ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪ - ಒಂದು ಚಿಂತನೆ

<ಪಂಪಭಾರತ

(ವಿಮರ್ಶೆ- ಕಾಪಿರೈಟ್ ಮುಕ್ತ)

ಪಂಪ

ಪಂಪ: ಆದಿಕವಿ- ಒಂದು ಚಿಂತನೆ

ಕನ್ನಡದ ಆದಿಕವಿ

ಪಂಪ ಸುಮಾರು ಒಂದು ಸಾವಿರದ ಎಪ್ಪತ್ತು ವರ್ಷಗಳ ಹಿಂದೆ ತನ್ನ ಕಾವ್ಯಗಳನ್ನು ಹೇಳಿದ. ಅವನನ್ನು ಎಲ್ಲ ಕಾಲದ ಕವಿಗಳು ಹೊಗಳಿದರು, ಚಂಪೂ ಕವಿಗಳಂತೂ ಅವನನ್ನು ಅನುಕರಿಸಲು ಹೆಣಗಿದರು. ಈಗಲೂ ಪಂಪನ ಕಾವ್ಯಗಳ

ಹಿರಿಮೆಯ ಬಗ್ಗೆ ಆಧುನಿಕ ವಿಮರ್ಶಕರೂ ಮುಕ್ತಕಂಠದ ಮಾತುಗಳನ್ನಾಡುತ್ತಿದ್ದಾರೆ. ಹೀಗೆ ಪಂಪ ಯಾಕೆ ಎಲ್ಲ ಕಾಲದಲ್ಲಿಯೂ ಮಹತ್ವವನ್ನು ಗಳಿಸಿಕೊಂಡ? ಅಥವಾ, ಒಬ್ಬ ಪ್ರಾಚೀನ ಕವಿ ಇವತ್ತಿಗೂ ಮಹತ್ವದವನಾಗಿ ಕಾಣಲು ಕಾರಣ ಏನು? ಎಂದು ಆಲೋಚಿಸಬೇಕಾಗಿದೆ. ಪಂಪನನ್ನು ಸಾಮಾನ್ಯವಾಗಿ

ಕನ್ನಡದ ಆದಿಕವಿ ಎಂದು
ಕರೆಯುತ್ತಾರೆ. ಆದರೆ ಅವನು
ಕನ್ನಡದಲ್ಲಿ ಬರೆದ
ಮೊದಲನೆಯ ಕವಿಯೇನಲ್ಲ
ಎಂಬುದು ಎಲ್ಲರಿಗೂ
ಗೊತ್ತಿರುವ ಅಂಶವೇ.
ಅವನಿಗಿಂತ ಮುಂಚೆ ಅನೇಕ
ಕವಿಗಳು ಮಹತ್ತರ ಕೆಲಸ
ಮಾಡಿದವರು, ಅದು
ಆಗಿಹೋದ ವಿಷಯ
ಪಂಪನಿಗಿಂತ ಸುಮಾರು

ಒಂದು ಶತಮಾನದ ಹಿಂದೆ ರಚಿತವಾದ ಕವಿರಾಜ ಮಾರ್ಗ ಸ್ಪಷ್ಟವಾಗಿ ಇದರ ಬಗ್ಗೆ ಹೇಳುತ್ತದೆ. ಪಂಪನಿಗೆ ಈ ಆದಿತನಕವನ್ನು ನೀಡಲು ಕಾರಣವೇನು?

ಪಂಪನಿಗೆ ಮುಂಚೆಯೇ ಅನೇಕ ಕನ್ನಡ ಕವಿಗಳಿದ್ದುದು ಮಾತ್ರವಲ್ಲದೆ, ಅವರು ವಿವಿಧ ಬಗೆಯ ಕೃತಿಗಳನ್ನು ರಚಿಸಿದರು ಎಂದೂ

ಕವಿರಾಜಮಾರ್ಗ ಹೇಳುತ್ತದೆ, ಹಾಗೂ ತನ್ನ ಹಿಂದಿನ ಮತ್ತು ತನ್ನ ಕಾಲದ ಅನೇಕ ಸಾಹಿತ್ಯ ಪ್ರಕಾರಗಳ ಹೆಸರನ್ನು ಹೇಳುತ್ತದೆ. ಅವುಗಳಲ್ಲಿ ಒಂದು ಗದ್ಯಕಥಾ. “ಮಿಗೆ ಕನ್ನಡಗಬ್ಬಂಗಳೊಳ್ ಅಗಣಿತಗುಣಗಣ ಗದ್ಯಪದ್ಯಸಮ್ಮಿಶ್ರಿತಮಂ ನಿಗದಿಸುವರ್ ಗದ್ಯಕಥಾಪ್ರಗೀತಿಯಿಂ

ತಚ್ಚಿರಂತನಾಚಾರ್ಯರ್ಕಳ್”
ಎಂಬ ಪದ್ಯವನ್ನು ಗಮನಿಸಿ.
ಎಂದರೆ ಅಪರಿಮಿತ
ಗುಣಗಳಿಂದ ಕೂಡಿದ
ಗದ್ಯಪದ್ಯಗಳು ಸೇರಿದ ಕಾವ್ಯ
ಪ್ರಕಾರವನ್ನು
ಕವಿರಾಜಮಾರ್ಗ ಗದ್ಯಕಥನ
ಎಂದು ಕರೆದಿದ್ದಾನೆ. ಈಗ
ನಾವು ಕರೆಯುವ
ಚಂಪೂಕಾವ್ಯ ಪ್ರಕಾರ ಎಂದು
ಹಲವು ವಿದ್ವಾಂಸರ

ಅಭಿಪ್ರಾಯ. ಚಂಪೂಕಾವ್ಯ ಕನ್ನಡದಲ್ಲಿಯೇ ಜನ್ಮತಾಳಿದ ಕಾವ್ಯಪ್ರಕಾರ. ಅದು ಕನ್ನಡದಿಂದ ಸಂಸ್ಕೃತಕ್ಕೆ ಹೋಯಿತು ಎಂಬ ಒಂದು ವಾದವಿದ್ದರೆ, ಕನ್ನಡ ಸಂಸ್ಕೃತಕ್ಕೆ ಏನು ಕೊಟ್ಟೀತು ಎಂಬ ಭಾವನೆಯಿಂದಲೋ ಏನೋ ಸಂಸ್ಕೃತದಲ್ಲಿಯೇ ಅದರ ಜನನವಾಯಿತು ಎಂದು ಅನೇಕರು

ವಾದಿಸುತ್ತಾರೆ.
ಸಂಸ್ಕೃತದಲ್ಲಿರುವ ದಂಡಿಯ ‘ಕಾವ್ಯಾದರ್ಶ’ ಎಂಬ ಲಕ್ಷಣಗ್ರಂಥ ‘ಕವಿರಾಜಮಾರ್ಗ'ಕ್ಕೆ ಮಾದರಿ ಎಂಬುದು ನಿಜ [ಅದರೊಡನೆ ಭಾಮಹನ ‘ಕಾವ್ಯಾಲಂಕಾರ’ ಕೂಡ]. ಅಲ್ಲಿ “ಗದ್ಯಪದ್ಯ ಮಯೀ ಕಾಚಿತ್ ಚಂಪೂರಿತ್ಯಭಿವಿದ್ಯತೇ” ಎಂಬ ಮಾತಿದೆ. “[ಗದ್ಯಪದ್ಯಮಯೀ

ಕಾಚಿತ್
ಚಂಪೂರಿತ್ಯಬಿಧೀಯತೇ”
ಎಂಬುದು ಅದಕ್ಕಿರುವ
ಪಾಠಾಂತರ. ಈ ಮಾತು
ಚಂಪೂ ಪ್ರಕಾರ
ಕವಿರಾಜಮಾರ್ಗಕ್ಕಿಂತ
ಮುಂಚೆಯೇ ಸಂಸ್ಕೃತದಲ್ಲಿತ್ತು
ಎಂಬ ವಾದಕ್ಕೆ ಪುಷ್ಟಿ
ಕೊಡುತ್ತದೆ. ಆದರೆ
ಇದರಲ್ಲೊಂದು ತೊಡಕು ಇದೆ.
ದಂಡಿಯನ್ನು ಬಹು

ವಿಷಯಗಳಲ್ಲಿ ಅನುಸರಿಸುವ ‘ಕವಿರಾಜಮಾರ್ಗ’ವು ಚಂಪೂಕಾವ್ಯ ಎಂಬ ಹೆಸರನ್ನೇ ಹೇಳುವುದಿಲ್ಲ. ಇದಕ್ಕೇನು ಕಾರಣ? ಜೊತೆಗೆ ಬಲದೇವ ಉಪಾಧ್ಯಾಯರು ‘ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೇ’ ಎಂಬ ಮಾತಿಗೆ ವ್ಯಾಖ್ಯಾನ ಮಾಡುತ್ತ, ಕಾಚಿತ್ ಮತ್ತು ಅಭಿಧೀಯತೇ ಎಂಬ ಶಬ್ದಗಳ

ಕಾರಣದಿಂದಾಗಿ, ದಂಡಿಯ ಕಾಲಕ್ಕೆ ಚಂಪೂ ಇತ್ತು, ಆದರೆ ದಂಡಿ ಅದನ್ನು ಕಣ್ಣಾರೆ ಕಂಡಿರಲಿಲ್ಲ ಎಂದು ತೀರ್ಮಾನಿಸುತ್ತಾರೆ. ಹೀಗಾಗಿ, ಈ ವಾಕ್ಯವು ದಂಡಿಯ ‘ಕಾವ್ಯಾದರ್ಶ’ದ ಮೂಲದಲ್ಲಿತ್ತೇ ಎಂಬ ಸಂದೇಹ ಮೂಡುತ್ತದೆ. ದಂಡಿಯೇ ಗದ್ಯ, ಪದ್ಯ ಮತ್ತು ಮಿಶ್ರ ಎಂಬ ಮೂರು

ಕಾವ್ಯಪ್ರಕಾರಗಳನ್ನು ಉಲ್ಲೇಖಿಸುತ್ತಾನೆ. ಮಿಶ್ರ ಎಂಬುದು ಚಂಪೂವನ್ನು ಸೂಚಿಸುತ್ತಿದೆಯೋ ಅಥವಾ ಬೇರೇನನ್ನಾದರೋ ಸೂಚಿಸುತ್ತಿದೆಯೋ ಎಂಬ ಅನುಮಾನ ಉಂಟಾಗುತ್ತದೆ. ಏಕೆಂದರೆ, ಸಮಾನ್ಯವಾಗಿ ಹಿಂದೆಲ್ಲ ಕಾವ್ಯವನ್ನು 'ಶ್ರವ್ಯ ಕಾವ್ಯ' ಮತ್ತು 'ದೃಶ್ಯ ಕಾವ್ಯ' ಎಂಬ ವಿಂಗಡಣೆ ಮಾಡುವ

ಪರಿಪಾಠವಿತ್ತು.
‘ಶ್ರವ್ಯಕಾವ್ಯ’ದಲ್ಲಿ ಗದ್ಯ ಮತ್ತು
ಎಂಬೆರಡು ಭೇದ. ದಂಡಿ
ಹೇಳುವ ಮಿಶ್ರ ಇನ್ನೊಂದು
ಕಾವ್ಯಪ್ರಕಾರವಾದ ‘ದೃಶ್ಯ
ಕಾವ್ಯ’ವನ್ನೇನಾದರೂ
ಸೂಚಿಸುತ್ತದೆಯೇ? ಏಕೆಂದರೆ
ಸಂಸ್ಕೃತ
ದೃಶ್ಯಕಾವ್ಯ(ನಾಟಕ)ಗಳ
ಸಂಭಾಷಣೆಯಲ್ಲಿ ಗದ್ಯವೂ
ಪದ್ಯವೂ ಇರುತ್ತಿತ್ತು. ಇದನ್ನೇ

ಮಿಶ್ರ ಎಂದು ದಂಡಿ ಸೂಚಿಸುತ್ತಿದ್ದಿರಬಹುದು. ಸಂಸ್ಕೃತದಲ್ಲಿಯೂ ಚಂಪೂ ಬಂದ ಮೇಲೆ ಯಾರಾದರೂ ‘ಕಾವ್ಯಾದರ್ಶಕ’ದಲ್ಲಿ ಈ ಮಾತನ್ನು ಸೇರಿಸಿರಬಹುದು; ಅಂದರೆ ಚಂಪೂವಿನ ಈ ವ್ಯಾಖ್ಯೆ ಪ್ರಕ್ಷೇಪವಿರಬಹುದು. ಅಲ್ಲದೆ ಮೊದಮೊದಲ ಸಂಸ್ಕೃತ ಚಂಪೂ ಕಾವ್ಯಗಳನ್ನು ರಚಿಸಿದವರು

ಕನ್ನಡಿಗರು; ಸಂಸ್ಕೃತದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ಚಂಪೂ ಕೃತಿಯಾದ ತ್ರಿವಿಕ್ರಮನ ‘ನಲಚಂಪೂಕ’ ಹತ್ತನೆಯ ಶತಮಾನದ್ದು; ಪಂಪನ ಕಾಲವೇ, ಸ್ವಲ್ಪ ಹಿಂಚು ಮುಂಚು.

ಕಾವ್ಯ ದೇಸೀ ಮತ್ತು ಮಾರ್ಗದಲ್ಲಿ ಚಂಪೂಕಾವ್ಯ

ನಮಗಿಲ್ಲಿ ಪ್ರಸ್ತುತವಾದುದೆಂದರೆ, ‘ಕವಿರಾಜಮಾರ್ಗ’ಪೂರ್ವದಲ್ಲಿಯೇ ಚಂಪೂ ಕನ್ನಡದಲ್ಲಿ ನೆಲೆಯೂರಿತ್ತು ಮಾತ್ರವಲ್ಲ, ದೊಡ್ಡ ಕವಿಗಳು ಆ ಪ್ರಕಾರದಲ್ಲಿ ಕಾವ್ಯ ರಚಿಸಿದ್ದರು ಎಂಬ ಅಂಶ. ಅದು

ಕಾಲಕಾಲಕ್ಕೆ ಹೆಚ್ಚೆಚ್ಚು ಪರಿಷ್ಕರಣಗೊಳ್ಳುತ್ತ ಅಂತರ್ ಸತ್ವ ಹೆಚ್ಚಿಸಿಕೊಳ್ಳುತ್ತ ಪಂಪನ ಕಾವ್ಯಗಳಲ್ಲಿ ತನ್ನ ಸಾಧನೆಯ ಶಿಖರವನ್ನು ತಲುಪಿತು. ಅನಂತರ ಆ ಕಾವ್ಯದ ಸತ್ವ ಇಳಿಮುಖವಾಯಿತು. ಅಂದರೆ ಪಂಪ ಚಂಪೂ ಪ್ರಕಾರದ ಪಕ್ವಫಲ. ಆ ಪಕ್ವತೆಗೆ ಕಾರಣ ತನ್ನೆರಡು ಕಾವ್ಯಗಳ ವಸ್ತು, ಭಾಷೆ, ಅಭಿವ್ಯಕ್ತಿವಿಧಾನ,

ಪಾತ್ರಚಿತ್ರಣ, ತನ್ನ ಕಾಲದ ಸ್ಥಿತಿಗತಿಗಳನ್ನು ಒಳಗೊಳ್ಳುವ ಬಗೆ ಇವೆಲ್ಲ ವಿಶಿಷ್ಟವಾಗಿದೆ . ಪಂಪ ತನ್ನೆರಡೂ ಕಾವ್ಯಗಳಲ್ಲಿನ ವೈಶಿಷ್ಟ್ಯಗಳನ್ನು ಒಟ್ಟಾರೆಯಾಗಿ ‘ದೇಸಿ’ ಎಂದು ಬಣ್ಣಿಸಿಕೊಳ್ಳುತ್ತಾನೆ. ತನ್ನ ಮೊದಲ ರಚನೆಯಾದ ‘ಆದಿಪುರಾಣ’ದ ಕೊನೆಯಲ್ಲಿ ‘ಸ್ವರ್ಗಾಪವರ್ಗಕ್ಕಮಾಸ್ಪದಮಪ್ಪ

ಆದಿಪುರಾಣವಸ್ತುಕೃತಿಯಂ
ಪೇಳ್ದಂ ಬೆಡಂಗಪ್ಪ
ಮಾರ್ಗದೊಳಂ ದೇಸಿಯೊಳಂ
ಪೊದಳ್ದೆಸೆವಿನಂ
ಸಂಸಾರಸಾರೋದಯಂ’
ಎಂದು ಹೇಳಿಕೊಂಡರೆ,
‘ವಿಕ್ರಮಾರ್ಜುನ ವಿಜಯ’ದ
ಮೊದಲ ಆಶ್ವಾಸದಲ್ಲಿ,
ಒಂದೆಡೆ “ಬಗೆ
ಪೊಸತಪ್ಪುದಾಗಿ
ಮೃದುಬಂಧದೊಳೊಂದುವು

ದು ಒಂದಿ ದೇಸಿಯೊಳ್
ಪುಗುವುದು” ಎಂದೂ;
ಮತ್ತೊಂದೆಡೆ, “ವರ್ಣಕಂ
ಕತೆಯೊಳೊಡಂಬಡಂ
ಪಡೆಯೆ ಪೇೞ್ವೊಡೆ ಪಂಪನೆ
ಪೇಳ್ಗುಂ ಎಂದು ಪಂಡಿತರೆ
ತಗುಳ್ದು ಬಿಚ್ಚಳಿಸೆ
ಪೇಳಲೊಡರ಼್ದೆನೀ
ಪ್ರಬಂಧಮಂ” ಎಂದೂ
ನುಡಿಯುತ್ತಾನೆ. ಅದೇ
ಕಾವ್ಯದ ಕೊನೆಯ

ಆಶ್ವಾಸದಲ್ಲಿ ಒಂದೆಡೆ, ತನ್ನ
ಕಾವ್ಯವೈಶಿಷ್ಟ್ಯಗಳಲ್ಲಿ ‘ಕೈತ
ದೇಸಿ’ಯೂ ಸೇರುವುದನ್ನು
ಉಲ್ಲೇಖಿಸುತ್ತಾನೆ;
ಮತ್ತೊಂದೆಡೆ,
“ವ್ಯಾಸಮುನಿಪ್ರಣೂತಕೃತಿ
ಯಂ ಸಲೆ ಪೇಳ್ದು ಪೊದಳ್ದ
ಸತ್ಕವಿವ್ಯಾಸಸಮಾಗಮಾನ್ವಿತ
ನುಂ ಆದಿಪುರಾಣಮನೆಯ್ದೆ
ಪೇಳ್ದು ವಾಕ್ಶ್ರೀಸುಭಗಂ
ಪುರಾಣಕವಿಯುಂ ಧರೆಗಾಗಿರೆ

ಉಣ್ಮೆಪ್ರೊಣ್ಮುವೀ
ದೇಸಿಗರಂತೆ
ನಾಡೊವಜನಾದನೊ ಪೇಳ್
ಕವಿತಾಗುಣಾರ್ಣವಂ”
ಎಂದೂ ಹೇಳಕೊಳ್ಳುತ್ತಾನೆ.
‘ದೇಸಿಗಳುಂತೆಕ’ ಎಂಬುದನ್ನು
ವೆಂಕಟಾಚಲಶಾಸ್ತ್ರಿಗಳು
‘ದೇಸಿಗರಂತೆ’ ಎಂದು
ಪರಿಷ್ಕರಿಸುತ್ತಾರೆ. ಹೀಗಾಗಿ
ಪಂಪನಿಗೆ ತನ್ನ
ಕಾವ್ಯವೈಶಿಷ್ಟ್ಯವಾದ

‘ದೇಸಿಯ’ ಬಗ್ಗೆ ಅರಿವು ಮಾತ್ರವಲ್ಲದೆ ಅಪಾರ ಹೆಮ್ಮೆಯೂ ಇದೆ. ಮುಂದಿನ ಕವಿಗಳು ಪಂಪನ ವೈಶಿಷ್ಟ್ಯವೆಂದು ‘ದೇಸಿ’ಯನ್ನು ಉಲ್ಲೇಖಿಸುವುದನ್ನು ಗಮನಿಸಬೇಕು. ಹಾಗಾದರೆ ‘ದೇಸಿ’ ಎಂದರೇನು ಎಂಬ ಪ್ರಶ್ನೆ ಏಳುತ್ತದೆ. ಕನಿಷ್ಠ ಪಕ್ಷ, ತನ್ನ ವೈಶಿಷ್ಟ್ಯವೆಂದು ಹೆಮ್ಮೆಯಿಂದ ಬೀಗುವ

ಪಂಪನ ಕಾವ್ಯಗಳ ದೇಸಿಯ ಸ್ವರೂಪವೇನು ಎಂಬುದನ್ನು ಅನ್ವೇಷಿಸಬೇಕಾಗಿದೆ.

ಸಾಮಾನ್ಯವಾಗಿ ಪಂಪನ ಎರಡು ಕಾವ್ಯಗಳಾದ ‘ಆದಿಪುರಾಣ’ ಮತ್ತು ‘ವಿಕ್ರಮಾರ್ಜುನವಿಜಯ”ಗಳನ್ನು ಕ್ರಮವಾಗಿ ಕಧಾರ್ಮಿಕಕಿ ಮತ್ತು ಕಲೌಕಿಕಕಿ ಕಾವ್ಯಗಳೆಂದು ಗುರುತಿಸುವ ಪದ್ಧತಿಯಿದೆ; ಇದೇನೂ

ತಪ್ಪಲ್ಲ. ಏಕೆಂದರೆ ಪಂಪನೇ ತನ್ನ ‘ವಿಕ್ರಮಾರ್ಜುನವಿಜಯ”ದ ಕೊನೆಯಲ್ಲಿ “ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ” ಎಂದು ಹೇಳಿಕೊಂಡಿದ್ದಾನೆ. ಆದರೆ ‘ಧಾರ್ಮಿಕ’ ಹಾಗೂ ‘ಲೌಕಿಕ’ ಎಂಬುದನ್ನು ನಾವು ಹೇಗೆ ನಿರ್ವಚಿಸಬೇಕು ಎಂಬ ಪ್ರಶ್ನೆ ಏಳುತ್ತದೆ. ಧರ್ಮ ಎಂಬುದಕ್ಕೆ

ನಿರ್ದಿಷ್ಟ ಅರ್ಥವಿದೆಯೇ,
ಉಹ್ಞೂ, ಇಲ್ಲ. ಹಾಗೆಯೇ
ಲೌಕಿಕ ಎಂಬುದಕ್ಕೂ.
ಏಕೆಂದರೆ "ಛಲದೊಳ್
ದುರ್ಯೋಧನಂ" ಎಂದು
ಮೊದಲಾಗುವ,
'ವಿಕ್ರಮಾರ್ಜುನವಿಜಯ"ದ
ಹದಿನಾಲ್ಕನೆಯ ಆಶ್ವಾಸದ
ಅರುವತ್ತನಾಲ್ಕನೆಯ,
ಪದ್ಯದಲ್ಲಿ ವಿವಿಧ ಪಾತ್ರಗಳು
ವಿಭಿನ್ನ ಗುಣಗಳಿಂದಾಗಿ

ವಿಶಿಷ್ಟವಾಗುತ್ತಾರೆಂದು ಹೇಳಿದ ಮೇಲೆ, “ಇವರ್ಗಿಳಿನ್ ಈ ಭಾರತಂ ಲೋಕಪೂಜ್ಯಂ” ಎನ್ನುತ್ತಾನೆ. ಅಂದರೆ, ಲೌಕಿಕ ಗುಣಗಳೂ ಪೂಜ್ಯವೇ ಎಂದಂತಾಯಿತು. ಹಾಗಾದರೆ, ಧಾರ್ಮಿಕ ಗುಣಗಳಿಗೂ ಲೌಕಿಕ ಗುಣಗಳಿಗೂ ಏನು ವ್ಯತ್ಯಾಸವೆಂದು ಕೇಳಬೇಕಾಗುತ್ತದೆ. ಕೊನೆಯ ಪಕ್ಷ, ಪಂಪನ ದೃಷ್ಟಿಯಲ್ಲಿ

ಇವುಗಳ ಸ್ವರೂಪವೇನು ಎಂದು ವಿವೇಚಿಸಬೇಕು.

‘ಆದಿಪುರಾಣ’ದ ಆರಂಭದ ಪದ್ಯಗಳಲ್ಲೊಂದರಲ್ಲಿ ಕವಿಯು ತನ್ನ ಈ ಪುರಾಣಕಾವ್ಯ ಎಲ್ಲರಿಗೂ ಹೇಗೆ ಪ್ರಿಯವಾಗುತ್ತದೆಂದು ಹೇಳಿಕೊಳ್ಳುವ ಮಾತುಗಳಿವೆ: “ಇದುವೆ ಸುಕವಿಪ್ರಮೋದಪ್ರದಂ ಇದುವೆ

ಸಮಸ್ತಭವ್ಯಲೋಕಪ್ರಮದಪ್ರ
ದಂ ಎನೆ ನೆಗಳ್ದ
ಆದಿಪುರಾಣದೊಳ್
ಅಱಿವುದು ಕಾವ್ಯಧರ್ಮಮಂ
ಧರ್ಮಮುಮಂ” ಎಂಬುದೇ
ಆ ಮಾತುಗಳು. ಧರ್ಮ
ಎಂಬುದಕ್ಕೆ ಪಂಪ ಏನು
ಅರ್ಥ
ಕೊಡುತ್ತಿದ್ದಾನೆಂಬುದನ್ನು
ಹುಡುಕುವುದು ಕಷ್ಟವೇನಲ್ಲ.
ಏಕೆಂದರೆ ಅವನ ಕೃತಿಯದು

‘ಸ್ವರ್ಗಾಪವರ್ಗಕ್ಕೆ ಆಸ್ಪದಮಪ್ಪ’ ವಸ್ತು, ಎಂದರೆ ಮೊದಲ ತೀರ್ಥಂಕರನ ಚರಿತೆ, ‘ತ್ರಿದಶಸ್ತುತ್ಯಮಿದಾದಿದೇವಚರಿತಂ’; ಇದು ‘ಸಮಸ್ತಭವ್ಯಲೋಕಪ್ರಮದಪ್ರದ’ವಾದುದು, ಮತ್ತು ಇದರ ರಚನೆಯೇ ‘ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆ’ ಎಂಬ ಉದ್ದೇಶವನ್ನು

ಹೊಂದಿರುವಂಥದು. ಇಲ್ಲಿನ ವಸ್ತು ಮತ್ತು ಈ ವಸ್ತುವನ್ನು ಪುಣ್ಯಕರವೆಂದು ಭಾವಿಸುವ ಶ್ರೋತೃವರ್ಗ ಇವುಗಳು, ಹಾಗೂ ಪಂಪನೂ ಜೈನನೇ ಆಗಿ ಕಾವ್ಯದ ಆರಂಭದಲ್ಲಿ ಜೈನ ಪರಿಕಲ್ಪನೆಗಳಿಗನುಗುಣವಾದ ಪ್ರಾರ್ಥನಾಪದ್ಯಗಳಿರುವುದರಿಂದ, ಇಲ್ಲಿನ ‘ಧರ್ಮ’ ಎಂಬ ಶಬ್ದಕ್ಕೆ ‘ಜೈನಧರ್ಮ’ ಎಂಬ

ಪರಿಮಿತವಾದ ಮತ್ತು ನಿರ್ದಿಷ್ಟವಾದ ಅರ್ಥವಿರುವುದು ಸ್ಪಷ್ಟವಾಗುತ್ತದೆ. ಅಂದರೆ ತನ್ನ ಕೃತಿಯ ಒಂದು ಗುಂಪಿನ ಓದುಗವರ್ಗವು ಜೈನಮತಕ್ಕೆ ಸಂಬಂಧಿಸಿದವರು ಎಂಬುದು ಆಶಯ, ಅದರಲ್ಲಿ ಅನುಮಾನವಿಲ್ಲ. ಆದರೆ ಅದಕ್ಕೂ ಮೊದಲೇ ಬರುವ 'ಸುಕವಿಪ್ರಮೋದಪ್ರದಂ'

ಎಂಬ ಮಾತೂ, ‘ಅಱಿವುದು ಕಾವ್ಯಧರ್ಮಮಂ’ ಎಂಬ ಮಾತೂ ಏನನ್ನು ಸೂಚಿಸುತ್ತವೆ? ಅಲ್ಲದೆ ತನ್ನ ಕಾವ್ಯ ಸಂತಸವನ್ನುಂಟುಮಾಡುವುದು ಮುಖ್ಯವಾಗಿ ಕಾವ್ಯಾಸಕ್ತರನ್ನು ಎಂಬ ಆಶಯವು ಧರ್ಮಕ್ಕೆ ಅವನು ನೀಡಿದ ಎರಡನೆಯ ಸ್ಥಾನದಿಂದ ವಿದಿತವಾಗುತ್ತದೆ

‘ಸುಕವಿ’ ಎಂದರೆ ಕವಿಗಳು ಎಂಬ ಅರ್ಥಕ್ಕಿಂತ ಒಳ್ಳೆಯ ಕಾವ್ಯಗಳಲ್ಲಿ ಆಸಕ್ತರಾದವರು ಎಂಬ ಅರ್ಥವೇ ಇಲ್ಲಿ ಸೂಕ್ತ. ಅಂಥವರಿಗಾಗಿ ಇಲ್ಲಿರುವುದು ‘ಕಾವ್ಯಧರ್ಮ’ ಎನ್ನುತ್ತಾನೆ ಕವಿ. ಈಗ ಇನ್ನೊಂದು ಪ್ರಶ್ನೆ ತಲೆದೋರುತ್ತದೆ: ‘ಕಾವ್ಯಧರ್ಮ’ ಎಂದರೇನು?

ಕಾವ್ಯಧರ್ಮ

ಕಾವ್ಯ ಎಂದರೇನೆಂಬುದನ್ನು ಇದುವರೆಗೂ ಯಾರೂ ಖಚಿತವಾಗಿಯೂ, ಸರ್ವಸಮ್ಮತವಾಗಿಯೂ ಸೂತ್ರರೂಪದಲ್ಲಿ ಹೇಳಿಲ್ಲ. ಜಗತ್ತಿನೆಲ್ಲೆಡೆಯ ಕಾವ್ಯಮೀಮಾಂಸೆ ಮತ್ತು ವಿಮರ್ಶೆಗಳು ಆದಿಯಿಂದ ಇಲ್ಲಿಯವರೆಗೂ ಅದರ ಬಗ್ಗೆ

ಚರ್ಚಿಸುತ್ತಲೇ ಬಂದಿವೆ; ಆದರೆ ಏನನ್ನೂ ನಿರ್ದಿಷ್ಟವಾಗಿ ಹೇಳಲಾಗಿಲ್ಲ. ಏಕೆಂದರೆ ಹೇಳಲಾಗುವುದಿಲ್ಲ. ಏಕೆಂದರೆ ಕಾವ್ಯ [ಸಾಹಿತ್ಯ] ಎಂಬುದು ಅನಂತಮುಖಿಯಾದುದು, ಅಮೂರ್ತವಾದುದು. ಪಂಪನೇ 'ಆದಿಪುರಾಣ'ದಲ್ಲಿ "ಇದು ನಿಚ್ಚಂ ಪೊಸತು ಅರ್ಣವಂಬೊಲ್ ಅತಿಗಂಭೀರಂ ಕವಿತ್ವಂ"

ಎನ್ನುತ್ತಾನೆ. ಎಂದರೆ ಕವಿತ್ವವು ಹಿಡಿತಕ್ಕೆ ಸಿಕ್ಕುವಂತಹುದಲ್ಲ, ಆಗಸವನ್ನು ಹಿಡಿಯಲು ಸಾಧ್ಯವೇ? ಈ ಮಾತುಗಳಲ್ಲಿ ಪಂಪ ಯಾವ ಆಶಯವನ್ನು ಹೇಳುತ್ತಿದ್ದಾನೆಯೋ ತಿಳಿಯದು; ಅವನು ನಮಗಿಂತ ಒಂದು ಸಾವಿರ ವರ್ಷಕ್ಕೂ ಹಿಂದೆ ಇದ್ದವನು, ತನ್ನ ಮಾತುಗಳನ್ನು ಅವನು ವಿವರಿಸಿಲ್ಲ. ಜೊತೆಗೆ ಇಂಥ

ಮಾತುಗಳೂ “ನಿಚ್ಚಂ ಪೊಸತು’, ಎಂದರೆ ಹೊಸ ಹೊಸ ಅರ್ಥಗಳನ್ನು ಸ್ಫುರಿಸುವಂತಹವು. ಕವಿತ್ವ ಎಂಬುದು ಸಮುದ್ರದ ಹಾಗೆ: ಹರಹು ಮತ್ತು ಆಳಗಳನ್ನು ಹೊಂದಿರುವಂಥದು. ಜೊತೆಗೆ ಸಮುದ್ರದ ‘ನೀರು’ ನಮ್ಮನ್ನೇ ಪ್ರತಿಬಿಂಬಿಸುವಂಥದು. ಹಾಗೆಯೇ ಕಾವ್ಯವೂ ಕಾಣುವವರ ಕಣ್ಣಿಗೆ

ಸಾಧ್ಯವಾದಂತೆ ಕಾಣುವಂಥದೇ ಹೊರತು ಎಲ್ಲರಿಗೂ ಒಂದೇ ರೀತಿಯಲ್ಲಿ ಅಲ್ಲ. ಏಕೆಂದರೆ ಕವಿತ್ವಕ್ಕೆ "ಅರ್ಥವಿಲ್ಲ, ಸ್ವಾರ್ಥವಿಲ್ಲ"; ಓದುಗ ಅದಕ್ಕೆ ಅರ್ಥ ನೀಡಬೇಕು, ಅಷ್ಟೆ. ಹಾಗೆ ನೀಡುವುದು ತನ್ನ ಅರ್ಥವನ್ನು ಮಾತ್ರ ಎಂಬುದನ್ನು ಮರೆಯಲಾಗದು. ಅಂದರೆ ಪಂಪನ ಕಾವ್ಯಕ್ಕಾಗಲೀ,

ಚರ್ಚೆಯ ಆಧಾರವಾದ ‘ಕಾವ್ಯಧರ್ಮ’ ಎಂಬ ಮಾತಿಗಾಗಲೀ ಅರ್ಥ ನೀಡಿ, ಅದಕನ್ನನುಗುಣವಾಗಿ ಕಾವ್ಯವವನ್ನು ವಿವರಿಸಬೇಕು.

‘ಕಾವ್ಯ ಎಂದರೇನು’, ಯಾರೂ ಹೇಳಲಾರರು ಎಂಬುದನ್ನಾಗಲೇ ಒಪ್ಪಿದಮೇಲೆ. ಆದ್ದರಿಂದ ಈಗ ಕಾವ್ಯವನ್ನು ನಾವೇ ನಮ್ಮ ಅನುಕೂಲಕ್ಕಾಗಿ

ನಿರ್ವಚಿಸಿಕೊಳ್ಳಬೇಕು;
ಬೇರೆಯವರು ಒಪ್ಪಲಿ ಬಿಡಲಿ,
ಇದು ನಮಗೆ ಆವಶ್ಯಕ.
ಇಲ್ಲದಿದ್ದರೆ
ಮುಂದುವರಿಯಲಾಗುವುದಿಲ್ಲ
. ಕಾವ್ಯ ಎಂದರೆ, (ನನ್ನ
ದೃಷ್ಟಿಯಲ್ಲಿ,Pradhan)
ವೈಯಕ್ತಿಕ ಅನುಭವಗಳ
ನೆಲೆಯಿಂದ ಮತ್ತು ಅವುಗಳ
ಆಧಾರದ ಮೇಲೆ, ಬದುಕಿನ
ಸ್ವರೂಪವನ್ನು ಕಂಡುಕೊಳ್ಳುವ

ಅನ್ವೇಷಣಾ ಪ್ರಕ್ರಿಯೆಯನ್ನು ಭಾಷೆಯ ಮಾಧ್ಯಮದಿಂದ ಅಭಿವ್ಯಕ್ತಗೊಳಿಸುವ ಪ್ರತಿಭಾವಂತನ ‘ಅಸಲು ಕಸಬು’. ಬದುಕು ಕಾವ್ಯಕ್ಕಿಂತ ದೊಡ್ಡದು; ಏಕೆಂದರೆ ಕಾವ್ಯವೇ ಬದುಕಿನ ಒಂದು ಸಣ್ಣ ಭಾಗ. ಕಾವ್ಯವೇ ಅಸಂಖ್ಯಮುಖಿಯಾದರೆ, ಇನ್ನು ಬದುಕು? ಇನ್ನೂ ವಿಸ್ತಾರವಾದುದು. ಹಾಗಾಗಿ

ಕವಿಕರ್ಮವೂ ಅಸಂಖ್ಯ
ಬಗೆಯದು. ಅಂದರೆ ಒಂದು
ಕಾವ್ಯಕೃತಿ ಮೇಲೆ ಹೇಳಿದ
ಪ್ರತಿಭಾವಂತನೊಬ್ಬನ
ಯಾವುದೋ ಒಂದು
ಕಾಣ್ಕೆಯ ಅಭಿವ್ಯಕ್ತಿ. ಇಂತಹ
ಕಾವ್ಯದ ಧರ್ಮ ಯಾವುದು?
ಕಾವ್ಯಧರ್ಮ ಎಂದರೆ ಕಾವ್ಯದ
ಪರಿಣಾಮ ಎಂದು
ಅರ್ಥವಿಸಬಹುದೇನೋ.
ಎಂದರೆ ತನ್ನ ‘ಆದಿಪುರಾಣ’

ಇಂತಹ ಕಾವ್ಯಕುತೂಹಲಿಗಳಾದ ಓದುಗರ ಮತ್ತು ಜಿನಧರ್ಮೀಯ ಓದುಗರ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರುತ್ತದೆ ಎಂಬ ಅರಿವು ಪಂಪನಿಗಿದೆ.

ಅಲೌಕಿಕಾವ್ಯವೇ

ಜೈನಧರ್ಮೀಯರಿಗೆ ಈ ಕಾವ್ಯವು ಉಂಟುಮಾಡುವ

ಪರಿಣಾಮದ ಸ್ಥೂಲ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಪರಿಭಾವಿಸಿಕೊಳ್ಳಬಹುದು: ಪುಣ್ಯ, ಶ್ರೇಯಸ್ಸು, ಸದ್ಗತಿ ಇಂತಹವುಗಳಿಗೆ ಇದರ ಓದು, ಮನನ, ಮತ್ತು ಅಲ್ಲಿನ ಧಾರ್ಮಿಕತೆಯ ಅನುಸರಣ ಕಾರಣವಾಗುತ್ತದೆ ಎನ್ನಬಹುದೇನೋ. ಆದರೆ ಕವಿ ಅದಕ್ಕಿಂತ ಹೆಚ್ಚಾಗಿ ಮತ್ತು ಮುಖ್ಯವೆಂದು ಬಗೆದು

ನಿರೀಕ್ಷಿಸುವ 'ಸುಕವಿಜನ'ರ ಮೇಲೆ ಯಾವ ಪರಿಣಾಮ ಬೀರಬೇಕೆಂದು ನಿರೀಕ್ಷಿಸುತ್ತಾನೆ ಎಂಬುದನ್ನೀಗ ಸ್ವಲ್ಪ ವಿಶದಪಡಿಸಿಕೊಳ್ಳಬೇಕು. ಇಂಥ ಓದುಗರು ಜೈನರಾಗಿದ್ದೂ, ಧರ್ಮೇತರವಾದ 'ಕಾವ್ಯಧರ್ಮ'ವನ್ನು ನಿರೀಕ್ಷಿಸುವವರಾಗಬಹುದು,

ಅಥವಾ ಜೈನೇತರ ಕಾವ್ಯಾಸಕ್ತರಾಗಿರಬಹುದು. ಆ ಮನೋಭಾವದ ಓದಿನ ಮಟ್ಟಿಗೆ ಅವರಿಬ್ಬರಲ್ಲಿರುವುದು ಒಂದೇ ಬಗೆಯ ನಿರೀಕ್ಷೆ. ಇಲ್ಲಿ ಪುಣ್ಯ, ಸದ್ಗತಿ ಇವುಗಳ ನಿರೀಕ್ಷೆಯಿಲ್ಲ. ಇಂಥವರು ಏನನ್ನು ನಿರೀಕ್ಷಿಸಬಹುದು ಅಥವಾ ಇಂಥವರ ಮೇಲೆ ಕಾವ್ಯ ಏನು ಪರಿಣಾಮ ಬೀರಬಹುದು?

ಕಾವ್ಯಾಸಕ್ತನು ಕಾವ್ಯದಿಂದ
ನಿರೀಕ್ಷಿಸುವುದು ಒಂದು
ವಿಶಿಷ್ಟ ಅನುಭವದ
ಪುನರ್ನಿರ್ಮಿತಿಯನ್ನು, ಮತ್ತು
ಬದುಕಿನ ಒಂದಂಶದ ವಿಶಿಷ್ಟ
ಕಾಣ್ಕೆಯೊಂದನ್ನು.
ಇಲ್ಲಿರುವುದು ಆದಿಜಿನನ
ಚರಿತ್ರೆ, ಅವನು ಒಬ್ಬ
ಮನುಷ್ಯನೇ; ನಾವೂ
ಮನುಷ್ಯರೇ. ಹಾಗಾಗಿ
ನಮ್ಮಿಬ್ಬರಲ್ಲಿರುವ

ಸಮಾನಾಂಶ ಮಾನವ ಬದುಕು. ಜೈನರು ದೇವರಲ್ಲಿ ನಂಬಿಕೆಯಿಡದವರು; ಹೀಗಾಗಿ ಅವರಿಗೆ ಸಾಕ್ಷಾತ್ಕರಿಸಿಕೊಳ್ಳಬೇಕಾದ ಅಥವಾ ಸಾಯುಜ್ಯ ಹೊಂದಬೇಕಾದ ಅಥವಾ ತನ್ನಲ್ಲಿರುವ ದೇವಾಂಶವನ್ನು ಕಂಡುಕೊಳ್ಳಬೇಕಾದ ತುರ್ತು ಇಲ್ಲ. ಆದರೆ ತೀರ್ಥಂಕರನು ಸಾಮಾನ್ಯ ವ್ಯಕ್ತಿಗಳಿಗಿಂತ

ತುಂಬ ಮೇಲುಮಟ್ಟದ ಜೀವಿ,
ಅವನು ಜೀವನವನ್ನು
[ಬದುಕು ಎಂಬ ನೀರು] ಪವಿತ್ರ
ತೀರ್ಥವನ್ನಾಗಿ
ಪರಿವರ್ತಿಸಿಕೊಂಡವನು.
ಅವನ ಬದುಕು
ಹೀಗಾಗಿರುವುದು ಅವನ
ವೈಯಕ್ತಿಕ ಸಾಧನೆಯಿಂದ,
ಅವನ ಬದುಕಿನ ಪರಿಯು
ಎಲ್ಲರಿಗೂ ಆದರ್ಶವಾದುದು,
ಮತಧರ್ಮಗಳ ಪರಿಧಿಯನ್ನು

ಮೀರಿ. ಪ್ರಾಯಶಃ ಆ ಪರಿಣಾಮವನ್ನು ತನ್ನ ‘ಪುರಾಣಕಾವ್ಯ’ವು ಕಾವ್ಯಾಸಕ್ತರ ಮೇಲೆ ಮಾಡುತ್ತದೆ ಎಂಬುದು ಕವಿಯ ನಿರೀಕ್ಷೆಯಾಗಿರಬೇಕು [ಈ ದೃಷ್ಟಿಕೋನದಿಂದ 'ಆದಿಪುರಾಣ' ವನ್ನು ಕುರಿತು ನಡೆಸಿರುವ ವಿವೇಚನೆಯನ್ನು ಈ ಪುಸ್ತಕದ ಕೊನೆಯಲ್ಲಿರುವ

ಒಂದು ಅನುಬಂಧದಲ್ಲಿ ಕಾಣಬಹುದು].

ಲೌಕಿಕ ಕಾವ್ಯ

ಪಂಪ ‘ಲೌಕಿಕ’ ಎಂದು ಕರೆದುಕೊಳ್ಳುವ ‘ವಿಕ್ರಮಾರ್ಜುನವಿಜಯ’ದ ಬಗ್ಗೆ ಒಂದಷ್ಟು ಚರ್ಚಿಸೋಣ. ಇಲ್ಲಿ ಲೌಕಿಕತೆ ನಮ್ಮ ವ್ಯಾವಹಾರಿಕ ಬದುಕಿಗೆ ಸಂಬಂಧಿಸಿದ್ದೇಯೆ?.

ಏಕೆಂದರೆ ಇಲ್ಲಿ
ತುಂಬಿರುವುದು ರಾಜರ ಕತೆ,
ಅವರ ನಡುವಣ
ಭಿನ್ನಾಭಿಪ್ರಾಯಗಳು, ಕುಟಿ
ಕಾರಾಸ್ಥಾನಗಳು, ಯುದ್ಧಗಳ
ವರ್ಣನೆ ಇಂತಹವು. ಇವು
ಸಾಮಾನ್ಯನ ಬದುಕಿಗೆ
ಹೊರತಾದುದು ತಾನೇ
ಸೈನ್ಯದಲ್ಲಿ ಪಾಲ್ಗೊಳ್ಳದಿದ್ದರೆ.
ಇಡೀ ಈ ಕಾವ್ಯವು ಉದ್ದಕ್ಕೂ
ರಾಜತ್ವದ ವೈಭವೀಕರಣಕ್ಕೆ

ಮೀಸಲಾಗಿದೆ ಎಂಬ ಭಾವನೆಯನ್ನು ಓದುಗನಲ್ಲಿ ಉಂಟುಮಾಡಿದರೆ ಆಶ್ಚರ್ಯವಿಲ್ಲ. ಕಾವ್ಯದ ಮೊದಲ ಪದ್ಯದಿಂದ ಕೊನೆಯದರವರೆಗೂ ಈ ಕಾರ್ಯ ನಡೆದಿರುವುದೂ ಸುಳ್ಳಲ್ಲ. [ಈ ಅಂಶವು ಇದೇ ಲೇಖಕನ 'ಪಂಪ ಮತ್ತು ರಾಜತ್ವ' ಎಂಬ ಲೇಖನದಲ್ಲಿ ವಿವರವಾಗಿ

ಪ್ರಸ್ತಾಪಿತವಾಗಿದೆ]. ಆದರೆ ಅದರ ಒಡಲಲ್ಲಿಯೇ ರಾಜತ್ವದ ವಿರುದ್ಧವಾದ ಆಕ್ರೋಶವೂ ಅಡಗಿದೆ, ಅದನ್ನು ಗುರುತಿಸಬೇಕು. ಈ ಆಕ್ರೋಶ ಯಾಕೆ?

ಪಂಪನ ಕಾಲದ ಸಂಕೀರ್ಣತೆ ಮತ್ತು ಸಂಧಿಗ್ದತೆ

ಪಂಪನ ಕಾಲದ ಕನ್ನಡ ನಾಡು, ನನ್ನ ದೃಷ್ಟಿಯಲ್ಲಿ, ಎರಡು ಬಗೆಯ ತೀವ್ರ ತಲ್ಲಣಗಳನ್ನು ಅನುಭವಿಸುತ್ತಲಿತ್ತು; ಹೇಳಿಕೊಳ್ಳಲಾಗದ ಸಂಕಟದ ಉರಿಯನ್ನು ಜನಪದವು ತನ್ನ ಮಡಿಲಲ್ಲಿ ಕಟ್ಟಿಕೊಂಡಿತ್ತು. 'ಸೆರಗಿನ ಕೆಂಡ' ಅವುಗಳೆಂದರೆ

ಜಾತಿ ಮತ್ತು ಯುದ್ಧ. ಜಾತಿ ಎಂಬುದು ಒಬ್ಬ ವ್ಯಕ್ತಿಯ ಬದುಕನ್ನು ನಿರ್ಧರಿಸಿಬಿಡುವ ವ್ಯಾಪಕವೂ ಬಲಿಷ್ಠವೂ ಆದ ವ್ಯವಸ್ಥೆ. ವ್ಯಕ್ತಿಯೊಬ್ಬ ಯಾವ ಜಾತಿಯಲ್ಲಿ ಹುಟ್ಟಿದ್ದಾನೆ ಎಂಬುದರ ಮೇಲೆಯೇ ಆ ಕಾಲದ ವ್ಯಕ್ತಿ ಮುಂದೇನಾಗುತ್ತಾನೆ ಎಂಬುದು ನಿರ್ಧರಿತವಾಗುತ್ತಿತ್ತು.

ಇಂದಿಗಿಂತ ಆಗ ಜಾತಿವ್ಯವಸ್ಥೆ ತೀರ ನಿಷ್ಠುರವಾಗಿತ್ತು, ಕ್ರೂರವಾಗಿತ್ತು. ಹಾಗೆಯೇ ಯುದ್ಧ. ಯುದ್ಧ ನಡೆಯುತ್ತಿದ್ದುದು ಯಾರಿಗಾಗಿ, ರಾಜನ ಸಾಮ್ರಾಜ್ಯವಿಸ್ತರಣೆಗಾಗಿ ತಾನೇ? ಆದರೆ ಯುದ್ಧದಲ್ಲಿ ಪಾಲ್ಗೊಳ್ಳಬೇಕಾದವರು ಸಾಮಾನ್ಯರು, ದೃಢಕಾಯರಾದ ಯುವಕರು.

ಯುದ್ಧದ ಗೆಲವು
ದೊರೆಯುತ್ತಿದ್ದುದು ರಾಜನಿಗೆ,
ಆದರೆ ಗೆದ್ದ ಮತ್ತು ಸೋತ
ಎರಡೂ ಕಡೆಯ ಜನಗಳಿಗೆ
ಸಿಕ್ಕುವುದು ಬವಣೆ. ಕಟ್ಟಿದ
ಬದುಕನ್ನು ಕೆಡಹುವುದು,
ಯುದ್ಧಪರಿಣಾಮದ ಬಗೆಗಿನ
ಆತಂಕ, ಬಿಟ್ಟಿಯ ಕೆಲಸ,
ಸಾವು-ನೋವು, ಆಸ್ತಿಪಾಸ್ತಿಯ
ಹಾನಿ, ಮುಂದೆ
ಏರಬಹುದಾದ ತೆರಿಗೆಯ

ಭೀತಿ - ಇವುಗಳು. ಯಾವ ಕಾಲದಲ್ಲಿಯೂ ಯುದ್ಧ ಅದರ ಫಲಾನುಭವಿಗಳಾದ ಕೆಲವರಿಗೆ ಹೊರತಾಗಿ ಜನಗಳಿಗೆ ಬೇಕಾಗದು. ಜನ ಮೂಲತಃ ಯುದ್ಧವಿರೋಧಿಗಳೇ. ಆದರೆ ತನ್ನ ರಾಜ್ಯದ ಒಡೆಯ ಯುದ್ಧದಲ್ಲಿ ತೊಡಗಿರುವಾಗ ಯಾರಾದರೂ ಅದರ ವಿರುದ್ಧ ಮಾತನಾಡಿದರೆ, ಅದು

ರಾಜದ್ರೋಹವಾಗುತ್ತಿತ್ತು,
ಹಾಗೆ ಮಾತನಾಡಿದವರು
ದಂಡನೆಗೆ ಈಡಾಗಬೇಕಾಗಿತ್ತು.
ಹೀಗಾಗಿ
ಯುದ್ಧಪರಿಸ್ಥಿತಿಯೆಂದರೆ
'ಅನ್ನಲಾಗದ
ಅನುಭವಿಸಲಾಗದ' ಸಂಕಟ.
ಯುದ್ಧಕ್ಕೆ ಕಾರಣವಾದ
ರಾಜನ ವಿರುದ್ಧ ಎಲ್ಲ
ಕಾಲದಲ್ಲಿಯೂ ಸಾಮಾನ್ಯ
ಜನತೆ ಹೊಂದುವ ಭಾವನೆ

ಆಕ್ರೋಶವೇ. ನಮ್ಮ ನಾಡಿನ ಹತ್ತನೆಯ ಶತಮಾನದ ಸುತ್ತುಮುತ್ತಲ ಪರಿಸ್ಥಿತಿಯನ್ನು ನೋಡಿದರೆ, ಪ್ರಾಯಶಃ ಆಗಿನ ಕಾಲದ ರಾಜರು ನಡೆಸಿದ ಯುದ್ಧಗಳು ಅಸಂಖ್ಯಾತ; ಆರನೆಯ ವಿಕ್ರಮಾರ್ಜುನನೆಂಬ ಚಾಲುಕ್ಯ ಚಕ್ರವರ್ತಿ ಐವತ್ತು ವರ್ಷ ಆಳಿದನಂತೆ, ಆವನ ಆಳ್ವಿಕೆಯ ಅವಧಿಯಲ್ಲಿ

ಐವತ್ತು ಯುದ್ಧಗಳನ್ನು ಮಾಡಿದನಂತೆ, ಇವನ ಮೇಲೆ ದಂಡೆತ್ತಿ ಬಂದವರೊಡನೆ, ತಾನೇ ದಂಡೆತ್ತಿ ಹೋಗಿ ಆಕ್ರಮಣ ಮಾಡಿ ಇತರರೊಡನೆ. ಜನರ ಪಾಡು ಏನಾಗಬೇಕು!

ಕರ್ಣನಂ ನೆನೆ- ದುರಂತದ ಹಿನ್ನೆಲೆ

ಪಂಪನ ‘ವಿಕ್ರಮಾರ್ಜುನವಿಜಯ’ ಕಾವ್ಯವು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವುದು ಈ ಎರಡು ತಲ್ಲಣಗಳನ್ನೇ. ಕರ್ಣನ ಪ್ರಸಂಗದ ಮೂಲಕ ಕವಿ ಧ್ವನಿಸುತ್ತಿರುವುದು ಒಂದು ಪಾತ್ರದ ದುರಂತವನ್ನು

ಮಾತ್ರವಲ್ಲ, ಅದಕ್ಕೆ
ಕಾರಣವಾದ ವ್ಯವಸ್ಥೆಯ
ದುರಂತದ ಬಗ್ಗೆ. ಕರ್ಣನ
ಸಾವಿನ ಸನ್ನಿವೇಶದಲ್ಲಿ ಬರುವ
"ನೆನೆಯದಿರಣ್ಣ
ಭಾರತದೊಳಿಂ
ಪೆರರಾರುಮನ್ ಒಂದೆ
ಚಿತ್ತದಿಂ ನೆನೆವೊಡೆ ಕರ್ಣನಂ
ನೆನೆಯ" ಎಂಬ ಮಾತಿನ
ಮೂಲಕ ತನ್ನ 'ಸಮಸ್ತ
ಭಾರತ' ಕಾವ್ಯದಲ್ಲಿನ

ನೆನಪಿನಲ್ಲಿಡಬೇಕಾದ ಅಂಶವೆಂದರೆ ಜಾತಿದುರಂತದ ಪರಿಯನ್ನು ಎಂಬುದನ್ನು ಕವಿ ಸೂಚಿಸುತ್ತಿರುವಂತೆ; ತನ್ನ ಕಾವ್ಯವನ್ನು ಓದಿದ ಮೇಲೆ ಕರ್ಣನ ಸಾವಿಗೆ ಕಾರಣವಾದ ಜಾತಿವ್ಯವಸ್ಥೆಯ ದುರಂತದ ಬಗ್ಗೆ ಓದುಗ ಚಿಂತಿಸಬೇಕೆಂಬ ಆಶಯವೂ ಇರಬಹುದು.

ಮತ್ತೊಂದು ಅಂಶದ ಕಡೆಗೆ ನಮ್ಮ ಗಮನವನ್ನೀಗ

ಹರಿಸಬಹುದು. ದ್ರೋಣನ ಸಾವಿನ ನಂತರ ಕರ್ಣನಿಗೆ ವೀರಪಟ್ಟವನ್ನು ಕಟ್ಟುವ ತನ್ನ ನಿರ್ಧಾರವನ್ನು ದುರ್ಯೋಧನ ಹೇಳಿದಾಗ ಅಶ್ವತ್ಥಾಮನು "ನಿಜದೊಳೆ ಭೂಪರೆಂಬರವಿವೇಕಿಗಳಪ್ಪರ್" ಎಂದು ಉದ್ಗರಿಸುತ್ತಾನೆ. ಅಂತೆಯೇ, ವೀರಪಟ್ಟ ಕಟ್ಟಿಸಿಕೊಂಡ ಮೇಲೆ ಕರ್ಣನು ಶರಶಯ್ಯೆಯ ಮೇಲೆ

ಕುರುಕ್ಷೇತ್ರದ ಮತ್ತೊಂದು ಮೂಲೆಯಲ್ಲಿ ಮಲಗಿದ್ದ ಭೀಷ್ಮನ ಬಳಿ ಹೋಗಿ ಮುಂದೇನು ಮಾಡಬೇಕೇಂಬ ಬಗ್ಗೆ ಸಲಹೆ ಕೇಳುತ್ತಾನೆ. ಆಗ ಅವನು ಹೇಳುವುದೆಂದರೆ, "ಎಮಗಿಂಬುಕೆಯ್ವೊಡಂ ಸುಯೋಧನನ ರಾಜ್ಯಮನೊಲ್ವೊಡಂ ಶಲ್ಯನನೆ ಸಾರಥಿಮಾಡಿ ಕಾದುವುದು" ಎಂದು.

ಅದರಂತೆಯೇ
ದುರ್ಯೋಧನನು ಕರ್ಣನಿಗೆ
ಸಾರಯಾಗೆಂದು ಕೇಳುವ
ಪ್ರಸಂಗ. ಕೀಳು ಕುಲದವನಿಗೆ
ಸಾರಯಾಗೆಂದು
ಕೇಳಿದಾಕ್ಷಣವೇ ಸಿಡಿಲಾದ
ಶಲ್ಯನು ಆಡುವ
ಮಾತುಗಳೆಂದರೆ, “ಪೊದಳ್ದು
ಪರ್ವಿದವಿವೇಕತೆಯಿಂ
ನೃಪಚಿತ್ತವೃತ್ತಿ ಸಂಚಲಂ
ಅಱಿಂದಮೋಲಗಿಸಿ ಬಾಳ್ವುದೆ

ಕಷ್ಟಮಿಳಾಧಿನಾಥರಂ” ಮತ್ತು “ಮದಾನ್ವಿತ ರಾಜಬೀಜಸಂಜನಿತಗುಣಂ ಮದಂ, ಮದಮನಾಳ್ದವಿವೇಕತೆಯಿಂದ ಮಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಂ, ಆರ್ ಕಿಡಿಪರ್ ನರೇಂದ್ರರೊಳ್” ಎಂಬಿವು. ಅಶ್ವತ್ಥಾಮ ಮತ್ತು ಶಲ್ಯರ ಮಾತುಗಳು ಅವರ ವೈಯಕ್ತಿಕ

ಅಭಿಪ್ರಾಯವನ್ನು
ಸೂಚಿಸುತ್ತವೆ ಎಂದು
ನನಗನ್ನಿಸುವುದಿಲ್ಲ, ಜನತೆಯು
ರಾಜತ್ವದ ಬಗ್ಗೆ ಹೊಂದಿದ
ಆಕ್ರೋಶ ಇಲ್ಲಿ ಹೊರಬಂದಿದೆ
ಎನ್ನಿಸುತ್ತದೆ. ಈ ಎರಡೂ
ಮಾತುಗಳು ಹೊಮ್ಮಿರುವುದು
ಯುದ್ಧರಂಗದಲ್ಲಿ, ಯುದ್ಧದ
ನಡುವೆ, ರಾಜನ ಎದುರಿಗೆ.
ಯಾವಾಗಿನದೋ ಸಿಟ್ಟು
ಇನ್ನಾವಾಗಲೋ

ಸಿಡಿಯುವಂತೆ
ಪಂಪಪ್ರತಿಭೆಯ ಆಳದಲ್ಲಿನ
ರಾಜತ್ವವಿರೋಧಿ
[ಯುದ್ಧವಿರೋಧಿ] ಧೋರಣೆ
ಈ ಸನ್ನಿವೇಶಗಲ್ಲಿ ಹೊಮ್ಮಿದೆ.

ಕಾವ್ಯ ಸತ್ವ

ಕವಿಗೆ, ಎರಡು ನೆಲೆಯ
ವ್ಯಕ್ತಿತ್ವಗಳು [ಎಲ್ಲರದೂ] :
ವೈಯಕ್ತಿಕ ನೆಲೆ ಮತ್ತು
ಪ್ರಾತಿಭಾ ನೆಲೆ.

ಸಂಗತಿಯೊಂದರ
ನಿಜಸ್ವರೂಪವನ್ನು ವ್ಯಕ್ತ್ಯತೀತ
ನೆಲೆಯಲ್ಲಿ ಕಂಡುಕೊಳ್ಳುವ
ಗುಣವೇ ಪ್ರತಿಭೆ
ಎನ್ನುವುದಾದರೆ, ಕವಿ
ವೈಯಕ್ತಿಕ ನೆಲೆಯಲ್ಲಿ
ನಡೆದುಕೊಳ್ಳುವುದಕ್ಕಿಂತ
ಅವನ ಈ ವ್ಯಕ್ತ್ಯತೀತ
ನೆಲೆಯಲ್ಲಿನ ಕಾಣ್ಕೆ
ಭಿನ್ನವಾದುದಾಗಿರುತ್ತದೆ
ಎನ್ನಬಹುದು. ಹೀಗಾಗಿ

ವ್ಯಕ್ತಿಯಾಗಿ ಪಂಪನಿಗೆ
ರಾಜತ್ವದ ಬಗ್ಗೆ
ಅಕ್ಕರೆಯಿರಬಹುದಾದರೂ,
ಅವನ ಪ್ರಾತಿಭಾ ದೃಷ್ಟಿಗೆ
ಅದರ ಕ್ರೌರ್ಯ
ಸ್ಪಷ್ಟವಾಗುತ್ತದೆ. ಸಮರ್ಥ
ಕವಿಯೊಬ್ಬನ ಕೃತಿಯು
ಕವಿಕಾಲದ ಸುತ್ತಲ
ವಾಸ್ತವವನ್ನು ಕಟ್ಟಿಕೊಡುತ್ತಲೇ
ಅದು ಇರಬೇಕಾದ
ಬಗೆಯನ್ನೂ ಒಳಗೊಳ್ಳುತ್ತದೆ;

ಇದನ್ನೇ ಸತ್ಯ ಮತ್ತು ಶಾಶ್ವತ ಎಂಬ ಮಾತುಗಳ ಮೂಲಕ ಕೆಲವರು ಸೂಚಿಸುವುದು. ಕಣ್ಣಿಗೆ ಕಾಣುವುದರ ವಿವರಗಳ ಮೂಲಕ ಅದು ಬದಲುಗೊಳ್ಳಬೇಕಾದ ರೀತಿಯನ್ನು ಉತ್ತಮ ಕಾವ್ಯ ಧ್ವನಿಸುತ್ತದೆ.

ಪಂಪನ ಮತ್ತು ಅವನಂತಹ ಕವಿಗಳ ವೈಶಿಷ್ಟ್ಯ ಇರುವುದು ಇಲ್ಲಿಯೇ. ವ್ಯಾಸನ

ಕತೆಯನ್ನಾರಿಸಿಕೊಂಡರೂ ಮಹಾಭಾರತವನ್ನು ಮೂಲದಲ್ಲಿದ್ದಂತೆಯೇ ಸ್ವೀಕರಿಸಲಿಲ್ಲ. ಸನ್ನಿವೇಶ ಪಾತ್ರಸ್ವರೂಪಗಳಂತಹ ಅಂಶಗಳಳ್ಲಿ ವ್ಯತ್ಯಾಸಗಳನ್ನು ಮಾತ್ರವೇ ಮಾಡಿಕೊಳ್ಳದೆ, ತನ್ನ ಕಾವ್ಯಗಳಲ್ಲಿ ತನ್ನ ಕಾಲದ ತಲ್ಲಣಗಳನ್ನೂ ಒಳಗೊಂಡು ನಿಜವಾದ ಜನಮಾನಸದ ಆಳದಲ್ಲಿನ ಅನಿಸಿಕೆಯನ್ನು

ಹುದುಗಿಸಿದ್ದಾನೆ. ಇದನ್ನೇ ಕೆಲವರು ಪಂಪನ ಸಮಸ್ತಭಾರತಕಿದ್ದ ಪರಿಕಲ್ಪನೆ ಎಂದು ಹೇಳುತ್ತಾರೆ, ಇರಬಹುದು. ಆದರೆ ನಾನು ಇದನ್ನೇ ‘ದೇಸಿ’ ಎನ್ನುತ್ತೇನೆ, ಆದರೆ ಇಷ್ಟು ಮಾತ್ರವೇ ಅಲ್ಲ. ಭಾಷೆ, ಸಂಸ್ಕೃತ ಮಾದರಿಯ ಕಾವ್ಯವಸ್ತು ಮತ್ತು ಆಕಾರಗಳ ನಡುವೆ ಕನ್ನಡದ ಸತ್ವವನ್ನು ಪ್ರಕಟಿಸುವ ಬಗೆ, ಮಾತಿನ

ಬಳಕೆಯ ಪರಿ, ಕನ್ನಡದ್ದಲ್ಲದ ಅಕ್ಷರ ಛಂದಸ್ಸಿಗೆ ಅಚ್ಚಗನ್ನಡವನ್ನು ಒಗ್ಗಿಸುವ ಬಗೆ, ಕನಕಸ್ವಾಮಿಯ ಪ್ರಸಂಗದಂತಹ ಸನ್ನಿವೇಶಗಳಲ್ಲಿ ಸೇರಿಸಿರುವ ಜಾನಪದ ಸಂಸ್ಕೃತಿ ವಿವರಗಳು ಮತ್ತು, ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಕಾಲದ ಜನರ ತಲ್ಲಣಗಳು ತವಕಗಳು, ಭಾವನೆ-ನಂಬಿಕೆಗಳು, ನೋವು

ನಲಿವುಗಳು, ಆಸೆ ಆಕಾಂಕ್ಷೆಗಳು ಇವೆಲ್ಲ ಒಗ್ಗೂಡಿ ‘ದೇಸಿ’ಯಾಗುತ್ತದೆ ಎಂದು ನನ್ನ ಭಾವನೆ. ‘ಆದಿಪುರಾಣ’ದಲ್ಲಿ ಒಂದು ಮತಧರ್ಮದವರ ಆರಾಧ್ಯ ವ್ಯಕ್ತಿತ್ವದ ಚಿತ್ರಣವನ್ನು ಜೈನೀಯ ಪರಿಭಾಷೆಯ ಮೂಲಕವೂ ಅದರ ಚೌಕಟ್ಟಿನ ಪರಿಧಿಯಲ್ಲಿಯೂ ಮಾಡುತ್ತಲೇ, ಜೀವನ

ಪಾವನವಾಗುವುದು ಹೇಗೆ, ನೀರು ತೀರ್ಥವಾಗುವುದು ಹೇಗೆ, ವ್ಯಕ್ತಿಯ ಬದುಕಿನ ಸಾರ್ಥಕತೆ ಎಲ್ಲಿ ಎಂಬುದರ ಬಗ್ಗೆ ಧ್ಯಾನಿಸಿದ್ದರೆ [ಆ ಕಾರಣದಿಂದಲೇ ಅದು ಧಾರ್ಮಿಕ, ಏಕೆಂದರೆ ಧಾರ್ಮಿಕತೆ ಎಂಬುದು ವೈಯಕ್ತಿಕ ಸಾರ್ಥಕತೆಯ ತುರ್ತೇ ವಿನಾ ಸಾಮೂಹಿಕ ಕ್ರಿಯೆಯಲ್ಲ]

‘ವಿಕ್ರಮಾರ್ಜುನವಿಜಯ”ವು ತನ್ನ ಕಾಲದ ಸಾಮಾಜಕ ನಂಬಿಕೆಗಳು, ವಾಸ್ತವಗಳು ಇವುಗಳ ಸ್ವರೂಪದ ವಿವರಗಳ ನಡುವೆಯೇ ಒಡಲಾಳದ ಸಂವೇದನೆಯನ್ನು ಒಳಗೊಳ್ಳುತ್ತದೆ. ಮಾನವನ ಬದುಕೆಂದರೆ ಎರಡು ನೆಲೆಯದು: ಆಂತರಿಕ ಬದುಕು, ಮತ್ತು ಸಾಮಾಜಿಕ

ಬದುಕು; ವ್ಯಕ್ತಿಯ ಆಶೋತ್ತರಗಳು ಮತ್ತು ಸಾಮಾಜಿಕ ಹೊಣೆಗಾರಿಕೆಗಳು. ಪಂಪನ ಈ ಎರಡು ಕಾವ್ಯಗಳು ಮಾನವ ಬದುಕಿನ ಎರಡು ಮುಖ್ಯ ನೆಲೆಗಳನ್ನು ಕುರಿತ ಪ್ರಾತಿಭ ಕಾಣ್ಕೆಯ ಫಲ. ಎಲ್ಲ ಕಾಲದ ಮಾನವ ಬದುಕಿನ ಪರಿಯೂ ಇದೇ ಆದುದರಿಂದ, ಆಯಾ ಕಾಲಕ್ಕೆ

ಅನುಗುಣವಾಗಿ ಓದುಗರಿಗೆ
ಇಂತಹ ಕಾವ್ಯಗಳು
ಓದುಗರಲ್ಲಿ ಅರಳುತ್ತ,
ಪ್ರಸ್ತುತವಾಗುತ್ತವೆ.
ಹೀಗಾಗಿಯೇ ಈ ಕಾವ್ಯಗಳು
ಒಂದು ಸಾವಿರದ ಎಪ್ಪತ್ತು
ವರ್ಷಗಳ ತಮ್ಮ
ಇರುವಿಕೆಯಲ್ಲಿ ಎಲ್ಲ ಕಾಲದ
ಕಾವ್ಯಾಸಕ್ತರ ಹೃದಯವನ್ನು
ಗೆಲ್ಲಲು ಸಾಧ್ಯವಾಗಿದೆ.

ಅಂದರೆ, ಪಂಪನ ಕಾವ್ಯಗಳ ಶ್ರೇಷ್ಠತೆಯಿರುವುದು ಅದರ ಹೂರಣದಲ್ಲಿ. ಕನ್ನಡಿಗರ ಬದುಕಿನ ಸಂವೇದನೆ ಎಲ್ಲಕಾಲಕ್ಕೂ ಒಂದೇ, ತನ್ನದೇ ವಿಶಿಷ್ಟ ರೂಪದ್ದು. ಇದೇ 'ಕನ್ನಡತನ', ಅಂದರೆ ಕನ್ನಡಿಗರು ಬದುಕನ್ನು ಗ್ರಹಿಸಿಕೊಳ್ಳುವ ಕ್ರಮ. ಪ್ರಾಯಶಃ ಅದೇ ದೇಸಿ. ಪಂಪ ತನ್ನ ಕಾವ್ಯದ ವೈಶಿಷ್ಟ್ಯವೆಂದರೆ

‘ದೇಸಿ’ ಎಂದು ಹೇಳಿಕೊಳ್ಳುವವುದರ ಹಿಂದೆ ಈ ಮನೋಭಾವವಿರಬಹುದು. ಇದನ್ನು ಮುಂದಿನ ಕವಿಗಳೂ ಮೆಚ್ಚಿಕೊಂಡಿದ್ದಾರೆ; ‘ಪಂಪನ ದೇಸಿ’ ಎನ್ನುವುದು ಒಂದು ನುಡಿಗಟ್ಟಾಗಿಬಿಟ್ಟಿದೆ. ಅಷ್ಟು ಮಾತ್ರವಲ್ಲ, ಪಂಪ ಯಾವುದೇ ಅಭಿವ್ಯಕ್ತಿವಿಧಾನದಲ್ಲಿ ಅಂತರ್ವಾಹಿನಿಯಾಗಿರಬೇಕಾ

ದುದು ದೇಸಿಯೇ ಎಂಬ ಅಭಿಪ್ರಾಯದವಾಗಿ ಕಾಣುತ್ತಾನೆ. ಆದ್ದರಿಂದಲೇ 'ಬಗೆ ಪೊಸತಪ್ಪುದಾಗಿ ದೇಸಿಯೊಳ್ ಪುಗುವುದು, ಪೊಕ್ಕ ಮಾರ್ಗದೊಳೆ ತಳ್ಪುದು' ಎನ್ನುವುದು. ಇಲ್ಲಿ ‘ಬಗೆ ಪೊಸತಪ್ಪುದಾಗಿ’ ಎಂಬ ಮಾತು 'ಆದಿಪುರಾಣಕ'ದ “ಇದು ನಿಚ್ಚಂ ಪೊಸತು ಅರ್ಣವಂಬೊಳ್ ಅತಿ

ಗಂಭೀರಂ ಕವಿತ್ವಂ” ಎಂಬ ವಾಕ್ಯವನ್ನು ನೆನಪಿಸುತ್ತದೆ. ಹೊಸತಾಗುವುದೆಂದರೆ ಅಪರಿಮಿತ ದೃಷ್ಟಿಕೋನಗಳಿಗೆ ಅನ್ವಯಿಸಬಹುದಾದುದು, ಪ್ರತಿ ಓದುಗನಿಗೂ ಪ್ರತಿ ಪೀಳಿಗೆಗೂ ಪ್ರಸ್ತುತವಾಗಿ ಕಾಣುವುದು ಎಂದರ್ಥ. ಕನ್ನಡ ಕಾವ್ಯ ಹೀಗಾಗಬೇಕಾದರೆ ಅದರ ಒಡಲಲ್ಲಿ ‘ದೇಸಿ’ ಅಥವಾ ‘ಕನ್ನಡತನ’

ಹುದುಗಿರಬೇಕು. ಇದು ಎಲ್ಲ ಕಾಲದ ಎಲ್ಲ ಬಗೆಯ ಕನ್ನಡ ಸಾಹಿತ್ಯದ ಮಾಗದರ್ಶಿ ಅಂಶ. ಇದನ್ನು ಮುಂದಿನ ಕನ್ನಡ ಕಾವ್ಯ ಪರಂಪರೆ ಒಪ್ಪಿದೆ. ಅದಕ್ಕಾಗಿಯೇ ಪಂಪ ಸಾವಿರ ವರ್ಷದ ಸರದಾರನಾಗಿದ್ದಾನೆ. ನಾಗರಾಜನೆಂಬ ಒಬ್ಬ ಹಿಂದಿನ ಕವಿಯಂತೂ “ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ”

ಎಂದು ಉದ್ಗರಿಸಿದ್ದಾನೆ. ಇವತ್ತೂ ಕನ್ನಡ ಸಾಹಿತ್ಯ ಜನಸಂವೇದನೆಗೆ ಮಿಡಿಯುವುದನ್ನು ತನ್ನ ಆದರ್ಶವಾಗಿ ಸ್ವೀಕರಿಸಿದೆ. ಆ ಕಾರಣಕ್ಕಾಗಿ ಪಂಪ ‘ಆದಿಕವಿ’ಯಾಗಿದ್ದಾನೆ, ಅವನ ಕಾವ್ಯಗಳು ಇಂತಹವಲ್ಲದ ರಚನೆಗಳನ್ನು ‘ಇಕ್ಕಿ ಮೆಟ್ಟಿವೆ’.[೧]

- (by Narayana Pradhan: ಓದುಗರು ಈ ಬ್ಲಾಗ್‌ನಲ್ಲಿ ಪ್ರಕಟವಾಗುವ ಲೇಖನಗಳನ್ನು ಓದಲು, ಪ್ರತಿ ಮಾಡಿಕೊಳ್ಳಲು ಹಾಗೂ ಮುದ್ರಿತ ಪ್ರತಿಯನ್ನು ಪಡೆದುಕೊಳ್ಳಲು ನನ್ನ ಅಭ್ಯಂತರವಿಲ್ಲ.[0] (http://pvnarayana42.blogspot.in/2013/10/blog-post_18.html)

ಪಂಪ: ಕವಿ-ಕೃತಿ ಪರಿಚಯ

<ಪಂಪಭಾರತ

ಪಂಪ: ಕವಿ ಪರಿಚಯ

- ಪಂಪನ ಜನನ : ಕ್ರಿ.ಶ. ೯೦೨, ದುಂದುಭಿ ಸಂವತ್ಸರ
- ತಂದೆ : ಅಭಿರಾಮ ದೇವರಾಯ (ರೂಢಿಯ ಹೆಸರು:ಭೀಮಪ್ಪಯ್ಯ.)
- ತಾಯಿ: ಅಬ್ಬಣಬ್ಬೆ (ಬೆಳ್ವೊಲದಣ್ಣಿಗೆರೆಯ ಜೋಯಿಸ ಸಿಂಘನಮೊಮ್ಮಗಳು)
- ಮಾಧವ ಸೋಮಯಾಜಿ:->ಅಭಿಮಾನ ಚಂದ್ರ -> ಕೊಮರಯ್ಯ (ಈ ಮೂವರೂ ಬ್ರಾಹ್ಮಣರು) ->

ಅಭಿರಾಮ ದೇವರಾಯ (ಜೈನಮತಕ್ಕೆ ಸೇರಿದನು) -> ಪಂಪ (ಜೈನ) [೧]

- ಜನ್ಮಸ್ಥಳ : ವೆಂಗಿ ಪುಳುಪು, ವೆಂಗಿ ಮಂಡಳ (ಆಂಧ್ರ), ವೇಮಲವಾಡ,ರಾಜಮಂಡ್ರಿಜಿಲ್ಲೆ (ವೆಂಗಿಪಳು ಎಂಬ ಅಗ್ರಹಾರ)
- ಗುರು : ದೇವೇಂದ್ರಮುನಿ
- ವಿದ್ಯಾಭ್ಯಾಸ :ಗಣಿತ, ವ್ಯಾಕರಣ,ಅಲಂಕಾರ, ಸಂಗೀತ, ನಾಟ್ಯ, ಶಿಲ್ಪ, ವೈದ್ಯ, ವೇದಶಾಸ್ತ್ರವನ್ನು ಗುರುಕುಲದಲ್ಲಿ ಅಭ್ಯಾಸ ಮಾಡಿದ್ದನು. ದೇವೇಂದ್ರ ಮುನೀಂದ್ರಈತನ ಗುರುಗಳು.
- ವೃತ್ತಿ: ವೆಂಗಿ ಚಾಲುಕ್ಯವಂಶದ ಎರಡನೆಯ ಅರಿಕೇಸರಿಯ ಆಸ್ಥಾನ ಪಂಡಿತ.

ಸಾಹಿತ್ಯ ಕೃತಿಗಳು

- ಆದಿಪುರಾಣ-ಮೊದಲನೆಯ ತೀರ್ಥಂಕರನಾದ ಪುರದೇವ/ವೃಷಭದೇವನ ಬಗ್ಗೆ ರಚಿತವಾದ

ಜೈನಕಾವ್ಯ, ಜಿನಸೇನಾಚಾರ್ಯರಸಂಸ್ಕೃತಕಾವ್ಯ, ಪೂರ್ವಪುರಾಣ ಇದರ ಆಕರ ಗ್ರಂಥ. ಇದರಲ್ಲಿ ೧೬ಆಶ್ವಾಸಗಳು ಮತ್ತು ೧೫೫೫ ಪದ್ಯಗಳೂ ಇವೆ. ಇದರಲ್ಲಿ ಪ್ರಮುಖವಾಗಿಆದಿತೀರ್ಥಂಕರನಾದ ವೃಷಭದೇವ ಮತ್ತು ಅವನ ಮಕ್ಕಳಾದ ಭರತ ಮತ್ತು ಬಾಹುಬಲಿಗಳ ಪ್ರಸಂಗವು ಚಿತ್ರಿತವಾಗಿದೆ ಹಾಗೂ ಜೈನಧರ್ಮದ ವರ್ಣನೆಯ ಜೊತೆಗೆ ಸರ್ವಧರ್ಮದ ಸಮನ್ವಯವನ್ನು ಮೆರೆದಿದ್ದಾನೆ.

- ವಿಕ್ರಮಾರ್ಜುನ ವಿಜಯ-ಪಂಪಭಾರತವೆಂದೇ ಪ್ರಸಿದ್ಧಿ. ಇದರಲ್ಲಿವ್ಯಾಸರಚಿತವಾದ ಮಹಾಭಾರತವನ್ನು ಕನ್ನಡಕ್ಕೆ ತಂದ ಕೀರ್ತಿ ಪಂಪನಿಗೆ ಸಲ್ಲುತ್ತದೆ. ಪಂಪ ಭಾರತದಲ್ಲಿ ಅರ್ಜುನನನ್ನು ಪ್ರಧಾನ ಭೂಮಿಕೆಯಲ್ಲಿ ನಿಲ್ಲಿಸಿ ತನ್ನ ದೊರೆ ಅರಿಕೇಸರಿಗೆ ಹೋಲಿಸಿದ್ದಾನೆ. ಮಹಾಭಾರತದ ಕಾವ್ಯದ ವರ್ಣನೆಯ ಜೊತೆಗೆ ಪಂಪ ತನ್ನ ಕಾಲದ ಸಮಾಜದ ನಾಗರೀಕತೆ, ಸಂಪ್ರದಾಯ, ಸಂಸ್ಕೃತಿ ಹಾಗೂ ಜನ ಸಾಮನ್ಯರ ಜೀವನದ ಪೂರ್ಣ

ಚಿತ್ರಣನೀಡಿದ್ದಾನೆ. ಅಂದಿನ ಕಾಲದ ಆಟಗಳು, ವಿದ್ಯಾಭ್ಯಾಸ ಪದ್ಧತಿ, ಜನರ ವಿಲಾಸಿಜೀವನ, ಪ್ರಕೃತಿ ಸೌಂದರ್ಯವನ್ನು ಸೊಗಸಾಗಿ ಚಿತ್ರಿಸಿದ್ದಾನೆ.

ಪ್ರಶಸ್ತಿ, ಪುರಸ್ಕಾರ, ಬಿರುದು:

- ಸಂಸಾರ ಸಾರೋದಯ, ಸರಸ್ವತೀ ಮಣಿಹಾರ, ಕವಿತಾಗುಣಾರ್ಣವ, ಆದಿಕವಿ, ಕನ್ನಡ ಕಾವ್ಯಗಳ ಜನಕ, ನಾಡೋಜ, ನೂತನ ಯುಗ ಪ್ರವರ್ತಕ.
- "ಏಂ ಕಲಿಯೋ, ಸತ್ಕವಿಯೋ ಕವಿತಾಗುಣಾರ್ಣಭವಂ"ಎಂದು ಪಂಪನನ್ನು ಹೊಗಳಿದ್ದಾರೆ. "ಪಸರಿಪ ಕನ್ನಡಕ್ಕೊರ್ವನೇ ಸತ್ಕವಿ ಪಂಪನಾವಗಂ" ಎಂದು ನಾಗರಾಜ ಕವಿಯು ಪಂಪನನ್ನು ಹೊಗಳಿದ್ದಾನೆ.

ಕವಿ ಸಂದೇಶ:

- '**ಧರ್ಮಂ ಪ್ರಧಾನಂ ಅರ್ಥಂ ಧರ್ಮಾಂಘ್ರಿಪಫಳಂ ಅದರ್ಕ್ಕೆರಸಮದುಕಾಮಂ**'- ಇದು ಪಂಪನ ಜೀವನ ದೃಷ್ಟಿ.
- **ಪದ ವಿಭಾಗ:**ಧರ್ಮಂ ಪ್ರಧಾನಂ, ಅರ್ಥಂ ಧರ್ಮ ಅಂಘ್ರಿಪ ಫಳಂ, ಅದರ್ಕ್ಕೆ ರಸಮದು ಕಾಮಂ
- **ಅರ್ಥ:**ಜೀವನಕ್ಕೆ ಮುಖ್ಯವಾದ ಧರ್ಮ, ಅರ್ಥ,ಕಾಮ, ಇವುಗಳಲ್ಲಿ ಧರ್ಮವು ಎಲ್ಲಕ್ಕೂ ಪ್ರಧಾನವು ಎಂದರೆ ಮುಖ್ಯವು, ಅರ್ಥವು ಎಂದರೆ ಸಂಪತ್ತು ಅಥವಾ ಧನವು, ಅದು ಧರ್ಮವೆಂಬ ಮರದ ಫಲವು/ ಹಣ್ಣು; ಆ ಫಲದ ರಸ ಅಥವಾ ಸಾರವೇ ಕಾಮವು ಎಂದರೆ ಅಗತ್ಯ ಬಯಕೆಗಳ ಈಡೇರಿಕೆ. ಧರ್ಮದಿಂದ ಬಯಕೆಗಳನ್ನು ಈಡೇರಿಸಿಕೊಳ್ಳಬೇಕು ಎಂಬುದು ಭಾವ.

ಬನವಾಸಿಯ ವರ್ಣನೆ

- ಕವಿಯ ಭಾಷಾಶೈಲಿಯ ಪರಿಚಯಕ್ಕಾಗಿ ಕೆಲವು ಪದ್ಯಗಳನ್ನು ಕೊಟ್ಟಿದೆ. (ಶ್ರೀ.ಡಿ.ಎಲ್ ನರಸಿಂಹಾಚಾರ್ಯರು ಪಂಪಭಾರತ ದೀಪಿಕೆಯಲ್ಲಿ ಈ ಸಾಲುಗಳು ಭಾವಗೀತೆಯಂತಿದೆ ಎಂದಿದ್ದಾರೆ.)
- ಕನ್ನಡನಾಡಿನ ಬಗ್ಗೆ ಅಪಾರ ಹೆಮ್ಮೆಯಿಂದ ತನ್ನ ಕಾವ್ಯದಲ್ಲಿ ಹೊಗಳಿದ್ದಾನೆ.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ......ko ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್|| ೪- ೨೮||

ಪದವಿಭಾಗ: ಸೊಗಸಾಗಿ ಬಂದ ಮಾಮರನೆ ತಲ್ತ ಎಲೆವಳ್ಳಿಯೆ ಪೂತಜಾತಿ ಸಂಪಗೆಯೆ ಕುಕಿಲ್ವ ಕೋಗಿಲೆಯೆ ಪಾಂಡುವ ತುಂಬಿಯೆ ನ

ಪದ ಅನ್ವಯ:ಬನವಾಸಿ ದೇಶದೊಳ್ ಒಳಂ, ಆವ ಬೆಟ್ಟುಗಳ ಒಳಮ ಆವ ನಂದನಂಗಳು ಒಳಂ ನೋಳ್ಪೊಡೆ, ಸೊಗಸಾಗಿ ಬಂದ ಮಾ

- **ಅರ್ಥ:**

ಆ ಬನವಾಸಿ ದೇಶದ ಯಾವ ಬೆಟ್ಟಗಳಲ್ಲಿಯೂ ಉದ್ಯಾನವನಗಳಲ್ಲಿಯೂ ನೋಡುವುದಾದರೆ ಸೊಗಸಾಗಿ ಫಲ ಬಿಟ್ಟಿರುವ ಮಾವಿನ ಮರಗಳೇ; ದಟ್ಟವಾಗಿ ಸೇರಿಕೊಂಡಿರುವ ವಿಳ್ಯೆಯದೆಲೆಯ ಬಳ್ಳಿಗಳೇ, ಹೂವನ್ನು ಬಿಟ್ಟಿರುವ ಜಾಜಿ ಮತ್ತು ಸಂಪಗೆ ಗಿಡಗಳೇ; ಸುಸ್ವರವಾಗಿ ಧ್ವನಿಮಾಡುವ ಕೋಗಿಲೆ, ಝೇಂಕರಿಸುವ ದುಂಬಿಗಳೇ, ಪ್ರೇಯಸಿಯರ ಒಳ್ಳೆಯ ಮುಖಗಳೇ, ನಗುಮುಖದಲ್ಲಿ ಪ್ರತಿಭಟಿಸಿ ಕೂಡುವ ನಲ್ಲರೇ.

-$-

ತ್ಯಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್|| ೪-೨೯||

ಪದ ವಿಭಾಗ:ತ್ಯಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರವಾದ ಮಾನಸರೆ ಮಾನಸರು; ಅಂತವರಾ

ಪದ-ಅನ್ವಯನುಸಾರ: ವನವಾಸಿ ದೇಶದೊಳ್ ತ್ಯಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳ್ಗೆ ಆಗರವಾದ ವ

- ## ಅರ್ಥ:

ಆ ಬನವಾಸಿ ದೇಶದಲ್ಲಿ ತ್ಯಾಗ, ಭೋಗ, ವಿದ್ಯೆ, ಸಂಗೀತ-ಗೋಷ್ಠಿಗಳ ಸಂತೋಷ ಸೌಖ್ಯಕ್ಕೆ ಅರ್ಹರಾಗಿರುವ ಮನುಷ್ಯರೇ ಮನುಷ್ಯರು. ಅಂತಹ ಅದೃಷ್ಟಶಾಲಿಗಳಾದ ಮನುಷ್ಯರಾಗಿ ಹುಟ್ಟಲು ಏನಾದರೂ ತಾನೇ ಸಾಧ್ಯವೇ? ಹಾಗೆ ಸಾಧ್ಯವಾಗದಿದ್ದರೂ ಆ ಬನವಾಸಿ ದೇಶದ ನಂದನವನಗಳಲ್ಲಿ ಮರಿದುಂಬಿಯಾಗಿಯೋ ಅಥವಾ ಕೋಗಿಲೆಯಾಗಿಯೋ ಹುಟ್ಟಬೇಕು.

-$-

ತೆಂಕಣಗಾಳಿ ಸೋಂಕಿದೊಡಂ ಒಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆ ನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ|| ೪-೩೦||

ಪದವಿಭಾಗ:ತೆಂಕಣಗಾಳಿ ಸೋಂಕಿದೊಡಂ ಒಳ್ನುಡಿ (ಗೇ)ಕೇಳ್ದೊಡಂ ಮಿಂಪನು ಆಳ್ದ ಗೇಯಂ ಕಿವಿ (ವೊ)ಹೊಕ್ಕೊಡಂ ಬಿರಿದ ಮಲ್ಲಿಗೆ (

ಪದ-ಅನ್ವಯನುಸಾರ: ತೆಂಕಣಗಾಳಿ ಸೋಂಕಿದೊಡಂ, ಒಳ್ನುಡಿ (ಗೇ)ಕೇಳ್ದೊಡಂ, (ಮಿ) ಇಂಪನು ಆಳ್ದ ಗೇಯಂ ಕಿವಿ (ವೊ)ಹೊಕ್ಕೊಡಂ

***ಅರ್ಥ**:

ಅತಿಸುಖಹೇತುಗಳಾದ) ದಕ್ಷಿಣ ದಿಕ್ಕಿನ ತಂಪಾದ ಗಾಳಿಯ ಸ್ಪರ್ಶವಾದರೂ, ಒಳ್ಳೆಯ ಮಾತನ್ನು ಕೇಳಿದರೂ, ಇಂಪಾದ ಗಾನವು ಕಿವಿಯನ್ನು ಪ್ರವೇಶಿಸಿದರೂ, ಅರಳಿದ ಮಲ್ಲಿಗೆಯ ಹೂವನ್ನು ಕಂಡರೂ, ನಿದ್ರಾಮುದ್ರಿತವಾದ ರತಿಸೌಖ್ಯಕ್ಕೆ ಪಾತ್ರವಾದರೂ, ವಸಂತೋತ್ಸವ ಪ್ರಾಪ್ತವಾದರೂ, ಏನು ಹೇಳಲಿ (ಯಾರು ಬೇಡವೆಂದು ತಡೆದು) ಅಂಕುಶದಿಂದ ತಿವಿದರೂ, ನನ್ನ ಮನಸ್ಸು ಬನವಾಸಿ ದೇಶವನ್ನು ನೆನೆಯುವುದು.

[೨] [೩] -೦-

ಪಂಪಭಾರತ

ಅನುಬಂಧ 16	**ಪಂಪ:ಕವಿ-ಕೃತಿ ಪರಿಚಯ**	ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	1	2	3	4	5	6	7
ಪಂಪ - ಒಂದು ಚಿಂತನೆ	ವ್ಯಾಸ ಭಾರತ ಮತ್ತು ಪಂಪಭಾರತ: ಪರಾಮರ್ಶೆ	ಪಂಪಭಾರತ:ಕಥಾ ಸಾರಾಂಶ	8	9	10	11	12	13	14

ನೋಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ |
ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು|ಸಂಸ್ಕೃತ ಸಾಹಿತ್ಯ

ಉಲ್ಲೇಖ

1. *(ಆದಿ ಪುರಾಣ ಮತ್ತು ಪಂಪ ಭಾರತದ ಹದಿನಾಲ್ಕನೇಅಶ್ವಾಸ ೪೦ ನೇ ಪದ್ಯದಿಂದ)*
2. *ಪಂಪ ಭಾರತ - ಗದ್ಯಾನುವಾದ (ಲೇಖಕರು- ಎನ್ .ಅನಂತರಂಗಾಚಾರ್) ಕೃಪೆ:- ಕಣಜ*
3. *ಪಂಪ ಭಾರತ ಡಿ.ಎಲ್.ನರಸಿಂಹಾಚಾರ್ ಕನ್ನಡ ಅಭಿವೃದ್ಧಿ ಪ್ರಾಧಿಕಾರ*

"https://kn.wikisource.org/w/index.php?title=ಪಂಪ:ಕವಿ-ಕೃತಿ_ಪರಿಚಯ&oldid=279436" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೮ ಸೆಪ್ಟೆಂಬರ್ ೨೦೨೫, ೧೧:೧೭ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಪ್ರಥಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪ್ರಥಮಾಶ್ವಾಸಂ

(ಮೂಲ = ೧೯೩೧ ರಮುದ್ರಣ- ಪಂಪ ಭಾರತ - ವಿಕ್ರಾಮಾರ್ಜುನ ವಿಜಯ) (IIX-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

- ## ಪೀಠಿಕೆ ಸ್ತುತಿಗಳು:

ನಾರಾಯಣ ಸ್ತುತಿ:

ಉ|| ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ಜೀಯನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ | ತ್ಮೀಯ ಸುಪುಷ್ಪಪಟ್ಟಮನೊಡಂಬಡೆ ತಾಳ್ದಿಯುಮಿಂತುದಾತ್ತ ನಾ

ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ||೧||

ಪದವಿಭಾಗ:ಶ್ರೀಯಂ ಆರಾತಿ(ಶತ್ರು) ಸಾಧನ (ಸಾಧನವೆಂಬ) ಪಯೋನಿಧಿಯೊಳ್(ಪಯೋ ನಿಧಿಯಿಂದ - ಸಮುದ್ರದಿಂದ) ಪಡೆದುಂ ಧರಿತ್ರಿಯಂ ಜೀಯೆನೆ(ಜೀಯ ಎಂದು) ಬೇಡಿಕೊಳ್ಳದೆ ವಿರೋಧಿ

ನರೇಂದ್ರರನ್ ಒತ್ತಿಕೊಂಡುಂ ಆತ್ಮೀಯ ಸುಪುಷ್ಪಪಟ್ಟಮನು (ಕಿರೀಟ) ಒಡಂಬಡೆ ತಾಳ್ದಿಯುಂ (ಧರಿಸು) ಇಂತು ಉದಾತ್ತ ನಾರಾಯಣನಾದ ದೇವನು ಎಮಗೆ ಈಗೆ (ಈಗೆ=ಕೊಡಲಿ) ಅರಿಕೇಸರಿ ಸೌಖ್ಯಕೋಟಿಯಂ.

೧.ಅರ್ಥ:ಅಮೃತಮಥನ ಕಾಲದಲ್ಲಿ ಹುಟ್ಟಿದ ಲಕ್ಷ್ಮಿಯನ್ನು ಶ್ರಮವಿಲ್ಲದೆ

ಪಡೆದ, ಬಲಿಚಕ್ರವರ್ತಿಯಿಂದ
ಬೇಡಿ ಭೂಮಿಯನ್ನು ಪಡೆದ,
ಪುಷ್ಪಪಟ್ಟವೆಂಬ ಸಾಮಾನ್ಯ
ತಲೆಯಲ್ಲಿ ಧರಿಸಿದ
ಕಿರೀಟವನ್ನು ಪಡೆದ
ನಾರಾಯಣನಂತಲ್ಲದೆ
ಶತ್ರುಸೈನ್ಯವೆಂಬ ಸಮುದ್ರದ
ಮಂಥನದಿಂದ
ಜಯಲಕ್ಷ್ಮಿಯನ್ನು ಬೇಡದೆ
ಶತ್ರುರಾಜರುಗಳನ್ನು
ಸೋಲಿಸಿ, ಭೂಮಿಯನ್ನೂ

ತನ್ನ ಯೋಗ್ಯತೆಗೆ ಅನುಗುಣವಾದ ಸುಪುಷ್ಪಪಟ್ಟವೆಂಬ ಶಿರೋಭೂಷಣವನ್ನು ಪಡೆದು ಉದಾತ್ತ ನಾರಾಯಣನು ಎನಿಸಿಕೊಂಡಿರುವ ದೇವನಾದ ಅರಿಕೇಸರಿಯು ನಮಗೆ ಸೌಖ್ಯರಾಶಿಯನ್ನು ಕೊಡಲಿ.

- **ಟಿಪ್ಪಣಿ**:ಇಲ್ಲಿ ಕವಿ ತನ್ನ ಪೋಷಕನಾದ ಅರಿಕೇಸರಿ

ದೊರೆಯನ್ನು ನಾರಾಯಣನಿಗೆ ಹೋಲಿಸಿ, ಸ್ತುತಿ ಮಾಡಿದ್ದಾನೆ.

---@@@---

ಶಿವಸ್ತುತಿ:

ಚಂ|| ಮುಳಿಸು
ಲಲಾಟನೇತ್ರಶಿಖಿ ಮೆಚ್ಚೆ
ವಿನೂತ ರಸಪ್ರಸಾದಮು
ಜ್ಜಳ ಜಸಮಂಗಸಂಗತ
ಲಸದ್ಭಸಿತಂ ಪ್ರಭುಶಕ್ತಿ ಶಕ್ತಿ ನಿ|
ರ್ಮಳಮಣಿಭೂಷಣಂ
ಫಣಿವಿಭೂಷಣಮಾಗೆ

ನೆಗೞ್ತೆಯಂ ಪುದುಂ ಗೊಳಿಸಿದನೀಶ್ವರಂ ನೆಗೞ್ದುದಾರ ಮಹೇಶ್ವರನೀಗೆ ಭೋಗಮಂ ‖ ೨ ‖

ಪದವಿಭಾಗ:ಮುಳಿಸು ಲಲಾಟನೇತ್ರಶಿಖಿ (ಶಿವ) ಮೆಚ್ಚೆ ವಿನೂತ ರಸಪ್ರಸಾದಂ (ಮೆಚ್ಚಿಕೆಯ ಆನಂದದ ಕೊಡಿಗೆ) ಉಜ್ಜಳ ಜಸಮ್ (ಉಜ್ವಲ ಕೀರ್ತಿ/ ಯಶಸ್ಸು), ಅಂಗಸಂಗತ (ಮೈಗೆ ಬಳಿದ)

ಲಸತ್ ಭಸಿತಂ (ಶೋಭೆಯ
ಭಸ್ಮ) ಪ್ರಭುಶಕ್ತಿ ಶಕ್ತಿ (ರಾಜನ
ಆಳ್ವಿಕೆ ಶಕ್ತಿ, ಪಾರ್ವತಿ
ಶಕ್ತಿದೇವಿಗೆ ಸಮ)ನಿರ್ಮಳ
ಮಣಿಭೂಷಣಂ
ಫಣಿವಿಭೂಷಣಂ
(ಮಣಿಕಂಠಹಾರ ರಾಜನ
ಶಿವನಂತೆ ಸರ್ಪ
ಹಾರವುಳ್ಳವನು) ಆಗೆ
(ಆಗಿರಲು) ನೆಗೞ್ತೆಯಂ
(ಕೀರ್ತಿಯನ್ನು)

ಪುದುಂಗೊಳಿಸಿದಂ (ತನ್ನಲ್ಲಿ ಸೇರಿಸಿಕೊಂಡನು)ಈಶ್ವರಂ ನೆಗಬ್ಟ್ದಿ (ಪ್ರಸಿದ್ಧ) ಉದಾರ ಮಹೇಶ್ವರನು ಈಗೆ (ಕೊಡಲಿ)ಭೋಗಮಂ(ಸುಖ ವನ್ನು).

೨.ಅರ್ಥ: ಅರಿಕೇಸರಿಯ ಕೋಪವೇ ಈಶ್ವರನ ಹಣೆಗಣ್ಣಿನ ಬೆಂಕಿಯಾಗಿರಲು ಅವನ ಮೆಚ್ಚಿಗೆಯೇ ಶ್ಲಾಘ್ಯವೂ ರಸಯುಕ್ತವೂ

ಆದ ಅವನ ಪ್ರಸಾದ.
ಅರಿಕೇಸರಿಯ ಯಶಸ್ಸೇ
ಈಶ್ವರನು ಶರೀರಕ್ಕೆ
ಲೇಪಿಸಿಕೊಂಡಿರುವ
ಕಾಂತಿಯುಕ್ತವಾದ
ವಿಭೂತಿಯಾಗಿರಲು
ಅರಿಕೇಸರಿಯ
ಶಕ್ತಿತ್ರಯಗಳಲ್ಲಿ ಒಂದಾದ
ಪ್ರಭುಶಕ್ತಿ ಈಶ್ವರನ
ಶಕ್ತಿದೇವತೆಯಾಗಿರಲು ಇವನ
ನಿರ್ಮಲವಾದ

ರತ್ನಭೂಷಣಗಳೇ ಅವನ ನಾಗಭೂಷಣವಾಗಿರಲು ವಿಶೇಷ ಪ್ರಸಿದ್ಧಿಯನ್ನು ತನ್ನಲ್ಲಿ ಅಳವಡಿಸಿಕೊಂಡಿರುವ ಈಶ್ವರನೂ ಉದಾರಮಹೇಶ್ವರನೆಂದು ಪ್ರಸಿದ್ದಿಯನ್ನು ಪಡೆದಿರುವ ಅರಿಕೇಸರಿಯೂ ಸೌಖ್ಯರಾಶಿಯನ್ನು ಕೊಡಲಿ.

- **ಟಿಪ್ಪಣಿ**:ಇಲ್ಲಿ ಕವಿ ತನ್ನ ಪೋಷಕನಾದ ಅರಿಕೇಸರಿ

ದೊರೆಯನ್ನು ಶಿವನಿಗೆ ಹೋಲಿಸಿ, ಸ್ತುತಿ ಮಾಡಿದ್ದಾನೆ.

---@@@---

ಸೂರ್ಯ ಸ್ತುತಿ:

ಉ|| ಚಂಡ ವಿರೋಧಿಸಾಧನ
ತಮಸ್ತಮಮೋಡೆ ವಿಶಿಷ್ಟ
ಪದ್ಮಿನೀ
ಷಂಡಮರಲ್ದು
ರಾಗದಿನೊಱಲ್ದಿರೆ ಯಾಚಕ
ಭೃಂಗಕೋಟಿ ಕೈ|

ಕೊಂಡು ನಿರಂತರಂ ತಗುಳ್ದು ಕೀರ್ತಿಸೆ ಮಿಕ್ಕೆಸೆವ ಪ್ರಚಂಡ ಮಾ ರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ|| ೩ ||

ಪದವಿಭಾಗ:3.ಚಂಡ - ಕ್ರೂರ, ವಿರೋಧಿ - ಶತ್ರು, ಸಾಧನ- ಸೈನ್ಯವಾದ,, ತಮಸ್ತಮಂ ಕತ್ತಲೆಯನ್ನು, ಓಡೆ – ಓಡಿಸಲು, ವಿಶಿಷ್ಟ

ಪದ್ಮಿನೀ ಷಂಡಂ (ಸಮೂಹ) ಅರಲ್ದು - ಕಮಲಗಳ ಸಮೂಹ / ಪದ್ಮಿನೀ ಜಾತಿಯ ಸ್ತ್ರೀ ಸಮೂಹ ಅರಳಿ, ರಾಗದಿಂ ಒರ/ಱಲ್ದಿರೆ - ಪ್ರೀತಿಯಿಂದ ಒಲಿದಿರಲು, ಹಾಡುತ್ತಿರಲು, ಯಾಚಕ ಭೃಂಗಕೋಟಿ - ಬೇಡುವವರು ಎಂಬ ದುಂಬಿಗಳ ಸಮೂಹ, ಕೈ ಕೊಂಡು – ಒಪ್ಪಿ ನಿರಂತರಂ ತಗುಳ್ದು – ಎಡಬಿಡದೆ

ಹಿಂಬಾಲಿಸಿ, ಕೀರ್ತಿಸೆ-
ಹೊಗಳುತ್ತಿರಲು, ಮಿಕ್ಕು
ಎಸೆವ - ಬಹಳ ಪ್ರಕಾಶಿಸುವ,
ಪ್ರಚಂಡ ಮಾರ್ತಾಂಡನು –
ತೀಕ್ಷ್ಣವಾದ ಸೂರ್ಯನು
ಅಥವಾ
ಚಂಡಮಾರ್ತಾಂಡನೆಂಬ
ಬಿರುದುಳ್ಳ ಅರಿಕೇಸರಿಯು,
ಅಲರ್ಚುಗೆ – ಅರಳಿಸಲಿ->
ಎನ್ನ ಹೃದಯಾಂಬುಜಮಂ
ನಿಜ ವಾಙ್ಮರೀಚಿಯಿಂ - ನನ್ನ

ಹೃದಯಕಮಲವನ್ನು ತನ್ನ ಮಾತಿನ ಕಿರಣದಿಂದ.

೩.ಅರ್ಥ: ಕ್ರೂರಿಗಳಾದ ಶತ್ರುಸೈನ್ಯವೆಂಬ ಕತ್ತಲೆಯ ಮೊತ್ತವು ಓಡಿಹೋಗುತ್ತಿರುವ ವಿಶೇಷ ಗುಣಗಳಿಂದ ಕೂಡಿದ ತಾವರೆಯ ಸಮೂಹವು (ಅರಿಕೇಸರಿಯ ಪರವಾಗಿ ಪದ್ಮಿನಿ ಜಾತಿಯ ಸ್ತ್ರೀಯರ ಸಮೂಹವು) ಅರಳಿ ಪ್ರೀತಿಸಿ ಸಂತೋಷದಿಂದಿರಲು,

ತಿರುಕನೆಂಬ ದುಂಬಿಗಳ
ಸಮೂಹವು ತೃಪ್ತಿಯಿಂದ
ಎಡಬಿಡದೆ ಹಿಂಬಾಲಿಸಿ
ಹೊಗಳುತ್ತಿರಲು
ಅತ್ಯಧಿಕವಾಗಿ
ಪ್ರಕಾಶಿಸುತ್ತಿರುವ
ಸೂರ್ಯನೂ ಪ್ರಚಂಡ
ಮಾರ್ತಂಡನೆಂಬ
ಬಿರುದಿನಿಂದ ಕೂಡಿದ
ಅರಿಕೇಸರಿಯೂ ತಮ್ಮ
ಮಾತೆಂಬ ಕಿರಣದಿಂದ ನನ್ನ

ಹೃದಯಕಮಲವನ್ನು
ಅರಳಿಸಲಿ.

---@@@---

ಅರಿಕೇಸರಿಗೂ ಮನ್ಮಥನಿಗೂ ಹೋಲಿಕೆ:

ಚಂ|| ಸಹಜದ ಚೆಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಱ್ದು ಸನ್ನಿಹಿತವೆನಿಪ್ಪಪೂರ್ವ ಶುಭಲಕ್ಷಣ ದೇಹದೊಳೊಳ್ಪನಾಳ್ದು ಸಂ|

ದಹಿಕಟಕ ಪ್ರಸಾದದೆ ಮನೋಜನುಮಂ ಗೆಲೆವಂದನಾಗಳುಂ ಸಹಜಮನೋಜನೋಜನೆಮ ಗೀಗೆ ವಿಚಿತ್ರ ರತೋತ್ಸವಂಗಳು ||೪||

ಪದವಿಭಾಗ: ಸಹಜದ ಚೆಲ್ವಿನೊಳ್, ಹುಟ್ಟಿನಿಂದಲೇ ಬಂದ ಸೌಂದರ್ಯದಲ್ಲಿ, ರತಿಯ ಸೋಲದ ಕೇಳಿಕೆಯೊಳ್ – ರತಿದೇವಿಯ ಸೋಲದ ರತಿ

ಕ್ರೀಡೆಯಲ್ಲಿ, ಪೊದಟ್ಟು
ಸನ್ನಿಹಿತವೆನಿಪ್ಪ –
ವ್ಯಾಪಿಸಿರುವ ಚೆನ್ನಾಗಿ
ಅಲಂಕಾರಗೊಂಡಿರುವ,
ಅಪೂರ್ವ ಶುಭಲಕ್ಷಣ
ದೇಹದೊಳ್ ಒಳ್ಪನು ಆಳ್ದು-
ಒಳ್ಳೆಯತನವನ್ನು
ಹೊಂದಿರುವ, ಸಂದಹಿಕಟಕ
ಪ್ರಸಾದದೆ -
ಸರ್ಪಭೂಷಣನಾದ ಶಿವನ
ಆಶೀರ್ವಾದದಿಂದ

ಮನೋಜನುಮಂ –
ಮನ್ಮಥನನ್ನು ಕೂಡ,
ಗೆಲೆವಂದನು ಆಗಳುಂ –
ಗೆಲ್ಲಲು ಬಂದವನಾದ ಸಹಜ
ಮನೋಜನ ಓಜಂ - ಸಹಜ
ಮನ್ಮಥನಿಗೆ ಗುರುವಾದ
ಅರಿಕೇಸರಿಯು , ಎಮಗೆ ಈಗೆ
ವಿಚಿತ್ರ ರತೋತ್ಸವಂಗಳು-
ನಮಗೆ ನಾನಾ ಬಗೆಯ
ಆನಂದಗಳನ್ನು ಈಗೆ- ಕೊಡಲಿ

(ಮನೋಜ= ಮನಸ್ಸಿನಲ್ಲಿ ಜನಿಸಿದವ,ಮನ್ಮಥ)

೪.ಅರ್ಥ : ತನ್ನ ಹುಟ್ಟಿನಿಂದಲೇ ಸಹಜವಾಗಿ ಬಂದ ಸೌಂದರ್ಯದಿಂದಲೂ ಎಂದೂ ಸೋಲದ ರತಿಕ್ರೀಡೆಯಿಂದಲೂ ಅಪೂರ್ವವಾದ ಶುಭಲಕ್ಷಣಗಳಿಂದ ಕೂಡಿದ ಶರೀರದ ವೈಭವದಿಂದಲೂ ಸರ್ಪಭೂಷಣನಾದ ಈಶ್ವರನ

ಪ್ರಸಾದದಿಂದಲೂ ಕೂಡಿ ಸಹಜ ಮನ್ಮಥನಿಗೂ ಆಚಾರ್ಯನಾಗಿರುವ ಅರಿಕೇಸರಿಯು ಯಾವಾಗಲೂ ರಮಣೀಯವೂ ವೈವಿಧ್ಯಮಯವೂ ಆದ ಸುಖ ಸಂತೋಷಗಳನ್ನು ದಯಪಾಲಿಸಲಿ. (ಮನ್ಮಥನು ಶರೀರವಿಲ್ಲದವನು; ಈಶ್ವರನ ಕೋಪಕ್ಕೆ ಪಾತ್ರನಾದವನು;

ಆರಿಕೇಸರಿ ಶಿವನ ಪ್ರಸಾದ/ ಆಶೀರ್ವಾದ ಉಳ್ಳವನು. ದೇಹ ಉಳ್ಳವನು ; ಹಾಗಾಗಿ ಅವನೇ ಮನ್ಮಥನಿಗಿಂತ ಹೆಚ್ಚಿನವ)

---@@@---

ಸರಸ್ವತಿಯ ಸ್ತೋತ್ರ:

ಚಂ|| ಕ್ಷಯಮಣಮಿಲ್ಲ ಕೇಳ್ದು ಕಡೆಗಂಡವನಾವನುಮಿಲ್ಲೆನಲ್ ತದ

ಕ್ಷಯನಿಧಿ ತಾನೆ

ತನ್ನನೊಸೆದೋಲಗಿಪಂಗರಿದಿ

ಲ್ಲೆನಿಪ್ಪ ವಾ|

ಙ್ಮಯಮನಿತರ್ಕಮಂಬಿಕೆ

ಸರಸ್ವತಿ

ಮನ್ಮುಖಪದ್ಮರಂಗದೇ

ೞ್ಗೆಯನೆಡೆಗೊಂಡು

ಕೊಂಡುಕೊನೆದೀಗರಿಗಂಗೆ

ವಿಶುದ್ಧ ಬುದ್ಧಿಯಂ|| ೫ ||

ಪದವಿಭಾಗ:ಕ್ಷಯಮಣಮಿ

ಲ್ಲ :ಕ್ಷಯಂ ಅಣಂ ಇಲ್ಲ =

ವಿದ್ಯೆಗೆ/ಭಾಷೆ; ಸಾಹಿತ್ಯಕ್ಕೆ
ಸ್ವಲ್ಪಯೂ ವಿನಾಶವಿಲ್ಲ;
ಕೇಬ್ಡಿ ಕಡೆಗಂಡವನು
ಆವನುಂ ಇಲ್ಲೆನಲ್:=ಕೇಳಿ
ಅದರ ಅದರ ಕೊನೆಯನ್ನು/
ಪಾರವನ್ನು ಕಂಡವನು
ಯಾರೂ ಇಲ್ಲ;ತದಕ್ಷಯನಿದಿ
ತಾನೆü= ಅದು ತನಗೆ ತಾನೇ
ಅಕ್ಷಯ ನಿಧಿಯಾಗಿದೆ.;
ತನ್ನನು ಒಸೆದು ಓಲಗಿಪಂಗೆ =
ತನ್ನನ್ನು ಒಲಿದು

ಸೇವಿಸುವವನಿಗೆ. ಅರಿದಿಲ್ಲ ಎನಿಪ್ಪ ಅಸಾಧ್ಯವಾದುದು ಇಲ್ಲ ಎನ್ನಿಸುವ; ವಾಙ್ಮಯಂ ಅನಿತರ್ಕಂ (ಅನಿತು: ಎಲ್ಲಾ) = ಎಲ್ಲಾ ಸಾಹಿತ್ಯಕ್ಕೂ ; ಅಂಬಿಕೆ ಸರಸ್ವತಿ = ತಾಯಿ ಸರಸ್ವತಿ ; ಮನ್ಮುಖಪದ್ಮರಂಗದೋಳ್ಗೆಯನ್ = ನನ್ನ ಮುಖವೆಂಬ ರಂಗಸ್ಥಳದ ಏಳಿಗೆಯನ್ನು; ಎಡೆಗೊಂಡು= ಒಳಗೊಂಡು; ಕೊನೆದು ಈಗೆ ಅರಿಗಂಗೆ

ವಿಶುದ್ಧ ಬುದ್ಧಿಯಂ=
ಅರಿಗಂಗೆ/ ಅರಿಕೇಸರಿಗೆ
ನಿರ್ಮಲವಾದ ಬುದ್ಧಿಯನ್ನು, -
ಕೊಂಡು ಕೊನೆದು
ಈಗೆ=ಹರ್ಷಗೊಂಡು ಕೊಡಲಿ.
೫.ಅರ್ಥ: ಸ್ವಲ್ಪವೂ
ನಾಶವಿಲ್ಲದ, ಯಾರಿಂದಲೂ
ಅದರ ಕೊನೆಯನ್ನು
ತಿಳಿಯುವುದಕ್ಕಾಗದ, ತನಗೆ
ತಾನೆ ಅಕ್ಷಯ
ನಿಧಿಯಾಗಿರುವ, ಅವಳನ್ನು

ಸೇವಿಸಿದವರಿಗೆ
ಅಸಾಧ್ಯವಾವುದೂ
ಇಲ್ಲವೆನಿಸುವ, ಸಮಸ್ತ
ವಾಙ್ಮಯಕ್ಕೂ ತಾಯಿಯಾದ
ಸರಸ್ವತೀದೇವಿಯು
ಕಮಲದಂತಿರುವ ನನ್ನ
ಮುಖದ ಮುಖವೆಂಬ
ರಂಗಸ್ಥಳದ
ಏಳಿಗೆಯನ್ನೊಳಗೊಂಡು
ಅರಿಕೇಸರಿಗೆ ಸಂತೋಷದಿಂದ

ನಿಷ್ಕಲ್ಮಷವಾದ ಬುದ್ಧಿಯನ್ನು ದಯಪಾಲಿಸಲಿ.

(ಸರಸ್ವತಿಯು ತನಗೂ ಅರಿಕೇಸರಿಗೂ ಏಳಿಗೆಯನ್ನು ಕೊಡಲಿ.) ---@@@---

ದುರ್ಗಾದೇವಿಯ ಸ್ತೋತ್ರ:

ತಿಸುಳದೊಳುಚ್ಚಳಿಪ್ಪ ಪೊಸ ನೆತ್ತರೆ ಕೆಂದಳಿರಾಗೆ ಕಣ್ಗಗು ರ್ವಿಸುವಿನಮೊಕ್ಕು ನೇಲ್ವ ಕರುಳ್ಗೋಳಿಯೆ ಬಾಳ (ಲ)ಮೃಣಾಳಮಾಗೆ ಮಿ|| ಕ್ಕಸುರರ ಮೆಯ್ಯೊಳಾದ ವಿರಹಾಗ್ನಿಯನಾಱಿಸುತಿಂತೆ ತನ್ನ ಕೂ

ರಸಿಯೊಳಡುರ್ತು

ಕೊಂದಸಿಯಳಿ(ರ್ಕ)ಸಿಯೊಳ್

ಪಡೆಮೆಚ್ಚೆ ಗಂಡನಾ || ೬ ||

ಪದವಿಭಾಗ:ತಿಸುಳದೊಳು ಉಚ್ಚಳಿಪ್ಪ = ತ್ರಿಶೂಲದಲ್ಲಿ ಮೇಲಕ್ಕೆ ಚಿಮ್ಮುವ; ಪೊಸ ನೆತ್ತರೆ =ಹೊಸ ರಕ್ತವೇ ; ಕೆಂದಳಿರಾಗೆ -ಕೆಂಪು ತಳಿರು = ಕೆಂಪು ಚಿಗುರಾಗಲು; ; ಕಣ್ಗಗುರ್ವಿಸುವಿನಮೊಕ್ಕು - ಕಣ್ಗೆ ಅಗುರ್ವಿಸುವಿನಂ ಒಕ್ಕು

= ಕಣ್ಣಿಗೆ
ಭಯವನ್ನುಂಟುಮಾಡುತ್ತಿರ
ಲು; ನೇಲ್ವ ಕರುಳ್ಗೋಳಿಯೆ
(ಕರುಳು ಓಳಿಯ) =
ನೇತಾಡುವ ಕರುಳುಗಳ
ಸಾಲೇ,; ಬಾಳ
(ಲ)ಮೃಣಾಳಮಾಗೆ = ಎಳೆಯ
ತಾವರೆ ದಂಟಾಗಲು,; ಮಿಕ್ಕ
ಅಸುರರ = ಹದ್ದು ಮೀರಿದ
ರಾಕ್ಷಸರ,; ಮೆಯ್ಯೊಳಾದ =
ದೇಹದಲ್ಲಿ ಉಂಟಾದ,;

ವಿರಹಾಗ್ನಿಯನು ಅಱಿಸುತೆ
ಇಂತೆ = ವಿರಹ / ಅಗಲಿಕೆ
ಎಂಬ ಗ್ನಿಯನ್ನು, ನಂದಿಸುತ್ತಾ,
ಹೀಗೆಯೇ; ತನ್ನ
ಕೂರಸಿಯೊಳ್ = ತನ್ನ
ಹರಿತವಾದ ಕತ್ತಿಯಲ್ಲಿ
(ಕತ್ತಿಯೊಡನೆ),; ಅಡುರ್ತು =
ಸಮೀಪಿಸಿ ಮೇಲೆ ಬಿದ್ದು,;
ಕೊಂದಸಿಯಳ್ =ಕೊಂದ
ಕೃಶಾಂಗಿಯಾದ,;
(ಇರ್ಕ್ವಸಿಯೊಳ್->) ಪಡೆಮೆಚ್ಚೆ

ಗಂಡನಾ = ಪಡೆಮೆಚ್ಚೆ ಗಂಡ ಎಂಬ ಬಿರುದುಳ್ಳ ಅರಿಕೇಸರಿಯ ,; ಅಸಿಯೋಳ್ = ಕತ್ತಿಯಲ್ಲಿ,; ಇರ್ಕೆ= ನೆಲಸಿ ಇರಲಿ.

- **ಟಿಪ್ಪಣಿ:** ಕಾಮ ಸಂತಾಪವನ್ನು ಶಮನಗಲಿಸಲು ವಿರಹಿಗಳು ಚಿಗುರನ್ನೂ, ತಾವರೆಯ ದಂಟನ್ನೂ ಉಪಯೋಗಿಸುವರು ಎಂದು

ಕವಿಗಳ ನಂಬುಗೆ; ತ್ರಿಪುರ ಸುಂದರಿಯನ್ನು ಮೋಹಿಸಿ ಬಂದ ಶಂಬು ನಿಶಂಬು ರಾಕ್ಷಸರ ಕಾಮವನ್ನು ತಣಿಸಲು ಅವರ ಬಿಸಿನೆತ್ತರನ್ನೂ ಕರುಳ ಮಾಲೆಯನ್ನೂ ಧರಿಸಿದಳು,; ಕಾಳಿಯಾಗಿ ಅವರನ್ನು ಸಂಹರಿಸಿದಳು. ಆ ದೇವತೆ ಅರಿಕೇಸರಿ ರಾಜನ ಕತ್ತಿಯಲ್ಲಿ ನೆಲಸಲಿ ಎಂದು ಪ್ರಾರ್ಥನೆ!

(ಪಡೆಮೆಚ್ಚೆ ಗಂಡ = ಸೈನ್ಯವು ಮೆಚ್ಚುವ ಶೂರ)

೬.ಅರ್ಥ: ತನ್ನ ತ್ರಿಶೂಲದಿಂದ ಮೇಲಕ್ಕೆ ಚಿಮ್ಮುತ್ತಿರುವ ಹೊಸರಕ್ತವೇ ಕೆಂಪಾದ ಚಿಗುರಾಗಿರಲು ಕಣ್ಣಿಗೆ ಭಯವನ್ನುಂಟುಮಾಡುತ್ತ ಹೊರಕ್ಕೆ ಸೂಸಿ ನೇತಾಡುತ್ತಿರುವ ಕರುಳುಗಳ ಸಮೂಹವೇ ಎಳೆಯ ತಾವರೆಯ ದಂಟಾಗಿರಲು

ಹದ್ದುಮೀರಿದ ರಾಕ್ಷಸರ ದೇಹದಲ್ಲುಂಟಾದ ಅಗಲಿಕೆಯೆಂಬ ಬೆಂಕಿಯನ್ನು ಅವು ಆರಿಸುತ್ತ ತನ್ನ ಹರಿತವಾದ ಕತ್ತಿಯನ್ನು ಆಶ್ರಯಿಸಿಕೊಂಡಿರುವ ಕೃಶಾಂಗಿಯಾದ ದುರ್ಗಿಯು ಪಡೆಮೆಚ್ಚಗಂಡನೆಂಬ ಬಿರುದುಳ್ಳ ಅರಿಕೇಸರಿಯ ಕತ್ತಿಯಲ್ಲಿ ನೆಲೆಸಲಿ / ಸೇರಿಸಿಕೊಂಡಿರಲಿ.

---@@@---

ವಿನಾಯಕನನ್ನು ಕುರಿತು ಪ್ರಾರ್ಥನೆ:

ಮಲ್ಲಿಕಾಮಾಲೆ || ಎನ್ನ ದಾನಮಿದಾಗಳುಂ ಮಧುಪಾಶ್ರಯಂ ಧರೆಗವ್ಯವ ಚ್ಛಿನ್ನ ದಾನಮಿದಾಗಳುಂ ವಿಬುಧಾಶ್ರಯಂ ಗೆಲೆವಂದನೆ|| ನನ್ನಿಜೋನ್ನತಿಯಿಂದಮೀ ಪತಿಯೆಂದು ಮೆಚ್ಚಿ ವಿನಾಯಕಂ|

ತಾನ್ನಿಮಿರ್ಚುದೆ ಕಬ್ಬಮಂ ನಯದಿಂ ಗುಣಾರ್ಣವ ಭೂಪನಾ॥ ೭ ॥

ಪದವಿಭಾಗ:ಎನ್ನ ದಾನಂ= ನನ್ನ ಮದದ ನೀರು,; ಇದು ಆಗಳುಂ = ಇದು ಯಾವಾಗಲೂ,; ಮಧುಪಾಶ್ರಯಂ/ ಮಧುಪ ಆಶ್ರಯಂ= ದುಂಬಿಗಳಿಗೆ ಆಸ್ರಯ ಕೊಡುವುದು; ; ಧರೆಗೆ = ಲೋಕಕ್ಕೆ , ಅವ್ಯವಚ್ಛಿನ್ನ =

ಸದಾ ; ದಾನಂ = ರಾಜನು ಮಾಡುವ ದಾನವು, ಇದಾಗಳುಂ = ಇದು ಯಾವಾಗಲೂ,; ವಿಬುಧಾಶ್ರಯಂ = ಪಂಡಿತರಿಗೆ ಆಶ್ರಯವಾದದ್ದು,; (ಗೆಲೆವಂದಂ ಎನೆ)- ಗೆದ್ದನು ಎನ್ನುವಂತೆ,) ಎನ್ನಂ = ನನ್ನನ್ನು ನಿಜೋನ್ನತಿಯಿಂದಂ = ತನ್ನ ಹಿರಿಮೆಯಿಂದ ; ಈ ಪತಿಯೆಂದು ಗೆಲೆವಂದಂ ಎನೆ

= ಗೆದ್ದನೆಂದು ಮೆಚ್ಚಿ =ಮೆಚ್ಚಿ,,;

,;ವಿನಾಯಕನು ,

ಎನ್ನಂ=ನನ್ನನ್ನು ಈ ಪತಿ =

ರಾಜನಾದ ಅರಿಕೇಸರಿ

ವಿನಾಯಕಂ ತಾನ್ನಿಮಿರ್ಚುದೆ

= ತಾನು (ಕವಿ) ಸರಿಯಾಗಿ

ವಿಸ್ತರಿಸಲಿ ಎಂದು,; ಕಬ್ಬಮಂ

ನಯದಿಂ = ನಯವಾಗಿ,;

ಗುಣಾರ್ಣವ ಭೂಪನಾ=

ಗುಣಾರ್ಣವಾ ಎಂಬ

ಬಿರುದಿದ್ದ ರಿಕೇಸರಿ ರಾಜನ,;

ಕಬ್ಬಮಂ = ಅವನ ಪ್ರಶಂಶಾ ರೂಪವಾದ ಈ ಕಾವ್ಯವನ್ನು, ನಯದಿಂದ/ ಚೆನ್ನಾಗಿ , ತಾಂ ನಿಮಿರ್ಚುಗೆ= ತಾನು (ಕವಿ) ಸರಿಯಾಗಿ ವಿಸ್ತರಿಸಲಿ (ನಿರ್ಮಿಸಲಿ) ಎಂದು.

7.ಅರ್ಥ: (ವಿನಾಯಕನ ಮುಖ ಆನೆಯದಾಗಿದ್ದು, ಅವನ ಮುಖದ ಮದೋದಕ) ನನ್ನ ಮದದ ನೀರು ಇದು ಯಾವಾಗಲೂ,; ದುಂಬಿಗಳಿಗೆ

ಆ ಶ್ರ ಯ ಕೊಡುವುದು;
ಆದರೆ ಲೋಕಕ್ಕೆ ಸದಾ
ರಾಜನು ಮಾಡುವ ದಾನವು,
ಇದು ಯಾವಾಗಲೂ,
ಪಂಡಿತರಿಗೆ ಆಶ್ರಯವಾದದ್ದು,;
(ಗೆಲೆವಂದಂ ಎನೆ)- ಗೆದ್ದನು ;
ಇದು ಮೇಲು; ಎನ್ನುವಂತೆ,)
ನನ್ನನ್ನು ತನ್ನ ಹಿರಿಮೆಯಿಂದ
ಗೆದ್ದನೆಂದು ಮೆಚ್ಚಿ,,;
ವಿನಾಯಕನು ನನ್ನನ್ನು ಈ
ರಾಜನಾದ ಅರಿಕೇಸರಿ

ವಿನಾಯಕಂ ತಾನು (ಕವಿ) ಸರಿಯಾಗಿ ವಿಸ್ತರಿಸಲಿ ಎಂದು ನಯವಾಗಿ, ಗುಣಾರ್ಣವಾ ಎಂಬ ಬಿರುದಿದ್ದ ರಿಕೇಸರಿ ರಾಜನ ಅವನ ಪ್ರಶಂಶಾ ರೂಪವಾದ ಈ ಕಾವ್ಯವನ್ನು, ನಯದಿಂದ/ ಚೆನ್ನಾಗಿ, ತಾನು (ಕವಿ) ಸರಿಯಾಗಿ ವಿಸ್ತರಿಸಲಿ (ನಿರ್ಮಿಸಲಿ) ಎಂದು ಆಶೀರ್ವದಿಸಲಿ.

- (**ತಾತ್ಪರ್ಯ:** ವಿನಾಯಕ ಅರಿಕೇಸರಿಯನ್ನು ತನಗಿಂತ ಉತ್ತಮ ಎಂದು ಮೆಚ್ಚಿದನು;)

೭. (ಹೀಗೂ ಹೇಳಬಹುದು.) ಮಧುಪಾಶ್ರಯಂ (ಅಂದರೆ ದುಂಬಿಗಳಿಗೆ ಅವಲಂಬನವಾದುದು- ಬಾಹ್ಯಾರ್ಥದಲ್ಲಿ; ಧ್ವನಿಯಲ್ಲಿ – ಮದ್ಯಪಾನ ಮಾಡುವವರಿಗೆ ಅವಲಂಬನವಾದುದು)

ಅರಿಕೇಸರಿಯ ದಾನವು (ವಸ್ತುಗಳನ್ನು ಪ್ರದಾನ ಮಾಡುವುದು-ಕೊಡುಗೆಯು) ವಿಬುಧಾಶ್ರಯಂ ಅಂದರೆ ವಿದ್ವಾಂಸರಿಗೆ ಅವಲಂಬನವಾದುದು. ಆದುದರಿಂದ ಈ ರಾಜನಾದ ಅರಿಕೇಸರಿಯು ತನ್ನ ಮೇಲ್ಮೆಯಿಂದ ನನ್ನನ್ನು ಗೆದ್ದಿದ್ದಾನೆ ಎಂಬ ಮೆಚ್ಚಿಗೆಯಿಂದ ವಿನಾಯಕನು

ಗುಣಾರ್ಣವನೆಂಬ

ಬಿರುದಾಂಕಿತನಾದ ಈ

ಅರಿಕೇಸರಿಯ

ವಿಷಯಕವಾದ ಈ

ಕಾವ್ಯವನ್ನು ನಯವಾಗಿ

ವಿಸ್ತರಿಸಲಿ ಎಂದು

ಆಶೀರ್ವದಿಸಲಿ.

ಉತ್ತಮ ಕಾವ್ಯದ ಲಕ್ಷಣಗಳು ಮತ್ತು ಕಾವ್ಯರಚನೆಯ ಉದ್ದೇಶ

ಚಂ|| ಬಗೆ ಪೊಸತು

ಅಪ್ಪುದಾಗಿ

ಮೃದುಬಂಧದೊಳ/

ಳೊದುವುದೊಂದಿ

ದೇಸಿಯೊಳ್|

ಪುಗುವುದು ಪೊಕ್ಕ

ಮಾರ್ಗದೊಳೆ ತಳ್ಳುದು

ತಳ್ಳೊಡೆ ಕಾವ್ಯಬಂಧಮೊ||

ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಱಿಲ್ದು ತುಂ ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋ ಲ್॥ ೮ ॥

ಪದ ವಿಭಾಗ-ಅರ್ಥ: ಕಾವ್ಯ ಹೇಗಿರಬೇಕೆಂದು ಹೇಳುತ್ತಾನೆ: ಬಗೆ ಪೊಸತು ಅಪ್ಪುದು ಆಗಿ=ಚಿಂತನೆ ಹೊಸತು

ಇರುವುದು ಆಗಿರಬೇಕು;
ಮೃದು ಬಂಧದೊಳ್
ಒಂದುವುದು, ಒಂದಿ
ದೇಸಿಯೊಳ್= ಮೃದುವಾದ
ಶಬ್ದಗಳ
ಜೋಡಣೆಯಲ್ಲಿರಬೇಕು;
ಹಾಗೆ ಸೇರಿ, ದೇಸಿಯಲ್ಲಿ
ಎಂದರೆ ಕನ್ನಡ ಶೈಲಿಯಲ್ಲಿ ;
ಪುಗುವುದು= ಹೊಗಬೇಕು;
ಪೊಕ್ಕ ಮಾರ್ಗದೊಳೆ= ಹಾಗೆ
ಹೋದಮೇಲೆ ಮಾರ್ಗದ

ಕ್ರಮದಲ್ಲೇ (ಸಂಸ್ಕøತ
ರೀತಿಯಲ್ಲಿ); ತಳ್ವುದು=
ಹೋಗಿ ಹೋದಿಕೊಳ್ಳಬೇಕು;
ತಳ್ತೊಡೆ= ಹಾಗೆ ಹೋದರೆ;
ಕಾವ್ಯಬಂಧಂ =
ಕಾವ್ಯರಚನೆಯು; (ಒಪ್ಪುಗುಂ-
>.) ಎಳಮಾವು ಕೆಂದಳಿರ
ಪೂವಿನ
ಬಿಣ್ಪೊ(ಣ್ಪೊರೆ)ಯಿಂ=
ಎಳೆಯ ಮಾವಿನ ಮರವು
ಕೆಂಪಾದ ಚಿಗುರಿನ ಹೂವಿನ

ಬಲುಭಾರದಿಂದ; ಬಱಿಲ್ದು =
ಜೋತುಬಿದ್ದು; ತುಂಬಿಗಳಿನೆ
ತುಂಬಿ; ದುಂಬಿಗಳಿಂದ
ಆವೃತವಾಗಿ; ಕೋಗಿಲೆಯ
ಬಗ್ಗಿಸೆ = ಕೋಗಿಲೆಯು
ಕೂಗುತ್ತಿರಲು; ಸುಗ್ಗಿಯೊಳ =
ಸುಗ್ಗಿಯಕಾಲದಲ್ಲಿ;
ಒಪ್ಪುವಂತೆವ್ರೋಲ್ =
ಸೊಗಸಾಗಿ ಕಾಣುವ ಹಾಗೆ
(ಒಪ್ಪುಗುಂ =) ಶೋಭಿಸುತ್ತದೆ.

೮.ಅರ್ಥ: ಕಾವ್ಯವು ನವನವೋಜ್ವಲವಾಗಿರಬೇಕು (ಹೊಸಬಗೆಯಾಗಿರಬೇಕು). ಮೃದು ಶಬ್ದಗಳ ಜೋಡಣೆಯಿಂದ ಕೂಡಿರಬೇಕು. ಅಚ್ಚಗನ್ನಡ ಶೈಲಿಯಲ್ಲಿ ರಚಿತವಾಗಿರಬೇಕು. ಸಂಸ್ಕೃತ ಶೈಲಿಯೊಂದಿಗೆ ಹೊಂದಿಕೊಂಡಿರಬೇಕು. ಹೀಗೆ ಸೇರಿಕೊಂಡಿದ್ದರೆ

ಕಾವ್ಯರಚನೆಯ
ವಸಂತಕಾಲದಲ್ಲಿ ಮಾವಿನ
ಮರವು ಕೆಂಪಾದ ಚಿಗುರು
ಮತ್ತು ಹೂವುಗಳ ಭಾರದಿಂದ
ಜೋತುಬಿದ್ದು ತುಂಬಿಗಳಿಂದ
ಆವೃತವಾಗಿ ಕೋಗಿಲೆಯ
ಕೂಜನದಿಂದ ಪ್ರಕಾಶಿಸುವ
ಹಾಗೆ
ಶೋಭಾಯಮಾನವಾಗಿರುತ್ತ
ದೆ

ಉ|| ಆ ಸಕಳಾರ್ಥ
ಸಂಯುತಮಳಂಕೃತಿಯುಕ್ತಮು
ದಾತ್ತ ವೃತ್ತ್ಯ ವಿ
ನ್ಯಾಸಮನೇಕ
ಲಕ್ಷಣಾಗುಣಪ್ರಭವಂ
ಮೃದುಪಾದಮಾದ ವಾ|
ಕ್ಪ್ರೀ ಸುಭಗಂ
ಕಳಾಕಳಿತಮೆಂಬ
ನೆಗಟ್ತೆಯನಾಳ್ದ ಕಬ್ಬಮಂ|
ಕೂಸುಮನೀವುದೀವುದರಿಕೇ
ಸರಿಗಲ್ಲದವಸ್ತುಗೀವುದೇ|| ೯

||

ಪದ ವಿಭಾಗ- ಅರ್ಥ: ಆ ಸಕಳಾರ್ಥ ಸಂಯುತಂ= ಉಲ್ಲೇಖಿಸಿದ ಎಲ್ಲಾ ಅರ್ಥಗಳಿಂದ ಕೂಡಿದ, ಅಮಳಂಕೃತಿಯುಕ್ತಂ = ಅಲಂಕಾರಗಳಿಂದ ಸೇರಿರುವ; ಉದಾತ್ತ ವೃತ್ತ್ತ್ವ= ಉತ್ತಮ ವೃತ್ತಿಗಳ; ವಿನ್ಯಾಸಮನೇಕ ಲಕ್ಷಣಗುಣಪ್ರಭವಂ= ಅನೇಕ ಕಾವ್ಯಲಕ್ಷಣ ವಿನ್ಯಾಸದಿಂದ

ಕೂಡಿದ ಮೃದುಪಾದಂ ಅದ =
ಮೃದುವಾದ ಪದ್ಯ
ಪಾದಗಳನ್ನು ಹೊಂದಿದ; ವಾ|
ಕ್ಶ್ರೀ ಸುಭಗಂ =ವಾಕ್
ಸಂಪತ್ತಿನಿಂದ ಸುಂದರವಾದ;
ಕಳಾಕಳಿತಮೆಂಬ = ಕಲಾನ್ವಿತ
ಎಂದು
ಎನಿಸಿಕೊಳ್ಳುವ,ನೆಗೞ್ತೆಯನ
ಉ ಆಳ್ದ ಕಬ್ಬಮಂ = ಪ್ರಸಿದ್ಧಿ
ಪಡೆದ ಕಾವ್ಯವನ್ನೂ, ,
ಕೂಸುಮಂ =

ಹೆಣ್ಣುಮಗುವನ್ನೂ, (ಕಾವ್ಯ ಕನ್ನಿಕೆಯನ್ನು)ಈವುದು; ಈವುದು ಅರಿಕೇಸರಿಗೆ ಅಲ್ಲದ ವಸ್ತುಗೆ ಈವುದೇ? ಕೂಡದು; ಅರಿಕೇಸರಿಗೆ ಕೊಡುವುದು,

೯.ಅರ್ಥ: ಸಮಸ್ತನಾದ ಅರ್ಥಗಳನ್ನೊಳಗೊಂಡಿರುವುದೂ ಅಲಂಕಾರಗಳಿಂದ ಕೂಡಿದುದೂ ಉತ್ತಮವಾದ ವೃತ್ತಿ ವಿನ್ಯಾಸದಿಂದ ಯುಕ್ತವಾದುದೂ

ಮೃದುಪದಪಾದಗಳನ್ನುಳ್ಳ
ವಾಕ್ಸಂಪತ್ತಿನಿಂದ
ಸುಂದರವಾಗಿ
ಕಲಾನ್ವಿತವಾದುದೂ ಆದ
ಕಾವ್ಯವನ್ನು (ಕಾವ್ಯ
ಕನ್ನಿಕೆಯನ್ನು) ರಾಜ
ಅರಿಕೇಸರಿಗೆ ಕೊಡಬೇಕು.
ಬೇರೆಯವರಿಗೆ ಕೊಡುವುದೇ
– ಕೂಡದು.!

---@@@---

ಚಂ|| ಕವಿಗಳ ನಾಮಧಾರಕ
ನರಾಪರೋಳಿಯೊಳೀತನೊ
ಳ್ಪಿದಂ
ಕವಿ ನೃಪನೀತನೊಳ್ಪಿದನೆನಲ್
ದೊರೆಯಲ್ತು ನೆಗೞ್ತೆವೆತ್ತ ಸ|
ತ್ಕವಿಗಳ
ಷೋಡಶಾವನಿಪರೋಳಿಯೊ
ಳಂ ಕವಿತಾಗುಣಾರ್ಣವಂ
ಕವಿತೆಯೊಳಗ್ಗಳಂ
ಗುಣದೊಳಗ್ಗಳಮೆಲ್ಲಿಯು
ಗುಣಾರ್ಣವಂ|| ೧೦||

ಪದ ವಿಭಾಗ -ಅರ್ಥ:

ಕವಿಗಳ ನಾಮಧಾರಕ ನರಾ(ಧಿ)ಪರೋೀಳಿಯೊಳೀತ ನೊಳ್ಳಿದಂ-> ನಾಮಧಾರಕ ಕವಿಗಳ ನರಾಧಿಪರ ಓಳೀಯೊಳ್ ಈತನು ಒಳ್ಳಿದಂ ಕವಿ =ಹೆರಿಗೆ ಮಾತ್ರಾ ಕವಿಗಳು ಮತ್ತು ಹೆಸರಿಗೆ ಮಾತ್ರಾ ರಾಜ ಎನ್ನಸಿಕೊಂಡವರಲ್ಲಿ ಈತನು ಹಾಗಲ್ಲದೆ ಓಳ್ಳೆಯವನು.

ನೃಪನೀತನು –ಈತನು ರಾಜ,

ಒಳ್ಳಿದನು ಎನಲ್
ದೊರೆಯಲ್ತು = ಈ ರಾಜನು
ಒಳ್ಳೆಯವನು ಎನ್ನಲು
ಯೋಗ್ಯವಲ್ಲ (ಯೋಗ್ಯವಲ್ಲ?
ವಿಶೇಷವಲ್ಲ)
ಸರಿಸಾಟಿಯಿಲ್ಲದವನು.
ನೆಗೞ್ತೆವೆತ್ತ ಸತ್ಕವಿಗಳ
ಕವಿತಾಗುಣಾರ್ಣವಂ =
ಪ್ರಸಿದ್ಧರಾದ ಒಳ್ಳೆಯ
ಕವಿಗಳಲ್ಲಿ (ತಾನು)
ಕವಿತಾಗಣಾರ್ಣವನು ಮತ್ತು ;;

ಷೋಡಶ ಅವನಿಪರ
ಓಳಿಯೊಳ್= ಹದಿನಾರು
ಕವಿಗಳ ಸಮೂಹದಲ್ಲಿ
ರಾಜನು; ಗುಣಾರ್ಣವಂ=
ಗುಣಾರ್ಣವನು ಕವಿತೆಯೊಳು
ಅಗ್ಗಳಂ = ತಾನು ಕವಿತ್ವದಲ್ಲಿ
ಶ್ರೇಷ್ಠನು. ಗುಣದೊಳು
ಅಗ್ಗಳಂ ಅಲ್ಲಿಯುಂ
ಗುಣಾರ್ಣವಂ =ರಾಜನು
ಗುಣದಲ್ಲಿ ಹದಿನಾರ
ರಾಜರಿಗಿಂತ ಶ್ರೇಷ್ಠನು. ಕವಿ

ತನಗಿದ್ದ ಕವಿತಾಗುಣಾರ್ಣ್ವ ಎಂಬ ಬಿರುದನ್ನೂ, ತನ್ನ ಪೋಷಕ ಅರಿಕೇಸರಿಗೆ ಗುಣಾರ್ಣವ ಎಂಬ ಬಿರುದುಗಳನ್ನು ಸಮರ್ಥಿಸಿಕೊಳ್ಳುತ್ತಾನೆ.

೧೦.ಅರ್ಥ: ಹೆಸರಿಗೆ ಮಾತ್ರ ಕವಿಗಳೆನಿಸಿಕೊಂಡಿರುವವರ ಸಾಲಿನಲ್ಲಿ ಕವಿಯೆಂದಾಗಲಿ ಸಾಮಾನ್ಯವಾಗಿ ರಾಜರೆಂಬ ಹೆಸರನ್ನು ಮಾತ್ರ

ಧರಿಸಿರುವವರ ಗುಂಪಿನಲ್ಲಿ
ರಾಜನೆಂದಾಗಲಿ
ಕರೆಸಿಕೊಳ್ಳುವುದು
ವಿಶೇಷವೇನೂ ಇಲ್ಲ.
ಸತ್ಕವಿಗಳ ಸಾಲಿನಲ್ಲಿ
ಪಂಪನು
ಕವಿತಾಗುಣಾರ್ಣವನೆಂದೂ,
ಷೋಡಷರಾಜರ ಶ್ರೇಣಿಯಲ್ಲಿ
ಅರಿಕೇಸರಿಯು
ಗುಣಾರ್ಣವನೆಂದೂ
ಪ್ರಸಿದ್ಧರಾಗಿದ್ದಾರೆ.

---@@@---

ಚಂ|| ಕತೆ ಪಿರಿದಾದೊಡಂ

ಕತೆಯ ಮೆಯ್ಗಿಡಲೀಯದೆ

ಮುಂ ಸಮಸ್ತ ಭಾ

ರತಮನಪೂರ್ವಮಾಗೆ ಸಲೆ

ಪೇೞ್ದ ಕವೀಶ್ವರರಿಲ್ಲ

ವರ್ಣಕಂ|

ಕತೆಯೊಳೊಡಂಬಡಂ ಪಡೆಯೆ

ಪೇೞ್ವೊಡೆ ಪಂಪನೆ

ಪೇೞ್ಗುಮೆಂದು ಪಂ

ಡಿತರೆ ತಗುಳ್ದು ಬಿಚ್ಚಳಿಸೆ

ಪೇೞಲೊಡರ್ಚಿದೆನೀ

ಪ್ರಬಂಧಮಂ|| ೧೧

ಪದ ವಿಭಾಗ -ಅರ್ಥ:ಕತೆ ಪಿರಿದು ಆದೊಡಂ ಕತೆಯ ಮೆಯ್ಮೆ (ಗ) ಕೆಡಲೀಯದೆ ಮುಂ (ಮೊದಲು) ಸಮಸ್ತ ಭಾರತಮಂ ಅಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರು ಇಲ್ಲ==[ಸಮಸ್ತ ಭಾರತ ಕತೆ ದೊಡ್ಡದು ಆದರೂ, ಕತೆಯ ಒಡಲಿಗೆ ಕೆಡುವುದಕ್ಕೆ ಅವಕಾಶಕೊಡದೆ ಮೊದಲು

ಸಮಸ್ತ ಭಾರತವನ್ನು
ಅಪೂರ್ವವಾಗಿ ಚೆನ್ನಾಗಿ
ಹೇಳಿದ ಕವೀಶ್ವರರು
ಇಲ್ಲ] ;;ವರ್ಣಕಂ ಕತೆಯೊಳು
ಒಡಂಬಡಂ ಪಡೆಯೆ
ಪೇೞ್ವೊಡೆ ಪಂಪನೆ
ಪೇೞ್ಗುಮೆಂದು ==
[ಹದಿನೆಂಟು ವರ್ಣನೆಗಳು
ಕತೆಯಲ್ಲಿ ಒಪ್ಪುವಂತೆ
ಕಥೆಯಲ್ಲಿರುವಂತೆ,
ಹೇಳುವುದಾದರೆ ಪಂಪನೆ

ಹೇಳಬೇಕೆಂದು – ಅವನೇ ಶಕ್ತನೆಂದು];; ಪಂಡಿತರೆ ತಗುಳ್ದು ಬಿಚ್ಚಟಿಸೆ (ವಿಸ್ತರಿಸೆ) ಪೇಟಿಲು ಒಡರ್ಚಿದೆನು ಈ ಪ್ರಬಂಧಮಂ==[ಪಂಡಿತರು ಮತ್ತೆಮತ್ತೆ ವಿಸ್ತರಿಸಿ ಹೇಳಲು; ನಾನು/ ತಾನು, ಈ ಕಾವ್ಯವನ್ನು ಹೇಳಲು ತೊಡಗಿದೆನು. ಎಂದು ಕವಿ ಹೇಳು ತ್ತಾನೆ].

೧೧.ಅರ್ಥ:ಸಮಸ್ತ ಭಾರತ ಕತೆ ದೊಡ್ಡದು ಆದರೂ,

ಕತೆಯ ಒಡಲಿಗೆ ಕೆಡುವುದಕ್ಕೆ ಅವಕಾಶಕೊಡದೆ ಮೊದಲು ಸಮಸ್ತ ಭಾರತವನ್ನು ಅಪೂರ್ವವಾಗಿ ಚೆನ್ನಾಗಿ ಹೇಳಿದ ಕವೀಶ್ವರರು ಇಲ್ಲ. ಹದಿನೆಂಟು ವರ್ಣನೆಗಳು ಕತೆಯಲ್ಲಿ ಒಪ್ಪುವಂತೆ ಕಥೆಯಲ್ಲಿರುವಂತೆ, ಹೇಳುವುದಾದರೆ ಪಂಪನೆ ಹೇಳಬೇಕೆಂದು – ಅವನೇ ಶಕ್ತನೆಂದು ಪಂಡಿತರು

ಮತ್ತೆಮತ್ತೆ ವಿಸ್ತರಿಸಿ ಹೇಳಲು; ನಾನು/ ತಾನು, ಈ ಕಾವ್ಯವನ್ನು ಹೇಳಲು ತೊಡಗಿದೆನು, ಎಂದು ಕವಿ ಹೇಳುತ್ತಾನೆ.

---@@@---

ಚಂ|| ಲಲಿತಪದಂ ಪ್ರಸನ್ನ ಕವಿತಾಗುಣಮಿಲ್ಲದೆ ಪೂಣ್ದು ಪೇೞ್ದ ಬೆ
ಳ್ಗಳ ಕೃತಿಬಂಧಮುಂ ಬರೆಪಕಾಱಂ ಕೈಗಳ ಕೇಡು ನುಣ್ಣನ|

ಪ್ಪಳಕದ ಕೇಡು
ಪೇೞಿಸಿದೊಡರ್ಥದ ಕೇಡೆನೆ
ಪೇೞ್ದು ಬೀಗಿ ಪೊ|
ಟ್ಟಳಿಸಿ ನೆಗೞ್ತೆಗಾಟಿಸುವ
ದುಷ್ಕವಿಯುಂ ಕವಿಯೆಂಬ
ಲೆಕ್ಕಮೇ|| ೧೨

ಪದವಿಭಾಗ - ಅರ್ಥ:

ಲಲಿತಪದಂ ಪ್ರಸನ್ನ
ಕವಿತಾಗುಣಂ ಇಲ್ಲದೆ ಪೂಣ್ದು
ಪೇೞ್ದಿ ಬೆಳ್ಗಳ(ಅಜ್ಞರ)
ಕೃತಿಬಂಧಮುಂ==

[ಸುಂದರವಾದ ಪದಗಳು,
ಪ್ರಸನ್ನತೆಯನ್ನು(ಆನಂದ)
ಕೊಡುವ ಕವಿತಾಗುಣವು
ಇಲ್ಲದೆ ಹೊಣೆಹೊತ್ತ ಕಷ್ಟಕ್ಕೆ
ಹೇಳಿದ ತಿಳಿಯದವರ ಕಾವ್ಯ
ರಚನೆಯು];; ಬರೆಪಕಾಱಂ
(ರಂ) ಕೈಗಳ ಕೇಡು,
ನುಣ್ಣನಪ್ಪಳಕದ ಕೇಡು,
ಪೇೞಿಸಿದೊಡರ್ಥದ
ಕೇಡೆನೆ==[ಬರಹಗಾರರ
ಕೈಗಳಿಗೆ ಕಷ್ಟವಾದುದೇ ಫಲ!

ನುಣ್ಣನೆಯ ಬರೆಯುವ
ತಾಳೆಯೋಲೆಗಳ ಹಾನಿ!
ಹೇಳಿಸಿದರೆ/ ಓದಿಸಿದರೆ
ಅದರ ಅರ್ಥದಲ್ಲಿ ರಸವಿಲ್ಲದೆ
ಹಾನಿ.];; ಪೇಳ್ದು ಬೀಗಿ
ಪೊಟ್ಟಳಿಸಿ (ಜಂಬ) ನೆಗೞ್ತೆಗೆ/
ನೆಗಳ್ತಿಗೆ ಆಟಿಸುವ
ದುಷ್ಕವಿಯುಂ ಕವಿಯೆಂಬ
ಲೆಕ್ಕಮೇ==[ಈ ಬಗೆಯ
ಕಾವ್ಯವನ್ನು ಹೇಳಿ
ಬೀಗಿ,ಗರ್ವಿಸಿ ಕೀರ್ತಿಗೆ

ಬಯಸುವ ಕೆಟ್ಟಕವಿಯು ಲೆಕ್ಕವೇ?].

೧೨:ಅರ್ಥ: ಸುಂದರವಾದ ಪದಗಳು, ಪ್ರಸನ್ನತೆಯನ್ನು(ಆನಂದ) ಕೊಡುವ ಕವಿತಾಗುಣವು ಇಲ್ಲದೆ ಹೊಣೆಹೊತ್ತ ಕಷ್ಟಕ್ಕೆ ಹೇಳಿದ ತಿಳಿಯದವರ ಕಾವ್ಯ ರಚನೆಯು ಬರಹಗಾರರ ಕೈಗಳಿಗೆ ಕಷ್ಟವಾದುದೇ ಫಲ! ನುಣ್ಣನೆಯ ಬರೆಯುವ

ತಾಳೆಯೋಲೆಗಳ ಹಾನಿ! ಹೇಳಿಸಿದರೆ/ ಓದಿಸಿದರೆ ಅದರ ಅರ್ಥದಲ್ಲಿ ರಸವಿಲ್ಲದೆ ಹಾನಿ.ಈ ಬಗೆಯ ಕಾವ್ಯವನ್ನು ಹೇಳಿ ಬೀಗಿ,ಗರ್ವಿಸಿ ಕೀರ್ತಿಗೆ ಬಯಸುವ ಕೆಟ್ಟಕವಿಯು ಲೆಕ್ಕವೇ?].

ಕವಿಯ ವಿನಯ

ಉ|| ವ್ಯಾಸಮುನೀಂದ್ರ ರುಂದ್ರ

ವಚನಾಮೃತವಾರ್ಾಯನೀಸು
ವೆಂ ಕವಿ
ವ್ಯಾಸನೆನೆಂಬ ಗರ್ವಮೆನಗಿಲ್ಲ
ಗುಣಾರ್ಣವನೊಳ್ಳು
ಮನ್ಮನೋ।
ವಾಸಮನೆಯ್ದಿ
ಪೇಳ್ದಿಪೆನದಲ್ಲದೆ ಗರ್ವಮೆ
ದೋಷಮೞ್ತಿಗಂ
ದೋಷಮೆ ಕಾಣೆನೆನ್ನಱಿವ
ಮಾೞ್ಕೆಯ ಪೇೞ್ವೆನಿದಾವ
ದೋಷಮೋ॥ ೧೩

ಪದವಿಭಾಗ: ಅರ್ಥ:-

ಅರ್ಥ:ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯಂ ಈಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ== [ವ್ಯಾಸಮಹರ್ಷಿಗಳ ವಿಸ್ತಾರವಾದ ಕಾವ್ಯದ ಕ್ಷೀರ ಸಮುದ್ರವನ್ನು ಈಜುವೆನು, ಕವಿ ವ್ಯಾಸನೇ ನಾನು ಅಥವಾ ಅವನ ಸಮಾನನು ಎಂಬ

ಗರ್ವವವು ನನಗಿಲ್ಲ!];;
ಗುಣಾರ್ಣವನ ಒಳ್ಪು, ಮನ್
ಮನೋವಾಸಮನು ಐಯ್ದೆ
ಪೇೞ್ದಿಪೆನು(ಪೇಳ್ದಪೆನು)
ಅದಲ್ಲದೆ ಗರ್ವಮೆ ದೋಷಂ;
ಅೞ್ತಿಗಂ ದೋಷಮೆ?;
ಕಾಣೆಂ; ಎನ್ನ ಅಱಿವ
ಮಾೞ್ಕೆಯ ಪೇೞ್ವೆನು; ಇದು
ಆವ ದೋಷಮೋ ==
[ಗುಣಾರ್ಣವ/ ಅರಿಕೇಸರಿಯ
ಒಳ್ಳೆಯತನ ನನ್ನ ಮನೋ

ಮಂದಿರವನ್ನು ಹೊಗಲು ಹೇಳುವೆನು; ಅದಲ್ಲದೆ ಗರ್ವವೆ ದೋಷವಾಗುವುದು. ಪ್ರೀತಿಗೂ ದೋಷವೇ? ಹಾಗೆ ಕಾಣೆನು; ನನ್ನ ತಿಳಿವು ಇದ್ದ ಮಟ್ಟಿಗೆ ಹೇಳುವೆನು; ಇದು ಯಾವ ದೋಷವೋ! ದೋಷವಿಲ್ಲ.]

೧೩.ತಾತ್ಪರ್ಯ:-

ವ್ಯಾಸಮಹರ್ಷಿಗಳ ವಿಸ್ತಾರವಾದ ಕಾವ್ಯದ ಕ್ಷೀರ

ಸಮುದ್ರವನ್ನು ಈಜುವೆನು,
ಕವಿ ವ್ಯಾಸನೇ ನಾನು ಅಥವಾ
ಅವನ ಸಮಾನನು ಎಂಬ
ಗರ್ವವು ನನಗಿಲ್ಲ!

ಗುಣಾರ್ಣವ/
ಅರಿಕೇಸರಿಯ
ಒಳ್ಳೆಯತನವು ನನ್ನ
ಮನೋ ಮಂದಿರವನ್ನು
ಹೊಗಲು ಹೇಳುವೆನು
(ಅವನ ಪ್ರೀತಿಗಾಗಿ ಈ
ಕಥೆಯನ್ನು ಹೇಳುವೆನು);

ಅದಲ್ಲದೆ ಗರ್ವವೆ
ದೋಷವಾಗುವುದು.
ಪ್ರೀತಿಗೂ ದೋಷವೇ?
ಹಾಗೆ ಕಾಣೆನು; ನನ್ನ ತಿಳಿವು
ಇದ್ದ ಮಟ್ಟಿಗೆ ಹೇಳುವೆನು;
ಇದು ಯಾವ ದೋಷವೋ!
ದೋಷವಿಲ್ಲ.

ಚಂ|| ವಿಪುಳ ಯಶೋವಿತಾನ
ಗುಣವಿಲ್ಲದನಂ ಪ್ರಭು ಮಾಡಿ
ಪೂರ್ವ ಭೂ

ಮಿಪರ ಪದಂಗಳಂ ಪುಗಿಸಿ

ಪೋಲಿಪೊಡೀತನುದಾತ್ತ

ಪೂರ್ವ ಭೂ|

ಮಿಪರುಮನೊಳ್ಪಿನೊಳ್

ತಗುಳೆವಂದೊಡೆ ಕಥೆಯೊಳ್

ತಗುಳ್ಚಿ ಪೋ

ಲಿಪೊಡೆನಗೞ್ತಿಯಾದುದು

ಗುಣಾರ್ಣವ ಭೂಭುಜನಂ

ಕಿರೀಟಿಯೊಳ್|| ೧೪

ಪದವಿಭಾಗ - ಅರ್ಥ:ವಿಪುಳ ಯಶೋವಿತಾನ

ಗುಣವಿಲ್ಲದನಂ ಪ್ರಭು ಮಾಡಿ
ಪೂರ್ವ ಭೂಮಿಪರ
ಪದಂಗಳಂ ಪುಗಿಸಿ
ಪೋಲಿಪೊಡೆ ಈತನು
ಉದಾತ್ತ ಪೂರ್ವ
ಭೂಮಿಪರುಮಂ ಓಳ್ಪಿನೊಳ್
ತಗುಳೆವಂದೊಡೆ
(ತಗಲಿಕೊಂಡರೆ,
ಹಿಂಬಾಲಿಸಿದರೆ)==[ಕೆಲವು
ಕವಿಗಳು,ವಿಪುಲ ಕೀರ್ತಿಯ
ಗುಣವಿಲ್ಲದನನ್ನು ಕಾವ್ಯ

ನಾಯಕನನ್ನು ಮಾಡಿ ಹಿಂದಿನ ರಾಜರ ಪದವಿಗಳನ್ನು ಅವರಲ್ಲಿ ಸೇರಿಸಿ ಹೋಲಿಸುತ್ತಾರೆ; ಈತ ಅರಿಕೇಸರಿ ರಾಜನಿಗೆ, ಉದಾತ್ತರಾದ ಹಿಂದಿನ ರಾಜರನ್ನು ಒಳ್ಳೆಯತನದಲ್ಲಿ ಹೋಲಿಸಿದರೆ,];; ಕಥೆಯೊಳ್ ತಗುಳ್ಚಿ (ಸೇರಿಸಿ,ತಗಲಿಸಿ,ಹೊಂದಿಸಿ) ಪೋಲಿಪೊಡೆ ಎನಗೆ

ಅೞ್ತಿಯಾದುದು
(ಅೞ್ತಿ=ಪ್ರೀತಿ) ಗುಣಾರ್ಣವ
ಭೂಭುಜನಂ(ಅರಿಕೇಸರಿರಾಜ
) ಕಿರೀಟಿಯೊಳ್==
[ಮಹಾಭಾರತದ ಕಥೆಯಲ್ಲಿ
ಸೇರಿಸಿ,ಅಥವಾ ಹೊಂದಿಸಿ
ಹೋಲಿಸುವುದಾದರೆ ನನಗೆ
ಅರಿಕೇಸರಿರಾಜನ್ನು
ಕಿರೀಟಿಯಲ್ಲಿ -ಅರ್ಜುನನಿಗೆ
ಹೋಲಿಸುವುದು
ಪ್ರೀತಿಯಾಗಿರುವುದು].

೧೪.ತಾತ್ಪರ್ಯ:-ಕೆಲವು ಕವಿಗಳು,ವಿಪುಲ ಕೀರ್ತಿಯ ಗುಣವಿಲ್ಲದನನ್ನು ಕಾವ್ಯ ನಾಯಕನನ್ನು ಮಾಡಿ ಹಿಂದಿನ ರಾಜರ ಪದವಿಗಳನ್ನು ಅವರಲ್ಲಿ ಸೇರಿಸಿ ಹೋಲಿಸುತ್ತಾರೆ; ಈತ ಅರಿಕೇಸರಿ ರಾಜನಿಗೆ, ಉದಾತ್ತರಾದ ಹಿಂದಿನ ರಾಜರನ್ನು ಒಳ್ಳೆಯತನದಲ್ಲಿ ಹೋಲಿಸಿದರೆ,

ಮಹಾಭಾರತದ ಕಥೆಯಲ್ಲಿ ಸೇರಿಸಿ,ಅಥವಾ ಹೊಂದಿಸಿ ಹೋಲಿಸುವುದಾದರೆ, **ನನಗೆ ಅರಿಕೇಸರಿರಾಜನನ್ನು ಕಿರೀಟಿಯಲ್ಲಿ ಅಥವಾ ಅರ್ಜುನನಿಗೆ ಹೋಲಿಸುವುದು ಪ್ರೀತಿಯಾಗಿರುವುದು**].

ಅರಿಕೇಸರಿರಾಜನ ವಂಶ ವಿವರಣೆ

ಕಂ|| ಶ್ರೀಮಚ್ಚಳುಕ್ಯ ವಂಶ
ವ್ಯೋಮಾಮೃತಕಿರಣನೆನಿಪ
ಕಾಂತಿಯನೊಳಕೊಂ|
ಡೀ ಮಹಿಯೊಳಾತ್ಮವಂಶಶಿ
ಖಾಮಣಿ ಜಸಮೆಸೆಯೆ
ಯುದ್ಧಮಲ್ಲಂ ನೆಗಳ್ದಿ||೧೫||

೧೫.**ಪದವಿಭಾಗ - ಅರ್ಥ:**

ಶ್ರೀಮತ್ ಚಳುಕ್ಯವಂಶ

ವ್ಯೋಮ ಅಮೃತಕಿರಣನು
(ಚಂದ್ರ) ಎನಿಪ ಕಾಂತಿಯನು
ಒಳಕೊಂಡ ಈ ಮಹಿಯೊಳು
ಆತ್ಮವಂಶ ಶಿಖಾಮಣಿ ಜಸಂ
ಎಸೆಯೆ ಯುದ್ಧಮಲ್ಲಂ
ನೆಗಟ್ದಿ==[ಶ್ರೀಮತ್
ಚಾಳುಕ್ಯವಂಶವೆಂಬ ಆಕಾಶಕ್ಕೆ
ಚಂದ್ರನು ಎನ್ನಿಸಿ ಕಾಂತಿಯನ್ನು
ಹೊಂದಿ, ಈ ಲೋಕದಲ್ಲಿ ತನ್ನ
ವಂಶಕ್ಕೆ ತಲೆಯಮಣಿಯಾದ
ಚೂಡಾರತ್ನದಂತೆ

ಯುದ್ಧಮಲ್ಲನೆಂಬುವವನು ಯಶಸ್ಸು ಶೋಭಿಸಲು ಪ್ರಸಿದ್ದನು]

ಆತ ನಿಜಭುಜವಿಜಯ ಖ್ಯಾತಿಯನಾಳ್ದಾಳ್ದನಧಿಕಬಲ ನವನಿಪತಿ|
ವ್ರಾತ ಮಣಿಮಕುಟಕಿರಣ ದ್ಯೋತಿತಪಾದಂ ಸಪಾದಲಕ್ಷ ಕ್ಷಿತಿಯಂ||೧೬||

೧೬.**ಪದವಿಭಾಗ - ಅರ್ಥ:**

ಆತ ನಿಜ

ಭುಜವಿಜಯಖ್ಯಾತಿಯನು
ಆಳ್ದು ಆಳ್ದನು ಅತಿಬಲನು
ಅವನಿಪತಿವ್ರಾತ
ಮಣಿಮಕುಟಕಿರಣದ್ಯೋತಿತ
ಪಾದಂ ಸಪಾದಲಕ್ಷ
ಕ್ಷಿತಿಯಂ==[ಆತನು ತನ್ನ
ಭುಜಬಲದಿಂದ ಜಯಿಸಿ
ಕೀರ್ತಿಯನ್ನು ಹೊಂದಿ
ಆಳಿದನು. ಆಳ್ದನು
ಅಧಿಕಬಲನು ರಾಜರ
ಸಮೂಹದ ಮಣಿಮಕುಟದ/

ಕಿರೀಟದ ಕಿರಣಗಳ

ಬೆಳಗಿಸಲ್ಪಟ್ಟ ಪಾದ

ವುಳ್ಳವನು 'ಸಪಾದಲಕ್ಷ'ವೆಂಬ

ಭೂಮಿಯನ್ನು ಆಳಿದನು.]

(ಎಲ್ಲಾ ರಾಜರೂ ಅವನ

ಪಾದಕ್ಕೆ ಕಿರೀಟ ಸಮೇತ

ನಮಿಸುತ್ತಿದ್ದರು ಎಂದು ಭಾವ)

ಏನಂ ಪೇೞ್ವುದೊ ಸಿರಿಯು

ದ್ದಾನಿಯನೆಣ್ಣೆಯೊಳೆ ತೀವಿ

ದೀರ್ಘಿಕೆಗಳನಂ|

ತಾ ನೃಪತಿ ನಿಚ್ಚಲಯ್ಯೂ

ಆನೆಯನವಗಾಹಮಿರಿಸು
ವಂ ಬೋದನದೊಳ್||೧೭||

೧೭.**ಪದವಿಭಾಗ -**

ಅರ್ಥ::ಏನಂ ಪೇೞ್ವುದೊ ಸಿರಿಯ ಉದ್ದಾನಿಯನು (ಅತಿಶಯವನ್ನು) ಎಣ್ಣೆಯೊಳೆ ತೀವಿ ದೀರ್ಘಿಕೆಗಳನು (ಬಾವಿಗಳನ್ನು) ಅಂತು ಆ ನೃಪತಿ ನಿಚ್ಚಲುಂ ಅಯ್ನೂಱು ಆನೆಯನು ಅವಗಾಹಂ ಇರಿಸುವಂ (ಮುಳುಗಿಸಿ ಸ್ನಾನ

ಮಾಡಿಸುವನು)
ಬೋದನದೊಳ್ ==[ಏನೆಂದು
ಹೇಳುವುದೊ! ಅವನ
ಸಂಪತ್ತಿನ ಅತಿಶಯವನ್ನು!
ಬಾವಿಗಳನ್ನು ಎಣ್ಣೆಯಿಂದ
ತುಂಬಿ, ಹಾಗೆಯೇ ಆ
ನೃಪತಿಯು ನಿತ್ಯವೂ
ಬೋದನಬೆಂಬ ಅವನ
ರಾಜಧಾನಿಯಲ್ಲಿ ಐದುನೂರು
ಅನೆಗಳನ್ನು ಮುಳುಗಿಸಿ

ಮುಳುಗಿಸಿ ಸ್ನಾನ
ಮಾಡಿಸುವನು].

ಶ್ರೀಪತಿಗೆ ಯುದ್ಧಮಲ್ಲ ಮ
ಹೀಪತಿಗೆ ನೆಗೞ್ತೆ ಪುಟ್ಟೆ
ಪುಟ್ಟಿದನಖಿಳ|
ಕ್ಷ್ಮಾಪಾಲ ಮೌಳಿಮಣಿ ಕಿರ
ಣಾಪಾಳಿತ
ನಖಮಯೂಖರಂಜಿತ
ಚರಣಂ|| ೧೮||

೧೮.**ಪದವಿಭಾಗ -**

ಅರ್ಥ:ಶ್ರೀಪತಿಗೆ ಯುದ್ಧಮಲ್ಲ

ಮಹೀಪತಿಗೆ ನೆಗಳ್ತೆ ಪುಟ್ಟೆ
ಪುಟ್ಟಿದನು ಅಖಿಳ
ಕ್ಷ್ಮಾಪಾಲ(ರಾಜ) ಮೌಳಿಮಣಿ
ಕಿರಣ ಆಪಾಳಿತ (ಪ್ರೋಷಿತ)
ನಖ ಮಯೂಖ(ಕಾಂತಿ),
ರಂಜಿತ ಚರಣಂ==[ಸಂಪತ್ತಿನ
ಒಡೆಯ ಯುದ್ಧಮಲ್ಲ
ರಾಜನಿಗೆ ಕೀರ್ತಿ
ಹುಟ್ಟಲು,ಹುಟ್ಟಿದನು ಎಲ್ಲಾ
ರಾಜರ ಕಿರೀಟದ ರತ್ನಗಳ
ಕಿರಣಗಳ ಕಾಂತಿಯಿಂದ

ಪ್ರೋಷಿತವಾದ ಉಗುರುಗಳ ಕಾಂತಿಯಿಂದ ಶೋಬಿಸುವ ಪಾದಗಳು ಇರುವ,]

ಅರಿಕೇಸರಿಯೆಂಬಂ ಸುಂ
ದರಾಂಗನತ್ಯಂತ ವಸ್ತುವಂ
ಮದಕರಿಯಂ।
ಹರಿಯಂ ಪಡಿವಡೆಗುರ್ಚಿದ
ಕರವಾಳನೆ ತೋಱಿ ನೃಪತಿ
ಗೆಲ್ಲಂಗೊಂಡಂ॥ ೧೯॥

೧೯.ಪದವಿಭಾಗ -

ಅರ್ಥ::ಅರಿಕೇಸರಿಯೆಂಬಂ

ಸುಂದರಾಂಗನು ಅತ್ಯಂತ ವಸ್ತುವಂ ಮದಕರಿಯಂ| ಹರಿಯಂ ಪಡಿವಡೆಗೆ (ಎದುರಿಸಿದ ಪಡೆಗೆ) ಉರ್ಚಿದ ಕರವಾಳನೆ ತೋಱೆ ನೃಪತಿ ಗೆಲ್ಲಂಗೊಂಡಂ==

[ಅರಿಕೇಸರಿಯೆಂಬಂ ಸುಂದರಾಂಗನು ಹುಟ್ಟಿದನು. ಆ ಅರಿಕೇಸರಿ ಅತ್ಯಂತ ಬೆಲೆಬಾಳುವ ವಸ್ತುವನ್ನು ಪಡೆದನು; ಮದದ

ಆನೆಯನ್ನೂ ಕುದುರೆಗಳನ್ನೂ ಅವನನ್ನು ಎದುರಿಸಿದ ಸೈನ್ಯಕ್ಕೆ ಒರೆಯಿಂದ ತೆಗೆದ ಕತ್ತಿಯನ್ನೇ ತೋರಿಸಿ (ಯುದ್ಧಮಾಡಿ), ಆ ರಾಜನು ಗೆಲುವನ್ನು ಪಡೆದನು.]

ನಿರುಪಮ ದೇವನ ರಾಜ್ಯದೊ ಳರಿಕೇಸರಿ ವೆಂಗಿವಿಷಯಮಂ ತ್ರಿ ಕಳಿಂಗಂ|
ಬೆರಸೊತ್ತಿಕೊಂಡು ಗರ್ವದೆ

ಬರೆಯಿಸಿದಂ ಪೆಸರನಖಿಳ ದಿಗ್ಭಿತ್ತಿಗಳೊಳ್‌|| ೨೦||

೨೦.ಪದವಿಭಾಗ-ಅರ್ಥ:-

ನಿರುಪಮ ದೇವನ ರಾಜ್ಯದೊಳು ಅರಿಕೇಸರಿ ವೆಂಗಿವಿಷಯಮಂ ತ್ರಿ ಕಳಿಂಗಂ ಬೆರಸಿ ಒತ್ತಿಕೊಂಡು ಗರ್ವದೆ ಬರೆಯಿಸಿದಂ ಪೆಸರನು ಅಖಿಳ ದಿಗ್ ಭಿತ್ತಿಗಳೊಳ್‌== [ರಾಷ್ಟ್ರಕೂಟರನಿರುಪಮ

ದೇವನ ರಾಜ್ಯದಲ್ಲಿ
ಅರಿಕೇಸರಿಯು ವೆಂಗಿಯೆಂಬ
ದೇಶವನ್ನೂ
ತ್ರಿಕಳಿಂಗಪ್ರದೇಶವನ್ನೂ
ಸೇರಿಕೊಂಡು ಗೆದ್ದುಕೊಂಡು,
ರೀವಿಯಿಂದ ತನ್ನ ಹೆಸರನ್ನು
ಎಲ್ಲಾ ದಿಕ್ಕುದೆಸೆಗಳಲ್ಲಿಯೂ
ಬರೆಸಿದನು].

ಕ್ಷತ್ರಂ ತೇಜೋಗುಣಮಾ
ಕ್ಷತ್ರಿಯರೊಳ್ ನೆಲಸಿ
ನಿಂದುದಾ ನೆಗಱ್ದಾದಿ|

ಕ್ಷತ್ರಿಯರೊಳಮಿಲ್ಲೆನಿಸಿದು

ದೀ

ತ್ರಿಜಗದೊಳೆಸಗಿದೆಸಕಮರಿಕೇ

ಸರಿಯಾ|| ೨೧||

೨೧.ಪದವಿಭಾಗ-ಅರ್ಥ:-

ಕ್ಷತ್ರಂ ತೇಜೋಗುಣಂ

ಕ್ಷತ್ರಿಯರೊಳ್ ನೆಲಸಿ

ನಿಂದುದು ಆ ನೆಗಟ್ದ ಆದಿ

ಕ್ಷತ್ರಿಯರೊಳಂ ಇಲ್ಲ

ಎನಿಸಿದುದು ಈ ತ್ರಿಜಗದೊಳು

ಎಸಗಿದ ಎಸಕಂ (ಮಾಡಿದ

ಕಾರ್ಯಗಳು)
ಅರಿಕೇಸರಿಯಾ==[ಕ್ಷತ್ರಿಯ ತೇಜೋಗುಣವು ಆ ಕ್ಷತ್ರಿಯವಂಶದಲ್ಲಿ ಗಟ್ಟಿಯಾಗಿ ನೆಲಸಿ ನಿಂತಿದೆ. ಅರಿಕೇಸರಿಯು ಮಾಡಿದ ಕಾರ್ಯಗಳು ಈ ಮೂರು ಜಗತ್ತಿನಲ್ಲಿ ಆ ಪ್ರಸಿದ್ಧರಾದ ಹಿಂದಿನ ಕ್ಷತ್ರಿಯರಲ್ಲಿ ಯಾರೂ ಇಲ್ಲ ಎನ್ನಿಸಿದುದು].

ಅರಿಕೇಸರಿಗಾತ್ಮಜರರಿ

ನರಪ ಶಿರೋದಳನ

ಪರಿಣತೋಗ್ರಾಸಿ ಭಯಂ|

ಕರಕರರಾಯಿರ್ವರೊಳಾರ್

ದೊರೆಯೆನೆ ನರಸಿಂಹ

ಭದ್ರದೇವರ್ ನೆಗಳ್ದಿರ್|| ೨೨||

೨೨.ಪದವಿಭಾಗ-ಅರ್ಥ:-

ಅರಿಕೇಸರಿಗೆ ಆತ್ಮಜರು

ಅರಿನರಪ (ಶತ್ರು ರಾಜರ)

ಶಿರೋದಳನ (ಶಿರ

ಉದಳನ=ಸೀಳು) ಪರಿಣತ

ಉಗ್ರ ಅಸಿ(ಕತ್ತಿ) ಭಯಂಕರ

ಕರರು (ಬಾಹುಗಳನ್ನು
ಉಳ್ಳವರು) ಆ ಯಿರ್ವರೊಳು
ಆರ್ ದೊರೆಯೆನೆ ನರಸಿಂಹ
ಭದ್ರದೇವರ್ ನೆಗಲ್ಟಿರ್==
[ಅರಿಕೇಸರಿಗೆ ಇಬ್ಬರು
ಮಕ್ಕಳು; ಶತ್ರು ರಾಜರ
ತಲೆಯನ್ನು ಸೀಳುವುದರಲ್ಲಿ
ಪರಿಣತರು. ಉಗ್ರವಾದ
ಕತ್ತಿಯಿಂದ ಕತ್ತರಿಸಬಲ್ಲ
ಭಯಂಕರ ಬಾಹುಗಳನ್ನು
ಉಳ್ಳವರು. ಆ ಇಬ್ಬರಲ್ಲಿ

ಯಾರು ದೊರೆಯಾಗುವರು ಎನ್ನಲು, ನರಸಿಂಹ ಭದ್ರದೇವರು (ದೊರೆಯಾಗಿ) ಪ್ರಸಿದ್ದರಾದರು]

ಕಂ|| ಅವರೊಳ್
ನರಸಿಂಗಂಗತಿ
ಧವಳಯಶಂ
ಯುದ್ಧಮಲ್ಲನಗ್ರಸುತಂ ತ|
ದ್ಭುವನ ಪ್ರದೀಪನಾಗಿ
ರ್ದವಾರ್ಯವೀರ್ಯಂಗೆ
ಬದ್ದೆಗಂ ಪಿರಿಯ ಮಗಂ||

೨೩॥

೨೩.ಪದವಿಭಾಗ-ಅರ್ಥ:-

ಅವರೊಳ್ ನರಸಿಂಗಂಗೆ ಅತಿಧವಳ (ನಿರ್ಮಲ) ಯಶಂ ಯುದ್ಧಮಲ್ಲನು ಅಗ್ರಸುತಂ, ತದ್ ಭುವನ ಪ್ರದೀಪನಾಗಿರ್ದ ಅವಾರ್ಯವೀರ್ಯಂಗೆ (ಸರಿಸಾಟಿಯಿಲ್ಲದ ಶೂರನಿಗೆ) (ಬದ್ದೆಗಂ (ಬದ್ದೆಗನು) ಪಿರಿಯ ಮಗಂ==[ಅವರಲ್ಲಿ

ನರಸಿಂಗನಿಗೆ ಬಹಳ ನಿರ್ಮಲವಾದ ಕೀರ್ತಿಯುಳ್ಳ (ಇಮ್ಮಡಿ) ಯುದ್ಧಮಲ್ಲನು ಹಿರಿಯ ಮಗನು;, ಆ ಲೋಕಕ್ಕೆ ಬೆಳಕಿನಂತಿದ್ದ ಸರಿಸಾಟಿಯಿಲ್ಲದ ಶೂರನಿಗೆ ಬದ್ದೆಗನು-ಭದ್ರದೇವನು ಹಿರಿಯ ಮಗನು].

ಪುಟ್ಟಿದೊಡಾತನೊಳಱಿವೊಡ ವುಟ್ಟಿದುದಱಿವಿಂಗೆ ಪೆಂಪು ಪೆಂಪಿನೊಳಾಯಂ|

ಕಟ್ಟಾಯದೊಳಳವಳವಿನೊ

ಳೊಟ್ಟಜೆ ಪುಟ್ಟಿದುದು

ಪೋಲ್ವರಾರ್ ಬದ್ದೆಗನಂ||

೨೪||

೨೪.ಪದವಿಭಾಗ-ಅರ್ಥ:-

ಪುಟ್ಟಿದೊಡೆ ಆತನೊಳು

ಅಱಿವು (ಜ್ಞಾನ)

ಒಡವುಟ್ಟಿದುದು,-> ಅಱಿವಿಂಗೆ

ಪೆಂಪು, -> ಪೆಂಪಿನೊಳು

ಆಯಂ(ಆದಾಯ,

ಸಾಮರ್ಥ್ಯ), ಕಟ್ಟಾಯದೊಳ್

ಅಳವು(ಶೌರ್ಯ)
ಅಳವಿನೊಳ್ ಒಟ್ಟಜೆ
(ಅತಿಶಯತ್ವ, ಪರಾಕ್ರಮ)
ಪುಟ್ಟಿದುದು; ಪೋಲ್ವರಾರ್
(ಹೋಲುವವರು ಯಾರು?
ಇಲ್ಲ.) ಬದ್ದೆಗನಂ==
[ಹುಟ್ಟಿದರೆ, ಆತನಲ್ಲಿ ಜ್ಞಾನ
ಒಡಹುಟ್ಟಿತು,-> ಆ ಜ್ಞಾನಕ್ಕೆ
ಪೆಂಪು (ಘನತೆ) ಹುಟ್ಟಿತು, ->
ಪೆಂಪಿನಿಂದ ಆದಾಯ,
ಸಾಮರ್ಥ್ಯಗಳು ಬಂದವು,,

ವಸಾಮರ್ಥ್ಯ ಶೌರ್ಯ ದಿಂದ ಅತಿಶಯತ್ವ, ಪರಾಕ್ರಮಗಳು ಹುಟ್ಟಿದವು; ಇವನಿಗೆ/ ಬದ್ದೆಗನಿಗೆ ಹೋಲುವವರು ಯಾರು? ಯಾರೂ ಇಲ್ಲ].

ಬಲ್ವರಿಕೆಯೊಳರಿನೃಪರ ಪ
ಡಲ್ವಡೆ ತಳ್ತಿಱಿದು ರಣದೊಳಾ
ವಿಕ್ರಮಮಂ|
ಸೊಲ್ವಿನಮಾವರ್ಜಿಸಿದಂ
ನಾಲ್ವತ್ತೆರಡಱಿಕೆಗಾಳೆಗಂಗ
ಚೊಳೀತಂ|| ೨೫||

೨೫.ಪದವಿಭಾಗ-ಅರ್ಥ:-

(ಈ

ಭದ್ರದೇವನು)ಬಲ್ವರಿಕೆಯೊಳ್

(ಬಲವಾದ ಧಾಳಿಯಲ್ಲ)

ಅರಿನೃಪರ ಪಡಲ್ವಡೆ

(ಚದುರುವಂತೆ) ತಳ್ತು ಇಱಿದು

(ತಾಗಿ-ಇರಿದು ,ಹೋರಾಡಿ)

ರಣದೊಳು ಆ ವಿಕ್ರಮಮಂ

(ಶೌರ್ಯವನ್ನ) ಸೊಲ್ವಿನಮ್

(ಸೊಲ್- ಎಲ್ಲರೂ

ಮಾತಾಡುವ)

ಆವರ್ಜಿಸಿದಂ(ಆರ್ಜಿಸು-ಸಂಪಾದಿಸು) ನಾಲ್ವತ್ತೆರಡು ಅಱಿಕೆ(ಪ್ರಸಿದ್ಧ) (ಗಾ) ಕಾಳೆಗಂಗಳೊಳು ಈತಂ==

[ಈ ಭದ್ರದೇವನು ಬಲವಾದ ಧಾಳಿಯಲ್ಲಿ ಶತ್ರು ರಾಜರ ಸೈನ್ಯ ಚದುರುವಂತೆ ತಾಗಿ-ಇರಿದು ,ಹೋರಾಡಿ ಯುದ್ಧದಲ್ಲಿ ಆ ಶೌರ್ಯವನ್ನು ಕುರಿತು ಎಲ್ಲರೂ ಮಾತಾಡುವರು. ಈತನು

ನಾಲ್ವತ್ತೆರಡು ಪ್ರಸಿದ್ಧ
ಕಾಳಗಗಳಲ್ಲಿ ಜಯವನ್ನು
ಸಂಪಾದಿಸಿದನು].

ಚಂ|| ವನಪರೀತ
ಭೂತಳದೊಳೀತನೆ ಸೋಲದ
ಗಂಡನೆಂಬ ಪೆಂ
ಪಿನ ಪೆಸರಂ
ನಿಮಿರ್ಚಿದುದುಮಲ್ಲದೆ
ವಿಕ್ರಮದಿಂದೆ ನಿಂದಗು|
ರ್ವಿನಲಿಱಿದಾಂತರಂ
ಮೊಸಳೆಯಂ ಪಿಡಿವಂತಿರೆ

ನೀರೊಳೊತ್ತಿ ಭೀ

ಮನನತಿಗರ್ವದಿಂ ಪಿಡಿಯೆ

ಮೆಯ್ಗಲಿ

ಬದ್ದೆಗನನ್ನನಾವನೋ|| ೨೬||

೨೬.ಪದವಿಭಾಗ-ಅರ್ಥ:-

ವನಧಿಪರೀತ ಭೂತಳದೊಳು

ಈತನೆ ಸೋಲದ ಗಂಡನೆಂಬ

ಪೆಂಪಿನ ಪೆಸರಂ

ನಿಮಿರ್ಚಿದುದುಂ

(ವಿಸ್ತರಿಸು)==[ಸಮುದ್ರದಿಂದ

ಸುತ್ತುವರಿದ ಭೂಮಿಯಲ್ಲಿ

ಈತನೆ ಸೋಲದ ವೀರನೆಂಬ ಘನತೆಯ ಕೀರ್ತಿಯನ್ನು ನಿವಿಸ್ತರಿಸಿದುದೂ];; ಅಲ್ಲದೆ ವಿಕ್ರಮದಿಂದೆ ನಿಂದು ಅಗುರ್ವೆನಲ್ (ಅಗುರ್- ಭಯ) ಇಱಿದು (ಇರಿದು- ಹೋರಾಡಿ) ಆಂತರಂ (ಎದುರಾದವರು) ಮೊಸಳೆಯಂ ಪಿಡಿವಂತಿರೆ ನೀರೊಳು ಒತ್ತಿ ಭೀಮನನು ಅತಿಗರ್ವದಿಂ ಪಿಡಿಯೆ

ಮೆಯ್ಗಲಿ (ಮೆಯ್ ಕಲಿ-
ಶೂರ) ಬದ್ದೆಗನ್ ಅನ್ನನ್
ಆವನೋ==[ಅಲ್ಲದೆ
ಪರಾಕ್ರಮದಿಂದ ನಿಂತು
ಭಯಪಡಿಸುವಂತೆ ಹೋರಾಡಿ
ಎದುರಾದವರನ್ನು
ಮೊಸಳೆಯು ನೀರಿನಲ್ಲಿ
ಹಿಡಿದಂತೆ ಇರಲು, ಸೋಲಿಸಿ
ರಾಜ ಭೀಮನನ್ನು ಬಹಳ
ದರ್ಪದಿಂದ ಹಿಡಿಯಲು,
ದೈಹಿಕಶೂರನಾದ ಬದ್ದೆಗನ

ಹಾಗೆಇರುವ ಶೂರನು ಯಾವನೋ? ಯಾರೂ ಇಲ್ಲ.]

೨೬.ತಾತ್ಪರ್ಯ:ಸಮುದ್ರದಿಂದ ಸುತ್ತುವರಿದ ಭೂಮಿಯಲ್ಲಿ ಈತನೆ ಸೋಲದ ವೀರನೆಂಬ ಘನತೆಯ ಕೀರ್ತಿಯನ್ನು ನಿವಿಸ್ತರಿಸಿದುದೂ ಅಲ್ಲದೆ ಪರಾಕ್ರಮದಿಂದ ನಿಂತು ಭಯಪಡಿಸುವಂತೆ ಹೋರಾಡಿ ಎದುರಾದವರನ್ನು ಮೊಸಳೆಯು ನೀರಿನಲ್ಲಿ

ಹಿಡಿದಂತೆ ಇರುವ (ಇವನು)
ರಾಜ ಭೀಮನನ್ನು ಸೋಲಿಸಿ,
ಬಹಳ ದರ್ಪದಿಂದ
ಹಿಡಿಯಲು, ದೈಹಿಕ
ಶೂರನಾದ ಬದ್ದೆಗನ ಅಂದರೆ
ಭದ್ರದೇವನ ಹಾಗೆ ಇರುವ
ಶೂರನು ಯಾವನೋ?
ಯಾರೂ ಇಲ್ಲ.

ಮ|| ಮುಗಿಲಂ ಮುಟ್ಟಿದ ಪೆಂಪು

ಪೆಂಪನೊಳಕೊಂಡುದ್ಯೋಗ
ಮುದ್ಯೋಗದೊಳ್
ನೆಗೞ್ದಾಜ್ಞಾಫಲಮಾಜ್ಞೆಯೊಳ್
ತೊಡರ್ದಗುರ್ವೊಂದೊಂದಗು
ರ್ವಿಂದಗು|
ರ್ವುಗೊಳುತ್ತಿರ್ಪರಿಮಂಡಳಂ
ಜಸಕಡರ್ಪಪ್ಪನ್ನೆಗಂ ಸಂದನೀ
ಜಗದೊಳ್
ಬದ್ದೆಗನನ್ನನಾವನಿೞಿಕುಂ
ಭ್ರೂಕೋಟಿಯಂ
ಕೋಟಿಯಂ|| ೨೭||

೨೭.ಪದವಿಭಾಗ-ಅರ್ಥ:-

ಮುಗಿಲಂ ಮುಟ್ಟಿದ ಪೆಂಪು (ಹಿರಿಮೆ) ಪೆಂಪನೊಳಕೊಂಡು ಉದ್ಯೋಗಂ ಉದ್ಯೋಗದೊಳ್ ನೆಗಲ್ದಿ ಆಜ್ಞಾಫಲಂ/ ತೊಡರ್ದ ಆಜ್ಞಾಫಲಂ ಆಜ್ಞೆಯೊಳ್ ತೊಡರ್ದ (ಶ್ರೇಷ್ಠ ತಿಳುವಳಿಕೆಯುಳ್ಳ ಆಜ್ಞೆಯಲ್ಲಿ) ಅಗುರ್ವು (ಭಯ) ಒದೊಂದು ಅಗುರ್ವಿಂದ

ಅಗುರ್ವುಗೊಳು
ಉತ್ತಿರ್ಪ(ಬಲಿಷ್ಠ, ಹೆಚ್ಚಿನ?)
ಅರಿ ಮಂಡಳಂ ಜಸಕೆ
ಅಡರ್ಪಪ್ಪ ಅನ್ನೆಗಂ
ಸಂದನು==[ಮುಗಿಲ ಎತ್ತರಕ್ಕೆ
ಮುಟ್ಟಿದ ಅವನ ಹಿರಿಮೆ,
ಘನತೆಯನ್ನು ಒಳಗೊಂಡು,
ರಾಜಕಾರ್ಯ ಮತ್ತು ಇತರೆ
ಕಾರ್ಯದಲ್ಲಿ ಮಾಡಿದ
ತಿಳುವಳಿಕೆಯುಳ್ಳ ಆಜ್ಞೆಯಲ್ಲಿ
ಇರುವ ಭಯವು,ಬಲಿಷ್ಠ ಶತ್ರು

ಸಮೂಹವನ್ನು ಒಂದೊಂದು ಭಯದಿಂದ ಒಂದೊಂದು ಭಯವು(ಹೆಚ್ಚುವಂತೆ ಉಂಟಾಗುವಂತಿರುತ್ತಿತ್ತು. ಈ ಯಶಸ್ಸಿಗೆ ಆಶ್ರಯವಾಗುವ ಮಟ್ಟಕ್ಕೆ ಏರಿದನು.];; ಈ ಜಗದೊಳ್ (ಬದ್ದೆಗನನ್ನನಾವನಿೞಿಕುಂ) ಬದ್ದೆಗನನು ಅನ್ನನು ಆವನ್ (ಇರುವನು); ಇೞಿಕುಂ (ಇಳಿಕುಂ-ಇಳಿಸಿಬಿಡುವನು)

ಭ್ರೂಕೋಟಿಯಂ (ಹುಬ್ಬಿನ ತುದಿಯ ಸನ್ನೆಯಿಂದ) ಕೋಟಿಯಂ.==[ಈ ಜಗತ್ತಿನಲ್ಲಿ ಬದ್ದೆಗನ ಅಂಥವನು ಯಾವನು ಇರುವನು?; ಹುಬ್ಬಿನ ತುದಿಯ ಸನ್ನೆಯಿಂದ ಕೋಟಿ ಜನರನ್ನು ಇಳಿಸಿಬಿಡುವನು/ ನಮಸ್ಕರಿಸುವಂತೆ ಮಾಡುವನು].

೨೭.ತಾತ್ಪರ್ಯ:- ಮುಗಿಲ ಎತ್ತರಕ್ಕೆ ಮುಟ್ಟಿದ ಅವನ ಹಿರಿಮೆ, ಘನತೆಯನ್ನು ಒಳಗೊಂಡು, ರಾಜಕಾರ್ಯ ಮತ್ತು ಇತರೆ ಕಾರ್ಯದಲ್ಲಿ ಮಾಡಿದ ಶ್ರೇಷ್ಠ ತಿಳುವಳಿಕೆಯುಳ್ಳ ಆಜ್ಞೆಯಲ್ಲಿ ಇರುವ ಭಯವು, ಬಲಿಷ್ಠ ಶತ್ರು ಸಮೂಹವನ್ನು ಒಂದೊಂದು ಭಯದಿಂದ ಒಂದೊಂದು ಭಯವು ಹೆಚ್ಚುವಂತೆ

ಉಂಟಾಗುವಂತಿರುತ್ತಿತ್ತು. ಈ ಯಶಸ್ಸಿಗೆ ಆಶ್ರಯವಾಗುವ ಮಟ್ಟಕ್ಕೆ ಏರಿದನು. ಈ ಜಗತ್ತಿನಲ್ಲಿ ಬದ್ದೆಗನಂಥವನು ಯಾವನು ಇರುವನು?; ಹುಬ್ಬಿನ ತುದಿಯ ಸನ್ನೆಯಿಂದ ಕೋಟಿ ಜನರನ್ನು ಇಳಿಸಿಬಿಡುವನು/ ನಮಸ್ಕರಿಸುವಂತೆ ಮಾಡುವನು].

ಭದ್ರದೇವನ ಮಗ

ಕಂ|| ಮೇರುವ ಪೊನ್
ಕಲ್ಪಾಂಘ್ರಿಪ
ದಾರವೆ ರಸದೊಱವು
ಪರುಸವೇದಿಯ ಕಣಿ ಭಂ|
ಡಾರದೊಳುಂಟೆನೆ ಕುಡುವ ನಿ
ವಾರಿತ ದಾನಕ್ಕೆ ಪೋಲ್ವರಾರ್
ಬದ್ದೆಗನಂ|| ೨೮||

೨೮.ಪದವಿಭಾಗ-ಅರ್ಥ:-

ಆತನ ಭಂಡಾರದೊಳ್,

ಮೇರುವ ಪೊನ್ ಕಲ್ಪ
ಅಂಘ್ರಿಪದ ಅರವೆ ರಸದ
ಒಱವು (ಒರತೆ,ಊಟೆ, ಜಲ)
ಪರುಸವೇದಿಯ (ಸ್ಪರ್ಶಮಣಿ)
ಕಣಿ ಭಂಡಾರದೊಳುಂಟೆನೆ
ಕುಡುವ ನಿವಾರಿತ (ನಿರಂತರ)
ದಾನಕ್ಕೆ ಪೋಲ್ವರಾರ್
ಬದ್ದೆಗನಂ==[ಆತನ
ಭಂಡಾರದಲ್ಲಿ,
ಮೇರುಪರ್ವತದಷ್ಟು ಚಿನ್ನ,
ಕಲ್ಪವೃಕ್ಷದ ತೋಟ, ಸಿದ್ಧರಸದ

ಊಟಿ, ಮುಟ್ಟಿದ್ದೆಲಾ ಚಿನ್ನವಾಗುವ ಸ್ಪರ್ಶಮಣಿಯ ಗಣಿ, ಇವು ಅವನ ಭಂಡಾರದಲ್ಲಿ ಉಂಟು ಎನ್ನಲು ಕೊಡುವ ನಿರಂತರ ದಾನಕ್ಕೆ ಬದ್ದೆಗನನ್ನು/ ಭದ್ರದೇವನನ್ನು ಹೊಲುವವರಾರು? ಯಾರೂ ಇಲ್ಲ.]

ತರಳ|| ಸುರಭಿ ದೇವತೆಯೆಂಬ ಕಾಪಿನೆ

ಮಾಣ್ದುದೇಱುವುದೊಂದೆಂ
ದಿರದೆ ಮಾಣ್ದುದು ದೇವ
ವಾರಣವೇಱಿ ಉಂಟವು
ಪೋದೊಡಾ।
ಖರಕರಂಗರಿದೆಂದೆ ಮಾಣ್ದಿರೆ
ಮಾಣ್ದುವಾ ಹರಿ ನೀನೆ ಪೇ
ೞರಿಯವೆಂದಿವು ಭದ್ರದೇವರ
ಚಾಗದೊಳ್ಪೊಱಗಾದುವೇ॥
೨೯॥

೨೯.ಪದವಿಭಾಗ-ಅರ್ಥ:-

ಸುರಭಿ ದೇವತೆಯೆಂಬ ಕಾಪಿನೆ

ಮಾಣ್ದುದು ಏಱುವುದೊಂದು
ಒಂದಿರದೆ ಮಾಣ್ದುದು ದೇವ
ವಾರಣವೇಱ್ ಉಂಟವು
(ಇದ್ದದ್ದೆಲ್ಲಾ)ಪೋದೊಡೆ
ಆಖರಕರಂಗೆ (ಆಖರ-
ಅಕ್ಕರೆ,ಪ್ರೀತಿ,ಕರ) ಅಱಿದೆಂದೆ
ಮಾಣ್ದಿರೆ ಮಾಣ್ದುವಾ ಹಱಿ
ನೀನೆ ಪೇೞು ಅಱಿಯವೆಂದ
ಇವು (ಅಱಿಯಲಾರದ ಇವು?
ಅಪೂರ್ವವಾದ ಇವು)
ಭದ್ರದೇವರ ಚಾಗದೊಳ್

ಪೊಜಿಗಾದುವೇ.==
[ಕಾಮಧೇನು ದೇವತೆಯೆಂಬ ಕಾಪಿನೆ ನಿಂತಿತು. ಯಾವುದೇ ಒಂದು, ಒಂದೂ ಇರದೆ ಇರಲಿಲ್ಲ. ದಾನ ಮಾಡದ ದೇವ ಇಂದ್ರನಲ್ಲಿ ಇದ್ದದ್ದೆಲ್ಲಾ ದೂರ್ವಾಸರ ಶಾಪದಿಂದ ಹೋದರೆ (ಹರಿಯ ಸಹಾಯದಿಂದ ಮತ್ತೆ ಸಿಕ್ಕಿತು, ಆದರೆ ಬದ್ದೆಗನಿಗೆ ಕೊಟ್ಟಿದ್ದು ಹಿಂದಕ್ಕೆ ಬರುವುದಿಲ್ಲ,).

ಆದ್ದರಿಂದ ಯಾರು ಹೆಚ್ಚು!)
ಅಕ್ಕರೆಯಿಂದ ದಾನ
ಮಾಡುವವನಿಗೆ
ಅಸಾಧ್ಯವಾದುದು ಎಂಬುದು
ಇಲ್ಲದಿರಲು, ದಾನವು
ನಿಂತೀತೇ, ಹರಿ ನೀನೆ ಹೇಳು
ಅಸಾಧ್ಯವಾದ ಮತ್ತು
ಅಪೂರ್ವವಾದ ಇವು ಇರಲಿ
ಇಲ್ಲದಿರಲಿ ಭದ್ರದೇವರ
ತ್ಯಾಗದಲ್ಲಿ

ಕಡಿಮೆಯಾಯಿತೇ?] (ಅರ್ಥ ಸಂಧಿಗ್ಧವಾಗಿದೆ).

ಭದ್ರದೇವನ ಮಗ ಯುದ್ಧಮಲ್ಲ ನರಸಿಂಹ

ಕಂ|| ಆ ಬದ್ದೆಗಂಗೆ ವೈರಿತ
ಮೋಬಳ ದಶಶತಕರಂ
ವಿರಾಜಿತ ವಿಜಯ|
ಶ್ರೀ ಬಾಹು ಯುದ್ಧಮಲ್ಲನಿ
ಳಾ ಬಹು ವಿಧರಕ್ಷಣ ಪ್ರವೀಣ
ಕೃಪಾಣಂ|| ೩೦

ಆತ್ಮಭವನಾನರಾಧಿಪ

ನಾತ್ಮಜನಾ ನಹುಷ ಪೃಥು

ಭಗೀರಥ ನಳ ಮಾ।

ಹಾತ್ಮರನಿೞಿಸಿ ನೆಗೞ್ದ ಮ

ಹಾತ್ಮಂ

ನರಸಿಂಹನೞಿವಿನೊಳ್

ಪರಮಾತ್ಮಂ॥ ೩೧

(ಯುಗ್ಮ ಪದ್ಯ; ಎರಡೂಪದ್ಯಸೇರಿ ಒಂದೇವಾಕ್ಯ.)

೩೦.ಪದವಿಭಾಗ-ಅರ್ಥ:-ಆ ಬದ್ದೆಗಂಗೆ ವೈರಿ ತಮೋಬಳ/ಲ (ಕತ್ತಲೆಗೆ ವೈರಿ- ಸೂರ್ಯ)

ದಶಶತಕರಂ ವಿರಾಜಿತ
ವಿಜಯಶ್ರೀ ಬಾಹು
ಯುದ್ಧಮಲ್ಲನು ಇಳಾ ಬಹು
ವಿಧರಕ್ಷಣ ಪ್ರವೀಣ ಕೃಪಾಣಂ
(ಖಡ್ಗ)==[ಆ ಬದ್ದೆಗನಿಗೆ
ವೈರಿಗಳೆಂಬ ಕತ್ತಲೆಗೆ
ಸೂರ್ಯನಾದ, ಶೋಭಿತ
ವಿಜಯಶ್ರೀಯಿಂದ ಕೂಡಿದ
ತೋಳುಗಳುಳ್ಳವನಾದ,
ಯುದ್ಧಮಲ್ಲನು
ಭೂಮಿಯನ್ನು ಬಹು

ವಿಧದಲ್ಲಿ
ರಕ್ಷಣೆಮಾಡುವುದರಲ್ಲಿ
ಸಮರ್ಥ ಖಡ್ಗವುಳ್ಳವನು].

೩೧.ಪದವಿಭಾಗ-ಅರ್ಥ:-

ಆತ್ಮಭವನು ಆ ನರಾಧಿಪನು
ಆತ್ಮಜನು ಆ ನಹುಷ ಪೃಥು
ಭಗೀರಥ ನಳ ಮಾಹಾತ್ಮರನು
ಇೞಿಸಿ(ಕಡೆಗಣಿಸಿ) ನೆಗೞ್ದ
ಮಹಾತ್ಮಂ ನರಸಿಂಹನು
ಅಱಿವಿನೊಳ್(ಅರವಿನಲ್ಲಿ-
ಜ್ಞಾನದಲ್ಲಿ) ಪರಮಾತ್ಮಂ==

[ಮಗನು, ಆ ರಾಜನಾದ ಆತ್ಮಜನು ಆ ನಹುಷ, ಪೃಥು, ಭಗೀರಥ, ನಳ,ಮೊದಲಾದ ಮಾಹಾತ್ಮರನ್ನು ಕಡೆಗಣಿಸಿ ಪ್ರಸಿದ್ಧ ಮಹಾತ್ಮನು, ನರಸಿಂಹನು ಅವನು ಜ್ಞಾನದಲ್ಲಿ ಪರಮಾತ್ಮನಿಗೆ ಸಮಾನನು].

೩೦,೩೧. ತಾತ್ಪರ್ಯ:-ಆ ಬದ್ದೆಗನಿಗೆ ವೈರಿಗಳೆಂಬ ಕತ್ತಲೆಗೆ ಸೂರ್ಯನಾದ,

ಶೋಭಿತ ವಿಜಯಶ್ರೀಯಿಂದ
ಕೂಡಿದ
ತೋಳುಗಳುಳ್ಳವನಾದ,
ಯುದ್ಧಮಲ್ಲನು
ಭೂಮಿಯನ್ನು ಬಹು
ವಿಧದಲ್ಲಿ
ರಕ್ಷಣೆಮಾಡುವುದರಲ್ಲಿ
ಸಮರ್ಥ ಖಡ್ಗವುಳ್ಳವನು.
ಮಗನು, ಆ ರಾಜನಾದ
ಆತ್ಮಜನು ಆ ನಹುಷ, ಪೃಥು,
ಭಗೀರಥ, ನಳ,ಮೊದಲಾದ

ಮಾಹಾತ್ಮರನ್ನು ಕಡೆಗಳಣಿಸಿ

ಪ್ರಸಿದ್ಧ ಮಹಾತ್ಮನು,

ನರಸಿಂಹನು ಅವನು

ಜ್ಞಾನದಲ್ಲಿ ಪರಮಾತ್ಮನಿಗೆ

ಸಮಾನನು.

ಮಾಂಕರಿಸದಱಿವು ಗುರು

ವಚ

ನಾಂಕುಶಮಂ ಪಾಱಿಯೆಡೆಗೆ

ಪೊಣರ್ದರಿಬಲಮಂ|

ಕಿಂಕೊಳೆ ಮಾಱ್ಪೆಡೆಗಣಮೆ ನಿ

ರಂಕುಶಮೆನಿಸಿದುದು ಮುನಿಸು ಭದ್ರಾಂಕುಶನಾ॥ ೩೨॥

೩೨.ಪದವಿಭಾಗ-ಅರ್ಥ:-

ಮಾಂಕರಿಸದು (ಉಪೇಕ್ಷೆಮಾಡುವುದಿಲ್ಲ) ಅಱಿವು (ತಿಳಿವು) ಗುರು ವಚನ ಅಂಕುಶಮಂ, ಪಾಱಿಯೆಡೆಗೆ(ಪಾರಿ-ಮದ ವೇರಿದ ಆನೆ) ಪೊಣರ್ದು ಅರಿಬಲಮಂ (ಶತ್ರು ಸೈನ್ಯ)

ಕಿಂಕೊಳೆ ಮಾಳ್ಪೆಡೆಗೆ
(ಮಾಳ್ಪೆಡೆಗೆ- ಹಿಂಸೆ ಮಾಡುವ
ಸಮಯಕ್ಕೆ)ಅಣಮೆ (ಬಹಳ)
ನಿರಂಕುಶಮೆನಿಸಿದುದು
ಮುನಿಸು
(<-)ಭದ್ರಾಂಕುಶನಾ(ಭದ್ರಜಾತಿ
ಯ ಆನೆಗೆ ಅಂಕುದಂತಿರುವ
ನರಸಿಂನ)=
ಭದ್ರಜಾತಿಯ ಆನೆಗೆ
ಅಂಕುಶದಂತಿರುವ ನರಸಿಂನ
ಅರಿವು ಅಥವಾ ತೀಳಿವು,

ಗುರು ವಚನವನ್ನು ಅಥವಾ
ತಿಳಿದವರ ಮಾತನ್ನು
ಉಪೇಕ್ಷೆಮಾಡವುದಾಗಿರಲಿಲ್ಲ.
ಆದರೆ ಅದೇ ಭದ್ರಾಂಕುಶನು
ಮದ ವೇರಿದ
ಆನೆಯಂತಿರುವ ಶತ್ರು
ಸೈನ್ಯವನ್ನು ಎದುರಿಸುವಾಗ
ಹಿಂಸೆ ಮಾಡುವ ಸಮಯಕ್ಕೆ
ನರಸಿಂಹನ ಮುನಿಸು/ಸಿಟ್ಟು
ನಿರಂಕುಶವಾಗಿರುತ್ತಿತ್ತು.

ಮಾಂಕರಿಸದಱಿವು ಗುರು
ವಚ
ನಾಂಕುಶಮಂ ಪಾಱಿಯೆಡೆಗೆ
ಪೊಣರ್ದರಿಬಲಮಂ|
ಕಿಂಕೊಳೆ ಮಾೞ್ಪೆಡೆಗಣಮೆ ನಿ
ರಂಕುಶಮೆನಿಸಿದುದು
ಮುನಿಸು ಭದ್ರಾಂಕುಶನಾ||
೩೨||

೩೨.ಪದವಿಭಾಗ-ಅರ್ಥ:-

ಮಾಂಕರಿಸದು
(ಉಪೇಕ್ಷೆಮಾಡುವುದಿಲ್ಲ)

ಅಱಿವು (ತಿಳಿವು) ಗುರು
ವಚನ ಅಂಕುಶಮಂ,
ಪಾಱಿಯೆಡೆಗೆ(ಪಾರಿ-ಮದ
ವೇರಿದ ಆನೆ) ಪೊಣರ್ದು
ಅರಿಬಲಮಂ (ಶತ್ರು ಸೈನ್ಯ)
ಕಿಂಕೊಳೆ ಮಾಱ್ಪೆಡೆಗೆ
(ಮಾಳ್ಪೆಡೆಗೆ- ಹಿಂಸೆ ಮಾಡುವ
ಸಮಯಕ್ಕೆ)ಅಣಮೆ (ಬಹಳ)
ನಿರಂಕುಶಮೆನಿಸಿದುದು
ಮುನಿಸು
(<-)ಭದ್ರಾಂಕುಶನಾ(ಭದ್ರಜಾತಿ

ಯ ಆನೆಗೆ ಅಂಕುದಂತಿರುವ
ನರಸಿಂನ)=
ಭದ್ರಜಾತಿಯ ಆನೆಗೆ
ಅಂಕುಶದಂತಿರುವ ನರಸಿಂನ
ಅರಿವು ಅಥವಾ
ತಿಳುವಳಿಕೆಯು, ಗುರು
ವಚನವನ್ನು ಅಥವಾ
ತಿಳಿದವರ ಮಾತನ್ನು
ಉಪೇಕ್ಷೆಮಾಡವುದಾಗಿರಲಿಲ್ಲ.
ಆದರೆ ಅದೇ ಭದ್ರಾಂಕುಶನು
ಮದ ವೇರಿದ

ಆನೆಯಂತಿರುವ ಶತ್ರು ಸೈನ್ಯವನ್ನು ಎದುರಿಸುವಾಗ ಹಿಂಸೆ ಮಾಡುವ ಸಮಯಕ್ಕೆ ನರಸಿಂಹನ ಮುನಿಸು/ಸಿಟ್ಟು ನಿರಂಕುಶವಾಗಿರುತ್ತಿತ್ತು.

ತಱಿಸಂದು ಲಾಟಿರೊಳ್ ತ
ಳ್ತಿಱಿದೇಱಿಂ ಪೇಱಿ ಕೇಳ್ದ
ಮಂಡಲಮಿನ್ನುಂ|
ತಿಱುನೀರಿಕ್ಕುವುದೆನಿಸಿದ
ತಱಿಸಲವಿನ ಚಲದ ಬಲದ
ಕಲಿ ನರಸಿಂಹಂ|| ೩೩

೩೩.ಪದವಿಭಾಗ-ಅರ್ಥ:-
ತಱಿಸಂದು (ತರಿಸಂದು-ಪಟ್ಟುಹಿಡಿದು)
ಲಾಟಿರೊಳ್(ಲಾಳ-ಲಾಟದೇಶದಲ್ಲಿ- ದಕ್ಷಿಣ ಗುಜರಾತು))
ತಳ್ತಿಱಿದೇಱಿಂ(ತಳ್ತು-ತಾಗಿ, ಇರಿದು ಏರಂ) ಪೇಱೆ (ಏರಂ ಪೇರೆ -ವಿಷಯ ಕೇಳಿ/ ಹೇಳಿದರೆ?) ಕೇಳ್ದು ಮಂಡಲಂ ಇನ್ನುಂ ತಿಱುನೀರು (ಸತ್ತವರಿಗೆ

ತರ್ಪಣದ ನೀರು) ಇಕ್ಕುವುದು
ಎನಿಸಿದ ತಜಿಸಲವಿನ (ಸ್ಥಿರ)
ಚಲದ (ಛಲದ) ಬಲದ ಕಲಿ
ನರಸಿಂಹಂ=
=ದಕ್ಷಿಣ ಗುಜರಾತಿನ
ಧಾಳಿಯುಭಯಂಕರವಾಗಿತ್ತು:
ಲಾಟದೇಶದಲ್ಲಿ ಪಟ್ಟುಹಿಡಿದು
ಯುದ್ಧಹೂಡಿ, ಶತ್ರುಗಳನ್ನು
ಇರಿದು ಕೆಡವಿದ ವಿಷಯ
ಕೇಳಿ/ ಹೇಳಿದರೆ; ಕೇಳಿ ಆ
ಮಂಡಲದಲ್ಲಿ ಇನ್ನೂ

ಸತ್ತವರಿಗೆ ತರ್ಪಣದ ನೀರು
ಕೊಡುವುದು ನೆಡೆದಿದೆ,ಎಂಬ
ಸುದ್ದಿ ಇದೆ. ಈ ಬಗೆಯ
ಸ್ಥಿರವಾದ ಛಲವುಳ್ಳ ಬಲದ
ಕಲಿ ನರಸಿಂಹನು.

ಸಿಂಗಂ ಮಸಗಿದವೋಲ್ ನರ
ಸಿಂಗಂ ತಳ್ತಿಱಿಯೆ ನೆಗಱ್ದ
ನೆತ್ತರ್ ನಭದೊಳ್|
ಕೆಂಗುಡಿ ಕವಿದಂತಾದುದಿ
ದೇಂ ಗರ್ವದ ಪೆಂಪೊ
ಸಕಲಲೋಕಾಶ್ರಯನಾ|| ೩೪

೩೪.ಪದವಿಭಾಗ-ಅರ್ಥ:-
ಸಿಂಗಂ ಮಸಗಿದವ್ರೋಲ್
ನರಸಿಂಗಂ ತಳ್ತು ಇಱಿಯೆ
ನೆಗೆಟ್ದಿ (ಹಾರಿದ) ನೆತ್ತರ್
ನಭದೊಳ್ ಕೆಂಗುಡಿ(ಕೆಂಪು
ಬಾವುಟ) ಕವಿದಂತಾದುದು
ಇದೇಂ ಗರ್ವದ ಪೆಂಪೊ
ಸಕಲಲೋಕಾಶ್ರಯನಾ=
=ಸಿಂಹವು ಕೆರಳಿ
ಆಕ್ರಮಿಸಿದಂತೆ ನರಸಿಂಗನು
ಯುದ್ಧದಲ್ಲಿ ತಾಗಿ/

ಎದುರುಬಿದ್ದು ಇರಿಯಲು,
ಹಾರಿದ ರಕ್ತ ಆಕಾಶದಲ್ಲಿ
ಕೆಂಪು ಬಾವುಟ
ಕವಿದಂತಾಗಿತ್ತು. ಇದೇನು
ಎಲ್ಲಾ ಜನರಿಗೂ
ಆಶ್ರಯನಾದ ನರಸಿಂಹನ
ಪರಾಕ್ರಮದ ಹಿರಿಮೆಯೋ!

ಏಱಿಂ ಮಾಳಮುಮಂ ಪಾ
ಱೋಱಿ ತಗುಳಿಱಿದು
ನರಗನುರಿಪಿದೊಡೆ ಕರಿಂ|
ಕೇಱಸಿದಾತನ ತೇಜದ

ಬೀೞಲನನುಕರಿಪುವಾದುವೊ
ಗೆದುರಿವುರಿಗಳ್||೩೫||

೩೫.ಪದವಿಭಾಗ-ಅರ್ಥ:-

ಏೞಿಂ ಮಾಳಮುಮಂ (ಏೞಿಂ-ಏಳು ಮಾಳವಮಂ - (ಮಾಳವರಾಜ್ಯದ ಭಾಗಗಳನ್ನು ಆಕ್ರಮಿಸಲು),ಪಾೞೇೞೆ (ಪಾಳೇಳೆ) ಮೇಲಕ್ಕೆ ಹಾರಿಹೋಗುವಂತೆ) ತಗುೞೆ (ಬೆನ್ನಟ್ಟಿ) ಇರಿದು, ನರಗನು

ಉರಿಪಿದೊಡೆ (ಸುಟ್ಟರೆ) ಕರಿಂ
ಕೇಟಿಸಿದು (ಸುಟ್ಟು
ಕರುಕುಲಾದ) ಆತನ ತೇಜದ
ಬೀೞಲನು (ತೇಜಸ್ಸಿನ
ಬಿಳಲು-ಬೇರು)
ಅನುಕರಿಪುವಾದು
(ಅನುಕರಿಸು-
ಹೋಲಿಸು?,ಅನಕರಿಸಲಾಗ
ದ್ದು), ಯಾರೂ ಹಾಗೆ
ಮಾಡಲು ಆಗದು.)

ಒಗೆದ(ಉಂಟಾದ)
ಉರಿವುರಿಗಳ್=
=[ಮಾಳವರಾಜ್ಯದ ಏಳು
ಭಾಗಗಳನ್ನು ಆಕ್ರಮಿಸಿದಾಗ
ಮೇಲಕ್ಕೆ ಹಾರಿಹೋಗುವಂತೆ
ಬೆನ್ನಟ್ಟಿ ನರಗನು/
ನರಸಿಂಹನು ಸುಟ್ಟರೆ ಅದು,
ಸುಟ್ಟು ಕರುಕುಲಾಯಿತು-
ಆತನ/ಮಾಳವನ ತೇಜಸ್ಸಿನ/
ಕೀರ್ತಿಯ ಬಿಳಲು/ ಬೇರು
ನಾಶವಾಯಿತು; ಹೀಗೆ

ಉಂಟಾದ ಜ್ವಾಲೆಗಳು ಹೇಗಿತ್ತೆಂದರೆ, ಯಾರೂ ಅನುಕರಣೆಮಾಡಲಾಗದ್ದು, ಯಾರೂ ಹಾಗೆ ಮಾಡಲು ಆಗದು].

(ಉತ್ಪ್ರೇಕ್ಷಾಲಂಕಾರಗಳು)

ವಿಜಯಾರಂಭ ಪುರಸ್ಸರ ವಿಜಯಗಜಂಗಳನೆ ಪಿಡಿದು ಘೂರ್ಜರ ರಾಜ|

ಧ್ವಜಿನಿಯನಿಱಿದೋಡಿಸಿ ಭುಜ

ವಿಜಯದೆ ವಿಜಯನುಮನಿಱಿಸಿದಂ ನರಸಿಂಹಂ|| ೩೬

೩೬.ಪದವಿಭಾಗ-ಅರ್ಥ:- ವಿಜಯಾರಂಭ (ವಿಜಯ ಆರಂಭ-ವಿಜಯಯಾತ್ರೆಯ ಕಾರ್ಯ) ಪುರಸ್ಸರ (ಪುರಸ್ಕಾರ) ವಿಜಯಗಜಂಗಳನೆ (ವಿಜಯ ಸೂಚಕ ಆನೆಗಳನ್ನು) ಪಿಡಿದು ಘೂರ್ಜರ ರಾಜ

ಧ್ವಜಿನಿಯನು (ಸೈನ್ಯ)
ಇಱಿದು ಓಡಿಸಿ
ಭುಜವಿಜಯದೆ
ವಿಜಯನುಮಂ
ಇಱಿಸಿದಂ(ವಿಜನುಮಂ-
ಅರ್ಜುನನ್ನೂ ಇಳಿಸಿದಂ
-ಕಡಿಮೆಯವನಾಗಿ
ಮಾಡಿದನು) ನರಸಿಂಹಂ=
=[ವಿಜಯಯಾತ್ರೆಯ
ಆರಂಭಕಾರ್ಯದಲ್ಲಿ
ಗೌರವದ ವಿಜಯ

ಸೂಚಕವಾದ ಆನೆಗಳನ್ನು ಹಿಡಿದು ಘೂರ್ಜರ ರಾಜನ ಸೈನ್ಯವನ್ನು ಹೊಡೆದೋಡಿಸಿ ಬಾಹುಬಲದ ಗೆಲುವಿನಿಂದ ಅರ್ಜುನನ್ನೂ ನರಸಿಂಹನು ಮೀರಿಸಿದನು. (ಕಡಿಮೆಯವನಾಗಿ ಮಾಡಿದನು)].

ಸಿಡಿಲವೊಲೆಱಗುವ ನರಗನ ಪಡೆಗಗಿದುಮ್ಮಳದಿನುಂಡೆಡೆ ಯೊಳುಣ್ಣದೆಯುಂ|

ಕೆಡೆದೆಡೆಯೊಳ್ ಕೆಡೆಯದೆ ನಿಂ
ದೆಡೆಯೊಳ್
ನಿಲ್ಲದೆಯುಮೋಡಿದಂ
ಮಹಿಪಾಲಂ ||೩೭||

೩೭.ಪದವಿಭಾಗ-ಅರ್ಥ:-

ಸಿಡಿಲವೊಲ್ ಎಱಗುವ
ನರಗನಪಡೆಗೆ ಅಗಿದು
(ಹೆದರಿ) ಉಮ್ಮಳದಿಂ
ಉಂಡೆಡೆಯೊಳು
(ಊಟಮಾಡಿದ ಸ್ಥಳದಲ್ಲಿ/
ಊಟಕ್ಕೆ ಹಾಕಿದ ಎಲೆ)

ಉಣ್ಣದೆಯುಂ ಕೆಡೆದ
(ಮಲಗಿದ೦ ಎಡೆಯೊಳ್
ಕೆಡೆಯದೆ, ನಿಂದೆಡೆಯೊಳ್
ನಿಲ್ಲದೆಯುಂ ಓಡಿದಂ
ಮಹಿಪಾಲಂ==[ಸಿಡಿಲಿನಂತೆ
ಧಾಳಿಮಾಡುವ ನರಸಿಂಹನ
ಸೈನ್ಯಕ್ಕೆ ಹೆದರಿ ಸಂಕಟದಿಂದ
ಉಂಡೆಡೆಯಲ್ಲಿ ಉಣ್ಣದೆ,
ಮಲಗಿದಲ್ಲಿ ಮಲಗದೆ,
ನಿಂತಲ್ಲಿ ನಿಲ್ಲದೆ,

ಮಹಿಪಾಲನೆಂಬ ರಾಜನು ಓಡಿದನು].

ಗಂಗಾವಾರ್ಧಿಯೊಳಾತ್ಮತು ರಂಗಮುಮಂ ಮಿಸಿಸಿ ನೆಗೞ್ದ ಡಾಳಪ್ರಿಯನೊಳ್।
ಸಂಗತ ಗುಣಾನಸಿಲತೆಯನ ಸುಂಗೊಳೆ ಭುಜವಿಜಯಗರ್ವದಿಂ ಸ್ಥಾಪಿಸಿದಂ॥೩೮॥

೩೮.ಪದವಿಭಾಗ-ಅರ್ಥ:-

ಗಂಗಾವಾರ್ಧಿಯೊಳ್ ಆತ್ಮ

ತುರಂಗಮುಮಂ ಮಿಸಿಸಿ
(ಮೀಸಿಸಿ -ಸ್ನಾನಮಾಡಿಸಿ)
ನೆಗಟ್ದಿ ಡಾಳಪ್ರಿಯನೊಳ್
(ಕಾಳಪ್ರಿಯ ಎಂಬ
ಊರಿನಲ್ಲಿ?) ಸಂಗತಗುಣಾನ
ಅಸಿಲತೆಯನು
(ಲತೆಯಂತಿರುವ ಕತ್ತಿ)
ಅಸುಂಗೊಳೆ (ಅಸು-ಪ್ರಾಣ,
ಕೊಳೆ-ಕೊಳ್ಳಲು,ತೆಗೆಯಲು)
ಭುಜವಿಜಯಗರ್ವದಿಂ
ಸ್ಥಾಪಿಸಿದಂ=

=[ಆ ನರಸಿಂಹ ರಾಜನು

ಗಂಗಾನದಿಯಲ್ಲಿ ತನ್ನ

ಕುದುರೆಯನ್ನು ಸ್ನಾನ ಮಾಡಿಸಿ

ಪ್ರಸಿದ್ಧವಾದ ಕಾಳಪ್ರಿಯ

ಎಂಬ ಊರಿನಲ್ಲಿ ಗುಣದಿಂದ

ಕೂಡಿದ ಲತೆಯಂತಿರುವ

ಕತ್ತಿಯನ್ನು ಶತ್ರುಗಳ

ಪ್ರಾಣವನ್ನು ತೆಗೆಯಲು ತನ್ನ

ಭುಜದ ವಿಜಯದ

ಪರಾಕ್ರಮದಿಂದ

ಸ್ಥಾಪಿಸಿದನು.ಕಾಳ ಪ್ರಿಯ

ಎಂಬಲ್ಲಿ ತನ್ನ ವಿಜಯದ ಶಾಸನವನ್ನು ಕಂಬದಲ್ಲಿ ಬರೆಸಿ ಸ್ಥಾಪಿಸಿದನು. ರಾಜ್ಯವನ್ನು ಗಂಗಾನದಿಯವರೆಗೂ ವಿಸ್ತರಿಸಿದನು ಎಂದು ಭಾವ. (ಉಜ್ಜಯನಿಯ ಮಹಾಕಾಲೇಶ್ವರ ದೇವಾಲಯ ಪ್ರದೇಶವಿರಬಹುದು)].

ಕಂ|| ಆ ನರಸಿಂಹಮಹೀಶ ಮ
ನೋನಯನಪ್ರಿಯೆ
ವಿಳೋಳನೀಳಾಳಕೆ ಚಂ|

ದ್ರಾನನೆ ಜಾಕವ್ವೆ ದಲಾ ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ|| ೩೯||

೩೯.ಪದವಿಭಾಗ-ಅರ್ಥ:-

ಕಂ|| ಆ ನರಸಿಂಹಮಹೀಶ ಮನ ನಯನ ಪ್ರಿಯೆ (ಮನದ ಕಣ್ಣಿಗೆ ಪ್ರಿಯೆ) ವಿಳೋಳನೀಳಾಳಕೆ (ವಿಳೋಳ- ವಿಲೋಲ, ನೀಳ ಆಳಿಕೆ-ಅಲುಗಾಡುವ ಕರಿಯ ಮುಂಗುರುಳಿನ) ಚಂದ್ರಾನನೆ,

ಜಾಕವ್ವೆ ದಲ್ ಜಾನಕಿಗೆ ಅಗ್ಗಳಮೆ (ಹೆಚ್ಚಿನವಳು) ಕುಲದೊಳಂ ಶೀಲದೊಳಂ=

=[ಆ ನರಸಿಂಹ ರಾಜನ ಪತ್ನಿ ಅವನ ಮನಸ್ಸಿಗೂ ಕಣ್ಣಿಗೂ ಪ್ರಿಯಳಾದ ಅಲುಗಾಡುವ ಕರಿಯ ಮುಂಗುರುಳಿನ ಚಂದ್ರನಂತೆ ಮುಖವುಳ್ಳ ಜಾಕವ್ವೆ! ದಲ್- ಅವಳೇ ಕುಲದಲ್ಲಿಯೂ, ಶೀಲದಲ್ಲಿಯೂ ಜಾನಕಿದೇವಿಗೆ ಹೆಚ್ಚಿನ ಗುಣವತಿ ಅವನ ಪತ್ನಿ.]. (ಜಾನಕಮ್ಮ-ಜಾನಕವ್ವ -ಜಾಕವ್ವೆ)

ಪೊಸತಲರ್ದ ಬಿಳಿಯ ತಾವರೆ ಯೆಸಙ್ಗಿಳ ನಡುವಿರ್ಪ ಸಿರಿಯುಮಾಕೆಯ ಕೆಲದೊಳ್| ನಸು ಮಸುಳ್ದು ತೋರ್ಪಳೆನೆ ಪೋ

ಲಿಸುವೊಡೆ ಜಾಕವ್ವೆಗುಟಿದ ಪೆಂಡಿರ್ ದೊರೆಯೇ|| ೪೦||

೪೦.ಪದವಿಭಾಗ-ಅರ್ಥ:-

(ಜಾಕವ್ವೆಯ ಸೌಂದರ್ಯ ವರ್ಣನೆ):ಪೊಸತು ಅಲರ್ದ ಬಿಳಿಯ ತಾವರೆಯ ಎಸಟ್ಗಳ ನಡುವಿರ್ಪ ಸಿರಿಯುಂ ಆಕೆಯ ಕೆಲದೊಳ್,ನಸು ಮಸುಳ್ದು (ಮಸುಕಾಗಿ) ತೋರ್ಪಳು ಎನೆ ಪೋಲಿಸುವೊಡೆ ಜಾಕವ್ವೆಗೆ, ಉಟಿದ ಪೆಂಡಿರ್ ದೊರೆಯೇ

(ಸಮಾನರೇ-ಅಲ್ಲ!)==
[(ಜಾಕವ್ವೆಯ ಸೌಂದರ್ಯ
ವರ್ಣನೆ):ಹೊಸದಾಗಿ
ಅರಳಿದ ಬಿಳಿಯ ತಾವರೆಯ
ಎಸಳುಗಳ ನಡುವೆ ಇರುವ
ಸಾಕ್ಷಾತ್ ಲಕ್ಷ್ಮಿಯೇ, ಆಕೆಯ
ಪಕ್ಕದಲ್ಲಿಟ್ಟು ಹೋಲಿಸಿದರೆ
ಸ್ವಲ್ಪ,ಮಬ್ಬಾಗಿ -ಮಸುಕಾಗಿ
ಕಾಣುವಳು. ಅಷ್ಟು ಸುಂದರಿ;
ಎನ್ನುವಾಗ ಜಾಕವ್ವೆಗೆ ಉಳಿದ

ಅರಸನ ಹೆಂಡಿರು
ಸಮಾನರೇ-ಅಲ್ಲ!].

ಆ ಜಾಕವ್ವೆಗಮಾ ವಸು
ಧಾ ಜಯ ಸದ್ವಲ್ಲಭಂಗಮತಿ
ವಿಶದ ಯಶೋ|
ರಾಜಿತನೆನಿಪರಿಕೇಸರಿ
ರಾಜಂ ತೇಜೋಗ್ನಿಮಗ್ನ ರಿಪು
ನೃಪಶಲಭಂ|| ೪೧ ||

೪೧.ಪದವಿಭಾಗ-ಅರ್ಥ:ಆ
ಜಾಕವ್ವೆಗುಂ ಆ ವಸುಧಾ
(ಭೂಮಿ) ಜಯ ಸದ್

ವಲ್ಲಭಂಗಂ (ಭೂಮಿ ಪತಿ)
ಅತಿ ವಿಶದ ಯಶೋರಾಜಿತನು
(ಯಶ-ಕೀರ್ತಿ) ಎನಿಪ
ಅರಿಕೇಸರಿರಾಜಂ
ತೇಜೋಗ್ನಿಮಗ್ನ (ರೂಪತಳೆದ
ಮುಳುಗಿದ,)ರಿಪು
ನೃಪಶಲಭಂ==[ಆ
ಜಾಕವ್ವೆಗೂ ಮತ್ತು ಆ
ಭೂಮಿಯನ್ನೆಲ್ಲಾ ಗೆದ್ದ
ಭೂಪತಿಯಾದ ಜಾಕವ್ವೆಯ
ಪತಿಗೂ, ಅತಿ ನಿರ್ಮಲವಾದ

ಕೀರ್ತಿಯಿಂದ ಶೋಭಿತನೂ ಆಗಿರುವ ಅರಿಕೇಸರಿರಾಜನಿಗೂ, ತನ್ನ ತೇಜಸ್ಸೆಂಬ ಅಗ್ನಿಯ ರೂಪತಳೆದವನಿಗೆ ಶತ್ರು ನೃಪರೆಂಬ ಪತಂಗಗಳನ್ನು ಹೊಂದಿದ **ಅರಿಕೇಸರಿ-ಇಮ್ಮಡಿ ಅರಿಕೇಸರಿ** ಎಂಬ ದೊರೆ].

ಮಗನಾದನಾಗಿ ಚಾಗದ

ನೆಗೞ್ತೆಯೊಳ್
ಬೀರದೇೞ್ಗೆಯೊಳ್ ನೆಗೞ್ದ
ಮಗಂ|
ಮಗನೆನೆ ಪುಟ್ಟಲೊಡಂ ಕೋ
ೞ್ಕೊೞಗಗೊಂಡುದು
ಭುವನಭವನಮರಿಕೇಸರಿಯೊ
ಳ್|| ೪೨||

೪೨.ಪದವಿಭಾಗ-

ಅರ್ಥ:ಮಗನು ಆದನು ಆಗಿ ಚಾಗದ ನೆಗೞ್ತೆಯೊಳ್ (ಚಾಗ-ತ್ಯಾಗ, ನೆಗೞ್-

ಕಾರ್ಯ) ಬೀರದ (ಬೀರ-
ವೀರ)ಏೞ್ಗೆಯೊಳ್ (ಉನ್ನತಿ)
ನೆಗೞೆ (ನೆಗಳ್-
ಪ್ರಸಿದ್ಧಿ)ಮಗಂ, ಮಗನು ಎನೆ
ಪುಟ್ಟಲು ಒಡಂ (ಕೂಡಲೆ)
ಕೋೞ್ಮೊಗಗೊಂಡುದು
(ಕೋಳ್ ಮೊಗ-ಕೊಂಡುದು,
ಕೋಡು -ಹೆಚ್ಚುಗಾರಿಕೆ
ಮುಖದಲ್ಲಿ ಬಂದಿತು) ಭುವನ
(ಲೋಕ) ಭವನಂ
ಅರಿಕೇಸರಿಯೊಳ್==

[(ಅರಿಕೇಸರಿ ಎಂಬ) ಮಗನು ಹುಟ್ಟಿದನು. ಹಾಗೆ ಹುಟ್ಟಿದವನು ದಾನಮಾಡುವ ಕಾರ್ಯದಲ್ಲಿ ಮತ್ತು ಶೌರ್ಯದ ಉನ್ನತಿಯಲ್ಲಿ ಪ್ರಸಿದ್ಧನಾಗಲು, ಮಗನೆಂದರೆ ಇವನೇ ಮಗನು ಎನ್ನುವಂತೆ ಹುಟ್ಟಲು, ಒಡನೆ ಈ ಲೋಕ ಮಂದಿರದಲ್ಲಿ ಅರಿಕೇಸರಿಯ ಕಾರಣದಿಂದ ಮುಖದಲ್ಲಿ ಕೋಡು ಮೂಡಿದಂತಾಯಿತು.

(ತಲೆಯಲ್ಲಿ ಕೋಡುಮೂಡಿದಂತೆ - ಬಹಳ ಹೆಚ್ಚುಗಾರಿಕೆ ಪಡೆದನು.]

- **ಟಿಪ್ಪಣಿ:**:(ನಿನಗೇನು ಹೆಚ್ಚುಗಾರಿಕೆ ಬಂದಿದೆಯಾ? ಎನ್ನಲು,- ನಿನಗೇನು ಕೋಡು ಬಂದಿದೆಯಾ ಎನ್ನುವರು. ಈ ನುಡಿಗಟ್ಟು ಎಂಟು ನೂರು ವರ್ಷದ ಹಿಂದೆಯೇ ಇತ್ತು ಎಂದಾಯಿತು.)

೪೧-೪೨.ತಾತ್ಪರ್ಯ:ಆ ಜಾಕವ್ವೆಗೂ ಮತ್ತು ಆ ಭೂಮಿಯನ್ನೆಲ್ಲಾ ಗೆದ್ದ ಭೂಪತಿಯಾದ ಜಾಕವ್ವೆಯ ಪತಿಗೂ, ಅತಿ ನಿರ್ಮಲವಾದ ಕೀರ್ತಿಯಿಂದ ಶೋಭಿತನೂ ಆಗಿರುವ ಅರಿಕೇಸರಿರಾಜನಿಗೂ, ತನ್ನ ತೇಜಸ್ಸೆಂಬ ಅಗ್ನಿಯ ರೂಪತಳೆದವನಿಗೆ ಶತ್ರು ನೃಪರೆಂಬ ಪತಂಗಗಳನ್ನು

ಹೊಂದಿದ **ಅರಿಕೇಸರಿ-ಇಮ್ಮಡಿ ಅರಿಕೇಸರಿ** ಎಂಬ ದೊರೆ ಮಗನು ಹುಟ್ಟಿದನು. ಹಾಗೆ ಹುಟ್ಟಿದವನು ದಾನಮಾಡುವ ಕಾರ್ಯದಲ್ಲಿ ಮತ್ತು ಶೌರ್ಯದ ಉನ್ನತಿಯಲ್ಲಿ ಪ್ರಸಿದ್ಧನಾಗಲು, ಮಗನೆಂದರೆ ಇವನೇ ಮಗನು ಎನ್ನುವಂತೆ ಹುಟ್ಟಲು, ಒಡನೆ ಈ ಲೋಕ ಮಂದಿರದಲ್ಲಿ ಅರಿಕೇಸರಿಯ ಕಾರಣದಿಂದ

ಮುಖದಲ್ಲಿ ಕೋಡು ಮೂಡಿದಂತಾಯಿತು. (ತಲೆಯಲ್ಲಿ ಕೋಡುಮೂಡಿದಂತೆ - ಬಹಳ ಹೆಚ್ಚುಗಾರಿಕೆ ಪಡೆದನು.)

ಇಮ್ಮಡಿ ಅರಿಕೇಸರಿ

ತರಳವೃತ್ತ|| ಮದದ ನೀರೊಳೆ ಲೋಕವಾರ್ತೆಗೆ ಬೆಚ್ಚುನೀರ್ದಳಿದಾಗಳಾ

ಮದಗಜಾಂಕುಶದಿಂದೆ

ಪೆರ್ಚಿಸಿ ನಾಭಿಯಂ

ಮದದಂತಿ ದಂ|

ತದೊಳೆ ಕಟ್ಟಿದ ತೊಟ್ಟಿಲಂ

ನಯದಿಂದಮೇಱಿಸೆ ಬಾಳಕಾ

ಲದೊಳೆ ತೊಟ್ಟಿಲಿಗಂ

ಗಜಪ್ರಿಯನಪ್ಪುದಂ ಸಲೆ

ತೋಱಿದಂ|| ೪೩||

೪೩.ಪದವಿಭಾಗ-

ಅರ್ಥ:ತರಳ||ಚಿಕ್ಕಂದಿನಿಂದ

ಅರಿಕೇಸರಿಗೆ 'ಗಜಪ್ರಿಯ'

ಆನೆಗಳಲ್ಲಿ ಆಸಕ್ತಿಯುಳ್ಳವನು
-ಎಂಬ ಬಿರುದು ಇತ್ತು.
ಅದನ್ನು ಹೊಗಳಲು ಈ ಪದ್ಯ
ಬಂದಿದೆ.
ಮದದ ನೀರೊಳೆ
ಲೋಕವಾರ್ತೆಗೆ ಬೆಚ್ಚುನೀರ್
ತಳಿದು ಆಗಳು ಆ ಮದಗಜ
ಅಂಕುಶದಿಂದೆ ಪೆರ್ಚಿಸಿ
(ಹೆಚ್ಚಿಸಿ?- ಕತ್ತರಿಸಿ) ನಾಭಿಯಂ
ಮದದಂತಿ ದಂತದೊಳೆ,
ಕಟ್ಟಿದ ತೊಟ್ಟಿಲಂ

ನಯದಿಂದಂ ಏಱಿಸೆ (ಏರಿಸೆ)
ಬಾಳಕಾಲದೊಳೆ
(ಬಾಲನಾದಾಗಲೇ)
ತೊಟ್ಟಿಲಿಗಂ ಗಜಪ್ರಿಯನು
ಅಪ್ಪುದಂ ಸಲೆ ತೋಱಿದಂ
(ತೋರಿದನು)=
ಅರ್ಥ=[ಆರಿಕೇಸರಿ
ಜನನವಾದಾಗ, ಆನೆಯ
ಮದದ ನೀರಲ್ಲಿಯೇ
ಲೋಕರೂಢಿಯಂತೆ
ಬೆಚ್ಚುನೀರನ್ನು

-ದೃಷ್ಟಿನಿವಾರಣೆಗಾಗಿ ತಳಿದು/ ಚಿಮುಕಿಸಿ, ಆಗ ಆ ಮದಗಜದ ಅಂಕುಶದಿಂದ ಹೊಕ್ಕುಳು ಬಳ್ಳಿಯನ್ನು ಕತ್ತರಿಸಿ, ಮದದಾನೆಯ ದಂತದಿಂದ ಕಟ್ಟಿದ್ದ ತೊಟ್ಟಿಲಲ್ಲಿ ಅವನನ್ನು ನಯವಾಗಿ ಹಾಕಿರಲು, ಬಾಲಕನಾಗಿದ್ದಾಗಲೇ ತೊಟ್ಟಿಲಲ್ಲಿ ಇದ್ದ ಮಗು

ಗಜಪ್ರಿಯನೆಂಬುದನ್ನು ಚೆನ್ನಾಗಿ ತೋರಿಸಿದನು].

ಕಂ॥ ರುಂದ್ರಾಂಭೋಧಿ ಪರೀತ
ಮ।
ಹೀಂದ್ರರದಾರಿನ್ನರೀ
ನರೇಂದ್ರಂ ಸಾಕ್ಷಾ॥
ದಿಂದ್ರಂ ತಾನೆನೆ ಸಲೆ ನೆಗ
ೞ್ದಿಂದ್ರೇಂದ್ರನ ತೋೞೆ
ತೊಟ್ಟಿಲಾಗಿರೆ ಬೞೆದಂ॥ ೪೪

೪೪.:ಪದವಿಭಾಗ-

ಅರ್ಥ:ಕಂ॥ ರುಂದ್ರ

ಅಂಭೋಧಿ ಪರೀತ (ಸುತ್ತುವರಿದ) ಮಹೀಂದ್ರರು ಅದು ಆರು ಇನ್ನರು ಈ ನರೇಂದ್ರಂ ಸಾಕ್ಷಾತ್ ಇಂದ್ರಂ ತಾನು ಎನೆ ಸಲೆ ನೆಗಳ್ದು ಇಂದ್ರೇಂದ್ರನ ತೋಳೆ ತೊಟ್ಟಿಲಾಗಿ ಇರೆ ಬಳೆದಂ=

ಅರ್ಥ=[ವಿಸ್ತಾರವಾದ ಕಡಲು ಸುತ್ತುವರಿದ ಭೂಮಿಗೆ ರಾಜರು ಅದು ಯಾರು ಇದ್ದಾರೆ? ಯಾರೂ ಇಲ್ಲ. ಈ

ನರೇಂದ್ರನು ಸಾಕ್ಷಾತ್ ಇಂದ್ರನೇ ತಾನು ಎಂಬಂತೆ ಬಹಳ ಪ್ರಸಿದ್ಧನಾಗಿ, ಇಂದ್ರರಾಜನ ತೋಳುಗಳೇ ತೊಟ್ಟಿಲಾಗಿ ಇರಲು, ಬೆಳೆದನು].

ಅಮಿತಮತಿ ಗುಣದಿನತಿ ವಿ
ಕ್ರಮಗುಣದಿಂ
ಶಾಸ್ತ್ರಪಾರಮುಂ ರಿಪುಬಳ
ಪಾ|
ರಮುಮೊಡನೆ ಸಂದುವೆನಿಸಿದ

ನಮೇಯ ಬಲಶಾಲಿ ಮನುಜ ಮಾರ್ತಾಂಡ ನೃಪಂ|| ೪೫

೪೫.:ಪದವಿಭಾಗ-ಅರ್ಥ:ಅಮಿತಮತಿ ಗುಣದಿಂ ಅತಿ ವಿಕ್ರಮಗುಣದಿಂ ಶಾಸ್ತ್ರಪಾರಮುಂ (ಪಾರ-ಆಚೆಯ ತೀರ) ರಿಪುಬಳ ಪಾರಮುಂ ಒಡನೆ ಸಂದುವು ಎನಿಸಿದನು ಅಮೇಯ (ಅಳತೆಗೆ ಮೀರಿದ)ಬಲಶಾಲಿ ಮನುಜ ಮಾರ್ತಾಂಡ ನೃಪಂ=

ಅರ್ಥ=[ಬಹಳ ಬುದ್ಧಿಶಕ್ತಿಯ ಗುಣದಿಂದ, ಅತಿ ಪರಾಕ್ರಮಗುಣದಿಂದ, ಶಾಸ್ತ್ರಜ್ಞಾದ ಆಚೆಯ ತೀರ ಹೊಂದಿ, ಶತ್ರುಬಲನ್ನೂ ಮೀರಿನೆಡೆದು, ಈ ಎಲ್ಲವೂ ಜೊತೆಜೊತೆಗೇ ಲಭಿಸಿದವು ಎನಿಸಿದನು ಅಳತೆಗೆ ಮೀರಿದ ಬಲಶಾಲಿ ಮಾನವ ಮಾರ್ತಾಂಡ ನೃಪನು].

ಉಡೆವಣಿ ಪಱಿಯದ ಮುನ್ನಮೆ
ತೊಡಗಿ ಚಲಂ ನೆಗೞೆ ರಿಪುಬಲಂಗಳನೆ ಪಡ|
ಲ್ವಡಿಸಿ ಪರಬಲದ ನೆತ್ತರ
ಕಡಲೊಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ|| ೪೬

೪೬.:ಪದವಿಭಾಗ-

ಅರ್ಥ:ಉಡೆವಣಿ (ಸೊಂಟದ ಉಡುದಾರಕ್ಕೆ ಕಟ್ಟಿದ ಒಡವೆಯನ್ನು) ಪಱಿಯದ

(ತೆಗೆಯದ) ಮುನ್ನಮೆ ತೊಡಗಿ ಚಲಂ ನೆಗಱೆ ರಿಪುಬಲಂಗಳನೆ ಪಡಲ್ವಡಿಸಿ (ಶತ್ರು ಸೈನ್ಯವನ್ನು ಚೆಲ್ಲಾಪಿಲ್ಲಿ ಮಾಡಿ) ಪರಬಲದ ನೆತ್ತರ ಕಡಲ ಒಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ=

ಅರ್ಥ=[ಸೊಂಟದ ಉಡುದಾರಕ್ಕೆ ಕಟ್ಟಿದ ಒಡವೆಯನ್ನು ತೆಗೆಯಯುವುದಕ್ಕೂ

ಮೊದಲೇ ಯುದ್ಧಕ್ಕೆ
ಆರಂಬಿಸಿ, ಛಲವು ಹೆಚ್ಚಲು,
ಶತ್ರುಸೈನ್ಯಗಳನ್ನು ಪಡಲ್ವಡಿಸಿ
ಚೆಲ್ಲಾಪಿಲ್ಲಿ ಮಾಡಿ ಆ ಸೈನ್ಯದ
ರಕ್ತದ ಕಡಲಿನ ಒಳಗಿನ
ಜಿಗುಳೆಯು ಬೆಳೆಯುವ
ತೆರದಲ್ಲಿ ಕುಮಾರನು
ಬೆಳೆದನು.]

ಮೇಲೆಟ್ಟಿ ಬಲಂ ಕೋಟಿಗೆ
ಮೇಲಪ್ಪೊಡಮನ್ಯವನಿತೆ
ನೆಗಳ್ದೂರ್ವಶಿಗಂ|

ಮೇಲಪ್ಪೊಡಮಕ್ಕೆಂದುಂ
ಸೋಲವು ಕಣ್
ಪರಬಲಾಬ್ಧಿಗಂ ಪರವಧುಗಂ॥
೪೭॥

೪೭:ಪದವಿಭಾಗ-

ಅರ್ಥ:ಮೇಲೆ ಎಟ್ಟಿ ಬಲಂ (ಸೈನ್ಯ) ಕೋಟಿಗೆ ಮೇಲಪ್ಪೊಡಂ, ಅನ್ಯವನಿತೆ ನೆಗಟ್ಟಿ ಊರ್ವಶಿಗಂ ಮೇಲಪ್ಪೊಡಂ ಅಕ್ಕೆಂದುಂ/ ಅಕ್ಕು ಎಂದುಂ ಸೋಲವು

ಕಣ್ ಪರಬಲ ಅಬ್ಧಿಗಂ
ಪರವಧುಗಂ==[ಮೇಲೆ ಬಿದ್ದ
ವೈರಿ ಸೈನ್ಯವು ಕೋಟಿಗೂ
ಮೇಲಿದ್ದರೂ,, ಪರವನಿತೆಯು
ಪ್ರಸಿದ್ಧ ರೂಪವತಿಯಾದ
ಊರ್ವಶಿಗೂ
ಮೀರಿಸಿದವಳಾಗಿದ್ದರೂ,
ಇವಳು ತನಗೆ ಆಗಲಿ(ಬೇಕು)
ಎಂದು, ರಾಜನ ಕಣ್ಣು, ಶತ್ರು
ಸೈನ್ಯ ಸಮುದ್ರಕ್ಕಾಗಲಿ,

ಪರವಧುಗಾಗಲಿ ಎಂದೂ
ಕೂಡಾ ಸೋಲುವುದಿಲ್ಲವು].

ಧುರದೊಳ್ ಮೂಱುಂ ಲೋಕಂ
ನೆರೆದಿರೆಯುಂ ಕುಡುವ ಪೋಟ್ಟಿರೊಳ್ ಮೇರುವೆ ಮುಂ।
ದಿರೆಯುಂ ಬೀರದ ಬಿಯದಂ
ತರಕ್ಕೆ ಕಿಱಿದೆಂದು ಚಿಂತಿಪಂ ಪ್ರಿಯಗಳ್ಳಂ॥ ೪೮॥

೪೮.:ಪದವಿಭಾಗ-

ಅರ್ಥ:ಧುರದೊಳ್

ಮೂಱುಂ ಲೋಕಂ

ನೆರೆದಿರೆಯುಂ (ನರೆದಿರೆ-

ನೆರೆದಿದ್ದರೂ) ಕುಡುವ

(ದಾನಮಾಡುವ)ಪೋೞ್ತಿರೊ

ಳ್ (ಪೊಳ್ತು-ಹೊತ್ತು)ಮೇರುವೆ

ಮುಂದೆ ಇರೆಯುಂ, ಬೀರದ

(ಬೀರ-ಶೂರ, ಶೌರ್ಯದ)

ಬಿಯದ (ವ್ಯಯದ) ಅಂತರಕ್ಕೆ

ಕಿಱಿದೆಂದು ಚಿಂತಿಪಂ
ಪ್ರಿಯಗಳ್ಳಂ=
=[ಪ್ರಿಯಗಳ್ಳನು ಎಂಬ
ಬಿರುದುಳ್ಳ ಅರಿಕೇಸರಿಯು,
ಯುದ್ಧದಲ್ಲಿ ಮೂರು
ಲೋಕವೂ ಒಟ್ಟು ಸೇರಿದ್ದರೂ,
ಮತ್ತು ದಾನಮಾಡುವ
ಹೊತ್ತಿನಲ್ಲಿ ಮೇರು ಪರ್ವತವೇ
(ಅಷ್ಟು ಸಂಪತ್ತು) ಮುಂದೆ
ಇದ್ದರೂ, ತನ್ನ ಶೌರ್ಯದ
ಅಂತರಕ್ಕೆ, ಹಾಗೆಯೇ

ಕೊಡುವ/ ವ್ಯಯದ ಅಂತರಕ್ಕೆ/ಅಂತಸ್ಥಿಗೆ ಚಿಕ್ಕದು ಎಂದು ಚಿಂತಿಸುವನು].

ಸಮನೆನಿಸುವರ್ ಪ್ರಶಸ್ತಿ
ಕ್ರಮದೊಳ್ ಸ್ವಸ್ತಿ ಸಮಗತ
(ಸಮಧಿಗತ) ಪಂಚಮಹಾ ಶ|
ಬ್ದ ಮಹಾ ಸಾಮಂತರೆನಲ್
ಸಮನೆನಿಪರೆ
ಗುಣದೊಳರಿಗನೊಳ್
ಸಾಮಂತರ್|| ೪೯||

೪೯.:ಪದವಿಭಾಗ-ಅರ್ಥ:ಸಮನೆನಿಸುವರ್ ಪ್ರಶಸ್ತಿ (ಬಿರುದು) ಕ್ರಮದೊಳ್ ಸ್ವಸ್ತಿ ಸಮ ಅಧಿಗತ ಪಂಚಮಹಾ ಶಬ್ದ ಮಹಾ ಸಾಮಂತರೆನಲ್ ಸಮನೆನಿಪರೆ ಗುಣದೊಳರಿಗನೊಳ್ ಸಾಮಂತರ್= =[ಸಮನೆನಿಸುವರ್ ಪ್ರಶಸ್ತಿ (ಬಿರುದಾವಳಿ ಹೇಳುವ

ಕ್ರಮದಲ್ಲಿ ಸ್ವಸ್ತಿ/ ಶುಭವಾಗಲಿ, ಘೋಶಗಳಾದ ಶೃಂಗ (ಕಹಳೆ), ತಮ್ಮಟೆ,ಶಂಖ, ಭೇರಿ, ಜಯಘಂಟೆ ಈ ಪಂಚಮಹಾ ಶಬ್ದಗಳನ್ನು ಪಡೆದ ಮಹಾ ಸಾಮಂತರು ಅರಿಕೇಸರಿಯೊಡನೆ ಸಮಾನರು ಎನ್ನಿಸುವವರು, ಗುಣದಲ್ಲಿ ಅರಿಗನನ್ನು ಸಾಮಂತರು ಸಮಾನರು ಎನ್ನಿಸುವರೇ? ಇಲ್ಲ.]

ಉ|| ಚಾಗದ ಕಂಬಮಂ

ನಿಱಿಸಿ ಬೀರದ ಶಾಸನಮಂ

ನೆಗೞ್ಚಿ ಕೋ

ೞ್ಪೋಗದ ಮಂಡಲಂಗಳನೆ

ಕೊಂಡು

ಜಗತ್ತ್ರಿತಯಂಗಳೊಳ್ ಜಸ|

ಕ್ಕಾಗರಮಾದ ಬದ್ದೆಗನಿನಾ

ನರಸಿಂಹನಿನತ್ತ ನಾಲ್ವೆರಲ್

ಮೇಗು ಪೊದಱ್ದಿ

ಚಾಗದೊಳಮೊಂದಿದ

ಬೀರದೊಳಂ ಗುಣಾರ್ಣವಂ||

೫೦||

೫೦:ಪದವಿಭಾಗ-

ಅರ್ಥ:ಚಾಗದ (ತ್ಯಾಗ)ಕಂಬಮಂ ನಿಱಿಸಿ (ಇರಿಸಿ-ನಿಲ್ಲಿಸಿ) ಬೀರದ (ವೀರದ) ಶಾಸನಮಂ ನೆಗೞ್ಚಿ ಕೋಳ್ (ಕೊಳ್ಳ್- ಪಡೆ, ಪೊಗದ-ಪಡೆಯದ) ಪೋಗದ ಮಂಡಲಂಗಳನೆ ಕೊಂಡು ಜಗತ್ತ್ರಿತಯಂಗಳೊಳ್ ಜಸಕ್ಕೆ

ಆಗರಮಾದ ಬದ್ದೆಗನಿಂ ಆ ನರಸಿಂಹನಿಂ ಅತ್ತ ನಾಲ್ವೆರಲ್ (ನಾಲ್ ವೆರಳ್- ನಾಲ್ಕು ಬೆರಳು)ಮೇಗು ಪೊದಳ್ದಿ (ಪೊದಳು- ವ್ಯಾಪಿಸು) ಚಾಗದೊಳಂ ಒಂದಿದ ಬೀರದೊಳಂ ಗುಣಾರ್ಣವಂ=

=**ಅರ್ಥ**:[ದಾನದ ಶಿಲಾಸ್ಥಂವನ್ನು ನಿಲ್ಲಿಸಿ, ಪ್ರತಾಪದ ವಿವರದ ಶಾಸನವನ್ನು ಮಾಡಿಸಿ,

ಪಡೆದುಕೊಳ್ಳಬೇಕಾದ
ವಶವಾಗದ ಮಂಡಲಂಗಳನ್ನು
ವಶಪಡಿಸಿಕೊಂಡು, ಮೂರು
ಲೋಕದಲ್ಲಿ ಕೀರ್ತಿಗೆ
ಆಗರನಾದ ಬದ್ದೆಗನಿಗಿಂತಲೂ,
ಆ ನರಸಿಂಹನಿಗಿಂತಲೂ,
ಗುಣಾರ್ಣವ ಬಿರುದಿನ
ಅರಿಕೇಸರಿ, ದಾನದಲ್ಲಿಯೂ,
ಅವನು ಹೊಂದಿರುವ
ಪರಾಕ್ರಮದಲ್ಲೂ, ಅದರಿಂದ

ಅತ್ತ ನಾಲ್ಕು ಬೆರಳು ಮೇಲೆ ವ್ಯಾಪಿಸಿದ್ದಾನೆ.]

ಕವಿಯ ಕಥಾನೀತಿ ನಿರೂಪಣೆ

ಮ॥ಸ್ರ॥ ಎನೆ ಸಂದುಂ ವೀರವೈರಿಕ್ಷಿತಿಪಗಜಘಟಾಟೋಪಕುಂಭಸ್ಥಳೀಳೇ ದನನುಗ್ರೋದ್ಭಾಸಿ ಭಾಸ್ವದ್ಭುಜಪರಿಘನನಾರೂಢ ಸರ್ವಜ್ಞನಂ ವೈ|

ರಿ ನರೇಂದ್ರೋದ್ದಾಮ

ದರ್ಪೋದ್ದಳನನನೆ

ಕಥಾನಾಯಕಂ ಮಾಡಿ ಸಂದ

ರ್ಜುನನೊಳ್ ಪೋಲ್ವೀ

ಕಥಾಭಿತ್ತಿಯನನುನಯದಿಂ

ಪೇೞಲೆಂದೆತ್ತಿಕೊಂಡೆಂ ೫೧ ||

೫೦.:ಪದವಿಭಾಗ-ಅರ್ಥ:

ಎನೆ ಸಂದುಂ (ಎನೆ- ಈ ರೀತಿ,

ಸಂದು-ಆಗಿ-

ಕೀರ್ತಿಶಾಲಿಯಾಗಿ)

ವೀರವೈರಿಕ್ಷಿತಿಪ (ವೀರ ಶತ್ರು

ಕ್ಷಿತಿಪ-ರಾಜರ)
ಗಜಘಟಾಟೋಪಕುಂಭಸ್ಥಳ
(ಆಟಾಟೊಪದ ಆನೆಯ
ಕುಂಭಸ್ಥಳವನ್ನು)
ಈಳೇದನನು
(ಸೀಲುವವನಾದ)
ಉಗ್ರೋದ್ಘಾಸಿ (ಉಗ್ರವಾದ
ಅಸಿ-ಕತ್ತಯುಳ್ಳ) ಭಾಸ್ವದ್ಭುಜ
(ಭಾಸ್ವತ್ -ಪ್ರಕಾಶಮಾನ
ಭುಜದ)
ಪರಿಘನನಾರೂಢಸರ್ವಜ್ಞನಂ

(ಪರಿಘನಂ- ಕಬ್ಬಿಣದ
ಒನಕೆಯನ್ನು,
ಆರೂಢಸರ್ಜ್ಞನು ಎಂಬ
ಬಿರುದುಳ್ಳ) ವೈರಿ
ನರೇಂದ್ರೋದ್ಧಾಮ
ದರ್ಪೋದ್ದಳನನನೆ (ವೈರಿ
ರಾಜರ, ಉದ್ದಾಮ ದರ್ಪಅತಿ
ಗರ್ವವನ್ನು, ಉದ್ದಳನನೆ-
ಬೇದಿಸುವವನನ್ನೇ)
ಕಥಾನಾಯಕಂ ಮಾಡಿ
(ಕಥಾನಾಯಕನನ್ನಾಗಿ ಮಾಡಿ)

ಸಂದ ಅರ್ಜುನನೊಳ್
ಪೋಲ್ವ ಈ (ಪ್ರಸಿದ್ಧನಾದ
ಅರ್ಜುನನೊಡನೆ ಹೋಲುವ
ಈ) ಕಥಾಭಿತ್ತಿಯನು
ಅನುನಯದಿಂ (ಈ
ಕಥಾಚಿತ್ರವನ್ನು ಪ್ರೀತಿಯಿಂದ)
ಪೇೞಲೆಂದು ಎತ್ತಿಕೊಂಡೆಂ
(ಹೇಳಲೆಂದು ಎತ್ತಿಕೊಂಡೆನು.)
೫೦.:ಅರ್ಥ:ಈ ರೀತಿ,
ಕೀರ್ತಿಶಾಲಿಯಾಗಿ ವೀರ
ಶತ್ರುರಾಜರ ಆಟಾಟೋಪದ

ಆನೆಯ ಕುಂಭಸ್ಥಳವನ್ನು ಸೀಳುವವನಾದ, ಉಗ್ರವಾದ ಕತ್ತಿಯುಳ್ಳ, ಪ್ರಕಾಶಮಾನ ಭುಜದ ಕಬ್ಬಿಣದ ಒನಕೆಯನ್ನು ಹೊಂದಿದ 'ಆರೂಢಸರ್ಜ್ಜನು' ಎಂಬ ಬಿರುದುಳ್ಳ, ವೈರಿ ರಾಜರ, ಉದ್ದಾಮ ಗರ್ವವನ್ನು, ಬೇದಿಸುವವನನ್ನೇ ಕಥಾನಾಯಕನನ್ನಾಗಿ ಮಾಡಿ, ಪ್ರಸಿದ್ಧನಾದ ಅರ್ಜುನನೊಡನೆ

ಹೋಲುವ, ಈ
ಕಥಾಚಿತ್ರವನ್ನು ಪ್ರೀತಿಯಿಂದ
ಹೇಳಲೆಂದು ಎತ್ತಿಕೊಂಡೆನು.

ಭಾರತ ಕಥಾರಂಭ

ವಚನ||ವ|| ಅದೆಂತೆನೆ-
ಸಮುನ್ಮಿಷ ರತ್ನಮಾಲಾ
ಪ್ರಭಾಭಿದರುಣ
ಜಲಪ್ಲವಾವಿಳ
ವಿಳೋಳವೀಚೀರಯ
ಪ್ರದಾರಿತ

;ಕುಳಾಚಲೋದಧಿಪರೀತಮಾಗಿರ್ದ ಜಂಬೂದ್ವೀಪದೊಳಗುಂಟು ನಾಡು ಕುರುಜಾಂಗಣನಾಮದಿಂ ಅಂತಾ ಕುರುಜಾಂಗಣ ವಿಷಯದೊಳ್-

ವಚನ:ಪದವಿಭಾಗ-

ಅರ್ಥ:ಅದೆಂತೆನೆ- ಸಮುನ್ಮಿಷತ್(ಪ್ರಕಾಶಿಸುವ) ರತ್ನಮಾಲಾ (ವಿವಿಧ ರತ್ನಗಳ)

ಪ್ರಭಾಭಿದ್ ಅರುಣ ಜಲಪ್ಲವ (ಕೆಂಪು ಜಲಾವರಿಸಿದ) ಆವಿಳ (ಕದರಿದ) ವಿಳೋಳ ವೀಚೀರಯ(ಅಲ್ಲೋಲಕಲ್ಲೋಲ ಅಲೆಗಳ ವೇಗದಿಂದ) ಪ್ರದಾರಿತ (ಸೀಳಲ್ಪಟ್ಟ) ಕುಳಾಚಲ ಉದಧಿಪರೀತಂ ಆಗಿರ್ದ (ಕುಲಪರ್ವತಗಳಿಂದ ನೀರಿನಿಂದ ಸಯತ್ತುವರಿದ) ಜಂಬೂದ್ವೀಪದೊಳಗೆ ಉಂಟು ನಾಡು

ಕುರುಜಾಂಗಣ ನಾಮದಿಂ
(ಜಂಬೂದ್ವೀಪದಲ್ಲಿ
ಕುರುಜಾಂಗಣ ಎಂಬ ಹೆಸರಿನ
ದೇಶ ಇದೆ.) ಅಂತಾ
ಕುರುಜಾಂಗಣ
ವಿಷಯದೊಳ್-
ಅರ್ಥ:ಅದು ಹೇಗೆಂದರೆ
ವಿಶೇಷವಾಗಿ
ಪ್ರಕಾಶಿಸುತ್ತಿರುವ
ವಿಧವಿಧವಾದ ರತ್ನಗಳ
ಕಾಂತಿಯಿಂದ ಭೇದಿಸಲ್ಪಟ್ಟ

ಕೆಂಪುನೀರಿನಿಂದ ಕಲುಷಿತವೂ ಚಂಚಲವೂ ಆವರಿಸಿದ, ಕದಡಿದ ಅಲ್ಲೋಲಕಲ್ಲೋಲ ಅಲೆಗಳ ವೇಗದಿಂದ ಸೀಳಲ್ಪಟ್ಟ ಕುಲಪರ್ವತಗಳಿಂದ ನೀರಿನಿಂದ ಸಯತ್ತುವರಿದ ಜಂಬೂದ್ವೀಪದಲ್ಲಿ ಕುರುಜಾಂಗಣ ಎಂಬ ಹೆಸರಿನ ದೇಶ ಇದೆ. ಹಾಗಿರುವ ಕುರುಜಾಂಗಣ ದೇಶದಲ್ಲಿ,-

ಕುರುಜಾಂಗಣ ದೇಶದ ವರ್ಣನೆ

ಚಂ||ಜಲಜಲನೊಱ್ಕುತಿರ್ಪ ಪರಿಕಾಲ್ ಪರಿಕಾಲೊಳಳುರ್ಕೆಗೊಂಡ ನೈದಿಲ ಪೊಸವೂ ಪೊದಱ್ದಿ ಪೊಸ ನೈದಿಲ ಕಂಪನೆ ಬೀಱಿ ಕಾಯ್ತಂ ಕೆಂ|

ಗೊಲೆಯೊಳೆ ಜೋಲ್ವ ಶಾಳಿ ನವಶಾಳಿಗೆ ಪಾಯ್ವ ಶುಕಾಳಿ

ತೋರೆ ಕೆ

ಯ್ವೊಲಗಳಿನೊಪ್ಪಿ ತೋಱಿ

ಸಿರಿ ನೋಡುಗುಮಾ

ವಿಷಯಾಂತರಾಳದೊಳ್||

೫೨||

೫೨:ಪದವಿಭಾಗ-ಅರ್ಥ:

ಜಲಜಲನೆ

ಒಱ್ಕುತಿರ್ಪ(ಹರಿಯುವ)

ಪರಿಕಾಲ್ ಪರಿಕಾಲೊಳು

ಅಳುರ್ಕೆಗೊಂಡ

(ವ್ಯಾಪಿಸಿದ)ನೈದಿಲ ಪೊಸವೂ

ಪೊದಟ್ದಿ (ಹರಡಿದ) ಪೊಸ
ನೈದಿಲ ಕಂಪನೆ ಬೀಱ್
ಕಾಯ್ತಂ (ಕಾಯಿಬಿಟ್ಟ)
ಕೆಂಗೊಲೆಯೊಳೆ (ಕೆಂಪು
ಗೊಂಚಲ)ಜೋಲ್ವ ಶಾಳಿ
(ಶಾಲಿ-ಭತ್ತ) ನವಶಾಳಿಗೆ
ಪಾಯ್ವ (ಹಾಯುವ)ಶುಕ ಆಳಿ
ತೋರೆ ಕೆಯ್ ವೊ/
ಹೊಲಗಳಿನೊಪ್ಪಿ ತೋಱ್ ಸಿರಿ
ನೋಡುಗುಂ ಆ

ವಿಷಯಾಂತರಾಳದೊಳ್
(ದೇಶದ ಹರಹು)|
೫೨:ಅರ್ಥ:ಜಳಜಳನೆಂದು
ಹರಿಯುವ ನೀರ
ಕಾಲುವೆಗಳು, ಈ
ಪರಿಕಾಲುವೆಗಳಲ್ಲಿ
ತುಂಬಿರುವ ನೈದಿಲೆಯ ಹೂಸ
ಹೂವುಗಳು ಹರಡಿದ
ಸುವಾಸನೆಯನ್ನು ಸೂಸಿ,
ಕಾಯಿಬಿಟ್ಟ ಕೆಂಪು
ಗೊಂಚಲಿನಲ್ಲಿ ಜೋಲುವ

ಭತ್ತದ ಹೊಸತೆನೆಗೆ ಎರಗುವ ಗಿಳಿಹಿಂಡು,ಕಾಣಲು, ಕೈಯ ಹೊಲಗಳು ಚಂದವಾಗಿ ಕಾಣಲು ಸಿರಿ/ಲಕ್ಷ್ಮಿಯು ಆ ನಾಡಿನ ವಿಸ್ತಾರವನ್ನು ನೋಡುವಳು.

ಬೆಳೆದೊಱಗಿರ್ದ ಕೆಯ್ವೊಲನೆ
ಕೆಯ್ವೊಲನಂ ಬಳಸಿರ್ದ ಪೂತ
ಪೂ
ಗೊಳಗಳೆ ಪೂತ
ಪೂಗೊಳಗಳಂ ಬಳಸಿರ್ದ

ವಿಚಿತ್ರ ನಂದನಾ|

ವಳಿಗಳೆ ನಂದನಾವಳಿಗಳಂ

ಬಳಸಿರ್ದ ಮದಾಳಿ ಸಂಕುಲಂ

ಗಳೆ ವಿಷಯಾಂಗನಾಲುಳಿತ

ಕುಂತಳದಂತೆವೊಲೊಪ್ಪಿ

ತೋಱುಗುಂ|| ೫೩ ||

೫೩:ಪದವಿಭಾಗ-ಅರ್ಥ:ಆ ದೇಶವು, ಬೆಳೆದು ಒರೆಗಿರ್ದ ಕೆಯ್ದೊಲನೆ (ಗದ್ದೆ) ಕೆಯ್ದೊಲನಂ ಬಳಸಿರ್ದ ಪೂತ (ಹೂತ-ಹೂವುಬಿಟ್ಟ)

ಪೂಗೊಳಗಳೆ ಪೂತ
ಪೂಗೊಳಗಳಂ ಬಳಸಿರ್ದ
ವಿಚಿತ್ರ ನಂದನ ಆವಳಿಗಳೆ
ನಂದನ ಆವಳಿಗಳಂ
ಬಳಸಿರ್ದ ಮದಾಳಿ (ಮದ
ಆಳಿ- ದುಂಬಿಯ ಸಮೂಹ)
ಸಂಕುಲಂಗಳೆ ವಿಷಯಾಂಗನಾ
(ದೇಶವೆಂಬ ಅಂಗನೆ- ಹೆಣ್ಣು)
ಲುಳಿತ (ಡೊಂಕಾದ)
ಕುಂತಳದಂತೆವೊಲು
(ಕೂದಲು ಮುಂಗುರುಳಿನಂತೆ)

ಒಪ್ಪಿ ತೋಱುಗುಂ(ಚಂದವಾಗಿ ತೋರುವುದು.)

೫೨:ಅರ್ಥ:ಆ ದೇಶವು, ಬೆಳೆದು ಬಾಗಿದ ಗದ್ದೆಗಳೇ, ಗದ್ದೆಗಳನ್ನು ಬಳಸಿರುವ ಹೂವುಬಿಟ್ಟ ಹೂವಿನ ಕೊಳಗಳೇ, ಹೂವುಬಿಟ್ಟ ಹೂವಿನ ಕೊಳಗಳಿಂದ ಆವರಿಸಿದ ವಿಚಿತ್ರ ತೋಟಗಳ ಸಾಲುಗಳೇ, ತೋಟಗಳ ಸಾಲುಗಳಿಂದ ಆವರಿಸಿದ

ದುಂಬಿಗಳ ಸಮೂಹವೇ,
ದೇಶವೆಂಬ ಹೆಣ್ಣಿನ
ಸುರುಳಿಸುತ್ತಿರುವ ಕೂದಲು
ಮುಂಗುರುಳಿನಂತೆ
ಚಂದವಾಗಿ ತೋರುವುದು.

ಚಂ|| ಲಳಿತ ವಿಚಿತ್ರ ಪತ್ರ ಫಲ ಪುಷ್ಪಯುತಾಟವಿ ಸೊರ್ಕಿದಾನೆಯಂ ಬೆಳೆವುದು ದೇವಮಾತೃಕಮೆನಿಪ್ಪ ಪೊಲಂ ನವಗಂಧಶಾಳಿಯಂ|

ಬೆಳೆವುದು ರಮ್ಯ ನಂದನ ವನಾಳಿ ವಿಯೋಗಿಜನಕ್ಕೆ ಬೇಟಮಂ ಬಳೆವುದು ನಾಡ ಕಾಡ ಬೆಳಸಿಂಬೆಳಸಾ ವಿಷಯಾಂತರಾಳದೊಳ್||

೫೪

೫೪::ಪದವಿಭಾಗ-

ಅರ್ಥ:ಲಳಿತ (ಲಲಿತ- ಸುಂದರ) ವಿಚಿತ್ರ ಪತ್ರ ಫಲ ಪುಷ್ಪಯುತ ಅಟವಿ, ಸೊರ್ಕಿದ

ಆನೆಯಂ ಬೆಳೆವುದು,
ದೇವಮಾತೃಕಂ ಎನಿಪ್ಪ
ಪೊಲಂ(ದೇವ ಮಾತೃಕ
ದೇವರದಯೆ ಎಂಬ ಹೊಲ),
ನವಗಂಧ ಶಾಳಿಯಂ (ಶಾಲಿ-
ಭತ್ತ) ಬೆಳೆವುದು, ರಮ್ಯ
ನಂದನ ವನಾಳಿ ವಿಯೋಗಿ
ಜನಕ್ಕೆ ಬೇಟಮಂ (ಪ್ರೇಮ)
ಬಳೆವುದು ನಾಡ ಕಾಡ ಬೆಳಸು
ಇಂಬೆಳಸು (ಇಂಪು- ಸವಿ

ಬೆಳಸು) ಆ ವಿಷಯಾಂತರ ಆಳದೊಳ್ (ವಿಷಯ-ನಾಡು).
ಅರ್ಥ:ಸುಂದರವಾದ ನಾನಾಬಗೆಯ ಎಲೆ, ಹಣ್ಣು,ಹೂವುಗಳಿಂದ ಕುಡಿದ ಕಾಡು, ಅದು ಮದದ ಆನೆಯನ್ನು ಬೆಳಸುತ್ತದೆ; ದೇವರ ಕರುಣೆಯ ಮಳೆಯಿಂದ ಬೆಳೆಯುವ ಹೊಲ ಹೊಸ ಸುವಾಸನೆಯ ಭತ್ತವನ್ನು ಬೆಳೆಯುವುದು

(ಪರಿಮಳ ಸಾಲೆ ಭತ್ತ, ಆಗಲೂ ಇತ್ತು); ರಮಣೀಯವಾದ ಉದ್ಯಾನ ವನಗಳ ಸಾಲು, ವಿಯೋಗಿ ಜನರಿಗೆ ಪ್ರೇಮವನ್ನು ಹೆಚ್ಚಿಸುವುದು. ಹೀಗೆ ಕುರುಜಾಂಗಣದ ನಾಡಿನ ಕಾಡಿನ ಒಳಗೆ ಸವಿಯಾದ ಬೆಳೆಗಳು.

ಕಂ|| ಆವಲರುಂ ಪಣ್ಣುಂ ಬೀ

ತೋವವು ಗಡ ಬೀಯವಲ್ಲಿ
ಮಲ್ಲಿಗೆಗಳುಮಿ|
ಮ್ಮಾವುಗಳುಮೆಂದೊಡಿನ್
ಪೆಱ
ತಾವುದು ಸಂಸಾರ
ಸಾರಸರ್ವಸ್ವ ಫಲಂ|| ೫೫||

೫೫:ಪದವಿಭಾಗ-ಅರ್ಥ:

ಆವ ಅಲರುಂ ಪಣ್ಣುಂ
(ಯಾವುದೇ ಹೂವು ಹಣ್ಣು)
ಬೀತು ಓವವು (ಕಾಲಕ್ಕೆ
ಸರಿಯಾಗಿ ಇಲ್ಲದೆ

ಹೋಗುವುದು) ಗಡ!
(ಅಯಾಕಾಲದಲ್ಲಿ
ಬೀತುಹೋಗುವ ಈ
ಬಗೆಯವು ಸಸ್ಯ ಜನರನ್ನು
ಓವವು- ಕಾಪಾಡಲಾರವು
ಗಡ!), ಬೀಯವು ಅಲ್ಲಿ (ಕುರು
ಭೂಮಿಯಲ್ಲಿ ಹಾಗೆ
ಬೀಯುವುದಿಲ್ಲ -
ಸದಾಕಾಲವೂ ಇರುವುದು)
ಮಲ್ಲಿಗೆಗಳುಂ ಮಾವುಗಳುಂ
ಎಂದೊಡೆ (ಎಂದಮೇಲೆ

ಇನ್ನು) ಇನ್ ಪೆಱತಾವುದು (ಹೆರತು-ಹೊರೆತು- ಬೇರೆ ಯಾವುದು) ಸಂಸಾರ ಸಾರಸರ್ವಸ್ವ ಫಲಂ.
೫೫:ಅರ್ಥ:ಯಾವುದೇ ಹೂವು ಹಣ್ಣುಗಳು ಅಯಾಕಾಲದಲ್ಲಿ ಬೀತುಹೋಗುವದು. ಈ ಬಗೆಯವು ಸಸ್ಯಗಳು ಜನರನ್ನು ಕಾಪಾಡಲಾರವು ಗಡ!, ಕುರು ಭೂಮಿಯಲ್ಲಿ

ಹಾಗೆ ಬೀಯುವುದಿಲ್ಲ
-ಮಲ್ಲಿಗೆಗಳು, ಮಾವುಗಳು,
ಸದಾಕಾಲವೂ ಇರುವುದು;
ಎಂದಮೇಲೆ ಇನ್ನು ಯಾವ
ಫಲ ತಾನೆ ಬೇಕು ಸಂಸಾರ
ಸುಖ ಸರ್ವಸ್ವಕ್ಕೆ. (ಕವಿಗೆ
ಹೂವು ಮಾವು ಇದ್ದರೆ ಸುಖ
ಸಂತೊಷಕ್ಕೆ ಸಾಕು ಎಂದು
ಭಾವ)

ಮಿಡಿದೊಡೆ ತನಿಗರ್ವು ರಸಂ

ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ। ಗಿಡುವುವು ತುಂಬಿಗಳಟ್ಟಿಮೆ ವಡುವುವು ಕುಡಿದೊಂದು ಪಣ್ಣ ರಸದೊಳೆ ಗಿಳಿಗಳ್॥ ೫೬॥

೫೬:ಪದವಿಭಾಗ-ಅರ್ಥ: ಆ ದೇಶದ ಕಬ್ಬು, ಹಣ್ಣು, ಹೂವುಗಳು, ಮಿಡಿದೊಡೆ (ಬೆರಳಿಂದ ಹೊಡೆದರೆ) ತನಿಗರ್ವು (ಹೊಸ ಕಬ್ಬು)

ರಸಂಬಿಡುವುವು,
ಬಿರಿದೊಂದು ಮುಗುಳ
(ಹೂವ) ಕಂಪಿನೊಳೆ
ಮೊಗಂಗಿಡುವುವು (ಮುಗಂ
ಗಿ/ಕಿಡುವುವು ಮುಖ ಕೆಡಿಸಿ/
ತೆಗೆಯುವುವು:ಡಿಎಲ್‌ಎನ್:-
ಮುಖ ಕೆಡಿಸಿ
ತೆಗೆಯುವುವು;ಅಥವಾ
ಮುಗಂಗೆ ಇಡುವುವು
-ಹೂವನ್ನು ಮುಖಕ್ಕೆ
ಇಡುವುವು) ತುಂಬಿಗಳ್;

ಅಲ್ಕಿಮೆ ವಡುವುವು
ಕುಡಿದೊಂದು ಪಣ್ಣ ರಸದೊಳೆ
ಗಿಳಿಗಳ್, (ಅಳ್ಕೆಮೆ-ಹಿಂಜರಿಕೆ;
ಅಳ್ಕು - ಹಿಂಜರಿ)
೫೩:ಅರ್ಥ: ಆ ದೇಶದ ಕಬ್ಬು,
ಹಣ್ಣು, ಹೂವುಗಳು, ಬೆರಳಿಂದ
ಹೊಡೆದರೆ ರಸ ಬಿಡುವುವು,
ಹೊಸ ಕಬ್ಬು ಸುರಿಸುವುವು,
ತುಂಬಿಗಳು ಬಿರಿದ
ಹೂಮೊಗ್ಗಿನ ಪರಿಮಳಕ್ಕೆ
ತೃಪ್ತಿಯಾಗಿ ಮುಖ

ತಿರುಗಿಸಿಹೋಗುವುವು; (ಅಥವಾ ಹೂವನ್ನು ಮುಖಕ್ಕೆ ಇಡುವುವು); ಗಿಳಿಗಳು ಒಂದು ಹಣ್ಣಿನ ರಸ ಕುಡಿದು ತೃಪ್ತಿಯಾಗಿ ಹಿಂತಿರುಗುವುವು.

ಸುತ್ತಿಱಿದ ರಸದ ತೋಱೆಗಳೆ
ಮುತ್ತಿನ ಮಾಣಿಕದ
ಪಲವುಮಾಗರಮೆ ಮದೋ|
ನ್ಮತ್ತ ಮದಕರಿ ವನಂಗಳೆ
ಸುತ್ತಲುಮಾ ನೆಲದ
ಸಿರಿಯನೇನಂ ಪೊಗೞ್ವೆಂ||

೫೭||

೫೭.:ಪದವಿಭಾಗ-

ಅರ್ಥ:ಸುತ್ತಿಱಿದ (ಸುತ್ತವರಿದ-ಬಳಸಿರುವ) ರಸದ ತೊಱೆಗಳೆ (ಸಿದ್ಧರಸದ ನದಿಗಳೇ, ಸಿದ್ಧರಸದಲ್ಲಿ ಕಬ್ಬಿಣ ಅದ್ದಿದರೆ ಚಿನ್ನವಾಗುವುದೆಂಬ ನಂಬಿಗೆ) ಮುತ್ತಿನ ಮಾಣಿಕದ ಪಲವುಂ ಆಗರಮೆ (ಆಗರ-ಮನಯೇ) ಮದೋನ್ಮತ್ತ ಮದಕರಿ ವನಂಗಳೆ ಸುತ್ತಲುಂ

ಆ ನೆಲದ ಸಿರಿಯನು ಏನಂ ಪೊಗಟ್ವೆಂ (ಹೊಗಳಲಿ).

ಅರ್ಥ:ಆ ಕುರು ನಾಡಿನಲ್ಲಿ, ಸುತ್ತುವರಿದ ಬಳಸಿರುವ ಸಿದ್ಧರಸದ ನದಿಗಳೇ, ಅಲ್ಲಿ ಮುತ್ತು ಮಾಣಿಕ್ಯಗಳಿಂದ ಮಾಡಿದ ಅನೇಕ ಮನೆಗಳೇ, ಸುತ್ತಲೂ ಮದೋನ್ಮತ್ತನಾದ ಮದ್ದಾನೆಗಳು ಇರುವ ಕಾಡುಗಳೇ, ಆ ನೆಲದ

ಸಂಪತ್ತನ್ನು ಏನೆಂದು
ಹೊಗಳಲಿ!

ವ|| ಅಂತು ಸೊಗಯಿಸುವ ಕುರುಜಾಂಗಣ ವಿಷಯ(ದೇಶ)ಕ್ಕೆ ರಾಜದ್ರಾಜಧಾನಿಯಾಗಿರ್ದು (ರಾಜತ್ -ಪ್ರಕಾಶಮಾನವಾದ ರಾಜಧಾನಿ) ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ ದಿಕ್ಕರಿಕಟತಟಕ್ಕೆ

ಮದಲೇಖೆಯಿರ್ಪಂತೆ

ಕೈಟಭಾರಾತಿಯ

ವಿಶಾಲೋರಸ್ಥಳಕ್ಕೆ

ಕೌಸ್ತುಭಮಿರ್ಪಂತೆ

ಸೊಗಯಿಸುತಿರ್ದುದು

ಹಸ್ತಿನಪುರ ಮೆಂಬುದು

ಪೊೞಲಲ್ಲಿ-

ವಚನ:ಅರ್ಥ: ಹಾಗೆ ಸೊಗಯಿಸುತ್ತಿರುವ ಕುರುಜಾಂಗಣ ದೇಶಕ್ಕೆ ಪ್ರಕಾಶಮಾನವಾದ

ರಾಜಧಾನಿ ಹಸ್ತಿನಾಪುರ. ಅದು ಈಶ್ವರನ ಜಟೆಯ ಸಮೂಹಕ್ಕೆ ಚಂದ್ರಲೇಖೆಯ ಹಾಗೆಯೂ, ದಿಗ್ಗಜಗಳ ಗಂಡಸ್ಥಲಕ್ಕೆ ಮದಲೇಖೆಯ ಹಾಗೆಯೂ, ವಿಷ್ಣುವಿನ ವಿಶಾಲವಾದ ವಕ್ಷಸ್ಥಳಕ್ಕೆ ಕೌಸ್ತುಭಮಣಿಯ ಹಾಗೆಯೂ ಸೊಗಯಿಸುತ್ತಿದೆ. ಆ ಪಟ್ಟಣದಲ್ಲಿ:-

ರಗಳೆ|| ಅದರ ಪೊಱವೊಱಲ
ವಿಶಾಲ ಕನಕ ಕೃತಕ ಗಿರಿಗಳಿಂ
ಫಳಪ್ರಕೀರ್ಣತರುಗಳಿಂ
ನನೆಯ ಕೊನೆಯ ತಳಿರ
ಮುಗುಳ
ವನಲತಾನಿಕುಂಜದಿಂ
ಪ್ರಸೂನ ರಜದ ಪುಂಜದಿಂ
ಗಗನತಳಮೆ ಪಱಿದು
ಬಿೞ್ದುದೆನಿಪ ಬಹುತಟಾಕದಿಂ
ಕುಕಿಲ್ವ ನಲಿವ ಕೋಕದಿಂ

ಸುರಿವ ಸುರಿಯಿಯಲರ
ಮುಗುಳ್ಗೆ
ಮೊಗಸಿದಳಿಕುಳಂಗಳಿಂ
ತೊದಲ್ವ ಶಿಶು ಶಕುಂಗಳಿಂ
ತೆಗೆಯೆ ಬೀರರವದೆ ಮೇಲೆ
ಪರಿವ ಮದಗಜಗಳಿಂ
ಚಳತ್ತುರಂಗಮಂಗಳಿಂ
ಲವಣ ಜಳ ಬಳಸಿದಂತೆ
ಬಳಸಿದಗಟಿ ನೀಳದಿಂದುದಗ್ರ
ಕನಕಶಾಳದಿಂ

ದೊಳಗೆ ಕುಲನಗಂಗಳೆನಿಪ
ದೇವಕುಲದ ಭೋಗದಿಂ
ಸರಾಗಮಾದ ರಾಗದಿಂ
ದಿವಮನೇಳಿಪಂತು ಮಿಳಿರ್ವ
ವಿವಿಧ ಕೇತನಂಗಳಿಂ
ಸದಾನಿಕೇತನಂಗಳಿಂ
ಧನದ ಭವನಮೆನಿಪ ಸಿರಿಯ
ಬಚ್ಚರಾಪಣಂಗಳಿಂ ಪೊದಟ್ದಿ
ಕಾವಣಂಗಳಿಂ
ವಿಟಜನಕ್ಕೆ ತೊಡರ್ವ
ಚಾರಿಯೆನಿಪ ಸೂಳೆಗೇರಿಯಿಂ

ವಿದಗ್ಧ ಹೃದಯಹಾರಿಯಿಂ
ಕನಕ
ಗೋಪುರಂಗಳೊಳಗಣೆರಡು
ದೆಸೆಯ ಗುಣಾಣೆಯಿಂ
ವಿಳಾಸಿನಿಯರ ಗಡಣೆಯಿಂ
ಸುರತಸುಖದ
ಬಳ್ಳವಳ್ಳಿಯೆನಿಪ
ಬಳ್ಳಿಮಾಡದಿಂ ಮಹಾ
ವಿನೋದನೀಡದಿಂ
ಕನಕಶೈಲಮೆನಿಸಿ ನೆಗಟ್ದಿ
ಭೂಮಿಪಾಲಭವನದಿಂ

ಸಮಸ್ತ ವಸ್ತುಭುವನದಿಂ॥
೫೮॥

ವ॥ ಅಂತು ಮೂಱುಲೋಕದ
ಚೆಲ್ವೆಲ್ಲಮಂ
ವಿಧಾತ್ರನೊಂದೆಡೆಗೆ
ತೆರಳ್ಚಿದಂತೆ
ಸಮಸ್ತವಸ್ತುವಿಸ್ತಾರಹಾರಮಾ
ಗಿರ್ದ ಹಸ್ತಿನಪುರವೆ
ನಿಜವಂಶಾವಳಂಬಮಾಗೆ
ನೆಗಳ್ದಿ ಭರತಕುಲತಿಲಕರ

ವಂಶಾವತಾರಮೆಂತಾದುದೆಂದೊಡೆ-

೫೮:ರಗಳೆ|ಪದವಿಭಾಗ:

ಅರ್ಥ: ಅದರ ಪೊಱವೊಳಲ(ಪಟ್ಟನದ ಹೊರಭಾಗದಲ್ಲಿ) ವಿಶಾಲ ಕನಕ ಕೃತಕ ಗಿರಿಗಳಿಂ ಫಳಪ್ರಕೀರ್ಣತರುಗಳಿಂ (ಹಣ್ಣುಗಳಿಂದ ಕಿಕ್ಕಿರಿದ ಮರಗಳಿಂದಲೂ,) ನನೆಯ (ಹೂವಿನ) ಕೊನೆಯ

(ಕುಡಿ)ತಳಿರ ಮುಗುಳ
ವನಲತಾನಿಕುಂಜದಿಂ
(ಬಳ್ಳಿಯ ಮಾಡದಿಂದ)
ಪ್ರಸೂನ (ಹೂವಿನ)ರಜದ
ಪುಂಜದಿಂ (ಹೂವಿನ
ಪರಾಗ))ಗಗನತಳಮೆ
ಪಱಿದು ಬಿೞ್ದುದೆನಿಪ
(ಆಕಾಶಪ್ರದೇಶವೇ ಹರಿದು
ಕೆಳಗೆ ಬಿದ್ದಿದೆಯೋ
)ಬಹುತಟಾಕದಿಂ ಕುಕಿಲ್ವ
ನಲಿವ

ಕೋಕದಿಂ(ವಿಶೇಷವಾದ
ಸರೋವರಗಳಿಂದಲೂ
ಹಾದುತ್ತಿರುವ
ಕೋಗಿಲೆಗಳಿಂದಲೂ) ಸುರಿವ
ಸುರಿಯಿಯಲರ (ಸುರಗಿಯ
ಹೂವಿನ) ಮುಗುಳ್ಗೆ ಮೊಗಸಿದ
(ಮುತ್ತಿಕೊಂಡ)
ಅಳಿಕುಳಂಗಳಿಂ (ದುಂಬಿಯ
ಸಮೂಹದಿಂದಲೂ)ತೊದಲ್ವ
ಶಿಶು ಶಕುಂಗಳಿಂ (ತೊದಲು
ಮಾತನಾಡುತ್ತಿರುವ ಗಿಳಿಯ

ಮರಿಗಳಿಂದಲೂ) ತೆಗೆಯೆ
ಬೀರ ರವದೆ ಮೇಲೆ ಪರಿವ
ಮದಗಜಗಳಿಂ
(ವೀರಶಬ್ದಗಳಿಂದ
ಮುನ್ನಡೆಸಲು ಮುಂದಕ್ಕೆ
ನುಗ್ಗುತ್ತಿರುವ
ಮದ್ದಾನೆಗಳಿಂದಲೂ) ಚಳತ್
ತುರಂಗಮಂಗಳಿಂ
(ಚಲಿಸುತ್ತಿರುವ
ಕುದುರೆಗಳಿಂದಲೂ) ಲವಣ
ಜಳ ಬಳಸಿದಂತೆ ಬಳಸಿದ

ಅಗಟಿ ನೀಳದಿಂದ ಉದಗ್ರ
(ಎತ್ತರದ) ಕನಕ
ಶಾಳದಿಂದ(ಲವಣಸಮುದ್ರ
ವೇ ಬಳಸಿಕೊಂಡಂತೆ
ಸುತ್ತುವರಿದಿರುವ ಕಂದಕಗಳ
ಹರವಿನಿಂದಲೂ, ಎತ್ತರವಾದ
ಚಿನ್ನದ ಗೋಡೆಯಿಂದಲೂ,)
ಒಳಗೆ ಕುಲನಗಂಗಳೆನಿಪ
ದೇವಕುಲದ ಭೋಗದಿಂ
(ಒಳಭಾಗದಲ್ಲಿ
ಕುಲಪರ್ವತವೆನಿಸಿಕೊಳ್ಳುವ

ದೇವಸ್ಥಾನಗಳ
ಐಶ್ವರ್ಯದಿಂದಲೂ)
ಸರಾಗಮಾದ ರಾಗದಿಂದ
ಅವಮನು ಏಳಿಪಂತು
ಮಿಳಿರ್ವ (ಅಲುಗಾಡುವ)
ವಿವಿಧ ಕೇತನಂಗಳಿಂ ಸದ್
ಅನಿಕೇತನಂಗಳಿಂ
(ಸ್ವರ್ಗವನ್ನೇ ಹಾಸ್ಯಮಾಡುವ
ಹಾಗೆ ಚಲಿಸುತ್ತಿರುವ
ಧ್ವಜಗಳಿಂದಲೂ) ಧನದ
ಭವನಮೆನಿಪ ಸಿರಿಯ ಬಚ್ಚರ

ಆಪಣಂಗಳಿಂ ಪೊದಟ್ಟಿ
ಕಾವಣಂಗಳಿಂ(ದಾನಮಾಡು
ವವರ ಮನೆಗಳಿಂದಲೂ,
ಕುಬೇರ ಭವನಗಳು ಎನಿಸಿ
ಕೊಂಡಿರುವ ಸಂಪದ್ಯುಕ್ತವಾದ
ವೈಶ್ಯರ ಅಂಗಡಿಗಳಿಂದಲೂ,
ವ್ಯಾಪಿಸಿಕೊಂಡಿರುವ
ಚಪ್ಪರಗಳಿಂದಲೂ)
ವಿಟಜನಕ್ಕೆ ತೊಡರ್ವ
ಚಾರಿಯೆನಿಪ (ಸಂಕೋಲೆ)
ಸೂಳೆಗೇರಿಯಿಂ ವಿದಗ್ಧ

(ಕಾಮತಪ್ತ) ಹೃದಯ
ಹಾರಿಯಿಂ (ವಿಟ ಜನರು
ಸಿಕ್ಕಿಕೊಳ್ಳುವ
ಸಂಕೋಲೆಯಂತೆಯೂ
ಪಂಡಿತರ ಹೃದಯವನ್ನೂ
ಸೂರೆಗೊಳ್ಳುವಂತೆಯೂ
ಇರುವ ಸೂಳೆಗೇರಿಯಿಂದಲೂ
) ಕನಕ ಗೋಪುರಂಗಳೊಳು
ಅಗಣೆರಡು ದೆಸೆಯ
ಗುಣಣೆಯಿಂ ವಿಳಾಸಿನಿಯರ
ಗಡಣೆಯಿಂ (ಚಿನ್ನದ

ಗೋಪುರದೊಳಗಿರುವ
ಎರಡು ಕಡೆಯ
ನೃತ್ಯಶಾಲೆಗಳಿಂದಲೂ
ವಿಲಾಸವತಿಯರಾದ ಸ್ತ್ರೀಯರ
ಸಮೂಹದಿಂದಲೂ)ಸುರತಸು
ಖದ ಬಳ್ಳವಳ್ಳಿಯೆನಿಪ
ಬಳ್ಳಿಮಾಡದಿಂ (ಸಂಭೋಗ
ಸುಖಾತಿಶಯದಿಂದ ಕೂಡಿದ
ಲತಾಗೃಹದಿಂದಲೂ), ಮಹಾ
ವಿನೋದನು
ಈಡದಿಂಕನಕಶೈಲಂ ಎನಿಸಿ

ನೆಗಟ್ದಿ
ಭೂಮಿಪಾಲಭವನದಿಂ
ಸಮಸ್ತ
ವಸ್ತುಭುವನದಿಂ(ಲತಾಗೃಹ
ದಿಂದಲೂ
ಆರಾಮಗೃಹಗಳಿಂದಲೂ
ಮೇರುಪರ್ವತವೆನಿಸಿಕೊಂಡು
ಪ್ರಸಿದ್ಧಿಯಾಗಿರುವ
ಅರಮನೆಗಳಿಂದಲೂ
ಭಂಡಾರಗಳಿಂದಲೂ)
(ತುಂಬಿತ್ತು)

೫೮:ಅರ್ಥ:-ಆ ಪಟ್ಟಣದ ಹೊರಭಾಗದಲ್ಲಿರುವ ಚಿನ್ನದಿಂದ ಮಾಡಿದ ಕೃತಕಪರ್ವತಗಳಿಂದಲೂ ಹಣ್ಣುಗಳಿಂದಲೂ ತುಂಬಿರುವ ಗಿಡಗಳಿಂದಲೂ ಹೂವು, ಕುಡಿ, ಚಿಗುರು, ಮೊಗ್ಗುಗಳಿಂದ ಕೂಡಿದ ತೋಟದ ಬಳ್ಳಿಚಪ್ಪರಗಳಿಂದಲೂ, ಹೂವಿನ ಪರಾಗದ ರಾಶಿಗಳಿಂದಲೂ ಆಕಾಶವೇ

ಹರಿದು ಕೆಳಗೆ ಬಿದ್ದಿದೆಯೋ ಎನ್ನಿಸಿಕೊಳ್ಳುವ ವಿಶೇಷವಾದ ಕೊಳಗಳಿಂದಲೂ, ಹಾಡುತ್ತಿರುವ ಕೋಗಿಲೆಗಳಿಂದಲೂ, ತಾನಾಗಿ ಸುರಿಯುತ್ತಿರುವ ಸುರಗಿಯ ಹೂವಿನ ಮೊಗ್ಗುಗಳಿಗೆ ಮುತ್ತಿಕೊಂಡಿರುವ ದುಂಬಿಯ ಸಮೂಹದಿಂದಲೂ, ತೊದಲು ಮಾತನಾಡುತ್ತಿರುವ ಗಿಳಿಯ ಮರಿಗಳಿಂದಲೂ, ವೀರ

ಶಬ್ದಮಾಡುತ್ತಾ
ಮುನ್ನಡೆಯುವ, ಮುಂದಕ್ಕೆ
ನುಗ್ಗುತ್ತಿರುವ
ಮದ್ದಾನೆಗಳಿಂದಲೂ,
ಚಲಿಸುತ್ತಿರುವ
ಕುದುರೆಗಳಿಂದಲೂ,
ಲವಣಸಮುದ್ರವೇ
ಬಳಸಿಕೊಂಡಂತೆ
ಸುತ್ತುವರಿದಿರುವ ಕಂದಕಗಳ
ಹರವಿನಿಂದಲೂ, ಎತ್ತರವಾದ
ಚಿನ್ನದ ಗೋಡೆಯಿಂದಲೂ,

ಒಳಭಾಗದಲ್ಲಿ
ಕುಲಪರ್ವತವೆನಿಸಿಕೊಳ್ಳುವ
ದೇವಸ್ಥಾನಗಳ
ಐಶ್ವರ್ಯದಿಂದಲೂ,
ಸ್ವರ್ಗವನ್ನೇ ಹಾಸ್ಯಮಾಡುವ
ಹಾಗೆ ಚಲಿಸುತ್ತಿರುವ
ಧ್ವಜಗಳಿಂದಲೂ,
ದಾನಮಾಡುವವರ
ಮನೆಗಳಿಂದಲೂ, ಕುಬೇರನ
ಭವನಗಳು ಎನ್ನಿಸಿದ
ಸಂಪದ್ಯುಕ್ತವಾದ ವೈಶ್ಯರ

ಅಂಗಡಿಗಳಿಂದಲೂ,
ವ್ಯಾಪಿಸಿಕೊಂಡಿರುವ
ಚಪ್ಪರಗಳಿಂದಲೂ, ವಿಟ
ಜನರು ಸಿಕ್ಕಿಕೊಳ್ಳುವ
ಸಂಕೋಲೆಯಂತೆಯೂ
ಪಂಡಿತರ (ಕಾಮತಪ್ತ?)
ಹೃದಯವನ್ನೂ
ಸೂರೆಗೊಳ್ಳುವಂತೆಯೂ
ಇರುವ
ಸೂಳೆಗೇರಿಯಿಂದಲೂ, ಚಿನ್ನದ
ಗೋಪುರದೊಳಗಿರುವ

ಎರಡು ಕಡೆಯ
ನೃತ್ಯಶಾಲೆಗಳಿಂದಲೂ
ವಿಲಾಸವತಿಯರಾದ ಸ್ತ್ರೀಯರ
ಸಮೂಹದಿಂದಲೂ
ಸಂಭೋಗ
ಸುಖಾತಿಶಯದಿಂದ ಕೂಡಿದ
ಲತಾಗೃಹದಿಂದಲೂ
ಆರಾಮಗೃಹಗಳಿಂದಲೂ
ಮೇರುಪರ್ವತವೆನಿಸಿಕೊಂಡು
ಪ್ರಸಿದ್ಧಿಯಾಗಿರುವ
ಅರಮನೆಗಳಿಂದಲೂ

ಭಂಡಾರಗಳಿಂದಲೂ ತುಂಬಿತ್ತು. || ೫೮ ||

ಕುರುವಂಶ ವಿವರ

ವ|| ಅಂತು ಮೂಱುಲೋಕದ ಚೆಲ್ವೆಲ್ಲಮಂ ವಿಧಾತ್ರನು (ಬ್ರಹ್ಮನು) ಒಂದೆಡೆಗೆ ತೆರಳ್ಚಿದಂತೆ (ರಾಶೀ ಹಾಕಿದಂತೆ) ಸಮಸ್ತವಸ್ತುವಿಸ್ತಾರಹಾರಂ ಆಗಿರ್ದ ಹಸ್ತಿನಪುರವೆ

ನಿಜವಂಶ ಅವಳಂಬಂ ಆಗೆ ನೆಗಲ್ದಿ ಭರತಕುಲತಿಲಕರ ವಂಶಾವತಾರಂ ಎಂತಾದುದು ಎಂದೊಡೆ-

ವಚನ:ಅರ್ಥ:

ಮೂರುಲೋಕದ ಸೌಂದರ್ಯವನ್ನು ಬ್ರಹ್ಮನು ಒಂದು ಕಡೆ ರಾಶಿ ಮಾಡಿದ ಹಾಗೆ ಸಮಸ್ತ ವಸ್ತು ವಿಸ್ತಾರದಿಂದ ಮನೋಹರವಾಗಿದ್ದ

ಹಸ್ತಿನಾಪಟ್ಟಣದಲ್ಲಿ
ಭರತವಂಶಶ್ರೇಷ್ಠರು
ರಾಜ್ಯಭಾರ ಮಾಡುತ್ತಿದ್ದರು.
ಅವರ ಹುಟ್ಟು
ಹೇಗಾಯಿತೆಂದರೆ:

ಕಂ|| ಜಳರುಹನಾಭನ
ನಾಭಿಯ
ಜಳ ಬುದ್ಬುದದೊಳಗೆ ಸುರಭಿ
ಪರಿಮಳ ಮಿಳಿತೋ|
ಲ್ಲುಳಿತಾಳಿ ಜಲಜಮಾಯ್ತಾ

ಜಳಜದೊಳೊಗೆದಂ ಹಿರಣ್ಯಗರ್ಭ ಬ್ರಹ್ಮಂ|| ೫೯||

೫೯.:ಪದವಿಭಾಗ-ಅರ್ಥ: [ಜಳರುಹನಾಭನ (ಜಲರುಹ- ಕಮಲ ನಾಭ ವಿಷ್ಣುವಿನ) ನಾಭಿಯಜಳ ಬುದ್ಬುದದೊಳಗೆ (ಜಲರುಹ- ಕಮಲದ ಹೊಕ್ಕಳ ಉಕ್ಕೇಳುವ ಜಲದಲ್ಲಿ) ಸುರಭಿ ಪರಿಮಳ ಮಿಳಿತ ಓಲ್ಲುಳಿತ ಅಳಿ (ದುಂಬಿಗಳಿಂದ ಕುಳಿತ)

ಜಲಜಂ ಆಯ್ತು (ಕಮಲವು ಆಯ್ತು- ಹುಟ್ಟಿತು) ಆಜಳಜದೊಳು ಒಗೆದಂ ಹಿರಣ್ಯಗರ್ಭ ಬ್ರಹ್ಮಂ.]=

೫೯.ಅರ್ಥ:=[ಕಮಲ ನಾಭ ವಿಷ್ಣುವಿನ, ಕಮಲದ ಹೊಕ್ಕಳಲ್ಲಿ ಉಕ್ಕೇಳುವ ಜಲದಲ್ಲಿ ಪರಿಮಳದಿಂದ ಕೂಡಿದ ಚಲಿಸುವ ದುಂಬಿಗಳಿಂದ ಆವೃತವಾದ ಕಮಲವು ಹುಟ್ಟಿತು. ಆ

ಕಮಲದಲ್ಲಿ ಹುಟ್ಟಿದನು ಹಿರಣ್ಯಗರ್ಭನೆಂಬ ಬ್ರಹ್ಮನು.]

ಕಮಲೋದ್ಭವನಮಳಿನ ಹೃ
ತ್ಕಮಲದೊಳೊಗೆದರ್
ಸುರೇಂದ್ರ ಧಾರಕರಾವಾ|
ಗಮಳರ್ ನೆಗಟ್ದಿರ್ದರ್ ಪುಲ
ಹ ಮರೀಚ್ಯತ್ರ್ಯಂಗಿರ ಪುಳಸ್ತ್ಯ
ಕ್ರತುಗಳ್|| ೬೦

೬೦.:ಪದವಿಭಾಗ-ಅರ್ಥ:-

[ಕಮಲೋದ್ಭವನ ಅಮಳಿನ (ಅಮಲ-ಪರಿಶುದ್ಧ)

ಹೃತ್ಕಮಲದೊಳು ಒಗೆದರ್ (ಹುಟ್ಟಿದರು) ಸುರೇಂದ್ರ (ದೇವತೆಗಳ ಒಡೆಯ. ಸು-ರೆಂದ್ರ-ಕಿವಿ; ಕಮಂಡಲ?)ಧಾರಕರ್ (ಕಮಂಡಲ ಹಿಡಿದ ಋಷಿಗಳು) ವಾಗಮಳರ್ (ವಾಗ್ಮಿಗಳು) ನೆಗಳ್ದು ಇರ್ದರ್ (ಪ್ರಸಿದ್ಧರು) ಪುಲಹ, ಮರೀಚಿ, ಅತ್ರಿ, ಅಂಗಿರ, ಪುಳಸ್ತ್ಯ ಕ್ರತುಗಳ್ ಇದ್ದರು.]=

೬೦.ಅರ್ಥ:=[ಆ ಬ್ರಹ್ಮನ ಪರಿಶುದ್ಧ ಹೃದಯಕಮಲದಲ್ಲಿ ಕಮಂಡಲ ಹಿಡಿದ ಋಷಿಗಳು ಹುಟ್ಟಿದರು; ಅವರು ವಾಗ್ಮಿಗಳು, ಪ್ರಸಿದ್ಧರು, ಅವರು- ಪುಲಹ, ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ ಕ್ರತು, ಇವರು ಬ್ರಹ್ಮನ ಮಾನಸ ಪುತ್ರರು.]

ವಚನ|| ಅಂತು ಹಿರಣ್ಯಾಗರ್ಭ ಬ್ರಹ್ಮ ಮನಸ್ಸಂಭವದೊಳ್

ಪುಟ್ಟಿದಖಿಳವರ್ಮಕ್ಕಳೊಳಗೆ
ಮರೀಚಿಯ ಮಗಂ
ಕಶ್ಯಪನನೇಕ ಭುವನೋತ್ಪತ್ತಿ
ನಾಟಕಕ್ಕೆ
ಸೂತ್ರಧಾರನಾದನಾತನ
ಮಗನವಾರ್ಯವೀರ್ಯಂ
ಸೂರ್ಯನಾತನಿಂದವ್ಯವಚ್ಛಿನ್ನ
ಮಾಗಿ ಬಂದಂ ವಂಶ
ಸೂರ್ಯವಂಶಮೆಂಬುದಾ
ಯ್ತು-

ವ.:ಪದವಿಭಾಗ-

ಅರ್ಥ:ಅಂತು ಹಿರಣ್ಯಗರ್ಭ ಬ್ರಹ್ಮ ಮನಸ್ ಸಂಭವದೊಳ್ ಪುಟ್ಟಿದಱು ಅವರ್ ಮಕ್ಕಳೊಳಗೆ ಮರೀಚಿಯ ಮಗಂ ಕಶ್ಯಪನು ಅನೇಕ ಭುವನ ಉತ್ಪತ್ತಿ ನಾಟಕಕ್ಕೆ ಸೂತ್ರಧಾರನಾದನು ಅತನ ಮಗನು ಅಪಾರ್ಯ ವೀರ್ಯಂ ಸೂರ್ಯನು ಆತನಿಂದ ಅವ್ಯವಚ್ಛಿನ್ನಮಾಗಿ

(ವಂಸ ಕಡಿಯದೆ) ಬಂದಂ ವಂಶ ಸೂರ್ಯವಂಶಮೆಂಬುದಾಯ್ತು-]

ವ|ಅರ್ಥ: ಹಾಗೆ ಹಿರಣ್ಯಗರ್ಭ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ಆರು ಜನ ಮಕ್ಕಳಲ್ಲಿ ಮರೀಚಿಯ ಮಗನಾದ ಕಶ್ಯಪನು ಅನೇಕ ಲೋಕಗಳ ಉತ್ಪತ್ತಿಯೆಂಬ ನಾಟಕಕ್ಕೆ ಸೂತ್ರಧಾರನಾದನು.

ತಡೆಯಿಲ್ಲದೆ ಪರಾಕ್ರಮದಿಂದ ಕೂಡಿದವನು ಅವನ ಮಗ ಸೂರ್ಯನು. ಆತನಿಂದ ಏಕಪ್ರಕಾರವಾಗಿ ನಡೆದುಬಂದ ವಂಶ ಸೂರ್ಯವಂಶದಾಯಿತು.]

ಕಂ|| ಅತ್ರಿಯ ಪಿರಿಯ ಮಗಂ ಭುವ
ನತ್ರಯ ಸಂಗೀತ ಕೀರ್ತಿ ಸೋಮಂ ಸಕಲ|
ಕ್ಷತ್ರಕುಲಪೂಜ್ಯನಮಳ ಚ

ರಿತ್ರಂ ಪ್ರೋದ್ದಾಮ ಸೋಮವಂಶಲಲಾಮಂ||೬೧|61|

೬೧.:ಪದವಿಭಾಗ-ಅರ್ಥ: [ಅತ್ರಿಯ ಪಿರಿಯ (ಹಿರಿಯ?) ಮಗಂ ಭುವನತ್ರಯ ಸಂಗೀತ ಕೀರ್ತಿ ಸೋಮಂ (ಚಂದ್ರನು) ಸಕಲ ಕ್ಷತ್ರಕುಲಪೂಜ್ಯನು ಅಮಳ ಚರಿತ್ರಂ ಪ್ರೋದ್ದಾಮ (ಅತಿಶಯ) ಸೋಮವಂಶ ಲಲಾಮಂ (ಆಭರಣನು)]

೬೧/61.:ಅರ್ಥ:[ಅತ್ರಿಯ ಹಿರಿಯ ಮಗನು ಮೂರು ಲೋಕದಲ್ಲೂ ಸಂಗೀತದಲ್ಲಿ ಹಾಡಲ್ಪಟ್ಟ ಕೀರ್ತಿವಂತ ಚಂದ್ರನು; ಅವನು ಸಕಲ ಕ್ಷತ್ರಿಯ ಕುಲಕ್ಕೆ ಪೂಜ್ಯನು ಶುದ್ಧ ಚರಿತ್ರನು; ಅತಿಶಯವಾದ ಸೋಮವಂಶಕ್ಕೆ ಶ್ರೇಷ್ಠನು.]

ಆ ಸೋಮವಂಶಜರ್ ಪಲ

ರಾಸುಕರಂಬೆರಸು ನೆಗಟ್ದಿ ಜಸದಿಂ ಜಗಮಂ|
ಬಾಸಣಿಸಿ ಪೋದೊಡೆ ಅಕ ವಿ ಳಾಸಂ ದೌಷ್ಯಂತಿ ಭರತನೆಂಬಂ ನೆಗಟ್ದಿಂ|| ೬೨||

೬೨.:ಪದವಿಭಾಗ-ಅರ್ಥ:[ಆ ಸೋಮವಂಶಜರ್ ಪಲರ್ (ಹಲವರು) ಅಸುಕರಂ ಬೆರಸು (ಅತಿಶಯ, ತೀವ್ರದಿಂದ ಕೂಡಿ) ನೆಗಟ್ದಿ ಜಸದಿಂ (ಉಂಟಾದ ಕೀರ್ತಿಯಿಂದ)

ಜಗಮಂ ಬಾಸಣಿಸಿ (ಮುಚ್ಚಿ,
ಬಿಟ್ಟು) ಪೋದೊಡೆ
ಅಕ(ತಿ?)ವಿಳಾಸಂ (ಅತ್ಯಂತ
ವಿಳಾಸದಿಂದ)ದೌಷ್ಯಂತಿ
ಭರತನೆಂಬಂ ನೆಗೞ್ದಿಂ]=
ಟಿ೨.:ಅರ್ಥ:=[ಆ
ಸೋಮವಂಶದಲ್ಲಿ ಹುಟ್ಟಿದ
ಅನೇಕರು ಅತಿಶಯ
ಪ್ರಸಿದ್ಧವಾದ ಕೀರ್ತಿಯಿಂದ
ಲೋಕವನ್ನೆಲ್ಲ ಮುಚ್ಚಿ ಮರಣ
ಹೊಂದಲಾಗಿ, ಅತ್ಯಂತ

ವಿಳಾಸದಿಂದ ಕೂಡಿದ
ದುಷ್ಯಂತನ ಮಗನಾದ
ಭರತನೆಂಬುವನು
ಪ್ರಸಿದ್ಧನಾದನು.]

ಚಾರುಚರಿತ್ರಂ ಭರತನ
ಪಾರಗುಣಂ ತನ್ನ
ಪೆಸರೊಳಮರ್ದೆಸೆಯೆ
ಯಶೋ|
ಭಾರಂ ಕುಲಮುಂ ಕಥೆಯುಂ
ಭಾರತಮೆನೆ ನೆಗಳ್ದನಂತು
ನೆಗಳ್ದುದು ಭೂಪರ್|| ೬೩||

:೬೩.:ಪದವಿಭಾಗ-ಅರ್ಥ:{ಚಾರುಚರಿತ್ರಂ (ಉತ್ತಮ ನಡತೆಯುಳ್ಳ,) ಭರತನು ಅಪಾರಗುಣಂ ತನ್ನ ಪೆಸರೊಳು ಅಮರ್ದು ಎಸೆಯೆ ಯಶೋಭಾರಂ ಕುಲಮುಂ ಕಥೆಯುಂ ಭಾರತಂ ಎನೆ ನೆಗೞ್ದಿನು ಅಂತು ನೆಗೞ್ವುದು ಭೂಪರ್] =

೬೩.:-ಅರ್ಥ:=[ಸಚ್ಚರಿತ್ರನೂ ಅಪಾರಗುಣಯುತನೂ ಯಶಸ್ಸಿನ ಭಾರದಿಂದ ಕೂಡಿದವನೂ ಆದ ಭರತನು ತನ್ನ ಕುಲವೂ ಕಥೆಯೂ ತನ್ನ ಹೆಸರಿನಲ್ಲಿ ಸೇರಿ ಭಾರತವೆಂದು ಪ್ರಸಿದ್ಧಿಯಾಗುವ ಹಾಗೆ

ಪ್ರಖ್ಯಾತನಾದನು. ಭರತಕುಲ-ವಂಶ, ಭಾರತ ಕಥೆ-ಹೀಗೆ)

ಭರತನನೇಕಾಧ್ವರ ಭರ
ನಿರತಂ ಜಸಮುೞಿಯೆ
ಕೞಿಯೆ ಭೂಪರ್ ಪಲರಾ|
ದರಿಸಿದ ಧರಣೀಭರಮಂ
ಧರಿಯಿಸಿದಂ
ಪ್ರತಿಮನೆಂಬನಪ್ರತಿಮಬಲಂ||
೬೪||

೬೪.:ಪದವಿಭಾಗ-ಅರ್ಥ:

[ಭರತನು ಅನೇಕ ಅಧ್ವರ

ಭರನಿರತಂ ಜಸಮುೞಿಯೆ
ಕೞಿಯೆ (ಸಾಯಲು)
ಭೂಪರ್ ಪಲರು (ಹಲವರು)
ಆದರಿಸಿದ ಧರಣೀಭರಮಂ
ಧರಿಯಿಸಿದಂ ಪ್ರತಿಮನೆಂಬನು
ಅಪ್ರತಿಮಬಲಂ]=
೬೪.:-**ಅರ್ಥ**:=[ಅನೇಕ ಯಜ್ಞ
ಕಾರ್ಯಗಳಲ್ಲಿ ಆಸಕ್ತನಾದ
ಭರತನು ಕೀರ್ತಿಶೇಷನಾಗಿ
ಸಾಯಲು, ಅನೇಕ ರಾಜರು
ಪ್ರೀತಿಸಿದ ಭೂಭಾರವನ್ನು

(ರಾಜ್ಯಭಾರವನ್ನು)
ಅಪ್ರತಿಮಬಲನಾದ
ಪ್ರತಿಮನೆಂಬುವನು
ಧರಿಸಿದರನು.]

ಅಂತಾ ಪ್ರತಿಮಂಗೆ ಸುತರ್
ಶಂತನು ಬಾಹ್ಲಿಕ ವಿನೂತ
ದೇವಾಪಿಗಳೋ|
ರಂತೆ ಧರೆ ಪೊಗೞೆ ನೆಗೞ್ದಿರ
ನಂತ ಬಳರ್ ಪರಬಳ
ಪ್ರಭೇದನ ಶೌರ್ಯರ್|| ೬೫||

೯೫.:ಪದವಿಭಾಗ-ಅರ್ಥ: [ಅಂತು ಆ ಪ್ರತಿಮಂಗೆ ಸುತರ್ ಶಂತನು, ಬಾಹ್ಲಿಕ, ವಿನೂತ, ದೇವಾಪಿಗಳು ಓರಂತೆ ಧರೆ ಪೊಗಱೆ ನೆಗೞ್ದಿರು ಅನಂತ ಬಳರ್ (ಬಲರು) ಪರಬಳ (ಶತ್ರು ಶೈನ್ಯ)ಪ್ರಭೇದನ ಶೌರ್ಯರ್]=

೬೫.:-ಅರ್ಥ:=[ಹಾಗೆ ಆ ಪ್ರತಿಮನಿಗೆ ಕೊನೆಯಿಲ್ಲದ ಬಲವುಳ್ಳವರೂ

ಶತ್ರುಸೈನ್ಯವನ್ನು ವಿಶೇಷವಾಗಿ ಭೇದಿಸುವ ಶೌರ್ಯವುಳ್ಳವರೂ ಆದ ಬಾಹ್ಲಿಕ, ವಿನೂತ ದೇವಾಪಿಗಳು ಸಾಲಾಗಿ ಮಕ್ಕಳು.]

ವ|| ಅವರೊಳಗೆ ದೇವಾಪಿ ನವಯೌವನ ಪ್ರಾರಂಭದೊಳೆ ತಪಶ್ಚರಣ ಪರಾಯಣನಾದಂ ಪ್ರತಿಮನುಂ ಪ್ರತಾಪಪ್ರಸರಪ್ರಕಟ

ಪಟುವಾಗಿ ಪಲವುಕಾಲಮರಸುಗೆಯ್ದು ಸಂಸಾರಾಸಾರತೆಗೆ ಪೇಸಿ ತಪೋವನಕ್ಕಭಿಮುಖನಾಗಲ್ಬಗೆದು-

ಪದವಿಭಾಗ-ಅರ್ಥ:

[ಅವರೊಳಗೆ ದೇವಾಪಿ ನವಯೌವನ ಪ್ರಾರಂಭದೊಳೆ ತಪಶ್ಚರಣ ಪರಾಯಣನಾದಂ; ಪ್ರತಿಮನುಂ ಪ್ರತಾಪಪ್ರಸರಪ್ರಕಟ

ಪಟುವಾಗಿ ಪಲವುಕಾಲಂ ಅರಸುಗೆಯ್ದು ಸಂಸಾರ ಅಸಾರತೆಗೆ ಪೇಸಿ ತಪೋವನಕ್ಕೆ ಅಭಿಮುಖನಾಗಲ್ ಬಗೆದು-]=

ಅರ್ಥ:ವ|| =[ಅವರಲ್ಲಿ ದೇವಾಪಿಯು ಹೊಸದಾದ ಯವ್ವನ ಪ್ರಾರಂಭದಲ್ಲಿಯೇ ತಪಸ್ಸು ಮಾಡುವುದರಲ್ಲಿ ಆಸಕ್ತನಾದನು. ಪ್ರತಿಮನೂ ಕೂಡ ಪ್ರತಾಪವನ್ನು

ಪ್ರಕಟಿಸುವುದರಲ್ಲಿ
ಸಮರ್ಥನಾಗಿ ಅನೇಕಕಾಲ
ರಾಜ್ಯಭಾರಮಾಡಿ ಸಂಸಾರದ
ಅಸಾರತೆಗೆ ಅಸಹ್ಯಪಟ್ಟು
ತಪೋವನಕ್ಕೆ ಹೋದನು.]

ಕಂ|| ಕಂತು ಶರ ಭವನನಾ
ಪ್ರಿಯ
ಕಾಂತಾ ಭ್ರೂವಿಭ್ರಮ
ಗೃಹಾಗ್ರಹವಶದಿಂ|
ಭ್ರಾಂತಿಸದುಪಶಾಂತಮನಂ

ಶಂತನುಗಿತ್ತಂ ಸಮಸ್ತ ರಾಜ್ಯಶ್ರೀಯಂ|| ೬೬||

೬೬.ಪದವಿಭಾಗ-ಅರ್ಥ:ಕಂತು ಶರ ಭವನನ (ಮನ್ಮಥನ ಬಾಣಗಳ ಮನೆ-ಬತ್ತಳಿಕೆಯ) ಆ ಪ್ರಿಯಕಾಂತಾ ಭ್ರೂವಿಭ್ರಮ (ಪ್ರಿಯವಾದ ಹೆಣ್ಣಿನ ಹುಬ್ಬೆಂಬ ಗ್ರಹ) ಗೃಹಾಗ್ರಹವಶದಿಂ (ಗ್ರಹದ ಆಗ್ರಹ-ಒತ್ತಾಯಕ್ಕೆ) ಭ್ರಾಂತಿಸದೆ

ಉಪಶಾಂತಮನಂ (ಬಹಳ ಶಾಂತ ಮನಸ್ಸಿನವನಾಗಿ) ಶಂತನುಗೆ ಇತ್ತಂ (ಕೊಟ್ಟನು) ಸಮಸ್ತ ರಾಜ್ಯಶ್ರೀಯಂ.

೬೬.ಅರ್ಥ:[ಮನ್ಮಥನ ಬಾಣಗಳಿಗೆ ವಾಸಸ್ಥಾನವಾದ ಬತ್ತಳಿಕೆಯ ಹಾಗಿದ್ದ ಆ ಪ್ರತಿಮನು ತನ್ನ ಪ್ರೀತಿಪಾತ್ರರಾದ ಸ್ತ್ರೀಯರ ಹುಬ್ಬಿನ ವಿಲಾಸವೆಂಬ ಗ್ರಹಕ್ಕೆ ವಶನಾಗಿ (ವಶವಾಗದೆ)

ಭ್ರಮೆಗೊಳ್ಳದೆ ಬಹಳ ಶಾಂತ ಮನಸ್ಸಿನವನಾಗಿ ಸಮಸ್ತರಾಜ್ಯ ಸಂಪತ್ತನ್ನೂ ಶಂತನುವಿಗೆ ಕೊಟ್ಟನು.]

ಶಂತನುಗಮಮಳ ಗಂಗಾ
ಕಾಂತೆಗಮೆಂಟನೆಯ ವಸು
ವಸಿಷ್ಠನ ಶಾಪ|
ಭ್ರಾಂತಿಯೊಳೆ ಬಂದು ನಿರ್ಜಿತ
ಕಂತುವೆನಲ್ಕಂತು ಪುಟ್ಟಿದಂ
ಗಾಂಗೇಯಂ|| ೬೭ ||

೬೭.ಪದವಿಭಾಗ-ಅರ್ಥ: [ಶಂತನುಗಂ ಅಮಳ (ಪವಿತ್ರ)ಗಂಗಾ ಕಾಂತೆಗಮಂ ಎಂಟನೆಯ ವಸು ವಸಿಷ್ಠನ ಶಾಪ ಭ್ರಾಂತಿಯೊಳೆ ಬಂದು ನಿರ್ಜಿತ (ಮೀರಿದ) ಕಂತುವು (ಮನ್ಮಥ) ಎನಲ್ಕೆ ಅಂತು ಪುಟ್ಟಿದಂ ಗಾಂಗೇಯಂ]=

೬೭.ಅರ್ಥ:=[ಶಂತನುವಿಗೂ ಪರಿಶುದ್ಧಳಾದ ಗಂಗಾದೇವಿಗೂ ಎಂಟನೆಯ

ವಸುವು ವಸಿಷ್ಠನ ಶಾಪದಿಂದ
ರೂಪಿನಲ್ಲಿ ಮನ್ಮಥನನ್ನು
ಸೋಲಿಸುವ
ಸೌಂದರ್ಯದಿಂದ ಕೂಡಿ
ಭೀಷ್ಮನು ಹುಟ್ಟಿದನು]

ವ|| ಅಂತು ಭುವನಕ್ಕೆಲ್ಲಮಾಯಮುಮಳ ವುಮಱಿವುಮಣ್ಮುಂ ಪುಟ್ಟುವಂತೆ ಪುಟ್ಟಿ ನವಯೌವನಂ ನೆರೆಯೆ ನೆಯೆ-

ವ.ಪದವಿಭಾಗ-ಅರ್ಥ: [ಅಂತು ಭುವನಕ್ಕೆಲ್ಲಂ ಆ ಯಮುಂ (ಐಶ್ವರ್ಯ)ಅಳವುಂ (ಶಕ್ತಿ) ಅಱಿವುಂ (ಜ್ಞಾನ) ಅಣ್ಮುಂ (ಪ್ರತಾಪ) ಪುಟ್ಟುವಂತೆ ಪುಟ್ಟಿ ನವಯೌವನಂ ನೆರೆಯೆನೆರೆಯೆ-]=

ವ.ಅರ್ಥ:=[ಹೀಗೆ ಲೋಕಕ್ಕೆಲ್ಲ ಆ ಐಶ್ವರ್ಯ, ಶಕ್ತಿ, ಜ್ಞಾನ, ಪ್ರತಾಪಗಳೇ ಹುಟ್ಟುವಂತೆ

ಹುಟ್ಟಿ
ನವಯೌವನವಂತನಾಗಿ
ಬೆಳೆಯಲು-]

ಶಾ|| ಸೌಲಪ್ರಾಂಶು
ವಿಶಾಲಲೋಲನಯನಂ
ಪ್ರೋದ್ಯದ್ವೃಷಸ್ಕಂಧನು
ನ್ಮೀಲತ್ಪಂಕಜವಕ್ತ್ರನಾಯತ
ಸಮಗ್ರೋರಸ್ಥಳಂ ದೀರ್ಘ
ಬಾ|
ಹಾಲಂಬಂ
ಭುಜವೀರ್ಯವಿಕ್ರಮಯುತಂ

ಗಂಗಾತ್ಮಜನ್ಮಂ ಜಯ
ಶ್ರೀಲೋಲಂ
ಜಮದಗ್ನಿರಾಮಮುನಿಯೊಳ್
ಕಲ್ತಂ ಧನುರ್ವಿದ್ಯೆಯಂ|| ೬೮

ಪದವಿಭಾಗ-

ಅರ್ಥ:ಸೌಲಪ್ರಾಂಶು (ಸಾಲ ಮರದಂತೆ ಎತ್ತರವುಳ್ಳ)ವಿಶಾಲಲೋಲನಯನಂ (ವಿಶಾಲ ಕಣ್ಣಿವನು), ಪ್ರೋದ್ಯದ್ ವೃಷಸ್ಕಂಧನು (ಎತ್ತರದ ಗೂಳಿಯ

ಭುಜದವನು) ಉನ್ಮೀಲತ್
ಪಂಕಜವಕ್ತ್ರನು ಆಯತ
(ಕಮಲದಂತೆ
ಮುಖವುಳ್ಳವನು, ವಿಸ್ತಾರ)
ಸಮಗ್ರೋರಸ್ಥಳಂ (ಆಯತ-
ವಿಸ್ತಾರ ತುಂಬಿದ
ಎದೆಯವನು) ದೀರ್ಘ ಬಾಹು
ಆಲಂಬಂ (ಉದ್ದವಾದ
ತೋಳಿಗೆ ಆಶ್ರಯನಾಗಿ)
ಭುಜವೀರ್ಯವಿಕ್ರಮಯುತಂ
(ಬಾಹುಗಳ ಶೌರ್ಯ

ವಿಕ್ರಮನು ಆದ) ಗಂಗಾತ್ಮ
ಜನ್ಮಂ ಜಯ ಶ್ರೀಲೋಲಂ
(ಗಂಗೆಯ ಮಗ ಭೀಷ್ಮನು
ಜಯವೆಂಬ ಲಕ್ಷ್ಮಿಯಲ್ಲಿ
ಆಸಕ್ತನು) ಜಮದಗ್ನಿರಾಮ
ಮುನಿಯೊಳ್ ಕಲ್ತಂ
ಧನುರ್ವಿದ್ಯೆಯಂ
(ಜಮದಗ್ನಿಯ ಮಗ
ಪರಷುರಾಮ ಮುನಿಯ ಬಳಿ
ಧನುರ್ವಿದ್ಯೆಯನ್ನು ಕಲಿತನು.)

೬೮.ಅರ್ಥ:=[ಸಾಲ ಮರದಂತೆ ಎತ್ತರವುಳ್ಳ, ವಿಶಾಲ ಕಣ್ಣಿವನು, ಎತ್ತರದ ಗೂಳಿಯ ಭುಜದವನು, ಕಮಲದಂತೆ ಮುಖವುಳ್ಳವನು, ವಿಸ್ತಾರವಾದ ತುಂಬಿದ ಎದೆಯವನು, ಉದ್ದವಾದ ತೋಳಿಗೆ ಆಶ್ರಯನಾಗಿ ಬಾಹುಗಳ ಶೌರ್ಯ ವಿಕ್ರಮನು ಆದ ಗಂಗೆಯ

ಮಗ ಭೀಷ್ಮನು ಜಯವೆಂಬ ಲಕ್ಷ್ಮಿಯಲ್ಲಿ ಆಸಕ್ತನಾಗಿದ್ದು, ಜಮದಗ್ನಿಯ ಮಗ ಪರಷುರಾಮ ಮುನಿಯ ಬಳಿ ಧನುರ್ವಿದ್ಯೆಯನ್ನು ಕಲಿತನು.]

ವಚನ|| ಅಂತು ಕಲ್ತು ಮುನ್ನಮೆ ಚಾಪವಿದ್ಯೆಯೊಳಾರಿಂದಮೀತನೆ ಭಾರ್ಗವನೆನಿಸಿದ ಭಾರ್ಗವಂಗೆ ತಾನೆ ಭಾರ್ಗವನಾಗಿ ಯುವರಾಜ

ಕಂಠಿಕಾಪರಿಕಲಿತ
ಕಂಠಲುಂಠನುಮಾಗಿ
ಪ್ರಮಾಣನಿಜಭುಜದಂಡದಂ
ಡಿತಾರಾತಿಮಂಡಲನುಮಾಗಿ
ಗಾಂಗೇಯಂ ಸುಖದೊಳರಸು
ಗೆಯ್ಯುತ್ತಿರ್ಪ ನ್ನೆಗಮಿತ್ತ
ಗಂಗಾದೇಶದೊಳುಪರಿಚರವ
ಸುವೆಂಬರಸಂ
ಮುಕ್ತಾವತಿಯೆಂಬ
ತೊರೆಯೊಳ್
ವಿಶ್ರಮಿಸಿರ್ದೊಡೆ

ಕೋಳಾಹಳಮೆಂಬ ಪರ್ವತಕ್ಕೆ

ಪುಟ್ಟಿದ ಗಿರಿಜೆಯೆಂಬ

ಕನ್ನೆಯನಾತಂ ಕಂಡು

ಕಣ್ಬೇಟಂಗೊಂಡು

ಮದುವೆಯಂ ನಿಂದೊಂದು

ದಿವಸಮಿಂದ್ರನೋಲಗಕ್ಕೆ

ಪೋಗಿ

ಋತುಕಾಲಪ್ರಾಪ್ತೆಯಾಗಿರ್ದ

ನಲ್ಲಳಲ್ಲಿಗೆ ಬರಲ್

ಪಡೆಯದಾಕೆಯಂ

ನೆನೆದಿಂದ್ರಿಯ

ಕ್ಷರಣೆಯಾದೊಡದನೊಂದು
ಕದಳೀಪತ್ರದೊಳ್ ಪುದಿದು
ತನ್ನ ನಡಪಿದ ಗಿಳಿಯ
ಕೈಯೊಳೋಪಳಲ್ಲಿಗಟ್ಟಿದೊಡ
ದಂ ತರ್ಪರಗಿಳಿಯನೊಂದು
ಗಿಡುಗನೆಡೆಗೊಂಡು
ಜಗುನೆಯಂ
ಪಾಯ್ವಾಗಳುಗಿಬಗಿ
ಮಾಡಿದಾಗಳದಱ ಕೈಯಿಂ
ಬರ್ದುಂಕಿ ತೊರೆಯೊಳಗೆ
ಬೀೞ್ದೊಡದನೊಂದು

ಬಾಳೆವಿನ್ನುಂಗಿ ಗರ್ಭಮಂ
ತಾಳ್ದಿದೊಡೊಂದು ದಿವಸಮಾ
ಮೀನನೊರ್ವ ಜಾಲಗಾಱಂ
ಜಾಲದೊಳ್ ಪಿಡಿದಲ್ಲಿಗರಸಪ್ಪ
ದಾಶನಲ್ಲಿಗುಯ್ದು
ತೋಱಿದೊಡದಂ ವಿದಾರಿಸಿ
ನೋೞ್ಪನ್ನೆಗಂ ಬಾಳೆಯ
ಗರ್ಭದೊಳಿರ್ದ ಬಾಳೆಯಂ
ಬಾಳನುಮಂ ಕಂಡೆತ್ತಿಕೊಂಡು
ಮತ್ಸ್ಯಗಂಧಿಯುಂ ಮತ್ಸ
ಗಂಧನುಮೆಂದು ಪೆಸರನಿಟ್ಟು

ನಡಪಿ
ಯಮುನಾನದೀತೀರದೊಳಿರ್
ಪನ್ನಿಗಮಲ್ಲಿಗೊರ್ಮೆ ಬ್ರಹ್ಮರ
ಮೊಮ್ಮನಪ್ಪ ಪರಾಶರ
ಮುನೀಂದ್ರನುತ್ತರಾಪಥಕ್ಕೆ
ಪೋಗುತ್ತುಂ ಬಂದು ತೊರೆಯ
ತಡಿಯೊಳೋಡಮಂ
ನಡೆಯಿಸುವ
ಮತ್ಸ್ಯಗಂಧಿಯಂ ಕಂಡೆಮ್ಮನೀ
ತೊರೆಯಂ ಪಾಯಿಸೆಂಬುದುಂ
ಸಾಸಿರ್ವರೇಱಿದೊಡಲ್ಲದೀ

ಯೋಡಂ ನಡೆಯದೆಂಬುದುಮಾಮನಿಬರ ಬಿಣ್ಪುಮಪ್ಪೆ ಮೇಱಿಸಂದೊಡಂತೆಗೆಯ್ವೆನೆಂದೋಡಮೇಱಿಸಿ ನಡೆಯಿಸುವಲ್ಲಿ ದಿವ್ಯಕನ್ನೆಯನಟ್ಟಿತ್ತುರ್ನೋಡಿ-

ಪದವಿಭಾಗ-ಅರ್ಥ:ಅಂತು ಕಲ್ತು ಮುನ್ನಮೆ ಚಾಪವಿದ್ಯೆಯೊಳು (ಮೊದಲೆ

ಬಿಲ್ಲು ವಿದ್ಯೆಯಲ್ಲಿ) ಆರಿಂದಂ ಈತನೆ (ಎಲ್ಲರಿಗಿಂತ ಇವನೇ) ಭಾರ್ಗವನೆನಿಸಿದ (ಉತ್ತಮ ಬಿಲ್ಲುಗಾರನೆನಿಸಿದ) ಭಾರ್ಗವಂಗೆ ತಾನೆ ಭಾರ್ಗವನಾಗಿ (ತಾನೇ ಗುರುವಾಗಿ) ಯುವರಾಜ ಕಂಠಿಕಾ (ಯುವರಾಜ ಪದವಿಗೆ) ಪರಿಕಲಿತ ಕಂಠಲುಂಠನುಮಾಗಿ (ಸೇರಿದ, ಕಂಠದ

ಅಲುಗಾಟವುಳ್ಳವನಾಗಿ)
ಪ್ರಮಾಣ ನಿಜಭುಜದಂಡ
ದಂಡಿತ ಆರಾತಿ (ಶತ್ರು)
ಮಂಡಲನುಮಾಗಿ (ಉದ್ದ
ಗಾತ್ರದ ತನ್ನ ಭುಜದ
ದಂಡದಿಂದ ಶತ್ರುಸೈನ್ಯವನ್ನು
ದಂಡಿಸಿದವನಾಗಿ,)
ಗಾಂಗೇಯಂ ಸುಖದೊಳು
ಅರಸು ಗೆಯ್ಯುತ್ತಿರ್ಪ
ಅನ್ನೆಗಂ(ಭೀಷ್ಮನು ಸುಖದಿಂದ
ರಾಜ್ಯಭಾರ ಮಾಡುತ್ತಿದ್ದನು,) ,

ಆ ಸಮಯದಲ್ಲಿ ಇತ್ತ
ಗಂಗಾದೇಶದೊಳು
ಉಪರಿಚರವಸುವೆಂಬ
ಅರಸಂ ಮುಕ್ತಾವತಿಯೆಂಬ
ತೊರೆಯೊಳ್ (ನದಿಯಲ್ಲಿ)
ವಿಶ್ರಮಿಸಿರ್ದೊಡೆ
ಕೋಳಾಹಳಮೆಂಬ ಪರ್ವತಕ್ಕೆ
ಪುಟ್ಟಿದ ಗಿರಿಜೆಯೆಂಬ
ಕನ್ನೆಯನು ಆತಂ ಕಂಡು
ಕಣ್ಬೇಟಂಗೊಂಡು
(ಮೋಹಗೊಂಡು)

ಮದುವೆಯಂ ನಿಂದು ಒಂದು
ದಿವಸಂ ಇಂದ್ರನ ಓಲಗಕ್ಕೆ
ಪೋಗಿ
ಋತುಕಾಲಪ್ರಾಪ್ತೆಯಾಗಿರ್ದ
ನಲ್ಲಳಲ್ಲಿಗೆ ಬರಲ್ ಪಡೆಯದೆ
ಆಕೆಯಂ ನೆನೆದು ಇಂದ್ರಿಯ
ಕ್ಷರಣೆಯಾದೊಡೆ
ಅದನೊಂದು
ಕದಳೀಪತ್ರದೊಳ್ ಪುದಿದು
(ಸುತ್ತಿ) ತನ್ನ ನಡಪಿದ (ಸಾಕಿದ)
ಗಿಳಿಯ ಕೈಯೊಳು ಓಪಳಲ್ಲಿಗೆ

(ಪ್ರಿಯಳಲ್ಲಿಗೆ) ಅಟ್ಟಿದೊಡೆ (ಕಳಿಸಿದರೆ) ಅದಂ ತರ್ಪರೆ ಗಿಳಿಯನು ಒಂದು ಗಿಡುಗನು ಎಡೆಗೊಂಡು (ಆಕ್ರಮಿಸಿ) ಜಗುನೆಯಂ ಪಾಯ್ವಾಗಳು (ಯಮುನೆಯನ್ನು ದಾಟುವಾಗ) ಉಗಿಬಗಿ ಮಾಡಿದಾಗಳು (ಉಗುರಿನಿಂದ ಪರಚಿದಾಗ) ಅದಱ ಕೈಯಿಂ ಬರ್ದುಂಕಿ (ಜಾರಿ)ತೊರೆಯೊಳಗೆ ಬಿಱ್ದೊಡೆ

ಅದನೊಂದು ಬಾಳೆವಿನ್ನುಂಗಿ
(ಬಾಳೆ ಮೀನು ನುಂಗಿ)
ಗರ್ಭಮಂ ತಾಳ್ದಿದೊಡೆ ಒಂದು
ದಿವಸಮ್
ಆಮೀನನು(ಮೀನನ್ನು) ಓರ್ವ
ಜಾಲಗಾಱಂ ಜಾಲದೊಳ್
(ಬೆಸ್ತನ ಬಲೆಯಲ್ಲಿ)ಪಿಡಿದು
ಅಲ್ಲಿಗೆ ಅರಸಪ್ಪ ದಾಶನಲ್ಲಿಗೆ
ಉಒಯ್ದು ತೋಱಿದೊಡೆ
(ತೋರಿಸಿದಾಗ) ಅದಂ
ವಿದಾರಿಸಿ ನೋೞ್ಪಿ ಅನ್ನೆಗಂ

(ಅದನ್ನು ಸೀಳಿ ನೋಡಿದಾಗ),
ಬಾಳೆಯ ಗರ್ಭದೊಳು ಇರ್ದ
(ಇದ್ದ) ಬಾಳೆಯಂ
(ಬಾಲೆಯನ್ನು) ಬಾಳನುಮಂ
(ಬಾಲಕನನ್ನು) ಕಂಡು
ಎತ್ತಿಕೊಂಡು ಮತ್ಸ್ಯಗಂಯುಂ
ಮತ್ಸ ಗಂಧನುಮೆಂದು
(ಮತ್ಸ್ಯಗಂಧಿ ಮತ್ತು
ಮತ್ಸ್ಯಗಂದನೆಂದು)
ಪೆಸರನಿಟ್ಟು ನಡಪಿ (ಸಲಹಿ)
ಯಮುನಾನದೀತೀರದೊಳು

ಇರ್ಪನ್ನೆಗಂ (ರುವಾಗ) ಅಲ್ಲಿಗೆ

ಒರ್ಮೆ (ಒಮ್ಮೆ) ಬ್ರಹ್ಮರ

ಮೊಮ್ಮನಪ್ಪ ಬ್ರಹ್ಮನ

ಮೊಮ್ಮಗನಾದ) ಪರಾಶರ

ಮುನೀಂದ್ರನು ಉತ್ತರಾಪಥಕ್ಕೆ

(ಉತ್ತರದೇಶಕ್ಕೆ) ಪೋಗುತ್ತುಂ

ಬಂದು ತೊರೆಯ (ನದಿಯ)

ತಡಿಯೊಳು ಓಡಮಂ

(ದಡದಲ್ಲಿ ದೋಣಿಯನ್ನು)

ನಡೆಯಿಸುವ

ಮತ್ಸ್ಯಗಂಧಿಯಂ

(ಮತ್ಸ್ಯಗಂಧಿಯನ್ನು) ಕಂಡು ಎಮ್ಮನು ಈ ತೊರೆಯಂ ಪಾಯಿಸೆಂಬುದುಂ (ನಮ್ಮನ್ನು ಈ ನದಿಯನ್ನು ದಾಟಿಸು ಎಂದು ಕೇಳಿದನು.) ಸಾಸಿರ್`ವರು ಏಱಿದೊಡೆ ಅಲ್ಲದು ಈ ಯೋಡಂ ನಡೆಯದೆಂಬುದುಂ (ಸಾವಿರ ಜನರು ಹತ್ತದ ಹೊರತು ಈ ದೋಣಿಯು ನಡೆಯುವುದಿಲ್ಲ ಎಂದಳು.) ಮಾಮ್ ಅನಿಬರ

ಬಿಣ್ಪುಮಪ್ಪೆಂ ಏಱಿಸು
ಎಂದೊಡೆ(ನಾವು ಅಷ್ಟು
ಜನರ ಭಾರವಾಗುತ್ತೇವೆ
ಏರಿಸು/ ದೋಣಿ ನಡೆಸು
ಎಂದನು) ಅಂತೆ ಗೆಯ್ವೆನು
ಎಂದೋಡೆ ಏಱಿಸಿ
(ದೋಣಿಯನ್ನು)
ನಡೆಯಿಸುವಲ್ಲಿ
ದಿವ್ಯಕನ್ನೆಯನು ಅೞ್ಕಿರ್ತು
(ಪ್ರೀತಿಸಿ) ನೋಡಿ-(ಹಾಗೆಯೇ
ಮಾಡುತ್ತೇನೆ ಎಂದು

ಹತ್ತಿಸಿಕೊಂಡು ನಡೆಸುತ್ತಿರುವಾಗ ಆ ದಿವ್ಯಕನ್ಯೆಯನ್ನು ಪ್ರೀತಿಸಿ ನೋಡಿ)

ಅರ್ಥ:ವಚನ:ಹಾಗೆ ಕಲಿತು ಮೊದಲೆ ವಿದ್ಯೆಯಲ್ಲಿ ಎಲ್ಲರಿಗಿಂತ ಇವನೇ ಉತ್ತಮ ಬಿಲ್ಲುಗಾರನೆನಿಸಿದ; ಭಾರ್ಗವನಿಗೆ ತಾನೇ ಗುರುವಾಗಿ, ಯುವರಾಜ ಪದವಿಗೆ ಸೇರಿದ, ಕಂಠದ

ಅಲುಗಾಟವುಳ್ಳವನಾಗಿ ಉದ್ದ ಗಾತ್ರದ ತನ್ನ ಭುಜದ ದಂಡದಿಂದ ಶತ್ರುಸೈನ್ಯವನ್ನು ದಂಡಿಸಿದವನಾಗಿ, ಭೀಷ್ಮನು ಸುಖದಿಂದ ರಾಜ್ಯಭಾರ ಮಾಡುತ್ತಿದ್ದನು. ಆ ಸಮಯದಲ್ಲಿ ಇತ್ತ ಗಂಗಾಪ್ರದೇಶದಲ್ಲಿ ಉಪರಿಚರವಸುವೆಂಬ ಅರಸನು ಮುಕ್ತಾವತಿಯೆಂಬ ನದಿಯಲ್ಲಿ ವಿಶ್ರಮಿಸಿದಾಗ

ಕೋಳಾಹಳವೆಂಬ ಪರ್ವತಕ್ಕೆ ಹುಟ್ಟಿದ ಗಿರಿಜೆಯೆಂಬ ಕನ್ನೆಯನ್ನು, ಆತನು ಕಂಡು ಮೋಹಗೊಂಡು ಮದುವೆಯನ್ನು ಮಾಡಿಕೊಂಡನು. ಒಂದು ದಿವಸ ಇಂದ್ರನ ಓಲಗಕ್ಕೆ ಹೋಗಿ ಋತುಕಾಲಪ್ರಾಪ್ತೆಯಾಗಿದ್ದ ಪ್ರಿಯಳಲ್ಲಿಗೆ ಬರಲು ಆಗದೆ, ಆಕೆಯನ್ನು ನೆನೆದು ಇಂದ್ರಿಯ

ಸ್ಖಲನವಾದಾಗ ಅದನ್ನು
ಒಂದು ಬಾಳೆಎಲೆಯಲ್ಲಿ ಸುತ್ತಿ
ತನ್ನ ಸಾಕಿದ ಗಿಳಿಯ ಕೈಯಲ್ಲಿ
ಪ್ರಿಯಳಲ್ಲಿಗೆ ಕಳಿಸಿದರೆ;
ಅದನ್ನು ತರವಾಗ ಗಿಳಿಯನ್ನು
ಒಂದು ಗಿಡುಗನು ಆಕ್ರಮಿಸಿ
ಯಮುನೆಯನ್ನು ದಾಟುವಾಗ
ಉಗುರಿನಿಂದ ಪರಚಿದಾಗ
ಅದರ ಕೈಯಿಂದ ಜಾರಿ
ನದಿಯೊಳಗೆ ಬಿದ್ದಾಗ ಅದನ್ನು
ಒಂದು ಬಾಳೆಮೀನು ನುಂಗಿ

ಗರ್ಭಧರಿಸಿತು. ಒಂದು ದಿವಸ ಮೀನನ್ನು ಒಬ್ಬ ಬೆಸ್ತನು ಬಲೆಯಲ್ಲಿ ಹಿಡಿದು ಅಲ್ಲಿಗೆ ಅರಸನಾಗಿದ್ದ ದಾಶನ ಬಳಿಗೆ ವಯ್ದು ತೋರಿಸಿದನು. ಅದನ್ನು ಸೀಳಿ ನೋಡಿದಾಗ ಬಾಳೆಯ ಗರ್ಭದಲ್ಲಿ ಇದ್ದ ಮಗು-ಬಾಲೆಯನ್ನು ಬಾಲಕನನ್ನು ಕಂಡು ಎತ್ತಿಕೊಂಡು ಮತ್ಸ್ಯಗಂಧಿ ಮತ್ತು ಮತ್ಸ್ಯಗಂದನೆಂದು

ಹೆಸರನಿಟ್ಟು ಸಲಹಿ)
ಯಮುನಾ ನದೀತೀರದಲ್ಲಿ
ಇದ್ದನು. ಹೀಗಿರುವಾಗ ಅಲ್ಲಿಗೆ
ಒಮ್ಮೆ ಬ್ರಹ್ಮನ
ಮೊಮ್ಮಗನಾದ ಪರಾಶರ
ಮುನೀಂದ್ರನು ಉತ್ತರದೇಶಕ್ಕೆ
ಹೋಗಲು ಬಂದು ನದಿಯ
ದಡದಲ್ಲಿ ದೋಣಿಯನ್ನು
ನಡೆಯಿಸುವ
ಮತ್ಸ್ಯಗಂಧಿಯನ್ನು ಕಂಡು,
ನಮ್ಮನ್ನು ಈ ನದಿಯನ್ನು

ದಾಟಿಸು ಎಂದು ಕೇಳಿದನು.
ಅವಳು ಸಾವಿರ ಜನರು ಹತ್ತದ
ಹೊರತು ಈ ದೋಣಿಯು
ನಡೆಯುವುದಿಲ್ಲ ಎಂದಳು.
ಆಗ ಋಷಿಯು ನಾವು ಅಷ್ಟು
ಜನರ ಭಾರವಾಗುತ್ತೇವೆ
ಏರಿಸು/ ದೋಣಿ ನೆಡೆಸು
ಎಂದನು. ಹಾಗೆಯೇ
ಮಾಡುತ್ತೇನೆ ಎಂದು
ಹತ್ತಿಸಿಕೊಂಡು
ನಡೆಸುತ್ತಿರುವಾಗ ಆ

ದಿವ್ಯಕನ್ಯೆಯನ್ನು ಪ್ರೀತಿಸಿ ನೋಡಿ;

ವ್ಯಾಸ ಅಥವಾ ಕೃಷ್ಣದ್ವೈಪಾಯನನ ಜನನ

ಮ॥ ಮನದೊಳ್ ಸೋಲ್ತು ಮುನೀಂದ್ರನಾಕೆಯೊಡಲೀ ದುರ್ಗಂಧವೋಪಂತೆ ಯೋ ಜನ ಗಂಧಿತ್ವಮನಿತ್ತು ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂ।

ಜನಲಂಪಟ್ಕಿಣಿನೀಯೆ

ಕೂಡುವೆಡೆಯೊಳ್

ಜ್ಞಾನಸ್ವರೂಪಂ ಮಹಾ

ಮುನಿಪಂ ಪುಟ್ಟಿದನಂತು

ದಿವ್ಯಮುನಿಗಳ್ಗೇಗೆಯ್ದೊಡಂ

ತೀರದೇ|| ೬೯||

ಪದ್ಯ-೬೯:ಪದವಿಭಾಗ-

ಅರ್ಥ:ಮ|| ಮನದೊಳ್

ಸೋಲ್ತು ಮುನೀಂದ್ರನು

(ಪರಾಶರ ಮುನಿಶ್ರೇಷ್ಠನು)

ಆಕೆಯ ಒಡಲ ಈ ದುರ್ಗಂಧ

ವ್ರೋಪಂತೆ (ಆಕೆಯ ದೇಹದ ಕೆಟ್ಟ ವಾಸನೆ ಹೋಗುವಂತೆ ಮಾಡಿ) ಯೋಜನಗಂಧಿತ್ವಮನು ಇತ್ತು (ಒಂದು ಯೋಜನ ದೂರದವರೆಗೂ ಇರುವ ಸುವಾಸನೆಯನ್ನು ಕೊಟ್ಟು) ಕಾಂಡಪಟದಂತೆ ಇರ್ಪ ಅನ್ನೆಗಂ ಮಾಡಿ ಮಂಜನು (ಮಂಜನ್ನು ತೆರೆಯ ಹಾಗೆ ಮಾಡಿ), ಅಲಂಪು

ಅಚ್ಚಿಱನೀಯೆ (ಅಕ್ಕರ-ಪ್ರೀತಿ) ಕೂಡುವ ಎಡೆಯೊಳ್ (ಸಂತೋಷವು ಪ್ರೀತಿಯನ್ನುಂಟು ಮಾಡಲು - ಬೆರೆಯುವ ಅಥವಾ ಸಮಾಗಮ ಸಮಯದಲ್ಲಿ) ಜ್ಞಾನಸ್ವರೂಪಂ ಮಹಾಮುನಿಪಂ ಪುಟ್ಟಿದನು (ಜ್ಞಾನದ ಆಕಾರವೇ ಆಗಿರುವ ಮಹಾ ಮುನಿಯು ಹುಟ್ಟಿದನು.) ಅಂತು

ದಿವ್ಯಮುನಿಗಳ್ಗೆ ಏಗೆಯ್ದೊಡಂ ತೀರದೇ(ಶ್ರೇಷ್ಠರಾದ ಋಷಿಗಳಿಗೆ ಏನು ಮಾಡಿದರೂ ತೀರದೇ - ನಡೆಯುತ್ತದೆ - ದೋಷವಿಲ್ಲ!)

ಪದ್ಯ-೬೯:ಅರ್ಥ:ಮ ||

ಪರಾಶರ ಮುನಿಶ್ರೇಷ್ಠನು ಆಕೆಯ ದೇಹದ ಕೆಟ್ಟ ವಾಸನೆ ಹೋಗುವಂತೆ ಮಾಡಿ, ಒಂದು ಯೋಜನ ದೂರದವರೆಗೂ ಇರುವ ಸುವಾಸನೆಯನ್ನು

ಕೊಟ್ಟು ಮಂಜನ್ನು ತೆರೆಯ ಹಾಗೆ ಮಾಡಿ, ಬೆರೆಯುವ ಅಥವಾ ಸಮಾಗಮ ಸಮಯದಲ್ಲಿ ಸಂತೋಷವು ಪ್ರೀತಿಯನ್ನುಂಟು ಮಾಡಲಾಗಿ, ಜ್ಞಾನದ ಆಕಾರವೇ ಆಗಿರುವ ಮಹಾ ಮುನಿಯು ಹುಟ್ಟಿದನು. ಶ್ರೇಷ್ಠರಾದ ಋಷಿಗಳಿಗೆ ಏನು ಮಾಡಿದರೂ ತೀರದೇ -

ನೆಡೆಯುತ್ತದೆ - ದೋಷವಿಲ್ಲ! ಅಲ್ಲವೇ! (ಕವಿಯ ಮಾತು)

ವ|| ಅಂತು ನೀಲಾಂಬುದ ಶ್ಯಾಮನುಂ ಕನಕ ಪಿಂಗಳ ಜಟಾಬಂಧಕಳಾಪನುಂ ದಂಡ ಕಪಾಳ್ವ ಹಸ್ತನುಂ ಕೃಷ್ಣಮೃಗ ತ್ವಕ್ವ್ವ ರಿಧಾನನುಮಾಗೆ ವ್ಯಾಸಭಟ್ಟಾರಕಂ ಪುಟ್ಟುವುದು ಮಾತನನೊಡಗೊಂಡು ಸತ್ಯವತಿಗೆ ಪುನ

ಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದನಿತ್ತಲ್-

ವ.:ಪದವಿಭಾಗ-ಅರ್ಥ:ವ||

ಅಂತು (ಹಾಗೆ) ನೀಲಾಂಬುದ ಶ್ಯಾಮನುಂ (ನೀಲಮೋಡದ ಹಾಗೆ ಕಪ್ಪು ಬಣ್ಣದ) ಕನಕ ಪಿಂಗಳ ಜಟಾಬಂಧಕಳಾಪನುಂ (ಹಳದಿ ಕೆಂಪು ಮಿಶ್ರ ಬಣ್ಣದ ಜಟೆಯ ಗುಚ್ಛಗಳುಳ್ಳ), ದಂಡ ಕಪಾಳ್ವ ಹಸ್ತನುಂ (ಕೈಯಲ್ಲಿ

ಯೋಗದಂಡವನ್ನೂ
ಕಮಂಡಲುವನ್ನೂ
ಹಿಡಿದವನನ್ನು) ಕೃಷ್ಣಮೃಗ
ತ್ವಕ್ಪ್ರಿಧಾನನುಂ ಆಗೆ (ಕಪ್ಪು
ಜಿಂಕೆಯಚರ್ಮದ
ಹೊದಿಕೆಯುಳ್ಳವನೂ ಆದ)
ವ್ಯಾಸಭಟ್ಟಾರಕಂ
ಪುಟ್ಟುವುದುಂ (ಪೂಜ್ಯನಾದ
ವ್ಯಾಸ ಋಷಿಯು
ಹುಟ್ಟುತ್ತಲು,)
ಆತನನೊಡಗೊಂಡು

ಸತ್ಯವತಿಗೆ ಪುನ
ಕನ್ಯಾಭಾವಮಂ ದಯೆಗೆಯ್ದು
ಪರಾಶರಂ ಪೋದನು ಇತ್ತಲ್-
(ಆ ಋಷಿಮಗನನ್ನು
ಕರೆದುಕೊಂಡು ಸತ್ಯವತಿಗೆ
ಪುನಃ ಕನ್ಯಾಭಾವವನ್ನು
ದಯಮಾಡಿ ಕೊಟ್ಟು ಪರಾಶರ
ಮುನಿಯು ಹೊರಟು
ಹೋದನು. ಇತ್ತಲಾಗಿ)
ವ.:ಅರ್ಥ:ವ|| ಹಾಗೆ
ನೀಲಮೋಡದ ಹಾಗೆ ಕಪ್ಪು

ಬಣ್ಣದ ಹಳದಿ ಕೆಂಪು ಮಿಶ್ರ
ಬಣ್ಣದ ಜಟೆಯ ಗುಚ್ಛಗಳುಳ್ಳ,
ಕೈಯಲ್ಲಿ ಯೋಗದಂಡವನ್ನೂ
ಕಮಂಡಲುವನ್ನೂ ಹಿಡಿದ
ಕಪ್ಪು ಜಿಂಕೆಯಚರ್ಮದ
ಹೊದಿಕೆಯುಳ್ಳವನೂ ಆದ
ಪೂಜ್ಯನಾದ ವ್ಯಾಸಋಷಿಯು
ಹುಟ್ಟುತ್ತಲು, ಆ
ಋಷಿಮಗನನ್ನು
ಕರೆದುಕೊಂಡು ಸತ್ಯವತಿಗೆ
ಪುನಃ ಕನ್ಯಾಭಾವವನ್ನು

ದಯಮಾಡಿ ಕೊಟ್ಟು ಪರಾಶರ ಮುನಿಯು ಹೊರಟು ಹೋದನು. ಇತ್ತಲಾಗಿ,

ಶಂತನು ಮತ್ತು ಯೋಜನಗಂಧಿ ಸತ್ಯವತಿ ವಿವಾಹ

ಮ॥

ಮೃಗಯಾವ್ಯಾಜದಿನೊರ್ಮೆ

ಶಂತನು ತೊೞಲ್ತರ್ಪಂ

ಪಳಂಚಲ್ಕೆ ತ

ನ್ತ್ರ ಗಶಾಬಾಕ್ಷಿಯ ಕಂಪು ತಟ್ಟಿ
ಮಧುಪಂಬೋಲ್ ಸೋಲ್ತು
ಕಂಡೋಲ್ದು ನ|
ಲ್ಮೆಗೆ ದಿಬ್ಯಂಬಿಡಿವಂತೆವೋಲ್
ಪಿಡಿದು ನೀನ್ ಬಾ
ಪೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ
ಬೇಡುವೊಡೆ
ನೀವೆಮ್ಮಯ್ಯನಂ ಬೇಡಿರೇ||
೭೦

ಪದ್ಯ ೭೦:ಪದವಿಭಾಗ-ಅರ್ಥ:ಮೃಗಯಾವ್ಯಾಜದಿಂ ಒರ್ಮೆ ಶಂತನು (ಶಂತನು ಮೃಗಬೇಟೆಯ ಕಾರಣದಿಂದ)ತೊಱಲ್ತರ್ಪಂ (ಸುತ್ತಾಡಿ ಬರುತ್ತಿರಲು,)ಪಳಂಚಲ್ಕೆ (ತಾಗು, ಮುಟ್ಟು) ತನ್ಮೃ ಗಶಾಬಾಕ್ಷಿಯ (ಆ ಜಿಂಕೆಮರಿಯಕಣ್ಣಿನಂತಿರುವ ಯೋಜನಗಂಧಿಯ) ಕಂಪು ತಟ್ಟೆ (ಸುವಾಸನೆಯು

ಅವನನ್ನು ಮುಟ್ಟಲು)
ಮಧುಪಂಬೋಲ್ ಸೋಲ್ತು
(ದುಂಬಿಯ ಹಾಗೆ
ಸೋತುಹೋಗಿ) ಕಂಡೋಲ್ದು
(ಕಂಡು ಪ್ರೀತಿಸಿ) ನಲ್ಮೆಗೆ
ದಿಬ್ಯಂಬಿಡಿವಂತೆವೋಲ್
(ಪ್ರೀತಿಗೆ ಪ್ರಾಮಾಣಿಸುವಂತೆ)
ಪಿಡಿದು ನೀನ್ ಬಾ ಪೋಪಂ
ಎಂದಂಗೆ (ಅವಳ ಕೈ ಹಿಡಿದು,
ನೀನು ಬಾ ಹೋಗೋಣ
ಎಂದವನಿಗೆ, ಅವಳು) ಮೆಲ್ಲಗೆ

(ತತ್ ಕನ್ಯಕೆ) ತ್ಕನ್ಯಕೆ ನಾಣ್ಚಿ (ಆ ಕನ್ಯೆ ನಾಚಿಕೊಂಡು)ಬೇಡುವೊಡೆ ನೀವು ಎಮ್ಮ ಅಯ್ಯನಂ ಬೇಡಿರೇ (ನೀವು ನನ್ನನ್ನು ಬಯಸುವುದಾದರೆ ನನ್ನ ತಂದೆಯನ್ನು ಕೇಳಿರಿ ಎಂದಳು.)|| ೭೦||

ಪದ್ಯ ೭೦:ಅರ್ಥ:ಒಂದು ದಿನ ಬೇಟೆಯ ನೆಪದಿಂದ ಸುತ್ತಾಡಿ ಬರುತ್ತಿರುವಾಗ ಶಂತನುವು, ಜಿಂಕೆಯ ಮರಿಯ ಕಣ್ಣಿನಂತೆ

ಕಣ್ಣುಳ್ಳ ಯೋಜನಗಂಧಿಯ ಸುವಾಸನೆಯು ಅವನನ್ನು ಮುಟ್ಟಲಾಗಿ, ಆದರಿಂದ ಅವನು ದುಂಬಿಯ ಹಾಗೆ ಸೋತು ಹೋಗಿ ಅವಳನ್ನು ಪ್ರೀತಿಸಿದನು. ತನ್ನ ಪ್ರೀತಿಗೆ ಸಾಕ್ಷಿಯಾಗಿ ದಿವ್ಯವನ್ನು ಹಿಡಿಯುವ ಹಾಗೆ ಅವಳ ಕೈಹಿಡಿದು ‘ನೀನು ಬಾ ಹೋಗೋಣ’ ಎನ್ನಲು ಆ ಕನ್ಯೆಯು ನಾಚಿಕೊಂಡು

ಮೆಲ್ಲಗೆ, 'ನೀವು ನನ್ನನ್ನು ಬಯಸುವುದಾದರೆ ನಮ್ಮ ತಂದೆಯನ್ನು ಕೇಳಿರಿ,' ಎಂದಳು.

ವಚನ||ಎಂಬುದುಂ ಶಂತನು ಪೊಱಲ್ಗೆ ಮಗುೞ್ದು ವಂದವರಯ್ಯನಪ್ಪ ದಾಶರಾಜನಲ್ಲಿಗೆ ಕೂಸಂ ಬೇಡೆ ಪೆರ್ಗಡೆಗಳನಟ್ಟಿದೊಡೆ ಗಾಂಗೇಯಂ ದೊರೆಯ ಪಿರಿಯ ಮಗನುಂ

ಕ್ರಮಕ್ರಮಾರ್ಹನುಮಿರ್ದಂತೆ ನ್ನ ಮಗಳಂ ಕುಡೆವೆಮ್ಮ ಮಗಳ್ಗೆ ಪುಟ್ಟದಾತಂ ರಾಜ್ಯಕ್ಕೊಡೆಯನುಂ ಪಿರಿಯ ಮಗನುಂ ಕ್ರಮಕ್ಕರ್ಹನುಮಪ್ಪೊಡೆ ಕುಡುವೆಮೆನೆ ತದ್ವ ತ್ತಾಂತಮಂ ಮಂತ್ರಿಗಳಿಂ ಶಂತನು ಕೇಳ್ದು-

ಪದವಿಭಾಗ-ಅರ್ಥ:ವ||

ಎಂಬುದುಂ ಶಂತನು ಪೊಲ್ಗೆ (ನಗರಕ್ಕೆ) ಮಗುಳ್ದು ವಂದು

(ಹಿಂತಿರುಗಿಬಂದು) ಅವರ ಅಯ್ಯನಪ್ಪ (ತಂದೆ) ದಾಶರಾಜನಲ್ಲಿಗೆ ಕೂಸಂ ಬೇಡೆ (ಕನ್ಯೆಯನ್ನು ಮದುವೆ ಮಾಡಿಕೊಡಬೇಕೆಂದು ಕೇಳಲು) ಪೆರ್ಗಡೆಗಳನು ಅಟ್ಟಿದೊಡೆ (ಹೆಗ್ಗಡೆಗಳನ್ನು ಕಳಿಸಿದಾಗ) ಗಾಂಗೇಯಂ (ಭೀಶ್ಮನು) ದೊರೆಯ ಪಿರಿಯ ಮಗನುಂ ಕ್ರಮಕ್ರಮಾರ್ಹನುಂ ಇರ್ದಂತೆ ಎನ್ನ ಮಗಳಂ

ಕುಡೆವೆಮ್ಮ (ಕುಡೆವು - ಕೊಡುವುದಿಲ್ಲ); ಮಗಳ್ಗೆ ಪುಟ್ಟದಾತಂ ರಾಜ್ಯಕ್ಕೆ ಒಡೆಯನುಂ, ಪಿರಿಯ ಮಗನುಂ ಕ್ರಮಕ್ಕೆ ಅರ್ಹನುಂ ಅಪ್ಪೊಡೆ, ಕುಡುವೆಂ ಎನೆ ತದ್ವ ತ್ತಾಂತಮಂ ಮಂತ್ರಿಗಳಿಂ ಶಂತನು ಕೇಳ್ದು-

ವಚನ:ಅರ್ಥ:-ಶಂತನು ಪಟ್ಟಣಕ್ಕೆ ಹಿಂದಿರುಗಿಬಂದು ಅವಳ ತಂದೆಯಾದ

ದಾಶರಾಜನಲ್ಲಿಗೆ ಕನ್ಯೆಯನ್ನು ಬೇಡುವುದಕ್ಕಾಗಿ ಹೆಗ್ಗಡೆಗಳನ್ನು ಕಳುಹಿಸಿದಾಗ. ದಾಶರಾಜನು ಭೀಷ್ಮನು ರಾಜನ ಹಿರಿಯಮಗನು ಕ್ರಮಪ್ರಾಪ್ತವಾದ ಹಕ್ಕುದಾರಿಕೆಗೆ ಅರ್ಹನು. ತನ್ನ ಮಗಳಿಗೆ ಹುಟ್ಟಿದವನು ರಾಜ್ಯಕ್ಕೆ ಒಡೆಯನಾಗುದಾದರೆ ಕೊಡುವೆನು, ಎಂದನು,ಆ

ಸಮಾಚಾರವನ್ನು ಶಂತನು
ಮಂತ್ರಿಗಳಿಂದ ಕೇಳಿ,-

ಮ|| ಕ್ರಮಮಂ ವಿಕ್ರಮದಿಂದೆ
ತಾಳ್ದುವ ಮಗಂ
ಗಾಂಗೇಯನಿರ್ದಂತೆ ನೋ|
ಡ ಮರುಳ್ ಶಂತನು
ತನ್ನದೊಂದು ಸವಿಗಂ
ಸೋಲಕ್ಕಮಿತ್ತಂ ನಿಜ|
ಕ್ರಮಮಂ ತನ್ನಯ
ಬೇಟದಾಕೆಯ

ಮಗಂಗೆಂಬೊಂದಪಖ್ಯಾತಿ

ಲೋ

ಕಮನಾವರ್ತಿಸೆ ಬೞ್ದೊಡೆನ್ನ

ಕುಲಮುಂ ತಕ್ಕೂರ್ಮೆಯುಂ

ಮಾಸದೇ|| ೭೧||

ಪದ್ಯ-೭೧:ಪದವಿಭಾಗ-

ಅರ್ಥ:ಕ್ರಮಮಂ

(ಪರಂಪರಾಗತ

ಪದವಿಯನ್ನು) ವಿಕ್ರಮದಿಂದೆ

ತಾಳ್ದುವ ಮಗಂ

ಗಾಂಗೇಯನು ಇರ್ದಂತೆ

(ಪರಾಕ್ರಮದಿಂದ ರಾಜ್ಯವನ್ನು ತಾಳುವ- ನೋಡಿಕೊಳ್ಳುವ ಮಗ ಗಂಗಾಪುತ್ರ ಭೀಷ್ಮನು ಇರುವಾಗ,) ನೋಡ ಮರುಳ್ ಶಂತನು (ನೋಡೋ ಮರುಳು ಶಂತನು) ತನ್ನದೊಂದು ಸವಿಗಂ ಸೋಲಕ್ಕಂ ಇತ್ತಂ ನಿಜ

ಕ್ರಮಮಂ(ತನ್ನ ಒಂದು ಸವಿ/ಚಪಲಕ್ಕೆ ಮತ್ತು ಮೋಹಕ್ಕೆ ಒಳಗಾಗಿ ತನ್ನ ಸಹಜವಾದ ಪದ್ದತಿಯನ್ನು) ತನ್ನಯ ಬೇಟದಾಕೆಯ ಮಗಂಗೆ ಎಂಬೊಂದು ಅಪಖ್ಯಾತಿ (ತಾನು ಕಾಮಿಸಿದವಳ ಮಗನಿಗೆ (ಇತ್ತಂ) ಕೊಟ್ಟನು,) ಲೋಕಮನಾವರ್ತಿಸೆ (ಎಂಬ ಈ ಮಾತುಎಂಬ ಈ ಅಪಕೀರ್ತಿ ಲೋಕವನ್ನು ವ್ಯಾಪಿಸಿದಾಗ) ಬಟೆಯ್ದೊಡೆ ಎನ್ನ (ಬಾಳಿದರೆ ನನ್ನ) ಕುಲಮುಂ ತಕ್ಕು ಊರ್ಮೆಯುಂ ಮಾಸದೇ(ಕುಲದ ಯಶಸ್ಸೂ, ತಕ್ಕದಾದ ಯೋಗ್ಯತೆಯೂ ಮಾಸದೇ? ಯಶಸ್ಸಿಗೆ ಕುಂದುಂಟಾಗುವುದು).

ಪದ್ಯ-೭೧:ಅರ್ಥ:ಪರಂಪರಾ ಗತ ಪದವಿಯನ್ನು ಪರಾಕ್ರಮದಿಂದ ರಾಜ್ಯವನ್ನು ತಾಳುವ- ನೋಡಿಕೊಳ್ಳುವ ಮಗ ಗಂಗಾಪುತ್ರ ಭೀಷ್ಮನು ಇರುವಾಗ, ನೋಡೋ ಮರುಳು ಶಂತನು ತನ್ನ ಒಂದು ಸವಿ/ಚಪಲಕ್ಕೆ ಮತ್ತು ಮೋಹಕ್ಕೆ ಒಳಗಾಗಿ ತನ್ನ ಸಹಜವಾದ ಪದ್ದತಿಯನ್ನು, ತಾನು ಕಾಮಿಸಿದವಳ

ಮಗನಿಗೆ (ಇತ್ತಂ) ಕೊಟ್ಟನು, ಎಂಬ ಈ ಮಾತು, ಎಂಬ ಈ ಅಪಕೀರ್ತಿ ಲೋಕವನ್ನು ವ್ಯಾಪಿಸಿದಾಗ, ಬಾಳಿದರೆ ನನ್ನ ಕುಲದ ಯಶಸ್ಸೂ, ತಕ್ಕದಾದ ಯೋಗ್ಯತೆಯೂ ಮಾಸದೇ? ತನ್ನ ಮತ್ತು ತನ್ನಕುಲದ ಯಶಸ್ಸಿಗೆ ಕುಂದುಂಟಾಗುವುದು.

ವಚನ|| ಎಂದು ತನ್ನ ನಾಣ್ಗಾಪನೆ ಬಗೆದ (ದು)ತನು

ಪರಿತಾಪಿತಶರೀರನುಮಾಗಿ ಶಂತನು ಕರಂಗೆರ್ದೆಗಿಡೆ ತದ್ವೃತ್ತಾಂತಮೆಲ್ಲಮಂ ಗಾಂಗೇಯನಱಿದು-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ನಾಣ್ಗಾಪನೆ ಬಗೆದು (ಲಜ್ಜೆ ಸಂತಾಪವನ್ನು ತೋರಿಸಿಕೊಳ್ಳದೆ, ಯೋಚಿಸಿ,) ತನುಪರಿತಾಪಿತ ಶರೀರನುಮಾಗಿ ಶಂತನು

ಕರಂಗಿ ಎರ್ದೆ ಕಿಡೆ(ದೇಹದಲ್ಲಿ ಸಂತಾಪವನ್ನು ಹೊಂದಿ ಕರಗಿ ಎದೆಗೆಟ್ಟನು -ಚಿತ್ತದ ಸ್ಥಿರತೆಯನ್ನು ಕಳೆದುಕೊಂಡನು.) ತದ್ವ ತ್ತಾಂತಮೆಲ್ಲಮಂ ಗಾಂಗೇಯನು ಅಱಿದು-(ಈ ಎಲ್ಲಾವಿಚಾರವನ್ನು ಭೀಷ್ಮನು ತಿಳಿದನು.)

ವಚನ:ಅರ್ಥ:ಶಂತನು ಎಂದು ಭಾವಿಸಿ ತನ್ನ ಲಜ್ಜೆ

ಸಂತಾಪವನ್ನು ತೋರಿಸಿಕೊಳ್ಳದೆ, ಯೋಚಿಸಿ, ದೇಹದಲ್ಲಿ ಸಂತಾಪವನ್ನು ಹೊಂದಿ ಕರಗಿ ಎದೆಗೆಟ್ಟನು -ಚಿತ್ತದ ಸ್ಥಿರತೆಯನ್ನು ಕಳೆದುಕೊಂಡನು.ಈ ಎಲ್ಲಾ ವಿಚಾರವನ್ನು ಭೀಷ್ಮನು ತಿಳಿದನು.

ಉ|| ಎನ್ನಯ ದೂಸಱಿಂ

ನೃಪತಿ ಬೇಡಿದುದಂ

ಕುಡಲೊಲ್ಲಂದಂಗಜೋ

ತ್ಪನ್ನ ವಿಮೋಹದಿಂದೞಿದಪಂ
ಪತಿ ಸತ್ತೊಡೆ ಸತ್ತ ಪಾಪಮೆ|
ನ್ನನ್ನರಕಂಗಳೊಳ್
ತಡೆಯದೞ್ದುಗುಮೇವುದು
ರಾಜ್ಯಲಕ್ಷ್ಮಿ ಪೋ
ತನ್ನಯ ತಂದೆಯೆಂದುದನೆ
ಕೊಟ್ಟು ವಿವಾಹಮನಿಂದೆ
ಮಾಡುವೆಂ|| ೭೨||

ಪದ್ಯ-೭೨:ಪದವಿಭಾಗ-
ಅರ್ಥ:ಎನ್ನಯ ದೂಸಱಿಂ
(ನನ್ನ ಕಾರಣದಿಂದ) ನೃಪತಿ

ಬೇಡಿದುದಂ (ರಾಜ ಶಂತನು, ತಾನು ಕೇಳಿದ್ದನ್ನು) ಕುಡಲು ಒಲ್ಲಂದೆ ಅಂಗಜ ಉತ್ಪನ್ನ ವಿಮೋಹದಿಂದ ಅೞಿದಪಂ (ಕೊಡಲು ಒಪ್ಪದ ಕಾರಣ ಕಾಮನಿಂದ ಹುಟ್ಟಿದ ಅತಿಮೋಹದ ಸಂಕಟದಿಂದ ಸಾಯುವನು.) ಪತಿ ಸತ್ತೊಡೆ (ಒಡೆಯನು-ತಂದೆ ಸತ್ತರೆ) ಸತ್ತ ಪಾಪಂ ಎನ್ನಂ ನರಕಂಗಳೊಳ್ ತಡೆಯದೆ ಅೞ್ದುಗುಂ

ಏವುದು ರಾಜ್ಯಲಕ್ಷ್ಮಿ? (ಸತ್ತ ಪಾಪವು ನನ್ನನ್ನು ನರಕದಲ್ಲಿ ತಡೆಯದೆ ಅದ್ದುವುದು- ಮುಳುಗಿಸುತ್ತದೆ. ಈ ರಾಜ್ಯ ಲಕ್ಷ್ಮಿ ಯಾವುದು- ಯಾವ ಲೆಕ್ಕ!) ಪೋ ತನ್ನಯ ತಂದೆಯೆಂದುದನೆ ಕೊಟ್ಟು ವಿವಾಹಮನು ಇಂದೆ ಮಾಡುವೆಂ(ಹೋಗು! ತನ್ನ ತಂದೆ ಹೇಳಿದ್ದನ್ನೇ ಕೊಟ್ಟು ವಿವಾಹವನ್ನು ಇಂದೇ

ಮಾಡುವೆನು, ಎಂದು ಭೀಷ್ಮನು ನಿಶ್ಚಯಿಸಿದನು.)

ಪದ್ಯ-೭೨:ಅರ್ಥ:ನನ್ನ ಕಾರಣದಿಂದ ರಾಜ ಶಂತನು, ತಾನು ಕೇಳಿದ್ದನ್ನು ದಾಶರಾಜನು ಕೊಡಲು ಒಪ್ಪದ ಕಾರಣ ಕಾಮನಿಂದ ಹುಟ್ಟಿದ ಅತಿಮೋಹದ ಸಂಕಟದಿಂದ ಸಾಯುವನು. ಒಡೆಯನು-ತಂದೆ ಸತ್ತರೆ, ಸತ್ತ ಪಾಪವು ನನ್ನನ್ನು ನರಕದಲ್ಲಿ

ತಡೆಯದೆ ಅದ್ದುವುದು-ಮುಳುಗಿಸುತ್ತದೆ. ಈ ರಾಜ್ಯ ಲಕ್ಷ್ಮಿ ಯಾವುದು- ಯಾವ ಲೆಕ್ಕ! (ಹೋಗಲಿ!?) ಹೋಗು! ತನ್ನ ತಂದೆ ಹೇಳಿದ್ದನ್ನೇ ಕೊಟ್ಟು ವಿವಾಹವನ್ನು ಇಂದೇ ಮಾಡುವೆನು, ಎಂದು ಭೀಷ್ಮನು ನಿಶ್ಚಯಿಸಿದನು.

ವಚನ|| ಎಂದು ನಿಶ್ಚಯಿಸಿ ಗಾಂಗೇಯಂ ದಾಶರಾಜನಲ್ಲಿಗೆವಂದಾತನ

ಮನದ ತೊಡರ್ಪಂ ಪಿಂಗೆ ನುಡಿದು-

ವಚನ:ಪದವಿಭಾಗ-

ಅರ್ಥ:ಎಂದು ನಿಶ್ಚಯಿಸಿ ಗಾಂಗೇಯಂ ದಾಶರಾಜನಲ್ಲಿಗೆ ವಂದು ಆತನ ಮನದ ತೊಡರ್ಪಂ ತಡಕು -ಸಿಕ್ಕನ್ನು, ಪಿಂಗೆ (ಹಿಂಗೆ - ಹೋಗುವಹಾಗೆ)ನುಡಿದು-

ವಚನ:ಅರ್ಥ:ತಂದೆಗೆ ಮದುವೆ ಮಾಡಬೇಕು, ಎಂದು

ನಿಶ್ಚಯಿಸಿ ಗಾಂಗೇಯನು ದಾಶರಾಜನ ಬಳಿಗೆ ಬಂದು ಆತನ ಮನಸ್ಸಿನಲ್ಲಿರುವ ಸಂಶಯದ ಸಿಕ್ಕು ಹೋಗುವಂತೆ, ಹೇಳಿದನು:-

ಉ॥ ನೀಡಿರದೀವುದೀ ನಿಜ ತನೂಜೆಯನೀ ವಧುಗಾದ ಪುತ್ರರೊಳ್
ಕೂಡುಗೆ ರಾಜ್ಯಲಕ್ಷ್ಮಿ ಮೊರೆಯಲ್ತೆನಗಂತದು ಪೆಂಡಿರೆಂಬರೊಳ್|

ಕೂಡುವನಲ್ಲೆನಿಂದು
ಮೊದಲಾಗಿರೆ ನಿಕ್ಕುವಮೆಂದು
ರಾಗದಿಂದ
ಕೂಡಿದನುಯ್ದು ಸತ್ಯವತಿಯಂ
ಸತಿಯಂ ಪತಿಯೊಳ್
ನದೀಸುತಂ॥ ೭೩ ॥

ಪದ್ಯ-೭೩:ಪದವಿಭಾಗ-ಅರ್ಥ:ನೀಡಿರದೆ (ತಡವಿಲ್ಲದೆ) ಈವುದು ಈ ನಿಜ ತನೂಜೆಯನು (ನನ್ನ ತಂದೆಗೆ ಈ ನಿನ್ನ ಮಗಳನ್ನು ಕೂಡಲೆ

ಕೊಡುವುದು.) ಈ ವಧುಗೆ
ಆದ ಪುತ್ರರೊಳ್ ಕೊಡುಗೆ
ರಾಜ್ಯಲಕ್ಷ್ಮಿ (ಈ ಕನ್ಯೆಗೆ
ಹುಟ್ಟಿದ ಮಕ್ಕಳಿಗೆ ರಾಜ್ಯವು
ಸೇರಲಿ.), ಮೊರೆಯಲ್ತು ಎನಗೆ
ಅಂತು ಅದು(ಅಂತು-ಹಾಗೆ
ನನಗೆ ರಾಜ್ಯ ಸಂಬಂಧವಿಲ್ಲ.)
ಪೆಂಡಿರೆಂಬರೊಳ್
ಕೂಡುವನಲ್ಲೆಂ ಇಂದು
ಮೊದಲಾಗಿರೆ ನಿಕ್ಕುವಂ
ಎಂದು(ಇಂದು ಮೊದಲಾಗಿ

ಹೆಂಗಸು ಎಂಬುವರಲ್ಲಿ
ಸೇರುವವನಲ್ಲ; ಇದು ನಿಶ್ಚಯ
-ಎಂದು ಪ್ರತಿಜ್ಞೆ ಮಾಡಿ)
ರಾಗದಿಂದ ಕೂಡಿದಂ ಉಯ್ದು
ಸತ್ಯವತಿಯಂ ಸತಿಯಂ
ಪತಿಯೊಳ್
ನದೀಸುತಂ(ಸಂತೋಷದಿಂದ
ಭೀಷ್ಮನು ದಾಸರಾಜನ
ಮಗಳು
ಯೋಜನಗಂಧಿಯಾದ
ಸತ್ಯವತಿ ಎಂಬ ಸಾಧ್ವಿಯನ್ನು

ಕರೆದುಕೊಂಡು ಹೋಗಿ, ತನ್ನ ತಂದೆಯೂ ಮತ್ತು ರಾಜನೂ ಆದ ಶಂತನುವಿಗೆ ಕೂಡಿದನು- ವಿವಾಹ ಮಾಡಿದನು).

ಪದ್ಯ-೭೩:ಅರ್ಥ:ನನ್ನ ತಂದೆಗೆ ಈ ನಿನ್ನ ಮಗಳನ್ನು ಕೊಡುವುದು. ಈ ಕನ್ಯೆಗೆ ಹುಟ್ಟಿದ ಮಕ್ಕಳಿಗೆ ರಾಜ್ಯವು ಸೇರಲಿ. ಹಾಗೆಯೇ ನನಗೆ ಈ ರಾಜ್ಯ ಸಂಬಂಧವಿಲ್ಲ. ಇಂದು ಮೊದಲಾಗಿ ಹೆಂಗಸು

ಎಂಬುವರಲ್ಲಿ ಸೇರುವವನಲ್ಲ;
ಇದು ನಿಶ್ಚಯ -ಎಂದು ಪ್ರತಿಜ್ಞೆ
ಮಾಡಿ, ಸಂತೋಷದಿಂದ
ಭೀಷ್ಮನು ದಾಸರಾಜನ
ಮಗಳು
ಯೋಜನಗಂಧಿಯಾದ
ಸತ್ಯವತಿ ಎಂಬ ಸಾಧ್ವಿಯನ್ನು
ಕರೆದುಕೊಂಡು ಹೋಗಿ, ತನ್ನ
ತಂದೆಯೂ ಮತ್ತು ರಾಜನೂ
ಆದ ಶಂತನುವಿಗೆ ವಿವಾಹ
ಮಾಡಿದನು.

ವಚನ|| ಅಂತು ಶಂತನುವುಂ
ಸತ್ಯವತಿಯುಮನ್ಯೋನ್ಯಾಸಕ್ತ
ಚಿತ್ತರಾಗಿ ಕೆಲವು
ಕಾಲಮಿರ್ಪನ್ನೆಗಮವರ
ಬೇಟದ ಕಂದಲ್ಗಳಂತೆ
ಚಿತ್ರಾಂಗದ
ವಿಚಿತ್ರವೀರ್ಯರೆಂಬ ಮಕ್ಕಳ್
ಪುಟ್ಟಿ ಮಹಾಪ್ರಚಂಡರುಂ
ಪ್ರತಾಪಿಗಳುಮಾಗಿ
ಬಳೆಯುತ್ತಿರ್ಪನ್ನೆಗಂ ಶಂತನು
ಪರಲೋಕ ಪ್ರಾಪ್ತನಾದೊಡೆ

ಗಾಂಗೇಯಂ ತದುಚಿತ
ಪರಲೋಕ ಕ್ರಿಯೆಗಳಂ ಮಾಡಿ
ಮುನ್ನೆ ತನ್ನ ನುಡಿದ
ನುಡಿವಳಿಯೆಂಬ
ಪ್ರಾಸಾದಕ್ಕಧಿಷ್ಠಾನಂಗಟ್ಟುವಂ
ತೆ ಚಿತ್ರಾಂಗದಂಗೆ ಪಟ್ಟಮಂ
ಕಟ್ಟಿ
ರಾಜ್ಯಂಗೆಯಿಸುತ್ತುಮಿರ್ಪನ್ನೆಗ
ಮೊರ್ವ ಗಂಧರ್ವನೊಳೆ
ಚಿತ್ರಾಂಗದಂ
ದ್ವಂದ್ವಯುದ್ಧಮಂ ಪೊಣರ್ಚೆ

ಕರುಕ್ಷೇತ್ರಮುಂ ಕಳಂಬೇೞ್ದು ಕಾದಿ ಸತ್ತೊಡೆ ವಿಚಿತ್ರವೀರ್ಯನಂ ಗಾಂಗೇಯಂ ಧರಾಭಾರ ಧುರಂಧರನಂ ಮಾಡಿ-

ವಚನ:ಪದವಿಭಾಗ-

ಅರ್ಥ:|| ಅಂತು ಶಂತನುವುಂ ಸತ್ಯವತಿಯುಂ ಅನ್ಯೋನ್ಯ ಆಸಕ್ತಚಿತ್ತರಾಗಿ ಕೆಲವು ಕಾಲಂ ಇರ್ಪ ಅನ್ನೆಗಂ ಅವರ ಬೇಟದ ಕಂದಲ್ಗಳಂತೆ (ಪ್ರೀತಿಯ

ಮೊಳಕೆ ಅಥವಾ

ಮೊಳಕೆಗಳಂತೆ) ಚಿತ್ರಾಂಗದ

ವಿಚಿತ್ತ್ರವೀರ್ಯರೆಂಬ ಮಕ್ಕಳ್

ಪುಟ್ಟಿ ಮಹಾಪ್ರಚಂಡರುಂ

ಪ್ರತಾಪಿಗಳುಮಾಗಿ

ಬಳೆಯುತ್ತಿರ್ಪ ಅನ್ನೆಗಂ

ಶಂತನು ಪರಲೋಕ

ಪ್ರಾಪ್ತನಾದೊಡೆ ಗಾಂಗೇಯಂ

ತದು ಉಚಿತ ಪರಲೋಕ

ಕ್ರಿಯೆಗಳಂ ಮಾಡಿ ಮುನ್ನೆ ತನ್ನ

ನುಡಿದ ನುಡಿವಳಿಯೆಂಬ

ಪ್ರಾಸಾದಕ್ಕೆ
ಅಧಿಷ್ಠಾನಂಗೆಟ್ಟುವಂತೆ
ಚಿತ್ರಾಂಗದಂಗೆ ಪಟ್ಟಮಂ ಕಟ್ಟಿ
ರಾಜ್ಯಂಗೆಯಿಸುತ್ತುಂ ಇರ್ಪ
ಅನ್ನೆಗಂ ಓರ್ವ
ಗಂಧರ್ವನೊಳೆ ಚಿತ್ರಾಂಗದಂ
ದ್ವಂದ್ವಯುದ್ಧಮಂ ಪೊಣರ್ಚೆ
ಕರುಕ್ಷೇತ್ರಮಂ ಕಳಂಬೇೞ್ದು
(ಯುದ್ಧರಂಗವಾಗಿ
ಮಾಡಿಕೊಂಡು)ಕಾದಿ ಸತ್ತೊಡೆ
ವಿಚಿತ್ರವೀರ್ಯನಂ

ಗಾಂಗೇಯಂ ಧರಾಭಾರ
ಧುರಂಧರನಂ ಮಾಡಿ-
ವಚನ:ಅರ್ಥ:ಹೀಗೆ
ಶಂತನುವೂ ಸತ್ಯವತಿಯೂ
ಅನ್ಯೋನ್ಯ
ಪ್ರೀತಿಯುಳ್ಳವರಾಗಿ ಕೆಲವು
ಕಾಲ ಇರುವಾಗ ಅವರ
ಪ್ರೇಮದ ಮೊಳಕೆಗಳಂತೆ)
ಚಿತ್ರಾಂಗದ
ವಿಚ್ತಿತ್ರವೀರ್ಯರೆಂಬ ಮಕ್ಕಳು
ಹುಟ್ಟಿ ಮಹಾಪ್ರಚಂಡರೂ,

ಪ್ರತಾಪಿಗಳೂ ಆಗಿ ಬಳೆಯುತ್ತಿದ್ದ ಸಮಯದಲ್ಲಿ, ಶಂತನು ಪರಲೋಕ ವಾಸಿಯಾದನು. ಗಾಂಗೇಯನು ಅದಕ್ಕೆ ಉಚಿತ ಪರಲೋಕ ಕ್ರಿಯೆಗಳನ್ನು ಮಾಡಿ ಮುಂಚೆ ತಾನು ನುಡಿದ ಪ್ರತಿಜ್ಞೆಯೆಂಬ ಕಟ್ಟಡಕ್ಕೆ ತಳಪಾಯ ಕಟ್ಟುವಂತೆ ಚಿತ್ರಾಂಗದನಿಗೆ ಪಟ್ಟವನ್ನು ಕಟ್ಟಿ ರಾಜ್ಯಭಾರವನ್ನು

ಮಾಡಿಸುತ್ತಿದ್ದನು. ಹಾಗೆ ಇದ್ದ ಸಮಯದಲ್ಲಿ ಒಬ್ಬ ಗಂಧರ್ವನ ಜೊತೆ ಚಿತ್ರಾಂಗದನು ದ್ವಂದ್ವಯುದ್ಧವನ್ನು ಹೂಡಿ ಕರುಕ್ಷೇತ್ರವನ್ನು ಕಣವಾಗಿ ಮಾಡಿ ಕದನ ಮಾಡಿದಾಗ ಚಿತ್ರಾಂಗಧನು ಸತ್ತನು. ಆಗ ವಿಚಿತ್ರವೀರ್ಯನನ್ನು ಗಾಂಗೇಯನು ರಾಜ್ಯಭಾರ

ಧುರಂಧರನನ್ನಾಗಿ ಮಾಡಿದನು (ರಾಜ್ಯದ ಪಟ್ಟಕಟ್ಟಿದನು).-

ವಿಚಿತ್ರವೀರ್ಯನಿಗೆ ಅಂಬಿಕೆ ಅಂಬಾಲಿಕೆಯರೊಡನೆ ವಿವಾಹ

ಮ|| ಸಕಳ ಕ್ಷತ್ರಿಯ ಮೋಹದಿಂ ನಿಜಭುಜ ಪ್ರಾರಂಭದಿಂ ಪೋಗಿ ತಾ

ಗಿ ಕೆಲರ್ ನೊಂದೊಡೆ ಕಾದಿ
ರಾಜಸುತರೊಳ್
ತನ್ನಂಕದೊಂದುಗ್ರಸಾ|
ಯಕದಿಂ ನಾಯಕರಂ
ಪಡಲ್ವಡಿಸುತುಂ ತಾಂ
ತಂದನಂದಂಬೆಯಂ
ಬಿಕೆಯಂಬಾಲೆಯರೆಂಬ
ಬಾಲೆಯ ರನೇಂ ಭೀಷ್ಮಂ
ಯಶೋಭಾಗಿಯೋ|| ೭೪ ||

ಪದ್ಯ-೭೪:ಪದವಿಭಾಗ-

ಅರ್ಥ:ಸಕಳ ಕ್ಷತ್ರಿಯ

ಮೋಹದಿಂ
(ಎಲ್ಲಾಕ್ಷತ್ರಿಯರಿಗೂ ಇರುವ
ಸಹಜವಾದ ಆಸೆಯಿಂದ)
ನಿಜಭುಜ ಪ್ರಾರಂಭದಿಂ
ಪೋಗಿ ತಾಗಿ(ತನ್ನ
ಭುಜಬಲಪರಾಕ್ರಮದಿಂದ
ಕಾಶೀರಾಜ್ಯಕ್ಕೆ ಹೋಗಿ,
ಯುದ್ಧಮಾಡಿ) ಕೆಲರ್
ನೊಂದೊಡೆ ಕಾದಿ
ರಾಜಸುತರೊಳ್ ತನ್ನ ಅಂಕದ
ಒಂದು ಉಗ್ರಸಾಯಕದಿಂ

ನಾಯಕರಂ
ಪಡಲ್ವಡಿಸುತುಂ(ಕಾಶಿರಾಜನ
ಕಡೆ ಕಾಶೀರಾಜನ ಮಕ್ಕಳು
ಕೆಲವರು ನೋವು ಹೊಂದುವ
ಹಾಗೆ ತನ್ನ ಪ್ರಬಲ
ಬಾಣದಿಂದ, ನಾಯಕರನ್ನು
ಹೆದರಿಸುತ್ತಾ ಚದುರಿಸುತ್ತ,)
ತಾಂ ತಂದನು ಅಂದು ಅಂಬೆ
ಅಂಬಿಕೆ ಅಂಬಾಲೆಯರೆಂಬ
ಬಾಲೆಯರನು ಏಂ ಭೀಷ್ಮಂ
ಯಶೋಭಾಗಿಯೋ(ತಾನು

ಅಂಬೆಅಂಬಿಕೆ
ಅಂಬಾಲಿಕೆಯರೆಂಬ
ಕಾಶಿರಾಜನ ಹೆಣ್ಣುಮಕ್ಕಳನ್ನು
ಅಪಹರಿಸಿಕೊಂಡು ತಂದನು.
ಭಿಷ್ಮನು ಏನು
ಕೀರ್ತಿಭಾಜನನೋ!)

ಪದ್ಯ-೭೪:ಅರ್ಥ:ಎಲ್ಲಾ
ಕ್ಷತ್ರಿಯರಿಗೂ ಇರುವ
ಸಹಜವಾದ ಆಸೆಯಿಂದ, ತನ್ನ
ಭುಜಬಲ ಪರಾಕ್ರಮದಿಂದ
ಕಾಶೀರಾಜ್ಯಕ್ಕೆ ಹೋಗಿ,

ಯುದ್ಧಮಾಡಿ ಕಾಶೀರಾಜನ ಮಕ್ಕಳು ಕೆಲವರು ನೋವು ಹೊಂದುವ ಹಾಗೆ ಮಾಡಿ, ತನ್ನ ಪ್ರಬಲ ಬಾಣದಿಂದ, ನಾಯಕರನ್ನು ಹೆದರಿಸುತ್ತಾ ಚದುರಿಸುತ್ತ, ತಾನು ಅಂಬೆ ಅಂಬಿಕೆ ಅಂಬಾಲಿಕೆಯರೆಂಬ ಕಾಶಿರಾಜನ ಹೆಣ್ಣುಮಕ್ಕಳನ್ನು ಅಪಹರಿಸಿಕೊಂಡು ತಂದನು. ಭಿಷ್ಮನು ಏನು ಕೀರ್ತಿಭಾಜನನೋ!)

ವಚನ| ಅಂತು ತಂದು ತನ್ನ
ತಮ್ಮಂ ವಿಚಿತ್ರವೀರ್ಯಂಗಾ
ಮೂವರ್ಕನ್ನೆಯರಂ ಪಾಣಿ
ಗ್ರಹಣಂಗೆಯ್ವಾಗಳೆಲ್ಲರಿಂ
ಪಿರಿಯಾಕೆ ನಿನ್ನನಲ್ಲದೆ
ಪೆಱರನೊಲ್ಲೆನೆಂದಿರ್ದೊಡೆ
ಮತ್ತಿನಿರ್ವರುಮಂ
ಮದುವೆಯಂ ಮಾಡಿ
ಗಾಂಗೇಯನಂಬೆಯನಿಂತೆಂ
ದಂ-

ವಚನ:ಪದವಿಭಾಗ-ಅರ್ಥ:ಅಂತು ತಂದು ತನ್ನ ತಮ್ಮಂ ವಿಚಿತ್ರವೀರ್ಯಂಗೆ ಆ ಮೂವರ್ ಕನ್ನೆಯರಂ ಪಾಣಿ ಗ್ರಹಣಂ ಗೆಯ್ವಾಗಳು ಎಲ್ಲರಿಂ ಪಿರಿಯಾಕೆ ನಿನ್ನನು ಅಲ್ಲದೆ ಪೆಱರನು ಒಲ್ಲೆನು ಎಂದಿರ್ದೊಡೆ ಮತ್ತೆ ಇನಿರ್ವರುಮಂ ಮದುವೆಯಂ ಮಾಡಿ ಗಾಂಗೇಯನು ಅಂಬೆಯನು ಇಂತು ಎಂದಂ-

ವಚನ:ಅರ್ಥ:ಹೀಗೆ ಬಾಲೆಯರನ್ನು ತಂದು ತನ್ನ ತಮ್ಮ ವಿಚಿತ್ರವೀರ್ಯನಿಗೆ ಆ ಮೂವರು ಕನ್ನೆಯರನ್ನು ಪಾಣಿಗ್ರಹಣವನ್ನು ಮಾಡುವಾಗ ಎಲ್ಲರಿಂಗಿಂತ ಹಿರಿಯವಳು ಅಂಬೆ, ಗೆದ್ದವನು ನೀನು ಅದರಿಂದ ನಿನ್ನನು ಅಲ್ಲದೆ ಬೇರೆಯವರನ್ನು ಮದುವೆಯಾಗುವುದಿಲ್ಲ

ಎಂದು ಹೇಳಲು, ಮತ್ತೆ ಇನ್ನಿಬ್ಬರನ್ನು ತಮ್ಮನಿಗೆ ಮದುವೆಯನ್ನು ಮಾಡಿ ಗಾಂಗೇಯನು ಅಂಬೆಯನ್ನು ಕುರಿತು ಹೀಗೆ ಹೇಳಿದನು.-

ಉ|| ಅತ್ತ
ಸುರೇಶ್ವರಾವಸಥಮಿತ್ತ
ಮಹೀತಳಮುತ್ತ ಪನ್ನಗೋ
ದಾತ್ತ ಸಮಸ್ತ
ಲೋಕಮಱಿದಂತಿರೆ
ಪೂರ್ಣ್ದೆನಗಾಗದಂಗಜೋ|

ತೃಪ್ತಿ ಸುಖಕ್ಕೆ ಸೋಲಲಟೆಗುಂ ಪುರುಷವ್ರತವೀಗಳಳಬ್ದೆಯೆಂ| ದತ್ತಿಗೆಯೆಂಬ ಮಾತನೆನಗೇನೆನಲಕ್ಕುಮೊ ಪಂಕಜಾನನೇ|| ೭೫

ಪದ್ಯ-೭೫:ಪದವಿಭಾಗ-ಅರ್ಥ:ಅತ್ತ ಸುರೇಶ್ವರ ಆವಸಥಂ (ಅತ್ತಲಾಗಿ ಇಂದ್ರನ ಸ್ವರ್ಗ) ಇತ್ತ ಮಹೀತಳಂ ಉತ್ತ (ಈಕಡೆ ಭೂಲೋಕ, ಮಧ್ಯೆ) ಪನ್ನಗೋದಾತ್ತ (ಹಾವಿನ

ಪಾತಾಳ) ಸಮಸ್ತ ಲೋಕಂ
ಅಱಿದಂತಿರೆ ಪೂಣ್ದ
(ಪಾತಾಳವೇ ಮೊದಲಾದ
ಸಮಸ್ತ ಲೋಕವೂ
ತಿಳಿಯುವ ಹಾಗೆ
ಪ್ರತಿಜ್ಞೆಮಾಡಿದ) ಎನಗೆ
ಆಗದು ಅಂಗಜ (ಕಾಮ)
ಉತ್ಪತ್ತಿ ಸುಖಕ್ಕೆ ಸೋಲಲು
(ನನಗೆ ಕಾಮನಿಂದಾದ
ಸುಖಕ್ಕೆ ಸೋಲಲು ಆಗದು,)
ಅಱಿಗುಂ ಪುರುಷವ್ರತಂ,

ಈಗಳು ಅಬ್ದೆಯೆಂದು
ಅತ್ತಿಗೆಯೆಂಬ
(ಪ್ರೀತಿಯವಳು) ಮಾತನು
ಎನಗೆ ಏನು ಎನಲು ಅಕ್ಕುಮೊ
ಪಂಕಜಾನನೇ (ನನ್ನ
ಬ್ರಹ್ಮಚರ್ಯ ವ್ರತವು ಅಳಿಗು
- ನಷ್ಟವಾಗುವುದು,. ಈಗ
ತಾಯಿಯೆಂದು ಕರೆದು
ಆಮೇಲೆ ಪ್ರೀತಿಸಿದವಳು
ನಲ್ಲಳು ಎನ್ನಲು ಎಲೆ
ಪಂಕಜಾನನೇ, ಆಗುವುದೋ-

ಇಲ್ಲ. ನಿನ್ನನ್ನು ಮದುವೆಯಾಗಲಾರೆ.)

ಪದ್ಯ-೭೫:ಅರ್ಥ:ಅಂಬೆಯನ್ನು ಕುರಿತು,'ಅತ್ತಲಾಗಿ ಇಂದ್ರನ ಸ್ವರ್ಗ, ಈ ಕಡೆ ಭೂಲೋಕ, ಹಾವಿನ ಪಾತಾಳ, ಪಾತಾಳವೇ ಮೊದಲಾದ ಸಮಸ್ತ ಲೋಕವೂ ತಿಳಿಯುವ ಹಾಗೆ ಪ್ರತಿಜ್ಞೆಮಾಡಿದ ನನಗೆ ಕಾಮನಿಂದಾದ ಸುಖಕ್ಕೆ ಸೋಲಲು ಆಗದು, ನನ್ನ

ಬ್ರಹ್ಮಚರ್ಯ ವ್ರತವು ಅಳಿಗು

- ನಷ್ಟವಾಗುವುದು. ಈಗ

ತಾಯಿಯೆಂದು ಕರೆದು

ಆಮೇಲೆ ಪ್ರೀತಿಸಿದವಳು -

ನಲ್ಲಳು ಎನ್ನಲು, ಎಲೆ

ಪಂಕಜಾನನೇ, ಆಗುವುದೋ-

ಇಲ್ಲ. ನಿನ್ನನ್ನು

ಮದುವೆಯಾಗಲಾರೆ,'

ಎಂದನು ಭೀಷ್ಮ.

ಅಂಬೆಯ ತೊಳಲಾಟ

ವ|| ಎಂದು ನುಡಿದ ಗಾಂಗೇಯನ ನುಡಿಯೋಳವಸರಮಂ ಪಸರಮಂ ಪಡೆಯದೆ ತನಗೆ ಕಿಱಿಯಂದುಂಗುರವಿಟ್ಟ ಸಾಲ್ವಲನೆಂಬರಸನಲ್ಲಿಗೆ ಪೋಗಿ ನೀನೆನ್ನಂ ಕೈಕೊಳವೇೞ್ಕುಮೆಂದೊಡಾತ ನಿಂತೆಂದಂ-

ವಚನ:ಪದವಿಭಾಗ-ಅರ್ಥ:

[ಎಂದು ನುಡಿದ ಗಾಂಗೇಯನ ನುಡಿಯೋಳು ಅವಸರಮಂ (ಅವಕಾಶವನ್ನು) ಪಸರಮಂ (ಸಲಿಗೆಯನ್ನು- ಇಷ್ಟವನ್ನು) ಪಡೆಯದೆ, ತನಗೆ ಕಿಱಿಯಂದು ಉಂಗುರವಿಟ್ಟ ಸಾಲ್ವಲನೆಂಬ ಅರಸನಲ್ಲಿಗೆ ಪೋಗಿ ನೀನೆನ್ನಂ ಕೈಕೊಳವೇೞ್ಕುಂ (ಅಂಗೀಕಾರ

ಮಾಡಬೇಕು)ಎಂದೊಡೆ
ಆತನು ಇಂತೆಂದಂ]
ವಚನ:ಅರ್ಥ:=[ಎಂದು
ಹೇಳಿದ ಭೀಷ್ಮನ ಮಾತಿನಲ್ಲಿ
ಅಂಬೆಯು ಯಾವ
ಇಷ್ಟಾರ್ಥವನ್ನು
ಪಡೆಯಲಾರದೆ ತನ್ನ
ಬಾಲ್ಯದಲ್ಲಿ
ಮದುವೆಯಾಗುತ್ತೇನೆಂದು
ಉಂಗುರವನ್ನು ತೊಡಿಸಿದ್ದ
ಸಾಲ್ವಲನೆಂಬ ರಾಜನಲ್ಲಿಗೆ

ಹೋಗಿ ನೀನು ನನ್ನನ್ನು ಅಂಗೀಕಾರ ಮಾಡಬೇಕು ಎನ್ನಲು ಆತನು ಹೀಗೆಂದು ಹೇಳಿದನು.

ಕಂ||

ಬಂಡಣದೊಳೆನ್ನನೋಡಿಸಿ
ಕೊಂಡುಯ್ದಂ ನಿನ್ನನಾ
ಸರಿತ್ಸುತನಾನುಂ|
ಪೆಂಡತಿಯೆನಾದೆನದಱಿಂ
ಪೆಂಡಿರ್ ಪೆಂಡಿರೊಳದೆಂತು
ಬೆರಸುವರಬಲೇ|| ೨೬||

ಪದ್ಯ-೭೬:ಪದವಿಭಾಗ-ಅರ್ಥ:ಬಂಡಣದೊಳು (ಯುದ್ಧದಲ್ಲಿ)ಎನ್ನನು ಓಡಿಸಿ, ಕೊಂಡು ಒಯ್ದಂ ನಿನ್ನನು ಆ ಸರಿತ್ಸುತನು ಆನುಂ ಪೆಂಡತಿಯೆನಾದೆನು ಅದಱಿಂ ಪೆಂಡಿರ್ ಪೆಂಡಿರೊಳ್ ಅದೆಂತು ಬೆರಸುವರು ಅಬಲೇ|

ಪದ್ಯ-೭೬:ಅರ್ಥ:ಯುದ್ಧದಲ್ಲಿ ನನ್ನನ್ನು ಸೋಲಿಸಿ ಓಡಿಸಿ,

ನಿನ್ನನ್ನು ಅಪಹರಿಸಿಕೊಂಡು ಹೋದನು ಆ ಗಂಗೆಯಮಗನು. ಹಾಗಾಗಿ ನಾನೂ ಹೆಂಗಸಾದೆನು. ಆದರಿಂದ ಹೆಂಗಸರು ಹೆಂಗಸರನ್ನು ಅದು ಹೇಗೆ ಮದುವೆಯಾಗುವರು ಅಬಲೇ? ನಿನ್ನನ್ನು ಮದುವೆಯಾಗಲು ಸಾಧ್ಯವಿಲ್ಲ, ಎಂದನು ಸಾಲ್ವ.

ವ|| ಎಂದು ಸಾಲ್ವಲಂ ತನ್ನ
ಪರಿಭವದೊಳಾದ ಸಿಗ್ಗಂ
ಸಾಲ್ವಿನಮುಂಟುಮಾಡಿದೊ
ಡಾತನ
ಮನಮನೊಡಂಬಡಿಸಲಾಱ
ದೆ ಪರಶುರಾಮನಲ್ಲಿಗೆ ಪೋಗಿ
ಭೀಷ್ಮನೆನ್ನ ಸ್ವಯಂವರದೊಳ್
ನೆರೆದರಸುಮಕ್ಕಳೆಲ್ಲರುಮ
ನೋಡಿಸಿ ಕೊಂಡು ಬಂದೆನ್ನ
ಂ ಮದುವೆಯಂ ನಿಲಲೊಲ್ಲ
ದ್ವ ಟ್ಟಿ ಕಳೆದೊಡೆನ್ನ

ದಿವಸಮುಂ

ಜವ್ವನಮುಮಡವಿಯೊಳಗೆ

ಪೂತ ಪೂವಿನಂತೆ

ಕಿಡಲೀಯದಾತನನೆನ್ನಂ

ಪಾಣಿಗ್ರಹಣಂ ಗೆಯ್ವಂತು

ಮಾಡು ಮಾಡಲಾಱದೊಡೆ

ಕಿಚ್ಚಂ ದಯೆಗೆಯ್ವುದೆಂದಂಬೆ

ಕಣ್ಣ ನೀರಂ ತುಂಬೆ-

ವಚನ:ಪದವಿಭಾಗ-

ಅರ್ಥ:ಎಂದು ಸಾಲ್ವ ಅಲಂ

ತನ್ನ ಪರಿಭವದೊಳು

(ಸೋಲು) ಆದ ಸಿಗ್ಗಂ
ಸಾಲ್ವಿನಂ (ಸಾಲುವಷ್ಟು)
ಉಂಟುಮಾಡಿದೊಡೆ ಆತನ
ಮನಮನು
ಒಡಂಬಡಿಸಲಾಱಿದೆ
ಪರಶುರಾಮನಲ್ಲಿಗೆ ಪೋಗಿ
ಭೀಷ್ಮನು ಎನ್ನ
ಸ್ವಯಂವರದೊಳ್ ನೆರೆದ
ಅರಸುಮಕ್ಕಳು ಎಲ್ಲರುಮನು
ಓಡಿಸಿ ಕೊಂಡು ಬಂದು ಎನ್ನ
ಮದುವೆಯಂ ನಿಲಲೊಲ್ಲದೆ

(ವ)ಅಟ್ಟಿ ಕಳೆದೊಡೆ ಎನ್ನ ದೆವಸಮುಂ ಜವ್ವನಮುಂ ಅಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದೆ ಆತನನು ಎನ್ನಂ ಪಾಣಿಗ್ರಹಣಂ ಗೆಯ್ವಂತು (ಕಯ್ಯನ್ನು ಹಿಡಿಯುವ) ಮಾಡು; ಮಾಡಲಾಱದೊಡೆ ಕಿಚ್ಚಂ ದಯೆಗೆಯ್ವುದೆಂದು ಅಂಬೆ ಕಣ್ಣ ನೀರಂ ತುಂಬೆ-

ವಚನ:ಅರ್ಥ:ಸಾಲ್ವನು ಅಂಬೆಯನ್ನು ವಿವಾಹವಾಗಲಾರೆ ಎಂದು ತನಗೆ ಸೋಲಿನಲ್ಲಿ ಉಂಟಾದ ನಾಚಿಕೆಯನ್ನು ಸಾಕಾಗುವಷ್ಟು ಪ್ರದರ್ಶಿಸಲು. ಅವನ ಮನಸ್ಸನ್ನು ಒಪ್ಪಿಸಲಾರದೆ ಅಂಬೆ ಪರಶುರಾಮನ ಹತ್ತಿರಕ್ಕೆ ಹೋಗಿ ಭೀಷ್ಮನು ಸ್ವಯಂವರದಲ್ಲಿ ಸೇರಿದ್ದ ರಾಜಕುಮಾರರೆಲ್ಲರನ್ನೂ

ಓಡಿಸಿ ತನ್ನನ್ನು
ಅಪಹರಿಸಿಕೊಂಡು ಬಂದು
ನನ್ನನ್ನು ಮದುವೆ
ಮಾಡಿಕೊಳ್ಳದೆ ಓಡಿಸಿದನು.
ನನ್ನ ಯೌವನವು ಕಾಡಿನಲ್ಲಿ
ಬಿಟ್ಟ ಹೂವಿನಂತೆ
ವ್ಯರ್ಥವಾಗದ ಹಾಗೆ ಆತನು
ನನ್ನ ಕಯ್ಯನ್ನು ಹಿಡಿಯುವ
ಹಾಗೆ ಮಾಡು; ಹಾಗೆ
ಮಾಡಲು ಸಾಧ್ಯವಿಲ್ಲದಿದ್ದರೆ
(ಆತ್ಮಹತ್ಯೆ

ಮಾಡಿಕೊಳ್ಳುವುದಕ್ಕೆ),
ಬೆಂಕಿಯನ್ನು ದಯಪಾಲಿಸು,
ಎಂಬುದಾಗಿ ಅಂಬೆಯು
ಕಣ್ಣಿನಲ್ಲಿ ನೀರುತುಂಬಿ
ಹೇಳಿದಳು.

ಮ|| ನಯಮಂ
ನಂಬುವೊಡೆನ್ನ ಪೇೞ್ದ
ಸತಿಯಂ ಕೈಕೊಂಡನಂತಲ್ಲದು
ರ್ಣಯಮಂ
ನಚ್ಚುವೊಡೆನ್ನನುಗ್ರ

ರಣದೊಳ್ ಮೇಣ್ ಮೀಱಿ ಮಾರ್ಕೊಂಡನಾ|
ರಯೆ ಕಜ್ಜಂ ಪೆಱತಿಲ್ಲ ಶಂತನು ಸುತಂಗೆನ್ನಂ ಕರಂ ನಂಬಿದಂ ಬೆಯೊಳೆನ್ನ ಅಂಬೆವಲಂ ವಿವಾಹವಿಧಿಯಂ ಮಾಳ್ಪಂ ಪೆಱರ್ ಮಾಳ್ಪರೇ|| ೭೭||

ಪದ್ಯ-೭೭:ಪದವಿಭಾಗ-ಅರ್ಥ:ನಯಮಂ ನಂಬುವೊಡೆ ಎನ್ನ ಪೇೞ್ದ ಸತಿಯಂ ಕೈಕೊಂಡಂ (ಅದಕ್ಕೆ

ಪರಶುರಾಮನು, ಭೀಷ್ಮನು
ಗುರು ಎಂದು, ವಿನಯವನ್ನು
ಆಶ್ರಯಿಸುವುದಾದರೆ ನಾನು
ಹೇಳಿದ ಹೆಣ್ಣನ್ನು
ಮದುವೆಯಾಗುತ್ತಾನೆ.)
ಅಂತಲ್ಲದೆ (ಮೇಣ್)
ದುರ್ಣಯಮಂ ನಚ್ಚುವೊಡೆ
ಎನ್ನನು ಉಗ್ರ ರಣದೊಳ್
ಮೇಣ್ ಮೀಱಿ
ಮಾರ್ಕೊಂಡನು
(ಎದುರಿಸುವನು)(ಹಾಗಲ್ಲದೆ

ಅವಿನಯವನ್ನೇ
ನಂಬುವುದಾದರೆ ನನ್ನನ್ನು
ಮೀರಿ ಭಯಂಕರವಾದ
ಯುದ್ಧದಲ್ಲಿ
ಪ್ರತಿಭಟಿಸುವವನಾಗುತ್ತಾನೆ.
),ಆರಯೆ ಕಜ್ಜಂ ಪೆಱತಿಲ್ಲ
(ವಿಚಾರ ಮಾಡಿದರೆ
(ಭೀಷ್ಮನಿಗೆ) ಬೇರೆ ಕಾರ್ಯ-
ಮಾರ್ಗ ಇಲ್ಲ.) ಶಂತನು
ಸುತಂಗೆನ್ನಂ ಕರಂ ನಂಬಿದ
ಅಂಬೆಯೊಳು, ಎನ್ನ

ಅಂಬೆವಲಂ (ಬಾಣ)
ವಿವಾಹವಿಧಿಯಂ ಮಾಳ್ಪೆಂ,
ಪೆಱರ್ ಮಾಱ್ಪರೇ (ಶಂತನು
ಮಗನಿಗೆ ನನ್ನನ್ನು ಬಹಳ
ನಂಬಿದ ಅಂಬೆಯಲ್ಲಿ ಅವನ
ಮದುವೆಯನ್ನು
ಮಾಡಿಸುತ್ತೇನೆ; ಅವನು
ಒಪ್ಪದಿದ್ದರೆ ನನ್ನ ಬಾಣವೇ
ವಿವಾಹವಿಧಿಯನ್ನು
ಮಾಡಿಸುವುದು/ ಬಾಣದ
ಮೂಲಕ ಮಾಡುವೆನು.

ಬೇರೆಯವರು ಮಾಡುವರೇ?
ಅದು ಆಗದು, ತಾನೇ
ಮಾಡಬೇಕು.)
ಪದ್ಯ-೭೭:ಅರ್ಥ:ಅದಕ್ಕೆ
ಪರಶುರಾಮನು, ಭೀಷ್ಮನು
ತನ್ನನ್ನು ಗುರು ಎಂದು,
ವಿನಯವನ್ನು
ಆಶ್ರಯಿಸುವುದಾದರೆ ನಾನು
ಹೇಳಿದ ಹೆಣ್ಣನ್ನು
ಮದುವೆಯಾಗುತ್ತಾನೆ.
ಹಾಗಲ್ಲದೆ ಅವಿನಯವನ್ನೇ

ನಂಬುವುದಾದರೆ ನನ್ನನ್ನು ಮೀರಿ ಭಯಂಕರವಾದ ಯುದ್ಧದಲ್ಲಿ ಪ್ರತಿಭಟಿಸುವವನಾಗುತ್ತಾನೆ. ವಿಚಾರ ಮಾಡಿದರೆ (ಭೀಷ್ಮನಿಗೆ) ಬೇರೆ ಕಾರ್ಯ-ಮಾರ್ಗ ಇಲ್ಲ. ಶಂತನು ಮಗನಿಗೆ ನನ್ನನ್ನು ಬಹಳ ನಂಬಿದ ಅಂಬೆಯಲ್ಲಿ ಅವನ ಮದುವೆಯನ್ನು ಮಾಡಿಸುತ್ತೇನೆ; ಅವನು

ಒಪ್ಪದಿದ್ದರೆ ನನ್ನ ಬಾಣವೇ ವಿವಾಹವಿಧಿಯನ್ನು ಮಾಡಿಸುವುದು/ ಬಾಣದ ಮೂಲಕ ಮಾಡುವೆನು. ಬೇರೆಯವರು ಮಾಡುವರೇ? ಅದು ಆಗದು, ತಾನೇ ಮಾಡಬೇಕು.

ವಚನ|| ಎಂದು ನಾಗಪುರಕ್ಕೆ ವರ್ಷ ಪರಶುರಾಮನ ಬರವಂ ಗಾಂಗೇಯಂ ಕೇಳ್ದಿರ್ದಿವರ್ಣಂದು ಕನಕ ರಜತ

ಪಾತ್ರಂಗಳೊಳರ್ಘ್ಯಮಂ ಕೊಟ್ಟು ಪೊಡಮಟ್ಟು-

ವಚನ:ಪದವಿಭಾಗ-

ಅರ್ಥ:ಎಂದು ನಾಗಪುರಕ್ಕೆ ವರ್ಷ ಪರಶುರಾಮನ ಬರವಂ ಗಾಂಗೇಯಂ ಕೇಳ್ದು ಇದಿರ್ವಂದು ಕನಕ ರಜತ ಪಾತ್ರಂಗಳೊಳು ಅರ್ಘ್ಯಮಂ ಕೊಟ್ಟು ಪೊಡಮಟ್ಟು-

ವಚನ:ಅರ್ಥ:ಎಂದು ಹಸ್ತಿನಾಪುರಕ್ಕೆ ಬರುತ್ತಿರುವ

ಪರಶುರಾಮನ
ಆಗಮನವನ್ನು ಭೀಷ್ಮನು
ಕೇಳಿ ಎದುರಾಗಿ ಬಂದು ಚಿನ್ನ
ಮತ್ತು ಬೆಳ್ಳಿಯ ಪಾತ್ರೆಗಳಲ್ಲಿ
ಅರ್ಘ್ಯವನ್ನು ಕೊಟ್ಟು
ನಮಸ್ಕಾರಮಾಡಿ-

ಮ || ಬೆಸನೇನೆಂದೊಡೆ
ಪೇೞ್ವೆನೆನ್ನ ಬೆಸನಂ
ಕೈಕೊಳ್ವುದೀ ಕನ್ನೆಯಂ
ಪಸುರ್ವಂದರ್
ಪಸೆಯೆಂಬಿವಂ ಸಮದು ನೀಂ

ಕೈಕೊಳ್ ಕೊಳಲ್ಕಾಗದಂ| ಬೆಸಕಂ ಚಿತ್ತದೊಳುಳ್ಳೊಡೀಗಳಿವರ ಮ್ಮಾಚಾರ್ಯರೆಂದೋವದೇ ವೇ೯ಸನಂ ಮಾಣದೆ ಕೈದುಗೊಳ್ಳೆರಡರೊಳ್ ಮೆಚ್ಚಿತ್ತೆನೇನೆಂದಪಯ್|| ೭೮||

ಪದ್ಯ-೭೮:ಪದವಿಭಾಗ-ಅರ್ಥ:ಬೆಸನೇನ್ ಎಂದೊಡೆ (ಬೆಸನು ಏನ್ - ಕೆಲಸ ಏನು,

ಅಪ್ಪಣೆ ಏನು? ಎಂದು ಭೀಷ್ಮನು ಕೇಳಿದರೆ), ಪೇೞ್ವೆನ್ ಎನ್ನ ಬೆಸನಂ ಕೈಕೊಳ್ವುದು ಈ ಕನ್ನೆಯಂ ಪಸುರ್ವಂದರ್ ಪಸೆಯೆಂಬಿವಂ ಸಮದು ನೀಂ ಕೈಕೊಳ್ (ಹೇಳುವೆನು, ನನ್ನ ಆಜ್ಞೆಯನ್ನು ಒಪ್ಪು, ಈ ಕನ್ಯೆಯನ್ನು ಹಸಿರುಚಪ್ಪರ ಹಸೆಮಣೆ ಇವುಗಳನ್ನು ಮಾಡಿಸಿ/ ಏರ್ಪಡಿಸಿ, ನೀನು

ಪರಿಗ್ರಹಿಸು),
ಕೊಳಲ್ಾಗದಂಬೆಸಕಂ
ಚಿತ್ತದೊಳು ಉಳ್ೊಡೆ ಈಗಳ್
ಇವರ್ ಎಮ್ಮ
ಆಚಾರ್ಯರೆಂದು ಓವದೆ
ಏರ್ವೇಸನಂ
(ಯುದ್ಧಕಾರ್ಯ)) ಮಾಣದೆ
ಕೈದುಗೊಳ್ಳ್ (ಬಿಡದೆ ಶಸ್ತ್ರ
ಹಿಡಿ) ಎರಡರೊಳ್ ಮೆಚ್ಚಿತ್ತೆನೆ,
ಏನೆಂದಪಯ್?=[ಈಕೆಯನ್ನು
ಸ್ವೀಕರಿಸುವುದಿಲ್ಲ ಎಂಬ

ಕಾರ್ಯ/ವಿಚಾರ ಮನಸ್ಸಿನಲ್ಲಿ ಇದ್ದರೆ, ಈಗ ಇವರು ನನ್ನ ಗುರುಗಳು ಎಂದು ಭಕ್ತಿಯನ್ನು ತೋರದೆ ಕೈದು/ ಆಯುಧವನ್ನುಹಿಡಿ; (ಯುದ್ಧಕಾರ್ಯಕ್ಕೆ) ಎರಡರಲ್ಲಿ ನೀನು ಇಷ್ಟಪಟ್ಟಿದ್ದನ್ನು ಕೊಟ್ಟಿದ್ದೇನೆ, ಏನು ಹೇಳುವೆ?]

ಪದ್ಯ-೭೮:ಅರ್ಥ:ಕೆಲಸ ಏನು, ಅಪ್ಪಣೆ ಏನು? ಎಂದು ಭೀಷ್ಮನು ಕೇಳಿದರೆ, ಅದಕ್ಕೆ

ಪರಶುರಾಮನು ನನ್ನ
ಆಜ್ಞೆಯನ್ನು ನೀನು
ಅಂಗೀಕಾರಮಾಡಬೇಕು.
ಹಸುರುವಾಣಿ ಚಪ್ಪರ ಮತ್ತು
ಹಸೆಮಣೆಗಳನ್ನು ಸಿದ್ಧಪಡಿಸಿ
ಈ ಕನ್ಯೆಯನ್ನು ಸ್ವೀಕರಿಸು,
ಸ್ವೀಕರಿಸಕೂಡದೆಂಬ ಕಾರ್ಯ
(ವಿಚಾರ)
ಮನಸ್ಸಿನಲ್ಲಿರುವಾದದರೆ
ಈಗಲೇ ಇವರು ನಮ್ಮ
ಗುರುಗಳು ಎಂಬ

ಭಕ್ತಿಪ್ರದರ್ಶನ ಮಾಡದೆ ಯುದ್ಧೋದ್ಯೋಗವನ್ನು ಕೈಕೊಂಡು ಶಸ್ತ್ರಧಾರಣೆ ಮಾಡು. ಎರಡರಲ್ಲಿ ಇಷ್ಟಪಟ್ಟಿದ್ದನ್ನು ಕೊಟ್ಟಿದ್ದೇನೆ, ಏನು ಹೇಳುವೆ? ಎಂದನು.

ವ|| ಎಂದು ನುಡಿದ ಪರಶುರಾಮನ ನುಡಿಯಂ ಗಾಂಗೇಯಂ ಕೇಳ್ದೆನಗೆ ವೀರಶ್ರೀಯುಂ ಕೀರ್ತಿಶ್ರೀಯುಓ ಅಲ್ಲದುೞಿದ

ಪೆಂಡಿರ್ ಮೊರೆಯಲ್ಲ ನೀವಿದನೇಕಾಗ್ರಹಂಗೆಯ್ವಿರೆಂ ದೊಡೆಂತುಮೆಮ್ಮೊಳ್ ಕಾದಲ್ವೇೞ್ವುದೆಂದು-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಪರಶುರಾಮನ ನುಡಿಯಂ ಗಾಂಗೇಯಂ ಕೇಳ್ದು, ಎನಗೆ ವೀರಶ್ರೀಯುಂ ಕೀರ್ತಿಶ್ರೀಯುಂ ಅಲ್ಲದೆ ಉೞಿದ ಪೆಂಡಿರ್

ಮೊರೆಯಲ್ಲ (ಸಂಬಂಧವಿಲ್ಲ)
ನೀವು ಅದನು ಏಕೆ ಆಗ್ರಹಂ
ಗೆಯ್ವಿರಿ (ಒತ್ತಾಯ
ಮಾಡುವಿರಿ)ಎಂದೊಡೆ
ಇಂತುಂ ಎಮ್ಮೊಳ್ ಕಾದಲ್
ವೇಟ್ಟುದೆಂದು-
ವಚನ:ಅರ್ಥ:ಎಂದು ಹೇಳಿದ
ಪರಶುರಾಮನ ಮಾತನ್ನು
ಭೀಷ್ಮನು ಕೇಳಿ ನನಗೆ
ವೀರಲಕ್ಷ್ಮಿ ಮತ್ತು
ಯಶೋಲಕ್ಷ್ಮಿಯರಲ್ಲದೆ

ಉಳಿದ ಹೆಂಗಸರಲ್ಲಿ ಸಂಬಂಧವಿಲ್ಲ. ಏಕೆ ಕೋಪಿಸಿ ಕೊಳ್ಳುತ್ತೀರಿ, ಹೀಗಾದರೆ ನಮ್ಮೊಡನೆ ಯುದ್ಧಮಾಡುವುದು ಎಂದನು ಪರಷುರಾಮ.

ಮ|| ಕೆಳರ್ದಂದುಗ್ರ ರಣಾಗ್ರಹ
ಪ್ರಣಯದಿಂದಾಗಳ್
ಕುರುಕ್ಷೇತ್ರಮಂ
ಕಳವೇೞ್ದೀ ವರ್ರುಮ್ಮೈಂದ್ರ
ವಾರುಣದೆ ವಾಯವ್ಯಾದಿ

ದಿವ್ಯಾಸ್ತ್ರ ಸಂ।
ಕುಳದಿಂದೊರ್ವರನೊರ್ವರೆ
ಚ್ಚು ನಿಜಪೀತಾಂಭೋಜದಿಂ
ಬ್ರಹ್ಮನು
ಚ್ಚಳಿಪನ್ನಂ ಪಿರಿದೊಂದು
ಸಂಕಟಮನೀ
ತ್ರೈಲೋಕ್ಯದೊಳ್
ಮಾಡಿದರ್|| ೭೯

ಪದ್ಯ-೭೯:ಪದವಿಭಾಗ-

ಅರ್ಥ:ಕೆಳರ್ದು ಅಂದು ಉಗ್ರ (ಅಂದು ಕೆರಳಿ ಉಗ್ರ)

ರಣಾಗ್ರಹ ಪ್ರಣಯದಿಂದ
ಆಗಳ್ =[ಆಗ ಯುದ್ದದ
ಅಪೇಕ್ಷೆಯ ಪ್ರೀತಿಯಿಂದ]
ಕುರುಕ್ಷೇತ್ರಮಂ ಕಳವೇಱ್ದು
ಈರ್ವರುಂ ಐಂದ್ರ ವಾರುಣಾದೆ
ವಾಯವ್ಯಾದಿ ದಿವ್ಯಾಸ್ತ್ರ
ಸಂಕುಳದಿಂದ
ಓರ್ವರನೊರ್ವರೆಚ್ಚು =
[ಇಬ್ಬರೂ ಭಯಂಕರವಾದ
ಯುದ್ಧಮಾಡಬೇಕೆಂಬ
ಅಪೇಕ್ಷೆಯಿಂದ

ಕುರುಕ್ಷೇತ್ರವನ್ನೇ
ಯುದ್ಧಭೂಮಿಯನ್ನಾಗಿ
ಮಾಡಿಕೊಂಡು ಐಂದ್ರಾಸ್ತ್ರ
ವಾರುಣಾಸ್ತ್ರ
ವಾಯವ್ಯಾಸ್ತ್ರಗಳ
ಸಮೂಹದಿಂದ
ಒಬ್ಬರನ್ನೊಬ್ಬರು,
ಬಾಣಪ್ರಯೋಗಮಾಡಿ
ಘಾತಿಸಿ,]
ನಿಜಪೀಠಾಂಭೋಜದಿಂ
ಬ್ರಹ್ಮನುಚ್ಚಳಿಪನ್ನಂ

ಪಿರಿದೊಂದು ಸಂಕಟಮನೀ ತ್ರೈಲೋಕ್ಯದೊಳ್ ಮಾಡಿದರ್==[ಬ್ರಹ್ಮನು ತನ್ನ ಕಮಲಾಸನದಿಂದ ಮೇಲಕ್ಕೆ ಹಾರಿಹೋಗುವಂತೆ ಮಾಡಿ, ಮೂರುಲೋಕಗಳಲ್ಲಿಯೂ ಹಿರಿದಾದ ಸಂಕಟವನ್ನುಂಟುಮಾಡಿದರು.]

ಪದ್ಯ-೭೯:ಅರ್ಥ:ಆಗ ಯುದ್ದದ ಅಪೇಕ್ಷೆಯ

ಪ್ರೀತಿಯಿಂದ ಇಬ್ಬರೂ
ಭಯಂಕರವಾದ
ಯುದ್ಧಮಾಡಬೇಕೆಂಬ
ಅಪೇಕ್ಷೆಯಿಂದ
ಕುರುಕ್ಷೇತ್ರವನ್ನೇ
ಯುದ್ಧಭೂಮಿಯನ್ನಾಗಿ
ಮಾಡಿಕೊಂಡು ಐಂದ್ರಾಸ್ತ್ರ
ವಾರುಣಾಸ್ತ್ರ
ವಾಯವ್ಯಾಸ್ತ್ರಗಳ
ಸಮೂಹದಿಂದ
ಒಬ್ಬರನ್ನೊಬ್ಬರು,

ಬಾಣಪ್ರಯೋಗಮಾಡಿ ಘಾತಿಸಿ, ಬ್ರಹ್ಮನು ತನ್ನ ಕಮಲಾಸನದಿಂದ ಮೇಲಕ್ಕೆ ಹಾರಿಹೋಗುವಂತೆ ಮಾಡಿ, ಮೂರುಲೋಕಗಳಲ್ಲಿಯೂ ಹಿರಿದಾದ ಸಂಕಟವನ್ನುಂಟುಮಾಡಿದರು.

ಶಿಖರಿಣಿ|| ಅತರ್ಕ್ಯಂ ವಿಕ್ರಾಂತಂ ಭುಜಬಲಮಸಾಮಾನ್ಯಮಧಿಕಂ

ಪ್ರತಾಪಂ ಪೋಗೀತಂಗೆಣೆಯೆ

ದಿವಿಜರ್ ವಾಯುಪಥದೊಳ್|

ಶಿತಾಸ್ತ್ರಂಗಳ್ ಪೊಂಕಂಗಿಡಿಸೆ

ಸುಗಿದಂ ಭಾರ್ಗವನಿದೇಂ

ಪ್ರತಿಜ್ಞಾ

ಗಾಂಗೇಯಂಗದಿರದಿರ್

ನಿಲ್ವನ್ನರೊಳರೇ|| ೮೦||

ಪದ್ಯ-೮೦:ಪದವಿಭಾಗ-ಅರ್ಥ: ಅತರ್ಕ್ಯಂ ವಿಕ್ರಾಂತಂ ಭುಜಬಲಂ ಅಸಾಮಾನ್ಯಮಧಿಕಂ

ಪ್ರತಾಪಂ=[ಈತನದು ತರ್ಕಕ್ಕೆ
ಮೀರಿದ ಭುಜಬಲ ಮತ್ತ
ಅಸಮಾನ್ಯ ಪರಾಕ್ರಮ,]
ಪೋಗು ಈತಂಗೆ ಎಣೆಯೆ
ದಿವಿಜರ್=[ಹೋಗೋ!
ಈತನಿಗೆ ದೇವತೆಗಳು
ಸಾಟಿಯೇ?]
ವಾಯುಪಥದೊಳ್
ಶಿತಾಸ್ತ್ರಂಗಳ್ ಪೊಂಕಂಗಿಡಿಸೆ
(ಪಂಕ- ಗರ್ವ ಕೆಡಿಸೆ) ಸುಗಿದಂ
(ಹೆದರಿದನು) ಭಾರ್ಗವನು

ಇದೇಂ ಪ್ರತಿಜ್ಞಾ
ಗಾಂಗೇಯಂಗೆ ಅದಿರದೆ
ಇದಿರ್ ನಿಲ್ವನ್ನರ್ ಒಳರೇ==
[ಆಕಾಶದಲ್ಲಿ ಹರಿತವಾದ
ಬಾಣಗಳು ಪರಷುರಾಮನ
ಗರ್ವವನ್ನು ಕೆಡಿಸಲು,
ಹೆದರಿದನು ಭಾರ್ಗವನು,
ಇದೇನು ಪ್ರತಿಜ್ಞಾಬದ್ಧ
ಗಾಂಗೇಯನಿಗೆ ಹೆದರದೆ
ಎದಿರು ನಿಲ್ಲುವವರು
ಇದ್ದಾರೆಯೇ?]

ಪದ್ಯ-೮೦:ಅರ್ಥ:ಈತನದು ತರ್ಕಕ್ಕೆ ಮೀರಿದ ಭುಜಬಲ ಮತ್ತ ಅಸಮಾನ್ಯ ಪರಾಕ್ರಮ, ಹೋಗೋ! ಈತನಿಗೆ ದೇವತೆಗಳು ಸಾಟಿಯೇ? ಆಕಾಶದಲ್ಲಿ ಹರಿತವಾದ ಬಾಣಗಳು ಪರಷುರಾಮನ ಗರ್ವವನ್ನು ಕೆಡಿಸಲು, ಹೆದರಿದನು ಭಾರ್ಗವನು, ಇದೇನು ಪ್ರತಿಜ್ಞಾಬದ್ಧ ಗಾಂಗೇಯನಿಗೆ ಹೆದರದೆ

ಎದಿರು ನಿಲ್ಲುವವರು ಇದ್ದಾರೆಯೇ? ಪರಷುರಾಮನು ಸೋತುಹೋದನು]

ಪರಷುರಾಮನ ಸೋಲು- ಅಂಬೆಯ ಅಗ್ನಿ ಪ್ರವೇಶ- ವಿಚಿತ್ರವೀರ್ಯನ ಮರಣ

ವಚನ|| ಅಂತು ಗಾಂಗೇಯನೊಳ್ ಪರಶುರಾಮಂ ಕಾದಿ

ಬಸವಟಿದುಸಿರಲಪ್ಪೊಡಮಾ
ಱದೆ ಮೂರ್ಛೆವೋಗಿರ್ದನಂ
ಕಂಡಂಬೆಯೆಂಬ
ದಂಡುರುಂಬೆ ನಿನಗೆ
ಪಥಾರ್ಥಮಾಗಿ
ಪುಟ್ಟುವೆನಕ್ಕೆಂದು
ಕೋಪಾಗ್ನಿಯಿಂದಮಗ್ನಿಶರೀರೆ
ಯಾಗಿ ದ್ರುಪದನ
ಮಹಾದೇವಿಗೆಮಗನಾಗಿ ಪುಟ್ಟಿ
ಕಾರಣಾಂತರದೊಳ್
ಶಿಖಂಡಿಯಾಗಿರ್ದಳಿತ್ತ

ಭೀಷ್ಮರ ಬೆಂಬಲದೊಳ್
ವಿಚಿತ್ರವೀರ್ಯನು
ಮಹಾರ್ಯವೀರ್ಯನುಮಾಗಿ
ಕೆಲವು ರಾಜ್ಯಲಕ್ಷ್ಮಿಯಂ ತಾಳ್ದಿ
ರಾಜಯಕ್ಷ್ಮ
ತಪ್ತಶರೀರನಾತ್ಮಜ
ವಿಗತಜೀವಿಯಾಗಿ
ಪರಲೋಕಪ್ರಾಪ್ತನಾದೊಡೆ
ಗಾಂಗೇಯನುಂ
ಸತ್ಯವತಿಯುಮತ್ಯಂತ
ಶೋಕಾನಲ ದಹ್ಯಮಾನ

ಮಾನಸರ್ಕಳಾಗಿ ಆತಂಗೆ

ಪರಲೋಕಕ್ರಿಯೆಗಳಂ ಮಾಡಿ

ರಾಜ್ಯಂ ನಷ್ಟರಾ (ಜ)

ಮಾದುದರ್ಕೆ

ಮಮ್ಮಲಮಱುಗಿ

ಯೋಜನಗಂ

ಸಿಂಧುಪುತ್ರನನಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಅಂತು

ಗಾಂಗೇಯನೊಳ್

ಪರಶುರಾಮಂ ಕಾದಿ

ಬಸವಟಿದು ಉಸಿರಲಪ್ಪೊಡೆ
ಮಾಱದೆ
ಮೂರ್ಛೆವೋಗಿರ್ದನಂ
ಕಂಡು ಅಂಬೆಯೆಂಬ
ದಂಡುರುಂಬೆ ನಿನಗೆ
ವಧಾರ್ಥಮಾಗಿ (ಸಾವಿಗೆ
ಕಾಣವಾಗಿ) ಪುಟ್ಟುವೆನು ಅಕ್ಕೆ
ಎಂದು ಕೋಪಾಗ್ನಿಯಿಂದಂ
ಅಗ್ನಿಶರೀರೆಯಾಗಿ ದ್ರುಪದನ
ಮಹಾದೇವಿಗೆ ಮಗನಾಗಿ
ಪುಟ್ಟಿ ಕಾರಣಾಂತರದೊಳ್

ಶಿಖಂಡಿಯಾಗಿರ್ದಳು. ಇತ್ತ
ಭೀಷ್ಮರ ಬೆಂಬಲದೊಳ್
ವಿಚಿತ್ರವೀರ್ಯನುಂ
ಅವಾರ್ಯವೀರ್ಯನುಮಾಗಿ
(ತಡೆಇಲ್ಲದ ಪ್ರತಾದವನು)
ಕೆಲವು ರಾಜ್ಯಲಕ್ಷ್ಮಿಯಂ ತಾಳ್ದಿ
(ರಾಜ್ಯಭಾರ ಮಾಡಿ)
ರಾಜಯಕ್ಷ್ಮ ತಪ್ತಶರೀರನು
(ಕ್ಷಯರೋಗದಿಂದ ಬೆಂದ
ಶರೀರ) ಆತ್ಮಜ
ವಿಗತಜೀವಿಯಾಗಿ

(ಮಕ್ಕಳಿಲ್ಲದವನಾಗಿ)
ಪರಲೋಕಪ್ರಾಪ್ತನಾದೊಡೆ (
ಪ್ರಾಣ ಬಿಟ್ಟಾಗ)
ಗಾಂಗೇಯನುಂ
ಸತ್ಯವತಿಯುಂ ಅತ್ಯಂತ
ಶೋಕಾನಲ ದಹ್ಯಮಾನ
ಮಾನಸರ್ಕಳಾಗಿ ಆತಂಗೆ
ಪರಲೋಕಕ್ರಿಯೆಗಳಂ ಮಾಡಿ
ರಾಜ್ಯಂ ನಷ್ಟರಾ(ಜ)
ಮಾದುದರ್ಕೆ
ಮಮ್ಮಲಮಱುಗಿ

ಯೋಜನಗಂ
ಸಿಂಧುಪುತ್ರನನು ಇಂತೆಂದಳ್-
ವಚನ:ಅರ್ಥ:ಹಾಗೆ
ಗಾಂಗೇಯನಲ್ಲಿ
ಪರಶುರಾಮನು ಕಾದಿ
ಶಕ್ತಿಗುಂದಿ
ಮಾತನಾಡಿವುದಕ್ಕೂ ಆಗದೆ
ಮೂರ್ಛೆಹೋಗಿದ್ದವನನ್ನು
ಕಂಡು ಅಂಬೆಯೆಂಬ
ಗಯ್ಯಾಳಿ ನಿನ್ನ ಸಾವಿಗೆ
ಕಾರಣವಾಗಿ ಹುಟ್ಟುತ್ತೇನೆ,

ಆಗಲಿ ಎಂದು ಕೋಪದ ಬೆಂಕಿಯಿಂದ ಅಗ್ನಿಪ್ರವೇಶಮಾಡಿ ದ್ರುಪದನ ಮಹಾರಾಣಿಗೆ ಮಗನಾಗಿ ಹುಟ್ಟಿ ಕಾರಣಾಂತರದಿಂದ ಶಿಖಂಡಿಯಾಗಿದ್ದಳು. ಈ ಕಡೆ ವಿಚಿತ್ರವೀರ್ಯನು ಭೀಷ್ಮರ ಸಹಾಯದಿಂದ ತಡೆಯಿಲ್ಲದ ಪರಾಕ್ರಮವುಳ್ಳವನಾಗಿ ಕೆಲವು ಕಾಲ ರಾಜ್ಯಲಕ್ಷ್ಮಿಯನ್ನು ಧರಿಸಿ ಕ್ಷಯರೋಗದಿಂದ

ಸುಡಲ್ಪಟ್ಟವನು,
ಮಕ್ಕಳಿಲ್ಲದೆಯೇ ಸತ್ತನು.
ಭೀಷ್ಮನೂ ಸತ್ಯವತಿಯೂ
ಅತ್ಯತಿಯವಾದ
ದುಖಾಗ್ನಿಯಿಂದ ಸುಡಲ್ಪಟ್ಟ
ಮನಸ್ಸುಳ್ಳವಾರಾಗಿ ಆತನಿಗೆ
ಪರಲೋಕಕ್ರಿಯೆಗಳನ್ನು
ಮಾಡಿ ರಾಜ್ಯಕ್ಕೆ ರಾಜನೇ
ಇಲ್ಲದಂತಾದುದಕ್ಕೆ
ವಿಷೇಷವಾಗಿ ದುಖಪಟ್ಟು
ಯೋಜನಗಂಧಿಯಾದ

ಸತ್ಯವತಿಯು ಭೀಷ್ಮನಿಗೆ
ಹೀಗೆಂದುಳು-

ಮ|| ಮಗನೆಂಬಂತು ಧರಿತ್ರಿ
ನಿನ್ನನುಜರಂ ಕೈಕೊಂಡು ಮುಂ
ಪೂರ್ಣ್ದ ನ
ನ್ನಿಗೆ ಬನ್ನಂ
ಬರಲೀಯದಾರ್ತೆಸಗಿದೀ
ವಿಖ್ಯಾತಿಯುಂ ಕೀರ್ತಿಯುಂ|
ಮುಗಿಲಂ ಮುಟ್ಟಿದುದಲ್ತೆ
ನಮ್ಮ ಕುಲದೊಳ್
ಮಕ್ಕಳ್ಪೆಱರ್ ನೀನೇ ಜ

ಟ್ಟಿಗನ್ನೈ ಮುನ್ನಿನೊರಂಟುವೇಡ ಮಗನೇ ಕೈಕೊಳ್ ಧರಾಭಾರಮಂ|| ೮೧||

ಪದ್ಯ-೮೦:ಪದವಿಭಾಗ-ಅರ್ಥ: ಸತ್ಯವತಿಯು ಮಗನನ್ನು ಕುರಿತು, 'ಮಗನ್ ಎಂಬಂತು ಧರಿತ್ರಿ (ಸತ್ಯವತಿಯು ಮಗನನ್ನು ಕುರಿತು, 'ಲೋಕವು 'ಮಗ ಎಂದರೆ ಇವನೇ ಮಗ,' ಎನ್ನುವ ಹಾಗೆ) ನಿನ್ನ

ಅನುಜರಂ ಕೈಕೊಂಡು (ನಿನ್ನ ತಮ್ಮಂದಿರನ್ನು ಸ್ವೀಕರಸಿ,) ಮುಂಪೂಣ್ದ ನನ್ನಿಗೆ ಬನ್ನಂ ಬರಲೀಯದೆ ಆರ್ತು ಎಸಗಿದ ಈ ವಿಖ್ಯಾತಿಯುಂ ಕೀರ್ತಿಯುಂ ಮುಗಿಲಂ ಮುಟ್ಟಿದುದಲ್ತೆ =[ನಿನ್ನ ತಮ್ಮಂದಿರನ್ನು ಸ್ವೀಕರಿಸಿ ಮೊದಲು ಪ್ರತಿಜ್ಞೆ ಮಾಡಿದ ಸತ್ಯಕ್ಕೆ ಭಂಗಬರದ ಹಾಗೆ ಸಮರ್ಥನಾಗಿ ಮಾಡಿದ ನಿನ್ನ

ಖ್ಯಾತಿಯೂ ಯಶಸ್ಸೂ
ಮುಗಿಲನ್ನು ಮುಟ್ಟಿತಲ್ಲವೇ!
(ಅತ್ಯುನ್ನತವಾಯಿತಲ್ಲವೇ!
];;ನಮ್ಮ ಕುಲದೊಳ್ ಮಕ್ಕಳ್
ಪೆಱರ್; ನೀನೇ ಜಟ್ಟಿಗನ್ನೈ;
ಮುನ್ನಿನ ಒರಂಟುವೇಡ
ಮಗನೇ ಕೈಕೊಳ್
ಧರಾಭಾರಮಂ=[ನಮ್ಮ
ವಂಶಕ್ಕೆ ಬೇರೆ ಮಕ್ಕಳೇ?
ಬೇಡ, ನೀನೇ
ಶೂರನಾಗಿದ್ದೀಯೇ. ಹಿಂದಿನ

ಒರಟುತನ ಬೇಡ. ಮಗನೇ ನೀನೇ ರಾಜ್ಯಭಾರವನ್ನು ವಹಿಸಿಕೊ, ಎಂದಳು.]|

ಪದ್ಯ-೮೦:ಅರ್ಥ:ಸತ್ಯವತಿಯು ಮಗನನ್ನು ಕುರಿತು, 'ಲೋಕವು 'ಮಗ ಎಂದರೆ ಇವನೇ ಮಗ,' ಎನ್ನುವ ಹಾಗೆ ನಿನ್ನ ತಮ್ಮಂದಿರನ್ನು ಸ್ವೀಕರಿಸಿ,ನಿನ್ನ ತಮ್ಮಂದಿರನ್ನು ಸ್ವೀಕರಿಸಿ ಮೊದಲು ಪ್ರತಿಜ್ಞೆ ಮಾಡಿದ ಸತ್ಯಕ್ಕೆ ಭಂಗಬರದ

ಹಾಗೆ ಸಮರ್ಥನಾಗಿ ಮಾಡಿದ ನಿನ್ನ ಖ್ಯಾತಿಯೂ ಯಶಸ್ಸೂ ಮುಗಿಲನ್ನು ಮುಟ್ಟಿತಲ್ಲವೇ! (ಅತ್ಯುನ್ನತವಾಯಿತಲ್ಲವೇ! ನಮ್ಮ ವಂಶಕ್ಕೆ ಬೇರೆ ಮಕ್ಕಳೇ? ಬೇಡ, ನೀನೇ ಶೂರನಾಗಿದ್ದೀಯೇ. ಹಿಂದಿನ ಒರಟುತನ ಬೇಡ. ಮಗನೇ ನೀನೇ ರಾಜ್ಯಭಾರವನ್ನು ವಹಿಸಿಕೊ, ಎಂದಳು.

ವ|| ಎಂದು ನಿನ್ನನಾನಿನಿತಂ ಕೈಯೊಡ್ಡಿ ಬೇಡಿದೆನೆಂದು ಸತ್ಯವತಿಗಮರಾಪಗಾನಂದನನಿಂತೆಂದಂ||

ವಚನ:ಪದವಿಭಾಗ-

ಅರ್ಥ:ಎಂದು ನಿನ್ನ ನಾನು ಇನಿತಂ ಕೈಯೊಡ್ಡಿ ಬೇಡಿದೆನೆಂದು ಸತ್ಯವತಿಗೆ ಅಮರಾಪಗಾ ನಂದನಂ (ಗಂಗೆಯ ಮಗ ಭೀಷ್ಮನು)ಇಂತು ಎಂದಂ|

ವಚನ:ಅರ್ಥ:ಎಂದು ಭೀಷ್ಮನನ್ನು ಕೈಯೊಡ್ಡಿ ಇಷ್ಟನ್ನು ಬೇಡಿದ ಸತ್ಯವತಿಗೆ, ದೇವಗಂಗಾನದಿಯ ಮಗನಾದ ಭೀಷ್ಮನು ಹೀಗೆಂದನು-

ಕಂ|| ಕಿಡುಗುಮೆ ರಾಜ್ಯಂ ರಾಜ್ಯದ
ತೊಡರ್ಪದೇವಾಟ್ಟೆ ಬಾಟ್ಟೆ ನನ್ನಿಯ ನುಡಿಯಂ|
ಕಿಡೆ ನೆಗೞ್ದೆ ನಾನುಮೆರಡಂ

ನುಡಿದೊಡೆ ಹರಿ ಹರ ಹಿರಣ್ಯಗರ್ಭರ್ ನಗರೇ|| ೮೨||

ಪದ್ಯ-೮೨:ಪದವಿಭಾಗ-ಅರ್ಥ:ಕಿಡುಗುಮೆ ರಾಜ್ಯಂ[ರಾಜ್ಯವು ಕೆಡತಕ್ಕುದೇ (ಅಶಾಶ್ವತವಾದುದರಿಂದ)] ರಾಜ್ಯದ ತೊಡರ್ಪದು ಏವಾಳ್ತೆ ಬಾಳ್ತೆ;=[ರಾಜ್ಯದ ತೊಡಕು ನನಗೇಕೆ? ನನ್ನ ಬದುಕು] ನನ್ನಿಯ ನುಡಿಯಂ ಕಿಡೆ, ನೆದಟೆ ನಾನುಂ ಎರಡಂ

ನುಡಿದೊಡೆ ಹರಿ ಹರ ಹಿರಣ್ಯಗರ್ಭರ್ ನಗರೇ= [ಸತ್ಯಪ್ರತಿಜ್ಞೆಗೆ ವಿರೋಧವಾಗುವಂತೆ ನಡೆದರೆ (ನಾನೂ ಎರಡು ಮಾತನ್ನಾಡಿದರೆ) ತ್ರಿಮೂರ್ತಿಗಳಾದ ಬ್ರಹ್ಮವಿಷ್ಣುಮಹೇಶ್ವರರು ನಗುವುದಿಲ್ಲವೇ?].

ಪದ್ಯ-೮೨:ಅರ್ಥ:. ರಾಜ್ಯವು ಕೆಡತಕ್ಕುದೇ

(ಅಶಾಶ್ವತವಾದುದರಿಂದ);
ರಾಜ್ಯದ ತೊಡಕು ನನಗೇಕೆ?
ನನ್ನ ಬದುಕು ಸತ್ಯಪ್ರತಿಜ್ಞೆಗೆ
ವಿರೋಧವಾಗುವಂತೆ ನಡೆದರೆ
(ನಾನೂ ಎರಡು
ಮಾತನ್ನಾಡಿದರೆ)
ತ್ರಿಮೂರ್ತಿಗಳಾದ
ಬ್ರಹ್ಮವಿಷ್ಣುಮಹೇಶ್ವರರು
ನಗುವುದಿಲ್ಲವೇ?

ಚಂ||

ಹಿಮಕರನಾತ್ಮಶೀತರುಚಿಯಂ

ದಿನನಾಯಕನುಷ್ಣದೀಧಿತಿ
ಕ್ರಮಮನಗಾಧ ವಾರಿಯೆ
ಗುಣ್ಪನಿಳಾವಧು ತನ್ನ ತಿಣ್ಪನು|
ತ್ತಮ
ಕುಲಶೈಲಮುನ್ನತಿಯನೇಳಿದ
ವಾಗೆ ಬಿಸುಟ್ಪೊಡಂ ಬಿಸು
ಟ್ಕೆ ಮ ಬಿಸುಡೆಂ ಮದೀಯ
ಪುರುಷವ್ರತಮೊಂದುಮನೀಗ
ಳಂಬಿಕೇ| ೮೩||

ಪದ್ಯ-೮೩:ಪದವಿಭಾಗ-

ಅರ್ಥ:ಹಿಮಕರನು

ಆತ್ಮಶೀತರುಚಿಯಂ,
(ಚಂದ್ರನು ಶೀತವನ್ನು),
ದಿನನಾಯಕನು
ಉಷ್ಣದೀಧಿತಿಕ್ರಮಮನು
(ಸೂರ್ಯನು ಬಿಸಿಯನ್ನು),
ಅಗಾಧ ವಾರಿಧಿಯೆ ಗುಣ್ಪಂ
(ಸಮುದ್ರವು ಆಳವನ್ನು)
ಇಳಾವಧು ತನ್ನ
ತಿಣ್ಪನು(ಭೂತಾಯಿ ತನ್ನ
ಭಾರವನ್ನು), ಉತ್ತಮ
ಕುಲಶೈಲಂ ಉನ್ನತಿಯನು

(ಎತ್ತರವನ್ನು) ಏಳಿದವಾಗೆ (ಬೇಡವೆಂದು) ಬಿಸುಟ್ಪೊಡಂ ಬಿಸುಟ್ಕೆ (ಬಿಸಾಡಿದರೆ ಬಿಸುಡಲಿ); ಮಬಿಸುಡೆಂ (ಬಿಸುಡೆನು) ಮದೀಯ ಪುರುಷವ್ರತಮಂ ಒಂದುಮನು (ನನ್ನ ಬ್ರಹ್ಮಚರ್ಯ ವ್ರತವನ್ನು)ಈಗಳು ಅಂಬಿಕೇ (ತಾಯೇ)

ಪದ್ಯ-೮೩:ಅರ್ಥ:ಚಂದ್ರನು ತನ್ನ ಶೀತಕಿರಣವನ್ನೂ, ಸೂರ್ಯನು ತನ್ನ ಬಿಸಿ ಕಿರಣ ತೀವ್ರತೆಯನ್ನೂ, ಅತ್ಯಂತ ಆಳವಾದ ಸಮುದ್ರವು ತನ್ನ (ಗಾಂಭೀರ್ಯ) ಆಳವನ್ನೂ, ಈ ಭೂದೇವಿಯು ತನ್ನ ಭಾರವನ್ನೂ, ಶ್ರೇಷ್ಠವಾದ ಕುಲಪರ್ವತಗಳು ತಮ್ಮ ಔನ್ನತ್ಯವನ್ನೂ, ಹಾಸ್ಯಾಸ್ಪದವಾಗುವಂತೆ

ಬಿಸುಟರೂ ಬಿಸಾಡಲಿ. ಎಲೆ ತಾಯೀ ನಾನು ನನ್ನ ಬ್ರಹ್ಮಚರ್ಯ ವ್ರತವೊಂದನ್ನು ಮಾತ್ರ ಬಿಸುಡುವುದಿಲ್ಲ/ ತೊರೆಯುವುದಿಲ್ಲ. ಎಂದನು ಭೀಷ್ಮ.

ವ|| ಎಂದು ತನ್ನ ನುಡಿದ ಪ್ರತಿಜ್ಞೆಯನೇಗೆಯ್ದು ತಪ್ಪಿದನಿಲ್ಲ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ನುಡಿದ

ಪ್ರತಿಜ್ಞೆಯನು ಏಗೆಯ್ದು (ಏನು ಮಾಡಿದರೂ) ತಪ್ಪಿದನಿಲ್ಲ-

ವಚನ:ಅರ್ಥ:ಹೀಗೆ ಹೇಳಿದ ಭೀಷ್ಮ ತನ್ನ ಮಾಡಿದ ಪ್ರತಿಜ್ಞೆಯನ್ನು ಏನು ಮಾಡಿದರೂ ತಪ್ಪಿದವನಾಗಲಿಲ್ಲ.

ಕಂ|| ರಂಗತ್ತರಂತ ವಾರ್ಧಿ ಚ
ಯಂಗಳ್ ತಂತಮ್ಮ
ಮೇರೆಯಂ ದಾಂಟುವೊಡಂ|
ಗಂಗೇಯನುಂ ಪ್ರತಿಜ್ಞಾ

ಗಾಂಗೇಯನುಮೊರ್ಮೆ ನುಡಿದುದಂ ತಪ್ಪುವರೇ|| ೮೪

ಪದ್ಯ-೮೪:ಪದವಿಭಾಗ-ಅರ್ಥ:ರಂಗತ್ತರಂಗವಾರ್ಧಿ ಚಯಂಗಳ್ (ನರ್ತಿಸುವ ಅಲೆಗಳುಳ್ಳ ಕಡಲುಗಳ ಸಮೂಹ) ತಂತಮ್ಮ ಮೇರೆಯಂ ದಾಂಟುವೊಡಂ (ತಮ್ಮ ತಮ್ಮ ಎಲ್ಲೆಯನ್ನು ಮೀರಿದರೂ), ಗಂಗೇಯನುಂ ಪ್ರತಿಜ್ಞಾಗಾಂಗೇಯನುಂ

(ಅರಕೇಸರಿ) ಒರ್ಮೆ
ನುಡಿದುದಂ
ತಪ್ಪುವರೇ(ಭೀಷ್ಮನೂ
ಅರಿಕೇಸರಿಯೂ ಒಂದು ಬಾರಿ
ಮಾಡಿದ ಭಾಷೆಯನ್ನು
ತಪ್ಪುತ್ತಾರಯೇ? ಇಲ್ಲ.)
ಪದ್ಯ-೮೪:ಅರ್ಥ:ನರ್ತಿಸುವ
ಅಲೆಗಳುಳ್ಳ ಕಡಲುಗಳ
ಸಮೂಹ ತಮ್ಮ ತಮ್ಮ
ಎಲ್ಲೆಯನ್ನು ಮೀರಿದರೂ,
ಭೀಷ್ಮನೂ ಅರಿಕೇಸತಿಯೂ

ಒಂದು ಬಾರಿ ಮಾಡಿದ ಭಾಷೆಯನ್ನು ತಪ್ಪುತ್ತಾರಯೇ? ಇಲ್ಲ.

ವ್ಯಾಸರ ಯೋಗಶಕ್ತಿಯಿಂದ ಧೃತರಾಷ್ಟ್ರ, ಪಾಂಡು, ವಿದುರರ ಜನನ

ವ|| ಅಂತಚಲಿತ ಪ್ರತಿಜ್ಞಾರೂಢನಾದ ಗಾಂಗೇಯನನೇಗೆಯ್ದುಂಮೊ ಡಂಬಡಿಸಲಾಱದೆ ಸತ್ಯವತಿ

ತಾನುಮಾತನುಮಾಳೋಚಿಸಿ
ನಿಶ್ಚಿತಮಂತ್ರರಾಗಿ
ಕೃಷ್ಣದ್ವೈಪಾಯನನಂ ನೆನೆದು
ಬರಿಸಿದೊಡೆ
ವ್ಯಾಸಮುನೀಂದ್ರನೇಗೆಯ್ವು
ದೇನಂ ತೀರ್ಚುವುದೆಂದೊಡೆ
ಸತ್ಯವತಿಯಿಂತೆಂದಳ್
ಹಿರಣ್ಯಗರ್ಭ ಬ್ರಹ್ಮರಿಂ
ತಗುಳ್ದವ್ಯವಚ್ಛಿನ್ನಮಾಗಿ ಬಂದ
ಸೋಮವಂಶವಿಗಳೆಮ್ಮ
ಕುಲಸಂತತಿ

ಗಮಾರುಮಿಲ್ಲದೆಡೆವಱಿದು
ಕಿಡುವಂತಾಗಿರ್ದುದದು
ಕಾರಣಾದಿಂ ನಿಮ್ಮ ತಮ್ಮಂ
ವಿಚಿತ್ರವೀರ್ಯನ
ಕ್ಷೇತ್ರದೊಳಂಬಿಕೆಗಮಂಬಾಲೆ
ಗಂ ಪುತ್ರರಪ್ಪಂತು
ವರಪ್ರಸಾದಮಂ
ದಯೆಗೆಯ್ವುದೆನೆ
ಅಂತೆಗೆಯ್ವೆನೆಂದು-

ವಚನ:ಪದವಿಭಾಗ-

ಅರ್ಥ:ಅಂತಚಲಿತ

ಪ್ರತಿಜ್ಞಾರೂಢನಾದ
ಗಾಂಗೇಯನಂ ಏಗೆಯ್ದುಂ
ಒಡಂಬಡಿಸಲಾಱದೆ ಸತ್ಯವತಿ
ತಾನುಂ ಆತನುಂ ಆಳೋಚಿಸಿ
ನಿಶ್ಚಿತಮಂತ್ರರಾಗಿ
ಕೃಷ್ಣದ್ವೈಪಾಯನನಂ ನೆನೆದು
ಬರಿಸಿದೊಡೆ
ವ್ಯಾಸಮುನೀಂದ್ರನು
ಏಗೆಯ್ವುದು ಏನಂ
ತೀರ್ಚುವುದು ಎಂದೊಡೆ,
ಸತ್ಯವತಿ ಇಂತೆಂದಳ್

ಹಿರಣ್ಯಗರ್ಭ ಬ್ರಹ್ಮರಿಂ ತಗುಳ್ದ
ಅವ್ಯವಚ್ಛಿನ್ನಮಾಗಿ ಬಂದ
ಸೋಮವಂಶವಿಗಳು ಎಮ್ಮ
ಕುಲಸಂತತಿಗಂ ಆರುಮಿಲ್ಲದೆ
ಎಡೆವಱಿದು
ಕಿಡುವಂತಾಗಿರ್ದುದು ಅದು
ಕಾರಣದಿಂ ನಿಮ್ಮ ತಮ್ಮಂ
ವಿಚಿತ್ರವೀರ್ಯನ ಕ್ಷೇತ್ರದೊಳ್
ಆಂಬಿಕೆಗಂ ಅಂಬಾಲೆಗಂ
ಪುತ್ರರು ಅಪ್ಪಂತು
ವರಪ್ರಸಾದಮಂ

ದಯೆಗೆಯ್ವುದು ಎನೆ ಅಂತೆಗೆಯ್ವೆನೆಂದು-

ವಚನ:ಅರ್ಥ:ಹಾಗೆ ಸ್ಥಿರಪ್ರತಿಜ್ಞೆಯುಳ್ಳ ಗಾಂಗೇಯನನ್ನು ಏನು ಮಾಡಿದರೂ ಒಪ್ಪಿಸಲಾರದೆ ಸತ್ಯವತಿಯು ತಾನೂ ಆತನೂ ಆಲೋಚಿಸಿ ನಿಷ್ಕೃಷ್ಟವಾದ ಮಂತ್ರಾಲೋಚನೆಮಾಡಿ ಕೃಷ್ಣದ್ವೈಪಾಯನ ವ್ಯಾಸರನ್ನು ನೆನೆದು ಬರಿಸಲಾಗಿ

ವ್ಯಾಸಮುನೀಂದ್ರನು ಏನು ಮಾಡಬೇಕು ಏನನ್ನು ಈಡೇರಿಸಬೇಕು ಎನ್ನಲು, ಸತ್ಯವತಿಯು ಹೀಗೆಂದಳು- ಹಿರಣ್ಯಗರ್ಭ ಬ್ರಹ್ಮನಿಂದ ಹಿಡಿದು ಏಕಪ್ರಕಾರವಾಗಿ ನಡೆದುಬಂದ ನಮ್ಮ ಸೋಮವಂಶವು ಈಗ ನಮ್ಮ ಸಂತತಿಗೆ ಯಾರೂ ಇಲ್ಲದೆ ಮಧ್ಯೆ ಹರಿದುಹೋಗಿ ನಾಶವಾಗುವಂತಾಗಿದೆ.

ಆದಕಾರಣದಿಂದ ನಿನ್ನ
ತಮ್ಮನಾದ ವಿಚಿತ್ರವೀರ್ಯನ
ಕ್ಷೇತ್ರದಲ್ಲಿ ಅಂಬಿಕೆಗೂ
ಅಂಬಾಲಿಕೆಗೂ ಮಕ್ಕಳಾಗುವ
ಹಾಗೆ ವರಪ್ರಸಾದವನ್ನು
ಕರುಣಿಸಬೇಕು ಎಂದಳು.
ವ್ಯಾಸನು ಹಾಗೆಯೇ
ಆಗಲೆಂದು ಒಪ್ಪಿದನು.

**ಚಂ|| ತ್ರಿದಶ ನರಾಸುರೋರಗ
ಗಣ ಪ್ರಭು ನಿಶ್ಚಿತ
ತತ್ತ್ವಯೋಗಿ ಯೋ**

ಗದ ಬಲಮುಣ್ಮಿ ಪೊಣ್ಮಿ ನಿಲೆ ಪುತ್ರ ವರಾರ್ಥಿಗಳಾಗಿ ತನ್ನ ಕ| ಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂ ತ್ರದೊಳೆ ಪೊದಱ್ದುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ|| ೮೫||

ಪದ್ಯ-೮೫:ಪದವಿಭಾಗ-ಅರ್ಥ: ತ್ರಿದಶ ನರ ಸುರ ಉರಗ ಗಣ ಪ್ರಭು ನಿಶ್ಚಿತ

ತತ್ತ್ವಯೋಗಿ(ದೇವತೆಗಳು
ಮನುಷ್ಯರು ರಾಕ್ಷಸರು ಮತ್ತು
(ಪಾತಾಳಲೋಕದ)
ಸರ್ಪಗಳು ಮೊದಲಾದವರ
ಗುಂಪಿಗೆ ಪ್ರಭುವೂ
ನಿಷ್ಕೃಷ್ಟವಾದ ತತ್ತ್ವಜ್ಞಾನಿಯೂ
ಯೋಗಿಯೂ ಆದ
ವ್ಯಾಸಮಹರ್ಷಿಯು),
ಯೋಗದ ಬಲಮುಣ್ಮೆ ಪೊಣ್ಮೆ
ನಿಲೆ(ತನ್ನ ಯೋಗಶಕ್ತಿಯು
ಹುಟ್ಟಿ

ಬಲಗೊಂಡುಕಾಣುವಂತೆ
ಸ್ಥಿರವಾಗಿ ನಿಲ್ಲಲು), ಪುತ್ರ
ವರಾರ್ಥಿಗಳಾಗಿ ತನ್ನ
ಕಟ್ಟಿದಿರೊಳೆ ನಿಂದರಂ
ನಯದೆ ನೋಡೆ (ಮಕ್ಕಳು
ಬೇಕೆಂಬ ವರವನ್ನು
ಬೇಡುವವರಾಗಿ ತನ್ನ
ಎದುರಿನಲ್ಲೇ
ನಿಂತಿರುವವರನ್ನು
ಪ್ರೀತಿಯಿಂದ ನೋಡಲಾಗಿ)
ಮುನೀಂದ್ರನ

ದಿವ್ಯದೃಷ್ಟಿಮಂತ್ರದೊಳೆ
ಪೊದಱ್ದಿದಾ
ಸತಿಯರಿರ್ವರೊಳಂ
ನವಗರ್ಭವಿಭ್ರಮಂ(ಆ
ಋಷಿಶ್ರೇಷ್ಠನ
ದಿವ್ಯದೃಷ್ಟಿಯಂತ್ರದಿಂದ ಆ
ಇಬ್ಬರು ಸ್ತ್ರೀಯರಲ್ಲಿಯೂ
ಹೊಸದಾಗಿ
ಗರ್ಭಸೌಂದರ್ಯವು
ತುಂಬಿತು. (ಇಬ್ಬರಿಗೂ
ಗರ್ಭಧಾರಣೆ ಆಯಿತು))

ಪದ್ಯ-೮೫:ಅರ್ಥ:ದೇವತೆಗಳು ಮನುಷ್ಯರು ರಾಕ್ಷಸರು ಮತ್ತು (ಪಾತಾಳಲೋಕದಲ್ಲಿರವ) ಸರ್ಪಗಳು ಮೊದಲಾದವರ ಗುಂಪಿಗೆ ಪ್ರಭುವೂ ನಿಷ್ಕೃಷ್ಟವಾದ ತತ್ವಜ್ಞಾನಿಯೂ ಯೋಗಿಯೂ ಆದ ವ್ಯಾಸಮಹರ್ಷಿಯು, ತನ್ನ ಯೋಗಶಕ್ತಿಯು ಹುಟ್ಟಿ ಬಲಗೊಂಡುಕಾಣುವಂತೆ

ಸ್ಥಿರವಾಗಿ ನಿಲ್ಲಲು, ಮಕ್ಕಳು
ಬೇಕೆಂಬ ವರವನ್ನು
ಬೇಡುವವರಾಗಿ ತನ್ನ
ಎದುರಿನಲ್ಲೇ
ನಿಂತಿರುವವರನ್ನು
ಪ್ರೀತಿಯಿಂದ ನೋಡಲಾಗಿ, ಆ
ಋಷಿಶ್ರೇಷ್ಠನ
ದಿವ್ಯದೃಷ್ಟಿಯಂತ್ರದಿಂದ ಆ
ಇಬ್ಬರು ಸ್ತ್ರೀಯರಲ್ಲಿಯೂ
ಹೊಸದಾಗಿ
ಗರ್ಭಸೌಂದರ್ಯವು

ತುಂಬಿತು. (ಇಬ್ಬರಿಗೂ ಗರ್ಭಧಾರಣೆ ಆಯಿತು).

ವ|| ಅಂತು ದಿವ್ಯಸಂಯೋಗದೊಳಿರ್ವರುಂ ಗರ್ಭಮಂ ತಾಳ್ದರ್ ಮತ್ತೊರ್ವ ಮಗನಂ ವರಮಂ ಬೇಡೆಂದಂಬಿಕೆಗೆ ಪೇೞ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂಳುಯ್ತೆಯಂ ತನ್ನವೊಲೆ

ಕಯ್ಗೆಯ್ದು ಬರವಂ
ಬೇಡಲಟ್ಟಿದೊಡಾಕೆಗೆ
ವರದನಾಗಿ
ವ್ಯಾಸಮುನೀಂದ್ರಂ
ಸತ್ಯವತಿಗಂ
ಭೀಷ್ಮಂಗಮಿಂತೆಂದನೆನ್ನ
ವರಪ್ರಸಾದ ಕಾಲದೊಳೆನ್ನಂ
ಕಂಡಂಬಿಕೆ ಕಣ್ಣಂ
ಮುಚ್ಚಿದಳಪ್ಪುದಱಿಂದಾಕೆಗೆ
ಧೃತರಾಷ್ಟ್ರನೆಂಬ ಮಗನತ್ಯಂತ
ಸುಂದರಾಂಗನಾಗಿಯುಂ

ಜಾತ್ಯಂಧನಕ್ಕುಮಂಬಾಲೆ
ಮದ್ರೂಪಮಂ ಕಂಡು
ಮೊಗಮಂ ಪಾಂಡುರಂ
ಮಾಡಿದಳಪ್ಪುದಱಿಂದಾಕೆಗೆ
ಪಾಂಡುರೋಗಸಂಗತನುಮ
ನೇಕ
ಭದ್ರಲಕ್ಷಣಲಕ್ಷಿತನುಮತ್ಯಂತ
ಪ್ರತಾಪನುಮಾಗಿ
ಪಾಂಡುರಾಜನೆಂಬ ಮಗನಕ್ಕು
ಮಂಬಿಕೆಯ
ಸೂಱುಯ್ತೆಯಪ್ಪಾಕೆ

ದರಸಹಿತ

ವದನಾರವಿಂದೆಯಾಗಿ ಬರವಂ

ಕೈಕೊಂಡಳಪ್ಪುದಱಿಂದಾಕೆಯ

ಮಗಂ ವಿದುರನೆಂಬ

ನನಂಗಾಕಾರನುಮಾಚಾರವಂ

ತನುಂ

ಬುದ್ಧಿವಂತನುಮಕ್ಕುಮೆಂದು

ಪೇೞ್ದು ಮುನಿಪುಂಗವಂ

ಪೋದನಿತ್ತಂ-

ವಚನ:ಪದವಿಭಾಗ-

ಅರ್ಥ:ಅಂತು

ದಿವ್ಯಸಂಯೋಗದೊಳು
ಇರ್ವರುಂ ಗರ್ಭಮಂ ತಾಳ್ದರ್
ಮತ್ತೊರ್ವ ಮಗನಂ ವರಮಂ
ಬೇಡೆಂದ ಅಂಬಿಕೆಗೆ
ಪೇೞ್ದೊಡೆ ಆಕೆಯುಂ
ವ್ಯಾಸಭಟ್ಟಾರಕನಲ್ಲಿಗೆ
ಪೋಗಲು ಅಲಸಿ ತನ್ನ
ಸೂಱುಯ್ತೆಯಂ ತನ್ನವೊಲೆ
ಕಯ್ಗೆಯ್ದು ಬರವಂ ಬೇಡಲು
ಅಟ್ಟಿದೊಡೆ ಆಕೆಗೆ
ವರದನಾಗಿ(ವರಕೊಡುವವ

ನಾಗಿ)=[ಹಾಗೆ ದಿವ್ಯವಾದ
(ಋಷಿ ಶ್ರೇಷ್ಠನ)
ಸಂಯೋಗದಿಂದ ಇಬ್ಬರೂ
ಗರ್ಭವನ್ನು ಧರಿಸಿದರು.
ಇನ್ನೊಬ್ಬ ಮಗನ ವರವನ್ನು
ಕೇಳು ಎಂದು ಅಂಬಿಕೆಗೆ
ಹೇಳಲು ಅವಳು
ವ್ಯಾಸಭಟ್ಟಾರಕನ ಹತ್ತಿರ
ಹೋಗುವುದಕ್ಕೆ
ಆಯಾಸಪಟ್ಟು ತನ್ನ
ದಾಸಿಯನ್ನು ತನ್ನ ಹಾಗೆಯೇ

ಅಲಂಕರಿಸಿ ವರವನ್ನು
ಪ್ರಾರ್ಥಿಸುವಂತೆ ಹೇಳಿ
ಕಳುಹಿಸಲು
(ವ್ಯಾಸಮಹರ್ಷಿಯು)
ಅವಳಿಗೂ ವರವನ್ನು ಕೊಟ್ಟು
]; ವ್ಯಾಸಮುನೀಂದ್ರಂ
ಸತ್ಯವತಿಗಂ ಭೀಷ್ಮಂಗಂ
ಇಂತೆಂದನು ಎನ್ನ ವರಪ್ರಸಾದ
ಕಾಲದೊಳ್ ಎನ್ನಂ ಕಂಡು
ಅಂಬಿಕೆ ಕಣ್ಣಂ ಮುಚ್ಚಿದಳು
ಅಪ್ಪುದಱಿಂದ ಆಕೆಗೆ

ಧೃತರಾಷ್ಟ್ರನೆಂಬ ಮಗನು
ಅತ್ಯಂತ
ಸುಂದರಾಂಗನಾಗಿಯುಂ
ಜಾತ್ಯಂಧನು ಅಕ್ಕುಂ,
ಅಂಬಾಲೆ ಮದ್ರೂಪಮಂ
ಕಂಡು ಮೊಗಮಂ ಪಾಂಡುರಂ
ಮಾಡಿದಳು ಅಪ್ಪುದಱಿಂದ
ಆಕೆಗೆ ಪಾಂಡುರೋಗ
ಸಂಗತನುಂ ಅನೇಕ
ಭದ್ರಲಕ್ಷಣಲಕ್ಷಿತನುಂ ಅತ್ಯಂತ
ಪ್ರತಾಪನುಮಾಗಿ

ಪಾಂಡುರಾಜನೆಂಬ
ಮಗನಕ್ಕುಂ,=[ಸತ್ಯವತಿ ಮತ್ತು
ಭೀಷ್ಮರನ್ನು ಕುರಿತು ನನ್ನ
ವರಪ್ರಸಾದ ಕಾಲದಲ್ಲಿ
ನನ್ನನ್ನು ನೋಡಿ ಅಂಬಿಕೆಯು
ಕಣ್ಣನ್ನು
ಮುಚ್ಚಿದಳಾದುದರಿಂದ ಆಕೆಗೆ
ಧೃತರಾಷ್ಟ್ರನೆಂಬ ಮಗನು
ಅತ್ಯಂತ ಸುಂದರನಾಗಿಯೂ
ಹುಟ್ಟುಗುರುಡನಾಗಿಯೂ
ಹುಟ್ಟುತ್ತಾನೆ. ಅಂಬೆಯು ನನ್ನ

ರೂಪವನ್ನು ಕಂಡು
ಮುಖವನ್ನು ಬೆಳ್ಳಗೆ
ಮಾಡಿಕೊಂಡುದರಿಂದ
ಆಕೆಯ ಮಗನು
ಪಾಂಡುರೋಗದಿಂದ
ಕೂಡಿದವನೂ ಅನೇಕ
ಶುಭಲಕ್ಷಣಗಳಿಂದ
ಗುರುತುಮಾಡಲ್ಪಟ್ಟವನೂ
(ಕೂಡಿದವನೂ) ಅತ್ಯಂತ
ಶೌರ್ಯಶಾಲಿಯೂ ಆಗಿ
ಪಾಂಡುರಾಜನೆಂಬ

ಮಗನಾಗುತ್ತಾನೆ.];
ಅಂಬಿಕೆಯ ಸೂೞುಯ್ತೆಯಪ್ಪ
ಆಕೆ ದರಸಹಿತ(ಹುಸಿನಗೆ)
ವದನಾರವಿಂದೆಯಾಗಿ
ಬರವಂ ಕೈಕೊಂಡಳು
ಅಪ್ಪುದಱಿಂದ ಆಕೆಯ ಮಗಂ
ವಿದುರನೆಂಬನು ಅನಂಗ
ಆಕಾರನುಂ(ಮನ್ಮಥನ
ಆಕಾರನು) ಆಚಾರವಂತನುಂ
ಬುದ್ಧಿವಂತನುಂ ಅಕ್ಕುಮೆಂದು
ಪೇೞ್ದು ಮುನಿಪುಂಗವಂ

ಪೋದನು ಇತ್ತಂ-=
[ಅಂಬಿಕೆಯ
ದಾದಿಯಾದವಳು
ಹುಸಿನಗೆಯಿಂದ ಕೂಡಿದ
ಮುಖ ಕಮಲವುಳ್ಳವಳಾಗಿ
ಬಂದುದರಿಂದ ಆಕೆಯ
ಮಗನಾದ ವಿದುರನು
ಮನ್ಮಥಾಕಾರವುಳ್ಳವನೂ
ಆಚಾರವಂತನೂ
ಬುದ್ಧಿವಂತನೂ ಆಗುವನು

ಎಂದು ಹೇಳಿ ಮುನಿಶ್ರೇಷ್ಠನು ಹೋದನು. ಇತ್ತ-];
ವಚನ:ಅರ್ಥ:ಹಾಗೆ ದಿವ್ಯವಾದ (ಋಷಿ ಶ್ರೇಷ್ಠನ) ಸಂಯೋಗದಿಂದ ಇಬ್ಬರೂ ಗರ್ಭವನ್ನು ಧರಿಸಿದರು. ಇನ್ನೊಬ್ಬ ಮಗನ ವರವನ್ನು ಕೇಳು ಎಂದು ಅಂಬಿಕೆಗೆ ಹೇಳಲು ಅವಳು ವ್ಯಾಸಭಟ್ಟಾರಕನ ಹತ್ತಿರ ಹೋಗುವುದಕ್ಕೆ

ಆಯಾಸಪಟ್ಟು ತನ್ನ
ದಾಸಿಯನ್ನು ತನ್ನ ಹಾಗೆಯೇ
ಅಲಂಕರಿಸಿ ವರವನ್ನು
ಪ್ರಾರ್ಥಿಸುವಂತೆ ಹೇಳಿ
ಕಳುಹಿಸಲು
(ವ್ಯಾಸಮಹರ್ಷಿಯು)
ಅವಳಿಗೂ ವರವನ್ನು ಕೊಟ್ಟು,
ಸತ್ಯವತಿ ಮತ್ತು ಭೀಷ್ಮರನ್ನು
ಕುರಿತು ನನ್ನ ವರಪ್ರಸಾದ
ಕಾಲದಲ್ಲಿ ನನ್ನನ್ನು ನೋಡಿ
ಅಂಬಿಕೆಯು ಕಣ್ಣನ್ನು

ಮುಚ್ಚಿದಳಾದುದರಿಂದ ಆಕೆಗೆ ಧೃತರಾಷ್ಟ್ರನೆಂಬ ಮಗನು ಅತ್ಯಂತ ಸುಂದರನಾಗಿಯೂ ಹುಟ್ಟುಗುರುಡನಾಗಿಯೂ ಹುಟ್ಟುತ್ತಾನೆ. ಅಂಬೆಯು ನನ್ನ ರೂಪವನ್ನು ಕಂಡು ಮುಖವನ್ನು ಬೆಳ್ಳಗೆ ಮಾಡಿಕೊಂಡುದರಿಂದ ಆಕೆಯ ಮಗನು ಪಾಂಡುರೋಗದಿಂದ ಕೂಡಿದವನೂ ಅನೇಕ

ಶುಭಲಕ್ಷಣಗಳಿಂದ
ಗುರುತುಮಾಡಲ್ಪಟ್ಟವನೂ
(ಕೂಡಿದವನೂ) ಅತ್ಯಂತ
ಶೌರ್ಯಶಾಲಿಯೂ ಆಗಿ
ಪಾಂಡುರಾಜನೆಂಬ
ಮಗನಾಗುತ್ತಾನೆ. ಅಂಬಿಕೆಯ
ದಾದಿಯಾದವಳು
ಹುಸಿನಗೆಯಿಂದ ಕೂಡಿದ
ಮುಖ ಕಮಲವುಳ್ಳವಳಾಗಿ
ಬಂದುದರಿಂದ ಆಕೆಯ
ಮಗನಾದ ವಿದುರನು

ಮನ್ಮಥಾಕಾರವುಳ್ಳವನೂ
ಆಚಾರವಂತನೂ
ಬುದ್ಧಿವಂತನೂ ಆಗುವನು
ಎಂದು ಹೇಳಿ ಮುನಿಶ್ರೇಷ್ಠನು
ಹೋದನು. ಇತ್ತ-

ಪೃಥ್ವಿ|| ವರಂಬಡೆದ ಸಂತಸಂ
ಮನದೊಳಾಗಲೊಂದುತ್ತರೋ
ತ್ತರಂ ಬಳೆವ ಮಾಟ್ಕೆಯಿಂ
ಬಳೆವ ಗರ್ಭಮಂ ತಾಳ್ದಿಯಾ|
ದರಂ ಬೆರಸು ಪೆತ್ತರಂದು
ಧೃತರಾಷ್ಟ್ರ ವಿಖ್ಯಾತ ಪಾಂ

ಡುರಾಜ ವಿದುರರ್ಕಳಂ ಕ್ರಮದೆ ಮೂವರು ಮೂವರಂ|| ೮೬ ||

ಪದ್ಯ-೮೬:ಪದವಿಭಾಗ-ಅರ್ಥ:(ಆ ಮೂವರು ಸ್ತ್ರೀಯರೂ)ವರಂಬಡೆದ ಸಂತಸಂ ಮನದೊಳಾಗಲು (ವರ ಪಡೆದ ಸಂತೋಷ ಮನಸ್ಸಿನಲ್ಲಿ ತುಂಬಲು), ಒಂದು ಉತ್ತರೋತ್ತರಂ ಬಳೆವ ಮಾಟ್ಕೆಯಿಂ (ಒಂದು

ಸಂತತಿತ ಸತತ
ಮುಂದುವರಿಯುವ
ಕ್ರಿಯೆಯಿಂದ),ಬಳೆವ
ಗರ್ಭಮಂ ತಾಳ್ದಿಂ ಅದರಂ
ಬೆರಸು(ಹಾಗೆಯೇ
ಬೆಳೆಯುತ್ತಿರುವ ಗರ್ಭವನ್ನು
ಧರಿಸಿ, ಅದನ್ನು ಹೊಂದಿದರು
), ಪೆತ್ತರು ಅಂದು ಧೃತರಾಷ್ಟ್ರ
ವಿಖ್ಯಾತ ಪಾಂಡುರಾಜ
ವಿದುರರ್ಕಳಂ ಕ್ರಮದೆ
ಮೂವರು

ಮೂವರಂ(ಮೂವರೂ ಧೃತರಾಷ್ಟ್ರ, ವಿಖ್ಯಾತನಾದ ಪಾಂಡುರಾಜ, ವಿದುರ ಎಂಬ ಮೂವರನ್ನು ಕ್ರಮವಾಗಿ ಅಂದು ಪಡೆದರು).

ಪದ್ಯ-೮೬:ಅರ್ಥ:ಆ ಮೂವರು ಸ್ತ್ರೀಯರೂ ವರ ಪಡೆದ ಸಂತೋಷ ಮನಸ್ಸಿನಲ್ಲಿ ತುಂಬಲು, ಒಂದು ಸಂತತಿ ಸತತ ಮುಂದುವರಿಯುವ

ಕ್ರಿಯೆಯಿಂದ, ಹಾಗೆಯೇ ಬೆಳೆಯುತ್ತಿರುವ ಗರ್ಭವನ್ನು ಧರಿಸಿ, ಅದನ್ನು ಹೊಂದಿದರು. ಮೂವರೂ ಧೃತರಾಷ್ಟ್ರ, ವಿಖ್ಯಾತನಾದ ಪಾಂಡುರಾಜ, ವಿದುರ ಎಂಬ ಮೂವರನ್ನು ಕ್ರಮವಾಗಿ ಅಂದು ಪಡೆದರು.

ಕಂ|| ಆ ವಿವಿಧ ಲಕ್ಷಣಂಗಳೊ
ಳಾವರಿಸಿದ ಕುಲದ ಬಲದ
ಚಲದಳವಿಗಳೊಳ್|
ಮೂವರುಮನಾದಿ ಪುರುಷರ್

ಮೂವರುಮೆನಲಲ್ಲದತ್ತ ಮತ್ತೇನೆಂಬರ್|| ೮೭||

ಪದ್ಯ-೮೭:ಪದವಿಭಾಗ-ಅರ್ಥ: ಆ ವಿವಿಧ ಲಕ್ಷಣಂಗಳೊಳು ಆವರಿಸಿದ ಕುಲದ ಬಲದ ಚಲದ ಅಳವಿಗಳೊಳ್(ಆ ವಿವಿಧ ಲಕ್ಷಣಂಗಳಿಂದ ಕೂಡಿದ ವಂಶದ, ಶೌರ್ಯ, ಛಲದ ಪ್ರಮಾಣಗಳಲ್ಲಿ) ಮೂವರುಂ ಅನಾದಿ (ಆದಿ?) ಪುರುಷರ್

ಮೂವರುಂ ಎನಲು ಅಲ್ಲದೆ ಅತ್ತ ಮತ್ತೇನೆಂಬರ್(ಆ ಮೂವರುಮನಾದಿ= ಆ ಮೂವರುಂ- ಅನಾದಿ; ಆ ಮೂವರನ್ನೂ ಆನಾದಿ ಪುರುಷರಾದ ತ್ರಿಮೂರ್ತಿಗಳೂ ಆದ ಬ್ರಹ್ಮವಿಷ್ಣು ಶಿವರೆಂದು ಹೇಳದೆ ಮತ್ತೇನೆಂದು ಹೇಳುವುದು).

ಪದ್ಯ-೮೭:ಅರ್ಥ:ಆ ವಿವಿಧ ಲಕ್ಷಣಂಗಳಿಂದ ಕೂಡಿದ ವಂಶದ, ಶೌರ್ಯ, ಛಲದ ಪ್ರಮಾಣಗಳಲ್ಲಿ ಆ ಮೂವರನ್ನೂ ಆನಾದಿ ಪುರುಷರಾದ ತ್ರಿಮೂರ್ತಿಗಳೂ ಆದ ಬ್ರಹ್ಮವಿಷ್ಣು ಶಿವರೆಂದು ಹೇಳದೆ ಮತ್ತೇನೆಂದು ಹೇಳುವುದು.

ವ|| ಅಂತವರ್ಗೆ ಜಾತಕರ್ಮ
ನಾಮಕರಣಾನ್ನಪ್ರಾಶನ
ಚೌಲೋಪನಯವಾದಿ
ಷೋಡಶಕ್ರಿಯೆಗಳಂ
ಗಾಂಗೇಯಂ ತಾಂ ಮುಂತಿಟ್ಟು
ಮಾಡಿ ಶಸ್ತ್ರ ಶಾಸ್ತ್ರಂಗಳೊಳತಿ
ಪರಿಣತರಂ ಮಾಡಿ
ಮದುವೆಯಂ ಮಾಡಲೆಂದು
ಧೃತರಾಷ್ಟ್ರಂಗೆ ಗಾಂಧಾರರಾಜ
ಸೌಬಲನ ಮಗಳಪ್ಪ
ಗಾಂಧಾರಿಯಂ

ಶಕುನಿಯೊಡವುಟ್ಟಿದಳಂ ತಂದುಕೊಟ್ಟು-

ವಚನ:ಪದವಿಭಾಗ-

ಅರ್ಥ:ಅಂತವರ್ಗೆ ಜಾತಕರ್ಮ ನಾಮಕರಣ ಅನ್ನಪ್ರಾಶನ ಚೌಲ ಉಪನಯವಾದಿ ಷೋಡಶಕ್ರಿಯೆಗಳಂ ಗಾಂಗೇಯಂ ತಾಂ ಮುಂತಿಟ್ಟು ಮಾಡಿ ಶಸ್ತ್ರ ಶಾಸ್ತ್ರಂಗಳೊಳು ಅತಿ ಪರಿಣತರಂ ಮಾಡಿ

ಮದುವೆಯಂ ಮಾಡಲೆಂದು ಧೃತರಾಷ್ಟ್ರಂಗೆ ಗಾಂಧಾರರಾಜ ಸೌಬಲನ ಮಗಳಪ್ಪ ಗಾಂಧಾರಿಯಂ ಶಕುನಿಯೊಡವುಟ್ಟಿದಳಂ ತಂದುಕೊಟ್ಟು-

ವಚನ:ಅರ್ಥ:|| ಹಾಗೆ ಅವರಿಗೆ ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ್ಯ ಉಪನಯನವೇ ಮೊದಲಾದ ಹದಿನಾರು

ಕರ್ಮಗಳನ್ನು ಪ್ರಧಾನವಾಗಿ
ಭೀಷ್ಮನು ತಾನೇ ಮುಂದೆ
ನಿಂತು ಮಾಡಿ ಅವರನ್ನು
ಶಸ್ತ್ರವಿದ್ಯೆಯಲ್ಲಿಯೂ
ಶಾಸ್ತ್ರವಿದ್ಯೆಯಲ್ಲಿಯೂ
ಪಂಡಿತರನ್ನಾಗಿ ಮಾಡಿದನು.
ಧೃತರಾಷ್ಟ್ರನಿಗೆ
ಗಾಂಧಾರರಾಜನಾದ
ಸೌಬಲನ ಮಗಳೂ ಶಕುನಿಯ
ಒಡಹುಟ್ಟಿದವಳೂ ಆದ

ಗಾಂಧಾರಿಯನ್ನು ಮದುವೆ ಮಾಡಿದನು.

<u>ಕರ್ಣನ ಜನನ ಮತ್ತು ಏಳಿಗೆ</u>

ಕಂ || ಮತ್ತಿತ್ತ ನೆಗೞ್ತೆಯ ಪುರು
ಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ |
ಮತ್ತಗಜಗಮನೆ ಯದುವಂ

ಶೋತ್ತಮೆಯೆನೆ ಕುಂತಿ ಕುಂತಿಭೋಜನ ಮನೆಯೊಳ್ || ೮೮||

ಪದ್ಯ-೮೮:ಪದವಿಭಾಗ-

ಅರ್ಥ:ಮತ್ತೆ ಇತ್ತ ನೆಗೞ್ತೆಯ (ಪ್ರಸಿದ್ಧ)ಪುರುಷೋತ್ತಮನ ಪಿತಾಮಹಂಗೆ ಶೂರಂಗೆ ಮಗಳ್ ಮತ್ತಗಜಗಮನೆ ಯದುವಂಶೋತ್ತಮೆ ಯೆನೆ ಕುಂತಿ ಕುಂತಿಭೋಜನ ಮನೆಯೊಳ್

ಪದ್ಯ-೮೮:ಅರ್ಥ:ಈ ಕಡೆ ಪ್ರಸಿದ್ಧನಾದ ಶ್ರೀಕೃಷ್ಣನ ತಾತನಾದ ಶೂರನೆಂಬ ಯದುವಂಶದ ರಾಜನಿಗೆ ಮದಗಜಗಮನೆಯೂ ಯದುವಂಶಶ್ರೇಷ್ಠಳೂ ಆದ ಕುಂತಿಯೆಂಬ ಮಗಳು ಕುಂತಿಭೋಜನ ಮನೆಯಲ್ಲಿ ಬೆಳೆಯುತ್ತಿರಲು;

ಬಳೆಯುತ್ತಿರ್ಪನ್ನೆಗಮಾ

ನಳಿನಾಸ್ಯೆಯ ಗೆಯ್ದುದೊಂದು ಶುಶ್ರೂಷೆ ಮನಂ |
ಗೊಳೆ ಕೊಟ್ಟಂ ದುರ್ವಾಸಂ
ವಿಳಸಿತ ಮಂತ್ರಾಕ್ಷರಂಗಳಂ ದಯೆಯಿಂದಂ || ೮೯||

ಪದ್ಯ-೮೯:ಪದವಿಭಾಗ-ಅರ್ಥ:ಬಳೆಯುತ್ತಿರ್ಪ ಅನ್ನೆಗಂ ಆ ನಳಿನಾಸ್ಯೆಯು ಗೆಯ್ದ ಒಂದು ಶುಶ್ರೂಷೆ ಮನಂಗೊಳೆ ಕೊಟ್ಟಂ ದುರ್ವಾಸಂ ವಿಳಸಿತ

ಮಂತ್ರಾಕ್ಷರಂಗಳಂ
ದಯೆಯಿಂದಂ
ಪದ್ಯ-೮೯:ಅರ್ಥ:ಆ
ಕಮಲಮುಖಿಯಾದ
ಕುಂತಿಯು ಮಾಡಿದ
ಶುಶ್ರೂಷೆಯಿಂದ ಮೆಚ್ಚಿದ
ದುರ್ವಾಸನೆಂಬ ಋಷಿಯು
ಪ್ರಕಾಶಮಾನವಾದ
(ಅಯ್ದು?)
ಮಂತ್ರಾಕ್ಯರಗಳನ್ನು
ದಯಮಾಡಿ ಕೊಟ್ಟನು.

ವ|| ಅಂತು ಕೊಟ್ಟಯ್ದು

ಮಂತ್ರಾಕ್ಷರಂಗಳನು ಆಹ್ವಾನಂ

ಗೆಯ್ದು ನಿನ್ನ ಬಗೆಗೆ ಬಂದ

ಪೋಲ್ವೆಯ ಮಕ್ಕಳಂ

ಪಡೆವೆಯೆಂದು

ಬೆಸಸಿದೊಡೊಂದು ದಿವಸಂ

ಕೊಂತಿ-

ವಚನ:ಪದವಿಭಾಗ-

ಅರ್ಥ:ಅಂತು ಕೊಟ್ಟಯ್ದು

ಮಂತ್ರಾಕ್ಷರಂಗಳನು ಆಹ್ವಾನಂ

ಗೆಯ್ದು ನಿನ್ನ ಬಗೆಗೆ ಬಂದ

ಪೊೀಲ್ವೆಯ ಮಕ್ಕಳಂ
ಪಡೆವೆಯೆಂದು ಬೆಸಸಿದೊಡೆ
ಒಣದು ದಿವಸಂ ಕೊಂತಿ-
ವಚನ:ಅರ್ಥ: || ಹಾಗೆ
ಕೊಟ್ಟು ಈ
ಅಯ್ದುಮಂತ್ರಗಳನ್ನು ನೀನು
ಉಚ್ಚರಿಸಿ ಕರೆದರೆ ನಿನ್ನ
ಮನಸ್ಸಿಗೆ ಬಂದ ಹೋಲಿಕೆಯ
ಮಕ್ಕಳನ್ನು ಪಡೆಯುತ್ತೀಯೆ
ಎಂದು ಅಪ್ಪಣೆ ಮಾಡಿದನು. .
ಒಂದು ದಿನ ಕುಂತಿಯು --

ಕಂ|| ಪುಚ್ಚವಣಂ ನೋಡುವೆನೆ ನ್ನಿಚ್ಚೆಯೊಳೀ ಮುನಿಯ ವರದ ಮಹಿಮೆಯನೆನುತಂ| ದುಚ್ಚಸ್ತನಿ ಗಂಗೆಗ ಶಫ ರೋಚ್ಚಳಿತ ತರತ್ತರಂಗೆಗೊರ್ವಳೆ ಬಂದಳ್|| ೯೦||

ಪದ್ಯ-೬೯:ಪದವಿಭಾಗ-ಅರ್ಥ:ಪುಚ್ಚವಣಂ (ಪರೀಕ್ಷೆಮಾಡಿ) ನೋಡುವೆನು

ಎನ್ನ ಇಚ್ಚೆಯೊಳು ಈ
ಮುನಿಯ ವರದ
ಮಹಿಮೆಯನು ಎನುತೆ
ಅಂದು ಉಚ್ಚಸ್ತನಿ (ಎತ್ತರದ
ಸ್ತನವುಳ್ಳವಳು) ಗಂಗೆಗ ಶಫರ
ಉಚ್ಚಳಿತ (ಮೀನು
ಹಾರುತ್ತಿರುವ) ತರತ್ತರಂಗೆಗೆ
(ಅಲೆಗಳ ಗಂಗೆಗೆ:ಗ-
ಅಧ್ಯಾಹಾರ) ಓರ್ವಳೆ
ಬಂದಳ್

ಪದ್ಯ-೬೯:ಅರ್ಥ:ಕುಂತಿಯು, ಈ ಋಷಿಯ ಕೊಟ್ಟ 'ವರ'ದ ಮಹಿಮೆಯನ್ನು ನನಗೆ ಇಷ್ಟ ಬಂದಂತೆ ಪರೀಕ್ಷೆ ಮಾಡಿ ನೋಡುತ್ತನೆಂದು ಮೀನುಗಳಿಂದ ಮೇಲಕ್ಕೆ ;ಹಾರಿಸಲ್ಪಟ್ಟ ಚಂಚಲವಾದ ಗಂಗಾನದಿಗೆ ಒಬ್ಬಳೇ ಬಂದಳು.

ಬಂದು ಸುರನದಿಯ ನೀರೊಳ್

ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನ| ಕ್ಕೆಂದಾಹ್ವಾನಂಗೆಯ್ಯಲೊಡಂ ದಲ್ ಧರೆಗಿೞಿದನಂದು ದಶಸತಕಿರಣಂ|| ೯೧

ಪದ್ಯ-೯೧:ಪದವಿಭಾಗ-ಅರ್ಥ:ಬಂದು ಸುರನದಿಯ(ಗಂಗೆಯ) ನೀರೊಳ್ ಮಿಂದು ಇನನಂ (ಸ್ನಾನ ಮಾಡಿ ಸೂರ್ಯನನ್ನು)ನೋಡಿ ನಿನ್ನ

ದೊರೆಯನೆ (ಸಮಾನನಾದ) ಮಗನು ಅಕ್ಕೆಂದು (ಆಗಲಿ) ಆಹ್ವಾನಂ ಗೆಯ್ಯಲು ಒಡಂ (ಒಡನೆ) ದಲ್ (ಅದೆ! ನಿಜಕ್ಕೂ) ಧರೆಗಿೞಿದನು ಅಂದು ದಶಸತಕಿರಣಂ (ಸಹಸ್ರಕಿರಣ ಸೂರ್ಯ ಭೂಮಿಗೆ ಇಳಿದುಬಂದ)|

ಪದ್ಯ-೬೯:ಅರ್ಥ:ಬಂದು ಗಂಗಾನದಿಯ ನೀರಿನಲ್ಲಿ ಸ್ನಾನಮಾಡಿ ಸೂರ್ಯನನ್ನು

ನೋಡಿ ನಿನಗೆ ಸಮನಾದ
ಮಗನಾಗಲಿ ಎಂದು
ಕರೆದಾಗಲೇ ಸೂರ್ಯನು
ಭೂಮಿಗಿಳಿದು
ಪ್ರತ್ಯಕ್ಷವಾದನು.

ವ|| ಅಂತು ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದರವಿಂದ ಬಾಂಧವನಂ ನೋಡಿ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು

ನಭೋಭಾಗದಿಂ (ಆಕಾಶದಿಂದ) ಭೂಮಿಭಾಗಕ್ಕೆ ಇೞಿದು ತನ್ನ ಮುಂದೆ ನಿಂದ ಅರವಿಂದ ಬಾಂಧವನಂ (ಕಮಲದ ಸಖ -ಸುರ್ಯ) ನೋಡಿ ನೋಡಿ-

ವಚನ:ಅರ್ಥ:ಹೀಗೆ ಆಕಾಶದಿಂದ ಭೂಮಿಗೆ ಇಳಿದು ತನ್ನ ಮುಂದೆ ನಿಂತಿರುವ ಸೂರ್ಯನನ್ನು ದಿಟ್ಟಿಸಿ ಮತ್ತೆ ಮತ್ತೆ ನೋಡಿ,

ಕಂ|| ಕೊಡಗೂಸುತನದ ಭಯದಿಂ
ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊ|
ಳ್ಕುಡಿಯಲೊಡಗೂಡೆ ಗಂಗೆಯ
ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ|| ೯೨||

ಪದ್ಯ-೯೨:ಪದವಿಭಾಗ-ಅರ್ಥ:ಕೊಡಗೂಸುತನದ ಭಯದಿಂ ನಡುಗುವ

ಕನ್ನಿಕೆಯ ಬೆಮರ ನೀರ್ಗಳ ಪೊನಲ್(ಪ್ರವಾಹವು) ಒಟ್ಟೈಡಿಯಲ್ (ಉಕ್ಕಿಹರಿಯಲು) ಒಡಗೂಡೆ ಗಂಗೆಯ ಮಡು ಕರೆಗಣ್ಮಿದುದು(ಕರೆ -ತೀರ,ಕಣ್ಮ- ತುಂಬು, ಉಕ್ಕಿಹರಿಯಿತು?) ದಡಗಳನ್ನು ಮೀರಿಯರಿಯಿತು. ನಾಣ ಪೆಂಪೇಂ

ಪಿರಿದೋ(ನಾಚಿಕೆಯ ಘನತೆ ಎಷ್ಟು ದೊಡ್ಡದೋ!)

ಪದ್ಯ-೯೨:ಅರ್ಥ:ತಾನು ಇನ್ನೂ ಕನ್ಯೆ ಎಂಬ ಭಯದಿಂದ ನಡುಗುವ ಆ ಕನ್ಯೆಯ ಬೆವರಿನ ನೀರಿನ ಪ್ರವಾಹವು ತುಂಬಿ ಹರಿದು ಉಕ್ಕಿಹರಿಯಲು ಗಂಗಾನದಿಯ ಮಡುವೂ ದಡವನ್ನು ಮೀರಿ ಹರಿಯಿತು.

ಆಕೆಯ ನಾಚಿಕೆಯ ಘನತೆ ಎಷ್ಟು ಹಿರಿದೊ!

ವ|| ಆಗಳಾದಿತ್ಯನಾಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕುಮುಮಂ ಕಿಡೆನುಡಿದಿಂತೆಂದಂ-

ವಚನ:ಪದವಿಭಾಗ-ಅರ್ಥ:ಆಗಳು ಆದಿತ್ಯನು ಆಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕುಮುಮಂ ಕಿಡೆನುಡಿದಿಂತೆಂದಂ (ಕಿಡಿದು ಕೆಡಿಸಿ- ಭಯ ಹೋಗುವಂತೆ ನುಡಿದ)-

ವಚನ:ಅರ್ಥ:ಆಗ ಸೂರ್ಯನು ಅವಳ ಮನಸ್ಸಿನ

ಸಂದೇಹವೂ, ನಡುಗುತ್ತಿರುವ ಶರೀರದ ನಡುಕವೂ ಹೋಗುವ ಹಾಗೆ ನಯದಿಂದ ಹೇಳಿದನು.

ಕಂ|| ಬರಿಸಿದ ಕಾರಣಮಾವುದೊ
ತರುಣಿ ಮುನೀಶ್ವರನ ಮಂತ್ರಮೇ ದೊರೆಯೆಂದಾಂ|
ಮರುಳಿಯೆನೆಯಱಿದುಮಱಿಯದೆ

ಬರಿಸಿದೆನ್ನಿನ್ನೇಱಿಮೆಂದೊಡಾಗದು ಪೋಗಲ್‌|| ೯೩||

ಪದ್ಯ-೯೩:ಪದವಿಭಾಗ-ಅರ್ಥ:ಬರಿಸಿದ ಕಾರಣಂ ಆವುದೊ ತರುಣಿ? ಮುನೀಶ್ವರನ ಮಂತ್ರಂ ಏ ದೊರೆಯೆಂದು (ಏನು ತರದ್ದು-ಎಂಥಾದ್ದು) ಆಂ ಮರುಳಿಯೆನೆ (ನಾನು ಮರುಳಿ ತಿಳಿಯದವಳು) ಅಱಿದುಂ ಅಱಿಯದೆ

(ತಿಳಿದೂ ತಿಳಿಯದೆ)
ಬರಿಸಿದೆನು ಇನ್ನು ಏಟಿಂ
ಎಂದೊಡೆ ಆಗದು ಪೋಗಲ್
(ಬರಮಾಡಿಕೊಂಡೆನು, ಇನ್ನು
ಏಳಿರಿ - ಇಲ್ಲಿಂದ ಹೋಗಿ
ಎಂದಾಗ, ಹೋಗುವುದಕ್ಕೆ-)
(ಆಗದು)
ಪದ್ಯ-೯೩:ಅರ್ಥ:ಎಲೆ
ತರುಣಿ ನನ್ನನ್ನು ಕರೆಸಿದ
ಕಾರಣವೇನು, ಎಂದು
ಸೂರ್ಯನು ಪ್ರಶ್ನಿಸಲು,

ಕುಂತಿಯು ಆ ಋಷಿಶ್ರೇಷ್ಠನು ಕೊಟ್ಟ ಮಂತ್ರವು ಎಂಥಾದ್ದು ಎಂದು ಪರೀಕ್ಷಿಸಿಸಲು ನಿನ್ನನ್ನು ತಿಳಿದೂ ತಿಳಿಯದೆ ಬರಿಸಿದೆನು.ನಾನು ಅರಿಯದವಳು. ಇನ್ನು ಇಲ್ಲಿಂದ ಹೋಗಿ ಎಂದಳು.

ಮುಂ ಬೇಡಿದ ವರಮಂ ಕುಡ ದಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗ|

ಕ್ಕಂಬುದುಮೊದವಿದ ಗರ್ಭದೊ ಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ|| ೯೪||

ಪದ್ಯ-೯೪:ಪದವಿಭಾಗ-ಅರ್ಥ:ಮುಂ ಬೇಡಿದ ವರಮಂ ಕುಡದೆ (ಕೊಡದೆ ಇರುವುದು ಆಗದು) ಅಂಬುಜಮುಖಿ, ಪುತ್ರನು ಎನ್ನ ದೊರೆಯಂ ನಿನಗಕ್ಕೆ ಎಂಬುದುಂ (ನನ್ನಂತೆಯೇ

ಇರುವ ಮಗನು
ನಿನಗಾಗುವನು, ಎಂದಾಗ,)
ಒದವಿದ ಗರ್ಭದೊಳು
ಅಂಬುಜಮಿತ್ರನನೆ ಪೋಲ್ವ
ಮಗನು
ಒಗೆತಂದಂ(ಸೂರ್ಯನನ್ನೇ
ಹೋಲುವ ಮಗನು
ಹುಟ್ಟಿಬಮದನು.)
ಪದ್ಯ-೯೪:ಅರ್ಥ:.
ಸೂರ್ಯನು, ಎಲೌ
ಕಮಲಮುಖಿ ಕುಂತಿಯೇ,

ನೀನು ಮೊದಲು ಬೇಡಿದ ವರವನ್ನು ಕೊಡದೆ ನಾನು ಹೋಗಲಾಗುವುದಿಲ್ಲ. ನಿನಗೆ ನನ್ನ ಸಮಾನನಾದ ಮಗನಾಗಲಿ ಎಂದನು. ಆಗ ಉಂಟಾದ ಗರ್ಭದಲ್ಲಿ ಕಮಲಸಖನಾದ ಸೂರ್ಯನನ್ನು ಹೋಲುವ ಮಗನು ಹುಟ್ಟಿಬಂದನು.

ಒಡವುಟ್ಟಿದ ಮಣಿಕುಂಡಲ

ಮೊಡವುಟ್ಟಿದ ಸಹಜಕವಚಮಮರ್ದಿರೆ ತನ್ನೊಳ್ |
ತೊಡರ್ದಿರೆಯುಂ ಬಂದಾಕೆಯ ನಡುಕಮನೊಡರಿಸಿದನಾಗಳಾ ಬಾಲಿಕೆಯಾ || ೯೫||

ಪದ್ಯ-೯೫:ಪದವಿಭಾಗ-ಅರ್ಥ:ಒಡವುಟ್ಟಿದ ಮಣಿಕುಂಡಲಂ ಒಡವುಟ್ಟಿದ ಸಹಜ ಕವಚಂ ಅಮರ್ದಿರೆ

(ಸೇರಿಕೊಂಡಿರಲು) ತನ್ನೊಳ್

ತೊಡರ್ದಿರೆಯುಂ

(ಅಂಟಿಕೊಂಡಿರಲು) ಬಂದು

ಆಕೆಯ ನಡುಕಮನು

ಒಡರಿಸಿದನು

(ಉಂಟುಮಢಿದನು)ಆಗಳು

ಆ ಬಾಲಿಕೆಯಾ(ಯುಂ)

ಪದ್ಯ-೯೫:ಅರ್ಥ:ಜೊತೆಯ

ಲ್ಲಿಯೇ ಹುಟ್ಟಿದ

ಮಣಿಕುಂಡಲಗಳೂ

(ರತ್ನಖಚಿತವಾದ ಕಿವಿಯ

ಆಭರಣಗಳು)
ಜೊತೆಯಲ್ಲಿಯೇ ಹುಟ್ಟಿದ
ಕವಚವೂ ತನ್ನಲ್ಲಿ ಸೇರಿ
ಅಮರಿಕೊಂಡಿರಲು ಆ
ಮಗನು ಹುಟ್ಟಿಬಂದು, ಆಗ ಆ
ಬಾಲಿಕೆಗೆ ನಡುಕವನ್ನುಂಟು
ಮಾಡಿದನು.

ವ|| ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನಮ ನೀಡಾಡುವಂತೆ ಕೂಸಂ

ಗಂಗೆಯೊಳೀಡಾಡಿ ಬಂದಳಿತ್ತ ಗಂಗಾದೇವಿಯುಮಾ ಕೂಸಂ ಮುಱುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಱ್ಕೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬಂ ಕಂಡು-

ವಚನ:ಪದವಿಭಾಗ-ಅರ್ಥ:ಅಂತು ನಡನಡ ನಡುಗಿ, ಜಲದೇವತೆಗಳು ಅಪ್ಪೊಡಂ (ಆದರೂ) ಮನಂಗಾಣ್ಬರು ಎಂದು ನಿಧಾನಮ ನೀಡಾಡುವಂತೆ (ನಿಧಿಯನ್ನು ಎಸೆಯುವಂತೆ) ಕೂಸಂ ಗಂಗೆಯೊಳು ಈಡಾಡಿ ಬಂದಳು ಇತ್ತ (ಮಗುವನ್ನು ಗಂಗೆಯಲ್ಲಿ ಹಾಕಿ ಬಂದಳು. ಇತ್ತ) ಗಂಗಾದೇವಿಯುಂ ಆ ಕೂಸಂ ಮುಱುಗಲೀಯದೆ (ಮುಳುಗಲು ಬಿಡದೆ) ತನ್ನ ತೆರೆಗಳೆಂಬ ನಲಿತೋಳ್ಗಳಿಂ (ಕೋಮಲ ತೋಲುಗಳಿಂದ)ಒಯ್ಯನೊಯ್ಯನೆ

(ಮೆಲ್ಲಮೆಲ್ಲನೆ) ತಟ್ಕ್ಕ್ಯಸಿ ತರೆ (ಅಪ್ಪಿಕೊಂಡು ತರಲು) ಗಂಗಾತೀರದೊಳು
ಇರ್ಪ ಸೂತನು ಎಂಬಂ ಕಂಡು-

ವಚನ:ಅರ್ಥ:ಹಾಗೆ
ಬಹಳವಾಗಿ ನಡುಗಿ
ಜಲದೇವತೆಗಳಾದರೂ ನನ್ನ
ಮನಸ್ಸನ್ನು
ತಿಳಿದುಕೊಳ್ಳುತ್ತಾರೆ ಎಂದು
ತನ್ನ ನಿಧಿಯನ್ನೇ
(ಐಶ್ವರ್ಯವನ್ನೇ)
ಬಿಸಾಡುವಂತೆ ಮಗುವನ್ನು
ಗಂಗೆಯಲ್ಲಿ ಹಾಕಿ ಬಂದಳು.
ಈ ಕಡೆ ಗಂಗಾದೇವಿಯು ಆ

ಕೂಸನ್ನು ಮುಳುಗುವುದಕ್ಕೆ ಅವಕಾಶಕೊಡದೆ ತನ್ನ ಅಲೆಗಳೆಂಬ ಕೋಮಲವಾದ ತೋಳುಗಳಿಂದ ನಿಧಾನವಾಗಿ ತಬ್ಬಿಕೊಂಡು ತರಲು ಗಂಗಾತೀರದಲ್ಲಿದ್ದ ಸೂತನೆಂಬುವನು ಅದನ್ನು ಕಂಡನು.

ಉ|| ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂ

ದ್ರಾಳಯದಿಂದಮುರ್ಚಿದ
ಫಣಾಮಣಿ ಮಂಗಳ
ರಶ್ಮಿಯೋ ಕರಂ ।
ಮೇಲಿಸಿದಪ್ಪುದೆನ್ನೆರ್ದೆಯನೆಂ
ದು ಬೊದಿಲ್ಲೆನೆ ಪಾಯ್ದು
ನೀರೊಳಾ
ಬಾಳನನಾದಮಾದರದೆ
ಕೊಂಡೊಸೆದಂ
ನಿಧಿಗಂಡನಂತೆವೊಲ್ ॥
೯೬॥

ಪದ್ಯ-೯೬:ಪದವಿಭಾಗ-ಅರ್ಥ:ಉ||

ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ (ಬಾಲ ಸೂರ್ಯನ ಬಿಂಬ) ಮೇಣ್ ಫಣೀಂದ್ರ ಆಳಯದಿಂದಂ (ಪಾತಾಳದ ನಾಗೇಂದ್ರನ ಮನೆಯಿಂದ) ಉರ್ಚಿದ ಫಣಾಮಣಿ(ಹೊರಬಂದ ಹೆಡೆಯ ಮಣಿಗಳ) ಮಂಗಳ ರಶ್ಮಿಯೋ (ಮಂಗಳ

ಕಿರಣವ್ರೋ!) ಕರಂ
ಮೇಲಿಸಿದಪ್ಪುದು
ಎನ್ನೆರ್ದೆಯನು ಎಂದು
(ಬಹಳ ಪ್ರೀತಿಯುಂಟು
ಮಾಡುವುದು, ನನ್ನ
ಎದೆಯನ್ನು ಎಂದು)
ಬೊದಿಲ್ಲೆನೆ ಪಾಯ್ದು
ನೀರೊಳು (ದೊಪ್ಪನೆ
ನೀರಿನಲ್ಲಿ ಹಾರಿ) ಆ
ಬಾಳನನು ಅದಂ ಆದರದೆ
ಕೊಂಡು(ಆ ಬಾಲಕನನ್ನು

ಪ್ರೀತಿಯಿಂದ ಎತ್ತಿಕೊಂಡು) ಒಸೆದಂ ನಿಧಿಗಂಡನಂತೆವೋಲ್ (ನಿಧಿ ಕಂಡನಂತೆವೊಲ್- ನಿಧಿ ಸಿಕ್ಕಿದವನಂತೆ ಸಂತಸಪಟ್ಟನು.)

ಪದ್ಯ-೯೬:ಅರ್ಥ:ಬಾಲ ಸೂರ್ಯಮಂಡಲದ ಬಿಂಬ ಗಂಗೆಯ ನೀರಿನಲ್ಲಿ ನೆಲಸಿತ್ತೋ! ಅಥವಾ ಪಾತಾಳದ ನಾಗಲೋಕದ

ನಾಗೇಂದ್ರನ ಮನೆಯಿಂದ
ಭೇದಿಸಿಕೊಂಡು ಬಂದ
ಹೊರಬಂದ ಹೆಡೆಯ
ಮಣಿಗಳ
ಮಂಗಳಕಿರಣಗಳೋ! ಇದು
ನನ್ನ ಹೃದಯವನ್ನು
ವಿಶೇಷವಾಗಿ ಆಕರ್ಷಿಸುತ್ತಿದೆ
ಎಂದು ಗಂಗೆಯ ನೀರಿನಲ್ಲಿ
ಬೊದಿಲ್ ಎಂದು
ಶಬ್ದವಾಗುವ ಹಾಗೆ ಥಟ್ಟನೆ
ಹಾರಿ ಅತ್ಯಂತ

ಪ್ರೇಮಾವತಿಶಯದಿಂದ ಆ ಬಾಲಕನನ್ನು ಪ್ರೀತಿಯಿಂದ ಎತ್ತಿಕೊಂಡು ನಿಧಿ ಸಿಕ್ಕಿದವನಂತೆ ಸಂತಸಪಟ್ಟನು.

ವ|| ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡಾಕೆ ರಾಗಿಸಿ ಸುತನ ಸೂತಕಮಂ ಕೊಂಡಾಡೆ-

ವಚನ:ಪದವಿಭಾಗ-ಅರ್ಥ:ಅಂತು ಕಂಡು ಮನಂಗೊಂಡು (ಮೆಚ್ಚಿ) ಎತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ (ಉಡಿಯಲ್ಲಿ) ಕೂಸನು ಇಟ್ಟೊಡೆ ಆಕೆ ರಾಗಿಸಿ (ಪ್ರೀತಿಸಿ) ಸುತನ ಸೂತಕಮಂ ಕೊಂಡಾಡೆ (ಕೊಂಡು ಆಡೆ?) (ಮಗ ಹುಟ್ಟಿದ ಸೂತಕ ಕೈಗೊಂಡು ಆಚರಿಸಿದಳು.)

ವಚನ:ಅರ್ಥ:ಮಗುವನ್ನು ಕಂಡು ಮೆಚ್ಚಿ ಎತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ಪ್ರಿಯಳ ಮಡಲಿನಲ್ಲಿ ಕೂಸನ್ನು ಇಡಲಾಗಿ, ಆಕೆ ಪ್ರೀತಿಸಿ ಮಗನು ಹುಟ್ಟಿದ ಮೈಲಿಗೆಯನ್ನು ಆಚರಿಸಿದಳು.

ಕಂ|| ಅಗುಱ್ದಿರಲಾ
ಕುಟೀಯೊಳ್ ತೊ
ಟ್ಟಗೆ ನಿಧಿಗಂಡಂತೆ
ವಸುಧೆಗಸದಳಮಾಯ್ತಾ |

ಮಗನಂದಮೆಂದು ಲೋಗರ್ ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್ ॥ ೯೭ ॥

ಪದ್ಯ-೯೭:ಪದವಿಭಾಗ-ಅರ್ಥ:ಅಗುಳ್ದಿರಲು ಆ ಕುಟಿಯೊಳ್ ತೊಟ್ಟಗೆ (ತಟ್ಟನೆ)ನಿಧಿಗಂಡಂತೆ (ನಿಧಿ ಕಂಡಂತೆ) ವಸುಧೆಗೆ ಅಸದಳಮ್ ಆಯ್ತು ಆ ಮಗನ ಅಂದಂ ಎಂದು ಲೋಗರ್ ಬಗೆದಿರೆ

ವಸುಷೇಣನೆಂಬ ಪೆಸರಾಯ್ತಾಗಳ್

ಪದ್ಯ-೯೭:ಅರ್ಥ:.

ಅಗೆಯುತ್ತಿರುವ ಗುಳಿಯಲ್ಲಿ ಅಕಸ್ಮಾತ್ ನಿಧಿ ದೊರೆತಂತಾಯಿತು. ಈ ಮಗುವಿನ ಸೌಂದರ್ಯ ಈ ಭೂಮಿಯಲ್ಲಿ ಅತಿಶಯವು ಎಂದು ಜನರು ಆಡಿಕೊಳ್ಳುತ್ತಿರಲು ಆಗ

ಮಗುವಿಗೆ ವಸುಷೇಣನೆಂಬ ಹೆಸರಾಯಿತು

ಅಂತು ವಸುಷೇಣನಾ ಲೋಕಾಂತಂಬರಮಳವಿ ಬಳೆಯೆ ಬಳೆದೆಸಕಮದೋ ||
ರಂತೆ ಜನಂಗಳ ಕರ್ಣೋಪಾಂತದೊಳೊಗೆದೆಸೆಯೆ ಕರ್ಣನೆಂಬನುಮಾದಂ || ೯೮ ||

ಪದ್ಯ-೯೮:ಪದವಿಭಾಗ-ಅರ್ಥ:ಮಗುವಿಗೆ

ವಸುಷೇಣನೆಂಬ
ಹೆಸರಾಯಿತು ಅಂತು
ವಸುಷೇಣನು ಆ ಲೋಕಾಂತ
ಅಂಬರಂ (ಲೋಕದ ಕೊನೆಯ
ತುದಿಯ ವರೆಗೂ ಹಬ್ಬಿತು,)
ಅಳವಿ ಬಳೆಯೆ,
(ಪರಾಕ್ರಮವು ಬೆಳೆಯಲು)
ಬಳೆದ ಎಸಕಮ್)(ಬೆಳೆದ
ರೀತಿ) ಅದು ಓರಂತೆ
(ಕ್ರಮವಾಗಿ)ಜನಂಗಳ
ಕರ್ಣೋಪಾಂತದೊಳು

(ಕಿವಿಗಳಿಂದ ಕಿವಿಗಳಿಗೆ) ಒಗೆದು ಎಸೆಯೆ (ಬಿದ್ದು ಪ್ರಕಾಶಿಸಲು)ಕರ್ಣನೆಂಬನುಂ ಆದಂ.

ಪದ್ಯ-೯೮:ಅರ್ಥ:ಹಾಗೆಯೇ ವಸುಷೇಣನ ಪರಾಕ್ರಮವು ಲೋಕದ ಎಲ್ಲೆಯವರೆಗೆ ಬೆಳೆಯಲು ಆ ಬೆಳೆದ ರೀತಿ ಒಂದೇ ಪ್ರಕಾರವಾಗಿ ಜನಗಳ ಕರ್ಣ(ಕಿವಿ)ಗಳಿಂದ ಕಿವಿಗಳಿಗೆ ಬಿದ್ದು ಹರಡುತ್ತಿರಲು

ವಸುಷೇಣನಿಗೆ ಕರ್ಣನೆಂಬ ಹೆಸರುಳ್ಳವನೂ ಆದನು.

ವ|| ಆಗಿಯಾತಂ ಶಸ್ತ್ರಶಾಸ್ತ್ರವಿದ್ಯೆಯೊಳತಿಪರಿಣತನಾಗಿ ನವಯೌವನಾಂಭದೊಳ್-

ವಚನ:ಪದವಿಭಾಗ-

ಅರ್ಥ:ಆಗಿಯು ಆತಂ ಶಸ್ತ್ರಶಾಸ್ತ್ರವಿದ್ಯೆಯೊಳು ಅತಿಪರಿಣತನಾಗಿ ನವಯೌವನಾರಂಭದೊಳ್-

ವಚನ:ಅರ್ಥ:ಆತನು ಶಸ್ತ್ರ ಮತ್ತು ಶಾಸ್ತ್ರವಿದ್ಯೆಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆಯಲು, ಅವನಿಗೆ ಯವ್ವನೋದಯವೂ ಆಯಿತು.

ಚಂ|| ಪೊಡೆದುದು ಬಿಲ್ಲ
ಜೇರೊಡೆಯೆ ವಿಱುವ ವೈರಿ
ನರೇಂದ್ರರಂ ಸಿಡಿ
ಲ್ಪೊಡೆದವೊಲಟ್ಟಿ ಮುಟ್ಟಿ
ಕಡಿದಿಕ್ಕಿದುದಾದೆಡರಂ

ನಿರಂತರಂ।
ಕಡಿಕಡಿದಿತ್ತ ಪೊನ್ನ ಬುಧ
ಮಾಗಧ ವಂದಿಜನಕ್ಕೆ ಕೊಟ್ಟ
ಕೋ
ಡೆಡರದೆ ಬೇಡಿಮೋಡಿಮಿದು
ಚಾಗದ ಬೀರದ ಮಾತು
ಕರ್ಣನಾ॥ ೯೯॥

ಪದ್ಯ-೯೯:ಪದವಿಭಾಗ-
ಅರ್ಥ:ಚಂ॥
ಪೊಡೆದುದು(ಪೊಡೆ-ಹೊಡೆ)
ಬಿಲ್ಲ ಜೇರೊಡೆಯೆ ವಿಋುವ

(ಬರುವ?) ವೈರಿ ನರೇಂದ್ರರಂ;
ಸಿಡಿಲ್ ಒಡೆದವೊಲ್ ಅಟ್ಟಿ
ಮುಟ್ಟಿ ಕಡಿದು ಇಕ್ಕಿದುದು
ಆದ ಎಡರಂ (ಬಡತನವನ್ನು)
ನಿರಂತರಂ ಕಡಿಕಡಿದು ಇತ್ತ
ಪೊನ್ನ (ಕೊಟ್ಟ ಹೊನ್ನು) ಬುಧ
ಮಾಗಧ
ವಂದಿಜನಕ್ಕೆ(ವಿದ್ವಾಂಸರಿಗೆ,
ಕೀರ್ತಿಸುವವರಿಗೆ,
ಹೊಗಳುಭಟ್ಟರಿಗೆ) ಕೊಟ್ಟ
ಕೋಡು

ಎಡರುದೆ(ಕೊಡಿವಿಕೆಗೆ ಭಂಗವಾಗದೆ -ಅಡರು- ಅಡಚಣೆ, ಅಡ್ಡಿ) ಬೇಡಿಂ ಓಡಿಂ(ಬೇಡಿದ್ದನ್ನು ತೆಗೆದುಕೊಂಡು ಓಡಿ) ಇದು ಚಾಗದ(ತ್ಯಾಗದ) ಬೀರದ (ವೀರದ-ಶೌರ್ಯದ) ಮಾತು ಕರ್ಣನಾ|| ೯೯

ಪದ್ಯ-೯೯:ಅರ್ಥ:ಅವನ ಬಿಲ್ಲಿನ ಟಂಕಾರವೇ ಬರುವ ಶತ್ರುರಾಜರನ್ನು ಹೋಗಿ

ಹೊಡೆಯಿತು. ನಿರಂತರವಾಗಿ ದಾನ ಮಾಡಿದ ಅವನ ಚಿನ್ನದ ರಾಶಿಯೇ – ವಿದ್ವಾಂಸರಿಗೂ ವಂದಿಮಾಗಧರಿಗೂ ಕೊಟ್ಟ ದಾನವೆ ಅವರಿಗಿದ್ದ ದಾರಿದ್ರ್ಯರನ್ನು ಸಿಡಿಲುಹೊಡೆದ ಹಾಗೆ ಅಟ್ಟಿಮೆಟ್ಟಿ ಕತ್ತರಿಸಿಹಾಕಿತು. ಅವನಲ್ಲಿಗೆ ಹೋಗಿ ಬೇಡಿದ್ದನ್ನು ತೆಗೆದುಕೊಂಡು ಓಡಿ ಎಂಬಂತೆ, ಕರ್ಣನಾ

ತ್ಯಾಗದ ಮತ್ತು ಶೌರ್ಯದ
ಮೇಲ್ಮೆ
ಲೋಕಪ್ರಸಿದ್ಧವಾಯಿತು.

ವ|| ಅಂತು ಭುವನ ಭವನಕ್ಕೆಲ್ಲಹ ನೆಗಳ್ದಿ ಕರ್ಣನ ಪೊಗೞ್ತೆಂ ನೆಗೞ್ತೆಯುಮುನೀಂದ್ರಂ ಕೇಳ್ದು ಮುಂದೆ ತನ್ನಂಶದೊಳ್ ಪುಟ್ಟುವರ್ಜುನಂಗಮಾತಂಗಂ ದ್ವಂದ್ವಯುದ್ಧಮುಂಟೆಂಬುದಂ ತನ್ನ

ದಿವ್ಯಜ್ಞಾನದಿಂದಮಱಿದುವಿಂ ತಲ್ಲದೀತನನಾತಂ ಗೆಲಲ್ ಬಾರದೆಂದು-

ವಚನ:ಪದವಿಭಾಗ-

ಅರ್ಥ:ಅಂತು ಭುವನ ಭವನಕ್ಕೆ ಎಲ್ಲ ಅಹ (ಹೀಗೆ ಲೋಕ ಲೋಕದಲ್ಲಿ)ನೆಗಟ್ದಿ (ಪ್ರಸಿದ್ಧವಾದ)ಕರ್ಣನ ಪೊಗೞ್ತೆಂ (ಹೊಗಳಿಕೆ)ನೆಗೞ್ತೆಯುಮು ನು (ಪ್ರಸಿದ್ಧಯನ್ನು)ಇಂದ್ರಂ

ಕೇಳ್ದು ಮುಂದೆ ತನ್ನ ಅಂಶದೊಳ್ ಪುಟ್ಟುವ ಅರ್ಜುನಂಗಂ ಆತಂಗಂ ದ್ವಂದ್ವಯುದ್ಧಂ ಉಂಟೆಂಬುದಂ ತನ್ನ ದಿವ್ಯಜ್ಞಾನದಿಂದಂ ಅಱಿದುಂ (ತಿಳಿದು) ಇಂತಲ್ಲದೆ ಈತನನು ಆತಂ ಗೆಲಲ್ ಬಾರದೆಂದು-

ವಚನ:ಅರ್ಥ:ಹೀಗೆ ಲೋಕಪ್ರಸಿದ್ಧವಾದ ಕರ್ಣನ ಹೊಗಳಿಕೆಯನ್ನೂ

ಪ್ರಸಿದ್ಧಿಯನ್ನೂ ಇಂದ್ರನು ಕೇಳಿ ಮುಂದೆ ತನ್ನ ಅಂಶದಲ್ಲಿ ಹುಟ್ಟುವ ಅರ್ಜುನನಿಗೂ ಈತನಿಗೂ ದ್ವಂದ್ವಯುದ್ಧವುಂಟಾಗುತ್ತದೆ ಎಂದು ತನ್ನ ದಿವ್ಯಜ್ಞಾನದಿಂದ ತಿಳಿದು, ಹೀಗಲ್ಲದೆ ಆತನು ಈತನನ್ನು ಗೆಲ್ಲಲಾಗುವುದಿಲ್ಲ ಎಂದು-

ಕಂ|| ಬೇಡಿದೊಡೆ ಬಲದ ಬರಿಯುಮ

ನೀಡಾಡುಗುಮುಗಿದು ಕರ್ಣನೆಂದಾಗಳೆ ಕೈ |
ಗೂಡಿದ ವಟುವಾಕೃತಿಯೊಳೆ ಬೇಡಿದನಾ ಸಹಜಕವಚಮಂ ಕುಂಡಳಮಂ || ೧೦೦||

ಪದ್ಯ-೧೦೦:ಪದವಿಭಾಗ-ಅರ್ಥ:ಬೇಡಿದೊಡೆ ಬಲದ ಬರಿಯುಮಂ (ಪಕ್ಕೆಲುಬನ್ನೂ) ಈಡಾಡುಗುಂ ಉಗಿದು (ಕಿತ್ತು ಕೊಡುವನು) ಕರ್ಣನೆಂದು ಆಗಳೆ ಕೈ ಗೂಡಿದ

ವಟುವಾಕೃತಿಯೊಳೆ (ಬ್ರಹ್ಮಚಾರಿಯ ವೇಷದಲ್ಲಿ)ಬೇಡಿದನು ಆ ಸಹಜಕವಚಮಂ ಕುಂಡಳಮಂ||

ಪದ್ಯ-೧೦೦:ಅರ್ಥ:ಬೇಡಿದರೆ ಕರ್ಣನು ಬಲಪಾರ್ಶ್ವದ ಪಕ್ಕೆಯನ್ನು ಕತ್ತರಿಸಿ ದಾನವಾಗಿ ಎಸೆಯುತ್ತಾನೆ ಎಂದು ಭಾವಿಸಿ ಆಗಲೇ ಪಡೆದ ಬ್ರಹ್ಮಚಾರಿಯ

ವೇಷದಲ್ಲಿಯೇ ಬಂದು
ಇಂದ್ರನು ಕರ್ಣನೊಡನೆ
ಹುಟ್ಟಿಬಂದ ಕವಚವನ್ನೂ
ಕುಂಡಲವನ್ನೂ ಬೇಡಿದನು.

ಬೇಡಿದುದನರಿದುಕೊಳ್ಳನೆ
ಬೇಡಿದುದಂ
ಮುಟ್ಟಲಾಗದೆನಗೆನೆ ನೆಗಳ್ದಿ |
ಲ್ಲಾಡದೆ ಕೊಳ್ಳೆಂದರಿದೀ
ಡಾಡಿದನಿಂದ್ರಂಗೆ ಕವಚಮಂ
ರಾಧೇಯಂ || ೧೦೧

ಪದ್ಯ-೧೦೧:ಪದವಿಭಾಗ-ಅರ್ಥ:ಬೇಡಿದುದನು ಅರಿದುಕೊಳ್ಳು (ಕತ್ತರಿಸುಕೊ)ಎನೆ ಬೇಡಿದುದಂ ಮುಟ್ಟಲಾಗದು ಎನಗೆ ಎನೆ ನೆಗೞ್ದು ಅಲ್ಲಾಡದೆ ಕೊಳ್ಕೆಂದು ಅರಿದು ಈಡಾಡಿದನು ಇಂದ್ರಂಗೆ ಕವಚಮಂ ರಾಧೇಯಂ

ಪದ್ಯ-೧೦೧:ಅರ್ಥ:. ನೀನು ಬೇಡಿದುದನ್ನು ಕತ್ತರಿಕೊ

ಎಂದು ಕರ್ಣನು ಹೇಳಲು,
ಇಂದ್ರನು ಬೇಡಿದುದನ್ನು
ನೀನು ಕೊಡುರುದಕ್ಕೆ
ಮೊದಲು ನಾನು
ಮುಟ್ಟಲಾಗದು ಎನ್ನಲು,
ಸ್ವಲ್ಪವೂ ಅಲುಗಾಡದೆ/
ಚಂಚಲತೆ ತೋರದೆ,
ತೆಗೆದುಕೋ ಎಂದು ಹೇಳಿ
ಕರ್ಣನು ಕವಚವನ್ನು ಕತ್ತರಿಸಿ
ಲಕ್ಷ್ಯವಿಲ್ಲದೆ

ನಿರ್ಯೋಚನೆಯಿಂದ

ಇಂದ್ರನಿಗೆ ಕೊಟ್ಟನು.

ಎಂದುಂ ಪೋಗೆಂದನೆ ಮಾ

ಣೆಂದನೆ

ಪೆಱತೊಂದನೀವೆನೆಂದನೆ

ನೊಂದಃ |

ಎಂದನೆ ಸೆರಗಿಲ್ಲದೆ ಪಿಡಿ

ಯೆಂದನಿದೇಂ ಕಲಿಯೊ

ಚಾಗಿಯೋ ರವಿತನಯಂ ||

೧೦೨

ಪದ್ಯ-೧೦೨:ಪದವಿಭಾಗ-ಅರ್ಥ:ಎಂದುಂ ಪೋಗು (ಹೋಗು)ಎಂದನೆ ಮಾಣ್ (ತಡೆ-ಬೇಡ)ಎಂದನೆ ಪೆಱತೊಂದನು ಈವೆನು (ಬೇರೊದನು ಕೊಡವೆನು) ಎಂದನೆ ನೊಂದು ಅಃ ಎಂದನೆ ಸೆರಗಿಲ್ಲದೆ(ಸೆರಗು-ಭಯ, ಇಲ್ಲದೆ) ಪಿಡಿಯೆಂದನು (ಹಿಡಿ-ತಗೋ ಎಂದನು) ಇದೇಂ

ಕಲಿಯೊ ಚಾಗಿಯೋ
(ತ್ಯಾಗಿಯೋ) ರವಿತನಯಂ
ಪದ್ಯ-೧೦೨:ಅರ್ಥ:ಕರ್ಣನು
ಬೇಡಿದ ಇಂದ್ರನಿಗೆ ಇಲ್ಲ
ಹೋಗು ಎಂದು ಹೇಳಿದನೆ?
ಸ್ವಲ್ಪ ತಡೆ ಎಂದು ಹೇಳಿದನೆ?
(ಕೇಳಿದ ಪದಾರ್ಥವನ್ನಲ್ಲದೆ)
‘ಬೇರೊಂದನ್ನು ಕೊಡುತ್ತೇನೆ
ಎಂದನೆ? (ಕತ್ತರಿಸುವಾಗ)
ನೋವಿನಿಂದ ಅಃ/ಆ
ಎಂದನೆ? ಹೆದರಿಕೆಯಿಲ್ಲದೆ

ಹಿಡಿ ತೆಗೆದುಕೋ ಎಂದನು. ಕರ್ಣನು ಅದೆಂತಹ ಶೂರನೋ, ಹಾಗೆಯೇ ತ್ಯಾಗಿಯೋ!

ವ|| ಅಂತು ತನ್ನ ಸಹಜಕವಚಮಂನೆತ್ತರ್ ಪನ ಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟೊಡಿಂದ್ರನಾತನ ಕಲಿತನಕೆ ಮೈಚ್ಚಿ-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ಸಹಜಕವಚಮಂ ನೆತ್ತರ್ ಪನ ಪನ ಪನಿಯೆ (ಹನಿಯುತ್ತಿರಲು) ತಿದಿಯುಗಿವಂತೆ ಉಗಿದು ಕೊಟ್ಟೊಡೆ ಇಂದ್ರನು ಆತನ ಕಲಿತನಕೆ ಮೈಚ್ಚಿ

ವಚನ:ಅರ್ಥ:ಹಾಗೆ ರಕ್ತವು ಪನ ಪನ ಹರಿಯುತ್ತಿರಲು ತನ್ನ ಸಹಜಕವಚವನ್ನು ಚರ್ಮದ

ಚೀಲವನ್ನು ಸೀಳುವಂತೆ ಸೀಳಿ,
ಕೊಡಲು, ಇಂದ್ರನು ಆತನ
ಶೌರ್ಯಕ್ಕೆ ಮೆಚ್ಚಿ.

ಕಂ|| ಸುರ ದನುಜ ಭುಜಗ
ವಿದ್ಯಾ
ಧರ
ನರಸಂಕುಲದೊಳಾರನಾದೊ
ಡಮೇನೋ |
ಗರ ಮುಟ್ಟೆ ಕೊಲ್ಗುಮಿದು ನಿಜ
ವಿರೋಧಿಯಂ
ಧುರದೊಳೆಂದು ಶಕ್ತಿಯನಿತ್ತಂ

|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ಸುರ ದನುಜ ಭುಜಗ ವಿದ್ಯಾಧರ ನರಸಂಕುಲದೊಳು ಆರನು ಆದೊಡಮೇನೋ (ಯಾರಾದರೇನೋ) ಗರಮುಟ್ಟೆ (ಗ್ರಹ ಬಡಿದಂತೆ/ ಹಾವುಕಚ್ಚಿದಂತೆ?)ಕೊಲ್ಲುಂ ಇದು, ನಿಜ ವಿರೋಧಿಯಂ (ನಿನ್ನ ಶತ್ರುವನ್ನು) ಧುರದೊಳು

ಎಂದು ಶಕ್ತಿಯನು ಇತ್ತಂ (ಕೊಟ್ಟನು)

ಪದ್ಯ-೧೦೩:ಅರ್ಥ:. ನಿನ್ನ ಶತ್ರುವನ್ನು, ಅವರು ದೇವತೆಗಳು, ರಾಕ್ಷಸರು, ನಾಗಗಳು, ವಿದ್ಯಾಧರರು, ಮನುಷ್ಯರು ಇವರಲ್ಲಿ ಯಾರಾದರೂ ಸರಿಯೆ, ಈ ಶಕ್ತ್ಯಾಯುಧವು ಗ್ರಹ ಬಡಿದ ಹಾಗೆ ಅವರನ್ನು ಕೊಲ್ಲುತ್ತದೆ

ಎಂದು, ಅವನಿಗೆ

ಶಕ್ತ್ಯಾಯುಧವನ್ನು ಕೊಟ್ಟನು.

ವ|| ಅಂತಿಂದ್ರನಿತ್ತ ಶಕ್ತಿಯಂ ಕೈಕೊಂಡು ನಿಜಬುಜಶಕ್ತಿಯಂ ಪ್ರಕಟಂ ಮಾಡಲೆಂದು ರೇಣುಕಾನಂದನನಲ್ಲಿಗೆ ಪೋಗಿ-

ವಚನ:ಪದವಿಭಾಗ-

ಅರ್ಥ:ಅಂತು ಇಂದ್ರನು ಇತ್ತ (ಕೊಟ್ಟ) ಶಕ್ತಿಯಂ ಕೈಕೊಂಡು ನಿಜಬುಜಶಕ್ತಿಯಂ ಪ್ರಕಟಂ

ಮಾಡಲೆಂದು ರೇಣುಕಾನಂದನನಲ್ಲಿಗೆ ಪೋಗಿ-

ವಚನ:ಅರ್ಥ:ಹಾಗೆ ಇಂದ್ರನು ಕೊಟ್ಟ ಶಕ್ತ್ಯಾಯುಧವನ್ನು ಸ್ವೀಕರಿಸಿ, ತನ್ನ ಬಾಹುಬಲವನ್ನು ಪ್ರಕಟಮಾಡಬೇಕೆಂದು ಪರಶುರಾಮನ ಹತ್ತಿರಕ್ಕೆ ಹೋದನು. ಹೋಗಿ-

ಕಂ|| ಕೂರಿಸೆ ಗುರು ಶುಶ್ರೂಷೆಯೊ ಳಾ ರಾಮನನುಗ್ರ ಪರಶು ಪಾಟಿತ ರಿಪು ವಂ | ಶಾರಾಮನನಿಷುವಿದ್ಯಾ ಪಾರಗನೆನಿಸಿದುದು ಬಲ್ಮೆ ವೈಕರ್ತನನಾ || ೧೦೪

ಪದ್ಯ-೧೦೪:ಪದವಿಭಾಗ-ಅರ್ಥ:ಕೂರಿಸೆ ಗುರು ಶುಶ್ರೂಷೆಯೊಳು ಆ ರಾಮನನು ಉಗ್ರ ಪರಶು

ಪಾಟಿತ (ಉಗ್ರ

ಕೊಡಲಿಯಿಂದ

ಸೀಳಿದ)ರಿಪುವಂಶ

ಆರಾಮನನು(ಶತ್ರುಗಳ

ವಂಶದ ತೋಟವನ್ನು)

ಇಷುವಿದ್ಯಾಪಾರಗನು

ಎನಿಸಿದುದು ಬಲ್ಮೆ(ಅವನ

ಪ್ರೌಢಿಮೆ ಇಷು/ಬಿಲ್ಲು

ವಿದ್ಯಾಪಾರಂಗತನು

ಎನ್ನಿಸಿತು) ವೈಕರ್ತನನು ಆ (

ಆ ಕರ್ಣನನ್ನು -ವೈಕರ್ತ-

ಕವಚವನ್ನು
ಕತ್ತರಿಸಿಕೊಟ್ಟವನು)
ಪದ್ಯ-೧೦೪:ಅರ್ಥ:ಭಯಂಕ
ರವಾದ ಕೊಡಲಿಯಿಂದ
ಸೀಳಲ್ಪಟ್ಟ ವೈರಿಗಳೆಂಬ
ತೋಟವನ್ನುಳ್ಳ ಆ
ಪರಶುರಾಮನನ್ನು ಕರ್ಣನು
ಗುರುಶುಶ್ರೂಷೆಯ ಮೂಲಕ
ಅವರಿಂದ ಕರ್ಣನು ಗಳಿಸಿದ
ಪ್ರೀತಿ ಅವನನ್ನು
ಧನುರ್ವಿದ್ಯೆಯಲ್ಲಿ

ಪಾರಂಗತನೆನ್ನುವ ಹಾಗೆ
ಮಾಡಿತು.

ವ|| ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮರೆದೊಱಗಿದಾ ಪ್ರಸ್ತಾವದೊಳಾ ಮುನಿಗೆ ಮುನಿಸಂ ಮಾಡಲೆಂದಿಂದ್ರನುಪಾಯ

ದೊಳಟ್ಟಿದ ವಜ್ರಕೀಟಂಗಳ್
ಕರ್ಣನೆರಡುಂ ತೊಡೆಯುಮ
ನುಳಿಯನೂಱಿ
ಕೊಂಡಂತಿಯೊಳ್
ಬೆಟ್ಟಿದಂತತ್ತಮಿತ್ತಮುರ್ಚಿ
ಪೋಗೆಯುಮದನಱಿಯದಂ
ತೆ ಗುರುಗೆ
ನಿದ್ರಾಭಿಗಾತಮಕ್ಕುಮೆಂದು
ತಲೆಯನು
ಗುರಿಸುತ್ತುಮಿರೆಯಿರೆ-

ವಚನ:ಪದವಿಭಾಗ-ಅರ್ಥ:

ಅಂತು ಧನುರ್ಧರ
ಅಗ್ರ್ರಗಣ್ಯನಾಗಿರ್ದು ಒಂದು
ದಿವಸಂ ತನ್ನ ತೊಡೆಯ ಮೇಲೆ
ತಲೆಯನಿಟ್ಟು ಪರಶುರಾಮಂ
ಮರೆದು
(ನಿದ್ರಿಸಿ)ಒಱಗಿದ(ಮಲಗಿದ)
ಆ ಪ್ರಸ್ತಾವದೊಳ್
(ಸಮಯದಲ್ಲಿ)ಆ ಮುನಿಗೆ
ಮುನಿಸಂ
(ಸಿಟ್ಟು)ಮಾಡಲೆಂದು

ಇಂದ್ರನು ಉಪಾಯದೊಳು
ಅಟ್ಟಿದ ವಜ್ರಕೀಟಂಗಳ್
(ಕಡಿದುಂಬಿ) ಕರ್ಣನ ಎರಡುಂ
ತೊಡೆಯುನು ಉಳಿಯನು
ಊಚಿ (ಚೂಪಾದ
ಕೊಂಡಿಯನ್ನು ಊರಿ)
ಕೊಂಡಂತಿಯೊಳ್
(ಕೊಡಲಿಯಲ್ಲಿ
-ಕೊಡತಿಯಲ್ಲಿ?) ಬೆಟ್ಟಿದಂತೆ
(ಹೊಡೆದಹಾಗೆ) ಅತ್ತಮಿತ್ತಂ
ಉರ್ಚಿ ಪೋಗೆಯುಂ (ಅತ್ತ

ಇತ್ತ ಚುಚ್ಚಿ / ಭೇದಿಸಿಕೊಂಡು ಹೋಗಲು) ಅದನು ಅಱಿಯದಂತೆ (ಅರಿಯದಂತೆ) ಗುರುಗೆ ನಿದ್ರಾಭಿಗಾತಂ (ನಿದ್ರಾಭಂಗ) ಅಕ್ಕುಮೆಂದು (ಆಗುವುದೆಂದು) ತಲೆಯನು ಉಗುರಿಸುತ್ತುಂ ಇರೆಯಿರೆ (ತಲೆಯನ್ನು ಉಗುರಿನಿಂದ ಸವರುತ್ತಿರಲು)-

ವಚನ:ಅರ್ಥ:ಅವನು ಹಾಗೆ ಬಿಲ್ಲು ಹಿಡಿದಿರುವವರಲ್ಲೆಲ್ಲ ಮೊದಲಿಗನಾಗಿದ್ದು ಒಂದು ದಿನ ಪರಶುರಾಮನು ಕರ್ಣನ ತೊಡೆಯ ಮೇಲೆ ತಲೆಯನ್ನು ಇಟ್ಟು ನಿದ್ರೆಯಲ್ಲಿ ಮಲಗಿದ ಸಂದರ್ಭದಲ್ಲಿ ಆ ಋಷಿಗೆ ಕೋಪವನ್ನುಂಟು ಮಾಡಬೇಕೆಂದು ಇಂದ್ರನು ಉಪಾಯದಿಂದ ಕೊಡಲಿಯಲ್ಲಿ ಹೊಡೆದ ಹಾಗೆ

ಆ ಕಡೆಯಿಂದ ಈ ಕಡೆಗೆ
ಕೊರೆದುಕೊಂಡು ಹೋದರೂ
ಕರ್ಣನು ಅದನ್ನು
ತಿಳಿಯದವನಂತೆ ಗುರುವಿಗೆ
ನಿದ್ರಾಭಂಗವಾಗುತ್ತದೆಂದು
ಗುರುವಿನ ತಲೆಯನ್ನು ತನ್ನ
ಉಗುರಿನಿಂದ ಸವರುತ್ತಿದ್ದನು.

**ಕಂ|| ಆತಿ ವಿಶದ
ವಿಶಾಲೋರು
ಕ್ಷತದಿಂದೊಱೆದನಿತು
ಜಡೆಯುಮಂ ನಾಂದಿ ಮನ |**

ಕ್ಷತದೊಡನೆಬ್ಬಿಱಿಸಿದುದು
ತ್ಥಿತಮಾ ವಂದಸ್ರ ಮಿಶ್ರ
ಗಂಧಂ ಮುನಿಯಂ|| ೧೦೫||

ಪದ್ಯ-೧೦೫:ಪದವಿಭಾಗ-

ಅರ್ಥ:ಅತಿ ವಿಶದ ವಿಶಾಲೋರುಕ್ಷತದಿಂದೆ ಒಱಿದ ಅನಿತು ಜಡೆಯುಮಂ ನಾಂದಿ(ಅತಿ ಸ್ಪಷ್ಟ ಅಗಲ ಗಾಯದಿಂದ ಒರೆದು/ಜಿನುಗಿ ಅಷ್ಟೂ ಜಡೆಯನ್ನೂ,ನಾದಿ/ ಒದ್ದೆ ಮಾಡಿ) ಮನ

ಕ್ಷತದೊಡನೆ (ಮನದ ಖಾತಿ, ಹಿಂಸೆಯೊಡನೆ)ಎಟ್ಟಿಱಿಸಿದು ದು ಉತ್ಥಿತಮ (ಅಧಿಕವಾದ)ಆ ವಂದಸ್ರ ಮಿಶ್ರ ಗಂಧಂ (ಸುರಿದ ರಕ್ತದ ವಾಸನೆ) ಮುನಿಯಂ

ಪದ್ಯ-೧೦೬:ಅರ್ಥ:ತೊಡೆಯ ಅಗಲವಾದ ಗಾಯದಿಂದ ಜಿನುಗಿ ಹೆಚ್ಚುತ್ತಿರುವ ರಕ್ತವು ವಾಸನೆಯು ಜಡೆಯಷ್ಟನ್ನೂ ಒದ್ದೆಮಾಡಿ ಅದರ

ವಾಸನೆಯು ಋಷಿಯನ್ನು ಮನದ ಕೋಪದೊಡನೆ ಎಚ್ಚರವಾಗುವ ಹಾಗೆ ಮಾಡಿತು.

ವ|| ಅಂತು ಧನುರ್ಧರಾಗ್ರಗಣ್ಯನಾಗಿರ್ದೊಂದು ದಿವಸಂ ತನ್ನ ತೊಡೆಯ ಮೇಲೆ ತಲೆಯನಿಟ್ಟು ಪರಶುರಾಮಂ ಮರೆದೊಱಗಿದಾ ಪ್ರಸ್ತಾವದೊಳಾ ಮುನಿಗೆ

ಮುನಿಸಂ
ಮಾಡಲೆಂದಿಂದ್ರನುಪಾಯ
ದೊಳಟ್ಟಿದ ವಜ್ರಕೀಟಂಗಳ್
ಕರ್ಣನೆರಡುಂ ತೊಡೆಯುಮ
ನುಳಿಯನೂಱ
ಕೊಂಡಂತಿಯೊಳ್
ಬೆಟ್ಟಿದಂತತ್ತಮಿತ್ತಮುರ್ಚಿ
ಪೋಗೆಯುಮದನಱ(ಱ?)
ಯದಂತೆ ಗುರುಗೆ
ನಿದ್ರಾಬಿಗಾತಮಕ್ಕುಮೆಂದು

ತಲೆಯನು

ಗುರಿಸುತ್ತುಮಿರೆಯಿರೆ-

ವಚನ:ಪದವಿಭಾಗ-ಅರ್ಥ:

ಅಂತು ಧನುರ್ಧರ
ಅಗ್ರ್ರಗಣ್ಯನಾಗಿರ್ದು ಒಂದು
ದಿವಸಂ ತನ್ನ ತೊಡೆಯ ಮೇಲೆ
ತಲೆಯನಿಟ್ಟು ಪರಶುರಾಮಂ
ಮರೆದು
(ನಿದ್ರಿಸಿ)ಒಱಗಿದ(ಮಲಗಿದ)
ಆ ಪ್ರಸ್ತಾವದೊಳ್
(ಸಮಯದಲ್ಲಿ)ಆ ಮುನಿಗೆ

ಮುನಿಸಂ
(ಸಿಟ್ಟು)ಮಾಡಲೆಂದು
ಇಂದ್ರನು ಉಪಾಯದೊಳು
ಅಟ್ಟಿದ ವಜ್ರಕೀಟಂಗಳ್
(ಕಡಿದುಂಬಿ) ಕರ್ಣನ ಎರಡುಂ
ತೊಡೆಯುನು ಉಳಿಯನು
ಊಱ (ಚೂಪಾದ
ಕೊಂಡಿಯನ್ನು ಊರಿ?)
ಕೊಂಡಂತಿಯೊಳ್
(ಕೊಡಲಿಯಲ್ಲಿ
-ಕೊಡತಿಯಲ್ಲಿ?) ಬೆಟ್ಟಿದಂತೆ

(ಹೊಡೆದಹಾಗೆ) ಅತ್ತಮಿತ್ತಂ
ಉರ್ಚಿ ಪೋಗೆಯುಂ (ಅತ್ತ
ಇತ್ತ ಚುಚ್ಚಿ / ಭೇದಿಸಿಕೊಂಡು
ಹೋಗಲು) ಅದನು
ಅಱ(ಱ?)ಯದಂತೆ
(ಅರಿಯದಂತೆ) ಗುರುಗೆ
ನಿದ್ರಾಬಿಗಾತಂ (ನಿದ್ರಾಭಂಗ)
ಅಕ್ಕುಮೆಂದು
(ಆಗುವುದೆಂದು) ತಲೆಯನು
ಉಗುರಿಸುತ್ತುಂ ಇರೆಯಿರೆ

(ತಲೆಯನ್ನು ಉಗುರಿನಿಂದ ಸವರುತ್ತಿರಲು)-

ವಚನ:ಅರ್ಥ:ಅವನು ಹಾಗೆ ಬಿಲ್ಲು ಹಿಡಿದಿರುವವರಲ್ಲೆಲ್ಲ ಮೊದಲಿಗನಾಗಿದ್ದು ಒಂದು ದಿನ ಪರಶುರಾಮನು ಕರ್ಣನ ತೊಡೆಯ ಮೇಲೆ ತಲೆಯನ್ನು ಇಟ್ಟು ನಿದ್ರೆಯಲ್ಲಿ ಮಲಗಿದ ಸಂದರ್ಭದಲ್ಲಿ ಆ ಋಷಿಗೆ ಕೋಪವನ್ನುಂಟು ಮಾಡಬೇಕೆಂದು ಇಂದ್ರನು

ಉಪಾಯದಿಂದ
ಕೊಡಲಿಯಲ್ಲಿ ಹೊಡೆದ ಹಾಗೆ
ಆ ಕಡೆಯಿಂದ ಈ ಕಡೆಗೆ
ಕೊರೆದುಕೊಂಡು ಹೋದರೂ
ಕರ್ಣನು ಅದನ್ನು
ತಿಳಿಯದವನಂತೆ ಗುರುವಿಗೆ
ನಿದ್ರಾಭಂಗವಾಗುತ್ತದೆಂದು
ಗುರುವಿನ ತಲೆಯನ್ನು ತನ್ನ
ಉಗುರಿನಿಂದ ಸವರುತ್ತಿದ್ದನು.

ವ|| ಅಂತೆಳ್ಚಿತ್ತು ನೆತ್ತರ ಪೊನಲೊಳ್ ನಾಂದು ನನೆದ

ಮೆಯ್ಯುಮಂ ತೊಯ್ದು
ತಳ್ಪೊಯ್ದ ಜಡೆಯುಮಂ
ಕಂಡೀ ಕ್ಷತ್ರಿಯಂಗಲ್ಲದಾಗದು
ಪಾರ್ವನೆಂದೆನ್ನೊಳ್ ಪುಸಿದು
ವಿದ್ದೆಯಂ ಕೈಕೊಂಡುದರ್ಕೆ
ದಂಡಂ ಪೆಱತಿಲ್ಲ ನಿನಗಾನಿತ್ತ
ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರ
ಮವಸಾನಕಾಲದೊಳ್
ಬೆಸಕೆಯ್ಯದಿರ್ಕೆಂದು
ಶಾಪಮನಿತ್ತನಂತು ಕರ್ಣನುಂ
ಶಾಪಹತನಾಗಿ ಮಗುೞ್ದು

ಬಂದು ಸೂತನ ಮನೆಯೊಳಿರ್ಪನ್ನೆಗಮಿತ್ತಲ್ ಕುಂತಿಗವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ-

ವಚನ:ಪದವಿಭಾಗ-

ಅರ್ಥ:ಅಂತು ಎಟ್ಟಿತ್ತು ನೆತ್ತರ ಪೊನಲೊಳ್ (ಹಾಗೆ ಎಚ್ಚರಾಗಿ, ರಕ್ತದಹೊಳೆಯಲ್ಲಿ) ನಾಂದು ನನೆದ ಮೆಯ್ಯುಮಂ (ರಕ್ತದಲ್ಲಿ ನಾದಿ ನೆನೆದ

ಮ್ಮೈಯನ್ನು) ತೊಯ್ದು
ತಳ್ಪೊಯ್ದ ಜಡೆಯುಮಂ
ಕಂಡು (ರಕ್ತದಲ್ಲಿ ತೊಯಿದ
ತಟ್ಟುವ? ಜಟೆಯನ್ನು ಕಂಡು)
ಈ ಕ್ಷತ್ರಿಯಂಗಲ್ಲದೆ ಆಗದು
ಪಾರ್ವನೆಂದು ಎನ್ನೊಳ್
ಪುಸಿದು ವಿದ್ದೆಯಂ
ಕೈಕೊಂಡುದರ್ಕೆ ದಂಡಂ
ಪೆಱತಿಲ್ಲ (ಈ ನೋವು
ತಡೆಯವುದು ಕ್ಷತ್ರಿಯನಿಗಲ್ಲದೆ
ಬ್ರಾಹ್ಮಣನಿಗೆ ಆಗದು. ನನ್ನಲ್ಲಿ

ಬ್ರಾಹ್ಮಣನೆಂದು ಸುಳ್ಳು ಹೇಳಿ
ವಿದ್ಯೆಯನ್ನು ಪಡೆದುದಕ್ಕೆ
ಶಿಕ್ಷೆಯು ಬೇರೆ ಇಲ್ಲ-) ನಿನಗೆ
ಆನಿತ್ತ ಬ್ರಹ್ಮಾಸ್ತ್ರಮೆಂಬ
ದಿವ್ಯಾಸ್ತ್ರಂ ಅವಸಾನ
ಕಾಲದೊಳ್ ಬೆಸಕೆಯ್ಯದೆ
ಇರ್ಕೆಂದು ಶಾಪಮನಿತ್ತನು
(ನಿನಗೆ ನಾನು ಕೊಟ್ಟ
ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರವು
ನಿನ್ನ ಅಂತಿಮ ಕಾಲದಲ್ಲಿ
ಕೆಲಸ ಮಾಡದೆ ಇರಲಿ,

ಎಂದುಶಾಪವನ್ನು ಕೊಟ್ಟನು.)ಅಂತು ಕರ್ಣನುಂ ಶಾಪಹತನಾಗಿ ಮಗುಳ್ದು ಬಂದು ಸೂತನ ಮನೆಯೊಳು ಇರ್ಪನ್ನೆಗಂ ಇತ್ತಲ್ ಕುಂತಿಗೆ ಅವರ ಮಾವನಪ್ಪ ಕುಂತಿಭೋಜನುಂ ಸ್ವಯಂಬರಂ ಮಾಡೆ-

ವಚನ:ಅರ್ಥ:ರಕ್ತದಲ್ಲಿ ನಾದಿ ನೆನೆದ ಮೈಯನ್ನು ರಕ್ತದಲ್ಲಿ ತೊಯಿದ ತಟ್ಟುವ?

ಜಟೆಯನ್ನು ಕಂಡು ಈ
ನೋವು ತಡೆಯವುದು
ಕ್ಷತ್ರಿಯನಿಗಲ್ಲದೆ ಬ್ರಾಹ್ಮಣನಿಗೆ
ಆಗದು. ನನ್ನಲ್ಲಿ
ಬ್ರಾಹ್ಮಣನೆಂದು ಸುಳ್ಳು ಹೇಳಿ
ವಿದ್ಯೆಯನ್ನು ಪಡೆದುದಕ್ಕೆ
ಶಿಕ್ಷೆಯು ಬೇರೆ ಇಲ್ಲ- ನಿನಗೆ
ನಾನು ಕೊಟ್ಟ ಬ್ರಹ್ಮಾಸ್ತ್ರಮೆಂಬ
ದಿವ್ಯಾಸ್ತ್ರವು ನಿನ್ನ ಅಂತಿಮ
ಕಾಲದಲ್ಲಿ ಕೆಲಸ ಮಾಡದೆ
ಇರಲಿ, ಎಂದು ಶಾಪವನ್ನು

ಕೊಟ್ಟನು. ಹಾಗೆ ಕರ್ಣನು
ಶಾಪಹತನಾಗಿ ಪುನ ಬಂದು
ಸೂತನ ಮನೆಯಲ್ಲಿರಲು ಈ
ಕಡೆ ಕುಂತಿಗೆ ಅವರ
ಮಾವನಾದ
ಕುಂತೀಭೋಜನು
ಸ್ವಯಂವರವನ್ನು
ಏರ್ಪಡಿಸಿದನು

ಕುಂತಿಯ ವಿವಾಹ - ಪಾಂಡವರ ಜನನ

ಚಂ|| ಸೊಗಯಿಪ ತಮ್ಮ
ಜವ್ವನದ ತಮ್ಮ ವಿಭೂತಿಯ
ತಮ್ಮ ತಮ್ಮ ಚೆ
ಲ್ವುಗಳ
ವಿಲಾಸದುರ್ಮೆಗಳೊಳಾವೆವ
ಗಾಗಿಪೆವೆಂದು ಬಂದಂ ಚೆ |
ನ್ನಿಗರುಮನಾಸೆಕಾಱರುಮ
ನೊಲ್ಲದೆ ಚೆಲ್ವಿಡಿದಿರ್ದ ರೂಪು

ದೃ

ಷ್ಟಿಗೆವರೆ ಪಾಂಡುರಾಜನನೆ

ಕುಂತಿ ಮನಂಬುಗೆ ಮಾಲೆ

ಸೂಡಿದಳ್ || ೧೧೬||

ಪದ್ಯ-೧೧೬:ಪದವಿಭಾಗ-ಅರ್ಥ:ಸೊಗಯಿಪ ತಮ್ಮ ಜವ್ವನದ ತಮ್ಮ ವಿಭೂತಿಯ ತಮ್ಮ ತಮ್ಮ ಚೆಲ್ವುಗಳ ವಿಲಾಸದ ಉರ್ಮೆಗಳೊಳು (ಉರ್ಮೆ-ಅತಿಶಯ) ಆವು (ನಾವು)ಎವಗೆ ಆಗಿಪೆವೆಂದು

(ನಮಗೆ ವಶ

ಮಾಡಿಕೊಳ್ಳುವೆವು

ಎಂದು)ಬಂದಂ ಚೆನ್ನಿಗರುಮಂ

(ಸುಂದರರರನ್ನು)

ಅಸೆಕಾಱಿರುಮಂ

(ಆಸೆಪಟ್ಟವರನ್ನು೦ ಒಲ್ಲದೆ

ಚೆಲ್ವು ಇಡಿದಿರ್ದ

(ಸುಂದರನಾದ) ರೂಪು

ದೃಷ್ಟಿಗೆವರೆ (ಕಣ್ಣಿಗೆಇಷ್ಟವಾದ)

ಪಾಂಡುರಾಜನನೆ ಕುಂತಿ

ಮನಂಬುಗೆ (ಮನಸ್ಸಿಗೆ

ಹೊಗಲು) ಮಾಲೆ ಸೂಡಿದಳ್ (ಸೂಡು, ಸೂಡಿಸು- ಮುಡಿಸು, ತೊಡಿಸಿದಳು)

ಪದ್ಯ-೧೦೬:ಅರ್ಥ:ಸೊಗಸಾಗಿರುವ ತಮ್ಮ ಯವ್ವನ, ಐಶ್ವರ್ಯ, ಸೌಂದರ್ಯ ಮತ್ತು ಶೃಂಗಾರಚೇಷ್ಟೆಗಳ ಅತಿಶಯದಿಂದ ನಾವು ಕುಂತಿಯನ್ನು ನಮ್ಮವಳನ್ನಾಗಿ ಮಾಡಿಕೊಳ್ಳುತ್ತೇನೆ ಎಂಬುದಾಗಿ ಬಂದಿದ್ದ

ಸೌಂದರ್ಯಶಾಲಿಗಳನ್ನೂ
ಕಾಮುಕರನ್ನೂ ಬಯಸದೆ,
ಕುಂತಿಯು ಪಾಂಡುವಿನ
ಸುಂದರವಾದ ರೂಪವು ತನ್ನ
ಕಣ್ಣಿಗೆ ಹಿತವಾಗಿದ್ದು
ಮನಸ್ಸನ್ನು ಹೊಗಲು
ಪಾಂಡುರಾಜನಿಗೇ
ವರಣಮಾಲೆಯನ್ನು
ತೊಡಿಸಿದಳು (ಹಾಕಿದಳು).

ವ|| ಅಂತು ಸ್ವಯಂಬರದೊಳ್

ನೆರೆದರಸುಮಕ್ಕಳೊಳಪ್ಪುಕೆಯ್ದ ಕುಂತಿಯೊಡನೆ ಮದ್ರರಾಜನ ಮಗಳ್ ಶಲ್ಯನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ ಗಾಂಗೇಯಂ ವಿಧಾತ್ರಂ ಮುಂಡಾಡುವಂತೆ ತಾಂ ಮದುವೆಯಂ ಮಾಡಿ-

ವಚನ:ಪದವಿಭಾಗ-

ಅರ್ಥ:ಅಂತು ಸ್ವಯಂಬರದೊಳ್ ನೆರೆದ

ಅರಸು ಮಕ್ಕಳೊಳು
ಅಪ್ಪುಕೆಯ್ದು (ಒಪ್ಪಿಕೊಂಡ)
ಕುಂತಿಯೊಡನೆ ಮದ್ರರಾಜನ
ಮಗಳ್ ಶಲ್ಯನ ಒಡವುಟ್ಟಿದ
ಮಾದ್ರಿಯುಮನು ಒಂದೆ
ಪಸೆಯೊಳು ಇರಿಸಿ
(ಹಸೆಮಣೆಯ ಮೇಲೆ
ಕೂರಿಸಿ) ಗಾಂಗೇಯಂ
ವಿಧಾತ್ರಂ ಮುಂಡಾಡುವಂತೆ
(ಬ್ರಹ್ಮನು ಮುದ್ದಾಡುವಂತೆ,

ಇಷ್ಟಪಡುವಂತೆ) ತಾಂ ಮದುವೆಯಂ ಮಾಡಿ-

ವಚನ:ಅರ್ಥ:ಹಾಗೆ ಸ್ವಯಂವರದಲ್ಲಿ ತುಂಬಿದ್ದ ರಾಜಕುಮಾರರಲ್ಲಿ ಪಾಂಡುವನ್ನೇ ಆಯ್ದುಕೊಂಡ ಕುಂತಿಯೊಡನೆ, ಮದ್ರರಾಜನ ಮಗಳೂ ಶಲ್ಯನೊಡನೆ ಹುಟ್ಟಿದವಳೂ ಆದ ಮಾದ್ರೀದೇವಿಯನ್ನೂ ಒಂದೇ ಹಸೆಮಣೆಯಲ್ಲಿ ಕೂರಿಸಿ

ಭೀಷ್ಮನು, ಬ್ರಹ್ಮನೆ
ಮೆಚ್ಚುವಂತೆ ತಾನೇ
ಮದುವೆಯನ್ನು ಮಾಡಿದನು.

ಚಂ|| ತಳಿರ್ಗಳಸಂ
ಮುಕ್ಕುಂದರವಮೆತ್ತಿದ ಮುತ್ತಿನ
ಮಂಟಪಂ ಮನಂ
ಗೊಳಿಪ ವಿತಾನಪಜ್ಕ್ತಿ
ಪಸುರ್ವಣ್ಂದಲಳ್ಳೊಲ್ದೆಡೆಯಾ
ಡುರೆಯ್ದೆಯರ್ |
ಬಳಸಿದ ವೇದಪಾರಗರ
ಸಂದಣಿಯೆಂಬಿವಱಿಂ

ವಿವಾಹಮಂ ಗಳಮದು ಕುಂತಿ ಮಾದ್ರಿಗಳೊಳಚ್ಚರಿಯಾದುದು ಪಾಂಡುರಾಜನಾ ‖ ೧೦೭‖

ಪದ್ಯ-೧೦೭:ಪದವಿಭಾಗ-ಅರ್ಥ:ತಳಿರ್ ಕಳಸಂ ಮುಕ್ಕುಂದರವಂ (ಮಾವಿನ ಚಿಗುರೆಲೆಯ ಕಳಸ, ಮುಕುಂದವಾದ್ಯದ ಶಬ್ದ,) ತಳಿರ ಎತ್ತಿದ ಮುತ್ತಿನ ಮಂಟಪಂ (ಎತ್ತರದ ಮುತ್ತಿನ

- ತಳಿರ ಮಂಟಪ,)
ಮನಂಗೊಳಿಪ ವಿತಾನಪಙ್ಕ್ತಿ
(ಮನಸ್ಸನು ಆಕರ್ಶಿಸುವ
ಮೆಟ್ಟಿಲುಗಳು,)
ಪಸುರ್ವಂದಲೊಳ್ (ಹಸಿರು
ಚಪ್ಪರದಲ್ಲಿ)
ಒಲ್ದೆಡೆಯಾಡುರೆಯ್ದೆಯರ್
(ಒಲ್ದು ಎಡೆಯಾಡುವ
ಐದೆಯರ್ -ಪ್ರೀತಿಯಿಂದ
ನೆಡೆದಾಡುವ
ಮುತ್ತೈದೆಯರು,) ಬಳಸಿದ

ವೇದಪಾರಗರ
ಸಂದಣಿಯೆಂಬ ಇವೞಿಂ
ವಿವಾಹಮಂಗಳಂ(ಬಳಸಿದ/
ಸುತ್ತುವರಿದ ವೇದ
ಪಠಿಸುವವರ ಸಮೂಹ ಈ
ರೀತಿಯಿರುವ) ಅದು ಕುಂತಿ
ಮಾದ್ರಿಗಳೊಳ್
ಅಚ್ಚರಿಯಾದುದು
ಪಾಂಡುರಾಜನಾ
(ಪಾಂಡುರಾಜನೊಡನೆ ಕುಂತಿ
ಮಾದ್ರಿಗಳ ವಿವಾಹ

ಆಶ್ಚರ್ಯಕರವಾಗಿ
ನೆಡೆಯಿತು.)).
ಪದ್ಯ-೧೦೭:ಅರ್ಥ:ಮಾವಿನ
ಚಿಗುರೆಲೆಯ ಕಳಸ,
ಮುಕುಂದವಾದ್ಯದ ಶಬ್ದ,
ಎತ್ತರದ ಮುತ್ತಿನ - ತಳಿರ
ಮಂಟಪ, ಮನಸ್ಸನು
ಆಕರ್ಶಿಸುವ ಮೆಟ್ಟಿಲುಗಳು,
ಹಸಿರು ಚಪ್ಪರದಲ್ಲಿ
ಪ್ರೀತಿಯಿಂದ ನೆಡೆದಾಡುವ
ಮುತ್ತೈದೆಯರು, ಸುತ್ತುವರಿದ

ವೇದ ಪಠಿಸುವವರ ಸಮೂಹ
ಈ ರೀತಿಯಿರುವ
ಪಾಂಡುರಾಜನೊಡನೆ ಕುಂತಿ
ಮಾದ್ರಿಗಳ ವಿವಾಹ
ಆಶ್ಚರ್ಯಕರವಾಗಿ
ನೆಡೆಯಿತು.

ತುಱುಗೆಮೆ ನೀಳ್ದ ಪುರ್ವು
ನಿಡುಗಣ್ ಪೊರೆಯಲ್ಲದೆ
ಬಟ್ಟಿತಪ್ಪ ಬಾ
ಯ್ದೆರೆ, ತನು ರೇಖೆಗೊಂಡ
ಕೊರಲೊಡ್ಡಿದ ಪೆರ್ಮೊಲೆ

ತೆಳ್ವಸಿಱು ಕರಂ |
ನೆರೆದ
ನಿತಂವಿಂಬಮಿಂಬುವಡೆದೊ
ಳ್ದೊಡೆ ನಕ್ಕರವದ್ದಿ ತಾನೆ ಪೋ
ಕಿಱುದೊಡೆಯೆಂದು ಧಾತ್ರಿ
ಪೊಗೞ್ಗುಂ ಪೊಗೞ್ವಿನ್ನರೆ
ಕುಂತಿ ಮಾದ್ರಿಗಳ್ || ೧೧೮

ಪದ್ಯ-೧೧೮:ಪದವಿಭಾಗ-

ಅರ್ಥ:ತುಱುಗೆಮೆ ನೀಳ್ದ ಪುರ್ವು (ದಟ್ಟ ಕೂದಲಿನ ಉದ್ದ ಹುಬ್ಬು) ನಿಡುಗಣ್,

ಪೊರೆಯಲ್ಲದೆ ಬಟ್ಟಿತಪ್ಪ
ಬಾಯ್ದಿರೆ (ನೀಳವಾದ ಕಣ್ಣು,
ಭಾರವಿಲ್ಲದ ದುಂಡಾದ
ತುಟಿಗಳು), ತನು
ರೇಖೆಗೊಂಡ ಕೊರಲ್ (ಸಣ್ಣ
ಗೆರೆಗಳಿರುವ ಕೊರಳು,)
ಒಡ್ಡಿದ ಪೆರ್ಮೊಲೆ (ಚಾಚಿದ
ದಪ್ಪ ಮೊಲೆ,) ತೆಳ್ವಸಿಱು (ತೆಳ್ವ್
+ ಅಸರ್/ ಬಸಿರ್?
ತೆಳುವಾದ ಹೊಟ್ಟೆ)
ಕರಂನೆರೆದ

ನಿತಂಬಂ(ತುಂಬಿಕೊಂಡಿರುವ ಪೃಷ್ಠ) ಇಂಬುವಡೆದೊಳ್ತೊಡೆ (ಹೊಂದಿಕೊಂಡಿರುವ ಒಳತೊಡೆ +? ಕಿರುತೊಡೆ)) ನಕ್ಕರವಡ್ಡಿ (=?ನೆಕ್ಕರವಟ್ಟೆ -ನೇರವಾದ ದೇಹ?) ತಾನೆ ಪೋ ಕಿಱುದೊಡೆಯೆಂದು ಧಾತ್ರಿ ಪೊಗೞ್ಗುಂ(ತಾನೇ ಹೋಗು ಎಂದು ಲೋಕವು ಹೋಗಳಿತು.) ಪೊಗೞ್ವಿನ್ನರೆ ಕುಂತಿ

ಮಾದ್ರಿಗಳ್(ಹೊಗಳಿಕೆಗೆ ಯೋಗ್ಯರೇಸರಿ ಕುಂತಿ ಮಾದ್ರಿಗಳು.)

ಪದ್ಯ-೧೦೮:ಅರ್ಥ:ಆ ವಧುಗಳಿಗೆ, ದಟ್ಟ ಕೂದಲಿನ ಉದ್ದ ಹುಬ್ಬು, ನೀಳವಾದ ಕಣ್ಣು, ಭಾರವಿಲ್ಲದ ದುಂಡಾದ ತುಟಿಗಳು, ಸಣ್ಣ ಗೆರೆಗಳಿರುವ ಕೊರಳು,ಚಾಚಿದ ದಪ್ಪ ಮೊಲೆ, ? ತೆಳುವಾದ ಹೊಟ್ಟೆ, ತುಂಬಿಕೊಂಡಿರುವ ಪೃಷ್ಠ,

ಹೊಂದಿಕೊಂಡಿರುವ
ಒಳತೊಡೆ, ನೇರವಾದ ದೇಹ,
ಇವೆಲ್ಲಾ ತಾನೇ/ ವಧುಗಳಿಗೆ,
-ಪತಿಯೊಡನೆ ಹೋಗು ಎಂದು
ಲೋಕವು ಹೋಗಳಿತು.
ಹೊಗಳಿಕೆಗೆ ಯೋಗ್ಯರೇ ಸರಿ
ಕುಂತಿ ಮಾದ್ರಿಗಳು.

ವ||
ಅಂತಾಕೆಗಳಿರ್ವರುಮೆರಡುಂ
ಕೆಲದೊಳಿರೆ
ಕಲ್ಪಲತೆಗಳೆರಡಱ ನಡುವಣ

ಕಲ್ಪವೃಕ್ಷ ಮಿರ್ಪಂತಿರ್ದ ಪಾಂಡುರಾಜಂಗೆ ಧೃತರಾಷ್ಟ್ರನಂಗಹೀನೆಂದು ವಿವಾಹದೊಸಗೆಯೊಡನೆ ಪಟ್ಟಬಂಧದೊಸಗೆಯಂ ಮಾಡಿ ನೆಲನನಾಳಿಸೆ-

ವಚನ:ಪದವಿಭಾಗ-

ಅರ್ಥ:ಅಂತು ಆಕೆಗಳು ಈರ್ವರುಂ ಎರಡುಂ ಕೆಲದೊಳು ಇರೆ ಕಲ್ಪಲತೆಗಳ ಎರಡಱ ನಡುವಣ ಕಲ್ಪವೃಕ್ಷ

ಮಿರ್ಪಂತಿರ್ದ
ಪಾಂಡುರಾಜಂಗೆ,
ಧೃತರಾಷ್ಟ್ರನು ಅಂಗಹೀನೆಂದು,
ವಿವಾಹದ ಒಸಗೆಯೊಡನೆ
ಪಟ್ಟಬಂಧದ ಒಸಗೆಯಂ
ಮಾಡಿ ನೆಲನನು ಆಳಿಸೆ-
(ಧೃತರಾಷ್ಟ್ರನು ಅಂಗಹೀನನು
ಕಣ್ಣಿಲ್ಲದವನು ಎಂದು,
ವಿವಾಹದೊಡನೆ ಪಟ್ಟಬಂಧದ
-ರಾಜ್ಯಪಟ್ಟಾಭಿಷೇಕ ಮಾಡಿ

ರಾಜ್ಯವಾಳಲು ಹೇಳಿದನು
ಭೀಷ್ಮ)
ವಚನ:ಅರ್ಥ:ಹಾಗೆ
ಅವರಿಬ್ಬರೂ ಎರಡು
ಪಕ್ಕಗಳಲ್ಲಿರಲು ಧೃತರಾಷ್ಟ್ರನು
ಅಂಗಹೀನು (ಕಣ್ಣಿಲ್ಲದವನು)
ಎಂಬ ಕಾರಣದಿಂದ, ಎರಡು
ಕಲ್ಪಲತೆಗಳ ಮಧ್ಯೆಯಿರುವ
ಕಲ್ಪವೃಕ್ಶದಂತಿದ್ದ
ಪಾಂಡುರಾಜನಿಗೆ
ವಿವಾಹಮಂಗಳದೊಡನೆ

ಪಟ್ಟಾಭಿಷೇಕವ್ರೂ ಆಗಿ
ರಾಜ್ಯವಾಳಲು ಹೇಳಿದನು
ಭೀಷ್ಮ .

ಉ||ಮೀಱುವೆರೆಂಬ
ಮಾಂಡಳಿಕರೀಯದರೆಂಬದ
ಟರ್ ವಯಲ್ಗೆ ಮೆ
ಯ್ದೋಱುರೆವೆಂಬ
ಪೂಣಿಗರಡಂಗಿ ಕುನುಂಗಿ
ಸಿಡಿಲ್ದು ಜೋಲ್ದು ಕಾ|
ಯ್ಪಾಱಿ ನಭಕ್ಕೆ ಪಾಱಿದುದು
ಗಂಡರ ನೆತ್ತಿಯೊಳೆತ್ತಿ ಬಾಳನಿ

ನ್ನೂಱುಗುಮೆಂದೊಡೇಂ ಪಿರಿದೊ ತೇಜದ ದಳ್ಳುರಿ ಪಾಂಡುರಾಜನಾ|| ೧೦೯

ಪದ್ಯ-೧೦೯:ಪದವಿಭಾಗ-ಅರ್ಥ:ಮೀಱುವೆರೆಂಬ ಮಾಂಡಳಿಕರು ಈಯದರೆ ಎಂಬ ಅದಟರ್ ವಯಲ್ಗೆ (ಕಾಳಗದ ಬಯಲಿಗೆ)ಮೆಯ್ದೋಱುರೆವೆಂಬ (ಮೈ (ದ)ತೋರುವರೆಂಬ) ಪೂಣಿಗರು(ಪರಾಕ್ರಮಿಗಳು) ಅಡಂಗಿ ಕುನುಂಗಿ ಸಿಡಿಲ್ದು ಜೋಲ್ದು ಕಾಯ್ವಾರೆ (ಅಡಗಿ, ಕುಗ್ಗಿ, ಜೋತುಬಿದ್ದು, ಕಾಯ್ದು/ಸಿಟ್ಟು ಆರಿಹೋಗಿ) ನಭಕ್ಕೆ ಪಾಱಿದುದು (ಪಾಂಡುರಾಜನ ತೇಜದ ದಳ್ಳುರಿ ಆಕಾಶಕ್ಕೆ ಏರತು.) ಗಂಡರ ನೆತ್ತಿಯೊಳೆತ್ತಿ ಬಾಳನುನಿನ್ನೂ(ಬಾಳು/ಕತ್ತಿಯನ್ನು ಶೂರರ/ ಶತ್ರುಗಳ ನೆತ್ತಿಯಲ್ಲಿ ಒತ್ತಿ ಇನ್ನೂ ಉರುಗುಂ) ಊಱುಗುಂ ಎಂದೊಡೆ (ನಾಟುತ್ತದೆ, ಎಂದರೆ) ಏಂ ಪಿರಿದೊ()ಹಿರಿದೋ ತೇಜದ ದಳ್ಳುರಿ ಪಾಂಡುರಾಜನಾ|

ಪದ್ಯ-೧೦೯:ಅರ್ಥ:. ಪಾಂಡುರಾಜನ ಆಜ್ಞೆಯನ್ನು ಮೀರಿ ನಡೆಯುತ್ತೇವೆ ಎಂಬ ಸಾಮಂತರಾಜರೂ,

ಕಪ್ಪಕಾಣಿಕೆಗಳನ್ನು
ಕೊಡುವುದಿಲ್ಲವೆಂದ
ಶೂರರೂ, ಕಾಳೆಗದಲ್ಲಿ
ಪ್ರತಿಭಟಿಸಿ
ಯುದ್ಧಮಾಡುವೆವು ಎಂದು
ಪ್ರತಿಜ್ಞೆಮಾಡಿದವರೂ ಅಡಗಿ,
ಕುಗ್ಗಿ, ಜೋತುಬಿದ್ದು, ಸಿಟ್ಟು
ಆರಿಹೋಗಿ ಕುಗ್ಗಿ, ಕೆಳಕ್ಕೆ ಬಿದ್ದು
ಕೋಪವಿರಹಿತರಾಗಲು
ಪಾಂಡುರಾಜನ ತೇಜಸ್ಸೆಂಬ
ಜಾಜ್ವಲ್ಯಮಾನವಾದ

ಬೆಂಕಿಯ ಆಕಾಶಕ್ಕೆ ಚಿಮ್ಮಿತು. ಪಾಂಡುರಾಜನ ಕತ್ತಿಯು ಇನ್ನೂ ಪರಾಕ್ರಮಿಗಳ ಹಣೆಯಲ್ಲಿ ನಾಡಲ್ಪಡುತ್ತಿವೆ ಎಂದಾಗ ಅವನ ತೇಜಸ್ಸು ಎಷ್ಟು ಹಿರಿದೋ! (ಎಂದರೆ ಅವನ ಪ್ರತಾಪವು ಯಾವ ತಡೆಯೂ ಇಲ್ಲದೆ ಅಭಿವೃದ್ಧಿಯಾಗಿ ಅವನ ಮೇಲ್ಮೆಯು

ಅತ್ಯತಿಶಯವಾದುದು ಎಂದು ಭಾವ)

ಮ|| ಬೆಸಕೆಯ್ದತ್ತು ಸಮುದ್ರಮುದ್ರಿತಧರಾಚಕ್ರಂ ಪ್ರತಾಪಕ್ಕಗು ರ್ವಿಸೆ ಗೋಳುಂಡೆಗೊಳುತ್ತುಮಿರ್ದು ದಿಶಾಚಕ್ರಂ ಪೊzಟ್ದಾಜ್ಞೆಗಂ |

ಪೆಸರ್ಗಂ ಮುನ್ನಮೆ ರೂಪುವೋದುದು

ವಿಯಚ್ಚಕ್ರಂ ಸಮಂತೆಂಬಿನಂ ಜಸಮಾ ಪಾಂಡುರಮಾದುದಾ ನೃಪರೊಳಾರಾ ಪಾಂಡುರಾಜಂಬರಂ ॥ ೧೧೦(110)

ಪದ್ಯ-೧೧೦:ಪದವಿಭಾಗ-ಅರ್ಥ:ಬೆಸಕೆಯ್ದತ್ತು ಸಮುದ್ರಮುದ್ರಿತಧರಾಚಕ್ರಂ (ಸಮುದ್ರದಿಂದ ಸುತ್ತುವರಿದ ಧರಾ/ಭೂಮಿಯು ಆಜ್ಞೆಯನ್ನು ಪಾಲಿಸಿತು),

ಪ್ರತಾಪಕ್ಕೆ ಅಗುರ್ವಿಸೆ (ಹೆದರಿ) ಗೋಳುಂಡೆ (ಹೆದರಿ ಗೋಳು/ದುಃಖ ಎಂಬ ಉಂಡೆಯನ್ನು)ಗೊಳುತ್ತುಮಿರ್ದುದು (ನುಂಗುತ್ತಿತ್ತು) ದಿಶಾಚಕ್ರಂ ಪೊದಲ್ದಾಜ್ಞೆಗಂ (ಪೊದಲ್ದ ಆಜ್ಞೆಗೆ- ವ್ಯಾಪಿಸಿದ ಅವನ ಆಜ್ಞೆಗೆ)|

ಪೆಸರ್ಗಂ (ಕೀರ್ತಿಗೆ) ಮುನ್ನಮೆ ರೂಪುವೋದುದು (ಗೂಡಾಗಿ ಪರಿಣಮಿಸಿತು) ವಿಯಚ್ಚಕ್ರಂ(ಆಕಾಶ), ಸಮಂತು (ಚೆನ್ನಾಗಿ) ಎಂಬಿನಂ (ಎನ್ನುತ್ತಿರಲು) ಜಸಮ್ ಆ ಪಾಂಡುರಮ್ (ಬೆಳ್ಳಗೆ) ಆದುದು - ಆಯಿತು, (ಪಾಂಡುವಿನ ಕೀರ್ತಿ ಮೇಲಿಂ ಕೆಳವರೆಗೂ ಬೆಳ್ಳಗಾಯಿತು- ಪ್ರಕಾಶಿಸಿತು) ಆ

ನೃಪರೊಳು ಆರು ಆ ಪಾಂಡುರಾಜ ಜಂಬರಂ(ರಾಜರಲ್ಲಿ ಆ ಪಾಂಡುರಾಜನ ಸಮಾನ ಆರು/ ಯಾರು?- ಯಾರೂ ಇಲ್ಲ.)

ಪದ್ಯ-೧೧೦:ಅರ್ಥ:ಸಮುದ್ರದಿಂದ ಸುತ್ತುವರಿಯಲ್ಪಟ್ಟ ಭೂಮಂಡಲವು ಅವನ ಆಜ್ಞೆಯನ್ನು ಸಂಪೂರ್ಣವಾಗಿ ಪಾಲಿಸಿತು. ಅವನ ಶೌರ್ಯಕ್ಕೆ ಹೆದರಿ ದಿಙ್ಮಂಡಲದಲ್ಲಿದ್ದ ರಾಜರೆಲ್ಲ ಗೋಳುಪಡುತ್ತಿದ್ದರು. ಸಂಪೂರ್ಣವಾಗಿ ಎಲ್ಲ ಕಡೆಗೂ ವ್ಯಾಪಿಸುವ ಅವನ ಆಜ್ಞೆಗೂ

ಯಶಸ್ಸಿಗೂ ಆಕಾಶಮಂಡಲವು ಗೂಡಾಗಿ ಪರಿಣಮಿಸಿತು. (ಆವಾಸಸ್ಥಾನವಾಯಿತು), ಎನ್ನುವಾಗ ಅವನ ಧವಳಕೀರ್ತಿ (ಬಿಳಿಕೀರ್ತಿ) ಸರ್ವಲೋಕವ್ಯಾಪ್ತಿಯಾಯಿತು. ರಾಜರುಗಳಲ್ಲಿ ಪಾಂಡುರಾಜನಿಗೆ ಸಮನಾಗುವವರಾರಿದ್ದಾರೆ? ಯಾರೂ ಇಲ್ಲ.

ಪಾಂಡುರಾಜನು ಶಾಪಗ್ರಸ್ತನಾಗಿ ವಾನಪ್ರಸ್ತಕ್ಕೆ ಹೋದುದು

ವ|| ಅಂತು ಪಾಂಡುರಾಜನಧಿಕತೆಜನುಮ ವನತವೈರಿಭೂಭೃತ್ಸಮಾಜನು ಮಾಗಿ ನೆಗೞುತ್ತಿರ್ದೊಂದು ದಿವಸಂ ತೋಪಿನ ಬೇಂಟೆಯನಾಡಲೞ್ತಿಯಿಂ ಪೋಗಿ-

ವಚನ:ಪದವಿಭಾಗ-ಅರ್ಥ:ಅಂತು ಪಾಂಡುರಾಜನು ಅಧಿಕತೇಜನುಂ ಅವನತವೈರಿಭೂಭೃತ್ಸಮಾಜನುಂ (ಅವನತ-ನಮಸ್ಕಕರಿಸಿದ,ವೈರಿ ಭೂ ಬೃತ್ ಸಮಾಜನು) ಆಗಿ ನೆಗೞುತ್ತಿರ್ದ (ಉತ್ತಮವಾಗಿದ್ದ) ಒಂದು ದಿವಸಂ ತೋಪಿನ (ಕಾಡು

ಬೇಟೆಯಾಡುವ ಸ್ಥಳ)
ಬೇಂಟೆಯನಾಡಲು
ಅೞ್ತಿಯಿಂ ಪೋಗಿ-
ವಚನ:ಅರ್ಥ:ಹಾಗೆ ಆ
ಪಾಂಡುರಾಜನು ನಿರ್ಮಲ
ತೇಜಸ್ಸುಳ್ಳವನೂ,
ನಮಸ್ಕರಿಸಲ್ಪಟ್ಟ ಶತ್ರುರಾಜ
ಸಮೂಹ ವನ್ನುಳ್ಳವನೂ
(ಎಲ್ಲಾರಾಜರೂ
ನಮಸ್ಕರಿಸುತ್ತಿದ್ದರು ಎಂದು
ಭಾವ) ಆಗಿ

;ರಾಜ್ಯಭಾರಮಾಡುತ್ತಿದ್ದು,

ಒಂದು ದಿವಸ ತೋಪಿನ

ಬೇಟೆಯನ್ನು ಆಡಲು

ಆಸಕ್ತನಾಗಿ ಕಾಡಿಗೆ

ಹೋದನು.

ಚಂ||ಇನಿಯಳನಟ್ಟಿಯಿಂದೆ

ಮೃಗಿ ಮಾಡಿ

ಮನೋಜಸುಖಕ್ಕೆ ಸೋಲ್ತಲಂ

ಪಿನೆ ನೆರೆಯಲ್ಕೆ

ದಿವ್ಯಮುನಿಯುಂ ಮೃಗಮಾಗಿ

ಮರಲ್ದು ಕೂಡೆ ಮೆ |

ಲ್ಲನೆ ಮೃಗಮೆಂದು ಸಾರ್ದು
ನೆಱನಂ ನಡೆ ನೋಡಿ
ನರೇಂದ್ರನೆಚ್ಚು ಭೋಂ
ಕನೆ ಮೃಗಚಾರಿಯಂ ತನಗೆ
ಮಾಣದೆ ತಂದನದೊಂದು
ಮಾರಿಯಂ ‖ ೧೧೧ (111)

ಪದ್ಯ-111:ಪದವಿಭಾಗ-
ಅರ್ಥ: ಇನಿಯಳನು ಅಱ್ತಿಯಿಂದೆ ಮೃಗಿ ಮಾಡಿ ಮನೋಜಸುಖಕ್ಕೆ (ಕಿಂದಮ ಋಷಿಯು ಪತ್ನಿಯನ್ನು ಜಿಂಕೆ

ಮಾಡಿಕೊಂಡು ಕಾಮಸುಖಕ್ಕೆ)
ಸೋಲ್ತು ಅಲಂಪಿನೆ ನೆರೆಯಲ್ಕೆ
(ಅವಳಿಗೆ ಸೋತು/ಆಸೆಪಟ್ಟು
ಆನಣದದಿಂದ ಕೂಡಿರಲು)
ದಿವ್ಯಮುನಿಯುಂ ಮೃಗಮಾಗಿ
ಮರಲ್ದು ಕೂಡೆ (ಆ
ದಿವ್ಯಮುನಿಯೂ ಜಿಂಕೆಯಾಗಿ
ಅರಳಿ/ ಹಿಗ್ಗಿ ಹೆಣ್ಣಿನ
ಜಿಂಕೆಯೊಡನೆ ಕೂಡಿರಲು)
ಮೆಲ್ಲನೆ ಮೃಗಮೆಂದು ಸಾರ್ದು
ನೆಱನಂ ನಡೆ ನೋಡಿ

ನರೇಂದ್ರನು ಎಚ್ಚು(ಮೆಲ್ಲಗೆ
ಜಿಂಕೆ ಎಂದು ಹತ್ತಿರ ಹೋಗಿ
ಆಯವನ್ನು ನೋಡಿ
ಪಾಡುರಾಜನು ಬಾಣದಿಂದ
ಹೊಡೆದನು) ಭೋಂಕನೆ
ಮೃಗಚಾರಿಯಂ ತನಗೆ
ಮಾಣದೆ ತಂದನು ಅದೊಂದು
ಮಾರಿಯಂ (ಬಗ್ಗನೆ
ಮೃಗವಾಗಿದ್ದ ಋಷಿಯನ್ನು
ಹೊಡೆದು ತನಗೆ ಒಂದು

ಮಾರಿಯನ್ನು ಮೃತ್ಯುವನ್ನು ತಂದುಕೊಂಡನು.)

ಪದ್ಯ-111:ಅರ್ಥ:ಅಲ್ಲಿ ಕಿಂದಮನೆಂಬ ಋಷಿಯೊಬ್ಬನು ತನ್ನ ಪ್ರಿಯಳನ್ನು ಹೆಣ್ಣು ಜಿಂಕೆಯನ್ನಾಗಿ ಮಾಡಿ ಕಾಮವಶನಾಗಿ ಸಂತೋಷದಿಂದ ಅವಳೊಡನೆ ಕೂಡಿ ಋಷಿಶ್ರೇಷ್ಠನಾದ ತಾನೂ ಗಂಡುಜಿಂಕೆಯ

ಆಕಾರವನ್ನು ತಾಳಿ
ಉತ್ಸಾಹದಿಂದ ಅದರೊಡನೆ
ಕೂಡಿದ್ದನು. ಪಾಂಡುರಾಜನು
ಅದು ಜಿಂಕೆಯೆಂದು ಮೆಲ್ಲಗೆ
ಅದರ ಹತ್ತಿರ ಬಂದು ಅದರ
ಮರ್ಮಸ್ಥಾನವನ್ನು ನೋಡಿ
ಗುರಿಯಿಟ್ಟು ಆ
ಮೃಗರೂಪದಲ್ಲಿದ್ದ ಆ
ಋಷಿಯನ್ನು ತಟ್ಟನೆ
ಬಾಣದಿಂದ ಹೊಡೆದು, ತನಗೆ
ಒಂದು ಮಾರಿಯನ್ನು/

ಮೃತ್ಯುವನ್ನು
ತಂದುಕೊಂಡನು.

ವ|| ಆಗಳ್ ಪ್ರಳಯದುಳ್ಕಮುಳ್ಕುವಂತೆ ತನ್ನೆಚ್ಚಂಬು ಮುನಿಕುಮಾರನ ಕಣ್ಣೊಳಮೆರ್ದೆಯೊಳಮುಕ್ಕೆ ಪೇಟಿಮೆನ್ನನಾವನೆಚ್ಚನೆಂಬ ಮುನಿದು ಮುನಿದ ಸರಮಂ ಕೇಳ್ದು ಬಿಲ್ಲನಂಬುಮನೀಡಾಡಿ ತನ್ನ ಮುಂದೆ ನಿಂದಿರ್ದ ಭೂಪನಂ ಮುನಿ ನೋಡಿ-

ವಚನ:ಪದವಿಭಾಗ-ಅರ್ಥ:ಆಗಳ್ ಪ್ರಳಯದ ಉಳ್ಕಮ್(ಉಲ್ಕೆಯು) ಉಳ್ಳುವಂತೆ (ಉರಿಯುವಂತೆ) ತನ್ನೆಚ್ಚಂಬು (ತಾನು ಹೊಡೆದ ಬಾಣ) ಮುನಿಕುಮಾರನ ಕಣ್ಣೊಳಂ ಎರ್ದೆಯೊಳಂ ಅಕ್ಕೆ(ಇರಲು) ಪೇೞಿಂ ಎನ್ನನು ಆವನು ಎಚ್ಚನು (ಹೊಡೆದನು)ಎಂಬ ಮುನಿದು ಮುನಿದ ಸರಮಂ

ಕೇಳ್ದು
ಬಿಲ್ಲನಂಬುಮನು(ಬಿಲ್ಲು
ಬಾಣಗಳನ್ನು) ಈಡಾಡಿ
(ಬಿಸಾಡಿ) ತನ್ನ ಮುಂದೆ
ನಿಂದಿರ್ದ ಭೂಪನಂ ಮುನಿ
ನೋಡಿ-
ವಚನ:ಅರ್ಥ:ಆಗ ತಾನು
ಹೊಡೆದ ಬಾಣವು
ಋಷಿಪುತ್ರನ ಕಣ್ಣಿನಲ್ಲಿಯೂ
ಎದೆಯಲ್ಲಿಯೂ
ಪ್ರಳಯಕಾಲದ

ಉಲ್ಕಾಪಾತದಂತೆ ಹೊಳೆಯುತ್ತಿರಲು ‘ನನ್ನನ್ನು ಯಾರು ಹೊಡೆದನು ಹೇಳಿ’ ಎಂಬ ಋಷಿಯ ಕೋಪಧ್ವನಿಯನ್ನು ಕೇಳಿ ಬಿಲ್ಲು ಬಾಣಗಳನ್ನು ಎಸೆದು ತನ್ನ ಮುಂದೆ ನಿಂತ ರಾಜನನ್ನು ಮುನಿ ನೋಡಿ,

ಉ|| ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತೊಡಗೂಡಿದೆನ್ನ ನಿಂ

ತನ್ನಯ ಮೆಚ್ಚುದರ್ಕೆ
ಪೆಱತಿಲ್ಲದು ದಂಡಮೊಱಿಲ್ದು
ನಲ್ಲಳೊಳ್ |
ನೀನ್ನಡೆನೊಡಿಯುಂ ಬಯಸಿ
ಕೂಡಿಯುಮಾರಡೆ
ಸಾವೆಯಾಗಿ ಪೋ
ಗಿನ್ನೆನೆ
ರೌದ್ರಶಾಪಪರಿತಾಪವಿಳಾಪ
ದೊಳಾ ಮಹೀಶ್ವರಂ || ೧೧೨

ಪದ್ಯ-೧೧೨:ಪದವಿಭಾಗ-

ಅರ್ಥ:ಸನ್ನತದಿಂ ರತಕ್ಕೆ ಎಳಸಿ

(ಬಗ್ಗಿ ರತಿಕ್ರೀಡೆಗೆ ಬಯಸಿ)
ನಲ್ಲಳೊಳ್ ಓತೊಡಗೂಡಿದ
ಎನ್ನನು ಇಂತನ್ನಯಂ
(ಪತ್ನಿಯಲ್ಲಿ ಒಟ್ಟುಗೂಡಿದ
ನನ್ನನ್ನು)
ಎಚ್ಚುದರ್ಕೆ(ಹೊಡೆದುದಕ್ಕೆ)
ಪೆಱತು ಇಲ್ಲದು
ದಂಡಮು(ಬೇರೆ ಇಲ್ಲ ಶಿಕ್ಷೆ)
ಒಱಲ್ದು ನಲ್ಲಳೊಳ್ ನೀನು
ನೆಡೆನೊಡಿಯುಂ ಬಯಸಿ
ಕೂಡಿಯುಂ ಆರಡೆ

ಸಾವೆಯಾಗಿ ಪೋಗಿನ್ನು ಎನೆ,
(ಪ್ರೀತಿಸಿ ನಲ್ಲೆಯೊಡನೆ ನೀನು
ಚೆನ್ನಾಗಿ ನೋಡಿ/
ಅಪೇಕ್ಷೆಪಟ್ಟು ಕೂಡಿದರೆ
ಸಾಯುವೆ ಹೋಗು ಇನ್ನು
ಎನ್ನಲು,) ರೌದ್ರಶಾಪ
ಪರಿತಾಪ ವಿಳಾಪದೊಳು ಆ
ಮಹೀಶ್ವರಂ (ರಾಜನು
ಭಯಂಕರ ಶಾಪದಿಂದ
ಸಂಕಟದಿಂದ ರೋದನದಲ್ಲಿ
ಇದ್ದನು.)

ಪದ್ಯ-೧೧೨:ಅರ್ಥ:ರತಿಕ್ರೀಡೆಯ ಸುಖಕ್ಕೆ ಆಸೆಪಟ್ಟು ಪ್ರಿಯಳಲ್ಲಿ ಪ್ರೇಮದಿಂದ ಸೇರಿಕೊಂಡಿದ್ದ ನನ್ನನ್ನು ಹೀಗೆ ಹೊಡೆದುದಕ್ಕೆ ನಿನಗೆ ಬೇರೆ ಶಿಕ್ಷೆಯಿಲ್ಲ, ನೀನು ಇನ್ನು ಮೇಲೆ ನಿನ್ನ ಪ್ರಿಯಳಲ್ಲಿ ಪ್ರೀತಿಸಿ ನೋಡಿದಾಗ ಅಥವಾ ಆಸೆಪಟ್ಟು ಕೂಡಿದಾಗ ಸಾಯುತ್ತೀಯೆ! ಹೋಗು, ಎಂದು ಶಪಿಸಿದನು. ಈ

ಭಯಂಕರವಾದ ಶಾಪದಿಂದುಂಟಾದ ದುಖದ ಸಂಕಟದಿಂದ ರೋದನದಲ್ಲಿ ಇದ್ದನು ಆ ಪಾಂಡುರಾಜನು.

ವ|| ಎನ್ನ ಗೆಯ್ದ ಕಾಮಾಕ್ರಾಂತಕ್ಕೆ ಕಾಮಕೃತಮೇಂ ಪಿರಿದಲ್ತು

ವಚನ:ಪದವಿಭಾಗ-ಅರ್ಥ:ಎನ್ನ ಗೆಯ್ದ (ನಾನು ಮಾಡಿದ) ಕಾಮಾಕ್ರಾಂತಕ್ಕೆ (ಕಾಮಕ್ರೀಡೆಯ ವಿಘ್ನಕ್ಕೆ)

)ಕಾಮಕೃತಮೇಂ

ಪಿರಿದಲ್ತು(ಸ್ವೇಚ್ಛಾರದಿಂದ

ಆಗಿದ್ದು - ಏನೂ ಹೆಚ್ಚಲ್ಲ.)

ವಚನ:ಅರ್ಥ:ನಾನು

ಮಾಡಿದ ಕಾಮಕ್ರೀಡೆಯ

ವಿಷ್ಟಕ್ಕೆ ಸ್ವೇಚ್ಛಾರದಿಂದ

ಆಗಿದ್ದು -ಶಾಪ ಏನೂ ಹೆಚ್ಚಲ್ಲ,

ಎಂದು ಪಾಂಡು ಭಾವಿಸಿದ.

ಕಂ|| ಎತ್ತ ವನಮೆತ್ತ ಮೃಗಯಾ

ವೃತ್ತಕವೀ ತಪಸಿಯೆತ್ತ

ಮೃಗಮೆಂದೆಂತಾ|

ನೆತ್ತೆಚ್ಚೈನಾತ್ಮಕರ್ಮಾ

ಯತ್ತಂ

ಪೆಱತಲ್ತಿದೆಲ್ಲಮಘಟಿತಘಟಿ

ತಂ ||೧೧೩||113||

ಪದ್ಯ-೬೯:ಪದವಿಭಾಗ-

ಅರ್ಥ:ಎತ್ತ ವನಂ ಎತ್ತ ಮೃಗಯಾವೃತ್ತಕವು ಈ ತಪಸಿಯೆತ್ತ, ಮೃಗಮೆಂದೆಂ ತಾನು ಎತ್ತು ಎಚ್ಚೆನು(ಎಲ್ಲಿಯ ಕಾಡು! ಎಲ್ಲಿಯ ಬೇಟೆಕಾರ್ಯ! ಈ ತಪಸ್ವಿ

ಎಲ್ಲಿಯವ!, ಜಿಂಕೆ ಎಂದೇ
ತಾನು ಬಿಲ್ಲನ್ನು ಎತ್ತಿ
ಹೊಡೆದೆನು ಎಚ್ಚೆನು)
ಆತ್ಮಕರ್ಮಾಯತ್ತಂ (ನನ್ನ
ಕರ್ಮ ಫಲ) ಪೆಱತಲ್ತು
(ಬೇರೆಯಲ್ಲ)ಇದೆಲ್ಲಮ
ಅಘಟಿತಘಟಿತಂ (ಇದೆಲ್ಲವೂ
ಸಂಬಂಧವಿಲ್ಲದ ಘಟನೆ,
ಆಗಬಾರದ ಕಾರ್ಯ!)
ಪದ್ಯ-೬೯:ಅರ್ಥ:ಎಲ್ಲಿಯ
ಕಾಡು! ಎಲ್ಲಿಯ

ಬೇಟೆಕಾರ್ಯ! ಈ ತಪಸ್ವಿ
ಎಲ್ಲಿಯವ!, ಜಿಂಕೆ ಎಂದೇ
ತಾನು ಬಿಲ್ಲನ್ನು ಎತ್ತಿ
ಹೊಡೆದೆನು, ನನ್ನ ಕರ್ಮ ಫಲ!
ಬೇರೆಯಲ್ಲ! ಇದೆಲ್ಲವೂ
ಸಂಬಂಧವಿಲ್ಲದ ಘಟನೆ,
ಆಗಬಾರದ ಕಾರ್ಯ! ಎಂದು
ಪಾಂಡು ಸಂಕಟಪಟ್ಟನು.

ವ|| ಎಂದು ಚಿಂತಿಸುತ್ತುಂ
ಪೊೞಲ್ಗೆ ಮಗುೞ್ದುವಂದು
ಗಾಂಗೇಯ ಧೃತರಾಷ್ಟ್ರ

ವಿದುರರ್ಕಳ್ಗೆ ತದ್ವೃತ್ತಾಂತಮೆಲ್ಲಮಂ ಪೇೞ್ದು ಸಮಸ್ತವಸ್ತುಗಳಂ ದೀನಾನಾಥಜನಂಗಳ್ಗೆ ಸೂಗೊಟ್ಟು ನಿಜಪರಿರಾರಮಂ ಬರಿಸಿ-

ವಚನ:ಪದವಿಭಾಗ-

ಅರ್ಥ:ಎಂದು ಚಿಂತಿಸುತ್ತುಂ ಪೊೞಲ್ಗೆ ಮಗುೞ್ದುವಂದು ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗೆ

ತದ್ವೃತ್ತಾಂತಮೆಲ್ಲಮಂ ಪೇೞ್ದು ಸಮಸ್ತವಸ್ತುಗಳಂ ದೀನಾನಾಥ ಜನಂಗಳ್ಗೆ ಸೂಗೊಟ್ಟು ನಿಜ ಪರಿರಾರಮಂ ಬರಿಸಿ-

ವಚನ:ಅರ್ಥ:ಎಂದು ಯೋಚಿಸುತ್ತ ಪಟ್ಟಣಕ್ಕೆ ಹಿಂದಿರುಗಿ ಬಂದು ಭೀಷ್ಮ ಧೃತರಾಷ್ಟ್ರ, ವಿದುರರಿಗೆ ಆ ಸಮಾಚಾರವನ್ನೆಲ್ಲ ಹೇಳಿ ಸಮಸ್ತವಸ್ತುಗಳನ್ನೂ

ದೀನರೂ ಅನಾಥರೂ ಆದ
ಜನಗಳಿಗೆ ದಾನಮಾಡಿ ತನ್ನ
ಪರಿವಾರವನ್ನು ಬರಮಾಡಿ-

ಉ|| ಸಾರಮನಂಗ
ಜಂಗಮಲತಾ
ಲಲಿತಾಂಗಿಯರಿಂದಮಲ್ತೆ ಸಂ
ಸಾರಮಿದೆಂಬುದಿನ್ನೆನಗೆ
ತಪ್ಪುದು ತನ್ಮುನಿ
ಶಾಪದಿಂದಿಮಿ|
ನ್ನಾರುಮಿದರ್ಕೆ ವಕ್ರಿಸದಿರಿಂ
ವನವಾಸದೊಳಿರ್ಪೆನೆಂದು ದು

ರ್ವಾರ ಪರಾಕ್ರಮಂ ತಳರೆ ಬಾರಿಸಿವಾರಿಸಿ ಕುಂತಿ ಮಾದ್ರಿಯರ್॥ ೧೧॥

ಪದ್ಯ-೬೯:ಪದವಿಭಾಗ-ಅರ್ಥ:ಸಾರಮು (ಸಂಸಾರವು) ಅನಂಗ (ಮನ್ಮಥನ) ಜಂಗಮಲತಾ (ನೆಡದಾಡುವ ಬಳ್ಳಿ) ಲಲಿತಾಂಗಿಯರಿಂದಂ ಅಲ್ತೆ (ಸುಂದರ ದೇಹದಿಂದ ಅಲ್ಲವೇ) ಸಂಸಾರಂ ಇದೆಂಬುದು ಇನ್ನೆನಗೆ ತಪ್ಪುದು ತನ್ನ ಮುನಿ ಶಾಪದಿಂದಂ (ಇದು ಸಂಸಾರ ಎನ್ನುವುದು ನನಗೆ ಇನ್ನು ತಪ್ಪಿತು ತನ್ನ ಮುನಿ ಶಾಪದಿಂದ), ಇನ್ನಾರುಂ ಇದರ್ಕೆ ವಕ್ರಿಸದಿರಿಂ (ಇನರೂ ಇದಕ್ಕೆ ಅಡ್ಡಬರದಿರಿ) ವನವಾಸದೊಳ್ ಇರ್ಪೆನು (ವನವಾಸದಲ್ಲಿರುತ್ತೇನೆ), ಎಂದು ದುರ್ವಾರ ಪರಾಕ್ರಮಂ ತಳರೆ (ಹೊರಡಲು) ಬಾರಿಸಿವಾರಿಸಿ ಕುಂತಿ ಮಾದ್ರಿಯರ್(ಕುಂತಿ ಮಾದ್ರಿಯರು ಬಾರಿಬಾರಿ ಹೇಳಿ ತಡೆದರು.)

ಪದ್ಯ-೬೯:ಅರ್ಥ:ಸಂಸಾರವು ಸಾರವತ್ತಾಗಿರುವುದು ಮನ್ಮಥನ ನಡೆದಾಡುವ ಬಳ್ಳಿಗಳಂತಿರುವ

ಸುಂದರದೇಹದ
ತರುಣಿಯರಿಂದಲ್ಲವೇ? ಆ
ಋಷಿಶಾಪದಿಂದ ಇನ್ನು ಅದು
ನನಗೆ ತಪ್ಪಿತು.
ವನವಾಸದಲ್ಲಿರುತ್ತೇನೆ! ಇದಕ್ಕೆ
ಮತ್ತಾರೂ ಅಡ್ಡಿಮಾಡಬೇಡಿ
ಎಂದು ಅಪ್ರತಿಮ
ಪರಾಕ್ರಮಿಯಾದ ಆ
ಪಾಂಡುರಾಜನು ಕಾಡಿಗೆ
ಹೊರಡಲು, ಕುಂತಿ
ಮಾದರಿಯರು ಅವನನ್ನು

ತಡೆದರು.(ತಡೆಯಲು ಪಾಂಡು ಹೊರಟೇ ಬಿಟ್ಟನು.)

ವ|| ಬೆನ್ನ ಬೆನ್ನನೆ ಬರೆ ಚಿನ್ನ ಬಿನ್ನನೆ ಪೋಗಿ-

ವಚನ:ಪದವಿಭಾಗ-

ಅರ್ಥ:ಬೆನ್ನ ಬೆನ್ನನೆ (ಬೆನ್ನ ಹಿಂದೆ ಬರಲು)ಬರೆ , ಚಿನ್ನ ಬಿನ್ನನೆ (ಮೌನವಾಗಿ)ಪೋಗಿ

ವಚನ:ಅರ್ಥ:ಅವನ ಬೆನ್ನ ಹಿಂದೆ ಹಿಂದೆಯೇ ಮೌನವಾಗಿ ಬಂದರು.

ಖಚರುಪ್ಲುತ ತ|| ತುಂಗ ವನ್ಯ
ಮತಂಗಜ ದಂತಾಘಾತ
ನಿಪಾತಿತ ಸಲ್ಲಕೀ
ಭಂಗಮಂ ಮಣಿಮೌಕ್ತಿಕ ನೀಳ
ಸ್ಥೂಳ ಶಿಲಾ ಪ್ರವಿಭಾಷಿತೋ|
ತ್ತುಂಗಮಂ
ಮುನಿಮುಖ್ಯಮುಖಾಂಭೋ
ಜೋದರ ನಿರ್ಗತಮಂತ್ರ ಪೂ
ತಾಂಗಮಂ
ನೃಪನೆಯ್ದಿದನುದ್ಯಚ್ಛೃಂಗಮ
ನಾ ಶತಶೃಂಗಮಂ|| ೧೧೫

ಪದ್ಯ-೧೧೫:ಪದವಿಭಾಗ-ಅರ್ಥ:ತುಂಗ(ಎತ್ತರದ) ವನ್ಯ ಮತಂಗಜ ದಂತಾಘಾತ ನಿಪಾತಿತ(ಎತ್ತರವಾದ ಕಾಡಾನೆಯ ದಂತದ ಪೆಟ್ಟಿನಿಂದ ಉರುಳಿಸಲ್ಪಟ್ಟು) ಸಲ್ಲಕೀಭಂಗಮಂ (ಆನೆಯಿಂದ ಮುರಿದ ಬೇಲದ ಮರಗಳನ್ನುಳ್ಳುದೂ) ಮಣಿಮೌಕ್ತಿಕ ನೀಳ ಸ್ಥೂಳ ಶಿಲಾ ಪ್ರವಿಭಾಷಿತ

ಓತ್ತುಂಗಮಂ(ಮುತ್ತು ಮತ್ತು
ರತ್ನಗಳನ್ನೊಳಗೊಂಡ
ನೀಲವೂ ಸ್ಥೂಲವೂ ಆದ
ಕಲ್ಲುಬಂಡೆಗಳಿಂದ
ಪ್ರಕಾಶಮಾನವಾದುದೂ
ಬಹಳ ಎತ್ತರವಾದುದೂ)
ಮುನಿಮುಖ್ಯ
ಮುಖಾಂಭೋಜ ಉದರ
(ಮನಿಮುಖ್ಯರ
ಮಖಕಮಲದಿಂದ
ಒಳಗಿನಿಂದ), ನಿರ್ಗತಮಂತ್ರ

ಪೂತಾಂಗಮಂ (ಹೊರಟ ಮಂತ್ರಗಳಿಂದ ಪೂತ / ಪವಿತ್ರವಾದ) ನೃಪನು ಎಯ್ದಿದನು ಉದ್ಯಚ್ಛೃಂಗಮನು ಆ ಶತಶೃಂಗಮಂ(ಎತ್ತರ ಶಿಖರವನ್ನು ಆ ಶತಶೃಂಗವೆಂಬ ಪರ್ವತವನ್ನು ಪಾಂಡುರಾಜನು ತಲುಪಿದನು)

ಪದ್ಯ-೧೧೫:ಅರ್ಥ:ಎತ್ತರವಾದ ಕಾಡಾನೆಯ ದಂತದ

ಪೆಟ್ಟಿನಿಂದ ಉರುಳಿಸಲ್ಪಟ್ಟು
ಮುರಿದ ಬೇಲದ
ಮರಗಳನ್ನುಳ್ಳುದೂ ಮುತ್ತು
ಮತ್ತು ರತ್ನಗಳನ್ನೊಳಗೊಂಡ
ನೀಲವೂ ಸ್ಥೂಲವೂ ಆದ
ಕಲ್ಲುಬಂಡೆಗಳಿಂದ
ಪ್ರಕಾಶಮಾನವಾದುದೂ
ಬಹಳ ಎತ್ತರವಾದುದೂ
ಋಷಿಶ್ರೇಷ್ಠರ
ಮುಖಕಮಲಗಳಿಂದ
ಹೊರಹೊರಟ ಮಂತ್ರಗಳಿಂದ

ಪವಿತ್ರವಾದ ಶರೀರವುಳ್ಳದೂ ಎತ್ತರವಾದ ಲೋಡುಗಳಿಂದ ಕೂಡಿದುದೂ ಆದ ಶತಶೃಂಗ ಪರ್ವತವನ್ನು ಪಾಂಡುರಾಜನು ಬಂದು ಸೇರಿದನು.

ವ|| ಆ ಪರ್ವತದ ವಿಪುಳ ವನೋಪಕಂಠಗಳೊಳ್ ತಾಪಸಕನ್ಯೆಯರ್ ನಡಪಿದೆಳಲತೆಗಳೊಳೆಱಗಿ ತುಱುಗಿ ಸಾಮವೇದಧ್ವನಿಯೊಳ್

ಮೊರೆವ ತುಂಬಿಗಳುಮಂ
ಪಣ್ತೆಱಗಿದ ತದಾಶ್ರಮದ
ತರುಗಳ ಮೇಗಿರ್ದು ಪುಗಿಲ್
ಪುಗಿಲೆಂದಿತ್ತ ಬನ್ನಿಮಿರಿಮೆಂಬ
ಪೊಂಬಣ್ಣದ
ಕೋಗಿಲೆಗಳುಮಂ
ಮುನಿಕುಮಾರರೋದುವ
ವೇದವೇದಾಂಗಂಗಳಂ
ತಪ್ಪುವಿಡುದು ಜಡಿದು
ಬಗ್ಗಿಸುವ ಪದುಮರಾಗದ
ಬಣ್ಣದರಗಿಳಿಗಳುಮಂ

ಸುರಭಿಗಳ ತೊರೆದ

ಮೊಲೆಗಳನುಣ್ಬವೞ

ಮಱಿಗಳಂ ಪೋಗೆ ನೂಂಕಿ

ಕೂಂಕಿ ಮೊಲೆಗಳನುಣ್ಬ

ಕಿಶೋರ ಕೇಸರಿಗಳುಮಂ

ತಮ್ಮೊಡನೆ ನಲಿದಾಡುವ

ಕಿಶೋರಕೇಸರಿಗಳಂ ಪಿಡಿದು

ತೆಗೆವ

ಕರಿಕಳಭಂಗಳುಮನಾಗಳಾಪ

ಳುವಂಗಳಿಂದೆ ಪಾಯ್ವ

ಪುಲಿಗಳ ಮಱಿಗಳೊಳ್

ಪರಿದಾಡುವ ತರುಣ

ಹರಿಣಂಗಳುಮಂ ಮತ್ತಂ

ಮುತ್ತ ಕುರುಡತವಸಿಗಳ

ಕೈಯಂ ಪಿಡಿದುಯ್ದವರ

ಗುಹೆಗಳಂ ಪುಗಿಪ

ಪೊಱಮಡಿಪ ಚಪಳ

ಕಪಿಗಳುಮಂ

ಹೋಮಾಗ್ನಿಯನೆಱಂಕೆಯ

ಗಾಳಿಯಿಂ

ನಂದಲೀಯದುರಿಪುವ

ರಾಜಹಂಸೆಗಳುಮಂ

ಮುನಿಗಣೀಶ್ವರರೊಡನೆ ದಾಳಿವೂಗೊಯ್ವೊಡನೆವರ್ಪ ಗೋಳಾಂಗೂಳಂಗಳುಮಂ ನೋಡಿ ತಪೋವನದ ತಪೋಧನರದ ತಪೋಧನರದ ತಪಪ್ರಭಾವಕ್ಕೆ ಚೋದ್ಯಂಬಟ್ಟು-

ವಚನ:ಪದವಿಭಾಗ-

ಅರ್ಥ:ಆ ಪರ್ವತದ ವಿಪುಳ ವನ ಉಪಕಂಠಗಳೊಳ್ (ತಪ್ಪಲಿನಲ್ಲಿ)

ತಾಪಸಕನ್ಯೆಯರ್ ನಡಪಿದ
ಎಳಲತೆಗಳೊಳ್ ಎಱಗಿ
ತುಱುಗಿ (ನೆಟ್ಟ ಬಳ್ಳಿಗಳಲ್ಲಿ
ಹೂವು ಹಣ್ಣುತುಂಬಿ)
ಸಾಮವೇದಧ್ವನಿಯೊಳ್
ಮೊರೆವ ತುಂಬಿಗಳುಮಂ
(ಸಂವೇದ ಪಾಠದೋತೆ
ಮೊರೆಯುವ ದುಂಬಿಗಳು)
ಪಣ್ತೆಱಗಿದ ತದಾಶ್ರಮದ
ತರುಗಳ ಮೇಗಿರ್ದು(ಹಣ್ಣು
ಬಿಟ್ಟು ಬಾಗಿದ ಮರಗಳು)

ಪುಗಿಲ್ ಪುಗಿಲ್ ಎಂದು ಇತ್ತ
ಬನ್ನಿಂ ಇರಿಮೆಂಬ
ಪೊಂಬಣ್ಣದ
ಕೋಗಿಲೆಗಳುಮಂ ('ಪುಗಿಲ್
ಪುಗಿಲ್' ಎಂದು ಇತ್ತ ಬನ್ನಿ.
ಇರಿ ಎಂಬ ಹೊಂಬಣ್ಣದ
ಕೋಗಿಲೆಗಳು)
ಮುನಿಕುಮಾರರು ಒದುವ
ವೇದವೇದಾಂಗಂಗಳಂ
ತಪ್ಪುವಿಡುದು ಜಡಿದು
ಬಗ್ಗಿಸುವ ಪದುಮರಾಗದ

ಬಣ್ಣದರಗಿಳಿಗಳುಮಂ(ತಪ್ಪು
ಹಿಡಿದು ಹೇಳುವ ಗಿಳಿಗಳು)
ಸುರಭಿಗಳ ತೊರೆದ
ಮೊಲೆಗಳನು ಉಣ್ಬ ಅವಱ
ಮಱಿಗಳಂ ಪೋಗೆ ನೂಂಕಿ
ಕೂಂಕಿ ಮೊಲೆಗಳನುಣ್ಬ
ಕಿಶೋರ
ಕೇಸರಿಗಳುಮಂ(ದನಗಳು
ಸುರಿಸುವ ಹಾಲನ್ನು ಉಣ್ಣುವ
ಕರುಗಳನ್ನು ಓಡಿಸಿ ಆ
ಮೊಲೆಗಳನ್ನುನ್ನುವ ಸಿಂಹದ

ಮರಿಗಳು) ತಮ್ಮೊಡನೆ
ನಲಿದಾಡುವ
ಕಿಶೋರಕೇಸರಿಗಳಂ ಪಿಡಿದು
ತೆಗೆವ ಕರಿಕಳಭಂಗಳುಮಂ
ಆಗಳು ಆ ಪಳುವಂಗಳಿಂದೆ
ಪಾಯ್ವ ಪುಲಿಗಳ
ಮಱಿಗಳೊಳ್ ಪರಿದಾಡುವ
ತರುಣ ಹರಿಣಂಗಳುಮಂ
ಮತ್ತಂ ಮುತ್ತ ಕುರುಡ
ತವಸಿಗಳ ಕೈಯಂ
ಪಿಡಿದುಯ್ದುವರ ಗುಹೆಗಳಂ

ಪುಗಿಪ ಪೊಱಮಡಿಪ ಚಪಳ
ಕಪಿಗಳುಮಂ
ಹೋಮಾಗ್ನಿಯನೆಱಂಕೆಯ
ಗಾಳಿಯಿಂ
ನಂದಲೀಯದುರಿಪುವ
ರಾಜಹಂಸೆಗಳುಮಂ
ಮುನಿಗಣೇಶ್ವರರೊಡನೆ
ದಾಳಿವೂಗೊಯ್ವೊಡನೆವರ್ಪ
ಗೋಳಾಂಗೂಳಂಗಳುಮಂ
ನೋಡಿ ತಪೋವನದ
ತಪೋಧನರದ

ತಪೋಧನರದ ತಪಪ್ರಭಾವಕ್ಕೆ ಚೋದ್ಯಂಬಟ್ಟು-

ವಚನ:ಅರ್ಥ: ಆ ಪರ್ವತದ ತಪ್ಪಲು ಪ್ರದೇಶದಲಿ ತಾಪಸಕನ್ಯೆಯರು ಸಾಕಿ ಬೆಳೆಸಿದ ಬಳ್ಳಿಗಳನ್ನು ಮುತ್ತಿ ಗುಂಪುಗೂಡೆ ಸಾಮವೇದಧ್ವನಿಯ ಶಬ್ದಮಾಡುತ್ತಿರುವ ದುಂಬಿಗಳನ್ನೂ ಫಲಭಾರದಿಂದ ಬಾಗಿದ ಆ

ಆಶ್ರಮದ ಗಿಡಗಳ ಮೇಲಿದ್ದು
‘ಪ್ರವೇಶಿಸಿ, ಬನ್ನಿ, ಇಲ್ಲಿ ವಾಸಿಸಿ’
ಎನ್ನುತ್ತಿರುವ ಹೊಂಬಣ್ಣದ
ಕೋಗಿಲೆಗಳನ್ನೂ
ಋಷಿಕುಮಾರರು ಅಧ್ಯಯನ
ಮಾಡುತ್ತಿರುವ
ವೇದವೇದಾಂಗಗಳಲ್ಲಿ ತಪ್ಪನ್ನು
ಕಂಡುಹಿಡಿದು ಆಕ್ಷೇಪಿಸಿ
ಸರಿಪಡಿಸುವ ಪದ್ಮರಾಗವೆಂಬ
ರತ್ನದ ಬಣ್ಣದಿಂದ ಕೂಡಿದ
ಶ್ರೇಷ್ಠವಾದ ಗಿಳಿಗಳನ್ನೂ

ಹಸುಗಳ ಹಾಲು ತುಂಬಿದ
ಕೆಚ್ಚಲುಗಳನ್ನು ಉಣ್ಣುತ್ತಿರುವ
ಅವುಗಳ ಕರುಗಳನ್ನು ಓಡಿಸಿ
ಹಾಲುಕುಡಿಯುತ್ತಿರುವ
ಸಿಂಹದ ಮರಿಗಳನ್ನೂ
ತಮ್ಮೊಡನೆ ನಲಿದಾಡುತ್ತಿರುವ
ಸಿಂಹದ ಮರಿಗಳನ್ನು
ಹಿಡಿದೆಳೆಯುವ ಆನೆಯ
ಮರಿಗಳನ್ನೂ ಆಗಾಗ ಅಲ್ಲಿ
ಎಡೆಯಾಡುತ್ತಿರುವ ಹುಲಿಯ
ಮರಿಗಳ ಜೊತೆಯಲ್ಲಿ

ಆಡುತ್ತಿರುವ ಜಿಂಕೆಯ
ಮರಿಗಳನ್ನೂ ಮತ್ತು
ಕುರುಡರಾದ ಮುದಿತಪಸ್ವಿಗಳ
ಕೈ ಹಿಡಿದು ಅವರ ಗುಹೆಗಳನ್ನು
ಪ್ರವೇಶಮಾಡಿಸುವರು.
ಹಾಗೆಯೇ ಅಲ್ಲಿಂದ
ಹೊರಡಿಸುವ ಚಪಳವಾದ
ಕಪಿಗಳನ್ನೂ ಹೋಮಾಗ್ನಿಯು
ನಂದಿಹೋಗದಂತೆ ತಮ್ಮ
ರಕ್ಕೆಯ ಗಾಳಿಯಿಂದ ಬೀಸಿ
ಉರಿಸುತ್ತಿರುವ

ರಾಜಹಂಸಗಳನ್ನೂ
ಮುನೀಂದ್ರ ಸಮೂಹದೊಡನೆ
ದಾಳಿಯ ಹೂವನ್ನು
ಕುಯ್ಯುವ ಮತ್ತು ಜೊತೆಯಲ್ಲಿ
ಬರುವ ಕಪಿಗಳನ್ನೂ ನೋಡಿ
ಆ ತಪೋವನದ ತಪಸ್ಸನ್ನೇ
ಧನವನ್ನಾಗಿ ಉಳ್ಳ ಆ
ಋಷಿಶ್ರೇಷ್ಠರ ತಪಸ್ಸಿನ
ಪ್ರಭಾವಕ್ಕೆ ಆಶ್ಚರ್ಯಪಟ್ಟನು.

ಚಂ|| ವಿನಯದಿನಿತ್ತ
ಬನ್ನಿಮಿರಿಮೆಂಬವೊಲಿಂಚರ

ದಿಂದಮೊಯ್ಯನೊ
ಯ್ಯನೆ ಮಱಿದುಂಬಿಗಳ್
ಮೊರೆವುವಳ್ಕಱೊಳೊಲ್ದೆಱ
ಪಂತೆ ತಳ್ತ ಪೂ।
ವಿನ ಪೊಸ ಗೊಂಚಲಿಂ
ಮರನಿದೇನೆಸೆದಿರ್ದುವೊ
ಕಲ್ತುವಾಗದೇ
ವಿನಯಮನೀ ತಪೋಧನರ
ಕೈಯೊಳೆ ಶಾಖಿಗಳುಂ
ನಗೇಂದ್ರದಾ॥ ೧೧೬

ಪದ್ಯ-೬೯:ಪದವಿಭಾಗ-ಅರ್ಥ:ವಿನಯದಿಂ ಇತ್ತ ಬನ್ನಿಂ ಮಿಗಿಂ ಎಂಬವೊಲು ಇಂಚರದಿಂದಂ ಒಯ್ಯನೊಯ್ಯನೆ ಮಱಿದುಂಬಿಗಳ್ ಮೊರೆವುವು (ದುಂಬಿಗಳು ಕರೆಯುವಂತೆ ಮೊರೆಯುತ್ತವೆ) ಅಟ್ಟಿಱೊಳು ಒಲ್ದಿಱಪಂತೆ ತಳ್ತ ಪೂವಿನ ಪೊಸ ಗೊಂಚಲಿಂ ಮರನು (ತಳಿತ

ಹೋವಿನ ಗೊಂಚಲು ಅಳ್ಕರ
-ಪ್ರೀತಿಯಿಂದ ಒಲಿದು
ಬಾಗಿವೆ) ಇದೇನು
ಎಸೆದಿರ್ದುವೊ (ಇದೇನು
ಶೋಭೆಯೋ!) ಕಲ್ತುವಾಗದೇ
ವಿನಯಮಂ ಈ ತಪೋಧನರ
ಕೈಯೊಳೆ ಶಾಖಿಗಳುಂ
ನಗೇಂದ್ರದ ಆ(ಆ ಬೆಟ್ಟಗಳ
ಮರಗಳು ತಪೋಧನರಿಂದ
ವಿನಯವನ್ನು ಕಲಿತ ಹಾಗಿದೆ)

ಪದ್ಯ-೬೯:ಅರ್ಥ:ಇದೇನು!
ಇಲ್ಲಿಯ ದುಂಬಿಯ ಮರಿಗಳು
ವಿನಯದಿಂದ ಈ ಕಡೆ ಬನ್ನಿ,
ಇಲ್ಲಿರಿ ಎನ್ನುವ ಹಾಗೆ
ಮನೋಹರವಾಗಿ
ಶಬ್ದಮಾಡುತ್ತಿವೆ. ಈ
ಪರ್ವತದ ಮರಗಳೂ ತಾವು
ಹೊತ್ತಿರುವ ಹೊಸಹೂವಿನ
ಗೊಂಚಲಿನ ಭಾರದಿಂದ
ಪ್ರೀತಿಯಿಂದ ಒಲಿದು ಬಾಗಿ

ತಪೋಧನರಿಂದ

ವಿನಯವನ್ನು ಕಲಿತ ಹಾಗಿದೆ!

ವ|| ಎಂದು ಮೆಚ್ಚುತ್ತುಮೆನಗೆ ನೆಲಸಿರಲೀ ತಪೋವನಮೆ ಪಾವನಮೆಂದು ತಪೋವನದ ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ ತದಾಶ್ರಮದೊಳಾಶ್ರಮಕ್ಕೆ ಗುರುವಾಗೆ ಪಾಂಡುರಾಜನಿರ್ಪನ್ನೆಗಮಿತ್ತ

ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರಮುನೀಂದ್ರನೊಳ್ ಬರಂಬಡೆದಳೆಂಬುದಂ ಕುಂತಿ ಕೇಳ್ದು ತಾನುಂ ಪುತ್ರಾರ್ಥಿನಿಯಾಗಲ್ ಬಗೆದು-

ವಚನ:ಪದವಿಭಾಗ-

ಅರ್ಥ:ಎಂದು ಮೆಚ್ಚುತ್ತುಂ

ಎನಗೆ ನೆಲಸಿರಲೀ

ತಪೋವನಮೆ

ಪಾವನಮೆಂದು ತಪೋವನದ

ಮುನಿಜನದ ಪರಮ

ಅನುರಾಗಮಂ ಪೆರ್ಚಿಸಿ

ಕಾಮಾನುರಾಗಮಂ

ಬೆರ್ಚಿಸಿ(ಬಿಟ್ಟು) ತದ್

ಆಶ್ರಮದೊಳು ಆಶ್ರಮಕ್ಕೆ

ಗುರುವಾಗೆ ಪಾಂಡುರಾಜನು

ಇರ್ಪ ಅನ್ನೆಗಮ್ ಇತ್ತ

ಧೃತರಾಷ್ಟ್ರನ

ಮಹಾದೇವಿಯಪ್ಪ ಗಾಂಧಾರಿ

ನೂರ್ವರ್ಮಕ್ಕಳಂ ಪಡೆವಂತು
ಪಾರಾಶರಮುನೀಂದ್ರನೊಳ್
ಬರಂಬಡೆದಳೆಂಬುದಂ ಕುಂತಿ
ಕೇಳ್ದು ತಾನುಂ
ಪುತ್ರಾರ್ಥಿನಿಯಾಗಲ್ ಬಗೆದು
ವಚನ:ಅರ್ಥ:ಪಾಂಡುವು
ಎಂದು ಆ ಪ್ರದೇಶವನ್ನು
ಮೆಚ್ಚುತ್ತ ತಾನು
ವಾಸವಾಗಿರಲು ಈ
ತಪೋವನವೇ
ಪವಿತ್ರವಾದುದು ಎಂದು ಆ

ತಪೋವನದ ಮುನಿಜನರ
ವಿಶೇಷ ಪ್ರೀತಿಯನ್ನು ಹೆಚ್ಚಿಸಿ
ಕಾಮದಲ್ಲಿ ತನಗಿದ್ದ
ಪ್ರೀತಿಯನ್ನು ಬಿಟ್ಟು. ಆ
ಆಶ್ರಮದಲ್ಲಿ ಪಾಂಡುರಾಜನು
ಆಶ್ರಮದ ಗುರುವಾಗಿ ಇದ್ದನು.
ಈ ಕಡೆ ಧೃತರಾಷ್ಟ್ರನ
ಮಹಾರಾಣಿಯಾದ
ಗಾಂಧಾರಿಯು
ನೂರುಮಕ್ಕಳನ್ನು
ಪಡೆಯುವಂತೆ

ವ್ಯಾಸಮಹರ್ಷಿಗಳಿಂದ

ವರವನ್ನು ಪಡೆದಳೆಂಬುದನ್ನು

ಕುಂತಿ ಕೇಳಿ ತಾನೂ ಮಕ್ಕಳನ್ನು

ಬಯಸಿ- ಬಯಸಿದಳು.

ಚಂ|| ವಿಸಸನದೊಳ್

ವಿರೋಧಿನೃಪರಂ

ತಱಿದೊಟ್ಟಲುಮರ್ಥಿಗರ್ಥ

ಮಂ

ಕಸವಿನ ಲೆಕ್ಕಮೆಂದು ಕುಡಲುಂ

ವಿಪುಳಾಯತಿಯಂ

ದಿಗಂತದೊಳ್|

ಪಸರಿಸಲುಂ ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋ
ಯಸಿದಪುದಿಕ್ಷುಪುಷ್ಪದವೊಲೆ ನ್ನಯ ನಿಷ್ಫಲ ಪುಷ್ಪದರ್ಶನಂ॥ ೧೧೭॥

ಪದ್ಯ-೬೯:ಪದವಿಭಾಗ-ಅರ್ಥ:ವಿಸಸನದೊಳ್ (ಕಾಳಗದಲ್ಲಿ) ವಿರೋಧಿ ನೃಪರಂ ತಱಿದೊಟ್ಟಲುಂ (ಕಡಿದು ಒಟ್ಟಲು) ಮರ್ಧಿಗೆ

ಅರ್ಥಮಂ ಕಸವಿನ
ಲೆಕ್ಕಮೆಂದು ಕುಡಲುಂ
(ಬೇಡಿದವರಿಗೆ ಧನವನ್ನು
ಕಸವೆಂದು ತಿಳಿದುಕೊಡಲು)
ವಿಪುಳಾಯತಿಯಂ
ದಿಗಂತದೊಳ್ ಪಸರಿಸಲುಂ
(ವಿಶೇಷ ಕೀರ್ತಿಯನ್ನು
ಹರಡಲು) ಕರಂ ನೆಱೆವ
ಮಕ್ಕಳನೀಯದೆ (ಬಹಳ
ಸಮರ್ಥ ಮಕ್ಕಳನ್ನು ಕೊಡದೆ)
ನೋಡೆ ನಾಡೆ

ನೋಯಸಿದಪುದು ಇಕ್ಷುಪುಷ್ಪದವೊಲು (ಕಾಯಿ ಬಿಡದ ಕಬ್ಬಿನ ಹೋವಿನಂತೆ) ಎನ್ನಯ ನಿಷ್ಫಲ ಪುಷ್ಪದರ್ಶನಂ(ಮಗುವಾಗದ ನನ್ನ ಮುಟ್ಟಿನ ದರ್ಶನ ವ್ಯರ್ಥವಾಗುವುದು).

ಪದ್ಯ-೬೯:ಅರ್ಥ:.ಯುದ್ಧದಲ್ಲಿ ಶತ್ರುರಾಜರನ್ನು ಕಡಿದೊಟ್ಟಲು ಸಾಮರ್ಥ್ಯವುಳ್ಳ, ಯಾಚಕರಿಗೆ

ದ್ರವ್ಯವನ್ನು ಕಸಕ್ಕೆ ಸಮನಾಗಿ ಎಣಿಸಿ ದಾನಮಾಡುವ, ತಮ್ಮ ಪರಾಕ್ರಮವನ್ನು ದಿಕ್ಕುಗಳ ಕೊನೆಗೂ ಹರಡಲು ಸಮರ್ಥರಾದ ಮಕ್ಕಳನ್ನು ಕೊಡದೆ ನಾಡು ನೋಡು ನೋಡುತ್ತಿರುವ ಹಾಗೆಯೇ ನನ್ನ ಮಕ್ಕಳಾಗದ ತಿಂಗಳ ಮುಟ್ಟು ಕಾಯಿಬಿಡದ ಕಬ್ಬಿನ ಹೂವಿನಂತೆ ನಿಷ್ಫಲವಾಯಿತು.

ವ|| ಎಂದು ಚಿಂತಾಕ್ರಾಂತೆಯಾಗಿರ್ದ ಕುಂತಿಯಂ ಕಂಡು ಪಾಂಡುರಾಜನೇಕಾಂತದೊಳಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಚಿಂತಾಕ್ರಾಂತೆಯಾಗಿ ಇರ್ದ ಕುಂತಿಯಂ ಕಂಡು ಪಾಂಡುರಾಜನು ಏಕಾಂತದೊಳು ಇಂತೆಂದಂ-

ವಚನ:ಅರ್ಥ:ಹೀಗೆ ಮಕ್ಕಳಿಲ್ಲ ಎಂಬ ಚಿಂತೆಯಿಂದ ಕೂಡಿದ್ದ ಕುಂತಿಯನ್ನು ನೋಡಿ ಪಾಂಡುರಾಜನು ರಹಸ್ಯವಾಗಿ ಹೀಗೆಂದು ಹೇಳಿದನು;

ಉ|| ಚಿಂತೆಯಿದೇನೊ ಸಂತತಿಗೆ ಮಕ್ಕಳೆ ನೆಟ್ಟನೆ ಬಾರ್ತೆಯಪ್ಪೊಡಿ ನ್ನಿಂತಿರವೇಡ ದಿವ್ಯ ಮುನಿಪುಂಗವರಂ ಬಗೆದೀರ್ಪಿನಂ ನಿಜಾ|

ತ್ಯಂತ

ಪತಿವ್ರತಾಗುಣದಿನರ್ಚಿಸಿ

ಮೆಚ್ಚಿಸು ನೀಂ ದಿಗಂತ ವಿ

ಶ್ರಾಂತ ಯಶರ್ಕಳಂ ವರ

ತನೂಭವರಂ ಪಡೆ ನೀಂ

ತಳೋದರೀ|| ೧೧೮

ಪದ್ಯ-೬೯:ಪದವಿಭಾಗ-

ಅರ್ಥ:ಚಿಂತೆ ಇದು ಏನೊ

ಸಂತತಿಗೆ ಮಕ್ಕಳೆ ನೆಟ್ಟನೆ

ಬಾರ್ತೆಯಪ್ಪೊಡೆ (ಮಕ್ಕಳೇ

ವಾರ್ತೆ/ ಮುಖ್ಯವಾದರೆ) ಇನ್ನು

ಇಂತು ಇರವೇಡ ದಿವ್ಯ
ಮುನಿಪುಂಗವರಂ
ಬಗೆದೀರ್ಪಿನಂ(ಬಗೆ-
ಈರ್ಪಿನಿಂ ಮನಸ್ಸು
ತೃಪ್ತಿಯಾಗುವಂತೆ
ಮುನಿಗಳನ್ನು ಮೆಚ್ಚಿಸು) ನಿಜ
ಅತ್ಯಂತ ಪತಿವ್ರತಾಗುಣದಿಂ
ಅರ್ಚಿಸಿ ಮೆಚ್ಚಿಸು ನೀಂ
ದಿಗಂತ ವಿಶ್ರಾಂತ ಯಶರ್ಕಳಂ
ವರ ತನೂಭವರಂ ಪಡೆ ನೀಂ

ತಳೋದರೀ(ತನು ಭವರು
-ಮಕ್ಕಳನ್ನು ಪಡೆ)
ಪದ್ಯ-೬೯:ಅರ್ಥ:ಸಣ್ಣನಡು
ವಿನ ಎಲೌ ಕುಂತಿಯೇ ಈ
ಚಿಂತೆಯೇಕೆ ನಿನಗೆ? ನಮ್ಮ
ವಂಶಕ್ಕೆ ನೇರವಾಗಿ
ಪುತ್ರಸಂತಾನದ
ಪ್ರಾಪ್ತಿಯಾಗಬೇಕಾದರೆ ಇನ್ನು
ಮೇಲೆ ನೀನು ಹೀಗಿರಬೇಡ;
ಋಷಿಶ್ರೇಷ್ಠರಿಂದ ನಿನ್ನ
ಇಷ್ಟಾರ್ಥಸಿದ್ಧಿಯಾಗುವ ಹಾಗೆ

ನಿನ್ನ ವಿಶೇಷ ಪತಿವ್ರತಾಗುಣದಿಂದ ಪೂಜೆಮಾಡಿ ಅವರನ್ನು ಮೆಚ್ಚಿಸು. ದಿಕ್ಕುಗಳ ಕೊನೆಯವರೆಗೆ ಹಬ್ಬುವ ಯಶದ ಮಕ್ಕಳನ್ನು ಪಡೆ ಎಂದನು.

<u>ಧರ್ಮಜನ ಜನನ</u>

ವ|| ಎಂದೊಡೆ ಕೊಂತಿಯಿಂತೆಂದಳೆನ್ನ

ಕನ್ನಿಕೆಯಾ ಕಾಲದೊಳ್
ನಾನೆನ್ನ ಮಾವಂ
ಕೊಂತಿಭೋಜನ ಮನೆಯೊಳ್
ಬಳೆವಂದು ದುರ್ವಾಸ
ಮಹಾಮುನಿಯರೆಮ್ಮ ಮನೆಗೆ
ನಿಚ್ಚಕ್ಕಂ ಬರ್ಪರವರೆನ್ನ
ವಿನಯಕ್ಕಂ ಭಕ್ತಿಗಂ
ಬೆಸಕೆಯ್ವುದರ್ಕಂ ಮೆಚ್ಚಿ
ಮಂತ್ರಾಕ್ಷರಂಗಳನಯ್ದಂ
ವರವಿತ್ತರೀಯಯ್ದು
ಮಂತ್ರಕಯ್ವರ್ಮಕ್ಕಳಂ ನಿನ್ನ

ಬಗೆಗೆ ಬಂದವರನಾಹ್ವಾನಂ
ಗೆಯ್ಯಲವರ ಪ್ರೋಲ್ವೆಯ
ಮಕ್ಕಳಂ ಪಡೆವೆಯೆಂದು
ಬೆಸಸಿದೊಡೀಗಳೆನ್ನ ಪುಣ್ಯದಿಂ
ದೊರೆಕೊಂಡು
ದೊಳ್ಳಿತ್ತೆಂಬುದಂ
ದಿವ್ಯಮುನಿವಾಕ್ಯಮಮೋಘ
ವಾಕ್ಯಮಕ್ಕುಮದರ್ಕೇನುಂ
ಚಿಂತಿಸಲ್ವೇಡ ಎಂದೊಡಂತೆ
ಗೆಯ್ವೆನೆಂದು
ತೀರ್ಥಜಲಂಗಳಂ ಮಿಂದು

ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದು-

ವಚನ:ಪದವಿಭಾಗ-

ಅರ್ಥ:ಎಂದೊಡೆ ಕೊಂತಿಯಿಂತು ಎಂದಳು, 'ಎನ್ನ ಕನ್ನಿಕೆಯಾ ಕಾಲದೊಳ್ ನಾನು ಎನ್ನ ಮಾವಂ ಕೊಂತಿಭೋಜನ ಮನೆಯೊಳ್ ಬಳೆವಂದು(ಬೆಳೆಯುವಾಗ) ದುರ್ವಾಸ

ಮಹಾಮುನಿಯರು ಎಮ್ಮ
ಮನೆಗೆ ನಿಚ್ಚಕ್ಕಂ (ನಿತ್ಯವೂ)
ಬರ್ಪರು ಅವರು ಎನ್ನ
ವಿನಯಕ್ಕಂ ಭಕ್ತಿಗಂ
ಬೆಸಕೆಯ್ವುದರ್ಕಂ(ಸೇವೆ
ಮಾಡಿದ್ದಕ್ಕೆ) ಮೆಚ್ಚಿ
ಮಂತ್ರಾಕ್ಷರಂಗಳನು ಅಯ್ದಂ
(೫) ವರವಿತ್ತರ್; ಈಯಯ್ದು
ಮಂತ್ರಕೆ ಐಯ್ವರ್
ಮಕ್ಕಳಂ(೦ಪಡೆಯುವೆ) ನಿನ್ನ
ಬಗೆಗೆ ಬಂದವರನು ಆಹ್ವಾನಂ

ಗೆಯ್ಯಲು ಅವರ ಪ್ರೋಲ್ವೆಯ (ಹೋಲುವ) ಮಕ್ಕಳಂ ಪಡೆವೆಯೆಂದು ಬೆಸಸಿದೊಡೆ (ಹೇಳಿದಾಗ) ಈಗಳು ಎನ್ನ ಪುಣ್ಯದಿಂ ದೊರೆಕೊಂಡುದು(ಈಗ ಲಭ್ಯವಾಯಿತು, ಅವಶ್ಯಕವಾಯಿತು) ಒಳ್ಳಿತ್ತು ಎಂಬುದಂ (ಎಂದು ಕುಂತಿ ಪಾಂಡುವಿಗೆ ಹೇಳಿದಾಗ, ಅವನು)

ದಿವ್ಯಮುನಿವಾಕ್ಯಮ್
ಅಮೋಘವಾಕ್ಯಂ ಅಕ್ಕುಮ್
(ಆಯಿತು)ಅದರ್ಕೇನುಂ
ಚಿಂತಿಸಲ್ವೇಡ ಎಂದೊಡೆ
()ಅದಕ್ಕೇನು ಚಿಂತಿಸಬೇಡ
ಎಂದಾಗ) ಅಂತೆ ಗೆಯ್ವೆನೆಂದು
(ಮಾಡುವೆನೆಂದು)
ತೀರ್ಥಜಲಂಗಳಂ ಮಿಂದು
ದಳಿಂಬವನುಟ್ಟು (ಶುಭ್ರವಾದ
ಬಟ್ಟೆ, ಉಟ್ಟು)ಮುತ್ತಿನ
ತೊಡಿಗೆಗಳಂ ತೊಟ್ಟು

ದರ್ಭಶಯನದೊಳು ಇರ್ದು(ದರ್ಭೆಯಮೇಲೆ ಮಲಗಿ)-

ವಚನ:ಅರ್ಥ:|| ಎಂದು ಪಾಂಡು ಹೇಳಲು, ಕುಂತಿಯು ಹೀಗೆಂದಳು- ನಾನು ಕನ್ನಿಕೆಯಾಗಿ ನನ್ನ ಮಾವನಾದ ಕುಂತಿಭೋಜನ ಮನೆಯಲ್ಲಿ ಬೆಳೆಯುತ್ತಿರುವಾಗ ದುರ್ವಾಸ ಮಹರ್ಷಿಗಳು ನಮ್ಮ ಮನೆಗೆ ಪ್ರತಿದಿನವೂ ಬರುತ್ತಿದ್ದರು.

ಅವರು ನನ್ನ ವಿನಯ ಭಕ್ತಿ ಸೇವೆಗೆ ಮೆಚ್ಚಿ ಅಯ್ದು (೫)ಮಂತ್ರಾಕ್ಷರಗಳನ್ನು ವರವಾಗಿ ಕೊಟ್ಟರು. ಈ ಅಯ್ದು ಮಂತ್ರದಿಂದ ನಿನ್ನ ಮನಸ್ಸಿಗೆ ಬಂದವರನ್ನು ನೆನೆದು ಕರೆಯಲು ಅವರನ್ನು ಹೋಲುವ ಅಯ್ದು ಮಕ್ಕಳನ್ನು ಪಡೆಯುತ್ತೀಯೆ ಎಂದು ಅಪ್ಪಣೆ ಕೊಡಿಸಿದರು. ಈಗ ಅದು ನನ್ನ ಪುಣ್ಯದಿಂದ

ದೊರೆಕೊಂಡುದು ಪ್ರಯೋಜನವಾಯಿತು ಎಂದು ಹೇಳಿದಳು. ಪಾಂಡುವು ‘ದಿವ್ಯಋಷಿಗಳ ಮಾತು ಬಹುಬೆಲೆಯುಳ್ಳದ್ದು ; ಅದಕ್ಕೇನೂ ಚಿಂತಿಸಬೇಡ, ಹಾಗೆಯೇ ಮಾಡು’ ಎಂದನು. ಕುಂತಿಯು ಹಾಗೆಯೇ ಮಾಡುತ್ತೇನೆಂದು ಹೇಳಿ ಪವಿತ್ರ ತೀರ್ಥಗಳಲ್ಲಿ ಸ್ನಾನಮಾಡಿ ಶುಭ್ರವಸ್ತ್ರವನ್ನು

ಧರಿಸಿ ಮುತ್ತಿನ ಆಭರಣವನ್ನು ತೊಟ್ಟು ದರ್ಭೆಯ ಮೇಲೆ ಮಲಗಿ-

ಉ|| ಜ್ಞಾನದಿನಿರ್ದು
ನಿಟ್ಟಿಪೊಡೆ ದಿವ್ಯ
ಮುನೀಂದ್ರನ ಕೊಟ್ಟ ಮಂತ್ರ
ಸಂ
ತಾನಮನೋದಿಯೋದಿ
ಯಮರಾಜನನದ್ಭುತತೇಜನಂ
ಪರೋ|

ಜಾನನೆ ಜಾನದಿಂ ಬರಿಸೆ ಬಂದು ಯಮಂ ಬೆಸನಾವುದಾವುದಾ ತ್ಮಾನುಗತಾರ್ಥಮೆಂದೊಡನ ಗೀವುದು ನಿನ್ನನೆ ಪೋಲ್ವ ಪುತ್ರನಂ|| ೧೧೯ ||

ಪದ್ಯ-೧೧೯:ಪದವಿಭಾಗ-ಅರ್ಥ: ಜ್ಞಾನದಿಂ ಇರ್ದು ನಿಟ್ಟಿಪೊಡೆ (ನೋಡಿದರೆ) ದಿವ್ಯ ಮುನೀಂದ್ರನ ಕೊಟ್ಟ ಮಂತ್ರ ಸಂತಾನಮಂ,

ಓದಿಯೋದಿ (ಪಠಿಸಿ)
ಯಮರಾಜನನು ಅದ್ಭುತ
ತೇಜನಂ ಸರೋಜಾನನೆ
(ಕುಂತಿ) ಜಾನದಿಂ ಬರಿಸೆ
(ಧ್ಯಾನದಿಂದ
ಬರಿಸಲು)ಬಂದು ಯಮಂ
ಬೆಸನು ಆವುದು(ಬೇಡಿಕೆ
ಏನು,) ಆವುದು ಆತ್ಮಾನುಗತ
ಆರ್ಥಮಂ (ಮನಸ್ಸಿನ ಅಪೇಕ್ಷೆ
ಯಾವುದು) ಎಂದೊಡೆ ಎನಗೆ
ಈವುದು ನಿನ್ನನೆ ಪೋಲ್ವ

ಪುತ್ರನಂ(ನನಗೆ ನಿನ್ನನ್ನೇ ಹೋಲುವ ಮಗನನ್ನು ಕೊಡುವುದು, ಎಂದಳು.)

ಪದ್ಯ-೧೧೯:ಅರ್ಥ:ಋಷಿಶ್ರೇಷ್ಠನಾದ ದುರ್ವಾಸನು ಕೊಟ್ಟ ಮಂತ್ರಸಮೂಹವನ್ನು ಜ್ಞಾನದಿಂದ ಏಕಾಗ್ರಚಿತ್ತದಿಂದ ಪಠಸಿ ಕಮಲಮುಖಿಯಾದ ಆ ಕುಂತಿಯು ಅದ್ಭುತವಾದ ತೇಜಸ್ಸಿನಿಂದ ಕೂಡಿದ ಯಮರಾಜನನ್ನು ಕರೆಸಿದಳು.

ಯಮನು ಬಂದು
‘ಮಾಡಬೇಕಾದ ಕಾರ್ಯ
ಯಾವುದು? ನಿನ್ನ
ಇಷ್ಟಾರ್ಥವೇನು’ ಎಂದನು.
‘ನಿನ್ನನ್ನು ಹೋಲುವ
ಮಗನನ್ನು ನನಗೆ
ಕೊಡುವುದು, ಎಂದಳು.'
ಎಂದಳು.

**ವ|| ಎಂಬುದುಂ
ತಥಾಸ್ತುವೆಂದು
ತನ್ನಂಶಮನಾಕೆಯ**

ಗರ್ಭದೊಳವತರಿಸಿ ಯಮಭಟ್ಟಾರಕನಂತರ್ಧಾನಕ್ಕೆ ಸಂದನನ್ನೆಗಮಾ ಕಾಂತೆಗೆ-

ವಚನ:ಪದವಿಭಾಗ-

ಅರ್ಥ:ಎಂಬುದುಂ ತಥಾಸ್ತು! ಎಂದು ತನ್ನ ಅಂಶಮನಾಲು ಆಕೆಯ ಗರ್ಭದೊಳು ಅವತರಿಸಿ ಯಮಭಟ್ಟಾರಕನು ಅಂತರ್ಧಾನಕ್ಕೆ ಸಂದನು ಅನ್ನೆಗಂ ಆ ಕಾಂತೆಗೆ-

ವಚನ:ಅರ್ಥ:ಯಮನು 'ತಥಾಸ್ತು' ಎಂದು ತನ್ನ ಅಂಶವನ್ನು ಅವಳ ಗರ್ಭದಲ್ಲಿ ಇಳಿಸಿಟ್ಟು ಮಾಯವಾದನು. ಆಗ ಕುಂತಿಗೆ-

ಚಂ|| ಹಿಮ
ಧವಳಾತಪತ್ರಮನೆ ಪೋಲೆ
ಮುಖೇಂದುವ ಬೆಳ್ಪು ಪೂರ್ಣ
ಕುಂ
ಭಮನೆ ನಿರಂತರಂ ಗೆಲೆ
ಕುಚಂಗಳ ತೋರ್ಪು

ಪತಾಕೆಯೊಂದು ವಿ|
ಭ್ರಮಮನೆ ಪೋಲೆ ಪುರ್ವಿನ
ಪೊಡಪೋ‍ೣಳಕೊಂಡುದವಳ್ಗೆ
ಗರ್ಭ ಚಿ
ಹ್ನಮೆ ಗಳ ಗರ್ಭದರ್ಭಕನ
ಸೂಚಿಪ ಮುಂದಣ
ರಾಜ್ಯಚಿಹ್ನಮಂ|| ೧೨೦||

ಪದ್ಯ-೧೨೦:ಪದವಿಭಾಗ-ಅರ್ಥ:ಹಿಮ ಧವಳ ಆತಪತ್ರಮ ಎನೆ ಪೋಲೆ ಮುಖೇಂದುವ ಬೆಳ್ಪು

(ಕುಂತಿಯ ಚಂದ್ರನನಂತಿರುವ
ಮುಖದಲ್ಲಿ ಬಿಳುಪು
ಮೂಡಿತು), ಪೂರ್ಣ
ಕುಂಭಮನೆ ನಿರಂತರಂ ಗೆಲೆ
ಕುಚಂಗಳ ತೋಱೆ
(ಸ್ತನಗಳು ದಪ್ಪವಾದವು,)
ಪತಾಕೆಯೊಂದು ವಿಭ್ರಮಮನೆ
(ವಿಲಾಸವನ್ನು)
ಪೋಲೆ(ಹೋಲಲು) ಪುರ್ವಿನ
(ಹುಬ್ಬಿನ)ಪೊಡಱ್
()ಅಲುಗಾಟ ಒಳಕೊಂಡುದು

ಅವಳ್ಗೆ (ಹುಬ್ಬುಗಳು
ದಟ್ಟವಾಗಿ ಕಂಪಿಸುತ್ತಿತ್ತು
ಶೋಭಿಸಿತು)ಗರ್ಭ
ಚಿಹ್ನಮೆಗಳ ಗರ್ಭದ
ಅರ್ಭಕನ ಸೂಚಿಪ ಮುಂದಣ
ರಾಜ್ಯಚಿಹ್ನಮಂ(ಈ ಗರ್ಭ
ಚಿಹ್ನೆಯು ರಾಜಲಕ್ಷಣದ
ಗುರುತು.)
ಪದ್ಯ-೧೨೦:ಅರ್ಥ:ಅವಳ
ಮುಖಕಮಲದ ಬಿಳುಪು
ಹಿಮದಂತೆ ಬೆಳ್ಪನೆ

ಕೊಡೆಯನ್ನು ಸೂಚಿಸಿತು.
ಸ್ತನಗಳು ಕೊಡಗಳ
ಆಕಾರವನ್ನು ಪಡೆದವು.
ಹುಬ್ಬಿನ ವಿಸ್ತಾರವು ಧ್ವಜದ
ವಿಸ್ತಾರವನ್ನು ತೋರಿಸಿತು.
ಅವಳ ಗರ್ಭದಲ್ಲಿರುವ
ಮಗುವಿನ ರಾಜ್ಯಚಿಹ್ನವನ್ನು
ಸೂಚಿಸುವಂತೆ ಅವಳಿಗೆ
ಗರ್ಭಚಿಹ್ನೆಗಳುಂಟಾದವು.

ವ|| ಅಂತು ಕೊಂತಿಯ ಗರ್ಭಭಾರಮುಂ

ತಾಪಸಾಶ್ರಮದನುರಾಗಮು

ಮೊಡನೊಡನೆ ಬಳೆಯೆ

ಬಂಧುಜನದ

ಮನೋರಥಂಗಳು

ಮೊಂಬತ್ತನೆಯ

ತಿಂಗಳುಮೊಡನೊಡನೆ

ನೆರೆಯೆ-

ವಚನ:ಪದವಿಭಾಗ-

ಅರ್ಥ:ಅಂತು ಕೊಂತಿಯ ಗರ್ಭಭಾರಮುಂ (ಗರ್ಭವು) ತಾಪಸ ಆಶ್ರಮದ

ಅನುರಾಗಮುಮ
ಒಡನೊಡನೆ ಬಳೆಯೆ
ಬಂಧುಜನದ
ಮನೋರಥಂಗಳುಂ
ಒಂಬತ್ತನೆಯ ತಿಂಗಳುಂ
ಒಡನೊಡನೆ
ನೆರೆಯೆ(ತುಂಬಲು)-
ವಚನ:ಅರ್ಥ: ಹಾಗೆ
ಕುಂತಿಯ ಗರ್ಭವು ಆ
ತಪಸ್ವಿಗಳ ಆಶ್ರಮದ
ಪ್ರೀತಿಯೂ

ಜೊತೆಜೊತೆಯಲ್ಲಿಯೇ ಅಭಿವೃದ್ಧಿಯಾಗಿ ಅವಳ ಬಂಧುಜನದ ಇಷ್ಟಾರ್ಥವೂ ಒಂಬತ್ತನೆಯ ತಿಂಗಳೂ ಒಟ್ಟಿಗೆ ಪೂರ್ಣವಾದುವು.

ಕಂ॥ ವನನಿಧಿಯಿಂದಂ
ಚಂದ್ರಂ
ವಿನತೋದರದಿಂ
ಗರುತ್ಮನುದಯಾಚಳದಿಂ।
ದಿನಪನೊಗೆವಂತೆ ಪುಟ್ಟಿದ

ನನಿಪಾರ್ಯ

ಸುತೇಜನೆನಿಪನಿನಜನ

ತನಯಂ|| ೧೨೧||

ಪದ್ಯ-೧೨೧:ಪದವಿಭಾಗ-

ಅರ್ಥ:ವನನಿಧಿಯಿಂದಂ

ಚಂದ್ರಂ (ಸಮುದ್ರದಿಂದ

ಚಂದ್ರನೂ,) ವಿನತೆ ಉದರದಿಂ

ಗರುತ್ಮಂ (ವಿನುತೆಯಿಂದ

ಗರುಡನೂ,)

ಉದಯಾಚಳದಿಂ ದಿನಪನು

ಒಗೆವಂತೆ

(ಉದಯಗಿರಿಯಿಂದ
ಸೂರ್ಯನು ಹುಟ್ಟಿದಂತೆ)
ಪುಟ್ಟಿದನು(ಹುಟ್ಟಿದನು)
ಅನಿವಾರ್ಯ ಸುತೇಜನು
(ಪ್ರಬಲ ತೇಜಸ್ಸುವುಳ್ಳ)
ಎನಿಪಂ ಇನಜನ (ಇನ-
ಸೂರ್ಯ ಜ ಮಗ =ಯಮ)
ತನಯಂ (ಮಗ).
ಪದ್ಯ-೧೨೧:ಅರ್ಥ:ಸಮುದ್ರ
ದಿಂದ ಚಂದ್ರನೂ,
ವಿನತಾದೇವಿಯಿಂದ

ಗರುಡನೂ,

ಉದಯಪರ್ವತದಿಂದ

ಸೂರ್ಯನೂ, ಹುಟ್ಟುವಂತೆ

ತೇಜೋಮೂರ್ತಿಯಾದ

ಯಮನ ಮಗನು ಜನಿಸಿದನು

ಪುಟ್ಟುವುದುಂ

ಧರ್ಮಮುಮೊಡ

ವುಟ್ಟಿದುದೀತನೊಳೆ

ಧರ್ಮನಂಶದೊಳೀತಂ|

ಪುಟ್ಟಿದನೆಂದಾ ಶಿಶುಗೊಸೆ

ದಿಟ್ಟುದು ಮುನಿಸಮಿತಿ ಧರ್ಮಸುತನೆನೆ ಪೆಸರುಂ|| ೧೨೨ ||

ಪದ್ಯ-೧೨೨:ಪದವಿಭಾಗ-ಅರ್ಥ:ಪುಟ್ಟುವುದುಂ (ಹುಟ್ಟುತ್ತಲೂ) ಧರ್ಮಂ ಒಡವುಟ್ಟಿದುದು ಈತನೊಳೆ(ಈತನ ಜೊತೆಯಲ್ಲಿ ಧರ್ಮವೂ ಹುಟ್ಟಿತು) ಧರ್ಮನ ಅಂಶದೊಳು ಈತಂ

ಪುಟ್ಟಿದನೆಂದು ಆ ಶಿಶುಗೆ ಒಸೆದು (ಒಸೆ-ಪ್ರೀತಿ)ಇಟ್ಟುದು ಮುನಿಸಮಿತಿ ಧರ್ಮಸುತನು ಎನೆ ಪೆಸರುಂ

ಪದ್ಯ-೧೨೨:ಅರ್ಥ:.ಕುಂತಿಗೆ ಇವನು ಹುಟ್ಟಲು ಇವನೊಡನೆಯೇ ಧರ್ಮವೂ ಹುಟ್ಟಿತು. ಯಮಧರ್ಮನ ಅಂಶದಿಂದ ಈತ ಹುಟ್ಟಿದ್ದಾನೆ ಎಂದು ಆ ಋಷಿಸಮೂಹವು ಆ ಮಗುವಿಗೆ ಪ್ರೀತಿಯಿಂದ

ಧರ್ಮಸುತನೆಂಬ

ಹೆಸರನ್ನಿಟ್ಟಿತು.

ವ|| ಅಂತು ಪೆಸರನಿಟ್ಟು

ಪರಕೆಯಂ ಕೊಟ್ಟು-

ವಚನ:ಪದವಿಭಾಗ-

ಅರ್ಥ:ಅಂತು

ಪೆಸರನು(ಹೆಸರನ್ನು) ಇಟ್ಟು

ಪರಕೆಯಂ ಕೊಟ್ಟು

ವಚನ:ಅರ್ಥ:ಹಾಗೆ

ಹೆಸರನಿಟ್ಟು ಋಷಿಗಳು

ಹರಕೆಯನ್ನು ಕೊಟ್ಟರು;

ಕಂ|| ಸಂತಸದಿನಿರ್ದು ಮಕ್ಕಳ
ಸಂತತಿಗೀ
ದೊರೆಯರಿನ್ನುಮಾಗದೊಡೆಂ
ತುಂ|
ಸಂತಸಮೆನಗಿಲ್ಲೆಂದಾ
ಕಾಂತೆ ಸುತಭ್ರಾಂತೆ
ಮುನ್ನಿನಂತೆವೊಲಿರ್ದಳ್||
೧೨೩

ಪದ್ಯ-೧೨೩:ಪದವಿಭಾಗ-
ಅರ್ಥ:ಸಂತಸದಿನಿರ್ದು(ಸಂತ
ಸದಿಂ ಇರ್ದು)

ಮಕ್ಕಳಸಂತತಿಗೆ ಈ
ದೊರೆಯರು (ಸಮಾನರು)
ಇನ್ನುಂ ಆಗದೊಡೆ (ಇನ್ನು
ಯಾರೂ
ಹುಟ್ಟದಿದ್ದರೆ)ಎಂತುಂ
ಸಂತಸಂ ಎನಗೆ ಇಲ್ಲೆಂದು
(ತನಗೆ ಅಷ್ಟೊಂದು ಸಂತಸ
ಇನ್ನು ಬೇರೆ ಇಲ್ಲ ಎಂದು)ಆ
ಕಾಂತೆ ಸುತಭ್ರಾಂತೆ
ಮುನ್ನಿನಂತೆವೊಲ್ ಇರ್ದಳ್,

(ಮೊದಲಿನಂತೆ ಇನ್ನೂ ಮಗನನ್ನು ಬಯಸಿ ಇದ್ದಳು) **ಪದ್ಯ-೧೨೩:ಅರ್ಥ**:ಕುಂತಿಯು ಸಂತೋಷದಿಂದಿದ್ದು, ಮಕ್ಕಳ ಸಂತತಿಗೆ ಇವನಿಗೆ ಸಮಾನರಾದ ಇನ್ನೂ ಇತರರ ಯಾರೂ ಹುಟ್ಟದಿದ್ದರೆ ತನಗೆ ಅಷ್ಟೊಂದು ಸಂತಸ ಬೇರೆ ಇನ್ನಿಲ್ಲ ಎಂದು ಎಂದು ಮೊದಲಿನಂತೆ ಇನ್ನೂ ಮಗನನ್ನು ಬಯಸಿ ಇದ್ದಳು.

ಭೀಮನ ಜನನ

ಮಂತ್ರಾಕ್ಷರ ನಿಯಮದಿನಭಿ
ಮಂತ್ರಿಸಿ ಬರಿಸಿದೊಡೆ
ವಾಯುದೇವಂ ಬಂದೇಂ|
ಮಂತ್ರಂ ಪೇೞೆನೆ ಕುಡು ರಿಪು
ತಂತ್ರಕ್ಷಯಕರನನೆನಗೆ ಹಿತನಂ
ಸುತನಂ|| ೧೨೪||

ಪದ್ಯ-೧೨೪:ಪದವಿಭಾಗ-ಅರ್ಥ:ಮಂತ್ರಾಕ್ಷರ ನಿಯಮದಿಂ ಅಭಿಮಂತ್ರಿಸಿ ಬರಿಸಿದೊಡೆ (ಪುನಃ ಮಗನನ್ನು

ಬಯಸಿ ವಾಯದೇವನನ್ನು ಕರೆದಾಗ) ವಾಯುದೇವಂ ಬಂದೇಂ ಮಂತ್ರಂ ಪೇಟೆನೆ (ವಾಯುವು ಬಂದು ಏನೆಂದು ಕೇಳಲು)ಕುಡು ರಿಪುತಂತ್ರಕ್ಷಯಕರನನು ಎನಗೆ ಹಿತನಂ ಸುತನಂ(ನನಗೆ ವೈರಿನಾಶಮಾಡವ ಮಗನನ್ನು ಕೊಡು ಎಂದಳು)

ಪದ್ಯ-೧೨೪:ಅರ್ಥ:ಮಂತ್ರಾಕ್ಷರವನ್ನು ಜಪಿಸುವ ವಿಧಿಯಿಂದ

ವಾಯುದೇವನನ್ನು
ಆಹ್ವಾನಿಸಲಾಗಿ ಅವನು
‘ಇಷ್ಟಾರ್ಥವೇನು ಹೇಳು’
ಎನ್ನಲು ‘ವೈರಿಸೈನ್ಯವನ್ನು
ನಾಶಪಡಿಸುವ ಹಿತನಾದ
ಮಗನನ್ನು ಕೊಡು’ ಎಂದಳು.

ವ||
ಎಂಬುದುಮದೇವಿರಿದಿತ್ತೆನೆಂ
ದು
ವಿಯತ್ತಳಕ್ಕೊಗೆದೊಡಾತನಂಶ
ಮಾಕೆಯ ಗರ್ಭ

ಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ-

ವಚನ:ಪದವಿಭಾಗ-ಅರ್ಥ:ಎಂಬುದುಂ ಅದೇವಿರಿದು ಇತ್ತೆನು ಎಂದು (ಅದೇನು ಹಿರಿದು ದೊಡ್ಡದು ಇತ್ತೆನು -ಕೊಟ್ಟೆನು) ವಿಯತ್ತಳಕ್ಕೊಗೆದೊಡೆ(ವಿಯತ್ತಳಕ್ಕೆ-ಆಕಾಶಕ್ಕೆ ಒಗೆದೊಡೆ) ಆತನ ಅಂಶಂ ಅಕೆಯ ಗರ್ಭ

ಸರೋವರದೊಳಗೆ ಚಂದ್ರಬಿಂಬದಂತೆ ಸೊಗಯಿಸೆ (ಸೇರಿತು)

ವಚನ:ಅರ್ಥ:ವಾಯುದೇವನು ‘ಇದೇನು ಮಹಾ ದೊಡ್ಡದು. ಕೊಟ್ಟಿದ್ದೇನೆ’ ಎಂದು ಹೇಳಿ ಆಕಾಶಕ್ಕೆ ನೆಗೆಯಲು, ಆತನ ಅಂಶವು ಅವಳ ಗರ್ಭದಲ್ಲಿ ಚಂದ್ರಬಿಂಬದಂತೆ ಸೇರಿತು.

ಚಂ|| ತ್ರಿವಳಿಗಳುಂ ವಿರೋಧಿ
ನೃಪರುತ್ಸವಮುಂ
ಕಿಡೆವಂದುವಾನನೇಂ
ದುವ ಕಡುವೆಳ್ಪು ಕೂಸಿನ
ನೆಗೞ್ತೆಯ ಬೆಳ್ಪುವೊಲಾಯ್ತು
ಮುನ್ನೆ ಬ|
ಳ್ಕುವ ನಡು ತೋರ್ಪ
ಮೆಯ್ಯನೊಳಕೊಂಡುದು
ಪೊಂಗೊಡನಂ ತಮಾಳ ಪ
ಲ್ಲವದೊಳೆ ಮುಚ್ಚಿದಂದದೊಳೆ
ಚೂಚುಕಮಾಂತುದು

ಕರ್ಪನಾಕೆಯಾ|| ೧೨೫||

ಪದ್ಯ-೧೨೫:ಪದವಿಭಾಗ-ಅರ್ಥ:ತ್ರಿವಳಿಗಳುಂ ವಿರೋಧಿ ನೃಪರುತ್ಸವಮುಂ ಕಿಡೆವಂದುವು (ಹೊಟ್ಟೆಮೇಲಿನ ೩ನೆರಿ ಶತ್ರುಗಳನ್ನು ಕೆಡಿಸುವುವು) ಆನನೇಂದುವ ಕಡುವೆಳ್ಪು (ಆನನ ಇಂದು ಮುಖಚಂದ್ರ ಬೆಳ್ಳಗಾಯಿತು) ಕೂಸಿನ ನೆಗೞ್ತೆಯ ಬೆಳ್ಪುವೊಲಾಯ್ತು

(ಮಗವಿನ ಕೀರ್ತಿಯ ಬೆಳಕು)
ಮುನ್ನೆ ಬಳ್ಳುವ ನಡು
ತೋರ್ಪ ಮೆಯ್ಯನು
ಒಳಕೊಂಡುದು (ನಡು
ದಪ್ಪವಾಯಿತು,)
ಪೊಂಗೊಡನಂ ತಮಾಳ
ಪಲ್ಲವದೊಳೆ (ಹೊಂಗೆಯ
ಚಿಗುರು) ಮುಚ್ಚಿದಂದದೊಳೆ
ಚೂಚುಕಮಾಂತುದು
ಕರ್ಪನಾಕೆಯಾ(ಎದೆಯು
ಚಿನ್ನದ ಕಳಸದಂತೆ ಹೊಂಗೆಯ

ಚಿಗರಿಟ್ಟಂತೆ ಕಪ್ಪು ಮೊಲೆತೊಟ್ಟು ಹೊಂದಿತು.)

ಪದ್ಯ-೧೨೫:ಅರ್ಥ:ಅವಳ ಹೊಟ್ಟೆಯ ಮೇಲಿನ ಮೂರು ಮಡಿಕೆಯರೇಖೆಗಳು ವೈರಿರಾಜರ ನಾಶದ ಸೂಚಕವಾದುವು. ಅವಳ ಮುಖದಲ್ಲಿರುವ ಹೆಚ್ಚಾದ ಬಿಳುಪುಬಣ್ಣವು ಗರ್ಭದಲ್ಲಿರುವ ಮಗುವಿನ ಯಶಸ್ಸಿನ ಬಿಳಿಯ ಬಣ್ಣವು.

ಮೊದಲು ಬಳುಕುತ್ತಿದ್ದ
ನಡುವು ದಪ್ಪವಾಯಿತು.
ಅವಳ ಮೊಲೆಯ ತೊಟ್ಟು
ಚಿನ್ನದ ಕಲಶವನ್ನು ಹೊಂಗೆಯ
ಚಿಗುರಿನಿಂದ ಮುಚ್ಚಿದಹಾಗೆ
ಕಪ್ಪುಬಣ್ಣವನ್ನು ತಾಳಿತು.

ಕಂ|| ಆ ಸುದತಿಯ ಮೃದು
ಪದ ವಿ
ನ್ಯಾಸಮುಮಂ
ಶೇಷನಾನಲಾರದೆ ಸುಯ್ದಂ|
ಬೇಸಱಿನೆಂದೊಡೆ ಗರ್ಭದ

ಕೂಸಿನ ಬಳೆದಳವಿಯಳವನಳೆವರು ಮೊಳರೇ॥ ೧೨೬॥

ಪದ್ಯ-೧೨೬:ಪದವಿಭಾಗ-ಅರ್ಥ:ಆ ಸುದತಿಯ ಮೃದು ಪದ ವಿನ್ಯಾಸಮುಮಂ ಶೇಷನು ಆನಲಾರದೆ ಸುಯ್ದಂ ಬೇಸಱಿಂ (ಕುಂತಿ ನೆಡೆದಾಗ ಭೂಮಿಯನ್ನು ಹೊತ್ತ ಶೇಷನು ಬಳಲಿದನು) (ನ) ಎಂದೊಡೆ ಗರ್ಭದಕೂಸಿನ

ಬಳೆದ ಅಳವಿಯ ಅಳವನು
(ಮಗವಿನ ಬೆಳದ
ಪ್ರಮಾಣವನ್ನು)
ಅಳೆವರುಮೊಳರೇ
(ಅಳೆಯುವವರು ಉಂಟೇ?)
ಪದ್ಯ-೬೯:ಅರ್ಥ:ಸುಂದರ
ವಾದ ದಂತಪಂಕ್ತಿಯಿಂದ
ಕೂಡಿದ ಆ ಕುಂತಿಯು
ಮೃದುವಾದ
ಹೆಜ್ಜೆಯಿಡುವುದನ್ನು
ಆದಿಶೇಷನು ಭಾರವನ್ನು

ತಾಳಲಾರದೆ ಕಷ್ಟದಿಂದ ಉಸುಗುಟ್ಟಿದನು, ಎಂದರೆ ಗರ್ಭದಲ್ಲಿರುವ ಕೂಸು ಬೆಳೆದ ಅಳತೆಯ ಪ್ರಮಾಣವನ್ನು ಅಳೆಯುವವರೂ ಇದ್ದಾರೆಯೇ? (ಇಲ್ಲ ಎಂದು ಅರ್ಥ).

ವ|| ಅಂತು ಗರ್ಭನಿರ್ಭರ ಪ್ರದೇಶದೊಳರಾತಿಗಳ್ಗಂತಕಾಲಂ ದೊರೆಕೊಳ್ವಂತೆ ಪ್ರಸೂತಿ ಕಾಲಂ ದೊರೆಕೊಳೆ-

ವಚನ:ಪದವಿಭಾಗ-

ಅರ್ಥ:ಅಂತು ಗರ್ಭನಿರ್ಭರ ಪ್ರದೇಶದೊಳು ಆರಾತಿಗಳ್ಗೆ ಅಂತಕಾಲಂ ದೊರೆಕೊಳ್ವಂತೆ ಪ್ರಸೂತಿ ಕಾಲಂ ದೊರೆಕೊಳೆ

ವಚನ:ಅರ್ಥ:ಹೀಗೆ ಗರ್ಭವು ಅಲ್ಲಿ ಬೆಳೆಯುತ್ತಿದ್ದಂತೆ ಶತ್ರುಗಳಿಗೆ ಅವಸಾನಕಾಲವು ಉಂಟಾಗುವ ಹಾಗೆ ಹೆರಿಗೆಯ ಕಾಲವು ಸಮೀಪಿಸಲು;

ಕಂ|| ಶುಭ ತಿಥಿ ಶುಭ ನಕ್ಷತ್ರಂ

ಶುಭ ವಾರಂ ಶುಭ ಮುಹೂರ್ತಮೆನೆ ಗಣಕನಿಳಾ| ಪ್ರಭುವೊಗೆದನುದಿತ ಕಾಯ ಪ್ರಭೆಯೊಗೆದಿರೆ ದಳಿತ ಶತ್ರುಗೋತ್ರಂ ಪುತ್ರಂ|| ೧೨೭ ||

ಪದ್ಯ-೧೨೭:ಪದವಿಭಾಗ-ಅರ್ಥ:ಶುಭ ತಿಥಿ ಶುಭ ನಕ್ಷತ್ರಂ ಶುಭ ವಾರಂ ಶುಭ ಮುಹೂರ್ತಂ ಎನೆ ಗಣಕನು ಇಳಾಪ್ರಭು ಒಗೆದನು

(ಭೂಮಿಗೆ ಪ್ರಭು ಹುಟ್ಟಿದನು) ಉದಿತ ಕಾಯ

ಪ್ರಭೆಯು(ಹುಟ್ಟಿದ ಶರೀರಕಾಂತಿ) ಒಗೆದಿರೆ ದಳಿತ (ಸೀಳಲ್ಪಟ್ಟ?- ನಾಶಕ)ಶತ್ರುಗೋತ್ರಂ (ಶತ್ರು ಸಂಹಾರಕ)ಪುತ್ರಂ.

ಪದ್ಯ-೧೨೭:ಅರ್ಥ:ಗಣಿಕರು/ ಜೋತಿಷಲೆಕ್ಕಿಗರು ಶುಭತಿಥಿ, ಶುಭನಕ್ಷತ್ರ, ಶುಭಮುಹೂರ್ತ ಎಂದು ಹೇಳುತ್ತಿರಲು ಜೊತೆಗೇ ಹುಟ್ಟಿದ ಶರೀರಕಾಂತಿಯು ಹರಡುತ್ತಿರಲು ಭೂಮಿಗೆ

ಪ್ರಭುವೂ ಶತ್ರುಸಂಹಾರಕನೂ ಆದ ಮಗನು ಹುಟ್ಟಿದನು.

ಭೀಮಂ ಭಯಂಕರಂ ಪೆಱ
ತೇ ಮಾತೀ ಕೂಸಿನಂದವೀತನ
ಪೆಸರುಂ|
ಭೀಮನೆ ಪೋಗೆನೆ ಮುನಿಜನ
ವೀ ಮಾಱ್ಕೆಯಿನಾಯ್ತು
ಶಿಶುಗೆ ಪೆಸರನ್ವರ್ಥಂ|| ೧೨೮||

ಪದ್ಯ-೧೨೮:ಪದವಿಭಾಗ-ಅರ್ಥ:;ಭೀಮಂ ಭಯಂಕರಂ ಪೆಱತೇ ಮಾತು ಈ

ಕೂಸಿನಂದವು (ಮಗುವಿನ ರೀತಿ ಅತಿಭಯಂಕರವಾದುದು; ಬೇರೆಯ ಮಾತೇನು?) ಈತನ ಪೆಸರುಂ ಭೀಮನೆ ಪೊೀಗೆನೆ (ಈತನ ಹೆಸರು ಕೂಡ ಭೀಮನೆಂದೇ -ಹೊಗಲಿ) ಮುನಿಜನವು ಈ ಮಾಟ್ಕೆಯಿನಾಯ್ತು ಶಿಶುಗೆ ಪೆಸರನ್ವರ್ಥಂ (ಶಿಶುವಿಗೆ ಹೆಸರು ಅನ್ವರ್ಥವಾಗಿಯೇ

(ಅರ್ಥಕ್ಕೆ ಹೊಂದಿಕೊಳ್ಳುವ ಹಾಗೆ) 'ಭೀಮ' ಎಂದಾಯಿತು)

ಪದ್ಯ-೧೨೮:ಅರ್ಥ:೧೨೮. ಈ ಮಗುವಿನ ರೀತಿ ಅತಿಭಯಂಕರವಾದುದು. ಬೇರೆಯ ಮಾತೇನು? ಅವನ ಹೆಸರು ಕೂಡ ಭೀಮನೆಂದೇ ಆಗಲಿ ಎಂದು ಋಷಿಗಳು ಹೇಳಲು ಅದೇ ರೀತಿ ಆ ಶಿಶುವಿಗೆ ಹೆಸರು

ಅನ್ವರ್ಥವಾಗಿಯೇ 'ಭೀಮ' ಎಂದಾಯಿತು

ದುರ್ಯೋಧನಾದಿ ಕೌರವರ ಜನನ

ವ|| ಅಂತು ಭರತಕುಲತಿಲಕರಪ್ಪಿರ್ವರ್ಮ ಕ್ಕಳಂ ಪೆತ್ತು ಕೊಂತಿ ಸಂತಸದಂತ ಮನೆಯಿರ್ದ್ದಪ್ಪುದುಮತ್ತ ಧೃತರಾಷ್ಟ್ರನ

ಮಹಾದೇವಿಯಪ್ಪ ಗಾಂಧಾರಿ ಕೇಳ್ದು ತನ್ನ ಗರ್ಭಂ ತಡೆದುದರ್ಕೆ ಕಿನಿಸಿ ಕಿಂಕಿರಿವೋೀಗಿ-

ವಚನ:ಪದವಿಭಾಗ-

ಅರ್ಥ:ಅಂತು ಭರತಕುಲತಿಲಕರು ಅಪ್ಪ ಇರ್ವರ್ ಮಕ್ಕಳಂ ಪೆತ್ತು (ಇಬ್ಬರುಮಕ್ಕಳನ್ನು ಹೆತ್ತು) ಕೊಂತಿ ಸಂತಸದಂತ ಮನಂ ಐಯ್ದು ಇರ್ಪುದುಂ(ಸಂತಸದ

ಮನಸ್ಸಿನಲ್ಲಿ ಇರಲು) ಅತ್ತ ಧೃತರಾಷ್ಟ್ರನ ಮಹಾದೇವಿಯಪ್ಪ (ಪತ್ನಿ) ಗಾಂಧಾರಿ ಕೇಳ್ದು ತನ್ನ ಗರ್ಭಂ ತಡೆದುದರ್ಕೆ ಕಿನಿಸಿ (ಕೇಳಿ, ತನ್ನಗರ್ಭ ಜನನ ತಡವಾದುದಕ್ಕೆ ಕೋಪಗೊಂಡು) ಕಿಂಕಿರಿವ್ರೋಗಿ (ಬೇಸರವಾಗಿ)-

ವಚನ:ಅರ್ಥ:ಆ ಕಡೆ ಧೃತರಾಷ್ಟ್ರನ ಮಹಾರಾಣಿ

ಗಾಂಧಾರಿಯು ಕೇಳಿ ತನ್ನ ಗರ್ಭವು ತಡವಾದುದಕ್ಕೆ ಕೋಪಿಸಿ ಕಿರಿಕಿರಿಯಾಗಿ-

ಕಂ|| ಸಂತತಿಗೆ ಪಿರಿಯ ಮಕ್ಕಳ
ನಾಂ ತಡೆಯದೆ
ಪಡೆವೆನೆಂದೊಡೆನ್ನಿಂ ಮುನ್ನಂ|
ಕೊಂತಿಯೆ ಪಡೆದಳ್ ಗರ್ಭದ
ಚಿಂತೆಯದಿನ್ನೇವುದೆಂದು
ಬಸಿಱಂ ಪೊಸೆದಳ್|| ೧೨೯

ಪದ್ಯ-೧೨೯:ಪದವಿಭಾಗ-

ಅರ್ಥ:ಸಂತತಿಗೆ ಪಿರಿಯ

ಮಕ್ಕಳ ನಾಂ ತಡೆಯದೆ ಪಡೆವೆನೆಂದೊಡೆ ಎನ್ನಿಂ ಮುನ್ನಂ (ನನಗಿಂತ ಮೊದಲೇ ಕುಂತಿಯು ಮಗು ಪಡೆದಳು) ಕೊಂತಿಯೆ ಪಡೆದಳ್; ಗರ್ಭದ ಚಿಂತೆಯದು ಇನ್ನು ಏವುದೆಂದು ಬಸಿಱಿಂ ಪೊಸೆದಳ್(ಇನ್ನು ಗರ್ಭದ ಚಿಂತೆ ಯಾವದಕ್ಕೆ? ಎಂದು ಹೊಟ್ಟೆಯನ್ನು ಹೊಸೆದಳು- ಕಿವುಚಿದಳು.)

ಪದ್ಯ-೧೨೯:ಅರ್ಥ:ವಂಶಕ್ಕೆ ಹಿರಿಯ ಮಕ್ಕಳನ್ನು ನಾನು ತಡಮಾಡದೆ ಮೊದಲು ಪಡೆಯುತ್ತೇನೆಂದಿದ್ದರೆ ನನಗಿಂತ ಮುಂಚೆ ಕುಂತಿಯೇ ಪಡೆದಳು. ಇನ್ನು ಮೇಲೆ ಗರ್ಭದ ಚಿಂತೆಯಾಕೆ, ಎಂದು ಹೊಟ್ಟೆಯನ್ನು ಕಿವುಚಿದಳು.

ಪೊಸೆದೊಡೆ ಪಾಲ್ಗಡಲಂ ಮಗು

ಬ್ದಿಸುರರ್ ಪೊಸೆದಲ್ಲಿ

ಕಾಳಕೂಟಾಂಕುರಮಂ|

ದಸದಳಮೊಗೆದಂತೊಗೆದುವು

ಬಸಿಱಿಂ ನೂಱೊಂದು

ಪಿಂಡಮರುಣಾಕೀರ್ಣಂ||

೧೩೦ ||

ಪದ್ಯ-೧೩೦:ಪದವಿಭಾಗ-

ಅರ್ಥ:ಪೊಸೆದೊಡೆ

ಪಾಲ್ಗಡಲಂ ಮಗುಬ್ದಿ

ಅಸುರರ್

(ದಾನವರು)ಪೊಸೆದಲ್ಲಿ

(ಗರ್ಭವನ್ನು ಕಿವುಚಿದಾಗ,
ದಾನವರು ಹಾಲುಕಡಲು
ಕಡೆದಾಗ) ಕಾಳಕೂಟಂ
ಅಂಕುರಮ್ ಅಂದು
ಅಸದಳಂ ಒಗೆದಂತೆ (ಅಂದು
ಕಾಳಕೂಟ ವಿಷ ಹುಟ್ಟಿದಂತೆ)
ಒಗೆದುವು (ಹುಟ್ಟಿದವು)
ಬಸಿಱಿಂ ನೂಱೊಂದು
ಪಿಂಡಂ ಅರುಣಾಕೀರ್ಣಂ
(ನೂರಾ ಒಂದು ಭ್ರೂಣಗಳು

ರಕ್ತದಿಂದ ತುಂಬಿದವು ಹುಟ್ಟಿದವು.)|

ಪದ್ಯ-೧೩೦:ಅರ್ಥ:

ಹಾಲಿನಸಮುದ್ರವನ್ನು ದಾನವರು ಕಡೆಯಲು ಅಂದು ಕಾಲಕೂಟವೆಂಬ ವಿಷದ ಮೊಳಕೆ ಅತಿಶಯವಾಗಿ ಹುಟ್ಟಿದ ಹಾಗೆ ಗಾಂಧಾರಿಯ ಗರ್ಭದಿಂದ ರಕ್ತದಿಂದ ತುಂಬಿದ ನೂರೊಂದು ಭ್ರೂಣಗಳು ಹುಟ್ಟಿದುವು.

ವ|| ಅವಂ ಕಂಡು ಕಿನಿಸಿ ಪರ್ಚೇಱಿದ್ದವೆಲ್ಲವಂ ಪೊೞಗೆ ಬಿಸುಟು ಬನ್ನಿಮೆಂಬುದುಂ ವ್ಯಾಸಭಟ್ಟಾರಕಂ ಬಂದು ಗಾಂಧಾರಿಯಂ ಬಗ್ಗಿಸಿ-

ವಚನ:ಪದವಿಭಾಗ-

ಅರ್ಥ:ಅವಂ ಕಂಡು ಕಿನಿಸಿ (ಸಿಟ್ಟುಗೊಂಡು) ಪರ್ಚೇಱಿವೆಲ್ಲವಂ ಪೊೞಗೆ ಬಿಸುಟು (ಚೂರೆಲ್ಲವನ್ನೂ ಹೊರಗೆ ಬಿಸಾಡಿ) ಬನ್ನಿಂ

ಎಮಬುದುಂ
ವ್ಯಾಸಭಟ್ಟಾರಕಂ ಬಂದು
ಗಾಂಧಾರಿಯಂ ಬಗ್ಗಿಸಿ
(ವ್ಯಾಸರು ಗಾಂಧಾರಿಯನ್ನು
ಗದರಿಸಿ)-
ವಚನ:ಅರ್ಥ:ಅವನ್ನು
ನೋಡಿ ಸಿಟ್ಟಿನಿಂದ,
ಇವುಗಳೆಲ್ಲವನ್ನೂ ಹೊರಗೆ
ಬಿಸಾಡಿಬನ್ನಿ ಎಂದು ಹೇಳಲು,
ವ್ಯಾಸಮಹರ್ಷಿಯು ಬಂದು
ಗಾಂಧಾರಿಯನ್ನು ಗದರಿಸಿ-

ಚಂ|| ಒದವುಗೆ ನಿನ್ನ ಸಂತತಿಗೆ
ನೂರ್ವರುದಗ್ರ
ಸುತರ್ಕಳೊಂದೆ ಗ
ರ್ಭದೊಳೆನೆ ಕೆಮ್ಮನಿಂತು
ಪೊಸೆದಿಕ್ಕಿದೆ
ಪೊಲ್ಲದುಗೆಯ್ದೆಯೆಂದು ಮಾ|
ಣದೆ ಮುನಿ
ನೂಱುಪಿಂಡಮುಮನಾಗಳೆ
ತೀವಿದ ಕಮ್ಮನಪ್ಪ ತು
ಪ್ಪದ ಕೊಡದೊಳ್ ಸಮಂತು
ಮಡಗಿಟ್ಟೊಡೆ ಸೃಷ್ಟಿಗೆ

ಚೋದ್ಯಮಪ್ಪಿನಂ|| ೧೩೧

ಪದ್ಯ-೬೯:ಪದವಿಭಾಗ-ಅರ್ಥ:ಒದವುಗೆ (ಒದಗಲಿ-ಹುಟ್ಟಲಿ) ನಿನ್ನ ಸಂತತಿಗೆ ನೂರ್ವರು ಉದಗ್ರ (ಶ್ರೇಷ್ಠ) ಸುತರ್ಕಳ್ ಒಂದೆ ಗರ್ಭದೊಳು ಎನೆ (ಹೇಳಲು), ಕೆಮ್ಮನಿಂತು(ಸುಮ್ಮನೆ ,ವ್ಯರ್ಥವಾಗಿ) ಪೊಸೆದು ಇಕ್ಕಿದೆ ಪೊಲ್ಲದುಗೆಯ್ದೆ (ಕೆಟ್ಟದು, ಹಾಳುಮಾಡಿದೆ) ಎಂದು

ಮಾಣದೆ (ಹಾಗೆಯೇ ಬಿಡದೆ)
ಮುನಿ
ನೂಱುಪಿಂಡಮುಮನು
ಆಗಳೆ ತೀವಿದ ಕಮ್ಮನಪ್ಪ
(ಸುವಾಸನೆಯ) ತುಪ್ಪದ
ಕೊಡದೊಳ್ ಸಮಂತು(
ತುಪ್ಪದ ಕೊಡದಲ್ಲಿ
ಓರಣವಾಗಿ) ಮಡಗಿ ಇಟ್ಟೊಡೆ
ಸೃಷ್ಟಿಗೆ ಚೋದ್ಯಮಪ್ಪಿನಂ
(ಲೋಕಕ್ಕೆ
ಅಚ್ಚರಿಯಾಗುವಂತಿತ್ತು)

ಪದ್ಯ-೬೯:ಅರ್ಥ:‘ನಿನ್ನ ಸಂತತಿಗೆ ಒಂದೇ ಗರ್ಭದಲ್ಲಿ ನೂರುಜನ ಶ್ರೇಷ್ಠರಾದ ಮಕ್ಕಳು ಹುಟ್ಟುವರು; ಹೀಗೆ ನಿಷ್ಪ್ರಯೋಜನವಾಗಿ ಹೀಗೆ ಹೊಟ್ಟೆಯನ್ನು ಕಿವುಚಿಬಿಟ್ಟೆ, ಕೆಟ್ಟಕೆಲಸವನ್ನು ಮಾಡಿದೆ’ ಎಂದು ಬಿಡದೆ ಆ ಋಷಿಯು ಆ ನೂರು ಭ್ರೂಣಗಳನ್ನು ಆಗಲೇ ಸುವಾಸನೆಯ ತುಪ್ಪದಿಂದ ತುಂಬಿದ

ಕೊಡದಲ್ಲಿ ಸುರಕ್ಷಿತವಾಗಿ ಇಡಿಸಿದನು. ಅದು ಲೋಕಕ್ಕೆ ಅಚ್ಚರಿಯಾಗುವಂತಿತ್ತು.

ವ|| ಅಂತು ನೂರ್ವರೊಳೊರ್ವನಗುರ್ಬು ಪರ್ಬಿ ಪರಕಲಿಸೆ ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನುಮಾಗೆ ಪುಟ್ಟುವುದುಂ-

ವಚನ:ಪದವಿಭಾಗ-

ಅರ್ಥ:ಅಂತು ನೂರ್ವರೊಳು

ಒರ್ವನು ಅಗುರ್ಬು ಪರ್ಬಿ (ಭಯವು ಹಬ್ಬಿ)ಪರಕಲಿಸೆ (ಹರಡಲು) ಸಂಪೂರ್ಣ ವಯಸ್ಕನಾಗಿ ಘೃತಘಟವಿಘಟನುಮಾಗೆ (ಘೃತಘಟ-ತುಪ್ಪದ ಕೊಡ ವಿಘಟ-ಒಡೆದುಕೊಂಡು) ಪುಟ್ಟುವುದುಂ (ಹುಟ್ಟಿದನು)-

ವಚನ:ಅರ್ಥ:|| ಆ ನೂರು ಪಿಂಡಗಳಲ್ಲಿ ಒಬ್ಬನು - ಭಯವು ಹಬ್ಬಿ ಹರಡುವ

ಹಾಗೆ ತುಂಬಿದ ಪ್ರಾಯವುಳ್ಳವನಾಗಿ ತುಪ್ಪದ ಕೊಡವನ್ನು (ಮಡಕೆ) ;ಒಡೆದುಕೊಂಡು ಹುಟ್ಟಿಬಂದನು.

ಕಂ|| ಪ್ರತಿಮೆಗಳಱುವು ಮೊಱಗಿದು
ದತಿ ರಭಸದೆ ಧಾತ್ರಿ ದೆಸೆಗಳುರಿದುವು ಭೂತ|
ಪ್ರತತಿಗಳಾಡಿದುವೊಳಱಿದು

ವತಿ ರಮ್ಯಸ್ಥಾನದೊಳ್ ಶಿವಾ ನಿವಹಂಗಳ್|| ೧೩೨||

ಪದ್ಯ-೧೩೨:ಪದವಿಭಾಗ-ಅರ್ಥ:ಪ್ರತಿಮೆಗಳಳ್ತುವು (ಅರಮನೆಯ ವಿಗ್ರಹಗಳು ಅತ್ತವು), ಮೊಳಗಿದುದತಿ ರಭಸದೆ ಧಾತ್ರಿ (ಭೂಮಿ ದೊಡ್ಡದಾಗಿ ಗುಡುಗಿತು), ದೆಸೆಗಳುರಿದುವು (ದಿಕ್ಕುಗಳಲ್ಲಿ ಬೆಂಕಿ ತೋರಿತು), ಭೂತಪ್ರತತಿಗಳು ಆಡಿದುವು

(ಪಿಶಾಚಿಗಳು ಕುಣಿದವು)
ಒಳಱಿದುವು(ವದರಿದವು,
ಕೂಗಿಕೊಂಡವು) ಅತಿ
ರಮ್ಯಸ್ಥಾನದೊಳ್ ಶಿವಾ
ನಿವಹಂಗಳ್(ಶಿವಾ
ನಿವಹಂಗಳ್/ ನರಿಗಳು
ಉತ್ತಮ ಸ್ಥಾನಗಳಲ್ಲಿ
ಕೂಗಿದವು.)
ಪದ್ಯ-೬೯:ಅರ್ಥ:ಅರಮನೆ
ಯ ವಿಗ್ರಹಗಳು ಅತ್ತವು,
ಭೂಮಿ ದೊಡ್ಡದಾಗಿ

ಗುಡುಗಿತು, ದಿಕ್ಕುಗಳಲ್ಲಿ ಬೆಂಕಿ ತೋರಿತು, ಪಿಶಾಚಿಗಳು ಕುಣಿದವು, ನರಿಗಳು ಉತ್ತಮ ಸ್ಥಾನಗಳಲ್ಲಿ ಕೂಗಿದವು.

ವ||

ಅಂತೊಗೆದನೇಕೋತ್ಪಾತಂಗಳಂ ಕಂಡು ಮುಂದಱಿವ ಚದುರ ವಿದುರನಿಂತೆಂದಂ-

ವಚನ:ಪದವಿಭಾಗ-ಅರ್ಥ: ಅಂತು ಒಗೆದ ಅನೇಕ ಉತ್ಪಾತಂಗಳಂ ಕಂಡು

ಮುಂದಱಿವ (ಮುಂದಿನದನ್ನು ತಿಳಿಯುವ) ಚದುರ ವಿದುರನು ಇಂತೆಂದಂ-

ವಚನ:ಅರ್ಥ:ಹಾಗೆ ಉಂಟಾದ ಅನೇಕ ಉತ್ಪಾತ -ಅಪಶಕುನಗಳನ್ನು ಕಂಡು ಭವಿಷ್ಯಜ್ಞಾನಿಯೂ ಬುದ್ಧಿವಂತನೂ ಆದ ವಿದುರನು ಹೀಗೆ ಹೇಳಿದನು.

ಕಂ|| ಈತನೆ ನಮ್ಮ ಕುಲಕ್ಕಂ

ಕೇತು

ದಲಾನಱಿವೆನಲ್ಲದಂದೇಕಿನಿ

ತು|

ತ್ಪಾತಂ ತೋರ್ಪುವು

ಬಿಸುಡುವು

ದೀತನ ಪೆಱಗುೞಿದ ಸುತರೆ

ಸಂತತಿಗಪ್ಪರ್|| ೧೩೩

ಪದ್ಯ-೬೯:ಪದವಿಭಾಗ-

ಅರ್ಥ:ಈತನೆ ನಮ್ಮ ಕುಲಕ್ಕಂ

ಕೇತು (ಕೇತುವಿನಂತೆ ಕೆಡುಕಿ)

ದಲ್ (ನಿಜ!) ಆನು ಅಱಿವೆನು

(ಅರಿವೆನು) ಅಲ್ಲದಂದು (ಇಲ್ಲದಿದ್ದರೆ)ಏಕೆ ಇನಿತು ಉತ್ಪಾತಂ ತೋರ್ಪುವು, ಬಿಸುಡುವುದು ಈತನ, ಪೆಱಗೆ ಉಱದ (ಈತನ ನಂತರ ಉಳಿದ) ಸುತರೆ ಸಂತತಿಗೆ ಅಪ್ಪರ್ (ವಂಶಕ್ಕೆ ಆಗುವರು)

ಪದ್ಯ-೬೯:ಅರ್ಥ:ಈತನು ನಮ್ಮ ವಂಶವನ್ನು ಹಾಳುಮಾಡುವ ಕೇತುಗ್ರಹ ಇದ್ದ ಹಾಗೆ; ಹಾಗಿಲ್ಲದಿದ್ದರೆ ಏಕೆ

ಇಷ್ಟು ಕೆಟ್ಟ
ನಿಮಿತ್ತಗಳಾಗುತ್ತಿದ್ದುವು.
ಇವನನ್ನು ಹೊರಗೆ
ಎಸೆಯುವುದು. ಇವನ ನಂತರ
ಹುಟ್ಟಿದ (ನೂರು) ಮಕ್ಕಳೇ
(ಅದರಲ್ಲಿ ಒಬ್ಬಳು ಮಗಳು)
ವಂಶೋದ್ಧಾರಕರಾಗುತ್ತಾರೆ.
ಎಂದನು ವಿದುರ.

ವ|| ಎಂದೊಡಂ ಪುತ್ರಮೋಹ ಕಾರಣಮಾಗಿ ಧೃತರಾಷ್ಟ್ರನುಂ ಗಾಂಧಾರಿಯುಮೇಗೆಯ್ದುಮೊ

ಡಂಬಡದಿರ್ದೊಡುತ್ಪಾತ
ಶಾಂತಿಕ ಪೌಷ್ಟಿಕ ಕ್ರಿಯೆಗಳಂ
ಮಹಾ ಬ್ರಾಹ್ಮಣರಿಂದಂ
ಬಳೆಯಿಸಿ ಬದ್ದವಣಮಂ
ಬಾಜಿಸಿ ಮಂಗಳಮಂ ಪಾಡಿಸಿ
ಕೂಸಿಂಗೆ
ದುರ್ಯೋಧನನೆಂದು
ಪೆಸರನಿಟ್ಟು ಮತ್ತಿನ
ಕೂಸುಗಳ್ಗೆಲ್ಲಂ
ದುಶ್ಶ್ಯಾಸನಾದಿಯಾಗಿ

ನಾಮಂಗಳನಿಟ್ಟು ಪರಕೆಯಂ ಕೊಟ್ಟು-

ವಚನ:ಪದವಿಭಾಗ-

ಅರ್ಥ:ಎಂದೊಡಂ ಪುತ್ರಮೋಹ ಕಾರಣಮಾಗಿ ಧೃತರಾಷ್ಟ್ರನುಂ ಗಾಂಧಾರಿಯುಂ ಏಗೆಯ್ದುಂ ಒಡಂಬಡದಿರ್ದೊಡೆ (ಪುತ್ರಮೋಹದ ಕಾರಣದಿಂದ ಧೃತರಾಷ್ಟ್ರನೂ ಗಾಂಧಾರಿಯೂ ಏನು

ಮಾಡಿದರೂ ಮಗುವನ್ನು ಎಸೆಯಲು ಒಪ್ಪದಿರಲು) ಉತ್ಪಾತ ಶಾಂತಿಕ ಪೌಷ್ಟಿಕ ಕ್ರಿಯೆಗಳಂ ಮಹಾ ಬ್ರಾಹ್ಮಣರಿಂದಂ ಬಳೆಯಿಸಿ ಬದ್ದವಣಮಂ ಬಾಜಿಸಿ (ಉತ್ಪಾತಶಾಂತಿಗಾಗಿಯೂ ಮಂಗಳವರ್ಧನಕ್ಕಾಗಿಯೂ ಶಾಂತಿಕರ್ಮಗಳನ್ನು ಬ್ರಾಹ್ಮಣರಿಂದ ಮಾಡಿಸಿ ವಾದ್ಯವನ್ನು ಬಾರಿಸಿ,)

ಮಂಗಳಮಂ ಪಾಡಿಸಿ
ಕೂಸಿಂಗೆ
ದುರ್ಯೋಧನನೆಂದು
ಪೆಸರನಿಟ್ಟು ಮತ್ತಿನ
ಕೂಸುಗಳ್ಗೆಲ್ಲಂ
ದುಶ್ಶ್ಯಾಸನಾದಿಯಾಗಿ
ನಾಮಂಗಳನಿಟ್ಟು ಪರಕೆಯಂ
ಕೊಟ್ಟು
(ದುರ್ಯೋಧನನೆಂದು.
ಹೆಸರಿಟ್ಟು ಉಳಿದ ಮಕ್ಕಳಿಗೆಲ್ಲ
ದುಶ್ಶ್ಯಾಸನನೇ ಮೊದಲಾದ

ಹೆಸರುಗಳನ್ನಿಟ್ಟು ಆಶೀರ್ವಾದ ಮಾಡಿದರು.)-

ವಚನ:ಅರ್ಥ:ವಿದುರನು ಮಗುವನ್ನು ಬಿಡಿ, ಎಂಬುದಾಗಿ ಹೇಳಿದರೂ ಪುತ್ರಮೋಹದ ಕಾರಣದಿಂದ ಧೃತರಾಷ್ಟ್ರನೂ ಗಾಂಧಾರಿಯೂ ಏನು ಮಾಡಿದರೂ ಮಗುವನ್ನು ಎಸೆಯಲು ಒಪ್ಪದಿರಲು ಉತ್ಪಾತಶಾಂತಿಗಾಗಿಯೂ ಮಂಗಳವರ್ಧನಕ್ಕಾಗಿಯೂ

ಶಾಂತಿಕರ್ಮಗಳನ್ನು
ಬ್ರಾಹ್ಮಣರಿಂದ ಮಾಡಿಸಿ
ವಾದ್ಯವನ್ನು ಬಾರಿಸಿ, ಮಂಗಳ
ಹಾಡಿಸಿ ಕೂಸಿಗೆ
ದುರ್ಯೋಧನನೆಂದು.
ಹೆಸರಿಟ್ಟು ಉಳಿದ ಮಕ್ಕಳಿಗೆಲ್ಲ
ದುಶ್ಯಾಸನನೇ ಮೊದಲಾದ
ಹೆಸರುಗಳನ್ನಿಟ್ಟು ಆಶೀರ್ವಾದ
ಮಾಡಿದರು.

<u>ಕಥಾನಾಯಕ ಅರ್ಜುನನ ಜನನ</u>

ಮ|| ಸುಕಮಿರ್ಪನ್ನೆಗಮಿತ್ತ ಕುಂತಿ
ಶತಶೃಂಗಾದ್ರೀಂದ್ರದೊಳ್
ದಿವ್ಯ ಬಾ
ಲಕನಿರ್ನ್ವೊರ್ಪನನುಗ್ರವೈರಿ
ಮದವನ್ಮಾತಂಗ ಕುಂಭಾದ್ರ್ರ
ಮೌ|
ಕ್ತಿಕ ಲಗ್ನೋಜ್ಜ್ವಲ ಬಾಣನಂ
ಪ್ರವಿಲಸದ್ಗೀರ್ವಾಣ ದಾತವ್ಯ

ಸಾ

ಯಕ ಸಂಪೂರ್ಣ

ಕಳಾಪ್ರವೀಣನನಿಳಾಭಾರ

ಕ್ಷಮಾಕ್ಷೂಣನಂ|| ೧೩೪||

ಪದ್ಯ-೬೯:ಪದವಿಭಾಗ-

ಅರ್ಥ:(ಇತ್ತಕಡೆ:-)ಸುಕಖ

ಇರ್ಪ ಅನ್ನೆಗಂ

(ಹಸ್ತಿನಾವತಿಯಲ್ಲಿ ಅವರು

ಸುಖವಾಗಿದ್ದರು ಆಗ) ಇತ್ತ

ಕುಂತಿ

ಶತಶೃಂಗಾದ್ರೀಂದ್ರದೊಳ್

(ಆತಪ್ರೋವನದಲ್ಲಿ) ದಿವ್ಯ
ಬಾಲಕನು, ಇನ್ಪೂರ್ವನನು
ಉಗ್ರವೈರಿ ಮದವನ್
ಮಾತಂಗ (ಶತ್ರುಗಳೆಂಬ
ಮದದ ಆನೆಗಳ) ಕುಂಭ
ಆರ್ದ್ರ (ಕುಂಭಸ್ಥಳದಲ್ಲಿ
ಒದ್ದೆಯಾದ) ಮೌಕ್ತಿಕ ಲಗ್ನ
(ಮುತ್ತು ಅಂಟಿದ) ಉಜ್ವಲ
ಬಾಣನಂ(ಅಸಾಧಾರಣ
ಬಿಲ್ಲುಗಾರನನ್ನು) ಪ್ರವಿಲಸತ್
(ಶೋಭಿಸುವ) ಗೀರ್ವಾಣ

ದಾತವ್ಯ (ದೇವತೆಗಳಿಂದ
ಕೊಟ್ಟವನು) ಸಾಯಕ
ಸಂಪೂರ್ಣ ಕಳಾಪ್ರವೀಣನಂ
(ಬಾಣವಿದ್ಯೆಯ ಸಂಪೂರ್ಣ
ಪ್ರವೀಣನನ್ನು), ನಿಳಾಭಾರ
ಕ್ಷಮ ಅಕ್ಷೂಣನಂ(ಭೂಮಿ
ರಾಜ್ಯಬಾರ ಹೊರುವ
ಸಮರ್ಥ, ಕೊರತೆಇರದ
ಮಗನನ್ನು ಕುಂತಿ
ಬಯಸಿದಳು)

ಪದ್ಯ-೬೯:ಅರ್ಥ:ಇತ್ತಕಡೆ:-
ಅತ್ತ ಹಸ್ತಿನಾವತಿಯಲ್ಲಿ ಅವರು ಸುಖವಾಗಿದ್ದರು. ಆಗ ಇತ್ತ ಕುಂತಿ ಆತಪೋವನದಲ್ಲಿ ದಿವ್ಯ ಬಾಲಕ, ಇನ್ನೊಬ್ಬನನ್ನು, ಶತ್ರುಗಳೆಂಬ ಮದದ ಆನೆಗಳ ಕುಂಭ ಕುಂಭಸ್ಥಳದಲ್ಲಿ ಒದ್ದೆಯಾದ ಮುತ್ತು ಅಂಟಿದ, ಅಸಾಧಾರಣ ಬಿಲ್ಲುಗಾರನನ್ನು, ಶೋಭಿಸುವ ದೇವತೆಗಳಿಂದ ಕೊಟ್ಟವನೂ, ಬಾಣವಿದ್ಯೆಯ

ಸಂಪೂರ್ಣ ಪ್ರವೀಣನನ್ನು,
ಭೂಮಿ ರಾಜ್ಯಬಾರ ಹೊರುವ
ಸಮರ್ಥ, ಕೊರತೆ ಇರದ
ಮಗನನ್ನು ಕುಂತಿ
ಬಯಸಿದಳು.

ವ|| ಅಂತು ಸರ್ವ ಲಕ್ಷಣ ಸಂಪೂರ್ಣನಪ್ಪ ಮಗನನಮೋಘಂ
ಪಡೆವೆನೆಂಬುದ್ಯೋಗಮನೆತ್ತಿಕೊಂಡು ಪಾಂಡುರಾಜನಂ ತಾನುಂ-

ವಚನ:ಪದವಿಭಾಗ-
ಅರ್ಥ:ಅಂತು ಸರ್ವಲಕ್ಷಣ
ಸಂಪೂರ್ಣನು ಅಪ್ಪ
ಮಗನನು ಅಮೋಘಂ
ಪಡೆವೆನು ಎಂಬ

ಉದ್ಯೋಗಮನು

ಎತ್ತಿಕೊಂಡು ಪಾಂಡುರಾಜನಂ

ತಾನುಂ

ವಚನ:ಅರ್ಥ:ಹಾಗೆಯೇ

ಸರ್ವಲಕ್ಷಣ ಸಂಪೂರ್ಣನೂ

ಆದ ಮಗನನ್ನು ಶ್ರೇಷ್ಠ

ರೀತಿಯಲ್ಲಿ ಪಡೆಯಬೇಕೆಂಬ

ಕಾರ್ಯದಲ್ಲಿ ತೊಡಗಿ

ಪಾಂಡುರಾಜನೂ ತಾನೂ

ಚಂ|| ಎಱಗಿಯುಮೊರ್ಮೆ

ದಿವ್ಯ

ಮುನಿಗಾರ್ತುಪವಾಸಮನಿರ್

ದುವೊರ್ಮೆ ಕೊ

ಯ್ದಱಿಕೆಯ ಪೂಗಳಿಂ

ಶಿವನನರ್ಚಿಸಿಯುಂ

ಬಿಡದೊರ್ಮೆ

ನೋಂತುಮೋ॥

ದಱಿವರ ಪೇೞ್ದ

ನೋಂಪಿಗಳನೊರ್ಮೆ

ಪಲರ್ಮೆಯುಮಿಂತು ತಮ್ಮ

ಮೆ

ಯ್ಮರೆವಿನಮಿರ್ವರುಂ ನಮೆದರೇನವರ್ಗಾದುದೊ ಪುತ್ರದೋಹಳಂ|| ೧೩೫||

ಪದ್ಯ-೧೩೫:ಪದವಿಭಾಗ-ಅರ್ಥ:ಎಱಗಿಯುಂ(ಎರಗಿ-ನಮಿಸಿ) ಒರ್ಮೆ ದಿವ್ಯ ಮುನಿಗೆ ಆರ್ತು(ಆಗಿ) ಉಪವಾಸಮನು ಇರ್ದುಂ, ಒರ್ಮೆ ಕೊಯ್ದ ಅಱಿಕೆಯ (-ಹೊಸ ಉತ್ತಮ) ಪೂಗಳಿಂ ಶಿವನನು ಅರ್ಚಿಸಿಯುಂ

(ಪೂಜಿಸಿ) ಬಿಡದೆ ಒರ್ಮೆ
ನೋಂತುಂ (ವ್ರತಹಿಡಿದು)
ಓದಱಿವರ (ಶಾಸ್ತ್ರ
ಓದಿದವರ) ಪೇೞ್ದ
ನೋಂಪಿಗಳನು (ವ್ರತಗಳನ್ನು)
ಒರ್ಮೆ ಪಲರ್ಮೆಯುಂ (ಹೀಗೆ
ಹಲವುಸಲ) ಇಂತು ತಮ್ಮ
ಮೆಯ್ಮರೆವಿನಂ
ಇರ್ವರುಂ(ಮೈಮರೆಯುವಂತೆ
ಇಬ್ಬರೂ) ನಮೆದರು
(ನವೆದರು ಬಳಲಿದರು) ಏನು

ಅವರ್ಗೆ ಆದುದೊ ಪುತ್ರದೋಹಳಂ (ಮಕ್ಕಳ ಬಯಕೆ).

ಪದ್ಯ-೧೩೫:ಅರ್ಥ:ಒಂದು/ ಅನೇಕ ಸಲ ಮುನಿಗಳಿಗೆ ನಮಸ್ಕಾರ ಮಾಡಿಯೂ ಮತ್ತೊಂದು ಸಲ ಉಪವಾಸವಿದ್ದೂ ಬೇರೊಂದು ಸಲ ಪ್ರಸಿದ್ಧರಾದ ಹೂವುಗಳನ್ನು ಕೊಯ್ದು ಶಿವನನ್ನು ಆರಾಸಿಯೂ

ಇನ್ನೊಂದು ಸಲ ಶಾಸ್ತ್ರಜ್ಞರು ಹೇಳಿದ ವ್ರತಗಳನ್ನು ನಿರಂತರ ನಡೆಯಿಸಿಯೂ ಒಂದು ಸಲವೂ ಅನೇಕಸಲವೂ ತಮ್ಮ ಶರೀರವು ಕೃಶವಾಗುವ ಹಾಗೆ ಇಬ್ಬರೂ ನಮೆದರು. ಅವರಿಗೆ ಮಕ್ಕಳನ್ನು ಪಡೆಯಬೇಕೆಂಬ ಆಶೆ ಹೆಚ್ಚಿನದಾಯಿತು.

ಆಲಸದೆ ಮಾಡಿ ಬೇಸಱದೆ ಸಾಲ್ಗುಮಿದೆನ್ನದೆ ಮೆಯ್ಯೊಗಕ್ಕೆ

ಪಂ

ಬಲಿಸದೆ ನಿದ್ದೆಗೆಟ್ಟು ನಿಡು

ಜಾಗರದೊಳ್ ತೊಡರ್ದೇಕ

ಪಾದದೊಳ್।

ಬಲಿದುಪವಾಸದೊಳ್

ನಮೆದು ನೋಂಪಿಗಳೊಳ್

ನಿಯಮ ಕ್ರಮಂಗಳಂ

ಸರಿಸಿದರಂತು ನೋನದೆ

ಗುಣಾರ್ಣವನಂ ಪಡೆಯಲ್ಕೆ

ತೀರ್ಗುಮೇ॥ ೧೩೬॥

ಪದ್ಯ-೧೩೬:ಪದವಿಭಾಗ-ಅರ್ಥ:ಆಲಸದೆ ಮಾಡಿ ಬೇಸಱದೆ ಸಾಲ್ಗುಂ (ಇದು ಸಾಕು) ಇದು ಎನ್ನದೆ, ಮೆಯ್ಯೊಸಗಕ್ಕೆ (ಮೈಸುಖಕ್ಕೆ)ಪಂಬಲಿಸದೆ, ನಿದ್ದೆಗೆಟ್ಟು ನಿಡು ಜಾಗರದೊಳ್ ತೊಡರ್ದು, ಏಕ ಪಾದದೊಳ್ಬಲಿದು ಉಪವಾಸದೊಳ್ ನಮೆದು (ಕಷ್ಟಪಟ್ಟು)

ನೋಂಪಿಗಳೊಳ್
(ವ್ರತದಲ್ಲಿ)ನಿಯಮ
ಕ್ರಮಂಗಳಂ ಸರಿಸಿದರು
(ಸಲ್ಲಿಸಿದರು) ಅಂತು
ನೋನದೆ (ವ್ರತ
ಮಾಡದೆ)ಗುಣಾರ್ಣವನಂ
ಪಡೆಯಲ್ಕೆ ತೀರ್ಗುಮೇ!
(ಪಡೆಯಲಾಗುವುದೇ? ಇಲ್ಲ.)
ಪದ್ಯ-೧೩೬:ಅರ್ಥ:. ಆಲಸ್ಯ
ಮಾಡದೆ ವ್ರತಮಾಡಿ,
ಬೇಸರಿಕೆಯಿಂದ ಇದು ಸಾಕು

ಎನ್ನದೆ, ದೇಹಸುಖಕ್ಕೆ
ಹಂಬಲಿಸದೆ, ನಿದ್ದೆಗೆಟ್ಟು,
ದೀರ್ಘವಾದ ಜಾಗರಣೆಗಳಲ್ಲಿ
ಸೇರಿಕೊಂಡು, ಒಂದು
ಕಾಲಿನಲ್ಲಿ ನಿಂತುಕೊಂಡು,
ಉಪವಾಸದಿಂದ ಕೃಶರಾಗಿ
ವ್ರತಗಳಲ್ಲಿ ನಿಯಮವನ್ನು
ತಪ್ಪದೆ ಪಾಲಿಸಿದರು. ಹಾಗೆ
ವ್ರತಮಾಡದೆ
ಗುಣಸಮುದ್ರನಾದ
ಅರ್ಜುನನನ್ನು (ಆ

ಬಿರುದಿನಿಂದ ಕೂಡಿದ
ಅರಿಕೇಸರಿಯನ್ನು)
ಪಡೆಯಲು ಸಾಧ್ಯವೇ? ಇಲ್ಲ.

ವ|| ಅಂತೊಂದು ವರ್ಷಂಬರಂ ಭರಂಗೆಯ್ದು ನೋಂತು ಪೂರ್ವಕ್ರಮದೊಳೊಂದುದಿವ ಸಮುಪವಾಸಮನಿರ್ದಗಣ್ಯ ಪುಣ್ಯತೀರ್ಥ ಜಲಂಗಳಂ ಮಿಂದು ದಳಿಂಬಮನುಟ್ಟು ದರ್ಭಶಯನದೊಳಿರ್ದು-

ವಚನ:ಪದವಿಭಾಗ-ಅರ್ಥ:ಅಂತು ಒಂದು ವರ್ಷಂಬರಂ ಭರಂಗೆಯ್ದು ನೋಂತು (ಒಂದು ವರ್ಷ ವ್ರತಮಾಡಿ) ಪೂರ್ವಕ್ರಮದೊಳು (ಹಿಂದೆ ಮಾಡಿದಂತೆ)ಒಂದುದಿವಸಂ ಉಪವಾಸಮನು ಇರ್ದು ಅಗಣ್ಯ ಪುಣ್ಯತೀರ್ಥ ಜಲಂಗಳಂ ಮಿಂದು ದಳಿಂಬಮನು

(ಶುಭ್ರಬಟ್ಟೆಯನ್ನು) ಉಟ್ಟು
ದರ್ಭಶಯನದೊಳಿರ್ದು-

ವಚನ:ಅರ್ಥ:|| ಹಾಗೆ
ಒಂದು ವರ್ಷದವರೆಗೆ
ಶ್ರದ್ಧೆಯಿಂದ ವ್ರತಮಾಡಿ
ಹಿಂದಿನ ರೀತಿಯಲ್ಲಿಯೇ
ಒಂದು ದಿವಸ
ಉಪವಾಸವಿದ್ದು
ಲೆಕ್ಕವಿಲ್ಲದಷ್ಟು
ಪುಣ್ಯತೀರ್ಥಗಳಲ್ಲಿ
ಸ್ನಾನಮಾಡಿ

ಶುಭ್ರವಸ್ತ್ರವನ್ನುಟ್ಟು ದರ್ಭೆಯ ಹಾಸಿಗೆಯ ಮೇಲಿದ್ದು ವ್ರತವನ್ನು ಪಾಲಿಸಿದಳು.

ಮ|| ಸುಲಿಪಲ್ ಮಿಂಚಿನ
ಗೊಂಚಲುಟ್ಟ ದುಗುಲಂ
ಗಂಗಾನದೀ ಫೇನಮು
ಜ್ಜ ಲ ಮುಕ್ತಾಭರಣಂ
ತರತ್ತರಳ ತಾರೋದಾರ ಭಾ
ಭಾರಮಂ|
ಗಲತಾ ಲಾಲಿತ ಸಾಂದ್ರ
ಚಂದನರಸಂ

**ಬೆಳ್ದಿಂಗಳೆಂಬೊಂದು ಪಂ
ಬಲ ಬಂಬಲ್ಗೆಡೆಯಾಗೆ
ಬೆಳ್ಪಸದನಂ ಕಣ್ಗೊಪ್ಪಿತಾ
ಕಾಂತೆಯಾ|| ೧೩೭||**

ಪದ್ಯ-೧೩೭:ಪದವಿಭಾಗ-ಅರ್ಥ:ಸುಲಿಪಲ್ ಮಿಂಚಿನ ಗೊಂಚಲು (ಬಿಟ್ಟ ಹಲ್ಲು ಮಿಂಚಿನ ಗೊಂಚಲು)ಉಟ್ಟ ದುಗುಲಂ ಗಂಗಾನದೀ ಪೇನಮ್ (ನೊರೆ) ಉಜ್ವಲ ಮುಕ್ತಾಭರಣಂ ತರತ್ತರಳ

ತಾರ ಉದಾರ (ಹೊಳೆಯುವ ಮುತ್ತಿನಹಾರದ ಹೊಳೆಯುವ ಅಲುಗಾಟ) ಭಾ ಭಾರಂ ಅಂಗಲತಾ ಲಾಲಿತ ಸಾಂದ್ರ ಚಂದನರಸಂ (ಲಲಿತ ಅಂಗದಲ್ಲಿ ಚಂದನ ಪರಿಮಳ) ಬೆಳ್ದಿಂಗಳೆಂಬೊಂದು ಪಂಬಲ (ಕುಂತಿಯ ಬೆಳುತಿಂಗಳ ಬಯಕೆ ಅವಳ ಬಿಳಿ ಬಟ್ಟೆಯಲ್ಲಿ ತೃಪ್ತಿ ಹೊಂದಿ ಕಣ್ಣಿಗೆ ಒಪ್ಪಿತು)

ಬಂಬಲ್ಗೆಡೆಯಾಗೆ ಬೆಳ್ಪಸದನಂ
ಕಣ್ಗೊಪ್ಪಿತಾ ಕಾಂತೆಯಾ|

ಪದ್ಯ-೧೩೭:ಅರ್ಥ:.

ಕುಂತಿಯ ಬಿಟ್ಟ ಶುಭ್ರ ಹಲ್ಲು
ಮಿಂಚಿನ ಗೊಂಚಲು,
ಧರಿಸಿರುವ ರೇಷ್ಮೆಯ ವಸ್ತ್ರವೇ
ಗಂಗಾನದಿಯ ಬಿಳಿಯ ನೊರೆ,
ಚಂಚಲವಾಗಿ
ಅಲುಗಾಡುತ್ತಿರುವ
ಮುತ್ತಿನಹಾರದ
ಕಾಂತಿಪ್ರಸರವೂ ಅಂಗಕ್ಕೆ

ಲೇಪಿಸಿಕೊಂಡಿರುವ ಗಟ್ಟಿಯಾದ ಶ್ರೀಗಂಧದ ರಸವೂ ಬೆಳುದಿಂಗಳ ಬಯಕೆಗೆ ತೃಪ್ತಿನೀಡಿ (ಎಂಬ ಸಂದೇಹಕ್ಕೆ ಅವಕಾಶವಾಗಿರಲು?) ಆ ಕುಂತೀದೇವಿಯ ಬಿಳಿಯ ಬಣ್ಣದ ಅಲಂಕಾರವು ಕಣ್ಣಿಗೆ ಮನೋಹರವಾಗಿದ್ದಿತು.

ವ|| ಅಂತು ತನ್ನ ಕೈಕೊಂಡು ಬೆಳ್ಪಸದನದೊಳ್

ಕೀರ್ತಿಶ್ರೀಯಂ ವಾಕ್ಶ್ರೀಯುಮನನುಕರಿಸಿ ಮಂತ್ರಾಕ್ಷರ ನಿಯಮದೊಳಿಂದ್ರನಂ ಬರಿಸೆ-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ಕೈಕೊಂಡು ಬೆಳ್ಪಸದನದೊಳ್ (ಬೆಳ್ ವಸನದಲ್ಲಿ) ಕೀರ್ತಿಶ್ರೀಯಂ ವಾಕ್ಶ್ರೀಯುಂನು (ವಾಕ್ ಶ್ರೀ- ಸರಸ್ವತಿ) ಅನುಕರಿಸಿ ಮಂತ್ರಾಕ್ಷರ ನಿಯಮದೊಳು

ಇಂದ್ರನಂ ಬರಿಸೆ (ಕರೆದು ಬರುವಂತೆಮಾಡಿದಳು)-

ವಚನ:ಅರ್ಥ:|| ಹಾಗೆ ತಾನು ಧರಿಸಿದ ಬಿಳಿಯ ಬಣ್ಣದ ಅಲಂಕಾರದಲ್ಲಿ ಯಶೋಲಕ್ಷ್ಮಿಯನ್ನೂ ವಾಕ್ ಲಕ್ಷ್ಮಿಯಾದ ಸರಸ್ವತಿಯನ್ನೂ ಅನುಕರಿಸಿ ಮಂತ್ರಾಕ್ಷರಗಳನ್ನು ಸಕ್ರಮವಾಗಿ ಪಠಿಸಿ ಇಂದ್ರನನ್ನು ಕರೆದು ಬರುವಂತೆಮಾಡಿದಳು.

ಕಂ|| ನೆನೆದ ಮನಂ

ಪೆಱಗುೞಿದ

ತ್ತೆನೆ ಬೆಳಗುವ ರತ್ನದೀಪ್ತಿ

ಸುರಧನು ನೆಗೆದ|

ತ್ತೆನೆ ನೆಯ್ದಿಲ್ಗೊಳನಲರ್ದ

ತ್ತೆನೆ ಕಣ್ಗಳ

ಬಳಗಮಾಗಳಿಂದ್ರಂ ಬಂದಂ||

೧೩೮||

ಪದ್ಯ-೧೩೮:ಪದವಿಭಾಗ-

ಅರ್ಥ:ನೆನೆದ ಮನಂ

ಪೆಱಗುೞಿದತ್ತೆನೆ(ಪೆರೆಗೆ

-ಹೆಚ್ಚಿಗೆ, ಬಿದತ್ತು ಎನೆ
-ಉಳಿದಿತ್ತು ಎನ್ನುವಾಗ;
ನೆನೆಯುವುದು (ಇನ್ನೂ ಇತ್ತು
ಎನ್ನವಷ್ಟರಲ್ಲಿ) ಬೆಳಗುವ
ರತ್ನದೀಪ್ತಿ ಸುರಧನು
(ಕಾಮನಬಿಲ್ಲು ಕಾಣಿಸಿತು
ಎನ್ನಲು) ನೆಗೆದತ್ತು ಎನೆ
ನೆಯ್ದಿಲ್ಗೊಳನಲರ್ದತ್ತೆನೆ
(ನೆಯ್ದಿಲ್ -ನೈದಿಲೆ, ಕೊಳಂ -
[ನ]- ಅಲರ್ದತ್ತು ಎನೆ-
ಕಮಲದಕೊಳ ಅರಳಿದಂತೆ?)

ಕಣ್ಗಳ ಬಳಗಂ ಆಗಳು ಇಂದ್ರಂ ಬಂದಂ (ಇಂದ್ರನಿಗೆ ಸಾವಿರ ಕಣ್ಣು ಎಂದು ನಂಬುಗೆ, ಅದನ್ನೆಲ್ಲಾ ಅರಳಿಸಿಕೊಂಡು ಇಂದ್ರ ಬಂದ)

ಪದ್ಯ-೧೩೮:ಅರ್ಥ:ಧ್ಯಾನ ಮಾಡಿದ ಮನಸ್ಸಿನಿಗಿಂತ ವೇಗವಾಗಿ ಎನ್ನುವ ಹಾಗೆಯೂ, ಪ್ರಕಾಶಮಾನವಾದ

ರತ್ನಕಾಂತಿಯು ಮೋಡಿದ ಕಾಮನಬಿಲ್ಲಾಗಿ ತೋರಿತು ಎನ್ನುವ ಹಾಗೆಯೂ, ಅವನ ಸಾವಿರ ಕಣ್ಣುಗಳ ಸಮೂಹವು ನೆಯ್ದಿಲೆಯ ಕೊಳವು ಅರಳಿತು ಎನ್ನುವ ಹಾಗೆಯೂ, ಇರಲು ಆಗ ಇಂದ್ರನು ಬಂದನು.

ಬೆಸನೇನೇಗೆಯ್ವುದೊ ನಿನ ಗೊಸೆದೇನಂ ಕುಡುವುದೆಂದೊಡೆಂದಳ್

ಮಕ್ಕಳ್|
ಒಸಗೆಯನೆನಗೀವುದು ನಿ
ನ್ನೆಸಕದ ಮಸಕಮನೆ ಪೋಲ್ವ
ಮಗನಂ ಮಘವಾ|| ೧೩೯||

ಪದ್ಯ-೧೪೦:ಪದವಿಭಾಗ-ಅರ್ಥ:ಇಂದ್ರನು ಬಂದವನು, ಬೆಸನೇನು (ಏನು ಕಾರ್ಯ?) ಏಗೆಯ್ವುದೊ(ಏನು ಮಾಢುವುದೊ?) ನಿನಗ ಒಸೆದು ಏನಂ ಕುಡುವುದು ಎಂದೊಡೆ, ಎಂದಳ್ ಮಕ್ಕಳ್

ಒಸಗೆಯನು ಎನಗೆ ಈವುದು (ಕೊಡುವುದು) ನಿನ್ನೆ ಎಸಕದ (ನಿನ್ನ ರೀತಿಯ ಶೂರ) ಮಸಕಮನೆ ಪ್ರೋಲ್ವ (ಶ್ರೇಷ್ಟತೆಯನ್ನು? ಹೊಂದಿದ) ಮಗನಂ ಮಘವಾ (ಇಂದ್ರನೇ)

ಪದ್ಯ-೧೪೦:ಅರ್ಥ:ಇಂದ್ರನು ಬಂದವನು, ಏನು ಕಾರ್ಯ? ಏನನ್ನು ಕೊಡಬೇಕು? ಎಂದು ಕೇಳಿದನು, ಇಂದ್ರನೇ ಮಕ್ಕಳ

ನಲಿವನ್ನೂ ನಿನ್ನ ಪರಾಕ್ರಮಕ್ಕೆ ಸಮನಾದ ಶೌರ್ಯವುಳ್ಳ ಮಗನನ್ನು ಕೊಡಬೇಕು ಎಂದಳು.

ವ|| ಎಂಬುದುಮಾಕೆಯ ಬಗೆದ ಬಗೆಯೊಳೊಡಂಬಡುವಂತೆ ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮನಾದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ

ಮದನನ ಸೌಭಾಗ್ಯಮುಮಂ
ಕಲ್ಪತರುವಿನುದಾರಶಕ್ತಿಯುಮ
ನೀಶ್ವರನ ಪ್ರಭುಶಕ್ತಿಯುಮಂ
ಜವನ ಬಲ್ಲಾಳ್ತನಮುಮಂ
ಸಿಂಹದ
ಕಲಿತನಮುಮನವರವರ
ದೆಸೆಗಳಿಂ ತೆಗೆದೊಂದುಮಾಡಿ
ಕೊಂತಿಯ
ದಿವ್ಯಗರ್ಭೋದರಮೆಂಬ
ಶುಕ್ತಿಕಾಪುಟೋದರದೊಳ್
ತನ್ನ ದಿವ್ಯಾಂಶಮೆಂಬ

ಮುಕ್ತಾಫಲೋದ
ಬಿಂದುವನಿಂದ್ರಂ ಸಂಕ್ರಮಿಸಿ
ನಿಜನಿವಾಸಕ್ಕೆ
ಪೋದನನ್ನೆಗಮಿತ್ತ
ಕೊಂತಿಯುಮಂದಿನ ಬೆಳಗಪ್ಪ
ಜಾವದೊಳ್
ಸುಖನಿದ್ರೆಯಾಗಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆಕೆಯ ಬಗೆದ ಬಗೆಯೊಳು (ಮನಸ್ಸಿನಲ್ಲಿ ಯೋಚಿಸಿದ)

ಒಡಂಬಡುವಂತೆ (ಒಪ್ಪುವಂತೆ) ಕುಲಗಿರಿಗಳ ಬಿಣ್ಪುಮಂ (ಭಾರ) ಧರಾತಳದ ತಿಣ್ಪುಮನು(ಭೂಮಿಯ ತೂಕ) ಆದಿತ್ಯನ ತೇಜದ ಅಗುಂತಿಯುಮಂ(ಅತಿಶಯತೆ), ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನ ಉದಾರಶಕ್ತಿಯುನು, ಈಶ್ವರನ ಪ್ರಭುಶಕ್ತಿಯುಮಂ, ಜವನ

(ಯಮನ)
ಬಲ್ಲಾಳ್ತನಮುಮಂ (ಶೌರ್ಯ)
ಸಿಂಹದ ಕಲಿತನಮುಮನು
ಅವರವರ ದೆಸೆಗಳಿಂ ತೆಗೆದು
ಒಂದುಮಾಡಿ ಕೊಂತಿಯ
ದಿವ್ಯಗರ್ಭೋದರಮೆಂಬ
(ಗರ್ಬದ) ಶುಕ್ತಿಕಾಪುಟ
(ಮುತ್ತಿಚಿಪ್ಪಿನ) ಉದರದೊಳ್
ತನ್ನ ದಿವ್ಯಾಂಶಮೆಂಬ
ಮುಕ್ತಾಫಲೋದ ಬಿಂದುವನು
(ಆ ಎಲ್ಲ ಶಕ್ತಿ ತುಂಬಿದ

ಮುತ್ತಿನಂಥ ಹನಿಯನ್ನು) ಇಂದ್ರಂ ಸಂಕ್ರಮಿಸಿ (ಬೆರಸಿ-ಸೇರಿಸಿ) ನಿಜನಿವಾಸಕ್ಕೆ ಪೋದನು ಅನ್ನೆಗಮಿತ್ತ ಕೊಂತಿಯುಂ ಅದಿನ ಬೆಳಗಪ್ಪ ಜಾವದೊಳ್ ಸುಖನಿದ್ರೆಯಾಗಿ-

ವಚನ:ಅರ್ಥ:ಇಂದ್ರನು ಕುಂತಿಯು ಆಸೆಪಟ್ಟಂತೆಯೇ ಕುಲಪರ್ವತಗಳ ಭಾರವನ್ನೂ, ಭೂಮಿಯ ತೂಕವನ್ನೂ,

ಸೂರ್ಯನ ತೇಜಸ್ಸಿನ
ಆಧಿಕ್ಯವನ್ನೂ, ಚಂದ್ರನ
ಕಾಂತಿಯನ್ನೂ, ಮನ್ಮಥನ
ಸೌಭಾಗ್ಯವನ್ನೂ, ಕಲ್ಪವೃಕ್ಷದ
ಔದಾರ್ಯವನ್ನೂ, ಈಶ್ವರನ
ಪ್ರಭುಶಕ್ತಿಯನ್ನೂ, ಯಮನ
ಶೌರ್ಯವನ್ನೂ, ಸಿಂಹದ
ಪರಾಕ್ರಮವನ್ನೂ, ಅವು
ಒಂದೊಂದರಿಂದಲೂ ತೆಗೆದು
ಒಟ್ಟಿಗೆ ಶೇಖರಿಸಿ ಕುಂತಿಯ
ಶ್ರೇಷ್ಠವಾದ ಮುತ್ತಿನ

ಚಿಪ್ಪಿನಂತಿರುವ ಗರ್ಭದ
ಒಳಗಡೆ ತನ್ನ ದಿವ್ಯಾಂಶವೆಂಬ
ಮುತ್ತಿನ ಹನಿಯನ್ನು
ಬೆರಸಿಟ್ಟು ಇಂದ್ರನು ತನ್ನ
ನಿವಾಸಕ್ಕೆ ಹೋದನು.

ಚಂ||

ಕುಡಿವುದನೇಱುಮಂಬುಯು

ಮಂ ಕುಲಶೈಲಕುಳಂಗಳಂ

ತಗು

ಳ್ದಡರ್ವುದನೊಂದು ಬಾಳ ರವಿ

ತನ್ನಯ ಸೋಗಿಲ ಮೇಗೆ

ರಾಗದಿಂ|

ಪೊಡರ್ವುದನಂತೆ

ದಿಕ್ಕರಿಗಳಂಬುಜಪತ್ರ

ಪುಟಾಂಬುವಿಂ ಬೆಡಂ

ಗಡಸಿರೆ ಮಜ್ಜನಂಬುಗಿಪುದಂ

ಸತಿ ಕಂಡೊಸೆದಳ್

ನಿಶಾಂತದೊಳ್|| ೧೪೦||

ಪದ್ಯ-೦೦:ಪದವಿಭಾಗ-

ಅರ್ಥ:ಕುಡಿವುದು ಏನು

ಏೞು ಅಂಬುಯುಮಂ(ತಣು

ಏಳು ಸಮುದ್ರವನ್ನು

ಕುಡಿದಂತೆ)

ಕುಲಶೈಲಕುಳಂಗಳಂ ತಗುಳ್ದು

ಅಡರ್ವುದನು (

ಸಪ್ತಕುಲಪರ್ವತಗಳನ್ನು

ತಾನು ಹತ್ತುವುದನ್ನೂ) ಒಂದು

ಬಾಳ ರವಿ ತನ್ನಯ ಸೋಗಿಲ

ಮೇಗೆ ರಾಗದಿಂ|

ಪೊಡರ್ವುದನು (ಬಾಲಸೂರ್ಯನು ತನ್ನ ಮಡಿಲಲ್ಲಿ ಸಂತೋಷವಾಗಿ ಹೊರಳುವುದನ್ನೂ), ಅಂತೆ ದಿಕ್ಕರಿಗಳಂ ಅಂಬುಜಪತ್ರ ಪುಟಾಂಬುವಿಂ ಬೆಡಂಗಡಸಿರೆ ಮಜ್ಜನಣ ಅಂಬುಗಿಪುದಂ (ತಾವರೆಯ ಎಸಳಿನ ದೊನ್ನೆಇಂದ ಸ್ನಾನ ಮಾಡುವುದನ್ನೂ,) ಸತಿ ಕಂಡೊಸೆದಳ್ ನಿಶಾಂತದೊಳ್

ಪದ್ಯ-00:ಅರ್ಥ:(ಕುಂತಿ

ಕಂಡ ಕನಸುಗಳು)- ರಾತ್ರಿಯ

ಕೊನೆಯ ಭಾಗದಲ್ಲಿ ತಾನು
ಸಪ್ತಸಮುದ್ರಗಳನ್ನು
ಕುಡಿಯುವುದನ್ನೂ,
ಸಪ್ತಕುಲಪರ್ವತಗಳನ್ನು ಸೇರಿ
ಹತ್ತುವುದನ್ನೂ
ಬಾಲಸೂರ್ಯನು ತನ್ನ
ಮಡಲಿನಲ್ಲಿ ಸಂತೋಷವಾಗಿ
ಹೊರಳುವುದನ್ನೂ, ಹಾಗೆಯೇ
ದಿಗ್ಗಜಗಳನ್ನೂ, ತಾವರೆಯ
ಎಸಳಿನ ದೊನ್ನೆಇಂದ ಸ್ನಾನ

ಮಾಡುವುದನ್ನೂ ಸ್ವಪ್ನದಲ್ಲಿ ಕಂಡು ಸಂತೋಷಪಟ್ಟಳು.

ವ|| ಅಂತು ಕಂಡು ಮುನಿಕುಮಾರರೋದುವ ವೇದನಿನಾದದಿಂ ವಿಗತ ನಿದ್ರೆಯಾಗಿ ಪಾಂಡುರಾಜಂಗಮಲ್ಲಿಯ ಮುನಿಜನಂಗಳ್ಗ ಮಱಿಪಿದೊಡವರಾ ಕನಸುಗಳ್ಗೆ ಸಂತೋಷಂಬಟ್ಟು-

ವಚನ:ಪದವಿಭಾಗ-ಅರ್ಥ:ಅಂತು ಕಂಡು ಮುನಿಕುಮಾರರು ಓದುವ ವೇದನಿನಾದದಿಂ ವಿಗತ ನಿದ್ರೆಯಾಗಿ (ಎಚ್ಚರಾಗಿ) ಪಾಂಡುರಾಜಂಗ ಅಲ್ಲಿಯ ಮುನಿಜನಂಗಳ್ಗಂ ಅಱಿಪಿದೊಡೆ ಅವರು ಆ ಕನಸುಗಳ್ಗೆ ಸಂತೋಷಂಬಟ್ಟು-

ವಚನ:ಅರ್ಥ:ಹಾಗೆ ಕನಸನ್ನು ಕಂಡ ನಂತರ

ಋಷಿಕುಮಾರರು ಪಠಿಸುವ ವೇದಘೋಷದಿಂದ ಎಚ್ಚೆತ್ತು ಪಾಂಡುರಾಜನಿಗೂ, ಅಲ್ಲಿದ್ದ ಋಷಿಮುನಿಗಳಿಗೂ, ಆ ಕನಸಿನ ವಿಷಯವನ್ನು ತಿಳಿಸಿದಳು; ಅವರು ಆ ಕನಸುಗಳಿಗೆ ಸಂತೋಷಪಟ್ಟು ಅದರ ಅರ್ಥವನ್ನು ವಿವರಿಸಿದರು

ಚಂ||

ಕುಡಿವುದಱಿಂದಮಬ್ಧಿಗಳನಬ್ಧಿ

ಪರೀತ ಮಹೀಶನಂ ತಗು
ಳ್ದಡವೃ್ದದಳಿಂ ಕುಲಾದ್ರಿ
ಪರಿವೇಷ್ಟಿತನಂ
ತರುಣಾರ್ಕನಟ್ಟಿಳಿಂ|
ಪೊಡವೃ್ದದಳಿಂದಮೆಂದು
ಮುದಿತೋದಿತನಂ
ದಿಗಿಭಂಗಳೆಂಟುಮೊ
ಳ್ಪೊಡರಿಸಿ ಮಜ್ಜನಂಬುಗಿಸೆ
ಕಂಡುದಳಿಂ
ಕಮಲಾಭಿರಾಮನಂ|| ೧೪೧

ಪದ್ಯ-00:ಪದವಿಭಾಗ-ಅರ್ಥ:ಕುಡಿವುದಱಿಂದಂ ಅಬ್ಧಿಗಳನು ಅಬ್ಧಿಪರೀತ ಮಹೀಶನಂ (ಸಮುದ್ರವು ಬಳಸಿದ ಭೂಮಿಗೆ ಒಡೆಯನನ್ನೂ) ತಗುಳ್ದು ಅಡರ್ವುದಱಿಂ ಕುಲಾದ್ರಿ ಪರಿವೇಷ್ಟಿತನಂ (ಪರ್ವತ ಹತ್ತುವುದು- ಅದನ್ನು ಬಳಸಿದ ರಾಜ್ಯವನ್ನೂ,) ತರುಣ ಅರ್ಕನು ಅಟ್ಟಿಱಿಂ

(ಪ್ರೀತಿಯನ್ನೂ)
ಪೊಡವುರ್ದಱಿಂದಂ ಎಂದುಂ
ಮತ್ತು ಉದಿತೋದಿತನಂ
(ಏಕಪ್ರಕಾರದ
ಅಭಿವೃದ್ಧಿಯನ್ನು) ದಿಕ್
(ಗ)ಇಭಂಗಳೆಂಟುಂ
ಒಳ್ಪೊಡರಿಸಿ(ಮಂಗಳವನ್ನೂ)
ಮಜ್ಜನಂಬುಗಿಸೆ ಕಂಡುದಱಿಂ
ಕಮಲಾಭಿರಾಮನಂ(ಸುಂದರ
ಮಗನನ್ನೂ)

ಪದ್ಯ-00:ಅರ್ಥ:ಕುಂತಿ ಕನಸು ಕಂಡ ಫಲಗಳು: ಸಪ್ತಸಮುದ್ರಗಳನ್ನು ಕುಡಿಯುವುದು- ಸಮುದ್ರವು ಬಳಸಿದ ಭೂಮಿಗೆ ಒಡೆಯನನ್ನೂ; ಕುಲಪರ್ವತಗಳನ್ನು ಹತ್ತುವುದರಿಂದ ಕುಲಪರ್ವತಗಳಿಂದ ಸುತ್ತುವರಿಯಲ್ಪಟ್ಟ ರಾಜ್ಯವನ್ನುಳ್ಳವನನ್ನೂ,

ಬಾಲಸೂರ್ಯನು
ಮಡಿಲಿನಲ್ಲಿ
ಹೊರಳಾಡುವುದರಿಂದ
ಏಕಪ್ರಕಾರದ
ಅಭಿವೃದ್ಧಿಯನ್ನು
ಪಡೆಯುವವನನ್ನೂ ಎಂಟು
ದಿಗ್ಗಜಗಳನ್ನೂ ಶೋಭಯಿಂದ
ಸ್ನಾನ ಮಾಡಿಸುವುದನ್ನು
ಕಂಡುದರಿಂದ ಕಮಲದಂತೆ
ಆಕರ್ಷಕವಾದ
ಸೌಂದರ್ಯವುಳ್ಳ ಮಗನನ್ನು

ಪಡೆಯುವುದನ್ನೂ
ತೋರಿಸುವುದು ಎಂದು
ಮುನಿಗಳು ಹೇಳಿದರು.

ವ||ಇಂತಪ್ಪ ಮಗನಂ ನೀನಮೋಘಂ ಪಡೆವೆಯೆಂದು ಮುನಿಜನಂಗಳ್ ಪೇೞ್ವೆ ಶುಭ ಸ್ವಪ್ನಫಲಂಗಳೊಡನೊಡನೆ ಗರ್ಭಚಿಹ್ನಂಗಳುಂ ತೋರೆ ಪಗೆವರ ಪೆಂಡಿರ ಮೊಗಂಗಳುಮಾಕೆಯ ಕುಚಚೂಚುಕಂಗಳುಮೊಡ

ನೊಡನೆ ಕಂದಿದುವಾಕೆಯ
ವಳಿತ್ರಯಂಗಳುಂ ಪಗೆವರ
ಶಕ್ತಿತ್ರಯಂಗಳುಮೊಡನೊಡನೆ
ಕೆಟ್ಟುವಾಕೆಯ ಬಾಸೆಗಳುಂ
ಪಗೆವರ
ಬಾಳ್ವಾಸೆಗಳುಮೊಡನೊಡನ
ಸಿಯವಾದುವಾಕೆಯ
ಮಂದಗಮನಮುಂ ಪಗೆವರ
ಮನಂಗಳುಮೊಡನೊಡನಲಸಿ
ಕೆಯ ಕೈಕೊಂಡುವಾಕೆಯ
ನಡುವಿನ ಬಡತನಮುಂ

ಪಗೆವರ ಸಿರಿಯುಮೊಡನೊಡನೆ ಕೆಟ್ಟುವಾ ಸಮಯದೊಳ್

ವಚನ:ಪದವಿಭಾಗ-ಅರ್ಥ:ಇಂತಪ್ಪ ಮಗನಂ ನೀನು ಅಮೋಘಂ ಪಡೆವೆಯೆಂದು ಮುನಿಜನಂಗಳ್ ಪೇಳ್ವಿ ಶುಭ ಸ್ವಪ್ನಫಲಂಗಳ ಒಡನೊಡನೆ ಗರ್ಭಚಿಹ್ನಂಗಳುಂ ತೋರಿ ಪಗೆವರ ಪೆಂಡಿರ

ಮೊಗಂಗಳುಂ (ಶತ್ರುಗಳ
ಹೆಂಡಿರ ಮುಖಗಳು
ಬಾಡಿದವು) ಆಕೆಯ
ಕುಚಚೂಚುಕಂಗಳುಂ
(ಮೊಲೆತೊಟ್ಟುಗಳು)
ಒಡನೊಡನೆ ಕಂದಿದುವು
ಆಕೆಯ ವಳಿತ್ರಯಂಗಳುಂ
ಪಗೆವರ ಶಕ್ತಿತ್ರಯಂಗಳುಂ
ಒಡನೊಡನೆ ಕೆಟ್ಟುವು ಆಕೆಯ
ಬಾಸೆಗಳುಂ ಪಗೆವರ
(ಶತ್ರುಗಳು) ಬಾಳ್ವಿ ಆಸೆಗಳುಂ

ಒಡನೊಡನೆ
ಅಸಿಯವಾದುವು ಆಕೆಯ
ಮಂದಗಮನಮುಂ ಪಗೆವರ
ಮನಂಗಳುಂ ಒಡನೊಡನೆ
ಅಲಸಿಕೆಯ ಕೈಕೊಂಡುವು
ಆಕೆಯ ನಡುವಿನ
ಬಡತನಮುಂ ಪಗೆವರ
ಸಿರಿಯುಂ ಒಡನೊಡನೆ
ಕೆಟ್ಟುವು ಆ ಸಮಯದೊಳ್-
ವಚನ:ಅರ್ಥ:ಕುಂತಿಗೆ,
ನೀನು ಮಗನನ್ನು

ಪಡೆಯುತ್ತೀಯೆ ಎಂದು
ಮುನಿಗಳು ಹೇಳಿದ
ಶುಭಸ್ವಪ್ನಫಲಗಳ
ಜೊತೆಯಲ್ಲಿಯೇ ಅವಳಿಗೆ
ಗರ್ಭಚಿಹ್ನೆಗಳೂ ತೋರಲಾಗಿ
ಶತ್ರುರಾಜರ ಸ್ತ್ರೀಯರ
ಮುಖವೂ ಆಕೆಯ ಮೊಲೆಯ
ತೊಟ್ಟುಗಳೂ ಒಟ್ಟಿಗೆ
ಕಂದಿದುವು (ಕಪ್ಪಾದವು).
ಆಕೆಯ ಹೊಟ್ಟೆಯ ಮೂರು
ಮಡಿಪುಗಳೂ ಶತ್ರುರಾಜರ

ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿ ಎಂಬ ಶಕ್ತಿತ್ರಯಗಳ ಜೊತೆ ಜೊತೆಯಲ್ಲಿಯೇ ನಾಶವಾದುವು. ಆಕೆಯ ಬಾಸೆಗಳೂ (ಹೊಕ್ಕುಳಿನಿಂದ ಎದೆಯವರೆಗಿರುವ ಕೂದಲಿನ ಸಾಲು) ಶತ್ರುಗಳ ಬಾಳುವ ಆಸೆಗಳೂ ಜೊತೆ ಜೊತೆಯಲ್ಲಿಯೇ ಕೃಶವಾದುವು. ಆಕೆಯ

ಮಂದಗಮನವೂ ಶತ್ರುಗಳ
ಮನಸ್ಸೂ ಜೊತೆ
ಜೊತೆಯಲ್ಲಿಯೇ ಆಲಸ್ಯವನ್ನು
ಹೊಂದಿದುವು.

**ಉ|| ಉರ್ಚಿದ ಬಾಳೊಳಾತ್ಮ
ಮುಖಬಿಂಬಮನಟ್ಟಿಯೆ
ನೋಡಲುಂ ಮನಂ
ಪೆರ್ಚೆ ಧನುರ್ಲತಾ ಗುಣ
ನಿನಾದಮನಾಲಿಸಿ ಕೇಳಲುಂ
ಮನಂ|**

ಬೆರ್ಚದೆ ಸಿಂಹ ಪೋತಕಮನೋವಲುಮಾಕೆ ಯ ದೋಹಳಂ ಕರಂ ಪೆರ್ಚಿದುದಾ ಗುಣಾರ್ಣವನ ಮುಂದಣ ಬೀರಮನಂದೆ ತೋರ್ಪವೋಲ್|| ೧೪೨

ಪದ್ಯ-00:ಪದವಿಭಾಗ-ಅರ್ಥ:ಉರ್ಚಿದ ಬಾಳೊಳು (ಒರೆಯಿದ ತೆಗೆದ ಕತ್ತಿ), ಆತ್ಮ ಮುಖಬಿಂಬಮನು ಅಟ್ಟಿಯೆ ನೋಡಲುಂ ಮನಂ

ಪೆರ್ಚೆ(ತನ್ನ ಮುಖವನ್ನು
ನೋಡಿಕೊಂಡು ಸಂತಸ),
ಧನುರ್ಲತಾ ಗುಣ
ನಿನಾದಮನು ಆಲಿಸಿ
ಕೇಳಲುಂ ಮನಂ ಬೆರ್ಚದೆ
(ಬಿಲ್ಲಿನ ಠೇಂಕಾರದಿಂದ
ಮನವು ಹೆದರದೆ) ಸಿಂಹ
ಪೋತಕಮನು
(ಮರಿಯನ್ನು)ಓವಲುಂ(ಸಾಕ
ಲು) ಆಕೆಯ
ದೋಹಳಂ(ಬಯಕೆ) ಕರಂ

(ಬಹಳ) ಪೆರ್ಚಿದುದು
(ಹೆಚ್ಚಿತು) ಆ ಗುಣಾರ್ಣವನ
ಮುಂದಣ ಬೀರಮಂ
(ಶೌರ್ಯವನ್ನು) ಅಂದೆ
ತೋರ್ಪವೋಲ್
ಪದ್ಯ-00:ಅರ್ಥ:(ಕುಂತಿಯ
ಬಸಿರು ಬಯಕೆಗಳು)
ಮುಂದಿನ ಗುಣಾರ್ಣವ
ಅರ್ಜುನನ (ಅರಿಕೇಸರಿಗೆ
ಹೋಲಿಕೆ) ಶೌರ್ಯವನ್ನು ಆ
ದಿನವೇ ತೋರ್ಪಡಿಸುವಂತೆ

ಕುಂತಿಯ ಬಸಿರ ಬಯಕೆಯು ಒರೆಗಳೆದ ಕತ್ತಿಯಲ್ಲಿ ತನ್ನ ಮುಖಮಂಡಲವನ್ನು ನೋಡಿಕೊಳ್ಳಲು ಸಂತಸ, ಉತ್ಸಾಹದಿಂದ ಬಿಲ್ಲಿನ ಟಂಕಾರ ಶಬ್ದವನ್ನು ಮನವಿಟ್ಟು ಕೇಳುವುದರೆ ಸ್ವಲ್ಪವೂ ಹೆದರದೆ ಇರುವುದು, ಸಿಂಹದ ಮರಿಯನ್ನು ತಂದುಸಾಕುವ ಬಯಕೆ ಇವು ಬಹಳ ಹೆಚ್ಚಿತು

ವ॥ಮತ್ತಮೇೞುಂ ಸಮುದ್ರಂಗಳ ನೀರನೊಂದುಮಾಡಿ ಮೀಯಲುಂ ವೇಳಾ ವನ ಲತಾಗೃಹೋದರ ಪುಳಿನಸ್ಥಳ ಪರಿಸರಪ್ರದೇಶ ದೊಳ್ ತೊೞಲಲುಮಱ್ತಿಯಾಗೆ-

ವಚನ:ಪದವಿಭಾಗ-

ಅರ್ಥ:ಮತ್ತಂ ಏೞುಂ ಸಮುದ್ರಂಗಳ ನೀರನು ಒಂದುಮಾಡಿ ಮೀಯಲುಂ

(ಸ್ನಾನ ಮಾಡಲು) ವೇಳಾವನ
(ಸಮುದ್ರತೀರದ ವನ)
ಲತಾಗೃಹ ಓದರ (ಒಳಗೆ)
ಪುಳಿನಸ್ಥಳ
(ಮರಳಿನ)ಪರಿಸರ
ಪ್ರದೇಶದೊಳ್ ತೊಱಲಲುಂ
ಅೞ್ತಿಯಾಗೆ (ತಿರುಗಾಡಲು
ಆಸೆಯಾಗಲ)-
ವಚನ:ಅರ್ಥ:ಕುಂತಿಗೆ, ಮತ್ತು
ಏಳು ಸಮುದ್ರಗಳ ನೀರನ್ನು
ಒಟ್ಟಿಗೆ ಸೇರಿಸಿ

ಸ್ನಾನಮಾಡಲೂ ಸಮುದ್ರದ
ಅಂಚಿನಲ್ಲಿರುವ
ಕಾಡಿನಲ್ಲಿಯೂ
ಬಳ್ಳಿಮಂಟಪಗಳ
ಒಳಭಾಗದಲ್ಲಿಯೂ
ಮರಳುದಿಣ್ಣೆಗಳ ಸುತ್ತಲೂ
ತಿರುಗಾಡಲೂ
ಆಸೆಯಾಯಿತು

ಕಂ|| ಬಳೆದ ನಿತಂಬದೆ

ಕಾಂಚೀ

ಕಳಾಪಮಂ ಕಟ್ಟಲಣಮೆ ನೆರೆಯದಿದೆಂದ|
ಗ್ಗಳಿಸಿ ಕುಳಿಕೆಗಳಿನೇಂ ಕ ಣ್ಗೊಳಿಸಿದುದೋ
ಸುಭಗೆಯಾದ ಸುದತಿಯ ಗರ್ಭಂ|| ೧೪೩

ಪದ್ಯ-00:ಪದವಿಭಾಗ-ಅರ್ಥ:ಬಳೆದ ನಿತಂಬದೆ (ಸೊಂಟದ ಹಿಂಭಾಗದಲ್ಲಿ) ಕಾಂಚೀಕಳಾಪಮಂ (ಒಡ್ಯಾಣವನ್ನು)

ಕಟ್ಟಲಣಮೆ(ಕಟ್ಟಲು ಆಗದು,
ದಪ್ಪವಾಗಿದೆ) ನೆರೆಯದು
(ಆಗದು)ಇದು ಎಂದು
ಅಗ್ಗಳಿಸಿ
(ಹೆಚ್ಚಿ)ಕುಳಿಕೆಗಳಿನೇಂ
(ದಾರದ ಕುಳಿಕೆ ಸೇರಿಸಿದೆ)
ಕಣ್ಗೊಳಿಸಿದುದೋ (ಕಣ್ಣಿಗೆ
ಸೊಗಸಿತೋ) ಸುಭಗೆಯಾದ
(ಸೌಭಾಗ್ಯವತಿ) ಸುದತಿಯ
ಗರ್ಭಂ

ಪದ್ಯ-00:ಅರ್ಥ:ಕುಂತಿಯ ಬೆಳೆದ ಪೃಷ್ಠಭಾಗದಿಂದ ಒಡ್ಯಾಣ/ಡಾಬನ್ನು ಕಟ್ಟಲೂ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ಆ ಸೌಭಾಗ್ಯಶಾಲಿನಿಯಾದ ಕುಂತಿಯ ಗರ್ಭವು ಬೆಳೆದು ನೂಲಿನ ಕುಳಿಕೆಗಳಿಂದ ಕಟ್ಟಿದುದು ಅತಿ ಮನೋಹರವಾಯಿತು.

ವ|| ಅಂತು ತೆಕ್ಕನೆ ತೀವಿದ ಮೆಯ್ಯೊಳಲರ್ದ ಸಂಪಗೆಯರಲಂತೆ ಬೆಳರ್ತ ಬಣ್ಣಂ ಗುಣಾರ್ಣವಂಗೆ ಮಾಡಿದ ಬಣ್ಣದಂತೆ ಸೊಗಯಿಸಿ ಬೆಳೆದು-

ವಚನ:ಪದವಿಭಾಗ-

ಅರ್ಥ:ಅಂತು ತೆಕ್ಕನೆ ತೀವಿದ (ತುಂಬಿದ) ಮೆಯ್ಯೊಳು ಅಲರ್ದ (ಅರಳಿದ) ಸಂಪಗೆಯ ಅರಲಂತೆ

(ಹೂವು) ಬೆಳರ್ತ(ಬಿಳಿ)
ಬಣ್ಣಂ ಗುಣಾರ್ಣವಂಗೆ/
ಅರ್ಜುನ/ ಅರಿಕೇಸರಿಗೆ
ಮಾಡಿದ ಬಣ್ಣದಂತೆ
ಸೊಗಯಿಸಿ ಬೆಳೆದು-
ವಚನ:ಅರ್ಥ:|| ಗರ್ಭಿಣಿ
ಕುಂತಿಯು ಹಾಗೆ
ಪೂರ್ಣವಾಗಿ ತುಂಬಿಕೊಂಡ
ಮೈಯಲ್ಲಿ ಅರಳಿದ
ಸಂಪಗೆಯ ಹೂವಿನಂತೆ ಇತ್ತು.
ಬಿಳುಪಾದ ಬಣ್ಣವು

ಗುಣಾರ್ಣವನಿಗೆ ಮಾಡಿದ ಬಣ್ಣದಂತೆ ಸೊಗಸಾಗಿ ಬಳೆದಿತ್ತು.

ಕಂ|| ತುಡುಗೆಗಳೊಳ್
ಸರಿಗೆಯುಮಂ
ಕಡುವಿಣ್ಣಿತ್ತೆನಿಸಿ
ನಡೆದುಮೋರಡಿಯನಣಂ|
ನಡೆಯಲುಮಾಱದೆ ಕೆಮ್ಮನೆ
ಬಿಡದಾರಯ್ವನಿತುಮಾಗೆ
ಬಳೆದುದು ಗರ್ಭಂ|| ೧೪೪ ||

ಪದ್ಯ-00:ಪದವಿಭಾಗ-ಅರ್ಥ:ತುಡುಗೆಗಳೊಳ್ (ಆಭರಣಗಳು) ಸರಿಗೆಯುಮಂ (ಸರಿಗೆ-ಒಂಗೆಳೆಸರ) ಕಡು ವಿಣ್ಣಿತ್ತೆನಿಸಿ(ಬಹಳ ಬಾರ) ನಡೆದುಂ ಓರಡಿಯನು(ಒಂದು ಹೆಜ್ಜೆ) ಅಣಂ (ಆಗದು)| ನಡೆಯಲುಂ ಆಱದೆ (ಆಗದೆ) ಕೆಮ್ಮನೆ (ಸುಮ್ಮನೆ) ಬಿಡದೆ ಆರಯ್ವ ಅನಿತುಮ್ (ಆರೈಕೆ,

ಶುಶ್ರೂಷೆ)ಆಗೆ ಬಳೆದುದು ಗರ್ಭಂ

ಪದ್ಯ-00:ಅರ್ಥ:ಅವಳು ಧರಿಸಿರುವ ಆಭರಣಗಳಲ್ಲಿ ಒಂದು ಸರಿಗೆಯೂ ಬಹುಭಾರ ಎನಿಸಿತು; ಓಡಾಡಲು ಒಂದು ಹೆಜ್ಜೆಯನ್ನೂ ಇಡಲಾರದೆ ಸುಮ್ಮನೆ ಆರೈಕೆ ಮಾಡತ್ತಿರಲು, ಗರ್ಭವು ಬೆಳೆಯಿತು

ವ|| ಅಂತಾ ಬಳೆದ ಗರ್ಭದೊಳ್ ಸಂಪೂರ್ಣಪ್ರಸವಸಮಯಂ ದೊರೆಕೊಳೆ ಗ್ರಹಂಗಳೆಲ್ಲಂ ತಂತಮ್ಮುಚ್ಚ ಸ್ಥಾನಂಗಳೊಳಿರ್ದು ಷಡ್ವರ್ಗ ಸಿದ್ಧಿಯನುಂಟುಮಾಡೆ ಶುಭಲಗ್ನೋದಯದೊಳ್-

ವಚನ:ಪದವಿಭಾಗ-

ಅರ್ಥ:ಅಂತು ಆ ಬಳೆದ ಗರ್ಭದೊಳ್ ಸಂಪೂರ್ಣ

ಪ್ರಸವಸಮಯಂ ದೊರೆಕೊಳೆ
(ಬರಲು) ಗ್ರಹಂಗಳೆಲ್ಲಂ
ತಂತಮ್ಮ ಉಚ್ಚ
ಸ್ಥಾನಂಗಳೊಳು ಇರ್ದು
ಷಡ್ವರ್ಗ
ಸಿದ್ಧಿಯನುಂಟುಮಾಡೆ
(ಗ್ರಹಸ್ಥಿತಿಯಲ್ಲಿ ಆರು
ಉತ್ತಮ
ಗುಣಗಳು)ಶುಭಲಗ್ನೋದಯ
ದೊಳ್-

ವಚನ:ಅರ್ಥ:ಹಾಗೆ ಬೆಳೆದ ಗರ್ಭತುಂಬಿದ ಹೆರಿಗೆಯ ಕಾಲವು ಪ್ರಾಪ್ತವಾಗಲು ಗ್ರಹಗಳೆಲ್ಲ ತಮ್ಮ ತಮ್ಮ ಉಚ್ಚಸ್ಥಾನಗಳಲ್ಲಿದ್ದು ಲಗ್ನ, ಹೋರಾ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ ಮತ್ತು ತ್ರಿಂಶಾಂಶಗಳೆಂಬ ಷಡ್ವರ್ಗಗಳ ಸಿದ್ಧಿಯು ಆಗಿ ಶುಭಲಗ್ನ ಉದಯದಲ್ಲಿ-

ಕಂ|| ಭರತಕುಲ ಗಗನ ದಿನಕರ

ನರಾತಿಕುಳಕಮಳಹಿಮಕರಂ

ಶಿಶು ತೇಜೋ।

ವಿರಚನೆಯುಂ ಕಾಂತಿಯುಮಾ

ವರಿಸಿರೆ

ಗರ್ಭೋದಯಾದ್ರಿಯಿಂದುದ

ಯಿಸಿದಂ॥ ೧೪೫॥

ಪದ್ಯ-00:ಪದವಿಭಾಗ-ಅರ್ಥ:ಭರತಕುಲ ಗಗನ ದಿನಕರನು (ಸೂರ್ಯನು) ಆರಾತಿ ಕುಳಕಮಳ ಹಿಮಕರಂ(ಆತ್ರು ಕುಲ

ಕಮಲಕ್ಕೆ ಚಂದ್ರನು) ಶಿಶು ತೇಜೋ ವಿರಚನೆಯುಂ ಕಾಂತಿಯುಂ ಆವರಿಸಿರೆ ಗರ್ಭ ಉದಯಾದ್ರಿಯಿಂದ ಉದಯಿಸಿದಂ (ಗರ್ಭವೆಂಬ ಉದಯ ಗಿರಿಯಲ್ಲಿ ಜನಿಸಿದನು)

ಪದ್ಯ-00:ಅರ್ಥ:ಭರತವಂಶವೆಂಬ ಆಕಾಶಕ್ಕೆ ಸೂರ್ಯನೂ ಶತ್ರುಗಳ ವಂಶವೆಂಬ ತಾವರೆಗೆ ಚಂದ್ರನೂ ಆದ

ಶಿಶುವು ಗರ್ಭವೆಂಬ ಉದಯ ಗಿರಿಯಲ್ಲಿ ಜನಿಸಿದನು.

ಉದಯಿಸುವುದುಮಮೃತಾಂ
ಶುವಿ
ನುದಯದೊಳಂಭೋಧಿ ವೇಲೆ
ಭೋರ್ಗರೆವವೊಲೊ।
ರ್ಮೊದಲೆಸೆದುವು
ಘನಪಥದೊಳ್
ತ್ರಿದಶಕರಾಹತಿಯಿನೊಡನೆ
ಸುರದುಂದುಭಿಗಳ್॥ ೧೪೬॥

ಪದ್ಯ-೧೪೬:ಪದವಿಭಾಗ-ಅರ್ಥ:ಉದಯಿಸುವುದುಂ (ಹುಟ್ಟುತ್ತಲು) ಅಮೃತಾಂಶುವಿನ (ಚಂದ್ರನ) ಉದಯದೊಳು ಅಂಭೋಧಿ ವೇಲೆ (ಸಮುದ್ರದ ಕರೆ) ಭೋರ್ಗರೆವವೊಲ್ ಒರ್ಮೊದಲೆಸೆದುವು ಘನಪಥದೊಳ್ ತ್ರಿದಶಕರ ಆಹತಿಯಿನೊಡನೆ ಸುರದುಂದುಭಿಗಳ್

ಪದ್ಯ-೧೪೬:ಅರ್ಥ:ಕುಂತಿಗೆ ಮಗನು ಹುಟ್ಟುತ್ತಲು ಚಂದ್ರೋದಯ ಸಮಯದಲ್ಲಿ ಸಮುದ್ರದಲೆಗಳು ಆರ್ಭಟಮಾಡುವ ಹಾಗೆ ಆಕಾಶಮಾರ್ಗದಲ್ಲಿ ದೇವತೆಗಳ ಕೈಚಪ್ಪಾಳೆಗಳೊಡನೆ ದೇವತೆಗಳ ಮಂಗಳವಾದ್ಯಗಳು ಆ ಕೂಡಲೇ ಒಟ್ಟಿಗೆ ಮೊಳಗಿದವು

ವ|| ಅಂತು ಮೊೞಗುವ ಸುರದುಂದುಭಿಗಳುಂ ಪರಸುವ ಜಯಜಯ ಧ್ವನಿಗಳುಂ ಬೆರಸು ದೇವೇಂದ್ರಂ ಬರೆ ದೇವವಿಮಾನಂಗಳೆಲ್ಲಂ ಶತಶೃಂಗಪರ್ವತಮಂ ಮುಸುಱಿಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ಮೊೞಗುವ ಸುರದುಂದುಭಿಗಳುಂ

ಪರಸುವ (ಹರಸುವ)
ಜಯಜಯ ಧ್ವನಿಗಳುಂ
ಬೆರಸು ದೇವೇಂದ್ರಂ ಬರೆ
ದೇವವಿಮಾನಂಗಳು ಎಲ್ಲಂ
ಶತಶೃಂಗಪರ್ವತಮಂ
ಮುಸುಱಿಕೊಂಡು
(ಮುತ್ತಿಕೊಂಡು)-
ವಚನ:ಅರ್ಥ:ಹಾಗೆ
ಶಬ್ದಮಾಡುತ್ತಿರುವ
ದೇವದುಂದುಭಿಗಳೊಡನೆ
ಹರಕೆಯ

ಜಯಜಯಶಬ್ದಗಳನ್ನೂ ಸೇರಿಸಿಕೊಂಡು ದೇವೇಂದ್ರನು ಬರಲಾಗಿ ಇತರ ದೇವತೆಗಳ ವಿಮಾನಗಳೆಲ್ಲವೂ ಶತಶೃಂಗಪರ್ವತವನ್ನು ಮುತ್ತಿಕೊಂಡವು.

ಕಂ|| ದೇವರ ಪಗಳ
ರವದೊಳ್
ದೇವರ ಸುರಿವರಲ ಸರಿಯ
ಬೆಳ್ಸರಿಯೊಳ್ ತ|
ದ್ದೇವ ವಿಮಾನಾವಳಿಯೊಳ್

ತೀವಿದುದೊರ್ಮೊದಲೆ ಗಗನದಿಂ ಧರೆ ಮಧ್ಯಂ|| ೧೪೭ ||

ಪದ್ಯ-೧೪೭:ಪದವಿಭಾಗ-ಅರ್ಥ:ದೇವರ ಪರೆಗಳ (ಹರಸುವ)ರವದೊಳ್ದೇವರ ಸುರಿವ ಅರಲ (ಹೂವಯುಗಳ) ಸರಿಯ ಬೆಳ್ಸರಿಯೊಳ್ (ಬೀಳುವ ಬಿಳಿ ಧಾರೆಯಲ್ಲಿ) ತದ್ದೇವ ವಿಮಾನಾವಳಿಯೊಳ್

ತೀವಿದುದು(ತುಂಬಿತು)
ಒರ್ಮೊದಲೆ (ಒಟ್ಟಿಗೆ)
ಗಗನದಿಂ ಧರೆ
ಮಧ್ಯಂ(ಭೂಮಿಯ
ಮಧ್ಯಭಾಗವು)
ಪದ್ಯ-೧೪೮:ಅರ್ಥ:ದೇವತೆಗ
ಳ ವಾದ್ಯಧ್ವನಿಯಿಂದ ಮತ್ತು
ದೇವತೆಗಳು ಸುರಿಸುತ್ತಿರುವ
ಹೂವುಗಳ
ಪ್ರವಾಹದಿಂದಲೂ, ಆ
ದೇವತೆಗಳ

ವಿಮಾನಪಂಕ್ತಿಗಳಿಂದಲೂ
ಭೂಮ್ಯಾಕಾಶಗಳ
ಮಧ್ಯಭಾಗವು
ತುಂಬಿಹೋಯಿತು.

ವ|| ಅಂತು ಹಿರಣ್ಯಗರ್ಭಬ್ರಹ್ಮಂ ಮೊದಲಾಗೆ ವ್ಯಾಸ ಕಶ್ಯಪ ವಸಿಷ್ಠ ವಾಲ್ಮೀಕಿ ವಿಶ್ವಾಮಿತ್ರ ಜಮದಗ್ನಿ ಭಾರದ್ವಾಜಾಗಸ್ತ್ಯ ಪುಲಸ್ತ್ಯ ನಾರದ ಪ್ರಮುಖರಪ್ಪ ದಿವ್ಯಮುನಿಪತಿಗಳುಮೇಕಾದ

ಶರುದ್ರರುಂ
ದ್ವಾದಶಾದಿತ್ಯರುಮಷ್ಟವಸುಗ
ಳುಮಶ್ವಿನೀ ದೇವರುಂ
ಮೊದಲಾಗೆ
ಮೂವತ್ತಮೂದೇವರುಂ
ಇಂದ್ರಂಬೆರಸು ವೈಮಾನಿಕ
ದೇವರುಂ ನೆರೆದು
ಪಾಂಡುರಾಜನುಮಂ
ಕುಂತಿಯುಮಂ ಪರಸಿ
ಕೂಸಿಂಗೆ ಜನ್ಮೋತ್ಸವಮಂ
ಮಾಡಿ-

ವಚನ:ಪದವಿಭಾಗ-ಅರ್ಥ:ಅಂತು ಹಿರಣ್ಯಗರ್ಭಬ್ರಹ್ಮಂ ಮೊದಲಾಗೆ ವ್ಯಾಸ ಕಶ್ಯಪ ವಸಿಷ್ಠ ವಾಲ್ಮೀಕಿ ವಿಶ್ವಾಮಿತ್ರ ಜಮದಗ್ನಿ ಭಾರದ್ವಾಜ ಅಗಸ್ತ್ಯ ಪುಲಸ್ತ್ಯ ನಾರದ ಪ್ರಮುಖರಪ್ಪ ದಿವ್ಯಮುನಿಪತಿಗಳುಂ, ಏಕಾದಶರುದ್ರರುಂ, ದ್ವಾದಶ ಆದಿತ್ಯರುಂ, ಅಷ್ಟವಸುಗಳುಂ, ಅಶ್ವಿನೀ ದೇವರುಂ,

ಮೊದಲಾಗೆ ಮೂವತ್ತಮೂರು
ದೇವರುಂ ಇಂದ್ರಂ ಬೆರಸು
(ಸೇರಿ) ವೈಮಾನಿಕ ದೇವರುಂ
ನೆರೆದು ಪಾಂಡುರಾಜನುಮಂ
ಕುಂತಿಯುಮಂ ಪರಸಿ
ಕೂಸಿಂಗೆ ಜನ್ಮೋತ್ಸವಮಂ
ಮಾಡಿ-

ವಚನ:ಅರ್ಥ:ಹೀಗೆ
ಹಿರಣ್ಯಗರ್ಭ ಬ್ರಹ್ಮನೇ
ಮೊದಲಾಗಿ ವ್ಯಾಸ, ಕಶ್ಯಪ,
ವಸಿಷ್ಠ, ವಾಲ್ಮೀಕಿ, ವಿಶ್ವಾಮಿತ್ರ,

ಜಮದಗ್ನಿ, ಭಾರದ್ವಾಜ,
ಅಗಸ್ತ್ಯ, ಪುಲಸ್ತ್ಯ, ನಾರದ
ಪ್ರಮುಖರಾದ
ದಿವ್ಯಋಷಿಶ್ರೇಷ್ಠರೂ
ಏಕಾದಶರುದ್ರರೂ
ದ್ವಾದಶಾದಿತ್ಯರೂ
ಅಷ್ಟವಸುಗಳೂ
ಅಶ್ವಿನೀದೇವತೆಗಳೂ
ಮೊದಲಾದ ಮೂವತ್ತು
ಮೂರು ದೇವರೂ
ಇಂದ್ರನೊಡಗೂಡಿ

ವೈಮಾನಿಕದೇವತೆಗಳೂ ಒಟ್ಟಾಗಿ ಸೇರಿ ಪಾಂಡುರಾಜನನ್ನೂ ಕುಂತಿಯನ್ನೂ ಹರಸಿ ಮಗುವಿಗೆ ಜನ್ಮೋತ್ಸವವನ್ನು ಮಾಡಿ,(ಮಾಡಿದರು.)

ಕಂ|| ನೋಡುವನಾ ಬ್ರಹ್ಮಂ
ಮುಂ
ಡಾಡುವನಮರೇಂದ್ರನಿಂದ್ರನ
ಚ್ಚರಸೆಯರೆ|

ಬ್ಬಾಡುವರೆಂದೊಡೆ
ಪೊಗೞಲ್ಕೇ
ವೇಡ ಗುಣಾರ್ಣವನ
ಜನ್ಮದಿನದ ಬೆಡಂಗಂ|| ೧೪೮||

ಪದ್ಯ-00:ಪದವಿಭಾಗ-ಅರ್ಥ:ನೋಡುವನು ಆ ಬ್ರಹ್ಮಂ, ಮುಂಡಾಡುವನು ಅಮರೇಂದ್ರನು, ಇಂದ್ರನ ಅಚ್ಚರಸೆಯರು ಎೞ್ದಾಡುವರು (ಮಗುವನ್ನು ಎತ್ತಿಕೊಳ್ಳಲು ಎಳೆಯುವರು) ಎಂದೊಡೆ

ಪೊಗಟಿಲ್ಕೇವೇಡ (ಹೊಗಳಬೇಡವೇ?) ಗುಣಾರ್ಣವನ ಜನ್ಮದಿನದ ಬೆಡಂಗಂ (ಸೊಗಸನ್ನು)

ಪದ್ಯ-00:ಅರ್ಥ:ಆ ಬ್ರಹ್ಮನೂ ಸಹ ಮಗುವನ್ನು ನೋಡುತ್ತಾನೆ; ದೇವೇಂದ್ರನು ಮುದ್ದಾಡುತ್ತಾನೆ, ಅಪ್ಸರಸ್ತ್ರೀಯರು ಮಗುವನ್ನು ಎತ್ತಿಕೊಳ್ಳಲು ಎಳೆದಾಡುವರು ಎಂದ ಮೇಲೆ ಗುಣಾರ್ಣವನ

ಜನ್ಮೋತ್ಸವದ ಸೊಗಸನ್ನು
ಹೊಗಳಬೇಡವೇ?

ವ|| ಅಂತು
ಪಿರಿದುಮೊಸಗೆಯಂ ಮಾಡಿ
ದೇವಸಭೆಯುಂ
ಬ್ರಹ್ಮಸಭೆಯುಮೊಡನಿರ್ದು
ನಾಮಕರಣೋತ್ಸವ
ನಿಮಿತ್ತಂಗಳಪ್ಪ
ನಾಮಂಗಳೊಳಿತಂ ಸಕಲ
ಭುವನ ಸಂಸ್ತೂಯಮಾನಂ
ಚಾಳುಕ್ಯವಂಶೋದ್ಭವಂ

ಶ್ರೀಮದರಿಕೇಸರಿ
ವಿಕ್ರಮಾರ್ಜುನನುದಾತ್ತನಾರಾ
ಯಣಂ ಪ್ರಚಂಡ
ಮಾರ್ತಾಂಡನುದಾರಮಹೇಶ್ವ
ರಂ ಕದನತ್ರಿಣೇತ್ರಂ ಮನುಜ
ಮಾಂಧಾತಂ ಪ್ರತಿಜ್ಞಾ
ಗಾಂಗೇಯಂ
ಶೌಚಾಂಜನೇಯನಕಳಂಕರಾ
ಮಂ ಸಾಹಸಭೀಮಂ
ಪ್ರತ್ಯಕ್ಷಜೀಮೂತವಾಹನಂ
ಜಗದೇಕಮಲ್ಲಂ ಪರಸೈನ್ಯ

ಭೈರವಂ ಅತಿರಥ ಮಥನಂ

ವೈರಿಗಜಘಟಾವಿಘಟನಂ

ವಿದ್ವಿಷ್ಟ ವಿದ್ರಾವಣನರಾತಿ

ಕಾಳಾನಳಂ

ರಿಪುಕುರಂಗಕಂಠೀರವಂ

ವಿಕ್ರಾಂತತುಂಗಂ

ಪರಾಕ್ರಮಧವಳಂ

ಸಮರೈಕಮೇರು ಶರಣಾಗತ

ವಚನ:ಪದವಿಭಾಗ-

ಅರ್ಥ:ಅಂತು ಪಿರಿದುಂ

ಒಸಗೆಯಂ ಮಾಡಿ,

ದೇವಸಭೆಯುಂ
ಬ್ರಹ್ಮಸಭೆಯುಂ ಒಡನಿರ್ದು
ನಾಮಕರಣೋತ್ಸವ
ನಿಮಿತ್ತಂಗಳಪ್ಪ ನಾಮಂಗಳು
ಒಳಿತಂ ಸಕಲ ಭುವನ
ಸಂಸ್ತೂಯಮಾನಂ,
ಚಾಳುಕ್ಯವಂಶೋದ್ಭವಂ,
ಶ್ರೀಮದರಿಕೇಸರಿ,
ವಿಕ್ರಮಾರ್ಜುನನು,
ಉದಾತ್ತನಾರಾಯಣಂ,
ಪ್ರಚಂಡ ಮಾರ್ತಾಂಡನು,

ಉದಾರಮಹೇಶ್ವರಂ,
ಕದನತ್ರಿಣೇತ್ರಂ, ಮನುಜ
ಮಾಂಧಾತಂ, ಪ್ರತಿಜ್ಞಾ
ಗಾಂಗೇಯಂ,
ಶೌಚಾಂಜನೇಯನು,
ಅಕಳಂಕರಾಮಂ,
ಸಾಹಸಭೀಮಂ,
ಪ್ರತ್ಯಕ್ಷಜೀಮೂತವಾಹನಂ,
ಜಗದೇಕಮಲ್ಲಂ, ಪರಸೈನ್ಯ
ಭೈರವಂ, ಅತಿರಥ ಮಥನಂ,
ವೈರಿಗಜಘಟಾವಿಘಟನಂ,

ವಿದ್ವಿಷ್ಟ
ವಿದ್ರಾವಣನು(ಶತ್ರುಗಳನ್ನು
ಓಡುವಂತೆ ಮಾಡುವವನು),
ಆರಾತಿ ಕಾಳಾನಳಂ,
ರಿಪುಕುರಂಗಕಂಠೀರವಂ,
ವಿಕ್ರಾಂತತುಂಗಂ,
ಪರಾಕ್ರಮಧವಳಂ,
ಸಮರೈಕಮೇರು, ಶರಣಾಗತ
ಜಲನಿಧಿ
ವಿನಯವಿಭೂಷಣಂ,
ಮನುನಿದಾನನನೂನದಾನಿ

ಲೋಕೈಕಕಲ್ಪದ್ರುಮಂ| ಜಲನಿ
ವಿನಯವಿಭೂಷಣಂ,
ಮನುನಿದಾನನನೂನದಾನಿ
ಲೋಕೈಕ ಕಲ್ಪದ್ರುಮಂ
ಗಜಾಗಮ,
ರಾಜಪುತ್ರನಾರೂಢಸರ್ವಜ್ಞಂ,
ಗಂಧೇಭ ವಿದ್ಯಾಧರಂ ನೃಪ
ಪರಮಾತ್ಮಂ, ವಿಬುಧ
ವನಜವನ ಕಳಹಂಸಂ,
ಸುರತಮಕರಧ್ವಜಂ,
ಸಹಜಮನೋಜಂ,

ಆಂಕುಚಕಳಶ ಪಲ್ಲವಂ
ಕರ್ಣಾಟೀ ಕರ್ಣಪೂರಂ
ಲಾಟೀಲಲಾಮಂ
ಕೇರಳೀಕೇಳಿಕಂದರ್ಪಂ
ಸಂಸಾರಸಾರೋದಯಂ
ಮಱುವಕ್ಕದಲ್ಲಱಿಂ
ನೋಡುತ್ತೆ ಗೆಲ್ವಂ
ಪಾಣ್ಬರಂಕುಸಂ ಅಮ್ಮನ
ಗಂಧವಾರಣಂ ಪಡೆಮೆಚ್ಚೆ
ಗಂಡಂ ಪ್ರಿಯಗಳ್ಳಂ ಗಣನಿ
ಗುಣಾರ್ಣವಂ

ಸಾಮಂತಚೂಡಾಮಣಿಯೆಂ

ದಿಂತಿವು ಮೊದಲಾಗೆ ಪಲವುಂ

ಅಷ್ಟೋತ್ತರಶತನಾಮಂಗಳನಿ

ಟ್ಟು ವಿಶೇಷ

ಆಶೀರ್ವಚನಂಗಳಿಂ ಪರಸಿ-

ವಚನ:ಅರ್ಥ:ಹಾಗೆ

ವಿಶೇಷೋತ್ಸವವನ್ನು ನಡೆಸಿ

ದೇವಸಭೆಯವರೂ

ಬ್ರಹ್ಮಸಭೆಯವರೂ ಒಟ್ಟಿಗಿದ್ದು

ಹೆಸರಿಡಲು

ಕಾರಣವಾದುವುಗಳಲ್ಲಿ

ಈತನು ಸಕಲಲೋಕಗಳಿಂದ ಹೊಗಳಲ್ಪಡುವ ಚಾಳುಕ್ಯವಂಶದಲ್ಲಿ ಹುಟ್ಟಿದ ಶ್ರೀಮದರಿಕೇಸರಿ, ವಿಕ್ರಮಾರ್ಜುನ, ಉದಾತ್ತನಾರಾಯಣ, ಪ್ರಚಂಡಮಾರ್ತಾಂಡ (ವಿಶೇಷತೇಜಸ್ಸನ್ನುಳ್ಳ ಸೂರ್ಯ) ಉದಾರಮಹೇಶ್ವರ (ಔದಾರ್ಯದಲ್ಲಿ ಶಿವನ ಹಾಗಿರುವವನು),

ಕದನತ್ರಿಣೇತ್ರ (ಯುದ್ಧದಲ್ಲಿ ಮುಕ್ಕಣ್ಣನಂತಿರುವವನು), ಮನುಜಮಾಂಧಾತ (ಮನುಷ್ಯರಲ್ಲಿ ಮಾಂಧಾತ ಚಕ್ರವರ್ತಿಯಂತಿರುವವನು), ಪ್ರತಿಜ್ಞಾಗಾಂಗೇಯ (ಪ್ರತಿಜ್ಞೆ ಮಾಡುವುದರಲ್ಲಿ ಪಣ ತೊಟ್ಟ ಭೀಷ್ಮನಂತಿರುವವನು ಹೀಗೆ ನೂರಾಎಂಟು ಹೆಸರುಗಳನ್ನಿಟ್ಟು ವಿಶೇಷ ಆಶೀರ್ವಚನಗಳಿಂದ

ಹರಸಿದರು. (ಇವೆಲ್ಲ ಕವಿಯ
ಪೋಷಕ ಅರಿಕೇಸರಿಯ
ಬಿರುದುಗಳು ಕಾವ್ಯದ
ಅರ್ಜುನ ನಾಯಕನಿಗೆ
ಹೋಲಿಸಿ ಹೇಳಿದವು.)

**ಉ|| ಸಪ್ತ ಸಮುದ್ರ ಮುದ್ರಿತ
ಧರಾತಳಮಂ ಬೆಸಕೆಯ್ಸು
ಮೀಱಿದು
ದ್ವೃಪ್ತ ವಿರೋಧಿ
ಸಾಧನಮನಾಹವದೊಳ್
ತಱದೊಟ್ಟು ವಿಶ್ವದಿ|**

ಗ್ವ್ಯಾಪ್ತ ಯಶೋವಿಳಾಸಿನಿಗೆ ವಲ್ಲಭನಾಗು ನಿರಂತರ ಸುಖ ವ್ಯಾಪ್ತಿಗೆ ನೀನೆ ಮೊತ್ತಮೊದಲಾಗರಿಕೇಸರಿ ಲೋಕಮುಳ್ಳಿನಂ|| ೧೪೯||

ಪದ್ಯ-00:ಪದವಿಭಾಗ-

ಅರ್ಥ:ಸಪ್ತ ಸಮುದ್ರ ಮುದ್ರಿತ ಧರಾತಳಮಂ (ಏಳು ಸಮುದ್ರ ಗಡಿಯುಳ್ಳ ಭೂಮಿಯನ್ನು.) ಬೆಸಕೆಯ್ಸು (ವಶಪಡಿಸಿಕೊಂಡು,)

ಮೀಱಿದ ಉದ್ವೃತ್ತ ವಿರೋಧಿ ಸಾಧನಮನು ಆಹವದೊಳ್ ತಱಿದೊಟ್ಟು (ಅರಸನ ಮಾತನ್ನು ಕೇಳದ ಗರ್ವಿಷ್ಠ ಶತ್ರುಗಳನ್ನು ಯುಧದ್ಧಲ್ಲಿ ಕತ್ತರಿಸಿ ರಾಶಿಹಾಕಿ,) ವಿಶ್ವದಿಗ್ವ್ಯಾಪ್ತ (ವಿಶ್ವ+ ದಿಕ್+ ವ್ಯಾಪ್ತ ಎಲ್ಲಾಕಡೆ ವ್ಯಾಪಿಸಿದ) ಯಶೋವಿಳಾಸಿನಿಗೆ (ಯಶ+ ವಿಳಾಸಿನಿಗೆ ಕೀರ್ತಿವನಿತೆಗೆ) ವಲ್ಲಭನಾಗು (ಪತಿಯಾಗು.)

ನಿರಂತರ ಸುಖವ್ಯಾಪ್ತಿಗೆ ನೀನೆ
ಮೊತ್ತಮೊದಲಾಗು ಅರಿಕೇಸರಿ
ಲೋಕಂ
ಉಳ್ಳಿನಂ(ಅರಿಕೇಸರಿಯೇ,
ಸದಾಕಾಲ
ಲೋಕವಿರುವವರೆಗೂ, ಎಲ್ಲಾ
ಬಗೆಯ ಸುಖಹೊಂದುವುದಕ್ಕೆ
ನೀನೇ ಮೊದಲಿಗನಾಗು.
ಎಂದು ದೇವತೆಗಳು
ಹರಸಿದರು.).

ಪದ್ಯ-00:ಅರ್ಥ:ಅರಿಕೇಸರಿಯೇ ನೀನು ಲೋಕವಿರುವವರೆಗೆ ಸದಾಕಾಲ ಏಳು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಭೂಮಿಯನ್ನು ನಿನ್ನ ವಶಪಡಿಸಿಕೊಂಡು. ನಿನ್ನನ್ನು ಮಾತನ್ನು ಕೇಳದ ಗರ್ವಿಷ್ಠರಾದ ಶತ್ರುಸೈನ್ಯವನ್ನು ಯುದ್ಧದಲ್ಲಿ ಕತ್ತರಿಸಿ ಹಾಕು.

ಸಮಸ್ತದಿಕ್ಕುಗಳಲ್ಲಿಯೂ

ವ್ಯಾಪಿಸಿಕೊಂಡಿರುವ

ಕೀರ್ತಿವನಿತೆಗೆ ಪತಿಯಾಗಿ

ನಿರಂತರವಾದ ಸುಖಭೋಗ

ಹೊಂದುವುದಕ್ಕೆ ನೀನೆ

ಮೊತ್ತಮೊದಲಿಗನಾಗು ಎಂದು

ದೇವತೆಗಳು ಹರಿಸಿದರು

||ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರ ಪ್ರಸಾದೋತ್ಪನ್ನ ಪ್ರಸನ್ನ ಗಂಭೀರವಚನರಚನ ಚತುರ ಕವಿತಾಗುಣಾರ್ಣವ ವಿರಚಿತಮಪ್ಪ ವಿಕ್ರಮಾರ್ಜುನ ವಿಜಯದೊಳ್ ಪ್ರಥಮಾಶ್ವಾಸಂ ||

ಉದಯಿಸುವುದುಮಮೃತಾಂಶುವಿ

ನುದಯದೊಳಂಭೋಧಿ ವೇಲೆ
ಭೋರ್ಗರೆವವೊಲೊ।
ಮೊರ್ದಲೆಸೆದುವು
ಘನಪಥದೊಳ್
ತ್ರಿದಶಕರಾಹತಿಯಿನೊಡನೆ
ಸುರದುಂದುಭಿಗಳ್॥ ೧೪೬॥

ಪದ್ಯ-೧೪೬:ಪದವಿಭಾಗ-ಅರ್ಥ:ಉದಯಿಸುವುದುಂ (ಹುಟ್ಟುತ್ತಲು) ಅಮೃತಾಂಶುವಿನ (ಚಂದ್ರನ) ಉದಯದೊಳು ಅಂಭೋಧಿ

ವೇಲೆ (ಸಮುದ್ರದ ಕರೆ)
ಭೋರ್ಗರೆವವೊಲ್ ಒರ್
ಮೊದಲೆಸೆದುವು
ಘನಪಥದೊಳ್ ತ್ರಿದಶಕರ
ಆಹತಿಯಿನೊಡನೆ
ಸುರದುಂದುಭಿಗಳ್
ಪದ್ಯ-೧೪೬:ಅರ್ಥ:ಕುಂತಿಗೆ
ಮಗನು ಹುಟ್ಟುತ್ತಲು
ಚಂದ್ರೋದಯ ಸಮಯದಲ್ಲಿ
ಸಮುದ್ರದಲೆಗಳು
ಆರ್ಭಟಮಾಡುವ ಹಾಗೆ

ಆಕಾಶಮಾರ್ಗದಲ್ಲಿ
ದೇವತೆಗಳ
ಕೈಚಪ್ಪಾಳೆಗಳೊಡನೆ
ದೇವತೆಗಳ
ಮಂಗಳವಾದ್ಯಗಳು ಆ
ಕೂಡಲೇ ಒಟ್ಟಿಗೆ ಮೊಳಗಿದವು

ವ|| ಅಂತು ಮೊಱಗುವ ಸುರದುಂದುಭಿಗಳುಂ ಪರಸುವ ಜಯಜಯ ಧ್ವನಿಗಳುಂ ಬೆರಸು ದೇವೇಂದ್ರಂ ಬರೆ

ದೇವವಿಮಾನಂಗಳೆಲ್ಲಂ
ಶತಶೃಂಗಪರ್ವತಮಂ
ಮುಸುಱಿಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ಮೊಳಗುವ ಸುರದುಂದುಭಿಗಳುಂ ಪರಸುವ (ಹರಸುವ) ಜಯಜಯ ಧ್ವನಿಗಳುಂ ಬೆರಸು ದೇವೇಂದ್ರಂ ಬರೆ ದೇವವಿಮಾನಂಗಳು ಎಲ್ಲಂ ಶತಶೃಂಗಪರ್ವತಮಂ

ಮುಸುಱಿಕೊಂಡು (ಮುತ್ತಿಕೊಂಡು)-

ವಚನ:ಅರ್ಥ:ಹಾಗೆ ಶಬ್ದಮಾಡುತ್ತಿರುವ ದೇವದುಂದುಭಿಗಳೊಡನೆ ಹರಕೆಯ ಜಯಜಯಶಬ್ದಗಳನ್ನೂ ಸೇರಿಸಿಕೊಂಡು ದೇವೇಂದ್ರನು ಬರಲಾಗಿ ಇತರ ದೇವತೆಗಳ ವಿಮಾನಗಳೆಲ್ಲವೂ

ಶತಶೃಂಗಪರ್ವತವನ್ನು ಮುತ್ತಿಕೊಂಡವು.

ಕಂ|| ದೇವರ ಪಗಳ ರವದೊಳ್

ದೇವರ ಸುರಿವರಲ ಸರಿಯ ಬೆಳ್ಸರಿಯೊಳ್ ತ|

ದ್ದೇವ ವಿಮಾನಾವಳಿಯೊಳ್

ತೀವಿದುದೊರ್ಮೋದಲೆ ಗಗನದಿಂ ಧರೆ ಮಧ್ಯಂ|| ೧೪೭ ||

ಪದ್ಯ-೧೪೭:ಪದವಿಭಾಗ-ಅರ್ಥ:ದೇವರ ಪರೆಗಳ (ಹರಸುವ)ರವದೊಳ್ದೇವರ ಸುರಿವ ಅರಲ (ಹೂವಯುಗಳ) ಸರಿಯ ಬೆಳ್ಸರಿಯೊಳ್ (ಬೀಳುವ ಬಿಳಿ ಧಾರೆಯಲ್ಲಿ) ತದ್ದೇವ ವಿಮಾನಾವಳಿಯೊಳ್ ತೀವಿದುದು(ತುಂಬಿತು) ಒರ್ಮೋದಲೆ (ಒಟ್ಟಿಗೆ) ಗಗನದಿಂ ಧರೆ

ಮಧ್ಯಂ(ಭೂಮಿಯ ಮಧ್ಯಭಾಗವು)

ಪದ್ಯ-೧೪೮:ಅರ್ಥ:ದೇವತೆಗಳ ವಾದ್ಯಧ್ವನಿಯಿಂದ ಮತ್ತು ದೇವತೆಗಳು ಸುರಿಸುತ್ತಿರುವ ಹೂವುಗಳ ಪ್ರವಾಹದಿಂದಲೂ, ಆ ದೇವತೆಗಳ ವಿಮಾನಪಂಕ್ತಿಗಳಿಂದಲೂ ಭೂಮ್ಯಾಕಾಶಗಳ

ಮಧ್ಯಭಾಗವು
ತುಂಬಿಹೋಯಿತು.

ವ|| ಅಂತು ಹಿರಣ್ಯಗರ್ಭಬ್ರಹ್ಮಂ ಮೊದಲಾಗೆ ವ್ಯಾಸ ಕಶ್ಯಪ ವಸಿಷ್ಠ ವಾಲ್ಮೀಕಿ ವಿಶ್ವಾಮಿತ್ರ ಜಮದಗ್ನಿ ಭಾರದ್ವಾಜಾಗಸ್ತ್ಯ ಪುಲಸ್ತ್ಯ ನಾರದ ಪ್ರಮುಖರಪ್ಪ ದಿವ್ಯಮುನಿಪತಿಗಳುಮೇಕಾದಶರುದ್ರರುಂ ದ್ವಾದಶಾದಿತ್ಯರುಮಷ್ಟವಸುಗ

ಘುಮಶ್ವಿನೀ ದೇವರುಂ ಮೊದಲಾಗೆ ಮೂವತ್ತಮೂದೇವರುಂ ಇಂದ್ರ್ರಂಬೆರಸು ವೈಮಾನಿಕ ದೇವರುಂ ನೆರೆದು ಪಾಂಡುರಾಜನುಮಂ ಕುಂತಿಯುಮಂ ಪರಸಿ ಕೂಸಿಂಗೆ ಜನ್ಮೋತ್ಸವಮಂ ಮಾಡಿ-

ವಚನ:ಪದವಿಭಾಗ-

ಅರ್ಥ:ಅಂತು

ಹಿರಣ್ಯಗರ್ಭಬ್ರಹ್ಮಂ
ಮೊದಲಾಗೆ ವ್ಯಾಸ ಕಶ್ಯಪ
ವಸಿಷ್ಠ ವಾಲ್ಮೀಕಿ ವಿಶ್ವಾಮಿತ್ರ
ಜಮದಗ್ನಿ ಭಾರದ್ವಾಜ ಅಗಸ್ತ್ಯ
ಪುಲಸ್ತ್ಯ ನಾರದ ಪ್ರಮುಖರಪ್ಪ
ದಿವ್ಯಮುನಿಪತಿಗಳುಂ,
ಏಕಾದಶರುದ್ರರುಂ, ದ್ವಾದಶ
ಆದಿತ್ಯರುಂ, ಅಷ್ಟವಸುಗಳುಂ,
ಅಶ್ವಿನೀ ದೇವರುಂ,
ಮೊದಲಾಗೆ ಮೂವತ್ತಮೂರು
ದೇವರುಂ ಇಂದ್ರಂ ಬೆರಸು

(ಸೇರಿ) ವೈಮಾನಿಕ ದೇವರುಂ ನೆರೆದು ಪಾಂಡುರಾಜನುಮಂ ಕುಂತಿಯುಮಂ ಪರಸಿ ಕೂಸಿಂಗೆ ಜನ್ಮೋತ್ಸವಮಂ ಮಾಡಿ-

ವಚನ:ಅರ್ಥ:ಹೀಗೆ ಹಿರಣ್ಯಗರ್ಭ ಬ್ರಹ್ಮನೇ ಮೊದಲಾಗಿ ವ್ಯಾಸ, ಕಶ್ಯಪ, ವಸಿಷ್ಠ, ವಾಲ್ಮೀಕಿ, ವಿಶ್ವಾಮಿತ್ರ, ಜಮದಗ್ನಿ, ಭಾರದ್ವಾಜ, ಅಗಸ್ತ್ಯ, ಪುಲಸ್ತ್ಯ, ನಾರದ

ಪ್ರಮುಖರಾದ
ದಿವ್ಯಋಷಿಶ್ರೇಷ್ಠರೂ
ಏಕಾದಶರುದ್ರರೂ
ದ್ವಾದಶಾದಿತ್ಯರೂ
ಅಷ್ಟವಸುಗಳೂ
ಅಶ್ವಿನೀದೇವತೆಗಳೂ
ಮೊದಲಾದ ಮೂವತ್ತು
ಮೂರು ದೇವರೂ
ಇಂದ್ರನೊಡಗೂಡಿ
ವೈಮಾನಿಕದೇವತೆಗಳೂ
ಒಟ್ಟಾಗಿ ಸೇರಿ

ಪಾಂಡುರಾಜನನ್ನೂ
ಕುಂತಿಯನ್ನೂ ಹರಸಿ
ಮಗುವಿಗೆ ಜನ್ಮೋತ್ಸವವನ್ನು
ಮಾಡಿ,(ಮಾಡಿದರು.)

ಕಂ|| ನೋಡುವನಾ ಬ್ರಹ್ಮಂ
ಮುಂ
ಡಾಡುವನಮರೇಂದ್ರನಿಂದ್ರನ
ಚ್ಚರಸೆಯರೆ|
ಲ್ಡಾಡುವರೆಂದೊಡೆ
ಪೊಗೞಲ್ಕೇ

ವೇಡ ಗುಣಾರ್ಣವನ ಜನ್ಮದಿನದ ಬೆಡಂಗಂ|| ೧೪೮||

ಪದ್ಯ-00:ಪದವಿಭಾಗ-ಅರ್ಥ:ನೋಡುವನು ಆ ಬ್ರಹ್ಮಂ, ಮುಂಡಾಡುವನು ಅಮರೇಂದ್ರನು, ಇಂದ್ರನ ಅಚ್ಚರಸೆಯರು ಎೞ್ದಾಡುವರು (ಮಗುವನ್ನು ಎತ್ತಿಕೊಳ್ಳಲು ಎಳೆಯುವರು) ಎಂದೊಡೆ ಪೊಗೞಲ್ಕೇವೇಡ (ಹೊಗಳಬೇಡವೇ?)

ಗುಣಾರ್ಣವನ ಜನ್ಮದಿನದ ಬೆಡಂಗಂ (ಸೊಗಸನ್ನು)

ಪದ್ಯ-00:ಅರ್ಥ:ಆ ಬ್ರಹ್ಮನೂ ಸಹ ಮಗುವನ್ನು ನೋಡುತ್ತಾನೆ; ದೇವೇಂದ್ರನು ಮುದ್ದಾಡುತ್ತಾನೆ, ಅಪ್ಸರಸ್ತ್ರೀಯರು ಮಗುವನ್ನು ಎತ್ತಿಕೊಳ್ಳಲು ಎಳೆದಾಡುವರು ಎಂದ ಮೇಲೆ ಗುಣಾರ್ಣವನ ಜನ್ಮೋತ್ಸವದ ಸೊಗಸನ್ನು ಹೊಗಳಬೇಡವೇ?

ವ|| ಅಂತು
ಪಿರಿದುಮೊಸಗೆಯಂ ಮಾಡಿ
ದೇವಸಭೆಯುಂ
ಬ್ರಹ್ಮಸಭೆಯುಮೊಡನಿರ್ದು
ನಾಮಕರಣೋತ್ಸವ
ನಿಮಿತ್ತಂಗಳಪ್ಪ
ನಾಮಂಗಳೊಳಿತಂ ಸಕಲ
ಭುವನ ಸಂಸ್ತೂಯಮಾನಂ
ಚಾಳುಕ್ಯವಂಶೋದ್ಭವಂ
ಶ್ರೀಮದರಿಕೇಸರಿ
ವಿಕ್ರಮಾರ್ಜುನನುದಾತ್ತನಾರಾ

ಯಣಂ ಪ್ರಚಂಡ
ಮಾರ್ತಾಂಡನುದಾರಮಹೇಶ್ವ
ರಂ ಕದನತ್ರಿಣೇತ್ರಂ ಮನುಜ
ಮಾಂಧಾತಂ ಪ್ರತಿಜ್ಞಾ
ಗಾಂಗೇಯಂ
ಶೌಚಾಂಜನೇಯನಕಳಂಕರಾ
ಮಂ ಸಾಹಸಭೀಮಂ
ಪ್ರತ್ಯಕ್ಷಜೀಮೂತವಾಹನಂ
ಜಗದೇಕಮಲ್ಲಂ ಪರಸೈನ್ಯ
ಭೈರವಂ ಅತಿರಥ ಮಥನಂ
ವೈರಿಗಜಘಟಾವಿಘಟನಂ

ವಿದ್ವಿಷ್ಟ ವಿದ್ರಾವಣನರಾತಿ ಕಾಳಾನಳಂ ರಿಪುಕುರಂಗಕಂಠೀರವಂ ವಿಕ್ರಾಂತತುಂಗಂ ಪರಾಕ್ರಮಧವಳಂ ಸಮರೈಕಮೇರು ಶರಣಾಗತ --

**---

ವಚನ:ಪದವಿಭಾಗ-

ಅರ್ಥ:ಅಂತು ಪಿರಿದುಂ ಒಸಗೆಯಂ ಮಾಡಿ, ದೇವಸಭೆಯುಂ

ಬ್ರಹ್ಮಸಭೆಯುಂ ಒಡನಿರ್ದು
ನಾಮಕರಣೋತ್ಸವ
ನಿಮಿತ್ತಂಗಳಪ್ಪ ನಾಮಂಗಳು
ಒಳಿತಂ ಸಕಲ ಭುವನ
ಸಂಸ್ತೂಯಮಾನಂ,
ಚಾಳುಕ್ಯವಂಶೋದ್ಭವಂ,
ಶ್ರೀಮದರಿಕೇಸರಿ,
ವಿಕ್ರಮಾರ್ಜುನನು,
ಉದಾತ್ತನಾರಾಯಣಂ,
ಪ್ರಚಂಡ ಮಾರ್ತಾಂಡನು,
ಉದಾರಮಹೇಶ್ವರಂ,

ಕದನತ್ರಿಣೇತ್ರಂ, ಮನುಜ
ಮಾಂಧಾತಂ, ಪ್ರತಿಜ್ಞಾ
ಗಾಂಗೇಯಂ,
ಶೌಚಾಂಜನೇಯನು,
ಅಕಳಂಕರಾಮಂ,
ಸಾಹಸಭೀಮಂ,
ಪ್ರತ್ಯಕ್ಷಜೀಮೂತವಾಹನಂ,
ಜಗದೇಕಮಲ್ಲಂ, ಪರಸೈನ್ಯ
ಭೈರವಂ, ಅತಿರಥ ಮಥನಂ,
ವೈರಿಗಜಘಟಾವಿಘಟನಂ,
ವಿದ್ವಿಷ್ಟ

ವಿದ್ರಾವಣನು(ಶತ್ರುಗಳನ್ನು
ಓಡುವಂತೆ ಮಾಡುವವನು),
ಆರಾತಿ ಕಾಳಾನಳಂ,
ರಿಪುಕುರಂಗಕಂಠೀರವಂ,
ವಿಕ್ರಾಂತತುಂಗಂ,
ಪರಾಕ್ರಮಧವಳಂ,
ಸಮರೈಕಮೇರು, ಶರಣಾಗತ
ಜಲನಿಧಿ
ವಿನಯವಿಭೂಷಣಂ,
ಮನುನಿದಾನನನೂನದಾನಿ
ಲೋಕೈಕಕಲ್ಪದ್ರುಮಂ| ಜಲನಿ

ವಿನಯವಿಭೂಷಣಂ,
ಮನುನಿದಾನನನೂನದಾನಿ
ಲೋಕೈಕ ಕಲ್ಪದ್ರುಮಂ
ಗಜಾಗಮ,
ರಾಜಪುತ್ರನಾರೂಢಸರ್ವಜ್ಞಂ,
ಗಂಧೇಭ ವಿದ್ಯಾಧರಂ ನೃಪ
ಪರಮಾತ್ಮಂ, ವಿಬುಧ
ವನಜವನ ಕಳಹಂಸಂ,
ಸುರತಮಕರಧ್ವಜಂ,
ಸಹಜಮನೋಜಂ,
ಆಂಕುಚಕಳಶ ಪಲ್ಲವಂ

ಕರ್ಣಾಟೀ ಕರ್ಣಪೂರಂ
ಲಾಟೀಲಲಾಮಂ
ಕೇರಳೀಕೇಳಿಕಂದರ್ಪಂ
ಸಂಸಾರಸಾರೋದಯಂ
ಮಱುವಕ್ಕದಲ್ಲಱಿಂ
ನೋಡುತ್ತೆ ಗೆಲ್ವಂ
ಪಾಣ್ಬರಂಕುಸಂ ಅಮ್ಮನ
ಗಂಧವಾರಣಂ ಪಡೆಮೆಚ್ಚೆ
ಗಂಡಂ ಪ್ರಿಯಗಳ್ಳಂ ಗಣನಿ
ಗುಣಾರ್ಣವಂ
ಸಾಮಂತಚೂಡಾಮಣಿಯೆಂ

ದಿಂತಿವು ಮೊದಲಾಗೆ ಪಲವುಂ
ಅಷ್ಟೋತ್ತರಶತನಾಮಂಗಳನಿ
ಟ್ಟು ವಿಶೇಷ
ಆಶೀರ್ವಚನಂಗಳಿಂ ಪರಸಿ-
ವಚನ:ಅರ್ಥ:ಹಾಗೆ
ವಿಶೇಷೋತ್ಸವವನ್ನು ನಡೆಸಿ
ದೇವಸಭೆಯವರೂ
ಬ್ರಹ್ಮಸಭೆಯವರೂ ಒಟ್ಟಿಗಿದ್ದು
ಹೆಸರಿಡಲು
ಕಾರಣವಾದುವುಗಳಲ್ಲಿ
ಈತನು ಸಕಲಲೋಕಗಳಿಂದ

ಹೊಗಳಲ್ಪಡುವ
ಚಾಳುಕ್ಯವಂಶದಲ್ಲಿ ಹುಟ್ಟಿದ
ಶ್ರೀಮದರಿಕೇಸರಿ,
ವಿಕ್ರಮಾರ್ಜುನ,
ಉದಾತ್ತನಾರಾಯಣ,
ಪ್ರಚಂಡಮಾರ್ತಾಂಡ
(ವಿಶೇಷತೇಜಸ್ಸನ್ನುಳ್ಳ
ಸೂರ್ಯ) ಉದಾರಮಹೇಶ್ವರ
(ಔದಾರ್ಯದಲ್ಲಿ ಶಿವನ
ಹಾಗಿರುವವನು),
ಕದನತ್ರಿಣೇತ್ರ (ಯುದ್ಧದಲ್ಲಿ

ಮುಕ್ಕಣ್ಣನಂತಿರುವವನು), ಮನುಜಮಾಂಧಾತ (ಮನುಷ್ಯರಲ್ಲಿ ಮಾಂಧಾತ ಚಕ್ರವರ್ತಿಯಂತಿರುವವನು), ಪ್ರತಿಜ್ಞಾಗಾಂಗೇಯ (ಪ್ರತಿಜ್ಞೆ ಮಾಡುವುದರಲ್ಲಿ ಪಣ ತೊಟ್ಟ ಭೀಷ್ಮನಂತಿರುವವನು ಹೀಗೆ ನೂರಾಎಂಟು ಹೆಸರುಗಳನ್ನಿಟ್ಟು ವಿಶೇಷ ಆಶೀರ್ವಚನಗಳಿಂದ ಹರಸಿದರು. (ಇವೆಲ್ಲ ಕವಿಯ

ಪ್ರೋಷಕ ಅರಿಕೇಸರಿಯ
ಬಿರುದುಗಳು ಕಾವ್ಯದ
ಅರ್ಜುನ ನಾಯಕನಿಗೆ
ಹೋಲಿಸಿ ಹೇಳಿದವು.)

ಉ|| ಸಪ್ತ ಸಮುದ್ರ ಮುದ್ರಿತ
ಧರಾತಳಮಂ ಬೆಸಕೆಯ್ಸು
ಮೀಱಿದು
ದ್ವೃಪ್ತ ವಿರೋಧಿ
ಸಾಧನಮನಾಹವದೊಳ್
ತಱಿದೊಟ್ಟು ವಿಶ್ವದಿ|

ಗ್ವ್ಯಾಪ್ತ ಯಶೋವಿಳಾಸಿನಿಗೆ ವಲ್ಲಭನಾಗು ನಿರಂತರ ಸುಖ ವ್ಯಾಪ್ತಿಗೆ ನೀನೆ ಮೊತ್ತಮೊದಲಾಗರಿಕೇಸರಿ ಲೋಕಮುಳ್ಳಿನಂ|| ೧೪೯||

ಪದ್ಯ-00:ಪದವಿಭಾಗ-ಅರ್ಥ:ಸಪ್ತ ಸಮುದ್ರ ಮುದ್ರಿತ ಧರಾತಳಮಂ (ಏಳು ಸಮುದ್ರ ಗಡಿಯುಳ್ಳ ಭೂಮಿಯನ್ನು.) ಬೆಸಕೆಯ್ಸು (ವಶಪಡಿಸಿಕೊಂಡು,)

ಮೀಱಿದ ಉದ್ವೃತ್ತ ವಿರೋಧಿ ಸಾಧನಮನು ಆಹವದೊಳ್ ತಱಿದೊಟ್ಟು (ಅರಸನ ಮಾತನ್ನು ಕೇಳದ ಗರ್ವಿಷ್ಠ ಶತ್ರುಗಳನ್ನು ಯುಧದ್ಧಲ್ಲಿ ಕತ್ತರಿಸಿ ರಾಶಿಹಾಕಿ,) ವಿಶ್ವದಿಗ್ವ್ಯಾಪ್ತ (ವಿಶ್ವ+ ದಿಕ್+ ವ್ಯಾಪ್ತ ಎಲ್ಲಾಕಡೆ ವ್ಯಾಪಿಸಿದ) ಯಶೋವಿಳಾಸಿನಿಗೆ (ಯಶ+ ವಿಳಾಸಿನಿಗೆ ಕೀರ್ತಿವನಿತೆಗೆ) ವಲ್ಲಭನಾಗು (ಪತಿಯಾಗು.)

ನಿರಂತರ ಸುಖವ್ಯಾಪ್ತಿಗೆ ನೀನೆ ಮೊತ್ತಮೊದಲಾಗು ಅರಿಕೇಸರಿ ಲೋಕಂ ಉಳ್ಳಿನಂ(ಅರಿಕೇಸರಿಯೇ, ಸದಾಕಾಲ ಲೋಕವಿರುವವರೆಗೂ, ಎಲ್ಲಾ ಬಗೆಯ ಸುಖಹೊಂದುವುದಕ್ಕೆ ನೀನೇ ಮೊದಲಿಗನಾಗು. ಎಂದು ದೇವತೆಗಳು ಹರಸಿದರು.).

ಪದ್ಯ-00:ಅರ್ಥ:ಅರಿಕೇಸರಿಯೇ ನೀನು ಲೋಕವಿರುವವರೆಗೆ ಸದಾಕಾಲ ಏಳು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಭೂಮಿಯನ್ನು ನಿನ್ನ ವಶಪಡಿಸಿಕೊಂಡು. ನಿನ್ನನ್ನು ಮಾತನ್ನು ಕೇಳದ ಗರ್ವಿಷ್ಠರಾದ ಶತ್ರುಸೈನ್ಯವನ್ನು ಯುದ್ಧದಲ್ಲಿ ಕತ್ತರಿಸಿ ಹಾಕು.

ಸಮಸ್ತದಿಕ್ಕುಗಳಲ್ಲಿಯೂ ವ್ಯಾಪಿಸಿಕೊಂಡಿರುವ ಕೀರ್ತಿವನಿತೆಗೆ ಪತಿಯಾಗಿ ನಿರಂತರವಾದ ಸುಖಭೋಗ ಹೊಂದುವುದಕ್ಕೆ ನೀನೆ ಮೊತ್ತಮೊದಲಿಗನಾಗು ಎಂದು ದೇವತೆಗಳು ಹರಿಸಿದರು.[೧][೨]

♦

|| ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ

ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ಪ್ರಥಮಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ

ಗಂಭೀರವಾದುದೂ ಆದ ಮಾತುಗಳ ರಚನೆಯಲ್ಲಿ ಚಾತುರ್ಯವನ್ನುಳ್ಳ ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಒಂದನೆಯ ಆಶ್ವಾಸವು॥

♦♣♣♣♣♣♣♣♣♣♣♣♣♣♣♣♣♣♣♦

ॐ

ಪಂಪಭಾರತ

{। class="wikitable" |- |[[ಪಂಪಭಾರತ|ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->]] ||ಪಂಪ:ಕವಿ-ಕೃತಿ ಪರಿಚಯ|ಪಂಪ:ಕವಿ-ಕೃತಿ ಪರಿಚಯ|| ಪಂಪಭಾರತ ಪ್ರಥಮಾಶ್ವಾಸಂ|1 ||ಪಂಪಭಾರತ ದ್ವಿತೀಯಾಶ್ವಾಸಂ|2 ||ಪಂಪಭಾರತ ತೃತೀಯಾಶ್ವಾಸಂ |3 || ಪಂಪಭಾರತ ಚತುರ್ಥಾಶ್ವಾಸಂ|4 || ಪಂಪಭಾರತ ಪಂಚಮಾಶ್ವಾಸಂ|5 ||ಪಂಪಭಾರತ ಷಷ್ಠಮಾಶ್ವಾಸಂ|6 || ಪಂಪಭಾರತ ಸಪ್ತಮಾಶ್ವಾಸಂ|7 || ಪಂಪಭಾರತ ಅಷ್ಠಮಾಶ್ವಾಸಂ| 8 ||ಪಂಪಭಾರತ ನವಮಾಶ್ವಾಸಂ|9 || ಪಂಪಭಾರತ ದಶಮಾಶ್ವಾಸಂ|10 || ಪಂಪಭಾರತ ಏಕಾದಶಾಶ್ವಾಸಂ|11|| ಪಂಪಭಾರತ ದ್ವಾದಶಾಶ್ವಾಸಂ|12|| ಪಂಪಭಾರತ ತ್ರಯೋದಶಾಶ್ವಾಸಂ|13 || ಪಂಪಭಾರತ ಚತುರ್ದಶಾಶ್ವಾಸಂ|14 ||ಅನುಬಂಧ|ಅನುಬಂಧ 16||ಪಂಪ - ಒಂದು ಚಿಂತನೆ||ವ್ಯಾಸ ಭಾರತ ಮತ್ತು ಪಂಪಭಾರತ: ಪರಾಮರ್ಶೆ |- |}

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

ಉಲ್ಲೇಖ

1. *ಪಂಪ ಭಾರತ - ಗದ್ಯಾನುವಾದ (ಲೇಖಕರು- ಎನ್ .ಅನಂತರಂಗಾಚಾರ್) ಕೃಪೆ:- ಕಣಜ*
2. *ಪಂಪ ಭಾರತ ಡಿ.ಎಲ್.ನರಸಿಂಹಾಚಾರ್ ಕನ್ನಡ ಅಭಿವೃದ್ಧಿ ಪ್ರಾಧಿಕಾರ*

"https://kn.wikisource.org/w/index.php?title=ಪಂಪಭಾರತ_ಪ್ರಥಮಾಶ್ವಾಸಂ&oldid=278603" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೮ ಮಾರ್ಚ್ ೨೦೨೫, ೧೨:೧೩ ರಂದು ಕೊನೆಯಾಗಿ

ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ

ಹೊರತು ಪಠ್ಯ "CC BY-SA 4.0 "

ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ದ್ವಿತೀಯಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ದ್ವಿತೀಯಾಶ್ವಾಸಂ

- (XIIX-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ನಕುಲ ಸಹದೇವರ ಜನನ

ಕಂ|| ಶ್ರೀಗಗಲುರಮಂ ಕೀರ್ತಿ

ಶ್ರೀಗೆ ದಿಗಂತಮುಮನಹಿತರಂ

ಗೆಲ್ವ ಜಯ|

ಶ್ರೀಗೆ ಭುಜಶಿಖರಮಂ ನೆಲೆ

ಯಾಗಿಸಿ ನೀಂ ನೆಲಸು

ನೇಸಱುಳ್ಳಿನಮರಿಗಾ|| ೧||

ಪದ್ಯ-೧:ಪದವಿಭಾಗ-

ಅರ್ಥ:ಶ್ರೀಗೆ ಅಗಲುರಮಂ

(ಲಕ್ಷ್ಮಿಗೆ, ಅಗಲ ಉರ-

ಎದೆಯನ್ನೂ) ಕೀರ್ತಿಶ್ರೀಗೆ

ದಿಗಂತಮುಮನು

(ದಿಕ್ಕುಗಳನ್ನೂ) ಅಹಿತರಂ
(ಶತ್ರುಗಳನ್ನು) ಗೆಲ್ವ
ಜಯಶ್ರೀಗೆ ಭುಜಶಿಖರಮಂ
(ಭುಜದ ಮೇಲುಭಾಗವನ್ನೂ)
ನೆಲೆಯಾಗಿಸಿ ನೀಂ ನೆಲಸು
ನೇಸಱುಳ್ಳಿನಂ (ನೇಸರ
ಉಳ್ಳವನು-ಸೂರ್ಯ)
ನೆಲಸು- (ಇರು)
ಅರಿಗಾ(ಅರಿಕೇಸರಿಯೇ-
ಅರ್ಜುನನೇ)-

ಪದ್ಯ-೧:ಅರ್ಥ:ನಿನ್ನ ಅಗಲವಾದ ಎದೆಯನ್ನು ಲಕ್ಷ್ಮಿಗೂ, ದಿಕ್ಕುಗಳನ್ನು ಕೀರ್ತಿಲಕ್ಷ್ಮಿಗೂ ಭುಜಶಿಖರವನ್ನು ಶತ್ರುಗಳನ್ನು ಗೆಲ್ಲುವ ವಿಜಯಲಕ್ಷ್ಮಿಗೂ ನಿವಾಸಸ್ಥಾನವನ್ನಾಗಿಸಿ ಸೂರ್ಯನಿರುವವರೆಗೂ ಅರಿಕೇಸರಿಯೇ ಸ್ಥಿರವಾಗಿ ಇರು.

ಎಂಬ ಪರಕೆಗಳ ರವದೊಳ್

ತುಂಬೆ ನಭೋವಿವರಮಮರ
ಮುನಿಜನಮಮರೇಂ|
ದ್ರಂ ಬೆರಸು ತಳರ್ದುದಾದುದ
ಳುಂಬಂ ಮನದೊಸಗೆ
ಕುಂತಿಗಂ ತತ್ಪತಿಗಂ|| ೨||

ಪದ್ಯ-೨:ಪದವಿಭಾಗ-ಅರ್ಥ:ಎಂಬ ಪರಕೆಗಳ (ಆಶೀರ್ವಾದಗಳ) ರವದೊಳ್ (ಶಬ್ದದಲ್ಲಿ) ತುಂಬೆ ನಭೋವಿವರಂ (ವಿಸ್ತಾರ ಆಕಾಶವನ್ನು ತುಂಬಲು)

ಅಮರ ಮುನಿಜನಂ
ಅಮರೇಂದ್ರಂ ಬೆರಸು
ತಳರ್ದುದು ಆದುದು
ಅಳುಂಬಂ (ಬಹಳ) ಮನದ
ಒಸಗೆ(ಸಂತಸ) ಕುಂತಿಗಂ
ತತ್ಪತಿಗಂ(ತತ್ ಪತಿ- ಅವಳ
ಪತಿ ಪಾಂಡುವಿಗೆ)
ಪದ್ಯ-೨:ಅರ್ಥ:ದೇವತೆಗಳ
ಹರಕೆಯ ಶಬ್ದವು ವಿಸ್ತಾರ
ಆಕಾಶನ್ನೆಲ್ಲ ತುಂಬಲು
ದೇವತೆಗಳೂ ಋಷಿಗಳೂ

ದೇವೇಂದ್ರನೊಡನೆ
ಹೊರಟುಹೋದರು.
ಕುಂತಿಗೂ ಅವಳ ಪತಿಯಾದ
ಪಾಂಡುರಾಜನಿಗೂ ಮನಸ್ಸಿಗೆ
ಬಹಳ ಸಂತೋಷವಾಯಿತು.

ವ|| ಅಂತು ಗುಣಾರ್ಣವನ ಪುಟ್ಟಿದೊಸಗೆಯೊಳೊಸಗೆ ಮರುಳ್ಗೊಂಡು ಕುಂತಿಯುಂ ಪಾಂಡುರಾಜನುಮಿರೆ ಮಾದ್ರಿ ತನಗೆ ಮಕ್ಕಳಿಲ್ಲದುದರ್ಕೆ ವಿರಕ್ತೆಯಾಗಿ ಪೊಸೆದು ಬಿಸುಟ

ರಕ್ತಾಶೋಕಪಲ್ಲವದಂತೆ ಕರಂ
ಕೊರಗಿ
ಚಿಂತಿಸುತಿರ್ದೊಡಾಕೆಯ
ಬಿನ್ನನಾದ ಮೊಗದಂದಮಂ
ಕಂಡು ಕುಂತಿ ಕರುಣಿಸಿ
ಪುತ್ರೋತ್ಪತ್ತಿ ನಿಮಿತ್ತಂಗಳಪ್ಪ
ಮಂತ್ರಾಕ್ಷರಂಗಳನುಪದೇಶಂಗೆ
ಯ್ದೊಡಾಕೆಯುಂ
ತದುಕ್ತಕ್ರಿಯೆಯೊಳಂ
ನಿಯಮನಿಯಮಿತೆಯಾಗಿ-

ವಚನ:ಪದವಿಭಾಗ-ಅರ್ಥ:ಅಂತು ಗುಣಾರ್ಣವನ ಪುಟ್ಟಿದ ಒಸಗೆಯೊಳು ಒಸಗೆ ಮರುಳ್ಗೊಂಡು (ಉತ್ಸವದಿಂದ ಹಿಗ್ಗಿ) ಕುಂತಿಯುಂ ಪಾಂಡುರಾಜನುಮಿರೆ ಮಾದ್ರಿ ತನಗೆ ಮಕ್ಕಳಯ ಇಲ್ಲದುದರ್ಕೆ ವಿರಕ್ತೆಯಾಗಿ (ಬೇಸರವಾಗಿ) ಪೊಸೆದು ಬಿಸುಟ ರಕ್ತ ಅಶೋಕಪಲ್ಲವದಂತೆ

(ಹೊಸೆದು ಬಿಸಾಡಿದ
ಅಶೋೕಕದ ಚಿಗುರಿನಂತೆ)
ಕರಂ (ಬಹಳ) ಕೊರಗಿ
ಚಿಂತಿಸುತಿರ್ದೊಡೆ ಆಕೆಯ
ಬಿನ್ನನಾದ (ಮೌನ? ಖಿನ್ನ)
ಮೊಗದಂದಮಂ ಕಂಡು ಕುಂತಿ
ಕರುಣಿಸಿ ಪುತ್ರೋತ್ಪತ್ತಿ
ನಿಮಿತ್ತಂಗಳಪ್ಪ (ಮಕ್ಕಳು
ಆಗುವ ವಿಧಿಗಳನ್ನು)
ಮಂತ್ರಾಕ್ಷರಂಗಳನು
ಉಪದೇಶಂಗೆಯ್ದೊಡೆ

ಆಕೆಯುಂ ತದುಕ್ತ (ತದ್ ಉಕ್ತ -ಹಾಗೆ ಹೇಳಿದ)ಕ್ರಿಯೆಯೊಳಂ ನಿಯಮ ನಿಯಮಿತೆಯಾಗಿ-

ವಚನ:ಅರ್ಥ:ಹಾಗೆ ಅರ್ಜುನನ ಜನ್ಮೋತ್ಸವದ ಸಂತೋಷದ ಸಂಭ್ರಮದಲ್ಲಿ ಕುಂತಿಯೂ ಪಾಂಡುರಾಜನೂ ಇರಲು, ಮಾದ್ರಿಯು ತನಗೆ ಮಕ್ಕಳಿಲ್ಲದುದಕ್ಕೆ ಖಿನ್ನಳಾಗಿ ಹೊಸೆದು ಬಿಸಾಡಿದ ಅಶೋಕದ ಚಿಗುರಿನಂತೆ

ವಿಶೇಷವಾಗಿ ದುಃಖಪಟ್ಟು ಚಿಂತಿಸುತ್ತಿರಲು, ಆಕೆಯ ಬಾಡಿದ ಮುಖವನ್ನು ಕಂಡು, ಕುಂತಿಯು ಕರುಣದಿಂದ ಪುತ್ರೋತ್ಪತ್ತಿ ಕಾರಣಗಳಾದ ಮಂತ್ರಗಳನ್ನು ಉಪದೇಶಮಾಡಲು, ಅವಳು ಆ ಮಂತ್ರಕ್ಕೆ ವಿಸಿದ ರೀತಿಯಲ್ಲಿ ನಿಯಮದಿಂದ (ಇದ್ದಳು)-

ಕಂ|| ಆಹ್ವಾನಂಗೆಯ್ದಶ್ವಿನಿ

ದೇವರನವರಿತ್ತ

ವರದೊಳವರಂಶಮೆ ಸಂ|

ಭಾವಿಸೆ ಗರ್ಭದೊಳಮಳರ

ನಾ ವನಜದಳಾಕ್ಷಿ ಪಡೆದು

ಸಂತತಿವೆತ್ತಳ್|| ೩ ||

ಪದ್ಯ-೩:ಪದವಿಭಾಗ-

ಅರ್ಥ:ಆಹ್ವಾನಂ ಗೆಯ್ದ ಅಶ್ವಿನಿದೇವರನು (ಅಶ್ವಿನಿದೇವತೆಗಳನ್ನು ಆಹ್ವಾನ ಮಾಡಿ) ಅವರಿತ್ತ ವರದೊಳು ಅವರ ಅಂಶಮೆ

ಸಂಭಾವಿಸೆ ಗರ್ಭದೊಳು ಅಮಳರನು (ಅವಳಿ ಮಕ್ಕಳನ್ನು) ವನಜದಳಾಕ್ಷಿ ಪಡೆದು ಸಂತತಿವೆತ್ತಳ್ (ಸಂತಾನ ಪಡೆದಳು)

ಪದ್ಯ-೩:ಅರ್ಥ:ಕಮಲಮುಖಿ ಯಾದ ಮಾದ್ರಿಯು ಅಶ್ವಿನೀದೇವತೆಯರನ್ನು ಆಹ್ವಾನಿಸಿ- ಬರಿಸಿಕೊಂಡು, ಅವರು ಕೊಟ್ಟ ವರಗಳಿಂದ ಅವರ ಅಂಶವೇ ಗರ್ಭದಲ್ಲಿ

ಉಂಟಾಗಲು ಅವಳಿ
ಮಕ್ಕಳನ್ನು ಪಡೆದು
ಸಂತಾನವನ್ನು ಪಡೆದಳು.

ವ|| ಆಗಳಾ ಪಾಂಡುರಾಜನಾ ಕೂಸುಗಳ್ಗೆ ಜಾತಕರ್ಮಮಂ ಮುನಿಗಳಿಂ ಬಳೆಯಿಸಿ ನಕುಲ ಸಹದೇವರೆಂದವರ್ಗಮಳ್ವೆಸರ ನಿಟ್ಟು ಪುತ್ರ ಸಂಪೂರ್ಣ ಮನೋರಥನಾಗಿರ್ಪಿನಮಯ್ವರ್ ಕೂಸುಗಳುಮೇೞ್ಗೆವಾಡಿವದ

ಚಂದ್ರನಂತುತ್ತರಾಭಿವೃದ್ಧಿಯೊ
ಳ್ ಸೊಗಯಿಸಿ ಬಳೆಯೆ ಭರತ
ಕುಲಕ್ಕೆ ವಿಶದ
ಯಶೋಂಕುರಂಗಳುಂ
ಬಂಧುಜನಕ್ಕೆ
ಪುಣ್ಯಾಂಕುರಂಗಳುಂ
ವಂದಜನಕ್ಕೆ
ಕಲ್ಪವೃಕ್ಷಾಂಕುರಂಗಳುಮರಾತಿ
ಜನಕ್ಕೆ
ಕಾಳಕೂಟಾಂಕುರಂಗಳುಮಂ
ಪೋಲ್ತು ಪಂಚಾಂಗ ಮಂತ್ರಂ

ಸ್ವರೂಪದೊಳ್ ಮೂರ್ತಿಮಂತಂಗಳಾದಂತೆ ಸೊಗಯಿಸಿ ಬಳೆಯೆ-

ವಚನ:ಪದವಿಭಾಗ-

ಅರ್ಥ:ಆಗಳು ಆ ಪಾಂಡುರಾಜನು ಆ ಕೂಸುಗಳ್ಗೆ ಜಾತಕರ್ಮಮಂ ಮುನಿಗಳಿಂ ಬಳೆಯಿಸಿ ನಕುಲ ಸಹದೇವರೆಂದು ಅವರ್ಗಂ ಅಳ್ವೆಸರನು ಇಟ್ಟು ಪುತ್ರ ಸಂಪೂರ್ಣ ಮನೋರಥನು

ಆಗಿರ್ಪಿನಂ, ಅಯ್ವರ್
ಕೂಸುಗಳುಂ ಏೞ್ಗೆ ವಾಡಿವದ
ಚಂದ್ರನಂತುತ್ತರಾಭಿವೃದ್ಧಿಯೊ
ಳ್ ಸೊಗಯಿಸಿ ಬಳೆಯೆ ಭರತ
ಕುಲಕ್ಕೆ ವಿಶದ
ಯಶೋಂಕುರಂಗಳುಂ
(ಮೊಳಕೆ) ಬಂಧುಜನಕ್ಕೆ
ಪುಣ್ಯಾಂಕುರಂಗಳುಂ
ವಂದಜನಕ್ಕೆ
ಕಲ್ಪವೃಕ್ಷಾಂಕುರಂಗಳುಮರಾತಿ
ಜನಕ್ಕೆ

ಕಾಳಕೂಟಾಂಕುರಂಗಳುಮಂ
ಪೋಲ್ತು ಪಂಚಾಂಗ ಮಂತ್ರಂ
ಸ್ವರೂಪದೊಳ್
ಮೂರ್ತಿಮಂತ್ರಂಗಳು ಆದಂತೆ
ಸೊಗಯಿಸಿ ಬಳೆಯೆ
ವಚನ:ಅರ್ಥ:ಆಗ ಆ
ಪಾಂಡುರಾಜನು ಆ ಶಿಶುಗಳಿಗೆ
ಋಷಿಗಳಿಂದ
ಜಾತಕರ್ಮಗಳನ್ನು ಮಾಡಿಸಿ
ನಕುಲ ಮತ್ತು ಸಹದೇವ
ಎಂಬ ಜೋಡಿ

ಹೆಸರುಗಳನ್ನಿಟ್ಟು ಮಕ್ಕಳನ್ನು ಪಡೆದ ಪೂರ್ಣತೃಪ್ತಿ ಹೊಂದಿರಲು, ಆ ಅಯ್ದು ಮಕ್ಕಳೂ ಶುಕ್ಲಪಕ್ಷದ ವೃದ್ಧಿಚಂದ್ರನಂತೆ ಸೊಗಯಿಸಿ ಬಳೆಯುತ್ತಿದ್ದರು; ಅವರು ಭರತವಂಶಕ್ಕೆ ವಿಸ್ತಾರವಾದ ಯಶಸ್ಸಿನಮೊಳಕೆಗಳೂ, ಬಂಧುಜನಗಳಿಗೆ ಪುಣ್ಯದ ಮೊಳಕೆಗಳೂ ಆಶ್ರಿತ ಜನರಿಗೆ ಕಲ್ಪವೃಕ್ಷದ

ಮೊಳಕೆಯಂತೆಯೂ,
ಶತ್ರುಜನಕ್ಕೆ ಕಾಳಕೂಟವಿಷದ
ಮೊಳಕೆಗಳೂ ಆಗಿ ಪಂಚಾಂಗ
ಮಂತ್ರಗಳಾದ ಸ್ತುತಿ, ನೈವೇದ್ಯ,
ಅಭಿಷೇಕ, ತರ್ಪಣ,
ಸಮಾರಾಧನ ಎಂಬ ವೇದಕ್ಕೆ
ಸಂಬಂಸಿದ ಮಂತ್ರಗಳು
ಉಪದೇಶವಾಗಲು
ಸಂತೋಷವಾಗಿ ಬೆಳೆದರು.

ಪದ್ಯ- ೪

ಕುಂತಿಯ ಮಕ್ಕಳ ಬಾಲಲೀಲೆ

ಕಂ|| ತೊಡರ್ದರ್ದಮರ್ದ

ಬಾಳವಣ್ಣದ

ತುಡುಗೆ ಪಳಂಚಲೆವ ಪಂಚ

ಜಡೆ ನೊಸಲೊಳೊಡಂ|

ಬಡುವರಳೆಲೆಯಿವಱಿಂ ಚೆ

ಲ್ವಿಡಿದಿರ್ದುದು ಬಾಳಕೇಳಿ

ಧರ್ಮಾತ್ಮಜನಾ|| ೪

ಪದ್ಯ-೪:ಪದವಿಭಾಗ-ಅರ್ಥ:ತೊಡರ್ದ ಮರ್ದ (ಚೆನ್ನಾಗಿ ಸೇರಿದ)ಬಾಳವಣ್ಣದ (ಕತ್ತಿ ಬಣ್ಣದ) ತುಡುಗೆ (ತೊಡಿಗೆ- ಉಡುಪು) ಪಳಂಚಲೆವ (ಬಡಿದು ತೊನೆದಾಡುವ)ಪಂಚ ಜಡೆ (ತಾಗುತ್ತಿರುವ ಐದುಜಡೆ) ನೊಸಲೊಳ ಒಡಂಬಡುವ ಅರಳೆಲೆ ಯಿವಱಿಂ (ಅರಳಿ ಎಲೆಪದಕ) ಚೆಲ್ವಿಡಿದು

ಇರ್ದುದು ಬಾಳಕೇಳಿ (ಬಾಲಕ್ರೀಡೆ) ಧರ್ಮಾತ್ಮಜನಾ

ಪದ್ಯ-೪:ಅರ್ಥ:. ಮೈಯಿಗೆ ಚೆನ್ನಾಗಿ ಹೊಂದಿಕೊಂಡ ಕತ್ತಿಯ ಬಣ್ಣದ (ನೀಲಿಬಣ್ಣದ) ಉಡುಪಿನಿಂದಲೂ ಬೆನ್ನಿಗೆ ತಾಗುತ್ತಿರುವ ಅಯ್ದು ಜಡೆಗಳಿಂದಲೂ ಒಪ್ಪಿ ಹಣೆಯಮೇಲೆ ತೋರುವ ಅರಳಿ ಎಲೆಯ ಆಕಾರದ ಪದಕಗಳಿಂದಲೂ

ಧರ್ಮರಾಯನ

ಬಾಲಕ್ರೀಡೆಯು

ಸುಂದರವಾಗಿದ್ದಿತು

ವ|| ಅಂತಾತಂ

ಬಳೆಯೆವಳೆಯೆ- (ಅಂತು-

ಹೀಗೆ ಆತಂ ಬೆಳೆಯೆ) -

ಅರ್ಥ:ಹೀಗೆ ಆತನು

ಬೆಳೆಯಲು,

ಕಂ|| ನಡೆವ ತಳರ್ನಡೆಯೊಳ್

ಪುಡಿ

ವುಡಿಯಾದುವು

ಶಿಲೆಗಳೊಡೆದು ಕರಿಗಳ್

ಭೀಮಂ|

ಪಿಡಿದಡದೊರ್ಡೆ ಬಾಯ್ವಿಟ್ಟೆ

ಲ್ವಡಗಾದುವು ಮುದ್ದದಂತು

ಸೊಗಯಿಸವೇಡಾ|| ೫||

ಪದ್ಯ-೫:ಪದವಿಭಾಗ-

ಅರ್ಥ:ನಡೆವ ತಳರ್

ನಡೆಯೊಳ್

ಪುಡಿವುಡಿಯಾದುವು

ಶಿಲೆಗಳು ಒಡೆದು, ಕರಿಗಳ್

ಭೀಮಂ ಪಿಡಿದು ಅಡರ್ದೊಡೆ (ಹಿಡಿದು ಹತ್ತಿದರೆ) ಬಾಯ್ಬಿಟ್ಟು ಎಲ್ವಡಗಾದುವು (ಎಲುಬು ಮಾಂಸವಾದವು) ಮುದ್ದು ಅದು ಎಂತು ಸೊಗಯಿಸವೇಡಾ(ಆ ಮುದ್ದು ಹುಡುಗನ ಆಟ ಎಷ್ಟು ಸೊಗಸಾಗಬೇಡ)

ಪದ್ಯ-೫:ಅರ್ಥ:ಬಾಲಕ ಭೀಮನ ನಡೆಯುವ ತಪ್ಪು ಹೆಜ್ಜೆಗಳಿಂದಲೇ ಕಲ್ಲುಗಳು

ಒಡೆದು ಪುಡಿಯಾದುವು.
ಆನೆಗಳನ್ನು ಹಿಡಿದು ಅವನು
ಹತ್ತಲು ಅವು ಬಾಯಿಬಿಟ್ಟು
(ಕೂಗಿಕೊಂಡು)
ಎಲುಬುಮಾಂಸಗಳಾದುವು.
ಆ ಮುದ್ದು ಹುಡುಗನ ಆಟ
ಎಷ್ಟು ಸೊಗಸಾಗಬೇಡ!

ಮುನಿವನ ಮನೆ ಬಿಸುಟುವು ಮುಂ

ಮುನಿಯರ ಸೋಂಕಿಲೊಳೆ ಬಳೆದ ಸಿಂಗಂಗಳ್ ಮು|

ದ್ದಿನೊಳಡರ್ವ ಪಿಡಿವ ಗುರ್ದುವ ಮನೆಗೇೞ್ವನಿತರ್ಕಮಲಸಿ ಮರುದಾತ್ಮಜನಾ|| ೬||

ಪದ್ಯ-೬:ಪದವಿಭಾಗ-ಅರ್ಥ:ಮುನಿವನಮನೆ (ಮನಿಯ ವನವನ್ನೇ) ಬಿಸುಟುವು (ಬಿಟ್ಟವು) ಮುಂ (ಮೊದಲು)ಮುನಿಯರ ಸೋಂಕಿಲೊಳೆ ಬಳೆದ ಸಿಂಗಂಗಳ್, ಮುದ್ದಿನೊಳು

ಅಡರ್ವ ಪಿಡಿವ ಗುರ್ದುವ
ಮನೆಗೆ ಎೞೆವ (ಮನೆಗೆ
ಎಳೆದು ತರುವ) ಅನಿತರ್ಕಂ
(ಎಲ್ಲದಕ್ಕೂ)ಅಲಸಿ
(ಬೇಸರಿಸಿ)
ಮರುದಾತ್ಮಜನಾ(ಭೀಮನಾ)
ಪದ್ಯ-೬:ಅರ್ಥ:ಭೀಮನು
ಹುಟ್ಟುವುದಕ್ಕೆ ಮೊದಲು,
ಋಷಿಗಳ ಮಡಲಿನಲ್ಲಿ ಬಳೆದ
ಸಿಂಹಗಳು, ಈಗ ಭೀಮನು
ಆಟಕ್ಕಾಗಿ ಅವುಗಳನ್ನು

ಹತ್ತುವ, ಹಿಡಿಯುವ, ಗುದ್ದುವ, ಮನೆಯೊಳಕ್ಕೆ ಎಳೆದುಕೊಂಡುಹೋಗುವ ಹಿಂಸೆಗಳಷ್ಟಕ್ಕೂ ಬೇಸರಗೊಂಡು, ಆ ಋಷಿಗಳ ವನವನ್ನೇ ಬಿಟ್ಟುಹೋದವು.

ವ|| ಅಂತಾತಂ ಬಳೆಯೆ- (ಅಂತು- ಹೀಗೆ ಆತಂ ಬೆಳೆಯೆ- ಬೆಳೆಯಲು-)

ಕಂ|| ಬೇಡದುದಂ ಬೇಡುವ ಪುಡಿ

ಯಾಡುವ ತೊದಳೊದವೆ

ನುಡಿವ ನಗಿಸುವ ಬಾಲ|

ಕ್ರೀಡೆ ಮುರಾರಿಯ ಬಾಲ

ಕ್ರೀಡೆಯನನುಕರಿಪುದಾದುದರಿ

ಕೇಸರಿಯಾ|| ೭||

ಪದ್ಯ-೭:ಪದವಿಭಾಗ-

ಅರ್ಥ:ಬೇಡದುದಂ ಬೇಡುವ (ಕೊಡೆಂದು ಬೇಡದ್ದನ್ನೇ ಕೇಳುವ) ಪುಡಿಯಾಡುವ (ದೂಳಾಡಿವ) ತೊದಳೊದವೆ ನುಡಿವ(ತೊದಲಿ

ಮಾನಾಡುವ) ನಗಿಸುವ,
ಬಾಲ ಕ್ರೀಡೆ ಮುರಾರಿಯ
ಬಾಲಕ್ರೀಡೆಯನು
ಅನುಕರಿಪುದು ಆದುದು
ಅರಿಕೇಸರಿಯಾ(ಅರ್ಜುನನ)
ಪದ್ಯ-೭:ಅರ್ಥ:ಬೇಡದುದನ್
ನು ಬೇಡುವ, ಧೂಳಿನಲ್ಲಿ
ಆಟವಾಡುವ, ತೊದಲು
ಮಾತುಗಳನ್ನು ಆಡುವ,
ನಗಿಸುವ, ಅರಿಕೇಸರಿಯ/
ಅರ್ಜುನನ ಬಾಲಕ್ರೀಡೆಯು

ಶ್ರೀಕೃಷ್ಣನ ಬಾಲಕ್ರೀಡೆಗಳನ್ನು ಹೋಲುತ್ತಿತ್ತು.

ಪರೆದಡರ್ದ ಧೂಳಿ ಕಿಱುನಗೆ ವೆರಸಿದ ತೊದಳೊದವೆ ನುಡಿವ ನುಡಿ ನಗೆಮೊಗದೊಳ್| ಪರಕಲಿಸಿದ ಕಾಡಿಗೆವೆರ ಸರಿಕೇಸರಿ ತಾಯ ಮನಮನಿಱ್ಕುಳಿಗೊಂಡಂ|| ೮ ||

ಪದ್ಯ-೮:ಪದವಿಭಾಗ-ಅರ್ಥ:ಪರೆದು ಅಡರ್ದ ಧೂಳಿ (ಹರೆದು ಧೂಳು ಅಂಟಿದಾಗ) ಕಿಱುನಗೆವೆರಸಿದ, ತೊದಳೊದವೆ ನುಡಿವ (ತೊದಲು ಒದವೆ, ಬರಲು) ನುಡಿ ನಗೆಮೊಗದೊಳ್' ಪರಕಲಿಸಿದ (ಹರಡಿದ) ಕಾಡಿಗೆ ವೆರಸೆ ಅರಿಕೇಸರಿ/ ಅರ್ಜುನನು ತಾಯ

ಮನಮನು
ಇಱ್ಕುಳಿಗೊಂಡಂ(ಎಳೆದು
ಕೊಂಡನು)
ಪದ್ಯ-೮:ಅರ್ಥ:ಅರ್ಜುನನು,
ಕೆದರಿ ಮೆಯ್ಗೆ ಅಂಟಿದ
ಧೂಳು, ಹುಸಿನಗೆಯಿಂದ
ಕೂಡಿದ ತೊದಲುಮಾತು,
ನಗುಮುಖದಲ್ಲಿ ಹರಡಿದ/
ಕದಡಿದ ಕಾಡಿಗೆಯೊಡನೆ
(ಅರಿಕೇಸರಿ) ತಾಯಿಯಾದ

;ಕುಂತಿಯ ಮನಸ್ಸನ್ನು ಆಕರ್ಷಿಸಿದನು.

ಒಗೆತರ್ಪ ಪಲ್ಗಳಾ ನಗೆ ಮೊಗದ ಸರಸ್ವತಿಯನಾಗಳರ್ಚಿಸಿದ ಪೊದ|

ಳ್ದಗಲದ ಚೆಲ್ವಿನ ಮೊಲ್ಲೆಯ

ಮುಗುಳ್ಗಳನಿಳಿಸಿರೆ ಗುಣಾರ್ಣವಂ ಸೊಗಯಿಸಿದಂ|| ೯||

ಪದ್ಯ-೯:ಪದವಿಭಾಗ-ಅರ್ಥ:ಒಗೆತರ್ಪ ಪಲ್ಗಳು ಆ ನಗೆಮೊಗದ ಸರಸ್ವತಿಯನು

ಆಗಳು ಆರ್ಚಿಸಿದ ಪೊದಳ್ದಗಲದ ಚೆಲ್ವಿನ ಮೊಲ್ಲೆಯಮುಗುಳ್ಗಳನಿಳಿಸಿರೆ ಗುಣಾರ್ಣವಂ ಸೊಗಯಿಸಿದಂ

ಪದ್ಯ-೯:ಅರ್ಥ:. ಹೊಸದಾಗಿ ಹುಟ್ಟುತ್ತಿರುವ ಹಲ್ಲುಗಳು, ಆ ನಗುಮುಖದ ವಾಗ್ದೇವಿಯನ್ನು ಪೂಜಿಸಿದ ಹರಡಿದ ಸುಂದರವಾದ ಮೊಗ್ಗಿನ ರಾಶಿಯನ್ನು ತಿರಸ್ಕರಿಸುವಂತಿರಲು

ಗುಣಾರ್ಣವನು/ಅರ್ಜುನನು ಸೊಗಸಾಗಿ ಕಂಡನು.

ಕರಿಕಳಭಂಗಳ ಶಿಶು ಕೇ
ಸರಿಗಳ ಬಟಿಯಂ ತಗುಳ್ದು
ಬಡವುಗಳನವಂ|
ತಿರಿಪಿ ಪಿಡಿಯುತ್ತುಮರಿಗಂ
ಪರಿದಾಡುವ
ಸಮವಯಸ್ಕರೊಳ್
ಸೊಗಯಿಸಿದಂ|| ೧೦

ಪದ್ಯ-೦೦:ಪದವಿಭಾಗ-

ಅರ್ಥ:ಕರಿ ಕಳಭಂಗಳ (ಆನೆ

ಮರಿಗಳ) ಶಿಶು ಕೇಸರಿಗಳ
ಬಟೆಯಂ ತಗುಳ್ದು(ಸಿಂಹದ
ಮರಿಗಳ ಬಳಿಗೆ ಹೋಗಿ)
ಬಡವುಗಳನವಂ ತಿರಿಪಿ
ಪಿಡಿಯುತ್ತುಂ
(ಬಡಪ್ರಾಣಿಗಳನ್ನು ತಿರುಗಿಸಿ
ಹಿಡಿಯುವ) ಅರಿಗಂ
ಪರಿದಾಡುವ
ಸಮವಯಸ್ಕರೊಳ್
ಸೊಗಯಿಸಿದಂ(ಅರಿಕೇಸರಿ/
ಅರ್ಜುನ ಅಲ್ಲಿ ಓಡಾಡುವ

ಜೊತೆಗಾರರೊಡನೆ ಸೊಗಸಾಗಿ ಕಂಡನು.)

ಪದ್ಯ-00:ಅರ್ಥ:ಆನೆಯ ಮರಿಗಳ ಸಿಂಹದ ಮರಿಗಳ ಬಳಿಗೆ ಹೋಗಿ ಆ ಬಡಪ್ರಾಣಿಗಳನ್ನು ಹಿಂತಿರುಗಿಸಿ ಹಿಡಿಯುವ ಅರಿಕೇಸರಿ/ಅರ್ಜುನ ಅಲ್ಲಿ ಓಡಾಡುವ ಜೊತೆಗಾರರೊಡನೆ ಸೊಗಸಾಗಿ ಕಂಡನು.

ದೆಯ್ವಬಲಂ ಸೊಗಸಿಕೆ ಮುಂ
ಗೆಯ್ವ ಬಲಂ
ಬಾಳಕಾಲದೊಳ್ ತೊಡರ್ದ
ಪೊಡ|
ರ್ದಯ್ವರ ಬಾಲಕ್ರಿಯೆಯುಂ
ಮುಯ್ವಂ ನೋಡಿಸಿತು
ತಾಯುಮಂ ತಂದೆಯುಮಂ||
೧೧

ಪದ್ಯ-೦೦:ಪದವಿಭಾಗ-
ಅರ್ಥ:ದೆಯ್ವಬಲಂ ಸೊಗಸಿಕೆ
ಮುಂಗೆಯ್ವ ಬಲಂ

ಬಾಳಕಾಲದೊಳ್
(ದೈವಬಲವೂ,
ಸೊಗಸಿಕೆಯೂ, ಮುಂದಿನ
ಕಾಲದಲ್ಲಿ) ತೊಡರ್ದ
ಪೊಡರ್ದ ಐಯ್ವರ
ಬಾಲಕ್ರಿಯೆಯುಂ ಮುಯ್ವಂ
ನೋಡಿಸಿತು ತಾಯುಮಂ
ತಂದೆಯುಮಂ(ಅವರಿಗೆ
ಒದಗುವ ಸಾಮರ್ಥ್ಯವೂ
ಬಾಲ್ಯದಲ್ಲಿಯೇ ಕಾಣಿಸಿ
ಪ್ರಕಾಶಿತವಾದ

ಬಾಲಕ್ರೀಡೆಯು ತೋರಿಸಿತು; ಇದು ಹೆಮ್ಮಗೆ ತಾಯಿ ತಂದೆಯರು ತಮ್ಮ ಭುಜವನ್ನು ತಾವೇ ನೋಡಿಕೊಳ್ಳುವ ಹಾಗೆ ಮಾಡಿತು)

ಪದ್ಯ-00:ಅರ್ಥ:ಪಾಂಡು ಕುಮಾರರ ದೈವಬಲವೂ, ಸೊಗಸಿಕೆಯೂ, ಮುಂದಿನ ಕಾಲದಲ್ಲಿ ಅವರಿಗೆ ಉಂಟಾಗಬಹುದಾದ ಸಾಮರ್ಥ್ಯವೂ

ಬಾಲ್ಯದಲ್ಲಿಯೇ ಕಾಣಿಸಿ ಪ್ರಕಾಶಿತವಾದ ಬಾಲಕ್ರೀಡೆಯು ತಾಯಿಯನ್ನೂ ತಂದೆಯನ್ನೂ ತಮ್ಮ ಭುಜವನ್ನು ತಾವೇ ನೋಡಿಕೊಳ್ಳುವ ಹಾಗೆ ಮಾಡಿತು.(ರೂಢಿಯಲ್ಲಿ, ಹೆಮ್ಮಗೆ ತಮ್ಮ ಭುಜವನ್ನು ತಾವೇ ತಟ್ಟಿಕೊಳುವರು ಅಥವಾ ನೋಡಿಕೊಳ್ಳುವರು)).

ವ|| ಅಂತಾ ಕೂಸುಗಳ್ ನಿಜ ಜನನೀಜನಕರ ಮನಮನಿಱ್ಕುಳಿಗೊಳಿಸಿಯು ಮರಾತಿ ಜನಂಗಳ ಮನಮನಸುಂಗೊಳಿಸಿಯುಂ ಬಳೆಯೆ ಬಳೆಯೆ- -

ವಚನ:ಪದವಿಭಾಗ-ಅರ್ಥ:

ಅಂತಾ ಕೂಸುಗಳ್ ನಿಜ (ತಮ್ಮ) ಜನನೀ ಜನಕರ ಮನಮನು ಇಱ್ಕುಳಿಗೊಳಿಸಿಯುಂ

(ಆಕರ್ಷಿಸಿ) ಆರಾತಿ (ಶತ್ರು) ಜನಂಗಳ ಮನ ಮನಸುಂಗೊಳು ಅಸಿಯುಂ ಬಳೆಯೆ ಬಳೆಯೆ-

ವಚನ:ಅರ್ಥ:|| ಹಾಗೆ ಆ ಮಕ್ಕಳು ತಮ್ಮ ತಾಯಿತಂದೆಯರ ಮನಸ್ಸನ್ನು ಆಕರ್ಷಿಸಿಸುವಂತೆಯೂ ಶತ್ರುಜನರ ಮನಸ್ಸಿನಲ್ಲಿ ಪ್ರಾಣಾಪಹರಣ ಭಯ

ಹುಟ್ಟಿಸುವಂತೆಯೂ
ಬಳೆದರು.

ಪದ್ಯ - ೧೨

*ವಸಂತಕಾಲದ ವರ್ಣನೆ:

ಚಂ|| ಅಲರ್ದದಿರ್ಮುರ್ತ್ತೆ ಪೂತ ಪೊಸಮಲ್ಲಿಗೆ ಕಂಪನವುಂಕುತಿರ್ಪ ತೆಂ ಬೆಲರುಮಿದಂ ಗೆಲಲ್ಬಗೆವ ತುಂಬಿಗಳ ಧ್ವನಿಯಿಂ ಕುಕಿಲ್ವ ಕೋ|

ಗಿಲೆ ನನೆದೋಱಿ ನುಣ್ಪೆಸೆವ ಮಾಮರನೊರ್ಮೊದಲಲ್ಲದು ಣ್ಮುವು ಯ್ಯಲ ಪೊಸಗಾವರಂ ಪುಗಿಲೊಳೇನೆಸೆದತ್ತೊ ಬಸಂತಮಾಸದೊಳ್|| ೧೨ ||

ಪದ್ಯ-೧೨:ಪದವಿಭಾಗ-ಅರ್ಥ:ಅಲರ್ದಮಿರ್ಮುತ್ತೆ ಪೂತ (ಅರಳಿದ) ಪೊಸಮಲ್ಲಿಗೆ ಕಂಪನು ಅವುಂಕುತಿರ್ಪ(ಅವುಕು

ಒತ್ತಿತೆಗೆಯುವ)
ತೆಂಬೆಲರುಂಮ (ತಂಗಾಳಿ)
ಇದಂ ಗೆಲಲ್ ಬಗೆವ
(ಇಷ್ಟಪಡುವ) ತುಂಬಿ ಗಳ
ಧ್ವನಿಯಿಂ(ಕಂಠಧ್ವನಿ) ಕುಕಿಲ್ವ
(ಹಾಡುವ) ಕೋಗಿಲೆ
ನನೆದೋಱೆ (ನನೆ ತೋರಿ-
ಕಾಣಿಸುವ) ನುಣ್ಪು ಎಸೆವ
ಮಾಮರನು (ನಯವಾಗಿ
ಶೋಭಿಸುವ ಮಾವಿನಮರ)
ಒರ್ಮೊದಲಲ್ಲದೆ (ಒರ್

ಮೊದಲು ಅಲ್ಲದೆ
-ಪದೇಪದೇ) ಉಣ್ಮುವ
ಉಯ್ಯಲ(ಚಿಮ್ಮುವ
ಉಯ್ಯಾಲೆ) ಪೊಸಗಾವರಂ
(ಹೊಸನಾದವು)
ಪುಗಿಲೊಳ್(ವಸಂತ
ಹೊಗಲು-ಆರಂಭವಾಗಲು)
ಏನೆಸೆದತ್ತೊ (ಏನು
ಸೊಗಸಾಗಿತ್ತೋ!)ಬಸಂತಮಾ
ಸದೊಳ್

ಪದ್ಯ-೧೨:ಅರ್ಥ:ಅರಳಿದ ಅದಿಮ್ರ್ಯುತ್ತೆಯ ಹೂವು, ಹೊಸ ಮಲ್ಲಿಗೆಯ ಹೂವಿನ ಸುವಾಸನೆಯನ್ನು ಒತ್ತಿ ಹೊರಡಿಸುತ್ತಿರುವ ತಂಗಾಳಿ, ಇದನ್ನು ಗೆಲ್ಲಲು ಯೋಚಿಸುತ್ತಿರುವ ದುಂಬಿ, ಕೊರಳ ಶಬ್ದದಿಂದ ಹಾಡುವ ಕೋಗಿಲೆ, ಹೂವಿನಿಂದ ಕೂಡಿ ನಯವಾಗಿರುವ ಮಾವಿನ ಮರ, ಒಂದೇ ಸಲವಲ್ಲದೆ

ಪದೇಪದೇ ತೂಗುವ
ಉಯ್ಯಾಲೆ, ಹೊಸನಾದ, ಇವು
ವಸಂತಋತುವಿನ
ಆರಂಭದಲ್ಲಿ ಏನು
ಸೊಗಸಾಗಿತ್ತೋ!

ವ|| ಅಗಳಾ ಬಸಂತರಾಜನ
ಬರವಿಂಗೆ ಗುಡಿಗಟ್ಟಿದಂತೆ
ಬಳ್ವಳ ಬಳೆದ
ಮಿಳಿರ್ವಶೋಕೆಯ
ತಳಿರ್ಗಳುಮಾತನ ಬರವಿಂಗೆ
ತೋರಣಂಗಟ್ಟಿದಂತೆ ಬಂದ

ಮಾಮರಂಗಳನಡರ್ದು

ತೊಡರ್ದೆಳಗೊಂಬುಗಳ್ವಿಡಿದು

ಮರದಿಂ ಮರಕ್ಕೆ

ದಾಂಗುಡಿವಿಡುವ

ಮಾಧವೀಲತೆಗಳು ಮಾತನ

ಬರವಿಂಗೆ ನೆರೆಯೆ ಸೊಗಯಿಸೆ

ಕೆಯ್ಗಯ್ವ ನಲ್ಲಳಂತೆ ನನೆಯ

ಬಿರಿಮುಗುಳ್ಗಳ

ತುಱುಗಲೊಳೆಱಗಿ ತುಱುಗಿದ

ಕಲ್ಪಲತೆಗಳು ಮಾತನ

ಬರವಿಂಗೆ ಬದ್ದವಣಂ

ಬಾಜಿಪಂತೆ ಭೋರ್ಗರೆದು

ಮೊರೆವ ತುಂಬಿಗಳುಮಾತನ

ಬರವಿಂಗೆ

ರಂಗವಲಿಯಿಕ್ಕಿದಂತೆ

ಪುಳಿನಸ್ಥಳಂಗಳೊಳುದಿರ್ದ

ಕಱಿವೂಗಳುಮಾತನ

ಬರವಿಂಗೆ ವನವನಿತೆ ಮೆಚ್ಚಿ

ನೆರೆಯೆ ಕೆಯ್ಗೆಯ್ದಂತೆ

ನಿಱಿನಿಱಿಗೊಂಡು

ಸೊಗಯಿಸುವ ನಿಱಿಗನ

ನಿಱಿದಳಿರ

ಗೊಂಚಲ್ಗಳುಮಾತನ

ಮೇಲ್ವಾಯೆ ರಾಗಿಸಿ

ರೋಮಾಂಕುರಮೊಗೆದಂತೊ

ಗೆದ

ಕಳಿಕಾಂಕುರಂಗಳುಮಾತನಂಗ

ಸಂಗದೊಳ್

ಕಾಮರಸಮುಗುವಂತುಗುವ

ಸೊನೆಯ

ಸೋನೆಗಳುಮನೊಳಕೊಂಡು

ತದಾಶ್ರಮದ

ನಂದನವನಂಗಳ್

ಜನಂಗಳನನಂಗಂಗೆ ತೋಱುವೆ ಸಂಗೆಯ್ದಿದುವು-

ವಚನ:ಪದವಿಭಾಗ-

ಅರ್ಥ:ವ|| ಅಂಗಳ್ ಆ ಬಸಂತರಾಜನ ಬರವಿಂಗೆ ಗುಡಿಗಟ್ಟಿದಂತೆ ಬಳ್ವಳ ಬಳೆದ (ಕೋಮಲವಾಗಿ ಬೆಳೆದ) ಮಿಳಿರ್ವ (ಅಲುಗಾಡುವ)ಅಶೋಕೆಯ ತಳಿರ್ಗಳುಂ (ಚಿಗುರಕುಡಿಗಳೂ), ಆತನ

ಬರವಿಂಗೆ ತೋರಣಂ(ಗ)
ಕಟ್ಟಿದಂತೆ ಬಂದ
ಮಾಮರಂಗಳನು ಅಡರ್ದು
ತೊಡರ್ದು (ಹತ್ತಿ
ಅಪ್ಪಿಕೋಡು)
ಎಳಗೊಂಬುಗಳ್ ವಿಡಿದು
(ಎಳೆಯ ರೆಂಬೆಗಳನ್ನು
ಹಿಡಿದು) ಮರದಿಂ ಮರಕ್ಕೆ
ದಾಂಗುಡಿವಿಡುವ (ಹಾರುವ),
ಮಾಧವೀ ಲತೆಗಳುಂ ಆತನ
ಬರವಿಂಗೆ (ವಸಂತನ

ಬರವಿಗಾಗಿ) ನೆರೆಯೆ
(ಪೂರ್ಣ) ಸೊಗಯಿಸೆ
ಕೆಯ್ಗೆಯ್ದ
(ಅಲಂಕರಿಸಿಕೊಂಡ)
ನಲ್ಲಳಂತೆ (ಪ್ರೇಯಸಿಯಂತೆ)
ನನೆಯ (ಮೊಗ್ಗಿನ)
ಬಿರಿಮುಗುಳ್ಗಳ ತುಱುಗಲು
ಒಳಿಱಿಗಿ ತುಱುಗಿದ
ಕಲ್ಪಲತೆಗಳುಂ ಆತನ
ಬರವಿಂಗೆ ಬದ್ದವಣಂ
ಬಾಜಿಪಂತೆ (ವಾದ್ಯವನ್ನು

ಬಾರಿಸುವಂತೆ) ಭೋರ್ಗರೆದು
ಮೊರೆವ ತುಂಬಿಗಳುಂ ಆತನ
ಬರವಿಂಗೆ
ರಂಗವಲಿಯಿಕ್ಕಿದಂತೆ
ಪುಳಿನ(ಮರಳು)
ಸ್ಥಳಂಗಳೊಳು ಉದಿರ್ದ
ಕಟಿವೂಗಳುಂ (ಕಳಿತ/
ಅರಳಿದ ಹೂವುಗಳು) ಆತನ
ಬರವಿಂಗೆ "ವನವನಿತೆ" ಮೆಚ್ಚಿ
ನೆಯೆ ಕೆಯ್ಗೆಯ್ದಂತೆ
(ಕೈಗಯ್ದಂತೆ?-

ಶೃಂಗಾರಗೊಂಡಂತೆ) ನಿಱುನಿಱುಗೊಂಡು (ನಿರಿಗೆ ನಿರಿಗೆಯಾಗಿ) ಸೊಗಯಿಸುವ ನಿಱುಗನ (ಸಿಹಿಮಾವಿನ) ನಿಱುದಳಿರ (ನರಿಗೆಯಚಿಗುರ) ಗೊಂಚಲ್ಗಳುಂ, ಆತನ ಮೇಲ್ವಾಯೆ (ನುಗ್ಗಲು) ರಾಗಿಸಿ ರೋಮಾಂಕುರಂ ಒಗೆದಂತ ಒಗೆದ (ತೋರುವ) ಕಳಿಕ ಅಂಕುರಂಗಳುಂ (ಚಿಗುರು ಕುಡಿಗಳು) ಆತನ (ವಸಂತನ)

ಅಂಗಸಂಗದೊಳ್ ಕಾಮರಸಂ
ಉಗುವಂತೆ ಉಗುವ
ಸೊನೆಯ ಸೋನೆಗಳುನು
(ಮರದ ಸೊನೆಯ ರಸಗಳು
ಉಕ್ಕಿಬರುವುದು ವಸಂತನ
ವನವನಿತೆಯ
ಅಂಗಸಂಗದಿಂದ ಬಂದ
ಕಾಮರಸ ಎಂದು ಭಾವ)
ಒಳಕೊಂಡು ತದಾಶ್ರಮದ
ನಂದನವನಂಗಳ್
ಜನಂಗಳನು ಅನಂಗಂಗೆ

(ಮನ್ಮಥನಿಗೆ) ತೋೞ್ತುವೆ ಸಂಗೆಯ್ಸಿದುವು (ತೊಳ್ತು-ತೊತ್ತಿನ ಕೆಲಸ ಮಾಡಿದವು)- **ವಚನ:ಅರ್ಥ**:ಆ ಸಮಯದಲ್ಲಿ ಆ ವಸಂತರಾಜನ ಬರವಿಗಾಗಿ ಬಾವುಟಗಳನ್ನು ಕಟ್ಟಿದಹಾಗೆ ಕೋಮಲವಾಗಿ ಬೆಳೆದು ಅಲುಗಾಡುವ ಅಶೋಕವೃಕ್ಷಗಳ ಚಿಗುರು ಕುಡಿಗಳೂ, ಆತನ ಬರವಿಗಾಗಿ

ತೋರಣ ಕಟ್ಟಿದಂತೆ ಹಣ್ಣು
ಕಾಯಿಗಳನ್ನು ಬಿಟ್ಟಿರುವ
ಮಾವಿನ ಮರಗಳನ್ನು ಏರಿ
ಅಡ್ಡಲಾಗಿ ಎಳೆಕೊಂಬೆಗಳನ್ನು
ಹಿಡಿದು ಮರದಿಂದ ಮರಕ್ಕೆ
ಕುಡಿಯನ್ನು ಚಾಚುವ
ಮೊಲ್ಲೆಯ ಬಳ್ಳಿಗಳೂ,
ವಸಂತನ ಬರುವಿಕೆಗೆ
ಸಂಪೂರ್ಣ ಸುಂದರವಾಗಿ
ಕಾಣುವುದಕ್ಕಾಗಿ
ಅಲಂಕಾರವನ್ನು

ಮಾಡಿಕೊಳ್ಳುವ
ಪ್ರೇಯಸಿಯಂತೆ ಹೂವಿನ
ದಪ್ಪ ಮೊಗ್ಗಿನ ಗುಂಪುಗಳಿಂದ
ಕೂಡಿ ದಟ್ಟವಾಗಿರುವ
ಕಲ್ಪಲತೆಗಳೂ ಆತನ ಬರವಿಗೆ
ಮಂಗಳವಾದ್ಯವನ್ನು
ಬಾರಿಸುವಂತೆ ದೊಡ್ಡ
ಶಬ್ದಮಾಡುವ ದುಂಬಿಗಳೂ,
ಆತನ ಬರವಿಗೆ
ರಂಗೋಲೆಯನ್ನಿಕ್ಕಿದಂತೆ
ಮರಳಿನ ಪ್ರದೇಶದಲ್ಲಿ

ಉದುರಿದ್ದ
ಕಳಿತಹೂವುಗಳೂ, ಆತನ
ಬರುವಿಕೆಗೆ ವನಲಕ್ಷ್ಮಿಯು
ಸಂತೋಷಪಟ್ಟು
ಸಂಪೂರ್ಣವಾಗಿ ಅಲಂಕಾರ
ಮಾಡಿದಂತೆ
ನಿರಿಗೆನಿರಿಗೆಯಾಗಿ
ಸೊಗಯಿಸುವ ಸಿಹಿಮಾವಿನ
ಸಾಲಾಗಿರುವ
ಗೊಂಚಲುಗಳೂ, ಆತನ
ಮೇಲೆ ಪ್ರೀತಿಸಿ ನುಗ್ಗಲು

ರೋಮಾಂಚನಗೊಂಡಂತೆ
ಹುಟ್ಟಿರುವ ಚಿಗುರು ಮತ್ತು
ಕಿರುಗೊಂಬೆಗಳ ಮೊಳಕೆಗಳೂ
ಆತನ ಶರೀರಸ್ಪರ್ಶದಿಂದ
ಕಾಮರಸವು ಜಿನುಗುವಂತೆ
ಸ್ರವಿಸುವ ಮರದ ಹಾಲಿನ
ಸೋನೆಗಳೂ ಇವುಗಳಿಂದ ಆ
ಆಶ್ರಮದ ನಂದನವನಗಳು
ಜನಗಳು ಮನ್ಮಥನಿಗೆ
ಸೇವೆಗೆಯ್ಯುವ ಹಾಗೆ
ಮಾಡಿದುವು.

ಚಂ|| ಬಿರಯಿಯ ಮಿೞ್ತುವೆಂ
ಮಿದಿದೊಡಲ್ಲದಣಂ
ಮುಳಿಸಾಱದೆಂದು ಪ
ಲ್ಮೊರೆದಪನಿಲ್ಲಿ ಮನ್ಮಥನಿದಂ
ಪುಗಲಿಂಗಡಿಮೆಂದು ಬೇಟಕಾ|
ಱರನಿರದೂಱ್ ಸಾಱ್
ಜಡಿವಂತೆಸೆಗುಂ ಸಹಕಾರ
ಕೋಮಳಾಂ
ಕುರ ಪರಿತುಷ್ಟ ಪುಷ್ಟ
ಪರಪುಷ್ಟ ಗಳಧ್ವನಿ
ನಂದನಂಗಳೊಳ್|| ೧೩||

ಪದ್ಯ-೧೩:ಪದವಿಭಾಗ-ಅರ್ಥ: (ವಸಂತನು) ಬಿರಯಿಯ ಮಿಱ್ತುವೆಂ (ಅಗಲಿದ ವಿರಹಿಗಳ ಮೃತ್ಯುವು), ಮಿದಿದೊಡಲ್ಲದೆ ಅಣಂ (ಮಿದಿ-ಚಚ್ಚು;ಚಚ್ಚಿದ ಹೊರತು) ಮುಳಿಸು ಆಱದೆಂದು (ಸಿಟ್ಟು ತಣಿಯದೆಂದು) ಪಲ್ ಮೊರೆದಪನು ಇಲ್ಲಿ ಮನ್ಮಥನು(ಮನ್ಮಥನು ಇಲ್ಲಿ

ಹಲ್ಲು ಕಡಿಯುವನು;) ಇದಂ
ಪುಗಲಿಂ ಗಡಿಮೆಂದು(ಈ
ವನವನ್ನು- ಹೊಗಲು ಬೇಡಿ/
ಕೂಡದು) ಬೇಟಕಾಱರನು
ಇರದೆ ಊಱ
ಸಾಱ(ಸುಮ್ಮನಿರದೆ
ಕೂಗಿಹೇಲಿ) ಜಡಿವಂತೆ
ಎಸೆಗುಂ (ಗದುವಂತೆ
-ಕಾಣುವನು) ಸಹಕಾರ
ಕೋಮಳ ಅಂಕುರ (ಮಾವಿನ
ಎಳೆಯ ಚಿಗುರು ತಿಂದು)

ಪರಿತುಷ್ಟ ಪುಷ್ಟ
ಪರಪುಷ್ಟ(ಕೋಗಿಲೆ)
ಗಳಧ್ವನಿ(ಕೊಬ್ಬಿ ತೃಪ್ತಿಪಟ್ಟ
ಕೋಗಿಲೆಯ ಕಂಠದ ದನಿ)
ನಂದನಂಗಳೊಳ್
(ವನಗಳಲ್ಲಿ)(ಎಸೆಗಂ-
ಶೋಭಿಸುವುದು)

ಪದ್ಯ-೧೩:ಅರ್ಥ:ವಸಂತನು
ಹೇಳಿದಂತಿದೆ: ನಾನು
ವಿರಹಿಗಳ ಮೃತ್ಯುವಾಗಿದ್ದೇನೆ.
ಅವರನ್ನು ಚಚ್ಚಿದಲ್ಲದೆ ನನ್ನ

ಕೋಪವು ಸ್ವಲ್ಪವೂ
ಆರುವುದಿಲ್ಲ ಎಂದು ಇಲ್ಲಿ
ಮನ್ಮಥನು ಹಲ್ಗಡಿದು
ಕೂಗುತ್ತಿದ್ದಾನೆ. ಇಲ್ಲಿಗೆ
ವಿರಹಿಗಳು ಪ್ರವೇಶಿಸಲು
ಕೂಡದು, ಎಂದು ಒಂದೇ
ಸಮನಾಗಿ ಬಲಾತ್ಕಾರದಿಂದ
ಕೂಗಿ ಹೇಳಿ ಹೆದರಿಸುವಂತೆ
ಮಾವಿನ ಮೃದುವಾದ
ಚಿಗುರುಗಳನ್ನು
ತೃಪ್ತಿಯಾಗುವಷ್ಟು ತಿಂದು

ಕೊಬ್ಬಿರುವ ಕೋಗಿಲೆಗಳ
ಕಂಠದ ದನಿ ಆ ತೋಟಗಳಲ್ಲಿ
ಶೋಭಿಸುತ್ತಿದೆ.

ಚಂ|| ಕವಿವ ಮದಾಳಿಯಿಂ
ಮಸುಳನಾಗಿ
ಪಯೋಜರಜಂಗಳೊಳ್ ಕವಿ
ಲ್ಗವಿಲನುಮಾಗಿ ಬಂದ
ಮಲಯಾನಿಲನೂದೆ ತೆರಳ್ವ
ಚೂತ ಪ|
ಲ್ಲವದ ತೆರಳ್ಕೆ ತದ್ವನ
ವಿಳಾಸಿನಿಯುಟ್ಟ

ದುಕೂಲದೊಂದು ಪ
ಲ್ಲವದ ತೆರಳ್ಕೆಯಂತೆಸೆಯೆ
ಕಣ್ಗೆಸೆದಿರ್ದುವು
ನಂದನಾಳಿಗಳ್|| ೧೪||

ಪದ್ಯ-೧೪:ಪದವಿಭಾಗ-ಅರ್ಥ:ಕವಿವ ಮದಾಳಿಯಿಂ (ಮುತ್ತುವ ದುಂಬಿಗಳಿಂದ) ಮಸುಳನಾಗಿ ಪಯೋಜ ರಜಂಗಳೊಳ್ (ತಾವರೆಯ ಪರಾಗದಲ್ಲಿ) ಕವಿಲ್ (ಗ)ಕವಿಲನುಮಾಗಿ (ಕೆಂಪು

ಬಣ್ಣದ) ಬಂದ
ಮಲಯಾನಿಲನು(ಮಂದಮಾ
ರುತನು) ಊದೆ (ಬೀಸಲು)
ತೆರಳ್ವ ಚೂತ ಪಲ್ಲವದ ತೆರಳ್ಕೆ
(ಅಲುಗಾಡುವ ಮಾವಿನ
ಚಿಗುರು) ತದ್ ವನ
ವಿಳಾಸಿನಿಯುಟ್ಟ
(ವನವನಿತೆಯು ಉಟ್ಟ)
ದುಕೂಲದ ಒಂದು ಪಲ್ಲವದ
ತೆರಳ್ಕೆಯಂತೆ ಎಸೆಯೆ (ಒಂದು
ಸೀರೆಯ ಸೆರಗಿನ

ಅಲುಗಾಟದಂತೆ ಶೋಭಿಸಲು) ಕಣ್ಗೆಸೆದಿರ್ದುವು ನಂದನಾಳಿಗಳ್(ಉದ್ಯಾನಗಳ ಸಾಲು ಕಣ್ಣಿಗೆ ಶೋಭಿಸಿತು)

ಪದ್ಯ-೧೪:ಅರ್ಥ:ಮುತ್ತುವ ದುಂಬಿಗಳಿಂದ,ತಾವರೆಯ ಪರಾಗದಲ್ಲಿ, ಕೆಂಪು ಬಣ್ಣದ ಬಂದ ಮಂದಮಾರುತನು ಬೀಸಲು, ಅಲುಗಾಡುವ ಮಾವಿನ ಚಿಗುರು, ಆ ವನವನಿತೆಯು ಉಟ್ಟ ಒಂದು

ಸೀರೆಯ ಸೆರಗಿನ
ಅಲುಗಾಟದಂತೆ ಶೋಭಿಸಲು
ಉದ್ಯಾನಗಳ ಸಾಲು ಕಣ್ಣಿಗೆ
ಶೋಭಿಸಿತು.

ಉ|| ಪೋಗದೆ
ಪಾಡುತಿರ್ಪಳಿಯೆ
ಬೃಂಹಿತಮಾಗಿರೆ ಚಂದ್ರಕಾಂತಿ
ಕಾ
ಯ್ವಾಗಿರೆ ಬೀಸುವೊಂದೆಲರೆ
ಬೀಸುವುದಾಗಿರೆ
ಕಾಯ್ಗಳಿಂದಮಿಂ|

ಬಾಗಿರೆ ಸೋರ್ವ ಸೋನೆ

ಮದಮಾಗಿರೆ ಮಾವಿನ ಬಂದ

ಕೋಡೆ ಕೋ

ಡಾಗಿರೆ ಕೋಡುಗೊಂಡು

ಪರಿದತ್ತು ವಸಂತಗಜಂ

ವಿಯೋಗಿಯಂ|| ೧೫||

ಪದ್ಯ-೧೫:ಪದವಿಭಾಗ-

ಅರ್ಥ:ಪೋಗದೆ ಪಾಡುತಿರ್ಪ

ಅಳಿಯೆ ಬೃಂಹಿತಂ ಆಗಿರೆ

(ಹೋಗದೆ ಹಾಡುತ್ತಿದ್ದ

ದುಂಬಿಗಳೆ ಆನೆಯ

ಫೀಂಕಾರವು,) ಚಂದ್ರಕಾಂತಿ
ಕಾಯ್ವಾಗಿರೆ ಬೀಸುವೊಂದು
ಅಲರೆ ಬೀಸುವುದು ಆಗಿರೆ
(ಚಂದ್ರನ ಬೆಳುದಿಂಗಳೇ
ಕೋಪವಾಗಿರಲು, ಬೀಸುವ
ಗಾಳಿಯೇ ಬೀಸಣಿಗೆ,)
ಕಾಯ್ಗಳಿಂದಂ ಇಂಬಾಗಿರೆ
(ಕಾಯಿಗಳಿಂದ ಸೊಗಸಾಗಿ)
ಸೋರ್ವ ಸೋನೆ
ಮದಮಾಗಿರೆ (ಸುರಿಯುವ
ನೀರು ಮದವಾಗಿರಲು)

ಮಾವಿನ ಬಂದ ಕೋಡೆ ಕೋಡಾಗಿರೆ (ಮಾವಿನ ಮರದಲ್ಲಿ ಹುಟ್ಟಿಬಂದ ಕೊಂಬೆಗಳೇ ಅದರ ಕೊಂಬು) ಕೋಡುಗೊಂಡು ಪರಿದತ್ತು (ಕೊಂಬು/ದಂತ ಪಡೆದು ತಿವಿಯಿತು) ವಸಂತಗಜಂ ವಿಯೋಗಿಯಂ|

ಪದ್ಯ-೧೫:ಅರ್ಥ:ಆ ವನವನ್ನು ಬಿಟ್ಟು ಹೋಗದೆ ಅಲ್ಲಿಯೇ ಹಾರಾಡುತ್ತಿರುವ

ದುಂಬಿಯೇ ಆನೆಯ
ಘೀಂಕಾರವು, ಬೆಳದಿಂಗಳೇ
ಅದರ ಕೋಪ, ಬೀಸುವ
ಗಾಳಿಯೇ
ಬೀಸಣಿಗೆಯಾಗಿರಲು,
ಕಾಯಿಗಳಿಂದ ಸೊಗಸಾಗಿ
ಸೋರುತ್ತಿರುವ ನೀರೇ
ಮದೋದಕ, ಮಾವಿನ
ಮರದಲ್ಲಿ ಹುಟ್ಟಿಬಂದ
ಕೊಂಬೆಗಳೇ ಅದರ
ಕೊಂಬಾಗಿರಲು,

ವಸಂತಕಾಲವೆಂಬ ಆನೆಯು ವಿರಹಿಯನ್ನು ತನ್ನ ದಂತದಿಂದ ತಿವಿದು ಹರಿಯಿತು, (ಓಡಿತು?).

ಪದ್ಯ - ೧೬

ಪಾಂಡುವಿನ ಮರಣ

ವ|| ಅಂತು ಬಂದ ಬಸಂತದೊಳ್ ಮಾದ್ರಿ ತಾಂ ಗರ್ವವ್ಯಾಲೆಯುಂ ಕ್ರೀಡಾನುಶೀಲೆಯು

ಮಪ್ಪುದಱಿಂ ವನಕ್ರೀಡಾನಿಮಿತ್ತದಿಂ ಪೋಗಿ-

ವಚನ:ಪದವಿಭಾಗ-

ಅರ್ಥ:ಅಂತು ಬಂದ ಬಸಂತದೊಳ್ ಮಾದ್ರಿ ತಾಂ ಗರ್ವವ್ಯಾಲೆಯುಂ (ಮಾದ್ರಿ ತಾನು ಗರ್ವದಿಂದ ಮದವೇರಿ) ಕ್ರೀಡಾನುಶೀಲೆಯು ಮಪ್ಪುದಱಿಂ (ಕ್ರೀಡಾಸಕ್ತೆಯಾಗಿ) ವನಕ್ರೀಡಾನಿಮಿತ್ತದಿಂ ಪೋಗಿ

(ಆಗಿದ್ದುದರಿಂದ ಕಾಡಿನಲ್ಲಿ ಆಟವಾಡುವುದಕ್ಕಾಗಿ ಹೋಗಿ)

ವಚನ:ಅರ್ಥ:ಹಾಗೆ ಬಂದ ವಸಂತದಲ್ಲಿ ಮಾದ್ರಿ ತಾನು ಗರ್ವದಿಂದ ಮದವೇರಿ, ಕ್ರೀಡಾಸಕ್ತೆಯಾಗಿ ವನಕ್ರೀಡೆಯ ಕಾರಣ ಕಾಡಿನಲ್ಲಿ ಹೋಗಿ-

ಚಂ|| ವನಕುಸುಮಂಗಳಂ ಬಗೆಗೆವಂದುವನಟ್ಟಿಯೊಳಾ

ಯ್ದು ಕೊಯ್ದು ಮೆ
ಲ್ಲನೆ ವಕುಳಾಳವಾಳ
ತಳದೊಳ್
ಸುರಿದಂಬುಜಸೂತ್ರದಿಂದೆ ಮ|
ತ್ತನಿತರೊಳಂ ಮುಗುಳ್ಸರಿಗೆ
ತೋಳ್ವಳೆ ಕಂಕಣಾವಾರಮೆಂದು
ಬೇ
ಟ್ಪಿನಿತನೆ ಮಾಡಿ ತೊಟ್ಟು
ಕರಮೊಪ್ಪಿದಳಾಕೆ ಬಸಂತ
ಕಾಂತೆವ್ರೋಲ್|| ೧೬||

ಪದ್ಯ-00:ಪದವಿಭಾಗ-ಅರ್ಥ:ವನಕುಸುಮಂಗಳಂ ಬಗೆಗೆವಂದುವಂ (ಮನಸ್ಸಿಗೆ ಬಂದುದನ್ನು)ಅೞ್ತಿಯೊಳು ಆಯ್ದು ಕೊಯ್ದು (ಪ್ರೀತಿಯಿಂದ ಆರಿಸಿ ಕೊಯಿದು) ಮೆಲ್ಲನೆ ವಕುಳಾಳವಾಳ ತಳದೊಳ್ (ಬಕುಳ ಮರದ ಪಾತಿಯ ತಾಣದಲ್ಲಿ) ಸುರಿದು, ಅಂಬುಜಸೂತ್ರದಿಂದೆ ಮತ್ತೆ

ಅನಿತರೊಳಂ ಮುಗುಳ್
ಸರಿಗೆ ತೋಳ್ವಳೆ ಕಂಕಣವು
ಆರಮ್
ಎಂದು(ತಾವರೆದಂಟಿನ
ದಾರದಿಂದ ಮತ್ತೆ ಅಷ್ಟೂ
ಹೂವುಗಳಲ್ಲೂ ಮೊಗ್ಗಿನ
ಸರಿಗೆ, ತೋಳು ಬಳೆ, ಬಳೆ
ಹಾರ ಎಂದು) ಬೇೞ್ಪಿನಿತನೆ
ಮಾಡಿ (ಬಾಕಾದಷ್ಟು
ಮಾಡಿಕೊಂಡು) ತೊಟ್ಟು
ಕರಂ(ಬಹಳ)

ಒಪ್ಪಿದಳು(ಶೋಭಿಸಿದಳು)
ಆಕೆ ಬಸಂತ ಕಾಂತೆವೋಲ್|

ಪದ್ಯ-00:ಅರ್ಥ:ತನ್ನ ಮನಸ್ಸಿಗೆ ಬಂದಂತಹ ಕಾಡಿನ ಹೂವುಗಳನ್ನು ಪ್ರೀತಿಯಿಂದ ಆರಿಸಿ ಕೊಯ್ದು ಮೆಲ್ಲನೆ ಬಕುಳವೃಕ್ಷದ ಪಾತಿಯ ತಾಣದಲ್ಲಿ ಸುರಿದು, ತಾವರೆಯ ದಂಟಿನ ದಾರದಿಂದ ಮತ್ತಿತರ ಹೂಗಳಿಂದ ಮೊಗ್ಗಿನ ಸರಿಗೆ,

ತೋಳಬಳೆ, ಕೈಬಳೆ, ಹಾರ
ಎಂದು ಬೇಕಾಗುವಷ್ಟು
ಮಾಡಿಕೊಂಡು ಧರಿಸಿ
ಮಾದ್ರಿಯು ವಸಂತ
ಲಕ್ಷ್ಮಿಯಂತೆ ಬಹಳ
ಶೋಭಿಸಿದಳು.

ವ|| ಅಂತು ತೊಟ್ಟ ಪೂದುಡುಗೆ ಮದನನ ತೊಟ್ಟ ಪೂಗಣೆಗೆಣೆಯಾಗಿರೆ-

ವಚನ:ಪದವಿಭಾಗ-

ಅರ್ಥ:ಅಂತು ತೊಟ್ಟ

ಪೂದುಡುಗೆ ಮದನನ ತೊಟ್ಟ
ಪೂಗಣೆಗೆಣೆಯಾಗಿರೆ-
ವಚನ:ಅರ್ಥ:ಹಾಗೆ ಧರಿಸಿದ
ಪುಷ್ಪಗಳ ಆಭರಣಗಳು
ಮನ್ಮಥನು ಪ್ರಯೋಗಿಸಿದ
ಪುಷ್ಪಬಾಣಕ್ಕೆ
ಸಮಾನವಾಗಿರಲು;

**ಚಂ|| ಮಿಳಿರ್ವ ಕುರುಳ್ಗಳೊಳ್
ತೊಡರ್ದ
ದೇಸಿಯನಾವಗಮೀವ ಚೆನ್ನ
ಪೂ**

ಗಳನವನೊಯ್ಯನೋಸರಿಸು
ತುಂ ವದನಾಬ್ಜದ
ಕಂಪನಾಳ್ದುಣಲ್|
ಬಳಸುವ ತುಂಬಿಯಂ ಪಿಡಿದ
ನೆಯ್ದಿಲೊಳೊಯ್ಯನೆ
ಸೋವುತುಂ ಬೆಡಂ
ಗೊಳಕೊಳೆ ಸೊರ್ಕಿದಂಗಜ
ಮತಂಗಜದಂತಿರೆ ಬರ್ಪ
ಮಾದ್ರಿಯಂ|| ೧೭||

ಪದ್ಯ-೧೭:ಪದವಿಭಾಗ-
ಅರ್ಥ:ಮಿಳಿರ್ವ(ಅಲುಗುವ)

ಕುರುಳ್ಗಳೊಳ್ ತೊಡರ್ದು
(ಅಲುಗಾಡುತ್ತಿರುವ
ಮುಂಗುರುಳಿನಲ್ಲಿ
ಸಿಕ್ಕಿಕೊಂಡು) ದೇಸಿಯಂ
(ಚೆಲುವನ್ನು)ಆವಗಂ(ಪೂರ್ಣ
) ಈವ (ಕೊಡುವ) ಚೆನ್ನ
ಪೂಗಳನವಂ (ಚಂದ
ಹೂವುಗಳನ್ನು) ಒನೊಯ್ಯನೆ
ಓಸರಿಸುತುಂ (ಮೆಲ್ಲ ಮಲ್ಲನೆ
ಪಕ್ಕಕ್ಕೆ ಸರಿಸುತ್ತಾ)
ವದನಾಬ್ಜದ ಕಂಪನು ಆಳ್ದು

ಉಣಲ್ (ಮುಖಕಮಲದ
ಪರಿಮಳವನ್ನು ಪಡೆದು
ಉಣ್ಣುವುಕ್ಕಾಗಿ) ಬಳಸುವ
(ಮುತ್ತುವ) ತುಂಬಿಯಂ
(ದುಂಬಿಗಳನ್ನು) ಪಿಡಿದ
ನೆಯ್ದಿಲೊಳು ಒಯ್ಯನೆ
ಸೋವುತುಂ (ಕೈಯ್ಯಲ್ಲಿ
ಹಿಡಿದಿದ್ದ ಕಮಲದಿಂದ
ಮೆಲ್ಲನೆ ಓಡಿಸುತ್ತಾ) ಬೆಡಂಗು
ಒಳಕೊಳೆ (ಬೆಡಂಗಿನಿಂದ
ಕೂಡಿ) ಸೊರ್ಕಿದ ಅಂಗಜ

(ಮನ್ಮಥ) ಮತಂಗಜದಂತಿರೆ ಬರ್ಪ (ಬೆಡಂಗಿನಿಂದ ಕೂಡಿ ಸೊಕ್ಕಿದ ಮನ್ಮಥನ ಮದ್ದಾನೆಯಂತೆ ಬರುತ್ತಿದ್ದ) ಮಾದ್ರಿಯಂ|| ೧೭

ಪದ್ಯ-೧೭:ಅರ್ಥ:.
ಅಲುಗುವ ಮುಂಗುರುಳುಗಳಲ್ಲಿ ಸಿಕ್ಕಿಕೊಂಡು ವಿಶೇಷ ಸೌಂದರ್ಯವನ್ನುಂಟುಮಾಡುತ್ತಿರುವ ಸೊಗಸಾದ

ಹೂವುಗಳನ್ನು ಮೆಲ್ಲ ಮಲ್ಲನೆ
ಪಕ್ಕಕ್ಕೆ ಸರಿಸುತ್ತಾ,
ಮುಖಕಮಲದ
ಪರಿಮಳವನ್ನು ಪಡೆದು
ಉಣ್ಣುವುಕ್ಕಾಗಿ
ಮುತ್ತಿಕೊಳ್ಳುತ್ತಿರುವ
ದುಂಬಿಯನ್ನು ಕೈಯ್ಯಲ್ಲಿ
ಹಿಡಿದಿದ್ದ ಕಮಲದಿಂದ
ಮೆಲ್ಲನೆ ಓಡಿಸುತ್ತಾ
ಬೆಡಂಗಿನಿಂದ ಕೂಡಿ, ಸೊಕ್ಕಿದ

ಮನ್ಮಥನ ಮದ್ದಾನೆಯಂತೆ
ಬರುತ್ತಿದ್ದ ಮಾದ್ರಿಯನ್ನು-

ವ|| ತಾಪಸಾಶ್ರಮದಿಂ ಪೊಱಮಟ್ಟಂತೆ ಬನಮಂ ತೊಳಲ್ವ ಪಾಂಡುರಾಜಂ ಕಂಡು-

ವಚನ:ಪದವಿಭಾಗ-

ಅರ್ಥ:ತಾಪಸ ಆಶ್ರಮದಿಂ ಪೊಱಮಟ್ಟಂತೆ ಬನಮಂ ತೊಳಲ್ವ ಪಾಂಡುರಾಜಂ ಕಂಡು

ವಚನ:ಅರ್ಥ:ತಾಪಸ್ವಿಗಳ ಆಶ್ರಮದಿಂದ ಹೊರಗೆಹೊರಟವನು ಕಾಡಿನಲ್ಲಿ ಅಡ್ಡಾಡುತ್ತಿದ್ದ ಪಾಂಡುರಾಜನು ಮಾದ್ರಿಯನ್ನು ನೋಡಿ-

ಚಂ|| ಸೊಗಯಿಸೆ ತೊಟ್ಟ ಪೂದುಡುಗೆ ಮೆಲ್ಲೆರ್ದೆಯೊಳ್ ತಡಮಾಡೆ ಗಾಡಿ ದಿ ಟ್ಟಿಗಳೊಳನಂಗರಾಗರಸಮು ಣ್ಮುವಿನಂ ನಡೆ ನೋಡಿ

ನೋಡಿ ತೊ|
ಟ್ಟಗೆ ಕೊಳೆ ಮೇಲೆ
ಪಾಯ್ದವಳನಪ್ಪಿದನಾ ವಿಭು
ತನ್ನ ಶಾಪಮಂ
ಬಗೆಯದೆ
ಮಿೞ್ತುದೇವತೆಯನಪ್ಪುೞಿಳು
ಕೆಯ್ಯಿನಪ್ಪುವಂತೆವೋಲ್||
೧೮||

ಪದ್ಯ-೧೮:ಪದವಿಭಾಗ-
ಅರ್ಥ: ಸೊಗಯಿಸೆ ತೊಟ್ಟ
ಪೂದುಡುಗೆ ಮೆಲ್ಲ್

ಎರ್ದೆಯೊಳ್ ತಡಂ ಆಡೆ (ಮಾದ್ರಿ, ಧರಿಸಿದ ಹೂವಿನ ಅಲಂಕಾರವು ಅವನ ಮೃದುವಾದ ಹೃದಯದಲ್ಲಿ ಮೆಲ್ಲಗೆ ಆಡುತ್ತಿರಲು) ಗಾಡಿ (ಆಂದವು) ದಿಟ್ಟಿಗಳೊಳ್ ಅನಂಗ ರಾಗರಸಂ ಉಣ್ಮುವಿನಂ (ಅವಳ ಸೌಂದರ್ಯವು ಅವನ ಕಣ್ಣುಗಳಲ್ಲಿ ಕಾಮರಸ ಉಕ್ಕುತ್ತಿರಲು) ನಡೆ ನೋಡಿ

ನೋಡಿ ತೊಟ್ಟಗೆ ಕೊಳೆ
(ಕಣ್ಣಿಟ್ಟು ನೋಡಿನೋಡಿ
ಬೇಗನೆ ಹಿಡಿಯಲು) ಮೇಲೆ
ಪಾಯ್ದು -ಅವಳನು
ಅಪ್ಪಿದನು-> ಆ ವಿಭು (ಆ
ರಾಜನು) ತನ್ನ ಶಾಪಮಂ
ಬಗೆಯದೆ. (ತನ್ನ ಶಾಪವನ್ನು
ಲೆಕ್ಕಿಸದೆ)
ಮಿೞ್ತುದೇವತೆಯನು
(ಮೃತ್ಯುದೇವತೆಯನ್ನು)
ಅೞ್ಕಱೞ್ಕರ್ಕೆಯಿನು

(ಅತಿಶಯ ಪ್ರೀತಿಯಿಂದ)
ಆಪ್ಪುವಂತೆ ವ್ಪೋಲ್
(ಅವಳನು ಅಪ್ಪಿದನು)
ಪದ್ಯ-೧೮:ಅರ್ಥ:ಮಾದ್ರಿ
ಧರಿಸಿದ ಹೂವಿನ
ಅಲಂಕಾರವು ತನ್ನ
ಮೃದುವಾದ ಹೃದಯದಲ್ಲಿ
ಮೆಲ್ಲಗೆ ಆಡುತ್ತಿರಲು, ಅವಳ
ಸೌಂದರ್ಯವು ಅವನ
ಕಣ್ಣುಗಳಲ್ಲಿ ಕಾಮರಸ
ಉಕ್ಕುತ್ತಿರಲು, ಕಣ್ಣಿಟ್ಟು

ನೋಡಿನೋಡಿ ಬೇಗನೆ ಹಿಡಿಯಲು, ಮೇಲೆ ನುಗ್ಗಿ ಅವಳನ್ನು ರಾಜನಾದ ಪಾಂಡುವು ತನಗಿದ್ದ ಶಾಪವನ್ನು ಲೆಕ್ಕಿಸದೆ, ಅತಿಶಯ ಪ್ರೀತಿಯಿಂದ ಮೃತ್ಯುದೇವತೆಯನ್ನಪ್ಪುವಂತೆ ಅವಳನ್ನು (ಮಾದ್ರಿಯನ್ನು) ಅಪ್ಪಿದನು.

ವ|| ಅಂತಪ್ಪುವುದುಂ ವಿಷಮ ವಿಷವಲ್ಲಿಯನಪ್ಪಿದಂತೆ ತಳ್ತ

ನಲ್ಲಳ ಮೃದು ಮೃಣಾಳ ಕೋಮಳ ಬಾಹುಪಾಶಂಗಳೆ ಯಮಪಾಶಂಗಳಾಗೆ-

ವಚನ:ಪದವಿಭಾಗ-

ಅರ್ಥ:ಅಂತು ಅಪ್ಪುವುದುಂ ವಿಷಮ (ಕೇಡಿನ) ವಿಷವಲ್ಲಿಯನು (ವಿಷದ ಬಳ್ಳಿಯನ್ನು) ಅಪ್ಪಿದಂತೆ ತಳ್ತ ನಲ್ಲಳ ಮೃದು ಮೃಣಾಳ ಕೋಮಳ ಬಾಹುಪಾಶಂಗಳೆ(ಹಾಗೆ

ಅಪ್ಪಿದ ಪ್ರಿಯಳ ಕೋಮಲವಾದ ತಾವರೆ ದಂಟಿನಂತೆ ಲಲಿತವಾದ ತೋಳುಗಳೆಂಬ ಹಗ್ಗಗಳೇ) ಯಮಪಾಶಂಗಳಾಗೆ-

ವಚನ:ಅರ್ಥ:ಹಾಗೆ ವಿಷದ ಬಳ್ಳಿಯನ್ನು ಆಲಿಂಗನ ಮಾಡುವಂತೆ ಅವಳನ್ನು ಅಪ್ಪಿಕೊಳ್ಳಲು ಆ ಪ್ರಿಯಳು ಹಾಗೆ ಅಪ್ಪಿದ ಪ್ರಿಯಳ ಕೋಮಲವಾದ ತಾವರೆ

ದಂಟಿನಂತೆ ಲಲಿತವಾದ ತೋಳುಗಳೆಂಬ ಹಗ್ಗಗಳೇ ಯಮಪಾಶವಾಗಲು-

ಚಂ|| ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದಮೊಯ್ಯಗೊಯ್ಯಗೆ ನಗೆಗಣ್ಗಳಾಲಿ ಮಗುಳ್ದಿಂತಿರೆ ಮುಚ್ಚಿರೆ ಸುಯ್ಯಡಂಗೆ ಮೆ|

ಲ್ಲಗೆ ಮಱಿಸೊಂದಿದಂದದೊಳೆ

ಜೋಲ್ದ ನಿಜೇಶನನಾ ಲತಾಂಗಿ

ತೊ

ಟ್ಟಗೆ ಕೊಳೆ ನೋಡಿ

ಕೆಟ್ಟೆನಿನಿಯಂ

ಮಱಿಸೊಂದಿದನೋ

ಬಱಿಲ್ದನೋ|| ೧೯ ||

ಪದ್ಯ-೧೯:ಪದವಿಭಾಗ-

ಅರ್ಥ:ಬಿಗಿದು ಅಮರ್ದಿರ್ದ

ತೋಳ್ ಸಡಿಲೆ ಜೋಲೆ

ಮೊಗಂ ಮೊಗದಿಂದಂ

ಒಯ್ಯಗೊಯ್ಯಗೆ (ಬಿಗಿಯಾಗಿ ಅಪ್ಪಿಕೊಂಡಿದ್ದ ತೋಳು ಸಡಿಲವಾಗಲು ಮುಖವು ಜೋತುಬೀಳಲು, ಮಲ್ಲಮೆಲ್ಲಗೆ ಮುಖದಲ್ಲಿದ್ದ) ನಗೆಗಣ್ಗಳಾಲಿ ಮಗುಬ್ದಿಂತಿರೆ ಮುಚ್ಚಿರೆ ಸುಯ್ಯಡಂಗೆ (ನಗೆಯ ಕಣ್ಣುಗಳ ಪಾಪೆಗಳು ಕಾಂತಿಹೀನವಾಗಿ ಮುಚ್ಚಿರಲು ಉಸಿರಾಟವು ನಿಂತುಹೋಗಲು) ಮೆಲ್ಲಗೆ

ಮಱಸೊಂದಿದ
ಅಂದದದೊಳೆ (ನಿಧಾನವಾಗಿ
ಪ್ರಜ್ಞೆತಪ್ಪಿದವನಂತೆ) ಜೋಲ್ದ
ನಿಜೇಶನನು ಆ ಲತಾಂಗಿ
ತೊಟ್ಟಗೆ ಕೊಳೆ ನೋಡಿ
(ಜೋತುಬಿದ್ದ ತನ್ನ ಪತಿಯನ್ನು
ಆ ಮಾದ್ರಿಯು
ದಿಟ್ಟಿಸಿನೋಡಿ), ಕೆಟ್ಟೆನು
ಇನಿಯಂ
ಮಱಸೊಂದಿದನೋ(ಪತಿ
ಯು ಮೂರ್ಛೆ ಹೋದನೋ)

ಬಚಿಲ್ದನೋ (ಬಳಲಿದ್ದಾನೋ) ಎಂದು ಮಾದ್ರಿ ಗಾಬರಿಯಾದಳು.

ಪದ್ಯ-೧೯:ಅರ್ಥ:ಬಿಗಿಯಾಗಿ ಅಪ್ಪಿಕೊಂಡಿದ್ದ ತೋಳು ಸಡಿಲವಾಗಲು ಮುಖವು ಜೋತುಬೀಳಲು ಮಲ್ಲಮೆಲ್ಲಗೆ ಮುಖದಲ್ಲಿದ್ದ ನಗೆಯ ಕಣ್ಣುಗಳ ಪಾಪೆಗಳು ಕಾಂತಿಹೀನವಾಗಿ ಮುಚ್ಚಿರಲು, ಉಸಿರಾಟವು

ನಿಂತುಹೋಗಲು,
ನಿಧಾನವಾಗಿ
ಪ್ರಜ್ಞೆತಪ್ಪಿದವನಂತೆ
ಜೋತುಬಿದ್ದ ತನ್ನ ಪತಿಯನ್ನು
ಆ ಮಾದ್ರಿಯು ದಿಟ್ಟಿಸಿನೋಡಿ,
ಕೆಟ್ಟೆನು; ಪತಿಯು ಮೂರ್ಛೆ
ಹೋದನೋ ಇಲ್ಲವೇ
ಬಳಲಿದ್ದಾನೋ ಎಂದು
ಮಾದ್ರಿ, ಗಾಬರಿಯಾದಳು.

ವ|| ಎಂದು ಪಱಿಪಟ್ಟು
ಸುಯ್ಯುಮಂ ಕೋಡುವ

ಮೆಯ್ಯುಮಂ ಕಂಡು ಪರಲೋಕ ಪ್ರಾಪ್ತನಾದುದನಱಿತು-

ಎಂದು ಪಱಿಪಟ್ಟ (ಹರಿದ -ತುಂಡಾದ) ಸುಯ್ಯುಮಂ (ನಿಂತ ಉಸಿರು) (ಉಸಿರನ್ನು) ಕೊಡುವ (ತಣ್ಣನೆ) ಮೆಯ್ಯುಮಂ (ತಣ್ಣಗಾದ ದೇಹವನ್ನೂ) ಕಂಡು ಪರಲೋಕ ಪ್ರಾಪ್ತನಾದುದನು ಅಱಿತು (ಮರಣಹೊಂದಿದನು ಎಂದು ತಿಳಿದು)-

ವಚನ:ಪದವಿಭಾಗ-ಅರ್ಥ:

ವಚನ:ಅರ್ಥ:ಎಂದು ನಿಂತುಹೋದ ಉಸಿರನ್ನೂ ತಣ್ಣಗಾದ ದೇಹವನ್ನೂ ನೋಡಿ ಪತಿ

ಮರಣಹೊಂದಿದನು ಎಂದು ತಿಳಿದಳು.

<u>ಮಾದ್ರಿ ಕುಂತಿ ವಿಲಾಪ</u>

ಕಂ|| ತಾಪಸನ
ಶಾಪಮೆಂಬುದು
ಪಾಪದ
ರೂಪಱಿತುಮಱಿಯದಂತೇಕೆ
ಮನಂ|
ಗಾಪಱಿದು ಬಂದು ಮುಟ್ಟಿದೆ

::ಕುಮಾರವ್ಯಾಸ ಭಾರತದಲ್ಲಿ;

ಪಾಂಡು ಮೈಮರೆದು ಮಲಗಿದ:

ಆ ಸುಖದ ಝೋಂಪಿನಲಿ ಮೈಮರೆ
ದೋಸರಿಸಿದುದು ವದನ ಕಂಗಳು
ಪೈಸರಿಸಿದವು ತೆಕ್ಕೆ ಸಡಲಿತು ದೇಹ ಬಾರಿಸಿತು
ಸೂಸಿದುದು ನಿಟ್ಟುಸುರು ರಾಣೀ
ವಾಸದುರದಲಿ ಕದಪನಿಟ್ಟು ಮ
ಹೀಶನೊರಗಿದ ಹದನ ಕಂಡಳು ಕಾಂತೆ ಭೀತಿಯಲಿ||೧೬||(೫)

ಮಾದ್ರಿಯ ಶೋಕ:

ಅಕಟ ಪಾಂಡು ಮಹೀಶ ವಿಷಕ
ನ್ನಿಕೆಯನೆನ್ನನು ಮುಟ್ಟಿದೈ ಬೇ
ಡಕಟ ಕೆಡಿಸದಿರೆನ್ನೆನ್ನೇ ತಾನರಿಯನೇ ಹದನ
ಪ್ರಕಟ ಕುರುಕುಲ ತಿಲಕರೀ ಬಾ
ಲಕರನಾರಿಗೆ ಕೊಟ್ಟೆ ತನ್ನೊಡ
ನಕಟ ಮುನಿದೈ ಮಾತಾನಾಡೆಂದೊರಲಿದಳು ಮಾದ್ರಿ||೧೭||(೫)

ಮಾದ್ರಿ ತಾನೇ ಸಹಗಮನಕ್ಕೆ:

ಮರುಳೆಲೌ ನೀವಕ್ಕ ನಿಮ್ಮೈ
ವರು ಕುಮಾರರು ನಿಮ್ಮ ಕೈಯೆಡೆ
ಧರಣಿಪತಿ ನಿಡು ನಿದ್ರೆಗೈದನು ನನ್ನ ತೋಳಿನಲಿ
ಸುರವಧುಗಳೊಡನಿರಲಿ ನಿನ್ನಯ
ಹರಿಬವೆನ್ನದು ನೋಡು ತನ್ನಯ
ಪರಿಯನೀತನ ನಿನಗೆ ಕೊಡೆನೆಂದಂಘ್ರಿಗೆರಗಿದಳು||೨೩|| (೫)

ಯೋಪನೆ ನೀನೆನ್ನ ಪಾಪಕರ್ಮಿಯ ಮೆಯ್ಯಂ|| ೨೦||

ಪದ್ಯ-೨೦:ಪದವಿಭಾಗ-ಅರ್ಥ:ತಾಪಸನ ಶಾಪಮೆಂಬುದು ಪಾಪದ ರೂಪ ಅಱಿತುಂ ಅಱಿಯದಂತೆ ಏಕೆ ಮನಂಗಾಪಱಿದು (ಮನದ ಕಾಪು- ಕಾವಲು, ಅರಿದು- ಕತ್ತರಿಸಿ) ಬಂದು ಮುಟ್ಟಿದೆಯ

ಓಪನೆ (ಪ್ರಿಯನೇ ಸ್ನೇಹನೇ?; ಪ್ರೀತಿಯಿಂದ ಒಪ್ಪಿದವನು ಓಪ?) ನೀನು ಎನ್ನ ಪಾಪಕರ್ಮಿಯ ಮೆಯ್ಯಂ.

ಪದ್ಯ-೨೦:ಅರ್ಥ:ಪ್ರಿಯನೇ (ಪಾಂಡುವೇ) ಋಷಿಯ ಶಾಪವು ಪಾಪದ ರೂಪವು; ತಿಳಿದೂ ತಿಳಿಯದಂತೆ ನಿನ್ನ ಮನಸ್ಸಿನ ಸಂಯಮವನ್ನು ಕಡಿದುಕೊಂಡು ಬಂದು

ಪಾಪಿಷ್ಠಳಾದ ನನ್ನ ಶರೀರವನ್ನು ಏಕೆ ಮುಟ್ಟಿದೆ?

ನೀನ್ನಿನ್ನ ಪಾವನದನೆನ ಪುನ್ನೆನೆಯದೆ ನೆರೆವೆನೆಂಬ ಬಗೆಯೊಳ್ ಬಂದೈ|
ನಿನ್ನೊಡನೆ ವಂದು ದಿವದೊಳ್ ನಿನ್ನ ಮನೋರಥಮನರಸ ನೆಱಪದೆ ಮಾಣೆಂ|| ೨೧ ||

ಪದ್ಯ-೨೧:ಪದವಿಭಾಗ-ಅರ್ಥ:ನೀಂ ನಿನ್ನ ಪಾವನು ಅದನು ಎನಸುಂ ನೆನೆಯದೆ

ನೆರೆವೆನು (ಸೇರುವೆನು) ಎಂಬ ಬಗೆಯೊಳ್ ಬಂದೈ ನಿನ್ನೊಡನೆ ವಂದು(ಬಂದು) ದಿವದೊಳು(ಸ್ವರ್ಗದಲ್ಲಿ) ನಿನ್ನ ಮನೋರಥಮನು (ಆಸೆಯನ್ನು) ಅರಸ! ನೆಱಪದೆ (ನೆರವೇರಿಸುವೆ), ಮಾಣೆಂ(ಬಿಡೆನು)

ಪದ್ಯ-೨೧:ಅರ್ಥ:೨೧. ನೀನು ನಿನ್ನ ಸಾವನ್ನು ಸ್ವಲ್ಪವೂ ಯೋಚಿಸದೆ ನಿನ್ನೊಡನೆ

ಕೊಡುತ್ತೇನೆ ಎಂಬ
ಮನಸ್ಸಿನಿಂದ ಬಂದಿದ್ದೀಯೇ!
ನಾನೂ ನಿನ್ನೊಡನೆ ಬಂದು
ಸ್ವರ್ಗದಲ್ಲಿ) ನಿನ್ನ ಆಸೆಯನ್ನು
ಅರಸನೇ! ನೆರವೇರಿಸುವೆನು,
ಹಾಗೆ ಮಾಡದೆ ಬಿಡೆನು.
ಎಂದಳು ಮಾದ್ರಿ.

ಉನ್ನತ ಧವಳಚ್ಛತ್ರ
ಚ್ಛನ್ನ
ವಿಯತ್ತಳನನಿಂದುಕುಳತಿಳಕನ
ನಿಂ|

ತನ್ನೆಯದಿಂದೀ ಪಟುವಿನೊ ಳೆನ್ನರಸನನಿಂತು ಬಿದಿಯೆ ತಂದಿಕ್ಕುವುದೇ|| ೨೨

ಪದ್ಯ-೨೨:ಪದವಿಭಾಗ-ಅರ್ಥ:ಉನ್ನತ ಧವಳಚ್ಛತ್ರಚ್ಛನ್ನ ವಿಯತ್ತಳನನು (ಧವಳ ಛತ್ರ ಅಚ್ಛನ್ನ -ಬಿಳಿ ಛತ್ರ ಅಚ್ಛನ್ನ ವಿಯತ್ತಳ) ಇಂದುಕುಳತಿಳಕನನು (ಚಂದ್ರವಂಶಶ್ರೇಷ್ಠನು) ಇಂತು

ಅನ್ನೆಯದಿಂದು (ಅನ್ಯಾಯವಾಗಿ) ಈ ಪೞುವಿನೊಳು (ಕಾಡಿನಲ್ಲಿ) ಎನ್ನ ಅರಸನನು ಇಂತು ಬಿದಿಯೆ (ವಿಧಿಯೆ)ತಂದು ಇಕ್ಕುವುದೇ(ಎಸೆಯುವುದೇ?)

ಪದ್ಯ-೨೨:ಅರ್ಥ:ಅಯ್ಯೋ ವಿಧಿಯೇ, ಎತ್ತರವಾದ (ರಾಜಚಿನ್ಹೆ) ತನ್ನ ಶ್ವೇತ ಛತ್ರದಿಂದ ಆಕಾಶವನ್ನೆಲ್ಲ ಮುಚ್ಚಿದವನೂ

ಚಂದ್ರವಂಶಶ್ರೇಷ್ಠನಾದವನೂ ಆದ ಪತಿಯನ್ನು ಹೀಗೆ ಅನ್ಯಾಯವಾಗಿ ಕಾಡಿನಲ್ಲಿ ತಂದು ಎಸೆಯುವುದೇ?

ವ|| ಎಂದು ವನದೇವತೆಗಳ್ಗೆಲ್ಲಂ ಕರುಣಮಾಗೆ ಪಳಯಿಸುವ ಮಾದ್ರಿಯ ಸರಮಂ ಕುಂತಿ ಕೇಳ್ದು ಭೋಂಕನೆರ್ದೆರೆದು-

ವಚನ:ಪದವಿಭಾಗ-

ಅರ್ಥ:ಎಂದು ವನದೇವತೆಗಳ್ಗೆ

ಎಲ್ಲಂ ಕರುಣಮಾಗೆ ಪಳಯಿಸುವ (ಪ್ರಲಾಪಿಸುವ) ಮಾದ್ರಿಯ ಸರಮಂ (ಸ್ವರ-ಸದ್ದನ್ನು) ಕುಂತಿ ಕೇಳ್ದು ಭೋಂಕನೆ ಎರ್ದೆರೆದು-(ಎದೆಬಿರಿದು)

ವಚನ:ಅರ್ಥ:ಎಂದು ಎಲ್ಲಾ ವನದೇವತೆಗಳಿಗೆ ಮರುಕ ಹುಟ್ಟುವ ಹಾಗೆ ಅಳುತ್ತಿದ್ದ ಮಾದ್ರಿಯ ಆ ಸದ್ದನ್ನು ಕುಂತಿ ಕೇಳಿ ಥಟ್ಟನೆ ಎದೆಬಿರಿದು

ಕಂ|| ಆ ದೆಸೆಯೊಳ್
ಭೂಭುಜನೋ
ಆ ದೆಸೆಯೊಳ್ ಮಾದ್ರಿ ನೆಗೆವ
ಕರುಣಾರವಮಂ|
ತಾ ದೆಸೆಯೊಳ್ ಭೂಪತಿಗೇ
ನಾದುದೊ ಪೇಟ್ ಬಿದಿಯೆ
ಕೆಟ್ಟೆನಟಿದೆನೆನುತ್ತುಂ|| ೨೩||

ಪದ್ಯ-೨೩:ಪದವಿಭಾಗ-ಅರ್ಥ:ಆ ದೆಸೆಯೊಳ್ ಭೂಭುಜನೋ (ರಾಜನೋ) ಆ ದೆಸೆಯೊಳ್ ಮಾದ್ರಿ ನೆಗೆವ

ಕರುಣಾರವಮಂ (ಹಾರಿ
ಬರುವ ಶೋಕದ ರವ-ಸದ್ದು)
ತಾ -(ಆ) ದೆಸೆಯೊಳ್
ಭೂಪತಿಗೇನಾದುದೊ
(ರಾಜನಿಗೇನಾಯಿತೋ)
ಪೇೞ್ ಬಿದಿಯೆ (ಹೇಳು
ವಿಧಿಯೇ) ಕೆಟ್ಟೆಂ ಅೞಿದೆಂ
ಎನುತ್ತುಂ (ಹೇಳು ಕೆಟ್ಟೆ,
ಅಳಿದೆ- ಸತ್ತೆ, ಎನ್ನುತ್ತಾ,
(ಎಂದು ಚೀರಿದಳು)

ಪದ್ಯ-೨೩:ಅರ್ಥ:ಯಾವ ದಿಕ್ಕಿನಲ್ಲಿ ರಾಜನು ಹೋದನು ಆ ದಿಕ್ಕಿನಿಂದಲೇ ಮಾದ್ರಿಯ ಕುರಣಾಮಯವಾದ ಧ್ವನಿಯೂ (ಕೇಳಿಬರುತ್ತಿದೆ), ಹೇಳು ವಿಧಿಯೇ ನನ್ನ ರಾಜನಿಗೆ ಏನಾಗಿದೆಯೋ ;ಹೇಳು ಸತ್ತೆ, ಕೆಟ್ಟೆ, ಎಂದು ಚೀರಿದಳು.

ಬಟಿಯನೆ ಮಕ್ಕಳ್ ಭೋರ್ಗರೆ

ದಱಿತುಂ ಪೆಱ ಪೆಱಗನಂತೆ ಪರಿತರೆ ಮುಡಿ ಬಿ| ಟ್ಟ(ಟೆ)ಱಲೆ ನಡುನಡುಗೆ ಕಣ್ಣೀರ್ ಗಱಗಱನೊರ್ಮೊದಲೆ ಸುರಿಯೆ ಪರಿತಂದಾಗಳ್|| ೨೪||

ಪದ್ಯ-00:ಪದವಿಭಾಗ-ಅರ್ಥ:ಬೞಿಯನೆ (ಹಿಂದೆಯೇ) ಮಕ್ಕಳ್ ಭೋರ್ಗರೆದು ಅೞುತುಂ

(ಮಕ್ಕಳು ಭೋರ್ಗರೆದು
ಅಳುತ್ತಾ) ಪೆಱ ಪೆಱಗನಂತೆ
ಪರಿತರೆ (ಜೊತೆಜೊತೆಗೇ
ಬೆನ್ನುಹಿಂದೆ ಓಡಿಬರಲು,)
ಮುಡಿ ಬಿಟ್ಟ ಅೞಲೆ (ತುರುಬು
ಬಿಚ್ಚಿ ಜೋಲಾಡುತ್ತಿರಲು)
ನಡು (ಸೊಂಟ) ನಡುಗೆ
ಕಣ್ಣೀರ್ ಗೞಗೞನೆ
ಒರ್ಮೊದಲೆ (ಒಟ್ಟಿಗೆ)ಸುರಿಯೆ
ಪರಿತಂದಾಗಳ್
(ಓಡಿಬಂದಾಗ)

ಪದ್ಯ-00:ಅರ್ಥ:ಮಕ್ಕಳು ಭೋರ್ಗರೆದು ಅಳುತ್ತಾ ಬೆನ್ನಹಿಂದೆಯೇ ಬರುತ್ತಿರಲು, ತಲೆಯ ತುರುಬು ಬಿಚ್ಚಿ ಕೆಳಗೆ ಜೋಲಾಡುತ್ತಿರಲು, ಸೊಂಟವು ನಡುಗುತ್ತಿರಲು, ಕಣ್ಣೀರು ಗಳಗಳನೆ ಧಾರಾಕಾರವಾಗಿ ಸುರಿಯುತ್ತಿರಲು ಕುಂತಿಯು ಓಡಿಬಂದಳು.

ವ|| ಅಂತು ತನ್ನ ನಲ್ಲನ ಕಳೇವರಮಂ ತೞ್ಕೈಸಿಕೊಂಡು ತನ್ನ ಸಾವಂ ಪರಿಚ್ಛೇದಿಸಿ ಪಲ್ಲಂ ಸುರಿಯುತ್ತುಮಿರ್ದ ಮಾದ್ರಿಯಂ ಕಂಡು ಕುಂತಿ ನೆಲದೊಳ್ ಮೆಯ್ಯನೀಡಾಡಿ ನಾಡಾಡಿಯಲ್ಲದೆ ಪಳಯಿಸಿ-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ನಲ್ಲನ ಕಳೇವರಮಂ

ತೆಕ್ಕೈಸಿಕೊಂಡು ತನ್ನ ಸಾವಂ
ಪರಿಚ್ಛೇದಿಸಿ (ನಿಷ್ಕರ್ಷೆ ಮಾಡಿ)
ಪಲ್ಲಂ (ಹಲ್ಲನ್ನು)
ಸುರಿಯುತ್ತುಂ ಇರ್ದ
ಮಾದ್ರಿಯಂ ಕಂಡು ಕುಂತಿ
ನೆಲದೊಳ್ ಮೆಯ್ಯನೀಡಾಡಿ
ನಾಡಾಡಿಯಲ್ಲದೆ ಪಳಯಿಸಿ-
ವಚನ:ಅರ್ಥ:ತನ್ನ ಪ್ರಿಯನ
ದೇಹವನ್ನು ತಬ್ಬಿಕೊಂಡು ತನ್ನ
ಸಾವನ್ನು ನಿಷ್ಕರ್ಷೆ
ಮಾಡಿಕೊಂಡು ಹಲ್ಲನ್ನು

ಬಿಟ್ಟುಕಿರಿಯುತ್ತ ಇದ್ದ (?) ಮಾದ್ರಿಯನ್ನು ಕಂಡು ಕುಂತಿಯು ನೆಲದಲ್ಲಿ ಬಿದ್ದು ಹೊರಳಾಡಿ ಬಹಳವಾಗಿ ಅತ್ತಳು.

ಕಂ||

ಅಡವಿಯೊಳೆನ್ನುಮನೆನ್ನೀ
ನಡಪಿದ ಶಿಶುಗಳುಮನಿಸಿರಿಸಿ
ನೀಂ ಪೇಟದೆ ಪೋ|
ದೊಡಮೇನೋ ನಿನ್ನ
ಬಟೆಯನೆ

ನಡೆತರ್ಪೆಂ ನಿನ್ನರಸ ಬಿಸುಟೆಂತಿರ್ಪೆಂ|| ೨೫||

ಪದ್ಯ-೨೫:ಪದವಿಭಾಗ-ಅರ್ಥ:ಅಡವಿಯೊಳ್ ಎನ್ನುಮಂ ಎನ್ನ ಈ ನಡಪಿದ (ನನ್ನನ್ನೂ ಈ ಸಾಕಿದ) ಶಿಶುಗಳುಮನು ಇರಿಸಿರಿಸಿ (ಕಾಡಿನಲ್ಲಿ ಬಿಟ್ಟು) ನೀಂ ಪೇಳದೆ ಪೋದೊಡಮ್ (ಹೋದರೆ)ಏನೋ ನಿನ್ನ ಬಳಿಯನೆ ನಡೆತರ್ಪೆಂ (ನಿನ್ನ

ಜೊತೆಗೇ ಬರುವೆನು) ನಿನ್ನ ಅರಸ ಬಿಸುಟು (ಬಿಟ್ಟು)ಎಂತು ಇರ್ಪೆಂ (ಹೇಗೆ ಇರಲಿ! ಇರಲಾರೆ)

ಪದ್ಯ-೨೫:ಅರ್ಥ:ಈ ಕಾಡಿನಲ್ಲಿ ನನ್ನನ್ನೂ ಸಾಕಿದ ಈ ಮಕ್ಕಳನ್ನೂ ಬಿಟ್ಟು ನೀನು ಹೋದರೆ ತಾನೆ ಏನು? ನಾನು ನಿನ್ನ ಹಿಂದೆಯೇ ಬರುತ್ತೇನೆ. ರಾಜನೇ ನಿನ್ನನ್ನು ಬಿಟ್ಟು ನಾನು ಹೇಗಿರಬಲ್ಲೆ?

ವ|| ಎಂದು ನೀನೀ ಕೂಸುಗಳಂ ಕೈಕೊಂಡು ನಡಪು ನಲ್ಲನನೆನಗೊಪ್ಪಿಸಾನಾತನಾ ದುದನಪ್ಪೆನೆನೆ ಮಾದ್ರಿಯಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಎಂದು ನೀನೀ ಕೂಸುಗಳಂ ಕೈಕೊಂಡು (ಮಾದ್ರಿಗೆ,ನೀನು ಈ ಮಕ್ಕಳನ್ನು ಸ್ವೀಕರಿಸಿ) ನಡಪು

(ಸಾಕು) ನಲ್ಲನನು ನನಗೊಪ್ಪಿಸು ಆನು ಆತನು ಆದುದನು ಅಪ್ಪೆನು ಎನೆ ಮಾದ್ರಿ, ಇಂತು ಎಂದಳ್ (ಹೀಗೆ ಹೇಳಿದಳು)-

ವಚನ:ಅರ್ಥ:ಎಂದು ಮಾದ್ರಿಯನ್ನು ಕುರಿತು ನೀನು ಈ ಮಕ್ಕಳನ್ನು ಸ್ವೀಕರಿಸಿ ಸಲಹು; ಪ್ರಿಯನನ್ನು ನನಗೊಪ್ಪಿಸು, ಅವನಾದುದನ್ನು (ಸಾವನ್ನು

)ನಾನು ಆಗುತ್ತೇನೆ, ಎನ್ನಲು ಮಾದ್ರಿ ಹೀಗೆಂದಳು-

ಕಂ|| ಎನಗಿಂದಿನೊಂದು ಸೂೞುಮ
ನಿನಿಯಂ ದಯೆಗೆಯ್ದನೆನ್ನ ಸೂೞಿಂ ನಿನಗಾ|
ನೆನಿತಾದೊಡಮೀವೆನೆ ಮ
ತ್ತನಯರ್ ಕೆಯ್ಯೆಡೆ ಪಲುಂಬದಿರ್ ಪೆೞಪೆೞವಂ||
೨೬||

ಪದ್ಯ-೨೬:ಪದವಿಭಾಗ-ಅರ್ಥ:ಎನಗೆ ಇಂದಿನ ಒಂದು ಸೂಱುಮಂ (ಒಂದು ಸರದಿಯನ್ನು) ಇನಿಯಂ ದಯೆಗೆಯ್ದನು (ಗಂಡನು ಕೊಟ್ಟನು) ಎನ್ನ ಸೂಱಂ (ಸರದಿಯನ್ನು) ನಿನಗೆ ಆನು ಎನಿತಾದೊಡಂ ಈವೆನೆ (ಏನೇ ಆದೂ ಕೊಡುವೆನೇ? ಇಲ್ಲ.) ಮತ್ ತನಯರ್ (ನನ್ನ ಮಕ್ಕಳು) ಕೆಯ್ಯೆಡೆ (ಕೈಯಲ್ಲಿ

ಇಟ್ಟಿದ್ದೇನೆ) ಪಲುಂಬದಿರ್ ಪೆಱಪೆಱವಂ (ನಿನ್ನವರು ನನ್ನವರು ಬೇರ ಬೇರೆ ಎಂದು ಹಂಬಲಸದಿರು) ಎಂದು- ಮಾದ್ರಿ ಹೇಳಿದಳು

ಪದ್ಯ-೨೬:ಅರ್ಥ:ನನಗೆ ಇಂದಿನ ಒಂದು ಸರದಿಯನ್ನು ಜೊತೆಬರಲು ಗಂಡನು ಕೊಟ್ಟನು, ನನ್ನ ಸರದಿಯನ್ನು ನಿನಗೆ ನಾನು ಏನೇ ಆದೂ ಕೊಡುವೆನೇ? ಇಲ್ಲ. ನನ್ನ

ಮಕ್ಕಳನ್ನು ನಿನ್ನ ಕೈಯಲ್ಲಿ ಇಟ್ಟಿದ್ದೇನೆ. ನಿನ್ನವರು ನನ್ನವರು ಬೇರ ಬೇರೆ ಎಂದು ಹಂಬಲಿಸದಿರು, ಎಂದು- ಮಾದ್ರಿ ಹೇಳಿದಳು

ವ|| ಎಂದು ತಪೋವನದ ಮುನಿಜನಮುಂ ವನದೇವತಾಜನಮುಂ ತನ್ನಣ್ಮಂ ಪೊಗೞೆ ಮಾದ್ರಿ ಪಾಂಡುರಾಜನೊಡನೆ ದಾಹೋತ್ತರದಂತೆ (?)

ಕಿರ್ಚಿಂಗೆ ಕುಲದೊಳಂ ಚಲದೊಳಮಾವ ಕಂದುಂ ಕುಂದುಮಿಲ್ಲದೆ ತನ್ನೊರೆಗಂ ದೊರೆಗಮಾರುಮಿಲ್ಲೆನಿಸಿದಾಗ ಳ್ ಕುಂತಿ ಶೋಕಾಕ್ರಾಂತೆಯಾಗಿರೆ ತಪೋವನದ ತಪೋವೃದ್ಧರಾ ಕಾಂತೆಯನಿಂತೆಂದು ಸಂತೈಸಿದರ್-

ವಚನ:ಪದವಿಭಾಗ-ಅರ್ಥ:

(ಎಂದು) ತಪೋವನದ

ಮುನಿಜನಮುಂ ವನದೇವತಾ
ಜನಮುಂ ತನ್ನ ಅಣ್ಮಂ
ಪೊಗೞೆ (ಅವಳ ಸಾಹಸ
ನಿರ್ಧಾರವನ್ನು ಹೊಗಳಲು)
ಮಾದ್ರಿ ಪಾಂಡುರಾಜನೊಡನೆ
ದಾಹೋತ್ತರದಂತೆ
(ಉತ್ತರಕ್ರಿಯೆಯ, ದಾಹ-
ಬಯಕೆಯಂತೆ) ಕಿರ್ಚಿಂಗೆ
(ಕಿಚ್ಚಿಗೆ- ಬೆಂಕಿಗೆ) ಕುಲದೊಳಂ
ಚಲದೊಳಮ್ ಆವ ಕಂದುಂ
ಕುಂದುಂ ಇಲ್ಲದೆ ತನ್ನ ಒರೆಗಂ

(ತನ್ನ ದೊರೆಗಂ- ಪತಿಗೆ ಸೇರಿದಳು), ದೊರೆಗಂ ಆರುಂ ಇಲ್ಲೆನಿಸಿದಾಗಳ್ (ತನ್ನ ಪೋಷಣೆಗೆ ಯಾರೂ ಇಲ್ಲ ಎಂದು)ಕುಂತಿ ಶೋಕಾಕ್ರಾಂತೆಯಾಗಿರೆ ತಪೋವನದ ತಪೋವೃದ್ಧರಾ ಕಾಂತೆಯನು ಇಂತೆಂದು ಸಂತೈಸಿದರ್-

ವಚನ:ಅರ್ಥ:ತಪೋವನದ ಋಷಿಗಳೂ

ವನದೇವತಾಸಮೂಹವೂ
ಮಾದ್ರಿಯ ಸಾಹಸವನ್ನು
ಹೊಗಳುತ್ತಿರಲು ಮಾದ್ರಿಯು
ತನ್ನನ್ನು ಉತ್ತರಕ್ರಿಯೆಯಲ್ಲಿ
ಅವಳ ಬಯಕೆಯಂತೆ ಬೆಂಕಿಗೆ
ಅರ್ಪಿಸಿಕೊಂಡು (ಸಹಗಮನ
ಮಾಡಿ) ಕುಲದಲ್ಲಿಯೂ
ಛಲದಲ್ಲಿಯೂ ಸ್ವಲ್ಪವೂ
ದೋಷವೂ ನ್ಯೂನತೆಯೂ
ಇಲ್ಲದೆ ತನಗೆ
ಸಮಾನರಾದವರಾರೂ ಇಲ್ಲ

ಎನ್ನಿಸಿ ಪತಿಯೊಡನೆ ಹೋದಳು. ಇತ್ತ ತನ್ನ ಪೋಷಣೆಗೆ ಯಾರೂ ಇಲ್ಲ ಎಂದು ಕುಂತಿಯು ದುಃಖದಿಂದ ಕೂಡಿದವಳಾಗಿರಲು ತಪೋವನದಲ್ಲಿದ್ದ ವೃದ್ಧ ತಾಪಸರು ಅವಳನ್ನು ಹೀಗೆಂದು ಸಂತೈಸಿದರು.

ಚಂ||

ಕಟಿದವರ್ಗಟ್ಟುದಟ್ಟೊಡವ

ರೇಱ್ಪೊಡಮಂತವಿರಿಂ
ಬಱಿಕ್ಕೆ ತಾ
ಮುಱಿವೊಡಮೇಱಿರಂತವರ
ಣಂ ತಮಗಂ ಬರ್ದುಕಿಲ್ಲ
ಧರ್ಮಮಂ|
ಗಱಿಯಿಸಿಕೊಳ್ವುದೊಂದೆ
ಚದುರಿಂತುಟು ಸಂಸೃತಿ
ಧರ್ಮಮೇಕೆ ಬಾ
ಯಱಿವುದಿದೇಕೆ
ಚಿಂತಿಸುವುದೇಕೆ

ಪಲುಂಬುವುದೇಕೆ ನೋಇವುದೋ|| ೨೭

ಪದ್ಯ-೨೭:ಪದವಿಭಾಗ-ಅರ್ಥ: ಕೞಿದವರ್ಗೆ ಅೞ್ವುದು (ಸತ್ತವರಿಗೆ ಅಳುವುದು) ಅೞ್ತೊಡೆ ಅವರೇೞ್ವೊಡಂ(ಅತ್ತರೆ ಅವರು ಎದ್ದು ಬರುವುದಾದರೆ) ಅಂತವರಿಂ (ಅದರಿಂದ) ಬೞಿಕ್ಕೆ (ಬಳಿಕ್ಕೆ-ಬಳಿಕ) ತಾಮ್ ಉೞಿವೊಡೆ

(ತಾನು ಉಳಿಯುವುದಾದರೆ ಅಳುವುದು-) ಏಟಿರ್ ಅಂತು ಅವರು(ಅವರು ಹೇಗೂ ಏಳುವುದಿಲ್ಲ); ಅಣಂ (ವಿಶೇಷವಾಗಿ)ತಮಗಂ ಬರ್ದುಕಿಲ್ಲ (ಅಳುತ್ತಾ ಕೂತರೆ ಅದರಿಂದ ತಮಗೂ ಬದುಕು-ಬಾಳುವೆ ಇಲ್ಲ) ಧರ್ಮಮಂ ಗೞಿಯಿಸಿಕೊಳ್ವುದು ಒಂದೆ ಚದುರ(ಧರ್ಮವನ್ನು ಗಳಿಸಿಕೊಳ್ಳುವುದು ಒಂದೆ

ಜಾಣತನ); ಇಂತುಟು ಸಂಸೃತಿ ಧರ್ಮಂ ಏಕೆ ಬಾಯಟೀವುದು ಇದು ಏಕೆ (ಬಾಯಿ ಬಡಿದುಕೊಳ್ಳುವುದೇಕೆ) ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ.

ಪದ್ಯ-೨೭:ಅರ್ಥ:ಸತ್ತವರು ಏಳುವುದಾದರೆ ಅವರಿಗಾಗಿ ಅಳಬೇಕು. ಇಲ್ಲ ಅವರಾದ ಮೇಲೆ ಉಳಿದ ನಾವು

ಉಳಿಯುವ ಪಕ್ಷದಲ್ಲಿಯೂ (ನಾವು ಅಳಬೇಕು). ಹಾಗೆ ಸತ್ತ ಅವರು ಏಳುವುದಿಲ್ಲ. ವಿಶೇಷವಾಗಿ ಅಳುತ್ತಾ ಕೂತರೆ ಅದರಿಂದ ತಮಗೂ ಬದುಕು-ಬಾಳುವೆ ಇಲ್ಲ ; ಧರ್ಮವನ್ನು ಗಳಿಸಿಕೊಳ್ಳುವುದು ಒಂದೆ ಜಾಣತನ. ಇಂತಿದೆ/ ಹೀಗಿದೆ ಸಂಸಾರಧರ್ಮ. ಹೀಗಿರುವಾಗ ಗೋಳಿಡುವುದೇಕೆ? ಚಿಂತಿಸುವುದೇಕೆ?

ಹಲುಬುವುದೇಕೆ? ಏಕೆ ವ್ಯಥೆಪಡುವುದು? ಹೀಗೆ ತಾಪಸರು ಕುಂತಿಗೆ ಹೇಳಿದರು.

ವ|| ಅಂತುಮಲ್ಲದೆ-

ವಚನ:ಪದವಿಭಾಗ-ಅರ್ಥ:- ಅಂತುಂ ಅಲ್ಲದೆ

ವಚನ:ಅರ್ಥ:ಅಷ್ಟೇ ಅಲ್ಲದೆ-

ಕಂ|| ಬಿಡದಟಿಲ್ವ
ಬಂಧುಜನದೊ
ಟ್ಟುಡಿಯದ ಕಣ್ಣೀರ ಪೂರಮಾ
ಪ್ರೇತಮನೋ।

ಗಡಿಸದೆ ಸುಡುವುದು ಗಡಮಿ ನ್ನುಡುಗುವುದೀ ಶೋಕಮಂ ಸರೋಜದಳಾಕ್ಷೀ|| ೨೮||

ಪದ್ಯ-೨೮:ಪದವಿಭಾಗ-ಅರ್ಥ:ಕಂ|| ಬಿಡದಬಿಲ್ವ (ಬಿಡದೆ ಅಳ್ವ- ಅಳುವ)ಬಂಧುಜನದ ಒಟ್ಟುಡಿಯದ(ಒಳುಕಡಿಯದ - ನಿಲ್ಲದ) ಕಣ್ಣೀರ ಪೂರಮಾ (ಕಣ್ಣೀರ ಪ್ರವಾಹವು) ಪ್ರೇತಮನೋ ಗಡಿಸದೆ

ಸುಡುವುದು ಗಡ (ಸತ್ತವರ ಪ್ರೇತವನ್ನು ಬೇಸರಿಸದೆ ಸುಡುವುದು (ದುಃಖಕ್ಕೆ ಈಡು ಮಾಡುವುದು) ಅಲ್ಲವೇ! ಇನ್ನು ಉಡುಗುವುದು ಈ ಶೋಕಮಂ ಸರೋಜದಳಾಕ್ಷೀ (ಕಮಲಮುಖಿ ಕುಂತೀ ಇನ್ನು ಸಹಿಸಿಕೊಳ್ಳಬೇಕು ಈ ಶೋಕವನ್ನು.)|

ಪದ್ಯ-೨೯:ಅರ್ಥ: ಬಿಡದೆ ಅಳುವ ನಿಲ್ಲದ ಬಂಧುಜನದ

ಕಣ್ಣೀರ ಪ್ರವಾಹವು ಸತ್ತವರ ಪ್ರೇತವನ್ನು ಬೇಸರಿಸದೆ ಸುಡುವುದು - ದುಃಖಕ್ಕೆ ಈಡುಮಾಡುವುದು, ಅಲ್ಲವೇ! ಕಮಲಮುಖಿ ಕುಂತೀ ಇನ್ನು ಈ ಶೋಕವನ್ನು ಸಹಿಸಿಕೊಳ್ಳಬೇಕು, ಎಂದರು ತಾಪಸಿಗಳು.

ವ|| ನೀನಿಂತು ಶೋಕಾಕ್ರಾಂತೆಯಾಗಿ ಸಂಸಾರಸ್ಥಿತಿಯನಱಿಯದಜ್ಞಾ

ನಿಗಳಂತೆ ವಿಪ್ರಳಾ
ಪಂಗೆಯ್ದೆಯಪ್ಪೊಡೀ
ಕೂಸುಗಳ್
ಮನಮಿಕ್ಕಿಯುಮೆರ್ದೆಯಿಕ್ಕಿ
ಯುಂ
ಕಿಡುವರೆಂದನೇಕೋಪಶಾಂತ
ವಚನಂಗಳಿಂದಂ
ಆಕೆಯುಬ್ಬೆಗಮನಾ
ನುಡಿದುಮಲ್ಲಿಯ ಮುನಿಜನ
ಮೆಲ್ಲಮಾ ಕೂಸುಗಳುಮಂ
ಕುಂತಿಯುಮಂ

ಮುಂದಿಟ್ಟೊಡಗೊಂಡು ನಾಗಪುರಕ್ಕೆ ವಂದು ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗಮಂಬಾಲೆಗಂ ಪಾಂಡುರಾಜನ ವೃತ್ತಾಂತಮನಱಿಪಿದೊಡಾಗ ಳ್-

ವಚನ:ಪದವಿಭಾಗ-

ಅರ್ಥ:ನೀನು ಇಂತು ಶೋಕಾಕ್ರಾಂತೆಯಾಗಿ ಸಂಸಾರಸ್ಥಿತಿಯನು

ಅಱಿಯದ ಅಜ್ಞಾನಿಗಳಂತೆ
ವಿಪ್ರಳಾಪಂಗೆಯ್ದೆಯು
ಅಪ್ಪೊಡೆ(ನೀನು ಹೀಗೆ
ದುಃಖಿತಳಾಗಿ ಸಂಸಾರದ
ನೀತಿಯನ್ನು ತಿಳಿಯದ
ಅಜ್ಞಾನಿಗಳಂತೆ ಗೋಳಿಟ್ಟರೆ,)
ಈ ಕೂಸುಗಳ್ ಮನಂ
ಇಕ್ಕಿಯುಂ ಎರ್ದೆಯಿಕ್ಕಿಯುಂ
ಕಿಡುವರ್ (ಈ ಮಕ್ಕಳು
ಮನಸ್ಸು ಕುಗ್ಗಿಯೂ,
ಧೈರ್ಯವು

ಕಡಿಮೆಯಾಗಿಯೂ
ಕೆಟ್ಟುಹೋಗುವರು ಎಂದು,)
ಎಂದು, ಅನೇಕ ಉಪಶಾಂತ
ವಚನಂಗಳಿಂದಂ ಆಕೆಯ
ಉಬ್ಬೆಗಮನು ಆನುಡಿದುಂ
(ಆಕೆಯ ಉದ್ವೇಗವನ್ನು
ಕಡಿಮೆಮಾಡಿ) ಅಲ್ಲಿಯ
ಮುನಿಜನಂ ಎಲ್ಲಂ ಆ
ಕೂಸುಗಳುಮಂ
ಕುಂತಿಯುಮಂ
ಮುಂದಿಟ್ಟೊಡಗೊಂಡು

ನಾಗಪುರಕ್ಕೆ ವಂದು (ಅಲ್ಲಿಯ ಋಷಿಸಮೂಹವೆಲ್ಲ ಆ ಮಕ್ಕಳನ್ನೂ ಕುಂತಿಯನ್ನೂ ಮುಂದಿಟ್ಟುಕೊಂಡು ತಮ್ಮಜೊತೆ ಕರೆದುಕೊಂಡು ಹಸ್ತಿನಾಪಟ್ಟಣಕ್ಕೆ ಬಂದು,) ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗಂ ಅಂಬಾಲೆಗಂ ಪಾಂಡುರಾಜನ ವೃತ್ತಾಂತಮನು ಅಱಿಪಿದೊಡೆ (ಹೇಳಿದಾಗ) ಆಗಳ್-(ಭೀಷ್ಮ

ಧೃತರಾಷ್ಟ್ರ, ವಿದುರರಿಗೂ ಅಂಬಾಲೆಗೂ ಪಾಂಡುರಾಜನ ವೃತ್ತಾಂತವನ್ನು ತಿಳಿಸಿದರು. ಆಗ)

ವಚನ:ಅರ್ಥ:ನೀನು ಹೀಗೆ ದುಃಖಿತಳಾಗಿ ಸಂಸಾರದ ನೀತಿಯನ್ನು ತಿಳಿಯದ ಅಜ್ಞಾನಿಗಳಂತೆ ಗೋಳಿಟ್ಟರೆ, ಈ ಮಕ್ಕಳು ಮನಸ್ಸು ಕುಗ್ಗಿಯೂ, ಧೈರ್ಯವು ಕಡಿಮೆಯಾಗಿಯೂ

ಕೆಟ್ಟುಹೋಗುವರು ಎಂದು,
ಆಕೆಯ ಉದ್ವೇಗವನ್ನು
ಕಡಿಮೆಮಾಡಿ, ಅಲ್ಲಿಯ
ಋಷಿಸಮೂಹವೆಲ್ಲವೂ ಆ
ಮಕ್ಕಳನ್ನೂ ಕುಂತಿಯನ್ನೂ
ಮುಂದಿಟ್ಟುಕೊಂಡು
ತಮ್ಮಜೊತೆ ಕರೆದುಕೊಂಡು
ಹಸ್ತಿನಾಪಟ್ಟಣಕ್ಕೆ
ಬಂದು,ಭೀಷ್ಮ, ಧೃತರಾಷ್ಟ್ರ,
ವಿದುರರಿಗೂ ಅಂಬಾಲೆಗೂ
ಪಾಂಡುರಾಜನ

ವೃತ್ತಾಂತವನ್ನು ತಿಳಿಸಿದರು.

ಆಗ -

<u>ಪಾಂಡವರು ಕುಂತಿಯೊಡನೆ ಹಸ್ತಿಣಾವತಿಯಲ್ಲಿ</u>

ಕಂ|| ತುಱುಗಿದ

ಹಿಮಬಿಂದುಗಳಿಂ

ದೆಱಗಿದ ನವ

ವನಜವನದವೋಲ್

ಶೋಕದಿನಂ|

ದೊರೆವ

ನಯನೋದಬಿಂದುವಿ

ನೆಱಗಿದುದೊರ್ವೊದಲೆ

ಬಂಧುಮುಖ ವನಜವನಂ||

೨೯||

ಪದ್ಯ-೨೯:ಪದವಿಭಾಗ-

ಅರ್ಥ:ತುಱುಗಿದ

ಹಿಮಬಿಂದುಗಳಿಂದ ಎಱಗಿದ

(ದಟ್ಟವಾಗಿ ಬಿದ್ದ

ಮಂಜಿನಹನಿಗಳಿಂದ

ಬಗ್ಗಿರುವ) ನವ

ವನಜವನದವೊಲ್

(ಹೊಸತಾವರೆಯ

ತೋಟದಂತೆ) ಶೋಕದಿಂ

ಅಂದು ಒರೆವ ನಯನ

ಓದಬಿಂದುವಿಂ ಎಱಗಿದುದು

(ಅಂದು ದುಖದಿಂದ

ಸ್ರವಿಸುತ್ತಿರುವ ಕಣ್ಣಿನ

ಹನಿಗಳಿಂದ ಒಟ್ಟಿಗೇ

ಬಗ್ಗಿದುವು) ಒರ್ಮೊದಲೆ

(ಒಟ್ಟಿಗೇ) ಬಂಧುಮುಖ

ವನಜವನಂ(ಬಂಧುಜನಗಳ

ಮುಖವೆಂಬ ಕಮಲದ ವನವು.)

ಪದ್ಯ-೨೯:ಅರ್ಥ:ದಟ್ಟವಾಗಿ ಬೀಳುವ ಮಂಜಿನಹನಿಗಳಿಂದ ಆವರಿಸಿ ಬಗ್ಗಿರುವ ಹೊಸತಾವರೆಯ ತೋಟದಂತೆ ಬಂಧುಜನಗಳ ಮುಖವೆಂಬ ಕಮಲದ ವನವು ಅಂದು ದುಖದಿಂದ ಸ್ರವಿಸುತ್ತಿರುವ ಕಣ್ಣಿನ ಹನಿಗಳಿಂದ ಕೂಡಿ

ಅವರ ಮುಖಗಳು ಒಟ್ಟಿಗೇ
ಕೆಳಗೆ ಬಗ್ಗಿದುವು.

ವ|| ಆಗಳ್ ಪುತ್ರ ಸ್ನೇಹದಿಂದತಿ ಪ್ರಳಾಪಂಗೆಯ್ವಂಬಾಲೆಯುಮಂ ಬಂಧುಜನ ನಿರೀಕ್ಷಣಾದಿಂ ಶೋಕಂ ಮಱುಕಣಿಸೆ ಬಾಯಱಿದು ಪಳಯಿಸುವ ಕುಂತಿಯುಮಂ ಗಾಂಗೇಯ ಧೃತರಾಷ್ಟ್ರ ವಿದುರರ್ಕಳುಮಂ

ಸತ್ಯವತೀದೇವಿಯುಮಂ ಸಂತೈಸಿ ಪಾಂಡುರಾಜಂಗೆ

ವಚನ:ಪದವಿಭಾಗ-

ಅರ್ಥ:ಆಗಳ್ ಪುತ್ರ ಸ್ನೇಹದಿಂದ ಅತಿ ಪ್ರಳಾಪಂಗೆಯ್ವ ಅಂಬಾಲೆಯುಮಂ ಬಂಧುಜನ ನಿರೀಕ್ಷಣದಿಂ ಶೋಕಂ ಮಱುಕಣಿಸೆ (ಮರುಕಣಿಸೆ - ಮರುಕಳಿಸೆ) ಬಾಯಬಿಡು

(ಬಾಯಿಸೋತು)
ಪಳಯಿಸುವ (ಅಳುವ)
ಕುಂತಿಯುಮಂ ಗಾಂಗೇಯ
ಧೃತರಾಷ್ಟ್ರ ವಿದುರರ್ಕಳುಮಂ
ಸತ್ಯವತೀದೇವಿಯುಮಂ
ಸಂತೈಸಿ ಪಾಂಡುರಾಜಂಗೆ
ವಚನ:ಅರ್ಥ:ಆಗ ಮಗನ
ಮೇಲಿನ ಪ್ರೀತಿಯಿಂದ
ಗೋಳಿಡುತ್ತಿದ್ದ ಪಾಂಡುವಿನ
ತಾಯಿ ಅಂಬಾಲೆಯನ್ನೂ
ಬಂಧುಜನರನ್ನೂ

ನೋಡುವುದರಿಂದ ಪುನ
ಕಾಣಿಸಿಕೊಂಡ ದುಖದಿಂದ
ಬಾಯಿ ಬಿಟ್ಟು ಅಳುವ
ಕುಂತಿಯನ್ನು, ಭೀಷ್ಮ
ಧೃತರಾಷ್ಟ್ರ ವಿದುರರು,
ಸತ್ಯವತೀದೇವಿಯು,
ಸಂತೈಸಿದರು.
ಪಾಂಡುರಾಜನಿಗೆ -
(ಉತ್ತರಕ್ರಿಯೆ- ಇತ್ಯಾ-)

**ವ||ಜಳದಾನಾದಿಕ್ರಿಯೆಗಳಂ
ನಿರ್ವರ್ತಿಸಿ**

ತದನಂತರದೊಳದುವೆ
ನಿರ್ವೇಗಮಾಗೆ
(ವಿರಕ್ತಿಹೊಂದಲು)
ವ್ಯಾಸವಚನದೊಳ್
ಸತ್ಯವತಿಯುಮಂಬಿಕೆಯು
ಮಂಬಾಲೆಯುಂ
ಸಂಸಾರವಿಶೀರ್ಣೆಯರಾಗಿ
ಮುನಿವನಮನಾಶ್ರಯಿಸಿದರಿತ್ತ
ಗಾಂಗೇಯನಯ್ವರ್
ಕೂಸುಗಳುಮಂ ತನ್ನ
ತೊಡೆಯೆ ತೊಟ್ಟಲಾಗಿ

ನಡುಪುತ್ತುಮಿರೆ ದುರ್ಯೋಧನ ಪ್ರಭೃತಿಗಳ್ ನೂರ್ವರುಂ ಧರ್ಮಪುತ್ರಾದಿಗಳಯ್ವರುಂ ಸಹಪಾಂಸುಕ್ರೀಡಿತರಾಗಿ-

ವಚನ:ಪದವಿಭಾಗ-

ಅರ್ಥ:ಜಳದಾನಾದಿಕ್ರಿಯೆಗಳಂ ನಿರ್ವರ್ತಿಸಿ (ಜಲ-ತರ್ಪಣ, ದಾನ, ಆದಿ ಕ್ರಿಯೆ,-ಉತ್ತರಕ್ರಿಯಾದಿಗಳನ್ನು ಮಾಡಿ) ತದನಂತರದೊಳು

ಅದುವೆ ನಿರ್ವೇಗಮಾಗೆ
(ವಿರಕ್ತಿಹೊಂದಲು)
ವ್ಯಾಸವಚನದೊಳ್ (ವ್ಯಾಸರ
ಸಲಹೆಯಂತೆ) ಸತ್ಯವತಿಯುಂ
ಅಂಬಿಕೆಯುಂ
ಅಂಬಾಲೆಯುಂ ಸಂಸಾರ
ವಿಶೀರ್ಣೆಯರಾಗಿ (ವಿಶೀರ್ಣೆ-
ಭಂಗಿಸು; ಸಂಸಾರದಲ್ಲಿ
ವೈರಾಗ್ಯಹೊಂದಿ)
ಮುನಿವನಮನು
ಆಶ್ರಯಿಸಿದರು(ತಪೋವನವ

ನ್ನು ಆಶ್ರಯಿಸಿದರು) ಇತ್ತ
ಗಾಂಗೇಯನು ಅಯ್ವರ್
ಕೂಸುಗಳುಮಂ (ಐದು
ಬಾಲಕರನ್ನು)ತನ್ನ ತೊಡೆಯೆ
ತೊಟ್ಟಲಾಗಿ ನಡುಪುತ್ತುಮಿರೆ
(ಸ್ವಂತ ಮಕ್ಕಳಂತೆ
ಸಾಕಿಸಲಹುತ್ತಿರಲು)
ದುರ್ಯೋಧನ ಪ್ರಭೃತಿಗಳ್
ನೂರ್ವರುಂ
(ದುರ್ಯೋಧನಾದಿ ನೂರು
ರಾಜ ಕುಮಾರರು)

ಧರ್ಮಪುತ್ರಾದಿಗಳು ಅಯ್ವರುಂ ಸಹಪಾಂಸುಕ್ರೀಡಿತರಾಗಿ (ಒಟ್ಟಿಗೆ ಧೂಳಾಟವನ್ನಾಡುತ್ತಿದ್ದರು.)-

ವಚನ:ಅರ್ಥ:ಅಳುತ್ತಿದ್ದ ಕುಂತಿ,ಸತ್ಯವತಿದೇವಿಯನ್ನೂ ಸಮಾಧಾನಮಾಡಿ, ಪಾಂಡುರಾಜನಿಗೆ ತರ್ಪಣಾದಿ ಕ್ರಿಯೆಗಳನ್ನು ಮಾಡಿ ಮುಗಿಸಿ, ಆಮೇಲೆ ಆ ದುಖವೇ ವಿರಕ್ತಿಗೆ

ಕಾರಣವಾಗಲು ಸಂಸಾರದಲ್ಲಿ ವೈರಾಗ್ಯಹೊಂದಿ ವ್ಯಾಸರ ಉಪದೇಶದಂತೆ ಸತ್ಯವತಿಯೂ ಅಂಬೆ ಅಂಬಾಲೆಯರೂ ಸಂಸಾರ ತ್ಯಾಗಮಾಡಿ ತಪೋವನವಕ್ಕೆ ಹೋದರು. ದುರ್ಯೋಧನಾದಿ ನೂರು ರಾಜ ಕುಮಾರರು ಧರ್ಮರಾಜನೇ ಮೊದಲಾದ ಅಯ್ದು ಬಾಲಕರು ಒಟ್ಟಿಗೆ ಧೂಳಾಟವನ್ನಾಡುತ್ತಿದ್ದರು.

ಕಂ||

ಒಡನಾಡಿಯುಮೊಡನೋದಿ

ಯು

ಮೊಡವಳೆದುಂ ಗುಳ್ಳೆಗೊಟ್ಟಿ

ಬಟ್ಟುಳಿಸೆಂಡುಂ|

ಪೊಡೆಸೆಂಡೆಂಬಿವನಾಡು

ತ್ತೊಡವಳೆದರ್ ತಮ್ಮೊಳೆಳಸೆ

ತಂತಂಗೆಡೆಗಳ್|| ೩೦||

ಪದ್ಯ-೩೦:ಪದವಿಭಾಗ-

ಅರ್ಥ:ಒಡನೆ ಆಡಿಯುಂ

ಒಡನೆ ಓದಿಯುಂ

ಒಡವಳೆದುಂ (ಜೊತೆಯಲ್ಲಿ) ಗುಳ್ಳೆಗೊಟ್ಟಿ (ಗುಳ್ಳೆಗೋಷ್ಟಿ) ಬಟ್ಟು ಉಳಿಸೆಂಡುಂ (ಬಚ್ಚಿಟ್ಟ ಚೆಂಡಿನ ಆಟ)|ಪೊಡೆಸೆಂಡು (ಹೊಡೆಯುವ ಚೆಂಡಿನಾಟ) ಎಂಬ ಇವನು ಆಡುತ್ತ ಒಡವಳೆದರ್ (ಒಟ್ಟಿಗೆ ಬೆಳೆದರು) ತಮ್ಮೊಳೆ ಎಳಸೆ ತಂತಂಗೆ ಎಡೆಗಳ್

ಪದ್ಯ-೩೦:ಅರ್ಥ:ಒಡನೆ ಆಡಿಯೂ ಒಡನೆ ಓದಿಯೂ

ಜೊತೆಯಲ್ಲಿ ಬೆಳೆದು,
ಗೊಳ್ಳೆಗೋಷ್ಟಿ, ಬಿಲ್ಲೆಯಾಟ,
ಬಚ್ಚಿಟ್ಟ ಚೆಂಡಿನ ಆಟ,
ಹೊಡೆಯುವ ಚೆಂಡಿನಾಟ,
ಎಂಬ ಈ ಆಟಗಳನ್ನಾಡುತ್ತ
ತಮ್ಮ ತಮ್ಮಲ್ಲಿ ಪ್ರತ್ಯೇಕ
ಸ್ನೇಹವನ್ನು ಬೆಳೆಸುತ್ತ
ಜೊತೆಯಲ್ಲಿಯೇ ಬೆಳೆದರು.

ವ|| ಅಂತಾ ಕೂಸುಗಳ್ ಕೂಸಾಟವಾಡುತ್ತಿರ್ದೊಂದು ದಿವಸಂ

ಮರಗೆರಸಿಯಾಡಲೆಂದು

ಮುಂದೆ ತಮ್ಮ ಪಗೆ

ಪರ್ವುವಂತೆ ಪನ್ನಿರ್ಮೃತ್ತರ್

ಪರ್ವಿದಾಲದ ಮರದ

ಮೊದಲ್ಗೆ ವಂದು ಭೀಮನಂ

ಮರೆಮಾಡಿ ಕೋಲನೀಡಾಡಿ

ಪಲವು ಸೂಱು ಕಾಡಿ-

ವಚನ:ಪದವಿಭಾಗ-

ಅರ್ಥ:ಅಂತು ಆ ಕೂಸುಗಳ್ ಕೂಸಾಟವಾಡುತ್ತಿರ್ದ ಒಂದು ದಿವಸಂ

ಮರಗೆರಸಿಯಾಡಲೆಂದು (ಮರಗೆರಸಿ ಎಂಬ ಆಟವನ್ನು ಆಡಬೇಕೆಂದು) ಮುಂದೆ ತಮ್ಮ ಪಗೆ (ಶತ್ರುತ್ವ - ಆಟದಲ್ಲಿ ಎದುರಾಳಿ) ಪರ್ವುವಂತೆ ಪನ್ನಿರ್ಮತ್ತರ್ (ಹನ್ನೆರಡು ಮತ್ತರ್ -ಅಳತೆ ಪ್ರದೇಶಕ್ಕೆ) ಪರ್ವಿದ (ಹಬ್ಬಿದ) ಆಲದ ಮರದ ಮೊದಲ್ಗೆ ವಂದು (ಆಲದ ಮರದ ಬುಡಕ್ಕೆ ಬಂದು) ಭೀಮನಂ

ಮರೆಮಾಡಿ ಕೋಲನು
ಈಡಾಡಿ (ಎಸೆದು) ಪಲವು
ಸೂಟಿ ಕಾಡಿ-
ವಚನ:ಅರ್ಥ:ಆ ಮಕ್ಕಳು
ಮಕ್ಕಳಾಟವನ್ನಾಡುತ್ತಿದ್ದ
ಒಂದು ದಿನ
ಮರಗೆರಸಿಯೆಂಬ ಆಟವನ್ನು
ಆಡಲೆಂದು ಬಂದು
ಎದುರಾಳಿಗೆ ಸಿಗದಂತೆ
ಕೋಲನ್ನೆಸೆದು, ಹನ್ನೆರಡು
ಮತ್ತರಷ್ಟು ಅಗಲವಾಗಿ ಬೆಳೆದ

ಆಲದಮರದ (ಕೆಳಭಾಗಕ್ಕೆ) ಬಂದ ಭೀಮನನ್ನು ಕಾಣದ ಹಾಗೆ ಇರಿಸಿ ಅನೇಕ ಸಲ ಕಾಡಿದನು. (ಕೋಲನ್ನು ಎಸೆದವನನ್ನು ಹುಡುಕುವ ಆಟ ಇರಬಹುದು- ಭೀಮ ಎಸೆದ ಕೋಲು ಬಹು ದೂರ ಹೋಗುವುದರಿಂದ ಅದನ್ನು ತರುವುದರೊಳಗೆ ಬೀಮ ಕಾಣದಂತೆ ಅಡಗಿರುತ್ತಿದ್ದ, ಅವನನ್ನು ಕಂಡರೆ ಕೋಲು

ಎಸೆಯುವ ಸರದಿ
ಎದುರಾಳಿಗೆ ಬರುವುದು,
ಆದರೆ ಆ ಅವಕಾಶ ಸಿಗದಂತೆ
ಕಾಡಿದ.)

ಕಂ||

ಪರಿದನಿಬರುಮೊಡನಡರ್ದಿರೆ
ಮರನಂ ಮುಟ್ಟಲ್ಕೆ
ಪಡೆಯದನಿಬರ್ಗಂ ಕಿಂ|
ಕಿರಿವೋಗಿ ಭೀಮಸೇನಂ
ಮರನಂ ಪಿಡಿದಲ್ಗೆ
ಪಣ್ಪೊಲನಿಬರುಮುದಿರ್ದರ್||

೩೧||

ಪದ್ಯ-೩೧:ಪದವಿಭಾಗ-ಅರ್ಥ:ಪರಿದು ಅನಿಬರುಂ (ಓಡಿದ ಎಲ್ಲರೂ) ಒಡನೆ ಅಡರ್ದಿರೆ ಮರನಂ (ಕೂಡಲೆ ಮರ ಹತ್ತಿರಲು) ಮುಟ್ಟಲ್ಕೆ ಪಡೆಯದ ಅನಿಬರ್ಗಂ(ಅವರನ್ನು ಮುಟ್ಟಲಾಗದೆ) ಕಿಂಕಿರಿವೋಗಿ (ಕೋಪಿಸಿಕೊಂಡು) ಭೀಮಸೇನಂ ಮರನಂ

ಪಿಡಿದು ಅಲ್ಗೆ (ಭೀಮಸೇನನು ಮರವನ್ನು ಹಿಡಿದು ಅಲುಗಿಸಲು) ಪಣ್ಬೊಲ್ ಅ ನಿಬರುಂ ಉದಿರ್ದರ್ (ಹಣ್ಣಿನಂತೆ ಅವರೆಲ್ಲರೂ ಉದುರಿಬಿದ್ದರು)|
ಪದ್ಯ-೩೧:ಅರ್ಥ:. ಓಡಿದ ಎಲ್ಲರೂ ಒಟ್ಟಿಗೆ ಮರವನ್ನು ಹತ್ತಿರಲು, ಅವರನ್ನು ಮುಟ್ಟಲಾಗದೆ ಭೀಮನು ರೇಗಿ ಕೋಪಿಸಿಕೊಂಡು ಮರವನ್ನು

ಹಿಡಿದು ಅಳ್ಳಾಡಿಸಲು ಹಣ್ಣಿನ ಹಾಗೆ ಅಷ್ಟು ಜನವೂ ಕೆಳಗೆ ಉದುರಿಬಿದ್ದರು).

ವ|| ಅಂತು ಬಿೞ್ದು ಸುಲಿದ ಮೊೞಕಾಲ್ಗಳುಂ ಕೞಲ್ದ ಪಲ್ಗಳುಮೆಲ್ವಡಗಾದ ಮೈಯ್ಗಳು ಮುಡಿದ ಕೆಯ್ಗಳುಮಾಗಿ ಬೆರಸೞುತ್ತುಂ ಬಂದು ಗಾಂಗೇಯ ಧೃತರಾಷ್ಟ್ರರ್ಗೆ ಕಾರಣಂಬೇೞ್ದೊಡವರಿಂದಿತ್ತ

ಭೀಮನೊಡನಾಡದಿರಿಮೆಂದು ಮುದುಗಣ್ಗಳ್ ಬಾರಿಸೆ ತಮ್ಮ ನೊಂದು ಸಿಗ್ಗಿಂಗನಿಬರುಮೊಂದಾಗಿ ಪೋಗಿ ಪೊಱವೊೞಲ ಮರದ ಕೆಳಗೆ ಮಱಸೊಂದಿದ ಭೀಮನನಡಸಿ ಪಿಡಿದು ನೂರ್ವರುಂ ಗಂಟಲಂ ಮೆಟ್ಟಿ-

ವಚನ:ಪದವಿಭಾಗ-

ಅರ್ಥ:ಅಂತು ಬಿೞ್ದು ಸುಲಿದ ಮೊಱಕಾಲ್ಗಳುಂ (ಹಾಗೆ ಬಿದ್ದು

ಗಾಯವಾದ
ಮೊಣಕಾಲುಗಳಿಂದಲೂ)
ಕಟಿಲ್ದ ಪಲ್ಗಳುಂ (ಕಳಚಿದ
ಹಲ್ಲುಗಳಿಂದಲೂ)
ಎಲ್ವಡಗಾದ ಮೈಯ್ಗಳು
(ಎಲುಬು ಒಡೆದ
ಮೈಯಿಂದಲೂ) ಮುಡಿದ
ಕೆಯ್ಗಳುಮ್ ಆಗಿ
ಬೆರಸಟುತ್ತುಂ ಬಂದು
ಗಾಂಗೇಯ ಧೃತರಾಷ್ಟ್ರರ್ಗೆ
ಕಾರಣಂ ಬೇಟ್ಡೊಡೆ (ಮುರಿದ

ಕಯ್ಯಿಂದಲೂ ಕೂಡಿ ಅಳುತ್ತಾ ಬಂದು ಭೀಷ್ಮ ಧೃತರಾಷ್ಟ್ರರಿಗೆ ಹಾಗಾಗುವುದಕ್ಕೆ ಕಾರಣವನ್ನು ಹೇಳಿದಾಗ) ಅವರಿಂದ ಇತ್ತ ಭೀಮನೊಡನೆ ಆಡದಿರಿಂ ಎಂದು ಮುದುಗಣ್ಗಳ್ ಬಾರಿಸೆ (ಅವರು ಅಂದಿನಿಂದ ಮುಂದೆ ಭೀಮನೊಡನೆ ಆಡಬೇಡಿ ಎಂದು ವೃದ್ಧರು (ಮುದಿಕಣ್ಣುಗಳು) ಎಚ್ಚರಿಸಲು,) ತಮ್ಮ ನೊಂದು

ಸಿಗ್ಗಿಂಗೆ ಅನಿಬರುಂ ಒಂದಾಗಿ
ಪೋಗಿ ಪೊಱವೊಲಿಲ(ತಾವು
ನೊಂದ ನಾಚಿಕೆಗಾಗಿ ಅಷ್ಟು
ಜನವೂ ಒಟ್ಟುಗೂಡಿಹೋಗಿ
ಪಟ್ಟಣದ ಹೊರಭಾಗದಲ್ಲಿ)
ಮರದ ಕೆಳಗೆ ಮಱಸೊಂದಿದ
ಭೀಮನನು ಅಡಸಿ ಪಿಡಿದು
ನೂರ್ವರುಂ ಗಂಟಲಂ ಮೆಟ್ಟಿ
(ಮರದ ಕೆಳಗೆ ಮೈಮರೆತು
ನಿದ್ದೆಮಾಡುತ್ತಿದ್ದ ಭೀಮನ
ಮೇಲೆ ಬಿದ್ದು ಹಿಡಿದು

ನೂರುಜನರೂ ಅವನ ಗಂಟಲನ್ನು ತುಳಿದು)-

ವಚನ:ಅರ್ಥ:ಹಾಗೆ ಬಿದ್ದು ಗಾಯವಾದ ಮೊಣಕಾಲುಗಳಿಂದಲೂ, ಕಳಚಿದ ಹಲ್ಲುಗಳಿಂದಲೂ, ಎಲುಬು ಒಡೆದ ಮೈಯಿಂದಲೂ, ಮುರಿದ ಕಯ್ಯಿಂದಲೂ ಕೂಡಿ ಅಳುತ್ತಾ ಬಂದು ಭೀಷ್ಮ ಧೃತರಾಷ್ಟ್ರರಿಗೆ ಹಾಗಾಗುವುದಕ್ಕೆ ಕಾರಣವನ್ನು

ಹೇಳಿದಾಗ, ಅವರು
ಅಂದಿನಿಂದ ಮುಂದೆ
ಭೀಮನೊಡನೆ ಆಡಬೇಡಿ
ಎಂದು ವೃದ್ಧರು
(ಮುದಿಕಣ್ಣುಗಳು)
ಎಚ್ಚರಿಸಲು, ತಾವು ನೊಂದ
ನಾಚಿಕೆಗಾಗಿ ಅಷ್ಟು ಜನವೂ
ಒಟ್ಟುಗೂಡಿಹೋಗಿ ಪಟ್ಟಣದ
ಹೊರಭಾಗದಲ್ಲಿ ಮರದ ಕೆಳಗೆ
ಮೈಮರೆತು ನಿದ್ದೆಮಾಡುತ್ತಿದ್ದ
ಭೀಮನ ಮೇಲೆ ಬಿದ್ದು ಹಿಡಿದು

ನೂರುಜನರೂ ಅವನ
ಗಂಟಲನ್ನು ತುಳಿದು-

ಕಂ|| ಪಾವುಗಳಂ ಕೊಳಿಸಿ ಮಹಾ
ಗ್ರಾವಮನುಱದಡಸಿ ಕಟ್ಟಿ ಕೊರಲೊಳ್ ಗಂಗಾ|
ದೇವಿಯ ಮಡುವಿನೊಳಬ್ದಿದ ರಾವರಿಸದೆ ತಮ್ಮ ಕುಲಮನಡಿಗಬ್ದುವವೋಲ್||
೩೨||

ಪದ್ಯ-೩೨:ಪದವಿಭಾಗ-ಅರ್ಥ:ಪಾವುಗಳಂ ಕೊಳಿಸಿ (ಹಾವುಗಳಿಂದ ಕಚ್ಚಿಸಿ) ಮಹಾಗ್ರಾವಮನು ಅದಡಸಿ ಕಟ್ಟಿ ಕೊರಲೊಳ್ (ಕುತ್ತಿಗೆಗೆ ದೊಡ್ಡ ಕಲ್ಲು ಕಟ್ಟಿ) ಗಂಗಾದೇವಿಯ ಮಡುವಿನೊಳು ಅಬ್ಬಿದು ಆರೂ ಆವರಿಸದೆ (ಯಾರೂ ಅಳೆದು/ವಿಚಾರಮಾಡಿ ನೋಡದೆ ಗಂಗಾನದಿಯ

ಮಡುವಿನಲ್ಲಿ) ತಮ್ಮ
ಕುಲಮನು ಅಡಿಗೆ
ಅಱ್ದುವವೋಲ್ (ತಮ್ಮ
ವಂಶವನ್ನು ಕೆಳಗೆ ಅದ್ದುವಂತೆ
ಅಳ್ದಿದರ್ ಮುಳುಗಿಸಿದರು-
'ಅಧ್ಯಾಹಾರ')
ಪದ್ಯ-೩೨:ಅರ್ಥ:.
ಹಾವುಗಳಿಂದ ಕಚ್ಚಿಸಿ
ದೊಡ್ಡಕಲ್ಲನ್ನು ಕುತ್ತಿಗೆಗೆ ಕಟ್ಟಿ,
ಯಾರೂ ಅಳೆದು/
ವಿಚಾರಮಾಡಿ ನೋಡದೆ

ಗಂಗಾನದಿಯ ಮಡುವಿನಲ್ಲಿ
ತಮ್ಮ ವಂಶವನ್ನು ಕೆಳಗೆ
ಅದ್ದುವಂತೆ ಅಳ್ದಿದರ್-
ಮುಳುಗಿಸಿದರು-
('ಅಧ್ಯಾಹಾರ')

ವ|| ಅಂತೞ್ದುವುದುಂ ಗಂಗಾದೇವಿಯ ವರಪ್ರಸಾದದೊಳ್ ವಿಷಮ ವಿಷಧರಂಗಳ್ ಪಱಿಯೆ ಕೊರಲೊಳ್ ತೊಡರ್ದ ಶಿಲೆಯಂ ಪಱಿದೀಡಾಡಿ

ಗಂಗೆಯ ನೀರಂ ತೋಳೊಳ್
ತುಳುಂಕಿ ಮಗುಳ್ದು ಬಂದಂಗೆ
ವಿಷದ
ಲಡ್ಡುಗೆಯನಿಕ್ಕಿಯುಮೆನಿತಾನು
ಮುಪ ದ್ರವಂಗಳೊಳ್
ತೊಡರಿಕ್ಕಿಯುಂ ಗೆಲಲಾಱದೆ
ಮನಮಿಕ್ಕಿಯುಮೆರ್ದೆಯಿಕ್ಕಿ
ಯುಮಿರ್ದರಂತಯ್ವರ್
ಕೂಸುಗಳ್ಗಂ ಗಾಂಗೇಯಂ
ಚೌಲೋಪನಯನಾದಿ
ಕ್ರಿಯೆಗಳಂ ಮಾಡಿ

ಸುಖಮಿರ್ಪನ್ನೆಗಮಿತ್ತ
ಗಂಗಾದ್ವಾರದೊಳ್
ಮಾಯಾಪುರಮೆಂಬ
ಋಷ್ಯಾಶ್ರಮದೊಳ್
ಗೌತಮನೆಂಬಂ ಬ್ರಹ್ಮಋಷಿ
ತಪಂ ಗೆಯ್ಯುತಿರ್ಪಿನಮಾ
ಋಷಿಗೆ
ಬಿಲ್ಲುಮಂಬುಂವೆರಸೊರ್ವ
ಮಗಂ ಪುಟ್ಟಿದನಾತಂಗೆ
ಶರದ್ವತನೆಂದು ಪೆಸರನಿಟ್ಟು
ನಡಪೆ ಬಳೆದು

ತಪಂಗೆಯ್ವಾತನಲ್ಲಿಗೆ ಜಲಕ್ರೀಡಾ ನಿಮಿತ್ತದಿಂದಿಂದ್ರನಚ್ಚರಸೆ ಜಲಚರೆಯೆಂಬವಳ್ ಬಂದೊಡಾಕೆಯಂ ಕಂಡು ಕಾಮಾಸಕ್ತಚಿತ್ತನಾಗಿ ಕೂಡಿ-

ವಚನ:ಪದವಿಭಾಗ-

ಅರ್ಥ:ಅಂತು ತಬ್ಬಿವುದುಂ(ಹಾಗೆ ತಳ್ಳಿದರೂ) ಗಂಗಾದೇವಿಯ ವರಪ್ರಸಾದದೊಳ್ ವಿಷಮ

ವಿಷಧರಂಗಳ್ ಪರಿಯೆ (ಗಂಗಾದೇವಿಯ ವರಪ್ರಸಾದದಿಂದ ವಿಷಸರ್ಪಗಳು ಹರಿದು ಹೋಗಲು) ಕೊರಲೊಳ್ ತೊಡರ್ದ ಶಿಲೆಯಂ ಪಱಿದೀಡಾಡಿ (ಕೊರಳಿನಲ್ಲಿ ಕಟ್ಟಿದ್ದ ಕಲ್ಲನ್ನು ಕಿತ್ತು ಎಸೆದು) ಗಂಗೆಯ ನೀರಂ ತೋಳೊಳ್ ತುಳುಂಕಿ {ಗಂಗೆಯ ನೀರನ್ನು ತೋಲಿನಿಂದ ಕಲಕಲು}

ಮಗುೞ್ದು ಬಂದಂಗೆ ವಿಷದ
ಲಡ್ಡುಗೆಯನು ಇಕ್ಕಿಯುಂ
ಮೆನಿತಾನುಂ
ಉಪದ್ರವಂಗಳೊಳ್
ತೊಡರಿಕ್ಕಿಯುಂ (ತಿನ್ನಿಸಿಯೂ
ಇನ್ನೂ ಅನೇಕ ವಿಧವಾದ
ಕಷ್ಟಗಳಲ್ಲಿ ತೊಡಗಿಸಿ
ಸಿಕ್ಕಿಸಿಯೂ) ಗೆಲಲಾಱದೆ
ಮನಮಂ ಇಕ್ಕಿಯಂ
ಎರ್ದೆಯಿಕ್ಕಿಯುಂ ಇರ್ದರ್
(ಗೆಲ್ಲಲಾರದೆ ಮನಸ್ಸು ಕುಸಿದು

ಧೈರ್ಯಕುಗ್ಗಿ ಇದ್ದರು.) ಅಂತು
ಅಯ್ವರ್ ಕೂಸುಗಳ್ಗಂ
ಗಾಂಗೇಯಂ
ಚೌಲೋಪನಯನಾದಿ
ಕ್ರಿಯೆಗಳಂ ಮಾಡಿ ಸುಖಂ
ಇರ್ಪ ಅನ್ನೆಗಂ ಇತ್ತ (ಈ ಕಡೆ
ಭೀಷ್ಮನು ಅಯ್ದು ಜನ
ಮಕ್ಕಳಿಗೂ
ಚೌಲೋಪನಯನಾದಿ
ಕರ್ಮಗಳನ್ನು ಮಾಡಿ
ಸುಖನಾಗಿರಲು, ಇತ್ತ.)

ಗಂಗಾದ್ವಾರದೊಳ್
ಮಾಯಾಪುರಮೆಂಬ
ಋಷ್ಯಾಶ್ರಮದೊಳ್
ಗೌತಮನೆಂಬಂ ಬ್ರಹ್ಮಋಷಿ
ತಪಂ ಗೆಯ್ಯುತಿರ್ಪಿನಂ (ಇತ್ತ
-ಈ ಕಡೆ ಗಂಗಾದ್ವಾರದಲ್ಲಿ
ಮಾಯಾಪುರವೆಂಬ
ಋಷ್ಯಾಶ್ರಮದಲ್ಲಿ
ಗೌತಮನೆಂಬ ಬ್ರಹ್ಮಋಷಿಯು
ತಪಸ್ಸನ್ನು ಮಾಡುತ್ತಿರಲು), ಆ
ಋಷಿಗೆ

ಬಿಲ್ಲುಮಂಬುಂವೆರಸೊರ್ವ
ಮಗಂ ಪುಟ್ಟಿದನಾತಂಗೆ
ಶರದ್ವತನೆಂದು ಪೆಸರನಿಟ್ಟು
(ಆ ಋಷಿಗೆ
ಬಿಲ್ಲುಬಾಣಗಳಿಂದ ಕೂಡಿದ
ಒಬ್ಬ ಮಗನು ಹುಟ್ಟಿದನು.
ಅವನಿಗೆ ಶರದ್ವತನೆಂದು
ಹೆಸರನ್ನಿಟ್ಟು ಸಲಹಿದನು.)
ನಡಪು ಬಳೆದು
ತಪಂಗೆಯ್ವಾತನಲ್ಲಿಗೆ
ಜಲಕ್ರೀಡಾ ನಿಮಿತ್ತದಿಂದ

ಇಂದ್ರನ ಅಚ್ಚರಸೆ
ಜಲಚರೆಯೆಂಬವಳ್
ಬಂದೊಡೆ ಆಕೆಯಂ ಕಂಡು
ಕಾಮಾಸಕ್ತಚಿತ್ತನಾಗಿ ಕೂಡಿ (
ಅವನನ್ನು ಸಲಹಲು ಬೆಳೆದ ಆ
ಋಷಿಯ ಬಳಿಗೆ
ಜಲಕ್ರೀಡೆಗಾಗಿ ಇಂದ್ರನ
ಅಪ್ಸರಸ್ತ್ರೀಯಾದ
ಜಲಚರೆಯೆಂಬುವಳು ಬರಲು
ಆವನು ಆಕೆಯನ್ನು ನೋಡಿ

ಕಾಮಾಸಕ್ತನಾಗಿ ಅವಳೊಡನೆ ಕೂಡಿ)-
ವಚನ:ಅರ್ಥ:ಹಾಗೆ ಮುಳುಗಿಸಿದಾಗಲೂ ಗಂಗಾದೇವಿಯ ವರಪ್ರಸಾದದಿಂದ ವಿಷಯುಕ್ತವಾದ ಹಾವುಗಳು ಹರಿದುಹೋದವು. ಕೊರಳಿನಲ್ಲಿ ಕಟ್ಟಿದ್ದ ಕಲ್ಲನ್ನು ಕಿತ್ತು ಎಸೆದು, ಗಂಗೆಯ ನೀರನ್ನು ತೋಳಿನಿಂದ ಕಲಕಿ

ತಳ್ಳಿ, ಪುನ ಹಿಂತಿರುಗಿದವನಿಗೆ
ವಿಷದ ಲಾಡುಗಳನ್ನು ತಿನ್ನಿಸಿ,
ಇನ್ನೂ ಅನೇಕ ವಿಧವಾದ
ಕಷ್ಟಗಳಲ್ಲಿ ಸಿಕ್ಕಿಸಿಯೂ
ಗೆಲ್ಲಲಾರದೆ ಮನ ಕುಂದಿ
ಧೈರ್ಯಕುಗ್ಗಿದವವಾಗಿಯೂ
ಇದ್ದರು. ಈ ಕಡೆ ಭೀಷ್ಮನು
ಐಯ್ದು ಜನ ಮಕ್ಕಳಿಗೂ
ಚೌಲೋಪನಯನಾದಿ
ಕರ್ಮಗಳನ್ನು ಮಾಡಿ
ಸುಖನಾಗಿದ್ದನು. ಇತ್ತ

ಗಂಗಾದ್ವಾರದಲ್ಲಿ
ಮಾಯಾಪುರವೆಂಬ
ಋಷ್ಯಾಶ್ರಮದಲ್ಲಿ
ಗೌತಮನೆಂಬ ಬ್ರಹ್ಮಋಷಿಯು
ತಪಸ್ಸು ಮಾಡುತ್ತಿರಲು ಆ
ಋಷಿಗೆ ಬಿಲ್ಲುಬಾಣಗಳಿಂದ
ಕೂಡಿದ ಒಬ್ಬ ಮಗನು
ಹುಟ್ಟಿದನು. ಅವನಿಗೆ
ಶರದ್ವತನೆಂದು ಹೆಸರನ್ನಿಟ್ಟು
ಸಲಹಿದನು. ಅವನನ್ನು
ಸಲಹಲು, ಬೆಳೆದ ಆ ಋಷಿಯ

ಬಳಿಗೆ ಜಲಕ್ರೀಡೆಗಾಗಿ ಇಂದ್ರನ ಅಪ್ಸರಸ್ತ್ರೀಯಾದ ಜಲಚರೆಯೆಂಬುವಳು ಬರಲು ಅವನು ಆಕೆಯನ್ನು ನೋಡಿ ಕಾಮಾಸಕ್ತನಾಗಿ ಅವಳೊಡನೆ ಕೂಡಿ-

ಕೃಪ-ಕೃಪೆಯರ ಜನನ-ಪಾಂಡವ ಕೌರವರ ವಿದ್ಯಾಭ್ಯಾಸ

ಕಂ|| ಒಗೆದ ಶರಸ್ತಂಬದೊಳಿ

ರ್ಬಗಿಯಾಗಿ ಮನೋಜ ರಾಗರಸಮುಗುತರೆ ತೊ| ಟ್ಟಗೆ ಬಿಸುಟು ಬಿಲ್ಲನಂಬುಮ ನಗಲ್ದನಾಶ್ರಮದಿನುದಿತ ಲಜ್ಜಾವಶದಿಂ|| ೩೩||

ಪದ್ಯ-೩೩:ಪದವಿಭಾಗ-ಅರ್ಥ:ಒಗೆದ ಶರಸ್ತಂಬದೊಳ್ (ಅಲ್ಲಿ ಹುಟ್ಟಿದ ಜೊಂಡುಹುಲ್ಲಿನಲ್ಲಿ ಚೆಲ್ಲಿದ) ಇರ್ಬಗಿಯಾಗಿ ಮನೋಜ ರಾಗರಸಮ್

ಉಗುತರೆ(ತಟ್ಟನೆ ರೇತಸ್ಸು
ಎರಡು ಭಾಗವಾಗಿ
ಸುರಿಯಲು) ತೊಟ್ಟಗೆ
ಬಿಸುಟು ಬಿಲ್ಲನಂಬುಮನು
ಅಗಲ್ದನು ಆಶ್ರಮದಿಂ ಉದಿತ
ಲಜ್ಜಾವಶದಿಂ(ಆ ಶರದ್ವತನು
ತನಗೊದಗಿದ ನಾಚಿಕೆಯಿಂದ
ಬಿಲ್ಲುಬಾಣಗಳನ್ನು ಕೂಡಲೆ
ಬಿಸಾಡಿ ಋಷ್ಯಾಶ್ರಮವನ್ನು
ಬಿಟ್ಟು ಹೋದನು)

ಪದ್ಯ-೩೩:ಅರ್ಥ:ಆ ಜೊಂಡುಹುಲ್ಲಿನಲ್ಲಿ ಚೆಲ್ಲಿದ ರೇತಸ್ಸು ಎರಡು ಭಾಗವಾಗಿ ಸುರಿಯಲು ಆ ಶರದ್ವತನು ತನಗೊದಗಿದ ನಾಚಿಕೆಯಿಂದ ಬಿಲ್ಲುಬಾಣಗಳನ್ನು ಕೂಡಲೆ ಬಿಸಾಡಿ ಋಷ್ಯಾಶ್ರಮವನ್ನು ಬಿಟ್ಟು ಹೋದನು.

ವ|| ಅನ್ನೆಗಮಾ ತಪೋವನಕ್ಕೆ ಬೇಂಟೆಯಾಡಲ್ಬಂದ ಶಂತನುವಿನೊಡನೆಯವರಾ

ಶರಸ್ತಂಬದೊಳ್
ಪರಿಕಲಿಸಿರ್ದ
ಮುನೀಂದ್ರನಿಂದ್ರಿಯ
ದೊಳೊಗೆದ ಪೆಣ್ಗೂಸುಮಂ
ಗಂಡುಗೂಸುಮನವಱ
ಕೆಲದೊಳಿರ್ದ ದಿವ್ಯ ಶರಾಸನ
ಶರಂಗಳುಮಂ ಕಂಡು
ಕೊಂಡುಪೋೀಗಿ ಶಂತನುಗೆ
ತೋಱದೊಡಾತನುಮಾ
ಶಿಶುದ್ವಯಮಂ ನಿಜ
ಗಜಪುರಕ್ಕುಯ್ದು ಕೃಪೆಯಿಂ

ನಡಪಿದನಪ್ಪುದಱಿಂ ಕೃಪನುಂ
ಕೃಪೆಯುಮೆಂದು ಪೆಸರನಿಟ್ಟು
ನಡಪುತ್ತಿರ್ಪನ್ನೆಗಮವರಯ್ಯಂ
ಶರದ್ವತನಲ್ಲಿಗೆ ಬಂದು
ಕಿಱಿಯಾತಂಗೆ
ಚೌಲೋಪನಯನಾದಿ
ಕ್ರಿಯೆಗಳಂ ಮಾಡಿ
ಧನುರ್ವಿದ್ಯೋಪದೇಶಂಗೆಯ್ದ್ಯೆ
ಸರ್ವವಿದ್ಯಾವಿಶಾರದನಾದನಾ
ಕೃಪಾಚಾರ್ಯರ ಪಕ್ಕದೊಳ್

ಕೂಸುಗಳಂ ವಿದ್ಯಾಭ್ಯಾಸಂಗೆಯ್ಸೆ-

ವಚನ:ಪದವಿಭಾಗ-

ಅರ್ಥ:ಅನ್ನೆಗಂ (ಅಷ್ಟರಲ್ಲಿ) ಆ ತಪೋವನಕ್ಕೆ ಬೇಂಟೆಯಾಡಲ್ ಬಂದ ಶಂತನುವಿನೊಡನೆಯವರು ಆ ಶರಸ್ತಂಬದೊಳ್ ಪರಿಕಲಿಸಿರ್ದ(ಚೆದುರಿದ್ದ) ಮುನೀಂದ್ರನ ಇಂದ್ರಿಯದೊಳು ಒಗೆದ

ಪೆಣ್ಗೂಸುಮನು
ಗಂಡುಗೂಸುಂ(ಹುಟ್ಟಿದ
ಹೆಣ್ಣು ಕೂಸನ್ನೂ
ಗಂಡುಕೂಸನ್ನೂ) ಅವಱ
ಕೆಲದೊಳಿರ್ದ (ಹತ್ತಿರದಲ್ಲಿದ್ದ)
ದಿವ್ಯ ಶರಾಸನ ಶರಂಗಳುಮಂ
ಕಂಡು ಕೊಂಡುಪೋಗಿ
ಶಂತನುಗೆ ತೋಱದೊಡೆ
(ಅವುಗಳ ಪಕ್ಕದಲ್ಲಿ
ಬಿಲ್ಲುಬಾಣಗಳನ್ನೂ ನೋಡಿ
ಅವುಗಳನ್ನು ತೆಗೆದುಕೊಂಡು

ಹೋಗಿ ಶಂತುನುವಿಗೆ
ತೋರಿಸಿದಾಗ, ಅವನು ಆ
ಎರಡು ಮಕ್ಕಳನ್ನೂ ತನ್ನ
ಹಸ್ತಿನಾಪುರಕ್ಕೆ (ಕರೆದು)
ಕೊಂಡುಹೋಗಿ)ಆತನುಂ ಆ
ಶಿಶುದ್ವಯಮಂ ನಿಜ
ಗಜಪುರಕ್ಕುಯ್ದು ಕೃಪೆಯಿಂ
ನಡಪಿದನಪ್ಪುದಱಿಂ ಕೃಪನುಂ
ಕೃಪೆಯುಮೆಂದು
ಪೆಸರನಿಟ್ಟು(ಅವನು ಆ
ಎರಡು ಮಕ್ಕಳನ್ನೂ ತನ್ನ

ಹಸ್ತಿನಾಪುರಕ್ಕೆ (ಕರೆದು)
ಕೊಂಡುಹೋಗಿ ಕೃಪೆಯಿಂದ
ಕೃಪೆ ಮತ್ತು ಕೃಪ ಎಂದು
ಹೆಸರಿಟ್ಟು,) ನಡಪುತ್ತಿರ್ಪ
ಅನ್ನೆಗಮ್ ಅವರಯ್ಯಂ
ಶರದ್ವತನು ಅಲ್ಲಿಗೆ ಬಂದು
ಕಿಱಿಯಾತಂಗೆ
ಚೌಲೋಪನಯನಾದಿ
ಕ್ರಿಯೆಗಳಂ ಮಾಡಿ
ಧನುರ್ವಿದ್ಯಾ
ಉಪದೇಶಂಗೆಯ್ಯೆ (ಅವರ

ತಂದೆಯಾದ ಶರದ್ವತನು ಅಲ್ಲಿಗೆ ಬಂದು ಚಿಕ್ಕವನಿಗೆ ಚೌಳೋಪನಯನವೇ ಮೊದಲಾದ ಕರ್ಮಗಳನ್ನೂ ಮಾಡಿ ಬಿಲ್ಲಿನ ವಿದ್ಯೆಯನ್ನೂ ಹೇಳಿಕೊಡಲು) ಸರ್ವವಿದ್ಯಾವಿಶಾರದನು ಆದನು (ಅವನು ಸರ್ವವಿದ್ಯಾವಿಶಾರದನಾದನು .) ಆ ಕೃಪಾಚಾರ್ಯರ ಪಕ್ಕದೊಳ್ ಕೂಸುಗಳಂ

ವಿದ್ಯಾಭ್ಯಾಸಂ
ಗೆಯ್ಸೆ(ಭೀಷ್ಮನು ಆ
ಕೃಪಾಚಾರ್ಯರ ಹತ್ತಿರ
ಮಕ್ಕಳನ್ನು ವಿದ್ಯಾಭ್ಯಾಸ
ಮಾಡಿಸಲು; ಮಾಡಸಿದನು)-
ವಚನ:ಅರ್ಥ:ಅಷ್ಟರಲ್ಲಿ ಆ
ತಪೋವನಕ್ಕೆ ಬೇಟೆಯಾಡ
ಬಂದಿದ್ದ
ಶಂತನುವಿನೊಡನಿದ್ದವರು ಆ
ಜೊಂಡುಹುಲ್ಲಿನಲ್ಲಿ ಚೆಲ್ಲಿದ್ದ
ಋಷಿಶ್ರೇಷ್ಠನ ವೀರ್ಯದಿಂದ

(ರೇತಸ್ಸಿನಿಂದ) ಹುಟ್ಟಿದ ಹೆಣ್ಣು ಕೂಸನ್ನೂ ಗಂಡುಕೂಸನ್ನೂ ಅವುಗಳ ಪಕ್ಕದಲ್ಲಿ ಬಿಲ್ಲುಬಾಣಗಳನ್ನೂ ನೋಡಿ ಅವುಗಳನ್ನು ತೆಗೆದುಕೊಂಡು ಹೋಗಿ ಶಂತನುವಿಗೆ ತೋರಿಸಿದರು. ಅವನು ಆ ಎರಡು ಮಕ್ಕಳನ್ನೂ ತನ್ನ ಹಸ್ತಿನಾಪುರಕ್ಕೆ (ಕರೆದು) ಕೊಂಡುಹೋಗಿ ಕೃಪೆಯಿಂದ ಕೃಪೆ ಮತ್ತು ಕೃಪ ಎಂದು

ಹೆಸರಿಟ್ಟು ಸಾಕಿದನು. ಅವರ ತಂದೆಯಾದ ಶರದ್ವತನು ಅಲ್ಲಿಗೆ ಬಂದು ಚಿಕ್ಕವನಿಗೆ ಚೌಳೋಪನಯನವೇ ಮೊದಲಾದ ಕರ್ಮಗಳನ್ನೂ ಮಾಡಿ ಬಿಲ್ಲಿನ ವಿದ್ಯೆಯನ್ನೂ ಹೇಳಿಕೊಡಲು ಅವನು ಸರ್ವವಿದ್ಯಾವಿಶಾರದನಾದನು. ಭೀಷ್ಮನು ಆ ಕೃಪಾಚಾರ್ಯರ ಹತ್ತಿರ

ಮಕ್ಕಳ ವಿದ್ಯಾಭ್ಯಾಸ
ಮಾಡಿಸಲು; ಮಾಡಸಿದನು)-

ಚಂ|| ಬರೆಯದೆ ಬಂದ ಸುದ್ದಗೆಯೆ ಸೂತ್ರಮನೊಂದೆ ಮುಹೂರ್ತಮಾತ್ರದಿಂ ಬರಿಸಿದುದುಂತು ಸೂತ್ರಿಸಿದ ಸೂತ್ರದ ವೃತ್ತಿ ನಿಜಾತ್ಮವೃತ್ತಿವೋಲ್| ಪರಿಣಮಿಸಿತ್ತು ಮತ್ತುೞಿದ ವಿದ್ಯೆಗಳೋಜರೆ ಚಟ್ಟರೆಂಬಿನಂ

ನೆರೆದುವು ತನ್ನೊಳಾರ್ ಗಳ ಗುಣಾರ್ಣವನಂತು ಕುಶಾಗ್ರಬುದ್ಧಿಗಳ್|| ೩೪||

ಪದ್ಯ-೩೪:ಪದವಿಭಾಗ-ಅರ್ಥ:

(ಅರ್ಜುನನು)ಬರೆಯದೆ ಬಂದ ಸುದ್ದಗೆಯೆ (ಶುದ್ಧಾಕ್ಷರಗಳ) ಸೂತ್ರಮನು ಒಂದೆ ಮುಹೂರ್ತಮಾತ್ರದಿಂ ಬರಿಸಿದುದು (ಶುದ್ಧವರ್ಣಮಾಲೆಯ

ಸೂತ್ರವನ್ನೂ ಬರೆಯದೆಯೇ
ಕ್ಷಣಮಾತ್ರದಲ್ಲಿ ಅಕ್ಷರಗಳನ್ನೂ
ಕಲಿತನು.) ಅಂತು ಸೂತ್ರಿಸಿದ
ಸೂತ್ರದ ವೃತ್ತಿ
ನಿಜಾತ್ಮವೃತ್ತಿವೋಲ್
ಪರಿಣಮಿಸಿತ್ತು (ಹಾಗೆಯೇ
ಸೂತ್ರರೂಪದಲ್ಲಿ
ಹೇಳಿದವುಗಳು
ಅರ್ಥವಿವರಣೆಯಿಲ್ಲದೆಯೇ
ತನ್ನ ಸಹಜ ಸ್ವಭಾವದಿಂದಲೇ
ಅವನಿಗೆ ಅವನ

ವಶವಾದುವು.) ಮತ್ತು
ಉೞಿದ ವಿದ್ಯೆಗಳು (ಉಳಿದ
ಅನೇಕ ವಿದ್ಯೆಗಳು) ಓಜರೆ
ಚಟ್ಟರೆಂಬಿನಂ ನೆರೆದುವು
ತನ್ನೊಳ್ (ಗುರುಗಳೇ
ಶಿಷ್ಯರೆಂಬಂತೆ ಅವನಲ್ಲಿ
ಸೇರಿದವು) ಆರ್ ಗಳ
(ಯಾರು ನಿಜವಾಗಿಯೂ)
ಗುಣಾರ್ಣವನ ಅಂತು
ಕುಶಾಗ್ರಬುದ್ಧಿಗಳ್(
ಅರ್ಜುನನಂತ/ ಗುಣಾರ್ಣವ

ಅರಿಕೇಸರಿಯಂತೆ ಸೂಕ್ಷ್ಮ ಬುದ್ಧಿಯವರು? ಯಾರೂ ಇಲ್ಲ!)

ಪದ್ಯ-೩೪:ಅರ್ಥ:ಗುಣಾರ್ಣವನ ಹಾಗೆ ಅರ್ಜುನನಂತೆ/ (ಗುಣಾರ್ಣವ ಅರಿಕೇಸರಿಯಂತೆ) ಕುಶಾಗ್ರಬುದ್ಧಿಗಳಾಗಿರುವವರು ಯಾರಿದ್ದಾರೆ? ಏಕೆಂದರೆ ಶುದ್ಧವರ್ಣಮಾಲೆಯ ಸೂತ್ರವನ್ನೂ ಅಭ್ಯಾಸ

ಮಾಡದೆಯೇ ಕ್ಷಣಮಾತ್ರದಲ್ಲಿ ಅಕ್ಷರಗಳನ್ನೂ ಕಲಿತನು. ಹಾಗೆಯೇ ಸೂತ್ರರೂಪದಲ್ಲಿ ಹೇಳಿದವುಗಳು ಅರ್ಥವಿವರಣೆಯಿಲ್ಲದೆಯೇ ತನ್ನ ಸಹಜ ಸ್ವಭಾವದಿಂದಲೇ ಅವನಿಗೆ ಅನವಾದುವು. ಉಳಿದ ಅನೇಕ ವಿದ್ಯೆಗಳು ಉಪಾಧ್ಯಾಯರೇ ಶಿಷ್ಯರಾದಂತೆ ಅವನಲ್ಲಿ ಸೇರಿಕೊಂಡವು. ಯಾರು

ನಿಜವಾಗಿಯೂ
ಅರ್ಜುನನಂತ/ ಗುಣಾರ್ಣವ
ಅರಿಕೇಸರಿಯಂತೆ ಸೂಕ್ಷ್ಮ
ಬುದ್ಧಿಯವರು? ಯಾರೂ
ಇಲ್ಲ!)

**ವ|| ಅಂತು ಪಂಚಾಂಗ
ವ್ಯಾಕರಣದ ವೃತ್ತಿಭೇದಮಪ್ಪ
ಛಂದೋವೃತ್ತಿಯೊಳಂ
ಶಬ್ದಾಲಂಕಾರ
ನಿಷ್ಠಿತಮಪ್ಪಲಂಕಾರದೊಳಂ
ವ್ಯಾಸ ವಾಲ್ಮೀಕಿ ಕಶ್ಯಪಪ್ರಭೃತಿ**

ವಿರಚಿತಂಗಳಪ್ಪ
ಮಹಾಕಾವ್ಯಂಗಳೊಳಂ
ನಾಂದೀಪ್ರರೋಚನಾಪ್ರಸ್ತಾವ
ನೇತಿವೃತ್ತ ಸಂ ಪ್ರವೇಶ
ವಿಷ್ಕಂಭ ಕಪ್ರೋತಿಕಾ
ವ್ಯಾಳಿಕಾದಿ
ಲಕ್ಷಣೋಪೇತಂಗಳಪ್ಪ
ನಾಟಕಂಗಳೊಳಂ ಪದಿನೆಂಟು
ಧರ್ಮಶಾಸ್ತ್ರಂಗಳೊಳಂ
ನಾಲ್ಕು ವೇದದೊಳಮಾಱಂಗ
ದೊಳಮಯ್ದು ತೆಱದ

ಮಂತ್ರಂಗಳೊಳಮಾಱುಂ
ದರ್ಶನದೊಳಂ
ಪ್ರತ್ಯಕ್ಷಾನುಮಾನ
ಪ್ರಮಾಣಂಗಳೊಳಂ
ಭರತಪ್ರಣೀತ
ನೃತ್ಯಶಾಸ್ತ್ರದೊಳಂ ನಾರದಾದಿ
ಪ್ರಣೀತ
ಗಾಂಧರ್ವವಿದ್ಯಾವಿಶೇಷಂಗ
ಳೊಳಂ ಗಜಾಗಮಜ್ಞ
ರಾಜಪುತ್ರ ಗೌತಮ ವಾದ್ವಾಕಿ
ಪಾಳ ಕಶ್ಯಪ ಸುಪತಿ

ಶ್ರೀಹರ್ಷಾದಿ
ಪುರಾಣಪುರುಷವಿರಚಿತಂಗಳ
ಪ್ಪ ಹಸ್ತಿಶಾಸ್ತ್ರಂಗಳೊಳಂ
ಚಿತ್ರಕರ್ಮ ಪತ್ರಚ್ಛೇದ
ಗ್ರಹಗಣಿತ
ರತ್ನಪರೀಕ್ಷೆಗಳೊಳಂ
ದಾರುಕರ್ಮ ವಾಸ್ತುವಿದ್ಯಾ
ಪೂರ್ವಯಂತ್ರ ಪ್ರಯೋಗ
ವಿಷಾಪಹರಣ ಸರಭೇದ
ರತಿತಂತ್ರೇಂದ್ರಜಾಲ ವಿವಿಧ
ವಿದ್ಯೆಗಳೊಳಮನೇಕಾಕ್ಷರ

ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳತಿಮತಿ ಪ್ರವೀಣನುಮಾರೂಢಸರ್ವಜ್ಞ ಮಹೇಂದ್ರ ಜಾಣ(?)ನುಮಾಗಿ-

ವಚನ:ಪದವಿಭಾಗ-ಅರ್ಥ:

ಅಂತು ಪಂಚಾಂಗ ವ್ಯಾಕರಣದ (ಹೀಗೆ ಐದು

ಅಂಗಗಳ ವ್ಯಾಕರಣದ)
ವೃತ್ತಿಭೇದಮಪ್ಪ
ಛಂದೋವೃತ್ತಿಯೊಳಂ
ಶಬ್ದಾಲಂಕಾರ ನಿಷ್ಠಿತಮಪ್ಪ
ಅಲಂಕಾರದೊಳಂ (ಮತ್ತು
ವೃತ್ತಿಭೇದದಿಂದ ಕೂಡಿದ -
ವೃತ್ತಗಳಿಂದ ಕೂಡಿದ
ಛಂದಸ್ಸಿನ ಶಾಸ್ತ್ರಗಳಲ್ಲಿಯೂ
ಶಬ್ದಾಲಂಕಾರದಿಂದ ಕೂಡಿದ
ಅಲಂಕಾರ ಶಾಸ್ತ್ರದಲ್ಲಿಯೂ)
ವ್ಯಾಸ ವಾಲ್ಮೀಕಿ ಕಶ್ಯಪಪ್ರಭೃತಿ

ವಿರಚಿತಂಗಳಪ್ಪ

ಮಹಾಕಾವ್ಯಂಗಳೊಳಂ

ನಾಂದೀಪ್ರರೋಚನಾಪ್ರಸ್ತಾವ

ನೇತಿವೃತ್ತ ಸಂ ಪ್ರವೇಶ

ವಿಷ್ಕಂಭ ಕಪ್ರೋತಿಕಾ

ವ್ಯಾಳಿಕಾದಿ

ಲಕ್ಷಣೋಪೇತಂಗಳಪ್ಪ

ನಾಟಕಂಗಳೊಳಂ ಪದಿನೆಂಟು

ಧರ್ಮಶಾಸ್ತ್ರಂಗಳೊಳಂ

ನಾಲ್ಕು ವೇದದೊಳಮಾಱಂಗ

ದೊಳಮಯ್ದು ತೆಱದ

ಮಂತ್ರಂಗಳೊಳಮಾಱುಂ
ದರ್ಶನದೊಳಂ
ಪ್ರತ್ಯಕ್ಷಾನುಮಾನ
ಪ್ರಮಾಣಂಗಳೊಳಂ
ಭರತಪ್ರಣೀತ
ನೃತ್ಯಶಾಸ್ತ್ರದೊಳಂ ನಾರದಾದಿ
ಪ್ರಣೀತ
ಗಾಂಧರ್ವವಿದ್ಯಾವಿಶೇಷಂಗ
ಳೊಳಂ ಗಜಾಗಮಜ್ಞ
ರಾಜಪುತ್ರ ಗೌತಮ ವಾದ್ವಾಕಿ
ಪಾಳ ಕಶ್ಯಪ ಸುಪತಿ

ಶ್ರೀಹರ್ಷಾದಿ ಪುರಾಣಪುರುಷ
ವಿರಚಿತಂಗಳಪ್ಪ
ಹಸ್ತಿಶಾಸ್ತ್ರಂಗಳೊಳಂ
ಚಿತ್ರಕರ್ಮ ಪತ್ರಚ್ಛೇದ
ಗ್ರಹಗಣಿತ
ರತ್ನಪರೀಕ್ಷೆಗಳೊಳಂ
ದಾರುಕರ್ಮ ವಾಸ್ತುವಿದ್ಯಾ
ಪೂರ್ವಯಂತ್ರ ಪ್ರಯೋಗ
ವಿಷಾಪಹರಣ ಸರಭೇದ
ರತಿತಂತ್ರೇಂದ್ರಜಾಲ ವಿವಿಧ
ವಿದ್ಯೆಗಳೊಳುಂ ಅನೇಕಾಕ್ಷರ

ಸ್ವರೂಪಂಗಳೊಳಂ ಚಾಪ ಚಕ್ರ ಪರಶು ಕೃಪಾಣ ತೋಮರ ಮುಸಲ ಮುಸುಂಡಿ ಭಿಂಡಿವಾಳ ಮುದ್ಗರ ಗದಾದಿ ವಿವಿಧಾಯುಧಂಗಳೊಳು ಅತಿಮತಿ ಪ್ರವೀಣನುಂ ಆರೂಢಸರ್ವಜ್ಞ ಮಹೇಂದ್ರ ಜಾಣ(?)ನುಮಾಗಿ-

ವಚನ:ಅರ್ಥ:ಹೀಗೆ ಐದು ಅಂಗಗಳ ವ್ಯಾಕರಣದ ಮತ್ತು

ವೃತ್ತಿಭೇದದಿಂದ ಕೂಡಿದ -
ವೃತ್ತಗಳಿಂದ ಕೂಡಿದ
ಛಂದಶ್ಶ್ಯಾಸ್ತ್ರಗಳಲ್ಲಿಯೂ
ಶಬ್ದಾಲಂಕಾರದಿಂದ ಕೂಡಿದ
ಅಲಂಕಾರಶಾಸ್ತ್ರದಲ್ಲಿಯೂ
ವ್ಯಾಸ ವಾಲ್ಮೀಕಿ ಕಶ್ಯಪ
ಮೊದಲಾದವರಿಂದ
ರಚಿತವಾದ
ಮಹಾಕಾವ್ಯಗಳಲ್ಲಿಯೂ
ನಾಂದಿ, ಪ್ರರೋಚನ,
ಪ್ರಸ್ಥಾವನ, ಇತಿವೃತ್ತ,

ಸಂಪ್ರವೇಶ, ನಿಷ್ಕಂಭ,
ಕಪೋತಿಕಾ, ವ್ಯಾಳಿಕಾ
ಮೊದಲಾದ ಲಕ್ಷಣಗಳಿಂದ
ಕೂಡಿದ
ನಾಟಕಶಾಸ್ತ್ರದಲ್ಲಿಯೂ
ಹದಿನೆಂಟು
ಧರ್ಮಶಾಸ್ತ್ರಗಳಲ್ಲಿಯೂ
ನಾಲ್ಕು ವೇದಗಳಲ್ಲಿಯೂ
ಆರು ಅಂಗಗಳಲ್ಲಿಯೂ
ಅಯ್ದು ರೀತಿಯ
ಮಂತ್ರಗಳಲ್ಲಿಯೂ ಆರು

ದರ್ಶನಗಳಲ್ಲಿಯೂ
ಭರತಪ್ರಣೀತವಾದ ನಾಟ್ಯ
ಶಾಸ್ತ್ರದಲ್ಲಿಯೂ ನಾರದನೇ
ಮೊದಲಾದವರಿಂದ
ರಚಿತವಾದ ಸಂಗೀತ
ವಿದ್ಯಾವಿಶೇಷಗಳಲ್ಲಿಯೂ
ಹಸ್ತಿಶಾಸ್ತ್ರಜ್ಞರಾಜ ರಾಜಪುತ್ರ
ಗೌತಮ, ವಾದ್ವಾಕಿ,
ಪಾಳಕಾಪ್ಯ, ಸುಗತಿ,
ಶ್ರೀಹರ್ಷನೇ ಮೊದಲಾದ
ಪ್ರಾಚೀನರಿಂದ ವಿರಚಿತವಾದ

ಹಸ್ತಿಶಾಸ್ತ್ರದಲ್ಲಿಯೂ
ಚಿತ್ರಕರ್ಮ, ಪತ್ರಚ್ಛೇದ,
ಗ್ರಹಗಣಿತ,
ರತ್ನಪರೀಕ್ಷೆಗಳಲ್ಲಿಯೂ
ದಾರುಕರ್ಮ, ವಾಸ್ತು –
ವಿದ್ಯೆಗಳಿಂದ ಕೂಡಿದ
ಯಂತ್ರೋಪಯೋಗದಲ್ಲಿ
ಯೂ ವಿಷಾಪಹರಣ,
ಸ್ವರಭೇದ, ರತಿತಂತ್ರ,
ಇಂದ್ರಜಾಲ ಮೊದಲಾದ
ಬಗೆಬಗೆಯ ವಿದ್ಯೆಗಳಲ್ಲಿಯೂ

ಅನೇಕಾಕ್ಷರ
ಸ್ವರೂಪದಲ್ಲಿಯೂ ಚಾಪ,
ಚಕ್ರ, ಪರಸು, ಕೃಪಾಣ, ಶಕ್ತಿ,
ತೋಮರ, ಮುಸಲ,
ಮುಸುಂಡಿ, ಭಿಂಡಿವಾಳ,
ಮುದ್ಗರ, ಗದೆಯೇ
ಮೊದಲಾದ ವಿಧವಿಧವಾದ
ಆಯುಧಗಳ
ಪ್ರಯೋಗದಲ್ಲಿಯೂ
ಅತಿಪ್ರವೀಣನೂ
ಸರ್ವಜ್ಞತ್ವವುಳ್ಳವನೂ

ಇಂದ್ರನಂತೆ ಜಾಣನೂ ಆದನು.

ಕಂ||

ಉಳ್ಳೋದುಗಳೊಳಗನಿತಱ

ವುಳ್ಳರ್ಗಂ

ತಿಳಿಪಲರಿಯದೆನಿಪೆಡೆಗಳು

ಮಂ|

ತೆಳ್ಳಗಿರೆ ತಿಳಿಪುಗುಂ ಬೆಸ

ಗೊಳ್ಳ ಗುಣಾರ್ಣವನ

ಲೆಕ್ಕಮಂ ಪೊಕ್ಕಮುಮಂ|| ೩೫

ಪದ್ಯ-೩೫:ಪದವಿಭಾಗ-ಅರ್ಥ:ಕಂ|| ಉಳ್ಳ ಓದುಗಳೊಳಗೆ ಎನಿತು ಅಱಿವು ಉಳ್ಳರ್ಗಂ (ಎಷ್ಟು ಜ್ಞಾನವಿದ್ದವರಗೂ) ತಿಳಿಪಲು ಅರಿಯದು ಎನಿಪ ಎಡೆಗಳುಮಂ (ಸ್ಥಳಗಳನ್ನು) ತೆಳ್ಳಗಿರೆ ತಿಳಿಪುಗುಂ (ಅರಿಯುವಂತೆ ತಿಳಿಸಿಕೊಡುತ್ತಾನೆ -ಅರಿಕೇಸರಿ/ ಅರ್ಜುನ);

ಬೆಸಗೊಳ್ಳ ಗುಣಾರ್ಣವನ ಲೆಕ್ಕಮಂ ಪೊಕ್ಕಮುಮಂ(ಅರ್ಜುನನ ಲೆಕ್ಕಪೊಕ್ಕಗಳನ್ನು ಕೇಳಯ್ಯಾ!) (ಓದುಗಳು - ವಿದ್ಯೆಗಳು)

ಪದ್ಯ-೩೫:ಅರ್ಥ:ಇರುವ ವಿದ್ಯೆಗಳಲ್ಲೆಲ್ಲ ಪೂರ್ಣಪಾಂಡಿತ್ಯಪಡೆದವರಿಗೂ ತಿಳಿಸುವುದಕ್ಕೆ ಅಸಾಧ್ಯವಾದ ಸ್ಥಳಗಳಲ್ಲಿಯೂ ಅರ್ಜುನನು

(ಅರಿಕೇಸರಿಯು) ಸರಳವಾಗಿ ಅರ್ಥವಾಗುವಂತೆ ತಿಳಿಸುತ್ತಾನೆ. ಅರ್ಜುನನ ಲೆಕ್ಕಪ್ರೊಕ್ಕಗಳನ್ನು ವಿಚಾರಮಾಡಿ ನೋಡಯ್ಯಾ

ವ|| ಎಂದು ಲೋಕಮೆಲ್ಲಂ ಪೊಗೞೆ ನೆಗೞ್ದ ಪೊಗೞ್ತೆಗಂ ನೆಗೞ್ತೆಗಂ ತಾನೆ ಗುಱಿಯಾಗಿ-

ವಚನ:ಪದವಿಭಾಗ-

ಅರ್ಥ:ಎಂದು ಲೋಕಂ ಎಲ್ಲಂ

ಪೊಗೞ್ (ಹೊಗಳು), ನೆಗೞ್ದ
ಪೊಗೞ್ತೆಗಂ ನೆಗೞ್ತೆಗಂ ತಾನೆ
ಗುಱಿಯಾಗಿ-

ವಚನ:ಅರ್ಥ:ಎಂದು
ಲೋಕವೆಲ್ಲ ಹೊಗಳುವ ಹಾಗೆ
ಪ್ರಸಿದ್ಧಿಪಡೆದ ಹೊಗಳಿಕೆಗೂ
ಪ್ರಸಿದ್ಧಿಗೂ ತಾನೆ
ಗುರಿಯಾದನು.

ಕಂ|| ಮಾನಸದೊಳ್
ಹಂಸೆಯವೋಲ್

ಮಾನಸ ವಾಗ್ವನಿತೆ ತನ್ನ ಮಾನಸದೊಳಿವಂ| ಮಾನಸನೆಂದಗಲದೆ ನಿಲೆ ಮಾನಸನಾದಂ ಸರಸ್ವತೀ ಕಳಹಂಸಂ|| ೩೬

ಪದ್ಯ-೩೬:ಪದವಿಭಾಗ-ಅರ್ಥ: ಮಾನಸದೊಳ್ (ಸರೋವರದಲ್ಲಿ) ಹಂಸೆಯವೋಲ್ (ಹಂಸದಂತೆ) ಮಾನಸ ವಾಗ್ವನಿತೆ (ಮನಸ್ಸಿನಲ್ಲಿ

ಹುಟ್ಟಿದ ವಾಗ್ದೇವಿಯು) ತನ್ನ ಮಾನಸದೊಳು ಇವಂ (ತನ್ನ ಮನಸ್ಸಿನಲ್ಲಿ ಇವನು) ಮಾನಸನೆಂದು ಅಗಲದೆ (ಮನುಷ್ಯನೆಂದು ಬಿಟ್ಟು ಹೋಗದೆ) ನಿಲೆ (ಅಲ್ಲೇ ಗಟ್ಟಿಯಾಗಿ ನಿಲ್ಲಲು) ಮಾನಸನಾದಂ ಸರಸ್ವತೀ ಕಳಹಂಸಂ(ಸರಸ್ವತಿಯ ವಾಹನವಾದ ಹಂಸದ ಹಾಗೆ

ಅರ್ಜುನನು
ಮನುಷ್ಯನಾಗಿದ್ದಾನೆ.)
ಪದ್ಯ-೩೬:ಅರ್ಥ:ಇವನ
ಮನಸ್ಸಿನಲ್ಲಿ ಹುಟ್ಟಿದ
ವಾಗ್ದೇವತೆಯು ಇವನು
ಮನುಷ್ಯನೆಂದು ಬಿಟ್ಟು
ಹೋಗದೆ ಮಾನಸ
ಸರೋವರದಲ್ಲಿರುವ
ಹಂಸಪಕ್ಷಿಯ ಹಾಗೆ ಅಲ್ಲೇ
ಗಟ್ಟಿಯಾಗಿ ನಿಲ್ಲಲು
ಸರಸ್ವತಿಯ ವಾಹನವಾದ

ಹಂಸದ ಹಾಗಿರುವ

ಅರ್ಜುನನು

ಮನುಷ್ಯನಾಗಿದ್ದಾನೆ.

ವ|| ಅಂತಯ್ಯರುಂ ಸಮಸ್ತ ಶಸ್ತ್ರ ಶಾಸ್ತ್ರ ಪ್ರಯೋಗ ಪ್ರವೀಣರಾಗೆ ಧರ್ಮಪುತ್ರಂ ಧರ್ಮಶಾಸ್ತ್ರಂಗಳೊಳಂ ಶ್ರುತಿಸ್ಮೃತಿಗಳೊಳಂ ಪ್ರವೀಣನಾದಂ ಭೀಮಸೇನಂ ವ್ಯಾಕರಣದೊಳಾರಿಂದ ಮಗ್ಗಳಂ ಕುಶಲನಾದಂ

ನಕುಲಂ ಕುಂತಶಸ್ತ್ರದೊಳತಿ ಪ್ರವೀಣನುಮಾಗಿ ಅಶ್ವವಿದ್ಯೆಯೊಳಾರಿಂದಂ ಪಿರಿಯನಾದಂ ಸಹದೇವಂ ಜ್ಯೋತಿರ್ಜ್ಞಾನದೊಳತಿ ಪರಿಣತನಾದಂ

ವಚನ:ಪದವಿಭಾಗ-

ಅರ್ಥ:ಅಂತು ಅಯ್ಯರುಂ ಸಮಸ್ತ ಶಸ್ತ್ರ ಶಾಸ್ತ್ರ ಪ್ರಯೋಗ ಪ್ರವೀಣರಾಗೆ ಧರ್ಮಪುತ್ರಂ ಧರ್ಮಶಾಸ್ತ್ರಂಗಳೊಳಂ

ಶ್ರುತಿಸ್ಮೃತಿಗಳೊಳಂ
ಪ್ರವೀಣನಾದಂ, ಭೀಮಸೇನಂ
ವ್ಯಾಕರಣದೊಳು ಆರಿಂದಂ
ಅಗ್ಗಳಂ ಕುಶಲನಾದಂ,
ನಕುಲಂ ಕುಂತಶಸ್ತ್ರದೊಳು
ಅತಿ ಪ್ರವೀಣನುಮಾಗಿ
ಅಶ್ವವಿದ್ಯೆಯೊಳು ಆರಿಂದಂ
ಪಿರಿಯನಾದಂ ಸಹದೇವಂ
ಜ್ಯೋತಿರ್ಜ್ಞಾನದೊಳು ಅತಿ
ಪರಿಣತನಾದಂ

ವಚನ:ಅರ್ಥ:ವ|| ಹಾಗೆ ಅಯ್ದು ಜನರೂ ಸಮಸ್ತಶಸ್ತ್ರಶಾಸ್ತ್ರಪ್ರಯೋಗಗಳಲ್ಲಿಯೂ ನಿಪುಣರಾದರು. ಧರ್ಮರಾಜನು ಧರ್ಮಶಾಸ್ತ್ರಗಳಲ್ಲಿಯೂ ಶ್ರುತಿಸ್ಮೃತಿಗಳಲ್ಲಿಯೂ ಪ್ರವೀಣನಾದನು. ಭೀಮಸೇನನು ವ್ಯಾಕರಣದಲ್ಲಿ ಎಲ್ಲರ್ರಿಗಿಂತಲೂ ಮೇಲಾದ ಬುದ್ಧಿವಂತನಾದನು.

ನಕುಲನು ಕುಂತಶ್ಯಾಸ್ತ್ರದಲ್ಲಿ (ಒಂದು ಬಗೆಯ ಆಯುಧ, ಈಟಿ, ಭರ್ಜಿ) ಪ್ರವೀಣನಾಗಿ ಅಶ್ವವಿದ್ಯೆಯಲ್ಲಿ ಎಲ್ಲರಿಗಿಂತಲೂ ಹಿರಿಯನಾದನು. ಸಹದೇವನು ಜ್ಯೋತಿರ್ಜ್ಞಾನದಲ್ಲಿ / ಭವಿಷ್ಯಜ್ಞಾನದಲ್ಲಿ ಅತಿ ಪರಿಣತನಾದನು.

ಚಂ|| ಬಳೆದುವು ತೋಳ್ಗಳೆಕ್ಕೆಯಿನಮಳ್

ಬಳೆವಂತಿರೆ ಮುಯ್ಯುಗಳ್
ಕುಳಾ
ಚಳ ಶಿಖರಂಗಳಂ
ಮಸುಳೆವಂದುವು ಪರ್ವಿದ
ವಕ್ಷವೀ ಕ್ಷಮಾ|
ತಳ ಕುಳಲಕ್ಷ್ಮಿಗಾಯ್ತು
ಕುಳಮಂದಿರಮೆಂದು
ಮಹೀತಳಂ ಮನಂ
ಗೊಳೆ ನೆರೆದತ್ತುದಾತ್ತ
ನವಯೌವನಮೊರ್ಮೆಯೆ
ಧರ್ಮಪುತ್ರನಾ|| ೩೭||

ಪದ್ಯ-೩೭:ಪದವಿಭಾಗ-ಅರ್ಥ:ಬಳೆದುವು ತೋಳ್ಗಳ್ ಎಕ್ಕೆಯಿಂ(ಒಟ್ಟಿಗೆ) ಅಮಳ್ (ಅವಳಿ) ಬಳೆವಂತಿರೆ (ಧರ್ಮಜನ ತೋಳುಗಳು ಅವಳಿಮಕ್ಕಳಂತೆ ಬೆಳದವು/ ಯೌವನ ಪ್ರಾಪ್ತವಾಯಿತು.) ಮುಯ್ವುಗಳ್ (ಹೆಗಲುಗಳು) ಕುಳಾಚಳ ಶಿಖರಂಗಳಂ ಮಸುಳೆವಂದುವು (ಕುಲಾಚಲ ಪರ್ವತವನ್ನು ಕುಂದುವಂತೆ

ಮಾಡಿದವು) ಪರ್ವಿದವಕ್ಷವು
(ಹರವಾದ/ಅಗಲ/ವಿಶಾಲ
ಎದೆ) ಈ ಕ್ಷಮಾತಳ
ಕುಳಲಕ್ಷ್ಮಿಗೆ ಆಯ್ತು
ಕುಳಮಂದಿರಮ್ (ಅದು ಈ
ಭೂ ಲಕ್ಷ್ಮಿಗೆ ಪರಂರೆಯ
ಮನೆಯ ಆಸ್ತಿಯಾಯಿತು)
ಎಂದು ಮಹೀತಳಂ
ಮನಂಗೊಳೆ (ಈ
ಭೂಮಂಡಲವು ಭಾವಿಸಲು)
ನೆರೆದತ್ತು ಉದಾತ್ತ

ನವಯೌವನಂ ಒರ್ಮೆಯೆ ಧರ್ಮಪುತ್ರನಾ(ಹೀಗೆ ಜನರು ಭಾವಿಸಲು ಧರ್ಮಜನ ಯೌವನ ಪ್ರಾಪ್ತವಾಯಿತು.)
ಪದ್ಯ-೩೭:ಅರ್ಥ:. ಧರ್ಮ ರಾಜನ ಎರಡು ತೋಳುಗಳೂ ಅವಳಿಗಳೂ ಬೆಳೆದಂತೆ ಜೊತೆಯಲ್ಲಿಯೇ ಬೆಳೆದುವು. ಹೆಗಲುಗಳು ಕುಲಪರ್ವತಗಳ ಶಿಖರಗಳನ್ನು ಕುಂದುವಂತೆ ಮಾಡಿದುವು;

(ಕಾಂತಿಹೀನವನ್ನಾಗಿ
ಮಾಡಿದುವು). ವಿಸ್ತಾರವಾದ
ಅವನ ಎದೆಯು
ಅಸಮಾನಳಾದ ಈ
ಭೂದೇವಿಗೆ
ವಂಶಪಾರಂಪರ್ಯವಾಗಿ
ಬಂದ ರಾಜ್ಯಕ್ಕೆ
ನಿವಾಸವಾಯಿತು ಎಂದು
ಲೋಕದ ಜನ ಭಾವಿಸುವ
ಹಾಗೆ/ ಸಂತೋಷಿಸುವ ಹಾಗೆ
ಧರ್ಮರಾಜನ ಉದಾತ್ತವಾದ

ಹೊಸಯೌವನವು ಒಟ್ಟಿಗೆ
ಯೌವನವು ಪ್ರಾಪ್ತವಾಯಿತು.

ವ|| ಅಂತು ಸೊಗಯಿಸುವ ರೂಪಿನೊಳ್ ಪೊನ್ನ ಬಣ್ಣದಂತಪ್ಪ ತನ್ನ ಮೆಯ್ಯ ಬಣ್ಣ ಮಳವಲ್ಲದೊಪ್ಪೆ-

ವಚನ:ಪದವಿಭಾಗ-

ಅರ್ಥ:ಅಂತು ಸೊಗಯಿಸುವ ರೂಪಿನೊಳ್ ಪೊನ್ನ ಬಣ್ಣದಂತೆ ಅಪ್ಪ ತನ್ನ ಮೆಯ್ಯ

ಬಣ್ಣ ಅಳವಲ್ಲದೆ (ಅಳತೆಯಿಲ್ಲದೆ?)ಒಪ್ಪೆ **ವಚನ:ಅರ್ಥ:**ಹಾಗೆ ಸೊಗಯಿಸುವ ರೂಪದಲ್ಲಿ, ಚಿನ್ನದ ಬಣ್ಣದ ಹಾಗಿರುವ ತನ್ನ ಶರೀರದ ಬಣ್ಣವು ಅತಿಶಯವಾಗಿ ಪ್ರಕಾಶಿಸಿತು.

ಚಂ|| ಕುಳಗಿರಿಯಂ ಸರೋಜನಿಲಯಂ ಮನುಜಾಕೃತಿಯಾಗೆ ಮಾಡಿದಂ

ತೊಳವೆನಿಪಂತುಟಪ್ಪ ಪೊಸ

ಬಣ್ಣದೊಳೊಂದಿದ

ಪಾರಿಜಾತಮ|

ಗ್ಗಳಮೆಸೆದೊಪ್ಪುವಂತೆ ತಳಿರಿಂ

ಮುಗುಳಿಂ ನವಯೌವನಂ

ಮನಂ

ಗೊಳೆ ಕರಮೊಪ್ಪಿದಂ ದಶ

ಸಹಸ್ರ ಮದೇಭ ಬಳಂ

ವೃಕೋದರಂ|| ೩೮

ಪದ್ಯ-೩೮:ಪದವಿಭಾಗ-

ಅರ್ಥ:ಕುಳಗಿರಿಯಂ

ಸರೋಜನಿಲಯಂ
ಮನುಜಾಕೃತಿಯಾಗೆ
ಮಾಡಿದಂತೆ ಒಳನ್ ಎನಿಪ
ಅಂತುಟಪ್ಪ-ಹಾಗೆ (ಕಮಲ-
ಸರೋಜ ನಿಲಯನಾದ
ಬ್ರಹ್ಮನು ಕುಪರ್ವತವನ್ನು
ಮನಷ್ಯನ ಆಕೃತಿಯ ಹಾಗೆ
ಮಾಡಿದ್ದಾನೆ) ಪೊಸ
ಬಣ್ಣದೊಳು ಒಂದಿದ
ಪಾರಿಜಾತಂ ಅಗ್ಗಳಂ
(ವಿಶೇಷವಾಗಿ) ಎಸೆದು

ಒಪ್ಪುವಂತೆ ತಳಿರಿಂ ಮುಗುಳಿಂ
(ಹೊಸ ಬಣ್ಣದ ಪಾರಿಜಾತವು
ಚಿಗುರಿನಿಂದ ಮತ್ತು
ಮೊಗ್ಗುಗಳಿಂದ ಕೂಡಿ
ಪ್ರಕಾಶಮಾನವಾಗಿ
ಒಪ್ಪುವಂತೆ) ನವಯೌವನಂ
ಮನಂಗೊಳೆ (ಆಕರ್ಶಕ) ಕರಂ
(ಬಹಳ)ಒಪ್ಪಿದಂ ದಶ ಸಹಸ್ರ
ಮದೇಭ (ಆನೆ) ಬಳಂ (ಬಲ)
ವೃಕೋದರಂ(ಅವನ
ಹೊಸಪ್ರಾಯವು

ಆಕರ್ಷಕವಾಗಿದ್ದು
ಹತ್ತುಸಾವಿರ ಮದ್ದಾನೆಗಳ
ಬಲವುಳ್ಳವನಾಗಿ ವಿಶೇಷವಾಗಿ
ಶೋಭಿಸಿದನು)

ಪದ್ಯ-೬೮:ಅರ್ಥ:ಭೀಮಸೇನ
ನ ಯೌವನ: ಬ್ರಹ್ಮನು
ಕುಲಪರ್ವತವನ್ನು ಮನುಷ್ಯನ
ರೂಪದಲ್ಲಿ ಮಾಡಿದ್ದಾನೆ
ಎನಿಸಿಕೊಂಡು ಭೀಮನು
ಅದೇ ಹೊಸ ಬಣ್ಣದ
ಪಾರಿಜಾತವು

ಚಿಗುರಿನಿಂದಲೂ
ಮೊಗ್ಗುಗಳಿಂದಲೂ ಕೂಡಿ
ಪ್ರಕಾಶಮಾನವಾಗಿ
ಒಪ್ಪುವಂತೆ ಅವನ
ಹೊಸಪ್ರಾಯವು
ಆಕರ್ಷಕವಾಗಿದ್ದು
ಹತ್ತುಸಾವಿರ ಮದ್ದಾನೆಗಳ
ಬಲವುಳ್ಳವನಾಗಿ ವಿಶೇಷವಾಗಿ
ಶೋಭಿಸಿದನು)

ವ|| ಅಂತೊಪ್ಪುವ
ಗಂಡಗಾಡಿಯೊಳಿಂದ್ರನೀಲ

ದಂತಪ್ಪ ಬಣ್ಣಂ ಕಣ್ಗೆವರೆ-

ವಚನ:ಪದವಿಭಾಗ-

ಅರ್ಥ:ಅಂತು ಒಪ್ಪುವ ಗಂಡಗಾಡಿಯೊಳ್ (ವೀರ ಸೌಂದರ್ಯದಲ್ಲಿ) ಇಂದ್ರನೀಲದಂತಪ್ಪ(ಇಂದ್ರನೀಲಮಣಿಯಂತೆ) ಬಣ್ಣಂ ಕಣ್ಗೆವರೆ(ಕಣ್ಣಿಗೆ ಸೊಗಸಾಗಿರಲು)-

ವಚನ:ಅರ್ಥ:ಹಾಗೆ ಒಪ್ಪುವ ವೀರಸೌಂದರ್ಯದಲ್ಲಿ

ಇಂದ್ರನೀಲಮಣಿಯ
ಹಾಗಿರುವ ಬಣ್ಣವು
ಸೊಗಸಾಗಿರಲು.

<u>ಅರ್ಜುನನ ಯೌವನೋದಯದ ವರ್ಣನೆ</u>

**ಚಂ|| ಶರದದ ಚಂದ್ರನಂ
ವಿಮಲ ಚಂದ್ರಿಕೆ
ಬಾಳದಿನೇಶನಂ ತಮೋ
ಹರಕಿರಣಂ ಕಿಶೋರ ಹರಿಯಂ
ನವಕೇಸರ ರಾಜಿ ಮಿಕ್ಕ ದಿ|**

ಕ್ಕರಿಯನನೂನ ದಾನ

ಪರಿಶೋಭೆ ಮನಂಗೊಳೆ

ಪೊರ್ದುವಂತೆ ಸುಂ

ದರ ನವಯೌವನಂ ನೆರೆಯೆ

ಪೊರ್ದೆ ಗುಣಾರ್ಣವನೊಪ್ಪಿ

ತೋಱಿದಂ|| ೩೯||

ಪದ್ಯ-೩೯:ಪದವಿಭಾಗ-ಅರ್ಥ:ಶರದದ ಚಂದ್ರನಂ (ಶರತ್ಕಾಲದ ಚಂದ್ರನನ್ನು) ವಿಮಲ ಚಂದ್ರಿಕೆ (ನಿರ್ಮಲ ಬೆಳದಿಂಗಳ) ಬಾಳದಿನೇಶನಂ

(ಬಾಲ ಸೂರ್ಯನನ್ನು)
ತಮೋಹರಕಿರಣಂ
(ಕತ್ತಲೆಯನ್ನು
ಹೋಗಲಾಡಿಸುವ ಕಿರಣನು)
ಕಿಶೋರ ಹರಿಯಂ
(ಸಿಂಹದಮರಿಯು)
ನವಕೇಸರ ರಾಜಿ (ಹೊಸದಾಗಿ
ಹುಟ್ಟಿದ ಅದರ ಕತ್ತಿನ
ಕೂದಲರಾಶಿಯೂ) ಮಿಕ್ಕ
ದಿಕ್ಕರಿಯಂ ಅನೂನ ದಾನ
ಪರಿಶೋಭೆ ಮನಂಗೊಳೆ

(ಮೀರಿದ ದಿಗ್ಗಜಗಳನ್ನೂ
ಕಡಿಮೆಯಿಲ್ಲದ ಮದೋದಕದ
ಕಾಂತಿಯೂ) ಪೊರ್ದುವಂತೆ
ಸುಂದರ ನವಯೌವನಂ
ನೆರೆಯೆ ಪೊರ್ದೆ
ಗುಣಾರ್ಣವನೊಪ್ಪಿ
ತೋಱಿದಂ(ಆಕರ್ಷಿಸುವ
ರೀತಿಯಲ್ಲಿ ಸೇರಿಕೊಳ್ಳುವಂತೆ
ಸುಂದರವಾದ
ಹೊಸಯೌವನವು
ಪೂರ್ಣವಾಗಿ ಸೇರಲು

ಗುಣಾರ್ಣವನು/ಅರ್ಜುನನು ಸೊಗಸಾಗಿ ಕಂಡನು)

ಪದ್ಯ-೩೯:ಅರ್ಥ:ಅರ್ಜುನನ ಯೌವನೋದಯದ ವರ್ಣನೆ:ನಿರ್ಮಲವಾದ ಬೆಳದಿಂಗಳ ಶರತ್ಕಾಲದ ಚಂದ್ರನನ್ನೂ, ಬಾಲಸೂರ್ಯನನ್ನೂ, ಕತ್ತಲೆಯನ್ನು ಹೋಗಲಾಡಿಸುವ ಕಿರಣಗಳನ್ನೂ,

ಸಿಂಹದಮರಿಯನ್ನು,
ಹೊಸದಾಗಿ ಹುಟ್ಟಿದ ಅದರ
ಕತ್ತಿನ ಕೂದಲರಾಶಿಯೂ,
ಮೀರಿದ/ಬಲಶಾಲಿ
ದಿಗ್ಗಜಗಳನ್ನೂ,
ಕಡಿಮೆಯಿಲ್ಲದ ಮದೋದಕದ
ಕಾಂತಿಯೂ, ಆಕರ್ಷಿಸುವ
ರೀತಿಯಲ್ಲಿ ಸೇರಿಕೊಳ್ಳುವಂತೆ
ಸುಂದರವಾದ
ಹೊಸಯೌವನವು
ಪೂರ್ಣವಾಗಿ ಸೇರಲು

ಗುಣಾರ್ಣವನು/ಅರ್ಜುನನು
ಸೊಗಸಾಗಿ ಕಂಡನು.

ವ|| ಅಂತು ನವಯೌವನಂ ನೆರೆಯೆ ನಿಱಿನಿಱಿಗೊಂಡ ಗುಣಾರ್ಣವನ ತಲೆ ನವಿರ್ಗಳ್ ಲಾವಣ್ಯರಸಮನಿಡಿದಿಡಿದು ತೀವಿದ ಕಮಲಾಸನನ ಬೆರಲಚ್ಚುಗಳನ್ನವಾದುವು ಮೂಱುಂ ಲೋಕದ ಮೂಱು ಪಟ್ಟಮನಾಳಲ್ಕೆ ತಕ್ಕ ಲಕ್ಷಣ ಸಂಪೂರ್ಣಮಪ್ಪ

ಸಹಜಮನೋಜನ ಲಲಾಟಂ
ಪಟ್ಟಂಗಟ್ಟಿದ ನೊಸಲ್ಗೆ
ಲಕ್ಷಣಮನಱಿಸಲ್ವೇಡೆಂಬಂತಾ
ದುದು ಕರ್ಬಿನ ಬಿಲ್ಲ
ಕೊಂಕಿನಂತೆ ಕೊಂಕಿಯುಂ
ಪರವನಿತೆಯರೆರ್ದೆಗೆ
ಕೊಂಕಿಲ್ಲದೆಯುಂ
ಸೊಗಯಿಸುವ ಸುರತ
ಮಕರಧ್ವಜನ ಪುರ್ಬುಗಳ್
ಕಾಮದೇವನ ವಿಜಯ
ವೈಜಯಂತಿಗಳಂತಾದುವು

ನೀಳ್ಪಂ ಬೆಳ್ಪುಮಂ ತಾಳ್ದಿ
ಪರವನಿತೆಯರ ದೆಸೆಗೆ
ಕಿಸುಗಣ್ಣಿದಂತೆ ಕಿಸು
ಸೆರೆವರಿದು ಸೊಗಯಿಸುವ
ಶೌಚಾಂಜನೇಯನ
ಕಣ್ಗಳೆಂಬಲರಂಬುಗಳ್
ಗಣಿಕಾಜನಂಗಳೆರ್ದೆಯಂ
ನಟ್ಟು ಕೆಂಕಮಾದಂತಾದುವು
ರಿಪುಜನದ ಪೆರ್ಚಿಂಗಂ
ಪರಾಂಗನಾಜನದ ಮೆಚ್ಚಿಂಗಂ
ಮೂಗಿಱಿವಂತೆ

ವಚನ:ಪದವಿಭಾಗ-ಅರ್ಥ:ಅಂತು ನವಯೌವನಂ ನೆರೆಯೆ (ತುಂಬಲು) ನಿಱಿನಿಱಿಗೊಂಡ ಗುಣಾರ್ಣವನ ತಲೆ ನವಿರ್ಗಳ್(ಹಾಗೆ ನವಯೌವನವು ಸಂಪೂರ್ಣವಾಗಲು ಗುಂಗುರುಗುಂಗುರಾದ ಗುಣಾರ್ಣವನ ತಲೆಯ ಕೂದಲು), ಲಾವಣ್ಯರಸಮನು

ಇಡಿದಿಡಿದು ತೀವಿದ
ಕಮಲಾಸನನ
ಬೆರಲಚ್ಚುಗಳನ್ನವು ಆದುವು
(ಸೌಂದರ್ಯರಸವನ್ನು
ಮಿದಿದುಮಿದಿದು ತುಂಬಿದ
ಬ್ರಹ್ಮನ
ಬೆರಳಚ್ಚುಗಳಂತಾದುವು)
ಮೂಱುಂ ಲೋಕದ ಮೂಱು
ಪಟ್ಟಮನು ಆಳಲ್ಕೆ (ಸ್ವರ್ಗ,
ಮರ್ತ್ಯ ಪಾತಾಳ, ಈ
ಮೂರುಲೋಕಗಳ

ರಾಜ್ಯಭಾರವನ್ನು
ಮಾಡುವುದಕ್ಕೂ) ತಕ್ಕ ಲಕ್ಷಣ
ಸಂಪೂರ್ಣಮಪ್ಪ
ಸಹಜಮನೋಜನ ಲಲಾಟಂ
(ಯೋಗ್ಯ ಲಕ್ಷಣಗಳಿಂದ
ಕೂಡಿದ
ಸಹಜಮನೋಜನಾದ,
ಸುಂದರನಾದ ಅರ್ಜುನನ
ಹಣೆಯು) ಪಟ್ಟಂಗಟ್ಟಿದ
ನೊಸಲ್ಗೆ ಲಕ್ಷಣಮನು
ಅಱಿಸಲ್ವೇಡ ಎಂಬಂತಾದುದು

(ಯಾವ ಲಕ್ಷಣವಿರಬೇಕೆಂದು
ಹುಡುಕಬೇಡ
ಎನ್ನುವಂತಾಯಿತು;) ಕರ್ಬಿನ
ಬಿಲ್ಲ ಕೊಂಕಿನಂತೆ
ಕೊಂಕಿಯುಂ ಪರವನಿತೆಯರ
ಎರ್ದೆಗೆ ಕೊಂಕಿಲ್ಲದೆಯುಂ
ಸೊಗಯಿಸುವ ಸುರತ
ಮಕರಧ್ವಜನ ಪುರ್ವುಗಳ್
ಕಾಮದೇವನ ವಿಜಯ
ವೈಜಯಂತಿಗಳಂತಾದುವು
(ಮನ್ಮಥನ ಕಬ್ಬಿನ ಬಿಲ್ಲಿನ

ವಕ್ರತೆಯಂತೆ ಬಗ್ಗಿದ್ದರೂ ಅನ್ಯಸ್ತ್ರೀಯರ ಪ್ರೀತಿಗೆ ಬಗ್ಗದೆ ಸೊಗಯಿಸುವ ಹುಬ್ಬುಗಳು ವಿಜಯದ ಪತಾಕೆಗಳಂತೆ ಆದುವು;) ನೀಳ್ಪಂ ಬೆಳ್ಪುಮಂ ತಾಳ್ದಿ ಪರವನಿತೆಯರ ದೆಸೆಗೆ ಕಿಸುಗಣ್ಣಿದಂತೆ ಕಿಸು ಸೆರೆವರಿದು ಸೊಗಯಿಸುವ ಶೌಚಾಂಜನೇಯನ ಕಣ್ಗಳೆಂಬ ಅಲರಂಬುಗಳ್(ಅಲರ್ ಪುಷ್ಪ, ಅಂಬು-ಬಾಣ) ;

ದೀರ್ಘತ್ವವನ್ನೂ ಬಿಳಿಯ
ಬಣ್ಣವನ್ನೂ ಹೊಂದಿ
ಅನ್ಯಸ್ತ್ರೀಯರ ವಿಷಯದಲ್ಲಿ
ಕೋಪಿಸಿಕೊಂಡಂತೆ ಕೆಂಪಾದ
ರಕ್ತನಾಳಗಳಿಂದ ಕೂಡಿ
ಸೊಗಯಿಸುವ
ಶೌಚಾಂಜನೇಯನ
ಕಣ್ಣುಗಳೆಂಬ
ಪುಷ್ಪಬಾಣಗಳು ;)
ಗಣಿಕಾಜನಂಗಳ ಎರ್ದೆಯಂ
(ಎದೆಯಲ್ಲಿ) ನಟ್ಟು

ಕೆಂಕಮಾದಂತಾದುವು
(ಕೆಂಪಾದಂತೆ) ರಿಪುಜನದ
ಪೆರ್ಚಿಂಗಂ ಪರಾಂಗನಾ ಜನದ
ಮೆಚ್ಚಿಂಗಂ ಮೂಗಿಱಿವಂತೆ
(ಮೂಗುಮುರಿಯುವಂತೆ ,)
(ವೇಶ್ಯಾಸ್ತ್ರೀಯರ ಎದೆಯಲ್ಲಿ
ನಾಟಿ ಕೆಂಪಾದಂತಾದುವು;
ಶತ್ರುಜನಗಳ ಅಭಿವೃದ್ಧಿಗೂ
ಪರಾಂಗನೆಯರ ಮೆಚ್ಚಿಕೆಗೂ
ಜುಗುಪ್ಸೆ ಪಡುವ ಹಾಗೆ
ಸೊಗಯಿಸುವ

ಗಂದೇಭವಿದ್ಯಾಧರನ ಮೂಗು ತನ್ನ ಉಸಿರಿನ ವಾಸನೆಯಲ್ಲದೆ ಇತರರ ವಾಸನೆಗೆ ಆಸೆಪಡದಂತಾಯಿತು)

ವಚನ:**ಅರ್ಥ**:ಹಾಗೆ ನವಯೌವನವು ಸಂಪೂರ್ಣವಾಗಲು ಗುಂಗುರುಗುಂಗುರಾದ ಗುಣಾರ್ಣವನ/ಅರ್ಜುನನ ತಲೆಯ ಕೂದಲು ಸೌಂದರ್ಯರಸವನ್ನು

ಮಿದಿದುಮಿದಿದು ತುಂಬಿದ ಬ್ರಹ್ಮನ ಬೆರಳಚ್ಚುಗಳಂತಾದುವು. ಸ್ವರ್ಗ, ಮರ್ತ್ಯ ಪಾತಾಳ, ಈ ಮೂರುಲೋಕಗಳ ರಾಜ್ಯಭಾರವನ್ನು ಮಾಡುವುದಕ್ಕೂ, ಯೋಗ್ಯ ಲಕ್ಷಣಗಳಿಂದ ಕೂಡಿದ ಸಹಜಮನೋಜನಾದ, ಸುಂದರನಾದ ಅರ್ಜುನನ ಹಣೆಯು, ಯಾವ

ಲಕ್ಷಣವಿರಬೇಕೆಂದು
ಹುಡುಕಬೇಡ
ಎನ್ನುವಂತಾಯಿತು; ಮನ್ಮಥನ
ಕಬ್ಬಿನ ಬಿಲ್ಲಿನ ವಕ್ರತೆಯಂತೆ
ಬಗ್ಗಿದ್ದರೂ ಅನ್ಯಸ್ತ್ರೀಯರ
ಪ್ರೀತಿಗೆ ಬಗ್ಗದೆ ಸೊಗಯಿಸುವ
ಹುಬ್ಬುಗಳು ವಿಜಯದ
ಪತಾಕೆಗಳಂತೆ ಆದುವು;
ದೀರ್ಘತ್ವವನ್ನೂ ಬಿಳಿಯ
ಬಣ್ಣವನ್ನೂ ಹೊಂದಿ
ಅನ್ಯಸ್ತ್ರೀಯರ ವಿಷಯದಲ್ಲಿ

ಕೋಪಿಸಿಕೊಂಡಂತೆ ಕೆಂಪಾದ
ರಕ್ತನಾಳಗಳಿಂದ ಕೂಡಿ
ಸೊಗಯಿಸುವ
ಶೌಚಾಂಜನೇಯನ
ಕಣ್ಣುಗಳೆಂಬ ಪುಷ್ಪಬಾಣಗಳು
ವೇಶ್ಯಾಸ್ತ್ರೀಯರ ಎದೆಯಲ್ಲಿ
ನಾಟಿ ಕೆಂಪಾದಂತಾದುವು;
ಶತ್ರುಜನಗಳ ಅಭಿವೃದ್ಧಿಗೂ
ಪರಾಂಗನೆಯರ ಮೆಚ್ಚಿಕೆಗೂ
ಜುಗುಪ್ಸೆ ಪಡುವ ಹಾಗೆ
ಸೊಗಯಿಸುವ

ಗಂದೇಭವಿದ್ಯಾಧರನ ಮೂಗು ತನ್ನ ಉಸಿರಿನ ವಾಸನೆಯಲ್ಲದೆ ಇತರರ ವಾಸನೆಗೆ ಆಸೆಪಡದಂತಾಯಿತು)

ವ||ಪೊಸ ಜವ್ವನದ ಮುಂಬಣ್ಣದಂತೆ ಕರ್ಪುಂ ಕೈಕೊಂಡು ಕತ್ತುರಿಯಲ್ ಬರೆದಂತಪ್ಪ ವಿಕ್ರಾಂತ ತುಂಗನ ವಿಸೆಗಳಾತನ (ಮೀಸೆಗಳು ಆತನ)ತೀವ್ರ ಪ್ರತಾಪಾನಳ(ಪ್ರತಾಪ ಅನಲ-

ಬೆಂಕಿ) ಧೂಮಲೇಖೆ
ಯಂತಾದುವು;
ಪುಳಿಯೊಳಲೆದ (ಹುಳಿಯಿಂದ
ತೊಳೆದ) ಪವಳದ ಬಟ್ಟಿನಂತೆ
ಸೊಗಯಿಸುವ
ಸಂಸಾರಸಾರೋದಯನ
ಬಿಂಬಾಧರಮನಂಗರಾಗರಸ
ದುರುಳಿಯಂತಾದುದು(ಬಿಂಬಾ
ಧರಂ-ತುಟಿ,
ಅನಂಗರಾಗರಸದ(ಮನ್ಮಥನ
ಬಯಕೆಯ ರಸದ , ಉರಳಿ-

ಉಂಡೆ-
ಉರುಳಿಯಂತಾದುದು);೧;
ರಸದಾಡಿಮದ (ದಾಳಿಂಬೆ)
ಬಿತ್ತುಮಂ (ಬೀಜ)ಪೊಸ
ಮುತ್ತುಮಂ
ಮುಕ್ಕುಳಿಸಿದಂತಪ್ಪ
(ತಿರಸ್ಕರಿಸಿದಂತೆ)
ವಿಬುಧವನಜವನ ಕಳಹಂಸನ
ದಂತಪಙ್ತಿಗಳ ಮೃತಕಿರಣನ
ಕಾಂತಿಗಳನಿಳಿಸುವಂತಾದುವು
(ಕಾಂತಿಗಳನು

ಇಳಿಸುವಂತಾದುವು- ಕಡಿಮೆ ಎನ್ನವಂತೆ);೨; ಮಡಿದು (ಮಡಿಸಿ) ತಂದಿಟ್ಟ ಪೊಸನೆಯ್ದಿಲ ಕಾವನಾವಗಂ (ಕಾವನು ಆವಗಂ-ಕಮಲದ ದಂಟನ್ನು) ಗೆಲ್ದ ರತ್ನಕುಂಡಲಂಗಳ ಪೊಳಪನೊಳಕೊಂಡಂತೆ ನಸುನೇಲ್ವ (ಸ್ವಲ್ಪ ಜೋಲಾಡುವ)ಕರ್ಣಾಟೀ ಕರ್ಣಪೂರನ ಪಾಲೆಗಳುಂ

(ಕಿವಿಯ ಓಲೆಗಳು)

ಸರಸ್ವತಿಯಾಡುವ

ಲೀಲಾಂದೋಳದಂತಾದುವು

(ಸರಸ್ವತಿಯ ಉಯ್ಯಾಲೆ);೩;

ಬಳ್ವಳ ಬೆಳೆದೆಳಗೌಂಗಿನಂತೆ

ಲೋಕದ

ಚೆಲ್ವೆಲ್ಲಮನೊಳಕೊಂಡು

ರೇಖೆಗೊಂಡ ಲಾಟೀ

ಲಲಾಮನ ಪರಿಣದ್ಧ ಕಂಧರಂ

ಯುವರಾಜ

ಕಂಠಿಕಾಭರಣಮಂ

ಕಟ್ಟುವುದರ್ಕೆ ನೋಂತು ತನ್ನ
ಚೆಲ್ವನಲ್ಲದೆ ಪೆಱರ
ಚೆಲ್ವನಾಸೆವಡದಂತಾದುದು;೪;
ಕುಲದ ಚಲದ ಮೈಮೆಯೊಳ್
ತನ್ನನೆ ನೋಡಿದ
ಸಂತೋಷದೊಳುತ್ಸಾಹ
ಮಾದಂತೆ ಸೊಗಯಿಸುವ
ಸಮರ್ರೈಕಮೇರುವಿನ
ಭುಜಶಿಖರಂಗಳ್ ಕುಲಶಿಖರಿ
ಶಿಖರಂಗಳಂತಾದುವು;೫;
ವ್ಯಾಳ ಗಜಂಗಳು ಮನಂಕದ

ಬರ್ದೆಯರುಮನುಗಿಬಗಿಮಾ
ಡಿದ ಸಂತೋಷದೊಳ್ ಬಳ್ವಳ
ಬಳೆದ ವಿಕ್ರಾಂತತುಂಗನ
ನಿಡುದೋಳ್ಗಳ್ ಗಣಿಕಾಜನಕ್ಕೆ
ಕಾಮಪಾಶಂಗಳು
ಮರಾತಿಜನಕ್ಕೆ
ಯಮಪಾಶಂಗಳುಮಾದುವು;
೬; ರಕ್ತಾಶೋಕಪಲ್ಲವದಂತೆ
ತೊಳತೊಳಗುವಾಂ ಕುಚಕಲಶ
ಪಲ್ಲವನ ಕರತಳಪಲ್ಲವಂಗಳ್
ಸಮದ

ಗಜಕುಂಭಸ್ಥಳಾಸಾಳನ
ಕರ್ಕಶಂಗಳಾದುವು;೭;
ಪೊಡರ್ವ
ಪಗೆವರನುಱದೆ(ಶತ್ರುಗಳನ್ನು
ಉರದೆ-ಬೇಗ ಕೊಂಡ-
ಸೆರೆಹಿಡಿದ) ಕೊಂಡ
ಸಂತೋಷದೊಳಂ
ಶ್ರೀಯನೊಳಕೊಂಡ
ಸಂತೋಷದೊಳಂ ತೆಕ್ಕನೆ
ತೀವಿದ ಕೇರಳೀ ಕೇಳಿ
ಕಂದರ್ಪನಗಲುರಂ ಲಕ್ಷ್ಮಿಗೆ

ಕುಲಭವನಮುಂ
ನಿವಾಸಭವನಮುಮಾದುದು;
೮; ಪೊಡರ್ವ ಮಂಡಳಿಕರ
ಮನದಂತೆ ಕರಮಸಿದಾದ
ಪರಾಕ್ರಮಧವಳನ
ಮಧ್ಯಪ್ರದೇಶಂ ನಾರಾಯಣಂ
ತನ್ನಾಳ್ದಂ ಮಾಡಿ
ತಾನಾಳ್ಮಾಡಿಯುಂ
ತಾನಳ್ಕಾಡೆಯುಂ ಬರ್ದೆಯರ
ಮನವನಳ್ಕಾಡಿಸುವಂತಾದು
ದು;೯;

ಗಂಭೀರಗುಣದೊಳಮಾವರ್ತ
ನ ಸಿದ್ಧಿಯೊಳಂ ಜಳನಿಯನೆ
ಪೋಲ್ವ ಶರಣಾಗತ ಜಳನಿಯ
ನಿಮ್ನನಾಭಿ ಚೆಲ್ವಿಂಗೆ ತಾನೆ
ನಾಭಿಯಾದುದು;೧೦;
ಸಿಂಹಕಟಿತಟಮನಿಳಿಸುವ
(ಸಿಂಹಕಟಿತಟಮನಿಳಿಸುವ)
ರಿಪುಕುರಂಗ ಕಂಠೀರವನ
ಕಟಿತಟಮೊಲು ನೋಡುವ
ಗಾಡಿಕಾರ್ತಿಯರ ಕಣ್ಗೆ
ಕಾಮನಡ್ಡಣದಂತೆದೊಡ್ಡಿತ್ತಾಗಿ

ಮೀಱುವುದ್ವೃತ್ತ ವೃತ್ತತೆಯ
ನೀಱ್ದುಕೊಂಡಂತುದ್ವೃತ್ತಂಗ
ಳಾದುವು;೧೧;
ಉದಾತ್ತನಾರಾಯಣನೂರು
ಯುಗ್ಮಂಗಳ್
(ಉದಾತ್ತನಾರಾಯಣನ
ಊರು-ಎರಡು ತೊಡೆ
ಯುಗ್ಮಂಗಳ್) ಮಾನಿನಿಯರ
ಮನೋಗಜಂಗಳಂ
ಕಟ್ಟಲ್ಕಾಲಾನ
ಸ್ತಂಭಂಗಳಾದುವು.;೧೨;

ವಚನ:ಅರ್ಥ:ಹೊಸಯೌವ ನದ ಮೊದಲ ಬಣ್ಣದಂತೆ ಕಪ್ಪಾಗಿ ಕಸ್ತೂರಿಯಿಂದ ಬರೆದಂತಿರುವ ವಿಕ್ರಾಂತತುಂಗನ ಮೀಸೆಗಳು ಅವನ ಭಯಂಕರವಾದ ಪ್ರಾತಾಪಾಗ್ನಿಯ ಹೊಗೆಯ ರೇಖೆಯಂತಾದುವು; ಹುಳಿಯಿಂದ ತೊಳೆದ ಹವಳದ ಬಟ್ಟಿನಂತೆ ಚಂದದ ಸಂಸಾರಸಾರೋದಯನ/

ಅರ್ಜುನನ ಕೆಂಪು ತುಟಿಯು
ಕಾಮರಸದ
ಉಂಡೆಯಂತಾಯಿತು;೧;
ದಾಳಿಂಬದ ಬೀಜಗಳನ್ನೂ
ಹೊಸಮುತ್ತುಗಳನ್ನೂ
ಉಗುಳುವಂತಿದ್ದ ವಿಬುಧ
ವನಜವನು ಕಳಹಂಸನ
ಹಲ್ಲಿನ ಸಾಲುಗಳು ಚಂದ್ರನ
ಕಾಂತಿಯನ್ನು
ತಿರಸ್ಕರಿಸುವಂತಾದುವು;೨;
ಮಡಿಸಿ ತಂದಿರಿಸಿದ

ಹೊಸನೆಯ್ದಿಲೆಯ ಕಾವನ್ನು
ಯಾವಾಗಲೂ ಗೆದ್ದಿರುವ
ರತ್ನದ ಹತ್ತು ಕಡುಕುಗಳ
ಹೊಳಪನ್ನೊಳಕೊಂಡು
ಹಾಗೆಯೇ ಸ್ವಲ್ಪ
ಜೋಲಾಡುತ್ತಿರುವ
ಕರ್ಣಾಟೀಕರ್ಣಪೂರನ
ಕಿವಿಯ ಹಾಲೆಗಳು
ಸರಸ್ವತಿಯು ತೂಗುತ್ತಿರುವ
ಆಟದುಯ್ಯಾಲೆಯಂತಾದುವು
;೩; ಬಳಬಳನೆ (ಚೆನ್ನಾಗಿ)

ಬೆಳೆದ ಎಳೆ ಅಡಿಕೆಯಂತೆ
ಲೋಕಸೌಂದರ್ಯವನ್ನೆಲ್ಲ
ತನ್ನಲ್ಲಿ ಸೇರಿಸಿಕೊಂಡು
ಗೆರೆಯನ್ನು ಹೊಂದಿದ
ಲಾಟೀಲಲಾಮನ ತುಂಬು
ಕೊರಳು
ಯುವರಾಜಪಟ್ಟಾಭಿಷೇಕಕ್ಕೆ
ಯೋಗ್ಯವಾದ ಒಡವೆಯನ್ನು
ಧರಿಸುವುದಕ್ಕೆ ವ್ರತಮಾಡಿ
ತನ್ನ ಸೌಂದರ್ಯವನ್ನೇ ಅಲ್ಲದೆ
ಇತರ ಸೌಂದರ್ಯಕ್ಕೂ

ಆಸೆಪಡುವಂತಾಯಿತು.;೪;
ಕುಲ ಮತ್ತು ಛಲದ
ಮಹಿಮೆಯಲ್ಲಿ ತನ್ನನ್ನೇ
ನೋಡಿದ ಸಂತೋಷವು
ಉತ್ಸಾಹವಾದ ಹಾಗೆ
ಸೊಗಯಿಸುವ
ಸಮರ್ರೈಕಮೇರುವಿನ ಭುಜದ
ಮೇಲುಭಾಗಗಳು
ಕುಲಪರ್ವತದ ಶಿಖರಗಳ
ಹಾಗೆ ಆದುವು;೫; ದುಷ್ಟ
ಆನೆಗಳನ್ನೂ ಸುಪ್ರಸಿದ್ಧರಾದ

ಸುಮಂಗಲಿಯರನ್ನೂ
(ಕುಲಸ್ತ್ರೀಯರನ್ನೂ)
ಹೆದರಿಸಿದ ಸಂತೋಷದಲ್ಲಿ
ಸುಪುಷ್ಟವಾಗಿ ಬೆಳೆದ
ವಿಕ್ರಾಂತತುಂಗನ
ದೀರ್ಘವಾದ ತೋಳುಗಳು
ವೇಶ್ಯಾಸ್ತ್ರೀಯರಿಗೆ
ಕಾಮಪಾಶವೂ ಶತ್ರುರಾಜರಿಗೆ
ಯಮಪಾಶವೂ ಆದುವು;೬;
ಕೆಂಪು ಮುಳ್ಳುಮುತ್ತುಗದ
ಚಿಗುರಿನ ಹಾಗೆ

ಪ್ರಕಾಶಮಾನವಾಗಿರುವ
ಆಂಕುಚಕಲಶಪಲ್ಲವನ
ಚಿಗುರಿನಂತಿರುವ ಅಂಗೈಗಳು
ಮದ್ದಾನೆಗಳ ಕುಂಭಸ್ಥಳವನ್ನು
ಅಪ್ಪಳಿಸುವುದರಿಂದ
ಒರಟಾದುವು;೭; ಉದ್ಧತರಾದ
ಶತ್ರುಗಳನ್ನು ಶೀಘ್ರವಾಗಿ
ಸೋಲಿಸಿದ
ಸಂತೋಷದಿಂದಲೂ
ಐಶ್ವರ್ಯವನ್ನು ಪಡೆದ
ಸಂತೋಷದಿಂದಲೂ ಇದ್ದಕ್ಕಿದ್ದ

ಹಾಗೆ ತುಂಬಿಕೊಂಡ
ಕೇರಳೀಕೇಳೀಕಂದರ್ಪನ
ವಿಶಾಲವಾದ ಎದೆಯು
ಲಕ್ಷ್ಮೀದೇವಿಗೆ
ವಂಶಪಾರಂಪರ್ಯವಾಗಿ
ಬಂದ ನೆಲೆಯೂ
ನಿತ್ಯವಾಸಸ್ಥಳವೂ
ಆಯಿತು;೮; ಉದ್ವ ೃತ್ತರಾದ
(ಮೇಲೆ ಬೀಳುವ)
ಸಾಮಂತರಾಜರ ಮನಸ್ಸಿನಂತೆ
ಬಹಳ ಕೃಶವಾದ

ಪರಾಕರ್ಮಧವಳನ
ಸೊಂಟವು
ಶ್ರೀಮನ್ನಾರಾಯಣನು ತಾನೇ
ಯಜಮಾನನಾಗಿಯೂ
ತನ್ನನ್ನೇ ಆಳಾಗಿಯೂ
ಮಾಡಿಕೊಂಡೂ ತಾನೇ
ನರ್ತನಮಾಡಿ ಕುಲಸ್ತ್ರೀಯರ
ಮನಸ್ಸನ್ನು ವಿಚಲಿತವನ್ನಾಗಿ
ಮಾಡುವಂತಾಯಿತು.;೯;
ಗಂಭೀರಗುಣದಲ್ಲಿಯೂ
ಸುಳಿಸುಳಿಯಾಗಿರುವ ಇತರ

ಗುಣದಲ್ಲಿಯೂ
ಸಮುದ್ರವನ್ನು ಹೋಲುವ
ಶರಣಾಗತ ಜಲನಿಯ
ಆಳವಾದ ಹೊಕ್ಕುಳು
ಸೌಂದರ್ಯಕ್ಕೆ ತಾನೆ
ಕೇಂದ್ರವಾಯಿತು;೧೦; ಸಿಂಹದ
ಸೊಂಟದ ಭಾಗವನ್ನೂ
ಹಿಯ್ಯಾಳಿಸುವ
ರಿಪುಕುರಂಗಕಂಠೀರವನ
ಸೊಂಟದ ಭಾಗವು
ಪ್ರೀತಿಯಿಂದ ನೋಡುವ

ಸುಂದರ ಸ್ತ್ರೀಯರ ಕಣ್ಣಿಗೆ
ಕಾಮನ ಗುರಾಣಿಯಂತೆ
ದೊಡ್ಡದಾಗಿ ಬೆಳೆದು
ಅತಿಶಯವಾದ ದರ್ಪವನ್ನು
ತಾಳಿದಂತೆ ವಿಶೇಷ ಗುಂಡಾಗಿ
ಬೆಳೆದುವು;೧೧; ಉದಾತ್ತ
ನಾರಾಯಣನ ಎರಡು
ತೊಡೆಗಳು ಸ್ತ್ರೀಯರ
ಮನಸ್ಸೆಂಬ ಆನೆಗಳನ್ನೂ
ಕಟ್ಟುವ ಕಂಬಗಳಾದುವು,
ಹಾಗೆಯೇ ಅಪೂರ್ವವಾಗಿ

ಪ್ರಕಾಶಿಸುವ ಕಿರುದೊಡೆಗಳು

ಉಡುಹತ್ತಿದಂಥವು ;೧೨;–

ವ|ಅಂತಪೂರ್ವಂಗಳಾಗಿ

ತೊಳಗುವ

ಕಿಱುದೊಡೆಗಳುಡುವಡರ್ದನ್ನ

ಮಾರೂಢ ಸರ್ವಜ್ಞನ ದೊಡ್ಡ

ಮಾರ್ಗಂಳೆಳವಾಱೆಯ

ದಿಂಡಿನೊಳ್

ಸಾಣೆಗಟ್ಟಿದಂತಾದುವು;೧೩;

ಗೂಢಗುಲಪಾರ್ಷ್ಣಿಗಳನೊಳ

ಕೊಂಡ ಮನುಜಮಾಂಧಾತನ

ಪೊಱ ಅಡಿಗಳ್ ವಿರೋಧಿ
ಭೂಪಾಳರನಡಿಗೆಱಗಿಸಿದ
ಸಂತೋಷದೊಳುನ್ನತಂ
ಗಳಾದಂತೆ
ಕೂರ್ಮೋನ್ನತಂಗಳಾದುವು;೧
ಳ; ನೊಸಲಂ ಸುಟ್ಟಿ
ತೋರ್ಪನ್ನವಪ್ಪಂಗುಟಂಗ
ಳೊಳ್ ಮಿಂಚಂ ಕೀಲಿಸಿದಂತೆ
ತೊಳಗಿ ಪೊಳೆವ ಪ್ರಚಂಡ
ಮಾರ್ತಾಂಡನ
ಪಾದನಖಂಗಳ್ ಗಂಡರ

ಪೆಂಡಿರಂಜಿದಳ್ಕಿದ ಮೊಗಮಂ
ನೋಡಲ್ಕೆ
ಕನ್ನಡಿಗಳನ್ನವಾದುವು;೧೫;
ಪೊಸತಲರ್ದ ಕೆಂದಾವರೆಯ
ಕೆಂಪುಮಂ
ಮೆಲ್ಪುಮನಿಳ್ಕುಳಿಗೊಂಡು
ತೊಳಗುವರಿಕೇಸರಿಯ
ಪಾದತಳಂಗಳಡಿಗೆಱಗಿದರಿನ
ರಪಾಲರ ಮಕುಟಮಾಣಿಕ್ಯ
ಮರೀಚಿಜಾಲ
ಬಾಳಾತಪಂಗಳನೆಲೆದು

ಕೆಂಕಮಾದಂತಾದುವು;೧೬; ಪೊಸವೆಸಱಿಗೆಯ (ಹೊಸ ಹೆಸರು ಅಗೆಯ-ಮೊಳಕೆ) ಬಣ್ಣದಂತೆ ಸೊಗಯಿಸುವ ಸಾಮಂತಚೂಡಾಮಣಿಯ ಮೆಯ್ಯ ಬಣ್ಣಂ ವಿಧಾತ್ರನೆಂಬ ಚಿತ್ತಾರಿಯ ವರ್ಣಕ್ರಮಂಗೆಯ್ದ ಕದಳೀಗರ್ಭಶ್ಯಾಮಮೆಂಬ ಬಣ್ಣದಂತಾದುದು;೧೭;.

ವಚನ:ಅರ್ಥ:

ಆರೂಢಸರ್ವಜ್ಞನ ತೊಡೆಯ

ಕಿಣ ಅಥವಾ ಜಡ್ಡುಗಳು
(ಕುದುರೆ ಸವಾರಿ ಮಾಡುವಾಗ
ಒತ್ತಿ ಆದ ಜಡ್ಡು) ಎಳೆಯ
ಬಾಳೆಯ ದಿಂಡಿನಲ್ಲಿ
ಸಾಣೆಯಕಲ್ಲನ್ನು ಕಟ್ಟಿದ
ಹಾಗಾದುವು;೧೩; ಗೂಢವಾದ
ಕಾಲಿನ ಹರಡನ್ನು
ಹೊಂದಿರುವ
ಮನುಜಮಾಂಧಾತನ
ಅಡಿಯ ಹೊರಭಾಗಗಳು
ಶತ್ರುರಾಜರನ್ನು ಕಾಲಿಗೆ

ಬೀಳುವಂತೆ ಮಾಡಿದ
ಸಂತೋಷದಲ್ಲಿ
ಎತ್ತರವಾದಂತೆ ಹಾಗೆಯೇ
ಆಮೆಯ ಚಿಪ್ಪಿನ
ಮೇಲುಭಾಗದಂತೆ
ಉಬ್ಬಿಕೊಂಡವು.;೧೪;
ಮುಖವನ್ನು ಸುಟ್ಟಿ
ತೋರಿಸುವಂತಿರುವ ಕಾಲಿನ
ಬೆರಳುಗಳಲ್ಲಿ ಸ್ವಲ್ಪ ನೆಟ್ಟಿರುವ
ಹಾಗೆ ಪ್ರಕಾಶಮಾನವಾಗಿರುವ
ಪ್ರಚಂಡಮಾರ್ತಾಂಡನ

ಕಾಲಿನ ಉಗುರುಗಳು
ವೀರಪತ್ನಿಯರು ಹೆದರಿದ
ತಮ್ಮ ಮುಖವನ್ನು
ನೋಡುವುದಕ್ಕೆ
(ಉಪಯೋಗಿಸುವ)
ಕನ್ನಡಿಯಂತಾದುವು.;೧೫;
ಹೊಸದಾಗಿ ಅರಳಿರುವ
ಕೆಂಪುದಾವರೆಯಂತೆ
ಕೆಂಪುಬಣ್ಣವನ್ನೂ
ಬಿಳಿಯಬಣ್ಣವನ್ನೂ
ತಿರಸ್ಕರಿಸುವ ಅರಿಕೇಸರಿಯ

ಪಾದತಳಗಳು ಕಾಲಿಗೆ ಬಿದ್ದ
ಶತ್ರುರಾಜರ ಕಿರೀಟದಲ್ಲಿರುವ
ಮಾಣಿಕ್ಯ ಸಮೂಹದ
ಕೆಂಬಿಸಿಲನ್ನು ಹಿಯ್ಯಾಳಿಸಿ
ಕೆಂಪಾದಂತಾದುವು.;೧೬;
ಹೆಸರುಕಾಳಿನ
ಹೊಸಮೊಳಕೆಯ ಬಣ್ಣದಂತೆ
ಸೊಗಯಿಸುವ
ಸಾಮಂತಚೂಡಾಮಣಿಯ
ಶರೀರದ ಬಣ್ಣವು ಬ್ರಹ್ಮನೆಂಬ
ಬಣ್ಣಗಾರನು ಬಣ್ಣಗಳನ್ನು

ಕಲಸಿಮಾಡಿದ ಬಾಳೆಯ
ಹೂವಿನ ಮೋತೆಯಂತೆ
ಕೆಂಪುಮಿಶ್ರವಾದ
ಕಪ್ಪುಬಣ್ಣದಿಂದ
ಕೂಡಿತು;೧೭;.

ಚಂ|| ಮನದೊಳೊಱಲ್ದು
ಜೋಲ್ದಳಿಪಿ ನೋಡಲೊಡಂ
ಸೆರೆಗೆಯ್ದು ಕಣ್ಣುಮಂ
ಮನಮುಮನಂಗಜನ್ಮನರಲಂ
ಬುಗಳಿಂದೆ ಮರುಳ್ಚಿ ಬಂದ
ಮಾ|

ವಿನ ಬನದೊಳ್ ತೆರಳ್ಚಿ ಪೊಳೆವಿಂದುಮರೀಚಿಗಳಿಂದು ರುಳ್ಚಿ ಪೂ
ವಿನ ಪಸೆಯೊಳ್ ಪೊರಳ್ಚಿದನಳುರ್ಕೆಯ ಬರ್ದೆಯರಂ ಗುಣಾರ್ಣವಂ|| ೪೦||

ಪದ್ಯ-೪೦:ಪದವಿಭಾಗ-ಅರ್ಥ:ಮನದೊಳು ಒಱಲ್ದು (ಪ್ರೀತಿಸಿ) ಜೋಲ್ದು ಅಳಿಪಿ(ನೇತುಬಿದ್ದು

ಆಸೆಪಟ್ಟು),
ನೋಡಲೊಡಂ(ನೋಡಿದ
ಕೂಡಲೆ) ಸೆರೆಗೆಯ್ದು
ಕಣ್ಣುಮಂ ಮನಮುಂ
ಅಂಗಜನ್ಮಂ (ಮನ್ಮಥನು)
ಅರಲಂಬುಗಳಿಂದೆ
ಹೂಬಾಣಗಳಿಂದ) ಮರುಳ್ಚಿ
(ಮರುಳುಮಾಡಿ) ಬಂದ
ಮಾವಿನ ಬನದೊಳ್ ತೆರಳ್ಚಿ
(ಸೇರುವಂತೆ ಮಾಡಿ) ಪೊಳೆವ
ಇಂದು ಮರೀಚಿಗಳಿಂದ

ಉರುಳ್ಚಿ (ಹೊಳೆವ ಚಂದ್ರನ
ಕಿರಣಗಳಿಂದ ಉರುಳಿಸಿ)
ಪೂವಿನ ಪಸೆಯೊಳ್
ಪೊರಳ್ಚಿದನು (ಹೂವಿನ
ಹಾಸಿಗೆಯಲ್ಲಿ ಹೊರಳಿಸಿದನು
- ವಿರಹದಿಂದ), ಅಳುರ್ಕೆಯ
ಬರ್ದೆಯರಂ ಗುಣಾರ್ಣವಂ(
ಧೀರರಾದ ಪ್ರಾಯದ
ಹೆಂಗಸರನ್ನೂ ಕೂಡಾ
ಗುಣಾರ್ಣವನಾದ
ಅರ್ಜುನನು)|| ೪೦||

ಪದ್ಯ-00:ಅರ್ಥ:ಗುಣಾರ್ಣ
ವ ಅರ್ಜುನನನು ಧೀರರಾದ
ಪ್ರಾಯದ ಹೆಂಗಸರನ್ನೂ
ಕೂಡಾ ತನ್ನನ್ನು ಮನಸ್ಸಿನಲ್ಲಿ
ಪ್ರೀತಿಸಿ ತನಗೆ ಸೋತು
ಆಶೆಯಿಂದ ನೋಡಲು ಅವರ
ಕಣ್ಣನ್ನೂ ಮನಸ್ಸನ್ನೂ
ಮನ್ಮಥನ ಹೂಬಾಣದಿಂದ
ಸೆರೆಹಿಡಿದು ಅವರಿಗೆ
ಮೋಹವುಂಟಾಗುವ ಹಾಗೆ
ಮಾಡಿ ಫಲಭರಿತವಾದ

ಮಾವಿನ ತೋಟದಲ್ಲಿ ಸೇರಿಸಿ ಪ್ರಕಾಶಮಾನವಾದ ಚಂದ್ರನ ಕಿರಣಗಳಿಂದ ಉರುಳಿಸಿ ಹೂವಿನ ಹಾಸಿಗೆಯಲ್ಲಿ ಹೊರಳುವ ಹಾಗೆ ಮಾಡಿದನು. (ಅವನನ್ನು ನೋಡಿದ ಪ್ರಾಯದಸ್ತ್ರೀಯರೂ ವಿಧವಿಧವಾದ ಕಾಮಬಾಧೆಗೊಳಗಾಗುತ್ತಿದ್ದರು ಎಂದು ಭಾವ).

ದ್ರೋಣನ ಜನನ -ಬಡತನ -ಪ್ರತಿಜ್ಞೆ

ವ|| ಅಂತು ನಕುಲ ಸಹದೇವರ್ ಸಹಿತಮಯ್ವರುಂ ನವಯೌವನದ ಪರಮಸುಖಮನೆಯ್ದಿ ಸಂತೋಷದಿನಿರ್ದರಿತ್ತ ಗಂಗಾದ್ವಾರದೊಳ್ ಭರದ್ವಾಜನೆಂಬ ಬ್ರಹ್ಮಋಷಿ-

ವಚನ:ಪದವಿಭಾಗ-ಅರ್ಥ:

ಅಂತು ನಕುಲ ಸಹದೇವರ್

ಸಹಿತಂ ಅಯ್ವರುಂ
ನವಯೌವನದ
ಪರಮಸುಖಮನು ಎಯ್ದಿ
ಸಂತೋಷದಿಂ ಇರ್ದರು; ಇತ್ತ
ಗಂಗಾದ್ವಾರದೊಳ್
ಭರದ್ವಾಜನೆಂಬ ಬ್ರಹ್ಮಋಷಿ-
ವಚನ:ಅರ್ಥ:ಹೀಗೆ ನಕುಲ
ಸಹದೇವರ ಸಹಿತ ಐಯ್ದು
ಜನರೂ ಹೊಸಪ್ರಾಯದ
ಉತ್ತಮಸುಖವನ್ನು ಹೊಂದಿ
ಸಂತೋಷದಿಂದಿದ್ದರು. ಈ ಕಡೆ

ಗಂಗಾದ್ವಾರದಲ್ಲಿ
ಭರದ್ವಾಜನೆಂಬ ಬ್ರಹ್ಮ
ಋಷಿಯು-

ಕಂ|| ಸ್ನಾನಾರ್ಥಮೊಂದು
ಕಳಶಮ
ನಾ ನಿಯಮ ನಿಧಾನನೆಟಿಲೆ
ಪಿಡಿದಮಳಿನ ಗಂ|
ಗಾ ನದಿಗೆ ವಂದು ಸುರತ ನಿ
ಧಾನಿಯನಮರೇಂದ್ರ
ಗಣಿಕೆಯಂ ಮುನಿ ಕಂಡಂ||
೪೧||

ಪದ್ಯ-೪೧:ಪದವಿಭಾಗ-ಅರ್ಥ:ಸ್ನಾನಾರ್ಥಂ ಒಂದು ಕಳಶಮಂ ಆ ನಿಯಮ ನಿಧಾನನೆ ಎಟಿಲೆ ಪಿಡಿದು (ಹಿಡಿದು)ಅಮಳಿನ ಗಂಗಾ ನದಿಗೆ ವಂದು(ನಿರ್ಮಲವಾದ ಗಂಗಾನದಿಗೆ ಬಂದು) ಸುರತ ನಿಧಾನಿಯಂ ಅಮರೇಂದ್ರ ಗಣಿಕೆಯಂ ಮುನಿ ಕಂಡಂ(ರತಿಸುಖಕ್ಕೆ ತಕ್ಕವಳಾದ

ಅಪ್ಸರೆಯೊಬ್ಬಳನ್ನು
ನೋಡಿದನು)

ಪದ್ಯ-೪೧:ಅರ್ಥ:ಸ್ನಾನಕ್ಕಾಗಿ ಒಂದು ಬಿಂದಿಗೆಯನ್ನು ಹಿಡಿದು, ನಿರ್ಮಲವಾದ ಗಂಗಾನದಿಗೆ ಬಂದು ರತಿಸುಖಕ್ಕೆ ತಕ್ಕವಳಾದ ಅಪ್ಸರೆಯೊಬ್ಬಳನ್ನು ನೋಡಿದನು)

ವ|| ಅಂತು ಕಾಣ್ಬುದುಮಮೃತಾಬ್ಧಿಯೆಂಬ

ಚ್ಚರಸೆಯ ಕನಕ

ಕಾಂಚೀಕಳಾಪದೊಳ್

ತೊಡರ್ದ ದೇವಾಂಗ

ವಸ್ತ್ರದುಳ್ಳುಡೆಯೊಳುಲಿವ

ಸೂಸಕದ ನೂಲ

ತೊಂಗಲ್ವೆರಸೆಟಿಲ್ವ ಮುಂದಣ

ಸೋಗೆ ಕಾರ್ಗಾಲದ

ಸೋಗೆಯಂತೆ ಸೊಗಯಿಸೆ-

ವಚನ:ಪದವಿಭಾಗ-

ಅರ್ಥ:ಅಂತು-ಹಾಗೆ

ಕಾಣ್ಬುದುಂ (ಹಾಗೆ ಕಂಡಾಗ)

ಅಮೃತಾಬ್ಧಿಯೆಂಬ
ಅಪ್ಸರೆಯ, ಕನಕ ಕಾಂಚೀ
ಕಳಾಪದೊಳ್(ಚಿನ್ನದ
ಒಡ್ಯಾಣದ ಪಟ್ಟಿಯಲ್ಲಿ.)
ತೊಡರ್ದ ದೇವಾಂಗ ವಸ್ತ್ರದ
ಉಳ್ಳುಡೆಯೊಳು ಉಲಿವ
(ಸಿಕ್ಕಿಕೊಂಡರೇಷ್ಮೆ ವಸ್ತ್ರದ
ಒಳುಡುಪಿನಲ್ಲಿ ಸದ್ದು
ಮಾಡುವ) ಸೂಸಕದ ನೂಲ
(ಗೆಜ್ಜೆಯ ಕುಚ್ಚಿನ) ತೊಂಗಲ್
ವೆರಸು ಎಟಿಲ್ವ (ನೂಲಿನ

ಗೊಂಚಲು ಸಮೇತ

ಇಳಿಬಿದ್ದಿರುವ) ಮುಂದಣ

ಸೋಗೆ ಕಾರ್ಗಾಲದ

ಸೋಗೆಯಂತೆ ಸೊಗಯಿಸೆ

(ಗರಿಯು ಮಳಗಾಲದ

ನವಿಲಿನಂತೆ

ಸುಂದರವಾಗಲು,)

ವಚನ:ಅರ್ಥ:ಹಾಗೆ ಕಂಡಾಗ

ಅಮೃತಾಬ್ಧಿಯೆಂಬ

ಅಪ್ಸರಸ್ತ್ರೀಯ ಚಿನ್ನದ

ನಡುಪಟ್ಟಿಯಲ್ಲಿ

ಸಿಕ್ಕಿಕೊಂಡಿದ್ದ ರೇಷ್ಮೆಯ
ವಸ್ತ್ರದ ಒಳ ಉಡುಪಿನಲ್ಲಿ
ಶಬ್ದಮಾಡುವ ಗೆಜ್ಜೆಯ
ಕುಚ್ಚಿನ ನೂಲಗೊಂಚಲ
ಸಮೇತವಾಗಿ ಇಳಿಬಿದ್ದಿರುವ
ಮುಂಭಾಗದ ಸೆರಗು
ಮಳೆಗಾಲದ ನವಿಲಿನಂತೆ
ಸುಂದರವಾಗಲು-

ಕಂ|| ಆದೆಲರ ಸೋಂಕಿನೊಳ್

ತೆಱ

ಪಾದೊಡೆ ಬೆಳ್ವೆಸೆಯೆ ಮಸೆದ ಮದನನ ಬಾಳಂ|
ತಾದುವು ಪೊಳೆವೊಳ್ದೊಡೆ ತೆಱ
ಪಾದೆರ್ದೆಯಂ ನಟ್ಟುವಂದು ತನ್ಮನಿಪತಿಯಾ|| ೪೨||

ಪದ್ಯ-೪೨:ಪದವಿಭಾಗ-ಅರ್ಥ:ಆದ ಎಲರ ಸೋಂಕಿನೊಳ್ (ಆದ ಗಾಳಿಯ ತಾಗಿದ ರಭಸಕ್ಕೆ) ತೆಱಪಾದೊಡೆ

ಬೆಳ್ಪೆಸೆಯೆ(ತೆರವಾದಾಗ-
ಬಟ್ಟೆಯು ಸರಿದಾಗ, ಬೆಳ್ಪು
ಎಸೆಯೆ- ತೊಡೆಯ ಬಿಳಿಪು
ಎಸೆದು ಎದ್ದುಕಾಣಲು)
ಮಸೆದ ಮದನನ ಬಾಳಂತೆ
ಆದುವು (ಅದು- ಮಸೆದು
ಹರಿತವಾದ ಮನ್ಮಥನ
ಕತ್ತಿಯಂತೆ ಆಯಿತು) ಪೊಳೆವ
ಒಳ್ತೊಡೆ ತೆಱಪಾದ
ಎರ್ದೆಯಂ ನಟ್ಟುವಂದು ತತ್
ಮುನಿಪತಿಯ ಆ (ಹೊಳೆದ

ಅಪ್ಸರೆಯ ಒಳತೊಡೆ, ಮುನಿಯ ತೆರೆದ ಎದೆಯನ್ನು ಹೊಕ್ಕಿತು)

ಪದ್ಯ-೪೨:ಅರ್ಥ:. ಗಾಳಿಯ ಸ್ಪರ್ಶದಿಂದ ಆದ ವಸ್ತ್ರದ ಸರಿಸುವಿಕೆಯು, ಅವಳ ಸುಂದರವಾದ ತೊಡೆಯು ತೊಡೆಯ ಬಿಳಿಪು ಎಸೆದು ಎದ್ದುಕಾಣಲು, ಅದು-ಮಸೆದು ಹರಿತವಾದ ಮನ್ಮಥನ ಕತ್ತಿಯಂತೆ

ಆಯಿತು. ಅದು ಆ ಋಷಿಯ ತೆರೆದ ಎದೆಯನ್ನು ಹೊಕ್ಕಿತು.

ವ|| ಅಂತು ಕಂತುಶರಪರವಶನಾಗಿ ಧೈರ್ಯಕ್ಷರಣೆಯುಮಿಂದ್ರಿಯ ಕ್ಷರಣೆಯುಮೊಡನೊಡನಾಗೆ-

ವಚನ:ಪದವಿಭಾಗ-

ಅರ್ಥ:ಅಂತು ಕಂತುಶರಪರವಶನಾಗಿ (ಹಾಗೆ ಮನ್ಮಥನ ಶರಕ್ಕೆ ಪಪರವಶನಾಗಿ)

ಧೈರ್ಯಕ್ಷರಣೆಯುಂ

ಇಂದ್ರಿಯ ಕ್ಷರಣೆಯುಂ

ಒಡನೊಡನೆ ಆಗೆ,

ವಚನ:ಅರ್ಥ:ಹಾಗೆ

ಮನ್ಮಥನ ಬಾಣಗಳಿಗೆ

ಪಪರವಶನಾಗಿ ಅವನ

ಧೈರ್ಯವು ಇಳಿಯಿತು,

ಅದರೊಟ್ಟಿಗೆ ರೇತಸ್ಸೂ

ಸೋರಿಹೋಗಲು:-

ಕಂ|| ಮಾಣದೆ

ಸೋರ್ವಿಂದ್ರಿಯಮಂ

ದ್ರೋಣದೊಳಾಂತಲ್ಲಿಯೊಗೆದ ಶಿಶುವಂ ಕಂಡೀ|
ದ್ರೋಣದೊಳೆ ಪುಟ್ಟಿದೀತಂ ದ್ರೋಣನೇ ಪೋಗೆಂದು ಪೆಸರನಿಟ್ಟಂ ಮುನಿಪಂ|| ೪೩||

ಪದ್ಯ-೪೩:ಪದವಿಭಾಗ-ಅರ್ಥ:ಮಾಣದೆ ಸೋರ್ವಿಂದ್ರಿಯಮಂ (ನಿಲ್ಲದೆ ಸೋರಿದ ಇಂದ್ರಿಯವನ್ನು) ದ್ರೋಣದೊಳು ಆಂತು ಅಲ್ಲಿ ಒಗೆದ ಶಿಶುವಂ ಕಂಡು (ಆ

ಭರದ್ವಾಜ ಋಷಿಯು ಅದನ್ನು ಒಂದು ದೊನ್ನೆಯಲ್ಲಿ ಹಿಡಿದು, ಅದರಲ್ಲಿ ಹುಟ್ಟಿದ ಶಿಶುವನ್ನು ನೋಡಿ) ಈ ದ್ರೋಣದೊಳೆ ಪುಟ್ಟಿದ ಈತಂ ದ್ರೋಣನೇ ಪೋಗೆಂದು ಪೆಸರನಿಟ್ಟಂ ಮುನಿಪಂ (ದೊನ್ನೆಯಲ್ಲಿ ಹುಟ್ಟಿದ ಈತನು ದ್ರೋಣನೆಂಬ ಹೆಸರಿನವನೇ ಆಗಲಿ, ಹೋಗು ಎಂದು ಆ ಹೆಸರನ್ನೇ ಅವನಿಗೆ ಇಟ್ಟನು)|

ಪದ್ಯ-೪೩:ಅರ್ಥ:ನಿಲ್ಲದೆ ಸೋರುವ ಇಂದ್ರಿಯವನ್ನು (ವೀರ್ಯವನ್ನು) ಆ ಭರದ್ವಾಜ ಋಷಿಯು ಒಂದು ದೊನ್ನೆಯಲ್ಲಿ ಹಿಡಿದು ಅದರಲ್ಲಿ ಹುಟ್ಟಿದ ಶಿಶುವನ್ನು ನೋಡಿ, ದೊನ್ನೆಯಲ್ಲಿ ಹುಟ್ಟಿದ ಮಗುವು ದ್ರೋಣನೆಂಬ ಹೆಸರಿನವನೇ ಸರಿ, ಹೋಗು ಎಂದು ಆ ಹೆಸರನ್ನೇ ಅವನಿಗೆ ಇಟ್ಟನು

ವ|| ಅಂತು
ಭರದ್ವಾಜನಾತ್ಮತನೂಜಂಗೆ
ಪೆಸರನಿಟ್ಟು ತನ್ನ ಕೆಳೆಯಂ
ಪಾಂಚಾಳ ದೇಶದರಸಂ
ಪೃಷತನೆಂಬನಾತನ ಮಗಂ
ದ್ರುಪದನುಮಂ
ದ್ರೋಣನುಮನೊಡಗೂಡಿ
ಯಜ್ಞಸೇನನೆಂಬ
ಬ್ರಹ್ಮಋಷಿಯ ಪಕ್ಕದೊಳ್
ಬಿಲ್ವಿದ್ದಯಂ ಕಲಲ್ವೇೞ್ಪೊಡೆ
ದ್ರೋಣನುಂ ದ್ರುಪದನುಂ

ಧನುರ್ಧರಾಗ್ರಗಣ್ಯರಾಗೆ
ಭರದ್ವಾಜಂ ದ್ರೋಣಂಗೆ
ಕೃಪನ ತಂಗೆಯಪ್ಪ
ಶಾರದ್ವತೆಯಂ ತಂದು
ಮದುವೆಯಂ
ಮಾಡಿದೊಡಾತಂಗ ಮಾಕೆಗಂ
ತ್ರಿಣೇತ್ರನಂಶದೊಳೊರ್ವ
ಮಗಂ ಪುಟ್ಟಿ-

ವಚನ:ಪದವಿಭಾಗ-

ಅರ್ಥ:ಅಂತು ಭರದ್ವಾಜನ ಆತ್ಮತನೂಜಂಗೆ ಪೆಸರನಿಟ್ಟು

(ಭಾರದ್ವಾಜನು ಹಾಗೆ ತನ್ನ ಮಗುವಿಗೆ ಹೆಸರಿನ್ನಿಟ್ಟು) ತನ್ನ ಕೆಳೆಯಂ ಪಾಂಚಾಳ ದೇಶದರಸಂ ಪೃಷತನೆಂಬನಾತನ ಮಗಂ ದ್ರುಪದನುಮಂ ದ್ರೋಣನುಮಂ ಒಡಗೂಡಿ (ತನ್ನ ಸ್ನೇಹಿತನೂ ಪಾಂಚಾಳದೇಶದ ರಾಜನೂ ಪೃಷತನ ಮಗನೂ ಆದ ದ್ರುಪದ ಮತ್ತು ದ್ರೋಣನನ್ನು

ಒಟ್ಟುಗೂಡಿಸಿ)
ಯಜ್ಞಸೇನನೆಂಬ
ಬ್ರಹ್ಮಋಷಿಯ ಪಕ್ಕದೊಳ್
ಬಿಲ್ವಿದ್ದಯಂ(ಬಿಲ್ ವಿದ್ಯೆಯಂ
ಕಲಲ್ ವೇಲ್ದೊಡೆ) ಲ್ವೇಟ್ದೊಡೆ
(ಹತ್ತಿರ ಬಿಲ್ವಿದ್ಯೆಯನ್ನು
ಕಲಿಯಲು ಹೇಳಲಾಗಿ)
ದ್ರೋಣನುಂ ದ್ರುಪದನುಂ
ಧನುರ್ಧರಾಗ್ರಗಣ್ಯರಾಗೆ
ಭರದ್ವಾಜಂ ದ್ರೋಣಂಗೆ
ಕೃಪನ ತಂಗೆಯಪ್ಪ

ಶಾರದ್ವತೆಯಂ ತಂದು ಮದುವೆಯಂ ಮಾಡಿದೊಡೆ ಆತಂಗಂ ಆಕೆಗಂ ತ್ರಿಣೇತ್ರನ ಅಂಶದೊಳು ಓರ್ವ ಮಗಂ ಪುಟ್ಟಿ-

ವಚನ:ಅರ್ಥ:ಭಾರದ್ವಾಜನು ಹಾಗೆ ತನ್ನ ಮಗುವಿಗೆ ಹೆಸರನ್ನಿಟ್ಟು ತನ್ನ ಸ್ನೇಹಿತನೂ ಪಾಂಚಾಳದೇಶದ ರಾಜನೂ ಪೃಷತನ ಮಗನೂ ಆದ ದ್ರುಪದ ಮತ್ತು ದ್ರೋಣನನ್ನು

ಒಟ್ಟುಗೂಡಿಸಿ
ಯಜ್ಞಸೇನನೆಂಬ
ಬ್ರಹ್ಮಋಷಿಯ ಹತ್ತಿರ ಬಿಲ್ಲು
ವಿದ್ಯೆಯನ್ನು ಕಲಿಯಲು
ಹೇಳಲಾಗಿ, ದ್ರೋಣ ಮತ್ತು
ದ್ರುಪದರು ಬಿಲ್ಲುವಿದ್ಯೆಯಲ್ಲಿ
ಮೊತ್ತಮೊದಲಿಗರಾದರು.
ಹೀಗಾಗಲು ಭಾರದ್ವಾಜನು
ದ್ರೋಣನಿಗೆ ಕೃಪನ
ತಂಗಿಯಾದ ಶಾರದ್ವತೆಯನ್ನು
ತಂದು ಮದುವೆಮಾಡಿದನು.

ಆಗ ಆತನಿಗೂ ಆಕೆಗೂ ಮುಕ್ಕಣ್ಣನಾದ ರುದ್ರನ ಅಂಶದಿಂದ ಒಬ್ಬ ಮಗನು ಹುಟ್ಟಿದನು. ಆಗ:-

ಕಂ|| ದಿವಿಜಾಶ್ವತ್ಥಾಮದೊಳೀ
ಭುವನಂಗಳ್ ನಡುಗೆ ಶಿಶು
ಸರಂಗೆಯ್ದೊಡೆ ನ|
ಕ್ಕವಯವದೆ ಕುಂಭಸಂಭವ
ನಿವನಶ್ವತ್ಥಾಮನೆಂದು ಪೆಸರಿಡೆ
ನೆಗಳ್ದಿಂ|| ೪೪||

ಪದ್ಯ-೪೪:ಪದವಿಭಾಗ-ಅರ್ಥ:ದಿವಿಜ (ದೇವತೆಗಳ) ಅಶ್ವತ್ಥಾಮದೊಳು ಅಶ್ವ ಸ್ಥಾಮ-ಶಕ್ತಿ; ಉಚ್ಛೈಶ್ರವವೆಂಬ ಕುದುರೆಯಂತೆ ಕೂಗಿದಾಗ) ಈ ಭುವನಂಗಳ್ ನಡುಗೆ ಶಿಶು ಸರಂ ಗೆಯ್ದೊಡೆ ನಕ್ಕು ಅವಯವದೆ (ಆಯಾಸವಿಲ್ಲದೆ) ಕುಂಭಸಂಭವನು ಇವಂ

ಅಶ್ವತ್ಥಾಮನೆಂದು ಪೆಸರಿಡೆ ನೆಗಟ್ದಿಂ(ಪ್ರಸಿದ್ಧನಾದನು) **ಪದ್ಯ-೪೪:ಅರ್ಥ**:ಹಾಗೆ ದ್ರೋಣನಿಗೆ ಆ ಮಗನು ಆ ಹುಟ್ಟಿದಾಗ ಕೂಗಿದ, ಅತ್ತಿರಯವ- ಧ್ವನಿಮಾಡಿದ ತಕ್ಷಣ ದೇವಲೋಕದ ಉಚ್ಚೈ ಶ್ರವವೆಂಬ ಕುದುರೆಯ ಕೆನೆತದಿಂದಾದಂತೆ ಲೋಕಗಳೆಲ್ಲ ನಡುಗಲು ಅದನ್ನು ನೋಡಿ ದ್ರೋಣನು

ನಕ್ಕು, ನಿರಾಯಾಸವಾಗಿ ಇವನಿಗೆ ಅಶ್ವತ್ಥಾಮನೆಂದು ಹೆಸರಿಡಲು, ಅವನು ಹಾಗೆ ಪ್ರಸಿದ್ಧನಾದನು.

ವ|| ಅಂತು ನೆಗಳ್ದ ತಮ್ಮಯ್ಯನ ಕೈಯೊಳ್ ಧನುರ್ವಿದ್ಯೋಪದೇಶದೊಳ್ ಧನುರ್ಧ ರಾಗ್ರಗಣ್ಯನುಮಾಗಿ ಸಂದಂ ದ್ರುಪದನುಂ ತನ್ನ ರಾಜ್ಯದೊಳ್ ನಿಂದಂ ದ್ರೋಣನುಂ ತನಗೆ

ಬಡತನಮಡಸೆ ಅಶ್ವತ್ಥಾಮನನೊಡಗೊಂಡು ನಾಡು ನಾಡಂ ತೊೞಲ್ದು ಪರಶುರಾಮನಲ್ಲಿಗೆ ವಂದಂ-

ವಚನ:ಪದವಿಭಾಗ-

ಅರ್ಥ:ಅಂತು ನೆಗೞ್ದ ತಮ್ಮಯ್ಯನ (ತಂದೆಯ ಬಳಿ?)ಕೈಯೊಳ್ ಧನುರ್ವಿದ್ಯೆ ಉಪದೇಶದೊಳ್ ಧನುರ್ಧರ ಅಗ್ರಗಣ್ಯನುಮಾಗಿ ಸಂದಂ ದ್ರುಪದನುಂ ತನ್ನ

ರಾಜ್ಯದೊಳ್ ನಿಂದಂ;
ದ್ರೋಣನುಂ ತನಗೆ ಬಡತನಂ
ಅಡಸೆ ಅಶ್ವತ್ಥಾಮನನು
ಒಡಗೊಂಡು ನಾಡು ನಾಡಂ
ತೊಟಿಲ್ದು (ಸುತ್ತಿ)
ಪರಶುರಾಮನಲ್ಲಿಗೆ ವಂದಂ-
ವಚನ:ಅರ್ಥ:ಹಾಗೆ ದ್ರೋಣ
ಮತ್ತು ದ್ರುಪದರು
ಬಿಲ್ಲುವಿದ್ಯೆಯಲ್ಲಿ
ಮೊತ್ತಮೊದಲಿಗರಾಗಲು,
ದ್ರುಪದನು ತನ್ನ ರಾಜ್ಯದಲ್ಲಿ

ನಿಂತನು. ದ್ರೋಣನು ತನಗೆ ಬಡತನವು ಬರಲು ಅಶ್ವತ್ಥಾಮನನ್ನು ಕರೆದುಕೊಂಡು ದೇಶದೇಶಗಳನ್ನೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದನು.

ಚಂ|| ಕ್ಷಿತಿಯೊಳಗುಳ್ಳ ಭೂಭುಜರ ಬಿತ್ತು ಮೊದಲ್ಗಿಡೆ ಮುನ್ನಮೇಕವಿಂ

ಶತಿ ಪರಿಸಂಖ್ಯೆಯಿಂ ತವಿಸಿ
ಸರ್ವನಿವೇದಕಮೆಂಬ
ಯಜ್ಞದೊಳ್|
ಕ್ಷಿತಿ ಪೊಗೞ್ವಿನ್ನಮಿತ್ತು
ಗುರುದಕ್ಷಿಣೆಯಾಗಿರೆ ಕಶ್ಯಪ
ಪ್ರಜಾ
ಪತಿಗೆ
ಸಮುದ್ರಮುದ್ರಿತಧರಿತ್ರಿಯ
ನೊಂದಱಿಯೂರನೀವವೋ
ಲ್|| ೪೫ ||

ಪದ್ಯ-೪೫:ಪದವಿಭಾಗ-ಅರ್ಥ:ಕ್ಷಿತಿಯೊಳಗೆ ಉಳ್ಳ (ಭೂಮಿಯಲ್ಲಿರುವ) ಭೂಭುಜರ ಬಿತ್ತು ಮೊದಲ್ ಕಿಡೆ (ರಾಜರ ಕ್ಷತ್ರಿಯರ ಬೀಜ ಮೊದಲ್- ಬೇರು ಸಹಿತ ನಾಶವಾಗುವಂತೆ) ಮುನ್ನಂ ಏಕವಿಂಶತಿ ಪರಿಸಂಖ್ಯೆಯಿಂ ತವಿಸಿ (ಮೊದಲು-ಹಿಂದೆ ಇಪ್ಪತ್ತೊಂದು ಸಾರಿ ಕ್ಷಯಿಸಿ/ ನಾಶಮಾಡಿ)

ಸರ್ವನಿವೇದಕಮೆಂಬ
ಯಜ್ಞದೊಳ್ (ಯಜ್ಞದಲ್ಲಿ) ಕ್ಷಿತಿ
ಪೊಗೞ್ವಿನ್ನಂ ಇತ್ತು (ಭೂಮಿ
ಹೊಗಳುವಂತೆ ಕೊಟ್ಟು)
ಗುರುದಕ್ಷಿಣೆಯಾಗಿರೆ ಕಶ್ಯಪ
ಪ್ರಜಾಪತಿಗೆ (ಕಶ್ಯಪ
ಪ್ರಜಾಪತಿಗೆ
ಗುರುದಕ್ಷಿಣೆಯಾಗಿ,) ಸಮುದ್ರ
ಮುದ್ರಿತ ಧರಿತ್ರಿಯನು ಒಂದು
ಅಱಿಯೂರನು ಈವವೋಲ್
(ಕಡಲಿನಿಂದ ಬಳಸಿದ

ಭೂಮಿಯನ್ನು ಒಂದು ಕುಗ್ರಾಮವನ್ನು ಕೊಡುವಂತೆ ಕೊಟ್ಟನು.)
ಪದ್ಯ-೪೫:ಅರ್ಥ:ಭೂಮಿಯಲ್ಲಿರುವ ರಾಜರು/ ಕ್ಷತ್ರಿಯರು ಬೇರುಸಹಿತ ನಾಶವಾಗುವಂತೆ ಹಿಂದೆ ಇಪ್ಪತ್ತೊಂದು ಸಲ ನಾಶಮಾಡಿ, ಲೋಕವೇ ಹೊಗಳುವಂತೆ ಸರ್ವನಿವೇದಕವೆಂಬ ಯಜ್ಞವನ್ನು ಮಾಡಿ ಅದರಲ್ಲಿ

ಕಶ್ಯಪ ಪ್ರಜಾಪತಿಯೆಂಬ
ಬ್ರಹ್ಮಋಷಿಗೆ ಸಮುದ್ರದಿಂದ
ಸುತ್ತುವರಿಯಲ್ಪಟ್ಟ ಅಖಂಡ
ಭೂಮಂಡಲವನ್ನು ಒಂದು
ಕುಗ್ರಾಮವನ್ನು ಕೊಡುವಂತೆ
ಗುರುದಕ್ಷಿಣೆಯಾಗಿ
ಪರಶುರಾಮನು ಕೊಟ್ಟನು.

**ವ|| ಅಂತು ವಲ್ಕಲಾವೃತ
ಕಟಿತಟನುಮಾಗಿರ್ದ
ಜಟಾಕಲಾಪನುಮಾಗಿ
ತಪೋವನಕ್ಕೆ ಪೋಪ**

ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕ ಪಾತ್ರಕ್ಕುಪಾಯಮಿಲ್ಲಪ್ಪುದ ಱಿಂ ಮೃತ್ಪಾತ್ರದೊಳರ್ಘ್ಯಮೆತ್ತಿ ಪೂಜಿಸಿ-

ವಚನ:ಪದವಿಭಾಗ-

ಅರ್ಥ:ಅಂತು (ಹಾಗೆ) ವಲ್ಕಲ ಆವೃತ ಕಟಿತಟನುಂ ಆಗಿರ್ದ (ನಾರು ಮಡಿಯನ್ನು ಸುತ್ತಿದ

ಸೊಂಟವುಳ್ಳ)
ಜಟಾಕಲಾಪನುಂ ಆಗಿ
ತಪೋವನಕ್ಕೆ ಪೋಪ
ಭಾರ್ಗವಂ (ಅನೇಕ
ಜಟೆಗಳನ್ನುಳ್ಳವನಾಗಿ
ಪರಷುರಾಮನು (ಅಲ್ಲಿಗೆ
ಹೋದ) ದ್ರವ್ಯಾರ್ಥಿಯಾಗಿ
ಬಂದ ಕುಂಭಸಂಭವನಂ
ಕಂಡು (ಆ ಪರಶುರಾಮನು
ದ್ರವ್ಯವನ್ನು ಬೇಡುವುದಕ್ಕಾಗಿ
ಬಂದ ದ್ರೋಣನನ್ನು ಕಂಡು)

ಕನಕ ಪಾತ್ರಕ್ಕೆ ಉಪಾಯಂ ಇಲ್ಲಪ್ಪುದಱಿಂ ಮೃತ್ಪಾತ್ರದೊಳು ಅರ್ಘ್ಯಂ ಎತ್ತಿ ಪೂಜಿಸಿ (ಚಿನ್ನದ ಪಾತ್ರೆಗಳು ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿ,)-

ವಚನ:ಅರ್ಥ:ಹಾಗೆ ನಾರು ಮಡಿಯನ್ನು ಸುತ್ತಿದ ಸೊಂಟವುಳ್ಳ, ಅನೇಕ

ಜಟೆಗಳನ್ನುಳ್ಳವನಾಗಿ ಆ ಪರಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆಗಳು ಇಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿ, (ಪೂಜಿಸಿದನು).

ಚಂ||

ಒಡವೆಯನರ್ಥಿಗಿತ್ತೆನವನೀತ

ಳಮಂ ಗುರುಗಿತ್ತೆನೀಗಳೊಂ

ದಡಕೆಯುಮಿಲ್ಲ

ಕೈಯೊಳೆರೆದಂ

ಶ್ರುತಪಾರಗನೆಂತು ಸಂತಸಂ

ಬಡಿಸುವೆನಿನ್ನಿದೊಂದು

ಧನುವಿರ್ದುದು

ದಿವ್ಯಶರಾಳಿಯಿರ್ದುದಿ

ಲ್ಲೊಡಮೆ ಸಮಂತು

ಪೇೞಿವರೊಳಾವುದನೀವು

ದೊ ಕುಂಭಸಂಭವಾ|| ೪೬||

ಪದ್ಯ-00:ಪದವಿಭಾಗ-

ಅರ್ಥ:ಒಡವೆಯನು ಅರ್ಥಿಗೆ

ಇತ್ತೆಂ ಅವನೀತಳಮಂ ಗುರುಗಿತ್ತೆನು. ಈಗಳು ಒಂದು ಅಡಕೆಯುಂ ಇಲ್ಲ ಕೈಯೊಳು; (ನನ್ನ ವಸ್ತುಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆಯೂ ಇಲ್ಲ.) ಎರೆದಂ (ಎರವಲಿಗೆ- ಕೇಳಲು ಬಂದವನು) ಶ್ರುತಪಾರಗನು ಎಂತು ಸಂತಸಂ

ಬಡಿಸುವೆನು? ಇನ್ನು ಇದು ಒಂದು ಧನುವಿರ್ದುದು ದಿವ್ಯಶರಾಳಿಯಿರ್ದುದು; ಇಲ್ಲ ಒಡಮೆ (ಎರವಲು ಕೇಳುವವನಾದರೋ ವೇದಪಾರಂಗತನು; ಹೇಗೆ ಅವನನ್ನು ಸಂತೋಷಪಡಿಸಲಿ? ' ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಆಸ್ತಿಯಿಲ್ಲ.)

ಸಮಂತು ಪೇಟಿ ಆವರೊಳ್
(ಅವುಗಳಲ್ಲಿ) ಆವುದನು
ಈವುದೊ ಕುಂಭಸಂಭವಾ
(ಎಲೈ ದ್ರೋಣನೆ ಇವುಗಳಲ್ಲಿ
ನಿನಗೆ ಯಾವುದನ್ನು ಕೊಡಲಿ?
ಚೆನ್ನಾಗಿ ಯೋಚಿಸಿ ಹೇಳು)
ಪದ್ಯ-00:ಅರ್ಥ:. ನನ್ನ
ವಸ್ತುಗಳನ್ನೆಲ್ಲ ಬೇಡಿದವರಿಗೆ
ಕೊಟ್ಟೆನು. ಭೂಮಂಡಲವನ್ನು
ಗುರುವಿಗೆ ಕೊಟ್ಟೆನು. ಈಗ
ನನ್ನಲ್ಲಿ ಒಂದು ಅಡಕೆಯೂ

ಇಲ್ಲ. ಎರವಲು ಕೇಳುವವನಾದರೋ ವೇದಪಾರಂಗತನು; ಹೇಗೆ ಅವನನ್ನು ಸಂತೋಷಪಡಿಸಲಿ? ‘ಎಲೈ ದ್ರೋಣನೆ ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ?

ಚೆನ್ನಾಗಿ ಯೋಚಿಸಿ ಹೇಳು,

ಎಂದನು ಪರಷುರಾಮ.

ವ|| ಎಂಬುದು ದ್ರೋಣನೆನಗೆ ವಿದ್ಯಾಧನಮೆ ಧನಮಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರಣ ವಾಯವ್ಯಾಗ್ನೇಯ ಪೌರಂದರಾದಿ ಪ್ರಧಾನಾಸ್ತ್ರಂಗಳಂ ಕುಡೆ ಕೊಂಡು ಪರಶುರಾಮನಂ

ಬೀಱೊಂಡು

ತನ್ನೊಡನಾಡಿಯಪ್ಪ ಕೆಳೆಯಂ

ದ್ರುಪದಂ

ಛತ್ರಾವತಿಯೊಳರಸು

ಗೆಯ್ದಪನೆಂದು ಕೇಳ್ದಾ

ಪೊೞಲ್ಗೆವಂದು

ದ್ರುಪದನರಮನೆಯ

ಬಾಗಿಲೊಳ್ ನಿಂದು

ಪಡಿಯಱನಂ ಕರೆದು

ನಿಮ್ಮೊಡನಾಡಿದ ಕೆಳೆಯಂ

ದ್ರೋಣನೆಂಬ ಪಾರ್ವಂ

ಬಂದನೆಂದು ನಿಮ್ಮರಸಂಗಳಿರಿಯೆ ಪೇಳ್ದೆಂಬುದುಮಾತನಾ ಮಾೞ್ಕೆಯೊಳೆ ಬಂದಱಿಪುವುದುಂ ದ್ರುಪದಂ ರಾಜ್ಯಮದಿರಾ ಮದೋನ್ಮತ್ತನುಂ ಗರ್ವಗ್ರಹ ವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ-

ವಚನ:ಪದವಿಭಾಗ-

ಅರ್ಥ:ಎಂಬುದು ದ್ರೋಣನು

ಎನಗೆ ವಿದ್ಯಾಧನಮೆ ಧನಂ ಅಪ್ಪುದಱಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದು (ಕೊಡುವುದು)ಎನೆ, ವಾರಣ ವಾಯವ್ಯ ಆಗ್ನೇಯ ಪೌರಂದರ ಆದಿ ಪ್ರಧಾನಾಸ್ತ್ರಂಗಳಂ ಕುಡೆ (ಐಂದ್ರಾದಿ ಅಸ್ತ್ರಗಳನ್ನು ಕೊಡಲು) ಕೊಂಡು ಪರಶುರಾಮನಂ ಬೀೞ್ಕೊಂಡು ತನ್ನ

ಒಡನಾಡಿಯಪ್ಪ ಕೆಳೆಯಂ
(ಒಡನಾಡಿಯಾದ ಗೆಳೆಯ)
ದ್ರುಪದಂ ಛತ್ರಾವತಿಯೊಳು
ಅರಸು ಗೆಯ್ದಪನೆಂದು ಕೇಳ್ದು
ಆ ಪೊೞಲ್ಗೆವಂದು (ಆ
ನಗರಕ್ಕೆ ಬಂದು) ದ್ರುಪದನ
ಅರಮನೆಯ ಬಾಗಿಲೊಳ್
ನಿಂದು ಪಡಿಯಱನಂ ಕರೆದು
ನಿಮ್ಮೊಡನಾಡಿದ ಕೆಳೆಯಂ
ದ್ರೋಣನೆಂಬ ಪಾರ್ವಂ
ಬಂದನೆಂದು ನಿಮ್ಮ ಅರಸಂಗೆ

ಅಱಿಯೆ ಪೇೞ
(ತಿಳಿಯುವಂತೆ
ಹೇಳು),ಎಂಬುದುಂ ಆತನು
ಆ ಮಾೞ್ಕೆಯೊಳೆ ಬಂದು
ಅಱಿಪುವುದುಂ (ಹೇಳಲು)
ದ್ರುಪದಂ ರಾಜ್ಯಮದಿರಾ
ಮದೋನ್ಮತ್ತನುಂ
(ರಾಜ್ಯವೆಂಬ ಮದ್ಯದಿಂದ
ಸೊಕ್ಕಿದವನೂ) ಗರ್ವಗ್ರಹ
ವ್ಯಗ್ರಚಿತ್ತನುಂ ಆಗಿ

ಮೇಗಿಲ್ಲದೆ(ಮೇಗು-ಉತ್ತಮ ನಡತೆ ಇಲ್ಲದೆ)

ವಚನ:ಅರ್ಥ:ಎಂಬುದಾಗಿ ಹೇಳಲು ದ್ರೋಣನು, ತನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ಕೊಡಬೇಕು ಎನ್ನಲು, ವಾರುಣ, ವಾಯುವ್ಯ, ಆಗ್ನೇಯ, ಐಂದ್ರಾದಿ ಅಸ್ತ್ರಗಳನ್ನು ಕೊಡಲು ಅದನ್ನು

ತೆಗೆದುಕೊಂಡು,
ಪರಶುರಾಮನಿಂದ ಅಪ್ಪಣೆ
ಪಡೆದು ತನ್ನ ಒಡನಾಡಿಯೂ
ಗೆಳೆಯನೂ ಆದ ದ್ರುಪದನು
ಛತ್ರಾವತಿಯಲ್ಲಿ ರಾಜ್ಯಭಾರ
ಮಾಡುತ್ತಿದ್ದಾನೆಂದು ಕೇಳಿ ಆ
ಪಟ್ಟಣಕ್ಕೆ ಬಂದು, ದ್ರುಪದನ
ಅರಮನೆಯ ಬಾಗಿಲಲ್ಲಿ
ನಿಂತು ಕಾವಲಿನವನನ್ನು
ಕರೆದು, 'ನಿಮ್ಮ ಒಡನಾಡಿದ
ಸ್ನೇಹಿತನಾದ ದ್ರೋಣನೆಂಬ

ಬ್ರಾಹ್ಮಣನು ಬಂದಿದ್ದಾನೆಂದು
ನಿಮ್ಮ ರಾಜನಿಗೆ
ತಿಳಿಯಪಡಿಸು', ಎಂದನು.
ಅವನು ಆ ರೀತಿಯಲ್ಲಿಯೇ
ಬಂದು ತಿಳಿಸಲಾಗಿ,
ದ್ರುಪದನು ರಾಜ್ಯವೆಂಬ
ಮದ್ಯದಿಂದ ಸೊಕ್ಕಿದವನೂ
ಅಹಂಕಾರವೆಂಬ ಗ್ರಹದಿಂದ
ಪೀಡಿತನಾದ
ಮನಸ್ಸುಳ್ಳವನೂ ಆಗಿ
ಉತ್ತಮ ನಡತೆಯಿಲ್ಲದೆ:-

ಕಂ|| ಅಂತೆಂಬನಾರ್ಗೆ

ಪಿರಿದುಂ

ಭ್ರಾಂತು ದಲೇಂ

ದ್ರೋಣನೆಂಬನೇಂ ಪಾರ್ವನೆ

ಪೇ|

ಚಿಂತೆನಗೆ ಕೆಳೆಯನೇ ನೂಂ

ಕಂತಪ್ಪನನಱಿಯೆನೆಂದು

ಸಭೆಯೊಳ್ ನುಡಿದಂ|| ೪೭ ||

ಪದ್ಯ-00:ಪದವಿಭಾಗ-

ಅರ್ಥ:ಅಂತೆಂಬನು ಆರ್ಗೆ

(ಅಂತು ಎಂಬನು,ಹಾಗೆ

ಹೇಳುವವನು ಯಾವನು?)
ಪಿರಿದುಂ ಭ್ರಾಂತು ದಲ್
ಏಂ(ಇದು ದೊಡ್ಡ
ಭ್ರಮೆಯಲ್ಲವೇ?)
ದ್ರೋಣನೆಂಬನ್ ಏಂ
ಪಾರ್ವನೆ ಪೇೞು ಎಂತು
ಎನಗೆ ಕೆಳೆಯನೇ
(ದ್ರೋಣನೆಂಬುವವನು ಏನು
ಬ್ರಾಹ್ಮಣನೇ? ಹೇಳು, ಏನು
ನನಗೆ ಗೆಳೆಯನೇ!) ನೂಂಕು
ಅಂತಪ್ಪನನು ಅಱಿಯೆನು

ಎಂದು ಸಭೆಯೊಳ್ ನುಡಿದಂ(ನೂಕು! ಅಂತಹವನನ್ನು ನಾನು ತಿಳಿದಿಲ್ಲ ; ಅವನನ್ನು ಹೊರಕ್ಕೆ ನೂಕು!' ಎಂದು ಸಭಾಮಧ್ಯದಲ್ಲಿ ದ್ರುಪದನು ಹೇಳಿದನು.)

ಪದ್ಯ-00:ಅರ್ಥ:. ಹಾಗೆ ಹೇಳುವವನು ಯಾವನು? ಇದು ದೊಡ್ಡ ಭ್ರಮೆಯಲ್ಲವೇ? ದ್ರೋಣನೆಂಬುವವನು ಏನು ಬ್ರಾಹ್ಮಣನೇ? ಹೇಳು, ಏನು

ನನಗೆ ಗೆಳೆಯನೇ! ನೂಕು! ಅಂತಹವನನ್ನು ನಾನು ತಿಳಿದಿಲ್ಲ ; ಅವನನ್ನು ಹೊರಕ್ಕೆ ನೂಕು!’ ಎಂದು ಸಭಾಮಧ್ಯದಲ್ಲಿ ದ್ರುಪದನು ಹೇಳಿದನು.

ವ|| ಅಂತು ನುಡಿದುದಂ ಪಡಿಯಱಂ ಬಂದಾ ಮಾೞ್ಕೆಯೊಳಱಿಪೆ ದ್ರೋಣನೊತ್ತಂಬದಿಂದೊಳ

ಗಂ ಪೊಕ್ಕು ದ್ರುಪದನಂ ಕಂಡು-

ವಚನ:ಪದವಿಭಾಗ-ಅರ್ಥ: ಅಂತು ನುಡಿದುದಂ ಪಡಿಯಱಂ (ಕಾವಲುಗಾರನು) ಬಂದು ಆ ಮಾಱ್ಕೆಯೊಳು ಅಱಿಪೆ (ಅದೇ ರೀತಿಯಲ್ಲಿ ಹೇಳಲು) ದ್ರೋಣನು ಒತ್ತಂಬದಿಂದ ಒಳಗಂ

ಪೊಕ್ಕು(ಒತ್ತಾಯದಿಂದ ಒಳಗೆ ಹೊಕ್ಕು) ದ್ರುಪದನಂ ಕಂಡು-

ವಚನ:ಅರ್ಥ:ವ|| ಆ ರೀತಿ ಹೇಳಿದುದನ್ನು ಕಾವಲಿನವನು ಬಂದು, ಅದೇ ಕ್ರಮದಲ್ಲಿ ತಿಳಿಸಲಾಗಿ ದ್ರೋಣನು ಒತ್ತಾಯದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ-

ಚಂ|| ಅಱಿಯಿರೆ ನೀಮುಮಾಮುಮೊಡನೋದಿ

ದೆವೆಂಬುದನಣ್ಣ ನಿನ್ನನಾ
ನಱಿಯೆನದೆಲ್ಲಿ ಕಂಡೆಯೊ
ಮಹೀಪತಿಗಂ
ದ್ವಿಜವಂಶಜಂಗಮೇ।
ತಱ ಕೆಳೆಯಿಂತು
ನಾಣಿಲಿಗರಪ್ಪರೆ
ಮಾನಸರೆಂಬ ಮಾತುಗಳ್
ನೆಱಗೊಳೆ
ಕುಂಭಸಂಭವನನಾ ದ್ರುಪದಂ
ಕಡು ಸಿಗ್ಗು ಮಾಡಿದಂ॥ ೪೮ ॥

ಪದ್ಯ-00:ಪದವಿಭಾಗ-ಅರ್ಥ:ಅಱಿಯಿರೆ (ತಿಳಿಯಿರೇ?) ನೀಮುಂ ಆಮಾಮುಂ ಒಡನೋದಿದೆವು ಎಂಬುದನು ಅಣ್ಣ; ನಿನ್ನ ನಾನು ಅಱಿಯೆನು ಅದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಂ ಏಂ ಏತಱಿ ಕೆಳೆಯಿಂತು (ರಾಜನಿಗೂ ದ್ವಿಜನಿಗೂ ಏತರ ಗೆಳೆತನ?); ನಾಣಿಲಿಗರು ಅಪ್ಪರೆ

ಮಾನಸರು(ಮಾನವರು
ನಾಚಿಕೆ ಇಲ್ಲದವರು
ಆಗುವರೇ?) ಎಂಬ
ಮಾತುಗಳ್ ನೆಱಗೊಳೆ
ಕುಂಭಸಂಭವನನು ಆ
ದ್ರುಪದಂ ಕಡು ಸಿಗ್ಗು
ಮಾಡಿದಂ(ಈ ಮಾತುಗಳು
ಮರ್ಮವನ್ನು ಭೇದಿಸಲು,
ದ್ರೋಣನನ್ನು ಬಹಳ
ಹೀಯ್ಯಾಳಿಸಿದನು)

ಪದ್ಯ-00:ಅರ್ಥ:ದ್ರೋಣನು, ‘ಅಣ್ಣಾ ನೀನೂ ನಾನೂ ಜೊತೆಯಲ್ಲಿ ಓದಿದೆವು ಎಂಬುದನ್ನು ತಿಳಿದಿಲ್ಲವೇ?’ ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ! ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ಬಗೆಯ ಗೆಳೆತನ? ಮಾನವರು ನಾಚಿಕೆ ಇಲ್ಲದವರು ಆಗುವರೇ?

ಎಂಬ ಈ ಮಾತುಗಳು ಅವನನ್ನು ಮರ್ಮವನ್ನು ಭೇದಿಸಲು, ದ್ರೋಣನನ್ನು ಬಹಳ ಹೀಯ್ಯಾಳಿಸಿದನು. ದ್ರೋಣನು ಬಹಳ ಅವಮಾನಿತನಾದನು.

ವ|| ಅಂತು ಮಾಡಿದುದುಮಲ್ಲದೀ ನಾಣಿಲಿ ಪಾರ್ವನೆೞ್ದು ಕಳೆಯಿಮೆಂಬುದುಂ ದ್ರೋಣ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಮಾಡಿದುದುಂ ಅಲ್ಲದೆ ಈ ನಾಣಿಲಿ (ನಾಚಿಕೆ ಇಲ್ಲದ) ಪಾರ್ವನ ಎೞೆದು ಕಳೆಯಿಂ ಎಂಬುದುಂ ದ್ರೋಣ ನಿಂತೆಂದಂ

ವಚನ:ಅರ್ಥ:ಹಾಗೆ ಮಾಡಿದುದೂ ಅಲ್ಲದೆ ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ನೂಕು ಎನ್ನಲು ದ್ರೋಣನು ಹೀಗೆಂದನು-

ಚಂಚಂ|| ನುಡಿ
ತಡವಪ್ಪುದೊಂದು
ಮೊಗದೊಳ್ ಮುಱುಕಂ
ದೊರೆಕೊಳ್ವುದೊಂದು ನಾ
ಣ್ಗೆಡೆಗುಡದಿರ್ಪುದೊಂದು
ನುಡಿಗಳ್ ಮೊರೆಯಂ
ಮರೆಯಿಪ್ಪುದೊಂದು ಕ|
ಳ್ಗುಡಿದವರಂದಮಿಂತು ಸಿರಿ
ಸಾರ್ತರೆ ಸಾರ್ವುದದರ್ಕೆ
ಸಂದೆಯಂ

ಬಡದೆ ಜಗಕ್ಕನೀಗಳಱಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ|| ೪೯ ||

ಪದ್ಯ-00:ಪದವಿಭಾಗ-ಅರ್ಥ:ಚಂ|| ನುಡಿ ತಡವಪ್ಪುದು ಒಂದು (ಮಾತಿನಲ್ಲಿ ತೊದಲುವುದು ಒಂದು;) ಮೊಗದೊಳ್ ಮುಱುಕಂ ದೊರೆಕೊಳ್ವುದು ಒಂದು (ಮುಖದಲ್ಲಿ ವಕ್ರಚೇಷ್ಟೆಯಾಗುವುದು

ಒಂದು;), ನಾಣ್ಗೆ
ಗುಡದಿರ್ಪುದೊಂದು
(ನಾಚಕೆಗೆ
ಅವಕಾಶಕೊಡದಿರುವುದು
ಒಂದು), ನುಡಿಗಳ್
ಮೊರೆಯಂ
ಮರೆಯಿಪ್ಪುದೊಂದು,
(ಮಾತಿನಲ್ಲಿ ಬಾಂಧವ್ಯವನ್ನು
ಮರೆಯುವುದು ಒಂದು), ಕಳ
ಕುಡಿದವರಂದಂ ಇಂತು
(ಹೆಂಡಕುಡಿದವರ ರೀತಿ) ಸಿರಿ

ಸಾರ್ತರೆ (ಸಂಪತ್ತು
ಬಂದರೆ)ಸಾರ್ವುದು
ಅದರ್ಕೆ(ಬರುತ್ತದೆ ಅದಕ್ಕೆ)
ಸಂದೆಯಂಬಡದೆ
(ಸಂದೇಹವಿಲ್ಲದೆ) ಜಗಕ್ಕನೆ/
ಜಲಕ್ಕನೆ(ವಿವರವಾಗಿ) ಈಗಳ್
ಅಱಿದೆಂ ಸಿರಿ ಕಳ್ಳ
ಒಡವುಟ್ಟಿತು ಎಂಬುದಂ (ಸಿರಿ
ಲಕ್ಷ್ಮಿಯು ಮದ್ಯದೊಡನೆ
ಹುಟ್ಟಿತು ಎಂಬುದನ್ನು ಈಗ

ವಿವರವಾಗಿ ತಿಳಿದೆನು,
ಎಂದನು ದ್ರೋಣ)
ಪದ್ಯ-00:ಅರ್ಥ:ಐಶ್ವರ್ಯ
ಬಂದಾಗ ಮದ್ಯಪಾನ
ಮಾಡಿದವರಂತೆ ಮಾತು
ತೊದಲುವುದು; ಮುಖದಲ್ಲಿ
ವಕ್ರಚೇಷ್ಟೆಯುಂಟಾಗುವುದು;
ಮಾತುಗಳು
ನಾಚಿಕೆಯಿಲ್ಲದಾಗುವುವು;
ಮಾತಿನಲ್ಲಿ ಬಾಂಧವ್ಯವನ್ನು
ಮರೆಯುವುದು -

ಮರೆಯುವಂತೆ ಮಾಡುವುದು;
ಆದುದರಿಂದ ಐಶ್ವರ್ಯವು
ಕಳ್ಳಿನೊಡನೆ ಹುಟ್ಟಿತು
ಎಂಬುದನ್ನು ಸಂದೇಹವಿಲ್ಲದೆ
ಈಗ ವಿವರವಾಗಿ ತಿಳಿದೆನು’

ವ|| ಎಂದು ಸೈರಿಸದೆ-

ವಚನ:ಅರ್ಥ:ಎಂದು ಹೇಳಿ
ಸಹಿಸಲಾರದೆ.

ಚಂ|| ಖಳ ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

ದಳವೊಡನೋದಿದೊಂದು ಬೆರಗಿಂಗೆ ಕೊಲಲ್ಕೆನಗಾಗದೀ ಸಭಾ|

ವಳಯದೊಳೆನ್ನನೇೞಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ|| ೫೦||

ಪದ್ಯ-೦೦:ಪದವಿಭಾಗ-ಅರ್ಥ:ಖಳ ನೊಳವಿಂಗೆ ಕುಪ್ಪೆ ವರಂ ಎಂಬವೊಲು (ಖಳನೇ

ನೊಣಕ್ಕೆ ಕಸವೇ
ಶ್ರೇಷ್ಠವಾದದ್ದು ಎನ್ನುವ
ಗಾದೆಯಂತೆ) ಆಂಬರಂ
ಉಂಟೆ ನಿನ್ನದು ಒಂದು
ಅಳವು(ನಿನ್ನ ಸಾಮರ್ಥ್ಯ
ನನ್ನವರೆಗೂ ಉಂಟೆ?)
ಒಡನೋದಿದ ಒಂದು
ಬೆರಗಿಂಗೆ ಕೊಲಲ್ಕೆ ಎನಗೆ
ಆಗದು. (ಜೊತೆಯಲ್ಲಿ
ಓದಿದೆನೆಂಬ ಒಂದು
ಕಾರಣದಿಂದ ನಿನ್ನನ್ನು

ಕೊಲ್ಲಲಾರೆ.) ಈ ಸಭಾವಳಯದೊಳ್ ಎನ್ನನು ಏಱಿಸಿದ ನಿನ್ನಂ (ಈ ಸಭಾಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು) ಆನಾಕುಳಂ (ಅನಾಯಾಸವಾಗಿ) ಎನ್ನ ಚಟ್ಟರಿಂ (ಶಿಷ್ಯರಿಂದ) ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ!

(ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?)

ಪದ್ಯ-೦೦:ಅರ್ಥ:ಎಂದು ಹೇಳಿ ಸಹಿಸಲಾರದೆ. ೫೦. ‘ಎಲೋ ಖಳನೇ ನೊಣಕ್ಕೆ ಕಸವೇ ಶ್ರೇಷ್ಠವಾದದ್ದು ಎನ್ನುವ ಗಾದೆಯಂತೆ, ನಿನ್ನ

ಸಾಮರ್ಥ್ಯ ನನ್ನವರೆಗೂ (ನನಗೆ ಸರಿಸಮಾನ) ಉಂಟೆ? ಜೊತೆಯಲ್ಲಿ ಓದಿದೆನೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು

ಹೊತ್ತಿರುವುದು ವ್ಯರ್ಥವಲ್ಲವೆ!
ಎಂದು ದ್ರೋಣನು
ಪ್ರತಿಜ್ಞೆಮಾಡಿ

ವ|| ಎಂದಾರೂಢಪ್ರತಿಜ್ಞನಾಗಿ ನಾಗಪುರಕ್ಕೆ ವಂದು ತಮ್ಮ ಭಾವಂ ಕೃಪನ ಮನೆಯೊಳಪ ಗತಪರಿಶ್ರಮನಾಗಿರ್ದೊಂದು ದಿವಸಂ ಪಾಂಡವರುಂ ಕೌರವರುಂ ಪೊಱಪೊೞಲೊಳ್-

ವಚನ:ಪದವಿಭಾಗ-

ಅರ್ಥ:ಎಂದು

ಆರೂಢಪ್ರತಿಜ್ಞನಾಗಿ

ನಾಗಪುರಕ್ಕೆ ವಂದು ತಮ್ಮ

ಭಾವಂ ಕೃಪನ ಮನೆಯೊಳು

ಅಪಗತಪರಿಶ್ರಮನಾಗಿರ್ದು

ಒಂದು ದಿವಸಂ ಪಾಂಡವರುಂ

ಕೌರವರುಂ

ಪೊಱಪೊಱಲೊಳ್-

ವಚನ:ಅರ್ಥ:ಎಂದು

ಪಣತೊಟ್ಟವನಾಗಿ

ಹಸ್ತಿನಾಪುರಕ್ಕೆ ಬಂದು ತನ್ನ ಭಾವನಾದ ಕೃಪನ ಮನೆಯಲ್ಲಿ ಶ್ರಮಪರಿಹಾರಮಾಡಿಕೊಂಡು ಇದ್ದನು. ಒಂದು ದಿನ ಪಾಂಡವರೂ ಕೌರವರೂ ಪಟ್ಟಣದ ಹೊರಭಾಗದಲ್ಲಿ ಬಿಲ್ಲುಗಾರಿಕೆ ಅಭ್ಯಾಸಮಾಡುತ್ತಿದ್ದರು.

ಪದ್ಯ ೫೧

ಕೌರವ ಪಾಂಡವರಿಗೆ ದ್ರೋಣನು ಗುರುವಾದುದು

ಕಂ|| ನೆರೆದಿಸುತಿರೆ
ತೋಲ್ಬುಲ್ಲೆಯ
ನಿರದದು ಬೀಱೊಡೆ ಪುರಾಣ
ಕೂಪದೊಳದನಿ|
ನ್ನರಿದು ತೆಗೆವಂದಮೆಂದವ
ರಿರೆ ಬಳಸಿಯುಮಲ್ಲಿ ಕಂಡು
ನಕ್ಕಂ ದ್ರೋಣಂ|| ೫೧|| 51||

ಪದ್ಯ-00:ಪದವಿಭಾಗ-ಅರ್ಥ: ನೆರೆದು (ಕೌರವ ಪಾಂಡವರು ಸೇರಿ) ಇಸುತಿರೆ (ಬಾಣದಿಂದ

ಹೊಡೆಯುತ್ತಿರಲು) ತೋಲ್ವ ಉಲ್ಲೆಯನು (ತೊಗಲಿನ ಹುಲ್ಲೆಯನ್ನು) ಇರದೆ ಅದು ಬಿಟ್ಟೊಡೆ ಪುರಾಣ ಕೂಪದೊಳು (ಅದು ಹಳೆಯ ಬಾವಿಯಲ್ಲಿ ಬೀಳಲು;) ಅದನು ಇನ್ನು ಅರಿದು ತೆಗೆವಂದಮಂ ಎಂದು ಅವರು ಇರೆ (ಅದನ್ನು ಇನ್ನು ಮೇಲಕ್ಕೆ ತೆಗೆಯುವ ರೀತಿ ಅರಿದು ಅಸಾಧ್ಯವು,ಎಂದು ಅವರು

ಇರಲಾಗಿ,) ಬಳಸಿಯುಂ ಅಲ್ಲಿ ಕಂಡು ನಕ್ಕಂ ದ್ರೋಣಂ(ಅಲ್ಲಿ ಸುತ್ತಾಡುತ್ತಿದ್ದ ದ್ರೋಣನು ಅದನ್ನು ಕಂಡು ನಕ್ಕನು).

ಪದ್ಯ-00:ಅರ್ಥ:ಕೌರವ ಪಾಂಡವರು ಸೇರಿ, ಚಕ್ಕಳದ ಜಿಂಕೆಯೊಂದನ್ನು ಬಾಣಗಳಿಂದ ಹೊಡೆಯುತ್ತಿರಲು ಅದು ಹಳೆಯ ಬಾವಿಯಲ್ಲಿ ಬೀಳಲು; ದನ್ನು ಇನ್ನು ಮೇಲಕ್ಕೆ

ತೆಗೆಯುವ ರೀತಿ ಅರಿದು (ಅರಿಯದು) ಅಸಾಧ್ಯವು, ಎಂದು ಅವರು ಇರಲಾಗಿ, ಅಲ್ಲಿ ಸುತ್ತಾಡುತ್ತಿದ್ದ ದ್ರೋಣನು ಅದನ್ನು ಕಂಡು ನಕ್ಕನು.

ಭರತಕುಳತಿಳಕರಿರ್ ವರ
ಶರಾಸನ ವ್ಯಗ್ರಹಸ್ತರಿರ್
ಬಳಯುತರಿರ್|
ನೆರೆದಿನಿಬರುವೀ ಲಕ್ಷ್ಯಮ

ನಿರದಕ್ಕಟ ಸರದೆ ತೆಗೆಯಲಾರ್ತಿರುಮಿಲ್ಲಾ|| ೫೨|| 52||

ಪದ್ಯ-00:ಪದವಿಭಾಗ-ಅರ್ಥ:ಭರತಕುಳತಿಳಕರಿರ್, ವರಶರಾಸನ ವ್ಯಗ್ರಹಸ್ತರಿರ್, ಬಳಯುತರಿರ್, ನೆರೆದ ಇನಿಬರುಂ ಈ ಲಕ್ಷ್ಯಮನು ಇರದೆ (ನೀವಿಷ್ಟು ಜನರೂ ಒಟ್ಟಾಗಿ ಈ ಗುರಿಯನ್ನು) ಅಕ್ಕಟ ಸರದೆ ತೆಗೆಯಲು

ಆರ್ತಿರುಂ ಇಲ್ಲಾ (ಬಾಣದಿಂದ ಮೇಲಕ್ಕೆ ತೆಗೆಯಲು ಸಮರ್ಥರಾಗಲಿಲ್ಲವೆ).

ಪದ್ಯ-00:ಅರ್ಥ:‘ಭರತವಂಶತಿಲಕರು ಆಗಿದ್ದೀರಿ; ಬಿಲ್ಲು ವಿದ್ಯೆಯಲ್ಲಿ ಪರಿಣತರಾಗಿದ್ದೀರಿ; ಬಲಿಷ್ಠರಾಗಿದ್ದೀರಿ; ನೀವಿಷ್ಟು ಜನರೂ ಒಟ್ಟಾಗಿ ಈ ಗುರಿಯನ್ನು (ಚಕ್ಕಳದ ಜಿಂಕೆಯನ್ನು) ಅಕ್ಕಟಾ!

ಬಾಣದಿಂದ ಮೇಲಕ್ಕೆ

ತೆಗೆಯಲು

ಸಮರ್ಥರಾಗಲಿಲ್ಲವೆ ?

ವ|| ಎಂದು ತನ್ನ

ಮಗನಪ್ಪಶ್ವತ್ಥಾಮನಂ ಕರೆದೀ

ಲಕ್ಷ್ಯಮಂ

ತೆಗೆಯೆಂಬುದುಮಾತನಂತೆ

ಗೆಯ್ವೆನೆಂದು ನೈಷ್ಠಿಕಮೆಂಬ

ಮುಷ್ಟಿಯೊಳಂ

ಪುಂಖಾನುಪುಂಖಮೆಂಬ

ಶರಸಂಧಾನದೊಳವಯವ

ದೊಳೆ ತೆಗೆದೊಡನಿಬರುಂ
ಚೋದ್ಯಂಬಟ್ಟು ಗಾಂಗೇಯ
ಧೃತರಾಷ್ಟ್ರರ್ಗಱಿಪಿದೊಡೆ
ನದೀತನೂಜಂ ಭಾರದ್ವಾಜಂಗೆ
ಬಱಿಯನಟ್ಟಿ ಬರಿಸಿ ಪೂರ್ವ
ಸಂಭಾಷಣಾರ್ಘ್ಯಮೆತ್ತಿ
ಮಧುಪರ್ಕ ವೇತ್ರಾಸನ
ತಾಂಬೂಲದಾನಿಗಳಿಂ
ಸಂತಸಂಬಡಿಸಿ ತದೀಯ ಕುಲ
ವಿದ್ಯಾವೃತ್ತಿಗಳಂ
ಬೆಸಗೊಂಡು-

ವಚನ:ಪದವಿಭಾಗ-ಅರ್ಥ:ಎಂದು ತನ್ನ ಮಗನಪ್ಪ ಅಶ್ವತ್ಥಾಮನಂ ಕರೆದು ಈ ಲಕ್ಷ್ಯಮಂ ತೆಗೆಯೆಂಬುದುಂ (ತೆಗೆ ಎನ್ನಲು) ಆತನು ಅಂತೆ ಗೆಯ್ವೆನೆಂದು (ಹಾಗೆ ಮಾಡುವೆನೆಂದು) ನೈಷ್ಠಿಕಮೆಂಬ ಮುಷ್ಟಿಯೊಳಂ ಪುಂಖಾನುಪುಂಖಮೆಂಬ ಶರಸಂಧಾನದೊಳು ಅವಯವದೊಳೆ

(ಶ್ರಮವಿಲ್ಲದೆ) ತೆಗೆದೊಡೆ,
ಅನಿಬರುಂ ಚೋದ್ಯಂಬಟ್ಟು
ಗಾಂಗೇಯ ಧೃತರಾಷ್ಟ್ರರ್ಗೆ
ಅಱಿಪಿದೊಡೆ (ತಿಳಿಸಿದಾಗ)
ನದೀತನೂಜಂ (ಭೀಷ್ಮನು)
ಭಾರದ್ವಾಜಂಗೆ (ದ್ರೋಣನಿಗೆ)
ಬಱಿಯನಟ್ಟಿ (ದೂತರನ್ನು
ಅಟ್ಟಿ ಕಳಿಸಿ,) ಬರಿಸಿ ಪೂರ್ವ
(ಕರೆಸಿಕೊಂಡು) ಸಂಭಾಷಣ
ಅರ್ಘ್ಯಂ ಎತ್ತಿ ಮಧುಪರ್ಕ
ವೇತ್ರಾಸನ

ತಾಂಬೂಲದಾನಿಗಳಿಂ ಸಂತಸಂಬಡಿಸಿ (ಮಧುಪರ್ಕ, ವೇತ್ರಾಸನ, ತಾಂಬೂಲದಾನಾದಿಗಳಿಂದ ಸಂತೋಷಪಡಿಸಿ,) ತದೀಯ ಕುಲ ವಿದ್ಯಾವೃತ್ತಿಗಳಂ ಬೆಸಗೊಂಡು (ಆತನ ಕುಲ, ವಿದ್ಯೆ ಮತ್ತು ವೃತ್ತಿಗಳನ್ನು ಪ್ರಶ್ನೆಮಾಡಿ ತಿಳಿದುಕೊಂಡು)-

ವಚನ:ಅರ್ಥ:ಎಂದು ತನ್ನ ಮಗನಾದ ಅಶ್ವತ್ಥಾಮನನ್ನು

ಕರೆದು ಈ ಲಕ್ಷ್ಯವನ್ನು ತೆಗೆ ಎನ್ನಲು, ಅವನು ‘ಹಾಗೆ ಮಾಡುವೆನೆಂದು’ ಎಂದು ನೈಷ್ಠಿಕವೆನ್ನುವ ಮುಷ್ಟಿಯಿಂದ ಬಾಣದ ಒಂದು ಗರಿಯನ್ನನುಸರಿಸಿ ಮತ್ತೊಂದು ಬಾಣಬಿಡುವ ಪ್ರಯೋಗದಿಂದ ನಿರಾಯಾಸವಾಗಿ ತೆಗೆದಾಗ. ಅಷ್ಟುಮಂದಿಯೂ ಆಶ್ಚರ್ಯಪಟ್ಟು (ಆ

ವಿಷಯವನ್ನು) ಭೀಷ್ಮ ಮತ್ತು
ಧೃತರಾಷ್ಟ್ರರಿಗೆ (ತಿಳಿಸಿದಾಗ)
ತಿಳಿಸಿದರು. ಭೀಷ್ಮನು
ದ್ರೋಣಾಚಾರ್ಯರಿಗೆ ಹೇಳಿ
ಕಳುಹಿಸಿ ಕರೆಸಿಕೊಂಡು,
ಕುಶಲ ಸಂಭಾಷಣಾಪೂರ್ವಕ
ಅರ್ಘ್ಯವನ್ನು ಕೊಟ್ಟು
ಮಧುಪರ್ಕ, ವೇತ್ರಾಸನ,
ತಾಂಬೂಲದಾನಾದಿಗಳಿಂದ
ಸಂತೋಷಪಡಿಸಿ ಆತನ ಕುಲ,
ವಿದ್ಯೆ ಮತ್ತು ವೃತ್ತಿಗಳನ್ನು

ಪ್ರಶ್ನೆಮಾಡಿ ತಿಳಿದುಕೊಂಡು-(ತಿಳಿದುಕೊಂಡನು).

ಮ|| ಮದಮಂ ಮುಕ್ಕುಳಿಸಿರ್ದಿಭಂಗಳನುದಗ್ ರಾಶ್ವಂಗಳಂ ತಕ್ಕಿನ ಗ್ಗದ ಬಾಡಂಗಳನಾಯ್ದು ಕೊಟ್ಟು ತಣಿದೆಂ ಪೋ ಸಾಲ್ಗುಮೆಂಬನ್ನಮಂ| ದಿದಿರೊಳ್ ನೂಱುಱುವರ್ ಕುಮಾರರುಮನಿಟ್ಟೀ ಕೂಸುಗಳ್ ಯೋಗ್ಯರ

ಪ್ಪುದನಿನ್ನೊಲ್ವೊಡೆ ಶಸ್ತ್ರವಿದ್ಯೆಗೊವಜಂ ನೀನಾಗು ಕುಂಭೋದ್ಭವಾ|| ೫೩||

ಪದ್ಯ-೫೩:ಪದವಿಭಾಗ-ಅರ್ಥ:ಮದಮಂ ಮುಕ್ಕುಳಿಸಿರ್ದ ಇಭಂಗಳನು(ಮದೋದಕವನ್ನು ಉಗುಳುತ್ತಿರುವ ಆನೆಗಳನ್ನು), ಉದಗ್ರ ಅಶ್ವಂಗಳಂ (ಉತ್ತಮ ಅಶ್ವಗಳನ್ನು) ತಕ್ಕಿನ ಅಗ್ಗದ

ಬಾಡಂಗಳನು (ಯೋಗ್ಯವೂ ಶ್ರೇಷ್ಠವೂ ಆದ ಗ್ರಾಮಗಳನ್ನೂ), ಆಯ್ದು ಕೊಟ್ಟು, ತಣಿದೆಂ ಪೋ ಸಾಲ್ಗುಂ ಎಂಬನ್ನಮುಂ (ತಕ್ಕ- ಉತ್ತಮವೂ ಶ್ರೇಷ್ಠವೂ ಆದ ಗ್ರಾಮಗಳನ್ನೂ 'ತೃಪ್ತನಾದೆ, ಸಾಕು, ಹೋಗು' ಎನ್ನುವಷ್ಟು ಕೊಟ್ಟು,) ಅಂದು ಇದಿರೊಳ್ ನೂಱು ಅಱುವರ್ ಕುಮಾರರುಮನು ಇಟ್ಟು

(ಅಂದು ಆ ನೂರಾರು
ಮಕ್ಕಳನ್ನು ತೋರಿಸಿ, ಅವರಿಗೆ
ಒಪ್ಪಿಸಿ) ಈ ಕೂಸುಗಳ್
ಯೋಗ್ಯರಪ್ಪುದನು ಇನ್ನು
ಒಲ್ಲೊಡೆ ಶಸ್ತ್ರವಿದ್ಯೆಗೆ ಓವಜಂ
ನೀನಾಗು ಕುಂಭೋದ್ಭವಾ
(‘ಈ ಮಕ್ಕಳು
ಯೋಗ್ಯರಾಗಬೇಕು, ಎಂದು
ಇಷ್ಟ ಪಡುವುದಾದರೆ ಎಲೈ
ದ್ರೋಣನೇ ನೀನು ಇವರಿಗೆ

ಶಸ್ತ್ರವಿದ್ಯೆಯ ಉಪಾಧ್ಯಾಯನಾಗು’)

ಪದ್ಯ-೫೩:ಅರ್ಥ:ಭೀಷ್ಮನು ದ್ರೋಣನಿಗೆ, ಮದೋದಕವನ್ನು ಉಗುಳುತ್ತಿರುವ ಆನೆಗಳನ್ನೂ, ಉತ್ತಮವಾದ ಕುದುರೆಗಳನ್ನೂ, ಉತ್ತಮವೂ, ಶ್ರೇಷ್ಠವೂ ಆದ ಗ್ರಾಮಗಳನ್ನೂ ‘ತೃಪ್ತನಾದೆ, ಸಾಕು, ಹೋಗು’ ಎನ್ನುವಷ್ಟು ಕೊಟ್ಟು, ಅಂದು

ಆ ನೂರಾರು ಮಕ್ಕಳನ್ನು ತೋರಿಸಿ, ಅವರಿಗೆ ಒಪ್ಪಿಸಿ ‘ಈ ಮಕ್ಕಳು ಯೋಗ್ಯರಾಗಬೇಕು ಎಂದು ಇಷ್ಟ ಪಡುವುದಾದರೆ ಎಲೈ ದ್ರೋಣನೇ ನೀನು ಇವರಿಗೆ ಶಸ್ತ್ರವಿದ್ಯೆಯ ಉಪಾಧ್ಯಾಯನಾಗು’

ವ||

ಎಂಬುದುಮಂತೆಗೆಯ್ವೆನೆಂದು ಕಲಶಜನನಿಬರ ಮೊಗಮಂ ನೋಡಿ-

ವಚನ:ಪದವಿಭಾಗ-
ಅರ್ಥ:ಎಂಬುದುಮ್ ಅಂತೆ
ಗೆಯ್ವೆನೆಂದು ಕಲಶಜನು
(ದ್ರೋಣ)ಅನಿಬರ ಮೊಗಮಂ
ನೋಡಿ (ದ್ರೋಣನು
ಹಾಗೆಯೇ ಮಾಡುತ್ತೇನೆಂದು
ಅವರೆಲ್ಲರ--)-
ವಚನ:ಅರ್ಥ:ಭೀಷ್ಮನು
ಹಾಗೆ ಹೇಳಲು, ದ್ರೋಣನು
ಹಾಗೆಯೇ ಮಾಡುತ್ತೇನೆಂದು

ಕೇಳಿ ಅವರೆಲ್ಲರ ಮುಖವನ್ನು ನೋಡಿ

ಕಂ|| ಈ ನೆರೆದಿನಿಬರುಮೆಂದುದ ನೇನೀವರೆ ಪೇೞಿಮೆಂದೊಡನಿಬರುಮಿರ್ದರ್|
ಮೌನವ್ರತದೆ ಗುಣಾರ್ಣವ ನಾನೀವೆಂ ನಿಮ್ಮ ಬಯಸಿ ಬೇೞ್ಪುದನೆಂದಂ|| ೫೪||

ಪದ್ಯ-೫೪:ಪದವಿಭಾಗ-ಅರ್ಥ:ಈ ನೆರೆದ ಇನಿಬರುಂ ಎಂದುದನು ಏನು ಈವರೆ ಪೇೞಿಂ(ಇಲ್ಲಿ ಸೇರಿರುವ ಇಷ್ಟುಜನರೂ ನಾನು ಕೇಳಿದ್ದನ್ನು ಕೊಡಬಲ್ಲಿರಾ/ ಹೇಳಿ,) ಎಂದೊಡೆ ಅನಿಬರುಂ ಇರ್ದರ್ ಮೌನವ್ರತದೆ (ಎನ್ನಲು ಎಲ್ಲರೂ ಮೌನವಾಗಿದ್ದರು.) ಗುಣಾರ್ಣವನು ಆನ್ ಈವೆಂ

ನಿಮ್ಮ ಬಯಸಿ ಬೇಱ್ಪಿದನು ಎಂದಂ (ಅರ್ಜುನನು 'ನೀವು ಬಯಸಿ ಕೇಳಿದುದನ್ನು ನಾನು ಕೊಡುತ್ತೇನೆ' ಎಂದನು).

ಪದ್ಯ-೫೫:ಅರ್ಥ: ದ್ರೋಣನು ಆ ಬಾಕರನ್ನು ಕುರಿತು,'ಇಲ್ಲಿ ಸೇರಿರುವ ಇಷ್ಟುಜನರೂ ನಾನು ಕೇಳಿದ್ದನ್ನು ಕೊಡುವಿರಾ ಹೇಳಿ,' ಎನ್ನಲು ಎಲ್ಲರೂ ಮೌನವಾಗಿದ್ದರು.

ಗುಣಾರ್ಣವನು/ ಅರ್ಜುನನು

‘ನೀವು ಬಯಸಿ ಕೇಳಿದುದನ್ನು ನಾನು ಕೊಡುತ್ತೇನೆ’ ಎಂದನು.

ವ|| ಎಂಬುದುಮಾ ಮಾತಿಂಗೆ ಮೆಚ್ಚಿ ಜಗದೇಕಮಲ್ಲನಂ ತೊಡೆಯನೇಱಿಸಿಕೊಂಡು ಕುಂಭಸಂಭವಂ ಗಾಂಗೇಯನನಿಂತೆದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ ಮಾತಿಂಗೆ ಮೆಚ್ಚಿ ಜಗದೇಕಮಲ್ಲನಂ

(ಹಾಗೆನ್ನಲಾಗಿ ಆ ಮಾತಿಗೆ ಮೆಚ್ಚಿ ಜಗದೇಕಮಲ್ಲನಾದ ಅರ್ಜುನನನ್ನು) ತೊಡೆಯನು ಏಱಿಸಿಕೊಂಡು ಕುಂಭಸಂಭವಂ ಗಾಂಗೇಯನನಿಂತೆದಂ

ವಚನ:ಅರ್ಥ:ಹಾಗೆ ಹೇಳಿದಾಗ ಆ ಮಾತಿಗೆ ಮೆಚ್ಚಿ, ದ್ರೋಣನು, ಜಗದೇಕಮಲ್ಲನಾದ ಅರ್ಜುನನನ್ನು ತೊಡೆಯ

ಮೇಲೆ ಕೂರಿರಿಸಿಕೊಂಡು ದ್ರೋಣನು ಬೀಷ್ಮನಿಗೆ ಹೀಗೆ ಹೇಳಿದನು

ಕಂ||

ಇನಿಬರೊಳಗೀತನೊರ್ವನೆ

ಧನುರಾಗಮದೆಡೆಗೆ

ಕುಶಲನಕ್ಕುಮದರ್ಕೇಂ|

ಕಿನಿಸದಿರಿಂ ಮುನ್ನಱಿಪಿದೆ

ನೆನೆ ಭೀಷ್ಮನಲಂಪು ಮಿಗೆ

ಮುಗುಳ್ನಗೆ ನಕ್ಕಂ|| ೫೫ ||

ಪದ್ಯ-00:ಪದವಿಭಾಗ-ಅರ್ಥ:ಇನಿಬರೊಳಗೆ ಈತನೊರ್ವನೆ ಧನುರಾಗಮದ ಎಡೆಗೆ(ಬಿಲ್ವಿದ್ಯೆಯಲ್ಲಿ) ಕುಶಲನಕ್ಕುಂ; ಅದರ್ಕೇಂ ಕಿನಿಸದಿರಿಂ (ಅದಕ್ಕೆಂದು ಕೋಪಿಸಬೇಡಿ) ಮುನ್ನ ಅಱಿಪಿದೆನು (ಮೊದಲೇ ತಿಳಿಸಿದೆನು) ಎನೆ ಭೀಷ್ಮ

ಅಲಂಪು ಮಿಗೆ (ಸಂತಸವು ಹೆಚ್ಚಲು) ಮುಗುಳ್ನಗೆ ನಕ್ಕಂ.

ಪದ್ಯ-00:ಅರ್ಥ:‘ಇಷ್ಟು ಮಕ್ಕಳಲ್ಲಿ ಇವನೊಬ್ಬನೇ ಬಿಲ್ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಅದಕ್ಕೆ ಕೋಪಿಸಬೇಡಿ; ಮೊದಲೇ ತಿಳಿಸಿದೆನು’ ಎನ್ನಲು ಭೀಷ್ಮನು ಬಹಳ ಸಂತೋಷದಿಂದ ಮುಗುಳ್ನಗೆ ನಕ್ಕನು.

ವ|| ಅಂತು
ದ್ರೋಣಾಚಾರ್ಯನಾಚಾರ್ಯ
ಪದವಿಯಂ ಕೈಕೊಂಡು
ಪಾಂಡವ ಕೌರವರ್ಗೆ
ಚತುರಂಗ
ಧನುರ್ವೇದಮುಮಂ
ದಿವ್ಯಾಸ್ತ್ರಂಗಳುಮಂ ಶಕ್ತಿ
ತೋಮರ ಮುಸಲ ಮುಸುಂಡಿ
ಭಿಂಡಿವಾಳ ಮುದ್ಗರ ಗದಾದಿ
ವಿವಿಧಾಯುಧಂಗಳುಮಂ ಗಜ
ರಥ ತುರಗ ಪದಾತಿ

ಯುದ್ಧಂಗಳುಮನುಪದೇಶಂಗೆ ಯ್ಯುತ್ತುಮಿರೆಯಿರೆ-

ವಚನ:ಪದವಿಭಾಗ-

ಅರ್ಥ:ಅಂತು ದ್ರೋಣಾಚಾರ್ಯನು ಆಚಾರ್ಯಪದವಿಯಂ ಕೈಕೊಂಡು ಪಾಂಡವ ಕೌರವರ್ಗೆ ಚತುರಂಗ (ನಾಲ್ಕುಭಾಗ) ಧನುರ್ವೇದಮುಮಂ ದಿವ್ಯಾಸ್ತ್ರಂಗಳುಮಂ ಶಕ್ತಿ

ತೋಮರ ಮುಸಲ
ಮುಸುಂಡಿ ಭಿಂಡಿವಾಳ
ಮುದ್ಗರ ಗದಾದಿ ವಿವಿಧ
ಆಯುಧಂಗಳುಮಂ ಗಜ ರಥ
ತುರಗ ಪದಾತಿ
ಯುದ್ಧಂಗಳುಮನು
ಉಪದೇಶಂಗೆಯ್ಯುತ್ತುಂ
ಇರೆಯಿರೆ-
ವಚನ:ಅರ್ಥ:ಹಾಗೆ
ದ್ರೋಣಾಚಾರ್ಯನು
ಆಚಾರ್ಯಪದವಿಯನ್ನು

ಸ್ವೀಕರಿಸಿ, ಪಾಂಡವ ಕೌರವರುಗಳಿಗೆ ನಾಲ್ಕು ಭಾಗವಾಗಿರುವ ಬಿಲ್ವಿದ್ಯೆಯನ್ನೂ, ದಿವ್ಯಾಸ್ತ್ರಗಳನ್ನೂ (ಪ್ರಯೋಗ ಉಪಸಂಹಾರಗಳನ್ನೂ) ಶಕ್ತಿ, ತೋಮರ, ಮುಸಲ, ಮುಸುಂಡಿ, ಭಿಂಡಿವಾಳ, ಮುದ್ಗ, ಗದೆಯೇ ಮೊದಲಾದ ಬಗೆಬಗೆಯ ಆಯುಧ ಪ್ರಯೋಗಗಳನ್ನೂ, ಆನೆ,

ತೇರು, ಕುದುರೆ ಮತ್ತು ಕಾಲಾಳುಗಳ ಯುದ್ಧದ ಕ್ರಮವನ್ನೂ ಹೇಳಿಕೊಡುತ್ತಾ ಇರಲು--

ಕಂ|| ಯಾದವ ವಂಶಜರುಂ
ನಾ
ನಾ ದೇಶ ನರೇಂದ್ರರುಂ
ಘಟೋದ್ಭವನ ಧನು|
ರ್ವೇದಮನೆ ಕಲಲ್ ಬಂದಾ
ಳಾದರ್ ವಿದ್ಯಾಪ್ರಭಾವಮಾ
ದೊರೆತೆ ವಲಂ|| ೫೬||

ಪದ್ಯ-೫೬:ಪದವಿಭಾಗ-ಅರ್ಥ:ಯಾದವ ವಂಶಜರುಂ ನಾನಾ ದೇಶ ನರೇಂದ್ರರುಂ (ರಾಜರು) ಘಟೋದ್ಭವನ (ದ್ರೋಣನ)ಧನು ರ್ವೇದಮನೆ ಕಲಲ್ (ಕಲಿಯಲು) ಬಂದು ಆಳಾದರ್ (ಸೇವಕರಾದರು) ವಿದ್ಯಾಪ್ರಭಾವಂ ಆ ದೊರೆತೆ ವಲಂ (ವಿದ್ಯೆಯ ಪ್ರಭಾವ ಆ ಯೋಗ್ಯತೆ ಇರುವುದೇ ಸರಿ! ವಲಂ!)

ಪದ್ಯ-೫೬:ಅರ್ಥ:ಯಾದವ ವಂಶದವರೂ ನಾನಾ ದೇಶದ ರಾಜರೂ ದ್ರೋಣಾಚಾರ್ಯರ ಧನುರ್ವಿದ್ಯೆಯನ್ನು ಕಲಿಯಲು ಬಂದು ಆತನ ಶಿಷ್ಯರಾದರು. ವಿದ್ಯೆಯ ಪ್ರಭಾವ ಆ ಯೋಗ್ಯತೆ ಇರುವುದೇ ಸರಿ! ವಲಂ!(ಅಬ್ಬಾ!) (ಇಲ್ಲಿ ಅರ್ಥಾಂತರನ್ಯಾಸ ಅಲಂಕಾರವಿದೆ ಎಂದು ಶ್ರೀ ಡಿ.ಎಲ್.ಎನ್. ಹೇಳಿದ್ದಾರೆ -

ಆದರೆ ತಿಳಿಯುವುದಿಲ್ಲ:- ತನಗೆ- ಪಂಪನಿಗೆ ಅವನ ವಿದ್ಯಾ ಪ್ರೌಢಿಮೆಗೆ ಅರಿಕೇಸರಿ ಕೊಟ್ಟಗೌರವವನ್ನು ಕುರಿತು ಇಲ್ಲಿ ವಿದ್ಯಾ ಮಹತ್ವದ ಉದ್ಗಾರವನ್ನು ಪಂಪ ಕೊಟ್ಟಿರಬಹುದು ಎಂಬ ಅಭಿಪ್ರಾಯ ಇರಬಹುದು.)

ದ್ರೋಣನ ಬಳಿಗೆ ಕರ್ಣನು ಬಂದುದು:

ದ್ರೋಣಂ ಗಡಮಿಷುವಿದ್ಯೆಗೆ

ಜಾಣಂ ಗಡಮೆಂದು ಕೇಳ್ದು ಕೌರವರ್ಗೆಲ್ಲಂ|
ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ|| ೫೭||

ಪದ್ಯ-೫೭:ಪದವಿಭಾಗ-ಅರ್ಥ:ದ್ರೋಣಂ ಗಡ! ಮಿಷುವಿದ್ಯೆಗೆ ಜಾಣಂ ಗಡಂ! (ದ್ರೋಣನಲ್ಲವೆ ! ಬಾಣವಿದ್ಯೆಯಲ್ಲಿ ಜಾಣನಲ್ಲವೆ!)ಎಂದು ಕೇಳ್ದು

ಕೌರವರ್ಗೆ ಎಲ್ಲಂ ಪ್ರಾಣಂ
ಬರ್ಪ ಆಕೃತಿಯೊಳೆ
ಬಾಣಾಸನ ಬಾಣಪಾಣಿ
(ಬಿಲ್ಲುಬಾಣಗಳನ್ನು ಹಿಡಿದವ)
ಕರ್ಣಂ ಬಂದಂ||

ಪದ್ಯ-೫೭:ಅರ್ಥ: ಅವನು
ದ್ರೋಣನಲ್ಲವೆ!
ಬಾಣವಿದ್ಯೆಯಲ್ಲಿ
ಜಾಣನಲ್ಲವೆ! (ಗಡ
-ಸಾಮಾನ್ಯನಲ್ಲ) ಎಂಬ
ಪ್ರಶಂಸೆಯನ್ನು ಕೇಳಿ

ಕೌರವರಿಗೆಲ್ಲ ಪ್ರಾಣ ಬರುವ ರೂಪದಲ್ಲಿ ಬಿಲ್ಲುಬಾಣಗಳನ್ನು ಹಿಡಿದ ಕರ್ಣನೂ ಅಲ್ಲಿಗೆ ಬಂದನು.

ವ|| ಅಂತು ಬಂದು ವೈರಿಗಜಘಟಾವಿಘಟನನೊ ಳ್ ವಿಘಟಿಸಿ ಬಿಲ್ಗಲ್ತು-

ವಚನ:ಪದವಿಭಾಗ-

ಅರ್ಥ:ಅಂತು ಬಂದು ವೈರಿಗಜ ಘಟಾವಿಘಟನನೊಳ್

(ಆನೆಗಳಂತಿರುವ ಶತ್ರುಗಳ ಸಮೂಹವನ್ನು (ವಿಘಟನು -ಅರ್ಜುನ, ಅವನೊಡನೆ) ವಿಘಟಿಸಿ (ಸ್ಪರ್ಧಿಸಿ) ಬಿಲ್ಗಲ್ತು-

ವಚನ:ಅರ್ಥ:ಹಾಗೆ ಬಂದು ಆನೆಗಳಂತಿರುವ ಶತ್ರುಗಳ ಸಮೂಹವನ್ನು ಭೇದಿಸಲು ಸಮರ್ಥನಾದ ಅರ್ಜುನನಲ್ಲಿ (ಅರಿಕೇಸರಿಯಲ್ಲಿ) ಸ್ಪರ್ಧಿಸಿ ಬಿಲ್ ವಿದ್ಯೆಯನ್ನು ಕಲಿತನು.

ಕಂ|| ಕೆಳೆಯುಂ ಗುಱಿಯುಂ
ಗೊಟ್ಟಿಯು
ಮಳವಿಗೆ ಪಿರಿದಾಗೆ ತನಗೆ
ದುರ್ಯೋಧನನೊಳ್|
ಮುಳಿಸುಂ ನೋವುಂ
ಕಲುಷಮು
ಮಳುಂಬಮೆನೆ
ತನಗರಾತಿಕಾಳಾನಳನೊಳ್||
೫೮||

ಪದ್ಯ-೫೮:ಪದವಿಭಾಗ-
ಅರ್ಥ:ಕೆಳೆಯುಂ ಗುಱಿಯುಂ

ಗೊಟ್ಟಿಯುಂ (ಸಹಯೋಗವ್ರೂ) ಆಳವಿಗೆ ಪಿರಿದಾಗೆ (ಅಳತೆ ಮೀರಿ ಹೆಚ್ಚಿತು) ತನಗೆ ದುರ್ಯೋರ್ಧನನೊಳ್; ಮುಳಿಸುಂ ನೋವುಂ ಕಲುಷಮುಂ (ಸಿಟ್ಟು, ವ್ಯಥೆ, ಮನಕೆಡುವುದು)ಆಳುಂಬಂ ಎನೆ (ಅಧಿಕವಾಗಿ ಎನ್ನುವಂತೆ) ತನಗೆ ಆರಾತಿ

ಕಾಳಾನಳನೊಳ್ (ಶತ್ರು ಅರ್ಜುನನಲ್ಲಿ)

ಪದ್ಯ-೫೮:ಅರ್ಥ:ಕ್ರಮೇಣ ಕರ್ಣನಿಗೆ ದುರ್ಯೋಧನನಲ್ಲಿ ಸ್ನೇಹವೂ ಗುರಿಯೂ ಎಂದರೆ ಮುಂದಿನ ಉದ್ದೇಶವೂ ಸಹಪಾಠಿತ್ವವೂ ಅಳತೆಗೆ ಮೀರಿದಂತೆ, ಕಾಲಾನಲನಾದ ಅರ್ಜುನನಲ್ಲಿ ಶತ್ರುತ್ವವು ಕೋಪವೂ ವ್ಯಥೆಯೂ

ಅಸೂಯೆಯೂ

ಅಧಿಕವಾಯಿತು.

ವ|| ಅಂತು ಕರ್ಣಂ ಗುಣಾರ್ಣವನೊಳ್ ಸೆಣಸಿ ಪಗೆಯನಭ್ಯಾಸಂಗೆಯ್ವಂತೆ ವಿದ್ಯಾಭ್ಯಾಸಂಗೆಯ್ಯೆ-

ವಚನ:ಪದವಿಭಾಗ-

ಅರ್ಥ:ಅಂತು ಕರ್ಣಂ ಗುಣಾರ್ಣವನೊಳ್ ಸೆಣಸಿ ಪಗೆಯನು

ಅಭ್ಯಾಸಂಗೆಯ್ವಂತೆ
ವಿದ್ಯಾಭ್ಯಾಸಂಗೆಯ್ಯೆ-
ವಚನ:ಅರ್ಥ:ಕರ್ಣನು
ಗುಣಾರ್ಣವನಲ್ಲಿ /
ಅರ್ಜುನನೊಡನೆ ಸ್ಪರ್ಧಿಸಿ
ಹಗೆತನವನ್ನು ಅಭ್ಯಾಸ
ಮಾಡುವಂತೆಯೇ
ವಿದ್ಯೆಯನ್ನೂ
ಅಭ್ಯಾಸಮಾಡಿದನು/
ಮಾಡಲು

ಕಂ||
ಮನದೊಳೊಗೆದನ್ಯಜನ್ಮದ
ಮುನಿಸದು ಕಣ್ಣಿಂ ತುಳುಂಕೆ
ಸೈರಿಸದವನು|
ರ್ವಿನಕ ಲಿತನಕ್ಕೆ ದುರ್ಯೋ
ಧನನುಂ ಭೀಮನೊಳೆ ಸೆಣಸಿ
ಗದೆಯಂ ಕಲ್ತಂ|| ೫೯||

ಪದ್ಯ-೫೯:ಪದವಿಭಾಗ-
ಅರ್ಥ:ಮನದೊಳೊಗೆದ
(ಮನದೊಳು ಒಗೆದ-
ಮನಸ್ಸಿನಲ್ಲಿ ಹುಟ್ಟಿದ)

ಅನ್ಯಜನ್ಮದ ಮುನಿಸು ಅದು,
ಕಣ್ಣಿಂ ತುಳುಂಕೆ ಸೈರಿಸದೆ
ಅವನು ಉರ್ವಿನ
(ಅಧಿಕವಾದ) ಕಲಿತನಕ್ಕೆ
ದುರ್ಯೋಧನನುಂ
ಭೀಮನೊಳ್ ಸೆಣಸಿ ಗದೆಯಂ
ಕಲ್ತಂ
ಪದ್ಯ-೫೯:ಅರ್ಥ: ಅದು
ಮನಸ್ಸಿನಲ್ಲಿ ಹುಟ್ಟಿದ
ಪೂರ್ವಜನ್ಮದ ಕೋಪವು,
ಕಣ್ಣಿನಲ್ಲಿ ತುಳುಕುತ್ತಿರಲು,

ಅವನ ಅಧಿಕ ಶೌರ್ಯಕ್ಕೆ ಸಹನೆಯಿಲ್ಲದೆ ದುರ್ಯೋಧನನೂ ಭೀಮನಲ್ಲಿ ಸ್ಪರ್ಧಿಸಿ ಗದೆಯ ಪ್ರಯೋಗವನ್ನು ಕಲಿತನು.

ವ|| ಅಂತು ಭಾರದ್ವಾಜನಾಗಾಮಿಕ ಸಂಗ್ರಾಮರಂಗಕ್ಕೆ ಪಾತ್ರಂಗಳಂ ಸಮೆಯಿಸುವ ಸೂತ್ರಧಾರನಂತೆ ಶಸ್ತ್ರವಿದ್ಯಾಭ್ಯಾಸಂಗೆಯ್ಯುತ್ತಿರೆ

ದೇಶಾಧೀಶ್ವರರಪ್ಪ ಪಲಂಬರ್

ರಾಜಕುಮಾರರ ನಡುವೆ

ತಾರಾಗಣಂಗಳ ಸಕಳ

ಕಳಾಧರನಂತೆ

ಶಸ್ತ್ರಕಳಾಧರನಾಗಿ ತನ್ನುಮಂ

ಗೆಲೆವಂದ ಸಾಮಂತ

ಚೂಡಾಮಣಿಯ

ಶರಪರಿಣತಿಯನಾರಯಲೆಂ

ದು-

ವಚನ:ಪದವಿಭಾಗ-

ಅರ್ಥ:ಅಂತು ಭಾರದ್ವಾಜನು

ಆಗಾಮಿಕ ಸಂಗ್ರಾಮರಂಗಕ್ಕೆ (ದ್ರೋಣನು ಮುಂದೆ ಬರುವ ಯುದ್ಧಕ್ಕೆ) ಪಾತ್ರಂಗಳಂ ಸಮೆಯಿಸುವ (ನಟರನ್ನು ಮಾಡುವ) ಸೂತ್ರಧಾರನಂತೆ ಶಸ್ತ್ರವಿದ್ಯಾಭ್ಯಾಸಂ ಗೆಯ್ಯುತ್ತಿರೆ, (ಮಾಡಿಸುತ್ತಿರಲು) ದೇಶಾಧೀಶ್ವರರಪ್ಪ ಪಲಂಬರ್ (ದೇಶದ ಒಡೆಯರಾಗುವ ಹಲವರು)ರಾಜಕುಮಾರರ ನಡುವೆ ತಾರಾಗಣಂಗಳ ಸಕಳ

ಕಳಾಧರನಂತೆ
(ನಕ್ಷತ್ರಸಮೂಹದ ಮಧ್ಯದ
ಪೂರ್ಣಚಂದ್ರನ ಹಾಗೆ)
ಶಸ್ತ್ರಕಳಾಧರನಾಗಿ
(ಶಸ್ತ್ರಕಲೆಯನ್ನು ಧರಿಸಿ)
ತನ್ನುಮಂ ಗೆಲೆವಂದ
(ದ್ರೋಣನನ್ನೂ-ತನ್ನನ್ನೂ
ಗೆದ್ದಿರುವ) ಸಾಮಂತ
ಚೂಡಾಮಣಿಯ
ಶರಪರಿಣತಿಯನು

ಆರಯಲ್(ಪರೀಕ್ಷಿಸಲು)
ಎಂದು-
ವಚನ:ಅರ್ಥ:ಹಾಗೆ
ದ್ರೋಣಾಚಾರ್ಯನು ಮುಂದೆ
ಬರುವ ಯುದ್ಧರಂಗಕ್ಕೆ
ನಟರನ್ನು ಸಿದ್ಧಪಡಿಸುವ
ಸೂತ್ರಧಾರನ ಹಾಗೆ
ಶಸ್ತ್ರವಿದ್ಯಾಭ್ಯಾಸವನ್ನು
ಮಾಡಿಸುತ್ತಿರಲು, ಅನೇಕ
ದೇಶದ ಒಡೆಯರಾಗುವ
ಹಲವರು ರಾಜಕುಮಾರರ

ಮಧ್ಯದಲ್ಲಿ ನಕ್ಷತ್ರಸಮೂಹದ ಮಧ್ಯದ ಪೂರ್ಣಚಂದ್ರನ ಹಾಗೆ ಶಸ್ತ್ರಕಲೆಯನ್ನು ಧರಿಸಿ ತನ್ನನ್ನೂ ಗೆದ್ದಿರುವ ಸಾಮಂತಚೂಡಾಮಣಿಯಾದ ಅರ್ಜುನನ (ಅರಿಕೇಸರಿಯ) ಬಾಣಪ್ರಯೋಗದ ಪಾಂಡಿತ್ಯವನ್ನು ಪರೀಕ್ಷಿಸಬೇಕೆಂದು-

ಕಂ||

ಛಾಯಾಲಕ್ಷ್ಯಮನೊಡ್ಡಿಯು

ಮಾಯದ ನೀರೊಳಗೆ ತನ್ನನಡಸಿದ ನೆಗೞಿಂ|
ಬಾಯೞಿವಿನಮಿಸಿಸಿಯುಮರೆ
ಹೋಯಜ ಬಾಪ್ಪೆಂದು ಹರಿಗನಂ ಗುರು ಪೊಗೞ್ದಿಂ||೬೦||

ಪದ್ಯ-೬೦:ಪದವಿಭಾಗ-ಅರ್ಥ:ಛಾಯಾಲಕ್ಷ್ಯಮನು ಒಡ್ಡಿಯುಂ ಆಯದ ನೀರೊಳಗೆ ತನ್ನನು ಅಡಸಿದ

ನೆಗೞಿಂ(ಹಿಡಿದುಕೊಂಡ
ಮೊಸಳೆಯನ್ನು)
ಬಾಯಟಿವಿನಂ (ಬಾಯಿ
ನಾಶವಾಗಲು) ಇಸಿಸಿಯುಂ
(ಬಾಣಪ್ರಯೋಗ ಮಾಡಿಸಿ)
ಅರೆ! ಹೋಯ್! ಅಜ! ಬಾಪ್ಪು
ಎಂದು ಹರಿಗನಂ
(ಅರಿಕೇಸರಿ/ಅರ್ಜುನನ್ನು)
ಗುರು
ಪೊಗೞ್ದಿಂ(ಹೊಗಳಿದನು)

ಪದ್ಯ-೬೦:ಅರ್ಥ:ಪ್ರತಿಬಿಂಬ ದ ಗುರಿಯನ್ನು ಒಡ್ಡಿ, ಆಳವಾದ ನೀರಿನಲ್ಲಿ ತನ್ನನ್ನು ಹಿಡಿದಿದ್ದ ಮೊಸಳೆಯನ್ನು ಅದು ಅರಚಿಕೊಂಡು ಸಾಯುವ ಹಾಗೆ ಬಾಣ ಪ್ರಯೋಗಮಾಡಿಸಿ ನೋಡಿ, 'ಅರೆ, ಹೋ, ಅಜ, ಭಾಪು, ಎಂಬ ಮೆಚ್ಚಿಕೆಯ ಮಾತುಗಳಿಂದ ಗುರುವು ಅರ್ಜುನನನ್ನು ಹೊಗಳಿದನು.

ವ|| ಅಂತು ಪೊಗೞ್ದು ತನ್ನ ಪಗೆವನಪ್ಪ ದ್ರುಪದನನೀತನಮೋಘಂ ಗೆಲಲ್ ನೆರೆಗು ಮೆಂದು ನಿಶ್ಚೈಸಿ-

ವಚನ:ಪದವಿಭಾಗ-

ಅರ್ಥ:ಅಂತು ಪೊಗೞ್ದು (ಹಾಗೆ ಹೊಗಳಿ)ತನ್ನ ಪಗೆವನಪ್ಪ ದ್ರುಪದನನು ಈತನ ಅಮೋಘಂ ಗೆಲಲ್ ನೆರೆಗು ಮೆಂದು ನಿಶ್ಚೈಸಿ-

ವಚನ:ಅರ್ಥ:ಹಾಗೆ ಹೊಗಳಿ, ತನ್ನ ಶತ್ರುವಾದ ದ್ರುಪದನನ್ನು ಈತನು ಅಮೋಘವಾಗಿ ಗೆಲ್ಲಲ್ಲು ಸಮರ್ಥನೆಂದು ನಿಶ್ಚೈಸಿ, (ಅವನನ್ನು ಕುರಿತು);

ಚಂ|| ಅಣುಗಿನೊಳೆನ್ನ ಚಟ್ಟರೊಳಗೀತನೆ ಜೆಟ್ಟಿಗನೆಂದು ವಿದ್ಯೆಯಂ

ಗುಣಕಱುಗೊಂಡು ಕೊಟ್ಟೆನಗೆ ಸಂತಸಮಪ್ಪಿನವೀವ ನಿನ್ನ ದ|

ಕ್ಷಿಣೆಯದು ಬೇಗಮಾ

ದ್ರುಪದನಂ ಗಡ

ಕೋಡಗಗಟ್ಟುಗಟ್ಟಿ ತಂ

ದಣಿಯರಮೊಪ್ಪಿಸಿಂತಿದನೆ

ಬೇಡಿದೆನಾಂ

ಪರಸೈನ್ಯಭೈರವಾ||೬೧||

ಪದ್ಯ-೦೦:ಪದವಿಭಾಗ-

ಅರ್ಥ:ಅಣುಗಿನೊಳು

(ಅಣುಗು-ಪ್ರೀತಿ; ಅಣುಗ-

ಮಗು; ಪ್ರೀತಿಯಬಾಲಕರಲ್ಲಿ/

ಶಿಷ್ಯರಲ್ಲಿ) ಎನ್ನ ಚಟ್ಟರೊಳಗೆ

(ಶಿಷ್ಯರಲ್ಲಿ) ಈತನೆ ಜೆಟ್ಟಿಗನೆಂದು ವಿದ್ಯೆಯಂ ಗುಣಕಱುಗೊಂಡು (ಪ್ರೀತಿಸಿ) ಕೊಟ್ಟ ಎನಗೆ ಸಂತಸಮ್ ಅಪ್ಪಿನಂ ಈವ (ಸಂತೋಷ ಆಗುವಂತೆ ಕೊಡುವ) ನಿನ್ನ ದಕ್ಷಿಣೆಯು ಅದು ಬೇಗಂ ಆ ದ್ರುಪದನಂ ಗಡ! ಕೋಡಗಗಟ್ಟುಗಟ್ಟಿ (ಕೋಡುಗ ಕಟ್ಟು ಕಟ್ಟಿ- ಕಪಿಯನ್ನು ಕಟ್ಟಿದಂತೆ ಕಟ್ಟಿ) ತಂದು

ಅಣಿಯರಂ(ಅತಿಶಯವಾಗಿ) ಒಪ್ಪಿಸು; ಇಂತು ಇದನೆ ಬೇಡಿದೆನು ಆಂ (ನಾನು) ಪರಸ್ಯೆನ್ಯಭ್ಯೆರವಾ (ವೈರಿಸ್ಯೆನ್ಯಕ್ಕೆ ಭ್ಯೆರವನೇ)

ಪದ್ಯ-00:ಅರ್ಥ:.

‘ಅರ್ಜುನಾ, ಪ್ರೀತಿಯ ನನ್ನ ಶಿಷ್ಯರಲ್ಲಿ ಇವನೇ ಪರಾಕ್ರಮಶಾಲಿ ಎಂದು ವಿದ್ಯೆಯನ್ನು ಪ್ರೀತಿಯಿಂದ ದಾನಮಾಡಿದ ನನಗೆ

ಸಂತೋಷವಾಗುವ ಹಾಗೆ ನೀನು ಕೊಡುವ ಗುರುದಕ್ಷಿಣೆಯಾಗಿ ಬೇಗ ಆ ದ್ರುಪದನನ್ನು ಕಪಿಯನ್ನು ಕಟ್ಟಿದಂತೆ ಕಟ್ಟಿ ತಂದು ಅತಿಶಯವಾದ ರೀತಿಯಲ್ಲಿ ಒಪ್ಪಿಸು. ಎಲ್ಲೈ ವೈರಿ ಸೈನ್ಯಕ್ಕೆ ಭೈರವನೇ ಇದನ್ನೇ ನಾನು ನಿನ್ನಿಂದ ಬೇಡಿದುದು, ಎಂದನು ದ್ರೋಣ.

ಪದ್ಯ ೬೨

ದ್ರುಪದನ ಗರ್ವಭಂಗ

ವ|| ಎಂಬುದುವಮೀ ಬೆಸನದಾವುದು ಗಹನಮೆಂದು ಪೂಣ್ದು ಪೋಗಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಈ ಬೆಸನದು(ಆಜ್ಞೆಯು) ಆವುದು ಗಹನಂ ಎಂದು ಪೂಣ್ದು (ಪ್ರತಿಜ್ಞೆಮಾಡಿ) ಪೋಗಿ-

ವಚನ:ಅರ್ಥ:ದ್ರೋಣನು ಹಾಗೆ ಹೇಳಲು, ಈ ಆಜ್ಞೆಯು ಏನು ಮಹಾದೊಡ್ಡದು! ಎಂದು ಪ್ರತಿಜ್ಞೆಮಾಡಿ ಹೋಗಿ-

ಮ|| ಒಡವಂದಂಕದ ಕೌರವರ್ ದ್ರುಪದನಂಬೇಱಿಂಗೆ ಮೆಯ್ಯೊಡ್ಡದೊ ಡ್ಡೊಡೆತೋಡುತ್ತಿರೆ ಸೂಸೆ ಬೀೞ್ವ ತಲೆಗಳ್ ಸೂೞ್ಪಿಟ್ಟನಾಗಳ್ ಜವಂ|

ಪಿಡಿದೀಡಾಡುವ ಮಾಣಿಕ್ಯಯಂತೆ ಪಲರಂ ಕೊಂದಿಕ್ಕಿ ಮೆಯ್ಯುಟ್ಟೆವಂ| ದೆಡೆಯೊಳ್ ಮಾಣದುರುಳ್ಚಿ ಕಟ್ಟಿ ರಿಪುವಂ ಮುಂದಿಕ್ಕಿದಂ ದ್ರೋಣನಾ|| ೬೨||

ಪದ್ಯ-00:ಪದವಿಭಾಗ-ಅರ್ಥ:ಒಡವಂದ (ಜೊತೆಗೆಬಂದ) ಅಂಕದ (ಪ್ರಸಿದ್ಧ) ಕೌರವರ್ ದ್ರುಪದನ ಅಂಬೇಱಿಂಗೆ (ಬಾಣದ

ಏಟಿಗೆ) ಮೆಯ್ಯೊಡ್ಡದೆ (ಎದುರಿಸದೆ) ಒಡ್ಡೊಡೆತು (ಒಡ್ಡು ಒಡೆದು- ಸೈನ್ಯವು ಚದುರಿ) ಓಡುತ್ತಿರೆ, ಸೂಸೆ ಬೀೞ್ವ ತಲೆಗಳ್ (ಬೀಳುವ ತಲೆಗಳು ಚೆಲ್ಲಾಡುತ್ತಿರಲು) ಸೂೞ್ಪಟ್ಟಂ (ಅರ್ಜುನನು -ಸೂಳ್ ಪಟ್ಟಂ-ಸರದಿ ಪಡೆದು) ಆಗಳ್ ಜವಂ (ಯಮನು) ಪಿಡಿದು ಈಡಾಡುವ ಮಾೞ್ಕೆಯಂತೆ

(ಹಿಡಿದು ಬಿಸಾಡುವ
ರೀತಿಯಲ್ಲಿ) ಪಲರಂ ಕೊಂದಿಕ್ಕಿ
(ಹಲವರನ್ನು ಕೊಂದು ಹಾಕಿ)
ಮೆಯ್ಯ್ಯುಟ್ಟೆವಂದು
ಎಡೆಯೊಳ್ (ಮೈ
ಮಟ್ಟುವಷ್ಟು ಹತ್ತಿರ ಬಂದು)
ಮಾಣದೆ ಉರುಳ್ಚಿ ಕಟ್ಟಿ
ರಿಪುವಂ (ಬಿಡದೆ ಶತ್ರುವನ್ನು
ಉರುಳಿಸಿ ಕಟ್ಟಿ) ಮುಂದೆ
ಇಕ್ಕಿದಂ ದ್ರೋಣನಾ

(ದ್ರೋಣನ ಮುಂದೆ ತಂದು ಹಾಕಿದನು.)

ಪದ್ಯ-00:ಅರ್ಥ:ಅರ್ಜುನನ ಜೊತೆಯಲ್ಲಿ ಬಂದ ಪ್ರಸಿದ್ಧರಾದ ಕೌರವರು ದ್ರುಪದನ ಬಾಣದ ಪೆಟ್ಟಿಗೆ ಎದುರಿಸಲಾರದೆ ಚದುರಿ ಓಡುತ್ತಿರಲು, ಬೀಳುವ ತಲೆಗಳು ಚೆಲ್ಲಾಡುತ್ತಿರಲು, ಅರ್ಜುನನು ತನ್ನ ಸರದಿಯನ್ನು ಪಡೆದು,

ಯಮನು ಹಿಡಿದು ಬಿಸಾಡುವ ರೀತಿಯಲ್ಲಿ ಹಲವರನ್ನು ಸಾಯಿಸಿ, ದ್ರುಪದನ ಮೈಮುಟ್ಟುವಷ್ಟು ಹತ್ತಿರಕ್ಕೆ ಬಂದು ಉರುಳಿಸಿ, ಶತ್ರುವನ್ನು ಕಟ್ಟಿತಂದು ದ್ರೋಣನ ಮುಂದೆ ತಂದು ಹಾಕಿದನು.

ವ|| ಆಗಳಾ ಕುಂಭಸಂಭವಂ ಪರಾಕ್ರಮಧವಳನ ಪರಾಕ್ರಮಕ್ಕೆ ಮೆಚ್ಚಿ ಕದಂಪಂ ಕರ್ಚಿ ದ್ರುಪದನಂ ತನ್ನ

ಮಂಚದ ಕಾಲೊಳ್

ಕಟ್ಟವೇಱ್ದು ತಲೆಯ ಮೇಲೆ

ಕಾಲನವಷ್ಟಂಭದಿಂ ನೀಡಿ-

ವಚನ:ಪದವಿಭಾಗ-

ಅರ್ಥ:ಆಗಳು ಆ ಕುಂಭಸಂಭವಂ (ದ್ರೋಣನು) ಪರಾಕ್ರಮಧವಳನ ಪರಾಕ್ರಮಕ್ಕೆ ಮೆಚ್ಚಿ ಕದಂಪಂ ಕರ್ಚಿ (ಕೆನ್ನೆಯನ್ನು ಕಚ್ಚಿ- ಮುತ್ತಿಟ್ಟು) ದ್ರುಪದನಂ ತನ್ನ ಮಂಚದ ಕಾಲೊಳ್

ಕಟ್ಟವೇಱ್ದಿ ತಲೆಯ ಮೇಲೆ ಕಾಲನು ಅವಷ್ಟಂಭದಿಂ (ಗರ್ವದಿಂದ) ನೀಡಿ-

ವಚನ:ಅರ್ಥ:ಆಗ ದ್ರೋಣನು ಪರಾಕ್ರಮದಲ್ಲಿ ಗೂಳಿಯಂತಿರುವ ಅರ್ಜುನನ ಶೌರ್ಯಕ್ಕೆ ಸಂತೋಷಪಟ್ಟು, ಅವನ ಕೆನ್ನೆಗೆ ಮುತ್ತಿಟ್ಟು, ದ್ರುಪದನನ್ನು ತನ್ನ ಮಂಚದ ಕಾಲಿಗೆ ಕಟ್ಟ ಹೇಳಿ ಅವನ

ತಲೆಯ ಮೇಲೆ ತನ್ನ ಕಾಲನ್ನು
ಗರ್ವದಿಂದ ನೀಡಿ-

ಕಂ||
ಸಿರಿಮೆಯ್ಯೊಳಗಂದಱಿವಿರೆ
ನೆರವಿಯೊಳಾರಱಿವರೊರ್ಮೆ
ಕಂಡರನಱಿಯ|
ಲ್ಕರಿದೆಮ್ಮಂ ಬಡ ಪಾರ್ವರ
ನರಸರೆ
ನೀವೀಗಳಱಿವಿರಱಿಯಿರೊ
ಪೇಱಿಂ|| ೬೩ ||

ಪದ್ಯ-00:ಪದವಿಭಾಗ-ಅರ್ಥ:ಸಿರಿಮೆಯ್ಯೊಳಗೆ ಅಂದು ಅಱಿವಿರೆ (ಸಿರಿವಂತಿಕೆಯಲ್ಲಿ ಅಂದು ಗುರುತಿಸುವಿರೆ?) ನೆರವಿಯೊಳ್ (ನೆರವಿ-ಗುಂಪು) ಆರ್ ಅಱಿವರ್ ಒರ್ಮೆ ಕಂಡರನು, ಅಱಿಯಲ್ಕೆ ಅರಿದು(ಒಂದು ಸಲ ಗುಂಪಿನಲ್ಲಿ ಕಂಡವರನ್ನು ಗುರುತಿಸಲಾರರು), ಎಮ್ಮಂ

(ನಮ್ಮನ್ನು) ಬಡ ಪಾರ್ವರನು
ಅರಸರೆ ನೀವು ಈಗಳು
ಅಱಿವಿರ್ ಅಱಿಯಿರೊ
ಪೇೞಿಂ(ಈಗಲಾದರೂ
ರಾಜರೇ ಗುರುತಿಸುವಿರಾ?
ಗುರುತಿಸಲಾರಿರೋ? ಹೇಳಿ,).
ಪದ್ಯ-00:ಅರ್ಥ:‘ಸಿರಿವಂತಿಕೆ
ಯಲ್ಲಿ ಅಂದು ನೀವು
ನಮ್ಮನ್ನು ತಿಳಿಯುತ್ತೀರಾ
-ಗುರುತಿಸುವಿರೇ? ಒಂದು ಸಲ
ಗುಂಪಿನಲ್ಲಿ ಕಂಡವರನ್ನು

ಗುರುತಿಸಲಾರರು.
ಬಡಬ್ರಾಹ್ಮಣರಾದ ನಮ್ಮನ್ನು
ಈಗಲಾದರೂ ರಾಜರೇ
ಗುರುತಿಸುವಿರಾ?
ಗುರುತಿಸಲಾರಿರೋ? ಹೇಳಿ,
ಎಂದನು ದ್ರೋಣ.

ವ|| ಎಂದು ಸಾಯೆ ಸರಸಂ ನುಡಿದು ಮತ್ತಂಮಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಸಾಯೆ ಸರಸಂ ನುಡಿದು ಮತ್ತೆ ಇಂತು ಎಂದಂ

ವಚನ:ಅರ್ಥ:ಎಂದು ಸಾಯುವಷ್ಟು ಪರಿಹಾಸ್ಯ ಮಾಡಿ ಪುನ ಹೀಗೆಂದನು-

ಕಂ|| ಆದಿ ಕ್ಷತ್ರಿಯರೇ ನೀ
ಮಾದಿತ್ಯನನಿಳಿಪ ತೇಜರಿರ್
ಪಾರ್ವನ ಕಾಲ್|
ಮೋದೆ
ನಡುತಲೆಯಲಿರ್ಪುದು
ಮಾದುದು ನಿಮಗೆಂದು
ನುಡಿದು
ಕಾಯ್ಪಿನೊಳೊದೆದಂ|| ೬೪

ಪದ್ಯ-00:ಪದವಿಭಾಗ-

ಅರ್ಥ:ಆದಿ ಕ್ಷತ್ರಿಯರೇ ನೀಂ ಆದಿತ್ಯನನು ಇಳಿಪ ತೇಜರಿರ್ ಪಾರ್ವನ ಕಾಲ್ ಮೋದೆ ನಡುತಲೆಯಲಿ ಇರ್ಪುದುಂ ಆದುದು ನಿಮಗೆ ಎಂದು ನುಡಿದು ಕಾಯ್ಪಿನೊಳು (ಸಿಟ್ಟಿನಿಂದ) ಒದೆದಂ (ಒದ್ದನು)

ಪದ್ಯ-00:ಅರ್ಥ:'ನೀವು ಆದಿಕ್ಷತ್ರಿಯರಲ್ಲವೇ?

ಸೂರ್ಯನನ್ನೂ ತಿರಸ್ಕರಿಸುವ ತೇಜಸ್ಸುಳ್ಳವರಾಗಿದ್ದೀರಿ? ಹಾರುವನು ಇಟ್ಟ ಕಾಲು ನಡುನೆತ್ತಿಯಲ್ಲಿ ಇರುವದಾಯಿತಲ್ಲಾ! ಎಂದು ಹೇಳಿ ಕೋಪದಿಂದ ಒದ್ದನು-

ವ|| ಒದೆದು ನಿನ್ನನಿನಿತು ಪರಿಭವಂಬಡಿಸಿದುದು ಸಾಲ್ಗುಂ ನಿನ್ನಂ ಕೊಲಲಾಗದು ಕೊಂದೊಡೆ ಮೇಲಪ್ಪ ಪಗೆಗಂಜಿ

ಕೊಂದಂತಾಗಿರ್ಕುಮೆಂದು ಕಟ್ಟಿದ ಕಟ್ಟುಗಳೆಲ್ಲಮಂ ತಾನೆ ಬಿಟ್ಟು ಕಳೆದು ಪೋಗೆಂಬುದುಂ ದ್ರುಪದಂ ಪರಿಭವಾನಳನಳವಲ್ಲದಳುರೆ

ವಚನ:ಪದವಿಭಾಗ-

ಅರ್ಥ:ಒದೆದು ನಿನ್ನನು ಇನಿತು (ಇಷ್ಟು) ಪರಿಭವಂಬಡಿಸಿದುದು (ಅವಮಾನಪಡಿಸಿದುದು) ಸಾಲ್ಗುಂ; ನಿನ್ನಂ

ಕೊಲಲಾಗದು; ಕೊಂದೊಡೆ
ಮೇಲಪ್ಪ ಪಗೆಗಂಜಿ
ಕೊಂದಂತೆ ಆಗಿರ್ಕುಮ್
ಎಂದು ಕಟ್ಟಿದ
ಕಟ್ಟುಗಳೆಲ್ಲಮಂ ತಾನೆ ಬಿಟ್ಟು
ಕಳೆದು, ಪೋಗು ಎಂಬುದುಂ
(ಎನ್ನಲು) ದ್ರುಪದಂ ಪರಿಭವ
ಆನಳನು (ಅಗ್ನಿಯು)
ಅಳವಲ್ಲದಳು ಉರೆ
(ಸುಡಲು)-

ವಚನ:ಅರ್ಥ:ಒದ್ದು 'ನಿನ್ನನ್ನು ಇಷ್ಟು ಅವಮಾನ ಪಡಿಸಿರುವುದು ಸಾಕು. ನಿನ್ನನ್ನು ಕೊಲ್ಲಬಾರದು. ಕೊಂದರೆ ಹೆದರಿ ತನಗಿಂತ ಮೇಲಾದ ಶತ್ರುವನ್ನು ಕೊಂದಂತೆ ಆಗುತ್ತದೆ' ಎಂದು ಕಟ್ಟಿದ ಕಟ್ಟುಗಳೆಲ್ಲವನ್ನೂ ತಾನೇ ಬಿಚ್ಚಿ ಅವನನ್ನು ಬಿಟ್ಟು, ಹೋಗು ಎನ್ನಲು, ದ್ರುಪದನನ್ನು

ಅವಮಾನವೆಂಬ ಅಗ್ನಿಯು
ವಿಶೇಷವಾಗಿ ಸುಡಲು-

+ವ||ನಿನ್ನಂ ಕೊಲ್ವನ್ನನೊರ್ವ
ಮಗನುಮಂ
ವಿಕ್ರಮಾರ್ಜುನಂಗೆ
ಪೆಂಡತಿಯಪ್ಪನ್ನಳೊರ್ವ
ಮಗಳುಮಂ
ಪಡೆದಲ್ಲದಿರೆನೆಂದು ಮಹಾ
ಪ್ರತಿಜ್ಞಾರೂಢನಾಗಿ
ಪೋದನಿತ್ತ ಭಾರದ್ವಾಜಂ
ಪಾಂಡವ ಕೌರವರ್ಕಳ

ಮೆಯ್ಯೊಳೆ ವಿದ್ದೆಯಂ ನೆರೆಯೆ ಸಂಕ್ರಮಿಸಿದ ತನ್ನ ವಿದ್ಯಾಮಹಿಮೆಯಂ ಮೆರೆಯಲ್ಕೆ ಬಾಹ್ಲೀಕ ಭೂರಿಶ್ರವಸ್ಸೋಮದತ್ತ ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗಿಂತೆಂದಂ-

ವಚನ:ಪದವಿಭಾಗ-ಅರ್ಥ:

(ದ್ರುಪದನು), ನಿನ್ನಂ ಕೊಲ್ವನ್ನನ ಒರ್ವ ಮಗನುಮಂ,

ವಿಕ್ರಮಾರ್ಜುನಂಗೆ
ಪೆಂಡತಿಯಪ್ಪನ್ನಳ ಒರ್ವ
ಮಗಳುಮಂ ಪಡೆದಲ್ಲದೆ
ಇರೆನೆಂದು ಮಹಾ
ಪ್ರತಿಜ್ಞಾರೂಢನಾಗಿ ಪೋದನು,
ಇತ್ತ ಭಾರದ್ವಾಜಂ
(ದ್ರೋಣನು) ಪಾಂಡವ
ಕೌರವರ್ಕಳ ಮೆಯ್ಯೊಳೆ
ವಿದ್ಯೆಯಂ ನೆರೆಯೆ
ಸಂಕ್ರಮಿಸಿದ (ಅಳವಡಿಸಿದ)
ತನ್ನ ವಿದ್ಯಾಮಹಿಮೆಯಂ

ಮೆರೆಯಲ್ಕೆ ಬಾಹ್ಲೀಕ ಭೂರಿಶ್ರವಸ್ಸೋಮದತ್ತ ಗಾಂಗೇಯ ಧೃತರಾಷ್ಟ್ರ ವಿದುರರ್ಕಳ್ಗೆ ಇಂತೆಂದಂ-

ವಚನ:ಅರ್ಥ:‘ದ್ರುಪದನು, ದ್ರೋಣನ್ನು ಕುರಿತು, 'ನಿನ್ನನ್ನೂ ಕೊಲ್ಲುವಂತಹ ಮಗನನ್ನೂ, ವಿಕ್ರಮಾರ್ಜುನನಿಗೆ/ ಅರ್ಜುನನಿಗೆ ಹೆಂಡತಿಯಾಗುವಂತಹ ಒಬ್ಬ ಮಗಳನ್ನೂ ಪಡೆಯದೆ

ಇರುವುದಿಲ್ಲ' ಎಂದು ದೊಡ್ಡ ಪ್ರತಿಜ್ಞೆಯನ್ನೂ ಮಾಡಿಹೋದನು. ಈ ಕಡೆ ಭಾರದ್ವಾಜನು ಪಾಂಡವ ಕೌರವರುಗಳ ದೇಹದಲ್ಲಿ ವಿದ್ಯೆಯನ್ನು ಸಂಪೂರ್ಣವಾಗಿ ಅಳವಡಿಸಿದ ತನ್ನ ವಿದ್ಯಾ ಮಹಿಮೆಯನ್ನು ಪ್ರಕಾಶಪಡಿಸುವುದಕ್ಕಾಗಿ ಬಾಹ್ಲೀಕ, ಭೂರಿಶ್ರವ, ಸೋಮದತ್ತ, ಭೀಷ್ಮ

ಧೃತರಾಷ್ಟ್ರ, ವಿದುರರಿಗೆ ಹೀಗೆಂದು ಹೇಳಿದನು.

ಪದ್ಯ;-:೬೫

ಪಾಂಡವ ಕೌರವರ ಶಸ್ತ್ರವಿದ್ಯಾ ಪ್ರದರ್ಶನ:

ಕಂ|| ನೆರೆಯೆ ಧನುರ್ವಿದ್ಯೆಯ

ಕ

ಣ್ದೆರೆವಿನೆಗಂ ಕಲ್ತ ನಿಮ್ಮ

ಮಕ್ಕಳ ಮೆಯ್ಯೊಳ್|

ಮೆರೆದಪ್ಪೆನೆನ್ನ ವಿದ್ದೆಯ

ನೞಿದೊಯ್ಕನೆ ನೆರೆದು ನೋೞ್ಪುದನಿಬರುವಿಗಳ್||೬೫||

ಪದ್ಯ-೬೫:ಪದವಿಭಾಗ-ಅರ್ಥ:ನೆರೆಯೆ (ಸಂಪೂರ್ಣವಾಗಿ) ಧನುರ್ವಿದ್ಯೆಯ ಕಣ್ದೆರೆವಿನೆಗಂ (ಪೂರ್ಣವಾಗಿ ಬಿಲ್ಲುವಿದ್ಯೆಯು ಕಣ್ಣುತೆರೆಯಲು-ಬರಲು) ಕಲ್ತ ನಿಮ್ಮ ಮಕ್ಕಳ ಮೆಯ್ಯೊ್ಳ್

ಮೆರೆದಪ್ಪೆನು(ಪ್ರಕಟಪಡಿಸುತ್
ತೇನೆ) ಎನ್ನ ವಿದ್ಯೆಯನು
ಅಱಿದು ಒಯ್ಯನೆ
(ನೇರವಾಗಿ) ನೆರೆದು (ಒಟ್ಟಾಗಿ)
ನೋೞ್ಪುದು ಅನಿಬರುವಿಗಳ್
(ಎಲ್ಲರೂ)
ಪದ್ಯ-೬೫:ಅರ್ಥ:.ದ್ರೋಣನು
, 'ಬಿಲ್ವಿದ್ಯೆಯೇ
ಆವಿರ್ಭಾವವಾಗುವ ಹಾಗೆ
ಸಂಪೂರ್ಣವಾಗಿ
ಕಲಿತುಕೊಂಡಿರುವ ನಿಮ್ಮ

ಮಕ್ಕಳ ದೇಹದಲ್ಲಿ ನನ್ನ ವಿದ್ಯಯನ್ನು ಪ್ರಕಟಪಡಿಸುತ್ತೇನೆ. ಈಗ ಎಲ್ಲರೂ ಒಟ್ಟಾಗಿ ಸೇರಿ ಪ್ರತ್ಯಕ್ಷವಾಗಿ ತಿಳಿದು ನೋಡಬೇಕು.

ವ||

ಎಂದೊಡಂತೆಗೆಯ್ವೆಮೆಂದನಿಬರುಮೊಡಂಬಟ್ಟು ಪೊಱವೊಱಲೊಳುತ್ತರ ದಿಶಾಭಾಗದೊಳ್

ಸಮಚತುರಸ್ರಮಾಗೆ

ನೆಲನನಳೆದು ಕಲ್ಲಂ

ಪುಲ್ಲುಮಂ ಸೋದಿಸಿ

ಶುಭದಿನ

ಶುಭಮೂಹೂರ್ತದೊಳ್-

ವಚನ:ಪದವಿಭಾಗ-

ಅರ್ಥ:ಎಂದೊಡೆ

ಅಂತೆಗೆಯ್ವಂ ಎಂದು

ಅನಿಬರುಂ ಒಡಂಬಟ್ಟು

ಪೊಱವೊೞಲೊಳು

(ಪಟ್ಟಣದ ಹೊರಗಿನ) ಉತ್ತರ

ದಿಶಾಭಾಗದೊಳ್
ಸಮಚತುರಸ್ರಮಾಗೆ
(ಚಚ್ಚೌಕವಾದ) ನೆಲನನು
ಅಳೆದು ಕಲ್ಲಂ ಪುಲ್ಲುಮಂ
ಸೋದಿಸಿ (ಕಲ್ಲು ಹುಲ್ಲನ್ನು
ತೆಗೆದು) ಶುಭದಿನ
ಶುಭಮೂಹೂರ್ತದೊಳ್-
ವಚನ:ಅರ್ಥ:(ದ್ರೋಣನು,)
ಎಂದು ಹೇಳಲಾಗಿ ಹಾಗೆಯೇ
ಮಾಡೋಣವೆಂದು ಎಲ್ಲರೂ
ಒಪ್ಪಿ ಪಟ್ಟಣದ ಹೊರಗಿನ

ಉತ್ತರದಿಗ್ಭಾಗದಲ್ಲಿ
ಚಚ್ಚೌಕವಾದ ಭೂಮಿಯನ್ನು
ಅಳೆದು ಕಲ್ಲು ಹುಲ್ಲನ್ನು
ಹುಡುಕಿ ತೆಗೆದು ಶುಭದಿನ
ಶುಭಮೂಹೂರ್ತದಲ್ಲಿ

ಕಂ|| ಗಟ್ಟಿಸಿ ಸಿಂಧುರದೊಳ್
ನೆಲ
ಗಟ್ಟಿಸಿ ಚೆಂಬೊನ್ನ ನೆಲೆಯ
ಚೌಪಳಿಗೆಗಳೊಳ್|
ಕಟ್ಟಿಸಿ ಪಟಿಯಿಗೆಗಳನಳ

ವಟ್ಟಿರೆ ಬಿಯಮಲ್ಲಿ ಮೊೞಗೆ ಪಲವುಂ ಪರಿಗಳ್|| ೬೬||

ಪದ್ಯ-೬೬:ಪದವಿಭಾಗ-ಅರ್ಥ:ಗಟ್ಟಿಸಿ (ಗಟ್ಟಿಮಾಡಿ)ಸಿಂಧುರದೊಳ್ (ಕಾವಿಯಿಂದ) ನೆಲಗಟ್ಟಿಸಿ (ಪೆಟ್ಟಿಸಿ) ಚೆಂಬೊನ್ನ (ಕೆಂಪು ಹೊನ್ನಿನ) ನೆಲೆಯ ಚೌಪಳಿಗೆಗಳೊಳ್ (ತೊಟ್ಟಿಗಳಲ್ಲಿ) ಕಟ್ಟಿಸಿ ಪೞಯಿಗೆಗಳನು

(ಬಾವುಟಗಳನ್ನು) ಅಳವಟ್ಟಿರೆ (ಕಟ್ಟಿರಲು) ಬಿಯಂ (ಮುಚ್ಚಳವಿರುವ ಡಬ್ಬಿಯಂತಹ ಒಂದು ಸಾಧನ, ಧ್ವನಿಮಾಡಲು) ಅಲ್ಲಿ ಮೊಟಿಗೆ ಪಲವುಂ ಪರಿಗಳ್(ವಾದ್ಯ)

ಪದ್ಯ-೬೬:ಅರ್ಥ:ನೆಲವನ್ನು ಚಂದ್ರಕಾವಿಯಿಂದ ಪೆಟ್ಟಿಸಿ ಕೆಂಪು ಹೊನ್ನಿನಿಂದ ಮಾಡಿದ ಮನೆಗಳ ತೊಟ್ಟಿಗಳಲ್ಲಿ ಬಾವುಟಗಳನ್ನು ಕಟ್ಟಿಸಿ ಸೂಕ್ತ

ಬಿಯಂ ಮೊದಲಾದ ಹಲವು ವಾದ್ಯಗಳು ಮೊಳಗುತ್ತಿರಲು,-

ವ|| ಅಂತು ಸಮೆದ ವ್ಯಾಯಾಮ ರಂಗಕ್ಕೆ ಗಾಂಗೇಯ ಧೃತರಾಷ್ಟ್ರ ವಿದುರ ಸೋಮದತ್ತ ಬಾಹ್ಲೀಕ ಭೂರಿಶ್ರವಾದಿ ಕುಲವೃದ್ಧರುಂ ಕುಂತಿ ಗಾಂಧಾರಿಗಳುಂ ವೆರಸು ಬಂದು ಕುಳ್ಳಿರೆ-

ವಚನ:ಪದವಿಭಾಗ-

ಅರ್ಥ:ಅಂತು ಸಮೆದ

(ಮಾಡಿದ) ವ್ಯಾಯಾಮ ರಂಗಕ್ಕೆ ಗಾಂಗೇಯ ಧೃತರಾಷ್ಟ್ರ ವಿದುರ ಸೋಮದತ್ತ ಬಾಹ್ಲೀಕ ಭೂರಿಶ್ರವಾದಿ ಕುಲವೃದ್ಧರುಂ ಕುಂತಿ ಗಾಂಧಾರಿಗಳುಂ ವೆರಸು ಬಂದು ಕುಳ್ಳಿರೆ-

ವಚನ:ಅರ್ಥ:ಹಾಗೆ ಮಾಡಿದ ವ್ಯಾಯಾಮರಂಗಕ್ಕೆ ಭೀಷ್ಮ ಧೃತರಾಷ್ಟ್ರ, ವಿದುರ, ಸೋಮದತ್ತ, ಬಾಹ್ಲೀಕ, ಭೂರಿಶ್ರವರೇ ಮೊದಲಾದ

ಕುಲವೃದ್ಧರು, ಕುಂತಿ
ಗಾಂಧಾರಿಯರೊಡನೆ ಬಂದು
ಕುಳಿತರು

ಕಂ|| ಅರಸಿಯರನಣುಗರಂ
ಬೇ
ಳ್ಪಿರುಮಂ ಮೊನೆಗಾಱರಂ
ಪ್ರಗೀತರನಿಂಬಾ|
ಗಿರೆ ಚೌಪಳಿಗೆಗಳೊಳ್
ಕುಳ್ಳಿರಿಸಿ
ದರೊಡನೆಸೆಯೆ ನೆರೆದ
ಪುರಜನ ಸಹಿತಂ|| ೬೭||

ಪದ್ಯ-೬೭:ಪದವಿಭಾಗ-ಅರ್ಥ:ಅರಸಿಯರು ಅನಣುಗರಂ ಬೇಟ್ಪಿರುಮಂ ಮೊನೆಗಾಱರಂ ಪ್ರಗೀತರನು (ರಾಣಿಯರು, ಮಕ್ಕಳು, ಬೇಕಾದವರನ್ನು, ಯೋಧರನ್ನೂ, ಗಣ್ಯರನ್ನೂ) ಇಂಬಾಗಿರೆ (ವಿಸ್ತಾರವಾಗಿ) ಚೌಪಳಿಗೆಗಳೊಳ್ (ಹಜಾರದಮೇಲು ಮಾಳಿಗೆಗಳಲ್ಲಿ)

ಕುಳ್ಳಿರಿಸಿದರು, ಒಡನೆ ಎಸೆಯೆ (ಶೋಭಿಸುವಂತೆ) ನೆರೆದ ಪುರಜನ ಸಹಿತಂ||

ಪದ್ಯ-೬೭:ಅರ್ಥ:.
ರಾಣಿಯರು, ಮಕ್ಕಳು , ಬೇಕಾದವರು ಯೋಧರು ಮತ್ತು ಗಣ್ಯರನ್ನೂ ಪಟ್ಟಣಿಗರೊಡನೆ ಶೋಭಿಸುವ ಹಾಗೆ ಒಟ್ಟಿಗೆ ಹಜಾರದ ಮಾಳಿಗೆಗಳಲ್ಲಿ

ಆಕರ್ಷಕವಾಗಿರುವ

ರೀತಿಯಲ್ಲಿ ಕುಳ್ಳಿರಿಸಿದರು.

ವ|| ಆಗಳ್ ಕುಂಭಸಂಭವಂ-

ವಚನ:ಪದವಿಭಾಗ-

ಅರ್ಥ:ಆಗಳ್

ಕುಂಭಸಂಭವಂ(ದ್ರೋಣನು)

ವಚನ:ಅರ್ಥ:ಆಗ

ದ್ರೋಣನು;

ಕಂ|| ಪೊಸ ಮುತ್ತಿನ ತುಡಿಗೆ

ಪೊದ

ಳ್ದೆಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂ|
ದೆಸೆದಿರೆ ಬೆಳ್ಮುಗಿಲಿಂದಂ ಮುಸುಕಿದ ನೀಲಾದ್ರಿ ಬರ್ಪ
ತೆಱದೊಳ್ ಬಂದಂ- ||೬೮||

ಪದ್ಯ-೬೮:ಪದವಿಭಾಗ-ಅರ್ಥ:ಪೊಸ ಮುತ್ತಿನ ತುಡಿಗೆ (ಹೊಸ ಮುತ್ತಿನ ತೊಡಿಗೆಗಳು) ಪೊದಳ್ದು ಎಸೆಯೆ (ಎಲ್ಲಡೆಯೂ ಶೋಭಿಸುವಂತೆ)

ದುಕೂಲಾಂಬರಂ
ನಿಜಾಂಗದೊಳಂ ಸಂದು
ಎಸೆದಿರೆ (ರೇಷ್ಮೆಯ ವಸ್ತ್ರವು
ತನ್ನ ಶರೀರವನ್ನು ಸೇರಿ
ಸುಂದರವಾಗಿರಲು)
ಬೆಳ್ಮುಗಿಲಿಂದಂ ಮುಸುಕಿದ
ನೀಲಾದ್ರಿ ಬರ್ಪ ತೆಱದೊಳ್
(ಬಿಳಿಯ ಮೋಡದಿಂದ
ಆವರಿಸಿದ ನೀಲಪರ್ವತವು
ಬರುವ ಹಾಗೆ)ಬಂದಂ|

ಪದ್ಯ-೬೮:ಅರ್ಥ:ಅಲ್ಲಿಗೆ ದ್ರೋಣನು, ಹೊಸಮುತ್ತಿನ ಆಭರಣಗಳು ಎಲ್ಲಡೆಯೂ ಶೋಭಿಸುವಂತೆ, ರೇಷ್ಮೆಯ ವಸ್ತ್ರವು ತನ್ನ ಶರೀರವನ್ನು ಸೇರಿ ಸುಂದರವಾಗಿರಲು ಬಿಳಿಯ ಮೋಡದಿಂದ ಆವರಿಸಿದ ನೀಲಪರ್ವತವು ಬರುವ ಹಾಗೆಬಂದನು.

ವ|| ಅಂತು ಬಂದು ರಂಗಭೂಮಿಯ ನಡುವೆ

ನಿಂದು-

ವಚನ:ಪದವಿಭಾಗ-

ಅರ್ಥ:ಅಂತು ಬಂದು ರಂಗಭೂಮಿಯ ನಡುವೆ ನಿಂದು-

ವಚನ:ಅರ್ಥ:ಹಾಗೆ ಬಂದು ರಂಗಸ್ಥಳದ ಮಧ್ಯದಲ್ಲಿ ನಿಂತುಕೊಂಡು;

ಕಂ|| ನೆಗೞ್ದಿರೆ ಪುಣ್ಯಾಹ ಸ್ವರ ಮೊಗೆದಿರೆ ಪಟು ಪಟಹ ಕಾಹಳಾ ರವವಾಗಳ್|

ಪುಗವೇೞ್ದಿಂ ವಿವಿಧಾಸ್ತ್ರ ಪ್ರಗಲ್ಭರಂ ತನ್ನ ಚಟ್ಟರಂ ಕಳಶಭವಂ|| ೬೯||

ಪದ್ಯ-೬೯:ಪದವಿಭಾಗ-ಅರ್ಥ:ನೆಗೞ್ದಿರೆ (ಉಂಟಾಗಿರಲು) ಪುಣ್ಯಾಹಸ್ವರಂ ಒಗೆದಿರೆ (ಪುಣ್ಯಾಹವಾಚನ ಮಂತ್ರನಾದವು ಉಂಟಾಗಲು) ಪಟು ಪಟಹ ಕಾಹಳಾ ರವವಾಗಳ್ (ವಾದ್ಯಧ್ವನಿಗಳು

ಮೊಳಗುತ್ತಿರಲು),
ಪುಗವೇೞ್ದಿಂ (ಪ್ರವೇಶಿಸಲು
ಹೇಳಿದನು); ವಿವಿಧ ಅಸ್ತ್ರ
ಪ್ರಗಲ್ಭರಂ (ಪರಿಣತರನ್ನು)ತನ್ನ
ಚಟ್ಟರಂ ಕಳಶಭವಂ
(ದ್ರೋಣ)(ವಿವಿಧ
ಶಸ್ತ್ರಾಸ್ತ್ರಗಳಲ್ಲಿ ಪರಿಣತರಾದ
ತನ್ನ ಶಿಷ್ಯರನ್ನು ದ್ರೋಣನು)
ಪದ್ಯ-೬೯:ಅರ್ಥ:ಪುಣ್ಯಾಹ
ವಾಚನ ಮಂತ್ರನಾದವು
ಉಂಟಾಗಲು; ತಮಟೆ

ಕೊಂಬು ಮೊದಲಾದ
ವಾದ್ಯಧ್ವನಿಗಳು
ಮೊಳಗುತ್ತಿರಲು ವಿವಿಧ
ಶಸ್ತ್ರಾಸ್ತ್ರಗಳಲ್ಲಿ ಪರಿಣತರಾದ
ತನ್ನ ಶಿಷ್ಯರನ್ನು ದ್ರೋಣನು
ಪ್ರವೇಶಮಾಡಲು ಹೇಳಿದನು.

ಕಂ||ಅಂತು ಪುಗವೇೞ್ವುದುಂ
ದಿ
ಗ್ದಂತಿಗಳುಂ ಕುಲನಗಂಗಳುಂ
ಗಡಣಂಗೊಂ|
ಡೆಂತು ಕವಿತರ್ಕುಮಂತೆ ನೆ

ಲಂ ತಳರ್ತ್ರಿನೆಗಂ ಪ್ರಚಂಡ ಕೋದಂಡಧರರ್||೭೦||

ಪದ್ಯ-೭೦:ಪದವಿಭಾಗ-ಅರ್ಥ:ಅಂತು ಪುಗವೇೞ್ದುದುಂ (ಹಾಗೆ ಪ್ರವೇಶಮಾಡಲು ಹೇಳಿದಾಗ), ದಿಗ್ದಂತಿಗಳುಂ ಕುಲನಗಂಗಳುಂ (ದಿಗ್ಗಜಗಳೂ ಕುಲಪರ್ವತಗಳೂ) ಗಡಣಂಗೊಂಡು ಎಂತು ಕವಿತರ್ಕುಮ್ ಅಂತೆ

(ಗುಂಪುಕೂಡಿ ಮುತ್ತುವ
ಹಾಗೆ) ನೆಲಂ ತಳರ್ರ್ನೆಗಂ
ಪ್ರಚಂಡ
ಕೋದಂಡಧರರ್(ಭೂಮಿ
ನಡುಗುವ ಹಾಗೆ)
ಪದ್ಯ-೨೦:ಅರ್ಥ:ಹಾಗೆ
ಪ್ರವೇಶಮಾಡಲು ಹೇಳಿದಾಗ
ದಿಗ್ಗಜಗಳೂ
ಕುಲಪರ್ವತಗಳೂ
ಗುಂಪುಕೂಡಿ ಮುತ್ತುವ ಹಾಗೆ,
ಮತ್ತು ಭೂಮಿ ನಡುಗುವ

ಹಾಗೆ ಶೂರರಾದ ಬಿಲ್ಗಾರರು (ರಂಗಭೂಮಿಯನ್ನು ಪ್ರವೇಶಿಸಿದರು.)

ವ|| ಅಂತು ಧರ್ಮಪುತ್ರನಂ ಮುಂತಿಟ್ಟು ಭೀಮಾರ್ಜುನ ನಕುಲ ಸಹದೇವರುಂ ದುರ್ಯೋಧನನಂ ಮುಂತಿಟ್ಟು ಯುಯುತ್ಸು ದುಶ್ಶ್ಯಾಸನ ದುಸ್ಸಹ ದುಸ್ಸಳ ಜರಾಸಂಧ ಸತ್ಯ ಸಂಧ ನಿಸ್ಸಹ ರಾಜಸಂಧ ವಿಂದ ಅನುವಿಂದ ದುರ್ಮತಿ

ಸುಬಾಹು ದುಸ್ಪರ್ಶನ

ದುರ್ಮರ್ಷಣ ದುರ್ಮುಖ

ದುಷ್ಕರ್ಣ ವಿಕರ್ಣ ವಿವಿಂಶತಿ

ಸುಲೋಚನ ಸುನಾಭ ಚಿತ್ರ

ಉಪಚಿತ್ರ ನಂದ ಉಪನಂದ

ಸುಚಿತ್ರಾಂಗದ ಚಿತ್ರಕುಂಡಲ

ಸುಹಸ್ತ ದೃಢಹಸ್ತ ಪ್ರಮಾಥಿ

ದೀರ್ಘಬಾಹು ಮಹಾಬಾಹು

ಪ್ರತಿಮ ಸುಪ್ರತಿಮ ಸಪ್ರಮಾಥಿ

ದುರ್ಧರ್ಷಣ ದುಷ್ಪರಾಜಯ

ಮಿತ್ರ ಉಪಮಿತ್ರ ಚೌಳೋಪ

ದ್ವಂದ್ವಹಸ್ತ ಪ್ರತೀಪ ಸುಪ್ರತೀಪ ಪ್ರಹಸ್ತ ಪ್ರತಾಪ ಪ್ರಮದ ಸದ್ಬಾಹುಗಳ್ ಮೊದಲಾಗಿ ನೂರ್ವರುಂ ಬಂದು-

ವಚನ:ಪದವಿಭಾಗ-ಅರ್ಥ: ಅಂತು ಧರ್ಮಪುತ್ರನಂ ಮುಂತಿಟ್ಟು ಭೀಮಾರ್ಜುನ ನಕುಲ ಸಹದೇವರುಂ- - -

ವಚನ:ಅರ್ಥ:ಧರ್ಮರಾಯ ನನ್ನು ಮುಂದಿಟ್ಟುಕೊಂಡು ಭೀಮಾರ್ಜುನ

ನಕುಲಸಹದೇವರೂ

ದುರ್ಯೋಧನನನ್ನು

ಮುಂದಿಟ್ಟುಕೊಂಡು

ಯುಯುತ್ಸು, ದುಶ್ಶ್ಯಾಸನ,

ದುಸ್ಸಳ, ಜರಾಸಂಧ,

ಸತ್ಯಸಂಧ, ನಿಸ್ಸಹ,

ರಾಜಸಂಧ, ವಿಂದ,

ಅನುವಿಂದ, ದುರ್ಮತಿ,

ಸುಬಾಹು, ದುಸ್ಪರ್ಶನ,

ದುರ್ಮರ್ಷಣ, ದುರ್ಮುಖ,

ದುಷ್ಕರ್ಣ, ವಿಕರ್ಣ, ವಿವಿಂಶತಿ,

ಸುಲೋಚನ, ಸುನಾಭ, ಚಿತ್ರ,
ಉಪಚಿತ್ರ, ನಂದ, ಉಪನಂದ,
ಸುಚಿತ್ರಾಂಗದ, ಚಿತ್ರಕುಂಡಲ,
ಸುಹಸ್ತ, ದೃಢಹಸ್ತ, ಪ್ರಮಾಥಿ,
ದೀರ್ಘಬಾಹು, ಮಹಾಬಾಹು,
ಪ್ರತಿಮೆ, ಸುಪ್ರತಿಮ,
ಸಪ್ರಮಾಥಿ, ದುರ್ಧರ್ಷಣ,
ದುಷ್ಟರಾಜಯ, ಮಿತ್ರ,
ಉಪಮಿತ್ರ, ಚೌಳೋಪ,
ದ್ವಂದ್ವಹಸ್ತ, ಪ್ರತೀಪ, ಪಹಸ್ತ,
ಪ್ರತಾಪ, ಪ್ರಮದ,

ಸದ್ಭಾಹುಗಳೇ ಮೊದಲಾದ
ನೂರು ಕೌರವರೂ ಬಂದು-

ಕಂ|| ಗದೆಯೊಳ್ ಬಿಲ್ಲೊಳ್
ಗಜದೊಳ್
ಕುದುರೆಯೊಳಂ
ರಥದೊಳಸ್ತ್ರಕೌಶಲದೆ ಬೆಡಂ|
ಗೊದವಿರೆ ತೋಱಿದರವರೊ
ರ್ಮೊದಲೆ
ಜನಂ ಪೊಗೞೆ ನೆಗೞೆ
ಜಳನಿಧಿ ನಿನದಂ|| ೭೧||

ಪದ್ಯ-೭೧:ಪದವಿಭಾಗ-ಅರ್ಥ:ಗದೆಯೊಳ್ ಬಿಲ್ಲೊಳ್ ಗಜದೊಳ್ ಕುದುರೆಯೊಳಂ ರಥದೊಳ್ ಅಸ್ತ್ರಕೌಶಲದೆ ಬೆಡಂಗೊದವಿರೆ(ಬೆಡಂಗು ಒದವಿರೆ;ಬೆಡಗು /ಸೊಗಸು ಉಂಟಾಗಲು) ತೋಱಿದರು ಅವರು ಒರ್ಮೊದಲೆ (ಕೌಶಲ್ಯವನ್ನು- ಒಟ್ಟಿಗೆ ತೋರಿಸಿದರು) ಜನಂ ಪೊಗೞೆ (ಹೊಗಳೆ) ನೆಗೞೆ

(ಉಂಟಾಗಲು) ಜಳನಿಧಿ ನಿನದಂ(ಸಮುದ್ರ ಘೋಷದಂತೆ)

ಪದ್ಯ-೭೧:ಅರ್ಥ:.

ಜನರೆಲ್ಲರೂ ಸಮುದ್ರ ಘೋಷದಂತೆ ಗಟ್ಟಿಯಾಗಿ ಒಟ್ಟಿಗೆ ಹೊಗಳುವ ಹಾಗೆ ಗದೆಯಲ್ಲಿ, ಬಿಲ್ಲಿನಲ್ಲಿ, ಆನೆಯಲ್ಲಿ, ಕುದುರೆಯಲ್ಲಿ, ರಥದಲ್ಲಿ, ಅಸ್ತ್ರಕೌಶಲದಲ್ಲಿ,

ಸೊಗಸು ತೋರುವಂತೆ

ಜಾಣ್ಮೆಯನ್ನು ಪ್ರದರ್ಶಿಸಿದರು.

ವ|| ಅಂತವರಿಂ ಬೞಿಯಂ-

ವಚನ:ಪದವಿಭಾಗ-

ಅರ್ಥ:ಅಂತು ಅವರಿಂ

ಬೞಿಯಂ-

ವಚನ:ಅರ್ಥ:ಹಾಗೆ

ಅವರಾದ ಬಳಿಕ-

ಕಂ|| ಆದ

ಮುಳಿಸಿಂದಮಾಗಳ್

ಮೋದುವ ಬಗೆ ಬಳೆಯೆ

ಪಿಡಿದ ಗದೆಗಳಿನಿಳಿಪಂ|

ತಾದುದು ಸುಯೋಧನೋಗ್ರ

ವೃ

ಕೋದರರೊರ್ಮೊದಲೆ

ಶಿಖರಮುಳ್ಳೆರಡಗಮಂ|| ೭೨||

ಪದ್ಯ-೭೨:ಪದವಿಭಾಗ-

ಅರ್ಥ:ಆದ ಮುಳಿಸಿಂದಂ (ಉಂಟಾದ ಸಿಟ್ಟಿನಿಂದ) ಆಗಳ್ (ಆಗ) ಮೋದುವ ಬಗೆ ಬಳೆಯೆ (ಹೊಡೆಯುವ

ಮನಸ್ಸು ಉಂಟಾಗಲು)
ಪಿಡಿದ ಗದೆಗಳನು
ಇಳಿಪಂತಾದುದು
ಸುಯೋಧನ ಉಗ್ರ
ವೃಕೋದರರ್ ಒರ್ಮೊದಲೆ
(ಕೂಡಲೆ)
ಶಿಖರಮುಳ್ಳೆರಡಗಮಂ
(ಶಿಖರಂ ಉಳ್ಳ ಎರಡು
ಅಗಮಂ- -ಆ ಗದೆಗಳನ್ನು
ಹಿಡಿದ ಅವರು, ಶಿಖರವುಳ್ಳ
ಬೆಟ್ಟಗಳಂತೆ; ಅಗ-ಬೆಟ್ಟ)||

ಪದ್ಯ-೭೨:ಅರ್ಥ:ಕೋಪವೂ ಹೊಡೆಯಬೇಕೆಂಬ ಅಭಿಲಾಷೆಯೂ (ಅವರಲ್ಲಿ) ಬೆಳೆಯಲು ದುರ್ಯೋಧನನೂ ಭೀಮನೂ ಏಕಕಾಲದಲ್ಲಿ ಎತ್ತಿ ಹಿಡಿದ ಗದೆಗಳು ಶಿಖರದಿಂದ ಕೂಡಿದ ಎರಡು ಬೆಟ್ಟಗಳನ್ನು ಅಲ್ಲಿ ಒಟ್ಟಿಗೆ ಇಳಿಸಿದಂತೆ ಇತ್ತು.

ವ||

ಅಂತಿರ್ವರುಮೊರ್ವರೊರ್ವ

ರೊಳ್ ಸೆಣಸಿ ಬಹಪ್ರಯೋಗ ಗದಾ ಕೌಶಲಮಂ ತೋಱಲೆಂದು-

ವಚನ:ಪದವಿಭಾಗ-

ಅರ್ಥ:ಅಂತು ಇರ್ವರುಂ ಒರ್ವರ್ ಒರ್ವರೊಳ್ ಸೆಣಸಿ ಬಹಪ್ರಯೋಗ (ಬಹ-ತಮಗೆ ಬರುವ, ತಿಳಿದ; Xಬಹು-ಅನೇಕ?) ಗದಾ ಕೌಶಲಮಂ ತೋಱಲೆಂದು-

ವಚನ:ಅರ್ಥ:ಅವರಿಬ್ಬರೂ ಪರಸ್ಪರ ಹೋರಾಡಿ ಅನೇಕ ಪ್ರಯೋಗಗಳಿಂದ ತಮಗೆ ಬರುವ ಗದಾ ಕೌಶಲವನ್ನು ತೋರಿಸಲೆಂದು ಹೋರಾಡುತ್ತಿದ್ದರು ಆಗ-.

ಕಂ|| ಗೆಡೆವೆಚ್ಚೆರ್ವರ್ ಮನಗೊಂ|
ಡೊಡನೊಡನೋರಂತು ತಗುಳ್ದು ಝೇಂಕರಿಸಿದೊಡೆ|
ಲ್ವಡಗಾಗೆ ಮೋದಲೆಂದಿ|

ರ್ದೆಡೆಯೊಳ್ ಗುರು ತನ್ನ ಮಗನನೆಡೆವುಗವೇೞ್ದಿಂ|| ೭೩||

ಪದ್ಯ-೭೩:ಪದವಿಭಾಗ-ಅರ್ಥ:ಗೆಡೆವೆಚ್ಚಿ ಇರ್ವರ್ (ಇಬ್ಬರು ಹೆಚ್ಚಿನ ಜೋಡಿ), ಮನಗೊಂಡು (ಜನರನ್ನು ಆಕರ್ಶಿಸುವಂತೆ) ಒಡನೊಡನೆ ಓರಂತು ತಗುಳ್ದು(ಜೊತೆಜೊಯಲ್ಲಿಯೇ ಬೆನ್ನಟ್ಟಿಕೊಂಡು) ಝೇಂಕರಿಸಿದೊಡೆ

(ಆರ್ಭಟಮಾಡಿದರೆ)
ಎಲ್ಬಡಗಾಗೆ (ಎಲುಬು
ಅಡಗು-ಮಾಂಸ ಆಗುವಂತೆ)
ಮೋದಲೆಂದಿರ್ದ ಎಡೆಯೊಳ್
(ಮೋದು-ಹೊಡೆ, ಎಂದು
ಇರ್ದ ಎಡೆ-ಸಮಯ;
ಜಜ್ಜಿಹೋಗುವ ಹಾಗೆ
ಹೊಡೆಯಬೇಕೆಂದಿದ್ದ
ಸಮಯದಲ್ಲಿ) ಗುರು ತನ್ನ
ಮಗನನು ಎಡೆವುಗವೇಟ್ಟಿಂ
(ಎಡೆ-ಮಧ್ಯ, ಉಗು-

ಹೋಗಲು ಹೇಳ್ದಂ-ಹೇಳ್ದನು;
ತನ್ನ ಮಗನಾದ
ಅಶ್ವತ್ಥಾಮನನ್ನು ಮಧ್ಯೆ
ಪ್ರವೇಶಮಾಡಲು
ಹೇಳಿದನು.)

ಪದ್ಯ-೭೩:ಅರ್ಥ:ಇಬ್ಬರೂ
ದೃಢಚಿತ್ತರಾಗಿ
ಜೊತೆಜೊಯಲ್ಲಿಯೇ
ಬೆನ್ನಟ್ಟಿಕೊಂಡು ಆರ್ಟಿಭಸಿ
ಅವರ ಶರೀರವು -ಎಲಬು
ಮಾಂಸವಾಗಿ, ಜಜ್ಜಿಹೋಗುವ

ಹಾಗೆ ಹೊಡೆಯಬೇಕೆಂದಿದ್ದ ಸಮಯದಲ್ಲಿ ಗುರು ದ್ರೋಣನು ಅವರಿಬ್ಬರನ್ನು ತಡೆಯುವುದಕ್ಕಾಗಿ ತನ್ನ ಮಗ ಅಶ್ವತ್ಥಾಮನನ್ನು ಮಧ್ಯೆ ಪ್ರವೇಶಮಾಡಲು ಹೇಳಿದನು.

ವ|| ಅಂತು ಮೇರೆದಪ್ಪಲ್ ಬಗೆದ ಮಹಾಸಮುದ್ರಂಗಳೆರಡಱ ನಡುವೆ ಕುಲಗಿರಿಯಿರ್ಪಂತಿರ್ದಶ್ವತ್ಥಾ

ಮನಂ ಕಂಡಿರ್ವರುಮೆರಡುಂ ದೆಸೆಗೆ ತೊಲಗಿ ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಮೇರೆದಪ್ಪಲ್ ಬಗೆದ (ಎಲ್ಲೆಯನ್ನು ಮೀರಲು ಯೋಚಿಸಿದ)ಮಹಾಸಮುದ್ರಂಗಳ ಎರಡಱ(ರ) ನಡುವೆ ಕುಲಗಿರಿಯಿರ್ಪಂತೆ ಇರ್ದ ಅಶ್ವತ್ಥಾಮನಂ ಕಂಡು ಇರ್ವರುಂ ಎರಡುಂ ದೆಸೆಗೆ

(ದಿಕ್ಕಿಗೆ) ತೊಲಗಿ ನಿಂದು, ಆಗಳ್

ವಚನ:ಅರ್ಥ:|| ಹಾಗೆ ಎಲ್ಲೆಯನ್ನು ಮೀರಲು ಯೋಚಿಸಿದ ಎರಡು ಮಹಾಸಮುದ್ರಗಳ ಮಧ್ಯೆ ಕುಲಪರ್ವತದಂತೆ ನಿಂತಿದ್ದ ಅಶ್ವತ್ಥಾಮನನ್ನು ನೋಡಿ ಇಬ್ಬರೂ ಎರಡು ದಿಕ್ಕಿಗೆ ಸರಿದು ನಿಂತರು; ಆಗ

ಕಂದಪದ್ಯ|| ಆ ದೂರ್ವಾಂಕುರ

ವರ್ಣದೊ|

ಳಾದಮೊಡಂಬಟ್ಟ ಕನಕ

ಕವಚಂ ರಾಜ|

ತ್ಕೋದಂಡಮಮರ್ದ ದೊಣೆ

ಕ|

ಣ್ಗಾದಮೆ ಬರೆ ಬಂದು ಮುಂದೆ

ನಿಂದಂ ಹರಿಗಂ|| ೭೪||

ಪದ್ಯ-೭೪:ಪದವಿಭಾಗ-

ಅರ್ಥ:ಆ ದೂರ್ವಾಂಕುರ

(ಗರಿಕೆಹುಲ್ಲು, ಅಂಕುರ-ಕುಡಿ)

ವರ್ಣದೊಳು

(ಬಣ್ಣದಲ್ಲಿ)ಆದಂ ಒಡಂಬಟ್ಟ

(ಒಪ್ಪಿದ) ಕನಕ ಕವಚಂ

ರಾಜತ್

ಕೋದಂಡಂ(ಪ್ರಕಾಶಮಾನವಾ

ದ ಬಿಲ್ಲು) ಅಮರ್ದ ದೊಣೆ

(ಬೆನ್ನಿಗೆ ಅಮರಿದ-

ಸೇರಿಕೊಂಡ ದೊಣೆ- ಬತ್ತಳಿಕೆ)

ಕಣ್ಗಾದಮೆ ಬರೆ (ಕಣ್ಗೆ

ಆದಮೆಬರೆ; ಕಣ್ಣಿಗೆ

ಸೊಗಸಾಗಲು) ಬಂದು

ಮುಂದೆ ನಿಂದಂ ಹರಿಗಂ(ಹರಿಗನು/ಅರಿಕೇಸರಿ/ ಅರ್ಜುನನು ಮುಂದೆ ಬಂದು ನಿಂತನು.)

ಪದ್ಯ-೭೪:ಅರ್ಥ:ಎಳೆಯ ಗರಿಕೆಯಹುಲ್ಲಿನ ಬಣ್ಣದಿಂದ ವಿಶೇಷವಾಗಿ ಒಪ್ಪಿ ಕಾಣುವ ಚಿನ್ನದ ಕವಚ, ಪ್ರಕಾಶಮಾನವಾದ ಬಿಲ್ಲು, ಬೆನ್ನಿಗೆ ಕಟ್ಟಿದ್ದ ಬತ್ತಳಿಕೆ ಇವು ಕಣ್ಣುಗಳಿಗೆ

ಮನೋಹರವಾಗಿರಲು ಅರ್ಜುನನು ಮುಂದುಗಡೆ ಬಂದು ನಿಂತನು.

ವ|| ಆಗಳ್ ಕುಂಭಸಂಭವನುಲಿವ ಜನದ ಕಳಕಳ ರವಮುಮಂ ಮೊೞಗುವ ಪಗಳುಮಂ ಬಾರಿಸಿ-

ವಚನ:ಪದವಿಭಾಗ-ಅರ್ಥ: ಆಗಳ್ ಕುಂಭಸಂಭವನು (ದ್ರೋಣನು) ಉಲಿವ

(ಮಾತಾಡುವ) ಜನದ ಕಳಕಳ ರವಮುಮಂ(ಸದ್ದನ್ನು) ಮೊಱಗುವ ಪಗಳುಮಂ(ವಾದ್ಯವನ್ನು) ಬಾರಿಸಿ (ನಿಲ್ಲಿಸಿ?)-

ವಚನ:ಅರ್ಥ:ಆಗ ದ್ರೋಣನು ಮಾತಾಡುತ್ತಿದ್ದ ಜನಗಳ ಕಳಕಳ ಧ್ವನಿಯನ್ನೂ ಮೊಳಗುತ್ತಿದ್ದ ವಾದ್ಯಗಳನ್ನೂ ನಿಲ್ಲಿಸಿ,-

ಕಂ|| ಈತಂ ಗುಣಾರ್ಣವಂ ವಿ

ಖ್ಯಾತ ಯಶಂ

ವೈರಿಗಜಘಟಾವಿಘಂಟನನಿಂ|

|

ತೀತನ ಸಾಹಸಮುಪಮಾ

ತೀತಮಿದಂ ನೋಡಿಮೆಂದು

ನೆರವಿಗೆ ನುಡಿದಂ|| ೭೫||

ಪದ್ಯ-೭೫:ಪದವಿಭಾಗ-

ಅರ್ಥ:ದ್ರೋಣ ಹೇಳಿದ್ದು:

ಈತಂ

ಗುಣಾರ್ಣವಂ(ಅರ್ಜುನ)

ವಿಖ್ಯಾತ ಯಶಂ

ವೈರಿಗಜಘಟಾವಿಘಂಟನನು, ಇಂತು ಈತನ ಸಾಹಸಂ ಉಪಮಾತೀತಂ (ಹೋಲಿಕೆಗೆ ಮೀರಿದುದು)ಇದಂ ನೋಡಿಮೆಂದು ನೆರವಿಗೆ ನುಡಿದಂ(ನೆರೆದವರಿಗೆ-ಸೇರಿದವರಿಗೆ ಹೇಳಿದನು.)

ಪದ್ಯ-೭೫:ಅರ್ಥ:ವಿಖ್ಯಾತ ಯಶಸ್ಸು ಉಳ್ಳವನು, ವೈರಿಗಜ ಘಟಾವಿಘಟನು, (ವೈರಿಗಳೆಂಬ ಆನೆಗಳನ್ನು

ಸೀಳುವ ಪರಾಕ್ರಮಿಯು)
ಆದ ಗುಣಾರ್ಣವನು/
ಅರ್ಜುನನು ಇವನು. ಈತನ
ಸಾಹಸ ಹೋಲಿಕೆಗೆ
ಮೀರಿದುದು ಇದನ್ನು ನೋಡಿ
ಎಂದು ಅಲ್ಲಿ ಸೇರಿದವರಿಗೆ
ಹೇಳಿದನು.

ವ|| ಆ ಪ್ರಸ್ತಾವದೊಳ್-

ವಚನ:ಪದವಿಭಾಗ-

ಅರ್ಥ:ಆ ಪ್ರಸ್ತಾವದೊಳ್-
(ಪ್ರಸ್ತಾವ- ಸಂದರ್ಭ)

ವಚನ:ಅರ್ಥ:ಆ
ಸಂದರ್ಭದಲ್ಲಿ

ಚಂ||
ಒಡೆಗುಮಜಾಂಡಮಿನ್ನಿನಿಸು
ಜೇವೊಡೆದಾಗಳೆ ಬೊಮ್ಮನುಂ
ಮನಂ
ಗಿಡುಗುಮದೇವುದೆಂದು
ಮಿಡಿದೊಯ್ಯನೆ
ಜೇವೊಡೆದಾಗಳಂಬನಂ|
ಬೊಡನೊಡನೀಂಬುವೆಂಬನಿ
ತು ಸಂದೆಯಮಪ್ಪಿನಮಸ್ತ್ರ

ಜಾಲದಿಂ

ತಡೆಯದೆ

ಪಂಜರಂಬಡೆದನಂದು

ವಿಯತ್ತಳದೊಳ್

ಗುಣಾರ್ಣವಂ|| ೭೬||

ಪದ್ಯ-೭೬:ಪದವಿಭಾಗ-ಅರ್ಥ:ಒಡೆಗುಂ ಅಜಾಂಡಂ(ಬ್ರಹ್ಮಾಂಡ) ಇನ್ನು ಇನಿಸು ಜೇವೊಡೆದಾಗಳೆ (ಬಿಲ್ಲಿನ ಸ್ವಲ್ಪ ಠೇಂಕಾರ ಮಾಡಿದರೆ), ಬೊಮ್ಮನುಂ

ಮನಂ ಗಿಡುಗುಂ (ಆ ಶಬ್ದಕ್ಕೆ ಬ್ರಹ್ಮನಿಗೂ ಮನಸ್ಸು ಕೆಡುವುದು) ಅದು ಏವುದೆಂದು (ಅಷ್ಟನ್ನೇಕೆ ಮಾಡುವುದು ಎಂದು) ಮಿಡಿದು ಒಯ್ಯನೆ ಜೇವೊಡೆದಾಗಳೆ ಅಂಬನಂ (ಅವನು ಬಹುಮೆಲ್ಲಗೆ ಟಂಕಾರಮಾಡಿದಾಗ ಒಂದು ಬಾಣವನ್ನು ಬಿಟ್ಟರೆ) ಒಡನೊಡನೆ ಈಂಬುವೆಂಬ

ಅನಿತು (ಒಂದು ಬಾಣವು ಮತ್ತೊಂದು ಬಾಣವನ್ನೂ ಹೆರುತ್ತಿದೆಯೋ) ಸಂದೆಯಂ ಅಪ್ಪಿನಂ(ಎಂಬ ಸಂದೇಹವನ್ನುಂಟುಮಾಡುತ್ತಾ) ಅಸ್ತ್ರ ಜಾಲದಿಂ ತಡೆಯದೆ ಪಂಜರಂ ಬಡೆದನು (ಪಂಜರವನ್ನು ಕಟ್ಟಿದನು) ಅಂದು ವಿಯತ್ತಳದೊಳ್ (ಆಕಾಶಪ್ರದೇಶದಲ್ಲಿ) ಗುಣಾರ್ಣವಂ (ಅರ್ಜುನನು)|

ಪದ್ಯ-೭೬:ಅರ್ಥ:ಅರ್ಜುನ ನು ಸ್ವಲ್ಪ ಮಾತ್ರಾ ಬಿಲ್ಲಿನ ನಾಣನ್ನು ಸ್ವಲ್ಪ ಠೇಂಕಾರ ಮಾಡಿದರೆ ಬ್ರಹ್ಮಾಂಡವು ಒಡೆದುಹೋಗುತ್ತದೆ; ಬ್ರಹ್ಮನು ಉತ್ಸಾಹಶೂನ್ಯನಾಗುತ್ತಾನೆ. ಅಷ್ಟನ್ನೇಕೆ ಮಾಡುವುದು ಎಂದು ಅವನು ಬಹುಮೆಲ್ಲಗೆ ಟಿಂಕಾರಮಾಡಿದಾಗ ಒಂದು ಬಾಣವು ಮತ್ತೊಂದು ಬಾಣವನ್ನೂ ಹೆರುತ್ತಿದೆಯೋ

ಎಂಬ
ಸಂದೇಹವನ್ನುಂಟುಮಾಡುತ್ತ
ಗುಣಾರ್ಣವನು
ಆಕಾಶಪ್ರದೇಶದಲ್ಲಿ ಆ ದಿನ
ಅಸ್ತ್ರಗಳ ಸಮೂಹದಿಂದ
ಸ್ವಲ್ಪವೂ ತಡಮಾಡದೆ ಒಂದು
(ಬಾಣದ) ಪಂಜರವನ್ನು
ಕಟ್ಟಿದನು.

ವ|| ಮತ್ತಮೈಂದ್ರ ವಾರುಣ ವಾಯವ್ಯಾಗ್ನೇಯ

ಪಾರ್ವತಾದಿ ಬಾಣಂಗಳಂ ತುಡೆ-

ವಚನ:ಪದವಿಭಾಗ-

ಅರ್ಥ:ಮತ್ತಂ ಐಂದ್ರ ವಾರುಣ ವಾಯವ್ಯ ಆಗ್ನೇಯ ಪಾರ್ವತ ಆದಿ ಬಾಣಂಗಳಂ ತುಡೆ- (ತೊಡಲು)

ವಚನ:ಅರ್ಥ:ಮತ್ತು ಐಂದ್ರ, ವಾರುಣ, ವಾಯವ್ಯ, ಆಗ್ನೇಯ, ಪಾರ್ವತವೇ

ಮೊದಲಾದ ಅಸ್ತ್ರಗಳನ್ನು
ಪ್ರಯೋಗಿಸಲು-

ಚಂ|| ಕವಿದುವು ಕಾಳ ನೀಳ
ಜಳದಾವಳಿ ವಾರಿಗಳ್
ಧರಿತ್ರಿಯಂ
ಕವಿದುವು ಗಾಳಿಗಳ್
ಪ್ರಳಯಕಾಲಮನಾಗಿಸಲೆಂದೆ
ಲೋಕಮಂ|
ಕವಿದುವು ಮೊಕ್ಕಳಂ
ಕವಿದುವುಗ್ರ ಲಯಾಗ್ನಿಗಳಂತೆ
ಬೆಟ್ಟುಗಳ್

ಕವಿದುವಿವೆಂಬನಿತ್ತು ಭಯಮಾಯ್ತು ಗುಣಾರ್ಣವನಸ್ತ್ರಕೌಶಲಂ|| ೭೭||

ಪದ್ಯ-೭೭:ಪದವಿಭಾಗ-ಅರ್ಥ:ಕವಿದುವು (ಆವರಿಸಿಕೊಂಡವು) ಕಾಳ ನೀಳ ಜಳದಾವಳಿ (ಪ್ರಳಯಕಾಲದ ಕಪ್ಪುಮೋಡಗಳು) ವಾರಿಗಳ್ ಧರಿತ್ರಿಯಂ ಕವಿದುವು

(ಸಮುದ್ರಗಳು ಭೂಮಿಯನ್ನು
ಮುಚ್ಚಿದುವು) ಗಾಳಿಗಳ್
ಪ್ರಳಯಕಾಲಮನು
ಆಗಿಸಲೆಂದೆ ಲೋಕಮಂ
ಕವಿದುವು (ಪ್ರಳಯಕಾಲವನ್ನು
ಉಂಟುಮಾಡಬೇಕೆಂದೇ
ಬಿರುಗಾಳಿಗಳು ಭೂಮಿಯನ್ನು
ಆವರಿಸಿಕೊಂಡವು) ಮೊಕ್ಕಳಂ
(ವಿಶೀಷವಾಗಿ) ಕವಿದುವು
ಉಗ್ರ ಲಯಾಗ್ನಿಗಳಂತೆ,
ಬೆಟ್ಟುಗಳ್ ಕವಿದುವು

ಇವೆಂಬನಿತ್ತು (ಬೆಟ್ಟಗಳು ಕವಿದುಕೊಂಡವು ಎನ್ನುವಷ್ಟು ಮಟ್ಟಿಗೆ) ಭಯಮಾಯ್ತು ಗುಣಾರ್ಣವನ ಅಸ್ತ್ರಕೌಶಲಂ(ಅರ್ಜುನನ ಅಸ್ತ್ರವಿದ್ಯಾ ಕೌಶಲವು).

ಪದ್ಯ-೭೭:ಅರ್ಥ:ಪ್ರಳಯಕಾಲದ ಕಪ್ಪುಮೋಡಗಳು ಆವರಿಸಿಕೊಂಡವು. ಸಮುದ್ರಗಳು ಭೂಮಿಯನ್ನು ಮುಚ್ಚಿದವು.

ಪ್ರಳಯಕಾಲವನ್ನು
ಉಂಟುಮಮಾಡಬೇಕೆಂದು
ಬಿರುಗಾಳಿಗಳು ಭೂಮಿಯನ್ನು
ಆವರಿಸಿಕೊಂಡವು.
ಪ್ರಳಯಕಾಲದ ಬೆಂಕಿಗಳು
ವಿಶೇಷವಾಗಿ
ಮುಚ್ಚಿಕೊಂಡವು. ಹಾಗೆಯೇ
ಬೆಟ್ಟಗಳು ಕವಿದುಕೊಂಡವು
ಎನ್ನುವಷ್ಟು ಮಟ್ಟಿಗೆ
ಅರ್ಜುನನ ಅಸ್ತ್ರವಿದ್ಯಾ

ಕೌಶಲವು
ಭಯಂಕರವಾಯಿತು.

ವ|| ಆಗಳಾ ಪರಾಕ್ರಮಧವಳನ ಶರಪರಿಣತಿಯಂ ಕಂಡು ದುರ್ಯೋಧನನ ಮೊಗಂ ತಲೆನವಿರ ಗಂಟಿಂ ಕಿಱಿದಾಗೆ ದ್ರೋಣ ಭೀಷ್ಮ ಕೃಪ ವಿದುರ ಪ್ರಭೃತಿಗಳ ಮೊಗಮರಲ್ದ ತಾವರೆಯಿಂ ಪಿಱಿದಾಗೆ-

ವಚನ:ಪದವಿಭಾಗ-ಅರ್ಥ:ಆಗಳು ಆ ಪರಾಕ್ರಮಧವಳನ ಶರಪರಿಣತಿಯಂ (ಪರಾಕ್ರಮಧವಳನಾದ ಅರ್ಜುನನ ಬಿಲ್ವಿದ್ಯೆಯ ಪಾಂಡಿತ್ಯವನ್ನು) ಕಂಡು ದುರ್ಯೋಧನನ ಮೊಗಂ ತಲೆನವಿರ ಗಂಟಿಂ ಕಿಱಿದಾಗೆ (ತಲೆಯಕೂದಲಿನ ಗಂಟಿಗಿಂತ ಚಿಕ್ಕದಾಗಲು)ದ್ರೋಣ ಭೀಷ್ಮ

ಕೃಪ ವಿದುರ ಪ್ರಭೃತಿಗಳ
ಮೊಗಮರಲ್ದ ತಾವರೆಯಿಂ
ಪಿರಿದಾಗೆ-
ವಚನ:ಅರ್ಥ:ಆಗ ಆ
ಪರಾಕ್ರಮಧವಳನಾದ
ಅರ್ಜುನನ ಬಿಲ್ವಿದ್ಯೆಯ
ಪಾಂಡಿತ್ಯವನ್ನು ನೋಡಿ
ದುರ್ಯೋಧನನ ಮುಖವು
ತಲೆಯಕೂದಲಿನ ಗಂಟಿಗಿಂತ
ಚಿಕ್ಕದಾಗಲು, ದ್ರೋಣ, ಭೀಷ್ಮ
ಕೃಪ, ವಿದುರರೇ

ಮೊದಲಾದವರ ಮುಖಗಳು
ಅರಳಿದ ತಾವರೆಗಿಂತ
ಹಿರಿದಾದುವು.

ಕಂ|| ತೊಳಗುವ ತೇಜಂ
ತೊಳತೊಳ |
ತೊಳಗುವ ದಿವ್ಯಾಸ್ತ್ರಮಮರ್ದ
ಕೋದಂಡಮಸುಂ|
ಗೊಳಿಸೆ ಮನಂಗೊಳಿಸೆ
ಭಯಂ|
ಗೊಳಿಸೆ ಸಭಾಸದರನುಱದೆ
ಕರ್ಣಂ ಬಂದಂ|| ೭೮||

ಪದ್ಯ-೭೮:ಪದವಿಭಾಗ-ಅರ್ಥ: ತೊಳಗುವ ತೇಜಂ (ಪ್ರಕಾಶಮಾನವಾದ ತೇಜಸ್ಸೂ)ತೊಳತೊಳ |ತೊಳಗುವ (ಪ್ರಕಾಶಿಸುವ) ದಿವ್ಯಾಸ್ತ್ರಂ ಅಮರ್ದ (ಕೂಡಿದ) ಕೋದಂಡಂ ಅಸುಂಗೊಳಿಸೆ (ಉತ್ಸಾಹಗೊಳಿಸಲು) ಮನಂಗೊಳಿಸೆ (ಆಕರ್ಷಿಸಿಸಲು) ಭಯಂಗೊಳಿಸೆ

ಸಭಾಸದರನು ಉಱಿದೆ (ಭರದಿಂದ?) ಕರ್ಣಂ ಬಂದಂ|

ಪದ್ಯ-೭೮:ಅರ್ಥ:ಆ ಸಮಯದಲ್ಲಿ ಪ್ರಕಾಶಮಾನವಾದ ತೇಜಸ್ಸು, ಅತ್ಯಂತ ಜಾಜ್ವಲ್ಯಮಾನವಾದ ದಿವ್ಯಾಸ್ತ್ರದಿಂದ ಕೂಡಿದ ಬಿಲ್ಲೂ ಸಭೆಯ ಜನರನ್ನು ಉತ್ಸಾಹಗೊಳಿಸಲು, ಆಕರ್ಷಿಸಿಸಲು ಭಯವನ್ನುಂಟುಮಾಡುತ್ತಿರ

ಲು ಕರ್ಣನು ವೇಗವಾಗಿ

ಬಂದನು

ವ|| ಬಂದು

ದ್ರೋಣಾಚಾರ್ಯಂಗೆ

ಪೊಡಮಟ್ಟು ಶರಧಿಯಿಂ

ದಿವ್ಯಾಸ್ತ್ರಂಗಳನುರ್ಚಿ

ಕೊಂಡು-

ವಚನ:ಪದವಿಭಾಗ-

ಅರ್ಥ:ಬಂದು

ದ್ರೋಣಾಚಾರ್ಯಂಗೆ

ಪೊಡಮಟ್ಟು ಶರಧಿಯಿಂ

(ಬತ್ತಳಿಕೆಯಿಂದ)ದಿವ್ಯಾಸ್ತ್ರಂಗ
ಳನು ಉರ್ಚಿ (ಉಗಿದು
ತೆಗೆದುಕೊಂಡು) ಕೊಂಡು-
ವಚನ:ಅರ್ಥ:ದ್ರೋಣಾ
ಚಾರ್ಯರಿಗೆ
ನಮಸ್ಕಾರಮಾಡಿ
ಬತ್ತಳಿಕೆಯಿಂದ
ದಿವ್ಯಾಸ್ತ್ರಗಳನ್ನು
ತೆಗೆದುಕೊಂಡು;-

ಕಂ|| ಅರಿಗನ ಬಿಲ್ಬಲ್ಮೆಯೊಳಂ

ದೆರಡಿಲ್ಲದೆ ಬಗೆದ

ಮುಳಿಸುಮೇವಮುಮೆರ್ದೆ

ಯೊಳ್||

ಬರೆದಿರೆ ತೋಱಿದನಾಯತ|

ಕರ ಪರಿಘಂ ಕರ್ಣನಾತ್ಮ

ಶರಪರಿಣತಿಯಂ|| ೭೯ ||

ಪದ್ಯ-೭೯:ಪದವಿಭಾಗ-

ಅರ್ಥ:ಅರಿಗನ (ಅರ್ಜುನನ) ಬಿಲ್ಬಲ್ಮೆಯೊಳಂ ದೆರಡಿಲ್ಲದೆ ಬಗೆದ (ಬಿಲ್ಲು ವಿದ್ಯೆಗಿಂತ ತನ್ನ ಬಿಲ್ಲಿನ ಪಾಂಡಿತ್ಯವು ಸ್ವಲ್ಪವೂ

ಬೇರೆಯಿಲ್ಲವೆಂದು ಭಾವಿಸಿದ)
ಮುಳಿಸುಂ ಏವಮುಂ (ಸಿಟ್ಟೂ
ಅಸಮಾಧಾನವೂ)
ಎರ್ದೆಯೊಳ್ ಬರೆದಿರೆ
(ಎದೆಯಲ್ಲಿ ತುಂಬಿರಲು)
ತೋಱಿದಂ (ತೋರಿಸಿದನು)
ಆಯತಕರ ಪರಿಘಂ
(ಪರಿಘದ ಆಯುಧದಂತೆ)
ಕರ್ಣನು ಆತ್ಮ
ಶರಪರಿಣತಿಯಂ

(ತನ್ನಬಾಣವಿದ್ಯಾಪ್ರೌಢಿಮೆಯ
ನ್ನು)
ಪದ್ಯ-೭೯:ಅರ್ಥ:.
ಅರ್ಜುನನ ಬಿಲ್ಲು ವಿದ್ಯೆಗಿಂತ
ತನ್ನ ಬಿಲ್ಲಿನ ಪಾಂಡಿತ್ಯವು
ಸ್ವಲ್ಪವೂ ಬೇರೆಯಿಲ್ಲವೆಂದು
ಭಾವಿಸಿದ ಸಿಟ್ಟೂ
ಅಸಮಾಧಾನವೂ ಎದೆಯಲ್ಲಿ
ತುಂರಲು ಪರಿಘಾಯುಧದಂತೆ
ದೀರ್ಘವಾದ ಬಾಹುಗಳನ್ನುಳ್ಳ
ಕರ್ಣನು ತನ್ನ

ಬಾಣವಿದ್ಯಾಪ್ರೌಢಿಮೆಯನ್ನು ಪ್ರದರ್ಶಿಸಿದನು.

ವ|| ಅಂತು ತೋಱಿಯುಮೆರ್ದೆಯ ಮುಳಿಸು ನಾಲಗೆಗೆ ವರೆ ಸೈರಿಸಲಾಱದೆ ವಿದ್ವಿಷ್ಟ ವಿದ್ರಾವಣನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ತೋಱಿಯುಂ (ಹಾಗೆ ಪರಿಣತಿ ತೋರಿಸಿ) ಎರ್ದೆಯ ಮುಳಿಸು (ತೋರಿದ

ಹೃದಯದ
ಕೋಪವು)ನಾಲಗೆಗೆ ವರೆ
(ಬರಲು) ಸೈರಿಸಲಾಱದೆ
ವಿದ್ವಿಷ್ಟ ವಿದ್ರಾವಣನನು
(ಶತ್ರುಗಳನ್ನು
ಓಡಿಸುವವನನ್ನು ಕುರಿತು)
ಇಂತು ಎಂದಂ-
ವಚನ:ಅರ್ಥ:ಹಾಗೆ ತೋರಿದ
ಹೃದಯದ ಕೋಪವು
ನಾಲಗೆಗೆ ಬರಲು
ಸಹಿಸಲಾರದೆ ಶತ್ರುಗಳನ್ನು

ಓಡಿಸುವವನಾದ
ಅರ್ಜುನನನ್ನು ಕುರಿತು
ಹೀಗೆಂದನು-

ಕಂ|| ಸಂಗತದಿನೀಗಳಿಂತೀ
ರಂಗಮೆ ರಣರಂಗಮಾಗೆ
ಕಾದುವಮಳವಂ|
ಪೊಂಗದಿರಿರಿದಿರ್ಚದೇಂ ಗಳ
ರಂಗಂಬೊಕ್ಕಾಡುವಂತೆ
ಪೆಂಡಿರೆ ಗಂಡರ್|| ೮೦||

ಪದ್ಯ-೮೦:ಪದವಿಭಾಗ-
ಅರ್ಥ:(ಅರ್ಜುನನನ್ನು

ಕುರಿತು ಹೀಗೆಂದನು)
ಸಂಗತದಿಂ (ಎಲ್ಲರೂ ಒಟ್ಟಿಗೆ
ಸೇರಿರುವುದರಿಂದ) ಈಗಳು
ಇಂತು ಈ ರಂಗಮೆ
ರಣರಂಗಂ ಆಗೆ ಕಾದುವಂ
(ಯುದ್ಧಮಾಡೋಣ)
ಅಳವಂ(ಪ್ರತಾಪವನ್ನು)
ಪೊಂಗದಿರ್
(ಹೊಂದಬೇಡ)ಇದಿರ್ಚು
(ಎದುರಿಸು) ಅದೇಂಗಳ
(ಅದೇನು? ಕೇವಲ

ಪ್ರದರ್ಶನ) ರಂಗಂ ಬೊಕ್ಕು ಆಡುವಂತೆ ಪೆಂಡಿರೆ (ನಾಟ್ಯರಂಗವನ್ನು ಹೊಕ್ಕು ಕುಣಿಯಲು ಹೆಂಗಸರೇ?) ಗಂಡರ್ (ಗಂಡಸರು,- ಯುದ್ಧಮಾಡಬೇಕು)

ಪದ್ಯ-೮೦:ಅರ್ಥ:ಇಲ್ಲಿ ಎಲ್ಲರೂ ಒಟ್ಟಿಗೆ ಸೇರಿರುವುದರಿಂದ ಈ ವ್ಯಾಯಾಮರಂಗವೇ ರಣರಂಗವಾಗಿರಲು

ಯುದ್ಧಮಾಡೋಣ.
ಪ್ರತಾಪದಿಂದ
ಅಹಂಕಾರಪಡದೇ ಇದಿರಿಸು.
ಅದೇನು? ಕೇವಲ ಪ್ರದರ್ಶನ;
ನಾಟ್ಯರಂಗವನ್ನು ಹೊಕ್ಕು
ಕುಣಿಯಲು ಹೆಂಗಸರೇ?
ಶೂರರುಗಂಡಸರು,-
ಯುದ್ಧಮಾಡಬೇಕು.

ವ||

ಎಂಬುದುಮತಿರಥಮಥನನಿಂ

ತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಅತಿರಥಮಥನನು

ಎಂತೆಂದಂ-

ವಚನ:ಅರ್ಥ:ಎನ್ನಲು ಅದಕ್ಕೆ

ಅತಿರಥರನ್ನು ಸೋಲಿಸುವ

ಅರ್ಜುನನು ಹೀಗೆಂದನು.

ಕಂ|| ಈ ನೆರೆದ ಗುರುಜನಂಗಳ

ಮಾನಿನಿಯರ ಮುಂದೆ ಕರ್ಣ

ಪೊಲ್ಲದು ನುಡಿದೈ|

ನೀನೆನ್ನೀ ನಿಡುದೋಳ್ಗಳ

ತೀನಂ ಮೞ್ಗಿಸುವೆಯಪ್ಪೊಡಾನೊಲ್ಲದನೇ|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ಎಲ್ವೈ ಕರ್ಣನೇ, ಈ ನೆರೆದ ಗುರುಜನಂಗಳಂ ಮಾನಿನಿಯರ (ಗರುಹಿರಿಯರ ಸ್ತ್ರೀಯರ) ಮುಂದೆ ಕರ್ಣ ಪೊಲ್ಲದು (ಕೆಟ್ಟದ್ದು) ನುಡಿದ್ಯೆ| ನೀನು ಎನ್ನ ಈ ನಿಡುದೋಳ್ಗಳ ತೀನಂ (ನೀನು ನನ್ನ

ದೀರ್ಘವಾದ ತೋಳುಗಳ ತೀಟೆಯನ್ನು) ಮಟ್ಗಿಸುವೆಯಪ್ಪೊಡೆ (ಹೋಗಲಾಡಿಸುವೆಎಯಾದರೆ) ಆನು ಒಲ್ಲದನೇ (ನಾನು ಬೇಡವೆನ್ನುತ್ತೇನೆಯೇ)

ಪದ್ಯ-೮೧:ಅರ್ಥ:
ಅರ್ಜುನನು, 'ಕರ್ಣ ನೀನು ಇಲ್ಲಿ ಸೇರಿರುವ ಗರುಹಿರಿಯರ ರಾಣಿವಾಸದ ಸ್ತ್ರೀಯರ ಮುಂದೆ ಕೆಟ್ಟ

ಮಾತನ್ನಾಡಿದ್ದೀಯೆ. ನೀನು ನನ್ನ ದೀರ್ಘವಾದ ತೋಳುಗಳ ತೀಟೆಯನ್ನು ಹೋಗಲಾಡಿಸುವುದಾದರೆ ನಾನು ಬೇಡವೆನ್ನುತ್ತೇನೆಯೇ?,' ಎಂದನು

ವ|| ಎಂಬುದುಂ ದ್ರೋಣನುಂ ಕೃಪನುಮೆಡೆಗೆ ವಂದು ಕರ್ಣನನಿಂತೆಂದರ್-

ವಚನ:ಪದವಿಭಾಗ-

ಅರ್ಥ:ಎಂಬುದುಂ

(ಹೇಳಲಾಗಿ) ದ್ರೋಣನುಂ ಕೃಪನುಂ ಎಡೆಗೆ ವಂದು (ಬಂದು) ಕರ್ಣನನು ಇಂತೆಂದರ್-

ವಚನ:ಅರ್ಥ:ಅರ್ಜುನನು ಹೀಗೆ ಎನ್ನಲು, ದ್ರೋಣನು ಮತ್ತ ಕೃಪನು, ಕರ್ಣನ ಮಧ್ಯೆ ಪ್ರವೇಶಿಸಿ ಕರ್ಣನಿಗೆ ಹೀಗೆ ಹೇಳಿದರು.

ಕಂ|| ಏವದ ಮುಳಿಸಿನ ಕಾರಣ

ಮಾವುದೊ ನೀಂ ನಿನ್ನ ತಾಯ ತಂದೆಯ ದೆಸೆಯಂ|
ಭಾವಿಸದೆ ಕರ್ಣ ನುಡಿವಂ
ತಾವುದು ಸಮಕಟ್ಟು
ನಿನಗಮರೀಕೇಸರಿಗಂ|| ೮೨||

ಪದ್ಯ-೮೨:ಪದವಿಭಾಗ-ಅರ್ಥ:ಏವದ ಮುಳಿಸಿನ ಕಾರಣಂ ಆವುದೊ, ನೀಂ ನಿನ್ನ ತಾಯ ತಂದೆಯ ದೆಸೆಯಂ (ಸ್ಥಿತಿಯನ್ನು ಅಂತಸ್ತನ್ನು, -ದಿಕ್ಕು?) ಭಾವಿಸದೆ

(ಯೋಚಿಸದೆ) ಕರ್ಣ ನುಡಿವಂತೆ (ಹೇಳಿದಂತೆ ಆಗಿದೆ.) ಆವುದು ಸಮಕಟ್ಟು (ಸಮಾನತೆ) ನಿನಗಂ ಅರೀಕೇಸರಿಗಂ/ ಅರ್ಜುನನಿಗೂ

ಪದ್ಯ-೮೨:ಅರ್ಥ:.ದ್ರೋಣ ಕೃಪರು ಕರ್ಣನಿಗೆ ಹೇಳಿದರು: (ನಿನ್ನ) ಅಸಮಾಧಾನ ಕೋಪಕ್ಕೆ ಕಾರಣವೇನು? ನಿನ್ನ ತಾಯಿ ತಂದೆಯ ಸ್ಥಿತಿಯನ್ನು

ಅಂತಸ್ತನ್ನು,ಯೋಚಿಸದೆ ಕರ್ಣ
ಹೇಳಿದಂತೆ ಆಗಿದೆ.
ಅರಿಕೇಸರಿಗೂ/
ಅರ್ಜುನನಿಗೂ ನಿನಗೂ
ಯಾವ ಸಮಾನತೆಯಿದೆ?
(ಸಮಾನರಲ್ಲಿ ಸೆಣಸಬೇಕು ;
ಕರ್ಣ ಸೂತನ ಮಗ,
ಆದ್ದರಿಂದ ದ್ವಂದ್ವ ಯುದ್ಧ
ಸರಿಯಲ್ಲ)

ವ|| ಎಂಬುದುಮಾ ಮಾತಿಂಗೆ ಮಱುವಾತುಗುಡಲಱಿಯದೆ

ಪಂದೆಯಂ ಪಾವಡರ್ದಂತುಮ್ಮನೆ ಬೆಮರುತ್ತುವಿರ್ದ ಕರ್ಣನಂ ದುರ್ಯೋಧನಂ ಕಂಡು ದ್ರೋಣನುಮಂ ಕೃಪನುಮನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ ಮಾತಿಂಗೆ ಮಱುವಾತುಗುಡಲು ಅಱಿಯದೆ

(ಮರುಮಾತಾಡಲು ತಿಳಿಯದೆ) ಪಂದೆಯಂ ಪಾವು ಅಡರ್ದಂತು (ಹೇಡಿಯನ್ನು ಹಾವು ಹತ್ತಿದ ಹಾಗೆ) ಉಮ್ಮನೆ ಬೆಮರುತ್ತುಂ ಇರ್ದ ಕರ್ಣನಂ ದುರ್ಯೋಧನಂ ಕಂಡು ದ್ರೋಣನುಮಂ ಕೃಪನುಮಂ ಇಂತೆಂದಂ-

ವಚನ:ಅರ್ಥ:ಎನ್ನಲು ಆ ಮಾತಿಗೆ ಮರುಮಾತಾಡಲು ತಿಳಿಯದೆ, ಹೇಡಿಯನ್ನು

ಹಾವು ಹತ್ತಿದ ಹಾಗೆ ಸುಮ್ಮನೆ
ಬೆವರಿ ನಿಂತಿದ್ದ ಕರ್ಣನನ್ನು
ದುರ್ಯೋಧನನು ನೋಡಿ
ದ್ರೋಣನನ್ನೂ ಕೃಪನನ್ನೂ
ಕುರಿತು ಹೀಗೆಂದನು-

ಕಂ|| ಕುಲಮೆಂಬುದುಂಟೆ
ಬೀರಮೆ|
ಕುಲಮಲ್ಲದೆ ಕುಲಮನಿಂತು
ಪಿಕ್ಕದಿರಿಂ ನೀ|
ಮೊಲಿದೆಲ್ಲಿ ಪುಟ್ಟ ಬಳೆದಿರೊ|

ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ|| ೮೩||

ಪದ್ಯ-೮೩:ಪದವಿಭಾಗ-ಅರ್ಥ: ಕುಲಮೆಂಬುದುಂಟೆ, ಬೀರಮೆ ಕುಲಮಲ್ಲದೆ (ಶೌರ್ಯವೇ ಕುಲವಲ್ಲದೆ) ಕುಲಮನು ಇಂತು ಪಿಕ್ಕದಿರಿಂ (ಕರ್ಣನ ಕುಲವನ್ನೂ ಬಿಡಿಸಿ ಹಿಕ್ಕಬೇಡಿ,- ನೋಡಬೇಡಿ); ನೀಂ ಒಲಿದು ಎಲ್ಲಿ ಪುಟ್ಟ ಬಳೆದಿರೊ ಕುಲಂ ಇರ್ದುದೆ

(ನೀವು ಪ್ರೀತಿಯಿಂದ ಹುಟ್ಟಿ ಬೆಳದಿರೋ ಅಲ್ಲಿ ಕುಲವಿದ್ದಿತೇ?) ಕೊಡದೊಳಂ ಶರಸ್ತಂಬದೊಳಂ- (ನೀವು ಹುಟ್ಟಿದ -ಕಲಶದಲ್ಲಿ, ಜೊಂಡು ಹುಲ್ಲಿನಲ್ಲಿ).

ಪದ್ಯ-೮೩:ಅರ್ಥ:ಶೌರ್ಯವೇ ಕುಲವಲ್ಲದೆ ಬೇರೆ ಕುಲವೆಂಬುದು ಉಂಟೇ? ಕರ್ಣನ ಕುಲವನ್ನೂ ಬಿಡಿಸಿ ಹಿಕ್ಕಬೇಡಿ,- ನೋಡಬೇಡಿ;

ನೀವು ಪ್ರೀತಿಸಿ ಎಲ್ಲಿ ಹುಟ್ಟಿ ಬೆಳೆದಿರಿ? ಕಲಶದಲ್ಲಿಯೂ ಜೊಂಡಿನ ರಾಶಿಯಲ್ಲಿಯೂ ಕುಲವಿದ್ದಿತೆ?

ಪದ್ಯ-:೮೪:

ಕರ್ಣ ಅಂಗರಾಜ್ಯದ ಅಧಿಪತಿಯಾದುದು:

ವ|| ಎಂದು ನುಡಿದು ಕರ್ಣನನೀಗಳೆ ಕುಲಜನಂ ಮಾಡಿ ತೋರ್ಪೆನೆಂದು ಕೈಯ್ಯಂ ಪಿಡಿದೊಡಗೊಂಡು

ಪೋಗಿ ಕನಕಪೀಠದ ಮೇಲೆ ಕುಳ್ಳಿರಿಸಿ ಕನಕಕಳಶದಲ್ ತೀವಿದಗಣ್ಯಪುಣ್ಯ ತೀರ್ಥೋದಕಂಗಳಂ ಚತುರ್ವೇದಪಾರಗರಿಂದಭಿಷೇಕಂಗೆಯ್ಸಿ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದು ಕರ್ಣನನು ಈಗಳೆ ಕುಲಜನಂ ಮಾಡಿ ತೋರ್ಪೆನೆಂದು(ಕರ್ಣನನ್ನೂ

ಈಗಲೇ ಕುಲಜನನ್ನಾಗಿ ಮಾಡಿ
ತೋರಿಸುತ್ತೇನೆ ಎಂದು)
ಕೆಯ್ಯಂ ಪಿಡಿದು ಒಡಗೊಂಡು
ಪೋಗಿ (ಕಯ್ಯನ್ನು ಹಿಡಿದು
ಜೊತೆಗೆ ಹೋಗಿ),
ಕನಕಪೀಠದ (ಚಿನ್ನದ ಪೀಠ)
ಮೇಲೆ ಕುಳ್ಳಿರಿಸಿ
ಕನಕಕಳಶದಲ್ ತೀವಿದ
ಅಗಣ್ಯಪುಣ್ಯ
ತೀರ್ಥೋದಕಂಗಳಂ

ಚತುರ್ವೇದಪಾರಗರಿಂದ
ಅಭಿಷೇಕಂ ಗೆಯ್ಸಿ (ಮಾಡಿಸಿ)-
ವಚನ:ಅರ್ಥ:ಎಂದು ಹೇಳಿ,
ಕರ್ಣನನ್ನೂ ಈಗಲೇ
ಕುಲಜನನ್ನಾಗಿ ಮಾಡಿ
ತೋರಿಸುತ್ತೇನೆ ಎಂದು
ಕರ್ಣನ ಕಯ್ಯನ್ನು
ಹಿಡಿದುಕೊಂಡು ಹೋಗಿ
ಚಿನ್ನದ ಪೀಠದ ಮೇಲೆ
ಕುಳ್ಳಿರಿಸಿ ಚಿನ್ನದ ಕಳಶದಲ್ಲಿ
ತುಂಬಿದ್ದ ಅಸಂಖ್ಯ

ಪುಣ್ಯತೀರ್ಥೋದಕಗಳಿಂದ ನಾಲ್ಕು ವೇದಗಳಲ್ಲಿ ಪ್ರವೀಣರಾದ ಪಂಡಿತರಿಂದ ಅಭಿಷೇಕಮಾಡಿಸಿದನು (ಮಾಡಿಸಿ).

ಕಂ|| ಮಂಗಳವರೆಗಳ್ ಶುಭ
ವಚ
ನಂಗಳ್ ಚಮರೀರುಹಂಗಳಾ
ಶ್ವೇತಚ್ಛ|
ತ್ರಂಗಳಮರ್ದೆಸಯೆ ಕರ್ಣಂ

ಗಂಗಮಹೀತಳ ವಿಭೂತಿಯಂ ನೆರೆಯಿತ್ತಂ|| ೮೪||

ಪದ್ಯ-೮೪:ಪದವಿಭಾಗ-ಅರ್ಥ:ಮಂಗಳವಗಳ್ ಶುಭ ವಚನಂಗಳ್ ಚಮರೀರುಹಂಗಳು ಆ ಶ್ವೇತಚ್ಛತ್ರಂಗಳುಂ ಅಮರ್ದು ಎಸಯೆ (ಸೇರಿ ಶೋಭಿಸುತ್ತಿರಲು) ಕರ್ಣಂಗೆ ಅಂಗಮಹೀತಳ (ಅಂಗ

ರಾಜ್ಯದ) ವಿಭೂತಿಯಂ ನೆರೆಯಿತ್ತಂ

ಪದ್ಯ-೮೪:ಅರ್ಥ:ಮಂಗಳ ವಾದ್ಯಗಳು ಮತ್ತು ಒಳ್ಳೆಯ ಸ್ವಸ್ತಿವಾಚನಗಳು ಚಾಮರಗಳು ಬಿಳಿಯ ಕೊಡೆಗಳು ಒಟ್ಟಿಗೆ ಸೇರಿ ಶೋಭಿಸುತ್ತಿರಲು ಕರ್ಣನಿಗೆ ಅಂಗರಾಜ್ಯದ ವೈಭವವನ್ನು ಸಂಪೂರ್ಣವಾಗಿ ಕೊಟ್ಟನು.

ವ|| ಅಂತಿತ್ತು ನಿತ್ಯದಾನಕ್ಕೆ ದೇವ ಸಬಳದ ಪದಿನೆಂಟು ಕೋಟಿ ಪೊನ್ನುಮನಿತ್ತು ನೀನೆನಗೊಂದನೀಯಲ್ವೇೞ್ಪು ದೆಂದು-

ವಚನ:ಪದವಿಭಾಗ-

ಅರ್ಥ:ಅಂತು ಇತ್ತು (ಹಾಗೆ ಕೊಟ್ಟು) ನಿತ್ಯದಾನಕ್ಕೆ ದೇವ ಸಬಳದ ಪದಿನೆಂಟು ಕೋಟಿ ಪೊನ್ನುಮನಿತ್ತು ನೀನು ಎನಗೊಂದನು

ಈಯಲ್ವೇಟ್ಟಿದೆಂದು (
ಈಯಲ್ ಏಟ್ಟಿದು ಎಂದು)-
ವಚನ:ಅರ್ಥ:ಹಾಗೆ ಕೊಟ್ಟು
ಪ್ರತಿನಿತ್ಯದ ದಾನಕ್ಕಾಗಿ ದೇವ-
ಅಳತೆಯಲ್ಲಿ
ಹದಿನೆಂಟುಕೋಟಿ
ಸುವರ್ಣನಾಣ್ಯಗಳನ್ನೂ
ಕೊಟ್ಟು, ನೀನು ನನಗೊಂದನ್ನು
ಅನುಗ್ರಹಿಸಬೇಕು ಎಂದನು.
ಅದೇನೆಂದರೆ:

ಕಂ|| ಪೊಡಮಡುವರ್
ಜೀಯೆಂಬರ್
ಕುಡು ದಯೆಗೆಯ್ಯೆಂ
ಪ್ರಸಾದಮೆಂಬಿವು
ಪೆಱರೊಳ್|
ನಡೆಗೆಮ್ಮ ನಿನ್ನಯೆಡೆಯೊಳ್
ನಡೆಯಲ್ವೇಡೆನಗೆ ಕೆಳೆಯನ್ನೈ
ರಾಧೇಯಾ|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ:ಪೊಡಮಡುವರ್, ಜೀಯೆಂಬರ್, ಕುಡು,

ದಯೆಗೆಯ್ಯೇಂ, ಪ್ರಸಾದಂ, ಎಂಬಿವು ಪೆಱರೊಳ್(ಇವು ಇತರರಲ್ಲಿ) ನಡೆಗೆಮ್ಮ ನಿನ್ನ -ಯೆಡೆಯೊಳ್ ನಡೆಯಲ್ವೇಡ, ಎನಗೆ ಕೆಳೆಯನ್ನೈ ರಾಧೇಯಾ

ಪದ್ಯ-೮೫:ಅರ್ಥ:ಎಲ್ಲೈ ರಾಧೇಯನೇ ಇತರರು ನನಗೆ ನಮಸ್ಕಾರ ಮಾಡುತ್ತಾರೆ; ಸ್ವಾಮಿ ಎನ್ನುತ್ತಾರೆ; ಕೊಡಿ, ದಯಪಾಲಿಸಿ, ಏನು ಪ್ರಸಾದ ಎನ್ನುತ್ತಾರೆ. ಇವೆಲ್ಲ ಇತರರಲ್ಲಿ

ನಡೆಯಲಿ; ನಿನ್ನ ನನ್ನ
ವ್ಯವಹಾರದಲ್ಲಿ ಬೇಡ, ನೀನು
ನನಗೆ ಗೆಳೆಯನಯ್ಯಾ
ರಾಧೇಯಾ, ಎಂದನು
ದುರ್ಯೋಧನ.

ವ|| ಎಂದು ಬೇಡಿಕೊಂಡು ಕರ್ಣನಂ ಮುಂದಿಟ್ಟೊಡಗೊಂಡು ಪೋಗಿ ಧೃತರಾಷ್ಟ್ರಂಗಂ ಗಾಂಧಾರಿಗಂ ಪೊಡಮಡಿಸಿದಾಗಳ್-

ವಚನ:ಪದವಿಭಾಗ-ಅರ್ಥ:ಎಂದು ಬೇಡಿಕೊಂಡು ಕರ್ಣನಂ ಮುಂದೆ ಇಟ್ಟು ಒಡಗೊಂಡು ಪೋಗಿ (ಜೊತೆಗೂಡಿ ಒಟ್ಟಿಗೆ ಹೋಗಿ)ಧೃತರಾಷ್ಟ್ರಂಗಂ ಗಾಂಧಾರಿಗಂ ಪೊಡಮಡಿಸಿದಾಗಳ್ (ನಮಸ್ಕಾರಮಾಡಿಸಿದಾಗ)-**ವಚನ:ಅರ್ಥ**:ಎಂದು ಬೇಡಿಕೊಂಡು ಕರ್ಣನನ್ನು

ಮುಂದಿರಿಸಿಕೊಂಡು ಹೋಗಿ
ಧೃತರಾಷ್ಟ್ರನಿಗೂ
ಗಾಂಧಾರಿಗೂ ನಮಸ್ಕಾರ
ಮಾಡಿಸಿದನು-
(ನಮಸ್ಕಾರಮಾಡಿಸಿದಾಗ).

**ಉ|| ಇಂತು ಸುಯೋಧನಂ
ನಿನಗೆ ಮಾಡಿದ
ರಾಜ್ಯವಿಭೂತಿಗುಂತೆ ಮು
ಯ್ಯಾಂತಿರದಿರ್
ಗುಣಾರ್ಣವನಿನಸ್ತಮಯಕ್ತಿದು
ಸಾಲ್ಗುವೀಗಳೆಂ|**

ಬಂತೆವೊಲಂದು

ಮುಂದಱಿದು ತನ್ನ ಮಗಂಗೆ

ಸಮಂತು ಬುದ್ಧಿವೇ

ೞ್ವಂತೆವೊಲತ್ತಲಸ್ತಗಿರಿಯಂ

ಮರೆಗೊಂಡುದು

ಸೂರ್ಯಮಂಡಲಂ|| ೮೬ ||

ಪದ್ಯ-೮೬:ಪದವಿಭಾಗ-

ಅರ್ಥ:ಇಂತು ಸುಯೋಧನಂ

ನಿನಗೆ ಮಾಡಿದ

ರಾಜ್ಯವಿಭೂತಿಗುಂತೆ

ಮುಯ್ವಾಂತಿರದಿರ್

(ರಾಜ್ಯವೈಭವಕ್ಕೆ
ಉಬ್ಬಿಹೋಗಬೇಡ)
ಗುಣಾರ್ಣವನಿಂ
ಅಸ್ತಮಯಕ್ಕೆ ಇದು ಸಾಲ್ದುಂ
ಈಗಳು ಎಂಬಂತೆವೊಲ್
ಅಂದು ಮುಂದಱಿದು
(ಭವಿಷ್ಯವನ್ನು ತಿಳಿದು) ತನ್ನ
ಮಗಂಗೆ ಸಮಂತು
ಬುದ್ಧಿವೇಳ್ವಂತೆವೊಲ್
(ಬುದ್ಧಿಹೇಳುವಂತೆ) ಅತ್ತಲ್
ಅಸ್ತಗಿರಿಯಂ (ಆ ಕಡೆ

ಪಶ್ಚಿಮದ ಅಸ್ತಗಿರಿಯನ್ನು)
ಮರೆಗೊಂಡುದು
ಸೂರ್ಯಮಂಡಲಂ(ಸೂರ್ಯ
ನು ಮುಳುಗಿದನು)
ಪದ್ಯ-೮೬:ಅರ್ಥ: 'ಹೀಗೆ
ದುರ್ಯೋಧನನು ಮಾಡಿದ
ರಾಜ್ಯವೈಭವಕ್ಕೆ
ಉಬ್ಬಿಹೋಗಬೇಡ.
ಗುಣಾರ್ಣವನಿಂದ/
ಅರ್ಜುನನಿಂದ ನೀನು
ಸಾಯುವುದಕ್ಕೆ ಈಗ ಇಷ್ಟೇ

ಸಾಕು’ ಎಂದು ಸೂರ್ಯನು ಮುಂದೆ ಆಗುವುದನ್ನು ಇಂದೇ ಪೂರ್ಣವಾಗಿ ಬುದ್ಧಿ ಹೇಳುವ ಹಾಗೆ ಅಸ್ತನಾದನು (ಸೂರ್ಯಮಂಡಲವು ಅಸ್ತಪರ್ವತದ ಹಿಂದೆ ಮರೆಗೊಂಡಿತು).

ವ|| ಆಗಳ್ ದುರ್ಯೋಧನನಂ ಮುಂದಿಟ್ಟೊಡಗೊಂಡು ಧೃತರಾಷ್ಟ್ರ ಕರ್ಣ ಶಲ್ಯ ಶಕುನಿ ಸೈಂಧವ ಪ್ರಭೃತಿಗಳ್ ನೆಲಂ

ಮೂರಿವಿಟ್ಟಂತೆ
ಸಭಾಕ್ಷೋಭಮಾಗೆ ತಳರ್ದು
ನಾನಾವಿಧ ವಾಹನಂಗಳನು
ಏಱಿ ನಿಜನಿವಾಸಂಗಳ್ಗೆ
ಪೋದರಿತ್ತ ಧರ್ಮಪುತ್ರನಂ
ಮುಂದಿಟ್ಟು ಭೀಮಾರ್ಜುನ
ನಕುಲ ಸಹದೇವರುಂ
ಗಾಂಗೇಯ ದ್ರೋಣ ಕೃಪ
ವಿದುರ ಪ್ರಭೃತಿಗಳ್
ನಾನಾವಿಧ
ವಾಹನಂಗಳನೇಱಿ ಬರೆ

ಪುರಜನಂಗಳೆಲ್ಲಮೋರೋರ್

ವರನೆ ಪಿಡಿಯಚ್ಚುವಿಡಿದು

ನುಡಿಯೆ

ಕೆಲರನಾಗತಮನಱಿವ

ಬುದ್ಧಿಯೊಡೆಯರಿಂತೆಂಬರ್

ವಚನ:ಪದವಿಭಾಗ-

ಅರ್ಥ:ಆಗಳ್

ದುರ್ಯೋಧನನಂ

ಮುಂದಿಟ್ಟೊಡಗೊಂಡು

ಧೃತರಾಷ್ಟ್ರ ಕರ್ಣ ಶಲ್ಯ ಶಕುನಿ

ಸೈಂಧವ ಪ್ರಭೃತಿಗಳ್

(ರಾಜರು) ನೆಲಂ
ಮೂರಿವಿಟ್ಟಂತೆ (ನೆಲವು
ಬಾಯಿಬಿಟ್ಟಂತೆ)
ಸಭಾಕ್ಷೋಭಮಾಗೆ ತಳರ್ದು
(ಹೊರಟು)ನಾನಾವಿಧ
ವಾಹನಂಗಳನು ಏಱಿ (ಏರಿ)
ನಿಜನಿವಾಸಂಗಳ್ಗೆ ಪೋದರು
(ತಮ್ಮ ಮನೆಗಳಿಗೆಹೋದರು).
ಇತ್ತ ಧರ್ಮಪುತ್ರನಂ
ಮುಂದಿಟ್ಟು ಭೀಮಾರ್ಜುನ
ನಕುಲ ಸಹದೇವರುಂ

ಗಾಂಗೇಯ ದ್ರೋಣ ಕೃಪ
ವಿದುರ ಪ್ರಭೃತಿಗಳ್
ನಾನಾವಿಧ ವಾಹನಂಗಳನು
ಏಱಿ ಬರೆ, (ಬರಲು)
ಪುರಜನಂಗಳೆಲ್ಲಂ
ಓರೋರ್ವರನೆ (ಒಬ್ಬಬ್ಬರನ್ನೇ)
ಪಿಡಿಯಚ್ಚುವಿಡಿದು (ಅವರ
ಲಾಂಚನ ಹಿಡಿದು
ಮಾತನಾಡಲು) ನುಡಿಯೆ
ಕೆಲರು ಅನಾಗತಮನು
ಅಱಿವ (ಮುಂದೆ

ಆಗುವುದನ್ನು ತಿಳಿಯುವ) ಬುದ್ಧಿಯೊಡೆಯರ್ ಅರಿತೆಂಬರ್(ಬುದ್ಧಿಯುಳ್ಳವರು ಕೆಲವರು ಹೀಗೆಂದರು)

ವಚನ:ಅರ್ಥ: ಆಗ ದುರ್ಯೋಧನನನ್ನು ಮುಂದಿಟ್ಟುಕೊಂಡು ದೃತರಾಷ್ಟ್ರ, ಕರ್ಣ, ಶಲ್ಯ, ಶಕುನಿ, ಸೈಂಧವ, ಮೊದಲಾದವರು ನೆಲ ಬಾಯಿಬಿಡುವಹಾಗೆ

ಸಭಾಮಂಟಪವು
ಕಲಕಿಹೋಗುವಂತೆ
ಹೊರಹೊರಟು
ನಾನಾವಿಧವಾದ
ವಾಹನಗಳನ್ನು ಹತ್ತಿಕೊಂಡು
ತಮ್ಮ ಮನೆಗಳಿಗೆ ಹೋದರು.
ಈ ಕಡೆ ಧರ್ಮರಾಜನನ್ನು
ಮುಂದಿಟ್ಟುಕೊಂಡು
ಭೀಮಾರ್ಜುನ ನಕುಲ
ಸಹದೇವರೂ ಭೀಷ್ಮ
ದ್ರೋಣ, ಕೃಪ, ವಿದುರರೇ

ಮೊದಲಾದವರೂ
ಬಗೆಬಗೆಯ ವಾಹನಗಳನ್ನು
ಹತ್ತಿ ಬರುತ್ತಿರಲು
ಪಟ್ಟಣದವರೆಲ್ಲ
ಒಬ್ಬೊಬ್ಬರನ್ನೂ ಅವರ
ಲಾಂಚನ ಹಿಡಿದು
ಮಾತನಾಡಲು (ಪ್ರತ್ಯೇಕವಾದ
ಸಂಕೇತಗಳಿಂದ ಗುರುತಿಸಿ
ಮಾತನಾಡುತ್ತಿರಲು) ಅವರಲ್ಲಿ
ಭವಿಷ್ಯಜ್ಞಾನ

ಬುದ್ಧಿಯುಳ್ಳವರು ಕೆಲವರು ಹೀಗೆಂದರು-

ಚಂ||

ಅವರಿವರನ್ನರಿನ್ನರೆನವೇಡರಿ

ಕೇಸರಿಗಾಂಪನಿಲ್ಲ ಮೀ

ಱುವ ತಲೆದೋರ್ಪ

ಗಂಡರಣಮಿಲ್ಲೆಡೆಯೊಳ್

ಗೆಡೆವಚ್ಚುಗೊಂಡು ಪಾಂ|

ಡವರನಕಾರಣಂ ಕೆಣಕಿದೀ

ಪೊಸ ಪೊಟ್ಟಿರೊಳಾದ ಕಿರ್ಚು

ಕಾ

ರವರ್ಗಿದು ನಾಡೆಯುಂ ತಿಣುಕನಾಗಿಸದೇಂ ಗಳ ಸಯ್ತು ಪೋಕುಮೇ|| ೮೭

ಪದ್ಯ-೮೭:ಪದವಿಭಾಗ-ಅರ್ಥ:ಅವರು ಇವರು ಅನ್ನರು ಇನ್ನರು ಎನವೇಡ (ಅವರು ಇವರು ಅಂತಹವರು ಇಂತಹವರು ಎನ್ನಬೇಡ.) ಅರಿಕೇಸರಿಗೆ ಆಂಪನಿಲ್ಲ (ಅರಿಕೇಸರಿಯನ್ನು/ ಅರ್ಜುನನ್ನು

ಎದುರಿಸುವವರು ಯಾರೂ
ಇಲ್ಲ.) ಮೀಱುವ (ಆಜ್ಞೆಯನ್ನು
ಮೀರಿ) ತಲೆದೋರ್ಪ
(ಎದುರಿಸುವ) ಗಂಡರು ಅಣಂ
(ಯಾರೂ) ಇಲ್ಲ. ಎಡೆಯೊಳ್
(ನಡುವೆ) ಗೆಡೆವಚ್ಚುಗೊಂಡು
(ಜೋಡಿ ಮುರಿದುಹೋಗಿ)
ಪಾಂಡವರನು ಅಕಾರಣಂ
ಕೆಣಕಿದ ಈ ಪೊಸ
ಪೊಟ್ಟಿರೊಳ್ ಆದ ಕಿರ್ಚು
(ಕೆಣಕಿದ ಈ ಹೊಸ

ಹೊತ್ತಿನಲ್ಲಿ ಉಂಟಾದ ಬೆಂಕಿಯು) ಕೌರವರಿಗೆ ಇರ್ದು(ಇದು) ನಾಡೆಯುಂ (ವಿಶೇಷವಾಗಿ)ತಿಣುಕನು ಆಗಿಸದೆ ಏಂಗಳ (ಕಷ್ಟವನ್ನು ಆಗಿಸದೆ ಎಂದಾದರೂ?) ಸಯ್ಯು ಪೋಕುಮೇ (ಸುಮ್ಮನೇ ಹೋಗುವುದೇ)

ಪದ್ಯ-೮೭:ಅರ್ಥ:ಅವರು ಇವರು ಅಂತಹವರು ಇಂತಹವರು ಎನ್ನಬೇಡ.

ಅರಿಕೇಸರಿಯನ್ನು ಎದುರಿಸುವವರು ಯಾರೂ ಇಲ್ಲ. ಅರ್ಜುನನ ಆಜ್ಞೆಯನ್ನು ಮೀರಿ ಅವನನ್ನು ಪ್ರತಿಭಟಿಸುವ ವೀರರು ಯಾರೂ ಇಲ್ಲ. ಇಬ್ಬರಿಗೂ ಸಮಾನವಾಗಿದ್ದ ಒಡನಾಟ ಮುರಿದುಹೋಗಿ, ಪಾಂಡವರನ್ನು ಕಾರಣವಿಲ್ಲದೆ ಕೆಣಕಿದ ಈ ಹೊಸ ಹೊತ್ತಿನಲ್ಲಿ ಉಂಟಾದ ಬೆಂಕಿಯು

(ಮನಸ್ತಾಪವು) ಕೌರವರಿಗೆ ವಿಶೇಷವಾದ ಕಷ್ಟವನ್ನು ಉಂಟುಮಾಡದೇ ಸುಮ್ಮನೇ ಹೋಗುವುದೇ?

ವ||

ಎಂದೊರ್ವರೊರ್ವರೊಂದೊಂದನೆ ನುಡಿಯುತ್ತುಂ ಪೋಗೆ ಬೆಳಗುವ ಕೈದೀವಿಗೆಗಳ್ ಕಟ್ಟಿಲೆಯಂ ತಲೆದೋಱಲೀಯದೆ ಪ್ರಚಂಡ ಮಾರ್ತಾಂಡನ

ತೇಜೋಂಕುರಂಗಳ್ ಬೆಳಗುವಂತೆ ಬೆಳಗೆ ಪಾಂಡವರ್ ನಿಜನಿವಾಸಕ್ಕೆ ಪೋದರಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ಓರ್ವರು ಓರ್ವರೂ ಒಂದೊಂದನೆ ನುಡಿಯತ್ತುಂ ಪೋಗೆ (ಹೋಗುತ್ತಿರಲು) ಬೆಳಗುವ ಕೈದೀವಿಗೆಗಳ್ ಕಟ್ಟಿಲೆಯಂ ತಲೆದೋಱಲು

ಈಯದೆ(ಅವಕಾಶ ಕೊಡದೆ)
ಪ್ರಚಂಡ ಮಾರ್ತಾಂಡನ
(ಸೂರ್ಯನ)
ತೇಜೋಂಕುರಂಗಳ್ (ತೇಜ
ಅಂಕುರಂಗಲ್-ಕಿರಣಗಳು)
ಬೆಳಗುವಂತೆ ಬೆಳಗೆ
ಪಾಂಡವರ್ ನಿಜನಿವಾಸಕ್ಕೆ
ಪೋದರು. ಆಗಳ್
(ಪಾಂಡವರು ತಮ್ಮ ನಿವಾಸಕ್ಕೆ
ಹೋದರು.)

ವಚನ:ಅರ್ಥ:ಎಂದು ಒಬ್ಬೊಬ್ಬರು ಒಂದೊಂದನ್ನು ಹೇಳುತ್ತ ಹೋಗುತ್ತಿರಲು, ಪ್ರಕಾಶಮಾನವಾಗಿದ್ದ ಕೈದೀವಿಗೆಗಳು ಕತ್ತಲೆಯ ಹರಡುವುದಕ್ಕೆ ಅವಕಾಶ ಕೊಡದೆ ಪ್ರಕಾಶಮಾನವಾದ ಸೂರ್ಯಕಿರಣಗಳ ಮೊಕಳೆಯಂತೆ ಬೆಳಗುತ್ತಿರಲು ಪಾಂಡವರು ತಮ್ಮ ನಿವಾಸಕ್ಕೆ ಹೋದರು. ಆಗ-

ಕಂ|| ಎಸೆವ ನಿಜವಂಶಮಂ ಪೆ

ರ್ಚಿಸುವ

ಗುಣಾರ್ಣವನೊಳುಂತೆ

ಸೆಣಸಲ್ಕೆಂದಿ|

ರ್ಪ ಸುಯೋಧನಂಗೆ

ಮುಳಿಸಿಂ

ಕಿಸುಗಣ್ಣಿದ

ತೆಱದಿನಮೃತಕರನುದಯಿಸಿ

ದಂ|| ೮೮||

ಪದ್ಯ-೮೮:ಪದವಿಭಾಗ-

ಅರ್ಥ:ಎಸೆವ ನಿಜವಂಶಮಂ

(ಪ್ರಕಾಶಿಸುವ ತನ್ನ
ವಂಶವನ್ನು) ಪೆರ್ಚಿಸುವ
(ಹೆಚ್ಚಿಸುವ)
ಗುಣಾರ್ಣವನೊಳು ಉಂತೆ
ಸೆಣಸಲ್ಕೆಂದಿರ್ಪ (ಸುಮ್ಮನೆ
ಹೋರಾಡಬೇಕೆಂದಿರುವ)
ಸುಯೋಧನಂಗೆ ಮುಳಿಸಿಂ
ಕಿಸುಗಣ್ಣಿದ ತೆಱದಿಂ
(ಕೋಪದಿಂದ ತನ್ನ ಕಣ್ಣನ್ನು
ಕೆರಳಿಸಿದ ರೀತಿಯಲ್ಲಿ)
ಅಮೃತಕರನು (ಚಂದ್ರನು)

ಉದಯಿಸಿದಂ (ಚಂದ್ರನು ಕೆಂಪಗೆ ಉದಯಿಸಿದನು/ ಕೆಂಪಗೆ ಮೂಡಿದನು)

ಪದ್ಯ-೮೮:ಅರ್ಥ:ಪ್ರಕಾಶಿಸುವ ತನ್ನ ವಂಶವನ್ನು ಅಭಿವೃದ್ಧಿಗೊಳಿಸುವ ಗುಣಾರ್ಣವ ಅರ್ಜುನನಲ್ಲಿ ಸುಮ್ಮನೆ ಹೋರಾಡಬೇಕೆಂದಿರುವ ದುರ್ಯೋಧನನಿಗೆ ಕೋಪದಿಂದ ತನ್ನ ಕಣ್ಣನ್ನು

ಕೆರಳಿಸಿದ ರೀತಿಯಲ್ಲಿ ಚಂದ್ರನು ಕೆಂಪಗೆ ಉದಯಿಸಿದನು.

ಪದ್ಯ;-:೮೯

ಪಾಂಡವರ ನಾಶಕ್ಕೆ ಕೌರವರ ಯೋಜನೆ:

ವ|| ಆಗಳ್ ದುರ್ಯೋಧನಂ ಭೀಮಸೇನನ ಬಲ್ಲಾಳ್ತನದಳವುಮಂವಿಕ್ರಮಾರ್ಜುನನ ದಿವ್ಯಾಸ್ತ್ರ ಕೌಶಳಮುಮಂ ಕಂಡು

ತನ್ನೆರ್ದೆಯುಂಪೊಳ್ಳುಮರನಂ

ಕಿರ್ಚಳುರ್ವಂತೊಳಗೊಳಗು

ಳುರೆ ಸೈರಿಸಲಾಱದೆ

ಕರ್ಣನಂಕರೆದಾಳೋಚಿಸಿ

ತಮ್ಮಯ್ಯನಲ್ಲಿಗೆ ಪೋಗಿ

ಪೊಡಮಟ್ಟು

ಕಟ್ಟೇಕಾಂತದೊಳಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್

ದುರ್ಯೋಧನಂ

ಭೀಮಸೇನನ ಬಲ್ಲಾಳ್ತನದ

ಅಳವುಮಂ (ಬಲಿಷ್ಠ ದೇಹದ ಶಕ್ತಿಯ ಪ್ರಮಾಣವನ್ನು) ವಿಕ್ರಮಾರ್ಜುನನ ದಿವ್ಯಾಸ್ತ್ರ ಕೌಶಳಮುಮಂ (ಕೌಶಲ್ಯವನ್ನೂ) ಕಂಡು ತನ್ನೆರ್ದೆಯುಂ (ತನ್ನ ಎರ್ದೆಂ -ಎದೆಯನ್ನು) ಪೊಳ್ಳುಮರನಂ (ಪೊಳ್ಳು-ಲಡ್ಡು ಮರವನ್ನು) ಕಿರ್ಚಳುರ್ವಂತೆ (ಕಿರ್ಚು-ಬೆಂಕಿ, ಅಳುರ್ವಂತೆ- ಸುಡುವಂತೆ) ಒಳಗೊಳಗೆ ಅಳುರೆ

(ವ್ಯಾಪಿಸಲು), ಸೈರಿಸಲಾಱದೆ ಕರ್ಣನಂ ಕರೆದು ಆಳೋಚಿಸಿ ತಮ್ಮ ಅಯ್ಯನಲ್ಲಿಗೆ ಪೋಗಿ (ತಮ್ಮ ತಂದೆಯ ಬಳಿ ಹೋಗಿ) ಪೊಡಮಟ್ಟು ಕಟ್ಟೇಕಾಂತದೊಳು (ನಮಿಸಿ, ಬಹಳ ಏಕಾಂತದಲ್ಲಿ)ಇಂತೆಂದಂ-

ವಚನ:ಅರ್ಥ:|| ಆಗ ದುರ್ಯೋಧನನು ಭೀಮಸೇನನ ಬಲಿಷ್ಠ ದೇಹದ

ಶಕ್ತಿಯ ಪ್ರಮಾಣವನ್ನು,
ಅರ್ಜುನನ
ದಿವ್ಯಾಸ್ತ್ರಕೌಶಲವನ್ನೂ,
ನೋಡಿ ಅವನ ಹೃದಯವು
ಪೊಳ್ಳುಮರವನ್ನು ಬೆಂಕಿಯು
ಸುಡುವಂತೆ ಒಳಗೊಳಗೆ
ವ್ಯಾಪಿಸಿರಲು, ಸಹಿಸಲಾರದೆ
ಕರ್ಣನನ್ನು ಕರೆದು
(ಅವನೊಡನೆ)
ಆಲೋಚನೆಮಾಡಿ ತನ್ನ
ತಂದೆಯಾದ ಧೃತರಾಷ್ಟ್ರನ

ಸಮೀಪಕ್ಕೆ ಹೋಗಿ
ನಮಸ್ಕಾರಮಾಡಿ ಬಹಳ
ರಹಸ್ಯವಾಗಿ ಏಕಾಂತದಲ್ಲಿ
ಹೀಗೆ ಹೇಳಿದನು-

**ಮ|| ಪಿರಿಯರ್ ನೀಮಿರೆ
ಪಾಂಡುರಾಜನೆ ವಲಂ ಮುಂ
ಪಟ್ಟಮಂ ಕಟ್ಟೆ ಭೂ
ಭರಮಂ ತಾಳ್ದಿದನೀಗಳಾತನ
ಸುತರ್ ತಾಮಾಗಳೇ
ಯೋಗ್ಯರಾ|**

ಗರೆ ಪಟ್ಟಕ್ಕೆ ತಗುಳ್ದು

ಪಾಲನೆರೆವಿರ್ ಪಾವಿಂಗೆ

ದಾಯಾದ್ಯರಂ

ಪಿರಿಯರ್ಮಾಡಿದಿರೆಮ್ಮ

ಸಾವುಮುೞಿವುಂ

ದೈವೇಚ್ಛೆಯಾಯ್ತಾಗದೇ|| ೬೯||

ಪದ್ಯ-೬೯:ಪದವಿಭಾಗ-

ಅರ್ಥ:ಪಿರಿಯರ್ ನೀಮಿರೆ (ಹಿರಿಯರಾದ ನೀವಿದ್ದರೂ) ಪಾಂಡುರಾಜನೆ ವಲಂ ಮುಂಪಟ್ಟಮಂ ಕಟ್ಟೆ

(ಮೊದಲು ಪಟ್ಟವನ್ನು
ಕಟ್ಟಲು) ಭೂಭರಮಂ
ತಾಳ್ದಿದನು,(ರಾಜ್ಯಭಾರವನ್ನು
ವಹಿಸಿದನು, ವಲಂ
-ಅಲ್ಲವೇ?.) ಈಗಳು ಆತನ
ಸುತರ್ ತಾಮಾಗಳೇ
ಯೋಗ್ಯರಾಗರೆ ಪಟ್ಟಕ್ಕೆ(ಈಗ
ಅವನ ಮಕ್ಕಳು ತಾವಾಗಲೇ
ಪಟ್ಟಕ್ಕೆ ಯೋಗ್ಯರಾಗರೇ?
ಆಗುವರು!) ತಗುಳ್ದು
ಪಾಲನೆವಿರ್ ಪಾವಿಂಗೆ (ಹಿಂದೆ

ಹೋಗಿ, ಹಾವಿಗೆ ಹಾಲು ಎರೆವಿರಿ) ದಾಯಾದ್ಯರಂ ಪಿರಿಯರ್ಮಾಡಿದಿರಿ (ದೊಡ್ಡವರನ್ನಾಗಿ ಮಾಡಿದಿರಿ); ಎಮ್ಮ ಸಾವುಂ ಉಬಿವುಂ ದೈವೇಚ್ಛೆಯಾಯ್ತಾಗದೇ

ಪದ್ಯ-೮೯:ಅರ್ಥ:.ಭೀಷ್ಮನು, 'ಹಿರಿಯರಾದ ನೀವಿದ್ದರೂ ಪಾಂಡುರಾಜನಿಗೆ ಮೊದಲು ಪಟ್ಟವನ್ನು ಕಟ್ಟಲು ಆತನು ರಾಜ್ಯಭಾರವನ್ನು ವಹಿಸಿದನು

ಅಲ್ಲವೇ?. ಈಗ ಅವರ ಮಕ್ಕಳು ತಾವಾಗಲೇ ಪಟ್ಟಕ್ಕೆ ಯೋಗ್ಯರಾಗುತ್ತಿಲ್ಲವೆ? (ನೀವು) ಬೆನ್ನಟ್ಟಿಕೊಂಡು ಹೋಗಿ ಹಾವಿಗೆ ಹಾಲನ್ನು ಎರೆಯುತ್ತಿದ್ದೀರಿ. ದಾಯಾದಿಗಳನ್ನು ದೊಡ್ಡವರನ್ನಾಗಿ ಮಾಡಿದಿರಿ. ನಮ್ಮ ಸಾವು ಬುದುಕುಗಳು ಈಗ ಅದೃಷ್ಟದಂತೆ/ ದೈವೇಚ್ಛೆಯಂತೆ ಆಗದೇ

ಇರುತ್ತದೆಯೇ’? ಬರುವುದಿಲ್ಲ ಎಂದೇ ಅರ್ಥ.(ಅಂದರೆ ರಾಜ್ಯವು ನಮಗೆ ಬಂದೇ ಬರುವುದೆಂಬ ನಂಬುಗೆಯಿಲ್ಲ.)

ವ|| ಅದಲ್ಲದೆಯುಂ-

ವಚನ:ಪದವಿಭಾಗ-

ಅರ್ಥ:ಅದು ಅಲ್ಲದೆಯುಂ-

ವಚನ:ಅರ್ಥ:ಹಾಗೂ ಅಲ್ಲದೆ-

ಚಂ|| ಮಲೆ
ತಲೆದೋಱಿದೆಂದುದನೆ
ಕೊಟ್ಟುದಡಂಗಮಡಂಗಿ
ಬಂದೊಡೊ|
ಕ್ಕಲಿಗವೆಸರ್ಗೆ ಪೂಣ್ದುದು
ಕುಱುಂಬು ಕಱುಂಬದೆ ಮಿಕ್ಕ
ಶತ್ರು ಮಂ|
ಡಳಿಕರೆ ಮಿತ್ರ
ಮಂಡಳಿಕರಾದರನಾಕುಳಮಿಂ
ದು ನಾಳೆ ಮಾ|

ಮಲೆದರನಿಕ್ಕಿ ನಮ್ಮನೇಟಿದಿಕ್ಕುಗುಮೀ ನೆಲೆಯಿಂ ಗುಣಾರ್ಣವಂ|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ: ಮಲೆ (ಗಡಿಯಬೆಟ್ಟವಾಸಿಗಳು) ತಲೆದೋಱದೆ (ಯುದ್ಧದಲ್ಲಿ ಕಾಣಿಸದೆ) ಎಂದುದನೆ (ಕೇಳಿದ್ದನ್ನು) ಕೊಟ್ಟುದು ಡಂಗಂ ಅಡಂಗಿ ಬಂದೊಡೆ

ಒಕ್ಕಲಿಗವೆಸರ್ಗೆ
ಪೂಣ್ದುದು(ಪ್ರತಿಜ್ಞೆಮಾಡಿದವು
) ಕುಱುಂಬು ಕಱುಂಬದೆ
(ಕುಱುಂಬು -ಸಣ್ಣ
ಪಾಳೆಯಪಟ್ಟುಗಳು)
(ಕೇಳಿದ್ದನ್ನು ಕೊಟ್ಟು ಅವರಿಗೆ
ಅಡಿಯಾಳಾಗುವಂತೆ
ಪ್ರತಿಜ್ಞೆಮಾಡಿತು.) ಮಿಕ್ಕ ಶತ್ರು
ಮಂಡಳಿಕರೆ ಮಿತ್ರ
ಮಂಡಳಿಕರು ಆದರು
ಅನಾಕುಳಂ ಇಂದು (ಸಣ್ಣ

ಪಾಳೆಯಗಳೆಲ್ಲ ಅವರ ಆಜ್ಞಾನುವರ್ತಿಯಾಗಿರಲು ನಿಷ್ಕರ್ಷೆಮಾಡಿಕೊಂಡುವು. ಪ್ರತಿಭಟಿಸದೆ ಶತ್ರುಮಂಡಲವೆಲ್ಲ ಮಿತ್ರಮಂಡಳಿಕರಾದರು.) ನಾಳೆ ಮಾರ್ಮಲೆದರನು ಇಕ್ಕಿ (ಇಂದೋ ನಾಳೆಯೋ ಗುಣಾರ್ಣವನು ಪ್ರತಿಭಟಿಸಿದವರನ್ನೆಲ್ಲ ಧ್ವಂಸಮಾಡಿ) ನಮ್ಮಂ ಎಱೆ

ದಿಕ್ಕುಗುಂ ಈ ನೆಲೆಯಿಂ ಗುಣಾರ್ಣವಂ (ಈ ನೆಲೆಯಿಂದ ಎಳೆದು ಬಿಸಾಡತ್ತಾನೆ’)

ಪದ್ಯ-೯೦:ಅರ್ಥ: (‘ಶತ್ರುರಾಜರೆಲ್ಲರೂ’) ಪ್ರತಿಭಟನೆಯೇ ಇಲ್ಲದೆ ಮನಸ್ಸಿನಲ್ಲಿ ಶತ್ರುತ್ವವನ್ನೂ ಅಡಗಿಸಿಕೊಂಡು ಅವರು ಕೇಳಿದ್ದನ್ನು ಕೊಟ್ಟು ಅವರಿಗೆ ಅಡಿಯಾಳಾಗುವಂತೆ

ಪ್ರತಿಜ್ಞೆಮಾಡಿದರು. ಸಣ್ಣ
ಪಾಳೆಯಗಳೆಲ್ಲ ಅವರ
ಆಜ್ಞಾನುವರ್ತಿಯಾಗಿರಲು
ನಿಶ್ಚಯಮಾಡಿಕೊಂಡುವು.
ಪ್ರತಿಭಟಿಸದೆ
ಶತ್ರುಮಂಡಲವೆಲ್ಲ
ಮಿತ್ರಮಾಂಡಳಿಕರಾದರು.
ಇಂದೋ ನಾಳೆಯೋ
ಗುಣಾರ್ಣವನು/ಅರ್ಜುನನು
ಪ್ರತಿಭಟಿಸಿದವರನ್ನೆಲ್ಲ
ನಾಶಮಾಡಿ ನಮ್ಮನ್ನೂ ಈ

ನೆಲೆಯಿಂದ ಎಳೆದು ಬಿಸಾಡತ್ತಾನೆ’

ವ|| ಅಂತು ವಿಕ್ರಮಾರ್ಜುನಂ ಬಿಲ್ಗೊಳಲುಂ ಭೀಮಸೇನಂ ಗದೆಗೊಳಲುಮಾಂಪುದರಿದು ಪಾಂಶುವಧದೆ ಕೆಯ್ಗೆ ಮಾಡುವುದುತ್ತಮಪಕ್ಷಮಂತು ಮಲ್ಲದೆಯುಂ-

ವಚನ:ಪದವಿಭಾಗ-

ಅರ್ಥ:ಅಂತು ವಿಕ್ರಮಾರ್ಜುನಂ ಬಿಲ್ಗ್

ಕೊಳಲುಂ ಭೀಮಸೇನಂ ಗದೆ
ಕೊಳಲುಂ ಆಂಪುದು ಅರಿದು
(ಎದರಿಸಲು ಆಗದು)
ಉಪಾಂಶು
ವಧದೆ(ರಹಸ್ಯವಾದ
ವಧೆಯಿಂದ) ಕೆಯ್ಗೆ
ಮಾಡುವುದು(ವಶಪಡಿಸಿಕೊ
ಳ್ಳುವುದು) ಉತ್ತಮಪಕ್ಷಂ
(ಉತ್ತಮವಾದ ಮಾರ್ಗ)
ಅಂತುಂ ಅಲ್ಲದೆಯುಂ-

ವಚನ:ಅರ್ಥ:ಹಾಗೆ ವಿಕ್ರಮಾರ್ಜುನನು/ ಅರ್ಜುನನು, ಬಿಲ್ಲನ್ನು ಹಿಡಿದರೂ ಭೀಮಸೇನನು ಗದೆಯನ್ನು ಹಿಡಿದರೂ ಎದುರಿಸಲು ಅಸಾಧ್ಯ. ರಹಸ್ಯವಾಗಿ ಮೋಸದ ಕೊಲೆಯಿಂದ ವಶಪಡಿಸಿಕೊಳ್ಳುವುದು ಉತ್ತಮವಾದ ಮಾರ್ಗ ಹಾಗೂ ಅಲ್ಲದೆ-

ಶ್ಲೋ|| ಸ್ವಾಮ್ಯಾರ್ಥಂ ಸ್ವಾಮ್ಯ ವಿಕ್ರಾಂತಂ ಮರ್ಮಜ್ಞಂ ವ್ಯವಸಾಯಿನಂ ಅರ್ಧರಾಜ್ಯಹರಂ ಭೃತ್ಯಂ ಯೋನ ಹನ್ಯಾತ್ಸ ಹನ್ಯತೇ|| ಎಂಬುದರ್ಥಶಾಸ್ತ್ರ ಸದ್ಭಾವಂ-

ಶ್ಲೋಕದ ಅರ್ಥ:'ಭಾಗಕ್ಕೆ ಆಶೆಪಡುತ್ತಿರುವವನೂ ಸ್ವಾಮ್ಯವನ್ನು ಪಡೆಯಲು ಶಕ್ತಿಯುಳ್ಳವನೂ ರಹಸ್ಯವನ್ನು ತಿಳಿದವನೂ

ಕಾರ್ಯಶೀಲನಾದವನೂ
ಅರ್ಧರಾಜ್ಯವನ್ನು
ಅಪಹರಿಸುವವನೂ ಆದ
ಆಳನ್ನು ಯಾವನು
ಕೊಲ್ಲುವುದಿಲ್ಲವೋ ಅವನು
ತಾನೇ ಹತನಾಗುತ್ತಾನೆ.
ಎನ್ನುವುದು ಅರ್ಧಶಾಸ್ತ್ರದ
ಸಾರವತ್ತಾದ ಭಾಗ.

ಉ|| ಮೇಣ್ಕುಲಮಿಲ್ಲೆಯೋ
ನಮಗೆ ದಾಯಿಗರಲ್ಲರೊ
ಶಸ್ತ್ರವಿದ್ಯೆಯೊಳ್/

ಪೂಣ್ಕೆಗಳಿಲ್ಲೆಯೋ ಧರೆಗೆ
ಮುನ್ನವರಯ್ಯನೆ
ಮುಖ್ಯನಲ್ಲನೋ|
ಜಾಣ್ಕೆಱದಾಗವೇಡ
ಮನದಲ್ ನಿಮಗಯ್ಯ
ವಿಧಾತೃಯೋಗದಿಂ/
ಕಣ್ಕುರುಡಾದೊಡೇನೊ
ಕುರುಡಾಗಲೆವೇಳ್ಪುದೆ ನಿಮ್ಮ
ಬುದ್ಧಿಯುಂ|| ೯೧ ||91||
(ಕುರುಡಾಗಲೆವೇಳ್ಕುಮೆ)

ಪದ್ಯ-೯೧:ಪದವಿಭಾಗ-ಅರ್ಥ:ಮೇಣ್ ಕುಲಮಿಲ್ಲೆಯೋ? ನಮಗೆ ದಾಯಿಗರಲ್ಲರೊ? (ದಾಯಾದಿಗಳಲ್ಲವೊ) ಶಸ್ತ್ರವಿದ್ಯೆಯೊಳ್ ಪೂಣ್ಕೆಗಳಿಲ್ಲೆಯೋ?(ಹೊಣೆ, ನೆಗಳಿಕೆ, ಶಪಥ) ಧರೆಗೆ ಮುನ್ನವರಯ್ಯನೆ (ಮುನ್ನ ಅವರ ಅಯ್ಯನೇ ತಂದೆಯೇ ರಾಜನಲ್ಲವೇ?)

ಮುಖ್ಯನಲ್ಲನೋ?
ಜಾಣ್ಕೆಱಿದಾಗವೇಡ
ಮನದಲ್ (ಜಾಣ್
-ಬುದ್ಧಿಯು, ಕಿರಿದಾಗವೇಡ-
ಮನದಲ್ಲಿ
ಕಡಿಮೆಯಾಗಬಾರದು)
ನಿಮಗೆ ಅಯ್ಯ
ವಿಧಾತೃಯೋಗದಿಂ ಕಣ್
ಕುರುಡಾದೊಡೆ
ಏನೊ(ತಂದೆಯೇ
ದೈವಯೋಗದಿಂದ ಕಣ್ಣು

ಕುರುಡಾದರೆ) ಕುರುಡಾಗಲು ಎವೇಳ್ಪುದೆ ನಿಮ್ಮ ಬುದ್ಧಿಯುಂ(ನಿಮ್ಮ ಬುದ್ಧಿಯೂ ಕುರುಡಾಗಬೇಕೆ?) **ಪದ್ಯ-೯೧:ಅರ್ಥ:**||‘ಅಲ್ಲದೆ ನಮಗೂ ಅವರಿಗೂ ಸಮಾನ ಕುಲವಿಲ್ಲವೇ? ರಾಜ್ಯಕ್ಕೆ ನಾವು ಭಾಗಿಗಳಲ್ಲವೆ? ನಾವು ಅವರಷ್ಟೇ ಶಸ್ತ್ರವಿದ್ಯೆಯಲ್ಲಿ (ಹೊಣೆಯುಳ್ಳವರು) ಪರಿಣತರಲ್ಲವೆ; ಈಗಾಗಲೇ

ಅವರ ತಂದೆ ರಾಜ್ಯಭಾರಮಾಡಿಯಾಗಲಿಲ್ಲವೆ? ನಿಮ್ಮ ಮನಸ್ಸಿನಲ್ಲಿ ಜಾಣ್ಮೆ ಕಿರಿದಾಗಬೇಕಾಗಬಾರದು. ತಂದೆಯೇ ದೈವಯೋಗದಿಂದ ಕಣ್ಣು ಕುರುಡಾದರೆ ನಿಮ್ಮ ಬುದ್ಧಿಯೂ ಕುರುಡಾಗಬೇಕೆ?’

ವ||ಎಂದು ತನ್ನ ಮನದೊಳೊಡಂಬಡೆ ನುಡಿದ ಮಗನ ಮಾತಂ ಧೃತರಾಷ್ಟ್ರಂ ಮನದೆಗೊಂಡು-

ವಚನ:ಪದವಿಭಾಗ-ಅರ್ಥ:ಎಂದು ತನ್ನ ಮನದೊಳು ಒಡಂಬಡೆ (ಮನಸ್ಸಿಗೆ ಒಪ್ಪಲು) ನುಡಿದ ಮಗನ ಮಾತಂ ಧೃತರಾಷ್ಟ್ರಂ ಮನದೆಗೊಂಡು (ಮನದಟ್ಟಾಗಿ,ಮನಸಾರೆ ಒಪ್ಪಿ)

ವಚನ:ಅರ್ಥ:ಎಂದು ತನ್ನ ಮನಸ್ಸಿಗೊಪ್ಪಿದ ಮಾತನ್ನಾಡಿದ ಮಗನ

ಮಾತನ್ನು ಧೃತರಾಷ್ಟ್ರನು
ಮನಸಾರೆ ಒಪ್ಪಿದನು.

ಉ|| ಏನೆರ್ದೆಗೊಂಡ
ಕಜ್ಜಮನೆ ಪೇೞ್ದಿಯೊ
ಚಿಂತಿಸುತಿರ್ಪೆನಾನುಮೇ
ನಾನುಮುಪಾಯಮಂ
ಬಗೆವರಂತವರ್ಗಳ್ ನಿನಗೆಂದೆ
ಕಂದ ಪೇೞ್|
ನೀನಿರೆ ಪಟ್ಟಮುಂ
ನೆಲನುಮಪ್ಪುದನೊಲ್ವೆನೆ
ವೈರಿಗಳ್ಗೆ ನೀ

ನೇನುಮದರ್ಕೆ

ಚಿಂತಿಸದಿರಿಲ್ಲಿರಲೀವನೆ

ಪಾಂಡುಪುತ್ರರಂ|| ೯೨ ||

ಪದ್ಯ-೯೨:ಪದವಿಭಾಗ-

ಅರ್ಥ:ಏನು ಎರ್ದೆಗೊಂಡ ಕಜ್ಜಮನೆ ಪೇೞ್ದಿಯೊ (ಹೃದಯದಲ್ಲಿದ್ದ ಕಾರ್ಯ ಏನಿತ್ತೋ ಅದೇ ಕಾರ್ಯವನ್ನು ಹೇಳಿದಯೊ) ಚಿಂತಿಸುತಿರ್ಪೆನು ಆನುಂ ಏನಾನುಂ ಅಪಾಯಮಂ

ಬಗೆವರೊ ಎಂತು ಅವರ್ಗಳ್
ನಿನಗೆಂದೆ ಕಂದ (ಮಗನೇ
ನಿನಗೆ ಅವರು ಏನಾದರೂ
ಕೇಡನ್ನು
ಯೋಚಿಸುತ್ತಿದ್ದಾರೆಯೆ)
ಪೇಟ್ (ಹೇಳು) ನೀನು
ಇರೆ(ನೀನು ಇರಲು)
ಪಟ್ಟಮುಂ ನೆಲನುಂ ಅಪ್ಪುದಂ
ಒಲ್ವೆನೆ(ಒಪ್ಪುವೆನೇ) ವೈರಿಗಳ್ಗೆ
(ಪಟ್ಟವೂ ರಾಜ್ಯವೂ
ಶತ್ರುಗಳಿಗೆ ಆಗುವುದನ್ನು

ನಾನು ಒಪ್ಪುತ್ತೇನೆಯೇ?)
ನೀನು ಏನು ಅದರ್ಕೆ
ಚಿಂತಿಸದಿರು ಇಲ್ಲಿ ಇರಲು
ಈವನೆ
(ಅವಕಾಶಕೊಡುತ್ತೇನೆಯೇ?)
ಪಾಂಡುಪುತ್ರರಂ|| ೬೨ ||
ಪದ್ಯ-೬೨:ಅರ್ಥ:. ನನ್ನ ಹೃದಯದಲ್ಲಿ ಏನಿತ್ತೋ ಅದೇ ಕಾರ್ಯವನ್ನು ಹೇಳಿದಯೊ; ಅವರು ನಿನಗೇನಾದರೂ ಕೇಡನ್ನು

ಯೋಚಿಸುತ್ತಿದ್ದಾರೆಯೆ ಎಂಬುದಾಗಿಯೇ ನಾನೂ ಚಿಂತಿಸುತ್ತಿದ್ದೇನೆ. ಮಗು, ನೀನಿರುವಾಗ ಪಟ್ಟವೂ ರಾಜ್ಯವೂ ಶತ್ರುಗಳಿಗೆ ಆಗುವುದನ್ನು ನಾನು ಒಪ್ಪುತ್ತೇನೆಯೇ? ಅದಕ್ಕೆ ನೀನು ಚಿಂತಿಸಬೇಡ; ಪಾಂಡುಪುತ್ರರು ಇಲ್ಲಿರಲು ನಾನು ಅವಕಾಶಕೊಡುತ್ತೇನೆಯೇ?

ವ|| ಎಂದು ದುರ್ಯೋಧನನಂ
ಬೀಡಿಂಗೆ ಪೋಗಲ್ವೇೞ್ದು
ಪಾಂಡವರಯ್ವರುಮಂ ಬರಿಸಿ
ಧೃತರಾಷ್ಟ್ರಂ
ತೊಡೆಯನೇಱಿಸಿಕೊಂಡು
ದುರ್ಯೋಧನನಪ್ಪೊಡೆ ಪೊಲ್ಲ
ಮಾನಸನಾತನುಂ
ನೀಮುಮೊಂದೆಡೆಯೊಳಿರೆ
ಕಿಸುಱುಂ ಕಲಹಮುಮೆಂದುಂ
ಕುಂದದದುಕಾರಣಂ
ಗಂಗಾನದಿಯ ದಕ್ಷಿಣ

ತಟದೊಳ್
ವಾರಣಾವತಮೆಂಬುದು
ಪೊಲಿಲ್ ಕುರುಜಾಂಗಣ
ವಿಷಯಕ್ಕೆ
ತಿಳವಮಪ್ಪಂತಿರ್ದುದಲ್ಲಿಗೆ
ಪೋಗಿ
ಸುಖಮಿರಿಮೆಂದೊಡಂತೆಗೆಯ್ವೆ
ಮೆಂದು ಬೀಳ್ಕೊಂಡು
ಬೀಡಿಂಗೆವಂದು ಗಾಂಗೇಯ
ದ್ರೋಣ ಕೃಪ ವಿದುರರ್ಕಳ್ಗಂ
ಕುಂತಿಗಂ

ತದ್ವೃತ್ತಾಂತಮನಱಿಪಿದರನ್ನೆ
ಗಮಿತ್ತ ದುರ್ಯೋಧನನವರ
ಪೋಗನಱಿದು
ಪುರೋಚನನೆಂಬ ತನ್ನ
ಮನದನ್ನನಪ್ಪ ಪೆರ್ಗಡೆಯೊಳ್
ಲಾಕ್ಷಾಗೃಹೋಪಾಯಮುಂ
ಚರ್ಚಿಸಿ
ವಾರಣಾವತಮನೊಂದೇ
ದಿವಸದೊಳೆಯ್ದು ವಂತಾಗೆ
ರಥಮಂ ಸಮಕಟ್ಟಿ ನಾಲ್ಕುಲಕ್ಕ

ಬಲಮಂ ನೆರಂಬೇೞ್ದು ಕಳಿಪಿದನಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ದುರ್ಯೋಧನನಂ ಬೀಡಿಂಗೆ (ನಿವಾಸಕ್ಕೆ) ಪೋಗಲ್ವೇೞ್ದು, ಪಾಂಡವರು ಅಯ್ವರುಮಂ ಬರಿಸಿ ಧೃತರಾಷ್ಟ್ರಂ ತೊಡೆಯನು ಏಱಿಸಿಕೊಂಡು (ಕುಳ್ಳಿರಿಸಿಕೊಂಡು) ದುರ್ಯೋಧನನಪ್ಪೊಡೆ ಪೊಲ್ಲ

ಮಾನಸನು (ಕೆಟ್ಟ
ಮನಸ್ಸಿನವನು) ಆತನುಂ
ನೀಮುಂ ಒಂದು ಎಡೆಯೊಳು
ಇರೆ ಕಿಸುಱುಂ ಕಲಹಮುಂ
(ಅಸಹನೆಯೂ ಜಗಳವೂ)
ಅಂದುಂ ಕುಂದದು
ಅದುಕಾರಣಂ ಗಂಗಾನದಿಯ
ದಕ್ಷಿಣ ತಟದೊಳ್
ವಾರಣಾವತಮೆಂಬುದು
ಪೊಲಿಲ್ (ಪಟ್ಟಣ),
ಕುರುಜಾಂಗಣ ವಿಷಯಕ್ಕೆ

ತಿಳವಂ ಅಪ್ಪಂತೆ ಇರ್ದುದು
(ಕುರುಜಾಂಗಣ ರಾಜ್ಯಕ್ಕೆ
ತಿಲಕದಂತೆ ಇರುವುದು)
ಅಲ್ಲಿಗೆ ಪೋಗಿ ಸುಖಂ ಇರಿಂ
ಎಂದೊಡೆ ಅಂತೆ
ಗೆಯ್ವೆಮೆಂದು (ಹಾಗೆಯೇ
ಮಾಡುವೆವೆಂದು)
ಬೀಳ್ಕೊಂಡು ಬೀಡಿಂಗೆ
ವಂದು(ಬಂದು); ಗಾಂಗೇಯ
ದ್ರೋಣ ಕೃಪ ವಿದುರರ್ಕಳ್ಗಂ
ಕುಂತಿಗಂ ತದ್ವೃತ್ತಾಂತಮನು

ಅಱಿಪಿದರು (ವಿದುರಾದಿಗಳಿಗೆ ಆ ವೃತ್ತಾಂತವನ್ನು ತಿಳಿಸಿದರು.) ಅನ್ನೆಗಂ ಇತ್ತ ದುರ್ಯೋಧನನು ಅವರ ಪೋಗನಱಿದು(ಅವರು ಹೋಗುವುದನ್ನು ತಿಳಿದು) ಪುರೋಚನನೆಂಬ ತನ್ನ ಮನದನ್ನನಪ್ಪ ಪೆರ್ಗಡೆಯೊಳ್ ಲಾಕ್ಷಾಗೃಹೋಪಾಯಮುಂ (ತನ್ನ ಆಪ್ತನಾದ ಹೆಗ್ಗಡೆಯಲ್ಲಿ ಅರಗಿನ ಮನೆಯ

ಉಪಾಯವನ್ನು) ಚರ್ಚಿಸಿ
ವಾರಣಾವತಮನು ಒಂದೇ
ದಿವಸದೊಳ್ ಅಯ್ದುವಂತಾಗೆ
(ವಾರಣಾವತವನ್ನು ಒಂದೇ
ದಿವಸದಲ್ಲಿ ಹೋಗಿ ಸೇರುವ
ಹಾಗೆ) ರಥಮಂ ಸಮಕಟ್ಟಿ
ನಾಲ್ಕುಲಕ್ಕ ಬಲಮಂ (ನಾಲ್ಕು
ಲಕ್ಷಸೈನ್ಯವನ್ನು) ನೆರಂಬೇಱ್ದು
ಕಳಿಪಿದನು
ಆಗಳ್(ಸಹಾಯಕ್ಕಾಗಿ

ನಿಯಮಿಸಿ ಕಳುಹಿಸಿದನು.
ಆಗಳ್) -
ವಚನ:ಅರ್ಥ:ಹೀಗೆ ಹೇಳಿ
ಧೃತರಾಷ್ಟ್ರನು
ದುರ್ಯೋಧನನ್ನು ಅವನ
ನಿವಾಸಕ್ಕೆ ಕಳುಹಿಸಿ,
ಪಾಂಡವರು ಐದು ಜನರನ್ನೂ
ಕರೆಸಿ ತೊಡೆಯಮೇಲೆ
ಕುಳ್ಳಿರಿಸಿಕೊಂಡು
'ದುರ್ಯೋಧನನಾದರೆ ಕೆಟ್ಟ
ಮನಸ್ಸುಳ್ಳವನು. ಅವನೂ

ನೀವೂ ಒಂದೇ ಸ್ಥಳದಲ್ಲಿದ್ದರೆ ಕೋಪವೂ ಜಗಳವೂ ಎಂದೂ ತಪ್ಪುವುದಿಲ್ಲ. ಆದ ಕಾರಣ ಗಂಗಾನದಿಯ ದಕ್ಷಿಣದಲ್ಲಿ ಕುರುಜಾಂಗಣದೇಶಕ್ಕೆ ತಿಲಕದಂತಿರುವ ವಾರಣಾವತವೆಂಬ ಪಟ್ಟಣವಿದೆ; ಕುರುಜಾಂಗಣ ರಾಜ್ಯಕ್ಕೆ ತಿಲಕದಂತೆ ಇರುವುದು. ಅಲ್ಲಿಗೆ ಹೋಗಿ ಸುಖವಾಗಿರಿ ಎನ್ನಲು

(ಪಾಂಡವರು) ಹಾಗೆಯೇ ಮಾಡುವೆವು ಎಂದು ಅವರ ಅಪ್ಪಣೆಯನ್ನು ಪಡೆದು ಮನೆಗೆ ಬಂದು ಭೀಷ್ಮ ದ್ರೋಣ ಕೃಪ ವಿದುರರುಗಳಿಗೂ ಕುಂತಿಗೂ ಆ ವಿಷಯವನ್ನು ತಿಳಿಸಿದರು. ಅಷ್ಟರಲ್ಲಿ ಇತ್ತಕಡೆ ದುರ್ಯೋಧನನು ಅವರು ಹೋಗುವುದನ್ನು ತಿಳಿದು ಪುರೋಚನನೆಂಬ ತನ್ನ ಆಪ್ತನಾದ ಹೆಗ್ಗಡೆಯಲ್ಲಿ

ಅರಗಿನ ಮನೆಯ
ಉಪಾಯವನ್ನು ವಿಚಾರ
ಚರ್ಚೆಮಾಡಿ
ವಾರಣಾವತವನ್ನು ಒಂದೇ
ದಿವಸದಲ್ಲಿ ಹೋಗಿ ಸೇರುವ
ಹಾಗೆ ರಥವನ್ನು ಸಿದ್ಧಪಡಿಸಿ
ನಾಲ್ಕು ಲಕ್ಷ ಸೈನ್ಯವನ್ನೂ
ಅವನ ಸಹಾಯಕ್ಕಾಗಿ
ನಿಯಮಿಸಿ ಕಳುಹಿಸಿದನು;
ಆಗ

ಕಂ|| ಉದಿತೋದಿತನ್ನೆ ನೀಂ

ನಿನ|

ಗುದಯದ

ಮೇಲುದಯಮೆಂದು

ನೆಗಟ್ದರಿಗಂಗ|

ಭ್ಯುದಯಮನಱಿಪುವ

ತೆಱದಿಂ

ದುದಯಾಚಳಚುಂಬಿಬಿಂಬನಿ

ನನುದಯಿಸಿದಂ|| ೯೩||

ಪದ್ಯ-೯೩:ಪದವಿಭಾಗ-

ಅರ್ಥ:ಉದಿತೋದಿತನ್ನೆ ನೀಂ,

ನಿನಗೆ ಉದಯದ ಮೇಲೆ ಉದಯಮೆಂದು ನೆಗೞ್ದಿ ಅರಿಗಂಗೆ ಅಭ್ಯುದಯಮನು ಅಱಿಪುವ ತೆಱದಿಂದೆ(ಪ್ರಸಿದ್ಧನಾದ ಅರಿಕೇಸರಿಗೆ ಅವನ ಅಭಿವೃದ್ಧಿಯನ್ನು ಸೂಚಿಸುವ ರೀತಿಯಿಂದ) ಉದಯಾಚಳ ಚುಂಬಿಬಿಂಬನು ಇನನು (ಸೂರ್ಯನು) ಉದಯಿಸಿದಂ

ಪದ್ಯ-೯೩:ಅರ್ಥ:‘ನೀನು ಪ್ರಸಿದ್ಧನಾವನು, ನಿನಗೆ ವೃದ್ಧಿಯ ಮೇಲೆ ವೃದ್ಧಿಯಾಗುತ್ತದೆ’ ಎಂದು ಪ್ರಸಿದ್ಧನಾದ ಅರಿಕೇಸರಿಗೆ ಅವನ ಅಭಿವೃದ್ಧಿಯನ್ನು ಸೂಚಿಸುವ ರೀತಿಯಿಂದ ಉದಯಪರ್ವತಕ್ಕೆ ತಾಗಿಕೊಂಡು ಸೂರ್ಯನು ಉದಯಿಸಿದನು.

ವ|| ಆ ಪ್ರಸ್ತಾವದೊಳ್
ಮಂಗಳಪಾಠಕರ
ಮಂಗಳವೃತ್ತೋಚ್ಚಾರಣೆಗಳಿಂ
ದಂ
ಪಾಂಡವರಯ್ವರುಮುನ್ಮೀಲಿತ
ನಯನರಾಗಿ
ನಿತ್ಯನಿಯಮಂಗಳಂ
ನಿರ್ವರ್ತಿಸಿ
ಮಂಗಳವಸದನಂಗೊಂಡು
ಮಹಾಬ್ರಾಹ್ಮಣರ್ ಪರಸುವ
ಪರಕೆಗಳುಮನಿಕ್ಕುವ

ಸೇಸೇಗಳು

ಮನಾಂತುಕೊಳುತ್ತುಂ

ಪಲವುಂ ತೆಱದ ಪ್ರಯಾಣ

ಪಟಹಂಗಳೆಸೆಯೆ ಶುಭ ಲಕ್ಷಣ

ಲಕ್ಷಿತಂಗಳಪ್ಪಾಜಾನೇಯ

ಕಾಂಭೋಜ

ವಾಜಿರಾಜಿಗಳೊಳ್ ಪೂಡಿದ

ದಿವ್ಯರಥಂಗಳನೇಱಿ

ದಿವ್ಯಬಾಣಾಸನ

ಬಾಣಪಾಣಿಗಳಾಗಿ

ನಿಜಪರಿಜನಂ ಬೆರಸು

ಗಾಂಗೇಯ ದ್ರೋಣ ಕೃಪ ವಿದುರರ್ ಕಳಿಪುತ್ತುಂ ಬರೆ ಪುರಜನಂಗಳೆಲ್ಲಂ ನೆರೆದವರ ಪೋಗಿಂಗಱಿಲ್ದು ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಆ ಪ್ರಸ್ತಾವದೊಳ್ ಮಂಗಳಪಾಠಕರ ಮಂಗಳವೃತ್ತ ಉಚ್ಚಾರಣೆಗಳಿಂದಂ ಪಾಂಡವರು ಅಯ್ವರುಂ

ಉನ್ಮೀಲಿತ
ನಯನರಾಗಿ(ಅರಳಿದ
ಕಣ್ಣುಗಳನ್ನುಳ್ಳವರಾಗಿ)
ನಿತ್ಯನಿಯಮಂಗಳಂ
ನಿರ್ವರ್ತಿಸಿ (ಮುಗಿಸಿ)
ಮಂಗಳವಸದನಂಗೊಂಡು(
ಮಂಗಳಕರವಾದ
ಅಲಂಕಾರವನ್ನು
ಮಾಡಿಕೊಂಡು)
ಮಹಾಬ್ರಾಹ್ಮಣರ್ ಪರಸುವ
ಪರಕೆಗಳುಮನು ಇಕ್ಕುವ

ಸೇಸೇಗಳುಮನು
ಆಂತುಕೊಳುತ್ತುಂ
(ಸ್ವೀಕರಿಸುತ್ತಾ) ಪಲವುಂ
ತೆಱಿದ ಪ್ರಯಾಣ
ಪಟಹಂಗಳು ಎಸೆಯೆ
(ಪ್ರಯಾಣಭೇರಿಗಳು
ಶೊಭಿಸಲು) ಶುಭ ಲಕ್ಷಣ
ಲಕ್ಷಿತಂಗಳ ಅಪ್ಪಾಜಾನೇಯ
ಕಾಂಭೋಜ
ವಾಜಿರಾಜಿಗಳೊಳ್
(ಕುದುರೆಗಳಲ್ಲಿ) ಪೂಡಿದ

ದಿವ್ಯರಥಂಗಳನು ಏಱಿ
ದಿವ್ಯಬಾಣಾಸನ
ಬಾಣಪಾಣಿಗಳಾಗಿ
(ದೇವದತ್ತವಾದ
ಬಿಲ್ಲುಬಾಣಗಳನ್ನು ಕಯ್ಯಲ್ಲಿ
ಹಿಡಿದವರಾಗಿ) ನಿಜಪರಿಜನಂ
ಬೆರಸು (ಪರಿವಾರದೊಂದಿಗೆ)
ಗಾಂಗೇಯ ದ್ರೋಣ ಕೃಪ
ವಿದುರರ್ ಕಳಿಪುತ್ತುಂ ಬರೆ
(ಕಳಿಸಲು ಬರಲು)
ಪುರಜನಂಗಳೆಲ್ಲಂ ನೆರೆದು

ಅವರ ಪ್ರೋಗ್ರಂಗೆ ಅಬಿಲ್ಡು (ದುಃಖಿಸಿ) ಸೈರಿಸಲಾಱದೆ (ಪಟ್ಟಣಿಗರೆಲ್ಲರೂ ಸೇರಿ ಅವರು ಹೊರಟುಹೋಗುವಿಕೆಗಾಗಿ ದುಖಪಟ್ಟು ಸಹಿಸಲಾರದೆ)-

ವಚನ:ಅರ್ಥ:ಆ ಸಂದರ್ಭದಲ್ಲಿ ಹೊಗಳುಭಟರ ಮಂಗಳಪದ್ಯ ಪಠನಗಳಿಂದ ಪಾಂಡವರು ಐದು ಜನರೂ ಅರಳಿದ

ಕಣ್ಣುಗಳನ್ನುಳ್ಳವರಾಗಿ
ಪ್ರತಿದಿನವೂ ಮಾಡಬೇಕಾದ
ನಿತ್ಯಕರ್ಮಗಳನ್ನು ಮುಗಿಸಿ
ಮಂಗಳಕರವಾದ
ಅಲಂಕಾರವನ್ನು
ಮಾಡಿಕೊಂಡು
ವೃದ್ಧಬ್ರಾಹ್ಮಣರುಗಳು
ಆಶೀರ್ವದಿಸುವ
ಹರಕೆಗಳನ್ನೂ ಚೆಲ್ಲುತ್ತಿರುವ
ಮಂತ್ರಾಕ್ಷತೆಗಳನ್ನೂ ತಲೆಯಲ್ಲಿ
ಸ್ವೀಕರಿಸುತ್ತಾ ನಾನಾರೀತಿಯ

ಪ್ರಯಾಣಭೇರಿಗಳು
ಪ್ರಕಾಶಿಸುತ್ತಿರಲು
ಶುಭಲಕ್ಷಣಗಳಿಂದ
ಗುರುತಿಸಲ್ಪಟ್ಟ ಒಳ್ಳೆಯ
ತಳಿಯಿಂದ ಕೂಡಿದ
ಕಾಂಭೋಜದೇಶದ ಉತ್ತಮ
ಕುದುರೆಗಳ ಸಮೂಹದಿಂದ
ಸಿದ್ಧಪಡಿಸಿದ ದಿವ್ಯರಥಗಳನ್ನು
ಹತ್ತಿ ದೇವದತ್ತವಾದ
ಬಿಲ್ಲುಬಾಣಗಳನ್ನು ಕಯ್ಯಲ್ಲಿ
ಹಿಡಿದವರಾಗಿ ತಮ್ಮ

ಪರಿವಾರದೊಂದಿಗೆ
ಸೇರಿಕೊಂಡು
ಹಸ್ತಿನಾಪುರದಿಂದ
ಹೊರಟರು. ಭೀಷ್ಮ ದ್ರೋಣ
ಕೃಪ ವಿದುರರು ದಾರಿ
ಕಳುಹಿಸಲು ಬಂದರು.
ಪಟ್ಟಣಿಗರೆಲ್ಲರೂ ಸೇರಿ
ಅವರು
ಹೊರಟುಹೋಗುವಿಕೆಗಾಗಿ
ದುಃಖಪಟ್ಟು ಸಹಿಸಲಾರದೆ
ಶೋಕಿಸಿದರು.

ಚಂ|| ಮನದೊಳಲಂಪು
ಪೊಣ್ಮೆ ನುಡಿದುಂ ನಡೆ
ನೋಡಿಯುಮಾಟಪಾಟಮಂ
ಬಿನದಮುಮಾರುಮಂ
ಮರೆಯಿಸುತ್ತಿರೆ ಬೀದಿಗಳೊಳ್
ವಿಳಾಸದೊ|
ಡ್ಡೆನಿಸಿ ತೊಱಲ್ವ ಪಾಂಡವರ
ಪೋಗಿನೊಳುಂತೆ
ಬೆಡಂಗುಗೆಟ್ಟು ಹ
ಸ್ತಿನಪುರಮಿಂದು ರಕ್ಕಸನ
ತಿಂದ

ಪೊಱಿಲ್ಗೆಣೆಯಾಗದಿರ್ಕುಮೇ||
೯೪||

ಪದ್ಯ-೯೪:ಪದವಿಭಾಗ-ಅರ್ಥ:ಮನದೊಳು ಅಲಂಪು ಪೊಣ್ಮೆ ನುಡಿದುಂ ನಡೆ ನೋಡಿಯುಂ ಆಟಪಾಟಮಂ ಬಿನದಮುಂ ಆರುಮಂ ಮರೆಯಿಸುತ್ತಿರೆ (ಯಾರನ್ನಾದರೂ ಮೈಮರೆಯುವಂತೆ ಮಾಡುತ್ತಿರಲು)

ಬೀದಿಗಳೊಳ್ ವಿಳಾಸದ
ಒಡ್ಡೆನಿಸಿ ತೊಲಿಲ್ವ
(ಬೀದಿಗಳಲ್ಲಿ ಸೌಂದರ್ಯದ
ಸಮೂಹವೆಂದೆನಿಸಿಕೊಂಡು
ತಿರುಗಾಡುತ್ತಿದ್ದ) ಪಾಂಡವರ
ಪೋಗಿನೊಳು ಉಂತೆ
ಬೆಡಂಗುಗೆಟ್ಟು (ಪಾಂಡವರು
ಊರನ್ನು ಬಿಟ್ಟು
ಹೋಗುವುದರಿಂದ
ಹಸ್ತಿನಾಪಟ್ಟಣವು ಬೆಡಗು
ಕಳೆದುಕೊಂಡು)

ಹಸ್ತಿನಪುರಮಿಂದು ರಕ್ಕಸನ
ತಿಂದ (ರಾಕ್ಷಸರು ತಿಂದು ಬಿಟ್ಟ)
ಪೊಟಿಲ್ಗೆ ಎಣೆಯಾಗದೆ
ಇರ್ಕುಮೇ (ಪಟ್ಟಣಕ್ಕೆ
ಸಮಾನವಾಗದೇ
ಇರುವುದೇ!)||
ಪದ್ಯ-೯೪:ಅರ್ಥ:ಮನಸ್ಸಿನ
ಲ್ಲಿ ಸಂತೋಷವುಕ್ಕುವಂತೆ
ಮಾತನಾಡಿಯೂ
ದೀರ್ಘದೃಷ್ಟಿಯಿಂದ
ನೋಡಿಯೂ ತಮ್ಮ

ಆಟಪಾಟವಿನೋದಗಳಿಂದ
ಯಾರನ್ನಾದರೂ
ಮೈಮರೆಯುವಂತೆ
ಮಾಡಿಯೂ ಬೀದಿಗಳಲ್ಲಿ
ಸೌಂದರ್ಯದ
ಸಮೂಹವೆಂದೆನಿಸಿಕೊಂಡು
ತಿರುಗಾಡುತ್ತಿದ್ದ ಪಾಂಡವರು
ಊರನ್ನು ಬಿಟ್ಟು
ಹೋಗುವುದರಿಂದ
ಹಸ್ತಿನಾಪಟ್ಟಣವು ಬೆಡಗು
ಕಳೆದುಕೊಂಡು ರಾಕ್ಷಸರು

ತಿಂದು ಬಿಟ್ಟ ಪಟ್ಟಣಕ್ಕೆ ಸಮಾನವಾಗದೇ ಇರುವುದೇ!

ವ|| ಎಂದು ಕಣ್ಣನೀರಂ ನೆಗಪೆ-

ವಚನ:ಪದವಿಭಾಗ-

ಅರ್ಥ:ಎಂದು ಕಣ್ಣನೀರಂ ನೆಗಪೆ (ಉಕ್ಕಿಸುತ್ತಿರಲು)-

ವಚನ:ಅರ್ಥ:ಎಂದು ಕಣ್ಣೀರನ್ನು ಸುರಿಸುತ್ತಿರಲು-

ಚಂ|| ಪರಸುವ ಪೌರವೃದ್ಧರ ಕುಲಾಂಗನೆಯರ್ಕಳ ಸಾಧು ವಾದದೊಳ್

ಬೆರಸಿ ಸಮಂತು ಸೂಸುವ ಜಲಾರ್ದ್ರಲಸದ್ಧವಳಾಕ್ಷತಂಗಳೊಳ್|
ಬೆರಸಿದ ತಣ್ಪನೆತ್ತಿ ಕವಿದೆತ್ತಿದ ಬಾಸಿಗದೊಂದು ಕಂಪಿನೊಳ್
ಪೊರೆದು ಮದಾಳಿಗಳ್ವೆರಸು ಬಂದುದದೊಂದನುಕೂಲ ಮಾರುತಂ|| ೯೫ ||

ಪದ್ಯ-೯೫:ಪದವಿಭಾಗ-ಅರ್ಥ:ಪರಸುವ ಪೌರವೃದ್ಧರ(ಹರಸುವ

ಊರಹಿರಿಯರ)
ಕುಲಾಂಗನೆಯರ್ಕಳ
(ಕುಲಸ್ತ್ರೀಯರ) ಸಾಧು
ವಾದದೊಳ್ ಬೆರಸಿ ಸಮಂತು
(ಒಳಿತಾಗಲಿ ಎಂಬ ಸಾದು
ಆಶೀರ್ವಾದ ಸೇರಿಕೊಂಡು,
ಸಮಂತು- ಚೆನ್ನಾಗಿ) ಸೂಸುವ
(ಎರಚುವ) ಜಲಾರ್ದ್ರ
(ತೋಯಿಸಿದ) ಲಸತ್
ಧವಳಾಕ್ಷತಂಗಳೊಳ್
(ಶೋಭಿಸುವ ಬಿಳಿಯ

ಅಕ್ಷತೆಗಳಲ್ಲಿ) ಬೆರಸಿದ
ತಣ್ಪನೆತ್ತಿ (ಕೂಡಿದ ತಂಪನ್ನು
ಎತ್ತಿಕೊಂಡು) ಕವಿದು ಎತ್ತಿದ
ಬಾಸಿಗದ ಒಂದು ಕಂಪಿನೊಳು
ಪೊರೆದು (ದಟ್ಟವಾಗಿ ಎತ್ತಿದ
ಬಾಸಿಗದ/ ಹೂವಿನ ಹಾರಗಳ
) ಮದ ಆಳಿಗಳ್ ಬೆರಸು
(ಸೊಕ್ಕಿದ ದುಂಬಿಗಳ
ಸಮೇತ) ಬಂದುದು ಒಂದು
ಅನುಕೂಲ ಮಾರುತಂ

(ಒಂದು ಅನುಕೂಲವಾಗಿ
ಬೀಸುವ ಗಾಳಿ ಬಂತು)

ಪದ್ಯ-೯೫:ಅರ್ಥ:ತಾತ್ಪರ್ಯ

:ಆಶೀರ್ವಾದವನ್ನು
ಮಾಡುತ್ತಿರುವ
ಊರಹಿರಿಯರ ಮತ್ತು
ಕುಲಸ್ತ್ರೀಯರ
ಸ್ವಸ್ತಿವಾಚನಗಳಿಂದಲೂ
ವಿಶೇಷವಾಗಿ ಚೆಲ್ಲುತ್ತಿರುವ
ಮನೋಹರವೂ
ಧವಳವರ್ಣಯುಕ್ತವೂ ಆದ

ಆರ್ದ್ರಾಕ್ಷತೆಗಳಿಂದಲೂ

ತಂಪಿನಿಂದಲೂ

ಕಂಪಿನಿಂದಲೂ ಎತ್ತಿ ಕಟ್ಟಿದ

ಬಾಸಿಂಗದ ಸುಗಂಧದಿಂದಲೂ

ಮದಿಸಿದ ದುಂಬಿಗಳಿಂದಲೂ

ಕೂಡಿದ ಹಿತವಾದ

ಗಾಳಿಯೊಂದು

ಹೊರಡುತ್ತಿರುವ ಪಾಂಡವರಿಗೆ

ಶುಭಸೂಚಕವಾಗಿ ಬೀಸಿತು.

ವ|| ಅಂತು ಪೊಱಲಂ

ಪೊಱಮಡೆ ಬಱಿಯನೆ

ತಗುಳ್ದು ಬರ್ಪ
ತಮ್ಮೊಡನಾಡಿಗಳಪ್ಪ ಮೇಳದ
ಸಬ್ಬವದ ನಗೆಯ
ತೆಗೞಿನವರನೆಮ್ಮ
ಬೞಿಯಟ್ಟಿದಂದು
ಬನ್ನಿಮೆಂದು ಪ್ರಿಯಂ
ನುಡಿದಿರಿಸಿ ಕಿೞಿದಂತರಂ
ಬಂದೊಂದು ತಾವರೆಗೆಯ
ಮೊದಲೊಳ್ ನಿಂದು ಭೀಷ್ಮ
ದ್ರೋಣ ಕೃಪ
ವಿದುರರ್ಕಳನೆಮಗೆ ತಕ್ಕ

ಬುದ್ಧಿಯಂ ಪೇೞ್ದು ಮಗುೞ್ಚಿಮೆನೆ-

ವಚನ:ಪದವಿಭಾಗ-

ಅರ್ಥ:ಅಂತು ಪೊೞಲಂ ಪೊಱಮಡೆ (ಹಾಗೆ ಪಟ್ಟಣವನ್ನು ಬಿಟ್ಟು ಹೊರಡಲು) ಬೞಿಯನೆ ತಗುಳ್ದು ಬರ್ಪ(ಹಿಂದೆಯೇ ಅನುಸರಿಸಿ ಬರುವ) ತಮ್ಮೊಡನಾಡಿಗಳಪ್ಪ ಮೇಳದ ಸಬ್ಬವದ (ವಿನೋದದ-)

ನಗೆಯ (ಹಾಸ್ಯಗಾರರ)
ತೆಗೞ್ದವರನು
(ಬೈಯುವವರನ್ನು) ಎಮ್ಮ
ಬೞಿಯಟ್ಟಿದಂದು
ಬನ್ನಿಮೆಂದು (ನಾವು
ಹೇೞಿಕೞುಹಿಸಿದಾಗ ಬನ್ನಿ)
ಪ್ರಿಯಂ ನುಡಿದು ಇರಿಸಿ
ಕಿೞಿದಂತರಂ ಬಂದು
(ಮಾತನ್ನಾಡಿ ನಿಲ್ಲಿಸಿ ಕೊಂಚ
ದೂರ ಬಂದು) ಒಂದು
ತಾವರೆಗೆಯ ಮೊದಲೊಳ್

ನಿಂದು (ತಾವರೆಯ ಕೆರೆಯ ಅಂಚಿನಲ್ಲಿ ನಿಂತು) ಭೀಷ್ಮ ದ್ರೋಣ ಕೃಪ ವಿದುರರ್ಕಳಂ ಎಮಗೆ ತಕ್ಕ ಬುದ್ಧಿಯಂ ಪೇಳ್ದು ಮಗುೞಿಂ ಎನೆ (ನಮಗೆ ಬುದ್ಧಿವಾದಗಳನ್ನು ತಿಳಿಸಿ ಹಿಂದಿರುಗಿ ಎನ್ನಲು-)-

ವಚನ:ಅರ್ಥ:ಹಾಗೆ ಪಟ್ಟಣವನ್ನು ಬಿಟ್ಟು ಹೊರಡಲು ತಮ್ಮನ್ನು ಹಿಂದೆಯೇ ಅನುಸರಿಸಿ

ಬರುವ ಸಹಪಾಠಿಗಳನ್ನೂ
ನಕಲಿಯುವರನ್ನೂ
ಹಾಸ್ಯಗಾರರನ್ನೂ
ಬೈಯುವವರನ್ನೂ
ಪಾಂಡವರು ‘ನಾವು
ಹೇಳಿಕಳುಹಿಸಿದಾಗ ಬನ್ನಿ’
ಎಂದು ಒಳ್ಳೆಯ ಮಾತನ್ನಾಡಿ
ನಿಲ್ಲಿಸಿ ಕೊಂಚ ದೂರ ಬಂದು
ಒಂದು ತಾವರೆಯ ಕೆರೆಯ
ಅಂಚಿನಲ್ಲಿ ನಿಂತು ಭೀಷ್ಮ
ದ್ರೋಣ ಕೃಪ

ವಿದುರರುಗಳನ್ನು 'ನಮಗೆ ಬುದ್ಧಿವಾದಗಳನ್ನು ತಿಳಿಸಿ ಹಿಂದಿರುಗಿ' ಎನ್ನಲು-

ಕಂ||

ನಡಪಿಯುಮೋದಿಸಿಯುಂ ಬಿ
ಲ್ವಿಡಿಯಿಸಿಯುಂ ಕೆಚ್ಚುವಿರ್ದ ಕೂರ್ಮೆಗಳೆರ್ದೆಯಂ|
ನಡೆ ಪಾಂಡುಸುತರಗಲ್ಕೆಗೆ
ನಿಡುಸುಯ್ದರ್ ದ್ರೋಣ ಭೀಷ್ಮ ಕೃಪ ವಿದುರರ್ಕಳ್|| ೯೬

ಪದ್ಯ-೯೬:ಪದವಿಭಾಗ-ಅರ್ಥ:ನಡಪಿಯುಂ (ಸಲಹಿ) ಓದಿಸಿಯುಂ ಬಿಲ್ವಿಡಿಯಿಸಿಯುಂ (ಬಿಲ್ಲು ಹಿಡಿಸಿ- ವಿದ್ಯೆಕಲಿಸಿ) ಕೆಚ್ಚುವಿರ್ದ (ನಿಕಟವಾಗಿ ಅಂಟಿಕೊಂಡು ಗಾಢವಾಗಿದ್ದ) ಕೂರ್ಮೆಗಳು (ಪ್ರೇಮವು) ಎರ್ದೆಯಂ ನಡೆ ಪಾಂಡುಸುತರ ಅಗಲ್ಕೆಗೆ

ನಿಡುಸುಯ್ದರ್ ದ್ರೋಣ
ಭೀಷ್ಮ ಕೃಪ ವಿದುರರ್ಕಳ್.
ಪದ್ಯ-೯೬:ಅರ್ಥ:ಪಾಂಡವರ
ನ್ನು, ಬಾಲ್ಯದಿಂದ ಸಲಹಿಯೂ
ವಿದ್ಯಾಭ್ಯಾಸ ಮಾಡಿಸಿಯೂ
ಬಿಲ್ವಿದ್ಯೆಯನ್ನು ಕಲಿಸಿಯೂ
ನಿಕಟವಾಗಿ ಅಂಟಿಕೊಂಡು
ಗಾಢವಾಗಿದ್ದ ಪ್ರೇಮವು
ಮನಸ್ಸನ್ನು ನಾಟಿರಲು ಬೀಷ್ಮ
ದ್ರೋಣ ಕೃಪ ವಿದುರರು

ಅವರ ಅಗಲಿಕೆಗಾಗಿ
ನಿಟ್ಟುಸಿರನ್ನು ಸೆಳೆದರು

ವ|| ಆಗಳ್ ವಿದುರಂ ಕೆಲನಱಿಯದಂತುಮವರಱಿ ವಂತುಂ ಸಾಮಾನ್ಯ ಸ್ಥಿತಿಯೊಳೆ ಬಟ್ಟೆಯ ನಂಜಿನ ಕಿರ್ಚಿನ ದೆಸೆಗೆ ಕರಂ ಪ್ರಯತ್ನಪರರಾಗಿಮೆಂದೊಡಂ ತೆ ಗೆಯ್ವೆಮೆಂದವರನಿರಲ್ವೇಳ್ದು ಪಯಣಂಬೋಗಿ-

ವಚನ:ಪದವಿಭಾಗ-ಅರ್ಥ:ಆಗಳ್ ವಿದುರಂ ಕೆಲನು ಅಱಿಯದಂತುಂ (ಪಕ್ಕದವರಿಗೆ ತಿಳಿಯದಂತೆ) ಅವರು ಅಱಿವಂತುಂ (ಅವರಿಗರ್ಥವಾಗುವಂತೆಯೂ) ಸಾಮಾನ್ಯ ಸ್ಥಿತಿಯೊಳೆ ಬಟ್ಟೆಯ ನಂಜಿನ (ದಾರಿಯಲ್ಲಿ ವಿಷದ) ಕಿರ್ಚಿನ ದೆಸೆಗೆ (ಬೆಂಕಿಯ ಅಪಾಯದ) ಕರಂ (ಹೆಚ್ಚು ಎಚ್ಚರವಾಗಿರಲು)

ಪ್ರಯತ್ನಪರರಾಗಿಂ ಎಂದೊಡೆ ಅಂತೆ ಗೆಯ್ವೆಮೆಂದು (ಹಾಗೆ ಮಾಡುವೆವೆಂದು) ಅವರನು ಇರಲ್ವೇೞ್ದು (ಇರಲು-ನಿಲ್ಲಲು ಹೇಳಿ) ಪಯಣಂಬೋಗಿ-

ವಚನ:ಅರ್ಥ:ಆಗ ವಿದುರನು ಪಕ್ಕದವರಿಗೆ ತಿಳಿಯದಂತೆಯೂ ಅವರಿಗರ್ಥವಾಗುವಂತೆಯೂ ಸರಳವಾದ ರೀತಿಯಲ್ಲಿಯೇ ‘ದಾರಿಯಲ್ಲಿ

ಪ್ರಾಪ್ತವಾಗಬಹುದಾದ ವಿಷ, ಅಗ್ನಿ ಮೊದಲಾದುವುಗಳ ವಿಷಯದಲ್ಲಿ ಎಚ್ಚರಿಕೆಯಾಗಿರಿ’ ಎಂದು ಹೇಳಲು ಅವರು ಹಾಗೆಯೇ ಮಾಡುತ್ತೇವೆಂದು ಹೇಳಿ ಅವರನ್ನು ಅಲ್ಲಿಯೇ ನಿಲ್ಲಲು ಹೇಳಿ ಮುಂದೆ ಪ್ರಯಾಣಮಾಡಿದರು.

ಕಂ|| ಪೊಳಪಿನ ಕಿರಣದ ಗಾಳಿಯ

ಪೊಳಪನೆ ಸೈರಿಸದ

ಕುಸುಮದಳ ಸುಕುಮಾರರ್|

ತಳರ್ದು ನೆಲೆಯಿಂದಮಾಗಳ್

ಕೊಳದಿಂ ಪೊಱಮಟ್ಟ

ಹಂಸೆಗಳ್ಗೆಣೆಯಾದರ್|| ೯೭ ||

ಪದ್ಯ-೯೭:ಪದವಿಭಾಗ-ಅರ್ಥ:ಪೊಳಪಿನ ಕಿರಣದ ಗಾಳಿಯ ಪೊಳಪನೆ ಸೈರಿಸದ (ಕಿರಣದ ಹೊಳಪನ್ನೂ ಗಾಳಿಯ ಸುಳಿವನ್ನೂ ಸೈರಿಸದ,) ಕುಸುಮದಳ

ಸುಕುಮಾರರ್ (ಕೋಮಲ)
ತಳರ್ದು ನೆಲೆಯಿಂದಮಾಗಳ್
(ತಮ್ಮ ವಾಸಸ್ಥಳದಿಂದ
ಹೊರಟು) ಕೊಳದಿಂ
ಪೊಱಮಟ್ಟ ಹಂಸೆಗಳ್ಗೆ
ಎಣೆಯಾದರ್
(ಸಮಾನರಾದರು)||
ಪದ್ಯ-೯೭:ಅರ್ಥ:ಪಾಂಡು
ಕುಮಾರರು
ಸೂರ್ಯನಕಿರಣದ
ಹೊಳಪನ್ನೂ ಗಾಳಿಯ

ಸುಳಿವನ್ನೂ ಸ್ಫುರಿಸದೆ,
ಹೂವಿನ ದಳದಂತೆ
ಕೋಮಲವಾಗಿದ್ದ ಆ
ಸುಕುಮಾರರು ತಮ್ಮ
ವಾಸಸ್ಥಳದಿಂದ ಹೊರಟು
ಸರೋವರವನ್ನು ಬಿಟ್ಟು
ಹೊರಟ ಹಂಸಗಳಿಗೆ
ಸಮಾನರಾದರು.

ವ|| ಆಗಿ ತಾವಾ ದಿಗಭೇಶ್ವರರಪ್ಪುದಱಿಂ ತಳರ್ದೆಡೆಯೆಡೆಯ ಮರಂಗಳ

ತೊರೆಗಳ ಬಾಡಂಗಳ
ಪೆಸರ್ಗಳಂ ಬೆಸಗೊಳುತ್ತುಂ
ಮಹಾಗ್ರಹಾರಂಗಳ
ಮಹಾಜನಂಗಳ ಕೊಟ್ಟ
ಪೊನ್ನಜನ್ನವಿರಂಗಳುಮನವರ
ಪರಕೆಯುಮಂ
ಕೆಯ್ಕೊಳುತ್ತುಮವರ್ಗೆ
ಬಾಧೆಯಾಗದಂತು
ಕಾಪಂನಿಯಮಿಸುತ್ತುಂ
ಕಾಲೂರ್ಗಳ ಗಂಡರ ಪೆಂಡಿರ
ನಡೆಯುಡೆಯ ನುಡಿಯ

ಮುಡಿಯ ಗಾಂಪಿಂಗೆ
ಮುಗುಳ್ಕಂಗೆ
ನಗುತ್ತುಮಲ್ಲಿಗಲ್ಲಿಗೊಡೆದ
ಕೆರೆಗಂ ಅೞಿದಾಯತನಕ್ಕಂ
ಧನಮನಿತ್ತು
ಜೀರ್ಣೋದ್ಧಾರಂಗಳಂ
ಮಾಡಿಸುತ್ತುಂ
ಬೀಡುದಾಣಂಗಳೊಳಿಕ್ಕಿದ
ಬಳ್ಳಿಗಾವಣಂಗಳೊಳಂ
ನನೆಯ ಜೊಂಪಂಗಳೊಳಂ
ವಿಶ್ರಮಿಸುತ್ತುಂ ಬಂದು-

ವಚನ:ಪದವಿಭಾಗ-ಅರ್ಥ:ಆಗಿ ತಾವಾ ದಿಗಭೇಶ್ವರರಪ್ಪುದಱಿಂ (ಬಹಳ ಶ್ರೀಮಂತರಾದುದರಿಂದ) ತಳರ್ದೆಡೆಯೆಡೆಯ (ಹೋದ ಪ್ರದೇಶದಲ್ಲಿ) ಮರಂಗಳ ತೊರೆಗಳ ಬಾಡಂಗಳ (ಗ್ರಾಮಗಳ) ಪೆಸರ್ಗಳಂ ಬೆಸಗೊಳುತ್ತುಂ (ಹೆಸರನ್ನು ಕೇಳುತ್ತಾ) ಮಹಾಗ್ರಹಾರಂಗಳ

ಮಹಾಜನಂಗಳ ಕೊಟ್ಟ
ಪೊನ್ನಜನ್ನವಿರಂಗಳುಮನು
(ಚಿನ್ನದ
ಯಜ್ಞೋಪವೀತಗಳನ್ನೂ)
ಅವರ ಪರಕೆಯುಮಂ
ಕೆಯ್ಕೊಳುತ್ತುಮ್ ಅವರ್ಗೆ
ಬಾಧೆಯಾಗದಂತು ಕಾಪಂ
(ಕಾವಲನ್ನು) ನಿಯಮಿಸುತ್ತುಂ
ಕಾಲೂರ್ಗಳ ಗಂಡರ ಪೆಂಡಿರ
ನಡೆಯುಡೆಯ ನುಡಿಯ
ಮುಡಿಯ ಗಾಂಪಿಂಗೆ

ಮುಗುಳ್ನಂಗೆ ನಗುತ್ತುಂ
ಅಲ್ಲಿಗಲ್ಲಿಗೆ ಒಡೆದ ಕೆರೆಗಂ
ಅೞಿದ ಆಯತನಕ್ಕಂ
(ಪಾಳಾಗಿದ್ದ
ದೇವಾಲಯಗಳಿಗೂ)
ಧನಮನಿತ್ತು
ಜೀರ್ಣೋದ್ಧಾರಂಗಳಂ
ಮಾಡಿಸುತ್ತುಂ
ಬೀಡುದಾಣಂಗಳೊಳು ಇಕ್ಕಿದ
ಬಳ್ಳಿಗಾವಣಂಗಳೊಳಂ

ನನೆಯ ಜೊಂಪಂಗಳೊಳಂ ವಿಶ್ರಮಿಸುತ್ತುಂ ಬಂದು- **ವಚನ:ಅರ್ಥ:**||ತಾವು ಬಹಳ ಶ್ರೀಮಂತರಾದುದರಿಂದ ಅಲ್ಲಿಂದ ಹೊರಟು ಹೋದ ಪ್ರದೇಶದಲ್ಲಿ ಪಕ್ಕಪಕ್ಕದಲ್ಲಿಯೇ ಸಿಕ್ಕಿದ ಮರಗಳ ನದಿಗಳ ಹಳ್ಳಿಗಳ ಹೆಸರುಗಳನ್ನು ವಿಚಾರಮಾಡುತ್ತಲೂ ಶ್ರೇಷ್ಠವಾದ ಅಗ್ರಹಾರದ

ಮಹಾಜನಗಳು ಕೊಟ್ಟಂತಹ
ಚಿನ್ನದ
ಯಜ್ಞೋಪವೀತಗಳನ್ನೂ
ಆಶೀರ್ವಾದಗಳನ್ನೂ
ಸ್ವೀಕರಿಸುತ್ತಲೂ ಅವರಿಗೆ
ಯಾವ ತೊಂದರೆಯೂ
ಆಗದಂತೆ ಕಾವಲನ್ನು
ಏರ್ಪಡಿಸುತ್ತಲೂ ಸಣ್ಣ
ಹಳ್ಳಿಗಳ ಗಂಡಸರ ಹೆಂಗಸರ
ಆಚಾರ, ಉಡುಪು ಮಾತು
ಮತ್ತು ತುರುಬುಗಳ

ಹಳ್ಳಿತನಕ್ಕೆ ಹುಸಿನಗುತ್ತಲೂ
ಅಲ್ಲಲ್ಲಿ ಒಡೆದುಹೋಗಿದ್ದ
ಕೆರೆಗೂ ಪಾಳಾಗಿದ್ದ
ದೇವಾಲಯಗಳಿಗೂ
ಹಣವನ್ನೂ ಕೊಟ್ಟು
ಮೊದಲಿದ್ದ ಸ್ಥಿತಿಗೆ ತರುತ್ತಲೂ
ತಾನು ಇಳಿದುಕೊಳ್ಳುವುದಕ್ಕೆ
ಹಾಕಿದ್ದ ಬಳ್ಳಿಯ
ಚಪ್ಪರಗಳಲ್ಲಿಯೂ ಹೂವಿನ
ಗೊಂಚಲುಗಳಲ್ಲಿಯೂ

ವಿಶ್ರಮಿಸಿಕೊಳ್ಳುತ್ತಲೂ
ಬಂದು

ಚಂ|| ಎಡಱಿದೀವ
ಕಲ್ಪತರುವೆಂದು
ವನೀಪಕಕೋಟಿ ಸಂತಸಂ
ಬಡೆ
ಪೊಡೆವೊಂದಕಾಳವಿಳಯಾಶ
ನಿಯೆಂದು ವಿರೋಧಿಗಳ್
ಮನಂ|
ಗಿಡೆ ಬಿಯಮುಂ
ಪರಾಕ್ರಮಮುಮೊಪ್ಪಿರೆ

ತನ್ನೊಡವುಟ್ಟಿದರ್ ಸಮಂ ತೊಡವರೆ ವಾರಣಾವತಮನೆಯ್ದಿದನಮ್ಮ ನ ಗಂಧವಾರಣಂ|| ೯೮||

ಪದ್ಯ-೯೮:ಪದವಿಭಾಗ-ಅರ್ಥ:ಎಡಱ ಅಱಿದು ಈವ (ಎಡರ-ಬಡತನ ನೋಡಿ ಕೊಡುವ,)ಕಲ್ಪತರುವೆಂದು ವನೀಪಕಕೋಟಿ (ಕೋಟಿ ಯಾಚಕರು) ಸಂತಸಂಬಡೆ (ಸಂತಸಪಡಲು); ಪೊಡೆವ

ಒಂದು ಅಕಾಳವಿಳಯ
ಅಶನಿಯೆಂದು (ಅಕಾಲದಲ್ಲಿ
ಪ್ರಾಪ್ತವಾಗುವ
ಪ್ರಳಯಕಾಲದ ಸಿಡಿಲೆಂದು)
ವಿರೋಧಿಗಳ್ ಮನಂಗಿಡೆ
(ಮನಸ್ಸು ಕೆಡಲು)
ಬಿಯಮುಂ (ವ್ಯಯವೂ??)
ಪರಾಕ್ರಮಮುಂ ಒಪ್ಪಿರೆ ತನ್ನ
ಒಡವುಟ್ಟಿದರ್ ಸಮಂತು
(ಚೆನ್ನಾಗಿ) ಒಡವರೆ (ತನ್ನ
ಒಡನೆ ಬರಲು)

ವಾರಣಾವತಮನು
ಎಯ್ದಿದನು ಅಮ್ಮನ
ಗಂಧವಾರಣಂ||
ಪದ್ಯ-೯೮:ಅರ್ಥ:೯೮.
ಬಡತನದ ಸ್ವರೂಪವನ್ನು
ತಿಳಿದು ದಾನಮಾಡುವ
ಕಲ್ಪವೃಕ್ಷವಿದೆಂದು
ಯಾಚಕಸಮೂಹವು
ಸಂತೋಷಪಡುವಂತಿರುವ
ದಾನಗುಣವೂ ಇದೊಂದು
ಅಕಾಲದಲ್ಲಿ ಪ್ರಾಪ್ತವಾಗುವ

ಪ್ರಳಯಕಾಲದ ಸಿಡಿಲೆಂದು ಶತ್ರುಗಳ ಮನಸ್ಸನ್ನು ಕೆಡಿಸುವ ಪರಾಕ್ರಮವೂ ತನ್ನಲ್ಲಿ ಪ್ರಕಾಶಿಸುತ್ತಿರಲು ತನ್ನ ಸಹೋದರರು ಜೊತೆಯಲ್ಲಿಯೇ ಕೂಡಿ ಬರುತ್ತಿರಲು ಅಮ್ಮನ ಗಂಧವಾರಣನಾದ (ಮತ್ತಗಜ) ಅರ್ಜುನನು (ಅರಿಕೇಸರಿಯು) ವಾರಣಾವತವನ್ನು ಬಂದು ಸೇರಿದನು.

♦

|| ಇದು ವಿವಿಧ
ವಿಬುಧಜನವಿನುತ
ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ದ್ವಿತೀಯಾಶ್ವಾಸಂ||

||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ
ರಚಿತವಾದುದೂ ಆದ

ವಿಕ್ರಮಾರ್ಜುನವಿಜಯದಲ್ಲಿ ಎರಡನೆಯ ಆಶ್ವಾಸವು||

♦♣♣♣♣♣♣♣♣♣♣♣♣♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	**2**	3	4	5	6	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ದ್ವಿತೀಯಾಶ್ವಾಸಂ&

oldid=178472" ಇಂದ
ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೧೫ ಮಾರ್ಚ್ ೨೦೧೯,
೨೧:೪೭ ರಂದು ಕೊನೆಯಾಗಿ
ಸಂಪಾದಿಸಲಾಯಿತು. •
ವಿಶೇಷವಾಗಿ ಟಿಪ್ಪಣಿ ಮಾಡದಿದ್ದ
ಹೊರತು ಪಠ್ಯ "CC BY-SA 4.0 "
ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ತೃತೀಯಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ತೃತೀಯಾಶ್ವಾಸಂ

- (XII.II-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

- ಸೂಚನೆ: ಪದ- 'ನೆಱೆಯೆ', ಎಂಬಲ್ಲಿ ಅನೇಕ ಕಡೆ 'ನೆಯೆ' ಎಂದು ಅಚ್ಚಾಗಿದೆ, (ನೆರೆಯೆ- ಬಹಳ ಎಂಬ ಅರ್ಥ; 'ಱೆ' ಅಚ್ಚಾಗಿಲ್ಲ) ಅದನ್ನು 'ನೆರೆಯೆ' ಎಂದು ಓದಿಕೊಳ್ಳಿ.

ಪಾಂಡವರು ವಾರಣಾವತ ಪಟ್ಟಣದ ಅರಗಿನ ಮನೆಯಲ್ಲಿ

<u>ದುರ್ಯೋಧನನ ತಂತ್ರ: ಪಾಂದವರು ವಾರಣಾವತಕ್ಕೆ: ಅರಗಿನ ಮನೆ ಪ್ರವೇಶ</u>

ಕಂ|| ಶ್ರೀಯನರಾತಿಬಳಾಸ್ಯ|
ಕ್ತ್ರೋಯಧಿಯೊಳ್ ಪಡೆದ
ವೀರನುಱದರಿಗಳನಾ||
ತ್ಮೀಯಪದಸುರಿತ ನಖ|
ಚಾಯೆಗಳೊಳ್ ನಿಱಿಸಿ ನಿಂದ
ಗಂಡಂ ಹರಿಗಂ|| ೧||

ಪದ್ಯ-೧:ಪದವಿಭಾಗ-

ಅರ್ಥ:ಶ್ರೀಯಂ

(ಜಯಲಕ್ಷ್ಮಿಯನ್ನು)
ಆರಾತಿಬಳಾಸೃಕ್
ತೋಯಧಿಯೊಳ್ (ಶತ್ರು
ಸೈನ್ಯದ ರಕ್ತಸಮುದ್ರದಲ್ಲಿ)
ಪಡೆದ ವೀರಂ (ಪಡೆದಂಥ
ಶೂರನು) ಉಱದ (ಸೇರದ)
ಅರಿಗಳಂ (ಶತ್ರುಗಳನ್ನು)
ಆತ್ಮೀಯ ಪದಸ್ಫುರಿತ (ತನ್ನ
ಪಾದದಲ್ಲಿ ಹೊಳೆಯುವ)
ನಖಚಾಯೆಗಳೊಳ್
(ಉಗುರುಕಾಂತಿಯಲ್ಲಿ)

ನಿಜಿಸಿ (ಸ್ಥಾಪಿಸಿ) ನಿಂದ ಗಂಡಂ (ನಿಂತ ವೀರನು) ಹರಿಗಂ (ಅರಿಕೇಸರಿಯು/ ಅರ್ಜುನನು)

ಪದ್ಯ-೧:ಅರ್ಥ: ಶತ್ರುಸೈನ್ಯದ ರಕ್ತಸಮುದ್ರದಲ್ಲಿ ಜಯಲಕ್ಷ್ಮಿಯನ್ನು ಪಡೆದ ವೀರನೂ, ತನಗೆ ಹೊಂದಿಕೊಳ್ಳದ ಶತ್ರುಗಳನ್ನು, ತನ್ನ ಕಾಲಿನಲ್ಲಿ ಹೊಳೆಯುತ್ತಿರುವ ಉಗುರಿನ

ಕಾಂತಿಯ ನೆರಳಿನಲ್ಲಿ ನಿಲ್ಲಿಸಿದ ಪರಾಕ್ರಮಶಾಲಿಯೂ ಆದವನು ಅರ್ಜುನನು- ಆ ಪಟ್ಟಣದ (ಶತ್ರುಗಳು ಅವನ ಪಾದಕ್ಕೆ ಶರಣಾಗದರು; ಅವನ ಪಾದದುಗರಿನಲ್ಲಿ ಅವರ ಮುಖ ಕಾಣುತ್ತಿತ್ತು).

ವ|| ಆ ಪೊಱಲ ಪೊಱವೋೞಲನೆಯ್ದೆ ವರ್ಪಾಗಳ್-

ವಚನ:ಪದವಿಭಾಗ-

ಅರ್ಥ:ಆ ಪೊಟಿಲ (ನಗರದ) ಪೊಱವೊೞಲನು ಐಯ್ದೆ ವರ್ಪಾಗಳ್ (ಪಟ್ಟಣದ ಹೊರಭಾಗವನ್ನು ಸಮೀಪಿಸಿದಾಗ)-

ವಚನ:ಅರ್ಥ:ಆ ವಾರಣಾವತ ಪಟ್ಟಣದ ಹೊರಭಾಗವನ್ನು ಸಮೀಪಿಸಿದಾಗ-

ಕಂ|| ಕತ್ತುರಿಯ ಸಗಣ ನೀರ್
ಬಿಡು
ಮುತ್ತಿನ ರಂಗವಲಿ ಮಿಳಿರ್ವ
ದುಗುಲದ ಗುಡಿ ಸಂ|
ಪತ್ತಿನ ಬಿತ್ತರದೆತ್ತಿದ
ಮುತ್ತಿನ ಮಂಡವಿಗೆ ಪೊಟಿಲ
ಮನೆಗಳೊಳೆಲ್ಲಂ|| ೨ ||

ಪದ್ಯ-೨:ಪದವಿಭಾಗ-

ಅರ್ಥ:ಕತ್ತುರಿಯ ಸಗಣ ನೀರ್ (ಕತ್ತೂರಿಯ ಪರಿಮಳ ಸೇರಿಸಿದ ಸಗಣಿಯ

ನೀರುಹಾಕಿ ಸಾರಿಸಿ, ಅದರ ಮೇಲೆ) ಬಿಡು ಮುತ್ತಿನ ರಂಗವಲಿ, ಮಿಳಿರ್ವ ದುಗುಲದ ಗುಡಿ (ಅಲುಗಾಡುವ ರೇಷ್ಮೆಯ ಧ್ವಜ), ಸಂಪತ್ತಿನ ಬಿತ್ತರದ ಎತ್ತಿದ ಮುತ್ತಿನ ಮಂಡವಿಗೆ(ಎತ್ತರದ ಮುತ್ತಿನ ಮಂಟಪಗಳು) ಪೊಱಿಲ ಮನೆಗಳೊಳೆಲ್ಲಂ (ಎಲ್ಲಾ ನಗರದ ಮನೆಗಳಲ್ಲೂ)

ಪದ್ಯ-೨:ಅರ್ಥ: ಪಟ್ಟಣದ ಮನೆಗಳ ಎದುರಿನಲ್ಲಿ ಕಸ್ತೂರಿಯ ಪರಿಮಳ ಸೇರಿಸಿದ ಸಗಣಿಯ ನೀರುಹಾಕಿ ಸಾರಿಸಿ, ಅದರ ಮೇಲೆ, ಬಿಡಿಬಿಡಿಯಾದ ಮುತ್ತಿನ ರಂಗೋಲಿ, ಚಲಿಸುತ್ತಿರುವ ರೇಷ್ಮೆಯ ಬಟ್ಟೆಯ ಬಾವುಟಗಳು, ಸಂಪತ್ತಿನ ವಿಸ್ತಾರವಾದ ಎತ್ತರದ ಮುತ್ತಿನ ಮಂಟಪ

ಇವುಗಳಿಂದ ಎಲ್ಲಾ ನಗರದ
ಮನೆಗಳಲ್ಲೂ
ಅಲಂಕೃತವಾಗಿದ್ದುವು

**ವ|| ಅಂತಾಗಳೊಂದುತ್ತರಂ
ಬಳೆಯೆ ಸೊಗಯಿಸುವ
ಪೊೞಲೊಳಷ್ಟ ಶೋಭೆಯಂ
ಮಾಡಿ ದುರ್ಯೋಧನನ
ಸಂಕೇತದೊಳ್ ಮುನ್ನಮೆ
ಸಮೆದಿರ್ದ ಪುರೋಚನಂ
ಗೋರೋಚನಾ ಸಿದ್ಧಾರ್ಥ
ದೂರ್ವಾಂಕುರ ಮಾತುಳುಂಗ**

ಶೃಂಗಾರದರ್ಪಣ ಪೂರ್ಣ
ಕಳಶ ಕಳಮಾವೃತ
ಕರಪಲ್ಲವೆಯರಪ್ಪ
ಪುರಂಧ್ರಿಯರುಂ ಬದ್ಧವಣದ
ಪರೆಗಳುಂ ಬೆರಸಿದಿರ್ವಂದು
ಮೆಯ್ಯಿಕ್ಕಿ ಪೊಡಮಟ್ಟು
ಪಾಂಡವರುಮಂ
ಮುಂದಿಟ್ಟೊಡಗೊಂಡು
ಬಂದು ಪೊೞಲಂ ಪುಗಿಸೆ
ಪೊಕ್ಕು ಬೀಡನೆಲ್ಲಿ
ಬಿಡುವಮನೆ ನಿಮ್ಮಯ್ಯಂ

ಧೃತರಾಷ್ಟ್ರನ ಬೆಸದಲ್
ಮುನ್ನಮೆ ಮಾಡಮಂ
ಸಮೆದಿಟ್ಟೆನಲ್ಲಿಗೆ
ಬಿಜಯಂಗೆಯ್ಯಿಮೆನೆ-

ವಚನ:ಪದವಿಭಾಗ-

ಅರ್ಥ:ಅಂತು ಆಗಳು ಒಂದು ಉತ್ತರಂ ಬಳೆಯೆ (ಅತಿಶಯವು ಬೆಳೆಯುತ್ತಿರಲು) ಸೊಗಯಿಸುವ ಪೊಟಿಲೊಳು (ಸೊಗಸಾಗಿ ಕಾಣುವ

ನಗರದಲ್ಲಿ) ಅಷ್ಟ ಶೋಭೆಯಂ

ಮಾಡಿ ದುರ್ಯೋಧನನ

ಸಂಕೇತದೊಳ್ ಮುನ್ನಮೆ

ಸಮೆದಿರ್ದ(ಮೊದಲೇ

ಸಿದ್ಧವಾಗಿದ್ದ) ಪುರೋಚನಂ

ಗೋರೋಚನಾ ಸಿದ್ಧಾರ್ಥ

ದೂರ್ವಾಂಕುರ ಮಾತುಳುಂಗ

ಶೃಂಗಾರದರ್ಪಣ ಪೂರ್ಣ

ಕಳಶ ಕಳಮಾವೃತ

ಕರಪಲ್ಲವೆಯರಪ್ಪ

ಪುರಂಧ್ರಿಯರುಂ

(ಮುತ್ತೈದೆಯರು) ಬದ್ಧವಣದ
(ವರ್ಧಮಾನವೆಂಬ ವಾದ್ಯದ)
ಪಗಳುಂಬೆರಸಿ ಇದಿರ್ವಂದು
(ಹೊಗಳುವಿಕೆ ಸೇರಿ
ಎದುರುಗೊಂಡು) ಮೆಯ್ಯಿಕ್ಕಿ
ಪೊಡಮಟ್ಟು
(ದೀರ್ಘದಂಡನಮಸ್ಕಾರಮಾ
ಡಿ) ಪಾಂಡವರುಮಂ
ಮುಂದಿಟ್ಟೊಡಗೊಂಡು
ಬಂದು ಪೊಱಲಂ
(ಪಟ್ಟಣವನ್ನು) ಪುಗಿಸೆ ಪೊಕ್ಕು

(ಪ್ರವೇಶಮಾಡಿಸಲು ಹೊಕ್ಕು)
'ಬೀಡನು ಎಲ್ಲಿ ಬಿಡುವಮೆನೆ,'
ನಿಮ್ಮ ಅಯ್ಯಂ (ನಮ್ಮ ತಂದೆ)
ಧೃತರಾಷ್ಟ್ರನ ಬೆಸದಲ್
(ಅಪ್ಪಣೆಯಲ್ಲಿ) ಮುನ್ನಮೆ
ಮಾಡಮಂ (ಮನೆಯನ್ನು)
ಸಮೆದಿಟ್ಟೆನು ಅಲ್ಲಿಗೆ
ಬಿಜಯಂಗೆಯ್ಯಿಂ ಎನೆ-
ವಚನ:ಅರ್ಥ:ಹಾಗೆ
ವೈಭವದಿಂದ ಕೂಡಿ
ಸೊಗಸಾಗಿ ಕಾಣುವ

ಪಟ್ಟಣದಲ್ಲಿ ಕಲಶ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆಯೆಂಬ ಎಂಟು ವಿಧ ಶೋಭೆಯ ಸ್ವಾಗತಗಳಿಂದ ಕೂಡಿ ದುರ್ಯೋಧನನ ಸೂಚನೆಯ ಪ್ರಕಾರ ಮೊದಲೇ ಸಿದ್ಧವಾಗಿದ್ದ ಪುರೋಚನನು ಗೋರಚನ (ಹಸುವಿನ ಎದೆಯಲ್ಲಿರುವ ಒಂದು ಜಾತಿಯ ಕೊಬ್ಬು) ಅಕ್ಷತೆ, ಗರಿಕೆಯ ಚಿಗುರು,

ಮಾದಲಹಣ್ಣು, ಕನ್ನಡಿ,
ಕಳಮಾಕ್ಷತೆ
ಮೊದಲಾದವುಗಳನ್ನು
ಕಯ್ಯಲ್ಲಿ ಧರಿಸಿದ್ದ
ಮುತ್ತೈದೆಯರು (ಸ್ತ್ರೀಯರು)
ಮಂಗಳವಾದ್ಯಗಳು
ಮೊದಲಾದವುಗಳಿಂದ ಕೂಡಿ
ಎದುರಿಗೆ ಬಂದು
ದೀರ್ಘದಂಡನಮಸ್ಕಾರಮಾ
ಡಿ ಪಾಂಡವರನ್ನು
ಮುಂದಿಟ್ಟುಕೊಂಡು ಬಂದು

ಪಟ್ಟಣವನ್ನು
ಪ್ರವೇಶಮಾಡಿಸಲು ಹೊಕ್ಕು
‘ಎಲ್ಲಿ ಬೀಡುಬಿಡೋಣ’
(ಇಳಿದುಕೊಳ್ಳೋಣ) ಎಂದು
ಪಾಂಡವರು ಪ್ರಶ್ನೆಮಾಡಲು
ಅವನು ನಿಮ್ಮಯ್ಯನಾದ
ಧೃತರಾಷ್ಟ್ರನ ಆಜ್ಞೆಯ ಪ್ರಕಾರ
ಮೊದಲೇ ಮನೆಯನ್ನು
ಸಿದ್ಧಪಡಿಸಿದ್ದೇನೆ; ಅಲ್ಲಿಗೆ
ದಯಮಾಡಿಸಿ ಎನ್ನಲು-,

ಕಂ|| ಅರಗು ಮೊದಲಾಗೆ ಘೃತ ಸ

ಜ್ಜರಸಂ ಬೆಲ್ಲಂ

ಸಣಂಬಿವೆಂಬಿವಱಿಂ ವಿ|

ಸ್ತರಿಸಿ ಸಮೆದಿಂದ್ರಭವನಮ

ಧರೆಗವತರಿಸಿರ್ದುದೆನಿಸುವರ

ಗಿನ ಮನೆಯಂ|| ೩

ಪದ್ಯ-೩:ಪದವಿಭಾಗ-

ಅರ್ಥ:ಅರಗು ಮೊದಲಾಗೆ ಘೃತ ಸಜ್ಜರಸಂ ಬೆಲ್ಲಂ ಸಣಂಬು ಎಂಬಿವಱಿಂ (ಎಂಬ

ಮೊದಲಾದ ವಸ್ತುಗಳಿಂದ)
ವಿಸ್ತರಿಸಿ ಸಮೆದ
(ಮಾಡಲ್ಪಟ್ಟ) ಇಂದ್ರಭವನಮೆ
ಧರೆಗೆ ಅವತರಿಸಿರ್ದುದು
ಎನಿಸುವ ಅರಗಿನ ಮನೆಯಂ
ಪದ್ಯ-೩:ಅರ್ಥ:ಅರಗು
ಮೊದಲಾದ ತುಪ್ಪ, ಸಜ್ಜರಸ
(ರಾಳದರಸ), ಬೆಲ್ಲ, ಸೆಣಬು
ಇವುಗಳಿಂದ ವಿಸ್ತಾರವಾಗಿ
ನಿರ್ಮಿಸಿದ ದೇವೇಂದ್ರನ
ಅರಮನೆಯೇ ಭೂಮಿಗಿಳಿದು

ಬಂದಿದೆಯೋ ಎನಿಸುವಂತಿದ್ದ ಅರಗಿನ ಮನೆಯನ್ನು-

ವ|| ತಾನೆ ಮುಂದಿಟ್ಟೊಡಂಗೊಂಡು ಬಂದು ಪುಗಿಸೆ ಪಾಂಡವರಯ್ವರುಂ ಕೊಂತಿವೆರಸು ಕಿಱಿದಾನುಂ ಬೇಗಮಿರ್ದು ದಾನ ಸನ್ಮಾನಾದಿಗಳಿಂ ಸಂತಸಂಬಡಿಸಿ ಪುರೋಚನನಂ ಬೀಡಿಂಗೆ

ಪೋಗಲ್ವೇಱ್ದು ಧರ್ಮಪುತ್ರನಾ ಮನೆಯಂ ಪರೀಕ್ಷಿಸಿ ನೋಡಲೊಡಮೞಿದು ನಿಜಾನುಜ ಸಹಿತಂ ಕೊಂತಿವೆರಸೇಕಾಂತದೊಳಿಂತೆಂದಂ-

ವಚನ:ಪದವಿಭಾಗ-

ಅರ್ಥ:ಪುರೋಚನನು - ತಾನೆ ಮುಂದಿಟ್ಟೊಡಂಗೊಂಡು ಬಂದು ಪುಗಿಸೆ (ಒಳ ಹೊಗಿಸಲು)

ಪಾಂಡವರಯ್ವರುಂ
ಕೊಂತಿವೆರಸು
(ಕುಂತಿಯೊಡಗೂಡಿ)
ಕಿಱಿದಾನುಂ ಬೇಗಂ ಇರ್ದು
ದಾನ ಸನ್ಮಾನಾದಿಗಳಿಂ
ಸಂತಸಂ ಬಡಿಸಿ
ಪುರೋಚನನಂ ಬೀಡಿಂಗೆ
ಪೋಗಲ್ವೇೞ್ದು (ಪೋಗಲ್
ಹೇಳ್ದು :ಅವನ ಮನೆಗೆ
ಹೋಗುವ ಹಾಗೆ ಹೇಳಿ)
ಧರ್ಮಪುತ್ರನು ಆ ಮನೆಯಂ

ಪರೀಕ್ಷಿಸಿ ನೋಡಲು ಒಡಂ
ಅಱಿದು (ಕೂಡಲೆ ತಿಳಿದು)
ನಿಜಾನುಜ ಸಹಿತಂ
ಕೊಂತಿವೆರಸಿ ಏಕಾಂತದೊಳು
ಇಂತೆಂದಂ-
ವಚನ:ಅರ್ಥ:ಪುರೋಚನ
ನು ತಾನೆ ಮುಂದೆ ಇದ್ದು
ಒಡಗೊಂಡು ಬಂದು
ಪ್ರವೇಶಮಾಡಿಸಲು ಅಯ್ದು
ಜನ ಪಾಂಡವರೂ
ಕುಂತಿಯೊಡಗೂಡಿ ಸ್ವಲ್ಪ

ಕಾಲವಿದ್ದು
ದಾನಸನ್ಮಾನಾದಿಗಳಿಂದ
ಸಂತೋಷಪಡಿಸಿ
ಪುರೋಚನನನ್ನು ಅವನ
ಮನೆಗೆ ಹೋಗುವ ಹಾಗೆ ಹೇಳಿ
ಧರ್ಮರಾಜನು ಆ
ಮನೆಯನ್ನು ಪರೀಕ್ಷಿಸಿ ನೋಡಿ
ಅದರ ರಹಸ್ಯವನ್ನು ಕೂಡಲೆ
ತಿಳಿದು ತಮ್ಮಂದಿರು ಮತ್ತು
ಕುಂತಿ ಒಡಗೂಡಿ, ಅವರಿಗೆ
ರಹಸ್ಯವಾಗಿ ಹೀಗೆ ಹೇಳಿದನು-

ಚಂ|| ಇದು
ಮನೆಯಂದಮಲ್ತುರಿವ
ದಳ್ಳುರಿಯುಗ್ಗಡದಂದಮಾಗಿ
ತೋ
ಱಿದಪುದು ಕಣ್ಗೆ
ಸಜ್ಜರಸದೆಣ್ಣೆಯ ತುಪ್ಪದ
ಕಂಪಿದೆಲ್ಲಮೆಂ|
ಬುದೆ ಬಗೆದಲ್ಲಿ
ನೋಡುವೊಡಮಿಟ್ಟಗೆ
ಕಲ್ಮರನೆಂಬುದಿಲ್ಲ ಕೂ

ರದನಿದನೊಡ್ಡಿದಂ ಪಗೆಗೆ ಸಂತಸಮಾಗಿರೆ ಮಾರಿ ಸುಯ್ಗುಮೇ|| ೪||

ಪದ್ಯ-00:ಪದವಿಭಾಗ-ಅರ್ಥ:ಇದು ಮನೆಯಂದಂ ಅಲ್ತು ಉರಿವ ದಳ್ಳುರಿಯು ಉಗ್ಗಡದ ಅಂದಮಾಗಿ (ಉರಿಯುವ ಜ್ವಾಲೆಗಳ ರೀತಿಯಲ್ಲಿ) ತೋಱಿದಪುದು ಕಣ್ಗೆ; ಸಜ್ಜರಸದ (ರಾಳದ) ಎಣ್ಣೆಯ ತುಪ್ಪದ ಕಂಪು

ಇದೆಲ್ಲಂ ಎಂಬುದೆ ಬಗೆದಲ್ಲಿ
(ಪರೀಕ್ಷಿಸಿದರೆ ಕಾಣುವುದು)
ನೋಡುವೊಡೆಂ ಇಟ್ಟಗೆ ಕಲ್ಲು
ಮರನೆಂಬುದು ಇಲ್ಲ
ಕೂರದನು(ಪ್ರೀತಿಸದವನು)
ಇದನು ಒಡ್ಡಿದಂ ಪಗೆಗೆ
(ಇದನ್ನು ಹಗೆತನಕ್ಕಾಗಿ
ಒಡ್ಡಿದ್ದಾನೆ) ಸಂತಸಮಾಗಿರೆ
ಮಾರಿ ಸುಯ್ಗುಮೇ(ಶತ್ರುವಿಗೆ
ಸಂತೋಷವಾದರೆ, ಮಾರಿ
ದುಃಖಿಸುವಳೇ)

ಪದ್ಯ-00:ಅರ್ಥ:ಇದು ಮನೆಯ ಹಾಗೆ ಕಾಣುವುದಿಲ್ಲ. ಉರಿಯುವ ಜ್ವಾಲೆಗಳ ರೀತಿಯಲ್ಲಿ ಕಣ್ಣಿಗೆ ಕಾಣುತ್ತಿದೆ. ಎಲ್ಲಿ ಪರೀಕ್ಷಿಸಿ ನೋಡಿದರೂ ಸಜ್ಜರಸದ/ರಾಳದ ಎಣ್ಣೆಯ ತುಪ್ಪದ ವಾಸನೆಯೇ ಇದೆ. ಇಟ್ಟಿಗೆ, ಕಲ್ಲು, ಮರ ಎಂಬುವುದಿಲ್ಲ. ಶತ್ರುವಿಗೆ ಸಂತೋಷವಾಗುವುದಕ್ಕೋಸ್ಕರ ಅಹಿತನಾದ

ದುರ್ಯೋಧನನು (ವಿರೋಚನನ ಮೂಲಕ) ಈ ಉಪಾಯವನ್ನು ಒಡ್ಡಿದ್ದಾನೆ. ಶತ್ರುವಿಗೆ ಸಂತೋಷವಾದರೆ, ಮಾರಿ ದುಃಖಿಸುವಳೇ? (ಅಂದರೆ ಇಲ್ಲ, ಮಾರಿಗೆ ಯಾರು ಸತ್ತರೂ ದುಃಖವಿಲ್ಲ)

ವ||

ಅದಲ್ಲದೆಯುಮತ್ಯಾದರಸ್ಸಂಭ್ರಮಮುತ್ಪಾದಯತಿಯೆಂಬುದೀ ಪುರೋಚನನೆಂಬ ಬೂತು

ಸುಯೋಧನನ ಬೆಸದಿಂ
ನಮಗಿನಿತಾದರಂ ಗೆಯ್ವಿದೆಲ್ಲಂ
ನಮ್ಮಂ ಮೆಳ್ಪಡಿಸಲೆಂದೆ
ಮಾಡಿದಂ
ನಾಮಿದನಱಿಯದಂತು
ಬೇಂಟೆಯ ನೆವದೊಳ್
ಬಟ್ಟೆಗಳಂ
ಸೋದಿಸುವಮೆಂದು ನಿಚ್ಚಂ
ಬೇಂಟೆವೋಗೆ
ಪುರೋಚನನುಂ ಪೆಱಗಣ
ಕಾಪಂ ಕಣ್ಗಾಪಿನಲೆ

ಕಾದಿರ್ಪನ್ನೆಗಂ ವಿದುರನ
ವಿಶ್ವಾಸ ದಾಸಂ ಕನಕನೆಂಬಂ
ಬಂದು ಪಾಂಡವರಂ
ಕಂಡೇಕಾಂತದೊಳ್
ವಿದುರನಟ್ಟಿದ ವಿನ್ನಾಣಂಗಳಂ
ಪೇೞ್ದು ನಂಬಿಸಿ ನೀಮೆಂತುಂ
ಬಲ್ಲಿರಂತೆ ಪೊಱಮಟ್ಟು
ಪೋಗಿಮೆಂದು ಜತುಗೃಹ
ಕವಾಟ ಪುಟ ಸಂಗಳೊಳ್
ಸುರಂಗಮಂ ಗಂಗೆಯೊಳ್
ಮೂಡುವಂತಾಗೆ ಸಮೆದು

ಪೇೞ್ದು ಪೋಪುದುಂ

ಪಾಂಡವರುಂ ಪುರೋಚನಂ

ತಮ್ಮಂ ಮಱುದಿವಸಂ

ಛಿದ್ರಿಸುವನೆನಲುಂ ಮುನ್ನಿನ

ದಿವಸಮೊಳಗಣ

ಪರಿಜನಮೆಲ್ಲಮಂ

ಪಾರ್ವರನೂಡುವ ನೆವದೊಳೆ

ಪೊಱಮಡಿಸಿ

ಸೂರ್ಯಾಸ್ತಮಯದೊಳ್

ಪಾರ್ವರನೂಡಿ

ನಿಷಾದಿತಿಯೆಂಬ

ಬೇಡಿತಿಗಮಯ್ವರ್
ಮಗಂದಿರ್ಗಮುಣಲಿಕ್ಕಿದೊಡೆ
ತಣಿಯುಂಡು ಬೆಂಡುಮರಲ್ದು
ಮಱಸುಂದಿದರ್
ಪುರೋಚನನುಮಾ
ಮನೆಯೊಳೊಂದೋವರಿಯೊ
ಳ್ ಮಱಕೆಂದಿದನಾ
ಪ್ರಸ್ತಾವದೊಳರ್ಧ
ರಾತ್ರಿಯಾದಾಗಳ್
ಕೊಂತಿವೆರಸಯ್ವರುಮಂ
ಮುನ್ನಮೊಯ್ಯನೊಯ್ಯನೆ

ಸುರಂಗದಿ ಪೊಱಮಡಿಸಿ ಭೀಮಸೇನಂ ಪುರೋಚನಂ ಮಱಕೆಂದಿರ್ದೋವರಿಯೊಳ್ ಕಿಚ್ಚಂ ಕೊಳಿಸಲೊಡಂ-

ವಚನ:ಪದವಿಭಾಗ-ಅರ್ಥ:

ಅದಲ್ಲದೆಯುಂ 'ಅತ್ಯಾದರಃ ಸಂಭ್ರಮಂ ಉತ್ಪಾದಯತಿ'ಯೆಂಬುದು (‘ವಿಶೇಷವಾದ ಆದರವು ಭಯವನ್ನುಂಟುಮಾಡುತ್ತದೆ’) ಈ ಪುರೋಚನನೆಂಬ ಬೂತು

(ಭೂತ) ಸುಯೋಧನನ
ಬೆಸದಿಂ (ಆಜ್ಞೆಯಂತೆ) ನಮಗೆ
ಇನಿತು ಆದರಂ ಗೆಯ್ದುದೆಲ್ಲಂ
(ಇಷ್ಟು ಆದರ ಮಾಡಿದ್ದು)
ನಮ್ಮಂ ಮೆಳ್ಪಡಿಸಲೆಂದೆ
ಮಾಡಿದಂ (ನಮ್ಮನ್ನು
ಮೋಸಪಡಿಸಲಾಗಿಯೇ
ಮಾಡಿದ್ದು) ನಾಂ ಇದನು
ಅಱಿಯದಂತು ಬೇಂಟೆಯ
ನೆವದೊಳ್ ಬಟ್ಟೆಗಳಂ
ಸೋದಿಸುವಮೆಂದು ನಿಚ್ಚಂ

ಬೇಂಟೆವ್ರೋಗೆ(ನಾವು ಇದನ್ನು
ತಿಳಿಯದ ಹಾಗೆ ಬೇಟೆಗೆ
ಹೋಗುವ ನೆಪದಲ್ಲಿ
ದಾರಿಯನ್ನು ಹುಡುಕೋಣ'
ಎಂದು ನಿತ್ಯವೂ ಬೇಟೆಗೆ
ಹೋಗುತ್ತಿರಲು)
ಪುರೋಚನನುಂ ಪೆಱಗಣ
ಕಾಪಂ ಕಣ್ಣಾಗಿಪಿನಲೆ
ಕಾದಿರ್ಪನ್ನೆಗಂ
(ಪುರೋಚನನು ಹೊರಗಿನ
ರಕ್ಷಣೆಯನ್ನು ತನ್ನ ಕಣ್ಣಿನ

ಮೇಲುನೋಟದಿಂದಲೇ
ನೋಡುತ್ತಿರುವಷ್ಟರಲ್ಲಿ)
ವಿದುರನ ವಿಶ್ವಾಸ ದಾಸಂ
ಕನಕನೆಂಬಂ ಬಂದು
ಪಾಂಡವರಂ ಕಂಡು
ಏಕಾಂತದೊಳ್ ವಿದುರನು
ಅಟ್ಟಿದ ವಿನ್ನಾಣಂಗಳಂ
ಪೇೞ್ದು (ವಿದುರನ ನಂಬಿಕೆಗೆ
ಪಾತ್ರನಾದ ಕನಕನೆಂಬ
ಸೇವಕನು ಬಂದು
ಪಾಂಡುವರನ್ನು ಕಂಡು

ರಹಸ್ಯವಾಗಿ ಅವರಿಗೆ
ವಿದುರನು ಕಳುಹಿಸಿದ
ಸಂಕೇತಗಳನ್ನು ಹೇಳಿ)
ನಂಬಿಸಿ ನೀಂ ಎಂತುಂ
ಬಲ್ಲಿರಂತೆ (ನಂಬುವ ಹಾಗೆ
ಮಾಡಿ 'ನೀವು ಹೇಗೂ
ತಿಳಿದವರಾಗಿದ್ದೀರಿ)
ಪೊಱಮಟ್ಟು ಪೋಗಿಂ ಎಂದು
(ಹಾಗೆಯೇ ಹೊರಟು ಹೋಗಿ
ಎಂದು) ಜತುಗೃಹ ಕವಾಟ
ಪುಟ ಸಂಗಳೊಳ್ (ಅರಗಿನ

ಮನೆಯ ಬಾಗಿಲಿನ
ಸಂದಿಯಲ್ಲಿ) ಸುರಂಗಮಂ
ಗಂಗೆಯೊಳ್
ಮೂಡುವಂತಾಗೆ ಸಮೆದು
ಪೇೞ್ದು
ಪೋಪುದುಂ(ನೆಲದೊಳಗಿನ
ರಂಧ್ರವನ್ನು ಗಂಗೆಯ ಆಚೆಯ
ದಡದಲ್ಲಿ ಹೊರಗೆ ಬರುವಂತೆ
ಸಿದ್ಧಪಡಿಸಿ ಆ ವಿಷಯವನ್ನು
ಅವರಿಗೆ ಹೇಳಿಹೋದನು.)
ಪಾಂಡವರುಂ ಪುರೋಚನಂ

ತಮ್ಮಂ ಮಱುದಿವಸಂ
ಛಿದ್ರಿಸುವನೆನಲುಂ
(ಪುರೋಚನನು ತಮ್ಮನ್ನು
ಮುಂದಿನ ದಿವಸ
ಛೇದಿಸುತ್ತಾನೆಂದು ತಿಳಿದು)
ಮುನ್ನಿನ ದಿವಸಮೊಳು ಅಗಣ
ಪರಿಜನಮೆಲ್ಲಮಂ
ಪಾರ್ವರನು ಊಡುವ
ನೆವದೊಳೆ ಪೊಱಮಡಿಸಿ
(ಮೊದಲ ದಿನವೇ
ಬ್ರಾಹ್ಮಣರಿಗೆ

ಭೋಜನಮಾಡಿಸುವ
ನೆಪದಲ್ಲಿ ತಮ್ಮ
ಪರಿವಾರವನ್ನೆಲ್ಲ ಹೊರಗೆ
ಹೋಗುವ ಹಾಗೆ ಮಾಡಿ.)
ಸೂರ್ಯಾಸ್ತಮಯದೊಳ್
ಪಾರ್ವರನು ಊಡಿ
(ಸಂಜೆಯಲ್ಲಿ ಬ್ರಾಹ್ಮಣರಿಗೆ
ಊಟ ಮಾಡಿಸಿ),
ನಿಷಾದಿತಿಯೆಂಬ ಬೇಡಿತಿಗಂ
ಅಯ್ವರ್ ಮಗಂದಿರ್ಗಂ
ಉಣಲಿಕ್ಕಿದೊಡೆ

(ನಿಷಾದಿತಿಯೆಂಬ
ಬೇಡರವಳಿಗೂ ಅವಳ
ಅಯ್ದು ಜನ ಮಕ್ಕಳಿಗೂ
ಊಟ ಮಾಡಿಸಿದಾಗ)
ತಣಿಯುಂಡು ಬೆಂಡುಮರಲ್ದು
ಮಱಸುಂದಿದರ್ (ಅವರು
ತೃಪ್ತಿಯಾಗಿ ತಿಂದು
ಬಳಲಿದಂತವರಾಗಿ
ಮೈಮರೆತು ನಿದ್ರಿಸಿದರು.)
ಪುರೋಚನನುಂ ಆ
ಮನೆಯೊಳೊಂದು

ಓವರಿಯೊಳ್
ಮಱಿಕೆಂದಿದನು
(ಪುರೋಚನನೂ ಆ ಮನೆಯ
ಒಂದು ಕೋಣೆಯಲ್ಲಿ
ಎಚ್ಚರತಪ್ಪಿ ಮಲಗಿದನು.) ಆ
ಪ್ರಸ್ತಾವದೊಳರ್ಧ
ರಾತ್ರಿಯಾದಾಗಳ್
ಕೊಂತಿವೆರಸಯ್ವರುಮಂ
ಮುನ್ನಮೊಯ್ಯನೊಯ್ಯನೆ
ಸುರಂಗದಿ ಪೊಱಮಡಿಸಿ (ಆ
ಸಂದರ್ಭದಲ್ಲಿ

ಅರ್ಧರಾತ್ರಿಯಾದಾಗ ಭೀಮಸೇನನು ಕುಂತಿಯೊಡನೆ ಅಯ್ದುಜನಗಳನ್ನು ಮೊದಲೇ ಮೆಲ್ಲಮೆಲ್ಲಗೆ ಸುರಂಗದಿಂದ ಹೊರಡಿಸಿ,) ಭೀಮಸೇನಂ ಪುರೋಚನಂ ಮಱಿಕೆಂದಿರ್ದ ಓವರಿಯೊಳ್ ಕಿಚ್ಚಂ ಕೊಳಿಸಲುಒಡಂ (ಪುರೋಚನನು ಮೈಮರೆತು ಮಲಗಿದ್ದ ಕೊಠಡಿಗೆ

ಬೊಂಕಿಯನ್ನು ಹಚ್ಚಲು, ಒಡನೆ) - **ವಚನ:ಅರ್ಥ**:ಅಷ್ಟೇ ಅಲ್ಲದೆ ‘ವಿಶೇಷವಾದ ಆದರವು ಭಯವನ್ನುಂಟುಮಾಡುತ್ತದೆ’ ಎಂಬುದು. ‘ಈ ಪುರೋಚನನೆಂಬ ಭೂತವು ದುರ್ಯೋಧನನ ಆಜ್ಞೆಯ ಪ್ರಕಾರ ನಮಗಿಷ್ಟು ಆದರ ಮಾಡಿದ್ದು ನಮ್ಮನ್ನು ಮೋಸಪಡಿಸಲಾಗಿಯೇ

ಮಾಡಿದ್ದಾನೆ. ನಾವು ಇದನ್ನು ತಿಳಿಯದ ಹಾಗೆ ಬೇಟೆಗೆ ಹೋಗುವ ನೆಪದಲ್ಲಿ ದಾರಿಯನ್ನು ಹುಡುಕೋಣ' ಎಂದು ನಿತ್ಯವೂ ಬೇಟೆಗೆ ಹೋಗುತ್ತಿರಲು ಪುರೋಚನನು ಹೊರಗಿನ ರಕ್ಷಣೆಯನ್ನು ತನ್ನ ಕಣ್ಣಿನ ಮೇಲುನೋಟದಿಂದಲೇ ನೋಡುತ್ತಿರುವಷ್ಟರಲ್ಲಿ ವಿದುರನ ನಂಬಿಕೆಗೆ

ಪಾತ್ರನಾದ ಕನಕನೆಂಬ
ಸೇವಕನು ಬಂದು
ಪಾಂಡುವರನ್ನು ಕಂಡು
ರಹಸ್ಯವಾಗಿ ಅವರಿಗೆ
ವಿದುರನು ಕಳುಹಿಸಿದ
ಸಂಕೇತಗಳನ್ನು ಹೇಳಿ
ನಂಬುವ ಹಾಗೆ ಮಾಡಿ ‘ನೀವು
ಹೇಗೂ ತಿಳಿದವರಾಗಿದ್ದೀರಿ;
ಹಾಗೆಯೇ ಹೊರಟು ಹೋಗಿ
ಎಂದು ಅರಗಿನ ಮನೆಯ
ಬಾಗಿಲಿನ ಸಂದಿಯಲ್ಲಿ

ನೆಲದೊಳಗಿನ ರಂಧ್ರವನ್ನು
ಗಂಗೆಯ ಆಚೆಯ ದಡದಲ್ಲಿ
ಹೊರಗೆ ಬರುವಂತೆ
ಸಿದ್ಧಪಡಿಸಿ ಆ ವಿಷಯವನ್ನು
ಅವರಿಗೆ ಹೇಳಿಹೋದನು.
ಪಾಂಡವರೂ ಕೂಡ
ಪುರೋಚನನು ತಮ್ಮನ್ನು
ಮುಂದಿನ ದಿವಸ
ಭೇದಿಸುತ್ತಾನೆಂದು ತಿಳಿದು
ಮೊದಲ ದಿನವೇ ಬ್ರಾಹ್ಮಣರಿಗೆ
ಭೋಜನಮಾಡಿಸುವ

ನೆಪದಲ್ಲಿ ತಮ್ಮ
ಪರಿವಾರವನ್ನೆಲ್ಲ ಹೊರಗೆ
ಹೋಗುವ ಹಾಗೆ ಮಾಡಿದರು.
ಸೂರ್ಯನು ಮುಳುಗುವ
ಹೊತ್ತಿನಲ್ಲಿ ಬ್ರಾಹ್ಮಣರಿಗೆಲ್ಲ
ಊಟ ಮಾಡಿಸಿ
ನಿಷಾದಿತಿಯೆಂಬ
ಬೇಡರವಳಿಗೂ ಅವಳ
ಅಯ್ದು ಜನ ಮಕ್ಕಳಿಗೂ
ಊಟ ಮಾಡಿಸಿದಾಗ, ಅವರು
ತೃಪ್ತಿಯಾಗಿ ತಿಂದು

ಬಳಲಿದಂತವರಾಗಿ
ಮೈಮರೆತು ನಿದ್ರಿಸಿದರು.
ಪುರೋಚನನೂ ಆ ಮನೆಯ
ಒಂದು ಕೋಣೆಯಲ್ಲಿ
ಎಚ್ಚರತಪ್ಪಿ ಮಲಗಿದನು. ಆ
ಸಂದರ್ಭದಲ್ಲಿ
ಅರ್ಧರಾತ್ರಿಯಾದಾಗ
ಭೀಮಸೇನನು ಕುಂತಿಯೊಡನೆ
ಅಯ್ದುಜನಗಳನ್ನು ಮೊದಲೇ
ನಿಧಾನವಾಗಿ ಸುರಂಗದಿಂದ
ಹೊರಡಿಸಿ ಪುರೋಚನನು

ಮೈಮರೆತು ಮಲಗಿದ್ದ
ಕೊರಡಿಗೆ ಬೆಂಕಿಯನ್ನು
ಹಚ್ಚಲು, ಒಡನೆ-

ಕಂ|| ಅಡೆವೊತ್ತದೆ
ಕಿಱಿಕಿಱಿದನೆ
ಸುಡದಿನಿಸರೆಪೊರೆಕನಾಗದೆ
ಯೆ ಸಸಿದಂದೊಂ|
ದೆಡೆಯೊಳಗೊಟ್ಟಿರ್ದರಳೆಯ
ನೊಡನಳುರ್ವಂತುಳುರ್ದನನ
ಲನರಗಿನ ಮನೆಯಂ|| ೫||

ಪದ್ಯ-00:ಪದವಿಭಾಗ-ಅರ್ಥ:ಅಡೆವೊತ್ತದೆ (ತಳ ಹತ್ತದೆ) ಕಿಱಿಕಿಱಿದನೆ (ಸ್ವಲ್ಪ ಸ್ವಲ್ಪ) ಸುಡದೆ ಇನಿಸು ಅರೆಪೊರೆಕನಾಗದೆಯೆ, ಸಸಿದು ಒಂದೊಂದ ಎಡೆಯೊಳಗೆ ಒಟ್ಟಿರ್ದ (ರಾಶಿಹಾಕಿದ) ಅರಳೆಯ (ಹತ್ತಿಯ) ನ ಒಡನೆ ಅಳುರ್ವಂತೆ(ವ್ಯಾಪಿಸುವಂತೆ) ಅಳುರ್ದನು(ವ್ಯಾಪಿಸಿದನು)

ಅನಲನು (ಅಗ್ನಿಯು) ಅರಗಿನ ಮನೆಯಂ

ಪದ್ಯ-00:ಅರ್ಥ:೫.

ತಳಭಾಗ ಹತ್ತಿಕೊಳ್ಳದೆ, ಸ್ವಲ್ಪ ಸ್ವಲ್ಪವಾಗಿ ಸುಡದೆ, ಸ್ವಲ್ಪವೂ ಅರೆಕರಿಕಾಗದೆ, ಬಿಡಿಸಿಟ್ಟಿದ್ದ ಹತ್ತಿಯ ರಾಶಿಯನ್ನು ಒಟ್ಟಿಗೇ ವ್ಯಾಪಿಸುವಂತೆ ಅರಗಿನ ಮನೆಯನ್ನು ಅಗ್ನಿಯು ತಕ್ಷಣ ವ್ಯಾಪಿಸಿದನು.

ಕಂ|| ಮೇಲಾದ

ಪಾಂಡುಸುತರನು

ಪಾಲಂಭಂಗೆಯ್ಯುತಿರ್ಪ

ದುರ್ಯೋಧನನಂ||

ಲೀಲೆಯೆ ನುಂಗುವ ಮೃತ್ಯುವ

ನಾಲಗೆಯೆನೆ ನೆಗೆದುವುರಿಯ

ನಾಲಗೆ ಪಲವುಂ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಮೇಲಾದ (ಉತ್ತಮರಾದ) ಪಾಂಡುಸುತರನು

ಉಪಾಲಂಭಂ
ಗೆಯ್ಯುತಿರ್ಪ(ಮೋಸಮಾಡು
ತ್ತಿರುವ) ದುರ್ಯೋಧನನಂ
ಲೀಲೆಯೆ (ಲೀಲೆಯಿಂದ)
ನುಂಗುವ ಮೃತ್ಯುವ
ನಾಲಗೆಯೆನೆ ನೆಗೆದುವು
ಉರಿಯ ನಾಲಗೆ ಪಲವುಂ
(ಅನೇಕ)
ಪದ್ಯ-೬:ಅರ್ಥ:ಉತ್ತಮರಾ
ದ ಪಾಂಡವರನ್ನು
ಮೋಸಮಾಡುತ್ತಿರುವ

ದುರ್ಯೋಧನನನ್ನು
ಲೀಲೆಯಿಂದಲೇ ನುಂಗುವ
ಮೃತ್ಯುದೇವತೆಯ
ನಾಲಗೆಯೆನ್ನುವ ಹಾಗೆ ಹಲವು
ಅಗ್ನಿಜ್ವಾಲೆಗಳು ಮೇಲಕ್ಕೆ
ಚಿಮ್ಮಿದವು.

ವ|| ಆಗಳ್ ಭೀಮಸೇನಂ ತನ್ನ ತಲೆಯೊಳಂ ಮೆಯ್ಯೊಳಂ ಕರಗಿ ಸುರಿವರಗಿನುರಿಯ ಬಂಬಲ್ಗಳಂ ಪೊಸೆದು ಬಿದಿರ್ದು ಕಳೆದು

ಸುರಂಗದೊಳಗಣಿಂದಮೆ ತನ್ನೊಡವುಟ್ಟಿದರ್ ಕೂಡೆ ವಂದನನ್ನೆಗಮಿತ್ತಂ-

ವಚನ:ಪದವಿಭಾಗ-

ಅರ್ಥ:ಆಗಳ್ ಭೀಮಸೇನಂ ತನ್ನ ತಲೆಯೊಳಂ ಮೆಯ್ಯೊಳಂ ಕರಗಿ ಸುರಿವ ಅರಗಿನ ಉರಿಯ ಬಂಬಲ್ಗಳಂ (ಜ್ವಾಲೆಯ ಗುಚ್ಛಗಳನ್ನು) ಪೊಸೆದು ಬಿದಿರ್ದು (ಕೊಡವಿ) ಕಳೆದು

ಸುರಂಗದೊಳಗಣಿಂದಮೆ
ತನ್ನೊಡವುಟ್ಟಿದರ್ ಕೂಡೆ
ವಂದನು; ಅನ್ನೆಗಂ ಇತ್ತಂ-
ವಚನ:ಅರ್ಥ:ಆಗ
ಭೀಮಸೇನನು ತನ್ನ ತಲೆಯ
ಮೇಲೆಯೂ ಶರೀರದ
ಮೇಲೆಯೂ ಕರಗಿ
ಸುರಿಯುತ್ತಿದ್ದ ಅರಗಿನ
ಜ್ವಾಲೆಯ ಗುಚ್ಛಗಳನ್ನು
ಹೊಸದು ಕೊಡವಿ
ತೆಗೆದುಹಾಕಿ ಸುರಂಗದ

ಒಳಗಿನಿಂದಲೇ ತನ್ನ ಸಹೋದರರ ಜೊತೆಯಲ್ಲಿ ಬಂದನು. ಅಷ್ಟರಲ್ಲಿ ಈ ಕಡೆ-

ಕಂ|| ಅರಗಿನ ಮನೆಯೊಳ್
ಪಾಂಡವ
ರುರಿದೞ್ಗಿದರಕ್ಕಟಯ್ಯೊ
ದುರ್ಯೋಧನನೆಂ|
ಬೆರಲೆಯಿನೆಂದೞುತುಂ ತ
ತ್ಪುರಜನಮೞಲೊದಪಿ
ಪರಿದು ನೋಡಿತ್ತಾಗಳ್| ೭||

ಪದ್ಯ-೭:ಪದವಿಭಾಗ-ಅರ್ಥ:ಅರಗಿನ ಮನೆಯೊಳ್ ಪಾಂಡವರು ಉರಿದು ಅೞ್ಗಿದರ್ (ಅಳಿದರು,ಸತ್ತರು)ಅಕ್ಕಟ ಅಯ್ಯೊ ದುರ್ಯೋಧನನೆಂಬ ಎರಲೆಯಿಂ ಎಂದು (ಜಿಂಕೆ, ನಂಜಿನ ಹುಳು) ಅೞುತುಂ (ಅಳುತ್ತಾ) ತತ್ ಪುರಜನಂ ಆೞಲು ಒದಪಿ (ದುಃಖತುಂಬಿ) ಪರಿದು

(ಹರಿದು,ಓಡಿಬಂದು)ನೋಡಿ ತ್ತಾಗಳ್

ಪದ್ಯ-೭:ಅರ್ಥ:ದುರ್ಯೋಧನನೆಂಬ ವಿಷದ ಹುಳುವಿನಿಂದ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಸತ್ತರು; ಅಯ್ಯೋ ಅಕ್ಕಟಾ! ಎಂದು ಅಳುತ್ತ ಆ ಪಟ್ಟಣಿಗರೆಲ್ಲ ದುಃಖತುಂಬಿ ಓಡಿಬಂದು ನೋಡಿದರು.

ವ|| ನೋಡಿ
ರೂಪಱಿಯಲಾಗದಂತು
ಕರಿಮುರಿಕನಾಗಿರ್ದ
ಬೇಡಿತಿಯು ಮನವಳಯ್ವರ್
ಮಕ್ಕಳುಮಂ ಕೊಂತಿಯುಂ
ಪಾಂಡವರುಮಪ್ಪರೇನುಂ
ತಪ್ಪಲ್ಲೆಂದು
ಪುರಪ್ರಧಾನರ್ಕಳ್ ತದ್ವೃ
ತ್ತಾಂತಮೆಲ್ಲಮಂ ಪೇೞ್ದು
ಧೃತರಾಷ್ಟ್ರಂಗಂ
ಪೇೞಲಟ್ಟಿದೊಡೆ-

ವಚನ:ಪದವಿಭಾಗ-ಅರ್ಥ:ನೋಡಿ ರೂಪ ಅಱಿಯಲು (ತಿಳಿಯಲು) ಆಗದಂತು ಕರಿಮುರಿಕನು ಆಗಿರ್ದ(ಕರುಕಲಾಗಿದ್ದ) ಬೇಡಿತಿಯುಮಂ ಅವಳ ಅಯ್ವರ್ ಮಕ್ಕಳುಮಂ (ಐದು ಮಕ್ಕಳ) ಕೊಂತಿಯುಂ ಪಾಂಡವರುಂ ಅಪ್ಪರೇ ಏನುಂ ತಪ್ಪಲ್ಲ ಎಂದು(ಏನೂ ವ್ಯತ್ಯಾಸವಿಲ್ಲ ಎಂದು)

ಪುರಪ್ರಧಾನರ್ಕಳ್ (ಪಟ್ಟಣದ ಮುಖ್ಯಸ್ಥರು)ತದ್ ವೃತ್ತಾಂತಂ ಎಲ್ಲಮಂ ಪೇೞ್ದು (ಹೇಳಿ) ಧೃತರಾಷ್ಟ್ರಂಗಂ ಪೇೞಲು ಅಟ್ಟಿದೊಡೆ (ಹೇಳಲು ಕಳಿಸಿದಾಗ)-

ವಚನ:ಅರ್ಥ:ನೋಡಿ ಗುರುತಿಸಲಾಗದಷ್ಟು ಕರಿಕುಮುರುಕಾಗಿದ್ದ ಬೇಡಿತಿಯನ್ನೂ ಅವಳ ಅಯ್ದು ಜನ ಮಕ್ಕಳನ್ನೂ

ಕುಂತಿ ಹಾಗೂ ಪಾಂಡವರೇ ಆಗಿದ್ದಾರೆ ಏನೂ ವ್ಯತ್ಯಾಸವಿಲ್ಲ ಎಂದು ಪಟ್ಟಣದ ಮುಖ್ಯಸ್ಥರು ಆ ವಿಚಾರವನ್ನೆಲ್ಲ ಧೃತರಾಷ್ಟ್ರನಿಗೆ ಹೇಳಿ ಕಳುಹಿಸಿದಾಗ-

ಕಂ|| ಮನದೊಳ್ ತ್ರೈಭುವನಮನಾ ಳ್ದನಿತುವರಂ ತನಗೆ ಸಂತಸಂ ಪೆರ್ಚಿಯುಮಂ|

ದಿನಿಸಂಧನೃಪಂ ತನ್ನಯ

ಜನದೊಳ್ ಕೆಲನಱಿಯೆ

ಕೃತಕ ಶೋಕಂಗೆಯ್ದಂ|| ೮||

ಪದ್ಯ-೮:ಪದವಿಭಾಗ-

ಅರ್ಥ:ಮನದೊಳ್

ತ್ರೈಭುವನಮನು

(ಮೂರುಲೋಕಗಳನ್ನೂ)

ಆಳ್ದನಿತುವರಂ (ಆಳುವಷ್ಟು)

ತನಗೆ ಸಂತಸಂ

ಪೆರ್ಚಿಯುಮಂ (ಹೆಚ್ಚಿದ್ದರೂ)

ಅಂದು ಇನಿಸು ಅಂಧನೃಪಂ

(ಕುರುಡುರಾಜನು) ತನ್ನಯ

ಜನದೊಳ್ ಕೆಲನು ಅಱಿಯೆ (ಪಕ್ಕದವರು ತಿಳಿಯುವಂತೆ) ಕೃತಕ ಶೋಕಂ ಗೆಯ್ದಂ (ಮಾಡಿದನು)|

ಪದ್ಯ-೮:ಅರ್ಥ:ಅದನ್ನು ಕೇಳಿ ತನಗೆ ಆ ದಿನ ಮೂರುಲೋಕಗಳನ್ನು ಆಳುವಷ್ಟು ಸಂತೋಷ ಹೆಚ್ಚಿದ್ದರೂ, ಪಕ್ಕದವರು ತಿಳಿಯುವಂತೆ ಕುರುಡುರಾಜನು ತನ್ನ ಜನರ

ಮಧ್ಯದಲ್ಲಿ ಕಪಟದುಖವನ್ನು ತೋರಿಸಿದನು.

ವ|| ಆಗಳ್ ನದೀತನೂಜ ಭಾರದ್ವಜ ಕೃಪರವಿರಳ ಬಾಷ್ಪವಾರಿ ದುರ್ದಿನ ದೀನಾನನರಾಗಿರೆ ವಿದುರಂ ತಾನುಮಱಿದುಮಱಿಯದಂತೆ ಶೋಕಾಕ್ರಾಂತನಾಗಿ ಧೃತರಾಷ್ಟ್ರನ ಬೆಸದೊಳ್ ವಾರಣಾವತಕ್ಕೆ ಪೋಗಿ ತದರ್ಧ ದಗ್ಧ ಕಳೇವರಂಗಳಂ

ಸಂಸ್ಕರಿಸಿ
ಜಳದಾನಾದಿಕ್ರಿಯೆಗಳಂ
ಮಾಡಿ ಮಗುೞೆ
ವಂದನನ್ನೆಗಮಿತ್ತ ಪಾಂಡವರ್
ಸುರಂಗದಿಂ ಪೊಱಮಟ್ಟು
ತಾರಾಗಣಾಂಗಳ್‌ನಿಂದ
ನೆಲೆಯಿಂದೆಸೆಯಂ
ಪೊೞ್ತುಮನಱಿದು
ತೆಂಕಮೊಗದೆ
ಪಯಣಂಬೋಗಿ-

ವಚನ:ಪದವಿಭಾಗ-ಅರ್ಥ:ಆಗಳ್ ನದೀತನೂಜ (ಭೀಷ್ಮ) ಭಾರದ್ವಜ (ದ್ರೋಣ) ಕೃಪರು, ಅವಿರಳ ಬಾಷ್ಪವಾರಿ ದುರ್ದಿನ (ಬಹಳ ಕಣ್ಣೀರು ಸುರಿಸುವ ಕೆಟ್ಟದಿನದಲ್ಲಿ) ದೀನ ಆನನರು ಆಗಿರೆ (ಬಾಡಿದ ಮುಖವುಳ್ಳವರು) ವಿದುರಂ ತಾನು ಅಱಿದುಂ ಅಱಿಯದಂತೆ (ಅರಿತೂ ಅರಿಯದಂತೆ)

ಶೋಕಾಕ್ರಾಂತನಾಗಿ
ಧೃತರಾಷ್ಟ್ರನ ಬೆಸದೊಳ್
(ಆಜ್ಞೆಯಂತೆ) ವಾರಣಾವತಕ್ಕೆ
ಪೋಗಿ ತದ್ ಅರ್ಧ ದಗ್ಧ
ಕಳೇವರಂಗಳಂ (ಅರ್ಧಸುಟ್ಟ
ದೇಹಗಳನ್ನು) ಸಂಸ್ಕರಿಸಿ ಜಳ
ದಾನಾದಿ ಕ್ರಿಯೆಗಳಂ
(ಶುದ್ಧಮಾಡಿ
ಉತ್ತರಕ್ರಿಯೆಗಳನ್ನು) ಮಾಡಿ
ಮಗುಟೆ ವಂದನು(ಹಿಂತಿರುಗಿ
ಬಂದನು) ಅನ್ನೆಗಮಿತ್ತ

ಪಾಂಡವರ್ ಸುರಂಗದಿಂ
ಪೊಱಮಟ್ಟು
ತಾರಾಗಣಂಗಳ್‌ನಿಂದ
ನೆಲೆಯಿಂ ದೆಸೆಯಂ (ದಿಕ್ಕನ್ನು)
ಪೊಱ್ತುಮನು
ಅಱಿದು(ಹೊತ್ತನ್ನು
ಅರಿತು,ತಿಳಿದು) ತೆಂಕಮೊಗದೆ
(ದಕ್ಷಿಣದಿಕ್ಕಿಗೆ)
ಪಯಣಂಬೋಗಿ-
ವಚನ:ಅರ್ಥ:ಆಗ
ಭೀಷ್ಮದ್ರೋಣ ಕೃಪರು

ಕೆಟ್ಟದಿನದಲ್ಲಿ ಬಹಳ ಕಣ್ಣೀರು ಸುರಿಸುವ ಬಾಡಿದ ಮುಖವುಳ್ಳವರಾಗಿರಲು, ವಿದುರನು ತಾನು ಅರಿತೂ ಅರಿಯದಂತೆ ದುಃಖದಿಂದ ಕೂಡಿದವನಾಗಿ ಧೃತರಾಷ್ಟ್ರನ ಆಜ್ಞೆಯ ಪ್ರಕಾರ ವಾರಣಾವತಕ್ಕೆ ಹೋಗಿ ಅಲ್ಲಿ ಅರ್ಧಸುಟ್ಟಿದ್ದ ದೇಹಗಳಿಗೆ ಶುದ್ಧಮಾಡಿ ಉತ್ತರಕ್ರಿಯೆಗಳನ್ನುಮಾಡಿ

ಹಿಂತಿರುಗಿ ಬಂದನು. ಅಷ್ಟರಲ್ಲಿ ಈ ಕಡೆ ಪಾಂಡವರು ಸುರಂಗದಿಂದ ಹೊರಟು ನಕ್ಷತ್ರ ಮಂಡಲಗಳ ಸ್ಥಾನಗಳಿಂದ ದಿಕ್ಕನ್ನೂ ಹೊತ್ತನ್ನೂ ತಿಳಿದು ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದರು.

<u>ಪಾಂಡವರು ವಾರಣಾವತ ಪಟ್ಟಣದಿಂದ ಹೊರಟು ಹಿಡಿಂಬವನ ಪ್ರವೇಶ</u>

ಮ|| ತ(ಕ)ಡಕುಂ

ಪಿಟ್ಟೆಯುಮೊತ್ತೆ ಮೆಲ್ಲಡಿಗಳಂ

ಬಳ್ಕುತ್ತುಮಳ್ಕುತ್ತುಮೋ

ರಡಿಗೊರ್ಮೆರ್ಮೆ

ಕುಳುತ್ತುಮೇಱುತಿರೆ

ಕಂಡಿಂತಾಗದಿನ್ನೇಱಿಮೆಂ|

ದೊಡನಂದಯ್ವರುಮಂ

ನಿಜಾಂಸಯುಗದೊಳ್

**ಪೊತ್ತೆತ್ತಿ ತಳ್ತೊಳ್ವ ಸೀ
ಱುಡುವಿಂದದ್ಭುತದಾ
ಹಿಡಿಂಬವನಮಂ ಪೊಕ್ಕಂ
ಮರುನ್ನಂದನಂ|| ೯||**

ಪದ್ಯ-೯:ಪದವಿಭಾಗ-ಅರ್ಥ:ಕಡಕುಂ (ಹರಳುಕಲ್ಲು) ಪಿಟ್ಟೆಯುಂ (ಪೆಟ್ಟಿ -ಮಣ್ಣು ಹೆಂಟೆ)ಒತ್ತೆ ಮೆಲ್ಲಡಿಗಳಂ (ಮೆದುಪಾದ) ಬಳ್ಕುತ್ತುಂ ಅಳ್ಕುತ್ತುಂ ಓರಡಿಗೆ ಒರ್ಮೋರ್ಮೆ ಕುಳುತ್ತುಂ

ಏಱುತಿರೆ(ಬಳುಕುತ್ತ ಹೆದರುತ್ತ, ಒಂದೊಂದು ಹೆಜ್ಜೆಗೂ ಕೂರುತ್ತ ಏಳುತ್ತ ಇರುವುದನ್ನು) ಕಂಡು ಇಂತಾಗದು ಎನ್ನೇಱಿಂ (ಇನ್ನು ಏಳಿಂ) ಎಂದು, ಒಡನೆ ಅಂದು ಅಯ್ವರುಮಂ (ಐದು ಜನರನ್ನೂ) ನಿಜಾಂಸಯುಗದೊಳ್ (ನಿಜ ಆಂಸಯುಗದೊಳ್ - ತನ್ನ ಎರಡು ಹೆಗಲಮೇಲೆ) ಪೊತ್ತೆತ್ತಿ

(ಹೊತ್ತು ಎತ್ತಿಕೊಂಡು)
ತಳ್ತೊಳ್ವ (ತಳ್ತು ಒಳ್ವ - ಒಟ್ಟಿಗೆ ಶಬ್ದಮಾಡುವ)
ಸೀೞುಡುವಿಂದ
(ಜೀರುಂಡೆಗಳಿಂದ) ಅದ್ಭುತದ
ಆ ಹಿಡಿಂಬವನಮಂ ಪೊಕ್ಕಂ
ಮರುನ್ನಂದನಂ
(ಜೀರುಂಡೆಗಳಿಂದ
ಅದ್ಭುತವಾಗಿದ್ದ
ಹಿಡಿಂಬವನನ್ನು

ವಾಯುಪುತ್ರನಾದ
ಭೀಮಸೇನನು ಹೊಕ್ಕನು.)

ಪದ್ಯ-೯:ಅರ್ಥ:ಮೃದುವಾದ ತಮ್ಮ ಪಾದಗಳಿಗೆ ಕಲ್ಲು, ಹೆಂಟೆಗಳು ಒತ್ತುತ್ತಿರಲು ಬಳುಕುತ್ತ ಹೆದರುತ್ತ, ಒಂದೊಂದು ಹೆಜ್ಜೆಗೂ ಕೂರುತ್ತ ಏಳುತ್ತ ಇರುವುದನ್ನು ಭೀಮಸೇನನು ನೋಡಿ 'ಇನ್ನು ಮುಂದೆ ಹೀಗಾಗುವುದಿಲ್ಲ ಏಳಿ ಎಂದು' ಒಟ್ಟಿಗೆ ಆ ಅಯ್ದು

ಜನರನ್ನು ತನ್ನ ಎರಡು ಭುಜದ ಮೇಲೆ ಹೊತ್ತು ಎತ್ತಿಕೊಂಡು ಒಟ್ಟಿಗೆ ಶಬ್ದಮಾಡುತ್ತಿರುವ ಜೀರುಂಡೆಗಳಿಂದ ಅದ್ಭುತವಾಗಿದ್ದ ಹಿಡಿಂಬವನನ್ನು ವಾಯುಪುತ್ರನಾದ ಭೀಮಸೇನನು ಹೊಕ್ಕನು.

- (ತಡಕು -ಎಸಕಪದ(ದೇ) ೧ ಹುಡುಕು ೨ ತಡವರಿಸು)

- (ಕಡಕು - ಸಣ್ಣ ಹರಳುಕಲ್ಲು; ಡಿ.ಎಲ್.ಎನ್)

ಚಂ|| ಅದು ಮದದಂತಿ ದಂತ ಮುಸಲ ಪ್ರವಿಭಗ್ನ ಮಹಾಮಹೀರುಹಾ ಸ್ಪದಮದು ಸಿಂಹನಾದಜನಿತ ಪ್ರತಿಶಬ್ದ ಮಹಾ ಭಯಾನಕ| ಪ್ರದಮದು ನಿರ್ಝರೋಚ್ಚಳಿತ ಶೀಕರ ಶೀತಳ ವಾತ ನರ್ತಿತೋ

ನ್ನದ ಶಬರೀ
ಜನಾಳಕಮದಾಯತ
ವೇತ್ರಲತಾವಿತಾನಕಂ|| ೧೦||

ಪದ್ಯ-೧೦:ಪದವಿಭಾಗ-ಅರ್ಥ:ಅದು ಮದದಂತಿ ದಂತ ಮುಸಲ (ದಂತದ ಒನಕೆಇಂದ) ಪ್ರವಿಭಗ್ನ (ಮರಿದ) ಮಹಾಮಹೀರುಹ ಆಸ್ಪದಂ (ದೊಡ್ಡಮರಗಳಿಗೆ ಆಶ್ರಯ) ಅದು ಸಿಂಹನಾದಜನಿತ ಪ್ರತಿಶಬ್ದ

(ಸಿಂಹಗರ್ಜನೆಯಿಂದ
ಉಂಟಾದ ಪ್ರತಿಧ್ವನಿಯಿಂದ)
ಮಹಾ ಭಯಾನಕ ಪ್ರದಂ,
ಅದು ನಿರ್ಝರೋಚ್ಚಳಿತ
ಶೀಕರ (ನಿರ್ಝರ ಉಚ್ಚಳಿತ
ಶೀಕರ- ಬೆಟ್ಟದ ಝರಿಗಳಿಂದ
ಮೇಲಕ್ಕೆದ್ದ ತುಂತುರುಗಳಿಂದ
ಒದ್ದೆಯಾದ ಗಾಳಿಯಿಂದ)
ಶೀತಳ ವಾತ ನರ್ತಿತೋನ್ನದ
ಶಬರೀ ಜನಾಳಕಮದ
(ಒದ್ದೆಯಾದ ಗಾಳಿಯಿಂದ

ಕುಣಿಸಲ್ಪಟ್ಟ ನರ್ತಿತ ಉನ್ನದ
-ಸೊಕ್ಕಿದ /ಮದಿಸಿರುವ
ಬೇಡಿತಿ ಜನರ ಅಳಕಮದ
-ಮುಂಗರುಳುಗಳನ್ನು /
ಉಳ್ಳದ್ದು) ಆಯತ
ವೇತ್ರಲತಾವಿತಾನಕಂ(ಅಯತ
ವೇತ್ರಲತಾ ವಿತಾನಕಂ
-ವಿಸ್ತಾರವಾದ ಬೆತ್ತದ ಬಳ್ಳಿಗಳ
ಮೇಲ್ಕಟ್ಟುಗಳಿಂದಕೂಡಿದ್ದು;
ವೇತ್ರ- ಬೆತ್ತ)

ಪದ್ಯ-೧೦:ಅರ್ಥ:ಆ ಹಿಡಿಂಬವನವು ಮದ್ದಾನೆಗಳ ಒನಕೆಯಂತಿರುವ ದಂತದಿಂದ ಮುರಿದ ದೊಡ್ಡಮರಗಳಿಗೆ ಆಶ್ರಯವಾಗಿದ್ದಿತು. ಸಿಂಹಗರ್ಜನೆಯಿಂದ ಉಂಟಾದ ಪ್ರತಿಧ್ವನಿಯಿಂದ ಭಯಂಕರವಾಗಿ ಕಂಡಿತು. ಬೆಟ್ಟ ಝರಿಗಳಿಂದ ಮೇಲಕ್ಕೆದ್ದ ತುಂತುರುಗಳಿಂದ ಒದ್ದೆಯಾದ ಗಾಳಿಯಿಂದ ಕುಣಿಸಲ್ಪಟ್ಟ

ಸೊಕ್ಕಿರುವ ಬೇಡಿತಿಯರ
ಮುಂಗುರುಳುಗಳಿಂದ
ಮನೋಹರವಾಗಿತ್ತು.
ವಿಸ್ತಾರವಾದ ಬೆತ್ತದ ಬಳ್ಳಿಗಳ
ಮೇಲ್ಕಟ್ಟುಗಳಿಂದ ಕೂಡಿತ್ತು.

ವ|| ಆ ವನಾಂತರಾಳ ಮಧ್ಯಸ್ಥಿತ ವಿಶಾಳ ವಟ ವಿಟಪಿಯನೆಯ್ತಂದದಱ ಕೆೞಗಯ್ವುರುಮನಿೞಿಪಿದೊಡ ಧ್ವಾನ ಪದ ಪರಿಶ್ರಮ ಶ್ರಾಂತರ್

ನಿದ್ರಾಭರಪರವಶರಾಗಿರೆ ಭೀಮಂ ಜಾವಮಿರ್ದು ತನ್ನೊಡವುಟ್ಟಿದರ್ಗಾದ ಪ್ರವಾಸಾಯಾಸಂಗಳ್ಗಂ ದೆಸೆಗಂ ಮನ್ಯುಮಿಕ್ಕು ಕಣ್ಣ ನೀರಂ ತುಂಬಿ-

ವಚನ:ಪದವಿಭಾಗ-

ಅರ್ಥ:ಆ ವನ ಅಂತರಾಳ ಮಧ್ಯಸ್ಥಿತ (ಆ ಕಾಡಿನ ಒಳಭಾಗದ ಮಧ್ಯದಲ್ಲಿ) ವಿಶಾಳ ವಟ ವಿಟಪಿಯನು

ಐಯ್ತಂದ (ವಿಸ್ತಾರವಾದ
ಆಲದ ಮರದ ಹತ್ತಿರ ಬಂದು)
ಅದಱ ಕೆಱಗೆ ಐಯ್ವರುಮನು
ಇಱಪಿದೊಡೆ (ಅದರ ಕೆಳಗೆ ಆ
ಅಯ್ದು ಜನರನ್ನು ಇಳಿಸಿದಾಗ)
ಅಧ್ವಾನ ಪದ (ದಾರಿ ನೆಡೆದ)
ಪರಿಶ್ರಮ ಶ್ರಾಂತರ್ ನಿದ್ರಾಭರ
ಪರವಶರು ಆಗಿರೆ
(ಬಳಲಿಕೆಯ ಆಯಾಸದಿಂದ
ನಿದ್ರೆಯ ಭಾರಕ್ಕೆ
ಒಳಗಾರದರು.) ಭೀಮಂ

ಜಾವಮಿರ್ದು (ಕಾವಲು ಇದ್ದು) ತನ್ನ ಒಡವುಟ್ಟಿದರ್ಗೆ ಆದ ಪ್ರವಾಸ ಆಯಾಸಂಗಳ್ಗಂ ದೆಸೆಗಂ ಮನ್ಯುಮಿಕ್ಕು (ಮನ್ಯು-ದುಃಖ, ಮಿಕ್ಕಂ-ಮೀರಿ) ಕಣ್ಣ ನೀರಂ ತುಂಬಿ-

ವಚನ:ಅರ್ಥ:ಆ ಕಾಡಿನ ಒಳಭಾಗದ ಮಧ್ಯದಲ್ಲಿ ವಿಸ್ತಾರವಾದ ಆಲದ ಮರದ ಹತ್ತಿರಕ್ಕೆ ಬಂದು ಅದರ ಕೆಳಗೆ ಆ ಐಯ್ದು ಜನರನ್ನು

ಇಳಿಸಿದಾಗ, ಅವರು ದಾರಿ
ನಡೆದ ಬಳಲಿಕೆಯ
ಆಯಾಸದಿಂದ ನಿದ್ರೆಯ
ಭಾರಕ್ಕೆ ಒಳಗಾರದರು.
ಭೀಮನು ಅವರಿಗೆ
ಕಾವಲಾಗಿದ್ದು ತನ್ನ
ಒಡಹುಟ್ಟಿದವರಿಗಾದ
ಪ್ರಯಾಣದಾಯಾಸಕ್ಕೂ
ದುರ್ದೆಶೆಗೂ ದು:ಖವು
ಮಿತಿಮೀರಿ ಬರಲು, ಅವನ

ಕಣ್ಣಲ್ಲಿ
ನೀರುತುಂಬಿಕೊಂಡಿತು.

ಚಂ|| ಭರತನ ವಂಶದೊಳ್
ನೆಗಟ್ದಿ
ಪಾಂಡುಗೆವೃಟ್ಟಿಯುವಮೀ
ಸಮಸ್ತ ಸಾ
ಗರ ಪರಿವೇಷ್ಟಿತಾವನಿಗೆ
ವಲ್ಲಭನಾಗಿಯುವಮೀ
ಮಹೋಗ್ರ ಕೇ|
ಸರಿ ಕರಿಕಂಠ ಗರ್ಜಿತ
ಮಹಾಟವಿಯೊಳ್

ಮಱಕೆಂದಿ ನೀಮುಮೀ ಮರದಡಿಯೊಳ್ ಶಿವಾಶಿವ ರವಂಗಳಿನೆಟ್ಟಿಱುವಂತುಟಾ ದುದೇ|| ೧೧||

ಪದ್ಯ-೧೧:ಪದವಿಭಾಗ-ಅರ್ಥ:ಭರತನ ವಂಶದೊಳ್ ನೆಗಟ್ದಿ (ಪ್ರಸಿದ್ಧ)ಪಾಂಡುಗೆ ಪುಟ್ಟಿಯುಂ (ಹುಟ್ಟಿಯೂ) ಈ ಸಮಸ್ತ ಸಾಗರ ಪರಿವೇಷ್ಟಿತ ಅವನಿಗೆ ವಲ್ಲಭನಾಗಿಯುಂ (ಸುತ್ತುವರಿದ ಅವನಿಗೆ-

ಭೂಮಿಗೆ ಒಡೆಯನಾಗಿಯೂ)
ಈ ಮಹೋಗ್ರ ಕೇಸರಿ
ಕರಿಕಂಠ ಗರ್ಜಿತ
ಮಹಾಟವಿಯೊಳ್ (ಈ
ಭಯಂಕರವಾದ ಸಿಂಹ ಮತ್ತು
ಆನೆಗಳ ಕೊರಳಿನಿಂದ
ಹೊರಟ ಗರ್ಜನೆಗಳಿಂದ
ಕೂಡಿದ ಈ
ಘೋರಾರಣ್ಯದಲ್ಲಿ)
ಮಱಕೆಂದಿ (ಮೈಮೆರೆತು)
ನೀಮುಂ ಈ ಮರದಡಿಯೊಳ್

ಶಿವಾಶಿವ ರವಂಗಳಿಂ(ಶಿವ ಆಶಿವ ರವಂಗಳಿಂ- ನರಿಗಳ ಅಮಂಗಳ ಶಬ್ದಗಳಿಂದ) ಎಚ್ಚಿಱುವಂತುಟಾದುದೇ(ಎ ಚ್ಚಿಱುವಂತುಟು- ಎಚ್ಚರಗೊಳ್ಳುವಂತೆ ಆದುದೇ)

ಪದ್ಯ-೧೧:ಅರ್ಥ:.
ಭರತವಂಶದಲ್ಲಿ ಪ್ರಸಿದ್ಧನಾದ ಪಾಂಡುರಾಜನಿಗೆ ಮಕ್ಕಳಾಗಿ ಹುಟ್ಟಿ, ಸಮುದ್ರದಿಂದ ಸುತ್ತುವರಿಯಲ್ಪಟ್ಟ ಈ ಸಮಸ್ತ

ಭೂಮಂಡಲಕ್ಕೆ ಒಡೆಯನಾಗಿ
ಈ ಭಯಂಕರವಾದ ಸಿಂಹ
ಮತ್ತು ಆನೆಗಳ ಕೊರಳಿನಿಂದ
ಹೊರಟ ಗರ್ಜನೆಗಳಿಂದ
ಕೂಡಿದ ಈ
ಘೋರಾರಣ್ಯದಲ್ಲಿ
ಮೈಮೆರೆತು ಮಲಗಿ ನೀವು ಈ
ಮರದಡಿಯಲ್ಲಿ ನರಿಗಳ
ಅಮಂಗಳ ಸದ್ದಿನಿಂದ
ಎಚ್ಚರಗೊಳ್ಳುವ ಹಾಗೆ
ಆಯಿತೆ?

ವ|| ಎಂದು ನುಡಿಯುತ್ತಿರ್ಪನ್ನೆಗಂ ಕೋಕನದಬಾಂಧವನುದಯಾಚಳಶಿಖರ ಶೇಖರನಾದ ನಾಗಳಾ ಬನಮನಾಳ್ವ ಹಿಡಿಂಬನೆಂಬನವರ ಬರವನಱಿದು ತನ್ನ ತಂಗೆ ಹಿಡಿಂಬೆಯೆಂಬಳಂ ಕರೆದು-

ವಚನ:ಪದವಿಭಾಗ-

ಅರ್ಥ:ಎಂದು ನುಡಿಯುತ್ತಿರ್ಪ ಅನ್ನೆಗಂ

(ಎಂದು ಹೇಳತ್ತಿರುವಷ್ಟರಲ್ಲಿ)
ಕೋಕನದ
(ತಾವರೆಗಳ)ಬಾಂಧವನು
(ಸೂರ್ಯನು)
ಉದಯಾಚಳಶಿಖರ
ಶೇಖರನಾದನು (ಉದಯ
ಪರ್ವತದ ಶಿಕರಕ್ಕೆ ಬಂದನು)
ಆಗಳು ಆ ಬನಮನು ಆಳ್ವ
(ಆಗ ಆ ವನವನ್ನು ಆಳುವ)
ಹಿಡಿಂಬನೆಂಬನು ಅವರ
ಬರವನು ಅಱಿದು

(ಬರುವಿಕೆಯನ್ನು ತಿಳಿದು) ತನ್ನ ತಂಗೆ (ತಂಗಿ) ಹಿಡಿಂಬೆಯೆಂಬಳಂ ಕರೆದು-

ವಚನ:ಅರ್ಥ:ಎಂದು ಹೇಳುತ್ತಿರುವಷ್ಟರಲ್ಲಿಯೇ ತಾವರೆಯ ಸಖನಾದ ಸೂರ್ಯನು ಉದಯಪರ್ವತದ ಶಿಕರಕ್ಕೆ ಬಂದನು (ಸೂರ್ಯೋದಯವಾಯಿತು). ಆಗ ಆ ಅರಣ್ಯಪ್ರದೇಶವನ್ನು

ಆಳುವ ಹಿಡಿಂಬನೆಂಬುವನು ಅವರ ಬರುವಕೆಯನ್ನು ತಿಳಿದು ತನ್ನ ತಂಗಿಯಾದ ಹಿಡಿಂಬೆಯೆಂಬವಳನ್ನು ಕರೆದು-

ಕಂ|| ನಿಡಿಯರ್ ಬಲ್ಲಾಯದ

ಬ

ಲ್ಡಿಡಿಗರ್

ವಂದಿರ್ದರಯ್ವರಾಲದ

ಕೆಟಿಗಿಂ|

ತೊಡರ್ದರ್ ನಮ್ಮಯ

ಭಕ್ಷದೊ

ಳಡು ಪಣ್ಣಿಡು ಪೋಗು

ನೀನುಮಾನುಂ ತಿಂಬಂ|| ೧೨||

ಪದ್ಯ-೧೨:ಪದವಿಭಾಗ-

ಅರ್ಥ:ನಿಡಿಯರ್

ಬಲ್ಲಾಯದ (ಬಲ್ ಆಯದ)

ಬಲ್ದಡಿಗರ್

(ನೀಳವಾಗಿರುವವರು, ಬಲು

ಆಯಕಟ್ಟಿನವರು, ಬಲ್

ದಡಿಗರ್ -ಬಲುದಾಂಡಿಗರಾಗಿ)

ವಂದಿರ್ದರಯ್ವರಾಲದ
ಕೆೞಗಿಂ (ವಂದು ಇರ್ದರ್
ಅಯ್ವರು ಆಲದ ಕೆಳಗೆ ಇಂ-
ಅಯ್ದು ಜನ ಆಲದಮರದ
ಕೆಳಗೆ ಇದ್ದಾರೆ); ತೊಡರ್ದರ್
ನಮ್ಮಯ ಭಕ್ಷದೊಳ್ ಅಡು
(ಇಂ-ಇನ್ನು ಇನ್ನು ನಮ್ಮ
ಆಹಾರಕ್ಕಾಗಿ ಸಿಕ್ಕಿಬಿದ್ದಿದ್ದರು.
ಅಡು- ಅಡಿಗೆ ಮಾಡು,
ಬೇಯಿಸು) ಪಣ್ಣಿಡು
(ಸಿದ್ಧಪಡಿಸು) ಪೋಗು

ನೀನುಂ ಆನುಂ ತಿಂಬಂ (ನೀನೂ ನಾನೂ ತಿನ್ನೋಣ) **ಪದ್ಯ-೧೨:ಅರ್ಥ**:ನೀಳವಾಗಿರುವವರು, ಬಲು ಆಯಕಟ್ಟಿನವರು, ಬಲುದಾಂಡಿಗರಾಗಿ ಇರುವ ಅಯ್ದು ಜನ ಆಲದ ಮರದ ಕೆಳಗೆ ಇದ್ದಾರೆ. ಇನ್ನು ನಮ್ಮ ಆಹಾರಕ್ಕಾಗಿ ಸಿಕ್ಕಿಬಿದ್ದರು. ಹೋಗಿ ಬೇಯಿಸಿ ಅಡುಗೆ ಮಾಡಿ ಸಿದ್ಧಪಡಿಸು; ನೀನೂ

ನಾನೂ ತಿನ್ನೋಣ. (ಎಂದನು ಹಿಡಿಂಬ)

ಹಿಡಿಂಬ ವಧೆ: ಭೀಮ ಹಿಡಿಂಬೆಯರ ವಿವಾಹ -ಘಟೋತ್ಕಜನ ಜನನ

ವ||

ಎಂಬುದುಮಂತೆಗೆಯ್ವೆನೆಂದು-

ವಚನ:ಪದವಿಭಾಗ-ಅರ್ಥ: ಎಂಬುದುಂ ಅಂತೆ ಗೆಯ್ವೆನೆಂದು-

ವಚನ:ಅರ್ಥ:ಹಿಡಿಂಬ ಹೇಳಲು, ಹಿಡಿಂಬೆಯು, ಹಾಗೆಯೇ ಮಾಡುತ್ತೇನೆ ಎಂದು.

ಕಂ|| ಆಗಸದೊಳಗೊಂದು ಮಹೀ
ಭಾಗದೊಳಿನ್ನೊಂದು ದಾಡೆಯಾಗಿರೆ ಮನದಿಂ|
ಬೇಗಂ ಬರ್ಪಳ ದಿಟ್ಟಿಗ
ಳಾಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ||

೧೩ ||

ಪದ್ಯ-೧೩:ಪದವಿಭಾಗ-ಅರ್ಥ: ಆಗಸದೊಳಗೆ ಒಂದು ಮಹೀಭಾಗದೊಳು ಇನ್ನೊಂದು ದಾಡೆಯಾಗಿರೆ (ಆಕಾಶದಲ್ಲಿ ಒಂದು ಭೂಮಿಯಲ್ಲಿ ಒಂದು ದವಡೆಯಾಗಿರಲು- ಅಷ್ಟು ದೊಡ್ಡದಾಗಿ ಬಾಯಿ ತೆರೆದು) ಮನದಿಂ ಬೇಗಂ ಬರ್ಪಳ (ಮನಸ್ಸಿನ ವೇಗಕ್ಕಿಂತ ಬೇಗ

ಬರುವವಳ) ದಿಟ್ಟಿಗಳು ಆಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ (ಆಗ ಹತ್ತಿತು-ನೆಟ್ಟಿತು, ಭೀಮನನ್ನು -ಭೀಮನಲ್ಲಿ)

ಪದ್ಯ-೧೩:ಅರ್ಥ:ಆಕಾಶದಲ್ಲಿ ಒಂದು ಭೂಮಿಯಲ್ಲಿ ಒಂದು ದವಡೆಯಾಗಿರಲು (ಅಂದರೆ ದೊಡ್ಡದಾಗಿ ಬಾಯಿ ತೆರೆದುಕೊಂಡು) ಮನಸ್ಸಿನ ವೇಗಕ್ಕಿಂತ ಬೇಗ ಬರುತ್ತಿದ್ದ

ಅವಳ ದೃಷ್ಟಿಗಳು ಭೀಮನಲ್ಲಿ ನೆಟ್ಟಿತು.

ವ||

ಅಂತೊಂದಂಬುವೀಡಿನೆಡೆಯೊಳ್ ಕಾಮನಂಬುವೀಡಿಂಗೊಳಗಾಗಿ ತಾಂ ಕಾಮರೂಪೆಯಪ್ಪುದಱಿಂ ದಿವ್ಯಕನ್ಯಕಾಸ್ವರೂಪಮಂ ಕೆಯ್ಕೊಂಡು (ಸುಂದರಳಾದ ಕನ್ನಿಕೆಯ ಆಕಾರವನ್ನು ತಾಳಿ)

ತನ್ನತ್ತ ಮೊಗದೆ ಬರ್ಪಳಂ (ತನ್ನ ಕಡೆಗೇ ಬರುವವಳನ್ನು) ಕಂಡು-

ವಚನ:ಪದವಿಭಾಗ-

ಅರ್ಥ:ಅಂತು ಒಂಸು ಅಂಬುವೀಡಿನ ಎಡೆಯೊಳ್ (ಒಂದು ಬಾಣಹೊಗುವಷ್ಟು ದೂರದ ಸ್ಥಳದಲ್ಲಿ) ಕಾಮನಂಬು ವೀಡಿಂಗೆ ಒಳಗಾಗಿ (ಕಾಮನಬಾಣಕ್ಕೆ ಪ್ರಯೋಗಕ್ಕೆ ತುತ್ತಾಗಿ) ತಾಂ

ಕಾಮರೂಪೆಯು ಅಪ್ಪುದಱಿಂ
(ತಾನು ಇಷ್ಟ ಬಂದ
ರೂಪವನ್ನು
ಧರಿಸುವವಳಾದುದರಿಂದ)
ದಿವ್ಯಕನ್ಯಕಾ ಸ್ವರೂಪಮಂ
ಕೆಯ್ಕೊಂಡು ತನ್ನತ್ತ ಮೊಗದೆ
(ಎದುರಿಗೇ) ಬರ್ಪಳಂ
ಕಂಡು-

ವಚನ:ಅರ್ಥ:ಹಾಗೆ ಒಂದು
ಬಾಣ ಹೋಗುವಷ್ಟು ದೂರದ
ಸ್ಥಳದಲ್ಲಿ, ಕಾಮನಬಾಣಕ್ಕೆ

ಪ್ರಯೋಗಕ್ಕೆ ತುತ್ತಾಗಿ, ತಾನು ಇಷ್ಟ ಬಂದ ರೂಪವನ್ನು ಧರಿಸುವವಳಾದುದರಿಂದ ಸುಂದರಳಾದ ಕನ್ನಿಕೆಯ ಆಕಾರವನ್ನು ತಾಳಿ ಭೀಮನು ತನ್ನ ಎದುರಿಗೇ ಬರುವವಳನ್ನು ನೋಡಿದನು.

ಕಂ|| ಖೇಚರಿಯೋ
ಭೂಚರಿಯೊ ನಿ
ಶಾಚರಿಯೋ ರೂಪು
ಬಣ್ಣಿಸಲ್ಕಾರ್ಗಮವಾ|

ಗ್ಗೊಚರವಿ ಕಾನನಮುಮ

ಗೋಚರಮಿವಳಿಲ್ಲಿಗೇಕೆ

ಬಂದಳೊ ಪೇೞಿಂ||೧೪||

ಪದ್ಯ-೧೪:ಪದವಿಭಾಗ-

ಅರ್ಥ:ಖೇಚರಿಯೋ

ಭೂಚರಿಯೊ ನಿಶಾಚರಿಯೋ

(ಖ -ಆಕಾಶದಲ್ಲಿ ಸಂಚರಿಸುವ

ವಿದ್ಯಾಧರೆಯೊ,

ಮನುಷ್ಯಳೋ, ರಾತ್ರಿಯಲ್ಲಿ

ಸಂಚಾರಮಾಡುವ

ರಾಕ್ಷಸಿಯೋ!) ರೂಪು

ಬಣ್ಣಿಸಲ್ಕೆ ಆರ್ಗುಂ
ವಾಗ್ಗೊಚರಂ; (ವಾಕ್
ಅಗೋಚರಂ- ರೂಪವನ್ನು
ವರ್ಣಿಸುವುದಕ್ಕೆ ಯಾರಿಗೂ
ಮಾತಿನಿಂದ ಸಾಧ್ಯವಿಲ್ಲ)
ಕಾನನಮುಂ ಅಗೋಚರಮ್
(ಕಾಡೂ ಯಾರಿಗೂ
ಪರಿಚಿತವಲ್ಲದುದು) ಇವಳು
ಇಲ್ಲಿಗೆ ಏಕೆ ಬಂದಳೊ
ಪೇೞಿಂ.

ಪದ್ಯ-೧೪:ಅರ್ಥ:.

ಆಕಾಶದಲ್ಲಿ ಸಂಚರಿಸುವ ವಿದ್ಯಾಧರೆಯೊ, ಮನುಷ್ಯಳೋ, ರಾತ್ರಿಯಲ್ಲಿ ಸಂಚಾರಮಾಡುವ ರಾಕ್ಷಸಿಯೋ! ಇವಳ ರೂಪವನ್ನು ವರ್ಣಿಸುವುದಕ್ಕೆ ಯಾರಿಗೂ ಮಾತಿನಿಂದ ಸಾಧ್ಯವಿಲ್ಲ. ಈ ಕಾಡೂ ಕೂಡ ಯಾರಿಗೂ ಪರಿಚಿತವಲ್ಲದುದು. ಇವಳು

ಇಲ್ಲಿಗೆ ಏಕೆ ಬಂದಳು ಹೇಳಿರಿ! ಎಂದು ಭೀಮನು ಯೋಚಿಸಿದನು.

ವ|| ಎಂಬನ್ನೆಗಮಾಕೆ ಮದನನ ಕೆಯ್ಯಿಂ ಬರ್ದುಂಕಿದರಲಂಬು ಬರ್ಪಂತೆ ಬಂದು ಭೀಮಸೇನನ ಕೆಲದೊಳ್ ಕುಳ್ಳಿರೆ ನೀನಾರ್ಗೇನೆಂಬೆಯೇಕೆ ಬಂದೆಯೆಂದೊಡಾಕೆಯೆಂದಳೆ ರಡಱಿಿಯ ದೊಲ್ಲ

ನಿನ್ನೊಳೆರಡಂ ನುಡಿಯಲಾಗದೆನಗೆ ಬನಂ ಹಿಡಿಂಬವನೆಂಬುದಿದನಾಳ್ವಂ ಹಿಡಿಂಬನೆಂಬಸುರನೆಮ್ಮಣ್ಣನಾನುಂ ಹಿಡಿಂಬೆಯೆನೆಂಬೆನಾತನ ಬೆಸದಿಂ ನಿಮ್ಮನಿಬರುಮಂ-

ವಚನ:ಪದವಿಭಾಗ-

ಅರ್ಥ:ಎಂಬ ಅನ್ನೆಗಂ ಅಕೆ (ಎಂದು ಹೇಳುವಷ್ಟರಲ್ಲಿ ಆಕೆ) ಮದನನ ಕೆಯ್ಯಿಂ ಬರ್ದುಂಕಿದ ಅರಲಂಬು ಬರ್ಪಂತೆ ಬಂದು

(ಮನ್ಮಥನ ಕಯ್ಯಿಂದ
ಬದುಕಿಬಂದ ಪುಷ್ಪಬಾಣದ
ಹಾಗೆ) ಭೀಮಸೇನನ
ಕೆಲದೊಳ್ ಕುಳ್ಳಿರೆ ನೀನಾರ್ಗೇ
ಎನೆಂಬೆ ಯೇಕೆ ಬಂದೆ
ಯೆಂದೊಡೆ (ನೀನು ಯಾರಿಗೆ
ಮಗಳು? ನಿನ್ನ ಹೆಸರೇನು?
ಯಾತಕ್ಕೆ ಬಂದಿದ್ದೀಯೆ)
ಆಕೆಯೆಂದಳು
ಎರಡಱಿಯದೊಲ್ದು (ಎರಡು
ಅಱಿಯದೆ ಒಲ್ದು-

ಕಪಟವಿಲ್ಲದೆ ಪ್ರೀತಿಸಿದ್ದರೀದ) ನಿನ್ನೊಳು ಎರಡಂ ನುಡಿಯಲಾಗದು ಎನಗೆ (ನಿನ್ನಲ್ಲಿ ಎರಡು ಬಗೆ ಅಥವಾ ಸುಳ್ಳನ್ನು ಹೇಳಬಾರದು.) ಬನಂ ಹಿಡಿಂಬವನ ಎಂಬುದು ಇದನಾಳ್ವಂ ಹಿಡಿಂಬನೆಂಬ ಅಸುರನು ಎಮ್ಮಣ್ಣನು ಆನುಂ ಹಿಡಿಂಬೆಯೆನೆಂಬೆನು, ಆತನ ಬೆಸದಿಂ ನಿಮ್ಮ ಇನಿಬರುಮಂ(ಈ ಕಾಡು

ಹಿಡಿಂಬವನ ಎಂಬುದು.
ಇದನ್ನು ಆಳುವ ಹಿಡಿಂಬನೆಂಬ
ರಾಕ್ಷಸನು ನಮ್ಮಣ್ಣನು; ನನ್ನ
ಹೆಸರೂ ಹಿಡಿಂಬೆಯೆಂದು;
ಅವನ ಆಜ್ಞೆಯ ಪ್ರಕಾರ
ನಿಮ್ಮೆಲ್ಲರನ್ನು-)-
ವಚನ:ಅರ್ಥ:ಅಷ್ಟರಲ್ಲಿ
ಅವಳು ಮನ್ಮಥನ ಕಯ್ಯಿಂದ
ಬದುಕಿಬಂದ ಪುಷ್ಪಬಾಣದ
ಹಾಗೆ ಬಂದು, ಭೀಮಸೇನನ
ಪಕ್ಕದಲ್ಲಿ ಕುಳಿತುಕೊಂಡಿರಲು

ಭೀಮಸೇನನು ಅವಳನ್ನು
ಕುರಿತು ನೀನು ಯಾರಿಗೆ
ಮಗಳು? ನಿನ್ನ ಹೆಸರೇನು?
ಯಾತಕ್ಕೆ ಬಂದಿದ್ದೀಯೆ?
ಎನ್ನಲು ಆಕೆ ಅವನನ್ನು
ಕುರಿತು, ಕಪಟವಿಲ್ಲದೆ
ಪ್ರೀತಿಸಿದ್ದರಿಂದ, ನಿನ್ನಲ್ಲಿ
ಎರಡು ಬಗೆ ಅಥವಾ ಸುಳ್ಳನ್ನು
ಹೇಳಬಾರದು.ಈ ಕಾಡು
ಹಿಡಿಂಬವನ ಎಂಬುದು.
ಇದನ್ನು ಆಳುವ ಹಿಡಿಂಬನೆಂಬ

ರಾಕ್ಷಸನು ನಮ್ಮಣ್ಣನು; ನನ್ನ ಹೆಸರೂ ಹಿಡಿಂಬೆಯೆಂದು; ಅವನ ಆಜ್ಞೆಯ ಪ್ರಕಾರ ನಿಮ್ಮೆಲ್ಲರನ್ನು-)-

ಕಂ|| ಪಿಡಿದಡಸಿ ತಿನಲ್ ಬಂದಿ
ರ್ದೆಡೆಯೊಳ್ ನಿನಗಾಗಿ
ಮದನನೆನ್ನನೆ ತಿನೆ ಕೇಳ್|
ಪಡೆನೋಡಲ್ ಬಂದವರಂ
ಗುಡಿವೊಱೆಸಿದರೆಂಬುದಾ
ಯ್ತು ನಿನ್ನೆನ್ನೆಡೆಯೊಳ್|| ೧೫||

ಪದ್ಯ-೧೫:ಪದವಿಭಾಗ-ಅರ್ಥ: ಪಿಡಿದು ಅಡಸಿ ತಿನಲ್ ಬಂದಿರ್ದ ಎಡೆಯೊಳ್ (ಹಿಡಿದು ಬಾಯಿಗೆ ತುರಿಕಿಕೊಂಡು ತಿನ್ನಲು ಬಂದ ಸಮಯದಲ್ಲಿ) ನಿನಗಾಗಿ ಮದನನು ಎನ್ನನೆ ತಿನೆ ಕೇಳ್ (ಮನ್ಮಥನು ನನ್ನನ್ನೇ ತಿನ್ನಲು ಕೇಳು-) ಪಡೆನೋಡಲ್ ಬಂದವರಂ ಗುಡಿವೊೞಿಸಿದರು ಎಂಬುದು

ಆಯ್ತು ನಿನ್ನ ಎನ್ನ ಎಡೆಯೊಳ್ (“ಪಡೆ -ಸೈನ್ಯವನ್ನು ನೋಡಲು ಬಂದವರ ಕೈಯಲ್ಲಿ ಬಾವುಟವನ್ನು ಹೊರಿಸಿದರು” ಎಂಬ ಗಾದೆಯಂತೆ, ನಿನ್ನ ನನ್ನ ವಿಚಾರದಲ್ಲಿ, ಸಂಬಂಧದಲ್ಲಿ.)

ಪದ್ಯ-೧೫:ಅರ್ಥ:(ನಿಮ್ಮನು) ಹಿಡಿದು ಬಾಯಿಗೆ ತುರಿಕಿಕೊಂಡು ತಿನ್ನಲು ಬಂದ ಸಮಯದಲ್ಲಿ ಮನ್ಮಥನು ನನ್ನನ್ನೇ ತಿನ್ನಲು, ಕೇಳು-

ಸೈನ್ಯವನ್ನು ನೋಡಲು ಬಂದವರ ಕೈಯಲ್ಲಿ ಬಾವುಟವನ್ನು ಹೊರಿಸಿದರು" ಎಂಬ ಗಾದೆಯಂತೆ, ನಿನ್ನ ನನ್ನ ವಿಚಾರದಲ್ಲಿ, ಸಂಬಂಧದಲ್ಲಿ ಆಯಿತು.

ವ|| ಎಂದೀ ಮಱಲುಂದಿದರಾರ್ಗೆಂದೊಡೆನ್ನ ತಾಯ್ವಿರುಮೊಡವುಟ್ಟಿದರೆಂದೊಡೆ ಹಿಡಿಂಬಂ ಬಂದವರಂ

ತಿಂದೊಡಂ ತಿನ್ಗೆ ನೀನೆನ್ನ ಪೆಗಲನೇಱು ಗಗನತಳಕ್ಕುಯ್ವೆನೆನೆ ಭೀಮಸೇನನಾ ಮಾತಿಂಗೆ ಮುಗುಳ್ನಗೆ ನಕ್ಕು-

ವಚನ:ಪದವಿಭಾಗ-

ಅರ್ಥ:ಎಂದು ಈ ಮಱಲುಂದಿದರ್ ಆರ್ಗೆ ಎಂದೊಡೆ(ಮೈಮರೆತು ಮಲಗಿದವರು ಯಾರು? ಎಂದು ಕೇಳಿದಾಗ) ಎನ್ನ

ತಾಯ್, ಇವರುಂ
ಒಡವುಟ್ಟಿದರ್ ಎಂದೊಡೆ,
(ತಾಯಿ ಮತ್ತು
ಒಡಹುಟ್ಟಿದವರು ಎಂದಾಗ)
ಹಿಡಿಂಬಂ ಬಂದು ಅವರಂ
ತಿಂದೊಡಂ ತಿನ್ಗೆ (ಹಿಡಿಂಬನು
ಬಂದು ಅವರನ್ನು
ತಿನ್ನುವುದಾದರೆ ತಿನ್ನಲಿ);
ನೀನು ಎನ್ನ ಪೆಗಲನು ಏಱು
ಗಗನತಳಕ್ಕೆ ಉಯ್ವೆನು ಎನೆ
(ನೀನು ನನ್ನ ಹೆಗಲನ್ನು ಏರು,

ಆಕಾಶಪ್ರದೇಶಕ್ಕೆ
ಕರೆದುಕೊಂಡು ಹೋಗುತ್ತೇನೆ
ಎನ್ನಲು,) ಭೀಮಸೇನನು ಆ
ಮಾತಿಂಗೆ ಮುಗುಳ್ನಗೆ ನಕ್ಕು-
ವಚನ:ಅರ್ಥ:ಎಂದು ‘ಈ
ಮೈಮರೆತು
ಮಲಗಿರುವವರಾರು’ ಎಂದು
ಕೇಳಿದಳು. ಅವರು ನನ್ನ
ತಾಯಿ ಮತ್ತು
ಒಡಹುಟ್ಟಿದವರು ಎಂದಾಗ
ಉತ್ತರಕೊಡಲು ಹಿಡಿಂಬನು

ಬಂದು ಅವರನ್ನು
ತಿನ್ನುವುದಾದರೆ ತಿನ್ನಲಿ; ನೀನು
ನನ್ನ ಹೆಗಲನ್ನು ಏರಿಕೋ,
ಆಕಾಶಪ್ರದೇಶಕ್ಕೆ
ಕರೆದುಕೊಂಡು ಹೋಗುತ್ತೇನೆ
ಎನ್ನಲು, ಹಿಡಿಂಬೆಯ ಆ
ಮಾತಿಗೆ ಭೀಮಸೇನನು
ಹುಸಿನಗೆ ನಕ್ಕು-

ಚಂ||
ಅಱಿಪಿದೆಯಂತುಮಲ್ಲದೆ

ನಿಶಾಚರಿಯೈ
ನಿನಗಪ್ಪುದಪ್ಪುದೀ
ಯಱಿನುಡಿ ಬರ್ಕೆ ನಿನ್ನ
ಪಿರಿಯಣ್ಣನೆ ಪಣ್ಣನೆ
ನೋೞ್ಪಮಾತನೊ।
ಡ್ಡೞಿಯದ
ಗಂಡವಾತನೆನುತಂತಿರೆ
ತಂಗೆಯ ಮಾಣ್ದುದರ್ಕವಂ
ಮೊಱಗಿ ಸಿಡಿಲ್ದದೊಂದು
ಸಿಡಿಲೇೞ್ಗೆಯಿನೆಯ್ತರೆ ವಂದು
ಭೀಮನಂ॥ ೧೬ ॥

ಪದ್ಯ-೧೬:ಪದವಿಭಾಗ-ಅರ್ಥ:ಅೞಿಪಿದೆಯ್ ([ಅಳಿಪಿದೆ-ಹಾಳುಮಾಡಿದೆ!? ಅಥವಾ ತಪ್ಪಿದೆ] ಮೋಹಗೊಂಡ ಸತ್ಯವನ್ನು ಹೇಳಿದೆ!) ಅಂತುಮಲ್ಲದೆ ನಿಶಾಚರಿಯ್ಮೆ, ನಿನಗಪ್ಪುದು ಅಪ್ಪುದು, ಈ (ಯ) ಅೞಿನುಡಿ (ಅಲ್ಲದೆ ನೀನು ರಾಕ್ಷಸಿಯು!; ಈ ಕೆಟ್ಟಮಾತು ನಿನಗೆ ತಕ್ಕುದು ತಕ್ಕದು.) ಬರ್ಕೆ

ನಿನ್ನ ಪಿರಿಯಣ್ಣನೆ (ನಿನ್ನ ಹಿರಿಯಣ್ಣನೇ ಬರಲಿ,) ಪಣ್ಣನೆ ನೋೞ್ಪೆಂ (ಸ್ವಲ್ಪ ಅವನನ್ನು ನೋಡುವೆನು) ಆತನ ಒಡ್ಡಱಿಯದ (ಒಡ್ಡು- ಮುಂದಾಳುತನ, ಅಳಿಯದ) ಗಂಡವಾತನು ಎನುತ ಅಂತಿರೆ (ಅವನ ಕುಂದದ ಪೌರುಷವನ್ನು ಪರೀಕ್ಷಿಸಿ ನೋಡೋಣ ಎನ್ನುತ, ಹಾಗಿರಲು) ತಂಗೆಯ

ಮಾಣ್ದುದರ್ಕೆ (ತಂಗಿಯು
ತಡಮಾಡಿದುದಕ್ಕೆ) ಅವಂ
ಮೊಟಗಿ ಸಿಡಿಲ್ದದೊಂದು
ಸಿಡಿಲ ಏಟ್ಗೆಯಿನೆ ಐಯ್ತರೆ
(ಅವನು- ಹಿಡಿಂಬನು
ಸಿಡಿಲಿಂತೆ ಘರ್ಜಿಸಿ
ಸಿಡಿಲವೇಗದಿಂದ) ವಂದು
ಭೀಮನಂ (ಬಂದು
ಭೀಮನನ್ನು)
ಪದ್ಯ-೧೬:ಅರ್ಥ:(ತಪ್ಪಿದೆ-
ಹಾಳುಮಾಡಿದೆ!?-

ಡಿಎಲ್ಎನ್) ನೀನು ನನ್ನಲ್ಲಿ ಮೋಹಗೊಂಡ ಸತ್ಯವನ್ನು ಹೇಳಿದೆ!; ಅಲ್ಲದೆ ನೀನು ರಾಕ್ಷಸಿಯಾಗಿದ್ದೀಯೆ; ಈ ಕೆಟ್ಟಮಾತು ನಿನಗೆ ತಕ್ಕುದು ತಕ್ಕದು. ನಿನ್ನ ಹಿರಿಯಣ್ಣನೇ ಬರಲಿ, ಅವನ ಕುಂದದ ಪೌರುಷವನ್ನು ಪರೀಕ್ಷಿಸಿ ನೋಡೋಣ ಎನ್ನುತ, ಹಾಗಿರಲು, ತಂಗಿಯು ತಡಮಾಡಿದ್ದಕ್ಕೆ ಅವನು-

ಹಿಡಿಂಬನು ಸಿಡಿಲಿಂತೆ
ಘರ್ಜಿಸಿ ಸಿಡಿಲವೇಗದಿಂದ
ಬಂದು ಭೀಮನನ್ನು-

ವ|| ಕಂಡು ಕಣ್ಗಳಿಂ ಕೆಂಡದ ತಂಡಂಗಳುಮುರಿಯ ತಂಡಂಗಳುಂ ಸೂಸೆ ನೀನೊರ್ವಯೆನ್ನೊಳಗೇಂ ಕಾದುವೆ ಈ ಮಱಲುಂದಿದರನೆತ್ತಿನಿಬರುಮ ನೊರ್ಮೆಯೆ ಪೊಸೆದು ಮುಕ್ಕುವೆನೆನೆ ಸಾಹಸಭೀಮಂ

ಮಲ್ಲಂತಿಗೆಯನಪ್ಪೊಡಂ ಸಡಲಿಸದವನನವಯವ ದೊಳಿಂತೆಂದಂ-

ವಚನ:ಪದವಿಭಾಗ-

ಅರ್ಥ:ಕಂಡು ಕಣ್ಗಳಿಂ ಕೆಂಡದ ತಂಡಂಗಳುಂ ಉರಿಯ ತಂಡಂಗಳುಂ ಸೂಸೆ (ನೋಡಿ ಕಣ್ಣುಗಳಿಂದ, ಕೆಂಡದ ರಾಶಿಯ ಉರಿಯ ಮೊತ್ತವೂ ಹೊರ ಚಿಮ್ಮುತ್ತರಲು) ನೀನೊರ್ವಯ್ ಎನ್ನೊಳಗೇಂ

ಕಾದುವೆ? (ನೀನೊಬ್ಬನೆ!
ನನ್ನಲ್ಲಿ ಹೇಗೆ ಕಾದುತ್ತೀಯೆ?)
ಈ ಮಱಲುಂದಿದರನ್ ಎತ್ತ್
ಇನಿಬರುಮನು ಒರ್ಮೆಯೆ
ಪೊಸೆದು ಮುಕ್ಕುವೆನು ಎನೆ
(ಈ ಮೈಮರೆತು
ಮಲಗಿದವರನ್ನು ಎಬ್ಬಿಸು,
ಇವರೆಲ್ಲರನ್ನೂ ಒಂದೇ ಸಲ
ಹೊಸೆದು ಮುಕ್ಕುತ್ತೇನೆ
ಎನ್ನಲು), ಸಾಹಸಭೀಮಂ
ಮಲ್ಲಂತಿಗೆಯನು ಅಪ್ಪೊಡಂ

ಸಡಲಿಸದೆ (ಸಾಹಸಭೀಮನು ತನ್ನ ಮಲ್ಲ ಚಡ್ಡಿಯನ್ನು (ಕಾಚ) ಸರಿಪಡಿಸದೆ, ಅವನ ಅನವಯವದೊಳು ಇಂತೆಂದಂ(ಅನ ಅವಯವದೊಳು; ಅನಾಯಾಸವಾಗಿ ಅವನನ್ನು ಕುರಿತು ಹೀಗೆಂದನು)-

ವಚನ:ಅರ್ಥ:ನೋಡಿ ಕಣ್ಣುಗಳಿಂದ, ಕೆಂಡದ ರಾಶಿಯ ಉರಿಯ ಮೊತ್ತವ್ರೂ

ಹೊರ ಚಿಮ್ಮುತ್ತರಲು,
ನೀನೊಬ್ಬನೆ! ನನ್ನಲ್ಲಿ ಹೇಗೆ
ಕಾದುತ್ತೀಯೆ? ಈ ಮೈಮರೆತು
ಮಲಗಿದವರನ್ನು ಎಬ್ಬಿಸು,
ಇವರೆಲ್ಲರನ್ನೂ ಒಂದೇ ಸಲ
ಹೊಸೆದು ಮುಕ್ತುತ್ತೇನೆ
ಎನ್ನಲು. ಸಾಹಸಭೀಮನು
ತನ್ನ ಮಲ್ಲ ಚಡ್ಡಿಯನ್ನು
(ಕಾಚ)ಸರಿಪಡಿಸದೆ,
ಅನಾಯಾಸವಾಗಿ ಅವನನ್ನು
ಕುರಿತು ಹೀಗೆಂದನು

ಕಂ|| ಏಂ ಗಾವಿಲನಯೊ ನಿನ್ನಂ
ನಂಗುವುದರ್ಕಿವರನೆತ್ತವೇೞ್ಕು
ಮೆ ನೆರಮಂ|
ಸಂಗಳಿಸಲ್ವೇೞ್ಕು ಮಾ
ತಂಗವಿರೋಧಿಗೆ ಕುರಂಗ
ಸಂಗರ ಧರೆಯೊಳ್|| ೧೭||

ಪದ್ಯ-೧೭:ಪದವಿಭಾಗ-ಅರ್ಥ:ಏಂ ಗಾವಿಲನಯೊ ನಿನ್ನಂ ನಂಗುವುದರ್ಕೆ ಇವರನು ಎತ್ತವೇೞ್ಕುಮೆ (ಎಂತಹ ದಡ್ಡನಯ್ಯಾ?

ನಿನ್ನಿಂದ/ನೀನು
ನುಂಗುವುದಕ್ಕಾಗಿ ಇಷ್ಟು
ಜನವನ್ನೂ ಎಬ್ಬಿಸಬೇಕೆ?)
ನೆರಮಂ ಸಂಗಳಿಸಲ್ವೇೞ್ಕು
(ಸಹಾಯವನ್ನು
ಒದಗಿಸಿಕೊಳ್ಳಬೇಕು?
ಬೇಕಾಗಿಲ್ಲ!)
ಮಾತಂಗವಿರೋಧಿಗೆ
(ಆನೆಯ ಶತ್ರುವಿಗ- ಸಿಂಹಕ್ಕೆ)
ಕುರಂಗ (ಜಿಂಕೆ) ಸಂಗರ

ಧರೆಯೊಳ್ (ಲೋಕದಲ್ಲಿ ಜಿಂಕೆಯಡನೆ ಯುದ್ಧ)| **ಪದ್ಯ-00:ಅರ್ಥ**:ಎಂತಹ ದಡ್ಡನಯ್ಯಾ? ನಿನ್ನಿಂದ/ನೀನು ನುಂಗುವುದಕ್ಕಾಗಿ ಇಷ್ಟು ಜನವನ್ನೂ ಎಬ್ಬಿಸಬೇಕೆ? ಜಿಂಕೆಯೊಡನೆ ಯುದ್ಧಮಾಡುವಾಗ ಗಜವಿರೋಯಾದ ಸಿಂಹಕ್ಕೆ ಸಹಾಯವನ್ನು

ಒದಗಿಸಿಕೊಳ್ಳಬೇಕೇ?

ಎಂದನು.

ವ|| ಎಂಬುದುಂ ಹಿಡಿಂಬನಾಡಂಬರಂಗೆಯ್ದು ತುಂಬುರುಕೊಳ್ಳಿಯತಂಬರಂ ಬರಂ ಸಿಡಿಲ್ದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಹಿಡಿಂಬನು ಆಡಂಬರಂಗೆಯ್ದು (ಅಬ್ಬರಿಸಿ) ತುಂಬುರುಕೊಳ್ಳಿಯತ

(ತೂಬರಮರದ ಕೊಳ್ಳಿಯ ಹಾಗೆ) ಅಂಬರ ಅಂಬರಂ ಸಿಡಿಲ್ದು(ಆಕಾಶದ ಎತ್ತರಕ್ಕೆ ನೆಗೆದು) -

ವಚನ:ಅರ್ಥ:ಹಿಡಿಂಬನು ಅಬ್ಬರಿಸಿ ತೂಬರಮರದ ಕೊಳ್ಳಿಯ ಹಾಗೆ ಆಕಾಶದ ಎತ್ತರಕ್ಕೆ ನೆಗೆದು-

ಚಂ|| ಕಡುಪಿನೆ ಪೊತ್ತು ಪಾಸರೆಯನೆಯ್ತರೆ ಭೀಮನುಮೊತ್ತಿ ಕಿಱ್ತು ಬೇ

ರೊಡನೆ
ಮಹೀಜಮೊಂದನಿಡೆಯುಂ
ಬಿಡೆ ಪೊಯ್ಯೆಯುಮಾ ಬನಂ
ಪಡ|
ಲ್ವಡುತಿರೆ ಕಲ್ಲೋಳಂ
ಮರದೊಳಂ ಬಡಿದೊಯ್ಯನೆ
ಜೋಲ್ದು ದೈತ್ಯನಂ
ಪಿಡಿದು ಮೃಣಾಳನಾಳಮನೆ
ಸೀಳ್ವವೊಲೊರ್ಮೆಯೆ ಸೀಳ್ದು
ಬೀಸಿದಂ|| ೧೮||

ಪದ್ಯ-೧೮:ಪದವಿಭಾಗ-ಅರ್ಥ:ಕಡುಪಿನೆ (ತೀವ್ರವಾಗಿ)ಪೊತ್ತು ಪಾಸರೆಯನು ಐಯ್ತರೆ (ಒಂದು ಹಾಸುಬಂಡೆಯನ್ನು ಹೊತ್ತು ವೇಗವಾಗಿ ಬರಲು) ಭೀಮನುಂ ಒತ್ತಿ ಕಿೞ್ತು ಬೇರೊಡನೆ ಮಹೀಜಂ(ಮರ) ಒಂದನು ಇಡೆಯುಂ ಬಿಡೆ (ಬಿಡೆಯವಿಲ್ಲದೆ) ಪೊಯ್ಯೆಯುಮ್ (ಭೀಮನೂ

ಬಲವಂತವಾಗಿ ಒಂದು ಮರವನ್ನು ಬೇರೊಡನೆಯೇ ಕಿತ್ತು ಅವನ ಮೇಲೆ ಕೊಡೆಯುವುದರಿಂದಲೂ) ಆ ಬನಂ ಪಡಲ್ಪಡುತಿರೆ (ಆ ಕಾಡು ಚೆಲ್ಲಾಪಿಲ್ಲಿಯಾಗುತ್ತಿರಲು), ಕಲ್ಲೊಳಂ ಮರದೊಳಂ ಬಡಿದು ಒಯ್ಯನೆ ಜೋಲ್ದು ದೈತ್ಯನಂ ಪಿಡಿದು (ಕಲ್ಲಿನಿಂದಲೂ

ಮರದಿಂದಲೂ ಬಡಿದು ಮೆಲ್ಲನೆ ಜೋತುಬಿದ್ದ ಆ ರಾಕ್ಷಸನನ್ನು ಹಿಡಿದುಕೊಂಡು) ಮೃಣಾಳನಾಳಮನೆ ಸೀಳ್ವವೊಲ್ ಒರ್ಮೆಯೆ ಸೀಳ್ದು ಬೀಸಿದಂ(ತಾವರೆಯ ದಂಟನ್ನು ಸೀಳುವ ಹಾಗೆ ಒಂದೇ ಸಲ ಸೀಳಿ ಎಸೆದನು.)

ಪದ್ಯ-೧೮:ಅರ್ಥ:ಒಂದು ಹಾಸುಬಂಡೆಯನ್ನು ಹೊತ್ತು ವೇಗವಾಗಿ ಬರಲು, ಭೀಮನೂ

ಬಲವಂತವಾಗಿ ಒಂದು ಮರವನ್ನು ಬೇರೊಡನೆಯೇ ಕಿತ್ತು ಅವನ ಮೇಲೆ ಕೊಡೆಯುವುದರಿಂದಲೂ ಆ ಕಾಡು ಚೆಲ್ಲಾಪಿಲ್ಲಿಯಾಗುತ್ತಿರಲು, ಕಲ್ಲಿನಿಂದಲೂ ಮರದಿಂದಲೂ ಬಡಿದು ಮೆಲ್ಲನೆ ಜೋತುಬಿದ್ದ ಆ ರಾಕ್ಷಸನನ್ನು ಹಿಡಿದುಕೊಂಡು, ತಾವರೆಯ

ದಂಟನ್ನು ಸೀಳುವ ಹಾಗೆ
ಒಂದೇ ಸಲ ಸೀಳಿ ಎಸೆದನು.

ವ|| ಆಗಳಾ ಕಳಕಳಕ್ಕೆ ಮಱಲುಂದಿದಯ್ವರುಮೆಚ್ಚಿತ್ತಿದೇನೆಂದು ಬೆಸಗೊಳೆ ತದ್ವೃತ್ತಾಂತ ಮೆಲ್ಲಮನಱಿಪಿ ಹಿಡಿಂಬೆ ಡಂಬಮಿಲ್ಲದೆ ಭೀಮಸೇನನೊಳಪ್ಪೊಡಂಬಡಂ ನುಡಿಯೆ ಕೊಂತಿಯುಂ ಧರ್ಮಪುತ್ರನುವಿಕೆ ಸಾಮಾನ್ಯವನಿತೆಯಲ್ಲಿವಳ್

ರಾಕ್ಷಸಸ್ತ್ರೀಯೆಂದು
ಭಾವಿಸಲ್ಬೇಡಿಈಕೆಯಂ
ಕೈಯ್ಕೊಳ್ಳುದೆ ಕಜ್ಜಮೆಂದಾಕೆಗಂ
ಭೀಮಸೇನಂಗಂ
ಗಂಧರ್ವವಿವಾಹಮಂ
ಮಾಡಿದೊಡೆ ಹಿಡಿಂಬೆ
ನೀಮಿಲ್ಲಿರಲ್ವೇಡ ಪರ್ವತದ
ಮೇಲೆ ಕಱಂಗಿ ಕಟ್ಟಿಲಿಸಿದ
ಮರುದುಱುಗಲ ನಡುವೆ
ಸುಧಾ ಧವಳಿತೋತ್ತುಂಗ
ರಮ್ಯ ಹರ್ಮ್ಯಂಗಳಂ

ಕಾಣ್ಬರಪ್ಪೊಡದು
ಹಿಡಿಂಬಪುರಮೆಂಬುದೆಮ್ಮ
ಪುರಮಲ್ಲಿಗೆ ಪೋಪಂ
ಬನ್ನಿಮೆಂದು
ಮುಂದಿಟ್ಟೊಡಗೊಂಡು
ಪೋಗಿ ಮಹಾವಿಭೂತಿಯಿಂ
ಪೊೞಲಂ ಪುಗಿಸಿ
ತನ್ನಸಂಪತ್ತುಮಂ ಶ್ರೀಯುಮಂ
ಮೆರೆದು ಮಜ್ಜನ
ಭೋಜನತಾಂಬೂಲ
ಲೇಪನಂಗಳಿಂ

ಪಥಪರಿಶ್ರಮಮೆಲ್ಲಮಂ ಕಳೆದು ಭೀಮಸೇನನುಂ ತಾನುಂ-

ವಚನ:ಪದವಿಭಾಗ-

ಅರ್ಥ:ಆಗಳಾ ಕಳಕಳಕ್ಕೆ ಮಱಲುಂದಿದ ಅಯ್ವರುಂ ಎೞ್ಚಿತ್ತು ಇದೇನೆಂದು ಬೆಸಗೊಳೆ (ಆಗ ಆ ಕಲಕಲಶಬ್ದದಿಂದ ಮೈಮರೆತು ನಿದ್ದೆ ಮಾಡುತ್ತಿದ್ದ ಅಯ್ದು ಜನವೂ ಎಚ್ಚೆತ್ತು ಇದೇನೆಂದು

ಕೇಳಲು), ತದ್ವೃತ್ತಾಂತಂ
ಎಲ್ಲಮನು ಅಱಿಪಿ (ಆ
ವಿಚಾರವನ್ನೆಲ್ಲಾ ತಿಳಿಸಿ),
ಹಿಡಿಂಬೆ ಡಂಬಮಿಲ್ಲದೆ
ಭೀಮಸೇನನೊಳು
ಒಪ್ಪೊಡಂಬಡಂ
ನುಡಿಯೆ(ಹಿಡಿಂಬೆಯು
ಕಪಟವಿಲ್ಲದೆ ಸರಳವಾಗಿ
ಭೀಮನ ವಿಷಯದಲ್ಲಿ ತನ್ನ
ಒಪ್ಪಿಗೆಯನ್ನು ತಿಳಿಸಲು)
ಕೊಂತಿಯುಂ

ಧರ್ಮಪುತ್ರನುವಿಕೆ ಸಾಮಾನ್ಯ
ವನಿತೆಯಲ್ಲಿವಳ್
ರಾಕ್ಷಸಸ್ತ್ರೀಯೆಂದು
ಭಾವಿಸಲ್ವೇಡ ಈಕೆಯಂ
ಕೆಯ್ಕೊಳ್ವುದೆ ಕಜ್ಜಂ
ಎಂದಾಕೆಗಂ ಭೀಮಸೇನಂಗಂ
ಗಂಧರ್ವವಿವಾಹಮಂ
ಮಾಡಿದೊಡೆ, (ಕುಂತಿಯೂ
ಧರ್ಮರಾಜನೂ ಇವಳು
ಸಾಮಾನ್ಯಳಾದ ಹೆಂಗಸಲ್ಲ;
ರಾಕ್ಷಸಸ್ತ್ರೀಯೆಂದು

ಭಾವಿಸಬೇಡ, ಅವಳನ್ನು ಸ್ವೀಕರಿಸುವುದೇ (ನಿನಗೆ ಯೋಗ್ಯವಾದ) ಕಾರ್ಯ ಎಂದು ಅವಳಿಗೂ ಭೀಮಸೇನನಿಗೂ ಗಾಂಧರ್ವವಿವಾಹವನ್ನು ಮಾಡಿದಾಗ-.) ಹಿಡಿಂಬೆ ನೀಂ ಇಲ್ಲಿರಲ್ವೇಡ (ಹಿಡಿಂಬೆಯು ನೀವು ಇಲ್ಲಿರುವುದು ಬೇಡ;), ಪರ್ವತದ ಮೇಲೆ ಕಱಿಂಗಿ ಕಟ್ಟಿಲಿಸಿದ ಮರುದುಱುಗಲ

ನಡುವೆ (ಬೆಟ್ಟದ ಮೇಲೆ ಕರ್ರಗೆ
ಕಪ್ಪಾಗಿ ಕಾಣುವ ಮರಗಳ
ತೋಪಿನ ನಡುವೆ ಸುಣ್ಣದಿಂದ
ಬಿಳುಪಾಗಿ ಮಾಡಲ್ಪಟ್ಟು)
ಸುಧಾ ಧವಳಿತ ಉತ್ತುಂಗ
(ಸುಣ್ಣಬಳಿದ ಎತ್ತರದ) ರಮ್ಯ
ಹರ್ಮ್ಯಂಗಳಂ
(ಅರಮನೆಗಳನ್ನು)
ಕಾಣ್ಬಿರಪ್ಪೊಡೆ ಅದು
(ಎತ್ತರವೂ ಮನೋಹರವೂ
ಆಗಿ ನಿಮ್ಮ ಕಣ್ಣಿಗೆ

ಕಾಣುತ್ತಿರುವ ಅದು)
ಹಿಡಿಂಬಪುರಮೆಂಬುದೆಮ್ಮ
ಪುರಮಲ್ಲಿಗೆ ಪೋಪಂ
ಬನ್ನಿಮೆಂದು(ಆ ಉಪ್ಪರಿಗೆ
ಮನೆಗಳು ಹಿಡಿಂಬ
ಪುರವೆಂಬುದು ನಮ್ಮ
ಪಟ್ಟಣ,ಅಲ್ಲಿಗೆ ಹೋಗೋಣ
ಬನ್ನಿ ಎಂದು) ಮುಂದಿಟ್ಟು
ಒಡಗೊಂಡು ಪೋಗಿ
ಮಹಾವಿಭೂತಿಯಿಂ
ಪೊಟಿಲಂ ಪುಗಿಸಿ (ಅವರನ್ನು

ಮುಂದುಮಾಡಿಕೊಂಡು
ಹೋಗಿ ಮಹಾವೈಭವದಿಂದ
ಪುರಪ್ರವೇಶಮಾಡಿದಳು.
ಹಾಗೆ ಮಾಡಿಸಿ), ತನ್ನ
ಸಂಪತ್ತುಮಂ ಶ್ರೀಯುಮಂ
ಮೆರೆದು ಮಜ್ಜನ (ಸ್ನಾನ)
ಭೋಜನ ತಾಂಬೂಲ
ಲೇಪನಂಗಳಿಂ ಪಥಪರಿಶ್ರಮಂ
ಎಲ್ಲಮಂ ಕಳೆದು
ಭೀಮಸೇನನುಂ ತಾನುಂ (ತನ್ನ
ಐಶ್ವರ್ಯವನ್ನೂ

ವೈಭವವನ್ನೂ ಅವರಿಗೆ (ತೋರಿಸಿ), ಸ್ನಾನ, ಭೋಜನ, ತಾಂಬೂಲ ಗಂಧಾದಿಲೇಪನಗಳಿಂದ ದಾರಿನಡೆದ ಬಳಲಿಕೆಗಳನ್ನೆಲ್ಲ ಹೋಗಲಾಡಿಸಿ ಸತ್ಕರಿಸಿದಳು. ಭೀಮಸೇನನೂ ತಾನೂ,)-

ವಚನ:ಅರ್ಥ:ಆಗ ಆ ಕಲಕಲಶಬ್ದದಿಂದ ಮೈಮರೆತು ನಿದ್ದೆ ಮಾಡುತ್ತಿದ್ದ ಅಯ್ಯು ಜನವೂ ಎಚ್ಚೆತ್ತು ಇದೇನೆಂದು

ಕೇಳಲು, ಆ ವಿಚಾರವನ್ನೆಲ್ಲಾ
ತಿಳಿಸಿ, ಹಿಡಿಂಬೆಯು
ಕಪಟವಿಲ್ಲದೆ ಸರಳವಾಗಿ
ಭೀಮನ ವಿಷಯದಲ್ಲಿ ತನ್ನ
ಒಪ್ಪಿಗೆಯನ್ನು ತಿಳಿಸಲು,
ಕುಂತಿಯೂ ಧರ್ಮರಾಜನೂ
ಇವಳು ಸಾಮಾನ್ಯಳಾದ
ಹೆಂಗಸಲ್ಲ; ರಾಕ್ಷಸಸ್ತ್ರೀಯೆಂದು
ಭಾವಿಸಬೇಡ, ಅವಳನ್ನು
ಸ್ವೀಕರಿಸುವುದೇ ನಿನಗೆ
ಯೋಗ್ಯವಾದ ಕಾರ್ಯ

ಎಂದು, ಅವಳಿಗೂ
ಭೀಮಸೇನನಿಗೂ
ಗಾಂಧರ್ವವಿವಾಹವನ್ನು
ಮಾಡಿದರು. ಆಗ
ಹಿಡಿಂಬೆಯು ನೀವು
ಇಲ್ಲಿರುವುದು ಬೇಡ; ಬೆಟ್ಟದ
ಮೇಲೆ ಕರ್‍ರಗೆ ಕಪ್ಪಾಗಿ ಕಾಣುವ
ಮರಗಳ ತೋಪಿನ ಮಧ್ಯೆ
ಸುಣ್ಣದಿಂದ ಬಿಳುಪಾಗಿ
ಮಾಡಲ್ಪಟ್ಟು ಎತ್ತರವೂ
ಮನೋಹರವೂ ಆಗಿ

ನಿಮ್ಮ ಕಣ್ಣಿಗೆ ಕಾಣುತ್ತಿರುವ ಆ ಉಪ್ಪರಿಗೆ ಮನೆಗಳು ನಮ್ಮ ಪಟ್ಟಣ (ರಾಜಧಾನಿ), ಅಲ್ಲಿಗೆ ಹೋಗೋಣ ಬನ್ನಿ ಎಂದು ಅವರನ್ನು ಮುಂದುಮಾಡಿಕೊಂಡು ಹೋಗಿ ಮಹಾವೈಭವದಿಂದ ಪುರಪ್ರವೇಶಮಾಡಿದಳು. ತನ್ನ ಐಶ್ವರ್ಯವನ್ನೂ ವೈಭವವನ್ನೂ ಅವರಿಗೆ (ತೋರಿಸಿ), ಸ್ನಾನ, ಭೋಜನ,

ತಾಂಬೂಲ ಗಂಧಾದಿಗಳಿಂದ ದಾರಿನಡೆದ ಬಳಲಿಕೆಗಳನ್ನೆಲ್ಲ ಹೋಗಲಾಡಿಸಿ ಸತ್ಕರಿಸಿದಳು. ಭೀಮಸೇನನೂ ತಾನೂ- ಹಿಡಿಂಬೆಯೂ-

ಕಂ|| ಎಲ್ಲಿ ಕೊಳನೆಲ್ಲಿ ತಣ್ಬುೞಿ
ಲೆಲ್ಲಿ ಲತಾಭವನಮೆಲ್ಲಿ ಧಾರಾಗೃಹಮಂ|
ಲ್ಲಿಯೆ ತೊಡರ್ದದಲ್ಲಿಯೆ ನಿಂ
ದಲ್ಲಿಯೆ ರಮಿಯಿಸಿದಳಾಕೆ ಮರುದಾತ್ಮಜನೊಳ್|| ೧೯||

ಪದ್ಯ-೧೯:ಪದವಿಭಾಗ-ಅರ್ಥ:ಎಲ್ಲಿ ಕೊಳನು ಎಲ್ಲಿ, ತಣ್ಬುೞಿಲು ಎಲ್ಲಿ (ಎಲ್ಲಿ ತಂಪಾದ ತೋಪುಗಳುಂ), ಲತಾಭವನಮ್ ಎಲ್ಲಿ, ಧಾರಾಗೃಹಮ್ (ಏಕಪ್ರಕಾರವಾಗಿ ನೀರು ಹರಿಯುವ ಮನೆಗಳುಂಟೋ) ಅಂತು ಅಲ್ಲಿಯೆ ತೊಡರ್ದದು ಅಲ್ಲಿಯೆ ನಿಂದು ಅಲ್ಲಿಯೆ ರಮಿಯಿಸಿದಳು ಆಕೆ

ಮರುದಾತ್ಮಜನೊಳ್ (ಆಕೆ ಹಿಡಿಂಬೆಯು ಅಲ್ಲಲ್ಲಿಯೇ ನಿಂತು ವಾಯುಪುತ್ರನಲ್ಲಿ ರಮಿಸಿದಳು)

ಪದ್ಯ-೧೯:ಅರ್ಥ:ಎಲ್ಲಿ ಸರೋವರಗಳುಂಟೋ, ಎಲ್ಲಿ ತಂಪಾದ ತೋಪುಗಳುಂಟೋ, ಎಲ್ಲಿ ಬಳ್ಳಿಮಾಡಗಳುಂಟೋ, ಎಲ್ಲಿ ಸದಾ ನೀರು ಹರಿಯುವ ಮನೆಗಳುಂಟೋ, ಅಲ್ಲಲ್ಲಿಯೇ ಸೇರಿಕೊಂಡು ಅಲ್ಲಲ್ಲಿಯೇ

ನಿಂತು ಹಿಡಿಂಬೆಯು ವಾಯುಪುತ್ರನಲ್ಲಿ ರಮಿಸಿದಳು.

ವ|| ಅಂತು ರಮಿಯಿಸಿ ಪೊೞಲ್ಗೆ ಮಗುೞ್ದು ಬಂದೊಡಾಕೆಗಂ ಭೀಮಂಗಂ

ವಚನ:ಪದವಿಭಾಗ-

ಅರ್ಥ:ಅಂತು ರಮಿಯಿಸಿ ಪೊೞಲ್ಗೆ ಮಗುೞ್ದು ಬಂದೊಡಾಕೆಗಂ ಭೀಮಂಗಂ

ವಚನ:ಅರ್ಥ:ಹಾಗೆ ರಮಿಸಿ ಉದ್ಯಾನವನ ನಗರಕ್ಕೆ ಮರಳಿ ಬಂದಾಗ ಆಕೆಗೂ ಭೀಮನಿಗೂ-

ಕಂ|| ಕಾರಿರುಳ ತಿರುಳ ಬಣ್ಣಂ
ಕೂರಿದುವೆನೆ ತೊಳಪ ದಾಡೆ
ಮಿಳಿರ್ವುರ್ರಿಗೇಸಂ|
ಪೇರೊಡಲೆಸೆದಿರೆ ಪುಟ್ಟಿದ
ನಾರುಮಗುರ್ವಿಸೆ ಮಗಂ
ಘಟೋತ್ಕಚನೆಂಬಂ|| ೨೦||

ಪದ್ಯ-೨೦:ಪದವಿಭಾಗ-ಅರ್ಥ:ಕಾರಿರುಳ ತಿರುಳ ಬಣ್ಣಂ ಕೂರಿದುವು ಎನೆ (ಇಲ್ಲಿ ಮೊನಚಾಯಿತು/ಒಟ್ಟಾಯಿತು ಎನ್ನುವಂತೆ) ತೊಳಪ (ಹೊಳೆಯುವ) ದಾಡೆ ಮಿಳಿರ್ವುರಿಗೇಸಂ (ಅಲುಗಾಡುವ ಕೆಂಗೂದಲು,) ಪೇರ್ ಒಡಲು ಎಸೆದಿರೆ (ದೊಡ್ಡ ದೇಹವೂ ಪ್ರಕಾಶಮಾನವಾಗಿರಲು)

ಪುಟ್ಟಿದನು ಆರುಂ
ಉಗುರ್ವಿಸೆ ಮಗಂ
ಘಟೋತ್ಕಚನೆಂಬಂ(ಯಾರಿ
ಗೇ ಆದರೂ
ಭಯವನ್ನುಂಟುಮಾಡುವಂತಿ
ರುವ ಘಟೋತ್ಕಚನೆಂಬ
ಮಗನು ಹುಟ್ಟಿದನು.)|
ಪದ್ಯ-೨೦:ಅರ್ಥ:ಕಗ್ಗತ್ತಲೆ
ಯಿಂದ ಕೂಡಿದ ರಾತ್ರಿಯ
ಬಣ್ಣವು ಇಲ್ಲಿ ಮೊನಚಾಯಿತು
ಎನ್ನುವ ಹಾಗೆ ತೊಳಗುತ್ತಿರುವ

ಕೋರೆಹಲ್ಲೂ

ಅಲುಗಾಡುತ್ತಿರುವ

ಕೆಂಗೂದಲೂ ದೊಡ್ಡ

ದೇಹವೂ

ಪ್ರಕಾಶಮಾನವಾಗಿರಲು

ಯಾರಿಗೇ ಆದರೂ

ಭಯವನ್ನುಂಟುಮಾಡುವಂತಿ

ರುವ ಘಟೋತ್ಕಚನೆಂಬ

ಮಗನು ಹುಟ್ಟಿದನು.

ವ|| ಅಂತು

ಪುಟ್ಟುವುದುವಿಶ್ವರಕಲ್ಪಿತದಿಂ

ರಾಕ್ಷಸರ್ಗೆ ಸದ್ಯೋಗರ್ಭಮುಂ

ಸದ್ಯ ಪ್ರಸೂತಿಯುಂ

ಸದ್ಯೋಯೌವನಮುಮುಳ್ಳ

ಕಾರಣದಿಂದಾಗಳೆ

ಷೋಡಶವರ್ಷದ

ಕುಮಾರನಾಗಿರೆ

ಪಾಂಡಮರುಮಲ್ಲಿ ಮೂಱು

ವರುಷಮಿರ್ದು

ತೃಣದ್ವೈಪಾಯನೋಪದೇಶ

ದಿಂದೇಕಚಕ್ರಕ್ಕೆ ವೋಪ

ಕಜ್ಜಮನಾಳೋಚಿಸಿ-

ವಚನ:ಪದವಿಭಾಗ-

ಅರ್ಥ:ಅಂತು ಪುಟ್ಟುವುದು ವಿಶ್ವರಕಲ್ಪಿತದಿಂ ರಾಕ್ಷಸರ್ಗೆ ಸದ್ಯೋಗರ್ಭಮುಂ ಸದ್ಯ ಪ್ರಸೂತಿಯುಂ ಸದ್ಯೋಯೌವನಮುಮುಳ್ಳ (ದೈವಸಂಕಲ್ಪದಿಂದ ರಾಕ್ಷಸರಿಗೆ ಕೂಡಲೇ ಗರ್ಭಧಾರಣೆ, ಕೂಡಲೇ ಹೆರಿಗೆ, ಕೂಡಲೇ ಯೌವನಪ್ರಾಪ್ತಿಯಾಗುವುದು) ಕಾರಣದಿಂದ ಆಗಳೆ

ಷೋಡಶವರ್ಷದ
ಕುಮಾರನಾಗಿರೆ (ಆಗಲೇ
ಹದಿನಾರುವರ್ಷದ
ಬಾಲಕನಾಗಿರಲು)
ಪಾಂಡಮರುಂ ಅಲ್ಲಿ ಮೂಱು
ವರುಷಂ ಇರ್ದು
ತೃಣದ್ವೈಪಾಯನ
ಉಪದೇಶದಿಂದ ಏಕಚಕ್ರಕ್ಕೆ-
ವೋಪ ಕಜ್ಜಮನು
ಆಳೋಚಿಸಿ (ಹೋಗುವ

ಕಾರ್ಯವನ್ನು
ಆಲೋಚಿಸಿದರು)-
ವಚನ:ಅರ್ಥ:||
ದೈವಸಂಕಲ್ಪದಿಂದ ರಾಕ್ಷಸರಿಗೆ
ಕೂಡಲೇ ಗರ್ಭಧಾರಣೆ,
ಕೂಡಲೇ ಹೆರಿಗೆ, ಕೂಡಲೇ
ಯೌವನಪ್ರಾಪ್ತಿಯಾಗುವುದು,
ಘಟೋದ್ಗಜನು ಆಗಲೇ
ಹದಿನಾರುವರ್ಷದ
ಬಾಲಕನಾಗಿರಲು ಪಾಂಡವರು
ಅಲ್ಲಿ ಮೂರುವರ್ಷಕಾಲವಿದ್ದು

ವೇದವ್ಯಾಸರ ಉಪದೇಶದ ಪ್ರಕಾರ ಏಕಚಕ್ರನಗರಕ್ಕೆ ಹೋಗುವ ಕಾರ್ಯವನ್ನು ಆಲೋಚಿಸಿದರು.

ಏಕಚಕ್ರನಗರ ಪ್ರವೇಶ - ಬಕಾಸುರ ವಧೆ

ಚಂ|| ಬರಿಸಿ ಹಿಡಿಂಬೆಯಂ
ಕರೆದು ಸಾರೆ ಘಟೋತ್ಕಚನಂ
ಮನೋಮುದಂ

ಬೆರಸೊಸೆದಿರ್ದವಿನ್ನೆವರಮಿನ್ನಿ ರಲಾಗದು ಪೋಪೆವೆಂದೊಡಾ| ದರದೊಳೆ ಕೊಟ್ಟ ವಸ್ತುಗಳನೊಂದುಮನೊಲ್ಲದೆ ಕೂರ್ತು ಬುದ್ಧಿವೇ ಳ್ದಿರಿಸಿ ಸುಖಪ್ರಯಾಣದೊಳೆ ಪಾಂಡವರೆಯ್ದಿದರೇಕಚಕ್ರ ಮಂ|| ೨೧||

ಪದ್ಯ-೨೦:ಪದವಿಭಾಗ-ಅರ್ಥ:ಬರಿಸಿ ಹಿಡಿಂಬೆಯಂ ಕರೆದು ಸಾರೆ ಘಟೋತ್ಕಚನಂ

(ಕರೆದು, ಹತ್ತಿರಕ್ಕೆ ಬರಲು)
ಮನೋಮುದಂ ಬೆರಸು
ಒಸೆದಿರ್ದೆವು
ಇನ್ನೆವರಂ(ಇಲ್ಲಿಯವರೆಗೆ
ಸುಖವಾಗಿ ಸಂತೋಷವಾಗಿ
ಇಲ್ಲಿ ಇದ್ದೆವು.) ಇನ್ನು
ಇರಲಾಗದು ಪೋಪೆವೆಂದೊಡೆ
ಆದರದೊಳೆ ಕೊಟ್ಟ
ವಸ್ತುಗಳನು ಒಂದುಮನು
ಒಲ್ಲದೆ (ಕೊಟ್ಟ ಯಾವ
ವಸ್ತುವನ್ನೂ ಸ್ವೀಕರಿಸದೆ)

ಕೂರ್ತು ಬುದ್ಧಿವೇಳ್ದು ಇರಿಸಿ (ಪ್ರೀತಿಯಿಂದ ಬುದ್ಧಿಹೇಳಿ ಅವರನ್ನು ಅಲ್ಲಿಯೇ ಬಿಟ್ಟು) ಸುಖಪ್ರಯಾಣದೊಳೆ ಪಾಂಡವರು ಎಯ್ದಿದರ್ (ಸೇರಿದರು) ಏಕಚಕ್ರಮಂ

ಪದ್ಯ-೨೦:ಅರ್ಥ:ಹಿಡಿಂಬೆ ಯನ್ನು ಬರಮಾಡಿಕೊಂಡು ಘಟೋತ್ಕಚನನ್ನೂ ಹತ್ತಿರಕ್ಕೆ ಕರೆದು ಇಲ್ಲಿಯವರೆಗೆ ಸುಖವಾಗಿ ಸಂತೋಷವಾಗಿ

ಇಲ್ಲಿ ಇದ್ದೆವು. ಇನ್ನು
ಇರಬಾರದು ಹೋಗುತ್ತೇನೆ
ಎಂದು ಹೇಳಿ ಅವರು
ಆದರದಿಂದ ಕೊಟ್ಟ ಯಾವ
ವಸ್ತುವನ್ನೂ ಸ್ವೀಕರಿಸದೆ
ಅಲ್ಲೆಯೇ ಬಿಟ್ಟು ಪ್ರೀತಿಯಿಂದ
ಬುದ್ಧಿಹೇಳಿ
ಸುಖಪ್ರಯಾಣದಿಂದ
ಪಾಂಡವರು
ಏಕಚಕ್ರಪುರವನ್ನು ಸೇರಿದರು

ರಗಳೆ|| ಅಲ್ಲಿ ಸೊಗಯಿಸುವ ಕೃತಕಗಿರಿಗಳಿಂ|

(ಸುಂದರ ಮಾಟದ ಬೆಟ್ಟಗಳು)

ಕಲ್ಪತರುಗಳೊಳ್ ಪೋಲ್ವ ಮರಗಳಿಂ ನಂದನಂಗಳೊಳ್ ಸುೞಿದ ಬಿರಯಿಯಿಂ|

(ಕಲ್ಪತರುಗಳನ್ನು ಹೋಲುವ ಮರಗಳು ನಂದನಂಗಳಲ್ಲಿ ಸುಳಿದ ವಿರಹಿಗಳು)

ಕಂಪು ಕಣ್ಮಲೆಯೆ ಪೂತ ಸುರಯಿಯಿಂ||

(ಸುಗಂಧ ಬೀರುತ್ತಿರುವ ಹೂವುಗಳನ್ನು ಬಿಟ್ಟಿರುವ ಸುರಗಿಯ ಮರಗಳಿಂದಲೂ)

ಸುತ್ತಲುಂ ಪರಿವ ಜರಿವೊನಲ್ಗಳಿಂ

(ಜರಿ ಪೊನಲ್ಗಳಿಂದ- ಸುತ್ತಲೂ ಹರಿಯುತ್ತಿರುವ ಸುಂದರವಾದ ಪ್ರವಾಹಗಳಿಂದ,)

ದೆತ್ತಲುಂ ನಲಿವ ಪೊಸ ನವಿಲ್ಗಳಿಂ|

(ಎತ್ತಲೂ - ಎಲ್ಲೆಡೆಯಲ್ಲಿಯೂ ಕುಣಿಯುತ್ತಿರುವ ನವಿಲುಗಳು,)

ಬೆಳೆದು ಮಗಮಗಿಪ ಗಂಧಶಾಳಿಯಿಂ

(ಶಾಲಿ-ಭತ್ತ:-ಬೆಳೆದಿರುವ ಸುಗಂಧಯುಕ್ತವಾದ ಬತ್ತದ ಗದ್ದೆಗಳು,)

ದಲ್ಲಿ ಸುೞಿವ ಗಿಳಿವಿಂಡಿನೋಳಿಯಿಂ||

(ಅಲ್ಲಿ ಸುಳಿವ:-ಸುಳಿಯುತ್ತಿರುವ ಗಿಳಿಗಳ ಹಿಂಡು)

ಈಂಟುಜಳಧಿಯೆನಿಪಗಳ ನೀಳ್ಪಿನಿಂ

(ಈಂಟು ಜಳಯೆನಿಪ:- ಕುಡಿಯುವ ನೀರಿನ ಸಮುದ್ರಂತಿರುವ ಆಳವಾದ ಕಂದಕ)

ನೆಗೆದು ಸೊಗಯಿಸುವ ಕೋಂಟೆಯೊಳ್ಪ್ಪಿನಿಂ|

(ಕೋಂಟೆಯ ಒಳ್ಪ್ಪಿನಿಂ:- ಮೇಲೆದ್ದುನಿಂತ ಸೊಗಸಾದ ಕೋಟೆ,)

ವಿವಿಧ ದೇವ ಗೃಹದಾಟಪಾಟದಿಂ|

(ವಿವಿಧರೀತಿಯ ದೇವಾಲಯಗಳು, ಆಟಪಾಟಗಳು,)

ಮಱುಗಿ ಬಟ್ಟೆಯರ ನೋಟ್ಪಿ ನೋಟದಿಂ||

(ದುಃಖದಿಂದ ನೋಡುತ್ತಿರುವ ದಾರಿಹೋಕರ ನೋಟಗಳು)

ಪಂಚರತುನದೊಳೆ ನೆರೆದ ಪಸರದಿಂ

(ಪಂಚರತ್ನಗಳಿಂದ ತುಂಬಿದ ಅಂಗಡಿಗಳು ಕುಬೇರರನ್ನೂ ಮೀರಿಸುವ ವಣಿಕರು)

ತೋರಣಂಗಳೊಳೆ ತೊಡರ್ದ ತಿಸರದಿಂ|

(ತೋರಣಗಳಲ್ಲಿ ಸೇರಿಕೊಂಡಿರುವ ಮೂರೆಳೆಯಹಾರಗಳಿಂದಲೂ)

ಧನದರನ್ನರಿವರೆನಿಪ ಪರದರಿಂ|

(ಧನದರನ್ನರ್ ಇವರೆನಿಪ=ಕುಬೇರನಂತಹವರಿವರು ಎನ್ನಿಸಿಕೊಂಡ ವ್ಯಾಪಾರಿಗಳಿಂದಲೂ)

ದೇವರನ್ನರಿವರೆನಿಪ ಬಿರುದರಿಂ||

(ದೇವರನ್ನರ್ ಇವರೆನಿಪ= ದೇವರಂತಹರಿವರು ಎನ್ನಿಸಿಕೊಂಡಿರುವ ಬಿರುದಾಂಕಿತರಿಂದಲೂ)

ನೆರೆಯೆ ಸೊಗಯಿಪಾ ಯೇಕಚಕ್ರಮಂ|

(ಪೂರ್ಣವಾಗಿ ಸೊಗಾಗಿರುವ ಏಕಚಕ್ರಪುರವನ್ನು)

ಮೆಚ್ಚಿದಂ ಹರಿಗನಮಿತ ವಿಕ್ರಮಂ| ೨೨||

(ಹರಿಗನು ಅಮಿತ ವಿಕ್ರಮಂ=ಎಲ್ಲೆಯಿಲ್ಲದ ಪರಾಕ್ರಮವುಳ್ಳ ಹರಿಗನು (ಅರ್ಜುನ-ಅರಿಕೇಸರಿಯು) ಮೆಚ್ಚಿದನು)

ಪದ್ಯ-00:ಪದವಿಭಾಗ-ಅರ್ಥ:(ಮೇಲೆ ಕೊಟ್ಟಿದೆ)

ಪದ್ಯ-00:ಅರ್ಥ:ಅಲ್ಲಿ ಸುಂದರವಾಗಿಕಾಣುವ ಕೃತಕಪರ್ವತಗಳಿಂದಲೂ ಕಲ್ಪವೃಕ್ಷವನ್ನೇ ಹೋಲುವ ಮರಗಳಿಂದಲೂ ನಂದನವನಗಳಲ್ಲಿ ಸುಳಿದಾಡುತ್ತಿರುವ ವಿರಹಿಗಳಿಂದಲೂ ಸುಗಂಧ ಬೀರುತ್ತಿರುವ ಹೂವುಗಳನ್ನು

ಬಿಟ್ಟಿರುವ ಸುರಗಿಯ
ಮರಗಳಿಂದಲೂ, ಸುತ್ತಲೂ
ಹರಿಯುತ್ತಿರುವ
ಸುಂದರವಾದ
ಕೃತಕಪರ್ವತಗಳು,
ಕಲ್ಪವೃಕ್ಷದಂತಿರುವ ಮರಗಳು,
ನಂದನವನಗಳಲ್ಲಿ ವಿರಹಿಸುವ
ವಿರಹಿಗಳು ಮನೋಹರವಾದ
ವಾಸನೆಯಿಂದ ಕೂಡಿದ
ಸುರಗಿಯ ಹೂವುಗಳು,
ಅಲ್ಲಲ್ಲೆ ಹರಿಯುವ ನದಿಗಳು,

ಎಲ್ಲೆಡೆಯಲ್ಲಿಯೂ
ಕುಣಿಯುತ್ತಿರುವ ನವಿಲುಗಳು,
ಕೊಬ್ಬಿ ಬೆಳೆದಿರುವ
ಸುಗಂಧಯುಕ್ತವಾದ ಬತ್ತದ
ಗದ್ದೆಗಳು, ಅದಕ್ಕೆ
ಸುಳಿಯುತ್ತಿರುವ ಗಿಳಿಗಳ
ಹಿಂಡು, ಸಮುದ್ರವನ್ನೂ
ಹೀಯ್ಯಾಳಿಸುವಷ್ಟು
ಆಳವಾದ ಕಂದಕ,
ಮೇಲೆದ್ದುಸೊಗಸುವ ಕೋಟೆ,
ವಿವಿಧರೀತಿಯ

ದೇವಾಲಯಗಳು, ಬಹಳ
ಆಸಕ್ತಿಯಿಂದ ನೋಡುತ್ತಿರುವ
ದಾರಿಹೋಕರ ನೋಟಗಳು,
ಪಂಚರತ್ನಗಳಿಂದ ತುಂಬಿದ
ಅಂಗಡಿಗಳು ಕುಬೇರರನ್ನೂ
ಮೀರಿಸುವ ವಣಿಕರು-
ಇವುಗಳಿಂದ
ಶೋಭಾಯಮಾನವಾದ
ಏಕಚಕ್ರಪುರವನ್ನು ಅತ್ಯಂತ
ಪರಾಕ್ರಮಿಯಾದ
ಅರ್ಜುನನು ನೋಡಿ

ಸಂತೋಷಪಟ್ಟನು. ಝರಿಯ ಪ್ರವಾಹಗಳಿಂದಲೂ ಎಲ್ಲ ಕಡೆಯಲ್ಲಿಯೂ ನಲಿದಾಡುತ್ತಿರುವ ಹೊಸನವಿಲುಗಳಿಂದಲೂ ಕೊಬ್ಬಿ ಬೆಳೆದು ವಾಸನೆಯನ್ನು ಬೀರುತ್ತಿರುವ ಕಂಪು ಬತ್ತದಿಂದಲೂ ಅಲ್ಲಿ ಸಂಚರಿಸುತ್ತಿರುವ ಗಿಳಿಯ ಹಿಂಡುಗಳ ಸಮೂಹದಿಂದಲೂ

ಕುಡಿಯುವುದಕ್ಕೆ
ಯೋಗ್ಯವಾದ
ಸಮುದ್ರವೆನಿಸಿಕೊಂಡಿರುವ
ಕಂದಕಗಳ
ದೀರ್ಘತೆಯಿಂದಲೂ
ಮೇಲಕ್ಕೆದ್ದ ಕೋಟೆಯ
ಸೊಗಸಾಗಿ ಕಾಣುವ
ಶ್ರೇಷ್ಠತೆಯಿಂದಲೂ, ಬಗೆ
ಬಗೆಯ ದೇವಾಲಯ
ಕ್ರೀಡಾವಿನೋದಗಳಿಂದಲೂ
ದಾರಿಹೋಕರನ್ನು

ಕರುಣೆಯಿಂದ ನೋಡುವ

ನೋಟದಿಂದಲೂ ಅಯ್ದು

ರೀತಿಯ ರತ್ನಗಳಿಂದ ತುಂಬಿದ

ಅಂಗಡಿಗಳಿಂದಲೂ

ತೋರಣಗಳಲ್ಲಿ

ಸೇರಿಕೊಂಡಿರುವ

ಮೂರೆಳೆಯಹಾರಗಳಿಂದಲೂ

ಕುಬೇರನಂತಹವರಿವರು

ಎನ್ನಿಸಿಕೊಂಡ

ವ್ಯಾಪಾರಿಗಳಿಂದಲೂ

ದೇವರಂತಹರಿವರು

ಎನ್ನಿಸಿಕೊಂಡಿರುವ
ಬಿರುದಾಂಕಿತರಿಂದಲೂ
ಪೂರ್ಣವಾಗಿ ಸೊಗಾಗಿರುವ
ಏಕಚಕ್ರಪುರವನ್ನು
ಎಲ್ಲೆಯಿಲ್ಲದ ಪರಾಕ್ರಮವುಳ್ಳ
ಹರಿಗನು (ಅರ್ಜುನ-
ಅರಿಕೇಸರಿಯು) ಮೆಚ್ಚಿದನು

**ವ|| || ಅಂತು ಮೆಚ್ಚಿ
ತಮ್ಮುತಯ್ವುರುಮಿನ್ನವು
ಪೊಟಿಲ್ಗಳಿಲ್ಲೀ ಪೊಟಿಲ್ಗೆ
ನಾಲ್ಕು ಯುಗದೊಳಂ**

ವಸುಮತಿ
ಪದ್ಮನಗರಮೇಕಚಕ್ರಂ
ಬಹುಧಾನ್ಯಮೆಂಬ ನಾಲ್ಕು
ಪೆಸರಾದುದೆಂದು
ಮನಂಗೊಂಡು ನೋಡುತ್ತುಂ
ಬಂದು ಚತುರ್ವೇದಪಾರಗರ
ಮನೆಯ ಮುಂದಣ
ಚತುಶ್ಶಾಲೆಯೊಳ್ ಬೀಡಂ
ಬಿಟ್ಟು ಧರಾಮರ
ವೇಷದೊಳೊಂದು

ವರುಷಮಿರ್ಪನ್ನೆಗಮೊಂದುದಿವಸಂ-

ವಚನ:ಪದವಿಭಾಗ-ಅರ್ಥ:

ಅಂತು ಮೆಚ್ಚಿ ತಮ್ಮುತ (ತಾವು) ಅಯ್ವರುಮ್ ಇನ್ನವು ಪೊಟಿಲ್ಗಳು (ಇಂತಹ-ಪಟ್ಟಣಗಳು) ಇಲ್ಲಿ ಈ ಪೊಟಿಲ್ಗೆ (ನಗರಕ್ಕೆ) ನಾಲ್ಕು ಯುಗದೊಳಂ ವಸುಮತಿ, ಪದ್ಮನಗರಂ, ಏಕಚಕ್ರಂ ಬಹುಧಾನ್ಯಂ ಎಂಬ ನಾಲ್ಕು

ಪೆಸರಾದುದು ಏಂದು ಮನಂಗೊಂಡು(ಸಂತೋಷಪಡಟ್ಟು) ನೋಡುತ್ತುಂ ಬಂದು ಚತುರ್ವೇದಪಾರಗರ (ನಾಲ್ಕು ವೇದಗಳಲ್ಲಿಯೂ ಪಂಡಿತರಾದವರ) ಮನೆಯ ಮುಂದಣ ಚತುಶ್ಯಾಲೆಯೊಳ್ (ತೊಟ್ಟಿಯಲ್ಲಿ) ಬೀಡಂ ಬಿಟ್ಟು ಧರಾಮರ (ಧರೆಯ ಅಮರರು- ಬ್ರಾಹ್ಮಣರ) ವೇಷದೊಳೊಂದು ವರುಷಂ

ಇರ್ಪ ಅನ್ನೆಗಂ ಒಂದು ದಿವಸಂ-

ವಚನ:ಅರ್ಥ:ಹೀಗೆ ಮೆಚ್ಚಿ ತಾವು ಐದು ಜನಗಳೂ, ಇಂತಹ ಪಟ್ಟಣಗಳು ಈ ಪಟ್ಟಣಕ್ಕೆ ನಾಲ್ಕು ಯುಗದಲ್ಲಿಯೂ ಕ್ರಮವಾಗಿ ವಸುಮತಿ, ಪದ್ಮನಗರ, ಏಕಚಕ್ರ, ಬಹುಧಾನ್ಯ ಎಂಬ ಹೆಸರುಗಳಾದುವು. ಎಂದು ಸಂತೋಷಪಟ್ಟು ನೋಡುತ್ತ

ಬಂದು ನಾಲ್ಕು
ವೇದಗಳಲ್ಲಿಯೂ
ಪಂಡಿತರಾದವರೊಬ್ಬರ
ಮನೆಯ ಮುಂಭಾಗದ
ತೊಟ್ಟಿಯಲ್ಲಿ ಬೀಡುಬಿಟ್ಟು
ಬ್ರಾಹ್ಮಣವೇಷದಿಂದ ಒಂದು
ವರ್ಷ ಕಾಲವಿದ್ದರು. ಆಗ
ಒಂದು ದಿನ-

ಕಂ|| ತುಂಬಿದ ರಕ್ತತೆಯಿಂ ನಿಜ
ಬಿಂಬಂ ವಾರುಣಿಯನೊಸೆದು
ಸೇವಿಸೆ ನಾಣ್ಗೆ|

ಟ್ಟಂಬೋೞ್ ತೇಜಂ ಮಸುಳ್ವಿನ ಮಂಬರಮಂ ಬಿಸುಟನಾಗಳಂಬುಜಮಿತ್ರಂ|| ೨೩||

ಪದ್ಯ-೨೩:ಪದವಿಭಾಗ-ಅರ್ಥ:

(ಸೂರ್ಯನು)ತುಂಬಿದ ರಕ್ತತೆಯಿಂ (ಕೆಂಪು ಬಣ್ಣದಿಂದ- ಪ್ರೀತಿಯಿಂದ), ನಿಜ ಬಿಂಬಂ ವಾರುಣಿಯನು

ಒಸೆದು ಸೇವಿಸೆ (ತನ್ನ
ಬಿಂಬವು ವರುಣನ ದಿಕ್ಕಾದ
ಪಶ್ಚಿಮವನ್ನು ಒಸೆದು ಪ್ರೀತಿಸಿ
ಸೇರಲು-/ ವಾರುಣ
-ಮದ್ಯವನ್ನು ಪ್ರೀತಿಸಿ ಸೇವಿಸೆ-
ಕುಡಿಯಲು)
ನಾಣ್ಗೆಟ್ಟಂಬೋಲ್ (ನಾಣ್
ಕೆಟ್ಟ ಅಂಬೊಲು-ನಾಚಿಕೆ
ಬಿಟ್ಟವನಂತೆ) ತೇಜಂ
ಮಸುಳ್ವಿನಂ (ಕಾಂತಿ
ಕುಂದುತ್ತಿರಲು) ಅಂಬರಮಂ

ಬಿಸುಟನು ಆಗಳ್ ಅಂಬುಜಮಿತ್ರಂ(ಆಕಾಶವನ್ನು ಬಿಟ್ಟನು - ಬಟ್ಟೆಯನ್ನು ಬಿಸಾಡಿದನು - ಆಗ ಕಮಲ ಸಖನಾದ ಸೂರ್ಯನು)

ಪದ್ಯ-೨೩:ಅರ್ಥ:ಆ ಒಂದು ದಿನ, ತುಂಬಿರುವ ಕೆಂಪು ಬಣ್ಣದಿಂದ ತನ್ನ ಬಿಂಬವು ಪಶ್ಚಿಮದಿಕ್ಕನ್ನು ಪ್ರೀತಿಸಿ ಸೇವೆಗಾಗಿ ಕಾಂತಿ ಮಂಕಾಗುತ್ತಿರಲು,

ಕಮಲಸಖನಾದ ಸೂರ್ಯನು ಆಕಾಶವನ್ನು ಬಿಟ್ಟನು. (ಸೂರ್ಯನು ಅಸ್ತಮಿಸಿದನು ಎಂಬುದು ಭಾವ) (ಅಂಬರ = ಆಕಾಶ , ಬಟ್ಟೆ)

ಶ್ಲೇಷಾಲಂಕಾರ:ಶ್ಲೇಷೆ: ಪ್ರೇಮದಿಂದ/ ಅನುರಾಗದಿಂದ ಪ್ರೀತಿಸಿ ಮದ್ಯಪಾನವನ್ನು ಮಾಡಲು ನಾಚಿಕೆಗೆಟ್ಟವನಂತೆ ಆಗ ಬಟ್ಟೆಯನ್ನು ಬಿಸುಟನು.

ವ|| ಆಗಳ್ ಸಂಧ್ಯಾವಂದನೆಗೆ ಧರ್ಮಪುತ್ರಾರ್ಜುನ ನಕುಲ ಸಹದೇವರ್ ಪೋದರನ್ನೆಗಮಿತ್ತ ಬೀಡಿನೊಳಿರ್ದ ಕೊಂತಿಯ ಭೀಮನ ಕರ್ಣೋಪಾಂತದೊಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಸಂಧ್ಯಾವಂದನೆಗೆ ಧರ್ಮಪುತ್ರ ಅರ್ಜುನ ನಕುಲ ಸಹದೇವರ್

ಪೋದರು ಅನ್ನೆಗಂ (ಹೋದರು. ಆಗ) ಇತ್ತ ಬೀಡಿನೊಳು (ಅವರು ಇದ್ದ ಮನೆಯಲ್ಲಿ) ಇರ್ದ (ಇದ್ದ)ಕೊಂತಿಯ ಭೀಮನ ಕರ್ಣೋಪಾಂತದೊಳ್ (ಕಿವಿಯೊಳಗೆ- ಹತ್ತಿರ)

ವಚನ:ಅರ್ಥ:ಆಗ ಸಂಧ್ಯಾವಂದನೆಗಾಗಿ ಧರ್ಮರಾಜ ಅರ್ಜುನ ನಕುಲ ಸಹದೇವರು ಹೋದರು.

ಅಷ್ಟರಲ್ಲಿ ಈ ಕಡೆ ಬೀಡಿನಲ್ಲಿದ್ದ ಕುಂತಿ ಮತ್ತು ಭೀಮನ ಕಿವಿಗೆ-

ಕಂ|| ಸಾರೆಯೊಳಟ್ವಿ ಮಹಾ
ದ್ವಿಜ
ನಾರಿಯ
ಮಮತಾವಿಪೂರಿತೋರ್ಜಿತ
ರವದಿಂ|
ಕಾರುಣ್ಯಾಕ್ರಂದನಮನಿ
ವಾರಿತಮೊರ್ಮೊದಲೆ ಬಂದು
ತೀಡಿತ್ತಾಗಳ್|| ೨೪||

ಪದ್ಯ-೨೪:ಪದವಿಭಾಗ-ಅರ್ಥ:ಸಾರೆಯೊಳ್ ಅೞ್ವ (ಹತ್ತಿರದಲ್ಲಿ ಅಳುವ) ಮಹಾ ದ್ವಿಜನಾರಿಯ (ಮಹಾಬ್ರಾಹ್ಮಣನ ಹೆಂಡತಿಯ) ಮಮತಾ ವಿಪೂರಿತ ಓರ್ಜಿತ ರವದಿಂ (ಮಮತೆಯಿಂದ ಕೂಡಿದ ದೊಡ್ಡ ಶಬ್ದದಿಂದ,) ಕಾರುಣ್ಯ ಆಕ್ರಂದನಂ ಅನಿವಾರಿತಂ ಒರ್ಮೋದಲೆ (ಕೂಡಲೆ)

ಬಂದು ತೀಡಿತ್ತು ಆಗಳ್
(ಕರುಣೆಯಿಂದ ಕೂಡಿದ
ಅಳುವಿನ ಸದ್ದು, ತಡೆ ಇಲ್ಲದೆ
ಕೂಡಲೆ ಬಂದು ಆಗ
ಮುಟ್ಟಿತ್ತು)|
ಪದ್ಯ-೨೪:ಅರ್ಥ:ಹತ್ತಿರದಲ್ಲಿ
ದ್ದ ಮಹಾಬ್ರಾಹ್ಮಣನ
ಹೆಂಡತಿಯ ಮಮತೆ
ಕರುಣೆಗಳಿಂದ ಕೂಡಿದ
ತಡೆಯಿಲ್ಲದೆ ಅಳುವ ಶಬ್ದವು

ಆಗ ಬಂದು (ಕುಂತಿ ಭೀಮರಿಗೆ) ಮುಟ್ಟಿತ್ತು.

ವ|| ಅದಂ ಕೇಳ್ದೇನಾನುಮೊಂದು ಕಾರಣಮಾಗಲೆವೇಳ್ಕುಮೀ ಪುಯ್ಯಲನಾರಯ್ದು ಬರ್ಪೆನೆಂದು ಭೀಮನನಿರಿಸಿ ಕೊಂತಿ ತಾನೆ ಪೋಗಿ-

ವಚನ:ಪದವಿಭಾಗ-

ಅರ್ಥ:ಅದಂ ಕೇಳ್ದು ಏನಾನುಮ್

(ಯಾವುದಾದರೂ) ಒಂದು ಕಾರಣಂ ಆಗಲೆವೇಙ್ಕುಂ (ಆಗಿರಲೇಬೇಕು) ಈ ಪುಯ್ಯಲನು (ಬೊಬ್ಬೆಯನ್ನು) ಆರಯ್ದು ಬರ್ಪೆನು (ವಿಚಾರಮಾಡಿ ಬರುವೆನು) ಎಂದು ಭೀಮನನು ಇರಿಸಿ ಕೊಂತಿ ತಾನೆ ಪೋಗಿ (ಹೋಗಿ)-

ವಚನ:ಅರ್ಥ:(ಆಳುವನ್ನು) ಅದನ್ನು ಕೇಳಿ ಇದಕ್ಕೆ

ಏನಾದರೂ ಒಂದು ಕಾರಣವಿರಬೇಕು. ಈ ಪ್ರಲಾಪವನ್ನು ವಿಚಾರಮಾಡಿ ಬರುತ್ತೇನೆ ಎಂದು ಭೀಮನನ್ನು ಅಲ್ಲಿ ಬಿಟ್ಟು ಕುಂತಿಯು ಹೋಗಿ (ನೋಡಿದಳು)

ಚಂ|| ಅಱೆ ಕುಡಲಾದ ಕೂಸು
ನೆಲದೊಳ್ ಪೊರಳುತ್ತಿರೆ
ಧರ್ಮಪತ್ನಿ ಬಾ
ಯಱಿದು ಕೊರಲ್ಗೆ ಪಾಯ್ದು
ಪರಿದಾಡುವ ಬಾಲಕನಾದ

ಶೋಕದಿಂ|
ಗಳಗಳ ಕಣ್ಣನೀರ್ ಸುರಿಯೆ
ಚಿಂತಿಪ ಪಾರ್ವನ
ಶೋಕದೊಂದು ಪೊಂ
ಪುೞಿಯನೆ ನೋಡಿ ನಾಡೆ
ಕರುಣಂ ತನಗಾಗಿರೆ ಕೊಂತಿ
ಚಿಂತೆಯಿಂ|| ೨೫||

ಪದ್ಯ-೨೫:ಪದವಿಭಾಗ-
ಅರ್ಥ:ಅೞೆ (ಅಳುತ್ತಿರಲು) ಕುಡಲಾದ ಕೂಸು (ಕೊಡಲು -ಕನ್ಯಾದಾನಕ್ಕಿರುವ ಮಗಳು),

ನೆಲದೊಳ್ ಪೊರಳುತ್ತಿರೆ ಧರ್ಮಪತ್ನಿ (ಬ್ರಾಹ್ಮಣನ ಹೆಂಡತಿ ನೆಲದಲ್ಲಿ ಹೊರಳುತ್ತಿರಲು) ಬಾಯಟಿದು ಕೊರಲ್ಗೆ ಪಾಯ್ದು (ಅತ್ತು, ಕೊರಳು ತಬ್ಬಿಕೊಂಡು) ಪರಿದಾಡುವ ಬಾಲಕನಾದ ಶೋಕದಿಂ (ದುಃಖದಿಂದ ಓಡಾಡುವ ಬಾಲಕನ್ನು)|

ಗಱಗಱ ಕಣ್ಣನೀರ್ ಸುರಿಯೆ (ಗಳಗಳನೆ ಕಣ್ಣೀರು ಸುರಿಯುತ್ತಿರಲು) ಚಿಂತಿಪ ಪಾರ್ವನ ಶೋಕದೊಂದು ಪೊಂಪುಱಿಯನೆ (ಚಿಂತಿಸುವ ಬ್ರಾಹ್ಮಣನ ಅಧಿವಾದ ಶೋಕದಲ್ಲಿರುವ ಸ್ಥಿತಿಯನ್ನು) ನೋಡಿ ನಾಡೆ(ಬಹಳ)

ಕರುಣಂ ತನಗಾಗಿರೆ ಕೊಂತಿ ಚಿಂತೆಯಿಂ(ಬಹಳ ಕರುಣೆಯುಂಟಾಗಿರಲು ಕುಂತಿಯು ದುಃಖದಿಂದ (ಬ್ರಾಹ್ಮಣನನ್ನು ಕುರಿತು ಪ್ರಶ್ನಿಸಿದಳು)

ಪದ್ಯ-೨೫:ಅರ್ಥ:ಮದುವೆಗೆ ಇರುವ ಬ್ರಾಹ್ಮಣನ ಮಗಳು ಅಳುತ್ತಿದ್ದಳು. ಅವನ ಹೆಂಡತಿಯು ನೆಲದ ಮೇಲೆ ಹೊರಳಾಡುತ್ತಿದ್ದಳು. ಕೊರಳನ್ನು ತಬ್ಬಿಕೊಂಡು ಅತ್ತು ಓಡಾಡುವ ಬಾಲಕನು ತನಗುಂಟಾದ ದುಖದಿಂದ ಗಳಗಳನೆ ಕಣ್ಣೀರನ್ನು ಸುರಿಸುತ್ತಿದ್ದನು. ಚಿಂತಿಸುತ್ತಿದ್ದ

ಬ್ರಾಹ್ಮಣನ
ದುಖಾತಿಶಯವನ್ನು ನೋಡಿ
ತನಗೆ ಬಹಳ
ಕರುಣೆಯುಂಟಾಗಿರಲು
ಕುಂತಿಯು ದುಖದಿಂದ
(ಬ್ರಾಹ್ಮಣನನ್ನು ಕುರಿತು
ಪ್ರಶ್ನಿಸಿದಳು-)

ವ|| ನಿನಗಿಂತೀ ಪಿರಿದು ಶೋಕಮೆಂತಾದುದೆಂಬುದು ಮಾ ಪಾರ್ವಂ ಕೊಂತಿಗಿಂತೆಂದಂ

ಬಕನೆಂಬನೊರ್ವಸುರನೀ
ಪೊಲಿಲ ತೆಂಕಣ
ಬೆಟ್ಟದೊಳಿರ್ಪನಾತಂಗೆ
ನಿಚ್ಚಮೊಂದು
ಮನೆಯೊಳೆರಡೆಮ್ಮೆವೋೞ್
ಯೊಳ್ ಪೂಡಿದ
ಪನ್ನಿರ್ಕಂಡುಗದಕ್ಕಿಯ
ಕೂೞುಮನದರ್ಕೆ ತಕ್ಕ
ಪರಿಕರಮುಮನೊರ್ವ
ಮಾನಸಂ ಕೊಂಡು
ಪೋಪನಂತಾತಂಬೆರಸದೆಲ್ಲ

ಮಂ ತಿಂದು ತಣಿಯದೆ ಪಲ್ಲಂ
ತಿಂಬನದೊಂದು ದಿವಸ
ತಪ್ಪಿದೊಡೀ
ಪೊಟಿಲನಿತುಮಂ ತಿಂಬಂ
ನಾಳಿನ ಬಾರಿಯೆಮ್ಮ ಮೇಲೆ
ಬಂದುದೆಮ್ಮ
ಮನೆಯೊಳಾನುಮೆಮ್ಮ
ಧರ್ಮಪತ್ನಿಯುಂ ಮಗನುಂ
ಮಗಳುಮಿಂತೀ ನಾಲ್ವರೆ
ಮಾನಸರೆಮ್ಮ
ಪೆಂಡಿತಿಯನೀವೆನೆಪ್ಪೊಡಾಕೆ

ಯಿಂ ಬಿಱಿಯಮೀ

ಕೂಸುಗಳಂ ನಡಪುವರಿಲ್ಲೀ

ಮಗಳನೀವೆನಪ್ಪೊಡೆ

ಕೊಡಗೂಸೆಂಬುದು

ಪೆಱರೊಡವೆ

ಮಗನನೀವೆನಪ್ಪೊಡೆ

ಸಂತತಿಚ್ಛೇದಮುಂ

ಪಿಂಡಚ್ಛೇದಮುಮಕ್ಕುಮದ

ಱಿಂದೆನ್ನನೆ

ಕುಡಲ್ವೇಱ್ಕುಮೆಂಬುದುಂ

ಕೊಂತಿಯಿಂತೆಂದಳ್-

ವಚನ:ಪದವಿಭಾಗ-ಅರ್ಥ:ನಿನಗೆ ಇಂತು ಈ ಪಿರಿದು ಶೋಕಂ ಎಂತಾದುದು ಎಂಬುದುಂ (ನಿನಗೆ ಇಷ್ಟು ಈ ದೊಡ್ಡ ದುಃಖ ಹೇಗಾಯಿತು ಎನ್ನಲು,) ಆ ಪಾರ್ವಂ ಕೊಂತಿಗೆ ಇಂತು ಎಂದಂ(ಬ್ರಾಹ್ಮಣನು ಕುಂತಿಗೆ ಹೀಗೆ ಹೇಳಿದನು-) ಬಕನೆಂಬನು ಓರ್ವ ಅಸುರನು ಈ ಪೊಟಿಲ (ನಗರದ)

ತೆಂಕಣ (ದಕ್ಷಿಣ) ಬೆಟ್ಟದೊಳು
ಇರ್ಪನು ಆತಂಗೆ ನಿಚ್ಚಂ
(ನಿತ್ಯವೂ) ಒಂದು
ಮನೆಯೊಳ್
ಎರಡೆಮ್ಮೆವೋೞಿಯೊಳ್
ಪೂಡಿದ (ಎರಡು ಕೋಣ
ಹೂಡಿದ -ಗಾಡಿಯಲ್ಲಿ)
ಪನ್ನಿರ್ಕಂಡುಗದ ಅಕ್ಕಿಯ
(ಹನ್ನರಡು ಖಂಡುಗದ
ಅಕ್ಕಿಯ) ಕೂೞುಮನು
(ಅನ್ನವನ್ನು) ಅದರ್ಕೆ ತಕ್ಕ

ಪರಿಕರಮುಮನು ಒರ್ವ
ಮಾನಸಂ (ತುಂಬಿದ
ಹನ್ನೆರಡು ಖಂಡಗದಕ್ಕಿಯನ್ನೂ
ಅದಕ್ಕೆ ಬೇಕಾಗುವಷ್ಟು
ವ್ಯಂಜನಪದಾರ್ಥಗಳನ್ನೂ
ಒಬ್ಬ ಮನುಷ್ಯನು) ಕೊಂಡು
ಪೋಪನು (ಅವನ್ನು
ತೆಗೆದುಕೊಂಡು ಹೋಗುತ್ತಾನೆ)
ಅಂತು ಆತಂ ಬೆರಸ
ಅದೆಲ್ಲಮಂ ತಿಂದು ತಣಿಯದೆ
ಪಲ್ಲಂ ತಿಂಬನು (ಅವನ

ಸಮೇತ ಆ ಪದಾರ್ಥವೆಲ್ಲವನ್ನೂ ತಿಂದರೂ ತೃಪ್ತನಾಗದೆ, ಹಲ್ಲನ್ನು ಕಡಿಯುತ್ತಾನೆ.) ಅದೊಂದು ದಿವಸ ತಪ್ಪಿದೊಡೆ ಈ ಪೊೞಲನು ಇತುಮಂ ತಿಂಬಂ (ಒಂದು ದಿವಸ ತಪ್ಪಿದರೂ ಈ ಪಟ್ಟಣವೆಲ್ಲವನ್ನೂ ತಿನ್ನುತ್ತಾನೆ) ನಾಳಿನ ಬಾರಿಯು ಎಮ್ಮ ಮೇಲೆ ಬಂದುದು; ಎಮ್ಮ ಮನೆಯೊಳು ಆನುಂ ಎಮ್ಮ

ಧರ್ಮಪತ್ನಿಯುಂ ಮಗನುಂ ಮಗಳುಮಂ ಇಂತ ಈ ನಾಲ್ವರೆ ಮಾನಸರು (ನಾಲ್ಕೇ ಜನರು) ಎಮ್ಮ ಪೆಂಡಿತಿಯನು ಈವೆನೆ ಎಪ್ಪೊಡಾಕೆಯಿಂ ಬಿೞಿಯಮೀ ಕೂಸುಗಳಂ ನಡಪುವರಿಲ್ಲ (ಹೆಂಡತಿಯನ್ನು ಕೊಡೋಣವೆಂದರೆ ಅವಳು ಹೋದಬಳಿಕ ಈ ಮಕ್ಕಳನ್ನು ಸಾಕುವವರಿಲ್ಲ.) ಈ ಮಗಳನು ಈವೆನಪ್ಪೊಡೆ

ಕೊಡಗೂಸೆಂಬುದು
ಪೆಱರೊಡವೆ (ಮಗಳನ್ನು
ಕೊಡೋಣವೆಂದರೆ ಕನ್ಯೆ
ಪರರ ವಸ್ತು;) ಮಗನನು
ಈವೆನಪ್ಪೊಡೆ
ಸಂತತಿಚ್ಛೇದಮುಂ
ಪಿಂಡಚ್ಛೇದಮುಂ ಅಕ್ಕುಂ(
ಮಗನನ್ನು ಕೊಡೋಣವೆಂದರೆ
ಸಂತತಿಯು ಹಱಿಯುವುದು
ಮತ್ತು ಪಿಂಡಹಾಕುವವರಿಲ್ಲ.)
ಅದಱಿಂದ ಎನ್ನನೆ

ಕುಡಲ್ವೇೞ್ಕುಂ ಎಂಬುದುಂ (ಆದುದರಿಂದ ನನ್ನನ್ನೇ ಕೊಡಬೇಕಾಗಿದೆ ಎಂದನು) ಕೊಂತಿಯಿಂತೆಂದಳ್- '

ವಚನ:ಅರ್ಥ:ನಿನಗೆ ಈಬಗೆಯ ಈ ದೊಡ್ಡ ದುಃಖ ಹೇಗಾಯಿತು ಎನ್ನಲು ಬ್ರಾಹ್ಮಣನು ಕುಂತಿಗೆ ಹೀಗೆ ಹೇಳಿದನು- ಬಕನೆಂಬ ರಾಕ್ಷಸನೊಬ್ಬನು ಈ ಪಟ್ಟಣಕ್ಕೆ ದಕ್ಷಿಣದ ಬೆಟ್ಟದಲ್ಲಿದ್ದಾನೆ.

ಅವನಿಗೆ ನಿತ್ಯವೂ
ಒಂದೊಂದು ಮನೆಯಿಂದ
ಎರಡು ಕೋಣಗಳನ್ನು
ಹೂಡಿರುವ ಗಾಡಿಯಲ್ಲಿ
ತುಂಬಿದ ಹನ್ನೆರಡು
ಖಂಡಗದಕ್ಕಿಯನ್ನೂ ಅದಕ್ಕೆ
ಬೇಕಾಗುವಷ್ಟು
ವ್ಯಂಜನಪದಾರ್ಥಗಳನ್ನೂ
ಒಬ್ಬ ಮನುಷ್ಯನು ಅವನ್ನು
ತೆಗೆದುಕೊಂಡು ಹೋಗುತ್ತಾನೆ.
(ಬಕನು) ಅವನ ಸಮೇತ ಆ

ಪದಾರ್ಥವೆಲ್ಲವನ್ನೂ ತಿಂದರೂ ತೃಪ್ತನಾಗದೆ ಹಲ್ಲನ್ನು ಕಡಿಯುತ್ತಾನೆ. ಒಂದು ದಿವಸ ತಪ್ಪಿದರೂ ಈ ಪಟ್ಟಣವೆಲ್ಲವನ್ನೂ ತಿಂದುಹಾಕುತ್ತಾನೆ. ನಾಳೆಯ ಸರದಿ ನನ್ನ ಮೇಲೆ ಬಂದಿದೆ. ನಮ್ಮ ಮನೆಯಲ್ಲಿ ನಾನೂ ನನ್ನ ಹೆಂಡತಿಯೂ ಮಗನೂ ಮಗಳೂ ಈ ನಾಲ್ಕೇ ಜನ (ಇರುವವರು). ಹೆಂಡತಿಯನ್ನು

ಕೊಡೋಣವೆಂದರೆ ಅವಳು ಹೋದಬಳಿಕ ಈ ಮಕ್ಕಳನ್ನು ಸಾಕುವವರಿಲ್ಲ. ಮಗಳನ್ನು ಕೊಡೋಣವೆಂದರೆ ಕನ್ಯೆ ಪರರ ವಸ್ತು; ಮಗನನ್ನು ಕೊಡೋಣವೆಂದರೆ ಸಂತತಿಯು ಹರಿದು ಹೋಗುತ್ತದೆ ಮತ್ತು ಪಿಂಡಹಾಕುವವರಿಲ್ಲ. ಆದುದರಿಂದ ನನ್ನನ್ನೇ ಕೊಡಬೇಕಾಗಿದೆ ಎಂದನು.

ಅದಕ್ಕೆ ಕುಂತಿಯು ಹೀಗೆಂದಳು

ಕಂ|| ನಿಮ್ಮೀ ನಾಲ್ವರೊಳೊರ್ವರು ಮಿಮ್ಮಿಡುಕಲ್ವೇಡ ಮಕ್ಕಳೊಳರೆನಗಯ್ವರ್| ತಮ್ಮೊಳಗೆಸೆವಯ್ವರೊಳಂ ನಾಮ್ಮಾಣದೆ ಬಕನ ಬಾರಿಗೊರ್ವನನೀವೆಂ|| ೨೬||

ಪದ್ಯ-೨೬:ಪದವಿಭಾಗ-

ಅರ್ಥ:ನಿಮ್ಮ ಈ ನಾಲ್ವರೊಳು

ಒರ್ವರುಂ ಇಂ ಮಿಡುಕಲ್ವೇಡ
(ಒಬ್ಬರೂ ಇನ್ನು ನಡುಗಬೇಡಿ)
ಮಕ್ಕಳ್ ಒಳರ್ ಎನಗೆ
ಅಯ್ವರ್ (ನನಗೆ ಅಯ್ದು
ಮಕ್ಕಳಿದ್ದಾರೆ) ತಮ್ಮೊಳಗೆ
ಎಸೆವ (ಶೋಭಿಸುವ)
ಅಯ್ವರೊಳಂ ನಾಂ ಮಾಣದೆ
(ತಪ್ಪದೆ) ಬಕನ ಬಾರಿಗ
ಓರ್ವನಂ ಈವೆಂ
(ಕೊಡುವೆನು)

ಪದ್ಯ-೨೬:ಅರ್ಥ:ನಿಮ್ಮ ಈ ನಾಲ್ಕು ಜನಗಳಲ್ಲಿ ಯಾರೂ ಇನ್ನು ಭಯಪಡಬೇಡಿ. ನನಗೆ ಅಯ್ದು ಮಕ್ಕಳಿದ್ದಾರೆ. ಶೋಭಿಸುವ ಆ ಅಯ್ವರಲ್ಲಿ ಒಬ್ಬನನ್ನು ನಾನು ಬಕನ ಸರದಿಗೆ ತಪ್ಪದೆ ಕೊಡುತ್ತೇನೆ. (ಎಂದಳು ಕುಂತಿ)

ವ||ಎಂಬುದುಂ ಪಾರ್ವನಿಂತೆನಲ್ವೇಡ ಮಕ್ಕಳೊಳಾದ ಮೋಹಮೆಲ್ಲಾ

ಜೀವಕ್ಕಂ
ಸಮಾನಮೆಂಬುದುಂ
ನೀಮಱೆಯಿರುಸಿರದಿರಿಮದ
ರ್ಕೆ ತಕ್ಕ ಸವಕಟ್ಟಂ
ಮಾಡಿಮೆಂದು ಬಂದು ತದ್ವ
ತ್ತಾಂತಮೆಲ್ಲಮಂ
ಭೀಮಸೇನಂಗಱಿಪಿದೊಡೆ
ನಾಳಿನುಣಿಸನೆನಗೆ
ದೊರೆಕೊಳಿಸಿ ಬಂದುದು
ಕರಮೊಳ್ಳಿತಾಯ್ತೆಂದು
ನಗುತಿರ್ಪನ್ನೆಗಂ ಮತ್ತಿನ

ನಾಲ್ವರುಂ ಬಂದು ತದ್ವ

ತ್ತಾಂತಮೆಲ್ಲಮಂ ಕೇಳ್ದು

ನಮಗೀ ಪೊಱಲೊಳೊಂದು

ಪರೋಪಕಾರಾರ್ಥಂ

ಸಯ್ಪಿನಿಂ

ದೊರೆಕೊಂಡುದೆಂದಿರುಳೆಲ್ಲಂ

ಬಕನ ಪಡೆಮಾತನೆ

ನುಡಿಯುತ್ತಿರ್ಪನ್ನೆಗಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

(ಹೇಳಿದಾಗ) ಪಾರ್ವನು

ಇಂತೆನಲ್ವೇಡ (ಹೀಗೆ ಹೇಳಬೇಡ) ಮಕ್ಕಳೊಳು ಆದ ಮೋಹಂ ಎಲ್ಲಾ ಜೀವಕ್ಕಂ ಸಮಾನಮೆಂಬುದುಂ (ಮಕ್ಕಳ ಮೇಲಿನ ಮೋಹ ಎಲ್ಲ ಜೀವಕ್ಕೂ ಸಮಾನ) ನೀಂ ಅಱಿಯಿರ್ (ಅರಿತಿಲ್ಲ) ಉಸಿರದಿರಿಂ (ಮಾತು ಬೇಡ) ಅದರ್ಕೆ ತಕ್ಕ ಸವಕಟ್ಟಂ (ತಕ್ಕ ಸಿದ್ಧತೆ ಮಾಡಿ) ಮಾಡಿಂ ಎಂದು, (ಕುಂತಿ)ಬಂದು ತದ್

(ಆ) ವೃತ್ತಾಂತಂ ಎಲ್ಲಮಂ
ಭೀಮಸೇನಂಗೆ ಅಱಿಪಿದೊಡೆ
(ಹೇಳಿದಾಗ ಅವನು) ನಾಳಿನ
ಉಣಿಸುನು ಎನಗೆ
ದೊರೆಕೊಳಿಸಿ
(ದೊರಕಿಸಿಕೊಂಡು)
ಬಂದುದು ಕರಂ (ಬಹಳ)
ಒಳ್ಳಿತು ಆಯ್ತೆಂದು ನಗುತಿರ್ಪ
ಅನ್ನೆಗಂ ಮತ್ತಿನ (ಉಳಿದ)
ನಾಲ್ವರುಂ ಬಂದು ತದ್ವ- ಆ
ತ್ತಾಂತಮೆಲ್ಲಮಂ ಕೇಳ್ದು

ನಮಗೀ ಪೊೞಲೊಳು
(ನಗರದಲ್ಲಿ) ಒಂದು
ಪರೋಪಕಾರಾರ್ಥಂ
ಸಯ್ಪಿನಿಂ (ಪುಣ್ಯದಿಂದ)
ದೊರೆಕೊಂಡುದು ಎಂದು
ಇರುಳೆಲ್ಲಂ (ರಾತ್ರಿಯೆಲ್ಲಾ)
ಬಕನ ಪಡೆಮಾತನೆ
(ಸುದ್ದಿಯನ್ನೇ)
ನುಡಿಯುತ್ತಿರ್ಪ ಅನ್ನೆಗಂ ಆ
ಸಮಯಕ್ಕೆ-

ವಚನ:ಅರ್ಥ:ಅದನ್ನು ಕೇಳಿ ಬ್ರಾಹ್ಮಣನು ಹೀಗೆ ಹೇಳಬೇಡ. ಮಕ್ಕಳ ಮೇಲಿನ ಮೋಹವು ಎಲ್ಲಾ ಜೀವಕ್ಕೂ ಸಮಾನ ಎಂದನು. ಕುಂತಿಯು ನಿಮಗೆ ತಿಳಿಯದು; ಮಾತಾಡಬೇಡಿ ಅದಕ್ಕೆ ಬೇಕಾದ ಸಿದ್ಧತೆ ಮಾಡಿ, ಎಂದು ಹೇಳಿ ಆ ವಿಚಾರವೆಲ್ಲವನ್ನೂ ಭೀಮಸೇನನಿಗೆ ತಿಳಿಸಲು,

ನಾಳೆಯ ಊಟವನ್ನು ನನಗೆ ಸಿದ್ಧಪಡಿಸಿ ಬಂದುದು ಬಹಳ ಒಳ್ಳೆಯದಾಯಿತು ಎಂದು ನಗುತ್ತಿರವಾಗ. ಉಳಿದ ನಾಲ್ಕು ಜನರೂ ಬಂದು ಆ ವಿಷಯವೆಲ್ಲವನ್ನೂ ಕೇಳಿ, ನಮಗೆ ಈ ಪಟ್ಟಣದಲ್ಲಿ ಇತರರಿಗೆ ಉಪಕಾರ ಮಾಡುವ ಸಂದರ್ಭವು ಪುಣ್ಯದಿಂದ ಪ್ರಾಪ್ತವಾಯಿತು ಎಂದು ರಾತ್ರಿಯೆಲ್ಲ ಬಕನ

ವಿಷಯವಾದ ಮಾತನ್ನೇ ಆಡುತ್ತಿದ್ದರು. ಅಷ್ಟರಲ್ಲಿ-

ಕಂ|| ಓಡೆ ತಮೋಬಳಮಗಿದ
ಳ್ಕಾಡೆ ನಿಶಾಚರಬಲಂ
ರಥಾಂಗಯುಗಂಗಳ್|
ಕೂಡೆ ಬಗೆ ಕೂಡೆ ನೇಸಱ್
ಮೂಡಿದುದು ಬಕಂಗೆ ಮಿೞ್ತು
ಮೂಡುವ ತೆಱದಿಂ|| ೨೭||

ಪದ್ಯ-೨೭:ಪದವಿಭಾಗ-

ಅರ್ಥ:ಓಡೆ ತಮೋಬಳಂ (ಕತ್ತಲೆಯ ಸೈನ್ಯ ಓಡಲು/

ಓಡಿತು.ಚೆನ್ನಾಗಿ
ಬೆಳಗಾಯಿತು.); ಅಗಿದು
ಅಳ್ಕಾಡೆ ನಿಶಾಚರಬಲಂ
(ಹೆದರಿ ರಾಕ್ಷಸಸಮೂಹವು
ನಡುಗಿತು)
ರಥಾಂಗಯುಗಂಗಳ್ ಕೂಡೆ
ಬಗೆ(ಮನಸ್ಸು)
ಕೂಡೆ(ಚಕ್ರವಾಕಮಿಥುನವು
ಕೂಡಲು ಮನಸ್ಸು
ಮಾಡಿತು.); ನೇಸಱ್
(ಸೂರ್ಯ) ಮೂಡಿದುದು,

ಬಕಂಗೆ ಮಿೞ್ತು ಮೂಡುವ ತೆಱದಿಂ (ಬಕನಿಗೆ ಮೃತ್ಯು ಮೂಡವ ರೀತಿಯಲ್ಲಿ.)

ಪದ್ಯ-೨೭:ಅರ್ಥ:ಕತ್ತಲೆಯ ರಾಶಿಯು ಓಡಿತು; ರಾಕ್ಷಸಸಮೂಹವು ಹೆದರಿ ನಡುಗಿತು; ಚಕ್ರವಾಕಮಿಥುನವು ಕೂಡಲು ಮನಸ್ಸು ಮಾಡಿತು; ಬಕನಿಗೆ ಸಾವು ಹುಟ್ಟುವ ರೀತಿಯಲ್ಲಿ ಸೂರ್ಯ ಮೂಡಿದನು.

ವ|| ಆಗಳ್ ಸಾಹಸಭೀಮಂ
ತನ್ನ ಸಾಹಸಮಂ
ತೋಱಲೆಂದು ಬಂದು
ಪಾರ್ವನ ಮನೆಯ ಮುಂದಣ
ಬಂಡಿಯ ಕೂಟಿಂ ಕೆಯ್ಕೊಂಡು
ನಿಲ್ವುದುಂ ಪಾರ್ವಂತಿಯುಂ
ಪಾರ್ವನುಂ ಪರಸಿ
ಸೇಸೆಯನಿಕ್ಕಿ ಕಳಿಪೆ ಪೋಟಿಲಿಂ
ಬಂಡಿಯನಟ್ಟಿಕೊಂಡು
ರಕ್ಕಸನಿರ್ದೆಡೆಗೆಯ್ತಂದು-

ವಚನ:ಪದವಿಭಾಗ-ಅರ್ಥ:ಆಗಳ್ ಸಾಹಸಭೀಮಂ ತನ್ನ ಸಾಹಸಮಂ ತೋಱಲೆಂದು (ತೋರಿಸಲೆಂದು) ಬಂದು ಪಾರ್ವನ (ಬ್ರಾಹ್ಮಣನ) ಮನೆಯ ಮುಂದಣ ಬಂಡಿಯ ಕೂೞಂ ಕೆಯ್ಕೊಂಡು ನಿಲ್ವುದುಂ (ಬ್ರಾಹ್ಮಣನ ಮನೆಯ ಮುಂಭಾಗದಲ್ಲಿದ್ದ ಗಾಡಿಯ ಅನ್ನವನ್ನು

ತೆಗೆದುಕೊಂಡು ನಿಂತನು.)
ಪಾರ್ವಂತಿಯುಂ ಪಾರ್ವನುಂ
ಪರಸಿ ಸೇಸೆಯನಿಕ್ಕಿ ಕಳಿಪೆ
(ಬ್ರಾಹ್ಮಣಿತಿಯೂ
ಬ್ರಾಹ್ಮಣನೂ ಹರಸಿ ತಲೆಯ
ಮೇಲೆ ಅಕ್ಷತೆಯನ್ನು ಚೆಲ್ಲಿ
ಕಳುಹಿಸಲು-) ಪೊಟಿಲಿಂ
ಬಂಡಿಯನು ಅಟ್ಟಿಕೊಂಡು
ರಕ್ಕಸನು ಇರ್ದೆಡೆಗೆ
ಐಯ್ತಂದು (ಬಂದು)-

ವಚನ:ಅರ್ಥ:ಆಗ ಸಾಹಸಭೀಮನು ಪರಾಕ್ರಮವನ್ನು ತೋರಬೇಕೆಂದು ಬಂದು ಬ್ರಾಹ್ಮಣನ ಮನೆಯ ಮುಂಭಾಗದಲ್ಲಿದ್ದ ಗಾಡಿಯ ಅನ್ನವನ್ನು ತೆಗೆದುಕೊಂಡು ನಿಂತನು. ಬ್ರಾಹ್ಮಣಿತಿಯೂ ಬ್ರಾಹ್ಮಣನೂ ಹರಸಿ ತಲೆಯ ಮೇಲೆ ಅಕ್ಷತೆಯನ್ನು ಚೆಲ್ಲಿ ಕಳುಹಿಸಲು, ಪಟ್ಟಣದಿಂದ

ಬಂಡಿಯನ್ನು
ಹೊಡೆದುಕೊಂಡು ರಾಕ್ಷಸನಿದ್ದ
ಸ್ಥಳಕ್ಕೆ ಭೀಮನು ಬಂದು/
ಬಂದನು.

ಕಂ|| ದಾಡೆಗಳನರೆಯೊಳಿಂಬಿಂ
ತೀಡುತ್ತುಂ ತೀವ್ರಮಾಗೆ
ಬಂಡಿಯ ಬರವಂ|
ನೋಡುತ್ತಿರ್ದಾ ಬಕನಂ
ನಾಡೆಯೆ ಅಂತರದೆ ಕಂಡು
ಮುಳಿದಂ ಭೀಮಂ|| ೨೮||

ಪದ್ಯ-೨೮:ಪದವಿಭಾಗ-ಅರ್ಥ:ದಾಡೆಗಳನು ಅರೆಯೊಳು (ಬಂಡೆಯಮೇಲೆ) ಇಂಬಿಂ (ಸಾವಕಾಶವಾಗಿ) ತೀಡುತ್ತುಂ (ಮಸೆಯುತ್ತಾ)ತೀವ್ರಮಾಗೆ (ಹರಿತವಾಗಲು) ಬಂಡಿಯ ಬರವಂ ನೋಡುತ್ತಿರ್ದ ಆ ಬಕನಂ ನಾಡೆಯೆ ಅಂತರದೆ (ಚೆನ್ನಾಗಿ ದೂರದಲ್ಲಿ) ಕಂಡು

ಮುಳಿದಂ (ಸಿಟ್ಟುಗೊಂಡನು) ಭೀಮಂ

ಪದ್ಯ-೨೮:ಅರ್ಥ:ತನ್ನ ಕೋರೆಹಲ್ಲುಗಳನ್ನು ಬಂಡೆಯಮೇಲೆ ಮೇಲೆ ಹರಿತವಾಗುವ ಹಾಗೆ ನಿಧಾನವಾಗಿ ಮಸೆಯುತ್ತ ಬಂಡಿಯ ಬರವನ್ನೇ ಎದಿರುನೋಡುತ್ತಿದ್ದ ಆ ಬಕನನ್ನು ಬಹಳ

ದೂರದಿಂದಲೇ ಕಂಡು ಭೀಮನು ಸಿಟ್ಟಾದನು.

ಕಂ|ಕಡೆಗಣ್ಣೊಳೆ ರಕ್ಕಸನಂ
ನಡೆ ನೋಡಿ ಕೊಲಲ್ಕೆ
ಸತ್ತ್ವಮಪ್ಪಂತಿರೆ ಮುಂ|
ಪೊಡೆವೆಂ ಕೂಱಿಂ ಬೞಿಯಂ
ಪೊಡೆವೆಂ ರಕ್ಕಸನನೆಂದು
ಸಾಹಸಭೀಮಂ|| ೨೯||

ಪದ್ಯ-೨೯:ಪದವಿಭಾಗ-ಅರ್ಥ:ಕಡೆಗಣ್ಣೊಳೆ ರಕ್ಕಸನಂ ನಡೆ ನೋಡಿ ಕೊಲಲ್ಕೆ

(ಕೊಲ್ಲಲು) ಸತ್ತ್ವಮಪ್ಪಂತಿರೆ (ಶಕ್ತಿ ಬರುವಂತೆ) ಮುಂಪೊಡೆವೆಂ ಕೂೞಿಂ (ಕೂಳನ್ನು ಮುಂ -ಮೊದಲೇ ಪೊಡೆವೆಂ-ಹೊಡೆಯುವೆನು) ಬೞಿಯಂ ಪೊಡೆವೆಂ (ನಂತರ ಹೊಡೆಯುವೆನು) ರಕ್ಕಸನನು ಎಂದು ಸಾಹಸಭೀಮಂ

ಪದ್ಯ-೨೯:ಅರ್ಥ:ಕಡೆಗಣ್ಣಿನಿಂದಲೇ ರಾಕ್ಷಸನನ್ನು ಚೆನ್ನಾಗಿ ನೋಡಿ ಕೊಲ್ಲುವುದಕ್ಕೆ

ಮೊದಲು ಅನ್ನವನ್ನು ಹೊಡೆಯುತ್ತೇನೆ (ತೃಪ್ತಿಯಾಗಿ ತಿನ್ನುತ್ತೇನೆ); ಆಮೇಲೆ ಆ ರಾಕ್ಷಸನನ್ನು ಹೊಡೆಯುತ್ತೇನೆ ಎಂದು ಸಾಹಸಭೀಮನು- (ಅನ್ನವನ್ನು ಹೊಡೆ-ತಿನ್ನು; ರಕ್ಕಸನನ್ನು ಹೊಡೆ- ಕೊಲ್ಲು)

ವ|| ಅಂತು ತನ್ನ ತಂದ ಬಂಡಿಯ ಕೂೞೆಲ್ಲಮಂ ಪತ್ತೆಂಟು ತುತ್ತಿನೊಳೆ ಸಮೆಯೆ ತುತ್ತುವುದಂ ಕಂಡು

ರಕ್ತಸನಿವನ ಪಾಂಗಂ

ಮೆಚ್ಚಲಾರೆನೆನ್ನುಮಿಂತು

ಸಮೆಯೆ ತುತ್ತುಗುಮೆಂದು

ಬಕಂ ಬಕವೇಷದಿಂ ಪೆಱಗಣ

ದೆಸೆಗೆ ಮೆಲ್ಲನೋಸರಿಸಿ

ಬಂದು-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ತಂದ

ಬಂಡಿಯ ಕೂೞ್(ಳ್)

ಎಲ್ಲಮಂ(ಅನ್ನವನೆಲ್ಲಾ)

ಪತ್ತೆಂಟು (ಹತ್ತೆಂಟು)

ತುತ್ತಿನೊಳೆ
ಸಮೆಯೆ(ಮುಗಿಸುವಂತೆ)
ತುತ್ತುವುದಂ
(ನುಂಗುವುದನ್ನು) ಕಂಡು
ರಕ್ತಸನು ಇವನ ಪಾಂಗಂ
(ರೀತಿಯನ್ನು) ಮೆಚ್ಚಲಾರೆನು
ಎನ್ನುಂ ಇಂತು ಸಮೆಯೆ
(ಮೆಲ್ಲಗೆ) ತುತ್ತುಗುಮೆಂದು
(ನುಂಗುವನೆಂದು) ಬಕಂ
ಬಕವೇಷದಿಂ (ಬಕಪಕ್ಷಿಯ
ರೂಪದಲ್ಲಿ) ಪೆಱಗಣ ದೆಸೆಗೆ

(ಹಿಂದುಗಡೆ) ಮೆಲ್ಲನೆ ಓಸರಿಸಿ ಬಂದು-

ವಚನ:ಅರ್ಥ:ತಾನು ತಂದ ಬಂಡಿಯ ಅನ್ನವೆಲ್ಲವನ್ನೂ ಹತ್ತೆಂಟು ತುತ್ತುಗಳಲ್ಲಿಯೇ ಮುಗಿಸುವ ಹಾಗೆ ಬಾಯಿಗೆ ತುಂಬಿಕೊಳ್ಳುವುದನ್ನು ರಾಕ್ಷಸನು ನೋಡಿ ಇವನ ರೀತಿಯನ್ನು ನಾನು ಮೆಚ್ಚಲಾರೆ. ನನ್ನನ್ನು ಇವನು ಪೂರ್ಣವಾಗಿ ನುಂಗಿ

ಬಿಡುವಂತಿದೆ, ಎಂದು
ಬಕಪಕ್ಷಿಯ ರೂಪದಿಂದ
ಹಿಂದುಗಡೆಗೆ ಮೆಲ್ಲಗೆ ಸರಿದು
ಬಂದು-

ಕಂ||ಎರಡುಂ
ಕೆಲನುಮನೆರಡುಂ
ಕರ ಪರಿಘದಿನಡಸಿ ಗುರ್ದಿ
ಪೆಱಪಿಂಗುವನಂ|
ಮುರಿದಡಸಿ ಪಿಡಿದು ಘಟ್ಟಿಸಿ
ಪಿರಿಯರೆಯೊಳ್
ಪೊಯ್ದನಸಗವೊಯ್ಲಂ

ಭೀಮಂ|| ೩೦||

ಪದ್ಯ-೩೦:ಪದವಿಭಾಗ-ಅರ್ಥ:ಬಕನು ಭೀಮನ ಎರಡುಂ ಕೆಲನುಮಂ (ಎರಡು ಪಕ್ಕಗಳನ್ನೂ)ಎರಡುಂ ಕರ-ಪರಿಘದಿನಂ(ಗದೆಯಿಂತಿದ್ದ ಎರಡು ಕೈಗಳಿಂದ) ಅಡಸಿ (ಹಿಡಿದು) ಗುರ್ದಿ ಪೆಱಪಿಂಗುವನಂ (ಹಿಂದಕ್ಕೆ ಸರಿಯುವವನನ್ನು) ಮುರಿದಡಸಿ (ಹಿಂತಿರುಗಿ

ಗಟ್ಟಿಯಾಗಿ) ಪಿಡಿದು ಘಟ್ಟಿಸಿ (ಅಪ್ಪಳಿಸಿ) ಪಿರಿಯ ಅರೆಯೊಳ್ ಪೊಯ್ದನು (ದೊಡ್ಡಬಂಡೆಯ ಮೇಲೆ ಹೊಡೆದನು,) ಅಸಗವೊಯ್ಲಂ (ಅಗಸಬಡಿದಂತೆ) ಭೀಮಂ

ಪದ್ಯ-೩೦:ಅರ್ಥ:ಬಕನು ಭೀಮನ, ಎರಡು ಪಕ್ಕಗಳನ್ನೂ ತನ್ನ ಗದೆಯಿಂತಿದ್ದ ಎರಡು ಕೈಗಳಿಂದ ಹಿಡಿದು ಗುದ್ದಿ ಹಿಂತಿರುಗಿದನು. ಹಾಗೆ

ಹಿಂದಕ್ಕೆ ಸರಿಯುವವನನ್ನು
ಭೀಮನು ಹಿಂತಿರುಗಿ
ಭೀಮನು ಘಟ್ಟಿಯಾಗಿ
ಹಿಡಿದುಕೊಂಡು ದೊಡ್ಡ
ಬಂಡೆಯ ಮೇಲೆ ಬಡಿದು-
ಅಗಸನು (ಬಟ್ಟೆಯನ್ನು)
ಬಡಿತದಂತೆ ಬಡಿದನು

ವ|| ಅಂತು ಪೊಯ್ದೊಡೆ ಪೊಡೆಸೆಂಡಂ ಪೊಯ್ದಂತೆ ಮೇಗೊಗೆದು ಸೆಣಸೆ-

ವಚನ:ಪದವಿಭಾಗ-

ಅರ್ಥ:ಅಂತು ಪೊಯ್ದೊಡೆ (ಹೊಡೆದಾಗ) ಪೊಡೆಸೆಂಡಂ (ಪುಟಚೆಂಡು)ಪೊಯ್ದಂತೆ ಮೇಗೆ ಒಗೆದು ಸೆಣಸೆ-

ವಚನ:ಅರ್ಥ:ಹಾಗೆ ಹೊಡೆದಾಗ, ಬಕನು ಪುಟಚೆಂಡನ್ನು ಹೊಡೆದಂತೆ ಮೇಲಕ್ಕೆ ಹಾರಿದನು.

ಉ|| ಬಾರಿಯನಿಟ್ಟು ಕೂಡೆ ಪೊಯಿಲಂ ತವೆ

ತಿಂದನನಾರ್ತರಿಲ್ಲಣಾಂ
ಬಾರಿಸಲಾರುಮಿನ್ ಜವನ
ಬಾರಿಯೊಳಿಕ್ಕುವವನೆಂದು
ಫರ್ವೆ ಭೋ।
ಭೋರೆನೆ ಬೀಸೆ ತದ್ವದನ
ಗಹ್ವರದಿಂ ಬಿಸುನೆತ್ತರುಣ್ಮೆ
ಭೋ
ಭೋರೆನೆ ಕೊಂದನಂಕದ
ಬಳಾಧಿಕನಂ ಬಕನಂ
ವೃಕೋದರಂ॥ ೩೧॥

ಪದ್ಯ-೩೧:ಪದವಿಭಾಗ-ಅರ್ಥ:ಬಾರಿಯನು ಇಟ್ಟು ಕೂಡೆ (ಸರದಿಯನ್ನು ಕಾದು, ಅವಕಾಶ ಸಿಕ್ಕ ಕೂಡಲೆ) ಪೊಱಲಂ (ಪಟ್ಟಣವನ್ನು) ತವೆ ತಿಂದನನು (ಪೂರಾ ತಿಂದವನನ್ನು) ಆರ್ತರಿಲ್ಲ (ಶಕ್ತರು ಆಗಲಿಲ್ಲ) ಅಣಂ ಬಾರಿಸಲ್ ಆರುಂ ಇನ್ (ಸ್ವಲ್ಪವೂ ತಡೆಯಲು ಯಾರೂ; ಇನ್ನು) ಜವನ

ಬಾರಿಯೊಳು ಇಕ್ಕುವೆಂ (ಯಮನ ಬಾರಿಗೆ ಕೊಡುತ್ತೇನೆ,) ಎಂದು ಪರ್ವೆ (ಬಹಳ- ಹರುವೆ ವಿಸ್ತಾರ) ಭೋರ್ಭೋರ್‍ರೆನೆ ಬೀಸೆ ತದ್ ವದನ ಗಹ್ವರದಿಂ(ಬೋರ್ ಬೋರ್ ನೆ ಬೀಸಲು, ಅವನ ಬಾಯಿ-ಗವಿಯಿಂದ) ಬಿಸುನೆತ್ತರು ಉಣ್ಮೆ (ಬಿಸಿರಕ್ತ ಚಿಮ್ಮಲು) ಭೋರ್ಭೋರ್‍ರೆನೆ (ತಕ್ಷಣ) ಕೊಂದಂ ಅಂಕದ

(ಬಲಿಷ್ಠ ಪ್ರಸಿದ್ಧ) ಬಳಾಧಿಕನಂ ಬಕನಂ (ಅಧಿಕಬಲಶಾಲಿಯಾದ ಬಕನನ್ನು ಕೊಂದನು) ವೃಕೋದರಂ (ಭೀಮನು)

ಪದ್ಯ-00:ಅರ್ಥ:ಭೀಮನು ಸ್ವಲ್ಪ ಅವಕಾಶ ಮಾಡಿಕೊಂಡು ಅಲ್ಪಕಾಲದಲ್ಲಿ ಪಟ್ಟಣವನ್ನೇ ನಾಶಮಾಡಿದ ಇವನನ್ನು ಸ್ವಲ್ಪ ಮಾತ್ರವೂ ತಡೆಯಲು ಶಕ್ತರಾಗಲಿಲ್ಲ.

ಇನ್ನು ಇವನನ್ನು ನಾನು
ಯಮನ ಸರದಿಗೆ
ಕಳುಹಿಸುತ್ತೇನೆ ಎಂದು,
ಬಹಳವಾಗಿ ಭೋರ್ ಎಂದು
ಶಬ್ದಮಾಡುತ್ತ ಅವನನ್ನು
ಬೀಸಲು ಅವನ ಮುಖವೆಂಬ
ಗವಿಯಿಂದ ಬಿಸಿರಕ್ತ
ಚಿಮ್ಮಲು,
ಅಧಿಕಬಲಶಾಲಿಯಾದ ಆ
ಬಕಾಸುರನನ್ನು
ಅತಿಶಯವಾದ ಶಕ್ತಿಯುಳ್ಳ

ಭೀಮನು ಕ್ಷಣಮಾತ್ರದಲ್ಲಿ ಕೊಂದನು.

ವ|| ಅಂತು ಕೊಂದು ನೀಲಗಿರಿಯನೆ ಪಿಡಿದೆೞ್ವಂತೆ ರಕ್ಕಸನ ಕರಿಯ ಪಿರಿಯೊಡಲನೆೞೆದು ತಂದು ಪೊೞಲ ನಡುವಿಕ್ಕಿದಾಗಳ್ ಪೊೞಲೆಲ್ಲಂ ಚೋದ್ಯಂಬಟ್ಟು ಬದ್ದವಣದ ಪಗಳಂ ಪೊಯ್ಸಿ ಸಾಹಸಭೀಮನ

ಸಾಹಸಮನಳವಲ್ಲದೆ
ಪೊಗೞ್ದ ತಮ್ಮಾಳ್ದನುಮನಿಷ್ಟ
ದೈವಮುಮಂ
ಕೊಂಡಾಡುವಂತಯ್ವರುಮಂ
ಕೊಂಡಾಡೆ ಕೆಲವು
ದಿವಸಮಿರ್ಪನ್ನೆಗಮೊಂದು
ದಿವಸಮಶಿಶಿರಕಿರಣನಪರಜ
ಲನಿಧಿತಟನಿಕಟ
ವರ್ತಿಯಾದನಾಗಳೊರ್ವ
ಪಾರ್ವಂ ವಿಸ್ತೀರ್ಣಜೀರ್ಣ
ಕರ್ಪಟಾವೃತಕಟಿತಟನುಮಾ

ಗಿ ಬಂದು ಕಣ್ಮುಚ್ಚಲೆಡೆವೇಡೆ
ತನಗವರ್ ಪಾಸಲ್ಕೊಟ್ಟ
ಕೃಷ್ಣಾಜಿನನಮಂ ಪಾಸಿ
ಪಟ್ಟಿರ್ದನಂ ಧರ್ಮಪುತ್ರನಾವ
ನಾಡಿಂ ಬಂದಿರೆಲ್ಲಿಗೆ
ಪೋದಪಿರೆಂದೊಡುತ್ತರಾಪಥ
ದೆ ಹಸ್ತಿನಪುರದಿಂ
ಬಂದೆಮೆಂದೊಡಲ್ಲಿ
ಪಾಂಡವರ ಪಡೆಮಾತಾವುದು
ಧೃತರಾಷ್ಟ್ರ ಸುಯೋಧನ

ರ್ಪಣಂದಮಾವುದೆಂದು ಬೆಸಗೊಳೆ-

ವಚನ:ಪದವಿಭಾಗ-

ಅರ್ಥ:ಅಂತು ಕೊಂದು ನೀಲಗಿರಿಯನೆ ಪಿಡಿದೆೞೆವಂತೆ (ನೀಲಪರ್ವತವನ್ನೇ ಹಿಡಿದೆಳೆದಂತೆ) ರಕ್ಕಸನ ಕರಿಯ ಪಿರಿಯ ಒಡಲನು ಎೞೆದು (ದೊಡ್ಡ ದೇಹವನ್ನು ಎಳೆದು) ತಂದು ಪೊೞಲ

(ಪಟ್ಟಣದ) ನಡುವೆ
ಇಕ್ಕಿದಾಗಳ್ (ಇಟ್ಟಾಗ)
ಪೊಟಿಲ್ ಎಲ್ಲಂ
ಚೋದ್ಯಂಬಟ್ಟು
(ಆಶ್ಚರ್ಯಪಟ್ಟು) ಬದ್ದವಣದ
ಪಗಳಂ ಪೊಯ್ಸಿ (ಮಂಗಳ
ವಾದ್ಯಗಳನ್ನು ಬಾಜನ
ಮಾಡಿಸಿ) ಸಾಹಸಭೀಮನ
ಸಾಹಸಮನು ಅಳವಲ್ಲದೆ
ಪೊಗಳ್ದು (ಅಳತೆಯಿಲ್ಲದಷ್ಟು
ಹೊಗಳಿ) ತಮ್ಮಾಳ್ದನುಮನು

ಇಷ್ಟ ದೈವಮುಮಂ
ಕೊಂಡಾಡುವಂತೆ
ಅಯ್ವರುಮಂ ಕೊಂಡಾಡೆ
(ತಮ್ಮ ಇಷ್ಟದೈವವನ್ನು
ಕೊಂಡಾಡುವಂತೆ ಅಯ್ದು
ಜನರನ್ನೂ ಕೊಂಡಾಡಲು)
ಕೆಲವು ದಿವಸಂ ಇರ್ಪ ಅನ್ನೆಗಂ
ಒಂದು ದಿವಸಂ
ಆಶಿಶಿರಕಿರಣನು (ಉಷ್ಣ
ಕಿರಣ ಸೂರ್ಯನು)
ಅಪರಜಲನಿಧಿ ತಟನಿಕಟ

ವರ್ತಿಯಾದನು
(ಪಶ್ಚಿಮಸಮುದ್ರ ತಟಕ್ಕೆ
ಹತ್ತಿರವಾದನು-
ಸಂಜೆಯಾಯಿತು.) ಆಗಳ್
ಒರ್ವ ಪಾರ್ವಂ
ವಿಸ್ತೀರ್ಣಜೀರ್ಣ (ಜೀರ್ಣ
-ಹರಿದ) ಕರ್ಪಟ ಆವೃತ
(ಸುತ್ತಿದ ಬಟ್ಟೆ)
ಕಟಿತಟನುಂ(ಸೊಂಟದಲ್ಲಿ)
ಆಗಿ ಬಂದು ಕಣ್ಮುಚ್ಚಲು
(ನಿದ್ದೆಮಾಡಲು)ಎಡೆವೇಡೆ

(ಸ್ಥಳ ಕೇಳೆ) ತನಗವರ್
ಪಾಸಲ್ಕೊಟ್ಟ ಕೃಷ್ಣಾಜಿನನಮಂ
ಪಾಸಿ (ಹಾಸಿ) ಪಟ್ಟಿರ್ದನಂ
(ಮಲಗಿದವನನ್ನು)
ಧರ್ಮಪುತ್ರನು, ಆವ ನಾಡಿಂ
ಬಂದಿರಿ ಎಲ್ಲಿಗೆ ಪೋದಪಿರಿ
ಎಂದೊಡೆ ಉತ್ತರಾಪಥದೆ
ಹಸ್ತಿನಪುರದಿಂ ಬಂದೆಂ
ಎಂದೊಡೆ ಅಲ್ಲಿ ಪಾಂಡವರ
ಪಡೆಮಾತಾವುದು ಧೃತರಾಷ್ಟ್ರ
ಸುಯೋಧನ ರಿರ್ಪಂದಂ

ಆವುದು ಎಂದು ಬೆಸಗೊಳೆ
(ಧರ್ಮರಾಜನು ಅಲ್ಲಿ
ಪಾಂಡವರ ಸುದ್ದಿಯೇನು?
ಧೃತರಾಷ್ಟ್ರ
ದುರ್ಯೋಧನರಿರುವ ರೀತಿ
ಯಾವುದು ಎಂದು ಕೇಳಿದನು.
ಕೇಳಿದಾಗ)-
ವಚನ:ಅರ್ಥ:ಹಾಗೆ ಕೊಂದು
ನೀಲಪರ್ವತವನ್ನೇ
ಹಿಡಿದೆಳೆದಂತೆ ರಾಕ್ಷಸನ
ಕರಿಯ ಹಿರಿಯ ಶರೀರವನ್ನು

ಭೀಮನು ಎಳೆದುತಂದು
ಪಟ್ಟಣದ ಮಧ್ಯಭಾಗದಲ್ಲಿ
ಇಟ್ಟನು. ಪಟ್ಟಣವೆಲ್ಲ
ಆಶ್ಚರ್ಯಪಟ್ಟು ಮಂಗಳ
ವಾದ್ಯಗಳನ್ನು ಬಾಜನ
ಮಾಡಿಸಿ ಸಾಹಸಭೀಮನ
ಪರಾಕ್ರಮವನ್ನು
ಅಳತೆಯಿಲ್ಲದಷ್ಟು ಹೊಗಳಿ
ತಮ್ಮ ಸ್ವಾಮಿಯನ್ನು
ಇಷ್ಟದೈವವನ್ನು
ಕೊಂಡಾಡುವಂತೆ ಅಯ್ದು

ಜನರನ್ನೂ ಕೊಂಡಾಡಿದರು.
ಅಲ್ಲಿ ಪಾಂಡವರು ಕೆಲವು
ದಿನವಿರುವಷ್ಟರಲ್ಲಿ ಒಂದು
ದಿನ ಸೂರ್ಯಾಸ್ತವಾಯಿತು.
ಆ ಸಮಯದಲ್ಲಿ ಒಬ್ಬ
ಬ್ರಾಹ್ಮಣನು ವಿಶೇಷವಾಗಿ
ಹರಿದುಹೋದ ಬಟ್ಟೆಯಿಂದ
ಮುಚ್ಚಿದ ಸೊಂಟ
ಪ್ರದೇಶವನ್ನುಳ್ಳವನಾಗಿ ಬಂದು
ಮಲಗಲು ಸ್ಥಳವನ್ನು
ಕೇಳಿದನು. ಅವರು ಕೊಟ್ಟ

ಜಿಂಕೆಯ ಚರ್ಮವನ್ನೇ ಹಾಸಿಕೊಂಡು ಮಲಗಿದ್ದ ಅವನನ್ನು ಧರ್ಮರಾಜನು ಯಾವ ನಾಡಿನಿಂದ ಬಂದಿರಿ, ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಪ್ರಶ್ನಿಸಿದನು. ಅವನು ಉತ್ತರಾಪಥದ ಹಸ್ತಿನಾಪಟ್ಟಣದಿಂದ ಬಂದೆವು ಎಂದನು. ಧರ್ಮರಾಜನು ಅಲ್ಲಿ ಪಾಂಡವರ ಸುದ್ದಿಯೇನು? ಧೃತರಾಷ್ಟ್ರ

ದುರ್ಯೋಧನರಿರುವ ರೀತಿ ಯಾವುದು ಎಂದು ಕೇಳಿದನು.

ಮ|| ಮನದೊಳ್ ಕೂರದ ಪಾಂಡುರಾಜಸುತರುಂ ಲಾಕ್ಷಾಗೃಹೋಗ್ರಾಗ್ನಿಯಾ ನನದೊಳ್ ಮಱ್ಗಿದರೆನ್ನ ಪುಣ್ಯಮಱಿಯರ್ ವೇಮಾಱ(?)ರಿನ್ನಾರೊ ಬೇ| ರನೆ ಕಿಱ್ತಿಕ್ಕಿದೆನೀಗಳಾಯ್ತು ಧರೆ ನಿರ್ದಾಯಾದ್ಯಮೆಂದಾ ಸುಯೋ

ಧನನಾಳುತ್ತಿರೆ ಸಂದ ಹಸ್ತಿನಪುರಂ ಸಂತಂ ಬಸಂತಂ ಕರಂ|| ೩೨||

ಪದ್ಯ-೩೨:ಪದವಿಭಾಗ-ಅರ್ಥ: ಮನದೊಳ್ ಕೂರದ (ಪ್ರೀತಿಸದ) ಪಾಂಡುರಾಜಸುತರುಂ ಲಾಕ್ಷಾಗೃಹ ಉಗ್ರಾಗ್ನಿಯಾನನದೊಳ್ (ಉಗ್ರ ಅಗ್ನಿ ಮುಖದಲ್ಲಿ) ಮೞ್ಗಿದರ್(ಸತ್ತರು) ಎನ್ನ

ಪುಣ್ಯಂ! ಅಱಿಯರ್
(ಅಸಾಧ್ಯರು) ವೇಮಾಱಿರ್
(ಮೋಸಹೋಗದವರು)
ಇನ್ನಾರೊ (ಇನ್ನು ಯಾರು
ಇದ್ದಾರೆ-) ಬೇರನೆ ಕಿೞ್ತಿಕ್ಕಿದೆಂ
(ಬೇರನ್ನೇ ಕಿತ್ತು ಇಕ್ಕಿದೆನು)
ಈಗಳಾಯ್ತು ಧರೆ
ನಿರ್ದಾಯಾದ್ಯಮು ಎಂದು ಆ
ಸುಯೋಧನನಾಳುತ್ತಿರೆ (ಈಗ
ಈ ರಾಜ್ಯವು
ದಾಯಾದಿಗಳಿಲ್ಲದ

ಹಾಗಾಯಿತು- ಎಂದು ದುರ್ಯೋಧನನು ರಾಜ್ಯಭಾರ ಮಾಡುತ್ತಿರಲು,) ಸಂದ ಹಸ್ತಿನಪುರಂ ಸಂತಂ ಬಸಂತಂ ಕರಂ(ಪ್ರಸಿದ್ಧವಾದ ಹಸ್ತಿನಪುರವು ಯಾವಾಗಲೂ ಬಹಳ ಸಂತೋಷಭರಿತವಾಗಿದೆ ಎಂದನು)

ಪದ್ಯ-೩೨:ಅರ್ಥ:ಅದಕ್ಕೆ ಅವನು ನನ್ನ ಶತ್ರುಗಳಾದ

ಪಾಂಡಸುತರು ಅರಗಿನ
ಮನೆಯ ಭಯಂಕರವಾದ
ಬೆಂಕಿಯ ಮುಖದಲ್ಲಿ ಸತ್ತರು.
ಇದು ನನ್ನ ಪುಣ್ಯ,
ಅಸಾಧ್ಯರಾದವರು,
ಮೋಸಹೋಗದಿರುವವರು
ಇನ್ನು ಯಾರಿದ್ದಾರೆ, ಎನ್ನುವ
ಹಾಗೆ ಈ ವೈರಿಗಳನ್ನು
ಬೇರುಸಹಿತ ಕಿತ್ತುಹಾಕಿದೆನು.
ಈಗ ಈ ರಾಜ್ಯವು
ದಾಯಾದಿಗಳಿಲ್ಲದ

ಹಾಗಾಯಿತು- ಎಂದು ದುರ್ಯೋಧನನು ರಾಜ್ಯಭಾರ ಮಾಡುತ್ತಿದ್ದಾನೆ, ಪ್ರಸಿದ್ಧವಾದ ಹಸ್ತಿನಪುರವು ಯಾವಾಗಲೂ ಪೂರ್ಣವಾಗಿ ಸಂತೋಷಭರಿತವಾಗಿದೆ ಎಂದನು.

ವ|| ಅದಲ್ಲದೆಯುಂ ಯಜ್ಞಸೇನನೆಂಬ ಮೊದಲ ಪೆಸರ ಪಾಂಚಾಳದೇಶದರಸಂ ದ್ರುಪದನೆಂಬಂ

ದ್ರೋಣನೊಳಾದ
ಪರಿಭವಮಂ ನೆನೆದಾತನಂ
ಕೊಲ್ವನ್ನನೊರ್ವ ಮಗನುಮಂ
ವಿಕ್ರಮಾರ್ಜನಂಗೆ
ಪೆಂಡಿತಿಯಪ್ಪನ್ನಳೊರ್ವ
ಮಗಳುಮಂ
ಪಡೆದಲ್ಲದಿರೆನೆಂದು ಪೂಣ್ದು
ಪೋಗಿ ಪಯೋವ್ರತನೆಂಬ
ದಿವ್ಯ ಮುನಿಪತಿಯಿಂ
ಪುತ್ರಕಾಮೇಷ್ಟಿಗೆಯ್ಸಿ
ಹೋಮಕುಂಡದಲ್ಲಿ

ಧಗಧಗಿಸುವ
ಜ್ವಾಲಾಮಾಲೆಗಳೊಳ್
ಕಿಚ್ಚಿಬಾಳುಮತ್ತಪರಮುಮ
ಭೇದ್ಯ
ಕವಚಮುಂಬೆರಸೊಗೆದ
ಧೃಷ್ಟದ್ಯುಮ್ನನೆಂಬ
ಮಗನುಮಂ
ಜ್ವಾಳಾಮಾಳಿನಿಯೊಗೆವಂತೊ
ಗೆದ ಕೃಷ್ಣೆಯೆಂಬ ಮಗಳುಮಂ
ಪಡೆದನಾ ಹೋಮಾಗ್ನಿಯೊಳ್
ಪುಟ್ಟಿದೊಂದು ದಿವ್ಯ

ಚಾಪಮುಮಯ್ದು ದಿವ್ಯ
ಶರಮೊಳವಾ ಬಿಲ್ಲನೇಱಿಸಿ ಆ
ಸರಲ್ಗಳಿಂದಾತನ ಮನೆಯ
ಮುಂದೆ ನಭದೊಳ್
ನಲಿನಲಿದಾಡುವ ಜಂತ್ರದ
ಮೀನನೆಚ್ಚನು ಮಾಕೆಗೆ
ಗಂಡನಕ್ಕುಮೆಂದಾದೇಶಮಂತ
ಪ್ಪ ಸಾಹಸಪುರುಷಂ
ವಿಕ್ರಮಾರ್ಜುನನಲ್ಲದೆ
ಪೆಱರಿಲ್ಲೆಂಬರದಱಿಂದೆನ್ನುಂ
ಪಾಂಡವರೊಳರೆಂಬ

ಮಾತುಗಳಂ
ಬುದ್ಧಿಯೊಡೆಯರಾರಾನುಂ
ನುಡಿವರ್
ದ್ರುಪದನುಮೀಗಳಾ ಕೂಸಿಂಗೆ
ಸಯಂಬರಮಂ ಮಾಡಲೆಂದು
ನೆಲದೊಳುಳ್ಳರಸು
ಮಕ್ಕಳೆಲ್ಲರ್ಗಂ
ಬೞಿಯನಟ್ಟಿದೊಡೆ
ದುರ್ಯೋಧನಾದಿಗಳ್
ಮೊದಲಾದನೇಕ
ದೇಶಾಶ್ವರರೆಲ್ಲಂ

ಛತ್ರವತಿಯೆಂಬುದು ದ್ರುಪದನ ಪೊಟಿಲಾ ಪೊಟಿಲ್ಗೆ ವಂದಿರ್ದರಾನಲ್ಲಿಂದಂ ಬಂದೆನೆಂದು ಪೇೞೆ ತದ್ವೃತ್ತಾಂತಮೆಲ್ಲಮಂ ಕೇಳ್ದು ತಮ್ಮೊಳಾಳೋಚಿಸಿ-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ ಯಜ್ಞಸೇನನೆಂಬ ಮೊದಲ ಪೆಸರ (ಹೆಸರ) ಪಾಂಚಾಳದೇಶದ ಅರಸಂ

ದ್ರುಪದನೆಂಬಂ-
ದ್ರೋಣನೊಳಾದ
ಪರಿಭವಮಂ (ಸೋಲನ್ನು)
ನೆನೆದು ಆತನಂ ಕೊಲ್ವನ್ನನು
ಒರ್ವ ಮಗನುಮಂ,
ವಿಕ್ರಮಾರ್ಜನಂಗೆ
ಪೆಂಡಿತಿಯಪ್ಪನ್ನಳು ಒರ್ವ
ಮಗಳುಮಂ, ಪಡೆದಲ್ಲದಿರೆ
ಇರೆನೆಂದು, ಪೂಣ್ದು
(ಪ್ರತಿಜ್ಞೆಮಾಡಿ) ಪೋಗಿ
ಪಯೋವ್ರತನೆಂಬ ದಿವ್ಯ

ಮುನಿಪತಿಯಿಂ
ಪುತ್ರಕಾಮೇಷ್ಟಿ ಗೆಯ್ಸೆ
(ಮಾಡಿಸಿ)
ಹೋಮಕುಂಡದಲ್ಲಿ
ಧಗಧಗಿಸುವ
ಜ್ವಾಲಾಮಾಲೆಗಳೊಳ್
(ಜ್ವಾಲೆಗಳ ಮಧ್ಯದಲ್ಲಿ)
ಕಿಟ್ಟಿಬಾಳುಂ (ರೆಯಿಂದ
ಹೊರಸೆಳೆದ ಕತ್ತಿ) ಮತ್ತು
ಪರಮುಂ ಅಭೇದ್ಯ
ಕವಚಮುಂ ಬೆರಸಿ (ಕತ್ತಿ

ಕವಚ ಸೇರಿ) ಒಗೆದ
(ಶೋಭಿಸುವ)ಧೃಷ್ಟದ್ಯುಮ್ನ
ನೆಂಬ ಮಗನುಮಂ;
ಜ್ವಾಳಾಮಾಳಿನಿಯು
ಒಗೆವಂತೆ
ಒಗೆದ(ಶೋಭಿಸುವ)
ಕೃಷ್ಣೆಯೆಂಬ ಮಗಳುಮಂ
ಪಡೆದನು ಆ
ಹೋಮಾಗ್ನಿಯೊಳ್;
ಪುಟ್ಟಿದೊಂದು
(ಅದರಲ್ಲಿಹುಟ್ಟಿದ) ದಿವ್ಯ

ಚಾಪಮುಂ ಅಯ್ದು ದಿವ್ಯ
ಶರಮೊಳವು(ಬಾಣಗಳಿದ್ದವು);
ಬಿಲ್ಲನೇಱಿಸಿ (ಬಿಲ್ಲನ್ನು ಏರಿಸಿ)
ಆ ಸರಲ್ಗಳಿಂದ
(ಬಾಣಗಳೀಂದ) ಆತನ
ಮನೆಯ ಮುಂದೆ ನಭದೊಳ್
(ಎತ್ತರದಲ್ಲಿ) ನಲಿನಲಿದಾಡುವ
ಜಂತ್ರದ ಮೀನನೆಚ್ಚನುಂ
(ಹೊಡೆದವನು) ಆಕೆಗೆ
ಗಂಡನಕ್ಕುಂ ಎಂದು
ಆದೇಶಮಂ(ಮಾಡಿದ್ದಾನೆ)

ಅಂತಪ್ಪ ಸಾಹಸಪುರುಷಂ
ವಿಕ್ರಮಾರ್ಜುನನಲ್ಲದೆ ಪೆಱರು
ಇಲ್ಲೆಂಬರು; ಅದಱಿಂದ
(ಅದರಿಂದ) ಇನ್ನುಂ
ಪಾಂಡವರು ಉಳರು
ಎಂಬ(ಇದ್ದಾರ ಎಂಬ ಮಾತು)
ಮಾತುಗಳಂ
ಬುದ್ಧಿಯೊಡೆಯರು
(ಬುದ್ಧಿವಂತರು) ಆರಾನುಂ
(ಎಲ್ಲರೂ) ನುಡಿವರ್;
ದ್ರುಪದನುವಂ ಈಗಳು ಆ

ಕೂಸಿಂಗೆ (ಹುಡುಗಿಗೆ)
ಸಯಂಬರಮಂ ಮಾಡಲೆಂದು
ನೆಲದೊಳು ಉಳ್ಳ ಅರಸು
ಮಕ್ಕಳೆಲ್ಲರ್ಗಂ (ಭೂಮಿಯ
ಮೇಲಿರುವ) ಬಜಿಯನು
ಅಟ್ಟಿದೊಡೆ (ದೂತರನ್ನು
ಕಳಿಸಲು)
ದುರ್ಯೋಧನಾದಿಗಳ್
ಮೊದಲಾದ ಅನೇಕ
ದೇಶಾಶ್ವರರು ಎಲ್ಲಂ
ಛತ್ರವತಿಯೆಂಬುದು

ದ್ರುಪದನ ಪೊೞಲು (ನಗರ)
ಆ ಪೊೞಲ್ಗೆ ವಂದಿರ್ದರು
ಆನು ಅಲ್ಲಿಂದಂ ಬಂದೆನು
ಎಂದು ಪೇೞೆ (ಹೇಳಲು-
ಹೇಳಿದನು) ತದ್
ವೃತ್ತಾಂತಮ್ ಎಲ್ಲಮಂ ಕೇಳ್ದು
ತಮ್ಮೊಳು ಆಳೋಚಿಸಿ-
ವಚನ:ಅರ್ಥ: ಅಷ್ಟೇ ಅಲ್ಲದೆ
ಯಜ್ಞಸೇನನೆಂಬ ಮೊದಲಿನ
ಹೆಸರಿನಿಂದ ಕೂಡಿದ
ಪಾಂಚಾಲದೇಶದ ರಾಜನಾದ

ದ್ರುಪದನೆಂಬುವನು
ದ್ರೋಣನಿಂದಾದ ಸೋಲನ್ನು
ನೆನೆಸಿಕೊಂಡು ಅವನನ್ನು
ಕೊಲ್ಲುವಂತಹ ಮಗನನ್ನೂ
ವಿಕ್ರಮಾರ್ಜುನನಿಗೆ
ಹೆಂಡತಿಯಾಗುವಂತಹ ಒಬ್ಬ
ಮಗಳನ್ನೂ ಪಡೆಯದೇ
ಇರುವುದಿಲ್ಲ ಎಂದು ಪ್ರತಿಜ್ಞೆ
ಮಾಡಿದನು.
ಪಯೋವ್ರತನೆಂಬ
ದೇವಋಷಿಯಿಂದ

ಪುತ್ರಕಾಮೇಷ್ಟಿಯಾಗವನ್ನು
ಮಾಡಿಸಿದನು.
ಹೋಮಕುಂಡದಲ್ಲಿ ಧಗಧಗಿಸಿ
ಉರಿಯುವ ಜ್ವಾಲೆಗಳ
ಸಮೂಹದಲ್ಲಿ ಒರೆಯಿಂದ
ಹೊರಸೆಳೆದ ಕತ್ತಿಯನ್ನೂ
ಗುರಾಣಿಯನ್ನೂ
(ಭೇದಿಸಲಾಗದ)
ಒಡೆಯಲಾಗದ ಕವಚವನ್ನೂ
ಕೂಡಿಕೊಂಡು
ಧೃಷ್ಟದ್ಯುಮ್ನನೆಂಬ ಮಗನೂ

ಜ್ವಾಲಾಮಾಲಿನೀದೇವಿಯಂತಿ
ರುವ ಕೃಷ್ಣೆಯೆಂಬ ಮಗಳೂ
ಹುಟ್ಟಿದರು. ಆ
ಹೋಮಾಗ್ನಿಯಲ್ಲಿಯೇ
ಒಂದು ಶ್ರೇಷ್ಠವಾದ ಬಿಲ್ಲೂ
ಅಯ್ದು ಶ್ರೇಷ್ಠವಾದ
ಬಾಣಗಳೂ ಉದ್ಭವಿಸಿದವು.
ಆ ಬಿಲ್ಲನ್ನು ಹೆದೆಯೇರಿಸಿ ಆ
ಬಾಣಗಳಿಂದ ಆತನ ಮನೆಯ
ಮುಂದೆ ಆಕಾಶದಲ್ಲಿ
ನಲಿನಲಿದು ಆಡುವ ಯಂತ್ರದ

ಮೀನನ್ನು ಹೊಡೆಯುವವನು
ಆಕೆಗೆ ಗಂಡನಾಗುತ್ತಾನೆ
ಎಂಬುದು (ಆದೇಶ)
ನಿಯಮ. ಅಂತಹ ಸಾಹಸ
ಪುರುಷನು
ವಿಕ್ರಮಾರ್ಜುನನಲ್ಲದೆ
ಬೇರೆಯವರಿಲ್ಲ
ಎನ್ನುವುದರಿಂದ ಪಾಂಡವರು
ಇನ್ನೂ ಇದ್ದಾರೆ ಎಂಬ
ಮಾತುಗಳನ್ನು
ಬುದ್ಧಿವಂತರೆಲ್ಲರೂ

ಹೇಳುತ್ತಿದ್ದಾರೆ. ಈಗ ದ್ರುಪದನು ಆ ಕನ್ಯೆಗೆ ಸ್ವಯಂವರವನ್ನು ಮಾಡಬೇಕೆಂದು ಭೂಮಿಯಲ್ಲಿರುವ ಎಲ್ಲ ರಾಜಕುಮಾರರಿಗೂ ದೂತರ ಮೂಲಕ ಸಮಾಚಾರವನ್ನು ಕಳುಹಿಸಿದ್ದಾನೆ. ದುರ್ಯೋಧನನೇ ಮೊದಲಾದ ಅನೇಕ ರಾಜರುಗಳೆಲ್ಲ ದ್ರುಪದನ ಆ

ಛತ್ರಪತಿ ಎಂಬ ಪಟ್ಟಣಕ್ಕೆ ಬಂದಿದ್ದಾರೆ. ನಾನು ಅಲ್ಲಿಂದಲೇ ಬಂದೆ ಎಂದು ಹೇಳಿದನು. ಆ ವೃತ್ತಾಂತವನ್ನೆಲ್ಲ ಕೇಳಿ ಪಾಂಡವರು ತಮ್ಮಲ್ಲಿ ಆಲೋಚಿಸಿದರು.

ಮ|| ತಲೆಯೊಳ್ ಸೀರೆಯನಿಕ್ಕಿ ಕೆಮ್ಮನೆನಿತಂ ಪೂಣ್ದಿರ್ಪ್ಪಮುಗ್ರಾರಿ ವಂ

ಶ ಲತಾವಲ್ಲರಿಗಳ್ಗೆ
ದಾವಶಿಖಿವೊಲ್ ಮೆಯ್ದೋಱಿ
ತದ್ದ್ರೌಪದೀ|
ಲಲನಾವ್ಯಾಜದಿನೀಗಳೊಂದೆ
ಪೊಱಲೊಳ್ ಸಂದಿರ್ದ
ಭಾಸ್ವತುಹೃ
ದ್ವಲಕಂ ಮಾರ್ವಲಕಂ
ಗುಣಾರ್ಣವ
ಶರಪ್ರಾಗಲ್ಭ್ಯಮಂ
ತೋಱುವಂ|| ೩೩||

ಪದ್ಯ-೩೩:ಪದವಿಭಾಗ-ಅರ್ಥ:ತಲೆಯೊಳ್ ಸೀರೆಯನು ಇಕ್ಕಿ ಕೆಮ್ಮನೆ ಇನಿತಂ (ತಲೆಯ ಮೇಲೆ ಬಟ್ಟೆಯನ್ನೂ ಹಾಕಿಕೊಂಡು ಎಷ್ಟು ಕಾಲ ಸುಮ್ಮನೆ) ಪೂಣ್ದು ಇರ್ಪಿಂ ಉಗ್ರಾರಿ ವಂಶ (ಉಗ್ರ ಶತ್ರುವಂಶದ)ಲತಾವಲ್ಲರಿಗಳ್ಗೆ(ಬಳ್ಳಿಗಳ ಕುಡಿಗಳಿಗೆ) ದಾವಶಿಖಿವೊಲ್ ಮೆಯ್ ತೋಱಿ (ಕಾಡುಗಿಚ್ಚಿನಹಾಗೆ

ಪ್ರಕಟವಾಗಿ) ತದ್ ದ್ರೌಪದೀ
ಲಲನಾ ವ್ಯಾಜದಿಂ(ನೆವದಿಂದ)
ಈಗಳು ಒಂದೆ ಪೊಟಿಲೊಳ್
ಸಂದಿರ್ದ (ಪಟ್ಟಣದಲ್ಲಿ
ಸೇರಿರುವ) ಭಾಸ್ವತ್
(ಹೊಳೆಯುವ) ಹೃದ್ಬಲಕಂ
(ಹೃತ್ ಬಲ- ಮಿತ್ರ ಸೈನ್ಯಕ್ಕೂ)
ಮಾರ್ವಲಕಂ (ಮಾರ್ ಬಲ-
ಶತ್ರುಸೈನ್ಯಕ್ಕೂ) ಗುಣಾರ್ಣವ
(ಅರ್ಜುನನ ಹೇಳಿದ -ನಮ್ಮ)
ಶರಪ್ರಾಗಲ್ಭ್ಯಮಂ

ತೋಱುವಂ(ಬಾಣಕೌಶಲವನ್ನು ತೋರಿಸೋಣ)
ಪದ್ಯ-೩೩:ಅರ್ಥ:ಅರ್ಜುನ ಹೇಳಿದ, ನಾವು ತಲೆಯ ಮೇಲೆ ಬಟ್ಟೆಯನ್ನೂ ಹಾಕಿಕೊಂಡು (ತಲೆಮರೆಸಿಕೊಂಡು) ಎಷ್ಟು ಕಾಲ ಸುಮ್ಮನೆ ಪ್ರತಿಜ್ಞೆ ಮಾಡಿಕೊಂಡಿರುವುದು? ಉಗ್ರ ಶತ್ರುಗಳೆಂಬ ಬಳ್ಳಿಯ ಕುಡಿಗಳಿಗೆ ಕಾಡುಗಿಚ್ಚಿನಂತೆ

ನಮ್ಮನ್ನು ಪ್ರಕಟವಾಗಿ ಆ
ದ್ರೌಪದೀಕನ್ಯೆಯ ನೆವದಿಂದ,
ಈಗ ಒಂದೇ ಪಟ್ಟಣದಲ್ಲಿ
ಸೇರಿರುವ
ಪ್ರತಾಪಶಾಲಿಗಳಾದ
ಮಿತ್ರವರ್ಗಕ್ಕೂ
ಶತ್ರುವರ್ಗಕ್ಕೂ ನಮ್ಮ
ಬಾಣಕೌಶಲವನ್ನು
ತೋರಿಸೋಣ.

<u>ದ್ರುಪದನ ರಾಜ್ಯಕ್ಕೆ ಪಾಂಡವರ ಪ್ರವೇಶ</u>

ವ|| ಎಂದು ನಿಶ್ಚಯಿಸಿ ತಮ್ಮ ಬಗೆದ ಬಗೆಯೊಳ್ ಪರಾಶರಮುನೀಂದ್ರೋಪದೇಶ ಮೊಡಂಬಡೆ ಪಾಂಡವರೇಕಚಕ್ರದಿಂ ಪೊಱಮಟ್ಟು ಶಕುನಂಗಳೆಲ್ಲಮುತ್ತರೋತ್ತರಂ ತಿರ್ದುವಿನ ಮುತ್ತರಾಭಿಮುಖರಾಗಿ

ಪಯಣಂಬೋಗಿ ಕೆಲವಾನುಂ
ದಿವಸಕ್ಕೆ ಯಮುನಾ
ನದೀತಟನಿಕಟವರ್ತಿಯಪ್ಪಂಗ
ದರ್ಪಣವೆಂಬಡವಿಯೊಳಗನೆ
ಬರೆವರೆ
ದಿನಕರಬಿಂಬಾಂಬುಜಮಂಬ
ರಸರೋವರದಿಂ
ಪತ್ತುವಿಡುವುದುಂ ಕವಿದ
ಕೞ್ತಲೆಯಗುರ್ವಾಗೆ
ತಮೋಪಶಮನನಿಮಿತ್ತಮುರಿ
ವ ಕೊಳ್ಳಿಯಂ ಪಿಡಿದು

ಜಗುನೆಯಂ ಪಾರ್ಯ್ವಾಗಳಾ
ಬನಮನಾಳ್ವ ಕುಬೇರನಾಯಕ
ನಂಗದರ್ಪಣನೆಂಬ
ಗಂಧರ್ವಂ
ಜಳಕ್ರೀಡೆಯಾಡುತಿರ್ದನಿಬರಿಂ
ಮುಂದೆ ಬರ್ಪ
ವಿಕ್ರಮಾರ್ಜುನನ
ಪಾದಾಭಿಘಾತದೊಳುಚ್ಚಳಿಸು
ವ ನೀರ ಸಪ್ಪುಳುಮಂ ಕೇಳ್ದು
ಪಿಡಿದ ಕೊಳ್ಳಿಯ ಬೆಳಗುಮಂ
ಕಂಡು ಬೆಳಗಂ ಕಂಡ

ಪತಂಗದಂತೆ ಮಾಣದೆಯ್ತಂದು- ವಚನ:ಪದವಿಭಾಗ-ಅರ್ಥ:

(ದ್ರುಪದನ ಛತ್ರವತೀಪುರಕ್ಕೆ ಹೋಗುವುದೆಂದು) ಎಂದು ನಿಶ್ಚಯಿಸಿ ತಮ್ಮ ಬಗೆದ ಬಗೆಯೊಳ್ (ತಾವು ಯೋಚಿಸಿದ ರೀತಿಯಲ್ಲಿ) ಪರಾಶರಮುನೀಂದ್ರ (ವ್ಯಾಸಮುನಿ)ಉಪದೇಶ ಮೊಡಂಬಡೆ (ಹೊಂದಲು)

ಪಾಂಡವರು ಏಕಚಕ್ರದಿಂ
ಪೊಱಮಟ್ಟು (ಹೊರಟು)
ಶಕುನಂಗಳೆಲ್ಲಂ
ಉತ್ತರೋತ್ತರಂತೆ
ಇರ್ದುವಿನಂ (ಇರಲು)
ಉತ್ತರಾಭಿಮುಖರಾಗಿ
ಪಯಣಂಬೋಗಿ ಕೆಲವಾನುಂ
ದಿವಸಕ್ಕೆ ಯಮುನಾ ನದೀತಟ
ನಿಕಟವರ್ತಿಯಪ್ಪ
ಅಂಗದರ್ಪಣವೆಂಬ
ಅಡವಿಯೊಳಗನೆ ಬರೆವರೆ

(ಬರುವಾಗ) ದಿನಕರಬಿಂಬ
ಅಂಬುಜಂ
(ಸೂರ್ಯಕಿರಣವೆಂಬ
ಕಮಲ) ಅಂಬರ
ಸರೋವರದಿಂ
ಪತ್ತುವಿಡುವುದುಂ(ಬಿಟ್ಟುಬಿ
ಡು-ತೊಲಗಲು) ಕವಿದ
ಕಟ್ತಿಲೆಯು ಅಗುರ್ವಾಗೆ
(ಕತ್ತಲೆಯು
ಭಯಾನಕವಾಗಲು) ತಮ
ಉಪಶಮನ ನಿಮಿತ್ತಂ

(ಕತ್ತಲೆಯನ್ನು
ಹೋಗಿಸಲು)ಉರಿವ
ಕೊಳ್ಳಿಯಂ ಪಿಡಿದು (ಹಿಡಿದು)
ಜಗುನೆಯಂ
(ಯಮುನೆಯನ್ನು)
ಪಾಯ್ವಾಗಳು (ದಾಟುವಾಗ)
ಆ ಬನಮನಾಳ್ವ
ಕುಬೇರನಾಯಕನ್
ಅಂಗದಪರ್ಣನೆಂಬ
ಗಂಧರ್ವಂ
ಜಳಕ್ರೀಡೆಯಾಡುತಿರ್ದನ್ (ಆ

ಕಾಡನ್ನು ಆಳುತ್ತಿದ್ದ
ಕುಬೇರನಾಯಕನಾಗಿದ್ದ
ಅಂಗದಪರ್ಣನೆಂಬ ಹೆಸರಿನ
ಗಂಧರ್ವನು
ನೀರಾಟವಾಡುತ್ತಿದ್ದನು.)
ಅನಿಬರಿಂ ಮುಂದೆ ಬರ್ಪ
ವಿಕ್ರಮಾರ್ಜುನನ/ಅರ್ಜುನನ
ಪಾದ ಅಭಿಘಾತದೊಳ್
ಉಚ್ಚಳಿಸುವ (ಕಾಲಿನ
ತುಳಿತದಿಂದ ಮೇಲಕ್ಕೆ
ಹಾರುವ) ನೀರ ಸಪ್ಪುಳುಮಂ

ಕೇಳ್ದು, ಪಿಡಿದ ಕೊಳ್ಳಿಯ ಬೆಳಗುಮಂ ಕಂಡು ಬೆಳಗಂ ಕಂಡ ಪತಂಗದಂತೆ ಮಾಣದೆ (ಸುಮ್ಮನಿರದೆ-ತಡೆಯದೆ) ಎಯ್ತಂದು (ಬಂದು)-

ವಚನ:ಅರ್ಥ:(ದ್ರುಪದನ ಛತ್ರವತೀಪುರಕ್ಕೆ ಹೋಗುವುದೆಂದು) ಎಂದು ನಿಶ್ಚಯಿಸಿ, ತಾವು ಯೋಚಿಸಿದ ರೀತಿಯಲ್ಲಿ ವ್ಯಾಸಮಹರ್ಷಿಗಳ

ಉಪದೇಶವ್ನೂ ಹೊಂದಲು,
ಪಾಂಡವರು
ಏಕಚಕ್ರಪುರದಿಂದ
ಹೊರಟರು. ಶಕುನಗಳೆಲ್ಲ
ತಮ್ಮ ಅಭಿವೃದ್ಧಿಯನ್ನೇ
ಸೂಚಿಸಿದುವು. ಉತ್ತರದಿಕ್ಕಿಗೆ
ಅಭಿಮುಖವಾಗಿ
ಪ್ರಯಾಣಮಾಡಿ ಕೆಲವು
ದಿವಸವಾದ ಮೇಲೆ
ಯಮುನಾನದಿಯ ದಡಕ್ಕೆ
ಹತ್ತಿರವಿರುವ

ಅಂಗದರ್ಪಣವೆಂಬ ಕಾಡನಲ್ಲಿ ಬರುವಾಗ, ಸೂರ್ಯಾಸ್ತವಾಯಿತು. ಕವಿದ ಕತ್ತಲೆಯು ಭಯಾನಕವಾಗಲು, ಕತ್ತಲೆಯನ್ನು ಹೋಗಲಾಡಿಸಲು, ಉರಿಯುವ ಕೊಳ್ಳಿಯನ್ನು ಹಿಡಿದು ಯಮುನಾನದಿಯನ್ನು ಹಾಯುವಾಗ, ಆ ಕಾಡನ್ನು

ಆಳುತ್ತಿದ್ದ
ಕುಬೇರನಾಯಕನಾಗಿದ್ದ
ಅಂಗದಪರ್ಣನೆಂಬ ಹೆಸರಿನ
ಗಂಧರ್ವನು
ನೀರಾಟವಾಡುತ್ತಿದ್ದನು.
ಎಲ್ಲರಿಗಿಂತ ಮುಂದೆ ಬರುತ್ತಿದ್ದ
ವಿಕ್ರಮಾರ್ಜುನನ ಕಾಲಿನ
ತುಳಿತದಿಂದ ಮೇಲಕ್ಕೆ
ಹಾರುವ ನೀರಿನ ಶಬ್ದವನ್ನು
ಕೇಳಿ ಅವರು ಹಿಡಿದಿದ್ದ
ಕೊಳ್ಳಿಯ ಬೆಳಗನ್ನು ನೋಡಿ

ಬೆಳಕನ್ನು ಕಂಡ ಪತಂಗದ
ಹುಳುವಿನಂತೆ ಸುಮ್ಮನಿರದೆ
ಅವರ ಮೇಲೆ ಬಿದ್ದನು.

ಮ|| ಬನಮೆನ್ನಾಳ್ವ ಬನಂ
ನಿಶಾಬಲದಿಂತಸ್ಮದ್ಬಲಂ
ಧೂರ್ತನಯ್
ನಿನಗೀ ಪೊಟ್ಟೆಜೊಳಿತ್ತ
ಬರ್ಪದಟನಿಂತಾರಿತ್ತರೆಂದಾಂ
ತೊಡಾ|
ತನನಾ
ಕೊಳ್ಳಿಯೊಳಿಟ್ಟೊಡಂತದು

ಲಯಾಂತೋಗ್ರಾಗ್ನಿಯಂತಜ್ವಿ
ಬಂ
ದೆನಸುಂ ಮಾಣದೆ ಬಾಗಿದಂ
ಪದಯುಗಕ್ಕಾರೂಢಸರ್ವಜ್ಞ
ನಾ|| ೩೪ ||

ಪದ್ಯ-೩೪:ಪದವಿಭಾಗ-
ಅರ್ಥ:ಬನಂ ಎನ್ನ ಆಳ್ವ
ಬನಂ, (ನಾನು ಆಳುವ
ವನವು) ನಿಶಾಬಲದಿ ಇಂತು
ಅಸ್ಮದ್ಬಲಂ(ಕತ್ತಲೆಯಬಲ
ಮತ್ತೆ ಅಸ್ಮತ -ನನ್ನಬಲ)

ಧೂರ್ತನಯ್ ನಿನಗೆ ಈ
ಪೊಟ್ತಿಟೊಳ್ ಇತ್ತ ಬರ್ಪ
ಅದಟನು (ಈ ಹೊತ್ತಿನಲ್ಲಿ ಇತ್ತ
ಬರುವಷ್ಟು ಪರಾಕ್ರಮವನ್ನು)
ಇಂತು ಆರಿತ್ತರ್ ಎಂದು
ಆಂತೊಡ್ (ಪ್ರತಿಭಟಿಸಲು)
ಆತನನು ಆ ಕೊಳ್ಳಿಯೊಳು
ಇಟ್ಟೊಡೆ (ಕೊಳ್ಳಿಯಿಂದ
ಹೊಡೆದಾಗ) ಅಂತದು
ಲಯಾಂತ ಉಗ್ರ ಅಗ್ನಿಯಂತೆ
ಅಟ್ಟೆ (ಅದು ಪ್ರಳಯಕಾಲದ

ಘೋರವಾದ ಬೆಂಕಿಯಂತೆ
ಸುಡಲು) ಬಂದು ಎನಸುಂ
ಮಾಣದೆ (ತಡೆಯದೆ)
ಬಾಗಿದಂ (ನಮಿಸಿದನು)
ಪದಯುಗಕ್ಕೆ
ಆರೂಢಸರ್ವಜ್ಞನಾದ
ಅರ್ಜುನನ(ಅವನು ಸ್ವಲ್ಪವೂ
ಸಾವಕಾಶ ಮಾಡದೆ ಬಂದು
ಆರೂಢಸರ್ವಜ್ಞನಾದ
ಅರ್ಜುನನ ಎರಡು

ಪಾದಗಳಿಗೆ ನಮಸ್ಕಾರ ಮಾಡಿದನು)

ಪದ್ಯ-೩೪:ಅರ್ಥ:ಈ ಕಾಡು ನಾನು ಆಳುವ ಕಾಡು. ಈ ರಾಕ್ಷಸ ಬಲವಿದು ನನ್ನ ಸೈನ್ಯ, ನೀನು ದುಷ್ಟನಾಗಿದ್ದೀಯೆ; ಈ ಹೊತ್ತಿನಲ್ಲಿ ಹೀಗೆ ಬರುವಷ್ಟು ಪರಾಕ್ರಮವನ್ನು ನಿನಗೆ ಕೊಟ್ಟವರಾರು ಎಂದು ಪ್ರತಿಭಟಿಸಲು, ಅರ್ಜುನನು ಅವನನ್ನು ಆ ಕೊಳ್ಳಿಯಿಂದಲೇ

ಹೊಡೆದನು. ಅದು
ಪ್ರಳಯಕಾಲದ ಘೋರವಾದ
ಬೆಂಕಿಯಂತೆ ಸುಟ್ಟಿತು.
ಅವನು ಸ್ವಲ್ಪವೂ ಸಾವಕಾಶ
ಮಾಡದೆ ಬಂದು
ಆರೂಢಸರ್ವಜ್ಞನಾದ
ಅರ್ಜುನನ ಎರಡು
ಕಾಲುಗಳಿಗೂ ನಮಸ್ಕಾರ
ಮಾಡಿದನು

ವ|| ಅಂತು ತಾಗಿ
ಬಾಗಿದಂತಾಗಿ ಗಂಧರ್ವಂ

ಕೊಂತಿವೆರಸಱುವರುಮಂ ತನ್ನ ಬೀಡಿಂಗೊಡಗೊಂಡೊಯ್ದತಿ ಪ್ರೀತಿಯಿಂ ಬಿರ್ದನಿಕ್ಕಿ-

ವಚನ:ಪದವಿಭಾಗ-

ಅರ್ಥ:ಅಂತು ತಾಗಿ ಬಾಗಿದಂತಾಗಿ ಗಂಧರ್ವಂ ಕೊಂತಿವೆರಸು ಅಱುವರುಮಂ (ಪ್ರತಿಭಟಿಸಿ ನಮಿಸಿದ ಗಂಧರ್ವನು ಕುಂತಿಯಿಂದ ಕೂಡಿದ ಆರು ಜನವನ್ನೂ)

ತನ್ನ ಬೀಡಿಂಗೆ ಒಡಗೊಂಡೊಯ್ದು ಅತಿ ಪ್ರೀತಿಯಿಂ ಬಿರ್ದನಿಕ್ಕಿ (ಪ್ರೀತಿಯಿಂದ ಆತಿಥ್ಯವನ್ನು ಮಾಡಿದನು.)-

ವಚನ:ಅರ್ಥ:ಹಾಗೆ ಪ್ರತಿಭಟಿಸಿ ನಮಿಸಿದ ಗಂಧರ್ವನು ಕುಂತಿಯಿಂದ ಕೂಡಿದ ಆರು ಜನವನ್ನೂ ತನ್ನ ಬೀಡಿಗೆ ಜೊತೆಯಲ್ಲಿ ಕರೆದುಕೊಂಡು ಹೋಗಿ

ಪ್ರೀತಿಯಿಂದ ಆತಿಥ್ಯವನ್ನು ಮಾಡಿದನು. ಅಲ್ಲದೆ

ಕಂ|| ಇದು ನಿನ್ನ ಕೊಟ್ಟ ತಲೆ ನಿನ
ಗಿದನಿತ್ತಪೆನೆಂದು ನುಡಿಯಲಾಗದು ಮಾರ್ಕೊ|
ಳ್ಳದಿರೆಂದು ಗಿಳಿಯ ಬಣ್ಣದ ಕುದುರೆಯನಯ್ನೂರನಿತ್ತನಂಗ ದಪರ್ಣಂ|| ೩೫||

ಪದ್ಯ-೩೫:ಪದವಿಭಾಗ-

ಅರ್ಥ:ಇದು ನಿನ್ನ ಕೊಟ್ಟ

(ಉಳಿಸಿದ) ತಲೆ. ನಿನಗೆ
ಇದನು ಇತ್ತಪೆನೆಂದು
(ಕೊಡುತ್ತೇನೆಂದು)
ನುಡಿಯಲಾಗದು
ಮಾರ್ಕೊಳ್ಳದಿರು
(ಮರುನುಡಿಯಬೇಡ) ಎಂದು
ಗಿಳಿಯ ಬಣ್ಣದ ಕುದುರೆಯನು
ಅಯ್ಯೂರನು ಇತ್ತನು
ಅಂಗದಪರ್ಣಂ.
(ಪ್ರತಿಮಾತಾಡಬೇಡ ಎಂದು
ಅಂಗದಪರ್ಣನು ಗಿಳಿಯ

ಬಣ್ಣದ ಅಯ್ನೂರು ಕುದುರೆಗಳನ್ನು ಅರ್ಜುನನಿಗೆ ಕೊಟ್ಟನು.)

ಪದ್ಯ-೩೫:ಅರ್ಥ:ಇದು ನೀನು ಕೊಟ್ಟ (ಬದುಕಿಸಿದ- ಉಳಿಸಿದ) ತಲೆ ಇದನ್ನು ನಿನಗೆ ಪ್ರತಿಯಾಗಿ ಕೊಡುತ್ತಿದ್ದೇನೆಂದು ಹೇಳಕೂಡದು. ಪ್ರತಿಮಾತಾಡಬೇಡ ಎಂದು ಅಂಗದಪರ್ಣನು ಗಿಳಿಯ

ಬಣ್ಣದ ಅಯ್ನೂರು ಕುದುರೆಗಳನ್ನು ಅರ್ಜುನನಿಗೆ ಕೊಟ್ಟನು.

ವ||

ಇತ್ತೊಡಿವ(ನ್ನ)ನ್ನೆಗಮೆಮಗಾಗಿ ರ್ಕೆಂದು ಪ್ರಿಯಂ ನುಡಿದಂಗದಪರ್ಣನನಿರವೇ ೞ್ದು ಮಾರ್ತಾಂಡೋದಯಮೆ ನಿಜೋದಯಮಾಗೆ ಪಯಣಂಬೋಗಿ-

ವಚನ:ಪದವಿಭಾಗ-ಅರ್ಥ:ಇತ್ತೊಡೆ ಇವನ್ನ ಅನ್ನಗಂ ಎಮಗಾಗಿ ಇರ್ಕೆ (ಇವು ನಮ್ಮದಾಗಿ ಇರಲಿ) ಎಂದು ಪ್ರಿಯಂ ನುಡಿದು ಅಂಗದರ್ಪಣನನು ಇರವೇಳ್ದು (ಅಲ್ಲಿರಲು ಹೇಳಿ) ಮಾರ್ತಾಂಡ (ಸೂರ್ಯ) ಉದಯಮೆ ನಿಜ (ತಮ್ಮ) ಉದಯಮಾಗೆ ಪಯಣಂಬೋಗಿ

(ಉದಯವಾಗಲು ಪ್ರಯಾಣ ಹೋಗಿ)-

ವಚನ:ಅರ್ಥ:ನಾವು ಅಪೇಕ್ಷಿಸುವವರೆಗೆ ಇವು ನಮ್ಮದಾಗಿ ನಿಮ್ಮಲ್ಲಿರಲಿ ಎಂದು ಪ್ರಿಯವಾದ ಮಾತನಾಡಿ ಅಂಗದರ್ಪಣನನ್ನು ಅಲ್ಲಿರಲು ಹೇಳಿ, ಸೂರ್ಯೋದಯವೇ ತಮ್ಮ ಅಭಿವೃದ್ಧಿ ಸೂಚಕವಾಗಿರಲು

ಪಾಂಡವರು ಮುಂದೆ

ಪ್ರಯಾಣ ಮಾಡಿ-

ಕಂ|| ಪುಣ್ಯನದೀನದ ನಗ

ಲಾವ(ರಾರ)

ವಣ್ಯ ವಿಭೂಷಣೆಯನೊಲ್ದು

ನೋಡುತ್ತುಮಿಳಾ|

ಪುಣ್ಯ ಸ್ತ್ರೀಯಂ ಸಂಚಿತ

ಪುಣ್ಯರ್ ಪಾಂಚಾಲದೇಶಮಂ

ಪುಗುತಂದರ್|| ೩೬||

ಪದ್ಯ-೩೬:ಪದವಿಭಾಗ-

ಅರ್ಥ: ಪುಣ್ಯನದೀ ನದ

ನಗರ ಅರಣ್ಯ
ವಿಭೂಷಣೆಯನು ಒಲ್ದು
(ಸುಂದರ ಅಲಂಕಾರವನ್ನು
ಒಲಿದು) ನೋಡುತ್ತುಂ
ಇಳಾ(ಭೂಮಿ)ಪುಣ್ಯ ಸ್ತ್ರೀಯಂ
ಸಂಚಿತಪುಣ್ಯರ್
ಪಾಂಚಾಲದೇಶಮಂ
ಪುಗುತಂದರ್ (ಪುಗು-ಹೊಗು;
ಹೊಕ್ಕರು)
ಪದ್ಯ-೩೬:ಅರ್ಥ:ಪವಿತ್ರವಾ
ದ ನದಿ, ನದ- ಬೆಟ್ಟದಿಂದ

ಬೀಳುವ ನದಿ-ಜರಿ, ನಗರ,
(ಅರಣ್ಯ) ಸುಂದರ
ಅಲಂಕಾರವನ್ನು ಪಡೆದ
ಪುಣ್ಯಭೂಮಿಯೂ ಆದ ಆ
ಪ್ರದೇಶಗಳನ್ನು ಒಲಿದು
ನೋಡುತ್ತ ಪುಣ್ಯಶಾಲಿಗಳಾದ
ಪಾಂಡವರು ಪಾಂಚಾಲ
ದೇಶವನ್ನು ಹೊಕ್ಕರು.

ವ||ಅಂತು
ತದ್ವಿಷಯವಿಳಾಸಿನಿಗೆ ಪಿಡಿದ
ಕನಕಚ್ಛತ್ರದಂತೆ

ಸೊಗಯಿಸುವ ಛತ್ರವತೀಪುರದ ಪೊಱವೊೞಲನೆಯ್ತೆಪ್ಪಾಗಳ್-

ವಚನ:ಪದವಿಭಾಗ-ಅರ್ಥ:

ಅಂತು ತದ್ ವಿಷಯ (ಆ ದೇಶ) ವಿಳಾಸಿನಿಗೆ ಪಿಡಿದ (ಹಿಡಿದ) ಕನಕಚ್ಛತ್ರದಂತೆ (ಚಿನ್ನದ ಕೊಡೆಯಂತೆ) ಸೊಗಯಿಸುವ ಛತ್ರವತೀ ಪುರದ(ನಗರದ)

ಪೊಱವೊಟಿಲನು(ಹೊರಹೊ
ಳಲನು- ಹೊರಭಾಗವನ್ನು)
ಅಯ್ತರ್ಪಾಗಳ್ (ಐತರು
ಐತರ್ಪ ಆಗಳ್-
ಬಂದುಸೇರಿದಾಗ)-
ವಚನ:ಅರ್ಥ:ಆ ದೇಶವೆಂಬ
ಸ್ತ್ರೀಗೆ ಹಿಡಿದ ಚಿನ್ನದ
ಕೊಡೆಯಂತೆ
ಸೌಂದರ್ಯದಿಂದ ಕೂಡಿದ
ಛತ್ರಪತಿಪುರದ

ಹೊರವಲಯವನ್ನು ಬಂದು ಸೇರಿದಾಗ,

ಉ|| ಪಾಡುವ ತುಂಬಿ
ಕೋಡುವ ಪುೞಿಲ್
ನಡಪಾಡುವ ರಾಜಹಂಸೆ ಬಂ
ದಾಡುವ ತೊಂಡುವೆಣ್ಬುರುಳಿ
ತೀಡುವ ತೆಂಬೆರಲೊಲ್ದು
ನಲ್ಲರೊಳ್|
ಕೂಡುವ ನಲ್ಲರಾರೆರ್ದೆಗಮಾರ
ಮನಕ್ಕಮನಂಗರಾಗಮಂ

ಮಾಡೆ ಮನಕ್ಕೆ ಬಂದುವರಿಕೇಸರಿಗಲ್ಲಿಯ ನಂದನಾಳಿಗಳ್|| ೩೭ ||

ಪದ್ಯ-೩೭:ಪದವಿಭಾಗ-ಅರ್ಥ:ಪಾಡುವ ತುಂಬಿ, ಕೋಡುವ ಪುಟಿಲ್ (ತೋಪು), ನಡಪಾಡುವ ರಾಜಹಂಸೆ, ಬಂದು ಆಡುವ ತೊಂಡುವೆಣ್ಬುರುಳಿ (ಹೆಣ್ಣು ಬುರುಳಿ-ಗಿಳಿ) ತೀಡುವ ತೆಂಬೆರಲು (ತಂಗಾಳಿ) ಒಲ್ದು

ನಲ್ಲರೊಳ್ ಕೂಡುವ ನಲ್ಲರ್ ಆರ ಎರ್ದೆಗಂ ಆರ ಮನಕ್ಕಂ ಅನಂಗರಾಗಮಂ (ಪ್ರೇಮಭಾವವನ್ನು) ಮಾಡೆ ಮನಕ್ಕೆ ಬಂದುವು ಅರಿಕೇಸರಿಗೆ ಅಲ್ಲಿಯ ನಂದನ ಆಳಿಗಳ್ (ತೋಟದ ಸಾಲುಗಳು)|

ಪದ್ಯ-೩೭:ಅರ್ಥ:. ಅಲ್ಲಿ ಹಾಡುತ್ತಿರುವ ದುಂಬಿ, ತಂಪಾಗಿರುವ ತೋಪು,

ನಡೆದಾಡುತ್ತಿರುವ ರಾಜಹಂಸೆ,
ಬಂದು ಮಾತನಾಡುವ
ತುಂಟಹೆಣ್ಣು ಗಿಳಿ, ಬೀಸುವ
ತಂಗಾಳಿ, ಪ್ರೇಯಸಿಯರಲ್ಲಿ
ಕೂಡುವ ಪ್ರಿಯರು – ಇವು
ಯಾರ ಹೃದಯಕ್ಕೂ
ಯಾರದೇ ಮನಸ್ಸಿಗೂ
ಪ್ರೇಮಭಾವವನ್ನುಂಟುಮಾ
ಡುತ್ತಿರಲು ಅಲ್ಲಿಯ ತೋಟದ
ಸಾಲುಗಳು ಅರಿಕೇಸರಿಯ/

ಅರ್ಜುನನ ಮನಸ್ಸನ್ನ
ಆಕರ್ಷಿಸಿದುವು.

ವ|| ಅಂತು ನೋಡುತ್ತಂಬರೆವರೆ

ವಚನ:ಪದವಿಭಾಗ-

ಅರ್ಥ:ಅಂತು ನೋಡುತ್ತಂ ಬರೆವರೆ

ವಚನ:ಅರ್ಥ:ಅಂತು ನೋಡುತ್ತಾ ಬರುವಾಗ-

ಚಂ|| ಮದಗಜಬೃಂಹಿತಧ್ವನಿ ತುರಂಗಮಹೇಷಿತಘೋಷ

ಮಾದಮೊ

ರ್ಮೊದಲೆ

ಪಯೋಧಿಮಂಥನಮಹಾರವ

ಮಂ ಗೆಲೆ ತಳ್ತ ಬಣ್ಣಾವ|

ಣ್ಣದ ಗುಡಿ

ತೊಂಬೆಗೊಂಚಲೆಲೆಯಿಕ್ಕಿದ

ಕಾವಣಮೆಲ್ಲಿಯುಂ ಪೊದ

ಱೊದ್ದವಿರೆ ಕಣ್ಗೆ

ಕಂಡುವಖಿಳಾವನಿಪಾಳರ

ಬಿಟ್ಟ ಬೀಡುಗಳ್|| ೩೮||

ಪದ್ಯ-00:ಪದವಿಭಾಗ-ಅರ್ಥ:ಮದಗಜ ಬೃಂಹಿತ (ಘೀಳಿಡುವ) ಧ್ವನಿ, ತುರಂಗಮ ಹೇಷಿತ ಘೋಷಂ (ಕುದುರೆಗಳ ಕೆನೆತದ ಶಬ್ದ) ಆದಂ ಓರ್ಮೋದಲೆ (ಒಟ್ಟಿಗೆ) ಪಯೋಧಿ ಮಂಥನ ಮಹಾರವಮಂ (ಸಮುದ್ರಮಥನದ ಮಹಾ ಶಬ್ದ) ಗೆಲೆ (ಮೀರಿಸಲು) ತಳ್ತ (ಸೇರಿರುವ)ಬಣ್ಣವಣ್ಣದ ಗುಡಿ

(ಬಾವುಟ) ತೊಂಬೆ(ಕುಚ್ಚು)
ಗೊಂಚಲು ಎಲೆಯಿಕ್ಕಿದ
ಕಾವಣಂ (ಹಸಿರೆಲೆ ಚಪ್ಪರ)
ಎಲ್ಲಿಯುಂ ಪೊದಱ್ದು
ಒದವಿರೆ(ವ್ಯಾಪಿಸಿ ಇರಲು)
ಕಣ್ಗೆ ಕಂಡುವ ಅಖಿಳ
ಅವನಿಪಾಳರ
(ಅವನಿಪಾಲರು - ಎಲ್ಲಾ
ರಾಜರ) ಬಿಟ್ಟ
ಬೀಡುಗಳ್(ವಸತಿಗಳು)|

ಪದ್ಯ-00:ಅರ್ಥ:ದ್ರುಪದನ ಛತ್ರಪತಿಪುರದ ಹೊರವಲಯದಲ್ಲಿ, ಮದ್ದಾನೆಗಳ ಘೀಳಿಡುವ ಸದ್ದು, ಕುದುರೆಗಳ ಕೆನೆತದ ಸದ್ದು, ಅವು ಒಟ್ಟುಗೂಡಿ ಸಮುದ್ರಮಥನದ ದೊಡ್ಡ ಶಬ್ದವನ್ನು ಮೀರಿದ್ದಿತು. ಕುದುರೆಗಳ ಕೆನೆತದ ಶಬ್ದ ಕುಚ್ಚು, ಹೂಗೊಂಚಲು ಚಿಗುರುಗಳಿಂದ ಕೂಡಿದ

ಚಪ್ಪರಗಳು ಎಲ್ಲೆಲ್ಲಿಯೂ ವ್ಯಾಪಿಸಿ ಒಪ್ಪಿದ್ದವು. ಸಮಸ್ತ ರಾಜರು ಇಳಿದುಕೊಂಡಿದ್ದ ಬೀಡುಗಳು ಕಣ್ಣಿಗೆ ಕಂಡವು.

ವ|| ಅಂತು ನೋಡುತ್ತುಂ ಮೆಚ್ಚುತ್ತುಂ ಬರೆವರೆ-

ವಚನ:ಪದವಿಭಾಗ-

ಅರ್ಥ:ಅಂತು ನೋಡುತ್ತುಂ ಮೆಚ್ಚುತ್ತುಂ ಬರೆವರೆ-

ವಚನ:ಅರ್ಥ:ಹಾಗೆ ನೋಡುತ್ತಲೂ ಮೆಚ್ಚುತ್ತಲೂ

ಬರುತ್ತಿರಲು-

ಉ|| ಈ ತ್ರಿಜಗಂಗಳೊಳ್

ನೆಗೞ್ದ ಪೆಂಡಿರುಮಂ

ಗೆಲೆವಂದ ಪದ್ಮಿನೀ

ಪತ್ರವಿಚಿತ್ರನೇತ್ರೆಗೆ

ಸಯಂಬರದೊಳ್

ವರನಪ್ಪೆವಾದೊಡೀ|

ಧಾತ್ರಿಯನಾಳ್ವೆಮಾಮೆ

ವಲಮೆಂದು ತೆರಳ್ದ ಸಮಸ್ತ

ರಾಜಕ

ಚ್ಛತ್ರದಿನಂದು ಛತ್ರವತಿಯೆಂಬಭಿಧಾನಮನಾಳ್ದುದಾ ಪೊಱಲ್|| ೩೯||

ಪದ್ಯ-೩೯:ಪದವಿಭಾಗ-ಅರ್ಥ:ಈ ತ್ರಿಜಗಂಗಳೊಳ್ ನೆಗೞ್ದ ಪೆಂಡಿರುಮಂ ಗೆಲೆವಂದ (ಈ ಮೂರು ಲೋಕದ ಸುಪ್ರಸಿದ್ಧ ಹೆಂಗಸರನ್ನೂ ಅಂದದಲ್ಲಿ ಗೆದ್ದ) ಪದ್ಮಿನೀ ಪತ್ರವಿಚಿತ್ರ ನೇತ್ರೆಗೆ(ಕಮಲಪತ್ರದಂತೆ

ಸುಂದರ ಕಣ್ಣುಳ್ಳ ದ್ರೌಪದಿಗೆ)
ಸಯಂಬರದೊಳ್
ವರನಪ್ಪೆವಾದೊಡೆ
(ವರನಾಗುವುದಾದರೆ) ಈ
ಧಾತ್ರಿಯನು ಆಳ್ವೆಂ,
ಆಮೆವಲಂ(ನಾವೇಸರಿ)
(ನಾವು ನಿಶ್ಚಯವಾಗಿಯೂ ಈ
ಭೂಮಿಯನ್ನು ಆಳುವವರೇ
ಸರಿ)
ಎಂದುದು(ಎಂದುಕೊಂಡರು.)
ತೆರಳ್ದ (ಅಲ್ಲಿ ಸೇರಿದ) ಸಮಸ್ತ

ರಾಜಕಚ್ಛತ್ರದಿಂ(ಎಲ್ಲಾ ಬಿಳ್ಗೊಡೆಗಳಿಂದ) ಅಂದು ಛತ್ರವತಿಯೆಂಬ ಅಭಿಧಾನಮನು (ಹೆಸರನ್ನು) ಆಳ್ದುದು ಸಾರ್ಥಕವಾಗಿ ಧರಿಸಿತು) ಆ ಪೊಟಿಲ್ (ಆ ನಗರ)

ಪದ್ಯ-೩೯:ಅರ್ಥ:ಈ ಮೂರು ಲೋಕದ ಸುಪ್ರಸಿದ್ಧ ಹೆಂಗಸರನ್ನೂ ಅಂದದಲ್ಲಿ ಗೆದ್ದ, ಕಮಲಪತ್ರದಂತೆ

ಸುಂದರ ಕಣ್ಣುಳ್ಳ ದ್ರೌಪದಿಗೆ ಸ್ವಯಂವರದಲ್ಲಿ ವರನಾಗುವುದಾದರೆ ನಾವು ನಿಶ್ಚಯವಾಗಿಯೂ ಈ ಭೂಮಿಯನ್ನು ಆಳುವವರೇ ಸರಿ, ಎಂದುಕೊಂಡುದು (ರಾಜಸಮೂಹ). ಒಟ್ಟಾಗಿ ಅಲ್ಲಿ ಸೇರಿದ ಎಲ್ಲಾ ಬಿಲ್ಗೊಡೆಗಳಿಂದ ಅಂದು ಆ ನಗರ ಛತ್ರವತಿಯೆಂಬ

ಹೆಸರನ್ನು ಸಾರ್ಥಕವಾಗಿ
ಧರಿಸಿತು.

ವ|| ಅಂತು ಸೊಗಯಿಸುವ ಪೊಟಿಲಂ ಪೊಕ್ಕೆಲ್ಲಿಯುಂ ಬೀಡು ಬಿಡಿಲೆಡೆವಡೆಯದೊಂದು ಭಾರ್ಗವಪರ್ಣಶಾಲೆಯೊಳೆಡೆ ಮಾಡಿಕೊಂಡು ಬ್ರಹ್ಮಲೋಕಮಿರ್ಪಂತಿರ್ದ ಬ್ರಹ್ಮಸಭೆಯೊಳಗೆ ದೇವ

ಬ್ರಾಹ್ಮಣರಾಗಿರ್ದರನ್ನೆಗಂ ದ್ರುಪದನಿತ್ತಲ್-

ವಚನ:ಪದವಿಭಾಗ-ಅರ್ಥ:

ಅಂತು ಸೊಗಯಿಸುವ (ಸುಂದರ) ಪೊಟಲಂ (ನಗರವನ್ನು) ಪೊಕ್ಕು ಎಲ್ಲಿಯುಂ ಬೀಡು ಬಿಡಲು ಎಡೆವಡೆಯದೆ (ಸ್ಥಳ ಸಿಕ್ಕದೆ) ಒಂದು ಭಾರ್ಗವ ಪರ್ಣಶಾಲೆಯೊಳ್ ಎಡೆ ಮಾಡಿಕೊಂಡು (ಒಂದು

ಕುಂಬಾರನ ಗುಡಿಸಲಿನಲ್ಲಿ
ಸ್ಥಳಾವಕಾಶವನ್ನು
ಮಾಡಿಕೊಂಡು)
ಬ್ರಹ್ಮಲೋಕಂ ಇರ್ಪಂತಿರ್ದ
(ಹಾಗಿದ್ದ) ಬ್ರಹ್ಮಸಭೆಯೊಳಗೆ
ದೇವ ಬ್ರಾಹ್ಮಣರಾಗಿ ಇರ್ದರ್
(ಇದ್ದರು) ಅನ್ನೆಗಂ
ದ್ರುಪದನಿತ್ತಲ್ (ಆ
ಸಮಯದಲ್ಲಿ ದ್ರುಪದನು
ಇತ್ತ-)

ವಚನ:ಅರ್ಥ:ಆ ದಿನ ಆ ಸುಂದರ ನಗರವನ್ನು ಪ್ರವೇಶಿಸಿ ಎಲ್ಲಿಯೂ ಬೀಡುಬಿಡಲು ಸ್ಥಳ ಸಿಕ್ಕದೆ ಒಂದು ಕುಂಬಾರನ ಗುಡಿಸಲಿನಲ್ಲಿ ಸ್ಥಳಾವಕಾಶವನ್ನು ಮಾಡಿಕೊಂಡು ಬ್ರಹ್ಮಲೋಕದ ಹಾಗಿದ್ದ ಬ್ರಾಹ್ಮಣರ ಸಭೆಯಲ್ಲಿ ದೇವಬ್ರಾಹ್ಮಣರಂತೆ

ಇರುತ್ತಿದ್ದರು. ಆ ಸಮಯದಲ್ಲಿ ದ್ರುಪದನು ಇತ್ತ-

<u>ದ್ರೌಪದೀ ಸ್ವಯಂವರ</u>

ಚಂ|| ನೆರೆದ ಸಮಸ್ತ ರಾಜಕಮನಾದರದಿಂದಿದರ್ ಗೊಂಡನೇಕ ರ
ತ್ನ ರಚಿತಮಾಗೆ ಮಾಡಿಸಿ ಸಯಂಬರಸಾಲೆಯನೋಳಿ ಯಿಂ ನರೇ|

ಶ್ವರರ್ಗಿರಲೆಂದು

ಚೌಪಳಿಗೆಗಳ್ ಪಲವಂ

ಸಮೆದಲ್ಲಿ ರತ್ನದಿಂ

ಬೆರಸಿದ ಬಣ್ಣದೊಳ್ ಮೆರೆಯೆ

ಕಟ್ಟಿಸಿ ಪುಟ್ಟಿಸಿ

ರಂಗಭೂಮಿಯಂ|| ೪೦||

ಪದ್ಯ-೪೦:ಪದವಿಭಾಗ-

ಅರ್ಥ:(ದ್ರುಪದನು) ನೆರೆದ

ಸಮಸ್ತ ರಾಜಕಮಂ (ಸೇರಿದ

ಎಲ್ಲಾ ರಾಜರನ್ನೂ)

ಆದರದಿಂದ ಇದರ್ಗೊಂಡು,

ಅನೇಕ ರತ್ನ ರಚಿತಮಾಗೆ ಮಾಡಿಸಿ (ಅನೇಕ ರತ್ನ ರಚಿತವಾಗುವಂತೆ ಮಾಡಿಸಿ) ಸಯಂಬರಸಾಲೆಯನು ಓಳಿಯಿಂ (ಸ್ವಯಂವರಶಾಲೆಯ ಸಾಲುಗಳನ್ನು) ನರೇಶ್ವರರ್ಗೆ(ರಾಜರಿಗೆ) ಇರಲೆಂದು ಚೌಪಳಿಗೆಗಳ್ ಪಲವಂ ಸಮೆದು (ಅನೇಕ ತೊಟ್ಟಿಗಳನ್ನು ಮಾಡಿಸಿ) ಅಲ್ಲಿ

ರತ್ನದಿಂಬೆರಸಿದ ಬಣ್ಣದೊಳ್ (ಅಲ್ಲಿ ರತ್ನದಿಂದ/ ಕೂಡಿದ ಕೆಂಪು ಬಣ್ಣದಲ್ಲಿ) ಮೆರೆಯೆ(ಶೋಭಿಸಲು) ಕಟ್ಟಿಸಿ ಪುಟ್ಟಿಸಿ ರಂಗಭೂಮಿಯಂ(ರಂಗಭೂಮಿಯನ್ನು ಗಟ್ಟಿಸಿ)

ಪದ್ಯ-೪೦:ಅರ್ಥ:ದ್ರುಪದನು ಸೇರಿದ ಎಲ್ಲಾ ರಾಜರನ್ನೂ ಆದರದಿಂದ ಬರಮಾಡಿಕೊಂಡು, ಅನೇಕ ರತ್ನ ರಚಿತವಾಗುವಂತೆ

ಮಾಡಿಸಿ, ಸ್ವಯಂವರಶಾಲೆಯ ಸಾಲುಗಳನ್ನು ರಾಜರಿಗೆ ಇರಲೆಂದು ಅನೇಕ ತೊಟ್ಟಿಗಳನ್ನು ಮಾಡಿಸಿ, ಅಲ್ಲಿ ರತ್ನದಿಂದ/ ಕೂಡಿದ ಕೆಂಪು ಬಣ್ಣದಲ್ಲಿ ಶೋಭಿಸಲು ರಂಗಭೂಮಿಯನ್ನು ಕಟ್ಟಿಸಿ ಗಟ್ಟಿಸಿ- ಗಟ್ಟಿ ನೆಲ ಮಾಡಿಸಿದನು.

ವ|| ಆ ನೆಲೆಯ ಚೌಪಳಿಗೆಗಳೊಳನೇಕ

ಪ್ರಾಸಾದದ ಮೇಲೆ ಚಿತ್ರದ
ಪಱವಿಗೆಗಳಂ ತುಱುಗಲುಂ
ಬಂಬಲ್ಗಳುಮಾಗೆ ಕಟ್ಟಿಸಿ
ಪಚ್ಚೆಯ ಹಾರದ
ತೋರಣಂಗಳಂ ದುಗುಲದ
ಗುಡಿಗಳಂ ಕಟ್ಟಿಸಿ
ಕಂಭಂಗಳೊಳೆಲ್ಲಂ
ಸುಯ್ಯಾಣದ ಚಿನ್ನದ ಪಱಿಯ
ಸಕಳವಟ್ಟೆಗಳಂ ಸುತ್ತಿಸಿ
ಮುತ್ತಿನ
ಮಂಡವಿಗೆಗಳನೆಡೆಯಱದತ್ತಿ

ಸಿ ಪೊನ್ನ ಮಾಂಗಾಯ ಗೊಂಚಲ್ಗಳುಮಂ ಮುತ್ತಿನ ಬುಂಭುಕಂಗಳುಮನೆಱಲೆ ಕಟ್ಟಿಸಿ ಮತ್ತಮಾ ಪ್ರಾಸಾದಂಗಳ ಚೌಪಳಿಗಳ ಪೊನ್ನ ಪೊಂಗಱಗೆ ನೀಳ್ಪುಂ ಬೆಳ್ಪುಮಂ ತಾಳ್ದಿ ಕರ್ಪಿನೊಳುಪಾಶ್ರಯಂಬಡೆದು-

ವಚನ:ಪದವಿಭಾಗ-ಅರ್ಥ:

ಆ ನೆಲೆಯ ಚೌಪಳಿಗೆಗಳೊಳು

ಅನೇಕ ಪ್ರಾಸಾದದ ಮೇಲೆ (ಆ ನೆಲೆ/ಸ್ಥಿರವಾದ ತೊಟ್ಟಿಯ ಮನೆಗಳ ಉಪ್ಪರಿಗೆಗಳ ಮೇಲೆ) ಚಿತ್ರದ ಪಟಿವಿಗೆಗಳಂ (ಬಾವುಟ) ತುಱುಗಲುಂ ಬಂಬಲ್ಗಳುಂ ಆಗೆ (ಬಾವುಟಗಳೂ ಗುಂಪುಗುಂಪಾಗಿರುವಂತೆ) ಕಟ್ಟಿಸಿ ಪಚ್ಚೆಯ ಹಾರದ ತೋರಣಂಗಳಂ ದುಗುಲದ ಗುಡಿಗಳಂ (ರೇಷ್ಮೆಯ

ಧ್ವಜಗಳೂ) ಕಟ್ಟಿಸಿ
ಕಂಭಂಗಳೊಳೆಲ್ಲಂ
ಸುಯ್ಯಾಣದ ಚಿನ್ನದ
ಪಟಿಯ ಸಕಳವಟ್ಟೆಗಳಂ
(ಸುತ್ತಿದ್ದ ಕಸೂತಿಯ
ಚಿತ್ರಕಾರ್ಯ ಮಾಡಿರುವ
ಜರತಾರಿವಸ್ತ್ರಗಳೂ ಚಿತ್ರದಿಂದ
ಕೂಡಿದ ಬಟ್ಟೆಗಳೂ) ಸುತ್ತಿಸಿ
ಮುತ್ತಿನ
ಮಂಡವಿಗೆಗಳನು(ಮಂಟಪಗ
ಳನ್ನೂ) ಎಡೆಯಱಿದು ಅತ್ತಿಸಿ

(ಜಾಗನೋಡಿ ಇಟ್ಟು) ಪೊನ್ನ ಮಾಂಗಾಯ ಗೊಂಚಲ್ಗಳುಮಂ (ಚಿನ್ನದ ಮಾವಿನ ಕಾಯಿನ ಗೊಂಚಲೂ) ಮುತ್ತಿನ ಬುಂಭುಕಂಗಳುಂ (ಮುತ್ತಿನ ಕುಚ್ಚುಗಳನ್ನೂ,) ಅಲಿಲೆ (ಜೋಲುವಂತೆ) ಕಟ್ಟಿಸಿ ಮತ್ತಂ ಆ ಪ್ರಾಸಾದಂಗಳ ಚೌಪಳಿಗಳ ಪೊನ್ನ ಪೊಂಗಱಿಗೆ ನೀಳ್ಪುಂ ಬೆಳ್ಪುಮಂ ತಾಳ್ದಿ

ಕರ್ಪಿನೊಳುಪಾಶ್ರಯಂಬಡೆ
ದು-
ವಚನ:ಅರ್ಥ:ಆ ಸ್ಥಿರವಾದ
ತೊಟ್ಟಿಯ ಮನೆಗಳ
ಉಪ್ಪರಿಗೆಗಳ ಮೇಲೆ. ಅನೇಕ
ಚತಿತ್ರವಾದ ಬಾವುಟಗಳೂ
ಗುಂಪುಗುಂಪಾಗಿ ಕಟ್ಟಿಸಿದ
ಹಸಿರುಹಾರದಿಂದ ಕೂಡಿದ
ತೋರಣಗಳೂ ರೇಷ್ಮೆಯ
ಧ್ವಜಗಳೂ ಕಂಬಕ್ಕೆ ಕಟ್ಟಿಸಿ,
ಸುತ್ತಿದ್ದ ಕಸೂತಿಯ

ಚಿತ್ರಕಾರ್ಯ ಮಾಡಿರುವ
ಜರತಾರಿವಸ್ತ್ರಗಳೂ ಚಿತ್ರದಿಂದ
ಕೂಡಿದ ಬಟ್ಟೆಗಳೂ
ಸೂಕ್ತಸ್ಥಾನಗಳಲ್ಲಿ ನಿರ್ಮಿಸಿದ
ಮಂಟಪಗಳಲ್ಲಿ
ಜೋಲಾಡುವಂತೆ ಕಟ್ಟಿಸಿದ್ದ
ಚಿನ್ನದ ಮಾವಿನ ಕಾಯಿನ
ಗೊಂಚಲನ್ನೂ, ಮುತ್ತಿನ
ಕುಚ್ಚುಗಳನ್ನೂ ಜೋಲುವಂತೆ
ಕಟ್ಟಿಸಿ, ಮತ್ತೆ ಆ
ಪ್ರಾಸಾದಂಗಳ ಚೌಪಳಿಗಳ

ಪೊನ್ನ ಪೊಂಗರಿಗೆಯನಗನು ಉದ್ದನೆಯದಾಗಿ ಇಟ್ಟು, ಬಿಳಿಬಣ್ಣವನ್ನು ತಳೆದು/ಹಚ್ಚಿ ಕಪ್ಪು ಬಣ್ಣದ ಉಪಾಶ್ರಯ/ ಹಿನ್ನಲೆ ಇಟ್ಟು ವಿವಿಧ ಬಣ್ಣಗಳನ್ನುಂಟುಮಾಡಿ ಸುವರ್ಣಚ್ಛಾಯೆಯನ್ನು/ ಬಂಗಾರದ ಬಣ್ಣವನ್ನು ಅಳವಡಿಸಿದುವು.

ಕಂ|| ತುಱುಗಿದ ಪೂಗೊಂಚಲ ಕಾ

ಯ್ತೞಗಿದ ಮಾವುಗಳ ಬೆಳೆದ ಕೌಂಗಿನ ಗೊನೆ ತ|
ಳ್ತೆಱಗಿರೆ ಮಾಡದೊಳಲ್ಲಿಯೆ ತಿಱಿದುಕೊಳಲ್ಕಿಂಬಿನೆಸಕಮೆಸೆದುದುಪವನಂ|| ೪೧||41|

ಪದ್ಯ-೪೧:ಪದವಿಭಾಗ-ಅರ್ಥ: ತುಱುಗಿದ ಪೂಗೊಂಚಲ (ಒತ್ತಾಗಿ ಸೇರಿರುವ ಹೂಗೊಂಚಲೂ) ಕಾಯ್ತೞಗಿದ ಮಾವುಗಳ ಬೆಳೆದ ಕೌಂಗಿನ ಗೊನೆ

(ಕಾಯಿಗಳ ಭಾರದಿಂದ
ಬಗ್ಗಿರುವ ಮಾವುಗಳೂ
ಪುಷ್ಟವಾಗಿ ಬೆಳೆದ ಅಡಿಕೆಯ
ಗೊನೆಗಳೂ) ತಳ್ತೆಱಗಿರೆ
ಮಾಡದೊಳಲ್ಲಿಯೆ
ತಿಱಿದುಕೊಳಲ್ಕೆ (ಅಲ್ಲಿಯೇ
ಅವುಗಳನ್ನು
ಕೊಯ್ದುಕೊಳ್ಳಲು)
ಇಂಬಿನೆಸಂ ಎಸೆದುದು
ಉಪವನಂ
(ಅನುಕೂಲವಾಗಿರುವ

ರೀತಿಯಲ್ಲಿ ಆ ಉಪವನವು ಪ್ರಕಾಶಮಾನವಾಗಿದ್ದಿತು)

ಪದ್ಯ-೪೧:ಅರ್ಥ:ಒತ್ತಾಗಿ ಸೇರಿರುವ ಹೂಗೊಂಚಲೂ ಕಾಯಿಗಳ ಭಾರದಿಂದ ಬಗ್ಗಿರುವ ಮಾವುಗಳೂ ಪುಷ್ಟವಾಗಿ ಬೆಳೆದ ಅಡಿಕೆಯ ಗೊನೆಗಳೂ ಗುಂಪಾಗಿ ಕೂಡಿ ಆ ಉಪ್ಪರಿಗೆಯಲ್ಲಿಯೇ ಸೇರಿ ಬಾಗಿರಲು ಅಲ್ಲಿಯೇ ಅವುಗಳನ್ನು

ಕೊಯ್ದುಕೊಳ್ಳಲು
ಅನುಕೂಲವಾಗಿರುವ
ರೀತಿಯಲ್ಲಿ ಆ ಉಪವನವು
ಪ್ರಕಾಶಮಾನವಾಗಿದ್ದಿತು.

ಕಂ||ನಾಳೆ ಸಯಂಬರಮೆನೆ
ಪಾಂ
ಚಾಳಮಹೀಪಾಳನಖಿಳ
ಭೂಭೃನ್ನಿಕರ|
ಕ್ಕೋಳಿಯೆ ಸಾಱಿದೊಡವನೀ
ಪಾಲರ್ ಕೆಯ್ಗೆಯ್ಯಲೆಂದು
ಪೞಿವೞಿಯಾದರ್|| ೪೨||

ಪದ್ಯ-೪೨:ಪದವಿಭಾಗ-ಅರ್ಥ:ನಾಳೆ ಸಯಂಬರಂ ಎನೆ (ನಾಳೆ ಸ್ವಯಂವರವೆಂದು) ಪಾಂಚಾಳಮಹೀಪಾಳನು (ಪಾಂಚಾಲರಾಜನಾದ ದ್ರುಪದನು) ಅಖಿಳ (ಎಲ್ಲಾ) ಭೂಭೃನ್ನಿಕರಕ್ಕೆ (ರಾಜರ ಸಮೂಹಕ್ಕೆ) ಓಳಿಯೆ (ಸಾಲಾಗಿ) ಸಾಱಿದೊಡೆ (ಸಾರಿದಾಗ), ಅವನೀಪಾಲರ್

(ರಾಜರು) ಕೆಯ್ಗೆಯ್ಯಲೆಂದು
(ಕಯ್ ಗೈಯಲು ಎಂದು-
ತಮ್ಮ ಶಕ್ತಿ ತೋರಲು)
ಪಱಿವಱಿಯಾದರ್(ಸಡಗರ
ದಿಂದ ಕೂಡಿದರು /
ಉತ್ಸಾಹಗೊಂಡರು)
ಪದ್ಯ-೪೨:ಅರ್ಥ:ಆಗ
ಪಾಂಚಾಲರಾಜನಾದ
ದ್ರುಪದನು ಸಮಸ್ತ
ರಾಜಸಮೂಹಕ್ಕೆ ಕ್ರಮವಾಗಿ
ನಾಳೆಯ ದಿನ

ಸ್ವಯಂವರವೆಂದು ಡಂಗುರ ಹೊಡೆಯಿಸಿದನು. ರಾಜರು ತಮ್ಮ ತಮ್ಮ ಶಕ್ತಿಪ್ರದರ್ಶನ ಮಾಡಲು ವಿಶೇಷ ಉತ್ಸಾಹಗೊಂಡರು

ವ|| ಆಗಿ ಮಱುದಿವಸಂ ನೇಸಱು ಮೂಡೆ-

ವಚನ:ಪದವಿಭಾಗ-

ಅರ್ಥ:ಆಗಿ ಮಱುದಿವಸಂ (ಮರುದಿವಸ) ನೇಸಱು

(ಸೂರ್ಯ ಮೂಡಲು)

ಮೂಡೆ-

ವಚನ:ಅರ್ಥ:ಮಾರನೆಯ

ದಿನ

ಸೂರ್ಯೋದಯವಾಗಲು-.

ಕಂ|| ತಂತಮ್ಮ ರಾಜ್ಯ ಚಿಹ್ನಂ
ತಂತಮ್ಮ ಮಹಾ ವಿಭೂತಿ
ತಂತಮ್ಮ ಬಲಂ|
ತಂತಮ್ಮೆಸೆವ ವಿಳಾಸಂ
ತಂತಮ್ಮಿರ್ಪೆಡೆಯೊಳೀಳಿಯಿಂ
ಕುಳ್ಳಿರ್ದರ್|| ೪೩||

ಪದ್ಯ-೪೩:ಪದವಿಭಾಗ-ಅರ್ಥ:ತಂತಮ್ಮ ರಾಜ್ಯ ಚಿಹ್ನಂ, ತಂತಮ್ಮ ಮಹಾ ವಿಭೂತಿ (ಐಶ್ವರ್ಯ), ತಂತಮ್ಮ ಬಲಂ (ಶಕ್ತಿ) ತಂತಮ್ಮ ಎಸೆವ ವಿಳಾಸಂ (ಶೋಭಿಸುವ ಚಿಹ್ನೆ) ತಂತಮ್ಮ ಇರ್ಪ ಎಡೆಯೊಳು(ತಾವಿದ್ದ ಸ್ಥಳಗಳಲ್ಲಿ) ಈಳಿಯಿಂ (ಸಾಲಾಗಿ) ಕುಳ್ಳಿರ್ದರ್

ಪದ್ಯ-೪೩:ಅರ್ಥ:ರಾಜರು ತಮ್ಮ ತಮ್ಮ ರಾಜ್ಯಚಿಹ್ನೆ ವೈಭವ ಸೈನ್ಯ ವಿಳಾಸ/ ಚಿಹ್ನೆಗಳಿಂದ ಕೂಡಿ ತಾವಿದ್ದ ಸ್ಥಳಗಳಲ್ಲಿ ಸಾಲಾಗಿ ಕುಳಿತರು.

ವ|| ಆಗಳ್ ದ್ರುಪದಂ ತನ್ನ ಪುರಕ್ಕಮಂತಪುರಕ್ಕಂ ಪರಿವಾರಕ್ಕಂ-

ವಚನ:ಪದವಿಭಾಗ-

ಅರ್ಥ:ಆಗಳ್ ದ್ರುಪದಂ ತನ್ನ

ಪುರಕ್ಕಂ ಅಂತಪುರಕ್ಕಂ ಪರಿವಾರಕ್ಕಂ (ಇವರಿಗೆಲ್ಲಾ) **ವಚನ:ಅರ್ಥ:**ಆಗ ದ್ರುಪದನು ತನ್ನ ಪಟ್ಟಣಕ್ಕೂ ರಾಣಿವಾಸಕ್ಕೂ ಪರಿವಾರಕ್ಕೂ

-

ಕಂ|| ಸಾಸಿರ ಪೊಂಗೆಯ್ದುಂ ಚಿ
ಕಾಸಟಮೆಂದೊಂದು
ಲಕ್ಕಗೆಯ್ದುದಿದರ್ಕಂ||
ಮಾಸರಮುಡಲೆಂದಧಿಕ
ಅಧಿಕ

೩ಾಸದಿನುಡಲಿಕ್ಕಿ ನೆರೆಯೆ ಬಿಯಮಂ ಮೆರೆದಂ|| ೪೪||

ಪದ್ಯ-೪೪:ಪದವಿಭಾಗ-ಅರ್ಥ:ಸಾಸಿರ ಪೊಂಗೆಯ್ದುಂ (ಪೊನ್ನು ಗೆಯಿದಂ-ಕೊಟ್ಟರೂ-) ಚಿಕಾಸಟಮ್(ಸಾಮಾನ್ಯ) ಎಂದು ಅಲ್ಲ, ಒಂದು ಲಕ್ಕಗೆಯ್ವುದೆ ಇದರ್ಕಂ (ಇದು ಲಕ್ಷ ಬೆಲೆಯುಳ್ಳದ್ದು) ಮಾಸರಂ (ಚಂದವಾಗಿ)

ಉಡಲು ಎಂದು ಅಧಿಕ ವಿಳಾಸದಿಂ ಉಡಲೆಂದು ಇಕ್ಕಿ (ಸಂತೋಷದಿಂದ ಉಡಲೂ ಕೊಟ್ಟು) ನೆರೆಯೆ (ಬಹಳ/ ಪೂರ್ಣ) ಬಿಯಮಂ ವೆಚ್ಚಮಾಡಿ ಮೆರೆದಂ(ಪ್ರಕಾಶಿಸಿದನು)

ಪದ್ಯ-೪೪:ಅರ್ಥ:. ಸಹಸ್ರಹೊನ್ನನ್ನು ಕೊಟ್ಟರೂ ಇದು ಲಭ್ಯವಾಗುವುದಿಲ್ಲ. ಹತ್ತಿಯ ಬಟ್ಟೆಯಾದರೂ ಇದು

ಲಕ್ಷ ಬೆಲೆಯುಳ್ಳದ್ದು ಎಂಬ ವಸ್ತ್ರಗಳನ್ನು ಮಧುರವಾಗಿ ಧರಿಸಲೂ ಸಂತೋಷದಿಂದ ಉಡಲೂ ಕೊಟ್ಟು ವಿಶೇಷವಾಗಿ ತನ್ನ ಔದಾರ್ಯವನ್ನು ಪ್ರಕಾಶಿಸಿದನು.

ವ|| ಅಂತು ಮೆದು ಕೂಸಂ ನೆಯೆ ಕೆಯ್ಗೆಯ್ಸಿಮೆಂದು ಮುನ್ನಂ ಕೆಯ್ಗೆಯ್ಸುತಿರ್ದ ತಱದ

ಕುಮಾರವ್ಯಾಸ ನಲವತ್ತು ಪದ್ಯಗಳಲ್ಲಿ ದ್ರೌಪದಿಯ ಸೌಂದರ್ಯ ವರ್ಣನೆ ಮಾಡಿದ್ದಾನೆ.

«»

ಪರಿಮಳದ ಪರಮಾಣುಗಳ ಸಂ
ವರಿಸಿ ಮುಕ್ತಾಫಲದ ಕೆಂದಾ
ವರೆಯ ಮರಿದುಂಬಿಗಳ ವರ್ಣಾಂತರವನಳವಡಿಸಿ|
ಸರಸ ವೀಣಾಧ್ವನಿಯ ಹಂಸೆಯ
ಗರುವ ಗತಿಗಳನಾಯ್ದು ಮನ್ಮಥ
ವರ ವಿರಂಚಿಯೆ ಸೃಜಿಸಿದನು ಪಾಂಚಾಲ ನಂದನೆಯ.||(೧-೧೩-೧೭)

ಚೆಲುವಿಕೆಯ ಚೈತನ್ಯವೋ ಪರಿ
ಮಳದ ಪುತ್ಥಲಿಯೋ ಲತಾಂಗಿಯ
ಸುಳಿವೋ ಲಾವಣ್ಯೈಕರಸಸಾಕಾರ ವಿಭ್ರಮವೊ||
ಲಲಿತ ಶೃಂಗಾರಾಬ್ಧಿ ಮಥನೋ
ಚ್ಚಲಿತ ಸುಧೆಯೋ ಸಾಧಕರಿಗಿದು
ಫಲಿಸಿದರೆ ಕೃತಕೃತ್ಯರೆಂದುದು ಸುರಸ್ತೋಮ||(೧-೧೩-೪೭)

ಈಕೆಯಂದುದಿಸಿದರೆ ಮದನಂ
ಗೇಕೆ ದೇಹತ್ಯಾಗವಹುದು ಪಿ
ನಾಕಿ ತಾವೈರಾಗ್ಯದಲಿ ಹೊಗುವನೆ ತಪೋವನವ||
ಸಾಕು ಗೌತಮ ಮನಿಯ ಮುಳಿಸಿನ
ಕಾಕುನುಡಿ ಫಲಿಸುವುದೆಯೆನುತಾ
ನಾಕಪತಿ ರಂಭಾದಿ ಸತಿಯರ ನೋಡಿದನು ನಗುತ||()೧-೧೩-೪೮)

(ಅರ್ಥ:ಅಂದು ದ್ರೌಪದಿ ಹುಟ್ಟಿದ್ದರೆ-

'ಶಿವ ಇವಳನ್ನು ನೋಡಿದ್ದರೆ ತಪಸ್ಸು ಬಿಡುತ್ತಿದ್ದ;
ಮನ್ಮಥನು ಬಾಣಹೊಡೆಯುವುದು ತಪ್ಪಿ
ಅವನು ಭಸ್ಮವಾಗಿ ದೇಹತ್ಯಾಗ ತಪ್ಪುತ್ತಿತ್ತು.
ಇಂದ್ರನು ತಾನು ಅಹಲ್ಯೆಯ ತಂಟೆಗೆ
ಹೋಗದೆ ಗೌತಮನ ಶಾಪ ತಪ್ಪುತ್ತಿತ್ತು
ತನಗೆ ಈ ದ್ರೌಪದಿಯೇ ಸಾಕಾಗಿತ್ತು' ಎಂದ ಇಂದ್ರ.)

ಗುಱುಗೆಯರಪ್ಪಂತಪುರ ಪುರಂಧ್ರಿಯರಂ ಕರೆದು ಪೇೞ್ವುದುಮಂತೆಗೆಯ್ವೆಮೆಂದು -

ವಚನ:ಪದವಿಭಾಗ-ಅರ್ಥ:ಅಂತು ಮೆದು ಕೂಸಂ (ಮದುಮಗಳನ್ನು) ನೆಯೆ (ಪೂರ್ಣ) ಕೆಯ್ಗೆಯ್ಸಿಮೆಂದು

(ಅಲಂಕರಿಸಿ ಎಂದು) ಮುನ್ನಂ ಕೆಯ್ಗೆಯ್ಯುತಿರ್ದ (ಹಿಂದೆ ಅಲಂಕರಿಸುತ್ತಿದ್ದ) ತೆಱದ (ರೀತಿಯ) ಗುಱುಗೆಯರಪ್ಪ ಅಂತಪುರ (ಅಂತಃಪುರ ಗರತಿಯರ) ಪುರಂಧ್ರಿಯರಂ ಕರೆದು ಪೇೞ್ವುದುಂ ಅಂತೆ ಗೆಯ್ವೆಮೆಂದು-

ವಚನ:ಅರ್ಥ:ಹಾಗೆಯೇ ಕನ್ಯೆಯನ್ನು ಪೂರ್ಣವಾಗಿ ಅಲಂಕರಿಸಿ ಎಂದು

ಹೇಳಿದನು. ಹಾಗೆ ಹೇಳುವುದಕ್ಕೆ ಮುಂಚೆಯೇ (ತಾವಾಗಿಯೇ) ಅಲಂಕರಿಸುತ್ತಿದ್ದ ಶಕ್ತರೂ ಅನುಭವಶಾಲಿಗಳೂ ಆದ ರಾಣಿ ವಾಸದ ಸ್ತ್ರೀಯರು ಹಾಗೆಯೇ ಮಾಡುತ್ತೇವೆಂದರು.

ಕಂ|| ಈ ಪೊೞ್ತಿಂಗೀ ರುತುವಿಂ
ಗೀ ಪಸದನಮಿಂತುಟಪ್ಪ
ಮೆಯ್ವಣ್ಣಕ್ಕಿಂ|

ತೀ ಪೂವಿನೊಳೀ ತುಡುಗೆಯೊ ಳೀ ಪುಟ್ಟಿಗೆಯೊಳ್ ಬೆಡಂಗುವಡೆದೆಸೆದಿರ್ಕುಂ|| ೪೫||

ಪದ್ಯ-೪೫:ಪದವಿಭಾಗ-ಅರ್ಥ:ಈ ಪೊಲಿಂಗೆ ಈ ರುತುವಿಂಗೆ ಈ ಪಸದನಂ ಇಂತುಟಪ್ಪ ಮೆಯ್ವಣ್ಣಕ್ಕೆ ಇಂತು ಈ ಪೂವಿನೊಳು ಈ ತುಡುಗೆಯೊಳು ಈ ಪುಟ್ಟಿಗೆಯೊಳ್ (ಸೀರೆಯಲ್ಲಿ)

ಬೆಡಂಗುವಡೆದು ಎಸೆದು ಇರ್ಕುಂ(ಚೆಲುವನ್ನು ಪಡೆದು ಪ್ರಕಾಶಿಸುತ್ತದೆ)

ಪದ್ಯ-೪೫:ಅರ್ಥ:ಈ ಹೊತ್ತಿಗೆ ಈಬಗೆಯ ಅಲಂಕಾರ, ಅದೇ ರೀತಿ- ಈ ಋತುವಿಗೆ ಇಂತಹ ಅಲಂಕಾರ; ಇಂತಹ ಮೈಬಣ್ಣಕ್ಕೆ ಇಂತಹ ಹೂವು ಈ ಆಭರಣ ಈ ಸೀರೆ ಉಚಿತವಾಗಿ ಚೆಲುವನ್ನು

ಪಡೆದು ಪ್ರಕಾಶಿಸುತ್ತದೆ ಎಂದು ಅಲಂಕರಿಸಿದರು.

ವ|| ಎಂದು ನೆರೆಯ ಪಸದನಂಗೊಳಿಸಿ-

ವಚನ:ಪದವಿಭಾಗ-

ಅರ್ಥ:ಎಂದು ನೆರೆಯ ಪಸದನಂಗೊಳಿಸಿ-

ವಚನ:ಅರ್ಥ: ಎಂದು ನಿಷ್ಕರ್ಷಿಸಿ ಪೂರ್ಣವಾಗಿ ಅಲಂಕಾರ

ಮಾಡಿದರು.ಅಲಂಕಾರಗೊಳಿ
ಸಿ -

ಚಂ|| ತುಡಿಸದೆ ಹಾರಮಂ
ಮೊಲೆಯ ಬಿಣ್ಪಿನೊಳಂ ನಡು
ಬಳ್ಕಿದಪ್ಪುದೀ
ನಡುಗುವುಲ್ಲವೇ ತೊಡೆ
ನಿತಂಬದ ಬಿಣ್ಪಿನೊಳೇವುದಕ್ಕ
ಪೋ|
ಬಿಡು ಕಟಿಸೂತ್ರಮಂ
ತೊಡೆಯ ಬಿಣ್ಪು
ಪದಾಂಬುರುಹಕ್ಕೆ ತಿಣ್ಣಮೆಂ

ತುಡಿಸುವುದಕ್ಕ

ನೂಪುರಮನೀ

ತೊಡವೇವುದೊ ರೂಪೆ

ಸಾಲದೆ|| ೪೬||

ಪದ್ಯ-೪೬:ಪದವಿಭಾಗ-ಅರ್ಥ:ತುಡಿಸದೆ ಹಾರಮಂ ಮೊಲೆಯ ಬಿಣ್ಪಿನೊಳಂ (ಭಾರದಿಂದ) ನಡು ಬಳ್ಕಿದಪ್ಪುದು ಈ ನಡುಗುವುಲ್ಲವೇ, ತೊಡೆ ನಿತಂಬದ ಬಿಣ್ಪಿನೊಳು

ಭಾರದಲ್ಲಿ (ನಡುಗುವುದು)
ಏವುದು(ಯಾವುದು) ಅಕ್ಕ
ಪೋ, ಬಿಡು ಕಟಿಸೂತ್ರಮಂ
(ಸೊಂಟದ ಉಡ್ಯಾಣವನ್ನು
ಬಿಡು/ಬೇಡ ಹೋಗಲಿ),
ತೊಡೆಯ ಬಿಣ್ಪು (ಭಾರ)
ಪದಾಂಬುರುಹಕ್ಕೆ ತಿಣ್ಣಂ
(ಪಾದಕ್ಕೆ ಭಾರವು)ಎಂತು
ಉಡಿಸುವುದು ಅಕ್ಕ
ನೂಪುರಮನು ಈ ತೊಡವು

ಏವುದೊ (ಈವ್ರೊಡವೆಗಳು ಏಕೋ!) ರೂಪೆ ಸಾಲದೆ

ಪದ್ಯ-೪೬:ಅರ್ಥ:ಹಾರವನ್ನು ತೊಡಿಸದಿದ್ದರೂ ಮೊಲೆಯ ಭಾರದಿಂದಲೇ ಸೊಂಟವು ಬಳುಕುತ್ತದೆ. ಪಿರ್ರೆ (ಪೃಷ್ಠಭಾಗ)ಯ ಭಾರದಿಂದಲೇ ತೊಡೆ ನಡುಗುವುದಲ್ಲವೇ? (ಆದುದರಿಂದ) ಒಡ್ಯಾಣದ ಭಾರ ಬೇರೆಯೇತಕ್ಕೆ? ಅದನ್ನು

ತೊಡದೆ ಬಿಡು. ತೊಡೆಯ ಭಾರವೇ ಪಾದಕಮಲಗಳಿಗೆ ಭಾರವಾಗಿದೆ (ಹೀಗಿರುವಾಗ) ಕಾಲಂದಿಗೆಯನ್ನೇಕೆ ತೊಡಿಸುವುದು. ಈಕೆಗೆ ಆಭರಣಗಳೇತಕ್ಕೆ ರೂಪೇ ಸಾಲದೆ?

ವ||

ಎಂದೆಂದೋರೊರ್ವರಾಕೆಯ ರೂಪಂ ವಕ್ರೋಕ್ತಿಯೊಳೆ ಪೊಗೞ್ದು ಮಂಗಳವಸದನ

ಮಿಕ್ಕಿಯುಂ ಪೊಸ ಮದವಳಿಗೆಯಪ್ಪುದಱಿಂ ತುಡಿಸಲೆವೇೞ್ಕುಮೆಂದು ನೆರೆಯೆ ಪಸದನಂಗೊಳಿಸಿ

ವಚನ:ಪದವಿಭಾಗ-

ಅರ್ಥ:ಎಂದು ಎಂದು ಓರ್ವರು ಓರ್ವರುಂ ಆಕೆಯ ರೂಪಂ ವಕ್ರೋಕ್ತಿಯೊಳೆ ಪೊಗೞ್ದು (ಹೊಗಳಿ) ಮಂಗಳವಸದನಮಿಕ್ಕಿಯುಂ ಪೊಸ

ಮದವಳಿಗೆಯಪ್ಪುದಱಿಂ
(ಮದುವಣಗಿತ್ತಿಯಾದುದರಿಂ
ದ) ತುಡಿಸಲೆವೇೞ್ಕುಂ
(ತೊಡಿಸಲೇ ಬೇಕು) ಎಂದು
ನೆರೆಯೆ (ಬಹಳ)
ಪಸದನಂಗೊಳಿಸಿ
(ಅಲಂಕಾರಮಾಡಿ-)
ವಚನ:ಅರ್ಥ:ಎಂದು
ಒಬ್ಬೊಬ್ಬರೂ ಆಕೆಯ
ಸೌಂದರ್ಯವನ್ನು ಹೊಗಳಿ
ಮಂಗಳಾಲಂಕಾರಮಾಡಿದರು.

ಹೊಸ
ಮದುವಣಗಿತ್ತಿಯಾದುದರಿಂ
ದ ಆಭರಣವನ್ನೂ ತೊಡಿಸಲೇ
ಬೇಕೆಂದು ಪೂರ್ಣವಾಗಿ
ಅಲಂಕಾರಮಾಡಿದರು-
ಅಲಂಕಾರಮಾಡಿ-

ಕಂ|| ಮಸೆದುದು ಮದನನ
ಬಾಳ್ ಕೂ
ರ್ಮಸೆಯಿಟ್ಟುದು ಕಾಮನಂಬು
ಬಾಯ್ಗೂಡಿದುದಾ|
ಕುಸುಮಾಸ್ತ್ರನ ಚಕ್ರಮಿದೆಂ

ಬೆಸಕಮನಾಳ್ದತ್ತು ಪಸದನಂ ದ್ರೌಪದಿಯಾ|| ೪೭||

ಪದ್ಯ-೪೭:ಪದವಿಭಾಗ-ಅರ್ಥ:ಕಂ|| ಮಸೆದುದು ಮದನನ ಬಾಳ್(ಮನ್ಮಥನ ಕತ್ತಿಯನ್ನು ಮಸೆದಂತಾಯಿತು) ಕೂರ್ಮಸೆಯಿಟ್ಟುದು ಕಾಮನಂಬು (ಕಾಮನ ಬಾಣ ಹರಿತವಾಯಿತು) ಬಾಯ್ದೊಡಿದುದಾ (ಚಕ್ರದ

ಬಾಯಿಹರಿತವಾಯಿತು)
ಕುಸುಮಾಸ್ತ್ರನ ಚಕ್ರಂ ಇದು
ಎಂಬ ಎಸಕಮನು ಆಳ್ದತ್ತು
(ಕುಸುಮಾಸ್ತ್ರನಾದ ಮನ್ಮಥನ
ಚಕ್ರಾಯುಧವು ಹರಿತವಾದ
ಬಾಯಿಂದ
ಕೂಡಿದುದಾಯಿತು)
ಪಸದನಂ(ಪ್ರಸಾದನ-
ಅಲಂಕಾರವು) ದ್ರೌಪದಿಯಾ
ಪದ್ಯ-೪೭:ಅರ್ಥ:ಆ
ದ್ರೌಪದಿಯ ಅಲಂಕಾರವು

ಮನ್ಮಥನ ಕತ್ತಿಯನ್ನು
ಮಸೆದಂತಾಯಿತು, ಕಾಮನ
ಬಾಣವು ಹರಿತವಾತು,
ಕುಸುಮಾಸ್ತ್ರನಾದ ಮನ್ಮಥನ
ಚಕ್ರಾಯುಧವು ಹರಿತವಾದ
ಬಾಯಿಂದ
ಕೂಡಿದುದಾಯಿತು ಎನ್ನುವ
ಶೋಭೆಯನ್ನು ಅವಳ
ಸೌಂದರ್ಯವು ಪಡೆಯಿತು.

ವ|| ಅಂತು ನೆರೆಯೆ ಪಸದನಂಗೊಳಿಸಿ

ಬಿಡುಮುತ್ತಿನ ಸೇಸೆಯನಿಕ್ಕಿ ತಾಯ್ಗಂ ತಂದೆಗಂ ಪೊಡಮಡಿಸಿ-

ವಚನ:ಪದವಿಭಾಗ-

ಅರ್ಥ:ಅಂತು ನೆರೆಯೆ (ಬಹಳ) ಪಸದನಂಗೊಳಿಸಿ (ಅಲಂಕರಿಸಿ) ಬಿಡುಮುತ್ತಿನ ಸೇಸೆಯನು ಇಕ್ಕಿ ತಾಯ್ಗಂ ತಂದೆಗಂ ಪೊಡಮಡಿಸಿ (ನಮಸ್ಕಾರ ಮಾಡಿಸಿ)

ವಚನ:ಅರ್ಥ:ಹಾಗೆ

ಸಂಪೂರ್ಣವಾಗಿ ಅಲಂಕಾರ

ಮಾಡಿ ಬಿಡಿಮುತ್ತಿನ

ಮಂತ್ರಾಕ್ಷತೆಯನ್ನು ಅವಳ

ತಲೆಯ ಮೇಲೆ ಚೆಲ್ಲಿ

ತಾಯಿಗೂ ತಂದೆಗೂ

ನಮಸ್ಕಾರ ಮಾಡಿಸಿ-

ಕಂ|| ನಿಟ್ಟಿಸೆ

ಹೋಮಾನಲನೊಳ್

ಪುಟ್ಟಿದ ನಿನಗಕ್ಕ ಪರಕೆ

ಯಾವುದೊ ನಿನ್ನಂ|

ಪುಟ್ಟಿಸಿದ ಬಿದಿ ನೆಗೞ್ತೆಯ ಜೆಟ್ಟಿಗನೊಳ್ ನೆರಪುಗೀಗಳರಿಕೇಸರಿಯೊಳ್| | ೪೮||

ಪದ್ಯ-೪೮:ಪದವಿಭಾಗ-ಅರ್ಥ:ನಿಟ್ಟಿಸೆ (ನೋಡಿದರೆ) ಹೋಮ ಅನಲನೊಳು ಪುಟ್ಟಿದ (ಹೋಮದ ಬೆಂಕಿಯಲ್ಲಿ ಹುಟ್ಟಿದ) ನಿನಗೆ ಅಕ್ಕ ಪರಕೆ (ಹರಕೆ)ಯಾವುದೊ! ನಿನ್ನಂ

ಪುಟ್ಟಿಸಿದ ಬಿದಿ (ದೈವ-ವಿಧಿ) ನೆಗೞ್ತೆಯ ಜೆಟ್ಟಿಗನೊಳ್ (ಪ್ರಸಿದ್ಧ ವೀರನೊಡನೆ - ವೀರಕೇಸರಿ/ ಅರ್ಜುನನೊಡನೆ) ನೆರಪುಗೆ (ಸೇರಿಸಲಿ) ಈಗಳ್ ಅರಿಕೇಸರಿಯೊಳ್

ಪದ್ಯ-೦೪೮:ಅರ್ಥ:ನೋಡಿದರೆ ಹೋಮದ ಬೆಂಕಿಯಲ್ಲಿ ಹುಟ್ಟಿದ(ಯಜ್ಞ ಕುಂಡದಲ್ಲಿ) ಹುಟ್ಟಿದ ನಿನಗೆ ಅಕ್ಕಾ!

ಪ್ರತ್ಯೇಕವಾದ ಹರಕೆ
ಯಾಕಮ್ಮ, ನಿನ್ನನ್ನು ಹುಟ್ಟಿಸಿದ
ಆ ದೈವವು ಸುಪ್ರಸಿದ್ಧ
ಪರಾಕ್ರಮಿಯಾದ
ಅರಿಕೇಸರಿಯಲ್ಲಿ ನಿನ್ನನ್ನು
ಸೇರಿಸಲಿ

**ವ|| ಎಂದು ಪರಸಿ
ಕನಕರತ್ನಖಚಿತಮುಂ
ಮೌಕ್ತಿಕಸ್ತಂಭಮುಮಪ್ಪ
ಸರ್ವತೋಭದ್ರಮೆಂಬ
ಸಿವಿಗೆಯನೇಱಿಸಿ ಚಾಮರದ**

ಕುಂಚದಡಪದ ಡವಕೆಯ
ವಾರ ವಿಳಾಸಿನಿಯರೆಡುಂ
ಕೆಲದೊಳ್ ಸುತ್ತಿಱಿದು ಬಳಸಿ
ಬರೆ ತಲೆವರಿದೋಜೆಯ
ಪಿಡಿಯನೇಱ
ಪೆಂಡವಾಸದೊಳ್ವೆಂಡಿರ್
ಬಳಸಿ ಬರೆ ತಳ್ತು ಪಿಡಿದ ಕನಕ
ಪದ್ಮದ ಸೀಗುರಿಗಳ
ನೆೞಲೆಡೆವಱಿಯದೆ ಬರೆ
ದ್ರುಪದನುಂ ಧೃಷ್ಟದ್ಯುಮ್ನನುಂ
ಮುತ್ತಿನ ಮಾಣಿಕದ

ಮಂಡನಾಯೋಗಂಗಳೊಳ್
ನೆರೆಯೆ ಪಣ್ಣಿದ ಮದಾಂಧ
ಗಂಧಸಿಂಧುರಂಗಳನೇಱಿ ಬರೆ
ಮುಂದೆ ಪಱಿವ ಧವಳಚ್ಛತ್ರ
ಚಂದ್ರಾದಿತ್ಯ ಪಾಳಿಕೇತನಾದಿ
ರಾಜ್ಯ ಚಿಹ್ನಂಗಳುಂ
ಮೊೞಗುವ
ಮಂಗಳತೂರ್ಯಂಗಳೆಸೆಯೆ
ಪೆಱಪೆಱಗೆ ದ್ರೌಪದಿ
ಶೃಂಗಾರಸಾಗರಮೆ ಮೇರೆದಪ್ಪಿ
ಬರ್ಪಂತೆ ಬರೆ-

ವಚನ:ಪದವಿಭಾಗ-ಅರ್ಥ:ಎಂದು ಪರಸಿ ಕನಕತ್ಕನಕ ಖಚಿತಮುಂ (ಹೊಳೆಯುವ ಚಿನ್ನದ) ಮೌಕ್ತಿಕಸ್ತಂಭಮುಂ ಅಪ್ಪ (ಮುತ್ತಿನ ಕಂಬಗಳನ್ನುಳ್ಳ) ಸರ್ವತೋಭದ್ರಂ ಎಂಬ ಸಿವಿಗೆಯನು ಏಱಿಸಿ (ಪಲ್ಲಕ್ಕಿಯಲ್ಲಿ ಏರಿಸಿ-ಕುಳ್ಳಿರಿಸಿ) ಚಾಮರದ ಕುಂಚದ ಅಡಪದ ಡವಕೆಯ (ಚಾಮರ,

ಕುಂಚ, ಎಲೆ ಅಡಿಕೆಯ ಚೀಲ
ಮತ್ತು ಪೀಕದಾನಿಗಳನ್ನು
ಹಿಡಿದಿದ್ದ) ವಾರ
ವಿಳಾಸಿನಿಯರು ಎರಡುಂ
ಕೆಲದೊಳ್ (ಪರಿವಾರದ
ಹೆಂಗಸರು
ಎರಡುಪಕ್ಕದಲ್ಲಿಯೂ)
ಸುತ್ತಿಱಿದು ಬಳಸಿ ಬರೆ (ಸುತ್ತ
ಗುಂಪುಗೂಡಿ ಬಳಸಿ
ಬರುತ್ತಿರಲು) ತಲೆವರಿದ
(ಮುಂದೆಹೋಗುತ್ತಿರುವ)

ಪಿಡಿಯನೇಱ (ಓಜೆಯ
ಪಿಡಿಯಂ ಏಱ-
ಹೆಣ್ಣಾನೆಯನ್ನು ಹತ್ತಿಕೊಂಡು)
ಪೆಂಡವಾಸದ ಒಳ್ವೆಂಡಿರ್
(ರಾಣಿವಾಸದ
ಸಭ್ಯಸ್ತ್ರೀಯರು) ಬಳಸಿ ಬರೆ,
(ಸುತ್ತ ಬರುತ್ತಿರಲು)ತಳ್ತು
ಪಿಡಿದ ಕನಕ ಪದ್ಮದ
ಸೀಗುರಿಗಳ (ಎತ್ತಿಹಿಡಿದ
ಚಿನ್ನದ ಪದ್ಮಾಕೃತಿಯ
ಸೀಗುರಿಗಳ)ನೆೞಲ್ (ನೆರಳು

ಬೀಳಲು) ಎಡೆವೞಿಯದೆ
(ಸ್ಥಳವಿಲ್ಲದಂತೆ) ಬರೆ
(ಬರುತ್ತಿರಲು), ದ್ರುಪದನುಂ
ಧೃಷ್ಟದ್ಯುಮ್ನನುಂ ಮುತ್ತಿನ
ಮಾಣಿಕದ
ಮಂಡನಾಯೋಗಂಗಳೊಳ್
(ಪೂರ್ಣವಾಗಿ
ಅಲಂಕಾರಮಾಡಿದ) ನೆರೆಯೆ
ಪಣ್ಣಿದ (ಚೆನ್ನಾಗಿ ಮಾಡಿದ)
ಮದಾಂಧ
ಗಂಧಸಿಂಧುರಂಗಳನು ಏಱಿ

ಬರೆ (ಮದ್ದಾನೆಗಳನ್ನೇರಿ
ಬರುತ್ತಿರಲು) ಮುಂದೆ ಪರಿವ
(ಹರಿವ-ಚಲಿಸುವ) ಧವಳಚ್ಛತ್ರ
(ಬೆಳ್ಗೊಡೆ) ಚಂದ್ರಾದಿತ್ಯ
ಪಾಳಿಕೇತನ (ಸೂರ್ಯ
ಚಂದ್ರರ ಲಾಂಛನಗಳು) ಆದಿ
(ಮೊದಲಾದ) ರಾಜ್ಯ
ಚಿಹ್ನಂಗಳುಂ ಮೊಱಗುವ
(ಮೊಳಗುವ)
ಮಂಗಳತೂರ್ಯಂಗಳು
ಎಸೆಯೆ (ಮಂಗಳವಾದ್ಯಗಳು

ಶೋಭಿಸಲು) ಪೆಱಪೆಱಗೆ (ಹಿಂದು ಹಿಂದೆಯೇ) ದ್ರೌಪದಿ ಶೃಂಗಾರಸಾಗರಮೆ ಮೇರೆದಪ್ಪಿ ಬರ್ಪಂತೆ ಬರೆ-

ವಚನ:ಅರ್ಥ:ಎಂದು ಹರಸಿ ಹೊಳೆಯುವ ಚಿನ್ನದಿಂದ ಕೆತ್ತಲ್ಪಟ್ಟುದ್ದೂ, ಮುತ್ತಿನ ಕಂಬಗಳನ್ನುಳ್ಳದ್ದೂ, ಸರ್ವತೋಭದ್ರವೆಂಬ ಹೆಸರುಳ್ಳ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಚಾಮರ, ಕುಂಚ,

ಎಲೆ ಅಡಿಕೆಯ ಚೀಲ ಮತ್ತು
ಪೀಕದಾನಿಗಳನ್ನು ಹಿಡಿದಿದ್ದ
ಪರಿವಾರದ ಹೆಂಗಸರು
ಎರಡುಪಕ್ಕದಲ್ಲಿಯೂ ಸುತ್ತ
ಗುಂಪುಗೂಡಿ ಬಳಸಿ
ಬರುತ್ತಿರಲು, ಮುಂದೆ
ಹೋಗುತ್ತಿರುವ
ಹೆಣ್ಣಾನೆಯನ್ನು ಹತ್ತಿಕೊಂಡು
ರಾಣಿವಾಸದ ಸಭ್ಯಸ್ತ್ರೀಯರು
ಸುತ್ತ ಬರುತ್ತಿರಲು, ಎತ್ತಿಹಿಡಿದ
ಚಿನ್ನದ ಪದ್ಮಾಕೃತಿಯ

ಸೀಗುರಿಗಳು ಬೀಳಲು
ಸ್ಥಳವಿಲ್ಲದಂತೆ
ಜೊತೆಯಲ್ಲಿಯೇ ಬರುತ್ತಿರಲು
ದ್ರುಪದನೂ ಧೃಷ್ಟದ್ಯುಮ್ನನೂ
ಮುತ್ತು
ಮಾಣಿಕ್ಯಾಭರಣಗಳಿಂದ
ಪೂರ್ಣವಾಗಿ
ಅಲಂಕಾರಮಾಡಿದ
ಮದ್ದಾನೆಗಳನ್ನೇರಿ ಬರುತ್ತಿರಲು
ಮುಂಭಾಗದಲ್ಲಿ
ಹರಿದುಹೋಗುತ್ತಿದ್ದ ಬಿಳಿಯ

ಕೊಡೆ, ಚಂದ್ರ, ಸೂರ್ಯ,
ಧ್ವಜಸಮೂಹವೇ ಮೊದಲಾದ
ರಾಜಚಿಹ್ನೆಗಳೂ
ಶಬ್ದಮಾಡುತ್ತಿದ್ದ
ಮಂಗಳವಾದ್ಯಗಳೂ
ಪ್ರಕಾಶಿಸುತ್ತಿರಲು ಹಿಂದು
ಹಿಂದೆಯೇ ದ್ರೌಪದಿಯು
ಶೃಂಗಾರಸಾಗರವೇ ಎಲ್ಲೇ
ಮೀರಿ ಬರುವಂತೆ ಬರಲು-
(ಬಂದಳು)

ಕಂ|| ಪರೆದುಗುವ ಪಂಚ ರತ್ನದ

ಪರಲ್ಗಳುದಿರ್ದೆಸೆಯೆ ಸೌಧದೊಳೆ ಕೆದಱಿದ ಕ| ಪ್ಪುರವಳ್ಕುಗಳೆಸೆಯೆ ಸಯಂ ಬರ ಸಾಲೆಯನೆಸೆವ ಲೀಲೆಯಿಂ ಪುಗುತಂದಳ್|| ೪೯||

ಪದ್ಯ-೪೯:ಪದವಿಭಾಗ-ಅರ್ಥ:ಪರೆದುಗುವ (ಎಲ್ಲೆಲ್ಲಿಯೂ ಸುರಿದಿದ್ದ) ಪಂಚ ರತ್ನದ ಪರಲ್ಗಳು ಉದಿರ್ದು ಎಸೆಯೆ (ಪಂಚ

ರತ್ನದ ಹರಳುಗಳು ಉದಿರಿದ್ದು
ಶೋಭಿಸಲು) ಸೌಧದೊಳೆ
ಕೆದಱಿದ ಕಪ್ಪುರವ ಅಳ್ಳುಗಳು
ಎಸೆಯೆ (ಪಚ್ಚಕರ್ಪೂರದ
ಹಳುಕುಗಳೂ
ಪ್ರಕಾಶಿಸುತ್ತಿರಲು) ಸಯಂಬರ
ಸಾಲೆಯನು ಎಸೆವ
ಲೀಲೆಯಿಂ
ಪುಗುತಂದಳ್(ಸ್ವಯಂವರ
ಗೃಹವನ್ನು

ಲೀಲೆಯವಿಲಾಸದಿಂದ

ಪ್ರವೇಶಿಸಿದಳು)

ಪದ್ಯ-೪೯:ಅರ್ಥ:ಎಲ್ಲೆಲ್ಲಿ

ಯೂ ಸುರಿದಿದ್ದ ಪಂಚರತ್ನದ

ಹರಳುಗಳೂ ಪಚ್ಚಕರ್ಪೂರದ

ಹಳುಕುಗಳೂ

ಪ್ರಕಾಶಿಸುತ್ತಿರಲು, ಸ್ವಯಂವರ

ಗೃಹವನ್ನು

ಲೀಲೆಯವಿಲಾಸದಿಂದ

ಪ್ರವೇಶಿಸಿದಳು.

ವ|| ಆಗಳ್-

ವಚನ:ಅರ್ಥ:ಆಗ-

ಕಂ|| ನುಡಿವುದನೆ ಮರೆದು

ಪೆಱತಂ

ನುಡಿಯೆ ಕೆಲರ್ ನೋಡದಂತೆ

ನೋಡೆ ಕೆಲರ್ ಪಾ|

ವಡರ್ದವೊಲಿರೆ

ಕೆಲರೊಯ್ಯನೆ

ತುಡುಗೆಯನೋಸರಿಸೆ

ಕೆಲರುದಗ್ರಾವನಿಪರ್|| ೫೦||

ಪದ್ಯ-೫೦:ಪದವಿಭಾಗ-

ಅರ್ಥ: (ಅವಳ

ಸೌಂದರ್ಯವನ್ನು ನೋಡಿ
ದಿಗ್ಭ್ರಮೆಯಿಂದ)
ನುಡಿವುದನೆ ಮರೆದು
(ಹೇಳಬೇಕಾದ್ದನ್ನೇ/
ಮಾತನಾಡಲು ಮರೆತರು)
ಪೆಱತಂನುಡಿಯೆ ಕೆಲರ್
(ಕೆಲವರು ಮರೆತು ಮತ್ತೇನೋ
ಹೇಳಿದರು) ನೋಡದಂತೆ
ನೋಡೆ ಕೆಲರ್ (ಕೆಲವರು
ನೋಡಿಯೂ ನೋಡದಂತೆ)
ಪಾವಡರ್ದವೊಲಿರೆ (ಹಾವು

ಮೈಮೇಲೆ ಹತ್ತಿಂದಂತೆ
ಸ್ತಬ್ಧರಾಗಿದ್ದರು,) ಕೆಲರ
ಒಯ್ಯನೆ ತುಡುಗೆಯನು
ಓಸರಿಸೆ ಕೆಲರು ಉದಗ್ರ
ಅವನಿಪರ್(ಕೆಲವು ರಾಜರು
ತಾವು ಚಂದಕಾಣಲು ತಮ್ಮ
ಒಡವೆ ಉಡುಪುಗಳನ್ನು
ಸರಿಪಡಿಸಿಕೊಂಡರು.)
ಪದ್ಯ-೫೦:ಅರ್ಥ:(ಅವಳ
ಸೌದರ್ಯವನ್ನು ನೋಡಿ
ದಿಗ್ಭ್ರಮೆಯಿಂದ)

ಹೇಳಬೇಕಾದ್ದನ್ನೇ/
ಮಾತನಾಡಲು ಮರೆತರು,
ಕೆಲವರು ಮರೆತು ಮತ್ತೇನೋ
ಹೇಳಿದರು, ಕೆಲವರು
ನೋಡಿಯೂ ನೋಡದಂತೆ,
ಹಾವು ಮೈಮೇಲೆ ಹತ್ತಿಂದಂತೆ
ಸ್ತಬ್ಧರಾಗಿದ್ದರು, ಕೆಲವು ಪ್ರಸಿದ್ಧ
ರಾಜರು ತಾವು ಚಂದಕಾಣಲು
ತಮ್ಮ ಒಡವೆ ಉಡುಪುಗಳನ್ನು
ಸರಿಪಡಿಸಿಕೊಂಡರು.

ಕಂ||ಒಡನೆ ನೆರೆದರಸುಮಕ್ಕಳ

ನಿಡುಗಣ್ಗಳ ಬಳಗಮೆಱಗೆ
ತನ್ನಯ ಮೆಯ್ಯೊಳ್|
ನಡೆ ಬಳಸಿ ಪಲರುಮಂಬಂ
ತುಡೆ ನಡುವಿರ್ದೊಂದು
ಪುಲ್ಲೆಯಿರ್ಪಂತಿರ್ದಳ್|| ೫೧||

ಪದ್ಯ-00:ಪದವಿಭಾಗ-ಅರ್ಥ:ಒಡನೆ ನೆರೆದ ಅರಸುಮಕ್ಕಳ ನಿಡುಗಣ್ಗಳ(ನೀಳಕಣ್ಣುಗಳ) ಬಳಗಮೆಱಗೆ (ಬಳಗಂ ಎರಗೆ- ದ್ರೌಪತಿಯಮೇಲೆ ಬೀಳಲು)

ತನ್ನಯ ಮೆಯ್ಯೊಳ್ ನಡೆ ಬಳಸಿ (ತನ್ನ ಮೈಯಲ್ಲಿ ಎರಗಿ ನೆಡೆ-ನಾಟಿಕೊಳ್ಳಲು,ಸುತ್ತಲೂ) ಪಲರುಂ ಅಂಬಂ ತುಡೆ(ಹಲವರು ಬಾಣ ತೊಡಲು) ನಡುವೆ ಇರ್ದ ಒಂದು ಪುಲ್ಲೆಯಿರ್ಪಂತೆ ಇರ್ದಳ್ (ಪುಲ್ಲೆ- ಜಿಂಕೆ)

ಪದ್ಯ-00:ಅರ್ಥ:ಒಟ್ಟಿಗೆ ಅಲ್ಲಿ ಸೇರಿದ್ದ ರಾಜಕುಮಾರರ ನೀಳವಾದ ಕಣ್ಣುಗಳ

ಸಮೂಹವು ತನ್ನ ಶರೀರದ ಮೇಲೆ ಎರಗಿ ನಾಟಿಕೊಳ್ಳಲು, ಸುತ್ತಲೂ ನಿಂತು ಅನೇಕರು ಪ್ರಯೋಗಮಾಡಿದ ಬಾಣಗಳ ಮಧ್ಯೆ ಸಿಕ್ಕಿದ ಹುಲ್ಲೆಯಂತೆ ದ್ರೌಪದಿ ಇದ್ದಳು.

ಕ||ಮೊನೆಯಂಬುಗಳೊಳೆ
ಪೂಣ್ದಪ
ನನಿಬರುಮಂ ಕಿೞಿದು
ಬೇಗದಿಂ ಹರಿಗನದ|
ರ್ಕೆನಗೆಡೆವೇೞ್ಕುಮೆ ಎಂಬವೊ

ಲನಿಬರುಮಂ ಪೂಣ್ದನತನು ನನೆಯಂಬುಗಳಿಂ|| ೫೨||

ಪದ್ಯ-00:ಪದವಿಭಾಗ-ಅರ್ಥ:ಮೊನೆಯ ಅಂಬುಗಳೊಳೆ ಪೂಣ್ದಪಂ (ಚೂಪಾದ ಬಾಣಗಳಲ್ಲಿ ಹೂತುಬಿಡುವನು) ಅನಿಬರುಮಂ(ಎಲ್ಲರನ್ನೂ) ಕಿಱಿದು ಬೇಗದಿಂ(ಬಹಳಬೇಗ) ಹರಿಗನು ಅದರ್ಕೆ ಎನಗೆ

ಎಡೆವೇೞ್ಕುಮೆ (ಅವಕಾಶ ಬೇಕೇ) ಎಂಬವೊಲ್ ಅನಿಬರುಮಂ (ಎಲ್ಲರನ್ನೂ) ಪೂಣ್ದನು (ಹೂಳಿದನು) ಅತನು(ಆತನು- ಮನ್ಮಥನು) ನನೆಯಂಬುಗಳಿಂ (ಹೂವಿನ ಬಾಣಗಳಿಂದ)

ಪದ್ಯ-00:ಅರ್ಥ: ಅರಿಗನು ಅಲ್ಪಕಾಲದಲ್ಲಿಯೇ ಎಲ್ಲರನ್ನೂ ಚೂಪಾದದ ಬಾಣಗಳಿಂದ

ಹೂಳಿಬಿಡುತ್ತಾನೆ. ಅದಕ್ಕಾಗಿ ನಾನು ಬಾಣಬಿಡುವುದಕ್ಕೆ ಸ್ಥಳಬೇಕಲ್ಲವೇ? ಎನ್ನುವ ಹಾಗೆ ಮನ್ಮಥನು ಅಷ್ಟು ಜನರನ್ನೂ ಪುಷ್ಪಬಾಣಗಳಿಂದ ಹೂಳಿದನು.

ವ|| ಆಗಳ್ ಪಾಂಡವರ್ ತಮ್ಮಂ ಪೆಱರಱಿಯದಂತು ಬ್ರಾಹ್ಮಣವೇಷದೊಳೆ ಬ್ರಹ್ಮಸಭೆಯೊಳ್ ಬಂದಿರೆ-

ವಚನ:ಪದವಿಭಾಗ-

ಅರ್ಥ:ಆಗಳ್ ಪಾಂಡವರ್ ತಮ್ಮಂ ಪೆಱರ್ ಅಱಿಯದಂತು (ಬೇರೆಯವರು ತಿಳಿಯದಂತೆ) ಬ್ರಾಹ್ಮಣವೇಷದೊಳೆ ಬ್ರಹ್ಮಸಭೆಯೊಳ್ ಬಂದಿರೆ-

ವಚನ:ಅರ್ಥ:ಆಗ ಪಾಂಡವರು ತಮ್ಮನ್ನು ಇತರರು ತಿಳಿದಂತೆ (ಗುರುತಿಸದಂತೆ)

ಬ್ರಾಹ್ಮಣವೇಷದಿಂದಲೇ
ಬ್ರಹ್ಮಸಭೆಯಲ್ಲಿ ಬಂದು
(ಕುಳಿತಿದ್ದರು)-

ಚಂ|| ಇಳೆಯೊಳುದಗ್ರ ವೀರ ಭಟ ತುಂಗ ಮತಂಗಜ ವಾಜಿ ರಾಜಿ ಚೌ ಪಳಿಗೆಗಳೊಳ್ ಧರಾಧರ ಧುರಂಧರ ಬಂಧುರ ರಾಜಕಂ ವಿಯ|

ತ್ತಳದೊಳನೇಕ ಕಿಂಪುರುಷ ಕಿನ್ನರ ಖೇಚರ ಸಿದ್ಧ ಬೃಂದಮ

ವ್ವಳಿಸಿರೆ ಮೂಱು ಲೋಕಮನೆ ಪೊೞ್ದುದು ಮೂನೆಲೆಯಿಂ ಸ್ವಯಂಬರಂ|| ೫೩ ||

ಪದ್ಯ-00:ಪದವಿಭಾಗ-ಅರ್ಥ:ಇಳೆಯೊಳು ಉದಗ್ರ (ಭೂಮಿಯಲ್ಲಿ ಶ್ರೇಷ್ಠರಾದ) ವೀರ ಭಟ ತುಂಗ ಮತಂಗಜ(ಎತ್ತರವಾದ ಮದ್ದಾನೆ) ವಾಜಿ ರಾಜಿ (ಕುದುರೆ ಸಮೂಹ)

ಚೌಪಳಿಗೆಗಳೊಳ್
(ಚಚ್ಚೌಕವಾದ ಮಂಟಪಗಳಲ್ಲಿ
ಉಪ್ಪರಿಗೆಗಳಲ್ಲಿ) ಧರಾಧರ
ಧುರಂಧರ ಬಂಧುರ(ಸುಂದರ)
ರಾಜಕಂ(ಭೂಮಿಯ
ಒಡೆಯರಾದ ಸುಂದರ ರಾತರ
ಸಮೂಹ)
ವಿಯತ್ತಳದೊಳು(ಆಕಾಶದಲ್ಲಿ
) ಅನೇಕ ಕಿಂಪುರುಷ ಕಿನ್ನರ
ಖೇಚರ ಸಿದ್ಧ ಬೃಂದಮು
ಅವ್ವಳಿಸಿರೆ (ಸಮೂಹವು

ಒತ್ತಾಗಿಸೇರಿರಲು) ಮೂಜು (ಮೂರು) ಲೋಕಮನೆ ಪೋಲ್ತುದು (ಹೋಲುತ್ತಿತ್ತು) ಮೂನೆಲೆಯಿಂ (ಮೂರು ನೆಲೆಗಳಿಂದ -ಭೂಮಿಯಲ್ಲಿ, ಉಪ್ಪರಿಗೆಯಲ್ಲಿ, ಆಕಾಶದಲ್ಲಿ) ಸ್ವಯಂಬರಂ

ಪದ್ಯ-00:ಅರ್ಥ:

ಭೂಮಿಯಲ್ಲಿ (ನೆಲದ ಮೇಲೆ) ಶ್ರೇಷ್ಠರಾದ ಭಟರೂ ಎತ್ತರವಾದ ಮದ್ದಾನೆ ಮತ್ತು

ಕುದುರೆಯ ಸಮೂಹಗಳೂ
ಚಚ್ಚೌಕವಾದ ಮಂಟಪಗಳಲ್ಲಿ
ರಾಜಶ್ರೇಷ್ಠರ
ಮನೋಹರವಾದ
ಸಮೂಹವೂ ಅಂತರಿಕ್ಷ
ಪ್ರದೇಶದಲ್ಲಿ ಕಿಂಪುರುಷ,
ಕಿನ್ನರ, ಖೇಚರ, ಸಿದ್ಧಪುರುಷರ
ಸಮೂಹವೂ ತುಂಬಿರಲು ಈ
ಮೂರುನೆಲೆಗಳಿಂದ
ಸ್ವಯಂವರ ಮಂಟಪವು

ಮೂರುಲೋಕವನ್ನೂ
ಹೋಲುತ್ತಿತ್ತು

ವ|| ಆಗಳ್ ವಿದಿತವೃತ್ತಾಂತೆಯಾಗಿ ದ್ರೌಪದಿಯ ಕೆಲದೊಳಿರ್ದ ಸುಂದರ ಮಾಲೆಯೆಂಬ ಚೇಟಿ-

ವಚನ:ಪದವಿಭಾಗ-

ಅರ್ಥ:ಆಗಳ್ ವಿದಿತ (ತಿಳಿದು)ವೃತ್ತಾಂತೆಯಾಗಿ ದ್ರೌಪದಿಯ ಕೆಲದೊಳಿರ್ದ

(ಪಕ್ಕದಲ್ಲಿದ್ದ)ಸುಂದರ ಮಾಲೆಯೆಂಬ ಚೇಟಿ-

ವಚನ:ಅರ್ಥ:ಆಗ ಅಲ್ಲಿದ್ದ ರಾಜರ ವಿಷಯವನ್ನು ತಿಳಿದುಕೊಂಡು ಪಕ್ಕದಲ್ಲಿದ್ದ ಸುಂದರಮಾಲೆಯೆಂಬ ಚೇಟಿಯು ದ್ರೌಪದಿಗೆ ಅವರ ಪರಿಚಯ ಮಾಡಿಸಿದಳು

ಮ|| ಕನಕೋಚ್ಚಾಸನಸಂಸ್ಥಿತಂ ನೃಪನವಂ ಬೆಂಗೀಶನುತ್ತುಂಗ ಪೀ

ನ ನಿಜಾಂಸಾರ್ಪಿತ

ಲಂಬಹಾರನವನಾ ಪಾಂಡ್ಯಂ

ಮನಂಗೊಂಡು ನಿ|

ನ್ನನೆ ಕಿಟ್ಟಿಣ್ಣೊಳೆ

ನೋಡುತಿರ್ಪವನವಂ

ಚೇರಮ್ಮನಾದಿತ್ಯ ತೇ

ಜನವಂ ನೋಡು

ಕಳಿಂಗದೇಶದರಸಂ ಪಂಕೇಜ

ಪ್ರತ್ರೇಕ್ಷಣೇ|| ೫೪||

ಪದ್ಯ-೦೦:ಪದವಿಭಾಗ-

ಅರ್ಥ:ಕನಕ ಉಚ್ಛ್ವಾಸನ

ಸಂಸ್ಥಿತಂ ನೃಪನು ಅವಂ(ಆ
ಎತ್ತರವಾದ ಚಿನ್ನದ ಪೀಠದಲ್ಲಿ
ಕುಳಿತಿರುವ ಅವನು)
ಬೆಂಗೀಶನು(ವಂಗದೇಶದ
ದೊರೆ), ಉತ್ತುಂಗ
ಪೀನ(ದಪ್ಪ) ನಿಜ
ಅಂಸ(ಭುಜದ ಮೇಲೆ)
ಅರ್ಪಿತ ಲಂಬಹಾರನು
ಅವನು ಆ
ಪಾಂಡ್ಯಂ(ಎತ್ತರವೂ ದಪ್ಪವೂ
ಆದ ಭುಜದಮೇಲೆ

ಉದ್ದವಾದ ಹಾರವುಳ್ಳವನು
ಪಾಂಡ್ಯ,) ಮನಂಗೊಂಡು
(ಮನಮೆಚ್ಚಿ) ನಿನ್ನನೆ
ಕಿೞ್ಗಣ್ಣೊಳೆ (ಕೆಳಕಣ್ಣಿನಲ್ಲಿ)
ನೋಡುತಿರ್ಪವನು ಅವಂ
ಚೇರಮ್ಮನು, ಆದಿತ್ಯತೇಜಂ
ಅವಂ ನೋಡು ಕಳಿಂಗದೇಶದ
ಅರಸಂ, ಪಂಕೇಜ
ಪ್ರತ್ರೇಕ್ಷಣೇ(ಕಮಲಪತ್ರ
ಕಣ್ಣಿನವಳೇ)

ಪದ್ಯ-00:ಅರ್ಥ: ಎಲೌ ಕಮಲಪತ್ರ ಕಣ್ಣಿನವಳೇ- ದ್ರೌಪದಿಯೇ ಆ ಎತ್ತರವಾದ ಚಿನ್ನದ ಪೀಠದಲ್ಲಿ ಕುಳಿತಿರುವ ಅವನು ವಂಗದೇಶದ ದೊರೆ, ಎತ್ತರವೂ ದಪ್ಪವೂ ಆದ ಭುಜದಮೇಲೆ ಉದ್ದವಾದ ಹಾರವುಳ್ಳವನು ಪಾಂಡ್ಯ, ವಿಶೇಷ ಆಕರ್ಷಿತನಾಗಿ ಕೆಳಗಣ್ಣಿನಲ್ಲಿ ನಿನ್ನನ್ನೇ ನೋಡುತ್ತಿರುವವನು ಚೇರಮ,

ಸೂರ್ಯತೇಜಸ್ಸುಳ್ಳ ಆತ
ಕಳಿಂಗದೇಶದರಸನು
ನೋಡು. ಎಂದಳು ಚೇಟಿ.

ವ|| ಮತ್ತಿತ್ತ ಬೀಸುವ ಚಾಮರಂಗಳ ಪೊಳಪಿನೊಳಮೆತ್ತಿದ ಬೆಳ್ಗೊಡೆಗಳ ಬೆಳ್ಪಿನೊಳಂ ದೆಸೆಗಳೆಲ್ಲಂ ಧವಳಿಸಿದನ್ನವಾಗೆ ಪೊಗಳುತೆ ವರ್ಪವರ ಸರಂಗಳೊಳಂ ಪಾಡುವ ಪಾಠಕಾಱರಿಂ

ಚರಂಗಳೊಳೆಲ್ಲಂ ದಿಗ್ಭಿತ್ತಿಗಳ್
ತೆಕ್ಕನೆ ತೀವೆ
ಮಣಿಮಯಪೀಠದ ಮೇಲೆ
ಕಾಲನವಷ್ಟಂಭದಿಂ ನೀಡಿ-

ವಚನ:ಪದವಿಭಾಗ-

ಅರ್ಥ:ಮತ್ತೆ ಇತ್ತ ಬೀಸುವ ಚಾಮರಂಗಳ ಪೊಳಪಿನೊಳ್ ಮೆತ್ತಿದ ಬೆಳ್ಗೊಡೆಗಳ ಬೆಳ್ಪಿನೊಳಂ ದೆಸೆಗಳೆಲ್ಲಂ (ದಿಕ್ಕುಗಳೆಲ್ಲವೂ) ಧವಳಿಸಿದನ್ನವಾಗೆ

(ಬಿಳಿಪಾದಂತಾಗಿರಲು)
ಪೊಗಳುತೆ ವರ್ಪವರ
(ಹೊಗಳುತ್ತ ಬರುವವರ)
ಸರಂಗಳೊಳಂ (ಸ್ವರ)
ಪಾಡುವ ಪಾಠಕಾಱರ
(ಹೊಗಳುಭಟ್ಟರ)
ಇಂಚರಂಗಳೊಳೆಲ್ಲಂ
(ಮಧುರವಾದ ಧ್ವನಿಯಿಂದ)
ದಿಗ್ಭಿತ್ತಿಗಳ್
(ದಿಗಂತಗಳೆಲ್ಲವೂ) ತೆಕ್ಕನೆ
ತೀವೆ (ತಕ್ಷಣ ತುಂಬಲು)

ಮಣಿಮಯಪೀಠದ ಮೇಲೆ ಕಾಲನು ಅವಷ್ಟಂಭದಿಂ ನೀಡಿ(ಠೀವಿಯಿಂದ ನೀಡಿ)-

ವಚನ:ಅರ್ಥ:ಮತ್ತೆ ಈ ಕಡೆ ಬೀಸುವ ಚಾಮರಗಳ ಹೊಳಪಿನಿಂದಲೂ ಎತ್ತಿದ ಬೆಳುಗೊಡೆಗಳ ಬೆಳುಪಿನಿಂದಲೂ ದಿಕ್ಕುಗಳಲ್ಲಿ ಬಿಳಿಯಬಣ್ಣದಿಂದ ಕೂಡಿದುದಾಗಿರಲು ಹೊಗಳುತ್ತ ಬರುವವರ

ಸ್ವರಗಳಿಂದಲೂ
ಹಾಡುತ್ತಿರುವವರ
ಹೊಗಳುಭಟ್ಟರ ಮಧುರವಾದ
ಧ್ವನಿಗಳಿಂದಲೂ
ದಿಗಂತಗಳೆಲ್ಲವೂ ಇದ್ದಕ್ಕಿದ್ದ
ಹಾಗೆ ತುಂಬಿರಲು
ರತ್ನಖಚಿತವಾದ ಆಸನದ
ಮೇಲೆ ತನ್ನ ಕಾಲನ್ನು
ಠೀವಿಯಿಂದ ನೀಡಿ

ಮ|| ಅಲರಂಬಿಂದುಱಿದೆನ್ನ
ಮೆಲ್ಲೆರ್ದೆಯನಿಂತುರ್ಚಿತ್ತಿದೆಂ

ಬಂತೆ ನೆ
ಯ್ದಿಲ ಕಾವಂ
ತಿರುಪುತ್ತುಮೊಂದನನಿಬರ್
ತಮ್ಮಂದಿರುಂ ತನ್ನೆರ|
ಟ್ಕೆಲದೊಳ್ ಬಂದಿರೆ ನೋಡಿ
ಸೋಲ್ತು ನಿನಗಾ ಗೇಯಕ್ಕೆ
ಸೋಲ್ತಂತೆವೋಲ್
ತಲೆಯಂ ತೂಗುವವಂ
ಸುಯೋಧನನೃಪಂ
ನೀನಾತನಂ ನೋಡುಗೇ||
೫೫||

ಪದ್ಯ-00:ಪದವಿಭಾಗ-ಅರ್ಥ:ಅಲರಂಬಿಂದೆ (ಅರಲು ಅಂಬು- ಹೂಬಾಣದಿಂದ) ಉಱದ ಎನ್ನ ಮೆಲ್ಲೆರ್ದೆಯನು ಇಂತು ಉರ್ಚಿತ್ತು (ಬೇಧಿಸಿತು)ಇದು ಎಂಬಂತೆ(ನನ್ನ ಮೃದುವಾದ ಹೃದಯವನ್ನು ಪುಷ್ಪಬಾಣವು ಈ ದಿನ ಹೀಗೆ ಚುಚ್ಚುತ್ತಿದೆ ಎನ್ನುವ ಹಾಗೆ) ನೆಯ್ದಿಲ ಕಾವಂ (ನೈದಿಲೆ ಹೂವಿನ

ತೊಟ್ಟು ಒಂದನ್ನು)
ತಿರುಪುತ್ತುಂ ಒಂದನು,
ಅನಿಬರ್ ()ಎಲ್ಲಾ
ತಮ್ಮಂದಿರುಂ ತನ್ನ
ಎರಟ್ಕೆಲದೊಳ್ (ಎರಳ್
ಕೆಲದೊಳ್- ಎರಡು ಪಕ್ಕದಲ್ಲಿ)
ಬಂದು ಇರೆ; ನೋಡಿ
ಸೋಲ್ತು(ಸೋತು) ನಿನಗೆ, ಆ
ಗೇಯಕ್ಕೆ ಸೋಲ್ತಂತೆವೋಲ್
ತಲೆಯಂ ತೂಗುವವಂ(ನಿನ್ನ
ಸೌಂದರ್ಯಕ್ಕೆ ಸೋತಿದ್ದರೂ

ಆ ಸಂಗೀತಕ್ಕೆ ಸೋತವನಂತೆ ತಲೆಯನ್ನು ತೂಗುವವನು) ಸುಯೋಧನನೃಪಂ ನೀನು ಆತನಂ ನೋಡುಗೇ(ನೋಡುವವಳಾಗು)
ಪದ್ಯ-00:ಅರ್ಥ: ನನ್ನ ಮೃದುವಾದ ಹೃದಯವನ್ನು ಪುಷ್ಪಬಾಣವು ಈ ದಿನ ಹೀಗೆ ಚುಚ್ಚುತ್ತಿದೆ ಎನ್ನುವ ಹಾಗೆ ನೆಯ್ದಿಲ ನೈದಿಲೆ ಹೂವಿನ

ತೊಟ್ಟನ್ನು ಒಂದು ಕೈಯಲ್ಲಿ
ತಿರುಗಿಸುತ್ತಲೂ ಅಷ್ಟು ಜನ
ತಮ್ಮಂದಿರೂ ತನ್ನ ಎರಡು
ಪಕ್ಕದಲ್ಲಿಯೂ ಬಂದಿರಲು
ನಿನ್ನ ಸೌಂದರ್ಯಕ್ಕೆ
ಸೋತಿದ್ದರೂ ಆ ಸಂಗೀತಕ್ಕೆ
ಸೋತವನಂತೆ ತಲೆಯನ್ನು
ತೂಗುವ ಅವನು
ದುರ್ಯೋಧನ ಭೂಪತಿ;
ಆತನನ್ನು ನೀನು ನೋಡು

ವ|| ಮತ್ತಿತ್ತ ಮಿಂಚಂ ತಟ್ಟಿ ಮೆಡಱಿದಂತೆ ಸುತ್ತಿಱಿದ ಕಾಲ್ಗಾಪಿನ ಕಡಿತಲೆಯ ಬಳಸಿದಗಣ್ಯ ಪಣ್ಯಾಂಗನಾಜನದ ನಡುವೆ ಮಣಿಮಯಪೀಠಂಗಳನೇಱಿ-

ವಚನ:ಪದವಿಭಾಗ-

ಅರ್ಥ:ಮತ್ತೆ ಅತ್ತ ಮಿಂಚಂ ತಟ್ಟಿ ಮೆಡಱಿದಂತೆ (ಮಿಂಚನ್ನು ತಡಿಕೆಯಾಗಿ ಹೆಣೆದಹಾಗೆ) ಸುತ್ತಿಱಿದ

(ಸುತ್ತ ಇರಿದ-ಕತ್ತಿಯ?ನ್ನು ಹಿಡಿದಿರುವ?) ಕಾಲ್ಗಾಪಿನ(ಕಾವಲಿನ) ಕಡಿತಲೆಯ (ಕತ್ತಿಯನ್ನು ಹೊಂದಿದ)ಬಳಸಿದ ಅಗಣ್ಯ (ಬಹಳ) ಪಣ್ಯಾಂಗನಾ ಜನದ (ವೇಶ್ಯೆಯರ) ನಡುವೆ ಮಣಿಮಯ ಪೀಠಂಗಳನು ಏಱ (ಹತ್ತಿ)-

ವಚನ:ಅರ್ಥ:ಈ ಕಡೆ ಮಿಂಚನ್ನು ತಡಿಕೆಯಾಗಿ

ಹೆಣೆದಹಾಗೆ
ಮುಸುಕಿದ್ದಾರೆಯೋ
ಎನ್ನುವಂತಿರುವ
ಅಸಂಖ್ಯಾತರಾದ
ವೇಶ್ಯಾಸ್ತ್ರೀಯರ ಮಧ್ಯೆ ಮತ್ತು
ಕತ್ತಿಹಿಡಿದ ಕಾವಲುಗಾರರ
ನಡುವೆ ರತ್ನಖಚಿತವಾದ
ಪೀಠದ ಮೇಲೆ-
(ಕುಳಿತಿರುವವರು)

ಕಂ|| ಆಯತ ಯದುವಂಶ
ಕುಲ

ಶ್ರೀಯಂ

ತಚ್ಕೈಸಿದದಟರತಿರಥರವರ|

ತ್ಯಾಯತಭುಜಪರಿಘರ್ ನಾ

ರಾಯಣ

ಬಲದೇವರೆಂಬರಂಬುಜವದ

ನೇ|| ೫೬||

ಪದ್ಯ-00:ಪದವಿಭಾಗ-

ಅರ್ಥ:ಆಯತ

(ವಿಸ್ತಾರವಾದ) ಯದುವಂಶ

ಕುಲಶ್ರೀಯಂ ತಚ್ಕೈಸಿದ

(ತಳ್ಕೈಸಿದ - ಆಲಂಗಿಸಿದ)

ಅದಟರು ಅತಿರಥರು ಅವರ
ಅತ್ಯಾಯತ (ಬಹಳ
ದೀರ್ಘವಾದ) ಭುಜಪರಿಘರ್
(ಪರಿಘದಂತಿರುವ
ಭುಜವುಳ್ಳವರು) ನಾರಾಯಣ
ಬಲದೇವರೆಂಬರ್ (ಕೃಷ್ಣ
ಬಲರಾಮರು)
ಅಂಬುಜವದನೇ(ದ್ರೌಪದಿ
ಯೇ)()

ಪದ್ಯ-00:ಅರ್ಥ:
ಕುಳಿತಿರುವವರು ವಿಸ್ತಾರವಾದ

ಯದುಲಕ್ಷ್ಮಿಯನ್ನು
ಆಲಿಂಗನಮಾಡಿಕೊಂಡಿರುವ
ಶೂರರೂ ಪರಾಕ್ರಮಿಗಳೂ
ದೀರ್ಘವಾದ
ಪರಿಘಾಯುಧದಂತಿರುವ
ತೋಳುಗಳನ್ನುಳ್ಳವರೂ
ಆದವರು
ಕೃಷ್ಣಬಲರಾಮರೆಂಬುವರು.

ವ|| ಎಂದು ಕಿಱಿದಂತರಂ ಪೋಗಿ-

ವಚನ:ಪದವಿಭಾಗ-

ಅರ್ಥ:ಎಂದು ಕಿಱಿದು

(ಸ್ವಲ್ಪ) ಅಂತರಂ ಪೋಗಿ-

ವಚನ:ಅರ್ಥ: ಎಂದು

ಸ್ವಲ್ಪದೂರ ಹೋಗಿ

ಉ|| ಇಂತಿವರಿನ್ನರೀ

ದೊರೆಯರೆಂದೆಱಿವಂತಿರೆ

ಪೇೞ್ದುವೇೞ್ದು ರಾ

ಜಾಂತರದಿಂದೆ ರಾಜಸುತೆಯಂ

ನಯದಿಂದವಳುಯ್ದಳಂತು ಸ|

ದ್ಭ್ಯಾಂತ ಸಮೀರಣೋತ್ಥಿತ ವಿಶಾಲ ವಿಳೋಳ ತರಂಗ ರೇಖೆ ಪ ದ್ಮಾಂತರದಿಂದಮಿಂಬಱಿದು ಮಾನಸಹಂಸಿಯನುಯ್ವಮಾ ರ್ಗದಿಂ|| ೫೭||

ಪದ್ಯ-00:ಪದವಿಭಾಗ-ಅರ್ಥ:ಇಂತು ಇವರು ಇನ್ನರು (ಇಂತಹವರು) ಈ ದೊರೆಯರು(ಯೋಗ್ಯತೆಯುಳ್ಳವರು) ಎಂದು ಎಱಿವಂತಿರೆ

ಪೇಟ್ಟುವೇಟ್ಟು (ತಿಳಿಯುವ
ಹಾಗೆ ಹೇಳಿ ಹೇಳಿ)
ರಾಜಾಂತರದಿಂದೆ
ರಾಜಸುತೆಯಂ
(ರಾಜಕುಮಾರಿ
ದ್ರೌಪದಿಯನ್ನು) ನಯದಿಂದ
ಅವಳು ಉಯ್ದಳು
ಅಂತು(ಕರೆದುಕೊಂಡು
ಹೋದಳು, ಅಂತು-
ಹೇಗೆಂದರೆ-) ಸದ್ಭಾಂತ
(ಚೆನ್ನಾಗಿ ಬೀಸಿದ)

ಸಮೀರಣೋತ್ಥಿತ
(ಸಮೀರಣಯಿಂದ-ಗಾಳಿ
ಉತ್ಥಿತ-ಮೇಲೆದ್ದ) ವಿಶಾಲ
ವಿಳೋಳ (ಓಲಾಡುವ)
ತರಂಗ ರೇಖೆ (ಅಲೆಗಳ
ಸಾಲಿನಂತೆ) ಪದ್ಮಾಂತರದಿಂದ
(ಒಂದು ಕಮಲದಿಂದ
ಮತ್ತೊಂದು ಪದ್ಮಕ್ಕೆ)
ಇಂಬಱಿದು
(ಸಮಯತಿಳಿದು)
ಮಾನಸಹಂಸಿಯಂ

ಉಯ್ಯುವಮಾರ್ಗದಿಂ(ಕರೆದು ಕೊಂಡು ಹೋಗುವ ರೀತಿಯಿಂದ)

ಪದ್ಯ-00:ಅರ್ಥ: ಇವರು ಇಂತಹವರು, ಈ ಯೋಗ್ಯತೆಯುಳ್ಳವರು ಎಂದು ಚೆನ್ನಾಗಿ ತಿಳಿಯುವ ಹಾಗೆ ಹೇಳಿ ಹೇಳಿ, ರಾಜರೊಬ್ಬರಿಂದ ಮುಂದಕ್ಕೆ ಆ ದ್ರೌಪದಿಯನ್ನು ಚೆನ್ನಾಗಿ ಬೀಸಿದ ಗಾಳಿಯಿಂದ ಮೇಲಕ್ಕೆದ್ದ ವಿಶಾಲವೂ

ಚಂಚಲವ್ರೂ ಆದ ಅಲೆಗಳ
ಸಾಲು ಹದವರಿತು
ಕಮಲದಿಂದ ಮೇಲಕ್ಕೆ
ರಾಜಹಂಸವನ್ನು
ಸೆಳೆದೊಯ್ಯುವ/
ಕರೆದುಕೊಂಡು ಹೋಗುವ
ರೀತಿಯಲ್ಲಿ ಈ ಚೇಟಿಯು
ಕರೆದುಕೊಂಡು ಹೋದಳು.

ವ|| ಅಂತು ನೆರೆದರಸುಮಕ್ಕಳಾರುಮಂ ಮೆಚ್ಚದೆ ಮಗುೞೆವರೆ

ದ್ರುಪದನಿದಳೆಲ್ಲ ಮೇನಿಂ
ಹೋಮಾಗ್ನಿಸಂಭವಮಪ್ಪ
ದಿವ್ಯಚಾಪಮನೇಱಿಸಿಯುವಿ
ಯಯ್ದು
ಶರದೊಳಾಕಾಶದೊಳ್
ನಲಿದು ಪೊಳೆಯುತ್ತಿರ್ಪ
ಜಂತ್ರದ ಮೀನನಿಸಲಾರ್ಪೊಡೆ
ಬಂದೇಱಿಸಿಯು ಮೆಚ್ಚು
ಗೆಲ್ಲಂಗೊಡೆನ್ನ ಮಗಳಂ
ಮದುವೆಯಪ್ಪುದೆಂಬುದುಮಾ
ಮಾಮೆ

ಬಿಲ್ಲನೇಱಿಸಿದಪೆವೆಂದನಿಬ ರಾನುಮರಸುಮಕ್ಕಳ್ ಬಂದು-

ವಚನ:ಪದವಿಭಾಗ-

ಅರ್ಥ:ಅಂತು ನೆರೆದ ಅರಸುಮಕ್ಕಳ ಆರುಮಂ ಮೆಚ್ಚದೆ (ಯಾರನ್ನೂ ಮೆಚ್ಚದೆ) ಮಗುೞೆ ವರೆ (ಹಿಂತಿರುಗಿಬರಲು) ದ್ರುಪದನು ಇದಳು ಎಲ್ಲಮ್ ಏನಿಂ (ಇದರಿಂದ ಏನಿದೆ!) ಹೋಮಾಗ್ನಿ ಸಂಭವಮಪ್ಪ

ದಿವ್ಯಚಾಪಮನು
(ಅಗ್ನಿಕುಂಡದಲ್ಲಿ ಹುಟ್ಟಿದ
ದಿವ್ಯಧನುವನ್ನು)
ಏಱಿಸಿಯುವಿಯ (ಧನುವಿನ
ಹೆದೆಯನ್ನು ಏರಿಸಿ) ಅಯ್ದು
ಶರದೊಳು (ಐದು ಬಾಣದಲ್ಲಿ)
ಆಕಾಶದೊಳ್ ನಲಿದು
ಪೊಳೆಯುತ್ತಿರ್ಪ ಜಂತ್ರದ
ಮೀನಂ ಇಸಲಾರ್ಪೊಡೆ
(ಮೇಲೆ ಹೊಳೆಯುವ
ಯಂತ್ರದ ಮೀನನ್ನು

ಹೊಡೆಯಲು ಶಕ್ತರಾದರೆ) ಬಂದು ಏಱಿಸಿಯು ಮೆಚ್ಚು ಗೆಲ್ಲಂಗೊಡು ಎನ್ನ ಮಗಳಂ ಮದುವೆಯಪ್ಪುದು ಎಂಬುದುಂ ಆಮಾಮೆ (ಆಂ ಆಮೆ- ನಾನು ನಾನೇ) ಬಿಲ್ಲನು ಏಱಿಸಿದಪೆವು ಎಂದು ಅನಿಬರಾನುಂ (ಎಷ್ಟೊ ಜನ) ಅರಸುಮಕ್ಕಳ್ ಬಂದು-

ವಚನ:ಅರ್ಥ:ಹಾಗೆ ಅಲ್ಲಿ ಸೇರಿದ್ದ ರಾಜಕುಮಾರರಲ್ಲಿ

ಯಾರನ್ನೂ ಮೆಚ್ಚದೆ
ದ್ರೌಪದಿಯು ಹಿಂದಿರುಗಿ
ಬರಲು ದ್ರುಪದನು
ಇದರಲ್ಲೇನಿದೆ, ಅಗ್ನಿಕುಂಡದಲ್ಲಿ
ಹುಟ್ಟಿದ ದಿವ್ಯಧನುವನ್ನು
ಹೆದೆಯೇರಿಸಿ ಈ ಅಯ್ದು
ಬಾಣಗಳಿಂದ ಆಕಾಶದಲ್ಲಿ
ನಲಿದು ಹೊಳೆಯುತ್ತಿರುವ
ಯಂತ್ರದ ಮೀನನ್ನು
ಹೊಡೆಯಲು ಸಮರ್ಥನಾದರೆ
ಬಂದು ಬಿಲ್ಲನ್ನು ಹೂಡಿ

ಜಯವನ್ನು ಪಡೆದು ನನ್ನ ಮಗಳನ್ನು ಮದುವೆಯಾಗಬಹುದು ಎಂಬುದಾಗಿ ಸಾರಿದನು. ನಾನು, ನಾನೇ, ಬಿಲ್ಲನ್ನು ಏರಿಸುತ್ತೇವೆಂದು ಎಷ್ಟೋ ಜನ ರಾಜಕುಮಾರರು ಬಂದು - (ಬಂದರು).

ಉ|| ಏಱಿಪೆವೆಂದರ್ ನೆಲದಿನೆತ್ತಲುಮಾಱದೆ ಬಿಱ್ದು ನೆತ್ತರಂ

ಕಾಱಿಯುಮೆತ್ತಿ
ಕಯ್ಯುಡಿದುಮಾಗಳೆ
ಕಾಲುಡಿದುಂ ಬಱಿಲ್ದು ಪ
ಲ್ಲಾಱ
ಪೊಡಪುರ್ಗೆಟ್ಟುಸಿರಲಪ್ಪೊಡ
ಮಾಱದೆ ಪೋದೊಡಾಗಳಾ
ನೇಱಿಪೆನೆಂದು ಪೊಚ್ಚಱಿಸಿ
ಬಂದು
ಸುಯೋಧನನುಗ್ರಚಾಪಮಂ||
೫೮||

ಪದ್ಯ-00:ಪದವಿಭಾಗ-ಅರ್ಥ:ಏೞಿಪೆವ್ ಎಂದರ್, ನೆಲದಿಂ ಎತ್ತಲುಂ ಆಱದೆ ಬಿೞ್ದು (ಎತ್ತಲೂ ಸಮರ್ಥರಾಗದೆ ಬಿದ್ದು), ನೆತ್ತರಂ ಕಾಱಿಯುಂ, ಎತ್ತಿ ಕಯ್ಯ್ಯುಡಿದುಂ ಆಗಳೆ ಕಾಲುಡಿದುಂ, (ಕೈಮುರಿದು ಕಾಲುಮುರಿದು) ಬೞಲ್ದು (ಬಳಲಿ) ಪಲ್ಲಾಱ (ಹಲ್ಲು ಆರಿ-ಒಣಗಿ) ಪೊಡರ್ಪುಗೆಟ್ಟು ()

ಉಸಿರಲು ಅಪ್ಪೊಡಮಾಡದೆ
(ಮಾತಾಡಲಾರದೆ)
ಪೋದೊಡೆ (ಹೋದರೆ)
ಆಗಳ್ ಆನ್ ಏೞಿಪೆನೆಂದು
ಪೊಚ್ಚಱಿಸಿ (ನಾನು ಹದೆ
ಏರಿಸುವೆನೆಂದು
ಶಕ್ತಿಯುತವಾಗಿ) ಬಂದು
ಸುಯೋಧನನು
ಉಗ್ರಚಾಪಮಂ
ಪದ್ಯ-00:ಅರ್ಥ:
ಏರಿಸುತ್ತೇನೆ ಎಂದವರು

ಅದನ್ನು ನೆಲದಿಂದ ಎತ್ತಲೂ ಸಮರ್ಥರಾಗದೆ ಬಿದ್ದು ರಕ್ತವನ್ನು ಕಾರಿ, ಕೈಮುರಿದು ಕಾಲುಮುರಿದು ಬಳಲಿ ಬಾಯೊಣಗಿ ಶಕ್ತಿಗುಂದಿ ಉಸಿರು ಕಟ್ಟಿ, ಹೋಗಲು ದುರ್ಯೋಧನನು ನಾನು ಏರಿಸುತ್ತೇನೆಂದು ಜಂಭದಿಂದ ಬಂದನು. ಆ ಭಯಂಕರವಾದ ಬಿಲ್ಲನ್ನು-

ವ|| ಮೂಱು ಸೂಱು ಬಲವಂದು ಪೊಡಮಟ್ಟು-

ವಚನ:ಪದವಿಭಾಗ-

ಅರ್ಥ:ಮೂಱು ಸೂಱು(ಮೂರು ಸಲ) ಬಲವಂದು (ಪ್ರದಕ್ಷಿಣೆ ಮಾಡಿ) ಪೊಡಮಟ್ಟು(ನಮಸ್ಕರಿಸಿ)-

ವಚನ:ಅರ್ಥ:ಮೂರು ಸಲ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ-

ಕಂ|| ಪಿಡಿದಾರ್ಪ ಭರದಿನೆತ್ತ

ಲ್ಕೊಡರಿಸಿದೊಡೆ

ನೆಲದಿನಣಮೆ ತಳರದೆ ಬಿಲ್

ನಿ|

ಲ್ತೊಡೆ ಗುಡು ಗುಡು ಗುಡು

ಗೊಳ್ಳೆಂ

ಡೊಡನಾರೆ ಸುಯೋಧನಂ

ಕರಂ ಸಿಗ್ಗಾದಂ|| ೫೯||

ಪದ್ಯ-00:ಪದವಿಭಾಗ-

ಅರ್ಥ:ಪಿಡಿದು ಆರ್ಪ

(ಕೈಲಾಗುವಷ್ಟು) ಭರದಿಂ

ಎತ್ತಲ್ಕೆ ಒಡರಿಸಿದೊಡೆ

(ಪ್ರಯತ್ನಪಟ್ಟಾಗ) ನೆಲದಿಂ ಅಣಮೆ (ಕೊಂಚವೂ) ತಳರದೆ (ಅಲುಗದೆ) ಬಿಲ್ ನಿಲ್ವೊಡೆ (ಅದು ನೆಲದಿಂದ ಕೊಂಚವೂ ಅಲುಗದೆ ನಿಂತಾಗ-) ಗುಡು ಗುಡು ಗುಡು ಗೊಳ್ಳೆಂಡು ಒಡನೆ ಆರೆ (ಕೂಗಿದಾ) ಸುಯೋಧನಂ ಕರಂ (ಬಹಳ) ಸಿಗ್ಗಾದಂ (ಲಜ್ಜಿತನಾದನು).

ಪದ್ಯ-00:ಅರ್ಥ:(ಬಿಲ್ಲನ್ನು) ಹಿಡಿದು ತನ್ನ ಕೈಲಾಗುವಷ್ಟುಶಕ್ತಿ ಉಪಯೋಗಿಸಿ ವೇಗದಿಂದ ಎತ್ತಲು ಪ್ರಯತ್ನಪಟ್ಟಾಗ, ಅದು ನೆಲದಿಂದ ಕೊಂಚವೂ ಅಲುಗದೆ ನಿಂತಾಗ-ಗುಡುಗುಡುಗುಡುಗೊಳ್ಳೆಂದು ನೋಡುತ್ತಿದ್ದವರು ಕೂಗಿದಾಗ, ದುರ್ಯೋಧನನು ವಿಶೇಷವಾಗಿ ಲಜ್ಜಿತನಾದನು.

ವ|| ಆಗಿ ಪೋಗಿ ಕರ್ಣನ ಮೊಗಮಂ ನೋಡಿದೊಡೆ ಕರ್ಣನಾಳ್ದನ ಸಿಗ್ಗಾದ ಮೊಗಮಂ ಕಂಡು-

ವಚನ:ಪದವಿಭಾಗ-

ಅರ್ಥ:ಆಗಿ ಪೋಗಿ ಕರ್ಣನ ಮೊಗಮಂ ನೋಡಿದೊಡೆ ಕರ್ಣನು ಆಳ್ದನ ಸಿಗ್ಗಾದ (ಸ್ವಾಮಿಯ ನಾಚಿಕೆಯ) ಮೊಗಮಂ ಕಂಡು-

ವಚನ:ಅರ್ಥ:ದುರ್ಯೋಧನ
ನು ಕರ್ಣನ ಮುಖವನ್ನು
ನೋಡಿದನು. ಕರ್ಣನು
ಸ್ವಾಮಿಯ ನಾಚಿದ
ಮೊಗವನ್ನು ನೋಡಿ

ಕಂ|| ಆನೇೞ್ಪೆನೆಂದಾ ಕಾ
ನೀನಂ ಬಂದೆತ್ತಿ ಬಿಲ್ಲನೇೞಿಸಿ
ತೆಗೆಯಲ್|
ತಾನಾರ್ತನಿಲ್ಲ ತೆಗೆವಂ
ತಾ ನೃಪತಿಗಳಳರಿಗನಿದಿರೊಳೇಂ
ಪುಟ್ಟಿದರೇ|| ೬೦||

ಪದ್ಯ-00:ಪದವಿಭಾಗ-ಅರ್ಥ: ಆನು ಏಱಿಪೆನು (ಹೆದೆಏರಿಸುತ್ತೇನೆ) ಎಂದು ಆ ಕಾನೀನಂ (ಮದುವೆಗೆ ಮೊದಲೇ ಹುಟ್ಟಿದವನು-ಕರ್ಣ) ಬಂದು ಎತ್ತಿ ಬಿಲ್ಲನೇಱಿಸಿ ತೆಗೆಯಲ್| ತಾನು ಆರ್ತನಿಲ್ಲ (ಸಮರ್ಥನಾಗಲಿಲ್ಲ) ತೆಗೆವಂತೆ (ಬಿಲ್ಲನ್ನು ಸೆಳೆಯಲು) ಆ ನೃಪತಿಗಳು ಅರಿಗನ

(ಅರಿಕೇಸರಿಯ/ ಅರ್ಜುನನ) ಇದಿರೊಳೇಂ ಪುಟ್ಟಿದರೇ(ಅರ್ಜುನನ ಎದುರಾಗಿ ಅವನಿಗಿಂತ ಸಮರ್ಥರಾಗಿ ಹುಟ್ಟಿದ್ದಾರೆಯೇನು?)

ಪದ್ಯ-00:ಅರ್ಥ:ಕರ್ಣನು, ನಾನು ಹೆದೆ ಏರಿಸುತ್ತೇನೆಂದು ಬಂದು ಎತ್ತಿ ಏರಿಸಲು ಶಕ್ತನಾಗಲಿಲ್ಲ. ಹಾಗೆ ಬಿಲ್ಲನ್ನು ಸೆಳೆಯಲು, ಆ ರಾಜರುಗಳು

ಅರ್ಜುನನ ಎದುರಾಗಿ

ಅವನಿಗಿಂತ ಸಮರ್ಥರಾಗಿ

ಹುಟ್ಟಿದ್ದಾರೆಯೇನು?

ವ|| ಅಂತಾ ಬಿಲ್ಲಂ

ಪಿಡಿದವರೆಲ್ಲಂ

ಬಿಲ್ಲುಂಬೆಱಗುಮಾಗಿ ಸಿಗ್ಗಾಗಿ

ಪೋಗಿ

ತಂತಮ್ಮಿರ್ಪೆಡೆಯೊಳಿರೆ

ಪಾಂಚಾಳರಾಜನೀ ನೆರೆದರ

ಸುಮಕ್ಕಳೊಳಾರುವಿ

ಬಿಲ್ಲನೇಱಿಸಲಾರ್ತರಿಲ್ಲಮೀ

ಜನವಡೆಯೊಳುಆರಾನುಂ ಈ ಬಿಲ್ಲನೇಱಿಸಲಾರ್ಪೊಡೆ ಬನ್ನಿಮೆಂದು ಸಾಱುವುದುಂ|

ವಚನ:ಪದವಿಭಾಗ-

ಅರ್ಥ:ಅಂತು ಆ ಬಿಲ್ಲಂ ಪಿಡಿದವರೆಲ್ಲಂ (ಹಿಡಿದವರೆಲ್ಲರೂ) ಬಿಲ್ಲುಂ ಬೆಱಗುಮಾಗಿ (ಬಿಲ್ಲಿನಿಂದ ಅಚ್ಚರಿಪಟ್ಟು ತಳಮಳಗೊಂಡು) ಸಿಗ್ಗಾಗಿ (ನಾಚಿಕೆಪಟ್ಟು) ಪೋಗಿ

ತಂತಮ್ಮ ಇರ್ಪೆಡೆಯೊಳು ಇರೆ (ತಾವು ತಾವು ಇದ್ದ ಸ್ಥಳಗಳಲ್ಲಿಯೇಇರಲು,) ಪಾಂಚಾಳರಾಜನು ಈ ನೆರೆದ(ಗುಂಪಿನಲ್ಲಿ) ಅರಸುಮಕ್ಕಳೊಳು ಆರುವಿ (ಯಾರೂ) ಬಿಲ್ಲನು ಏಱಿಸಲು ಆರ್ತರಿಲ್ಲಂ; ಈ ಜನವಡೆಯೊಳು (ಗುಂಪಿನಲ್ಲಿ) ಆರಾನುಂ (ಯಾರಾದರೂ) ಈ ಬಿಲ್ಲನು ಏಱಿಸಲು

(ಬಿಲ್ಲನ್ನು ಹೆದೆ ಏರಿಸುವ)
ಆರ್ಪೊಡೆ (ಸಮರ್ಥರಾದರೆ)
ಬನ್ನಿಂ ಎಂದು ಸಾಱುವುದುಂ-
ವಚನ:ಅರ್ಥ:ಹಾಗೆ ಆ
ಬಿಲ್ಲನ್ನು ಹಿಡಿದವರೆಲ್ಲರೂ
ಅಚ್ಚರಿಪಟ್ಟು
ತಳಮಳಗೊಂಡು, ಲಜ್ಜಿತರಾಗಿ
ಹೋಗಿ ತಾವು ತಾವು ಇದ್ದ
ಸ್ಥಳಗಳಲ್ಲಿದ್ದರು. ಆಗ
ದ್ರುಪದನು ಇಲ್ಲಿರುವ
ರಾಜಕುಮಾರರಲ್ಲಿ ಈ

ಬಿಲ್ಲನ್ನೇರಿಸಲು ಯಾರೂ ಶಕ್ತರಾಗಲಿಲ್ಲ. ಈ ಜನದ ಗುಂಪಿನಲ್ಲಿ ಯಾರಾದರೂ ಈ ಬಿಲ್ಲನ್ನು ಹೆದೆ ಏರಿಸುವ ಶಕ್ತಿಯಿದ್ದರೆ ಬನ್ನಿ ಎಂದು ಸಾರಿದನು.

ಸ್ಪರ್ಧೆಗೆ ಅರ್ಜುನನ ಪ್ರವೇಶ

ಚಂ|| ಮುಸುಕಿದ ನೀರದಾವಳಿಗಳಂ ಕಿರಣಂಗಳೊಳೊತ್ತಿ ತೇಜಮ

ವಿಸುವಿನಮಾಗಳೊರ್ಮೊದ

ಲೆ ಮೂಡುವ ಬಾಳ

ದೀನೇಶಬಿಂಬದೊಂ|

ದೆಸಕದಿನಾ ದ್ವಿಜನ್ಮಸಭೆಯಂ

ಪೊಱಮಟ್ಟೊಡೆ

ಮಾಸಿದಂದಮುಂ

ಪಸದನದಂತೆ ಕಣ್ಗೆಸೆದು

ತೋಱಿದುದಾ

ಕದನತ್ರಿಣೇತ್ರನಾ|| ೬೧||

ಪದ್ಯ-00:ಪದವಿಭಾಗ-

ಅರ್ಥ:ಮುಸುಕಿದ

(ಮುಚ್ಚಿಕೊಂಡ)
ನೀರದಾವಳಿಗಳಂ (ನೀರದ-
ಮೋಡಗಳ ಸಾಲನ್ನು)
ಕಿರಣಂಗಳೊಳು ಒತ್ತಿ
(ಕಿರಣಗಳಲ್ಲಿ ಒತ್ತಿ) ತೇಜಂ
ಅರ್ವಿಸುವಿನಂ ಆಗಳ್
ಒರ್ಮೊದಲೆ
ಮೂಡುವ(ಪ್ರಕಾಶವು
ವ್ಯಾಪಿಸುತ್ತಿರಲು ಆಗ ಒಟ್ಟಿಗೆ
ಹುಟ್ಟುವ) ಬಾಳ
ದಿನೇಶಬಿಂಬದ ಒಂದು

ಎಸಕದಿಂ ಆ (ಬಾಲ
ಸೂರ್ಯನಬಿಂಬದ
ಶೋಭೆಯಿಂದ) ದ್ವಿಜನ್ಮ
ಸಭೆಯಂ (ಬ್ರಾಹದಮಣರ
ಸಭೆಯಿಂದ) ಪೊಱಮಟ್ಟೊಡೆ
(ಹೊರಬಂದರೆ,) ಮಾಸಿದ
ಅಂದಮುಂ (ರೀತಿಯುಲ್ಲಿ)
ಪಸದನದಂತೆ
(ಅಲಂಕಾರದಂತೆ) ಕಣ್ಗೆ
ಎಸೆದು ತೋಱಿದುದು (ಕಣ್ಣಿಗೆ
ಪ್ರಕಾಶಮಾನವಾಗಿ ತೋರಿತು.

ಹೇಗೆಂದರೆ-) ಕದನತ್ರಿಣೇತ್ರನಾ
(ಕದನ ತ್ರಿಣೇತ್ರನಾ-
ಯುದ್ಧದಲ್ಲಿ ರುದ್ರನಂತಿರುವ
ಅರ್ಜುನನಾ)

ಪದ್ಯ-00:ಅರ್ಥ:
ಮುಚ್ಚಿಕೊಂಡಿರುವ
ಮೋಡಗಳ ಸಮೂಹವನ್ನು
ಕಿರಣಗಳಿಂದ ಒತ್ತಿ ತೇಜಸ್ಸು
ಪ್ರಕಾಶಮಾನವಾಗುತ್ತಿರಲು
ಇದ್ದಕ್ಕಿದ್ದ ಹಾಗೆ
ಉದಯವಾಗುವ

ಬಾಲಸೂರ್ಯ
ಬಿಂಬದೊಂದು ರೀತಿಯಲ್ಲಿ
ಬ್ರಾಹ್ಮಣ ಸಭೆಯಿಂದ
ಅರ್ಜುನನು
ಹೊರಟುಬಂದನು.
ಮಲಿನವಾಗಿದ್ದ ಆ
ಕದನತ್ರಿಣೇತ್ರನ/ ಅರ್ಜುನನ
ರೀತಿಯು
ಅಲಂಕಾರಮಾಡಿದಂತೆಯೇ,
ಕಣ್ಣಿಗೆ ಪ್ರಕಾಶಮಾನವಾಗಿ
ತೋರಿತು.

ಕುಮಾರವ್ಯಾಸನ ಹಾಸ್ಯಭರಿತ ವರ್ಣನೆ:

ಏಳಿ ಭುಜಬಲವುಳ್ಳವರು ವಿಪ್ರಾಳಿಯಲಿ ಬಿಲುವಿಡಿದು
ಯಂತ್ರದ ಕೋಲುಗಳ ಕೇಣಿಪುದು ಎಂದು,
ದೃಷ್ಟದ್ಯುಮ್ನನು ಸಾರಿದಾಗ:
ವಿಪ್ರವೇಷದ ಅರ್ಜುನನು ಸ್ಪರ್ಧೆಯ ಬಿಲ್ಲನ್ನು
ಎತ್ತಲು ಹೊರಟು ಎದ್ದುನಿಂತಾಗ-

"'ಮೆಲ್ಲನೆ ಧೋತ್ರದರ್ಭೆಯಗೂಡ ಸಂವರಸುತ್ತ/ ಸರಿಪಡಿಸಿಕೊಂಡ'";
ಆಗ ಉಳಿದ ಬ್ರಾಹ್ಮಣ ವಟುಗಳು/ಹುಡುಗರು ಇವನನ್ನು ಅಪಹಾಸ್ಯಮಾ
ಅರ್ಜುನ ಪಂಚೆ ಸರಿಪಡಿಸಿಕೊಳ್ಳಲು ಮಾತ್ರಾ
ಎದ್ದನೆಂದು ಭಾವಿಸಿದರು. ಆದರೆ ಹಾಸ್ಯಕ್ಕಾಗಿ ಛೇಡಿಸುವರು:

ಏನು ಸಿದ್ಧಿಯ ಉಪಾದ್ಯರೆದ್ದಿರಿ (ಉಪಾದ್ಯರು ಎದ್ದಿರಿ)
ದೇನು ಧನುವಿಂಗಲ್ಲಲೇ ತಾ
(ಎದ್ದಿರಿ, ಇದೇನು ಸುಮ್ಮನೆ ಎದ್ದಿರಾ, ಬಿಲ್ಲಿಗಾಗಿ ಅಲ್ಲ ಅಲ್ಲವೇ?)

ನೇನು ಮನದಂಘವಣೆ ಬಯಸಿದಿರೇ ನಿತಂಬಿನಿಯ||
(ತಾನ್- ಏನು ಮನಸಸ್ಸಿನ ಅಂಗವಣೆ- ಬಯಕೆ? ಸುಂದರಿಯನ್ನು ಬಯಸಿದಿ

ವೈನತೇಯನ ವಿಗಡಿಸಿದ ವಿಷ
ವೇನು ಸದರವೋ ಹಾವಡಿಗರಿಗಿ
ದೇನು ನಿಮ್ಮುತ್ಸಾಹವೆಂದುದು ದೂರ್ತ ವಟುನಿಕರ||**(೧-೧೫-೧೦)**

ಅವನು ನಿಜವಾಗಿ ಬಿಲ್ಲೆತ್ತಲು ಹೊರಟಿದ್ದಾನೆಂದು ತಿಳಿದಾಗ
ದಿಗ್ಭ್ರಮೆಗೊಳ್ಳುವರು. ಗರುಡನಂತಿರುವ ಮಾಗಧ ದುರ್ಯೋಧನ ಕರ್ಣರ
ವಿಗಡಿಸಿದ/ಭಂಗಪಡಿಸಿದ ವಿಷಸರ್ಪದಂತಿದೆ ಧನು
ಅದನ್ನು ಪಳಗಿಸುವ ಹಾವಾಡಿಗ-ಸದರವೋ ಸುಲಭವಲ್ಲ ಎಂದರು;

ಉದ್ಭ್ರಮಿತನು ಇವ- ಶ್ರೋತ್ರೀಯರ ಸಭೆಗೆ ಹಳಿವ (ಕಳಂಕ) ತರುವ ಎಂದರು.

ವ|| ಅಂತು ಪೊಱಮಡುವರಾತಿಕಾಲಾನಲನಂ ಕಂಡು ಕಡ್ಡುವಂದ ದೊಡ್ಡರೆಲ್ಲಂ ಮುಸುಱಿ-

ವಚನ:ಪದವಿಭಾಗ-

ಅರ್ಥ:ಅಂತು ಪೊಱಮಡುವ ಆರಾತಿಕಾಲ ಅನಲನಂ (ಶತ್ರುನಾಶಕ/ಪ್ರಳಯಕಾಲದ ಅಗ್ನಿಯನ್ನು/ ಅರ್ಜುನನ್ನು) ಕಂಡು ಕಡ್ಡುವಂದ

(ಗಡ್ಡಬಂದ) ದೊಡ್ಡರೆಲ್ಲಂ

(ವೃದ್ಧರೆಲ್ಲರೂ) ಮುಸುಱಿ

(ಮುತ್ತಿ)-

ವಚನ:ಅರ್ಥ:ಹಾಗೆ

ಹೊರಟು ಬರುವ

ಪ್ರಳಯಕಾಲದ

ಅಗ್ನಿಯಂತಿರುವ ಅರ್ಜುನನ್ನು

ಕಂಡು ಗಡ್ಡಬಂದ ವೃದ್ಧರೆಲ್ಲ

ಮುತ್ತಿಕೊಂಡು-

ಕಂ|| ಸಂಗತಸತ್ವರ್ ಕುರು ರಾ

ಜಂಗಂ

ಕರ್ಣಂಗಮೇೞ್ಸಿಪಲ್ಕರಿದನಿ

ದಂ|

ತಾಂ ಗಡಮೇೞ್ಸಿಪನೀ ಪಾ

ರ್ವಂಗಕ್ಕಟ ಮೆಯ್ಯ್ಯೊಳೊಂದು

ಮರುಳುಂಟಕ್ಕುಂ|| ೬೨||

ಪದ್ಯ-00:ಪದವಿಭಾಗ-

ಅರ್ಥ: ಸಂಗತಸತ್ವರ್

(ಸಶಕ್ತರಾದ) ಕುರು ರಾಜಂಗಂ

ಕರ್ಣಂಗಂ (ಸಶಕ್ತರಾದ

ಕುರುರಾಜ ದುರ್ಯೋಧನ

ಕರ್ಣರಿಗೆ) ಏಱಿಸಲ್ಕೆ
ಅರಿದನ್ ಇದಂ ತಾಂ
(ಏರಿಸುವುದಕ್ಕೆ ಅಸಾಧ್ಯವಾದ
ಇದನ್ನು ಇವನು) ತಾಂ ಗಡಂ
ಏಱಿಪಂ? (ತಾನು ಬಿಲ್ಲನ್ನು
ಎತ್ತುವನೇ ಗಡ!) ಈ
ಪಾರ್ವಂಗೆ ಅಕ್ಕಟ
ಮೆಯ್ಯೊಳೊಂದು ಮರುಳು
(ಭೂತ) ಉಂಟಕ್ಕುಂ (ಈ
ಬ್ರಾಹ್ಮಣನಿಗೆ, ಅಯ್ಯೋ,
ಶರೀರದಲ್ಲಿ ಪಿಶಾಚಿ

ಸೇರಿಕೊಂಡಿರಬೇಕು)-
(ಎಂದರು)
ಪದ್ಯ-00:ಅರ್ಥ:
ಸತ್ವಶಾಲಿಗಳಾದ
ದುರ್ಯೋಧನ ಕರ್ಣರಿಗೂ
ಏರಿಸುವುದಕ್ಕೆ ಅಸಾಧ್ಯವಾದ
ಇದನ್ನು ಇವನು ಈ
ಹಾರುವನು ಏರಿಸುತ್ತಾನೆಯೇ
ಅಬ್ಬಾ! ಈ ಬ್ರಾಹ್ಮಣನಿಗೆ,
ಅಯ್ಯೋ, ಶರೀರದಲ್ಲಿ ಭೂತ/

ಪಿಶಾಚಿ ಸೇರಿಕೊಂಡಿರಬೇಕು,
ಎಂದರು

ವ|| ಎಂದು ಬಾಯ್ಗೆ ವಂದುದನೆ ನುಡಿಯೆ ರಂಗಭೂಮಿಯ ನಡುವೆ ನಿಂದು ದಿವ್ಯಚಾಪಕ್ಕೆ ಪೊಡವಟ್ಟುವಯವದಿನೆಡಗೆ ಯ್ಯೊಳೆತ್ತಿಕೊಂಡು ತನ್ನ ಬಗೆದ ಕಜ್ಜಮಂ ಗೊಲೆಗೊಳಿಸುವಂತಾ ಬಿಲ್ಲ ಗೊಲೆಯನೇರೆ ನೂಂಕಿ-

ವಚನ:ಪದವಿಭಾಗ-ಅರ್ಥ:ಎಂದು ಬಾಯ್ಗೆ ವಂದುದನೆ ನುಡಿಯೆ; ರಂಗಭೂಮಿಯ ನಡುವೆ ನಿಂದು ದಿವ್ಯಚಾಪಕ್ಕೆ ಪೊಡವಟ್ಟು ಅವಯವದಿಂ (ಶ್ರಮವಿಲ್ಲದೆ) ಎಡಗೆಯ್ಯೊಳು (ಎಡದ ಕೈಯಲ್ಲಿ) ಎತ್ತಿಕೊಂಡು ತನ್ನ ಬಗೆದ ಕಜ್ಜಮಂ (ತಾನು ನಿಶ್ಚಯಿಸಿದ ಕಾರ್ಯವನ್ನು)

ಗೊಲೆಗೊಳಿಸುವಂತೆ (ಕೊನೆಗೊಳಿಸುವಂತೆ), ಆ ಬಿಲ್ಲ ಗೊಲೆಯನೇರೆ ನೂಂಕಿ (ಆ ಬಿಲ್ಲಿನ ತುದಿಯನ್ನು ಎಳೆದು ಏರಿಸಿ ಕಟ್ಟಿ)- **ವಚನ:ಅರ್ಥ:**ಎಂದು ಬಾಯಿಗೆ ಬಂದುದನ್ನು ಆಡಲು- (ಆಡಿದರು)ಅರ್ಜುನನು ರಂಗಸ್ಥಳದ ಮಧ್ಯಭಾಗದಲ್ಲಿ ನಿಂತುಕೊಂಡು ಧನಸ್ಸಿಗೆ

ನಮಸ್ಕಾರಮಾಡಿ ಶ್ರಮವಿಲ್ಲದೆ ಎಡಗೈಯ್ಯಿಂದಲೇ ಎತ್ತಿಕೊಂಡು ತಾನು ಕೈಹಾಕಿದ ಕಾರ್ಯವನ್ನು ಸುಗಮವಾಗಿ ಮುಗಿಸುವಂತೆ ಆ ಬಿಲ್ಲಿನ ತುದಿಯನ್ನು ಎಳೆದು ಏರಿಸಿ ಕಟ್ಟಿ-

ಮ|| ದೆಸೆ ಕಂಪಂಗೊಳೆ

ಕೊಂಡು ದಿವ್ಯಶರಮಂ

ಕರ್ಣಾದಿಗಳ್ ಕಂಡು ಬೆ

ಕ್ಕಸಮಾಗಿರ್ಪಿನಮೊಂದೆ
ಸೂಟಿ ತೆಗೆದಾಕರ್ಣಾಂತಮಂ
ತಾಗೆ ನಿ
ಟ್ಟಿಸಲಾರ್ಗಗಿಸಲಕ್ಕುಮೆಂಬೆ
ಸಕದಾ ಮೀನಂ ಸಮಂತೆಚ್ಚು
ಮೆ
ಚ್ಚಿಸಿದಂ ದೇವರುಮಂ
ಧನುರ್ಧರರುಮಂ
ವಿದ್ವಿಷ್ಟವಿದ್ರಾವಣಂ|| ೬೩||
ಪದ್ಯ-೬೩:ಪದವಿಭಾಗ-
ಅರ್ಥ:(ಅರ್ಜುನನ ಬಾಣ

ಪ್ರಯೋಗ)ದೆಸೆ ಕಂಪಂಗೊಳೆ
(ದಿಕ್ಕುಗಳು ಕಂಪಿಸಲು)
ಕೊಂಡು ದಿವ್ಯಶರಮಂ (ದಿವ್ಯ
ಬಾಣವನ್ನು) ಕರ್ಣಾದಿಗಳ್
ಕಂಡು ಬೆಕ್ಕಸಮಾಗಿರ್ಪಿನಂ
(ಬೆಕ್ಕಸ ಬೆರಗಾಗಲು) ಒಂದೆ
ಸೂಟಿ (ಒಂದೇ ಸಲಕ್ಕೆ)
ತೆಗೆದು ಆಕರ್ಣಾಂತಮಂ ತಾಗೆ
(ತೆಗೆದು ಕಿವಿಗೆ ತಾಗುವಂತೆ
ಕಿವಿಯವರೆಗೆ ಎಳೆದು)
ನಿಟ್ಟಿಸಲು ಆಗರ್ಾಗರ್ೆ ಇಸಲು

ಅಕ್ಕುಂ (ನೋಡಲು ಯಾರಿಗೆ ಆಗುತ್ತದೆ) ಎಂಬ ಎಸಕದ (ಹೊಳೆಯುವ) ಆ ಮೀನಂ ಸಮಂತೆಚ್ಚು (ಸರಿಯಾಗಿ ಕೊಡೆದು) ಮೆಚ್ಚಿಸಿದಂ- ದೇವರುಮಂ ಧನುರ್ಧರರುಮಂ ವಿದ್ವಿಷ್ಟವಿದ್ರಾವಣಂ(ದೇವತೆಗಳನ್ನೂ ಕುಶಲರಾದ ಬಿಲ್ಗಾರರನ್ನೂ

ವಿದ್ವಿಷ್ಟವಿದ್ರಾವಣನಾದ ಅರ್ಜುನನು)

ಪದ್ಯ-೬೩:ಅರ್ಥ:ಅರ್ಜುನನು, ದಿಕ್ಕುಗಳು ಕಂಪಿಸುವ ಹಾಗೆ ದಿವ್ಯ ಬಾಣವನ್ನು ತೆಗೆದುಕೊಂಡು ಕರ್ಣನೇ ಮೊದಲಾದವರು ನೋಡಿ ಬೆಕ್ಕಸ ಬೆರಗಾಗಲು ಒಂದೇ ಸಲಕ್ಕೆ ಕಿವಿಮುಟ್ಟುವವರೆಗೆ ಸೆಳೆದು ಇದನ್ನು ಯಾರಿಗೆ ನೋಡುವುದಕ್ಕೂ

ಹೊಡೆಯುವುದಕ್ಕೂ ಸಾಧ್ಯ
ಎಂಬಂತಿದ್ದ ಹೊಳೆಯುವ
ಮೀನನ್ನು ಭೇದಿಸಿ
ದೇವತೆಗಳನ್ನೂ ಕುಶಲರಾದ
ಬಿಲ್ಗಾರರನ್ನೂ
ವಿದ್ವಿಷ್ಟವಿದ್ರಾವಣನಾದ
ಅರ್ಜುನನು ಸಂತೋಷ
ಪಡಿಸಿದನು

ವ|| ಆಗಳಾ ಪಿಡಿದ ಬಿಲ್ಲೆ ಕರ್ಬಿನ ಬಿಲ್ಲಾಗೆಯುಮಂಬುಗಳೆ

ಪೂವಿನಂಬುಗಳಾಗೆಯು ಮೆಚ್ಚ ಮೀನೆ ಮೀನಕೇತನಂ ಆಗೆಯುಂ, ಸಹಜಮನೋಜನಂ ಮನೋಜನೆಂದೆ ಬಗೆದು-

ವಚನ:ಪದವಿಭಾಗ-

ಅರ್ಥ:ಆಗಳು ಆ ಪಿಡಿದ ಬಿಲ್ಲೆ ಕರ್ಬಿನ (ಮನ್ಮಥನ ಕಬ್ಬಿನ ಬಿಲ್ಲು) ಬಿಲ್ಲಾಗೆಯುಂ ಅಂಬುಗಳೆ ಪೂವಿನ ಅಂಬುಗಳಾಗೆಯು ಮೆಚ್ಚ

ಮೀನೆ
ಮೀನಕೇತನಮಾಗೆಯುಂ
ಸಹಜಮನೋಜನಂ
ಮನೋಜನೆಂದೆ ಬಗೆದು-
ವಚನ:ಅರ್ಥ:ಆಗ
ದ್ರೌಪದಿಯು- ಅವನು ಹಿಡಿದ
ಬಿಲ್ಲನ್ನೇ ಕಬ್ಬಿನ
ಬಿಲ್ಲನ್ನಾಗಿಯೂ, ಬಾಣಗಳನ್ನೇ
ಪುಷ್ಪಬಾಣಗಳನ್ನಾಗಿಯೂ,
ಹೊಡೆದ ಮೀನನ್ನೇ ಮೀನಿನ
ಬಾವುಟವನ್ನಾಗಿಯೂ,

ಸಹಜಮನೋಜನಾದ
ಅರ್ಜುನನನ್ನೇ
ಮನ್ಮಥನನ್ನಾಗಿಯೂ
ಭಾವಿಸಿದಳು.

ಚಂ|| ನಡೆ ಕಡೆಗಣ್ ಮನಂ
ಬಯಸೆ ತಳ್ತಮರ್ದಪ್ಪಲೆ
ತೋಳ್ಗಳಾಸೆಯೊಳ್
ತೊಡರ್ದಿರೆ ಪೊಣ್ಮೆ
ಘರ್ಮಜಲಮುಣ್ಮೆ ಭಯಂ
ಕಿಡೆ ನಾಣ್ ವಿಕಾರದೊಳ್|

ತೊಡರ್ದಿರೆ ಕೆಯ್ತವುಮ್ಮಳಿಪ ಕನ್ನೆಗೆ ಸುಂದರಮಾಲೆ ಮಾಲೆಯಂ ತಡೆಯದೆ ನೀಡೆ ಮಾಣದೆ ಗುಣಾರ್ಣವನಂ ಸತಿ ಮಾಲೆ ಸೂಡಿದಳ್|| ೬೪||

ಪದ್ಯ-೬೪:ಪದವಿಭಾಗ-ಅರ್ಥ:ನಡೆ ಕಡೆಗಣ್ (ಕುಡಿನೋಟ ಅವನಲ್ಲಿ ನಡೆ -ನೆಟ್ಟಿತು) ಮನಂ ಬಯಸೆ ತಳ್ಳು (ಸೇರಿಸಿ) ಅಮರ್ದಪ್ಪಲೆ

(ಅಮರ್ದು-ಗಾಢವಾಗಿ
ಅಪ್ಪಲೆ- ಅಪ್ಪಿಕೊಳ್ಳಲು)
ತೋಳ್ಗಳು ಆಸೆಯೊಳ್
ತೊಡರ್ದಿರೆ (ತೋಳುಗಳು
ಅವನ
ಗಾಢಾಲಿಂಗನಮಾಡಲು
ಆಸೆಯಲ್ಲಿ ಸಿಲುಕಲು) ಪೊಣ್ಮೆ
ಘರ್ಮಜಲಂ ಉಣ್ಮೆ ಭಯಂ
(ಹೊಮ್ಮಲು- ಬೆವರುಹನಿ,
ಭಯವಾಯಿತು,) ಕಿಡೆ ನಾಣ್
(ನಾಚಿಕೆ ಕಿಡೆ-ಹೋಯಿತು)

ವಿಕಾರದೊಳ್ ತೊಡರ್ದಿರೆ
(ಅಂಗವಿಕಾರಗಳು ಶರೀರದಲ್ಲಿ
ತಲೆದೋರಲು) ಕೆಯ್ತು
ಉಮ್ಮಳಿಪ ಕನ್ನೆಗೆ
(ಉದ್ವೇಗಗೊಂಡ ದ್ರೌಪದಿ
ಕನ್ಯೆಗೆ) ಸುಂದರಮಾಲೆ
ಮಾಲೆಯಂ ತಡೆಯದೆ ನೀಡೆ
(ಸುಂದರಮಾಲೆ ಎಂಬ ಚೇಟಿ
ಮಾಲೆಯನ್ನು ತಡೆಯದೆ ಕೈಗೆ
ಕೊಡಲು); ಮಾಣದೆ
ಗುಣಾರ್ಣವನಂ ಸತಿ ಮಾಲೆ

ಸೂಡಿದಳ್(ಬಿಡದೆ ಸತಿಯಾದ ದ್ರೌಪದಿಯು ಗುಣಾರ್ಣವನಿಗೆ ಮಾಲೆಯನ್ನು ಹಾಕಿದಳು).

ಪದ್ಯ-೬೪:ಅರ್ಥ:ಕುಡಿನೋಟ ಅವನಲ್ಲಿ ನೆಟ್ಟಿತು. ಮನಸ್ಸು ಅವನನ್ನು ಬಯಸಿತು, ತೋಳುಗಳು ಅವನ ಗಾಢಾಲಿಂಗನಮಾಡಲು ಆಸೆಯಲ್ಲಿ ಸಿಲುಕಲು,. ಮೈಯಲ್ಲಿ ಬೆವರು ಹುಟ್ಟಿತು, ಭಯವು ಉಂಟಾಯಿತು,

ನಾಚಿಕೆ ಹೋಯಿತು,
ಅಂಗವಿಕಾರಗಳು ಶರೀರದಲ್ಲಿ
ತಲೆದೋರಿದುವು.
ಉದ್ವೇಗಗೊಂಡ ದ್ರೌಪದಿ
ಕನ್ಯೆಗೆ ಸುಂದರಮಾಲೆಯೆಂಬ
ಚೇಟಿ ಸ್ವಯಂವರ
ಮಾಲೆಯನ್ನು
ಸಾವಕಾಶಮಾಡದೆ ಅವಳ
ಕೈಲಿತ್ತಳು. ಸತಿಯಾದ
ದ್ರೌಪದಿಯು ಗುಣಾರ್ಣವನಿಗೆ
ಮಾಲೆಯನ್ನು ಹಾಕಿದಳು.

ವ|| ಆಗಳ್ ದ್ರುಪದಂ
ಬದ್ದವಣಾದ ಪಗಳಂ
ಬಾಜಿಸಲ್ವೇೞ್ದು ಸುರತ ಮಕರ
ಧ್ವಜನಂ ದ್ರೌಪದಿಯೊಡನೆ
ಸಿವಿಗೆಯನೇಱಿಸಿ
ಧೃಷ್ಟದ್ಯುಮ್ನ
ಯುಧಾಮನ್ಯೂತ್ತಮೌಜಶ್ಶಿ
ಖಂಡಿ ಚೇಕಿತಾನರೆಂಬ ತನ್ನ
ಮಗಂದಿರುಂ
ತಮ್ಮಂದಿರುಂಬೆರಸು ನೆಲಂ
ಮೂರಿವಿಟ್ಟಂತೆ ಬರೆ

ಮುಂದಿಟ್ಟು ಪೊಟಿಲ್ಗೊಡಗೊಂಡುವರ್ಪು ದುಮಿತ್ತ ದುರ್ಯೋಧನಂ ಕರ್ಣ ಶಲ್ಯ ಶಕುನಿ ದುಶ್ಯಾಸನಾದಿಗಳೊಳಾಲೋಚಿಸಿ ಪೇಟಿಮೇಗೆಯ್ವುಮೆನೆ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್ ದ್ರುಪದಂ ಬದ್ದವಣದ ಪರೆಗಳಂ ಬಾಜಿಸಲ್ ವೇೞ್ದು (ಆಗ

ದ್ರುಪದನು
ಮಂಗಳವಾದ್ಯಗಳನ್ನು
ಬಾರಿಸಲು ಹೇಳಿ) ಸುರತ
ಮಕರ
ಧ್ವಜನಂ(ಸುರತಮಕರಧ್ವಜ-
ಅರಿಕೇಸರಿ/ ಅರ್ಜುನನನ್ನು)
ದ್ರೌಪದಿಯೊಡನೆ ಸಿವಿಗೆಯನು
ಏಱಿಸಿ (ದ್ರೌಪದಿಯೊಡನೆ
ಪಲ್ಲಕ್ಕಿಯನ್ನೇರಿಸಿ),
ಧೃಷ್ಟದ್ಯುಮ್ನ ಯುಧಾಮನ್ಯು
ಉತ್ತಮೌಜ ಶಿಖಂಡಿ

ಚೇಕಿತಾನರೆಂಬ ತನ್ನ
ಮಗಂದಿರುಂ ತಮ್ಮಂದಿರುಂ
ಬೆರಸು (ಮಕ್ಕಳು ಮತ್ತು
ತಮ್ಮಂದಿರೊಡನೆ) ನೆಲಂ
ಮೂರಿವಿಟ್ಟಂತೆ ಬರೆ (ಜನರು
ನೆಲ ಬಾಯಿಬಿಟ್ಟಂತೆ
ಒತ್ತೊತ್ತಾಗಿ ಬರಲು)
ಮುಂದಿಟ್ಟು ಪೊಱಲ್ಗೆ
ಒಡಗೊಂಡು
ಬರ್ಪುದುಂ(ಮುಂದಿಟ್ಟುಕೊಂ
ಡು ಪಟ್ಟಣಕ್ಕೆ ಬರಲು/

ಬಂದನು) ಇತ್ತ
ದುರ್ಯೋಧನಂ ಕರ್ಣ ಶಲ್ಯ
ಶಕುನಿ ದುಶ್ಯಾಸನಾದಿಗಳು
ಆಳಾಲೋಚಿಸಿ ಪೇೞಿಂ
ಏಗೆಯ್ವಂ ಎನೆ ಕರ್ಣನು
ಇಂತೆಂದಂ
(ಮೊದಲಾದವರಲ್ಲಿ
ಆಲೋಚಿಸಿ ಈಗ ಏನು
ಮಾಡೋಣ ಹೇಳಿ ಎನ್ನಲು
ಕರ್ಣನು ಹೀಗೆ ಹೇಳಿದನು.)-

ವಚನ:ಅರ್ಥ:ಆಗ
ದ್ರುಪದನು
ಮಂಗಳವಾದ್ಯಗಳನ್ನು
ವಾದನಮಾಡಿಸಿ
ಸುರತಮಕರಧ್ವಜನಾದ
ಅರ್ಜುನನನ್ನು
ದ್ರೌಪದಿಯೊಡನೆ
ಪಲ್ಲಕ್ಕಿಯನ್ನೇರಿಸಿ
ಧೃಷ್ಟದ್ಯುಮ್ನ, ಯುಧಾಮನ್ಯು,
ಉತ್ತಮೌಜ, ಶಿಖಂಡಿ ಮತ್ತು
ಚೇಕಿತಾನರೆಂಬ ತನ್ನ ಮಕ್ಕಳೂ

ಮತ್ತು ತಮ್ಮಂದಿರೊಡಗೂಡಿ
ನೆಲವು ಬಾಯಿಬಿಟ್ಟ ಹಾಗೆ
ಅರ್ಜುನನನ್ನು
ಮುಂದಿಟ್ಟುಕೊಂಡು ಜನರು
ನೆಲ ಬಾಯಿಬಿಟ್ಟಂತೆ
ಒತ್ತೊತ್ತಾಗಿ
ಮುಂದಿಟ್ಟುಕೊಂಡು ಪಟ್ಟಣಕ್ಕೆ
ಬರಲು/ ಬಂದನು. ಇತ್ತ,
ದುರ್ಯೋಧನನು ಕರ್ಣ,
ಶಲ್ಯ, ಶಕುನಿ, ದುಶ್ಯಾಸನನೇ
ಮೊದಲಾದವರಲ್ಲಿ

ಆಲೋಚಿಸಿ ಈಗ ಏನು
ಮಾಡೋಣ ಹೇಳಿ ಎನ್ನಲು
ಕರ್ಣನು ಹೀಗೆ ಹೇಳಿದನು.

ಮ|| ಜನಮೆಲ್ಲಂ
ನೆರೆದಕ್ಕಟಣ್ಣರಿವರಿಂದೇವಂದ
ರೇವ್ರೋದರೆಂ
ಬಿನಮೇಂ ಪ್ರೋಪಮೆ ನಾಡ
ಕೂಟಕುಳಿಗಳ್ಗೇದೋಸಮೇಂ
ಬನ್ನಮೊಂ|
ದನೆ ಕೇಳಾಂತರನಿಕ್ಕಿ ಮಿಕ್ಕ
ವಿಜಯಶ್ರೀಕಾಂತೆಗಂ

ಕಾಂತೆಗಂ

ನಿನಗಂ

ದೋರ್ವಲದಿಂದಮೊಂದೆ

ಪಸೆಯೊಳ್

ಪಾಣಿಗ್ರಹಂಗೆಯ್ಯೆನೇ|| ೬೫||

ಪದ್ಯ-00:ಪದವಿಭಾಗ-ಅರ್ಥ:ಜನಮೆಲ್ಲಂ ನೆರೆದು (ಜನರೆಲ್ಲ ಸೇರಿ) ಅಕ್ಕಟ ಅಣ್ಣರಿವರ್ ಇಂದೇ ವಂದರ್ ಏವ್ರೋದರ್ ಎಂಬಿನಂ ಏಂ ಪೋಪಮೆ(ಅಯ್ಯೋ

ಅಣ್ಣಂದಿರು ಈ ದಿನ ಏಕೆ ಬಂದರು ಏಕೆ ಹೋಗುತ್ತಾರೆ ಎನ್ನುವ ಹಾಗೆ ತಿರಸ್ಕಾರದಿಂದ ನಮ್ಮ ಬಗೆಗೆ ಹೇಳುವಂತೆ ಹೋಗುವುದೇ) ನಾಡ ಕೂಟಕುಳಿಗಳ್ಗೆ (ನಾಡಗುಂಪಿನ ಜನಕ್ಕೆ) ಏದೋಸಂ (ಏನು ದೋಷ- ತಪ್ಪು) ಎಂ ಬನ್ನಂ (ಏನು ಸೋಲು) ಒಂದನೆ ಕೇಳು (ಒಂದು ವಿಷಯವನ್ನು ಕೇಳು) ಅಂತರನಿಕ್ಕಿ

(ಅಂತರನು ಇಕ್ಕಿ-
ಎದುರಿಸಿದವರನ್ನು
ಹೊಡೆದೋಡಿಸಿ) ಮಿಕ್ಕ (ಈಗ
ಕೈಮೀರಿಹೋದ)
ವಿಜಯಶ್ರೀಕಾಂತೆಗಂ
(ವಿಜಯಲಕ್ಷ್ಮಿಗೂ) ಕಾಂತೆಗಂ
ನಿನಗಂ (ದ್ರೌಪದಿಗೂ ನಿನಗೂ)
ದೋರ್ವಲದಿಂದಂ ಒಂದೆ
ಪಸೆಯೊಳ್
ಪಾಣಿಗ್ರಹಂಗೆಯ್ಯೆನೇ
(ತೋಳುಬಲದಿಂದ ಒಂದೇ

ಹಸೆಮಣೆಯಮೇಲೆ ಪಾಣಿಗ್ರಹಣ (ವಿವಾಹ)ವನ್ನು ಮಾಡಲಾರೆನೇ? ಎಂದನು ಕರ್ಣ).

ಪದ್ಯ-00:ಅರ್ಥ: ಜನವೆಲ್ಲ ಒಟ್ಟುಗೂಡಿ ಅಯ್ಯೋ ಅಣ್ಣಂದಿರು ಈ ದಿನ ಏಕೆ ಬಂದರು ಏಕೆ ಹೋಗುತ್ತಾರೆ ಎನ್ನುವ ಹಾಗೆ (ಸುಮ್ಮನೆ ಬಂದರು ಹೋದರು, ಎಂದು) ತಿರಸ್ಕಾರದಿಂದ ನಮ್ಮ ಬಗೆಗೆ

ನಾಡಗುಂಪಿನ ಜನ
ಹೇಳುವಂತೆ ನಾವು
ಹೋಗುವುದೇ? ಒಂದು
ವಿಷಯವನ್ನು ಕೇಳು,
ಪರಾಕ್ರಮಿಗಳಾದ ನಮಗೆ ಈ
ತೆರನಾದ ಸೋಲು
ಅವಮಾನಕರ, ನನ್ನ
ಅಭಿಪ್ರಾಯವಿದು
'ಎದುರಿಸಿದವರನ್ನು
ಹೊಡೆದೋಡಿಸಿ ಈಗ
ಕೈಮೀರಿರುವ

ವಿಜಯಲಕ್ಷ್ಮಿಗೂ ಈ ದ್ರೌಪದಿಗೂ ನಿನಗೂ ನನ್ನ ಬಾಹುಬಲದಿಂದ ಒಂದೇ ಹಸೆಮಣೆಯಮೇಲೆ ಪಾಣಿಗ್ರಹಣ (ವಿವಾಹ)ವನ್ನು ಮಾಡಲಾರೆನೇ?' ಎಂದನು ಕರ್ಣ.

ವ|| ಎನೆ ಶಲ್ಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ-(ಎನ್ನಲು) ಶಲ್ಯನು ಇಂತು ಎಂದಂ-

ವಚನ:ಅರ್ಥ:ಎನ್ನಲು ಶಲ್ಯನು ಹೀಗೆ ಹೇಳಿದನು.

ಚಂ|| ಕುಡುವೊಡೆ ನಿಸ್ತ್ರಪಂ ಕುಡುವುದೇಱಿಸಿದಂ ಬೆಸೆಕೋಲನೆಂದು ಪೇೞ್ ಕುಡುವುದೆ ಕನ್ನೆಯಂ ದ್ವಿಜಕುಲಂಗಿದು ವಿಶ್ವನರೇಂದ್ರ ವೃಂದದೊಳ್|

ತೊಡರ್ದ ಪರಾಭವಂ ದ್ರುಪದನಂ ತಱಿದೊಟ್ಟದೆ ಕೆಮ್ಮಗಾನಿದಂ

ಕಡೆಗಣಿಸಿರ್ದೊಡೆನ್ನ ಕಡುಗೊರ್ವಿದ ತೋಳ್ಗಳ ಕೊರ್ವದೇವುದೋ|| ೬೬||

ಪದ್ಯ-00:ಪದವಿಭಾಗ-ಅರ್ಥ: ಕುಡುವೊಡೆ (ಕನ್ಯಾದಾನ ಕೊಡಬೇಕಾದರೆ) ನಿಸ್ತ್ರಪಂ (ಲಜ್ಜೆ ಇಲ್ಲದೆ) ಕುಡುವುದು (ಕೊಡುವುದು), ಏಱಿಸಿದಂ ಬೆಸೆಕೋಲನು ಎಂದು (ಹತ್ತಿಯನ್ನು (ಪಿಡಿಯುವ) ಎಕ್ಕುವ

ಬಿಲ್ಲಿನಂತಿರುವ ಈ ಬಿಲ್ಲನ್ನು ಏರಿಸಿದನೆಂಬ ಕಾರಣದಿಂದ) ಪೇೞು (ಹೇಳು) ಕುಡುವುದೆ ಕನ್ನೆಯಂ ದ್ವಿಜಕುಲಂಗೆ(ಬ್ರಾಹ್ಮಣವಂಶದವನಿಗೆ ಕನ್ಯೆಯನ್ನು ಕೊಡುವುದೇ?) ಇದು ವಿಶ್ವನರೇಂದ್ರ ವೃಂದದೊಳ್ ತೊಡರ್ದ ಪರಾಭವಂ (ಈ ಪರಾಭವವು ಸಮಸ್ತ ರಾಜವೃಂದಕ್ಕೂ ಸೋಲು,)

ದ್ರುಪದನಂ ತಱಿದೊಟ್ಟದೆ
(ದ್ರುಪದನನ್ನು ತರಿದು ಹಾಕದೆ)
ಕೆಮ್ಮಗೆ ಆನ್ ಇದಂ(ನಾನು
ಇದನ್ನು ಸುಮ್ಮನೆ)
ಕಡೆಗಣಿಸಿರ್ದೊಡೆ
(ಕಡೆಗಣಿಸಿದರೆ) ಎನ್ನ
ಕಡುಗೊರ್ವಿದ ತೋಳ್ಗಳ
ಕೊರ್ವು ಅದು
ಏವುದೋ(ಕೊಬ್ಬಿ ಬೆಳೆದಿರುವ
ನನ್ನ ತೋಳುಗಳಿಗೆ ಕೊಬ್ಬು
ಅದೇತಕ್ಕೋ!)

ಪದ್ಯ-00:ಅರ್ಥ:ಕನ್ಯಾದಾನ ಕೊಡಬೇಕಾದರೆ ಲಜ್ಜೆಯಾಗದ ರೀತಿಯಲ್ಲಿ ದಾನಮಾಡಬೇಕು. ಹತ್ತಿಯನ್ನು ಎಕ್ಕುವ ಬಿಲ್ಲಿನಂತಿರುವ ಈ ಬಿಲ್ಲನ್ನು (ಸಮಾನ್ಯ ಕೋಲನ್ನು) ಹೆದೆ ಏರಿಸಿದನೆಂಬ ಕಾರಣದಿಂದ ಬ್ರಾಹ್ಮಣವಂಶದವನಿಗೆ ಕನ್ಯೆಯನ್ನು ಕೊಡುವುದೇ? ಈ ಪರಾಭವವು ಸಮಸ್ತ ರಾಜವೃಂದಕ್ಕೂ

ತೊಡರಿಕೊಂಡ ಸೋಲು,
ಆದುದರಿಂದ ಈಗ ನಾನು ಈ
ದ್ರುಪದನನ್ನು ತರಿದು ಹಾಕದೆ
ಸುಮ್ಮನಿದ್ದರೆ ಕೊಬ್ಬಿ
ಬೆಳೆದಿರುವ ನನ್ನ
ತೋಳುಗಳಿಗೆ ಕೊಬ್ಬು
ಅದೇತಕ್ಕೋ?
ಸಾರ್ಥಕತೆಯೇನು? ಎಂದನು
ಶಲ್ಯ.

ವ|| ಎಂದು ಕೆಳರ್ದು ನುಡಿದು ಸಯಂಬರಕೆ

ನೆರೆದರಸುಮಕ್ಕಳೆಲ್ಲರನುತ್ಸಾಹಿಸಿ ನೋಡೆ ನೋಡೆ-

ವಚನ:ಪದವಿಭಾಗ-ಅರ್ಥ:ಎಂದು ಕೆಳರ್ದು (ಕೋಪಿಸಿ) ನುಡಿದು ಸಯಂಬರಕೆ ನೆರೆದರಸುಮಕ್ಕಳೆಲ್ಲರನುತ್ಸಾಹಿಸಿ ನೋಡೆ ನೋಡೆ-

ವಚನ:ಅರ್ಥ:ಎಂದು ಕೋಪಿಸಿ ನುಡಿದು, ಸ್ವಯಂವರಕ್ಕೆ ಸೇರಿದ್ದ ಎಲ್ಲ

ರಾಜಕುಮಾರರನ್ನೂ
ಪ್ರೋತ್ಸಾಹಿಸಿ
ನೋಡುನೋಡುತ್ತಿದ್ದಂತೆಯೇ

ಉ|| ಪಕ್ಕರೆಯಿಕ್ಕಿ ಬಂದುವು ಹಯಂ ಘಟೆ ಪಣ್ಣಿದುವಾಯುಧಂಗಳಿಂ ತೆಕ್ಕನೆ ತೀವಿ ಬಂದುವು ರಥಂ ಪುಲಿವಿಂಡುವೊಲಾದಳುರ್ಕೆ ಕೈ|

ಮಿಕ್ಕಿರೆ ಬಂದುದೊಂದಣಿ ರಣಾನಕ

ರಾವಮಳುಂಬಮಾದುದಾರ್ ಮಿಕ್ಕು ಬರ್ದುಂಕುವನ್ನರಿವರ್ಗೆಂಬಿನೆ ಗಂ ಮಸಗಿತ್ತು ರಾಜಕಂ|| ೬೭||

ಪದ್ಯ-00:ಪದವಿಭಾಗ-ಅರ್ಥ:ಪಕ್ಕರೆ ಇಕ್ಕಿ ಬಂದುವು ಹಯಂ ಘಟೆ ಪಣ್ಣಿದುವು ಆಯುಧಂಗಳಿಂ ತೆಕ್ಕನೆ ತೀವಿ ಬಂದುವು ರಥಂ ಪುಲಿವಿಂಡುವೊಲ್ ಆದ ಅಳುರ್ಕೆ ಕೈ ಮಿಕ್ಕಿರೆ ಬಂದುದು

ಒಂದು ಅಣಿ ರಣಾನಕ ರಾವಂ
ಅಳುಂಬಂ ಆದುದು ಆರ್-
ಮಿಕ್ಕು ಬರ್ದುಂಕುವನ್ನರ್
ಇವರ್ಗೆಂಬಿನೆಗಂ ಮಸಗಿತ್ತು
ರಾಜಕಂ.
ಪಕ್ಕರೆಯಿಕ್ಕಿ (ಜೀನು
ಹಾಕಿಕೊಂಡು) ಬಂದುವು
ಹಯಂ; ಘಟೆ ಆನೆಗಳು
ಪಣ್ಣಿದುವು (ಆನೆಗಳು
ಸಿದ್ಧವಾದವು;)
ಆಯುಧಂಗಳಿಂ ತೆಕ್ಕನೆ ತೀವಿ

(ಚೆನ್ನಾಗಿ ತುಂಬಿ) ಬಂದುವು ರಥಂ; ಪುಲಿವಿಂಡುವೊಲ್ ಆದ ಅಳುರ್ಕೆ (ಉಂಟಾದ ವ್ಯಾಪ್ತಿ, ಹರವು) ಕೈ ಮಿಕ್ಕಿರೆ (ಕೈಮೀರಿರಲು) ಬಂದುದು ಒಂದು ಅಣಿ (ಬಂದುದು ಒಂದು ಸಾಲು ಕಾಲಾಳು ಸೈನ್ಯ) ರಣಾನಕ ರಾವಂ (ಒಂದು ರಣವಾದ್ಯದ ಆರ್ಭಟ), ಅಳುಂಬಮಾದುದು

(ಅತಿಶಯವಾಯಿತು), ಆರ್
ಮಿಕ್ಕು ಬರ್ದುಂಕವನ್ನರ್
ಇವರ್ಗೆ ಎಂಬಿನಗಂ
(ಇವರನ್ನು ಮಿಕ್ಕಿ-ಮೀರಿ
ಬದುಕುವವರು ಯಾರು
ಎನ್ನುವಂತೆ), ಮಸಗಿತ್ತು
ರಾಜಕಂ (ರಾಜರ ಸಮೂಹ)
ವಿಜೃಂಭಿಸಿತು.

ಪದ್ಯ-00:ಅರ್ಥ:
ಜೀನುಗಳನ್ನು ಧರಿಸಿದ
ಕುದುರೆಗಳು ಬಂದುವು.

ಆನೆಗಳ ಸಮೂಹವು
ಯುದ್ಧಸನ್ನದ್ಧವಾದವು.
ಆಯುಧಗಳಿಂದ ತುಂಬಿದ
ರಥಗಳು ಬಂದವು.
ಕಾಲಾಳುಸೈನ್ಯದ ಸಾಲೊಂದು
ಹುಲಿಯ ಹಿಂಡಿನ ಹಾಗೆ
ಕೈಮೀರಿ ಮುಂದೆ ಬಂದಿತು.
ರಣವಾದ್ಯದ ಆರ್ಭಟ
ವಿಜೃಂಭಿಸಿತು. ಇದನ್ನು ಮೀರಿ
ಯಾರು ಬದುಕುತ್ತಾರೆ ಎನ್ನುವ

ಹಾಗೆ ರಾಜಸಮೂಹವು ಆರ್ಭಟಿಸಿ ಬಂದಿತು.

ವ|| ಅಂತು ನೆಲಂ ಮೂರಿವಿಟ್ಟಂತೆ ತಳರ್ದು-

ವಚನ:ಪದವಿಭಾಗ-

ಅರ್ಥ:ಅಂತು ನೆಲಂ ಮೂರಿವಿಟ್ಟಂತೆ (ಬಾಯಿ ಬಿಟ್ಟಂತೆ) ತಳರ್ದು (ಹೊರಟು)-

ವಚನ:ಅರ್ಥ:ಹಾಗೆ ನೆಲವು ಪ್ರಸರಿಸಿ ತುಂಬಿದ, ಬಾಯಿ

ಬಿಟ್ಟ ಹಾಗೆ ನಡೆದುಬಂದು,

ಚಂ|| ತೆರೆಗಳ ಬಂಬಲಂ

ಮಿಳಿರ್ವ

ಕೇತನರಾಜಿಗಳೋಳಿವಟ್ಟ ಬೆ

ಳ್ನೊರೆಗಳ ಪಿಂಡನೆತ್ತಿಸಿದ

ಬೆಳ್ಗೊಡೆಗಳ್ ಮಕರಂಗಳ

ಭಯಂ|

ಕರ ಕರಿಗಳ್ ತೆಱಂಬೊಳೆವ

ವಿಂಗಳನುಳ್ಕುವ ಕೈದುಗಳ್

ನಿರಾ

ಕರಿಸಿರಿ ಮೇರೆದಪ್ಪಿ ಕವಿದತ್ತು ನರಾಪಸೈನ್ಯಸಾಗರಂ|| ೬೮||

ಪದ್ಯ-00:ಪದವಿಭಾಗ-ಅರ್ಥ:ತೆರೆಗಳ ಬಂಬಲಂ ಮಿಳಿರ್ವ ಕೇತನರಾಜಿಗಳೋಳಿವಟ್ಟ ಬೆಳ್ನೊರೆಗಳ ಪಿಂಡನೆತ್ತಿಸಿದ ಬೆಳ್ಗೊಡೆಗಳ್ ಮಕರಂಗಳ ಭಯಂಕರ ಕರಿಗಳ್ ತೆಱಂಬೊಳೆವ ವಿಂಗಳನುಳ್ಕುವ ಕೈದುಗಳ್

ನಿರಾಕರಿಸಿರೆ ಮೇರೆದಪ್ಪಿ
ಕವಿದತ್ತು
ನರಾಪಸ್ಸೈನ್ಯಸಾಗರಂ
ಪದ್ಯ-00:ಅರ್ಥ: ತೆರೆಗಳ
ಬಂಬಲಂ (ಸಮೂಹ ವು-)
ಮಿಳಿರ್ವ ಕೇತನರಾಜಿಗಳ್
(ಅಲುಗುವ ಬಾವುಟಗಳು);
ಓಳಿವಟ್ಟ (ಸಾಲಾದ)
ಬೆಳ್ನೊರೆಗಳ (ಬಿಳಿನೊರೆಗಳು)
ಪಿಂಡನೆತ್ತಿಸಿದ ಬೆಳ್ಗೊಡೆಗಳ್
(ಗುಂಪಾಗಿರುವ

ಬಿಳಿಕೊಡೆಗಳು) ; ಮಕರಂಗಳ ಭಯಂ|

ಕರ ಕರಿಗಳ್ (ಬಯಂಕರ ಆನೆಗಳು ಮೊಸಳೆಗಳು) ತೆಱಂಬೊಳೆವ (ಬಗೆಬಗೆಯಾಗಿ ಹೊಳೆಯುವ) ಮೀಂಗಳನು ಉಳ್ಕುವ ಕೈದುಗಳ್ (ಝುಳಪಿಸಿವ/ಹೊಳೆಯುವ ಆಯುಧಗಳು) ನಿರಾಕರಿಸಿರೆ (ರಾಜರನ್ನು ನಿರಾಕರಿಸಿದ್ದರಿಂದ) ಮೇರೆದಪ್ಪಿ ಕವಿದತ್ತು ನರಾಪಸೈನ್ಯಸಾಗರಂ (ರಾಜರ ಸೇನಾಸಮುದ್ರವು ಮೇರೆಯನ್ನು ಮೀರಿ ದ್ರುಪದನನ್ನು ಮುತ್ತಿತು.)

ವ|| ಅಂತು ಕವಿದ ರಿಪುಬಳಜಳನಿಯ ಕಳಕಳರವಮಂ ಕೇಳ್ದು ಪೊಱಲಂ ಪುಗಲೊಲ್ಲದೆ ನಿಂದ ಮನುಜಮಾಂಧಾತನಂ ಪಾಂಚಾಳರಾಜನಿಂತೆಂದಂ-

ವಚನ:ಪದವಿಭಾಗ-ಅರ್ಥ:ಅಂತು ಕವಿದ ರಿಪುಬಳ ಜಳನಿಧಿಯ (ಹಾಗೆ ಮುತ್ತಿದ ಶತ್ರು ಸೈನ್ಯ ಸಮುದ್ರದ) ಕಳಕಳರವಮಂ ಕೇಳ್ದು (ಕಲರವ ಸದ್ದನ್ನು ಕೇಳಿ) ಪೊಟಿಲಂ ಪುಗಲು ಒಲ್ಲದೆ ನಿಂದ ಮನುಜಮಾಂಧಾತನಂ (ನಗರ ಪ್ರವೇಶ ಮಾಡಲು ಒಪ್ಪದೇ ನಿಂತ ಮನುಜಮಾಂಧಾತನಾದ

ಅರ್ಜುನನ್ನು ಕುರಿತು)
ಪಾಂಚಾಳರಾಜನು ಇಂತೆಂದಂ
(ದ್ರುಪದನು ಹೀಗೆ ಹೇಳಿದನು)
(ಮನುಜಮಾಂಧಾತ –
ಅರಿಕೇಸರಿಯ ಬಿರುದು)
ವಚನ:ಅರ್ಥ:ಹಾಗೆ ಮುತ್ತಿದ
ಶತ್ರುಸೇನಾಸಮುದ್ರದ
ಕಳಕಳಶಬ್ದವನ್ನು ಕೇಳಿ
ಪುರಪ್ರವೇಶ ಮಾಡದೇ ನಿಂದ
ಮನುಜಮಾಂಧಾತನಾದ
ಅರ್ಜುನನನ್ನು ಕುರಿತು

ಪಾಂಚಾಲರಾಜನಾದ

ದ್ರುಪದನು ಹೀಗೆಂದನು-

ಮ|| ಧನುವಂ ನೀಂ ತೆಗೆದೆಚ್ಚು

ವಿನನಳವಂ

ಕೆಯ್ಕೊಂಡುದರ್ಕಂ ಕರಂ

ನಿನಗೀ ಕನ್ನಿಕೆ

ಸೋಲ್ತುದರ್ಕಮೆರ್ದೆಯೊಳ್

ಕೋಪಾಗ್ನಿ ಕೈಗಣ್ಮೆ ಬಂ|

ದಿನಿತುಂ ರಾಜಕುಲಂ

ಸಮಸ್ತಭರದಿಂ

ಮೇಲೆಳ್ದುದಿನ್ ಕಾವನಾ

ವನೊ ನೀನಲ್ಲದೆ ಕಾವುದೆನ್ನ ತಲೆಯಂ ವಿದ್ವಿಷ್ಟವಿದ್ರಾವಣಾ|| ೬೯||

ಪದ್ಯ-೦೦:ಪದವಿಭಾಗ-ಅರ್ಥ: ಧನುವಂ ನೀಂ (ನೀನು ಬಿಲ್ಲನ್ನು) ತೆಗೆದ ಎಚ್ಚು (ಹೊಡೆದು) ಮೀನನಲು ಅಳವಂ ಕೆಯ್ಕೊಂಡುದರ್ಕಂ (ನೀನು ಬಿಲ್ಲನ್ನು ಏರಿಸಿ ಮೀನನ್ನು ಹೊಡೆದು ಪರಾಕ್ರಮವನ್ನು

ಪ್ರದರ್ಶಿಸಿದುದಕ್ಕೂ), ಕರಂ (ವಿಶೇಷವಾಗಿ) ನಿನಗೆ ಈ ಕನ್ನಿಕೆ ಸೋಲ್ತುದರ್ಕಂ (ಈ ಕನ್ಯೆ ನಿನಗೆ ವಿಶೇಷವಾಗಿ ಸೋತುದಕ್ಕೂ) ಎರ್ದೆಯೊಳ್ ಕೋಪಾಗ್ನಿ ಕೈಗಣ್ಮೆ (ಎದೆಯಲ್ಲಿ ಕೋಪಾಗ್ನಿ ಹೆಚ್ಚಿ) ಬಂದು ಇನಿತುಂ ರಾಜಕುಲಂ ಸಮಸ್ತಭರದಿಂ ಮೇಲೆೞ್ದುದು (ಈ ರಾಜಸಮೂಹವು ವಿಶೇಷ ವೇಗದಿಂದ ನಮ್ಮ

ಮೇಲೆದ್ದಿದೆ.) ಇನ್ ಕಾವನು
ಆವನೊ ನೀನಲ್ಲದೆ ಕಾವುದೆನ್ನ
ತಲೆಯಂ ವಿದ್ವಿಷ್ಟವಿದ್ರಾವಣಾ
(ಇನ್ನು ಮೇಲೆ ನಮ್ಮನ್ನು ರಕ್ಷಣೆ
ಮಾಡುವವರು ನೀನಲ್ಲದೆ
ಮತ್ತಾರು? ಎಲೈ ವಿದ್ವಿಷ್ಟ
ವಿದ್ರಾವಣನೇ(ರಾಜ
ವೀರಕೇಸರಿಯ ಬಿರುದು)
ಅರ್ಜುನನೇ ನನ್ನ ತಲೆಯನ್ನು
ಕಾಯಬೇಕು ಎಂದನು)

ಪದ್ಯ-00:ಅರ್ಥ: ನೀನು ಬಿಲ್ಲನ್ನು ಏರಿಸಿ ಮೀನನ್ನು ಹೊಡೆದು ಪರಾಕ್ರಮವನ್ನು ಪ್ರದರ್ಶಿಸಿದುದಕ್ಕೂ ಈ ಕನ್ಯೆ ನಿನಗೆ ವಿಶೇಷವಾಗಿ ಸೋತು ಅನಳಾದುದಕ್ಕೂ ಎದೆಯಲ್ಲಿ ಕೋಪಾಗ್ನಿ ಹೆಚ್ಚಿ ಈ ರಾಜಸಮೂಹವು ವಿಶೇಷ ವೇಗದಿಂದ ನಮ್ಮ ಮೇಲೆದ್ದಿದೆ. ಇನ್ನು ಮೇಲೆ ನಮ್ಮನ್ನು ರಕ್ಷಣೆ ಮಾಡುವವರು ನೀನಲ್ಲದೆ

ಮತ್ತಾರು? ಎಲೈ ವಿದ್ವಿಷ್ಟ ವಿದ್ರಾವಣನನಾದ ಅರ್ಜುನನೇ ನನ್ನ ತಲೆಯನ್ನು ಕಾಯಬೇಕು ಎಂದನು.

ವ||

ಎಂಬುದುಮರಾತಿಕಾಳಾನಳನಿದರ್ಕೇನುಂ ಚಿಂತಿಸಲ್ವೇಡ ನೀಮೆನ್ನ ಕಾಳೆಗಮಂ ಪೆಱಗಿರ್ದು ನೋಡಿಮೆಂದು ತಾನುಂ ಭೀಮಸೇನನುಂ ದಿವ್ಯಶರಾಸನಂಗಳಂ ಕೊಂಡು

ಪೂಣೆ ಪುಗುವರಾತಿಬಲಮಂ ಮಾರ್ಕೊಂಡು ತೆಗೆನೆರೆದಿಸೆ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆರಾತಿಕಾಳಾನಳನು ಇದರ್ಕೇನುಂ ಚಿಂತಿಸಲ್ವೇಡ (ಇದಕ್ಕೆ ನೀವು ಏನೂ ಚಿಂತಿಸಬೇಕಾಗಿಲ್ಲ) ನೀಂ ಎನ್ನ ಕಾಳೆಗಮಂ ಪೆಱಗಿರ್ದು ನೋಡಿಂ ಎಂದು (ನೀವು ನನ್ನ ಕಾಳೆಗವನ್ನು ಹೊರಗಿದ್ದು

ನೋಡಿ ಎಂದು) ತಾನುಂ
ಭೀಮಸೇನನುಂ
ದಿವ್ಯಶರಾಸನಂಗಳಂ ಕೊಂಡು
ಪೂಣೆ (ಪ್ರತಿಜ್ಞೆಮಾಡಿ)
ಪುಗುವ (ಹೊಗುವ)
ಆರಾತಿಬಲಮಂ
(ಶತ್ರುಸೈನ್ಯವನ್ನು)
ಮಾರ್ಕೊಂಡು (ಎದುರಿಸಿ)
ತೆಗೆನೆರೆದು ಇಸೆ (ಬಾಣವನ್ನು
ತೆಗೆದು ಕಿವಿಯವರೆಗೆ ಎಳೆದು
ಹೊಡೆಯಲು)-

ವಚನ:ಅರ್ಥ:ಅರಾತಿಕಾಲಾನಳನು (ರಾಜ ವೀರಕೇಸರಿಯ ಬಿರುದು:) ಅರ್ಜುನನು ಇದಕ್ಕೆ ನೀವು ಏನೂ ಚಿಂತಿಸಬೇಕಾಗಿಲ್ಲ; ನೀವು ನನ್ನ ಕಾಳೆಗವನ್ನು ಹೊರಗಿದ್ದು ನೋಡಿ ಎಂದು ಹೇಳಿ ತಾನೂ ಭೀಮಸೇನನೂ ಉತ್ತಮವಾದ ಬಿಲ್ಲುಗಳನ್ನು ತೆಗೆದುಕೊಂಡು ಪ್ರತಿಜ್ಞೆಮಾಡಿ ಪ್ರವೇಶಮಾಡಿದ

ಶತ್ರುಸೈನ್ಯವನ್ನು ಎದುರಿಸಿ
ಬಾಣವನ್ನು ತೆಗೆದು
ಕಿವಿಯವರೆಗೆ ಎಳೆದು
ಹೊಡೆಯಲು-

ಚಂ|| ಸರಳ ಪೊದಳ್ದ
ಬಲ್ಸರಿಯ ಕೋಳ್ಗಿರಲಾಱದೆ
ಬಿಲ್ ತೆರಳ್ದು ದು
ರ್ಧರ ಹಯಮಟ್ಟಿ ಸಂದಣಿಸಿ
ಸಂದಣಿ
ಕೊಟ್ಟುದಿಗೊಂಡುದಗ್ರ ಭೀ|

ಕರ ರಥಮಟ್ಟಿ ದಂತಿಘಟೆಗಳ್
ಪೆಱಗಿಟ್ಟೊಡೆ ಕಟ್ಟೆಗಟ್ಟಿದಂ
ತಿರೆ
ತಳರ್ದತ್ತರಾತಿಬಲಮಾಂಪವ
ರಾರ್ ಕದನತ್ರಿಣೇತ್ರನಂ|| ೭೦||

ಪದ್ಯ-೦೦:ಪದವಿಭಾಗ-ಅರ್ಥ:ಸರಳ ಪೊದಲ್ದ (ಬಾಣಗಳ ವ್ಯಾಪಿಸಿದ) ಬಲ್ಸರಿಯ (ದೊಡ್ಡ ಮಳೆಯ) ಕೋಳ್ಗೆ ಇರಲಾಱದೆ (ಬಾಳಗಳ ಸುರಿ ಮಳೆಗೆ

ಎದುರಿಸಲಾರದೆ) ಬಿಲ್
ತೆರಳ್ದು (ಬಿಲ್ಲುಗಾರರಸೈನ್ಯ
ಹಿಮ್ಮೆಟ್ಟಿ) ದುರ್ಧರ
ಹಯಮೞ್ಗೆ ಸಂದಣಿಸಿ
(ಎದುರಿಸಲಾರದ ಅಳುಕಿ/
ಹಾಳಾಗಿ) ಸಂದ ಅಣಿ (ಬಂದ
ಲಾಲಾಳು ಸೈನ್ಯ -ಸಂದಣಿಸಿ-
ಒಟ್ಟಾಗಿ)
ಕೊೞ್ಗುದಿಗೊಂಡುದಗ್ರ ಭೀಕರ
(ಕೋೞ್ ಕುದಿಗೊಂಡುದು
ಉಗ್ರ -ಉಗ್ರ ಬಾಣದ

ಏಟಿನಿಂದ ನೊಂದು)
ರಥಮೞ್ಗೆ (ರಥಂ ಅೞ್ಗೆ -
ರಥಗಳು ಅಳಿದು ನಾಶವಾಗಿ)
ದಂತಿಘಟೆಗಳ್ ಪೆಱಗಿಟ್ಟೊಡೆ
(ಆನೆಯ ಸೈನ್ಯ
ಹಿಂದೆಸರಿಯಲು)
ಕಟ್ಟೆಗಟ್ಟಿದಂತಿರೆ (ಅದು
ಕಟ್ಟೆಯನ್ನು ಕಟ್ಟಿದಂತೆ ಇತ್ತು;)
ತಳರ್ದತ್ತು ಆರಾತಿಬಲಂ
ಆಂಪವರ್ ಆರ್(ಆರಾತಿ-
ಶತ್ರು ಸೈನ್ಯವು ತಳರ್ದತ್ತು

ತೆರಳಿತು, ಹಿಂದೆಸರಿಯಿತು)
ಆಂಪವರಾರ್
ಕದನತ್ರಿಣೇತ್ರನಂ
(ಕದನರುದ್ರನಾದ
ಅರ್ಜುನನ್ನು
ಎದುರಿಸುವವರು ಯಾರು?
ಯಾರೂ ಇಲ್ಲ.)
ಪದ್ಯ-00:ಅರ್ಥ: ಒಟ್ಟಿಗೆ
ಸೇರಿದ ಬಾಣಗಳ ಸುರಿಮಳೆಗೆ
ತಡೆಯಲಾರದೆ
ಬಿಲ್ಲುಗಾರರಸೈನ್ಯ ಹಿಮ್ಮೆಟ್ಟಿತು,

ಪ್ರತಿಭಟಿಸಲಾಗದೆ
ಕುದುರೆಗಳು ನಾಶವಾದವು.
ಗುಂಪುಕೂಡಿದ ಬಿಲ್ಲಾಳಿನ
ಸಾಲುಗಳು ಬಿಲ್ಲಿನ ಪೆಟ್ಟಿನಿಂದ
ನೊಂದಿತು. ರಥಗಳು
ನಾಶವಾಗಿ ಆನೆಯ
ಸಮೂಹವು ಹಿಮ್ಮೆಟ್ಟಿ ಓಡಿತು,
ಹಿಂದೆ ಇದ್ದ ಆನೆಯ
ಗುಂಪುಗಳು ಕಟ್ಟೆಯನ್ನು
ಕಟ್ಟಿದ ಹಾಗಿರಲು
ಶತ್ರುಸೈನ್ಯವು ಸರಿದೋಡಿತು.

ಕದನತ್ರಿಣೇತ್ರನಾದ
ಅರ್ಜುನನನ್ನು
ಎದುರಿಸುವವರು ಯಾರು?
ಯಾರೂ ಇಲ್ಲ.

ವ|| ಆಗಳ್ ಕರ್ಣನರ್ಣವನಿನಾದದಿಂದಾ ರ್ದು ಗುಣಾರ್ಣವನೊಳ್ ಬಂದು ತಾಗಿ ಶಲ್ಯಂ ಭೀಮಸೇನನೊಳ್ ತಾಗಿ ಕಿಱಿದುಂ ಪೊೞ್ತು ಕಾದೆ-

ವಚನ:ಪದವಿಭಾಗ-ಅರ್ಥ:ಆಗಳ್ ಕರ್ಣನು ಆರ್ಣವನಿನಾದದಿಂದ ಆರ್ದು (ಸಮುದ್ರಘೋಷದಂತೆ ಆರ್ಭಟಿಸಿ) ಗುಣಾರ್ಣವನೊಳ್ ಬಂದು ತಾಗಿ (ಅರಿಕೇಸರಿಯ ಬಿರುದನ್ನು ಉಪಯೋಗಿಸಿದೆ: ಅರ್ಜುನನೊಡನೆ ಯುದ್ಧಕ್ಕೆ ನಿಂತನು) ಶಲ್ಯಂ ಭೀಮಸೇನನೊಳ್ ತಾಗಿ

(ಶಲ್ಯನು ಭೀಮಸೇನನನ್ನು) ಕಿಱಿದುಂ ಪೊೞ್ತು ಕಾದೆ (ಸ್ವಲ್ಪ ಹೊತ್ತು ಕಾದಲು/ ಯುದ್ಧಮಾಡಲು)-

ವಚನ:ಅರ್ಥ:ಆಗ ಕರ್ಣನು ಸಮುದ್ರಘೋಷದಂತೆ ಆರ್ಭಟಿಸಿ, ಅರ್ಜುನನೊಡನೆಯೂ, ಶಲ್ಯನು ಭೀಮಸೇನನೊಡನೆಯೂ ಯುದ್ಧಕ್ಕೆ ನಿಂತರು/ ತಾಗಿದರು

ಚಂ|| ಅರಿದು ಗೆಲಲ್ಕೆ ಪಾರ್ವನ
ಶರಾಸನವಿದ್ಯೆಯನೆಂದು
ನೊಂದು ನಿ
ತ್ತರಿಸದೆ ಪಾರ್ವನೊಳ್
ಕಲಹಮಾಗದು ಚಿ
ದೊರೆಯಲ್ತಿದೆಂದು ಭಾ|
ಸ್ಕರಸುತನೊಯ್ಯನೋಸರಿಸೆ
ಮದ್ರಮಹೀಶನುಮಂ
ಮರುತ್ಸುತಂ
ವಿರಥನೆ ಮಾಡಿ ತಳ್ತು
ನೆಲಕಿಕ್ಕಿದನೊರ್ಮೆಯ

ಮಲ್ಲಯುದ್ಧದೊಳ್|| ೭೧ ||

ಪದ್ಯ-೭೧:ಪದವಿಭಾಗ-

ಅರ್ಥ:(ಕರ್ಣನು) ಅರಿದು (ಅಸಾಧ್ಯ) ಗೆಲಲ್ಕೆ ಪಾರ್ವನ ಶರಾಸನವಿದ್ಯೆಯನು ಎಂದು ನೊಂದು(ಹಾರುವನ/ ಬ್ರಾಹ್ಮಣನ ಬಿಲ್ವಿದ್ಯೆಯನ್ನು ಗೆಲುವುದು ಅಸಾಧ್ಯ ಎಂದು ವ್ಯಥೆಪಟ್ಟು), ನಿತ್ತರಿಸದೆ (ನಿಭಾಯಿಸಲಾರದೆ- ಎದುರಿಸಿ ನಿಲ್ಲಲಾರದೆ), ಪಾರ್ವನೊಳ್

ಕಲಹಮಾಗದು ಚಿ
ದೊರೆಯಲ್ತಿದು ಎಂದು (ಚಿ
ಬ್ರಾಹ್ಮಣರಲ್ಲಿ
ಜಗಳವಾಡುವುದು
ಯೋಗ್ಯವಲ್ಲ' ಎಂದು)
ಭಾಸ್ಕರಸುತನು ಒಯ್ಯನೆ
ಓಸರಿಸೆ (ಕರ್ಣನು ಮೆಲ್ಲಗೆ
ಹಿಮ್ಮೆಟ್ಟಲು)
ಮದ್ರಮಹೀಶನುಮಂ
ಮರುತ್ಸುತಂ ವಿರಥನೆ ಮಾಡಿ
(ಭೀಮನು ಮದ್ರರಾಜನಾದ

ಶಲ್ಯನನ್ನು ರಥದಿಂದ ಕೆಳಕ್ಕಿಳಿಸಿ) ತಳ್ತು (ಹಿಡಿದು/ ತಳ್ಳಿ?) ನೆಲಕಿಕ್ಕಿದನು ಒರ್ಮೆಯ ಮಲ್ಲಯುದ್ಧದೊಳ್ (ಮಲ್ಲಯುದ್ಧದಲ್ಲಿ ಒಂದೇ ಸಲಕ್ಕೆ ನೆಲಕ್ಕೆ ಅಪ್ಪಳಿಸಿದನು)

ಪದ್ಯ-೭೧:ಅರ್ಥ: ಕರ್ಣನು ಬ್ರಾಹ್ಮಣನ ಬಿಲ್ವಿದ್ಯೆಯನ್ನು ಎದುರಿಸಿ ನಿಲ್ಲಲಾರದೆ, ಗೆಲ್ಲುವುದು ಅಸಾಧ್ಯ ಎಂದು

ವ್ಯಥೆಪಟ್ಟು, 'ಚಿ ಬ್ರಾಹ್ಮಣರಲ್ಲಿ ಜಗಳವಾಡುವುದು ಯೋಗ್ಯವಲ್ಲ' ಎಂದು ಮೆಲ್ಲಗೆ ಹಿಮ್ಮೆಟ್ಟಲು/ ಹಿಮ್ಮೆಟ್ಟಿದನು, ಭೀಮನು ಮದ್ರರಾಜನಾದ ಶಲ್ಯನನ್ನು ರಥದಿಂದ ಕೆಳಕ್ಕಿಳಿಸಿ, ಹಿಡಿದು, ಮಲ್ಲಯುದ್ಧದಲ್ಲಿ ಒಂದೇ ಸಲಕ್ಕೆ ಅಪ್ಪಳಿಸಿದನು.

ವ|| ಆಗಳಾ ಬಲದ ನಡುವಿರ್ದ ನಾರಾಯಣಂ ಬಲದೇವಂಗೆ

ಸುಟ್ಟಿತೋಱೆ ಭೀಮಾರ್ಜುನರ್ಕಳಿವರಮೋಘಮಪ್ಪರೆಂದವರ ಸಾಹಸಕ್ಕೆ ಮೆಚ್ಚಿ ಸಂತಸಂಬಟ್ಟಿರ್ದಾಗಳುಱಿದ ರಸು ಮಕ್ಕಳೆಲ್ಲಂ ಕರ್ಣ ಶಲ್ಯರ್ ಮೊಗಂದಿರಿದುದಂ ಕಂಡು ಮನಂಗೆಟ್ಟು-

ವಚನ:ಪದವಿಭಾಗ-

ಅರ್ಥ:ಆಗಳು ಆ ಬಲದ ನಡುವೆ ಇರ್ದ ನಾರಾಯಣಂ

ಬಲದೇವಂಗೆ (ಆಗ ಆ ಸೈನ್ಯದ
ಮಧ್ಯೆ ಇದ್ದ ಶ್ರೀಕೃಷ್ಣನು
ಬಲರಾಮನಿಗೆ) ಸುಟ್ಟಿತೋಱಿ
(ಬೆರಳಿನಿಂದ ಸುಟ್ಟಿ/
ಗುರಿಮಾಡಿ ಸೂಚಿಸಿ
ತೋರಿಸಿ)
ಭೀಮಾರ್ಜುನರ್ಕಳ್ ಇವರು
ಅಮೋಘಂ ಅಪ್ಪರೆಂದು
(ನಿಶ್ಚಯವಾಗಿಯೂ ಅವರೇ)
ಅವರ ಸಾಹಸಕ್ಕೆ ಮೆಚ್ಚಿ
ಸಂತಸಂಬಟ್ಟಿರ್ದ ಆಗಳು

(ಸಂತೋಷಪಟ್ಟ ಆ ಸಮಯದಲ್ಲಿ) ಉೞಿದ ಅರಸು ಮಕ್ಕಳೆಲ್ಲಂ (ಉಳಿದ ರಾಜಕುಮಾರರೆಲ್ಲ) ಕರ್ಣ ಶಲ್ಯರ್ ಮೊಗಂದಿರಿದುದಂ (ಹಿಮ್ಮೆಟ್ಟಿದುದನ್ನು)ಕಂಡು ಮನಂಗೆಟ್ಟು (ಧೈರ್ಯ ಕುಂದಿ)-

ವಚನ:ಅರ್ಥ:ಆಗ ಆ ಸೈನ್ಯದ ಮಧ್ಯೆ ಇದ್ದ ಶ್ರೀಕೃಷ್ಣನು ಬಲರಾಮನಿಗೆ

ಇವರು ಭೀಮಾರ್ಜುನರು
ಎಂದು ಬೆರಳಿನಿಂದ ಸುಟ್ಟಿ/
ಗುರಿಮಾಡಿ ಸೂಚಿಸಿ ತೋರಿಸಿ,
ಇವರು ನಿಶ್ಚಯವಾಗಿಯೂ
ಅವರೇ ಎಂದು, ಅವರ
ಪರಾಕ್ರಮಕ್ಕೆ
ಸಂತೋಷಪಟ್ಟನು/
ಸಂತೋಷಪಟ್ಟ ಆ
ಸಮಯದಲ್ಲಿ ಉಳಿದ
ರಾಜಕುಮಾರರೆಲ್ಲ
ಕರ್ಣಶಲ್ಯರು ಮುಖತಿರುಗಿಸಿ

ಹಿಮ್ಮೆಟ್ಟಿದುದನ್ನು ನೋಡಿ ಧೈರ್ಯಗುಂದಿ-

ಕಂ|| ಕರಮೊಸೆದಾ ದ್ರುಪದಜೆಯೊಳ್ ನೆರೆದೊಸಗೆಗೆ ತಮ್ಮ ಬೀರಮಂ ಬಿಂಕಮುಮಂ|

ತೆಱವುಂ ತೆಲ್ಲಂಟಿಯುಮೆಂ ದರಿಕೇಸರಿಗಾಗಳೀವವೋಲ್ ಬೆನ್ನಿತ್ತರ್|| ೭೨||

ಪದ್ಯ-೭೨:ಪದವಿಭಾಗ-

ಅರ್ಥ:ಕರಂ (ಬಹಳ) ಒಸೆದು

(ಸಂತೋಷಪಟ್ಟು) ಆ
ದ್ರುಪದಜೆಯೊಳ್ ನೆರೆದ
ಒಸಗೆಗೆ (ಆ ದ್ರೌಪದಿಯೊಡನೆ
ಸೇರಿದ ಸಂತೋಷಕ್ಕೆ) ತಮ್ಮ
ಬೀರಮಂ ಬಿಂಕಮುಮಂ
ತೆಱವುಂ (ತಮ್ಮ
ಶೌರ್ಯವನ್ನೂ, ಗರ್ವವನ್ನೂ
ತಪ್ಪ ಕಾಣಿಕೆಯೆಂದು)
ತೆಲ್ಲಂಟಿಯುಮೆಂದು
(ಬಳುವಳಿಯೆಂದೂ)
ಅರಿಕೇಸರಿಗೆ ಆಗಳ್

ಈವಪ್ರೋಲ್ ಬೆನ್ನಿತ್ತರ್ (ಅರಿಕೇಸರಿಗೆ ಕೊಡುವ ಹಾಗೆ ಬೆನ್ನುತಿರುಗಿಸಿ ಪಲಾಯನ ಮಾಡಿದರು.) (ಅರ್ಜುನ ದ್ರೌಪದಿಯರ ವಿವಾಹಕ್ಕೆ ಅವರು/ ರಾಜಕುಮಾರರು ಕೊಟ್ಟ ಉಡುಗೊರೆ-ಬಳುವಳಿ ಯಾವುದೆಂದರೆ ಅವರ ಶೌರ್ಯ ಗರ್ವ/ ಗೌರವ)

ಪದ್ಯ-೭೨:ಅರ್ಥ:ದ್ರೌಪದಿ ಯೊಡನೆ ಅರ್ಜುನನು ಬಂದು

ಸೇರಿದ ಸಂತೋಷಕ್ಕಾಗಿ ತಮ್ಮ
ಪರಾಕ್ರಮವನ್ನೂ
ಅಹಂಕಾರವನ್ನೂ ತಪ್ಪು
ಕಾಣಿಕೆಯನ್ನಾಗಿಯೂ/
ಬಳುವಳಿಯನ್ನಾಗಿಯೂ
ಅರಿಕೇಸರಿಗೆ/ಅರ್ಜುನನಿಗೆ
ಕೊಡುವ ಹಾಗೆ ಬೆನ್ನುತಿರುಗಿಸಿ
ಪಲಾಯನ ಮಾಡಿದರು.

**ವ|| ಆಗಳ್ ವಿಕ್ರಾಂತತುಂಗಂ
ಬಿಲ್ಲ ಕೊಪ್ಪಿನ ಮೇಲೆ
ಕೆಯ್ಯನೂಱಿ ಮುಗುಳ್ನಗೆ**

ನಗುತ್ತುಂ ಪಾಂಚಾಳರಾಜತನೂಜೆಗಿಂ ತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್ ವಿಕ್ರಾಂತತುಂಗಂ (ಅರ್ಜುನನು) ಬಿಲ್ಲ ಕೊಪ್ಪಿನ ಮೇಲೆ ಕೆಯ್ಯನೂಱಿ (ಕಯ್ಯನ್ನು ಊರಿ) ಮುಗುಳ್ನಗೆ ನಗುತ್ತುಂ ಪಾಂಚಾಳರಾಜತನೂಜೆಗೆ

()ದ್ರೌಪದಿಗೆ ಇಂತೆಂದಂ (ಇಂತು ಎಂದಂ-ಹೇಳಿದನು)- **ವಚನ:ಅರ್ಥ:**ವಿಕ್ರಾಂತತುಂಗ ನಾದ ಅರ್ಜುನನು ಬಿಲ್ಲಿನ ತುದಿಯ ಮೇಲೆ ಕಯ್ಯನ್ನೂರಿಕೊಂಡು ಹುಸಿನಗೆ ನಗುತ್ತ ದ್ರೌಪದಿಗೆ ಹೀಗೆ ಹೇಳಿದನು

ಕಂ||

ನಿನ್ನನುಱುಗಿಸಲುಮಾಜಿಯೊ

ಳೆನ್ನಂ ಬೆಂಕೊಂಡು ಕಾದಲುಂ ಬಂದೀಗಳ್|
ಬಿನ್ನನೆ ಮೊಗದಿಂ ಬೀರರ್ ಬೆನ್ನಿತ್ತುದನಿನಿಸು ನೋಡ ಸರಸಿರುಹಮುಖೀ|| ೭೩||

ಪದ್ಯ-00:ಪದವಿಭಾಗ-ಅರ್ಥ:ನಿನ್ನನು ಉಱುಗಿಸಲುಂ (ಒಲಿಸುವುದಕ್ಕೂ) ಆಜಿಯೊಳ್ ಎನ್ನಂ (ನನ್ನೊಡನೆ ಯುದ್ಧದಲ್ಲಿ)

ಬೆಂಕೊಂಡು (ಬೆನ್ನಟ್ಟಿ ಬಂದು)
ಕಾದಲುಂ
(ಯುದ್ಧಮಾಡುವುದಕ್ಕೂ)
ಬಂದು ಈಗಳ್ ಬಿನ್ನನೆ
ಮೊಗದಿಂ ಬೀರರ್
ಬೆನ್ನಿತ್ತುದನು ಇನಿಸು ನೋಡ
ಸರಸಿರುಹಮುಖೀ (ಈಗ
ಪೆಚ್ಚು ಮುಖದಿಂದ ಬೆನ್ನು
ತಿರುಗಿಸಿ
ಹೋಗುತ್ತಿರುವುದನ್ನು

ಸ್ವಲ್ಪನೋಡು ಕಮಲನಯನೇ ಎಂದನು ಅರ್ಜುನ.)

ಪದ್ಯ-00:ಅರ್ಥ: ಎಲೌ ಕಮಲಮುಖಿಯಾದ ದ್ರೌಪದಿಯೇ ಈ ವೀರರು ನಿನ್ನನ್ನು ಒಲಿಸುವುದಕ್ಕೂ ನನ್ನೊಡನೆ ಯುದ್ಧಮಾಡುವುದಕ್ಕೂ ಬೆನ್ನಟ್ಟಿ ಬಂದು ಈಗ ಪೆಚ್ಚು ಮುಖದಿಂದ ಬೆನ್ನು ತಿರುಗಿಸಿ ಹೋಗುತ್ತಿರುವುದನ್ನು

ಸ್ವಲ್ಪನೋಡು ಕಮಲನಯನೇ
ಎಂದನು ಅರ್ಜುನ.

ವ|| ಎಂಬನ್ನೆಗಂ ದ್ರುಪದಂ ಬಂದವರ್ ಪಾಂಡವರಪ್ಪುದುಮಂ (ಬಂದಿರುವವರು ಪಾಂಡವರಾಗಿ) ತನ್ನಳಿಯಂ ವಿಕ್ರಮಾರ್ಜುನನಪ್ಪುದುಮಂ ತಪ್ಪಿಲ್ಲದಱಿದು ಮಹಾವಿಭೂತಿಯಿಂ ಪೊೞಲಂ ಪುಗಿಸಿ-

ವಚನ:ಪದವಿಭಾಗ-ಅರ್ಥ:

ಎಂಬನ್ನೆಗಂ ದ್ರುಪದಂ

ಬಂದವರ್

ಪಾಂಡವರಪ್ಪುದುಮಂ

(ಪಾಂಡವರೆಂಬುದನ್ನು) ತನ್ನ

ಅಳಿಯಂ

ವಿಕ್ರಮಾರ್ಜುನನಪ್ಪುದುಮಂ

ತಪ್ಪಿಲ್ಲದಱಿದು (ನಿಶ್ಚಯವಾಗಿ

ತಿಳಿದು) ಮಹಾವಿಭೂತಿಯಿಂ

ಪೊಬಿಲಂ

ಪುಗಿಸಿ(ಮಹಾವೈಭವದಿಂದ
ಪುರವನ್ನು ಪ್ರವೇಶಮಾಡಿಸಿ) -
ವಚನ:ಅರ್ಥ:ಅಷ್ಟರಲ್ಲಿ
ದ್ರುಪದನು ಅಲ್ಲಿಗೆ
ಬಂದಿರುವವರು
ಪಾಂಡವರೆಮಬುದನ್ನು ತನ್ನ
ಅಳಿಯನು
ವಿಕ್ರಮಾರ್ಜುನನಾಗಿರುವುದ
ನ್ನೂ ನಿಶ್ಚಯವಾಗಿ ತಿಳಿದು
ಮಹಾವೈಭವದಿಂದ

ಪುರವನ್ನು ಪ್ರವೇಶಮಾಡಿಸಿ-(ಪ್ರವೇಶಮಾಡಿಸಿದನು.)

ಚಂ|| ಪೊಟಿಲೊಳಗೊಪ್ಪೆ
ಕನ್ನಡಿಯ ಕಂಚಿನ
ತೋರಣದೋೞಿಗಳ್ ತಳ
ತ್ತಳಿಸೆ ವಿಚಿತ್ರಕೇತುತತಿಗಳ್
ಮಿಳಿರ್ದಾಡೆ
ಪುರಾಂಗನಾಜನಂ|
ಗಳ ಜಯ ಜೀಯಮಾನ
ರವಮಿಕ್ಕುವ ಸೇಸೆ
ಮನೋನುರಾಗಮಂ

ಬಳೆಯಿಸೆ ಪೊಕ್ಕನಾ ದ್ರುಪದಮಂದಿರಮಂ ಪರಸೈನ್ಯಭೈರವಂ|| ೭೪||

ಪದ್ಯ-೭೪:ಪದವಿಭಾಗ-ಅರ್ಥ:ಪೊಳಲೊಳಗೆ ಒಪ್ಪೆ ಕನ್ನಡಿಯ ಕಂಚಿನ ತೋರಣದ ಓಳಿಗಳ್ ತಳತ್ತಳಿಸೆ (ಪಟ್ಟಣದಲ್ಲಿ ಕನ್ನಡಿ ಮತ್ತು ಕಂಚಿನ ತೋರಣದ ಸಮೂಹಗಳು ಥಳಿಥಳಿಸಿ ಶೋಭಿಸಿದವು)

ವಿಚಿತ್ರಕೇತುತತಿಗಳ್
ಮಿಳಿರ್ದಾಡೆ (ವಿಧವಿಧವಾದ
ಬಾವುಟಗಳ ಸಮೂಹಗಳು
ಅಲುಗಾಡಲು-)
ಪುರಾಂಗನಾ(ಸ್ತ್ರೀಯರು)
ಜನಂಗಳ ಜಯ ಜೀಯಮಾನ
ರವಂ{ಪುರದ ಸ್ತ್ರೀಜನರು
ಜಯಜಯವೆಂದು
ಘೋಷಿಸುವ ಸದ್ದು} ಇಕ್ಕುವ
ಸೇಸೆ (ಚೆಲ್ಲುವ ಮಂತ್ರಾಕ್ಷತೆ)
ಮನೋನುರಾಗಮಂ

ಬಳೆಯಿಸೆ (ಮನಸ್ಸಿಗೆ ಸಂತೋಷವನ್ನು ಹೆಚ್ಚಿಸಲು) ಪೊಕ್ಕನು (ಹೊಕ್ಕನು) ಆ ದ್ರುಪದಮಂದಿರಮಂ ಪರಸೈನ್ಯಭೈರವಂ (ಶತ್ರುಸೈನ್ಯಕ್ಕೆ ಭೈರವನಂತಿರುವ ಅರ್ಜುನನು)

ಪದ್ಯ-೭೪:ಅರ್ಥ: ಪಟ್ಟಣದಲ್ಲಿ ಕನ್ನಡಿ ಮತ್ತು ಕಂಚಿನ ತೋರಣದ

ಸಮೂಹಗಳು ಥಳಿಥಳಿಸಿ ಶೋಭಿಸಿದವು. ವಿಧವಿಧವಾದ ಬಾವುಟಗಳ ಸಮೂಹಗಳು ಅಲುಗಾಡಲು- ಪುರದ ಸ್ತ್ರೀಜನರು ಜಯಜಯವೆಂದು ಘೋಷಿಸುವ ಸದ್ದು, ಚೆಲ್ಲುವ ಮಂತ್ರಾಕ್ಷತೆ, ಮನಸ್ಸಿಗೆ ಸಂತೋಷವನ್ನು ಹೆಚ್ಚಿಸಿದುವು. ಶತ್ರುಸೈನ್ಯಕ್ಕೆ ಭೈರವನಂತಿರುವ ಅರ್ಜುನನು

ದ್ರುಪದನ ಅರಮನೆಯನ್ನು ಪ್ರವೇಶಿಸಿದನು.

<u>**ಅರ್ಜುನ ದ್ರೌಪತಿಯರ ವಿವಾಹ**</u>

ವ||ಆಗಳ್ ದ್ರುಪದಂ ಪಚ್ಚೆಯ ನೆಲಗಟ್ಟಿನೊಳಂ ರಾಜಾವರ್ತದ ಕಂಬದೊಳಂ ಪವಳದ ಜಂತೆಯೊಳಂ ಪದ್ಮರಾಗದ ಬೋದಿಗೆಯೊಳಮಿಂದ್ರನೀಲ

ದ ಭದ್ರದೊಳಂ ಕರ್ಕೇತನದ
ಜಾಳರಿಗೆಯೊಳಂ ಪಳುಕಿನ
ಚಿತ್ರಭಿತ್ತಿಯೊಳಂ
ಚಂದ್ರಕಾಂತದ
ಚಂದ್ರಶಾಲೆಯೊಳಮೊಪ್ಪುವ
ವಿವಾಹಗೇಹಮಂ
ಸಮೆಯಿಸಿಯದಱ
ನಡುವಣಾರ್ದ್ರಮೃತ್ತಿಕಾವಿರಚಿ
ತಮಪ್ಪ ಚತುರಾಂತರದೊಳ್
ಮುತ್ತಿನ ಚೌಕದ ನಡುವಣ
ಚೆಂಬೊನ್ನ ಪಟ್ಟವಣೆಯ

ಮೇಗಣ ದುಗುಲದ

ಪೆಸೆಯೊಳ್ ಗುಣಾರ್ಣವನನಾ

ದ್ರುಪದಜೆಯನೊಡನೆ

ಕುಳ್ಳಿರಿಸಿ ಹಿತ ಪುರೋಹಿತ

ಪ್ರಾಜ್ಯಾಜ್ಯಾಹುತಿಹುತ

ಹುತವಹಸಮಕ್ಷದೊಳ್

ಕೆಯ್ನೀರೆರೆದು

ಪ್ರಾಣಿಗ್ರಹಂಗೆಯ್ಸೆ-

ವಚನ:ಪದವಿಭಾಗ-ಅರ್ಥ:

ಆಗಳ್ ದ್ರುಪದಂ ಪಚ್ಚೆಯ

ನೆಲಗಟ್ಟಿನೊಳಂ

(ನೆಲಗಟ್ಟಿನಿಂದ ಕೂಡಿದ)
ರಾಜಾವರ್ತದ
(ಇಂದ್ರನೀಲಮಣಿ)
ಕಂಬದೊಳಂ ಪವಳದ
ಜಂತೆಯೊಳಂ (ತೊಲೆ?)
ಪದ್ಮರಾಗದ
ಬೋದಿಗೆಯೊಳಂ
ಇಂದ್ರನೀಲದ ಭದ್ರದೊಳಂ
ಕರ್ಕೇತನದ (ಚಿನ್ನದ)
ಜಾಳರಿಗೆಯೊಳಂ (ಜಾಲರಿ)
ಪಳುಕಿನ

(ಹೊಳೆಯುವ)ಚಿತ್ರಭಿತ್ತಿಯೊ
ಳಂ ಚಂದ್ರಕಾಂತದ
ಚಂದ್ರಶಾಲೆಯೊಳಂ ಒಪ್ಪುವ
(ಶೋಭಿಸುವ)
ವಿವಾಹಗೇಹಮಂ
ಸಮೆಯಿಸಿಯು
(ವಿವಾಹಗೃಹವನ್ನು
ಸಿದ್ಧಗೊಳಿಸಿ) ಅದಱ
ನಡುವಣ ಆರ್ದ್ರಮೃತ್ತಿಕಾ
(ಒದ್ದೆಮಣ್ಣಿನಿಂದ)
ವಿರಚಿತಮಪ್ಪ (ಮಾಡಿದ)

ಚತುರಾಂತರದೊಳ್
(ಹಸೆಮಣೆ ಜಗುಲಿಯಲ್ಲಿ)
ಮುತ್ತಿನ ಚೌಕದ ನಡುವಣ
ಚೆಂಬೊನ್ನ ಪಟ್ಟವಣೆಯ
ಮೇಗಣ (ಚಚ್ಚೌಕವಾದ
ಮುತ್ತಿನ ಹೊಂಬಣ್ಣದ
ಹಸೆಯ ಮಣೆಯ ಮೇಲಿನ)
ದುಗುಲದ ಪೆಸೆಯೊಳ್ (
ರೇಷ್ಮೆಯ ಹಸೆಯಲ್ಲಿ)
ಗುಣಾರ್ಣವನನು
(ಅರ್ಜುನನ್ನು) ಆ

ದ್ರುಪದಜೆಯನೊಡನೆ
ಕುಳ್ಳಿರಿಸಿ, ಹಿತ ಪುರೋಹಿತ
ಪ್ರಾಜ್ಯ ಆಜ್ಯಾಹುತಿಹುತ
(ಶುದ್ಧ ತುಪ್ಪದ ಆಹುತಿ ಹುತ-
ಅಗ್ನಿಗೆ ಹಾಕಿ) ಹುತವಹ
ಸಮಕ್ಷದೊಳ್
(ಅಗ್ನಿಸಮಕ್ಷಮದಲ್ಲಿ)
ಕೆಯ್ನೀರೆರೆದು ಪ್ರಾಣಿಗ್ರಹಂ
ಗೆಯ್ಸೆ (ಕೈನೀರು ಎರೆದು-
ಕೈನೀರು ಬಿಟ್ಟು- ಧಾರೆಯೆರೆದು

ಪಾಣಿಗ್ರಹಣವನ್ನು
ಮಾಡಿಸಲು)-
ವಚನ:ಅರ್ಥ:ಆಗ
ದ್ರುಪದನು ಪಚ್ಚೆಯೆಂಬ
ರತ್ನದಿಂದ ಮಾಡಿದ
ನೆಲಗಟ್ಟಿನಿಂದಲೂ ಎಳೆಯ
ಇಂದ್ರನೀಲಮಣಿಯಿಂದ
ಮಾಡಿದ ಕಂಭಗಳಿಂದಲೂ
ಹವಳದ ಜಂತಿಗಳಿಂದಲೂ
ಪದ್ಮರಾಗದ
ಬೋದಿಗೆಗಳಿಂದಲೂ

ಇಂದ್ರನೀಲದ
ಉಪ್ಪರಿಗೆಗಳಿಂದಲೂ ಚಿನ್ನದ
ಜಾಲರಿಗಳಿಂದಲೂ ಸ್ಪಟಿಕದ
ಚಿತ್ರಿತವಾದ
ಗೋಡೆಗಳಿಂದಲೂ
ಚಂದ್ರಕಾಂತ ಶಿಲೆಯಿಂದ
ನಿರ್ಮಿಸಿದ
ಮೇಲ್ಮಹಡಿಯಿಂದಲೂ
ವಿವಾಹಗೃಹವನ್ನು
ಸಿದ್ಧಗೊಳಿಸಿ, ಅದರ ಮಧ್ಯೆ
ಹಸಿಯ ಮಣ್ಣಿನಿಂದ ಮಾಡಿದ

ಚಚ್ಚೌಕದ ಹಸೆಯ
ಜಗಲಿಯಲ್ಲಿ ಚಚ್ಚೌಕವಾದ
ಮುತ್ತಿನ ಹೊಂಬಣ್ಣದ
ಹಸೆಯ ಮಣೆಯ ಮೇಲೆ
ರೇಷ್ಮೆಯ ಹಸೆಯಲ್ಲಿ
ಗುಣಾರ್ಣವನನ್ನೂ
ದ್ರೌಪದಿಯನ್ನೂ
ಕುಳ್ಳಿರಿಸಿದನು. ಬಂಧುಗಳು,
ಪುರೋಹಿತರು, ಶುದ್ಧವಾದ
ತುಪ್ಪದ ಹವಿಸ್ಸನ್ನು
ಹೋಮಮಾಡಿಸಿದರು.

ದ್ರುಪದನು

ಅಗ್ನಿಸಮಕ್ಷಮದಲ್ಲಿ

ಧಾರೆಯೆರೆದು

ಪಾಣಿಗ್ರಹಣವನ್ನು

ಮಾಡಿಸಲು-.

ಚಂ|| ಇಡಿದಿರೆ ಮಂಜಿನೊಳ್

ತುಱುಗಿ

ತೆಂಕಣಗಾಳಿಯೊಳಾದ

ಸೋಂಕಿನೊಳ್

ನಡುಗುವಶೋಕವಲ್ಲರಿಯ

ಪಲ್ಲವದೊಳ್

ನವಚೂತಪಲ್ಲವಂ|
ತೊಡರ್ದರ್ವೊಲಾಗೆ
ಘರ್ಮಜಲದಿಂ ನಡುಪಾಕೆಯ
ಪಾಣಿಪಲ್ಲವಂ
ಬಿಡಿದು ಬೆಡಂಗನಾಳ್ದುದು
ಗುಣಾರ್ಣವನೊಪ್ಪುವ
ಪಾಣಿಪಲ್ಲವಂ|| ೭೫||

ಪದ್ಯ-೭೫:ಪದವಿಭಾಗ-ಅರ್ಥ:ಇಡಿದಿರೆ ಮಂಜಿನೊಳ್ ತುಱುಗಿ (ಮಂಜಿನಿಂದ ತುಂಬಿದ, ತುರುಗಿ ದಟ್ಟವಾಗಿ

ವ್ಯಾಪ್ತವಾದ)
ತೆಂಕಣಗಾಳಿಯೊಳು ಆದ
ಸೋಂಕಿನೊಳ್(ದಕ್ಷಿಣಮಾರು
ತ ಸ್ಪರ್ಶದಿಂದ) ನಡುಗುವ
ಅಶೋಕವಲ್ಲರಿಯ
ಪಲ್ಲವದೊಳ್
(ಅಶೋಕಲತೆಯ
ಚಿಗುರಿನಲ್ಲಿ)
ನವಚೂತಪಲ್ಲವಂ
(ಹೊಸದಾದ ಮಾವಿನ
ಚಿಗುರು) ತೊಡರ್ದವೊಲ್

ಆಗೆ (ಸೇರಿಕೊಂಡ ಹಾಗೆ)
ಘರ್ಮಜಲದಿಂ ನಡುಪ
ಆಕೆಯ ಪಾಣಿಪಲ್ಲವಂ
(ಬೆವರಿನಿಂದ ನಡುಗುತ್ತಿರುವ
ಆಕೆಯ ಚಿಗುರಿನಂತಿರುವ
ಕಯ್ಯನ್ನು) ಬಿಡಿದು(ಹಿಡಿದು)
ಬೆಡಂಗನು ಆಳ್ದುದು
(ಸೊಬಗನ್ನು ಹೊಂದಿತು)
ಗುಣಾರ್ಣವನೊಪ್ಪುವ
ಪಾಣಿಪಲ್ಲವಂ
(ಎಲೆಯಚಿಗುರಿನಂತಿರುವ ಕೈ)

ಪದ್ಯ-೭೫:ಅರ್ಥ:

ಮಂಜಿನಿಂದ ತುಂಬಿದ,

ತುರುಗಿ ದಟ್ಟವಾಗಿ

ವ್ಯಾಪ್ತವಾದ, ದಕ್ಷಿಣಮಾರುತ

ಸ್ಪರ್ಶದಿಂದ

ಅಲುಗಾಡುತ್ತಿರುವ

ಅಶೋಕಲತೆಯ ಚಿಗುರಿನಲ್ಲಿ

ಹೊಸದಾದ ಮಾವಿನ ಚಿಗುರು

ಸೇರಿಕೊಂಡ ಹಾಗೆ

ಬೆವರಿನಿಂದ ನಡುಗುತ್ತಿರುವ

ಆಕೆಯ ಚಿಗುರಿನಂತಿರುವ

ಕಯ್ಯನ್ನು ಹಿಡಿದು
ಗುಣಾರ್ಣವನ/ ಅರ್ಜುನನ
ಸುಂದರವಾದ
ಎಲೆಯಚಿಗುರಿನಂತಿರುವ ಕೈ
ಸೊಬಗನ್ನು ಹೊಂದಿತು.

ವ|| ಅಂತೊರ್ವರೊರ್ವರ ಕಿಱುಕುಣಿಕೆಗಳಂ ಪಿಡಿದು ರತಿಯುಂ ಕಾಮದೇವನುಂ ಬರ್ಪಂತೆ ಬೇಳ್ವೆಯ ಕೊಂಡದ ಮೊದಲ್ಗೆ ವಂದು ಕನಕಗಿರಿಯ ಬಲಗೊಳ್ವ ಪತಂಗ

ದಂಪತಿಯಂತಾ ದಂಪತಿಗಳ್ ಸಪ್ತಾರ್ಚಿಯಂ ಮೂಱು ಸೂಱು ಬಲವಂದು ನಿಂದಿಂ ಬೞಿಯಮಾಕೆ ಪುರೋಹಿತನ ಪೇೞ್ದೋಜೆಯೊಳ್ ಲಾಜೆಯನಗ್ನಿಕುಂಡದೊಳ್ ಸುರಿದು-

ವಚನ:ಪದವಿಭಾಗ-

ಅರ್ಥ:ಅಂತು ಒರ್ವರೊರ್ವರ (ಹಾಗೆ ಒಬ್ಬರು ಇನ್ನೊಬ್ಬರ) ಕಿಱುಕುಣಿಕೆಗಳಂ ಪಿಡಿದು

(ಕಿರುಬೆರಳನ್ನು
ಹಿಡಿದುಕೊಂಡು) ರತಿಯುಂ
ಕಾಮದೇವನುಂ ಬರ್ಪಂತೆ
ಬೇಳ್ವೆಯ ಕೊಂಡದ ಮೊದಲ್ಗೆ
(ಹೋಮಕುಂಡದ
ಅಗ್ರಭಾಗಕ್ಕೆ) ವಂದು (ಬಂದು)
ಕನಕಗಿರಿಯ ಬಲಗೊಳ್ವ
(ಪ್ರದಕ್ಷಿಣೆ ಮಾಡುವ) ಪತಂಗ
ದಂಪತಿಯಂತೆ
(ಸೂರ್ಯದಂಪತಿಗಳ ಹಾಗೆ)
ಆ ದಂಪತಿಗಳ್

ಸಪ್ತಾರ್ಚಿಯಂ ಮೂಱು
ಸೂಱು ಬಲವಂದು
(ಅಗ್ನಿಯನ್ನು ಮೂರು ಸಲ
ಪ್ರದಕ್ಷಿಣೆ ಮಾಡಿ) ನಿಂದಿಂ
ಬೞಿಯಂ (ನಿಂತ ಬಳಿಕ) ಆಕೆ
ಪುರೋಹಿತನ
ಪೇೞ್ದೋಜೆಯೊಳ್ (ಪೇೞ್ದ
ಓಜೆಯೊಳ್ ಹೇಳಿದ
ರೀತಿಯಲ್ಲಿ) ಲಾಜೆಯನು
(ಅರಳನ್ನು) ಅಗ್ನಿಕುಂಡದೊಳ್
ಸುರಿದು-

ವಚನ:ಅರ್ಥ:ಹಾಗೆ ಒಬ್ಬರು ಇನ್ನೊಬ್ಬರ ಕಿರುಬೆರಳನ್ನು ಹಿಡಿದುಕೊಂಡು ರತಿಯೂ ಕಾಮದೇವನೂ ಬರುವ ಹಾಗೆ ಹೋಮಕುಂಡದ ಅಗ್ರಭಾಗಕ್ಕೆ ಬಂದು ಮೇರುಪರ್ವತವನ್ನು ಪ್ರದಕ್ಷಿಣೆ ಮಾಡುವ ಸೂರ್ಯದಂಪತಿಗಳ ಹಾಗೆ ಅಗ್ನಿಯನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ನಿಂತ ಬಳಿಕ ದ್ರೌಪದಿಯು ಆ

ಪುರೋಹಿತನು ಹೇಳಿದ
ಕ್ರಮದಲ್ಲಿ ಅರಳನ್ನು
ಅಗ್ನಿಕುಂಡದಲ್ಲಿ ಸುರಿದು,-
(ಲಾಜಹೋಮವನ್ನು
ಮಾಡಿದಳು)

**ಚಂ|| ಅದಱ ಪೊದಳ್ದು ನೀಳ್ದ
ಪೋಗೆಯಂ ಲುಳಿತಾಳಕ್ಕೆ ತನ್ನ
ವಕ್ತ್ರ ಪ
ದ್ಮದಿನೊಸೆದಾಂತೊಡಾಕೆಯ
ಕಪೋಲದೊಳಾ ನವ
ಧೂಮಲೇಖೆ ಬೆ|**

ಳ್ಪಿದಿರ್ಗೊಳೆ ಗಾಡಿವೆತ್ತಡರ್ದು ಕತ್ತುರಿಯೊಳ್ ಮದವಟ್ಟೆಯಂ ವಿಳಾ
ಸದೆ ತೆಗೆದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ|| ೭೬||

ಪದ್ಯ-೭೬:ಪದವಿಭಾಗ-ಅರ್ಥ: ಅದಱ ಪೊದಳ್ದು (ಅದರಿಂದ ಹೊರಟ) ನೀಳ್ದ ಪೋಗೆಯಂ (ಉದ್ದ ಹೊಗೆಯನ್ನ)ಲುಳಿತಾಳಕ್ಕೆ

(ಸುಳಿಕೂದಲಿನ ಆ ದ್ರೌಪದಿ)
ತನ್ನ ವಕ್ತ್ರ ಪದ್ಮದಿಂ (ಮುಖ
ಕಮಲದಿಂದ) ಒಸೆದು
(ಸಂತಸದಿಂದ) ಆಂತೊಡೆ
(ಧರಿಸಿದರೆ) ಆಕೆಯ
ಕಪೋಲದೊಳು (ಅವಳ
ಕೆನ್ನೆಯಲ್ಲಿ) ಆ ನವ
ಧೂಮಲೇಖೆ (ಆ
ಹೊಸಹೊಗೆಯ ಗೆರೆಯು)
ಬೆಳ್ಪಿದಿರ್ಗೊಳೆ ಗಾಡಿವೆತ್ತು
(ಸೊಗಸನ್ನು ಹೊಂದಿ)

ಅಡರ್ದು (ಮೇಲೇರಿ)
ಕತ್ತುರಿಯೊಳ್ ಮದವಟ್ಟೆಯಂ
ವಿಳಾಸದೆ ತೆಗೆದಂತೆ(ಪ್ರೀತಿಯ
ಆಧಿಕ್ಯವನ್ನು ತೋರಿಸಲು
ಕಸ್ತೂರಿಯಿಂದ ರಚಿಸಿದ
ಪತ್ರಲೇಖೆಯನ್ನು ಬರೆದಹಾಗೆ)
ಕಣ್ಗೆಸೆದು ತೋಱಿದುದು ಆ
ಕದನತ್ರಿಣೇತ್ರನಾ
(ಕದನತ್ರಿಣೇತ್ರನಾ/
ಅರ್ಜುನನ ಕಣ್ಣಿಗೆ ಸೊಗಸಾಗಿ
ಕಂಡಿತು)

ಪದ್ಯ-೭೬:ಅರ್ಥ:ಗುಂಗರು ಕೂದಲಿನ ಆ ದ್ರೌಪದಿಯು ದಟ್ಟವೂ ದೀರ್ಘವೂ ಆದ ಅರಳಿನ ಹೊಗೆಯನ್ನು ತನ್ನ ಮುಖಕಮಲದಲ್ಲಿ ಪ್ರೀತಿಯಿಂದ ಧರಿಸಿರುವ ಅವಳ ಕೆನ್ನೆಯಲ್ಲಿ ಆ ಹೊಸಹೊಗೆಯ ಗೆರೆಯು ಸೊಗಸನ್ನು ಹೊಂದಿ ಊರ್ಧ್ವಮುಖವಾಗಿ ಪ್ರೀತಿಯ ಆಧಿಕ್ಯವನ್ನು ತೋರಿಸಲು

ಕಸ್ತೂರಿಯಿಂದ ರಚಿಸಿದ ಪತ್ರಲೇಖೆ (ಕಪೋಲಪತ್ರ – ಅಲಂಕಾರಕ್ಕಾಗಿ ಕನ್ನೆಯ ಮೇಲೆ ಬರೆದುಕೊಳ್ಳುವ ಚಿತ್ರ)ಯಂತೆ ಆ ಕದನತ್ರಿಣೇತ್ರನ/ಅರ್ಜುನನ ಕಣ್ಣಿಗೆ ಸೊಗಸಾಗಿ ಕಂಡಿತು.

ವ|| ಅಂತು ಸೊಗಯಿಸೆ ಪಾಡುವ ಮಂಗಳವಂಗಳುಮೋದುವ ಋಚೆಗಳುಂ ಪರಸುವ

ಪರಕೆಗಳುಮೆಸೆಯೆ

ಪಸೆಯೊಳಿರ್ದ-

ವಚನ:ಪದವಿಭಾಗ-

ಅರ್ಥ:ಅಂತು ಸೊಗಯಿಸೆ ಪಾಡುವ ಮಂಗಳವಂಗಳುಂ (ಹಾಡುತ್ತಿರುವ ಮಂಗಳಧ್ವನಿಗಳು) ಓದುವ ಋಚೆಗಳುಂ (ವೇದಮಂತ್ರಗಳೂ) ಪರಸುವ ಪರಕೆಗಳುಂ ಎಸೆಯೆ (

ಹರಕೆಗಳೂ ಶೋಭಿಸಲು)
ಪಸೆಯೊಳಿರ್ದು--
ವಚನ:ಅರ್ಥ:ಸೊಗಸಾಗಿರು
ವ ಹಾಗೆ ಹಾಡುತ್ತಿರುವ
ಮಂಗಳಧ್ವನಿಗಳೂ
ಪಠಿಸುತ್ತಿರುವ
ವೇದಮಂತ್ರಗಳೂ ಹರಸುವ
ಹರಕೆಗಳೂ ಶೋಭಿಸಲು
ಹಸೆಯಲ್ಲಿದ್ದ
ತುಂಟಸಖಿಯರು

ಗುಣಾರ್ಣವನಿಗೆ ಹೀಗೆಂದು ಸೂಚಿಸಿದರು.--

ಚಂ|| ಪರಿಜೆಯನಂಟು (?) ಕೆನ್ನೆಗಳನೊಯ್ಯನೆ ನೀವುವ ಚಿನ್ನಪೂವನೋ
ಸರಿಸುವ ಹಾರಮಂ ಪಿಡಿದು ನೋಡುವ ಕಟ್ಟಿದ ನೂಲ ತೊಂಗಲಂ|
ತಿರಿಪುವ ಕೆಯ್ತದೊಂದು ನೆವದಿಂ ಲಲಿತಾಂಗಿಯ ಶಂಕೆಯಂ ಭಯಂ

ಬೆರಸಿದ ನಾಣುಮಂ ಕ್ರಮದೆ ಪಿಂಗಿಸು ಬೇಸಱದಿರ್ ಗುಣಾರ್ಣವಾ|| ೭೭||

ಪದ್ಯ-೭೭:ಪದವಿಭಾಗ-ಅರ್ಥ:ಪರಿಜೆಯನಂಟು (?) (ಚಲ್ಲಾಟದ ನೆವದಲ್ಲಿ) ಕೆನ್ನೆಗಳನು ಒಯ್ಯನೆ ನೀವುವ (ಕೆನ್ನೆಯನ್ನು ಸವರುವ) ಚೆನ್ನಪೂವನು ಓಸರಿಸುವ (ಚೆನ್ನದ ಹೂವನ್ನು ಓರೆಮಾಡು) ಹಾರಮಂ

ಪಿಡಿದು ನೋಡುವ
(ಹಾರವನ್ನು ಹಿಡಿದು
ಪರೀಕ್ಷೆಮಾಡುವ), ಕಟ್ಟಿದ
ನೂಲ ತೊಂಗಲಂ (ನೂಲಿನ
ಕುಚ್ಚು) ತಿರಿಪುವ,
ಕೆಯ್ತದೊಂದು ನೆವದಿಂ
(ಕೆಲಸದ ನೆವದಿಂದ)
ಲಲಿತಾಂಗಿಯ ಶಂಕೆಯಂ
(ಸಂಶಯವನ್ನೂ)
ಭಯಂಬೆರಸಿದ ನಾಣುಮಂ
(ನಾಚಿಕೆಯನ್ನೂ) ಕ್ರಮದೆ

ಪಿಂಗಿಸು (ಕ್ರಮಕ್ರಮವಾಗಿ ಹೋಗಲಾಡಿಸು.) ಬೇಸಱದಿರ್ ಗುಣಾರ್ಣವಾ (ನೀನು ಬೇಸರಪಡಬೇಡ ಅರ್ಜುನಾ)

ಪದ್ಯ-೭೭:ಅರ್ಥ: ಚಲ್ಲಾಟದ ನೆವದಲ್ಲಿ, ಕೆನ್ನೆಯನ್ನು ಸವರು, ಚೆನ್ನದ ಹೂವನ್ನು ಓರೆಮಾಡು, ಹಾರವನ್ನು ಹಿಡಿದು ಪರೀಕ್ಷೆಮಾಡು, ಅಲಂಕಾರಕ್ಕಾಗಿರುವ ನೂಲಿನ

ಕುಚ್ಚನ್ನು ತಿರುಗಿಸು, ಕಾರ್ಯಗಳ (ಚೇಷ್ಟೆಯ) ನೆಪದಿಂದ ಕೋಮಲಶರೀರೆಯಾದ ಆ ದ್ರೌಪದಿಯ ಸಂಶಯವನ್ನೂ ಭಯದಿಂದ ಕೂಡಿದ ನಾಚಿಕೆಯನ್ನೂ ಅರ್ಜುನನೇ ನೀನು ಕ್ರಮಕ್ರಮವಾಗಿ ಹೋಗಲಾಡಿಸು. ಈ ಕಾರ್ಯದಲ್ಲಿ ನೀನು ಬೇಸರಪಡಬೇಡ,

ವ|| ಎಂದು ಕೆಲದೊಳಿರ್ದ ದಂಡುರುಂಬೆಗಳ್ ಬುದ್ಧಿವೇೞೆ-

ವಚನ:ಪದವಿಭಾಗ-

ಅರ್ಥ:ಎಂದು ಕೆಲದೊಳಿರ್ದ (ಪಕ್ಕದಲ್ಲಿದ್ದ) ದಂಡುರುಂಬೆಗಳ್ ಬುದ್ಧಿವೇೞೆ (ತುಂಟದಾಸಿಯರು ಬುದ್ಧಿಹೇಳಲು)-

ವಚನ:ಅರ್ಥ:ಎಂದು

ಪಕ್ಕದಲ್ಲಿದ್ದ ತುಂಟದಾಸಿಯರು

ಬುದ್ಧಿಹೇಳಲು-

ಉ|| ಕಾಂತೆ ಪೊದಳ್ದ ನಾಣ

ಭರದಿಂದಧರೀಕೃತ

ಚಂದ್ರಬಿಂಬ ಸ

ತ್ಕಾಂತಿಯನಾನನಾಂಬುಜಮ

ನೊಯ್ಯನೆ ಬಾಗಿರೆ ಕಾದಲಂಗೆ

ಸ|

ಯ್ತಂತಿರು

ನಾಣ್ಚದೆಂದಣುಗೆಯರ್

ಪಿಡಿದಟ್ಟಿಕೊಳೆತ್ತಿ ಬುದ್ಧಿ ವೇ
ಟ್ದಿಂತೆ ಕದಂಪಿನೊಳ್
ಪೊಳೆದುವಾಕೆಯ ಹಾರ
ಮರೀಚಿ ಮಾಲೆಗಳ್|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ:ಕಾಂತೆ ಪೊದಳ್ದ ನಾಣ ಭರದಿಂದ (ದ್ರೌಪದಿಯು ಲಜ್ಜಾಭಾರದಿಂದ) ಅಧರೀಕೃತ (ಕಡಿಮೆ ಮಾಡಿದ್ದ) ಚಂದ್ರಬಿಂಬ ಸತ್ಕಾಂತಿಯನು ಆನನಾಂಬುಜಮನು

(ಚಂದ್ರಬಿಂಬದ ಕಾಂತಿಯನ್ನೂ ಕಡಿಮೆಮಾಡಿದ್ದ ತನ್ನ ಮುಖಕಮಲವನ್ನು) ಒಯ್ಯನೆ ಬಾಗಿರೆ (ಮೆಲ್ಲಗೆ ಬಾಗಿಸಲು) ಕಾದಲಂಗೆ ಸಯ್ತಂತಿರು (ಪ್ರೀತಿಯವನಿಗೆ ಸರಿಯಾಗಿರು), ನಾಣ್ಚದೆಂದು ಅಣುಗೆಯರ್ ಪಿಡಿದು ಅಲ್ಕಿಳೆತ್ತಿ (ನಾಚಿಕೆ ಪಡಬೇಡ ಎಂದು, ಹುಡುಗಿಯರು ಅವಳ ಮುಖವನ್ನು, ಅಳ್ಕಳೊಳ್ ಎತ್ತಿ

-ಪ್ರೀತಿಯಿಂದ ಎತ್ತಿ), ಬುದ್ಧಿ ವೇಟ್ದಿಂತೆ (ಬುದ್ಧಿಹೇಳುತ್ತಿದ್ದಾರೆಯೋ ಎನ್ನುವ ರೀತಿಯಲ್ಲಿ) ಕದಂಪಿನೊಳ್ (ಅವಳ ಕೆನ್ನೆಯಲ್ಲಿ) ಪೊಳೆದುವು ಆಕೆಯ ಹಾರ ಮರೀಚಿ ಮಾಲೆಗಳ್ (ಅವಳ ಕೆನ್ನೆಯಲ್ಲಿ ಅವಳ ಹಾರದ ಕಾಂತಿಕಿರಣಗಳ ಸಾಲುಗಳು ಹೊಳೆದವು.)

ಪದ್ಯ-೭೮:ಅರ್ಥ:

ದ್ರೌಪದಿಯು ಲಜ್ಜಾಭಾರದಿಂದ ಚಂದ್ರಬಿಂಬದ ಕಾಂತಿಯನ್ನೂ ಕೀಳುಮಾಡಿದ್ದ ತನ್ನ ಮುಖಕಮಲವನ್ನು ಮೆಲ್ಲಗೆ ಬಗ್ಗಿಸಿರಲು ಅವಳ ಸಖಿಯರು ಪ್ರೀತಿಯಿಂದ ಅವಳ ಮುಖವನ್ನೆತ್ತಿ 'ನಿನ್ನ ಪ್ರಿಯನಿಗೆ ಸರಿಯಾಗಿರು' ಎಂದು ಬುದ್ಧಿಹೇಳುತ್ತಿದ್ದಾರೆಯೋ ಎನ್ನುವ ರೀತಿಯಲ್ಲಿ ಅವಳ

ಕೆನ್ನೆಯಲ್ಲಿ ಅವಳ ಹಾರದ ಕಾಂತಿಕಿರಣಗಳ ಸಾಲುಗಳು ಹೊಳೆದವು.

ವ|| ಅಂತೊಪ್ಪುವ ವಿವಾಹಮಂಗಳದೊಸಗೆಯೊಳ್ ಮಂಗಳ ಪಾಠಕರೆಳ್ದು ನಿಂದಿರ್ದು ()-

ವಚನ:ಪದವಿಭಾಗ-

ಅರ್ಥ:ಅಂತು ಒಪ್ಪುವ ವಿವಾಹಮಂಗಳದ ಒಸಗೆಯೊಳ್ ಮಂಗಳ

ಪಾಠಕರು ಎಬ್ಬಿ
ನಿಂದಿರ್ದುರ್(ಎದ್ದು ನಿಂತಿದ್ದು)-
ವಚನ:ಅರ್ಥ:ಹಾಗೆ
ಶೋಭಿಸುವ ಮದುವೆಯ
ಶುಭೋತ್ಸವದಲ್ಲಿ
ಹೊಗಳುಭಟರು ಎದ್ದು
ನಿಂತಿದ್ದು-

ಶಾ||
ಇಂದ್ರಾನೋಕಹಮೊಪ್ಪುವಿಂ
ದ್ರತುರಂಗಂ ಸಂದಿಂದ್ರಗೇಹಂ
ಪೊದ

ಳ್ದಿಂದ್ರಾನೇಕಪಮೊಪ್ಪುವಿಂದ್ರ ನಖಿಳೇಂದ್ರೈಶ್ವರ್ಯಮಿಂದ್ರಾ ಣಿ ಸಂ| ದಿಂದ್ರಾನರ್ಘ್ಯವಿಭೂಷಣಾಂಗ ಳರಿಭೂಪಾಳಾವಳೀದುಸ್ತಮ ಶ್ಚಂದ್ರಂಗೀಗರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ|| ೭೯||

ಪದ್ಯ-೭೯:ಪದವಿಭಾಗ-

ಅರ್ಥ:ಇಂದ್ರಾನೋಕಹಂ (ಇಂದ್ರನ ಮರವಾದ

ಕಲ್ಪವೃಕ್ಷವೂ) ಒಪ್ಪುವ
ಇಂದ್ರತುರಂಗಂ (ಇಂದ್ರನ
ಕುದುರೆಯಾದ ಉಚ್ಚೈ ಶ್ರಸ್ಸೂ)
ಸಂದಿಂದ್ರಗೇಹಂ (ಗೇಹ -
ಮನೆ; ಇಂದ್ರನ
ಅರಮನೆಯಾದ
ಸುಧರ್ಮವೆಂಬ
ಸಭಾಮಂಟಪವೂ) ಪೊದಳ್ದ
ಇಂದ್ರಾನೇಕಪಂ (ಬಲಿಷ್ಠವಾದ
ಇಂದ್ರನ ಆನೆಯಾದ
ಐರಾವತವೂ) ಒಪ್ಪುವ

ಇಂದ್ರನಖಿಳೇಂದ್ರೈಶ್ಚರ್ಯಂ
(ಇಂದ್ರನ ಸಕಲ
ಐಶ್ವರ್ಯಗಳೂ) ಇಂದ್ರಾಣಿ
(ಇಂದ್ರನ ಪತ್ನಿ) ಸಂದ
ಇಂದ್ರಾನರ್ಘ್ಯ
ವಿಭೂಷಣಂಗಳ (ಇಂದ್ರನ
ಬೆಲೆಯಿಲ್ಲದ ಆಭರಣಗಳೂ)
ಅರಿಭೂಪಾಳ ಆವಳೀ
ದುಸ್ತಮಶ್ಚಂದ್ರಂಗೆ *ಈಗೆ
(ಶತ್ರುರಾಜರೆಂಬ ಕೆಟ್ಟ ಕತ್ತಲೆಗೆ
ಚಂದ್ರನಾಗಿರುವ) ಅಗರಿಗಂಗೆ

(ಅರಿಗ-ಅರಿಕೇಸರಿ/
ಅರಜುನನಿಗೆ)
ಮಂಗಳಮಹಾಶ್ರೀಯಂ
ಜಯಶ್ರೀಯುಮಂ (ಹಿರಿದಾದ
ಸುಖಸಂಪತ್ತನ್ನೂ
ಅತುಲೈಶ್ವರ್ಯವನ್ನೂ
*ಕೊಡಲಿ)
ಪದ್ಯ-೨೯:ಅರ್ಥ: ಇಂದ್ರನ
ಮರವಾದ ಕಲ್ಪವೃಕ್ಷವೂ
ಪ್ರಕಾಶಮಾನವಾದ ಇಂದ್ರನ
ಕುದುರೆಯಾದ ಉಚ್ಚೈ ಶ್ರಸ್ಸೂ

ಸುಪ್ರಸಿದ್ಧವಾದ ಇಂದ್ರನ

ಅರಮನೆಯಾದ

ಸುಧರ್ಮವೆಂಬ

ಸಭಾಮಂಟಪವೂ

ಬಲಿಷ್ಠವಾದ ಇಂದ್ರನ

ಆನೆಯಾದ ಐರಾವತವೂ

ಇಂದ್ರನ ಸಕಲ

ಐಶ್ವರ್ಯಗಳೂ ಇಂದ್ರನ

ರಾಣಿಯಾದ ಶಚೀದೇವಿಯೂ

ಇಂದ್ರನ ಬೆಲೆಯಿಲ್ಲದ

ಆಭರಣಗಳೂ,

ಶತ್ರುರಾಜರೆಂಬ ಕೆಟ್ಟ ಕತ್ತಲೆಗೆ
ಚಂದ್ರನಾಗಿರುವ ಅವನಿಗೆ
ಹಿರಿದಾದ ಸುಖಸಂಪತ್ತನ್ನೂ
ಅತುಲ್ಯೈಶ್ವರ್ಯವನ್ನೂ
ಕೊಡಲಿ

ವ|| ಎಂದು ಮಂಗಳವೃತ್ತಂಗಳನೋದೆ ಕಿಱಿದುಂ ಬೇಗಮಿರ್ದೆತ್ತಿದ ಬೋನದೊಳ್ ಕಲ್ಯಾಣಾಮೃತಾಹಾರಮನಾ ರೋಗಿಸಿ ಬಱಿಯಂ

ಯಕ್ಷಕರ್ದಮದ

ಕೆಯ್ಗಟ್ಟಿಯೊಳ್ ಕೆಯ್ಯಂ

ತಿಮಿರ್ದು ತಂಬುಲಮಂ

ಕೊಂಡು-

ವಚನ:ಪದವಿಭಾಗ-

ಅರ್ಥ:ಎಂದು ಮಂಗಳವೃತ್ತಂಗಳಂ ಓದೆ ಕಿಱಿದುಂ ಬೇಗಂ(ಸ್ವಲ್ಪ ಕಾಲ) ಇರ್ದೆತ್ತಿದ ಬೋನದೊಳ್ (ಬಡಿಸಿದ ಭೋಜನದಲ್ಲಿ) ಕಲ್ಯಾಣ ಅಮೃತಾಹಾರಮನು

ಆರೋಗಿಸಿ (ಶುಭಕರವಾದ
ಅಮೃತಕ್ಕೆ ಸಮಾನವಾದ
ಆಹಾರವನ್ನು ಊಟಮಾಡಿ)
ಬಱಿಯಂ (ಅನಂತರ)
ಯಕ್ಷಕರ್ದಮದ
ಕೆಯ್ಗಟ್ಟಿಯೊಳ್
(ಪಚ್ಚಕರ್ಪೂರ ಅಗರು
ಕಸ್ತೂರಿ ಶ್ರೀಗಂಧ ಕೇಸರಿ
ಮೊದಲಾದ
ಸುಗಂಧದ್ರವ್ಯಗಳನ್ನು ಮಿಶ್ರ
ಮಾಡಿದ ಲೇಪನದ

ಕದಡಿನಿಂದ) ಕೆಯ್ಯಂ
ತಿೞಿದುರ್ಧ (ಕಯ್ಯನ್ನು
ಬಳಿದುಕೊಂಡು
)ತಂಬುಲಮಂ ಕೊಂಡು-
ವಚನ:ಅರ್ಥ:ಎಂದು
ಮಂಗಳಗೀತೆಗಳನ್ನು ಓದಲು/
ಹೇಳಲು ಸ್ವಲ್ಪ ಕಾಲವಾದ
ಮೇಲೆ ಬಡಿಸಿದ
ಶುಭಕರವಾದ ಅಮೃತಕ್ಕೆ
ಸಮಾನವಾದ ಆಹಾರವನ್ನು
ಊಟಮಾಡಿ ಪಚ್ಚಕರ್ಪೂರ

ಅಗರು ಕಸ್ತೂರಿ ಶ್ರೀಗಂಧ
ಕೇಸರಿ ಮೊದಲಾದ
ಸುಗಂಧದ್ರವ್ಯಗಳನ್ನು ಮಿಶ್ರ
ಮಾಡಿದ ಲೇಪನದ
ಕದಡಿನಿಂದ ಕಯ್ಯನ್ನು
ಬಳಿದುಕೊಂಡು
ತಾಂಬೂಲವನ್ನು ಸ್ವೀಕರಿಸಿ-

ಕಂ|| ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಳ್ದಿ
ಮಾತಱಿವರ ಸ|
ಬ್ಬವದವರೊಡನಂತೊಸೆದ

ನ್ನವಾಸದೋಲಗದೊಳಿರ್ದನಾ ಗಳ್ ಹರಿಗಂ|| ೮೦||

ಪದ್ಯ-೮೦:ಪದವಿಭಾಗ-ಅರ್ಥ:ಕವಿ ಗಮಕಿ ವಾದಿ ವಾಗ್ಮಿ ಪ್ರವರರ ಪಂಡಿತರ ನೆಗಟ್ದಿ (ಪ್ರಸಿದ್ಧರಾದ) ಮಾತ ಅಱಿವರ (ಮಧು ತಿಳಿದವರ) ಸಬ್ಬವದವರೊಡನೆ (ವಿನೋದಗಾರರೊಡನೆ) ಅಂತೆ ಒಸೆದು (ಹಾಗೆ ಶೋಭಿಸಿ) ಅನ್ನವಾಸದ

ಓಲಗದೊಳು (ಭೋಜನ ಶಾಲೆಯ ಸಭೆಯಲ್ಲಿ) ಇರ್ದನು ಆಗಳ್ ಹರಿಗಂ (ಅರ್ಜುನನು)

ಪದ್ಯ-೮೦:ಅರ್ಥ: ಹರಿಗನು/ ಅರ್ಜುನನು, ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು, ಶ್ರೇಷ್ಠರಾದ ಪಂಡಿತರು ಪ್ರಸಿದ್ಧರಾದ ಸಂಭಾಷಣಕಾರರು, ಹಾಸ್ಯಗಾರರು ಇವರೊಡನೆ ಸಂತೋಷದಿಂದ

ಭೋಜನಶಾಲೆಯ ಓಲಗದಲ್ಲಿದ್ದನು.

ವ|| ಆ ಪ್ರಸ್ತಾವದೊಳ್-

ವಚನ:ಅರ್ಥ:ಆ ಸಂದರ್ಭದಲ್ಲಿ -

ಉ|| ಬೇಸರೆ ಲೋಕಮಂ ತಗುಳ್ದು ಸುಟ್ಟಟಿಲಿಂದೆ ಖರಾಂಶು ನಾರಕಾ ವಾಸದೊಳಾಱ್ವವೋಲಪರರ್ ವಾಯೊಳಾಱ್ವುದುಮಿತ್ತ ವಂದ ಸಂ|

ಧ್ವಾಸಮಯಾತ್ತರಕ್ತರುಚಿ
ಪಿಂಗೆ
ಬೞಿಕ್ಕುದಯಾದ್ರಿಯೊಳ್
ಪದಂ
ಗಾಸಿದ ಪೊನ್ನ
ಪುಂಜಿಯವೊಲಿರ್ದುದು ಕಣ್ಗೆ
ಹಿಮಾಂಶುಮಂಡಲಂ|| ೮೧||

ಪದ್ಯ-೮೦:ಪದವಿಭಾಗ-
ಅರ್ಥ:ಬೇಸರೆ ಲೋಕಮಂ
ತಗುಳ್ದು (ಜನ ಬೇಸರ
ಪಡುವಹಾಗೆ) ಸುಟ್ಟಟಿಲಿಂದೆ

(ಬಿಸಿಲಿನಿಂಸ ಸುಟ್ಟ
ಅಳಲಿಂದ-ದುಃಖದಿಂದ)
ಖರಾಂಶು (ಸೂರ್ಯನು)
ನಾರಕ ಆವಾಸದೊಳು
ಆೞ್ವವೋಲ್
(ನರಕಲೋಕದಲ್ಲಿ
ಆಳ್ವವೋಲ್/ ಮುಳುಗುವ
ಹಾಗೆ) ಅಪರ ವಾರ್ಧಿಯೊಳ್
ಆೞ್ವುದುಂ (ಪಶ್ಚಿಮ
ಸಮುದ್ರದಲ್ಲಿ ಮುಳುಗುತ್ತಲು)
ಇತ್ತ ವಂದ (ಬಂದ)

ಸಂಧ್ಯಾಸಮಯಾತ್ತ ರಕ್ತರುಚಿ (ಸಂಜೆಸಮಯದ ಕೆಂಪು ಬಣ್ಣ) ಪಿಂಗೆ (ಹಿಂದೆ ಸರಿಯಲು) ಬಟಿಕ್ಕ ಉದಯಾದ್ರಿಯೊಳ್ (ಬಳಿಕ ಉದಯಾಚಲದಲ್ಲಿ)ಪದಂಗಾಸಿದ (ಹದವಾಗಿ- ಚೆನ್ನಾಗಿ ಕಾಯಿಸಿದ?) ಪೊನ್ನ ಪುಂಜಿಯವೊಲು (ಚಿನ್ನದ ಪುಂಜಿ- ಮುದ್ದೆಯಂತೆ) ಇರ್ದುದು ಕಣ್ಗೆ

ಹಿಮಾಂಶುಮಂಡಲಂ (ಚಂದ್ರ ಮಂಡಲವು ಕಣ್ಣಿಗೆ ಇರ್ದುದು- ಕಾಣುತ್ತಿತ್ತು)

ಪದ್ಯ-೮೦:ಅರ್ಥ:ಲೋಕವನ್ನು ಬೆನ್ನಟ್ಟಿ ಅದು ದುಃಖಪಡುವಂತೆ ಸುಟ್ಟು ದುಖದಿಂದ ಸೂರ್ಯನು ನರಕವಾಸದಲ್ಲಿ ಮುಳುಗುವ ಹಾಗೆ ಪಶ್ಚಿಮಸಮುದ್ರದಲ್ಲಿ ಮುಳುಗಿದನು. ಸಂಧ್ಯಾಕಾಲದಲ್ಲುಂಟಾದ

ಕೆಂಪುಕಾಂತಿಯು ಹಿಂಜರಿಯಿತು. ಅನಂತರ ಚಂದ್ರಮಂಡಲವು ಹದವಾಗಿ ಕಾಸಿದ (ಶುಭ್ರಮಾಡಿದ) ಶುದ್ಧಚಿನ್ನದ ಮುದ್ದೆಯ (ಗಂಟೆಯ) ಹಾಗೆ ಕಣ್ಣಿಗೆ ಕಾಣಿಸುತ್ತತ್ತು.

ವ|| ಆಗಳ್ ದ್ರುಪದಂ ನಿಜಾಂತಪುರಪರಿವಾರಂಬೆರಸುದಾರಮಹೇಶ್ವರನಲ್ಲಿಗೋಲಗಕ್ಕೆ ವಂದು ನೃತ್ಯ ವಾದ್ಯ

ಗೀತಾತೋದ್ಯಂಗಳೊಳ್
ಕಿಱಿದುಂ
ಬೇಗಮಿರ್ದೋಲಗಮುಮಂ
ಪಱೆಯಲ್ವೇೞ್ದು ಮತ್ತಿನ
ನಾಲ್ವರ್ಗಂ ಕೊಂತಿಗಂ
ಬೇಱೆಬೇಱೆ ಮಾಡಂಗಳಂ
ಬೀಡುವೇೞ್ದು
ಗುಣಾರ್ಣವನಂ ಸೆಜ್ಜೆಗೆ
ಬಿಜಯಂಗೆಯ್ಯೆಮೆನೆ ಕಾಮಂ
ಕಳನೇೞುವಂತೆ

ಸೆಜ್ಜೆಯನೇಱೆ ಸೆಡೆದಿರ್ದ ನಲ್ಲಳಂ ನೋಡಿ-

ವಚನ:ಪದವಿಭಾಗ-ಅರ್ಥ: ಆಗಳ್ ದ್ರುಪದಂ ನಿಜ (ತನ್ನ) ಅಂತಪುರ ಪರಿವಾರಂ ಬೆರಸು (ಒಡಗೂಡಿಕೊಂಡು) ಉದಾರಮಹೇಶ್ವರನಲ್ಲಿಗೆ (ಅರ್ಜುನನ ಬಳಿಗೆ) ಓಲಗಕ್ಕೆ ವಂದು ನೃತ್ಯ ವಾದ್ಯ ಗೀತ ಆತೋದ್ಯಂಗಳೊಳ್ (ವಾದ್ಯಗಳಲ್ಲಿ) ಕಿಱಿದುಂ

ಬೇಗಂ ಇರ್ದು ಓಲಗಮುಮಂ ಪರೆಯಲ್ವೇೞ್ದು (ಕಿರಿದಿ- ಸ್ವಲ್ಪಕಾಲ ಇದ್ದು ಸಭೆಯನ್ನು ವಿಸರ್ಜಿಸುವಂತೆ ಹೇಳಿ) ಮತ್ತಿನ (ಉಳಿದ) ನಾಲ್ವರ್ಗಂ ಕೊಂತಿಗಂ ಬೇವೇ ಮಾಡಂಗಳಂ (ಬೇರೆ ಮನೆಗಳನ್ನು) ಬೀಡುವೇೞ್ದು (ಹೇಳ್ದು- ಹೇಳಿ ಬಿಡಾರವನ್ನು ನಿಯಮಿಸಿ), ಗುಣಾರ್ಣವನಂ (ಅರ್ಜುನನ್ನು) ಸೆಜ್ಜೆಗೆ

ಬಿಜಯಂಗೆಯ್ಯಿಂ ಎನೆ
(ಶಯ್ಯಾಸ್ಥಳಕ್ಕೆ ದಯಮಾಡಿಸಿ
ಎನ್ನಲು- ಎಂದನು.) ಕಾಮಂ
(ಮನ್ಮಥನು) ಕಳನ
ಏಱುವಂತೆ (ಕಳನಂ/
ಯುದ್ಧರಂಗವನ್ನು ಏರು-
ಪ್ರವೇಶ ಮಾಡುವ ಹಾಗೆ)
ಸೆಜ್ಜೆಯನೇಱಿ (ಹಾಸಿಗೆಯ
ಮೇಲೆ ಕುಳಿತು) ಸೆಡೆದಿರ್ದ
ನಲ್ಲಳಂ(ಲಜ್ಜೆಯಿಂದ ಕೂಡಿದ್ದ
ತನ್ನ ಪ್ರಿಯಳನ್ನು) ನೋಡಿ -

ವಚನ:ಅರ್ಥ:ಆಗ ದ್ರುಪದನು ತನ್ನ ಅಂತಪುರದ ಪರಿವಾರನ್ನು ಒಡಗೂಡಿಕೊಂಡು ಉದಾರಮಹೇಶ್ವರನಾದ(ಅರಿ ಕೇಸರಿಯ ಬಿರುದು) ಅರ್ಜುನನ ಸಭಾಗೃಹಕ್ಕೆ ಬಂದು ನೃತ್ಯ, ವಾದ್ಯ, ಗೀತ, ಮಂಗಳವಾದ್ಯಗಳಲ್ಲಿ ಭಾಗಿಯಾಗಿ ಸಭೆಯನ್ನು ವಿಸರ್ಜಿಸುವಂತೆ ಹೇಳಿ

ಧರ್ಮರಾಜನೇ ಮೊದಲಾದ
ಉಳಿದ ನಾಲ್ಕು ಜನಗಳಿಗೂ
ಕುಂತೀದೇವಿಗೂ ಬೇರೆಬೇರೆ
ಮನೆಗಳನ್ನು ಬಿಡಾರವನ್ನಾಗಿ
ಮಾಡಿಸಿ ಗುಣಾರ್ಣವನನ್ನು
ಶಯ್ಯಾಸ್ಥಳಕ್ಕೆ ದಯಮಾಡಿಸಿ
ಎಂದನು. ಅರ್ಜುನನು
ಮನ್ಮಥನು ಯುದ್ಧರಂಗವನ್ನು
ಪ್ರವೇಶ ಮಾಡುವ ಹಾಗೆ
ಹಾಸಿಗೆಯ ಮೇಲೆ ಕುಳಿತು

ಲಜ್ಜೆಯಿಂದ ಕೂಡಿದ್ದ ತನ್ನ
ಪ್ರಿಯಳನ್ನು ನೋಡಿ-

ಉ||

ನೋಟದೊಳಳ್ಕಿಜಂಬಡೆದು

ಮೆಲ್ನುಡಿಯೊಳ್ ಬಗೆವೊಕ್ಕು

ಜಾಣೊಳ

ಳ್ಕಾಟಮನೆಲ್ಲಮಂ ಕಿಡಿಸಿ

ಸೋಂಕಿನೊಳೊಯ್ಯನೆ

ಮೆಯ್ಯೊಣರ್ಚಿ ಬಾ|

ಯ್ಗೂಟದೊಳಳ್ಕಿಱಂ ಪಡೆದು

ಕೂಟದೊಳುಣ್ಮಿದ ಬೆಚ್ಚ

ತೞ್ಕೆಯೊಳ್
ಕೂಟ ಸುಖಂಗಳಂ
ಪಡೆದನೇಂ ಚದುರಂ ಗಳ
ಬದ್ದೆದಲ್ಲೞಿಂ|| ೮೨||

ಪದ್ಯ-೮೨:ಪದವಿಭಾಗ-ಅರ್ಥ:ನೋಟದೊಳ್ ಅೞ್ಕಜಂಬಡೆದು (ನೋಟದಿಂದ ಪ್ರೀತಿಯನ್ನು ಗಳಿಸಿ) ಮೆಲ್ನುಡಿಯೊಳ್ ಬಗೆವೊಕ್ಕು (ಮೃದುವಾದ ಮಾತಿನಿಂದ ಅವಳ, ಬಗೆ

ಹೊಕ್ಕು-ಮನಸ್ಸನ್ನು ಹೊಕ್ಕು-ಗೆದ್ದು) ಜಾಣ್ಪೊಳ್ ಅಳ್ಳಾಟಮನೆಲ್ಲಮಂ (ಅಲುಗಾಟ-ನಡುಕವೆಲ್ಲವನ್ನೂ) ಕಿಡಿಸಿ (ಹೋಗಲಾಡಿಸಿ), ಸೋಂಕಿನೊಳು ಒಯ್ಯನೆ ಮೆಯ್ವೊಣರ್ಚೆ(ಮೆಲ್ಲನೆ ಹತ್ತಿರ ಸಾರಿ ಮೈಗೆ ಮೈ ತಾಗಿಸಿ) ಬಾಯ್ಗೂಟದೊಳ್ ಅಟ್ಕಱಿಂ ಪಡೆದು (ಮತ್ತುಕೊಟ್ಟು

-ಪಡೆದು) ಕೂಟದೊಳ್ ಉಣ್ಮಿದ (ಕೂಡುವಿಕೆಯಲ್ಲಿ ಹುಟ್ಟಿದ) ಬೆಚ್ಚ ತೞ್ಕೆಯೊಳ್ ಕೂಟ ಸುಖಂಗಳಂ ಪಡೆದನು. ಏಂ ಚದುರಂಗಳ (ಏನು ಚದುರನೋ) ಬದ್ದೆದಲ್ಲಟಿಂ(ಬದ್ದೆದಲ್ಲಳ-ಅರಿಕೇಸರಿಯ ಹೆಸರು/ ಅರ್ಜುನನು)

ಪದ್ಯ-೮೨:ಅರ್ಥ: .

ನೋಟದಿಂದ ಪ್ರೀತಿಯನ್ನು

ಗಳಿಸಿ, ಮೃದುವಾದ
ಮಾತಿನಿಂದ ಅವಳ
ಮನಸ್ಸನ್ನು ಗೆದ್ದು,
ಜಾಣತನದಿಂದ ಅವಳ
ನಡುಕವನ್ನು/ ಭಯವನ್ನು
ಹೋಗಲಾಡಿಸಿ, ಮೆಲ್ಲನೆ
ಸೋಂಕುವುದರಿಂದ ಅವಳ
ಮೈಯಲ್ಲಿ ತನ್ನ ಮೈಯ್ಯನ್ನು
ಸೇರಿಸಿ ತುಟಿಗಳೆರಡನ್ನೂ
ಸೇರಿಸಿ ಮುತ್ತಿಟ್ಟು ಬಿಗಿಯಾಗಿ
ಆಲಿಂಗನಮಾಡಿಕೊಂಡು

ರತಿಸುಖವನ್ನೂ ಪಡೆದನು.

ಅರ್ಜುನನು ಏನು

ಚದುರನೋ?

ಉ||ಬೇಡಿಸುವಪ್ಪುಗಳ್ಗೊರೆವ

ಲಲ್ಲೆಯ ಮೆಲ್ನುಡಿಗಳ್ಗೆ ಕೂಡೆ

ನಾ

ಣೂಡಿದ ಕೆಂದುಗಳ್ಗೆ

ಬಗೆಗೊಂಡಿನಿಸಂ

ತಲೆದೂಗುವಂತೆವೋಲ್|

ನಾಡೆ ಪೊದಳ್ದು ನೀಳ್ದವರ

ಸುಯ್ಗಳ

ಗಾಳಿಯೊಳೊಯ್ಯನೊಯ್ಯನ ಳ್ಳಾಡುವುದಾಯ್ತು ತತ್ಸುರತಮಂದಿರದುಜ್ಜ ಳದೀಪಿಕಾಂಕುರಂ|| ೮೩||

ಪದ್ಯ-೮೩:ಪದವಿಭಾಗ-ಅರ್ಥ:ಬೇಡಿಸುವ ಅಪ್ಪುಗಳ್ಗೆ ಒರೆವ ಲಲ್ಲೆಯ ಮೆಲ್ನುಡಿಗಳ್ಗೆ ಕೂಡೆ (ಬಯಸುವ ಆಲಿಂಗನಗಳಿಗೂ ಆಡುತ್ತಿರುವ ಪ್ರೀತಿಯ ಮೃದುನುಡಿಗೂ ಕೂಡಲೆ)

ನಾಣೂಡಿದ ಕೆಂದುಗಳ್ಗೆ
(ನಾಣ್ ಊಡಿದ- ನಾಚಿಕೆ
ತುಂಬಿದ ಮಲಗಾಟಕ್ಕೆ)
ಬಗೆಗೊಂಡ ಇನಿಸಂ
ತಲೆದೂಗುವಂತೆವೋಲ್
(ದೀಪಗಳು- ಮನಸ್ಸು ಒಪ್ಪಿ
ತಲೆಯನ್ನು ತೂಗುವಹಾಗೆ)
ನಾಡೆ (ನೋಡಲು) ಪೊದಳ್ದು
(ವ್ಯಾಪಿಸಿ) ನೀಳ್ದ ಅವರ
ಸುಯ್ಗಳ (ಉದ್ದವಾದ ಅವರ-
ದ್ರೌಪದಿ ಅರ್ಜುನರ

ಉಸಿರಾಟದ), ಗಾಳಿಯೊಳು ಒಯ್ಯನೊಯ್ಯನೆ ಅಳ್ಳಾಡುವುದಾಯ್ತು (ಅಲುಗಾಡುವುದಾಯಿತು) ತತ್ ಸುರತಮಂದಿರದ ಉಜ್ಜ್ವಳದೀಪಿಕ ಅಂಕುರಂ (ಆ ಶಯ್ಯಾಗೃಹದ ಪ್ರಕಾಶನಮಾನವಾದ ದೀಪದ ಕುಡಿಗಳು)

ಪದ್ಯ-೮೩:ಅರ್ಥ:

ಬಯಸುವ ನಾಚಿಕೆ ತುಂಬಿದ

ಮಲಗಾಟಕ್ಕೆ /
ಆಲಿಂಗನಗಳಿಗೂ,
ಆಡುತ್ತಿರುವ ಪ್ರೀತಿಯ
ಮೃದುನುಡಿಗೂ ಕೂಡಲೆ,
ನಾಚಿಕೆ ತುಂಬಿದ ಮಲಗಾಟಕ್ಕೆ
ಕೂಡಿದ ಸುರತಕ್ರೀಡೆಗೂ
ಮೆಚ್ಚಿ ದೀಪಗಳು ಮನಸ್ಸು
ಒಪ್ಪಿ ತಲೆಯನ್ನು
ತೂಗುವಹಾಗೆ ವಿಶೇಷವಾಗಿ
ವ್ಯಾಪಿಸಿ ಉದ್ದವಾದ ಅವರ-
ದ್ರೌಪದಿ ಅರ್ಜುನರ

ಉಸಿರಾಟದಿಂದ ರತಿಕ್ರೀಡಾಮಂದಿರದ ಪ್ರಕಾಶಮಾನವಾದ ದೀಪದ ಕುಡಿಯು ಅವರ ಉಸಿರಿನ ಗಾಳಿಯಿಂದ ನಿಧಾನವಾಗಿ ಅಲ್ಲಾಡುತ್ತಿದ್ದವು.

ವ|| ಅಂತಾ ಯಿರುಳ ನಾಲ್ಕು ಜಾವಮುಂ ಕಾಮನ ಜಾಗರದಂತವರ್ಗೆ ಕೆಂದಿನೊಳೆ ಬೆಳಗಾಗೆ-

ವಚನ:ಪದವಿಭಾಗ-

ಅರ್ಥ:ಅಂತು ಆ ಯಿರುಳ ನಾಲ್ಕು ಜಾವಮುಂ ಕಾಮನ ಜಾಗರದಂತೆ ಅವರ್ಗೆ ಕೆಂದಿನೊಳೆ (ಸುರತಕ್ರೀಡೆಯಲ್ಲಿಯೇ) ಬೆಳಗಾಗೆ-

ವಚನ:ಅರ್ಥ:ಹಾಗೆ ಆ ರಾತ್ರಿಯ ನಾಲ್ಕು ಜಾವಗಳೂ ಕಾಮನ ಜಾಗರಣೆಯಂತೆ

ಸುರತಕ್ರೀಡೆಯಲ್ಲಿಯೇ ಕಳೆದು ಬೆಳಗಾಯಿತು.

ಚಂ|| ನಿನಗಿನಿಸಪ್ಪೊಡಂ ಮನದೊಳೋವದ ಕಟ್ತಿಲೆಯೆಂಬ ಪಾಪ ಕ ರ್ಮನ ಮಱಿಗಳ್ ಕರಂ ಪಲವುಮಂ ಸೆರೆಗೆಯ್ದಿವೆಂದು ತಮ್ಮನ| ಣ್ಪಿನೊಳವನೊಪ್ಪಿಪಂತೆ ಮುಗುಳೊಳ್ ಮಱಸುಂದಿದ ತುಂಬಿ ಪಾಱಿ ಕೋ

ಕನದ ಕುಲಂಗಳುಳ್ಳಲರ್ದುವೆಂಬಿನ ಮಂದೊಗೆದಂ ದಿವಾಕರಂ|| ೮೪||

ಪದ್ಯ-೮೪:ಪದವಿಭಾಗ-ಅರ್ಥ:ನಿನಗೆ ಇನಿಸು ಅಪ್ಪೊಡಂ (ಸೂರ್ಯನೇ, ನಿನಗೆ ಸ್ವಲ್ಪವಾದರೂ) ಮನದೊಳು ಓವದ ಕಟ್ತಿಲೆಯೆಂಬ (ಪ್ರಿಯವಲ್ಲದ ಕತ್ತಲೆಯೆಂಬ) ಪಾಪ ಕರ್ಮನ

(ಪಾಪಿಷ್ಠನ) ಮಱಿಗಳ್
(ಮರಿಗಳನ್ನು) ಕರಂ
ಪಲವುಮಂ (ವಿಶೇಷವಾಗಿ
ಹಲವು) ಸೆರೆಗೆಯ್ದೆವ್ ಇವು
ಎಂದು (ಮರಿಗಳನೇಕವನ್ನು
ಇಗೋ ಸೆರೆಹಿಡಿದಿದ್ದೇನೆ
ಎಂದು)
ತಮ್ಮನಣ್ಪಿನೊಳವನೊಪ್ಪಿಪಂ
ತೆ (ತಮ್ಮ ನಣ್ಪಿನೊಳ್-
ಪ್ರೇಮದಿಂದ ಅವನು
ಒಪ್ಪಿಪಂತೆ/

ಮರಿದುಂಬಿಗಳನ್ನು
ಒಪ್ಪಿಸುವಂತೆ) ಮುಗುಳ್ಗೊಳ್
ಮಱಿಸುಂದಿದ (ತಾವರೆ
ಮೊಗ್ಗಿನಲ್ಲಿ ಮೈಮರೆತು
ನಿದ್ರಿಸಿದ) ತುಂಬಿ ಪಾರಿ
(ತುಂಬಿ ಹಾರಿಹೋಗಲು)
ಕೋಕನದ ಕುಲಂಗಳು
(ತಾವರೆಯ ಸಮೂಹಗಳು)
ಉಳ್ಳ ಅಲರ್ದುವು (ಚೆನ್ನಾಗಿ
ಅರಳಿದವು,) ಎಂಬಿನಂ
(ಎನ್ನುವಹಾಗೆ) ಅಂದು

ಒಗೆದಂ ದಿವಾಕರಂ(ಸೂರ್ಯನು ಒಗೆದಂ-ಹುಟ್ಟಿದನು)

ಪದ್ಯ-೮೪:ಅರ್ಥ:ಸೂರ್ಯನೇ ನಿನಗೆ ಸ್ವಲ್ಪವಾದರೂ ಪ್ರಿಯವಲ್ಲದ ಕತ್ತಲೆಯೆಂಬ ಪಾಪಿಷ್ಠನ ಮರಿಗಳನೇಕವನ್ನು ಇಗೋ ಸೆರೆಹಿಡಿದಿದ್ದೇನೆ. ಇದೋ ಇಲ್ಲಿ ಇದೆ, ಒಪ್ಪಿಸಿಕೋ ಎಂದು ತಮ್ಮ ಸ್ನೇಹದಿಂದ ಒಪ್ಪಿಸುವ ಹಾಗೆ ಮೊಗ್ಗುಗಳಲ್ಲಿ

ಮಲಗಿದ್ದ ತುಂಬಿಗಳು ಹಾರಿಹೋಗಲು ಕಮಲಸಮೂಹಗಳು ಚೆನ್ನಾಗಿ ಅರಳಿದುವು, ಅಂದು ಸೂರ್ಯನು ಹುಟ್ಟಿದನು.

ವ|| ಅಂತು ಮಾರ್ತಾಂಡನುಂ ಪ್ರಚಂಡ ಮಾರ್ತಾಂಡನುಮುದಿತೋದಿತರಾಗೆ-

ವಚನ:ಪದವಿಭಾಗ-

ಅರ್ಥ:ಅಂತು

ಮಾರ್ತಾಂಡನುಂ

(ಸೂರ್ಯನೂ) ಪ್ರಚಂಡ

ಮಾರ್ತಾಂಡನುಂ ಉದಿತ

ಉದಿತರಾಗೆ-

ವಚನ:ಅರ್ಥ:ಹೀಗೆ

ಸೂರ್ಯನು

ಉದಯವಾಗುತ್ತಿರಲು, ಮತ್ತು

ಪ್ರಚಂಡ ಮಾರ್ತಾಂಡನಾದ

ಅರ್ಜುನನು ಏಳಿಗೆ

ಹೊಇಂದುತ್ತಿರಲು-

ಮ||
ಕಚಭಾರಾಳಸಗಾಮಿನೀಪರಿ
ವೃತಂ ಗಂಗಾತರಂಗೋಪಮಾ
ನ ಚಳಚ್ಚಾಮರ ವಾತ ಪೀತ
ನಿಜ ಘರ್ಮಾಂಭಕಣಾಂ
ದ್ರೌಪದೀ|
ಕುಚಕುಂಭಾರ್ಪಿತ
ಕುಂಕುಮದ್ರವ
ವಿಲಿಪ್ತೋರಸ್ಥಳಂ ದಾಂಟೆ ಕೀ
ರ್ತಿ ಚತುರ್ವಾರ್ಯನಿರ್ದನಂದು
ಸುಖದಿಂ ವಿದ್ವಿಷ್ಟ

ವಿದ್ರಾವಣಂ|| ೮೫

ಪದ್ಯ-೮೫:ಪದವಿಭಾಗ-ಅರ್ಥ:ಕಚಭಾರ ಆಳಸಗಾಮಿನೀ ಪರಿವೃತಂ (ಕಚ-ಕೂದಲು;ಕೂದಲಿನ ಭಾರದಿಂದ ಬಳಲಿ ನಿಧಾನವಾಗಿ ನಡೆಯುವ ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟವನೂ) ಗಂಗಾತರಂಗ (ಗಂಗೆಯ ಅಲೆಗಳನ್ನು) ಉಪಮಾನ

(ಹೋಲುವ) ಚಳತ್ ಚಾಮರ
ವಾತ (ಅಲುಗುವ
ಚಾಮರಗಳ ಗಾಳಿಯಿಂದ)
ಪೀತ (ಕುಡಿಯಲ್ಪಟ್ಟ) ನಿಜ
ಘರ್ಮಾಂಭಕಣಂ (ತನ್ನ
ಬೆವರಿನ ಹನಿಯನ್ನುಳ್ಳವನೂ)
ದ್ರೌಪದೀಕುಚ ಕುಂಭಾರ್ಪಿತ
ಕುಂಕುಮದ್ರವ (ದ್ರೌಪದಿಯ
ಕುಂಭದಂತಿರುವ ಕುಚಗಳಿಗೆ
ಅರ್ಪಿತವಾದ/ಹಚ್ಚಿದ
ಕುಂಕುಮದ ನೀರಿನಿಂದ)

ವಿಲಿಪ್ತ ಓರಸ್ಥಳಂ (ಪೂಸಿರುವ

ಎದೆಯು ಪ್ರದೇಶವುಳ್ಳವನೂ)

ದಾಂಟೆ ಕೀರ್ತಿ

ಚತುರ್ವಾರ್ಧಿಯನು (ತನ್ನ

ಕೀರ್ತಿಯು ನಾಲ್ಕು

ಸಮುದ್ರಗಳನ್ನೂ ದಾಟಿರಲು

)ಇರ್ದನಂದು ಸುಖದಿಂ

ವಿದ್ವಿಷ್ಟ

ವಿದ್ರಾವಣಂ(ಅರ್ಜುನನು ಆ

ದಿನ ಅಲ್ಲಿ ಸುಖದಿಂದಿದ್ದನು.)

ಪದ್ಯ-೮೫:ಅರ್ಥ:ಕೂದಲಿನ ಭಾರದಿಂದ ಬಳಲಿ ನಿಧಾನವಾಗಿ ನಡೆಯುವ ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟವನೂ, ಗಂಗೆಯ ಅಲೆಗಳ ಹಾಗೆ ಅಲುಗಾಡುತ್ತಿರುವ ಚಾಮರದ ಗಾಳಿಯಿಂದ ಕುಡಿಯಲ್ಪಟ್ಟ ತನ್ನ ಬೆವರಿನ ಹನಿಯನ್ನುಳ್ಳವನೂ, ದ್ರೌಪದಿಯ ಕುಂಭದಂತಿರುವ

ಕುಚಗಳಿಗೆ ಲೇಪನ ಮಾಡಿದ್ದ ಕುಂಕುಮಕೇಸರಿಯ ದ್ರವದಿಂದ ಪೂಸಿರುವ ಎದೆಯುಳ್ಳವನೂ ಆದ ಅರ್ಜುನನು ತನ್ನ ಕೀರ್ತಿಯು ನಾಲ್ಕು ಸಮುದ್ರಗಳನ್ನೂ ದಾಟಿರಲು ಆ ದಿನ ಅಲ್ಲಿ ಸುಖದಿಂದಿದ್ದನು.

ॐ

ಇದು ವಿವಿಧ ವಿಬುಧಜನವಿನುತ

ಜಿನಪದಾಂಭೋಜ ವರ
ಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್
ದ್ರೌಪದೀಕಲ್ಯಾಣವರ್ಣನಂ
ತೃತೀಯಾಶ್ವಾಸಂ
ವ|| ಇದು ವಿವಿಧ
ವಿದ್ವಾಂಸರಿಂದ ಸ್ತುತಿಸಲ್ಪಟ್ಟ

ಜಿನನ ಪಾದಕಮಲದ ವರಪ್ರಸಾದದಿಂದ ಹುಟ್ಟಿದುದೂ ಪ್ರಸನ್ನವೂ ಗಂಭೀರವೂ ಆದ ಮಾತುಗಳನ್ನು ರಚಿಸುವುದರಲ್ಲಿ ಜಾಣನಾದ ಕವಿತಾಗುಣಾರ್ಣವನಿಂದ ವಿರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ದ್ರೌಪದೀಕಲ್ಯಾಣ

ವರ್ಣನಾತ್ಮಕವಾದ ಮೂರನೆಯ ಆಶ್ವಾಸ. ♦♣♣♣♣♣♣♣♣♣♣♣♣♣♣♣♣♣♣♣♦

[೧] [೨]

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	**3**	4	5	6	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

ಉಲ್ಲೇಖ

1. *ಪಂಪ ಭಾರತ - ಗದ್ಯಾನುವಾದ (ಲೇಖಕರು- ಎನ್ .ಅನಂತರಂಗಾಚಾರ್) ಕೃಪೆ:- ಕಣಜ*
2. *ಪಂಪ ಭಾರತ ಡಿ.ಎಲ್.ನರಸಿಂಹಾಚಾರ್ ಕನ್ನಡ ಅಭಿವೃದ್ಧಿ ಪ್ರಾಧಿಕಾರ*

"https://kn.wikisource.org/w/index.php?title=ಪಂಪಭಾರತ_ತೃತೀಯಾಶ್ವಾಸಂ&oldid=242474" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೯ ಜನವರಿ ೨೦೨೧, ೨೧:೪೬ ರಂದು ಕೊನೆಯಾಗಿ

ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ
ಹೊರತು ಪಠ್ಯ "CC BY-SA 4.0 "
ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಚತುರ್ದಶಾಶ್ವಾಸಂ

<ಪಂಪಭಾರತ

- (XXIII.VII.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು

ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ))**

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ಚತುರ್ದಶಾಶ್ವಾಸಂ

ಧರ್ಮರಾಯನು ದೃತರಾಷ್ಟ್ರ ಗಾಂಧಾರಿಯರನ್ನು ಸಮಾಧಾನ ಪಡಿಸಿದುದು- ಹರಿಗ/ ಅರ್ಜುನನಿಗೆ ಪಟ್ಟಾಭಿಷೇಕ; ಕವಿಯ ಮಾತು ಉಪಸಂಹಾರ

<u>ಯುದ್ಧದನಂತರದ ಕುರುಕ್ಷೇತ್ರ ರಣರಂಗ; ದೃತರಾಷ್ಟ್ರ ಗಾಂಧಾರಿಯರಿಗೆ ಧರ್ಮಜನ ಸ್ವಾಂತನ</u>

ಕಂ|| ಶ್ರೀ ರಾಮಾಲಿಂಗಿತ ವಿಪು
ಳೋರಸ್ಕಂ ಭಾಸ್ಕರಪ್ರತಾಪಂ
ನಿಜ ದೋ|
ರ್ಮೇರು ಮಥಿತಾರಿ ಬಳ ಕೂ
ಪಾರಂ ಸಂಹಾರಿತಾರಿ
ಶೌರ್ಯಂ ಹರಿಗಂ|| ೧ ||

ಪದ್ಯ-೧:ಪದವಿಭಾಗ-ಅರ್ಥ:ಶ್ರೀ ರಾಮಾ ಆಲಿಂಗಿತ ವಿಪುಳ ಉರಸ್ಕಂ (ಸಂಪತ್ ಲ್ಲಕ್ಷ್ಮಿಯಿಂದ ಆಲಿಂಗಿಸಲ್ಪಟ್ಟ ವಿಸ್ತಾರವಾದ ಎದೆಯುಳ್ಳವನೂ) ಭಾಸ್ಕರಪ್ರತಾಪಂ (ಸೂರ್ಯನ ಪ್ರತಾಪವುಳ್ಳವನೂ) ನಿಜದ ಊರ್ ಮೇರು ಮಥಿತ (ತನ್ನ ಭುಜವೆಂಬ ಮೇರುಪರ್ವತದಿಂದ ಕಡೆದ)

ಅರಿ ಬಳ ಕೂಪಾರಂ (ಕಡೆದ ಶತ್ರುಸೇನಾ ಸಮುದ್ರವುಳ್ಳವನೂ) ಸಂಹಾರಿತ ಅರಿ ಶೌರ್ಯಂ ಹರಿಗಂ (ಶತ್ರುಗಳನ್ನು ಕೊಂದ ಶೌರ್ಯವುಳ್ಳವನೂ ಆದ ಅರಿಕೇಸರಿಯು (ಅರ್ಜುನನು))

ಪದ್ಯ-೧:ಅರ್ಥ: ಸಂಪತ್ ಲ್ಲಕ್ಷ್ಮಿಯಿಂದ ಆಲಿಂಗಿಸಲ್ಪಟ್ಟ ವಿಸ್ತಾರವಾದ

ಎದೆಯುಳ್ಳವನೂ
ಸೂರ್ಯನಪ್ರತಾಪವುಳ್ಳವ
ನೂ, ತನ್ನ ಭುಜವೆಂಬ
ಮೇರುಪರ್ವತದಿಂದ ಕಡೆದ
ಶತ್ರುಸೇನಾಸಮುದ್ರವುಳ್ಳವ
ನೂ ತನ್ನ ಭುಜವೆಂಬ
ಮೇರುಪರ್ವತದಿಂದ ಕಡೆದ
ಶತ್ರುಸೇನಾ
ಸಮುದ್ರವುಳ್ಳವನೂ
ಶತ್ರುಗಳನ್ನು ಕೊಂದ

ಶೌರ್ಯವುಳ್ಳವನೂ ಆದ ಅರಿಕೇಸರಿಯು (ಅರ್ಜುನನು)

ತನ್ನಿಱಿದು ಗೆಲ್ದ ಕೊಳುಗುಳ ವನ್ನೋಡಲ್ ಚಕ್ರಪಾಣಿಯುಂ ತನ್ನ ಸಹೋ। ತ್ಪನ್ನರುಮೊಡವರೆ ಬಂದು ವಿ ಪನ್ನೋಗ್ರಾರಾತಿವರ್ಗನಾಹವ ಧರೆಯಂ। ೨ ||

ಪದ್ಯ-೨:ಪದವಿಭಾಗ-ಅರ್ಥ:ತನ್ನ ಇಱಿದು ಗೆಲ್ದ ಕೊಳುಗುಳವಂ ನೋಡಲ್

(ತಾನು ಯುದ್ಧಮಾಡಿ ಗೆದ್ದ ಯುದ್ಧಭೂಮಿಯನ್ನು ನೋಡಲು) ಚಕ್ರಪಾಣಿಯುಂ ತನ್ನ ಸಹೋತ್ಪನ್ನರುಂ ಒಡವರೆ ಬಂದು (ಕೃಷ್ಣನೂ ತನ್ನ ಸಹೋದರರರೂ ಜೊತೆಯಲ್ಲಿ ಬರಲು) ವಿಪನ್ನ ಉಗ್ರ ಆರಾತಿವರ್ಗನು ಆಹವಧರೆಯಂ (ನಾಶಮಾಡಲ್ಪಟ್ಟ ಭಯಂಕರವಾದ

ಶತ್ರುಗಳನ್ನುಳ್ಳ ಧರ್ಮರಾಯನೂ ಯುದ್ಧಭೂಮಿಯನ್ನು ಬಂದು -ಸೇರಿದನು.)

ಪದ್ಯ-೨:ಅರ್ಥ: ತಾನು ಯುದ್ಧಮಾಡಿ ಗೆದ್ದ ಯುದ್ಧಭೂಮಿಯನ್ನು ನೋಡಲು ಕೃಷ್ಣನೂ ತನ್ನ ಸಹೋದರರೂ ಜೊತೆಯಲ್ಲಿ ಬರಲು ನಾಶಮಾಡಲ್ಪಟ್ಟ ಭಯಂಕರವಾದ

ಶತ್ರುಗಳನ್ನುಳ್ಳ ಧರ್ಮರಾಯನೂ ಯುದ್ಧಭೂಮಿಯನ್ನು ಬಂದು ಸೇರಿದನು.

ವ|| ಎಯ್ದಿ ತನ್ನಿಂದಮಂತಕಾನನಮನೆಯ್ದಿದ ಮಹಾ ಪ್ರಚಂಡಮಂಡಳಿಕಮಕುಟ ಬದ್ಧಸಾಮಂತಮಹಾಸಾಮಂತಸಂಹತಿಯುಮನೆಣಿಕೆಗಱಿದ ಕರಿತುರಗವರೂಥ

ಪದಾತಿಗಳುಮಂ ನೋಡಿ ಮುರಾರಿಯ ಮೊಗಮಂ ನೋಡೆಯಧೋಕ್ಷಜನಜಾತಶತ್ರುವನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಯ್ದಿ ತನ್ನಿಂದಂ ಅಂತಕಾನನಮನು ಎಯ್ದಿದ (ತನ್ನಿಂದ ಯಮನ ಬಾಯನ್ನು ಸೇರಿದ,) ಮಹಾ ಪ್ರಚಂಡಮಂಡಳಿಕಮಕುಟ ಬದ್ದಸಾಮಂತ

ಮಹಾಸಾಮಂತ
ಸಂಹತಿಯುಮನು
(ಮಹಾಶೂರರಾದ ಮಂಡಳಿಕ,
ಮಕುಟಬದ್ಧ
ಸಾಮಂತಮಹಾಸಾಮಂತ
ಸಮೂಹವನ್ನು) ಎಣಿಕೆಗಱಿದ
(ಎಣಿಕೆಯನ್ನು ಮೀರಿದ) ಕರಿ
ತುರಗ ವರೂಥ
ಪದಾತಿಗಳುಮಂ ನೋಡಿ
(ಅಸಂಖ್ಯಾತವಾದ ಆನೆ,
ಕುದುರೆ, ತೇರು, ಕಾಲಾಳು

ಸೈನ್ಯವನ್ನು ನೋಡಿ)
ಮುರಾರಿಯ ಮೊಗಮಂ
ನೋಡೆಯು ಅಧೋಕ್ಷಜನು
ಅಜಾತಶತ್ರುವನು ಇಂತೆಂದಂ
(ಕೃಷ್ಣನ ಮುಖವನ್ನು
ನೋಡಲು ಕೃಷ್ಣನು
ಧರ್ಮರಾಯನನ್ನು ಕುರಿತು
ಹೀಗೆಂದನು.)-
ವಚನ:ಅರ್ಥ:ತನ್ನಿಂದ
ಯಮನ ಬಾಯನ್ನು ಸೇರಿದ
ಮಹಾಶೂರರಾದ ಮಂಡಳಿಕ,

ಮಕುಟಬದ್ಧ
ಸಾಮಂತಮಹಾಸಾಮಂತ
ಸಮೂಹವನ್ನು ಎಣಿಕೆಯನ್ನು
ಮೀರಿದ ಅಸಂಖ್ಯಾತವಾದ
ಆನೆ, ಕುದುರೆ, ತೇರು,
ಕಾಲಾಳು ಸೈನ್ಯವನ್ನು ನೋಡಿ
ಕೃಷ್ಣನ ಮುಖವನ್ನು
ನೋಡಲು ಕೃಷ್ಣನು
ಧರ್ಮರಾಯನನ್ನು ಕುರಿತು
ಹೀಗೆಂದನು.

ಉ|| ಶಾತ ಶರಾಗ್ನಿ ಭಗ್ನ ಭಟ
ಕೋಟಿ
ವಿಭೀಷಣಮುಗ್ರವೈರಿಸಂ
ಘಾತಕರೀಂದ್ರರುಂದ್ರಕಟಕೂ
ಟಪರಿಚ್ಯುತಭೃಂಗಮಾಳಿಕಾ|
ಪೀತಮದಾಂಬುಕಂ
ಪ್ರಕೃತಿರಕ್ತಜಳಾಸವಮತ್ತಯೋ
ಗಿನೀ
ವ್ರಾತಪರೀತಭೂತಸದನಂ
ಕದನಂ ಕದನತ್ರಿಣೇತ್ರನಾ|| ೩ ||

ಪದ್ಯ-೩:ಪದವಿಭಾಗ-ಅರ್ಥ:ಶಾತ ಶರಾಗ್ನಿ ಭಗ್ನ (ಹರಿತವಾದ ಬಾಣಗಳ ಬೆಂಕಿಯಿಂದ ಹಾಳಾದ) ಭಟ ಕೋಟಿ ವಿಭೀಷಣಂ (ಅನೇಕ ಯೋಧರಿಂದ ಭಯಂಕರವಾದುದೂ) ಉಗ್ರವೈರಿಸಂಘಾತ ಕರೀಂದ್ರ ರುಂದ್ರ ಕಟಕೂಟ (ಶತ್ರುಗಳು ಸಮೂಹಗಳಿಂದಲೂ ಆನೆಗಳು ವಿಸ್ತಾರವಾದ

ಕಪೋಲದ ಕಡೆಯಿಂದ)
ಪರಿಚ್ಯುತ (ಸುರಿಯತ್ತಿರುವ)
ಭೃಂಗಮಾಳಿಕಾ ಪೀತಂ
ಮದಾಂಬುಕಂ(ದುಂಬಿಗಳ
ಮಾಲೆಗಳಿಂದ
ಕುಡಿಯುತ್ತಿರುವ
ಮದೋದಕವನ್ನುಳ್ಳದ್ದೂ,)
ಪ್ರಕೃತಿ ರಕ್ತಜಳ ಆಸವ
ಮತ್ತಯೋಗಿನೀ ವ್ರಾತಪರೀತ
->ಭೂತಸದನಂ (ಸಹಜವಾಗಿ
ರಕ್ತಜಲವೆಂಬ ಮದ್ಯದಿಂದ

ಸೊಕ್ಕಿರುವ ಯೋಗಿನೀ

ಜನಗಳ ಗುಂಪಿನಿಂದಲೂ)

ಕದನಂ ಕದನ

ತ್ರಿಣೇತ್ರನಾ(ಅರ್ಜುನನ

ಯುದ್ಧರಂಗವು ಭೂತಸದನಂ-

ಪಿಶಾಚಿಗಳ

ಆವಾಸಸ್ಥಾನವಾಗಿದೆ.)

ಪದ್ಯ-೩:ಅರ್ಥ: ಹರಿತವಾದ

ಬಾಣಗಳ ಬೆಂಕಿಯಿಂದ

ಹಾಳಾದ ಅನೇಕ

ಯೋಧರಿಂದ

ಭಯಂಕರವಾದುದೂ
ಭಯಂಕರವಾದ ಶತ್ರುಗಳು
ಸಮೂಹಗಳಿಂದಲೂ
ಆನೆಗಳು ವಿಸ್ತಾರವಾದ
ಕಪೋಲದ ಕಡೆಯಿಂದ
ಸುರಿಯತ್ತಿರುವ, ದುಂಬಿಗಳ
ಮಾಲೆಗಳಿಂದ
ಕುಡಿಯುತ್ತಿರುವ
ಮದೋದಕವನ್ನುಳ್ಳದ್ದೂ,
ಸಹಜವಾಗಿ ರಕ್ತಜಲವೆಂಬ
ಮದ್ಯದಿಂದ ಸೊಕ್ಕಿರುವ

ಯೋಗಿನೀ ಜನಗಳ
ಗುಂಪಿನಿಂದಲೂ
ಸುತ್ತುವರಿಯಲ್ಪಟ್ಟ
ಅರ್ಜುನನ ಯುದ್ಧರಂಗವು
ಪಿಶಾಚಿಗಳ
ಆವಾಸಸ್ಥಾನವಾಗಿದೆ.

ಚ|| ಸ್ಫುರಿತ ವರೂಥ ಚಕ್ರ ಹತಿಯಿಂ ಧರಣೀತಳಮತ್ತಮಿತ್ತಮು ಚ್ಚರಿಯೆ ವಿಯತ್ತಳಂ ಬಗೆದು ನೋಟ್ಪೊಡೆ ನಾಡೆ ಪತತ್ಪತತ್ರಿ

ಜ|

ರ್ಘುರಿತಮೆ ದಿಕ್ತಟಂ ರಿಪು

ನರಾಪ ರಕ್ತ ಧುನೀ ಪ್ರವಾಹ

ಪಿಂ

ಜರಿತಮೆ ಬೀರಮಂ

ಪೊಗಳ್ವಿನೇವೊಗಳ್ವಿಂ

ಕದನತ್ರಿಣೇತ್ರನಾ|| ೪ ||

ಪದ್ಯ-೪:ಪದವಿಭಾಗ-

ಅರ್ಥ:ಸ್ಫುರಿತ ವರೂಥ ಚಕ್ರ

ಹತಿಯಿಂ (ಪ್ರಕಾಶಮಾನವಾದ

ತೇರಿನ ಗಾಲಿಗಳ

ಹೊಡೆತದಿಂದ) ಧರಣೀತಳಂ
ಅತ್ತಮಿತ್ತಂ ಅಬ್ಬರಿಯೆ
(ಭೂಪ್ರದೇಶವು ಅಲ್ಲಲ್ಲಿ
ಹಳ್ಳತಗ್ಗುಗಳಿಂದ ಕೂಡಿದೆ.)
ವಿಯತ್ತಳಂ ಬಗೆದು
ನೋಱ್ಪೊಡೆ ನಾಡೆ ಪತತ್ಪತತ್ರಿ
ಜರ್ಝರಿತಮೆ
(ಆಕಾಶಪ್ರದೇಶವು
ಬೀಳುತ್ತಿರುವ ಬಾಣಗಳ
ಚೂರುಗಳಿಂದ
ಜರ್ಝರಿತವಾಗಿ ಹೋಗಿದೆ.)

ದಿಕ್ತಟಂ ರಿಪು ನರಾಪ ರಕ್ತ
ಧುನೀ ಪ್ರವಾಹ ಪಿಂಜರಿತಮೆ(
ದಿಗ್ಭಾಗಗಳು ಶತ್ರುರಾಜರ
ರಕ್ತದ ನದಿಯ ಪ್ರವಾಹದಿಂದ
ಕೆಂಪು ಹಳದಿ ಮಿಶ್ರವಾದ
ಬಣ್ಣದಿಂದ ಕೂಡಿದೆ.)
ಬೀರಮಂ ಪೊಗಳ್ವಿಂ
ಏವೊಗಳ್ವಿಂ ಕದನತ್ರಿಣೇತ್ರನಾ
(ಅರ್ಜುನನ ಬೀರಮಂ-
ಪ್ರತಾಪವನ್ನು ಹೇಗೆ
ವರ್ಣಿಸುವುದು ಸಾಧ್ಯ!)

ಪದ್ಯ-೪:ಅರ್ಥ:
ಪ್ರಕಾಶಮಾನವಾದ ತೇರಿನ ಗಾಲಿಗಳ ಹೊಡೆತದಿಂದ ಭೂಪ್ರದೇಶವು ಅಲ್ಲಲ್ಲಿ ಹಳ್ಳತಗ್ಗುಗಳಿಂದ ಕೂಡಿದೆ. ಆಕಾಶಪ್ರದೇಶವು ಬೀಳುತ್ತಿರುವ ಬಾಣಗಳ ಚೂರುಗಳಿಂದ ಜರ್ಝರಿತವಾಗಿ ಹೋಗಿದೆ. ದಿಗ್ಭಾಗಗಳು ಶತ್ರುರಾಜರ ರಕ್ತದ ನದಿಯ ಪ್ರವಾಹದಿಂದ

ಕೆಂಪು ಹಳದಿ ಮಿಶ್ರವಾದ
ಬಣ್ಣದಿಂದ ಕೂಡಿದೆ.
ಅರ್ಜುನನ ಪ್ರತಾಪವನ್ನು
ಹೇಗೆ ವರ್ಣಿಸುವುದು ಸಾಧ್ಯ!

ವ|| ಎಂಬನ್ನೆಗಂ ಧೃತರಾಷ್ಟ್ರನುಂ ಗಾಂಧಾರಿಯುಮೊಂದಾಗಿ ಬರೆ ದುರ್ಯೋಧನನ ಪೆಂಡಿರಪ್ಪ ಭಾನುಮತಿಯುಂ ಚಂದ್ರಮತಿಯುಂ ಮೊದಲಾಗೆ ಸಮಸ್ತಾಂತಪುರಮುಂ

ದುಶ್ಶ್ಯಾಸನ ಲಕ್ಕಣ
ಭೂರಿಶ್ರವಸ್ಸೋಮದತ್ತ
ಭಗದತ್ತ ಬಾಹ್ಲೀಕ ಶಲ್ಯ ಶಕುನಿ
ಸೈಂಧವ ಕರ್ಣ ಪ್ರಮುಖರಪ್ಪ
ನಾಯಕರ ಪೆಂಡಿರುಂ ತಮ್ಮ
ಗಂಡರಂ
ಕೊಳುಗುಳದೊಳಱಸಿ ಕಾಣದೆ
ಬಾಯಱಿದು ಪಳಯಿಸುತ್ತುಂ
ಯೂಥಪತಿ ಕೆಡೆಯೆ
ದೆಸೆದಪ್ಪಿದ
ವನಕರಿಕರೇಣುಗಳುಮನಡರ್

ಪಿಲ್ಲದೆ ಕಲ್ಪವೃಕ್ಷಮುಡಿದು

ಕೆಡೆಯೆ ಬಂಬಲ ಬಾಡಿದ

ವನಲತೆಗಳುಮಂ ಪೋಲ್ತು-

ವಚನ:ಪದವಿಭಾಗ-

ಅರ್ಥ:ಎಂಬನ್ನೆಗಂ

ಧೃತರಾಷ್ಟ್ರನುಂ

ಗಾಂಧಾರಿಯುಂ ಒಂದಾಗಿ

ಬರೆ (ಎನ್ನುವಷ್ಟರಲ್ಲಿ

ಧೃತರಾಷ್ಟ್ರನೂ

ಗಾಂಧಾರಿಯೂ ಒಟ್ಟುಗೂಡಿ

ಬರಲು,) ದುರ್ಯೋಧನನ

ಪೆಂಡಿರಪ್ಪ ಭಾನುಮತಿಯುಂ ಚಂದ್ರಮತಿಯುಂ ಮೊದಲಾಗೆ ಸಮಸ್ತ ಅಂತಃಪುರಮುಂ (ದುರ್ಯೋಧನನ ಹೆಂಡತಿಯರಾದ ಭಾನುಮತಿಯೂ ಚಂದ್ರಮತಿಯೂ ಸಮಸ್ತ ರಾಣಿವಾಸವೂ) ದುಶ್ಯಾಸನ ಲಕ್ಕಣ ಭೂರಿಶ್ರವ ಸೋಮದತ್ತ ಭಗದತ್ತ ಬಾಹ್ಲೀಕ ಶಲ್ಯ ಶಕುನಿ ಸೈಂಧವ

ಕರ್ಣ ಪ್ರಮುಖರಪ್ಪ
ನಾಯಕರ ಪೆಂಡಿರುಂ (ಲಕ್ಷಣ
ಭೂರಿಶ್ರವ ಸೋಮದತ್ತ
ಭಗದತ್ತ ಬಾಹ್ಲಿಕ ಶಲ್ಯಶಕುನಿ
ಸೈಂಧವ ಕರ್ಣನೇ
ಮೊದಲಾದ
ಪ್ರಮುಖನಾಯಕರ
ಹೆಂಡತಿಯರೂ) ತಮ್ಮ
ಗಂಡರಂ ಕೊಳುಗುಳದೊಳು
ಅಱಸಿ ಕಾಣದೆ ಬಾಯೞಿದು
ಪಳಯಿಸುತ್ತುಂ (ತಮ್ಮ

ಗಂಡಂದಿರನ್ನು
ಯುದ್ಧಭೂಮಿಯಲ್ಲಿ ಹುಡುಕಿ
ಕಾಣದೆ ಗಟ್ಟಿಯಾಗಿ ಅಳುತ್ತಾ)
ಯೂಧಪತಿ (ಹಿಂಡಿನ
ಸಲಗನು) ಕೆಡೆಯೆ ದೆಸೆದಪ್ಪಿದ
ವನಕರಿ ಕರೇಣುಗಳು
(ಆನೆಮರಿ) ಮನ
ಅಡರ್ಪಿಲ್ಲದೆ (ದಿಕ್ಕುಕಾಣದ
ಕಾಡಿನ ಹೆಣ್ಣಾನೆಗಳನ್ನೂ
ಕಲ್ಪವೃಕ್ಷವು ಮುರಿದು ಬೀಳಲು
ಅವಲಂಬನವಿಲ್ಲದೆ)

ಕಲ್ಪವೃಕ್ಷಮುಡಿದು ಕೆಡೆಯೆ ಬಂಬಲ ಬಾಡಿದ ವನಲತೆಗಳುಮಂ ಪೋಲ್ತು (ಕಲ್ಪವೃಕ್ಷವು ಮುರಿದು ಬೀಳಲು ಅವಲಂಬನವಿಲ್ಲದೆ ಸುಟ್ಟು ಬಾಡಿದ ಕಾಡುಬಳ್ಳಿಗಳನ್ನೂ ಹೋಲುತ್ತಿದ್ದವು) - **ವಚನ:ಅರ್ಥ**:ಎನ್ನುವಷ್ಟರಲ್ಲಿ ಧೃತರಾಷ್ಟ್ರನೂ ಗಾಂಧಾರಿಯೂ ಒಟ್ಟುಗೂಡಿ

ಬರಲು, ದುರ್ಯೋಧನನ
ಹೆಂಡತಿಯರಾದ
ಭಾನುಮತಿಯೂ
ಚಂದ್ರಮತಿಯೂ ಸಮಸ್ತ
ರಾಣಿವಾಸವೂ ಲಕ್ಷಣ
ಭೂರಿಶ್ರವ ಸೋಮದತ್ತ
ಭಗದತ್ತ ಬಾಹ್ಲಿಕ ಶಲ್ಯಶಕುನಿ
ಸೈಂಧವ ಕರ್ಣನೇ
ಮೊದಲಾದ
ಪ್ರಮುಖನಾಯಕರ
ಹೆಂಡತಿಯರೂ ತಮ್ಮ

ಗಂಡಂದಿರನ್ನು
ಯುದ್ಧಭೂಮಿಯಲ್ಲಿ ಹುಡುಕಿ
ಕಾಣದೆ ಗಟ್ಟಿಯಾಗಿ ಅಳುತ್ತಾ
ಹಿಂಡಿನ ಸಲಗನು ಸಾಯಲು
ದಿಕ್ಕುಕಾಣದ ಕಾಡಿನ
ಹೆಣ್ಣಾನೆಗಳನ್ನೂ ಕಲ್ಪವೃಕ್ಷವು
ಮುರಿದು ಬೀಳಲು
ಅವಲಂಬನವಿಲ್ಲದೆ ಸುಟ್ಟು
ಬಾಡಿದ ಕಾಡುಬಳ್ಳಿಗಳನ್ನೂ
ಹೋಲುತ್ತಿದ್ದವು

ಚಂ|| ಇಱಿವ ಪಿಣಿಲ್
ತೆರಳ್ದೊರೆವ ಕಣ್ಣನಿ ಮಾಣದೆ
ಮೋದೆ ಶೋಕದ
ಚ್ಚೆಱಿದವೊಲಿರ್ದ
ಬಾಸುಱಿನೊಳಲ್ದು ಕನಲ್ದು
ಬಱಲ್ದು ಜೋಲ್ದ ಮೆಯ್|
ಮಱುಗುವ
ಬೇಗದೊಳ್ಮೊಗಮಣಂ
ದೆಸೆಗಾಣದ
ನೋಟಮಾರುಮಂ

ಮಱುಗಿಸೆ ಬಂದುದಂದು ಕರುಣಾಂ ಬರೆ ವೈರಿನೃಪಾಂಗನಾಜನಂ|| ೫ ||

ಪದ್ಯ-೫:ಪದವಿಭಾಗ-

ಅರ್ಥ:ಇಱಿವ ಪಿಣಿಲ್ (ಸಡಿಲವಾಗಿರುವ ಜಡೆ), ತೆರಳ್ದು ಒರೆವ ಕಣ್ಣನಿ (ಪ್ರವಾಹವಾಗಿ ಸುರಿಯುವ ಕಣ್ಣೀರು,) ಮಾಣದೆ ಮೋದೆ ಶೋಕದೆ ಅಚ್ಚೆಱಿದವೊಲ್ ಇರ್ದ(ಬಿಡದೆ

ಹೊಡೆದುಕೊಳ್ಳುತ್ತಿರಲು
ದುಃಖದ ಅಚ್ಚೆಟ್ಟಹಾಗೆ ಇದ್ದ)
ಬಾಸುಱಿನೊಳ್ ಅೞ್ದು
ಕನಲ್ದು ಬಱಿಲ್ದು ಜೋಲ್ದ
ಮೆಯ್ (ಬಾಸುಂಡೆಗಳಲ್ಲಿ
ತಗ್ಗಾಗಿ ಕೆರಳಿ
ಆಯಾಸಗೊಂಡು
ಜೋಲುತ್ತಿರುವ ಮೈ)
ಮಱುಗುವ ಬೇಗದೊಳ್
ಮಗಮ್ ಅಣಂ ದೆಸೆಗಾಣದ
ನೋಟಂ ಆರುಮಂ

ಮಱುಗಿಸೆ (ವ್ಯಥೆಪಡುವ ಹೊತ್ತಿನಲ್ಲಿ ದಿಕ್ಕುಕಾಣದೆ, ನೋಟ ಇವು ಯಾರನ್ನಾದರೂ ದುಖಿಸುವಂತೆ ಮಾಡುವಂತಿರಲು) ಬಂದುದಂದು ಕರುಣಂ ಬರೆ ವೈರಿನೃಪಾಂಗನಾಜನಂ

ಪದ್ಯ-೫:ಅರ್ಥ: ಪತಿಯನ್ನು ಕಳೆದುಕೊಂಡ ರಾಣಿಯರು; ಸಡಿಲವಾಗಿರುವ ಜಡೆ, ಪ್ರವಾಹವಾಗಿ ಸುರಿಯುವ

ಕಣ್ಣೀರು, ಬಿಡದೆ
ಹೊಡೆದುಕೊಳ್ಳುತ್ತಿರಲು
ದುಃಖದ ಅಚ್ಚೊತ್ತಿಹಾಗೆ ಇದ್ದ
ಬಾಸುಂಡೆಗಳಲ್ಲಿ ತಗ್ಗಾಗಿ ಕೆರಳಿ
ಆಯಾಸಗೊಂಡು
ಜೋಲುತ್ತಿರುವ ಮೈ,
ವ್ಯಥೆಪಡುವ ಹೊತ್ತಿನಲ್ಲಿ
ದಿಕ್ಕುಕಾಣದೆನೋಟ ಇವು
ಯಾರನ್ನಾದರೂ
ದುಖಿಸುವಂತೆ
ಮಾಡುವಂತಿರಲು

ಶತ್ರುರಾಜರ ರಾಣಿಯರು ಕರುಣೆಯೇ ಮೂರ್ತಿಮತ್ತಾಗಿ ಬಂದಂತೆ ಅಲ್ಲಿಗೆ ಬಂದರು.

ವ|| ಆಗಳ್ ಧರ್ಮಪುತ್ರಂ ಧೃತರಾಷ್ಟ್ರಂಗಂ ಗಾಂಧಾರಿಗಮೆಱಗಿ ಪೊಡೆವಟ್ಟು-

ವಚನ:ಪದವಿಭಾಗ-

ಅರ್ಥ:ಆಗಳ್ ಧರ್ಮಪುತ್ರಂ ಧೃತರಾಷ್ಟ್ರಂಗಂ ಗಾಂಧಾರಿಗಂ

ಎಱಗಿ ಪೊಡೆವಟ್ಟು (ಬಗ್ಗಿ ನಮಸ್ಕಾರಮಾಡಿ)-

ವಚನ:ಅರ್ಥ:ವ|| ಆಗ ಧರ್ಮರಾಜನು ಧೃತರಾಷ್ಟ್ರನಿಗೂ ಗಾಂಧಾರಿಗೂ ಬಗ್ಗಿ ನಮಸ್ಕಾರಮಾಡಿ

ಕಂ|| ಏಗೆಯ್ದುಮೆನ್ನ ಧರೆಯೊ
ವಾ೯ಗಮುಮಂ ನೀಮೆ
ಬೆಸಸೆಯುಂ ಕುಡದಿನಿತಂ|
ಮೇಗಿಲ್ಲದೆ ನೆಗೆಟ್ಟಳಿದಂ

ನಾಗಧ್ವಜನಯ್ಯ ನೀಮದರ್ಕಱಿಲದಿರಿಂ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಏಗೆಯ್ದುಂ ಎನ್ನ ಧರೆಯ ಒರ್ವಾಗಮುಮಂ ನೀಮೆ ಬೆಸಸೆಯುಂ (ಏನು ಮಾಡಿದರೂ ನನ್ನ ರಾಜ್ಯದ ಒಂದು ಭಾಗವನ್ನು ನೀವೆ ಹೇಳಿದರೂ) ಕುಡದೆ ಇನಿತಂ ಮೇಗಿಲ್ಲದೆ (ಕೊಡದೆ ಸ್ವಲ್ಪವೂ ಉತ್ತಮವಲ್ಲದ ರೀತಿಯಲ್ಲಿ)

ನೆಗೆಬ್ದು ಅಳಿದಂ ನಾಗಧ್ವಜನು (ಇಷ್ಟನ್ನೂ ಮಾಡಿ ಸರ್ಪಧ್ವಜನಾದ ದುರ್ಯೋಧನನು ಸತ್ತನು) ಅಯ್ಯ ನೀಂ ಅದರ್ಕೆ ಅಱಲದಿರಿಂ (ನೀವು ಅದಕ್ಕಾಗಿ ದುಖಪಡಬೇಡಿ.)

ಪದ್ಯ-೬:ಅರ್ಥ: ಏನು ಮಾಡಿದರೂ ನನ್ನ ರಾಜ್ಯದ ಒಂದು ಭಾಗವನ್ನು ನೀವೆ ಹೇಳಿದರೂ ಕೊಡದೆ ಸ್ವಲ್ಪವೂ

ಉತ್ತಮವಲ್ಲದ ರೀತಿಯಲ್ಲಿ
ಇಷ್ಟನ್ನೂ ಮಾಡಿ
ಸರ್ಪಧ್ವಜನಾದ
ದುರ್ಯೋಧನನು ಸತ್ತನು.
ನೀವು ಅದಕ್ಕಾಗಿ
ದುಃಖಪಡಬೇಡಿ.

ಆತನೊಡವೋಯ್ತು ಪಗೆ
ನಿಮ
ಗಾತನಿನಗ್ಗಳದ ಮಗನೆನಾಂ
ನಖ ಮಾಂಸ|
ಪ್ರೀತಿಯೊಳೆ ನೆಗಟ್ವೆನಿಂ ಪಡೆ

ಮಾತೇಂ ಪಂಬಲಿಸದೆನ್ನ ಪೇೞ್ದುದುಗೆಯ್ಯೆಂ|| ೭ ||

ಪದ್ಯ-೭:ಪದವಿಭಾಗ-ಅರ್ಥ:ಆತನೊಡ ವೋಯ್ತು ಪಗೆ (ಹಗೆ- ದ್ವೇಷವು ಆತನೊಡನೆಯೇ ಹೋಯಿತು.) ನಿಮಗೆ ಆತನಿಂ ಅಗ್ಗಳದ ಮಗನೆನೆ (ನಾನು ಆತನಿಗಿಂತ ಉತ್ತಮನಾದ ಮಗನಾಗಿದ್ದೇನೆ.) ಆಂ ನಖಮಾಂಸ ಪ್ರೀತಿಯೊಳೆ

ನೆಗೞ್ವೆನಿಂ
(ಉಗುರುಕಣ್ಣಿನಮಾಂಸದಂತೆ
ಬಹು ಅನ್ಯೋನ್ಯವಾದ
ಪ್ರೀತಿಯಿಂದಲೇ
ನಡೆದುಕೊಳ್ಳುತ್ತೇನೆ.)
ಪಡೆಮಾತೇಂ ಪಂಬಲಿಸದೆ
ಎನ್ನ ಪೇೞ್ದುದು ಗೆಯ್ಯಿಂ
(ಬೇರೆ ಮಾತೇನು?
ಹಂಬಲಿಸದೆ ನಾನು
ಹೇಳಿದುದನ್ನು ಮಾಡಿ.)

ಪದ್ಯ-೭:ಅರ್ಥ: ದ್ವೇಷವು ಆತನೊಡನೆಯೇ ಹೋಯಿತು. ನಾನು ಆತನಿಗಿಂತ ಉತ್ತಮನಾದ ಮಗನಾಗಿದ್ದೇನೆ. ಉಗುರುಕಣ್ಣಿನಮಾಂಸದಂತೆ ಬಹು ಅನ್ಯೋನ್ಯವಾದ ಪ್ರೀತಿಯಿಂದಲೇ ನಡೆದುಕೊಳ್ಳುತ್ತೇನೆ. ಬೇರೆ ಮಾತೇನು? ಹಂಬಲಿಸದೆ ನಾನು ಹೇಳಿದುದನ್ನು ಮಾಡಿ.

ವ|| ಎಂಬುದುಂ

ಧೃತರಾಷ್ಟ್ರನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಧೃತರಾಷ್ಟ್ರನು ಇಂತು ಎಂದಂ -

ವಚನ:ಅರ್ಥ:ಎನ್ನುಲು

ಧೃತರಾಷ್ಟ್ರನ್ನು ಹೀಗೆಂದನು.

ಕಂ|| ತನಯಶತಮಾದುದಲ್ತೆನ

ಗನಿವಾರಿತ ದುಖಶತಮೆ

ತಾನಾದುದವಂ|

ನೆನೆಯೆಂ ಸಂಸ್ಕಾರಿಸಲೀ

ವನಿತೆಯರ್ಗವರವರ ಪುರುಷರಂ ಕುಡವೇೞ್ಕುಂ|| ೮ ||

ಪದ್ಯ-೮:ಪದವಿಭಾಗ-ಅರ್ಥ:ತನಯಶತಮಾದುದು ಅಲ್ತು ಎನಗೆ ಅನಿವಾರಿತ ದುಖಶತಮೆ ತಾನಾದುದು (ನನಗೆ ನೂರು ಮಕ್ಕಳಾಗಲಿಲ್ಲ, ತಡೆಯಲಾಗದ ನೂರು ದುಃಖಗಳೇ ತಾನಾದುವು.) ಅವಂ ನೆನೆಯೆಂ (ಅವುಗಳನ್ನು

ನೆನೆಯುವುದಿಲ್ಲ;)
ಸಂಸ್ಕಾರಿಸಲು ಈ
ವನಿತೆಯರ್ಗೆ ಅವರವರ
ಪುರುಷರಂ ಕುಡವೇಳ್ಕುಂ (
ಈ ಸ್ತ್ರೀಯರು ಅವರವರ
ಪತಿದೇಹಗಳನ್ನು ಶವಸಂಸ್ಕಾರ
ಮಾಡಲು ಅವರಿಗೆ
ಕೊಡಬೇಕು.)
ಪದ್ಯ-೮:ಅರ್ಥ: ನನಗೆ
ನೂರು ಮಕ್ಕಳಾಗಲಿಲ್ಲ,
ತಡೆಯಲಾಗದ ನೂರು

ದುಃಖಗಳೇ ತಾನಾದುವು.
ಅವುಗಳನ್ನು ನೆನೆಯುವುದಿಲ್ಲ;
ಈ ಸ್ತ್ರೀಯರು ಅವರವರ
ಪತಿದೇಹಗಳನ್ನು ಶವಸಂಸ್ಕಾರ
ಮಾಡಲು ಅವರಿಗೆ
ಕೊಡಬೇಕು. ಎಂದನು
ಧೃತರಾಷ್ಟ್ರ.

ವ|| ಎಂಬುದುಮದಾವುದು ದೋಷಮವರ್ಗೆಲ್ಲಂ ಸಂಸ್ಕಾರವಿಯಂ ನಾನೆ ಪಕ್ಕದೊಳಿರ್ದು

ಮಾಡುಸುವೆನೆಂಬನ್ನೆಗಂ ಕೊಂತಿ ಬಂದು ಕರ್ಣನ ಕಳೇವರಮಂ ತೆಱ್ಕೈಸಿ ಕೊಂಡು ಪಾಂಡವರಯ್ವರುಮನಲ್ಲಿಗೆ ಬರಿಸಿ-

ವಚನ:ಪದವಿಭಾಗ-ಅರ್ಥ: ಎಂಬುದುಂ ಅದಾವುದು ದೋಷಂ (ಹಾಗೆಂದಾಗ, ದೋಷವೇನಿದೆ?) ಅವರ್ಗೆಲ್ಲಂ ಸಂಸ್ಕಾರ ವಿಧಿಯಂ ನಾನೆ

ಪಕ್ಕದೊಳಿರ್ದು

ಮಾಡುಸುವೆನು ಎಂಬ

ಅನ್ನೆಗಂ (ಅವರುಗಳ

ಸಂಸ್ಕಾರವಿಧಿಯನ್ನೆಲ್ಲ ನಾನೇ

ಪಕ್ಕದಲ್ಲಿದ್ದು ಮಾಡಿಸುತ್ತೇನೆ

ಎನ್ನುವಷ್ಟರಲ್ಲಿ) ಕೊಂತಿ

ಬಂದು ಕರ್ಣನ ಕಳೇವರಮಂ

ತೆಱ್ಕೈಸಿ ಕೊಂಡು

(ಕುಂತೀದೇವಿಯು ಬಂದು

ಕರ್ಣನ ಹೆಣವನ್ನು

ತಬ್ಬಿಕೊಂಡು) ಪಾಂಡವರು ಅಯ್ವರುಮನು ಅಲ್ಲಿಗೆ ಬರಿಸಿ-

ವಚನ:ಅರ್ಥ: ಹಾಗೆಂದಾಗ, ದೋಷವೇನಿದೆ? ಅವರುಗಳ ಸಂಸ್ಕಾರವಿಧಿಯನ್ನೆಲ್ಲ ನಾನೇ ಪಕ್ಕದಲ್ಲಿದ್ದು ಮಾಡಿಸುತ್ತೇನೆ ಎನ್ನುವಷ್ಟರಲ್ಲಿ ಕುಂತೀದೇವಿಯು ಬಂದು ಕರ್ಣನ ಹೆಣವನ್ನು ತಬ್ಬಿಕೊಂಡು ಪಾಂಡವರು

ಐದು ಜನವನ್ನೂ ಅಲ್ಲಿಗೆ

ಬರಮಾಡಿ -.

ಕಂ|| ನಿಮ್ಮಣ್ಣನೆನ್ನ ಪಿರಿಯ ಮ

ಗಮ್ಮಾತೇಂ ಕರ್ಣನಾಂ

ಮಹಾಪಾತಕಿಯೆಂ|

ನಿಮ್ಮಯ ಮೋಹದಿನೀತಂ

ಗಾಮ್ಮಾಡಿದೆನಿನಿತನೆಂದು

ಶೋಕಂಗೆಯ್ದಳ್|| ೯

ಪದ್ಯ-೯:ಪದವಿಭಾಗ-

ಅರ್ಥ:ನಿಮ್ಮಣ್ಣನು ಎನ್ನ

ಪಿರಿಯ ಮಗಂ ಮಾತು ಏಂ?

ಕರ್ಣನು- ('ಕರ್ಣನು ನಿಮ್ಮಣ್ಣ,
ನನ್ನ ಹಿರಿಯ ಮಗ,ಏನು
ಹೇಳಲಿ?) ಆಂ
ಮಹಾಪಾತಕಿಯೆಂ (ನಾನು
ಮಹಾಪಾತಕಿ,) ನಿಮ್ಮಯ
ಮೋಹದಿಂ ಈತಂಗೆ ಆಂ
ಮಾಡಿದೆನು ಇನಿತನೆಂದು
ಶೋಕಂ ಗೆಯ್ದಳ್ (ನಿಮ್ಮ
ಮೇಲಿನ (ಮೋಹದಿಂದ)
ಈತನಿಗೆ ಇಷ್ಟನ್ನೂ ನಾನೇ

ಮಾಡಿದೆನು ಎಂದು ದುಖಿಸಿದಳು)

ಪದ್ಯ-೯:ಅರ್ಥ:ಕರ್ಣನು ನಿಮ್ಮಣ್ಣ, ನನ್ನ ಹಿರಿಯ ಮಗ, ಏನು ಹೇಳಲಿ? ನಾನು ಮಹಾಪಾತಕಿ, ನಿಮ್ಮ ಮೇಲಿನ (ಮೋಹದಿಂದ) ಈತನಿಗೆ ಇಷ್ಟನ್ನೂ ನಾನೇ ಮಾಡಿದೆನು ಎಂದು ದುಖಿಸಿದಳು

ವ|| ಆಗಳಯ್ವರುಮಾ ಮಾತಂ ಕೇಳ್ದು ಭೋಂಕನೆರ್ದೆದೆರೆಯೆ

ಸಹೋದರ ಶೋಕದೊಳ್ ಮನ್ಯುಮಿಕ್ಕು ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಆಗಳ್ ಅಯ್ವರುಂ ಆ ಮಾತಂ ಕೇಳ್ದು (ಆಗ ಅಯ್ದು ಸಹೋದರರು ಆ ಮಾತನ್ನು ಕೇಳಿ) ಭೋಂಕನೆ ಎರ್ದೆದೆರೆಯೆ ಸಹೋದರ ಶೋಕದೊಳ್ ಮನ್ಯುಮಿಕ್ಕು ಸೈರಿಸಲಾಱದೆ-

ವಚನ:ಅರ್ಥ: ಆಗ ಅಯ್ದು ಸಹೋದರರು ಆ ಮಾತನ್ನು ಕೇಳಿ ಕೂಡಲೆ ಎದೆಬಿರಿಯುವಂತೆ ವಿಶೇಷವಾದ ದುಃಖದಿಂದ ಮನತುಂಬಿ ಸಹಿಸಲಾರದೆ-

ಕರ್ಣನ ಸಾವಿಗೆ ಧರ್ಮರಾಯನ ದುಃಖ - ಮರಣಿಸಿದವರೆಲ್ಲರ ಅಂತ್ಯ ಸಂಸ್ಕಾರ

ಚಂ||

ಅಱಿಪಿದರಾರುಮಿಲ್ಲೆಮಗೆ

ನೀನೆಮಗಣ್ಣನೆಯೆಂದು

ಮುನ್ನಮಾ

ಮಱಿದೊಡೆ ಪಟ್ಟಮಂ

ನೆಲನುಮಂ ನಿನಗಿತ್ತು

ಕುರುಪ್ರಧಾನನೊಳ್|

ಕಱುಪನೆ ನಿಚ್ಚಟಂ ಬಿಸುಟು

ನಿನ್ನಯ ಪೇೞ್ದುದುಗೆಯ್ದು

ಪಾಱಿಯಂ

ಮೆರೆಯೆವೆ ಬಾಯ

ತಂಬುಲದೊಳಂ

ಮಡುಗೂೞೊಳಮಂಗವಲ್ಲ

ಭಾ|| ೧೦ ||

ಪದ್ಯ-೧೦:ಪದವಿಭಾಗ-

ಅರ್ಥ:ಅಱಿಪಿದರು ಆರುಂ

ಇಲ್ಲ ಎಮಗೆ (ನೀನು ನಮಗೆ

ಅಣ್ಣನೆಂದು ತಿಳಿಸಿದವರು

ಯಾರೂ ಇಲ್ಲ.) ನೀನು
ಎಮಗೆ ಅಣ್ಣನೆಯೆಂದು
ಮುನ್ನಮೆ ಅಱಿದೊಡೆ (ನೀನು
ನಮಗೆ ಅಣ್ಣನೆಂದು ಮೊದಲು
ತಿಳಿದಿದ್ದರೆ) ಪಟ್ಟಮಂ
ನೆಲನುಮಂ ನಿನಗೆ ಇತ್ತು
(ಪಟ್ಟವನ್ನೂ ರಾಜ್ಯವನ್ನೂ
ನಿನಗೆ ಕೊಟ್ಟು)
ಕುರುಪ್ರಧಾನನೊಳ್ ಕಱುಪನೆ
ನಿಚ್ಚಟಂ ಬಿಸುಟು
(ಕೌರವಮುಖ್ಯಸ್ಥನಾದ

ದುರ್ಯೋಧನನಲ್ಲಿ
ಕೋಪವನ್ನು ಶಾಶ್ವತವಾಗಿ
ಬಿಟ್ಟು,) ನಿನ್ನಯ ಪೇಳ್ದುದು
ಗೆಯ್ದು (ನೀನು ಹೇಳಿದುದನ್ನು
ಮಾಡಿಕೊಂಡು,) ಪಾೞಿಯಂ
ಮೆರೆಯೆವೆ (ಧರ್ಮವನ್ನು
ಪಾಲಿಸುತ್ತಿರುತ್ತಿದ್ದೆವಲ್ಲವೆ?)
ಬಾಯ ತಂಬುಲದೊಳಂ
ಮಡುಗೂೞೊಳಂ
ಅಂಗವಲ್ಲಭಾ (ಅಂಗರಾಜನೇ
ನಿನ್ನ

ಬಾಯಿದಂಬುಲದಲ್ಲಿಯೂ ಬಿಟ್ಟ ಅನ್ನದಲ್ಲಿಯೂ ಧರ್ಮವನ್ನು ಪಾಲಿಸುತ್ತಿರುತ್ತಿದ್ದೆವಲ್ಲವೆ?)

ಪದ್ಯ-೧೦:ಅರ್ಥ: ೧೦. “ನೀನು ನಮಗೆ ಅಣ್ಣನೆಂದು ತಿಳಿಸಿದವರು ಯಾರೂ ಇಲ್ಲ. ನೀನು ನಮಗೆ ಅಣ್ಣನೆಂದು ಮೊದಲು ತಿಳಿದಿದ್ದರೆ ಪಟ್ಟವನ್ನೂ ರಾಜ್ಯವನ್ನೂ ನಿನಗೆ ಕೊಟ್ಟು

ಕೌರವಮುಖ್ಯಸ್ಥನಾದ
ದುರ್ಯೋಧನನಲ್ಲಿ
ಕೋಪವನ್ನು ಶಾಶ್ವತವಾಗಿ
ಬಿಟ್ಟು, ನೀನು ಹೇಳಿದುದನ್ನು
ಮಾಡಿಕೊಂಡು ಅಂಗರಾಜನೇ
ನಿನ್ನ
ಬಾಯಿದಂಬುಲದಲ್ಲಿಯೂ
ಬಿಟ್ಟ ಅನ್ನದಲ್ಲಿಯೂ
ಧರ್ಮವನ್ನು
ಪಾಲಿಸುತ್ತಿರುತ್ತಿದ್ದೆವಲ್ಲವೆ?

ವ|| ಎಂದು
ಶೋಕಾಕ್ರಾಂತರಾದರಂ
ನಾರಾಯಣಂ ಸಂತೈಸಿ
ಕೊಂದರ್ ಕೊಲೆ
ಸಾವರೆಂಬುದು
ಜಗದ್ವ್ಯಾಪಾರಮೀಶ್ವರನಿಚ್ಛೆ
ಯಿಂದ ನೆಗಳ್ದಿಮೆಂದು
ದುಃಖೋಪಶಮನಂ
ಮಾಡಿದೊಡೆ
ಸಮಾಹಿತಚಿತ್ತರಾಗಿ
ಕೊಳುಗುಳನಂ

ವಿಧಿವಿಧಾನದಿಂ ಬಳಸಿ
ದುರ್ಯೋಧನಂ ಮೊದಲಾಗೆ
ಕುರುಕ್ಷೇತ್ರದೊಳ್
ಸತ್ತರಸುಮಕ್ಕಳೆಲ್ಲರುಮನೊಂ
ದಾಗಿ ತಂದು ಬೆಟ್ಟಾಗೊಟ್ಟಿ
ಕರ್ಣನ ಕಳೇವರಮನನಿಬರಿಂ
ಮಿಗೆ ಮಹಾಬ್ರಾಹ್ಮಣರಿಂದಂ
ಮಂತ್ರವಿಧಿಯಿಂದಿರಿಸಿ
ಹರಿಚಂದನ ಕರ್ಪೂರ
ಕಾಳಾಗರುಕಾಷ್ಠಂಗಳಿಂದಂ
ಯಥೋಕ್ತ ವಿಧಿಯಿಂ

ಸಂಸ್ಕಾರಿಸಿ ಕರ್ಣಂಗೆ
ಕರ್ಣಸ್ಥಳಿಯೆಂಬ ತೀರ್ಥಮಂ
ಮಾಡಿ ಜಳದಾನಾದಿ
ಕ್ರಿಯೆಗಳಂ ನಿರ್ವರ್ತಿಸೆ
ತದನಂತರದೊಳ್
ಧೃತರಾಷ್ಟ್ರನುಂ
ಗಾಂಧಾರಿಯುಂ
ಪುತ್ರವಿಯೋಗದುಃಖದಿಂ
ಮುನಿವನಮನಾಶ್ರಯಿಸಿದರ್
ಕೊಂತಿಯುಂ ಕರ್ಣನ
ಶೋಕದೊಳ್ ಧರ್ಮಪುತ್ರನಂ

ಬೀೞ್ಕೊಂಡವರೊಡನೆ ತಪಶ್ಚರಣಪರಾಯಣೆಯಾದ ಳಿತ್ತ ಧರ್ಮನಂದನಂ ದೇವಕೀನಂದನನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಶೋಕಾಕ್ರಾಂತರು ಆದರಂ ನಾರಾಯಣಂ ಸಂತೈಸಿ (ಎಂದು ದುಖದಿಂದ ಕೂಡಿದ್ದವರನ್ನು ಕೃಷ್ಣನು ಸಮಾಧಾನಪಡಿಸಿ) ಕೊಂದರ್

ಕೊಲೆ ಸಾವರೆಂಬುದು ಜಗದ್ವ್ಯಾಪಾರಂ ಈಶ್ವರನ ಇಚ್ಛೆಯಿಂದ ನೆಗಳ್ಗುಂ ಎಂದು ದುಃಖೋಪಶಮನಂ ಮಾಡಿದೊಡೆ (ಕೊಂದವರು ಕೊಲೆಗೆ ಈಡಾಗಿ ಸಾಯುತ್ತಾರೆ ಎಂಬುದು ಲೋಕೋಕ್ತಿ. ಈಶ್ವರನ ಇಚ್ಛೆಯಿಂದಲೇ ನಡೆಯುತ್ತದೆ ಎಂದು ದು:ಖವನ್ನು ಹೋಗಲಾಡಿಸಿದನು.)

ಸಮಾಹಿತಚಿತ್ತರಾಗಿ
ಕೊಳ್ಗುಗುಳನಂ
ವಿಧಿವಿಧಾನದಿಂ ಬಳಸಿ
(ಶಾಂತ ಮನಸ್ಸಿನವರಾಗಿ
ಯುದ್ಧರಂಗವನ್ನು
ಶಾಸ್ತ್ರರೀತಿಯಲ್ಲಿ ಸುತ್ತಿನೋಡಿ)
ದುರ್ಯೋಧನಂ ಮೊದಲಾಗೆ
ಕುರುಕ್ಷೇತ್ರದೊಳ್ ಸತ್ತ
ಅರಸುಮಕ್ಕಳೆಲ್ಲರುಮಂ
ಒಂದಾಗಿ ತಂದು ಬೆಟ್ಟಾಗೊಟ್ಟಿ
(ದುರ್ಯೋಧನನೇ

ಮೊದಲಾಗಿ ಕುರುಕ್ಷೇತ್ರದಲ್ಲಿ
ಸತ್ತ ಎಲ್ಲ ರಾಜಕುಮಾರರನ್ನೂ
ತಂದು ಒಟ್ಟಿಗೆ ಬೆಟ್ಟದಂತೆ
ರಾಶಿಮಾಡಿ,) ಕರ್ಣನ
ಕಳೇವರಮನು ಅನಿಬರಿಂ
ಮಿಗೆ ಮಹಾಬ್ರಾಹ್ಮಣರಿಂದಂ
ಮಂತ್ರವಿಧಿಯಿಂದ ಇರಿಸಿ
(ಕರ್ಣನ ಶರೀರವನ್ನು ಅಷ್ಟು
ಜನವನ್ನೂ ಮೀರುವ
ರೀತಿಯಲ್ಲಿ ಬ್ರಾಹ್ಮಣರಿಂದ
ವಿಧಿಪೂರ್ವಕವಾಗಿ ಇರಿಸಿ)

ಹರಿಚಂದನ ಕರ್ಪೂರ
ಕಾಳಾಗರು ಕಾಷ್ಠಂಗಳಿಂದಂ
ಯಥೋಕ್ತ ವಿಧಿಯಿಂ
ಸಂಸ್ಕಾರಿಸಿ (ಶ್ರೀಗಂಧ,
ಕರ್ಪೂರ, ಕರಿಯ ಅಗರು
ಸೌದೆಯಿಂದ ಶಾಸ್ತ್ರದಲ್ಲಿ
ಹೇಳಿರುವಂತೆ
ಸಂಸ್ಕಾರಮಾಡಿದರು.)
ಕರ್ಣಂಗೆ ಕರ್ಣಸ್ಥಳಿಯೆಂಬ
ತೀರ್ಥಮಂ ಮಾಡಿ
ಜಳದಾನಾದಿ ಕ್ರಿಯೆಗಳಂ

ನಿರ್ವರ್ತಿಸೆ (ಕರ್ಣನ
ಜ್ಞಾಪಕಾರ್ಥವಾಗಿ
ಕರ್ಣಸ್ಥಳಿಯೆಂಬ ಕ್ಷೇತ್ರವನ್ನು
ನಿರ್ಮಿಸಿದರು, ತರ್ಪಣವೇ
ಮೊದಲಾದ ಕ್ರಿಯೆಗಳನ್ನು
ಮಾಡಿ ಮುಗಿಸಿದರು.)
ತದನಂತರದೊಳ್
ಧೃತರಾಷ್ಟ್ರನುಂ
ಗಾಂಧಾರಿಯುಂ
ಪುತ್ರವಿಯೋಗ ದುಃಖದಿಂ
ಮುನಿವನಮನು

ಆಶ್ರಯಿಸಿದರ್
(ಧೃತರಾಷ್ಟ್ರನೂ
ಗಾಂಧಾರಿಯೂ ಮಕ್ಕಳನ್ನು
ಅಗಲಿದ ದುಖದಿಂದ
ಋಷಿಗಳ ತಪೋವನವನ್ನು
ಆಶ್ರಯಿಸಿದರು.)
ಕೊಂತಿಯುಂ ಕರ್ಣನ
ಶೋಕದೊಳ್ ಧರ್ಮಪುತ್ರನಂ
ಬೀಱ್ಕೊಂಡು ಅವರೊಡನೆ
ತಪಶ್ಚರಣ
ಪರಾಯಣೆಯಾದಳು

(ಕುಂತೀದೇವಿಯೂ ಕರ್ಣನ ದುಖದಿಂದ ಧರ್ಮರಾಯನ ಅಪ್ಪಣೆಯನ್ನು ಪಡೆದು ಹೊರಟು ತಪಸ್ಸಿನಲ್ಲಿ ನಿರತಳಾದಳು.) ಇತ್ತ ಧರ್ಮನಂದನಂ ದೇವಕೀನಂದನನಂ ಇಂತೆಂದಂ (ಈ ಕಡೆ ಧರ್ಮರಾಯನು ಕೃಷ್ಣನಿಗೆ ಹೀಗೆಂದನು-)-

ವಚನ:ಅರ್ಥ:ಎಂದು ದುಖದಿಂದ ಕೂಡಿದ್ದವರನ್ನು ಕೃಷ್ಣನು ಸಮಾಧಾನಪಡಿಸಿ ಕೊಂದವರು ಕೊಲೆಗೆ ಈಡಾಗಿ ಸಾಯುತ್ತಾರೆ ಎಂಬುದು ಲೋಕೋಕ್ತಿ. ಈಶ್ವರನ ಇಚ್ಛೆಯಿಂದಲೇ ನಡೆಯುತ್ತದೆ ಎಂದು ದು:ಖವನ್ನು ಹೋಗಲಾಡಿಸಿದನು. ಶಾಂತ ಮನಸ್ಸಿನವರಾಗಿ ಯುದ್ಧರಂಗವನ್ನು

ಶಾಸ್ತ್ರರೀತಿಯಲ್ಲಿ ಸುತ್ತಿನೋಡಿ ದುರ್ಯೋಧನನೇ ಮೊದಲಾಗಿ ಕುರುಕ್ಷೇತ್ರದಲ್ಲಿ ಸತ್ತ ಎಲ್ಲ ರಾಜಕುಮಾರರನ್ನೂ ತಂದು ಒಟ್ಟಿಗೆ ಬೆಟ್ಟದಂತೆ ರಾಶಿಮಾಡಿದರು; ರಾಶಿಮಾಡಿ-ಕರ್ಣನ ಶರೀರವನ್ನು ಅಷ್ಟು ಜನವನ್ನೂ ಮೀರುವ ರೀತಿಯಲ್ಲಿ ಬ್ರಾಹ್ಮಣರಿಂದ ವಿಧಿಪೂರ್ವಕವಾಗಿ ಇರಿಸಿ, ಶ್ರೀಗಂಧ, ಕರ್ಪೂರ, ಕರಿಯ

ಅಗರು ಸೌದೆಯಿಂದ
ಶಾಸ್ತ್ರದಲ್ಲಿ ಹೇಳಿರುವಂತೆ
ಸಂಸ್ಕಾರಮಾಡಿದರು. ಕರ್ಣನ
ಜ್ಞಾಪಕಾರ್ಥವಾಗಿ
ಕರ್ಣಸ್ಥಳಿಯೆಂಬ ಕ್ಷೇತ್ರವನ್ನು
ನಿರ್ಮಿಸಿದರು. ತರ್ಪಣವೇ
ಮೊದಲಾದ ಕ್ರಿಯೆಗಳನ್ನು
ಮಾಡಿ ಮುಗಿಸಿದರು.
ಧೃತರಾಷ್ಟ್ರನೂ
ಗಾಂಧಾರಿಯೂ ಮಕ್ಕಳನ್ನು
ಅಗಲಿದ ದುಖದಿಂದ

ಋಷಿಗಳ ತಪೋವನವನ್ನು ಆಶ್ರಯಿಸಿದರು. ಕುಂತೀದೇವಿಯೂ ಕರ್ಣನ ದುಃಖದಿಂದ ಧರ್ಮರಾಯನ ಅಪ್ಪಣೆಯನ್ನು ಪಡೆದು ಹೊರಟು ತಪಸ್ಸಿನಲ್ಲಿ ನಿರತಳಾದಳು. ಈ ಕಡೆ ಧರ್ಮರಾಯನು ಕೃಷ್ಣನಿಗೆ ಹೀಗೆಂದನು-

ಮ||

ಇನಿತೊಂದುಗ್ರರಣಪ್ರಘಟ್ಟಕ

ದೊಳೀ ಭಾರಾವತಾರಂ
ಧರಾಂ
ಗನೆಗೀಯಿರ್ವರಿನಾದುದಾಯ್ತಿ
ನಗೆ ನಿರ್ದಾಯಾದ್ಯಮೀ ಸಾ|
ಲ್ಗೆನಗಿಂ ರಾಜ್ಯಮೆ
ಬಾಚಿತ್ತೆಯಲ್ತು
ಹರಿಗಂಗುತ್ಸಾಹದಿಂ ಪಟ್ಟ ಬಂ
ಧನಮಂ ಮಾಡುವಮಿಂದೆ
ಹಸ್ತಿನಪುರಪ್ರಸ್ಥಾನಮಂ
ಮಾಡುವಂ|| ೧೧ ||

ಪದ್ಯ-೧೧:ಪದವಿಭಾಗ-ಅರ್ಥ:ಇನಿತೊಂದು ಉಗ್ರರಣಪ್ರಘಟ್ಟಕದೊಳು ಈ ಭಾರಾವತಾರಂ (ಇಷ್ಟು ಭಯಂಕರವಾದ ಈ ಯುದ್ಧಸಮಾರಂಭದಲ್ಲಿ ಈ) ಧರಾಂನೆಗೆ ಈ ಇರ್ವರಿಂ ಆದುದು ಆಯ್ತು ಎನಗೆ ನಿರ್ದಾಯಾದ್ಯಂ (ನನಗೆ ದಾಯಾದಿಗಳಿಲ್ಲದಿರುವುದೂ ಆಯಿತು.) ಸಾಲ್ಗೆ ಎನಗಿಂ

ರಾಜ್ಯಮೆ ಬಾಟ್ಟೆಯಲ್ತು
(ನನಗೆ ಇನ್ನು ರಾಜ್ಯದಿಂದ
ಪ್ರಯೋಜನವಿಲ್ಲ.) ಹರಿಗಂಗೆ
ಉತ್ಸಾಹದಿಂ ಪಟ್ಟ
ಬಂಧನಮಂ ಮಾಡುವಂ
(ಹರಿಗನಾದ ಅರ್ಜುನನಿಗೆ
ಇಂದೇ ಪಟ್ಟಾಭಿಷೇಕವನ್ನು
ಮಾಡೋಣ,) ಇಂದೆ
ಹಸ್ತಿನಪುರಪ್ರಸ್ಥಾನಮಂ
ಮಾಡುವಂ (ಈ ದಿನವೇ

ಹಸ್ತಿನಾಪುರಕ್ಕೆ ಪ್ರಯಾಣ ಮಾಡೋಣ.)

ಪದ್ಯ-೧೧:ಅರ್ಥ: ಇಷ್ಟು ಭಯಂಕರವಾದ ಈ ಯುದ್ಧಸಮಾರಂಭದಲ್ಲಿ ಈ ಭೀಮಾರ್ಜುನರಿಬ್ಬರಿಂದ ಭೂದೇವಿಗೆ ಈ ಭಾರದ ಇಳಿಯುವಿಕೆ ಆಯಿತು. ನನಗೆ ದಾಯಾದಿಗಳಿಲ್ಲದಿರುವುದೂ ಆಯಿತು. ಈ ವೈಭವವೇ ನನಗೆ ಸಾಕು. ನನಗೆ ಇನ್ನು

ರಾಜ್ಯದಿಂದ ಪ್ರಯೋಜನವಿಲ್ಲ. ಹರಿಗನಾದ ಅರ್ಜುನನಿಗೆ ಇಂದೇ ಪಟ್ಟಾಭಿಷೇಕವನ್ನು ಮಾಡೋಣ, ಈ ದಿನವೇ ಹಸ್ತಿನಾಪುರಕ್ಕೆ ಪ್ರಯಾಣ ಮಾಡೋಣ.

ವ|| ಎಂಬುದುಮಶೇಷ ಧರಾಭಾರಮಂ ಶೇಷಂ ತಾಳ್ದುವಂತೆ ವಿಕ್ರಮಾರ್ಜುನಂಗಲ್ಲದೆ

ಪೆಱಂಗೆ

ತಾಳ್ದಲರಿದಿದರ್ಕಾನುಮೊಡಂ

ಬಡುವೆನೆಂದು

ಮುಕುಂದನನೇಕ

ಮುಕುಂದಬೃಂದಂಗಳ್

ಮೋಱಗೆ

ಶುಭಮೂಹೂರ್ತದೊಳರಿಕೇ

ಸರಿಯಂ ಮುಂದಿಟ್ಟು

ಹಸ್ತಿನಪುರೋಪವನಮನೆಯ್ದೆ

ವಂದಾಗಳ್-

ವಚನ:ಪದವಿಭಾಗ-ಅರ್ಥ:ಎಂಬುದುಂ ಶೇಷ ಧರಾಭಾರಮಂ ಶೇಷಂ ತಾಳ್ದುವಂತೆ (ಎನ್ನಲು “ಸಮಸ್ತಭೂಭಾರವನ್ನೂ ಆದಿಶೇಷನು ಧರಿಸುವ ಹಾಗೆ) ವಿಕ್ರಮಾರ್ಜುನಂಗೆ ಅಲ್ಲದೆ ಪೆಱಂಗೆ ತಾಳ್ದಲರಿದು ಇದರ್ಕೆ ಆನುಂ ಒಡಂಬಡುವೆನು ಎಂದು(ವಿಕ್ರಮಾರ್ಜುನನಲ್ಲದೆ

ಬೇರೆಯವರಿಗೆ ಧರಿಸಲಸಾಧ್ಯ;
ಇದಕ್ಕೆ ನಾನೂ ಒಪ್ಪುತ್ತೇನೆ”
ಎಂದು.) ಮುಕುಂದನು
ಅನೇಕ ಮುಕುಂದ
ಬೃಂದಂಗಳ್ ಮೊಟಿಗೆ (ಎಂದು
ಕೃಷ್ಣನು ಅನೇಕ
ಮಂಗಳವಾದ್ಯಗಳ
ಸಮೂಹವು
ಭೋರ್ಗರೆಯುತ್ತಿರಲು)
ಶುಭಮೂಹೂರ್ತದೊಳ್
ಅರಿಕೇಸರಿಯಂ ಮುಂದಿಟ್ಟು

ಹಸ್ತಿನಪುರ ಉಪವನಮನು
ಎಯ್ದೆ ವಂದಾಗಳ್
(ಶುಭಮುಹೂರ್ತದಲ್ಲಿ
ಅರಿಕೇಸರಿಯನ್ನು ಮುಂದಿಟ್ಟು
ಹಸ್ತಿನಾಪಟ್ಟಣದ
ಸಮೀಪದಲ್ಲಿರುವ
ತೋಟವನ್ನು
ಸಮೀಪಿಸಿದನು.)-

<u>ಅರ್ಜುನನಿಗೆ ಪಟ್ಟಾಭಿಷೇಕ</u>

ವಚನ:ಅರ್ಥ:

ಧರ್ಮರಾಜನು ಅರ್ಜುನನಿಗೆ ಪಟ್ಟಕಟ್ಟೋಣ- ಎನ್ನಲು "ಸಮಸ್ತಭೂಭಾರವನ್ನೂ ಆದಿಶೇಷನು ಧರಿಸುವ ಹಾಗೆ ವಿಕ್ರಮಾರ್ಜುನನಲ್ಲದೆ ಬೇರೆಯವರಿಗೆ ಧರಿಸಲಸಾಧ್ಯ; ಇದಕ್ಕೆ ನಾನೂ ಒಪ್ಪುತ್ತೇನೆ". ಎಂದು ಕೃಷ್ಣನು ಅನೇಕ ಮಂಗಳವಾದ್ಯಗಳ

ಸಮೂಹವು
ಭೋರ್ಗರೆಯುತ್ತಿರಲು
ಶುಭಮುಹೂರ್ತದಲ್ಲಿ
ಅರಿಕೇಸರಿಯನ್ನು ಮುಂದಿಟ್ಟು
ಹಸ್ತಿನಾಪಟ್ಟಣದ
ಸಮೀಪದಲ್ಲಿರುವ
ತೋಟವನ್ನು ಸಮೀಪಿಸಿದನು.

ಚಂ|| ಮೃದುಮಧುರಸ್ವನಂ
ನೆಗೞೆ
ಬಂದೆಳಮಾವಿನೊಳಿರ್ದು
ಕೂಡೆ ಪಾ

ಡಿದುದು ಮದಾಳಿಮಾಲೆ
ಪುಗಲೆನ್ನದೆ ಪುಗಲೆನ್ನದೆ ದಲ್
ಪುಗಿಮೆಂದು ಮೆಲ್ಪುಗುಂ|
ದದ ದನಿಯಿಂ
ತಳಿರ್ತಸುಗೆಯೊಳ್ ನೆಲಸಿರ್ದ
ಪಿಕಾಳಿ ಮೆಲ್ಲನೂ
ಳ್ದುದು ಮನಮಾ ತೀಡಿದುದು
ತೆಂಕಣ
ತಂಬೆಲರಪ್ಪಿಕೊಳ್ವವೋಲ್||
೧೨ ||

ಪದ್ಯ-೧೨:ಪದವಿಭಾಗ-ಅರ್ಥ:ಮೃದುಮಧುರ ಸ್ವನಂ ನೆಗೞೆ (ಮೃದುಮಧುರವಾದ ಧ್ವನಿಯು ಉಂಟಾಗಲು) ಬಂದ ಎಳಮಾವಿನೊಳಿರ್ದು (ಹೂಬಿಟ್ಟ ಎಳಮಾವಿನ ಮರದಲ್ಲಿದ್ದುಕೊಂಡು) ಕೂಡೆ ಪಾಡಿದುದು ಮದಾಳಿಮಾಲೆ (ಮದಿಸಿದ ದುಂಬಿಯ ಸಮೂಹವು ಕೂಡಲೆ ಹಾಡಿತು.) ಪುಗಲ್ ಎನ್ನದೆ

ಪುಗಲ್ ಎನ್ನದೆ ದಲ್
ಪುಗಿಮೆಂದು ಮೆಲ್ಪುಗುಂದದ
ದನಿಯಿಂ
(ಪ್ರವೇಶಮಾಡಬೇಡ ಎನ್ನದೆ
ಪ್ರವೇಶಮಾಡಿ ಎಂದು
ಮೆಲ್ಲನೆ/ಮೃದು ದನಿ ಕುಂದದ
ಧ್ವನಿಯಿಂದ) ತಳಿರ್ತ
ಅಸುಗೆಯೊಳ್ ನೆಲಸಿರ್ದ
ಪಿಕಾಳಿ (ಚಿಗುರಿದ
ಅಶೋಕಮರದಲ್ಲಿ ನೆಲಸಿದ್ದ
ಕೋಗಿಲೆಗಳ ಗುಂಪು) ಮೆಲ್ಲನೆ

ಊಳ್ದುದು (ನಿಧಾನವಾಗಿ ಕೂಗಿತು.) ಮನಮಾ ತೀಡಿದುದು ತೆಂಕಣ ತಂಬೆಲರ್ ಅಪ್ಪಿಕೊಳ್ವವೋೕಲ್ (ಮನಸ್ಸಿಗೆ ತೃಪ್ತಿಯಾಗುವಂತೆ ಆಲಿಂಗನ ಮಾಡಿಕೊಳ್ಳುವ ಹಾಗೆ ದಕ್ಷಿಣದಿಕ್ಕಿನ ತಂಗಾಳಿಯು ಬೀಸಿತು)

ಪದ್ಯ-೧೨:ಅರ್ಥ:
ಮೃದುಮಧುರವಾದ ಧ್ವನಿಯು ಉಂಟಾಗಲು,

ಹೂವುಬಿಟ್ಟ ಎಳಮಾವಿನ
ಮರದಲ್ಲಿದ್ದುಕೊಂಡು
ಮದಿಸಿದ ದುಂಬಿಯ
ಸಮೂಹವು ಕೂಡಲೆ
ಹಾಡಿತು. ಪ್ರವೇಶಮಾಡಬೇಡ
ಎನ್ನದೆ ಪ್ರವೇಶಮಾಡಿ ಎಂದು
ಮೆಲ್ಲನೆ/ಮೃದು ದನಿ ಕುಂದದ
ಧ್ವನಿಯಿಂದ ಚಿಗುರಿದ
ಅಶೋಕಮರದಲ್ಲಿ ನೆಲಸಿದ್ದ
ಕೋಗಿಲೆಗಳ ಗುಂಪು
ನಿಧಾನವಾಗಿ ಕೂಗಿತು.

ಮನಸ್ಸಿಗೆ ತೃಪ್ತಿಯಾಗುವಂತೆ
ಆಲಿಂಗನ ಮಾಡಿಕೊಳ್ಳುವ
ಹಾಗೆ ದಕ್ಷಿಣದಿಕ್ಕಿನ
ತಂಗಾಳಿಯು ಬೀಸಿತು

ಚಂ|| ಪಸರಿಸಿ ಬಂದ ಮಾಮರನೆ ಬೆಳ್ಗೊಡೆ ರಾಗದ ಪುಂಜದನ್ನವ ಪ್ಪಸುಗೆಯ ನೀಳ್ದ ಕೆಂದಳಿರೆ ಪಾಳಿಮಹಾಧ್ವಜಮೆತ್ತಮಿಂಪ ನಾ|

ಳ್ದಿಸೆವಳಿಗೀತಿ ತಾನೆ

ಜಯಗೀತಿಗಳಾಗಿರೆ

ವಿಕ್ರಮಾರ್ಜುನಂ

ಗೊಸೆದಿದಿರ್ವರ್ಪರ್ವೋಲ್

ಬನವದೊಪ್ಪಿದುದಿಂತು

ಬಸಂತರಾಜನಾ|| ೧೩ ||

ಪದ್ಯ-೧೩:ಪದವಿಭಾಗ-

ಅರ್ಥ:ಪಸರಿಸಿ ಬಂದ

ಮಾಮರನೆ ಬೆಳ್ಗೊಡೆ (ಚಿಗುರಿ

ಹೂವಾದ ಮಾವಿನಮರವೇ

ಶ್ವೇತಚ್ಛತ್ರ;) ರಾಗದ

ಪುಂಜದನ್ನವಪ್ಪ ಅಸುಗೆಯ
ನೀಳ್ದ ಕೆಂದಳಿರೆ ಪಾಳಿ
(ಕೆಂಪುಬಣ್ಣದ
ರಾಶಿಯಂತಿರುವ
ಅಶೋಕವೃಕ್ಷದ ಕೆಂಪುಚಿಗುರೇ
ಪಾಳಿಧ್ವಜಗಳು.)
ಮಹಾಧ್ವಜಂ ಎತ್ತಂ
ಇಂಪನಾಳ್ದು ಎಸೆವ ಅಳಿಗೀತಿ
ತಾನೆ ಜಯಗೀತಿಗಳಾಗಿರೆ
(ಎಲ್ಲ ಕಡೆಯಲ್ಲಿಯೂ
ಸೌಂದರ್ಯದಿಂದ ಕೂಡಿ

ಪ್ರಕಾಶಿಸುವ ದುಂಬಿಯ ಹಾಡೇ ಜಯಗೀತೆಗಳಾಗಿರಲು) ವಿಕ್ರಮಾರ್ಜುನಂಗೆ ಒಸೆದು ಇದಿರ್ವರ್ಪರ್ವೊಲ್ (ವಿಕ್ರಮಾರ್ಜುನನನ್ನು ಪ್ರೀತಿಯಿಂದ ಸ್ವಾಗತಿಸುವ ಹಾಗೆ) ಬನವದೊಪ್ಪಿದುದು ಇಂತು ಬಸಂತರಾಜನಾ (ವಸಂತರಾಜನ ವನವು ಶೋಭಾಯಮಾನವಾಗಿತ್ತು.)

ಪದ್ಯ-೧೩:ಅರ್ಥ: ಚಿಗುರಿ ಹೂವಾದ ಮಾವಿನಮರವೇ ಶ್ವೇತಚ್ಛತ್ರ; ಕೆಂಪುಬಣ್ಣದ ರಾಶಿಯಂತಿರುವ ಅಶೋಕವೃಕ್ಷದ ಕೆಂಪುಚಿಗುರೇ ಪಾಳಿಧ್ವಜಗಳು. ಎಲ್ಲ ಕಡೆಯಲ್ಲಿಯೂ ಸೌಂದರ್ಯದಿಂದ ಕೂಡಿ ಪ್ರಕಾಶಿಸುವ ದುಂಬಿಯ ಹಾಡೇ ಜಯಗೀತೆಗಳಾಗಿರಲು, ವಿಕ್ರಮಾರ್ಜುನನನ್ನು

ಪ್ರೀತಿಯಿಂದ ಸ್ವಾಗತಿಸುವ
ಹಾಗೆ ವಸಂತರಾಜನ ವನವು
ಶೋಭಾಯಮಾನವಾಗಿತ್ತು.

ವ|| ಆಗಳ್ ನಗರಪ್ರವೇಶಂಗೆಯ್ಯಲೆಂದು ಕಿಱಿದಾನುಂ ಬೇಗಮಾ ಪುರೋಪವನದೊಳ್ ವಿಶ್ರಮಿಸಿ ಪಂಚರತ್ನಮಯ ಮಂಡನಾಯೋಗ ಮಂಡಿತವಿಜಯಗಜಾರೂಢ ನಾದ ವಿಜಯನಂ ಮುಂದಿಟ್ಟು

ಮಹಾವಿಭೂತಿಯಿಂದಯ್ವ
ರುಂ ನಿಜಾನ್ವಯ
ರಾಜದ್ರಾಜಧಾನಿಯಂ ಪುಗೆ-

ವಚನ:ಪದವಿಭಾಗ-

ಅರ್ಥ:ಆಗಳ್ ನಗರಪ್ರವೇಶಂ ಗೆಯ್ಯಲೆಂದು ಕಿಱದಾನುಂ ಬೇಗಮ್ (ಆಗ ನಗರಪ್ರವೇಶಮಾಡಬೇಕೆಂದು ಸ್ವಲ್ಪ ಕಾಲ,) ಆ ಪುರ ಉಪವನದೊಳ್ ವಿಶ್ರಮಿಸಿ (ಆ ಪಟ್ಟಣದ ಸಮೀಪದ

ತೋಟದಲ್ಲಿದ್ದು ವಿಶ್ರಾಂತಿ
ಹೊಂದಿ) ಪಂಚರತ್ನಮಯ
ಮಂಡನಾಯೋಗ ಮಂಡಿತ
ವಿಜಯಗಜಾರೂಢನಾದ
ವಿಜಯನಂ ಮುಂದಿಟ್ಟು
(ಪಂಚರತ್ನದಿಂದ ಕೂಡಿದ
ಆಭರಣಗಳ ಸಮೂಹದಿಂದ
ಅಲಂಕರಿಸಲ್ಪಟ್ಟ
ವಿಜಯಗಜವನ್ನು ಹತ್ತಿರುವ
ಅರ್ಜುನನನ್ನು
ಮುಂದುಮಾಡಿಕೊಂಡು)

ಮಹಾವಿಭೂತಿಯಿಂದ ಅಯ್ವರುಂ ನಿಜಾನ್ವಯ ರಾಜದ್ರಾಜಧಾನಿಯಂ ಪುಗೆ (ಮಹಾವೈಭವದಿಂದ ಅಯ್ದು ಜನವೂ ತಮ್ಮ ವಂಶಪಾರಂಪರ್ಯವಾಗಿ ಬಂದು ಪ್ರಕಾಶಿಸುತ್ತಿರುವ ರಾಜಧಾನಿಯನ್ನು ಪ್ರವೇಶಿಸಿದರು. ಹೊಗಲು-)-

ವಚನ:ಅರ್ಥ:ಆಗ ನಗರಪ್ರವೇಶಮಾಡಬೇಕೆಂದು

ಸ್ವಲ್ಪ ಕಾಲ ಆ ಪಟ್ಟಣದ
ಸಮೀಪದ ತೋಟದಲ್ಲಿದ್ದು
ವಿಶ್ರಾಂತಿ ಹೊಂದಿ
ಪಂಚರತ್ನದಿಂದ ಕೂಡಿದ
ಆಭರಣಗಳ ಸಮೂಹದಿಂದ
ಅಲಂಕರಿಸಲ್ಪಟ್ಟ
ವಿಜಯಗಜವನ್ನು ಹತ್ತಿರುವ
ಅರ್ಜುನನನ್ನು
ಮುಂದುಮಾಡಿಕೊಂಡು
ಮಹಾವೈಭವದಿಂದ ಅಯ್ದು
ಜನವೂ ತಮ್ಮ

ವಂಶಪಾರಂಪರ್ಯವಾಗಿ
ಬಂದು ಪ್ರಕಾಶಿಸುತ್ತಿರುವ
ರಾಜಧಾನಿಯನ್ನು
ಪ್ರವೇಶಿಸಿದರು.

ಮ||
ನವಕಾಳಾಗರುಧೂಪಧೂಮತ
ತಿಸೌಗಂಧಂಗಳಿಂ ಸಯ್ತು ನೀ
ಳ್ದು ವಿಯಚ್ಚಕ್ರದೊಳಲ್ಲಿ
ಮಂದಮರುತವ್ಯಾಘಾತದಿಂದೆ
ಯ್ದೆ ತೋ|

ರ್ಣವೊಲಾಗಿರ್ದುದು ಕಣ್ಗೆ ವಂದುದು ಪುರಸ್ತ್ರೀ ಪಾಂಡುಪುತ್ರಂಗಮು ತ್ಸವದಿಂ ಮುನ್ನರಿದಿರ್ದ ತನ್ನ ಪಿಣಿಲಂ ಕೂರ್ತಂದು ಬಿಟ್ಟಂತೆವೋಲ್|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ನವ ಕಾಳಾಗರು ಧೂಪಧೂಮತತಿ ಸೌಗಂಧಂಗಳಿಂ (ಹೊಸದಾದ ಕರಿಯ ಅಗರುಧೂಪದ

ಹೊಗೆಯ ಸಮೂಹವು ಸುವಾಸನೆಗಳಿಂದ ಕೂಡಿ,) ಸಯ್ತು ನೀಳ್ದು ವಿಯಚ್ಚಕ್ರದೊಳ್ (ನೇರವಾಗಿ ಆಕಾಶದಲ್ಲಿ) ಅಲ್ಲಿ ಮಂದಮರುತ ವ್ಯಾಘಾತದಿಂದ ಎಯ್ದೆ (ಅಲ್ಲಿ ನಿಧಾನವಾಗಿ ಬೀಸುವ ಗಾಳಿಯಿಂದ ಹೊಡೆಯಲ್ಪಟ್ಟು ಚೆನ್ನಾಗಿ) ತೋರ್ಪವೊಲ್ ಆಗಿರ್ದುದು

(ಆಕರ್ಷಕವಾಗುವ ಹಾಗೆ ಆಯಿತು.) ಕಣ್ಗೆ ವಂದುದು ಪುರಸ್ತ್ರೀ (ಪಟ್ಟಣವೆಂಬ ವನಿತೆ ಚೆನ್ನಾಗಿ ಆಕರ್ಷಕವಾಗುವ ಹಾಗೆ ಆಯಿತು.) ಪಾಂಡುಪುತ್ರಂಗಂ ಉತ್ಸವದಿಂ ಮುನ್ನ ಅರಿದಿರ್ದ(ಪಾಂಡುಪುತ್ರನಾದ ಅರ್ಜುನನಿಗಾಗಿ ಸಂತೋಷದಿಂದ ಮೊದಲು ಕತ್ತರಿಸಿದ್ದ) ತನ್ನ ಪಿಣಿಲಂ (ತನ್ನ

ಜಡೆಯನ್ನು) ಕೂರ್ತಂದು ಬಿಟ್ಟಂತೆವ್ರೋಲ್ (ಈಗ ಪ್ರೀತಿಯಿಂದ ಇಳಿಯಬಿಟ್ಟ ಹಾಗೆ ಕಣ್ಣಿಗೆ ಮನೋಹರವಾಗಿ ಕಂಡಿತು.)

ಪದ್ಯ-೧೫:ಅರ್ಥ:

ಹೊಸದಾದ ಕರಿಯ ಅಗರುಧೂಪದ ಹೊಗೆಯ ಸಮೂಹವು ಸುವಾಸನೆಗಳಿಂದ ಕೂಡಿ ನೇರವಾಗಿ ಆಕಾಶದಲ್ಲಿ

ಉದ್ದವಾಗಿ ಹರಡಿ ಅಲ್ಲಿ
ನಿಧಾನವಾಗಿ ಬೀಸುವ
ಗಾಳಿಯಿಂದ ಹೊಡೆಯಲ್ಪಟ್ಟು
ಚೆನ್ನಾಗಿ ಆಕರ್ಷಕವಾಗುವ
ಹಾಗೆ ಆಯಿತು. ಪಟ್ಟಣವೆಂಬ
ವನಿತೆ ಪಾಂಡುಪುತ್ರನಾದ
ಅರ್ಜುನನಿಗಾಗಿ
ಸಂತೋಷದಿಂದ ಮೊದಲು
ಕತ್ತರಿಸಿದ್ದ ತನ್ನ ಜಡೆಯನ್ನು
ಈಗ ಪ್ರೀತಿಯಿಂದ

ಇಳಿಯಬಿಟ್ಟ ಹಾಗೆ ಕಣ್ಣಿಗೆ
ಮನೋಹರವಾಗಿ ಕಂಡಿತು.

ಮಲ್ಲಿಕಮಾಲೆ||
ಓಳಿದೋರಣಮಾಯ್ತು
ಹಾರದ ಪಚ್ಚೆಸಾರದ ಮಾಲೆ
ಸೌ
ಧಾಳಿಯೊಳ್ಗುಡಿಯಾಯ್ತು
ಚೀನದ ಸುಯ್ಯತಾಣದ ಪಟ್ಟೆ
ಹ|
ರ್ಮ್ಯಾಳಿದಪ್ಪದೆ
ರಯ್ಯಮಾಯ್ತೆಸೆವಾಟ

ಪಾಟದ ಗೀತಿ ಕ

ಣ್ಗೋಳಿವಟ್ಟುದದೊಂದು

ಚೆಲ್ವು ದಲಾಯ್ತು

ತತ್ಪುರಮಧ್ಯದೊಳ್|| ೧೫ ||

ಪದ್ಯ-೧೫:ಪದವಿಭಾಗ-

ಅರ್ಥ:ಓಳಿ (ದೋ)

ತೋರಣಮಾಯ್ತು ಹಾರದ

ಪಚ್ಚೆಸಾರದ ಮಾಲೆ (ಆ

ಪಟ್ಟಣದ ಮಧ್ಯದಲ್ಲಿ

ಹಾರವಾಗಿ ಮಾಡಿರುವ

ಹಸಿರುವಾಣಿಯ ಸಾರವತ್ತಾದ

ತೋರಣಗಳು ಸಾಲಾಗಿ
ರಂಜಿಸಿದುವು.)
ಸೌಧಾಳಿಯೊಳ್
ಗುಡಿಯಾಯ್ತು ಚೀನದ
ಸುಯ್ಯತಾಣದ ಪಟ್ಟೆ
(ಉಪ್ಪರಿಗೆಗಳ ಸಾಲಿನಲ್ಲಿ
ರೇಷ್ಮೆಯ ಕಸೂತಿ
ಕೆಲಸಮಾಡಿದ ನವುರಾದ
ಬಟ್ಟೆಗಳು ಒಳ್ಳೆಯ
ಬಾವುಟಗಳಾದವು;)
ಹರ್ಮ್ಯಾಳಿ (ದ) ತಪ್ಪದೆ

ರಯ್ಯಮಾಯ್ತು ಎಸೆವಾಟ
ಪಾಟದ ಗೀತಿ (ಎಲ್ಲ ಸೌಧದ
ಉಪ್ಪರಿಗೆಗಳಲ್ಲಿಯ
ಶೋಭಿಸುವ ಆಟ ಪಾಟ-
ಸಂಗೀತಗಳು
ರಮ್ಯವಾಯಿತು)
ಕಣ್ಗೋಳಿವಟ್ಟುದು ಅದೊಂದು
ಚೆಲ್ವು ದಲ್ ಆಯ್ತು ತತ್ಪುರ
ಮಧ್ಯದೊಳ್ (ಆ ನಗರದ
ನಡುವೆ ಅದೊಂದು ಸೊಗಸು

ಕಣ್ಣಿಗೆ ಸೌಂದರ್ಯ ರಾಶಿಯಾಗಿ ಕಂಡಿತು.)

ಪದ್ಯ-೧೫:ಅರ್ಥ: ಆ ಪಟ್ಟಣದ ಮಧ್ಯದಲ್ಲಿ ಹಾರವಾಗಿ ಮಾಡಿರುವ ಹಸಿರುವಾಣಿಯ ಸಾರವತ್ತಾದ ತೋರಣಗಳು ಸಾಲಾಗಿ ರಂಜಿಸಿದುವು. ಉಪ್ಪರಿಗೆಗಳ ಸಾಲಿನಲ್ಲಿ ರೇಷ್ಮೆಯ ಕಸೂತಿ ಕೆಲಸಮಾಡಿದ ನವುರಾದ ಬಟ್ಟೆಗಳು ಒಳ್ಳೆಯ

ಬಾವುಟಗಳಾದವು; ಎಲ್ಲ ಸೌಧದ ಉಪ್ಪರಿಗೆಗಳಲ್ಲಿಯ ಆಟ ಸಂಗೀತಗಳು ರಮ್ಯವಾಯಿತು. ನೃತ್ಯ ಸಂಗೀತ ಹಾಡುಗಳು ಮನೋಹರವಾದುವು. ಆ ನಗರದ ನಡುವೆ ಅದೊಂದು ಸೊಗಸು ಕಣ್ಣಿಗೆ ಸೌಂದರ್ಯ ರಾಶಿಯಾಗಿ ಕಂಡಿತು.

ಮಾಲಿನಿ|| ಪ್ರವರತರ ಪುರಂನೂಪುರಾರಾವಮೆತ್ತಂ

ಕಿವಿಗೆ ವರೆ ವಿಳಾಸಂ ಕಣ್ಗೆ

ಶೇಷಾಕ್ಷತೌಘ|

ದ್ರವಮೆ

ತಮಗಮಿತ್ತತ್ತಿಂಬನೆಂಬನ್ನೆಗಂ

ಪಾಂ

ಡವರೆ ಪುಗೆ ಪೊಱಲ್ಗಂದೊಟ್ಟ

ಬೆಟ್ಟಾಯ್ತು ರಾಗಂ|| ೧೬ ||

ಪದ್ಯ-೧೬:ಪದವಿಭಾಗ-

ಅರ್ಥ:ಪ್ರವರತರ ಪುರಂ

ನೂಪುರಾರಾವಂ ಎತ್ತಂ ಕಿವಿಗೆ

ವರೆ (ಅತಿಶ್ರೇಷ್ಠರಾದ

ಅಂತಪುರಸ್ತ್ರೀಯರ
ಕಾಲಂದಿಗೆಯ ಧ್ವನಿಯು ಎಲ್ಲ
ಕಡೆಯಲ್ಲಿಯೂ
ಕೇಳಿಸುತ್ತಿರಲು)
ವಿಳಾಸಂ(ಸೊಗಸು) ಕಣ್ಗೆ
ಶೇಷಾಕ್ಷತೌಘ ದ್ರವಮೆ
(ಆಶೀರ್ವಾದದ ಅಕ್ಷತೆಗಳ
ಸಮೂಹವು) ತಮಗಂ ಇತ್ತ
ಅತ್ತ ಇಂಬಂ (ಸಣತೋಷ)
ಎಂಬ ಅನ್ನೆಗಂ (ಕಣ್ಣುಗಳಿಗೆ
ವೈಭವವು ತೋರಿ ಬರಲು,

ಆಶೀರ್ವಾದದ ಅಕ್ಷತೆಗಳ ಸಮೂಹವು ತಮಗೂ ಸಂತೋಷವನ್ನೂ ಕೊಟ್ಟಿತು ಎನ್ನುತ್ತಿರಲು) ಪಾಂಡವರೆ ಪುಗೆ ಪೊಂಬಿಲ್ಗೆ (ಪುರ, ನಗರ)ಅಂದು ಒಟ್ಟ ಬೆಟ್ಟಾಯ್ತು ರಾಗಂ (ಪಾಂಡವರೇ ಪುರಪ್ರವೇಶಮಾಡಲು ಅಂದು ಸಂತೋಷವು

ಬೆಟ್ಟದಷ್ಟಾಯಿತು,-
ಅತ್ಯತಿಶಯವಾಯಿತು.)

ಪದ್ಯ-೧೬:ಅರ್ಥ:
ಅತಿಶ್ರೇಷ್ಠರಾದ
ಅಂತಪುರಸ್ತ್ರೀಯರ
ಕಾಲಂದಿಗೆಯ ಧ್ವನಿಯು ಎಲ್ಲ
ಕಡೆಯಲ್ಲಿಯೂ
ಕೇಳಿಸುತ್ತಿರಲು ಕಣ್ಣುಗಳಿಗೆ
ವೈಭವವು ತೋರಿ ಬರಲು,
ಆಶೀರ್ವಾದದ ಅಕ್ಷತೆಗಳ
ಸಮೂಹವು ತಮಗೂ

ಸಂತೋಷವನ್ನೂ ಕೊಟ್ಟಿತು
ಎನ್ನುತ್ತಿರಲು ಪಾಂಡವರೇ
ಪುರಪ್ರವೇಶಮಾಡಲು ಅಂದು
ಸಂತೋಷವು
ಬೆಟ್ಟದಷ್ಟಾಯಿತು,-
ಅತ್ಯತಿಶಯವಾಯಿತು.

ವ|| ಅಂತು ಪುರುಜನಜನಿತಾಶೀರ್ವಾದಸ ಹಸ್ರಂಗಳೊಡನೆ ಸೂಸುವ ಶೇಷಾಕ್ಷತಂಗಳ ನಾನುತ್ತುಂ ಬಂದು ತತ್ಪುರಾಂಗನೆಯ

ಮುಖಸರಸಿಜಮಲರ್ದಂತೆಸೆ
ದೊಪ್ಪುವ ರಾಜಮಂದಿರಮಂ
ಪೊಕ್ಕು ಧರ್ಮನಂದನಂ
ದೇವಕೀನಂದನನೊಳ್
ಪರಮಾನಂದಂ ಬೆರಸು
ಸಾಮಂತ ಚೂಡಾಮಣಿಯ
ಪಟ್ಟಬಂಧನ
ಮಹೋತ್ಸವಮಂ
ಸಮಕೊಳಿಸಿ
ವಿಕ್ರಮಾರ್ಜುನನನಿಂತೆಂದಂ-

ವಚನ:ಪದವಿಭಾಗ-ಅರ್ಥ:ಅಂತು ಪುರುಜನ ಜನಿತಾಶೀರ್ವಾದ ಸಹಸ್ರಂಗಳೊಡನೆ (ಹಾಗೆ ಪಟ್ಟಣದ ಜನಗಳಿಂದ ಉದ್ಭವವಾದ ಆಶೀರ್ವಾದ ಸಹಸ್ರಗಳೊಡನೆ,) ಸೂಸುವ ಶೇಷಾಕ್ಷತಂಗಳನು ಆನುತ್ತುಂ ಬಂದು (ಅವರು ಚೆಲ್ಲುವ ಮಂತ್ರಾಕ್ಷತೆಗಳನ್ನೂ ತಲೆಯಲ್ಲಿ ಧರಿಸುತ್ತ ಬಂದು),

ತತ್ಪುರಾಂಗನೆಯ- ತತ್ ಪುರ ಅಂಗನೆಯ ಮುಖಸರಸಿಜಂ ಅಲರ್ದಂತೆ ಎಸೆದು ಒಪ್ಪುವ ರಾಜಮಂದಿರಮಂ ಪೊಕ್ಕು (ಆ ಪುರಸ್ತ್ರೀಯ ಮುಖಕಮಲವು ಅರಳಿದಂತೆ ಪ್ರಕಾಶಿಸುತ್ತಿರುವ ಅರಮನೆಯನ್ನು ಹೊಕ್ಕು-, ಪ್ರವೇಶೀಸಿದರು.) ಧರ್ಮನಂದನಂ ದೇವಕೀನಂದನನೊಳ್

ಪರಮಾನಂದಂ ಬೆರಸು
(ಧರ್ಮರಾಜನು ಕೃಷ್ಣನೊಡನೆ
ವಿಶೇಷ ಸಂತೋಷದಿಂದ
ಕೂಡಿ) ಸಾಮಂತ
ಚೂಡಾಮಣಿಯ
ಪಟ್ಟಬಂಧನ
ಮಹೋತ್ಸವಮಂ
ಸಮಕೊಳಿಸಿ
(ಸಾಮಂತಚೂಡಾಮಣಿಯಾ
ದ ಅರ್ಜುನನ
ಪಟ್ಟಾಭಿಷೇಕಮಹೋತ್ಸವವ

ನ್ನೇರ್ಪಡಿಸಿ)
ವಿಕ್ರಮಾರ್ಜುನನನು
ಇಂತೆಂದಂ (ಅರ್ಜುನನನ್ನು
ಕುರಿತು ಹೀಗೆಂದನು)-
ವಚನ:ಅರ್ಥ:ಹಾಗೆ
ಪಟ್ಟಣದ ಜನಗಳಿಂದ
ಉದ್ಭವವಾದ ಆಶೀರ್ವಾದ
ಸಹಸ್ರಗಳೊಡನೆ, ಅವರು
ಚೆಲ್ಲುವ ಮಂತ್ರಾಕ್ಷತೆಗಳನ್ನೂ
ತಲೆಯಲ್ಲಿ ಧರಿಸುತ್ತ ಬಂದು ಆ
ಪುರಸ್ತ್ರೀಯ ಮುಖಕಮಲವು

ಅರಳಿದಂತೆ ಪ್ರಕಾಶಿಸುತ್ತಿರುವ ಅರಮನೆಯನ್ನು ಪ್ರವೇಶೀಸಿದರು. ಧರ್ಮರಾಜನು ಕೃಷ್ಣನೊಡನೆ ವಿಶೇಷ ಸಂತೋಷದಿಂದ ಕೂಡಿ ಸಾಮಂತಚೂಡಾಮಣಿಯಾದ ಅರ್ಜುನನ ಪಟ್ಟಾಭಿಷೇಕಮಹೋತ್ಸವವ ನ್ನೇರ್ಪಡಿಸಿ ಅರ್ಜುನನನ್ನು ಕುರಿತು ಹೀಗೆಂದನು-

ಉ|| ಪ್ರಾಯದ ಪೆಂಪೆ
ಪೆಂಪೆಮಗೆ ಮೀಱಿದರಂ ತವೆ
ಕೊಂದ ಪೆಂಪು ಕ
ಟ್ಟಾಯದ ಪೆಂಪು
ಶಕ್ರನೊಡನೇಱಿದ ಪೆಂಪಿವು
ಪೆಂಪುವೆತ್ತು ನಿ|
ಟ್ಟಾಯುಗಳಾಗಿ
ನಿನ್ನೊಳಮರ್ದಿರ್ದುವು ನೀಂ
ತಲೆವೀಸದುರ್ವರಾ
ಶ್ರೀಯನಿದಾಗದೆನ್ನದೊಳಕೊ
ಳ್ ಪರಮೋತ್ಸವದಿಂ

ಗುಣಾರ್ಣವಾ|| ೧೭ ||

ಪದ್ಯ-೧೭:ಪದವಿಭಾಗ-ಅರ್ಥ:ಪ್ರಾಯದ ಪೆಂಪೆ ಪೆಂಪು (ಸಹಜವಾಗಿ ಪ್ರಾಯದ ಹಿರಿಮೆಯೇ ಹಿರಿಮೆ ಮತ್ತು ಸೊಗಸು) ಎಮಗೆ ಮೀಱಿದರಂ ತವೆ ಕೊಂದ ಪೆಂಪು (ನಮಗೆ ನಮ್ಮನ್ನು ಅತಿಕ್ರಮಿಸಿದವರನ್ನು ನಾಶವಾಗುವಂತೆ ಕೊಂದ ಹಿರಿಮೆ) ಕಟ್ಟಾಯದ ಪೆಂಪು

(ಅತ್ಯಧಿಕವಾದ ಪರಾಕ್ರಮದ ಹಿರಿಮೆ;) ಶಕ್ರನೊಡನೆ ಏಱಿದ ಪೆಂಪು (ನಿನ್ನದು ಇಂದ್ರನೊಡನೆ ಅವನ ಅರ್ಧಾಸನವನ್ನು ಹತ್ತಿದ ವೈಭವ) ಇವು ಪೆಂಪುವೆತ್ತು ನಿಟ್ಟಾಯುಗಳಾಗಿ ನಿನ್ನೊಳು ಅಮರ್ದುರ್ಱ ಇರ್ದುರ್ಱವು (ಇವು ಆಧಿಕ್ಯವನ್ನು ಹೊಂದಿ ದೀರ್ಘಾಯುವಾಗಿ ನಿನ್ನಲ್ಲಿ ಸೇರಿಕೊಂಡು ಇದ್ದವು.) ನೀಂ

ತಲೆವೀಸದೆ (ನೀನು
ತಲೆಬೀಸದೆ
(ಅಸಮ್ಮತಿಯನ್ನುಪ್ರದರ್ಶಿಸದೆ
)) ಉರ್ವರಾಶ್ರೀಯಂ
ಇದಾಗದು ಎನ್ನದೆ (ಇದು
ನನ್ನಿಂದಾಗುವುದಿಲ್ಲ ಎನ್ನದೆ ಈ
ರಾಜ್ಯಸಂಪತ್ತನ್ನು) ಒಳಕೊಳ್
ಪರಮ ಉತ್ಸವದಿಂ
ಗುಣಾರ್ಣವಾ (ಅತ್ಯಂತ
ಸಂತೋಷದಿಂದ ನೀನು
ಅಂಗೀಕರಾಮಾಡು.)

ಪದ್ಯ-೧೭:ಅರ್ಥ:

ಗುಣಾರ್ಣವಾ, ಜಗತ್ತಿನಲ್ಲಿ ಸಹಜವಾಗಿ ಪ್ರಾಯದ ಹಿರಿಮೆಯೇ ಹಿರಿಮೆ; ಆದರೆ ನಮಗೆ ನಮ್ಮನ್ನು ಅತಿಕ್ರಮಿಸಿದವರನ್ನು ನಾಶವಾಗುವಂತೆ ಕೊಂದ ಹಿರಿಮೆ; ಅತ್ಯಧಿಕವಾದ ಪರಾಕ್ರಮದ ಹಿರಿಮೆ; ನಿನ್ನದು ಇಂದ್ರನೊಡನೆ ಅವನ ಅರ್ಧಾಸನವನ್ನು ಹತ್ತಿದ

ವೈಭವ. ಇವು ಆಧಿಕ್ಯವನ್ನು ಹೊಂದಿ ದೀರ್ಘಾಯುವಾಗಿ ನಿನ್ನಲ್ಲಿ ಸೇರಿಕೊಂಡು ಇದ್ದವು. ಅರ್ಜುನ, ನೀನು ತಲೆಬೀಸದೆ (ಅಸಮ್ಮತಿಯನ್ನುಪ್ರದರ್ಶಿಸದೆ) ಇದು ನನ್ನಿಂದಾಗುವುದಿಲ್ಲ ಎನ್ನದೆ ಈ ರಾಜ್ಯಸಂಪತ್ತನ್ನು ಅತ್ಯಂತ ಸಂತೋಷದಿಂದ ನೀನು ಅಂಗೀಕರಾಮಾಡು.

ವ|| ಎಂದು ಧರ್ಮಪುತ್ರನುಂ ದೇವಕೀಪುತ್ರನುಂ

ಮರುತ್ಪುತ್ರನುಮಮರೇಂದ್ರ
ಪುತ್ರನನೆಂತಾನುಮೊಡಂಬಡಿ
ಸಿ ನಾಳೆ
ಪಟ್ಟಬದ್ಧೋತ್ಸವಮೆಂದು
ಮುನ್ನಿನ ದಿವಸಂ ಮಯನಿಂ
ಪಂಚರತ್ನಮಯಮಾದ
ಸಭಾಮಂಟಪಮಂ ತರಿಸಿ
ವಸಿಷ್ಠ ಕಶ್ಯಪ ವ್ಯಾಸ
ವಿಶ್ವಾಮಿತ್ರ ಭರದ್ವಾಜಾದಿ
ಮುನಿಪತಿಗಳಂ ಬರಿಸಿ
ಮಾತಳಿಯ ಕೆಯ್ಯೊಳ್

ದೇವೇಂದ್ರನಟ್ಟಿದ ಕಲ್ಪವೃಕ್ಷದ
ತಳಿರ್ಗಳನೈರಾವತದ
ಹರವೃಷಭದ ಕೋಡ
ಮಣ್ಣುಮನಾಕಾಶಗಂಗೆಯ
ನೀರುಮಂ
ಮಂದಾರಪಾರಿಜಾತದ
ಪೂಮಾಲೆಗಳುಮಂ
ವರುಣದೇವನಟ್ಟಿದ
ಕ್ಷಾರಕ್ಷೀರೇಕ್ಷುದಮಧುಘೃತಸ್ವಾ
ದೂದಕಂಗಳೆಂಬೇೞುಂ
ಸಮುದ್ರಂಗಳ ಚತುರ್ದಶ

ಮಹಾನದಿಗಳ ನೀರುಮಂ
ತಱಿತಱಿ ತೊಳಗುವ ಕಳಧೌತ
ಕಳಶಂಗಳೊಳ್ ತೆಕ್ಕನೆ ತೀವಿ
ತಂದ ವಾರವನಿತಾಜನಕ್ಕಂ
ಸಾಮಂತಚಕ್ರಕ್ಕಮುಡಲಿಕ್ಕಿ
ಧವಳಚ್ಛತ್ರ
ಚಾಮರಸಿಂಹಾಸನ
ಪಟ್ಟವರ್ಧನಕುಲಧನಾದಿ
ರಾಜ್ಯಚಿಹ್ನಂಗಳಂ ವಿವಿಧ
ವಿಧಾನದಿಂದಮವಾಸಿಸಿ
ಗಂಗಾಜಳಪವಿತ್ರೀಕೃತಗಾತ್ರ

ನುಂ ಕೌಶೇಯ
ಪರಿಧಾನನುಮಾಗಿರ್ದ
ಮಾನನಿಧಾನನಂ ತಂದು
ಪೊಡೆವಡಿಸಿ
ಮಂಗಳಪಟಹಂಗಳುಂ
ಮಂಗಳಗೀತಿಗಳುಮೆಸೆಯೆ
ಕಳಕಳಾವರ್ತಮಾಗೆ
ಜಾಗರಮಿರ್ದು ಮಱುದಿವಸಂ
ಪ್ರಶಸ್ತ ಮೌಹೂರ್ತಿಕ
ನಿರೂಪಿತ ಶುಭ ಲಗ್ನೋದಯ
ದಿಂದಷ್ಟೋತ್ತರಶತ

ಪೂರ್ಣಕುಂಭಂಗಳಂ

ಚತುರ್ವೇದ ಪಾರಗರಪ್ಪ

ಧರಾಮರರೆತ್ತಿಕೊಂಡು

ಮಂತ್ರಪೂತ ಜಲಂಗಳಿಂ

ಮೀಯಿಸಿ-

ವಚನ:ಪದವಿಭಾಗ-

ಅರ್ಥ:ಎಂದು

ಧರ್ಮಪುತ್ರನುಂ

ದೇವಕೀಪುತ್ರನುಂ

ಮರುತ್ಪುತ್ರನುಂ ಅಮರೇಂದ್ರ

ಪುತ್ರನನು ಎಂತಾನುಂ

ಒಡಂಬಡಿಸಿ (ಎಂದು
ಧರ್ಮರಾಯನೂ ಕೃಷ್ಣನೂ
ಭೀಮನೂ ಅರ್ಜುನನ್ನು
ಹೇಗೂ ಒಪ್ಪಿಸಿದರು) ನಾಳೆ
ಪಟ್ಟಬದ್ಧೋತ್ಸವಮೆಂದು
ಮುನ್ನಿನ ದಿವಸಂ ಮಯನಿಂ
ಪಂಚರತ್ನಮಯಮಾದ
ಸಭಾಮಂಟಪಮಂ ತರಿಸಿ
(ನಾಳೆಯೇ ಪಟ್ಟವನ್ನು ಕಟ್ಟುವ
ದಿವಸವೆಂದು
ದಾನವಲೋಕದ ಶಿಲ್ಪಿಯಾದ

ಮಯನೆಂಬುವನಿಂದ
ಪಂಚರತ್ನಮಯವಾದ
ಸಭಾಮಂಟಪವನ್ನು
ತರಿಸಿದರು.) ವಸಿಷ್ಠ ಕಶ್ಯಪ
ವ್ಯಾಸ ವಿಶ್ವಾಮಿತ್ರ
ಭರದ್ವಾಜಾದಿ ಮುನಿಪತಿಗಳಂ
ಬರಿಸಿ ಮಾತಳಿಯ ಕೆಯ್ಯೊಳ್
ದೇವೇಂದ್ರನು ಅಟ್ಟಿದ
ಕಲ್ಪವೃಕ್ಷದ ತಳಿರ್ಗಳನು
ಐರಾವತದ ಹರವೃಷಭದ
ಕೋಡ ಮಣ್ಣುಮನು

(ಮಾತಲಿಯ ಕಯ್ಯಲ್ಲಿ
ದೇವೇಂದ್ರನು ಕಲ್ಪವೃಕ್ಷದ
ಚಿಗುರುಗಳನ್ನೂ
ಐರಾವತವೆಂಬಾನೆಯೂ
ಈಶ್ವರನ ನಂದಿಯೂ
ಕೊಂಬಿನಿಂದ ಎಬ್ಬಿಸಿದ
ಮಣ್ಣನ್ನೂ) ಆಕಾಶಗಂಗೆಯ
ನೀರುಮಂ ಮಂದಾರ
ಪಾರಿಜಾತದ
ಪೂಮಾಲೆಗಳುಮಂ
(ಆಕಾಶಗಂಗೆಯ ನೀರನ್ನು

ನಮೇರು ಮಂದಾರ
ಪಾರಿಜಾತಗಳೆಂಬ
ದೇವಲೋಕದ ಮರಗಳ
ಹೂವುಗಳಿಂದ ಕೂಡಿದ
ನೀರುಗಳನ್ನೂ
ಕಳುಹಿಸಿಕೊಟ್ಟನು.)
ವರುಣದೇವನು ಅಟ್ಟಿದ ಕ್ಷಾರ
ಕ್ಷೀರ ಇಕ್ಷುದ ಮಧು ಘೃತ
ಸ್ವಾದ ಉದಕಂಗಳೆಂಬ
ಏಳುಂ ಸಮುದ್ರಂಗಳ
ಚತುರ್ದಶ ಮಹಾನದಿಗಳ

ನೀರುಮಂ (ವರುಣದೇವನು ಉಪ್ಪು, ಹಾಲು, ಕಬ್ಬಿನ ರಸ, ಮೊಸರು, ಜೇನು, ತುಪ್ಪ, ಸಿಹಿನೀರುಗಳ ಏಳು ಸಮುದ್ರಗಳ ಮತ್ತು ಹದಿನಾಲ್ಕು ಮಹಾನದಿಗಳ ಪುಣ್ಯತೀರ್ಥವನ್ನು ಕಳುಹಿಸಿಕಟ್ಟನು.) ತಱತಱ ತೊಳಗುವ ಕಳಧೌತ ಕಳಶಂಗಳೊಳ್ ತೆಕ್ಕನೆ ತೀವಿ ತಂದ ವಾರ ವನಿತಾ ಜನಕ್ಕಂ

ಸಾಮಂತ ಚಕ್ರಕ್ಕಂ ಉಡಲು
ಇಕ್ಕಿ (ಥಳಥಳನೆ ಹೊಳೆಯುವ
ಸ್ವಚ್ಛವಾದ ಬಿಳಿಯ
ಕೊಡಗಳಲ್ಲಿ ತುಂಬಿ
ತಂದಿರುವ
ವೇಶ್ಯಾಸ್ತ್ರೀಯರಿಗೂ
ಸಾಮಂತರಾಜಸಮೂಹಕ್ಕೂ
ಉಡುಗೊರೆಯನ್ನು ಕೊಟ್ಟನು.
) ಧವಳಚ್ಛತ್ರ ಚಾಮರ
ಸಿಂಹಾಸನ ಪಟ್ಟವರ್ಧನ ಕುಲ
ಧನಾದಿ ರಾಜ್ಯಚಿಹ್ನಂಗಳಂ

ವಿವಿಧ ವಿಧಾನದಿಂದಂ ಆವಾಸಿಸಿ (ಶ್ವೇತಚ್ಛತ್ರ (ಬಿಳಿಯ ಕೊಡೆ) ಚಾಮರ, ಸಿಂಹಾಸನ, ಪಟ್ಟದಾನೆ, ಕುಲಧನವೇ ಮೊದಲಾದ ರಾಜ್ಯಚಿಹ್ನೆಗಳನ್ನು ಬೇರೆ ಬೇರೆ ರೀತಿಯಿಂದ ಪ್ರತಿಷ್ಠೆ ಮಾಡಿಸಿದನು.) ಗಂಗಾಜಳ ಪವಿತ್ರೀಕೃತಗಾತ್ರನುಂ ಕೌಶೇಯ ಪರಿಧಾನನುಂ ಆಗಿರ್ದ ಮಾನನಿಧಾನನಂ

ತಂದು ಪೊಡೆವಡಿಸಿ
(ಗಂಗಾಜಲದಿಂದ
ಪವಿತ್ರವನ್ನಾಗಿ ಮಾಡಲ್ಪಟ್ಟ
ಶರೀರವುಳ್ಳವನೂ ರೇಷ್ಮೆಯ
ವಸ್ತ್ರದ ಹೊದಿಕೆಯುಳ್ಳವನೂ
ಆದ ಅರ್ಜುನನನ್ನು
ನಮಸ್ಕಾರಮಾಡಿಸಿ)ಮಂಗಳ
ಪಟಹಂಗಳುಂ
ಮಂಗಳಗೀತಿಗಳುಂ ಎಸೆಯೆ
ಕಳಕಳಾವರ್ತಮಾಗೆ
(ಮಂಗಳವಾದ್ಯಗಳೂ

ಮಂಗಳಗೀತೆಗಳೂ
ಪ್ರಕಾಶಿಸುತ್ತಿರಲು
ಕಳಕಳಧ್ವನಿಯಿಂದ
ಆವರಿಸಲ್ಪಟ್ಟು)
ಜಾಗರಮಿರ್ದು
(ಜಾಗರಣೆಯಿರಿಸಿದನು.)
ಮಱುದಿವಸಂ ಪ್ರಶಸ್ತ
ಮೌಹೂರ್ತಿಕ ನಿರೂಪಿತ ಶುಭ
ಲಗ್ನೋದಯದಿಂದ
(ಮಾರನೆಯ ದಿವಸ
ಪ್ರಶಸ್ತವಾದ ಜೋಯಿಸರಿಂದ

ನಿಷ್ಕರ್ಷಿಸಲ್ಪಟ್ಟ
ಶುಭಮುಹೂರ್ತದಲ್ಲಿ)
ಅಷ್ಟೋತ್ತರಶತ
ಪೂರ್ಣಕುಂಭಂಗಳಂ
ಚತುರ್ವೇದ ಪಾರಗರಪ್ಪ
ಧರಾಮರರು ಎತ್ತಿಕೊಂಡು
ಮಂತ್ರಪೂತ ಜಲಂಗಳಿಂ
ಮೀಯಿಸಿ (ನೂರೆಂಟು
ಪೂರ್ಣಕುಂಭಗಳನ್ನು ನಾಲ್ಕು
ವೇದಗಳಲ್ಲಿಯೂ
ಪಂಡಿತರಾದ ಬ್ರಾಹ್ಮಣರು

ಎತ್ತಿಕೊಂಡು
ಮಂತ್ರಪೂತವಾದ ನೀರಿನಿಂದ
ಸ್ನಾನಮಾಡಿಸಿದರು.)-
ವಚನ:ಅರ್ಥ:ವ|| ಎಂದು
ಧರ್ಮರಾಯನೂ ಕೃಷ್ಣನೂ
ಭೀಮನೂ ಅರ್ಜುನನ್ನು
ಹೇಗೂ ಒಪ್ಪಿಸಿದರು.
ನಾಳೆಯೇ ಪಟ್ಟವನ್ನು ಕಟ್ಟುವ
ದಿವಸವೆಂದು
ದಾನವಲೋಕದ ಶಿಲ್ಪಿಯಾದ
ಮಯನೆಂಬುವನಿಂದ

ಪಂಚರತ್ನಮಯವಾದ ಸಭಾಮಂಟಪವನ್ನು ತರಿಸಿದರು. ವಸಿಷ್ಠ, ಕಶ್ಯಪ, ವ್ಯಾಸ, ವಿಶ್ವಾಮಿತ್ರ, ಭಾರದ್ವಾಜರೇ ಮೊದಲಾದ ಋಷಿಶ್ರೇಷ್ಠರನ್ನು ಬರಮಾಡಿದರು. ಮಾತಲಿಯ ಕಯ್ಯಲ್ಲಿ ದೇವೇಂದ್ರನು ಕಲ್ಪವೃಕ್ಷದ ಚಿಗುರುಗಳನ್ನೂ ಐರಾವತವೆಂಬಾನೆಯೂ ಈಶ್ವರನ ನಂದಿಯೂ

ಕೊಂಬಿನಿಂದ ಎಬ್ಬಿಸಿದ ಮಣ್ಣನ್ನೂ ಆಕಾಶಗಂಗೆಯ ನೀರನ್ನು ನಮೇರು ಮಂದಾರ ಪಾರಿಜಾತಗಳೆಂಬ ದೇವಲೋಕದ ಮರಗಳ ಹೂವುಗಳಿಂದ ಕೂಡಿದ ನೀರುಗಳನ್ನೂ ಕಳುಹಿಸಿಕೊಟ್ಟನು. ವರುಣದೇವನು ಉಪ್ಪು, ಹಾಲು, ಕಬ್ಬಿನ ರಸ, ಮೊಸರು, ಜೇನು, ತುಪ್ಪ, ಸಿಹಿನೀರುಗಳ

ಏಳು ಸಮುದ್ರಗಳ ಮತ್ತು ಹದಿನಾಲ್ಕು ಮಹಾನದಿಗಳ ಪುಣ್ಯತೀರ್ಥವನ್ನು ಕಳುಹಿಸಿಕಟ್ಟನು. ಅವನ್ನು ಥಳಥಳನೆ ಹೊಳೆಯುವ ಸ್ವಚ್ಛವಾದ ಬಿಳಿಯ ಕೊಡಗಳಲ್ಲಿ ತುಂಬಿ ತಂದಿರುವ ವೇಶ್ಯಾಸ್ತ್ರೀಯರಿಗೂ ಸಾಮಂತರಾಜಸಮೂಹಕ್ಕೂ ಉಡುಗೊರೆಯನ್ನು ಕೊಟ್ಟನು.

ಶ್ವೇತಚ್ಛತ್ರ (ಬಿಳಿಯ ಕೊಡೆ) ಚಾಮರ, ಸಿಂಹಾಸನ, ಪಟ್ಟದಾನೆ, ಕುಲಧನವೇ ಮೊದಲಾದ ರಾಜ್ಯಚಿಹ್ನೆಗಳನ್ನು ಬೇರೆ ಬೇರೆ ರೀತಿಯಿಂದ ಪ್ರತಿಷ್ಠೆ ಮಾಡಿಸಿದನು. ಗಂಗಾಜಲದಿಂದ ಪವಿತ್ರವನ್ನಾಗಿ ಮಾಡಲ್ಪಟ್ಟ ಶರೀರವುಳ್ಳವನೂ ರೇಷ್ಮೆಯ ವಸ್ತ್ರದ ಹೊದಿಕೆಯುಳ್ಳವನೂ

ಆದ ಅರ್ಜುನನನ್ನು
ನಮಸ್ಕಾರಮಾಡಿಸಿ
ಮಂಗಳವಾದ್ಯಗಳೂ
ಮಂಗಳಗೀತೆಗಳೂ
ಪ್ರಕಾಶಿಸುತ್ತಿರಲು
ಕಳಕಳಧ್ವನಿಯಿಂದ
ಆವರಿಸಲ್ಪಟ್ಟು
ಜಾಗರಣೆಯಿರಿಸಿದನು.
ಮಾರನೆಯ ದಿವಸ
ಪ್ರಶಸ್ತವಾದ ಜೋಯಿಸರಿಂದ
ನಿಷ್ಕರ್ಷಿಸಲ್ಪಟ್ಟ

ಶುಭಮುಹೂರ್ತದಲ್ಲಿ ನೂರೆಂಟು ಪೂರ್ಣಕುಂಭಗಳನ್ನು ನಾಲ್ಕು ವೇದಗಳಲ್ಲಿಯೂ ಪಂಡಿತರಾದ ಬ್ರಾಹ್ಮಣರು ಎತ್ತಿಕೊಂಡು ಮಂತ್ರಪೂತವಾದ ನೀರಿನಿಂದ ಸ್ನಾನಮಾಡಿಸಿದರು.

ಚಂ|| ಸ್ರ|| ವನಧಿಪ್ರಧ್ವಾನದಿಂ ಮಂಗಳಪಹರವಂ ಪೆರ್ಚೆ ಮಾಂಗಲ್ಯಗೇಯ

ಧ್ವನಿಯಿಂದಾಶಾಂತರಂ
ಘೂರ್ಣಿಸಿ ಸೊಗಯಿಸೆ
ಕೆಯ್ಗೆಯ್ದು ಸಾಮಂತ ಸೀಮಂ|
ತಿನಿಯರ್ ಮುಂದಾಡೆ
ಭೋರೆಂದೆಸೆಯೆ
ಜಯಜಯಧ್ವಾನಮೋರಂತೆ
ವಾರಾಂ
ಗನೆಯರ್ ವಂದಾಡೆ ಸಂದೀ
ವಿಭವದೊಳರಿಗಂಗಾಯ್ತು
ರಾಜ್ಯಾಭಿಷೇಕಂ|| ೧೮

ಪದ್ಯ-೧೮:ಪದವಿಭಾಗ-ಅರ್ಥ:ವನಧಿಪ್ರಧ್ವಾನದಿಂ ಮಂಗಳಪಹ ರವಂ ಪೆರ್ಚೆ (ಸಮುದ್ರಘೋಷದಂತೆ ಮಂಗಳವಾದ್ಯ ಧ್ವನಿಯು ಹೆಚ್ಚಲು,) ಮಾಂಗಲ್ಯಗೇಯ ಧ್ವನಿಯಿಂದ ಆಶಾಂತರಂ ಘೂರ್ಣಿಸಿ ಸೊಗಯಿಸೆ (ಮಂಗಳಗೀತೆಗಳ ಧ್ವನಿಯಿಂದ ದಿಕ್ಕುಗಳ ಒಳಭಾಗವೆಲ್ಲ ಶಬ್ದಮಾಡಿ

ಸೊಗಯಿಸಲು,) ಕೆಯ್ಗೆಯ್ದು
ಸಾಮಂತ ಸೀಮಂತಿನಿಯರ್
ಮುಂದೆ ಆಡೆ (ಅಲಂಕರಾರ
ಮಾಡಿಕೊಂಡಿರುವ
ಸಾಮಂತರಾಜರ ಸ್ತ್ರೀಯರು
ಮುಂಭಾಗದಲ್ಲಿ
ನೃತ್ಯವಾಡಲು,) ಭೋರೆಂದು
ಎಸೆಯೆ ಜಯಜಯಧ್ವಾನಂ
ಓರಂತೆ,
(ಜಯಜಯಧ್ವನಿಯು ಒಂದೇ
ಸಮನಾಗಿ ಭೋರೆಂದು

ಧ್ವನಿಮಾಡುತ್ತಿರಲು)
ವಾರಾಂಗನೆಯರ್ ವಂದು
ಆಡೆ (ವೇಶ್ಯಾಸ್ತ್ರೀಯರು
ಬಂದು ನೃತ್ಯವಾಡಲು,) ಸಂದ
ಈ ವಿಭವದೊಳು ಅರಿಗಂಗೆ
ಆಯ್ತು ರಾಜ್ಯಾಭಿಷೇಕಂ
(ಹೀಗೆ ನೆಡೆದ ಈ ವೈಭವದಲ್ಲಿ
ಅರಿಗನಿಗೆ (ಅರ್ಜುನನಿಗೆ)
ರಾಜ್ಯಾಭಿಷೇಕವಾಯಿತು.)

ಪದ್ಯ-೧೮:ಅರ್ಥ:
ಸಮುದ್ರಘೋಷದಂತೆ

ಮಂಗಳವಾದ್ಯ ಧ್ವನಿಯು
ಹೆಚ್ಚಲು, ಮಂಗಳಗೀತೆಗಳ
ಧ್ವನಿಯಿಂದ ದಿಕ್ಕುಗಳ
ಒಳಭಾಗವೆಲ್ಲ ಶಬ್ದಮಾಡಿ
ಸೊಗಯಿಸಲು, ಅಲಂಕರಾರ
ಮಾಡಿಕೊಂಡಿರುವ
ಸಾಮಂತರಾಜರ ಸ್ತ್ರೀಯರು
ಮುಂಭಾಗದಲ್ಲಿ ನೃತ್ಯವಾಡಲು,
ಜಯಜಯಧ್ವನಿಯು ಒಂದೇ
ಸಮನಾಗಿ ಭೋರೆಂದು
ಧ್ವನಿಮಾಡುತ್ತಿರಲು

ವೇಶ್ಯಾಸ್ತ್ರೀಯರು ಬಂದು ನೃತ್ಯವಾಡಲು, ಹೀಗೆ ನೆಡೆದ ಈ ವೈಭವದಲ್ಲಿ ಅರಿಗನಿಗೆ (ಅರ್ಜುನನಿಗೆ) ರಾಜ್ಯಾಭಿಷೇಕವಾಯಿತು.

ವ|| ಆಗಳ್ ರಾಜ್ಯಾಭಿಷೇಕದ ನಂತರದೊಳ್ ಧರ್ಮನಂದನಂ ವಾಯುನಂದನಂ ದೇವಕೀನಂದನನಶ್ವಿನೀನಂದ ನರಯ್ವರುಮನೇಕ

ಮಂಗಳಾಭರಣಾಳಂಕೃತಶರೀ
ರರರಿಕೇಸರಿಯಂ
ಕೇಸರಿವಿಷ್ಟರದೊಳ್ ಕುಳ್ಳಿರಿಸಿ
ಪಂಚರತ್ನಶಿಖಾವಿರಾಜಮಾನ
ಮಪ್ಪ ಪಟ್ಟಮನೆತ್ತಿ ಯಾದವ
ವಂಶಸಂಭೂತೆಯುಮನೇಕಲ
ಕ್ಷಣೋಪೇತೆಯುಮಪ್ಪ
ಸುಭದ್ರೆಗೆ
ಮಹಾದೇವಿವಟ್ಟಮಂ
ಕಟ್ಟಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್

ರಾಜ್ಯಾಭಿಷೇಕದ

ನಂತರದೊಳ್

ಧರ್ಮನಂದನಂ

ವಾಯುನಂದನಂ

ದೇವಕೀನಂದನಂ

ಅಶ್ವಿನೀನಂದನರ್

ಅಯ್ವರುಮ್

(ರಾಜ್ಯಾಭಿಷೇಕವಾದ ಮೇಲೆ

ಧರ್ಮರಾಯನೂ ಭೀಮ ಕೃಷ್ಣ

ನಕುಲಸಹದೇವರೇ
ಮೊದಲಾದ ಅಯ್ದುಜನರೂ)
ಅನೇಕ ಮಂಗಳಾಭರಣ
ಅಳಂಕೃತಶರೀರ
ಅರಿಕೇಸರಿಯಂ
ಕೇಸರಿವಿಷ್ಟರದೊಳ್ ಕುಳ್ಳಿರಿಸಿ
(ಅನೇಕ ಒಡವೆಗಳಿಂದ
ಅಲಂಕಾರಮಾಡಲ್ಪಟ್ಟ
ಶರೀರರಾಗಿ ಅರಿಕೇಸರಿಯನ್ನು
ಸಿಂಹಾಸನದಲ್ಲಿ ಕುಳ್ಳಿರಿಸಿ)
ಪಂಚರತ್ನಶಿಖಾ

ವಿರಾಜಮಾನಮಪ್ಪ
ಪಟ್ಟಮನು ಎತ್ತಿ (ಅಯ್ದು
ರತ್ನಗಳಿಂದ ಖಚಿತವಾದ
ತಲೆಯ ಪಟ್ಟ
(ಶಿರಪೇಷ್)ದಿಂದ
ಪ್ರಕಾಶಮಾನವಾದ
ಪಟ್ಟವಸ್ತ್ರವನ್ನು ಕಟ್ಟಿ)
ಯಾದವ
ವಂಶಸಂಭೂತೆಯುಂ ಅನೇಕ
ಲಕ್ಷಣೋಪೇತೆಯುಮಪ್ಪ
ಸುಭದ್ರೆಗೆ

ಮಹಾದೇವಿವಟ್ಟಮಂ
ಕಟ್ಟಿದಾಗಳ್
(ಯಾವದವಂಶದಲ್ಲಿ
ಹುಟ್ಟಿದವಳೂ ಅನೇಕ
ಲಕ್ಷಣಗಳಿಂದ ಕೂಡಿದವಳೂ
ಆದ ಸುಭದ್ರೆಗೆ
ಮಹಾರಾಣಿಯ ಪಟ್ಟವನ್ನು
ಕಟ್ಟಿದರು.)
ವಚನ:ಅರ್ಥ:ರಾಜ್ಯಾಭಿಷೇಕ
ವಾದ ಮೇಲೆ
ಧರ್ಮರಾಯನೂ ಭೀಮ ಕೃಷ್ಣ

ನಕುಲಸಹದೇವರೇ

ಮೊದಲಾದ ಅಯ್ದುಜನರೂ

ಅನೇಕ ಒಡವೆಗಳಿಂದ

ಅಲಂಕಾರಮಾಡಲ್ಪಟ್ಟ

ಶರೀರರಾಗಿ ಅರಿಕೇಸರಿಯನ್ನು

ಸಿಂಹಾಸನದಲ್ಲಿ ಕುಳ್ಳಿರಿಸಿ,

ಅಯ್ದು ರತ್ನಗಳಿಂದ

ಖಚಿತವಾದ ತಲೆಯ ಪಟ್ಟ

(ಶಿರಪೇಷ್)ದಿಂದ

ಪ್ರಕಾಶಮಾನವಾದ

ಪಟ್ಟವಸ್ತ್ರವನ್ನು ಕಟ್ಟಿ,

ಯಾವದವಂಶದಲ್ಲಿ ಹುಟ್ಟಿದವಳೂ ಅನೇಕ ಲಕ್ಷಣಗಳಿಂದ ಕೂಡಿದವಳೂ ಆದ ಸುಭದ್ರೆಗೆ ಮಹಾರಾಣಿಯ ಪಟ್ಟವನ್ನು ಕಟ್ಟಿದರು.

- **ಟಿಪ್ಪಣಿ**::- ಇಲ್ಲಿ ದ್ರೌಪದಿಯ ಸುದ್ದಿ ಇಲ್ಲ. ಅರ್ಜುನನ ಆಪ್ತ ಶ್ರೀಕೃಷ್ಣನ ಸೋದರಿಗೆ ಪಟ್ಟಮಹಿಷಿ ಸ್ಥಾನ..

ಚಂ|| ನೆಗಳ್ದುದು
ದೇವದುಂದುಭಿರವಂ
ಸುರನಂದನದಿಂ ಪೊದಟ್ದಿ ಬ
ಲ್ಮುಗುಳ್ಗಳ ತಂದಲಂದು
ಕವಿತಂದುದದಂ ತನಿಸೋಂಕು
ಸೋಂಕಿ ಮೆ|
ಲ್ಲಗೆ ಮಲಯಾನಿಳಂ
ಸುೞಿದೊಡಂದು ಜಗಂ
ಪೊಸತಾದುದೆಂದೊಡೇ
ವೊಗಳ್ವುದೊ
ಪಟ್ಟಬಂಧನಮಹೋತ್ಸವ

ಮಂ ಜಗದೇಖಮಲ್ಲನಾ|| ೧೯ ||

ಪದ್ಯ-೧೯:ಪದವಿಭಾಗ-ಅರ್ಥ:ನೆಗಳ್ದುದು ದೇವದುಂದುಭಿರವಂ (ದೇವ ದುಂದುಭಿಯ ಅದ್ದು ಆಯಿತು.) ಸುರ ನಂದನದಿಂ ಪೊದಟ್ದಿ ಬಲ್ಮು ಗುಳ್ಗಳ ತಂದಲ್ ಅಂದು ಕವಿತಂದುದು (ದೇವತೆಗಳ ತೋಟದಿಂದ ವ್ಯಾಪಿಸಿದ ದೊಡ್ಡ ಹೂಗಳ

ತುಂತುರುಮಳೆ ಅಂದು
ಮುಚ್ಚುವಂತೆ ಸುರಿಯಿತು.
(ಪುಷ್ಪವೃಷ್ಟಿಯಾಯಿತು))
ಅದಂ ತನಿಸೋಂಕು ಸೋಂಕಿ
ಮೆಲ್ಲಗೆ ಮಲಯಾನಿಳಂ
ಸುೞಿದೊಡೆ (ಅದರ
ಇಂಪಾದ ಸ್ಪರ್ಶದಿಂದ
ನಿಧಾನವಾಗಿ
ಮಲಯಮಾರುತವು
ಸುಳಿದಾಡಿದರೆ,ಸುಳಿದಾಡಿದಾ
ಗ,) ಅಂದು ಜಗಂ ಪೊಸತು

ಆದುದು ಎಂದೊಡೆ (ಆ ದಿನ ಲೋಕವೇ ಹೊಸತಾಯಿತು ಎಂದರೆ) ಎವ್ರೊಗೆಬ್ಬ್ವುದೊ ಪಟ್ಟಬಂಧನ ಮಹೋತ್ಸವಮಂ ಜಗದೇಖಮಲ್ಲನಾ (ಜಗದೇಕಮಲ್ಲನಾದ ಅರ್ಜುನನ ಪಟ್ಟಬಂಧ ಮಹೋತ್ಸವವನ್ನು ಏನೆಂದು ಹೊಗಳುವುದೊ!)

ಪದ್ಯ-೧೯:ಅರ್ಥ: ದೇವ ದುಂದುಭಿಯ ಅದ್ದು ಆಯಿತು. ದೇವತೆಗಳ ತೋಟದಿಂದ ವ್ಯಾಪಿಸಿದ ದೊಡ್ಡ ಹೂಗಳ ತುಂತುರುಮಳೆ ಅಂದು ಮುಚ್ಚುವಂತೆ ಸುರಿಯಿತು. (ಪುಷ್ಪವೃಷ್ಟಿಯಾಯಿತು) ಅದರ ಇಂಪಾದ ಸ್ಪರ್ಶದಿಂದ ನಿಧಾನವಾಗಿ ಮಲಯಮಾರುತವು

ಸುಳಿದಾಡಿದರೆ, ಆ ದಿನ
ಲೋಕವೇ ಹೊಸತಾಯಿತು
ಎಂದರೆ ಜಗದೇಕಮಲ್ಲನಾದ
ಅರ್ಜುನನ ಪಟ್ಟಬಂಧ
ಮಹೋತ್ಸವವನ್ನು ಏನೆಂದು
ಹೊಗಳುವುದೊ!

ಮುತ್ತಿನ ಪಚ್ಚೆ ಮಾಣಿಕದ
ವಜ್ರದ ಕೇಟಿಯೊಳೊಂದಿ
ಸಾಂದಿನೊಳ್
ಕತ್ತುರಿಯೊಂದು
ಕೋಳ್ಗೆಸರೊಳೋಕುಳಿ

ಚಂದನಗಂಧವಾರಿಯೊಳ್|

ಸುತ್ತಲುಮಟ್ಟಿಱಿಂ ಪಡೆವ

ಗೇಯದ

ಪೆಂಪಿನಲಂಪನಾರ್ಗಮಾ

ರ್ತಿತ್ತುದು

ಪಟ್ಟಬಂಧನಮಹೋತ್ಸವಮಾ

ಪಡೆಮೆಚ್ಚೆ ಗಂಡನಾ|| ೨೦ ||

ಪದ್ಯ-೨೦:ಪದವಿಭಾಗ-

ಅರ್ಥ:ಮುತ್ತಿನ ಪಚ್ಚೆ

ಮಾಣಿಕದ ವಜ್ರದ

ಕೇಟಿಯೊಳ ಒಂದಿ (ಮುತ್ತು

ಪಚ್ಚೆ ರತ್ನ ಮತ್ತು ವಜ್ರಗಳ
ಸಾಲುಗಳಲ್ಲಿ ಸೇರಿ)
ಸಾಂದಿನೊಳ್ (ಸಾದಿ-ಗಂಧ)
ಕತ್ತುರಿಯ ಒಂದು
ಕೋಳ್ಗೆಸರೊಳ್ ಓಕುಳಿ
(ಶ್ರೀಗಂಧ ಕಸ್ತೂರಿ
ಮೊದಲಾದುವುಗಳ ಒಳ್ಳೆಯ
ಕೆಸರಿನಲ್ಲಿಯೂ
ಓಕುಳಿಯಾಡುವ)
ಚಂದನಗಂಧ ವಾರಿಯೊಳ್
(ಶ್ರೀಗಂಧದ

ಪರಿಮಳಯುಕ್ತವಾದ
ನೀರಿನಲ್ಲಿಯೂ) ಸುತ್ತಲುಂ
ಅಱ್ಕಱಿಂ ಪಡೆವ
(ಎಲ್ಲೆಡೆಯಲ್ಲಿಯೂ
ಪ್ರೀತಿಯನ್ನುಂಟುಮಾಡುವ)
ಗೇಯದ ಪೆಂಪಿನ ಅಲಂಪನು
(ಸಂಗೀತದ ವೈಭವದಿಂದ
ಕೂಡಿದ ಸಂತೋಷವನ್ನು->)
ಆರ್ಗಮ್ ಆರ್ತು ಇತ್ತುದು (
ಎಂತಹವರಿಗೂ/ ಯಾರಿಗೇ
ಆಯಿತು ಸರಿಯಾಗಿ

ಕೊಟ್ಟಿತು.) ಪಟ್ಟಬಂಧನ ಮಹೋತ್ಸವಮ್ ಆ ಪಡೆಮೆಚ್ಚೆ ಗಂಡನಾ (ಪಡೆಮೆಚ್ಚೆ ಗಂಡನಾದ ಅರ್ಜುನನ ಪಟ್ಟಬಂಧನ ಮಹೋತ್ಸವವು - ಎಂತಹವರಿಗೂ ಸಾಕಷ್ಟು ಸಂತೋಷವನ್ನು ಕೊಟ್ಟಿತು.)

ಪದ್ಯ-೨೦:ಅರ್ಥ: ೨೦. ಮುತ್ತು ಪಚ್ಚೆ ರತ್ನ ಮತ್ತು ವಜ್ರಗಳ ಸಾಲುಗಳಲ್ಲಿ ಸೇರಿ,

ಶ್ರೀಗಂಧ ಕಸ್ತೂರಿ
ಮೊದಲಾದುವುಗಳ ಒಳ್ಳೆಯ
ಕೆಸರಿನಲ್ಲಿಯೂ ಶ್ರೀಗಂಧದ
ಪರಿಮಳಯುಕ್ತವಾದ
ನೀರಿನಲ್ಲಿಯೂ
ಓಕುಳಿಯಾಡಿಸುತ್ತ
ಎಲ್ಲೆಡೆಯಲ್ಲಿಯೂ
ಪ್ರೀತಿಯನ್ನುಂಟುಮಾಡುವ
ಸಂಗೀತದ ವೈಭವದಿಂದ
ಕೂಡಿದ ಅರ್ಜುನನ
ಪಟ್ಟಬಂಧನ ಮಹೋತ್ಸವವು

ಎಂತಹವರಿಗೂ ಸಾಕಷ್ಟು ಸಂತೋಷವನ್ನು ಕೊಟ್ಟಿತು.

ವ||

ಮತ್ತಮೈರಾವಣಾನ್ವಯನುಂ ಸುರಭಿನಿಶ್ವಾಸನುಂ ಸೂಕ್ಷ್ಮಬಿಂದುರುಚಿರನುಂ ಕಾಳಿಂಗ ವನಸಂಭೂತನುಮನೇಕಲಕ್ಷಣೋಪೇತನುಮಪ್ಪ ತ್ರಿಭುವನಾಭರಣಮೆಂಬಾನೆಗಮುಭಯಕುಲ ಶುದ್ಧನುಂ

ಗುಣಶುದ್ಧನುಂ
ಗುಣಸಮುದ್ರನುಮಪ್ಪ
ಮಹಾಮಂತ್ರಿಯಭವನುಮು
ಚ್ಚೈಶ್ರೈವಾನ್ವಯ ಸಂಭವನುಂ
ಪ್ರಶಸ್ತ ಲಕ್ಷಣ ಲಕ್ಷಿತನುಮಪ್ಪ
ತ್ರಿಭುವನಿತಿಲಕಮೆಂಬ
ಕುದುರೆಗಂ ಪಟ್ಟಂಗಟ್ಟಿ
ಪುರುಷೋತ್ತಮನ ತಂಗೆಯುಂ
ತಾನುಂ
ತುಳಾಪುರುಷಮನಿರ್ದು

ಲೋಕಕ್ಕೆಲ್ಲಂ ಬಿಯಮಂ ಮೆರೆದು-

ವಚನ:ಪದವಿಭಾಗ-

ಅರ್ಥ:ಮತ್ತಮ್ ಐರಾವಣ ಅನ್ವಯನುಂ ಸುರಭಿ ನಿಶ್ವಾಸನುಂ ಸೂಕ್ಷ್ಮ ಬಿಂದು ರುಚಿರನುಂ (ಐರಾವತದ ವಂಶದಲ್ಲಿ ಹುಟ್ಟಿದುದೂ ಸುಗಂಧಯುಕ್ತವಾದ ಉಸಿರುಳ್ಳುದೂ ಸೂಕ್ಷ್ಮವಾದುದೂ ಸಣ್ಣ ಸಣ್ಣ

ಬಿಳಿಯ ಮಚ್ಚೆಗಳಿಂದ ರಮ್ಯವಾದುದೂ) ಕಾಳಿಂಗ ವನಸಂಭೂತನುಂ ಅನೇಕ ಲಕ್ಷಣೋಪೇತನುಂ ಅಪ್ಪ (ಕಳಿಂಗದೇಶದ ಅರಣ್ಯದಲ್ಲಿ ಹುಟ್ಟಿದುದೂ ಅನೇಕ ಲಕ್ಷಣಗಳಿಂದ ಕೂಡಿದುದೂ ಆಗಿರುವ,) ತ್ರಿಭುವನಾಭರಣಮೆಂಬ ಆನೆಗಂ (ತ್ರಿಭುವನಾಭರಣವೆಂಬ

ಆನೆಗೂ) ಉಭಯಕುಲ
ಶುದ್ಧನುಂ ಗುಣಶುದ್ಧನುಂ
ಗುಣಸಮುದ್ರನುಂ ಅಪ್ಪ
(ಉಭಯಕುಲಶುದ್ಧನೂ
ಗುಣಸಮುದ್ರನೂ ಆಗಿರುವ)
ಮಹಾಮಂತ್ರಿಯ ಭವನುಂ
ಉಚ್ಚೈಶ್ರ್ಯವಾನ್ವಯ
ಸಂಭವನುಂ
(ಮಹಾಮಂತ್ರಿಯ
ಮನೆಯಲ್ಲಿಯೇ ಬೆಳೆದ ಉಚ್ಚೈ
ಶ್ರವದ ವಂಶದಲ್ಲಿಯೇ

ಜನಿಸಿರುವ) ಪ್ರಶಸ್ತ ಲಕ್ಷಣ ಲಕ್ಷಿತನುಮ್ ಅಪ್ಪ (ಪ್ರಶಸ್ತವಾದ ಲಕ್ಷಣಗಳಿಂದ ಗುರುತುಮಾಡಲ್ಪಟ್ಟ) ತ್ರಿಭುವನಿತಿಲಕಮೆಂಬ ಕುದುರೆಗಂ ಪಟ್ಟಂಗಟ್ಟಿ (ತ್ರಿಭುವನತಿಲಕವೆಂಬ ಕುದುರೆಗೂ ಪಟ್ಟವನ್ನು ಕಟ್ಟಿದರು.) ಪುರುಷೋತ್ತಮನ ತಂಗೆಯುಂ ತಾನುಂ ತುಳಾಪುರುಷಮನು ಇರ್ದು (

ಕೃಷ್ಣನ ತಂಗಿಯಾದ
ಸುಭದ್ರೆಯೂ ಅರ್ಜುನನೂ
ತುಲಾಪುರಷಭಾರವಿದ್ದು (ತನ್ನ
ತೂಕದಷ್ಟು ಚಿನ್ನವನ್ನು
ತೂಕಮಾಡಿ
ದಾನಮಾಡುವುದು))
ಲೋಕಕ್ಕೆಲ್ಲಂ ಬಿಯಮಂ
ಮೆರೆದು (ಲೋಕಕ್ಕೆಲ್ಲ ತಮ್ಮ
ದಾನದ ವೈಭವವನ್ನು
ಮೆರೆದರು.)-

ವಚನ:ಅರ್ಥ:ಮತ್ತು
ಐರಾವತದ ವಂಶದಲ್ಲಿ
ಹುಟ್ಟಿದುದೂ
ಸುಗಂಧಯುಕ್ತವಾದ
ಉಸಿರುಳ್ಳುದೂ
ಸೂಕ್ಷ್ಮವಾದುದೂ ಸಣ್ಣ ಸಣ್ಣ
ಬಿಳಿಯ ಮಚ್ಚೆಗಳಿಂದ
ರಮ್ಯವಾದುದೂ
ಕಳಿಂಗದೇಶದ ಅರಣ್ಯದಲ್ಲಿ
ಹುಟ್ಟಿದುದೂ ಅನೇಕ
ಲಕ್ಷಣಗಳಿಂದ ಕೂಡಿದುದೂ

ಆಗಿರುವ
ತ್ರಿಭುವನಾಭರಣವೆಂಬ
ಆನೆಗೂ
ಉಭಯಕುಲಶುದ್ಧನೂ
ಗುಣಸಮುದ್ರನೂ ಆಗಿರುವ
ಮಹಾಮಂತ್ರಿಯ
ಮನೆಯಲ್ಲಿಯೇ ಬೆಳೆದ (?)
ಉಚ್ಚೈ ಶ್ರವದ ವಂಶದಲ್ಲಿಯೇ
ಜನಿಸಿರುವ ಪ್ರಶಸ್ತವಾದ
ಲಕ್ಷಣಗಳಿಂದ
ಗುರುತುಮಾಡಲ್ಪಟ್ಟ

ತ್ರಿಭುವನತಿಲಕವೆಂಬ ಕುದುರೆಗೂ ಪಟ್ಟವನ್ನು ಕಟ್ಟಿದರು. ಕೃಷ್ಣನ ತಂಗಿಯಾದ ಸುಭದ್ರೆಯೂ ಅರ್ಜುನನೂ ತುಲಾಪುರಷಭಾರವಿದ್ದು (ತನ್ನ ತೂಕದಷ್ಟು ಚಿನ್ನವನ್ನು ತೂಕಮಾಡಿ ದಾನಮಾಡುವುದು) ಲೋಕಕ್ಕೆಲ್ಲ ತಮ್ಮ ದಾನದ ವೈಭವವನ್ನು ಮೆರೆದರು.

ಚಂ|| ತೊರೆದುದು ಕಾಮಧೇನು

ತುಱುಗಲ್ಗೊನೆವಣ್ತುದು

ಕಲ್ಪವೃಕ್ಷಮೀ

ಶ್ವರನ

ವರಪ್ರಸಾದಮಿದಿರ್ಗೊಂಡುದು

ಸುತ್ತಿಱಿದೊಂದು ಮುತ್ತಿನಾ|

ಗರಮೆ ತೆರಳ್ದುದೆಯ್ದೆ ರಸ

ಸಿದ್ಧಿಯುಮಾಯ್ತೆನೆ

ತನ್ನನಾಸೆವ

ಟ್ಟೆರೆದವರ್ಗಿತ್ತು ಪೊಮ್ಮಯದೆ

ಮಾಡಿದನೀ ನೆಲನಂ

ಗುಣಾರ್ಣವಂ|| ೨೧ ||

ಪದ್ಯ-೨೧:ಪದವಿಭಾಗ-ಅರ್ಥ:ತೊರೆದುದು ಕಾಮಧೇನು (ಕಾಮಧೇನುವೆಂಬ ದೇವಲೋಕದ ಹಸುವು ಸೊರೆತು ಹಾಲನ್ನು ಸುರಿಸಿತು.) ತುಱುಗಲ್ ಗೊನೆವಣ್ತುದು ಕಲ್ಪವೃಕ್ಷಂ (ಕಲ್ಪವೃಕ್ಷವು ಕಿಕ್ಕಿರಿದು- ಗೊನೆ ಹಣ್ತುದು- ತುಂಬಿದ ಹಣ್ಣುಗಳಿಂದ

ಕೂಡಿದ
ಗೊನೆಯನ್ನುಳ್ಳುದಾಯಿತು)
ಈಶ್ವರನ ವರಪ್ರಸಾದಂ
ಇದಿರ್ಗೊಂಡುದು (ಈಶ್ವರನ
ವರಪ್ರಸಾದವು
ಎದಿರುಗೊಂಡಿತು.) ಸುತ್ತಿಱಿದ
ಒಂದು ಮುತ್ತಿನ ಆಗರಮೆ
ತೆರಳ್ದುದು (ಸುತ್ತಲೂ ಒಂದು
ಮುತ್ತಿನ ಮನೆಯೇ
ಆವರಿಸಿಕೊಂಡು ಚಲಿಸಿತು.)
ಎಯ್ದೆ ರಸ ಸಿದ್ಧಿಯುಂ

ಆಯ್ತನೆ ತನ್ನನು ಆಸೆವಟ್ಟ
ಎರೆದವರ್ಗೆ ಇತ್ತು (ಚೆನ್ನಾಗಿ/
ಸಂಪೂರ್ಣವಾಗಿ ರಸಸಿದ್ಧಿ
ಆಯಿತು ಎನ್ನುವ ಹಾಗೆ ತನ್ನಲ್ಲಿ
ಆಸೆಯಿಂದ ಬಂದು
ಬೇಡಿದವರಿಗೆ ಅವರ
ತೃಪ್ತ್ಯನುಸಾರವಾಗಿ
ದಾನಮಾಡಿ) ಪೊಮ್ಮಯದೆ
(ಹೊನ್ನು ಮಯವನ್ನಾಗಿ)
ಮಾಡಿದನು ಈ ನೆಲನಂ
ಗುಣಾರ್ಣವಂ (ಅರ್ಜುನನು

ಲೋಕವನ್ನೆಲ್ಲ ಸುವರ್ಣಮಯವನ್ನಾಗಿ ಮಾಡಿದನು.)

ಪದ್ಯ-೨೧:ಅರ್ಥ:
ಕಾಮಧೇನುವೆಂಬ ದೇವಲೋಕದ ಹಸುವು ಹಾಲನ್ನು ಸುರಿಸಿತು. ಕಲ್ಪವೃಕ್ಷವು ಕಿಕ್ಕಿರಿದು ತುಂಬಿದ ಹಣ್ಣುಗಳಿಂದ ಕೂಡಿದ ಗೊನೆಯನ್ನುಳ್ಳದಾಯಿತು. ಈಶ್ವರನ ವರಪ್ರಸಾದವು

ಎದಿರುಗೊಂಡಿತು. ಸುತ್ತಲೂ ಒಂದು ಮುತ್ತಿನ ಮನೆಯೇ ಆವರಿಸಿಕೊಂಡು ಚಲಿಸಿತು. ಚೆನ್ನಾಗಿ/ ಸಂಪೂರ್ಣವಾಗಿ ರಸಸಿದ್ಧಿ ಆಯಿತು ಎನ್ನುವ ಹಾಗೆ ತನ್ನಲ್ಲಿ ಆಸೆಯಿಂದ ಬಂದು ಬೇಡಿದವರಿಗೆ ಅವರ ತೃಪ್ತ್ಯನುಸಾರವಾಗಿ ದಾನಮಾಡಿ ಅರ್ಜುನನು ಲೋಕವನ್ನೆಲ್ಲ

ಸುವರ್ಣಮಯವನ್ನಾಗಿ
ಮಾಡಿದನು.

ವ|| ಅಂತು ಚಾಗಂಗೆಯ್ದು ಸಿಂಹಾಸನಮಸ್ತಕಸ್ಥಿತನುಂ ವಿರಾಜಮಾನ ಧವಳಚ್ಛತ್ರಚಾಮರ ಸಹಸ್ರಸಂಛಾದಿತನುಮಾಗಿ ವಿಕ್ರಾಂತುಂಗ ನೊಡ್ಡೋಲಗಂಗೊಟ್ಟಿರೆ-

ವಚನ:ಪದವಿಭಾಗ-

ಅರ್ಥ:ಅಂತು ಚಾಗಂ ಗೆಯ್ದು

ಸಿಂಹಾಸನ ಮಸ್ತಕಸ್ಥಿತನುಂ (ಹಾಗೆ ದಾನಮಾಡಿ ಸಿಂಹಾಸನದ ಮೇಲುಭಾಗದಲ್ಲಿ ಕುಳಿತವನೂ) ವಿರಾಜಮಾನ ಧವಳಚ್ಛತ್ರಚಾಮರ ಸಹಸ್ರ ಸಂಛಾದಿತನುಮಾಗಿ (ಹೊಳೆಯುತ್ತಿರುವ ಸಾವಿರಾರು ಬೆಳುಗೊಡೆ ಮತ್ತು ಚಾಮರಗಳಿಂದ ಮುಸುಕಲ್ಪಟ್ಟವನೂ ವಿಶೇಷ

ಪರಾಕ್ರಮಿಯೂ ಆದ)
ವಿಕ್ರಾಂತುಂಗ
ನೊಡ್ಡೋಲಗಂಗೊಟ್ಟಿರೆ
(ಅರ್ಜುನನು ಸಭಾಮಧ್ಯದಲ್ಲಿ
ಓಲಗಗೊಟ್ಟಿರಲು-)-
ವಚನ:ಅರ್ಥ:ಹಾಗೆ
ದಾನಮಾಡಿ ಸಿಂಹಾಸನದ
ಮೇಲುಭಾಗದಲ್ಲಿ
ಕುಳಿತವನೂ
ಹೊಳೆಯುತ್ತಿರುವ ಸಾವಿರಾರು
ಬೆಳುಗೊಡೆ ಮತ್ತು

ಚಾಮರಗಳಿಂದ
ಮುಸುಕಲ್ಪಟ್ಟವನೂ ವಿಶೇಷ
ಪರಾಕ್ರಮಿಯೂ ಆದ
ಅರ್ಜುನನು ಸಭಾಮಧ್ಯದಲ್ಲಿ
ಓಲಗಗೊಟ್ಟಿರಲು-

ಕಂ|| ಎಡೆಗೊಂಡಿರಿಮುತ್ಸಂಚಂ
ನುಡಿಯದಿರಿಂ ನೃಪತಿ
ನುಡಿಯಿಂ ನೀಮಿ|
ರ್ಪೆಡೆಯೊಳಿರಿಂ ನೀವಱಿವಿರ್
ಮಿಡುಕಿದೊಡೆನೆ
ಚಿತ್ರವೇತ್ರದಂಡಧರರ್ಕಳ್||

೨೨ ||

ಪದ್ಯ-೨೨:ಪದವಿಭಾಗ-ಅರ್ಥ:ಎಡೆಗೊಂಡಿರಿಂ (ನಿಮ್ಮ ನಿಮ್ಮ ಸ್ಥಳದಲ್ಲಿರಿ;) ಉತ್ಸಂಚಂ ನುಡಿಯದಿರಿಂ (ಗಟ್ಟಿಯಾಗಿ ಮಾತನಾಡಬೇಡಿ;) ನೃಪತಿ ನುಡಿಯಿಂ ನೀಂ ಇರ್ಪೆಡೆಯೊಳಿರಿಂ (ರಾಜನು ಮಾತನಾಡಿದ ಮೇಲೆ ನೀವು ಮಾತನಾಡಿ; ನೀವು ಇರುವ ಸ್ಥಳದಲ್ಲಿಯೇ ಇರಿ;) ನೀವ್

ಅಱಿವಿರ್ ಮಿಡುಕಿದೊಡೆನೆ ಚಿತ್ರವೇತ್ರ ದಂಡಧರರ್ಕಳ್ (ಅಲುಗಾಡಿದರೆ ತಕ್ಷಣವೇ ಬಗೆಬಗೆಯಾದ ಬೆತ್ತವನ್ನು ಹಿಡಿದಿರುವ ಕಟ್ಟಿಗೆಕಾರರ ಅನುಭವವು ನಿಮಗಾಗುತ್ತದೆ)

ಪದ್ಯ-೨೨:ಅರ್ಥ: ನಿಮ್ಮ ನಿಮ್ಮ ಸ್ಥಳದಲ್ಲಿರಿ; ಗಟ್ಟಿಯಾಗಿ ಮಾತನಾಡಬೇಡಿ; ರಾಜನು ಮಾತನಾಡಿದ ಮೇಲೆ ನೀವು ಮಾತನಾಡಿ; ನೀವು ಇರುವ

ಸ್ಥಳದಲ್ಲಿಯೇ ಇರಿ; ಅಲುಗಾಡಿದರೆ ತಕ್ಷಣವೇ ಬಗೆಬಗೆಯಾದ ಬೆತ್ತವನ್ನು ಹಿಡಿದಿರುವ ಕಟ್ಟಿಗೆಕಾರರ ಅನುಭವವು ನಿಮಗಾಗುತ್ತದೆ. (ಅವರ ದಂಡದ ಏಟುಗಳ ರುಚಿ ನಿಮಗೆ ಅನುಭವವಾಗುತ್ತದೆ ಎಂದಭಿಪ್ರಾಯ).

ಕಂ||ಓಳಿಕೊಳೆ ಪೊಳೆವ ಕಣ್ಗಳ್

ನೀಲಿಮವನಜಂಗಳೋಳಿ
ಕೊಳ್ಳದುವುಂ ತಾ|
ಮೋಳಿಕೊಳಲಂತೆ ಗಣಿಕೆಯ
ರೋಳಿಯೊಳೆ ಮಡಲ್ತ
ಲತೆಗಳಿರ್ಪಂತಿರ್ದರ್|| ೨೩ ||

ಪದ್ಯ-೨೩:ಪದವಿಭಾಗ-ಅರ್ಥ:ಓಳಿಕೊಳೆ ಪೊಳೆವ ಕಣ್ಗಳ್ (ವೇಶ್ಯಾಸ್ತ್ರೀಯರ ಹೊಳೆಯುವ ಕಣ್ಣುಗಳ ಸಾಲು) ನೀಲಿಮ ವನಜಂಗಳ ಓಳಿಕೊಳ್ಳದುವುಂ ತಾಂ

ಓಳಿಕೊಳಲಂತೆ (ಕನ್ನೆದಿಲೆಯ ಗುಂಪಿನಲ್ಲಿ ತಾವು ಸೇರದವುಗಳೂ ಸಾಲಿಗೆ ಸೇರುವಂತೆ) ಗಣಿಕೆಯರ ಓಳಿಯೊಳೆ (ವೇಶ್ಯಾಸ್ತ್ರೀಯರ ಸಾಲುಗಳಲ್ಲೇ) ಮಡಲ್ತ ಲತೆಗಳು ಇಂರ್ಪಣಂತೆ ಇರ್ದರ್ (ಹಬ್ಬಿದ ಬಳ್ಳಿಯಂತಿದ್ದರು - ವೇಶ್ಯಾಸ್ತ್ರೀಯರು ಹಬ್ಬಿದ ಬಳ್ಳಿಗಳಂತೆ ಇದ್ದರು.)

(ಮಡಲ್ತ -ಹಬ್ಬಿದ, ಸಾಲಿನಲ್ಲಿ ಇರುವ)

ಪದ್ಯ-೨೩:ಅರ್ಥ:
ವೇಶ್ಯಾಸ್ತ್ರೀಯರ ಹೊಳೆಯುವ ಕಣ್ಣುಗಳ ಸಾಲು, ಕನ್ನೆದಿಲೆಯ ಗುಂಪಿನಲ್ಲಿ ತಾವು ಸೇರದವುಗಳೂ ಸಾಲಿಗೆ ಸೇರುವಂತೆ ವೇಶ್ಯಾಸ್ತ್ರೀಯರ ಸಾಲುಗಳಲ್ಲಿ ವೇಶ್ಯಾಸ್ತ್ರೀಯರು ಹಬ್ಬಿದ ಬಳ್ಳಿಗಳಂತೆ ಇದ್ದರು..

ಕಂ|| ಸಾರ್ಚಿದ

ಲೋಹಾಸನದೊಳ

ಮರ್ಚಿದ ಬೊಂದರಿಗೆ

ಪೞಿಯ ಬಿತ್ತರಿಗೆ ಕರಂ|

ಪೆರ್ಚುವ ಮಹಿಮೆಯನೆಯ್ದೆ ನಿ

ಮಿರ್ಚೆ ಮಹಾ ಮಕುಟ

ಬದ್ಧರೋಳಿಯೊಳಿರ್ದರ್ ||೨೪

||

ಪದ್ಯ-೨೪:ಪದವಿಭಾಗ-

ಅರ್ಥ:ಸಾರ್ಚಿದ

ಲೋಹಾಸನದೊಳು

ಅಮರ್ಚಿದ
ಬೊಂದರಿಗೆ(ಹತ್ತಿರ ಇಟ್ಟಿರುವ
ಲೋಹಾಸನಗಳಲ್ಲಿ ಸೇರಿರುವ
ಮೆತ್ತೆಗಳು) ಪಟಿಯ ಬಿತ್ತರಿಗೆ
ಕರಂ ಪೆರ್ಚುವ
ಮಹಿಮೆಯನು ಎಯ್ದೆ
ನಿಮಿರ್ಚೆ (ಸಣ್ಣ ಹತ್ತಿಯ
ಪೀಠಗಳೂ ವಿಶೇಷ
ವೈಭವವನ್ನು ಅತಿಶಯವಾಗಿ
ಉಂಟು ಮಾಡಲು) ಮಹಾ
ಮಕುಟ ಬದ್ಧರೋಳಿಯೊಳು

ಇರ್ದರ್ (ಮಹಾರಾಜರುಗಳು ಸಾಲಾಗಿ ಇದ್ದರು.)

ಪದ್ಯ-೨೪:ಅರ್ಥ: ೨೪. ಹತ್ತಿರ ಇಟ್ಟಿರುವ ಲೋಹಾಸನಗಳಲ್ಲಿ ಸೇರಿರುವ ಮೆತ್ತೆಗಳು (ಪಟಿಯ?) ಸಣ್ಣ ಹತ್ತಿಯ ಪೀಠಗಳೂ ವಿಶೇಷ ವೈಭವವನ್ನು ಅತಿಶಯವಾಗಿ ಉಂಟು ಮಾಡಲು ಮಹಾರಾಜರುಗಳು ಸಾಲಾಗಿ ಇದ್ದರು.

ಮಗ ಮಗ ಮಗಿಸುವ ಮೃಗಮದ
ದಗರುವ ಕಪ್ಪುರದ ಕಂಪುಮಂ ಸೂಡಿದ ಬಾ|
ಸಿಗದ ಪೊಸಗಂಪನಿಂಬಾ
ಗೊಗೆದಿರೆ ಮಾಡಿದುದು ಚಾಮರರುಹಗಂಧವಹಂ|| ೨೫ ||

ಪದ್ಯ-೨೫:ಪದವಿಭಾಗ-ಅರ್ಥ:ಮಗ ಮಗ ಮಗಿಸುವ ಮೃಗಮದದ (ಸುಗಂಧವನ್ನು

ಬೀರುತ್ತಿರುವ ಕಸ್ತೂರಿಯ,) ಅಗರುವ ಕಪ್ಪುರದ ಕಂಪುಮಂ (ಅಗರು ಮತ್ತು ಪಚ್ಚಕರ್ಪೂರದ ಸುವಾಸನೆಯನ್ನೂ) ಸೂಡಿದ ಬಾಸಿಗದ ಪೊಸ ಗಂಪನು ಇಂಬಾಗಿ ಒಗೆದಿರೆ-> (ಅಲ್ಲಿ ನೆರೆದವರು ಮುಡಿದು ಕೊಂಡಿರುವ ಬಾಸಿಗದ ಹೊಸ ಸುವಾಸನೆಯನ್ನು) ಮಾಡಿದುದು ಚಾಮರರುಹ

ಗಂಧವಹಂ (ಚಾಮರ ಬೀಸುವುದರಿಂದ ಎದ್ದ ಗಾಳಿಯು ಅದು ಸಂತೋಷದಾಯಕವಗಿರುವಂತೆ ಮಾಡಿತು.)

ಪದ್ಯ-೨೫:ಅರ್ಥ:

ಸುಗಂಧವನ್ನು ಬೀರುತ್ತಿರುವ ಕಸ್ತೂರಿಯ, ಅಗರು ಮತ್ತು ಪಚ್ಚಕರ್ಪೂರದ ಸುವಾಸನೆಯನ್ನೂ, ಅಲ್ಲಿ ನೆರೆದವರು ಮುಡಿದು

ಕೊಂಡಿರುವ ಬಾಸಿಗದ ಹೊಸ ಸುವಾಸನೆಯನ್ನು ಚಾಮರ ಬೀಸುವುದರಿಂದ ಎದ್ದ ಗಾಳಿಯು ಅದು ಸಂತೋಷದಾಯಕವಗಿರುವಂತೆ ಮಾಡಿತು.

ಪಸರಿಸಿದ ತಾರಹಾರದ ಪೊಸವೆಳ್ದಿಂಗಳುಮನಮರ್ದ ಪೆರ್ದುಡುಗೆಗಳೊಳ್|
ಮಿಸುಗುವ ಪೊಸ ಮಾಣಿಕದೆಳ

ವಿಸಿಲುಮನೊಡಗಾಣಲಾದು ದರಿಗನ ಸಭೆಯೊಳ್|| ೨೬ ||

ಪದ್ಯ-೨೬:ಪದವಿಭಾಗ-ಅರ್ಥ:ಪಸರಿಸಿದ ತಾರಹಾರದ ಪೊಸ ವೆಳ್ದಿಂಗಳುಮನು (ಪ್ರಸರಿಸಿರುವ ಮುತ್ತಿನ ಹಾರಗಳ ಹೊಸಬೆಳ್ದಿಂಗಳುಗಳನ್ನು) ಅಮರ್ದ ಪೆರ್ದು ಉಡುಗೆಗಳೊಳ್ ಮಿಸುಗುವ

(ಧರಿಸಿರುವ ಬೆಲೆಯುಳ್ಳ
ಆಭರಣ ಉಡುಗೆಗಳಲ್ಲಿ)
ಪೊಸ ಮಾಣಿಕದ
ಎಳವಿಸಿಲುಮನು (ಹೊಸ
ಮಾಣಿಕ್ಯಗಳ ಪ್ರಕಾಶಿಸುವ
ಎಳೆಯ
ಬಿಸಿಲನ್ನೂ,)ಒಡಗಾಣಲು
ಆದುದು ಅರಿಗನ ಸಭೆಯೊಳ್
(ಅರಿಕೇಸರಿಯ ಆಸ್ಥಾನದಲ್ಲಿ
ಒಟ್ಟಿಗೆ ಕಾಣಲು
ಸಾಧ್ಯವಾಯಿತು.)

ಪದ್ಯ-೨೬:ಅರ್ಥ:
ಪ್ರಸರಿಸಿರುವ ಮುತ್ತಿನ ಹಾರಗಳ ಹೊಸಬೆಳ್ದಿಂಗಳುಗಳನ್ನೂ, ಧರಿಸಿರುವ ಬೆಲೆಯುಳ್ಳ ಆಭರಣಗಳಲ್ಲಿ ಪ್ರಕಾಶಿಸುವ ಹೊಸ ಮಾಣಿಕ್ಯಗಳ ಉಡುಗೆಗಳಲ್ಲಿ ಎಳೆಯ ಬಿಸಿಲನ್ನೂ, ಅರಿಕೇಸರಿಯ ಆಸ್ಥಾನದಲ್ಲಿ ಒಟ್ಟಿಗೆ ಕಾಣಲು ಸಾಧ್ಯವಾಯಿತು.

(ಅರಿಕೇಸರಿಯ ಆಸ್ಥಾನದಲ್ಲಿ ಬೆಳುದಿಂಗಳನ್ನೂ ಎಳೆ ಬಿಸಲನ್ನೂ ಒಟ್ಟಿಗೆ ಕಾಣಲು ಸಾಧ್ಯವಾಯಿತು. ಎಂದು ಭಾವ)

ವ|| ಅಂತು ದೇವೇಂದ್ರನಾಸ್ಥಾನಮನೆ ಪೋಲ್ತು ಸೊಗಯಿಸುವ ಸಂಸಾರಸಾರೋದಯ ನಾಸ್ಥಾನದೊಳೊರ್ವ ವೈತಾಳಿಕಂ ನಿಂದಿರ್ದು

ಮೃದುಮಧುರಗಂಭೀರಧ್ವನಿಯಿನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ದೇವೇಂದ್ರನ ಆಸ್ಥಾನಮನೆ ಪೋಲ್ತು ಸೊಗಯಿಸುವ (ಹಾಗೆ ದೇವೇಂದ್ರನ ಸಭೆಯನ್ನೇ ಹೋಲುತ್ತ ಸೊಗಸಿನಿಂದ ಕೂಡಿದಸುವ) ಸಂಸಾರ ಸಾರೋದಯನ ಆಸ್ಥಾನದೊಳು (

ಸಂಸಾರಸಾರೋದಯನಾದ ಅರ್ಜುನನ ಆಸ್ಥಾನದಲ್ಲಿದ್ದ) ಒರ್ವ ವೈತಾಳಿಕಂ ನಿಂದಿರ್ದು ಮೃದು ಮಧುರ ಗಂಭೀರಧ್ವನಿಯಿಂ ಇಂತೆಂದಂ (ವೈತಾಳಿಕನು ಎದ್ದು ನಿಂತು ಮೃದು ಮಧುರ ಗಂಭೀರ ಧ್ವನಿಯಿಂದ ಹೀಗೆಂದನು-)-

ವಚನ:ಅರ್ಥ:ಹಾಗೆ ದೇವೇಂದ್ರನ ಸಭೆಯನ್ನೇ ಹೋಲುತ್ತ ಸೊಗಸಿನಿಂದ

ಕೂಡಿದಸುವ
ಸಂಸಾರಸಾರೋದಯನಾದ
ಅರ್ಜುನನ ಆಸ್ಥಾನದಲ್ಲಿದ್ದ
ವಿವಿಧ ತಾಳಗಲಲ್ಲಿ ಹಅಡುವ
ವೈತಾಳಿಕನು ಎದ್ದು ನಿಂತು
ಮೃದು ಮಧುರ ಗಂಭೀರ
ಧ್ವನಿಯಿಂದ ಹೀಗೆಂದನು/
ಹಾಡಿದನು-

ಸ್ರ|| ಆಸೇತೋ ರಾಮ
ಚಾಪಾಟನಿ ತಟಯುಗ
ಟಂಕಾಂಕಿತಾಖಂಡ ಖಂಡಾ

ದಾ ಪೀಯೂಷಾಬ್ಧಿ ದುಗ್ಧಪ್ಲವ ಧವಳ ಕನತ್ಕುಂದರಾನ್ಮಂದರಾದ್ರೇ|
ಆಚಂದ್ರಾರ್ಕ ಪ್ರತೀತೋಭಯ ಗಿರಿಶಿಖರಾತ್ ಸ್ಯೋದಯಸ್ಯೇಕ ಹೇತೋ
ಶ್ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತು ವಿಕ್ರಾಂತತುಂಗಃ|| ೨೭ ||

ಪದ್ಯ-೨೭:ಪದವಿಭಾಗ-ಅರ್ಥ:ಆಸೇತೋ, ರಾಮ

ಚಾಪ ಅಟನಿ ತಟಯುಗ
(ಶ್ರೀರಾಮನ ಬಿಲ್ಲಿನ ಕೊಪ್ಪಿನ
ಎರಡು ಕಡೆಗಳೆಂಬ) ಟಂಕ
ಅಂಕಿತ (ಉಳಿಯಿಂದ
ಗುರುತು ಮಾಡಲ್ಪಟ್ಟ)
ಅಖಂಡ ಖಂಡಾತ್ ಆ
ಪೀಯೂಷಾಬ್ಧಿ + ಆಸೇತೋಃ,
(ಸಮಗ್ರವಾದ
ಭರತಖಂಡದಲ್ಲಿ
ರಾಮಸೇತುವಿನವರೆಗೂ)
ದುಗ್ಧಪ್ಲವ ಧವಳ ಕನತ್

(ಹಾಲಿನ ಪ್ರವಾಹದಂತೆ ಬೆಳ್ಳಗೆ ಪ್ರಕಾಶಿಸುತ್ತಿರುವ) ಕಂದರಾನ್ ಮಂದರಾದ್ರೇ ಆಚಂದ್ರಾರ್ಕ ಪ್ರತೀತ (ಕ್ಷೀರಸಾಗರದಂತೆ ಮಂದರಪರ್ವತ ಕಣಿವೆಯವರೆಗೂ) ಉಭಯ ಗಿರಿಶಿಖರಾತ್ (ಪೂರ್ವ ಪಶ್ಚಿಮ ಪರ್ವತಗಳ ಪರ್ವತಭೂಮಿಗಳಿರುವ ಶಿಖರಗಳವರೆಗೂ) ಸ್ವೋದಯಸ್ಯ ಏಕ ಹೇತೋ

(ತನ್ನ ಅಭಿವೃದ್ಧಿಗೆ ಒಂದೇ ಕಾರಣವಾಗಿರುವ) ಶೈಲೇಳಾ ಕಲ್ಪಕಾಳಂ (ಪರ್ವತಭೂಮಿಗಳಿರುವ ಶಿಖರಗಳು ಇರುವ ಕಾಲದವರೆಗೂ) ಕ್ಷಿತಿವಲಯಂ ಇದಂ ಪಾತು ವಿಕ್ರಾಂತತುಂಗಃ (ವಿಕ್ರಾಂತತುಂಗನಾದ ಅರ್ಜುನನು ಈ ಭೂಮಂಡಲವನ್ನು ರಕ್ಷಿಸಲಿ.)

ಪದ್ಯ-೨೭:ಅರ್ಥ:
ಶ್ರೀರಾಮನ ಬಿಲ್ಲಿನ ಕೊಪ್ಪಿನ
ಎರಡು ಕಡೆಗಳೆಂಬ
ಉಳಿಯಿಂದ ಗುರುತು
ಮಾಡಲ್ಪಟ್ಟ ಸಮಗ್ರವಾದ
ಭರತಖಂಡದಲ್ಲಿ
ರಾಮಸೇತುವಿನವರೆಗೂ
ಹಾಲಿನ ಪ್ರವಾಹದಂತೆ ಬೆಳ್ಳಗೆ
ಪ್ರಕಾಶಿಸುತ್ತಿರುವ,
ಕ್ಷೀರಸಾಗರದಂತೆ
ಮಂದರಪರ್ವತ

ಕಣಿವೆಯವರೆಗೂ ತನ್ನ
ಅಭಿವೃದ್ಧಿಗೆ ಒಂದೇ
ಕಾರಣವಾಗಿರುವ ಚಂದ್ರ
ಸೂರ್ಯರ ಪರ್ಯಂತ
ಪ್ರಸಿದ್ಧರಾಗಿರುವ ಪೂರ್ವ
ಪಶ್ಚಿಮ ಪರ್ವತಗಳ
ಪರ್ವತಭೂಮಿಗಳಿರುವ
ಶಿಖರಗಳು ಇರುವ
ಕಾಲದವರೆಗೂ
ವಿಕ್ರಾಂತತುಂಗನಾದ

ಅರ್ಜುನನು ಈ ಭೂಮಂಡಲವನ್ನು ರಕ್ಷಿಸಲಿ.

ಶಾ|| ಶೌರ್ಯಂ ಯಸ್ಯ ಗುಣಾರ್ಣವ ಕ್ಷಿತಿಪತೇಸ್ಸವ್ಯಾಪಸವ್ಯಕ್ರಮಾತ್ ಗರ್ವಾಕೃಷ್ಟವಿಕರ್ಣಟಂಕನಿಕರೋತ್ಕೀರ್ಣಪ್ರಭಾವಾಕ್ಷರೈಃ|
ಮತ್ತಾರಿದ್ವಿಪಮಸ್ತಕಸ್ಥಿತಶಿಲಾಪಟ್ಟಂ ಸದಾಖ್ಯಾಯತೇ

ತಸ್ಯಾಯಂ ಪುನರುಕ್ತ ಏವ ಸಮರ ಶ್ಲಾಘ್ಯಪ್ರಶಸ್ತಿಕ್ರಮಃ|| ೨೮ ||

ಪದ್ಯ-೨೮:ಪದವಿಭಾಗ-ಅರ್ಥ:ಶೌರ್ಯಂ ಯಸ್ಯ ಗುಣಾರ್ಣವ ಕ್ಷಿತಿಪತೇ (ಯಾವ ಗುಣಾರ್ಣವನೆಂಬ ಬಿರುದುಳ್ಳ ಅರಿಕೇಸರಿರಾಜನ (ಅರ್ಜುನನ)) ಸ್ಸ ಸವ್ಯ ಅಪಸವ್ಯಕ್ರಮಾತ್ (ಪರಾಕ್ರಮವು ಬಲ ಮತ್ತು

ಎಡಗೈಗಳಿಂದ
ಪ್ರಯೋಗಮಾಡುವ
ಕ್ರಮವಾದ) ಗರ್ವಾಕೃಷ್ಟ
ವಿಕರ್ಣಟಂಕ ನಿಕರೋತ್ಕೀರ್ಣ
(ಕ್ರಮವಾದ ಗರ್ವದಿಂದ ಕೂಡಿ
ಕಿವಿಯವರೆಗೂ ಸೆಳೆಯುವ
ಬಾಣಗಳೆಂಬ) ಪ್ರಭಾವಾಕ್ಷರೈಃ
(ಶಕ್ತಿಯುತವಾದ ಉಳಿಗಳ
ಸಮೂಹದಿಂದ/
ಅಕ್ಷರಗಳಿಂದ) ಮತ್ತ ಅರಿದ್ವಿಪ
(ಶತ್ರುರಾಜರ ಮದ್ದಾನೆಗಳ)

ಮಸ್ತಕಸ್ಥಿತ ಶಿಲಾಪಟ್ಟಂ (
ಕುಂಭಸ್ಥಳದಲ್ಲಿ
ಶಕ್ತಿಯುತವಾದ ಉಳಿಗಳ
ಸಮೂಹದಿಂದ/
ಅಕ್ಷರಗಳಿಂದ
ಕೊರೆಯಲ್ಪಟ್ಟಿರುವ
ಶಾಸನಪ್ಫಲಕಗಳು) ಸದಾ
ಆಖ್ಯಾಯತೇ (ಸದಾ
ಹೇಳುತ್ತಿರುವ) ತಸ್ಯ
(ಅವನ)ಅಯಂ (ಈ)
ಪುನರುಕ್ತ ಏವ-> ಸಮರ

ಶ್ಲಾಘ್ಯ ಪ್ರಶಸ್ತಿ ಕ್ರಮಃ (ಅರಿಕೇಸೆರಿಯ ಯುದ್ಧ ಪ್ರಶಸ್ತಿಯ ಕ್ರಮವು- ಪುನರುಕ್ತ ಏವ- ಪುನರುಕ್ತವಾದದ್ದೇ- / ಪುನರುಕ್ತವಾಗುತ್ತಿರಲಿ.)

ಪದ್ಯ-೨೮:ಅರ್ಥ: ಯಾವ ಗುಣಾರ್ಣವನೆಂಬ ಬಿರುದುಳ್ಳ ಅರಿಕೇಸರಿರಾಜನ (ಅರ್ಜುನನ) ಪರಾಕ್ರಮವು ಬಲ ಮತ್ತು ಎಡಗೈಗಳಿಂದ ಪ್ರಯೋಗಮಾಡುವ

ಕ್ರಮವಾದ ಗರ್ವದಿಂದ ಕೂಡಿ
ಕಿವಿಯವರೆಗೂ ಸೆಳೆಯುವ
ಬಾಣಗಳೆಂಬ ಶತ್ರುರಾಜರ
ಮದ್ದಾನೆಗಳ ಕುಂಭಸ್ಥಳದಲ್ಲಿ
ಶಕ್ತಿಯುತವಾದ ಉಳಿಗಳ
ಸಮೂಹದಿಂದ/
ಅಕ್ಷರಗಳಿಂದ
ಕೊರೆಯಲ್ಪಟ್ಟಿರುವ
ಶಾಸನಪ್ಮಲಕಗಳು ಸದಾ
ಹೇಳುತ್ತಿರುವ ಈ
ಅರಿಕೇಸರಿಯ ಯುದ್ಧ

ಪ್ರಶಸ್ತಿಯ ಕ್ರಮವು,

ಪುನರುಕ್ತವಾಗುತ್ತಿರಲಿ.

ಏತತ್ಕಂಪಿತ ಪರ್ವತಾಸ್ಸು

ಚಕಿತಾ ಏತುಂ ಸಮುದ್ರಂ

ಪುನಃ

ಸಪ್ತದ್ವೀಪ ಜಿಗೀಷಯಾ

ವಿಜಯಿನಾ ಕೇನಾಪಿ

ಪುರಿಜೀಕೃತಂ|

ಯಜ್ಞಾತಂ ಶರ ಶಂಕು ಶಲ್ಯ

ಶತಕೈಸ್ಸಂತಾಪ್ಯ ಶತ್ರುದ್ವಿಪಾನ್

ನಿಶ್ವಾಸೋಪರತಾನ್ ಗುಣಾರ್ಣವಮಹೀಪಾಲೇನ ಯುದ್ಧಾವನೌ|| ೨೯ ||

ಪದ್ಯ-೨೯:ಪದವಿಭಾಗ-ಅರ್ಥ:ಏತತ್ಕಂಪಿತ ಪರ್ವತಾಸ್ಸು ಚಕಿತಾ ಏತುಂ ಸಮುದ್ರಂ ಪುನಃಸಪ್ತದ್ವೀಪ ಜಿಗೀಷಯಾ ವಿಜಯಿನಾ ಕೇನಾಪಿ ಪುರಿಜೀಕೃತಂ ಯಜ್ಞಾತಂ ಶರ ಶಂಕು ಶಲ್ಯ ಶತಕೈಸ್ಸಂತಾಪ್ಯ

ಶತ್ರುದ್ವಿಪಾನ್ನಿಶ್ವಾಸೋಪರತಾ
ನ್
ಗುಣಾರ್ಣವಮಹೀಪಾಲೇನ
ಯುದ್ಧಾವನೌ
ಪದ್ಯ-೨೯:ಅರ್ಥ:
ಗುಣಾರ್ಣವ ಮಹೀಪಾಲನ
ಯುದ್ಧಭೂಮಿಯಲ್ಲಿ ಅವನ
ಹರಿತವಾದ ನೂರಾರು
ಬಾಣಗಳಿಂದ ಹತವಾದ
ಶತ್ರುರಾಜರ ಆನೆಗಳು ಸಪ್ತ
ದ್ವೀಪಗಳನ್ನೂ ಗೆಲ್ಲಬೇಕೆಂಬ

ಆಶೆಯುಳ್ಳ ಇಂದ್ರನಿಗೆ ಹೆದರಿ ನಡುಗುತ್ತ ಸಮುದ್ರಪ್ರವೇಶಮಾಡುತ್ತಿರುವ ಕುಲಪರ್ವತಗಳ ರಾಜಿಯ ಹಾಗಿವೆ.

ಪೃಥ್ವಿ|| ಪರಸ್ಪರ ವಿರುದ್ಧಯೋರ್ವಿನಯ ಯೌವನಾರಂಭಯೋಃ ಪ್ರಭೂತ ಸಹಜೇರ್ಷ್ಯಯೋರಪಿ ಸರಸ್ವತೀ ಶ್ರೀಸ್ತಿಯೋಃ||

ತಥಾಚ ಪರಿಹಾರಿಣೋರಪಿ ಮಹಾ ಕ್ಷಮಾ ಶೌರ್ಯಯೋಃ ಚಿರಂ ಪ್ರಥಮ ಸಂಗಮೋ ಹರಿಗ ಭೂಪತೌ ದೃಶ್ಯತೇ|| ೩೦ ||

ಪದ್ಯ-೩೦:ಪದವಿಭಾಗ-ಅರ್ಥ: ಪರಸ್ಪರ ವಿರುದ್ಧಯೋರ್ (ಪರಸ್ಪರ ವಿರೋಧವಾಗಿರುವ) ವಿನಯ ಯೌವನ ಆರಂಭಯೋಃ (ವಿನಯ ಮತ್ತು ಯವ್ವನದ

ಆರಂಭಗಳು,) ಪ್ರಭೂತ
(ಹುಟ್ಟಿಲುವ)ಸಹಜ
ಈರ್ಷ್ಯಯೋರ್ ಅಪಿ
(ಸಹಜವಾಗಿಯೇ ಹುಟ್ಟಿರುವ
ಅಸೂಯೆಯಿಂದ ಕೂಡಿದ)
ಸರಸ್ವತೀ ಶ್ರೀಸ್ತ್ರಿಯೋಃ
(ಸರಸ್ವತಿ ಮತ್ತು ಲಕ್ಷ್ಮಿಗಳನ್ನೂ)
ತಥಾಚ ಪರಿಹಾರಿಣೋರಪಿ
(ಹಾಗೆಯೇ ಪರಸ್ಪರ
ಪರಿಹಾರವಳ್ಳವುಗಳಾದ)
ಮಹಾ ಕ್ಷಮಾ ಶೌರ್ಯಯೋಃ

(ದಯೆ ಮತ್ತು ಶೌರ್ಯಗಳ)

ಚಿರಂ/ ಚಿರಾತ್

(ಬಹುಕಾಲವಾದ ಮೇಲೆ)

ಪ್ರಥಮ ಸಂಗಮೋ

(ಮೊದಲನೆಯ ಸಲ

ಸಂಗನವಾಗಿರುವುದನ್ನು)

ಹರಿಗ ಭೂಪತೌ ದೃಶ್ಯತೇ

(ಮೊದಲನೆಯ ಸಲ

ಅರಿಕೇಸರಿ ರಾಜನಲ್ಲಿ

ಸಂಗನವಾಗಿರುವುದನ್ನು/

ಒಟ್ಟಿಗೆ ಇರುವುದನ್ನು ನೋಡಬಹುದಾಗಿದೆ.)

ಪದ್ಯ-೩೦:ಅರ್ಥ: ಪರಸ್ಪರ ವಿರೋಧವಾಗಿರುವ ವಿನಯ ಮತ್ತು ಯವ್ವನದ ಆರಂಭಗಳು, ಸಹಜವಾಗಿಯೇ ಹುಟ್ಟಿರುವ ಅಸೂಯೆಯಿಂದ ಕೂಡಿದ ಸರಸ್ವತಿ ಮತ್ತು ಲಕ್ಷ್ಮಿಗಳನ್ನೂ ಹಾಗೆಯೇ ಪರಸ್ಪರ ಪರಿಹಾರವಳ್ಳವುಗಳಾದ

ದಯೆ ಮತ್ತು ಶೌರ್ಯಗಳ ಬಹುಕಾಲವಾದ ಮೇಲೆ ಮೊತ್ತ ಮೋದಲನೆಯ ಸಲ ಅರಿಕೇಸರಿ ರಾಜನಲ್ಲಿ ಸಂಗನವಾಗಿರುವುದನ್ನು/ ಒಟ್ಟಿಗೆ ಇರುವುದನ್ನು ನೋಡಬಹುದಾಗಿದೆ.

ವ|| ಅಂತಾತಂ ಪೊಗೞ್ದು ಮಾಣ್ದ ನಂತರದೊಳೆತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ ಮತ್ತಂ

ಪರಿಚ್ಛೇದಂಗಳನಱಿದುಮೊ

ಟ್ಟಜೆಯ ರಾಜಿಯಿಂ

ಕಣ್ಗಳಿಂಚರದೊಳಂ

ಪೊಂಪುಱಿವೋಗೆ

ಮಂಗಳಪಾಠಕರಿರ್ವರೊಂದೆ

ಕೊರಲೊಳಿಂತೆಂದು

ಮಂಗಳವೃತ್ತಂಗಳನೋದಿದರ್

-

ವಚನ:ಪದವಿಭಾಗ-

ಅರ್ಥ:ಅಂತು ಆತಂ

ಪೊಗಱ್ದು ಮಾಣ್ದ

ನಂತರದೊಳ್ (ಹಾಗೆ ಅವನು ಹೊಗಳಿ ನಿಲ್ಲಿಸಿಯಾದ ಮೇಲೆ) ಎತ್ತಿಕೊಂಡ ಶ್ರುತಿಯಂ ಪಲ್ಲಟಿಸದೆಯುಂ (ಶಾಸ್ತ್ರವನ್ನು (ವೇದಾಕ್ಷರಗಳನ್ನು)ಪಲ್ಲಟ ಮಾಡದೆ / ವ್ಯತ್ಯಾಸಮಾಡದೆಯೂ) ಮತ್ತಂ ಪರಿಚ್ಛೇದಂಗಳು ಅಱಿದುಂ ಒಟ್ಟಜೆಯ ರಾಜಿಯಿಂ (ನಿಲ್ಲಿಸಬೇಕಾದ ಸ್ಥಳಗಳನ್ನೂ ತಿಳಿದೂ

ಸಂಪೂರ್ಣಾರ್ಥ
ದ್ಯೋತಕವಾಗುವ ಹಾಗೂ)
ಕಣ್ಗೆಳಿಂಚರದೊಳಂ (ಕಂಡಂತೆ
ಇನಿದಾದ ಸ್ವರಗಳಿಂದ)
ಪೊಂಪುಳಿ ವೋಗೆ
(ರೋಮಾಂಚವಾಗುವ
ಹಾಗೂ) ಮಂಗಳಪಾಠಕರು
ಇರ್ವರುಂ ಒಂದೆ ಕೊರಲೊಳು
(ಇಬ್ಬರು ಮಂಗಳಪಾಠಕರು
ಒಕ್ಕೊರಲಿನಿಂದ) ಇಂತೆಂದು
ಮಂಗಳವೃತ್ತಂಗಳನು

ಓದಿದರ್ (ಮಂಗಳ
ಸ್ತೋತ್ರವನ್ನು ಪಠಿಸಿದರು.)-
ವಚನ:ಅರ್ಥ:ಹಾಗೆ ಅವನು
ಹೊಗಳಿ ನಿಲ್ಲಿಸಿಯಾದ ಮೇಲೆ,
ಶಾಸ್ತ್ರವನ್ನು
(ವೇದಾಕ್ಷರಗಳನ್ನು)
ವ್ಯತ್ಯಾಸಮಾಡದೆಯೂ
(ಸುಸ್ವರವಾಗಿ) ನಿಲ್ಲಿಸಬೇಕಾದ
ಸ್ಥಳಗಳನ್ನೂ ತಿಳಿದೂ
ಸಂಪೂರ್ಣಾರ್ಥ
ದ್ಯೋತಕವಾಗುವ ಹಾಗೂ

ಕಂಡಂತೆ ಇನಿದಾದ
ಸ್ವರಗಳಿಂದ ಕೂಡಿ
ರೋಮಾಂಚವಾಗುವ ಹಾಗೂ
ಇಬ್ಬರು ಮಂಗಳಪಾಠಕರು
ಒಕ್ಕೊರಲಿನಿಂದ ಮಂಗಳ
ಸ್ತೋತ್ರವನ್ನು ಪಠಿಸಿದರು.

<u>ಅರಿಕೇಸರಿ ಯಾ ಅರ್ಜುನನಿಗೆ ಶುಬ ಹಾರೈಕೆಯ ಆಶೀರ್ವಚನ: ಮಂಗಳಸ್ತೋತ್ರ</u>

ಶಾ||

ರಂಗತ್ತುಂಗತರಂಗಭಂಗುರಲ

ಸದ್ಗಂಗಾಜಳಂ ನರ್ಮದಾ

ಸಂಗ ಸ್ವಚ್ಛವನಂ ಪ್ರಸಿದ್ಧ

ವರದಾ ಪುಣ್ಯಾಂಬು

ಗೋದಾವರೀ|

ಸಂಗತ್ಯೋರ್ಜಿತವಾರಿಸಾರ ಯಮುನಾ ನೀಳೋರ್ಮಿ ನೀರಂ ಭುಜೋ ತ್ತುಂಗಂಗೀಗರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ|| ೩೧ /31||

ಪದ್ಯ-೩೧:ಪದವಿಭಾಗ-ಅರ್ಥ:ರಂಗತ್ ತುಂಗ ತರಂಗ ಭಂಗುರ ಲಸತ್ ಗಂಗಾಜಳಂ (ನರ್ತನ ಮಾಡುತ್ತಿರುವ ಎತ್ತರ ಅಲೆಗಳಿಂದ

ವಿಭ್ರಾಜಮಾನವಾಗುತ್ತಿರುವ
(ಘರ್ಷಣೆಯನ್ನು
ಹೊಂದುತ್ತಿರುವ)
ಪ್ರಕಾಶಮಾನವಾದ
ಗಂಗಾಜಲವೂ) ನರ್ಮದಾ
ಆಸಂಗ ಸ್ವಚ್ಛವನಂ
(ಸ್ವಚ್ಛವಾಗಿರುವ
ನರ್ಮದಾನದಿಯ ನೀರೂ)
ಪ್ರಸಿದ್ಧ ವರದಾ ಪುಣ್ಯಾಂಬು
(ಪ್ರಸಿದ್ಧವೂ ಪವಿತ್ರವೂ ಆದ
ವರದಾನದಿಯ ನೀರೂ)

ಗೋದಾವರೀ ಸಂಗತ್
ಊರ್ಜಿತ ವಾರಿಸಾರ
(ಶ್ರೇಷ್ಠವಾದ ಗೋದಾವರಿಯ
ಊರ್ಜಿತ/ಸೇರಿ ಹೆಚ್ಚುತ್ತಿವ
ನೀರೂ) ಯಮುನಾ
ನೀಳೋರ್ಮಿ ನೀರಂ
(ಸಾರವತ್ತಾದ
ಯಮುನಾನದಿಯ ನೀಲಿಯ
ಬಣ್ಣದ ಅಲೆಗಳಿಂದ ಕೂಡಿದ
ನೀರೂ), ಭುಜೋತ್ತುಂಗಂಗೆ
ಈಗೆ ಅರಿಗಂಗೆ ಮಂಗಳ

ಮಹಾಶ್ರೀಯಂ ಜಯಶ್ರೀಯುಮಂ (ಇವೆಲ್ಲವ್ಯೂ ಎತ್ತರವಾದ ಭುಜಗಳುಳ್ಳ ಅರಿಗನಿಗೆ (ಅರ್ಜುನನಿಗೆ) ಮಂಗಳಕರವಾದ ಸಂಪತ್ತನ್ನೂ ಜಯಲಕ್ಷ್ಮಿಯನ್ನೂ ಈಗೆ-ಕೊಡಲಿ)

ಪದ್ಯ-೩೧:ಅರ್ಥ: ನರ್ತನ ಮಾಡುತ್ತಿರುವ ಎತ್ತರ ಅಲೆಗಳಿಂದ

ವಿಭ್ರಾಜಮಾನವಾಗುತ್ತಿರುವ
(ಘರ್ಷಣೆಯನ್ನು
ಹೊಂದುತ್ತಿರುವ)
ಪ್ರಕಾಶಮಾನವಾದ
ಗಂಗಾಜಲವೂ,
ಸ್ವಚ್ಛವಾಗಿರುವ
ನರ್ಮದಾನದಿಯ ನೀರೂ
ಪ್ರಸಿದ್ಧವೂ ಪವಿತ್ರವೂ ಆದ
ವರದಾನದಿಯ ನೀರೂ,
ಶ್ರೇಷ್ಠವಾದ ಗೋದಾವರಿಯ
ಊರ್ಜಿತ/ಸೇರಿ ಹೆಚ್ಚುತ್ತಿವ

ನೀರೂ, ಸಾರವತ್ತಾದ
ಯಮುನಾನದಿಯ ನೀಲಿಯ
ಬಣ್ಣದ ಅಲೆಗಳಿಂದ ಕೂಡಿದ
ನೀರೂ, ಇವೆಲ್ಲವೂ
ಎತ್ತರವಾದ ಭುಜಗಳುಳ್ಳ
ಅರಿಗನಿಗೆ (ಅರ್ಜುನನಿಗೆ)
ಮಂಗಳಕರವಾದ ಸಂಪತ್ತನ್ನೂ
ಜಯಲಕ್ಷ್ಮಿಯನ್ನೂ ಕೊಡಲಿ.

ಮ||

ಶ್ರುತದೇವೀವಚನಾಮೃತಂ

ಶ್ರುತಕಥಾಳಾಪಂ ಶ್ರುತಸ್ಕಂದ
ಸಂ
ತತಿ ಶಶ್ವಚ್ಚ್ಯುತಪಾರಗ ಶ್ರುತಿ
ಮಹೋರ್ಮ್ಯುಲ್ಲಾಸಿವಾರಾಶಿ
ವಾ|
ರಿತಧಾತ್ರೀತಳಗೀತಿ
ನಿರ್ಮಳಯಶಂಗಾರೂಢಸರ್ವ
ಜ್ಞ ಭೂ
ಪತಿಗೊಲ್ದಾಗಳುಮೀಗೆ
ಮಂಗಳಮಹಾಶ್ರೀಯಂ
ಜಯಶ್ರೀಯುಮಂ|| ೩೨ ||

ಪದ್ಯ-೩೨:ಪದವಿಭಾಗ-ಅರ್ಥ:ಶ್ರು(ಶ್ರೃ)ತದೇವೀ ವಚನಾಮೃತಂ ಶ್ರುತಕಥಾಳಾಪಂ (ಸರಸ್ವತಿ ವಚನಗಳೆಂಬ ಅಮೃತವೂ, ಕೇಳಿದ ಪುರಾಣಸಿದ್ಧವೂ ಆದ ಕಥಾ ಸಮೂಹಗಳೂ) ಶ್ರುತಸ್ಕಂದ ಸಂತತಿ (ಜಿನಾಗಮಗಳೂ) ಶಶ್ವಚ್ಛ್ರುತಪಾರಗ ಶ್ರುತಿ (ಶಶ್ವತ್ ಶ್ರುತಿ ಪಾರಗ ಶ್ರುತಿ-

ಶಾಸ್ವತವಾದ ವೇದಗಳಲ್ಲಿ
ಪಂಡಿತರಾದವರ ಜ್ಞಾನ),
ಮಹೋರ್ಮ್ಯುಲ್ಲಾಸಿ (ಮಹಾ
ಊರ್ಮಿ ಉಲ್ಲಾಸಿ- ಮಹಾ
ಅಲೆಗಳಿಂದ
ಉಲ್ಲಾಸವನ್ನುಳ್ಳ) ವಾರಾಶಿ
ವಾರಿತ ಧಾತ್ರೀ
(ಸಮುದ್ರದಿಂದ ತಡೆಯಲ್ಪಟ್ಟ
ಭೂತಳದ) ಧಾತ್ರೀ ತಳಗೀತಿ
(ಭೂತಳದ ಸ್ತೋತ್ರಗಳು,)
ನಿರ್ಮಳ ಯಶಂಗೆ

ಆರೂಢಸರ್ವಜ್ಞ (ನಿರ್ಮಲ ಕೀರ್ತಿಯುಳ್ಳ ಆರೂಢಸರ್ವಜ್ಞನೆಂಬ ಬಿರುದುಳ್ಳ) ಭೂಪತಿಗೆ ಒಲ್ದ ಆಗಳುಂ ೬೦ಯಾವಾಗಲೂ, ಸರ್ವದಾ) ಈಗೆ (ಕೊಡಲಿ) ಮಂಗಳ ಮಹಾಶ್ರೀಯಂ ಜಯಶ್ರೀಯುಮಂ (ಅರಿಕೇಸರಿ ರಾಜನಿಗೆ / ಅರ್ಜುನನಿಗೆ ಪ್ರೀತಿಯಿಂದ ಮಂಗಳಮಹಾಶ್ರೀಯನ್ನೂ

ಜಯಶ್ರೀಯನ್ನೂ ಸರ್ವದಾ ಕೊಡಲಿ.)

ಪದ್ಯ-೩೨:ಅರ್ಥ: ಸರಸ್ವತಿ ವಚನಗಳೆಂಬ ಅಮೃತವೂ, ಕೇಳಿದ ಪುರಾಣಸಿದ್ಧವೂ ಆದ ಕಥಾ ಸಮೂಹಗಳೂ, ಜಿನಾಗಮಗಳೂ, ವೇದ ಸಮೂಹಗಳೂ ಶಾಸ್ವತವಾದ ವೇದಗಳಲ್ಲಿ ಪಂಡಿತರಾದವರ ಜ್ಞಾನಗಳೆಂಬ ದೊಡ್ಡ ಅಲೆಗಳಿಂದ ಸಮುದ್ರದಿಂದ

ಪರಿವೃತರಾದ ಭೂಮಿಯ
ಸಮುದ್ರಗೀತೆಗಳೂ
ಇವೆಲ್ಲವೂ ನಿರ್ಮಲ
ಕೀರ್ತಿಯುಳ್ಳ
ಆರೂಢಸರ್ವಜ್ಞನೆಂಬ
ಬಿರುದುಳ್ಳ ಅರಿಕೇಸರಿ
ರಾಜನಿಗೆ (ಅರ್ಜುನನಿಗೆ)
ಪ್ರೀತಿಯಿಂದ
ಮಂಗಳಮಹಾಶ್ರೀಯನ್ನೂ
ಜಯಶ್ರೀಯನ್ನೂ ಸರ್ವದಾ
ಕೊಡಲಿ-

ಶಾ|| ಕೈಳಾಸಂ
ನಿಷಧಾಧಿಪಾಂಗ
ನಿಕಟಕ್ಷೋಣೀಧರಂ ನೀಳ ಕು
ತ್ಕೀಳಂ ಕಂದಮಹೀಧರಂ
ಶಿಖರನಾಮೋದ್ಯನ್ನಗಂ
ಪ್ರಸ್ಫುರ|
ತ್ಪ್ರಾಳೇಯಾಚಲಮೀತನೆಮ್ಮ
ವೊಲಿಳಾಭೃನ್ನಾಥನೆಂದಿಂತಿಳಾ
ಪಾಳಂಗೀಗರಿಗಂಗೆ
ಮಂಗಳಮಹಾಶ್ರೀಯಂ
ಜಯಶ್ರೀಯುಮಂ|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಕೈಳಾಸಂ ನಿಷಧಾಧಿಪಾಂಗ ನಿಕಟಕ್ಷೋಣೀಧರಂ (ಕೈಲಾಸ ಪರ್ವತ, ನಿಷಧಪರ್ವತ ಮತ್ತು ಅಂಗದೇಶಕ್ಕೆ ಸಮೀಪವಾದ ಪರ್ವತ,) ನೀಳ ಕುತ್ಕೀಳಂ (ನೀಲಗಿರಿಯೆಂಬ ಪರ್ವತ,) ಕಂದಮಹೀಧರಂ ಶಿಖರನಾಮ ಉದ್ಯನ್ನಗಂ (ಕಂದವೆಂಬ ಪರ್ವತ,

ಶಿಖರವೆಂಬ ಎತ್ತರ ಪರ್ವತ)
ಪ್ರಸ್ಫುರತ್ಪ್ರಾಳೇಯಾಚಲಂ
(ಎತ್ತರವೂ ಪ್ರಕಾಶವೂ ಆದ
ಹಿಮವತ್ಪರ್ವತ) ಈತಂ
ಎಮ್ಮವೊಲ್ ಇಳಾಭೃನ್ನಾಥಂ
ಎಂದು (ಇವೆಲ್ಲ
ಅರಿಕೇಸರಿಯೂ ನಮ್ಮ
ಹಾಗೆಯೇ ರಾಜಾರಾಜ,
ಚಕ್ರವರ್ತಿ -ಇಳೆಯನ್ನು
ಧರಿಸಿರುವವನು- ಎಂದು)
ಎಂದು ಇಂತು ಇಳಾ ಪಾಳಂಗೆ

ಈಗೆ ಅರಿಗಂಗೆ
ಮಂಗಳಮಹಾಶ್ರೀಯಂ
ಜಯಶ್ರೀಯುಮಂ (ಎಂದು
ಭೂಪಾಲನಾದ ಅರಿಕೇಸರಿಗೆ
/ಅರ್ಜುನನಿಗೆ- ಮಂಗಳ
ಮಹಾಶ್ರೀಯನ್ನೂ
ಜಯಶ್ರೀಯನ್ನೂ
ಅನುಗ್ರಹಿಸಲಿ.)
ಪದ್ಯ-೩೩:ಅರ್ಥ: ಕೈಲಾಸ
ಪರ್ವತ, ನಿಷಧಪರ್ವತ ಮತ್ತು
ಅಂಗದೇಶಕ್ಕೆ ಸಮೀಪವಾದ

ಪರ್ವತ, ನೀಲಗಿರಿಯೆಂಬ ಪರ್ವತ, ಕಂದವೆಂಬ ಪರ್ವತ, ಶಿಖರವೆಂಬ ಪರ್ವತ ಎತ್ತರವೂ ಪ್ರಕಾಶವೂ ಆದ ಹಿಮವತ್ಪರ್ವತ ಇವೆಲ್ಲ ಅರಿಕೇಸರಿಯೂ ನಮ್ಮ ಹಾಗೆಯೇ ರಾಜಾರಾಜ, ಚಕ್ರವರ್ತಿ (ಇಳೆಯನ್ನು ಧರಿಸಿರುವವನು) ಎಂದು ಭೂಪಾಲನಾದ ಅರಿಕೇಸರಿಗೆ (ಅರ್ಜುನನಿಗೆ) ಮಂಗಳ

ಮಹಾಶ್ರೀಯನ್ನೂ
ಜಯಶ್ರೀಯನ್ನೂ
ಅನುಗ್ರಹಿಸಲಿ.

ಮ|| ಜಳಧಿ ದ್ವೀಪ ರಸತಳಾಂಬರ ಕುಲಾದ್ರೀಂದ್ರಂಗಳೋರಂತೆ ತ ನ್ನೊಳಮುದ್ಯತ್ಕಟಕಂಗಳಾವಹ ಮಹಾದ್ರವ್ಯಂಗಳೋರಂತೆ ಮಂ| ಗಳಕಾರ್ಯಂಗಳನಿತ್ತು ಮತ್ತೆ ಮಣಿಭೂಷಾತುಂಗರತ್ನಾಂಶು

ಪಾ

ಟಳಿತಂಗೀಗರಿಗಂಗೆ ಮಂಗಳ

ಮಹಾಶ್ರೀಯಂ

ಜಯಶ್ರೀಯುಮಂ|| ೩೪ ||

ಪದ್ಯ-೩೪:ಪದವಿಭಾಗ-

ಅರ್ಥ:ಜಳಧಿ ದ್ವೀಪ ರಸತಳಾಂಬರ ಕುಲಾದ್ರೀಂದ್ರಂಗಳು ಓರಂತೆ (ಸಮುದ್ರ, ದ್ವೀಪ, ಪಾತಾಳ, ಆಕಾಶ ಮತ್ತು ಕುಲಪರ್ವತಗಳು ಕ್ರಮವಾಗಿ)

ತನ್ನೊಳಂ ಉದ್ಯತ್ಕಟಕಂಗಳ್
ಆವಹ ಮಹಾದ್ರವ್ಯಂಗಳಂ
(ತನ್ನಲ್ಲಿರುವ ಅತಿಶಯವಾದ
ಸೈನ್ಯಗಳೂ, ಆಹವ-
ಯುದ್ಧದಮಹಾ
ವಸ್ತುಗಳನ್ನೂ) ಓರಂತೆ
(ಕ್ರಮವಾಗಿ)
ಮಂಗಳಕಾರ್ಯಂಗಳನು
ಇತ್ತು ಮತ್ತೆ
ಮಣಿಭೂಷಾತುಂಗರತ್ನಾಂಶು
ಪಾಟಳಿತಂಗೆ (ಒಂದೇ

ಸಮನಾದ
ಮಂಗಳಕಾರ್ಯಗಳನ್ನು
ಪಾಟಳಕಾಂತಿಯಿಂದ) ಈಗೆ
(ಕೊಡಲಿ) ಅರಿಗಂಗೆ ಮಂಗಳ
ಮಹಾಶ್ರೀಯಂ
ಜಯಶ್ರೀಯುಮಂ
(ಪ್ರಕಾಶಮಾನವಾದ ಅರಿಗಂಗೆ
ಮಂಗಳಕಾರ್ಯಗಳನ್ನೂ
ಜಯಶ್ರೀಯನ್ನೂ
ದಯಪಾಲಿಸಲಿ)

ಪದ್ಯ-೩೪:ಅರ್ಥ: ಸಮುದ್ರ, ದ್ವೀಪ, ಪಾತಾಳ, ಆಕಾಶ ಮತ್ತು ಕುಲಪರ್ವತಗಳು ತಮ್ಮಲ್ಲಿರುವ ಅಮೂಲ್ಯವಾದ ವಸ್ತುಗಳನ್ನೂ, ತನ್ನಲ್ಲಿರುವ ಅತಿಶಯವಾದ ಸೈನ್ಯಗಳೂ, ಆಹವ- ಯುದ್ಧದಮಹಾ ವಸ್ತುಗಳನ್ನೂ, ಒಂದೇ ಸಮನಾದ ಮಂಗಳಕಾರ್ಯಗಳನ್ನು ಪಾಟಳಕಾಂತಿಯಿಂದ

ಪ್ರಕಾಶಮಾನವಾದ ಅರಿಗಂಗೆ
ಮಂಗಳಕಾರ್ಯಗಳನ್ನೂ
ಜಯಶ್ರೀಯನ್ನೂ
ದಯಪಾಲಿಸಲಿ.

**ನಯನಾನಂದ
ಮೃಗಾಂಕಬಿಂಬಮುದಯಂಗೆ
ಯ್ವರ್ಕಬಿಂಬಂ ಮನ
ಪ್ರಿಯಲಕ್ಷ್ಮೀ ವದನೇಂದು
ಬಿಂಬಮಖಿಲ
ಕ್ಷ್ಮಾದ್ವೀಪವಾರ್ಧಿಪ್ರಮೋ।**

ದ

ಯಶೋಬಿಂಬಮುದಗ್ರದಿಕ್ಕರಿ

ಕರಾಕರಾಕಾರೋಲ್ಲಸದ್ಬಾಹು

ಗೀ

ಪ್ರಿಯಗಳ್ಳಂಗೊಸೆದೀಗೆ

ಮಂಗಳಮಹಾಶ್ರೀಯಂ

ಜಯಶ್ರೀಯುಮಂ|| ೩೫ ||

ಪದ್ಯ-೩೫:ಪದವಿಭಾಗ-

ಅರ್ಥ:ನಯನಾನಂದ

ಮೃಗಾಂಕಬಿಂಬಂ (ಕಣ್ಣುಗಳಿಗೆ

ಆನಂದವನ್ನು

ಉಂಟುಮಾಡುವ
ಚಂದ್ರಬಿಂಬವೂ) ಉದಯಂ
ಗೆಯ್ವ ಅರ್ಕಬಿಂಬಂ
(ಮೂಡುತ್ತಿರುವ
ಬಾಲಸೂರ್ಯನ ಬಿಂಬವೂ)
ಮನಪ್ರಿಯಲಕ್ಷ್ಮೀ ವದನೇಂದು
ಬಿಂಬಂ (ಮನಸ್ಸಿಗೆ
ಪ್ರಿಯಳಾದ ಲಕ್ಷ್ಮೀದೇವಿಯ
ಮುಖಚಂದ್ರಬಿಂಬವೂ)
ಅಖಿಲ ಕ್ಷ್ಮಾ (ಭೂಮಿ)ದ್ವೀಪ
ವಾರ್ಧಿ ಪ್ರಮೋದ

ಯಶೋಬಿಂಬಂ
(ಸಮಸ್ತವಾದ ಭೂಮಿ, ದ್ವೀಪ,
ಮತ್ತು ಸಮುದ್ರಗಳಿಗೆ
ಸಂತೋಷವನ್ನುಂಟುಮಾಡು
ವ ಯಶೋಬಿಂಬವೂ
-ಕ್ರೀರ್ತಿಸಮೂಹವೂ,)
ಉದಗ್ರ ದಿಕ್ಕರಿ ಕರ ಆಕರ
ಆಕಾರೋಲ್ಲಸತ್ ಬಾಹುಗೆ
(ದೀರ್ಘವಾದ ದಿಗ್ಗಜಗಳ
ಸೊಂಡಿಲುಗಳ ಆಕಾರವನ್ನುಳ್ಳ
ಪ್ರಕಾಶಮಾನವಾದ

ಬಾಹುಗಳನ್ನುಳ್ಳ) ಈ
ಪ್ರಿಯಗಳ್ಳಂಗೆ ಒಸೆದು ಈಗೆ
ಮಂಗಳಮಹಾಶ್ರೀಯಂ
ಜಯಶ್ರೀಯುಮಂ
(ಪ್ರಿಯಗಳ್ಳನೆಂಬ
ಬಿರುದಾಂಕಿತನಾದ
ಅರಿಕೇಸರಿಗೆ (ಅರ್ಜುನನಿಗೆ)
ಸಂತೋಷಿಸಿ
ಮಂಗಳಮಹಾಶ್ರೀಯನ್ನೂ
ಜಯಶ್ರೀಯನ್ನೂ ಈಗೆ-
ಕೊಡಲಿ)

ಪದ್ಯ-೩೫:ಅರ್ಥ: ಕಣ್ಣುಗಳಿಗೆ ಆನಂದವನ್ನು ಉಂಟುಮಾಡುವ ಚಂದ್ರಬಿಂಬವೂ, ಮೂಡುತ್ತಿರುವ ಬಾಲಸೂರ್ಯನ ಬಿಂಬವೂ, ಮನಸ್ಸಿಗೆ ಪ್ರಿಯಳಾದ ಲಕ್ಷ್ಮೀದೇವಿಯ ಮುಖಚಂದ್ರಬಿಂಬವೂ, ಸಮಸ್ತವಾದ ಭೂಮಿ, ದ್ವೀಪ, ಮತ್ತು ಸಮುದ್ರಗಳಿಗೆ

ಸಂತೋಷವನ್ನುಂಟುಮಾಡು
ವ ಯಶೋಬಿಂಬವೂ
(ಕ್ರೀರ್ತಿಸಮೂಹವೂ)
ದೀರ್ಘವಾದ ದಿಗ್ಗಜಗಳ
ಸೊಂಡಿಲುಗಳ ಆಕಾರವನ್ನುಳ್ಳ
ಪ್ರಕಾಶಮಾನವಾದ
ಬಾಹುಗಳನ್ನುಳ್ಳ
ಪ್ರಿಯಗಳ್ಳನೆಂಬ
ಬಿರುದಾಂಕಿತನಾದ
ಅರಿಕೇಸರಿಗೆ (ಅರ್ಜುನನಿಗೆ)
ಸಂತೋಷಿಸಿ

ಮಂಗಳಮಹಾಶ್ರೀಯನ್ನೂ ಜಯಶ್ರೀಯನ್ನೂ ಕೊಡಲಿ

ವ|| ಎಂದು ಪೊಗೞ್ದು ಮಾಣ್ದ ನಂತರದೊಳ್ ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜಾದಿ ಮಹಾಮುನಿಪ್ರತತಿಗಳ್ ಬಂದು ನಿಜಕಮಂಡಲುಜಲಂಗಳೊಳ್ ಬೆರಸಿದ ಧವಳಾಕ್ಷತಂಗಳಂ ತಳಿದು-

ವಚನ:ಪದವಿಭಾಗ-ಅರ್ಥ:ಎಂದು ಪೊಗಳ್ದು ಮಾಣ್ದ ನಂತರದೊಳ್ (ಎಂದು ಹೊಗಳಿ ನಿಲ್ಲಿಸಿಯಾದ ಮೇಲೆ) ವ್ಯಾಸ ಕಶ್ಯಪ ವಿಶ್ವಾಮಿತ್ರ ಭರದ್ವಾಜಾದಿ ಮಹಾಮುನಿ ಪ್ರತತಿಗಳ್ ಬಂದು ನಿಜಕಮಂಡಲುಜಲಂಗಳೊಳ್ (ತಮ್ಮ ಕಮಂಡಲುಗಳಲ್ಲಿ) ಬೆರಸಿದ ಧವಳಾಕ್ಷತಂಗಳಂ

ತಳಿದು (ನೀರಿನಿಂದ ಬೆರಸಿದ ಬಿಳಿಯ ಅಕ್ಷತೆಗಳನ್ನು ಚೆಲ್ಲಿ- ಆಶೀವಾದಪೂರ್ವಕ ತಲೆಯ ಮೇಲೆ ಎರಚಿ)- ಹರಸಿದರು)- **ವಚನ:ಅರ್ಥ**: ಎಂದು ಹೊಗಳಿ ನಿಲ್ಲಿಸಿಯಾದ ಮೇಲೆ, ವ್ಯಾಸ ಕಶ್ಯಪ ವಿಶ್ವಾಮಿತ್ರ ಭಾರದ್ವಾಜರೇ ಮೊದಲಾದ ಮಹಾಮುನಿಗಳ ಸಮೂಹಗಳು ಬಂದು ತಮ್ಮ ಕಮಂಡಲುಗಳಲ್ಲಿ ನೀರಿನಿಂದ

ಬೆರಸಿದ ಬಿಳಿಯ ಅಕ್ಷತೆಗಳನ್ನು ಚೆಲ್ಲಿ (ಆಶೀವಾದಪೂರ್ವಕ ತಲೆಯ ಮೇಲೆ ಎರಚಿ) ಹರಸಿದರು.

ವ|| ಅರಿ ಭೂಪಾಳ ದವಾನಳಂ ಹರಿಗ ನಿನ್ನುಗ್ರಾಸಿ ಧಾರಾಂಬು ಶ್ರೀ ಕರದಿಂ ಮಱುಗೆ ದಾನವರ್ಷ ಸಲಿಲಂ ಕೊಳ್ಗರ್ಥಿ ಸಸ್ಯಕ್ಕೆ ಕಿ| ನ್ನರಿಯರ್ ಪಾಡುಗೆ ನಿನ್ನದೊಂದು ಪಲವುಂ

ಬಣ್ಣಂಗಳಂ ಮೇರು ಮಂ
ದರ ಕೈಳಾಸ ಮಹೇಂದ್ರ ನೀಳ
ನಿಷಧಾದ್ರೀಂದ್ರೋಪಕಂಠಂಗ
ಳೊಳ್|| ೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಅರಿ ಭೂಪಾಳ ದವಾನಳಂ (ಶತ್ರುರಾಜರೆಂಬ ಕಾಡುಕಿಚ್ಚು) ಹರಿಗ ನಿನ್ನ ಉಗ್ರ ಅಸಿ ಧಾರಾ(ನಿನ್ನ ಭಯಂಕರವಾದ ಕತ್ತಿಯ ಅಲಗೆಂಬ) ಅಂಬು ಶ್ರೀಕರದಿಂ

(ನೀರಿನ ಹನಿಗಳಿಂದ)
ಮೞ್ಗೆ (ಅಳಿದುಹೋಗಲಿ.)
ದಾನವರ್ಷ ಸಲಿಲಂ ಕೊಳ್ಗರ್ಥಿ
ಸಸ್ಯಕ್ಕೆ (ಯಾಚಕರೆಂಬ ವೃಕ್ಷಕ್ಕೆ
ನಿನ್ನ ದಾನವೆಂಬ ಮಳೆಯು
ಸುರಿಯಲಿ.) ಕಿನ್ನರಿಯರ್
ಪಾಡುಗೆ ನಿನ್ನದೊಂದು
ಪಲವುಂ ಬಣ್ಣಂಗಳಂ (ನಿನ್ನ
ಸ್ತುತಿರೂಪವಾದ ಅನೇಕ
ಹಾಡುಗಳನ್ನು ಕಿನ್ನರಿಯರು)
ಮೇರು ಮಂದರ ಕೈಳಾಸ

ಮಹೇಂದ್ರ, ನೀಳ ನಿಷಧ - ಅದ್ರೀಂದ್ರ ಉಪಕಂಠಂಗಳೊಳ್ (ಸಮೀಪ ಪ್ರದೇಶಗಳಲ್ಲಿ)- (ಮೇರು, ಮಂದರ, ಕೈಲಾಸ, ಮಹೇಂದ್ರ, ನಿಷಧ ಪರ್ವತಗಳ ಸಮೀಪ ಪ್ರದೇಶಗಳಲ್ಲಿ (ತಪ್ಪಲಿನಲ್ಲಿ) ಹಾಡಲಿ.)

ಪದ್ಯ-೩೬:ಅರ್ಥ:ಎಲ್ಲೈ ಅರ್ಜುನನೇ ಶತ್ರುರಾಜರೆಂಬ

ಕಾಡುಕಿಚ್ಚು ನಿನ್ನ ಭಯಂಕರವಾದ ಕತ್ತಿಯ ಅಲಗೆಂಬ ನೀರಿನ ಹನಿಗಳಿಂದ (ಅಸಿಧಾರೆಯ ಹನಿಗಳಿಂದ) ಅಳಿದುಹೋಗಲಿ. ಯಾಚಕರೆಂಬ ವೃಕ್ಷಕ್ಕೆ ನಿನ್ನ ದಾನವೆಂಬ ಮಳೆಯು ಸುರಿಯಲಿ. ನಿನ್ನ ಸ್ತುತಿರೂಪವಾದ ಅನೇಕ ಹಾಡುಗಳನ್ನು ಕಿನ್ನರಿಯರು ಮೇರು, ಮಂದರ, ಕೈಲಾಸ,

ಮಹೇಂದ್ರ, ನಿಷಧ
ಪರ್ವತಗಳ ಸಮೀಪ
ಪ್ರದೇಶಗಳಲ್ಲಿ (ತಪ್ಪಲಿನಲ್ಲಿ)
ಹಾಡಲಿ.

ವ|| ಎಂದು ಪರಸಿ ತಮ್ಮ ನಿವಾಸಂಗಳ್ಗೆ ಪೋದರಾಗಳ್ ಧರ್ಮನಂದನನೆನಗೆ ನಿನ್ನ ರಾಜ್ಯಾಭಿವೃದ್ಧಿಯಂ ನೋಡುತಿರ್ಪುದುಂ ಮುಮುಕ್ಷು ವೃತ್ತಿಯೊಳಿರ್ಪುದುಮಲ್ಲದೆ

ಪೆಱತೇನುಂ ಬಾೞ್ತೆಯಲ್ಲೆಂದು ಭೀಮ ನಕುಳ ಸಹದೇವರ್ಕಳ್ಗೆ ದುರ್ಯೋಧನನ ತಮ್ಮನಪ್ಪ ಯುಯುತ್ಸುಗಮವರ್ ಬೇಡಿದ ನಾಡುಗಳನೆ ಕುಡಿಸಿ ಸಂತಸಂಬಡಿಸೆ ಪುರುಷೋತ್ತಮನಂ ವಿಬುಧವನಜವನಕಳಹಂಸನು ಮಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಪರಸಿ ತಮ್ಮ

ನಿವಾಸಂಗಳ್ಗೆ ಪ್ೋದರಾಗಳ್
(ಅರ್ಜುನನಿಗೆ ವಿಜಯ ಶ್ರೀ
ದೊರೆಯಲಿ ಎಂಬುದಾಗಿ
ಆಶೀರ್ವಾದಮಾಡಿ ತಮ್ಮ
ಮನೆಗಳಿಗೆ ಹೋದರು.)
ಧರ್ಮನಂದನನು ಎನಗೆ ನಿನ್ನ
ರಾಜ್ಯಾಭಿವೃದ್ಧಿಯಂ
ನೋಡುತಿರ್ಪುದುಂ (ಆಗ
ಧರ್ಮರಾಯನು ಅರ್ಜುನ!
ನಿನ್ನ ರಾಜ್ಯಾಭಿವೃದ್ಧಿಯನ್ನು
ನೋಡುತ್ತಿರುವುದೂ)

ಮುಮುಕ್ಷು ವೃತ್ತಿಯೊಳು
ಇರ್ಪುದುಮಲ್ಲದೆ ಪೆಱತೇನುಂ
ಬಾೞ್ತೆಯಲ್ಲೆಂದು
(ಮೋಕ್ಷೇಚ್ಛುಗಳಾದ
ತಪಸ್ವಿಗಳ
ವೃತ್ತಿಯಲ್ಲಿರುವುದೂ ಅಲ್ಲದೆ
ನನಗೆ ಬೇರೆ ಯಾವ
ಪ್ರಯೋಜನವೂ ಇಲ್ಲ ಎಂದು
ಹೇಳಿ) ಭೀಮ ನಕುಳ
ಸಹದೇವರ್ಕಳ್ಗೆ
ದುರ್ಯೋಧನನ ತಮ್ಮನಪ್ಪ

ಯುಯುತ್ಸುಗಮವರ್
(ಹಾಗೆಯೇ ಭೀಮ ನಕುಲ
ಸಹದೇವರುಗಳಿಗೂ
ದುರ್ಯೋಧನನ ತಮ್ಮನಾದ
ಯುಯುತ್ಸುವಿಗೂ) ಬೇಡಿದ
ನಾಡುಗಳನೆ ಕುಡಿಸಿ
ಸಂತಸಂಬಡಿಸೆ (ಅವರು
ಕೇಳಿದ ನಾಡುಗಳನ್ನು/
ರಾಜ್ಯಗಳನ್ನು ಕೊಡಿಸಿ
ಸಂತೋಷಪಡಿಸಿದನು.)
ಪುರುಷೋತ್ತಮನಂ

ವಿಬುಧವನಜವನಕಳಹಂಸ
ನುಂ ಇಂತೆಂದಂ (ಅರ್ಜುನನು
ಕೃಷ್ಣನನ್ನು ಕುರಿತು
ಹೀಗೆಂದನು,)-
ವಚನ:ಅರ್ಥ:ಅರಿಗನಿಗೆ/
ಅರ್ಜುನನಿಗೆ ವಿಜಯ ಶ್ರೀ
ದೊರೆಯಲಿ ಎಂಬುದಾಗಿ
ಆಶೀರ್ವಾದಮಾಡಿ ತಮ್ಮ
ಮನೆಗಳಿಗೆ ಹೋದರು. ಆಗ
ಧರ್ಮರಾಯನು ಅರ್ಜುನ!
ನಿನ್ನ ರಾಜ್ಯಾಭಿವೃದ್ಧಿಯನ್ನು

ನೋಡುತ್ತಿರುವುದೂ,
ಮೋಕ್ಷೇಚ್ಛುಗಳಾದ ತಪಸ್ವಿಗಳ
ವೃತ್ತಿಯಲ್ಲಿರುವುದೂ ಅಲ್ಲೆದ
ನನಗೆ ಬೇರೆ ಯಾವ
ಪ್ರಯೋಜನವೂ ಇಲ್ಲ ಎಂದು
ಹೇಳಿ ಹಾಗೆಯೇ ಭೀಮ
ನಕುಲ ಸಹದೇವರುಗಳಿಗೂ
ದುರ್ಯೋಧನನ ತಮ್ಮನಾದ
ಯುಯುತ್ಸುವಿಗೂ ಅವರು
ಕೇಳಿದ ನಾಡುಗಳನ್ನು/
ರಾಜ್ಯಗಳನ್ನು ಕೊಡಿಸಿ

ಸಂತೋಷಪಡಿಸಿದನು.

ಅರ್ಜುನನು ಕೃಷ್ಣನನ್ನು

ಕುರಿತು ಹೀಗೆಂದನು,

ಕಂ|| ನಿನ್ನ ದಯೆಯಿಂದಮರಿ

ನೃಪ

ರನ್ನೆ ಕೊಂದೆಮಗೆ ಸಕಳ

ರಾಜ್ಯಶ್ರೀಯುಂ|

ನಿನ್ನ ಬಲದಿಂದೆ ಸಾರ್ದುದು

ನಿನ್ನುಪಕಾರಮನದೇತರೊಳ್

ನೀಗುವೆನೋ|| ೩೭ ||

ಪದ್ಯ-೩೭:ಪದವಿಭಾಗ-ಅರ್ಥ:ನಿನ್ನ ದಯೆಯಿಂದಂ ಅರಿ ನೃಪರನ್ನೆ ಕೊಂದ ಎಮಗೆ (ನನ್ನ ಕೃಪೆಯಿಂದ ಶತ್ರುರಾಜರನ್ನು ಸಂಪೂರ್ಣವಾಗಿ ಕೊಂದ ನಮಗೆ) ಸಕಳ ರಾಜ್ಯಶ್ರೀಯುಂ ನಿನ್ನ ಬಲದಿಂದೆ ಸಾರ್ದುದು (ಸಕಲ ರಾಜ್ಯಸಂಪತ್ತೂ ನಿನ್ನ ಬೆಂಬಲದಲೇ ಕೈಸೇರಿತು.) ನಿನ್ನ ಉಪಕಾರಮನು

ಅದೇತರೊಳ್ ನೀಗುವೆನೋ (
ನಿನ್ನ ಸಹಾಯವನ್ನು ಯಾವ
ರೀತಿಯಲ್ಲಿ ತೀರಿಸಬೇಕೊ!.)

ಪದ್ಯ-೩೭:ಅರ್ಥ: ನಿನ್ನ
ಕೃಪೆಯಿಂದ ಶತ್ರುರಾಜರನ್ನು
ಸಂಪೂರ್ಣವಾಗಿ ಕೊಂದ
ನಮಗೆ ಸಕಲ ರಾಜ್ಯಸಂಪತ್ತೂ
ನಿನ್ನ ಬೆಂಬಲದಲೇ ಕೈಸೇರಿತು.
ನಿನ್ನ ಸಹಾಯವನ್ನು ಯಾವ
ರೀತಿಯಲ್ಲಿ ತೀರಿಸಬೇಕೊ!
ಎಂದು ಅರ್ಜುನನು ಕೃಷ್ಣನ

ಸಹಾಯವನ್ನು ಸ್ಮರಿಸಿ ಹೇಳಿದನು.

ವ|| ಎಂದು ಮುಕುಂದನನು ಅನುನಯ ವಚನ ರಚನಾ ಪರಂಪರೆಗಳಿಂದ ಸಂತಸಂ ಬಡೆ ನುಡಿದು ಸಾತ್ಯಕಿವೆರಸು ಅನರ್ಘ್ಯವಸ್ತುವಾಹನ ಸಹಿತಂ ದ್ವಾರಾವತಿಗೆ ಕಳಿಪಿ

ವಚನ:ಪದವಿಭಾಗ-ಅರ್ಥ:ಎಂದು ಮುಕುಂದನನು ಅನುನಯ

ವಚನ ರಚನಾ
ಪರಂಪರೆಗಳಿಂದ ಸಂತಸಂ
ಬಡೆ ನುಡಿದು (ಎಂದು
ಕೃಷ್ಣನನ್ನು ಪ್ರೀತಿಯುಕ್ತವಾದ
ಮಾತುಗಳ ಸಮೂಹದಿಂದ
ಸಂತೋಷಪಡುವ ಹಾಗೆ
ಮಾತನಾಡಿ) ಸಾತ್ಯಕಿವೆರಸು
ಅನರ್ಘ್ಯವಸ್ತುವಾಹನ
ಸಹಿತಂ ದ್ವಾರಾವತಿಗೆ ಕಳಿಪಿ
(ಸಾತ್ಯಕಿಯೊಡನೆ ಬೆಲೆಯೇ
ಇಲ್ಲದ ಅನೇಕ

ವಸ್ತುವಾಹನಗಳ ಸಹಿತವಾಗಿ ದ್ವಾರಾವತಿಗೆ ಕಳುಹಿಸಿದನು).

ವ|| ಎಂದು ಕೃಷ್ಣನನ್ನು ಪ್ರೀತಿಯುಕ್ತವಾದ ಮಾತುಗಳ ಸಮೂಹದಿಂದ ಸಂತೋಷಪಡುವ ಹಾಗೆ ಮಾತನಾಡಿ ಸಾತ್ಯಕಿಯೊಡನೆ ಬೆಲೆಯೇ ಇಲ್ಲದ ಅನೇಕ ವಸ್ತುವಾಹನಗಳ ಸಹಿತವಾಗಿ ದ್ವಾರಾವತಿಗೆ ಕಳುಹಿಸಿದನು.

ಅರಿಕೇಸರಿ ರಾಜನ ಬಿರುದುಗಳ ವಿವರಣೆ

ವ||ಸಕಳಭುವನತಳ ಭಾರಮನವಯವದಿಂ ತಾಳ್ದಿರ್ದುದಾತ್ತವೃತ್ತಿಯೊಳು ದಾತ್ತನಾರಾಯಣನುಂ ಭುವನ ಭವನೋದರದೊಳ್ ಪಸರಿಸಿದ ತೇಜದೊಳ್ ಪ್ರಚಂಡ ಮಾರ್ತಂಡನುಂ ಆವೆಡೆಯೊಳಮಸ ಮಾನಮೆನಿಸಿದ

ಮಹಾಮಹಿಮೆಯೊಳು ಉದಾರಮಹೇಶ್ವರನುಂ

ವಚನ:ಪದವಿಭಾಗ-ಅರ್ಥ:ಳಭುವನತಳ ಭಾರಮನವಯವದಿಂ ತಾಳ್ದಿರ್ದು ಉದಾತ್ತವೃತ್ತಿಯೊಳು ಉದಾತ್ತನಾರಾಯಣನುಂ ಭುವನ ಭವನೋದರದೊಳ್ ಪಸರಿಸಿದ ತೇಜದೊಳ್ ಪ್ರಚಂಡ ಮಾರ್ತಂಡನುಂ

ಆವೆಡೆಯೊಳಮಸ
ಮಾನಮೆನಿಸಿದ
ಮಹಾಮಹಿಮೆಯೊಳು
ಉದಾರಮಹೇಶ್ವರನುಂ

ವ||ನಳ ನಹುಷ
ಮಾಂಧಾತರಂ ಮಸುಳಿವಂದ
ನೆಗೞ್ತೆಯೊಳೆ
ಮನುಜಮಾಂಧಾತನುಂ
ತ್ರಿಣೇತ್ರನುಮನಸುಂಗೊಳಿಸಿದ
ಸಾಹಸದೊಳ್
ಕದನತ್ರಿಣೇತ್ರನುಂ

ವಚನ:ಪದವಿಭಾಗ-

ಅರ್ಥ:ನಳನಹುಷಮಾಂಧಾತ

ರನ್ನು ಕಾಂತಿಹೀನಮಾಡಿದ

ಪ್ರಸಿದ್ಧಿಯಿಂದ

ಮನುಜಮಾಂಧಾತನೂ

ಮುಕ್ಕಣ್ಣನನ್ನೂ

ಆಶ್ಚರ್ಯಪಡಿಸಿದ

ಸಾಹಸದಿಂದ

ಕದನತ್ರಿಣೇತ್ರನೂ

ವ||ಅಚಳಿತ ಪ್ರತಿಜ್ಞೆಯೊಳ್

ಪ್ರತಿಜ್ಞಾ ಗಾಂಗೇಯನುಂ

ರಾಮನುಮನೇಲಿಸಿದ ಸಹಾಸದೊಳಕಳಂಕರಾಮನುಂ

ವಚನ:ಪದವಿಭಾಗ-

ಅರ್ಥ:ಚಲಿಸದೇ ಇದ್ದ ಪ್ರತಿಜ್ಞೆಯಿಂದ ಪ್ರತಿಜ್ಞಾಗಾಂಗೇಯನೂ ರಾಮನನ್ನೂ ಹಿಯ್ಯಾಳಿಸಿದ ಸಾಹಸದಿಂದ ಅಕಳಂಕ ರಾಮನೂ

ವಚನ:ಪದವಿಭಾಗ-ಅರ್ಥ:ಸಮಸ್ತವಾದ ಭೂಮಂಡಲದ ಭಾರವನ್ನೂ ಸುಲಭವಾಗಿ ಧರಿಸಿ ಉದಾತ್ತ ವೃತ್ತಿಯಲ್ಲಿದ್ದು ಉದಾತ್ತನಾರಾಯಣನೂ ಭುವನೋದರದಲ್ಲಿ (ಪ್ರಪಂಚವೆಂಬ ಮನೆಯ ಒಳಭಾಗದಲ್ಲಿ) ಪ್ರಸರಿಸಿದ ತೇಜಸ್ಸಿನಿಂದ ಪ್ರಚಂಡಮಾರ್ತಂಡನೂ

(ಅತ್ಯಂತ ಕಾಂತಿಯುಕ್ತವಾದ ಸೂರ್ಯ) ಯಾವ ಕಡೆಯಲ್ಲಿಯೂ ಸಮಾನವೇ ಇಲ್ಲದವನು ಎಂಬ ಮಹಿಮೆಯಿಂದ ಉದಾರಮಹೇಶ್ವರನೂ

ವ||ಬೇಡಿದರ ಬೇಡಿದುದಂ ಮಾರ್ಕೊಳ್ಳದೀವುದಱಿಂ ಪ್ರತ್ಯಕ್ಷಜೀಮೂತವಾಹನೆನುಂ ಚತುರ್ದನ ಭುವನಂಗಳೊಳ್ ತನಗೆ

ಮಾರ್ಮಲೆವರಿಲ್ಲಪ್ಪುದಱಿಂ ಜಗದೇಕಮಲ್ಲನುಂ ಉರ್ಕಿ ಬಂದು ಮೇಲ್ವಾಯ್ದ ಮಾರ್ವಲಂಗಳಂ ತನ್ನ ಬಾಳ ಬಾಯೊಳಱಿಡಿದುದಱಿಂ ಪರಸೈನ್ಯಭೈರವನುಂ

ವಚನ:-ಅರ್ಥ:ಬೇಡಿದವರಿಗೆ ಅವರು ಬೇಡಿದುದನ್ನು ಪ್ರತಿಮಾತನಾಡದೆ ಕೊಡುವುದರಿಂದ ಪ್ರತ್ಯಕ್ಷ ಜೀಮೂತವಾಹನನೂ,

ಹದಿನಾಲ್ಕು

ಲೋಕಗಳಲ್ಲಿಯೂ ತನಗೆ

ಪ್ರತಿಭಟಿಸುವವರಿಲ್ಲದುದರಿಂ

ದ ಜಗದೇಕಮಲ್ಲನೂ, ಕೊಬ್ಬಿ

ಬಂದು ಮೇಲೆ ಬೀಳುವ

ಪ್ರತಿಸೈನ್ಯವನ್ನು ತನ್ನ ಕತ್ತಿಯ

ಮೊನೆಯಿಂದ/

ನಾಶಪಡಿಸಿದುದರಿಂದ

ಪರಸೈನ್ಯ ಭೈರವನೂ

ವ||ಅರಾತಿ ಗಜಘಟೆಗಳೆನಿತು

ಬಂದೊಡ್ಡೆಯುಂ

ತನ್ನೊಂದಮುಂದಧ್ವನಿಗೊಡ್ಡೊಡೆ ದೋಡುವುದಱಿಂ ವೈರಿಗಜಘಟಾವಿಘಟನನುಂ

ಶತ್ರುಪಕ್ಷಗಳ ಆನೆಯ ಸಮೂಹವು ಎಷ್ಟು ಬಂದು ಚಾಚಿದರೂ ತನ್ನ ಒಂದು ಗರ್ಜನೆಗೆ ಗುಂಪು ಚೆದುರಿ ಓಡುವುದರಿಂದ ವೈರಿಗಜಘಟಾವಿಘಟನನೂ

ವ||ತನಗಿದಿರನದಿರದೊಡ್ಡಿದ ವಿದ್ವಿಷ್ಟ ಬಲಂ ನೋಡೆ ನೋಡೆ ಕರಗುವುದಱಿಂ ವಿದ್ವಿಷ್ಟ ವಿದ್ರಾವಣನುಂ

ವಚನ:-ಅರ್ಥ:ತನಗೆ ಇದಿರಾಗಿ ಹೆದರದೆ ಬಂದು ಒಡ್ಡಿದ ಶತ್ರುಸೈನ್ಯವು

ನೋಡುನೋಡುತ್ತಿರುವಾಗಲೇ
ಕರುಗುವುದರಿಂದ ವಿದ್ವಿಷ್ಟ
ವಿದ್ರಾವಣನೂ

ವ||ಅರಾತಿ ವನ
ಗಹನಮನಳುರ್ದು
ಕೊಳ್ವುದಱಿಂದಮರಾತಿ
ಕಾಳಾನಳನುಂ ಪಗೆವರೆಂಬ
ಕುರಂಗಂಗಳನೊಂದೊಂದ
ಳೊಂದಲೀ
ಯದೆಚ್ಚಿಟ್ಟುವುದಱಿಂ
ರಿಪುಕುರಂಗಕಂಠೀರವನುಂ

ವಚನ:-ಅರ್ಥ:ಶತ್ರುಗಳೆಂಬ ಕಾಡಿನ ಒಳಭಾಗವನ್ನು ವ್ಯಾಪಿಸಿ ಸುಡುವುದರಿಂದ ಅರಾತಿ ಕಾಳಾನಳನೂ ಹಗೆಗಳೆಂಬ ಜಿಂಕೆಗಳನ್ನು ಒಂದೂ ಬಿಡದಂತೆ ಬೆನ್ನಟ್ಟಿ ಕೊಲ್ಲುವುದರಿಂದ ಅವಕಾಶವಿಲ್ಲದೆ ಓಡಿಸುವುದರಿಂದ ರಿಪು ಕುರಂಗಕಂಠೀರವನೂ

ವ||ವಿಕ್ರಾಂತದೊಳ್ ತನ್ನಿರ್ದಲ್ಲಿ ತಾನೆ ಪಿರಿಯನಪ್ಪುದಱಿಂ ವಿಕ್ರಾಂತ ತುಂಗನುಂ ಆವೆಡೆಯೊಳಂ ವಿಕ್ರಮಂ ಕ್ರಮಮೆನಿಸಿದುದಱಿಂ ಪರಾಕ್ರಮಧವಳನುಂ

ವಚನ:-

ಅರ್ಥ:ಪರಾಕ್ರಮದಲ್ಲಿ ತಾನಿದ್ದ ಜಾಗದಲ್ಲಿಯೇ ಹಿರಿಯನಾದುದರಿಂದ ವಿಕ್ರಾಂತತುಂಗನೂ, ಎಲ್ಲ

ಕಡೆಯಲ್ಲಿಯೂ ಪರಾಕ್ರಮವೇ ತನಗೆ ಯೋಗ್ಯವಾದುದೆಂದು ಅಂಗೀಕರಿಸುವುದರಿಂದ ಪರಾಕ್ರಮಧವಳನೂ

ವ||ಎಂತಪ್ಪ ಸಂಗ್ರಾಮದೊಳಂ ಪೋಗದೆ ನಟ್ಟು ನಿಲ್ವುದಱಂ ಸಮರೈಕಮೇರುವುಂ

ವಚನ:ಪದವಿಭಾಗ-

ಅರ್ಥ:ಎಂತಹ ಯುದ್ಧದಲ್ಲಿಯೂ ಬಿಟ್ಟುಹೋಗದೆ ಸ್ಥಿರವಾಗಿ

ನಿಲ್ಲುವುದರಿಂದ

ಸಮರ್ರೈಕಮ್ೇರುವ್ೂ

ವ|\ಗೊಜ್ಜಿಗನೆಂಬ ಸಕಳ

ಚಕ್ರವರ್ತಿ ಮುಳಿಯೆ ತನಗೆ

ಶರಣಾಗತನಾದ

ವಿಜಯಾದಿತ್ಯನಂ ಕಾದ

ಬಲ್ಲಾಳ್ತನದೊಳ್ ಶರಣಾಗತ

ಜಳನಿಯುಂ ವಿನಯಮೇ

ತನಗೆ ಭೂಷಣಮಾಗೆ

ಮಾಡುವುದಱಿಂ ವಿನಯ

ಭೂಷಣನುಂ

ವಚನ:ಪದವಿಭಾಗ-ಅರ್ಥ:

ಗೊಜ್ಜಿಗನೆಂಬ ಸಕಳಚಕ್ರವರ್ತಿಯ ಕೋಪಕ್ಕೆ ಪಾತ್ರನಾದ ವಿಜಯಾದಿತ್ಯನನ್ನು ರಕ್ಷಿಸಿದ ಪರಾಕ್ರಮದಿಂದ (ರಕ್ಷಿಸಿದುದರಿಂದ) ಶರಣಾಗತಜಳನಿಯ. ವಿನಯವನ್ನೇ ತನಗೆ ಒಡವೆಯನ್ನಾಗಿ

ಮಾಡಿಕೊಂಡಿರುವುದರಿಂದ ವಿನಯಭೂಷಣನೂ

ವ|\ಲೋಕಕ್ಕೆಲ್ಲಮಸಾಧಾರಣ ಮಪ್ಪ ದಾನಗುಣದೊಳ್ ಲೋಕೈಕಕಲ್ಪದ್ರುಮನುಂ

ವಚನ:ಪದವಿಭಾಗ-

ಅರ್ಥ:ಲೋಕಕ್ಕೆಲ್ಲ ಅಸಾಧಾರಣ ರೀತಿಯದಾಗಿರುವ ದಾನಗುಣದಿಂದ ಲೋಕೈಕ ಕಲ್ಪದ್ರುಮನೂ

ವ||ಎನಿತಾನುಂ ಗಜಗಮನಂಗಳಂ ತಾನೆ ಸಮೆದನಪ್ಪುದಱಿಂ ಗಜಗಮನರಾಜಪುತ್ರನುಂ

ವಚನ:ಪದವಿಭಾಗ-

ಅರ್ಥ:ಎಷ್ಟೋ ಗಜಶಾಸ್ತ್ರಗಳನ್ನು ತಾನೆ ರಚಿಸಿರುವುದರಿಂದ ಗಜಾಗಮ ರಾಜಪುತ್ರನೂ

ವ||ಎಂತಪ್ಪ ಗರ್ವವ್ಯಾಳಿಯುಮನತಿವರ್ತಿಗ

ಳುಮನಾರೂಢದೊಳ್ ತನಗಳವಡುವುದಱಿಂದಾರೂಢ ಸರ್ವಜ್ಞನುಂ

ವಚನ:ಪದವಿಭಾಗ-

ಅರ್ಥ:ಎಂತಹ ಮದ್ದಾನೆಯನ್ನೂ ವಶಕ್ಕೆ ಬರದೇ ಇರುವ ತುಂಟಾನೆಗಳನ್ನೂ ಹತ್ತುವುದರಲ್ಲಿ ಸಮರ್ಥನಾಗಿರುವುದರಿಂದ ಆರೂಢಸರ್ವಜ್ಞನೂ

ವ||ಪರಮಾತ್ಮನಂತೆ ಲೋಕಾಲೋಕದ ವಸ್ತುಗಳುಮಂ ಕರತಳಾಮಳಕಮಾಗಱಿವುದ ರಿಂ ನೃಪ ಪರಮಾತ್ಮನುಂ

ವಚನ:ಪದವಿಭಾಗ-

ಅರ್ಥ:ಪರಮಾತ್ಮನ ಹಾಗೆ ಲೋಕಾಲೋಕ ವಸ್ತುಗಳನ್ನು ಕಯ್ಯಲ್ಲಿರುವ ನೆಲ್ಲಿಯಕಾಯಿನಂತೆ

ತಿಳಿದಿರುವುದರಿಂದ ನೃಪಪರಮಾತ್ಮನೂ

ವ||ಎಂತಪ್ಪ ಪಂಡಿತರ ಗೋಷ್ಠಿಯೊಳಂ ತಾನೆ ಸೊಗಯಿಸುವುದಱಿಂ ವಿಬುಧ ವನಜವನಕಳಹಂಸನುಂ

ವಚನ:ಪದವಿಭಾಗ-

ಅರ್ಥ:ಎಂತಹ ವಿದ್ವಾಂಸರ ಸಮೂಹದಲ್ಲಿಯೂ ತಾನೇ ಪ್ರಕಾಶಮಾನವಾಗಿರುವುದರಿಂದ

ವಿಬುಧವನಜವನಕಳಹಂಸ
ನೂ

ವ||ಕೆಯ್ಗೆಯ್ಯದೆ ಸೊಗಯಿಸುವನಪ್ಪುದಱಿಂ ಸಹಜಮನೋಜನುಂ ಎಂತಪ್ಪ ಬರ್ದೆಯರುಮಂ ಬಗೆಗೆ ವರಿಸುವ ತಕ್ಕಿನೊಳ್ ಸುರತಮಕರಧ್ವಜನುಂ

ವಚನ:ಪದವಿಭಾಗ-

ಅರ್ಥ:ಅಲಂಕಾರಮಾಡಿಕೊಳ್ಳದೆಯೇ

ಸುಂದರನಾಗಿರುವುದರಿಂದ

ಸಹಜಮನೋಜನೂ ಎಂತಹ

ಪ್ರೌಢಸ್ತ್ರೀಯರನ್ನೂ ತನ್ನಲ್ಲಿ

ಪ್ರೀತಿಮಾಡುವ ಹಾಗೆ

ಮಾಡುವ ಯೋಗ್ಯತೆಯಿಂದ

ಸುರತಮಕರಧ್ವಜನೂ

ವ||ಕೂರ್ಪ ಕೂರದರ

ಕೂರದರ ಪಡೆಗಳೆರಡುಂ

ತನ್ನನೆ ಮೆಚ್ಚುವುದಱಿಂ

ಪಡೆಮೆಚ್ಚೆಗಂಡನುಂ

ವಚನ:ಪದವಿಭಾಗ-

ಅರ್ಥ:ಪ್ರೀತಿಸುವ ಮತ್ತು

ಪ್ರೀತಿಸದಿರುವ

ಎರಡುಸೈನ್ಯಗಳೂ ತನ್ನನ್ನು

ಮೆಚ್ಚುವುದರಿಂದ

ಪಡೆಮೆಚ್ಚೆಗಂಡನೂ

ವ||ಎಂತಪ್ಪ

ಮಾರ್ವಲಂಗಳುಮಂ

ನೋಡುತ್ತೆ ಗೆಲ್ವುದಱಿಂ

ನೋಡುತ್ತೆ ಗೆಲ್ವನುಂ ಮಹಾ

ಭಾರಾವತಾರದೊಳತಿರಥ

ಮಹಾರಥ

ಸಮರಥಾರ್ಧರಥಕರ್ಳಂ

ಪಡಲ್ವಡಿಸುವುದಱಿಂ

ಸಾಹಸಾರ್ಜುನನುಮ್

ವಚನ:ಪದವಿಭಾಗ-

ಅರ್ಥ:ಎಂತಹ

ಪ್ರತಿಸೈನ್ಯವನ್ನೂ

ನೋಡುವುದರಿಂದಲೇ

ಗೆಲ್ಲುವುದರಿಂದ ನೋಡುತ್ತೆ

ಗೆಲ್ವನೂ ಮಹಾಭಾರತ

ಯುದ್ಧದಲ್ಲಿ ಅತಿರಥ ಸಮರಥ

ಅರ್ಥರಥರುಗಳನ್ನೂ ಕೆಳಗೆ
ಬೀಳುವ ಹಾಗೆ
ಮಾಡುವುದರಿಂದ
ಸಾಹಸಾರ್ಜುನನೂ

ವ||

ಅಮರೇಂದ್ರನೊಳರ್ಧಾಸನ

ಮೇಱದ ಮಹಾ

ಮಹಿಮೆಯೊಳ್

ಮಹಿಮ್ಮಾರ್ಣವನುಮರಿಕರಿಗ

ಳಂ ಪಡಲ್ವಡಿಸುವ

ಬೀರದೊಳರಿ ಕೇಸರಿಯುಂ ಆಗಿ,

ವಚನ:ಪದವಿಭಾಗ-

ಅರ್ಥ:ದೇವೇಂದ್ರನೊಡನೆ ಅರ್ಧಾಸನವನ್ನು ಹತ್ತಿದ ಮಹಾಮಹಿಮೆಯಿಂದ ಮಹಿಮಾರ್ಣವನೂ, ಶತ್ರುಗಳು ಆನೆಗಳನ್ನು ಕೆಳಗುರುಳಿಸುವುದರಿಂದ ಅರಿಕೇಸರಿಯೂ ಆಗಿ

<u>ಅರಿಕೇಸರಿಯ ಅಭಿರುಚಿ</u>

ಚಂ|| ಪಸದನಮಾವುದಾವ
ಋತುವಿಂಗಮರ್ದೊಪ್ಪುಗು
ಮಾವ ಪೊತ್ತಿದಾ
ವೆಕಸದೊಳೊಂದುಗುಂ
ವಿನಯಮಾವೆಡೆಗಾವುದು
ಚಿಲ್ವುವೆತ್ತು ರಂ|
ಜಿಸುಗುಮದರ್ಕದಂ ಸಮಱಿ
ನಿಚ್ಚಲುಮಾ ಬಿಯಮಾ
ವಿನೋದಮಾ

ಪಸದನಮಾ ವಿಳಾಸದೊಳೊಡಂಬಡೆ ಭೋಗಿಸಿದಂ ಗುಣಾರ್ಣವಂ|| ೩೮ ||

ಪದ್ಯ-೩೮:ಪದವಿಭಾಗ-ಅರ್ಥ:ಪಸದನಮಾವುದು ಆವ ಋತುವಿಂಗೆ ಅಮರ್ದೊಪ್ಪುಗುಂ (ಯಾವ ಋತುವಿಗೆ ಯಾವ ಅಲಂಕಾರವು ಒಪ್ಪುವುದು,) ಆವ ಪೊೞ್ತು ಅದಾವ

ಏಕಸದೊಳ್ ಒಂದುಗುಂ
(ಯಾವ ಹೊತ್ತು ಯಾವ
ಕಾರ್ಯಕ್ಕೆ ಒಪ್ಪುತ್ತದೆ,
ಹೊಂದುತ್ತದೆ) ವಿನಯಂ
ಆವೆಡೆಗೆ ಆವುದು ಚೆಲ್ವುವೆತ್ತು
ರಂಜಿಸುಗುಂ (ಯಾವ ಸ್ಥಳಕ್ಕೆ
ಯಾವ ವಿನಯ (ನೀತಿ)
ಸೊಗಸಾಗಿದೆ) ಅದರ್ಕೆ ಅದಂ
ಸಮಱಿ ನಿಚ್ಚಲುಂ (ಅದಕ್ಕೆ
ಅದನ್ನು ಸರಿಯಾಗಿ ಸೇರಿಸಿ
(ಹೊಂದಿಸಿಕೊಂಡು)

ಪ್ರತಿದಿನವೂ) ಆ ಬಿಯಮ್ ಆ ವಿನೋದಮ್ ಆಪಸದನಮ್ ಆ ವಿಳಾಸದೊಳು ಒಡಂಬಡೆ ಭೋಗಿಸಿದಂ ಗುಣಾರ್ಣವಂ (ಆ ವೆಚ್ಚ, ಆ ಸಂತೋಷ, ಆ ಅಲಂಕಾರ, ಆ ವಿಲಾಸಗಳಲ್ಲಿ ಸೇರಿ ಮನೋಹರವಾಗುವ ರೀತಿಯಲ್ಲಿ (ಅರಿಕೇಸರಿಯು) ಗುಣಾರ್ಣವನು ಸುಖವಾಗಿದ್ದನು.)

ಪದ್ಯ-೩೫:ಅರ್ಥ: ಯಾವ ಋತುವಿಗೆ ಯಾವ ಅಲಂಕಾರವು ಒಪ್ಪುವುದು; ಯಾವ ಹೊತ್ತು ಯಾವ ಕಾರ್ಯಕ್ಕೆ ಒಪ್ಪುತ್ತದೆ; ಯಾವ ಸ್ಥಳಕ್ಕೆ ಯಾವ ವಿನಯ (ನೀತಿ) ಸೊಗಸಾಗಿದೆ ಅದಕ್ಕೆ ಅದನ್ನು ಸರಿಯಾಗಿ ಸೇರಿಸಿ (ಹೊಂದಿಸಿಕೊಂಡು) ಪ್ರತಿದಿನವೂ ಆ ವೆಚ್ಚ, ಆ ಸಂತೋಷ, ಆ ಅಲಂಕಾರ, ಆ

ವಿಲಾಸಗಳಲ್ಲಿ ಸೇರಿ

ಮನೋಹರವಾಗುವ

ರೀತಿಯಲ್ಲಿ (ಅರಿಕೇಸರಿಯು)

ಗುಣಾರ್ಣವನು

ಸುಖವಾಗಿದ್ದನು.

ಪಸರಿಸಿ ನೀಳ್ದ ತನ್ನ

ಜಸದೊಳ್ ಪೆಱನೊರ್ವನ

ಕೀರ್ತಿ ತಳ್ತು ರಂ

ಜಿಸೆ ನೆಗಳ್ದಾತನೇಂ

ನೆಗಳ್ದನೆಂಬ ಚಲಂ ಮಿಗೆ ತನ್ನ

ಪೆಂಪು ತ|

ನ್ನೆಸಕಮೆ ತನ್ನ ವಿಕ್ರಮಮೆ ತನ್ನ ನೆಗೞ್ತೆಯೆ ತನ್ನ ಮಾತೆ ತಾ ನೆಸೆವ ಜಗತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ:ಪಸರಿಸಿ ನೀಳ್ದ ತನ್ನ ಜಸದೊಳ್ (ಪ್ರಸರಿಸಿ ಬೆಳೆದ ತನ್ನ ಯಶಸ್ಸಿನೊಡನೆ) ಪೆಱನ್ ಒರ್ವನ ಕೀರ್ತಿ ತಳ್ತು ರಂಜಿಸೆ (ಇನ್ನೊಬ್ಬನ ಕೀರ್ತಿ

ಸಮಾನವಾಗಿ ಸೇರಿ ಪ್ರಕಾಶಿಸಿದರೆ) ನೆಗೞ್ದಾತನೇಂ ನೆಗೞ್ದನೆಂಬ ಚಲಂ ಮಿಗೆ (ಅವನು ಪ್ರಸಿದ್ಧನೆ ಎಂಬ ಛಲವು ಹೆಚ್ಚಾಗಿರಲು) ತನ್ನ ಪೆಂಪು ತನ್ನ ಎಸಕಮೆ ತನ್ನ ವಿಕ್ರಮಮೆ ತನ್ನ ನೆಗೞ್ತೆಯೆ ತನ್ನ ಮಾತೆ (ತನ್ನ ವೈಭವ, ತನ್ನ ಪರಾಕ್ರಮ, ತನ್ನ ಪ್ರಸಿದ್ಧಿ, ತನ್ನ ಮಾತು) ತಾನು ಎಸೆವ ಜಗತ್ರಯಕ್ಕೆ ಎನಿಸಿ

ಪಾಲಿಸಿದಂ ನೆಲನಂ ಗುಣಾರ್ಣವಂ (ತನ್ನ ಮಾತು ಇವುಗಳೇ ಪ್ರಸಿದ್ಧವಾಗಿರುವ ಮೂರು ಲೋಕಗಳಿಗೂ ತಾನೇ ಎನಿಸಿ ಗುಣಾರ್ಣವನು ರಾಜ್ಯವನ್ನು ಪಾಲಿಸಿದನು.)

ಪದ್ಯ-೩೯:ಅರ್ಥ:ಪ್ರಸರಿಸಿ ಬೆಳೆದ ತನ್ನ ಯಶಸ್ಸಿನೊಡನೆ ಇನ್ನೊಬ್ಬನ ಕೀರ್ತಿ ಸಮಾನವಾಗಿ ಸೇರಿ ಪ್ರಕಾಶಿಸಿದರೆ, ಅವನು

ಪ್ರಸಿದ್ಧನೆ ಎಂಬ ಛಲವು
ಹೆಚ್ಚಾಗಿರಲು ತನ್ನ ವೈಭವ,
ತನ್ನ ಪರಾಕ್ರಮ, ತನ್ನ ಪ್ರಸಿದ್ಧಿ,
ತನ್ನ ಮಾತು ಇವುಗಳೇ
ಪ್ರಸಿದ್ಧವಾಗಿರುವ ಮೂರು
ಲೋಕಗಳಿಗೂ ತಾನೇ ಎನಿಸಿ
ಗುಣಾರ್ಣವನು ರಾಜ್ಯವನ್ನು
ಪಾಲಿಸಿದನು.

<u>ವೆಂಗಿಪಳು- ವಸಂತ ಕೊಟ್ಟೂರು- ನಿಡಗುಂದಿ- ಪ್ರದೇಶದಲ್ಲಿದ್ದ ಪಂಪಕವಿಯ ವಂಶವಿಚಾರ</u>

ಕಂ|| ಆ ಮಳಯಾಚಳ

ಹಿಮಗಿರಿ

ಸೀಮಾವನಿತಳಕೆ

ಬೆಂಗಿಮಂಡಳದೊಳ್ ಚೆ|

ಲ್ವಾವಗಮೆ ತನಗದೊಂದೂರ್

ನಾಮದೊಳಂ ವೆಂಗಿಪೞು

ಕರಂ ಸೊಗಯಿಸುಗುಂ|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ಆ ಮಳಯಾಚಳ ಹಿಮಗಿರಿಸೀಮಾ ಅವನಿತಳಕೆ (ಆ ಮಲಯಪರ್ವತದಿಂದ ಹಿಡಿದು ಹಿಮವತ್ಪರ್ವತವನ್ನು ಮೇರೆಯಾಗಿ ಉಳ್ಳ ಭೂಭಾಗಕ್ಕೆ) ಬೆಂಗಿಮಂಡಳದೊಳ್ ಚೆಲ್ವು ಆವಗಮೆ- ಯಾವಾಗಲೂ, (ಇರುವ ವೆಂಗಿದೇಶವೇ ಯಾವಾಗಲೂ

ಸುಂದರವಾಗಿರುವುದು.),
ತನಗೆ ಅದೊಂದು ಊರ್
ನಾಮದೊಳಂ (ತನಗೆ
ಅದರಲ್ಲಿ ವೆಂಗಿಪಳು
ಎಂಬುದು ಒಂದು ಊರು,)
ವೆಂಗಿಪೞು ಕರಂ
ಸೊಗಯಿಸುಗುಂ (ಆ
ವೆಂಗಿಪಳು ವಿಶೇಷವಾಗಿ
ಶೋಭಿಸುವುದು..)
ಪದ್ಯ-೪೦:ಅರ್ಥ: ಆ
ಮಲಯಪರ್ವತದಿಂದ

ಹಿಡಿದು ಹಿಮವತ್ಪರ್ವತವನ್ನು ಮೇರೆಯಾಗಿ ಉಳ್ಳ ಭೂಭಾಗಕ್ಕೆ ಇರುವ ವೆಂಗಿದೇಶವೇ ಯಾವಾಗಲೂ ಸುಂದರವಾಗಿರುವುದು. ತನಗೆ ಅದರಲ್ಲಿ ವೆಂಗಿಪಳು ಎಂಬುದು ಒಂದು ಊರು, ಆ ವೆಂಗಿಪಳು ಎಂಬ ಪದವೇ ವಿಶೇಷವಾಗಿ ಶೋಭಿಸುವುದು.

ಅದುವೆ ವಸಂತಂ ಕೊಟ್ಟೊ

ರೊದವಿದ ನಿಡುಗುಂದಿ ಮಿಕ್ಕ ವಿಕ್ರಮ ಪುರವೆಂ|
ಬುದುಮಗ್ರಹಾರ ಸಂಪ ತ್ಪದವಿಗಳೊಳಮಗ್ರಗಣ್ಯನೂ ರ್ಜಿತಪುಣ್ಯಂ|| ೪೧ ||

ಪದ್ಯ-೪೧:ಪದವಿಭಾಗ-ಅರ್ಥ:ಅದುವೆ ವಸಂತಂ ಕೊಟ್ಟೂರು ಒದವಿದ ನಿಡುಗುಂದಿ (ಆ ವೆಂಗಿಪಳುವಿನಲ್ಲಿ ವಸಂತ ಕೊಟ್ಟೂರು, ಅಲ್ಲಿಯೇ

ನಿಡುಗುಂದಿ) ಮಿಕ್ಕ
ವಿಕ್ರಮಪುರವೆಂಬುದುಂ
ಅಗ್ರಹಾರ (ಅತ್ಯತಿಶಯವಾದ
ವಿಕ್ರಮಪುರ ಎಂಬುವ
ಅಗ್ರಹಾರಗಳು)
ಸಂಪತ್ಪದವಿಗಳೊಳ್
ಅಗ್ರಗಣ್ಯಂ ಊರ್ಜಿತಪುಣ್ಯಂ
(ಅಲ್ಲಿಯ ಸಂಪತ್ಪದವಿಗಳಲ್ಲಿ
ಅಗ್ರಗಣ್ಯನಾದವನೂ
ಅಭಿವೃದ್ಧಿಯಾಗುತ್ತಿರುವ
ಪುಣ್ಯವುಳ್ಳವನೂ ಆದ)

ಪದ್ಯ-೪೧:ಅರ್ಥ: ಆ ವೆಂಗಿಪಳುವಿನಲ್ಲಿ ವಸಂತ ಕೊಟ್ಟೂರು, ಅಲ್ಲಿಯೇ ನಿಡುಗುಂದಿ, ಅತ್ಯತಿಶಯವಾದ ವಿಕ್ರಮಪುರ ಎಂಬುವ ಅಗ್ರಹಾರಗಳು ಶೋಭಾಯಮಾನವಾಗಿವೆ. ಅಲ್ಲಿಯ ಸಂಪತ್ಪದವಿಗಳಲ್ಲಿ ಅಗ್ರಗಣ್ಯನಾದವನೂ

ಅಭಿವೃದ್ಧಿಯಾಗುತ್ತಿರುವ

ಪುಣ್ಯವುಳ್ಳವನೂ ಆದ

ನಯಶಾಲಿ ವತ್ಸ ಗೋತ್ರ

ಶ್ರಯಣೀಯನನೇಕ ಸಕಳ

ಶಾಸ್ತ್ರಾರ್ಥ ವಿನಿ|

ಶ್ಚಯ ಮತಿ ಕೃತಿ ಮಾಧವ

ಸೋ

ಮಯಾಜಿ ಸಲೆ

ನೆಗಳ್ದಿನಾಸಮುದ್ರಂಬರೆಗಂ||

೪೨ ||

ಪದ್ಯ-೪೨:ಪದವಿಭಾಗ-ಅರ್ಥ:ನಯಶಾಲಿ ವತ್ಸ ಗೋತ್ರಶ್ರಯಣೀಯನ್ (ವಿನಯಶಾಲಿಯೂ ವತ್ಸಗೋತ್ರವನ್ನು ಆಶ್ರಯಿಸಿದವನೂ)ಅನೇಕ ಸಕಳ ಶಾಸ್ತ್ರಾರ್ಥ ವಿನಿಶ್ಚಯ ಮತಿಕೃತಿ (ಸಕಲ ಶಾಸ್ತ್ರಾರ್ಥಗಳಲ್ಲಿ ಸ್ಥಿರವಾದ ಪಾಂಡಿತ್ಯವುಳ್ಳವನೂ ಆದ) ಮಾಧವ ಸೋಮಯಾಜಿ ಸಲೆ

ನೆಗಳ್ದಿನು ಆ ಸಮುದ್ರಂಬರೆಗಂ(ಮಾಧವ ಸೋಮಯಾಜಿಯೆಂಬುವನು ಸಮುದ್ರ ಕಡೆಯವರೆಗೂ ಬಹುಪ್ರಸಿದ್ಧನಾಗಿದ್ದನು.)

ಪದ್ಯ-೪೨:ಅರ್ಥ: ವಿನಯಶಾಲಿಯೂ ವತ್ಸಗೋತ್ರವನ್ನು ಆಶ್ರಯಿಸಿದವನೂ ಸಕಲ ಶಾಸ್ತ್ರಾರ್ಥಗಳಲ್ಲಿ ಸ್ಥಿರವಾದ ಪಾಂಡಿತ್ಯವುಳ್ಳವನೂ ಆದ

ಮಾಧವ
ಸೋಮಯಾಜಿಯೆಂಬುವನು
ಸಮುದ್ರ ಕಡೆಯವರೆಗೂ
ಬಹುಪ್ರಸಿದ್ಧನಾಗಿದ್ದನು.

ಉ|| ಶಕ್ರ ಶಶಾಂಕ ಸೂರ್ಯ
ಪವಮಾನರುಮಾತನ
ಹೋಮ ಮಂತ್ರ ಚ
ಕ್ರ ಕ್ರಮಕಕ್ಕಣಿಂ
ಮಿಡುಕಲಾಗಡೆ
ಶಾಪಮನೀಗುಮೆಂದೆ ದಿ|

ಕ್ಚಕ್ರಮುಮಂಜಿ ಬೆರ್ಚಿ

ಬೆಸಕೆಯ್ಯುವುದದಲ್ಲದಗುರ್ವು

ಪರ್ವೆ ಸ

ರ್ವಕ್ರತುಯಾಜಿಯಾದನಳವಿಂ

ತುಟು

ಮಾಧವಸೋಮಯಾಜಿಯಾ||

೪೩ ||

ಪದ್ಯ-೪೩:ಪದವಿಭಾಗ-

ಅರ್ಥ:ಶಕ್ರ ಶಶಾಂಕ ಸೂರ್ಯ

ಪವಮಾನರುಂ (ಇಂದ್ರ ಚಂದ್ರ

ಸೂರ್ಯ

ವಾಯುದೇವತೆಗಳೂ) ಆತನ ಹೋಮ ಮಂತ್ರ ಚಕ್ರ ಕ್ರಮಕಕ್ಕಣಂ (ಆತನ ಹೋಮ ಮಂತ್ರ ಚಕ್ರಕ್ರಮಕ್ಕೆ) ಮಿಡುಕಲು ಆಗಡೆ (ಸ್ವಲ್ಪವೂ ಅಡ್ಡಿ ಮಾಡುತ್ತಿರಲಿಲ್ಲ.) ಶಾಪಮಂ ಈಗುಂ ಎಂದೆ (ಮಾಡಿದರೆ ಶಾಪವನ್ನು ಕೊಡುತ್ತಾನೆಂದೇ) ದಿಕ್ ಚಕ್ರಮು ಅಂಜಿ ಬೆರ್ಚಿ ಬೆಸಕೆಯ್ಯುದು

(ದಿಙ್ಮಂಡಲಗಳೂ ಹೆದರಿ ಸೇವೆ ಮಾಡುತ್ತವೆ.) ಅದಲ್ಲದೆ ಅಗುರ್ವು ಪರ್ವೆ ಸರ್ವಕ್ರತುಯಾಜಿಯಾದಂ (ಅದಲ್ಲದೆ ಅವನು ಭಯಭಕ್ತಿ ಹುಟ್ಟುವಂತೆ ಸರ್ವಕ್ರತುಯೆಂಬಯಜ್ಞವನ್ನು ಮಾಡಿದ ಸರ್ವಕ್ರತುಯಾಜಿಯಾದನು.) ಅಳವು ಇಂತುಟು ಮಾಧವಸೋಮಯಾಜಿಯಾ

(ಮಾಧವ ಸೋಮಯಾಜಿಯ ಶಕ್ತಿಯು ಹೀಗಿದೆ.)

ಪದ್ಯ-೪೩:ಅರ್ಥ: ಇಂದ್ರ ಚಂದ್ರ ಸೂರ್ಯ ವಾಯುದೇವತೆಗಳೂ ಆತನ ಹೋಮ ಮಂತ್ರ ಚಕ್ರಕ್ರಮಕ್ಕೆ ಸ್ವಲ್ಪವೂ ಅಡ್ಡಿ ಮಾಡುತ್ತಿರಲಿಲ್ಲ. ಮಾಡಿದರೆ ಶಾಪವನ್ನು ಕೊಡುತ್ತಾನೆಂದೇ ದಿಙ್ಮಂಡಲಗಳೂ ಹೆದರಿ ಸೇವೆ ಮಾಡುತ್ತವೆ. ಅದಲ್ಲದೆ

ಅವನು ಭಯಭಕ್ತಿ ಹುಟ್ಟುವಂತೆ ಸರ್ವಕ್ರತುಯೆಂಬಯಜ್ಞವನ್ನು ಮಾಡಿದ ಸರ್ವಕ್ರತುಯಾಜಿಯಾದನು. ಮಾಧವ ಸೋಮಯಾಜಿಯ ಶಕ್ತಿಯು ಹೀಗಿದೆ.

ಕಂ|| ವರ ದಿಗ್ವನಿತೆಗೆ ಮಾಟದ
ಕುರುಳಾ ತ್ರೈಭುವನಕಾಂತೆಗಂ
ದಲ್ ಕಂಠಾ|
ಭರಣಮೆನೆ ಪರೆದ ತನ್ನ

ಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ॥ ೪೪ ॥

ಪದ್ಯ-೪೪:ಪದವಿಭಾಗ-ಅರ್ಥ:ವರ ದಿಗ್ವನಿತೆಗೆ ಮಾಟದಕುರುಳ್ (ಶ್ರೇಷ್ಠವಾದ ದಿಕ್ಕೆಂಬ ಸ್ತ್ರೀಗೆ ಕೃತಕ ಕೂದಲುಗಳು) ತ್ರೈಭುವನಕಾಂತೆಗಂ ದಲ್ ಕಂಠಾಭರಣಂ ಎನೆ (ಮೂರು ಲೋಕಗಳ ಸ್ತ್ರೀಗೂ ಕತ್ತಿನ

ಆಭರಣವು ಎನ್ನುವ ಹಾಗೆ)
ಪರೆದ ತನ್ನ ಅಧ್ವರ ಧೂಮದೆ
ಕರಿದು ಮಾಡಿದಂ
ನಿಜಯಶಮಂ (ವ್ಯಾಪಿಸಿರುವ
ತನ್ನ ಯಜ್ಞದೂಮದಿಂದ
(ಹೊಗೆಯಿಂದ) ತನ್ನ
ಯಶಸ್ಸನ್ನು ಎಲ್ಲರೂ
ನಮಸ್ಕರಿಸುವಂತೆ
ಮಾಡಿಕೊಂಡನು.)
ಪದ್ಯ-೪೪:ಅರ್ಥ: ಶ್ರೇಷ್ಠವಾದ
ದಿಕ್ಕೆಂಬ ಸ್ತ್ರೀಗೆ ಕೃತಕ

ಕೂದಲುಗಳು, ಮೂರು ಲೋಕಗಳ ಸ್ತ್ರೀಗೂ ಕತ್ತಿನ ಆಭರಣವು ಎನ್ನುವ ಹಾಗೆ, ವ್ಯಾಪಿಸಿರುವ ತನ್ನ ಯಜ್ಞದೂಮದಿಂದ (ಹೊಗೆಯಿಂದ) ತನ್ನ ಯಶಸ್ಸನ್ನು ಎಲ್ಲರೂ ನಮಸ್ಕರಿಸುವಂತೆ ಮಾಡಿಕೊಂಡನು. (ಕರಿ = = ಅಡ್ಡಲಾಗಿ ಬೀಳು, ನಮಸ್ಕರಿಸು, ಅಡ್ಡಬೀಳು,

ಎಸಕಪದ ಪ್ರೊ. ಜಿ. ವೆಂಕಟಸುಬ್ಬಯ್ಯ ಕನ್ನಡ-ಕನ್ನಡ ನಿಘಂಟು)

ತತ್ತನಯನಖಿಳ ಕರಿ ತುರ
ಗೋತ್ತಮ ಮಣಿ ಕನಕ ಸಾರ ವಸ್ತುವನೆರೆದ|
ರ್ಗಿತ್ತು ಸಲೆ ನೆಗಳ್ದನತಿ ಪುರು
ಷೋತ್ತಮನಭಿಮಾನಚಂದ್ರನೆ ನಿಪಂ ಪೆಸರಿಂ|| ೪೫ ||

ಪದ್ಯ-೪೫:ಪದವಿಭಾಗ-ಅರ್ಥ:ತತ್ ತನಯನು

(ಅವನ ಮಗ) ಅಖಿಳ ಕರಿ
ತುರಗೋತ್ತಮ ಮಣಿ ಕನಕ
ಸಾರ ವಸ್ತುವನು (ಸಮಸ್ತ ಆನೆ
ಕುದುರೆ ಉತ್ತಮ ರತ್ನ ಚಿನ್ನ
ಮೊದಲಾದ ಉತ್ತಮ
ವಸ್ತುಗಳನ್ನು) ಎರೆದರ್ಗೆ ಇತ್ತು
(ಬೇಡಿದವರಿಗೆ
ದಾನಮಾಡಿ)ಸಲೆ ನೆಗಳ್ದಿನು
(ವಿಶೇಷ ಪ್ರಸಿದ್ಧನಾದನು.)
ಅತಿ ಪುರುಷೋತ್ತಮನು
ಅಭಿಮಾನಚಂದ್ರನೆನಿಪಂ

ಪೆಸರಿಂ (ಪುರುಷರಲ್ಲಿ ಅತಿಶ್ರೇಷ್ಠನಾದ ಅಭಿಮಾನಚಂದ್ರನೆಂಬ ಹೆಸರುಳ್ಳವನು ವಿಶೇಷ ಪ್ರಸಿದ್ಧನಾದನು.)

ಪದ್ಯ-೪೫:ಅರ್ಥ:

ಪುರುಷರಲ್ಲಿ ಅತಿಶ್ರೇಷ್ಠನಾದ ಅವನ ಮಗನಾದ ಅಭಿಮಾನಚಂದ್ರನೆಂಬ ಹೆಸರುಳ್ಳವನು ಬೇಡಿದವರಿಗೆ ತನ್ನ ಸಮಸ್ತ ಆನೆ ಕುದುರೆ

ಉತ್ತಮ ರತ್ನ ಚಿನ್ನ
ಮೊದಲಾದ ಉತ್ತಮ
ವಸ್ತುಗಳನ್ನು ದಾನಮಾಡಿ
ವಿಶೇಷ ಪ್ರಸಿದ್ಧನಾದನು.

ಕಂ|| ಆತಂಗೆ ಭುವನ ಭವನ
ಖ್ಯಾತಂಗೆ ಸಮಸ್ತ ವೇದ
ವೇದಾಂಗ ಸಮು|
ದ್ಯೋತಿತ ಮತಿಯುತನುಚಿತ
ಪು
ರಾತನ ಚರಿತಂ ತನೂಭವಂ
ಕೊಮರಯ್ಯಂ|| ೪೬ ||

ಪದ್ಯ-೪೬:ಪದವಿಭಾಗ-ಅರ್ಥ: ಆತಂಗೆ ಭುವನ ಭವನಖ್ಯಾತಂಗೆ (ಭೂಮಂಡಲದಲ್ಲಿ ಪ್ರಸಿದ್ಧನಾದ ಆತನಿಗೆ) ಸಮಸ್ತ ವೇದ ವೇದಾಂಗ ಸಮುದ್ಯೋತಿತ (ಸಕಲ ವೇದಶಾಸ್ತ್ರಗಳಿಂದ ಪ್ರಕಾಶಿಸಲ್ಪಟ್ಟ ಬುದ್ಧಿಯುಳ್ಳವನೂ) ಮತಿಯುತನು ಉಚಿತ

ಪುರಾತನ ಚರಿತಂ ತನೂಭವಂ ಕೊಮರಯ್ಯಂ (ಉಚಿತವಾದ ಪ್ರಾಚೀನ ಆಚರಸಂಪನ್ನನಾದವನೂ ಆದ ಮಗನು ಕೊಮರಯ್ಯನೆಂಬುವನು.)

ಪದ್ಯ-೪೬:ಅರ್ಥ: ಭೂಮಂಡಲದಲ್ಲಿ ಪ್ರಸಿದ್ಧನಾದ ಆತನಿಗೆ ಸಕಲ ವೇದಶಾಸ್ತ್ರಗಳಿಂದ ಪ್ರಕಾಶಿಸಲ್ಪಟ್ಟ

ಬುದ್ಧಿಯುಳ್ಳವನೂ
ಉಚಿತವಾದ ಪ್ರಾಚೀನ
ಆಚರಸಂಪನ್ನನಾದವನೂ
ಆದ ಮಗನು
ಕೊಮರಯ್ಯನೆಂಬುವನು.

ಆ ಕೊಮರಯ್ಯಂಗವನಿತ
ಳಾಕಾಶ ವ್ಯಾಪ್ತ ನಿಜ ಗುಣ
ಮಣಿ ರ|
ತ್ನಾಕರನಜ್ಞಾನತಮೋ
ನೀಕರನಭಿರಾಮ
ದೇವರಾಯಂ ತನಯಂ|| ೪೭

||

ಪದ್ಯ-೪೭:ಪದವಿಭಾಗ-ಅರ್ಥ:ಆ ಕೊಮರಯ್ಯಂಗೆ ಅವನಿತಳಾಕಾಶ ವ್ಯಾಪ್ತ ನಿಜ ಗುಣ ಮಣಿ (ಆ ಕೊಮರಯ್ಯನಿಗೆ ಭೂಮ್ಯಾಕಾಶಗಳಲ್ಲಿ ಹರಡಿರುವ ತನ್ನ ಗುಣವೆಂಬ ಮಣಿಗಳಿಗೆ) ರತ್ನಾಕರಂ ಅಜ್ಞಾನ ತಮೋ ನಿಕರಂ (ಸಮುದ್ರದಂತಿರುವವನೂ

ಅಜ್ಞಾನವೆಂಬ ಕತ್ತಲನ್ನು ಪರಿಹರಿಸುವವನೂ ಆದ) ಅಭಿರಾಮ ದೇವರಾಯಂ ತನಯಂ (ಅಭಿರಾಮದೇವರಾಯ ಎಂಬುವನು ಮಗನು.)

ಪದ್ಯ-೪೭:ಅರ್ಥ: ಆ ಕೊಮರಯ್ಯನಿಗೆ ಭೂಮಿ ಆಕಾಶಗಳಲ್ಲಿ ಹರಡಿರುವ ತನ್ನ ಗುಣವೆಂಬ ಮಣಿಗಳಿಗೆ ಸಮುದ್ರದಂತಿರುವವನೂ

ಅಜ್ಞಾನವೆಂಬ ಕತ್ತಲನ್ನು ಪರಿಹರಿಸುವವನೂ ಆದ ಅಭಿರಾಮದೇವರಾಯ ಎಂಬುವನು ಮಗನು.

ಉ||

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ ಮಾತೊ ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ತ|

ಜ್ಞಾತಿಯನುತ್ತರೋತ್ತರಮೆ ಮಾಡಿ ನೆಗೆೞ್ದಿದನಿಂತಿರಾತ್ಮ ವಿಖ್ಯಾತಿಯನಾತನಾತನ ಮಗಂ ನೆಗೞ್ದಿಂ ಕವಿತಾಗುಣಾರ್ಣವಂ|| ೪೮ ||

ಪದ್ಯ-೪೮:ಪದವಿಭಾಗ-ಅರ್ಥ:ಜಾತಿಯೊಳು ಎಲ್ಲಂ ಉತ್ತಮದ ಜಾತಿಯ ವಿಪ್ರಕುಲಂಗೆ (ಜಾತಿಗಳಲ್ಲೆಲ್ಲ ಉತ್ತಮ ಜಾತಿಯ ಬ್ರಾಹ್ಮಣಕುಲದವನಿಗೆ),

ನಂಬಲ್ ಏ ಮಾತೊ
(ನಂಬಲು ಏನು ಮಾತೋ,
ಅಸಾಧ್ಯ-) ಜಿನೇಂದ್ರ
ಧರ್ಮಮೆ ವಲಂ ದೊರೆ
ಧರ್ಮದೊಳೆಂದು ನಂಬಿ
(ಧರ್ಮದಲ್ಲೆಲ್ಲ ಜೈನಧರ್ಮವೇ
ಅಲ್ಲವೆ! ಉತ್ತಮವಾದುದೆಂದು
ನಂಬಿ,) ತಜ್ಜಾತಿಯಂ
ಉತ್ತರೋತ್ತರಮೆ ಮಾಡಿ (ಆ
ಜಾತಿಯನ್ನು
ಅತಿಶಯವಾದುದಾಗಿ ಮಾಡಿ)

ನೆಗೞ್ಚಿದನ್ (ಪ್ರಸಿದ್ಧಪಡಿಸಿದನು.) ಇಂತಿರೆ ಆತ್ಮ ವಿಖ್ಯಾತಿಯನು ಆತನು (ತನ್ನ ಖ್ಯಾತಿಯನ್ನು ಈ ರೀತಿಯಲ್ಲಿ ಹೆಚ್ಚಿಸಿಕೊಂಡನು/ ಪ್ರಸಿದ್ಧಪಡಿಸಿದನು.) ಆತನ ಮಗಂ ನೆಗೞ್ದಿಂ ಕವಿತಾಗುಣಾರ್ಣವಂ (ಅವನ ಮಗನೇ ಪ್ರಸಿದ್ಧನಾದ ಕವಿತಾಗುಣಾರ್ಣವ ಎಂಬ ಬಿರುದಿನ ಪಂಪ.)

ಪದ್ಯ-೪೮:ಅರ್ಥ:

ಜಾತಿಗಳಲ್ಲೆಲ್ಲ ಉತ್ತಮ ಜಾತಿಯ ಬ್ರಾಹ್ಮಣಕುಲದವನಿಗೆ ನಂಬಲು ಏನು ಮಾತೋ, ನಂಬಲು ಅಸಾಧ್ಯವೆಂಬಂತೆ, ಧರ್ಮದಲ್ಲೆಲ್ಲ ಜೈನಧರ್ಮವೇ ಉತ್ತಮವಾದುದೆಂದು ನಂಬಿ, ಆ ಜಾತಿಯನ್ನು ಅತಿಶಯವಾದುದಾಗಿ ಮಾಡಿ, ತನ್ನ ಖ್ಯಾತಿಯನ್ನು ಈ

ರೀತಿಯಲ್ಲಿ ಹೆಚ್ಚಿಸಿಕೊಂಡನು/ ಪ್ರಸಿದ್ಧಪಡಿಸಿದನು.. ಅವನ ಮಗನೇ ಪ್ರಸಿದ್ಧನಾದ ಕವಿತಾಗುಣಾರ್ಣವ ಎಂಬ ಬಿರುದಿನ ಪಂಪ.

ಕಂ|| ಪಂಪಂ ಧಾತ್ರೀವಳಯ ನಿ
ಳಿಂಪಂ ಚತುರಂಗ ಬಳ
ಭಯಂಕರಣಂ ನಿ|
ಷ್ಕಂಪಂ ಲಲಿತಾಲಂಕರ
ಣಂ
ಪಂಚಶರೈಕರೂಪನಪಗತಪಾ

ಪಂ|| ೪೯ ||

ಪದ್ಯ-೪೯:ಪದವಿಭಾಗ-ಅರ್ಥ:ಪಂಪಂ ಧಾತ್ರೀವಳಯ ನಿಳಿಂಪಂ (ಪಂಪನು ಭೂಮಂಡಲದ ಶ್ರೇಷ್ಠ-ದೇವತೆ.) ಚತುರಂಗ ಬಳ ಭಯಂಕರಣಂ (ಚತುರಂಗಸೈನ್ಯಗಳಿಗೆ ಭಯವನ್ನುಂಟುಮಾಡುವವನು.) ನಿಷ್ಕಂಪಂ ಲಲಿತ ಅಲಂಕರಣಂ (ಧೈರ್ಯಶಾಲಿ

(ನಡುಗದವನು) ಸುಂದರವಾದ ಅಲಂಕಾರವುಳ್ಳವನು.) ಪಂಚಶರ ಏಕರೂಪನು ಅಪಗತಪಾಪಂ (ಮನ್ಮಥನ ಹಾಗೆಯೇ ಇರುವ ರೂಪವುಳ್ಳವನು, ಪಾಪರಹಿತನಾದವನು.)

ಚಂ|| ಕವಿತೆ ನೆಗಱ್ತೆಯಂ ನಿಱಿಸೆ ಜೋಳದ ಪಾಱಿ ನಿಜಾನಾಥನಾ

ಪದ್ಯ-೪೯:ಅರ್ಥ: ಪಂಪನು ಭೂಮಂಡಲದ ಶ್ರೇಷ್ಠದೇವತೆ.

ಚತುರಂಗಸೈನ್ಯಗಳಿಗೆ
ಭಯವನ್ನುಂಟುಮಾಡುವವ
ನು. ಧೈರ್ಯಶಾಲಿ
(ನಡುಗದವನು)
ಸುಂದರವಾದ
ಅಲಂಕಾರವುಳ್ಳವನು.
ಮನ್ಮಥನ ಹಾಗೆಯೇ ಇರುವ
ರೂಪವುಳ್ಳವನು,
ಪಾಪರಹಿತನಾದವನು.

ಚಂ|| ಕವಿತೆ ನೆಗೞ್ತೆಯಂ

ನಿಱಿಸೆ ಜೋಳದ ಪಾೞಿ

ನಿಜಾಧಿನಾಥನಾ
ಹವದೊಳರಾತಿನಾಯಕರ
ಪಟ್ಟನೆ ಪಾಱಿಸೆ ಸಂದ ಪೆಂಪು
ಭೂ|
ಭುವನದೊಳಾಗಳುಂ ಬೆಳಗೆ
ಮಿಕ್ಕಭಿಮಾನದ ಮಾತು
ಕೀರ್ತಿಯಂ
ವಿವರಿಸೆ ಸಂದನೇಂ ಕಲಿಯೊ
ಸತ್ಕವಿಯೋ
ಕವಿತಾಗುಣಾಣವಂ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ಕವಿತೆ ನೆಗೞ್ತೆಯಂ ನಿೞಿಸೆ ಜೋಳದ ಪಾೞಿ (ತನ್ನ ಕವಿತ್ವವು ಖ್ಯಾತಿಯನ್ನು ಸ್ಥಾಪಿಸಿತು. ಅನ್ನದಾತನ ಉಪ್ಪಿನ ಋಣವು ತೀರುವಿಕೆ.) ನಿಜಾಧಿ ನಾಥನ ಆಹವದೊಳು ಅರಾತಿನಾಯಕರ ಪಟ್ಟನೆ ಪಾೞಿಸೆ (ತನ್ನ ರಾಜನ ಯುದ್ಧದಲ್ಲಿ ಶತ್ರುನಾಯಕರ

ವೀರಪಟ್ಟಗಳನ್ನು
ಹಾರಿಸುವಂತಹ,) ಸಂದ
ಪೆಂಪು ಭೂಭುವನದೊಳು
ಆಗಳುಂ ಬೆಳಗೆ (ಉಂಟಾದ
ಹಿರಿಮೆ
ಭೂಲೋಕದಲ್ಲಿಯಾವಾಗಲೂ
ಪ್ರಕಾಶಿಸಲು,) ಮಿಕ್ಕ
ಅಭಿಮಾನದ ಮಾತು
ಕೀರ್ತಿಯಂ ವಿವರಿಸೆ (ಉಳಿದ
ಅಭಿಮಾನದ ಮಾತುಗಳು
ತನ್ನ ಯಶಸ್ಸನ್ನು ವಿವರಿಸಲು,--

ಕವಿತಾಗುಣಾರ್ಣವನು ಬಹು ಪ್ರಸಿದ್ಧನಾದನು.) ಸಂದನೇಂ ಕಲಿಯೊ ಸತ್ಕವಿಯೋ ಕವಿತಾಗುಣಾಣವಂ (ಪಂಪಕವಿಯು ಏನು ಶೂರನೋ ಎಂತಹ ಸತ್ಕವಿಯೋ?)

ಪದ್ಯ-೫೦:ಅರ್ಥ: ತನ್ನ ಕವಿತ್ವವು ಖ್ಯಾತಿಯನ್ನು ಸ್ಥಾಪಿಸಿತು. ಅನ್ನದಾತನ ಉಪ್ಪಿನ ಋಣವು ತೀರುವಿಕೆ.

ತನ್ನ ರಾಜನ ಯುದ್ಧದಲ್ಲಿ
ಶತ್ರುನಾಯಕರ
ವೀರಪಟ್ಟಗಳನ್ನು
ಹಾರಿಸುವಂತಹ ಉಂಟಾದ
ಹಿರಿಮೆಯನ್ನೂ ತನ್ನ
ಯಶಸನ್ನೂ ಪ್ರಕಾಶಿಸಲು-
ಉಳಿದ ಅಭಿಮಾನದ
ಮಾತುಗಳು ತನ್ನ ಯಶಸ್ಸನ್ನು
ವಿವರಿಸಲು,--
ಕವಿತಾಗುಣಾರ್ಣವನು ಬಹು
ಪ್ರಸಿದ್ಧನಾದನು.

ಪಂಪಕವಿಯು ಏನು
ಶೂರನೋ ಎಂತಹ
ಸತ್ಕವಿಯೋ?

ಕಾವ್ಯ ವಿಚಾರ

ಕಂ|| ಆತಂಗರಿಕೇಸರಿ ಸಂ
ಪ್ರೀತಿಯೆ ಬಿಱಿಯಟ್ಟಿ
ಪಿರಿದನಿತ್ತು ನಿಜಾಭಿ|
ಖ್ಯಾತಿಯನಿಳೆಯೊಳ್ ನಿಱಿಸ
ಲ್ಕೀ ತೆಱದಿತಿಹಾಸ
ಕಥೆಯನೊಪ್ಪಿಸೆ ಕುಱಿತಂ||

೫೧ ||

ಪದ್ಯ-೫೧:ಪದವಿಭಾಗ-ಅರ್ಥ:ಆತಂಗೆ ಅರಿಕೇಸರಿ ಸಂಪ್ರೀತಿಯೆ ಬೞಿಯಟ್ಟಿ (ಆತನಿಗೆ (ಆ ಪಂಪನಿಗೆ) ಅರಿಕೇಸರಿರಾಜನು ಅತ್ಯಂತ ಪ್ರೀತಿಯಿಂದ ಹೇಳಿಕಳುಹಿಸಿ) ಪಿರಿದನು ಇತ್ತು (ವಿಶೇಷವಾಗಿ ದಾನಮಾಡಿ) ನಿಜಾಭಿಖ್ಯಾತಿಯನು ಇಳೆಯೊಳ್ ನಿಱಿಸಲ್ಕೆ (ತನ್ನ

ಕೀರ್ತಿಯನ್ನು ಭೂಮಿಯಲ್ಲಿ ಸ್ಥಾಪಿಸಲು) ಈ ತೆಱದ ಇತಿಹಾಸ ಕಥೆಯನು ಒಪ್ಪಿಸೆ ಕುಱಿತಂ (ಈ ರೀತಿಯಾದ ಇತಿಹಾಸ ಕಥೆಯನ್ನು ರಚಿಸಿ ಒಪ್ಪಿಸಲು ಕೋರಿದನು/ ಆಜ್ಞಾಪಿಸಿದನು.)

ಪದ್ಯ-೫೧:ಅರ್ಥ: ಆತನಿಗೆ (ಆ ಪಂಪನಿಗೆ) ಅರಿಕೇಸರಿರಾಜನು ಅತ್ಯಂತ ಪ್ರೀತಿಯಿಂದ ಹೇಳಿಕಳುಹಿಸಿ

ವಿಶೇಷವಾಗಿ ದಾನಮಾಡಿ,
ತನ್ನ ಕೀರ್ತಿಯನ್ನು
ಭೂಮಿಯಲ್ಲಿ ಸ್ಥಾಪಿಸಲು ಈ
ರೀತಿಯಾದ ಇತಿಹಾಸ
ಕಥೆಯನ್ನು ರಚಿಸಿ ಒಪ್ಪಿಸಲು
ಕೋರಿದನು.

ಶ್ರೌತಮಿದು ತನಗೆ ಗಂಗಾ
ಸ್ರೋತದವೊಲಳುಂಬಮಾಗಿ
ಗೆಡೆಗೊಳ್ಳದೆ ವಿ|
ಖ್ಯಾತ ಕವಿ ವೃಷಭ ವಂಶೋ

ದ್ಭೂತಮೆನಲ್ ಬರಿಸದೊಳಗೆ ಸಮೆವಿನೆಗಮಿದಂ|| ೫೨ ||

ಪದ್ಯ-೫೨:ಪದವಿಭಾಗ-

ಅರ್ಥ:ಶ್ರೌತಮಿದು ತನಗೆ (ಕೇಳಬೇಕಾದ ವೇದಸದೃಶವಾದ ಈ ಕೃತಿಯು ತನಗೆ) ಗಂಗಾಸ್ರೋತದವೊಲ್ ಅಳುಂಬಮಾಗಿ (ಗಂಗಾಪ್ರವಾಹದಂತೆ ಅತ್ಯತಿಶಯವಾಗಿ) ಗೆಡೆಗೊಳ್ಳದೆ (ಪರರ

ಸಹಾಯವನ್ನಪೇಕ್ಷಿಸದೆ) ವಿಖ್ಯಾತ ಕವಿ ವೃಷಭ ವಂಶೋದ್ಭೂತಂ ಎನಲ್ (ಪ್ರಸಿದ್ಧರಾದ ಕವಿಶ್ರೇಷ್ಠರ ಪರಂಪರೆಯಲ್ಲಿಯೇ ಹುಟ್ಟಿತು ಎನ್ನುವ ಹಾಗೆ) ಬರಿಸದೊಳಗೆ ಸಮೆವಿನೆಗಂ ಇದಂ (ಇದು ಒಂದು ವರ್ಷದಲ್ಲಿ ರಚಿತವಾಯಿತು.)

ಪದ್ಯ-೫೨:ಅರ್ಥ:

ಕೇಳಬೇಕಾದ

ವೇದಸದೃಶವಾದ ಈ ಕೃತಿಯು ತನಗೆ ಗಂಗಾಪ್ರವಾಹದಂತೆ ಅತ್ಯತಿಶಯವಾಗಿ ಪರರ ಸಹಾಯವನ್ನಪೇಕ್ಷಿಸದೆ ಪ್ರಸಿದ್ಧರಾದ ಕವಿಶ್ರೇಷ್ಠರ ಪರಂಪರೆಯಲ್ಲಿಯೇ ಹುಟ್ಟಿತು ಎನ್ನುವ ಹಾಗೆ ಇದು ಒಂದು ವರ್ಷದಲ್ಲಿ ರಚಿತವಾಯಿತು.

ವ|| ಅದೆಂತೆನೆ ಆದಿವಂಶಾವತಾರಸಂಭವಂ ರಂಗಪ್ರವೇಶಂ

ಜತುಗೃಹದಾಹಂ ಹಿಡಿಂಬ
ವಧೆಬಕಾಸುರವಧೆ
ದ್ರೌಪದೀಸ್ವಯಂವರಂ
ವೈವಾಹಂ
ಯುಧಿಷ್ಠಿರಪಟ್ಟಬಂಧನಂ
ಇಂದ್ರಪ್ರಸ್ಥ ಪ್ರವೇಶಂ
ಅರ್ಜುನದಿಗ್ವಿಜಯಂ
ದ್ವಾರಾವತೀಪ್ರವೇಶಂ
ಸುಭದ್ರಾಹರಣಂ ಸುಭದ್ರಾ
ವಿವಾಹಂ ಖಾಂಡವವನ
ದಹನಂ ಮಯ ದರ್ಶನಂ

ನಾರದಾಗಮನಂ ಜರಾಸಂಧ

ವಧೆ ರಾಜಸೂಯಂ

ಶಿಶುಪಾಲವಧೆ

ದ್ಯೂತವ್ಯತಿಕರಂ ವನ

ಪ್ರವೇಶಂ ಕಿರ್ಮ್ಮೀರ ವಧೆ

ಕಾಮ್ಯಕವನದರ್ಶನಂ

ದ್ವೈತವನ ಪ್ರವೇಶಂ

ಸೈಂಧವಬಂಧನಂ

ಚಿತ್ರಾಂಗದಯುದ್ಧಂ

ಕಿರಾತದೂತಾಗಮನಂ

ದ್ರೌಪದೀವಾಕ್ಯಂ ಪಾರಾಶರ

ವೀಕ್ಷಣಂ

ಇಂದ್ರಕೀಲಾಭಿಗಮನಂ

ಈಶ್ವರಾರ್ಜುನ ಯುದ್ಧಂ

ದಿವ್ಯಾಸ್ತ್ರಲಾಭಂ

ಇಂದ್ರಲೋಕಾಲೋಕನಂ

ನಿವಾತಕವಚಾಸುರವಧೆ

ಕಾಳಕೇಯ ಪೌಳೋಮವಧೆ

ಸೌಗಂಕಕಮಲಾಹರಣಂ

ಜಟಾಸುರವಧೆ

ಮಾಯಾಮತ್ತಹಸ್ತಿ ವ್ಯಾಜಂ

ವಿರಾಟಪುರ ಪ್ರವೇಶಂ

ಕೀಚಕವಧೆ ದಕ್ಷಿಣೋತ್ತರ
ಗೋಗ್ರಹಣಂ ಅಭಿಮನ್ಯು
ವಿವಾಹಂ ಮಂತ್ರಾಳೋಚನಂ
ದೂತಕಾರ್ಯಂ
ಕುರುಕ್ಷೇತ್ರಪ್ರಯಾಣಂ ಭೀಷ್ಮ
ಕರ್ಣ ವಿವಾದಂ
ಯುದ್ಧೋದ್ಯೋಗಂ ಶ್ವೇತವಧೆ
ಭೀಷ್ಮಶರ ಶಯನಂ
ದ್ರೋಣಾಭಿಷೇಕಂ
ಅಭಿಮನ್ಯು ವಧೆ ಸೈಂಧವ ವಧೆ
ಘಟೋತ್ಕಚ ವಧೆ

ದ್ರೋಣಚಾಪ ಮೋಕ್ಷಂ
ದ್ರೋಣ ವಧೆ ಅಶ್ವತ್ಥಾಮ
ಕರ್ಣ ವಿವಾದಂ
ಕರ್ಣಾಭಿಷೇಕಂ ಸಂಸಪ್ತಕ
ವಧೆ ದುಶ್ಯಾಸನ ವಧೆ
ವೇಣೀಸಂಹನನಂ
ಕರ್ಣಾರ್ಜುನ ಯುದ್ಧಂ ಕರ್ಣ
ಸೂರ್ಯಲೋಕಪ್ರಾಪ್ತಿ
ಶಲ್ಯಾಭಿಷೇಕಂ
ಶಲ್ಯನಿಪಾತನಂ ಭೀಮ
ದುರ್ಯೋಧನ ಗದಾಯುದ್ಧಂ

ದುರ್ಯೋಧನ ವಧೆ

ಪಂಚಪಾಂಡವಹರಣಂ

ಸ್ತ್ರೀಪರ್ವಂ

ಅರ್ಜುನಾಭಿಷೇಕಂ

ಪೆಱವುಮುಪಾಖ್ಯಾನ

ಕಥೆಗಳೊಳಮೊಂದುಂ

ಕುಂದಲೀಯದೆಪೇೞ್ಗೆಂ-

ವಚನ:ಅರ್ಥ: ಅದು ಹೇಗೆಂದರೆ ಆದಿವಂಶಾವತಾರಸಂಭವ, ರಂಗಪ್ರವೇಶ,

ಅರಗಿನಮನೆಯ ದಾಹ,
ಹಿಡಿಂಬವಧೆ, ಬಕಾಸುರವಧೆ,
ದ್ರೌಪದೀಸ್ವಯಂವರ, ವಿವಾಹ,
ಧರ್ಮರಾಯಪಟ್ಟಾಭಿಷೇಕ,
ಇಂದ್ರಪ್ರಸ್ಥಪ್ರವೇಶ, ಅರ್ಜುನ
ದಿಗ್ವಿಜಯ, ದ್ವಾರಾವತೀ
ಪ್ರವೇಶ, ಸುಭದ್ರಾಹರಣ,
ಸುಭದ್ರಾವಿವಾಹ,
ಖಾಂಡವವನ ದಹನ,
ಮಯದರ್ಶನ,
ನಾರದಾಗಮನ,

ಜರಾಸಂಧವಧೆ, ರಾಜಸೂಯ,
ಶಿಶುಪಾಲವಧೆ,
ದ್ಯೂತವ್ಯತಿಕರ, ವನಪ್ರವೇಶ,
ಕೀಚಕವಧೆ,
ಕಾಮ್ಯಕವನದರ್ಶನ, ದ್ವೈ
ತವನಪ್ರವೇಶ,
ಸೈಂಧವಬಂಧನ,
ಚಿತ್ರಾಂಗದಯುದ್ಧ,
ಕಿರಾತದೂತಾಗಮನ,
ದ್ರೌಪದೀವಾಕ್ಯ, ವ್ಯಾಸರ
ದರ್ಶನ,

ಇಂದ್ರಕೀಲಾಭಿಗಮನ,
ಈಶ್ವರಾರ್ಜುನಯುದ್ಧ,
ದಿವ್ಯಾಸ್ತ್ರಲಾಭ,
ಇಂದ್ರಾಲೋಕಾಲೋಕನ,
ನಿವಾತಕವಚಾಸುರವಧೆ,
ಕಾಳಕೇಯಪೌಳೋಮವಧೆ,
ಸೌಗಂಕಕಮಲಾಹರಣ,
ಜಟಾಸುರವಧೆ, ಮತ್ತಗಜದ
ವೃತ್ತಾಂತ,
ವಿರಾಟಪುರಪ್ರವೇಶ,
ಕೀಚಕವಧೆ, ದಕ್ಷಿಣೋತ್ತರ

ಗೋಗ್ರಹಣ,
ಅಭಿಮನ್ಯುವಿವಾಹ,
ಮಂತ್ರಾಲೋಚನೆ,
ದೂತಕಾರ್ಯ, ಕುರುಕ್ಷೇತ್ರ
ಪ್ರಯಾಣ,
ಭೀಷ್ಮಕರ್ಣವಿವಾದ,
ಯುದ್ಧೋದ್ಯೋಗ, ಶ್ವೇತವಧೆ,
ಭೀಷ್ಮಶರಶಯನ,
ದ್ರೋಣಾಭಿಷೇಕ,
ಅಭಿಮನ್ಯುವಧೆ,
ಸೈಂಧವವಧೆ,

ಘಟೋತ್ಕಚವಧೆ,
ದ್ರೋಣಚಾಪಮೋಕ್ಷ,
ದ್ರೋಣವಧೆ, ಅಶ್ವತ್ಥಾಮಕರ್ಣ
ವಿವಾದ, ಕರ್ಣಾಭಿಷೇಕ,
ಸಂಸಪ್ತಕವಧೆ,
ದುಶ್ಯಾಸನವಧೆ, ಮುಡಿಯನ್ನು
ಕಟ್ಟುವುದು, ಕರ್ಣಾರ್ಜುನರ
ಯುದ್ಧ, ಕರ್ಣನ
ಸೂರ್ಯಲೋಕಪ್ರಾಪ್ತಿ,
ಶಲ್ಯಾಭಿಷೇಕ, ಶಲ್ಯನಿಪಾತನ,
ಭೀಮದುರ್ಯೋಧನ

ಗದಾಯುದ್ಧ,
ದುರ್ಯೋಧನವಧೆ,
ಪಂಚಪಾಂಡವಹರಣ,
ಸ್ತ್ರೀಪರ್ವ, ಅರ್ಜುನಾಭಿಷೇಕ
ಮೊದಲಾದ ಇತರ ಅನೇಕ
ಉಪಾಖ್ಯಾನ ಕತೆಗಳಲ್ಲಿ
ಒಂದೂ ತಪ್ಪದೆ ಹೇಳಿದೆನು.

ಅರಿಕೇಸರಿಯ ಉದಾರತೆ ಮತ್ತು ಕವಿಯ ಬಗ್ಗೆ ಗೌರವ

ಚಂ|| ಎಸೆಯೆ ಸಮಸ್ತ
ಭಾರತಮನಾವ
ನರೇಂದ್ರರುಮಾರ್ತುರ್ ಕೂರ್ತುರ್
ಪೇ
ೞಿಸರೆ ಕವೀಂದ್ರರುಂ ನೆರೆಯೆ
ಪೇೞಿರೆ ಪೇೞಿಪ್ಪೊಡೆಯ್ದೆ
ನೀನೆ ಪೇ|
ೞಿಸುವೆಯುದಾತ್ತ ಕೀರ್ತಿ ನಿಲೆ
ಪೇೞ್ವೊಡೆ ಪಂಪನೆ

ಪೇೞ್ಗುಮಿಂತು ಪೇ
ೞಿಸಿದ ನರೇಂದ್ರರುಂ ನೆರೆಯೆ
ಪೇೞ್ದ ಕವೀಂದ್ರರುಮಾರ್
ಧರಿತ್ರಿಯೊಳ್|| ೫೩ ||

ಪದ್ಯ-೫೩:ಪದವಿಭಾಗ-
ಅರ್ಥ:ಎಸೆಯೆ ಸಮಸ್ತ
ಭಾರತಮನು ಆವ
ನರೇಂದ್ರರುಂ ಆರ್ತುು ಕೂರ್ತುು
ಪೇೞಿಸರೆ (ಇದುವರೆಗೆ
ಯಾವ ರಾಜರೂ
ಸಮರ್ಥರಾಗಿ ಪ್ರೀತಿಯಿಂದ

ಪ್ರಸಿದ್ಧವಾದ
ಸಮಗ್ರಭಾರತವನ್ನು
ಹೇಳಿಸರೆ? ಹೇಳಿಸಿಲ್ಲ.)
ಕವೀಂದ್ರರುಂ ನೆರೆಯೆ ಪೇೞಿರೆ
(ಕವಿಶ್ರೇಷ್ಠರೂ ಪೂರ್ಣವಾಗಿ
ಹೇಳಿಲ್ಲ.) ಪೇೞೆಪ್ಪೊಡೆ ಎಯ್ದೆ
ನೀನೆ ಪೇೞಿಸುವೆ
(ಹೇಳಿಸುವುದಾದರೆ ನೀನೆ
ಚೆನ್ನಾಗಿ ಹೇಳಿಸುತ್ತೀಯೆ;)
(ಯು) ಉದಾತ್ತ ಕೀರ್ತಿ ನಿಲೆ
(ಉನ್ನತವಾದ ಕೀರ್ತಿ ನಿಲ್ಲುವ

ಹಾಗೆ) ಪೇೞ್ವೊಡೆ ಪಂಪನೆ ಪೇೞ್ಗುಂ (ಹೇಳುವ ಪಕ್ಷದಲ್ಲಿ ಪಂಪನೆ ಹೇಳುತ್ತಾನೆ.) ಇಂತು ಪೇೞಿಸಿದ ನರೇಂದ್ರರುಂ ನೆರೆಯೆ ಪೇೞ್ದ ಕವೀಂದ್ರರುಮಾರ್ ಧರಿತ್ರಿಯೊಳ್ (ಹೀಗೆ ಹೇಳಿಸಿದ ರಾಜರೂ ಪೂರ್ಣವಾಗಿ ಹೇಳಿದ ಕವಿಶ್ರೇಷ್ಠರೂ ಲೋಕದಲ್ಲಿ ಯಾರಿದ್ದಾರೆ?)

ಪದ್ಯ-೫೩:ಅರ್ಥ: ಇದುವರೆಗೆ ಯಾವ ರಾಜರೂ ಸಮರ್ಥರಾಗಿ ಪ್ರೀತಿಯಿಂದ ಪ್ರಸಿದ್ಧವಾದ ಸಮಗ್ರಭಾರತವನ್ನು ಹೇಳಿಸಿಲ್ಲ. ಕವಿಶ್ರೇಷ್ಠರೂ ಪೂರ್ಣವಾಗಿ ಹೇಳಿಲ್ಲ. ಹೇಳಿಸುವುದಾದರೆ ನೀನೆ ಚೆನ್ನಾಗಿ ಹೇಳಿಸುತ್ತೀಯೆ; ಉನ್ನತವಾದ ಕೀರ್ತಿ ನಿಲ್ಲುವ ಹಾಗೆ ಹೇಳುವ ಪಕ್ಷದಲ್ಲಿ

ಪಂಪನೆ ಹೇಳುತ್ತಾನೆ. ಹೀಗೆ ಹೇಳಿಸಿದ ರಾಜರೂ ಪೂರ್ಣವಾಗಿ ಹೇಳಿದ ಕವಿಶ್ರೇಷ್ಠರೂ ಲೋಕದಲ್ಲಿ ಯಾರಿದ್ದಾರೆ?

ಎನೆ ಸಕಲಾವನೀತಳ ಜನಂ
ಪಿರಿದುಂ ದಯೆಗೆಯ್ದು ಸಾರ್ಚಿ
ಮೆ
ಲ್ಲನೆ ಪಿರಿದಪ್ಪ ಗೌರವದ
ಮೈಮೆಯ
ಮನ್ನಣೆಯೋಳಿಗಳ್ ಕರಂ|

ಮನಮನಲರ್ಚೆ ಕೀರ್ತಿ

ಜಗದೊಳ್ ನಿಲೆ ಪೇಟಿಸಿದಂ

ಜಗಕ್ಕೆ ನ

ಚ್ಚಿನ ಕವಿತಾ

ಗುಣಾರ್ಣವನಿನೀ ಕೃತಿ

ಬಂಧನಮಂ ಗುಣಾರ್ಣವಂ||

೫೪ ||

ಪದ್ಯ-೫೪:ಪದವಿಭಾಗ-

ಅರ್ಥ:ಎನೆ ಸಕಲ ಅವನೀತಳ

ಜನಂ (ಎಂದು ಸಮಸ್ತ

ಭೂಮಂಡಲದ ಜನವೂ)

ಪಿರಿದುಂ ದಯೆಗೆಯ್ದು ಸಾರ್ಚಿ
ಮೆಲ್ಲನೆ ಪಿರಿದಪ್ಪ ಗೌರವದ
ಮೈಮೆಯ (ಹೇಳಲು
ಗುಣಾರ್ಣವನಾದ
ಅರಿಕೇಸರಿಯು ವಿಶೇಷವಾದ
ಕೃಪೆಮಾಡಿ ಹಿರಿದಾದ
ಮಹಿಮೆಯ)
ಮನ್ನಣೆಯೋಳಿಗಳ್
(ಸತ್ಕಾರಗಳ ಸಾಲು
ಸಾಲುಗಳನ್ನು) ಕರಂ
ಮನಮನು ಅಲರ್ಚೆ

(ವಿಶೇಷವಾಗಿ ಮನಸ್ಸನ್ನು ಅರಳಿಸಲು (ತೃಪ್ತಿಪಡಿಸಲು)) ಕೀರ್ತಿ ಜಗದೊಳ್ ನಿಲೆ ಪೇಟಿಸಿದಂ (ಅವನ ಕೀರ್ತಿ ನಿಲ್ಲುವಂತೆ ಲೋಕದಲ್ಲಿ-ಹೇಳಿಸಿದನು.) ಜಗಕ್ಕೆ ನಚ್ಚಿನ ಕವಿತಾ ಗುಣಾರ್ಣವನಿಂ ಈ ಕೃತಿ ಬಂಧನಮಂ ಗುಣಾರ್ಣವಂ (ಲೋಕದಲ್ಲಿ ಪ್ರಸಿದ್ಧನಾದ ಕವಿತಾಗುಣಾರ್ಣವನಾದ

ಪಂಪನಿಂದ ಈ ಕಾವ್ಯಪ್ರಬಂಧವನ್ನು ಗುಣಾರ್ಣವನು ಹೇಳಿಸಿದನು.)

ಪದ್ಯ-೫೪:ಅರ್ಥ: ಎಂದು ಸಮಸ್ತ ಭೂಮಂಡಲದ ಜನವೂ ಹೇಳಲು ಗುಣಾರ್ಣವನಾದ ಅರಿಕೇಸರಿಯು ವಿಶೇಷವಾದ ಕೃಪೆಮಾಡಿ ಹಿರಿದಾದ ಮಹಿಮೆಯ ಸತ್ಕಾರಗಳ

ಸಾಲು ಸಾಲುಗಳನ್ನು ಸದ್ದಿಲ್ಲದೆ ಮಾಡಿ ವಿಶೇಷವಾಗಿ ಮನಸ್ಸನ್ನು ಅರಳಿಸಲು (ತೃಪ್ತಿಪಡಿಸಲು) ಅವನ ಕೀರ್ತಿ ನಿಲ್ಲುವಂತೆ ಲೋಕದಲ್ಲಿ ಪ್ರಸಿದ್ಧನಾದ ಕವಿತಾಗುಣಾರ್ಣವನಾದ ಪಂಪನಿಂದ ಈ ಕಾವ್ಯಪ್ರಬಂಧವನ್ನು ಗುಣಾರ್ಣವನು ಹೇಳಿಸಿದನು.

ಪಿರಿಯಕ್ಕರ|| ತುಡುಗೆ
ನಿಚ್ಚಲುಂ ಪಂಚರತ್ನಂಗಳುಂ
ಪೊಱಮಡೆ
ತನ್ನುಡುವುಪ್ಪಟಂಗಳ್
ಮಡಿಯೊಳಾಗೆಯುಮಟ್ಟಿಱಿಂ
ಕಂಡಾಗಳ್ ಪಿರಿಯ
ಬಿತ್ತರಿಗೆಯಂ ಕೆಲದೊಳಿಕ್ಕಿ|
ಕೊಡುವ ಬಾಡಕ್ಕಂ
ಜೀವಧನಂಗಳ್ಗಂ ಬಿಡುವೆಣ್ಗಂ
ಲೆಕ್ಕಮಿಲ್ಲೆನಿಸಿ ರಾಗಂ

ಗಿಡದೆ ಕೊಂಡಾಡಿದಂ

ಬಲ್ಲಹನಱಿಯೆ

ಗುಣಾರ್ಣವಂ

ಕವಿತಾಗುಣಾರ್ಣವನಂ|| ೫೫

||

ಪದ್ಯ-೫೫:ಪದವಿಭಾಗ-

ಅರ್ಥ:ತುಡುಗೆ

(ಆಭರಣಗಳನ್ನೂ) ನಿಚ್ಚಲುಂ

ಪಂಚರತ್ನಂಗಳುಂ

(ಪ್ರತಿನಿತ್ಯವೂ

ಆಭರಣಗಳನ್ನೂ

ಪಂಚರತ್ನಗಳನ್ನೂ)
ಪೊಱಮಡೆ ತನ್ನ ಉಡುವು
ಉಪ್ಪಟಂಗಳ್ಕ
ಮಡಿಯೊಳಾಗೆಯುಂ
(ಹೊರಗೆ ಹೊರಡಬೇಕಾದರೆ
ತಾನು ಸ್ವಂತವಾಗಿ ಧರಿಸುವ
ಶ್ರೇಷ್ಠವಾದ ವಸ್ತ್ರಗಳನ್ನೂ
ಒಳ್ಳೆಯ ಮಡಿಯಾಗಿರುವ
ಸ್ಥಿತಿಯಲ್ಲಿ) ಅಱ್ಕಱಿಂ
(ಪ್ರೀತಿಯಿಂದ ಕೊಡುವನು.)
ಕಂಡಾಗಳ್ ಪಿರಿಯ

ಬಿತ್ತರಿಗೆಯಂ ಕೆಲದೊಳು ಇಕ್ಕಿ (ಉನ್ನತವಾದ ಆಸನಗಳನ್ನೂ ತನ್ನ ಪಕ್ಕದಲ್ಲಿಯೇ ಹಾಕಿಸಿ ಕುಳ್ಳಿರಿಸಿಕೊಂಡು ಗೌರವಿಸುವನು.) ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ (ಅವನು ದಾನಮಾಡುವ ಹಳ್ಳಿಗಳಿಗೂ ಗೋವುಗಳೇ ಮೊದಲಾದ ಪ್ರಾಣಿಗಳಿಗೂ ದಾಸಿಯರಿಗೂ ಲೆಕ್ಕವೇ ಇಲ್ಲ

ಎನ್ನುವಂತೆ,) ರಾಗಂಗಿಡದೆ
ಕೊಂಡಾಡಿದಂ (ಪ್ರೀತಿಯು
ಕಡಿಮೆಯಾಗದಂತೆ
ಹೊಗಳಿದನು) ಬಲ್ಲಹನು
ಅಱಿಯೆ ಗುಣಾರ್ಣವಂ
ಕವಿತಾಗುಣಾರ್ಣವನಂ
(ರಾಷ್ಟ್ರಕೂಟರ ರಾಜನಾದ
ವಲ್ಲಭದೇವನಾದ
ಮೂರನೆಯ ಕೃಷ್ಣನು
ತಿಳಿಯುವಂತೆ
ಕವಿತಾಗುಣಾರ್ಣವನಾದ

ಪಂಪಕವಿಯನ್ನು ಸತ್ಕರಿಸಿದನು.)

ಪದ್ಯ-೫೫:ಅರ್ಥ: ಪ್ರತಿನಿತ್ಯವೂ ಆಭರಣಗಳನ್ನೂ ಪಂಚರತ್ನಗಳನ್ನೂ ಹೊರಗೆ ಹೊರಡಬೇಕಾದರೆ ತಾನು ಸ್ವಂತವಾಗಿ ಧರಿಸುವ ಶ್ರೇಷ್ಠವಾದ ವಸ್ತ್ರಗಳನ್ನೂ ಒಳ್ಳೆಯ ಮಡಿಯಾಗಿರುವ ಸ್ಥಿತಿಯಲ್ಲಿ ಪ್ರೀತಿಯಿಂದ

ಕೊಡುವನು. ಉನ್ನತವಾದ ಆಸನಗಳನ್ನೂ ತನ್ನ ಪಕ್ಕದಲ್ಲಿಯೇ ಹಾಸಿ ಕುಳ್ಳಿರಿಸಿಕೊಂಡು ಗೌರವಿಸುವನು. ಅವನು ದಾನಮಾಡುವ ಹಳ್ಳಿಗಳಿಗೂ ಗೋವುಗಳೇ ಮೊದಲಾದ ಪ್ರಾಣಿಗಳಿಗೂ ದಾಸಿಯರಿಗೂ ಲೆಕ್ಕವೇ ಇಲ್ಲ. ಪ್ರೀತಿಯು ಕಡಿಮೆಯಾಗದಂತೆ ಹೊಗಳಿದನು. ರಾಷ್ಟ್ರಕೂಟರ

ರಾಜನಾದ ವಲ್ಲಭದೇವನಾದ
ಮೂರನೆಯ ಕೃಷ್ಣನು
ತಿಳಿಯುವಂತೆ
ಕವಿತಾಗುಣಾರ್ಣವನಾದ
ಪಂಪಕವಿಯನ್ನು
ಸತ್ಕರಿಸಿದನು.

**ಬೀರದಳವಿಯ ನನ್ನಿಯ
ಚಾಗದ ಶಾಸನಂ
ಚಂದ್ರರ್ಕತಾರಂಬರಂ
ಮೇರು ನಿಲ್ವಿನಂ ನಿಲವೇಙ್ಕುಂ
ಕಾವ್ಯಕ್ಕೆ ತಾನಿತ್ತಂ**

ಶಾಸನದಗ್ರಹಾರಂ|

ಸಾರಮೆಂಬಿನಂ ಪೆಸರಿಟ್ಟು

ತಾನೀಯೆ ಹರಿಗನ ಧರ್ಮ

ಭಂಡಾರದಂತೆ

ಸಾರಮಾದುದು

ಬಿಟ್ಟಗ್ರಹಾರಮಾ

ಬಚ್ಚೆಸಾಸಿರದೊಳು

ಧರ್ಮಪುರಂ ಮನೋಹರಂ||

೫೬ ||

ಪದ್ಯ-೫೬:ಪದವಿಭಾಗ-

ಅರ್ಥ:ಬೀರದ ಅಳವಿಯ

ನನ್ನಿಯ ಚಾಗದ (ತನ್ನ
ಶೌರ್ಯದ ಪರಾಕ್ರಮದ
ಶಕ್ತಿಯ ಸತ್ಯದ ದಾನದ
(ಪ್ರತೀಕಾರವಾಗಿರುವ))
ಶಾಸನಂ ಚಂದ್ರ ಅರ್ಕ ತಾರೆ
ಅಂಬರಂ ಮೇರು ನಿಲ್ವಿನಂ
(ಶಾಸನವು ಚಂದ್ರ ಸೂರ್ಯ
ನಕ್ಷತ್ರಗಳಿರುವವರೆಗೆ
ಮೇರುಪರ್ವತ ನಿಲ್ಲುವಂತೆ)
ನಿಲವೇಳ್ಕುಂ ಕಾವ್ಯಕ್ಕೆ
ತಾನಿತ್ತಂ ಶಾಸನದಗ್ರಹಾರಂ

(ಮೇರುಪರ್ವತ ನಿಲ್ಲುವಂತೆ
ಕಾವ್ಯಕ್ಕೆ ಬಹುಮಾನವಾಗಿ
(ಸಂಭಾವನೆಯಾಗಿ) ತಾನು
ಕೊಟ್ಟ ಶಾಸನದಗ್ರಹಾರವು)
ಸಾರಮೆಂಬಿನಂ ಪೆಸರಿಟ್ಟು
ತಾನೀಯೆ (ಸಾರವತ್ತಾಗಿ
ನಿಲ್ಲಬೇಕು ಎನ್ನುವಂತೆ ಹೆಸರು
ಹೇಳಿ ದಾನವಾಗಿ ಕೊಟ್ಟ.)
ಹರಿಗನ ಧರ್ಮ
ಭಂಡಾರದಂತೆ
ಸಾರಮಾದುದು ಬಿಟ್ಟ

ಅಗ್ರಹಾರಂ ಆ ಬಚ್ಚೆಸಾಸಿರದೊಳು ಧರ್ಮವುರಂ ಮನೋಹರಂ ()

ಪದ್ಯ-೫೬:ಅರ್ಥ: ತನ್ನ ಶೌರ್ಯದ ಪರಾಕ್ರಮದ ಶಕ್ತಿಯ ಸತ್ಯದ ದಾನದ (ಪ್ರತೀಕಾರವಾಗಿರುವ) ಶಾಸನವು ಚಂದ್ರ ಸೂರ್ಯ ನಕ್ಷತ್ರಗಳು ಇರುವವರೆಗೆ, ಮೇರುಪರ್ವತ ನಿಲ್ಲುವಂತೆ

ಕಾವ್ಯಕ್ಕೆ ಬಹುಮಾನವಾಗಿ (ಸಂಭಾವನೆಯಾಗಿ) ತಾನು ಕೊಟ್ಟ ಶಾಸನದಗ್ರಹಾರವು ಸಾರವತ್ತಾಗಿ ನಿಲ್ಲಬೇಕು ಎನ್ನುವಂತೆ ಹೆಸರು ಹೇಳಿ ದಾನವಾಗಿ ಕೊಟ್ಟ. ಆ ಅಗ್ರಹಾರವು ಆ ಬಚ್ಚೆಸಾವಿರ ಎಂಬ ನಾಡಿನಲ್ಲಿಯೂ ಆ ಧರ್ಮಪುರವು ಅರಿಕೇಸರಿಯ ಧರ್ಮಭಂಡಾರದಂತೆ (ಧರ್ಮವನ್ನು ಕೂಡಿಟ್ಟಿರುವ

ಉಗ್ರಾಣದಂತೆ)
ಸಾರವುಳ್ಳದ್ದಾಯಿತು.

ಚಂ|| ದೆಸೆ ಮಖಧೂಮದಿಂ
ದ್ವಿಜರ ಹೋಮದಿನೊಳ್ಗೆರೆ
ಹಂಸ ಕೋಕ ಸಾ
ರಸ ಕಳ ನಾದದಿಂದೊಳಗೆ
ವೇದನಿನಾದದಿನೆತ್ತಮೆಯ್ದೆ
ಶೋ|
ಭಿಸೆ ಸುರಮಥ್ಯಮಾನ ವನಧಿ
ಕ್ಷುಭಿತಾರ್ಣ ಘೋಷದಂತೆ
ಘೂ

ರ್ಣಿಸುತಿರಲೀ ಗುಣಾರ್ಣವನ ಧರ್ಮದ ಧರ್ಮಪುರಂ ಮನೋಹರಂ|| ೫೭ ||

ಪದ್ಯ-೫೭:ಪದವಿಭಾಗ-ಅರ್ಥ:ದೆಸೆ ಮುಖಧೂಮದಿಂ ದ್ವಿಜರ ಹೋಮದಿಂ (ದಿಕ್ಕುಗಳು ಯಜ್ಞಯಾಗಗಳ ಹೊರೆಯಿಂದಲೂ) ಒಳ್ಗೆರೆ ಹಂಸ ಕೋಕ ಸಾರಸ ಕಳ ನಾದದಿಂದ, (ಒಳ್ಳೆಯ ಕೆರೆಗಳು ಹಂಸ ಚಕ್ರವಾಕ

ಸಾರಸಪಕ್ಷಿಗಳ ಮಧುರವಾದ ಧ್ವನಿಯಿಂದಲೂ) ಒಳಗೆ ವೇದನಿನಾದದಿಂ ಎತ್ತಂ ಎಯ್ದೆ ಶೋಭಿಸೆ (ಊರಿನ ಒಳಭಾಗವು ವೇದಘೋಷದಿಂದ ಎಲ್ಲೆಡೆ ಚೆನ್ನಾಗಿ ಶೋಭಿಸಿರಲು) ಸುರಮಥ್ಯ ಮಾನ ವನಧಿ ಕ್ಷುಭಿತಾರ್ಣ ಘೋಷದಂತೆ (ದೇವತೆಗಳಿಂದ ಕಡೆಯಲ್ಪಟ್ಟ ಸಮುದ್ರದ ಘೋಷದಂತೆ)

ಘೂರ್ಣಿಸುತಿರಲು ಈ ಗುಣಾರ್ಣವನ ಧರ್ಮದ ಧರ್ಮವುರಂ ಮನೋಹರಂ (ಅಬ್ಬರಿಸುತ್ತಿರಲು,ಅರಿಕೇಸರಿಯು ಧರ್ಮವಾಗಿ ಕೊಟ್ಟ ಧರ್ಮಪುರವು ಶಬ್ದಮಾಡುತ್ತ ಯಾವಾಗಲೂ ಬಹು ರಮಣೀಯವಾಗಿತ್ತು.)

ಪದ್ಯ-೫೭:ಅರ್ಥ: ದಿಕ್ಕುಗಳು ಯಜ್ಞಯಾಗಗಳ ಹೊರೆಯಿಂದಲೂ

ಬ್ರಾಹ್ಮಣರು ಮಾಡುವ
ಹೋಮದಿಂದಲೂ ಒಳ್ಳೆಯ
ಕೆರೆಗಳು ಹಂಸ ಚಕ್ರವಾಕ
ಸಾರಸಪಕ್ಷಿಗಳ ಮಧುರವಾದ
ಧ್ವನಿಯಿಂದಲೂ, ಊರಿನ
ಒಳಭಾಗವು
ವೇದಘೋಷದಿಂದ ಎಲ್ಲೆಡೆ
ಚೆನ್ನಾಗಿ ಶೋಭಿಸಿರಲು,
ದೇವತೆಗಳಿಂದ ಕಡೆಯಲ್ಪಟ್ಟ
ಸಮುದ್ರದ ಘೋಷದಂತೆ
ಅಬ್ಬರಿಸುತ್ತಿರಲು,ಅರಿಕೇಸರಿ

ಯು ಧರ್ಮವಾಗಿ ಕೊಟ್ಟ
ಧರ್ಮಪುರವು ಶಬ್ದಮಾಡುತ್ತ
ಯಾವಾಗಲೂ ಬಹು
ರಮಣೀಯವಾಗಿತ್ತು.

ಪಂಪನು ತನ್ನ ಕಾವ್ಯದ ಹಿರಿಮೆಯನ್ನು ಹೇಳುವುದು

ಕಂ|| ರಾಜದ್ರಾಜಕಮೆನಿಸಿದ
ಸಾಜದ ಪುಲಿಗೆಯ ತಿರುಳ
ಕನ್ನಡದೊಳ್ ನಿ

ವ್ಯಾಜದೆಸಕದೊಳೆ ಪುದಿದೊಂ ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೇ|| ೫೮ ||

ಪದ್ಯ-೫೮:ಪದವಿಭಾಗ-ಅರ್ಥ:ರಾಜತ್ ರಾಜಕಮೆನಿಸಿದ ಸಾಜದ ಪುಲಿಗೆಯ (ಪ್ರಕಾಶಮಾನವಾದ ರಾಜನುಳ್ಳದ್ದು ಎಂದೆನಿಸಿದ ಪುಲಿಗೆರೆಯ) ತಿರುಳ

ಕನ್ನಡದೊಳ್ ನಿರ್ವ್ಯಾಜದ ಎಸಕದೊಳೆ ಪುದಿದ ಒಂದು ಓಜೆಯ (ಸಹಜವಾದ ತಿರುಳುಕನ್ನಡದಲ್ಲಿ ಋಜುವಾದ ಕಾವ್ಯಮಾರ್ಗದಲ್ಲಿ) ಬಲದಿನಿಯ ಕವಿತೆ ಪಂಪನ ಕವಿತೇ (ಶಕ್ತಿಯುಕ್ತವಾಗಿಯೂ ಇಂಪಾಗಿಯೂ ಇರುವಂತೆ ರಚಿತವಾಗಿದೆ.)

ಪದ್ಯ-೫೮:ಅರ್ಥ: ಪಂಪನ ಕವಿತ್ವವು ಪ್ರಕಾಶಮಾನವಾದ ರಾಜನುಳ್ಳದ್ದು ಎಂದೆನಿಸಿದ ಪುಲಿಗೆರೆಯ ಸಹಜವಾದ ತಿರುಳುಕನ್ನಡದಲ್ಲಿ ಋಜುವಾದ ಕಾವ್ಯಮಾರ್ಗದಲ್ಲಿ ಶಕ್ತಿಯುಕ್ತವಾಗಿಯೂ ಇಂಪಾಗಿಯೂ ಇರುವಂತೆ ರಚಿತವಾಗಿದೆ.

ಚಂ|| ಪುದಿದ ಜಸಂ ಪೊದಳ್ದಿ
ಚಳಮೊಂದಿದಳಂಕೃತಿ ಕೈತ
ದೇಸಿಯಿಂ
ಬುದನೆನೆ ವಸ್ತು ವಿದ್ಯೆಯೆನೆ
ಕಬ್ಬಮೆ ಮುನ್ನಮವಂತಿವಲ್ಲದ|
ಲ್ಲದೆ ಪೆಱವಿಲ್ಲ ಕಬ್ಬಮೆನೆ
ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆ
ಟ್ಟಿದುವು
ಸಮಸ್ತಭಾರತಮುಮಾದಿಪು
ರಾಣಮಹಾಪ್ರಬಂಧಮುಂ||
೫೯ ||

ಪದ್ಯ-೫೯:ಪದವಿಭಾಗ-ಅರ್ಥ:ಪುದಿದ ಜಸಂ ಪೊದಟ್ದಿ ಚಳಂ ಒಂದಿದ ಅಳಂಕೃತಿ (ಕೂಡಿಕೊಂಡಿರುವ ಯಶಸ್ಸು ವ್ಯಾಪ್ತವಾದ ಓಜಸ್ಸು ಅಥವಾ ಕಾಂತಿ, ಸೇರಿಕೊಂಡಿರುವ ಅಲಂಕಾರ,) ಕೃತ ದೇಸಿಯೆಂಬುದನ್ ಎನೆ (ರಚನೆಯು ದೇಸಿ ರಚನೆಯೆಂಬುದನ್ನೇ ಹೇಳಲು) ವಸ್ತು ವಿದ್ಯೆಯೆನೆ ಕಬ್ಬಮೆ

(ಶಿಲ್ಪವಿದ್ಯೆ ಎನ್ನಲು
ಕಾವ್ಯವೇ?/ ಇರುವ
ವಿಚಾರಗಳನ್ನೇ ಉಳ್ಳ
ಕಾವ್ಯಗಳು ಕಾವ್ಯವೇ? -)
ಮುನ್ನಮವಂತಿವಲ್ಲದ-
ಮುನ್ನಂ ಅದು ಅಂತು ಇವು
ಅಲ್ಲದು ಅಲ್ಲದೆ ಪೆಱವಿಲ್ಲ
(ಹಿಂದೆ ಅದು ಹೀಗೆ, ಇದು
ಅಲ್ಲ ಎಂಬುದಲ್ಲದೆ ಬೇರೆ
ಇಲ್ಲ; ಹಿಂದೆ ಅದು ಕಾವ್ಯ,
ಹಿಂದೆ ಇದು ಕಾವ್ಯ ಅಲ್ಲದ್ದು

ಎಂಬ ನಿರ್ಣಯವೇನಿತ್ತೋ
ಅದು ಅಲ್ಲದೆ ಬೇರೆ ಇಲ್ಲ.)
ಕಬ್ಬಮ್ ಎನೆ ಮುನ್ನಿನ
ಕಬ್ಬಮನೆಲ್ಲ ಮಿಕ್ಕಿ ಮೆಟ್ಟಿದುವು
(ಅವುಗಳ ಹಾಗಿರದೆ ಮೇಲೆ
ಹೇಳಿದ ಗುಣಗಳಲ್ಲದೆ
ಬೇರೆಯಲ್ಲ
ಎಂದೆನಿಸಿಕೊಂಡೂ ಪ್ರಾಚೀನ
ಕಾವ್ಯಗಳನ್ನೆಲ್ಲ ಮೀರಿಸಿ ಮೇಲೆ
ನಿಂತವು.)
ಸಮಸ್ತಭಾರತಮುಂ

ಆದಿಪುರಾಣ ಮಹಾಪ್ರಬಂಧಮುಂ (ಈ ಸಮಗ್ರ ಭಾರತವೂ ಆದಿಪುರಾಣವೆಂ ಮಹಾ ಕಾವ್ಯವೂ)

ಪದ್ಯ-೫೯:ಅರ್ಥ: ಕೂಡಿಕೊಂಡಿರುವ ಯಶಸ್ಸು ವ್ಯಾಪ್ತವಾದ ಓಜಸ್ಸು ಅಥವಾ ಕಾಂತಿ, ಸೇರಿಕೊಂಡಿರುವ ಅಲಂಕಾರ, ರಚನೆಯು ದೇಸಿ ರಚನೆಯೆಂಬುದನ್ನೇ ಶಿಲ್ಪವಿದ್ಯೆ

ಎನ್ನಲು ಕಾವ್ಯವೇ?/ ಇರುವ ವಿಚಾರಗಳನ್ನೇ ಉಳ್ಳ ಕಾವ್ಯಗಳು ಕಾವ್ಯವೇ? ಹಿಂದೆ ಅದು ಕಾವ್ಯ, ಇದು ಕಾವ್ಯ ಅಲ್ಲದ್ದು ಎಂಬ ನಿರ್ಣಯವೇನಿತ್ತೋ ಅದು ಅಲ್ಲದೆ ಬೇರೆ ಇಲ್ಲ. ಈ ಸಮಗ್ರ ಭಾರತವೂ ಆದಿಪುರಾಣವೆಂ ಮಹಾ ಕಾವ್ಯವೂ ಅವುಗಳ ಹಾಗಿರದೆ ಮೇಲೆ ಹೇಳಿದ ಗುಣಗಳಲ್ಲದೆ ಬೇರೆಯಲ್ಲ

ಎಂದೆನಿಸಿಕೊಂಡೂ
ಪ್ರಾಚೀನಕಾವ್ಯಗಳನ್ನೆಲ್ಲ
ಮೀರಿಸಿ ಮೇಲೆ ನಿಂತವು.

ಬೆಳಗುವೆನಿಲ್ಲಿ ಲೌಕಿಕಮನಲ್ಲಿ
ಜಿನಾಗಮಮಂ ಸಮಸ್ತ ಭೂ
ತಳಕೆ ಸಮಸ್ತ
ಭಾರತಮುಮಾದಿಪುರಾಣಮು
ಮೆಂದು ಮೆಯ್ಯಸುಂ|
ಗೊಳುತಿರೆ ಪೂಣ್ದು ಪೂಣ್ದ
ತೆಱದೊಂದಱದಿಂಗಳೊ
ಳೊಂದು ಮೂಱು ತಿಂ

ಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ|| ೬೦ ||

ಪದ್ಯ-೬೦:ಪದವಿಭಾಗ-ಅರ್ಥ:ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂತಳಕೆ (ಈ ಕಾವ್ಯವಾದ ವಿಕ್ರಮಾರ್ಜುನವಿಜಯ ಅಥವಾ ಭಾರತದಲ್ಲಿ ಸಮಸ್ತಭೂಮಂಡಲಕ್ಕೆ

ಲೋಕವ್ಯವಹಾರವನ್ನೂ ಅಲ್ಲಿ
ಆ ಆದಿಪುರಾಣದಲ್ಲಿ
ಜಿನಾಗಮವನ್ನೂ
ಪ್ರಕಾಶಪಡಿಸುತ್ತೇನೆ.) ಸಮಸ್ತ
ಭಾರತಮುಂ
ಆದಿಪುರಾಣಮುಂ ಎಂದು
ಮೆಯ್ಯ್ (ಪಾತ್ರಗಳು)
ಅಸುಂಗೊಳುತಿರೆ
(ಸಜೀವವಾಗಿರುವಂತೆ)
ಪೂಣ್ದು ಪೂಣ್ದ ತೆಱದೆ ಒಂದು
ಅಱುದಿಂಗಳೊಳು ಒಂದು

(ಪ್ರತಿಜ್ಞೆಮಾಡಿ ಆ ಪ್ರತಿಜ್ಞೆ ಮಾಡಿದ ರೀತಿಯಲ್ಲಿಯೇ ಒಂದು -ಭಾರತವು ಆರು ತಿಂಗಳಲ್ಲಿಯೂ) ಮೂಱು ತಿಂಗಳೊಳೆ (ಮತ್ತೊಂದು -ಆದಿಪುರಾಣವು ಮೂರುತಿಂಗಳಲ್ಲಿಯೂ) ಸಮಾಪ್ತಿಯಾದುದು ಎನೆ (ಪೂರ್ಣವಾಯಿತು ಎನ್ನುವ ಹಾಗೆ) ಬಣ್ಣಿಸಿದಂ ಕವಿತಾಗುಣಾರ್ಣವಂ (

ಕವಿತಾಗುಣಾರ್ಣವನಾದ ಪಂಪನು ವರ್ಣಿಸಿದನು.)

ಪದ್ಯ-೬೦:ಅರ್ಥ: ಈ ಕಾವ್ಯವಾದ ವಿಕ್ರಮಾರ್ಜುನವಿಜಯ ಅಥವಾ ಭಾರತದಲ್ಲಿ ಸಮಸ್ತಭೂಮಂಡಲಕ್ಕೆ ಲೋಕವ್ಯವಹಾರವನ್ನೂ ಅಲ್ಲಿ ಆ ಆದಿಪುರಾಣದಲ್ಲಿ ಜಿನಾಗಮವನ್ನೂ ಪ್ರಕಾಶಪಡಿಸುತ್ತೇನೆ.

ಸಮಸ್ತಭಾರತವೂ
ಆದಿಪುರಾಣವೂ ಎಂಬುದಾಗ
ಇರುವ ಕಾವ್ಯದಲ್ಲಿ ಪಾತ್ರಗಳು
ಸಜೀವವಾಗಿರುವಂತೆ
ಪ್ರತಿಜ್ಞೆಮಾಡಿ ಆ ಪ್ರತಿಜ್ಞೆ
ಮಾಡಿದ ರೀತಿಯಲ್ಲಿಯೇ
ಒಂದು (ಭಾರತವು) ಆರು
ತಿಂಗಳಲ್ಲಿಯೂ ಮತ್ತೊಂದು
(ಆದಿಪುರಾಣವು)
ಮೂರುತಿಂಗಳಲ್ಲಿಯೂ
ಪೂರ್ಣವಾಯಿತು ಎನ್ನುವ

ಹಾಗೆ
ಕವಿತಾಗುಣಾರ್ಣವನಾದ
ಪಂಪನು ವರ್ಣಿಸಿದನು.

- **ಟಿಪ್ಪಣಿ::ನಿಜವಾಗಿ ಅದ್ಭುತ ಸಾಮರ್ಥ್ಯ!**

ಕ್ಷಿತಿಗೆ ಸಮಸ್ತ ಭಾರತಮುಮಾದಿಪುರಾಣಮು ಮೀಗಳೊಂದಳಂ ಕೃತಿಯವೊಲಿರ್ದುವೇಕಱಿಯ ಪೋದವರಾದವರೊಳ್ ಸರಸ್ವತೀ|

ಮತಿ ಕವಿತಾಗುಣಕ್ಕೆ

ಪದೆದೆಯ್ದೆವರಲ್ಕೆ

ಕವಿಂದ್ರರಾರ್ ಸರ

ಸ್ವತಿಗೆ ವಿಳಾಸಮಂ ಪೊಸತು

ಮಾಡುವ ಪಂಪನ

ವಾಗ್ವಿಲಾಸಮಂ|| ೬೧ ||

ಪದ್ಯ-೬೧:ಪದವಿಭಾಗ-

ಅರ್ಥ:ಕ್ಷಿತಿಗೆ ಸಮಸ್ತ

ಭಾರತಮುಂ

ಆದಿಪುರಾಣಮುಂ (ಸಮಸ್ತ

ಭಾರತವೂ ಆದಿಪುರಾಣವೂ

ಲೋಕಕ್ಕೆ) ಈಗಳ್ ಒಂದು ಅಳಂಕೃತಿಯವೊಲ್ ಇರ್ದುವು (ಈಗ ಒಂದು ಅಲಂಕಾರದಂತೆ ಇವೆ.) ಏಕೆ ಅಱಿಯ (ಏಕೆ ಎಂದು ಅರಿಯ- ತಿಳಿಯಪ್ಪ) ಪೋದವರು ಆದವರೊಳ್ ಸರಸ್ವತೀ ಮತಿ ಕವಿತಾಗುಣಕ್ಕೆ (ಹಿಂದೆ ಆಗಿಹೋದವರಲ್ಲಿಯೂ ಈಗ ಆಗಿರುವವರಲ್ಲಿಯೂ

ಸರಸ್ವತೀಮತಿಯುಳ್ಳವನು ಬುದ್ಧಿಯುಳ್ಳವನು ಪಂಪನು.) ಪದೆದು ಎಯ್ದೆವರಲ್ಕೆ (ಅವನ ಮಾತಿನ- ಚೆಲುವನ್ನು ಸಮೀಪಿಸಲು) ಕವಿಂದ್ರರಾರ್ ಸರಸ್ವತಿಗೆ ವಿಳಾಸಮಂ (ಸರಸ್ವತಿಗೆ ವಿಲಾಸವನ್ನು/ ಸೊಗಸನ್ನು) ಪೊಸತು ಮಾಡುವ ಪಂಪನ ವಾಗ್ವಿಲಾಸಮಂ (ಹೊಸ ರೀತಿಯಲ್ಲಿ ಮಾಡುವ ಅವನ

ಮಾತಿನ ವೈಭವವನ್ನು ಮೀರಿಸುವ ಕವೀಂದ್ರರು ಯಾರಿದ್ದಾರೆ? ಯಾರೂ ಇಲ್ಲ.)

ಪದ್ಯ-೬೧:ಅರ್ಥ:ಸಮಸ್ತ ಭಾರತವೂ ಆದಿಪುರಾಣವೂ ಲೋಕಕ್ಕೆ ಈಗ ಒಂದು ಅಲಂಕಾರದಂತೆ ಇವೆ. ಏಕೆ ಎಂದು ತಿಳಿಯಲು, ಹಿಂದೆ ಆಗಿಹೋದವರಲ್ಲಿಯೂ ಈಗ ಆಗಿರುವವರಲ್ಲಿಯೂ ಸರಸ್ವತೀ ಮತಿಯಾಗಿ

ಸರಸ್ವತೀಮತಿಯುಳ್ಳವನು ಬುದ್ಧಿಯುಳ್ಳವನು ಪಂಪನು. ಅವನ ಮಾತಿನ ಚೆಲುವನ್ನು ಸಮೀಪಿಸಲು ಸರಸ್ವತಿಗೆ ಸೊಬಗನ್ನು ಹೊಸ ರೀತಿಯಲ್ಲಿ ಮಾಡುವ ಅವನ ಮಾತಿನ ವೈಭವವನ್ನು ಮೀರಿಸುವ ಕವೀಮದ್ರರು ಯಾರಿದ್ದಾರೆ? ಯಾರೂ ಇಲ್ಲ.

ಕವಿತಾಗುಣಾರ್ಣವ ಪಂಪನು ಯೋಗ್ಯತೆಯಿಂದ "ಆಚಾರ್ಯ"ನಾದನು

ಉ||ಕ್ಷಿತಿಗೆ ಸಮಸ್ತ
ಭಾರತಮುಮಾದಿಪುರಾಣಮು
ವಿಗಳೊಂದಳಂ
ವ್ಯಾಸಮುನಿ ಪ್ರಣೂತ
ಕೃತಿಯಂ ಸಲೆ ಪೇೞ್ದ ಸತ್ಯವಿ
ವ್ಯಾಸ
ಸಮಾಗಮಾನ್ವಿತಮನಾದಿಪು
ರಾಣಮನೆಯ್ದೆ ಪೇೞ್ದ ವಾ|

ಕೃ್ರೀ ಸುಭಗಂ

ಪುರಾಣಕವಿಯುಂ

ಧರೆಗಾಗಿರೆಯುಣ್ಮೆ

ಪೊಣ್ಮುವೀ

ದೇಸಿಗಳುಂತೆ

ನಾಡೊವಜನಾದನೊ ಪೇೞ್

ಕವಿತಾಗುಣಾರ್ಣವಂ|| ೬೨ ||

ಪದ್ಯ-೬೨:ಪದವಿಭಾಗ-

ಅರ್ಥ:ವ್ಯಾಸಮುನಿ ಪ್ರಣೂತ

ಕೃತಿಯಂ ಸಲೆ ಪೇೞ್ದು

(ವ್ಯಾಸಮಹರ್ಷಿಗಳ, ಪ್ರಸಿದ್ಧ

ಕೃತಿಯಾದ ಭಾರತವನ್ನು ಚೆನ್ನಾಗಿ ಹೇಳಿ) ಸತ್ಯವಿ ವ್ಯಾಸ ಸಮಾಗಮ ಆನ್ವಿತಮನು ಆದಿಪುರಾಣಮಮಂ ಎಯ್ದೆ ಪೇೞ್ದ (ಪ್ರಸಿದ್ಧರಾದ ಸತ್ಕವಿಗಳ ವ್ಯಾಖ್ಯಾನ ಮತ್ತು ಸಹವಾಸಗಳಿಂದ ಕೂಡಿರುವ ಆದಿಪುರಾಣವನ್ನು ಚೆನ್ನಾಗಿ ಹೇಳಿ,) ವಾಕ್ಶ್ರೀ ಸುಭಗಂ (ವಾಕ್ಸಂಪತ್ತಿನ ಸೌಂದರ್ಯವುಳ್ಳವನೂ)

ಪುರಾಣಕವಿಯುಂ
(ಪುರಾಣರಚನೆ ಮಾಡಿದ
ಕವಿಯು) ಧರೆಗಾಗಿರೆ
ಉ(ಯು)ಣ್ಮಿ ಪೊಣ್ಮುವ ಈ
ದೇಸಿಗಳು (ಅವನಿಂದ
ಹೊರಹೊಮ್ಮುವ ಈ ದೇಸಿ
ಕಾವ್ಯ ಚಲುವುಗಳು
ತೋರಿರಲು) ಉಂತೆ
(ಸುಮ್ಮನೆ) ನಾಡ ಓವಜನು
ಆದನೊ ಪೇೞ್
ಕವಿತಾಗುಣಾರ್ಣವಂ

(ಕವಿತಾಗುಣಾರ್ಣವನು ಸುಮ್ಮನೆ ನಾಡಿನ ಆಚಾರ್ಯನು ಆದನೋ ಹೇಳು! ಯೋಗ್ಯತೆಯಿಂದ ಅದನು.)

ಪದ್ಯ-೬೨:ಅರ್ಥ:
ವ್ಯಾಸಮಹರ್ಷಿಗಳ, ಪ್ರಸಿದ್ಧ ಕೃತಿಯಾದ ಭಾರತವನ್ನು ಚೆನ್ನಾಗಿ ಹೇಳಿ ಪ್ರಸಿದ್ಧರಾದ ಸತ್ಕವಿಗಳ ವ್ಯಾಖ್ಯಾನ ಮತ್ತು ಸಹವಾಸಗಳಿಂದ ಕೂಡಿರುವ

ಆದಿಪುರಾಣವನ್ನು ಚೆನ್ನಾಗಿ
ಹೇಳಿ, ಪಂಪನು ವಾಕ್ಸಂಪತ್ತಿನ
ಸೌಂದರ್ಯವುಳ್ಳವನೂ,
ಪುರಾಣರಚನೆ ಮಾಡಿದ
ಕವಿಯು ಲೋಕದಲ್ಲಿ ಹುಟ್ಟಿ,
ಅವನಿಂದ ಹೊರಹೊಮ್ಮುವ
ಈ ದೇಸಿ ಕಾವ್ಯದ
ಚೆಲುವುಗಳು - ಅವನ
ಕಾವ್ಯದಲ್ಲಿ ಹೊಮ್ಮಿರಲು-
ಕವಿತಾಗುಣಾರ್ಣವನು
ಸುಮ್ಮನೆ ನಾಡಿನ

ಆಚಾರ್ಯನು ಆದನೋ ಹೇಳು! ಯೋಗ್ಯತೆಯಿಂದ ಅದನು. (ಎಂದು ಭಾವ)

ಮಂಗಳ ಪದ್ಯಗಳು - ಎಲ್ಲರಿಗೂ ಇಷ್ಟಾರ್ಥ ನೆರವೇರುವ ಹಾರೈಕೆ

ಚಂ|| ಪುದಿದಿರೆ ರಾಗಮುರ್ಕೆ ಪೊಸವೇಟದಲಂಪುಗಳೆಲ್ಲ ಮೋದಿದ ಗಿ್ದಿದಱನುಯಾಯಿಗಳ್ಗೆಸೆವುದಾರ ಗುಣಂ ಸಕಳಾವನೀಶ್ವರ|

ಗರ್ದಟನಳುರ್ಕೆ ಭೃತ್ಯನಿವಹಕ್ಕೆ ಚದುರ್ ಗಣಿಕಾಜನಕ್ಕೆ ಕುಂದದೆ ನೆಲಸಿರ್ಕೆ ಮಹಿತಳಕ್ಕೆ ಮದೀಯ ಕೃತಿಪ್ರಬಂಧದಿಂ|| ೬೩ ||

ಪದ್ಯ-೬೩:ಪದವಿಭಾಗ-ಅರ್ಥ:ಪುದಿದು ಇರೆ (-ತುಂಬಿರಲಿ.) ರಾಗಂ ಉರ್ಕೆ (ಸಂತೋಷವು ಉಕ್ಕಲಿ) ಪೊಸವೇಟದ ಅಲಂಪುಗಳು ಎಲ್ಲಂ (ಹೊಸ ಪ್ರಣಯದ

ಆನಂದಗಳೆಲ್ಲವ್ರೂ,) ಓದಿದರ್ಗೆ
(ಓದಿದವರಿಗೆ) ಇದಱ
ಅನುಯಾಯಿಗಳ್ಗೆ (ಇದರ
ಅನುಯಾಯಿಗಳಿಗೆ - ಇದರ
ನೀತಿಯನ್ನು
ಅನುಸರಿಸುವವರಿಗೆ) ಎಸೆವ
ಉದಾರ ಗುಣಂ (-
ಶೋಭಿಸುವ ಉದಾರ
ಗುಣವ್ರೂ,) ಸಕಳ
ಅವನೀಶ್ವರರ್ಗೆ
(ಸಮಸ್ತರಾಜರಿಗೆ ಶೋಭಿಸುವ

ಉದಾರ ಗುಣವೂ, -
ಉಂಟಾಗಲಿ) ಅದಟನು
ಅಳ್ಕುರ್ಕೆ ಭೃತ್ಯನಿವಹಕ್ಕೆ
(ಸೇವಕವರ್ಗಕ್ಕೆ/ ಭಟರಿಗೆ
ಪರಾಕ್ರಮವೂ,) ಚದುರ್
ಗಣಿಕಾಜನಕ್ಕೆ (ಗಣಿಕೆಯರಿಗೆ
ಹಚ್ಚಿನ ಕೌಶಲವೂ,) ಕುಂದದೆ
ನೆಲಸಿರ್ಕೆ ಮಹಿತಳಕ್ಕೆ
ಮದೀಯ ಕೃತಿಪ್ರಬಂಧದಿಂ
(ಭೂಮಂಡಲಕ್ಕೆ ನನ್ನ ಕಾವ್ಯ
ರಚನೆಯಿಂದ ಇವೆಲ್ಲವೂ

ಕಡಿಮೆಯಾಗದಂತೆ ನಲಸಿರಲಿ)

ಪದ್ಯ-೬೩:ಅರ್ಥ: ಈ ನನ್ನ ಕೃತಿಬಂಧವನ್ನು ಓದಿದರಿಗೆ ಸಂತೋಷವು ತುಂಬಿರಲಿ. ಹೊಸ ಪ್ರಣಯದ ಆನಂದಗಳೆಲ್ಲವೂ ಉಕ್ಕಲಿ, ಇದರಂತೆ ನಡೆದುಕೊಂಡ ಸಮಸ್ತ ರಾಜರಿಗೆ ಶೋಭಿಸುವ ಉದಾರ ಗುಣವೂ, ಸೇವಕವರ್ಗಕ್ಕೆ/ಭಟರಿಗೆ

ಪರಾಕ್ರಮವೂ, ಗಣಿಕೆಯರಿಗೆ ಹಚ್ಚಿನ ಕೌಶಲವೂ ಉಂಟಾಗಲಿ. ಭೂಮಂಡಲಕ್ಕೆ ನನ್ನ ಕಾವ್ಯ ರಚನೆಯಿಂದ ಇವೆಲ್ಲವೂ ಕಡಿಮೆಯಾಗದಂತೆ ನಲಸಿರಲಿ)

<u>ಮಹಾಭಾರತ ಲೋಕಪೂಜ್ಯವಾಗಲು ಇವರುಗಳು ಕಾರಣ</u>

ಮ||ಸ್ರ||

ಚಲದೊಳ್ದುಯೋ೯ಧನಂ

ನನ್ನಿಯೊಳಿನತನಯಂ
ಗಂಡಿನೊಳ್ ಭೀಮಸೇನಂ
ಬಲದೊಳ್
ಮದ್ರೇಶನತ್ಯುನ್ನತಿಯೊಳಮರ
ಸಿಂಧೂದ್ಭವಂ ಚಾಪವಿದ್ಯಾ|
ಬಲದೊಳ್ ಕುಂಭೋದ್ಭವಂ
ಸಾಹಸದ ಮಹಿಮೆಯೊಳ್
ಫಲ್ಗುಣಂ ಧರ್ಮದೊಳ್ ನಿ
ರ್ಮಲ ಚಿತ್ತಂ ಧರ್ಮಪುತ್ರಂ
ಮಿಗಿಲಿವರ್ಗಳಿನೀ ಭಾರತಂ
ಲೋಕಪೂಜ್ಯಂ|| ೬೪ ||

ಪದ್ಯ-೬೪:ಪದವಿಭಾಗ-ಅರ್ಥ:ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ ಗಂಡಿನೊಳ್ ಭೀಮಸೇನಂ, (ಛಲದಲ್ಲಿ ದುಯೋಧನನೂ ಸತ್ಯದಲ್ಲಿ ಕರ್ಣನೂ ಪೌರುಷದಲ್ಲಿ ಭೀಮಸೇನನೂ) ಬಲದೊಳ್ ಮದ್ರೇಶನು ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ ಚಾಪವಿದ್ಯಾಬಲದೊಳ್

ಕುಂಭೋದ್ಭವಂ (ಬಲದಲ್ಲಿ
ಶಲ್ಯನೂ ಗುಣದ
ಉನ್ನತಿಯಲ್ಲಿ ಭೀಷ್ಮನೂ
ಬಿಲ್ಲು ವಿದ್ಯೆಯ ಕೌಶಲದಲ್ಲಿ
ದ್ರೋಣಾಚಾರ್ಯನೂ)
ಸಾಹಸದ ಮಹಿಮೆಯೊಳ್
ಫಲ್ಗುಣಂ (ಸಾಹಸದ
ಮಹಿಮೆಯಲ್ಲಿ ಅರ್ಜುನನೂ,)
ಧರ್ಮದೊಳ್ ನಿರ್ಮಲ ಚಿತ್ತಂ
ಧರ್ಮಪುತ್ರಂ (ಧರ್ಮದಲ್ಲಿ
ಪರಿಶುದ್ಧಮನಸ್ಸುಳ್ಳ

ಧರ್ಮರಾಯನೂ)
ಮಿಗಿಲಿವರ್ಗಳಿಂ ಈ ಭಾರತಂ
ಲೋಕಪೂಜ್ಯಂ (ಇವರಿಂದ
ಮಹಾಭಾರತವು
ಲೋಕಪೂಜ್ಯವಾಗಿದೆ.)
ಪದ್ಯ-೬೪:ಅರ್ಥ: ಛಲದಲ್ಲಿ
ದುಯೋಧನನೂ, ಸತ್ಯದಲ್ಲಿ
ಕರ್ಣನೂ ಪೌರುಷದಲ್ಲಿ
ಭೀಮಸೇನನೂ, ಬಲದಲ್ಲಿ
ಶಲ್ಯನೂ, ಗುಣದ
ಉನ್ನತಿಯಲ್ಲಿ ಭೀಷ್ಮನೂ,

ಬಿಲ್ಲು ವಿದ್ಯೆಯ ಕೌಶಲದಲ್ಲಿ ದ್ರೋಣಾಚಾರ್ಯನೂ, ಸಾಹಸದ ಮಹಿಮೆಯಲ್ಲಿ ಅರ್ಜುನನೂ, ಧರ್ಮದಲ್ಲಿ ಪರಿಶುದ್ಧ ಮನಸ್ಸುಳ್ಳ ಧರ್ಮರಾಯನೂ ಶ್ರೇಷ್ಠರಾದವರು. ಇವರಿಂದ ಮಹಾಭಾರತವು ಲೋಕಪೂಜ್ಯವಾಗಿದೆ.

<u>ಮಂಗಳ ಪದ್ಯ : ಈ ಕಾವ್ಯವನ್ನು ಓದಿದ,ಬರೆದ, ಕೇಳಿದ ಎಲ್ಲರಿಗೆ ಕವಿಯ ಶುಭ ಹಾರೈಕೆ</u>

ಮ|| ಕರಮಱ್ಕಿರ್ತುರ್ಜ ಸಮಸ್ತ

ಭಾರತ ಕಥಾ ಸಂಬಂಧಮಂ

ಬಾಜಿಸಲ್

ಬರೆಯಲ್

ಕೇಳಲೊಡರ್ಚುವಂಗಮಿದ

ಱೊಳ್ ತನ್ನಿಷ್ಟವಪ್ಪನ್ನಮು|

ತ್ತರಮಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಮಿಷ್ಟಾಂಗನಾ ಸುರತಂ ಕಾಂತಿಯಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ|| ೬೫ ||

ಪದ್ಯ-೬೫:ಪದವಿಭಾಗ-ಅರ್ಥ:ಕರಂ ಅಲ್ಕಿರ್ತು (ಬಹಳವಾಗಿ ಪ್ರೀತಿಸಿ) ಸಮಸ್ತ ಭಾರತ ಕಥಾ ಸಂಬಂಧಮಂ ಬಾಜಿಸಲ್ ಬರೆಯಲ್

ಕೇಳಲ್ ಒಡರ್ಚುವಂಗಂ (ವಾಚಿಸಲು (ಓದಲು), ಬರೆಯಲು, ಕೇಳಲು ಪ್ರಾರಂಭಮಾಡುವವನಿಗೆ) ಇದಱೊಳ್ ತನ್ನ ಇಷ್ಟವಪ್ಪನ್ನಂ ಉತ್ತರಂ --> ಅಕ್ಕುಂ (ಇದರಿಂದ ತನ್ನ ಇಷ್ಟಾರ್ಥವು ಅಭಿವೃದ್ಧಿಯೂ --> ಆಗುತ್ತದೆ.) ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾಸುರತಂ

(ಧೈರ್ಯ, ತೃಪ್ತಿ, ಬಲ, ವೈಭವ, ಸೌಭಾಗ್ಯ, ತನ್ನ ಇಷ್ಟಳಾದ ಸ್ತ್ರೀಯ ಸಂಭೋಗ,)

ಕಾಂತಿಯ ಅಗುಂತಿ ಶಾಂತಿ

ವಿಭವಂ ಭದ್ರಂ ಶುಭಂ ಮಂಗಳಂ <-ಅಕ್ಕುಂ (ಶಾಂತಿ, ಏಳಿಗೆ, ವಿಭುತ್ವ/ ದೊರೆತನ , ಭದ್ರ- ರಕ್ಷಣೆ, ಶುಭ, ಮಂಗಳ ಇವೆಲ್ಲವೂ ಆಗುತ್ತವೆ.)

ಪದ್ಯ-೬೫:ಅರ್ಥ: ಸಮಸ್ತ ಭಾರತಕಥಾ ಪ್ರಬಂಧವನ್ನು

ಬಹಳವಾಗಿ ಪ್ರೀತಿಸಿ
ವಾಚಿಸಲು (ಓದಲು),
ಬರೆಯಲು, ಕೇಳಲು
ಪ್ರಾರಂಭಮಾಡುವವನಿಗೆ
ತನ್ನ ಇಷ್ಟಾರ್ಥವು
ಅಭಿವೃದ್ಧಿಯಾಗುತ್ತದೆ.
ಧೈರ್ಯ, ತೃಪ್ತಿ, ಬಲ,
ವೈಭವ, ಸೌಭಾಗ್ಯ, ತನ್ನ
ಇಷ್ಟಳಾದ ಸ್ತ್ರೀಯ
ಸಂಭೋಗ, ಶಾಂತಿ, ಏಳಿಗೆ,
ವಿಭುತ್ವ/ ದೊರೆತನ , ಭದ್ರ-

ರಕ್ಷಣೆ, ಶುಭ, ಮಂಗಳ -
ಇವೆಲ್ಲವೂ ಆಗುತ್ತವೆ.

♦

|| ಇದು ವಿವಿಧ
ವಿಬುಧಜನವಿನುತ
ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ

ವಿಕ್ರಮಾರ್ಜುನವಿಜಯದೊ
ಳ್ ಚತುರ್ದಶಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ

ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಹದಿನಾಲ್ಕನೆಯ ಆಶ್ವಾಸವು||

♦♣♣♣♣♣♣♣♣♣♣♣♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	11	12	13	**14**

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ಚತುರ್ದಶಾಶ್ವಾಸಂ

&oldid=159041" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೧ ಆಗಸ್ಟ್ ೨೦೧೮, ೧೨:೩೪ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಪಂಚಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಚಮಾಶ್ವಾಸಂ

- (XXV.II.IIX-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಅರ್ಜುನನಿಂದ ಸುಭದ್ರಾಪಹರಣ - ವಿವಾಹ

ಕಂ|| ಶ್ರೀ ವೀರಶ್ರೀ ಕೀರ್ತಿ
ಶ್ರೀ ವಾಕ್ಶ್ರೀಯೆಂಬ
ಪೆಂಡಿರಗಲದೆ ತನ್ನೊಳ್|
ಭಾವಿಸಿದ ಪೆಂಡಿರೆನಿಸಿದ
ಸೌವಾಗ್ಯದ
ಹರಿಗನೆಮ್ಮನೇನೊಲ್ದಪನೋ||
೧||

ಪದ್ಯ-೧:ಪದವಿಭಾಗ-
ಅರ್ಥ:ಶ್ರೀ ವೀರಶ್ರೀ ಕೀರ್ತಿ ಶ್ರೀ ವಾಕ್-ಶ್ರೀಯೆಂಬ ಪೆಂಡಿರ್(ಸ್ತ್ರೀಯರು) ಅಗಲದೆ,

ತನ್ನೊಳ್ ಭಾವಿಸಿದ
(ಧ್ಯಾನಿಸಲ್ಪಟ್ಟ) ಪೆಂಡಿರ್
(ಸ್ತ್ರೀಯರು) ಎನಿಸಿದ
ಸೌವಾಗ್ಯದ
(ಸೌಭಾಗ್ಯವನ್ನುಳ್ಳ) ಹರಿಗನು
ಎಮ್ಮನು ಒಲ್ದಪನೋ
(ನನ್ನನ್ನು (ಸುಭದ್ರೆಯನ್ನು)
ಪ್ರೀತಿಸುತ್ತಾನೆಯೋ
ಇಲ್ಲವೋ?)
ಪದ್ಯ-೧:ಅರ್ಥ: ಸುಭದ್ರೆಯು
ಚಿಂತಿತಳಾಗಿದ್ದಾಳೆ, ಏನೆಂದರೆ:

ಲಕ್ಷ್ಮಿ, ಜಯಲಕ್ಷ್ಮಿ, ಕೀರ್ತಿಲಕ್ಷ್ಮಿ, ವಾಕ್‌ಲಕ್ಷ್ಮಿ ಎಂಬ ಸ್ತ್ರೀಯರು ತನ್ನನ್ನು ಯಾವಾಗಲೂ ಧ್ಯಾನಿಸುತ್ತಿರುವ ಸ್ತ್ರೀಯರು ಎಂಬ ಸೌಭಾಗ್ಯವನ್ನುಳ್ಳ ಅರ್ಜುನನು ನನ್ನನ್ನು ಪ್ರೀತಿಸುತ್ತಾನೆಯೋ ಇಲ್ಲವೋ?

<u>ಸುಭದ್ರೆಯ ವಿರಹ ವೇದನೆ</u>

ಕಂ||ಎಂಬ ಬಗೆಯೊಳ್
ಸುಭದ್ರೆ ಪ
ಲುಂಬಿ ಮನಂಬಸದೆ
ತನುವನಾಱಿಸಲಲರಿಂ|
ತುಂಬಿಗಳಿಂ ತಣ್ಣೆಲರಿಂ
ತುಂಬಿದ ತಿಳಿಗೊಳದಿನೆಸೆವ
ಬನಮಂ ಪೊಕ್ಕಳ್|| ೨||

ಪದ್ಯ-೨:ಪದವಿಭಾಗ-

ಅರ್ಥ:ಎಂಬ ಬಗೆಯೊಳ್
ಸುಭದ್ರೆ ಪಲುಂಬಿ

(ಮನಸ್ಸಿನಲ್ಲಿ ಸುಭದ್ರೆ
ಹಲುಬಿ/ ಚಿಂತಿಸಿ)
ಮನಂಬಸದೆ ತನುವನು
ಆಱಿಸಲ್ (ಒಂದೇ
ಮನಸ್ಸಿನಿಂದ ದೇಹದ
ವಿರಹಸಂತಾಪವನ್ನು
ತಣಿಸಲು) ಅಲರಿಂ
ತುಂಬಿಗಳಿಂ ತಣ್ಣೆಲರಿಂ
(ತಂಗಾಳಿಯಿಂದ) ತುಂಬಿದ
ತಿಳಿಗೊಳದಿಂ ಎಸೆವ ಬನಮಂ

(ಉದ್ಯಾನವನವನ್ನು)
ಪೊಕ್ಕಳ್
ಪದ್ಯ-೨:ಅರ್ಥ: . ಎಂಬ
ಮನಸ್ಸಿನಿಂದ ಕೂಡಿದ
ಸುಭದ್ರೆಯು ಹಲುಬಿ
ಮನಸ್ಸನ್ನು ಒಂದೇ
ಮನಸ್ಸಿನಿಂದ ದೇಹದ
ವಿರಹಸಂತಾಪವನ್ನು
ಆರಿಸಿಕೊಳ್ಳಲು,
ಹೂವಿನಿಂದಲೂ
ದುಂಬಿಗಳಿಂದಲೂ

ತಂಗಾಳಿಯಿಂದಲೂ ತುಂಬಿದ
ತಿಳಿನೀರಿನ ಕೊಳಗಳಿಂದಲೂ
ಸೊಗಯಿಸುವ
ಉದ್ಯಾನವನವನ್ನು
ಪ್ರವೇಶಿಸಿದಳು.

ಕಂ||ತಳತಳಿಸಿ ಪೊಳೆವ
ಮಾವಿನ
ತಳಿರ್ಗಳಶೋಕೆಗಳ ಮಿಸುಪ
ಲತೆಗಳ ನೆಲೆ ಬ|
ಳ್ವಳ ಬಳೆದ ಬೇಟದುರುಳಿಯ

ಬಳಗಮಿದೆಂದೆಳೆಯಳೆಳಸಿ ತಳವೆಳಗಾದಳ್|| ೩ ||

ಪದ್ಯ-೩:ಪದವಿಭಾಗ-ಅರ್ಥ:|ತಳತಳಿಸಿ ಪೊಳೆವ ಮಾವಿನ ತಳಿರ್ಗಳ್ (ಚಿಗುರೆಲೆ) ಅಶೋಕೆಗಳ ಮಿಸುಪ(ಹೊಳೆವ-ಶೋಭಿಸುವ) ಲತೆಗಳ ನೆಲೆ (ಬಳ್ಳಿಗಳ ತಾಣ) ಬಳ್ವಳ ಬಳೆದ (ಸೊಂಪಾಗಿ ಬೆಳೆದ) ಬೇಟದ ಉರುಳಿಯ ಬಳಗಂ

ಇದೆಂದು (ಪ್ರೇಮದ ಉಂಡೆಗಳ ರಾಶಿ ಇವು ಎಂದು) ಎಳೆಯಳು (ಕೋಮಲೆ ಸುಭದ್ರೆ) ಎಳಸಿ (ಭಾವಿಸಿ) ತಳವೆಳಗಾದಳ್ (ತಳಮಳಗೊಂಡಳು)

ಪದ್ಯ-೩:ಅರ್ಥ: ತಳತಳ ಎಂದು ಹೊಳೆಯುವ ಮಾವಿನ ಚಿಗುರುಗಳ, ಅಶೋಕ ವೃಕ್ಷಗಳ, ಶೋಭಿಸುವ ಬಳ್ಳಿಗಳ ತಾಣ, ಇವು

ಸೊಂಪಾಗಿ ಬೆಳೆದ ಸೊಂಪಾಗಿ

ಬೆಳೆದ ಪ್ರೇಮದುಂಡೆಗಳ

ಸಮೂಹವೆಂದು

ಬಾಲೆಯಾದ ಸುಭದ್ರೆಯು ತಳಮಳಗೊಂಡಳು

ಕಂ||ಕೊಳದ ತಡಿವಿಡಿದು

ಬೆಳೆದೆಳ

ದಳಿರ್ಗಳಶೋಕೆಗಳ ಲತೆಯ

ಮನೆಗಳೊಳೆ ತೆಱಂ|

ಬೊಳೆವಲರ ಬಸದೆ

ಸುೞಿವಳಿ

ಗಳ ಬಳಗದ ದನಿಗೆ ಕಿನಿಸಿ ಕಿಂಕಿಱಿವೋದಳ್|| ೪ ||

ಪದ್ಯ-೪:ಪದವಿಭಾಗ-ಅರ್ಥ:ಕೊಳದ ತಡಿವಿಡಿದು (ದಡವನ್ನೇ ಅನುಸರಿಸಿ) ಬೆಳೆದ ಎಳದಳಿರ್ಗಳ (ಎಳೆಯ ಚಿಗುರನ್ನುಳ್ಳ) ಅಶೋಕೆಗಳ ಲತೆಯ ಮನೆಗಳೊಳೆ (ಲತೆಗಳ ಮಂಟಪಗಳಲ್ಲಿಯೇ) ತೆಱಂಬೊಳೆವ ಅಲರ (ತರಂ-

ತರತರವಾಗಿ ಹೊಳೆವ ಹೂವುಗಳ) ಬಸದೆ (ಬಳಿಯೆ) ಸುೞಿವ ಅಳಿಗಳ (ಮುತ್ತುವ ದುಂಬಿಗಳ) ಬಳಗದ ದನಿಗೆ ಕಿನಿಸಿ ಕಿಂಕಿಱಿವೋದಳ್ (ಕೆರಳಿ ಕಿರಿಕಿರಿಗೊಂಡಳು) **ಪದ್ಯ-೪:ಅರ್ಥ**:ವಿರಹದಿಂದ ಸಂತಾಪಗೊಂಡ ಸುಭದ್ರೆಯು, ಸರೋವರದ ದಡವನ್ನೇ ಅನುಸರಿಸಿ ಬೆಳೆದ ಎಳೆಯ ಚಿಗುರನ್ನುಳ್ಳ ಅಶೋಕ

ಮರಗಳ ಲತೆಗಳ
ಮಂಟಪಗಳಲ್ಲಿಯೇ ತರಂ-
ತರತರವಾಗಿ ಹೊಳೆವ
ಹೂವುಗಳ ಬಳಿಯೆ ಮುತ್ತಿ
ಸುತ್ತಾಡುವ ದುಂಬಿಗಳ ಧ್ವನಿಗೆ
ಕೆರಳಿ ಕರಿಕಿರಿಗೊಂಡಳು.

ಕಂ||ಸುರಯಿಯ
ಬಿರಿಮುಗುಳ್ಗಳ ಪೊರೆ
ವೊರೆಯೊಳ್
ಪೊರೆವೊರಕನಲ್ಲದಲ್ಲುಗುವ
ರಜಂ|

ಬೊರೆದು ಪರಕಲಿಸಿದಳಿಕುಳ ಪರಿಕರಮುಮನತನುಶಿಖಿಯ ಕಿಡಿಗಳೆ ಗೆತ್ತಳ್|| ೫||

ಪದ್ಯ-೫:ಪದವಿಭಾಗ-

ಅರ್ಥ:ಸುರಯಿಯ ಬಿರಿಮುಗುಳ್ಗಳ (ಸುರಗಿಯ ಹೂವಿನ ಅರಳಿದ ಮೊಗ್ಗುಗಳ) ಪೊರೆವೊರೆಯೊಳ್ (ಹೂವಿನ ಪದರಪದರದಲ್ಲಿ) ಪೊರೆವೊರಕನಲ್ಲದೆ (ಹೊರೆ/ ಭಾರಹೊರುವಿಕೆ ಇಲ್ಲದೆ)

ಅಲ್ಲುಗುವ (ಅಲ್ಲಿ ಉಗುವ-ಉದುರುವ)ರಜಂ ಬೊರೆದು (ಪರಾಗದಿಂದ ಲೇಪಿಸಲ್ಪಟ್ಟು) ಪರಕಲಿಸಿದ (ಚೆದುರಿದ) ಅಳಿಕುಳ ಪರಿಕರಮುಂ (ದುಂಬಿಗಳ ಸಮೂಹದ ಪರಿವಾರವನ್ನು) ಅತನುಶಿಖಿಯ(ಮನತನು- ಮನಸ್ಸಿನ ದೇಹದ ಮನ್ಮಥನ, ಶಿಖಿ- ಬೆಂಕಿಯ,) ಕಿಡಿಗಳೆ ಗೆತ್ತಳ್.(ಕಾಮಾಗ್ನಿಯ

ಕಿಡಿಗಳೆಂದೇ (ಸುಭದ್ರೆಯು)
ಭಾವಿಸಿದಳು.)
ಪದ್ಯ-೫:ಅರ್ಥ:ಸುರಗಿಯ
ಹೂವಿನ ಅರಳಿದ ಮೊಗ್ಗುಗಳ
ಒತ್ತಾದ ಪದರಗಳಲ್ಲಿ
ಲಘುವಾಗಿ ಹೊರಳಾಡಿ ಅಲ್ಲಿ
ಉದುರುವ ಪರಾಗದಿಂದ
ಲೇಪಿಸಲ್ಪಟ್ಟು
ಹಾರಾಡುತ್ತಿರುವ ದುಂಬಿಗಳ
ಸಮೂಹದ ಪರಿವಾರವನ್ನು
ಕೂಡ ಕಾಮಾಗ್ನಿಯ

ಕಿಡಿಗಳೆಂದೇ (ಸುಭದ್ರೆಯು) ಭಾವಿಸಿದಳು.

ವ|| ಅಂತು ನನೆಯ ಕೊನೆಯ ತಳಿರ ನಿಱದಳಿರ ಮುಗುಳ ಬಿರಿಮುಗುಳ ಮಿಡಿಯ ಕಿಱುಮಿಡಿಯ ಬಲ್ಮಿಡಿಗಳೊಳೆಱಗಿ ತುಱುಗಿದ ಬನಮಂ ಪೊಕ್ಕಲ್ಲಿಯುಂ ಮೆಯ್ಯನಾಱಸಲಾಱದೆ ಪೂತ ಚೂತಲತೆಗಳೊಳ್ ತಳ್ಪೊಯ್ದ ಪೊಸ ಮುತ್ತಿನ

ಬಾಸಣಿಗೆಯೊಳ್ ಬಾಸಣಿಸಿದ ಬಿರಿ ಮುಗುಳ್ಗಳ್ಗೊಳ್ ತುಱುಗಿದದಿರ್ಮುತ್ತೆಯ ಸುತ್ತಿನೊಳೆಸೆದುಪಾಶ್ರಯಂಬಡೆದ ಸಾಂದ್ರ ಚಂದ್ರಕಾಂತದ ಶಿಲೆಯನೊಳಗುಮಾಡಿ-

ವಚನ:ಪದವಿಭಾಗ-ಅರ್ಥ: ಅಂತು ನನೆಯ ಕೊನೆಯ ತಳಿರ(ಹಾಗೆ ಹೂವಿನ, ಕೊನೆ ಎಳೆರೆಂಬೆಗಳ) ನಿಱಿದಳಿರ ಮುಗುಳ (ನಿರಿಯಾಗಿರುವ

ಚಿಗುರುಗಳ ಮೊಗ್ಗಿನ)
ಬಿರಿಮುಗುಳ ಮಿಡಿಯ
ಕಿಱುಮಿಡಿಯ (ಬಿರಿದ
ಮೊಗ್ಗಿನ, ಮಿಡಿಯ
ಹೀಚುಮಿಡಿಯ)
ಬಲ್ಮಿಡಿಗಳೊಳು ಎಱಗಿ
ತುಱುಗಿದ ಬನಮಂ
ಪೊಕ್ಕು(ದೊಡ್ಡ ಮಿಡಿಗಳಿಮದ
ಬಾರದಿಂದ ಬಾಗಿ ಕಿಕ್ಕಿರಿದ
ವನವನ್ನು ಪ್ರವೇಶಿಸಿ)
ಅಲ್ಲಿಯುಂ ಮೆಯ್ಯನು

ಆಱಿಸಲಾಱದೆ (ಅಲ್ಲಿಯೂ ಶರೀರತಾಪವನ್ನು ಆರಿಸಲಾರದೆ) ಪೂತ ಚೂತಲತೆಗಳೊಳ್ ತಳ್ವೊಯ್ದು (ಹೂವನ್ನು ಬಿಟ್ಟಿರುವ ಮಾವಿನಮರದಲ್ಲಿನ ಬಳ್ಳಿಗಳಿಗೆ ಹತ್ತಿದ) ಪೊಸ ಮುತ್ತಿನ ಬಾಸಣಿಗೆಯೊಳ್ ಬಾಸಣಿಸಿದ ಬಿರಿ ಮುಗುಳ್ಗಳೊಳ್ (ಹೊಸ ಮುತ್ತಿನ ಹೊದಿಕೆಯಲ್ಲಿ

ಮುಚ್ಚಿದ ಬಿರಿದ ಮೊಗ್ಗುಗಳಲ್ಲಿ) ತುಱುಗಿದ ಅದಿಮುರ್ತ್ತೆಯ ಸುತ್ತಿನೊಳು ಎಸೆದು (ಸೇರಿಕೊಂಡಿರುವ ಅದಿಮುರ್ತ್ತೆಯ ಹೂವಿನ ಸುತ್ತಿನಲ್ಲಿ ತೊರುವ) ಉಪಾಶ್ರಯಂಬಡೆದ ಸಾಂದ್ರ ಚಂದ್ರಕಾಂತದ ಶಿಲೆಯನು ಒಳಗುಮಾಡಿ-

ವಚನ:ಅರ್ಥ: ಹಾಗೆ ಹೂವಿನ, ಕೊನೆ ಎಳೆರೆಂಬೆಗಳ,

ಚಿಗುರಿನ ನಿರಿಯಾಗಿರುವ
ಚಿಗುರುಗಳ ಮೊಗ್ಗಿನ,
ಭಾರದಿಂದ ಬಗ್ಗಿ ಕಿಕ್ಕಿರಿದ
ವನವನ್ನು ಪ್ರವೇಶಿಸಿ
ಅಲ್ಲಿಯೂ ಶರೀರತಾಪವನ್ನು
ಆರಿಸಲಾರದೆ ಹೂವನ್ನು
ಬಿಟ್ಟಿರುವ
ಮಾವಿನಮರದಲ್ಲಿನ
ಬಳ್ಳಿಗಳಿಗೆ ಹತ್ತಿದ ಹೊಸ
ಮುತ್ತಿನ ಹೊದಿಕೆಯಲ್ಲಿ
ಮುಚ್ಚಿದ ಬಿರಿದ ಮೊಗ್ಗುಗಳಲ್ಲಿ

ಸೇರಿಕೊಂಡಿರುವ

ಅದಿಮೂರ್ತ್ತಿಯ ಹೂವಿನ

ಸುತ್ತಿನಲ್ಲಿ ತೋರುವ,

ಸ್ಥಾನಪಡೆದ ಒತ್ತಾಗಿರುವ

ಚಂದ್ರಕಾಂತ ಶಿಲೆಯನ್ನು

ಒಳಗೊಂಡಿರುವ- ಒಂದು

ಮಾಧವೀ ಮಂಟಪವನ್ನು

ಕಂಡಳು

ಮ|| ಇದಿರೊಳ್ ಕಟ್ಟಿದ

ತೋರಣಂ ನಿಱಿದಳಿರ್

ಪೂಗೊಂಚಲಂದೆತ್ತಮೆ

ತ್ತಿದ ಪೂಮಾಲೆ ಪರಾಗ
ರಾಗಮುದಿತಾಶಾ ಭಾ
ಸಮುದ್ಯನ್ಮಧೂ|
ನ್ಮದ ಭೃಂಗಧ್ವನಿ
ಮಂಗಳಧ್ವನಿಯೆನಲ್
ಸಾಲ್ವನ್ನೆಗಂ ತಾನೆ ತ
ಕ್ಕುದು ಕಾಮಂಗೆ
ವಿವಾಹಮಂಟಪಮೆನಲ್ಕಾ
ಮಾದವೀಮಂಟಪಂ|| ೬||

ಪದ್ಯ-೬:ಪದವಿಭಾಗ-
ಅರ್ಥ:(ಮಾದವೀ

ಮಂಟಪದ) ಇದಿರೊಳ್
ಕಟ್ಟಿದ ತೋರಣಂ
ನಿಱಿದಳಿರ್ (ನಿರಿಗೆಯ
ಚಿಗುರು) ಪೂಗೊಂಚಲ್
ಅಂದು ಎತ್ತಂ ಎತ್ತಿದ
(ಎಲ್ಲೆಲ್ಲಿಯೂ ಎತ್ತಿ ಕಟ್ಟಿದ)
ಪೂಮಾಲೆ ಪರಾಗ ರಾಗಂ
(ಕೆಂಪುಬಣ್ಣದಿಂದ) ಮುದಿತ
ಆಶಾ ಭಾಸಂ ಉದ್ಯತ್
ಮಧೂನ್ಮದ ಭೃಂಗಧ್ವನಿ
ಮಂಗಳಧ್ವನಿಯೆನಲ್(ಆನಂ

ದತುಂಬಿದ ದಿಕ್ಕುಗಳ ಪ್ರಕಾಶ, ಮಧುಮತ್ತವಾದ ದುಂಬಿಗಳ ಧ್ವನಿಯೇ ಮಂಗಳವಾದ್ಯ ಎನ್ನುವಂತೆ) ಸಾಲ್ವನ್ನೆಗಂ ತಾನೆ ತಕ್ಕುದು(ತಾನು ಯೋಗ್ಯವಾದುದು ಎನ್ನುವಂತೆ) ಕಾಮಂಗೆ ವಿವಾಹಮಂಟಪಮೆನಲ್ಕಾ ಮಾದವೀಮಂಟಪಂ(ಆ ಮಾಧವೀ ಮಂಟಪವು ಇದೇ ಮದನನ ವಿವಾಹ

ಮಂಟಪವಾಗುವುದಕ್ಕೆ
ಯೋಗ್ಯವಾದುದು ಎನ್ನುವಂತೆ
ತಕ್ಕದಾಗಿದ್ದಿತು)
ಪದ್ಯ-೬:ಅರ್ಥ: ಮಾದವೀ
ಮಂಟಪದ : ಇದಿರಿನಲ್ಲಿ
ಕಟ್ಟಿದ ತೋರಣದ ಚಿಗುರು
ಕಾಣುತ್ತಿರಲು ಹೂಗೊಂಚಲು,
ಎಲ್ಲೆಲ್ಲಿಯೂ ಎತ್ತಿ ಕಟ್ಟಿದ
ಹೂವಿನ ಮಾಲೆಯಂತಿರಲು
ಹೂವಿನ ಪರಾಗದ
ಕೆಂಪುಬಣ್ಣದಿಂದ

ಆನಂದತುಂಬಿದ ದಿಕ್ಕುಗಳ
ಪ್ರಕಾಶ, ಹಾಗಿರಲು
ಮಧುಮತ್ತವಾದ ದುಂಬಿಗಳ
ಧ್ವನಿಯೇ ಮಂಗಳವಾದ್ಯ
ಎನ್ನುವಂತೆ ಆ ಮಾಧವೀ
ಮಂಟಪವು ಇದೇ ಮದನನ
ವಿವಾಹ
ಮಂಟಪವಾಗುವುದಕ್ಕೆ
ಯೋಗ್ಯವಾದುದು ಎನ್ನುವಂತೆ
ತಕ್ಕದಾಗಿದ್ದಿತು

ವ|| ಆ ಮಾಧವೀ
ಲತಾಮಂಟಪಮಂ ಕಾಮನ
ಡಾಮರಕ್ಕಳ್ಕಿ
ವನದುರ್ಗಂಬುಗುವಂತೆ
ಪೊಕ್ಕದರೊಳಗೆ
ಕಪ್ಪುರವಳುಕಿನ
ಜಗಲಿಯನಗಲಿತಾಗಿ ಸಮೆದು
ಚಂದನದೆಳದಳಿರ್ಗಳಂ ಪಾಸಿ
ಮಲ್ಲಿಗೆಯಲರ್ಗಳಂ ಪೂವಾಸಿ
ಮೃಣಾಳನಾಳದೊಳ್ ಸಮೆದ
ಸರಿಗೆಗಂಕಣಂಗಳುಮಂ ಯವ

ಕಳಿಕೆಗಳೊಳ್ ಸಮೆದ
ಕಟಿಸೂತ್ರಮುಮಂ ಸಾರ
ಕರ್ಪೂರದೊಳ್ ವಿರಚಿಸಿದ
ಹಾರಮುಮಂ ಕಠಿಯ ನೆಯ್ದಿಲ
ಕಾವಿನೊಳ್ ಭಾವಿಸಿದ
ನೂಪುರಮುಮನದಱ
ಬಿಠಿಮುಗುಳ್ಗಳೊಳ್ ಚಿತ್ರಿಸಿದ
ಕರ್ಣಪೂರಮುಮಂ ಬಿಳಿಯ
ತಾವರೆಯೆಳಗಾವಿನಸಿಯ
ನೂಲೊಳ್ ಕೋದ ತೋರ
ಮಲ್ಲಿಗೆಯ ಬಿಠಿಮುಗುಳ

ಸರಿಗೆಯುಮಂ

ಕಪ್ಪುರವಳುಕಿನ

ಲಂಗಣಮುಮಂ ತೊಟ್ಟು

ಕುಳಿರ್ಕೊೞ್ಪಿ

ಚಂದನರಸಮನೆರ್ದೆಯೊಳಂ

ಮೆಯ್ಯೊಳಂ ತಳ್ಕಿಱಿದು

ಕರಿಯ ಕರ್ಬಿನ ಕಾವಿನೆಳ

ಮೈಂದವಾೞೆಯೆಲೆಯೆ

ಬಿಜ್ಜಣಿಗೆಗಳಿಂ ಬೀಸಲ್ವೇೞ್ದು

ತಣ್ಬುಗೆಯ್ಯೆ ಮನದ ಮೆಯ್ಯ

ಸಂತಾಪದೊಳ್ ಬಿಸುಸುಯ್ದು ಬಿಸುಪಿನೊಳನಿತುಮಂ ಗೆಲ್ದು-

ವಚನ:ಪದವಿಭಾಗ-

ಅರ್ಥ:ಆ ಮಾಧವೀ ಲತಾಮಂಟಪಮಂ ಕಾಮನ ಡಾಮರಕ್ಕೆ ಅಳ್ಕಿ ವನದುರ್ಗಂ ಬುಗುವಂತೆ ಪೊಕ್ಕದರೊಳಗೆ (ಕಾಮನ ಕೋಟಲೆಗೆ ಹೆದರಿ ಕಾಡಿನ ಕೋಟೆಯನ್ನು ಹೊಗುವ ಹಾಗೆ ಆ ಮಾಧವೀ ಲತಾ ಮಂಟಪವನ್ನು

ಪ್ರವೇಶಿಸಿ) ಕಪ್ಪುರವ ಅಳುಕಿನ ಜಗಲಿಯನ ಅಗಲಿತಾಗಿ ಸಮೆದು ಚಂದನದೆ ಎಳದಳಿರ್ಗಳಂ (ಎಳೆ ತಳಿರ್ಗಳಂ) ಪಾಸಿ ಮಲ್ಲಿಗೆಯಲರ್ಗಳಂ ಪೂವಾಸಿ (ಅದರಲ್ಲಿ ಕರ್ಪೂರದ ಹಳುಕಿನ ಜಗುಲಿಯನ್ನು ವಿಸ್ತಾರವಾಗಿ ನಿರ್ಮಿಸಿ, ಶ್ರೀಗಂಧದ ಎಳೆಯ ಚಿಗುರುಗಳನ್ನು ಹಾಸಿ.

ಮಲ್ಲಿಗೆಯ ಹೂವುಗಳನ್ನು
ಹರಡಿ) ಮೃಣಾಳನಾಳದೊಳ್
ಸಮೆದ
ಸರಿಗೆಗಂಕಣಂಗಳುಮಂ
(ತಾವರೆಯ ದಂಟಿನಿಂದ
ಮಾಡಿದ ತಂತಿಬಳೆಗಳನ್ನೂ)
ಯವ (ಗೋದಿಯ-ಮೊಳಕೆ-
>)ಕಳಿಕೆಗಳೊಳ್ ಸಮೆದ
ಕಟಿಸೂತ್ರಮುಮಂ
(ಗೋದುವೆಯ
ಮೊಳಕೆಗಳಿಂದ ಮಾಡಿದ

ಉಡುದಾರವನ್ನೂ) ಸಾರ
ಕರ್ಪೂರದೊಳ್ ವಿರಚಿಸಿದ
ಹಾರಮುಮಂ (ಕರ್ಪೂರದ
ತಿರುಳಿನಿಂದ ರಚಿಸಿದ
ಹಾರವನ್ನೂ) ಕರಿಯ ನೆಯ್ದಿಲ
ಕಾವಿನೊಳ್ ಭಾವಿಸಿದ
ನೂಪುರಮುಮನು (ಕನ್ನೆ
ದಿಲೆಯ ಕಾವಿನಲ್ಲಿ ಮೇಳಿಸಿದ
ಕಾಲಂದಿಗೆಯನ್ನೂ -) ಅದಱ
ಬಿರಿಮುಗುಳ್ಗಳೊಳ್ ಚಿತ್ರಿಸಿದ
ಕರ್ಣಪೂರಮುಮಂ (ಅದರ

ಬಿರಿದ (ಅರಳಿದ)
ಮೊಗ್ಗುಗಳಲ್ಲಿ ಚಿತ್ರಿಸಿದ
ಕಿವಿಯ ಅಲಂಕಾರವನ್ನೂ)
ಬಿಳಿಯ ತಾವರೆಯ
ಎಳಗಾವಿನಸಿಯ
(ಎಳೆಯದಂಟಿನ) ನೂಲೊಳ್
ಕೋದ ತೋರ ಮಲ್ಲಿಗೆಯ
ಬಿರಿಮುಗುಳ
ಸರಿಗೆಯುಮಂ(ಬಿರಿ
ಮುಗುಳಿನ ಸರಿಗೆಯನ್ನೂ)
ಕಪ್ಪುರವಳುಕಿನ

ಲಂಗಣಮುಮಂ ತೊಟ್ಟು (ಕರ್ಪೂರದ ಹಳುಕಿನ ಹಾರವನ್ನೂ ತೊಟ್ಟು), ಕುಳಿರ್ಕೊೞ್ಪ (ತಣ್ಣಗಿರುವ) ಚಂದನರಸಮನು ಎರ್ದೆಯೊಳಂ ಮೆಯ್ಯೊಳಂ ತಳ್ಕಿಱಿದು (ಮೈಯಲ್ಲೆಲ್ಲ ಲೇಪಿಸಿಕೊಂಡು) ಕರಿಯ ಕರ್ಬಿನ ಕಾವಿನ ಎಳ ಮೈಂದವಾೞೆಯೆಲೆಯ (ಎಳೆಯ ಮಹೇಂದ್ರ ಬಾಳೆಯ

ಎಲೆಯ) ಬಿಜ್ಜಣಿಗೆಗಳಿಂ
ಬೀಸಲ್ವೇೞ್ದು (ಬೀಸಹೇಳಿ)
ತಣ್ಬುಗೆಯ್ಯೆ
(ತಂಪನ್ನುಂಟುಮಾಡಲು)
ಮನದ ಮೆಯ್ಯ
ಸಂತಾಪದೊಳ್ ಬಿಸುಸುಯ್ದು,
ಬಿಸುಪಿನೊಳನಿತುಮಂ ಗೆಲ್ದು
(ಆ ಶಾಖದಲ್ಲಿ ಅಷ್ಟು
ಶೈತ್ಯೋಪಕರಣಗಳನ್ನು
ಮೀರಿಸಿ)-

ವಚನ:ಅರ್ಥ:ಸುಭದ್ರೆಯು ಕಾಮನ ಕೋಟಲೆಗೆ ಹೆದರಿ ಕಾಡಿನ ಕೋಟೆಯನ್ನು ಹೊಗುವ ಹಾಗೆ ಆ ಮಾಧವೀ ಲತಾ ಮಂಟಪವನ್ನು ಪ್ರವೇಶಿಸಿ ಅದರಲ್ಲಿ ಕರ್ಪೂರದ ಹಳುಕಿನ ಜಗುಲಿಯನ್ನು ವಿಸ್ತಾರವಾಗಿ ನಿರ್ಮಿಸಿ, ಶ್ರೀಗಂಧದ ಎಳೆಯ ಚಿಗುರುಗಳನ್ನು ಹಾಸಿ, ಮಲ್ಲಿಗೆಯ ಹೂವುಗಳನ್ನು

ಹರಡಿದಳು. ತಾವರೆಯ
ದಂಟಿನಿಂದ ಮಾಡಿದ
ತಂತಿಬಳೆಗಳನ್ನೂ
ಗೋದುವೆಯ ಮೊಳಕೆಗಳಿಂದ
ಮಾಡಿದ ಉಡುದಾರವನ್ನೂ
ಕರ್ಪೂರದ ತಿರುಳಿನಿಂದ
ರಚಿಸಿದ ಹಾರವನ್ನೂ ಕನ್ನೆ
ದಿಲೆಯ ಕಾವಿನಲ್ಲಿ ಮೇಳಿಸಿದ
ಕಾಲಂದಿಗೆಯನ್ನೂ
(ಧರಿಸಿದಳು.) ಅದರ ಬಿರಿದ
(ಅರಳಿದ) ಮೊಗ್ಗುಗಳಲ್ಲಿ

ಚಿತ್ರಿಸಿದ ಕಿವಿಯ ಅಲಂಕಾರವನ್ನೂ, ಬಿಳಿಯ ತಾವರೆಯ ಎಳೆಯ ದಂಟಿನ ನೂಲಿನಲ್ಲಿ ಪೋಣಿಸಿದ ದಪ್ಪ ಮಲ್ಲಿಗೆಯ ಬಿರಿ ಮುಗುಳಿನ ಸರಿಗೆಯನ್ನೂ ಕರ್ಪೂರದ ಹಳುಕಿನ ಹಾರವನ್ನೂ ತೊಟ್ಟಳು. ವಿಶೇಷ ತಂಪಾಗಿರುವ ಶ್ರೀಗಂಧದ ರಸವನ್ನು ಎದೆಯಲ್ಲಿ ಮೈಯಲ್ಲೆಲ್ಲ ಲೇಪಿಸಿಕೊಂಡು,

ಕರಿಯ ಕಬ್ಬಿನ ಕಾವಿನ
ಎಳೆಯ ಮಹೇಂದ್ರ ಬಾಳೆಯ
ಎಲೆಯ ಬೀಸಣಿಗೆಗಳಿಂದ
ಬೀಸಹೇಳಿ
ತಂಪನ್ನುಂಟುಮಾಡಲು,
ಮನಸ್ಸಿನ ಮತ್ತು ದೇಹದ
ಸಂತಾಪದಿಂದ ನಿಟ್ಟುಸಿರನ್ನು
ಬಿಟ್ಟು ಆ ಶಾಖದಲ್ಲಿ ಅಷ್ಟು
ಶೈತ್ಯೋಪಕರಣಗಳನ್ನು
ಮೀರಿಸಿ-

ಉ|| ಕೆಂದಳಿರ್ವಾಸು ಸೇಕದ
ತೊವಲ್ಗೆಣೆಯಾಯ್ತು ಮೃಣಾಳ
ನಾಳವೊಂ
ದೊಂದಡೆವೊತ್ತಿ ಪತ್ತಿದುವು
ಸೂಸುವ ಶೀತಳವಾರಿ
ಮೈಯ್ಯನೆ|
ಯ್ತಂದಿರದೆತ್ತ ಬತ್ತಿದುವು
ತಚ್ಛಶಿಕಾಂತಶಿಳಾತಳಂ ಸಿಡಿ
ಲ್ದಂದೊಡೆದತ್ತಿದೇಂ ಬಿಸಿದೊ
ಬೇಟದ ಬೆಂಕೆ
ಮೃಗಾಂಕವಕ್ತ್ರೆಯಾ|| ೭ ||

ಪದ್ಯ-೭:ಪದವಿಭಾಗ-ಅರ್ಥ:ಕೆಂದಳಿರ್ವಾಸು (ಕೆಂಪು ಚಿಗುರಿನಿಂದ ಮಾಡಿದ ಹಾಸಿಗೆ) ಸೇಕದ ತೊವಲ್ಗೆಣೆಯಾಯ್ತು (ನೀರು ಚಿಮುಕಿಸಿದ ಚಿಗುರಿಗೆ ಸಮಾನವಾಯಿತು.) ಮೃಣಾಳ ನಾಳ ವೊಂದೊಂದು ಅಡೆವೊತ್ತಿ ಪತ್ತಿದುವು (ತಳಹತ್ತಿಕೊಂಡು ಮೈಗೆ ಅಂಟಿಕೊಂಡವು) ಸೂಸುವ

ಶೀತಳವಾರಿ (ತಂಪುನೀರು)
ಮೈಯ್ಯನು ಎಯ್ತಂದು
ಇರದೆತ್ತ ಬತ್ತಿದುವು (ಹರಿದು
ಎಲ್ಲಿಯೋ
ಬತ್ತಿಹೋಯಿತು),ತತ್
ಶಶಿಕಾಂತ ಶಿಳಾತಳಂ
(ಚಂದ್ರಕಾಂತಶಿಲೆಯಕಲ್ಲು)
ಸಿಡಿಲ್ದು ಒಡೆದತ್ತಿದೇಂ(ಸಿಡಿದು
ಇರದೆ ಒಡೆದುಹೋಯಿತು.)
ಬಿಸಿದೊ ಬೇಟದ ಬೆಂಕೆ
(ಕಾಮದ ಬೆಂಕಿ)

ಮೃಗಾಂಕವಕ್ತ್ರಿಯಾ (ಮೃಗಾಂಕ- ಚಂದ್ರನಂತೆ, ವಕ್ತ್ರಿಯಾ- ಮುಖದವಳು)

ಪದ್ಯ-೭:ಅರ್ಥ: ಆ ಕೆಂಪು ಚಿಗುರಿನಿಂದ ಮಾಡಿದ ಹಾಸಿಗೆಯು ಬಿಸಿ ನೀರು ಚಿಮುಕಿಸಿದ ಚಿಗುರಿಗೆ ಸಮಾನವಾಯಿತು. ತಾವರೆಯ ದಂಟೊಂದೊಂದು ತಳಹತ್ತಿಕೊಂಡು ಮೈಗೆ ಅಂಟಿಕೊಂಡವು. ಮೇಲೆ

ಚೆಲ್ಲಿದ ತಣ್ಣಗಿರುವ ನೀರು
ಹರಿದು ಎಲ್ಲಿಯೋ
ಬತ್ತಿಹೋಯಿತು. ಆ
ಚಂದ್ರಕಾಂತ ಶಿಲಾತಳವು
ಸಿಡಿದು ಇರದೆ
ಒಡೆದುಹೋಯಿತು. ಆ
ಚಂದ್ರವದನೆ ಸುಭದ್ರೆಯ
ವಿರಹಾಗ್ನಿಯಿದು ಎಷ್ಟು
ಬಿಸಿಯಾದುದೋ?

ಚಂ|| ಅರಿಗನ ಬೇಟದೊಂದೆ ಪೊಸಬೇಟದ

ಕೇಸುರಿಯಿಂದಮೆಯ್ದೆ ದ
ಳ್ಳುರಿ ನೆಗೆದಂದು ಕೆಂದಳಿರ
ಪಾಸುಗಳಿಂ
ಕುಳಿರ್ವಾಲಿನೀರ್ಗಳಿಂ|
ತುರಿಪದೆ ಸೂಸುತುಂ
ಕೆಳದಿಯರ್ ನದಿಪುತ್ತಿರೆ
ನೋಡೆ ದಾಹಮೋ
ತ್ತರಿಸಿದುದೊಂದು ಪೊನ್ನ
ಸಲಗಿರ್ಪವೊಲಿರ್ದುದು
ಮೆಯ್ ಸುಭದ್ರೆಯಾ|| ೮ ||

ಪದ್ಯ-೮:ಪದವಿಭಾಗ-ಅರ್ಥ:ಅರಿಗನ ಬೇಟದ ಒಂದೆ ಪೊಸಬೇಟದ(ಪ್ರೇಮದ ಒಂದು ಹೊಸ ಅನುಭವದ) ಕೇಸುರಿಯಿಂದಮೆಯ್ದೆ (ಕೇಸು ಉರಿ)ದಳ್ಳುರಿ ನೆಗೆದಂದು (ಚಿಮ್ಮಿದಾಗ) ಕೆಂದಳಿರ ಪಾಸುಗಳಿಂ (ಕೆಂಪು ಚಿಗುರಿನ ಹಾಸುಗಳಿಂದಲೂ) ಕುಳಿರ್ವ (ತಂಪು) ಆಲಿನೀರ್ಗಳಿಂ (ಹಿಮದ ನೀರಿನಿಂದ)ತುರಿಪದೆ

ಸೂಸುತುಂ (ತ್ವರಿಪ- ಬೇಗನೆ ಚಿಮುಕಿಸುತ್ತಾ) ಕೆಳದಿಯರ್ ನದಿಪುತ್ತಿರೆ (ನಂದಿಸುತ್ತಿರಲು) ನೋಡೆ ದಾಹಂ ಒತ್ತರಿಸಿದುದು (ಉರಿ ಹೆಚ್ಚಿತು) ಒಂದು ಪೊನ್ನ (ಚಿನ್ನದ) ಸಲಗಿರ್ಪವೊಲ್ ಇರ್ದುದು (ಸಲಾಕೆಯ ಹಾಗಿದ್ದಿತು.) ಮೆಯ್ (ದೇಹ) ಸುಭದ್ರೆಯಾ.

ಪದ್ಯ-೯:ಅರ್ಥ: ಅರ್ಜುನನ ಮೇಲಿನ ಪ್ರೇಮದ ಒಂದು

ಹೊಸ ಅನುಭವದ ಒಂದು
ಕೆಂಪುಜ್ವಾಲೆಯು ಚಿಮ್ಮಿದಾಗ
ಅವಳ ಸಖಿಯರು ಕೆಂಪು
ಚಿಗುರಿನ ಹಾಸುಗಳಿಂದಲೂ
ತಂಪಾಗಿರುವ ಹಿಮದ
ನೀರಿನಿಂದಲೂ ಬೇಗನೆ
ಚಿಮುಕಿಸುತ್ತಾ
ನಂದಿಸುತ್ತಿರಲು, ಎಷ್ಟು
ಪ್ರಯತ್ನಿಸಿದರೂ ಎಲ್ಲರೂ
ನೋಡುತ್ತಿರುವ ಹಾಗೆಯೇ ಆ
ಉರಿಯು ಹೆಚ್ಚಿತು.

ಸುಭದ್ರೆಯ ಶರೀರವು ಕಾಸಿದ
ಚಿನ್ನದ (ಅಪರಂಜಿಯ)
ಸಲಾಕೆಯ ಹಾಗಿದ್ದಿತು.

ಚಂ||ಮದನ ದವಾನಲಾರ್ಚಿ
ತನುವಂ ಸುಡೆ ತಳ್ತೆಮೆಯೊಳ್
ಪಳಂಚಿ ಬೀ
ಗಿದ ಬೆಳರ್ವಾಯೊಳುಚ್ಚಳಿಸಿ
ತುಂಗ ಕುಚಂಗಳ
ಪೊಯ್ಲೊಳೆತ್ತಲುಂ|
ಕೆದಱಿ ವಳಿತ್ರಯಂಗಳ
ತೊಡರ್ಪುಗಳೊಳ್

ತೊಡರ್ದೊರ್ಯ್ಯನೊಯ್ಯನೆ ಯ್ದಿದುವು ವಿಲೋಲನೇತ್ರ ಜಲಬಿಂದುಗಳಾಕೆಯ ನಿಮ್ನನಾಭಿಯಂ|| ೯ ||

ಪದ್ಯ-೯:ಪದವಿಭಾಗ-ಅರ್ಥ:ಮದನ ದವಾನಲಾರ್ಚಿ (ಕಾಮವೆಂಬ ದಾವ+ಅನಲ - ಕಾಡುಗಿಚ್ಚಿನ ಜ್ವಾಲೆಯು) ತನುವಂ ಸುಡೆ (ದೇಹವನ್ನು ಸುಡಲು) ತಳ್ತೆಮೆಯೊಳ್ (ತಳ್ತ ಎವೆ-ಮುಚ್ಚಿರುವ ರೆಪ್ಪೆಗಳಲ್ಲಿ)

ಪಳಂಚಿ (ತಾಗಿ) ಬೀಗಿದ ಬೆಳರ್ವಾಯೊಳು ಉಚ್ಚಳಿಸಿ (ಬಿಳಿಚಿಕೊಂಡಿರುವ ತುಟಿಯಲ್ಲಿ ಚಿಮ್ಮಿ) ತುಂಗ ಕುಚಂಗಳ ಪೊಯ್ಲೊಳು ಎತ್ತಲುಂ (ಎತ್ತರದ ಸ್ತನಗಳ ಬಡಿತದಿಂದ ಎಲ್ಲ ಕಡೆಯೂ) ಕೆದಱಿ (ಚೆದುರಿ) ವಳಿತ್ರಯಂಗಳ ತೊಡರ್ಪುಗಳೊಳ್ (ತ್ರಿವಳಿಗಳ ತೊಡಕುಗಳಲ್ಲಿ)

ತೊಡರ್ದು ಒಯ್ಯನೊಯ್ಯನೆ ಎಯ್ದಿದುವು (ಸೇರಿಕೊಂಡು ನಿಧಾನವಾಗಿ ಸೇರಿದುವು->) ವಿಲೋಲನೇತ್ರ ಜಲಬಿಂದುಗಳು(ಅತಿ ಆಸಕ್ತ ಕಣ್ಣೀರಿನ ಹನಗಳು) ಆಕೆಯ ನಿಮ್ನನಾಭಿಯಂ (ಕೆಳಗಿನ ಹೊಕ್ಕಳನ್ನು ಸೇರಿದವು)

ಪದ್ಯ-೯:ಅರ್ಥ: ಕಾಮವೆಂಬ ಕಾಡುಗಿಚ್ಚಿನ ಜ್ವಾಲೆಯು ದೇಹವನ್ನು ಸುಡಲು

ಸುಭದ್ರೆಯ ಮುಚ್ಚಿರುವ
ರೆಪ್ಪೆಗಳಲ್ಲಿ ತಗುಲಿ
ಬಿಳಿಚಿಕೊಂಡಿರುವ
ತುಟಿಯಲ್ಲಿ ಚಿಮ್ಮಿ ನೆಗೆದು
ಎತ್ತರದ ಸ್ತನಗಳ ಬಡಿತದಿಂದ
ಎಲ್ಲ ಕಡೆಯೂ ಚೆದುರಿ
ತ್ರಿವಳಿಗಳ ತೊಡಕುಗಳಲ್ಲಿ
ಸೇರಿಕೊಂಡು ನಿಧಾನವಾಗಿ
ಆಕೆಯ ಕೆಳಗಿನ ಆಳ
ಹೊಕ್ಕಳನ್ನು ಸೇರಿದವು.

ಚಂ||ನಗೆಮೊಗಮಂ
ಪೊದಳ್ದಲರ್ದ ತಾವರೆಯೆಂಬ
ವಿಮೋಹದಿಂ ಮೊಗಂ
ಬುಗಲೊಡಮಾ
ತಳೋದರಿಯ ಸುಯ್ಗಳ
ಬೆಂಕೆಯೊಳಿಚ್ಚೈಗೆಟ್ಟು ತೊ|
ಟ್ಟಗೆ ಕೊಳೆ ಮುಂದೆ ಬಿಳ್ದು
ಮಗುಱಿ ಸತಿಯಿಕ್ಕಿದ ಕಣ್ಣ
ನೀರ ಧಾ
ರೆಗಳೊಳೆ ನಾಂದೆಲರ್ಚಿ
ಪೊದಳ್ದೊರ್ಮೆಯೆ

ಪಾಱಿದುವುನ್ಮದಾಳಿಗಳ್|| ೧೦ ||

ಪದ್ಯ-೧೦:ಪದವಿಭಾಗ-ಅರ್ಥ:ನಗೆಮೊಗಮಂ ಪೊದಳ್ದ ಅಲರ್ದ ತಾವರೆಯೆಂಬ ವಿಮೋಹದಿಂ (ನಗೆ ಮುಖವನ್ನು ಚೆನ್ನಾಗಿ ಅರಳಿದ ತಾವರೆಯೆಂಬ ಭ್ರಾಂತಿಯಿಂದ) ಮೊಗಂ ಬುಗಲು ಒಡಮ್ ಆ ತಳೋದರಿಯ ಸುಯ್ಗಳ

ಬೆಂಕೆಯೊಳ್ ಇಚ್ಚೈಗೆಟ್ಟು
(ಆಶಾಭಂಗವಾಗಿ) ತೊಟ್ಟಗೆ
ಕೊಳೆ (ಕಾವು ಹತ್ತಲು?)
ಮುಂದೆ ಬಿೞ್ದು (ಮುಂದೆ
ಬಿದ್ದು) ಮಗುೞು ಸತಿಯಿಕ್ಕಿದ
ಕಣ್ಣ ನೀರ ಧಾರೆಗಳೊಳೆ
ನಾಂದು (ಪುನ ಆ ಸತಿಯು
ಸುರಿದ ಕಣ್ಣೀರಿನ ಧಾರೆಗಳಲ್ಲಿ
ನೆನೆದು) ಆಲರ್ಚಿ
(ಚೇತರಿಸಿಕೊಂಡು) ಪೊದಳ್ದು
ಒರ್ಮೆಯೆ ಪಾಱಿದುವ್

ಉನ್ಮದಾಳಿಗಳ್ (<-ಸೊಕ್ಕಿದ ದುಂಬಿಗಳು).

ಪದ್ಯ-೧೦:ಅರ್ಥ:ಸೊಕ್ಕಿದ ದುಂಬಿಗಳು ಸುಭದ್ರೆಯ ನಗೆ ಮುಖವನ್ನು ಚೆನ್ನಾಗಿ ಅರಳಿದ ತಾವರೆಯೆಂಬ ಭ್ರಾಂತಿಯಿಂದ ಪ್ರವೇಶಿಸಲು ಆ ತಳೋದರಿಯಾದ ಸುಭದ್ರೆಯ ಉಸಿರಿನ ಬೆಂಕಿಯಲ್ಲಿ ಆಶಾಭಂಗವಾಗಿ ಕಾವು ಹತ್ತಲು ಮುಂದೆ ಬಿದ್ದು ಪುನ

ಆ ಸತಿಯು ಸುರಿದ ಕಣ್ಣೀರಿನ
ಧಾರೆಗಳಲ್ಲಿ ನೆನೆದು
ಚೇತರಿಸಿಕೊಂಡು ಚದುರಿ
ಒಟ್ಟಿಗೇ ಹಾರಿದುವು

**ವ|| ಅಂತಾಬಾಲೆ ಕಾಯ್ದ
ಪುಡಿಯೊಳಗೆ
ಬಿಸುಟ್ಟೆಳವಾೞೆಯಂತೆ
ಸುರತ ಮಕರಧ್ವಜನೊಳಾದ
ಬೇಟದೊಳ್ ಮಮ್ಮಲ
ಮಱುಗುರ್ತಿರ್ದಳತ್ತ ಮನುಜ
ಮನೋಜನುಂ**

ಮದನಪರಿತಾಪಕ್ಕಾಱದುಮ್ಮ
ಳಿಸಿ ಮಧುಮಥನನ ಕಣ್ಣಂ
ಬಂಚಿಸಿ ವಿಜೃಂಭಮಾಣ ನವ
ನಳಿನ ಪರಿಕರ ಕೃಷ್ಣ ಮಧುಕರ
ರಮಣೀಯಪುಳಿನ ಪರಿಸರ
ಪ್ರದೇಶ ನಿವೇಶಿತ ವಿರಹಿತ
ಜನನಿಚಯ ನಿಚಿತ
ಮಾನಸೋನ್ಮತ್ತ ಕಾಮಿನೀ
ಗಂಡೂಷ ಸಿಂಧು ಸೇಕ
ಪುಳಕಿತ ವಕುಳ ಮುಕುಳ
ವಿದಳಿತ

ಮನೋಹರಾಶೋಕಲತಾ

ರಮಣೀ ರಮಣೀಯ

ನೂಪುರರವ ರಮ್ಯಮನವಿರಳ

ಕುಸುಮಧೂಳೀ ಧೂಸರ

ಪುಳಿನ ಧವಳಿತ

ಧರಾತಳಮನುತ್ಫುಲ್ಲ ಪಲ್ಲವ

ಲೀಲಾಯಮಾನ

ಮತ್ತಕೋಕಿಲೋಲ್ಲಾಸಿತ

ಶೀಕರೋದ್ದಾಮ ದುರ್ದಿನ

ವನಮನೆಯ್ದೆವಂದು-

ವಚನ:ಪದವಿಭಾಗ-ಅರ್ಥ:ಅಂತು ಆ ಬಾಲೆ ಕಾಯ್ದ ಪುಡಿಯೊಳಗೆ (ಧೂಳಿನಲ್ಲಿ) ಬಿಸುಟ್ಟ ಎಳೆವಾೞೆಯಂತೆ (ಎಳೆಯ ಬಾಳೆಯ ಹಾಗೆ) ಸುರತಮಕರಧ್ವಜನೊಳು ಆದ (ಅರ್ಜುನನಲ್ಲಿ ಉಂಟಾದ) ಬೇಟದೊಳ್ (ಪ್ರೀತಿಯಲ್ಲಿ) ಮಮ್ಮಲ ಮಱುಗುರ್ತಿರ್ದಳ್ (ಸಂಕಟಪಡುತ್ತಿದ್ದಳು), ಅತ್ತ

ಮನುಜ ಮನೋಜನುಂ
(ಅರ್ಜುನನೂ)
ಮದನಪರಿತಾಪಕ್ಕೆ ಆಱದೆ
ಉಮ್ಮಳಿಸಿ
(ಮದನತಾಪವನ್ನು
ಸಹಿಸಲಾರದೆ ದುಃಖಿಸಿ)
ಮಧುಮಥನನ ಕಣ್ಣಂ
ಬಂಚಿಸಿ (ತಪ್ಪಿಸಿಕೊಂಡು)
ವಿಜೃಂಭಮಾಣ (ಬಹಳ
ಸುಂದರ) ನವ ನಳಿನ ಪರಿಕರ
(ಹೊಸತಾವರೆಯ

ಸಮೂಹದಿಂದ) ಕೃಷ್ಣ
ಮಧುಕರ ರಮಣೀಯಪುಳಿನ
(ಆಕರ್ಷಿಸಲ್ಪಟ್ಟ
ದುಂಬಿಗಳಿಂದ ರಮ್ಯವಾದ
ಪುಳಿನ- ಮರಳಿನ ಸಮೀಪ
ಸ್ಥಳದಲ್ಲಿ) ಪರಿಸರ ಪ್ರದೇಶ
ನಿವೇಶಿತ ವಿರಹಿತ
ಜನನಿಚಯ
ನಿಚಿತ(ವಿರಹಿಜನಗಳ
ಸಮೂಹದಲ್ಲಿ
ಸೇರಿಕೊಂಡಿರುವ) ಮಾನಸ

ಉನ್ಮತ್ತ ಕಾಮಿನೀ ಗಂಡೂಷ
ಸಿಂಧು ಸೇಕ (ಮುಕ್ಕುಳಿಸಿದ
ಮದ್ಯದಿಂದ
ರೋಮಾಂಚಗೊಂಡ)
ಪುಳಕಿತ ವಕುಳ ಮುಕುಳ
ವಿದಳಿತ (ಅರಳಿದ
ಹೂವುಗಳಿಂದ ಕೂಡಿದ)
ಮನೋಹರ ಅಶೋಕಲತಾ
ರಮಣೀ ರಮಣೀಯ
ನೂಪುರರವ (ಕಾಲಂದಿಗೆಯ
ಶಬ್ದದಿಂದ) ರಮ್ಯಮನ ವಿರಳ

ಕುಸುಮಧೂಳೀ ಧೂಸರ
ಪುಳಿನ ಧವಳಿತ (ಹೂವಿನ
ಪರಾಗಗಳಿಂದ ಮಾಸಲಾದ
ಮರಳಿನಿಂದ ಬಿಳುಪಾಗಿ
ಮಾಡಲ್ಪಟ್ಟ) ಧರಾತಳಮನು
ಉತ್ಫುಲ್ಲ ಪಲ್ಲವ (ಅರಳಿರುವ
ಚಿಗುರುಗಳ) ಲೀಲಾಯಮಾನ
ಮತ್ತ ಕೋಕಿಲ ಉಲ್ಲಾಸಿತ
ಶೀಕರೋದ್ದಾಮ (ಉಲ್ಲಾಸಕರ
ತುಂತುರುಮಳೆಯಿಂದ)

ದುರ್ದಿನ ವನಮನು ಎಯ್ದೆವಂದು (ಸಮೀಪಿಸಿ)- **ವಚನ:ಅರ್ಥ**:|| ಹಾಗೆ ಬಾಲೆಯು ಕಾದ ಧೂಳಿನಲ್ಲಿ ಬಿಸುಟ ಎಳೆಯ ಬಾಳೆಯ ಹಾಗೆ ಸುರತಮಕರಧ್ವಜನಾದ ಅರ್ಜುನನಲ್ಲಿ ಉಂಟಾದ ಪ್ರೀತಿಯ ವಿರಹದಿಂದ ಸಂಕಟಪಡುತ್ತಿದ್ದಳು. ಆ ಕಡೆ ಮನುಜ ಮನೋಜನಾದ ಅರ್ಜುನನೂ ಕೂಡ

ಮದನತಾಪವನ್ನು
ಸಹಿಸಲಾರದೆ ದುಖಿಸಿ ಕೃಷ್ಣನ
ಕಣ್ಣನ್ನು ತಪ್ಪಿಸಿಕೊಂಡು
ವಿಜೃಂಭಿಸುತ್ತಿರುವ
ಹೊಸತಾವರೆಯ
ಸಮೂಹದಿಂದ
ಆಕರ್ಷಿಸಲ್ಪಟ್ಟ ದುಂಬಿಗಳಿಂದ
ರಮ್ಯವಾದುದೂ ಮರಳಿನ
ಸಮೀಪ ಸ್ಥಳದಲ್ಲಿ ಇಡಲ್ಪಟ್ಟು
ವಿರಹಿಜನಗಳ ಸಮೂಹದಲ್ಲಿ
ಸೇರಿಕೊಂಡಿರುವ ಮನಸ್ಸುಳ್ಳ

ಸ್ತ್ರೀಯರು ಮುಕ್ಕುಳಿಸಿದ
ಮದ್ಯದಿಂದ
ರೋಮಾಂಚಗೊಂಡ
ಬಕುಳದ ಮೊಗ್ಗನ್ನುಳ್ಳುದೂ
ಅರಳಿದ ಹೂವುಗಳಿಂದ
ಕೂಡಿದ
ಅಶೋಕವೃಕ್ಷಗಳನ್ನುಳ್ಳದೂ
ರಮಣಿಯರ
ರಮಣೀಯವಾದ
ಕಾಲಂದಿಗೆಯ ಶಬ್ದದಿಂದ
ರಮ್ಯವೂ ದಟ್ಟವೂ ಹೂವಿನ

ಪರಾಗಗಳಿಂದ ಮಾಸಲಾದ
ಮರಳಿನಿಂದ ಬಿಳುಪಾಗಿ
ಮಾಡಲ್ಪಟ್ಟ
ಭೂಭಾಗವನ್ನುಳ್ಳುದೂ
ಅರಳಿರುವ ಚಿಗುರುಗಳ
ಲೀಲೆಗೊಳಗಾದ ಮದಿಸಿರುವ
ಕೋಗಿಲೆಗಳಿಗೆ ಉಲ್ಲಾಸಕರ
ತುಂತುರುಮಳೆಯಿಂದ
ದೀರ್ಘವಾದ ಮೋಡ ಕವಿದ
ದಿನದಂತಿರುವುದೂ ಆದ
ವನವನ್ನು ಅರ್ಜುನನು

ಸಮೀಪಿಸಿ-

(ಸಮೀಪಿಸಿದನು).

ಚಂ|| ಬಿರಿದಲರೊಳ್

ತೆಱಂಬೊಳೆವ ತುಂಬಿ

ತಳ್ತಿರ್ದೆಳಮಾವು ಮಾವಿನಂ

ಕುರಮನೆ ಕರ್ಚಿ ಬಿಚ್ಚಱಿಪ

ಕೋಗಿಲೆ ಕಂಪನವುಂಕಿ

ಪೊತ್ತು ನಿ|

ತ್ತರಿಪೆಲರೆಂಬಿವೇವುವೊ

ಮದೀಯ ಮನೋಗತ ಕಾಮ

ರಾಗ ಸಾ

ಗರದೊದವಿಂಗೆ ನಲ್ಲಳ ವಿಲೋಕನಚಂದ್ರಿಕೆಯೊಂದೆ ಸಾಲದೇ|| ೧೧||

ಪದ್ಯ-೧೧:ಪದವಿಭಾಗ-ಅರ್ಥ: ಬಿರಿದ ಅಲರೊಳ್ (ಹೂವಿನಲ್ಲಿ) ತೆಱಂಬೊಳೆವ (ತರಂ ಹೊಳೆವ) ತುಂಬಿ ತಳಿರ್ತೆಳ (ಚಿಗುರಿದ) ಮಾವು ಮಾವಿನ ಅಂಕುರಮನೆ ಕರ್ಚಿ (ಮಾವಿನ ಚಿಗುರನ್ನೇ ಕಚ್ಚಿ) ಬಿಚ್ಚಟಿಪ (ಉಬ್ಬುವ)

ಕೋಗಿಲೆ ಕಂಪನು ಅವುಂಕಿ
ಪೊತ್ತು (ಅಡಗಿಸಿಕೊಂಡು
ಹೊತ್ತು) ನಿತ್ತರಿಪ (ದಾಟಿ
ಬರುವ) ಎಲರ್ ಎಂಬಿವು
ಏವುವೊ (ಗಾಳಿ ಎಂಬಿವು
ಏನುಮಾಡುವುವೋ!)
ಮದೀಯ ಮನೋಗತ (ನನ್ನ
ಮನಸ್ಸಿನಲ್ಲಿ ತುಂಬಿರುವ)
ಕಾಮ ರಾಗ ಸಾಗರದ
ಒದವಿಂಗೆ
(ಮನ್ಮಥಪ್ರೇಮಸಾಗರದ

ಹೆಚ್ಚುವಿಕೆಗೆ) ನಲ್ಲಳ ವಿಲೋಕನಚಂದ್ರಿಕೆಯೊಂದೆ ಸಾಲದೇ (ನಲ್ಲಳ - ಸುಭದ್ರೆಯ, ವಿಲೋಕನ- ನೋಟವೆಂಬ, ಚಂದ್ರಿಕೆಯೊಂದೆ- ಬೆಳುದಿಂಗಳಿನ ಸಹಾಯವೊಂದೆ ಸಾಲದೇ)

ಪದ್ಯ-೧೧:ಅರ್ಥ: ಅರಳಿದ ಹೂವಿನಲ್ಲಿ ವಿಧವಿಧವಾಗಿ ಹೊಳೆಯುವ ದುಂಬಿಯೂ

ಚಿಗುರಿದ ಎಳೆಮಾವೂ
ಮಾವಿನ ಚಿಗುರನ್ನೇ ಕಚ್ಚಿ
ಉತ್ಸಾಹಗೊಳ್ಳುವ
ಕೋಗಿಲೆಯೂ ವಾಸನೆಯನ್ನು
ತನ್ನಲ್ಲಿ ಅಡಗಿಸಿಕೊಂಡು
ಹೊತ್ತು ದಾಟಿ ಬರುವ
ಗಾಳಿಯೂ (ವಿರಹ
ಪರಿಹಾರಕ್ಕೆ)
ಏನುಮಾಡುವುವೋ. ನನ್ನ
ಮನಸ್ಸಿನಲ್ಲಿ ತುಂಬಿರುವ
ಮನ್ಮಥಪ್ರೇಮಸಾಗರದ

ಹೆಚ್ಚುವಿಕೆಗೆ ಸುಭದ್ರೆಯ
ನೋಟವೆಂಬ ಬೆಳುದಿಂಗಳಿನ
ಸಹಾಯವೊಂದೆ ಸಾಲದೆ

ವ|| ಎನುತ್ತುಂ ಬಂದು ಬಿರಿದ ಬಿರಿಮುಗುಳ್ಗಳೊಳೆಱಗಿ ತುಱುಗಿದಶೋಕಲತೆಯನ್ನೆಱ್ಕೆ ತರ್ಗ ನೋಡಿ-

ವಚನ:ಪದವಿಭಾಗ-ಅರ್ಥ:
ಎನುತ್ತುಂ (ಎನ್ನುತ್ತಾ) ಬಂದು
ಬಿರಿದ ಬಿರಿಮುಗುಳ್ಗಳೊಳು
ಎಱಗಿ(ಅರಳಿದ

ಬಿರಿಮುಗುಳಕಡೆ ಎರಗಿ-ಬಾಗಿ
) ತುಱುಗಿದ
ಅಶೋಕಲತೆಯನ್ನ ಅೞ್ಕಿರ್ತು
(ಕಿಕ್ಕಿರಿದಿದ್ದ ಅಶೋಕದ
ಬಳ್ಳಿಯನ್ನು ಪ್ರೀತಿಸಿ) ನೋಡಿ-
ವಚನ:ಅರ್ಥ:ಎನ್ನುತ್ತಾ
ಬಂದು ಅರಳಿದ
ಬಿರಿಮುಗುಳಕಡೆ ಬಾಗಿ
ಕಿಕ್ಕಿರಿದಿದ್ದ ಅಶೋಕದ
ಬಳ್ಳಿಯನ್ನು ಪ್ರೀತಿಸಿ ನೋಡಿ

ಚಂ|| ಅಲರಲರ್ಗಣ್
ಮುಗುಳ್ನಗೆ ಮಡಲ್ ತೊಡೆ
ತುಂಬಿ ಕುರುಳ್ ತಳಿರ್ ತಳಂ
ಗೊಲೆ ಮೊಲೆ ಕೆಂಪು ಕೆಂಪು
ಕೊನೆ ಸೆಳ್ಳುಗುರ್ಗಳ್ ಕುಡಿ
ತೋಳ್ ನಯಂ ನಯಂ|
ನೆಲೆ ನೆಲೆ ಭಂಗಿ ಭಂಗಿ
ಪದವಣ್ ಬೆಳರ್ವಾಯ್
ಪೆಱತಲ್ಲಿದೆಂತೊ ಕೋ
ಮಲಲತೆ
ಪೇೞಿಮೆನ್ನಿನಿಯಳಂ

ಮರೆಗೊಂಡುದೊ ಸೂರೆಗೊಂಡುದೋ|| ೧೨||

ಪದ್ಯ-೧೨:ಪದವಿಭಾಗ-ಅರ್ಥ: ಅಲರ್ ಅಲರ್ಗಣ್ (ಹೂವು- ಅವಳ ಹೂವಿನಂತಿರುವ ಕಣ್ಣು) ಮುಗುಳ್‍ನಗೆ, ಮಡಲ್ (ಬಳ್ಳಿಯಂತಿರುವ) ತೊಡೆ ತುಂಬಿ ಕುರುಳ್ (ಇಲ್ಲಿಯ ದುಂಬಿ ಅವಳ ಮುಂಗುರುಳುಗಳು), ತಳಿರ್

ತಳಂ (ಚಿಗುರು ಅವಳ ಅಂಗೈ), ಗೊಲೆ ಮೊಲೆ (ಗೊಂಚಲು ಸ್ತನಗಳು) ಕೆಂಪು ಕೆಂಪು(ಕೆಂಪು ಬಣ್ಣ ಅವಳ ಕೆಂಪು ಬಣ್ಣ) ಕೊನೆ ಸೆಳ್ಳು ಉಗುರ್ಗಳ್(ಅವಳ ತೆಳುವಾದ ಉಗುರುಗಳು ಇದರ ಎಳೆಯದಾದ ಕೊನೆಗಳು) ಕುಡಿ ತೋಳ್ (ಕುಡಿಗಳು ಅವಳ ತೋಳುಗಳು), ನಯಂ

ನಯಂನೆಲೆ (ಬಳ್ಳಿಯ ನಯ
ಸುಭದ್ರೆಯ ಮೃದುತ್ವ,), ನೆಲೆ
ಭಂಗಿ ಭಂಗಿ (ಇದರ ರೀತಿ-
ಅವಳ ರೀತಿ,) ಪದವಣ್
ಬೆಳರ್ವಾಯ್ (ಇಲ್ಲಿಯ
ಹದವಾದ ಹಣ್ಣುಗಳು
ಹೊಳೆಯುವ ತುಟಿಗಳು)
ಪೆಱತಲ್ಲ ಇದೆಂತೊ (
ಬೇರೆಯಿಲ್ಲ, ಇದು ಹೇಗೊ?)
ಕೋಮಲ ಲತೆ (ಬಳ್ಳಿ)
ಪೇೞಿಮೆನ್ನಿನಿಯಳಂ (

ಪೇಟಿಮ್-ಹೇಳಿರಿ, ಎನ್ನ ಇನಿಯಳಂ- ನನ್ನ ಪ್ರಿಯೆಯನ್ನು) ಮರೆಗೊಂಡುದೊ ಸೂರೆಗೊಂಡುದೋ (ಮರೆಯಾಗಿಟ್ಟುಕೊಂಡಿದೆಯೋ ಇಲ್ಲವೇ ಅವಳ ಸರ್ವಸ್ವವನ್ನೂ ಸೂರೆಗೊಂಡಿದೆಯೋ?)

ಪದ್ಯ-೧೨:ಅರ್ಥ: ಈ ಬಳ್ಳಿಯ ಹೂವು- ಅವಳ

ಹೂವಿನಂತಿರುವ ಕಣ್ಣು, ಇದರ ಮೊಗ್ಗು ಅವಳ ನಗೆ, ಇದರ ಬಳ್ಳಿ ಅವಳ ತೊಡೆಗಳು, ಇಲ್ಲಿಯ ದುಂಬಿ ಅವಳ ಮುಂಗುರುಳುಗಳು, ಇಲ್ಲಿಯ ಚಿಗುರು ಅವಳ ಅಂಗೈ, ಗೊಂಚಲು ಸ್ತನಗಳು, ಈ ಬಳ್ಳಿಯ ಕೆಂಪು ಬಣ್ಣ ಅವಳ ಕೆಂಪು ಬಣ್ಣ, ಅವಳ ತೆಳುವಾದ ಉಗುರುಗಳು, ಇದರ ಎಳೆಯದಾದ

ಕೊನೆಗಳು ಕುಡಿಗಳು ಅವಳ
ತೋಳುಗಳು; ಬಳ್ಳಿಯ ನಯ
ಸುಭದ್ರೆಯ ಮೃದುತ್ವ, ಇದರ
ರೀತಿ- ಅವಳ ರೀತಿ, ಇಲ್ಲಿಯ
ಹದವಾದ ಹಣ್ಣುಗಳು
ಹೊಳೆಯುವ ತುಟಿಗಳು
ಬೇರೆಯಿಲ್ಲ, ಈ ಬಳ್ಳಿಯು ನನ್ನ
ಪ್ರಿಯೆ ಸುಭದ್ರೆಯನ್ನು
ಮರೆಯಾಗಿಟ್ಟುಕೊಂಡಿದೆ
ಯೋ ಇಲ್ಲವೇ ಅವಳ
ಸರ್ವಸ್ವವನ್ನೂ

ಸೂರೆಗೊಂಡಿದೆಯೋ?
(ಬಳ್ಳಿಗೆ ಸ್ವತ ಇಷ್ಟೆಲ್ಲ
ಸೌಂದರ್ಯವೆಲ್ಲಿ ಬರಬೇಕು?)

ವ|| ಎಂದು ಕಿಱಿದಾನುಂ ಬೇಗಮಱಿಮರುಳಾದಂತಾ ಲತೆಯೊಳ್ ಪೞಿಗಾಳೆಗಂಗಾದಿ ಬರೆವರೆ ಕಾಮದೇವನಿರ್ಮ್ಮಾವಿನ ನನೆಯನಂಬುಗಳುಮನವಱ ಬಲ್ಮಿಡಿಯನೆ ಮಿಟ್ಟೆಯುಮಂ ಮಾಡಿ ತನ್ನನೇಸಾಡಿ ಕಾಡೆ-

ವಚನ:ಪದವಿಭಾಗ-ಅರ್ಥ:ಎಂದು ಕಿಱಿದಾನುಂ ಬೇಗಂ (ಸ್ವಲ್ಪ ಸಮಯ) ಅಱಿಮರುಳಾದಂತೆ (ಅರುಳುಮರುಳನಂತೆ) ಆ ಲತೆಯೊಳ್ ಪೞೆಗಾಳೆಗಂಗಾದಿ ಬರೆವರೆ (ಹರೆಗಾಳೆಗಂ ಕಾದಿ; ಜಗಳದಮಾತನಾಡಿ) ಕಾಮದೇವನ ಇಮ್ಮಾವಿನ ನನೆಯನು ಅಂಬುಗಳುಮನು

ಅವಳಿ ಬಲ್ಮಿಡಿಯನೆ
ಮಿಟ್ಟೆಯುಮಂ(ಅದರ ಬಲಿತ
ಹೀಚುಗಳನ್ನು
ಮಣ್ಣಿನುಂಡೆಯನ್ನಾಗಿ) ಮಾಡಿ
ತನ್ನನು ಏಸಾಡಿ ಕಾಡೆ-
ವಚನ:**ಅರ್ಥ**:ಎಂದು
ಸ್ವಲ್ಪಸಮಯ
ಅರುಳುಮರುಳನಂತೆ ಆ
ಬಳ್ಳಿಯೊಡನೆ
ಜಗಳದಮಾತನಾಡಿ
ಬರುತ್ತಿರಲು ಕಾಮದೇವನ

ಸಿಹಿಮಾವಿನ ಹೂವುಗಳನ್ನು
ಬಾಣಗಳನ್ನಾಗಿಯೂ ಅದರ
ಬಲಿತ ಹೀಚುಗಳನ್ನು
ಮಣ್ಣಿನುಂಡೆಯನ್ನಾಗಿ ಮಾಡಿ
ತನ್ನನ್ನೇ ಹೊಡೆದು ಕಾಡಿದನು.

ಚಂ|| ಅಸಿಯಳನೊಲ್ದು
ಮೊಲ್ಲನಣಮೆನ್ನದೆ ರೂಪನೆ
ನೋಡಿ ಕೂಡಲಾ
ಟಿಸಿ ಪರಿದೆಯ್ದಿ
ಪತ್ತಿದಲರ್ಗಣ್ಗಳನೇನುಮನೆನ್ನ
ದಂತುಪೇ|

ಕ್ಷಿಸಿ ಮನಮೆಲ್ಲಮಂ

ಕವರ್ದಪಂ ತನುವಂ

ಬಡಮಾಡಿ ಕಾಡಿ ದಂ

ಡಿಸಿದಪನಂಗಜನ್ಮನ

ಕವರ್ತೆಯ ದಂಡದ

ಪಾಂಗಿದೆಂತುಟೋ|| ೧೩||

ಪದ್ಯ-೧೩:ಪದವಿಭಾಗ-

ಅರ್ಥ:ಅಸಿಯಳನು

(ಕೃಶಾಂಗಿಯಾದ

ಸುಭದ್ರೆಯನ್ನು) ಒಲ್ಗಂ ಒಲ್ಲಂ

ಅಣಂ ಎನ್ನದೆ ರೂಪನೆ

ನೋಡಿ (ಇವನು
ಪ್ರೀತಿಸುತ್ತಾನೆಯೇ ಒಲ್ಲಂ-
ಇಲ್ಲವೇ ಎಂಬುದೇನನ್ನೂ
ಯೋಚಿಸದೇ ರೂಪವನ್ನೇ
ನೋಡಿ) ಕೂಡಲಾಟಿಸಿ
(ಬೆರೆಯಲು ಆಶೆಪಟ್ಟು)
ಪರಿದೆಯ್ದಿ (ಓಡಿಬಂದು)
ಪತ್ತಿದ ಅಲರ್ ಕಣ್ಗಳನು
(ಅಂಟಿದ ಹೂವಿಹಾಗಿರುವ
ಕಣ್ಣುಗಳನ್ನು) ಏನುಂ ಎನ್ನದೆ
ಅಂತು ಉಪೇಕ್ಷಿಸಿ

ಮನಮೆಲ್ಲಮುಂ ಕವರ್ದಪಂ (ಸೂರೆಮಾಡುತ್ತಾನೆ.) ತನುವಂ ಬಡಮಾಡಿ ಕಾಡಿ ದಂಡಿಸಿದಪನು ಅಂಗಜನ್ಮನ ಕವರ್ತೆಯ(ಮನ್ಮಥನ ಈ ಸೂರೆಯ) ದಂಡದ ಪಾಂಗು ಇದೆಂತುಟೋ (ಶಿಕ್ಷೆಯ ರೀತಿ ಅದೆಂತಹುದೊ!)

ಪದ್ಯ-೧೩:ಅರ್ಥ:

ಕೃಶಾಂಗಿಯಾದ ಸುಭದ್ರೆಯನ್ನು ಇವನು

ಪ್ರೀತಿಸುತ್ತಾನೆಯೇ ಇಲ್ಲವೇ
ಎಂಬುದೇನನ್ನೂ
ಯೋಚಿಸದೇ ರೂಪವನ್ನೇ
ನೋಡಿ ಬೆರೆಯಲು ಆಶೆಪಟ್ಟು
ಓಡಿಬಂದು ಅಂಟಿದ
ಹೂವಿಹಾಗಿರುವ ಕಣ್ಣುಗಳನ್ನು
ಏನೂ ಹೇಳದೆ ಉಪೇಕ್ಷಿಸಿ
ಮನ್ಮಥನು ಮನಸ್ಸೆಲ್ಲವನ್ನೂ
ಸೂರೆಮಾಡುತ್ತಾನೆ.
ಶರೀರವನ್ನು ಕೃಶವನ್ನಾಗಿ
ಮಾಡಿ ಕಾಡಿ ಶಿಕ್ಷಿಸುತ್ತಾನೆ.

ಮನ್ಮಥನ ಈ ಸೂರೆಯ ಈ
ಶಿಕ್ಷೆಯ ರೀತಿ ಅದೆಂತಹುದೊ!

ವ|| ಎಂದು ನಂದನವನೋಪಕಂಠಂಗಳೊಳನಂಗಶರವಶನಾಗಿ ತೊೞಲ್ದು ನೋಡುತ್ತುಂ ತನ್ನ ಮನದೊಳಿಂತೆಂದು ಬಗೆಗುಂ-

ವಚನ:ಪದವಿಭಾಗ-

ಅರ್ಥ:ಎಂದು ನಂದನವನು ಉಪಕಂಠಂಗಳೊಳು (ಸಮೀಪ ಪ್ರದೇಶಗಳಲ್ಲಿ)

ಅನಂಗಶರ ವಶನಾಗಿ (ಮನ್ಮಥನ ಬಾಣದ ವಶನಾಗಿ)ತೊಟಿಲ್ದು (ತೊಳಲಿ) ನೋಡುತ್ತುಂ ತನ್ನ ಮನದೊಳು ಇಂತೆಂದು ಬಗೆಗುಂ-

ವಚನ:ಅರ್ಥ:.ಎಂದು ನಂದನವನದ ಸಮೀಪ ಪ್ರದೇಶಗಳಲ್ಲಿ ಮನ್ಮಥನ ಬಾಣದ ವಶನಾಗಿ, ಸುತ್ತಿ ತೊಳಲಿ ನೋಡುತ್ತ ತನ್ನ

ಮನಸ್ಸಿನಲ್ಲಿ ಹೀಗೆಂದು ಯೋಚಿಸಿದನು

ಚಂ|| ಉರಿವೆರ್ದೆಯಾರೆ ಚಿಂತಿಪ ಮನಂ ಗುಡಿಗಟ್ಟೆ ಮರಲ್ದು ನೋಡುವ ಚ್ಚರಿಯೊಳೆ ಬೆಚ್ಚ ಕಣ್ಮಲರ್ಗೆ ಸಂತಸದಾಗರಮಾಗೆ ಬೇಟದೊಳ್|

ಬಿರಿವೊಡಲೊಯ್ಯನಂಕುರಿಸೆ ಸೈಪಿನೊಳಿಂತೆನಗೀಗಳೀ ವನಾಂ

ತರದೊಳೆ ಕಾಣಲಕ್ಕುಮೊ ಮದೀಯ ಮನೋರಥ ಜನ್ಮಭೂಮಿಯಂ|| ೧೪||

ಪದ್ಯ-೧೪:ಪದವಿಭಾಗ-ಅರ್ಥ:ಉರಿವ ಎರ್ದೆಯು ಆರೆ (ಎದೆಯು ಶಾಂತವಾಗುವ ಹಾಗೆ) ಚಿಂತಿಪ ಮನಂ ಗುಡಿಗಟ್ಟೆ ಮರಲ್ದು (ಬಾವುಟ ಹಾರುವಂತೆ- ಉತ್ಸಾಹಗೊಳ್ಳುವ ಹಾಗೆ ಪುನಃ)ನೋಡುವ

ಅಚ್ಚರಿಯೊಳೆ ಬೆಚ್ಚ ಕಣ್

ಅಲರ್ಗೆ(ನೋಡಬೇಕೆಂಬ

ಆಶ್ಚರ್ಯದಿಂದಲೇ

ಮುಚ್ಚಿಕೊಂಡಿರುವ ನನ್ನ

ಹೂಕಣ್ಣಿಗೆ) ಸಂತಸದ

ಆಗರಮಾಗೆ

ಬೇಟದೊಳ್(ಸಂತೋಷ

ತುಂಬುವ ಹಾಗೆ ಪ್ರೇಮದ

ಬಯಕೆಯಲ್ಲಿ) ಬಿರಿವೊಡಲು

ಒಯ್ಯನೆ ಅಂಕುರಿಸೆ

ಸೈಪಿನೊಳು (ಬಿರಿಯುತ್ತಿರುವ

ಶರೀರವು ಇದ್ದಕ್ಕಿದ್ದ ಹಾಗೆ,
ರೋಮಾಂಚಗೊಳ್ಳುವ ಹಾಗೆ)
ಇಂತು ಎನಗೆ ಈಗಳ್ ಈ
ವನಾಂತರದೊಳೆ (ನನ್ನ
ಅದೃಷ್ಟದಿಂದ ಹೀಗೆ ಇಲ್ಲಿ
ವನದಲ್ಲಿಯೇ ನನ್ನ
ಮನೋರಥಕ್ಕೆ)
ಕಾಣಲಕ್ಕುಮೊ ಮದೀಯ
ಮನೋರಥ
ಜನ್ಮಭೂಮಿಯಂ(ನನ್ನ
ಆಸೆಯ ಜನ್ಮಭೂಮಿಯಾದ

ಸುಭದ್ರೆಯನ್ನು ಕಾಣಲು
ಸಾಧ್ಯವಾಗುತ್ತದೆಯೋ!)
ಪದ್ಯ-೧೪:ಅರ್ಥ:
ಉರಿಯುತ್ತಿರುವ ನನ್ನ
ಎದೆಯು ಶಾಂತವಾಗುವ
ಹಾಗೆ, ಚಿಂತಿಸುತ್ತಿರುವ ನನ್ನ
ಮನಸ್ಸು ಉತ್ಸಾಹಗೊಳ್ಳುವ
ಹಾಗೆ ಪುನಃ ನೋಡಬೇಕೆಂಬ
ಆಶ್ಚರ್ಯದಿಂದಲೇ
ಮುಚ್ಚಿಕೊಂಡಿರುವ ನನ್ನ
ಕಣ್ಣಿಗೆ ಸಂತೋಷ ತುಂಬುವ

ಹಾಗೆ ಪ್ರೇಮದ ಬಯಕೆಯಲ್ಲಿ
ವಿರಹದಿಂದ ಬಿರಿಯುತ್ತಿರುವ
ಶರೀರವು ಇದ್ದಕ್ಕಿದ್ದ ಹಾಗೆ,
ರೋಮಾಂಚಗೊಳ್ಳುವ ಹಾಗೆ
ನನ್ನ ಅದೃಷ್ಟದಿಂದ ಹೀಗೆ ಇಲ್ಲಿ
ವನದಲ್ಲಿಯೇ ನನ್ನ ಆಸೆಯ
ಜನ್ಮಭೂಮಿಯಾದ
ಸುಭದ್ರೆಯನ್ನು ಕಾಣಲು
ಸಾಧ್ಯವಾಗುತ್ತದೆಯೋ!

ವ|| ಎಂದು

ಬಗೆಯುತ್ತುಮಾಕೆಯಿರ್ದ

ಮಾಧವೀಮಂಟಪಕ್ಕೆ ಪೊಗಸಿ

ಪಲರ ಪಲವುಂ ತೆಱದ

ಬೇಟದ ಪಡೆಮಾತುಗಳಂ

ಕೇಳ್ದಲ್ಲಿಯಾರಾನುಮೆಮ್ಮಂದಿಗ

ರಿರ್ದರಕ್ಕುಮೆನುತ್ತುಂ ಬರ್ಪ

ಗಂಧೇಭ ವಿದ್ಯಾಧರನಂ

ಸುಭದ್ರೆ ಭೋಂಕನೆ ಕಂಡು-

ವಚನ:ಪದವಿಭಾಗ-

ಅರ್ಥ:ಎಂದು ಬಗೆಯುತ್ತುಂ (ಯೋಚಿಸುತ್ತ) ಆಕೆಯಿರ್ದ ಮಾಧವೀಮಂಟಪಕ್ಕೆ (ಆಕೆ

ಇದ್ದ ಮಾಧವೀಮಂಟಪದ
ಹತ್ತಿರಕ್ಕೆ) ಮೊಗಸಿ ಪಲರ
ಪಲವುಂ ತೆಱದ ಬೇಟದ
ಪಡೆಮಾತುಗಳಂ ಕೇಳ್ದು
(ಮುತ್ತಿಕೊಂಡ ಅದೇ
ತೆರನಾದ ವಿರಹದ
ಮಾತನ್ನನ್ನು ಕೇಳಿ) ಅಲ್ಲಿ
ಯಾರಾನುಂ ಎಮ್ಮಂದಿಗರು
ಇರ್ದರಕ್ಕುಂ ಎನುತ್ತುಂ
(ನಮ್ಮಂತಹವರೂ ಇಲ್ಲಿ
ಯಾರಾದರೂ ನನ್ನನಂತಿರುವ

ವಿರಹಿಗಳು ಇದ್ದಿರಬಹುದು ಎನ್ನುತ್ತ) ಬರ್ಪ ಗಂಧೇಭ ವಿದ್ಯಾಧರನಂ ಸುಭದ್ರೆ ಭೋಂಕನೆ ಕಂಡು (ಬರುತ್ತಿರುವ ಅರ್ಜುನನನ್ನು ಸುಭದ್ರೆಯು ಇದ್ದಕ್ಕಿದ್ದ ಹಾಗೆ ನೋಡಿ)-

ವಚನ:ಅರ್ಥ:ಎಂಬುದಾಗಿ ಯೋಚಿಸುತ್ತ ಆಕೆ ಇದ್ದ ಮಾಧವೀಮಂಟಪದ ಹತ್ತಿರಕ್ಕೆ ಬಂದು ಅಲ್ಲಿ ಮುತ್ತಿಕೊಂಡ

ಅದೇ ತೆರನಾದ ವಿರಹದ
ಮಾತನ್ನನ್ನು ಕೇಳಿ,
ನಮ್ಮಂತಹವರೂ ಇಲ್ಲಿ
ಯಾರಾದರೂ ನನ್ನನಂತಿರುವ
ವಿರಹಿಗಳು ಇದ್ದಿರಬಹುದು
ಎನ್ನುತ್ತ ಬರುತ್ತಿರುವ
ಅರ್ಜುನನನ್ನು ಸುಭದ್ರೆಯು
ಪಕ್ಕನೆ ನೋಡಿ- (ನೊಡಿದಳು)

ಚಂ||

ಪಡಿದೆರೆವಂದದಿಂದಮೆರ್ದೆ

ಯುಂ ತೆರೆದತ್ತು ಪೊದಳ್ದ
ಸಂಕೆಯಿಂ
ನಡುಕಮುಮಾಗಳುಬ್ದಿಗ
ಮಾದುದು ಸಾಧ್ವಸದಿಂ
ಬೆಮರ್ ಬೆಮ|
ರ್ವೆಡೆಗಳಿನುಣ್ಮಿ ಪೊಣ್ಮಿದುದು
ಕಣ್ ನಡೆ ನೋಡದೆ ತಪ್ಪು
ನೋಡಿ ನಾ
ಣೆಡೆಯೊಳಮಾದುದಾ ಸತಿಗೆ
ನೋಡಲೊಡಂ
ಪಡೆಮೆಚ್ಚೆಗಂಡನಂ|| ೧೫ ||

ಪದ್ಯ-೧೫:ಪದವಿಭಾಗ-ಅರ್ಥ:ಪಡಿದ ಎರೆವಂದದಿಂದಂ (ಬಾಗಿಲು ತರೆದ ರೀತಿಯಲ್ಲಿ) ಎರ್ದೆಯುಂ ತೆರೆದತ್ತು (ಎದೆಯು ತೆರೆಯಿತು,) ಪೊದಳ್ದ ಸಂಕೆಯಿಂ ನಡುಕಮುಂ ಆಗಳು ಉಬ್ಬದಿಗಮಾದುದು (ಉಂಟಾದ ಸಂದೇಹ/ ಭಯದಿಂದ ನಡುಕವು

ಉದ್ಭವಿಸಿತು/ ತಲೆದೋರಿತು)
ಸಾಧ್ವಸದಿಂ (ಸಡಗರದಿಂದ)
ಬೆಮರ್ (ಬೆವರು,) ಬೆಮರ್ವ
ಎಡೆಗಳಿಂ ಉಣ್ಮಿ (ಬೆವರುವ
ಕಡೆಗಳಿಂದ ಹೆಚ್ಚಿ
ಹೊರಸೂಸಿ) ಪೊಣ್ಮಿದುದು
ಕಣ್ ನಡೆ ನೋಡದೆ ತಪ್ಪು
ನೋಡಿ (ಕಣ್ಣುಗಳ
ಲಜ್ಜೆಯಿಂದ ನೇರವಾಗಿ
ನೋಡದೆ ತಪ್ಪು/ಓರೆ
ದೃಷ್ಟಿಯಿಂದ ನೋಡಿದುವು)

ನಾಣೆಡೆಯೊಳಂ ಆದುದು ಆ ಸತಿಗೆ ನೋಡಲೊಡಂ ಪಡೆಮೆಚ್ಚೆಗಂಡನಂ(ಅರ್ಜುನನ್ನು)

ಪದ್ಯ-೧೫:ಅರ್ಥ:

ಪಡೆಮೆಚ್ಚೆಗಂಡನಾದ ಅರ್ಜುನನ್ನು ನೋಡಿದ ತಕ್ಷಣವೇ ಆ ಸತಿಗೆ ಬಾಗಿಲು ತೆರೆಯುವಂತೆ ಎದೆಯು ತೆರೆಯಿತು, ಉಂಟಾದ ಸಂದೇಹ/ ಭಯದಿಂದ

ನಡುಕವು ಉದ್ಭವಿಸಿತು/
ತಲೆದೋರಿತು; ಸಡಗರದಿಂದ
ಬೆವರು, ಬೆವರುವ ಕಡೆಗಳಿಂದ
ಹೆಚ್ಚಿ ಹೊರಸೂಸಿ; ಕಣ್ಣುಗಳ
ಲಜ್ಜೆಯಿಂದ ನೇರವಾಗಿ
ನೋಡದೆ ತಪ್ಪು (ಓರೆ)
ದೃಷ್ಟಿಯಿಂದ ನೋಡಿದುವು

ವ|| ಆಗಳ್
ಸುರತಮಕರಧ್ವಜನುಮನಂ
ಗಾಮೃತ ಪಯೋಧಿಯೊಳ್
ಮೂಡಿ ಮುಳುಗಾಡಿದರಂತೆ

ಕಿಱಿದು ಬೇಗಮನಿರ್ತು

ತನ್ನಿಂತ ತಾನೆ ಚೇತರಿಸಿ

ಸುಭದ್ರೆಯ

ರೂಪನಾಪಾದಮಸ್ತಕಂಬರ

ಮೆಯ್ದೆ ನೋಡಿ ತನ್ನೊಳಾದ

ಬೇಟದೊಳ್

ಬಡವಟ್ಟುಮೇೞ್ಗೆವಾಡಿವದ

ಸಸಿಯಂತೆ

ಸೊಗೆಯಿಸುವಸಿಯಳಂ

ಕಂಡು-

ವಚನ:ಪದವಿಭಾಗ-ಅರ್ಥ:ಆಗಳ್ ಸುರತಮಕರಧ್ವಜನುಂ ಅನಂಗಾಮೃತ ಪಯೋಧಿಯೊಳ್ (ಮನ್ಮಥನ ಅಮೃತಸಮುದ್ರದಲ್ಲಿ) ಮೂಡಿ ಮುೞುಗಾಡಿದರಂತೆ (ಮುಳುಗಾಡಿದವರ ಹಾಗೆ) ಕಿಱಿದು ಬೇಗಂ ಅನಿತ್ರ್ಉ(ಸ್ವಲ್ಪ ಕಾಲವಿದ್ದು) ತನ್ನಿಂತ ತಾನೆ ಚೇತರಿಸಿ ಸುಭದ್ರೆಯ

ರೂಪನು ಅಪಾದಮಸ್ತಕಂ
ಬರಮೆಯ್ದೆ ನೋಡಿ
(ಸುಭದ್ರೆಯ ರೂಪವನ್ನು
ಕಾಲಿನಿಂದ ತಲೆಯವರೆಗೆ
ತೃಪ್ತಿಯಾಗುವಂತೆ ನೋಡಿ)
ತನ್ನೊಳಾದ ಬೇಟದೊಳ್
ಬಡವಟ್ಟುಂ ಏೞ್ಗೆವಾಡಿವದ
(ಶುಕ್ಲಪಕ್ಷ ಪಾಡ್ಯದ)
ಸಸಿಯಂತೆ (ಶಶಿ- ಚಂದ್ರನಂತೆ)
ಸೊಗೆಯಿಸುವ ಅಸಿಯಳಂ
(ಕೃಶಾಂಗಿಯನ್ನು) ಕಂಡು-

ವಚನ:ಅರ್ಥ:ಆಗ
ಸುರತಮಕರಧ್ವಜನಾದ
ಅರ್ಜುನನೂ ಕೂಡ
ಮನ್ಮಥನ
ಅಮೃತಸಮುದ್ರದಲ್ಲಿ ಮೂಡಿ
ಮುಳುಗಾಡಿದವರ ಹಾಗೆ ಸ್ವಲ್ಪ
ಕಾಲವಿದ್ದು ತನ್ನಷ್ಟಕ್ಕೆ ತಾನೇ
ಚೇತರಿಸಿಕೊಂಡು ಸುಭದ್ರೆಯ
ರೂಪವನ್ನು ಕಾಲಿನಿಂದ
ತಲೆಯವರೆಗೆ
ತೃಪ್ತಿಯಾಗುವಂತೆ ನೋಡಿ

ತನ್ನಲ್ಲುಂಟಾದ
ಪ್ರೇಮವಿರಹದಿಂದ ಕೃಶನಾಗಿ
ಶುಕ್ಲಪಕ್ಷ ಪಾಡ್ಯದ
ಸೊಗಯಿಸುವ
ಕೃಶಾಂಗಿಯನ್ನು ಕಂಡು-

ಚಂ|| ಸರಸ
ಮೃಣಾಳನಾಳವಳಯಂಗಳೊ
ಳುಜ್ಜ್ವಳ ವೃತ್ತ ಮೌಕ್ತಿಕಾ
ಭರಣ ಗಣಂಗಳೊಳ್
ಶಶಿಕರಂಗಳೊಳಾಱದೆ
ಬೇಟದೊಳ್ ಕನ|

ಲ್ದುರಿವೆರ್ದೆ ನೋಡ

ನೋಡಲೊಡನಾಱಿದುದೇನ

ಮರ್ದಿಂದೆ ತೊಯ್ದು ಕ

ಪ್ಪುರವಳುಕಿಂದಜಂ ಕಡೆದು

ಕಂಡರಿಪಂ ವಲಮೆನ್ನ

ನಲ್ಲಳಂ|| ೧೬||

ಪದ್ಯ-೧೬:ಪದವಿಭಾಗ-ಅರ್ಥ:ಸರಸ ಮೃಣಾಳನಾಳವಳಯಂಗಳೊಳ್ (ರಸಯುಕ್ತವಾದ ತಾವರೆಯ ದಂಟಿನ

ಕಂಕಣಗಳಿಂದ), ಉಜ್ಜ್ವಳ
ವೃತ್ತ ಮೌಕ್ತಿಕಾಭರಣ
ಗಣಂಗಳೊಳ್ (ಹೊಳೆಯುವ
ದುಂಡು ಮುತ್ತಿನ
ಒಡವೆಗಳಿಂದಲೂ),
ಶಶಿಕರಂಗಳೊಳ್ ಆಱದೆ
ಬೇಟದೊಳ್ ಕನಲ್ದು ಉರಿವ
(ಚಂದ್ರಕಿರಣಗಳಿಂದ
ಕಡಮೆಯಾಗದೆ
ಪ್ರೇಮವಿರಹದಿಂದ ಕೆರಳಿ
ಎರ್ದೆ ಉರಿಯುತ್ತಿದ್ದ ನನ್ನ

ಎದೆಯು) ನೋಡ
ನೋಡಲೊಡನೆ ಆಱಿದುದು
(ನೋಡೊ! ಸುಭದ್ರೆಯನ್ನು
ನೋಡಿದೊಡನೆಯೇ ಆರಿ
ಹೋಯಿತು) ಏನು
ಅಮರ್ದಿಂದೆ ತೊಯ್ದು (ಏನು,
ಅಮೃತದಲ್ಲಿ ನೆನೆಸಿ) ಕಪ್ಪುರವ
ಅಳುಕಿಂದ ಅಜಂ ಕಡೆದು
ಕಂಡರಿಪಂ (ಅಜಂ- ಬ್ರಹ್ಮನು
ಕರ್ಪೂರದ ಹಳುಕಿನಿಂದ
ಕಡೆದು ಕೊರೆದಿದ್ದಿರಬೇಕು)

ವಲಂ! ಎನ್ನ ನಲ್ಲಳಂ (ನನ್ನ ಪ್ರಿಯಳನ್ನು)

ಪದ್ಯ-೧೬:ಅರ್ಥ:

ಚಂದ್ರಕಿರಣಗಳಿಂದ ಕಡಮೆಯಾಗದೆ ಪ್ರೇಮವಿರಹದಿಂದ ಕೆರಳಿ ಉರಿಯುತ್ತಿದ್ದ ನನ್ನ ಎದೆಯು ರಸಯುಕ್ತವಾದ ತಾವರೆಯ ದಂಟಿನ ಕಂಕಣಗಳಿಂದಲೂ, ಹೊಳೆಯುವ ದುಂಡು ಮುತ್ತಿನ ಒಡವೆಗಳಿಂದಲೂ,

ಕೂಡಿದ ಸುಭದ್ರೆಯನ್ನು ನೋಡಿದೊಡನೆಯೇ ಆರಿಹೋಯಿತು; ನಿಜವಾಗಿಯೂ ಬ್ರಹ್ಮನು ಈ ನನ್ನ ಪ್ರಿಯಳನ್ನು ಅಮೃತದಲ್ಲಿ ನೆನೆಸಿ ಕರ್ಪೂರದ ಹಳುಕಿನಿಂದ ಕಡೆದು ಕೊರೆದಿದ್ದಿರಬೇಕು, ವಲಂ! (ಆಹಾ!)

ಉ|| ವೃತ್ತಕುಚಂಗಳಿಂದುದಿರ್ದ ಚಂದನದೊಳ್ ತಳಿರ್ವಾಸು

ಬೆಳ್ಪನಾ
ಳ್ದತ್ತು ದುಕೂಲದೊಂದು
ಮಡಿವಾಸಿದ
ಮಾೞ್ಕೆವೊಲಾಯ್ತು
ಮೆಯ್ಯನಿ|
ಕ್ಕುತ್ತಿರೆ ಪತ್ತಿ
ಕೆಂದಳಿರ್ಗಳಚ್ಚುಗಳಚ್ಚಿಱದಂ
ತೆ ಕಾಮನ
ಚ್ಚೊತ್ತಿದ ಬೇಟದಚ್ಚುಗಳ
ಮಾೞ್ಕೆಯೊಳಿರ್ದುದು
ಮೆಯ್ ಸುಭದ್ರೆಯಾ|| ೧೭||

ಪದ್ಯ-೧೭:ಪದವಿಭಾಗ-ಅರ್ಥ:ವೃತ್ತಕುಚಂಗಳಿಂದ ಉದಿರ್ದ (ದುಂಡಾದ ಮೊಲೆಗಳಿಂದ ಉದುರಿದ) ಚಂದನದೊಳ್ ತಳಿರ್ವಾಸು ಬೆಳ್ಪನು ಆಳ್ದತ್ತು (ಶ್ರೀಗಂಧದ ಚಿಗುರಿನ ಹಾಸಿಗೆಯು ಬಿಳಿಯ ಬಣ್ಣವನ್ನು ತಾಳಿದೆ.) ದುಕೂಲದೊಂದು ಮಡಿ ವಾಸಿದ ಮಾಟ್ಕೆವೊಲಾಯ್ತು (ರೇಷ್ಮೆಯ ಮಡಿವಸ್ತ್ರವು

ಮಾಸಿದ ರೀತಿಯಾಗಿದೆ-
ವಸ್ತ್ರದಂತಾಗಿದೆ.)
ಮೆಯ್ಯನಿಕ್ಕುತ್ತಿರೆ (ಹಾಸಿಗೆಯ
ಮೇಲೆ ಮೈಯನ್ನು ಚಾಚಲು)
ಪತ್ತಿ ಕೆಂದಳಿರ್ಗಳು ಅಚ್ಚುಗಳ್
ಅಚ್ಚೞಿದಂತೆ (ಆ ಸುಭದ್ರೆಯ
ದೇಹ, ಅವಳ ಮೈಯಿಗೆ ಒತ್ತಿದ
ಕೆಂಪು ಚಿಗುರುಗಳ
ಮುದ್ರೆಗಳಿಂದ ಅಚ್ಚೊತ್ತಿದ
ಹಾಗೆ ಅಂಟಿಕೊಂಡು) ಕಾಮನ
ಅಚ್ಚೊತ್ತಿದ ಬೇಟದ ಅಚ್ಚುಗಳ

ಮಾಟ್ಕೆಯೊಳು ಇರ್ದುದು (ಮನ್ಮಥನು ಮುದ್ರಿಸಿದ ಪ್ರೇಮಮುದ್ರೆಗಳ ಚಿತ್ರದಂತಿವೆ) ಮೆಯ್ (ದೇಹ) ಸುಭದ್ರೆಯಾ

ಪದ್ಯ-೧೭:ಅರ್ಥ: ದುಂಡಾದ ಮೊಲೆಗಳಿಂದ ಉದುರಿದ ಶ್ರೀಗಂಧದ ಚಿಗುರಿನ ಹಾಸಿಗೆಯು ಬಿಳಿಯ ಬಣ್ಣವನ್ನು ತಾಳಿದೆ. ರೇಷ್ಮೆಯ ಮಡಿವಸ್ತ್ರವು ಮಾಸಿದ

ವಸ್ತ್ರದಂತಾಗಿದೆ. ಹಾಸಿಗೆಯ
ಮೇಲೆ ಮೈಯನ್ನು ಚಾಚಲು
ಆ ಸುಭದ್ರೆಯ ಮೈಯಿಗೆ
ಒತ್ತಿದ ಕೆಂಪು ಚಿಗುರುಗಳ
ಮುದ್ರೆಗಳಿಂದ ಅಚ್ಚೊತ್ತಿದ
ಹಾಗೆ ಅಂಟಿಕೊಂಡು
ಮನ್ಮಥನು ಮುದ್ರಿಸಿದ
ಪ್ರೇಮಮುದ್ರೆಗಳ ಚಿತ್ರದಂತಿವೆ

ವ||

ಅದಱಿನೀಕೆಯುಮೆನಗೆರಡ

ಱಿಯದ ನಲ್ಲ

ಮನಂದೋಱುವುದು
ಪಲ್ಗೆದೋಱುವುದು ಮಾವುದು
ದೋಸಮೆಂದಾಕೆ ಕುಳ್ಳಿರ್ದ
ತಳಿರ ಸಜ್ಜೆಯೊಡನೆ
ಕುಳ್ಳಿರ್ಪುದುಂ ನಾಣ್ಚಿ
ಪೋಗಲೆಂದೆೞ್ದ ಕನ್ನೆಯಂ
ಚೂತಲತಿಕೆಯೆಂಬ ಕೆಳದಿ
ಜಡಿದು ಕುಳ್ಳಿರಿಸಿ ಗಂಧೇಭ
ವಿದ್ಯಾಧರನನಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಅದಱಿಂ

(ಆದುದರಿಂದ) ಈಕೆಯುಂ
ಎನಗೆ ಎರಡಱಿಯದ
(ಕಪಟವಿಲ್ಲದ) ನಲ್ಲ
ಮನಂದೋಱುವುದು
(ಒಳ್ಳೆಯ ಮನಸ್ಸನ್ನು
ತೋರಿಸುವುದರಲ್ಲಿಯೂ)
ಸಲ್ಗೆದೋಱುವುದುಂ ಆವುದು
ದೋಸಮೆಂದು (ಸಲಿಗೆಯನ್ನು
ತೋರಿಸುವುದರಲ್ಲಿ
ಯಾವುದು ದೋಷವು
ಎಂದು) ಆಕೆ ಕುಳ್ಳಿರ್ದ ತಳಿರ

ಸಜ್ಜೆಯೊಡನೆ
ಕುಳ್ಳಿರ್ಪುದುಂ(ಆಕೆ ಕುಳಿತಿದ್ದ
ಚಿಗುರುಹಾಸಿಗೆಯಲ್ಲಿಯೇ
ಅರ್ಜುನನು ಕುಳಿತುಕೊಳ್ಳಲು)
ನಾಣ್ಚಿ ಪೋಗಲೆಂದೆೞ್ದ
ಕನ್ನೆಯಂ(ಲಜ್ಜೆಪಟ್ಟು
ಹೋಗಲೆಂದು ಎದ್ದ
ಕನ್ಯೆಯನ್ನು)
ಚೂತಲತಿಕೆಯೆಂಬ ಕೆಳದಿ
ಜಡಿದು ಕುಳ್ಳಿರಿಸಿ (ಲಜ್ಜೆಪಟ್ಟು
ಹೋಗಲೆಂದು ಎದ್ದ

ಕನ್ಯೆಯನ್ನು
ಚೂತಲತಿಕೆಯೆಂಬ ಸಖಿಯು
ಗದರಿಸಿ ಕುಳ್ಳಿರಿಸಿ) ಗಂಧೇಭ
ವಿದ್ಯಾಧರನನಿಂತೆಂದಳ್-
(ಅರ್ಜುನನನ್ನು ಕುರಿತು
ಹೀಗೆಂದಳು-)
ವಚನ:ಅರ್ಥ:ಆದುದರಿಂದ
ಈಕೆಯು ನನಗೆ ಕಪಟವಿಲ್ಲದ
ಮನಸ್ಸನ್ನು
ತೋರಿಸುವುದರಲ್ಲಿಯೂ
ಸಲಿಗೆಯನ್ನು

ತೋರಿಸುವುದರಲ್ಲಿಯೂ
ಯಾವುದು ದೋಷವೆಂದು
ಎಂದು ಆಕೆ ಕುಳಿತಿದ್ದ
ಚಿಗುರುಹಾಸಿಗೆಯಲ್ಲಿಯೇ
ಕುಳಿತನು. ಲಜ್ಜೆಪಟ್ಟು
ಹೋಗಲೆಂದು ಎದ್ದ
ಕನ್ಯೆಯನ್ನು
ಚೂತಲತಿಕೆಯೆಂಬ ಸಖಿಯು
ಗದರಿಸಿ ಕುಳ್ಳಿರಿಸಿ
ಗಂಧೇಭವಿದ್ಯಾಧರನಾದ

ಅರ್ಜುನನನ್ನು ಕುರಿತು
ಹೀಗೆಂದಳು-

ಚಂ|| ಮದನನ ಕಾಯ್ಪು
ಮಾಣ್ಗೆ ಸರಸೀರುಹಜನ್ಮನ
ಮೆಚ್ಚು ತೀರ್ಗೆ ಕೊ
ಳ್ಗುದಿ ಮನದಿಂದಮಿಂದು
ಪೊಱಮಾಱುಗೆ
ಚಂದ್ರಕರಂಗಳಿಂದು ತ|
ಣ್ಣಿದುವೆರ್ದೆಗಕ್ಕೆ ಕೆಂದಳಿರ
ಸೆಜ್ಜೆಯ ಜಿಂಜಿಣಿ ಪೋಕೆ ನಿನ್ನ
ಕೂ

ಟದೊಳಿನಿದಕ್ಕೆ ಮತ್ಸಖಿಗೆ ಬೇರೆ ಪಳಾಳದೊಳೇಂ ಗುಣಾರ್ಣವಾ|| ೧೮ ||

ಪದ್ಯ-೧೮:ಪದವಿಭಾಗ-ಅರ್ಥ:ಮದನನ ಕಾಯ್ಪು ಮಾಣ್ಗೆ (ಮದನನ ಕೋಪ ನಿಲ್ಲಲಿ) ಸರಸೀರುಹಜನ್ಮನ ಮೆಚ್ಚು ತೀರ್ಗೆ (ಸರಸೀರುಹ-ಕಮಲದಲ್ಲಿ ಜನ್ಮನ ಹುಟ್ಟಿದವ-, ಬ್ರಹ್ಮನ ಅಪೇಕ್ಷೆ ತೀರಲಿ) ಕೊಳ್

ಕುದಿ(ಮಿತಿಮೀರಿದ ದುಃಖದ
ಕುದಿತ) ಮನದಿಂದಂ ಇಂದು
ಪೊಱಮಾಱುಗೆ
(ವಿರಹತಾಪದ ಕುದಿತ
ಮನಸ್ಸಿನಿಂದ
ಹೊರಹೋಗಲಿ,)
ಚಂದ್ರಕರಂಗಳು ಇಂದು
ತಣ್ಣಿದುವ್ ಎರ್ದೆಗೆ ಅಕ್ಕೆ
(ಚಂದ್ರಕಿರಣಗಳು ಇಂದು
ಹೃದಯಕ್ಕೆ
ತಂಪನ್ನುಂಟುಮಾಡುವುದಾಗ

ಲಿ) ಕೆಂದಳಿರ ಸೆಜ್ಜೆಯ
ಜಿಂಜಿಣಿ ಪ್ರೋಕೆ
(ಕೆಂಪುಚಿಗುರು ಹಾಸಿಗೆಯ
ತಾಪವು ಹೋಗಲಿ) ನಿನ್ನ
ಕೂಟದೊಳು ಇನಿದಕ್ಕೆ ಮತ್
ಸಖಿಗೆ (ನಿನ್ನನ್ನು
ಸೇರುವುದರಿಂದ ನನ್ನ ಸಖಿಗೆ
ಸವಿಯುಂಟಾಗಲಿ)
ಬೇರೆಪಳಾಳದೊಳು ಏಂ
(ವ್ಯರ್ಥಾಲಾಪದಿಂದ)
ಗುಣಾರ್ಣವಾ.

ಪದ್ಯ-೧೮:ಅರ್ಥ: ಮದನನ ಕೋಪ ನಿಲ್ಲಲಿ; ಬ್ರಹ್ಮನ ಆಶೆ ತೀರಲಿ, ವಿರಹತಾಪದ ಕುದಿತ ಮನಸ್ಸಿನಿಂದ ಹೊರಹೋಗಲಿ, ಚಂದ್ರಕಿರಣಗಳು ಇಂದು ಹೃದಯಕ್ಕೆ ತಂಪನ್ನುಂಟುಮಾಡುವುದಾಗಲಿ. ಕೆಂಪುಚಿಗುರು ಹಾಸಿಗೆಯ ತಾಪವು ಹೋಗಲಿ. ನಿನ್ನನ್ನು ಸೇರುವುದರಿಂದ ನನ್ನ ಸಖಿಗೆ ಸವಿಯುಂಟಾಗಲಿ,

ಗುಣಾರ್ಣವ/ ಅರ್ಜುನನೇ
ಇತರ ವ್ಯರ್ಥಾಲಾಪದಿಂದ
ಏನು ಪ್ರಯೋಜನ? ಎಂದಳು
ಸುಭದ್ರೆಯ ಸಖಿ.

ಚಂ||ಬೆಳಗುವ
ಸಾಂದ್ರಚಂದ್ರಕಿರಣಾಳಿಗಳೋ
ಳಿಗಳಿಂದಮೆತ್ತಮು
ಜ್ಜ್ವಳಿಸುವಿರುಳ್ಗಳಂ
ಕಳೆದುಮೆಯ್ದೆ
ತಳಿರ್ತೆಳಮಾವುಮಂ ಮನಂ|

ಗೊಳೆ ನಡೆ ನೋಡಿಯುಂ

ಕಿವಿಯನಿಂದೊಳದಿಂಚರಕಾಂ

ತುಮಿಂತು ಕೋ

ಮಳೆಯಸು

ಮತ್ತಮೀಯೊಡಲೊಳಿರ್ದುದಿ

ದೆಮ್ಮಯ ಸೈಪು ಭೂಪತೀ||

೧೯ ||

ಪದ್ಯ-೧೯:ಪದವಿಭಾಗ-

ಅರ್ಥ:ಬೆಳಗುವ

ಸಾಂದ್ರಚಂದ್ರಕಿರಣಾಳಿಗಳ

ಓಳಿಗಳಿಂದಂ(ಪ್ರಕಾಶಮಾನ

ವೂ ದಟ್ಟವೂ ಆದ
ಚಂದ್ರಕಿರಣಗಳ
ಸಾಲುಗಳಿಂದ) ಎತ್ತಂ
ಉಜ್ಜ್ವಳಿಸುವ ಇರುಳ್ಗಳಂ
ಕಳೆದುಂ ಎಯ್ದೆ(ಎಲ್ಲೆಡೆಯೂ
ತೊಳಗುವ ರಾತ್ರಿಗಳನ್ನು
ಕಳೆದು ಬಂದ)
ತಳಿರ್ತೆಳಮಾವುಮಂ
(ಚಿಗುರಿದ ಎಳೆಯ ಮಾವಿನ
ಮರಗಳನ್ನು) ಮನಂಗೊಳೆ
ನಡೆ ನೋಡಿಯುಂ

(ತೃಪ್ತಿಯಾಗುವ ಹಾಗೆ ಚೆನ್ನಾಗಿ
ನೋಡಿಯೂ) ಕಿವಿಯನು
ಇಂದೊಳದ ಇಂಚರಕೆ
ಆಂತುಮಿಂತು
(ಹಿಂದೋಳರಾಗದ ಇಂಪಾದ
ಧ್ವನಿಗೆ ಕಿವಿಗೊಟ್ಟೂ)
ಕೋಮಳೆಯ ಅಸು
(ಕೋಮಲ ಸುಭದ್ರೆಯ
ಪ್ರಾಣವು) ಮತ್ತಂ ಈ
ಯೊಡಲೊಳು ಇರ್ದುದು
ಇದು ಎಮ್ಮಯ ಸೈಪು

(ಪುಣ್ಯ) ಭೂಪತೀ (ರಾಜ ಅರಕೇಸರೀ/ಅರ್ಜುನನೇ ಈ ಕೋಮಲೆ ಸುಭದ್ರೆಯ ಪ್ರಾಣವು ಈ ಶರೀರದಲ್ಲಿಯೇ ಇದ್ದುದು ನಮ್ಮ ಪುಣ್ಯವೆಂದೇ ಹೇಳಬೇಕು)

ಪದ್ಯ-೧೯:ಅರ್ಥ: ಅರ್ಜುನ! ಪ್ರಕಾಶಮಾನವೂ ದಟ್ಟವೂ ಆದ ಚಂದ್ರಕಿರಣಗಳ ಸಾಲುಗಳಿಂದ ಎಲ್ಲೆಡೆಯೂ ತೊಳಗುವ ರಾತ್ರಿಗಳನ್ನು

ಕಳೆದು ಬಂದ ಚಿಗುರಿದ
ಎಳೆಯ ಮಾವಿನ ಮರಗಳನ್ನು
ತೃಪ್ತಿಯಾಗುವ ಹಾಗೆ ಚೆನ್ನಾಗಿ
ನೋಡಿಯೂ
ಹಿಂದೋಳರಾಗದ ಇಂಪಾದ
ಧ್ವನಿಗೆ ಕಿವಿಗೊಟ್ಟೂ ,ರಾಜ
ಅರಕೇಸರೀ/ ಅರ್ಜುನನೇ ಈ
ಕೋಮಲೆ ಸುಭದ್ರೆಯ
ಪ್ರಾಣವು ಈ ಶರೀರದಲ್ಲಿಯೇ
ಇದ್ದುದು ನಮ್ಮ ಪುಣ್ಯವೆಂದೇ
ಹೇಳಬೇಕು.

ವ|| ಎಂಬನ್ನೆಗಂ

ಸುರತಮಕರಧ್ವಜನ

ಸುಭದ್ರೆಯ ವಿರಹ

ಪರಿತಾಪದೊಳಾದ

ಪಡೆಮಾತಂ

ಕರ್ಣಪರಂಪರೆಯಿಂ ಕೇಳ್ದು

ಸಂತಸಂಬಟ್ಟು ಚಕ್ರಿ

ಚಕ್ರಿಕಾವರ್ತಿಯಪ್ಪುದಱಿಂದಾ

ವನಾಂತರಾಳಕ್ಕೊರ್ವನೆ

ಬಂದು

ಮಾಧವೀಮಂಟಪಮಂ

ಪೊಕ್ಕು ಅವರಿರ್ವರ ನಾಣುಮಂ ನಡುಕಮುಮಂ ಪತ್ತುವಿಟ್ಟು ನುಡಿದು-

ವಚನ:ಪದವಿಭಾಗ-

ಅರ್ಥ:ಎಂಬ ಅನ್ನೆಗಂ (ಎನ್ನುವಷ್ಟರಲ್ಲಿ) ಸುರತಮಕರಧ್ವಜನ ಸುಭದ್ರೆಯ ವಿರಹ ಪರಿತಾಪದೊಳು ಆದ ಪಡೆಮಾತಂ (ಅರ್ಜುನ ಸುಭದ್ರೆಯರ ವಿರಹತಾಪಕ್ಕೆ

ಸಂಬಂಧಪಟ್ಟ ಸುದ್ದಿಯನ್ನು)
ಕರ್ಣಪರಂಪರೆಯಿಂ ಕೇಳ್ದು
ಸಂತಸಂಬಟ್ಟು (ಕಿವಿಯಿಂದ
ಕಿವಿಗೆ ಹರಡಿಬಂದ ಸುದ್ದಿಕೇಳಿ
ಸಂತೋಷಪಟ್ಟು) ಚಕ್ರಿ
ಚಕ್ರಿಕಾವರ್ತಿಯಪ್ಪುದಱಿಂದ
ಆ ವನಾಂತರಾಳಕ್ಕೆ ಒರ್ವನೆ
ಬಂದು (ಶ್ರೀಕೃಷ್ಣನು
ಕಪಟೋಪಾಯವುಳ್ಳವನಾದು
ದರಿಂದ ಆ ವನದ ಒಳಗೆ
ಒಬ್ಬನೇ ಬಂದು)

ಮಾಧವೀಮಂಟಪಮಂ ಪೊಕ್ಕು (ಹೊಕ್ಕು) ಅವರು ಇರ್ವರ ನಾಣುಮಂ ನಡುಕಮುಮಂ ಪತ್ತುವಿಟ್ಟು ನುಡಿದು (ಅವರಿಬ್ಬರ ಲಜ್ಜೆಯನ್ನೂ ನಡುಕವನ್ನೂ ಹೋಗಲಾಡಿಸಿ ಹೇಳಿದನು) - **ವಚನ:ಅರ್ಥ**:ಎನ್ನುವಷ್ಟರಲ್ಲಿ ಅರ್ಜುನ ಸುಭದ್ರೆಯರ ವಿರಹತಾಪಕ್ಕೆ ಸಂಬಂಧಪಟ್ಟ ಸುದ್ದಿಯನ್ನು ಕಿವಿಯಿಂದ

ಕಿವಿಗೆ ಹರಡಿಬಂದ ಸುದ್ದಿಕೇಳಿ
ಸಂತೋಷಪಟ್ಟು ಶ್ರೀಕೃಷ್ಣನು
ಕಪಟೋಪಾಯವುಳ್ಳವನಾದು
ದರಿಂದ ಆ ವನದ ಒಳಗೆ
ಒಬ್ಬನೇ ಬಂದು
ಮಾಧವೀಮಂಟಪವನ್ನು
ಪ್ರವೇಶಿಸಿ ಅವರಿಬ್ಬರ
ಲಜ್ಜೆಯನ್ನೂ ನಡುಕವನ್ನೂ
ಹೋಗಲಾಡಿಸಿ ಹೇಳಿದನು.

<u>ಸುಭದ್ರೆಯ ಅಪಹರಣಕ್ಕೆ ಕೃಷ್ಣನ ಸಹಾಯ</u>

ಮ|| ಕುಡಲಿರ್ಪಂ

ಬಲದೇವನೆನ್ನನುಜೆಯಂ

ದುರ್ಯೋಧನಂಗಾನೊಡಂ

ಬಡೆನೀವೆಟ್ಟಿಯದಾಗಳುಂ

ನಿನಗೆ ದಲ್ ಪದ್ಮಾಸನಂ ತಾನೆ

ನೇ|

ರ್ಪಡಿಸಲ್

ಕೂಡಿದನಿರ್ಪುದಲ್ತು

ನಯಮಿನ್ನೀ ಪೊೞ್ತೆ

ಪೊೞ್ತಾಗೆ ನೀ

ನೊಡಗೊಂಡುಯ್ವುದು

ಕನ್ನೆಯಂ ತಡೆಯದಿರ್

ವಿದ್ವಿಷ್ಟವಿದ್ರಾವಣಾ|| ೨೦||

ಪದ್ಯ-೨೦:ಪದವಿಭಾಗ-

ಅರ್ಥ:ಕುಡಲಿರ್ಪಂ

ಬಲದೇವನು ಎನ್ನ (ಕೃಷ್ಣನ)

ಅನುಜೆಯಂ (ತಂಗಿಯನ್ನು)

ದುರ್ಯೋಧನಂಗೆ ಆನು

ಒಡಂಬಡೆನು(ನಾನು

ಒಪ್ಪುವುದಿಲ್ಲ) ಈವ
ಅೞ್ತಿಯದು (ನಿನಗೆ
-ಕನ್ಯೆಯನ್ನು ಕೊಡುವ ಪ್ರೀತಿ-
ಅಪೇಕ್ಷೆ ಇದೆ)ಆಗಳುಂ ನಿನಗೆ
ದಲ್ ಪದ್ಮಾಸನಂ ತಾನೆ
ನೇರ್ಪಡಿಸಲ್ ಕೂಡಿದನ್
(ಬ್ರಹ್ಮನು ತಾನೇ ನಿನಗೆ-
ಅರ್ಜುನನಿಗೆ ಸುಭದ್ರೆ ಸೇರಲು
ಕೂಡಿಸಿದ್ದಾನೆ) ಇರ್ಪುದಲ್ತು
ನಯಮಿನ್ನು (ಇನ್ನು ನೀವು
ಇಲ್ಲಿ ಇರುವುದು ನೀತಿಯಲ್ಲ.)

ಈ ಪೊಟ್ಟೆ ಪೊಟ್ಟಾಗೆ ನೀನು
ಒಡಗೊಂಡು ಉಯ್ವುದು
ಕನ್ನೆಯಂ (ಈ ಹೊತ್ತೆ
ಹೊತ್ತಾಗಿ ಅಂದರೆ ಈಗಲೇ
ಕನ್ಯೆಯನ್ನು ಜೊತೆಯಲ್ಲಿ
ಕರೆದುಕೊಂಡು
ಹೊರಟುಹೋಗು,)
ತಡೆಯದಿರ್
ವಿದ್ವಿಷ್ಟವಿದ್ರಾವಣಾ
(ಅರ್ಜುನನೇ
ತಡಮಾಡಬೇಡ.)

ಪದ್ಯ-೨೦:ಅರ್ಥ:ಬಲರಾಮನು ನನ್ನ ತಂಗಿಯನ್ನು ದುರ್ಯೋಧನನಿಗೆ ಕೊಡಬೇಕೆಂದಿದ್ದಾನೆ. ನಾನು ಅದಕ್ಕೆ ಒಪ್ಪುವುದಿಲ್ಲ. ನಿನಗೇ ಪ್ರೀತಿಯಿಂದ ಕೊಡಬೇಕೆಂಬುದು ನನ್ನ ಅಪೇಕ್ಷೆ. ಬ್ರಹ್ಮನು ತಾನೇ ನಿನಗೆ-ಸುಭದ್ರೆಯು ಸೇರಲು, ಇಬ್ಬರನ್ನೂ ಕೂಡಿಸಿದ್ದಾನೆ). ಇನ್ನು ಮೇಲೆ ಇಲ್ಲಿರುವುದು

ನೀತಿಯಲ್ಲ. ಈ ಹೊತ್ತೆ
ಹೊತ್ತಾಗಿ ಅಂದರೆ ಈಗಲೇ
ಕನ್ಯೆಯನ್ನು ಜೊತೆಯಲ್ಲಿ
ಕರೆದುಕೊಂಡು
ಹೊರಟುಹೋಗು,
ವಿದ್ವಿಷ್ಟವಿದ್ರಾವಣನಾದ
ಅರ್ಜುನನೇ ತಡಮಾಡಬೇಡ.

ವ|| ಅಂತು ಪೋಗೆವೋಗೆ
ಬಲದೇವನನುಮತದೊಳ್
ಪೆಱಗಂ ತಗುಳ್ವ ಯಾದವ
ಬಲಮುಂಟಪ್ಪೊಡದನಂಬು

ಗಾಣಿಸಲ್ ನೀನೆ
ಸಾಲ್ವೆಯುಟಿದುದಂ
ಮಾಣಿಸಲಾನೆ ಸಾಲ್ವೆನಿದುವೆ
ಮುಹೂರ್ತಮಾಗೆ
ನಡೆವುದೆಂದು ಶೈಬ್ಯ ಬಳಾಹಕ
ಮೇಘವರ್ಣ
ಸುಗ್ರೀವಂಗಳೆಂಬ ನಾಲ್ಕು
ಕುದುರೆಗಳೊಳ್ ಪೂಡಿದ
ದಿವ್ಯರಥಮನೆಸಗಲ್
ದಾರುಕನೆಂಬ
ಸಾರಥಿಯನೀವುದುಮಾ

ರಥಮಂ ಮನೋರಥನಂ
ಬೆರಸೇಱಿ ಚೂತಲತಿಕೆವೆರಸು
ಸುಭದ್ರೆಯನೇಱಿಲ್ವೇೞ್ದುದಾತ್ತ
ನಾರಾಯಣಂ ನಾರಾಯಣನ
ಪರಸಿದ ಪರಕೆಗಳುಮಂ
ಕೆಯ್ಕೊಂಡು
ಬೀೞ್ಕೊಂಡಿಂದ್ರಪ್ರಸ್ಥದ
ಬಟ್ಟೆಯೊಳ್
ಸುಖಪ್ರಯಾಣಂಗೆಯ್ದನನ್ನೆಗ
ಮಿತ್ತ ಬಲದೇವಂ
ಸುಭದ್ರೆಯಂ

ಸಾಮಂತಚೂಡಾಮಣಿಯು ಯ್ದನೆಂಬುದಂ ಕೇಳ್ದು-

ವಚನ:ಪದವಿಭಾಗ-

ಅರ್ಥ:ಅಂತು ಪೋಗೆವೋಗೆ (ಹಾಗೆ ಹೋಗುವಾಗ) ಬಲದೇವನ ಅನುಮತದೊಳ್ ಪೆಱಗಂತಗುಳ್ವ (ಬಲರಾಮನ ಸಮ್ಮತಿಯಂತೆ ಬೆನ್ನಟ್ಟಿಬರುವ) ಯಾದವ ಬಲಮುಂಟು ಅಪ್ಪೊಡೆ (ಬೆನ್ನಟ್ಟಿಬರುವ ಯಾದವ

ಬಲವುಂಟಾದರೆ) ಅದನು ಅಂಬುಗಾಣಿಸಲ್ ನೀನೆ ಸಾಲ್ವೆಯು (ಅದಕ್ಕೆ ಬಾಣಪ್ರಯೋಗ ಮಾಡಲು ನೀನು ಶಕ್ತನಾಗಿದ್ದೀಯೆ.) ಉೞಿದುದಂ ಮಾಣಿಸಲಾನೆ ಸಾಲ್ವೆನು (ಉಳಿದುದನ್ನು ತಪ್ಪಿಸಲು ನಾನು ಶಕ್ತನು- ಬಲ್ಲೆ,) ಇದುವೆ ಮುಹೂರ್ತಮಾಗೆ ನಡೆವುದೆಂದು ಶೈಬ್ಯ ಬಳಾಹಕ

ಮೇಘವರ್ಣ
ಸುಗ್ರೀವಂಗಳೆಂಬ ನಾಲ್ಕು
ಕುದುರೆಗಳೊಳ್ ಪೂಡಿದ
(ಹೂಡಿದ) ದಿವ್ಯರಥಮನು
ಎಸಗಲ್ ದಾರುಕನೆಂಬ
ಸಾರಥಿಯನು ಈವುದುಂ
(ಅದನ್ನು ನಡೆಯಲು
ದಾರುಕನೆಂಬ ಸಾರಥಿಯನ್ನೂ
ಕೊಟ್ಟನು). ಆ ರಥಮಂ
ಮನೋರಥನಂ ಬೆರಸಿ ಏಱಿ
ಚೂತಲತಿಕೆವೆರಸು

ಸುಭದ್ರೆಯನೇಱಿಲ್ವೇೞ್ದು (ಆ ರಥವನ್ನು ಅರ್ಜುನನು ಸಂತೋಷದಿಂದ ಚೂತಲತಿಕೆಯೊಡಗೂಡಿ ಸುಭದ್ರೆಯನ್ನು ಹತ್ತಲು ಹೇಳಿ), ಉದಾತ್ತನಾರಾಯಣಂ (ಅರ್ಜುನನು) ನಾರಾಯಣನ ಪರಸಿದ ಪರಕೆಗಳುಮಂ ಕೆಯ್ಕೊಂಡು (ನಾರಾಯಣನು/ ಕೃಷ್ಣನು ಹರಸಿದ ಹರಕೆಗಳನ್ನು ಅಂಗೀಕರಿಸಿ) ಬೀೞ್ಕೊಂಡು

ಇದ್ರಪ್ರಸ್ಥದ ಬಟ್ಟೆಯೊಳ್
ಸುಖಪ್ರಯಾಣಂಗೆಯ್ದನು(ಅ
ವನಿಂದ ಅಪ್ಪಣೆಪಡೆದು
ಇಂದ್ರಪ್ರಸ್ಥದ ದಾರಿಯಲ್ಲಿ
ಸುಖಪ್ರಯಾಣಮಾಡಿದನು).
ಅನ್ನೆಗಂ ಇತ್ತ ಬಲದೇವಂ
(ಅಷ್ಟರಲ್ಲಿ ಈಕಡೆ
ಬಲರಾಮನು) ಸುಭದ್ರೆಯಂ
ಸಾಮಂತಚೂಡಾಮಣಿಯು
ಉಯ್ದನೆಂಬುದಂ
ಕೇಳ್ದು(ಸುಭದ್ರೆಯನ್ನು

ಅರ್ಜುನನು ಕರೆದುಕೊಂಡು ಹೋದನೆಂಬುದನ್ನು ಕೇಳಿ)- **ವಚನ:ಅರ್ಥ**:ಹಾಗೆ ಹೋಗುವಾಗ ಬಲರಾಮನ ಸಮ್ಮತಿಯಂತೆ ಬೆನ್ನಟ್ಟಿಬರುವ ಯಾದವ ಬಲವುಂಟಾದರೆ ಅದಕ್ಕೆ ಬಾಣಪ್ರಯೋಗ ಮಾಡಲು ನೀನು ಶಕ್ತನಾಗಿದ್ದೀಯೆ. ಉಳಿದುದನ್ನು ತಪ್ಪಿಸಲು ನಾನು ಶಕ್ತನು/ ಬಲ್ಲೆ, ಇದನ್ನೇ

ಸುಮುಹೂರ್ತವನ್ನಾಗಿ ಎಣಿಸಿ ಹೊರಡು ಎಂದು ಶೈಬ್ಯ, ಬಳಾಹಕ, ಮೇಘವರ್ಣ, ಸುಗ್ರೀವಗಳೆಂಬ ನಾಲ್ಕು ಕುದುರೆಗಳನ್ನು ಹೂಡಿದ್ದ ದಿವ್ಯರಥವನ್ನೂ ಅದನ್ನು ನಡೆಯಲು ದಾರುಕನೆಂಬ ಸಾರಥಿಯನ್ನೂ ಕೊಟ್ಟನು. ಆ ರಥವನ್ನು ಅರ್ಜುನನು ಸಂತೋಷದಿಂದ ಚೂತಲತಿಕೆಯೊಡಗೂಡಿ

ಸುಭದ್ರೆಯನ್ನು ಹತ್ತಲು ಹೇಳಿ
ನಾರಾಯಣನು/ಕೃಷ್ಣನು
ಹರಸಿದ ಹರಕೆಗಳನ್ನು
ಅಂಗೀಕರಿಸಿ ಅವನಿಂದ
ಅಪ್ಪಣೆಪಡೆದು ಇಂದ್ರಪ್ರಸ್ಥದ
ದಾರಿಯಲ್ಲಿ
ಸುಖಪ್ರಯಾಣಮಾಡಿದನು.
ಅಷ್ಟರಲ್ಲಿ ಈಕಡೆ
ಬಲರಾಮನು ಸುಭದ್ರೆಯನ್ನು
ಸಾಮಂತಚೂಡಾಮಣಿಯಾದ

ಅರ್ಜುನನು ಕರೆದುಕೊಂಡು ಹೋದನೆಂಬುದನ್ನು ಕೇಳಿ-

ಮ|| ಉಱದೆನ್ನಂ ಕುಡಲಿರ್ದ ಕೂಸನೊಡಗೊಂಡುಯ್ವಾತ ನಂ ತಾಗಿ ತ ಳ್ತಿಱಿಯಲ್ ಕೋಡಗಗಟ್ಟುಗಟ್ಟಿ ತರಲಿನ್ನಾರಾರ್ಪರಂತಪ್ಪ ಪೊ| ಚ್ಚಱಸಾಮಂತರೆ ಪೋಗಿಮೆಂದು ಪಲರಂ ಪೇೞ್ದಾಗಳೆಯ್ತಂದರಂ

ತೊರೆಕೊಳ್ವಂತಿರೆ ಕೊಂಡುವಂದರಿಗನೆಚ್ಚುಗ್ರೇಷು ಧಾರಾಜಳಂ|| ೨೧ ||

ಪದ್ಯ-೨೧:ಪದವಿಭಾಗ-ಅರ್ಥ:ಉಱದೆ ಎನ್ನಂ (ನನ್ನನ್ನು ಲಕ್ಷಿಸದೆ) ಕುಡಲಿರ್ದ ಕೂಸನು ಒಡಗೊಂಡುಯ್ವ ಆತನಂ ತಾಗಿ (ದಾನಮಾಡಬೇಕಿದ್ದ ಕನ್ಯೆಯನ್ನು ಜೊತೆಯಲ್ಲಿ ಕೊಂಡು ಹೋದವನನ್ನು

ಎದುರಿಸಿ) ತಳ್ತಿಱಿಯಲ್
(ತಳ್ತು ಅರಿಯಲ್ ಸೇರಿ
ಹೋರಾಡಿ)
ಕೋಡಗಗಟ್ಟುಗಟ್ಟಿ ತರಲು
ಇನ್ನಾರು ಆರ್ಪರ್ (ಕಪಿಯನ್ನು
ಕಟ್ಟುವ ಹಾಗೆ ಕಟ್ಟಿ ತರಲೂ
ಯಾರು
ಸಮರ್ಥರಾಗಿರುತ್ತಾರೆ)
ಅಂತಪ್ಪ ಪ್ರೊಚ್ಚಱಿಸಾಮಂತರೆ
ಪೋಗಿಂ ಎಂದು (ಅಂತಹ
ಪರಾಕ್ರಮವುಳ್ಳ

ಶೂರಸಾಮಂತರೇ ಹೋಗಿ”
ಎಂದು) ಪಲರಂ ಪೇಱ್ದಾಗಳ್
ಎಯ್ತಂದರಂ (ಹಲವರನ್ನು
ನೇಮಿಸಲು -ಹಾಗೆ ಬಂದು-
ಎದುರಿಸಿದವರನ್ನು)
ತೊರೆಕೊಳ್ವಂತಿರೆ (ನದಿಯ
ಪ್ರವಾಹದ ಹಾಗೆ) ಕೊಂಡುವು
(ಆಕ್ರಮಿಸಿ ಕೊಂದಿತು) ಅಂದು
ಅರಿಗನು ಎಚ್ಚ ಉಗ್ರೇಷು
ಧಾರಾಜಳಂ (ಅರಿಗನು /
ಅರ್ಜುನನು ಹೊಡೆದ

ಭಯಂಕರವಾದ ಬಾಣಗಳ ಧಾರಾಪ್ರವಾಹವು ನದಿಯು ನುಗ್ಗುವ ಹಾಗೆ ಆಕ್ರಮಿಸಿ ಕೊಂದಿತು.)

ಪದ್ಯ-೨೧:ಅರ್ಥ: “ನನ್ನನ್ನು ಲಕ್ಷಿಸದೆ ದಾನಮಾಡಬೇಕಿದ್ದ ಕನ್ಯೆಯನ್ನು ಜೊತೆಯಲ್ಲಿ ಕೊಂಡು ಹೋದವನನ್ನು ಎದುರಿಸಿ ಹೋರಾಡಿ ಕಪಿಯನ್ನು ಕಟ್ಟುವ ಹಾಗೆ ಕಟ್ಟಿ ತರಲೂ ಯಾರು

ಸಮರ್ಥರಾಗಿರುತ್ತಾರೆ,
ಅಂತಹ ಪರಾಕ್ರಮವುಳ್ಳ
ಶೂರಸಾಮಂತರೇ ಹೋಗಿ”
ಎಂದು ಹಲವರನ್ನು
ನೇಮಿಸಲು (ಹಾಗೆ ಬಂದು)
ಎದುರಿಸಿದವರನ್ನು
ಅರ್ಜುನನು ಹೊಡೆದ
ಭಯಂಕರವಾದ ಬಾಣಗಳ
ಧಾರಾಪ್ರವಾಹವು ನದಿಯು
ಪ್ರವಾಹ ನುಗ್ಗುವ ಹಾಗೆ
ಆಕ್ರಮಿಸಿ ಕೊಂದಿತು.

ವ|| ಆಗಳ್ ತನ್ನ ಪೇೞ್ದಿ ನಾಯಕರ ಸಾವಂ ಕೇಳ್ದು ಯಾದವಬಲ ಜಳನಿವೆರಸು ವಿಳಯಕಾಲ ಜಳನಿಯಂತೆ ತೆರಳಲ್ ಬಗೆದ ಬಲದೇವನಂ ವಾಸುದೇವನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್ ತನ್ನ ಪೇೞ್ದಿ ನಾಯಕರ ಸಾವಂ ಕೇಳ್ದು (ಹೇಳಿ ನಿಯಮಿಸಿದ ನಾಯಕರ ಸಾವನ್ನು ಕೇಳಿ)

ಯಾದವಬಲ ಜಳನಿವೆರಸು (ಯಾದವ ಬಲಸಮುದ್ರದೊಡಗೂಡಿ) ವಿಳಯಕಾಲ ಜಳನಿಯಂತೆ (ಪ್ರಳಯಕಾಲದ ಸಮುದ್ರದಂತೆ) ತೆರಳಲ್ ಬಗೆದ ಬಲದೇವನಂ ವಾಸುದೇವನು ಇಂತೆಂದಂ (ಬಲರಾಮನನ್ನು ಕುರಿತು ಕೃಷ್ಣನು ಹೀಗೆಂದನು)-

ವಚನ:ಅರ್ಥ:“ಆಗ ತಾನು ಹೇಳಿ ನಿಯಮಿಸಿದ ನಾಯಕರ ಸಾವನ್ನು ಕೇಳಿ ಯಾದವ ಬಲಸಮುದ್ರದೊಡಗೂಡಿ ಪ್ರಳಯಕಾಲದ ಸಮುದ್ರದಂತೆ ಹೊರಡಲು ಯೋಚಿಸಿದ ಬಲರಾಮನನ್ನು ಕುರಿತು ಕೃಷ್ಣನು ಹೀಗೆಂದನು –

ಮ|| ಕುಲಮಂ ಪೇೞ್ವೊಡೆ ಸೋಮವಂಶತಿಲಕಂ ಬಿಲ್ಲಾಳ್ತನಂಬೇೞ್ವೊಡು

ಜ್ವಲ ತೀವ್ರಾಸ್ತ್ರನಿಘಾತಪಾತಿತ
ರಿಪುವ್ಯೂಹಂ ಬಲಂಬೇಟಿ
ದೋ|
ರ್ವಲದೊಳ್ ಕೇಳ್ ನಿನಗಂ
ಬಲಸ್ಥನೊಡೆಯಂ ಕೂಸಿಂಗೆ
ಕೊಂಡುಯ್ವುದೇ
ಚಲಮೇ ದೋಷಮದರ್ಕೆ
ನೀನ್ ಮುಳಿವುದೇ ನೀನ್
ಪೇಟ್ಕೊಡಾನ್ ಸಾಲೆನೇ||
೨೨||

ಪದ್ಯ-೨೨:ಪದವಿಭಾಗ-ಅರ್ಥ:ಕುಲಮಂ ಪೇೞ್ವೊಡೆ ಸೋಮವಂಶತಿಲಕಂ (ಸುಭದ್ರೆಯನ್ನು ಕರೆದೊಯ್ದ ಅರ್ಜುನನ - ಕುಲವನ್ನು ಹೇಳುವುದಾದರೆ ಚಂದ್ರವಂಶದಲ್ಲಿ ಶ್ರೇಷ್ಠನಾದವನಾಗಿದ್ದಾನೆ) ಬಿಲ್ಲಾಳ್ತನಂ ಬೇೞ್ವೊಡೆ ಉಜ್ವಲ ತೀವ್ರಾಸ್ತ್ರ ನಿಘಾತ ಪಾತಿತ(ಕೆಡವಿದ)

ರಿಪುವ್ಯೂಹಂ

(ಧನುರ್ವಿದ್ಯೆಯ

ಪರಾಕ್ರಮವನ್ನು

ಹೇಳುವುದಾದರೆ ತನ್ನ

ತೀಕ್ಷ್ಣ ಬಾಣಗಳ ಹೊಡೆತದಿಂದ

ಶತ್ರುವ್ಯೂಹವನ್ನು ಕೆಡವಿದ

ಸಾಮರ್ಥ್ಯವುಳ್ಳವನು)

ಬಲಂಬೇಱೆ

ದೋರ್ವಲದೊಳ್ / ತೋಳ್

ಬಲದೊಳ್(ಬಲವನ್ನು

ಹೇಳುವುದಾದರೆ

ಬಾಹುಬಲದಲ್ಲಿ) ಕೇಳ್
ನಿನಗಂ ಬಲಸ್ಥನೊಡೆಯಂ
(ನಿನಗಿಂತಲೂ
ಬಲಿಷ್ಠನಾದವನು) ಕೂಸಿಂಗೆ
ಕೊಂಡುಯ್ವುದು (ನಮ್ಮ
ಕನ್ಯೆಯನ್ನು
ಕೊಂಡುಹೋಗಲಿ,)
ಏಚಲಮೇ (ಸಿಟ್ಟು -
ಹಟವೇತಕ್ಕೆ?) ದೋಷಂ
(ದೋಷವೇನು?) ಅದರ್ಕೆ
ನೀನ್ ಮುಳಿವುದೇ (ಅದಕ್ಕೆ

ನೀನು ಕೋಪಿಸುವುದೇ?)
ನೀನ್ ಪೇೞ್ವೊಡೆ ಆನ್
ಸಾಲೆನೇ (ನೀನು ಹೇಳಿದರೆ,
ನಾನು ಸಾಲದೆ?)
ಪದ್ಯ-೨೨:ಅರ್ಥ:ಕುಲವನ್ನು
ಹೇಳುವುದಾದರೆ
ಚಂದ್ರವಂಶದಲ್ಲಿ
ಶ್ರೇಷ್ಠನಾದವನಾಗಿದ್ದಾನೆ.
ಧನುರ್ವಿದ್ಯೆಯ
ಪರಾಕ್ರಮವನ್ನು
ಹೇಳುವುದಾದರೆ ತನ್ನ

ತೀಕ್ಷ್ಣ ಬಾಣಗಳ ಹೊಡೆತದಿಂದ ಶತ್ರುವ್ಯೂಹವನ್ನು ಕೆಡವಿದ ಸಾಮರ್ಥ್ಯವುಳ್ಳವನು. ಬಲವನ್ನು ಹೇಳುವುದಾದರೆ ಬಾಹುಬಲದಲ್ಲಿ ನಿನಗಿಂತಲೂ ಬಲಿಷ್ಠನಾದವನು; ನಮ್ಮ ಕನ್ಯೆಯನ್ನು ಕೊಂಡುಹೋಗಲಿ, ಸಿಟ್ಟು - ಹಟವೇತಕ್ಕೆ? ದೋಷವೇನು? ಅದಕ್ಕೆ ನೀನು ಕೋಪಿಸುವುದೇ? ನೀನು

ಹೋರಾಡು ಎಂದು ಆಜ್ಞೆ
ಮಾಡುವುದಾದರೆ
ಅವನೊಡನೆ ಯುದ್ಧಮಾಡಲು
ನಾನೇ ಸಮರ್ಥನಲ್ಲವೇ?

ವ|| ಎಂದು ಬಲದೇವನ ಮನದೊಳಾದ ಮುಳಿಸೆಂಬ ಕಿಚ್ಚಂ ತನ್ನ ಮೃದು ಮಧುರ ವಚನರಚನಾಜಲಂಗಳಂ ತಳಿದು ನದಿಪಿದನಿತ್ತ ವಿಕ್ರಮಾರ್ಜುನನುಂ ಕತಿಪಯ ದಿನಂಗಳಿಂದನೇಕ

ಸಹಕಾರಶೋಕಾನೋಕಹನಂ
ದನವನಪ್ರಸ್ಥಮನಿಂದ್ರ
ಪ್ರಸ್ಥಮನೆಯ್ದಿವಂದು ಮುನ್ನಮೆ
ತನ್ನ ಬರವನಱಿದು
ಪೊಲಿಲೊಳಷ್ಟಶೋಭೆಯಂ
ಮಾಡಿ ತನಗಿದಿರ್ವಂದ
ಕೊಂತಿಯ ಧರ್ಮಪುತ್ರ
ಭೀಮಸೇನಾದಿಗಳ ಪಾದ
ಪದ್ಮಂಗಳಂ ತನ್ನ
ಕರಕಮಲಂಗಳಿಂದರ್ಚಿಸಿ
ತದೀಯಾಶೀರ್ವಚನಂಗಳ

ನಾಂತು ತನಗೆ ಪೊಡಮಟ್ಟ

ನಕುಲ ಸಹದೇವಂ ಪರಸಿ

ಪುನಪುನರಾಲಿಂಗನಂಗೆಯ್ದು

ಮುಹುರ್ಮುಹುರಾಳೋಕನಂ

ಗೆಯ್ಯುತ್ತುಂ ಬಂದು

ದಿವಿಜೇಂದ್ರ ವಿಳಾಸದಿಂ

ಪೊೞಲಂ ಪುಗೆ-

ವಚನ:ಪದವಿಭಾಗ-

ಅರ್ಥ:ಎಂದು ಬಲದೇವನ ಮನದೊಳಾದ ಮುಳಿಸೆಂಬ ಕಿಚ್ಚಂ (ಬಲರಾಮನ ಮನಸ್ಸಿನ

ಕೋಪವೆಂಬ ಬೆಂಕಿಯನ್ನು)
ತನ್ನ ಮೃದು ಮಧುರ
ವಚನರಚನಾ ಜಲಂಗಳಂ
ತಳಿದು ನದಿಪಿದನು (ತನ್ನ ಸವಿ
ಮಾತಿನ ಜಾಣ ಜೋಡಣೆಯ
ನೀರಿನಿಂದ ಸಿಂಪಿಸಿ
ನಂದಿಸಿದನು.) ಇತ್ತ
ವಿಕ್ರಮಾರ್ಜುನನುಂ ಕತಿಪಯ
ದಿನಂಗಳಿಂದ (ಅರ್ಜುನನು
ಕೆಲವು ದಿವಸಗಳಲ್ಲಿ) ಅನೇಕ
ಸಹಕಾರ ಅಶೋಕ ಅನೋಕ

ಅಹ (ಇರುವ) ನಂದನವನ
ಪ್ರಸ್ಥಮನು ಇಂದ್ರಪ್ರಸ್ಥಮನು
ಎಯ್ದೆವಂದು
(ನಂದನವನದಂತಿರುವ
ವನಗಳಿಂದ ಕೂಡಿದ
ಇಂದ್ರಪ್ರಸ್ಥ ಪುರವನ್ನು ಸೇರಿ
ಬಂದು, -ಸೇರಿದನು.)
ಮುನ್ನಮೆ ತನ್ನ ಬರವನಱಿದು
ಪೊೞಲೊಳು
ಅಷ್ಟಶೋಭೆಯಂ ಮಾಡಿ
(ಎಂಟು ವಿಧವಾದ

ಅಲಂಕಾರಗಳಿಂದ

ಅಲಂಕರಿಸಿ) ತನಗಿದಿರ್ವಂದ

(ತನ್ನ ಸ್ವಾಗತ್ಕ್ಕೆ ಬಂದ)

ಕೊಂತಿಯ ಧರ್ಮಪುತ್ರ

ಭೀಮಸೇನಾದಿಗಳ ಪಾದ

ಪದ್ಮಂಗಳಂ ತನ್ನ

ಕರಕಮಲಂಗಳಿಂದ ಅರ್ಚಿಸಿ

(ಪೂಜಿಸಿ) ತದೀಯ

(ಅವರಿಂದ)

ಆಶೀರ್ವಚನಂಗಳನು ಆಂತು

(ಪಡೆದು) ತನಗೆ ಪೊಡಮಟ್ಟ

ನಕುಲ ಸಹದೇವಂ ಪರಸಿ
(ಹರಸಿ) ಪುನಪುನಂ
ಆಲಿಂಗನಂಗೆಯ್ದು
ಮುಹುರ್ಮುಹುರ್
ಆಳೋಕನಂ ಗೆಯ್ಯುತ್ತುಂ
(ನೋಡುತ್ತ) ಬಂದು
ದಿವಿಜೇಂದ್ರ ವಿಳಾಸದಿಂ
ಪೊಟಿಲಂ ಪುಗೆ (ದೇವೇಂದ್ರ
ವೈಭವದಿಂದ ಪಟ್ಟಣವನ್ನು
ಹೊಗಲು- (ಪ್ರವೇಶಿಸಿದನು)-

ವಚನ:ಅರ್ಥ:ಎಂದು ಬಲರಾಮನ ಮನಸ್ಸಿನ ಕೋಪವೆಂಬ ಬೆಂಕಿಯನ್ನು ತನ್ನ ಸವಿ ಮಾತಿನ ಜಾಣ ಜೋಡಣೆಯ ನೀರಿನಿಂದ ಸಿಂಪಿಸಿ ನಂದಿಸಿದನು. ಈ ಕಡೆ ವಿಕ್ರಮಾರ್ಜುನನು ಕೆಲವು ದಿವಸಗಳಲ್ಲಿ ಅನೇಕ ಮಾವಿನ ಮತ್ತು ಅಶೋಕಮರಗಳುಳ್ಳ ನಂದನವನದಂತಿರುವ ವನಗಳಿಂದ ಕೂಡಿದ

ಇಂದ್ರಪ್ರಸ್ಥ ಪುರವನ್ನು ಸೇರಿದನು. ಮೊದಲೇ ತಾನು ಬರುವುದನ್ನು ತಿಳಿದು ಪಟ್ಟಣವನ್ನು ಎಂಟು ವಿಧವಾದ ಅಲಂಕಾರಗಳಿಂದ ಅಲಂಕರಿಸಿತ್ತು. ತನಗೆ ತನ್ನ ಸ್ವಾಗತ್ಕೆ ಬಂದ ಕುಂತೀದೇವಿ, ಧರ್ಮರಾಜ, ಭೀಮಸೇನನೇ ಮೊದಲಾದವರ ಪಾದಕಮಲಗಳನ್ನು ತನ್ನ ಕಮಲಹಸ್ತಗಳಿಂದ

ಪೂಜೆಮಾಡಿ ಅವರಿಂದ ಆಶೀರ್ವಾದಗಳನ್ನು ಪಡೆದನು. ತನಗೆ ನಮಸ್ಕಾರ ಮಾಡಿದ ನಕುಲ ಸಹದೇವರನ್ನು ಹರಸಿ ಪುನ ಪುನ ಆಲಿಂಗನಮಾಡಿಕೊಂಡು ಪುನ ಪುನ ನೋಡುತ್ತ ದೇವೇಂದ್ರ ವೈಭವದಿಂದ ಪಟ್ಟಣವನ್ನು ಪ್ರವೇಶಿಸಿದನು.-

ಕಂ|| ಪರಸುವ

ಪುರಜನದೊದವಿದ

ಪರಕೆಗಳಂಬುಧಿನಿನಾದಮಂ

ಮಿಗೆ ತಮ್ಮ|

ಯ್ವುರುಮೊಡನೆ ಮೆರೆದು

ಪರಮಾ

ನುರಾಗದಿಂ ಬಂದು

ಪೊಕ್ಕರಂದರಮನೆಯಂ|| ೨೩

||

ಪದ್ಯ-00:ಪದವಿಭಾಗ-

ಅರ್ಥ:ಪರಸುವ ಪುರಜನದ

ಒದವಿದ ಪರಕೆಗಳ
ಅಂಬುಧಿನಿನಾದಮಂ ಮಿಗೆ
(ಹರಕೆಗಳು
ಸಮುದ್ರಘೋಷವನ್ನು
ಮೀರಿರಲು) ತಮ್ಮ
ಅಯ್ವರುಮೊಡನೆ ಮೆರೆದು
(ಐದು ಜನರೂ ಅತ್ಯಂತ
ಸಂತೋಷದಿಂದ)
ಪರಮಾನುರಾಗದಿಂ ಬಂದು
ಪೊಕ್ಕರು (ಹೊಕ್ಕರು) ಅಂದು
ಅರಮನೆಯಂ

ಪದ್ಯ-00:ಅರ್ಥ: ಆಗ ಪಟ್ಟಣದ ಜನರು ಹರಸಿದ ಹರಕೆಗಳು ಸಮುದ್ರಘೋಷವನ್ನು ಮೀರಿರಲು ತಾವ ಐದು ಜನರೂ ಅತ್ಯಂತ ಸಂತೋಷದಿಂದ ಅರಮನೆಯನ್ನು ಪ್ರವೇಶಿಸಿದರು.

ವ|| ಅಂತು ರಾಜಮಂದಿರಮಂ ಪೊಕ್ಕು ಧರ್ಮಪುತ್ರನನಗಲ್ದ

ಪನ್ನೆರಡು ಮಾಸದೊಳಾದ ದಿಗ್ವಿಜಯ ಪ್ರಪಂಚಮುಮಂ ಸುಭದ್ರಾಹರಣಮುಮಂ ಪುರುಷೋತ್ತಮನ ಪರಮ ಮಿತ್ರತ್ವಮುಮನಱಿದು ಸಂತಸಂಬಟ್ಟು ತಮ್ಮನಿಬರುಮೇಕಸ್ಥರಾಗಿ-

ವಚನ:ಪದವಿಭಾಗ-

ಅರ್ಥ:ಅಂತು ರಾಜಮಂದಿರಮಂ ಪೊಕ್ಕು (ಅರಮನೆಯನ್ನು ಪ್ರವೇಶಿಸಿ)

ಧರ್ಮಪುತ್ರನನಗಲ್ದ ಪನ್ನೆರಡು ಮಾಸದೊಳು ಆದ ದಿಗ್ವಿಜಯ ಪ್ರಪಂಚಮುಮಂ (ಸಮಾಚಾರವನ್ನು) ಸುಭದ್ರಾಹರಣಮುಮಂ ಪುರುಷೋತ್ತಮನ ಪರಮ ಮಿತ್ರತ್ವಮುಮನು ಅಱಿದು ಸಂತಸಂಬಟ್ಟು ತಮ್ಮ ಅನಿಬರುಂ ಏಕಸ್ಥರಾಗಿ-

ವಚನ:ಅರ್ಥ:|| ಹಾಗೆ ಅರಮನೆಯನ್ನು ಪ್ರವೇಶಿಸಿ

ಧರ್ಮರಾಜನನ್ನು
ಅಗಲಿಹೋದ ಹನ್ನೆರಡು
ತಿಂಗಳುಗಳಲ್ಲಿ ನಡೆದ
ದಿಗ್ವಿಜಯದ ವಿಷಯವನ್ನೂ
ಸುಭದ್ರಾಪಹರಣವನ್ನೂ
ಎಲ್ಲರೂ ಕೇಳಿದರು.
ಪುರುಷೋತ್ತಮನಾದ
ಶ್ರೀಕೃಷ್ಣನ ಉತ್ತಮ
ಸ್ನೇಹಸ್ವಭಾವವನ್ನು ತಿಳಿದು
ಸಂತೋಷಪಟ್ಟರು. ತಾವೈದು
ಜನವೂ ಒಮ್ಮನಸ್ಸಿನಿಂದ.

ಮ|| ಎರೆದಿಂತಟ್ಟಲೇವೇೞ್ಪ
ಕನ್ನೆ ಬೞಿಯಂ ಬಂದಳ್
ಮರುಳ್ದಂಬುಜೋ
ದರನಿಂತಟ್ಟಿದನಿಂತು
ನೋಂತರೊಳರೇ ಸೈಪಿಂಗೆ
ನಾಮಿನ್ನಿಳಾ|
ಧರನುಂ ಯಾದವ
ವಂಶಜರ್ವೆರಸು ಬರ್ಪಂತಟ್ಟಿ
ಮಾೞ್ಪಂ ಮನೋ
ಹರಮಪ್ಪಂತು
ವಿವಾಹಮಂಗಳಮನೆಂದಂದ

ಟ್ಟಿದರ್ ದೂತರಂ|| ೨೪ ||

ಪದ್ಯ-00:ಪದವಿಭಾಗ-

ಅರ್ಥ:ಎರೆದು (ನಮಗೆ ದಾನವಾಗಿ ಕೊಡಿ ಎಂದು ಬೇಡಿಕೊಂಡು) ಇಂತು ಅಟ್ಟಲೇವೇಟ್ಟಿ (ಎಂದು ದೂತರನ್ನು ಕಳಿಸಬೇಕು) ಕನ್ನೆ ಬಟಿಯಂ ಬಂದಳ್ ಮರುಳ್ದು (ಕನ್ಯೆಯು ತಾನಾಗಿಯೇ ಜೊತೆಯಲ್ಲಿಯೇ ಬಂದಿದ್ದಾಳೆ ಮರುಳ್ದು- ಮೋಹಿಸಿ)

ಅಂಬುಜೋದರನು ಇಂತು
ಅಟ್ಟಿದನು (ಕೃಷ್ಣನೇ ಹೀಗೆ
ಕಳುಹಿಸಿಕೊಟ್ಟಿದ್ದಾನೆ) ಇಂತು
ನೋಂತರೊಳರೇ ಸೈಪಿಂಗೆ-
ಪುಣ್ಯಕ್ಕೆ (ಪುಣ್ಯಕ್ಕೆ ಇಂತಹ
ಅದೃಷ್ಟಶಾಲಿಗಳಾದವರು
(ವ್ರತ ಮಾಡಿರುವವರು) ಬೇರೆ
ಯಾರಿದ್ದಾರೆ), ನಾಮಿನ್ನು
ಇಳಾಧರನುಂ ಯಾದವ
ವಂಶಜರ್ವೆರಸು ಬರ್ಪಂತೆ
ಅಟ್ಟೆ (ನಾವು ಇನ್ನು

ಯಾದವರೊಡಗೂಡಿ ಕೃಷ್ಣನು ಬರುವ ಹಾಗೆ ದೂತರನ್ನು ಕಳುಹಿಸಿ) ಮಾಳ್ಪಿಂ ಮನೋಹರಂ ಅಪ್ಪಂತು ವಿವಾಹಮಂಗಳಮನು ಎಂದು (ಮನೋಹರವಾಗಿರುವ ರೀತಿಯಲ್ಲಿ ಮದುವೆಯ ಮಂಗಳವನ್ನು ಮಾಡೋಣ ಎಂದು) ಅಟ್ಟಿದರ್ ದೂತರಂ

ಪದ್ಯ-00:ಅರ್ಥ: ನಮಗೆ ದಾನವಾಗಿ ಕೊಡಿ ಎಂದು

ದೂತರನ್ನು ಕಳಿಸಬೇಕು; ಈ ಮೂಲಕ ಬೇಡಿ ಪಡೆಯಬೇಕಾದ ಕನ್ಯೆಯು ತಾನಾಗಿಯೇ ಜೊತೆಯಲ್ಲಿಯೇ ಬಂದಿದ್ದಾಳೆ. ಕೃಷ್ಣನೇ ಹೀಗೆ ಕಳುಹಿಸಿಕೊಟ್ಟಿದ್ದಾನೆ. ಇಂತಹ ಅದೃಷ್ಟಶಾಲಿಗಳಾದವರು (ವ್ರತ ಮಾಡಿರುವವರು) ಬೇರೆ ಯಾರಿದ್ದಾರೆ. ನಾವು ಇನ್ನು ಯಾದವರೊಡಗೂಡಿ ಕೃಷ್ಣನು

ಬರುವ ಹಾಗೆ ದೂತರನ್ನು
ಕಳುಹಿಸಿ
ಮನೋಹರವಾಗಿರುವ
ರೀತಿಯಲ್ಲಿ ಮದುವೆಯ
ಮಂಗಳವನ್ನು ಮಾಡೋಣ
ಎಂದು ದೂತರನ್ನು ಅಟ್ಟಿದರು.

ವ|| ಅಟ್ಟಿದೊಡವರ್ ಪೋಗಿ ಬಲದೇವನುಮಂ ವಾಸುದೇವನುಮಂ ಕಂಡು ತಮ್ಮ ಬಂದ ಕಜ್ಜಮನೊಡಂಬಡಿಸಿ

ಯಾದವರ್ವೆರಸು ಮುಂದಿಟ್ಟೊಡಗೊಂಡು ಬರೆ ಬರವನಱಿದು ಪಾಂಡವರಯ್ವರುಮಿದಿರ್ವೋಗಿ ಯಥೋಚಿತ ಪ್ರತಿಪತ್ತಿಗಳಿಂ ಕಂಡು ಪೊೞಲ್ಗೊಡಗೊಂಡು ಬಂದು ಶುಭದಿನ ನಕ್ಷತ್ರ ಯೋಗಕರಣಂಗಳಂ ನಿಟ್ಟಿಸಿ-

ವಚನ:ಪದವಿಭಾಗ-

ಅರ್ಥ:ಅಟ್ಟಿದೊಡೆ ಅವರ್ ಪೋಗಿ ಬಲದೇವನುಮಂ

ವಾಸುದೇವನುಮಂ ಕಂಡು
ತಮ್ಮ ಬಂದ ಕಜ್ಜಮನು
ಒಡಂಬಡಿಸಿ (ತಾವು ಬಂದ
ಕಾರ್ಯಕ್ಕೆ ಅವರು ಒಪ್ಪುವ
ಹಾಗೆ ಮಾಡಿ) ಯಾದವರ್
ವೆರಸು (ಸೇರಿ ಅವರನ್ನು)
ಮುಂದಿಟ್ಟೊಡಗೊಂಡು ಬರೆ
(ಬರಲು) ಬರವನಱಿದು
ಪಾಂಡವರಯ್ವರುಂ
ಇದಿರ್ವೋಗಿ (ಅವರಿಗಿದಿರಾಗಿ
ಹೋಗಿ ಸ್ವಾಗತಿಸಿ)

ಯಥೋಚಿತ (ಯಥ ಉಚಿತ-ಯೋಗ್ಯವಾದ) ಪ್ರತಿಪತ್ತಿಗಳಿಂ (ಸತ್ಕಾರಗಳಿಂದ) ಕಂಡು ಪೊೞಲ್ಗೆ ಒಡಗೊಂಡು (ಪಟ್ಟಣಕ್ಕೆ ಜೊತೆಯಲ್ಲಿ ಕರೆದುಕೊಂಡು) ಬಂದು ಶುಭದಿನ ನಕ್ಷತ್ರ ಯೋಗಕರಣಂಗಳಂ ನಿಟ್ಟಿಸಿ-

ವಚನ:ಅರ್ಥ:ಅವರು ಹೋಗಿ ಬಲರಾಮನನ್ನೂ ವಾಸುದೇವನನ್ನೂ ಕಂಡು

ತಾವು ಬಂದ ಕಾರ್ಯಕ್ಕೆ
ಅವರು ಒಪ್ಪುವ ಹಾಗೆ ಮಾಡಿ
ಯಾದವರೊಡಗೂಡಿ
ಅವರನ್ನೇ
ಮುಂದುಮಾಡಿಕೊಂಡು
ಬಂದರು. ಅವರು
ಬರುವುದನ್ನು ತಿಳಿದು
ಪಾಂಡವರೈದು ಮಂದಿಯೂ
ಅವರಿಗಿದಿರಾಗಿ ಹೋಗಿ
ಸ್ವಾಗತಿಸಿ ಸೂಕ್ತವಾದ
ಸತ್ಕಾರಗಳಿಂದ ಕಂಡು

ಪಟ್ಟಣಕ್ಕೆ ಜೊತೆಯಲ್ಲಿ ಕರೆದುಕೊಂಡು ಬಂದರು. ಶುಭಕರವಾದ ದಿನ, ನಕ್ಷತ್ರಯೋಗ ಕರಣಗಳನ್ನು ನೋಡಿ-

<u>ಅರ್ಜುನ ಸುಭದ್ರೆಯರ ವಿವಾಹ</u>

ಮ|| ಪಸುರ್ವಂದರ್ ಪಸೆ (ಪರೆ?) ವೇದಪಾರಗರವಂ ಕಣ್ಬೇಟದುದ್ದಾನಿಯಂ

ಪಸರಂ ಗೆಯ್ದವೊಲಪ್ಪ

ಪೊಚ್ಚಳಿ ಮಹಾ ಸಾಮಂತ

ಸೀಮಂತಿನೀ|

ಪ್ರಸರಂ ಮಂಗಳ

ತೂರ್ಯನಾದಮೆಸೆಯುತ್ತಿರ್ಪ

ನ್ನೆಗಂ ಚಕ್ರಿ ರಾ

ಗಿಸಿ ಕೆಯ್ಕೊಂರೆರೆದಂ

ಗುಣಾರ್ಣವ

ಮಹೀಪಾಲಂಗಮಾ

ಕನ್ನೆಯಂ|| ೨೫||

ಪದ್ಯ-೨೫:ಪದವಿಭಾಗ-ಅರ್ಥ: ಪಸುರ್ವಂದರ್ (ಹಸಿರುವಾಣಿಯ ಚಪ್ಪರ) ಪಸೆ(ಹಸೆಮಣೆ) ವೇದಪಾರಗರವಂ (ಪಂಡಿತರ ವೇದಘೋಷ) ಕಣ್ಬೇಟದ ಉದ್ದಾನಿಯಂ ಪಸರಂ ಗೆಯ್ದವೊಲಪ್ಪ ಪೊಚ್ಚಳಿ ಮಹಾ ಸಾಮಂತ ಸೀಮಂತಿನೀ ಪ್ರಸರಂ(ಕಣ್ಣಿಗೆ ಪ್ರೀತಿಯನ್ನುಂಟುಮಾಡುವ

ಸಾಮಂತರ,
ಸುಮಂಗಲೀಸ್ತ್ರೀಯರ
ಸಮೂಹವು) ಮಂಗಳ
ತೂರ್ಯನಾದಂ
ಎಸೆಯುತ್ತಿರ್ಪನ್ನೆಗಂ
(ಮಂಗಳವಾದ್ಯ ಧ್ವನಿ
ಘೋಷಿಸುತ್ತಿರಲು) ಚಕ್ರಿ
ರಾಗಿಸಿ (ಶ್ರೀಕೃಷ್ಣನು
ಪ್ರೀತಿಯಿಂದ) ಕೆಯ್ನೀರೆರೆದಂ
ಗುಣಾರ್ಣವ
ಮಹೀಪಾಲಂಗಂ ಆ

ಕನ್ನೆಯಂ(ಅರ್ಜುನನಿಗೆ)
ಕನ್ಯೆಯಾದ ಸುಭದ್ರೆಯನ್ನು
ಧಾರಾಪೂರ್ವಕ
ದಾನಮಾಡಿಕೊಟ್ಟನು)-
ವೀರಕೇರಿಗೆ ಅನ್ವಯಿಸಿ
ಗುಣಾರ್ಣವ ಮಹೀಪಾಲಂಗೆ
ಎಂದು ಹೇಳಿದೆ
ಪದ್ಯ-೨೫:ಅರ್ಥ:ಹಸಿರುವಾ
ಣಿಯ ಚಪ್ಪರ, ಹಸೆಮಣೆ,
ಪಂಡಿತರ ವೇದಘೋಷ ಇವು
ಕಣ್ಣಿಗೆ

ಪ್ರೀತಿಯನ್ನುಂಟುಮಾಡುವ
ಅಂಗಡಿಯ ಸಾಲಿನ ಹಾಗೆ
ಶೂರರ, ಮಹಾ ಸಾಮಂತರ,
ಸುಮಂಗಲೀಸ್ತ್ರೀಯರ
ಸಮೂಹವು ಒಳಗೊಂಡಿರಲು
ಮಂಗಳವಾದ್ಯ ಧ್ವನಿ
ಘೋಷಿಸುತ್ತಿರಲು ಶ್ರೀಕೃಷ್ಣನು
ಪ್ರೀತಿಯಿಂದ ತನ್ನಕೈಯಲ್ಲಿ
ನೀರುಬಿಟ್ಟು ಧಾರಾಪೂರ್ವಕ
ಅರ್ಜುನನಿಗೆ ಕನ್ಯೆಯಾದ

ಸುಭದ್ರೆಯನ್ನು

ದಾನಮಾಡಿಕೊಟ್ಟನು.

ವ|| ಅಂತವರಿರ್ವರ ಬೇಟಮೆಂಬ ಲತೆಯ ಬೆಳಸಿಂಗೆ ಪೊಯ್ಷಾರೆರೆವಂತೆ ಕೆರೆದು ಬಿಯಮಂ ಮೆರೆದು-

ವಚನ:ಪದವಿಭಾಗ-

ಅರ್ಥ:ಅಂತು ಅವರ್ ಇರ್ವರ ಬೇಟಮೆಂಬ (ಪ್ರೇಮದ) ಲತೆಯ ಬೆಳಸಿಂಗೆ ಪೊಯ್ಷಾರೆರೆವಂತೆ (ಹೊಯ್

ನೀರೆರೆಯುವಂತೆ) ಕೆರೆದು ಬಿಯಮಂ ಮೆರೆದು (ಯಥೇಚ್ಛವಾಗಿ ದ್ರವ್ಯವನ್ನು ದಾನಮಾಡಿದನು)-

ವಚನ:ಅರ್ಥ:ಹಾಗೆ ಅವರಿಬ್ಬರ ಪ್ರೇಮವೆಂಬ ಬಳ್ಳಿಗೆ ಹೊಯ್ ನೀರೆರೆಯುವಂತೆ ಧಾರಾಜಲವನ್ನು ಕೊಟ್ಟು ಯಥೇಚ್ಛವಾಗಿ ದ್ರವ್ಯವನ್ನು ದಾನಮಾಡಿದನು

ಪಿರಿಯಕ್ಕರಂ|| ತೊಟ್ಟ
ತುಡುಗೆಗಳ್
ಕೌಸ್ತುಭರತ್ನಮನೋರೆಂದೆ
ಮಸುಳಿಸೆ ಪಾಲ್ಗಡಲೊಳ್
ಪುಟ್ಟಿದಾನೆಯನಾನೆಗಳ್
ಗೆಲೆವರೆ ಕುದುರೆಗಳ್
ಕುದುರೆಯಂ ಕೀೞ್ಮಾಡೆ|
ತೊಟ್ಟ ಮದನನ
ಪೂಗಣೆಗೆಣೆಯಾಗೆ
ಗಣಿಕೆಯರ್ ಗಣಿದಮಂ
ಬಗೆಯದಿಂತು

ಕೊಟ್ಟಂ ತಂಗೆಗೆ ಬೞಿವೞಿಯೆಂದಿಂತು ಸರ್ವಸ್ವಮೆಲ್ಲಮಂ ಪುರುಷೋತ್ತಮಂ|| ೨೬

ಪದ್ಯ-೨೬:ಪದವಿಭಾಗ-ಅರ್ಥ:ಕೃಷ್ಣನು ಕೊಟ್ಟ ಉಡುಗೊರೆಗಳು :ತೊಟ್ಟ ತುಡುಗೆಗಳ್ ಕೌಸ್ತುಭರತ್ನಮನು ಓರೆಂದೆ ಮಸುಳಿಸೆ (ಕೌಸ್ತುಭರತ್ನವನ್ನು ಕಾಂತಿಹೀನವನ್ನಾಗಿ ಮಾಡುವ

ಅನೇಕ ಆಭರಣಗಳು,)
ಪಾಲ್ಗಡಲೊಳ್ಪುಟ್ಟಿದ
ಆನೆಯನು ಅನೆಗಳ್ ಗೆಲೆವರೆ
(ಐರಾವತವನ್ನೂ ಮೀರಿಸುವ
ಆನೆಗಳನ್ನೂ) ಕುದುರೆಗಳ್
ಕುದುರೆಯಂ
(ಉಚ್ಚೈಶ್ರವಸ್ಸನ್ನು ಮೀರಿಸುವ
ಕುದುರೆಗಳನ್ನೂ)
ಕೀೞ್ಮಾಡೆತೊಟ್ಟ ಮದನನ
ಪೂಗಣೆಗೆಣೆಯಾಗೆ
ಗಣಿಕೆಯರ್ (ವೇಶ್ಯೆಯರು)

ಗಣಿದಮಂ (ಗಣನೆಗೆ ಮೀರಿದ) ಬಗೆಯದೆ ಇಂತು ಕೊಟ್ಟಂ ತಂಗೆಗೆ ಬೞಿವೞಿಯ (ಬಳುವಳಿಯನ್ನು)ಎಂದಿಂತು ಸರ್ವಸ್ವಂ ಎಲ್ಲಮಂ ಪುರುಷೋತ್ತಮಂ(ಕೃಷ್ಣನು)|

ಪದ್ಯ-೨೬:ಅರ್ಥ:ವಿಷ್ಣುವಿನ ಹೃದಯದಲ್ಲಿರುವ ಕೌಸ್ತುಭರತ್ನವನ್ನೂ ಕಾಂತಿಹೀನವನ್ನಾಗಿ ಮಾಡುವ

ಅನೇಕ ಆಭರಣಗಳನ್ನೂ ಐರಾವತವನ್ನೂ ಕೀಳ್ಮಾಡುವ ಆನೆಗಳನ್ನೂ ಉಚ್ಚೈಶ್ರವಸ್ಸನ್ನು ತಿರಸ್ಕರಿಸುವ ಕುದುರೆಗಳನ್ನೂ ಮನ್ಮಥನ ಪುಷ್ಪಬಾಣಗಳಂತಿರುವ ವೇಶ್ಯಾಸ್ತ್ರೀಯರನ್ನೂ ಅಸಂಖ್ಯಾತವಾಗಿ ಕೃಷ್ಣನು ತಂಗಿಗೆ ಬಳುವಳಿಯಾಗಿ ಕೊಟ್ಟನು.

ವ|| ಅಂತು

ಬೞಿವೞಿಗೊಟ್ಟಿಂಬೞಿಯಂ

ಧರ್ಮಪುತ್ರಂ

ಬಲದೇವನನೆನಿತಾನುಮುಚಿತ

ಪ್ರತಿಪತ್ತಿಗಳಿಂ ಸಂತಸಂಬಡಿಸಿ

ದ್ವಾರಾವತಿಗೆ ಕೞಿಪಿದನಾ

ವಿವಾಹೋತ್ಸವಾನಂತರದೊ

ಳ್-

ವಚನ:ಪದವಿಭಾಗ-

ಅರ್ಥ:ಅಂತು

ಬೞಿವೞಿಗೊಟ್ಟ

ಇಂಬಟ್ಟಿಯಂ (ಬಳುವಳಿ ಕೊಟ್ಟ ಬಳಿಕ) ಧರ್ಮಪುತ್ರಂ ಬಲದೇವನನು ಎನಿತಾನುಮುಚಿತ ಪ್ರತಿಪತ್ತಿಗಳಿಂ (ಸತ್ಕಾರಗಳಿಂದ) ಸಂತಸಂಬಡಿಸಿ ದ್ವಾರಾವತಿಗೆ ಕಟ್ಟಿಪಿದನು ಆ ವಿವಾಹೋತ್ಸವ ಆನಂತರದೊಳ್-

ವಚನ:ಅರ್ಥ:ಹಾಗೆ ಬಳುವಳಿ ಕೊಟ್ಟ ಬಳಿಕ ಧರ್ಮರಾಜನು ಬಲರಾಮನನ್ನು ಅನೇಕ ಉಚಿತ ಸತ್ಕಾರಗಳಿಂದ ಸಂತೋಷಪಡಿಸಿ ದ್ವಾರಕಾಪಟ್ಟಣಕ್ಕೆ ಕಳುಹಿಸಿಕೊಟ್ಟನು. ಆ ಮದುವೆಯ ಮಹೋತ್ಸವವಾದ ಮೇಲೆ

ಚಂ|| ತಳಿರ್ಗಳ ಪಾಸಿನೊಳ್
ಪೊರಳುತಿರ್ದಱಿಲಂ ಕಿಡೆ
ಸೋಂಕೆ ಸೋಂಕುಗಳ್
ಕಳೆದುವು ಮೆಯ್ಯ ಸುಯ್ಯ
ಪದವೆಂಕೆಗಳಂ
ಬಿಗಿಯಪ್ಪಿದಪ್ಪುಗಳ್|
ಕಳೆದುವು ನಾಣುಮಂ ಕಿಱಿದು
ಜಾಣುಮನಲ್ಕಿಱಿನೀವ
ಚುಂಬನಂ
ಕಳೆದುವು ಗರ್ವಮಂ
ಕಳೆದುವಂತವರಿರ್ವರ

ಮನ್ಮಥದ್ರವಂ|| ೨೭ ||

ಪದ್ಯ-೨೭:ಪದವಿಭಾಗ-

ಅರ್ಥ:ತಳಿರ್ಗಳ ಪಾಸಿನೊಳ್ ಪೊರಳುತಿರ್ದ ಅೞಲಂ (ಚಿಗುರಿನ ಹಾಸಿಗೆಯಲ್ಲಿ ಹೊರಳುತ್ತಿದ್ದ ದುಃಖವನ್ನು) ಕಿಡೆ ಸೋಂಕೆ ಸೋಂಕುಗಳ್ ಕಳೆದುವು (ಅವರ ಪರಸ್ಪರ ಸ್ಪರ್ಶಗಳು ಕಳೆದುವು), ಮೆಯ್ಯ ಸುಯ್ಯ ಪದವೆಂಕೆಗಳಂ (ಹದವಾದ

ಉರಿಗಳು)
ಬಿಗಿಯಪ್ಪಿದಪ್ಪುಗಳ್
ಕಳೆದುವು (ದೇಹದ ಉಸುರಿನ
ಬೆಂಕಿಯನ್ನು ಅವರ
ಬಿಗಿಯಾಗಿ ಅಪ್ಪಿದ
ಆಲಿಂಗನಗಳು ಕಳೆದುವು)
ನಾಣುಮಂ, ಕಿಱಿದು
ಜಾಣುಮನು ಅಱ್ಕೞಿನು
(ಪ್ರೀತಿಯಿಂದ) ಈವ
ಚುಂಬನಂ ಕಳೆದುವು
(ಲಜ್ಜೆಯನ್ನೂ ಜಾಣ್ಮೆಯನ್ನೂ

ಅವರ ಪರಸ್ಪರ ಪ್ರೀತಿಯಿಂದ ಕೊಡುತ್ತಿರುವ ಮುತ್ತುಗಳು ಹೋಗಲಾಡಿಸಿದುವು) ಗರ್ವಮಂ ಕಳೆದುವಂತು ಅವರಿರ್ವರ ಮನ್ಮಥದ್ರವಂ (ಅವರಿಬ್ಬರ ಮದನೋದಕವು ಅವರ ಹೆಮ್ಮೆಯನ್ನು ಕಳೆದವು)

ಪದ್ಯ-೨೭:ಅರ್ಥ:ಅರ್ಜುನ ಸುಭದ್ರೆಯರು, ಚಿಗುರಿನ ಹಾಸಿಗೆಯಲ್ಲಿ ಹೊರಳುತ್ತಿದ್ದ

ದುಃಖವನ್ನು ಅವರ ಪರಸ್ಪರ ಸ್ಪರ್ಶಗಳು ಕಳೆದುವು; ದೇಹದ ಉಸುರಿನ ಬೆಂಕಿಯನ್ನು ಅವರ ಬಿಗಿಯಾಗಿ ಅಪ್ಪಿದ ಆಲಿಂಗನಗಳು ಕಳೆದುವು. ಲಜ್ಜೆಯನ್ನೂ ಜಾಣ್ಮೆಯನ್ನೂ ಅವರ ಪರಸ್ಪರ ಪ್ರೀತಿಯಿಂದ ಕೊಡುತ್ತಿರುವ ಮುತ್ತುಗಳು ಹೋಗಲಾಡಿಸಿದುವು. ಅವರಿಬ್ಬರ ಮದನೋದಕವು ಅವರ ಹೆಮ್ಮೆಯನ್ನು ಕಳೆದವು.

ಮಾಲಿನಿ|| ಅಭಿನವ

ಮದಲೇಖಾ ಲಾಲಿತಂ

ವಿಭ್ರಮ ಭ್ರೂ

ರಭಸ ಗತಿವಿಳಾಸಂ ದೀಪ್ತ

ಕಂದರ್ಪ ದರ್ಪ||

ಕ್ಷುಭಿತ ಗಳನಿನಾದಂ

ಪ್ರಸುರದ್ಘರ್ಮವಾರಿ

ಪ್ರಭವಮೆಸೆದುದಂತಾ

ಕಾಂತೆಗಾ ಕಾಂತಸಂಗಂ|| ೨೮||

ಪದ್ಯ-೨೮:ಪದವಿಭಾಗ-

ಅರ್ಥ:ಅಭಿನವ ಮದಲೇಖಾ

ಲಾಲಿತಂ (ಹೊಸ
ಕಸ್ತೂರಿಯಿಂದ ಬರೆದ
ಮದಲೇಖೆಯಿಂದ
ಪೋಶಿಸಲ್ಪಟ್ಟ) ವಿಭ್ರಮ
ಭ್ರೂರಭಸ ಗತಿವಿಳಾಸಂ
(ಸುಂದರವಾದ ಹುಬ್ಬಿನ
ವೇಗವಾದ ವಿಲಾಸವನ್ನುಳ್ಳ)
ದೀಪ್ತ ಕಂದರ್ಪ ದರ್ಪಕ್ಷುಭಿತ
ಗಳನಿನಾದಂ (ಹೆಚ್ಚಾದ
ಕಾಮಗರ್ವದಿಂದ ಕೆರಳಿದ
ಕೊರಳಿನ ಶಬ್ದವನ್ನುಳ್ಳ)

ಪ್ರಸುರತ್ ಘರ್ಮವಾರಿ ಪ್ರಭವಂ(ಪ್ರಕಾಶಿತ ಬೆವರುಗಳನ್ನು ಹುಟ್ಟಿಸುವ) ಸೆದುದಂತು ಆ ಕಾಂತೆಗ ಆ ಕಾಂತಸಂಗಂ (ಆ ಪ್ರಿಯನ ಸಮಾಗಮವು ಆ ಸುಭದ್ರೆಗೆ ಸಂತೋಷವನ್ನುಟುಮಾಡಿತು) |

ಪದ್ಯ-೨೮:ಅರ್ಥ:ಹೊಸ ಮದಲೇಖೆಯಿಂದ ಪೋಶಿಸಲ್ಪಟ್ಟ, ಸುಂದರವಾದ

ಹುಬ್ಬಿನ ವೇಗವಾದ
ವಿಲಾಸವನ್ನುಳ್ಳ ಹೆಚ್ಚಾದ
ಕಾಮಗರ್ವದಿಂದ ಕೆರಳಿದ
ಕೊರಳಿನ ಶಬ್ದವನ್ನುಳ್ಳ
ಪ್ರಕಾಶಿತ ಬೆವರುಗಳನ್ನು
ಹುಟ್ಟಿಸುವ ಆ ಪ್ರಿಯನ
ಸಮಾಗಮವು ಆ ಸುಭದ್ರೆಗೆ
ಸಂತೋಷವನ್ನುಟುಮಾಡಿತು

ವ|| ಅಂತು ಕಾಮದೇವನುಂ ರತಿಯುಂ ವಸಿಷ್ಠನುಮರುಂಧತಿಯುಮೀ

ಶ್ವರನುಂ ಪಾರ್ವತಿಯುಮೆನಿಸಿ ಸಮರೂಪ ಸಮಸತ್ವ ಸಮರತಂಗಳೊಳೆ ಸಮಾನುರಾಗಮುಂ ಪಡೆಯೆ ಸುಖಮಿರ್ಪನ್ನೆಗಂ ಸುಭದ್ರೆಗೆ ಗರ್ಭಚಿಹ್ನಂಗಳ್ ತೋರೆ-

ವಚನ:ಪದವಿಭಾಗ-

ಅರ್ಥ:ಅಂತು ಕಾಮದೇವನುಂ ರತಿಯುಂ ವಸಿಷ್ಠನುಂ ಅರುಂಧತಿಯುಂ ಈಶ್ವರನುಂ ಪಾರ್ವತಿಯುಂ

ಎನಿಸಿ ಸಮರೂಪ ಸಮಸತ್ತ್ವ ಸಮರತಂಗಳೊಳೆ (ಸಮಾನ ರೂಪ, ಸಮಾನ ಶಕ್ತಿ, ಸಮಾನ ಸುರತಕ್ರೀಡೆಗಳಲ್ಲಿ) ಸಮ ಅನುರಾಗಮಂ ಪಡೆಯೆ (ಸಮಾನ ಪ್ರೀತಿಯನ್ನು ಪಡೆಯಲು) ಸುಖಮಿರ್ಪನ್ನೆಗಂ ಸುಭದ್ರೆಗೆ ಗರ್ಭಚಿಹ್ನಂಗಳ್ ತೋರೆ(ಸುಭದ್ರೆಗೆ ಗರ್ಭ ಚಿಹ್ನೆಗಳು ತೋರಿತು.)-

ವಚನ:ಅರ್ಥ:ಮನ್ಮಥನೂ ರತಿಯೂ, ವಸಿಷ್ಠನೂ ಅರುಂಧತಿಯೂ ಈಶ್ವರನೂ ಪಾರ್ವತಿಯೂ ಎನ್ನಿಸಿ ಸಮಾನ ರೂಪ, ಸಮಾನ ಶಕ್ತಿ, ಸಮಾನ ಸುರತಕ್ರೀಡೆಗಳಲ್ಲಿ ಸಮಾನ ಪ್ರೀತಿಯನ್ನು ಪಡೆಯಲು, ಹೀಗೆ ಸುಖವಾಗಿರಲು ಸುಭದ್ರೆಗೆ ಗರ್ಭ ಚಿಹ್ನೆಗಳು ತೋರಿತು.

ಕಂ|| ಒಟ್ಟಜೆಯಿಂ
ಭಾರತದೊಳ್
ಕಟ್ಟಾಳ್ಗಳನಿಱಿದು ತವಿಸಲಾ
ಜೆಟ್ಟಿಗರಂ|
ಪುಟ್ಟಿದನೆಂಬವೊಲದಟಂ
ಪುಟ್ಟಿದನಭಿಮನ್ಯು ಕಲಿತನಂ
ಪುಟ್ಟುವವೋೞ್|| ೨೯ ||

ಪದ್ಯ-೨೯:ಪದವಿಭಾಗ-ಅರ್ಥ:ಒಟ್ಟಜೆಯಿಂ (ಪರಾಕ್ರಮದಿಂದ) ಭಾರತದೊಳ್ ಕಟ್ಟಾಳ್ಗಳನು

ಇಱಿದು ತವಿಸಲು ಆ
ಜೆಟ್ಟಿಗರಂ (ಭಾರತ
ಯುದ್ಧದಲ್ಲಿ ಅತ್ಯಂತ
ಶೂರರಾದ ವೀರನನ್ನು
ಹೊಡೆದು ನಾಶಪಡಿಸಲು)
ಪುಟ್ಟಿದನೆಂಬವೊಲ್(ಹುಟ್ಟಿದ
ನೆಂಬ ಹಾಗೆ) ಅದಟಂ
ಪುಟ್ಟಿದನ್ ಅಭಿಮನ್ಯು
ಕಲಿತನಂ
ಪುಟ್ಟುವವೋಲ್(ಪರಾಕ್ರಮಿ
ಯಾದ ಅಭಿಮನ್ಯುವು

ಪರಾಕ್ರಮವೇ ಮೂರ್ತಿವತ್ತಾಗಿ ಹುಟ್ಟುವ ಹಾಗೆ ಹುಟ್ಟಿದನು)

ಪದ್ಯ-೨೯:ಅರ್ಥ:

ಪರಾಕ್ರಮದಿಂದ ಭಾರತ ಯುದ್ಧದಲ್ಲಿ ಅತ್ಯಂತ ಶೂರರಾದ ವೀರನನ್ನು ಹೊಡೆದು ನಾಶಪಡಿಸಲು ಹುಟ್ಟಿದನೆಂಬ ಹಾಗೆ ಪರಾಕ್ರಮಿಯಾದ ಅಭಿಮನ್ಯುವು ಪರಾಕ್ರಮವೇ ಮೂರ್ತಿವತ್ತಾಗಿ ಹುಟ್ಟುವ

ಹಾಗೆ ಸುಭದ್ರೆಯಲ್ಲಿ ಹುಟ್ಟಿದನು.

ವ|| ಅಂತಾತಂ ಪುಟ್ಟುವುದುಂ ತಮಗೆ ಸಂತಸಂ ಪುಟ್ಟಿ ಸುಖಮಿರ್ಪನ್ನೆಗಂ-

ವಚನ:ಪದವಿಭಾಗ-

ಅರ್ಥ:ಅಂತು ಆತಂ ಪುಟ್ಟುವುದುಂ(ಹುಟ್ಟಲಾಗಿ) ತಮಗೆ ಸಂತಸಂ ಪುಟ್ಟಿ ಸುಖಂ ಇರ್ಪನ್ನೆಗಂ-

ವಚನ:ಅರ್ಥ:ಆತನು ಹುಟ್ಟಲಾಗಿ ತಮಗೆ ಸಂತೋಷವೂ ಹುಟ್ಟಿ ಸುಖವಾಗಿರುವಷ್ಟರಲ್ಲಿ (ವಸಂತಋತು ಪ್ರಾಪ್ತವಾಯಿತು.)

<u>ವಸಂತಋತು ವರ್ಣನೆ</u>

ಚಂ|| ಅಗರುವ ಮೆಚ್ಚುವಚ್ಚ ಸಿರಿಕಂಡದೊಳಗ್ಗಲಿಸಿತ್ತು ಸೂಡು ಶ

ಯ್ಯಗಳ ಬಿಯಕ್ಕೆ

ಜೊಂಪದಲರ್ವಾಸುಗಳೊಳ್

ನೆಲಸಿತ್ತು ಪೂತ ಗೊ|

ಜ್ಜಗೆಗಳ

ಸಿಂದುರಂಗಳೊಳಗೋಗರಗಂ

ಪನೆ ಬೀಱುತಿರ್ಪ ಮ

ಲ್ಲಿಗೆಯೊಳರಲ್ದ

ಸಂಪಗೆಯೊಳಗ್ಗಲಿಸಿತ್ತು

ಬಸಂತಮಾಸದೊಳ್|| ೩೦||

ಪದ್ಯ-೩೦:ಪದವಿಭಾಗ-

ಅರ್ಥ:ಅಗರುವ

(ಚಳಿಗಾಲದಲ್ಲಿ ಶಾಖಕ್ಕಾಗಿ ಉಪಯೋಗಿಸುತ್ತಿದ್ದ ಅಗರುವಿನಲ್ಲಿದ್ದ) ಮೆಚ್ಚುವ ಅಚ್ಚ ಸಿರಿಕಂಡದೊಳ್ ಅಗ್ಗಲಿಸಿತ್ತು (ಮೆಚ್ಚುವ ಸ್ವಚ್ಛವಾದ ಶ್ರೀಗಂಧದ ಲೇಪನದಲ್ಲಿ ಅತಿಶಯವಾಯಿತು.) ಸೂಡು ಶಯ್ಯೆಗಳ ಬಿಯಕ್ಕೆ (ಬೆಚ್ಚನೆಯ ಹಾಸಿಗೆಯಲ್ಲಿದ್ದ ಬಯಕೆಯು) ಜೊಂಪದ

ಅಲರ್ ವಾ/ಹಾಸುಗಳೊಳ್
ನೆಲಸಿತ್ತು (ಗೊಂಚಲಾಗಿರುವ
ಹೂವಿನ ಹಾಸಿಗೆಯಲ್ಲಿ
ನೆಲೆಸಿತ್ತು) ಪೂತ ಗೊಜ್ಜಗೆಗಳ
ಸಿಂದುರಂಗಳೊಳಗೆ
(ಹೂಬಿಟ್ಟಿದ್ದ ಸೇವಂತಿಗೆ
ಮತ್ತು ಸಿಂಧುವಾರ
ಹೂವುಗಳಲ್ಲಿದ್ದ)
ಓಗರಗಂಪನೆ ಬೀಱುತಿರ್ಪ
(ಮಿಶ್ರಗಂಧವನ್ನು
ಬೀರುತ್ತಿರುವ) ಮಲ್ಲಿಗೆಯೊಳು

ಅರಲ್ದ ಸಂಪಗೆಯೊಳು
ಅಗ್ಗಲಿಸಿತ್ತು
ಬಸಂತಮಾಸದೊಳ್
(ಮಲ್ಲಿಗೆಯಲ್ಲಿಯೂ ಅರಳಿದ
ಸಂಪಗೆಯಲ್ಲಿಯೂ
ವಸಂತಮಾಸದಲ್ಲಿ
ಅತಿಶಯವಾಯಿತು)

ಪದ್ಯ-೩೦:ಅರ್ಥ:
(ವಸಂತಋತು
ಪ್ರಾಪ್ತವಾಯಿತು)
ಚಳಿಗಾಲದಲ್ಲಿ ಶಾಖಕ್ಕಾಗಿ

ಉಪಯೋಗಿಸುತ್ತಿದ್ದ
ಅಗರುವಿನಲ್ಲಿದ್ದ ಮೆಚ್ಚುವ
ಸ್ವಚ್ಛವಾದ ಶ್ರೀಗಂಧದ
ಲೇಪನದಲ್ಲಿ
ಅತಿಶಯವಾಯಿತು.
ಬೆಚ್ಚನೆಯ ಹಾಸಿಗೆಯಲ್ಲಿದ್ದ
ಬಯಕೆಯು
ಗೊಂಚಲಾಗಿರುವ ಹೂವಿನ
ಹಾಸಿಗೆಯಲ್ಲಿ ನೆಲೆಸಿತ್ತು.
ಹೂಬಿಟ್ಟಿದ್ದ ಸೇವಂತಿಗೆ ಮತ್ತು
ಸಿಂಧುವಾರ ಹೂವುಗಳಲ್ಲಿದ್ದ

ಮಿಶ್ರಗಂಧವನ್ನು ಬೀರುತ್ತಿರುವ
ಮಲ್ಲಿಗೆಯಲ್ಲಿಯೂ ಅರಳಿದ
ಸಂಪಗೆಯಲ್ಲಿಯೂ
ವಸಂತಮಾಸದಲ್ಲಿ
ಅತಿಶಯವಾಯಿತು.

ಉ|| ಮುಂ ಮಹಿಯೆಲ್ಲಮಂ
ಶಿಶಿರರಾಜನೆ
ಬಿಚ್ಚತಮಾಳ್ದನೀಗಳಾ
ತಂ ಮಿಡುಕಲ್ಕೆ ಸಲ್ಲಿರದೆ
ಪೋಪುದದೇಕೆನೆ
ಕಾಮದೇವನಿ|

ತ್ತಂ ಮಧು ಪೆತ್ತನೀ
ನೆಲನನಿಂತಿದು ಪತ್ತಳೆಯೆಂದು
ಸಾಱುವ
ದಂ ಮಿಗೆ ಕರ್ಚಿ ಪಾಱಿದುವು
ಕೆಂದಳಿರಂ
ಗಿಳಿವಿಂಡಿನೋಳಿಗಳ್|| ೩೧ ||

ಪದ್ಯ-೩೧:ಪದವಿಭಾಗ-
ಅರ್ಥ:ಮುಂ (ಮೊದಲು) ಮಹಿಯೆಲ್ಲಮಂ ಶಿಶಿರರಾಜನೆ ಬಿಚ್ಚತಂ ಆಳ್ದನು (ಭೂಮಿಯನ್ನೆಲ್ಲ ಮಾಗಿಯ

ಕಾಲವೆಂಬ ರಾಜನು ಬಿಚ್ಚತ-
ವಿಸ್ತೃತವಾಗಿ/ ಬಹುಕಾಲ
ಆಳಿದನು) ಈಗಳಾತಂ
ಮಿಡುಕಲ್ಕೆ ಸಲ್ಲಿರದೆ
ಪೋಪುದು ಅದೇಕೆನೆ (ಈಗ
ಆತನು ಚಲಿಸಲು ಸಾಧ್ಯವಿಲ್ಲ
ಇರದೆಹೋಗಬೇಕು.
ಅದೇಕೆಂದರೆ) ಕಾಮದೇವನು
ಇತ್ತಂ - ಮಧು ಪೆತ್ತನು ಈ
ನೆಲನನು (ಈ ಭೂಮಿಯನ್ನು
ಮನ್ಮಥನು ಕೊಟ್ಟನು,

ವಸಂತರಾಜನು ಪಡೆದನು)
ಇಂತಿದು ಪತ್ತಳೆಯೆಂದು
ಸಾಱುವದಂ (ಇದು ಹೀಗೆ
ರಾಜಶಾಸನ (ಓಲೆಯಪತ್ರ)
ಎಂದು ಡಂಗುರ ಹೊಡೆಯುವ
ರೀತಿಯಲ್ಲಿ) ಮಿಗೆ ಕರ್ಚಿ
ಪಾಱಿದುವು ಕೆಂದಳಿರಂ
ಗಿಳಿವಿಂಡಿನ ಓಳಿಗಳ್
(ಗಿಳಿಯ ಹಿಂಡಿನ ಸಾಲುಗಳು
ಕೆಂಪಾದ ಚಿಗುರುಗಳನ್ನು
ಕಚ್ಚಿಕೊಂಡು ಹಾರಿದುವು)

ಪದ್ಯ-೩೧:ಅರ್ಥ: . ಮೊದಲು ಭೂಮಿಯನ್ನೆಲ್ಲ ಮಾಗಿಯ ಕಾಲವೆಂಬ ರಾಜನು ವಿಶಾಲವಾಗಿ/ ಬಹುಕಾಲ ಆಳಿದನು. ಈಗ ಆತನು ಚಲಿಸಲು ಸಾಧ್ಯವಿಲ್ಲ ಇರದೆಹೋಗಬೇಕು. ಅದೇಕೆಂದರೆ ಈ ಭೂಮಿಯನ್ನು ಮನ್ಮಥನು ಕೊಟ್ಟನು, ವಸಂತರಾಜನು ಪಡೆದನು. ಇದು ಹೀಗೆ

ರಾಜಶಾಸನ (ಓಲೆಯಪತ್ರ)
ಎಂದು ಡಂಗುರ ಹೊಡೆಯುವ
ರೀತಿಯಲ್ಲಿ ಗಿಳಿಯ ಹಿಂಡಿನ
ಸಾಲುಗಳು ಕೆಂಪಾದ
ಚಿಗುರುಗಳನ್ನು ಕಚ್ಚಿಕೊಂಡು
ಹಾರಿದುವು

ಚಂ|| ಕೆಱಗಣ ಕೆಂದಳಿರ್
ಪುದಿದ ಮೇಗಣ
ಪಂದಳಿರೊಂದಿದೊಂದು ಕೆ
ಯ್ಗೞಿದ ಪಸುರ್ಪುಮಂ
ಪೊಳೆವ ಕೆಂಪುಮನಾಳ್ದಿರೆ

ಬೇಟದೊಳ್ ಕನ|

ಲ್ದುಟಿದ

ವಿಯೋಗಿಯಳ್ಳೈರ್ದೆಯನಾಯ್ದ

ದನಾಟಿಸಲೆಂದೆ ಮನ್ಮಥಂ

ಘಟಿಯಿಸಿ

ಕೆಂಪುವಾಸಿದವೊಲಿರ್ದುವು

ಮಾಮರಗಳ್

ಬಸಂತದೊಳ್|| ೩೨||

ಪದ್ಯ-೩೨:ಪದವಿಭಾಗ-

ಅರ್ಥ:ಕೆಟಿಗಣ ಕೆಂದಳಿರ್

ಪುದಿದ (ಕೆಳಭಾಗದ ಕೆಂಪು

ಚಿಗುರಿನಿಂದ ತುಂಬಿದ)
ಮೇಗಣ ಪಂದಳಿರ್ ಒಂದಿದ
(ಮೇಲುಭಾಗದ ಹಸಿರು
ಚಿಗುರು ಒಂದಕ್ಕೊಂದು
ಕೂಡಿಸಿಕೊಂಡ) ಒಂದು
ಕೆಯ್ಗೞಿದ ಪಸುರ್ಪುಮಂ
(ಅತಿಶಯವಾದ ಹಸಿರು
ಬಣ್ಣವನ್ನೂ) ಪೊಳೆವ
ಕೆಂಪುಮಂ ಆಳ್ದಿರೆ
(ಹೊಳೆಯುವ ಕೆಂಪು
ಬಣ್ಣವನ್ನೂ ಹೊಂದಿರಲು)

ಬೇಟದೊಳ್ ಕನಲ್ದು ಉಱಿದ
ವಿಯೋಗಿಯ ಅಳ್ಕೆರ್ದೆಯನು
(ಪ್ರೇಮದಲ್ಲಿ ಕೆರಳಿ
ವಿರಹದಿಂದ ಕೆರಳಿ
ಉಳಿದುಕೊಂಡ ವಿರಹಿಯ
ನಡುಗುವ ಎದೆಯನ್ನು)
ಆಯ್ದು ಅದನು ಆಟಿಸಲೆಂದೆ
(ಅದನ್ನು ಬಯಸಲಿ ಎಂದೇ)
ಮನ್ಮಥಂ ಘಟಿಯಿಸಿ
ಕೆಂಪುವಾಸಿದವೊಲಿರ್ದುವು
ಮಾಮರಗಳ್

ಬಸಂತದೊಳ್(ಮನ್ಮಥನು ಅದನ್ನು ಸೇರಿಸಿ ಕೆಂಪು ಬಣ್ಣವನ್ನು ಹಾಸಿದ ಹಾಗೆ ಮಾವಿನ ಮರಗಳು ವಸಂತ ಕಾಲದಲ್ಲಿ ರಮ್ಯವಾಗಿದ್ದುವು.)

ಪದ್ಯ-೩೨:ಅರ್ಥ: ಕೆಳಭಾಗದ ಕೆಂಪು ಚಿಗುರಿನಿಂದ ತುಂಬಿದ, ಮೇಲುಭಾಗದ ಹಸಿರು ಚಿಗುರು ಒಂದಕ್ಕೊಂದು ಕೂಡಿಸಿಕೊಂಡು ಅತಿಶಯವಾದ ಹಸಿರು

ಬಣ್ಣವನ್ನೂ ಹೊಳೆಯುವ
ಕೆಂಪು ಬಣ್ಣವನ್ನೂ
ಹೊಂದಿರಲು, ಪ್ರೇಮದಲ್ಲಿ
ಕೆರಳಿ ವಿರಹದಿಂದ ಕೆರಳಿ
ಉಳಿದುಕೊಂಡ ವಿರಹಿಯ
ನಡುಗುವ ಎದೆಯನ್ನು
ಆಯ್ದುಕೊಂಡು ಅದನ್ನು
ಬಯಸಲಿ ಎಂದೇ ಮನ್ಮಥನು
ಅದನ್ನು ಸೇರಿಸಿ ಕೆಂಪು
ಬಣ್ಣವನ್ನು ಹಾಸಿದ ಹಾಗೆ

ಮಾವಿನ ಮರಗಳು ವಸಂತ
ಕಾಲದಲ್ಲಿ ರಮ್ಯವಾಗಿದ್ದುವು.

ಚಂ|| ಪರೆಯೆ ಪಸುರ್ಪು
ಬೆಳ್ಪಡರೆ ಬಲ್ಮುಗುಳೊಳ್
ಪೊರೆದೋರೆ ತೆಂಬೆರಲ್
ಪೊರೆವೊರೆಯಂ ಪಡಿಲ್ಚೆ ನಡು
ಪೊಂಗಿರೆ ಮಲ್ಲಿಗೆಗಳ್
ಬಸಂತದೊಳ್|
ಬಿರಿದೊಡೆ ನಲ್ಲರಂ ನೆನೆದ
ನಲ್ಲರ ಮೆಲ್ಲೆರ್ದೆಗಳ್
ಬಸಂತದೊಳ್

ಬಿರಿದುವಂದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಪರೆಯೆ ಪಸುಪ್ಪುರ್ (ಹಸಿರು ಬಣ್ಣ ಹೋಗಿ) ಬೆಳ್ಪಡರೆ ಬಲ್ಮುಗುಳ್ಗೊಳ್ (ಬಲಿತ ಮೊಗ್ಗುಗಳಲ್ಲಿ ಬಿಳಿಯ ಬಣ್ಣವು ತುಂಬಲು) ಪೊರೆದೋರೆ (ದಳದ ಪದರಗಳು ತೋರುತ್ತಿರಲು)

ತೆಂಬೆರಲ್ ಪೊರೆವೊರೆಯಂ

ಸಡಿಲ್ಚೆ (ತಂಗಾಳಿಯು ಆ

ದಳದ ಪದರಗಳನ್ನು

ಸಡಲಿಸಲು), ನಡು ಪೊಂಗಿರೆ

ಮಲ್ಲಿಗೆಗಳ್ (ಮೊಗ್ಗಿನ

ಮಧ್ಯಭಾಗವು ಉಬ್ಬಿ

ಮಲ್ಲಿಗೆಯು ಅರಳಿರಲು)

ಬಸಂತದೊಳ್ ಬಿರಿದೊಡೆ

ನಲ್ಲರಂ ನೆನೆದ ನಲ್ಲರ

ಮೆಲ್ಲೆರ್ದೆಗಳ್ ಬಸಂತದೊಳ್

ಬಿರಿದುವು (ವಸಂತಕಾಲದಲ್ಲಿ

ಪ್ರಿಯರನ್ನು ನೆನಸಿಕೊಂಡ ವಿರಹಿಗಳ ಹೃದಯಗಳು ಒಡೆದುವು.) ಅದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ (ಮಲ್ಲಿಗೆಯ ಅರಳುವಿಕೆಗೆ ಪ್ರಿಯರ ಮೃದುಹೃದಯವು ಅದು ಹೇಗೆ ಸಮಯಪಾಲನೆ ಮಾಡಿತೊ!)

ಪದ್ಯ-೩೩:ಅರ್ಥ:

ವಸಂತಕಾಲದಲ್ಲಿ ಮಲ್ಲಿಗೆಯ

ಹಸಿರು ಬಣ್ಣ ಹೋಗಿ ಬಲಿತ
ಮೊಗ್ಗುಗಳಲ್ಲಿ ಬಿಳಿಯ
ಬಣ್ಣವು ತುಂಬಲು, ದಳದ
ಪದರಗಳು ತೋರುತ್ತಿರಲು,
ತಂಗಾಳಿಯು ಆ ದಳದ
ಪದರಗಳನ್ನು ಸಡಲಿಸಿದವು.
ಮೊಗ್ಗಿನ ಮಧ್ಯಭಾಗವು ಉಬ್ಬಿ
ಮಲ್ಲಿಗೆಯು ಅರಳಿರಲು
ವಸಂತಕಾಲದಲ್ಲಿ ಪ್ರಿಯರನ್ನು
ನೆನಸಿಕೊಂಡ ವಿರಹಿಗಳ
ಹೃದಯಗಳು ಒಡೆದುವು.

ಮಲ್ಲಿಗೆಯ ಅರಳುವಿಕೆಗೆ
ಪ್ರಿಯರ ಮೃದುಹೃದಯವು
ಅದು ಹೇಗೆ ಸಮಯಪಾಲನೆ
ಮಾಡಿತೊ!

ಚಂ||
ನನೆಯೆಳಗಂಪನೆತ್ತಿಯುಮ
ಣಂ ನನೆ ನಾಱದರಲ್ದನೇಕ
ಕೋ
ಕನದ ವನಂಗಳೊಳ್
ಸುೞಿದು ತಣ್ಣಸಮಾಗದೆ
ಕೂಡೆ ಬಂದ ಮಾ|

ವಿನ ಪೊಸ ಪೂವಿನೊಳ್

ಪೊರೆದು ಪೊಣ್ಮಿದ ಕಂಪು

ಮೊಗಂಗಳಂ ಚಳಿ

ಲ್ಲನೆ ಕೊಳೆ ಪೊಯ್ಯೆ

ತೀಡಿದುದು ತೆಂಕಣ ಗಾಳಿ

ವಸಂತಮಾಸದೊಳ್|| ೩೪||

ಪದ್ಯ-೩೪:ಪದವಿಭಾಗ-

ಅರ್ಥ:ನನೆಯ (ಹೂವಿನ)

ಎಳಗಂಪನು ಎತ್ತಿಯುಂ

(ಹೂವಿನ ಎಳೆಯ

ವಾಸನೆಯನ್ನು

ಹೊಂದಿಯೂ), ಅಣಂ ನನೆ
ನಾಱದೆ ಅರಲ್ದ ಅನೇಕ
ಕೋಕನದ ವನಂಗಳೊಳ್
ಸುೞಿದು (ಹೂವಿನ
ಪರಿಮಳದಿಂದ
ಗಂಧಯುಕ್ತವಾಗದೆ ಅರಳಿದ
ತಾವರೆಯ ವನಗಳಲ್ಲಿ
ಸುತ್ತಾಡಿಯೂ)
ತಣ್ಣಸಮಾಗದೆ (ತಂಪಾಗದೆ)
ಕೂಡೆ ಬಂದ ಮಾವಿನ ಪೊಸ
ಪೂವಿನೊಳ್ ಪೊರೆದು

ಪೊಣ್ಮಿದ (ಹೊಮ್ಮಿದ) ಕಂಪು
ಮೊಗಂಗಳಂ (ಆಗಲೆ ಬಂದ
ಹಣ್ಣಾದ ಮಾವಿನ ಮರದ
ಹೊಸ ಹೂಗಳಲ್ಲಿ
ಸೇರಿಕೊಂಡು ಅದರಿಂದ
ಹೊರಹೊಮ್ಮಿದ
ಸುವಾಸನೆಯು
ಮುಖಗಳನ್ನು) ಚಳಿಲ್ಲೆನೆ ಕೊಳೆ
ಪೊಯ್ಯೆ (ಚಳಿಲೆಂದು
ಆಕ್ರಮಿಸಿ ಅಪ್ಪಳಿಸುವಂತೆ)
ತೀಡಿದುದು (ಬೀಸಿತು) ತೆಂಕಣ

ಗಾಳಿ

ವಸಂತಮಾಸದೊಳ್(ವಸಂತ ಮಾಸದಲ್ಲಿ ತೆಂಕಣಗಾಳಿ ಬೀಸಿತು)

ಪದ್ಯ-೩೪:ಅರ್ಥ: ಹೂವಿನ ಎಳೆಯ ವಾಸನೆಯನ್ನು ಹೊಂದಿಯೂ ಹೂವಿನ ಪರಿಮಳದಿಂದ ಗಂಧಯುಕ್ತವಾಗದೆ ಅರಳಿದ ತಾವರೆಯ ವನಗಳಲ್ಲಿ ಸುತ್ತಾಡಿಯೂ ತಂಪಾಗದೆ ಆ

ಆಗಲೆ ಬಂದ ಹಣ್ಣಾದ
ಮಾವಿನ ಮರದ ಹೊಸ
ಹೂಗಳಲ್ಲಿ ಸೇರಿಕೊಂಡು
ಅದರಿಂದ ಹೊರಹೊಮ್ಮಿದ
ಸುವಾಸನೆಯು ಮುಖಗಳನ್ನು
ಚಳಿಲೆಂದು ಆಕ್ರಮಿಸಿ
ಅಪ್ಪಳಿಸುವಂತೆ
ವಸಂತಮಾಸದಲ್ಲಿ
ತೆಂಕಣಗಾಳಿ ಬೀಸಿತು

ಚಂ||ಮುಗುಳ್ವದನಾದ ಸಂಪಗೆ
ಮಡಲ್ತದಿರ್ಮುತ್ತೆ ಮರಲ್ದರಲ್ದ

ಮ
ಲ್ಲಿಗೆ ನನೆಗರ್ಚಿ
ಕಾಕಳಿಯೊಳಾಣತಿಗೆಯ್ವ
ಮದಾಳಿ ಪೋ ಪುಗಲ್|
ಪುಗಲೆನುತಿರ್ಪ ಪಕ್ಕಿ
ಮನುಮಂ ಕವರುತ್ತಿರೆ
ಯೋಗಿಗಂ ವಿಯೋ
ಗಿಗಮರಿದಾಯ್ತು ಪೊಕ್ಕ
ಪುಗಿಲಿಂತು ವಸಂತಕ
ಚಕ್ರವರ್ತಿಯಾ|| ೩೫ ||

ಪದ್ಯ-೩೫:ಪದವಿಭಾಗ-ಅರ್ಥ:ಮುಗುಳ್ವದನಾದ (ಮುಗುಳ್ (ವ)ಹದನಾದ ಮೊಗ್ಗಿನ ಹದಕ್ಕೆ ಬಂದ) ಸಂಪಗೆ ಮಡಲ್ತದಿರ್ಮುತ್ತೆ (ಮಡಲ್ತ- ಹಬ್ಬಿದ, ಅದಿರ್ಮುತ್ತೆ ಹೂವು) ಮರಲ್ದ ಅರಲ್ದ ಮಲ್ಲಿಗೆ (ಮರಳಿದ- ಬಹಳ ಅರಳಿದ ಮಲ್ಲಿಗೆ) ನನೆಗರ್ಚೆ ಕಾಕಳಿಯೊಳು ಆಣತಿಗೆಯ್ವ (ಹೂವನ್ನು

ಕಚ್ಚಿಕೊಂಡು ಇಂಪಾದ
ಧ್ವನಿಯಲ್ಲಿ ಆಲಾಪನೆ
ಮಾಡುತ್ತಿರುವ) ಮದಾಳಿ
ಪೋ ಪುಗಲ್ ಪುಗಲೆನುತಿರ್ಪ
(ಮದ ಅಳಿ- ಸೊಕ್ಕಿದ
ದುಂಬಿಗಳಿಗೆ, ಹೋಗಿ
ಪ್ರವೇಶಿಸಿರಿ, ಪ್ರವೇಶಿಸಿರಿ
ಎನ್ನುತ್ತಿರುವ) ಪಕ್ಕಿ ಮನುಮಂ
ಕವರುತ್ತಿರೆ (ಕೋಗಿಲೆಪಕ್ಷಿಯ
ಗಾನ ಮನಸ್ಸನ್ನು
ಸೂರೆಗೊಳ್ಳುತ್ತಿರಲು)

ಯೋಗಿಗಂ ವಿಯೋಗಿಗಮ್
ಅರಿದಾಯ್ತು ಪೊಕ್ಕ
ಪುಗಿಲಿಂತು ವಸಂತಕ
ಚಕ್ರವರ್ತಿಯಾ(ಯೋಗಿಗೂ
ವಿಯೋಗಿಗೂ ವಸಂತ
ಚಕ್ರವರ್ತಿಯ ಪ್ರವೇಶವು
ಅರಿದಾಯ್ತು-
ಸಹಿಸಲಸಾಧ್ಯವಾಯಿತು -
ಶತ್ರುವಾಯ್ತು?)
ಪದ್ಯ-೩೫:ಅರ್ಥ: ಮೊಗ್ಗಿನ
ಹದಕ್ಕೆ ಬಂದ ಸಂಪಗೆಯೂ

ಹಬ್ಬಿದ ಅದಿಮುರ್ತ್ತೆಯೂ
ಚೆನ್ನಾಗಿ ಅರಳಿದ
ಮಲ್ಲಿಗೆಯೂ ಹೂವನ್ನು
ಕಚ್ಚಿಕೊಂಡು ಇಂಪಾದ
ಧ್ವನಿಯಲ್ಲಿ ಆಲಾಪನೆ
ಮಾಡುತ್ತಿರುವ ಸೊಕ್ಕಿದ
ದುಂಬಿಗಳಿಗೆ ಹೋಗಿ
ಪ್ರವೇಶಿಸಿರಿ, ಪ್ರವೇಶಿಸಿರಿ
ಎನ್ನುತ್ತಿರುವ ಕೋಗಿಲೆಪಕ್ಷಿಯ
ಗಾನ ಮನಸ್ಸನ್ನು
ಸೂರೆಗೊಳ್ಳುತ್ತಿರಲು

ಯೋಗಿಗೂ ವಿಯೋಗಿಗೂ
ವಸಂತ ಚಕ್ರವರ್ತಿಯ
ಪ್ರವೇಶವು
ಸಹಿಸಲಸಾಧ್ಯವಾಯಿತು

ವ||ಅಂತು ಭುವನಕ್ಕೆಲ್ಲಮೊಸಗೆವರ್ಪಂತೆ ಬಂದ ವಸಂತದೊಳೊಂದು ದಿವಸಮನ್ನವಾಸದೋಲಗ ದೊಳುದಾತ್ತನಾರಾಯಣನುಂ ನಾರಾಯಣನುಮಿರ್ದಲ್ಲಿಗೊರ್ವಂ-

ವಚನ:ಪದವಿಭಾಗ-ಅರ್ಥ:ಅಂತು ಭುವನಕ್ಕೆಲ್ಲಂ ಒಸಗೆವರ್ಪಂತೆ (ಹಬ್ಬದಕರೆ ಬರುವ ಹಾಗೆ)ಬಂದ ವಸಂತದೊಳು ಒಂದು ದಿವಸಮ್ ಅನ್ನವಾಸದೋಲಗದೊಳು ಉದಾತ್ತನಾರಾಯಣನುಂ ನಾರಾಯಣನುಂ (ಅರ್ಜುನ ಕೃಷ್ಣ) ಇರ್ದಲ್ಲಿಗೆ ಒರ್ವಂ-

ವಚನ:ಅರ್ಥ:ಹಾಗೆ ಲೋಕಕ್ಕೆಲ್ಲ ಹಬ್ಬದಕರೆ ಬರುವ ಹಾಗೆ ಬಂದ ವಸಂತ ಕಾಲದಲ್ಲಿ ಒಂದು ದಿವಸ ಭೋಜನಶಾಲೆಯ ಸಭೆಯಲ್ಲಿ ಅರ್ಜುನನೂ ಕೃಷ್ಣನೂ ಇದ್ದ ಸ್ಥಳಕ್ಕೆ ಒಬ್ಬನು (ಬಂದನು-)

ಕಂ|| ತೊಟ್ಟೈಕ್ಕವಡಂ
ಮರವಿಲ್
ಕಟ್ಟಿದ ಪಣೆಕಟ್ಟು ಬೇಂಟೆವರೆ
ದೊರೆಯೊಳೊಡಂ|

ಬಟ್ಟಸಿಯ ಸುರಗಿ ದಳಿವದ ತೊಟ್ಟಂಗಿಗೆ ತನ್ನೊಳಮರೆ ಬೇಂಟೆಯನೊರ್ವಂ|| ೩೬ ||

ಪದ್ಯ-00:ಪದವಿಭಾಗ-ಅರ್ಥ:ತೊಟ್ಟ ಎಕ್ಕವಡಂ (ಎಕ್ಕಡ) ಮರವಿಲ್ ಕಟ್ಟಿದ ಪಣೆಕಟ್ಟು (ಹಣೆಯ ಕಟ್ಟು) ಬೇಂಟೆವರೆ (ಬೇಟೆಯಡೋಲು) ದೊರೆಯೊಳೊಡಂ ಬಟ್ಟ ಅಸಿಯ ಸುರಗಿ (ತೆಳುವಾದ

ಕತ್ತಿ) ದಳಿವದ (ಮೇಲು ಹೊದಿಕೆಯ) ತೊಟ್ಟಂಗಿಗೆ (ತೊಟ್ಟ ಅಂಗಿ) ತನ್ನೊಳಮರೆ (ತನ್ನುಳು ಅಮರೆ ಸೇರಿರಲು) ಬೇಂಟೆಯನೊರ್ವಂ (ಬಂದನು)

ಪದ್ಯ-00:ಅರ್ಥ: ತೊಟ್ಟ ಎಕ್ಕಡ, ಕಟ್ಟಿದ ಮರದ ಬಿಲ್ಲು, ಕಟ್ಟಿದ ಹಣೆಯ ಕಟ್ಟು, ಬೇಟೆಯ ಪರೆ (ತಮಟೆ) ಸರಿಯಾಗಿ

ಹೊಂದಿಕೊಂಡಿರುವ ಸಣ್ಣ ಕತ್ತಿ, ಉತ್ತರೀಯದಿಂದ ಕೂಡಿದ ಅಂಗಿ ಇವುಗಳಿಂದ ಕೂಡಿದ ಬೇಟೆಗಾರನೊಬ್ಬನು-(ಬಂದನು)

ಕಂ||ಬಂದು ಪೊಡವಟ್ಟು
ಕಂಡಿಂ
ತೆಂದಂ ಪೊಲನುಡುಗಿ
ಬಂದುದುಡಿದುದು ಪುಲ್ ಕಾ|
ಡುಂ ದಲೆಲೆಯಿಕ್ಕಿ ಘಳಿಲೆನೆ

ನಿಂದುವು ತಣಿದುವು ಮೃಗಂಗಳೆತ್ತಲುಮೀಗಳ್|| ೩೭||

ಪದ್ಯ-೩೭:ಪದವಿಭಾಗ-ಅರ್ಥ:ಬೇಟೆಗಾರನೊಬ್ಬನು ಬಂದು ಪೊಡವಟ್ಟು (ನಮಸ್ಕಾರ ಮಾಡಿ) ಕಂಡು ಇಂತೆಂದಂ (ಹೀಗೆಂದನು) ಪೊಲನುಡುಗಿ ಬಂದುದು ಉಡಿದುದು (ಹೊಲಗಳಲ್ಲಿ ಕಾಳು ಕಡ್ಡಿಗಳನ್ನು

ಬಿಡಿಸಿಯಾಯಿತು.) (ಪುಲ್ (ಕೂಡಾ) ಕಾಡುಂ ದಲೆಲೆಯಿಕ್ಕಿ ಘಳಿಲೆನೆ ನಿಂದುವು (ಕಾಡು ನಿಜವಾಗಿಯೂ ಎಲೆ ಬಿಟ್ಟು ಚಿಗುರಿ ನಿಂತಿವೆ.) ತಣಿದುವು ಮೃಗಂಗಳ್ ಎತ್ತಲುಂ ಈಗಳ್(ಎಲ್ಲ ಕಡೆಯಲ್ಲಿಯೂ ಈಗ ಮೃಗಗಳು ತೃಪ್ತಿಪಟ್ಟಿವೆ.)

ಪದ್ಯ-೩೭:ಅರ್ಥ: ಬಂದು ನಮಸ್ಕಾರ ಮಾಡಿ ಹೀಗೆಂದನು: ಹೊಲಗಳಲ್ಲಿ

ಕಾಳು ಕಡ್ಡಿಗಳನ್ನು ಬಿಡಿಸಿಯಾಯಿತು. ಹುಲ್ಲೊಕ್ಕಣೆಯೂ ಆಯಿತು. ಕಾಡು ನಿಜವಾಗಿಯೂ ಎಲೆ ಬಿಟ್ಟು ಚಿಗುರಿ ನಿಂತಿವೆ. ಎಲ್ಲ ಕಡೆಯಲ್ಲಿಯೂ ಈಗ ಮೃಗಗಳು ತೃಪ್ತಿಪಟ್ಟಿವೆ.

ಕಂ||ಸುೞಿಯದು ಗಾಳಿ
ಮೃಗಂ ಕೆ
ಯ್ವೞಿಗಳ ಮೇತದೊಳೆ
ತಣಿದಪುವು ಪಂದಿಗಳುಂ|

ಪಱ ನವಿರಿಕ್ಕಿದುವಾಳಂ

ಪಱು ಪರಿದಾಡಲ್ ಕರಂ

ಬೆಡಂಗವನಿಪತೀ|| ೩೮ ||

ಪದ್ಯ-೩೮:ಪದವಿಭಾಗ-

ಅರ್ಥ:ಸುೞಿಯದು ಗಾಳಿ

ಮೃಗಂ ಕೆಯ್ವೞಿಗಳ

ಮೇತದೊಳೆ ತಣಿದಪುವು

(ಮೃಗಗಳು ಹೊಲದ

ದಾರಿಯಲ್ಲಿರುವ

ಮೇವುಗಳಿಂದಲೇ

ತೃಪ್ತಿಪಡುತ್ತಿವೆ) ಪಂದಿಗಳುಂ

ಪೞ ನವಿರಿಕ್ಕಿದುವು (ಹಂದಿಗಳೂ ತಮ್ಮ ಹಳೆಯ ಕೂದಲುಗಳನ್ನು ಬೀಳಿಸಿಕೊಂಡಿವೆ.) ಆಳಂಪೞು (ಪೞು- ಕಾಡು) ಪರಿದಾಡಲ್ (ಓಡಾಡಲು) ಕರಂ ಬೆಡಂಗುಂ (ಅತ್ಯಂತ ಸೊಗಸು) ಅನಿಪತೀ

ಪದ್ಯ-೩೮:ಅರ್ಥ: ರಾಜನೇ ಈಗ ಗಾಳಿ ಬೀಸುವುದಿಲ್ಲ, ಮೃಗಗಳು ಹೊಲದ

ದಾರಿಯಲ್ಲಿರುವ ಮೇವುಗಳಿಂದಲೇ ತೃಪ್ತಿಪಡುತ್ತಿವೆ. ಹಂದಿಗಳೂ ತಮ್ಮ ಹಳೆಯ ಕೂದಲುಗಳನ್ನು ಬೀಳಿಸಿಕೊಂಡಿವೆ. ಕಾಡು ಈಗ ಓಡಾಡಲು ಅತ್ಯಂತ ಸೊಗಸಾಗಿದೆ.

ಕಂ||ಬರವಂ ಕಾಡಂ ಬೇಗೆಗೆ
ಕರಮಱಿದೆರಡುಂ
ಮೃಗಗಳುಂ ತಣ್ಬುೞಲೊಳ್|

ನೆರೆದೊಡವಂದುವು ತಪ್ಪದಿ ದರಿಕೇಸರಿ ಕಂಡು ಮೆಚ್ಚುವೈ ಕೋಳ್ವಾಂಗಂ|| ೩೯||

ಪದ್ಯ-೩೯:ಪದವಿಭಾಗ-ಅರ್ಥ:ಬರವಂ ಕಾಡಂ ಬೇಗೆಗೆ ಕರಂ ಅಱಿದು (ಚೆನ್ನಾಗಿ ತಿಳಿದು) ಎರಡುಂ ಮೃಗಗಳುಂ ತಣ್ಬುೞಿಲೊಳ್ (ಎರಡು ಜಿಂಕೆಗಳೂ ತಂಪಾದ ಮರಗಳ ನೆರಳಿನಲ್ಲಿ) ನೆರೆದು ಒಡವಂದುವು (ಸೇರಿ

ಜೊತೆಗೂಡಿ ಬಂದಿವೆ) ತಪ್ಪದು
ಇದು ಅರಿಕೇಸರಿ ಕಂಡು
ಮೆಚ್ಚುವ್ಯೆ ಕೋಳ್ವಾಂಗಂ(ಇದು
ಸುಳ್ಳಲ್ಲ ಅರ್ಜುನನೇ ಮೃಗವು
ಸಿಕ್ಕಿಬೀಳುವ ರೀತಿಯನ್ನು
ನೀನು ಮೆಚ್ಚುತ್ತೀಯೆ)
ಪದ್ಯ-೩೯:ಅರ್ಥ: ಮೃಗಗಳ
ಬರುವಿಕೆಯನ್ನೂ ಕಾಡಿನ
ಸ್ವರೂಪವನ್ನೂ ಚೆನ್ನಾಗಿ
ತಿಳಿದು ಎರಡು ಜಿಂಕೆಗಳೂ
ತಂಪಾದ ಮರಗಳ ನೆರಳಿನಲ್ಲಿ

ಸೇರಿ ಜೊತೆಗೂಡಿ ಬಂದಿವೆ. ಇದು ಸುಳ್ಳಲ್ಲ ಅರ್ಜುನನೇ ಮೃಗವು ಸಿಕ್ಕಿಬೀಳುವ ರೀತಿಯನ್ನು ನೀನು ಮೆಚ್ಚುತ್ತೀಯೆ.

<u>ಬೇಟೆಗಾರನಿಮದ ಬೇಟೆಯ ಕ್ರಮ ವಿವರ</u>

ಕಾಡೊಡಮ ವೇಳೆ ಸಲೆ ಕೆಯ್ಯೊಗ್ಗಿಡಿದುದೆನೆ ನೆಲದೊಳಿರ್ದ ನೆಲ್ಲಿಯ ಕಾಯುಂ|

ನೋಡ ನೆಲಮುಟ್ಟಲಟ್ಟಿಯೊ ಳಾಡುವೊಡೀ ದಿವಸಮಲ್ತೆ ಬೇಂಟೆಯ ದಿವಸಂ|| ೪೦||

ಪದ್ಯ-೪೦:ಪದವಿಭಾಗ-ಅರ್ಥ: ಕಾಡೊಡಮ (ಕಾಡ ಒಡಮ-ಕಾಡಿನ ವಸ್ತು) ವೇಳೆ ಸಲೆ ಕೆಯ್ಗೂಡಿದುದು ಎನೆ (ಅದನ್ನು ಸಂಗ್ರಹಿಸಬೇಕಾದ ಕಾಲ ಇವೆರಡೂ ಕೈಗೂಡಿದೆ ಎನ್ನಲು) ನೆಲದೊಳಿರ್ದ ನೆಲ್ಲಿಯ ಕಾಯುಂ ನೋಡ,

(ನೆಲದಲ್ಲಿ ಉದುರಿರುವ ನೆಲ್ಲಿಯ ಕಾಯೇ ಸಾಕ್ಷಿ, ನೋಡಿ!) ನೆಲಮುಟ್ಟಲು ಅಟ್ಟಿಯೊಳು ಆಡುವೊಡೆ (ನೆಲವನ್ನು ಮುಟ್ಟಿ ಸಂತಸದಿಂದ ಆಟ ಬೇಟೆ ಆಡುವ ಪಕ್ಷದಲ್ಲಿ) ಈ ದೆವಸಮಲ್ತೆ ಬೇಂಟೆಯ ದೆವಸಂ ()|

ಪದ್ಯ-೪೦:ಅರ್ಥ: ಕಾಡಿನಲ್ಲಿ ಸಂಗ್ರಹಿಸಬೇಕಾದ ವಸ್ತು,

ಅದನ್ನು ಸಂಗ್ರಹಿಸಬೇಕಾದ ಕಾಲ ಇವೆರಡೂ ಕೈಗೂಡಿದೆ ಎನ್ನಲು, ನೆಲದಲ್ಲಿ ಉದುರಿರುವ ನೆಲ್ಲಿಯ ಕಾಯೇ ಸಾಕ್ಷಿ. ನೆಲವನ್ನು ಮುಟ್ಟಿ ಸಂತಸದಿಂದ ಬೇಟೆ ಆಡುವ ಪಕ್ಷದಲ್ಲಿ, ಬೇಟೆಗೆ ಈ ದಿನವೇ ಯೋಗ್ಯವಾದ ದಿನವಲ್ಲವೇ? ಇದೇ ತಕ್ಕ ಸಮಯ!

ವ|| ಮತ್ತಂ ಬೇಂಟೆ ಜಾಱಿಲ್ಲದೆ ಬೇಂಟೆಯ ಮಾತಂ ಬಿನ್ನಪಂಗೆಯ್ವೆಂ-

ವಚನ:ಪದವಿಭಾಗ-

ಅರ್ಥ:ಮತ್ತಂ ಬೇಂಟೆ ಜಾಱಿಲ್ಲದೆ (ಜಾಳು- ಅಲ್ಲದ- ಸುಳ್ಳು ಅಲ್ಲದ) ಬೇಂಟೆಯ ಮಾತಂ ಬಿನ್ನಪಂ ಗೆಯ್ವೆಂ- (ಅರಿಕೆಮಾಡಿಕೊಳ್ಳುತ್ತೇನೆ)

ವಚನ:ಅರ್ಥ:ಬೇಟೆಯ ವಿಷಯವಾದ ಸುಳ್ಳು

ಸಂದೇಶಗಳಿಲ್ಲದ ಬೇಟೆಯ (ಫಲಾಫಲಗಳನ್ನು) ಅರಿಕೆಮಾಡಿಕೊಳ್ಳುತ್ತೇನೆ

ಪಿರಿಯಕ್ಕರ|| ಆಡಲಾಡಿಸಲ್ ಪಾಱಿಯಂ ನಿಱಿಸಲುಂ ಪರಿಗೊಳಲ್ ತೊವಲಿಕ್ಕ ಲೊಳಗಂಬರಲ್ ಕಾಡ ಬೇಲಿಯಂ ಮಾರ್ಕಾಂಡನಱಿಯಲುಂ ಮೂಡಿಗೆ ಕಕ್ಕುಂಬಂ ಸುಱಿಸಿ ಜೊಂಪಂ|

ಬೀಡು ಬಿಡುವಿಂಬು ಕದಳಿ

ತೆಂಗಿನ ತಾಣಂ ಜಾಣಿಂ

ನೀರ್ದಾಣಮೆಂದೆಡೆಯಱಿ

ದುಂ

ಮಾಡಲ್ ಮಾಡಿಸಲ್ ಪಡೆ

ಮೆಚ್ಚೆ ನೀಂ ಬಲ್ಲೆ ನೀಂ ಮೆಚ್ಚೆ

ಹರಿಗ ಕೇಳಾನೆ ಬಲ್ಲೆಂ|| ೪೧||

ಪದ್ಯ-೪೧:ಪದವಿಭಾಗ-

ಅರ್ಥ: ಆಡಲು ಆಡಿಸಲ್

ಪಾಱಿಯಂ ನಿಱಿಸಲುಂ

ಪರಿಗೊಳಲ್

ತೊವಲಿಕ್ಕಲು(ಬೇಟೆಯಾಡು
ವುದಕ್ಕೂ ಆಡಿಸುವುದಕ್ಕೂ
ಕ್ರಮವನ್ನು ಸ್ಥಾಪಿಸುವುದಕ್ಕೂ
ಓಡುವುದಕ್ಕೂ ಚಿಗುರನ್ನು
ಹಾಕುವುದಕ್ಕೂ)
ಒಳಗಂಬರಲ್ ಕಾಡ
ಬೇಲಿಯಂ ಮಾರ್ಕಾಂಡಂ
ಅಱಿಯಲುಂ (ಒಳಗೆ
ಪ್ರವೇಶಿಸುವುದಕ್ಕೂ ಕಾಡಿನ
ಎಲ್ಲೆಯನ್ನೂ ಎದುರು
ಕಾಡನ್ನೂ ತಿಳಿಯುವುದಕ್ಕೂ)

ಮೂಡಿಗೆ ಕಕ್ಕುಂಬಂ ಸುೞಿಸಿ (ಬತ್ತಳಿಕೆಗೆ ಕಕ್ಕುಂಬ (?)ಗಳನ್ನು ಸುಳಿಸಿ) ಜೊಂಪಂ ಬೀಡು ಬಿಡುವಿಂಬು (ಇದು ಬೀಡುಬಿಡಲು ಸ್ಥಳ), ಕದಳಿ (ಬಾಳೆ) ತೆಂಗಿನ ತಾಣಂ, ಜಾಣಿಂ ನೀರ್ ತಾಣಮೆಂದು (ಮೃಗಗಳು ಜಾಣತನದಿಂದ ನೀರು ಕುಡಿಯಲು ಬರುವ ಸ್ಥಳ) ಎಡೆಯ ಅಱಿದುಂ (ತಾಣವನ್ನು ತಿಳಿದು)ಮಾಡಲ್

ಮಾಡಿಸಲ್ ಪಡೆ ಮೆಚ್ಚೆ ನೀಂ ಬಲ್ಲೆ ನೀಂ (ಸೈನ್ಯ ಮೆಚ್ಚುವ ಹಾಗೆ ಮಾಡುವುದಕ್ಕೆ ನೀನು ಬಲ್ಲೆ, ಕೂಡಿಸುವುದಕ್ಕೂ ಸಮರ್ಥ) ಮೆಚ್ಚೆ ಹರಿಗ (ಅರ್ಜುನ) ಕೇಳು ಆನೆ ಬಲ್ಲೆಂ|

ಪದ್ಯ-೪೧:ಅರ್ಥ:

ಬೇಟೆಯಾಡುವುದಕ್ಕೂ ಆಡಿಸುವುದಕ್ಕೂ ಕ್ರಮವನ್ನು ಸ್ಥಾಪಿಸುವುದಕ್ಕೂ ಓಡುವುದಕ್ಕೂ ಚಿಗುರನ್ನು

ಹಾಕುವುದಕ್ಕೂ ಒಳಗೆ
ಪ್ರವೇಶಿಸುವುದಕ್ಕೂ ಕಾಡಿನ
ಎಲ್ಲೆಯನ್ನೂ ಎದುರು
ಕಾಡನ್ನೂ ತಿಳಿಯುವುದಕ್ಕೂ
ಬತ್ತಳಿಕೆಗೆ ಕಕ್ಕುಂಬ (?)ಗಳನ್ನು
ಸುಳಿಸಿ, ಇದು ಜೊಂಪ (?)
ಇದು ಬೀಡುಬಿಡಲು ಸ್ಥಳ,
ಇದು ಬಾಳೆ, ತೆಂಗು ಇರುವ
ಸ್ಥಳ ಇದು, ಮೃಗಗಳು
ಜಾಣತನದಿಂದ ನೀರು
ಕುಡಿಯಲು ಬರುವ ಸ್ಥಳ

ಎಂದು ಜಾಣ್ಮೆಯಿಂದ ತಿಳಿದು
ಸೈನ್ಯ ಮೆಚ್ಚುವ ಹಾಗೆ
ಮಾಡುವುದಕ್ಕೆ ನೀನು ಬಲ್ಲೆ,
ಕೂಡಿಸುವುದಕ್ಕೂ ಸಮರ್ಥ.
ಎಲೈ ಅರಿಗನೇ ನೀನು
ಮೆಚ್ಚುವ ಹಾಗೆ ಮಾಡಲು
ನಾನೂ ಬಲ್ಲೆ ಅರ್ಜುನ!

ಕಂ||

ಮೃಗದೊಲವರಮುಮನರಸನ
ಬಗೆಯುಮನಱದಲಸದೆಳಸ
ಲೋಲಗಿಸಲ್ ನೆ|

ಟ್ಟಗೆ ಬಲ್ಲನುಳ್ಳೊಡವನ ಲ್ತೆ ಗುಣಾರ್ಣವ ಬೇಂಟೆಕಾಱನೊಲಗಕಾಱಂ॥ ೪೨॥

ಪದ್ಯ-೪೨:ಪದವಿಭಾಗ-ಅರ್ಥ:ಮೃಗದ ಒಲವರಮುಮಂ(ಒಲವನ್ನು) ಅರಸನ ಬಗೆಯುಮಂ ಅಱಿದು ಅಲಸದೆ(ಅರಸನ ಅಭಿಪ್ರಾಯವನ್ನೂ ತಿಳಿದು ಉದಾಸೀನ ಮಾಡದೆ)

ಎಳಸಲು ಓಲಗಿಸಲ್
(ಸೇವೆಮಾಡಲು
ಪ್ರಯತ್ನಿಸಲು) ನೆಟ್ಟಗೆ
ಬಲ್ಲನುಳ್ಳೊಡೆ (ಸರಿಯಾಗಿ
ತಿಳಿದವನಾದರೆ) ಅವನಲ್ತೆ
ಗುಣಾರ್ಣವ ಬೇಂಟೆಕಾಱನು
ಓಲಗಕಾಱಂ(ಸೇವೆ ಮಾಡಲು
ತಿಳಿದಿರುವವನೇ ಅಲ್ಲವೇ
ನಿಜವಾದ ಬೇಟೆಗಾರನೂ
ಸೇವಾಳುವೂ
ಆಗಿರುವವನು!)|

ಪದ್ಯ-೪೨:ಅರ್ಥ: ಪ್ರಾಣಿಗಳ ಬಯಕೆನ್ನೂ, ಅರಸನ ಅಭಿಪ್ರಾಯವನ್ನೂ ತಿಳಿದು ಉದಾಸೀನ ಮಾಡದೆ ಸೇವೆ ಮಾಡಲು ತಿಳಿದಿರುವವನೇ ಅಲ್ಲವೇ ನಿಜವಾದ ಬೇಟೆಗಾರನೂ ಸೇವಾಳುವೂ ಆಗಿರುವವನು!

ಪಿರಿಯಕ್ಕರ|| ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂ

ಗಣಿದಮಂ ಕಂಡಿಯಂ
ಮಾರ್ಕಂಡಿಯಂ
ಪುಗಿಲಂ ಪೋಗಂ ಬಾರಿಯಂ
ಸನ್ನೆಯಂ ನೂಱುವಮರ್ಚುವ
ನಿಲ್ವೆಡೆಯಂ|
ಬಗೆಯಂ ತೆಗೆಯನಲ್ಲಾಟಮಂ
ಕಾಟಮಂ ನೋವುದಂ
ಸಾವುದನೆಲ್ಲಂದದಿಂ
ಬಗೆದಾಗಳರಸರೊಳೆಲ್ಲ ಕೇಳ್
ನೀಂ ಬಲ್ಲೆ

ಬೇಂಟೆಕಾಱರೊಳೆಲ್ಲವಾನೆ ಬಲ್ಲೆಂ|| ೪೩||

ಪದ್ಯ-೪೩:ಪದವಿಭಾಗ-ಅರ್ಥ:ಮೃಗಮಂ ಗಾಳಿಯನಿರ್ಕೆಯಂ (ಗಾಳಿ ಬೀಸುವ ದಿಕ್ಕನ್ನೂ) ಪಕ್ಕೆಯಂ (ಅವು ಮಲಗುವ ಎಡೆಯನ್ನೂ) ಗಣಿದಮಂ (ಸಂಖ್ಯೆಯನ್ನೂ) ಕಂಡಿಯಂ (ಅದರ ದಾರಿ) ಮಾರ್ಕಂಡಿಯಂ ಪುಗಿಲಂ

ಪೋಗಂ (ಬರುವ ಮತ್ತು ಹೊಗುವದಾರಿ,) ಬಾರಿಯಂ ಸನ್ನೆಯಂ (ಸರದಿ, ಸನ್ನೆ) ನೂಱುವ ಅಮರ್ಚುವ (ನುಸುಳುವ? ಸೇರುವ) ನಿಲ್ವೆಡೆಯಂ (ನಿಲ್ಲುವ ಸ್ಥಳವನ್ನೂ) ಬಗೆಯಂ ತೆಗೆಯನು ಅಲ್ಲಾಟಮಂ ಕಾಟಮಂ (ಆಸಕ್ತಿ ವಿರಕ್ತಿಗಳನ್ನೂ ಅವುಗಳ, ಚಲನೆ,) ನೋವುದಂ (ಹಿಂಸೆ,

ಯಾತನೆ) ಸಾವುದನು
ಎಲ್ಲಂದದಿಂ ಬಗೆದಾಗಳ್
(ಎಲ್ಲ ರೀತಿಯಿಂದಲೂ
ಯೋಚಿಸಿದಾಗ)
ಅರಸರೊಳೆಲ್ಲ ಕೇಳ್ ನೀಂ
ಬಲ್ಲೆ ಬೇಂಟೆಕಾಱರೊಳ್
ಎಲ್ಲವ ಆನೆ ಬಲ್ಲೆಂ
(ಬೇಟೆಗಾರರಲ್ಲೆಲ್ಲ ನೀನೂ
ನಾನೂ ಬಲ್ಲೆವು)

ಪದ್ಯ-೪೩:ಅರ್ಥ: .
ಪ್ರಾಣಿಗಳ ಸ್ವಭಾವವನ್ನೂ

ಗಾಳಿ ಬೀಸುವ ದಿಕ್ಕನ್ನೂ-
ಆದರಿಂದ ಪ್ರಾಣಿಗಳಿರುವ
ಸ್ಥಳವನ್ನೂ ಅವು ಮಲಗುವ
ಎಡೆಯನ್ನೂ ಅವುಗಳ
ಸಂಖ್ಯೆಯನ್ನೂ ಅವು
ನುಸುಳುವ ಕಂಡಿ
ಪ್ರತಿಕಂಡಿಗಳನ್ನೂ ಅವುಗಳು
ಬರುವ ಮತ್ತು ಹೊಗುವದಾರಿ,
ಅವುಗಳಿಗೆ
ಉಪಯೋಗಿಸಬೇಕಾದ
ಸಂಜ್ಞೆಗಳನ್ನೂ ಅವುಗಳು

ಸೇರುವ ನಿಲ್ಲುವ ಸ್ಥಳವನ್ನೂ
ಅವುಗಳ ಆಸಕ್ತಿ
ವಿರಕ್ತಿಗಳನ್ನೂ ಅವುಗಳ,
ಚಲನೆ, ಹಿಂಸೆ, ಯಾತನೆ
ಸಾವುಗಳನ್ನೂ ಎಲ್ಲ
ರೀತಿಯಿಂದಲೂ
ಯೋಚಿಸಿದಾಗ
ರಾಜರುಗಳಲ್ಲೆಲ್ಲ
ಬೇಟೆಗಾರರಲ್ಲೆಲ್ಲ ನೀನೂ
ನಾನೂ ಬಲ್ಲೆವು.

ವ|| ಮತ್ತಂ ನೆಲನುಂ
ಗಾಳಿಯುಂ ಕೆಯ್ಯುಂ
ಮೃಗಮುಮನಱಿದು
ಕಾಲಾಳೊಳಂ
ಕುದುರೆಯೊಳಮೊಳಗಂ
ಬರಲಾನೆ ಬಲ್ಲೆನಿದು
ಪೆರ್ವೇಂಟೆಯಂದಂ ದೀವದ
ಬೇಂಟೆಯಂ
ಬಿನ್ನಪಂಗೆಯ್ವೊಡೆ ಗಾಳಿಯುಂ
ಕಱಿವುಮುಱಿವುಂ ಕಾಂಪು
ಮೇಪುಂ ತೋಡುಂ ಬೀಡುಂ

ದೆಸೆಯುಂ ಮೆಚ್ಚುಂ ಬೆಚ್ಚುಂ

ಪೋಗುಂ ಮೇಗುಂ ಬೆದಱುಂ

ಕೆದಱುಂ ಪೆರ್ಚುಂ

ಕುಂದುಮನಱಿದು ಕಾಣಲುಂ

ಕಾಣಿಸಲುಂ ಕಡಂಗಲುಂ

ಕಡಂಗಿಸಲುಮಡಂಗಲುಮ

ಡಂಗಿಸಲುಮೊಡ್ಡಲು

ಮೊಡ್ಡಿಸಲುಂ ಪುಗಿಸಲುಂ

ಮಿಗಿಸಲುಂ ಕಾಣದುದಂ

ಕಾಣಿಸಲುಂ ಮಾಣದುದಂ

ಮಾಣಿಸಲುಮೇಱದುದನೇಱಿ

ಸಲುಂ ಜಾಣನಾಗಿ ಮೂಱು
ಕೊಂಬುಮನಾಱು
ನಾಣ್ಪೋಗುಮನೆರಟ್ಟಿಜ್ಜೆಯು
ಮಂ ಮೂಱು ಪೊೞ್ತುಮಂ
ಮೃಗದ ಮೂಱಿರವುಮ
ನಾಱೂರಯ್ಕ್ಯುಮಂ
ಗಾಳಿಯುಮನೆಱಂಕೆಯುಮಂ
ಬಲ್ಲನಾಗಿ ನಂಬಿದ
ಬರವುಮಂ ನಂಬದ
ಬರವುಮನಱಿದು
ಮಲೆದುದಂ ಮಲೆಯಿಸಲುಂ

ಮಲೆದುದಂ ತೊಲಗಿಸಲುಂ
ನಂಬದುದಂ ನಂಬಿಸಲುಂ
ನಂಬಿದುದಂ
ಬಿಡಿಸಲುಮೊಳಪುಗುವುದರ್ಕೆ
ಡೆ ಮಾಡಲುಮೆಡೆಯಾಗದ
ಮೃಗಮನವುಂಕಿಸಲುಮೊಲ್ದು
ಮೊಲ್ಲದ ನಲ್ಲರಂತೆ
ಮಿಡುಕಿಸಲುಂ
ಪಣಮುಡಿದರಂತಡ್ಡಂ
ಮಾಡಲುಮೆಸೆದ
ದೆಸೆಗಳ್ಗೋಡಿಸಲುಂ

ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳಾನೆ ಬಲ್ಲೆಂ-

ವಚನ:ಪದವಿಭಾಗ-

ಅರ್ಥ:ಮತ್ತಂ ನೆಲನುಂ ಗಾಳಿಯುಂ ಕೆಯ್ಯುಂ ಮೃಗಮುಮನು ಅಱಿದು ಕಾಲಾಳೊಳಂ ಕುದುರೆಯೊಳಮೊಳಗಂ (ಪದಾತಿಸೈನ್ಯ ಮತ್ತು ಕುದುರೆಯ ಸೈನ್ಯಗಳ) ಬರಲು

ಆನೆ ಬಲ್ಲೆನು ಇದು ಪೆರ್ವೆಣ್ಂಟೆಯಂದಂ (ಇದು ಹೆಬ್ಬೇಟೆಯ ರೀತಿ) ದೀವದ ಬೇಂಟೆಯಂ ಬಿನ್ನಪಂಗೆಯ್ವೊಡೆ ಗಾಳಿಯುಂ ಕೞಿವುಂ ಉೞಿವುಂ (ದೂರಹೋಗುವುದು, ಉಳಿಯುವುದು) ಕಾಂಪು (ರಕ್ಷಣೆ) ಮೇಪುಂ (ಮೇವು) ತೋಡುಂ ಬೀಡುಂ ದೆಸೆಯುಂ ಮೆಚ್ಚುಂ ಬೆಚ್ಚುಂ

(ಬೆದರುವುದು) ಪೋಗುಂ
ಮೇಗುಂ ಬೆದಱುಂ ಕೆದಱುಂ
(ರಕ್ಷಣೆ ಮತ್ತು ಮೇವುಗಳನ್ನೂ
ತೋಡುವುದನ್ನೂ
ಬೀಡುಬಿಡುವುದನ್ನೂ
ದಿಕ್ಕುಗಳನ್ನೂ
ಸಂಕೇತಸ್ಥಳಗಳನ್ನೂ) ಪೆರ್ಚುಂ
ಕುಂದುಮನಱಿದು ಕಾಣಲುಂ
ಕಾಣಿಸಲುಂ ಕಡಂಗಲುಂ
ಕಡಂಗಿಸಲುಂ (ಅವುಗಳ
ಉದ್ರೇಕಿಸಲೂ, ಅವುಗಳನ್ನು

ರೇಗಿಸಲೂ) ಅಡಂಗಲುಂ
ಡಂಗಿಸಲುಂ ಒಡ್ಡಲು
ಮೊಡ್ಡಿಸಲುಂ
(ಅವಿತುಕೊಳ್ಳಿಸಲೂ ಒಡ್ಡಲು
ಒಡ್ಡಿಸಲೂ) ಪುಗಿಸಲುಂ
ಮಿಗಿಸಲುಂ ಕಾಣದುದಂ
ಕಾಣಿಸಲುಂ ಮಾಣದುದಂ
ಮಾಣಿಸಲುಂ ಏಱದುದನು
ಏಱಸಲುಂ ಜಾಣನಾಗಿ
ಮೂಱು ಕೊಂಬುಮನಾಱು
(ಅವುಗಳ ಮೂರು ಸಂಕೇತ

ಸ್ಥಳಗಳನ್ನೂ)
ನಾಣ್ಪೋಗುಮನು
ಎರೞ್ಪಿಜ್ಜೆಯುಮಂ (ಆರು
ಬಗೆಯ ರತಿಕ್ರೀಡೆಯನ್ನೂ
ಎರಡು ಹೆಜ್ಜೆಯನ್ನೂ)
ಮೂಱು ಪೊೞ್ತುಮಂ ಮೃಗದ
ಮೂಱೆರವುಮ
ನಾಱೂರಯ್ಕೆಯುಮಂ
(ಮೂರು ಹೊತ್ತನ್ನೂ ಮೃಗದ
ಮೂರು ಸ್ಥಿತಿಗಳನ್ನೂ ಆರು
ಪೋಷಣಾಕ್ರಮವನ್ನೂ)

ಗಾಳಿಯುಮಂ
ಎಱಂಕೆಯುಮಂ ಬಲ್ಲನಾಗಿ
ನಂಬಿದ ಬರವುಮಂ ನಂಬದ
ಬರವುಮನಱಿದು
(ಗಾಳಿಯನ್ನೂ ರಕ್ಕೆಯನ್ನೂ
ತಿಳಿದವನಾದ ಕಾರಣ)
ಮಲೆದುದಂ ಮಲೆಯಿಸಲುಂ
ಮಲೆದುದಂ ತೊಲಗಿಸಲುಂ
(ಕೆರಳದೇ ಇರುವುದನ್ನು
ಕೆರಳಿಸಲೂ ಕೆರಳಿರುವುದನ್ನು
ತೊಲಗಿಸಲೂ) ನಂಬದುದಂ

ನಂಬಿಸಲುಂ ನಂಬಿದುದಂ
ಬಿಡಿಸಲುಂ ಒಳಪುಗುವುದರ್ಕೆ
ಎಡೆ (ಜಾಗ) ಮಾಡಲುಂ
ಎಡೆಯಾಗದ ಮೃಗಮನು
ಅವುಂಕಿಸಲುಂ ಒಲ್ದುಮೊಲ್ಲದ
ನಲ್ಲರಂತೆ () ಮಿಡುಕಿಸಲುಂ
(ಪ್ರೀತಿಸಿಯೂ ಪ್ರೀತಿಸದ
ಪ್ರೇಮಿಗಳ ಹಾಗೆ
ವ್ಯಥೆಪಡಿಸಲೂ)
ಪಣಮುಡಿದರಂತೆ ಅಡ್ಡಂ
ಮಾಡಲುಂ (ಜೂಜಿನಲ್ಲಿ

ಒತ್ತೆಯನ್ನು ಸೋತವರಂತೆ ಅಡ್ಡಗಟ್ಟಲೂ) ಎಸೆದ ದೆಸೆಗಳ್ಗೆ ಓಡಿಸಲುಂ ಕುಮಾರಸ್ವಾಮಿಯ ನಿಮ್ಮಡಿಯ ಕೆಲದೊಳು ಆನೆ ಬಲ್ಲೆಂ (ಷಣ್ಮುಖನ ಮತ್ತು ನಿಮ್ಮ ಸಾಕ್ಷಿಯಾಗಿ ನಾನೇ ಸಮರ್ಥನಾಗಿದ್ದೇನೆ)-

ವಚನ:ಅರ್ಥ:ಮತ್ತೆ ನೆಲದ ಲಕ್ಷಣಗಳನ್ನೂ ಗಾಳಿಯು ಬರುವ ದಿಕ್ಕನ್ನೂ ಹೆಜ್ಜೆಯ

ಗುರುತುಗಳನ್ನೂ
ಮೃಗಗಳನ್ನೂ ತಿಳಿದು
ಪದಾತಿಸೈನ್ಯ ಮತ್ತು (ಈ
ಪದ್ಯವೂ ಸರಿಯಾಗಿ
ಅರ್ಥವಾಗುತ್ತಿಲ್ಲ) ಕುದುರೆಯ
ಸೈನ್ಯಗಳ ಮಧ್ಯೆ ನಾನು
ಬರಲು ಸಮರ್ಥ. ಇದು
ಹೆಬ್ಬೇಟೆಯ ರೀತಿ;
ಮೃಗಗಳನ್ನು ಒಡ್ಡಿ
ಆಕರ್ಷಿಸುವ ದೀವಕ
ಬೇಟೆಯನ್ನು ಹೇಳುವುದಾದರೆ

ಗಾಳಿಯ ದಿಕ್ಕನ್ನೂ ಪ್ರಾಣಿಗಳ
ಹೋಗುವಿಕೆ ಮತ್ತು
ಉಳಿಯುವಿಕೆಗಳನ್ನೂ ರಕ್ಷಣೆ
ಮತ್ತು ಮೇವುಗಳನ್ನೂ
ತೋಡುವುದನ್ನೂ
ಬೀಡುಬಿಡುವುದನ್ನೂ
ದಿಕ್ಕುಗಳನ್ನೂ
ಸಂಕೇತಸ್ಥಳಗಳನ್ನೂ ಆಸಕ್ತಿ
ಭಯಗಳನ್ನೂ
ಪೋಗುಮೇಗುಗಳನ್ನೂ (?)
ಹೆದರಿಕೆ ಬೆದರಿಕೆಗಳನ್ನೂ

ಹೆಚ್ಚು ಕುಂದುಗಳನ್ನೂ ತಿಳಿದು
ಅವುಗಳನ್ನು ಕಾಣಲು
ಕಾಣಿಸಲು ಅವುಗಳ ಮೇಲೆ
ರೇಗಲೂ ಅವುಗಳನ್ನು
ರೇಗಿಸಲೂ ಅವಿತುಕೊಳ್ಳಲೂ
ಅವಿತುಕೊಳ್ಳಿಸಲೂ ಒಡ್ಡಲು
ಒಡ್ಡಿಸಲೂ ಪ್ರವೇಶ
ಮಾಡಿಸಲೂ ಬೇರೆಡೆಯಲ್ಲಿ
ಉಳಿಯುವ ಹಾಗೆ ಮಾಡಲೂ
ಕಾಣದಿರುವುದನ್ನು
ಕಾಣಿಸಲೂ

ತಡೆಯುವುದಕ್ಕಾಗದುದನ್ನು
ತಡೆಯಲೂ ಹತ್ತದೆ
ಇರುವುದನ್ನು ಹತ್ತಿಸಲೂ
ಚಾತುರ್ಯದಿಂದ ಅವುಗಳ
ಮೂರು ಸಂಕೇತ ಸ್ಥಳಗಳನ್ನೂ
ಆರು ಬಗೆಯ
ರತಿಕ್ರೀಡೆಯನ್ನೂ ಎರಡು
ಹೆಜ್ಜೆಯನ್ನೂ ಮೂರು
ಹೊತ್ತನ್ನೂ ಮೃಗದ ಮೂರು
ಸ್ಥಿತಿಗಳನ್ನೂ ಆರು
ಪೋಷಣಾಕ್ರಮವನ್ನೂ

ಗಾಳಿಯನ್ನೂ ರಕ್ಕೆಯನ್ನೂ
ತಿಳಿದವನಾದ ಕಾರಣ
ಅಪಾಯವಿಲ್ಲವೆಂದು ನಂಬಿ
ಬರುವ ಪ್ರಾಣಿಯನ್ನೂ
ಸಂದೇಹದಿಂದ ಬರುವ
ಪ್ರಾಣಿಯನ್ನೂ ತಿಳಿದು
ಕೆರಳದೇ ಇರುವುದನ್ನು
ಕೆರಳಿಸಲೂ ಕೆರಳಿರುವುದನ್ನು
ತೊಲಗಿಸಲೂ ನಂಬದೇ
ಇರುವುದನ್ನು ನಂಬಿಸಲೂ
ನಂಬಿದುದನ್ನು ಬಿಡಿಸಲೂ

ಒಳಗೆ ಪ್ರವೇಶ ಮಾಡುವುದಕ್ಕೆ
ಅವಕಾಶಮಾಡಲೂ
ಅನವಾಗದ ಮೃಗವನ್ನು ಅನ
ಮಾಡಿಕೊಳ್ಳಲೂ
ಪ್ರೀತಿಸಿಯೂ ಪ್ರೀತಿಸದ
ಪ್ರೇಮಿಗಳ ಹಾಗೆ
ವ್ಯಥೆಪಡಿಸಲೂ ಜೂಜಿನಲ್ಲಿ
ಒತ್ತೆಯನ್ನು ಸೋತವರಂತೆ
ಅಡ್ಡಗಟ್ಟಲೂ ಎಸೆದ ದಿಕ್ಕಿಗೆ
ಓಡಿಸಲೂ
ಕುಮಾರಸ್ವಾಮಿಯ

(ಷಣ್ಮುಖನ) ಮತ್ತು ನಿಮ್ಮ
ಸಾಕ್ಷಿಯಾಗಿ ನಾನೇ
ಸಮರ್ಥನಾಗಿದ್ದೇನೆ.

**ಕಂ|| ಬರೆದಂತೆ ಬೆನ್ನ ಕರ್ಪೆಸೆ
ದಿರೆ ಸೂಚಮನುರ್ಚಿ
ಪುಲ್ಲೆಗಾಟಿಸಿ ಮಲೆತ|
ರ್ಪೆರಲೆಯ
ಸೋಲಮನೞ್ತಿಯೊ
ಳರಿಕೇಸರಿ ನಿಂದು
ನೋೞ್ಪುದುದರಸಲ್ತೇ|| ೪೪||**

ಪದ್ಯ-೪೪:ಪದವಿಭಾಗ-ಅರ್ಥ:ಬರೆದಂತೆ ಬೆನ್ನ ಕರ್ಪುರ ಎಸೆದಿರೆ ಸೂಚಮನು ಉರ್ಚಿ ಪುಲ್ಲೆಗಾಟಿಸಿ (ಹುಲ್ಲಿನ ಸುಳಿಗಳನ್ನು ಮುರಿದು ಹೆಣ್ಣಿನ ಜಿಂಕೆಗಾಗಿ) ಮಲೆತರ್ಪ ಎರಲೆಯ ಸೋಲಮನು ಅೞ್ತಿಯೊಳ್ (ಗಂಡುಜಿಂಕೆಯ ಮೋಹವನ್ನು ಪ್ರೀತಿಯಿಂದ ನೋಡುವುದು) ಅರಿಕೇಸರಿ ನಿಂದು

ನೋಟ್ಟಿದೊಂದು ಅರಸಲ್ತೇ (ನೋಡುವುದು ರಾಜರಿಗೆ ಯೋಗ್ಯವಾದ ವಿನೋದವಲ್ಲವೇ?)|

ಪದ್ಯ-೪೪:ಅರ್ಥ: . ಅರ್ಜುನನೇ, ಚಿತ್ರಿಸಿದ ಹಾಗೆ ಬೆನ್ನಿನ ಕಪ್ಪು ಮಚ್ಚೆಯು ಕಾಣುತ್ತಿರಲು, ಹುಲ್ಲಿನ ಸುಳಿಗಳನ್ನು ಮುರಿದು ಹೆಣ್ಣಿನ ಜಿಂಕೆಗಾಗಿ ಬಯಸಿ ಸೊಕ್ಕಿನಿಂದ ಬರುತ್ತಿರುವ

ಗಂಡುಜಿಂಕೆಯ ಮೋಹವನ್ನು ಪ್ರೀತಿಯಿಂದ ನೋಡುವುದು ರಾಜರಿಗೆ ಯೋಗ್ಯವಾದ ವಿನೋದವಲ್ಲವೇ?

ಕಂ||

ಪದಮುಮನಿಂಬುಮನಣಮ

ಱ

ಯದದೇವುದು ಬದ್ದೆ ಬೆಳ್ಮೆಗಂ

ಪಜ್ಜೆದಲೆಂ|

ಬುದನೆರಡುಮನಱಿವಾತನೆ

ಚದುರಂ ಚದುರಂಗೆ ಬದ್ದೆ ವಜ್ಜೆಗಳೊಳವೇ|| ೪೫||

ಪದ್ಯ-೪೫:ಪದವಿಭಾಗ-ಅರ್ಥ:ಪದಮುಮಂ ಇಂಬುಮಂ ಅಣಂ ಅಱಿಯದದು ಏವುದು ಬದ್ದೆ ಬೆಳ್ಮಿಗಂ(ಪಾದ ಮತ್ತು ಅದರ ಹರವುನ್ನೂ ತಿಳಿಯದ ಆ ಪ್ರೌಢಿಮೆಯೆಂತಹುದು), ಪಜ್ಜೆದಲ್ ಎಂಬುದಂ ಎರಡುಮಂ ಅಱಿವಾತನೆ

ಚದುರಂ (ನಿಜವಾದ ಹೆಜ್ಜೆ, ಅದರ ಲಕ್ಷಣ ಎರಡನ್ನೂ ತಿಳಿದವನೇ ಚತುರ), ಚದುರಂಗೆ ಬದ್ದೆ ವಜ್ಜೆಗಳು ಒಳವೇ (ಜಾಣನಿಗೂ ತಿಳಿಯದ ಪ್ರೌಢವಾದ ಹೆಜ್ಜೆಯ ಗುರುಗಳುಂಟೆ?)

ಪದ್ಯ-೪೫:ಅರ್ಥ: ಪಾದ ಮತ್ತು ಅದರ ಹರವುನ್ನೂ ಸ್ವಲ್ಪವೂ ತಿಳಿಯದ ಆ ಪ್ರೌಢಿಮೆಯೆಂತಹುದು?

ಅಂಜುವ ಮೃಗ ಅದರ

ನಿಜವಾದ ಹೆಜ್ಜೆ ಎರಡನ್ನೂ

ತಿಳಿದವನೇ ಚತುರ.

ಜಾಣನಿಗೂ ತಿಳಿಯದ

ಪ್ರೌಢವಾದ ಹೆಜ್ಜೆಯ

ಗುರುಗಳುಂಟೆ?

ವ|| ಮತ್ತಂ ಪಂದಿವೇಂಟೆಯ ಮಾತಂ ಬಿನ್ನಪಂಗೆಯ್ವಂ-

ವಚನ:ಪದವಿಭಾಗ-

ಅರ್ಥ:ಮತ್ತಂ

ಪಂದಿವೇಂಟೆಯ ಮಾತಂ

ಬಿನ್ನಪಂ ಗೆಯ್ವೆಂ-

ವಚನ:ಅರ್ಥ:ಇನ್ನು

ಹಂದಿಯ ಬೇಟೆಯ ಮಾತನ್ನು

ಅರಿಕೆಕೊಳ್ಳುತ್ತೇನೆ-

ಪಿರಿಯಕ್ಕರ|| ನೆಲನಂ

ನಿಱುಗೆಯಂ ನಡೆವೊಂದು

ಪದಮುಮಂ ಸೋವಳಿ

ಮೇವಳಿ ಬಿಸುವಳಿಯಂ

ಬಲಮಂ

ಶಕುನಮನೊಳ್ಳಿತ್ತುಪಾಯ

ಮಂ ಪಿಡಿವಂದೀತನೆ ವಂದಿ

ಕುರುಡು ಕುಂಟೆಂ|

ದಲಸದಱಿಂದಿಂತು ಬಲ್ಮೆಗೆ

ಬೆರಲೆತ್ತಿ ಪಜ್ಜೆಯಂ ನೆಲೆಗಳಂ

ಕಿಡಲೀಯದೆ

ಸಿಲೆಯ ಮೇಲಾದೊಡಂ

ಶಕುನಮಂ ನಿಱಪಂತೆ

ನಿಱಿಸುವೆಂ ಪಂದಿಯಂ ನೀಂ

ಮೆಚ್ಚಲು|| ೪೬||

ಪದ್ಯ-೪೬:ಪದವಿಭಾಗ-

ಅರ್ಥ:ನೆಲನಂ ನಿಱುಗೆಯಂ

ನಡೆವೊಂದು
ಪದಮುಮಂ(ನೆಲವನ್ನೂ
ನಿಂತ ಸ್ಥಳವನ್ನೂ ನಡೆಯುವ
ಹೆಜ್ಜೆಯ ರೀತಿಯನ್ನೂ)
ಸೋವಳಿ ಮೇವಳಿ
ಬಿಸುವಳಿಯಂ ಬಲಮಂ
ಶಕುನಮಂ
ಒಳ್ಳಿತ್ತುಪಾಯಮಂ
(ಹಿಡಿಯುವವುದು,
ಮೇಯುವಿಕೆ,
ಒಟ್ಟುಗೂಡಿಸುವಿಕೆ,

ಶಕ್ತಿಯನ್ನೂ ಶಕುನ
ಸಂಕೇತಗಳನ್ನೂ ಒಳ್ಳೆಯ
ಉಪಾಯಗಳನ್ನೂ,)
ಪಿಡಿವಂದು ಈತನೆ, ವಂದಿ
ಕುರುಡು ಕುಂಟೆಂದು ಅಲಸದೆ
ಅಱಿದು (ಹಂದಿಯು
ಕುರುಡು ಅಥವಾ ಕುಂಟು
ಎಂದು ಉದಾಸೀನಮಾಡದೆ)
ಇಂತು ಬಲ್ಮೆಗೆ ಬೆರಲು ಎತ್ತಿ
ಪಜ್ಜೆಯಂ ನೆಲೆಗಳಂ
ಕಿಡಲೀಯದೆ (ನನ್ನ ಶಕ್ತಿಯನ್ನು

ಪ್ರದರ್ಶಿಸಿ ಹೆಜ್ಜೆಯ
ಗುರುಗಳನ್ನು ಅವುಗಳ
ವಸತಿಗಳನ್ನು ಕೆಡಿಸದೆ)
ಸಿಲೆಯ ಮೇಲಾದೊಡಂ
ಶಕುನಮಂ ನಿಱಿಪಂತೆ
ನಿಱಿಸುವೆಂ ಪಂದಿಯಂ
(ಕಲ್ಲಿನ ಮೇಲಾದರೂ
ಸಂಕೇತವನ್ನು ಸ್ಥಾಪಿಸುವ
ಹಾಗೆ ನೀನು ಮೆಚ್ಚುವಂತೆ
ಹಂದಿಯನ್ನು ನಿಲ್ಲಿಸುತ್ತೇನೆ)
ನೀಂ ಮೆಚ್ಚಲು

ಪದ್ಯ-೪೬:ಅರ್ಥ:

ಹಂದಿಯನ್ನು ಹಿಡಿಯುವಾಗ ನೆಲವನ್ನೂ ನಿಂತ ಸ್ಥಳವನ್ನೂ ನಡೆಯುವ ಹೆಜ್ಜೆಯ ರೀತಿಯನ್ನೂ, ಹಿಡಿಯುವವುದು, ಮೇಯುವಿಕೆ, ಒಟ್ಟುಗೂಡಿಸುವಿಕೆ, ಶಕ್ತಿಯನ್ನೂ ಶಕುನ ಸಂಕೇತಗಳನ್ನೂ ಒಳ್ಳೆಯ ಉಪಾಯಗಳನ್ನೂ,

(ಉಳ್ಳವನು) ಇವನೇ (ಎಂಬ ಪ್ರೌಢಿಮೆಯನ್ನು ಪಡೆದಿದ್ದೇನೆ). ಹಂದಿಯು ಕುರುಡು ಅಥವಾ ಕುಂಟು ಎಂದು ಉದಾಸೀನಮಾಡದೆ ನನ್ನ ಶಕ್ತಿಯನ್ನು ಪ್ರದರ್ಶಿಸಿ ಹೆಜ್ಜೆಯ ಗುರುಗಳನ್ನು ಅವುಗಳ ವಸತಿಗಳನ್ನು ಕೆಡಿಸದೆ ಕಲ್ಲಿನ ಮೇಲಾದರೂ ಸಂಕೇತವನ್ನು ಸ್ಥಾಪಿಸುವ ಹಾಗೆ ನೀನು

ಮೆಚ್ಚುವಂತೆ ಹಂದಿಯನ್ನು ನಿಲ್ಲಿಸುತ್ತೇನೆ.

ವ|| ಮತ್ತಂ ಪಂದಿವೇಂಟೆಯ ನಾಯೆಂತಪ್ಪುವೆಂದೊಡಸಿಯ ನಡುವುಮಗಲುರಮುಂ ತಳ್ತು ಕಟ್ಟಿದ ಕಿವಿಯುಂ ಪುರ್ವುಂ ತೋರಮಾಗಿ ನಿರ್ಮಾಂಸಮಪ್ಪ ಕಾಲ್ಗಳುಂ ನೆಲನಂ ಮುಟ್ಟದುಗುರ್ಗಳುಮನುಳ್ಳು ದಾಗಿ ಜಾತ್ಯಶ್ವದಂತೆ

ಬೇಗಮಾಗಿ ಕೋಳಿ
ಕಾಳಿಕಾಱನಂತೆ
ಬಱಿಯಱಿವಿಡಿದು ತುಂಬಿನ
ನೀರನುರ್ಚಿದಾಗಳಡೆ ಪರಿದು
ಮನ್ನೆಯರಂತೆ ಕಾದಿಯಲಸದೆ
ಸೂಳೆಯಂತೆ ಕೋಳಂ
ಪಟ್ಟಿಟ್ಟಿಸದೆ ತಕ್ಕನಂತೆ
ನಂಬಿಸಿಯ
ಮೊತ್ತರದಂತೊತ್ತಿಯು
ಮುರಿಯಳುರ್ವಂತಳುರ್ದು
ಕೊಳ್ವುದಿದು ಪಂದಿವೇಂಟೆಯ

ನಾಯ್ ಮತ್ತಂ
ಕಿಱುವೇಂಟೆಯ ನಾಯಂ
ಕೊಂಡುಂ ಜಾಱಿಯುಂ
ನೆಲನುಂ ಪೊೞ್ತುಂ
ಪೊಲನುಮನಱಿದು
ಬೞಿಯೊಳ್ ಪೊಸತುಂ
ಪೞದುಮನಱಿದು
ಪರಿಯಿಸಲ್ ನೀನೆ
ಬಲ್ಲೆಯದನು ಆನೆ ಬಲ್ಲೆನೆಂದು
ಬಿನ್ನಪಂಗೆಯ್ವೆನಂತುಮಲ್ಲದೆ
ಬಲ್ಮೆಗಂ ಬಸನಕ್ಕಂ ಸವಿಯಪ್ಪ

ಕಿಱುವೇಂಟೆಯುಂ ಪೆರ್ವೇಂಟೆಯುಮಲ್ಲದುೞಿದ ಬೇಂಟೆಯಂ ಬೇಂಟೆಯೆನ್ನೆಂ-

ವಚನ:ಪದವಿಭಾಗ-

ಅರ್ಥ:ಮತ್ತಂ ಪಂದಿವೇಂಟೆಯ (ಹಂದಿಯ ಬೇಟೆಯ ನಾಯಿಯು) ನಾಯಿ ಎಂತಪ್ಪುವು ಎಂದೊಡೆ ಅಸಿಯ ನಡುವುಂ ಅಗಲು ಉರಮುಂ ತಳ್ತು ಕಟ್ಟಿದ ಕಿವಿಯುಂ ಪುರ್ವುಂ

(ತೆಳುವಾದ ಸೊಂಟ, ಅಗಲವಾದ ಎದೆ, ನೆಟ್ಟಗೆ ನಿಂತಿರುವ ಕಿವಿಗಳು ಬಾಗಿದ ಹುಬ್ಬು,) ತೋರಮಾಗಿ ನಿರ್ಮಾಂಸಮಪ್ಪ ಕಾಲ್ಗಳುಂ ನೆಲನಂ ಮುಟ್ಟದ ಉಗುರ್ಗಳುನು ಉಳ್ಳುದಾಗಿ ಜಾತ್ಯಶ್ವದಂತೆ ಬೇಗಮಾಗಿ (ದಪ್ಪವಾಗಿ ಮಾಂಸವಿಲ್ಲದ ಕಾಲುಗಳು, ನೆಲವನ್ನು ಮುಟ್ಟದ ಉಗುರು

ಇವುಗಳಿಂದ ಕೂಡಿ ಜಾತಿಯ ಕುದುರೆಯಂತೆ ವೇಗವಾಗಿ ನಡೆದು) ಕೋಳಿ ಕಾಳಿಕಾಱನಂತೆ ಬಱಿಯ ಅಱಿವಿಡಿದು (ಮಾರ್ಗವನ್ನು ಹಿಡಿದು) ತುಂಬಿನ ನೀರನು ಉರ್ಚಿದಾಗಳಡೆ ಪರಿದು (ತೂಬಿನ ನೀರು ಹರಿದ ಹಾಗೆ) ಮನ್ನೆಯರಂತೆ ಕಾದಿಯ ಅಲಸದೆ (ಕಾದಲು ಆಲಸ್ಯ ಪಡದೆ) ಸೂಳೆಯಂತೆ ಕೋಳಂ

ಪಟ್ಟಟ್ಟಿಸದೆ (ಸೂಳೆಯಂತೆ
ಸುಲಿಗೆಮಾಡಿ ಓಡಿಸದೆ)
ತಕ್ಕನಂತೆ ನಂಬಿಸಿಯ
ಮೊತ್ತರದಂತೆ ಒತ್ತಿಯುಂ
ಉರಿಯ ಅಳುರ್ವಂತೆ
ಅಳುರ್ದುಕೊಳ್ವುದು (ಒತ್ತಿ
ಉರಿಯು ಹರಡುವಂತೆ
ಹರಡಿಕೊಳ್ಳುವುದು.) ಇದು
ಪಂದಿವೇಂಟೆಯ ನಾಯ್
(ಇದು ಹಂದಿಬೇಟೆಯಲ್ಲಿ
ಉಪಯೋಗಿಸುವ ನಾಯಿಯ

ಲಕ್ಷಣ.) ಮತ್ತಂ
ಕಿಱುವೇಂಟೆಯ ನಾಯಂ
ಕೊಂಡುಂ ಜಾಱಿಯುಂ
ನೆಲನುಂ ಪೊೞ್ತುಂ
ಪೊಲನುಮನಱಿದು
ಬೞಿಯೊಳ್ ಪೊಸತುಂ
ಪೞದುಮನಱಿದು
ಪರಿಯಿಸಲ್ ನೀನೆ ಬಲ್ಲೆಯ್
ಎದನು ನಾನೆ
ಬಲ್ಲೆನೆಂದು(ದಾರಿಯಲ್ಲಿಯೇ
ಹೊಸದು

ಹಳೆಯದೆಂಬುದನ್ನು ತಿಳಿದು ಹರಿಯಿಸಲು ನೀನೇ ಶಕ್ತನೆಂಬುದನ್ನು ನಾನು ಬಲ್ಲೆ, ಎಂದು) ಬಿನ್ನಪಂಗೆಯ್ವೆನು ಅಂತುಮಲ್ಲದೆ ಬಲ್ಮೆಗಂ ಬಸನಕ್ಕಂ ಸವಿಯಪ್ಪ ಕಿಱುವೇಂಟೆಯುಂ (ಶಕ್ತಿಪ್ರದರ್ಶನಕ್ಕೂ ಸವಿಯಾಗಿರುವ ಕಿರುಬೇಟೆಯ್ಯೂ) ಪೆರ್ವೇಂಟೆಯುಂ ಅಲ್ಲದೆ

ಉಚಿದ ಬೇಂಟೆಯಂ

ಬೇಂಟೆಯೆನ್ನೆಂ - ಬೇಂಟೆ

ಎನ್ನೆಂ (ಹೆಬ್ಬೇಟೆಯನ್ನೂ

ಬಿಟ್ಟು ಉಳಿದ ಬೇಟೆಯನ್ನು

ಬೇಟೆಯೆಂದೇ ನಾನು

ಕರೆಯುವುದಿಲ್ಲ)-

ವಚನ:ಅರ್ಥ:ಮತ್ತು

ಹಂದಿಯ ಬೇಟೆಯ

ನಾಯಿಯು ಎಂತಹುದು

ಎಂದರೆ ತೆಳುವಾದ ಸೊಂಟ,

ಅಗಲವಾದ ಎದೆ, ನೆಟ್ಟಗೆ

ನಿಂತಿರುವ ಕಿವಿಗಳು ಬಾಗಿದ
ಹುಬ್ಬು, ದಪ್ಪವಾಗಿ
ಮಾಂಸವಿಲ್ಲದ ಕಾಲುಗಳು,
ನೆಲವನ್ನು ಮುಟ್ಟದ ಉಗುರು
ಇವುಗಳಿಂದ ಕೂಡಿ ಜಾತಿಯ
ಕುದುರೆಯಂತೆ ವೇಗವಾಗಿ
ನಡೆದು ಶಾಕ್ತೇಯಮತದ
ವಂಚಕನಂತೆ ತನ್ನ
ಮಾರ್ಗವನ್ನು ಹಿಡಿದು,
ತೂಬಿನ ನೀರಿನ ಹಾಗೆ ಸಡಿಲ
ಮಾಡಿದ ತಕ್ಷಣವೇ ಅಡ್ಡವಾಗಿ

ಹರಿದು, ಮಾನ್ಯರ ಸೇವಕನಂತೆ ಕಾದಲು ಆಲಸ್ಯ ಪಡದೆ ಸೂಳೆಯಂತೆ ಸುಲಿಗೆಮಾಡಿ ಓಡಿಸದೆ, ಯೋಗ್ಯನಂತೆ ನಂಬಿಸಿ ಒತ್ತರದಂತೆ (?) ಒತ್ತಿ ಉರಿಯು ಹರಡುವಂತೆ ಹರಡಿಕೊಳ್ಳುವುದು. ಇದು ಹಂದಿಬೇಟೆಯಲ್ಲಿ ಉಪಯೋಗಿಸುವ ನಾಯಿಯ ಲಕ್ಷಣ. ಇನ್ನು ಕಿರುಬೇಟೆಯ ನಾಯನ್ನು ತೆಗೆದುಕೊಂಡು

ಸಡಿಲ ಮಾಡಿದ ನೆಲದ
ಸ್ವರೂಪವನ್ನು ಹೊತ್ತನ್ನೂ
ಹೊಲವನ್ನೂ ತಿಳಿದು
ದಾರಿಯಲ್ಲಿಯೇ ಹೊಸದು
ಹಳೆಯದೆಂಬುದನ್ನು ತಿಳಿದು
ಹರಿಯಿಸಲು ನೀನೇ
ಶಕ್ತನೆಂಬುದನ್ನು ನಾನು ಬಲ್ಲೆ.
ಅಲ್ಲದೆ ಶಕ್ತಿಪ್ರದರ್ಶನಕ್ಕೂ
ಸವಿಯಾಗಿರುವ
ಕಿರುಬೇಟೆಯ್ನೂ
ಹೆಬ್ಬೇಟೆಯನ್ನೂ ಬಿಟ್ಟು

ಉಳಿದ ಬೇಟೆಯನ್ನು
ಬೇಟೆಯೆಂದೇ ನಾನು
ಕರೆಯುವುದಿಲ್ಲ.

ಪಿರಿಯಕ್ಕರ|| ಪಸಿವು ದೊರೆಕೊಳ್ಳುಮುಣಿಸುಗಳಿನಿಕೆ ಯ್ಯುಮಾವಂದದೊಳ್ ಕನಲ್ದಾದ ಮೆಯ್ಯ ನಸಿಯನಾಗಿಪುದುಳಿದುವಪ್ಪು ವು ಬಗೆಗೊಳಲಪ್ಪುದು ಮೃಗದ ಮೆಯ್ಯೊಳ್|

ನಿಸದಮೆಸೆವುದಂ ಬಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು ಬಸನಮೆಂದಱಿಯದೇಳಿಸುವರ್ ಬೇಂಟೆಯಂ ಬೇಂಟೆಯೆ ಬಿನದಂಗಳರಸಲ್ತೇ|| ೪೭||

ಪದ್ಯ-೪೭:ಪದವಿಭಾಗ-ಅರ್ಥ:ಪಸಿವು ದೊರೆಕೊಳ್ಗುಂ ಉಣಿಸುಗಳ್ ನಿಕೆಯ್ಗುಂ (ಬೇಟೆಯು ಹಸಿವುಂಟು ಮಾಡುತ್ತದೆ. ಆಹಾರ

ರುಚಿಯಾಗುತ್ತದೆ)
ಆವಂದದೊಳ್ ಕನಲ್ದಾದ
ಮೆಯ್ಯನು
ಅಸಿಯನಾಗಿಪುದು (ಕೊಬ್ಬಿದ
ಬೊಜ್ಜು ಕರಗಿ ಮೈ
ತೆಳ್ಳಗಾಗುತ್ತದೆ)
ಉಳಿದುವಪ್ಪುವು ಬಗೆಗೊಳು
ಅಪ್ಪುದು ಮೃಗದ ಮೆಯ್ಯೊಳ್
ನಿಸದಂ ಎಸೆವುದಂ (ಮೃಗಗಳ
ಶರೀರ ಮತ್ತು ಮನಸ್ಸಿನ
ಅರಿವುಂಟಾಗುತ್ತದೆ.) ಬಲ್ಲಾಳ

ಬಿಲ್ಬಲ್ಮೆ ತನ್ನೊಳು ಅಮಿಸುತೆ ಲೇಸಪ್ಪುದು (ಬಿಲ್ಲಿನ ಪ್ರೌಢಿಮೆ ತನ್ನಲ್ಲಿ ಪ್ರಕಾಶಿಸಿ ಒಳಿತಾಗುತ್ತದೆ) ಬಸನಮೆಂದು ಅಱಿಯದೆ ಏಳಿಸುವರ್ ಬೇಂಟೆಯಂ (ಳಿಯದವರು ಬೇಟೆಯನ್ನು ವ್ಯಸನವೆಂದು ಕರೆಯುತ್ತಾರೆ.) ಬೇಂಟೆಯೆ ಬಿನದಂಗಳ ಅರಸಲ್ತೇ!

ಪದ್ಯ-೪೭:ಅರ್ಥ: ಬೇಟೆಯು ಹಸಿವುಂಟು ಮಾಡುತ್ತದೆ.

ಆಹಾರ ರುಚಿಯಾಗುತ್ತದೆ.
ಯಾವ ರೀತಿಯಲ್ಲಾದರೂ
ಕೆರಳಿ ಬೊಜ್ಜು ಕರಗಿ ಮೈ
ತೆಳ್ಳಗಾಗುತ್ತದೆ. ಉಳಿದುವೂ
ಆಗುತ್ತದೆ. ಮೃಗಗಳ ಶರೀರ
ಮತ್ತು ಮನಸ್ಸಿನ
ಅರಿವುಂಟಾಗುತ್ತದೆ.
ಪರಾಕ್ರಮಶಾಲಿಯ ಬಿಲ್ಲಿನ
ಪ್ರೌಢಿಮೆ ತನ್ನಲ್ಲಿ ಪ್ರಕಾಶಿಸಿ
ಒಳಿತಾಗುತ್ತದೆ.
ಬಾಣಪ್ರಯೋಗ

ಮಾಡುವುದರಿಂದ ತನಗೂ ಒಳ್ಳೆಯದಾಗುತ್ತದೆ. ತಿಳಿಯದವರು ಬೇಟೆಯನ್ನು ವ್ಯಸನವೆಂದು ಕರೆಯುತ್ತಾರೆ. ಬೇಟೆಯು ವಿನೋದಗಳ ರಾಜನಲ್ಲವೆ!

<u>ಬೇಟೆಗೆ ಪ್ರವೇಶ - ಬೇಟೆ</u>

ವ|| ಎಂದು ಬಿನ್ನಪಂಗೆಯ್ದ ಬೇಂಟೆಯಾತಂಗೆ ಮೃಗ ವ್ಯಾಯಾಮ ಕಾರ್ತಿಕೇಯಂ

ಮೆಚ್ಚಿ ಮೆಚ್ಚುಗೊಟ್ಟು
ತೊವಲನಿಕ್ಕೆಂದು ಮುಂದೆ
ಪೇೞ್ದಿಟ್ಟಿ ನಾರಾಯಣನುಂ
ತಾನುಮಂತಪುರ
ಪರಿವಾರಂಬೆರಸು ಬೇಂಟೆಗೆ
ಪೊಱಮಟ್ಟು ಪರಿಯ ತಾಣಕ್ಕೆ
ವಂದು ಬೇಲಿಯ
ಕೆಲದೊಳಲ್ಲದೆ
ಪೆಱಗಣುಲಿಪಿಂಗಮುಳ್ಳೊಳ
ಕ್ಕಂ ಗೆಂಟಾಗಿ ಬೀಡಂ ಬಿಡಿಸಿ
ಬೇಂಟೆಕಾಱನ ಸಮೆದ

ಮಕರತೋರಣಮುಮಂ
ಗುಣಣೆಯ ಬಾಣಸಿನ
ಮಜ್ಜನದ ರಾಣಿವಾಸದ
ಮನೆಗಳುಮಂ ನನೆಯ
ಪಂದರುಮಂ ತಳಿರ
ಕಾವಣಂಗಳುಮಂ ಮಾಡದ
ನೆಲೆಯ
ಚೌಪಳಿಗೆಗಳುಮನವಱ
ಮೇಲಿರ್ದೆಲೆಯಡಕೆಯುಮಂ
ತೆಂಗಿನೆಳನೀರುಮಂ
ಕೊಳಲಿಂಬಪ್ಪಂತಿರೆ ಮಾಡಿ

ನಟ್ಟ ಕೌಂಗಿನ ತೆಂಗಿನ
ಮರಂಗಳುಮಂ ಪಣ್ವೆರಸು
ನಟ್ಟ ಮೈಂದವಾೞಿಗಳುಮಂ
ತೊವಲ್ವೆರಸು
ನಟ್ಟಾಲಂಗಳುಮನಮರೆ
ಮಾಡಿದ ಬಟ್ಟುಳಿಯ ಕಕ್ಕುಂಬ
ತೊಡಂಬೆಯ ಮೂಡಿಗೆಯ
ಕದಳಿಕೆಯ
ಕಂಡಪಟಂಗಳುಮಂ ಪಲವುಂ
ತೆಱದ ಪಲವುಂ ಪೊರೆಯಾಗಿ
ಕಟ್ಟಿದ ಬಲೆಗಳುಮಂ

ಪಡಿಗಳನಮರ್ಚಿ ಬಿಲ್ಲುಂ

ಕುದುರೆಯುಂ ಕಾಲಾಳುಂ

ನಾಯ್ಗಳುಮಂ ತಿಣ್ಣಿಮಿರಿಸಿ

ಕೆಯ್ಯಂ

ನೇಣುಮನಳವಿಯೊಳ್ ಕೂಡಿ

ನಡೆಯಗ್ವೇೞ್ದು

ಬೇಂಟೆವಸದನಂಗೊಂಡು

ಕಂಡಿಯ

ಬಾಗಿಲೊಳುದಾತ್ತನಾರಾಯಣ

ನುಂ ನಾರಾಯಣನುಮಿರ್ದು

ಪುಗಿಲ ಪುಲ್ಲೆಯ

ಮೊದಲುರಮುಮಂ ಪೆಱಗಣ ಪುಲ್ಲೆಯ ನಡುವುಮನಯ್ದರೊಳ್ ಮೂಱುವಂ ಮೂರೊಳೆರಡು ಮನೆರಡರೊಳೊಂದುಮನೆಚ್ಚು ಬಿಲ್ಲ ಬಲ್ಮೆಯಂ ಮೆದು-

ವಚನ:ಪದವಿಭಾಗ-

ಅರ್ಥ:ಎಂದು ಬಿನ್ನಪಂಗೆಯ್ದ ಬೇಂಟೆಯಾತಂಗೆ ಮೃಗ ವ್ಯಾಯಾಮ ಕಾರ್ತಿಕೇಯಂ (ಅರ್ಜುನನು) ಮೆಚ್ಚಿ

ಮೆಚ್ಚುಗೊಟ್ಟು
ತೊವಲನಿಕ್ಕೆಂದು ಮುಂದೆ
ಪೇೞ್ದಿ ಇಟ್ಟಿ
(ಬಹುಮಾನವನ್ನಿತ್ತು
ಚಿಗುರನ್ನು ಹಾಕು ಎಂದು
ಹೇಳಿ) ನಾರಾಯಣನುಂ
ತಾನುಮಂ ಅಂತಪುರ
ಪರಿವಾರಂಬೆರಸು ಬೇಂಟೆಗೆ
ಪೊಱಮಟ್ಟು (ಹೊರಟು)
ಪರಿಯ ತಾಣಕ್ಕೆ ವಂದು
(ಬೇಟೆಗೆ ಹೊರಟು

ಪ್ರವೇಶಸ್ಥಳಕ್ಕೆ ಬಂದು)
ಬೇಲಿಯ ಕೆಲದೊಳಲ್ಲದೆ
ಪೆಱಗಣು (ಹಿಂದಿನ)
ಲಿಪಿಂಗಮಂ ಉಳ್ಳೊಳಕ್ಕಂ
ಗೆಂಟಾಗಿ (ಸದ್ದಿಗೂ
ಗಗದ್ದಲಕ್ಕೂ ದೂರವಾಗಿ)
ಬೀಡಂ ಬಿಡಿಸಿ ಬೇಂಟೆಕಾಱಿನ
ಸಮೆದ (ಮಾಡಿದ್ದ)
ಮಕರತೋರಣಮುಮಂ
ಗುಣಣೆಯ ಬಾಣಸಿನ
ಮಜ್ಜನದ ರಾಣಿವಾಸದ

ಮನೆಗಳುಮಂ ನನೆಯ
ಪಂದರುಮಂ ತಳಿರ
ಕಾವಣಂಗಳುಮಂ ಮಾಡದ
ನೆಲೆಯ ಚೌಪಳಿಗೆಗಳುಂ
ಅನವಱ ಮೇಲಿರ್ದ
ಎಲೆಯಡಕೆಯುಮಂ
(ನೃತ್ಯಶಾಲೆ, ಪಾಕಶಾಲೆ,
ಸ್ನಾನಗೃಹ, ಅಂತಪುರ,
ಹೂವಿನ ಚಪ್ಪರ, ಚಿಗುರಿನ
ಹಂದರ, ಉಪ್ಪರಿಗೆಯ
ಮನೆಯ ತೊಟ್ಟಿಗಳು,

ಅವುಗಳ ಮೇಲಿದ್ದ,
ಎಲೆಯಡಿಕೆ) ತೆಂಗಿನ
ಎಳನೀರುಮಂ ಕೊಳಲು
ಇಂಬಪ್ಪಂತಿರೆ
(ತೆಗೆದುಕೊಳ್ಳಲು
ಅನುಕೂಲವಾಗುವ
ಹಾಗೆ)ಮಾಡಿ ನಟ್ಟ ಕೌಂಗಿನ
ತೆಂಗಿನ ಮರಂಗಳುಮಂ
ಪಣ್ವೆರಸು (ಹಣ್ಣಿನಿಂದ ಕೂಡಿ)
ನಟ್ಟ ಮೈಂದವಾಟೆಗಳುಮಂ
ತೊವಲ್ವೆರಸು (ಚಿಗುರಿನಿಂದ

ಕೂಡಿದ) ನಟ್ಟ
ಆಲಂಗಳುಮನಮರೆ
ಮಾಡಿದ ಬಟ್ಟುಳಿಯ ಕಕ್ಕುಂಬ
ತೊಡಂಬೆಯ ಮೂಡಿಗೆಯ
ಕದಳಿಕೆಯ
ಕಂಡಪಟಂಗಳುಮಂ
(ಗೊಂಚಲುಗಳಿಂದ ಮಾಡಿದ
ಮೂಡಿಗೆ-ಬತ್ತಳಿಕೆ ಬಾವುಟ
ತೆರೆಗಳು) ಪಲವುಂ ತೆಱದ
ಪಲವುಂ ಪೊರೆಯಾಗಿ ಕಟ್ಟಿದ
ಬಲೆಗಳುಮಂ

ಪಡಿಗಳನಮರ್ಚಿ ಬಿಲ್ಲುಂ
ಕುದುರೆಯುಂ ಕಾಲಾಳುಂ
ನಾಯ್ಗಳುಮಂ ತಿಣ್ಣಿಮಿರಿಸಿ
ಕೆಯ್ಯಂ
ನೇಣುಮನಳವಿಯೊಳ್ ಕೂಡಿ
ನಡೆಯಲ್ವೇಳ್ದು
ಬೇಂಟೆವಸದನಂಗೊಂಡು
ಕಂಡಿಯ ಬಾಗಿಲೊಳು
ಉದಾತ್ತನಾರಾಯಣನುಂ
ನಾರಾಯಣನುಂ (ಅರ್ಜುನ
ಕೃಷ್ಣರು) ಇರ್ದು ಪುಗಿಲ

ಪುಲ್ಲೆಯ ಮೊದಲುರಮುಮಂ
(ಮೊದಲ ಉರಮುಮಂ-
ಜಿಂಕೆಯ ಎದೆಯ ಮೊದಲ
ಭಾಗವನ್ನು) ಪೆಱಗಣ
ಪುಲ್ಲೆಯ
ನಡುವುಮನಯ್ದರೊಳ್
(ಹೊರಗಣ ಹುಲ್ಲೆ
ಮಧ್ಯಭಾಗವನ್ನೂ)
ಮೂಱುವಂ
ಮೂರೊಳೆರಡುಮನು
ಎರಡರೊಳು ಒಂದುಮನು

ಎಚ್ಚು (ಹೊಡೆದು) ಬಿಲ್ಲ
ಬಲ್ಮೆಯಂ ಮೆರೆದು-
ವಚನ:ಅರ್ಥ:ಎಂದು
ಅರಿಕೆಮಾಡಿದ
ಬೇಟೆಯವನಿಗೆ ಪ್ರಾಣಿಗಳಿಗೆ
ವ್ಯಾಯಾಮ
ಮಾಡಿಸುವುದರಲ್ಲಿ
ಷಣ್ಮುಖನಂತಿರುವ
ಅರ್ಜುನನು (ಅರಿಕೇಸರಿಯು)
ಬಹುಮಾನವನ್ನಿತ್ತು ಚಿಗುರನ್ನು
ಹಾಕು ಎಂದು ಮೊದಲು

ಹೇಳಿಕಳುಹಿಸಿದನು. ಕೃಷ್ಣನೂ ತಾನೂ ರಾಣಿವಾಸದ ಪರಿವಾರದೊಡನೆ ಬೇಟೆಗೆ ಹೊರಟು ಪ್ರವೇಶಸ್ಥಳಕ್ಕೆ ಬಂದರು. ಬೇಲಿಯ ಪಕ್ಕದಲ್ಲಿಯೇ ಅಲ್ಲದೆ ಹಿಂದುಗಡೆಯ ಸದ್ದಿಗೂ ಗಗದ್ದಲಕ್ಕೂ ದೂರವಾಗಿ ಪಾಳೆಯವನ್ನು ಬಿಡಿಸಿದರು. ಬೇಟೆಗಾರನು ಮಾಡಿದ್ದ ಮಕರತೋರಣ, ನೃತ್ಯಶಾಲೆ,

ಪಾಕಶಾಲೆ, ಸ್ನಾನಗೃಹ,

ಅಂತಪುರ, ಹೂವಿನ ಚಪ್ಪರ,

ಚಿಗುರಿನ ಹಂದರ,

ಉಪ್ಪರಿಗೆಯ ಮನೆಯ

ತೊಟ್ಟಿಗಳು, ಅವುಗಳ

ಮೇಲಿದ್ದ, ಎಲೆಯಡಿಕೆ, ತೆಂಗಿನ

ಎಳನೀರುಗಳನ್ನು

ತೆಗೆದುಕೊಳ್ಳಲು

ಅನುಕೂಲವಾಗುವ ಹಾಗೆ

ಮಾಡಿ ನೆಟ್ಟಿರುವ, ಅಡಕೆ

ಮತ್ತು ತೆಂಗಿನ ಮರಗಳು

ಹಣ್ಣಿನಿಂದ ಕೂಡಿ ನೆಟ್ಟಿರುವ
ಮಹೇಂದ್ರ ಬಾಳೆ,
ಚಿಗುರಿನಿಂದ ಕೂಡಿ ನೆಟ್ಟಿರುವ
ಆಲದ ಮರ, ಗಾಢವಾಗಿ
ಸೇರಿಕೊಂಡಿರುವ ಬಟ್ಟುಳಿಯ
(?) ಕಕ್ಕುಂಬದ (?)
ಗೊಂಚಲುಗಳಿಂದ ಮಾಡಿದ
ಬತ್ತಳಿಕೆ ಬಾವುಟ ತೆರೆಗಳು
ಹಲವು ರೀತಿಯ ಹಲವು
ಹೊರೆಗಳಾಗಿ ಕಟ್ಟಿದ ಬಲೆಗಳು
ಬಾಗಿಲುಗಳನ್ನು (ಭದ್ರಪಡಿಸಿ)

ಸೇರಿಸಿ, ಬಿಲ್ಲ, ಕುದುರೆ
ಕಾಲಾಳು ನಾಯಿ ಹೆಚ್ಚು
ಸಂಖ್ಯೆಯ ಕೋಲು ಹಗ್ಗ
ಮೊದಲಾದುವನ್ನೆಲ್ಲ
ಸರಿಯಾದ ಪ್ರಮಾಣದಲ್ಲಿ
ಸೇರಿಸಿ ನಡೆಯಹೇಳಿ
ಬೇಟೆಯ ಉಡುಪನ್ನು
(ಅಲಂಕಾರವನ್ನು) ತೊಟ್ಟು
ಮೃಗವು ಹೊರಗೆ ಬರುವ
ಸ್ಥಳದಲ್ಲಿ ಬಾಗಿಲಲ್ಲಿ ಅರ್ಜುನ
ಕೃಷ್ಣರು ನಿಂತು ಬೇಟೆಗೆ

ಪ್ರಾರಂಭಮಾಡಿದರು. ಪ್ರವೇಶ ಮಾಡುವ ಜಿಂಕೆಯ ಎದೆಯ ಮೊದಲ ಭಾಗವನ್ನು ಹೊರಗಣ ಹುಲ್ಲೆ ಮಧ್ಯಭಾಗವನ್ನೂ ಅಯ್ದರಲ್ಲಿ ಮೂರನ್ನೂ ಮೂರಲ್ಲಿ ಎರಡನ್ನೂ ಎರಡಲ್ಲಿ ಒಂದನ್ನೂ ಹೊಡೆದು ತಮ್ಮ ಬಿಲ್ವಿದ್ಯೆಯ ಪ್ರೌಢಿಮೆಯನ್ನು ಪ್ರಕಾಶಪಡಿಸಿದರು.

ಕಂ|| ಮುಂದಣ ಮಿಗಮಂ
ಕೞಿಪದೆ
ಸಂದಿಸಿ ಬೞಿಗೊಳ್ವ
ಮಿಗಮುಮಂ ಕೞಿಪದೆ ತಾ|
ನೊಂದಳವಿದಪ್ಪುದೆಚ್ಚು ಬ
ಲಿಂದಮನಿಂ ಬಿಲ್ಲ ಬಲ್ಮೆಯಂ
ಪೊಗೞಿಸಿದಂ|| ೪೮||

ಪದ್ಯ-00:ಪದವಿಭಾಗ-

ಅರ್ಥ:ಮುಂದಣ ಮಿಗಮಂ ಕೞಿಪದೆ ಸಂದಿಸಿ (ಜಿಂಕೆಯನ್ನು ಸಾಯಿಸದೆ

ಅದನ್ನು ಅನುಸರಿಸಿ)
ಬಱಿಗೊಳ್ವ ಮಿಗಮುಮಂ
ಕಱಿಪದೆ (ಹಿಂದೆ ಬಂದ
ಮೃಗವನ್ನೂ ಕೊಲ್ಲದೆ) ತಾನು
ಒಂದಳವಿ ತಪ್ಪದೆ ಎಚ್ಚು
(ಒಂದು ಅಳತೆಯನ್ನೂ ತಪ್ಪದೆ
ಅರ್ಜುನನು
ಬಾಣಪ್ರಯೋಗಮಾಡಿ)
ಬಲಿಂದಮನಿಂ (ಬಲಿಯನ್ನು
ದಮನ ಮಾಡಿದವ-
ಕೃಷ್ಣನಿಂದ) ಬಿಲ್ಲ ಬಲ್ಮೆಯಂ

ಪೊಗೞಿಸಿದಂ (ತನ್ನ ಬಿಲ್ವಿದ್ಯೆಯನ್ನು ಹೊಗಳುವ ಹಾಗೆ ಮಾಡಿದನು.)

ಪದ್ಯ-00:ಅರ್ಥ: . ಮುಂದೆ ಬಂದ ಜಿಂಕೆಯನ್ನು ಸಾಯಿಸದೆ ಅದನ್ನು ಅನುಸರಿಸಿ ಹಿಂದೆ ಬಂದ ಮೃಗವನ್ನೂ ಕೊಲ್ಲದೆ ತಾನು ಒಂದು ಅಳತೆಯನ್ನೂ ತಪ್ಪದೆ ಅರ್ಜುನನು ಬಾಣಪ್ರಯೋಗಮಾಡಿ

ಕೃಷ್ಣನು ತನ್ನ ಬಿಲ್ವಿದ್ಯೆಯನ್ನು ಹೊಗಳುವ ಹಾಗೆ ಮಾಡಿದನು.

ವ|| ಮತ್ತಂ ಬೆರ್ಚಿ ಪೊಳೆದು ಪರಿವ ಪೊಳೆವುಲ್ಲೆಗಳುಮಂ ತಲೆಯಂ ಕುತ್ತಿ ವಿಶಾಲಂಬರಿವ ಕರಡಿಗಳುಮನಡಂಗಿ ಪರಿವ ಪುಲಿಗಳುಮಂ ಸೋಂಕಿ ಪರಿವೆಯ್ಗಳುಮಂ ತಡಂಮೆಟ್ಟಿ ಪರಿವ ಕಡವಿನ ಕಾಡೆಮ್ಮೆಯ ಮರೆಯ ಪಿಂಡುಗಳು

ಮನಳವಿದಪ್ಪದೊಂದೊಂದ ನಿಸುವಂತೆ ಪಲವನೆಚ್ಚು ನೆಲಂ ಬಿರಿಯೆ ಗಜಱ್ ಗರ್ಜಿಸಿ ಪಾಯ್ವ ಸಿಂಗಂಗಳುಮಂ ಕಂಡು-

ವಚನ:ಪದವಿಭಾಗ-

ಅರ್ಥ:ಮತ್ತಂ ಬೆರ್ಚಿ ಪೊಳೆದು ಪರಿವ ಪೊಳೆವ ಉಲ್ಲೆಗಳುಮಂ (ಹೆದರಿ ಹೊಳೆಯುವ ಹರಿದ- ಓಡುವ ಜಿಂಕೆಗಳನ್ನೂ) ತಲೆಯಂ ಕುತ್ತಿ

ವಿಶಾಲಂಬರಿವ
ಕರಡಿಗಳುಮಂ ಅಡಂಗಿ
ಪರಿವ ಪುಲಿಗಳುಮಂ
ಸೋಂಕಿ ಪರಿವೆ ಎಯ್ಗಳುಮಂ
(ಹುಲಿಗಳನ್ನೂ ತಾಗಿ
ಓಡಿಹೋಗುವ ಮುಳ್ಳು
ಹಂದಿಗಳನ್ನೂ) ತಡಂಮೆಟ್ಟಿ
ಪರಿವ (ಓಡುವ) ಕಡವಿನ
ಕಾಡೆಮ್ಮೆಯ ಮರೆಯ
ಪಿಂಡುಗಳುಮನು (ಓಡುವ
ಕಡವೆ ಮತ್ತು ಕಾಡೆಮ್ಮೆಯ

ಮರಿಗಳ ಹಿಂಡುಗಳನ್ನು)
ಅಳವಿದಪ್ಪದೆ ಒಂದೊಂದನು
ಇಸುವಂತೆ (ಹೊಡೆಯುವ
ಹಾಗೆ) ಪಲವನು ಎಚ್ಚು
(ಹಲವನ್ನು ಹೊಡೆದು ಕೆಡವಿ,)
ನೆಲಂ ಬಿರಿಯೆ ಗಜಱ ಗರ್ಜಿಸಿ
ಪಾಯ್ವ ಸಿಂಗಂಗಳುಮಂ
ಕಂಡು-

ವಚನ:ಅರ್ಥ:ಪುನ ಹೆದರಿ
ಹೊಳೆಯುವ ಹರಿದ- ಓಡುವ
ಜಿಂಕೆಗಳನ್ನೂ,

ತಲೆತಗ್ಗಿಸಿಕೊಂಡು ದೂರವಾಗಿ
ಹರಿಯುವ ಕರಡಿಗಳನ್ನೂ
ಅಡಗಿಸಿ ಹರಿಯುವ
ಹುಲಿಗಳನ್ನೂ ತಾಗಿ
ಓಡಿಹೋಗುವ ಮುಳ್ಳು
ಹಂದಿಗಳನ್ನೂ ಅಡ್ಡಗಟ್ಟಿ
ಉದ್ದವಾಗಿ ಕಾಲಿಟ್ಟು ಓಡುವ
ಕಡವೆ ಮತ್ತು ಕಾಡೆಮ್ಮೆಯ
ಮರಿಗಳ ಹಿಂಡುಗಳನ್ನು
ಅಳತೆದಪ್ಪದೆ ಒಂದೊಂದನ್ನೂ
ಹೊಡೆಯುವ ಹಾಗೆ ಹಲವನ್ನು

ಹೊಡೆದು ಕೆಡವಿದನು.

ಭೂಮಿಯು

ಬಿರಿದುಹೋಗುವ ಹಾಗೆ

ಆರ್ಭಟದಿಂದ

ಘರ್ಜನೆಮಾಡಿಕೊಂಡು

ಮುನ್ನುಗ್ಗುತ್ತಿರುವ

ಸಿಂಹಗಳನ್ನು ಕಂಡು

ಕಂ|| ಆಸುಕರಂ ಗಡ ತಮಗತಿ

ಭಾಸುರ ಮೃಗರಾಜ

ನಾಮಮುಂ ಗಡಮೆಂದಾ|

ದೋಸಕ್ಕೆ ಮುಳಿದು ನೆಗೞ್ದರಿ

ಕೇಸರಿ ಕೇಸರಿಗಳನಿತುಮಂ ತಳ್ತಿಱಿದಂ|| ೪೯ ||

ಪದ್ಯ-00:ಪದವಿಭಾಗ-ಅರ್ಥ:ಆಸುಕರಂ ಗಡ (ಅತಿವೇಗವಾದುವು) ತಮಗೆ ಅತಿಭಾಸುರ ಮೃಗರಾಜ ನಾಮಮುಂ ಗಡಂ (ಬಹು ಶೋಭಿತವಾದ ಮೃಗರಾಜನೆಂಬ ಹೆಸರು ಇವಕ್ಕೆ ಇದೆಯಲ್ಲವೆ) ಎಂದು ಆದೋಸಕ್ಕೆ (ಆ ದೋಷಕ್ಕೆ)

ಮುಳಿದು ನೆಗಬ್ದಿ ಅರಿಕೇಸರಿ (ಅರ್ಜುನ) ಕೇಸರಿಗಳನು ಅತುಮಂ ತಳ್ತು ಇಱಿದಂ ((ಸಿಂಹ)ಗಳಷ್ಟನ್ನೂ ಎದುರಿಸಿ ಇರಿದನು- ಕೊಂದನು)

ಪದ್ಯ-00:ಅರ್ಥ: ಇವು ಅತಿವೇಗವಾದುವು ಆದರೂ ಬಹು ಶೋಭಿತವಾದ ಮೃಗರಾಜನೆಂಬ ಹೆಸರು ಇವಕ್ಕೆ ಇದೆಯಲ್ಲವೆ? ಎಂದು ಆ ದೋಷಕ್ಕೆ

ಕೋಪಿಸಿಕೊಂಡು ಪ್ರಸಿದ್ಧನಾದ ಅರಿಕೇಸರಿಯು ಕೇಸರಿ (ಸಿಂಹ)ಗಳಷ್ಟನ್ನೂ ಎದುರಿಸಿ ಕೊಂದನು.

ಕಂ||ಇಱಿದವಱ ನೆತ್ತರೊಳ್ ತ
ಳ್ಕಿಱಿದಂ ತನ್ನುರಮನುರು
ಗಜಂಗಳನಾಟಂ|
ದಱಿಸಿ ಕೊಲುತಿರ್ಪವೆಂಬೀ
ಕಱುಪಿನೊಳರಿಗಂಬರಂ
ಗಜಪ್ರಿಯರೊಳರೇ|| ೫೦

ಪದ್ಯ-೦೦:ಪದವಿಭಾಗ-ಅರ್ಥ:ಇಱಿದು ಅವಱ ನೆತ್ತರೊಳ್ ತಳ್ಕಿಱಿದಂ ತನ್ನಉರಮನು (ರಕ್ತದಿಂದ ತನ್ನ ಎದೆಯನ್ನು ಲೇಪನ ಮಾಡಿಕೊಂಡನು) ಉರು ಗಜಂಗಳನು ಆಟಂದು ಅಱಸಿ ಕೊಲುತಿರ್ಪವು (ಶ್ರೇಷ್ಠವಾದ ಆನೆಗಳನ್ನೂ ಮೇಲೆಬಿದ್ದು ಹಿಂಸಿಸಿ ಕೊಲ್ಲುತ್ತಿವೆ) ಎಂಬ ಈ ಕಱುಪಿನೊಳು (ಈ

ಕೋಪದಲ್ಲಿ) ಅರಿಗಂಬರಂ ಗಜಪ್ರಿಯರು ಒಳರೇ (ಈ ಕೋಪದಲ್ಲಿ ಅರಿಕೇಸರಿಯ/ ಅರ್ಜುನನ ಮಟ್ಟಕ್ಕೆ ಬರುವ ಗಜಪ್ರಿಯರು ಇದ್ದಾರೆಯೇ?) **ಪದ್ಯ-00:ಅರ್ಥ**: ಅವುಗಳ ರಕ್ತದಿಂದ ತನ್ನ ಎದೆಯನ್ನು ಲೇಪನ ಮಾಡಿಕೊಂಡನು. ಈ ಸಿಂಹಗಳು ಶ್ರೇಷ್ಠವಾದ ಆನೆಗಳನ್ನೂ ಮೇಲೆಬಿದ್ದು ಹಿಂಸಿಸಿ ಕೊಲ್ಲುತ್ತಿವೆ ಎಂಬ ಈ

ಕೋಪದಲ್ಲಿ ಅರಿಕೇಸರಿಯ/
ಅರ್ಜುನನ ಮಟ್ಟಕ್ಕೆ ಬರುವ
ಗಜಪ್ರಿಯರು (ಆನೆಯನ್ನು
ಪ್ರೀತಿಸುವವರು)
ಇದ್ದಾರೆಯೇ?

ವ|| ಅಂತು ನರ ನಾರಾಯಣರಿರ್ವರುಮನವರ ತ ಶರಾಸಾರ ಶೂನ್ಯೀಕೃತ ಕಾನನಮಾಗೆಚ್ಚು ಮೃಗವ್ಯ ವ್ಯಾಪಾರದಿಂ ಬೞಲ್ದು

ಮನದಂತೆ ಪರಿವ

ಜಾತ್ಯಶ್ವಂಗಳನೇಱಿ ಬರೆವರೆ-

ವಚನ:ಪದವಿಭಾಗ-

ಅರ್ಥ:ಅಂತು ನರ

ನಾರಾಯಣರ್ ಇರ್ವರುಂ

ಅನವರತ ಶರಾಸಾರ

ಶೂನ್ಯೀಕೃತ ಕಾನನಮಾಗೆ

ಎಚ್ಚು (ಎಡಬಿಡದ ಬಾಣಗಳ

ಮಳೆಯಿಂದ ಕಾಡುಗಳನ್ನೆಲ್ಲ

ಬರಿದು ಮಾಡಿ ಹೊಡೆದು)

ಮೃಗವ್ಯ ವ್ಯಾಪಾರದಿಂ

ಬಿಟಿಲ್ಲು (ಬೇಟೆಯ
ಕಾರ್ಯದಿಂದ ಬಳಲಿ)
ಮನದಂತೆ ಪರಿವ
ಜಾತ್ಯಶ್ವಂಗಳನೇಱಿ ಬರೆವರೆ
(ಮನಸ್ಸಿನ ವೇಗದಿಂದ
ಹರಿಯುವ ಜಾತಿ
ಕುದುರೆಗಳನ್ನು ಹತ್ತಿಬಂದರು)-
ವಚನ:ಅರ್ಥ:ಹಾಗೆ
ನರನಾರಾಯಣರಿಬ್ಬರೂ
ಎಡಬಿಡದ ಬಾಣಗಳ
ಮಳೆಯಿಂದ ಕಾಡುಗಳನ್ನೆಲ್ಲ

ಬರಿದು ಮಾಡಿ ಹೊಡೆದು
ಬೇಟೆಯ ಕಾರ್ಯದಿಂದ
ಬಳಲಿ ತಮ್ಮ ಮನಸ್ಸಿನ
ವೇಗದಿಂದ ಹರಿಯುವ ಜಾತಿ
ಕುದುರೆಗಳನ್ನು ಹತ್ತಿಬಂದರು-

ಚಂ|| ಜವಮುೞಿದೊಂದು ಸೋಗೆನವಿಲೊಯ್ಯನೆ ಕರ್ಕಡೆಗಾಸಿಯಾಗಿ ಪಾ ಱುವುದುಮಿದೆನ್ನ ನಲ್ಲಳ ರತಿಶ್ರಮವಿಶ್ಲಥ ಕೇಶಪಾಶದೊಳ್|

ಸವಸವನಾಗಿ

ತೋಱಿದಪುದೆಂಬುದೆ

ಕಾರಣದಿಂದದಂ ಗುಣಾ

ರ್ಣವನಿಡಲೊಲ್ದನಿಲ್ಲ

ಹಯವಲ್ಗನಸಂಚಳ

ರತ್ನಕುಂಡಳಂ|| ೫೧||

ಪದ್ಯ-00:ಪದವಿಭಾಗ-

ಅರ್ಥ:ಜವಮುಱಿದ ಒಂದು ಸೋಗೆನವಿಲು ಒಯ್ಯನೆ ಕರ್ಕಡೆ ಗಾಸಿಯಾಗಿ (ಶಕ್ತಿಗುಂದಿ ಓಡಲಾಗದದ

ಒಂದು ಗಂಡುನವಿಲು,
ಕಕ್ಕಡೆಯೆಂಬ ಆಯುಧದಿಂದ
ಪೆಟ್ಟುತಿಂದು) ಪಾಱುವುದುಂ
ಇದು ಎನ್ನ ನಲ್ಲಳ
ರತಿಶ್ರಮವಿಶ್ಲಥ
ಕೇಶಪಾಶದೊಳ್
ಸವಸವನಾಗಿ
ತೋಱಿದಪುದು
(ರತಿಕ್ರೀಡೆಯ ಸಮಯದಲ್ಲಿ
ಸುಭದ್ರೆಯ ಬಿಚ್ಚಿಹೋದ
ತುರುಬಿನ ಗಂಟಿಗೆ

ಸಮಾವಾಗಿ ತೋರುತ್ತಿದೆ)
ಎಂಬುದೆ ಕಾರಣದಿಂದ ಅದಂ
ಗುಣಾರ್ಣವನು ಇಡಲ್
ಒಲ್ದನಿಲ್ಲ (ಅದನ್ನು
ಹೊಡೆಯಲು ಒಪ್ಪಲಿಲ್ಲ)
ಹಯವಲ್ಗನಸಂಚಳ
ರತ್ನಕುಂಡಳಂ (ಕುದುರೆಯ
ಅಲುಗಾಟದಿಂದ
ಅಲುಗಾಡುವ ರತ್ನದ
ಕುಂಡಲವನ್ನುಳ್ಳ ಅರ್ಜುನನು)

ಪದ್ಯ-00:ಅರ್ಥ: ಅಲ್ಲಿ ಕಕ್ಕಡೆ (ಮುಳ್ಳುಗೋಲು)ಯೆಂಬ ಆಯುಧದಿಂದ ಪೆಟ್ಟುತಿಂದು ನಿಧಾನವಾಗಿ ಹಾರುತ್ತಿತ್ತು. ಅದನ್ನು ನೋಡಿ ಅರ್ಜುನನು ಇದು ನನ್ನ ಪ್ರಿಯಳಾದ ಪ್ರಿಯಳಾದ ಸುಭದ್ರೆಯೊಡನೆ ರತಿಕ್ರೀಡೆಯ ಸಮಯದಲ್ಲಿ ಬಿಚ್ಚಿಹೋದ ತುರುಬಿನ ಗಂಟಿಗೆ ಸಮಾವಾಗಿ

ತೋರುತ್ತಿದೆ ಎಂಬ
ಕಾರಣದಿಂದ ಕುದುರೆಯ
ಅಲುಗಾಟದಿಂದ
ಅಲುಗಾಡುವ ರತ್ನದ
ಕುಂಡಲವನ್ನುಳ್ಳ ಅರ್ಜುನನು
ಅದನ್ನು ಹೊಡೆಯಲು
ಒಪ್ಪಲಿಲ್ಲ

ವ|| ಅಂತು ಬೇಂಟೆಯಾಡಿ ಬೞಲ್ದು ಬೇಸಗೆಯ ನಡುವಗಲೊಳ್ ವನಕ್ರೀಡೆಗಂ ಜಲಕ್ರೀಡೆಗಮಾಸಕ್ತರಾಗಿ

ಯಮುನಾನದೀತಟ ನಿಕಟವರ್ತಿಗಳಾದರಲ್ಲಿ

ವಚನ:ಪದವಿಭಾಗ-ಅರ್ಥ:ಅಂತು ಬೇಂಟೆಯಾಡಿ ಬಱಲ್ದು (ಬಳಲಿ) ಬೇಸಗೆಯ ನಡುವಗಲೊಳ್ (ನಡುಹಗಲಿನಲ್ಲಿ) ವನಕ್ರೀಡೆಗಂ ಜಲಕ್ರೀಡೆಗಂ ಆಸಕ್ತರಾಗಿ ಯಮುನಾನದೀತಟ ನಿಕಟವರ್ತಿಗಳಾದರು ಅಲ್ಲಿ

(ಯಮುನಾನದೀ ದಡಕ್ಕೆ ಬಂದರು. ಅಲ್ಲಿ)

ವಚನ:ಅರ್ಥ:ಹಾಗೆ ಬೇಟೆಯಾಡಿ ಬಳಲಿ ಆ ಬೇಸಗೆಯ ನಡುಹಗಲಿನಲ್ಲಿ ವನಕ್ರೀಡೆಗೂ ಜಲಕ್ರೀಡೆಗೂ ಆಸೆಪಟ್ಟವರಾಗಿ ಯಮುನಾನದೀದಡಕ್ಕೆ ಬಂದರು. ಅಲ್ಲಿ

<u>ಯಮುನಾನದಿಯ ವರ್ಣನೆ</u>

ಚಂ|| ಸರಳ ತಮಾಳ ತಾಳ

ಹರಿಚಂದನ ನಂದನ

ಭೂಜರಾಜಿಯಿಂ

ಸುರಿವಲರೋಳಿ

ತದ್ವನಲತಾಂಗಿಯ ಸೂಸುವ

ಸೇಸೆಯಾಯ್ತು ಭೃಂ|

ಗರವಮದೊಂದು

ಮಂಗಳರವಕ್ಕೆಣೆಯಾಯ್ತು

ಮನೋನುರಾಗದಿಂ

ಕರಿವವ್ರೊಲಾಯ್ತು ಮತ್ತ ಕಳಹಂಸರವಂ ಪಡೆಮೆಚ್ಚೆಗಂಡನಂ|| ೫೨||

ಪದ್ಯ-೫೨:ಪದವಿಭಾಗ-ಅರ್ಥ:ಸರಳ (ತೇಗ) ತಮಾಳ (ಹೊಂಗೆ) ತಾಳ ಹರಿಚಂದನ ನಂದನ ಭೂಜರಾಜಿಯಿಂ ಸುರಿವ ಅಲರ ಓಳಿ (ಸುರಿಯುವ ಪುಷ್ಪರಾಶಿಯು) ತದ್ ವನಲತಾಂಗಿಯ (ಆ ವನಲಕ್ಷ್ಮಿಯು) ಸೂಸುವ

ಸೇಸೆಯಾಯ್ತು (ಅಕ್ಷತೆ)
ಭೃಂಗರವಂ ಅದೊಂದು
ಮಂಗಳ ರವಕ್ಕೆ
ಎಣೆಯಾಯ್ತು
(ಮಂಗಳವಾದ್ಯಕ್ಕೆ) ಮನ
ಅನುರಾಗದಿಂ
ಕರೆವವೊಲಾಯ್ತು ಮತ್ತ
ಕಳಹಂಸರವಂ
(ಕಳಹಂಸಧ್ವನಿಯು)
ಪಡೆಮೆಚ್ಚೆಗಂಡನಂ
(ಅರ್ಜುನನನ್ನು).

ಪದ್ಯ-೫೨:ಅರ್ಥ: ನದಿಯು ಅರ್ಜುನನನ್ನು ಸ್ವಾಗತಿಸಿದ ಬಗೆ: ತೇಗ, ಹೊಂಗೆ, ತಾಳೆ, ಶ್ರೀಗಂಧ ಮತ್ತು ನಂದನವೃಕ್ಷಗಳ ಸಮೂಹಗಳಿಂದ, ಸುರಿಯುವ ಪುಷ್ಪರಾಶಿಯು ಆ ವನಲಕ್ಷ್ಮಿಯು ಚೆಲ್ಲುತ್ತಿರುವ ಅಕ್ಷತೆಯಾಯಿತು. ದುಂಬಿಗಳ ಧ್ವನಿಯು ಮಂಗಳವಾದ್ಯಕ್ಕೆ ಸಮಾನವಾಯಿತು. ಮದಿಸಿದ ಕಳಹಂಸಧ್ವನಿಯು ಪಡೆಮೆಚ್ಚೆ

ಗಂಡನಾದ ಅರ್ಜುನನನ್ನು ಪ್ರೀತಿಯಿಂದ ಕರೆಯುವ ಹಾಗಾಯಿತು.

**ಕಂ|| ಯಮುನಾನದೀ
ತರಂಗಮ
ನಮುಂಕಿ ವನಲತೆಯ
ಮನೆಗಳಂ ಸೋಂಕಿ ವನ|
ಭ್ರಮಣ ಪರಿಶ್ರಮಮಂ ಮು
ನ್ನಮೆ ಕಳೆದುದು
ಬಂದದೊಂದು
ಮಂದಶ್ವಸನಂ|| ೫೩ ||**

ಪದ್ಯ-೫೩:ಪದವಿಭಾಗ-ಅರ್ಥ:ಯಮುನಾನದೀ ತರಂಗಮಂ ಅಮುಂಕಿ (ಅದುಮಿ) ವನಲತೆಯ ಮನೆಗಳಂ ಸೋಂಕಿ (ಮುಟ್ಟಿ), ವನಭ್ರಮಣ ಪರಿಶ್ರಮಮಂ (ಕಾಡಿನಲ್ಲಿ ಅಲೆದ ಆಯಾಸವನ್ನು) ಮುನ್ನಮೆ ಕಳೆದುದು ಬಂದ ಅದೊಂದು ಮಂದಶ್ವಸನಂ (ಮಂದಮಾರುತವು)|

ಪದ್ಯ-೫೩:ಅರ್ಥ:

ಯಮುನಾ ನದಿಯ ಅಲೆಗಳನ್ನು ಅದುಮಿ, ಕಾಡಿನ ಬಳ್ಳಿ ಮನೆಗಳನ್ನು ಮುಟ್ಟಿ, ಬಂದ ಒಂದು ಮಂದಮಾರುತವು (ಅವರು) ಕಾಡಿನಲ್ಲಿ ಅಲೆದ ಆಯಾಸವನ್ನು ಆರಂಭದಲ್ಲೇ ಪರಿಹರಿಸಿತು.

ವ|| ಅಂತು ಕಾಳಿಂದೀಜಲ ಶಿಶಿರಶೀಕರವಾರಿ ಚಾರಿಯುಂ

ಮೃಗಯಾ ಪರಿಭ್ರಮ
ಶ್ರಮೋತ್ಥಿತ ಸ್ವೇದಜಲ
ಲವಹಾರಿಯುಮಾಗಿ ಬಂದ
ಮಂದಾನಿಲಕ್ಕೆ
ಮೆಯ್ಯನಾಱಿಸುತ್ತುಮಾ
ಪುಣ್ಯನದಿಯನೆಯ್ದೆವಂದು
ತನ್ನ ಬಾಳ ನೀರಂತೆ ಕಱಂಗಿ
ಕರ್ಗಿದ ನೀರಂ ನೋಡಿ
ವಿಕ್ರಮಾರ್ಜುನಂ
ಕಾಳಾಹಿಮಥನನ ಮೊಗಮಂ
ನೋಡಿ-

ವಚನ:ಪದವಿಭಾಗ-ಅರ್ಥ:ಅಂತು ಕಾಳಿಂದೀಜಲ ಶಿಶಿರಶೀಕರವಾರಿ ಚಾರಿಯುಂ (ತಂಪಾದ ನೀರಿನ ತುಂತುರುಗಳ ಮೇಲೆ ಸಂಚಾರ ಮಾಡಿದುದೂ) ಮೃಗಯಾ ಪರಿಭ್ರಮ ಶ್ರಮೋತ್ಥಿತ- ಶ್ರಮ ಉತ್ಥಿತ(ಹುಟ್ಟಿದ , ಉಂಟಾದ) (ಬೇಟೆಯ ಅಲೆದಾಟದ ಆಯಾಸದಿಂದುಂಟಾದ) ಸ್ವೇದಜಲ

ಲವಹಾರಿಯುಮಾಗಿ
(ಬೆವರಿನ ಕಣಗಳನ್ನು
ಹೋಗಲಾಡಿಸಿದುದೂ ಆಗಿ)
ಬಂದ ಮಂದಾನಿಲಕ್ಕೆ
ಮೆಯ್ಯನು ಆಱಿಸುತ್ತುಮ್ ಆ
ಪುಣ್ಯನದಿಯನು
ಎಯ್ದೆವಂದು (ಸಮೀಪಕ್ಕೆ
ಬಂದು) ತನ್ನ ಬಾಳ (ಕತ್ತಿಯ)
ನೀರಂತೆ ಕಱಂಗಿ ಕರ್ಗಿದ
ನೀರಂ ನೋಡಿ
ವಿಕ್ರಮಾರ್ಜುನಂ

ಕಾಳಾಹಿಮಥನನ (ಕೃಷ್ಣನ) ಮೊಗಮಂ ನೋಡಿ-

ವಚನ:ಅರ್ಥ:ಹಾಗೆ ಯಮುನಾನದಿಯ ತಂಪಾದ ನೀರಿನ ತುಂತುರುಗಳ ಮೇಲೆ ಸಂಚಾರ ಮಾಡಿದುದೂ ಬೇಟೆಯ ಅಲೆದಾಟದ ಆಯಾಸದಿಂದುಂಟಾದ ಬೆವರಿನ ಕಣಗಳನ್ನು ಹೋಗಲಾಡಿಸಿದುದೂ ಆಗಿ ಬಂದ ಮಂದಮಾರುತಕ್ಕೆ

ಶರೀರವನ್ನು ಒಡ್ಡುತ್ತಾ ಆ
ಪುಣ್ಯನದಿಯ ಸಮೀಪಕ್ಕೆ
ಬಂದು ತನ್ನ ಕತ್ತಿಯ
ಕಾಂತಿಯಂತೆ ಕಪ್ಪಾಗಿ ಕರ್ರಗಿದ್ದ
ನೀರನ್ನು ನೋಡಿ
ವಿಕ್ರಮಾರ್ಜುನನು
ಕಾಳಿಂಗಮರ್ದನನಾದ ಕೃಷ್ಣನ
ಮುಖವನ್ನು ನೋಡಿ-

ಕಂ|| ತನ್ನೊಳಗಣ ಪನ್ನಗನಂ
ಮುನ್ನೀನ್ ಪಿಡಿದೊಗೆಯೆ
ಕಾಯಲಾಱದೆ ಪಿರಿದುಂ|

ಬನ್ನದ ಕರ್ಪೆಸೆದುದು ತೊರೆ ಗಿನ್ನುಂ ಹರಗಳ ತಮಾಳ ನೀಳಚ್ಛವಿಯಿಂ|| ೫೪||

ಪದ್ಯ-೫೪:ಪದವಿಭಾಗ-ಅರ್ಥ:ತನ್ನೊಳಗಣ ಪನ್ನಗನಂ (ಕಾಳಿಂಗಸರ್ಪವನ್ನು)ಮುನ್ನ ನೀನ್ ಪಿಡಿದೊಗೆಯೆ (ಹಿಡಿದೆತ್ತಿ ಎಸೆಯಲು) ಕಾಯಲಾಱದೆ ಪಿರಿದುಂ ಬನ್ನದ ಕರ್ಪೆಸು ಎದುದು (ವಿಶೇಷವಾಗಿ ಅಂದುಂಟಾದ

ಸೋಲಿನ ಕರಿಯಬಣ್ಣವು ಪ್ರಕಾಶಿಸುತ್ತಿದೆ) ತೊರೆಗೆ ಇನ್ನುಂ (ಈ ನದಿಯಲ್ಲಿ) ಹರಗಳ (ಶಿವನ ಕಂಠದಂತೆ) ತಮಾಳ ನೀಳಚ್ಛವಿಯಿಂ(ಹೊಂಗೆಯ ಮರದಂತೆಯೂ)

ಪದ್ಯ-೫೪:ಅರ್ಥ: ತನ್ನಲ್ಲಿದ್ದ ಕಾಳಿಂಗಸರ್ಪವನ್ನು ಮೊದಲು ನೀನು ಹಿಡಿದೆತ್ತಿ ಎಸೆಯಲು ಅದನ್ನು ರಕ್ಷಿಸಲಾರದೆ ಆ

ನದಿಗೆ ವಿಶೇಷವಾಗಿ
ಅಂದುಂಟಾದ ಸೋಲಿನ
ಕರಿಯಬಣ್ಣವು ಇಂದೂ
ಇನ್ನೂ ಶಿವನ ಕಂಠದಂತೆಯೂ
ಹೊಂಗೆಯ ಮರದಂತೆಯೂ
ಈ ನದಿಯಲ್ಲಿ ಕಪ್ಪು
ಕಾಂತಿಯಿಂದ ಪ್ರಕಾಶಿಸುತ್ತಿದೆ.

ಕಂ||ತಡಿವಿಡಿದು ಪೂತ
ಲತೆಗಳ
ನೊಡನೊಡನೆಲರಲೆಯೆ
ಬಿಡದೆ ಸುರಿವಲರ್ಗಳನಂ|

ದೆಡೆಗುಡದೆ ನೂಂಕಿ ಮೆಲ್ಲನೆ ತಡಿಯಂ ಸಾರ್ಚಿದಪುದಿದಱ ಬಂಬಲ್ದೆರೆಗಳ್|| ೫೫||

ಪದ್ಯ-೫೫:ಪದವಿಭಾಗ-ಅರ್ಥ:ತಡಿವಿಡಿದು (ದಡವನ್ನು ಅನುಸರಿಸಿ) ಪೂತ ಲತೆಗಳನು ಒಡನೊಡನೆ ಎಲರ್ ಅಲೆಯೆ (ಗಾಳಿಯ ಅಲೆಯು ಅಲುಗಿಸಲು) ಬಿಡದೆ ಸುರಿವ ಅಲರ್ಗಳನಂದು (ಹೂವುಗಳನ್ನು) ಎಡೆಗುಡದೆ

ನೂಂಕಿ (ಒಂದೇ ಸಮನಾಗಿ ತಳ್ಳಿ) ಮೆಲ್ಲನೆ ತಡಿಯಂ ಸಾರ್ಚಿದಪುದು(ಸೇರಿಸುತ್ತವೆ) ಇದಱ ಬಂಬಲ್ದೆರೆಗಳ್ (ಇದರ ಸಾಲಾದ ಅಲೆಗಳು ಮೆಲ್ಲನೆ ದಡವನ್ನು ಸೇರಿಸುತ್ತವೆ.)

ಪದ್ಯ-೫೫:ಅರ್ಥ: .
ದಡವನ್ನು ಅನುಸರಿಸಿ ಹೂಬಿಟ್ಟಿರುವ ಲತೆಗಳನ್ನು ಆಗಾಗ ಗಾಳಿಯ ಅಲೆಯು ಅಲುಗಿಸಲು ಅದರಿಂದ

ಸುರಿಯುವ ಹೂವುಗಳನ್ನು ಒಂದೇ ಸಮನಾಗಿ ತಳ್ಳಿ ಇದರ ಸಾಲಾದ ಅಲೆಗಳು ಮೆಲ್ಲನೆ ದಡವನ್ನು ಸೇರಿಸುತ್ತವೆ.

<u>ಯಮುನೆಯ ದಡದಲ್ಲಿ ವಿಹಾರ - ಜಲಕ್ರೀಡೆ</u>

ಕಂ||ವಿದಳಿತ ನುತ ಶತಪತ್ರದ

ಪುದುವಿನೊಳಿರದಗಲೆವೋದ

ಹಂಸನನಱಸಲ್|

ಪದೆದೆಳಸುವ ಪೆಣ್ಣಂಚೆಯ

ಪದ ಕೊರಲಿಂಚರದ ಸರಮೆ

ಸವಿ ಕಿವಿಗಿದರೊಳ್|| ೫೬||

ಪದ್ಯ-೫೬:ಪದವಿಭಾಗ-

ಅರ್ಥ:ವಿದಳಿತ ನುತ

ಶತಪತ್ರದ (ಅರಳಿದ

ಪ್ರಸಿದ್ಧವಾದ ತಾವರೆಯ)

ಪುದುವಿನೊಳು ಇರದೆ

ಅಗಲೆವೋದ ಹಂಸನನು

ಅಱಸಲ್ (ಹುಡುಕಲು)

ಪದೆದು ಎಳಸುವ

ಪೆಣ್ಣಂಚೆಯ(ಪ್ರೀತಿಸಿ

ಆಶೆಪಟ್ಟು ಕೂಗುವ
ಹೆಣ್ಣುಹಂಸದ) ಪದ ಕೊರಲ
ಇಂಚರದ ಸರಮೆ (ಹದವಾದ
ಕೊರಲಿನ ಇಂಪಾದ
ಧ್ವನಿಯೇ) ಸವಿ
ಕಿವಿಗಿದರೊಳ್ (ಕಿವಿಗಿಂಪಾದ
ಸ್ವರವಾಗಿದೆ)
ಪದ್ಯ-೫೬:ಅರ್ಥ: . ಅರಳಿದ
ಪ್ರಸಿದ್ಧವಾದ ತಾವರೆಯ
ಹುದುವಿನ ಆಶ್ರಯದಲ್ಲಿ
ಇರದೆ ಅಗಲಿಹೋದ ಗಂಡು

ಹಂಸಪಕ್ಷಿಯನ್ನು ಹುಡುಕಲು
ಪ್ರೀತಿಸಿ ಆಶೆಪಟ್ಟು ಕೂಗುವ
ಹೆಣ್ಣುಹಂಸದ ಹದವಾದ
ಕೊರಲಿನ ಇಂಪಾದ ಧ್ವನಿಯೇ
ಇಲ್ಲಿ ಕಿವಿಗಿಂಪಾದ ಸ್ವರವಾಗಿದೆ

ಕಂ||
ನೆರೆಯಲರ್ದಂಭೋರುಹದಲ
ರ್ದಳಿಗಲನೆಲೆದೊಗೆದುವೆಸೆ
ಯೆ ಜಲದೇವತೆಗಳ್||
ನಿಱವಿಡಿದುಡಲ್ ನಿಮಿರ್ಚಿದ

ಕುಱುವಡಿಯ ತರಂಗದಂತೆ ಬಂಬಲ್ದೆರೆಗಳ್|| ೫೭||

ಪದ್ಯ-೫೭:ಪದವಿಭಾಗ-ಅರ್ಥ:ನೆರೆಯಲರ್ದ ಅಂಭೋರುಹದ ಅಲರ್ದುಱುಗಲಂ (ಪೂರ್ಣವಾಗಿ ಅರಳಿದ ತಾವರಯ ಸಮೂಹವನ್ನು) ಅಲೆದು ಒಗೆದುವು(ಪೀಡಿಸಿ ನೆಗೆದವು) ಎಸೆಯೆ (ಶೋಭಿಸಲು)

ಜಲದೇವತೆಗಳ್ ನಿಱಿವಿಡಿದು ಉಡಲ್ (ಜಲದೇವತೆಗಳು ಉಡಲು ಎತ್ತಿದ ಸೀರೆಯ ನಿರಿಗೆಗಳು) ನಿಮಿರ್ಚಿದ (ಬಿಚ್ಚಿದ) ಕುಱುವಡಿಯ (ಚಿಕ್ಕ ಮಡಿಬಟ್ಟೆಯ) ತರಂಗದಂತೆ ಬಂಬಲ್ದೆರೆಗಳ್ (ಅಲೆಗಳಂತೆ, ಸಾಲಾದ ಅಲೆಗಳು)

ಪದ್ಯ-೫೭:ಅರ್ಥ:

(ತಾತ್ಪರ್ಯ) ಜಲದೇವತೆಗಳು ಉಡಲು ಎತ್ತಿದ ಸೀರೆಯ

ನಿರಿಗೆಗಳು ಚಿಮ್ಮುವಂತೆ
ಅಲೆಗಳ ಸಾಲುಸಾಲುಗಳು
ತಾವರೆಗಳನ್ನು ಬಡಿದು
ಮೇಲಿಂದ ಹಾರಿ
ಶೋಭಿಸಿದವು.

ಚಂ|| ತುರಗಚಯಂಗಳಂತಿರೆ
ತರಂಗಚಯಂ
ಚಮರೀರುಹಂಗಳಂ|
ತಿರೆ ಕಳಹಂಸೆ
ಬೆಳ್ಗೊಡೆಗಳಂತಿರೆ ಬೆಳ್ನೊರೆ
ಗೊಟ್ಟಿ ಗಾಣಾರಂ|

ತಿರೆ ಮಱಿದುಂಬಿ

ಮೇಳದವರಂತಿರೆ ಸಾರಿಕೆ

ರಾಜಗೇಹದಂ

ತಿರೆ ಕೊಳನಲ್ಲಿ

ತಾಮರಸರಂತಿರೆ

ತಾಮರಸಂಗಳೊಪ್ಪುಗುಂ||

೫೮ ||

ಪದ್ಯ-೫೮:ಪದವಿಭಾಗ-

ಅರ್ಥ:ತುರಗಚಯಂಗಳಂತಿರೆ

ತರಂಗಚಯಂ (ತರಂಗ--

ಅಲೆಗಳ ಸಮೂಹವು

ಕುದುರೆಗಳ
ಸಮೂಹದಂತಿರಲು)
ಚಮರೀರುಹಂಗಳಂತಿರೆ
ಕಳಹಂಸೆ
(ಕೋಮಲಹಂಸಪಕ್ಷಿಯು
ಚಾಮರಗಳಂತಿರಲು)
ಬೆಳ್ಗೊಡೆಗಳಂತಿರೆ ಬೆಳ್ನೊರೆ
(ಬಿಳಿಯ ನೊರೆ
ಶ್ವೇತಚ್ಛತ್ರಿಯಂತಿರಲು) ಗೊಟ್ಟಿ
ಗಾಣರಂತಿರೆ ಮಱಿದುಂಬಿ
(ದುಂಬಿಯ ಮರಿಗಳು

ಗಾಯಕಗೋಷ್ಠಿಯಂತಿರಲು),
ಮೇಳದವರಂತಿರೆ ಸಾರಿಕೆ
(ಹೆಣ್ಣು ಗಿಳಿಯು
ಸಖಿಯಂತಿರಲು)
ರಾಜಗೇಹದಂತಿರೆ ಕೊಳನು
ಅಲ್ಲಿ (ಅಲ್ಲಿಯ ಕೊಳವು
ಅರಮನೆಯಂತಿರಲು)
ತಾಮರಸರಂತಿರೆ- ತಾಂ
ಅರಸಂತಿರೆ ತಾಮರಸಂಗಳು-
ತಾವರೆಗಳು,
ಒಪ್ಪುಗುಂ(ತಾವರೆಗಳು ತಾವೇ

ಅರಸರಾಗಿರುವ ಹಾಗೆ ಶೋಭಿಸುತ್ತಿವೆ)

ಪದ್ಯ-೫೮:ಅರ್ಥ: ಅಲೆಗಳ ಸಮೂಹವು ಕುದುರೆಗಳ ಸಮೂಹದಂತಿರಲು, ಕೋಮಲಹಂಸಪಕ್ಷಿಯು ಚಾಮರಗಳಂತಿರಲು, ಬಿಳಿಯ ನೊರೆ ಶ್ವೇತಚ್ಛತ್ರಿಯಂತಿರಲು, ದುಂಬಿಯ ಮರಿಗಳು ಗಾಯಕಗೋಷ್ಠಿಯಂತಿರಲು, ಹೆಣ್ಣು ಗಿಳಿಯು

ಸಖಿಯಂತಿರಲು, ಅಲ್ಲಿಯ ಕೊಳವು ಅರಮನೆಯಂತಿರಲು ತಾವರೆಗಳು ತಾವೇ ಅರಸರಾಗಿರುವ ಹಾಗೆ ಶೋಭಿಸುತ್ತಿವೆ.

ವ|| ಎಂದು ಭಾಸ್ಕರತನೂಜೆಯನುಭಯತಟ ನಿಕಟ ಕುಸುಮನಿವಹ ತತ್ಪರಾಗ ಪಟಳ ಪಿಶಂಗ ತರತ್ತರಂಗ ಸರೋಜೆಯಂ

ಮೆಚ್ಚಿ ಪೊಗಳ್ದು ಜಲಕ್ರೀಡೆಯಾಡಲ್ ಬಗೆದು ತಾನುಮನಂತನುಮಂತಪುರ ಪರಿವಾರಂ ಬೆರಸು-

ವಚನ:ಪದವಿಭಾಗ-

ಅರ್ಥ:ಎಂದು ಭಾಸ್ಕರತನೂಜೆಯನು (ಯುಮುನಾನದಿಯನ್ನು) ಉಭಯತಟ ನಿಕಟ ಕುಸುಮನಿವಹ ತತ್ಪರಾಗ ಪಟಳ(ಎರಡು ಸಮೀಪದ

ಮರಗಳಿಂದ ಉದುರಿದ
ಹೂವಿನ ಪರಾಗರಾಶಿಯಿಂದ)
ಪಿಶಂಗ ತರತ್ತರಂಗ
ಸರೋಜೆಯಂ ಮೆಚ್ಚಿ
ಪೊಗಳ್ದು (ಅಲೆಗಳಿಂದ
ಕೂಡಿದ ಕಮಲವನ್ನು
ಸೂರ್ಯಪುತ್ರಿಯಾದ
ಯಮುನಾನದಿಯನ್ನು ಮೆಚ್ಚಿ
ಹೊಗಳಿ) ಜಲಕ್ರೀಡೆಯಾಡಲ್
ಬಗೆದು (ನೀರಲ್ಲಿ ಆಟವಾಡಲು
ಬಯಸಿ) ತಾನುಂ ಅನಂತನುಂ

(ಕೃಷ್ಣನು)
ಅಂತಪುರಪರಿವಾರಂ ಬೆರಸು-
ವಚನ:ಅರ್ಥ:ಎಂದು ಎರಡು
ಸಮೀಪದ ಮರಗಳಿಂದ
ಉದುರಿದ ಹೂವಿನ
ಪರಾಗರಾಶಿಯಿಂದ ಪಿಶಂಗ
(ಕಪ್ಪುಮಿಶ್ರವಾದ
ಕೆಂಪುಬಣ್ಣ)ವಾಗಿ ಮಾಡಲ್ಪಟ್ಟ
ಚಂಚಲವಾದ ಅಲೆಗಳಿಂದ
ಕೂಡಿದ ಕಮಲವನ್ನು
ಸೂರ್ಯಪುತ್ರಿಯಾದ

ಯಮುನಾನದಿಯನ್ನು ಮೆಚ್ಚಿ ಹೊಗಳಿ ತಾನೂ ಕೃಷ್ಣನೂ ಅಂತಪುರಪರಿವಾರದೊಡನೆ ಕೂಡಿ ನೀರಿನಲ್ಲಿ ಆಟವಾಡಲು ಬಯಸಿದರು.

ಕಂ|| ಒತ್ತಿದ ತಳ್ಕೈತ್ತಿದ ತೞ್ತೆ
ಮುತ್ತಿನ ಪೊಸದುಡಿಗೆ ತಳಿರ
ಸೋರ್ಮುಡಿ ಮನಮಂ|
ಪತ್ತಿಸಿ ಜೊತ್ತಿಸೆ ಮದನೋ
ನ್ಮತ್ತೆಯರವಯವದೆ
ಬಂದರರರಸಿಯರರೆಬರ್|| ೫೯||

ಪದ್ಯ-೫೯:ಪದವಿಭಾಗ-ಅರ್ಥ:ಒತ್ತಿದ (ಹಚ್ಚಿಕೊಂಡ) ತಳ್ಳು-ಗಂಧ, ಎತ್ತಿದ ತಟಿ (ಛತ್ರಿ) ಮುತ್ತಿನ ಪೊಸದುಡಿಗೆ (ಹೊಸ ತುಡಿಗೆ/ ಹೊಸತು ಉಡಿಗೆ?- ಮುತ್ತಿನ ಹೊಸಬಡವೆಗಳು) ತಳಿರ ಸೋರ್ಮುಡಿ (ಚಿಗುರಿನಿಂದ ಅಲಂಕರಿಸಿದ ಜೋಲುತುರುಬು) ಮನಮಂ ಪತ್ತಿಸಿ ಜೊತ್ತಿಸೆ (ಮನಸ್ಸನ್ನು

ಪ್ರವೇಶಿಸಿ ಆಕರ್ಷಿಸುತ್ತಿರಲು)
ಮದನೋನ್ಮತ್ತೆಯರು(ಕಾಮ
ದಿಂದ ಹುಚ್ಚೆದ್ದರು)
ಅವಯವದೆ
(ವೈಯಾರದಿಂದ) ಬಂದರು
ಅರಸಿಯರು
ಅರೆಬರ್(ಕೆಲವರು)
ಪದ್ಯ-೫೯:ಅರ್ಥ:.
ಲೇಪನಮಾಡಿಕೊಂಡಿರುವ
ಶ್ರೀಗಂಧಾದಿಲೇಪನವೂ ಎತ್ತಿ
ಹಿಡಿದಿರುವ ಛತ್ರಿಗಳೂ

ಮುತ್ತಿನ ಹೊಸಬಡವೆಗಳು
ಚಿಗುರಿನಿಂದ ಅಲಂಕರಿಸಿದ
ಜೋಲುತುರುಬು ಮನಸ್ಸನ್ನು
ಪ್ರವೇಶಿಸಿ ಆಕರ್ಷಿಸುತ್ತಿರಲು
ಕಾಮದಿಂದ ಹುಚ್ಚೆದ್ದ ಕೆಲವರು
ರಾಣಿಯರು ಲೀಲೆಯಿಂದ
ಅಲ್ಲಿಗೆ ಬಂದರು.

ಕಂ||ಇದು ಮೃದು ಕಳಹಂಸದ
ರವ
ಮಿದು ನೂಪುರ ನಿನದಮಿದು
ರಥಾಂಗಯುಗಂ ಮ|

ತ್ತಿದು ಕುಚಯುಗಮಿದು ಸರಸಿಜ ಮಿದು ಮೊಗಮೆನಿಸಿದುದು ನೆರೆದ ಪೆಂಡಿರ ತಂಡಂ|| ೬೦||

ಪದ್ಯ-೬೦:ಪದವಿಭಾಗ-ಅರ್ಥ:ಇದು ಮೃದು ಕಳಹಂಸದ ರವಮಿದು ನೂಪುರ ನಿನದಮಿದು ರಥಾಂಗಯುಗಂ ಮತ್ತಿದು ಕುಚಯುಗಮಿದು ಸರಸಿಜಮಿದು ಮೊಗಂ

ಎನಿಸಿದುದು ನೆರೆದ ಪೆಂಡಿರ ತಂಡಂ (ಅಲ್ಲಿ ಸೇರಿದ ಹೆಂಗಸರ ಗುಂಪು)

ಪದ್ಯ-೬೦:ಅರ್ಥ: (ಅಲ್ಲಿ ನೆರೆದ ಹೆಂಗಸರ ಸಮೂಹದಲ್ಲಿ ಮಾತು, ಗೆಜ್ಜೆಸದ್ದು,ಇತ್ಯಾದಿ ಸನ್ನಿವೇಶಕ್ಕೆ ಹೋಲಿಕೆಯ ರೂಪಕ) ಅಲ್ಲಿ ಸೇರಿದ ಹೆಂಗಸರ ಗುಂಪು- ಇದು ಮೃದುವಾದ ಕಳಹಂಸಧ್ವನಿ- ಇದು

ಕಾಲ್ಗಡಗದ ಶಬ್ದ; ಇದು ಚಕ್ರವಾಕಪಕ್ಷಿಗಳ ಜೋಡಿ- ಇದು ಮೊಲೆಗಳ ಜೋಡಿ, ಇದು ಕಮಲ- ಇದು ಮುಖ ಎನ್ನಿಸಿತು.

ವ|| ಅಂತು ಮದನನ ಮನೋರಾಜ್ಯಮೆ ಬರ್ಪಂತೆ ಬಂದು ತಂಡತಂಡದೆ ರಮಣೀಯ ರಮಣೀಜನಂ ಬೆರಸು ಪಂಚರತ್ನಂಗಳಂ ಕೆದಱಿಸಿ ಸಾಂದಿನ ಸೌಸವದ

ಕುಂಕುಮದ ಕತ್ತುರಿಯ ಕದಡಂ ಕದಡಿ-

ವಚನ:ಪದವಿಭಾಗ-

ಅರ್ಥ:ಅಂತು ಮದನನ ಮನೋರಾಜ್ಯಮೆ ಬರ್ಪಂತೆ ಬಂದು, ತಂಡತಂಡದೆ ರಮಣೀಯ ರಮಣೀಜನಂ ಬೆರಸು (ಸೇರಿ) ಪಂಚರತ್ನಂಗಳಂ ಕೆದಱಿಸಿ (ಕೆದರಿಸಿ-ಹರಡಿಸಿ)ಸಾಂದಿನ ಸೌಸವದ ಕುಂಕುಮದ

ಕತ್ತುರಿಯ ಕದಡಂ (ಶ್ರೀಗಂಧದ ವಾಸನೆಯನ್ನು ಕುಂಕುಮಕೇಸರಿ ಮತ್ತು ಕಸ್ತೂರಿಯ ಬಗ್ಗಡಗಳನ್ನು ಕದಡಿ)ಕದಡಿ-

ವಚನ:ಅರ್ಥ:ಹಾಗೆ ಮನ್ಮಥನ ಮನೋರಾಜ್ಯವೇ ಬರುವಂತೆ ಬಂದು, ಗುಂಪು ಗುಂಪಾದ ರಮಣೀಯರಾದ ಆ ಸ್ತ್ರೀಜನರೊಡನೆ ಸೇರಿ ನೀರಿಗೆ ಪಂಚರತ್ನಗಳನ್ನು

ಹರಡಿಸಿ ಶ್ರೀಗಂಧದ
ವಾಸನೆಯನ್ನು
ಕುಂಕುಮಕೇಸರಿ ಮತ್ತು
ಕಸ್ತೂರಿಯ ಬಗ್ಗಡಗಳನ್ನು
ಕದಡಿ ನದಿಯನ್ನು
ಪ್ರವೇಶಿಸಿದರು.

ಕಂ|| ನೀಲದ ಬೆಳ್ಳಿಯ
ಗಾಡಿಯು
ಮೀ ಲಲಿತಾಂಗಿಯರ ಕಣ್ಗೆ
ಪೋಲ್ತುಂ ನಾಂ ಕ|
ಣ್ಗೇಳಿದಮಾಗಿರೆವೆಂದೆಳ

ವಾಳೆಗಳೋಡಿದುವು ಬಾಲೆಯರ್ ಪುಗುವಾಗಳ್|| ೬೧||

ಪದ್ಯ-೬೧:ಪದವಿಭಾಗ-ಅರ್ಥ:ನೀಲದ ಬೆಳ್ಳಿಯ ಗಾಡಿಯುಂ (ಸೌಂದರ್ಯ) ಈ ಲಲಿತಾಂಗಿಯರ ಕಣ್ಗೆ ಪೋಲ್ತುಂ (ಹೋಲುವ ಕಣ್ಣುಗಳನ್ನುಳ್ಳ ಈ ಕೋಮಲೆಯರ ಮುಂದೆ) ನಾಂ ಕಣ್ಗೇಳಿದಮಾಗಿರೆವೆಂದು

(ಕಣ್ಗೆ ಕೀಳಿದಂ ಅಗಿರೆವು ಎಂದು- ನಾವು ಹೀನವಾಗಿ ಕಾಣಿಸಿಕೊಳ್ಳಲಾರೆವು ಎಂದು) ಎಳವಾಳೆಗಳು (ಎಳೆಯ ಮೀನುಗಳು) ಓಡಿದುವು ಬಾಲೆಯರ್ ಪುಗುವಾಗಳ್ (ನೀರನ್ನು ಪ್ರವೇಶಿಸಿದಾಗ)

ಪದ್ಯ-೬೧:ಅರ್ಥ:ನೀಲರತ್ನದ, ಬೆಳ್ಳಿಯ, ಸೌಂದರ್ಯವನ್ನು ಹೋಲುವ ಕಣ್ಣುಗಳನ್ನುಳ್ಳ ಈ ಕೋಮಲೆಯರ ಮುಂದೆ

ನಾವು ಹೀನವಾಗಿ

ಕಾಣಿಸಿಕೊಳ್ಳಲಾರೆವು ಎಂದು

ಅಲ್ಲಿದ್ದ ಎಳೆಯ ಮೀನುಗಳು

ಆ ಬಾಲೆಯರು ನೀರನ್ನು

ಪ್ರವೇಶಿಸಿದಾಗ

ಓಡಿಹೋದುವು

ವ|| ಅಂತು ಪೊಕ್ಕಾಗಳ್-

ವಚನ:ಅರ್ಥ:ಹಾಗೆ

ಪ್ರವೇಶಿಸಿದಾಗ

ಕಂ|| ಆದಲೆ ನೀರ್ ಗುಂಡಿತ್ತೆಂ

ದೀದಲೆಯೊಳೆ ನಿಂದು ಸತಿಗೆ ಹರಿಗಂ ತೋಱು|
ತ್ತಾದರದೆ ಜಾನುದಘ್ನಮು ರೋದಘ್ನಂ ಕಂಠದಘ್ನಮೆಂಬಳವಿಗಳಂ||
೬೨||

ಪದ್ಯ-೬೨:ಪದವಿಭಾಗ-ಅರ್ಥ:ಆದಲೆ ನೀರ್ ಗುಂಡಿತ್ತೆಂದು ಈದಲೆಯೊಳೆ ನಿಂದು (ಅಲ್ಲಿ ನೀರು ಆಳವಾಗಿದೆ ಎಂದು

ಅರ್ಜುನನು ಈ
ಕಡೆಯಲ್ಲಿಯೇ ನಿಂತು) ಸತಿಗೆ
ಹರಿಗಂ (ಅರ್ಜುನನು)
ತೋಱುತ್ತಾ ಆದರದೆ
ಜಾನುದಘ್ನಂ ಉರೋದಘ್ನಂ
ಕಂಠದಘ್ನಮ್ ಎಂಬ
ಅಳವಿಗಳಂ (ಜಾನು-
ಮೊಲಕಾಲು, ಉರ- ಎದೆ;
ಕಂಠ- ಕುತ್ತಿಗೆ, ಆಳದ
ಪ್ರಮಾಣಗಳನ್ನು ಆದರದಿಂದ
ತೋರಿಸಿದನು.)

ಪದ್ಯ-೬೨:ಅರ್ಥ: ಆ ಕಡೆಯಲ್ಲಿ ನೀರು ಆಳವಾಗಿದೆ ಎಂದು ಅರ್ಜುನನು ಈ ಕಡೆಯಲ್ಲಿಯೇ ನಿಂತು ಸುಭದ್ರೆಗೆ ಮೊಳಕಾಲವರೆಗೆ ಮುಳುಗುವ ಎದೆಯವರೆಗೆ ಮುಳುಗುವ ಕತ್ತಿನವರೆಗೆ ಮುಳುಗುವ ಪ್ರಮಾಣಗಳನ್ನು ಆದರದಿಂದ ತೋರಿಸಿದನು.

ವ|| ಅಂತು ಜಗುನೆಯ ಮಡುವಂ ತಮ್ಮರಸಿಯರ

ವಿಕಟ ನಿತಂಬಬಿಂಬಂಗಳ

ಘಟ್ಟಣೆಯೊಳಮರೆ

ಬಗಿದೊಗೆದ

ಮೊಲೆಗಳಳ್ಳೇಱಿನೊಳಳ್ಳಾಡಿ

ತಳ್ಳಂಕಗುಟ್ಟಿ

ನೀರಾಟಮಾಡುವಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಜಗುನೆಯ

ಮಡುವಂ

(ಯುಮುನಾನದಿಯ

ಮಡುವನ್ನು) ತಮ್ಮರಸಿಯರ

ವಿಕಟ ನಿತಂಬಬಿಂಬಂಗಳ ಘಟ್ಟಣೆಯೊಳು ಅಮರೆ ಬಗಿದೊಗೆದ ಮೊಲೆಗಳ ಅಳ್ಳೇಱಿನೊಳ್ ಅಳ್ಳಾಡಿ (ಸ್ವಲ್ಪ ನೀರಿನಲ್ಲಿ) ತಳ್ಳಂಕಗುಟ್ಟಿ (ತುಳುಕಾಡಿ) ನೀರಾಟಮಾಡುವಾಗಳ್-

ವಚನ:ಅರ್ಥ:ಯುಮುನಾನದಿಯ ಮಡುವನ್ನು ಆ ರಾಣಿಯರು ತಮ್ಮ ದಪ್ಪವಾದ ಪಿರ್ರೆಗಳ ತಾಗುವಿಕೆಯಿಂದ

ಭಾಗಮಾಡಿ ಮೊಲೆಗಳ
ಘಟ್ಟಣೆಯಿಂದ ತುಳುಕಾಡಿ
ಜಲಕ್ರೀಡೆಯಾಡಿದರು

ಚಂ|| ಪೊಸತಲರ್ದೊಂದು ತಾವರೆಯೆಗೆತ್ತು ಮುಖಾಬ್ಜಮನೊಂದು ತುಂಬಿ ಚುಂ
ಬಿಸೆ ಸತಿ ಬೆರ್ಚಿ ಪೆಳ್ಪಳಿಸಿ ನೋಟ್ಪಿದುಮಾಕೆಯ ಕಣ್ಣ ಬೆಳ್ಪುಗಳ್|

ಪಸರಿಸೆ ತುಂಬಿಗಳ್

ಕುವಲಯಂಗಳಳರಳ್ದುವೆ ಗೆತ್ತು

ಮತ್ತೆಯುಂ

ಮುಸುಱುವುದುಂ

ಗುಣಾರ್ಣವನನಾಗಳವಳ್

ಭಯದಿಂದಮಪ್ಪಿದಳ್|| ೬೩||

ಪದ್ಯ-೬೩:ಪದವಿಭಾಗ-ಅರ್ಥ:ಪೊಸತು ಅಲರ್ದ ಒಂದು ತಾವರೆಯೆಗೆತ್ತು (ಒಂದು ಹೊಸದಾಗಿ ಅರಳಿದ ಕಮಲವೆಂದೇ ಭ್ರಮಿಸಿ)

ಮುಖಾಬ್ಜಮನು ಒಂದು
ತುಂಬಿ ಚುಂಬಿಸೆ (ಒಂದು
ದುಂಬಿಯು ಮುತ್ತಿಡಲು) ಸತಿ
ಬೆರ್ಚಿ ಪೆಳ್ಪಳಿಸಿ ನೋಟ್ಪಿದುಂ
(ಸತಿಯು ಹೆದರಿ ಭಯದಿಂದ
ನೋಡುತ್ತಿರಲು) ನೋಟ್ಪಿದುಂ
ಆಕೆಯ ಕಣ್ಣ ಬೆಳ್ಪುಗಳ್
ಪಸರಿಸೆ (ಅವಳ ಕಣ್ಣಿನ
ಬಿಳಿಯ ಬಣ್ಣವು ಪ್ರಸರಿಸಲು)
ತುಂಬಿಗಳ್ ಕುವಲಯಂಗಳ
ಅರಳ್ದುವೆ ಗೆತ್ತು ಮತ್ತೆಯುಂ

ಮುಸುಱುವುದುಂ (ಅದನ್ನು ದುಂಬಿಗಳ ಅರಳಿದ ಕನ್ನೈದಿಲೆಗಳೆಂದೇ ಭ್ರಾಂತಿಗೊಂಡು ಪುನ ಮುತ್ತಲು) ಗುಣಾರ್ಣವನನು ಆಗಳವಳ್ ಭಯದಿಂದಂ ಅಪ್ಪಿದಳ್

ಪದ್ಯ-೬೩:ಅರ್ಥ:ಮುಖಕಮಲಗಳನ್ನು ಒಂದು ದುಂಬಿಯು ಒಂದು ಹೊಸದಾಗಿ ಅರಳಿದ ಕಮಲವೆಂದೇ ಭ್ರಮಿಸಿ

ಮುತ್ತಿಡಲು ಆ ಸತಿಯು
ಹೆದರಿ ಭಯದಿಂದ
ನೋಡುತ್ತಿರಲು ಅವಳ ಕಣ್ಣಿನ
ಬಿಳಿಯ ಬಣ್ಣವು ಪ್ರಸರಿಸಲು
ಅದನ್ನು ದುಂಬಿಗಳ ಅರಳಿದ
ಕನ್ನೈದಿಲೆಗಳೆಂದೇ
ಭ್ರಾಂತಿಗೊಂಡು ಪುನ
ಮುತ್ತಲು ಅವಳು ಭಯದಿಂದ
ಗುಣಾರ್ಣವನನ್ನು
ಅಪ್ಪಿಕೊಂಡಳು.

ಚಂ||ಅಸಿಯಳವುಂಕಿ
ಕೆಂದಳದೊಳೊತ್ತುವ ನೀರ್
ಮೊಗಮಂ ಪಳಂಚೆ ಬಂ
ಚಿಸಲಿನಿಸಾನುಮಂ
ಮುಱುಗಿದಾಗಡೆ ಭೋಂಕನೆ
ಬಂದು ಬಾಳೆಮೀನ್|
ಮುಸುಱಿ ನಿರಂತರಂ ಕರ್ದುಕೆ
ಸತ್ಕವಿಯೊಳ್ ಸಮನಾಗಿ
ಮಾರ್ಗಮಂ
ಪೊಸಯಿಸಿ ದೇಸಿಯಂ
ಪೊಸತುಮಾಡಿದಳೊರ್ವಳ

ಪೂರ್ವರೂಪದಿಂ|| ೬೪||

ಪದ್ಯ-೬೪:ಪದವಿಭಾಗ-ಅರ್ಥ:ಅಸಿಯಳು ಅವುಂಕಿ ಕೆಂದಳದೊಳು (ಕೆಂಪಾದ ತನ್ನ ಅಂಗೈಯಿಂದ) ಒತ್ತುವ ನೀರ್ ಮೊಗಮಂ ಪಳಂಚೆ (ತಗುಲಲು) ಬಂಚಿಸಲು ಇನಿಸಾನುಮಂ ಮುಟ್ಟಿಗಿದಾಗಡೆ (ಮತ್ತೊಬ್ಬಳು ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ

ಒಂದಿಷ್ಟು ಮುಳುಗಿದಾಗಲೆ)
ಭೋಂಕನೆ ಬಂದು
ಬಾಳೆಮೀನ್ ಮುಸುಙಿ
(ಮುತ್ತಿಕೊಂಡು) ನಿರಂತರಂ
ಕರ್ದುಕೆ (ಕಚ್ಚಲು)
ಸತ್ಕವಿಯೊಳ್ ಸಮನಾಗಿ
ಮಾರ್ಗಮಂಪೊಸಯಿಸಿ
ದೇಸಿಯಂ
ಪೊಸತುಮಾಡಿದಳೊರ್ವಳ
ಪೂರ್ವರೂಪದಿಂ

ಪದ್ಯ-೬೪:ಅರ್ಥ: .
ಕೃಶಾಂಗಿಯಾದ ಒಬ್ಬಳು
ಕೆಂಪಾದ ತನ್ನ ಅಂಗೈಯಿಂದ
ಅಮುಕಿ ಚೆಲ್ಲಿದ ನೀರು ತನ್ನ
ಮುಖವನ್ನು ತಗುಲಲು
ಮತ್ತೊಬ್ಬಳು ಅದನ್ನು
ತಪ್ಪಿಸಿಕೊಳ್ಳುವುದಕ್ಕಾಗಿ
ಒಂದಿಷ್ಟು ಮುಳುಗಿದಾಗಲೆ
ಒಂದು ಬಾಳೆಯ ಮೀನು
ಇದ್ದಕ್ಕಿದ್ದ ಹಾಗೆ ಬಂದು
ಮುತ್ತಿಕೊಂಡು ಒಂದೇ

ಸಮನಾಗಿ ಕಚ್ಚಲು, ಅವಳು
ಸತ್ಕವಿಗೆ ಸಮನಾಗಿ
ಮಾರ್ಗೀಶೈಲಿಯನ್ನು
ಹೊಸದಾಗಿಸಿ ದೇಸೀಶೈಲಿಯ
ಸೌಂದರ್ಯವನ್ನು
ಅಪೂರ್ವರೀತಿಯಿಂದ
ಹೊಸತು ಮಾಡಿದಳು. (???)

ಕಂ|| ಆ ಸಕಳ ಸ್ತ್ರೀ ನಿವಹದ
ಪೂಸಿದ ಮೃಗಮದದ
ಮುಡಿಯ ಪೂವಿಯ ರಜದಿಂ|
ವಾಸಿಸಿದ ನೀರ ಕದಡಿಂ

ದಾಸವದೊಳ್ ಸೊರ್ಕಿ ಬೆಂಡುಮಗುಳ್ದುವು ಮೀಂಗಳ್|| ೬೫||

ಪದ್ಯ-೬೫:ಪದವಿಭಾಗ-ಅರ್ಥ:ಆ ಸಕಳ ಸ್ತ್ರೀ ನಿವಹದ (ಸಮೂಹದ) ಪೂಸಿದ ಮೃಗಮದದ (ಕಸ್ತೂರಿಯಿಂದಲೂ) ಮುಡಿಯ ಪೂವಿಯ ರಜದಿಂ (ಹೂಗಳ ಪರಾಗಗಳಿಂದ) ವಾಸಿಸಿದ ನೀರ ಕದಡಿಂದ

ಆಸವದೊಳ್
(ಮದ್ಯಸೇವನೆಯಿಂದ)
ಸೊರ್ಕಿ ಬೆಂಡುಂ ಉಗುೞ್ದುವು
ಮೀಂಗಳ್ (ಬೆಂಡಿನಂತೆ
ಹೊಟ್ಟೆ ಮೇಲಾಗಿ ತೇಲಿದವು)
ಪದ್ಯ-೬೫:ಅರ್ಥ: ಆ ಸಕಲ
ಸ್ತ್ರೀ ಸಮೂಹವು ಲೇಪನ
ಮಾಡಿಕೊಂಡಿದ್ದ
ಕಸ್ತೂರಿಯಿಂದಲೂ ತುರುಬಿನ
ಹೂಗಳ ಪರಾಗಗಳಿಂದಲೂ
ವಾಸನೆ ಮಾಡಲ್ಪಟ್ಟ ನೀರಿನ

ಕದಡವೆಂಬ
ಮದ್ಯಸೇವನೆಯಿಂದ
ಮೀನುಗಳು ಸೊಕ್ಕಿ
ಬೆಂಡಿನಂತೆ ತೇಲಿ
ಅಸ್ತವ್ಯಸ್ತವಾದುವು.

ಕಂ||ಮುಡಿ ಬಿಡೆ ಪರೆದೆಸಱ್ಗಳ
ಪೊಸ
ದುಡುಗೆಯ ಮುತ್ತುಗಳ ಕುಚದ
ಸಿರಿಕಂಡದ ಬೆ|
ಳ್ಪೊಡನೊಡನೆಸೆದಿರೆ
ಜಗುನೆಯ

ಮಡು ಗಂಗೆಯ ಮಡುವನಿನಿಸನನುಕರಿಸಿರ್ಕುಂ || ೬೬||

ಪದ್ಯ-೬೬:ಪದವಿಭಾಗ-ಅರ್ಥ:ಮುಡಿ ಬಿಡೆ ಪರೆದ ಎಸಳ್ಗಳ (ಬಿಚ್ಚಿದ ತುರುಬಿನಿಂದ ಚೆದುರಿದ ಹೂವಿನ ದಳಗಳಿಂದ) ಪೊಸದುಡುಗೆಯ ಮುತ್ತುಗಳ ಕುಚದ ಸಿರಿಕಂಡದ ಬೆಳ್ಪು ಒಡನೊಡನೆ ಎಸೆದಿರೆ

(ಮೊಲೆಗೆ ಲೇಪನ
ಮಾಡಿಕೊಂಡಿದ್ದ
ಶ್ರೀಗಂಧದಿಂದ ಬಿಳಿಯ
ಬಣ್ಣವನ್ನು ಹೊಂದಿ)
ಜಗುನೆಯ ಮಡು
(ಯಮುನೆಯ ಮಡು)
ಗಂಗೆಯ ಮಡುವನು
ಇನಿಸನು ಅನುಕರಿಸಿರ್ಕುಂ
(ಗಂಗೆಯ ಮಡುವನ್ನು ಸ್ವಲ್ಪ
ಹೋಲುತ್ತಿತ್ತು)

ಪದ್ಯ-೬೬:ಅರ್ಥ: . ಆ ಸ್ತ್ರೀಯರ ಬಿಚ್ಚಿದ ತುರುಬಿನಿಂದ ಚೆದುರಿದ ಹೂವಿನ ದಳಗಳಿಂದಲೂ, ಹೊಸ ಒಡವೆಗಳ ಮುತ್ತುಗಳಿಂದಲೂ ಮೊಲೆಗೆ ಲೇಪನ ಮಾಡಿಕೊಂಡಿದ್ದ ಶ್ರೀಗಂಧದಿಂದ ಬಿಳಿಯ ಬಣ್ಣವನ್ನು ಹೊಂದಿ ಯಮುನೆಯ ಮಡು (ಬಿಳುಪಾಗಿರುವ) ಗಂಗೆಯ

ಮಡುವನ್ನು ಸ್ವಲ್ಪ
ಹೋಲುತ್ತಿತ್ತು

ವ|| ಅಂತು ನಾಡೆಯುಂ ಪೊೞ್ತು ಜಲಕೇಳೀ ಲೀಲೆಯೊಳ್ ಮೆರೆದು ನಿಮಿರ್ದ ಕುರುಳ್ಗಳುಂ ಕೆಂಪೇಱಿದ ಕಣ್ಗಳುಂ ಬೆಳ್ಪೇಱಿದ ಬಾಯ್ದೆಗಳುಂ ಪಳಂಚಿದ ಬಣ್ಣಂಗಳುಮೆಸೆಯೆ ಸೊಗಯಿಸುವ ನಿಜ

ವಧೂಜನಂ ಬೆರಸು ಪೊಱಮಟ್ಟ್ಯಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ನಾಡೆಯುಂ ಪೊೞ್ತು (ಬಹಳ ಹೊತ್ತು) ಜಲಕೇಳೀ ಲೀಲೆಯೊಳ್ ಮೆರೆದು, ನಿಮಿರ್ದ ಕುರುಳ್ಗಳುಂ (ಕೆದರಿನಿಂತ ಕೂದಲುಗಳೂ) ಕೆಂಪೇಱಿದ ಕಣ್ಗಳುಂ ಬೇಳ್ಪೇಱಿದ ಬಾಯ್ದೆಗಳುಂ (ಬಿಳಿಚಿಕೊಂಡ

ತುಟಿಗಳೂ) ಪಳಂಚಿದ
ಬಣ್ಣಂಗಳುಂ ಎಸೆಯೆ(ದೇಹಕ್ಕೆ
ಅಂಟಿಕೊಂಡಿರುವ ಬಣ್ಣದ
ಸೀರೆಗಳೂ ಶೋಭಿಸಲು)
ಸೊಗಯಿಸುವ ನಿಜ
ವಧೂಜನಂ ಬೆರಸು
(ಸ್ತ್ರೀಜನಗಳೊಜನೆ)
ಪೊಱಮಟ್ಟಾಗಳ್
(ಹೊರಟುಬಂದಾಗ)-
ವಚನ:ಅರ್ಥ:ಹಾಗೆ ಬಹಳ
ಹೊತ್ತು ಜಲಕ್ರೀಡೆಯ

ಆಟದಲ್ಲಿ ಮೆರೆದು,ಕೆದರಿನಿಂತ ಕೂದಲುಗಳೂ, ಕೆಂಪಾದ ಕಣ್ಣುಗಳೂ, ಬಿಳಿಚಿಕೊಂಡ ತುಟಿಗಳೂ, ದೇಹಕ್ಕೆ ಅಂಟಿಕೊಂಡಿರುವ ಬಣ್ಣದ ಸೀರೆಗಳೂ ಶೋಭಿಸಲು, ಸೊಗಸಾಗಿ ಕಾಣುತ್ತಿರುವ ತಮ್ಮ ಸ್ತ್ರೀಜನಗಳೊಜನೆ ಕೃಷ್ಣಾರ್ಜುನರು ನೀರಿನಿಂದ ಹೊರಟುಬಂದರು.

ಕಂ|| ತೆಱಪುವಡೆದಂಗಜಂ ಕೆ

ಯ್ಸೆರೆಗೊಳೆ ನೋಟಕರ ಮನಮನಾಗಳ್ ಕೊಳದಿಂ| ಪೊಱಮಡೆ ಜಿಗಿಲ್ತು ಪತ್ತಿದ ಕುಱುವಡಿಗಳೆ ಮೆರೆದುವವರ ನಾಣ್ಗಳ ತೆಱಪಂ|| ೬೭ ||

ಪದ್ಯ-೬೭:ಪದವಿಭಾಗ-ಅರ್ಥ:ತೆಱಪುವಡೆದು ಅಂಗಜಂ (ಮನ್ಮಥನು ಬಿಡುವುಮಾಡಿಕೊಂಡು) ಕೆಯ್ಸೆರೆಗೊಳೆ ನೋಟಕರ ಮನಮನು ಆಗಳ್

(ನೋಡುವವರ ಮನಸ್ಸನ್ನು
ಆಗ ಸೆರೆಹಿಡಿಯಲು)
ಕೊಳದಿಂ ಪೊಱಮಡೆ ಜಿಗಿಲ್ತು
ಪತ್ತಿದ ಕುಱುವಡಿಗಳೆ (ಚಿಕ್ಕ
ಮಡಿಬಟ್ಟೆಗಳೇ -
ಲಂಗೊಟಿಗಳೇ) ಮೆರೆದುವ
ಅವರ ನಾಣ್ಗಳ ತೆಱಪಂ
(ಅವರ ನಾಚಿಕೆಸ್ಥಾನಗಳ
ಎಡೆಗಳನ್ನು ಪ್ರಕಟಿಸಿದುವು)
ಪದ್ಯ-೬೭:ಅರ್ಥ: ಮನ್ಮಥನು
ಬಿಡುವುಮಾಡಿಕೊಂಡು

ನೋಡುವವರ ಮನಸ್ಸನ್ನು ಸೆರೆಹಿಡಿಯಲು (ಎಂಬಂತೆ) ಕೊಳದಿಂದ ಸ್ತ್ರೀಯರು ಹೊರಗೆ ಬಂದರು. ಅವರ ಶರೀರಕ್ಕೆ ಅಂಟಿಕೊಂಡಿದ್ದ ಚಿಕ್ಕ ಲಂಗೊಟಿಗಳೇ ಅವರ ನಾಚಿಕೆಸ್ಥಾನಗಳ ಎಡೆಗಳನ್ನು ಪ್ರಕಟಿಸಿದುವು.

ವ|| ಆಗಳ್ ಮಡಿಯ ಭಂಡಾರದ ಮಾಣಿಕ್ಯ ಭಂಡಾರದ ನಿಯೋಗಿಗಳ್

ತಂದು ಮುಂದಿಟ್ಟ ಪೊನ್ನ
ಪಡಲಿಗೆಗಳೊಳೊಟ್ಟಿದ
ದೇವಾಂಗವಸ್ತ್ರಂಗಳುಮನನೇ
ಕವಿಧದ ತುಡುಗೆಗಳು
ಮನೆನಿತಾನುಂ ತೆಱದ
ಸುಗಂಧದ್ರವ್ಯಂಗಳುಮನರಸಿ
ಯರ್ಗಮರಸುಮಕ್ಕಳ್ಗುಮಿತ್ತು
ತಾಮಿರ್ವರುಂ ಉಟ್ಟುಂ
ತೊಟ್ಟುಂ ಪೂಸಿಯುಂ ನೆರೆಯೆ
ಕೆಯ್ಗೆಯ್ದು
ದಿವ್ಯಾಹಾರಂಗಳನಾರೋಗಿಸಿ

ಕೆಯ್ಗೆಟ್ಟಿಕೊಂಡು

ತಂಬುಲಂಗೊಂಡಿಂ

ಬೞಿಯಮಚ್ಯುತಂ

ವಿಕ್ರಮಾರ್ಜುನನ ಕೆಯ್ಯಂ

ಪಿಡಿದುಕೊಂಡು ತನ್ನ

ಬಾಲಕ್ರೀಡೆಯ ಸಾಹಸಂಗಳಂ

ತೋಱಲೆಂದು-

ವಚನ:ಪದವಿಭಾಗ-

ಅರ್ಥ:ಆಗಳ್ ಮಡಿಯ ಭಂಡಾರದ ಮಾಣಿಕ್ಯ ಭಂಡಾರದ ನಿಯೋಗಿಗಳ್

(ವಸ್ತ್ರಭಂಡಾರ ಮಾಣಿಕ್ಯ
ಭಂಡಾರಗಳ
ಅಕಾರಿಗಳು)ತಂದು
ಮುಂದಿಟ್ಟ ಪೊನ್ನ
ಪಡಲಿಗೆಗಳೊಳೊಟ್ಟಿದ
ದೇವಾಂಗವಸ್ತ್ರಂಗಳುಮನನೇ
ಕವಿಧದ ತುಡುಗೆಗಳು
ಮನೆನಿತಾನುಂ ತೆಱದ (ತೆರದ-
ವಿವಿಧ)
ಸುಗಂಧದ್ರವ್ಯಂಗಳುಮನು
ಅರಸಿಯರ್ಗಂ

ಅರಸುಮಕ್ಕಳ್ಗಂ ಇತ್ತು (ಕೊಟ್ಟು) ತಾಮ್ ಇರ್ವರುಂ (ತಾವಿಬ್ಬರೂ) ಉಟ್ಟುಂ ತೊಟ್ಟುಂ ಪೂಸಿಯುಂ ನೆರೆಯೆ ಕೆಯ್ಗೆಯ್ದು (ಚೆನ್ನಾಗಿ ಅಲಂಕರಿಸಿಕೊಂಡು) ದಿವ್ಯ ಆಹಾರಂಗಳನು ಆರೋಗಿಸಿ (ಊಟಮಾಡಿ) ಕೆಯ್ಗಟ್ಟಿಕೊಂಡು ತಂಬುಲಂಗೊಂಡು ಇಂಬಟಿಯಂ (ಹತ್ತಿದಲ್ಲಿದ್ದ)

ಅಚ್ಯುತಂ ವಿಕ್ರಮಾರ್ಜುನನ (ಅರ್ಜುನನ) ಕೆಯ್ಯಂ ಪಿಡಿದುಕೊಂಡು ತನ್ನ ಬಾಲಕ್ರೀಡೆಯ ಸಾಹಸಂಗಳಂ ತೋಱಲೆಂದು-

ವಚನ:ಅರ್ಥ:ಆಗ ವಸ್ತ್ರಭಂಡಾರ ಮಾಣಿಕ್ಯ ಭಂಡಾರಗಳ ಅಕಾರಿಗಳು ತಂದು ಮುಂದೆ ಚಿನ್ನದ ತಟ್ಟೆಗಳಲ್ಲಿ ರಾಶಿ ಹಾಕಿದ ರೇಷ್ಮೆ ವಸ್ತುಗಳನ್ನೂ ಅನೇಕ

ವಿಧವಾದ ಆಭರಣಗಳನ್ನೂ
ಎಷ್ಟೋ ರೀತಿಯ
ಸುಗಂಧದ್ರವ್ಯಗಳನ್ನೂ
ರಾಣಿಯರಿಗೂ
ರಾಜಕುಮಾರರಿಗೂ ಕೊಟ್ಟು
ತಾವಿಬ್ಬರೂ ವಸ್ತ್ರಗಳನ್ನು
ತೊಟ್ಟು ಚೆನ್ನಾಗಿ
ಅಲಂಕರಿಸಿಕೊಂಡು
ವಾಸನಾದ್ರವ್ಯವನ್ನು
ಲೇಪಿಸಿಕೊಂಡು
ಸಂಪೂರ್ಣವಾಗಿ ಅಲಂಕಾರ

ಮಾಡಿಕೊಂಡರು.
ಆಹಾರಗಳನ್ನು ಊಟಮಾಡಿ
ಕೈಗಂಧವನ್ನೂ ಲೇಪಿಸಿ
ತಾಂಬೂಲ ಸ್ವೀಕರಿಸಿದ ಮೇಲೆ
ಕೃಷ್ಣನು ಹತ್ತಿದಲ್ಲಿದ್ದ
ಅರ್ಜುನನ ಕಯ್ಯನ್ನು
ಹಿಡಿದುಕೊಂಡು ತನ್ನ
ಬಾಲಕ್ರೀಡೆಯ ಸಾಹಸಗಳನ್ನು
ತೋರಲೆಂದು ಹೊರಟನು.

ಉ|| ಕೊಂದೆನವುಂಕಿ ಸಂದ ಖರಧೇನುಕರಂ

ಮುಳಿಸಿಂದಮಿಲ್ಲಿ ಕಾ

ಳಿಂದಿಯ ಪಾವನಪ್ಪಳಿಸಿದೆಂ

ಪಿಡಿದೀ ಸಿಲೆಯಲ್ಲಿ ಮತ್ತಮಾ|

ಟಂದರನುಗ್ರ್ರದೈತ್ಯರನಳುರ್ಕೆ

ಯಿನಿಕ್ಕಿದೆನಿಲ್ಲಿ ಮುನ್ನಮೆಂ

ದಂದು ಗುಣಾರ್ಣವಂಗೆ ಮಧು

ಕೈಟಭಹಾರಿ ತೋಱಿಲ್ದು

ತೋಱಿದಂ|| ೬೮||

ಪದ್ಯ-೬೮:ಪದವಿಭಾಗ-

ಅರ್ಥ:ಕೊಂದೆನು ಅವುಂಕಿ

(ಒತ್ತಿ) ಸಂದ ಖರಧೇನುಕರಂ

(ರಾಕ್ಷಸರು) ಮುಳಿಸಿಂದಂ,
ಅಲ್ಲಿ ಕಾಳಿಂದಿಯ ಪಾವನು
ಅಪ್ಪಳಿಸಿದೆಂ, ಪಿಡಿದು ಈ
ಸಿಲೆಯಲ್ಲಿ ಮತ್ತಂ
ಆಟಂದರನು
(ಅಟಕಾಯಿಸಿದ, ಮೇಲೆಬಿದ್ದ)
ಅಗ್ರದೈತ್ಯರನು ಅಳುರ್ಕೆಯಿಂ
ಇಕ್ಕಿದೆಂ (ಪರಾಕ್ರಮದಿಂದ
ಇಲ್ಲಿ ಕೊಂದೆನು) ಇಲ್ಲಿ ಮುನ್ನಂ
ಎಂದು ಅಂದು
ಗುಣಾರ್ಣವಂಗೆ

(ಅರ್ಜುನನಿಗೆ) ಮಧು ಕೈಟಭಹಾರಿ ತೋಱಿಲ್ದು ತೋಱಿದಂ (ಮಧುಕೈಟಭರಿಗೆ ಶತ್ರುವಾದ ಕೃಷ್ಣನು ಸುತ್ತಾಡಿ ಅರ್ಜುನನಿಗೆ ತೋರಿಸಿದನು.)

ಪದ್ಯ-೬೮:ಅರ್ಥ: ಹಿಂದೆ ಇದ್ದ ಖರಧೇನುಕರೆಂಬ ರಾಕ್ಷಸರನ್ನು ಇಲ್ಲಿ ಒತ್ತಿ ಕೋಪದಿಂದ ಕೊಂದೆನು. ಯಮುನಾನದಿಯಲ್ಲಿದ್ದ ಕಾಳಿಂಗನೆಂಬ ಹಾವನ್ನು

ಹಿಡಿದು ಈ ಕಲ್ಲಿನ ಮೇಲೆ ಅಪ್ಪಳಿಸಿದೆನು. ಮತ್ತು ಹಿಂದಿನ ಕಾಲದಲ್ಲಿ ಮೇಲೆಬಿದ್ದ ಭಯಂಕರರಾದ ರಾಕ್ಷಸರನ್ನು ಪರಾಕ್ರಮದಿಂದ ಇಲ್ಲಿ ಕೊಂದೆನು ಎಂದು ಆ ದಿನ ಗುಣಾರ್ಣವನಾದ ಅರ್ಜುನನಿಗೆ, ಮಧುಕೈಟಭರಿಗೆ ಶತ್ರುವಾದ ಕೃಷ್ಣನು ಸುತ್ತಾಡಿ ಅರ್ಜುನನಿಗೆ ತೋರಿಸಿದನು.

ವ|| ಅಂತಾ ವನಾಂತರಾಳಮಂ ತೊಟಿಲ್ದು ತೋಱುತ್ತಿರ್ಪನ್ನೆಗಮನೂನ ದಾನಿಯದಾನದುದ್ದಾನಿಯ ದಾನಮನಾನಲಾನಲ್ಲದೆ ಪೆಱರ್ ನೆರೆಯರೆಂಬಂತೆ ತೊಟ್ಟನೆ ಕಟ್ಟಿದಿರೊಳ್-

ವಚನ:ಪದವಿಭಾಗ-

ಅರ್ಥ:ಅಂತು ಆ ವನಾಂತರ ಆಳಮಂ ತೊಟಿಲ್ದು ತೋಱುತ್ತಿರ್ಪ ಅನ್ನೆಗಂ

(ಸುತ್ತಾಡಿ
ತೋರುತ್ತಿರುವಷ್ಟರಲ್ಲಿ)
ಅನೂನ ದಾನಿಯ ದಾನದ
ಉದ್ದಾನಿಯ (ಕುಂದಿಲ್ಲದೆ
ದಾನಮಾಡುವವನ)
ದಾನಮನು ಆನಲು
(ಸ್ವೀಕರಿಸುವುದಕ್ಕೆ) ಆನಲ್ಲದೆ
ಪೆಱರ್ ನೆರೆಯರೆಂಬಂತೆ
(ನಾನಲ್ಲದೆ ಬೇರೆಯವರು
ಸಮರ್ಥರಾಗಲಾರರು)
ತೊಟ್ಟನೆ ಕಟ್ಟೆದಿರೊಳ್-

(ಎನ್ನುವಾಗ ಹಾಗೆ
ಕಟ್ಟಿದಿರಿನಲ್ಲಿ)
ವಚನ:ಅರ್ಥ:ಹಾಗೆ ವನದ
ಒಳಭಾಗವನ್ನು ಸುತ್ತಾಡಿ
ತೋರುತ್ತಿರುವಷ್ಟರಲ್ಲಿ
ಕುಂದಿಲ್ಲದೆ
ದಾನಮಾಡುವವನ
ದಾನವನ್ನು ಸ್ವೀಕರಿಸುವುದಕ್ಕೆ
ನಾನಲ್ಲದೆ ಬೇರೆಯವರು
ಸಮರ್ಥರಾಗಲಾರರು

ಎನ್ನುವಾಗ ಹಾಗೆ
ಕಟ್ಟಿದಿರಿನಲ್ಲಿ-

<u>ಖಾಂಡವವನ ದಹನ</u>

ಕಂ|| ಉರಿವುರಿಯನೆ
ತಲೆನವಿರನು
ಕರಿಸಿರೆ ಸಂತಪ್ತ
ಕನಕವರ್ಣಮುಮುರಿಯೊಂ|
ದುರುಳಿವೊಲಿರೆ ಜಠರಾನಳ
ನುರಿವಿನಮಂತೊರ್ವನುರಿಯ
ಬಣ್ಣದ ಪಾರ್ವಂ|| ೬೯ ||

ಪದ್ಯ-೬೯:ಪದವಿಭಾಗ-ಅರ್ಥ:ಉರಿವುರಿಯನೆ ತಲೆನವಿರ್ ಅನುಕರಿಸಿರೆ (ಉರಿಯುತ್ತಿರುವ ಜ್ವಾಲೆಯನ್ನೇ ತಲೆಯ ಕೂದಲು ಅನುಕರಿಸುತ್ತಿರಲು) ಸಂತಪ್ತ ಕನಕವರ್ಣಮುಂ (ಪುಟವಿಟ್ಟ ಚಿನ್ನದ ಹೊಂಬಣ್ಣವು) ಉರಿಯ ಒಂದು ಉರುಳಿವೊಲ್ ಇರೆ (ಬೆಂಕಿಯ ಒಂದು

ಉಂಡೆಯಂತಿರಲು)
ಜಠರಾನಳನು ಉರಿವಿನಂ
ಅಂತೆ (ಜಠರಾಗ್ನಿಯ
ಉರಿಯಿಂದ
ಕೂಡಿದಂತೆ)ಒರ್ವನ್
ಉರಿಯ ಬಣ್ಣದ ಪಾರ್ವಂ
(ಬೆಂಕಿಯ ಬಣ್ಣದ
ಬ್ರಾಹ್ಮಣನೊಬ್ಬನು)-
ಪದ್ಯ-೬೯:ಅರ್ಥ:
ಉರಿಯುತ್ತಿರುವ
ಜ್ವಾಲೆಯನ್ನೇ ತಲೆಯ

ಕೂದಲು ಅನುಕರಿಸುತ್ತಿರಲು
ಅವನ ಪುಟವಿಟ್ಟ ಚಿನ್ನದ
ಹೊಂಬಣ್ಣವು ಬೆಂಕಿಯ
ಒಂದು ಉಂಡೆಯಂತಿರಲು
ಜಠರಾಗ್ನಿಯ ಉರಿಯಿಂದ
ಕೂಡಿದಂತೆ (ಹಸಿವಿನಿಂದ
ಕೂಡಿದ) ಬೆಂಕಿಯ ಬಣ್ಣದ
ಬ್ರಾಹ್ಮಣನೊಬ್ಬನು-

ವ|| ಅಂತು ವರ್ಪನಂ ಕಂಡು ಸಾಮಂತಚೂಡಾಮಣಿ ತನ್ನೊಳಿಂತೆಂದು ಬಗೆದಂ-

ವಚನ:ಪದವಿಭಾಗ-ಅರ್ಥ:ಅಂತು ವರ್ಪನಂ (ಬರುತ್ತಿರುವವನ್ನು)ಕಂಡು ಸಾಮಂತಚೂಡಾಮಣಿ (ಅರ್ಜುನನು) ತನ್ನೊಳು ಇಂತೆಂದು ಬಗೆದಂ(ಯೋಚಿಸಿದನು) -

ವಚನ:ಅರ್ಥ:ಹಾಗೆ ಬರುತ್ತಿರುವವನ್ನು ಕಂಡು ಸಾಮಂತಚೂಡಾಮಣಿ ತನ್ನಲ್ಲಿ ಹೀಗೆಂದು ಯೋಚಿಸಿದನು.

ಕಂ|| ತಪ ನಿಯಮ ನಿಯತನೀ

ಬ

ರ್ಪ ಪಾರ್ವನೇನಟ್ಟಿ ತನಗದಂ

ಬೇಡಿದೊಡಿ|

ನ್ನಪಗತದುರಿತರ್ ಸಂಪೂ

ರ್ಣಪುಣ್ಯರಾನಲ್ಲದಿಲ್ಲ ಪೇೞ

ಪೆಱರೊಳರೇ|| ೭೦

ಪದ್ಯ-೭೦:ಪದವಿಭಾಗ-

ಅರ್ಥ:ತಪ ನಿಯಮ

ನಿಯತನು ಈ ಬರ್ಪ

ಪಾರ್ವನು ಏನಟ್ಟಿ ತನಗೆ (ಈ

ಬ್ರಾಹ್ಮಣನು ತನ್ನ ಅಪೇಕ್ಷೆ ಏನೆಂಬುದನ್ನು) ಅದಂ ಬೇಡಿದೊಡೆ ಇನ್ನು ಅಪಗತದುರಿತರ್ (ಇನ್ನು ಪಾಪರಹಿತರಾದವರು) ಸಂಪೂರ್ಣಪುಣ್ಯರ್ ಆನಲ್ಲದೆ (ನಾನಲ್ಲದೆ) ಇಲ್ಲ ಪೇಱು ಪೆಱರೊಳರೇ(ಇನ್ನರೂ ಇಲ್ಲ, ಹೇಳು ಬೇರೆ ಇದ್ದಾರೆಯೋ!)

ಪದ್ಯ-20:ಅರ್ಥ: ತಪಸ್ಸಿನ ನಿಯಮದಲ್ಲಿ ಆಸಕ್ತನಾದ,

ಎದುರಿಗೆ ಬರುತ್ತಿರುವ ಈ ಬ್ರಾಹ್ಮಣನು ತನ್ನ ಅಪೇಕ್ಷೆ ಏನೆಂಬುದನ್ನು ನನ್ನಲ್ಲಿ ಬೇಡುವುದಾದರೆ, (ಕೊಟ್ಟವರು) ಇನ್ನು ಪಾಪರಹಿತರಾದವರು ನನಗಿಂತ ಪುಣ್ಯಶಾಲಿಗಳು ಇನ್ನರೂ ಇಲ್ಲ, ಹೇಳು ಬೇರೆ ಇದ್ದಾರೆಯೋ!.

ವ|| ಎಂಬನ್ನೆಗಂ ಸಾಮಂತ ಚೂಡಾಮಣಿಯನೆಯ್ದೆವಂದು

ನಾಲ್ಕುಂ ವೇದಂಗಳೊಳ್

ನಾಲ್ಕುಂ ಋಚಂಗಳಂ ಪೇೞ್ದು

ಸಿತ ದೂರ್ವಾಂಕುರ

ವಿಮಿಶ್ರಂಗಳಪ್ಪ

ಶೇಷಾಕ್ಷತೆಗಳಂ ಕೊಟ್ಟು

ಮುಂದೆ ನಿಂದನಂ ನಿಮಗೆ

ಬಾೞ್ತೆಯಪ್ಪುದಂ

ಬೇಡಿಕೊಳ್ಳಿಂ ಎನೆ-

ವಚನ:ಪದವಿಭಾಗ-

ಅರ್ಥ:ಎಂಬನ್ನೆಗಂ ಸಾಮಂತ

ಚೂಡಾಮಣಿಯನು

ಎಯ್ದೆವಂದು (ಸಮೀಪಕ್ಕೆ ಬಂದು) ನಾಲ್ಕುಂ ವೇದಂಗಳೊಳ್ ನಾಲ್ಕುಂ ಋಚಂಗಳಂ ಪೇೞ್ದು (ಹೇಳಿ) ಸಿತ ದೂರ್ವಾಂಕುರ ವಿಮಿಶ್ರಂಗಳಪ್ಪ (ಗರಿಕೆಯ ಕುಡಿಯಿಂದ ಕೂಡಿದ) ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ (ಮುಂದೆ ನಿಂತವನನನ್ನು) ನಿಮಗೆ ಬಾೞ್ತೆಯಪ್ಪುದಂ

(ಉಪಯುಕ್ತವಾದುದನ್ನು)
ಬೇಡಿಕೊಳ್ಳಿಂ ಎನೆ-
ವಚನ:ಅರ್ಥ:ಎನ್ನುವಷ್ಟರಲ್ಲಿ
ಅವನು
ಸಾಮಂತಚೂಡಾಮಣಿಯಾದ
ಅರ್ಜುನನ ಸಮೀಪಕ್ಕೆ
ಬಂದು, ನಾಲ್ಕು
ವೇದಗಳಿಂದಲೂ ನಾಲ್ಕು
ಋಕ್ಕುಗಳನ್ನು ಹೇಳಿ ಬಿಳಿ
ಗರಿಕೆಯ ಕುಡಿಯಿಂದ
ಕೂಡಿದ

ಆಶೀರ್ವಾದರೂಪವಾದ
ಶೇಷಾಕ್ಷತೆಯನ್ನು ಕೊಟ್ಟು
ಮುಂದೆ ನಿಂತವನನನ್ನು.
ಅರ್ಜುನನು
ಉಪಯುಕ್ತವಾದದನ್ನು
(ಅಪೇಕ್ಷೆಯನ್ನು) ಕೇಳಿಕೊಳ್ಳಿ
ಎನ್ನಲು- (ಎಂದನು).

ಚಂ|| ಮಣಿ ಕನಕಾದಿ ವಸ್ತುಗಳನೊಂದುಮನೊಲ್ಲೆನ ವೇವುವಾದವಿ

ನ್ನಣಿಸೆನಗೞ್ತಿ ಮೆಯ್

ಪಸಿದು ಜೊಮ್ಮನೆ

ಪೋದಪುದೆನ್ನ ವೇೞ್ಪುದಂ।

ತಣಿಯುಣಲೀವೊಡೀವುದೆನೆ

ಪಾರ್ಥನದೇವಿರಿದಿತ್ತೆನಾವುದು

ಣ್ಬುಣಿಸೆನೆ ಪೇೞ್ವೆನೆಂಬ

ಪದದೊಳ್

ನರಕಾಂತಕನಗ್ನಿದೇವನಂ॥

೭೧॥

ಪದ್ಯ-೭೧:ಪದವಿಭಾಗ-

ಅರ್ಥ:ಮಣಿ ಕನಕಾದಿ

ವಸ್ತುಗಳನೊಂದುಮಂ
ಒಲ್ಲೆನ್ ಅವು ಏವುವು (ಅವು
ಏನು ಮಹಾ?) ಅದಂ
ಇನ್ನುಣಿಸು ಎನಗೆ ಅಱ್ತಿ
(ನನಗೆ ರುಚಿಕರವಾದ ಊಟ
ಮಾಡಿಸು, ಅದು ಪ್ರೀತಿ)
ಮೆಯ್ ಪಸಿದು ಜೊಮ್ಮನೆ
ಪೋದಪುದು (ಶರೀರವು
ಹಸಿವಿನಿಂದ ಜೊಮ್ಮುಹಿಡಿದು
ಹೋಗಿದೆ;) ಎನ್ನ ವೇೞ್ಪುದಂ
(ನಾನು

ಹೇಳಿದ್ದನ್ನು,ಬಯಸಿದ್ದನ್ನು)
ತಣಿಯುಣಲ್
(ತೃಪ್ತಿಯಾಗುವಹಾಗೆ)
ಈವೊಡೆ ಈವುದು ಎನೆ
(ಊಟವನ್ನು
ಕೊಡುವುದಾದರೆ ಕೊಡಿ -
ಎನ್ನಲು) ಪಾರ್ಥನು
ಅದೇವಿರಿದು ಇತ್ತೆನು
(ಪಾರ್ಥನು ಇದೇನು
ದೊಡ್ಡದು, ಕೊಟ್ಟಿದ್ದೇನೆ)
ಆವುದು ಉಣ್ಬುಣಿಸು ಎನೆ

(ಯಾವುದು ನೀವು ಊಟ
ಮಾಡುವ ಆಹಾರ ಎಂದು
ಕೇಳಲು,) ಪೇೞ್ವೆನೆಂಬ
ಪದದೊಳ್ (‘ಹೇಳುತ್ತೇನೆ’
ಎನ್ನುವಷ್ಟರಲ್ಲಿ)
ನರಕಾಂತಕನು ಅಗ್ನಿದೇವನಂ
(ಶ್ರೀಕೃಷ್ಣನು ಅಗ್ನಿದೇವನನ್ನು)-
ಪದ್ಯ-೨೧:ಅರ್ಥ:ಮಣಿಕನ
ಕಾದಿ ವಸ್ತುಗಳಾವುದನ್ನೂ
ಅಪೇಕ್ಷಿಸುವುದಿಲ್ಲ ; ಅವು
ಏನು ಮಹಾದೊಡ್ಡವು; ನನಗೆ

ರುಚಿಕರವಾದ ಊಟ
ಮಾಡಿಸು, ಅದು ಪ್ರೀತಿ,
ಶರೀರವು ಹಸಿವಿನಿಂದ
ಜೊಮ್ಮುಹಿಡಿದು ಹೋಗಿದೆ;
ನನಗೆ ತೃಪ್ತಿಯಾಗುವಹಾಗೆ
ಊಟವನ್ನು ಕೊಡುವುದಾದರೆ
ಕೊಡಿ, ಎನ್ನಲು ಪಾರ್ಥನು
ಇದೇನು ದೊಡ್ಡದು,
ಕೊಟ್ಟಿದ್ದೇನೆ. ಯಾವುದು
ನೀವು ಊಟ ಮಾಡುವ
ಆಹಾರ ಎಂದು ಕೇಳಿದನು.

‘ಹೇಳುತ್ತೇನೆ’ ಎನ್ನುವಷ್ಟರಲ್ಲಿ ನರಕಾಂತಕನಾದ ಶ್ರೀಕೃಷ್ಣನು ಅಗ್ನಿದೇವನನ್ನು-

ವ|| ಕಾಣಲೊಡಮಱಿದು ಶರಣಾಗತಜಳನಿಯನೆಯ್ದೆ ವಂದನೀ ಬಕವೇಷಿ ನಿನ್ನನೇನಂ ಬೇಡಿದಂ ನೀನೀತಂಗೇನನಿತ್ತಿಯೆನೆ-

ವಚನ:ಪದವಿಭಾಗ-

ಅರ್ಥ:ಕಾಣಲೊಡಂ ಅಱಿದು (ತಕ್ಷಣವೇ ಅರಿತು,ಗುರುತಿಸಿ)

ಶರಣಾಗತಜಳನಿಯನ ಎಯ್ದಿ
(ಶರಣಾಗತ ಸಮುದ್ರನಾದ
ಅರ್ಜುನನ ಬಳಿ ಬಂದು)
ವಂದನು ಈ ಬಕವೇಷಿ
ನಿನ್ನನು ಏನಂ ಬೇಡಿದಂ (ಈ
ಬಕವೇಷಿಯು ಬಂದನೇ,
ನಿನ್ನನ್ನು ಏನು ಬೇಡಿದನು,)
ನೀನು ಈತಂಗೆ ಏನಿತ್ತೆ ಎನೆ
(ನೀನು ಇವನಿಗೆ ಏನನ್ನು
ಕೊಟ್ಟೆ' ಎಂದು ಕೇಳಿದನು)-

ವಚನ:ಅರ್ಥ:ಕಂಡು,
ತಕ್ಷಣವೇ ಗುರುತಿಸಿ
ಶರಣಾಗತ ಸಮುದ್ರನಾದ
ಅರ್ಜುನನ ಸಮೀಪಕ್ಕೆ ‘ಈ
ಬಕವೇಷಿಯು ಬಂದನೇ,
ನಿನ್ನನ್ನು ಏನು ಬೇಡಿದನು,
ನೀನು ಇವನಿಗೆ ಏನನ್ನು
ಕೊಟ್ಟೆ’ ಎಂದು ಕೇಳಿದನು.

ಚಂ|| ಪಸಿದುಣವೇಡಿದಂ ಬಡವನಾನುಣಲಿತ್ತೆನದಲ್ಲದಿಲ್ಲಿ ದಲ್

ಕುಸುರಿಯ ಮಾತುಗಾಣೆನೆನೆ

ಕೇಳ್ದು ಮುರಾಂತಕನೇಂ

ತಗುಳ್ದೆ ಯಿ|

ನ್ನುಸಿರದಿರೀವ

ಮಾತನಿವನುಣ್ಬುದು

ಖಾಂಡವವೀತನಗ್ನಿ ಮುಂ

ಪುಸಿದಿವನಿಂತೆ

ಪಾಯಿಸಿದನಿಂದ್ರನೊಳಾದಿ

ನರೇಂದ್ರರೆಲ್ಲರಂ|| ೭೨

ಪದ್ಯ-೭೨:ಪದವಿಭಾಗ-

ಅರ್ಥ:ಪಸಿದು

ಉಣವೇಡಿದಂ ಬಡವನು
ಆನು ಉಣಲು ಇತ್ತೆನು
(ಹಸಿದು ಊಟವನ್ನು
ಬೇಡಿದನು; ಬಡವನು ನಾನು
ಕೊಡುತ್ತೇನೆಂದೆ) ಅದಲ್ಲದೆ
ಇಲ್ಲಿ ದಲ್ ಕುಸುರಿಯ
ಮಾತುಗಾಣೆನು ಎನೆ (ದಲ್ಲದೆ
ಇನ್ನು ಮತ್ತಾವ ಚಮತ್ಕಾರದ
ಮಾತನ್ನೂ ಕಾಣೆ ಎನ್ನಲು,)
ಕೇಳ್ದು ಮುರಾಂತಕನು ಏಂ
ತಗುಳ್ದೆ ಯಿನ್ನು ಉಸಿರದಿರು

ಈವ ಮಾತನು, ಇವನುಣ್ಬುದು
ಖಾಂಡವಂ (ಕೊಡುವ
ಮಾತನ್ನೇ ಆಡಬೇಡ. ಇವನು
ಊಟ ಮಾಡುವುದು
ಖಾಂಡವ ವನವನ್ನು) ಈತನು
ಅಗ್ನಿ, ಮುಂ ಪುಸಿದಿವನು
ಇಂತೆ (ಹಿಂದೆ ಇವನು
ಹೀಗೆಯೇ ಸುಳ್ಳು ಹೇಳಿ)
ಪಾಯಿಸಿದನು (ಹಾಯಿ-ಸು
-ನುಗ್ಗು ಹೋರಾಡು)
ಇಂದ್ರನೊಳು ಆದಿ

ನರೇಂದ್ರರೆಲ್ಲರಂ(ಆದಿಕಾಲದ ರಾಜರನ್ನೆಲ್ಲ ದೇವೇಂದ್ರನಲ್ಲಿ ಹೋರಾಡುವಂತೆ ಮಾಡಿದನು)

ಪದ್ಯ-೭೨:ಅರ್ಥ:‘ ಹಸಿದು ಊಟವನ್ನು ಬೇಡಿದನು; ಬಡವನು ನಾನು ಕೊಡುತ್ತೇನೆಂದೆ, ಅದಲ್ಲದೆ ಇನ್ನು ಮತ್ತಾವ ಚಮತ್ಕಾರದ ಮಾತನ್ನೂ ಕಾಣೆ ಎನ್ನಲು, ಕೃಷ್ಣನು “ನೀನು ಏನು

ಮಾಡಿದೆ? ಇನ್ನು ಮೇಲೆ ಕೊಡುವ ಮಾತನ್ನೇ ಆಡಬೇಡ. ಇವನು ಊಟ ಮಾಡುವುದು ಖಾಂಡವವನವನ್ನು, ಈತನು ಅಗ್ನಿದೇವ; ಹಿಂದೆ ಇವನು ಹೀಗೆಯೇ ಸುಳ್ಳು ಹೇಳಿ ಆದಿಕಾಲದ ರಾಜರನ್ನೆಲ್ಲ ದೇವೇಂದ್ರನಲ್ಲಿ ಹೋರಾಡುವಂತೆ ಮಾಡಿದನು

ವ|| ಈತನಜಮುಖವ್ಯಾಘ್ರಂ ಶ್ವೇತ ಕೃಷ್ಣಕಾರಕನೀತನ ಮಾತು ಮಾತಲ್ಲವೆಂದೊಡಾ ಮಾತು ತನ್ನಂ ಮೂದಲಿಸಿದಂತಾಗೆ ವಿದ್ವಿಷ್ಟವಿದ್ರಾವಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಈತನು ಅಜಮುಖ ವ್ಯಾಘ್ರಂ (ಕಪಟಿ), ಶ್ವೇತ ಕೃಷ್ಣಕಾರಕನ್, ಈತನ ಮಾತು ಮಾತಲ್ಲವು, ಎಂದೊಡೆ ಆ

ಮಾತು ತನ್ನಂ
ಮೂದಲಿಸಿದಂತೆ ಆಗೆ
ವಿದ್ವಿಷ್ಟವಿದ್ರಾವಣನು
(ಅರ್ಜುನನು) ಇಂತೆಂದಂ-
**ವಚನ:ಅರ್ಥ:'ಈತನು
ಹೋತನ ಮುಖದ ಹುಲಿ.
ಬಿಳಿಯದನ್ನು
ಕರಿಯದನ್ನಾಗಿ
ಮಾಡುವವನು
(ಮೋಸಗಾರ) ಈತನ
ಮಾತು ಮಾತಲ್ಲ' ಎಂದನು.**

ಆ ಮಾತು ತನ್ನನ್ನು
ಮೂದಲಿಸಿದ ಹಾಗಾಗಲು
ವಿದ್ವಿಷ್ಟವಿದ್ರಾವಣನಾದ
ಅರ್ಜುನನು ಹೀಗೆಂದನು

ಚಂ|| ಎರೆದನ
ಪೆಂಪುವೇೞ್ಕೊಡನಲಂ
ಪೊಣರ್ವಾತನ
ಪೆಂಪುವೇೞ್ಕೊಡಾ
ಸುರಪತಿ ಕೊಟ್ಟ
ತಾಣದೆಡೆವೇೞ್ಕೊಡಮಾ
ಯಮುನಾನದೀ ತಟಾಂ|

ತರಮೊಸೆದಿತ್ತನಾನೆರೆಯೆ

ಕೇಳ್ವನಿಳಾಧರನೀನದರ್ಕೆ ಮಾ

ತೆರಡಣಮಾಡಲಾಗದಿರು

ಸೈಪಿನೊಳಲ್ಲದೆ ಕೂಡಿ

ಬರ್ಕುಮೇ|| ೭೩ ||

ಪದ್ಯ-೭೩:ಪದವಿಭಾಗ-

ಅರ್ಥ:ಎರೆದನ ಪೆಂಪು

ವೇೞ್ದೊಡೆ ಅನಲಂ

(ಬೇಡಿದವನ ಶ್ರೇಷ್ಠತೆಯನ್ನು

ಹೇಳುವುದಾದರೆ

ಅಗ್ನಿದೇವ)ಪೊಣರ್ವಾತನ

ಪೆಂಪು ವೇೞ್ಪೊಡೆ ಆ
ಸುರಪತಿ (ಸಾಕ್ಷಾತ್
ದೇವೇಂದ್ರ) ಕೊಟ್ಟ ತಾಣದ
ಎಡೆ ವೇೞ್ಪೊಡಂ ಆ
ಯಮುನಾನದೀ ತಟಾಂತರಂ
(ಮಾತು ಕೊಟ್ಟ ಸ್ಥಳವನ್ನು
ಹೇಳುವುದಾದರೆ ಪವಿತ್ರವಾದ
ಯಮುನಾನದೀದಡಪ್ರದೇಶ;)
ಒಸೆದು ಇತ್ತನಾನ್
(ಸಂತೋಷರಿಂದ ಕೊಟ್ಟವನು
ನಾನು), ಎರೆಯೆ ಕೇಳ್ವನು

ಇಳಾಧರ ನೀನು (ಕೊಟ್ಟಾಗ
ಕೇಳಿಸಾಕ್ಷಿಯಾಗಿದ್ದವನು
ಭೂಧರನಾದ ನೀನು;)
ಅದರ್ಕೆ ಮಾತೆರಡಣಂ
(ಅದಕ್ಕೆ ಮಾತು ಎರಡು
ಅಣಂ-ಸ್ವಲ್ಪವೂ)
ಅಡಲಾಗದು, ಇರು
ಸೈಪಿನೊಳಲ್ಲದೆ ಕೂಡಿ
ಬರ್ಕುಮೇ (ಇಂತಹ
ಸಂದರ್ಭವು

ಅದೃಷ್ಟದಿಂದಲ್ಲದೆ ಕೂಡಿಬರುತ್ತದೆಯೇ?)

ಪದ್ಯ-೭೩:ಅರ್ಥ: ಬೇಡಿದವನ ಶ್ರೇಷ್ಠತೆಯನ್ನು ಹೇಳುವುದಾದರೆ ಅಗ್ನಿದೇವ, ಯುದ್ಧಮಾಡುವವನ ಹಿರಿಮೆಯನ್ನು ಹೇಳುವುದಾದರೆ ಸಾಕ್ಷಾತ್ ದೇವೇಂದ್ರ, ಮಾತು ಕೊಟ್ಟ ಸ್ಥಳವನ್ನು ಹೇಳುವುದಾದರೆ ಪವಿತ್ರವಾದ

ಯಮುನಾನದೀದಡಪ್ರದೇಶ;
ಪ್ರೀತಿಯಿಂದ ಕೊಟ್ಟವನು
ನಾನು; ಕೊಟ್ಟಾಗ ಕೇಳಿ
ಸಾಕ್ಷಿಯಾಗಿದ್ದವನು
ಭೂಧರನಾದ ನೀನು; ಅದಕ್ಕೆ
ಸ್ವಲ್ಪವೂ ಎರಡು
ಮಾತನಾಡಕೂಡದು; ಇಂತಹ
ಸಂದರ್ಭವು
ಅದೃಷ್ಟದಿಂದಲ್ಲದೆ
ಕೂಡಿಬರುತ್ತದೆಯೇ?

ಮ|| ದನುಜಾರೀ ದಿವಿಜೇಂದ್ರ
ಶಾಶ್ವತಗುಣಾ ನಿನ್ನಳ್ಕದೇಂ
ಬೇಡಿದಾ
ನನಲಂ ತೀರ್ಥ
ಸಮೀಪಮಂಬುನಿವಹ
ವ್ಯಾಳೋಳ ಕಾಳಿಂದಿಯಾ|
ವನಮುಂ ಕೇಳ್ದುವು
ಭೂತಮಯ್ದುಮಱಿಗುಂ
ಕೊಟ್ಟಿರ್ದುದಾದಂತಱಿಂ
ದೆನಗಿಂ ಮಾಣ್ಬುದು ಸೂಱೆ
ಖಾಂಡವಮನಾಂ

ತಳ್ವಿಲ್ಲದಿಂದೂಡುವೆಂ|| ೭೪||

ಪದ್ಯ-೭೪:ಪದವಿಭಾಗ-

ಅರ್ಥ:ದನುಜಾರೀ (ಶ್ರೀಕೃಷ್ಣನೇ) ದಿವಿಜೇಂದ್ರ ಶಾಶ್ವತಗುಣಾ (ದೇವೇಂದ್ರನಂತೆ ಶಾಶ್ವತವಾದ ಗುಣಗಳುಳ್ಳವನೇ,) ನಿನ್ನ ಅಳ್ಕದೇಂ (ನಿನ್ನ ಅಂಜಿಕೆಯೇನು?) ಬೇಡಿದಾನ್ ಅನಲಂ ತೀರ್ಥ ಸಮೀಪಂ (ಪುಣ್ಯತೀರ್ಥಕ್ಕೆ ಸಮೀಪದಲ್ಲಿ,

) ಅಂಬುನಿವಹ ವ್ಯಾಳೋಳ
ಕಾಳಿಂದಿಯು
(ಜಲರಾಶಿಯಿಂದ
ಸಂಚರಿಸುತ್ತಿರುವ
ಯಮುನಾನದಿಯ) ಆ
ವನಮುಂ ಕೇಳ್ದುವು (ಈ
ಕಾಡುಗಳೂ ನಾನಾಡಿದ
ಮಾತುಗಳನ್ನು ಕೇಳಿವೆ)
ಭೂತಂ ಅಯ್ದುಂ ಅಱಿಗುಂ
(ಪಂಚಭೂತಗಳೂ ತಿಳಿದಿವೆ)
ಕೊಟ್ಟಿರ್ದುದು ಆದ

ಅಂತಱಿಂದ (ಮಾತನ್ನ
ಕೊಟ್ಟಾಗಿರುವುರಿಂದ) ಎನಗಿಂ
ಮಾಣ್ಬುದು ಸೂಱಿ (ಎನಗೆ
ಮಾಣ್- ಇಲ್ಲ ಎನ್ನುವುದು
ಸರಿಯೇ- ಸರಿಯಲ್ಲ -
ಕೆಟ್ಟದು) ಖಾಂಡವಮನು ಆಂ
ತಳ್ವಿಲ್ಲದಿಂದ ಊಡುವೆಂ
(ಖಾಂಡವವನವನ್ನು ನಾನು
ತಡೆಯಿಲ್ಲದೆ/ ತಡವಿಲ್ಲದೆ
ಉಣಿಸುತ್ತೇನೆ)

ಪದ್ಯ-೭೪:ಅರ್ಥ: ದನುಜರ ವೈರಿಯಾದ ಶ್ರೀಕೃಷ್ಣನೇ, ದೇವೇಂದ್ರನಂತೆ ಶಾಶ್ವತವಾದ ಗುಣಗಳುಳ್ಳವನೇ, ನಿನ್ನ ಅಂಜಿಕೆಯೇನು? ಬೇಡಿದವನು ಅಗ್ನಿ, ಪುಣ್ಯತೀರ್ಥಕ್ಕೆ ಸಮೀಪದಲ್ಲಿ, ಜಲರಾಶಿಯಿಂದ ಸಂಚರಿಸುತ್ತಿರುವ ಯಮುನಾನದಿಯ ಸಮೀಪವಿರುವ ಈ

ಕಾಡುಗಳೂ ನಾನಾಡಿದ
ಮಾತುಗಳನ್ನು ಕೇಳಿವೆ. ನಾನು
ಮಾತು ಕೊಟ್ಟಿರುವುದನ್ನು
ಪಂಚಭೂತಗಳೂ ತಿಳಿದಿವೆ.
ಮಾತನ್ನ ಕೊಟ್ಟಾಗಿರುವುರಿಂದ
ಅದನ್ನು ಇಲ್ಲ ಎನ್ನುವುದು
ನನಗೆ ಕ್ರಮವೇ?
ಖಾಂಡವವನವನ್ನು ನಾನು
ತಡವಿಲ್ಲದೆ ಉಣಿಸುತ್ತೇನೆ

ಉ|| ಒತ್ತಿ ತಋಂಬಿ ನಿಂದ
ರಿಪು ಭೂಜ ಸಮಾಜದ

ಬೇಗಗ್ಗಳಂ ನಭ
ಕ್ಕೆತ್ತದೆ ಬಂದು ತನ್ನ
ಮರೆವೊಕ್ಕೊಡೆ ಕಾಯದೆ
ಚಾಗದೊಳ್ಪಿನ|
ಚ್ಚೊತ್ತದೆ ಮಾಣ್ದು ಬಾಳ್ವ
ಪುೞುವಾನಸನೆಂಬನಜಾಂಡ
ಮೆಂಬುದೊಂ
ದತ್ತಿಯ ಪೆರ್ಣ್ಗೊಳಿರ್ಪ
ಪುೞುವಲ್ಲದೆ ಮಾನಸನೇ
ಮುರಾಂತಕಾ|| ೭೫||

ಪದ್ಯ-೭೫:ಪದವಿಭಾಗ-ಅರ್ಥ: ಒತ್ತಿ ತಱುಂಬಿ ನಿಂದ ರಿಪು ಭೂಜ ಸಮಾಜದ ಬೇರ್ಗಳಂ(ಮುನ್ನುಗ್ಗಿ ಅಡ್ಡಗಟ್ಟಿ ನಿಂತ ಶತ್ರುಗಳೆಂಬ ಮರಗಳ ಸಮೂಹದ ಬೇರುಗಳನ್ನು) ನಭಕ್ಕೆ ಎತ್ತದೆ ಬಂದು ತನ್ನ ಮರೆವೊಕ್ಕೊಡೆ ಕಾಯದೆ(ಮೂಲೋತ್ಪಾಟನೆ ಮಾಡದೆ, ಬಂದು ತನಗೆ ಶರಣಾಗತರಾದವರನ್ನು

ರಕ್ಷಿಸದೆ) ಚಾಗದ ಒಳ್ಪಿನ
ಅಚ್ಟೊತ್ತದೆ (ತ್ಯಾಗದ ಒಳ್ಳೆಯ
ಗುಣವನ್ನು ಗಟ್ಟಿಗೊಳಿಸದೆ,)
ಮಾಣ್ದು ಬಾೞ್ವಿ
ಪುೞುವಾನಸನು ಎಂಬನು
(ತಪ್ಪಿ ಬಾಳುವ ಹುಳುಸಮಾನ
ಮಾನವನೆಂಬುವವನು)
ಅಜಾಂಡಮೆಂಬುದು ಒಂದು
ಅತ್ತಿಯ ಪೆಣ್ಣೊಳು ಇರ್ಪ
(ಬ್ರಹ್ಮಾಂಡವೆಂಬ ಅತ್ತಿಯ
ಹಣ್ಣಿನಲ್ಲಿರುವ) ಪುೞುವಲ್ಲದೆ

ಮಾನಸನೇ ಮುರಾಂತಕಾ
(ಹುಳುವಲ್ಲದೇ ಮನುಷ್ಯನೇ
ಕೃಷ್ಣಾ!)
ಪದ್ಯ-೭೫:ಅರ್ಥ: ಮುನ್ನುಗ್ಗಿ
ಅಡ್ಡಗಟ್ಟಿ ನಿಂತ ಶತ್ರುಗಳೆಂಬ
ಮರಗಳ ಸಮೂಹದ
ಬೇರುಗಳನ್ನು
ಮೂಲೋತ್ಪಾಟನೆ ಮಾಡದೆ,
ಬಂದು ತನಗೆ
ಶರಣಾಗತರಾದವರನ್ನು
ರಕ್ಷಿಸದೆ, ತ್ಯಾಗದ ಒಳ್ಳೆಯ

ಗುಣವನ್ನು ಗಟ್ಟಿಗೊಳಿಸದೆ,
ತಪ್ಪಿ ಬಾಳುವ ಹುಳುಸಮಾನ
ಮಾನವನೆಂಬುವವನು
ಬ್ರಹ್ಮಾಂಡವೆಂಬ ಅತ್ತಿಯ
ಹಣ್ಣಿನಲ್ಲಿರುವ ಹುಳುವಲ್ಲದೇ
ಮನುಷ್ಯನೇ ಕೃಷ್ಣಾ! (ಈ ವಿಶ್ವ
ಒಂದು ಅತ್ತಿಯ ಮರ
ಇದ್ದಹಾಗೆ, ಆ ಅತ್ತಿಯ
ಮರದಲ್ಲಿ ಇರುವ ಸಾವಿರಾರು
ಹಣ್ಣುಗಳೇ ಬ್ರಹ್ಮಾಂಡಗಳು;
ಅದರಲ್ಲಿ ಇವನಿರುವುದು

ಒಂದು ಅತ್ತಿಯ
ಹಣ್ಣಿನಂತಿರುವ ಬ್ರಹ್ಮಾಂಡದ
ಒಳಗೆ, ಅತ್ತಿಯ ಹಣ್ಣಿನ ಒಳಗೆ
ಅದೇ ಜಗತ್ತೆಂದು ತೀದಿರುವ
ಸಾವಿರಾರು ಹುಳುಗಳಿವೆ;
ಅದರಂತೆ ಮನುಷ್ಯ ಆ
ಹುಳುವಿನಂತೆ ಅರ್ಥವಿಲ್ಲದೆ
ಬದುಕಿದಂತಾಗುತ್ತದೆ - ಕೊಟ್ಟ
ಮಾತಿಗೆ ತಪ್ಪಿ ಬದುಕಿದವನ
ಬಾಳು ಎಂದು ಅರ್ಜುನ
ಕೃಷ್ಣನಿಗೆ ಹೇಳಿದ)

ವ|| ಎಂದು ಮಱುಮಾತಿಂಗೆಡೆಯಿಲ್ಲದಂತಿರೆ ನುಡಿದ ಪಡೆಮೆಚ್ಚೆ ಗಂಡನ ಗಂಡವಾತುಮಂ ನನ್ನಿವಾತುಮಂ ಮುರಾಂತಕಂ ಮೆಚ್ಚಿ-

ವಚನ:ಪದವಿಭಾಗ-

ಅರ್ಥ:ಎಂದು ಮಱುಮಾತಿಂಗೆ ಎಡೆಯಿಲ್ಲದಂತಿರೆ (ಅವಕಾಶವಿಲ್ಲದಂತೆ) ನುಡಿದ

ಪಡೆಮೆಚ್ಚೆ ಗಂಡನ ಗಂಡವಾತುಮಂ (ಅರ್ಜುನನ ರಾಕ್ರಮದ ಮಾತನ್ನೂ) ನನ್ನಿವಾತುಮಂ (ಸತ್ಯವಾಕ್ಕನ್ನೂ) ಮುರಾಂತಕಂ ಮೆಚ್ಚಿ-

ವಚನ:ಅರ್ಥ:ಎಂದು ಮರುಮಾತಿಗೆ ಅವಕಾಶವಿಲ್ಲದಂತೆ ಮಾತನಾಡಿದ ಪಡೆಮೆಚ್ಚೆಗಂಡನಾದ

ಅರ್ಜುನನ ಪರಾಕ್ರಮದ ಮಾತನ್ನೂ ಸತ್ಯವಾಕ್ಯನ್ನೂ ಕೃಷ್ಣನು ಮೆಚ್ಚಿ- (ಮೆಚ್ಚಿದನು).

ಮ||

ಸಮಕಟ್ಟಿಂಗೊರೆಗಾರುಮಿಲ್ಲರಿಗ ಕೇಳ್ ನಿನ್ನೊಳ್ ಸಮಂ ಧಾತ್ರಿಯೊಳ್

ಹಿಮಕೃದ್ಭೂಧರದಂತೆ ನಿನ್ನ ಗುಣಸಂದೋಹಂಗಳಂ ಕಾಣಲ|

ಕ್ಕುಮೆ
ಮತ್ತ್ರೊರ್ವನೊಳಾಗದೆಂತೆನೆ
ಸಮಸ್ತ್ರೋರ್ವೀಧರಾಶೇಷ ಶೇ
ಷ ಮಹಾ ನಾಗ ಫಣಾಮಣಿ
ದ್ಯುತಿಯನೇಂ
ಖದ್ಯೋತದೊಳ್ ಕಾಣ್ಬರೇ||
೭೬ ||

ಪದ್ಯ-೭೬:ಪದವಿಭಾಗ-ಅರ್ಥ:ಸಮಕಟ್ಟೆಂಗ ಒರೆಗಾರುಂ ಇಲ್ಲ ಅರಿಗ ಕೇಳ್ (ಅರ್ಜುನನೇ ಕೇಳು, ನಿನ್ನ

ಹೋಲಿಕೆಗೂ ಸಮಾನತೆಗೂ
ಬರುವವರು ಯಾರೂ ಇಲ್ಲ)
ನಿನ್ನೊಳ್ ಸಮಂ
ಧಾತ್ರಿಯೊಳ್
ಹಿಮಮಕ್ಕೃದ್ಭೂಧರದಂತೆ
(ಹಿಮವತ್ಪರ್ವತದಂತಿರುವ
ನಿನ್ನ ಸಮ ಈ ಭೂಮಿಯಲ್ಲಿ)
ನಿನ್ನ ಗುಣಸಂದೋಹಂಗಳಂ
ಕಾಣಲಕ್ಕುಮೆ
ಮತ್ತೊರ್ವನೊಳು ಆಗ
ಅದೆಂತೆನೆ(ಗುಣರಾಶಿಯನ್ನು

ಮತ್ತೊಬ್ಬನಲ್ಲಿ
ಕಾಣಲಾಗುವುದೇ- ಇಲ್ಲ.ಅದು
ಹೇಗೆಂದರೆ)
ಸಮಸ್ತೋರ್ವೀಧರಾಶೇಷ
ಶೇಷ ಮಹಾನಾಗ ಫಣಾಮಣಿ
ದ್ಯುತಿಯನು (ಸಮಸ್ತ
ಭೂಮಂಡಲವನ್ನು
ಧರಿಸಿರುವ ಆದಿಶೇಷನೆಂಬ
ಮಹಾಸರ್ಪದ
ಹೆಡೆಯಲ್ಲಿರುವ
ರತ್ನಕಾಂತಿಯನ್ನು) ಏಂ

ಖದ್ಯೋತದೊಳ್ ಕಾಣ್ಬರೇ (ಮಿಂಚುಹುಳುವಿನಲ್ಲಿ ಕಾಣಬಹುದೇ?)

ಪದ್ಯ-೭೬:ಅರ್ಥ: ಎಲೈ ಅರಿಗ/ ಅರ್ಜುನನೇ ಕೇಳು, ಈ ಭೂಮಿಯಲ್ಲಿ ನಿನ್ನ ಹೋಲಿಕೆಗೂ ಸಮಾನತೆಗೂ ಬರುವವರು ಯಾರೂ ಇಲ್ಲ ; ಹಿಮವತ್ಪರ್ವತದಂತಿರುವ ನಿನ್ನ ಗುಣರಾಶಿಯನ್ನು ಮತ್ತೊಬ್ಬನಲ್ಲಿ

ಕಾಣಲಾಗುವುದಿಲ್ಲ ಅದು ಹೇಗೆಂದರೆ ಸಮಸ್ತ ಭೂಮಂಡಲವನ್ನು ಧರಿಸಿರುವ ಆದಿಶೇಷನೆಂಬ ಮಹಾಸರ್ಪದ ಹೆಡೆಯಲ್ಲಿರುವ ರತ್ನಕಾಂತಿಯನ್ನು ಮಿಂಚುಹುಳುವಿನಲ್ಲಿ ಕಾಣಬಹುದೇ?

ಚಂ|| ಮುನಿಯಿಸಿದಂ ಕರಂ ರಿಡಿಯನಪ್ಪುದು

(ಪಿರಿಯನಪ್ಪುದು) ಬೇಱ್ಪಿನ
ಬೇಱ್ಪಿ ವಸ್ತು ಕಾಂ
ಚನಗಿರಿಯಿಂದಮಗ್ಗಳಮೆನಿಪ್
ಪುದದಾದೊಡಮೇನೊ
ಜೀವಮು|
ಳ್ಳಿನಮಿಱಿದರ್ಥಮುಳ್ಳಿನೆಗಮಿ
ತ್ತು ನೆಗೞ್ತೆಯನಾಂಪುದೆಂಬ
ಪೆಂ
ಪಿನ ಸಮಕಟ್ಟು ಕಣ್ಗೆ
ದೊರೆಯಾರರಿಕೇಸರಿ
ನಿನ್ನವೋಲ್ ಪೆಱಂ|| ೭೭ ||

ಪದ್ಯ-೭೭:ಪದವಿಭಾಗ-ಅರ್ಥ:ಮುನಿಯಿಸಿದಂ ಕರಂ ಪಿರಿಯನಪ್ಪುದು (ಕೆರಳಿಸಿದವನು ವಿಶೇಷ ದೊಡ್ಡವನಹುದು) ಬೇಟ್ಪಿನ ಬೇಟ್ಪ ವಸ್ತು (ಬೇಡುವವನು ಬೇಡಿದ ವಸ್ತು) ಕಾಂಚನಗಿರಿಯಿಂದಂ ಅಗ್ಗಳಮೆನಿಪ್ಪುದು ಆದಾದೊಡಂ ಏನೊ (ಮೇರುಪರ್ವತಕ್ಕಿಂತಲೂ

ಅತಿಶಯವಾದುದು.
ಆದರೇನು?) ಜೀವಮುಳ್ಳಿನಂ
ಇಱಿದು ಅರ್ಥಮುಳ್ಳಿನೆಗಂ
ಇತ್ತು (ಜೀವವಿರುವವರೆಗೂ
ಶೌರ್ಯಪ್ರದರ್ಶನ ಮಾಡಿ
ಧನವಿರುವವರೆಗೂ
ದಾನಮಾಡಿ)
ನೆಗೞ್ತೆಯನಾಂಪುದೆಂಬ
ಪೆಂಪಿನ ಸಮಕಟ್ಟು ಕಣ್ಗೆ
ದೊರೆ (ಸಮಾನ) ಯಾರ್
ಅರಿಕೇಸರಿ ನಿನ್ನವೋಲ್

ಪೆಱಂ (ಕೀರ್ತಿಯನ್ನು
ಪಡೆಯಬೇಕೆಂಬ ಹಿರಿಯ
ಗುರಿ ನಿನ್ನ ದೃಷ್ಟಿಗಿದೆ. ನಿನಗೆ
ಸಮಾನರಾದವರು ಪೆರಂ-
ಬೇರೆ ಯಾರಿದ್ದಾರೆ?)
ಪದ್ಯ-೭೭:ಅರ್ಥ: ನಿನ್ನನ್ನು
ಕೆರಳಿಸಿದವನು ವಿಶೇಷ
ದೊಡ್ಡವನಹುದು.
ಬೇಡುವವನು ಬೇಡಿದ ವಸ್ತು
ಮೇರುಪರ್ವತಕ್ಕಿಂತಲೂ
ಅತಿಶಯವಾದುದು.

ಆದರೇನು?
ಜೀವವಿರುವವರೆಗೂ
ಶೌರ್ಯಪ್ರದರ್ಶನ ಮಾಡಿ
ಧನವಿರುವವರೆಗೂ
ದಾನಮಾಡಿ, ಕೀರ್ತಿಯನ್ನು
ಪಡೆಯಬೇಕೆಂಬ ಹಿರಿಯ
ಗುರಿ ನಿನ್ನ ದೃಷ್ಟಿಗಿದೆ. ನಿನಗೆ
ಸಮಾನರಾದವರು ಬೇರೆ
ಯಾರಿದ್ದಾರೆ? ಯಾರೂ ಇಲ್ಲ!

ವ|| ಎಂದು ತನಗೆ ಕೊಟ್ಟ ಕೋಡಿಂಗೊಡಂಬಟ್ಟ

ದಿತಿಜಕುಲದಾವಾನಲನುಮನ
ರಾತಿ
ಕಾಲಾನಲನುಮನನಲನಿಷ್ಟಾ
ರ್ಥಸಿದ್ಧಿಯಕ್ಕು ಮೆಂದು ಪರಸಿ
ಮನಃಪವನವೇಗದಿಂ
ಪಾಲ್ಗಡಲನೆಯ್ದಿ ತನ್ನ ಬಯ್ತಿಟ್ಟ
ದಿವ್ಯ ಸಂಭವಂಗಳಪ್ಪ
ಶ್ವೇತಾಶ್ವಂಗಳೊಳ್ ಪೂಡಿದ
ದಿವ್ಯ ರಥಮುಮಂ ದಧೀಚಿ
ಗಂಡಸ್ಥಮಪ್ಪ
ಗಾಂಡೀವಮೆಂಬ ಬಿಲ್ಲುಮಂ

ದಿವ್ಯಶರಂಗಳೊಳ್ ತೆಕ್ಕನೆ
ತೀವಿದ ತವದೊಣೆಗಳುಮಂ
ತಂದೆನ್ನ ಪ್ರತಿಜ್ಞೆಯಂ
ತೀರ್ಚುವೊಡಮಿಂದ್ರನಂ
ಗೆಲ್ವೊಡಮಿವನಮೋಘಂ
ಕೆಯ್ಕೊಳಲ್ವೇಱ್ಕುಮೆಂದೊಡತಿ
ರಥಮಥನನಗ್ನಿದೇವಂಗೆ
ಪೊಡವಟ್ಟು ಕೆಯ್ಕೊಂಡು
ಬೃಹಂದಳನೆಂಬ
ಸಾರಥಿವೆರಸು
ರಥಮನೇಱಿಲೊಡಂ-

ವಚನ:ಪದವಿಭಾಗ-ಅರ್ಥ:ಎಂದು ತನಗೆ ಕೊಟ್ಟ ಕೋಡಿಂಗೆ (ಕೊಡುಗೆಗೆ) ಒಡಂಬಟ್ಟ (ಒಪ್ಪಿ) ದಿತಿಜಕುಲದಾವಾನಲನುಮಂ (ದಿತಿಯಕುಲದವರಿಗೆ -ಅಗ್ನಿ), ಆರಾತಿ (ಶತ್ರುಗಳಿಗೆ ಪ್ರಳಯಾಗ್ನಿ) ಕಾಲಾನಲನುಮಂ (ಕೃಷ್ಣ ಮತ್ತು ಅರ್ಜುನ) ಅನಲನ್ (ಅಗ್ನಿಯು)

ಇಷ್ಟಾರ್ಥಸಿದ್ಧಿಯಕ್ಕು ಮೆಂದು
ಪರಸಿ (ಹರಸಿ)
ಮನಃಪವನವೇಗದಿಂ (ಮನ-
ವಾಯು ವೇಗದಿಂದ)
ಪಾಲ್ಗಡಲನು ಎಯ್ದಿ
(ಕ್ಷೀರಸಮುದ್ರವನ್ನು ಸೇರಿ)
ತನ್ನ ಬಯ್ತಿಟ್ಟ ದಿವ್ಯ
ಸಂಭವಂಗಳಪ್ಪ (ದೈವಾಂಶ
ಸಂಭೂತಗಳಾದ)
ಶ್ವೇತಾಶ್ವಂಗಳೊಳ್ ಪೂಡಿದ
ದಿವ್ಯ ರಥಮುಮಂ (ಬಿಳಿಯ

ಕುದುರೆಗಳನ್ನು ಹೂಡಿದ
ದಿವ್ಯರಥವನ್ನೂ) ದಧೀಚಿ
ಗಂಡಸ್ಥಮಪ್ಪ
ಗಾಂಡೀವಮೆಂಬ ಬಿಲ್ಲುಮಂ,
ದಿವ್ಯಶರಂಗಳೊಳ್ ತೆಕ್ಕನೆ
ತೀವಿದ ತವದೊಣೆಗಳುಮಂ
(ಬಾಣಗಳಿಂದ ಪೂರ್ಣವಾಗಿ
ತುಂಬಿದ
ಅಕ್ಷಯತೂಣೀರಗಳನ್ನೂ /
ಬತ್ತಳಿಕೆಗಳನ್ನೂ) ತಂದು ಎನ್ನ
ಪ್ರತಿಜ್ಞೆಯಂ ತೀರ್ಚುವೊಡಂ

ಇಂದ್ರನಂ ಗೆಲ್ವೊಡಂ (ತನ್ನ ಪ್ರತಿಜ್ಞೆಯನ್ನು ತೀರಿಸುವುದಕ್ಕೆ ಹಾಗೂ ಇಂದ್ರನನ್ನು ಗೆಲ್ಲುವುದಕ್ಕೆ) ಇವನು ಅಮೋಘಂ ಕೆಯ್ಕೊಳಲ್ವೇಟ್ಕುಂ (ಸ್ವೀಕರಿಸಬೇಕು) ಎಂದೊಡೆ ಅತಿರಥಮಥನನು ಅಗ್ನಿದೇವಂಗೆ ಪೊಡವಟ್ಟು ಕೆಯ್ಕೊಂಡು (ನಮಸ್ಕಾರ ಮಾಡಿ ಅವನ್ನು ಸ್ವೀಕರಿಸಿ)

ಬೃಹಂದಳನೆಂಬ
ಸಾರಥಿವೆರಸು
(ಸಾರಥಿಯೊಡನೆ)
ರಥಮನೇಱಲು ಒಡಂ-
ವಚನ:ಅರ್ಥ:ಎಂದು ತನಗೆ
ಕೊಟ್ಟ ಕೊಡುಗೆಗೆ ಒಪ್ಪಿ,
ದೈತ್ಯರ ಕುಲಕ್ಕೆ
ಕಾಡುಗಿಚ್ಚಿನಂತಿರುವ
ಕೃಷ್ಣನನ್ನೂ, ಶತ್ರುಗಳಿಗೆ
ಪ್ರಳಯಾಗ್ನಿಯಂತಿರುವ
ಅರ್ಜುನನನ್ನೂ, ಅಗ್ನಿಯು

‘ನಿಮ್ಮ ಇಷ್ಟಾರ್ಥ
ಸಿದ್ಧಿಯಾಗಲಿ’ ಎಂದು ಹರಸಿ
ಮನೋವಾಯುವೇಗದಿಂದ
ಕ್ಷೀರಸಮುದ್ರವನ್ನು ಸೇರಿ ಅಲ್ಲಿ
ತಾನು ಬಚ್ಚಿಟ್ಟಿದ್ದ ದೈವಾಂಶ
ಸಂಭೂತಗಳಾದ ಬಿಳಿಯ
ಕುದುರೆಗಳನ್ನು ಹೂಡಿದ
ದಿವ್ಯರಥವನ್ನೂ ದಧೀಚಿಯ
ಕಪೋಲಪ್ರದೇಶದಿಂದ
ರಚಿತವಾದ ಗಾಂಡೀವವೆಂಬ
ಬಿಲ್ಲನ್ನೂ ದಿವ್ಯವಾದ

ಬಾಣಗಳಿಂದ ಪೂರ್ಣವಾಗಿ ತುಂಬಿದ ಅಕ್ಷಯತೂಣೀರಗಳನ್ನೂ (ಬತ್ತಳಿಕೆಗಳನ್ನೂ) ತಂದು ತನ್ನ ಪ್ರತಿಜ್ಞೆಯನ್ನು ತೀರಿಸುವುದಕ್ಕೆ ಹಾಗೂ ಇಂದ್ರನನ್ನು ಗೆಲ್ಲುವುದಕ್ಕೆ ಅಮೋಘವಾದ ಇವುಗಳನ್ನು ಸ್ವೀಕರಿಸಬೇಕು ಎಂದು ಹೇಳಲು, ಅತಿರಥಮಥನನಾದ ಅರ್ಜುನನು ಅಗ್ನಿದೇವನಿಗೆ

ನಮಸ್ಕಾರ ಮಾಡಿ ಅವನ್ನು ಸ್ವೀಕರಿಸಿ ಬೃಹಂದಳನೆಂಬ ಸಾರಥಿಯೊಡನೆ ರಥವನ್ನು ಏರಲು ಒಡನೆ-

ಉ|| ಪಾವಕನಟ್ಟಿ ಖಾಂಡವಮನುಂಡಪನರ್ಜುನ ನೊಡಿದಪ್ಪನೈ ರಾವತವಾಹನಂ ನೆರೆದು ಸಾಧನ ಸಂಯುತನಾಂಪನಲ್ಲಿ ನಾ|

ನಾ ವಿಧ ಯುದ್ಧಮುಂಟೆನುತೆ ಶೈಬ್ಯ ಬಳಾಹಕ ಮೇಘವರ್ಣ ಸು ಗ್ರೀವ ಹಯಂಗಳಿಂದೆಸೆವುದಂ ರಥಮಂ ಹರಿ ತಾನುಮೇಱಿದಂ|| ೭೮ ||

ಪದ್ಯ-೭೮:ಪದವಿಭಾಗ-

ಅರ್ಥ:ಪಾವಕನು ಅಟ್ಟಿ (ಅಗ್ನಿಯು ಸುಟ್ಟು) ಖಾಂಡವಮಂ ಉಂಡಪಂ (ಉಣ್ಣುತ್ತಾನೆ) ಅರ್ಜುನನು

ಊಡಿದಪ್ಪನು(ಉಣಿಸುತ್ತಾನೆ)
ಐರಾವತವಾಹನಂ (ಇಂದ್ರನು)
ನೆರೆದು ಸಾಧನ
ಸಂಯುತನಾಂಪನಲ್ಲಿ (
ಸಮರ್ಥನಾಗಿ
ಸೈನ್ಯಸಮೇತನಾಗಿ ಅಲ್ಲಿ
ಸೇರುವನು) ನಾನಾ ವಿಧ
ಯುದ್ಧಂ ಉಂಟು ಎನುತೆ
(ಎನ್ನುತ್ತ) ಶೈಬ್ಯ ಬಳಾಹಕ
ಮೇಘವರ್ಣ ಸುಗ್ರೀವ
ಹಯಂಗಳಿಂದ ಎಸೆವುದಂ

ರಥಮಂ ಹರಿ ತಾನುಂ ಏಱಿದಂ (ರಥವನ್ನು ಕೃಷ್ಣನು ತಾನೂ ಹತ್ತಿದನು)

ಪದ್ಯ-೭೮:ಅರ್ಥ: ಅಗ್ನಿಯು ಖಾಂಡವವನ್ನು ಸುಟ್ಟು ಉಣ್ಣುತ್ತಾನೆ, ಅರ್ಜುನನು ಉಣಿಸುತ್ತಾನೆ. ಐರಾವತವಾಹನನಾದ ಇಂದ್ರನು ಸೈನ್ಯಸಮೇತನಾಗಿ ಸೇರಿ ಪ್ರತಿಭಟಿಸುತ್ತಾನೆ. ಇಲ್ಲಿ ನಾನಾವಿಧವಾದ

ಯುದ್ಧವುಂಟು ಎನ್ನುತ್ತ ಶೈಬ್ಯ, ಬಳಾಹಕ, ಮೇಘವರ್ಣ, ಸುಗ್ರೀವವೆಂಬ ಕುದುರೆಗಳಿಂದ ಪ್ರಕಾಶಮಾನವಾದ ರಥವನ್ನು ಕೃಷ್ಣನು ತಾನೂ ಹತ್ತಿದನು.

ವ|| ಅಂತು ದಾರುಕಂ ರಥಮಂ ಚೋದಿಸಲೊಡಂ-

ವಚನ:ಪದವಿಭಾಗ-

ಅರ್ಥ:ಅಂತು ದಾರುಕಂ ರಥಮಂ ಚೋದಿಸಲು (ನಡೆಸಲು) ಒಡಂ ಕೂಡಲೆ-

ವಚನ:ಅರ್ಥ:ದಾರುಕನು ರಥವನ್ನು ನಡೆಸಲು ಕೂಡಲೆ-

ಕಂ||

ಚೋದಿಸುವುದುಮಿರ್ವರ ರಥ

ಚೋದಕರವರೆರಡು ರಥದ

ಗಾಲಿಯ ಕೋಳಿಂ|

ದಾದ ರಜಪಟಲಂ ಕವಿ

ದಾದಮೆ ತೀವಿದುದು

ದಿವಿಜವಧುವಿರ ಕಣ್ಣೊಳ್||

೭೯||

ಪದ್ಯ-೭೯:ಪದವಿಭಾಗ-ಅರ್ಥ:ಚೋದಿಸುವುದುಂ ಇರ್ವರ ರಥಚೋದಕರ್ ಅವರ ಎರಡು ರಥದ ಗಾಲಿಯ ಕೋಳಿಂದಾದ ರಜಪಟಲಂ (ಗಾಲಿಗಳ ಆಕ್ರಮಣದಿಂದಾದ ಧೂಳಿನ ಸಮೂಹವು) ಕವಿದು ಅದಮೆ (ಬಹಳ) ತೀವಿದುದು (ತುಂಬಿತು) ದಿವಿಜ ವಧುವಿರ

ಕಣ್ಣೊಳ್ (ದೇವಸ್ತ್ರೀಯರ ಕಣ್ಣಲ್ಲಿ ಬಹಳವಾಗಿ ತುಂಬಿತು)

ಪದ್ಯ-೭೯:ಅರ್ಥ:

ಸಾರಥಿಗಳು ನೆಡೆಸಲು ಎರಡು ರಥದ ಗಾಲಿಗಳ ಆಕ್ರಮಣದಿಂದಾದ ಧೂಳಿನ ಸಮೂಹವು ಮುತ್ತಿ ಮುಸುಕಿ ದೇವಸ್ತ್ರೀಯರ ಕಣ್ಣಲ್ಲಿ ಬಹಳವಾಗಿ ತುಂಬಿತು

ವ|| ಅಂತೆಯ್ದಿ ಯಮುನಾನದಿಯ ತೆಂಕಣ

ದೆಸೆಯೊಳ್ ನೂಱು ಯೋಜನದಗಲದೊಳಮನಿತೆ ನೀಳದೊಳಂ ನೆರೆದು-

ವಚನ:ಪದವಿಭಾಗ-

ಅರ್ಥ:ಅಂತು ಎಯ್ದಿ ಯಮುನಾನದಿಯ ತೆಂಕಣ ದೆಸೆಯೊಳ್ (ದಕ್ಷಿಣದಿಕ್ಕಿನಲ್ಲಿ) ನೂಱು ಯೋಜನದ ಅಗಲದೊಳಂ ಅನಿತೆ ನೀಳದೊಳಂ ನೆರೆದು(ಅಷ್ಟೇ

ಉದ್ದವೂ ಆವರಿಸಿತ್ತು-

ತುಂಬಿತ್ತು -

ವಚನ:ಅರ್ಥ:ಹಾಗೆ ಬಂದು,

ಯಮುನಾನದಿಯ

ದಕ್ಷಿಣದಿಕ್ಕಿನಲ್ಲಿ ನೂರು

ಯೋಜನದಗಲವೂ ಅಷ್ಟೇ

ಉದ್ದವೂ ಆಗಿತ್ತು ಆ

ಖಾಂಡವವನ.

ಮ|| ಕಕುಭಾಶೋಕ ಕದಂಬ

ಲುಂಗ ಲವಲೀ

ಭೂಜಾರ್ಜುನಾನೋಕಹ

ಪ್ರಕರಂ ಪುಷ್ಪಿತ ಹೇಮಪಂಕಜ
ರಜಸ್ಸಂಸಕ್ತ ಭೃಂಗಾಂಗನಾ|
ನಿಕರಂ ಸಾರಸ ಹಂಸ ಕೋಕಿಳ
ಕುಳಧ್ವಾನೋತ್ಕರಂ ಚೆಲ್ವನಾ
ಯ್ತು ಕರಂ ಸಕ್ತನಿಳಿಂಪ
ದಂಪತಿಗಳಿಂದಾ ನಂದನಂ
ನಂದನಂ|| ೮೦||

ಪದ್ಯ-೮೦:ಪದವಿಭಾಗ-

ಅರ್ಥ:ಅಲ್ಲಿಯ ಮರಗಳು-:
ಕಕುಭ ಅಶೋಕ ಕದಂಬ
ಲುಂಗ ಲವಲೀ ಭೂಜ

(ಅರನೆಲ್ಲಿ)
ಅರ್ಜುನಾನೋಕಹ
(ಬಿಳಿಯಅತ್ತಿ) ಪ್ರಕರಂ
ಪುಷ್ಪಿತ ಹೇಮಪಂಕಜ
(ಹೊಂದಾವರೆಯ)
ರಜಸ್ಸಂಸಕ್ತ
(ಪರಾಗಧೂಳಿನಲ್ಲಿ) ಭೃಂಗ
ಅಂಗನಾ ನಿಕರಂ
(ಹೊರಳಾಡಿರುವ
ಹೆಣ್ಣುದುಂಬಿಗಳ
ಗುಂಪುಗಳಿಂದಲೂ) ಸಾರಸ

ಹಂಸ ಕೋಕಿಳ
ಕುಳಧ್ವಾನೋತ್ಕರಂ
(ಪಕ್ಷಿಸಮೂಹದ
ಶಬ್ದರಾಶಿಯಿಂದಲೂ)
ಚೆಲ್ವನಾಯ್ತು ಕರಂ (ಬಹಳ)
ಸಕ್ತನಿಳಿಂಪ ದಂಪತಿಗಳಿಂದ
(ಪರಸ್ಪರ ಆಸಕ್ತರಾದ
ದೇವದಂಪತಿಗಳಿಂದಲೂ) ಆ
ನಂದನಂ
ನಂದನಂ(ಸುಂದರವಾಗಿ
ಕಂಡಿತು)

ಪದ್ಯ-೮೦:ಅರ್ಥ:ಅಲ್ಲಿಯ ಮರಗಳು-: ಕೆಂಪುಮತ್ತಿ, ಅಶೋಕ, ಕದಂಬ, ಮಾತುಲುಂಗ, ಅರನೆಲ್ಲಿ, ಬಿಳಿಯಅತ್ತಿ ಮೊದಲಾದ ಮರಗಳ ಸಮೂಹಗಳಿಂದಲೂ ಪುಷ್ಪಭರಿತವಾದ ಹೊಂದಾವರೆಯ ಪರಾಗಧೂಳಿನಲ್ಲಿ ಹೊರಳಾಡಿರುವ

ಹೆಣ್ಣುದುಂಬಿಗಳ
ಗುಂಪುಗಳಿಂದಲೂ ಬಕ,
ಹಂಸ, ಕೋಗಿಲೆ ಮೊದಲಾದ
ಪಕ್ಷಿಸಮೂಹದ
ಶಬ್ದರಾಶಿಯಿಂದಲೂ
ಆನಂದವನ್ನುಂಟುಮಾಡುವ
ಆ ಖಾಂಡವವನವು ಪರಸ್ಪರ
ಆಸಕ್ತರಾದ
ದೇವದಂಪತಿಗಳಿಂದಲೂ
ಸುಂದರವಾಗಿ ಕಂಡಿತು.

ವ|| ಎನೆ ಸೊಗಯಿಸುವ ಖಾಂಡವವನಮಂ ವನರುಹನಾಭಂ ವಿಕ್ರಮಾರ್ಜುನಂಗೆ ತೋಱಲ್ದು ತೋಱೆ-

ವಚನ:ಪದವಿಭಾಗ-

ಅರ್ಥ:ಎನೆ ಸೊಗಯಿಸುವ ಖಾಂಡವವನಮಂ ವನರುಹನಾಭಂ (ಕೃಷ್ಣನು) ವಿಕ್ರಮಾರ್ಜುನಂಗೆ (ಅರ್ಜುನನಿಗೆ) ತೋಱಲ್ದು

ತೋಱೆ (ಸುತ್ತಾಡಿ ತೋರಿಸಲು)- **ವಚನ:ಅರ್ಥ:**ಹಾಗೆ ಸೊಬಗಿನ ಖಾಂಡವವನವನ್ನು ಕೃಷ್ಣನು ಅರ್ಜುನನಿಗೆ ಸುತ್ತಾಡಿ ತೋರಿಸಲು- (ತೋರಿಸಿದನು)

ಮ|| ಅಲರಂ ನೋಯಿಸದೊಯ್ಯನೊಯ್ಯನಳಿಗಳ್ ಬಂಡುಣ್ಬುವಾಟಂದು
ಬಂ ದಲೆಯಲ್ಕಣ್ಮದು ಗಾಳಿ ಸೂರ್ಯಕಿರಣಾನೀಕಕ್ಕಮೆಂದಪ್ಪೊಡಂ|
ಸಲವಿಲ್ಲುದ್ಧತ ಸಿದ್ಧ ಖೇಚರರೆ ತಾಮಾಳ್ವೇರಿಯಾಗಿಂತು ನಿ
ಚ್ಚಲುಮೋರಂತಿರೆ ಕಾವರೀ ದೊರೆತು ಕಾಪೀ ನಂದನಕ್ಕಿಂದ್ರನಾ|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ಅಲರಂ (ಹೂವನ್ನು) ನೋಯಿಸದೆ

ಒಯ್ಯನೊಯ್ಯನೆ ಅಳಿಗಳ್
ಬಂಡುಣ್ಬುವು (ಮೆಲ್ಲಮಲ್ಲನೆ
ಜೇನುಪಾನಮಾಡುತ್ತವೆ),
ಆಟಂದು (ಬಿರುಸಾಗಿ) ಬಂದು
ಅಲೆಯಲ್ಕೆ ಅಣ್ಮದು ಗಾಳಿ
(ಗಾಳಿಯು ನುಗ್ಗಿ ವೇಗವಾಗಿ
ಬೀಸುವುದಿಲ್ಲ)
ಸೂರ್ಯಕಿರಣ ಆನೀಕಕ್ಕಂ
(ಸಮೂಹಗಳು)
ಎಂದಪ್ಪೊಡಂ ಸಲವಿಲ್ಲ
(ಎಂದೂ ಇಲ್ಲಿ

ಪ್ರವೇಶಿಸುವುದಿಲ್ಲ) ಉದ್ಧತ ಸಿದ್ಧ ಖೇಚರರೆ (ಗರ್ವಿಷ್ಠರಾದ ಸಿದ್ಧಖೇಚರರೇ) ತಾಂ ಆಳ್ವೇರಿಯಾಗಿ ಇಂತು ನಿಚ್ಚಲುಂ ಓರಂತಿರೆ (ರಕ್ಷಕರಾಗಿ ಇದನ್ನು ನಿತ್ಯವೂ ಒಂದೇ ಕ್ರಮದಿಂದ) ಕಾವರು; ಈ ದೊರೆತು (ಈ ರೀತಿ ಇದೆ) ಕಾಪು ಈ ನಂದನಕ್ಕೆ ಇಂದ್ರನಾ (ಈ ಇಂದ್ರನ ವನಕ್ಕೆ ಕಾವಲು- ಈ ರೀತಿ ಇದೆ)

ಪದ್ಯ-೮೨:ಅರ್ಥ: ಇಲ್ಲಿ ದುಂಬಿಗಳು ಹೂವನ್ನು ನೋಯಿಸದೆ ಮೆಲ್ಲಮಲ್ಲನೆ ಜೇನುಪಾನಮಾಡುತ್ತವೆ. ಗಾಳಿಯು ನುಗ್ಗಿ ವೇಗವಾಗಿ ಬೀಸುವುದಿಲ್ಲ, ಸೂರ್ಯನ ಕಿರಣಸಮೂಹಗಳೂ ಎಂದೂ ಇಲ್ಲಿ ಪ್ರವೇಶಿಸುವುದಿಲ್ಲ. ಗರ್ವಿಷ್ಠರಾದ ಸಿದ್ಧಖೇಚರರೇ ರಕ್ಷಕರಾಗಿ ಇದನ್ನು ನಿತ್ಯವೂ ಒಂದೇ ಕ್ರಮದಿಂದ

ಕಾಯುತ್ತಿದ್ದಾರೆ. ಇಂದ್ರನ ಖಾಂಡವವನಕ್ಕೆ ಕಾವಲು ಈ ರೀತಿಯಾಗಿದೆ

ಉ|| ಒಮ್ಮೆ ತೊಟಿಲ್ದು ನೋಡಿ ಬನಮಂ ಮಘವಂ ಶಚಿ ಪೂತ ಚೂತಮಂ ನೆರ್ಮಿದಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ| ಸೋರ್ಮುಡಿಯೊಳ್ ತಗುಳ್ಚಿದೊಡೆ ಸೂಟಿನೆ

ಬಾರಿಸಿದಂ ದಲೆಂದೊಡಿಂ ಕೂರ್ಮೆಯ ಮಾತು ಮೆಚ್ಚುವನಿತರ್ಕೆ ಬಳಾರಿ ಮುರಾಸುರಾರಿಯೇಂ|| ೮೨ ||

ಪದ್ಯ-೮೨:ಪದವಿಭಾಗ-

ಅರ್ಥ: ಒಮ್ಮೆ ತೊಟಿಲ್ಲು (ಸುತ್ತಾಡಿ) ನೋಡಿ ಬನಮಂ ಮಘವಂ (ವನವನ್ನು ಅದರ ಸೊಬಗನ್ನೂ ನೋಡಿ ಬರುತ್ತಿದ್ದಾಗ) ಶಚಿ ಪೂತ ಚೂತಮಂ (ಹೂವಿನಿಂದ

ಕೂಡಿದ ಮಾವಿನ ಮರಕ್ಕೆ) ನೆರ್ಮಿದ ಶೋಕವಲ್ಲರಿಯ (ಅಶೋಕ ಬಳ್ಳಿಯನ್ನು ನೋಡಿ) ಪಲ್ಲವಂ ಒಂದನೆ ಕೊಯ್ದು (ಅದರ ಒಂದು ಚಿಗುರನ್ನು ಕೊಯ್ದು) ರಾಗದಿಂ ಸೋರ್ಮುಡಿಯೊಳ್ ತಗುಳ್ಚಿದೊಡೆ (ಪ್ರೀತಿಯಿಂದ ತನ್ನ ಉದ್ದ ಜಡೆಯಲ್ಲಿ ಮುಡಿದುಕೊಳ್ಳಲು) ಸೂಚಿನೆ ಬಾರಿಸಿದಂ (ಸೂಳ್ (ಎಚ್ಚರಕೆ

) ಎಂದು ತಡೆದನು) ದಲ್-
ನಿಜ! ಎಂದೊಡಿಂ ಕೂರ್ಮೆಯ
ಮಾತು (ಎಂದಾಗ ವನದ
ಬಗೆಗೆ ಅವನ ಪ್ರೀತಿಯ ಭಾವ
ಎಷ್ಟಿರಬೇಕು?) ಮೆಚ್ಚುವನ್
ಇತರ್ಕೆ ಬಳಾರಿ (ಇದಕ್ಕೆ
-ಈವನಕ್ಕೆ ಬಹಳ
ಮೆಚ್ಚುವನು- ಪ್ರಿತಿಸುವನು
ಇಂದ್ರನು, ಬಲಿಯ ವಿರೋಧಿ)
ಮುರ ಅಸುರಾರಿಯೇಂ
(ಅವನು -ಇಂದ್ರನು ಉದಾರತೆ

ತೋರಲು ಮುರನನ್ನು ಕೊಂದ ಶ್ರೀಕೃಷ್ಣನೇ?)ಇಂದ್ರನು ಪತ್ನಿ ಶಚಿಗೂ ಉದಾರತೆ ತೋರಿಲ್ಲ)

ಪದ್ಯ-೮೨:ಅರ್ಥ: ಒಂದು ಸಲ ಇಂದ್ರನು ಶಚೀದೇವಿಯೊಡಗೂಡಿ ಸುತ್ತಾಡುತ್ತಾ ವನವನ್ನು ಅದರ ಸೊಬಗನ್ನೂ ನೋಡಿ ಬರುತ್ತಿದ್ದಾಗ ಹೂವಿನಿಂದ ಕೂಡಿದ ಮಾವಿನ ಮರಕ್ಕೆ ಹಬ್ಬಿದ್ದ ಅಶೋಕ ಬಳ್ಳಿಯನ್ನು

ನೋಡಿ ಅದರ ಒಂದು ಚಿಗುರನ್ನು (ಶಚಿಯು) ಕೊಯ್ದು ಪ್ರೀತಿಯಿಂದ ತನ್ನ ಉದ್ದ ಜಡೆಯಲ್ಲಿ ಮುಡಿದುಕೊಳ್ಳಲು ಇಂದ್ರನು ಸೂಳ್ (ಅಪಾಯ- ಎಚ್ಚರಕೆ)ಎಂದು ತಡೆದನು ಎಂಬುದು ನಿಜ! ಎಂದಾಗ ಆ ವನದ ವಿಷಯದಲ್ಲಿ ಅವನ ಪ್ರೀತಿಯ ಭಾವ ಎಷ್ಟಿರಬೇಕು? ಈ ವನವನ್ನು ಇಂದ್ರನು ಬಹಳ

ಮೆಚ್ಚುವನು. ಇಂದ್ರನು ಉದಾರತೆ ತೋರಲು ಕೃಷ್ಣನೆಂದು ತಿಳಿದೆಯಾ?

ಕಂ|| ಇಂತಪ್ಪ ಬನಮನಿದನಿ
ನ್ನೆಂತನಲನನೂಡಲೆಂದು
ಪೂಣ್ದಯ್ ಮುಂ ಪೂ|
ಣ್ದಂತೂಡು ಪೂಡು ಶಿತಶರ
ಸಂತತಿಯಂ ಬಿಲ್ಲೊಳೇಕೆ ನೀಂ
ತಡೆದಿರ್ಪಯ್|| ೮೩ ||

ಪದ್ಯ-೮೩:ಪದವಿಭಾಗ-

ಅರ್ಥ:ಇಂತಪ್ಪ ಬನಮನು

ಇದನು ಇನ್ನೆಂತು ಅನಲನನ್
ಊಡಲೆಂದು ಪೂಣ್ದಯ್
(ಹೀಗಿರುವ ಈ ವನವನ್ನು ಅಗ್ನಿ
ಉಣಲೆಂದು ಹೇಗೆ ಪ್ರತಿಜ್ಞೆ
ಮಾಡಿದೆ?) ಮುಂ (ಮೊದಲು)
ಪೂಣ್ದಂತೂಡು (ಮೊದಲು
ಪ್ರತಿಜ್ಞೆ ಮಾಡಿದ ಹಾಗೆ
ಉಣಿಸು) ಪೂಡು
(ಬಾಣವನ್ನು ಹೂಡು)
ಶಿತಶರಸಂತತಿಯಂ ಬಿಲ್ಲೊಳು
(ಹರಿತವಾದ ಬಾಣ

ಸಮೂಹವನ್ನು ಬಿಲ್ಲಿನಲ್ಲಿ) ಏಕೆ ನೀಂ ತಡೆದಿರ್ಪೆಯ್?

ಪದ್ಯ-೮೩:ಅರ್ಥ: ಹೀಗಿರುವ ಈ ವನವನ್ನು ಅಗ್ನಿ ಉಣಲೆಂದು ಹೇಗೆ ಪ್ರತಿಜ್ಞೆ ಮಾಡಿದೆ? ಮೊದಲು ಪ್ರತಿಜ್ಞೆ ಮಾಡಿದ ಹಾಗೆ ಉಣಿಸು, ಬಿಲ್ಲಿನಲ್ಲಿ ಹರಿತವಾದ ಬಾಣಸಮೂಹವನ್ನು ಸಂಧಾನಮಾಡು. ಏಕೆ ತಡೆದಿರುವೆ?

ಕಂ||ಪರಮಾಣುವನಿತು
ಬನದೊಳ್
ಚರಾಚರಂ ಪೋಗೆ
ತಣಿಯನನಲನದರ್ಕಾಂ|
ನೆರಮಪ್ಪೆನುಗ್ರ ಕಿನ್ನರ
ಸುರ ದನುಜೋರಗರ
ಕದನಮೇಂ ನಿನಗರಿದೇ|| ೮೪
||

ಪದ್ಯ-೮೪:ಪದವಿಭಾಗ-ಅರ್ಥ:ಪರಮಾಣುಂ ಅನಿತು ಬನದೊಳ್ ಚರಾಚರಂ

ಪೋಗೆ (ವನದಲ್ಲಿ
ಪರಮಾಣುವಷ್ಟು ಚರಾಚರ
ಪ್ರಾಣಿಗಳು ಹೊರಗೆ
ಹೋದರೂ) ತಣಿಯನು
ಅನಲನು (ಅಗ್ನಿಯು
ತೃಪ್ತಿಪಡಲಾರ) ಅದರ್ಕೆ ಆಂ
ನೆರಮಪ್ಪೆನು (ಅದಕ್ಕೆ ನಾನು
ನೆರವಾಗುವೆನು) ಉಗ್ರ ಕಿನ್ನರ
ಅಸುರ ದನುಜ ಉರಗರ
ಕದನಮೇಂ ನಿನಗೆ

ಅರಿದೇ(ನಿನಗೆ ಹರಿಯದೇ? ಅಸಾಧ್ಯವೇ?)
ಪದ್ಯ-೮೪:ಅರ್ಥ: ಈ ವನದಲ್ಲಿರವ ಪರಮಾಣುವಿನಷ್ಟು ಚರಾಚರ ಪ್ರಾಣಿಗಳು ಹೊರಗೆ ಹೋದರೂ ಅಗ್ನಿಯು ತೃಪ್ತಿಪಡಲಾರ. ಅದಕ್ಕೆ ನಾನು ನೆರವಾಗುವೆನು. ಭಯಂಕರರಾದ ಕಿನ್ನರರು, ರಾಕ್ಷಸರು, ದನಜರು, ನಾಗರು

ಇವರೊಡನೆ ಯುದ್ಧ
ಮಾಡುವುದು ನಿನಗೆ
ಅಸಾಧ್ಯವೇ?

ವ|| ಎಂಬುದುಮಂತೆ ಗೆಯ್ವೆನೆನ್ನ ಸಾಹಸಮಂ ನೋಡಿಮೆಂದು ವಿಕ್ರಾಂತ ತುಂಗನುತ್ತುಂಗ ಭುಜಪರಿಘದೆರಡು ದೆಸೆಯೊಳಂ ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು

ದಿವ್ಯಾಸ್ತ್ರಂಗಳಂ ಪಿಡಿದು ಕೆಯ್ತೀವಿಕೊಂಡಗ್ನಿದೇವನಂ ನೋಡಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂತೆ ಗೆಯ್ವೆನು ಎನ್ನ ಸಾಹಸಮಂ ನೋಡಿಮೆಂದು (ಹಾಗೆಯೇ ಮಾಡುವೆನು. ನನ್ನ ಪರಾಕ್ರಮವನ್ನು ನೋಡಿ ಎಂದು) ವಿಕ್ರಾಂತ ತುಂಗನು ಉತ್ತುಂಗ ಭುಜಪರಿಘದ

ಎರಡು ದೆಸೆಯೊಳಂ
(ಅರ್ಜುನನು, ಎತ್ತರದ
ಗದೆಯಂತಿರುವ ಎರಡು
ಭುಜಗಳಲ್ಲಿಯೂ)
ತವದೊಣೆಗಳಂ ಬಿಗಿದು
(ಅಕ್ಷಯತೂಣೀರಗಳನ್ನು
ಬಿಗಿದುಕೊಂಡು)
ಗಾಂಡೀವಮನು ಏಱಿಸಿ
(ಗಾಂಡೀವವೆಂಬ ಬಿಲ್ಲಿಗೆ
ಹೆದೆಯೇರಿಸಿ) ನೀವಿ
ಜೇವೊಡೆದು (ಸವರಿ,

ನಾಣನ್ನು ಶಬ್ದಮಾಡಿ ನೋಡಿ) ದಿವ್ಯಾಸ್ತ್ರಂಗಳಂ ಪಿಡಿದು (ದಿವ್ಯಾಸ್ತ್ರಗಳನ್ನು ಕಯ್ಯಲ್ಲಿ ಹಿಡಿದು) ಕೆಯ್ತೀವಿಕೊಂಡು (ಕಯ್ಯಲ್ಲಿ ತುಂಬಿಕೊಂಡು) ಅಗ್ನಿದೇವನಂ ನೋಡಿ-

ವಚನ:ಅರ್ಥ:ಅರ್ಜುನನು ಹಾಗೆಯೇ ಮಾಡುವೆನು, ನನ್ನ ಪರಾಕ್ರಮವನ್ನು ನೋಡಿ ಎಂದು, ಉತ್ತಮಪರಾಕ್ರಮಿಯಾದ

ಅರ್ಜುನನು ತನ್ನ ಎತ್ತರದ
ಗದೆಯಂತಿರುವ ಎರಡು
ಭುಜಗಳಲ್ಲಿಯೂ
ಅಕ್ಷಯತೂಣೀರಗಳನ್ನು
ಬಿಗಿದುಕೊಂಡು
ಗಾಂಡೀವವೆಂಬ ಬಿಲ್ಲಿಗೆ
ಹೆದೆಯೇರಿಸಿ ಹೆದೆಯನ್ನು
ಸವರಿ, ನಾಣನ್ನು
ಶಬ್ದಮಾಡಿನೋಡಿ
ದಿವ್ಯಾಸ್ತ್ರಗಳನ್ನು ಕಯ್ಯಲ್ಲಿ

ತುಂಬಿಕೊಂಡು

ಅಗ್ನಿದೇವನನ್ನು ನೋಡಿ-

ಉ|| ಓಡುಗೆ ನಿಮ್ಮ ಮೆಯ್ಯ

ಪಸಿವಾಂತ ವಿರೋಧಿಗಳೆನ್ನ

ಕೆಯ್ಯ್ಯಾಳ

ಱ್ಕಾಡುಗೆ ಕೊಳ್ಳಿಮಣ್ಣಿಮನೆ

ಕೇಳ್ದನಲಂ ಪರಸುತ್ತಮಾ

ಲಯ|

ಕ್ರೀಡೆಯೊಳೀ

ಚರಾಚರಮುಮಂ

ಸುಡುವಂದಿನ ಮೆಯ್ಗಮಗ್ಗಳಂ

ಮಾಡಿ ತಗುಳ್ದು ನೀಳ್ದು ಬಳೆದರ್ವಿಸೆ ಪರ್ವಿದನಾ ವನಾಂತಮಂ|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ:ಓಡುಗೆ ನಿಮ್ಮ ಮೆಯ್ಯ ಪಸಿವು (ನಿಮ್ಮ ದೇಹದ ಹಸಿವು ಓಡಲಿ) ಆಂತ ವಿರೋಗಳು ಎನ್ನ ಕೆಯ್ಯೊಳ್ ಅಳ್ಕಾಡುಗೆ (ಎದುರಿಸಿದ ಶತ್ರುಗಳು ನಮ್ಮ ಕಯ್ಯಲ್ಲಿ ನಾಶವಾಗಲಿ) ಕೊಳ್ಳಿಂ ಉಣ್ಣಿಂ

ಎನೆ (ತೆಗೆದುಕೊಳ್ಳಿ, ಉಣ್ಣಿ
ಎನ್ನಲು) ಕೇಳ್ದು ಅನಲಂ
ಪರಸುತ್ತಂ ಆ
ಲಯಕ್ರೀಡೆಯೊಳು ಈ
ಚರಾಚರಮುಮಂ ಸುಡುವ
ಅಂದಿನ (ಅವರನ್ನು ಹರಸುತ್ತ
ಪ್ರಳಯಕಾಲದಲ್ಲಿ ಈ
ಚರಾಚರವನ್ನೆಲ್ಲ ಸುಡುವ
ಅಂದಿನ) ಮೆಯ್ಗಂ
ಅಗ್ಗಳಂಮಾಡಿ (ಶರೀರವನ್ನೂ
ಮೀರಿದ ರೂಪವನ್ನು ಧರಿಸಿ)

ತಗುಳ್ದು ನೀಳ್ದು ಬಳೆದು ಉರ್ವಿಸೆ (ನೀಳವಾಗಿ ಬೆಳೆದು ಉರಿಸಲು- ಸುಡಲು) ಪರ್ವಿದಂ ಆ ವನಾಂತಮಂ (ಆ ಕಾಡಿನ ಒಳಬಾಗದಲ್ಲೆಲ್ಲಾ ಪರ್ವಿದಂ - ಹರಡಿದನು/ ಹಬ್ಬಿದನು)

ಪದ್ಯ-೮೫:ಅರ್ಥ: ನಿಮ್ಮ ದೇಹದ ಹಸಿವು ಓಡಲಿ; ಎದುರಿಸಿದ ಶತ್ರುಗಳು ನಮ್ಮ ಕಯ್ಯಲ್ಲಿ ನಾಶವಾಗಲಿ;

ತೆಗೆದುಕೊಳ್ಳಿ, ಉಣ್ಣಿ ಎನ್ನಲು
ಅವರನ್ನು ಹರಸುತ್ತ
ಪ್ರಳಯಕಾಲದಲ್ಲಿ ಈ
ಚರಾಚರವನ್ನೆಲ್ಲ ಸುಡುವ
ಅಂದಿನ ಶರೀರವನ್ನೂ
ಮೀರಿದ ರೂಪವನ್ನು ಧರಿಸಿ
ನೀಳವಾಗಿ ಬೆಳೆದು ಸುಡಲು
ಆ ವನದ ಒಳಭಾಗವಲ್ಲೆಲ್ಲಾ
ಹಬ್ಬಿದನು.

ಮ|| ಫಳ ಕರ್ಪೂರ ಲವಂಗ ಲುಂಗ ಲವಳೀ ಹಿಂತಾಳ

ತಾಳೀ ತಮಾ
ಳ ಳತಾ ಸುಂದರ
ನಂದನಕ್ಕಳುರೆ ಮುಂ
ತನ್ನರ್ಚೆಗಳ್ ಬಂದು ಮೊ|
ಕ್ಕಳಮೆತ್ತಂ ಸುರಿಯುತ್ತುಮಿರ್ಪ
ರಸಮಂ ಮುಂ
ಪೀರ್ದುಕೊಂಡಂ ಮನಂ
ಗೊಳೆ ಸಪ್ತಾರ್ಚಿ ಪೊದಳ್ದು
ನೀಳ್ದೊಸಗೆಯಿಂದಾಪೋಶ
ನಂಗೊಳ್ವವೋಲ್|| ೮೬||

ಪದ್ಯ-೮೬:ಪದವಿಭಾಗ-ಅರ್ಥ:ಫಳ ಕರ್ಪೂರ ಲವಂಗ ಲುಂಗ(ಮಾದಲ) ಲವಳೀ (ಅರನೆಲ್ಲಿ) ಹಿಂತಾಳ ತಾಳೀ ತಮಾಳ ಳತಾ (ಹೊಂಗೆಯಬಳ್ಳಿ?) ಸುಂದರ ನಂದನಕ್ಕೆ ಅಳುರೆ-> ಮುಂ (ಮೊದಲು) ತನ್ನ ಅರ್ಚಿಗಳ್ (ಜ್ವಾಲೆಗಳು ಅಳುರೆ-ವ್ಯಾಪಿಸಲು) ಬಂದು ಮೊಕ್ಕಳಮೆತ್ತಂ (ಮೊಕ್ಕಳಂ

-ಬಹಳ,ಎತ್ತಂ- ಎಲ್ಲಡೆಯೂ)
ಸುರಿಯುತ್ತುಮಿರ್ಪ ರಸಮಂ
(ಸುರಿಯುತ್ತಿರುವ ಮರದ
ರಸವನ್ನು) ಮುಂ
ಪೀರ್ದುಕೊಂಡಂ (ಮೊದಲೇ
ಹೀರಿಕೊಂಡನು->)
ಮನಂಗೊಳೆ ಸಪ್ತಾರ್ಚಿ
ಪೊದಳ್ದು (ಇಷ್ಟವಾಗಲು
ಅಗ್ನಿಯು ಹರಡಿ) ನೀಳ್ದ
ಒಸಗೆಯಿಂದ
ಆಪೋಶನಂಗೊಳ್ವವೋಲ್

(ದೀರ್ಘವಾಗಿ ಸಂತಸದಿಂದ --
ಆಪೋಶನವನ್ನು
ತೆಗೆದುಕೊಳ್ಳುವ ಹಾಗೆ-
ಮೊದಲೇ ಹೀರಿಕೊಂಡನು)
ಪದ್ಯ-೮೬:ಅರ್ಥ: ಫಲಿಸಿದ
ಕರ್ಪೂರ, ಲವಂಗ, ಮಾದಲ,
ಅರನೆಲ್ಲಿ, ಹಿಂತಾಳ, ತಾಳೆ,
ಹೊಂಗೆಯಬಳ್ಳಿ (?)
ಇವುಗಳಿಂದ ಸುಂದರವಾಗಿದ್ದ
ವನವನ್ನು ಮೊದಲೇ ತನ್ನ
ಉರಿಯ ಜ್ವಾಲೆಗಳು

ಹರಡಿರಲು ಮುಂದುವರಿದು ದೀರ್ಘವಾಗಿ ಬೆಳೆದು ಸಂತೋಷದಿಂದ ಆಪೋಶನವನ್ನು ತೆಗೆದುಕೊಳ್ಳುವ ಹಾಗೆ ವಿಶೇಷವಾಗಿ ಸುರಿಯುತ್ತಿರುವ ಮರದ ರಸವನ್ನು ಅಗ್ನಿಯು ಹೀರಿಕೊಂಡನು.

ಕಂ|| ನನೆಕೊನೆಯ ತಳಿರ ಪೂವಿನ

ಬನಮನಿತುಂ ಶಿಖಿಗಳಳುರೆ ಬೆಂಕೆಯ ಪೊಯ್ದು|
ರ್ವಿನೊಳೆ ಕೊರಗಿರ್ದ ಲತೆಗಳ ಕೊನೆಗೊನೆಯನೆ
ದಹನನಳುರ್ದು ಕೊನೆಗೊನೆಗೊಂಡಂ|| ೮೭||

ಪದ್ಯ-೮೭:ಪದವಿಭಾಗ-ಅರ್ಥ:ನನೆಕೊನೆಯ ತಳಿರ (ಮೊಗ್ಗಿನಕೊನೆಯ, ಟಿಸಿಲಿನ) ಪೂವಿನ ಬನಂ ಆನಿತುಂ (ಹೂವಿನ ಆ ವನವನ್ನೆಲ್ಲಾ)

ಶಿಖಿಗಳಳು ಉರೆ (ಬೆಂಕಿಯ
ಜ್ವಾಲೆಗಳು ವ್ಯಾಪಿಸಲು)
ಬೆಂಕೆಯ ಪ್ರೊಯ್ದ
ಉರ್ವಿನೊಳೆ ಕೊರಗಿರ್ದ
(ಬೆಂಕಿಯು ಹೊಡೆದ
ರಭಸದಲ್ಲಿಯೇ ಬಾಡಿದ)
ಲತೆಗಳ ಕೊನೆಗೊನೆಯನೆ
(ಬಳ್ಳಿಗಳ ಕವಲು
ಕವಲುಗಳನ್ನೇ) ದಹನಂ
ಅಳುರ್ದು (ಅಗ್ನಿಯು ಸುಟ್ಟು)
ಕೊನೆಗೊನೆಗೊಂಡಂ

(ತುತ್ತತುದಿಯನ್ನೂ ಆಕ್ರಮಿಸಿದನು)

ಪದ್ಯ-೮೭:ಅರ್ಥ:

ಮೊಗ್ಗಿನಕೊನೆಯ/ಟಿಸಿಲಿನ, ಚಿಗುರಿನ, ಹೂವಿನ ಆ ವನವನ್ನೆಲ್ಲಾ ಬೆಂಕಿಯ ಜ್ವಾಲೆಗಳು ವ್ಯಾಪಿಸಲು ಬೆಂಕಿಯು ಹೊಡೆದ ರಭಸದಲ್ಲಿಯೇ ಬಾಡಿದ ಬಳ್ಳಿಗಳ ಕವಲು ಕವಲುಗಳನ್ನೇ ಅಗ್ನಿಯು

ಸುಟ್ಟು ತುತ್ತತುದಿಯನ್ನೂ ಆಕ್ರಮಿಸಿದನು.

ವ|| ಆಗಳಾ ಬನಮನಿಂದ್ರನ ಬೆಸದೊಳ್ ಕಾವ ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರ ಬಲಮನಿತುಮೊಂದಾಗಿ ವಿಕ್ರಮಾರ್ಜುನನೊಳ್ ತಾಗೆ-

ವಚನ:ಪದವಿಭಾಗ-

ಅರ್ಥ:ಆಗಳು ಆ ಬನಮನು ಇಂದ್ರನ ಬೆಸದೊಳ್ ಕಾವ

(ಕಾಯುವ) ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರ ಬಲಂ (ಸೈನ್ಯವು) ಅನಿತುಂ (ಅಷ್ಟೂ) ಒಂದಾಗಿ ವಿಕ್ರಮಾರ್ಜುನನೊಳ್ ತಾಗೆ (ಅರ್ಜುನನನ್ನು ಬಂದು ಎದುರಿಸಿದುವು)-

ವಚನ:ಅರ್ಥ:ಆಗ ಅವನನ್ನು ಇಂದ್ರನ ಆಜ್ಞೆಯಂತೆ ಕಾಯುತ್ತಿದ್ದ ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ

ವಿದ್ಯಾಧರ ಸೈನ್ಯವಷ್ಟೂ
ಒಂದಾಗಿ ಅರ್ಜುನನನ್ನು
ಬಂದು ಎದುರಿಸಿದುವು

ಕಂ|| ಕೊಂಡಪುದುರಿ
ಬನಮನದಂ
ಕಂಡೆಂತಿರಲಕ್ಕುಮೆಂದು
ತಾಗಿದ ನೆಗೞ್ದ|
ಳ್ಗಂಡರ ಗಂಡೋಡುವಿನಂ
ಕೊಂಡುವು ಗಾಂಡೀವಮುಕ್ತ
ಬಾಣಗಣಂಗಳ್|| ೮೮||

ಪದ್ಯ-೮೮:ಪದವಿಭಾಗ-ಅರ್ಥ:ಕೊಂಡಪುದು ಉರಿ ಬನಮನು (ಬೆಂಕಿಯು ವನವನ್ನು ಸುಡುತ್ತಿದೆ.) ಅದಂ ಕಂಡು ಎಂತಿರಲಕ್ಕುಮೆಂದು (ಅದನ್ನು ನೋಡಿಯೂ ಹೇಗೆ ಸುಮ್ಮನಿರುವುದು ಎಂದು) ತಾಗಿದ ನೆಗಟ್ದಿ ಒಳ್ಗಂಡರ ಗಂಡೋಡುವಿನಂ ಕೊಂಡುವು(ಎದುರಿಸಿದ ಪ್ರಸಿದ್ಧವಾದ ಶೂರರ

ಪೌರುಷವು ಪಲಾಯನ ಮಾಡುವ ಹಾಗೆ ಅವರನ್ನು ಆಹುತಿಗೊಂಡವು)
ಗಾಂಡೀವಮುಕ್ತ ಬಾಣಗಣಂಗಳ್ (ಗಾಂಡೀವದಿಂದ ಬಿಟ್ಟ ಬಾಣಗಳು)

ಪದ್ಯ-೮೮:ಅರ್ಥ: .
ಬೆಂಕಿಯು ವನವನ್ನು ಸುಡುತ್ತಿದೆ. ಅದನ್ನು ನೋಡಿಯೂ ಹೇಗೆ

ಸುಮ್ಮನಿರುವುದು ಎಂದು
ಎದುರಿಸಿದ ಪ್ರಸಿದ್ಧವಾದ
ಶೂರರ ಪೌರುಷವು
ಪಲಾಯನ ಮಾಡುವ ಹಾಗೆ
ಗಾಂಡೀವದಿಂದ ಬಿಟ್ಟ
ಬಾಣಗಳು ಅವರನ್ನು
ಆಹುತಿಗೊಂಡವು.

ವ|| ಅಂತು ಕಾದೆ ವಿದ್ವಿಷ್ಟವಿದ್ರಾವಣನ ಮೊನೆಯಂಬಿನಂಬೇಱಿಂಗಳ್ಕಿ ಹತವಿಹೆತ ಕೋಳಾಹಳರಾಗಿ

ಸಿದ್ಧರಸಿದ್ಧರಾಗೆಯುಂ
ಕಿನ್ನರರಿನ್ನಾರ ಮರೆಯಂ
ಪುಗುವಮೆನೆಯುಂ ಕಿ
ಪುರುಷರ್ ಕಾಪುರುಷರಂತೆ
ಬಾಯಂ ಬಿಡೆಯುಂ
ಗಂಧರ್ವರ್ ಗರ್ವಮನುೞಿ
ದೊಂದೊರ್ವರುಂ
ಮಿಗೆಯೋಡೆಯುಂ
ವಿದ್ಯಾಧರರರಧರರಾಗೆಯುಂ
ಪನ್ನಗರ್ ಪನ್ನತಿಕೆಯಿಂ
ಬಂದಾಂತೊಡೆ-

ವಚನ:ಪದವಿಭಾಗ-ಅರ್ಥ:ಅಂತು ಕಾದೆ (ಕಾದಲು-ಯುದ್ಧಮಾಡಲು) ವಿದ್ವಿಷ್ಟವಿದ್ರಾವಣನ (ಅರ್ಜುನನ) ಮೊನೆಯಂಬಿನ ಅಂಬೇಱಿಂಗೆ ಅಳ್ಕಿ(ಬಿಲ್ಲು ಯುದ್ಧಕ್ಕೆ ಅಳುಕಿ/ ಹೆದರಿ) ಹತವಿಹೆತ ಕೋಲಾಹಳರಾಗಿ (ನಾನಾ ವಿಧವಾದ ಹೊಡೆತ ಮರುಹೊಡೆತಗಳ ಕೋಲಾಹಲದಲ್ಲಿ) ಸಿದ್ಧರು

ಅಸಿದ್ಧರಾಗೆಯುಂ ಕಿನ್ನರರು ಇನ್ನಾರ ಮರೆಯಂ ಪುಗುವಂ ಎನೆಯುಂ (ಸಿದ್ಧರು ಸಿದ್ಧತೆಯಿಲ್ಲದವರಾದರು, ಕಿನ್ನರರು ಇನ್ನು ಯಾರ ಮರೆಯನ್ನು ಹೋಗೋಣವೆಂದು ಯೋಚಿಸಿದರು) ಕಿ(ಕಿಂ) ಪುರುಷರ್ ಕಾ ಪುರುಷರಂತೆ ಬಾಯಂ ಬಿಡೆಯುಂ (ಕಿಂಪುರುಷರು

ಅಲ್ಪಮನುಷ್ಯರಂತೆ
ಹಾಹಾಕಾರಪಟ್ಟರು)
ಗಂಧರ್ವರ್ ಗರ್ವಮನು
ಉೞಿದು ಒಂದೊರ್ವರುಂ
ಮಿಗೆಯೋಡೆಯುಂ
(ಗಂಧರ್ವರು ತಮ್ಮ
ಆತ್ಮಗರ್ವವನ್ನು ಬಿಟ್ಟು
ಒಬ್ಬೊಬ್ಬರನ್ನೂ ಮೀರಿಸಿ
ಓಡಿದರು) ವಿದ್ಯಾಧರರು
ಅಧರರಾಗೆಯುಂ
(ತಿರಸ್ಕೃತರಾದರು) ಪನ್ನಗರ್

ಪನ್ನತಿಕೆಯಿಂ ಬಂದು ಅಂತೊಡೆ (ಪನ್ನಗರು ಪರಾಕ್ರಮದಿಂದ ಬಂದು ಎದುರಿಸಿದರು)-

ವಚನ:ಅರ್ಥ:ಹಾಗೆ ಕಾದಲು ವಿದ್ರಾವಣನ ಮೊನಚಾದ ಬಾಣದ ಬಿಲ್ಲಿನ ಯುದ್ಧದ ನಾನಾ ವಿಧವಾದ ಹೊಡೆತ ಮರುಹೊಡೆತಗಳ ಕೋಲಾಹಲದಲ್ಲಿ ಸಿದ್ಧರು ಸಿದ್ಧತೆಯಿಲ್ಲದವರಾದರು,

ಕಿನ್ನರರು ಇನ್ನು ಯಾರ
ಮರೆಯನ್ನು
ಹೋಗೋಣವೆಂದು
ಯೋಚಿಸಿದರು, ಕಿಂಪುರುಷರು
ಅಲ್ಪಮನುಷ್ಯರಂತೆ
ಹಾಹಾಕಾರಪಟ್ಟರು.
ಗಂಧರ್ವರು ತಮ್ಮ
ಆತ್ಮಗರ್ವವನ್ನು ಬಿಟ್ಟು
ಒಬ್ಬೊಬ್ಬರನ್ನೂ ಮೀರಿಸಿ
ಓಡಿದರು. ವಿದ್ಯಾಧರರು
ತಿರಸ್ಕೃತರಾದರು. ಪನ್ನಗರು

ಪರಾಕ್ರಮದಿಂದ ಬಂದು ಎದುರಿಸಿದರು.

ಕಂ|| ನಾಗರ ಖಂಡಂಗಳನಾ ನಾಗರ ಖಂಡದೊಳೆ ತೊಡರೆ ನರನಿಸುವುದುಮಾ| ನಾಗರ ಖಂಡಂಗಳುಮಂ ನಾಗರ ಖಂಡಮುಮನಳುರ್ದುಕೊಂಡಂ ದಹನಂ|| ೮೯||

ಪದ್ಯ-೮೯:ಪದವಿಭಾಗ-

ಅರ್ಥ:ನಾಗರ ಖಂಡಂಗಳಂ ಆನಾಗರ ಖಂಡದೊಳೆ

ತೊಡರೆ (ಹಸಿಯ ಶುಂಠಿಯ ಚೂರುಗಳೂ ಆ ಸರ್ಪಗಳ ಚೂರುಗಳಲ್ಲಿಯೇ ಸಿಕ್ಕಿಕೊಳ್ಳುವಂತೆ) ನರನು ಇಸುವುದುಂ (ಅರ್ಜುನನು ಬಾಣಪ್ರಯೋಗ ಮಾಡಲು) ಆ ನಾಗರ ಖಂಡಂಗಳುಮಂ ನಾಗರ ಖಂಡಮುಮನು ಅಳುರ್ದು ಕೊಂಡಂ(ವ್ಯಾಪಿಸಿ ಸುಟ್ಟನು) ದಹನಂ- ಅಗ್ನಿಯು(ಆ ಹಸಿರು

ಶುಂಠಿಯ ಚೂರುಗಳನ್ನೂ ಸರ್ಪಗಳ ಚೂರುಗಳನ್ನೂ ಅಗ್ನಿಯು ವ್ಯಾಪಿಸಿ ಸುಟ್ಟನು.)
ಪದ್ಯ-೮೯:ಅರ್ಥ: . ಅಲ್ಲಿ ಬೆಳೆದ ಹಸಿಯ ಶುಂಠಿಯ ಚೂರುಗಳೂ ಆ ಸರ್ಪಗಳ ಚೂರುಗಳಲ್ಲಿಯೇ ಸಿಕ್ಕಿಕೊಳ್ಳುವಂತೆ ಅರ್ಜುನನು ಬಾಣಪ್ರಯೋಗ ಮಾಡಲು ಆ ಹಸಿರು ಶುಂಠಿಯ ಚೂರುಗಳನ್ನೂ ಸರ್ಪಗಳ

ಚೂರುಗಳನ್ನೂ ಅಗ್ನಿಯು ವ್ಯಾಪಿಸಿ ಸುಟ್ಟನು.

ಕಂ||ವಿರಹಿಗಳ ಸುಯ್ಯ
ಬೆಂಕೆಯೊ
ಳಿರದೊಣಗಿದುವಕ್ಕುಮೀಗಳೆ
ನಲುರಿವುರಿಯಿಂ|
ಕರಿಮುರಿಕನಾದುವುನ್ಮದ
ಪರಭೃತ ಷಟ್ಚರಣ
ರಾಜಕೀರಕುಲಂಗಳ್|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ:ವಿರಹಿಗಳ ಸುಯ್ಯ

ಬೆಂಕೆಯೊಳು ಇರದೆ
ಒಣಗಿದುವಕ್ಕುಂ (ಪ್ರೇಮಿಗಳ
ಬಿಸಿಯುಸಿರಿನ ಬೆಂಕಿಯಲ್ಲಿ
ಒಣಗಿದುವ್ರೋ) ಈಗಳೆ
ಎನಲು (ಈಗ ಎನ್ನುವ ಹಾಗೆ)
ಉರಿವುರಿಯಿಂ (ಉರಿಯುವ
ಬೆಂಕಿಯ ಜ್ವಾಲೆಯಿಂದ)
ಕರಿಮುರಿಕನು
ಆದುವು(ಸುಟ್ಟು
ಕರಿಮುರುಕಾದುವು)
ಉನ್ಮದಪರಭೃತ ಷಟ್ಚರಣ

ರಾಜಕೀರಕುಲಂಗಳ್(ಸೊಕ್ಕಿದ ಕೋಗಿಲೆ ದುಂಬಿ ಮತ್ತು ಅರಗಿಳಿಗಳ ಸಮೂಹಗಳು)

ಪದ್ಯ-೯೦:ಅರ್ಥ: ಸೊಕ್ಕಿದ ಕೋಗಿಲೆ ದುಂಬಿ ಮತ್ತು ಅರಗಿಳಿಗಳ ಸಮೂಹಗಳು ತಮ್ಮನ್ನು ಅಗಲಿದ ಪ್ರೇಮಿಗಳ ಬಿಸಿಯುಸಿರಿನ ಬೆಂಕಿಯಲ್ಲಿ ಒಣಗಿದುವೋ ಎನ್ನುವ ಹಾಗೆ ಉರಿಯುವ ಬೆಂಕಿಯ

ಜ್ವಾಲೆಯಿಂದ ಸುಟ್ಟು
ಕರಿಮುರುಕಾದುವು.

ಕಂ||ಉರಿ ಕೊಳೆ ದೆಸೆಗಾಣದೆ
ದೆಸೆ
ವರಿವರಿದು ಕುಜಂಗಳಂ
ಪಡಲ್ವಡಿಸಿ ಭಯಂ|
ಬೆರಸೊಳರೆ ನೆಗೆದುದಾ ವನ
ಕರಿ ಶರಭ ಕಿಶೋರ
ಕಂಠಗರ್ಜನೆ ಬನದೊಳ್||
೯೧||

ಪದ್ಯ-೯೧:ಪದವಿಭಾಗ-ಅರ್ಥ:ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ(ಬೆಂಕಿಯು ಆಕ್ರಮಿಸಲು ದಿಕ್ಕು ತೋಚದೆ ದಿಕ್ಕುದಿಕ್ಕಿಗೆ ಓಡಿ ಮರಗಳನ್ನು ಕೆಳಗುರುಳಿಸಿ) ಭಯಂ ಬೆರಸು ಒಳರೆ (ಹೆದರಿ ಕೂಗಿಕೊಳ್ಳಲು) ನೆಗೆದುದು (ಚಿಮ್ಮಿ ಹಾರಿದುವು->) ಆ ವನಕರಿ

(ಕಾಡಾನೆ) ಶರಭ ಕಿಶೋರ ಕಂಠಗರ್ಜನೆ ಬನದೊಳ್ (ಕೊರಳ ಗರ್ಜನೆ ಆ ಕಾಡಿನಲ್ಲಿ)

ಪದ್ಯ-೯೧:ಅರ್ಥ: ಬೆಂಕಿಯು ಆಕ್ರಮಿಸಲು ದಿಕ್ಕು ತೋಚದೆ ದಿಕ್ಕುದಿಕ್ಕಿಗೆ ಓಡಿ ಮರಗಳನ್ನು ಕೆಳಗುರುಳಿಸಿ ಹೆದರಿ ಕೂಗಿಕೊಳ್ಳಲು ಕಾಡಾನೆಯ ಶರಭಗಳ ಮರಿಗಳ ಕೊರಳ

ಗರ್ಜನೆ ಆ ಕಾಡಿನಲ್ಲಿ ಚಿಮ್ಮಿ ಹಾರಿದುವು

ಕಂ||ಸಂಗತ

ಧೂಮಾವಳಿಯನಿ

ಭಂಗಳೆ ಗೆತ್ತೊಳಱೆ ಪಾಯ್ದು

ಪೊಗೆ ಪುಗೆ ಕಣ್ಣಂ|

ಸಿಂಗಂಗಳಳುರೆ ಗರ್ಜಿಸಿ

ಲಂಗಿಸಿ ಪುಡಪುಡನೆ ಪುೞ್ಗಿ

ಸತ್ತುವು ಪಲವುಂ|| ೯೨||

ಪದ್ಯ-೯೨:ಪದವಿಭಾಗ-

ಅರ್ಥ:ಸಂಗತ

(ಒಟ್ಟಾಗಿತುಂಬಿದ)
ಧೂಮಾವಳಿಯನು ಇಭಂಗಳೆ
ಗೆತ್ತು (ಆನೆಗಳೆಂದು ಭಾವಿಸಿ)
ಒಳಱಿ (ಕೂಗಿಕೊಳ್ಳಲು)
ಪಾಯ್ದು ಪೊಗೆ ಪುಗೆ ಕಣ್ಣಂ
ಸಿಂಗಂಗಳು ಅಳುರೆ
(ಹೊಗೆಯು ಸಿಂಹಗಳ ಕಣ್ಣಿಗೆ
ಸೇರಲು) ಗರ್ಜಿಸಿ
ಲಂಗಿಸಿ(ನೆಗೆದು) ಪುಡಪುಡನೆ
ಪುಟ್ಟಿಗೆ ಸತ್ತುವು

ಪಲವುಂ(ಬೆಂದು ಸತ್ತವು ಹಲವು)

ಪದ್ಯ-೯೨:ಅರ್ಥ:

ಒಟ್ಟಾಗಿತುಂಬಿದ ಹೊಗೆಯ ಸಮೂಹವನ್ನು ಆನೆಗಳೆಂದು ಭಾವಿಸಿ ಸಿಂಹಗಳು ಕೂಗಿಕೊಂಡವು. ಮೇಲೆ ಹಾಯ್ದು ಹೊಗೆಯು ಕಣ್ಣಿಗೆ ಸೇರಲು ಗರ್ಜನೆಮಾಡಿ ನೆಗೆದು ಪುಡಪುಡನೆ ಸುಟ್ಟು ಸತ್ತುಹೋದವು.

ವ|| ಮತ್ತಮಲ್ಲಿ ಕೆಲವು ಲತಾಗೃಹಂಗಳೊಳಂ ಧಾರಾಗೃಹಂಗಳೊಳಂ-

ವಚನ:ಪದವಿಭಾಗ-

ಅರ್ಥ:ಮತ್ತಂ ಅಲ್ಲಿ ಕೆಲವು ಲತಾಗೃಹಂಗಳೊಳಂ ಧಾರಾಗೃಹಂಗಳೊಳಂ (ನೀರುಸುರಿಯುವ ಮಂಟಪ)-

ವಚನ:ಅರ್ಥ:ವ|| ಅಲ್ಲಿಯ ಕೆಲವು ಬಳ್ಳಿ ಮನೆಯಲ್ಲಿಯೂ

ನೀರುಸುರಿಯುವ

ಮಂಟಪಗಳಲ್ಲಿಯೂ

ಕಂ|| ಒಡನಳುರೆ ಕಿರ್ಚು

ತೋಳಂ

ಸಡಿಲಿಸದಾ ಪ್ರಾಣವಲ್ಲಭರ್

ಪ್ರಾಣಮನಂ|

ದೊಡಗಳೆದರೋಪರೋಪ

ರೊ

ಳೊಡಸಾಯಲ್

ಪಡೆದರಿನ್ನವುಂ ಸಯ್ಪೊಳವೇ||

೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಒಡನೆ ಅಳುರೆ ಕಿರ್ಚು (ಬೆಂಕಿಯು ಒಟ್ಟಿಗೆ ಅಳುರೆ- ಸುಡಲು) ತೋಳಂ ಸಡಿಲಿಸದೆ ಆ ಪ್ರಾಣವಲ್ಲಭರ್ (ಪ್ರಿಯಪ್ರೇಯಸಿಯರು) ಪ್ರಾಣಮನು ಅಂದು ಒಡಗಳೆದರ್ (ಪ್ರಾಣವನ್ನು ಬಿಟ್ಟರು) ಓಪರ್ ಓಪರೊಳ್ ಒಡಸಾಯಲ್ ಪಡೆದರ್(ಪ್ರಿಯರು

ಪ್ರಿಯರೊಡನೆ ಸಾಯುವ ಅದೃಷ್ಟವನ್ನು ಪಡೆದರು) ಇನ್ನವುಂ ಸಯ್ಪು ಒಳವೇ (ದಕ್ಕಿಂತ ಬೇರೆ ಪುಣ್ಯವು ಉಂಟೇ)

ಪದ್ಯ-೯೩:ಅರ್ಥ: .

ಬೆಂಕಿಯು ತಮ್ಮನ್ನು ಒಟ್ಟಿಗೆ ಸುಡಲು ತಮ್ಮ ತೋಳುಗಳನ್ನು ಸಡಿಲಿಸಿದೆ ಆ ಪ್ರಿಯಪ್ರೇಯಸಿಯರು ಜೊತೆಯಲ್ಲಿಯೇ ಪ್ರಾಣವನ್ನು

ಬಿಟ್ಟರು. ಪ್ರಿಯರು ಪ್ರಿಯರೊಡನೆ ಸಾಯುವ ಅದೃಷ್ಟವನ್ನು ಪಡೆದರು. ಇದಕ್ಕಿಂತ ಬೇರೆ ಪುಣ್ಯವು ಉಂಟೇ?

ವ|| ಅಂತು ಖಾಂಡವವನಮೆಲ್ಲಮನನಲಂ ಪ್ರಳಯಕಾಳಾನಳನಂತಳುರ್ದು ಕೊಳೆ ಬಳಸಿ ಬಂದು ಕಾವ ನಾರಾಯಣನ ಸುದರ್ಶನಮೆಂಬ ಚಕ್ರದ

ಕೋಳುಮಂ
ವಿಕ್ರಮಾರ್ಜುನನ
ದಿವ್ಯಾಸ್ತ್ರಂಗಳ
ಕೋಳುಮನಗ್ನಿದೇವನ
ಶಿಖಾಕಳಾಪದ
ಕೋಳುಮನೆಂತಾನುಂ
ಬಂಚಿಸಿ ಬಲೆ ಪಱಿದ
ಕೋಕನಂತೊರ್ವ
ವನಪಾಲಕಂ ಪೋಗಿ
ದೇವೇಂದ್ರನಂ ಕಂಡು-

ವಚನ:ಪದವಿಭಾಗ-ಅರ್ಥ:

ಅಂತು
ಖಾಂಡವವನಮೆಲ್ಲಮನು
ಅನಲಂ
ಪ್ರಳಯಕಾಳಾನಳನಂತೆ
(ಪ್ರಳಯಕಾಲದ
ಬೆಂಕಿಯಂತೆ) ಅಳುರ್ದು
ಕೊಳೆ (ಸುಟ್ಟು ತಿನ್ನಲು) ಬಳಸಿ
ಬಂದು (ಸುತ್ತಲೂ ಬಳಸಿ
ಬಂದು) ಕಾವ ನಾರಾಯಣನ
ಸುದರ್ಶನಮೆಂಬ ಚಕ್ರದ

ಕೋಳುಮಂ (ಬಂಧನವನ್ನು,ಆಕ್ರಮಣವನ್ನೂ) ವಿಕ್ರಮಾರ್ಜುನನ ದಿವ್ಯಾಸ್ತ್ರಂಗಳ ಕೋಳುಮನು ಅಗ್ನಿದೇವನ ಶಿಖಾಕಳಾಪದ ಕೋಳುಮನು ಎಂತಾನುಂ ಬಂಚಿಸಿ (ಹೇಗೋ ವಂಚಿಸಿ) ಬಲೆ ಪಱಿದ ಕೋಕನಂತ (ಬಲೆಯಿಂದ ತಪ್ಪಿಸಿಕೊಂಡ ಕೋಕಪಕ್ಷಿಯಂತೆ) ಓರ್ವ ವನಪಾಲಕಂ ಪೋಗಿ

(ಹೋಗಿ) ದೇವೇಂದ್ರನಂ ಕಂಡು-

ವಚನ:ಅರ್ಥ:|| ಹೀಗೆ ಖಾಂಡವವನವೆಲ್ಲವನ್ನೂ ಅಗ್ನಿಯು ಪ್ರಳಯಕಾಲದ ಬೆಂಕಿಯಂತೆ ಸುಟ್ಟು ತಾನು ಭುಂಜಿಸುತ್ತಿರಲು ಸುತ್ತಲೂ ಬಳಸಿ ಬಂದು ರಕ್ಷಣೆ ಮಾಡುತ್ತಿರುವ ಕೃಷ್ಣನ ಸುದರ್ಶನವೆಂಬ ಚಕ್ರದ ಆಕ್ರಮಣವನ್ನೂ

ವಿಕ್ರಮಾರ್ಜುನನ
ದಿವ್ಯಾಸ್ತ್ರಗಳ ಆಕ್ರಮಣವನ್ನೂ
ಅಗ್ನಿದೇವನ ಜ್ವಾಲೆಗಳ
ಸಮೂಹದ ಆಕ್ರಮಣವನ್ನೂ
ಹೇಗೋ ವಂಚಿಸಿ ಬಲೆಯಿಂದ
ತಪ್ಪಿಸಿಕೊಂಡ
ಕೋಕಪಕ್ಷಿಯಂತೆ ಆ ತೋಟದ
ಕಾವಲುಗಾರನೊಬ್ಬನು
ಹೋಗಿ ದೇವೇಂದ್ರನನ್ನು
ಕಂಡು-

ಮಲ್ಲಿಕಾಮಾಲೆ|| ದೇವ
ಬಿನ್ನಪಮಿಂದು ಖಾಂಡವಮಂ
ಕೃಶಾನು ತಗುಳ್ದು ನಾ
ನಾ ವಿಧಂ ಸುಡೆ
ನೋಡಲಾರದೆ ತಳ್ತ ದೇವರ
ಕಾಪಿನಾಳ್|
ದೇವ ಕಿನ್ನರ ಪನ್ನಗಾವಳಿ
ಮೊಟ್ಟನಪ್ಪಿನಮೆಚ್ಚು ಕೊಂ
ದೇವರೆಂದಱಿದಿರ್ದನೊರ್ವನ
ಗುರ್ವು ಪರ್ವಿರೆ ದೇವರಂ||
೯೪ ||

ಪದ್ಯ-೯೪:ಪದವಿಭಾಗ-ಅರ್ಥ:ದೇವ ಬಿನ್ನಪಮ್ ಇಂದು ಖಾಂಡವಮಂ ಕೃಶಾನು ತಗುಳ್ದು (ಅಗ್ನಿಯು ವ್ಯಾಪಿಸಿ) ನಾನಾ ವಿಧಂ ಸುಡೆ ನೋಡಲಾರದೆ ತಳ್ತ (ಎದುರಿಸಿದ) ದೇವರ ಕಾಪಿನಾಳ್ ದೇವ ಕಿನ್ನರ ಪನ್ನಗ ಆವಳಿ (ಸಮೂಹ) ಮೊಟ್ಟನಪ್ಪಿನಂ (ಮಟ್ಟಸವಾಗುವಂತೆ-

ನಾಶವಾಗುವ ಹಾಗೆ) ಎಚ್ಚು
(ಹೊಡೆದು) ಕೊಂದು,
ಏವರೆಂದು ಅಱಿದಿರ್ದಂ
(ತಿಳಿದಿದ್ದಾನೆ) ಒರ್ವನು
('ಏನು ಮಾಡಬಲ್ಲರವರು'
ಎಂದು ತಿಳಿದ ಒಬ್ಬನು)
ಅಗುರ್ವು (ಭಯವು) ಪರ್ವಿರೆ
(ಹರಡಿರಲು) ದೇವರಂ
(ದೇವಪ್ರಭುವಾದ ನಿಮ್ಮನ್ನು)
ಪದ್ಯ-೯೪:ಅರ್ಥ: ಸ್ವಾಮಿ
ವಿಜ್ಞಾಪನೆ, ಈ ದಿನ

ಖಾಂಡವವನವನ್ನು ಅಗ್ನಿಯು
ವ್ಯಾಪಿಸಿ ನಾನಾ ರೀತಿಯಾಗಿ
ಸುಡಲು ನೋಡಲಾರದೆ
ಎದುರಿಸಿದ ಸ್ವಾಮಿಯ
ಕಾವಲುಗಾರರಾದ ದೇವ
ಕಿನ್ನರ ಪನ್ನಗಾವಳಿಯನ್ನು
ನಾಶವಾಗುವ ಹಾಗೆ ಹೊಡೆದು
ಕೊಂದು ಭಯವು ಹರಡಿರಲು,
ದೇವಪ್ರಭುವಾದ ನಿಮ್ಮನ್ನು
‘ಏನು ಮಾಡಬಲ್ಲರವರು’

ಎಂದು ಅಹಂಕಾರಮಗ್ನನಾದ ಒಬ್ಬನು ತಿಳಿದಿದ್ದಾನೆ.

ಕಂ|| ಎರಡು ರಥಮೊಳವು
ನೋಟ
ಕ್ಕೆರಡಳವನೊಂದು ರಥಮೆ
ತೋಟಿಗೆ ಪಲವಾ|
ಗಿರೆ ಪರಿದು ಕಣ್ಣೊಳಿನ್ನುಂ
ತಿರಿದಪುದುರಿದಪುದು ನಮ್ಮ
ಬನಮೆನಿತನಿತುಂ|| ೯೫ ||

ಪದ್ಯ-೯೫:ಪದವಿಭಾಗ-

ಅರ್ಥ:ಎರಡು ರಥಂ ಒಳವು

ನೋಟಕ್ಕೆ (ನೋಡಲು ಎರಡು ರಥಗಳಿವೆ) ಎರಡಳು ಅವನ ಒಂದು ರಥಮೆ ತೋಟಿಗೆ (ಕಾಳೆಗಕ್ಕೆ) ಪಲವಾಗಿರೆ ಪರಿದು (ಅನೇಕ ರಥವಾಗಿರುವಂತೆ ಹರಿದು) ಕಣ್ಣೊಳ್ ಇನ್ನುಂ ತಿರಿದಪುದು (ಇನ್ನೂ ಕಣ್ಣಿನಲ್ಲಿ ತಿರುಗುತ್ತದೆ), ಉರಿದಪುದು ನಮ್ಮ ಬನಮ್ ಎನಿತನಿತುಂ (ವನವು

ಎಷ್ಟಿತ್ತೋ ಅಷ್ಟೂ ಉರಿಯುತ್ತಿದೆ)

ಪದ್ಯ-೯೫:ಅರ್ಥ: ನೋಡಲು ಎರಡು ರಥಗಳಿವೆ. ಅದರಲ್ಲಿ ಒಂದು ರಥವೇ ಕಾಳೆಗದಲ್ಲಿ ಅನೇಕ ರಥವಾಗಿರುವಂತೆ ಹರಿದು ಇನ್ನೂ ಕಣ್ಣಿನಲ್ಲಿ ತಿರುಗುತ್ತದೆ. ನಮ್ಮ ವನವು ಎಷ್ಟಿತ್ತೋ ಅಷ್ಟೂ ಉರಿಯುತ್ತಿದೆ, ಎಂದು ಕಾವಲುಗಾರನು ಹೇಳಿದನು.

ವ|| ಎಂಬುದುಂ ಪೌಳೋವಿ
ಪತಿ ತನ್ನ ದಿವ್ಯಜ್ಞಾನದೊಳ್
ನೋಡಿ ಚಕ್ರಿಯುಂ
ವಿಕ್ರಮಾರ್ಜುನನುಮಪ್ಪುದನ
ಱದು ಗಜಱ ಗರ್ಜಿಸಿ ವಿಳಯ
ಕಾಳಾಂಬುದದಂತೆ
ಮೊಱಗುಮಂ ಸಿಡಿಲ
ಬಳಗಮನೊಳಕೊಂಡ
ದ್ರೋಣ ಮಹಾದ್ರೋಣ
ಪುಷ್ಕಳಾವರ್ತ
ಸುವರ್ತಕಂಗಳೆಂಬ

ಮುಗಿಲ್ಗಳಂ ಬೆಸಸಿದಾಗಳವು ವಿಂಧ್ಯಾಚಳಕೂಟ ಕೋಟಿಗಳೆ ಕಿೞ್ತೆೞ್ದುಬರ್ಪಂತೆ ಬಂದು ದೆಸೆಗಳೆಲ್ಲಮಂ ಮುಸುಱಿ ಕೞ್ತಲಿಸಿ ಕವಿದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಪೌಳೋಮಿ ಪತಿ (ಇಂದ್ರನು) ತನ್ನ ದಿವ್ಯಜ್ಞಾನದೊಳ್ ನೋಡಿ ಚಕ್ರಿಯುಂ ವಿಕ್ರಮಾರ್ಜುನನುಂ

ಅಪ್ಪುದನು ಅಱಿದು ಗಜಱಿ
ಗರ್ಜಿಸಿ (ಅವರಿಬ್ಬರೂ
ಶ್ರೀಕೃಷ್ಣಾರ್ಜುನರಾಗಿದ್ದುದನ್ನು
ತಿಳಿದು ರೇಗಿ ಗರ್ಜಿಸಿ) ವಿಳಯ
ಕಾಳಾಂಬುದದಂತೆ
(ಪ್ರಳಯಕಾಲದ
ಮೋಡದಂತೆ) ಮೊೞಗುಮಂ
(ಗುಡುಗು) ಸಿಡಿಲ
ಬಳಗಮನು ಒಳಕೊಂಡ (ತನ್ನ
ಬಳಗವನ್ನು ಒಳಗೊಂಡ)
ದ್ರೋಣ ಮಹಾದ್ರೋಣ

ಪುಷ್ಕಳಾವರ್ತ
ಸುವರ್ತಕಂಗಳೆಂಬ
ಮುಗಿಲ್ಗಳಂ ಬೆಸಸಿದಾಗಳು
ಅವು (ಮೋಡಗಲಿಗೆ
ಆಜ್ಞೆಮಾಡಿದಾಗ ಅವು)
ವಿಂಧ್ಯಾಚಳಕೂಟ ಕೋಟಿಗಳೆ
ಕಿಟ್ತೆಟ್ಟುಬರ್ಪಂತೆ ಬಂದು
(ಅವು ವಿಂಧ್ಯಪರ್ವತದ
ಕೋಟ್ಯಂತರ ಶಿಖರಗಳೇ
ಕಿತ್ತೆದ್ದು ಬರುವ ಹಾಗೆ ಬಂದು)
ದೆಸೆಗಳೆಲ್ಲಮಂ ಮುಸುರಿ

ಕಟ್ತಿಲಿಸಿ ಕವಿದು (ದಿಕ್ಕುಗಳೆಲ್ಲವನ್ನೂ ಮುಸುಕಿ ಕತ್ತಲಾಗುವಂತೆ ಕವಿದು)- **ವಚನ:ಅರ್ಥ**:ಎಂದು ಹೇಳಲು ಶಚೀಪತಿಯಾದ ಇಂದ್ರನು ತನ್ನ ದಿವ್ಯಜ್ಞಾನದಿಂದ ನೋಡಿ ಅವರಿಬ್ಬರೂ ಶ್ರೀಕೃಷ್ಣಾರ್ಜುನರಾಗಿದ್ದುದನ್ನು ತಿಳಿದು ರೇಗಿ ಗರ್ಜಿಸಿ ಪ್ರಳಯಕಾಲದ ಮೋಡದಂತೆ

ಗುಡುಗು ಸಿಡಿಲುಗಳ ತನ್ನ ಬಳಗವನ್ನು ಒಳಗೊಂಡ ದ್ರೋಣ, ಮಹಾದ್ರೋಣ, ಪುಷ್ಕಳಾವರ್ತ, ಸಂವರ್ತಕಗಳೆಂಬ ಮೋಡಗಳಿಗೆ ಅಗ್ನಿಯನ್ನು ನಾಶಪಡಿಸಲು ಆಜ್ಞೆಮಾಡಿದನು. ಅವು ವಿಂಧ್ಯಪರ್ವತದ ಕೋಟ್ಯಂತರ ಶಿಖರಗಳೇ ಕಿತ್ತೆದ್ದು ಬರುವ ಹಾಗೆ ಬಂದು

ದಿಕ್ಕುಗಳೆಲ್ಲವನ್ನೂ ಮುಸುಕಿ
ಕತ್ತಲಾಗುವಂತೆ ಕವಿದು-

ಚಂ|| ಕವಿದುವು ಸಪ್ತಸಾಗರ ಜಲಂಗಳೆ ಲೋಕಮನೀಗಳೆಂಬಿನಂ ಕವಿದು ಮುಗಿಲ್ಗಳಲ್ಲಿ ಕರೆಯುತ್ತಿರೆ ಪಾವಕನುರ್ಚುಗೆಟ್ಟಿದೆಂ| ತುವೊ ತೊದಳಾಯ್ತು ದಾನಮೆನೆ ಮಾರುತಬಾಣದೆ ಮೇಘಮಾಲಿಕಾ

ನಿವಹಮನೆಚ್ಚು ಕೂಡೆ ಶರಪಂಜರಮಂ ಪಡೆದಂ ಗುಣಾರ್ಣವಂ|| ೯೬||

ಪದ್ಯ-00:ಪದವಿಭಾಗ-

ಅರ್ಥ:ಕವಿದುವು ಸಪ್ತಸಾಗರ ಜಲಂಗಳೆ ಲೋಕಮನು ಈಗಳೆಂಬಿನಂ (ಲೋಕವನ್ನೆಲ್ಲ ಏಳುಸಾಗರಗಳ ನೀರು ಈಗಲೇ ಮುಚ್ಚಿಕೊಂಡವೊ ಎನ್ನುವ ಹಾಗೆ ಕವಿದು) ಕವಿದು ಮುಗಿಲ್ಗಳು ಅಲ್ಲಿ ಕರೆಯುತ್ತಿರೆ

(ಮಳೆಯನ್ನು ಸುರಿಸುತ್ತಿರಲು,)
ಪಾವಕನು ಉರ್ಕುಗೆಟ್ಟು
ಅದೆಂತುವೊ ತೊದಳಾಯ್ತು
ದಾನಂ ಎನೆ (ಅಗ್ನಿಯು
ಶಕ್ತಿಗುಂದಿ ಅದು ಹೇಗೋ
ದಾನವು ಸುಳ್ಳಾಯಿತು
ಎನ್ನಲು) ಮಾರುತಬಾಣದೆ
(ವಾಯುವ್ಯಾಸ್ತ್ರದಿಂದ)
ಮೇಘಮಾಲಿಕಾ ನಿವಹಮನು
ಎಚ್ಚು (ಮೇಘಮಾಲೆಗಳ
ಸಮೂಹವನ್ನು

ಹೊಡೆದೋಡಿಸಿ) ಕೂಡೆ ಶರಪಂಜರಮಂ ಪಡೆದಂ (ಪಡೆದನು, ಒಂಟುಮಾಡಿದನು) ಗುಣಾರ್ಣವಂ (ತಕ್ಷಣವೇ ಒಂದು ಬಾಣದ ಪಂಜರವನ್ನು ನಿರ್ಮಿಸಿದನು)

ಪದ್ಯ-00:ಅರ್ಥ: ಏಳುಸಾಗರಗಳ ನೀರು ಈಗಲೇ ಎನ್ನುವ ಹಾಗೆ ಲೋಕವನ್ನೆಲ್ಲ ಮೋಡಗಳು

ಕವಿದು ಮಳೆಯನ್ನು
ಸುರಿಸುತ್ತಿರಲು, ಅಗ್ನಿಯು
ಶಕ್ತಿಗುಂದಿ ಹೇಗೋ ದಾನವು
ಸುಳ್ಳಾಯಿತು ಎನ್ನಲು
ಅರ್ಜುನನು
ವಾಯುವ್ಯಾಸ್ತ್ರದಿಂದ
ಮೇಘಮಾಲೆಗಳ
ಸಮೂಹವನ್ನು
ಹೊಡೆದೋಡಿಸಿ ತಕ್ಷಣವೇ
ಒಂದು ಬಾಣದ ಪಂಜರವನ್ನು
ನಿರ್ಮಿಸಿದನು

ವ|| ಅಂತು

ಪುಂಖಾನುಪುಂಖಮಾಗೆ

ಪಾಯ್ವ

ಶರಸಂಧಾನದೊಳೆಡೆವಱಿಯ

ದಂತೆರಡುಂ ಕೆಯ್ಯೊಳ್

ತೋಡುಂ ಬೀಡುಂ

ಕಾಣಲಾಗದಂತಿಸೆ ತುಱುಗಿ

ಕವಿವಂಬಿನ ಮಱಿಯೆ

ಮಱಿಯಂ ಮಾಣಿಸೆ

ದಿವ್ಯಾಸ್ತ್ರಂಗಳಿಂ ನೂಱು

ಯೋಜನದಳವಿಯ

ಖಾಂಡವವನವೆಲ್ಲಮಂ ತಟ್ಟಿ
ಮೆಡಱ ಮಶಕ
ಮಾತ್ರಮಪ್ಪೊಡಂ ಮಿಸುಕಲ್
ಛಿದ್ರಮಿಲ್ಲದಂತಾಗೆ
ಶರಪಂಜರದೊಳ್ ಮುಚ್ಚಿ
ಮುಸುಕಿದಾಗಳಭಿನವ
ಜೀಮೂತವಾಹನನ
ದಿವ್ಯಾಸ್ತ್ರದ ಕೋಳ್ಗಿರಲಾಱದೆ
ಜೀಮೂತಂಗಳೆಲ್ಲಂ
ತೆರಳ್ಚೋಡಿದೊಡಗ್ನಿದೇವನಾ

ವಗೆಯ ಕಿರ್ಚಿನಂತೊಳಗೊಳಗಳುರ್ದು

ವಚನ:ಪದವಿಭಾಗ-ಅರ್ಥ:ಅಂತು ಪುಂಖಾನುಪುಂಖಮಾಗೆ (ಹಾಗೆ ಒಂದರನಂತರ ಒಂದರಮತೆ) ಪಾಯ್ವ ಶರಸಂಧಾನದೊಳು ಎಡೆವಱಿಯದಂತೆ ಎರಡುಂ ಕೆಯ್ಯೊಳ್ ತೋಡುಂ ಬೀಡುಂ ಕಾಣಲಾಗದಂತಿಸೆ ತುಱುಗಿ

ಕವಿವಂಬಿನ ಮಱೆಯೆ
(ಎರಡು ಕೈಗಳಿಂದಲೂ
ತೊಡುವುದು ಬಿಡುವುದು
ಕಾನದಂತೆ ಏಕಪ್ರಕಾರವಾಗಿ
ಪ್ರಯೋಗಮಾಡಿ ಬಾಣಗಳ
ಮಳೆಯಿಂದ) ತುಱುಗಿ
ಕವಿವಂಬಿನ ಮಱೆಯೆ
ಮಱೆಯಂ ಮಾಣಿಸೆ
(ಬಾಣಗಳ ಮಳೆಯಿಂದ
ಮಳೆಯನ್ನು ಅರ್ಜುನನ್ನು
ಮಳೆಯನ್ನು ನಿಲ್ಲಿಸಲು)

ದಿವ್ಯಾಸ್ತ್ರಂಗಳಿಂ ನೂಱು
ಯೋಜನದಳವಿಯ
ಖಾಂಡವವನವೆಲ್ಲಮಂ
ತಟ್ಟಿಂ- ಎಡರ (ದಿವ್ಯಾಸ್ತ್ರದಿಂದ
ನೂರುಯೋಜನವಿಸ್ತಾರವುಳ್ಳ
ಖಾಂಡವವನವೆಲ್ಲವನ್ನೂ
ತಟ್ಟಿಯ ಹಾಗೆ ಹೆಣೆದು)
ಮಶಕ ಮಾತ್ರಮಪ್ಪೊಡಂ
ಮಿಸುಕಲ್
ಛಿದ್ರಮಿಲ್ಲದಂತಾಗೆ
(ಸೊಳ್ಳೆಯಂತಹ ಪ್ರಾಣಿಯೂ

ಚಲಿಸಲು ರಂಧ್ರವಿಲ್ಲದ ಹಾಗೆ)
ಶರಪಂಜರದೊಳ್ ಮುಚ್ಚಿ
ಮುಸುಕಿದ ಆಗಳು ಅಭಿನವ
ಜೀಮೂತವಾಹನನ
(ಅರ್ಜುನನ) ದಿವ್ಯಾಸ್ತ್ರದ
ಕೋಳ್ಗೆ ಇರಲಾಱದೆ
ಜೀಮೂತಂಗಳೆಲ್ಲಂ
(ಮೋಡಗಳೆಲ್ಲವೂ)
ತೆರಳ್ದೋಡಿದೊಡೆ (ಚಲಿಸಿ
ಹೋದಾಗ) ಅಗ್ನಿದೇವನು
ಆವಗೆಯ ಕಿರ್ಚಿನಂತೆ

ಒಳಗೊಳಗಗಳು ಉರ್ದು-
(ಅಗ್ನಿದೇವನು ಕುಂಬಾರರ
ಆವಿಗೆಯ ಬೆಂಕಿಯಂತೆ
ಒಳಗೊಳಗೇ ವ್ಯಾಪಿಸಿ
ಸುಟ್ಟನು-)
ವಚನ:ಅರ್ಥ:ಹಾಗೆ
ಒಂದರನಂತರ ಒಂದರಮತೆ-
ಪುಂಖಾನುಪುಂಖವಾಗಿ
ತೋಡುಬೀಡುಗಳು
ಕಾಣದಷ್ಟು ವೇಗದಿಂದ
ಎರಡು ಕೈಗಳಿಂದಲೂ

ತೊಡುವುದು ಬಿಡುವುದು
ಕಾನದಂತೆ ಏಕಪ್ರಕಾರವಾಗಿ
ಪ್ರಯೋಗಮಾಡಿ ಬಾಣಗಳ
ಮಳೆಯಿಂದ ಮಳೆಯನ್ನು
ಅರ್ಜುನನ್ನು ಮಳೆಯನ್ನು
ನಿಲ್ಲಿಸಿದನು. ದಿವ್ಯಾಸ್ತ್ರದಿಂದ
ನೂರುಯೋಜನವಿಸ್ತಾರವುಳ್ಳ
ಖಾಂಡವವನವೆಲ್ಲವನ್ನೂ
ತಟ್ಟಿಯ ಹಾಗೆ ಹೆಣೆದು
ಸೊಳ್ಳೆಯಂತಹ ಪ್ರಾಣಿಯೂ
ಚಲಿಸಲು ರಂಧ್ರವಿಲ್ಲದ ಹಾಗೆ

ಬಾಣದ ಪಂಜರದಲ್ಲಿ ಮುಚ್ಚಿ ಮುಸುಕಿದನು. ಅಭಿನವ ಜೀಮೂತವಾಹನನಾದ ಅರ್ಜುನನ ದಿವ್ಯಾಸ್ತ್ರದ ಆಕ್ರಮಣವನ್ನು ಸಹಿಸಲಾರದೆ ಮೋಡಗಳೆಲ್ಲವೂ ಚಲಿಸಿ ಹೋದಾಗ ಅಗ್ನಿದೇವನು ಕುಂಬಾರನ ಆವಿಗೆಯ ಬೆಂಕಿಯಂತೆ ಒಳಗೊಳಗೇ ವ್ಯಾಪಿಸಿ ಸುಟ್ಟನು-

ಕಂ|| ವನ ಖಗ ಮೃಗ ವನ ತರು

ವನಚರ ವನ ವನಜ
ನಿವಹಮುಳ್ಳನಿತುಂ ಸೀ|
ರನಿತುಮಣಮುೞಿದುದಿಲ್ಲೆಂ
ಬಿನಮುಂಡಂ ದಹನನಳುರ್ದು
ಖಾಂಡವವನಮಂ|| ೯೭ ||

ಪದ್ಯ-00:ಪದವಿಭಾಗ-ಅರ್ಥ:ವನ ಖಗ ಮೃಗ ವನತರು ವನಚರ ವನ ವನಜ ನಿವಹಮುಳ್ಳ ಅನಿತುಂ (ತಾವರೆಗಳ ಸಮೂಹದಲ್ಲಿ ಅಷ್ಟನ್ನೂ) ಸೀರನಿತುಂ ಅಣಂ

ಉೞಿದುದಿಲ್ಲೆಂಬಿನಂ
ಉಂಡಂ (ಒಂದು ಸಣ್ಣ ಸೀರು
(ಹೇನಿನ ಮೊಟ್ಟೆ)
ಉಳಿಯಲಿಲ್ಲವೆನ್ನುವ ಹಾಗೆ
ಅಗ್ನಿಯು ಉಂಡನು-
ಸುಟ್ಟನು) ದಹನನು
ಅೞುರ್ದು ಖಾಂಡವವನಮಂ
(ದಹನನು-ಅಗ್ನಿಯು
ಖಾಂಡವನವನ್ನೆಲ್ಲ ವ್ಯಾಪಿಸಿ)

ಪದ್ಯ-00:ಅರ್ಥ:

ಕಾಡಿನಪಕ್ಷಿ, ಮೃಗ,

ಕಾಡಿನಮರ, ಪ್ರಾಣಿ, ತಾವರೆಗಳ ಸಮೂಹದಲ್ಲಿ ಒಂದು ಸಣ್ಣ ಸೀರು (ಹೇನಿನ ಮೊಟ್ಟೆ) ಉಳಿಯಲಿಲ್ಲವೆನ್ನುವ ಹಾಗೆ ಅಗ್ನಿಯು ವ್ಯಾಪಿಸಿ ಖಾಂಡವನವನ್ನೆಲ್ಲ ತಿಂದು ಬಿಟ್ಟನು.

<u>ಮಯನ ರಕ್ಷಣೆ</u>

ವ|| ಅಂತಾ ವನಗಹನಮೆಲ್ಲಂ ದಹನಮಯವಾದ

ಪ್ರಸ್ತಾವದೊಳ್ ವಿಸ್ಮಯಮಾಗೆಮಯನೆಂಬ ದಾನವವಿಶ್ವಕರ್ಮಂ ನೆಗೆದುರಿವುರಿಮಾಲೆಗಳಂ ಗದೆಯೊಳ್ ಬೀಸುತ್ತುಂ ಪೊಱಮಡೆ ಪೊಱಮಡಲೀಯದೆ-

ವಚನ:ಪದವಿಭಾಗ-

ಅರ್ಥ:ಅಂತು ಆ ವನಗಹನಮೆಲ್ಲಂ ದಹನಮಯವಾದ

ಪ್ರಸ್ತಾವದೊಳ್ (ಹಾಗೆ ಆ
ವನಪ್ರದೇಶವೆಲ್ಲ ಉರಿಗೆ
ಸುಡುವ ಸಂದರ್ಭದಲ್ಲಿ)
ವಿಸ್ಮಯಮಂ ಆಗೆ
ಮಯನೆಂಬ ದಾನವ
ವಿಶ್ವಕರ್ಮಂ ನೆಗೆದು
(ಆಶ್ಚರ್ಯವಾಗುವ ಹಾಗೆ
ಮಯನೆಂಬ ರಾಕ್ಷಸ ಶಿಲ್ಪಿಯು
ಮೇಲೆದ್ದು ಹಾರಿ)
ಉರಿವುರಿಮಾಲೆಗಳಂ
ಗದೆಯೊಳ್ ಬೀಸುತ್ತುಂ

ಪೊಱಮಡೆ (ಚಿಮ್ಮುತ್ತಿದ್ದ ಜ್ವಾಲೆಗಳ ಸಮೂಹಗಳನ್ನು ತನ್ನ ಗದೆಯಿಂದ ಬೀಸುತ್ತ ಹೊರಗೆ ಬಂದನು)
ಪೊಱಮಡಲು ಈಯದೆ-

ವಚನ:ಅರ್ಥ:ಹಾಗೆ ಆ ವನಪ್ರದೇಶವೆಲ್ಲ ಉರಿಗೆ ಸುಡುವ ಸಂದರ್ಭದಲ್ಲಿ ಆಶ್ಚರ್ಯವಾಗುವ ಹಾಗೆ ಮಯನೆಂಬ ರಾಕ್ಷಸ ಶಿಲ್ಪಿಯು ಮೇಲೆದ್ದು ಹಾರಿ ಚಿಮ್ಮುತ್ತಿದ್ದ

ಜ್ವಾಲೆಗಳ ಸಮೂಹಗಳನ್ನು ತನ್ನ ಗದೆಯಿಂದ ಬೀಸುತ್ತ ಹೊರಗೆ ಬಂದನು. ಅದಕ್ಕೆ ಅವಕಾಶಕೊಡದೆ-

ಕಂ|| ಒಂದು ದೆಸೆಯೊಳ್
ತಗುಳ್ವ ಮು
ಕುಂದನ ಕರಚಕ್ರಮೊಂದು
ದೆಸೆಯೊಳ್ ನರನೆ|
ಚ್ಚೊಂದು ಶರಮೊಂದು
ದೆಸೆಯೊಳ್

ಕುಂದದೆ ದಹನಾರ್ಚಿ ಸುತ್ತಿ ಮುತ್ತುವ ಪದದೊಳ್|| ೯೮ ||

ಪದ್ಯ-೯೮:ಪದವಿಭಾಗ-ಅರ್ಥ:ಒಂದು ದೆಸೆಯೊಳ್ ತಗುಳ್ವ ಮುಕುಂದನ ಕರಚಕ್ರಂ ಒಂದು (ಕೃಷ್ಣನ ಕಯ್ಯಿನ ಸುದರ್ಶನಚಕ್ರವೂ) ಒಂದು ದೆಸೆಯೊಳ್ ನರನು ಎಚ್ಚ ಒಂದು ಶರಂ (ಮತ್ತೊಂದು ಕಡೆ ಅರ್ಜುನನು ಹೊಡಿದ ಬಾಣವೂ) ಒಂದು

ದೆಸೆಯೊಳ್ ಕುಂದದೆ ದಹನಾರ್ಚಿ(ಕಡಿಮೆಯಾಗದ ಉರಿಯ ಜ್ವಾಲೆ) ಸುತ್ತಿ ಮುತ್ತುವ ಪದದೊಳ್(ಸುತ್ತಿ ಮುತ್ತುವ ಸಮಯದಲ್ಲಿ.)

ಪದ್ಯ-೯೮:ಅರ್ಥ: ಒಂದು ಕಡೆ ಅಟ್ಟಿಬರುವ ಕೃಷ್ಣನ ಕಯ್ಯಿನ ಸುದರ್ಶನಚಕ್ರ, ಮತ್ತೊಂದು ಕಡೆ ಅರ್ಜುನನು ಹೂಡಿದ ಬಾಣ ಮತ್ತೊಂದೆಡೆಯಲ್ಲಿ ಸ್ವಲ್ಪವೂ

ಕಡಿಮೆಯಾಗದ ಉರಿಯ ಜ್ವಾಲೆ, ಸುತ್ತಿ ಮುತ್ತುವ ಸಮಯದಲ್ಲಿ.

ಕಂ||ಶರಣಕ್ಕೆನಗರಿಕೇಸರಿ ಯೆರಡು ಪದಾಂಬುಜಮುಮೀಗಳೆಂಬು ದಮಾಗಳ್|
ಹರಿ ಚಕ್ರಂ ಕೊಳ್ಳದೆ ನರ ಶರಮುರ್ಚದೆ ದಹನಶಿಖೆಗಳಳುರದೆ ಅವನಂ|| ೯೯||

ಪದ್ಯ-೯೯:ಪದವಿಭಾಗ-ಅರ್ಥ: ಶರಣಕ್ಕೆ ಎನಗೆ ಅರಿಕೇಸರಿಯ ಎರಡು ಪದಾಂಬುಜಮುಂ (ಪಾದಕಮಲಗಳನ್ನು) ಈಗಳ್ ಎಂಬುದಂ (ಈಗ ಶರಣು ಬಂದಿದ್ದೇನೆ ನನಗೆ ರಕ್ಷೆ, ಎಂದಾಗ) ಆಗಳ್ ಹರಿ ಚಕ್ರಂ ಕೊಳ್ಳದೆ ನರಶರಂ ಉರ್ಚದೆ ದಹನಶಿಖೆಗಳಳು ಉರದೆ ಅವನಂ

(ಅರ್ಜುನನ ಬಾಣಗಳು ಬೇಸಲಿಲ್ಲ. ಅಗ್ನಿಜ್ವಾಲೆಗಳು ಅವನನ್ನು ಸುಡಲಿಲ್ಲ.)

ಪದ್ಯ-೯೯:ಅರ್ಥ:ತಕ್ಷಣವೇ ಮಯನು ‘ಅರ್ಜುನನ ಎರಡು ಪಾದಕಮಲಗಳನ್ನು ಈಗ ಶರಣು ಬಂದಿದ್ದೇನೆ ನನಗೆ ರಕ್ಷೆ, ಎಂದಾಗ ಒಡನೆಯೇ ಕೃಷ್ಣನ ಸುದರ್ಶನವು ಪ್ರಯೋಗವಾಗದೆ ನಿಂತಿತು. ಅರ್ಜುನನ ಬಾಣಗಳು

ಬೇಸಲಿಲ್ಲ. ಅಗ್ನಿಜ್ವಾಲೆಗಳು
ಅವನನ್ನು ಸುಡಲಿಲ್ಲ.

ವ|| ಆಗಳ್ ಮಯಂ ವಿಸ್ಮಯಂಬಟ್ಟು ಪೊಡವಟ್ಟು ಪೋದನಾಗಳಾ ವನಾಂತರಾಳದೊಳಿರ್ಪ ತಕ್ಷಕನ ಮಗನಪ್ಪಶ್ವಸೇನನೆಂಬ ಪನ್ನಗಂ ತನ್ನ ತಾಯಂ ತನ್ನ ಬಾಲಮಂ ಕರ್ಚಲ್ವೇೞ್ದು ದಹನಾರ್ಚಿಗಳಿಂ ಬರ್ದುಂಕಿ ನೆಗೆದು

ಪಾಱುವಾಗಳದನೆರಟ್ಟಿಂಡಮ

ಪ್ಪಿನಮಾಖಂಡಳ

ತನಯನಿಸುವುದುಂ ತನ್ನ

ಬಾಲಂಬೆರಸುರಿಯೊಳ್ ಬಿಣ್ದು

ಮಿಡುಮಿಡುಮಿಡುಕುತಿರ್ದ

ಜನನಿಯಂ ಕಂಡು

ಪಾವುಗಳುಳ್ಳ ಪಗೆಯಂ

ಮರೆಯವೆಂಬುದಂ

ನನ್ನಿಮಾಡಿ-

ವಚನ:ಪದವಿಭಾಗ-

ಅರ್ಥ:ಆಗಳ್ ಮಯಂ

ವಿಸ್ಮಯಂಬಟ್ಟು ಪೊಡವಟ್ಟು (ಆಶ್ಚರ್ಯಪಟ್ಟು ನಮಸ್ಕಾರ ಮಾಡಿ) ಪೋದನಾಗಳು ಆ ವನಾಂತರಾಳದೊಳು ಇರ್ಪ ತಕ್ಷಕನ ಮಗನಪ್ಪ ಅಶ್ವಸೇನನೆಂಬ ಪನ್ನಗಂ(ಆ ಕಾಡಿನ ಮಧ್ಯದಲ್ಲಿದ್ದ ತಕ್ಷಕನ ಮಗನಾದ ಅಶ್ವಸೇನನೆಂಬ ಹಾವು) ತನ್ನ ತಾಯಂ ತನ್ನ ಬಾಲಮಂ ಕರ್ಚಲ್ವೇೞ್ದು (ಕಚ್ಚಿಕೊಳ್ಳುವಂತೆ ಹೇಳಿ)

ದಹನಾರ್ಚಿಗಳಿಂ ಬರ್ದುಂಕಿ ನೆಗೆದು (ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಂಡು ಬದುಕಿ ನೆಗೆದು) ಪಾಱುವಾಗಳ್ ಅದನು ಎರಟ್ಬಿಂಡಮಪ್ಪಿನಂ (ಅರ್ಜುನನು ಎರಡುತುಂಡಾಗುತ್ತಿರಲು-ಹಾಗೆ ಹೊಡೆದನು.) ಆಖಂಡಳ ತನಯನು ಇಸುವುದುಂ ತನ್ನ ಬಾಲಂಬೆರಸು ಉರಿಯೊಳ್

ಬಿಟ್ಟು (ತನ್ನ ಬಾಲದೊಡನೆ
ಬೆಂಕಿಯಲ್ಲಿ ಬಿದ್ದು)
ಮಿಡುಮಿಡುಮಿಡುಕುತ್ತಿರ್ದ
ಜನನಿಯಂ ಕಂಡು,
ಪಾವುಗಳು ಉಳ್ಳ ಪಗೆಯಂ
ಮರೆಯವೆಂಬುದಂ
ನನ್ನಿಮಾಡಿ (ಹಾವುಗಳು
ತಮ್ಮಲ್ಲಿರುವ ದ್ವೇಷವನ್ನು
ಮರೆಯುವುದಿಲ್ಲ ಎಂಬುದನ್ನು
ಸತ್ಯವನ್ನಾಗಿ ಮಾಡುವಂತೆ)-

ವಚನ:ಅರ್ಥ:ಮಯನು ಆಶ್ಚರ್ಯಪಟ್ಟು ನಮಸ್ಕಾರ ಮಾಡಿ ಹೊರಟು ಹೋದನು. ಆಗ ಆ ಕಾಡಿನ ಮಧ್ಯದಲ್ಲಿದ್ದ ತಕ್ಷಕನ ಮಗನಾದ ಅಶ್ವಸೇನನೆಂಬ ಹಾವು ತನ್ನ ತಾಯಿಯನ್ನು ತನ್ನ ಬಾಲವನ್ನು ಕಚ್ಚಿಕೊಳ್ಳುವಂತೆ ಹೇಳಿ ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಂಡು ಬದುಕಿ ನೆಗೆದು ಹಾರುವಾಗ ಅದನ್ನು

ಇಂದ್ರನಂದನನಾದ ಅರ್ಜುನನು ಎರಡುತುಂಡಾಗುವ ಹಾಗೆ ಹೊಡೆದನು. ಬಾಲದೊಡನೆ ಬೆಂಕಿಯಲ್ಲಿ ಬಿದ್ದು ಮಿಡುಮಿಡುಕುತ್ತಿದ್ದ ತನ್ನ ತಾಯಿಯನ್ನು ಕಂಡು ಕೆರಳಿತು. ಹಾವುಗಳು ತಮ್ಮಲ್ಲಿರುವ ದ್ವೇಷವನ್ನು ಮರೆಯುವುದಿಲ್ಲ ಎಂಬುದನ್ನು ಸತ್ಯವನ್ನಾಗಿ ಮಾಡುವಂತೆ-

ಕಂ|| ಪಗೆ ಸಾಱುವುದುಂ
ಕೊಲ್ಲೆಂ
ಪಗೆ ಸಾಱಿದ ನಿನ್ನನಾರ
ಮರೆಯಂ ಪೊಕ್ಕುಂ|
ಪಗೆಯಂ ನೆಱಪೆನೆ ನೆಱಪುವ
ಬಗೆಯೊಳೆ ಪೊಕ್ಕಂ ಕಡಂಗಿ
ಕರ್ಣನ ದೊಣೆಯಂ|| ೧೦೦ ||

ಪದ್ಯ-೧೦೦:ಪದವಿಭಾಗ-ಅರ್ಥ:ಪಗೆ ಸಾಱುವುದುಂ (ಶತ್ರುತ್ವವನ್ನು ಸಾರಿ ಹೇಳಲು) ಕೊಲ್ಲೆಂ ಪಗೆ ಸಾಱಿದ ನಿನ್ನನು

(ದ್ವೇಷವನ್ನು ಸಾರಿದ ನಿನ್ನನ್ನು ಕೊಲ್ಲುವುದಿಲ್ಲ) ಆರ ಮರೆಯಂ ಪೊಕ್ಕುಂ ಪಗೆಯಂ ನೆಱಪು ಎನೆ (ಯಾರ ಆಶ್ರಯವನ್ನಾದರೂ ಪಡೆದು ದ್ವೇಷವನ್ನು ತೀರಿಸು’) ನೆಱಪುವ ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯಂ (ಅದನ್ನು ನೆರವೇರಿಸುವ ಮನಸ್ಸಿನಿಂದ ಕೋಪಿಸಿಕೊಂಡು ಕರ್ಣನ

ಬತ್ತಳಿಕೆಯನ್ನು ಪ್ರವೇಶಿಸಿದನು- ಸರ್ಪ)

ಪದ್ಯ-೧೦೦:ಅರ್ಥ: ತನ್ನ ಶತ್ರುತ್ವವನ್ನು ಸಾರಿ ಹೇಳಲು ಅರ್ಜುನನು ಅದನ್ನು ಕುರಿತು 'ದ್ವೇಷವನ್ನು ಸಾರಿದ ನಿನ್ನನ್ನು ಕೊಲ್ಲುವುದಿಲ್ಲ. ಯಾರ ಆಶ್ರಯವನ್ನಾದರೂ ಪಡೆದು ದ್ವೇಷವನ್ನು ತೀರಿಸು' ಎಂದನು. ಅದನ್ನು ಪೂರೈಸುವ ಮನಸ್ಸಿನಿಂದ

ಕೋಪಿಸಿಕೊಂಡು ಕರ್ಣನ ಬತ್ತಳಿಕೆಯನ್ನು ಸೇರಿದನು

ವ|| ಅಂತಶ್ವಸೇನನರ್ಧಾವಲಿಕಮೆಂಬಮೋಘಾಸ್ತ್ರಮಾಗಿ ಕರ್ಣನ ದೊಣೆಯೊಳಿರ್ದನಿತ್ತ ಖಾಂಡವವನದೊಳಗೆ ಮಂದಪಾಲನೆಂಬ ಮುನಿಗಮೊಂದು ಲಾವಗೆಗಂ ಪುಟ್ಟಿದ ನಾಲ್ಕುಂ ಲಾವಗೆಗಳಗ್ನಿಸೂಕ್ತಂಗಳನೋದುತ್ತುಮದಿರದಿದಿರಂ ಬರೆ ಮೆಚ್ಚಿ ಬರವನಗ್ನಿದೇವಂ ಬೇಡಿಕೊಳ್ಳಿಮೆಂದೊಡೆಮ್ಮನ್ವಯಕ್ಕೆ ನೀನ್ ತಣ್ಣಿದೆಯಾಗೆಂದು ಬೇಡುವುದುಂ ತದಸ್ತುವೆಂದನಿತ್ತಲಿಂದ್ರಂ ತನ್ನ ಬಲಮೆಲ್ಲಮಳ್ಕಿಮೆಳ್ಕಿ ದಂತಾದುದೆಂಬುದಂ ಕೇಳ್ದು-

ವಚನ:ಪದವಿಭಾಗ-ಅರ್ಥ:ಅಂತು ಅಶ್ವಸೇನನು ಅರ್ಧಾವಲಿಕಮೆಂಬ ಅಮೋಘಾಸ್ತ್ರಮಾಗಿ ಕರ್ಣನ ದೊಣೆಯೊಳ್ ಇರ್ದನು (ಕರ್ಣನ ಬತ್ತಳಿಕೆಯಲ್ಲಿದ್ದನು)

ಇತ್ತ ಖಾಂಡವವನದೊಳಗೆ ಮಂದಪಾಲನೆಂಬ ಮುನಿಗಂ ಒಂದು ಲಾವಗೆಗಂ ಪುಟ್ಟಿದ ನಾಲ್ಕುಂ ಲಾವಗೆಗಳು (ಒಂದು ಲಾವುಕಪಕ್ಷಿಗೂ ಹುಟ್ಟಿದ ನಾಲ್ಕು ಲಾವುಕಹಕ್ಕಿಗಳು) ಅಗ್ನಿಸೂಕ್ತಂಗಳನು ಓದುತ್ತುಂ ಅದು ಇರದೆ ಇದಿರಂ ಬರೆ ಮೆಚ್ಚಿ ಬರವನಗ್ನಿದೇವಂ (ಎದುರಾಗಿ ಬರಲು ಅವುಗಳ ಬರುವಿಕೆಗೆ ಸಂತೋಷಪಟ್ಟು

ಅಗ್ನಿದೇವನು) ಬೇಡಿಕೊಳ್ಳಿಂ
ಎಂದೊಡೆ ಎಮ್ಮನ್ವಯಕ್ಕೆ
ನೀನ್ ತಣ್ಣಿದೆಯಾಗೆಂದು
ಬೇಡುವುದುಂ (‘ನಮ್ಮ
ವಂಶಕ್ಕೆ ನೀನು
ಹಿತವಂತನಾಗು’ ಎಂದು
ಬೇಡಿಕೊಂಡವು)
ತದಸ್ತುವೆಂದುಂ (ಹಾಗೆಯೇ
ಆಗಲಿ ಎಂದು ವರವನ್ನು
ಕೊಟ್ಟನು) ಇತ್ತಲಿಂದ್ರಂ ತನ್ನ
ಬಲಮೆಲ್ಲಂ ಅಳ್ಕಿಮೆಳ್ಕಿ

ದಂತಾದುದೆಂಬುದಂ ಕೇಳ್ದು (ಇಂದ್ರನು ತನ್ನ ಬಲವೆಲ್ಲ ನಾಶವಾಗಿ ಸಾರಿಸಿದಂತಾಯಿತೆಂಬುದನ್ನು ಕೇಳಿ)-

ವಚನ:ಅರ್ಥ:ಹಾಗೆ ಅಶ್ವಸೇನನು ಅರ್ಧಾವಲೀಕವೆಂಬ ಅಮೋಘವಾದ ಬಾಣವಾಗಿ ಕರ್ಣನ ಬತ್ತಳಿಕೆಯಲ್ಲಿದ್ದನು. ಈ ಕಡೆ ಖಾಂಡವವನದಲ್ಲಿ

ಮದನಪಾಲನೆಂಬ ಋಷಿಗೂ ಒಂದು ಲಾವುಕಪಕ್ಷಿಗೂ ಹುಟ್ಟಿದ ನಾಲ್ಕು ಲಾವುಕಹಕ್ಕಿಗಳು ಅಗ್ನಿಸೂತ್ರಮಂತ್ರಗಳನ್ನು ಜಪಿಸುತ್ತ ಬೆಂಕಿಗೆ ಹೆದರದೆ ಎದುರಾಗಿ ಬರಲು ಅವುಗಳ ಬರುವಿಕೆಗೆ ಸಂತೋಷಪಟ್ಟು ಅಗ್ನಿದೇವನು (ನಿಮಗೆ ಬೇಕಾದ) ವರವನ್ನು ಕೇಳಿಕೊಳ್ಳಿ ಎನ್ನಲು 'ನಮ್ಮ

ವಂಶಕ್ಕೆ ನೀನು ಹಿತವಂತನಾಗು’ ಎಂದು ಬೇಡಿಕೊಂಡವು. ಅಗ್ನಿಯು ಹಾಗೆಯೇ ಆಗಲಿ ಎಂದು ವರವನ್ನು ಕೊಟ್ಟನು. ಈ ಕಡೆ ಇಂದ್ರನು ತನ್ನ ಬಲವೆಲ್ಲ ನಾಶವಾಗಿ ಸಾರಿಸಿದಂತಾಯಿತೆಂಬುದನ್ನು ಕೇಳ್ದಿ- (ಕೇಳಿದನು. ಆಗ)

ಚಂ|| ಮಗನೆನಗೆಂದು ಪೇೞ

ಪಿಡಿದು ಕಟ್ಟದೆ ಮಾಣ್ಬೆನೆ

ಪಾರ್ಥನಂ ಧರಿ
ತ್ರಿಗೆ ಗುರುವೆಂದು
ವಜ್ರದೊಳುರುಳ್ಚದೆ ಮಾಣ್ಬೆನೆ
ಚಕ್ರಿಯಂ ಕರಂ|
ಬಗೆಯದೆ ಗೊಡ್ಡಮಾಡಿದರ್ಗೆ
ತಕ್ಕುದನೀಗಳೆ ಮಾೞ್ಪೆನೆಂದು
ತೊ
ಟ್ಟಗೆ ಪೊಱಮಟ್ಟನೇಱಿ
ನಿಜವಾಹನಮಂ ದಿವದಿಂ
ಸುರಾಪಂ|| ೧೦೧||

ಪದ್ಯ-೧೦೧:ಪದವಿಭಾಗ-ಅರ್ಥ:ಮಗನು ಎನಗೆಂದು ಪೇಟಿ ಪಿಡಿದು ಕಟ್ಟದೆ ಮಾಣ್ಬೆನೆ ಪಾರ್ಥನಂ (ನನ್ನ ಮಗನೆಂದು ಅರ್ಜುನನನ್ನು ಹಿಡಿದು ಕಟ್ಟದೆ ಬಿಡುತ್ತೇನೆಯೇ?) ಧರಿತ್ರಿಗೆ ಗುರುವೆಂದು ವಜ್ರದೊಳು ಉರುಳ್ಚದೆ ಮಾಣ್ಬೆನೆ ಚಕ್ರಿಯಂ (ಲೋಕಗುರುವೆಂದು

ಕೃಷ್ಣನನ್ನು ವಜ್ರಾಯುಧದಿಂದ ಉರುಳಿಸದೆ ಬಿಡುತ್ತೇನೆಯೇ?) ಕರಂ ಬಗೆಯದೆ ಗೊಡ್ಡಮಾಡಿದರ್ಗೆ (ನನ್ನನ್ನು ಸ್ವಲ್ಪವೂ ಲಕ್ಷಿಸದೆ ಚೇಷ್ಟೆಮಾಡಿದವರಿಗೆ/ ಕೈಲಾಗದ ನಪುಂಸಕನನ್ನು ಮಾಡಿದವರಿಗೆ) ತಕ್ಕುದನು ಈಗಳೆ ಮಾೞ್ಪೆನೆಂದು (ತಕ್ಕದ್ದನ್ನು ಈಗಲೇ ಮಾಡುತ್ತೇನೆ' ಎಂದು)

ತೊಟ್ಟಗೆ ಪೊಱಮಟ್ಟನೇಱಿ ನಿಜವಾಹನಮಂ ದಿವದಿಂ ಸುರಾಪಂ(ತಟ್ಟನೆ ದೇವೇಂದ್ರನು ತನ್ನ ವಾಹನವಾದ ಐರಾವತವನ್ನು ಹತ್ತಿ ಸ್ವರ್ಗದಿಂದ ಹೊರಟನು)

ಪದ್ಯ-೧೦೧:ಅರ್ಥ: ‘ನನ್ನ ಮಗನೆಂದು ಅರ್ಜುನನನ್ನು ಹಿಡಿದು ಕಟ್ಟದೆ ಬಿಡುತ್ತೇನೆಯೇ? ಲೋಕಗುರುವೆಂದು ಕೃಷ್ಣನನ್ನು

ವಜ್ರಾಯುಧದಿಂದ
ಉರುಳಿಸದೆ ಬಿಡುತ್ತೇನೆಯೇ?
ನನ್ನನ್ನು ಸ್ವಲ್ಪವೂ ಲಕ್ಷಿಸದೆ
ಚೇಷ್ಟೆಮಾಡಿದವರಿಗೆ
ತಕ್ಕದ್ದನ್ನು ಈಗಲೇ
ಮಾಡುತ್ತೇನೆ' ಎಂದು ಇದ್ದಕ್ಕಿದ್ದ
ಹಾಗೆ ದೇವೇಂದ್ರನು ತನ್ನ
ವಾಹನವಾದ ಐರಾವತವನ್ನು
ಹತ್ತಿ ಸ್ವರ್ಗದಿಂದ ಹೊರಟನು.

ವ|| ಅಂತು ದೇವನಿಕಾಯಂ ಬೆರಸು ಯುದ್ಧಸನ್ನದ್ಧನಾಗಿ

ಪರಸೈನ್ಯ

ಭೈರವನೊಳಿಱಿವೆನೆಂಬ

ಪಱುವಗೆಯೊಳ್

ಭೈರವಂಬಾಯ್ವಂತೆ ಬಂದು

ನಿಂದ ಪುರಂದರನಲ್ಲಿಗೆ

ಸರಸಿಜಸಂಭವಂ ಬಂದು

ಮಾರ್ಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು

ದೇವನಿಕಾಯಂ

ಬೆರಸು(ದೇವತೆಗಳ

ಸಮೂಹವನ್ನು
ಕೂಡಿಕೊಂಡು)
ಯುದ್ಧಸನ್ನದ್ಧನಾಗಿ ಪರಸೈನ್ಯ
ಭೈರವನೊಳು ಅಱಿವೆನೆಂಬ
ಪೞುವಗೆಯೊಳ್
(ಅರ್ಜುನನೊಡನೆ ಯುದ್ಧ
ಮಾಡುತ್ತೇನೆಂಬ
ಕೆಟ್ಟಮನಸ್ಸಿನಿಂದ-
ಪೞುವಗೆಯೊಳ್ :ಪಳು-ಕೆಟ್ಟ
ಹಗೆಯೊಳು)
ಭೈರವಂಬಾಯ್ತುಂತೆ

(ಭೈರವನು ನುಗ್ಗುವಹಾಗೆ)
ಬಂದು ನಿಂದ
ಪುರಂದರನಲ್ಲಿಗೆ
ಸರಸಿಜಸಂಭವಂ (ಇಂದ್ರನ
ಹತ್ತಿರಕ್ಕೆ ಬ್ರಹ್ಮನು) ಬಂದು
ಮಾರ್ಕೊಂಡು (ಎದುರು
ನಿಂತು)-
ವಚನ:ಅರ್ಥ:ದೇವತೆಗಳ
ಸಮೂಹವನ್ನು ಕೂಡಿಕೊಂಡು
ಯುದ್ಧಕ್ಕೆ ಸಿದ್ಧನಾಗಿ
ಅರ್ಜುನನೊಡನೆ ಯುದ್ಧ

ಮಾಡುತ್ತೇನೆಂಬ ಕೆಟ್ಟಮನಸ್ಸಿನಿಂದ ಭೈರವನು ನುಗ್ಗುವ ಹಾಗೆ ಬಂದು ನಿಂತ ಇಂದ್ರನ ಹತ್ತಿರಕ್ಕೆ ಬ್ರಹ್ಮನು ಬಂದು ಅವನನ್ನು ತಡೆದು ಎದುರು ನಿಂತು-

ಚಂ|| ಬನಮನೆ
ಕಾಯಲೆಂದಿಱಿವೆಯಪ್ಪೊಡೆ
ಮುನ್ನಮೆ ಪೋದುದಂದು ಪಾ
ರ್ಥನೊಳೆನಗೇವಮೆಂಬ
ಬಗೆಯುಳ್ಳೊಡೆ ನಿನ್ನಯ

ಪುತ್ರನಚ್ಯುತಂ|
ಗಿನಿಸೆರ್ದೆ
ನೋವೆಯಪ್ಪೊಡದು ಕೂಡದು
ಮೂವರೊಳೊರ್ವನೆಮ್ಮ ಮಾ
ತಿನಿತೆ ಗುಣಾರ್ಣವಂಗೆ ಕುಡು
ಗೆಲ್ಲಮನಿಂತಿದೆ ಕಜ್ಜದುಜ್ಜುಗಂ||
೧೦೨ ||

ಪದ್ಯ-೧೦೨:ಪದವಿಭಾಗ-ಅರ್ಥ:ಬನಮನೆ (ವನವನೆ-ವನವನ್ನು) ಕಾಯಲೆಂದು ಇಱಿವೆಯಪ್ಪೊಡೆ

(ಇರಿಯುವುದಾದರೆ-
ಯುದ್ಧಮಾಡುವುದಾದರೆ)
ಮುನ್ನಮೆ ಪೋದುದಂದು
(ಅದು ಮೊದಲೇ
ನಾಶವಾಗಿದೆ) ಪಾರ್ಥನೊಳು
ಎನಗೇವಮೆಂಬ
ಬಗೆಯುಳ್ಳೊಡೆ (ಪಾರ್ಥನಲ್ಲಿ
ನಿನಗೆ
ದ್ವೇಷವಿದೆಯೆನ್ನುವುದಾದರೆ)
ನಿನ್ನಯ ಪುತ್ರನು ಅಚ್ಯುತಂಗೆ
ಇನಿಸು

ಎರ್ದೆನೋವೆಯಪ್ಪೊಡದು
ಕೂಡದು (ಎದೆನೋವು-
ಕೋಪ ಇರುವುದಾದರೆ ಅದು
ಕೂಡದು) ಮೂವರೊಳು
ಒರ್ವನು ಎಮ್ಮ (ಅವನು
ನಮ್ಮ ತ್ರಿಮೂರ್ತಿಗಳಲ್ಲೊಬ್ಬ)
ಮಾತು ಇನಿತೆ (ನಮ್ಮ
ಮಾತಿಷ್ಟೆ) ಗುಣಾರ್ಣವಂಗೆ
ಕುಡು ಗೆಲ್ಲಮನು ಇಂತಿದೆ
ಕಜ್ಜದ ಉಜ್ಜುಗಂ (ಈಗ

ಮಾಡಬೇಕಾದ
ಕಾರ್ಯವಿಷ್ಟೆ)|
ಪದ್ಯ-೧೦೨:ಅರ್ಥ: “ನೀನು ವನವನ್ನು ರಕ್ಷಿಸುವುದಕ್ಕಾಗಿ ಯುದ್ಧಮಾಡುವುದಾದರೆ ಅದು ಮೊದಲೇ ನಾಶವಾಗಿದೆ. ಪಾರ್ಥನಲ್ಲಿ ನಿನಗೆ ದ್ವೇಷವಿದೆಯೆನ್ನುವುದಾದರೆ ಅವನು ನಿನ್ನ ಮಗ; ಕೃಷ್ಣನ ವಿಷಯದಲ್ಲಿ ಹೃದಯವೇದನೆ (ಕೋಪ)ಯಿರುವುದಾದರೆ

ಅದು ಕೂಡದು. ಅವನು ತ್ರಿಮೂರ್ತಿಗಳಲ್ಲೊಬ್ಬ, ನಮ್ಮ ಮಾತಿಷ್ಟೆ ; ಗುಣಾರ್ಣವನಾದ ಅರ್ಜುನನಿಗೆ ಜಯವನ್ನು ಕೊಡು. ಈಗ ಮಾಡಬೇಕಾದ ಕಾರ್ಯವಿಷ್ಟೆ."

ವ|| ಎಂದು ಕಮಲಾಸನನಾಸೆದೋಱೆ ನುಡಿದುಳ್ಳುದನೆ ನುಡಿದೊಡಂತೆಗೆಯ್ವೆನೆಂದು-

ವಚನ:ಪದವಿಭಾಗ-ಅರ್ಥ:ಎಂದು ಕಮಲಾಸನನು ಆಸೆದೋಱೆ ನುಡಿದು (ಆಸೆ-ಕರ್ತವ್ಯವನ್ನು ತೋರಲು) ಉಳ್ಳುದನೆ ನುಡಿದೊಡೆ (ಇರುವುದನ್ನು ಇದ್ದಹಾಗೆ ಹೇಳಲು) ಅಂತೆಗೆಯ್ವೆನೆಂದು (ಹಾಗೆ ಮಾಡುವೆನೆಂದು)-

ವಚನ:ಅರ್ಥ: ಎಂದು ಬ್ರಹ್ಮನು ಮಾಡಬೇಕಾದ ಕರ್ತವ್ಯವನ್ನು ತೋರಿಸಲು,

ಇರುವುದನ್ನು ಇದ್ದಹಾಗೆ ಹೇಳಲು, ಇಂದ್ರನು ಹಾಗೆ ಮಾಡುವೆನೆಂದು-

ಚಂ|| ಸುರಿವರಲೊಂದು ಬೆಳ್ಸರಿಯದಾತ್ಮತನೂಭವನು ತ್ತಮಾಂಗದೊಳ್
ದೊರೆಕೊಳೆ ನಿಲ್ಲದಲ್ಲಿ ಕುಸುಮಂ ಕೆಲವಲ್ಲುಗೆ ತನ್ನ ರತ್ನವಿ|
ಸುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿ

ನಾಮಮಂ ಸರಸದಿನಾಗಳುಚ್ಚರಿಸಿ ಸಾಹಸಮಂ ಪೊಗಳ್ದಿಂ ಸುರಾಧಿಪಂ|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ಸುರಿವ ಅರಲ್ ಒಂದು ಬೆಳ್ಸರಿಯದ ಆತ್ಮತನೂಭವನ ಉತ್ತಮಾಂಗದೊಳ್ ದೊರೆಕೊಳೆ (ಸುರಿಯುತ್ತಿರುವ ಹೂಗಳು -ಧಾರಾಕಾರವಾಗಿ ಬಿಳಿಯದಾರೆಯಾಗಿ,-ತನ್ನ

ಮಗನಾದ ಅರ್ಜುನನ
ತಲೆಯ ಮೇಲೆ-: ತನ್ನ
ಮಗನಾದ ಅರ್ಜುನನ
ತಲೆಯ ಮೇಲೆ
ಧಾರಾಕಾರವಾಗಿ
ಸುರಿಯುತ್ತಿರುವ ಹೂಗಳು)
ನಿಲ್ಲದಲ್ಲಿ ಕುಸುಮಂ ಕೆಲವು
ಅಲ್ಲುಗೆ (ನಿಲ್ಲದೆ ಅಲ್ಲಿ
ಬೀಳುತ್ತಿರಲು) ತನ್ನ
ರತ್ನವಿಸುರಿತ ಕಿರೀಟಮಂ
ಕವಿದು ತಾನೆ (ಇಂದ್ರನು ತಾನೇ

ರತ್ನಕಾಂತಿಯಿಂದ ಕೂಡಿದ
ತನ್ನ ಕಿರೀಟವನ್ನು ಅರ್ಜುನನ
ತಲೆಯ ಮೇಲಿಟ್ಟು) ನರಂಗೆ
ಕಿರೀಟಿ ನಾಮಮಂ ಸರಸದಿಂ
ಆಗಳು ಉಚ್ಚರಿಸಿ
(ಅರ್ಜುನನಿಗೆ ‘ಕಿರೀಟಿ’ ಎಂಬ
ಹೆಸರನ್ನು ಸರಸವಾಗಿ ಇಟ್ಟು)
ಸಾಹಸಮಂ ಪೊಗಳ್ದಿಂ
ಸುರಾಧಿಪಂ (ಇಂದ್ರನು ಅವನ
ಸಾಹಸವನ್ನು ಹೊಗಳಿದನು)

ಪದ್ಯ-೧೦೩:ಅರ್ಥ: ತನ್ನ ಮಗನಾದ ಅರ್ಜುನನ ತಲೆಯ ಮೇಲೆ ಧಾರಾಕಾರವಾಗಿ ಸುರಿಯುತ್ತಿರುವ ಹೂಗಳು ಆ ಸ್ಥಳದಲ್ಲಿಯೇ ನಿಲ್ಲದೆ ಅಲ್ಲಿ ಬೀಳುತ್ತಿರಲು ಇಂದ್ರನು ತಾನೇ ರತ್ನಕಾಂತಿಯಿಂದ ಕೂಡಿದ ತನ್ನ ಕಿರೀಟವನ್ನು ಅರ್ಜುನನ ತಲೆಯ ಮೇಲಿಟ್ಟು ಅರ್ಜುನನಿಗೆ ‘ಕಿರೀಟಿ’ ಎಂಬ

ಹೆಸರನ್ನು ಸರಸವಾಗಿ ಇಟ್ಟು
ಅವನ ಸಾಹಸವನ್ನು
ಹೊಗಳಿದನು

ವ|| ಅಂತು ಪೊಗೞ್ದು ಖಾಂಡವವನದಹನದೊಳಾದ ಪೊಗೆಯೊಳಮಲ್ಲಿಯ ಮಹಾನಾಗಂಗಳ ವಿಷಂಬೆರಸು ಸುಯ್ವ ಸುಯ್ಯ ಪೊಗೆಯೊಳಂ ಕಱಂಗಿ ಕಟ್ಟಿದ ಮೆಯ್ಯುಮಂ ಪ್ರಚಂಡ ಗಾಂಡೀವ

ವ್ಯಾಘಾತದೊಳಿಂದ್ರನೀಲಂಗ
ಳನಡಸಿದಂತಪ್ಪ
ಮುಂಗೆಯ್ಯುಮುಂ ಕಂಡು
ಕೃಷ್ಣನೆಂಬ ಪೆಸರನಿಟ್ಟನಾಗಳ್
ಬ್ರಹ್ಮಂ ಬ್ರಹ್ಮಾಯುವಕ್ಕೆಂದು
ಪರಸಿದನೀಶ್ವರಂ
ನೀನುದಾರಮಹೇಶ್ವರ
ನಪ್ಪುದಱಿಂ ನಿನಗಮೆನಗ
ಮೇತಳಂ ವಿಕಲ್ಪಮುಂ
ವಿಚ್ಛಿನ್ನಮುಮಿಲ್ಲೆಂದನಂತು
ಮೂದೇವರುಂ ಪರಸಿ

ನಿಜನಿವಾಸಂಗಳ್ಗೆ ಪೋದರಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಪೊಗೞ್ದಿ (ಹಾಗೆ ಹೊಗಳಿ) ಖಾಂಡವವನದಹನದೊಳು ಆದ ಪೊಗೆಯೊಳಂ ಅಲ್ಲಿಯ ಮಹಾನಾಗಂಗಳ ವಿಷಂಬೆರಸು ಸುಯ್ವ ಸುಯ್ಯ ಪೊಗೆಯೊಳಂ(ಹೊಗೆಯಿಂದ ಲೂ ಅಲ್ಲಿಯ ಮಹಾಸರ್ಪಗಳ

ವಿಷಮಿಶ್ರವಾಗಿ ಉಸಿರಾಡುವ ಗಾಳಿಯಿಂದಲೂ) ಕಱಂಗಿ ಕಟ್ಗಿದ ಮೆಯ್ಯುಮಂ (ಕಪ್ಪು ಕಪ್ಪಾದಶ ರೀರವನ್ನು) ಪ್ರಚಂಡ ಗಾಂಡೀವ ವ್ಯಾಘಾತದೊಳು ಇಂದ್ರನೀಲಂಗಳನು ಅಡಸಿದಂತಪ್ಪ ಮುಂಗೆಯ್ಯುಮುಂ (ಕಪ್ಪುಕಪ್ಪಾದ ಶರೀರವನ್ನೂ ಮಹಾಶಕ್ತಿಯುಕ್ತವಾದ

ಗಾಂಡೀವದ ಪೆಟ್ಟಿನಿಂದ
ಇಂದ್ರನೀಲರತ್ನಗಳು
ಸೇರಿಕೊಂಡ ಹಾಗಿರುವ
ಮುಂಗಯ್ಯ್ಯನ್ನು) ಕಂಡು
ಕೃಷ್ಣನೆಂಬ ಪೆಸರನಿಟ್ಟನಾಗಳ್
(ಇಂದ್ರನು ಅರ್ಜುನನಿಗೆ
ಕೃಷ್ಣನೆಂಬ ಹೆಸರಿಟ್ಟನು)
ಬ್ರಹ್ಮಂ ಬ್ರಹ್ಮಾಯುವಕ್ಕೆಂದು
(ದೀರ್ಘಾಯುವಾಗಲಿ)
ಪರಸಿದನು, ಈಶ್ವರಂ ನೀನು
ಉದಾರಮಹೇಶ್ವರ

ನಪ್ಪುದೞಿಂ ನಿನಗಂ ಎನಗಂ
ಏತಳಂ ವಿಕಲ್ಪಮುಂ
ವಿಚ್ಛಿನ್ನಮುಂ ಇಲ್ಲೆಂದನು
(ನಿನಗೂ ನನಗೂ
ಯಾವುದರಲ್ಲಿಯೂ
ವ್ಯತ್ಯಾಸವೂ ಭೇದವೂ ಇಲ್ಲ
ಎಂದನು) ಅಂತು
ಮೂದೇವರುಂ ಪರಸಿ
ನಿಜನಿವಾಸಂಗಳ್ಗೆ
ಪೋದರಾಗಳ್ (ಹಾಗೆ
ತ್ರಿಮೂರ್ತಿಗಳೂ

ಅರ್ಜುನನನ್ನು ಹರಸಿ ತಮ್ಮ ವಾಸಸ್ಥಳಗಳಿಗೆ ಹೋದರು)-

ವಚನ:ಅರ್ಥ:ಖಾಂಡವವನ ದಹನದಿಂದುಂಟಾದ ಹೊಗೆಯಿಂದಲೂ ಅಲ್ಲಿಯ ಮಹಾಸರ್ಪಗಳ ವಿಷಮಿಶ್ರವಾಗಿ ಉಸಿರಾಡುವ ಗಾಳಿಯಿಂದಲೂ ಕಪ್ಪುಕಪ್ಪಾದ ಶರೀರವನ್ನೂ ಮಹಾಶಕ್ತಿಯುಕ್ತವಾದ ಗಾಂಡೀವದ ಪೆಟ್ಟಿನಿಂದ

ಇಂದ್ರನೀಲರತ್ನಗಳು
ಸೇರಿಕೊಂಡ ಹಾಗಿರುವ
ಮುಂಗಯ್ಯನ್ನೂ ಕಂಡು
ಇಂದ್ರನು ಅರ್ಜುನನಿಗೆ
ಕೃಷ್ಣನೆಂಬ ಹೆಸರಿಟ್ಟನು.
ಬ್ರಹ್ಮನು ನಿನಗೆ
ದೀರ್ಘಾಯುವಾಗಲಿ ಎಂದು
ಹರಸಿದನು. ಈಶ್ವರನು ನೀನು
ಉದಾರಮಹೇಶ್ವರನಾಗಿರುವು
ದರಿಂದ ನಿನಗೂ ನನಗೂ
ಯಾವುದರಲ್ಲಿಯೂ

ವ್ಯತ್ಯಾಸವೂ ಭೇದವೂ ಇಲ್ಲ ಎಂದನು. ಹಾಗೆ ತ್ರಿಮೂರ್ತಿಗಳೂ ಅರ್ಜುನನನ್ನು ಹರಸಿ ತಮ್ಮ ವಾಸಸ್ಥಳಗಳಿಗೆ ಹೋದರು

ಚಂ|| ಅನಿತಿನಿತೆನ್ನದಾಂತ ಸುರ ಪನ್ನಗ ಕಿನ್ನರ ಸೈನ್ಯಮೆಲ್ಲಮಂ ಬಿನ ಮೊನೆಯೊಳ್ ಪಡಲ್ವಡೆ ಲತಾಭವನಂ ಕೃತಕಾಚಳಂಗಳೆಂ

ಬಿನಿತುಮವಜ್ಗೆ ತಜ್ಗೆ ನುಡಿಯಂ ನುಡಿದಂತೆ ನೆಗಳ್ಚಿಲಗ್ನಿದೇ ವನನಮರೇಂದ್ರನಂದನಮ ನೂಡಿದನಂದಮರೇಂದ್ರನಂದ ನಂ|| ೧೦೪||

ಪದ್ಯ-೧೦೪:ಪದವಿಭಾಗ-ಅರ್ಥ:ಅನಿತಿನಿತೆನ್ನದೆ ಆಂತ ಸುರ ಪನ್ನಗ ಕಿನ್ನರ ಸೈನ್ಯಮೆಲ್ಲಂ (ಅಷ್ಟಿಷ್ಟೆನ್ನದೆ ಪ್ರತಿಭಟಿಸಿದ ದೇವತೆಗಳ

ನಾಗರರ ಕಿನ್ನರರ
ಸೈನ್ಯವೆಲ್ಲವನ್ನೂ) ಅಂಬಿನ
ಮೊನೆಯೊಳ್ ಪಡಲ್ವಡೆ (ನ್ನ
ಬಾಣದ ಹೊಡೆತಕ್ಕೆ ಸಿಕ್ಕಿಸಿ
ಚೆಲ್ಲಾಪಿಲ್ಲಿಯಾಗಿ
ಕೆಳಗುರುಳಲು) ಲತಾಭವನಂ
ಕೃತಕಾಚಳಂಗಳ್ ಎಂಬಿನಿತುಂ
ಅೞ್ಗಿ ತೞ್ಗೆ (ಕೃತಕಪರ್ವತ
ಎಂಬಿವೆಲ್ಲ ನಾಶವಾಗಿ
ತಗ್ಗಿದರೂ) ನುಡಿಯಂ
ನುಡಿದಂತೆ ನೆಗೞ್ಚಲು

(ಮಾಡಲು) ಅಗ್ನಿದೇವನಂ ಅನಮರೇಂದ್ರ ನಂದನಮಂ ಊಡಿದನು ಅಂದು ಅಮರೇಂದ್ರನಂದನಂ(ಅಗ್ನಿ ದೇವನಿಗೆ ಇಂದ್ರನ ಉದ್ಯಾನವಾದ ಖಾಂಡವವನವನ್ನು ಅರ್ಜುನನು ಉಣಿಸಿದನು)

ಪದ್ಯ-೧೦೪:ಅರ್ಥ:

ಅಪ್ಪಿಪ್ಪೆನ್ನದೆ ಪ್ರತಿಭಟಿಸಿದ ದೇವತೆಗಳ ನಾಗರರ ಕಿನ್ನರರ

ಸೈನ್ಯವೆಲ್ಲವೂ ತನ್ನ ಬಾಣದ
ಹೊಡೆತಕ್ಕೆ ಸಿಕ್ಕಿಸಿ
ಚೆಲ್ಲಾಪಿಲ್ಲಿಯಾಗಿ
ಕೆಳಗುರುಳಲು ಬಳ್ಳಿವನೆ
ಕೃತಕಪರ್ವತ ಎಂಬಿವೆಲ್ಲ
ನಾಶವಾಗಿ ತಗ್ಗಿದರೂ
ತಾನಾಡಿದ ಮಾತನ್ನು
ಉಳಿಸಿಕೊಳ್ಳುವುದಕ್ಕಾಗಿ
ಅಗ್ನಿದೇವನಿಗೆ ಇಂದ್ರನ
ಉದ್ಯಾನವಾದ

ಖಾಂಡವವನವನ್ನು
ಅರ್ಜುನನು ಉಣಿಸಿದನು.

ವ|| ಆಗಳ್ ಸ್ವಾಹಾಂಗನಾನಾಥಂ ಸಂಪೂರ್ಣ ಮನೋರಥನಾಗಿ ಖಟ್ವಾಂಗನೆಂಬರಸನ ಯಜ್ಞದೊಳಾತನ ತಂದ ಘೃತಸಮುದ್ರಮಂ ಕುಡಿದೊಡಾದ ರೋಗಮಿಂದು ಪೋದುದೆಂದು ನೀರೋಗನಾಗಿ

ಮಹಾನುರಾಗಂಬೆರಸು ಪರಸಿ ಪೋದನಾಗಳಿರ್ವರುಮಿಂದ್ರ ಪ್ರಸ್ಥಕ್ಕೆಯ್ದೆವಂದು-

ವಚನ:ಪದವಿಭಾಗ-

ಅರ್ಥ:ಆಗಳ್ ಸ್ವಾಹಾಂಗನಾ ನಾಥಂ (ಅಗ್ನಿ) ಸಂಪೂರ್ಣ ಮನೋರಥನಾಗಿ, ಖಟ್ವಾಂಗನೆಂಬ ಅರಸನ ಯಜ್ಞದೊಳು ಆತನ ತಂದ ಘೃತ ಸಮುದ್ರಮಂ ಕುಡಿದೊಡಾದ

(ಖಟ್ವಾಂಗನೆಂಬ ರಾಜನ
ಯಜ್ಞದಲ್ಲಿ ಅವನು ತಂದಿದ್ದ
ತುಪ್ಪದ ಸಮುದ್ರವನ್ನು
ಕುಡಿದುದರಿಂದ ಉಂಟಾದ)
ರೋಗಮಿಂದು
ಪೋದುದೆಂದು
ನೀರೋಗನಾಗಿ
(ರೋಗರಹಿತನಾಗಿ)
ಮಹಾನುರಾಗಂ ಬೆರಸು
ಪರಸಿ ಪೋದನು
(ಸಂತೋಷದಿಂದು ಕೂಡಿ

ಆಶೀರ್ವದಿಸಿ ಹೋದನು)
ಆಗಳಿರ್ವರುಂ ಇಂದ್ರಪ್ರಸ್ಥಕ್ಕೆ
ಎಯ್ದಿವಂದು
(ಇಂದ್ರಪ್ರಸ್ಥಪಟ್ಟಣಕ್ಕೆ ಬಂದು
ಸೇರಿದರು)-

ವಚನ:ಅರ್ಥ:ಆಗ
ಸ್ವಾಹಾದೇವಿಯ ಪತಿಯಾದ
ಅಗ್ನಿಯು ಇಷ್ಟಾರ್ಥವನ್ನು
ಪೂರ್ಣವಾಗಿ ಪಡೆದವನಾಗಿ
ಖಟ್ವಾಂಗನೆಂಬ ರಾಜನ
ಯಜ್ಞದಲ್ಲಿ ಅವನು ತಂದಿದ್ದ

ತುಪ್ಪದ ಸಮುದ್ರವನ್ನು ಕುಡಿದುದರಿಂದ ಉಂಟಾದ ರೋಗವು ಇಂದು ಪರಿಹಾರವಾಯಿತು ಎಂದು ರೋಗರಹಿತನಾಗಿ ವಿಶೇಷ ಸಂತೋಷದಿಂದು ಕೂಡಿ ಆಶೀರ್ವದಿಸಿ ಹೋದನು. ಆಗ ಕೃಷ್ಣಾರ್ಜುನರಿಬ್ಬರೂ ಇಂದ್ರಪ್ರಸ್ಥಪಟ್ಟಣಕ್ಕೆ ಬಂದು ಸೇರಿದರು.

ಚಂ|| ಇದಿರ್ವರೆ ಧರ್ಮಜಂ
ಬೆರಸು ತನ್ನೊಡವುಟ್ಟಿದರೆಯ್ದೆ
ತಳ್ತು ಕ
ಟ್ಟಿದ ಗುಡಿ ರಂಗವಲ್ಲಿಗಳೆ
ದಾಂಗುಡಿಯಂತಿರೆ ಸೂಸೆ
ಸೇಸೆಯಂ|
ಸುದತಿಯರಿಕ್ಕೆ
ಚಾಮರಮನಂಗನೆಯರ್
ನಿಜಕೀರ್ತಿ ಲೋಕಮಂ
ಪುದಿದಿರೆ ಪೊಕ್ಕನಂದು
ನಿಜಮಂದಿರಮಂ

ಪರಸೈನ್ಯಭೈರವಂ|| ೧೦೫

ಪದ್ಯ-೧೦೫:ಪದವಿಭಾಗ-ಅರ್ಥ:ಇದಿರ್ವರೆ ಧರ್ಮಜಂ ಬೆರಸು ತನ್ನೊಡವುಟ್ಟಿದರು ಎಯ್ದೆ (ಸ್ವಾಗತಕ್ಕೆ ಇದಿರಾಗಿ ಬರಲು) ತಳ್ತು ಕಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ (ದೊಡ್ಡಬಾವುಟದಂತಿರಲು) ಸೂಸೆ ಸೇಸೆಯಂ ಸುದತಿಯರು ಇಕ್ಕೆ (ಸ್ತ್ರೀಯರು

ಅಕ್ಷತೆಗಳನ್ನು ಚೆಲ್ಲುತ್ತಿರಲು)
ಚಾಮರಮನು ಅಂಗನೆಯರ್
ನಿಜಕೀರ್ತಿ ಲೋಕಮಂ
ಪುದಿದಿರೆ (ತನ್ನ ಕೀರ್ತಿಯು
ಲೋಕವನ್ನೆಲ್ಲ
ವ್ಯಾಪಿಸುತ್ತಿರಲು)
ಪೊಕ್ಕನಂದು
ನಿಜಮಂದಿರಮಂ
ಪರಸೈನ್ಯಭೈರವಂ
(ಪರಸೈನ್ಯಭೈರವನಾದ
ಅರ್ಜುನನು ತನ್ನ

ಅರಮನೆಯನ್ನು ಪ್ರವೇಶಿಸಿದನು)

ಪದ್ಯ-೧೦೫:ಅರ್ಥ: ಆಗ ತನ್ನ ಒಡಹುಟ್ಟಿದವರು ಧರ್ಮರಾಯನೊಡಗೂಡಿ ಸ್ವಾಗತಕ್ಕೆ ಇದಿರಾಗಿ ಬರಲು ಕಟ್ಟಿದ ತೋರಣವೂ ಇಟ್ಟ ರಂಗವಲ್ಲಿಯೂ ತನ್ನ ಕೀರ್ತಿಯ ದಾಂಗುಡಿ/ ದೊಡ್ಡಬಾವುಟದಂತಿರಲು ಸ್ತ್ರೀಯರು ಅಕ್ಷತೆಗಳನ್ನು

ಚೆಲ್ಲುತ್ತಿರಲು ಅಂಗನೆಯರು ಚಾಮರವನ್ನು ಬೀಸುತ್ತಿರಲು ತನ್ನ ಕೀರ್ತಿಯು ಲೋಕವನ್ನೆಲ್ಲ ವ್ಯಾಪಿಸುತ್ತಿರಲು ಅಂದು ಪರಸೈನ್ಯಭೈರವನಾದ ಅರ್ಜುನನು ತನ್ನ ಅರಮನೆಯನ್ನು ಪ್ರವೇಶಿಸಿದನು.

ॐ

||ಇದು ವಿವಿಧ ವಿಬುಧಜನವಿನುತ

ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವ
ವಿರಚಿತಮಪ್ಪ ವಿಕ್ರಮಾರ್ಜುನ
ವಿಜಯದೊಳ್
ಪಂಚಮಾಶ್ವಾಸಂ ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ

ಹುಟ್ಟಿದುದೂ ತಿಳಿಯಾದುದೂ ಗಂಭೀರವಾದುದೂ ಆದ ಮಾತುಗಳ ರಚನೆಯಲ್ಲಿ ಚಾತುರ್ಯವನ್ನುಳ್ಳ ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಅಯ್ದನೆಯ ಆಶ್ವಾಸ.||

♦♣♣♣♣♣♣♣♣♣♣♣♣♣♣♣♣♣♣♣♦

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	**5**	6	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ

"https://kn.wikisource.org/w/index.php?title=ಪಂಪಭಾರತ_ಪಂಚಮಾಶ್ವಾಸಂ&oldid=159037" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೦ ಆಗಸ್ಟ್ ೨೦೧೮, ೧೯:೩೭ ರಂದು ಕೊನೆಯಾಗಿ ಸಂಪಾದಿಸಲಾಯಿತು. •
ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಷಷ್ಠಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ಷಷ್ಠಾಶ್ವಾಸಂ

- (XXIX.III.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ.

ಧರ್ಮರಾಯನಿಂದ ರಾಜಸೂಯ ಯಾಗ

ಕಂ||ಶ್ರೀಗೆ ಫಳಂ ಚಾಗಂ ವಾಕ್

ಶ್ರೀಗೆ ಫಳಂ ಸರ್ವಶಾಸ್ತ್ರ ಪರಿಣತಿ ವೀರ|
ಶ್ರೀಗೆ ಫಳಮಾಯವೆಂದಿಂ ತಾಗಳು ಮರಿದೆಸಗಿದಂ ಪರಾಕ್ರಮಧವಳಂ||೧||

ಪದ್ಯ-೧:ಪದವಿಭಾಗ-ಅರ್ಥ:ಶ್ರೀಗೆ ಫಳಂ(ಫಲಮ-ಫಲವು) ಚಾಗಂ (ತ್ಯಾಗವು), ವಾಕ್ ಶ್ರೀಗೆ ಫಳಂ ಸರ್ವಶಾಸ್ತ್ರ ಪರಿಣತಿ (ಫಲವು ಸರ್ವ ಶಾಸ್ತ್ರಜ್ಞಾನ) ವೀರಶ್ರೀಗೆ

(ಶೌರ್ಯಕ್ಕೆ) ಫಳಮ
ಆಯುವೆಂದು ಇಂತು ಆಗಳುಂ
ಅರಿದು ಎಸಗಿದಂ
ಪರಾಕ್ರಮಧವಳಂ (ಶೌರ್ಯಕ್ಕೆ
ಫಲವು ಔಚತ್ಯ ಎಂದು
ಅರ್ಜುನನು ತಿಳಿದು
ನೆಡೆದನು)

:ಪದ್ಯ-೧:ಅರ್ಥ:ಶ್ರೀಗೆ ಫಲವು
ತ್ಯಾಗವು, ವಿದ್ಯೆಗೆ ಸರ್ವಶಾಸ್ತ್ರ
ಪರಿಣತಿ - ಸರ್ವ
ಶಾಸ್ತ್ರಜ್ಞಾನವು ಫಲವು;

ಶೌರ್ಯಕ್ಕೆ ಶೌರ್ಯಕ್ಕೆ ಫಲವು ಔಚತ್ಯ ಎಂದು ಅರ್ಜುನನು ತಿಳಿದು ನೆಡೆದನು.

ವ||ಅಂತು ಖಾಂಡವದಹನ ಪ್ರಪಂಚದಿಂ ಬಳಿಮಾರಾತಿ ವನದಹನ ತೀವ್ರಪ್ರತಾಪ ಗಹನಕ್ಕೆ ಮುನ್ನಮಳ್ಕಿ ಪರಮಂಡಳಿಕರಿತ್ತುಂ ತೆತ್ತು ಬೆಸಕೈಯ್ಯೆ ಕೆಲವು ದಿವಸಮಿರ್ದು

ನಾರಾಯಣನಂ ದ್ವಾರಾವತಿಗೆ ಕಳಿಸಿ-

ವಚನ:ಪದವಿಭಾಗ-

ಅರ್ಥ:ಅಂತು (ಹಾಗೆ) ಖಾಂಡವದಹನ ಪ್ರಪಂಚದಿಂ (ಖಾಂಡವದಹನ ಪ್ರಕರಣದ) ಬಳಿಂ ಆರಾತಿ (ಬಳಿಕ ಶತ್ರುಗಳು) ವನದಹನ ಬಹಳಪ್ರತಾಪ ತೀವ್ರತೆಗೆ ಮುನ್ನಮ್ ಅಳ್ಕಿ (ಮೊದಲೇ ಹೆದರಿ) ಪರಮಂಡಳಿಕರ್

ಇತ್ತುಂ ತೆತ್ತು ಬೆಸಕೈಯ್ಯೆ (ಸಾಮಂತರು ಕಪ್ಪಕಾಣಿಕೆಗಳನ್ನು ಕೊಟ್ಟು ಆಜ್ಞೆಯನ್ನು ಪಾಲಿಸುತ್ತಿರಲು,) ಕೆಲವು ದಿವಸಮಿರ್ದು ನಾರಾಯಣನಂ ದ್ವಾರಾವತಿಗೆ ಕಳಿಸಿ-

ವಚನ:ಅರ್ಥ:ಹಾಗೆ ಖಾಂಡವದಹನ ಪ್ರಕರಣದ ಬಳಿಕ ಶತ್ರುಗಳೆಂಬ ವನದಹನ ಬಹಳಪ್ರತಾಪ ತೀವ್ರತೆಗೆ

ಸಾಮಂತರು
ಕಪ್ಪಕಾಣಿಕೆಗಳನ್ನು ಕೊಟ್ಟು
ಆಜ್ಞೆಯನ್ನು
ಪಾಲಿಸುತ್ತಿರಲು,ಕೆಲವು ದಿವಸ
ಇದ್ದು ಕೃಷ್ಣನನ್ನು ದ್ವಾರಾವತಿಗೆ
ಕಳಿಸಿದನು.-

ಉ||ತುಂಗ ತರಂಗ
ಭಂಗುರಪಯೋಧಿಪರೀತಮ
ಹಾಮಹೀತಳಾ
ಲಿಂಗಿತ ಕೀರ್ತಿಕೇಳ್ದು ಬಡ
ಪಾರ್ವನ ಪುಯ್ಯಲೊರ್ಮೆ

ಕೇಳ್ದನಾ

ವಂಗಮಗುರ್ವು ಪರ್ವೆ

ಜವನೊಳ್ ಸೆರಗಿಲ್ಲದೆ

ಪೋಗಿತಾಗಿ ತಂ

ದಂ ಗಡ ವಿಕ್ರಮಾರ್ಜುನನೆ

ಪಾರ್ವರ ಪಿಳ್ಳೆಯ ಪೋದ

ಜೀವಮಂ||೨||

ಪದ್ಯ-೨:ಪದವಿಭಾಗ-

ಅರ್ಥ:ತುಂಗ ತರಂಗ ಭಂಗುರ

ಪಯೋಧಿ ಪರೀತ (ಎತ್ತದ

ಅಲೆಗಳ ಅಸ್ಥಿರ

ಸಮುದ್ರದಿಂದ ಸುತ್ತುವರಿದ) ಮಹಾಮಹೀತಳ ಆಲಿಂಗಿತ ಕೀರ್ತಿ(ಭೂಮಿಯನ್ನು ಹೊಂದಿದ ಕೀರ್ತಿಯ ಅರ್ಜುನನು) ಕೇಳ್ದು ಬಡ ಪಾರ್ವನ ಪುಯ್ಯಲೊರ್ಮೆ ಕೇಳ್ದನು (ಬಡ ಬ್ರಾಹ್ಮಣನ ಗೋಳನ್ನು ಕೇಳಿದನು.) ಆವಂಗಂ ಅಗುರ್ವು ಪರ್ವೆ (ಯಾವನಿಗೂ ಭಯವು ಹುಟ್ಟಲು) ಜವನೊಳ್

ಸೆರಗಿಲ್ಲದೆ ಪೋಗಿ ತಾಗಿ (ಯಮನಲ್ಲಿಗೆ ಸಹಾಯವಿಲ್ಲದೆ ಹೋಗಿ ಅವನನ್ನು ಎದುರಿಸಿ) ತಂದಂ ಗಡ (ತಂದನು ಅಬ್ಬಾ!) ವಿಕ್ರಮಾರ್ಜುನನೆ ಪಾರ್ವರ ಪಿಳ್ಳೆಯ ಪೋದ ಜೀವಮಂ (ಅರ್ಜುನನು ಯಮನಲ್ಲಿಗೆ ಯಾರ ಸಹಾಯವಿಲ್ಲದೆ ಹೋಗಿ ಅವನನ್ನು ಎದುರಿಸಿ ಆ ಬ್ರಾಹ್ಮಣನ ಮಗನ

ಜೀವವನ್ನು ತಂದನು. ಗಡ-ಅಬ್ಬಾ!)

ಪದ್ಯ-೨:ಅರ್ಥ:ಎತ್ತರದ ಅಲೆಗಳ ಅಸ್ಥಿರ ಸಮುದ್ರದಿಂದ ಸುತ್ತುವರಿದ ಮಹತ್ತಾದ ಭೂಮಿಯನ್ನು ಹೊಂದಿದ ಕೀರ್ತಿಯ ಅರ್ಜುನನು, ಬಡ ಬ್ರಾಹ್ಮಣನ ಗೋಳನ್ನು ಕೇಳಿ ಯಾವನಿಗೂ ಭಯವು ಹುಟ್ಟಲು, ಅರ್ಜುನನು ಯಮನಲ್ಲಿಗೆ

ಯಾರ ಸಹಾಯವಿಲ್ಲದೆ ಹೋಗಿ ಆ ಬ್ರಾಹ್ಮಣನ ಮಗನ ಜೀವವನ್ನು ತಂದನು. ಗಡ-ಅಬ್ಬಾ!

ರಾಕ್ಷಸ ಶಿಲ್ಪಿ ಮಯನಿಂದ ಧರ್ಮರಾಯನಿಗೆ ಅದ್ಭುತವಾದ ಸಭಾಮಂಟಪದ ಕೊಡಿಗೆ

ವ||ಎಂದು ಲೋಕಮೆಲ್ಲಂಪೊಗಳೆ ವಿದ್ವಿಷ್ಟವಿದ್ರಾವ್ರಣನುಂ ಭೀಮ

ಯುಧಿಷ್ಠಿರ ನಕುಳ
ಸಹದೇವರುಮಯ್ವರುಂಬೆರ
ಸೊಂದು
ದಿವಸಮೋಲಗಂಗೊಟ್ಟರೆ
ಧರ್ಮಪುತ್ರನಲ್ಲಿಗೆ ಮಯಂ
ಪಂಚರತ್ನಹಿರಣ್ಮಯಂ
ಚತುರಶ್ರಮೂರುಂ
ಯೋಜನದಳವಿಯ
ಸಭಾಮಂಟಪಮನುನೊಂದು
ಲಕ್ಕ ರಕ್ಕಸವಡೆಯಂ ಪೊತ್ತು
ತರಿಸಿ ತನ್ನ ನಲ್ಮೆಯ ಬಲ್ಮೆಯಂ

ಮೆರೆಯಲೆಂದು ದೇವಲೋಕದಿಂ ತಂದು ಮುಂದಿಟ್ಟು -

ವಚನ:ಪದವಿಭಾಗ-

ಅರ್ಥ:ಎಂದು ಲೋಕಮೆಲ್ಲಂ ಪೊಗಳೆ ವಿದ್ವಿಷ್ಟವಿದ್ರಾವ್ರಣನುಂ (ಅರ್ಜುನ) ಭೀಮ ಯುಧಿಷ್ಠಿರ ನಕುಳ ಸಹದೇವರುಂ ಅಯ್ವರುಂ ಬೆರಸೊಂದು ದಿವಸಂ ಓಲಗಂಗೊಟ್ಟರೆ

ಧರ್ಮಪುತ್ರನಲ್ಲಿಗೆ ಮಯಂ
ಪಂಚರತ್ನಹಿರಣ್ಮಯಂ
ಚತುರಶ್ರ ಮೂರುಂ
ಯೋಜನದ ಅಳವಿಯ
ಸಭಾಮಂಟಪಮನುಂ ಒಂದು
ಲಕ್ಕ ರಕ್ಕಸವಡೆಯಂ ಪೊತ್ತು
ತರಿಸಿ ತನ್ನ ನಲ್ಮೆಯ
ಬಲ್ಮೆಯಂ ಮೆರೆಯಲೆಂದು
ದೇವಲೋಕದಿಂ ತಂದು
ಮುಂದಿಟ್ಟು -

ವಚನ:ಅರ್ಥ:(ಹೋದ ಜೀವವನ್ನು ತಂದನು) ಎಂದು ಲೋಕಮೆಲ್ಲವೂ ಹೊಗಳಲು ಅರ್ಜುನ, ಭೀಮ, ಯುಧಿಷ್ಠಿರ, ನಕುಲ, ಸಹದೇವರು ಈ ಅಯ್ವರು ಸೇರಿ ಒಂದು ದಿವಸ ಓಲಗವನ್ನು -ಸಭೆಯನ್ನು ನೆಡೆಸುತ್ತುವಾಗ, ಧರ್ಮಪುತ್ರನಲ್ಲಿಗೆ ಮಯನು ಪಂಚರತ್ನ ಹಿರಣ್ಮಯಂ ಚತುರಶ್ರ-ಚಚ್ಚೌಕವಾದ

ಮೂರುಂ ಯೋಜನದ ಅಳತೆಯ ಸಭಾಮಂಟಪವನ್ನು ಒಂದು ಲಕ್ಷ ರಕ್ಕಸ ವಡೆಯಿಂದ ಹೊರಿಸಿಕೊಂಡು ತರಿಸಿ ತನ್ನ ನಲಿಮೆಯ/ಒಳ್ಳೆಯತನವನ್ನು ಶಕ್ತಿಯನ್ನೂ ಮೆರೆಸಲು ದೇವಲೋಕದಿಂದ ತಂದು ಅವರ ಮುಂದಿಟ್ಟು - (ಮುಂದಿಟ್ಟನು)

ಮ|| ಇದರಂದಂ ಬಸವಂದ
ಮೊಂದಿಟ್ಟು
ತೆರನಲ್ತೆಂತೆಂತೊಡಾರೊಯ್ವು
ಡಿಂ
ತಿದರೊಳ್
ದಿವ್ಯಸರೋವರಂಗಳಿದರೊಳ್
ಕಲ್ಪಾಜ/ವನೀದಂಗಳಿಂ|
ತಿದರೊಳ್ ನಾಟಕಶಾಲೆ
ರಯ್ಯಮಿದರೊಳ್
ದೇವಾಪ್ಸರೋನೃತ್ಯ ವಿಂ

ತಿದರಂತಾಗಿರೆ ನೋಳ್ಪೊಡಾರುಮರಿಯರ್ ಮಾಡಲ್ ಸಭಾಗೇಹಮಂ||೩||

ಪದ್ಯ-೩:ಪದವಿಭಾಗ-

ಅರ್ಥ:ಇದರ ಅಂದಂ ಬಸವಂದಂ (ಇದರ ಸೌಂದರ್ಯ ಆಸ್ಚರ್ಯ-ಅದ್ಭುತವಾದುದು;) ಒಂದಿಟ್ಟು ತೆರನಲ್ತು (ಒಂದೇ ಬಗೆಯದಲ್ಲ,) ಅಂತು ಎಂತೊಡೆ ಆರೊಯ್ವಡೆ

ಇಂತಿದರೊಳ್
ದಿವ್ಯಸರೋವರಂಗಳ್
ಇದರೊಳ್ ಕಲ್ಪಾಜ/
ವನೀದಂಗಳ್ ಇಂತಿದರೊಳ್
ನಾಟಕಶಾಲೆ
ರಯ್ಯುಮಿದರೊಳ್ ದೇವ
ಅಪ್ಸರೋನೃತ್ಯ ಇಂತು
ಇದರಂತಾಗಿರೆ ನೋಳ್ಪೊಡೆ
ಆರುಮರಿಯರ್ (ಆರುಂ
ಅರಿಯರ್) ಮಾಡಲ್

(ಮಾಡವಿಕೆ -ನಿರ್ಮಾಣ)
ಸಭಾಗೇಹಮಂ.

ಪದ್ಯ-೩:ಅರ್ಥ:ಇದರ ಸೌಂದರ್ಯ ಆಸ್ಚರ್ಯ- ಅದ್ಭುತವಾದುದು; ಒಂದೇ ಬಗೆಯದಲ್ಲ, ದಿವ್ಯಸರೋವರಂಗಳೂ ಕಲ್ಪವೃಕ್ಷಗಳೂ, ನಾಟಕಶಾಲೆಯು, ರಮ್ಯತೆಯೂ, ಇದರಲ್ಲಿ ದೇವ ಅಪ್ಸರೆಯರ ನೃತ್ಯ, ಈ

ಸಭಾಮಂಟಪದ ನಿರ್ಮಾಣ ನೊಡಿದಾಗ ಯಾರೂ ಇದರ (ರಹಸ್ಯವನ್ನು) ಅರಿಯದು.

ವ|| ಎಂದೆನ್ನೀ ಪ್ರಾಣಮೆಂಬುದುವಿಕ್ರಮಾರ್ ಜುನನ ದಯೆಗೆಯ್ದು ಪ್ರಾಣಮೆನ್ನ ಕೊಟ್ಟುದರ್ಕೆ ಮಾರ್ಕೊಳ್ಳದೆ ಕೊಳ್ಳಖಿಮೆಂದೊಡಂತೆಗೆಯ್ವೆ ಮೆಮದು ನಿಶ್ಚಯಿಸೆ ಧರ್ಮಪುತ್ರಂಗೋಲಗಂಗುಡ

ಲ್ತಕ್ಕುದೆಂದದಂ ಧರ್ಮಪುತ್ರಂಗೆ ಕೊಟ್ಟು ಪರಾಕ್ರಮಧವಳಂಗೆ ಶಶಾಠಂಕವಿಶದಯಶಮೆತೆರ ಳ್ದುರುಳಿಗೊಂಡಂತಿರ್ದ ಶಂಖಮಂ ಬಾಸಣಿಗೆಗಳೆದು-

ವಚನ:ಪದವಿಭಾಗ-

ಅರ್ಥ:ಎಂದು ಎನ್ನ ಈ ಪ್ರಾಣಮೆಂಬುದು ವಿಕ್ರಮಾರ್ಜುನನ ದಯೆಗೆಯ್ದು ಪ್ರಾಣಮೆನ್ನ(ನನ್ನ ಪ್ರಾಣವು ವಿಕ್ರಮಾರ್ಜುನನು

ದಯೆಯಿಂದ ಕೊಟ್ಟದ್ದು ಎನ್ನ ಪ್ರಾಣವು, ಎಂದು), ಕೊಟ್ಟುದರ್ಕೆ ಮಾರ್ಕೊಳ್ಳದೆ (ಕೊಟ್ಟಿದ್ದನ್ನು ಪ್ರತಿಹೇಳದೆ) ಕೊಳ್ಳಿಂ ಎಂಮೆಂದೊಡೆ ಅಂತೆಗೆಯ್ವೆಮೆಂದು (ಹಾಗೆ ಮಾಡುವೆವೆಂದು) ನಿಶ್ಚಯಿಸೆ ಧರ್ಮಪುತ್ರಂಗೆ ಓಲಗಂಗುಡಲ್ ತಕ್ಕುದೆಂದು ಅದಂ ಧರ್ಮಪುತ್ರಂಗೆ ಕೊಟ್ಟು ಪರಾಕ್ರಮಧವಳಂಗೆ

(ಅರ್ಜುನನಿಗೆ) ಶಶಾಂಕವಿಶದ ಯಶಮೆತ್ತೆರಳ್ದು ಉರುಳಿಗೊಂಡಂತಿರ್ದ ಶಂಖಮಂ (ಚಂದ್ರನಷ್ಟು ದೊಡ್ಡ ಕೀರ್ತಿಯೇ ಸುತ್ತಿಕೊಂಡು ಉಂಡೆಯಂತಿದ್ದ ಶಂಖವನ್ನು) ಬಾಸಣಿಗೆಗಳೆದು (ಅದಕ್ಕೆ ಸುತ್ತಿದ್ದ ಮುಸುಕನ್ನು ತೆಗೆದು ಕೊಟ್ಟನು.)

ವಚನ:ಅರ್ಥ:ಮಯನು, ನನ್ನ ಪ್ರಾಣವು

ವಿಕ್ರಮಾರ್ಜುನನು
ದಯೆಯಿಂದ ಕೊಟ್ಟದ್ದು ಎನ್ನ
ಪ್ರಾಣವು, ಎಂದು,
ಕೊಟ್ಟಿದ್ದನ್ನು ಪ್ರತಿಹೇಳದೆ
ತೆಗೆದುಕೊಳ್ಳಿರಿ ಎಂದನು.
ಹಾಗೆ ಮಾಡುವೆವೆಂದು
ನಿಶ್ಚಯಿಸಿ ತೆಗೆದುಕೊಳ್ಳಲು
ಒಪ್ಪಿದರು. ಧರ್ಮಪುತ್ರನಿಗೆ
ಓಲಗ ನೆಡೆಸಲು ತಕ್ಕುದೆಂದು
ಅದನ್ನು ಧರ್ಮಪುತ್ರನಿಗೆ
ಕೊಟ್ಟು, ಅರ್ಜುನನಿಗೆ,

ಚಂದ್ರನಷ್ಟು ದೊಡ್ಡ
ಕೀರ್ತಿಯೇ ಸುತ್ತಿಕೊಂಡು
ಉಂಡೆಯಂತಿದ್ದ ಶಂಖವನ್ನು
ಅದಕ್ಕೆ ಸುತ್ತಿದ್ದ ಮುಸುಕನ್ನು
ತೆಗೆದು ಮಯನು ಕೊಟ್ಟನು.

**ಕಂ|| ಇದನಿಂದ್ರನಟ್ಟಿದಂ ನಿನ
ಗಿದರ ಪೆಸರ್
ದೇವದತ್ತಮೆಂಬುದು ನಿನಗ|
ಭ್ಯುದಯಕರಂ ಶಂಖಂ ರಿಪು
ಹೃದಯಕವಾಟಪುಟವಿಘಟ
ನಂ ನೋಡರಿಗಾ||೪||**

ಪದ್ಯ-೪:ಪದವಿಭಾಗ-ಅರ್ಥ:ಇದನು ಇಂದ್ರನು ಅಟ್ಟಿದಂ ನಿನಗೆ, (ಇದನ್ನು ನಿನಗಾಗಿ ಇಂದ್ರನು ಕಳುಹಿಸಿಕೊಟ್ಟನು) ಇದರ ಪೆಸರ್ ದೇವದತ್ತಮೆಂಬುದು ನಿನಗೆ ಅಭ್ಯುದಯಕರಂ ಶಂಖಂ ರಿಪು ಹೃದಯ ಕವಾಟ ಪುಟವಿಘಟನಂ (ಶತ್ರುಗಳ ಹೃದಯದ ಬಾಗಿಲನ್ನು

ಒಡೆಯುವುದು) ನೋಡು ಅರಿಗಾ (ಅರ್ಜುನನೇ)

ಪದ್ಯ-೪:ಅರ್ಥ:ಈ ಶಂಖವನ್ನು ನಿನಗಾಗಿ ಇಂದ್ರನು ಕಳುಹಿಸಿಕೊಟ್ಟನು. ಇದರ ಹೆಸರು ದೇವದತ್ತವೆಂದು; ಈ ಶಂಖವು ನಿನಗೆ ಅಭ್ಯುದಯಕರವು , ಶತ್ರುಗಳ ಹೃದಯದ ಬಾಗಿಲನ್ನು ಒಡೆಯುವುದು

ನೋಡು ಅರ್ಜುನನೇ,

ಎಂದನು ಮಯ.

ವ||ಎಂದದಂ

ವಿಕ್ರಮಾರ್ಜುನಂಗೆ ಕೊಟ್ಟು

ಮುನ್ನಂ

ಷೋಡಶರಾಜರೊಳಗೆ

ಮಾಂಧಾತನೆಂಬಂ

ವಿದ್ಯಾಧರನಾತನ ಗದೆಯಿದು

ಬಳಿಯಮಾತನಂ

ಲವಣನೆಂಬಸುರಂ ಕಾದಿ

ಕೊಂದು ಕೊಂಡೊಡಾತನಂ

ರಾಮಚಂದ್ರನ ತಮ್ಮಂ ಶತ್ರುಘ್ನ ಗೆಲ್ದು ತನಗೆ ಕೊಂಡು ಸಮುದ್ರದ ನಡುವಣ ಮೈನಾಕಪರ್ವತದೊಳ್ ಮಡಗಿದೊಡೆನೆನಗಿದಂ ವರುಣದೇವನಿತ್ತನಿಂತಪ್ಪುದು-

ವಚನ:ಪದವಿಭಾಗ-

ಅರ್ಥ:ಎಂದು ಅದಂ ವಿಕ್ರಮಾರ್ಜುನಂಗೆ ಕೊಟ್ಟು ಮುನ್ನಂ ಷೋಡಶರಾಜರೊಳಗೆ

ಮಾಧಾತನೆಂಬಂ
ವಿದ್ಯಾಧರನಾತನ ಗದೆಯಿದು
ಬಳಿಯಂ ಆತನಂ
ಲವಣನೆಂಬ ಅಸುರಂ ಕಾದಿ
ಕೊಂದು ಕೊಂಡೊಡೆ ಆತನಂ
ರಾಮಚಂದ್ರನ ತಮ್ಮಂ
ಶತ್ರುಘ್ನ ಗೆಲ್ದು ತನಗೆ ಕೊಂಡು
ಸಮುದ್ರದ ನಡುವಣ
ಮೈನಾಕಪರ್ವತದೊಳ್
ಮಡಗಿದೊಡೆನೆ ಎಗಿದಂ

ವರುಣದೇವನು ಇತ್ತನು ಇಂತಪ್ಪುದು-
ವಚನ:ಅರ್ಥ:ಎಂದು ಅದನ್ನು ಮಯನು, ಅರ್ಜುನನಿಗೆ ಕೊಟ್ಟು, ಮೊದಲು ಷೋಡಶ(೧೬) ಮಹಾರಾಜರಲ್ಲಿ ಮಾಂಧಾತನೆಂಬವನು ವಿದ್ಯಾಧರನು; ಆತನ ಗದೆಯಿದು; ಬಳಿಕ ಆತನನ್ನು ಲವಣನೆಂಬ ಅಸುರನು

ಯುದ್ಧಮಾಡಿ ಕೊಂದು
ಅದನ್ನು ತೆಗೆದುಕೊಂಡ ನಂತರ
ಆತನನ್ನು ರಾಮಚಂದ್ರನ
ತಮ್ಮನಾದ ಶತ್ರುಘ್ನನು ಗೆದ್ದು
ತಾನೇ ತೆಗೆದುಕೊಂಡು
ಸಮುದ್ರದ ನಡುವಿನ
ಮೈನಾಕಪರ್ವತದಲ್ಲಿ ಇಟ್ಟ
ನಂತರ ತನಗೆ ಅದನ್ನು
ವರುಣದೇವನು ನನಗೆ
ಕೊಟ್ಟನು; ಹೀಗಿದೆ ಇದರ
ವಿಷಯ ಎಂದನು.-

ಕಂ||ಅಧಿಕರಿಪುನೃಪತಿಬಳನವ
ರುಧಿರಜಳಸ್ಫುರಿತ
ರೌದ್ರಮೀಗದೆ ಪೆಸರಿಂ|
ರುಧಿರಮುಖಿಯೆಂಬುದೆಂದದ
ನಧಿಕಬಳಸ್ಥಂಗೆ
ಭೀಮಸೇನಂಗಿತ್ತಂ||೫||

ಪದ್ಯ-೫:ಪದವಿಭಾಗ-

ಅರ್ಥ:ಅಧಿಕ ರಿಪುನೃಪತಿ ಬಳ ನವ ರುಧಿರಜಳ ಸ್ಫುರಿತ (ಈ ಗದೆ ಬಹಳ ಶತ್ರುರಾಜರ ಸೈನ್ಯದ ಹೊಸ

ರಕ್ತಜಲದಿಂದದ ಕೂಡಿಶೋಭಿಸುವ) ರೌದ್ರಮಂ ಈ ಗದೆ ಪೆಸರಿಂ ರುಧಿರಮುಖಿಯೆಂಬುದೆಂದು (ಉದರವಾದ ಈ ಗದೆಯ ಹೆಸರು ರುಧಿರಮುಖಿ ಎಂದು) ಅದನು ಅಧಿಕಬಳಸ್ಥಂಗೆ ಭೀಮಸೇನಂಗೆ ಇತ್ತಂ (ಕೊಟ್ಟನು)

:ಪದ್ಯ-೫:ಅರ್ಥ:ಈ ಗದೆ ಬಹಳ ಶತ್ರುರಾಜರ ಸೈನ್ಯದ

ಹೊಸ ರಕ್ತಜಲದಿಂದದ

ಕೂಡಿಶೋಭಿಸುವ ಇದರ

ಹೆಸರು ರುಧಿರಮುಖಿ

ಎಂಬುದು, ಎಂದು ಹೇಳಿ

ಅದನ್ನು ಅಧಿಕಬಲನಾದ

ಭಿಮಸೇನನಿಗೆ ಕೊಟ್ಟನು.

ವ||ಇಂತಿತ್ತುಬಳಿಯಮವರ

ದಾನಸನ್ಮಾದಿಗಳಿಂ ಮಯಂ

ರಾಗರಸಮಯನಾಗಿ

ಸಂತಸಂಬಟ್ಟು

ಪೋದನಿತ್ತಮತ್ತೊದು

ದಿವಸಮಾ

ಸಭಾಮಂಟಪದೊಳ್

ಧರ್ಮರಾಜಂ ತನ್ನ ನಾಲ್ವರು

ತಮ್ಮಂದಿರೊಡನೆ

ದೇವೇಂದ್ರಲೀಲೆಯಿಂದೋಲ

ಗೊಟ್ಟರೆಯಿರೆ-

ವಚನ:ಪದವಿಭಾಗ-

ಅರ್ಥ:ಇಂತು ಇತ್ತು ಬಳಿಯಂ (ನಂತರ) ಅವರ ದಾನಸನ್ಮಾದಿಗಳಿಂ ಮಯಂ ರಾಗರಸಮಯನಾಗಿ

(ಪ್ರೀತಿಯುಳ್ಳವನಾಗಿ)
ಸಂತಸಂಬಟ್ಟು ಪೋದನು ಇತ್ತ
ಮತ್ತೊಂದು ದಿವಸಂ ಆ
ಸಭಾಮಂಟಪದೊಳ್
ಧರ್ಮರಾಜಂ ತನ್ನ ನಾಲ್ವರು
ತಮ್ಮಂದಿರೊಡನೆ
ದೇವೇಂದ್ರಲೀಲೆಯಿಂದೋಲ
ಗೊಟ್ಟರೆಯಿರೆ-
:ವಚನ:ಅರ್ಥ:ಹೀಗೆಗದೆಯ
ನ್ನು ಕೊಟ್ಟು ಬಳಿಕ ಅವರ
ದಾನಸನ್ಮಾದಿಗಳಿಂದ

ಮಯನು ಅಧಿಕ
ಪ್ರೀತಿಯುಳ್ಳವನಾಗಿ
ಸಂತಸಪಟ್ಟು ಹೋದನು. ಇತ್ತ
ಮತ್ತೊಂದು ದಿವಸ ಆ
ಸಭಾಮಂಟಪದಲ್ಲಿ
ಧರ್ಮರಾಜನು ತನ್ನ ನಾಲ್ವರು
ತಮ್ಮಂದಿರೊಡನೆ
ದೇವೇಂದ್ರನ ಸಭೆಯಂತೆ
ರಾಜಸಭೆಯನ್ನು
ನೆಡೆಸುತ್ತಿರಲು-

<u>ನಾರದರ ಆಗಮನ</u>

ಚಂ||

ಬೆಳಗುಗಳೆಲ್ಲಮೊಂದುರುಳಿ

ಯಾಗಿ

ನಭಸ್ಥಳದಿಂದಮೀಮಹೀ

ತಳಕಿಳಿತರ್ಪುದೆಂದು

ಮನುಜಾಕೃತಿಯೆಂದು

ಮುನೀಂದ್ರನೆಂದು ಕ|

ಣ್ಗೊಳಿಸೆ ಮುನೀಂದ್ರರೊಳ್

ಕಮಳಸಂಬವನಂದನನೆಂದು

ನೋಟಕರ್

ತಳವೆಳಗಾಗೆ ಸಾರೆವರೆ ನೀರದಮಾರ್ಗದಿನಂದುನಾರದಂ ||೬||

ಪದ್ಯ-೬:ಪದವಿಭಾಗ-ಅರ್ಥ:ಬೆಳಗುಗಳೆಲ್ಲಂ ಒಂದುರುಳಿಯಾಗಿ (ಕಾಂತಿಗಳೆಲ್ಲಾ ಸೇರಿ ಒಂದು ಗೋಲವಾಗಿ) ನಭಸ್ಥಳದಿಂದಂ ಈ ಮಹೀತಳಕೆ ಇಳಿತರ್ಪುದು ಎಂದು (ಆಕಾಶದಿಂದ ಈ ಭೂಮಿಗೆ ಇಳಿದು ಬರುತ್ತಿದೆ

ಎಂಬಂತೆ)
ಮನುಜಾಕೃತಿಯೆಂದು
ಮುನೀಂದ್ರನೆಂದು
ಕಣ್ಗೊಳಿಸೆ(ಮಾನವನ
ಆಕಾರವಾಗಿ ಕಣ್ಣಿಗೆ ಕಾಣಲು)
ಮುನೀಂದ್ರರೊಳ್
ಕಮಳಸಂಬವ ನಂದನನೆಂದು
(ಮುನಿಗಳಲ್ಲಿ ಬ್ರಹ್ಮನ ಮಗ
ನಾರದನೆಂದು) ನೋಟಕರ್
ತಳವೆಳಗಾಗೆ (ನೋಡುವವರು
ಚಿಂತಿತರರಾಗಲು) ಸಾರೆವರೆ

ನೀರದಮಾರ್ಗದಿಂ ಅಂದು ನಾರದಂ (ನಾರದನು ಆಕಾಶ ಮಾರ್ಗದಿಂದ ಅಂದು ಸಾರಿಬಂದನು.)

:ಪದ್ಯ-೬:ಅರ್ಥ:ಕಾಂತಿಗಳೆಲ್ಲಾ ಸೇರಿ ಒಂದು ಗೋಲವಾಗಿ ಆಕಾಶದಿಂದ ಈ ಭೂಮಿಗೆ ಇಳಿದು ಬರುತ್ತಿದೆ ಎಂಬಂತೆ ಮಾನವನ ಆಕಾರವಾಗಿ ಕಣ್ಣಿಗೆ ಕಾಣಲು ಮುನಿಗಳಲ್ಲಿ ಬ್ರಹ್ಮನ ಮಗ ನಾರದನೆಂದು

ನೋಡುವವರು ಚಿಂತಿತರರಾಗಲು, ನಾರದನು ಆಕಾಶ ಮಾರ್ಗದಿಂದ ಅಂದು ಸಾರಿ ಅಲ್ಲಿಗೆ ಬಂದನು.

ತರಳ||ಬಳಸಿ ತನ್ನೊಡನೊಯ್ಯನೊಯ್ಯನೆ ಬರ್ಪ ದೇವರದೊಂದು ಗಾ ವುಳಿಯನಿನ್ನಿರಿಮೆಂದು ತನ್ನನೆ ನಿಳ್ಕಿ ನೋಳ್ಪರ ಕಣ್ಗೆ ಕ| ಣ್ಬೊಳಪುತನ್ನಯ ಮೈಯ ಬೆಳ್ಪಿನೊಳಳ್ಪು(ಳ್ದು) ನಿಂದೊಡೆ

ವಾಳೆಮೀನ್
ಪೊಳೆಯೆ ಧಾತ್ರಿಗೆ
ವರ್ಷಗಂಗೆವೊಲೊಪ್ಪಿದಂ
ಮುನಿಪುಂಗವಂ||೭||

ಪದ್ಯ-೭:ಪದವಿಭಾಗ-ಅರ್ಥ:ಬಳಸಿ ತನ್ನೊಡನೆ ಒಯ್ಯನೊಯ್ಯನೆ ಬರ್ಪ ದೇವರದೊಂದು ಗಾವುಳಿಯನು ಇನ್ನಿರಿಮೆಂದು (ಸುತ್ತುವರಿದು ತನ್ನೊಡನೆ ಮೆಲ್ಲಗೆ ಬರುತ್ತಿದ್ದ ದೇವತೆಗಳ

ಗುಂಪನ್ನು ಕುರಿತು, 'ಇನ್ನು ಇಲ್ಲಿಯೇ ಇರಿ' ಎಂದು ಹೇಳಿ) ತನ್ನನೆ ನಿಳ್ಕಿ ನೋಳ್ಪರ ಕಣ್ಗೆ (ತನ್ನನ್ನು ನಿಟ್ಟಿಸಿ ನೋಡುವವರ) ಕಣ್ಬೊಳಪು (ಕಣ್ಣಿನ ಪ್ರಕಾಶ) ತನ್ನಯ ಮೈಯ ಬೆಳ್ಪಿನೊಳಳ್ಪು(ಳ್ದು) ನಿಂದೊಡೆ (ತನ್ನದೇಹದ ಕಾಂತಿಯೊಡನೆ ಸೇರಿ ನಿಂತರೆ) ವಾಳೆಮೀನ್ ಪೊಳೆಯೆ (ಬಾಳೆಮೀನು ಹೊಳೆದಂತೆ

ಕಾಣುವುದು,) ಧಾತ್ರಿಗೆ ವರ್ಪ (-ಬರುವ) ಗಂಗೆವೊಲ್ ಒಪ್ಪಿದಂ ಮುನಿಪುಂಗವಂ (ಹೀಗೆ ಭೂಮಿಗೆ ಇಳಿದು ಬರುತ್ತಿರುವ ಗಂಗೆಯಂತೆ ಮುನಿಪುಂಗವನು ಕಂಡನು)

:ಪದ್ಯ-೭:ಅರ್ಥ:ಸುತ್ತುವರಿದು ತನ್ನೊಡನೆ ಮೆಲ್ಲಗೆ ಬರುತ್ತಿದ್ದ ದೇವತೆಗಳ ಗುಂಪನ್ನು ಕುರಿತು, 'ಇನ್ನು ಇಲ್ಲಿಯೇ ಇರಿ' ಎಂದು ಹೇಳಿ,

ತನ್ನನ್ನು ನಿಟ್ಟಿಸಿ ನೋಡುವವರ ಕಣ್ಣಿನ ಪ್ರಕಾಶ, ತನ್ನ ದೇಹದ ಕಾಂತಿಯೊಡನೆ ಸೇರಿ ನಿಂತರೆ, ಬಾಳೆಮೀನು ಹೊಳೆದಂತೆ ಕಾಣುವುದು; ಹೀಗೆ ಭೂಮಿಗೆ ಇಳಿದು ಬರುತ್ತಿರುವ ಗಂಗೆಯಂತೆ ಮುನಿಪುಂಗವನು ಕಂಡನು.

ವ|| ಅಂತು ಬರ್ಪಾಗಳ್-

:ವಚನ:ಅರ್ಥ:ಹಾಗೆ ಬರುವಾಗ-

ತರಳ|| ಸರಿಗೆಯೊಳ್

ಸಮೆದಕ್ಷಮಾಲಿಕೆ ಪೊನ್ನ

ಮುಂಜಿ ತೊಳಪ್ಪ ಕ

ಪ್ಪುರದ ಭಸ್ಮರಜಸ್ತ್ರೀ

ಪುಂಡ್ರಕಮೊಪ್ಪೆ ಪಿಂಗ ಜಟಾಳಿ

ತಾ|

ವರೆಯ ಸೂತ್ರದೊಳಾದ

ಜನ್ನವಿರಂ ದುಕೂಲದ

ಕೋವಣಂ

ಕರಮೊಡಂಬಡೆ

ನೋಟಕರ್ಕಳನಾ ತಪಸ್ವಿ

ಮರಳ್ಚಿದಂ || ೮ ||

ಪದ್ಯ-೮:ಪದವಿಭಾಗ-

ಅರ್ಥ:ಸರಿಗೆಯೊಳ್ ಸಮೆದ (ಮಾಡಿದ) ಅಕ್ಷಮಾಲಿಕೆ (ಚಿನ್ನದ ತಂತಿಯಲ್ಲಿ ಮಾಡಿದ ಜಪಮಾಲೆ), ಪೊನ್ನ ಮುಂಜಿ (ಹೊನ್ನಿನ ಉಡಿದಾರ) ತೊಳಪ್ಪ ಕಪ್ಪುರದ ಭಸ್ಮರಜಸ್ತ್ರೀ ಪುಂಡ್ರಕಂ ಒಪ್ಪೆ (ಹೊಳೆಯುವ ಪರ್ಪೂರ ಮಿಶ್ರಿತ ಭಸ್ಮದ ಪುಡಿಯ

ಮೂರು ಗೆರೆಗಳು, -ಭಸ್ಮ
ರಜಸ್ತ್ರೀ- ರಜಸ್ -ಪುಡಿ, ತ್ರೀ
ಪುಂಡ್ರಕಂ ಮೂರು ಗೆರಯ
ಲೇಪನ) ಪಿಂಗ ಜಟಾಳಿ
ತಾವರೆಯ ಸೂತ್ರದೊಳಾದ
ಜನ್ನವಿರಂ (ತಾವರೆಯ
ದಂಟಿನ ನಾರಿನಲ್ಲಿ ಮಾಡಿದ
ಜನಿವಾರ) ದುಕೂಲದ
ಕೋವಣಂ (ರೇಷ್ಮೆಯ
ಬಟ್ಟೆಯ ಕೌಪೀನ), ಕರಂ
ಒಡಂಬಡೆ ನೋಟಕರ್ಕಳನು

ಆ ತಪಸ್ವಿ ಮರಳ್ಚಿದಂ (ಬಹಳ ಒಪ್ಪಿತ ವೇಷದಲ್ಲಿ ನೋಡುವವರು ಮೆಚ್ಚುವಂತಿರಲು ಆತಪಸ್ವಿ ನಾರದನು ಜನರನ್ನು ಮರುಳುಮಾಡಿದನು)

:ಪದ್ಯ-೮:ಅರ್ಥ: ಚಿನ್ನದ ತಂತಿಯಲ್ಲಿ ಮಾಡಿದ ಜಪಮಾಲೆ, ಹೊನ್ನಿನ ಉಡಿದಾರ, ಹೊಳೆಯುವ ಪರ್ಪೂರ ಮಿಶ್ರಿತ ಭಸ್ಮದ

ಪುಡಿಯ ಮೂರು ಗೆರೆಗಳು,
-ಭಸ್ಮ ರಜಸ್ತ್ರೀ- ರಜಸ್ -ಪುಡಿ,
ತ್ರೀ ಪುಂಡ್ರಕಂ ಮೂರು
ಗೆರಯ ಲೇಪನ,
ಪಿಂಗಲಬಣ್ಣದ ಜಟೆಗಳು,
ತಾವರೆಯ ದಂಟಿನ ನಾರಿನಲ್ಲಿ
ಮಾಡಿದ ಜನಿವಾರ, ರೇಷ್ಮೆಯ
ಬಟ್ಟೆಯ ಕೌಪೀನ, ಬಹಳ
ಒಪ್ಪಿತ ವೇಷದಲ್ಲಿ
ನೋಡುವವರು
ಮೆಚ್ಚುವಂತಿರಲು ಆತಪಸ್ವಿ

ನಾರದನು ಜನರನ್ನು ಮರುಳುಮಾಡಿದನು.

ಕಂ|| ಬಟ್ಟಗೊಡೆ ಚಂದ್ರಕಾಂತಿಯ ನಟ್ಟುಂಬರಿಗೊಳೆ ಪೊದಳ್ದ ಕೃಷ್ಣಾಜಿನಮೊಂ ದಿಟ್ಟಳಮೆಸೆಯ ಬೆಡಂಗಂ ಪುಟ್ಟಿಸೆ ಗಾಡಿಗಳೊಳೆಸೆವ ವೀಣಾಕ್ಷಣಿತಂ||೯||

ಪದ್ಯ-00:ಪದವಿಭಾಗ-ಅರ್ಥ:ಬಟ್ಟಗೊಡೆ

(ದುಂಡಗಿರುವ ಕೊಡೆ)

ಚಂದ್ರಕಾಂತಿಯನು

ಅಟ್ಟುಂಬರಿಗೊಳೆ ಪೊದಳ್ದ

ಕೃಷ್ಣಾಜಿನಮೊಂದಿ-

ಕೃಷ್ಣಾಜಿನಂ ಒಂದು(ಚಂದ್ರನ

ಕಾಂತಿಯನ್ನು

ಓಡಿಸುವಂತಿರುವ

ಹೊದ್ದಿರುವ/ ಹರಡಿದ

ಕೃಷ್ಣಾಜಿನ) ಒಂದು ಇಟ್ಟಳಂ

ಎಸೆಯ ಬೆಡಂಗಂ ಪುಟ್ಟಿಸೆ

ಗಾಡಿಗಳೊಳು (ಸೊಗಸಾಗಿ

ಎಸೆವ- ತೋರುವ) ಎಸೆವ ವೀಣಾಕ್ಷಣಿತಂ (ವೀಣಾನಾದ) **:ಪದ್ಯ-00:ಅರ್ಥ**: ನಾರದರ ಗಾಡಿ-ಭೂಮಿಕೆ ಲಕ್ಷಣ: ದುಂಡಗಿರುವ ಕೊಡೆ, ಚಂದ್ರನ ಕಾಂತಿಯನ್ನು ಓಡಿಸುವಂತಿರುವ ಹೊದ್ದಿರುವ/ ಹರಡಿದ ಕೃಷ್ಣಾಜಿನ, ಸೊಗಸಾಗಿ ತೋರುವ (ವೀಣಾನಾದ ಮಾಡುತ್ತಿರುವ ನಾರದ.

ಕಂ||ಬೆರಲೊಳ್ ಬೀಣೆಯ

ತಂತಿಗ

ಳೊರಸಿದ

ಕೆಂಗಲೆಗಳಕ್ಷಮಾಲೆಯೊಳೆಸ

ದಂ|

ತಿರೆ ಪೊಸಯೆ ಮುತ್ತು ಪವಳಂ

ಬೆರಸಿದವೊಲಾಯ್ತು

ಚೆನ್ನತಪಸಿಯ ಕೈಯೊಳು||

೧೦||

ಪದ್ಯ-೧೦:ಪದವಿಭಾಗ-

ಅರ್ಥ:ಬೆರಲೊಳ್ ಬೀಣೆಯ

ತಂತಿಗಳು ಒರಸಿದ ಕೆಂಗಲೆಗಳ ಅಕ್ಷಮಾಲೆಯೊಳು ಎಸದಂತಿರೆ ಪೊಸಯೆ ಮುತ್ತು ಪವಳಂ ಬೆರಸಿದವ್ವೊಲಾಯ್ತು ಚೆನ್ನತಪಸಿಯ ಕೈಯೊಳು-

:ಪದ್ಯ-೧೦:ಅರ್ಥ:ಬೆರಳುಗಳಲ್ಲಿ ವೀಣೆಯ ತಂತಿಯನ್ನು ತೀಡಿ ಬಾರಿಸುತ್ತಿರುವ, ಕೆಂಪು ಜಡೆಗಳ, ಜಪಮಾಲೆಯಲ್ಲಿ ಶೋಭಿಸುತ್ತಿರಲು, ಆ ಚೆಂದದ ತಪಸ್ವಿಯ ಕೈಯಲ್ಲಿ ಮುತ್ತು

ಹವಳ ಬೆರೆಸಿದಹಾಗೆ

ಚಂದವಾಯಿತು.

ವ|| ಅಂತಯ ಸಾಕ್ಷಾತ್ ಬ್ರಹ್ಮ

ಬರ್ಪಂತೆ ಬಂದು -

:ವಚನ:ಅರ್ಥ:ಅಂತಯ-

ಹಾಗೆಯೇ ಸಾಕ್ಷಾತ್ ಬ್ರಹ್ಮ

ಬರ್ಪಂತೆ/ಬರುವಂತೆ ಬಂದು -

ಕಂ||

ಅಡಿಯಿಟ್ಟನೆಳೆಯೊಳಿವನೆಂ

ಬೆಡೆಯೊಳ್ ಪರಿಜನ

ಸಮೇತಮಿದಿಳ್ದರಸಂ|

ಪೊಡವಡೆ ತಪಸ್ವಿ ಕೆಯ್ಯಂ ಪಡಿದೆತ್ತಿ ಪಲರ್ಮೆ ಪರಸಿದಂ ಪರಕೆಗಳಂ||೧೧||

ಪದ್ಯ-೧೧:ಪದವಿಭಾಗ-ಅರ್ಥ:ಅಡಿಯಿಟ್ಟನು ಎಳೆಯೊಳು(ಭೂಮಿಯಮೇಲೆ) ಇವನು, ಎಂಬೆಡೆಯೊಳ್ (ಎನ್ನುವಾಗ), ಪರಿಜನ ಸಮೇತಂ ಇದಿರ್ಗ ಅರಸಂ (ಅರಸ ಧರ್ಮಜನು ಸ್ವಾಗತಕ್ಕಾಗಿ

ಎದುರುಗೊಂಡನು)
ಪೊಡವಡೆ (ನಮಸ್ಕರಿಸಲು)
ತಪಸ್ವಿ ಕೆಯ್ಯಂ ಪಿಡಿದೆತ್ತಿ
(ತಪಸ್ವಿ ನಾರದನು ಅವನನ್ನು
ಕೈಹಿಡಿದು ಎತ್ತಿದನು,)
ಪಲರ್ಮೆ ಪರಸಿದಂ
(ಹಲವೊಮ್ಮೆ ಹಲವು
ಹರಕೆಗಳನ್ನು ಹರಸಿದನು.)

:ಪದ್ಯ-೧೧:ಅರ್ಥ:

(ನಾರದನು)
ಭೂಮಿಯಮೇಲೆ ಇವನು

ಕಾಲಿಟ್ಟನು ಎನ್ನುವಾಗ, ಅರಸ ಧರ್ಮಜನು ಸ್ವಾಗತಕ್ಕಾಗಿ ಪರಿಜನ ಸಮೇತ ಎದುರುಗೊಂಡನು. ಅವನು ನಮಸ್ಕರಿಸಲು, ತಪಸ್ವಿ ನಾರದನು ಅವನನ್ನು ಕೈಹಿಡಿದು ಎತ್ತಿದನು, ಹಲವು ಆಶೀರ್ವಾದಗಳನ್ನು ಹರಸಿದನು.

ವ||ಅಂತು ಧರ್ಮಪುತ್ರಂ ಅಬ್ಜಜಪುತ್ರನಂ

ಮುಂದಿಟ್ಟೊಡಗೊಂಡು
ಬಂದು
ಮಣಿಕನಕರಚನವಿಚಿತ್ರವೇತ್ರಾ
ಸನದೊಳಿರಿಸಿ
ಮಹಾರ್ಘ್ಯಗುಣಮಣಿವಿಭೂ
ಷಭಣಂಗೆ ಕನಕಪಾತ್ರದೊಳ್
ಅರ್ಘ್ಯಮೆತ್ತಿ ಕನಕ ಕಳಶ
ಸಂಭೃಶ
ಶುಚಿಜಲಂಗಳಿಂದಮಾ
ಮುನೀಶ್ವರನ ಪಾದಪದ್ಮಮಂ
ಕರ್ಚಿ

ತತ್ಪಾದಪವಿತ್ರೋದಕಗಳಿಂ ಮಹಾಋಷಿಯ ತಳಿದ ಕನಕಕಮಂಡಲುವಿನ ತೀರ್ಥೋದಕಂಗಳಿಂದಯ್ವರುಂ ಪವಿತ್ರೀಕೃತಮಸ್ತಕರಾಗಿರ್ದು ಯುಧಿಷ್ಠಿರಂ ನಾರದಮಹಾಮುನಿಯ ಮೊಗಮಂ ನೋಡಿ -

ವಚನ:ಪದವಿಭಾಗ-

ಅರ್ಥ:ಅಂತು (ಈ

ರೀತಿ)ಧರ್ಮಪುತ್ರಂ ಅಬ್ಜಜಪುತ್ರನಂ (ಕಮಲದಲ್ಲಿ ಹುಟ್ಟಿದ ಬ್ರಹ್ಮನ ಮಗ ನಾರದನನ್ನು) ಮುಂದಿಟ್ಟೊಡಗೊಂಡು ಬಂದು (ಮುಂದೆ ಮಾಡಿಕೊಂಡು ಬಂದು) ಮಣಿಕನಕರಚನವಿಚಿತ್ರ ವೇತ್ರಾಸನದೊಳು ಇರಿಸಿ (ಬೆತ್ತದ ಪೀಠದ ಮೇಲೆ ಕೂರಿಸಿ) ಮಹಾರ್ಘ್ಯ ಗುಣ

ಮಣಿವಿಭೂಷಭಣಂಗೆ
(ನಾರದನಿಗೆ)
ಕನಕಪಾತ್ರದೊಳ್
ಅರ್ಘ್ಯಮೆತ್ತಿ (ಚಿನ್ನದ
ಪಾತ್ರೆಯಲ್ಲಿ ಅರ್ಘ್ಯಕೊಟ್ಟು)
ಕನಕ ಕಳಶ ಸಂಭೃಶ ಶುಚಿ
ಜಲಂಗಳಿಂದಂ ಆ
ಮುನೀಶ್ವರನ ಪಾದಪದ್ಮಮಂ
(ಚಿನ್ನದ ಕಳಶದ ಶುಚಿಯಾದ
ನೀರಿನಲ್ಲಿ ಮುನಿಯ
ಪಾದಕಮಲಗಳನ್ನು) ಕರ್ಚಿ

(ತೊಳೆದು) ತತ್ಪಾದ
ಪವಿತ್ರೋದಕಗಳಿಂ (ಆ
ಪಾದದ ಪವಿತ್ರ
ಪಾದೋದಕಗಳಿಂದ ಮತ್ತು)
ಮಹಾಋಷಿಯ ತಳಿದ
ಕನಕಕಮಂಡಲುವಿನ
ತೀರ್ಥೋದಕಂಗಳಿಂದ
ಅಯ್ವರುಂ (ಮಹಾಋಷಿಯು
ಚಿಮುಕಿಸಿದ ಕೈ ಕಮಂಡಲ
ತೀರ್ಥದ ನೀರಿನಿಂದ ಐದು
ಜನ ಪಾಂಡವರೂ)

ಪವಿತ್ರೀಕೃತಮಸ್ತಕರಾಗಿರ್ದು
(ತಲೆಯ ಮೇಲೆ ಪವಿತ್ರ
ಸಿಂಚನ
ಮಾಡಿಸಿಕೊಂಡವರಾಗಿ-ದರು)
ಯುಧಿಷ್ಠಿರಂ
ನಾರದಮಹಾಮುನಿಯ
ಮೊಗಮಂ ನೋಡಿ
(ಯುಧಿಷ್ಠಿರನು
ನಾರದಮಹಾಮುನಿಯ
ಮುಖವನ್ನು ನೋಡಿ) -

:ವಚನ:ಅರ್ಥ:ಈ ರೀತಿ ಧರ್ಮಪುತ್ರನು ಕಮಲದಲ್ಲಿ ಹುಟ್ಟಿದ ಬ್ರಹ್ಮನ ಮಗ ನಾರದನನ್ನು ಮುಂದಿಟ್ಟೊಡಗೊಂಡು / ಮುಂದೆ ಮಾಡಿಕೊಂಡು ಬಂದು ಮಣಿಕನಕ ರಚನ ವಿಚಿತ್ರವಾದ ಬೆತ್ತದ ಪೀಠದ ಮೇಲೆ ಕೂರಿಸಿ) ಮಹಾರ್ಘ್ಯ ಗುಣ ಮಣಿವಿಭೂಷಭಣನಾದ

ನಾರದನಿಗೆ ಚಿನ್ನದ
ಪಾತ್ರೆಯಲ್ಲಿ ಅರ್ಘ್ಯಕೊಟ್ಟು,
ಚಿನ್ನದ ಕಳಶದ ಶುಚಿಯಾದ
ನೀರಿನಲ್ಲಿ ಮುನಿಯ
ಪಾದಕಮಲಗಳನ್ನು ತೊಳೆದು,
ಆ ಪಾದದ ಪವಿತ್ರ
ಪಾದೋದಕಗಳಿಂದ ಮತ್ತು
ಮಹಾಋಷಿಯು ಚಿಮುಕಿಸಿದ
ಕೈ ಕನಕಕಮಂಡಲ ತೀರ್ಥದ
ನೀರಿನಿಂದ ಐದು ಜನ
ಪಾಂಡವರೂ ತಲೆಯ ಮೇಲೆ

ಪವಿತ್ರ ಸಿಂಚನ
ಮಾಡಿಸಿಕೊಂಡವರಾಗಿ-ದರು.
ಯುಧಿಷ್ಠಿರನು
ನಾರದಮಹಾಮುನಿಯ
ಮುಖವನ್ನು ನೋಡಿ-

ಕಂ|| ಪಡೆದಂ ಬ್ರಹ್ಮ ಜಗಮಂ
ಪಡೆಯಲ್ ತಾನಾರ್ತನಿಲ್ಲ
ಪೆಂಪಂ ನಿಮ್ಮಂ |
ಪಡೆದಲ್ತೆ ಪಡೆದನೆನಿಸಿದ
ಕಡುಪೆಂಪಿನ ಪೊರೆಗೆನೀಮ್
ಮೊದಲಿಗರಾದಿರ್ ||೧೨||

ಪದ್ಯ-೧೨:ಪದವಿಭಾಗ-ಅರ್ಥ:ಪಡೆದಂ ಬ್ರಹ್ಮ ಜಗಮಂ ಪಡೆಯಲ್ ತಾನು ಆರ್ತನಿಲ್ಲ ಪೆಂಪಂ (ಹಿರಿಮೆ-ಕೀರ್ತಿ) ನಿಮ್ಮಂ ಪಡೆದಲ್ತೆ ಪಡೆದನು (ನಿಮ್ಮನ್ನು ಪಡೆದಮೇಲೆ ನಾರದನ ತಂದೆ ಸೃಷ್ಟಿಕರ್ತ ಎಂಬ ದೊಡ್ಡ ಕೀರ್ತಿ ಪಡೆದ) ಎನಿಸಿದ ಕಡುಪೆಂಪಿನ ಪೊರೆಗೆ ನೀವ್ ಮೊದಲಿಗರಾದಿರ್ (ಹೀಗೆ

ಬ್ರಹ್ಮನಿಗೆ ಹಿರಿಮೆ ತರಲು ನೀವು ಮೊದಲಿಗರಾದಿರಿ,)

:ಪದ್ಯ-೧೨:ಅರ್ಥ: ಬ್ರಹ್ಮನು ಜಗತ್ತನ್ನು ಸೃಷ್ಟಿಸಿದನು; ಆದರೆ ಅವನು ಕೀರ್ತಿಯನ್ನು ಪಡೆಯಲು ಆಗಲಿಲ್ಲ. ನಿಮ್ಮನ್ನು ಪಡೆದಮೇಲೆ ನಾರದನ ತಂದೆ ಸೃಷ್ಟಿಕರ್ತ ಎಂಬ ದೊಡ್ಡ ಕೀರ್ತಿ ಪಡೆದ, ಹೀಗೆ ನೀವು ಬ್ರಹ್ಮನ ಹೊರಗೆ ಕೀರ್ತಿಗೆ ಕಾರಣರಾದಿರಿ, ಹೀಗೆ

ಬ್ರಹ್ಮನಿಗೆ ಹಿರಿಮೆ ತರಲು
ನೀವು ಮೊದಲಿಗರಾದಿರಿ,
ಎಂದು ಧರ್ಮರಾಯನು
ಮುನಿಗೆ ಹೇಳಿದನು.

ಕಂ||ಬಾದೇನಾ ಮದೀಯ
ಕರ್ಮ ಫ
ಳೋದಿತ ಸಂತಾಪರೂಪ
ಪಾಪಕಳಾಪ|
ಚ್ಛೇದನಕರಮಾಯ್ತು ಭವ
ತ್ಪಾದ ಪ್ರಕ್ಷಾಲನೋದಕಂ
ಮುನಿನಾಥಾ ||೧೩||

ಪದ್ಯ-೧೩:ಪದವಿಭಾಗ-ಅರ್ಥ:ಬಾದೇನ್ ಆ ಮದೀಯ ಕರ್ಮ ಫಳೋದಿತ ಸಂತಾಪರೂಪ ಪಾಪಕಳಾಪ ಚ್ಛೇದನಕರಮಾಯ್ತು ಭವತ್ಪಾದ ಪ್ರಕ್ಷಾಲನೋದಕಂ (ನಿಮ್ಮಪಾದದ ನೀರಿನ ಪ್ರೋಕ್ಷಣದಿಂದ) ಮುನಿನಾಥಾ

:ಪದ್ಯ-೧೩:ಅರ್ಥ:ಮಾತೇನು ! ನಾನು ಮಾಡಿದ ಕರ್ಮ ನಿಮ್ಮ ಪಾದದ ನೀರಿನ

ಪ್ರೋಕ್ಷಣದಿಂದ ಸಂತಾಪರೂಪದ ಪಾಪಸಮೂಹ ಮನಿನಾಥನೇ ಛೇದನವಾಯಿತು- ನಾಶವಾಯಿತು.

ಕಂ||ಬೆಸನೆನಗಾವುದೋ ಬೆಸಸಿಂ ಬೆಸನಂ ಪಿರಿದಕ್ಕೆ ಗೆಯ್ಯೆ ಸಾರ್ದಿರ್ದೆನದಂ | ಬೆಸಸಿಂ ನಿಮ್ಮಯ ಬರವಂ ಪೊಸತಾಗಿರೆ ಬಂದಿರೀಗಳೆಲ್ಲಿಂ ಬಂದಿರಿ||೧೪||

ಪದ್ಯ-೧೪:ಪದವಿಭಾಗ-ಅರ್ಥ:ಬೆಸನು ಎನಗೆ ಆವುದೋ ಬೆಸಸಿಂ, ಬೆಸನಂ ಪಿರಿದಕ್ಕೆ ಗೆಯ್ಯೆ (ನೀವು ಹೇಳಿದ್ದು ಹಿರದಾದರೂ

ಮಾಡಲು) ಸಾರ್ದಿರ್ದೆನ್ (ಹತ್ತಿರವಿದ್ದೇನೆ.) ಅದಂ ಬೆಸಸಿಂ ನಿಮ್ಮಯ ಬರವಂ ಪೊಸತಾಗಿರೆ ಬಂದಿರ್, ಈಗಳ್ ಎಲ್ಲಿಂ ಬಂದಿರಿ- (ನೀವು ಹೊಸತಾಗಿ ಬಂದಿದ್ದೀರಿ. ಈಗ ಎಲ್ಲಿಂದ ಬಂದಿರಿ)

:ಪದ್ಯ-೧೪:ಅರ್ಥ:ಹೇಳಬೇಕಾದ ಕಾರ್ಯವೇನು ನನಗೆ ಹೇಳಿ. ನೀವು ಹೇಳಿದ್ದು

ಹಿರದಾದರೂ ಮಾಡಲು ಹತ್ತಿರವಿದ್ದೇನೆ. ಅದನ್ನು ಹೇಳಿ,ನೀವು ಹೊಸತಾಗಿ ಬಂದಿದ್ದೀರಿ. ಈಗ ಎಲ್ಲಿಂದ ಬಂದಿರಿ? ಎಂದು ಧರ್ಮಜನು ಕೇಳಿದನು.

ವ||ಎಂಬುದುಮಾ ಮುನೀಂದ್ರನಿಂದ್ರಲೋಕದಿಂ ಬಂದನೆಂದೊಡಲ್ಲಿಯ ಪಡೆಮಾಮಾತಾವುದು -

ವಚನ:ಪದವಿಭಾಗ-ಅರ್ಥ:ಎಂಬುದುಂ ಆ ಮುನೀಂದ್ರನು ಇಂದ್ರಲೋಕದಿಂ ಬಂದನೆಂದೊಡೆ ಅಲ್ಲಿಯ ಪಡೆಮಾಮಾತಾವುದು - **ವಚನ:ಅರ್ಥ:** ಎನ್ನಲು ಆಮುನಿಯು ಇಂದ್ರಲೋಕದಿಂದ ಬಂದೆನು ಎಂದನು; ಅದಕ್ಕೆ ಧರ್ಮಜನು

ಅಲ್ಲಿಯ ಸುದ್ದಿಯೇನು ಎಂದು ಕೇಳಿದನು- ಮತ್ತೆ-

ದಿವಿಜೇಂದ್ರಂ ಸುಖಮಿರ್ದನೇ ದಿತಿಸುತವ್ಯಾಬಾಧೆಗಳ್ದೇವರ್ಗಿ ಲ್ಲವಲಾ ಷೋಡಶರಾಜರಿರ್ಪ ತೆರೆರನೇನೆಮ್ಮನ್ವಯಕ್ಷ್ಮಾಪರಾ ವ ವಿಳಾಸಂಗಳೊಳಿರ್ಪರೇ ದೊರೆತು ತಾನೆಮ್ಮಯ್ಯನೈಶ್ವರ್ಯಮಂ ತಿವನೆಲ್ಲಂ ತಿಳಿವಂತುಟಾಗಿ ಬೆಸಸಿಂ

ಪಂಕೇಜಗರ್ಭಾತ್ಮಜಾ||೧೫||

ಪದ್ಯ-೧೫:ಪದವಿಭಾಗ-ಅರ್ಥ:ದಿವಿಜೇಂದ್ರಂ ಸುಖಮಿರ್ದನೇ (ಇಂದ್ರ ಸುಖವಾಗಿರುವನೇ,) ದಿತಿಸುತವ್ಯಾ (ರಾಕ್ಷಸರ) ಬಾಧೆಗಳ್ ದೇವರ್ಗೆ ಇಲ್ಲವಲಾ?; ಷೋಡಶರಾಜರಿರ್ಪ ತೆರೆರನೇನು ?ಎಮ್ಮ ಅನ್ವಯಕ್ಷ್ಮಾಪರ್ (ನಮ್ಮ

ವಂಶದವರು) ಆವ
ವಿಳಾಸಂಗಳೊಳು ಇರ್ಪರೇ?;
ದೊರೆತು ತಾನ್ ಎಮ್ಮಯ್ಯನ
ಐಶ್ವರ್ಯಮಂತು? ಇವನೆಲ್ಲಂ
ತಿಳಿವಂತುಟಾಗಿ ಬೆಸಸಿಂ
(ಹೇಳಿರಿ)
ಪಂಕೇಜಗರ್ಭಾತ್ಮಜಾ
(ಕಮಲಜಾತನ ಮಗನೇ)
:ಪದ್ಯ-೧೫:ಅರ್ಥ: ಬ್ರಹ್ಮನ
ಪುತ್ರರೇ, ಇಂದ್ರ
ಸುಖವಾಗಿರುವನೇ,

ದೇವತೆಗಳಿಗೆ ರಾಕ್ಷಸರ ಬಾಧೆ ಇಲ್ಲವಲ್ಲವೇ? ಹದಿನಾರು ಮಹಾರಾಜರು ಯಾವ ರೀತಿ ಇದ್ದಾರೆ? ನಮ್ಮ ವಂಶದವರು ಯಾ ವೈಭವದಲ್ಲಿದ್ದಾರೆ? ನಮ್ಮ ತಂದೆಯ ಭಾಗ್ಯ ಹೇಗಿದೆ? ಇವೆಲ್ಲವನ್ನೂ ತಿಳಿಯುವಂತೆ ಹೇಳಿರಿ

ವ||ಎಂಬುದುಮಾ ಮುನೀಶ್ವರನಿಳಾದರೇಶ್ವರಂ ಬೆಸಗೊಂಡಂದದೊಳೆ

ದೇವಲೋಕದ ಪಡೆಮಾತೆಲ್ಲಮಂ ಪೇಳ್ದು ಪಾಂಡುರಾಜನ ಮಾತನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ ಮುನೀಶ್ವರನು ಇಳಾದರೇಶ್ವರಂ ಬೆಸಗೊಂಡ ಅಂದದೊಳೆ (ಧರ್ಮಜನು ಕೇಳಲು ಆ ಮುನೀಶ್ವರನು ಭೂಒಡೆಯ ಧರ್ಮರಾಜನು

ಕಾಳಿದ ರೀತಿಯಲ್ಲಿಯೇ)
ದೇವಲೋಕದ
ಪಡೆಮಾತೆಲ್ಲಮಂ ಪೇಳ್ದು
ಪಾಂಡುರಾಜನ
ಮಾತನಿಂತೆಂದಂ-
:**ವಚನ**:**ಅರ್ಥ**:ಧರ್ಮಜನು
ಕೇಳಲು ಆ ಮುನೀಶ್ವರನು
ಭೂ ಒಡೆಯ ಧರ್ಮರಾಜನು
ಕಾಳಿದ ರೀತಿಯಲ್ಲಿಯೇ
ದೇಲೋಕದ ಸುದ್ದಿಯನ್ನು

ಹೇಳಿ ಪಾಡುರಾಜನ ಮಾತನ್ನು
ಹೀಗೆ ಹೇಳದನು.

ಉ||ನೀಡಿರದಿಂದ್ರನೋಲಗಕೆ
ಪೋಪುದುಮಾಗಳುಮಂತೆ
ಪೋಗಿಯುಂ
ಶೋಡಶ ರಾಜರಿಂ
ಕಡೆಯೊಳಿರ್ಪುದು ಜೀಯ
ಹಸಾದಮೆಂಬುದಂ|
ನೋಡಿದ ದೃಷ್ಟಿಗಳ್ಕಿ
ಸುಗಿದಿರ್ಪುದುಮಾದಮೆ
ಮಾನಭಂಗಮಂ

ಮಾಡೆ ಮನಃ ಕ್ಷತಕ್ಕಳವಿಗಾಣೆವು ನೋಡಿರೇ ಪಾಂಡುರಾಜನಾ||೧೬||

ಪದ್ಯ-೧೬:ಪದವಿಭಾಗ-ಅರ್ಥ:ನೀಡಿರದೆ (ನೀಡು ಇರದೆ, ತಡವಿಲ್ಲದೆ) ಇಂದ್ರನೋಲಗಕೆ ಪೋಪುದುಂ ಆಗಳುಂ ಅಂತೆ ಪೋಗಿಯುಂ (ಪಾಂಡುವು ಆಗ ಇಂದ್ರನ ಹಾಗೆ ಸಭೆಗೆ ಹೋಗಿಯೂ) ಶೋಡಶ ರಾಜರಿಂ

ಕಡೆಯೊಳಿರ್ಪುದು (ಹದಿನಾರು ಮಹಾರಾಜರ ಕೊನೆಯಲ್ಲಿ ಇದ್ದೂ.) ಜೀಯ ಹಸಾದಂ ಎಂಬುದಂ ನೋಡಿದ ದೃಷ್ಟಿಗೆ ಅಳ್ಕಿ (ಅವರು ನೋಡಿದ ದೃಷ್ಟಿಗೆ ಅಳುಕಿ ಅವರಿಗೆ ಜೀಯ ಹಸಾದ ಎನ್ನಬೇಕಾಗಿದೆ,- ಸಮಾನತೆ ಇಲ್ಲ) ಸುಗಿದಿರ್ಪುದುಂ ಆದಮೆ (ವಿಶೇಷವಾಗಿ) ಮಾನಭಂಗಮಂ ಮಾಡೆ

ಮನಃ ಕ್ಷತಕ್ಕೆ ಅಳವಿಗಾಣೆವು (ವಿಶೇಷವಾಗಿ ಮಾನಹಾನಿ ಮಾಡಲು ಅವನ ಮನಸ್ಸಿನ ಗಾಯಕ್ಕೆ ಅಳತೆ ಕಾಣೆವು ಎಂದನು ನಾರದ.) ನೋಡಿರೇ ಪಾಂಡುರಾಜನಾ

:ಪದ್ಯ-೧೬:ಅರ್ಥ:ತಡವಿಲ್ಲದೆ ಪಾಂಡುವು ಆಗ ಇಂದ್ರನ ಹಾಗೆ ಸಭೆಗೆ ಹೋಗಿಯೂ ಹದಿನಾರು ಮಹಾರಾಜರ ಕೊನೆಯಲ್ಲಿ ಇದ್ದೂ ಅವರು

ನೋಡಿದ ದೃಷ್ಟಿಗೆ ಅಳುಕಿ ಅವರಿಗೆ ಜೀಯ ಹಸಾದ ಎನ್ನಬೇಕಾಗಿದೆ,- ಸಮಾನತೆ ಇಲ್ಲ.ಹೀಗೆ ಸುಗ್ಗಿಕುಗ್ಗಿ ಇರಬೇಕಾಗಿದೆ. ವಿಶೇಷವಾಗಿ ಮಾನಹಾನಿ ಮಾಡಲು ಅವನ ಮನಸ್ಸಿನ ಗಾಯಕ್ಕೆ ಅಳತೆ ಕಾಣೆವು. ಇದು ನೋಡಿ ಇದು ಪಾಂಡುವಿನ ಸ್ಥಿತಿ, ಎಂದನು ನಾರದ.

ಮ||
ಪರಚಕ್ರಂಗಳನೊತ್ತಿಕೊಂಡದ
ಟರಂ ಕೊಂದಿಕ್ಕಿದಾಯಾದರೆ
ಲ್ಲರುಮುಳ್ಕುತ್ತಿರೆ
ಸಂದಸಾಹಸದನಿರ್ಮ್ಮೀಯಯ್ಬ
ರುಮ ಮಕ್ಕಳಾ |
ಗಿರೆಯುಂ
ನಿಚ್ಚಲುಮಿಂದ್ರನೋಲಗದೊ
ಳಂತಾ ಪಾಂಡುರಾಜಂಗೆ ನಿ
ರ್ನೆರಮಪ್ಪೊಂದಪಮಾನದಿಂ
ದಮಿನಿತೊಂದೂನತಮಪ್ಪಂ

ದುಟೀ||೧೭||

ಪದ್ಯ-00:ಪದವಿಭಾಗ-ಅರ್ಥ:ಪರಚಕ್ರಂಗಳನೊತ್ತಿ ಕೊಂಡು ಅದಟರಂ ಕೊಂದಿಕ್ಕಿ (ಪರ ರಾಜರನ್ನು ಆಕ್ರಮಿಸಿ ಕೊದು) ದಾಯಾದರ ಎಲ್ಲರುಂ ಅಳ್ಕುತ್ತಿರೆ (ದಾಯಾದುಗಳೆಲ್ಲಾ ಅಂಜುತ್ತಿರಲು) ಸಂದಸಾಹಸದ ನಿಮ್ಮ ಈ ಅಯ್ವರುಂ ಮಕ್ಕಳಾಗಿರೆಯುಂ (ಹೆಚ್ಚನ ಸಾಹಸದ ನೀವು

ಐದು ಮಕ್ಕಳಿದ್ದೂ) ನಿಚ್ಚಲುಂ
ಇಂದ್ರನೋಲಗದೊಳು
(ನಿತ್ಯವೂ ಇಂದ್ರನ
ಓಲಗದಲ್ಲಿ) ಅಂತು ಆ
ಪಾಂಡುರಾಜಂಗೆ (ಆ
ಪಾಂಡುರಾಜನಿಗೆ ಹಾಗೆ)
ನಿರ್ನೆರಮಪ್ಪೊಂದು
ಅಪಮಾನದಿಂದಂ
ಇನಿತೊಂದು ಊನತಂ
ಅಪ್ಪಂದುಟೇ (ನಿಶ್ಕಾರಣವಾಗಿ
ಇಷ್ಟೊಂದು ಅಪಮಾನ ದಿಂದ

ಈ ರೀತಿಯ ಊನತ -ಕೊರತೆ ಆಗಬಹುದೇ?)-

:ಪದ್ಯ-00:ಅರ್ಥ:ಪರ ರಾಜರನ್ನು ಆಕ್ರಮಿಸಿ ಕೊದು, ದಾಯಾದರ ಎಲ್ಲರೂ ದಾಯಾದುಗಳೆಲ್ಲಾ ಅಂಜುತ್ತಿರಲು, ಹೆಚ್ಚಿನ ಸಾಹಸದ ನೀವು ಐದು ಮಕ್ಕಳಿದ್ದೂ ನಿತ್ಯವೂ ಇಂದ್ರನ ಓಲಗದಲ್ಲಿ ಆ ಪಾಂಡುರಾಜನಿಗೆ ಹಾಗೆ

ನಿಷ್ಕಾರಣವಾಗಿ ಇಷ್ಟೊಂದು ಅಪಮಾನವಾಗುವ ಈ ರೀತಿಯ ಊನತ -ಕೊರತೆ ಆಗಬಹುದೇ?)-

ವ|| ಆಮುಮದಂ ನೋಡಲಾರದೆಯುಂ ಪಾಂಡುರಾಜನೆನ್ನಿರ್ದಿರವನೆನ್ನ ಮಕ್ಕಳ್ಗರಿಪಿರಾಜಸೂಯಮೆಂಬ ಯಾಗಮಂಬೇಳ್ವಂತೆ ಮಾಡಿಬನ್ನಮೆನೆಯುಮದನರಿಪಲೆಂದೆ ಬಂದೆಮಾ ಮಖದ

ಮಹಾತ್ಮ್ಯಮಂ ಪೇಳ್ದೊಡೆ
ಮುನ್ನಂ ಕೃತಯುಗದೊಳ್
ಹರಿಶ್ಚಂದ್ರನೆಂಬ ಚಕ್ರವರ್ತಿ
ಚತುರರ್ಣವಪರೀತಮಹೀತಳ
ಮೆಲ್ಲಮಂ ಧರಾಮರರ್ಕಳ್ಗೆ
ದಕ್ಷಿಣೆಕೊಟ್ಟನಪ್ಪುದರಿಂದಮ
ದರ
ಫಲೊದೊಳೀಗಳಾತನಲ್ಲಿಗಿಂ
ದ್ರಂ ನಿಚ್ಚಮೊಂದು ಪೊಳ್ತು
ಪೋಗಿ ಪೂಜಿಸಿ ಬರ್ಪಂ
ನಿಮ್ಮಯ್ಯಂಗೆ

ನೀಮುಮನಿತುಮಹಿಮೆಯಂ ಮಾಳ್ಪಿರಪ್ಪೊಡೆ-

ವಚನ:ಪದವಿಭಾಗ-ಅರ್ಥ:

ಆಮುಂ ಅದಂ ನೋಡಲಾರದೆಯುಂ (ನಾನು ಅದನ್ನು ನೋಡಲಾರದೆ -ಬಂದೆ-) ಪಾಂಡುರಾಜನು ಎನ್ನ ಇರ್ದಿರವನೆನ್ನ (ಪಾಂಡುರಾಜನು ತನ್ನ ಇರುವ ಸ್ಥಿತಿಯನ್ನು) ಮಕ್ಕಳ್ಗೆ ಅರುಪಿ ರಾಜಸೂಯಮೆಂಬ

ಯಾಗಮಂ ಬೇಳ್ವಂತೆ
(ಮಕ್ಕಳಿಗೆ ತಿಳಿಸಿ ರಾಜಸೂಯ
ಯಾಗವನ್ನು ಮಾಡುವಂತೆ)
ಮಾಡಿಬನ್ನಿಂ ಎನೆಯುಂ
ಅದನು ಅರಿಪಲೆಂದೆ ಬಂದೆಂ (
ಮಾಡಿಬನ್ನಿ ಎನ್ನಲು ಅದನ್ನು
ತಿಳಿಸಲೆಂದೇ ಬಂದೆ) ಆ
ಮಖದ (ಯಜ್ಞದ)
ಮಹಾತ್ಮ್ಯಮಂ ಪೇಳದೊಡೆ
(ಹೇಳುವುದಾದರೆ) ಮುನ್ನಂ
ಕೃತಯುಗದೊಳ್

ಹರಿಶ್ಚಂದ್ರನೆಂಬ ಚಕ್ರವರ್ತಿ
ಚತುರರ್ಣವ ಪರೀತ
ಮಹೀತಳಂ ಎಲ್ಲಮಂ (ಹಿಂದೆ
ಕೃತಯುಗದಲ್ಲಿ
ಹರಿಶ್ಚಂದ್ರನೆಂಬ ಚಕ್ರವರ್ತಿ
ನಾಲ್ಕು ಸಮುದ್ರದಿಂದ
ಸುತ್ತುವರಿದ ಮಹೀತಳ-
ಭೂಮಿಯನ್ನು ಗೆದ್ದು-
ಅದೆಲ್ಲವನ್ನೂ) ಧರಾ
ಅಮರರ್ಕಳ್ಗೆ (ಭೂಸುರರಿಗೆ)
ದಕ್ಷಿಣೆಕೊಟ್ಟನು

ಅಪ್ಪುದರಿಂದಂ ಅದರ
ಫಲೊದೊಳು ಈಗಳು
ಆತನಲ್ಲಿಗೆ ಇಂದ್ರಂ
ನಿಚ್ಚಮೊಂದು ಪೊಳ್ತು
ಪೋಗಿ(ನಿತ್ಯವೂ ಒಂದು
ಹೊತ್ತು ಹೋಗಿ) ಪೂಜಿಸಿ
ಬರ್ಪಂ (ಬರುವನು)
ನಿಮ್ಮಯ್ಯಂಗೆ ನೀಮುಂ
ಅನಿತು ಮಹಿಮೆಯಂ
ಮಾಳ್ಪಿರಪ್ಪೊಡೆ
(ಮಾಡುವವರಾದರೆ)-

:ವಚನ:ಅರ್ಥ:ನಾನು ಅದನ್ನು ನೋಡಲಾರದೆ -ಬಂದೆ- ಪಾಂಡುರಾಜನು ತನ್ನ ಇರುವ ಸ್ಥಿತಿಯನ್ನು ಮಕ್ಕಳಿಗೆ ತಿಳಿಸಿ ರಾಜಸೂಯ ಯಾಗವನ್ನು ಮಾಡುವಂತೆ ಮಾಡಿಬನ್ನಿ ಎನ್ನಲು ಅದನ್ನು ತಿಳಿಸಲೆಂದೇ ಬಂದೆ ಆ ಯಜ್ಞದ) ಮಹಾತ್ಮ್ಯವನ್ನು ಹೇಳುವುದಾದರೆ, ಹಿಂದೆ ಕೃತಯುಗದಲ್ಲಿ

ಹರಿಶ್ಚಂದ್ರನೆಂಬ ಚಕ್ರವರ್ತಿ ನಾಲ್ಕು ಸಮುದ್ರದಿಂದ ಸುತ್ತುವರಿದ ಮಹೀತಳ-ಭೂಮಿಯನ್ನು ಗೆದ್ದು-ಅದೆಲ್ಲವನ್ನೂ ಭೂಸುರರಿಗೆ ದಕ್ಷಿಣೆಕೊಟ್ಟನು. ಹಾಗೆ ಮಾಡಿದ್ದರಿಂದ ಅದರ ಫಲೊದಲ್ಲಿ ಈಗಲೂ ಆತನಲ್ಲಿಗೆ ಇಂದ್ರನು ನಿತ್ಯವೂ ಒಂದು ಹೊತ್ತು ಹೋಗಿ) ಪೂಜಿಸಿ ಬರುವನು. ನಿಮ್ಮ

ತಂದೆಗೆ ನೀವ್ರೂ ಅಷ್ಟು
ಮಹಿಮೆಯನ್ನು
ಮಾಡುವವರಾದರೆ-

ಚಂ|| ಬಿರುದರನೊತ್ತಿ
ಬೀರರರನಡಂಗಿಸಿ ಕೊಂಕಿಗಳಂ
ಕಳಲ್ಚಿ ಚಿ
ನ್ನರನಡಿಗೊತ್ತಿ ಮಂಡಳಿಕರಂ
ಬೆಸಕೊಯ್ಸಿ ಕರುಂಬರಂ ನಿರಾ
|
ಕರಿಸಿ
ಸಮಸ್ತವಾರಿಧಿಮಹೀತಲದರ್

ಥಮೆಲ್ಲಮಂ
ತರಿಸಿ ನೆಗಳ್ತೆಯಂ
ನಿರಿಸಲಾರ್ಪಡೆ ಮಾಡಿರೆ
ರಾಜಸೂಯಮಂ||೧೮||

ಪದ್ಯ-೧೮:ಪದವಿಭಾಗ-ಅರ್ಥ:ಬಿರುದರನು ಒತ್ತಿ (ಬಿರುದುಳ್ಳ ರಾಜರನ್ನು ಆಕ್ರಮಿಸಿ), ಬೀರರರನಡಂಗಿಸಿ (ವೀರರರನ್ನು ಅಡಗಿಸಿ) ಕೊಂಕಿಗಳಂ ಕಳಲ್ಚಿ (ದೂರುವವರನ್ನು ಕಳಚಿ- ಶಕ್ತಿ

ಕುಂದಿಸಿ) ಚೆನ್ನರನು ಅಡಿಗೊತ್ತಿ (ಬಲಿಷ್ಠರನ್ನು ಬಗ್ಗುಬಡಿದು) ಮಂಡಳಿಕರಂ ಬೆಸಕೊಯ್ಸಿ (ಮಂಡಳಿಕರನ್ನು ಸೇವೆ ಮಾಡುವಂತೆಮಾಡಿ) ಕರುಂಬರಂ ನಿರಾಕರಿಸಿ (ಅಸೂಯೆ ಪಡುವವರನ್ನು ಅಲಕ್ಷಿಸಿ) ಸಮಸ್ತವಾರಿಧಿಮಹೀತಲದ ಅರ್ಥಂ ಎಲ್ಲಮಂ (ಸಕಲ ಸಮುದ್ರ ಬಳಸಿದ

ಭೂಮಿಯಲ್ಲಿರುವ ಎಲ್ಲಾ ಸಂಪತ್ತನ್ನೂ ತರಿಸಿ)ತರಿಸಿ ನೆಗಳ್ತಿಯಂ ನಿರಿಸಲಾರ್ಪಡೆ (ಕೀರ್ತಿಯು ನಿಲ್ಲುವಂತೆ ಮಾಡುವುದಾದರೆ) ಮಾಡಿರೆ (ಮಾಡಿರಯ್ಯಾ) ರಾಜಸೂಯಮಂ.

:ಪದ್ಯ-೧೮:ಅರ್ಥ:ಬಿರುದುಳ್ಳ ರಾಜರನ್ನು ಆಕ್ರಮಿಸಿ, ವೀರರನ್ನು ಅಡಗಿಸಿ, ದೂರುವವರನ್ನು ಕಳಚಿ- ಶಕ್ತಿ

ಕುಂದಿಸಿ, ಬಲಿಷ್ಠರನ್ನು
ಬಗ್ಗುಬಡಿದು, ಮಂಡಳಿಕರನ್ನು
ಸೇವೆ ಮಾಡುವಂತೆಮಾಡಿ,
ಅಸೂಯೆ ಪಡುವವರನ್ನು
ಅಲಕ್ಷಿಸಿ, ಸಕಲ ಸಮುದ್ರ
ಬಳಸಿದ ಭೂಮಿಯಲ್ಲಿರುವ
ಎಲ್ಲಾ ಸಂಪತ್ತನ್ನೂ ತರಿಸಿ,
ಕೀರ್ತಿಯು ನಿಲ್ಲುವಂತೆ
ಮಾಡುವುದಾದರೆ,
ಮಾಡಿರಯ್ಯಾ)
ರಾಜಸೂಯಯಾಗವನ್ನು!

ವ|| ಎಂದು ರಾಜಸೂಯಾಂತಂ ಕಳಹಮೆಂಬುದಂ ಬಗೆದು ತಾನುಂ ಕಲಹಪ್ರಿಯನಪ್ಪುದರಿಂದಮನಿತನೆ ನುಡಿದು ಮಾಣ್ದು ಮುನೀಂದ್ರನಂ ನರೇಂದ್ರನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ರಾಜಸೂಯ ಅಂತಂ ಕಳಹಮೆಂಬುದಂ

ಬಗೆದು (ತಿಳಿದು) ತಾನುಂ ಕಲಹಪ್ರಿಯನು ಅಪ್ಪುದರಿಂದಂ ಅನಿತನೆ ನುಡಿದು ಮಾಣ್ದ (ಅಷ್ಟನ್ನೇ ಹೇಳಿ ನಿಲ್ಲಿಸಿದ) ಮುನೀಂದ್ರನಂ ನರೇಂದ್ರನು ಇಂತೆಂದಂ-

:ವಚನ:ಅರ್ಥ:ಎಂದು ರಾಜಸೂಯದ ಅಂತ್ಯ ಕಲಹವೆಂಬುದನ್ನು ತಿಳಿದಿದ್ದೂ ತಾನು ಕಲಹಪ್ರಿಯನು

ಆಗಿರುವುದರಿಂದ ಅಷ್ಟನ್ನೇ ಹೇಳಿ ನಿಲ್ಲಿಸಿದ ಮುನೀಂದ್ರನನ್ನು ಕುರಿತು ನರೇಂದ್ರನು/ರಾಜನು ಹೀಗೆಂದನು-

ಚಂ||

ಬೆಳಗುವುದಿಂದ್ರಲೋಕದೊಳ ಗಯ್ಯನ ಮಾತೆನಲೆಮ್ಮ ಸಾಹಸಂ ಬೆಳಗುವುದೀಧರಾವಳಯದೊ ಳ್ ತಣಿವರ್ ದ್ವಿಮುಖ್ಯರಪ್ಪುದ

|

ಗ್ಗಳಿಕೆ ಪೊದಳ್ದು ಪರ್ವುವುದು

ಕೀರ್ತಿ ಪುರಾಕೃತ

ಪುಣ್ಯದಿಂದೆಸಂ

ಗಳಿಸುವುದೆಂದೊಡೀ

ಮಖದೊಳೇನ್ ತೊದಲುಂಟೆ

ಮುನೀಂದ್ರನಾಯಕಾ||೧೯||

ಪದ್ಯ-೧೯:ಪದವಿಭಾಗ-

ಅರ್ಥ:ಬೆಳಗುವುದು

ಇಂದ್ರಲೋಕದೊಳಗೆ

ಅಯ್ಯನ ಮಾತು ಎನಲು

ಎಮ್ಮ ಸಾಹಸಂ ಬೆಳಗುವುದು ಈ ಧರಾವಳಯದೊಳ್ (ಭೂಮಂಡಲದಲ್ಲಿ) ತಣಿವರ್ ದ್ವಿಮುಖ್ಯರು ಅಪ್ಪುದು ಅಗ್ಗಳಿಕೆ (ಬ್ರಾಹ್ಂಣರು ತೃಪ್ತಿ ಹೊಂದುವರು, ಹಿರಿಮೆಯು ಆಗುವುದು.) ಪೊದಳ್ದು ಪರ್ವುವುದು ಕೀರ್ತಿ (ಕೀರ್ತಿಯು ಹಬ್ಬುವುದು) ಪುರಾಕೃತ ಪುಣ್ಯದಿಂದ ಎಸಂಗಳಿಸುವುದು (ಈ

ಯಶಸ್ಸು ಬರುವುದು)
ಎಂದೊಡೆ (ಎಂದಾಗ) ಈ
ಮಖದೊಳೇನ್ ತೊದಲುಂಟೆ
ಮುನೀಂದ್ರನಾಯಕಾ
(ಮುನೀಂದ್ರನೇ ಈ
ಯಜ್ಞದಿಂದ ಏನಾದರೂ
ದೋಷವಿದೆಯೇ/
ಕಂಟಕವಿದೆಯೇ! ಎಂದನು
ಧರ್ಮಜ)
:ಪದ್ಯ-೧೯:ಅರ್ಥ:ಇಂದ್ರ
ಲೋಕದೊಳಗೆ ನಮ್ಮ

ಅಯ್ಯನ ಮಾತು
ಬೆಳಗುವುದು ಎನ್ನಲು ನಮ್ಮ
ಸಾಹಸವೂ ಬೆಳಗುವುದು ಈ
ಭೂಮಂಡಲದಲ್ಲಿ.
ಬ್ರಾಹ್ಮಣರು ತೃಪ್ತಿ
ಹೊಂದುವರು, ಹಿರಿಮೆಯು
ಆಗುವುದು. ಕೀರ್ತಿಯು
ಹಬ್ಬುವುದು ಪುರಾಕೃತ
ಪುಣ್ಯದಿಂದ ಈ ಯಶಸ್ಸು
ಬರುವುದು, ಎಂದಾಗ,
ಮುನೀಂದ್ರನೇ ಈ

ಯಜ್ಞದಿಂದ ಏನಾದರೂ ದೋಷವಿದೆಯೇ/ ಕಂಟಕವಿದೆಯೇ! ಎಂದನು ಧರ್ಮಜ)

ವ|| ಎಂಬುದುಮಾಮಾತಂ ನಿಲೆ ನುಡಿದುರ್ಕೆ ಮೆಚ್ಚಿ ನಿನಗಿದೇವಿರಿದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ ಮಾತಂ ನಿಲೆ ನುಡಿದುರ್ಕೆ ಮೆಚ್ಚಿ ನಿನಗಿದು ಏಂ ಹಿರಿದು-

:ವಚನ:ಅರ್ಥ: ರಾಜನು ಹಾಗೆಂದಾಗ ಆವನ ಮಾತು ಗಟ್ಟಿ ನಿಲ್ಲುವುದಕ್ಕಾಗಿ - ನಿನಗೆ ಇದೇನು ಮಹಾ ದೊಡ್ಡದು! (ಮಾಡು ಯಜ್ಞವ ಎಂದನು ನಾರದ)

ಕಂ|| ಪರಪಿನ ನೀಳದ ಕಡೆಯಂ
ಮರುಳಂ ತವೆ
ನೋಡಲಾರದಂಬರದತಳ ಮಂ|

ಕರಿದೆಂಬತಿರೆ ನಿನ್ನಂ

ನರನೆಂಬುದೆ ನಿನ್ನ

ಸಾಹಸಕ್ಕದು ಪಿರಿದೇ||೨೦||

ಪದ್ಯ-೨೦:ಪದವಿಭಾಗ-

ಅರ್ಥ:ಪರಪಿನ (ಹರಡಿದ) ನೀಳದ ಕಡೆಯಂ (ನೀಲಿಬಣ್ಣದ ಅಂಚನ್ನು) ಮರುಳಂ ತವೆ ನೋಡಲಾರದೆ (ಮರುಳನು ಪೂರಾ ನೋಡಲಾರದೆ) ಅಂಬರದತಳಮಂ

ಕರಿದೆಂಬತಿರೆ (ಆಕಾಶದ ತಳವನ್ನು ಕರಿದು ಎಂಬ ಹಾಗೆ) ನಿನ್ನಂ ನರನೆಂಬುದೆ ನಿನ್ನ ಸಾಹಸಕ್ಕೆ ಅದು ಪಿರಿದೇ (ನಿನ್ನನ್ನು ಸಾಮಾನ್ಯ ನರನೆನ್ನಬಹುದೇ! ನಿನ್ನ ಶೌರ್ಯಕ್ಕೆ ಆ ಯಜ್ಞ ದೊಡ್ಡದೇ! ಎಂದನು ನಾರದ)

:ಪದ್ಯ-೨೦:ಅರ್ಥ:

ವ|| ನುಡಿದು ನಾಡೆಯುಂ ಪೊಳ್ತಿರ್ದುಮಿನ್

ಪೋಪೆನೆಂದ ಮುನಿನಾಥನಂ
ನರನಾಥಂ
ಬಿಜಯಂಗಯ್ಯೆಮೆನೆ
ನಾರದನಿರದೆ
ಗಗನತಳಕ್ಕೊಗೆದು
ಮುಗಿಲಪೊರೆಯೊಳಡಂಗಿದನಿ
ತ್ತ ಧರ್ಮರಾಜಂ
ನಿಜಾನುಜರೊಡನೆರಾಜಸೂ
ಯಪ್ರಪಂಚಮನಾಳೋಚಿಸಿ
ಪುರುಷೋತ್ತಮನನೀಪದದೊ

ಳ್ ಬರಿಸುವುದು ನಮಗುತ್ತಮಪಕ್ಷಮೆಂದು-

ವಚನ:ಪದವಿಭಾಗ-

ಅರ್ಥ:ನುಡಿದು (ಹೀಗೆ ಹೇಳಿ) ನಾಡೆಯುಂ ಪೊಳ್ತು ಇರ್ದುಂ ಇನ್ ಪೋಪೆನೆಂದ ಮುನಿನಾಥನಂ (ಹೇಳಿ, ಮತ್ತೆ ಸ್ವಲ್ಪ ಹೊತ್ತು ಇದ್ದು ಹೋಗುವೆನು ಎಂದ ಮಿನಿಯನ್ನು) ನರನಾಥಂ ಬಿಜಯಂಗಯ್ಯಿಮೆನೆ

(ಧರ್ಮರಾಜನು
ದಯಮಾಡಿಸಿ/ ಬಿಜಂಗಯ್ಯಿರಿ
ಎನ್ನಲು,)ನಾರದನು ಇರದೆ
ಗಗನತಳಕ್ಕೆ ಒಗೆದು
ಮುಗಿಲಪೊರೆಯೊಳು
ಅಡಂಗಿದನು (ನಾರದನು
ಆಕಾಶದ ತಳಕ್ಕೆ ಹಾರಿ
ಮೋಡದ ಮೋಡದ
ಪದರದಲ್ಲಿ ಮರೆಯಾದನು.)
ಇತ್ತ ಧರ್ಮರಾಜಂ
ನಿಜಾನುಜರೊಡನೆ

ರಾಜಸೂಯಪ್ರಪಂಚಮನು
ಆಳೋಚಿಸಿ
ಪುರುಷೋತ್ತಮನನು ಈ
ಪದದೊಳ್ ಬರಿಸುವುದು
ನಮಗೆ ಉತ್ತಮ ಪಕ್ಷಮೆಂದು
(ಇತ್ತಲಾಗಿ ಹಸ್ತಿನಾವತಿಯಲ್ಲಿ
ಧರ್ಮರಾಜನು ತನ್ನ
ತಮ್ಮಂದಿರೊಡನೆ
ರಾಜಸೂಯ ವಿಚಾರವನ್ನು
ಆಲೋಚಿಸಿ ಶ್ರೀ ಕೃಷ್ಣನು ಈ

ಸಮಯದಲ್ಲಿ ತಮಗೆ ಉತ್ತಮ ಸಂಗಾತಿಯೆಂದು)-

:ವಚನ:ಅರ್ಥ:ಹೀಗೆ ಹೇಳಿ, ಮತ್ತೆ ಸ್ವಲ್ಪ ಹೊತ್ತು ಇದ್ದು, ಹೋಗುವೆನು ಎಂದ ಮುನಿಯನ್ನು ಧರ್ಮರಾಜನು ದಯಮಾಡಿಸಿ/ ಬಿಜಂಗಯ್ಯಿರಿ ಎನ್ನಲು,ನಾರದನು ಆಕಾಶದ ತಳಕ್ಕೆ ಹಾರಿ ಮೋಡದ ಮೋಡದ ಪದರದಲ್ಲಿ ಮರೆಯಾದನು. ಇತ್ತಲಾಗಿ

ಹಸ್ತಿನಾವತಿಯಲ್ಲಿ ಧರ್ಮರಾಜನು ತನ್ನ ತಮ್ಮಂದಿರೊಡನೆ ರಾಜಸೂಯ ವಿಚಾರವನ್ನು ಆಲೋಚಿಸಿ ಶ್ರೀ ಕೃಷ್ಣನು ಈ ಸಮಯದಲ್ಲಿ ತಮಗೆ ಉತ್ತಮ ಸಂಗಾತಿಯೆಂದು-ಅವನನ್ನು ಕರೆಸಿದನು.

<u>ಹಸ್ತಿನಾವತಿಗೆ ಶ್ರೀಕೃಷ್ಣನ ಆಗಮನ</u>

ಉ|| ದ್ವಾರವತೀಪುರಕ್ಕೆ

ಚರರಂ ತಡವಿಲ್ಲದೆ ಬೇಗಮಟ್ಟಿ

ಪಂ

ಕೇರುಹನಾಭನಂ ಬರಿಸಿ

ಮಜ್ಜನ ಭೋಜನ

ಭೂಷಣಾದಿ ಸ|

ತ್ಕಾರದೊಳಳ್ಕಿರಂ ನರೆಯೆ

ಮಾಡಿ ಮುರಾಂತಕಂ

ಪಾಂಡುಭೂಭುಜಂ

ಕಾರಣಮಾಗೆ ನಾರದನ ಪೇಳ್ದ ನೆಗಳ್ತಿಯ ರಾಜಸೂಯಮಂ|| ೨೧||21||

ಪದ್ಯ-೨೧:ಪದವಿಭಾಗ-ಅರ್ಥ:ದ್ವಾರವತೀಪುರಕ್ಕೆ ಚರರಂ (ದೂತರನ್ನು ಕಳಿಸಲು) ತಡವಿಲ್ಲದೆ ಬೇಗಮಟ್ಟಿ (ಕಳಿಸಿ) ಪಂಕೇರುಹನಾಭನಂ (ಕೃಷ್ಣನನ್ನು) ಬರಿಸಿ ಮಜ್ಜನ ಭೋಜನ ಭೂಷಣಾದಿ

ಸತ್ಕಾರದೊಳು ಅಳ್ಕಿರಂ
ನರೆಯೆ ಮಾಡಿ
(ಕರೆಸಿಕೊಂಡು, ಅವನಗೆ
ಸ್ನಾನ, ಊಟ, ಅಲಂಕಾರಾದಿ
ಸತ್ಕಾರಗಳನ್ನು ಪ್ರೀತಿಯಿಂದ
ವಿಶೇಷವಾಗಿ ಮಾಡಿ)
ಮುರಾಂತಕಂ
ಪಾಂಡುಭೂಭುಜಂ
ಕಾರಣಮಾಗೆ ನಾರದನ ಪೇಳ್ದ
ನೆಗಳ್ತಿಯ ರಾಜಸೂಯಮಂ
(ಪಾಂಡುರಾಜನನ್ನು

ಕಾರಣವಾಗಿಟ್ಟುಕೊಂಡು ನಾರದನು ಹೇಳಿದ ಪ್ರಸಿದ್ಧವಾದ ರಾಜಸುಯ ಯಾಗದ ವಿಷಯವನ್ನು)-

:ಪದ್ಯ-೨೧:ಅರ್ಥ:ದ್ವಾರವತೀ ಪುರಕ್ಕೆ ದೂತರನ್ನು ಕಳಿಸಲು ತಡವಿಲ್ಲದೆ ಬೇಗಕಳಿಸಿ ಶ್ರೀಕೃಷ್ಣನನ್ನು ಕರೆಸಿಕೊಂಡು, ಅವನಗೆ ಸ್ನಾನ, ಊಟ, ಅಲಂಕಾರಾದಿ ಸತ್ಕಾರಗಳನ್ನು ಪ್ರೀತಿಯಿಂದ ವಿಶೇಷವಾಗಿ

ಮಾಡಿ, ಪಾಂಡುರಾಜನನ್ನು ಕಾರಣವಾಗಿಟ್ಟುಕೊಂಡು ನಾರದನು ಹೇಳಿದ ಪ್ರಸಿದ್ಧವಾದ ರಾಜಸುಯ ಯಾಗದ ವಿಷಯವನ್ನು)-

ಕಂ|| ಬೇಳಲೆ ಬಗೆಯೊಡೆ ಹರಿಯೊಡ ನಾಳೊಚಿಪಮೆಂದು ಬಳಿಯನಟ್ಟಿದನೆಮ್ಮಂ| ಪಾಳಿಸುವೈ ನೀನ್ ನಿಮ್ಮೊಡ

ನಾಳೋಚಿಸದೆಮಗೆ

ನೆಗಳಲೇಂನೆರವುಟೇ||೨೨||

ಪದ್ಯ-00:ಪದವಿಭಾಗ-

ಅರ್ಥ:ಬೇಳಲೆ ಬಗೆಯೊಡೆ

(ಬೆಳಲು - ಮಾಡಲು

ಯೋಚಿಸುವ ಪಕ್ಷದಲ್ಲಿ)

ಹರಿಯೊಡನೆ

ಆಳೊಚಿಪಮೆಂದು

(ಹರಿಯೊನೆ ಆಲೋಚಿಸೋಣ

ಎಂದು) ಬಳಿಯನಟ್ಟಿದನು

ಎಮ್ಮಂ ಪಾಳಿಸುವೈ

ನೀನ್(ದೂತರನ್ನು ಕಳಿಸಿದೆ, ನಮ್ಮನ್ನು ಕಾಪಾಡವೆಯಲ್ಲವೆ ನೀನು) ನಿಮ್ಮೊಡನೆ ಆಳೋಚಿಸದೆ ಎಮಗೆ ನೆಗಳಲೇಂ ನೆರವುಟೇ (ನಿಮ್ಮೊಡನೆ ಆಲೋಚಿಸದೆ ಕಾರ್ಯಮಾಡಲು ನಮಗೆ ಬೇರೆ ನೆರವು ಇದೆಯೇ?)|

:ಪದ್ಯ-00:ಅರ್ಥ:ಯಾಗ ಮಾಡಲು ಯೋಚಿಸುವ ಪಕ್ಷದಲ್ಲಿ ಹರಿಯೊನೆ

ಆಲೋಚಿಸೋಣ ಎಂದು ದೂತರನ್ನು ಕಳಿಸಿದೆ, ನಮ್ಮನ್ನು ಕಾಪಾಡವೆಯಲ್ಲವೆ ನೀನು. ನಿಮ್ಮೊಡನೆ ಆಲೋಚಿಸದೆ ಕಾರ್ಯಮಾಡಲು ನಮಗೆ ಬೇರೆ ನೆರವು ಇದೆಯೇ?

ವ||ಎಂಬುದುಮದೆಲ್ಲಮುಮಂ ನೆರೆಯೆ ಕೇಳ್ದು ಮುಂದಣ ಕಜ್ಜದ ಬಿಣ್ಪುನರಿದಂ ಭೋರುಹನಾಭಂ

ಶುಂಭದಂಭೋಧರಧ್ವಯಿನಿ ತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂದು ಎಲ್ಲಮುಮಂ ನೆರೆಯೆ ಕೇಳ್ದು (ಧರ್ಮಜನು ಆಗ ಹೇಳಿದ್ದೆಲ್ಲವನ್ನೂ ಕೇಳಿ) ಮುಂದಣ ಕಜ್ಜದ ಬಿಣ್ಪುನು ಅರಿದಂ (ಮುಂದಿನ ಕಾರ್ದಬಿಗುವನ್ನೂ ಭಾರವನ್ನೂ ಅರಿತನು.)

ಭೋರುಹನಾಭಂ ಶುಂಭದಂಭೋಧರ ಧ್ವಯಿನಿತೆಂದಂ (ಆಗ ಕೃಷ್ಣನು ಒಡೆಯುತ್ತಿರುವ ಮೇಘದ ಘರ್ಜನೆಯ ಧ್ವನಿಯಿಂದ ಹೀಗೆ ಹೇಳಿದನು.)-

:**ವಚನ**:**ಅರ್ಥ**:ಧರ್ಮಜನು ಆಗ ಹೇಳಿದ್ದೆಲ್ಲವನ್ನೂ ಕೇಳಿ ಮುಂದಿನ ಕಾರ್ದಬಿಗುವನ್ನೂ ಭಾರವನ್ನೂ ಅರಿತನು. ಆಗ ಕೃಷ್ಣನು, ಒಡೆಯುತ್ತಿರುವ

ಮೇಘದ ಘರ್ಜನೆಯ

ಧ್ವನಿಯಿಂದ ಹೀಗೆ

ಹೇಳಿದನು.-

ಉ|| ಎಂತು ಬಿಗರ್ತುರ್ ಧೀರರನೆ

ಕೊಂದಪಿರೆಂತು ಸಮಸ್ತ

ವಾರ್ಧಿ ಪ

ರ್ಯಂತ ಧರಿತ್ರಿ ವಶಕೆ

ತಂದಪಿರೆಂತು ಧನಂಗಳಂ

ಪ್ರಯೋ |

ಗಾಂತರದಿಂ

ತೆರಳ್ಚಿದಪಿರಾಗದಿದಾದೊಡ

ಮೆಂತು ರಾಜಸೂ

ಯಾಂತಮಿದೆಂತು

ಬೇಳ್ದಪಿರಪಾಯಶತಂ ಬರೆ

ರಾಜಸೂಯಮಂ || ೨೩||

ಪದ್ಯ-೨೩:ಪದವಿಭಾಗ-

ಅರ್ಥ:ಎಂತು ಬಿಗತ್ತುರ್ಜ

ಧೀರರರೆನೆ ಕೊಂದಪಿರೆಂತು

(ಹೇಗೆ- ಭಯಪಡಿಸಿ

ಧೀರರಾದ ರಾಜರನ್ನು

ಕೊಲ್ಲುವಿರಿ?) ಸಮಸ್ತ ವಾರ್ಧಿ

ಪರ್ಯಂತ ಧರಿತ್ರಿ ವಶಕೆ

ತಂದಪಿರೆಂತು (ಸಮಸ್ತ
ಸಮುದ್ರಗಳ ಕೊನೆಯುವರಿಗೆ
ಭೂಮಿಯನ್ನು ವಶಕ್ಕೆ
ತರುವಿರಿ?) ಧನಂಗಳಂ
ಪ್ರಯೋಗಾಂತರದಿಂ
ತೆರಳ್ಚಿದಪಿರಿ (ಧನವನ್ನು
ಯಾವ ಬೇರೆ ಬೇರೆ
ಉಪಾಯಗಳಿಂದ
ಕೂಡಿಹಾಕುವಿರಿ) ಆಗದ
ಇದಾದೊಡಂ (ಕಷ್ಟವಾದ
ಇದು ಆದರೂ) ಎಂತು

ರಾಜಸೂಯಾಂತಂ ಇದೆಂತು ಬೇಳ್ದಪಿರ್ (ಹೇಗೆ ರಾಜಸೂಯದ ಅಂತ್ಯವನ್ನು ಹೇಗೆ ಮಾಡುವಿರಿ) ಅಪಾಯಶತಂ ಬರೆ (ನೂರಾರು ಅಪಾಯ ಬರಲು) ರಾಜಸೂಯಮಂ?|

:ಪದ್ಯ-೨೩:ಅರ್ಥ:ಹೇಗೆ- ಭಯಪಡಿಸಿ ಧೀರರಾದ ರಾಜರನ್ನು ಕೊಲ್ಲುವಿರಿ? ಸಮಸ್ತ ಸಮುದ್ರಗಳ

ಕೊನೆಯವರಿಗೆ
ಭೂಮಿಯನ್ನು ವಶಕ್ಕೆ
ತರುವಿರಿ? ಧನವನ್ನು ಯಾವ
ಬೇರೆ ಬೇರೆ ಉಪಾಯಗಳಿಂದ
ಕೂಡಿಹಾಕುವಿರಿ? ಕಷ್ಟವಾದ
ಇದು ಆದರೂ, ನೂರಾರು
ಅಪಾಯ ಬರಲು, ಹೇಗೆ
ರಾಜಸೂಯದ ಅಂತ್ಯವನ್ನು
ಹೇಗೆ ಮಾಡುವಿರಿ?

ಕಂ||ಗಾಳು ಗೊರವಂ ತಗುಳ್ಚಿ ಪ

ಳಾಳಮನೇನೊಂದನಪ್ಪೊಡಂ ಗಳಪಿದೊಡಾ |
ಬೇಳುನುಡಿಗೇಳ್ದು ಕೆಮ್ಮನೆ ಬೇಳಲ್ ನಿಮಗಂತು ರಾಜಸೂಯಂ ಮೊಗ್ಗೇ||೨೪||

ಪದ್ಯ-೨೪:ಪದವಿಭಾಗ-ಅರ್ಥ:ಗಾಳು ಗೊರವಂ (ಆ ಕಪಟಿಯಾದ ಸಂನ್ಯಾಸಿ) ತಗುಳ್ಚಿ ಪಳಾಳಮನು ಏನೊಂದನು ಅಪ್ಪೊಡಂ (ಏನಾದರೊಂದು ಪೊಳ್ಳು

ಕೆಲಸವನ್ನು ಅಂಟಿಸಿ)
ಗಳಪಿದೊಡೆ (ಹರಟಿದರೆ) ಆ
ಬೇಳು ನುಡಿಗೇಳ್ದು ಕೆಮ್ಮನೆ
ಬೇಳಲ್ (ಆ
ಮರುಳುಮಾಡುವ ಮಾತನ್ನು
ಕೇಳಿ ಸುಮ್ಮನೆ
ಯಜ್ಞಮಾಡಲು)ನಿಮಗಂತು
ರಾಜಸೂಯಂ ಮೊಗ್ಗೇ
(ನಿಮಗೆ ಹಾಗೆ ರಾಜಸೂಯ
ಮಾಡಲು ಯಜ್ಞವು ಏನು

ಜಗಿದು ತಿನ್ನುವ ಹೂವಿನ ಮೊಗ್ಗೇ?)

:ಪದ್ಯ-೨೪:ಅರ್ಥ:ಆ ಕಪಟಿಯಾದ ಸಂನ್ಯಾಸಿ ನಾರದನು ಏನಾದರೊಂದು ಪೊಳ್ಳು ಕೆಲಸವನ್ನು ಅಂಟಿಸಿ ಹರಟಿದರೆ, ಆ ಮರುಳುಮಾಡುವ ಮಾತನ್ನು ಕೇಳಿ ಸುಮ್ಮನೆ ಯಜ್ಞಮಾಡಲು, ನಿಮಗೆ ಹಾಗೆ ರಾಜಸೂಯ ಮಾಡಲು

ಯಜ್ಞವು ಏನು ಜಗಿದು
ತಿನ್ನುವ ಹೂವಿನ ಮೊಗ್ಗೇ?
ಎಂದನು ಕೃಷ್ಣ.

ವ||ಮುನ್ನಂ ಕೃತಯುಗದೊಳ್
ಸೋಮನ ವರುಣನ
ರಾಜಸೂಯದ ಕಡೆಯೊಳ್
ದೇವಾಸುರ ಯುದ್ಧ ನೆಗಳೆ
ಹಿರಣ್ಯ ಕಾಳನೇಮಿಗಳ್
ಮೊದಲಾಗಿ ನೆಗಳ್ತಿಯ
ದೈತ್ಯರೆಲ್ಲಮೆನ್ನ
ಚಕ್ರಘಾತದೊಳಳ್ಕಿ

ಮಳ್ಗಿದಂತಾದರದೊಂದು
ಧಾರಾವನಿತೆಯ
ಭಾರಾವತಾರದೊಳೆನಿತಾನುಂ
ಘಸಣಿ ಪೋದುದದು,
ಕಾರಣದಿಂ ರಾಜಸೂಯದ
ಮಾತಂ ಕೇಳ್ದಲ್ಲಿಯೇ
ಮರೆವುದು ನುಡಿಯಲ್ವೇಡೆನೆ
ಮರುಮಾತುಗುಡಲರಿಯದೆ
ಧರ್ಮಪುತ್ರಂ
ಮೌನಗೊಂಡುಸರದಿರೆ
ಪರಾಕ್ರಮಧವಳನಿಂತೆಂದಂ|

ವಚನ:ಪದವಿಭಾಗ-ಅರ್ಥ:ಮುನ್ನಂ ಕೃತಯುಗದೊಳ್ ಸೋಮನ ವರುಣನ ರಾಜಸೂಯದ ಕಡೆಯೊಳ್ ದೇವಾಸುರ ಯುದ್ಧ ನೆಗಳೆ ಹಿರಣ್ಯ ಕಾಳನೇಮಿಗಳ್ ಮೊದಲಾಗಿ ನೆಗಳ್ತಿಯ ದೈತ್ಯರೆಲ್ಲಮೆನ್ನ ಚಕ್ರಘಾತದೊಳು ಅಳ್ಕಿ ಮಳ್ಗಿದಂತಾದರು ಅದು ಒಂದು ಧಾರಾವನಿತೆಯ

ಭಾರಾವತಾರದೊಳು
ಎನಿತಾನುಂ ಘಸಣಿ
ಪೋದುದದು(ಭಾರವನ್ನು
ಇಳಿಸುವಲ್ಲಿ ಎಷ್ಟೋ
ಆಯಾಸವಾಯಿತು),
ಕಾರಣದಿಂ ರಾಜಸೂಯದ
ಮಾತಂ ಕೇಳ್ದಲ್ಲಿಯೇ
ಮರೆವುದು ನುಡಿಯಲ್ವೇಡೆನೆ,
ಮರುಮಾತುಗುಡಲು
ಅರಿಯದೆ ಧರ್ಮಪುತ್ರಂ
ಮೌನಗೊಂಡು ಉಸರದಿರೆ

ಪರಾಕ್ರಮಧವಳನು ಇಂತೆಂದಂ (ಆಗ ಅರ್ಜುನನು ಹೀಗೆಂದನು-)|

:ವಚನ:ಅರ್ಥ:ಕೃಷ್ಣನು ಹೇಳಿದ: ಹಿಂದೆ ಕೃತಯುಗದಲ್ಲಿ ಸೋಮ ವರುಣರ ರಾಜಸೂಯ ಯಾಗದ ಕೊನೆಯಲ್ಲಿ ದೇವತೆಗಳ ಮತ್ತು ಅಸುರರ ನಡುವೆ ಯುದ್ಧ ಆರಂಭವಾಯಿತು; ಹಿರಣ್ಯ ಕಾಲನೇಮಿಗಳೇ ಮೊದಲಾಗಿ

ಪ್ರಸಿದ್ಧ ದೈತ್ಯರೆಲ್ಲಾ ನನ್ನ ಚಕ್ರದ ಹೊಡೆತದಿಂದ ಅಳಿದು ಮಲಗಿದರು/ ನಾಶವಾದರು, ಅದೊಂದು ಭೂಮಿಯ ಭಾರವನ್ನು ಇಳಿಸುವಲ್ಲಿ ಪರಿಶ್ರಮವಾಯಿತು. ಈ ಕಾರಣದಿಂದ ರಾಜಸೂಯದ ಮಾತನ್ನು ಕೇಳಿದಲ್ಲಿಯೇ ಮರೆಯುವುದು ಒಳ್ಳೆಯದು, ಇನ್ನು ಹೆಚ್ಚು ಹೇಳುವುದು ಬೇಡ, ಎನ್ನಲು

ಧರ್ಮರಾಜನಿಗೆ
ಮರುಮಾತನಾಡಲು
ತಿಳಿಯದೆ ಸುಮ್ಮನಿದ್ದನು. ಆಗ
ಅರ್ಜುನನು ಹೀಗೆಂದನು-.

ಕಂ||ಎನಿತುಂ ಗಡ
ಪಯೋನಿಧಿಪರೀತಮಹೀತಳ
ಮೆಂಬುದಾಂಪ ಬೀ
ರನ ಪೆಸರಾವುದೀ ನುಡಿಯನೀ
ಪದದೊಳ್ ಪರನಿಕ್ಕಿ ನಾರದಂ|
ಮನದೊಳ್ ಪೇಸುಗುಂ
ಸುರಪನುಂ ನಗುಗುಂ

ಕಡುವಿನ್ನಕ್ಕುಮ

ಯ್ಯನಮುಖಮೆಂತುಪೇಕ್ಷಿಸು

ವುದೀ ಮಖಮಂ

ಸರಸೀರುಹೋದರಾ|| ೨೫||

ಪದ್ಯ-೨೫:ಪದವಿಭಾಗ-

ಅರ್ಥ:ಎನಿತುಂ ಗಡ

ಪಯೋನಿಧಿ ಪರೀತ

ಮಹೀತಳಮೆಂಬುದು (ಕಡಲು

ಸುತ್ತುವರಿದ ಭೂಮಿ ಎಷ್ಟಪ್ಪಾ

ಗಡ!) ಆಂಪ ಬೀರನ

ಪೆಸರಾವುದು (ಅದನ್ನು

ಎದುರಿಸುವ/ ಗೆದ್ದುಕೊಡುವ
ವೀರನ ಹೆಸರಾವುದು?) ಈ
ನುಡಿಯನು ಈ ಪದದೊಳ್
(ಈ ಸಮಯದಲ್ಲಿ) ಪರನಿಕ್ಕಿ
(ಹಿಂದಿಡಲು - ಬಿಡಲು)
ನಾರದಂ ಮನದೊಳ್
ಪೇಸುಗುಂ (ಹೇಸು)
(ನಾರದನು ಮನಸ್ಸಿನಲ್ಲೇ
ಜಿಗುಪ್ಸೆಪಡುವನು,)
ಸುರಪನುಂ ನಗುಗುಂ
(ಇಂದ್ರನು ನಮ್ಮನ್ನು ನೋಡಿ

ನಗಬಹುದು,) ಕಡುವಿನ್ನಕ್ಕುಂ ಅಯ್ಯನ ಮುಖಮ್ (ತಂದೆ ಪಾಮಡುವಿನ ಮುಖ ಸಪ್ಪಗಾಗುವುದು) ಎಂತು ಉಪೇಕ್ಷಿಸುವುದು ಈ ಮುಖಮಂ ಸರಸೀರುಹೋದರಾ (ಹೇಗೆ ಈ ಯಾಗವನ್ನು ಉಪೇಕ್ಷಿಸಿ ಮಾಡದೆ ಬಿಡುವುದು ಕಮಲನಾಭನೇ, ಎಂದನು ಅರ್ಜುನ.)

:ಪದ್ಯ-೨೫:ಅರ್ಥ:ಕಡಲು ಸುತ್ತುವರಿದ ಭೂಮಿ ಎಷ್ಟಪ್ಪಾ ಗಡ! ಅದನ್ನು ಎದುರಿಸುವ/ ಗೆದ್ದುಕೊಡುವ ವೀರನ ಹೆಸರಾವುದು? ಈ ಸಮಯದಲ್ಲಿ ಹಿಮ್ಮೆಟ್ಟಿ ಬಿಡಲು, ನಾರದನು ಮನಸ್ಸಿನಲ್ಲೇ ಜಿಗುಪ್ಸೆಪಡುವನು; ಇಂದ್ರನು ನಮ್ಮನ್ನು ನೋಡಿ ನಗಬಹುದು; ತಂದೆ

ಪಾಮಡುವಿನ ಮುಖ
ಸಪ್ಪಗಾಗುವುದು; ಹೇಗೆ
ಉಪೇಕ್ಷಿಸಿ ಈ ಯಾಗವನ್ನು
ಮಾಡದೆ ಬಿಡುವುದು
ಕಮಲನಾಭನೇ, ಎಂದನು
ಅರ್ಜುನ.)

ವ|| ಎಂದೊಡೆ ಭೀಮಸೇನನಿಂತೆಂದಂ

ವಚನ:ಪದವಿಭಾಗ-ಅರ್ಥ:ಎಂದೊಡೆ ಭೀಮಸೇನಂ ಇಂತೆಂದಂ

:ವಚನ:ಅರ್ಥ:ಎಂದಾಗ

ಭೀಮಸೇನನನು ಹೀಗೆ ಹೇಳಿದ-

ಕಂ||ಪನ್ನತರ ನಡುವನುಡಿಯ

ಲ್ಕೆನ್ನ ಭುಜಾರ್ಗಳಮೆ

ಸಾಲ್ಗುಮೊಸೆ ಮೇಣ್ ಮುನಿ

ಮೇ|

ಣೆನ್ನ ನುಡಿ ಟಾರಡಾಢಣ

ಮೆನ್ನಂ ಬೆಸಸುವುದು

ರಾಜಸೂಯಂ ಬೇಳಲ್||

೨೬||

ಪದ್ಯ-೨೬:ಪದವಿಭಾಗ-ಅರ್ಥ:ಪನ್ನತರ (ವೀರರ) ನಡುವಂ ಉಡಿಯಲ್ಕೆ ಎನ್ನ ಭುಜಾರ್ಗಳಮೆ ಸಾಲ್ಗುಂ ಒಸೆ (ವೀರರ ಸೊಂಟವನ್ನು ಮುರಿಯಲು ಅಗುಳಿಯಂತಿರುವ ಭುಜಗಳೇ ಸಾಕು, ಮತ್ತೆ) ಒಸೆ ಮೇಣ್ ಮುನಿ ಮೇಣ್ (ಒಪ್ಪು ಇಲ್ಲ ಬಿಡು) ಎನ್ನ ನುಡಿ ಟಾರಡಾಢಣಂ (ನನ್ನ ಮಾತು

ಖಡಾ ಖಂಡಿತ) ಎನ್ನಂ
ಬೆಸಸುವುದು ರಾಜಸೂಯಂ
ಬೇಳಲ್ (ಯಾಗ) (ಎನ್ನಂ
-ನನ್ನನ್ನು ಕುರಿತು - ನನಗೆ
ರಾಜಸೂಯ ಯಾಗ
ಮಾಡಲು ನೀವು-
ಬೆಸಸುವುದು- ಆಜ್ಞೆ
ಮಾಡುವುದು)
(ಟಾಠಡಾಢಣಂ - ಇದಕ್ಕೆ
ಅರ್ಥವಿಲ್ಲದ್ದೂ ಎಂಬ
ಅರ್ಥವೂ ಇದೆ?)

:ಪದ್ಯ-೨೬:ಅರ್ಥ:ಭೀಮ ಹೇಳಿದ: ವೀರರ ಸೊಂಟವನ್ನು ಮುರಿಯಲು ಅಗುಳಿಯಂತಿರುವ ಭುಜಗಳೇ ಸಾಕು, ಮತ್ತೆ, ಒಪ್ಪು ಇಲ್ಲ ಬಿಡು ನನ್ನ ಮಾತು ಖಡಾ ಖಂಡಿತ; ನನಗೆ/ನಮಗೆ ರಾಜಸೂಯ ಯಾಗ ಮಾಡಲು ನೀವು ಆಜ್ಞೆ ಮಾಡುವುದು.

<u>ಜರಾಸಂದನ ಕಥೆ: ಅವನ ವಧೆ</u>

ವ||ಎಂದು ಗಜರಿಗರ್ಜಿಸುವುದಮಮಳರು ಮೀಬೇಳ್ವೆಯ ಮಾತಂ ತೆಮಳೆ ನುಡಿದೊಡೆಮ್ಮ ಗಂಡಮಾತುಮಳುಂಬಂಭೃತ ಮಕ್ಕುಮೆಂದು ಮಯ್‌ಮೆಯ್ಗೆ ಬೆಸಸೆಂಬುದಂ ರಾಜಸೂಯಮಂ ಬೇಳ್ದಲ್ಲದಿರಿರಪ್ಪೊಡೆ ಗಂಗಾನದಿಯ ಬಡಗಣ

ತಡಿಯ
ಮಘಮಘಿಸುವವಾರಣಾಸಿ
ಪುರನಾಳ್ವ ಬೃಹದ್ಬಳಂ
ಪುತ್ರೋತ್ಪತ್ತಿನಿಮಿತ್ತಮಪ್ಪೊಂ
ದು ದಿವ್ಯಪಿಂಡಮಂ
ತನ್ನಿರ್ವರರರಸಿಯರ್ಗೆ
ಪಚ್ಚುಕೊಟ್ಟೊಡೆ ಪುಟ್ಟಿದೆರಡು
ಪೋಳುಮನೀವೇವುವೆಂದು
ಬಿಸುಡೆ ಜರೆಯೆಂಬ ರಕ್ಕಸಿ
ಕಂಡು ತಿನಲೆಂದೆರಡು
ಪೋಳುಮನೊಂದು ಕಯ್ಕೊಳೆ

ಪಿಡಿದೊಂದೊಂದರೊಳ್
ಸಂಧಿಸಿ ಮಾನಸ
ರೂಪುಗೊಂಡೊಡೆ
ಚೋದ್ಯಂಬಟ್ಟು
ಜರಾಸಂಧನೆಂದು ಪೆಸರನಿಟ್ಟು
ಬೃಹದ್ಬಳಂಗೆ ಕೊಟ್ಟೊಡೆ
ಜರಾಸಂಧನುಂ
ಸಾಲ್ವಲನುಮೆಂಬ
ದೈತ್ಯನುಮೊಂದಾಗಿ
ಮೂವತ್ತರಡಕ್ಷೋಹಿಣಿಂಬೆರ
ಸು ಮಧುರಾಪುರಕ್ಕೆ ವಂದೆನ್ನ

ಮುತ್ತಿಕೊಂಡೊಡುಪಾಯ
ಬಲದೊಳೆ ಸಾಲ್ವಲನಂ
ಕೊಂದು ಜರಾಸಂಧಗಳ್ಕಿ
ಮಧುರಾಪುರಮಂ ಬಿಸುಟ್ಟು
ಪೋಗಿ ದ್ವಾರವತಿಯಂ
ಸಮುದ್ರಮೆ
ನೀರ್ಗಾದಿಗೆಯಾಗಿ
ಮಾಡಿದೆನಿನ್ನುಂ ಯಾದವರ
ಸರೆಗಳೆಲ್ಲಾತನಲ್ಲಿರ್ದರಾತನಂ
ಭೀಮನ ಕಯ್ಯೊಳಲ್ಲದೆ
ಸಾಯನೆಂಬುದಾದೇಶಮದರಿ

ನೆಮ್ಮಿಚ್ಚೆಯುಂ ಸಮಸ್ತ
ಬಲಂಬೆರಸು
ಭೀಮಾರ್ಜುನರಂ
ಪೇಳ್ಪುದೆಂದು
ಧರ್ಮಪುತ್ರನೊಡಂಬಡಿಸಿ
ನುಡಿದು
ಮಧುರಾಪುರಮನೆಯ್ದಿ
ಬೃಹದ್ಬಳತನೂಜನಲ್ಲಿಗೆ
ಧರ್ಮಯುದ್ಧಮಂ
ಬೇಡಿಯಟ್ಟಿದೊಡೆ -

ವಚನ:ಪದವಿಭಾಗ-ಅರ್ಥ:

(ಭೀಮನು) ಎಂದು ಗಜರಿ ಗರ್ಜಿಸುವುದಂ ಅಮಳರುಂ (ಅವಳಿಗಳು ನಕುಲ ಸಹದೇವರು) ಈ ಬೇಳ್ವೆಯ ಮಾತಂ ತೆಮಳೆ ನುಡಿದೊಡೆ ಎಮ್ಮ ಗಂಡಮಾತುಂ ಅಳುಂಬಂ ಭೃತಮಕ್ಕುಮೆಂದು (ಈ ಯಾಗದ ಮಾತು ಜಾರಿಹೋಗದಂತೆ ಹೇಳಿದಾಗ -ಯಾಗ ಕೈಬಿಟ್ಟರೆ- ತಮ್ಮ

ವೀರನುಡಿಯು ವಿಶೇಷವಾಗಿ
ಕೆಡುತ್ತದೆ) ಮಯ್ಮೆಯ್ಗೆ
ಬೆಸಸು ಎಂಬುದಂ
ರಾಜಸೂಯಮಂ
(ರಾಜಸೂಯಕ್ಕೆ
ನಮೊಬ್ಬಬ್ಬರಿಗೂ
ಕರ್ತವ್ಯವನ್ನು ಬೆಸಸು-ಹೇಳು
ಎಂದಾಗ) ಬೇಳ್ದ ಅಲ್ಲದೆ
ಇರಿರಪ್ಪೊಡೆ (ಯಾಗ ಅಲ್ಲದೆ
ಇರಲಾರಿರಾದರೆ, ಹೀಗೆ
ಮಾಡಿ,) ಗಂಗಾನದಿಯ

ಬಡಗಣ ತಡಿಯ
ಮಘಮಘಿಸುವ ವಾರಣಾಸಿ
ಪುರನಾಳ್ವ ಬೃಹದ್ಬಳಂ
(ಗಂಗಾನದಿಯ ಉತ್ತರ
ತಡಿಯ ಮಘಮಘಿಸುವ/
ಪರಿಮಳಭರಿತ ವಾರಣಾಸಿ
ಪುರನ್ನು ಆಳುತ್ತಿದ್ದ
ಬೃಹದ್ಬಲನು) ಪುತ್ರೋತ್ಪತ್ತಿ
ನಿಮಿತ್ತಮಪ್ಪೊಂದು
ದಿವ್ಯಪಿಂಡಮಂ
ತನ್ನಿರ್ವರರಸಿಯರ್ಗೆ

ಪಚ್ಚುಕೊಟ್ಟೊಡೆ (ಮಗನನ್ನು
ಪಡೆಯಲು ಒಂದು ದಿವ್ಯ
ಪಿಂಡವನ್ನು ತನ್ನ ಇಬ್ಬರು
ರಾಣಿಯರಿಗೆ ಹೆಚ್ಚಿ ಎರಡು
ಭಾಗಮಾಡಿಕೊಟ್ಟನು;)
ತನ್ನಿರ್ವರರರಸಿಯರ್ಗೆ
ಪಚ್ಚುಕೊಟ್ಟೊಡೆ ಪುಟ್ಟಿದೆರಡು
ಪೋಳುಮನು
ಈವೇವುವೆಂದು ಬಿಸುಡೆ
(ಹಾಗೆ ಹೋಳನ್ನು ತಿಂದ
ಅವರಿಗೆ ಹುಟ್ಟಿದ ಎರಡು

ಹೋಳು ಶಿಶುವನ್ನು ಇದರಿಂದ ಏನು
ಉಪಯೋಗವಿಲ್ಲವೆಂದು
ಬಿಸಾಡಲು) ಜರೆಯೆಂಬ
ರಕ್ಕಸಿ ಕಂಡು ತಿನಲೆಂದೆರಡು
ಪೋಳುಮನೊಂದು ಕಯ್ಯೊಳೆ
ಪಿಡಿದೊಂದೊಂದರೊಳ್
ಸಂಧಿಸಿ ಮಾನಸ
ರೂಪುಗೊಂಡೊಡೆ
(ಜರೆಯೆಂಬ ರಾಕ್ಷಸಿಯು
ಕಂಡು ತಿನ್ನಲೆಂದು ಎರಡು

ಹೋಳುಗಳನ್ನು ಒಂದು
ಕಯ್ಯಲ್ಲಿಹಿಡಿದು
ಒಂದಕ್ಕೊಂದು ಜೊಡಿಸಿದಾಗ
ಅದು ಮಾನವ
ರೂಪುಗೊಂಡಿತು, ಅದನ್ನು)
ಚೋದ್ಯಂಬಟ್ಟು
ಜರಾಸಂಧನೆಂದು ಪೆಸರನಿಟ್ಟು
ಬೃಹದ್ಬಳಂಗೆ ಕೊಟ್ಟೊಡೆ
(ಅಚ್ಚರಿಪಟ್ಟು
ಜರಾಸಂಧನೆಂದು ಹೆಸರನ್ನಿಟ್ಟು
ಬೃಹದ್ಬಲನಿಗೆ ಕೊಟ್ಟಳು

ಅವನು) ಜರಾಸಂಧನುಂ
ಸಾಲ್ವಲನುಮೆಂಬ
ದೈತ್ಯನುಮೊಂದಾಗಿ
ಮೂವತ್ತರಡಕ್ಷೋಹಿಣಿಂಬೆರ
ಸು (ನಂತರ ಜರಾಸಂಧನೂ
ಸಾಲ್ವಲನು ಎಂಬ ದೈತ್ಯನು
ಒಂದಾಗಿ ಮೂವತ್ತರಡು
ಅಕ್ಷೋಹಿಣಿ ಸೈನ್ಯ
ಸೇರಸಿಕೊಂಡು)
ಮಧುರಾಪುರಕ್ಕೆ ವಂದೆನ್ನ
ಮುತ್ತಿಕೊಂಡೊಡೆ ಉಪಾಯ

ಬಲದೊಳೆ ಸಾಲ್ವಲನಂ ಕೊಂದು (ಮಧುರಾಪುರಕ್ಕೆ ಬಂದು ನಮ್ಮನ್ನು ಮುತ್ತಿದರು; ಆಗ ಉಪಾಯ ಬಲದಿಂದ ಸಾಲ್ವಲನನ್ನು ಕೊಂದು,) ಜರಾಸಂಧಗಳ್ಕಿ ಮಧುರಾಪುರಮಂ ಬಿಸುಟ್ಟು ಪೋಗಿ (ಜರಾಸಂಧನಿಗೆ ಮಧುರಾಪುರವನ್ನು ಬಿಟ್ಟು ಹೋಗಿ) ದ್ವಾರವತಿಯಂ ಸಮುದ್ರಮೆ

ನೀರ್ಗಾದಿಗೆಯಾಗಿ
ಮಾಡಿದೆನು (ದ್ವಾರಾವತಿಗೆ
ಹೋಗಿ ಅಲ್ಲಿ ಸಮುದ್ರವನ್ನೇ
ನೀರು ಕಂದಕವಾಗಿ ಮಾಡಿ
ನೆಲಸಿದೆನು.) ಇನ್ನುಂ
ಯಾದವರ ಸರೆಗಳೆಲ್ಲಿ
ಆತನಲ್ಲಿರ್ದರು ಆತನಂ
ಭೀಮನ ಕಯ್ಯೊಳಲ್ಲದೆ
ಸಾಯನೆಂಬುದು ಆದೇಶಂ
(ಇನ್ನೂ ಯಾದವರು ಅವನ
ಸರೆಗಳೆಲ್ಲಿ ಇರುವವರು;

ಆತನನ್ನು ಭೀಮನ
ಕಯ್ಯಲ್ಲಲ್ಲದೆ ಸಾಯಲಾರನು
ಎನ್ನುವುದು ವಿಧಿಯ ಆದೇಶ.)
ಅದರಿಂ ಎಮ್ಮಿಚ್ಛೆಯುಂ (ನನ್ನ
ಅಪೇಕ್ಷೆಯೂ ಅದೇ.) ಸಮಸ್ತ
ಬಲಂಬೆರಸು
ಭೀಮಾರ್ಜುನರಂ
ಪೇಳ್ವುದೆಂದು (ಸಮಸ್ತ
ಸೈನ್ಯಸಮೇತ ಹೊರಡಲು
ಭೀಮಾರ್ಜುನರಿಗೆ
ಹೇಳುವುದೆಂದು ಕೃಷ್ಣನು)

ಧರ್ಮಪುತ್ರನಂ ಒಡಂಬಡಿಸಿ
ನುಡಿದು ಮಧುರಾಪುರಮನ
ಎಯ್ದಿ ಬೃಹದ್ಬಳ
ತನೂಜನಲ್ಲಿಗೆ
ಧರ್ಮಯುದ್ಧಮಂ
ಬೇಡಿಯಟ್ಟಿದೊಡೆ
(ಧರ್ಮಪುತ್ರನನ್ನು ಒಪ್ಪುವಂತೆ
ಹೇಳಿ ಮಧುರಾಪುರವನ್ನು
ಸೇರಿ ಬೃಹದ್ಬಲನ ಮಗ
ಜರಾಸಂಧನೊಡನೆ

ಧರ್ಮಯುದ್ಧವನ್ನು ಕೇಳಿ
ದೂತರನ್ನು ಕಳಸಿದನು ಆಗ)-
:**ವಚನ**:**ಅರ್ಥ**:ಭೀಮನು
ಹೀಗೆ ಗರ್ಜಿಸಲು
ಅವಳಿಗಳಾದ ನಕುಲ
ಸಹದೇವರು, ಈ ಯಾಗದ
ಮಾತು
ಜಾರಿಹೋಗಬಾರದೆಂದು
ಹೇಳಿದಾಗ -ಯಾಗ ಕೈಬಿಟ್ಟರೆ-
ತಮ್ಮ ವೀರನುಡಿಯು
ವಿಶೇಷವಾಗಿ ಕೆಡುತ್ತದೆ,

ರಾಜಸೂಯಕ್ಕೆ
ನಮ್ಮೊಬ್ಬಬ್ಬರಿಗೂ
ಕರ್ತವ್ಯವನ್ನು ಹೇಳು,
ಎಂದಾಗ, ಯಾಗ ಅಲ್ಲದೆ
ಇರಲಾರಿರಾದರೆ, ಹೀಗೆ
ಮಾಡಿ-
ಹಿಂದೆ ಗಂಗಾನದಿಯ ಉತ್ತರ
ತಡಿಯ ಪರಿಮಳಭರಿತ
ವಾರಣಾಸಿ ಪುರನ್ನು ಆಳುತ್ತಿದ್ದ
ಬೃಹದ್ಬಲನು ಮಗನನ್ನು
ಪಡೆಯಲು ಒಂದು ದಿವ್ಯ

ಪಿಂಡವನ್ನು ತನ್ನ ಇಬ್ಬರು
ರಾಣಿಯರಿಗೆ ಹೆಚ್ಚಿ ಎರಡು
ಭಾಗಮಾಡಿಕೊಟ್ಟನು; ಹಾಗೆ
ಹೋಳನ್ನು ತಿಂದ ಅವರಿಗೆ
ಹುಟ್ಟಿದ ಎರಡು ಹೋಳು
ಶಿಶುವನ್ನು, ಇದರಿಂದ ಏನು
ಉಪಯೋಗವಿಲ್ಲವೆಂದು
ಬಿಸಾಡಲು, ಜರೆಯೆಂಬ
ರಾಕ್ಷಸಿ ಅವನ್ನು ಕಂಡು
ತಿನ್ನಲೆಂದು ಎರಡು
ಹೋಳುಗಳನ್ನು ಒಂದು

ಕಯ್ಯಲ್ಲಿಹಿಡಿದು
ಒಂದಕ್ಕೊಂದು ಜೊಡಿಸಿದಾಗ
ಅದು ಮಾನವ
ರೂಪುಗೊಂಡಿತು,
ಅಚ್ಚರಿಪಟ್ಟು ಅದನ್ನು
ಜರಾಸಂಧನೆಂದು ಹೆಸರನ್ನಿಟ್ಟು
ಬೃಹದ್ಬಲನಿಗೆ ಕೊಟ್ಟಳು.
ಅವನು ಕಾಲಾನಂತರ
ಜರಾಸಂಧನೂ ಸಾಲ್ವಲನು
ಎಂಬ ದೈತ್ಯನು ಒಂದಾಗಿ
ಮೂವತ್ತರಡು ಅಕ್ಷೋಹಿಣಿ

ಸೈನ್ಯ ಸೇರಸಿಕೊಂಡು
ಮಧುರಾಪುರಕ್ಕೆ ಬಂದು
ನಮ್ಮನ್ನು ಮುತ್ತಿದರು; ಆಗ
ಉಪಾಯ ಬಲದಿಂದ
ಸಾಲ್ವಲನನ್ನು ಕೊಂದು,
ಜರಾಸಂಧನಿಗೆ
ಮಧುರಾಪುರವನ್ನು
ಬಿಟ್ಟುಕೊಟ್ಟು, ಅಲ್ಲಿಂದ
ಹೋಗಿ ದ್ವಾರಾವತಿಗೆ ಹೋಗಿ
ಅಲ್ಲಿ ಸಮುದ್ರವನ್ನೇ ನೀರು
ಕಂದಕವಾಗಿ ಮಾಡಿ

ನೆಲಸಿದೆನು. ಇನ್ನೂ
ಯಾದವರು ಅವನ ಸರೆಗಳಲ್ಲಿ
ಇರುವರು; ಆತನು ಭೀಮನ
ಕಯ್ಯಲ್ಲಲ್ಲದೆ ಸಾಯಲಾರನು
ಎನ್ನುವುದು ವಿಧಿಯ ಆದೇಶ.
ನನ್ನ ಅಪೇಕ್ಷೆಯೂ ಅದೇ.
ಸಮಸ್ತ ಸೈನ್ಯಸಮೇತ
ಹೊರಡಲು
ಭೀಮಾರ್ಜುನರಿಗೆ
ಹೇಳುವುದೆಂದು ಕೃಷ್ಣನು
ಧರ್ಮಪುತ್ರನನ್ನು ಒಪ್ಪುವಂತೆ

ಹೇಳಿ ಮಧುರಾಪುರವನ್ನು
ಸೇರಿ ಬೃಹದ್ಬಲನ ಮಗ
ಜರಾಸಂಧನೊಡನೆ
ಧರ್ಮಯುದ್ಧವನ್ನು ಕೇಳಿ
ದೂತರನ್ನು ಕಳಸಿದನು ಆಗ-

<u>ಅರ್ಜುನನ ಭೀಮ ನಕುಲ ಸಹದೇವರ ದಿಗ್ವಿಜಯ</u>

ಮಂ|| ಕಲಿ

ಮಾರ್ಕೊಳ್ಳದೆಕೊಟ್ಟು

ಮಯ್ಯೊಳೆ ಸಿಡಿಲ್
ತಾಪಂತೆವೋಲ್ ತಾಗೆ ಮೆ
ಯ್ಗಲಿ ಭೀಮಂ
ಪೆರಪಿಂಗದಾಂತು ಪಲವುಂ
ಬಂಧಂಗಳಿಂ ತಳ್ದು ತ|
ತ್ಕುಲಿಶೈಲಂ ಕುಲಶೈಲದೊಳ್
ಕಲುಷದಿಂ ಪೋರ್ವಂತೆ
ಪೋರ್ದು ನೆ
ಯ್ದಿಲ ಕಾವಂ ತುದಿಗೆಯ್ದೆ ಸೀಳ್ವ
ತೆರದಿಂ ಸೀಳ್ದಂ
ಜರಾಸಂದನಂ||೨೭||

ಪದ್ಯ-೨೭:ಪದವಿಭಾಗ-ಅರ್ಥ:ಕಲಿ ಮಾರ್ಕೊಳ್ಳದೆ ಕೊಟ್ಟು (ಶೂರ ಜರಾಸಂದನು ಎದುರಾಡದೆ ಧರ್ಮಯುದ್ಧವನ್ನು ಕೊಟ್ಟನು) ಮಯ್ಯೊಳೆ ಸಿಡಿಲ್ ತಾಪಂತೆವೋಲ್ ತಾಗೆ (ಏಕಾಂಗಿಯಾಗಿ ಸಿಡಿಲು ತಾಗುವ ಹಾಗೆ) ಮೆಯ್ಗಲಿ ಭೀಮಂ ಪೆರಪಿಂಗದೆ ಆಂತು (ದೈಹಿಕ ಶೂರನಾದ ಭೀಮನ

ಹಿಂದೆ ಸರಿಯದೆ ಎದುರಿಸಿ)
ಪಲವುಂ ಬಂಧಂಗಳಿಂ ತಳ್ದು
(ಹಲವು ಪಟ್ಟುಗಳಿಂದ
ಅವನೊಡನೆ ಸೇರಿ
ಹೋರಾಡಿದನು)
ತತ್ಕುಲಿಶೈಲಂ ಕುಲಶೈಲದೊಳ್
ಕಲುಷದಿಂ ಪೋರ್ವಂತೆ
ಪೋರ್ದು (ಆ ಕುಲಪರ್ವತವು
ಮತ್ತೊಂದು
ಕುಲಪರ್ವತದೊಡನೆ
ಹೋರಾಡುವಂತೆ ಹೋರಾಡಿ)

ನೆಯ್ದಿಲ ಕಾವಂ ತುದಿಗೆಯ್ದೆ ಸೀಳ್ವ ತೆರದಿಂ ಸೀಳ್ದಂ ಜರಾಸಂದನಂ (ನೈದಿಲೆಯ ದಂಟನ್ನು ತುದಿಯಿಂದ ಬುಡದವರೆಗೂ ಸೀಳುವಂತೆ ಜರಾಸಂಧನನ್ನು ಸೀಳಿದನು.). **:ಪದ್ಯ-೨೭:ಅರ್ಥ**:ಶೂರ ಜರಾಸಂದನು ಎದುರಾಡದೆ ಧರ್ಮಯುದ್ಧವನ್ನು ಕೊಟ್ಟನು. ಏಕಾಂಗಿಯಾಗಿ ಸಿಡಿಲು ತಾಗುವ ಹಾಗೆ ಭೀಮನನ್ನು

ಎದುರಿಸಿದನು. ದೈಹಿಕ ಶೂರನಾದ ಭೀಮನ ಹಿಂದೆ ಸರಿಯದೆ ಎದುರಿಸಿ ಹಲವು ಪಟ್ಟುಗಳಿಂದ ಅವನೊಡನೆ ಸೇರಿ ಹೋರಾಡಿದನು. ಆ ಕುಲಪರ್ವತವು ಮತ್ತೊಂದು ಕುಲಪರ್ವತದೊಡನೆ ಹೋರಾಡುವಂತೆ ಹೋರಾಡಿ, ಕೊನೆಗೆ ನೈದಿಲೆಯ ದಂಟನ್ನು ತುದಿಯಿಂದ ಬುಡದವರೆಗೂ

ಸೀಳುವಂತೆ ಜರಾಸಂಧನನ್ನು
ಸೀಳಿದನು.

ವ|| ಅಂತು ದೃಢ ಕಠಿಣ ಹೃದಯ ಬಂಧನಂ ಜರಾಸಂಧನಂ ಕೊಂದುಮಾತನ ಮಗಂ ಕ್ಷೇಮಧೂರ್ತಿಯಂ ರಾಜ್ಯದೊಳ್ ನಿರಿಸಿ ಜರಾಸಂಧನ ರಥಮಂ ತರಿಸಿ ಸಮಸ್ತ ವಸ್ತುಗಳಂ ಕೊಂಡು ಗರುತ್ವನಂ ನೆನೆದು ಬರಿಸಿ

ರಥಮಂಚೋದಿಸಲ್ವೇಳ್ದು ಯಾದವರ ಸೆರೆಗಳುಮಂ ಮುಂದಿಟ್ಟು ನಾರಾಯಣಂ ಭೀಮಾರ್ಜುನವೆರಸು ಸುಖಪ್ರಯಾಣಂಗಳಿಂದಿಂದ್ರ ಪ್ರಸ್ಥಕ್ಕೆ ವಂದು ಧರ್ಮಪುತ್ರನಂ ಕಂಡು-

ವಚನ:ಪದವಿಭಾಗ-

ಅರ್ಥ:ಅಂತು ದೃಢ ಕಠಿಣ ಹೃದಯಬಂಧನಂ (ಹಾಗೆ ಗಟ್ಟಿಯಾದ ಗಡಸು

ಹೃದಯಬಂದವುಳ್ಳ)
ಜರಾಸಂಧನಂ ಕೊಂದುಂ
ಆತನ ಮಗಂ
ಕ್ಷೇಮಧೂರ್ತಿಯಂ
ರಾಜ್ಯದೊಳ್ ನಿರಿಸಿ
ಜರಾಸಂಧನ ರಥಮಂ ತರಿಸಿ
ಸಮಸ್ತ ವಸ್ತುಗಳಂ ಕೊಂಡು
ಗರುತ್ವನಂ (ಗರುಡನನ್ನು)
ನೆನೆದು ಬರಿಸಿ ರಥಮಂ
ಚೋದಿಸಲ್ವೇಳ್ದು (ನೆಡೆಸಲು
ಹೇಳಿ) ಯಾದವರ

ಸೆರೆಗಳುಮಂ (ಸರೆಯಲ್ಲಿದ್ದ ಯಾದವರನ್ನು) ಮುಂದಿಟ್ಟು ನಾರಾಯಣಂ ಭೀಮಾರ್ಜುನವೆರಸು ()ಸೇರಿ ಸುಖಪ್ರಯಾಣಂಗಳಿಂದ ಇಂದ್ರಪ್ರಸ್ಥಕ್ಕೆ ವಂದು ಧರ್ಮಪುತ್ರನಂ ಕಂಡು-

:ವಚನ:ಅರ್ಥ:ಹಾಗೆ ಗಟ್ಟಿಯಾದ ಗಡಸು ಹೃದಯಬಂದವುಳ್ಳ ಜರಾಸಂಧನನ್ನು ಕೊಂದು,

ಆತನ ಮಗ
ಕ್ಷೇಮಧೂರ್ತಿಯನ್ನು
ರಾಜ್ಯದಲ್ಲಿ ಅಧಿಕಾರದಲ್ಲಿ
ಇರಿಸಿ ಜರಾಸಂಧನ ರಥವನ್ನು
ತರಿಸಿ ಸಮಸ್ತ ವಸ್ತುಗಳನ್ನೂ
ತೆಗೆದುಕೊಂಡು ಗರುಡನನ್ನು
ನೆನೆದು ಕರೆಸಿ ರಥವನ್ನು
ನೆಡೆಸಲು ಹೇಳಿ, ಸರೆಯಲ್ಲಿದ್ದ
ಯಾದವರನ್ನು
ಮುಂದಿಟ್ಟುಕೊಂಡು ಕೃಷ್ಣನು
ಭೀಮಾರ್ಜುನರ ಜೊತೆ ಸೇರಿ

ಸುಖಪ್ರಯಾಣ ಮಾಡಿ ಇಂದ್ರಪ್ರಸ್ಥಕ್ಕೆ ಬಂದು ಧರ್ಮಪುತ್ರನನ್ನು ಕಂಡನು.-

ಶಿಖರಿಣಿ|| ಜರಾಸಂಧಂ ಮುನ್ನ ಮಡಿದೊಡಿಳೆ ನಿಶ್ಕಂಟಕಮದ ಕಿರಲ್ವೇಡಿನ್ ನಾಲ್ಕು ದೆಸಗಂ ಬೆಸಸಿಂ ನಿಮ್ಮನುಜರಂ | ಭರಂಗಯ್ದಾಗಳ್ ನೀಂ ಪೆಸರ್ವೆಸರೊಳಾ ನಾಲ್ಕರುಮನಾ

ದರಂಗೊಂಡಾ ನಾಲ್ಕು ದೆಸಗೆ
ಬೆಸಸಿಂ ಬೆಳ್ಕುರಿವಿನಂ||೨೮||

ಪದ್ಯ-೨೮:ಪದವಿಭಾಗ-

ಅರ್ಥ:ಜರಾಸಂಧಂ ಮುನ್ನ ಮಡಿದೊಡೆ ಇಳೆ ನಿಶ್ಕಂಟಕಂ ಅದರ್ಕೆ ಇರಲ್ವೇಡ (ಜರಾಸಂಧನು ಯಾಗಕ್ಕೆ ಮೊದಲೇ ಸತ್ತಿದ್ದರಿಂದ ಭೂಮಿ ನಿರ್ಭಾದಿತವಾಯಿತು. ಆದರಿಂದ ಇನ್ನು ಸುಮ್ಮನಿರಬೇಡ/

ತಡಮಾಡುವುದು ಬೇಡ) ಇನ್
ನಾಲ್ಕು ದೆಸಗಂ ಬೆಸಸಿಂ ನಿಮ್ಮ
ಅನುಜರಂ (ಇನ್ನು ನಾಲ್ಕು
ದಿಕ್ಕಿಗೂ ನಿನ್ನ ತಮ್ಮಂದಿರನ್ನು)
ಭರಂಗಯ್ದಾಗಳ್ (ಕಾರ್ಯ
ನಿರ್ವಹಿಸುವಾಗ) ನೀಂ
ಪೆಸರ್ವೆಸರೊಳು ಆ
ನಾಲ್ಕರುಮನು (ನೀನು
ಹೆಸರು ಹೆಸರಿನಲ್ಲಿ ನಾಲ್ಕು
ತಮ್ಮಂದಿರನ್ನೂ)
ಆದರಂಗೊಂಡು ಆ ನಾಲ್ಕು

ದೆಸಗೆ ಬೆಸಸಿಂ ಬೆಳ್ಕುರಿವಿನಂ (ಭಯವುಂಟಾಗುವಹಾಗೆ). (ಆದರರದಿಂದ ನಾಲ್ಕು ದಿಕ್ಕುಗಳಿಗೆ ಭಯವುಂಟಾಗುವಹಾಗೆ ವಿಜಯ ಯಾತ್ರಗೆ ನೇಮಿಸಿ, ಎಂದನು ಕೃಷ್ಣ.)

:ಪದ್ಯ-೨೮:ಅರ್ಥ:ಹಾಗೆ ಧರ್ಮಪುತ್ರನನ್ನು ಕಂಡು ಕೃಷ್ಣನು, ಜರಾಸಂಧನು ಯಾಗಕ್ಕೆ ಮೊದಲೇ

ಸತ್ತಿದ್ದರಿಂದ ಭೂಮಿ
ನಿರ್ಭಾದಿತವಾಯಿತು.
ಅದರಿಂದ ಇನ್ನು
ಸುಮ್ಮನಿರಬೇಡ/
ತಡಮಾಡುವುದು ಬೇಡ, ಇನ್ನು
ನಾಲ್ಕು ದಿಕ್ಕಿಗೂ ನಿನ್ನ
ತಮ್ಮಂದಿರನ್ನು, ಕಾರ್ಯ
ನಿರ್ವಹಿಸಲು ನೀನು ಹೆಸರು
ಹೆಸರಿನಲ್ಲಿ ನಾಲ್ಕು
ತಮ್ಮಂದಿರನ್ನೂ ಆದರದಿಂದ
ನಾಲ್ಕು ದಿಕ್ಕುಗಳಿಗೆ

ಭಯವುಂಟಾಗುವಹಾಗೆ
ವಿಜಯಯಾತ್ರಗೆ ನೇಮಿಸಿ,
ಎಂದನು .)

ವ|| ಅಂತು ಭೀಮಸೇನನಿಂದ್ರನಮೇಲೆ ವೇಳ್ಪಂತೆ ಪೂರ್ವ ದಿಗ್ಭಾಗಕ್ಕೆ ವೇಳ್ದು, ನಕುಳನಂ ಯಮನನದಿರ್ಪಲ್ವೇಳ್ಪಂತೆ ದಕ್ಷಿಣದಿಗವಭಾಗಕ್ಕೆ ಬೆಸಸಿ ಸಹದೆವನಂ ವರುಣನನದಿರ್ಪಲ್

ನಿಯಮಿಸುವಂತೆ ಪಶ್ಚಿಮದಿಗ್ಭಾದಕ್ಕೆ ಪೇಳ್ದು ವಿಕ್ರಮಾರ್ಜುನನಂ ಕುಬೇರನಿಂ ಕಪ್ಪಂಗೊಳಲ್ ಸಮರ್ಪಿಸುವಂತೆಉತ್ತರೋತ್ತ ರಮಾಗಲುತ್ತರದಿಶಾಭಾಗಕ್ಕೆ ವೇಳ್ದಾಗಲ್-

ವಚನ:ಪದವಿಭಾಗ-

ಅರ್ಥ:ಅಂತು ಭೀಮಸೇನನು ಇಂದ್ರನಮೇಲೆ ವೇಳ್ವಂತೆ ಪೂರ್ವ ದಿಗ್ಭಾಗಕ್ಕೆ ವೇಳ್ದು,

(ಹಾಗೆ ಭೀಮಸೇನನನ್ನು ಇಂದ್ರನಮೇಲೆ ಬೀಳುವಂತೆ ಪೂರ್ವ ದಿಗ್ಭಾಗಕ್ಕೆ ವಿಜಯ ಯಾತ್ರೆಗೆ ಹೇಳಿ,) ನಕುಳನಂ ಯಮನಂ ಇದಿರ್ಪಲ್ವೇಳ್ವಂತೆ ದಕ್ಷಿಣದಿಗವಭಾಗಕ್ಕೆ ಬೆಸಸಿ (ನಕುಲನನ್ನು ಯಮನು ಇರುವ ದಕ್ಷಿಣದಿಕ್ಕಿನ ಭಾಗಕ್ಕೆ ನೇಮಿಸಿ) ಸಹದೇವನಂ ವರುಣನನು ಅದಿರ್ಪಲ್ (ನಡುಗುವಂತೆ)

ನಿಯಮಿಸುವಂತೆ
ಪಶ್ಚಿಮದಿಗ್ಭಾದಕ್ಕೆ ಪೇಳ್ದು
(ಸಹದೆವನನ್ನು ವರುಣನು
ಇರುವ ಪಶ್ಚಿಮದಿಗ್ಭಾದಕ್ಕೆ ಕಡೆ
ಶತ್ರುಗಳು ನಡುಗುವಹಾಗೆ
ನಿಯಮಿಸುವಂತೆ ಹೇಳಿ)
ವಿಕ್ರಮಾರ್ಜುನನಂ
ಕುಬೇರನಿಂ ಕಪ್ಪಂಗೊಳಲ್
ಸಮರ್ಪಿಸುವಂತೆ
ಉತ್ತರೋತ್ತರಂ ಆಗಲು
ಉತ್ತರದಿಶಾ ಭಾಗಕ್ಕೆ

ವೇಳ್ಡಾಗಲ್ (ಅರ್ಜುನನ್ನು ಕುಬೇರನಿಂದ ಕಪ್ಪತರುವನೋ ಎನ್ನುವಂತೆ ಉತ್ತರೋತ್ತರೇಳಿಗೆಯಾಗಲು ಉತ್ತರದಿಕ್ಕಿನ ಭಾಗಕ್ಕೆ ವಿಜಯ ಯಾತ್ರೆಗೆ ಹೇಳಿದಾಗ)-

:**ವಚನ**:**ಅರ್ಥ**:ಹಾಗೆ ಭೀಮಸೇನನ್ನು ಇಂದ್ರನಮೇಲೆ ಬೀಳುವಂತೆ ಪೂರ್ವ ದಿಗ್ಭಾಗಕ್ಕೆ ವಿಜಯ ಯಾತ್ರೆಗೆ ಹೇಳಿ, ನಕುಲನನ್ನು ಯಮನು

ಇರುವ ದಕ್ಷಿಣದಿಕ್ಕಿನ ಭಾಗಕ್ಕೆ
ನೇಮಿಸಿ, ಸಹದೇವನನ್ನು
ವರುಣನು ಇರುವ
ಪಶ್ಚಿಮದಿಗ್ಭಾದ ಕಡೆ ಶತ್ರುಗಳು
ನಡುಗುವಹಾಗೆ
ನಿಯಮಿಸುವಂತೆ ಹೇಳಿ,
ಅರ್ಜುನನ್ನು ಕುಬೇರನಿಂದ
ಕಪ್ಪತರುವನೋ ಎನ್ನುವಂತೆ
ಉತ್ತರೋತ್ತರ
ಏಳಿಗೆಯಾಗಲು ಉತ್ತರದಿಕ್ಕಿನ

ಭಾಗಕ್ಕೆ ವಿಜಯ ಯಾತ್ರೆಗೆ

ಹೇಳಿದಾಗ)-

ಚಂ|| ಅರಿ ನರಪಾಲ

ಮೌಳಿಮಣಿಯೊಳ್

ನೆಲೆಗೊಂಡುದು ಶಂಖಚಕ್ರ

ಚಾ

ಮರ ಹಳಚಿಹ್ನ ಚಿನ್ಹಿತ

ಪದಾಕೃತಿ ಬೀಸುವ

ಚಾಮರಾಳಿ ಸುಂ|

ದರಿಯರ ಕಯ್ಗಳಿಂ ಬರ್ದುಕಿ

ಬಳ್ದುವು ಬೆಳ್ಗೊಡೆ ನೋಡೆ

ನೋಡೆ ನಿಂ|
ದುರಿದುವು
ಸಾಲಭಂಜಿಕೆಗಳಳ್ತುವು
ವೈರಿನರೆಂದ್ರ ಗೇಹದೊಳ್ ||
೨೯||

ಪದ್ಯ-೨೯:ಪದವಿಭಾಗ-ಅರ್ಥ:ಅರಿ ನರಪಾಲ ಮೌಳಿಮಣಿಯೊಳ್ ನೆಲೆಗೊಂಡುದು ಶಂಖಚಕ್ರ ಚಾಮರ ಹಳಚಿಹ್ನ ಚಿನ್ನಿತ ಪದಾಕೃತಿ ಬೀಸುವ

ಚಾಮರಾಳಿ ಸುಂದರಿಯರ ಕಯ್ಗಳಿಂ ಬರ್ದುಕಿ ಬಳ್ದುವು ಬೆಳ್ಗೊಡೆ ನೋಡೆ ನೋಡೆ ನಿಂದುರಿದುವು ಸಾಲಭಂಜಿಕೆಗಳು ಅಳ್ತುವು ವೈರಿನರೆಂದ್ರ ಗೇಹದೊಳ್ (ಅರಮನೆಯಲ್ಲಿ)

:ಪದ್ಯ-೨೯:ಅರ್ಥ:ಶತ್ರುರಾಜರ ಕಿರೀಟ ರತ್ನಗಳಲ್ಲಿ ಶಂಖ,ಚಕ್ರ, ಚಾಮರ, ಹಳಚಿಹ್ನ /ನೇಗಿಲು, ಈ ಗುರುತುಗಳ

ಪಾದಗಳ ಆಕೃತಿ ಬೀಸುವ ಚಾಮರಾಗಳು- ಚಕ್ರವರ್ತಿಯ ಚಿಹ್ನೆಗಳು ಸುಂದರಿಯರ ಕೈಗಳಿಂದ ಬಿದ್ದವು; ನೋಡು ನೋಡುತ್ತಿದ್ದಂತೆ ಸ್ವೇಛತ್ರಗಳು ಬಿದ್ದವು, ಶತ್ರುರಾಜರ ಅರಮನೆಯ ಸಾಲಭಂಜಿಕೆಗಳು ಅತ್ತವು. ಹೀಗೆ ಅರ್ಜುನನಿಗೆ ವಿಜಯ ಚಿಹ್ನೆಗಳುಂಟಾದವು.

ವ|| ಅಂತು ವಿಜಯಂ ತನ್ನ
ದಿಗ್ವಿಜಯದೊಳಾಧ ವಿಜಯ
ಚಿಹ್ನೆಗಳ್ ಮುನ್ನಮೆ ನೆಗಳೆ
ವಿಜಯದ ಗುಡಿವಿಡಿಸಿ ಅರಿ
ನೃಪರಂ ಬೇಧಿಸಿ
ಪಾಂಚಾಳರಂ ಚಾಳಿಸಿ
ಗಾಂಧರ್ವರಂ ವಿರಥರಂ
ಮಾಡಿ ಕೌಳಾಧೀಶರಂ ಸಾಧಿಸಿ
ಕಿಂಪುರುಷರಂ
ಕಾಪುರುಷರ್ಮಾಡಿ
ಬಾಹ್ಲೀಕರನನೀಕರಿಸಿ

ಮಾಳವಿಗರಂ ಕೆಳಗಿವಿಯ್ಯಲೀಯದಾಟಂದು ನಿಜ ನಾಮಾಂಕಿತ ಸಾಯಕಗಳಿಂದೆಚ್ಚು ನಚ್ಚಂ ಕಿಡಿಸಿ-

ವಚನ:ಪದವಿಭಾಗ-

ಅರ್ಥ:ಅಂತು ವಿಜಯಂ ತನ್ನ ದಿಗ್ವಿಜಯದೊಳಾಧ ವಿಜಯ ಚಿಹ್ನೆಗಳ್ ಮುನ್ನಮೆ ನೆಗಳೆ ವಿಜಯದ ಗುಡಿವಿಡಿಸಿ ಅರಿ ನೃಪರಂ ಬೇಧಿಸಿ

ಪಾಂಚಾಳರಂ ಚಾಳಿಸಿ
ಗಾಂಧರ್ವರಂ ವಿರಥರಂ
ಮಾಡಿ ಕೌಳಾಧೀಶರಂ ಸಾಧಿಸಿ
ಕಿಂಪುರುಷರಂ ಕಾಪುರುಷರ್
ಮಾಡಿ ಬಾಹ್ಲೀಕರನು
ಅನನೀಕರಿಸಿ
(ಸೈನ್ಯರಹಿತರನ್ನಾಗಿ ಮಾಡಿ)
ಮಾಳವಿಗರಂ ಕೆಳಗಿವಿಯ್ಯಲು
ಈಯದೆ ಆಟಂದು
(ಉದಾಸೀನರಾಗಲು ಬಿಡದೆ
ಮೇಲೆ ಬಿದ್ದು) ನಿಜ

ನಾಮಾಂಕಿತ ಸಾಯಕಗಳಿಂದ ಎಚ್ಚು, ನಚ್ಚಂ ಕಿಡಿಸಿ (ನಂಬಿಕೆ ಕೆಡಿಸಿ)-

:ವಚನ:ಅರ್ಥ:ಹೀಗೆ ಅರ್ಜುನನು ತನ್ನ ದಿಗ್ವಿಜಯದಲ್ಲಿ ವಿಜಯ ಚಿಹ್ನೆಗಳನ್ನು ಮೊದಲೆ ಹೊಂದಲು, ವಿಜಯದ ಬಾವುಟ ಹಾರಿಸಿ, ಶತ್ರುರಾಜರನ್ನು ಬೇಧಿಸಿ, ಪಾಂಚಾಲರನ್ನು ಓಡಿಸಿ,ಸ

ಗಾಂಧರ್ವರನ್ನು ರಥವಿಲ್ಲದಂತೆ
ಮಾಡಿ, ಕೌಲರಾಜರನ್ನು
ಸೋಲಿಸಿ, ಕಿಂಪುರುಷರನ್ನು
ಕಾಪುರುಷರನ್ನಾಗಿ/
ಹೇಡಿಗಳನ್ನಾಗಿ ಮಾಡಿ
ಬಾಹ್ಲೀಕರನು
ಸೈನ್ಯರಹಿತರನ್ನಗಿ ಮಾಡಿ,
ಮಾಳವಿಗರನ್ನು
ಉದಾಸೀನರಾಗಲು ಬಿಡದೆ
ಮೇಲೆ ಬಿದ್ದು, ತನ್ನ
ನಾಮಾಂಕಿತ ಆಯುಧಗಳಿಂದ

ಹೊಡೆದು ಆತ್ಮವಿಶ್ವಾಸ ಕೆಡಿಸಿ

-

ಮ||ಉರದಿರ್ಪಂತೆಮಗಾವ

ಗರ್ವಮಿರಿಯಲ್ವೇಡೆ

ಮ್ಮನುಮ್ಮುಳ್ಳುದಂ

ನೆರೆ ಕೊಂಡೆಮ್ಮಯ

ಬಾಳ್ವೆಯೊಳ್ ನಿರಿಸುವಂ

ನೀನಿಂದು ತಂದಿತ್ತು ಕೆ||

ಯ್ಸರಿಯಂ ಕೊಟ್ಟಳವಟ್ಟ ಸಾರ

ಧನಮಂ ಮೂವಿಟ್ಟಿಗಂ

ಪೊಣ್ಡು ಕಾ

ಲ್ಗೆರಗಿತ್ತಂತರಿಗಂಗೆ ಬೆರ್ಚಿಭಯದಿಂ ಗ್ರಾಮ ಕುಳಂ ರಾಜಕಂ||೩೦||

ಪದ್ಯ-೩೦:ಪದವಿಭಾಗ-ಅರ್ಥ:ಉರದಿರ್ಪಂತೆ ಎಮಗಾವ ಗರ್ವಂ ಇರಿಯಲ್ವೇಡ ಎಮ್ಮನು(ನಿಮ್ಮನ್ನು ಲಕ್ಷ್ಯ ಮಾಡದಿರುವಂತೆ ನಮಗೆಯಾವ ಗರ್ವವಿದೆ? ನಮ್ಮನ್ನು ಸುಮ್ಮನೆ

ಯುದ್ಧಮಾಡಬೇಡ/
ಹೊಡೆಯಬೇಡ)
ಎಮ್ಮುಳ್ಳದಂ - ಎಮ್ಮ
ಉಳ್ಳುದಂ ನೆರೆ ಕೊಂಡು
ಎಮ್ಮಯ ಬಾಳ್ವೆಯೊಳ್
ನಿರಿಸುವಂ ನೀನು
(ನಮ್ಮಲ್ಲಿರುವುದನ್ನು
ಪೂರ್ಣವಾಗಿ ತೆಗೆದುಕೊಂಡು
ನಮ್ಮ ಬದುಕುಗಳಲ್ಲಿ
ಸ್ಥಿರತೆಯನ್ನು ಸ್ಥಾಪಿಸುವವನು
ನೀನು.) ಇಂದು ತಂದಿತ್ತು

ಕೆಯ್ಸರಿಯಂ ಕೊಟ್ಟು
ಅಳವಟ್ಟ (ಕೈಗೆ ಸಿಕ್ಕಿದ್ದ
ಸೆರೆಯಾಳುಗಳನ್ನು ಕೊಟ್ಟು
ಅಲತೆಗೆ ಒಳಪಟ್ಟ) ಸಾರ
ಧನಮಂ ಮೂವಿಟ್ಟಿಗಂ
ಪೊಣ್ದು (ಎಲ್ಲಾಹಣವನ್ನು
ಕೊಟ್ಟು, ಮೂರುವಿಧದ ಬಿಟ್ಟಿ
ಕೆಲಸ ಮಾಡವೆವೆಂದು
ಪೊಣ್ದು- ಭಾಷೆಕೊಟ್ಟು)
ಕಾಲ್ಗೆರಗಿತ್ತಂತು ಅರಿಗಂಗೆ
ಬೆರ್ಚಿ ಭಯದಿಂ ಗ್ರಾಮ

ಕುಳಂ ರಾಜಕಂ
(ಗ್ರಾಮದವರೂ
ಕುಲದವರೂ,ರಾಜರೂ,
ಅರ್ಜುನನಿಗೆ ಹೆದರಿ
ಭಯದಿಂದ ಕಾಲಿಗೆ ಬಿದ್ದು
ಹೀಗೆ ಕೇಳಿಕೊಂಡರು.)
:ಪದ್ಯ-೩೦:ಅರ್ಥ:ಗ್ರಾಮದ
ವರೂ ಕುಲದವರೂ,ರಾಜರೂ,
ಅರ್ಜುನನಿಗೆ ಹೆದರಿ
ಭಯದಿಂದ ಕಾಲಿಗೆ ಬಿದ್ದು
ಹೀಗೆ ಕೇಳಿಕೊಂಡರು.

ನಿಮ್ಮನ್ನು ಲಕ್ಷ್ಯ
ಮಾಡದಿರುವಂತೆ
ನಮಗೆಯಾವ ಗರ್ವವಿದೆ?
ನಮ್ಮನ್ನು ಸುಮ್ಮನೆ
ಯುದ್ಧಮಾಡಬೇಡ/
ಹೊಡೆಯಬೇಡ.
ನಮ್ಮಲ್ಲಿರುವುದನ್ನು
ಪೂರ್ಣವಾಗಿ ತೆಗೆದುಕೊಂಡು
ನಮ್ಮ ಬದುಕುಗಳಲ್ಲಿ
ಸ್ಥಿರತೆಯನ್ನು ಸ್ಥಾಪಿಸುವವನು
ನೀನು. ಕೈಗೆ ಸಿಕ್ಕಿದ್ದ

ಸೆರೆಯಾಳುಗಳನ್ನು ಕೊಟ್ಟು
ಅಳತೆಗೆ ಒಳಪಟ್ಟ ಎಲ್ಲಾ
ಹಣವನ್ನು ಕೊಟ್ಟು,
ಮೂರುವಿಧದ ಬಿಟ್ಟಿ ಕೆಲಸ
ಮಾಡವವೆಂದು ಪ್ರೊಣ್ಣು-
ಭಾಷೆಕೊಟ್ಟು ಅರ್ಜುನನಿಗೆ
ಹೆದರಿ ಭಯದಿಂದ ಕಾಲಿಗೆ
ಬಿದ್ದು ಹೀಗೆ ಕೇಳಿಕೊಂಡರು.

ವ|| ಮತ್ತಮಲ್ಲಿ ಕೆಲರಂ ಮೈತ್ರಾಸನ ವೃತ್ತಿಯೊಳ್ ನಿರಿಸಿ ಕೆಲರನುದ್ಧತಾ

ಪ್ರತಿಮಹಿತಮಾರ್ಗಾಡಿ
ಕೆಲರನುಚ್ಚಾಟಿಸಿ
ಸರ್ವಹರಣಂಗೆಯ್ದು
ಕಸರಮಲ್ಲಮನಿಂದ್ರಪ್ರಸ್ಥಕ್ಕೆ
ಕಳಿಪಿ ಕಾಶ್ಮೀರ ಹಿಮವಂತ
ಹೇಕಕೂಟ ಕೈಳಾಸ
ಪಾರಿಯಾತ್ರಸ್ವೇತಶೃಂಗ
ಗಂಧಮಾದನಗಿರಿ
ನಿಕಟವರ್ತಿಗಳಪ್ಪ
ಪರ್ವತರಾಜರನಪಗತತೇಜರ್
ಮಾಡಿ ಕಸವರಮಂ ಕೆಯ್ಗೆ

ಮಅಡಿ ಮೇರುಪರ್ವತದ
ತೆಂಕಣ ತಳ್ಪಲೊಳ್
ದ್ವಾದಶಯೋಜನ
ಪ್ರಮಾಣಮಪ್ಪ ಜಂಬೂವೃಕ್ಷದ
ಕೆಲದೊಳಡಸಿ ರಸದತೊರೆ
ಪರಿವಂತೆ ಕನಕಗಿರಿಯನಲೆದು
ಪರಿವ ಜಮಬೂನದಮೆಂಬ
ತೊರೆಯೊಳ್ ಪುಟ್ಟಿದ
ಜಾಂಬೂನದಮೆಂಬ ಪೊನ್ನ
ಪಾಸರಿಗಳಂ ಕಂಡು-

ವಚನ:ಪದವಿಭಾಗ-ಅರ್ಥ:ಮತ್ತಂ ಅಲ್ಲಿ ಕೆಲರಂ ಮೈತ್ರಾಸನ ವೃತ್ತಿಯೊಳ್ ನಿರಿಸಿ(ಮಿತ್ರರಾಗಿ ಇರಿಸಿ) ಕೆಲರನು ಉದ್ಧತಾ ಪ್ರತಿಂ ಅಹಿತಮರ್ಾಡಿ (ಉದ್ಧಟರನ್ನು ಅಹಿತರನ್ನು ಅದಕ್ಕೆ ಪ್ರತಿ-ವಿರುದ್ಧಮಾಡಿ, ಮಿತ್ರರನ್ನು ಮಾಡಿಕೊಂಡು) ಕೆಲರನುಚ್ಚಾಟಿಸಿ (ಕೆಲವರನ್ನು ಓಡಿಸಿ,) ಸರ್ವಹರಣಂಗೆಯ್ದು

ಕಸರಮಲ್ಲಮನು
ಇಂದ್ರಪ್ರಸ್ಥಕ್ಕೆ ಕಳಿಪಿ
(ಸರ್ವನ್ನೂ ತೆಗೆದುಕೊಂಡು
ಚಿನ್ನವನ್ನೆಲ್ಲಾ ಇಂದ್ರಪ್ರಸ್ಥಕ್ಕೆ
ಕಳಿಸಿದನು.-) ಕಾಶ್ಮೀರ
ಹಿಮವಂತ ಹೇಕಕೂಟ
ಕೈಳಾಸ
ಪಾರಿಯಾತ್ರಸ್ವೇತಶೃಂಗ
ಗಂಧಮಾದನಗಿರಿ
ನಿಕಟವರ್ತಿಗಳಪ್ಪ
ಪರ್ವತರಾಜರನು ಅಪಗತ

ತೇಜಮರ್ಾಡಿ (ಕಾಶ್ಮೀರ,
ಹಿಮವಂತ, ಹೇಕಕೂಟ,
ಕೈಲಾಸ, ಪಾರಿಯಾತ್ರ,
ಸ್ವೇತಶೃಂಗ, ಗಂಧಮಾದನಗಿರಿ,
ನಿಕಟವರ್ತಿಗಳಪ್ಪ
ಪರ್ವತರಾಜರನ್ನು ಸೋಲಿಸಿ)
ಕಸವರಮಂ ಕೆಯ್ಗೆ ಮಾಡಿ
(ಚಿನ್ನವನ್ನೆಲ್ಲಾ ಕಸಿದುಕೊಂಡು)
ಮೇರುಪರ್ವತದ ತೆಂಕಣ
ತಳ್ಪಲೊಳ್ (ಮೇರುಪರ್ವತದ
ದಕ್ಷಿಣ ತಪ್ಪಲಿನಲ್ಲಿ)

ದ್ವಾದಶಯೋಜನ
ಪ್ರಮಾಣಮಪ್ಪ ಜಂಬೂವೃಕ್ಷದ
ಕೆಲದೊಳು
(ಹನ್ನೆರಡುಯೋಜನ
ಪ್ರಮಾಣವಿರುವ
ಜಂಬೂವೃಕ್ಷದ ಪಕ್ಕದಲ್ಲಿ)
ಅಡಸಿ ರಸದತೊರೆ ಪರಿವಂತೆ
(ಅಗೆದು ಕೊರೆದು ಪಾದರಸದ
ನದಿಯುಹರಿಯುವಂತೆ)
ಕನಕಗಿರಿಯನು ಅಲೆದು
ಪರಿವ ಜಂಬೂನದಮೆಂಬ

ತೊರೆಯೊಳ್ ಪುಟ್ಟಿದ (ಕನಕಗಿರಿಯನು ಸುತ್ತಾಡಿ ಅಲ್ಲಿ ಹರಿಯುವ ಜಂಬೂನದಮೆಂಬ ನದಿಯಲ್ಲಿ ಹುಟ್ಟಿದ) ಜಾಂಬೂನದಮೆಂಬ ಪೊನ್ನ ಪಾಸರಿಗಳಂ ಕಂಡು(ಜಾಂಬೂನದವೆಂಬ ಚಿನ್ನದ ಹಾಸುಬಂಡೆಗಳನ್ನು ನೋಡಿದನು/ ಕಂಡು)-

:ವಚನ:ಅರ್ಥ:ಮತ್ತೆ ಅಲ್ಲಿ ಕೆಲವರನ್ನು ಮಿತ್ರರಾಗಿ ಇರಿಸಿ,

ಕೆಲವು ಉದ್ಧಟರನ್ನು
ಅಹಿತರನ್ನು ಮಿತ್ರರನ್ನು
ಮಾಡಿಕೊಂಡು, ಕೆಲವರನ್ನು
ಓಡಿಸಿ, ಸರ್ವನ್ನೂ
ತೆಗೆದುಕೊಂಡು ಚಿನ್ನವನ್ನೆಲ್ಲಾ
ಇಂದ್ರಪ್ರಸ್ಥಕ್ಕೆ ಕಳಿಸಿದನು.
ಕಾಶ್ಮೀರ, ಹಿಮವಂತ,
ಹೇಕಕೂಟ, ಕೈಲಾಸ,
ಪಾರಿಯಾತ್ರ, ಸ್ವೇತಶೃಂಗ,
ಗಂಧಮಾದನಗಿರಿ,
ನಿಕಟವರ್ತಿಗಳಪ್ಪ

ಪರ್ವತರಾಜರನ್ನು ಸೋಲಿಸಿ
ಚಿನ್ನವನ್ನೆಲ್ಲಾ ಕಸಿದುಕೊಂಡು,
ಮೇರುಪರ್ವತದ ದಕ್ಷಿಣ
ತಪ್ಪಲಿನಲ್ಲಿ
ಹನ್ನೆರಡುಯೋಜನ
ಪ್ರಮಾಣವಿರುವ
ಜಂಬೂವೃಕ್ಷದ ಪಕ್ಕದಲ್ಲಿ
ಅಗೆದು ಕೊರೆದು ಪಾದರಸದ
ನದಿಯು ಹರಿಯುವಂತೆ
ಮಾಡಿ, ಕನಕಗಿರಿಯನ್ನು ಸುತ್ತಿ,
ಸುತ್ತಾಡಿ ಅಲ್ಲಿ ಹರಿಯುವ

ಜಂಬೂನದಮೆಂಬ ನದಿಯಲ್ಲಿ ಹುಟ್ಟಿದ ಜಾಂಬೂನದವೆಂಬ ಚಿನ್ನದ ಹಾಸುಬಂಡೆಗಳನ್ನು ನೋಡಿದನು/ ಕಂಡು)-

ಕಂ|| ಗಾಂಡೀವದ
ಕೊಪ್ಪುಗಳೊಳ್
ಖಂಡಿಸಿ ತತ್ತಟದ ಕನಕ
**ರೇಣುವನವನಾ **
ಖಂಡಲತನಯನಸುಂಗೊಳೆ
ಖಂಡಿಸಿದಂ ನಿಶಿತ ಪರಷು
ಶರಸಮಿತಿಗಳಂ||೩೧||31||

ಪದ್ಯ-೩೧:ಪದವಿಭಾಗ-ಅರ್ಥ:ಗಾಂಡೀವದ ಕೊಪ್ಪುಗಳೊಳ್ ಖಂಡಿಸಿ (ಗಾಂಡೀವದ ತುದಿಯಿಂದ ಕತ್ತರಿಸಿ) ತತ್ತಟದ ಕನಕ ರೇಣುವನು (ಆದರ ತಡಿಯಲ್ಲಿದ್ದ ಚಿನ್ನದ ಹಾಸನ್ನು) ಆ ಖಂಡಲತನಯಂ (ಅರ್ಜುನನು) ಅಸುಂಗೊಳೆ ಖಂಡಿಸಿದಂ (ಸಚೇತನವಾಗಿ ಕತ್ತರಿಸಿದನು) ನಿಶಿತ ಪರಷು

ಶರಸಮಿತಿಗಳಂ(ಹರಿತವಾದ ಕೊಡಲಿ ಬಾಣಗಳಿಂದ) **:ಪದ್ಯ-೩೧:ಅರ್ಥ**:ಅರ್ಜುನನು ಜಾಂಬೂನದವೆಂಬ ಚಿನ್ನದ ಹಾಸುಬಂಡೆಗಳನ್ನು - ಗಾಂಡೀವದ ತುದಿಯಿಂದ ಕತ್ತರಿಸಿ, ಆದರ ತಡಿಯಲ್ಲಿದ್ದ ಚಿನ್ನದ ಹಾಸನ್ನು ಹರಿತವಾದ ಕೊಡಲಿ ಬಾಣಗಳಿಂದ ಸಚೇತನವಾಗಿ ಕತ್ತರಿಸಿದನು.

ವ|| ಅಂತು ಕನಕ ರೇಣುಗಳ್ ಪುಟ್ಟಿದ ಪಾಸರಿಗಳುಮಂ (ಹಾಗೆ ಚಿನ್ನದ ರೇಣುಗಳು ಹುಟ್ಟಿರುವ ಹಾಸುಕಲ್ಲುಗಳನ್ನು) ಕನಕದ ಪಿರಿಯ ಸಲೆಗಳುಮನೊಟ್ಟಿ ಬೆಟ್ಟಾಗಿ ಪುಂಗಿಸಿ-

ವಚನ:ಪದವಿಭಾಗ-

ಅರ್ಥ:ಅಂತು ಕನಕ ರೇಣುಗಳ್ ಪುಟ್ಟಿದ ಪಾಸರಿಗಳುಮಂ (ಹಾಗೆ

ಚಿನ್ನದ ರೇಣುಗಳು ಹುಟ್ಟಿರುವ ಹಾಸುಕಲ್ಲುಗಳನ್ನು) ಕನಕದ ಪಿರಿಯ ಸಲೆಗಳುಮಂ ಒನಟ್ಟಿ ಬೆಟ್ಟಾಗಿ ಪುಂಗಿಸಿ (ಚಿನ್ನದ ದೊಡ್ಡ ಶಿಲೆಗಳನ್ನು ಒಟ್ಟು ಸೇರಿಸಿ ದೊಡ್ಡ ರಾಶ ಮಾಡಿ)-

:**ವಚನ**:**ಅರ್ಥ**:ಹಾಗೆ ಚಿನ್ನದ ರೇಣುಗಳು ಹುಟ್ಟಿರುವ ಹಾಸುಕಲ್ಲುಗಳನ್ನು ಚಿನ್ನದ ದೊಡ್ಡ ಶಿಲೆಗಳನ್ನು ಒಟ್ಟು ಸೇರಿಸಿ ದೊಡ್ಡ ರಾಶ ಮಾಡಿ-

ಚಂ|| ಬರಿಸಿ ಘಟೋತ್ಕಚಂ
ಬೆರಸು
ದಾನವಸೇನೆಯನೀಗಳೀ
ಬಲಂ
ಬೆರಸಿವನಿಂತು ಪೊತ್ತು ನೆಡ
ನಮ್ಮ ಪುರಕ್ಕೆನೆ ತದ್ಗಿರೀಮದ್ರ
ಕಂ |
ದರ
ಕನಕಾಚಳಂಗಳೆನಿತುಂಟನಿತಂ
ತವೆ ಹೇಮ ರೇಣುಗ

ಳ್ವರಸು ಕಡಂಗಿ ಪೊತ್ತು ನಡದತ್ತು ಘಟೋತ್ಕಚ ರೌದ್ರಸಾಧನಂ||೩೨||

ಪದ್ಯ-೩೨:ಪದವಿಭಾಗ-ಅರ್ಥ:ಬರಿಸಿ ಘಟೋತ್ಕಚಂ ಬೆರಸು (ಸಮೇತ) ದಾನವಸೇನೆಯಂ ಈಗಳು ಈ ಬಲಂ ಬೆರಸು (ದಾನವರ ಸೇನೆಯನ್ನು ಬರಮಾಡಿಕೊಂಡು ಘಟೋತ್ಕಚನ ಸಹಿತ,)

ಅವನಿಂತು ಪೊತ್ತು ನೆಡ ನಮ್ಮ
ಪುರಕ್ಕೆ ಎನೆ (ನಮ್ಮ ನಗರಕ್ಕೆ
ಅವೆಲ್ಲವನ್ನೂ ಹೊತ್ತುಕೊಂಡು
ಹೋಗು ಎನ್ನಲು)
ತದ್ಗಿರೀಮದ್ರ ಕಂದರ
ಕನಕಾಚಳಂಗಳಂ (ಅಚಲ-
ಬೆಟ್ಟ)) ಇನಿತುಂಟು
ಅನಿತಂ(ತದ್ ಗಿರೀಂದ್ರ- ಆ
ಬೆಟ್ಟದ ಕಣಿವೆಗಳಲ್ಲಿರುವ
ಚಿನ್ನದ ಬೆಟ್ಟಗಳನ್ನು
ಎಷ್ಟಿವೆಯೋ ಅಷ್ಟನ್ನೂ) ತವೆ

ಹೇಮ ರೇಣುಗಳ್ವರಸು
ಕಡಂಗಿ ಪೊತ್ತು ನಡದತ್ತು
ಘಟೋತ್ಕಚ ರೌದ್ರಸಾಧನಂ
(ತವೆ- ಮತ್ತೆ/
ಮುಗಿದುಹೋಗುವಷ್ಟು
ಚಿನ್ನದ ರೇಣು/ಧೂಳುಗಳ
ಸಮೇತ ಉತ್ಸಾಹದಿಂದ
ಹೊತ್ತು ನಡೆಯಿತು
ಘಟೋತ್ಕಚನ ಭಯಂಕರ
ಸೈನ್ಯ)

:ಪದ್ಯ-೩೨:ಅರ್ಥ:ಘಟೋತ್ಕ
ಚನ ಸಹಿತ ದಾನವರ
ಸೇನೆಯನ್ನು
ಬರಮಾಡಿಕೊಂಡು, ಆ ಬೆಟ್ಟದ
ಕಣಿವೆಗಳಲ್ಲಿರುವ ಚಿನ್ನದ
ಬೆಟ್ಟಗಳನ್ನು ಎಷ್ಟಿವೆಯೋ
ಅಷ್ಟನ್ನೂ, ನಮ್ಮ ನಗರಕ್ಕೆ
ಅವೆಲ್ಲವನ್ನೂ ಹೊತ್ತುಕೊಂಡು
ಹೋಗು ಎನ್ನಲು
ಘಟೋತ್ಕಚನ ಭಯಂಕರ
ಸೈನ್ಯ ಅಲ್ಲಿರುವುದು

ಮುಗಿದುಹೋಗುವಷ್ಟು
ಚಿನ್ನದ ರೇಣು/ಧೂಳುಗಳ
ಸಮೇತ ಉತ್ಸಾಹದಿಂದ
ಹೊತ್ತು ನಡೆಯಿತು.

ವ|| ಆಗಳ್ ಪರಾಕ್ರಮ ಧವಳಂ ತನ್ನ ಪರಾಕ್ರಮಮಂ ಮೆರೆಯಲೆಂದು ಕೈಳಾಸದ ಮೇಗಣ್ಗೆ ವಂದು ಕುಬೇರನಿಂ ಕಪ್ಪಗೊಂಡು ಪೊನ್ನಂ ಜಕ್ಕರೆಕ್ಕೆಯಿಂ ಪೊತ್ತುಬರೆ ತಡೆಯದೆ ಇಂದ್ರಪ್ರಸ್ಥಕ್ಕೆ

ಬಂದನಿತ್ತ ಭೀಮನುಂ
ಮೂಡಣದಿಶಾ ಭಾಗಮಂ
ಬಾಯ್ಕೇಳಿಸಿ ದೇವೇಂದ್ರನ
ವಜ್ರಮುಮಂ
ಇಂದ್ರಾಣಿಯಕೈಗನ್ನಡಿಯುಮು
ಳಿಯೆ ಸಮಸ್ತ ವಸ್ತುಗಳಂ
ತಂದಂ. ಸಹದೇವನುಂ
ಪಡುವಣದೆಸೆಯ
ಮಂಡಳಿಕರನದರ್ಪಿಯುಮು
ದಿರ್ಪಿಯುಂ ಕೊಂಡು
ವರುಣನ ಮಕರುಮಂ

ವರುಣಾನಿಯ ಕೊರಲೊಳಯ್ದೆ
ಮಿನುಗುಮುಳಿಯೆಯುಳಿದ
ವಸ್ತಗಳೆಲ್ಲಮುಂ ತಂದು
ಮುಂದಿಟ್ಟಂ ನಕಳನಂ
ತೆಂಕಣದೆಸೆಯ ಮಲೆಪರಂ
ಮಂಡಳಿಕರುಮನಸಿಯರಾಗೆ
ಕವರ್ದುಕೊಂಡು
ಲಂಕೆಯಮೇಗೆ ನೆಡೆದು
ವಿಭೀಷಣಂ ತನಗೆ
ಬಾಯ್ಕೇಳದಿರ್ದೊಡೆ

ವಿಕ್ರಮಾರ್ಜುನಂಗೆ ಪೇಳ್ದಟ್ಟಿದೊಡೆ-

ವಚನ:ಪದವಿಭಾಗ-ಅರ್ಥ:ಆಗಳ್ ಪರಾಕ್ರಮ ಧವಳಂ ತನ್ನ ಪರಾಕ್ರಮಮಂ ಮೆರೆಯಲೆಂದು ಕೈಳಾಸದ ಮೇಗಣ್ಗೆ ವಂದು ಕುಬೇರನಿಂ ಕಪ್ಪಗೊಂಡು ಪೊನ್ನಂ ಜಕ್ಕರು (ಯಕ್ಷರು) ಎಕ್ಕೆಯಿಂ (ಒಟ್ಟಾಗಿ) ಪೊತ್ತುಬರೆ ತಡೆಯದೆ ಇಂದ್ರಪ್ರಸ್ಥಕ್ಕೆ

ಬಂದನು. ಇತ್ತ ಭೀಮನುಂ ಮೂಡಣ (ಪೂರ್ವ)ದಿಶಾ ಭಾಗಮಂ ಬಾಯ್ಕೇಳಿಸಿ (ವಿಧೇಯರನ್ನಾಗಿಸಿ) ದೇವೇಂದ್ರನ ವಜ್ರಮುಮಂ ಇಂದ್ರಾಣಿಯ ಕೈಗನ್ನಡಿಯುಂ ಉಳಿಯೆ ಸಮಸ್ತ ವಸ್ತುಗಳಂ ತಂದಂ. ಸಹದೇವನುಂ ಪಡುವಣದೆಸೆಯ (ಪಶ್ಚಿಮ) ಮಂಡಳಿಕರನು ಅದರ್ಪಿಯುಂ

ಉದಿರ್ಪಿಯುಂ (ನಡುಗಿಸಿ
ಉದುರಿಸಿ) ಕೊಂಡು
ವರುಣನ ಮಕರುಮಂ
ವರುಣಾನಿಯ ಕೊರಲೊಳು
ಅಯ್ದೆ ಮಿನುಗುಂ
ಉಳಿಯೆಯುಳಿದ
ವಸ್ತಗಳೆಲ್ಲಮುಂ ತಂದು
ಮುಂದಿಟ್ಟಂ ನಕಳನಂ ತೆಂಕಣ
(ದಕ್ಷಿಣ) ದೆಸೆಯ ಮಲೆಪರಂ
ಮಂಡಳಿಕರುಮನು
ಅಸಿಯರಾಗೆ

(ದುರ್ಬಲರಾಗಲು)
ಕವರ್ದುಕೊಂಡು
ಲಂಕೆಯಮೇಗೆ ನೆಡೆದು
ವಿಭೀಷಣಂ ತನಗೆ
ಬಾಯ್ಕೇಳದಿರ್ದೊಡೆ
ವಿಕ್ರಮಾರ್ಜುನಂಗೆ
ಪೇಳ್ದಟ್ಟಿದೊಡೆ-
:ವಚನ:ಅರ್ಥ:ಆಗ
ಪರಾಕ್ರಮಧವಳ ಅರ್ಜುನನು
ತನ್ನ ಪರಾಕ್ರಮವನ್ನು
ಮೆರೆಯಲು ಕೈಲಾಸದ ಮೇಲೆ

ವಂದು ಕುಬೇರನಿಂದ
ಕಪ್ಪಪಡೆದು ಯಕ್ಷರು ಒಟ್ಟಾಗಿ
ಚಿನ್ನವನ್ನು ಹೊತ್ತುಬರಲ,
ತಡೆಯದೆ ಇಂದ್ರಪ್ರಸ್ಥಕ್ಕೆ
ಬಂದನು. ಇತ್ತ ಭೀಮನು
ಪೂರ್ವದಿಕ್ಕಿನವರನ್ನು
ವಿಧೇಯರನ್ನಾಗಿಸಿ,
ದೇವೇಂದ್ರನ
ವಜ್ರಾಯುಧವನ್ನೂ,
ಇಂದ್ರಾಣಿಯ
ಕೈಗನ್ನಡಿಯುನ್ನೂ ಬಿಟ್ಟು

ಉಳಿದ ಸಮಸ್ತ ವಸ್ತುಗಳನ್ನು ತಂದನು. ಸಹದೇವನು ಪಶ್ಚಿಮ ಮಾಂಡಳೀಕರನ್ನು ನಡುಗಿಸಿ ಉದುರಿಸಿ/ ಕೆಡವಿಕೊಂಡು ವರುಣನ ವಾಹನ ಮಕರುವನ್ನೂ ವರುಣಾನಿಯ ಕೊರಳೊಳು ಇದ್ದ ಮಿನುಗುತಾಳಿಯನ್ನೂ ಬಿಟ್ಟು ಉಳಿದ ವಸ್ತಗಳೆಲ್ಲಮುಂ ತಂದು ಮುಂದಿಟ್ಟನು. ನಕುಲನು

ದಕ್ಷಿಣ ದೆಸೆಯ
ವಿರೋಧಿಗಳನ್ನು
ಮಂಡಳಿಕರನ್ನೂ
ದುರ್ಬಲರಾಗಿಮಾಡಿ
ಕಸಿದುಕೊಂಡು
ಲಂಕೆಯಮೇಲೆ ನಡೆದನು.
ಅಲ್ಲಿ ವಿಭೀಷಣನು ತನಗೆ
ಅಧೀನನಾಗದಿರಲು
ಅರ್ಜುನನಿಗೆ ಕರೆಕಳಿಸಿದನು
ಆಗ-

ಉ|| ತೊಂಡಿನೊಳ್ಕುರ್ಕಿ
ಕೆಟ್ಟುದಶಕಂಠನನಕ್ಕಟಕೊಂಡ
ಪೆರ್ಮರುಳ್
ಕೊಂಡುದೆ ತನ್ನುಮಂಬಿಸುಡು
ನೀಂ ಬಲಗರ್ಮವನಾ
ಸಮುದ್ರ ಮೇ|
ಬಂಡಮೊ ಪಾಯ್ದೊಡೆಂದು
ನಿಜ ಸಾಯಕದೊಳ್
ಬರದೆಚ್ಚು ಕಪ್ಪಮಂ
ಕೊಂಡನವುಂಕಿ ಲಂಕೆಯ
ವಿಭೀಷಣಾನಂ

ಪರಸೈನ್ಯಭೈರವಂ||೩೩||

ಪದ್ಯ-00:ಪದವಿಭಾಗ-ಅರ್ಥ:ತೊಂಡಿನೊಳು ಉರ್ಕಿ ಕೆಟ್ಟ ದಶಕಂಠನನು ಅಕ್ಕಟ ಕೊಂಡ (ಹಿಡಿದ ಭೂತ->) ಪೆರ್ಮರುಳ್ ಕೊಂಡುದೆ ತನ್ನುಮಂ(ದುಷ್ಟತನದಿಂದ ಸೊಕ್ಕಿ ಕೆಟ್ಟ ಆ ರಾವಣನನ್ನು ಹಿಡಿದ ಭೂತ ಹಿಡಿಯಿತೆ?) ಬಿಸುಡು ನೀಂ ಬಲಗರ್ಮವನು (ನೀನು

ಗರ್ವವನ್ನು ಬಿಡು) ಆ
ಸಮುದ್ರಂ ಏಂ ಬಂಡಮೊ
(ಏನು ದೊಡ್ಡದೋ)
ಪಾಯ್ದೊಡೆ (ಹಾಯಿದರೆ)
ಎಂದು ನಿಜ ಸಾಯಕದೊಳ್
ಬರದು ಎಚ್ಚು (ತನ್ನ
ಬಾಣದಲ್ಲಿ ಬರೆದು
ಹೋಡೆದು) ಕಪ್ಪಮಂ
ಕೊಂಡು ಅವುಂಕಿ (ಒತ್ತಿ)
ಲಂಕೆಯ ವಿಭೀಷಣನಂ

ಪರಸೈನ್ಯಭೈರವಂ(ಅರ್ಜುನ
ನು)
:ಪದ್ಯ-00:ಅರ್ಥ:ದುಷ್ಟತನ
ದಿಂದ ಸೊಕ್ಕಿ ಕೆಟ್ಟ ಆ
ರಾವಣನನ್ನು ಹಿಡಿದ ಭೂತ
ನಿನಗೆ ಹಿಡಿಯಿತೆ? ನೀನು
ಗರ್ವವನ್ನು ಬಿಡು .ಆ
ಸಮುದ್ರಂ ಹಾಯಿದರೆ ಏನು
ದೊಡ್ಡದೋ! ಎಂದುತನ್ನ
ಬಾಣದಲ್ಲಿ ಬರೆದು
ಪರಸೈನ್ಯಭೈರವ ಅರ್ಜುನನು

ಲಂಕೆಯ ವಿಭೀಷಣನನ್ನು ಹೊಡೆದು ಒತ್ತಿ ಕಪ್ಪವನ್ನು ಕೊಂಡನು.

<u>ರಾಜಸುಯ ಯಾಗದ ವಿವರ</u>

ವ||ಅಂತುಂ ನಾಲ್ಕು ಸಮುದ್ರಂಗಳ ನೀರುಳಿಯೆ ರತುನಂಗಳುಮಂ ದಿಶಾಗಜಂಗಳುಳಿಯೆ ಗಜಂಗಳುಮಂ ಆದಿತ್ಯನ ಕುದುರೆಗಳುಳಿಯೆ

ಕುದುರೆಗಳುಮಂ ದೇವೇಂದ್ರನ
ಸುರಭಿಯುಮನೀಶ್ವರನ
ನಂದಿಯುಮುಳಿಯೆ
ಗೋವ್ರಜಂಗಳು
ಮನಿಂದ್ರಪ್ರಸ್ಥಕ್ಕೆ
ತೆರಳ್ಚಿನಾರಾಯಣನ
ಮತದೊಳ್
ಹಸ್ತಿನಾಪುರದೊಳಿರ್ದ
ದೃತರಾಷ್ಟ್ರ ವಿದುರ ಗಾಂಗೇಯ
ದ್ರೋಣಾಶ್ವತ್ಥಾಮ ಕೃಪ
ಬಾಹ್ಲೀಕ ಸೋಮದತ್ತ ಭಗದತ್ತ

ಭೂರಿಶ್ರವ ಕರ್ಣ ಶಲ್ಯಶಕುನಿ
ಸೈಂಧವ ದುರ್ಯೋಧನ
ದುಶ್ಶ್ಯಾಸಾದಿಗಳ್ಗೆಲ್ಲಂ
ಬಳಿಯನಟ್ಟಿ ಬರಿಸಿ
ಶಿಶುಪಾಲಾದಿಗಳಪ್ಪ
ನೇಕಾಧೀಶ್ವರರೆಲ್ಲರುಮಂ
ಬರಿಸಿ ವ್ಯಾಸರ್ ಮೊದಲಾಗೆ
ಬ್ರಹ್ಮಋಷಿಯರುರುಮೆಲ್ಲರು
ಮಂ ಬರಿಸಿ ತುಳಿಲ ಪರಕೆಯ
ಸಮಾನ ಪ್ರತಿಪತ್ತಿಯಿಂ
ಕಿರಿವಿರಿಯರರಿದು

ಪೊಡಮಟ್ಟು
ಪರಸಿಯಪ್ಪಿಕೊಂಡು ನುಡಿದು
ನೋಡಿಯುಂ ನಕ್ಕು
ಕಯ್ಯಂಪಿಡಿದು ಬಲ್ಲಿದಿರೆ
ಎಂದು ಪ್ರಿಯದೊಳಂ
ಬಿರ್ದಿನೊಳಂ ಸಂತಸಂಬಡಿಸಿ
ಶುಭ ದಿನ ವಾರ ನಕ್ಷತ್ರ ಯೋಗ
ಕರಣ
ಮುಹೂರ್ತದೊಳಿಂದ್ರಪ್ರಸ್ಥಕ್ಕೆ
ಉತ್ತರದಿಗ್ಭಾಗದೊಳ್ ಸಹಸ್ರ
ಯೋಜನ ಪ್ರಮಾಣದೊಳ್

ಯಾಗಮಂಟಪಮಂ ಸಮೆದು
ಮಯನುಕೊಟ್ಟ
ಸಭಾಮಂಟಪದೊಳ್
ಬ್ರಹ್ಮಋಷಿಯರುಮನರಸುಮ
ಕ್ಕಳುಮನೆಡೆಯಿರಿದಿರಿಸಿ
ಯಜ್ಞದ್ರವ್ಯಗಳೆಲ್ಲಮುಂ ನೆರಪಿ
ಮಹಾ ವಿಭವದೊಳ್
ಶಮೀಪಾರ್ಶ್ವತಳ
ದಕ್ಷಿಣಶಾಲೆಯೊಳ್
ಹಿರಣ್ಯಾದಾನಮಂ ಮಾಡಿ
ವೇದಿನಿಹಿತಂಗಳಪ್ಪಾಹವನೀ

ಯ
ದಕ್ಷಿಣಗಾರ್ಹ್ಯಪತ್ಯಂಗಗಳೆಂಬ
ಮೂರು
ಕೊಂಡಗಳೊಳುತ್ತರವೇದಿಯೊ
ಳ್ ಅಗ್ನಿಸಂಧಾನಂಗಯ್ದು
ವ್ಯಾಸ ಕಶ್ಯಪ ವಿಶ್ವಾಮಿತ್ರ
ಭಾರದ್ವಾಜ
ಬ್ರಹ್ಮಾಧ್ವರ್ಯಾಗ್ನೀದ್ರ
ಮೈತ್ರಾವರುಣಾಗ್ನಿ
ಪರಿಚಾರಕೋದ್ಘಾತೃ ನೇತೃ
ಹೋತೃ ಜಮದಗ್ನ್ಯಾದಿಗಳಪ್ಪ

ಷೋಡಶತ್ರ್ವಿಜಂಗಳಂ

ಬೇಳಲ್ವೇಳ್ದು ಧರ್ಮಪುತ್ರಂ

ಸಪತ್ನಿ

ಯಜಮಾನನಾಗಿರ್ದಾಗಳ್-

ವಚನ:ಪದವಿಭಾಗ-

ಅರ್ಥ:ಕೆಳಗೆ

ಪ್ರತಿಪದಅರ್ಥಕೊಟ್ಟಿದೆ-

:ವಚನ:ಅರ್ಥ:ಹಾಗೆ ನಾಲ್ಕು

ಸಮುದ್ರಗಳ ನೀರನ್ನು

ಉಳಿಯೆ- ಬಿಟ್ಟು ಮಿಕ್ಕ

ರತ್ನಗಳನ್ನೂ, ದಿಗ್ಗಜಗಳನ್ನೂ

ಬಿಟ್ಟು, ಗಜಗಳನ್ನೂ ಆದಿತ್ಯನ ಕುದುರೆಗಳನ್ನು ಬಿಟ್ಟು (ಉಳಿಯೆ) ಎಲ್ಲಾ ಕುದುರೆಗಳನ್ನೂ, ದೇವೇಂದ್ರನ ಸುರಭಿಯನ್ನು ಈಶ್ವರನ ನಂದಿಯನ್ನು ಉಳಿಯೆ-ಬಿಟ್ಟು ಗೋವಿನ ಸಮೂಹಗಳನ್ನು ಇಂದ್ರಪ್ರಸ್ಥಕ್ಕೆ ತಲುಪಿಸಿದರು. ನಂತರ ನಾರಾಯಣನ/ ಶ್ರೀಕೃಷ್ಣನ ಅಭಿಪ್ರಾಯದಂತೆ ಹಸ್ತಿನಾಪುರದಲ್ಲಿ ಇದ್ದ,

ದೃತರಾಷ್ಟ್ರ ವಿದುರ ಗಾಂಗೇಯ
ದ್ರೋಣ ಅಶ್ವತ್ಥಾಮ ಕೃಪ
ಬಾಹ್ಲೀಕ ಸೋಮದತ್ತ
ಭಗದತ್ತ ಭೂರಿಶ್ರವ ಕರ್ಣ
ಶಲ್ಯ ಶಕುನಿ ಸೈಂಧವ
ದುರ್ಯೋಧನ ದುಶ್ಶ್ಯಾಸಾದಿ
ಎಲ್ಲರನ್ನೂ ಬಳಿಯನು ಅಟ್ಟಿ/
ದೂರನ್ನು ಕಳಿಸಿ
ಕರೆಸಿಕೊಂಡರು.
ಶಿಶುಪಾಲಾದಿಗಳಾದ ಅನೇಕ
ಅಧೀಶ್ವರರು ಎಲ್ಲರನ್ನು

ಬರಮಾಡಿಕೊಂಡರು.
ವ್ಯಾಸರು ಮೊದಲಾಗಿ
ಬ್ರಹ್ಮಋಷಿಗಳೆಲ್ಲರನ್ನೂ ಕರೆಸಿ
ತುಳಿಲ/ನಮಸ್ಕಾರಕ್ಕೆ
ಪರಕೆಯ/ ಆಶೀರ್ವಾದಕ್ಕೆ
ಸಮಾನ ಪ್ರತಿಪತ್ತಿಯ/
ಯೋಗ್ಯವಾದ ಸತ್ಕಾರದಿಂದ
ಕಿರಿವಿರಿಯರನ್ನು ಅರಿತು
ನಮಿಸಿ ಹರಸಿ- ಅಪ್ಪಿಕೊಂಡು,
ಮಾತನಾಡಿಸಿ, ನೋಡಿ ನಕ್ಕು,
ಕಯ್ಯನ್ನು ಹಿಡಿದು ಬಲ್ಲಿದಿರೆ/

ಕ್ಷೇಮವೇ? ಎಂದು
ಪ್ರಿಯದಿಂದಕೇಳಿ, ಬಿರ್ದಿನಲ್ಲಿ/
ಊಟದಲ್ಲಿ ಸಂತಸಪಡಿಸಿ,
ಶುಭ ದಿನ ವಾರ ನಕ್ಷತ್ರ
ಯೋಗ ಕರಣ
ಮುಹೂರ್ತದಲ್ಲಿ ಇಂದ್ರಪ್ರಸ್ಥಕ್ಕೆ
ಉತ್ತರದಿಗ್ಭಾಗದಲ್ಲಿ ಸಹಸ್ರ
ಯೋಜನ ಪ್ರಮಾಣದಲ್ಲಿ
ಯಾಗಮಂಟಪವನ್ನು
ಸಮೆದು/ರಚಿಸಿ
ಮಯನುಕೊಟ್ಟ

ಸಭಾಮಂಟಪದಲ್ಲಿ
ಬ್ರಹ್ಮಋಷಿಗಳಿಗೂ,
ಅರಸುಮಕ್ಕಳಿಗೂ ತಕ್ಕ
ಎಡೆಮಾಡಿ ಕೂರಿಸಿ,
ಯಜ್ಞದ್ರವ್ಯಗಳೆಲ್ಲವನ್ನೂ
ಒಟ್ಟುತಂದು ಇರಿಸಿ, ಮಹಾ
ವೈಭವದಿಂದ
ಶಮೀಪಾರ್ಶ್ವತಳ/ಬನ್ನೀ
ಮರದಪಕ್ಕದಲ್ಲಿ
ದಕ್ಷಿಣಶಾಲೆಯಲ್ಲಿ ಹಿರಣ್ಯ/
ಚಿನ್ನದನಾಣ್ಯ ದಾನವನ್ನು

ಮಾಡಿ, ವೇದಿನಿಹಿತಗಳಾದ/
ವೇದೋಕ್ತ ಅಂಗಗಳಾಧ
ಆಹವನೀಯ, ದಕ್ಷಿಣ,
ಗಾರ್ಹ್ಯಪತ್ಯಗಳ ಮೂರು
ಕುಂಡಗಳಲ್ಲಿ ಉತ್ತರ
ವೇದಿಯಲ್ಲಿ
ಅಗ್ನಿಸಂಧಾನವನ್ನು
(ಅರುಣಿಯಿಂದ ಕಡೆದು
ಅಗ್ನಿಯನ್ನು
ಹುಟ್ಟಿಸುವುದು)ಮಾಡಿ,
ವ್ಯಾಸ, ಕಶ್ಯಪ, ವಿಶ್ವಾಮಿತ್ರ,

ಭಾರದ್ವಾಜ, ಬ್ರಹ್ಮ, ಅಧ್ವರ್ಯ,
ಅಗ್ನೀದ್ರ, ಮೈತ್ರಾವರುಣ,
ಅಗ್ನಿಪರಿಚಾರಕ, ಉದ್ಘಾತೃ,
ನೇತೃ, ಹೋತೃ,
ಜಮದಗ್ನ್ಯಗಳೇ ಆದಿ
ಷೋಡಶ (೧೬) ಋತ್ವಿಜರನ್ನು
ಬೇಳಲುವೇಳ್ದು/
ಯಜ್ಞಮಾಡಲು ಹೇಳಿ
ಧರ್ಮಪುತ್ರನು ಪತ್ನಿಸಮೇತ
ಯಜಮಾನನಾಗಿ ಇದ್ದನು
ಆಗ--

ಕಂ|| ಚಾರುತರ ಯಜ್ಞವಿದ್ಯಾ

ಪಾರಗರ ರವಗಳಿಂ ಸ್ವಧಾಕಾರ

ವಷ|

ಟ್ಕಾರ ಸ್ವಾಹಾಕಾರೋಂ

ಕಾರ ಧ್ವನಿ ನೆಗಳೆ

ನೆಗಳ್ದುದಾಹುತಿಧೂಮಂ ||

೩೪||

ಪದ್ಯ-೩೪:ಪದವಿಭಾಗ-

ಅರ್ಥ:ಚಾರುತರ

ಯಜ್ಞವಿದ್ಯಾಪಾರಗರ

ರವಗಳಿಂ (ರಮಣೀಯ

ಯಜ್ಞವಿದ್ಯೆಯ ಪರಿಣತರ ಧ್ವನಿಗಳಿಂದ) ಸ್ವಧಾಕಾರ ವಷಟ್ಕಾರ ಸ್ವಾಹಾಕಾರ ಓಂಕಾರ ಧ್ವನಿ ನೆಗಳಿ ನೆಗಳ್ದುದು ಆಹುತಿಧೂಮಂ (ಓಂಕಾರ ಧ್ವನಿ ಉಂಟಾಗಲು ಹವಿಸ್ಸಿನ ಹೊಗೆಯೂ ಉಂಟಾಯಿತು)

:ಪದ್ಯ-೩೪:ಅರ್ಥ:ರಮಣೀಯ ಯಜ್ಞವಿದ್ಯೆಯ ಪರಿಣತರ ಧ್ವನಿಗಳಿಂದ, ಸ್ವಧಾಕಾರ

ವಷಟ್ಕಾರ ಸ್ವಾಹಾಕಾರ
ಓಂಕಾರ ಧ್ವನಿ ಉಂಟಾಗಲು
ಹವಿಸ್ಸಿನ ಹೊಗೆಯೂ
ಉಂಟಾಯಿತು)

ಕಂ|| ಬಳಸೆಮುಗಿಲ್ಗಳ್ ಕನಕಾ
ಚಳಮಂ
ಬಳಸುವೊಳಿಕ್ಕಿದಾಹುತಿಗಳ
ಗೊಂ|
ದಳದಿ ನೊಡನೊಗೆಹ(ದ)
ಪೊಗೆಗಳ್

ಬಳಸಿದುವೆಡೆವಿಡದೆ ಕನಕಯೂಪಮನಾಗಳ||೩೫||

ಪದ್ಯ-೩೫:ಪದವಿಭಾಗ-ಅರ್ಥ:ಬಳಸೆ ಮುಗಿಲ್ಗಳ್ ಕನಕಾಚಳಮಂ ಬಳಸುವೊಳ್ (ಕನಕಾಚಲವನ್ನು ಮೊಡಗಳು ಸುತ್ತುವಂತೆ) ಇಕ್ಕಿದ ಆಹುತಿಗಳ ಗೊಂದಳದಿಂ (ಹಾಕಿದ ಅಹುತಿಗಳ ಸಮೂಹದಿಂದ) ಒಡನೆ ಒಗೆಹ(ದ) (ಕೂಡಲೆ ಹುಟ್ಟಿದ)

ಪೊಗೆಗಳ್ ಬಳಸಿದುವು ಎಡೆವಿಡದೆ ಕನಕಯೂಪಮನು ಆಗಳ್(ಹೊಗಗಳು ಯಾಗದ ಚಿನ್ನದ ಕಂಬವನ್ನು ಬಳಸಿದವು/ ಸುತ್ತುವರಿದವು)|

:ಪದ್ಯ-೩೫:ಅರ್ಥ:ಕನಕಾಚಲವನ್ನು ಮೊಡಗಳು ಸುತ್ತುವಂತೆ ಹಾಕಿದ ಅಹುತಿಗಳ ಸಮೂಹದಿಂದ ಕೂಡಲೆ ಹುಟ್ಟಿದ ಹೊಗಗಳು ಯಾಗದ

ಚಿನ್ನದ ಕಂಬವನ್ನು ಆಗ
ಬಳಸಿದವು/ ಸುತ್ತುವರಿದವು.

ಚಂ|| ಒಡನೆ ದಿಗಂತ ದಂತಿಗಳ
ಕೋಡಮೊದಲ್ಗಳೊಳಯ್ದೆ
ಪೊಕ್ಕು ಸಿ
ಪ್ಪಡಸಿದ ಮಾಳ್ಕೆಯಾದವು
ಕರಂಗಳಡಂಗಿ
ಕಿಲುಂಬುಗೊಂಡಕ|
ನ್ನಡಿಗೆಣೆಯಾಯ್ತು
ಭಾನುವಳಯಂ
ದಿವಿಜಾಪಗೆನೋಡೆ ಕೂಡೆ ಕ

ರ್ಪದೆಣೆಯಾದುದಾ

ಯಮುನೆಗಗ್ಗದ ಯಾಗದ

ಧೂಮದೇಳ್ಗೆಯೊಳ್ ||೩೬||

ಪದ್ಯ-00:ಪದವಿಭಾಗ-

ಅರ್ಥ:ಒಡನೆ ದಿಗಂತ ದಂತಿಗಳ ಕೋಡ ಮೊದಲ್ಗಳ್ಗೊಳು ಎಯ್ದೆ (ಹೊಗೆಯು ಕೂಡಲೆ ದಿಕ್‍ದಂತಿಗಳ ಕೊಂಬಿನ ಬುಡಗಳಲ್ಲಿ ಹೊಕ್ಕು) ಪೊಕ್ಕು ಸಿಪ್ಪಡಸಿದ ಮಾಳ್ಕೆಯಾದವು

(ಚಿಪ್ಪನ್ನು ತೊಡಿಸಿದ
ಮಾಟವಾಯಿತು.)
ಕರಂಗಳಡಂಗಿ
ಕಿಲುಂಬುಗೊಂಡಕನ್ನಡಿಗೆಣೆ
ಯಾಯ್ತು ಭಾನುವಳಯಂ
(ಭಾನುವಲಯ/
ಸೂರ್ಯಬಿಂಬವು ಕಿರಣಗಳು
ಅಡಗಿ ಕಿಲುಬು ಹತ್ತಿದ
ಕನ್ನಡಿಯಂತೆ ಕಾಣಿಸಿತು.)
ದಿವಿಜಾಪಗೆ ನೋಡೆ ಕೂಡೆ
ಕರ್ಪಡರ್ದೆಣೆಯಾದುದು

(ದೇವಲೋಕದಲ್ಲಿ ಹುಟ್ಟಿ ಬಿದ್ದ ಗಂಗಾನದಿ ಕೂಡಲೆ ನೋಡಿದರೆ ಕಪ್ಪುಬಣ್ಣಗೊಂದಿ ಎಣೆಯಾದುದು- ಸಮಾನವಾಯಿತು) ಆ ಯಮುನೆಗೆ ಅಗ್ಗದ ಯಾಗದ ಧೂಮದ ಏಳ್ಗೆಯೊಳ್ (ಆ ಯಮುನೆಗೆ, ಶ್ರೇಷ್ಠವಾದ ಯಜ್ಞದ ಹೊಗೆಯ ಏಳುವಿಕೆಯಿಂದ)

:ಪದ್ಯ-00:ಅರ್ಥ:ಹೊಗೆಯು ಕೂಡಲೆ ದಿಕ್‍ದಂತಿಗಳ ಕೊಂಬಿನ ಬುಡಗಳಲ್ಲಿ ಹೊಕ್ಕು, ಅಲ್ಲಿ ಚಿಪ್ಪನ್ನು ತೊಡಿಸಿದ ಮಾಟವಾಯಿತು. ಭಾನುವಲಯ/ ಸೂರ್ಯಬಿಂಬವು ಕಿರಣಗಳು ಅಡಗಿ ಕಿಲುಬು ಹತ್ತಿದ ಕನ್ನಡಿಯಂತೆ ಕಾಣಿಸಿತು. ಶ್ರೇಷ್ಠವಾದ ಯಜ್ಞದ ಹೊಗೆಯ ಏಳುವಿಕೆಯಿಂದ,

ದೇವಲೋಕದಲ್ಲಿ ಹುಟ್ಟಿ ಬಿದ್ದ
ಗಂಗಾನದಿ ಕೂಡಲೆ
ನೋಡಿದರೆ ಕಪ್ಪುಬಣ್ಣಗೊಂದಿ
ಆ ಯಮುನೆಗೆ,
ಸಮಾನವಾಯಿತು.

ಕಂ|| ಗಣನಾತೀತಾಜ್ಯಾಹುತಿ
ಗಣದಿಂದಂ ತಣಿಯೆ
ಜಾತವೇದನುಮಾ ಬ್ರಾ |
ಹ್ಮಣ ಸಮಿತಿ ಬೇಳೆದೇವರ್
ತಣಿಯುಂಡರ್ ನೆರೆದು
ದಿವ್ಯಹವ್ಯಾಮೃತಮಂ|| ೩೭||

ಪದ್ಯ-೩೭:ಪದವಿಭಾಗ-ಅರ್ಥ:ಗಣನಾತೀತ ಆಜ್ಯಾಹುತಿ (ಲೆಕ್ಕವಿಲ್ಲದಷ್ಟು ತುಪ್ಪದ ಆಹುತಿ) ಗಣದಿಂದಂ (ಸಮೂಹದಿಂದ ತಣಿಯೆ (ತೃಪ್ತಿ ಹೊಂದಲು) ಜಾತವೇದನುಂ (ಅಗ್ನಿಯೂ)ಆ ಬ್ರಾಹ್ಮಣ ಸಮಿತಿ (ಬ್ರಾಹ್ಂಣರ ಸಮೂಹ) ಬೇಳೆ (ಹವಿಸ್ಸನ್ನು ಹಾಕಲು) ದೇವರ್

ತಣಿಯುಂಡರ್ ನೆರೆದು
ದಿವ್ಯಹವ್ಯಾಮೃತಮಂ(ದೇವತೆ
ಗಳು ನರೆದು-ಸೇರಿ ದಿವ್ಯ
ಹವಿಸ್ಸೆಂಬ ಅಮೃತವನ್ನು
ತಣಿಯುಂಡರು
ತಣಿಯುವಂತೆ-
ತೃಪ್ತಿಯಾಗುವಂತೆ ಉಂಡರು.)
:ಪದ್ಯ-೩೭:ಅರ್ಥ:ಲೆಕ್ಕವಿಲ್ಲದ
ಷ್ಟು ತುಪ್ಪದ ಆಹುತಿ
ಸಮೂಹದಿಂದ ತೃಪ್ತಿ
ಹೊಂದಲು ಅಗ್ನಿಯು, ಆ

ಬ್ರಾಹ್ಮಣರ ಸಮೂಹ) ಹವಿಸ್ಸನ್ನು ಹಾಕಲು,ನೆರೆದು ದೇವತೆಗಳು ಸೇರಿ ದಿವ್ಯ ಹವಿಸ್ಸೆಂಬ ಅಮೃತವನ್ನು ತೃಪ್ತಿಯಾಗುವಂತೆ ಉಂಡರು.

ಮ||ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಸಾಮರ್ಥ್ಯಮಂ ಸೂಳು ಸೂ

ಳದೆ ಪೇಳಲ್ ಪರಿವಂತೆ ಪೊಣ್ಮೆ ಪಲವುಂ

ಧೂಮಂಗಳಾ ಹೋಮ ಧೂ|

ಮದ ಗಂಧಂ ನಸು ಮುಟ್ಟೆ

ದಿವ್ಯಮುಖಮಂ ಕಯ್ಕೊಂಡು

ಸಗ್ಗಕ್ಕೆ ಪಾ

ರಿದುವಾ ಪಾರಿವ

ಜಕ್ಕವಕ್ಕಿಳದೇಂ ಪೆಂಪೋ

ಮಹಾ ಯಜ್ಞದಾ ||೩೮||

ಪದ್ಯ-೩೮:ಪದವಿಭಾಗ-

ಅರ್ಥ:ತ್ರಿದಶ ಇಂದ್ರಂಗೆ

ಯುಧಿಷ್ಠಿರ ಅಧ್ವರದ

ಮಾಸಾಮರ್ಥ್ಯಮಂ

(ಮೂವತ್ತು ದೇವತೆಗಳ
ಇಂದ್ರನಿಗೆ ಯುಧಿಷ್ಠಿರನು
ಮಾಡಿದ ಯಜ್ಞದ ಮಹಾ
ಸಾಹಸವನ್ನು) ಸೂಳು
ಸೂಳದೆ ಪೇಳಲ್ (ಕ್ರಮ
ಕ್ರಮವಾಗಿ ಹೇಳಲು)
ಪರಿವಂತೆ (ಹೋಗುವ ಹಾಗೆ)
ಪೊಣ್ಮೆ ಪಲವುಂ
ಧೂಮಂಗಳು (ಹಲವು
ಧೂಮಗಳು ಮೇಲಕ್ಕೇರಲು)
ಆ ಹೋಮ ಧೂಮದ ಗಂಧಂ

(ಆ ಹೋಮದ ಹೊಗೆಯ
ಸುವಾಸನೆ) ನಸು ಮುಟ್ಟೆ
(ಸ್ವಲ್ಪ ತಾಗಲು)
ದಿವ್ಯಮುಖಮಂ ಕಯ್ಕೊಂಡು
(ಶ್ರೇಷ್ಠಯಜ್ಞದ ದೂಮವನ್ನು
ಸೇವಿಸಿ) ಸಗ್ಗಕ್ಕೆ ಪಾರಿದುವು ಆ
ಪಾರಿವ ಜಕ್ಕವಕ್ಕಿಳು
(ಆಹಾರುವ ಚಕ್ರವಾಕ
ಪಕ್ಷಿಗಳು ಸ್ವರ್ಗಕ್ಕೆ ಹಾರಿದವು.)
ಅದೇಂ ಪೆಂಪೋ ಮಹಾ

ಯಜ್ಞದಾ (ಆ ಮಹಾಯಜ್ಞದ ಪೆಂಪು- ಹಿರಿಮೆ ಅದೆಷ್ಟೋ!) **:ಪದ್ಯ-೩೮:ಅರ್ಥ**:ಮೂವತ್ತು ದೇವತೆಗಳ ಇಂದ್ರನಿಗೆ ಯುಧಿಷ್ಠಿರನು ಮಾಡಿದ ಯಜ್ಞದ ಮಹಾ ಸಾಹಸವನ್ನು ಕ್ರಮ ಕ್ರಮವಾಗಿ ಹೇಳಲು ಹೋಗುವ ಹಾಗೆ ಹಲವು ಧೂಮಗಳು ಮೇಲಕ್ಕೇ ಏರಿದವು. ಆ ಹೋಮದ ಹೊಗೆಯ ಸುವಾಸನೆ ಸ್ವಲ್ಪ

ತಾಗಲು ಶ್ರೇಷ್ಠಯಜ್ಞದ
ದೂಮುವನ್ನು ಸೇವಿಸಿ ಆ
ಹಾರುವ ಚಕ್ರವಾಕ ಪಕ್ಷಿಗಳು
ಸ್ವರ್ಗಕ್ಕೆ ಹಾರಿ ಹೋದವು. ಆ
ಮಹಾಯಜ್ಞದ ಪೆಂಪು-
ಹಿರಿಮೆ ಅದೆಷ್ಟೋ!

**ವ||ಅಂತು ಪುರೋಡಾಶ
ಪವಿತ್ರೋದರರನುಂ
ಸೋಮಪಾನ
ಕಷಾಯಿತೋದುರನುಮಾಗಿ
ಮೂವತ್ತೆರಡು ದಿವಸದೊಳ್**

ಕ್ರತುವಣ ನಿರ್ವರ್ತಿಸಿ ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್

ವಚನ:ಪದವಿಭಾಗ-

ಅರ್ಥ:ಅಂತು ಪುರೋಡಾಶ ಪವಿತ್ರೋದರನುಂ ಸೋಮಪಾನ ಕಷಾಯಿತೋದುರನುಮಾಗಿ ಮೂವತ್ತೆರಡು ದಿವಸದೊಳ್ ಕ್ರತುವಣ ನಿರ್ವರ್ತಿಸಿ

ಮಹಾದಾನಂಗೆಯ್ದು ದಕ್ಷಿಣಾಕಾಲದೊಳ್ **:ವಚನ:ಅರ್ಥ:**ಹೀಗೆ ಹೋಮ ಮಾಡಿ ಉಳಿದ ಹುರಿದ ಹಿಟ್ಟಿನ ಹವಿಸ್ಸು ಸೇವಿಸಿ ಪವಿತ್ರ ಹೊಟ್ಟೆಯುಳ್ಳವನೂ, ಸೋಮರಸ ಪಾನಕಷಾಯಕುಡಿದ ಉದುರವುಳ್ಳವನಾಗಿ, ಮೂವತ್ತೆರಡು ದಿವಸದಲ್ಲಿ

ಯಾಗವನ್ನು ಮುಗಿಸಿ ಮಹಾದಾನಗಳನ್ನು ಮಾಡಿ ದಕ್ಷಿಣಾಎಯನ್ನು ಕೊಡವ ಕಾಲದಲ್ಲಿ-

ಉ||ಒಟ್ಟಿದ ಪೊನ್ನ ಬೆಟ್ಟುಗಳನೀವೆಡೆಗೇವುದೊ ತೂಕಮೆನ್ನ ಕೆ
ಯ್ಗಟ್ಟಳೆ ಕೊಳ್ಳಿಮೆಂದು ಕುಡೆ ಷೋಡಶ ಋತ್ವಿಜರ್ಗಿತ್ತುದರ್ಕೆ ಬಾ|

ವಿಟ್ಟಿರೆ ವಿಪ್ರಕೋಟಿ ಮಡಗಲ್ಕೆಡೆಇಲ್ಲದೆ ಪೊನ್ನ ರಾಶಿಯಂ ಬಿಟ್ಟನೆ ಬಂದು ಕಾಯೆ ಯಮನಂದನನೇನ್ ತೊದಳಿಲ್ಲದಿತ್ತನೊ||೩೯||

ಪದ್ಯ-೩೯:ಪದವಿಭಾಗ-ಅರ್ಥ:ಒಟ್ಟಿದ ಪೊನ್ನ ಬೆಟ್ಟುಗಳನು ಈವೆಡೆಗೆ (ರಾಶಿಹಾಕಿದ ಚಿನ್ನದಬೆಟ್ಟಗಳನ್ನು

ಕೊಡುವಾಗ) ಏವುದೊ

ತೂಕಮ್ (ತೂಕ ಏಕೆ), ಎನ್ನ

ಕೆಯ್ಗಗಿಟ್ಟಳೆ (ನನ್ನ ಕಯ್ಯೇ

ಕಟ್ಟಳೆ-ತೂಕ) ಕೊಳ್ಳಿಮೆಂದು

ಕುಡೆ (ತೆಗೆದುಕೊಳ್ಳಿ ಎಂದು

ಕೊಡಲು,) ಷೋಡಶ

ಋತ್ವಿಜರ್ಗೆ ಇತ್ತುದರ್ಕೆ

ಬಾವಿಟ್ಟಿರೆ ವಿಪ್ರಕೋಟಿ

(ಹದಿನಾರು ಋತ್ವಿಕ್ಕುಗಳಿಗೆ

ಕೊಟ್ಟಿದ್ದಕ್ಕೆ ಕೋತ್ರ್ಯಾಂತರ

ಬ್ರಾಹ್ಮಣರು ಬಾವಿಟ್ಟಿರೆ-

ಆಶ್ಚರ್ಯದಿಂದ ಬಾಯಿಬಿಟ್ಟು
ನೋಡುತ್ತಿರಲು)
ಮಡಗಲ್ಕೆಡೆಇಲ್ಲದೆ ಪೊನ್ನ
ರಾಶಿಯಂ ಬಟ್ಟನೆ ಬಂದು
ಕಾಯೆ (ಚಿನ್ನದ ರಾಶಿಯನ್ನು
ಸುತ್ತುವರಿದು ಕಾಯಲು)
ಯಮನಂದನನು ಏನ್
ತೊದಳಿಲ್ಲದೆ ಇತ್ತನೊ
(ಧರ್ಮರಾಯನು ಏನು
ವಂಚನೆ ಇಲ್ಲದೆ

ದಾನಮಾಡಿದಲೋ!
ದಾನಮಾಡಿದನು.)
:ಪದ್ಯ-೩೯:ಅರ್ಥ:ರಾಶಿಹಾಕಿದ ಚಿನ್ನದಬೆಟ್ಟಗಳನ್ನು ಕೊಡುವಾಗ ತೂಕ ಏಕೆ, ನನ್ನ ಕಯ್ಯೇ ಕಟ್ಟಳೆ-ತೂಕ, ತೆಗೆದುಕೊಳ್ಳಿ ಎಂದು ಕೊಡಲು, ಹದಿನಾರು ಋತ್ವಿಕ್ಕುಗಳಿಗೆ ಕೊಟ್ಟಿದ್ದಕ್ಕೆ ಕೋಟ್ಯಾಂತರ ಬ್ರಾಹ್ಮಣರು ಆಶ್ಚರ್ಯದಿಂದ ಬಾಯಿಬಿಟ್ಟು

ನೋಡುತ್ತಿರಲು, ಚಿನ್ನದ ರಾಶಿಯನ್ನು ಸುತ್ತುವರಿದು ಕಾಯಲು, ಧರ್ಮರಾಯನು ಏನು ವಂಚನೆ ಇಲ್ಲದೆ ದಾನಮಾಡಿದಲ್ಲೋ! ವಂಚನೆ ಇಲ್ಲದೆ ದಾನಮಾಡಿದನು.

ಸ್ರ|ದಾನಾಂಭಃ ಪೀನ ಗಂಡಸ್ಥಳ ಕರಿನಿಕರಂ ಬಾಳ್ತಿಯೋ ಮೆಚ್ಚುವೇಳಾ ಜಾನೇಯಾ ಶ್ವೋತ್ಕರಂ ಬಾಳ್ತಿಯೊ ಮಣಿನಿಚಯಂ

ಬಾಳ್ತಿಯೋ ಪೇಳಿಮೆಂದಾ | ದೀನಾನಾಥರ್ಗೆ ವೃದ್ಧ ದ್ವಿಜ ಮುನಿಕರಕ್ಕಂದಡರ್ ಪೋಪಿನಂ ಕಃ ಕೇನಾರ್ಥಿ ಕೋ ದರಿದ್ರಃ ಎನುತುಮನಿತುಮಂ ಧರ್ಮಜಂ ಸಳಿಗೊಟ್ಟೋ|| ೪೦||

ಪದ್ಯ-೪೦:ಪದವಿಭಾಗ-ಅರ್ಥ:ದಾನಾಂಭಃ ಪೀನ ಗಂಡಸ್ಥಳ ಕರಿನಿಕರಂ

(ಮದೋದಕವುಳ್ಳ ದೊಡ್ಡ
ಗಂಡಸ್ಥಳವುಳ್ಳ ಆನೆಗಳ
ಸಮೂಹ) ಬಾಳ್ತಿಯೋ
ಮೆಚ್ಚುವೇಳ್ (ನಿಮಗೆ
ಬಾಳ್ತಿಯೋ ಪ್ರಯೋಜನವೋ
ಇಷ್ಟವೋ ಅದನ್ನು ಕೇಳು)
ಆಜಾನೇಯಾ ಶ್ವೋತ್ಕರಂ
ಬಾಳ್ತಿಯೊ (ಉತ್ತಮವಾದ
ಕುದರೆ
ಪ್ರಯೋಜನವೋ)ಮಣಿನಿಚ
ಯಂ ಬಾಳ್ತಿಯೋ ಪೇಳಿಂ

ಎಂದು (ರತ್ನರಾಶಿ
ಪ್ರಯೋಜನವ್ರೋ ಹೇಳಿ
ಎಂದು) ಆ ದೀನ ಅನಾಥರ್ಗೆ
(ದೀನರಿಗೂ ಅನಾಥರಿಗೂ)
ವೃದ್ಧ ದ್ವಿಜ ಮುನಿಕರಕ್ಕೆ
ಅಂದು ಅಡರ್ ಪೋಪಿನಂ
(ವೃದ್ಧರು ದ್ವಿಜರು ಮುನಿಕರಕ್ಕೆ
ಅಂದು ಬಡತನವು
ಹೋಗುತ್ತಿರಲು) ಕಃ ಕೇನಾರ್ಥಿ
ಕೋ ದರಿದ್ರಃ (ಯಾರು
ಏನನ್ನು ಬೇಡುವನು? ಯಾರು

ಬಡವರು,) ಎನುತುಂ ಅನಿತುಮಂ ಧರ್ಮಜಂ ಸಲಿಗೊಟ್ಟೋ (ಎಂದು ಹೇಳುತ್ತಾ ಧರ್ಮಜನು ಅಷ್ಟನ್ನೂ ಸೂರೆಯಾಗಿ ಕೊಟ್ಟನು.)

:ಪದ್ಯ-೪೦:ಅರ್ಥ:ಮದೋದಕವುಳ್ಳ ದೊಡ್ಡ ಗಂಡಸ್ಥಳವುಳ್ಳ ಆನೆಗಳ ಸಮೂಹ, ನಿಮಗೆ ಯಾವುದು ಪ್ರಯೋಜನವೋ ಇಷ್ಟವೋ ಅದನ್ನು ಕೇಳು,

ಉತ್ತಮವಾದ ಕುದರೆ ಪ್ರಯೋಜನವ್ರೋ? ರತ್ನರಾಶಿ ಪ್ರಯೋಜನವ್ರೋ ಹೇಳಿ ಎಂದು, ಆ ದೀನರಿಗೂ ಅನಾಥರಿಗೂ, ವೃದ್ಧರು ದ್ವಿಜರು ಮುನಿಕರಕ್ಕೆ ಅಂದು ಬಡತನವು ಹೋಗುತ್ತಿರಲು, ಯಾರು ಬಡವರು, ಎಂದು ಹೇಳುತ್ತಾ ಧರ್ಮಜನು ಅಷ್ಟನ್ನೂ ಸೂರೆಯಾಗಿ ಕೊಟ್ಟನು.

ವ||ಅಂತು ನಿಜ ಧವಳಚ್ಛತ್ರ
ಚಾಮರ ಸಿಂಹಾಸನಾದಿ ರಾಜ
ಚಿಹ್ನೆಗಳುಳಿಯೆ
ಸರ್ವಸ್ವಮೆಲ್ಲಮಂ
ದಕ್ಷಿಣೆಕೊಟ್ಟು
ವ್ಯಾಸಗಾಂಗೇಯ ವಿದುರ
ಬಾಹ್ಲೀಕಸೋಮದತ್ತ ಭಗದತ್ತ
ಧರತರಾಷ್ಟ್ರ ದ್ರೋಣ
ಅಶ್ವತ್ಥಾಮ ಕೃಪ
ಕುಲವೃದ್ಧರುಮಂ
ದುರ್ಯೋಧನ ದುಶ್ಯಾಸನ

ಕರ್ಣ ಶಲ್ಯ ಶಕುನಿಗಳುಮನು

ದಾನ ಸನ್ಮಾನಾದಿಗಳೊಳಂ

ಸಂತಸಂಬಡಿಸಿಧರ್ಮಪುತ್ರಂ

ಪೇಳಿಮೀಸಭೆಯೊಳಗ್ರ

ಪೂಜೆಗಾರ್ ತಕ್ಕರೆನೆ

ಗಾಂಗೇಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ನಿಜ
ಧವಳಚ್ಛತ್ರ ಚಾಮರ
ಸಿಂಹಾಸನಾದಿ ರಾಜ
ಚಿಹ್ನೆಗಳು ಉಳಿಯೆ

ಸರ್ವಸ್ವಮೆಲ್ಲಮಂ
ದಕ್ಷಿಣೆಕೊಟ್ಟು
ವ್ಯಾಸಗಾಂಗೇಯ ವಿದುರ
ಬಾಹ್ಲೀಕಸೋಮದತ್ತ ಭಗದತ್ತ
ಧರತರಾಷ್ಟ್ರ ದ್ರೋಣ
ಅಶ್ವತ್ಥಾಮ ಕೃಪ
ಕುಲವೃದ್ಧರುಮಂ
ದುರ್ಯೋಧನ ದುಶ್ಯಾಸನ
ಕರ್ಣ ಶಲ್ಯ ಶಕುನಿಗಳುಮನು
ದಾನ ಸನ್ಮಾನಾದಿಗಳೊಳಂ
ಸಂತಸಂಬಡಿಸಿ ಧರ್ಮಪುತ್ರಂ

(ಹೀಗೆ ತನ್ನ ಶ್ವೇತಚ್ಛತ್ರ ಚಾಮರ ಸಿಂಹಾಸನ ಆದಿ ರಾಜ ಚಿಹ್ನೆಗಳು ಉಳಸಿಕೊಂಡು, ಸರ್ವಸ್ವಮೆಲ್ಲವನ್ನೂ ದಾನಕೊಟ್ಟು, ವ್ಯಾಸರು ಗಾಂಗೇಯ, ವಿದುರ, ಬಾಹ್ಲೀಕ,ಸೋಮದತ್ತ, ಭಗದತ್ತ, ಧರತರಾಷ್ಟ್ರ, ದ್ರೋಣ, ಅಶ್ವತ್ಥಾಮ, ಕೃಪ, ಕುಲವೃದ್ಧರನ್ನೂ, ದುರ್ಯೋಧನ, ದುಶ್ಯಾಸನ,

ಕರ್ಣ, ಶಲ್ಯ, ಶಕುನಿಗಳನ್ನೂ,
ದಾನ ಸನ್ಮಾನಾದಿಗಳಿಂದ,
ಸಂತಸಪಡಿಸಿ,
ಧರ್ಮಪುತ್ರನು) ಪೇಳಿಂ ಈ
ಸಭೆಯೊಳು ಅಗ್ರ ಪೂಜೆಗೆ
ಆರ್ ತಕ್ಕರು ಎನೆ (ಹೇಳಿ
ಈಸಭೆಗೆ ಅಗ್ರ ಪೂಜೆಗೆ
ಯಾರು ತಕ್ಕವರು ಎನ್ನಲು,)
ಗಾಂಗೇಯನು
ಇಂತೆಂದಂ(ಭೀಷ್ಮನು
ಹೀಗೆಂದನು.) -

<u>ಯಾಗದ ಕೊನೆಯಲ್ಲಿ ಅಗ್ರಪೂಜೆ - ಶಿಶುಪಾಲ ವಧೆ</u>

:ವಚನ:ಅರ್ಥ:ಹೀಗೆ ಧರ್ಮರಾಯನು ತನ್ನ ಶ್ವೇತಚ್ಛತ್ರ ಚಾಮರ ಸಿಂಹಾಸನ ಆದಿ ರಾಜ ಚಿಹ್ನೆಗಳು ಉಳಸಿಕೊಂಡು, ಸರ್ವಸ್ವಮೆಲ್ಲವನ್ನೂ ದಾನಕೊಟ್ಟು, ವ್ಯಾಸರು ಗಾಂಗೇಯ, ವಿದುರ, ಬಾಹ್ಲೀಕ,ಸೋಮದತ್ತ,

ಭಗದತ್ತ, ಧರತರಾಷ್ಟ್ರ,
ದ್ರೋಣ, ಅಶ್ವತ್ಥಾಮ, ಕೃಪ,
ಕುಲವೃದ್ಧರನ್ನೂ,
ದುರ್ಯೋಧನ, ದುಶ್ಯಾಸನ,
ಕರ್ಣ, ಶಲ್ಯ, ಶಕುನಿಗಳನ್ನೂ,
ದಾನ ಸನ್ಮಾನಾದಿಗಳಿಂದ,
ಸಂತಸಪಡಿಸಿ, ಧರ್ಮಪುತ್ರನು,
ಹೇಳಿ ಈ ಸಭೆಗೆ ಅಗ್ರ ಪೂಜೆಗೆ
ಯಾರು ತಕ್ಕವರು ಎನ್ನಲು-
ಭೀಷ್ಮನು ಹೀಗೆಂದನು.

ಮ||ಬಲಿಯಂ ಕಟ್ಟಿದನಾವನೀ
ಧರಣಿಯಂ ವಿಕ್ರಾಂತದಿಂದ
ರಸಾ
ತಲದಿಂದೆತ್ತಿದನಾವನಂದು
ನರಸಿಂಹಾಕಾರದಿಂ ದೈತ್ಯನಂ |
ಛಲದಿಂ
ಸೀಳ್ದವನಾವನಬ್ಧಿಮಥನಪ್ರಾ
ರಂಭದೊಳ್ ಮಂದರಾ
ಚಲಮಂ ತಂದವನಾವನಾತನೆ
ವಲಂ ತಕ್ಕ ಪೆರರ್ ತಕ್ಕರೇ||
೪೧ ||

ಪದ್ಯ-೪೧:ಪದವಿಭಾಗ-ಅರ್ಥ:ಬಲಿಯಂ ಕಟ್ಟಿದನು ಆವನು ಈ ಧರಣಿಯಂ ವಿಕ್ರಾಂತದಿಂದ ರಸಾತಲದಿಂದ ಎತ್ತಿದನು ಆವನು ಅಂದು ನರಸಿಂಹಾಕಾರದಿಂ ದೈತ್ಯನಂ ಛಲದಿಂ ಸೀಳ್ದವನು ಆವನು ಅಬ್ಧಿಮಥನ ಪ್ರಾರಂಭದೊಳ್ ಮಂದರಾಚಲಮಂ ತಂದವನು ಆವನು ಆತನೆ ವಲಂ ತಕ್ಕ ಪೆರರ್ ತಕ್ಕರೇ

:ಪದ್ಯ-೪೧:ಅರ್ಥ:ಬಲಿಯನ್ನು ಕಟ್ಟಿದವನು ಯಾವನು, ಈ ಭೂಮಿಯನ್ನು ವಿಕ್ರಾಂತದಿಂದ ರಸಾತಲದಿಂದ ಮೇಲೆ ಎತ್ತಿದವನು ಯಾವನು, ಅಂದು ನರಸಿಂಹರೂಪದಿಂದ ದೈತ್ಯನನ್ನು ಛಲದಿಂದ ಸೀಳಿದವಮು ಯಾವನು,ಸಮುದ್ರಮಥನ ಪ್ರಾರಂಭದಲ್ಲಿ ಮಂದರಾಚಲವನ್ನು

ತಂದವನು ಯಾವನು, ಆತನೆ ಶ್ರೀಕೃಷ್ಣನು ವಲಂ- ನಿಜವಾಗಿಯೂ ಅಗ್ರ ಪೂಜೆಗೆ ತಕ್ಕವನು. ಬೇರೆಯವರು ತಕ್ಕವರಾಗುವರೇ? ಇಲ್ಲ! ಎಂದನು ಭೀಷ್ಮ.

ವ|| ಎಂದು ತನ್ನಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂನಂದನನಾಂದಂಬೆರ

ಸಂತೆಗೆಯ್ವನೆಂದು ಪುರುಷೋತ್ತಮಂಗರ್ಘ್ಯಮೆತ್ತಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ತನ್ನಮನದೊಳು ಅಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂದನನು ಆನಂದಂಬೆರಸು ಅಂತೆ

ಗೆಯ್ವನೆಂದು
ಪುರುಷೋತ್ತಮಂಗೆ
ಅರ್ಘ್ಯಮೆತ್ತಿದಾಗಳ್-
:**ವಚನ**:**ಅರ್ಥ**:ಎಂದು
ತನ್ನಮನಸಿನಲ್ಲಿ ಇದ್ದುದನ್ನೇ
ಅಚ್ಯೊತ್ತಿದ ಹಾಗೆ ನುಡಿದ
ಭೀಷ್ಮನ ಮಾತನ್ನು
ಮನಪೂರ್ವಕವಾಗಿ
ಧರ್ಮರಾಯನು
ಆನಂದಹೊಂದಿ ಹಾಗೆಯೇ
ಮಾಡುವೆನೆಂದು

ಪುರುಷೋತ್ತಮನಿಗೆ

ಅಗ್ರಪೂಜೆಗೆ ಕೂರಿಸಿ

ಅರ್ಘ್ಯವನ್ನು ಎತ್ತಿಕೊಟ್ಟನು-

ಕಂ|| ಮುಳಿದು

ಶಿಶುಪಾಲನಾಸಭೆ

ಯೊಳಗೆ ಮಹಾಪ್ರಳಯ

ಜಳಧಿನಾದದಿನಿರದು |

ಚ್ಚಳಿಸಿ ನಡಿದಂ ತೆ ಕಳೆ

ಕಳೆ

ಹರಿಗೆತ್ತಿದನರ್ಘ್ಯದರ್ಘ್ಯಮಂ

ಧರ್ಮಸುತಾ||೪೨||

ಪದ್ಯ-೪೨:ಪದವಿಭಾಗ-ಅರ್ಥ:ಮುಳಿದು ಶಿಶುಪಾಲನು ಆ ಸಭೆಯೊಳಗೆ ಮಹಾಪ್ರಳಯ ಜಳಧಿ ನಾದದಿಂ (ಕೊಪದಿಂದ ಶಿಶುಪಾನು, ಸಭಯಲ್ಲಿ ಪ್ರಳಯ ಸಮುದ್ರಘೋಷದ ಧ್ವನಿಯಿಂದ) ಇರದೆ ಉಚ್ಚಳಿಸಿ (ಸುಮ್ಮನೆ ಕೂರದೆ, ಹಾರಿ - ನೆಗೆದು- ಎದ್ದುನಿಂತು) ನುಡಿದಂ, (ಹೇಳಿದನು) ತೆ (ಚಿಃ) ಕಳೆ ಕಳೆ

(ತೆಗೆ ತೆಗೆ) ಹರಿಗೆತ್ತಿದ ಅನರ್ಘ್ಯದ ಅರ್ಘ್ಯಮಂ ಧರ್ಮಸುತಾ! (ಧರ್ಮರಾಜನೇ! ಕೃಷ್ಣನಿಗೆ ಎತ್ತಿದ ಅಮೋಘವಾದ ಅರ್ಘ್ಯೋದಕವನ್ನು ಚಿಃ ತೆಗೆ ತೆಗೆ ಎಂದು ಕರ್ಕಶವಾಗಿ ನುಡಿದನು.)

:ಪದ್ಯ-೪೨:ಅರ್ಥ:ಶಿಶುಪಾನು ಕೊಪದಿಂದ, ಆ ಸಭಯಲ್ಲಿ ಪ್ರಳಯಕಾಲದ

ಸಮುದ್ರಘೋಷದ ಧ್ವನಿಯಿಂದ ಸುಮ್ಮನೆ ಕೂರದೆ, ನೆಗೆದು, ಎದ್ದುನಿಂತು, ಧರ್ಮರಾಜನೇ! ಕೃಷ್ಣನಿಗೆ ಎತ್ತಿದ ಅಮೋಘವಾದ ಅರ್ಘ್ಯೋದಕವನ್ನು ಚಿಃ! ತೆಗೆ ತೆಗೆ! ಎಂದು ಕರ್ಕಶವಾಗಿ ನುಡಿದನು.

ಕಂ|| ತೀವಿದ ನರೆಯುಂ ಡೊಳ್ಳುಂ

ದೇವವ್ರತನೆನಿಸಿ ನೆಗಳ್ದ ಯಶಮುಂ ಬೆರಸಿ | ನ್ನೀವುದು ಹರಿಗರ್ಘ್ಯಮನೆಂ ದಾವನುಮೀ ಭೀಷ್ಮರಂತು ನುಡಿದರುಮೊಳರೇ|| ೪೩||

ಪದ್ಯ-00:ಪದವಿಭಾಗ-ಅರ್ಥ:ತೀವಿದ ನರೆಯುಂ (ತುಂಬಿದ ನೆರೆ ಕೂದಲು) ಡೊಳ್ಳುಂ ದೇವವ್ರತನು ಎನಿಸಿ (ಡೊಳ್ಳಹೊಟ್ಟೆಯ ದೇವವ್ರತನು ಎನಿಸಿಕೊಂಡು)

ನೆಗಳ್ದ ಯಶಮುಂ ಬೆರಸಿ
ಇನ್ನು ಈವುದು (ಹೆಸರು
ಪಡೆದು ನೆಡೆದುಬಂದ
ಕೀರ್ತಿಯನ್ನು ಪಡೆದೂ ಇನ್ನು-
ಈಗ ಕೊಡುವುದು)
ಹರಿಗರ್ಘ್ಯಮನು ಎಂದು
(ಹರಿಗೆ ಅರ್ಘ್ಯವನ್ನು ಎಂದು)
ಅವನುಂ (ಯಾವನಾದರೂ)
ಈ ಭೀಷ್ಮರಂತು (ಈ ಭೀಷ್ಮರ
ಹಾಗೆ) ನುಡಿದರುಮೊಳರೇ
(ಹೇಳಿದವರೂ ಇರವರೇ?)

:ಪದ್ಯ-00:ಅರ್ಥ: ತುಂಬಿದ ನೆರೆ ಕೂದಲು, ಡೊಳ್ಳಹೊಟ್ಟೆಯ ದೇವವ್ರತನು ಎನಿಸಿಕೊಂಡು, ಹೆಸರು ಪಡೆದ ನೆಡೆದು ಬಂದ ಕೀರ್ತಿಯನ್ನು ಪಡೆದೂ ಇನ್ನು- ಈಗ ಹರಿಗೆ ಅರ್ಘ್ಯವನ್ನು ಕೊಡುವುದು ಎಂದು ಯಾವನಾದರೂ ಈ ಭೀಷ್ಮರ ಹಾಗೆ ಹೇಳಿದವರೂ ಇರವರೇ)

ಕಂ|| ಕುರುವೃದ್ಧಂ ಕುಲವೃದ್ಧಂ

ಸರಿತ್ಸುತಂ ತಕ್ಕನೆಂದು ನಂಬಿದ ಸಭೆಯೊಳ್ |
ದೊರೆಗೆಡಿಸಿ ನುಡಿದೊಡೇನೊಲ
ವರಮೆನ್ನದೆ ನೀನುಮದನೆ ಕೊಂಡೆಸಗುವುದೇ ||೪೪||

ಪದ್ಯ-೪೫:ಪದವಿಭಾಗ-ಅರ್ಥ:ಕುರುವೃದ್ಧಂ ಕುಲವೃದ್ಧಂ ಸರಿತ್ಸುತಂ(ಗಂಗೆಯ ಮಗ) ತಕ್ಕನೆಂದು (ಯೋಗ್ಯನೆಂದು)

ನಂಬಿದ ಸಭೆಯೊಳ್ ದೊರೆಗೆಡಿಸಿ (ಗೌರವವನ್ನು ಕೆಡಿಸಿಕೊಂಡು) ನುಡಿದೊಡೆ ಏನು ಒಲವರಮೆನ್ನದೆ (ಹೇಳಿದರೆ, ಅದು ಪಕ್ಷಪಾತವೆಂದು ಎನ್ನಿಸುವುದಿಲ್ಲವೇ) ನೀನುಂ ಅದನೆ ಕೊಂಡು ಅಸಗುವುದೇ? (ಧರ್ಮಜನೇ ನೀನು ಭೀಷ್ಮನ ಮಾತನ್ನೇ

ಒಪ್ಪಿ ಅದರಂತೆ ಮಾಡುವುದೇ?) **:ಪದ್ಯ-೪೫:ಅರ್ಥ**:ಕುರುಗಳಿಗೆಲ್ಲಾ ಹಿರಿಯನು, ಆ ಕುಲಕ್ಕೇ ಹಿರಿಯನು, ಪವಿತ್ರಗಂಗೆಯ ಮಗ, ಇವನು ಯೋಗ್ಯನೆಂದು ನಂಬಿದ ಸಭೆಯಲ್ಲಿ ಗೌರವವನ್ನು ಕೆಡಿಸಿಕೊಂಡು ಹೇಳಿದರೆ, ಅದು ಪಕ್ಷಪಾತವೆಂದು ಎನ್ನಿಸುವುದಿಲ್ಲವೇ?

ಧರ್ಮಜನೇ ನೀನು ಭೀಷ್ಮನ ಮಾತನ್ನೇ ಒಪ್ಪಿ ಅದರಂತೆ ಮಾಡುವುದೇ? ಎಂದನು ಶಿಶುಪಾಲ.

ಕಂ||

ಮನದೊಲವರಮುಳ್ಳೊಡೆ

ಕುಡು

ಮನೆಯೊಳ್

ಹರಿಗಗ್ರಪೂಜೆಯಂ

ಯಜ್ಞದೊಳೀ |

ಮನುಜಾಧೀಶ್ವರ ಸಭೆಯೊಳ್

ನೆನೆಯಲುಮಾಗದು ದುರಾತ್ಮನಂ ಬೆಸಗೊಳ್ವಾ|| ೪೫||

ಪದ್ಯ-೪೬:ಪದವಿಭಾಗ-ಅರ್ಥ:ಮನದೆ ಒಲವರಮುಳ್ಳೊಡೆ ಕುಡು ಮನೆಯೊಳ್ ಹರಿಗಗ್ರಪೂಜೆಯಂ (ಮನಸ್ಸಿನಲ್ಲಿ ಪಕ್ಷಪಾತವಿದ್ದರೆ ಮನೆಯಲ್ಲಿ ಹರಿಗೆ ಅಗ್ರಪೂಜೆಯನ್ನು ಕೊಡು!)

ಯಜ್ಞದೊಳೀ
ಮನುಜಾಧೀಶ್ವರ ಸಭೆಯೊಳ್
(ಯಜ್ಞದಲ್ಲಿ ಈ ನೆರೆದ
ಮಹಾರಾಜರ ಸಭೆಯಲ್ಲಿ)
ನೆನೆಯಲುಮಾಗದು
ದುರಾತ್ಮನಂ (ದುರಾತ್ಮನಾದ
ಕೃಷ್ಣನನ್ನು
ನೆನೆದುಕೊಳ್ಳುವುದಕ್ಕೆ ಕೂಡಾ
ಆಗದು.) ಬೆಸಗೊಳ್ವಾ (ಅವನ
ವಿಚಅರ ಕೇಳುತ್ತೀಯಾ?)

:ಪದ್ಯ-೪೬:ಅರ್ಥ:ನಿನಗೆ ಮನಸ್ಸಿನಲ್ಲಿ ಪಕ್ಷಪಾತವಿದ್ದರೆ ಹರಿಗೆ ಅಗ್ರಪೂಜೆಯನ್ನು ನಿನ್ನ ಮನೆಯಲ್ಲಿ ಕೊಡು! ಯಜ್ಞದಲ್ಲಿ, ಈ ನೆರೆದ ಮಹಾರಾಜರ ಸಭೆಯಲ್ಲಿ, ದುರಾತ್ಮನಾದ ಕೃಷ್ಣನನ್ನು ನೆನೆದುಕೊಳ್ಳುವುದಕ್ಕೆ ಕೂಡಾ ಆಗದು. ಅವನ ವಿಚಾರ ಕೇಳುತ್ತೀಯಾ?

ಕಂ|| ಅಳವರಿಯದೆಗ್ಗು
ಬಳವಳ
ಬಳೆವಿನೆಗಂ ಪಚ್ಚ ಪಸಿಯ
ತುರುಕಾರಂಗ |
ಗ್ಗಳಿಯೆನೆ ಮಾಡಿ ನೀನುಂ
ಪಳಿಯಂಕಟ್ಟಿದೆಯೊ
ಭೂಪರಿನಿಬರ ಕೊರಲೊಳ್ ||
೪೬||

ಪದ್ಯ-೪೭:ಪದವಿಭಾಗ-ಅರ್ಥ:ಅಳವರಿಯದೆ ಎಗ್ಗು, ಬಳವಳ ಬಳೆವಿನೆಗಂ

(ಪ್ರಮಾಣವನ್ನು ತಿಳಿಯದಷ್ಟು
ದಡ್ಡತನವು, ಅತಿಶಯವಾಗಿ
ಬೆಳೆಯುತ್ತಿರಲು) ಪಚ್ಚ
ಪಸಿಯ ತುರುಕಾರಂಗೆ
ಅಗ್ಗಳಿಯೆನೆ ಮಾಡಿ (ಹಚ್ಚಹಸಿ
ದನಕಾಯುವವನಿಗೆ
ಹಿರಿಮೆಯನ್ನು ಕೊಟ್ಟು)
ನೀನುಂ ಪಳಿಯಂ (ಪಳಿ- ಹಳಿ-
ನಿಂದಿಸು, ನಿಂದೆ) ಕಟ್ಟಿದೆಯೊ
ಭೂಪರು ಅನಿಬರ
ಕೊರಲೊಳ್ (ನೀನು ಈ

ರಾಜಾಧಿರಾಜರೆಲ್ಲರ ಕೊರಳಲ್ಲಿ ಅವಮಾನ ಮತ್ತು ನಿಂದೆಯನ್ನು ಕಟ್ಟಿದಯಲ್ಲಾ!)

:ಪದ್ಯ-೪೭:ಅರ್ಥ:ಪ್ರಮಾಣ ತಿಳಿಯದಷ್ಟು ದಡ್ಡತನವು ಅತಿವಾಗಿ ಬೆಳೆಯುತ್ತಿರಲು, ಹಚ್ಚಹಸಿ ದನಕಾಯುವವನಿಗೆ ಹಿರಿಮೆಯನ್ನು ಕೊಟ್ಟು, ನೀನು ಈ ರಾಜಾಧಿರಾಜರೆಲ್ಲರ ಕೊರಳಲ್ಲಿ ಅವಮಾನ ಮತ್ತು ನಿಂದೆಯನ್ನು ಕಟ್ಟಿದಯಲ್ಲಾ!

ಕಂ||ದೇವರನಡಿಗೆರಗಿಸಿ ಸಕ
ಲಾವನಿತಳದದಟರಂ
ಪಡಲ್ವಡಿಸಿದ ಶೌ |
ರ್ಯಾವಷ್ಟಂಬದೊಳಾನಿರೆ
ಗೋವಳಿಗಂಗ್ರಪೂಜೆಯಂ
ನೀನ್ ಕುಡುವಾ |42||

ಪದ್ಯ-೪೭:ಪದವಿಭಾಗ-ಅರ್ಥ:ದೇವರನಡಿಗೆರಗಿಸಿ (ದೇವತೆಗಳನ್ನು ನನ್ನ ಪಾದಕ್ಕೆ ನಮಸ್ಕರಿಸುವಂತೆ ಮಾಡಿ) ಸಕಲಾವನಿತಳದ ಅದಟರಂ

(ಸಕಲ ಭೂಮಂಡಲದ
ಶೂರರನ್ನು) ಪಡಲ್ವಡಿಸಿದ
(ಹೊಡೆದು ಉರುಳಿಸಿದ)
ಶೌರ್ಯಾವಷ್ಟಂಬದೊಳು
ಆನಿರೆ (ಪ್ರತಾಪದ
ಹಿರಿಮೆಯಲ್ಲಿ ನಾನು
ಇರುವಾಗ) ಗೋವಳಿಗಂಗೆ
ಅಗ್ರಪೂಜೆಯಂ ನೀನ್
ಕುಡುವಾ (ಒಬ್ಬ
ದನಕಾಯುವವನಿಗೆ ನೀನು

ಅಗ್ರಪೂಜೆಯನ್ನು ಕೊಡಬಹುದೇ?)

:ಪದ್ಯ-೪೭:ಅರ್ಥ:ಮತ್ತೂ ಹೇಳುತ್ತನೆ ಶಿಶುಪಾಲ: ದೇವತೆಗಳನ್ನು ನನ್ನ ಪಾದಕ್ಕೆ ನಮಿಸುವಂತೆ ಮಾಡಿ ಸಕಲ ಭೂಮಂಡಲದ ಶೂರರನ್ನು ಹೊಡೆದು ಉರುಳಿಸಿದ, ಪ್ರತಾಪದ ಹಿರಿಮೆಯಲ್ಲಿ ನಾನು ಇರುವಾಗ, ಒಬ್ಬ ದನಕಾಯುವವನಿಗೆ ನೀನು

ಅಗ್ರಪೂಜೆಯನ್ನು
ಕೊಡಬಹುದೇ?)

ಕಂ|| ಸಮಕಟ್ಟರಿಯದೆ ಹರಿಗ
ರ್ಘ್ಯಮೆತ್ತಿ ನಿಂದಿರ್ದ
ಯಜ್ಞಮದು ಮೊದಲೊಳ ತಾ |
ನಮರ್ದ್ರ್ಯಮಮರ್ದಿರದೆ
ತಣಿಯುಂ
ಡಮರ್ದ ಗೋಮೂತ್ರದಿಂದೆ
ಬಾಯ್ಮೊಸಿದವೋಲ್ ||೪೮||

ಪದ್ಯ-:೪೮:ಪದವಿಭಾಗ-

ಅರ್ಥ:ಸಮಕಟ್ಟರಿಯದೆ

(ಸಮಕಟ್ಟನ್ನು-ಸರಿಯಾದ
ವ್ಯವಸ್ಥೆಯನ್ನು ತಿಳಿಯದೆ)
ಹರಿಗೆ ಅರ್ಘ್ಯಮೆತ್ತಿ ನಿಂದಿರ್ದ
ಯಜ್ಞಮದು (ಕೃಷ್ಣನಿಗೆ
ಅಗ್ರಪೂಜೆಯ ಅರ್ಘ್ಯವನ್ನು
ಕೊಟ್ಟಿರುವುದು)
ಮೊದಲೊಳ್ ತಾನ್
ಅಮರ್ದುಂ (ಮೊದಲಲ್ಲಿ
ತಾನು ಅಮದಿದರೂ -ಬಂದು)
ಅಮರ್ದ ಇರದೆ ತಣಿಯುಂಡು
(ತಡಮಾಡದೆ ಅಮೃತವನ್ನು

ತೃಪ್ತಿಯಾಗುವಂತೆ
ಊಟಮಾಡಿ) ಅಮರ್ದ
ಗೋಮೂತ್ರದಿಂದೆ
ಬಾಯ್ಮುೂಸಿದವ್ರೋಲ್ (ಆ
ಅಮೃತವನ್ನು ಉಂಡ
ಬಾಯನ್ನು ಗೋಮೂತ್ರದಿಂದ
ಬಾಯಿಗೆ ಹಚ್ಚಿದಂತೆ/
ಮುಕ್ಕಳಿಸಿದಂತೆ ಆಯಿತು.)

:ಪದ್ಯ-೪೮:ಅರ್ಥ:

ಸರಿಯಾದ ವ್ಯವಸ್ಥೆಯನ್ನು
ತಿಳಿಯದೆ ಕೃಷ್ಣನಿಗೆ

ಅಗ್ರಪೂಜೆಯ ಅರ್ಘ್ಯವನ್ನು ಕೊಟ್ಟಿರುವುದು, ಮೊದಲಲ್ಲಿ ತಾನು ಬಂದು ತಡಮಾಡದೆ ಅಮೃತವನ್ನು ತೃಪ್ತಿಯಾಗುವಂತೆ ಊಟಮಾಡಿ, ಆ ಅಮೃತವನ್ನು ಉಂಡ ಬಾಯನ್ನು ಗೋಮೂತ್ರದಿಂದ ಬಾಯಿಮುಕ್ಕಳಿಸಿದಂತೆ ಆಯಿತು.

ಕಂ|| ಕುಡುವೇಳ್ವನ
ಕುಡುವವನ ಕುಡೆ
ಪಡೆವನ ಪೆಂಪೇಂ
ನೆಗಳ್ತಿವಡೆಗುಮೊಪೇಳ್ವಿಂ |
ಕುಡುವೇಳ್ಗಿಮ ಕುಡುವಣ್ಣಂ
ಕುಡುಗುಮೆ ಕುಡೆ ಕೊಳ್ವ
ಕಲಿಯನರಿಯಲಕ್ಕುಂ|| ೪೯|

ಪದ್ಯ-೪೯:ಪದವಿಭಾಗ-
ಅರ್ಥ:ಕುಡುವೇಳ್ವನ
ಕುಡುವವನ ಕುಡೆ ಪಡೆವನ
ಪೆಂಪು ಏಂ (ಅಗ್ರಪೂಜೆಗೆ

ಅರ್ಘ್ಯವನ್ನು ಕೊಡಲು
ಹೇಳುವವನ, ಕೊಡುವವನ,
ಅದನ್ನು ಪಡೆಯುವವನ
ಹಿರಿಮೆ) ಏಂ
ನೆಗಳ್ತಿವಡೆಗುಮೊ ಪೇಳ್ವೆಂ
(ಏನು ಕೀರ್ತಿಯನ್ನು
ಪಡೆಯುವುದೊ ಹೇಳುತ್ತೇನೆ;)
ಕುಡುವೇಳ್ಗಿಮ ಕುಡುವಣ್ಣಂ
ಕುಡುಗುಮೆ ಕುಡೆ ಕೊಳ್ವ
ಕಲಿಯನು ಅರಿಯಲಕ್ಕುಂ
(ಕೊಡುವಂತೆ ಹೇಳಲಿ,

ಕೊಡುವ ಅಣ್ಣನು ಕೊಡಲಿ,
ಹಾಗೆ ಕೊಡಲು ಅದನ್ನು
ತೆಗೆದುಕೊಳ್ಳುವ ಶೂರನನ್ನು
ಅರಯಬೇಕು/
ತಿಳಿದುಕೊಳ್ಳಬೇಕು-

:ಪದ್ಯ-೪೯:ಅರ್ಥ:

ವ||ಎಂದನಿತರೊಳ್
ಮಾಣದೆಗೀರ್ವಾಣಾರಿಯ
ಸುರಾರಿಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಅನಿತರೊಳ್

(ಅಷ್ಟಕ್ಕೇ) ಮಾಣದೆ (ಬಿಡದೆ)
ಗೀರ್ವಾಣಾರಿಯ
(ದೇವಶತ್ರುವಾದ
ಶಿಶುಪಾಲನು)
ಅಸುರಾರಿಯನು ಇಂತೆಂದಂ
(ಕೃಷ್ಣನ್ನು ಕುರಿತು ಹೀಗೆ
ಹೇಳಿದನು)-
:ವಚನ:ಅರ್ಥ:ಎಂದು
ಅಷ್ಟಕ್ಕೇ ಬಿಡದೆ
ದೇವತೆಗಳಶತ್ರುವಾದ

ಶಿಶುಪಾಲನು ಕೃಷ್ಣನ್ನು ಕುರಿತು ಹೀಗೆ ಹೇಳಿದನು-

ಕಂ||ದೊರೆಯಕ್ಕಮೆ ನಿನಗೆ ಯುಧಿ
ಷ್ಠಿರನರ್ಘ್ಯಮನೆತ್ತೆ ಶಂಕದೊಳ್ ಪಾಲೆರದಂ |
ತಿರೆ ಮಲಿನಮಿಲ್ಲದೊಳ್ಗುಲ ದರಸುಗಳಿರೆ ನೀನುಮಗ್ರಪೂಜೆಯನಾಂಪಾ ||೫೦||

ಪದ್ಯ-೫೦:ಪದವಿಭಾಗ-ಅರ್ಥ:ದೊರೆಯಕ್ಕಮೆ - ದೊರಕಿಸಿಕೊಳ್ಳುವ ಅಕ್ಕುಮೇ?(ಅರ್ಘ್ಯ ಕೊಟ್ಟರೆ, ನಿನಗೆ ತೆಗೆದುಕೊಳ್ಳುವ ಯೋಗ್ಯತೆಇದೆಯೇ? ಅಥವಾ ತೆಗೆದುಕೊಳ್ಳಬಹುಗೇ?) ನಿನಗೆ ಯುಧಿಷ್ಠಿರನು ಅರ್ಘ್ಯಮನು ಎತ್ತೆ ಶಂಕದೊಳ್ ಪಾಲೆರದಂತಿರೆ (ಶಂಖದಲ್ಲಿ ಹಾಲು ಎರದಂತೆ ಇರುವ)

ಮಲಿನಮಿಲ್ಲದ ಒಳ್ಗಲದ ಅರಸುಗಳಿರೆ ನೀನುಂ ಅಗ್ರಪೂಜೆಯನಾಂಪಾ (ಮಲಿನವಿಲ್ಲದ ಪರಿಶುದ್ಧವಾದ ಅರಸುಗಳಿರುವಾಗ ನೀನು ಅಗ್ರಪೂಜೆಯನ್ನು ಸ್ವೀಕರಿಸಬಹುದೇ? ಎಂದರೆ ಧರ್ಮಜನಿಗೆ -'ನೊಡು ನನಗಿಂತ ಹಿರಿಯರು ಶ್ರೇಷ್ಠರು ಅಲ್ಲಿದ್ದಾರೆ ಅವರಿಗೆ ಕೊಡು

ಎನ್ನಬೇಕಾಗಿತ್ತು ಎಂದು ಭಾವ.)

:ಪದ್ಯ-೫೦:ಅರ್ಥ:ಧರ್ಮಜ ನು ಅರ್ಘ್ಯ ಕೊಟ್ಟರೆ, ನಿನಗೆ ತೆಗೆದುಕೊಳ್ಳುವ ಯೋಗ್ಯತೆಇದೆಯೇ? ಅಥವಾ ತೆಗೆದುಕೊಳ್ಳಬಹುಗೇ? ಶಂಖದಲ್ಲಿ ಹಾಲು ಎರದಂತೆ ಇರುವ ಮಲಿನವಿಲ್ಲದ ಪರಿಶುದ್ಧವಾದ ಕುಲದ ಅರಸುಗಳಿರುವಾಗ ನೀನು

ಅಗ್ರಪೂಜೆಯನ್ನು ಸ್ವೀಕರಿಸಬಹುದೇ? ಎಂದರೆ ಧರ್ಮಜನಿಗೆ ಕೃಷ್ಣನು ಹೇಳಬೇಕಿತ್ತು--'ನೋಡು ನನಗಿಂತ ಹಿರಿಯರು ಶ್ರೇಷ್ಠರು ಅಲ್ಲಿದ್ದಾರೆ ಅವರಿಗೆ ಅರ್ಘ್ಯವನ್ನು ಕೊಡು ಎನ್ನಬೇಕಾಗಿತ್ತು ಎಂದು ಭಾವ.)

ಕಂ|| ಮನದೊಲವರದಿಂದೀ ಯಮ

ತನಯನ ಕುಡುವಗ್ರಪೂಜೆ ಮತ್ಸನ್ನಧಿಯೊಳ್ |
ನಿನಗಸನಿಯ ಮಿಳ್ತುವ ನಂ ಜಿನ ದೊರೆಯೆಂದೊಣರ ನಂದಗೋಪಾಲಸುತಾ ||೫೧||

ಪದ್ಯ-೫೧:ಪದವಿಭಾಗ-ಅರ್ಥ:ಮನದೊಲವರದಿಂದೀ ಯಮತನಯನ (ಮನಸ್ಸಿನಲ್ಲಿ ನಿನ್ನ ಮೇಲಿನ ಪಕ್ಷಪಾತದಿಂದ) ಕುಡುವಗ್ರಪೂಜೆ ಮತ್ಸನ್ನಧಿಯೊಳ್ (ನನ್ನ

ಎದುರಿನಲ್ಲಿ ಕೊಡುವ
ಅಗ್ರಪೂಜೆ) ನಿನಗೆ ಅಸನಿಯ
ಮಿಳ್ತುವ (ನಿನಗೆ
ಸಿಡಿಲುಹೊಡೆದ ಸಾವಿನ)
ನಂಜಿನ (ವಿಷದ)
ದೊರೆಯೆಂದ ಸಮಾನವೆಂದು-
ಕೊಡುಗೆಯೆಂದು) ಒಣರ್
ನಂದಗೋಪಾಲಸುತಾ
(ದನಕಾಯುವ
ನಂದಗೋಪಾಲಸುತನೇ ಹಾಗೆ
ಭಾವಿಸು)

:ಪದ್ಯ-೫೧:ಅರ್ಥ:ದನಕಾಯುವ ನಂದಗೋಪಾಲಸುತನೇ ಮನಸ್ಸಿನಲ್ಲಿ ನಿನ್ನ ಮೇಲಿನ ಪಕ್ಷಪಾತದಿಂದ ನನ್ನ ಎದುರಿನಲ್ಲಿ ಕೊಡುವ ಈ ಅಗ್ರಪೂಜೆ ನಿನಗೆ ಸಿಡಿಲುಹೊಡೆದ ಸಾವಿನ, ವಿಷದ ಸಮಾನವೆಂದು- ಕೊಡುಗೆಯೆಂದು ಭಾವಿಸು.

ಕಂ|| ಮನೆ ನಿನಗೆ
ನಂದಗೋಪಾ
ಲನ ಮನೆ ತುರುಗಾರ್ತಿ ನಿನಗೆ
ಮನೆವೆಂಡತಿ ಪ |
ಚ್ಚನೆ ಪಸಿಯ ಗೋವನ್ನೈ ಕರ
ಮನರಿಯದೆ
ನಿನ್ನಳವಿಗಳವನರಿಯದೆ
ನೆಗಳ್ದ್ಯೆ ||೫೨||

ಪದ್ಯ-೫೨:ಪದವಿಭಾಗ-

ಅರ್ಥ:ಮನೆ ನಿನಗೆ

ನಂದಗೋಪಾಲನ ಮನೆ,

ತುರುಗಾರ್ತಿ
(ದನಕಾಯುವವಳು) ನಿನಗೆ
ಮನೆವೆಂಡತಿ, ಪಚ್ಚನೆ ಪಸಿಯ
ಗೋವನ್ನೈ ಕರಮನು
ಅರಿಯದೆ ನಿನ್ನಳವಿಗೆ
ಅಳವನು ಅರಿಯದೆ (ನಿನ್ನ
ಯೋಗ್ಯತೆಯ
ಸಾಮರ್ಥ್ಯವನ್ನು/ ಆಳವನ್ನು/
ಮಟ್ಟವನ್ನು ಅರಿಯದೆ)
ನೆಗಳ್ದೈ
(ನೆಡೆದುಕೊಂಡಿರುವೆ.)

:ಪದ್ಯ-೫೨:ಅರ್ಥ:ನಿನಗೆ ಮನೆ, ನಂದಗೋಪಾಲನ ಮನೆ; ಮನೆಯ ಹೆಂಡತಿ ದನಕಾಯುವವಳು; ಹಚ್ಚ ಹಸಿಯ ಗೋವಳನೇಸ್ಸೈ ನೀನು; ನಿನ್ನ ಕರುಮನು ಕರ್ಮವಾದ ಗೊಲ್ಲತನವನ್ನು ಅರಿಯದೆ, ನಿನ್ನ ಯೋಗ್ಯತೆಯ ಮಟ್ಟವನ್ನು ಅರಿಯದೆ ನೆಡೆದುಕೊಂಡಿರುವೆ.

ಕಂ|| ಮುರನಡಸಿ ಪಿಡಿದು
ಕಟ್ಟಿದ
ಪರಿಭವಮಂ ಮರೆದೆ ನಿನ್ನ
ಪೆಡೆಗಯ್ಗಟ್ಟಂ |
ಶರದಿಂ ಬಿಡಿಸಿದನಲ್ಲನೆ
ಪರಿತ್ಸುತಂ
ಬನ್ನವಿನ್ನವೆಂಬುಮೊಳವೇ ||
೫೩||

ಪದ್ಯ-೫೩:ಪದವಿಭಾಗ-
ಅರ್ಥ:ಮುರನಡಸಿ ಪಿಡಿದು
ಕಟ್ಟಿದ ಪರಿಭವಮಂ ಮರೆದೆ

(ಮುರನೆಂಬ ರಾಕ್ಷಸನು
ನಿನ್ನನ್ನು ಕಟ್ಟಿಹಾಕಿದ
ಅವಮಾನವನ್ಲು
ಮರತೆಯಲ್ಲಾ!) ನಿನ್ನ
ಪೆಡೆಗಯ್ಗಟ್ಟಂ ಶರದಿಂ
ಬಿಡಿಸಿದನಲ್ಲನೆ ಸರಿತ್ಸುತಂ
(ನಿನ್ನ ಹಿಂಗಟ್ಟು ಮುರಿಯನ್ನು
ಭೀಷ್ಮನು ಬಾಣದಿಂದ
ಬಿಡಿಸಿದನಲ್ಲವೇ?)
ಬನ್ನವಿನ್ನವೆಂಬುಮೊಳವೇ
(ನಿನಗೆ ಬನ್ನವಿನ್ನ - ಭಂಗದ

ನಾಚಿಕೆ ನರ್ಯಾದೆ

ಇದೆಯೇ?)

:ಪದ್ಯ-೫೩:ಅರ್ಥ:ಮುರನೆಂ

ಬ ರಾಕ್ಷಸನು ನಿನ್ನನ್ನು

ಕಟ್ಟಿಹಾಕಿದ

ಅವಮಾನವನ್ಲು

ಮರತೆಯಲ್ಲಾ! ನಿನ್ನ ಹಿಂಗಟ್ಟು

ಮುರಿಯನ್ನು ಭೀಷ್ಮನು

ಬಾಣದಿಂದ ಬಿಡಿಸಿದನಲ್ಲವೇ?

ನಿನಗೆ ಮಾನ ನರ್ಯಾದೆ

ಎಂಬುವು ಇವೆಯೇ?

ಎಂದನು ಶಿಶುಪಾಲ.

ಕಂ|| ದನುಜಾಂತಕನೆಂಬೀ ನಿ
ನ್ನ
ನಚ್ಚುವೋದಂಕಮೆಲವೊಮು
ನ್ನೆನ್ನನ್ನಂ |
ದನುಜಂ ಪುಟ್ಟದೆ ಸಂದುದು
ನಿನಗೀ ಪೆಸರೆನ್ನ ಮುಂದೆಯುಂ
ಸಂದುಪುದೇ ||೫೪||

ಪದ್ಯ-೫೪:ಪದವಿಭಾಗ-

ಅರ್ಥ:ದನುಜಾಂತಕನೆಂಬ ಈ

ನಿನ್ನ ನಚ್ಚುವ್ರೋದ ಅಂಕಂ (ನಂಬಿಗೆಯ/ ನೆಚ್ಚಿನ ಬಿರುದು) ಎಲವ್ರೊ ಮುನ್ನ ಎನ್ನನ್ನಂ ದನುಜಂ ಪುಟ್ಟದೆ ಸಂದುದು (ಎಲವ್ರೊ ನನ್ನಂಥ ದನಜನು ಮೊದಲು ಹುಟ್ಟದೆ ಆ ಹೆಸರು ನಿನಗೆ ಬಂದಿತು) ನಿನಗೆ ಈ ಪೆಸರು ಎನ್ನ ಮುಂದೆಯುಂ ಸಂದುಪುದೇ (ನಿನಗೆ ಈ ಹೆಸರು ನನ್ನ

ಎದುರಿನಲ್ಲಿಯೂ ಸಲ್ಲವುದೇ?)

:ಪದ್ಯ-೫೪:ಅರ್ಥ:ದನುಜಾಂತಕನೆಂಬ ಈ ನಿನ್ನ ನಂಬಿಗೆಯ ನೆಚ್ಚಿನ ಬಿರುದು, ಎಲವೊ! ನನ್ನಂಥ ದನಜನು ಮೊದಲು ಹುಟ್ಟದೆ ಆ ಹೆಸರು ನಿನಗೆ ಬಂದಿತು.ನಿನಗೆ ಈ ಹೆಸರು ನನ್ನ ಎದುರಿನಲ್ಲಿಯೂ ಸಲ್ಲವುದೇ?

ಕಂ|| ಆನಿರ್ದ

ಸಭೆಯೊಳರ್ಘ್ಯಮ

ನಾನಲ್ಕ್ಯಾಟಿಸಿದ ನಿನ್ನ ಬಿಸಿ

ನೆತ್ತರನಿಂ |

ತೀ ನೆರವಿ ನೊಡೆ ಕುಡಿಯದೊ

ಡೇನೋ ಶಿಶುಪಾಲನೆಂಬ

ಪೆಸರೆಸದಪುದೇ ||೫೫||

ಪದ್ಯ-೫೫:ಪದವಿಭಾಗ-

ಅರ್ಥ:ಆನಿರ್ದ ಸಭೆಯೊಳ್

ಅರ್ಘ್ಯಮನು ಆನಲ್ಕೆ

ಆಟಿಸಿದ ನಿನ್ನ ಬಿಸಿ ನೆತ್ತರನು

ಇಂತು ಈ ನೆರವಿ ನೊಡೆ
ಕುಡಿಯದೊಡೆ ಏನೋ
ಶಿಶುಪಾಲನೆಂಬ ಪೆಸರು
ಎಸದಪುದೇ
:ಪದ್ಯ-೫೫:ಅರ್ಥ:ನಾನಿರುವ
ಸಭೆಯಲ್ಲಿ ಅಗ್ರಪುಜೆಯ
ಅರ್ಘ್ಯವನು ಸ್ವೀಕರಿಸುವುದಕ್ಕೆ
ಬಯಸಿದ ನಿನ್ನ ಬಿಸಿ ರಕ್ತವನ್ನು
ಇಲ್ಲಿ ಈ ಸಭೆಯಜನರು
ನೋಡುತ್ತಿರಲುಕುಡಿಯದೆ
ಇದ್ದರೆ ಏನೋ ನನಗೆ

ಶಿಶುಪಾಲನೆಂಬ ಹೆಸರು ಸಲ್ಲುವುದೇ? ಖಂಡಿತ ಇಲ್ಲ!

ಕಂ|| ಮರಿದ ಮುಚುಕುಂದನೆಂಬನ
ಮರೆವೊಕ್ಕುದನಂದು ನೀನ್ ಜರಾಸಂಧಂಗಂ |
ಬಿರುತೋಡಿಮದಂ ಭೂತಳ
ಮರಿಯದೆ ನೆನೆಯೆಲವೊ ಗೋವುಗಾದುದು ಪುಸಿಯೇ||
೫೬||

ಪದ್ಯ-೫೬:ಪದವಿಭಾಗ-ಅರ್ಥ: ಮಱಿದ (ಮರೆತೆಯಾ) ಮುಚುಕುಂದನೆಂಬನ ಮರೆವೊಕ್ಕುದನು ಅಂದು (ಹಿಂದೆ), ನೀನ್ ಜರಾಸಂಧಂಗಂ ಬಿರುತು ಓಡಿಂ ಅದಂ ಭೂತಳಂ ಅಱಿಯದೆ ನೆನೆ ಎಲವೊ ಗೋವುಗಾದುದು ಪುಸಿಯೇ

:ಪದ್ಯ-೫೬:ಅರ್ಥ:ಹಿಂದೆ <u>ಮುಚುಕುಂದನೆಂಬುವವನನ್ನು</u>

ಮರೆಹೊಕ್ಕುದನ್ನು
ಮರೆತೆಯಾ? ನೀನು
ಜರಾಸಂಧಂಗೆ ಹೆದರಿ
ಓಡಿದುದನ್ನು ಲೋಕ
ತೀಯದೇ? ದನಕಾದಿದ್ದು
ಸುಳ್ಳೇ? ಎಲವೋ ನೆನಪು
ಮಾಡಿಕೊ!

ಕಂ|| ಮೀನಾವೆ
ಪಂದಿಯೆಂದೆನಿ
ತಾನುಂ ತೆರನಾಗಿ
ಡೊಂಬವಿದ್ದೆಯನಾಡಲ್ |

ನೀನರಿಯುವೆಯುರದಿದಿರ್ಚಿ ದೊ
ಡಾನರಿವೆಂ ನಿನ್ನನಿಲ್ಲಿ ದೆಸೆವಲಿಗೈಯಲ್ || ೫೭||

ಪದ್ಯ-೫೭:ಪದವಿಭಾಗ-ಅರ್ಥ:ಮೀನು ಆವೆ ಪಂದಿಯೆಂದು ಎನಿತಾನುಂ ತೆರನಾಗಿ (ಎಷ್ಟೋ ಬಗೆಯಾಗಿ) ಡೊಂಬವಿದ್ದೆಯನು ಆಡಲ್ ನೀನರಿಯುವೆ ಉರದೆ

(ಇರದೆ) ಇದಿರ್ಚಿದೊಡೆ (ಎದುರಿಸಿದರೆ) ಆನರಿವೆಂ ನಿನ್ನನು ಇಲ್ಲಿ ದೆಸೆವಲಿಗೈಯಲ್ (ದೆಸೆಗೆ ಬಲಿಗಯ್ಯ್ಯಲು- ದಿಗ್ಬಲಿಕೊಡಲು ಆನರಿವೆಂ -ನನಗೆ ಗೊತ್ತು)|

:ಪದ್ಯ-೫೭:ಅರ್ಥ: ಮೀನು ಅವತಾರ ಮಾಡಿದೆ; ಹಂದಿಯಾದೆ ಹೀಗೆ ಮೊದಲಾದ ಎಷ್ಟೋ

ಬಗೆಯಾಗಿಡೊಂಬರ ವಿದ್ಯೆನ್ನು ತೋರಿಸುವುದನ್ನು ನೀನು ತಿಳಿದಿದ್ದೀಯೆ. ಆದರೆ ಇರದೆ ಎದುರಿಸಿದರೆ, ನಿನ್ನನ್ನು ಇಲ್ಲಿ ದಿಗ್ಬಲಿಕೊಡಲು ನಾನು ಬಲ್ಲೆ.

ಕಂ|| ಅರಿಯದಿದಂ ಮಾಡಿದೆನೆ
ನ್ನರಿಯಮಿಕೆಗೆ ಸೈರಿಸೆಂದು
ನೀನ್ ಸಭೆಯೊಳ್ ಕಾ |
ಲ್ಗೆರಗೆರಗು ಕೊಲ್ಲೆನೆಂದೆರ್ದೆ
ತರೆವಿನಗಂ ಹರಿಯ
ನೆರನನಸುರಂ ನುಡಿದಂ|| ೫೮||

ಪದ್ಯ-೫೮:ಪದವಿಭಾಗ-ಅರ್ಥ:ಅರಿಯದೆ ಇದಂ ಮಾಡಿದೆನು ಎನ್ನ ಅರಿಯಮಿಕೆಗೆ (ಅರಿಯದ ಇರುಮಿಕೆಗೆ; ತಿಳಿಗೇಡಿತನಕ್ಕೆ) ಸೈರಿಸೆಂದು (ಸಹಿಸು ಎಂದು) ನೀನ್ ಸಭೆಯೊಳ್ ಕಾಲ್ಗೆರಗು ಎರಗು ಕೊಲ್ಲೆನೆಂದು ಎರ್ದೆತರೆವಿನಗಂ (ಎದೆ ಬಿರಯುವಂತೆ) ಹರಿಯ

ನೆರನನು (ಮರ್ಮಸ್ಥಳವನ್ನು) ಅಸುರಂ ನುಡಿದಂ **:ಪದ್ಯ-೫೮:ಅರ್ಥ**:ಅರಿಯದೆ / ತಿಳುವಳಿಕೆ ಇಲ್ಲದೆ ಇದನ್ನು ಮಾಡಿದೆನು (ಅರ್ಘ್ಯವನ್ನು ಸ್ವೀಕರಿಸೆದೆನು); ನನ್ನ ತಿಳಿಗೇಡಿತನವನ್ನು ನೀವು ಸಹಿಸಿಕೊಳ್ಳಿ ಎಂದು ಈ ಸಭೆಯಲ್ಲಿ ನನ್ನ ಕಾಲಿಗೆ ಎರಗು ಎರಗು- ಬೀಳು ಬೀಳು, ಎಂದು ಎದೆಬಿರಯುವಂತೆ

ಕೃಷ್ಣನ ಮರ್ಮಸ್ಥಾನವನ್ನು ಅಸುರ ಶಿಶುಪಾನು ಚುಚ್ಚಿ ನುಡಿದನು.

ವ|| ಅಂತು ನುಡಿದು ಕಾಯ್ಪಿನೊಳ್ ಪಿಡುಗಿ ನಡನಡ ನಡುಗಿ-

ವಚನ:ಪದವಿಭಾಗ-

ಅರ್ಥ:ಅಂತು ನುಡಿದು ಕಾಯ್ಪಿನೊಳ್ (ಕೋಪದಲ್ಲಿ) ಪಿಡುಗಿ (ಸಿಡಿಲ ಹಾಗೆ) ನಡನಡ ನಡುಗಿ-

:ವಚನ:ಅರ್ಥ:ಹಾಗೆ ಹೇಳಿ, ಸಿಡಿಲ ಹಾಗೆ ಆರ್ಬಟಿಸಿ ಕೋಪದಿಂದ ನಡನಡ ನಡುಗಿ-

ಕಂ|| ಪೊಳೆದುಳ್ಳುವ ಕುಡು
ದಾಡೆಯ
ಪೊಳಪು ನೊಸಲ್ಗಡರ್ದು
ಪೊಡರ್ವ ಪುರ್ವೆಸವಿನಮ |
ವ್ವಳಿಸುವ ಮುಳಿಸಿನ ದಳ್ಳುರಿ
ಗಳನುಗುಳ್ವ
ವೊಲುಗಳ್ದಿನಸುರನುರಿವ
ಪಳಿಗಳಂ ||೫೯||

ಪದ್ಯ-೫೯:ಪದವಿಭಾಗ-ಅರ್ಥ:ಪೊಳೆದುಳ್ಳುವ ಕುಡುದಾಡೆಯಪೊಳಪು (ಹೊಳೆದು ಮಿಂಚುವ ಕೋರೆದಾಡೆಯ ಹೊಳಪು,) ನೊಸಲ್ಗಡರ್ದು ಪೊಡರ್ವ ಪುರ್ವು ಎಸವಿನಂ (ಹಣೆಗೆ ಏರಿ ನಡುಗುವ ಹುಬ್ಬು ಶೋಭಿಸುವಿಕೆ) ಅವ್ವಳಿಸುವ ಮುಳಿಸಿನ ದಳ್ಳುರಿಗಳನು ಉಗುಳ್ವವೊಲು

(ಮೇಲೆಬೀಳುವ ಕೋಪದ ದಳ್ಳುರಿ- ಬೆಂಕಿಯನ್ನು ಕಾರುವಹಾಗೆ) ಉಗುಳ್ದಂ ಅಸುರನು ಉರಿವ ಪಳಿಗಳಂ(ನಿಂದೆಗಳನ್ನು) (ಶಿಶುಪಾಲನು ಉರಿಯುತ್ತಿರುವಬೆಂಕಿಯಂತಿರುವ ನಿಂದೆಗಳನ್ನು ಬಾಯಿಯಿಂದ ಉಗುಳಿದನು)

:ಪದ್ಯ-೫೯:ಅರ್ಥ:ಉಗ್ರ ಶಿಶುಪಾಲನ ವರ್ಣನೆ:

ಹೊಳೆದು ಮಿಂಚುವ
ಕೋರೆದಾಡೆಯ ಹೊಳಪು,
ಹಣೆಗೆ ಏರಿ ನಡುಗುವ ಹುಬ್ಬು
ಶೋಭಿಸುವಿಕೆ;
ಮೇಲೆಬೀಳುವ ಕೋಪದ
ದಳ್ಳುರಿ- ಬೆಂಕಿಯನ್ನು
ಕಾರುವಹಾಗೆ, ಅಸುರ
ಶಿಶುಪಾಲನು
ಉರಿಯುತ್ತಿರುವಬೆಂಕಿಯಂತಿ
ರುವ ನಿಂದೆಗಳನ್ನು
ಬಾಯಿಯಿಂದ ಉಗುಳಿದನು.

ವ|| ಆಗಳ್

ಸಭಾಸದರೆಲ್ಲಮೆವೆ ಮಿಡುಕದೆ

ಪಂದೆಯಂ

ಪಾವಡರ್ದವೊಲುಸಿರದಿರೆನಾ

ರಾಯಣಂ

ಶಿಶುಪಾಲನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್

ಸಭಾಸದರೆಲ್ಲಮ ಎವೆ

ಮಿಡುಕದೆ ಪಂದೆಯಂ

ಪಾವಡರ್ದವೊಲುಸಿರದಿರೆನಾ

ರಾಯಣಂ
ಶಿಶುಪಾಲನನಿಂತೆಂದಂ
:ವಚನ:ಅರ್ಥ:ಆಗ
ಸಭಾಸದರ ಎಲ್ಲಮಂ
ಕಣ್ಣುರೆಪ್ಪೆ ಮಿಡುಕದೆ
ಹೇಡಿಯನ್ನು ಹಾವು
ಅಡರಿದಂತೆ ಉಸಿರದೆ
ಸುಮ್ಮನಿರಲು, ಕೃಷ್ಣನು
ಶಿಶುಪಾಲನಿಗೆ ಹೀಗೆ
ಹೇಳಿದನು.

ಕಂ||ನಿನ್ನಯ ತಾಯ್

ಸಾತ್ವತಿಯುಂ

ನಿನ್ನ ತಂದೆನ್ನ

ತೊಡೆಯಮೇಲಿಳಿಪುವುದಂ |

ನಿನ್ನ ಲಲಾಟದ ಕಣ್ಣದು

ಮುನ್ನಮೆ ಕಿಡೆ ನಿನ್ನ

ಮೃತ್ಯುವೆನ್ನಕಯ್ಯೊಳ್ ||೬೦ ||

ಪದ್ಯ-೬೦:ಪದವಿಭಾಗ-

ಅರ್ಥ: ನಿನ್ನಯ ತಾಯ್ ಸಾತ್ವತಿಯುಂ (ನಿನ್ನ ತಾಯಿ ಸಾತ್ವತಿಯು) ನಿನ್ನ ತಂದು ಎನ್ನ

ತೊಡೆಯಮೇಲೆ
ಇಳಿಪುವುದಂ ನಿನ್ನ ಲಲಾಟದ
ಕಣ್ಣು ಅದು ಮುನ್ನಮೆ ಕಿಡೆ
(ಹಣೆಯ ಮೇಲಿದ್ದ ಕಣ್ಣು -
ಅದು ಕೂಡಲೆ ಇಲ್ಲವಾಗಲು)
ನಿನ್ನ ಮೃತ್ಯುವು ಎನ್ನಕಯ್ಯೊಳ್
(ನಿನ್ನ ಸಾವು ನನ್ನ ಕಯ್ಯಲ್ಲಿ
ಎಂದು ತಿಳಿದಳು)

:ಪದ್ಯ-೬೦:ಅರ್ಥ:-

<u>ಶಿಶುಪಾಲನೇ</u> ನಿನ್ನ ತಾಯಿ
ಸಾತ್ವತಿಯು ನಿನ್ನನ್ನು ತಂದು

ನನ್ನ ತೊಡೆಯಮೇಲೆ ಇಡಲು,
ನಿನ್ನ ಹಣೆಯ ಮೇಲಿದ್ದ ಕಣ್ಣು
- ಅದು ಕೂಡಲೆ ಇಲ್ಲವಾಗಲು,
ನಿನ್ನ ಸಾವು ನನ್ನ ಕಯ್ಯಲ್ಲಿ
ಎಂದು ತಿಳಿದು, ಕೊಲ್ಲದಿರಲು
ಬೇಡಿಕೊಂಡಳು.

ಕಂ|| ನೆರೆದುದನರಿದೀ
ಕಿರಿಯವ
ನರಿಯದೆ ಕೆಡೆ
ನುಡಿದನಪ್ಪೊಡಂ ನೂರುವರಂ
|

ನರೆ ಸಲಿಸುವುದೆಂದುದನಾಂ ಮರೆವೆನೆ ಬಯ್ ಬಯ್ ಸಲಿಸುವೆ ನೂರುವರಂ ||೬೧

ಪದ್ಯ-೬೧:ಪದವಿಭಾಗ-ಅರ್ಥ:ನೆರೆದುದಂ (ತುಂಬಿದುದು- ಆಯುಷ್ಯವುತುಂಬಿ ತನ್ನಸಾವು ನನ್ನ ಕೈಯಲ್ಲಿ ಎಂಬುದನ್ನು) ಅರಿದು (ತಿಳಿದೂ) ಈ ಕಿರಿಯವನು ಅರಿಯದೆ (ಈ ಚಿಕ್ಕವನು

ತಿಳಿಯದೆ) ಕೆಡೆ
ನುಡಿದನಪ್ಪೊಡಂ (ಕೆಟ್ಟ
ಮಾತನ್ನಾಡಿದರೂ)
ನೂರುವರಂ ನರೆ (ಪೂರ್ತಿ)
ಸಲಿಸುವುದು ಎಂದುದಂ ಆಂ
ಮರೆವೆನೆ (ನೂರು ಬೈಗುಳು
ಪೂರ್ತಿಯಾಗುವವರೆಗೂ
ಕೊಲ್ಲದಿರುವ ಮಾತನ್ನು
ಸಲ್ಲಿಸುವೆನು ಎಂದದು
ನಿನ್ನತಾಯಿಗೆ
ಮಾತುಕೊಟ್ಟಿರುವುದನ್ನು

ಮರೆಯುವೆನೇ? ಇಲ್ಲ!)
ಬಯ್ ಬಯ್ ಸಲಿಸುವೆ
ನೂರುವರಂ (ನೂರು ಬೈಗುಳು
ಆಗುವವರೆಗೂ ನನ್ನ
ಮಾತನ್ನು ಸಲ್ಲಿಸುವೆನು
ಎಂದನು ಕೃಷ್ಣ.)

:ಪದ್ಯ-೬೧:ಅರ್ಥ:

ಆಯುಷ್ಯವು ತುಂಬಿ ತನ್ನ
ಸಾವು ನನ್ನ ಕೈಯಲ್ಲಿ
ಎಂಬುದನ್ನು ತಿಳಿದೂ, ಈ
ಚಿಕ್ಕವನು ತಿಳಿಯದೆ ಕೆಟ್ಟ

ಮಾತನ್ನಾಡಿದರೂ, ನೂರು ಬೈಗುಳು ಪೂರ್ತಿಯಾಗುವವರೆಗೂ ಕೊಲ್ಲದಿರುವ ಮಾತನ್ನು ಸಲ್ಲಿಸುವೆನು ಎಂದು ನಿನ್ನ ತಾಯಿಗೆ (ಕೃಷ್ಣನ ಸೋದರತ್ತೆ) ಮಾತುಕೊಟ್ಟಿರುವುದನ್ನು ಮರೆಯುವೆನೇ? ಇಲ್ಲ! ನೂರು ಬೈಗುಳು ಆಗುವವರೆಗೂ ನನ್ನ ಮಾತನ್ನು ಸಲ್ಲಿಸುವೆನು ಎಂದನು ಕೃಷ್ಣ.

- (ಮೂಲ ಮಹಾಭಾರತದಲ್ಲಿ ಕ್ಷಮಾರ್ಹವಾದ ನೂರು ತಪ್ಪುಗಳನ್ನು ಇವನು ಮಾಡಿದರೂ ಇವನನ್ನು ಕೊಲ್ಲುವುದಿಲ್ಲ ಎಂದು ಕೃಷ್ಣನು ಶಿಸುಪಾಲನ ತಾಯಿಗೆ ಎಂದರೆ ತನ್ನ ತಂದೆ ವಸುದೇವನ ಮತ್ತು ಕುಂತಿಯ ತಂಗಿ ಶ್ರತಶ್ರವೆಗೆ/ ಸಾತ್ವತಿಗೆ ಮಾತುಕೊಟ್ಟಿರುತ್ತಾನೆ.)

ಕಂ||ಮುನಿಯಲನೆಗಾಗ

ಗಾಂಗೇ

ಯನಿರ್ದನಿರ್ದಂ

ಘಟೋದ್ಭವಂ ನೆಗಳ್ದ ಪೃಥಾ|

ತನಯರುಮಿರ್ದರ್

ದುರ್ಯೋ

ಧನನಿರ್ದಂ ಕೇಳೆ ಪೇಳ್ವರಾ

ಬಲ್ಲವರುಂ||೬೨ ||

ಪದ್ಯ-೬೨:ಪದವಿಭಾಗ-

ಅರ್ಥ:ಮುನಿಯಲ್ ಎನೆಗೆ

(ನನಗೆ ನೀನು

ಸಿಟ್ಟುಮಾಡಬೇಡ) ಆಗ ಗಾಂಗೇಯನು ಇರ್ದಂ ಇರ್ದಂ ಘಟೋದ್ಭವಂ ನೆಗಳ್ದ ಪೃಥಾತನಯರುಂ (ಕುಂತಿಯ ಮಕ್ಕಳು) ಇರ್ದರ್ ದುರ್ಯೋಧನನು ಇರ್ದಂ ಕೇಳೆ (ಅವರನ್ನು ಕೇಳಿದರೆ) ಪೇಳ್ವರಾ ಬಲ್ಲವರುಂ (ತಿಳಿದ ಅವರು ಹೇಳುತ್ತಾರೆ)

:ಪದ್ಯ-೬೨:ಅರ್ಥ:ನನ್ನಮೇಲೆ ನೀನು ಸಿಟ್ಟುಮಾಡಬೇಡ. ಆಗ

ಗಾಂಗೇಯನು ಇದ್ದನು, ದ್ರೋಣನು ಇದ್ದನು, ಪ್ರಸಿದ್ಧ ಪಾಂಡವರು ಇದ್ದರು, ದುರ್ಯೋಧನನೂ ಇದ್ದನು, ಅವರನ್ನು ಕೇಳಿದರೆ ತಿಳಿದ ಅವರು ಹೇಳುತ್ತಾರೆ.

ಎನೆಯೆನೆ ಬಾಯ್ಗೆಬಂದನಿ ತನಿತುಮನಮರಾರಿ ಬಯ್ಯೆ ಸೈರಿಸಿನೂರಿಂ | ಬನಿತುವರಂ ಮನ್ನಿಸಿ ನಸು

ಕಿನಿಸದೆ ಮಿಗೆ ಕಿನಿಸಿ ದಿತಿಜಕುಳದವದಹನಂ ||೬೩ ||

ಪದ್ಯ-೬೩:ಪದವಿಭಾಗ-ಅರ್ಥ:ಎನೆಯೆನೆ (ಹೇಳುಹೇಳುತ್ತಿದ್ದಂತೆ) ಬಾಯ್ಗೆಬಂದ ಅನಿತು ಅನಿತುಮನು (ಬಾಯಿಗೆ ಬಂದೆತೆಲ್ಲಾ ಮತ್ತೂ ಮತ್ತೂ) ಅಮರಾರಿ ಬಯ್ಯೆ (ರಾಕ್ಷಸನು ಬಯ್ಯಲು) ಸೈರಿಸಿ ನೂರಿಂ ಬನಿತುವರಂ ಮನ್ನಿಸಿ (ಸಹಿಸಿ

ನೋರು ಬೈಗಳು
ಆಗುವವರೆಗೂ ಮನ್ನಿಸಿ)
ನಸುಕಿನಿಸದೆ (ಸ್ವಲ್ಪವು
ಕೋಪಿಸದೆ) ಮಿಗೆ (ಬೈಗಳು
ನೂರಕ್ಕೆ ಮಿಗಲು) ಕಿನಿಸಿ
ದಿತಿಜಕುಳದವದಹನಂ(ದೈತ್ಯ
ಕುಲದಹಿಸಿದ ಕೃಷ್ಣನು
ಕೋಪಿಸಿ,)
:ಪದ್ಯ-೬೩:ಅರ್ಥ:ಹೀಗೆ
ಹೇಳುಹೇಳುತ್ತಿದ್ದಂತೆ ಬಾಯಿಗೆ
ಬಂದೆತೆಲ್ಲಾ ಮತ್ತೂ ಮತ್ತೂ

ರಾಕ್ಷಸನು ಬಯ್ಯಲು, ಸಹಿಸಿ,
ನೋರು ಬೈಗಳು
ಆಗುವವರೆಗೂ ಮನ್ನಿಸಿ
ಸ್ವಲ್ಪವು ಕೋಪಿಸದೆ, ಬೈಗಳು
ನೂರಕ್ಕೆ ಮಿಗಲು,
ದೈತ್ಯಕುಲದಹಿಸಿದ ಕೃಷ್ಣನು
ಕೋಪಿಸಿ)

ಮುಳಿದು ತನಗರ್ಘ್ಯಮೆತ್ತಿದ
ತಳಿಗೆಯೊಳಿಡೆತಿರಿದ ತೆರದೆ
ತಲೆ ಪರಿದಾಗಳ್ |
ಕಳಕಳಿಸಿ ನಗುತಮಿರ್ದುದು

ತಳಿಗೆಯ ಮೇಲಸುರನದಟದೇನಚ್ಚರಿಯೊ ||೬೪||

ಪದ್ಯ-೬೪:ಪದವಿಭಾಗ-ಅರ್ಥ:ಮುಳಿದು ತನಗೆ ಅರ್ಘ್ಯಮೆತ್ತಿದ ತಳಿಗೆಯೊಳು ಇಡೆತಿರಿದ ತೆರದೆ(ಸಿಟ್ಟಾಗಿ ತನಗೆ ಅರ್ಘ್ಯಕೊಟ್ಟ ಅಗಲದ ಹರಿವಾಣ ಅತವಾ ತಟ್ಟೆಯನ್ನು ಚಕ್ರದಂತೆ ತಿರುಗಿಸಿ ಹೊಡೆಯಲು) ತಲೆ

ಪರಿದಾಗಳ್ (ಶಿಶುಪಾಲನ ತಲೆ ತುಂಡಾಗಿ) ಕಳಕಳಿಸಿ ನಗುತಮಿರ್ದುದು ತಳಿಗೆಯ ಮೇಲೆ (ಆ ತಟ್ಟೆಯ ಮೇಲೆ ಗಹಗಹಿಸಿ ನಗುತ್ತಿತ್ತು) ಅಸುರನ ಅದಟು ಅದೇನಚ್ಚರಿಯೊ (ಆ ಆ ಅಸುರನ ಶೌರ್ಯ ಅದೇನು ಅಶ್ಚರ್ಯವ್ರೋ!)

:ಪದ್ಯ-೬೪:ಅರ್ಥ:ಕೃಷ್ಣನು ಸಿಟ್ಟಾಗಿ ತನಗೆ ಅರ್ಘ್ಯಕೊಟ್ಟ

ಅಗಲದ ಹರಿವಾಣ ಅತವಾ ತಟ್ಟೆಯನ್ನು ಚಕ್ರದಂತೆ ತಿರುಗಿಸಿ ಹೊಡೆಯಲು ಶಿಶುಪಾಲನ ತಲೆ ತುಂಡಾಗಿ ಆ ತಟ್ಟೆಯ ಮೇಲೆ ಗಹಗಹಿಸಿ ನಗುತ್ತಿತ್ತು. ಆ ಅಸುರನ ಶೌರ್ಯ ಅದೇನು ಅಶ್ಚರ್ಯವೋ!

ವ||ಅಂತು ಜವನರ್ಘ್ಯಮೆತ್ತಿದಂತಿರ್ದಶಿಶುಪಾಲನ ಶಿರೋಂಬುಜಮಂ

ಕಂಡಳಲ್ದಾತನ

ನಂಟರಪ್ಪಶ್ವಗ್ರೀವ

ವಿದ್ಯನ್ಮಾಲಿನೀಲಾದಿಗಳಪ್ಪ

ಪ್ರಭುಗಳನಿಬರಾನುಂ

ಮುರಾಂತಕನಂ ಬಂದು

ತಾಗಿದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಜವನ

ಅರ್ಘ್ಯಮೆತ್ತಿದಂತೆ ಇರ್ದ

ಶಿಶುಪಾಲನ

ಶಿರೋಂಬುಜಮಂ(ರಕ್ತಸರಿ

ಯುತ್ತಿರುವ ಯಮುನ
ಅರ್ಘ್ಯದಂತಿರುವ
ಕಮಲದಂತಿರುವ ಶಿಶುಪಾಲನ
ಶಿರವನ್ನು ನೊಡಿ) ಕಂಡು
ಅಳಲ್ದಾತನ ನಂಟರಪ್ಪ
(ದುಃಖಪಟ್ಟು ಅವನ
ಬಂಧುಗಳಾದ)ಅಶ್ವಗ್ರೀವ
ವಿದ್ಯನ್ಮಾಲಿ ನೀಲಾದಿಗಳಪ್ಪ
ಪ್ರಭುಗಳು ಅನಿಬರಾನುಂ
ಮುರಾಂತಕನಂ ಬಂದು
ತಾಗಿದೊಡೆ

:ವಚನ:ಅರ್ಥ:ರಕ್ತಸರಿಯುತ್ತಿ

ರುವ ಯಮನ

ಅರ್ಘ್ಯದಂತಿರುವ

ಕಮಲದಂತಿರುವ ಶಿಶುಪಾಲನ

ಶಿರವನ್ನು ನೊಡಿ ದುಃಖಪಟ್ಟು

ಅವನ ಬಂಧುಗಳಾದ

ಅಶ್ವಗ್ರೀವ, ವಿದ್ಯನ್ಮಾಲಿ,

ನೀಲಾದಿ ರಾಜರುಗಳು

ಅನಿಬರಾನುಂ ಕೃಷ್ಣನನ್ನು

ಬಂದು ಎದುರಿಸಿದಾಗ-

ಕಂ|| ತಿರುಪಿ ಕರಚಕ್ರಮಂ ದನು

ಜರ ತಲೆಗಳನಸುರ ವೈರಿಮುಳಿದಿಡೆ ಪರಿದಂ |
ಬರತಳಮನಯ್ದಿ ಮೇಘದ ಪೊರೆನೊರೆಯೊಳ್
ತೊಡರ್ದು ನೆಲಕೆ ಬೀಳವೆತಲೆಗಳ್ ||೬೫ ||

ಪದ್ಯ-೬೫:ಪದವಿಭಾಗ-ಅರ್ಥ:ತಿರುಪಿ ಕರಚಕ್ರಮಂ ದನುಜರ ತಲೆಗಳನು ಅಸುರವೈರಿ ಮುಳಿದು ಇಡೆ (ಕೋಪಗೊಂಡು

ಹೊಡೆಯಲು) ಪರಿದಂ
(ಕತ್ತರಿಸಿದನು)
ಅಂಬರತಳಮನು ಐಯ್ದಿ
ಮೇಘದ ಪೊರೆನೊರೆಯೊಳ್
(ಮೋಡದ ಪದರ ಪದಗಳಲ್ಲಿ)
ತೊಡರ್ದು
(ಸಿಕ್ಕಿಕೊಂಡು)ನೆಲಕೆ ಬೀಳವೆ
ತಲೆಗಳ್
:ಪದ್ಯ-೬೫:ಅರ್ಥ:ತಿರುಪಿ ಕೈ
ಚಕ್ರಮವನ್ನು ತಿರುಗಿಸಿ
ದನುಜರ ತಲೆಗಳನ್ನು ಕೃಷ್ಣನು

ಕೋಪಗೊಂಡು ಹೊಡೆದು ಕತ್ತರಿಸಿದನು. ಅವು ಆಕಾಶಕ್ಕೆ ಹೊಗಿ ಮೋಡದ ಪದರ ಪದಗಳಲ್ಲಿ ಸಿಕ್ಕಿಕೊಂಡು ಆ ತಲೆಗಳು ನೆಲಕ್ಕೆ ಬೀಳವೆ-ಬೀಳುವುದಿಲ್ಲವೇ? ಇಲ್ಲ.

ವ||ಅನಿತೊಂದು ಮಹಾಪ್ರಘಟ್ಟದೊಳ್ ಅಗ್ರಪೂಜೆಯಂ ನಾರಾಯಣಮಗೆ ಕೊಟ್ಟವಭೃತಸ್ನಾನದೊಳ್

ಪಿರಿದುಮೊಸಗೆಯಂ ಮಾಡಿ ಯಾಗವಿಧಿಯಂ ನಿರ್ವರ್ತಿಸಿ ನರೆದ ರಾಜಕುಲಮೆಲ್ಲಮಂ ಪೂಜಿಸಿ ವಿಸರ್ಜಿಸಿದಾಗಳ್ ಮುರಾಂತಕನಂತಕನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅನಿತೊಂದು ಮಹಾಪ್ರಘಟ್ಟದೊಳ್ ಅಗ್ರಪೂಜೆಯಂ ನಾರಾಯಣಮಗೆ ಕೊಟ್ಟು

ಅವಭೃತಸ್ನಾನದೊಳ್
ಪಿರಿದುಮೊಸಗೆಯಂ ಮಾಡಿ
ಯಾಗವಿಧಿಯಂ ನಿರ್ವರ್ತಿಸಿ
ನರೆದ ರಾಜಕುಲಮೆಲ್ಲಮಂ
ಪೂಜಿಸಿ ವಿಸರ್ಜಿಸಿದಾಗಳ್
ಮುರಾಂತಕನು
ಅಂತಕನಂದನನು ಇಂತೆಂದಂ-
:ವಚನ:ಅರ್ಥ:ಅಷ್ಟೊಂದು
ದೊಡ್ಡ ಕಾರ್ಯಕ್ರಮದಲ್ಲಿ
ಅಗ್ರಪೂಜೆಯನ್ನು ಶ್ರೀಕೃಷ್ಣನಿಗೆ
ಕೊಟ್ಟು ಅವಭೃತಸ್ನಾನದಡನೆ

ದೊಡ್ಡ ಒಸಗೆಯನ್ನು ಮಾಡಿ ಯಾಗವಿಧಿಯನ್ನು ಮುಗಿಸಿ ನರೆದ ರಾಜಕುಲವೆಲ್ಲವನ್ನೂ ಪೂಜಿಸಿ ವಿಸರ್ಜಿಸಿದಾಗ, ಮುರಾಂತಕನಂತಕನಾದ ಕೃಷ್ಣನು ಧರ್ಮಜನಿಗೆ ಹೀಗೆ ಹೇಳಿದನು-

ಮ||ಹಿಮ ಸೇತು ಪ್ರತಿಬದ್ಧ ಭೂವಳಯಮಂ ನಿಷ್ಕಂಟಕಂಮಾಡಿ ವಿ

ಕ್ರಮ ತೋರಿ ನಿಜಾನುಜರ
ನೆರಪಿದೊಂದೈಶ್ವರ್ಯದಿಂ
ರಾಜಸೂ ||
ಯಮನಿಂದಗ್ಗಳದಗ್ಗಳಿಕ್ಕೆಯ
ಮಖಂ ತಾನೆಂಬಿನಂ ನಿನ್ನ ಕೀ
ರ್ತಿ ಮುಖಂ ಕೀರ್ತಿ
ಮುಖಮೆಂಬೊಲೇನೆಸುದು
ದೋ ದಿಗ್ದಂತಿ ದಂತಂಗಳೊಳ್
||೬೬ ||

ಪದ್ಯ-00೬೬:ಪದವಿಭಾಗ-ಅರ್ಥ:ಹಿಮ ಸೇತು ಪ್ರತಿಬದ್ಧ

ಭೂವಳಯಮಂ
ನಿಷ್ಕಂಟಕಂಮಾಡಿ ವಿಕ್ರಮ
ತೋರಿ ನಿಜ ಅನುಜರ
(ತನ್ನಸೋದರರ) ನೆರಪಿದ
ಒಂದೈಶ್ವರ್ಯದಿಂ ರಾಜಸೂ
ಯಮನು
ಇಂದಗ್ಗಳದಗ್ಗಳಿಕ್ಕೆಯ ಮಖಂ
ತಾನೆಂಬಿನಂ ನಿನ್ನ ಕೀರ್ತಿ
ಮುಖಂ ಕೀರ್ತಿ
ಮುಖಮೆಂಬೊಲೇನೆಸುದು
ದೋ ದಿಗ್ದಂತಿ ದಂತಂಗಳೊಳ್

:ಪದ್ಯ-೬೬:ಅರ್ಥ:ಹಿಮಾಲ
ಯದಿಂದ ರಾಮಸೇತುವರೆಗೆ
ಪ್ರತಿಷ್ಟಿತವಾದ
ಭೂಮಂಡಲವನ್ನು
ವಿರೋಧಿಗಳಿಲ್ಲದಂತೆಮಾಡಿ,
ಶವರ್ಯವನ್ನು ತೋರಿಸಿ, ನಿನ್ನ
ಸೋದರರರು ತಂದು ಕೂಡಿದ
ಐಶ್ವರ್ಯದಿಂದ
ರಾಜಸುಯವನ್ನು ಇಂದು
ವಿಶೇಷ ಶ್ರೇಷ್ಠತೆಯಿಂದಾದ
ಯಜ್ಞವು ತಾನು ಎಂಬಂತೆ

ಮಾಡಿ, ನಿನ್ನ ಕೀರ್ತಿ,
ಕೀರ್ತಿಯೇ ಮುಖವು
ಮುಖವೇ ಕೀರ್ತಿ ಎಂಬಂತೆ
ಏನು ಶೋಭಿಸಿತೊ!
ದಿಗ್ದಂತಿಗಳ ದಂತಗಳಲ್ಲಿಯ
ಪ್ರಕಾಶದಂತೆ ಶೂಭಿಸಿತು.
(ಎಂಟು ದಿಕ್ಕಿನಲ್ಲಿಯೂ
ಬೆಟ್ಟದಷ್ಟು ದೊಡ್ಡ ಆನೆಗಳು
ತಮ್ಮ ಮಹಾ ದಂತದ
ಕೊಂಬುಗಳಿಂದ

ಭೂಮಿಯನ್ನು ಎತ್ತಿಹಿಡಿದಿವೆ
ಮಬ ನಂಬುಗೆ)

ವ|| ಎಂದು ನುಡಿದ ಮಂದರಧರನಂ ನಿನ್ನುಗ್ರದೊಳದೇವಿರಿದೆಂದು ವಸ್ತು ವಾಹನಂಗಳನಿತ್ತು ದ್ವಾರಾವತಿಗೆ ಕಳಿಸಿ ಸುಖಸಂಕಥಾವಿನೋದಂಗ ಳೊಳ್ ರಾಜ್ಯಲಕ್ಷ್ಮಿಯನನು ಭವಿಸುತ್ತಿರ್ಪನ್ನೆಗಮತ್ತಂ-

ವಚನ:ಪದವಿಭಾಗ-ಅರ್ಥ:ಎಂದು ನುಡಿದ ಮಂದರಧರನಂ ನಿನ್ನ ಅನುಗ್ರಹದೊಳು ಅದೇವಿರಿದು ಎಂದು ವಸ್ತು ವಾಹನಂಗಳನು ಇತ್ತು ದ್ವಾರಾವತಿಗೆ ಕಳಿಸಿ ಸುಖಸಂಕಥಾವಿನೋದಂಗಳೊಳ್ ರಾಜ್ಯಲಕ್ಷ್ಮಿಯನನುಭವಿಸುತ್ತಿರ್ಪನ್ನೆಗಮತ್ತಂ-

:ವಚನ:ಅರ್ಥ:ಎಂದು
ಹೇಳಿದ ಕೃಷ್ಣನನ್ನು ನಿನ್ನ
ಅನುಗ್ರದಲ್ಲಿ ಅದೇನು
ಹಿರಿದಲ್ಲ, ಎಂದು ವಸ್ತು
ವಾಹನಂಗಳನ್ನು ಕೊಟ್ಟು
ಅವನನ್ನು ದ್ವಾರಾವತಿಗೆ ಕಳಿಸಿ
ಸುಖದಿಂದ,ಸಂಕಥಾ
ವಿನೋದಂಗಳಲ್ಲಿ
ರಾಜ್ಯಲಕ್ಷ್ಮಿಯನ್ನು
ಅನಭವಿಸುತ್ತಿದ್ದನು

ಎನ್ನುವಾಗ ಅತ್ತ ಹಸ್ತಿನಾವತಿಯಲ್ಲಿ-

<u>ಹಸ್ತಿನಾವತಿಯಲ್ಲಿ ಕಪಟದ್ಯೂತ</u>

ಕಂ|| ಮೇಗಿಲ್ಲದ ಬಿಲ್ಲಾಳ್ತನ ದಾಗರಮೆನೆ ನೆಗಳ್ದ ತತ್ಪೃಥಾನಂದನರು \ ದ್ಯೋಗದ ಚಾಗದ ಯಾಗದ ಭೋಗದ ಮೈಮೆಗೆ ಸುಯೋಧನಂ ಬೆರಗಾದಂ ||

೬೭ ||

ಪದ್ಯ-೬೭:ಪದವಿಭಾಗ-ಅರ್ಥ:ಮೇಗಿಲ್ಲದ (ಸರಿಸಾಟಿ ಇಲ್ಲದ) ಬಿಲ್ಲಾಳ್ತನದ ಆಗರಂ ಎನೆ (ಪರಾಕ್ರಮದ ಆಗರ ಎನ್ನುವಂತೆ) ನೆಗಳ್ದ (ಪ್ರಸಿದ್ಧ) ತತ್ ಪೃಥಾನಂದನರು ಆ ಪಾಂಡವರು) ಉದ್ಯೋಗದ ಚಾಗದ (ದಾನದ) ಯಾಗದ ಭೋಗದ (ಸುಖದ) ಮೈಮೆಗೆ

(ಮಹಿಮೆಗೆ) ಸುಯೋಧನಂ ಬೆರಗಾದಂ |
:ಪದ್ಯ-೬೭:ಅರ್ಥ:ಇತ್ತ ಕುಂತಿಯ ಮಕ್ಕಳು ಸುಖದಿಂದಿರಲು,ಅತ್ತ ಹಸ್ತಿನಾವತಿಯಲ್ಲಿ ಸರಿಸಾಟಿ ಇಲ್ಲದ ಪರಾಕ್ರಮದ ಆಗರ ಎನ್ನುವಂತೆ, ಪ್ರಸಿದ್ಧ ಆ ಪಾಂಡವರ ಯಜ್ಞಕಾರ್ಯದ, ದಾನದ, ಯಾಗದ, ಸುಖದ,

ಮಹಿಮೆಗೆ ಸುಯೋಧನನು
ಬೆರಗಾದನು.

ವ|| ಆಗಿ ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟಚತುಷ್ಟಯದೊಳ್ ಮಂತಣಮಿರ್ದು ದಾಯಿಗರಪ್ಪೊಡೆ ಕರಂ ಪೆರ್ಚಿದರವರ ಪೆರ್ಚಿಂಗೇಗಯ್ವಂ ಬಸನಗಳಂ ಸಮಕಟ್ಟುಮಪ್ಪಡೆ ಸಪ್ತವ್ಯಸನಂಗಳೊಳಯ್ವರುಮ

ನೊಂದುಂ ಗೆಲ್ಲುವಲ್ಲವು
ರಾಷ್ಟ್ರವ್ಯಸನಮಂ
ಬಳವ್ಯಸನಮಂ
ಪಾರ್ವಮಪ್ಪೊಡವು
ಮುನ್ನಮಿಲ್ಲ
ಪರಮಂಡಳವ್ಯಸನಮನಾರ
ಯ್ವಮಪ್ಪೊಡಿತ್ತುಂ ತೆತ್ತುಂ
ಬಾಳ್ವ ಮಂಡಳಮಲ್ಲದೆ
ಕೀೞಿಯುಂ ಮೀೞಿಯುಂ ನೆಗಳ್ವ
ಮಂಡಳಮಿಲ್ಲ, ಪುರುಷಮಂ
ಸಮಕಟ್ಟುವಮಪ್ಪೊಡೆ

ಪೊಕ್ಕಿರಿಯಲಣ್ಮುವರಿಲ್ಲ; ರಸದಾನಾದಿಗಳೊಳ್ ಛಿದ್ರಿಸುವಮಪ್ಪೊಡವರಾಪ್ತ ವಂತರು, ಬುದ್ಧಿವಂತರುಮಾಗಿ ನೆಗಳ್ದರಿನ್ನಾವ ಮಾಳ್ಕೆಯೊಳ್ ಬಗೆಯಂ ಕೆಯ್ಗೆ ಮಾಡುವಂ ಪೇಳಿಮೆನೆ ಶಕುನಿಯಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಿ ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ

ದುಷ್ಟಚತುಷ್ಟಯದೊಳ್
ಮಂತಣಮಿರ್ದು
(ಆಲೋಚನೆ)
ದಾಯಿಗರಪ್ಪೊಡೆ ಕರಂ
ಪೆರ್ಚಿದರು
(ದಾಯಾದಿಗಳಾದರೋ
ಬಹಳ ಹೆಚ್ಚಿಕೊಂಡರು) ಅವರ
ಪೆರ್ಚಿಂಗೇಗಯ್ವಂ (ಏಳಿಗೆಗೆ
ಪ್ರತಿಯಾಗೆ ಏಣು
ಮಾಡೋಣ?) ಬಸನಗಳಂ
ಸಮಕಟ್ಟುಮಪ್ಪಡೆ

ಸಪ್ತವ್ಯಸನಂಗಳೊಳು
ಐಯ್ವರುಮನು ಒಂದುಂ
ಗೆಲ್ಲುವಲ್ಲವು (ವ್ಯಸನ
ದುರಭ್ಯಾಸವನ್ನು
ಹಚ್ಚ್ಯೋಣವೆಂದರೆ ಅವು
ಒಂದೂ ಇಲ್ಲ- ಗೆಲುವಿಗೆ
ಅವಕಾಶವಿಲ್ಲ)
ರಾಷ್ಟ್ರವ್ಯಸನಮುಂ
ಬಳವ್ಯಸನಮುಂ
ಪಾರ್ವಮಪ್ಪೊಡವು
ಮುನ್ನಮಿಲ್ಲ (ರಾಜ್ಯವಿಸ್ತಾರದ

ವ್ಯಸನ, ಸೈನ್ಯದ ಪಿತೂರಿ
ಕಟ್ಟುವ ವ್ಯಸನ ಇವುಗಳನ್ನು
ನೋಡಿದರೆ , ಅದು ಮೊದಲೇ
ಇಲ್ಲ.)
ಪರಮಂಡಳವ್ಯಸನಮನು
ಆರಯ್ಯುಮಪ್ಪೊಡಿತ್ತುಂ ತೆತ್ತುಂ
ಬಾಳ್ವ ಮಂಡಳಂ ಅಲ್ಲದೆ
ಕೀರಿಯುಂ ಮೀರಿಯುಂ
ನೆಗಳ್ವ ಮಂಡಳಮಿಲ್ಲ
(ಪರಶತ್ರುಮಂಡಳವನ್ನು
ಎತ್ತಕಟ್ಟೋಣವೆಂದರೆ, ಎಲ್ಲಾ

ಕಪ್ಪ ಕೊಡುವವರು; ಅವರ ಮೇಲೆ ರೇಗುವ, ಅವರನ್ನು ಮೀರಿಸುವ ಸಾಮಂತರಿಲ್ಲ.), ಪುರುಷಮಂ ಸಮಕಟ್ಟುವಮಪ್ಪೊಡೆ ಪೊಕ್ಕಿರಿಯಲಣ್ಮುವರಿಲ್ಲ (ಪೌರಷದಿಂದ ಹೊಡೆಯೋಣವೆಂದರೆ ಹೊಕ್ಕು ಇರಿಯುವವರು ಇಲ್ಲ.); ರಸದಾನಾದಿಗಳೊಳ್ ಭಿದ್ರಿಸುವಮಪ್ಪೊಡವರಾಪ್ತ

ವಂತರು (ವಿಷ ಕೆಟ್ಟ
ದಾನಗಳಿಂದ
ಬೀಧಿಸೋಣವೆಂದರೆ ಅವರು
ಬುದ್ಧಿವಂತರು.),
ಬುದ್ಧಿವಂತರುಮಾಗಿ
ನೆಗಳ್ದರಿನ್ನಾವ ಮಾಳ್ಕೆಯೊಳ್
ಬಗೆಯಂ ಕೆಯ್ಗೆ ಮಾಡುವಂ
ಪೇಳಿಮೆನೆ (ಹೀಗೆ
ಬುದ್ಧಿವಂತರಾಗಿ ಹೆಚ್ಚಿದ
ಅವರನ್ನು ಯಾವ
ಕೃತಿಯಿಯಿಂದ ಅವರನ್ನು

ನಮ್ಮ ಮುಷ್ಠಿಯೊಳಗೆ ಮಾಡುವ ದಾರಿ ಹೇಳಿ ಎಂದರು) ಶಕುನಿಯಿಂತೆಂದಂ- (ಆಗ ಶಕುನಿಯು ಹೀಗೆಂದನು)-

:ವಚನ:ಅರ್ಥ:ರಾಜಸೂಯ ಯಾಗವನಂತರ ಕೌರವರು ಹಸ್ತಿನಾಪುರಕ್ಕ್ ಬಂದರು. ಅದಾಗಿ ದುಶ್ಶಾಸನ ಕರ್ಣ ಶಕುನಿ ಸೈಂಧವರು, ಈ ನಾಲ್ವರು ದುಷ್ಟಕೂಟದೊಳಗೆ

ಮಂತ್ರಾಲೋಚನೆ ನೆಡೆದು ದಾಯಾದಿಗಳಾದರೋ ಬಹಳ ಹೆಚ್ಚಿಕೊಂಡರು, ಅವರ ಏಳಿಗೆಗೆ ಪ್ರತಿಯಾಗೆ ಏಣು ಮಾಡೋಣ?ವ್ಯಸನ ದುರಭ್ಯಾಸವನ್ನು ಹಚ್ಚೋಣವೆಂದರೆ ಅವು ಒಂದೂ ಇಲ್ಲ- ಗೆಲುವಿಗೆ ಅವಕಾಶವಿಲ್ಲ. ರಾಜ್ಯವಿಸ್ತಾರದ ವ್ಯಸನ, ಸೈನ್ಯದಲ್ಲಿ ಪಿತೂರಿ ಕಟ್ಟುವ

ವ್ಯಸನ ಇವುಗಳನ್ನು ನೋಡಿದರೆ , ಅದು ಮೊದಲೇ ಇಲ್ಲ. ಪರಶತ್ರುಮಂಡಳವನ್ನು ಎತ್ತಕಟ್ಟೋಣವೆಂದರೆ, ಎಲ್ಲಾ ಕಪ್ಪ ಕೊಡುವವರು; ಅವರ ಮೇಲೆ ರೇಗುವ, ಅವರನ್ನು ಮೀರಿಸುವ ಸಾಮಂತರಿಲ್ಲ. ಪೌರಷದಿಂದ ಹೊಡೆಯೋಣವೆಂದರೆ ಹೊಕ್ಕು ಇರಿಯುವವರು ಇಲ್ಲ; ವಿಷ ಕೆಟ್ಟ ದಾನಗಳಿಂದ

ಬೀಧಿಸೋಣವೆಂದರೆ ಅವರು ಬುದ್ಧಿವಂತರು. ಹೀಗೆ ಬುದ್ಧಿವಂತರಾಗಿ ಹೆಚ್ಚಿದ ಅವರನ್ನು ಯಾವ ಕೃತಿಯಿಯಿಂದ ಅವರನ್ನು ನಮ್ಮ ಮುಷ್ಠಿಯೊಳಗೆ ಮಾಡುವ ದಾರಿ ಹೇಳಿ ಎಂದರು, ಆಗ ಶಕುನಿಯು ಹೀಗೆಂದನು-

ಚಂ|| ಬೆಸಸಿದ ಮಾತಿನಿತುಮಂತುಟೆ ಗೆಲ್ಲವು

ಪಾಂಡು ಪುತ್ರರಂ
ಬಸನದೊಡಂಬಡಂ
ಮರೆದುಮಾ
ಯಮನಂದನನಲ್ತೆ ನೆತ್ತದೊಳ್
|
ಬಸನಿಗನಾತನಂ ಬರಿಸಿ
ನೆತ್ತಮನಾಡಿಸಿ
ಗೆಲ್ದುಕೊಳ್ವಮೀ
ವಸುಮತಿಯಂ ಮನಂಬಸದೆ
ನೀನ್ ಬಳಿಯಟ್ಟು
ಫಣೀಂದ್ರಕೇತನಾ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ಬೆಸಸಿದ ಮಾತು ಇನಿತುಂ ಅಂತುಟೆ ಗೆಲ್ಲವು ಪಾಂಡು ಪುತ್ರರಂ (ನೀವು ಹೇಳಿದ ಅಷ್ಟೂ ವಿಚಾರ ಅಂತೆಯೇ ಸರಿ. ಅವು ಪಾಂಡವರನ್ನು ಗೆಲ್ಲಲಾರವು) ಬಸನದ ಒಡಂಬಡಂ ಮರೆದುಂ ಆ ಯಮನಂದನನಲ್ತೆ ನೆತ್ತದೊಳ್

ಬಸನಿಗನು(ವ್ಯಸನದ
ತಂತ್ರಪ್ರಯೋಗದ
ಒಪ್ಪಿಗೆಯನ್ನು ಮರೆತರೂ,
ಧರ್ಮರಾಯನು ಲೆತ್ತದಲ್ಲಿ/
ಪಗಡೆಯಾಟದಲ್ಲಿ
ವ್ಯಸನಿಗನು/
ಆಸಕ್ತಿಯುಳ್ಳವನು) ಆತನಂ
ಬರಿಸಿ ನೆತ್ತಮನಾಡಿಸಿ
ಗೆಲ್ದುಕೊಳ್ವಂ ಈ
ವಸುಮತಿಯಂ (ಅವನನ್ನು
ಕರೆಸಿ ಪಗಡೆಯಾಟವಾಡಿಸಿ

ಈ ಭೂಮಿಯನ್ನು
ಗೆದ್ದುಕೊಳ್ಳೋಣ)
ಮನಂಬಸದೆ ನೀನ್
ಬಳಿಯಟ್ಟು ಫಣೀಂದ್ರಕೇತನಾ
(ಮನದಲ್ಲಿ ಬೇರೆ ವಿಚಾರ
ಮಾಡದೆ ದೂತರನ್ನು ಕಳಿಸಿ
ಅವನನ್ನು ಕರೆಸು)
:ಪದ್ಯ-೬೮:ಅರ್ಥ:ನೀವು
ಹೇಳಿದ ಅಷ್ಟೂ ವಿಚಾರ
ಅಂತೆಯೇ ಸರಿ. ಅವು
ಪಾಂಡವರನ್ನು ಗೆಲ್ಲಲಾರವು.

ವ್ಯಸನದ ತಂತ್ರಪ್ರಯೋಗದ ಒಪ್ಪಿಗೆಯನ್ನು ಮರೆತರೂ, ಧರ್ಮರಾಯನು ಪಗಡೆಯಾಟದಲ್ಲಿ ಆಸಕ್ತಿಯುಳ್ಳವನು. ಅವನನ್ನು ಕರೆಸಿ ಪಗಡೆಯಾಟವಾಡಿಸಿ ಈ ಭೂಮಿಯನ್ನು ಗೆದ್ದುಕೊಳ್ಳೋಣ. ಮನದಲ್ಲಿ ಬೇರೆ ವಿಚಾರ ಮಾಡದೆ ದೂತರನ್ನು ಕಳಿಸಿ ಅವನನ್ನು ಕರೆಸು, ಎಂದನು ಶಕುನಿ.

ವ|| ಎಂದು ನಾಳವಾಸಗೆಗಳಂ
ಮುನ್ನಮೆ ಸಮಕಟ್ಟಿ
ತಾಮುಮಾಮುಂ ಕೆಲವು
ದೆವಸಂ ಗೋಷ್ಠಿಯೊಳಿರ್ಪಂ
ಬರ್ಕೆಂದುಬಳಿಯನಟ್ಟಿದೊಡ
ವರ ಮನದ ಪುಲ್ವಗೆಯಂ
ಪೊಲ್ಲಮನರಿಯದೆ ಸಮಸ್ತ
ಬಳೋದ್ಯುಕ್ತನಾಗಿ
ಶಕುನಂಗಳಮ ಕ್ರಮದಿಂ
ಬಗೆಯದೆ ನಿಯತಿಃ ಕೇನ
ಲಂಘ್ಯತೇ ಎಂಬ ನುಡಿಯಂ

ನನ್ನಿಮಾಡಿ
ಮದಗಜೇಂದ್ರಪುರಮನ್ನೈದೆ
ಬರೆ ಧೃತರಾಷ್ಟ್ರಾದಿ
ಕುಲವೃದ್ಧರೊಡನೆ
ದುರ್ಯೋಧನನಿದಿರ್ವೋಗಿ
ಧರ್ಮಪುತ್ರಂಗೆ ಪೊಡಮಟ್ಟು
ಭೀಮನಂ ಸಮಾನ
ಪ್ರತಿಪತ್ತಿಯೊಳ ಕಂಡು ತನಗೆ
ಪಡಮಟ್ಟ ಮತ್ತಿನ
ಮೂವರುಮಂ ತೆಗೆದು ತಳ್ಕೈಸಿ
ಪರಸಿ

ತನ್ನತಂಮ್ಮಂದಿರುಮನಯ್ವುವ ರ್ಗಂ ಪೊಡಮಡಿಸಿ ಪೊಳಲೊಳಗಣೆವಂದು ರಾಜಮಂದಿರಮಂಪೊಕ್ಕು-

ವಚನ:ಪದವಿಭಾಗ-

ಅರ್ಥ:ಎಂದು ನಾಳವಾಸಗೆಗಳಂ (ಕಳ್ಳದಾಲಗಳನ್ನು) ಮುನ್ನಮೆ ಸಮಕಟ್ಟಿ (ಮೊದಲೇ ತಯಾರಿಸಿ) ತಾಮುಂ ಆಮುಂ ಕೆಲವು ದೆವಸಂ

ಗೋಷ್ಠಿಯೊಳಿರ್ಪಂ ಬರ್ಕೆಂದು
ಬಳಿಯನಟ್ಟಿದೊಡೆ ಅವರ
ಮನದ ಪುಲ್ವಗೆಯಂ
(ಮನಸ್ಸಿನ ಒಳಹಗೆಯನ್ನು)
ಪೊಲ್ಲಮನು ಅರಿಯದೆ
(ಮೋಸವನ್ನು ತೀಲಿಯದೆ)
ಸಮಸ್ತ ಬಳೋದ್ಯುಕ್ತನಾಗಿ
(ಸಕಲ ಸೈನ್ಯ ಸಮೇತನಾಗಿ)
ಶಕುನಂಗಳಮ ಕ್ರಮದಿಂ
ಬಗೆಯದೆ ನಿಯತಿಃ ಕೇನ
ಲಂಘ್ಯತೇ (ವಿಧಿಯನ್ನು

ಮೀರುವವರಾರು) ಎಂಬ
ನುಡಿಯಂ ನನ್ನಿಮಾಡಿ
(ಸತ್ಯಮಾಡಿ)
ಮದಗಜೇಂದ್ರಪುರಮನು
ಐದೆ,ತಲುಪಲು, ಬರೆ
ಧೃತರಾಷ್ಟ್ರಾದಿ
ಕುಲವೃದ್ಧರೊಡನೆ
ದುರ್ಯೋಧನನು
ಇದಿರ್ವೋಗಿ (ಎದುರು
ಹೋಗಿ) ಧರ್ಮಪುತ್ರಂಗೆ
ಪೊಡಮಟ್ಟು (ನಮಿಸಿ)

ಭೀಮನಂ ಸಮಾನ
ಪ್ರತಿಪತ್ತಿಯೊಳ ಕಂಡು ತನಗೆ
ಪಡಮಟ್ಟ ಮತ್ತಿನ
ಮೂವರುಮಂ ತೆಗೆದು
ತಳ್ಕೈಸಿ ಪರಸಿ
ತನ್ನತಂಮ್ಮಂದಿರುಮನು
ಅಯ್ವವರ್ಗಂ ಪೊಡಮಡಿಸಿ
(ನಮಿಸುವಂತೆ ಮಾಡಿ)
ಪೊಳಲೊಳಗಣೆವಂದು
ರಾಜಮಂದಿರಮಂಪೊಕ್ಕು-

:ವಚನ:ಅರ್ಥ:ಧರ್ಮರಾಜನನ್ನು ಕರೆಸು ಎಂದು ಶಕುನಿ, ಕಳ್ಳದಾಳಗಳನ್ನು) ಮೊದಲೇ ತಯಾರಿಸಿ) ತಾವೂ ನಾವೂ ಕೆಲವು ದಿವಸ ಗೋಷ್ಠಿಯಲ್ಲಿ ಇರೋಣವೆಂದು ಬರಬೇಕೆಂದು, ದೂತರನ್ನು ಕಳಿಸಿದಾಗ, ಅವರ ಮನಸ್ಸಿನ ಒಳಹಗೆಯನೂ, ಮೋಸವನ್ನು ತಿಳಿಯದೆ ಸಕಲ ಸೈನ್ಯ ಸಮೇತನಾಗಿ ಶಕುನಗಳನ್ನು

ಕ್ರಮದಿಂದ ಗಮನಿಸದೆ
'ನಿಯತಿಃ ಕೇನ ಲಂಘ್ಯತೇ' -
ವಿಧಿಯನ್ನು
ಮೀರುವವರಾರು-ಎಂಬ
ನುಡಿಯಂತ ಅದನ್ನು
ಸತ್ಯಮಾಡಿ) ಹಸ್ತಿನಾವತಿಗೆ
ಹೊರಟು ತಲುಪಲು,
ಬಂದಾಗ ಧೃತರಾಷ್ಟ್ರಾದಿ
ಕುಲವೃದ್ಧರೊಡನೆ
ದುರ್ಯೋಧನನು ಎದುರು
ಹೋಗಿ ಧರ್ಮಪುತ್ರನಿಗೆ

ನಮಿಸಿ, ಭೀಮನನ್ನು ಸಮಾನ
ಗೌರವದಿಂದ ಕಂಡು, ತನಗೆ
ನಮಿಸಿದ ಉಳಿದ ಮೂವರು
ಪಾಂಡವರನ್ನು ತೆಗೆದು
ಆದರಿಸಿ, ಹರಸಿ, ತನ್ನ
ತಂಮ್ಮಂದಿರನ್ನು ಐದುಜನ
ಪಾಂಡವರಿಗೂ ನಮಿಸುವಂತೆ
ಮಾಡಿ' ನಗರದೊಳಗೆ ಬಂದು,
ರಾಜಮಂದಿರವನ್ನು ಹೊಕ್ಕು-

ಉ||ನೋಡಿ ಪೃಥಾತನೂಜರ
ಸಭಾಗೃಹದಂದಮನಂತುಟ

ಪ್ಪುದಂ
ಮಾಡಿಪೆನೆಂದು ಮಾಡಿಸಿ
ಸಭಾಲಯಮಂ ನಿಜ ರಾಜ
ಲೀಲೆಯೊಳ್ |
ಕೂಡಿ ಯುಧಿಷ್ಠಿರ ಪ್ರಭುಗೆ
ತಾನೆ ಸುಯೋಧನನುಯ್ದು
ತೋರಿದಂ
ನೋಡಿರೆ ಸಿಂಹ ಮಾಡುವರ
ಬಾಲಮನಾಡಿದರೆಂಬ
ಮಾಳ್ಕೆಯಂ ||೬೯ ||

ಪದ್ಯ-೬೯:ಪದವಿಭಾಗ-ಅರ್ಥ:ನೋಡಿ ಪೃಥಾತನೂಜರ (ಪಾಂಡವರ) ಸಭಾಗೃಹದಂದಮನು ಅಂತುಟಪ್ಪುದಂ (ಹಾಗೆಯೇ ಇರುವುದನ್ನು)ಮಾಡಿಪೆನೆಂದು ಮಾಡಿಸಿ ಸಭಾಲಯಮಂ ನಿಜ ರಾಜ ಲೀಲೆಯೊಳ್ ಕೂಡಿ ಯುಧಿಷ್ಠಿರ ಪ್ರಭುಗೆ ತಾನೆ ಸುಯೋಧನನು ಉಯ್ದು (ಕರೆದುಕೊಂಡು ಹೋಗಿ)

ತೋರಿದಂ, ನೋಡಿರೆ ಸಿಂಹ ಮಾಡುವರ ಬಾಲಮನಾಡಿದರೆಂಬ ಮಾಳ್ಕೆಯಂ (ಬಾವನ್ನು ಹಿಡಿದು ಕುಣಿದರು ಎಂಬಹಾಗೆ)

:ಪದ್ಯ-೬೯:ಅರ್ಥ:

ಪಾಂಡವರ ಸಭಾಗೃಹದ ಅಂದವನ್ನು ನೋಡಿ, ತಾನೂ ಹಾಗೆಯೇ ಇರುವುದನ್ನು ಮಾಡಿಸುವೆನೆಂದು ಮಾಡಿಸಿ,

ಸಭಾಲಯುವನ್ನು ತನ್ನ ರಾಜವೈಭವದಿಂದ ಕೂಡಿ ಯುಧಿಷ್ಠಿರ ಪ್ರಭುವಿಗೆ, ತಾನೆ ಸುಯೋಧನನು ಕರೆದುಕೊಂಡು ಹೋಗಿ ತನ್ನ ಸಭಾಮಂಟಪವನ್ನು ತೋರಿಸಿದನು, ನೋಡಿರೋ ಹೇಗಿದೆ ಎಂದನು; ಅದು 'ಸಿಂಹದವೇಷ ಮಾಡುವರ ಬಾಲವನ್ನು ಹಿಡಿದು

ಕುಣಿದರು' ಎಂಬ ನೆಡೆಯನ್ನು ಎಂಬ ಹಾಗೆ ಇತ್ತು.

ವ|| ಅಂತು ಸುಯೋಧನಂ ತನ್ನ ವಿಭವಮುಮಂ ವಿಳಾಸಮುಮಂ ಪಾಡವರ್ಗೆ ಮೆರೆದು ಕಂದುಕ ಕ್ರೀಡಾದಿ ನಾನಾ ವಿಧ ವಿನೋದಂಗಳಿಂ ಕೆಲವುದಿವಸಮನಿರ್ದೊಂದು ದಿವಸಂ ತನಗೆ ಸವಂ ಸಮಕಟ್ಟುವಂತೆ ಪಿಂಗಾಕ್ಷನಕ್ಷಕ್ರಿಡೆಯಂ

ಶಕುನಿಯೊಳ್ ಸಮಕಟ್ಟಿ ಪೂಡಲ್ವೇಳ್ದು ಪುಸಿಯೆನೆ ಪೆರರಂ ಮುನ್ನಮಾಡಲ್ಕೇಳ್ದು ತಾನುಂ ಧರ್ಮಪುತ್ರನುಂ ಕೆಲದೊಳಿರ್ದು ನೋಡುತ್ತಿರೆ ಶಕುನಿಯಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಸುಯೋಧನಂ ತನ್ನ ವಿಭವಮುಮಂ ವಿಳಾಸಮುಮಂ ಪಾಡವರ್ಗೆ ಮೆರೆದು ಕಂದುಕ ಕ್ರೀಡಾದಿ

ನಾನಾ ವಿಧ ವಿನೋದಂಗಳಿಂ
ಕೆಲವುದಿವಸಮನು
ಇರ್ದೊಂದು ದಿವಸಂ ತನಗೆ
ಸಾವಂ ಸಮಕಟ್ಟುವಂತೆ
ಪಿಂಗಾಕ್ಷನು
(ದುರ್ಯೋಧನನು)
ಅಕ್ಷಕ್ರೀಡೆಯಂ ಶಕುನಿಯೊಳ್
ಸಮಕಟ್ಟಿ ಪೂಡಲ್ವೇಳ್ದು
(ಸರಿಯಾಗಿ ಹೋಡುವಂತೆ
ಹೇಳಿ) ಪುಸಿಯೆನೆ (ಸುಳ್ಳೇ)
ಪೆರರಂ ಮುನ್ನ ಮಾಡಲ್ಕೇಳ್ದು

(ಬೇರೆಯವರಿಗೆ ಆಡಲು ಹೇಳಿ) ತಾನುಂ ಧರ್ಮಪುತ್ರನುಂ ಕೆಲದೊಳಿರ್ದು ನೋಡುತ್ತಿರೆ ಶಕುನಿಯಿಂತೆಂದಂ-

:ವಚನ:ಅರ್ಥ:ಹಾಗೆ ಸುಯೋಧನನು ತನ್ನ ವೈಭವವನ್ನೂ ವಿಲಾಸವನ್ನೂ ಪಾಡವರಿಗೆ ದೊಡ್ಡದಾಗಿ ಪ್ರದರ್ಶಿಸಿ, ಎದು ಸೆಂಡು ಮೊದಲಾದ ಕ್ರೀಡೆ ಮತ್ತು

ನಾನಾ ವಿಧ ವಿನೋದಗಳನ್ನು ಕೆಲವು ದಿವಸ ನೆಡಸಿ, ಒಂದು ದಿವಸಂ ತನಗೆ ಸಾವನ್ನು ತಂದುಕೊಳ್ಳುವಂತೆ, ದ ದುರ್ಯೋಧನನು ಅಕ್ಷಕ್ರಿಡೆಯನ್ನು ಅಥವಾ ಪಗಡೆಯಾಟವನ್ನು ಶಕುನಿಯ ಹತ್ತಿರ ಸಮಕಟ್ಟಾಗಿ ಹೂಡಲು ಹೇಳಿದನು, ಹುಸಿಯಾಟಾಡುವಂತೆ ಮೊದಲು ಬೇರೆಯವರಿಗೆ

ಹೇಳಿ, ತಾನು-
ದುರ್ಯೋಧನನೂ,
ಧರ್ಮಪುತ್ರನೂ ಪಕ್ಕದಲ್ಲಿದ್ದು
ನೋಡುತ್ತಿರಲು, ಶಕುನಿ
ಹೀಗೆಂದನು-

ಕಂ||
ನೋಡುವುದರೊಳೇನಳ್ತಿಯೊ
ಳಾಡುತ್ತಿರಲಾಗ
ತಮ್ಮುತಿರ್ವರುಮೆನೆ ನಾ |
ಮಾಡುವಮೆ ಬನ್ನಿಮೆಂಬುದು

ಮಾಡುವ ಬಗೆ ಬಂದು ನೆತ್ತಮಂ ಧರ್ಮಸುತಂ ||೨೦||

ಪದ್ಯ-೦೦:ಪದವಿಭಾಗ-ಅರ್ಥ:ನೋಡುವುದರೊಳ್ ಏನ್ (ನೋಡುವುದರಲ್ಲಿ ಏನಿದೆ?) ಅಳ್ತಿಯೊಳ್ ಆಡುತ್ತಿರಲಾಗ? (ಪ್ರೀತಿಯಿಂದ ಆಡಬಾರದೆ?) ತಮ್ಮುತಿರ್ವರುಂ (ತಾವು ಇಬ್ಬರೂ) ಎನೆ (ಎನ್ನಲು) ನಾಮಾಡುವಮೆ (ನಾವಿಬ್ಬರೂ

ಆಡೋಣವೇ)
ಬನ್ನಿಮೆಂಬುದುಂ (ಬನ್ನಿ
ಎಂದಾಗ) ಆಡುವ ಬಗೆ
ಬಂದು ನೆತ್ತಮಂ ಧರ್ಮಸುತಂ
(ಧರ್ಮಸುತನಿಗೆ ಆಡುವ ಅಸೆ
ಬಂದು- ಬಂದಿತು)
:ಪದ್ಯ-00:ಅರ್ಥ:
(ಶಕುನಿಯು) ನೋಡುವುದರಲ್ಲಿ
ಏನಿದೆ? ಪ್ರೀತಿಯಿಂದ ತಾವು
ಇಬ್ಬರೂ ಆಡಬಾರದೆ?
ಎನ್ನಲು, ನಾವಿಬ್ಬರೂ

ಆಡೋಣವೇ? ಬನ್ನಿ ಎಂದಾಗ, ಧರ್ಮಸುತನಿಗೆ ಆಡುವ ಅಸೆ ಬಂದು- ಬಂದಿತು.

ಕಂ||ಕರೆದೊಡೆ ಜೂದಿಗಂ ಧುರ
ಭರಕಾಖೇಟಕ್ಕೆ
ಭೂಭುಜಂಗಾಗದದು ಮೆ|
ಯ್ಗರದಿರಲೆಂಬ ಪುರಾತನ
ಗುರುವಚನಂ ತನಗೆ
ನಿಟ್ಟೆಪಟ್ಟುದರಿಂದಂ ||೨೧ ||

ಪದ್ಯ-೨೧:ಪದವಿಭಾಗ-

ಅರ್ಥ:ಕರೆದೊಡೆ ಜೂದಿಗಂ

(ಜೂಜಿಗೆ) ಧುರಭರಕೆ

ಆಖೇಟಕ್ಕೆ

(ಬೇಟೆಗೂ)ಭೂಭುಜಂಗೆ

ಆಗದು ಅದು ಮೆಯ್ಗರದಿರಲ್

(ಮೈಮರೆಸಿಕೊಂಡಿರುವುದು

ಅದು ಆಗದು) ಎಂಬ ಬ

ಪುರಾತನ ಗುರುವಚನಂ ತನಗೆ

ನಿಟ್ಟೆಪಟ್ಟುದರಿಂದಂ

(ನಿಶ್ಚವಾಗಿರುವುದರಿಂದ

ಧರ್ಮಜನು ಆಡಲು

ಒಪ್ಪಿದನು.)

:ಪದ್ಯ-೭೧:ಅರ್ಥ:ಕರೆದಾಗ ಜೂಜಿಗೆ, ಯುದ್ಧಕ್ಕೆ ಬೇಟೆಗೂ ಮೈಮರೆಸಿಕೊಂಡಿರುವುದು- ಬೆಡವೆನ್ನುವುದು ಅದು ಆಗದು ಎಂಬ ಬ ಪುರಾತನ ಗುರುವಚನನಿದೆ. ಇದು ತನಗೆ ನಿಶ್ಚವಾಗಿರುವುದರಿಂದ ಧರ್ಮಜನು ಆಡಲು ಒಪ್ಪಿದನು.

ವ||ಅಂತು ಪೂಡಿಕೊಂಡು ನಾಳವಾಸಗೆಯನಿಕ್ಕಲೇಳ್ವ

ದುಂ ಶಕುನಿ ಮುನ್ನೆ ತನ್ನ
ಮಾಡಿದ
ನಾಳವಾಸಗಳನರಸಾಳಂತೆಕ
ಣ್ಣರಿದು ಮೆಟ್ಟಿ
ಮುರಿದಿಕ್ಕುವಾಗಳೊಡ್ಡಮಂ
ಪೀಳಿಮೆನೆ,
ಪೊಳ್ತಿಪೊಗಿಂಗಮಮಳ್ತಿಗಮಾ
ಡುವತಮ್ಮುತಿರ್ವರುಂ ಪಲಗೆಗೆ
ಸಾಸಿರ ಗದ್ಯಾಣದ ಪನ್ನೇ
ಸಾಲ್ಗುಮಗ್ಗಳಂ ಬೇಡೆಂದು
ದುರ್ಯೋಧನನೊಕ್ಕಲಂಪುಡಿ

ಯೊಳ್ ಪೊರಳ್ಚುವಂತೆ
ಪಾಸಂಗೆಯಂ ಪೊರಳ್ಚಿ
ಮುನ್ನಂ
ನೆತ್ತಮಮನರಿಯದನಂತವರ
ದಾಯುಮನಾಡೆ
ಮಡಿಮಡಿಗುರುವುದುಮೊಂ
ದು ಪತ್ತೆಂಟು ಪಲಗೆಯಂ
ಮೆಳ್ಪಡಿಸಲೆಂದು ಸೋಲ್ತು
ಸೋಲದೊಳೇವಯಿಸಿ
ಯಿನ್ನೊಡ್ಡಂ ಕೊಳ್ಳಿಮೆಂದು -

ವಚನ:ಪದವಿಭಾಗ-ಅರ್ಥ:ಅಂತು ಪೂಡಿಕೊಂಡು ನಾಳವಾಸಗೆಯನು ಇಕ್ಕಲೇಳ್ವದುಂ (ಹಾಗೆ ಸಿದ್ಧಮಾಡಿಕೊಂಡು ಕಳ್ಳ ದಾಳಗಳನ್ನು ಹಾಕಲು ಹೇಳಲು) ಶಕುನಿ ಮುನ್ನೆ ತನ್ನ ಮಾಡಿದ ನಾಳವಾಸಗಳನು ಅರಸಾಳಂತೆ ಕಣ್ಣರಿದು (ಅರಸಿನ ಆಳಿನಂತೆ ಕಣ್ಣಿನ ಸೂಚನೆ ತಿಳಿದು ಶಕುನಿ

ಮೊದಲೇ ಮಾಡಿದ ಕಳ್ಳ ದಾಳಗಳನ್ನು) ಮೆಟ್ಟ ಮುರಿದಿಕ್ಕುವಾಗಳ್ ಒಡ್ಡಮಂ ಪೀಳ್ದಿಂ ಎನೆ (ಮಟ್ಟ ನೆಲದಲ್ಲಿ ತಿರುವಿದಾಳಹಾಕುವಾಗ ಒಡ್ಡು/ ಫಣನ್ನುಹೇಳಿ ಎನ್ನಲು), ಪೊಳ್ತಿಪೊಗಿಂಗಂ ಅಳ್ತಿಗಂ ಆಡುವ ತಮ್ಮುತ ಇರ್ವರುಂ ಪಲಗೆಗೆ ಸಾಸಿರ ಗದ್ಯಾಣದ ಪನ್ನೇ ಸಾಲ್ಗುಂ (ಹೊತ್ತು ಹೋಗಲೂ,

ಸ್ನೇಹಕ್ಕೂ ಆಡುವ
ಸಮ್ಮತದಿಂದ ಇಬ್ಬರೂ ಒಂದು
ಸಲದ ಹಲಗೆ ಆಟಕ್ಕೆ ಸಾವಿರ
ಗದ್ಯಾಣದ ಚಿನ್ನವೇ ಸಾಕು)
ಅಗ್ಗಳಂ ಬೇಡೆಂದು (ಹೆಚ್ಚು
ಬೇಡವೆಮದು)
ದುರ್ಯೋಧನನು ಒಕ್ಕಲಂ
ಪುಡಿಯೊಳ್ ಪೊರಳ್ಚುವಂತೆ
ಪಾಸಂಗೆಯಂ ಪೊರಳ್ಚಿ
(ದುರ್ಯೋಧನನು ತನ್ನ
ಕುಲವನ್ನೇದೂಳಿನಲ್ಲಿ

ಹೋರಳಿಸುವಂತೆದಾಳಗಳನ್ನು ಹೊರಳಿಸಿ,) ಮುನ್ನಂ ನೆತ್ತಮಮನು ಅರಿಯದನಂತೆ ಅವರ ದಾಯುಮನು ಆಡೆ (ಮೊದಲು ಪಗಡೆಯಾಟವನ್ನು ತಿಳಿಯದವನಂತೆ ಅದರ ಗರವನ್ನು ಹಾಕಲು) ಮಡಿಮಡಿಗೆ ಉರುವುದುಂ ಒಂದು ಪತ್ತೆಂಟು ಪಲಗೆಯಂ(ಬಾರಬಾರಿಗೆ ಉರುಳಿಸಿದ ಒಂದು ಹತ್ತೆಂಟು

ಆಟವನ್ನು) ಮೆಳ್ಪಡಿಸಲೆಂದು ಸೋಲ್ತು (ಮರುಳುಪಡಿಸಲು? -ಮೋಸಮಾಡಬೇಕೆಂದು ಸೋತು) ಸೋಲದೊಳು ಏವಯಿಸಿ ಯಿನ್ನೊಡ್ಡಂ ಕೊಳ್ಳಿಮೆಂದು (ಸೋಲಿನಿಂದ ಬೇಸರಿಸಿ ಇನ್ನೊಂದು ಫಣವನ್ನು ತೆಗೆದುಕೊಳ್ಳಿರಿ ಎಂದನು ದುರ್ಯೋಧನ)-

:ವಚನ:ಅರ್ಥ:ಹಾಗೆ ಪಗಡೆಹಲಗೆಯನ್ನು

ಹೂಡಿಕೊಂಡು ಕಳ್ಳ
ದಾಳಗಳನ್ನು ಹಾಕಲು
ಹೇಳಲು ಶಕುನಿ ಮೊದಲು
ತಾನು ಮಾಡಿದ ಅರಸಿನ
ಆಳಿನಂತೆ ಕಣ್ಣಿನ ಸೂಚನೆ
ತಿಳಿದು ಶಕುನಿ ಮೊದಲೇ
ಮಾಡಿದ ಕಳ್ಳ ದಾಳಗಳನ್ನು
ಮಟ್ಟ ನೆಲದಲ್ಲಿ
ತಿರುವಿದಾಳಹಾಕುವಾಗ
ಒಡ್ಡು/ ಘಣನ್ನುಹೇಳಿ ಎನ್ನಲು,
ಹೊತ್ತು ಹೋಗಲೂ, ಸ್ನೇಹಕ್ಕೂ

ಆಡುವ ಸಮ್ಮತದಿಂದ
ಇಬ್ಬರೂ ಒಂದು ಸಲದ ಹಲಗೆ
ಆಟಕ್ಕೆ ಸಾವಿರ ಗದ್ಯಾಣದ
ಚಿನ್ನವೇ ಸಾಕು; ಹೆಚ್ಚು
ಬೇಡವೆಮದು,
ದುರ್ಯೋಧನನು ತನ್ನ
ಕುಲವನ್ನೇದೂಳಿನಲ್ಲಿ
ಹೋರಳಿಸುವಂತೆ
ದಾಳಗಳನ್ನು ಹೊರಳಿಸಿ,
ಮೊದಲು ಪಗಡೆಯಾಟವನ್ನು
ತಿಳಿಯದವನಂತೆ ಅದರ

ಗರವನ್ನು ಹಾಕಲು-
ಹಾಕಿದನು., ಬಾರಬಾರಿಗೆ
ಉರುಳಿಸಿದ ಒಂದು ಹತ್ತೆಂಟು
ಆಟವನ್ನು
ಮೋಸಮಾಡಬೇಕೆಂದು
ಸೋತು, ಸೋಲಿನಿಂದ
ಬೇಸರಿಸಿ ಇನ್ನೊಂದು
ಫಣವನ್ನು ತೆಗೆದುಕೊಳ್ಳಿರಿ
ಎಂದನು ದುರ್ಯೋಧನ-

**ಚಂ|| ಪಲಗೆಗೆ ಪತ್ತು
ಸಾಯಿರಮೆ**

ಗದ್ಯಣಮೆಂದಿರದೊಡ್ಡಿ
ತಾಮೆರ
ಳ್ವಲಗೆಯನಾಡಿ ಸೋಲ್ತೊಡೆ
ಸುಯೋಧನನೇವದೆಧರ್ಮಪು
ತ್ರನಂ |
ಕುಲಧನ ಸಂಕುಲನಂಗಳನೆ
ತಂದಿಡೆ ಇಟ್ಟವನಾಡಿ
ಸೋಲ್ತನಾ
ಕುಲಮತಿ ಮುಂದೆ
ಭಾರತದೊಳೊಡ್ಡುವುದು ಕಡು
ನನ್ನಿ ಮಾಳ್ಪವೋಲ್ || ೭೨||

ಪದ್ಯ-00:ಪದವಿಭಾಗ-ಅರ್ಥ:ಪಲಗೆಗೆ ಪತ್ತು ಸಾಯಿರಮೆ ಗದ್ಯಾಣಮೆಂದು ಇರದೊಡ್ಡಿ ತಾಮ್ ಎರಳ್ಪಲಗೆಯನು ಆಡಿ ಸೋಲ್ತೊಡೆ ಸುಯೋಧನನು ಏವದೆ (ಬೇಸರದಿಂದ) ಧರ್ಮಪುತ್ರನಂ (ಧರ್ಮರಾಯನೂ ನಿಯಮದಂತೆ ಅಷ್ಟು ಪಣವೊಡ್ಡಿ) ಕುಲಧನ

ಸಂಕುಲನಂಗಳನೆ ತಂದಿಡೆ
ಇಟ್ಟು ಅವಂ ಆಡಿ ಸೋಲ್ತನು
ಆಕುಲಮತಿ (ಧರ್ಮರಾಯನ
ಎದುರು ಕುಲಧನ
ಸಮೂಹವನ್ನೇ ತಂದು
ಫಣವಾಗಿ ಇಟ್ಟು ಅವನು ಒಡ್ಡಿ
ಆಡಿ ಈಗ ಗೆದ್ದರೂ,) ಮುಂದೆ
ಭಾರತದೊಳು ಒಡ್ಡುವುದು
ಕಡು ನನ್ನಿ ಮಾಳ್ಪವೋಲ್
(ಮುಂದೆ ಭಾರತ ಯುದ್ಧದಲ್ಲಿ
ಅದನ್ನು ಸತ್ಯ ಮಾಡುವಂತೆ)

:ಪದ್ಯ-00:ಅರ್ಥ:ಒಂದು ಹಲಗೆಯ ಆಟಕ್ಕೆ ಹತ್ತು ಸಾವಿರ ಇರಲಿ ಗದ್ಯಾಣವೆಂದು ಇರದೆ/ ತಡೆಯದೆ ಒಡ್ಡಿ ತಾವು- ಶಕುನಿ ದುರ್ಯೋಧನರು ಎರಡು ಹಲಗೆಯ ಆಟ ಆಡಿ ಸೋತರೆ, ದುರ್ಯೋಧನನು ಬೇಸರತೋರುತ್ತಾ ತನ್ನ ಕುಲಧನ ಸಮೂಹವನ್ನೇ ತಂದು ಫಣವಾಗಿ ಒಡ್ಡಲು, ಹಾಗೆ ಇಟ್ಟ ಅವನು ಆಡಿ ಈಗ

ಗೆದ್ದರೂ, ಮುಂದೆ ಭಾರತ ಯುದ್ಧದಲ್ಲಿ ಅದನ್ನು ಸತ್ಯ ಮಾಡುವಂತೆ ಅದನ್ನು ಇಟ್ಟು ಆಡಿದಾಗ ಆಕುಲಮತಿ -ವ್ಯತಿಥನಾದ ಧರ್ಮರಾಯನೂ ನಿಯಮದಂತೆ ಅಷ್ಟೇ ಪಣವೊಡ್ಡಿ ಅವನೆದುರು ಆಡಿ ಸೋತನು. (ಅನ್ವಯ ಅರ್ಥ ಮಾಡವಲ್ಲಿ ಸ್ವಲ್ಪ

ಗೊಂದಲವಿದೆ- ಬಹಳಷ್ಟು ಅಧ್ಯಾಹಾರವಾಗಿದೆ.)

ವ||ಅಂತು ಕಳಿಂಗಾಂಗ ವನಸಂಭವಂಗಳಪ್ಪ ಮಧಾಂಧಗಂಧಸಿಂಧುರಂಗಳು ಮನಾಜಾನೇಯಕಾಂಭೋಜ ಭೂಮಿಜಂಗಳಪ್ಪ ಜಾತ್ಯಶ್ವಂಗಳನೊಡ್ಡಿದಾಗಳ್ ದುರ್ಯೋಧನಂ ಬಂದಿಕಾರನಂತೆಸೆರೆಗಯ್ದುಂ ವ್ರಣವೈದ್ಯನಂತೆ

ಕೊಡಸಾರಿಯಂ ಪಿಡಿದುಂ
ಸೂಳೆಯಂತೆ
ಕಳಿವುಳಿವನರಿದುಂ
ರಸವಾದಿಯಂತೆ.... ಕಟ್ಟಿಯುಂ
ಪೆರ್ಜೋೞಡೆಯಂತೆ ನುಣ್ಣಿತಂ
ವೇಳ್ದುವಣುಗಾಳಂತೆ
ದಾಯಂಬಡೆದುಂ
ಮೇಳದಂಕದಂತೆ
ಸುಳಿಯರಿದುಂ ಡೊಂಬರ
ಕೋಡಗದಂತಾಡಿ ಗೆಲ್ವಾಗಳ್
ತಮ್ಮಣ್ಣನ ಸೋಲಮಂ

ಕಂಡಾಗಳ್

ಭೀಮಸೇನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು (ಹಾಗೆ ಧರ್ಮರಾಯನು) ಕಳಿಂಗ ಅಂಗ ವನ ಸಂಭವಂಗಳು ಅಪ್ಪ ಮಧಾಂಧಗಂಧಸಿಂಧುರಂಗ ಳುಮನು (ಹುಟ್ಟಿದ ಮದ್ದಾನೆಗಳನ್ನೂ) ಆಜಾನೇಯ

(ಉತ್ತಮಜಾತಿಯ)
ಕಾಂಭೋಜ ಭೂಮಿಜಂಗಳಪ್ಪ
ಜಾತ್ಯಶ್ವಂಗಳನು
(ಕುದುರೆಗಳನ್ನು) ಒಡ್ಡಿದಾಗಳ್
ದುರ್ಯೋಧನಂ
ಬಂದಿಕಾರನಂತೆ ಸೆರೆಗಯ್ದುಂ
(ಸರೆಹಿಡಿಯುವ
ಬಂದಿಕಾರನಂತೆ
ವಶಪಡಿಸಿಕೊಂಡು)
ವ್ರಣವೈದ್ಯನಂತೆ
ಕೊಡಸಾರಿಯಂ ಪಿಡಿದುಂ

(ಹುಣ್ಣು ಚಿಕಿತ್ಸಕನಂತೆ
ಕೊಡಸಾರಿ ಮೂಲಿಕೆ ಹಿಡಿದು
ಹಣಪಡೆಯುವಂತೆ)
ಸೂಳೆಯಂತೆ ಕಳಿವುಳಿವನು
ಅರಿದುಂ (ಸೂಳೆಯರ ಹಾಗೆ
ಕರೆದಿದ್ದು ಉಳಿದುದನ್ನು
ತಿಳಿದು ಪಡೆದಂತೆ)
ರಸವಾದಿಯಂತೆ....
ಕಟ್ಟಿಯುಂ (ಪಾದರಸದಿಂದ
ಚಿನ್ನ ತೆಗೆಯುವ
ರಸವಾದಿಯಂತೆ ಚಿನ್ನವನ್ನು

ತೆಗದು ಕಟ್ಟಿ,)
ಪೆರ್ಜೋಡೆಯಂತೆ ನುಣ್ಣಿತಂ
ವೇಳ್ದುಂ (ಜಾರೆಯಮತೆ
ನಯವಾಗಿ ಹೇಳಿ)
ಅಣಗಾಳಂತೆ
ದಾಯಂಬಡೆದುಂ
(ಗೆಳೆಯನಂತೆ ತನ್ನ
ಭಾಗಪಡೆದು) ಮೇಳದ
ಅಂಕದಂತೆ ಸುಳಿಯರಿದುಂ
(ಮೇಳದ ಆಟದಮತೆ
ಸುಳಿವು ತಿಳಿದು) ಡೊಂಬರ

ಕೋಡಗಗದಂತೆ ಆಡಿ (ಡೊಂಬರ ಕೋತಿಯಂತೆ ಚಮತ್ಕಾರದಿಂದ ಆಡಿ) ಗೆಲ್ವಾಗಳ್ (ದುರ್ಯೋಧನನು ಗೆದ್ದಾಗ) ತಮ್ಮಣ್ಣನ ಸೋಲಮಂ ಕಂಡಾಗಳ್ ಭೀಮಸೇನನಿಂತೆಂದಂ (ತನ್ನ ಅಣ್ಣನಸೋಲನ್ನು ಕಂಡು ಆಗ ಹೀಗೆಂದನು-)-

:ವಚನ:ಅರ್ಥ:ಹಾಗೆ ಧರ್ಮರಾಯನು, ಕಳಿಂಗ

ಅಂಗ ವನಹಳಲ್ಲಿ ಹುಟ್ಟಿದ ಮದ್ದಾನೆಗಳನ್ನೂ ಉತ್ತಮಜಾತಿಯ ಕುದುರೆಗಳನೂ, ಪಣವಾಗಿ ಒಡ್ಡಿದಾಗ ಸರೆಹಿಡಿಯುವ ಬಂದಿಕಾರನಂತೆ ವಶಪಡಿಸಿಕೊಂಡನು. ಹುಣ್ಣು ಚಿಕಿತ್ಸಕನಂತೆ ಕೊಡಸಾರಿ ಮೂಲಿಕೆ ಹಿಡಿದು ಹಣಪಡೆಯುವಂತೆ, ಸೂಳೆಯರ ಹಾಗೆ ಕಳೆದ

ಉಳಿದುದನ್ನು ತಿಳಿದು ಪಡೆದಂತೆ, ಪಾದರಸದಿಂದ ಚಿನ್ನ ತೆಗೆಯುವ ರಸವಾದಿಯಂತೆ ಚಿನ್ನವನ್ನು ತೆಗದು ಕಟ್ಟಿದಂತೆ, ಜಾರೆಯಂತೆ ನಯವಾಗಿ ಹೇಳಿದಂತೆ, ಗೆಳೆಯನಂತೆ ತನ್ನ ಭಾಗಪಡೆದು ಆಡಿ, ಮೇಳದ ಆಟದಮತೆ ಸುಳಿವು ತಿಳಿದು ಗೆದ್ದನು; ಹೀಗೆ ಡೊಂಬರ ಕೋತಿಯಂತೆ

ಚಮತ್ಕಾರದಿಂದ ಆಡಿ
ದುರ್ಯೋಧನನು ಗೆದ್ದಾಗ,
ಭೀಮಸೇನನು ತನ್ನ ಅಣ್ಣನ
ಸೋಲನ್ನು ಕಂಡು ಆಗ
ಹೀಗೆಂದನು-

ಕಂ||ಭಯಮರಿಯದ
ಕಲಿಯುಂ ಚಾ
ಗಿಯುಮೆನಿಸದೆ ನಾಡೆ
ಲೋಭಿಯುಂ ಪಂದೆಯುಮಾ
ಗಿಯುಮಾ ಬಾಳ್ವಂಗಲ್ಲದೆ ಸೂ

ಳೆಯ ಕರ್ಣ ಪಾಸಗೆಯ ಕಣ್ಣುಮೇನುರುಗುಗುಮೇ || ೭೩ ||

ಪದ್ಯ-೭೩:ಪದವಿಭಾಗ-ಅರ್ಥ:ಭಯಮರಿಯದ ಕಲಿಯುಂ ಚಾಗಿಯಮೆನಿಸದೆ (ಅಂಜಿಕೆಯನ್ನು ತಿಳಿಯದ ಶೂರನೂ, ದಾನಿಯೆಂದು ಎನಿಸಿಕೊಳ್ಳದೆ) ನಾಡೆ ಲೋಭಿಯುಂ ಪಂದೆಯುಂ ಆಗಿಯುಂ (ವಿಶೇಷವಾಗಿ

ಲೋಭಿಯೂ, ಜಪುಣನೂ, ಹೇಡಿಯೂ ಆಗಿಯೂ ಇರುವವನ) ಆ ಬಾಳ್ವಂಗಲ್ಲದೆ ಸೂಳೆಯ ಕಣ್ ಪಾಸಗೆಯ ಕಣ್ಣುಂ ಏನುರುಗುಗುಮೇ (ಬಾಳುವೆಗಲ್ಲದೆ, ವೇಶ್ಯೆಯ ಕಣ್ಣೊ, ದಾಳಗಳ ಕಣ್ಣುಗಳೂ ಬಾಗುವುವೇ?)

:ಪದ್ಯ-೭೩:ಅರ್ಥ:ಅಂಜಿಕೆ ಯನ್ನು ತಿಳಿಯದ ಶೂರನೂ, ದಾನಿಯೆಂದು ಎನಿಸಿಕೊಳ್ಳದೆ,

ವಿಶೇಷವಾಗಿ ಲೋಭಿಯೂ, ಜಪುಣನೂ, ಹೇಡಿಯೂ ಆಗಿಯೂ ಇರುವವನ ಆ ಬಾಳುವೆಗಲ್ಲದೆ, ವೇಶ್ಯೆಯ ಕಣ್ಣೂ, ದಾಳಗಳ ಕಣ್ಣುಗಳೂ ಬಾಗುವುವೇ? ಎಂದನು ಭೀಮ.

ವ|| ಎಂದು ಕಯ್ಪೆಸರಂಬೆರಸು ನುಡಿದ ಭೀಮಸೇನನ ನುಡಿಗಳ್ ಕಿಡಿಗಳಂತೆ ತನ್ನಮನಮನೊಲಿಸೆಯುಮೆ

ರ್ದೆಯಂ ಕನಲಿಸೆಯುಮೇನುಮೆನ್ನದೆ ಮುಂತಣ ಕಜ್ಜಮನೆಬಗೆದುಸಿರದಿರ್ದ ದುರ್ಯೋಧನನಲ್ಲಿಗೆ ಗಾಂಗೇಯನುಂ ವಿದುರನುಂ ಬಂದು-

ವಚನ:ಪದವಿಭಾಗ-

ಅರ್ಥ:ಎಂದು ಕಯ್ಪೊಸರಂಬೆರಸು (ಕಹಿಬೆರಸಿ) ನುಡಿದ

ಭೀಮಸೇನನ ನುಡಿಗಳ್
ಕಿಡಿಗಳಂತೆ ತನ್ನ ಮನಮನು
ಒಲಿಸೆಯುಂ ಎರ್ದೆಯಂ
ಕನಲಿಸೆಯುಂ ಏನುಮೆನ್ನದೆ
ಮುಂತಣ ಕಜ್ಜಮನೆ ಬಗೆದು
ಉಸಿರದಿರ್ದ ದುರ್ಯೋಧನಂ
ಅಲ್ಲಿಗೆ ಗಾಂಗೇಯನುಂ
ವಿದುರನುಂ ಬಂದು-

:ವಚನ:ಅರ್ಥ: ಃಇಗೆ
ಕಹಿಬೆರಸಿ ಹೇಳಿದ
ಭೀಮಸೇನನ ನುಡಿಗಳು

ಬೆಂಕಿಯ ಕಿಡುಗಳಂತೆ ಇದ್ದರೂ ಅದಕ್ಕೆ ದುರ್ಯೋಧನನು ತನ್ನ ಮನಸ್ಸನ್ನು ಕೆರಳಿಸಿಯೂ, ಕೋಪಗಳಿಸಿದರೂ ಏನೂ ಹೇಳದೆ ಮುಂದಿನ ಕಾರ್ಯವನ್ನು ಯೋಚಿಸಿ ಸುಮ್ಮನಿದ್ದ ದುರ್ಯೋಧನ ಬಳಿಗೆ ಭೀಷ್ಮನೂ ವಿದುರನೂ ಬಂದು-

ಉ|| ಸಾಲದೆ ಜೂದು
ನಿಮ್ಮೊಳಗಿದೇಂ ಗಳ
ಮಾಣಿಸಿಮೆಂದೊಡನ್ಯ ಭೂ
ಪಾಲಕಿರೀಟತಾಟಿತಪದಂ
ಯಮನಂದನನಜ್ಞ
ನಾಡೆಯುಂ |
ಸೋಲದೊಳಾದಮೇವಯಿಸಿ
ದೆಂ ನುಡಿಗಿನ್ನಡೆಯಿಲ್ಲ
ಪೋಗಿಮಾ
ತ್ಮಾಲಯಕೆಂದೊಡೆನುಮೇನಲ
ಣ್ಮದೆ ಬಾರಿಸಲಣ್ಮದಿರ್ವರುಂ

|| ೭೪ ||

ಪದ್ಯ-೦೦:ಪದವಿಭಾಗ-ಅರ್ಥ:ಸಾಲದೆ ಜೂದು ನಿಮ್ಮೊಳಗೆ ಇದೇಂಗಳ ಮಾಣಿಸಿಂ (ನಿಮ್ಮೊಳಗೆ ಇದೇನು ನಿಲ್ಲಿಸಿರಿ.) ಎಂದೊಡೆ (ಎಂದು ಹೇಳಿದರೆ) ಅನ್ಯ ಭೂಪಾಲಕಿರೀಟತಾಟಿತಪದಂ (ಶತ್ರುರಾಜರ ಕಿರೀಟ ತಾಗಿದ ಪಾದವುಳ್ಳವನು) ಯಮನಂದನನ ಅಜ್ಜ

ನಾಡೆಯುಂ
ಸೋಲದೊಳು(ಧರ್ಮಜನ
ಅಜ್ಜ ಜೂಜಿನಲ್ಲಿ
ಸೋತಿದ್ದರಲ್ಲಿ) ಅದಂ
ಏವಯಿಸಿದೆಂ (ಅದರಲ್ಲಿ
ನೊಂದಿದ್ದೇನೆ) ನುಡಿಗೆ
ಇನ್ನಡೆಯಿಲ್ಲ ಪೋಗಿಂ
ಆತ್ಮಾಲಯಕೆ (ಇನ್ನು ಬೇರೆ
ಮಾತು ಬೇಡ ನಿಮ್ಮ ಮನೆಗೆ)
ಎಂದೊಡೆ ಎನುಮೇನಲು
ಅಣ್ಮದೆ (ಎಂದಾಗ, ಏಳಲೂ

ಪ್ರಯತ್ನಿಸದೆ) ಬಾರಿಸಲು ಅಣ್ಮದೆ ಇರ್ವರುಂ (ತಡೆಯಲು ಆಗದೆ, ಇಬ್ಬರೂ)

:ಪದ್ಯ-00:ಅರ್ಥ: ಸಾಲದೆ ಜೂಜು? ನಿಮ್ಮೊಳಗೆ ಇದೇನು ನಿಲ್ಲಿಸಿರಿ. ಎಂದು ಹೇಳಿದರೆ, ಶತ್ರುರಾಜರ ಕಿರೀಟ ತಾಗಿದ ಪಾದವುಳ್ಳ ಧರ್ಮಜನ ಅಜ್ಜ ಜೂಜಿನಲ್ಲಿ ಸೋತಿದ್ದ, ಅದರಲ್ಲಿ ನೊಂದಿದ್ದೇನೆ. ಇನ್ನು ಬೇರೆ ಮಾತು ಬೇಡ ನಿಮ್ಮ

ಮನೆಗೆ ಹೋಗಿರಿ. ಎಂದಾಗ,

ಏಳಲೂ ಪ್ರಯತ್ನಿಸದೆ,

ತಡೆಯಲು ಆಗದೆ, ಇಬ್ಬರೂ-

ವ|| ಧರತರಾಷ್ಟ್ರನಲ್ಲಿಗೆ ಪೋಗಿ

-

ವಚನ:ಪದವಿಭಾಗ-ಅರ್ಥ:

:ವಚನ:ಅರ್ಥ:ಧರತರಾಷ್ಟ್ರನ

ಲ್ಲಿಗೆ ಪೋಗಿ -

ಚಂ|| ನಿನಗ ಮಗಂ

ಪುರಾಕೃತದ ಕರ್ಮಮೆ

ಪುಟ್ಟುವವೊಲೆ ಪುಟ್ಟಿ ನಿ

ನಿಬರುಮಂ
ರಸಾತಳದೊಳಳ್ದಿಪಂ ಪಗೆ
ಪೊಲ್ಲ ಪಾಂಡುನಂ |
ದನರೊಳಹೀಂದ್ರಕೇತನನ
ಜೂ(ಬೂ)ದಿನ
ಗೆಲ್ಲಮದೆಂತುಟೆನ್ನ ನಂ
ಜಿನ
ಸವಿಯಂತುಟೆಂದೊಡಿನಿಸಂತ
ದೊಳಂತಕನಲ್ಲಿಗಟ್ಟುಗುಂ ||
೭೫||

ಪದ್ಯ-೭೫:ಪದವಿಭಾಗ-ಅರ್ಥ:ನಿನಗ ಮಗಂ ಪುರಾಕೃತದ ಕರ್ಮಮೆ ಪುಟ್ಟುವವೊಲೆ ಪುಟ್ಟಿ (ಧರತರಾಷ್ಟ್ರನೇ ನಿನಗೆ ಮಗನು ಪೂರ್ವಜನ್ಮದ ಕೆಟ್ಟ ಕರ್ಮದ ಫಲವಾಗಿ ಹುಟ್ಟಿ) ನಿಮ್ಮನು ಅಬರುಮಂ ರಸಾತಳದೊಳು ಅಳ್ದಿಪಂ (ನಿಮ್ಮೆಲ್ಲರನ್ನೂ ರಸಾಳದ ನರಕದಲ್ಲಿ ಅದ್ದುತ್ತಾನೆ/

ಮುಳುಗಿಸುತ್ತಾನೆ) ಪಗೆ ಪೊಲ್ಲ
ಪಾಂಡುನಂದನರೊಳು
(ಪಾಂದುನಂದನರೊಡನೆ
ಹಗೆತನೆ ಬೇಡದ್ದು/ ಕೆಟ್ಟದ್ದು)
ಅಹೀಂದ್ರಕೇತನನ ಜೂದಿನ
ಗೆಲ್ಲಮದು ಎಂತುಟೆನ್ನ (ಸರ್ಪ
ಕೇತನ-ಧ್ವಜದವನ-
ದುರ್ಯೋಧನನ ಜೂಜಿನ
ಗೆಲುವು ಹೇಗಿದೆಎನ್ನುವೆಯೊ-
ಅದು) ನಂಜಿನ
ಸವಿಯಂತುಟು ಎಂದೊಡೆ

ಇನಿಸು ಅಂತದೊಳ
ಅಂತಕನಲ್ಲಿಗೆ ಅಟ್ಟುಗುಂ
(ಅದು ವಿಷದ
ಸವಿಯೂಟದಂತೆ ಇದೆ. ಸ್ವಲ್ಪ
ಸಮಯದಲ್ಲೇ ಯಮನಲ್ಲಿಗೆ
ಕಳಿಸುತ್ತದೆ.)
:ಪದ್ಯ-೭೫:ಅರ್ಥ:ಭಿಷ್ಮರು
ಹೇಳಿದರು, ಧರತರಾಷ್ಟ್ರನೇ
ನಿನಗೆ ಮಗನು ಪೂರ್ವಜನ್ಮದ
ಕೆಟ್ಟ ಕರ್ಮದ ಫಲವಾಗಿ
ಹುಟ್ಟಿ, ನಿಮ್ಮೆಲ್ಲರನ್ನೂ

ರಸಾಳದ ನರಕದಲ್ಲಿ
ಅದ್ದುತ್ತಾನೆ/
ಮುಳುಗಿಸುತ್ತಾನೆ;
ಪಾಂಡುನಂದನರೊಡನೆ
ಹಗೆತನೆ ಬೇಡದ್ದು/ ಕೆಟ್ಟದ್ದು.
ದುರ್ಯೋಧನನ ಜೂಜಿನ
ಗೆಲುವು ಹೇಗಿದೆಎನ್ನುವೆಯೊ-
ಅದು ವಿಷದ
ಸವಿಯೂಟದಂತೆ ಇದೆ. ಸ್ವಲ್ಪ
ಸಮಯದಲ್ಲೇ ಯಮನಲ್ಲಿಗೆ
ಕಳಿಸುತ್ತದೆ.

ಕಂ|| ಪುರುಡಿಸಿಕೊಂಡೀಗಳ್
ನೀ
ನರಸಿನ ಗರ್ವದೊಳೆ ಬೀಗಿ
ಬೆಸೆಯದೆ ಮಗನಂ |
ಕರೆದೊಪ್ಪಿಸವೇಳ ಯುಧಿ
ಷ್ಠಿರಂಗೆ ಮುನ್ನ ಗೆಲ್ದ
ವಸ್ತುವಾಹನಚಯಮಂ ||೭೬
||

ಪದ್ಯ-೭೬:ಪದವಿಭಾಗ-

ಅರ್ಥ:ಪುರುಡಿಸಿಕೊಂಡು ಈಗಳ್ ನೀನು ಅರಸಿನ

ಗರ್ವದೊಳೆ ಬೀಗಿ ಬೆಸೆಯದೆ ಮಗನಂ ಕರೆದು ಒಪ್ಪಿಸವೇಳ (ಹಿಂದಕ್ಕೆ ಕೊಡಲು- ಒಪ್ಪಿಸಲು ಹೇಳಪ್ಪಾ!)ಯುಧಿಷ್ಠಿರಂಗೆ ಮುನ್ನ ಗೆಲ್ದ ವಸ್ತುವಾಹನ ಚಯಮಂ (ಮೊದಲು ಗೆದ್ದ ವಸ್ತು ವಾಹನ ಸಮಸ್ತವನ್ನೂ) **:ಪದ್ಯ-೭೬:ಅರ್ಥ**:ಅಸೂಯೆ ಯಿಂದಕೂಡಿ ಈಗ ನೀನು ಅರಸೆಂಬ ಗರ್ವದಲ್ಲಿ ಉಬ್ಬಿ ಅಹಂಕಾರ ಪಡದೆ ಮಗನನ್ನು

ಕರೆದು ಮೊದಲು ಗೆದ್ದ ವಸ್ತು
ವಾಹನ ಸಮಸ್ತವನ್ನೂ
ಹಿಂದಕ್ಕೆ ಒಪ್ಪಿಸಲು ಹೇಳಪ್ಪಾ!

ಮ||ಸ್ರ||
ಕದನಪ್ರಾರಂಭಶೌಂಡಂ
ರಿಪುನೃಪಬಲದಾವಾನಲಂ
ವೈರಿ ಭೂಭೃ
ನ್ಮದವನ್ಮಾತಂಗ ಕುಂಭಸ್ಥಳ
ದಳನಖರೋಗ್ರಾಸಿ ಪಂಚಾಸ್ಯ
ಧೈರ್ಯಂ |

ವಿದಿತ ಪ್ರತ್ಯಕ್ಷನಾಶಾಕರಿ
ನಿಕಿಟತಟಶ್ರಾಂತ ದಾನ
ಭರಂಗೆ
ಯ್ದಿದಿರೊಳ್ ವಿಕ್ರಾಂತ ತುಂಗಂ
ಹರಿಗನಿರೆ
ಬಿಗುರ್ತಾಂಪನಂತಾವಗಂಡಂ||
೭೭||

ಪದ್ಯ-00:ಪದವಿಭಾಗ-
ಅರ್ಥ:ಕದನಪ್ರಾರಂಭಶೌಂ
ಡಂ (ಯುದ್ಧದ
ಉದ್ಯೋಗದಲ್ಲಿ

ಆಸಕ್ತಿಯುಳ್ಳವನು,)
ರಿಪುನೃಪಬಲದಾವಾನಲಂ
(ಶತ್ರು ಸೈನ್ಯಕ್ಕೆ ಕಾಡು
ಕಿಚ್ಚಿನಂತೆ ಇರುವವನು,) ವೈರಿ
ಭೂಭೃನ್ಮದವನ್ಮಾತಂಗ
ಕುಂಭಸ್ಥಳ ದಳನಖರೋಗ್ರಾಸಿ
(ವೈರಿಗಳ ಮದದಿಂದ ಕೂಡಿದ
ಆನೆಗಳ ಕುಂಭಸ್ಥಳವನ್ನು
ಸೀಳುವ ತೀಕ್ಷಣ ಉಗ್ರ ಅಸಿ -
ಕತ್ತಿಯುಳ್ಳವನು,,) ಪಂಚಾಸ್ಯ
ಧೈರ್ಯಂ (ಸಿಂಹದಂತೆ

ಧೈರ್ಯದವನು) ವಿದಿತ
ಪ್ರತ್ಯಕ್ಷಂ ಆಶಾ - ಕರಿ (ಕಣ್ಣಿಗೆ
ಕಾಣುವುದನ್ನೆಲ್ಲಾ ಆಶಾ-
ದಾನಂ ಆಸೆಪಟ್ಟವರಿಗೆ
ಮಾಡುವವನು,)
ನಿಕಿಟತಟಶ್ರಾಂತ (ಹತ್ತಿರದಲ್ಲಿ
ವಿಶ್ರಾಂತನು) ದಾನ (ದಾನಿ)
ಭರಂಗೆಯ್ದು (ಆರ್ಭಟಿಸಿ,)
ಇದಿರೊಳ್ ವಿಕ್ರಾಂತ
ತುಂಗಂ(ಉನ್ನತ ಪರಾಕ್ರಮಿ)
ಹರಿಗನು ಇರೆ (ಎದುರಿನಲ್ಲಿ

ಉನ್ನತ ಪರಾಕ್ರಮಿ ಅರಿಕೇಸರಿ / ಅರ್ಜುನ ಇರಲು), ಬಿಗುರ್ತು (ಹೆದರಿಸಿ) ಆಂಪ (ಎದುರಿಸುವ) ಆಂತೆ ಆವ ಗಂಡಂ (ಅಂತಹ ಶೂರನು ಯಾವನಿದ್ದಾನೆ) **:ಪದ್ಯ-00:ಅರ್ಥ**:ಯುದ್ಧದ ಉದ್ಯೋಗದಲ್ಲಿ ಆಸಕ್ತಿಯುಳ್ಳವನು, ಶತ್ರು ಸೈನ್ಯಕ್ಕೆ ಕಾಡು ಕಿಚ್ಚಿನಂತೆ ಇರುವವನು, ವೈರಿಗಳ

ಮದದಿಂದ ಕೂಡಿದ ಆನೆಗಳ
ಕುಂಭಸ್ಥಳವನ್ನು ಸೀಳುವ
ತೀಕ್ಷಣ ಉಗ್ರ ಅಸಿ -
ಕತ್ತಿಯುಳ್ಳವನು, ಸಿಂಹದಂತೆ
ಧೈರ್ಯದವನು, ಕಣ್ಣಿಗೆ
ಕಾಣುವುದನ್ನೆಲ್ಲಾ
ಆಸೆಪಟ್ಟವರಿಗೆ
ಮಾಡುವವನು, ಹತ್ತಿರದಲ್ಲಿ
ವಿಶ್ರಾಂತನು, ದಾನಿ, ಉನ್ನತ
ಪರಾಕ್ರಮಿ ಅರಿಕೇಸರಿ /
ಅರ್ಜುನ ಎದುರಿನಲ್ಲಿ ಇರಲು,

ಆರ್ಬಟಿಸಿ, ಹೆದರಿಸಿ ಎದುರಿಸುವ ಅಂತಹ ಶೂರನು ಯಾವನಿದ್ದಾನೆ.

ॐ

||ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವ

ವಿರಚಿತಮಪ್ಪ ವಿಕ್ರಮಾರ್ಜುನ
ವಿಜಯದೊಳ್ ಷಷ್ಠಾಸ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ

ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಆರನೆಯ ಆಶ್ವಾಸ.|| ♦♣♣♣♣♣♣♣♣♣♣♣♣♣♣♣♣♣♣♦

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	**6**	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?

title=ಪಂಪಭಾರತ_ಷಷ್ಠಾಶ್ವಾಸಂ&oldid=185595" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೩೦ ಸೆಪ್ಟೆಂಬರ್ ೨೦೧೯, ೨೩:೩೩ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಸಪ್ತಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ಸಪ್ತಮಾಶ್ವಾಸಂ

- (V|/IIV/XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಧರ್ಮರಾಯನಿಗೆ ಲೆತ್ತದಲ್ಲಿ ಸೋಲು- ವನವಾಸ

ಕಂ|| ಶ್ರೀ ರಮಣೀರಮಣಾಂಗರಿ

ನಾರೀ ವೈಧವ್ಯ ದಿವ್ಯ ದೀಕ್ಷಾ

ದಕ್ಷಂ|

ಗಾರೆಣೆ ಹರಿಗಂಗೀಗಡೆ

ಬಾರಿಸು ನೀಂ ನಿನ್ನ

ಮಗನನಂಧನರೇಂದ್ರಾ|| ೧ ||

ಪದ್ಯ-೧:ಪದವಿಭಾಗ-

ಅರ್ಥ: ಶ್ರೀ

ರಮಣೀರಮಣಾಂಗೆ

ಅರಿನಾರೀ ವೈಧವ್ಯ ದಿವ್ಯ

ದೀಕ್ಷಾ ದಕ್ಷಂಗೆ ಆರೆಣೆ

ಹರಿಗಂಗೆ ಈಗಡೆ ಬಾರಿಸು
ನೀಂ ನಿನ್ನ ಮಗನನು
ಅಂಧನರೇಂದ್ರಾ

ಪದ್ಯ-೧:ಅರ್ಥ:

ಐಶ್ವರ್ಯವೆಂಬ ಲಕ್ಷ್ಮಿಯ
ಪತಿಗೂ, ಶತ್ರುರಾಜಸ್ತ್ರೀಯರಿಗೆ
ವೈಧವ್ಯ ದೀಕ್ಷೆಯನ್ನು ಕೊಡುವ
ಶಕ್ತಿಯುಳ್ಳವನೂ ಆದ
ಅರಿಕೇಸರಿಗೆ
ಸಮಾನರಾದವರು ಯಾರು?
ಕುರುಡ ದೊರೆಯೇ ನಿನ್ನ

ಮಗನನ್ನು ಈ ಜೂಜಿನ
ಕಾರ್ಯದಿಂದ ತಡೆ.

ಕಂ|| ಕಾದುದು ಶರಣ್ಗೆವಂದರ
ನಾದುದು
ಕಾಲಾಗ್ನಿಬಲವದರಿನೃಪತಿಗೆ
ಕಾ|
ಪಾದುದು ನೆಲಕ್ಕೆ ತೋಳ್ವಲ
ವಿ ದೊರೆತೆನೆ ಮರುಳೆ
ಹರಿಗನೊಳ್ ಪಗೆಗೊಳ್ವಾ|| ೨
||

ಪದ್ಯ-೨:ಪದವಿಭಾಗ-ಅರ್ಥ: ಕಾದುದು ಸರಣ್ಗೆವಂದರನು (ಶರಣು ಬಂದವರನ್ನು ರಕ್ಷಿಸಿತು), ಆದುದು ಕಾಲಾಗ್ನಿ ಬಲವು ಅದು ಅರಿನೃಪತಿಗೆ, (ಅವನ ಬಲವು ಶತ್ರುರಾಜರಿಗೆ ಕಾಲಾಗ್ನಿಯಾಯಿತು) ಕಾಪಾದುದು ನೆಲಕ್ಕೆ (ಭೂಮಿಗೆ ರಕ್ಷಣೆಯಾಯಿತು) ತೋಳ್ ವಲವಿ ದೊರೆತು ಎನೆ

(ಅವನ ತೋಳುಬಲ ಇಂಥಾದ್ದು ಎನ್ನುವಾಗ) ಮರುಳೆ ಹರಿಗನೊಳ್ ಪಗೆಗೊಳ್ವಾ (ಮರುಳೆ ಅರ್ಜುನನಲ್ಲಿ ಹಗೆತನ ಮಾಡವೆಯಾ?)

ಪದ್ಯ-೨:ಅರ್ಥ: ಅರ್ಜುನನ ತೋಳಿನ ಬಲವು ಶರಣು ಬಂದವರನ್ನು ರಕ್ಷಿಸಿತು. ಅವನ ಬಲವು ಶತ್ರುರಾಜರಿಗೆ ಕಾಲಾಗ್ನಿಯಾಯಿತು.

ಭೂಮಿಗೆ ರಕ್ಷಣೆಯಾಯಿತು.
ಅವನ ತೋಳುಬಲ
ಇಂಥಾದ್ದು ಎನ್ನುವಾಗ, ಹುಚ್ಚ!
ಅರ್ಜುನನಲ್ಲಿ ಹಗೆತನ
ಮಾಡವೆಯಾ?

ವ|| ಎಂದೆನಿತಾನುಂ
ತೆಱದೊಳೆ ಸಾಱಿಯುಂ
ಕೀಱಿಯುಂ ನುಡಿದೊಡೆ
ಧೃತರಾಷ್ಟ್ರಂ ಮಗನಲ್ಲಿಗೆ
ವಂದು ಜಡಿದು
ನುಡಿದುಮೇಗೆಯ್ದು

ಮೊಡಂಬಡಿಸಲಾಱದಿರೆ ಯುಧಿಷ್ಠಿರಂ ತಲೆಗವಿವನಲ್ಲದೆಯುಮೇವ ದೊಳ್ ತಲೆಗವಿದು ಸಿಗ್ಗಂ ಕೊಂಡಾಡಿ ನೆತ್ತಮನಾಡಿ-

ವಚನ:ಪದವಿಭಾಗ-

ಅರ್ಥ:ಎಂದು ಎನಿತಾನುಂ ತೆಱದೊಳೆ ಸಾಱಿಯುಂ ಕೀಱಿಯುಂ ನುಡಿದೊಡೆ (ಎಂದು ಎಷ್ಟೋ ರೀತಿಯಲ್ಲಿ ಸಾರಿ ಸಾರಿ ಕೋಪದಿಂದ

ಹೇಳಿದರೂ) ಧೃತರಾಷ್ಟ್ರಂ
ಮಗನಲ್ಲಿಗೆ ವಂದು ಜಡಿದು
ನುಡಿದುಂ ಏಗೆಯ್ದುಂ
ಒಡಂಬಡಿಸಲಾಱದಿರೆ
(ಧೃತರಾಷ್ಟ್ರನು ಮಗನ
ಹತ್ತಿರಕ್ಕೆ ಬಂದು ಗದರಿಸಿ ಹೇಳಿ
ಏನೂ ಮಾಡಿದರೂ
ಒಪ್ಪಿಸಲಾಗದಿರಲು)
ಯುಧಿಷ್ಠಿರಂ
ತಲೆಗವಿವನಲ್ಲದೆಯುಂ
(ತಲೆತಗ್ಗಿಸುವವನಲ್ಲವಾದರೂ

) ಏವದೊಳ್ ತಲೆಗವಿದು (ಬೇಸರದಿಂದ ತಲೆತಗ್ಗಿಸಿ) ಸಿಗ್ಗಂ ಕೊಂಡು (ನಾಚಿಕೆ ಪಟ್ಟು)ಆಡಿ ನೆತ್ತಮನಾಡಿ (ಪಗಡೆಯಾಡಿ)-

ವಚನ:ಅರ್ಥ:ಎಂದು ಎಷ್ಟೋ ರೀತಿಯಲ್ಲಿ ಸಾರಿ ಸಾರಿ ಕೋಪದಿಂದ (ಭೀಷ್ಮರು?) ಹೇಳಿದರೂ, ಧೃತರಾಷ್ಟ್ರನು ಮಗನ ಹತ್ತಿರಕ್ಕೆ ಬಂದು ಗದರಿಸಿ ಬಯ್ದು ಹೇಳಿ

ಏನೂ ಮಾಡಿದರೂ
ಒಪ್ಪಿಸಲಾಗದಿರಲು,
ಧರ್ಮರಾಜನು
ತಲೆತಗ್ಗಿಸುವವನಲ್ಲವಾದರೂ
ಬೇಸರದಿಂದ ತಲೆತಗ್ಗಿಸಿ
ನಾಚಿಕೆಪಟ್ಟು ಪಗಡೆಯಾಡಿ-

ಕಂ|| ವ್ಯಾಳ ಗಜಂಗಳನಗ್ಗದ
ಸೂಳೆಯರೊಕ್ಕನಲನರ್ಘ್ಯ
ವಸ್ತುಗಳನಿಳಾ|
ಪಾಳಂ ಸೋಲ್ತೊಡೆ ಜೂದಿನ

ಕೇಳಿಯನಾ ಕೇಳಿಯನಿತಳ್ ಮಾಣಿಸಿದರ್|| ೩ ||

ಪದ್ಯ-೩:ಪದವಿಭಾಗ-ಅರ್ಥ:ವ್ಯಾಳ ಗಜಂಗಳನು ಅಗ್ಗದಸೂಳೆಯರ ಒಕ್ಕನಲ ಅನರ್ಘ್ಯ ವಸ್ತುಗಳನು (ತುಂಟಾದ ಆನೆಗಳನ್ನೂ ಶ್ರೇಷ್ಠರಾದ ದಾಸಿಯರನ್ನೂ ಕುಟುಂಬಗಳನ್ನೂ) ಇಳಾಪಾಳಂ ಸೇಲ್ತೊಡೆ (ಇಳೆಯ ಪಾಲಕ

ಧರ್ಮರಾಜನು ಸೋತಾಗ)
ಜೂದಿನಕೇಳಿಯನು ಆ
ಕೇಳಿಯನಿತಳ್ ಮಾಣಿಸಿದರ್
(ಜೂಜಿನ ಆಟವನ್ನು ಆ
ಆಟಕ್ಕೆ ನಿಲ್ಲಿಸಿದರು)
ಪದ್ಯ-೩:ಅರ್ಥ: ತುಂಟಾದ
ಆನೆಗಳನ್ನೂ ಶ್ರೇಷ್ಠರಾದ
ದಾಸಿಯರನ್ನೂ
ಕುಟುಂಬಗಳನ್ನೂ
ಬೆಲೆಯಿಲ್ಲದ
ವಸ್ತುಗಳನ್ನೂಇಳೆಯ ಪಾಲಕ

ಧರ್ಮರಾಜನು ಸೋತಾಗ, ಜೂಜಿನಾಟವನ್ನು ಆ ಆಟಕ್ಕೆ ನಿಲ್ಲಿಸಿದರು.

ವ|| ಮಾಣಿಸಿದೊಡೆ ಮಾಣದೆ ರಪಣಮಂ ತೋಱಿಯುಮೊತ್ತೆಯನುಗ್ಗಡಿಸಿಯುಮಾಡಿಮೆನೆ ಪೆಱತೇನುಮುಪಾಯಮಿಲ್ಲದೆ ಮ್ಮಾಳ್ವ ನೆಲನೊತ್ತೆಯೆಂದೊಡೆ ಬಗೆದು ನೋಡ್ ಗೆಲ್ದಿಂ ಬಱಿಯಂ ಮುದುಗಣ್ಗಳ್

ಮಗುೞ ಕುಡಿಸುವರೆಂಬ

ಬಗೆಯೊಳಂ

ವಿಕ್ರಮಾರ್ಜುನನುಂ

ಭೀಮನುಂ

ಯಮಳರುಮೆೞೆದುಕೊಳ್ವರೆಂ

ಬ ಸಂಕೆಯೊಳಮಂತಲ್ತು

ನಿನ್ನನ ನ್ನಿಯೊಳಂ

ವರ್ಷಾವಯೊಳಲ್ಲದೆ

ನೆಲನನೊತ್ತೆವಿಡಿಯೆನೆಂದೊಡೆ

ಧರ್ಮಪುತ್ರಂ ಪನ್ನೆರಡು

ವರುಷಂಬರಂ ನಾಡಂ

ಪ್ರಗರಣ್ಯದೊಳಿರ್ಪಂತುಮಜ್
ಞಾತವಾಸಮೆಂದೊಂದು
ವರುಷದೊಳಾರಾನು
ಮಱಿದರಪ್ಪೊಡೆ ಮತ್ತಂ
ದ್ವಾದಶಾಬ್ದಂಬರಂ ನಾಡ
ದೆಸೆಯಂ
ನೋಡದಂತಾಗೆಯೊಂದೆ
ಪಲಗೆಯೊಳೆ
ಗೆಲ್ಲಸೋಲಮಪ್ಪಂತು ನನ್ನಿ
ನುಡಿದು
ನೆಲನನೊತ್ತೆಯಿಟ್ಟಾಡಿ-

ವಚನ:ಪದವಿಭಾಗ-ಅರ್ಥ:ಮಾಣಿಸಿದೊಡೆ ಮಾಣದೆ ರಪಣಮಂ ತೋಱಿಯುಂ (ಹಾಗೆ ನಿಲ್ಲಿಸಿದರೂ ದುರ್ಯೋಧನನು ನಿಲ್ಲಿಸಲು ಇಷ್ಟಪಡದೆ ವಸ್ತುಗಳನ್ನು ತೋರಿಸಿಯೂ) ಒತ್ತೆಯನು ಅಗ್ಗಡಿಸಿಯುಂ ಆಡಿಂ ಎನೆ (ಒತ್ತೆಗಳನ್ನು ಕೂಗಿ ಹೇಳುತ್ತಲೂ ಆಡಿ ಎನ್ನಲು,)

ಪೆಱತೇನುಂ
ಉಪಾಯಮಿಲ್ಲದೆ ಎಮ್ಮ
ಆಳ್ವ ನೆಲನೊತ್ತೆಯೆಂದೊಡೆ
(ನಮ್ಮ ಆಳುತ್ತಿರುವ ರಾಜ್ಯವೇ
ಒತ್ತೆ'ಯೆಂದೊಡನೆಯೇ)
ಬಗೆದು ನೋಡ್ ಗೆಲ್ದಿಂ
ಬಱಿಯಂ ಮುದುಗಣ್ಗಳ್
ಮಗುೞ ಕುಡಿಸುವರೆಂಬ
ಬಗೆಯೊಳಂ (ಗೆದ್ದ ಬಳಿಕ
(ಎಲ್ಲವನ್ನೂ) ಈ ಭೀಷ್ಮ
ವಿದುರ ಮುದಿಕಗಣ್ಣಗಳು

ಪುನ ಹಿಂದಕ್ಕೆ
ಕೊಡಿಸಿಬಿಡುವರೆಂಬ
ಯೋಚನೆಯಿಂದಲೂ)
ವಿಕ್ರಮಾರ್ಜುನನುಂ
ಭೀಮನುಂ ಯಮಳರುಂ
ಎಟೆದುಕೊಳ್ವರೆಂಬ
ಸಂಕೆಯೊಳಂ (ಅರ್ಜುನ
ಭೀಮ ನಕುಲರು
ಯುದ್ಧದಿಂದ
ಕಸಿದುಕೊಳ್ಳುತ್ತಾರೆಂಬ
ಸಂದೇಹದಿಂದಲೂ) ಅಂತಲ್ತು

ನಿನ್ನ ನನ್ನಿಯೊಳಂ
ವರ್ಷಾವಧಿಯೊಳಲ್ಲದೆ
ನೆಲನನು ಒತ್ತೆವಿಡಿಯೆನು
ಎಂದೊಡೆ
(ಸಂದೇಹದಿಂದಲೂ
ದುರ್ಯೋಧನನು
ಧರ್ಮರಾಜನನ್ನು ಕುರಿತು
ಹಾಗಲ್ಲ ನಿನ್ನ ಸತ್ಯನಡೆಯಲ್ಲಿ
ನಂಬಿಕೆಯಿಲ್ಲದಿಲ್ಲ. ಆದರೂ
ವರ್ಷದ ಕಾಲ ಅವಧಿಯೊಳು
ಅಲ್ಲದೆ ನಿನ್ನ ಭೂಮಿಯನ್ನು

ಒತ್ತೆಯಾಗಿ ಸ್ವೀಕರಿಸುವುದಿಲ್ಲ ಎನ್ನಲು), ಧರ್ಮಪುತ್ರಂ ಪನ್ನೆರಡು ವರುಷಂಬರಂ ನಾಡಂ ಪುಗದರಣ್ಯದೊಳಿರ್ಪಂತುಂ ಅಜ್ಞಾತವಾಸಮೆಂದು ಒಂದು ವರುಷದೊಳು ಆರಾನು ಮಱಿದರಪ್ಪೊಡೆ ಮತ್ತಂ ದ್ವಾದಶಾಬ್ದಂಬರಂ ನಾಡ ದೆಸೆಯಂ ನೋಡದಂತಾಗೆಯುಂ

(ಧರ್ಮರಾಜನು ‘ಹನ್ನೆರಡು ವರ್ಷದವರೆಗೆ ನಾಡನ್ನು ಪ್ರವೇಶಮಾಡದೆ ಕಾಡಿನಲ್ಲಿರುತ್ತೇವೆ. ಒಂದು ವರ್ಷ ಅಜ್ಞಾನತವಾಸ ಮಾಡುತ್ತೇವೆ. ಆ ಅಜ್ಞಾತವಾಸವೆಂಬ ಒಂದು ವರ್ಷದಲ್ಲಿ ಯಾರಾದರೂ ತಿಳಿದರಾದರೆ ಪುನ ಹನ್ನೆರಡು ವರ್ಷದವರೆಗೆ ರಾಜ್ಯದ ಕಡೆಗೆ ನೋಡುವುದಿಲ್ಲ) ಒಂದೆ

ಪಲಗೆಯೊಳೆ ಗೆಲ್ಲಸೋಲಂ ಅಪ್ಪಂತು ನನ್ನಿ ನುಡಿದು ನೆಲನಂ (ರಾಜ್ಯವನ್ನು) ಒತ್ತೆಯಿಟ್ಟಾಡಿ (ಒಂದು ಹಲಗೆಯಾಟದಲ್ಲಿ ಗೆಲುವು ಸೋಲು ನಿರ್ಧರವಾಗಲಿ ಎಂದು ಸತ್ಯಮಾಡಿ ರಾಜ್ಯವನ್ನು ಒತ್ತೆ ಇಟ್ಟು ಆಡಿ-)-

ವಚನ:ಅರ್ಥ:ಹಾಗೆ ನಿಲ್ಲಿಸಿದರೂ

ದುರ್ಯೋಧನನು ನಿಲ್ಲಿಸಲು ಇಷ್ಟಪಡದೆ ವಸ್ತುಗಳನ್ನು ತೋರಿಸಿಯೂ ಒತ್ತೆಗಳನ್ನು ಕೂಗಿ ಹೇಳುತ್ತಲೂ ಆಡಿ ಎನ್ನಲು, ಬೇರೆ ಉಪಾಯವಿಲ್ಲದೆ ಧರ್ಮರಾಜನು ನಮ್ಮ ಆಳುತ್ತಿರುವ ರಾಜ್ಯವೇ ಒತ್ತೆ ಯೆಂದೊಡನೆಯೇ ಯೋಚನೆಮಾಡಿ ಗೆದ್ದ ಬಳಿಕ (ಎಲ್ಲವನ್ನೂ) ಈ ಭೀಷ್ಮ

ವಿದುರ ಮುದಿಕಗಣ್ಣಗಳು
ಪುನ ಹಿಂದಕ್ಕೆ
ಕೊಡಿಸಿಬಿಡುವರೆಂಬ
ಯೋಚನೆಯಿಂದಲೂ,
ಅರ್ಜುನ ಭೀಮ ನಕುಲರು
ಯುದ್ಧದಿಂದ
ಕಸಿದುಕೊಳ್ಳುತ್ತಾರೆಂಬ
ಸಂದೇಹದಿಂದಲೂ
ದುರ್ಯೋಧನನು
ಧರ್ಮರಾಜನನ್ನು ಕುರಿತು
ಹಾಗಲ್ಲ ನಿನ್ನ ಸತ್ಯನಡೆಯಲ್ಲಿ

ನಂಬಿಕೆಯಿಲ್ಲದಿಲ್ಲ. ಆದರೂ ವರ್ಷದ ಕಾಲ ಅವಧಿಯೊಳು ಅಲ್ಲದೆ ನಿನ್ನ ಭೂಮಿಯನ್ನು ಒತ್ತೆಯಾಗಿ ಸ್ವೀಕರಿಸುವುದಿಲ್ಲ ಎನ್ನಲು, ಧರ್ಮರಾಜನು ‘ಹನ್ನೆರಡು ವರ್ಷದವರೆಗೆ ನಾಡನ್ನು ಪ್ರವೇಶಮಾಡದೆ ಕಾಡಿನಲ್ಲಿರುತ್ತೇವೆ. ಒಂದು ವರ್ಷ ಅಜ್ಞಾನತವಾಸ ಮಾಡುತ್ತೇವೆ. ಆ ಅಜ್ಞಾತವಾಸವೆಂಬ ಒಂದು

ವರ್ಷದಲ್ಲಿ ಯಾರಾದರೂ ತಿಳಿದರಾದರೆ ಪುನ ಹನ್ನೆರಡು ವರ್ಷದವರೆಗೆ ರಾಜ್ಯದ ಕಡೆಗೆ ನೋಡುವುದಿಲ್ಲ. ಒಂದು ಹಲಗೆಯಾಟದಲ್ಲಿ ಗೆಲುವು ಸೋಲು ನಿರ್ಧರವಾಗಲಿ ಎಂದು ಸತ್ಯಮಾಡಿ ರಾಜ್ಯವನ್ನು ಒತ್ತೆ ಇಟ್ಟು ಆಡಿ-

ಕಂ|| ಆ ಪಲಗೆಯುಮಂ ಸೋಲ್ತು ಮ

ಹೀಪತಿ ಚಲದಿಂ ಬಿಟೆಕ್ಕೆ ಸೋಲ್ತಂ ಗಡಮಾ|

ದ್ರೌಪದಿಯುಉಮನೇನಾಗದೊ

ಪಾಪದ ಫಳಮೆಯ್ದೆವಂದ ದೆವಸದೊಳಾರ್ಗಂ|| ೪ ||

ಪದ್ಯ-೪:ಪದವಿಭಾಗ-ಅರ್ಥ:ಆ ಪಲಗೆಯುಮಂ ಸೋಲ್ತು ಮಹೀಪತಿ (ಮಹೀಪತಿ ಧರ್ಮರಾಯನು ಆ ಹಲಗೆಯ ಆಟವನ್ನೂ

ಸೋತು) ಚಲದಿಂ ಬೞಿಕ್ಕೆ
ಸೋಲ್ತಂ ಗಡಂ ಆ
ದ್ರೌಪದಿಯುಮನೆ (ಬಳಿಕ
ಹಟದಂದ ಆಡಿ
ದ್ರೌಪದಿಯನ್ನೂ ಸೋತನು
ಗಡ!) ಏನಾಗದೊ ಪಾಪದ
ಫಳಂ ಎಯ್ದಿವಂದ
ದೆವಸದೊಳು ಆರ್ಗಂ(ಪಾಪದ
ಫಲ ಕೂಡಿಬಂದ ದಿವಸ
ಯಾರಿಗೆ ಏನು ತಾನೇ
ಆಗುವುದಿಲ್ಲ!)

ಪದ್ಯ-೪:ಅರ್ಥ: ಆ ಹಲಗೆಯನ್ನೂ ಸೋತನು. ಧರ್ಮರಾಜನು ಅಷ್ಟಕ್ಕೇ ಬಿಡದೆ ಬಳಿಕ ಹಟದಿಂದ ದ್ರೌಪದಿಯನ್ನೂ ಸೋತನು. ಪಾಪದ ಫಲ ಕೂಡಿಬಂದ ದಿವಸ ಯಾರಿಗೆ ಏನು ತಾನೇ ಆಗುವುದಿಲ್ಲ!

<u>ಸಭೆಯಲ್ಲಿ ದ್ರೌಪದಿಯ ತುರುಬು ಎಳೆದು ಮಾನಭಂಗ</u>

ವ|| ಅಂತು ದುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರ ಮೆಲ್ಲಂ ಬಂದುದು ಪಾಂಚಾಳರಾಜತನೂಜೆಯೊರ್ವಳ್ ಬಂದಳಿಲ್ಲಾಕೆಯಂ ತನ್ನಿಮೆಂದು ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನಱಿದು

ಮೇಗಿಲ್ಲದ
ಗೊಡ್ಡಾಟಮಾಡಲ್ ಬಗೆದು
ಕರ್ಣನ ಲೆಂಕಂ
ಪ್ರಾತಿಕಾಮಿಯೆಂಬನುಮಂ
ತನ್ನ ತಮ್ಮಂ ದುಶ್ಶ್ಯಾಸನನುಮಂ
ಪೇಟ್ಯೊಡ್ಡವಂದಿರಾಗಳೆ
ಬೀಡಿಂಗೆವರಿದು
ರಜಸ್ವಲೆಯಾಗಿರ್ದೆಂ
ಮುಟ್ಟಲಾಗದೆನೆಯುಮೊತ್ತಂ
ಬದಿಂದೊಳಗಂ ಪೊಕ್ಕು
ಪಾಂಚಾಳಿಯಂ ಕಣ್ಗಿಡೆ

ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು-

ವಚನ:ಪದವಿಭಾಗ-

ಅರ್ಥ:ಅಂತು ದುರ್ಯೋಧನನು ಅಜಾತಶತ್ರುವಿನ (ಶತ್ರು ಹುಟ್ಟದೇ ಇರುವವ (ಸರ್ವಸುಖನಾದ)) ಸರ್ವಸ್ವಮೆಲ್ಲಮಂ ಗೆಲ್ದು, ಗೆಲ್ದ ಕಸವರಮೆಲ್ಲಂ (ಚಿನ್ನ

ಸಂಪತ್ತು) ಬಂದುದು
ಪಾಂಚಾಳರಾಜತನೂಜೆ
(ದ್ರೌಪದಿ)ಯೊರ್ವಳ್
ಬಂದಳಿಲ್ಲ (ಬರಲಿಲ್ಲ)
ಆಕೆಯಂ ತನ್ನಿಂ ಎಂದು
ಯುಧಿಷ್ಠಿರಂ ಕೊಟ್ಟ ನನ್ನಿಯ
ಬಲದೊಳ್ (ಸತ್ಯದ ಬಲದಲ್ಲಿ)
ತನಗೆ ಲಯಮಿಲ್ಲದುದನು
ಅಱಿದು ಮೇಗಿಲ್ಲದ
ಗೊಡ್ಡಾಟಮಾಡಲ್ ಬಗೆದು
(ಉತ್ತಮವಲ್ಲದ

ತುಂಟಾಟವಾಡಲು) ಕರ್ಣನ
ಲೆಂಕಂ
ಪ್ರಾತಿಕಾಮಿಯೆಂಬನುಮಂ
ತನ್ನ ತಮ್ಮಂ
ದುಶ್ಶ್ಯಾಸನನುಮಂ ಪೇೞ್ದೊಡೆ
ಅವಂದಿರು ಆಗಳೆ
ಬೀಡಿಂಗೆವರಿದು
(ದುಶ್ಶ್ಯಾಸನನಿಗೆ ಹೇಳಿದಾಗ
ಅವರು ಅವಳ ಬೀಡುಬಿಟ್ಟ
ಸ್ಥಳಕ್ಕೆ ಹೋಗಿ)
ರಜಸ್ವಲೆಯಾಗಿರ್ದಂ

ಮುಟ್ಟಲಾಗದು ಎನೆಯುಂ
(‘ರಸಜ್ವಲೆಯಾಗಿದ್ದೇನೆ
ಮುಟ್ಟಕೂಡದು’ ಎಂದರೂ)
ಒತ್ತಂಬದಿಂದ ಒಳಗಂ ಪೊಕ್ಕು
ಪಾಂಚಾಳಿಯಂ ಕಣ್ಗಿಡೆ
ಜಡಿದು ಮುಡಿಯಂ ಪಿಡಿದು
(ಬಲಾತ್ಕಾರದಿಂದ ಒಳಗೆ
ಪ್ರವೇಶಿಸಿ ದ್ರೌಪದಿಯನ್ನು
ಭಯಪಡುವಂತೆ ಗದರಿಸಿ
ಅವಳ ತುರುಬನ್ನು ಹಿಡಿದು)

ತನ್ಮಧ್ಯದಿಂ ಸುಯೋಧನನ
ಸಭಾಮಧ್ಯಕ್ಕೆ ತಂದು-
ವಚನ:ಅರ್ಥ:ಹಾಗೆ
ದುರ್ಯೋಧನನು
ಯುಧಿಷ್ಠಿರನ ಸರ್ವಸ್ವವನ್ನೂ
ಗೆದ್ದು, ಗೆದ್ದ ಬೆಲೆಯುಳ್ಳ
ವಸ್ತುಗಳೆಲ್ಲವೂ ಬಂದುವು.
ದ್ರೌಪದಿಯೊಬ್ಬಳು ಮಾತ್ರ
ಬಂದಿಲ್ಲ. ಆಕೆಯನ್ನು
ತನ್ನಿಯೆಂದು ಧರ್ಮರಾಜನು
ಕೊಟ್ಟ ಸತ್ಯವಾಕ್ಕಿನ

ಬಲದಿಂದಲೇ ತನಗೆ ಆಜ್ಞೆಗೆ
ಕೇಡಿಲ್ಲವೆಂದು ತಿಳಿದು
ಉತ್ತಮವಲ್ಲದ
ತುಂಟಾಟವಾಡಲು (ಚೇಷ್ಟೆ
ಮಾಡಲು) ಯೋಚಿಸಿ ಕರ್ಣನ
ಸೇವಕನಾದ
ಪ್ರಾತಿಕಾಮಿಯೆಂಬುವನಿಗೂ
ತನ್ನ ತಮ್ಮನಾದ
ದುಶ್ಯಾಸನನಿಗೆ ಹೇಳಿದಾಗ
ಅವರು ಅವಳ ಬೀಡುಬಿಟ್ಟ
ಸ್ಥಳಕ್ಕೆ ಹೋಗಿ,

‘ರಸಜ್ವಲೆಯಾಗಿದ್ದೇನೆ ಮುಟ್ಟಕೂಡದು’ ಎಂದರೂ ಬಲಾತ್ಕಾರದಿಂದ ಒಳಗೆ ಪ್ರವೇಶಿಸಿ ದ್ರೌಪದಿಯನ್ನು ಭಯಪಡುವಂತೆ ಗದರಿಸಿ ಅವಳ ತುರುಬನ್ನು ಹಿಡಿದು ಆ ಮನೆಯ ಮಧ್ಯಭಾಗದಿಂದ ದುರ್ಯೋಧನನ ಸಭಾಮಂದಿರದ ಮಧ್ಯಭಾಗಕ್ಕೆ ಸೆಳೆದು ತಂದು-ತಂದರು.

ಮ|| ಮನದೊಳ್
ನೊಂದಮರಾಪಗಾಸುತ ಕೃಪ
ದ್ರೋಣಾದಿಗಳ್ ಬೇಡವೇ
ಡೆನೆಯುಂ ಮಾಣದೆ ತೋಱೆ
ತೊೞ್ತುವೆಸಕೆಯ್ ಪೋ
ಪೋಗು ನೀನೆಂದು ಬ|
ಯ್ದನಿತಾನು
ತೆಱದಿಂದಮುಟ್ಟುದುವರಂ
ಕೆಯ್ವಂದು ದುಶ್ಶಾಸನಂ
ತನಗಂ ಮೆಲ್ಲನೆ ಮೃತ್ಯು ಸಾರೆ
ತೆಗೆದಂ ಧಮ್ಮಿಲ್ಲಮಂ

ಕೃಷ್ಣೆಯಾ|| ೫ ||

ಪದ್ಯ-೫:ಪದವಿಭಾಗ-

ಅರ್ಥ:ಮನದೊಳ್ ನೊಂದಂ ಅರಾಪಗಾಸುತ (ಗಂಗೆಯ ಮಗ- ಭೀಷ್ಮ) ಕೃಪ ದ್ರೋಣಾದಿಗಳ್ ಬೇಡವೇಡೆನೆಯುಂ ಮಾಣದೆ (ಬಿಡದೆ) ತೋಟ್ಟೆ ತೊಟ್ಟುವೆಸಕೆಯ್ ಪೋ ಪೋಗು ನೀನೆಂದು ಬಯ್ದು ಎನಿತಾನು ತೆಱದಿಂದಂ

(‘ದಾಸಿ, ನಡೆ, ನೀನು ತೊತ್ತಿನ ಕೆಲಸಮಾಡು ಹೋಗು, ಹೋಗು’ ಎಂದು ಎಷ್ಟೋ ರೀತಿಯಲ್ಲಿ ಬಯ್ದು) ಉಟ್ಟುದುವರಂ ಕೆಯ್ವಂದು ದುಶ್ಶ್ಯಾಸನಂ ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ (ತುರುಬನ್ನು) ಕೃಷ್ಣೆಯಾ(ದ್ರೌಪದಿಯ)

ಪದ್ಯ-೫೫:ಅರ್ಥ:ಭೀಷ್ಮ ಕೃಪ ದ್ರೋಣಾದಿಗಳು ಮನಸ್ಸಿನಲ್ಲಿ

ದುಃಖಪಟ್ಟು
ಬೇಡಬೇಡವೆಂದರೂ ಬಿಡದೆ
‘ದಾಸಿ, ನಡೆ, ನೀನು ತೊತ್ತಿನ
ಕೆಲಸಮಾಡು ಹೋಗು,
ಹೋಗು’ ಎಂದು ಎಷ್ಟೋ
ರೀತಿಯಲ್ಲಿ ಬಯ್ದು ಉಟ್ಟ
ಸೀರೆಯವರೆಗೆ ಕೈಹಾಕಿ ತನಗೆ
ಮೃತ್ಯು ಸಮೀಪವಾಗಿರಲು
ದುಶ್ಯಾಸನನು ದ್ರೌಪದಿಯ
ತುರುಬನ್ನು ಹಿಡಿದು ಸೆಳೆದನು.

ವ|| ಅಂತು ಕೃಷ್ಣೆಯ
ಕೃಷ್ಣಕಬರೀಭಾರಮಂ
ಮೇಗಿಲ್ಲದೆ ಪಿಡಿದು ತೆಗೆದು
ಕೃಷ್ಣೋರಗನಂ ಪಿಡಿದ
ಬೆಳ್ಳಾಳಂತುಮ್ಮನೆ
ಬೆಮರುತ್ತುಮಿರ್ದ
ದುಶ್ಶ್ಯಾಸನನುಮಂ ಕಣ್ಕೆತ್ತಿ
ಕಿಱುನಗೆ ನಗುವ ಕೂರದರ
ಮೊಗಮುಮಂ ತಮ್ಮಣ್ಣನ
ಬಿನ್ನನಾದ ಮೊಗಮುಮಂ

ಕಂಡು ಕಣ್ಗಳಿಂ ನೆತ್ತರ್ ತುಳುಂಕೆ-

ವಚನ:ಪದವಿಭಾಗ-

ಅರ್ಥ:ಅಂತು ಕೃಷ್ಣೆಯ ಕೃಷ್ಣಕಬರೀಭಾರಮಂ (ಕಪ್ಪಾದ ಮುಡಿಯ ಗಂಟನ್ನು) ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗನಂ ಪಿಡಿದ ಬೆಳ್ಳಾಳಂ ತುಮ್ಮನೆ ಬೆಮರುತ್ತುಮಿರ್ದ ದುಶ್ಶಾಸನನುಮಂ

(ನೀಚವಾದ ರೀತಿಯಲ್ಲಿ
ಹಿಡಿದು ಸೆಳೆದು
ಕಾಳಸರ್ಪವನ್ನು ಹಿಡಿದ
ಪೆಚ್ಚನಂತೆ ಸುಮ್ಮನೆ
ಬೆವರುತ್ತಿದ್ದ ದುಶ್ಶಾಸನನೂ)
ಕಣ್ಕೆತ್ತಿ ಕಿಱುನಗೆ ನಗುವ
ಕೂರದರ ಮೊಗಮುಮಂ
ತಮ್ಮಣ್ಣನ ಬಿನ್ನನಾದ
ಮೊಗಮುಮಂ ಕಂಡು
ಕಣ್ಗಳಿಂ ನೆತ್ತರ್ ತುಳುಂಕೆ-

ವಚನ:ಅರ್ಥ:ಹಾಗೆ
ದ್ರೌಪದಿಯ ಕಪ್ಪಾದ
ಮುಡಿಯ ಗಂಟನ್ನು
ನೀಚವಾದ ರೀತಿಯಲ್ಲಿ
ಹಿಡಿದು ಸೆಳೆದು
ಕಾಳಸರ್ಪವನ್ನು ಹಿಡಿದ
ಪೆಚ್ಚನಂತೆ ಸುಮ್ಮನೆ
ಬೆವರುತ್ತಿದ್ದ ದುಶ್ಶ್ಯಾಸನನೂ
ಕಣ್ಸನ್ನೆಮಾಡಿ (ಹಾಸ್ಯದಿಂದ)
ಕಿರುನಗೆ ನಗುವ ಹಗೆಗಳ
ಮುಖವನ್ನೂ ತಮ್ಮಣ್ಣನ

ಖಿನ್ನವಾದ ಮುಖವನ್ನೂ ಭೀಮನು ನೋಡಿದನು. ಅದನ್ನು ಕಂಡು ಕಣ್ಣಿನಲ್ಲಿ (ಕೋಪದಿಂದ) ರಕ್ತವು ತುಳುಕಿತು

ಉ|| ಕೋಪದ ಪೆರ್ಚಿನೊಳ್ ನಡುಗುವೂರುಯುಗಂ ಕಡುಪಿಂದರಲ್ವ ನಾ ಸಾಪುಟಮೆಕ್ಕೆಯಿಂ ಪೊಡರ್ವ ಪುರ್ವು ಪೊದಳ್ದ ಲಯಾಂತಕ ತ್ರಿಶೂ|

ಲೋಪಮ ಭೀಷಣ ಭ್ರುಕಟಿ

ಮುನ್ನಮೆ ರೌದ್ರ

ಗದಾಯುಧಂಬರಂ

ಪೋಪ ಭುಜಾರ್ಗಳಂ

ರಿಪುಗಳ ಗ್ರಹಮಾದುದು

ಭೀಮಸೇನನಾ|| ೬ ||

ಪದ್ಯ-೬:ಪದವಿಭಾಗ-

ಅರ್ಥ:ಕೋಪದ ಪೆರ್ಚಿನೊಳ್

(ಆಧಿಕ್ಯದಿಂದ)

ನಡುಗುವೂರುಯುಗಂ

(ನಡುಗುವ ಊರುಯುಗಂ

-ಎರಡೂತೊಡೆಗಳು)
ಕಡುಪಿಂದ ಅರಲ್ವ ನಾಸಾಪುಟ
(ಮೂಗಿನ ಹೊಳ್ಳೆಗಳು)
ಎಕ್ಕೆಯಿಂ ಪೊಡರ್ವ
ಪುರ್ವು(ಒಟ್ಟಿಗೆ ವಿಮಿರಿದ
ಹುಬ್ಬು) ಪೊದಳ್ದ ಲಯಾಂತಕ
ತ್ರಿಶೂಲೋಪಮ ಭೀಷಣ
ಭ್ರುಕಟಿ (ಭಯಂಕರವೂ ಆದ
ಹುಬ್ಬು) ಮುನ್ನಮೆ ರೌದ್ರ
ಗದಾಯುಧ ಅಂಬರಂ ಪೋಪ
ಭುಜಾರ್ಗಳಂ (ಗದೆಯ ಕಡೆ

ತಿರುಗಿದ ತೋಳುಗಳು)
ರಿಪುಗಳ ಗ್ರಹಮಾದುದು
(ಕತ್ತನ್ನು ಹಿಡಿ?)
ಭೀಮಸೇನನಾ
ಪದ್ಯ-೬:ಅರ್ಥ: .ಅತಿಯಾದ
ಕೋಪದಿಂದ ಎರಡು
ತೊಡೆಗಳೂ ನಡುಗಿದುವು.
ತೀವ್ರವಾಗಿ ಮೂಗಿನ
ಹೊಳ್ಳೆಗಳು ಅರಳಿದುವು.
ಪ್ರಳಯಕಾಲದ ಯಮನ
ತ್ರಿಶೂಲಕ್ಕೆ ಸಮಾನವೂ

ಭಯಂಕರವೂ ಆದ ಹುಬ್ಬು ಗಂಟಿಕ್ಕಿತು. ಮೊದಲೇ ಭಯಂಕರವಾದ ಭೀಮಸೇನನ ಅಗುಳಿಯಂತಿರುವ ತೋಳುಗಳು ಗದೆಯ ಕಡೆ ತಿರುಗಿ ಶತ್ರುಗಳ ಕತ್ತನ್ನು ಹಿಡಿಯುವಂತಾಯಿತು.

<u>ದುಶ್ಶ್ಯಾಸನನ ಕರುಳು ಬಗೆಯುವುದಾಯೂ ನೂರು ಕೌರವರನ್ನು ಕೊಲ್ಲುವುದಾಗಿಯೂ ಭೀಮನ ಪ್ರತಿಜ್ಞೆ</u>

ಮ|| ನೆಲನಂ ನುಂಗುವ

ಮೇರುವಂ ಪಿಡಿದು

ಕೀಱ್ವಾಶಾಗಜೇಂದ್ರಂಗಳಂ

ಚಲದಿಂ ಕಟ್ಟುವ ಸಪ್ತ

ಸಪ್ತಿಯನಿಳಾಭಾಗಕ್ಕೆ

ತರ್ಪೊಂದು ತೋ|

ಳ್ವಲಮುಂ ಗರ್ವಮುಮುಣ್ಮಿ

ಪೊಣ್ಮೆ ಮನದೊಳ್

ಕೋಪಾಗ್ನಿ ಕೆಯ್ಗಣ್ಮೆ ಕ

ಣ್ಮಲರೊಳ್ ಬಂದಿರೆ

ನೋಡಿದಂ ಕಲುಷದಿಂ

ಗಾಂಡೀವಿ ಗಾಂಡೀವಮಂ|| ೭

ಪದ್ಯ-೭:ಪದವಿಭಾಗ-ಅರ್ಥ:ನೆಲನಂ (ಭೂಮಿಯನ್ನೇ) ನುಂಗುವ ಮೇರುವಂ ಪಿಡಿದು ಕೀೞ್ವ, ಆಶಾಗಜೇಂದ್ರಂಗಳಂ ಚಲದಿಂ

ಕಟ್ಟುವ, ಸಪ್ತ ಸಪ್ತಿಯನು (ಸೂರ್ಯನನ್ನು) ಇಳಾಭಾಗಕ್ಕೆ (ಭೂಮಿಗೆ) ತರ್ಪೊಂದು ತೋಳ್ವಲಮುಂ ಗರ್ವಮುಂ ಉಣ್ಮೆ ಪೊಣ್ಮೆ (ಚಿಮ್ಮಿ ಹೊಮ್ಮಲು) ಮನದೊಳ್ ಕೋಪಾಗ್ನಿ ಕೆಯ್ಗಣ್ಮೆ (ಕೈಮೀರಿ, ಮಿತಿಮೀರಿ) ಕಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ

ಪದ್ಯ-೭:ಅರ್ಥ:

ಭೂಮಿಯನ್ನೇ ನುಂಗುವ,
ಮೇರುಪರ್ವತವನ್ನು ಹಿಡಿದು
ಕೀಳುವ, ದಿಗ್ಗಜಗಳನ್ನು
ಹಟದಿಂದ ಕಟ್ಟುವ,
ಸೂರ್ಯನನ್ನು ಭೂಭಾಗಕ್ಕೆ
ತರುವ, ಬಾಹುಬಲವೂ
ಅಹಂಕಾರವೂ ಚಿಮ್ಮಿ
ಹೊಮ್ಮಲು ಕೋಪದ
ಬೆಂಕಿಯು ಮಿತಿಮೀರಿ
ಹೂವಿನಂತಿರುವ ಕಣ್ಣಿನಲ್ಲಿ

ಬಂದಿರಲು, ಅರ್ಜುನನು

ಕೋಪದಿಂದ ತನ್ನ

ಗಾಂಡೀವವನ್ನು ನೋಡಿದನು.

ಕಂ|| ಪ್ರಕುಪಿತ ಮೃಗಪತಿ ಶಿಶು

ಸ

ನ್ನಿಕಾಶರತಿ ವಿಕಟ ಭೀಷಣ

ಭ್ರೂ ಭಂಗರ್

ನಕುಲ ಸಹದೇವರಿರ್ವರು

ಮಕಾಲ ಕಾಲಾಗ್ನಿರೂಪಮಂ

ಕೆಯ್ಕೊಂಡರ್|| ೮ ||

ಪದ್ಯ-೮:ಪದವಿಭಾಗ-ಅರ್ಥ:ಪ್ರಕುಪಿತ (ಬಹಳಕೋಪಿತ) ಮೃಗಪತಿ ಶಿಶು ಸನ್ನಿಕಾಶರ್ (ಸಿಮಹದ ಮರಿ ಸಮಾನರು) ಅತಿ ವಿಕಟ ಭೀಷಣ ಭ್ರೂ ಭಂಗರ್ (ಅತಿ ವಿಕಟವೂ ಭಯಂಕರವೂ ಹುಬ್ಬಿನ ಗಂಟುಳ್ಳವರೂ) ನಕುಲ ಸಹದೇವರಿರ್ವರುಂ ಅಕಾಲ ಕಾಲಾಗ್ನಿರೂಪಮಂ ಕೆಯ್ಕೊಂಡರ್ (ಅಕಾಲದಲ್ಲಿ

ಬರುವ
ಪ್ರಳಯಾಗ್ನಿರೂಪವನ್ನು
ಹೊಂದಿದರು.)
ಪದ್ಯ-೮:ಅರ್ಥ: ಬಹಳ
ಕೋಪಗೊಂಡಿರುವ ಸಿಂಹದ
ಮರಿಗೆ ಸಮಾನರೂ ಅತಿ
ವಿಕಟವೂ ಭಯಂಕರವೂ
ಹುಬ್ಬಿನ ಗಂಟುಳ್ಳವರೂ ಆದ
ನಕುಲ ಸಹದೇವರಿಬ್ಬರೂ
ಅಕಾಲದಲ್ಲಿ ಬರುವ

ಪ್ರಳಯಾಗ್ನಿ ರೂಪವನ್ನು ಹೊಂದಿದರು.

ವ|| ಅಂತು ವಿಳಯಕಾಲಜಳನಿಧಿಗಳಂತೆ ಮೇರೆದಪ್ಪಲ್ ಬಗೆದ ತನ್ನ ನಾಲ್ವರ್ ತಮ್ಮಂದಿರ ಮುನಿದ ಮೊಗಮಂ ಕಂಡು ತನ್ನ ನುಡಿದ ನನ್ನಿಯ ಕೇಡಂ ಬಗೆದರೆಂದು ಕಟಾಕ್ಷ ವಿಕ್ಷೇಪದಿಂ ಬಾರಿಸೆ-

ವಚನ:ಪದವಿಭಾಗ-

ಅರ್ಥ:ಅಂತು

ವಿಳಯಕಾಲಜಳನಿಗಳಂತೆ(ವಿ
ಳಯಕಾಲದ ಜಲನಿಧಿಗಳಂತೆ)
ಮೇರೆದಪ್ಪಲ್ ಬಗೆದ ತನ್ನ
ನಾಲ್ವರ್ ತಮ್ಮಂದಿರ ಮುನಿದ
ಮೊಗಮಂ ಕಂಡು ತನ್ನ
ನುಡಿದ ನನ್ನಿಯ ಕೇಡಂ
ಬಗೆದರೆಂದು ಕಟಾಕ್ಷ
ವಿಕ್ಷೇಪದಿಂ
ಬಾರಿಸೆ(ಕಣ್ಸನ್ನೆಯಿಂದಲೇ
ತಡೆಯಲು- ತಡೆದನು.)

ವಚನ:ಅರ್ಥ:ಹಾಗೆ ಪ್ರಳಯಕಾಲದ ಸಮುದ್ರಗಳ ಹಾಗೆ ಎಲ್ಲೆಮೀರಲು ಯೋಚಿಸಿದ ತನ್ನ ನಾಲ್ಕು ತಮ್ಮಂದಿರ ಕೋಪಗೊಂಡ ಮುಖಗಳನ್ನು ನೋಡಿ ಧರ್ಮರಾಜನು ತಾನಾಡಿದ ಸತ್ಯದ ಕೇಡನ್ನು ಯೋಚಿಸಿದ್ದಾರೆಂದು ತಿಳಿದು ಕಣ್ಸನ್ನೆಯಿಂದಲೇ ತಡೆಯಲು-ತಡೆದನು.

ಮ||
ಅನಿತೊಂದುರ್ಕಿನೊಳುರ್ಕಿ
ಕೌರವ ಖಳರ್
ಪಾಂಚಾಳರಾಜಾತ್ಮಜಾ
ನನ ಪದ್ಮಗ್ಲಪನೈಕ
ಕಾರಣಪರರ್ ತಾಮಾಗೆಯುಂ
ಮತ್ತಮ|
ಣ್ಣನ ಕಣ್ಸನ್ನೆಗೆ ಮೀಱಲಣ್ಮದೆ
ಸಮಂತಿರ್ದರ್ ಪೃಥಾಪುತ್ರರಂ
ತಿನಿತೊಂದಾದೊಡಮೇಂ
ಮಹಾಪುರುಷರಾಜ್ಞಾಲಂಘ

ನಂಗೆಯ್ವುರೇ|| ೯ ||

ಪದ್ಯ-೯:ಪದವಿಭಾಗ-

ಅರ್ಥ:ಅನಿತೊಂದು ಉರ್ಕಿನೊಳು ಉರ್ಕಿ ಕೌರವ ಖಳರ್ (ಕೊಬ್ಬಿನಲ್ಲಿ ಉಬ್ಬಿ ದುಷ್ಟಕೌರವರು) ಪಾಂಚಾಳರಾಜಾತ್ಮಜಾನನ ಪದ್ಮಗ್ಲಪನೈಕ ಕಾರಣಪರರ್ (ಪಾಂಚಾಳರಾಜ ಆತ್ಮಜ ಆನನ (ಪಾಂಚಾಲಿಯ ಮುಖ) ಪದ್ಮಗ್ಲಪನ್ ಏಕ

(ಮುಖಕಮಲ ಬಾಡಲು
ಕಾರಣ ಪರರು) ತಾಂ
ಆಗೆಯುಂ (ಅವರು
ಆಗಿದ್ದರೂ) ಮತ್ತಂ ಅಣ್ಣನ
ಕಣ್ಸನ್ನೆಗೆ ಮೀಱಲಣ್ಮದೆ
ಸಮಂತಿರ್ದರ್ (ಮೀರಲು
ಸಮರ್ಥರಾಗದೆ ಸುಮ್ಮನೆ
ಇದ್ದರು) ಪೃಥಾಪುತ್ರರು ಅಂತು
ಇನಿತೊಂದು ಆದೊಡಂ ಏಂ
ಮಹಾಪುರುಷರ್
ಆಜ್ಞಾಲಂಘನಂ ಗೆಯ್ವರೇ

(ಮಹಾಪುರುಷರು ಹಿರಿಯರ ಆಜ್ಞೆಯನ್ನು ದಾಟುವರೇ?)

ಪದ್ಯ-೯:ಅರ್ಥ: ಅಷ್ಟೊಂದು ಕೊಬ್ಬಿನಲ್ಲಿ ಉಬ್ಬಿ ದುಷ್ಟಕೌರವರು ದ್ರೌಪದಿಯ ಮುಖಕಮಲವು ಬಾಡುವುದಕ್ಕೆ ಮುಖ್ಯ ಕಾರಣರಾಗಿದ್ದರೂ, ಅಣ್ಣನಾದ ಧರ್ಮರಾಜನ ಕಣ್ಸನ್ನೆಗೆ ಮೀರಲು ಸಮರ್ಥರಾಗದೆ ಪಾಂಡವರು ಸುಮ್ಮನೆ

ಶಾಂತಿಯಿಂದಿದ್ದರು. ಮಹಾಪುರುಷರು ಹಿರಿಯರ ಆಜ್ಞೆಯನ್ನು ದಾಟುವರೇ?

ದ್ರೌಪದಿಯ ಪ್ರತಿಜ್ಞೆ

ವ|| ಆಗಳ್ ದ್ರೌಪದಿ ತನ್ನ ಕೇಶಪಾಶಮಂ ದುಶ್ಶ್ಯಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಆಗಳ್ ದ್ರೌಪದಿ ತನ್ನ

ಕೇಶಪಾಶಮಂ (ಕೂದಲಿನ ಗಂಟನ್ನು) ದುಶ್ಶ್ಯಾಸನಂ ಪಿಡಿದು ತೆಗೆದನೆಂಬ ಸಿಗ್ಗು ಅಗ್ಗಳಂ ಪೆರ್ಚೆ (ನಾಚಿಕೆಯು ಬಹಳವಾಗಿ ಹೆಚ್ಚಲು) ಸಭೆಯೊಳು ಇಂತೆಂದಳ್-

ವಚನ:ಅರ್ಥ:ಆಗ ತನ್ನ ಕೂದಲಿನ ಗಂಟನ್ನು ದುಶ್ಶ್ಯಾಸನನು ಹಿಡಿದು ಸೆಳೆದನೆಂಬ ನಾಚಿಕೆಯು ಬಹಳವಾಗಿ ಹೆಚ್ಚಲು

ದ್ರೌಪದಿಯು ಸಭೆಯಲ್ಲಿ ಹೀಗೆಂದಳು.

ಕಂ|| ಮುಡಿಯಂ
ಪಿಡಿದೆೞೆದವನಂ
ಮುಡಿಯಿಸಿ ಮತ್ತವನ ಕರುಳ
ಪಿಣಿಲಿಂದೆನ್ನಂ|
ಮುಡಿಯಿಸುವಿನೆಗಂ
ಮುಡಿಯಂ
ಮುಡಿಯೆಂ ಗಡ
ಕೇಳಿಮೀಗಳಾನ್ ನುಡಿ
ನುಡಿದೆಂ|| ೧೦

ಪದ್ಯ-೧೦:ಪದವಿಭಾಗ-ಅರ್ಥ:ಮುಡಿಯಂ ಪಿಡಿದು ಎೞೆದವನಂ ಮಡಿಯಿಸಿ (ಕೂದಲಿನ ಮುಡಿಯನ್ನು ಹಿಡಿದು ಎಳೆದವನನ್ನು ಸಾಯಿಸಿ) ಮತ್ತೆ ಅವನ ಕರುಳ ಪಿಣಿಲಿಂದೆ ಎನ್ನಂ ಮುಡಿಯಿಸುವಿನೆಗಂ (ಅವನ ಕರುಳಿನ ಜಡೆಯಿಂದ ನನ್ನ ಮುಡಿಯನ್ನು ಮುಡಿಯಿಸುವವರೆಗೂ)

ಮುಡಿಯಂ ಮುಡಿಯೆಂ ಗಡ (ಆ ಮುಡಿಯನ್ನು ಪುನ ಮುಡಿಯುವುದಿಲ್ಲ;) ಕೇಳಿಂ ಈಗಳ್ ಆನ್ ನುಡಿ ನುಡಿದೆಂ (ಕೇಳಿ ಈಗ ನಾನು ಪ್ರತಿಜ್ಞೆ ಮಾಡಿದ್ದೇನೆ ಎಂದಳು)

ಪದ್ಯ-೧೦:ಅರ್ಥ:

ಮುಡಿಯನ್ನು ಹಿಡಿದೆಳೆದವನನ್ನು ಕೊಂದು ಅವನ ಕರುಳಿನ ಜಡೆಯಿಂದ ನನ್ನ ಮುಡಿಯನ್ನು

ಮುಡಿಯಿಸುವವರೆಗೂ ಆ ಮುಡಿಯನ್ನು ಪುನ ಮುಡಿಯುವುದಿಲ್ಲ; ನೀವೆಲ್ಲ ಕೇಳಿ ಈಗ ನಾನು ಪ್ರತಿಜ್ಞೆ ಮಾಡಿದ್ದೇನೆ ಎಂದಳು.

ಭೀಮನ ಪ್ರತಿಜ್ಞೆ

ವ|| ಎಂಬುದುಂ ಭೀಮಸೇನನಾ ಮಾತಂ ಕೇಳ್ದು ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಭೀಮಸೇನನು ಆ ಮಾತಂ

ಕೇಳ್ದು ಸೈರಿಸಲಾಱದೆ-

(ಸಹಿಸಲಾಗದೆ)

ವಚನ:ಅರ್ಥ:ಭೀಮಸೇನನು

ಆ ಮಾತನ್ನು ಕೇಳಿ

ಸಹಿಸಲಾಗದೆ-

ಉ|| ಆಱದ ಕೋಪ

ಪಾವಕನಿನಣ್ಣನ ನನ್ನಿಯನಿಲ್ಲಿ

ಮೀಱುವೆಂ

ಮೀರೆನೆನುತ್ತುಮಿರ್ಪ
ಪದದಲ್ಲಿಯೆ ನೋಡೆ ಮರುಳ್ಗೆ
ಧೂಪಮಂ|
ತೋಱದ ಮಾೞ್ಕೆಯಿಂ
ದ್ರುಪದರಾಜಸುತಾ
ವಚನಂಗಳಲ್ಲಿ ಮೆ
ಯ್ದೋರೆ ಮರುತ್ಸುತಂ
ನುಡಿದನಾ ಸಭೆಯೊಳ್ ನವ
ಮೇಘನಾದದಿಂ|| ೧೧ ||

ಪದ್ಯ-೧೧:ಪದವಿಭಾಗ-

ಅರ್ಥ:ಆಱದ ಕೋಪ

ಪಾವಕನಿಂ (ಆರದ
ಕೋಪಾಗ್ನಿಯಿಂದ) ಅಣ್ಣನ
ನನ್ನಿಯನು ಇಲ್ಲಿ ಮೀಱುವೆಂ
ಮೀರೆನೆ ಎನುತ್ತುಮಿರ್ಪ
ಪದದಲ್ಲಿಯೆ (ಮೀರುವೆನು -
ಮೀರುವುದಿಲ್ಲ, ಎನ್ನುತ್ತಿದ್ದ
ಸಮಯದಲ್ಲಿಯೇ) ನೋಡೆ
ಮರುಳ್ಗೆ ಧೂಪಮಂ ತೋಱಿದ
ಮಾಟ್ಕೆಯಿಂ (ದೆವ್ವಕ್ಕೆ
ಧೂಪವನ್ನು ತೋರಿಸಿದ
ರೀತಿಯಿಂದ)

ದ್ರುಪದರಾಜಸುತಾ
(ದ್ರೌಪದಿಯ) ವಚನಂಗಳಲ್ಲಿ
ಮೆಯ್ದೋರೆ ಮರುತ್ಸುತಂ
(ಮಾತುಗಳಲ್ಲಿ
ಕಾಣಿಸಿಕೊಳ್ಳಲು) ನುಡಿದನು
ಆ ಸಭೆಯೊಳ್ ನವ
ಮೇಘನಾದದಿಂ
(ಹೊಸಗುಡುಗಿನ ಶಬ್ದದಿಂದ
ಹೇಳಿದನು)

ಪದ್ಯ-೧೧:ಅರ್ಥ:

ಕಡಿಮೆಯಾಗದ

ಕೋಪಾಗ್ನಿಯಿಂದ ಅಣ್ಣನ ಸತ್ಯವಾಕ್ಯನ್ನು ಮೀರುವೆನು - ಮೀರುವುದಿಲ್ಲ, ಎನ್ನುತ್ತಿದ್ದ ಸಮಯದಲ್ಲಿಯೇ ದೈವಕ್ಕೆ ಧೂಪವನ್ನು ತೋರಿಸಿದ ರೀತಿಯಿಂದ ದ್ರೌಪದಿಯ ಮಾತುಗಳಲ್ಲಿ ಕಾಣಿಸಿಕೊಳ್ಳಲು ಭೀಮಸೇನನು ಆ ಸಭೆಯಲ್ಲಿ ಹೊಸಗುಡುಗಿನ ಶಬ್ದದಿಂದ ಹೇಳಿದನು.

ಮ|| ಮುಳಿಸಿಂದಂ
ನುಡಿದೊಂದು ನಿನ್ನ ನುಡಿ
ಸಲ್ಗಾರಾಗದೆಂಬರ್ ಮಹಾ
ಪ್ರಳಯೋಲ್ಕೋಪಮ
ಮದ್ಗದಾಹತಿಯಿನತ್ಯುಗ್ರಾಜಿ
ಯೊಳ್ ಮುನ್ನಮೀ|
ಖಳ ದುಶ್ಶ್ಯಾಸನನಂ ಪೊರಳ್ಚಿ
ಬಸಿಱಂ ಪೋೞಿಕ್ಕಿ ಬಂಬಲ್ಗರು
ಳ್ಗಳಿನಾನಲ್ತೆ ವಿಳಾಸದಿಂ
ಮುಡಿಯಿಪಂ
ಪಂಕೇಜಪತ್ರೇಕ್ಷಣೇ|| ೧೨||

ಪದ್ಯ-೧೨:ಪದವಿಭಾಗ-ಅರ್ಥ:ಮುಳಿಸಿಂದಂ ನುಡಿದ ಒಂದು ನಿನ್ನ ನುಡಿ ಸಲ್ಗೆ ಆರು ಆಗದೆಂಬರ್ (ಕೋಪದಿಂದ ನೀನು ಆಡಿದ ನಿನ್ನ ಶಪಥ ಸಲ್ಲಲಿ, ಆಗದು ಎನ್ನುವವರು ಯಾರು) ಮಹಾಪ್ರಳಯ ಉಲ್ಕೆಗೆ ಉಪಮ, (ಸಮಾನವಾದ) ಮತ್ ಗದಾಹತಿಯಿಂ (ನನ್ನ ಗದೆಯ ಹೊಡೆತದಿಂದ) ಅತ್ಯುಗ್ರ

ಆಜಿಯೊಳ್
(ಅತಿಭಯಂಕರವಾದ
ಯುದ್ಧದಲ್ಲಿ) ಮುನ್ನಂ ಈ
ಖಳ ದುಶ್ಶ್ಯಾಸನನಂ ಪೊರಳ್ಚಿ
ಬಸಿಱಂ ಪೋೞಕ್ಕಿ (ಮೊದಲು
ದುಶ್ಶ್ಯಾಸನನನ್ನು ಹೊರಳಿಸಿ
ಹೊಟ್ಟೆಯನ್ನು ಹೋಳಾಗಿ
ಸೀಳಿ) ಬಂಬಲ್ ಕರುಳ್ಗಳಿನು
ಆನಲ್ತೆ ವಿಳಾಸದಿಂ
ಮುಡಿಯಿಪಂ
ಪಂಕೇಜಪತ್ರೇಕ್ಷಣೇ

(ಹೆಣೆದುಕೊಂಡಿರುವ ಕರುಳಿನಿಂದ ವೈಭವದಿಂದ ಮುಡಿಯಿಸುವವನು ನಾನೇ ಅಲ್ಲವೇ ಎಲೌ ಕಮಲದಳದ ಹಾಗೆ ಕಣ್ಣುಳ್ಳ ದ್ರೌಪದಿಯೇ?)|

ಪದ್ಯ-೧೨:ಅರ್ಥ: .
ಕೋಪದಿಂದ ನೀನು ಆಡಿದ ನಿನ್ನ ಶಪಥ ಸಲ್ಲಲಿ, ಆಗದು ಎನ್ನುವವರು ಯಾರು. ಮಹಾಪ್ರಳಯಕಾಲದ

ಉಲ್ಕೆಗೆ ಸಮಾನವಾದ ನನ್ನ
ಗದೆಯ ಹೊಡೆತದಿಂದ
ಅತಿಭಯಂಕರವಾದ
ಯುದ್ಧದಲ್ಲಿ ಮೊದಲು
ದುಶ್ಯಾಸನನನ್ನು ಹೊರಳಿಸಿ
ಹೊಟ್ಟೆಯನ್ನು ಹೋಳಾಗಿ
ಸೀಳಿ ಹೆಣೆದುಕೊಂಡಿರುವ
ಕರುಳಿನಿಂದ ವೈಭವದಿಂದ
ನಾನೇ ಮುಡಿಯಿಸುವೆನು
ಅಲ್ಲವೇ ದ್ರೌಪದಿಯೇ?

(ಮುಡಿಸುವವನು ನಾನೇ
ಅಲ್ಲವೇ ದ್ರೌಪದೀ)

ಮ||ಸ್ರ|| ಕುಡಿವೆಂ
ದುಶ್ಶ್ಯಾಸನೋರಸ್ಥಳಮನಗಲೆ
ಪೋೞುದುರ್ಯೋ ಕೆನ್ನೆತ್ತರಂ ಪೊ
ಕ್ಕುಡಿವೆಂ
ಪಿಂಗಾಕ್ಷನೂರುದ್ವಯಮನುರು
ಗದಾಘಾತದಿಂ ನುಚ್ಚು
ನೂಱು|
ಗೊಡೆವೆಂ ತದ್ರತ್ನ ರಶ್ಮಿ ಪ್ರಕಟ
ಮಕುಟಮಂ ನಂಬು ನಂಬೆನ್ನ

ಕಣ್ಣಿಂ
ಕಿಡಿಯುಂ ಕೆಂಡಂಗಳುಂ
ಸೂಸಿದಪುವಹಿತರಂ ನೋಡಿ
ಪಂಕೇಜವಕ್ತ್ರೇ|| ೧೩||

ಪದ್ಯ-೧೩:ಪದವಿಭಾಗ-
ಅರ್ಥ:ಕುಡಿವೆಂ ದುಶ್ಯಾಸನ ಓರಸ್ಥಳಮನು ಅಗಲೆ ಪೋೞ್ದು ಕೆನ್ನೆತ್ತರಂ (ದುಶ್ಯಾಸನನ ಎದೆಯನ್ನು ಅಗಲವಾಗಿ ಸೀಳಿ ಕೆನ್ನೆತ್ತರನ್ನು ಕುಡಿಯುತ್ತೇನೆ) ಪೊಕ್ಕುಡಿವೆಂ

ಪಿಂಗಾಕ್ಷನ (ದುರ್ಯೋಧನನ)
ಊರುದ್ವಯಮನು ಉರು
ಗದಾಘಾತದಿಂ (ದೊಡ್ಡ
ಗದೆಯ ಹೊಡೆತದಿಂದ
ಮುರಿಯುತ್ತೇನೆ) ನುಚ್ಚು
ನೂಱುಗೊಡೆವೆಂ ತದ್ ರತ್ನ
ರಶ್ಮಿ ಪ್ರಕಟ ಮಕುಟಮಂ
(ಕಿರೀಟವನ್ನು
ನುಚ್ಚುನೂರಾಗುವಂತೆ);
ನಂಬು ನಂಬೆನ್ನ
ಕಣ್ಣಿಂಕಿಡಿಯುಂ ಕೆಂಡಂಗಳುಂ

ಸೂಸಿದಪುವು ಅಹಿತರಂ
ನೋಡಿ ಪಂಕೇಜವಕ್ತ್ರೇ
ಪದ್ಯ-೧೩:ಅರ್ಥ:
ದುಶ್ಯ್ಯಾಸನನ ಎದೆಯನ್ನು
ಅಗಲವಾಗಿ ಸೀಳಿ ಕೆನ್ನೆತ್ತರನ್ನು
ಕುಡಿಯುತ್ತೇನೆ. ಮೇಲೆಬಿದ್ದು
ದುರ್ಯೋಧನನ
ಎರಡುತೊಡೆಗಳನ್ನೂ ದೊಡ್ಡ
ಗದೆಯ ಹೊಡೆತದಿಂದ
ಮುರಿಯುತ್ತೇನೆ).
ರತ್ನಕಾಂತಿಗಳಿಂದ

ಪ್ರಕಾಶವಾದ ಅವನ ಕಿರೀಟವನ್ನು ನುಚ್ಚುನೂರಾಗುವಂತೆ ಪುಡಿಮಾಡುತ್ತೇನೆ. ದ್ರೌಪದಿ ಈ ನನ್ನ ಮಾತನ್ನು ನಂಬು, ನಂಬು; ಶತ್ರುಗಳನ್ನು ನೋಡಿ ನನ್ನ ಕಣ್ಣಿನಿಂದ ಕಿಡಿಯೂ ಕೆಂಡಗಳೂ ಚೆಲ್ಲುವುವು.

ಮ|| ಮುಳಿಸಂ ಮಾಡಿಯುಮೇವಮಂ

ಪಡೆದುಮಿನ್ನೀ ಪಂದೆಗಳ್
ಪ್ರಾಣದಿಂ
ದೊಳರಿನ್ನುಂ ತಲೆ
ಮತ್ತಮಟ್ಟೆಗಳ
ಮೇಲಿರ್ದಪ್ಪುವೆಂದಂತೆ ದಲ್।
ಮುಳಿಸಿಲ್ಲಣ್ಣನ
ನನ್ನಿಯೆಂಬುದನೆ
ಪೇೞೀವೇೞ್ದುಮೀ ಕೌರವ
ರ್ಕಳನುಂತಿನ್ನೆಗಮುರ್ಚಿ
ಮುಕ್ಕದೆ ಸಡಿಲ್ದೀ ಭೀಮನೇಂ
ಮಾಣ್ದುಮೇ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ಮುಳಿಸಂ ಮಾಡಿಯುಂ ಏವಮಂ ಪಡೆದುಂ ಇನ್ನೀ ಪಂದೆಗಳ್ ಪ್ರಾಣದಿಂದ ಒಳರು (ಕೋಪವನ್ನುಂಟುಮಾಯೂ, ನೋವನ್ನು ಬರಿಸಿಯೂ ಇನ್ನೂ ಈ ಹೇಡಿಗಳು ಜೀವದಿಂದಿದ್ದಾರೆ.) ಇನ್ನುಂ ತಲೆ ಮತ್ತೆ ಅಮಟ್ಟೆಗಳ ಮೇಲಿರ್ದಪ್ಪುವೆಂದು ಅಂತೆ

ದಲ್ (ಇನ್ನೂ ಅವರ ತಲೆಗಳು ಅವರು ಮುಂಡಗಳ ಮೇಲಿವೆ ಎನ್ನುವುದು) ಮುಳಿಸಿಲ್ಲ - ಅಣ್ಣನ ನನ್ನಿಯೆಂಬುದನೆ ಪೇೞ್ (ಕೋಪವಿಲ್ಲ-ಅಣ್ಣನ ಸತ್ಯವೆಂಬುದು ಒಂದೇ ಹೇಳು; ಇಲ್ಲದಿದ್ದರೆ ಏನು ಹೇಳಿದರೂ) ಈ ಏೞ್ದಿಂ ಈ ಕೌರವರ್ಕಳಂ ಉಂತು ಇನ್ನೆಗಂ ಉರ್ಚಿ ಮುಕ್ಕದೆ ಸಡಿಲ್ದೀ ಭೀಮನೇಂ ಮಾಣ್ಗುಮೇ (ಈ ಕೌರವರನ್ನು

ಈ ಕೆರಳಿದ ಭೀಮನು ಇಷ್ಟು ಹೊತ್ತಿಗೆ ಸುಲಿದು ಬಾಯಿಗೆ ಹಾಕಿಕೊಳ್ಳದೆ ಬಿಡುತ್ತಿದ್ದೇನೆ?)
ಪದ್ಯ-೧೪:ಅರ್ಥ: ನಮಗೆ ಇಷ್ಟು ಕೋಪವನ್ನುಂಟುಮಾಯೂ, ನೋವನ್ನು ಬರಿಸಿಯೂ ಇನ್ನೂ ಈ ಹೇಡಿಗಳು ಜೀವದಿಂದಿದ್ದಾರೆ. ಇನ್ನೂ ಅವರ ತಲೆಗಳು ಅವರು ಮುಂಡಗಳ ಮೇಲಿವೆ

ಎನ್ನುವುದು ಕೋಪವಿಲ್ಲದ
ಅಣ್ಣನ ಸತ್ಯವೆಂಬುದು ಒಂದೇ
ಕಾರಣ ಹೇಳು, ಕೇಳು-
ಇಲ್ಲದಿದ್ದರೆ ಏನು ಹೇಳಿದರೂ
ಅಣ್ಣನ ಸತ್ಯವೆಂಬುದು ಒಂದು
ಇಲ್ಲದಿದ್ದರೆ ಏನು ಹೇಳಿದರೂ
ಈ ಕೆರಳಿದ ಭೀಮನು ಇಷ್ಟು
ಹೊತ್ತಿಗೆ ಸುಲಿದು ಬಾಯಿಗೆ
ಹಾಕಿಕೊಳ್ಳದೆ ಬಿಡುತ್ತಿದ್ದೇನೆ?

ವ|| ಎಂದು

ಪಾಂಚಾಳರಾಜತನೂಜೆಯ

ಮನಮನಾರೆ ನುಡಿದು ಮತ್ತಮಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಪಾಂಚಾಳರಾಜತನೂಜೆಯ ಮನಮನು ಆರೆ (ಆರುವಂತೆ- ಸಮಾಧಾನವಾಗಲು) ನುಡಿದು ಮತ್ತಂ ಇಂತೆಂದಂ-

ವಚನ:ಅರ್ಥ:ಎಂದು ದ್ರೌಪದಿಯ ಮನಸ್ಸು

ಸಮಾಧಾನವಾಗುವ ಹಾಗೆ
ನುಡಿದು ಪುನ ಹೀಗೆಂದನು-

ಮ|| ಸುರಸಿಂಧುಪ್ರಿಯಪುತ್ರ
ಕೇಳ್ ಕಳಶಜಾ ನೀಂ ಕೇಳ್
ಕೃಪಾ ಕೇಳ ಮಂ
ದರದಿಂದಂಬುಯಂ
ಕಲಂಕಿದಸುರಪ್ರಧ್ವಂಸಿವೋ
ಲ್ ಬಾಹುಮಂ||
ದರದಿಂ ವೈರಿಬಲಾಬ್ಧಿ
ಘೂರ್ಣಿಸೆ ಬಿಗುರ್ತೀ
ಕೌರವರ್ ಕೂಡೆ ನೂ

ರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್|| ೧೫ ||

ಪದ್ಯ-೧೫:ಪದವಿಭಾಗ-

ಅರ್ಥ:ಸುರಸಿಂಧುಪ್ರಿಯಪುತ್ರ (ಭೀಷ್ಮನೇ ಕೇಳು) ಕೇಳ್ ಕಳಶಜಾ (ದ್ರೋಣನೇ ಕೇಳು) ನೀಂ ಕೇಳ್ ಕೃಪಾ (ಕೃಪನೇ ನೀನೂ ಕೇಳು) ಕೇಳ ಮಂದರದಿಂದ ಅಂಬುಯಂ ಕಲಂಕಿದ

ಸುರಪ್ರಧ್ವಂಸಿವೊಲ್
ಬಾಹುಮಂದರದಿಂ
(ಮಂದರಪರ್ವತದಿಂದ
ಕ್ಷೀರಸಮುದ್ರವನ್ನು ಕಲಕಿದ
ನಾರಾಯಣನ ಹಾಗೆ ನನ್ನ
ತೋಳೆಂಬ ಮಂದರದಿಂದ)
ವೈರಿಬಲಾಬ್ಧಿ ಘೂರ್ಣಿಸೆ
ಬಿಗುರ್ತೀ
(ಶತ್ರುಸೇನಾಸಮುದ್ರವನ್ನು
ಕಡೆದು ಮದಿಸಿರುವ)
ಕೌರವರ್ ಕೂಡೆ

ನೂರ್ವರುಮಂ ಕೊಲ್ವೆನು (ಈ ನೂರು ಕೌರವರನ್ನೂ ಒಟ್ಟಿಗೆ ಕೊಲ್ಲುತ್ತೇನೆ.) ಇದು ಎನ್ನ ಪೂಣ್ಕೆ (ಪ್ರತಿಜ್ಞೆ) ನುಡಿದೆಂ ನಿಮ್ಮೀ ಸಭಾಮಧ್ಯದೊಳ್(ನಿಮ್ಮ ಈ ಸಭೆಯ ಮಧ್ಯದಲ್ಲಿ ಈ ನನ್ನ ಪ್ರತಿಜ್ಞೆಯನ್ನು ತಿಳಿಸಿದ್ದೇನೆ)

ಪದ್ಯ-೧೫:ಅರ್ಥ: ಭೀಷ್ಮರೇ ಕೇಳಿ, ದ್ರೋಣರೇ ಕೇಳಿ, ಕೃಪರೇ ಕೇಳಿ,

ಮಂದರಪರ್ವತದಿಂದ
ಕ್ಷೀರಸಮುದ್ರವನ್ನು ಕಲಕಿದ
ನಾರಾಯಣನ ಹಾಗೆ ನನ್ನ
ತೋಳೆಂಬ ಮಂದರದಿಂದ
ಘೋಷಿಸುತ್ತಿರುವ
ಶತ್ರುಸೇನಾಸಮುದ್ರವನ್ನು
ಕಡೆದು ಮದಿಸಿರುವ ಈ
ನೂರು ಕೌರವರನ್ನೂ ಒಟ್ಟಿಗೆ
ಕೊಲ್ಲುತ್ತೇನೆ. ನಿಮ್ಮ ಈ
ಸಭೆಯ ಮಧ್ಯದಲ್ಲಿ ಈ ನನ್ನ

ಪ್ರತಿಜ್ಞೆಯನ್ನು ತಿಳಿಸಿದ್ದೇನೆ,
ಎಂದನು ಭೀಮ.

ವ|| ಎಂದು ವಿಳಯಕಾಳಜಳಧರನಿನಾದ ದಿಂ ಗಿರಿ ತಾಟಿಸಿದಂತಾನುಂ ನೆಲಂ ಮೊಱಗಿದಂತಾನುಂ ಗಜಱಿ ಗರ್ಜಿಸಿ ನುಡಿದು ಮಹಾಪ್ರತಿಜ್ಞಾರೂಢನಾದ ಭೀಮಸೇನನ ನುಡಿಯಂ ಕೇಳ್ದು ಕೌರವರ್ ಕಡಲ ನಡುವಣ ಪರ್ವತದಂತಳ್ಳಾಡೆ

ಕುರುವೃದ್ಧನುಂ ಬುದ್ಧಿವೃದ್ಧನುಮಪ್ಪ ಗಾಂಗೇಯ ಧೃತರಾಷ್ಟ್ರಂಗಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ವಿಳಯಕಾಳ ಜಳಧರ ನಿನಾದದಿಂ (ಪ್ರಳಯಕಾಲದ ಸಮುದ್ರಘೋಷದಂತೆ) ಗಿರಿ ತಾಟಿಸಿದಂತೆ ಆನುಂ ನೆಲಂ ಮೊಟಗಿದಂತೆ ಆನುಂ ಗಜಱ

ಗರ್ಜಿಸಿ (ಪರ್ವತವು
ಅಪ್ಪಳಿಸಿದ ಭೂಮಿಯ
ಗುಡುಗಿನಂತೆ ಆರ್ಭಟಿಸಿ
ಗರ್ಜನೆಮಾಡಿ) ನುಡಿದು
ಮಹಾಪ್ರತಿಜ್ಞಾರೂಢನಾದ
ಭೀಮಸೇನನ ನುಡಿಯಂ
ಕೇಳ್ದು ಕೌರವರ್ ಕಡಲ
ನಡುವಣ ಪರ್ವತದಂತೆ
ಅಳ್ಳಾಡೆ ಕುರುವೃದ್ಧನುಂ
ಬುದ್ಧಿವೃದ್ಧನುಮಪ್ಪ
ಗಾಂಗೇಯ ಧೃತರಾಷ್ಟ್ರಂಗೆ

ಇಂತೆಂದಂ (ಕೌರವರಲ್ಲಿ ಹಿರಿಯನೂ ಆದ ಜ್ಞಾನವೃದ್ಧನೂ ಆದ ಭೀಷ್ಮನು ಧೃತರಾಷ್ಟ್ರನಿಗೆ ಹೀಗೆ ಹೇಳಿದನು)-

ವಚನ:ಅರ್ಥ:ಎಂದು ಪ್ರಳಯಕಾಲದ ಸಮುದ್ರಘೋಷದಂತೆ ಪರ್ವತವು ಅಪ್ಪಳಿಸಿದ ಭೂಮಿಯ ಗುಡುಗಿನಂತೆ ಆರ್ಭಟಿಸಿ ಗರ್ಜನೆಮಾಡಿ

ನುಡಿದು ಮಹಾಪ್ರತಿಜ್ಞೆಯನ್ನು ಅಂಗೀಕರಿಸಿದ ಭೀಮಸೇನನ ಮಾತನ್ನು ಕೇಳಿ ಕೌರವರು ಸಮುದ್ರಮಧ್ಯದ ಪರ್ವತದಂತೆ ನಡುಗಿದರು. ಕೌರವರಲ್ಲಿ ಹಿರಿಯನೂ ಹಿರಿಯನೂ ಆದ ಜ್ಞಾನವೃದ್ಧನೂ ಆದ ಭೀಷ್ಮನು ಧೃತರಾಷ್ಟ್ರನಿಗೆ ಹೀಗೆ ಹೇಳಿದನು

<u>ಭೀಷ್ಮರ ವ್ಯಥೆ</u>

ಚಂ|| ಭರತ ಯಯಾತಿ ಕುತ್ಸ
ಪುರುಕುತ್ಸ
ಪುರೂರವರಿಂದಮಿನ್ನೆಗಂ
ಪರಿವಿಡಿಯಿಂದೆ ಬಂದ
ಶಶಿವಂಶಮದೀಗಳಿವಂದಿರಿಂ
ದೆ ನಿ|
ತ್ತರಿಸುವುದಕ್ಕುಮೆಂದೆ
ಬಗೆದಿರ್ದೊಡೆ ಕೀಲೊಳೆ ಕಿಚ್ಚು
ಪುಟ್ಟಿ ಭೋ

ಗ೯ರೆದುರಿದಂತೆ ನಿನ್ನ ಮಗನಿಂದುರಿದತ್ತಿದನಾರೊ ಬಾರಿಪರ್|| ೧೬ ||

ಪದ್ಯ-೧೬:ಪದವಿಭಾಗ-ಅರ್ಥ:ಭರತ ಯಯಾತಿ ಕುತ್ಸ ಪುರು ಕುತ್ಸ ಪುರೂರವರಿಂದಂ ಇನ್ನೆಗಂ ಪರಿವಿಡಿಯಿಂದೆ ಬಂದ ಶಶಿವಂಶಂ ಇದೀಗಳ್ ಇವಂದಿರಿಂದೆ ನಿತ್ತರಿಸುವುದಕ್ಕುಮೆಂದೆ ಬಗೆದಿರ್ದೊಡೆ ಕೀಲೊಳೆ ಕಿಚ್ಚು

ಪುಟ್ಟಿ ಭೋರ್ಗರೆದು
ಉರಿದಂತೆ ನಿನ್ನ ಮಗನಿಂದ
ಉರಿದತ್ತು ಇದನಾರೊ
ಬಾರಿಪರ್ (ತಡೆಯುವವರು)
ಪದ್ಯ-೧೬:ಅರ್ಥ: ಕುಲವೃದ್ಧ
ಭೀಷ್ಮನು ಧೃತರಾಷ್ಟ್ರನಿಗೆ
ಹೇಳುತ್ತಾನೆ: ಭರತ ಯಯಾತಿ
ಕುತ್ಸ ಪುರೂರವರಿಂದ ಹಿಡಿದು
ಇಲ್ಲಿಯವರೆಗೂ ಕ್ರಮವಾಗಿ
ನಡೆದುಬಂದ ಚಂದ್ರವಂಶವು
ಈಗ ಈ ಕೌರವರಿಂದ

ಮುಂದುವರಿಯುತ್ತದೆ ಎಂದು ಯೋಚಿಸುತ್ತಿರಲು, ಅದರ ಬದಲು ಕೀಲಿನಲ್ಲಿಯೇ ಬೆಂಕಿಹುಟ್ಟಿ ಶಬ್ದಮಾಡಿ ಉರಿಯುವ ಹಾಗೆ ನಿನ್ನ ಮಗನಿಂದ ನಮ್ಮ ವಂಶವೇ ಸುಟ್ಟುಹೋಯಿತು (ಹೋಗುತ್ತದೆ). ಇದನ್ನು ತಡೆಯುವವರು ಯಾರೋ! ಯಾರೂ ಇಲ್ಲ!

<u>ಪಾಂಡವರು ಹಸ್ತಿನಾಪತಿಯಿಂದ ವನವಾಸಕ್ಕೆ ನಿರ್ಗಮನ</u>

ವ|| ಎಂದಱಿಲ್ದು ಧೃತರಾಷ್ಟ್ರನೊಳ್ ನುಡಿಯೆ ಕುಂಭಸಂಭವಾಶ್ವತ್ಥಾಮ ಕೃಪ ವಿದುರಾದಿಗಳ್ ನೀಮೆನಿತು ನುಡಿದೊಡಮಾನೆಯ ಕೋಡು ಬಾಗದೆಂಬಂತೆ ದುರ್ಯೋಧನನುದ್ವೃತ್ತತೆಯು ಮಂ ಭೀಮಸೇನನ

ಮಹಾಪ್ರತಿಜ್ಞೆಯುಮನಾರ್ಗಂ
ಬಾರಿಸಲ್ಬಾರದು ಕೆಯ್ಗಱಿದ
ಮನೆವಾೞ್ತೆ
ಬುದ್ಧಿವೇೞಲೆಡೆಯಿಲ್ಲ
ತಾಮುಂ ತಾಮುಮೞಿವರ್
ಬನ್ನಿಮೆಂದು ನಿಜನಿವಾಸಂಗಳ್ಗೆ
ಪೋದರಾಗಳ್ ಭೀಮಸೇನಂ
ಧರ್ಮಪುತ್ರಂಗೆಂದನುಪ್ಪಿಕ್ಕಿ
ದೊಡೆ ತುಪ್ಪದ
ಮೆಳ್ಪಡಿತೆಂಬಂತೆ ನಮ್ಮ
ಕೆಮ್ಮನಿರ್ಪಿರವಿದೇ ಕಾರಣಂ

ಬನ್ನಿ
ಪೋಪಮೆಂದರಮನೆಯಂ
ಪೊಱಮಟ್ಟು ಬರೆ ಧೃತರಾಷ್ಟ್ರಂ
ದುರ್ಯೋಧನನೇಗೆಯ್ದುಮೊ
ಡಂಬಡಿಸಲಾಱದಿರೆಯುಂ
ದ್ರೌಪದಿ ಪರಸ್ತ್ರೀಯಂ ನಮ್ಮ
ಮನೆಯೊಳಿರಿಸುವುದು
ಚಿತಮಲ್ಲೆಂದು ಕೞಿಪಿದೊಡೆ
ಪಾಂಚಾಳರಾಜತನೂಜೆವೆರ
ಸು ಬಿನ್ನ ಬಿನ್ನನೆ ಪೊೞಲಂ
ಪೊಱಮಡೆ

ಪುರಜನಂಗಳೆಲ್ಲಂ ನೆರೆದವರ ಪೋಗಿಂಗೆ ಸೈರಿಸಲಾಱದೆ ತಮ್ಮೊಳಿಂತೆಂದರ್-

ವಚನ:ಪದವಿಭಾಗ-

ಅರ್ಥ:ಎಂದಱಿಲ್ದು ಧೃತರಾಷ್ಟ್ರನೊಳ್ ನುಡಿಯೆ, ಕುಂಭಸಂಭವ ಅಶ್ವತ್ಥಾಮ ಕೃಪ ವಿದುರಾದಿಗಳ್ ನೀಂ ಎನಿತು ನುಡಿದೊಡಂ ಆನೆಯ ಕೋಡು ಬಾಗದೆಂಬಂತೆ ದುರ್ಯೋಧನನು

ಉದ್ವೃತ್ತತೆಯುಮಂ (ಉದ್
ವೃತ್ತತೆ) ಭೀಮಸೇನನ
ಮಹಾಪ್ರತಿಜ್ಞೆಯುಮನು
ಆರ್ಗಂ ಬಾರಿಸಲ್ ಬಾರದು,
ಕೆಯ್ಗಟಿದ ಮನೆವಾೞ್ತೆ
ಬುದ್ಧಿವೇೞಲು
(ಬುದ್ಧಿಹೇಳಲು) ಎಡೆಯಿಲ್ಲ,
ತಾಮುಂ ತಾಮುಂ ಅಱಿವರ್,
ಬನ್ನಿಂ ಎಂದು ನಿಜ
ನಿವಾಸಂಗಳ್ಗೆ ಪೋದರಾಗಳ್,
ಭೀಮಸೇನಂ ಧರ್ಮಪುತ್ರಂಗೆ

ಎಂದನು 'ಉಪ್ಪು ಇಕ್ಕಿದೊಡೆ ತುಪ್ಪದ ಮೆಳ್ಪಡಿತೆ' ಎಂಬಂತೆ ನಮ್ಮ ಕೆಮ್ಮನಿರ್ಪಿರವು (ಸುಮ್ಮನಿರುವುದು) ಇದೇ ಕಾರಣಂ; ಬನ್ನಿ ಪೋಪಮೆಂದು ಅರಮನೆಯಂ ಪೊಱಮಟ್ಟು ಬರೆ, ಧೃತರಾಷ್ಟ್ರಂ ದುರ್ಯೋಧನನು ಏಗೆಯ್ದುಂ ಒಡಂಬಡಿಸಲು ಆಱದಿರೆಯುಂ, ದ್ರೌಪದಿ

ಪರಸ್ತ್ರೀಯಂ ನಮ್ಮ

ಮನೆಯೊಳು ಇರಿಸುವುದು

ಉಚಿತಮಲ್ಲೆಂದು

ಕೞಿಪಿದೊಡೆ

ಪಾಂಚಾಳರಾಜತನೂಜೆವೆರ

ಸು ಬಿನ್ನ ಬಿನ್ನನೆ (ಸುಮ್ಮನೆ

ಮೌನವಾಗಿ) ಪೋಟಿಲಂ

ಪೋೞಿಮಡೆ

ಪುರಜನಂಗಳೆಲ್ಲಂ ನೆರೆದವರ

ಪೋಗಿಂಗೆ ಸೈರಿಸಲಾೞದೆ

ತಮ್ಮೊಳಿಂತೆಂದರ್-

ವಚನ:ಅರ್ಥ:|| ಎಂದು ವ್ಯಸನಪಟ್ಟು ಧೃತರಾಷ್ಟ್ರನಲ್ಲಿ ಹೇಳಲು, ದ್ರೋಣ, ಅಶ್ವತ್ಥಾಮ, ಕೃಪ, ವಿದುರರೇ ಮೊದಲಾದವರು ನೀವೆಷ್ಟು ಹೇಳಿದರೂ ಆನೆಯ ಕೊಂಬು ಬಗ್ಗುವುದಿಲ್ಲ ಎನ್ನುವ ಹಾಗೆ ದುರ್ಯೋಧನನ ಉದ್ಧಟತನವನ್ನೂ, ಭೀಮನ ಮಹಾಪ್ರತಿಜ್ಞೆಯನ್ನೂ ಯಾರಿಗೂ

ತಡೆಯಲಾಗುವುದಿಲ್ಲ;
ಕೈಮೀರಿದ ಮನೆವಾರ್ತೆಗೆ
ಬುದ್ಧಿಹೇಳಲು ಅವಕಾಶವಿಲ್ಲ;
ಅವರವರೇ ತಿಳಿಯಲಿ ಬನ್ನಿ
ಎಂದು ತಮ್ಮ ಮನೆಗಳಿಗೆ
ಹೋದರು. ಆಗ
ಭೀಮಸೇನನು
ಧರ್ಮರಾಜನಿಗೆ ಹೇಳಿದನು.
'ಉಪ್ಪನ್ನು ಬಡಿಸಿದರೆ ತುಪ್ಪಕ್ಕೆ
ಮೋಸ' ಎನ್ನುವ ಹಾಗೆ ನಾವು
ಸುಮ್ಮನಿರುವುದರಿಂದ ಏನು

ಪ್ರಯೋಜನ, ಬನ್ನಿ
ಹೋಗೋಣ ಎಂದು
ಅರಮನೆಯಿಂದ ಹೊರಟು
ಬರಲು, ಧೃತರಾಷ್ಟ್ರನು
ದುರ್ಯೋಧನನನ್ನು ಏನು
ಮಾಡಿಯೂ
ಒಪ್ಪಿಸಲಾಗದಿರಲು,
ಪರಸ್ತ್ರೀಯಾದ ದ್ರೌಪದಿಯನ್ನು
ನಮ್ಮ ಮನೆಯಲ್ಲಿ
ಇಟ್ಟುಕೊಳ್ಳುವುದು
ಯೋಗ್ಯವಲ್ಲವೆಂದು

ಕಳುಹಿಸಿದನು.
ದ್ರೌಪದಿಯೊಡನೆ ಪಾಂಡವರು
ಸುಮ್ಮನೆ ಮೌನವಾಗಿ
ಪಟ್ಟಣವನ್ನು ಬಿಟ್ಟು
ಹೊರಟರು. ಪಟ್ಟಣದ
ಜನರೆಲ್ಲರೂ ಒಟ್ಟುಗೂಡಿ
ಅವರು ಆ ಸ್ಥಿತಿಯಲ್ಲಿ
ಹೋಗುತ್ತಿರುವುದನ್ನು ನೋಡಿ
ಸಹಿಸಲಾರದೆ ದುಖಪಟ್ಟು
ತಮ್ಮತಮ್ಮಲ್ಲಿ ಹೀಗೆಂದರು-

ಕಂ|| ಏದೊರೆಯಂ

ಯಮನಂದನ

ನೇದೊರೆಯಂ

ಭೀಮಸೇನನೇದೊರೆಯಂ

ಕಂ|

ಜೋದರನ ಮೈದುನಂ ತಾ

ಮೇದೊರೆಯರಮಳ್ಗಳವರ್ಗ

ಮೀಯಿರವಾಯ್ತೇ|| ೧೭ ||

ಪದ್ಯ-೧೭:ಪದವಿಭಾಗ-

ಅರ್ಥ:ಏದೊರೆಯಂ

ಯಮನಂದನನನು,

ಏದೊರೆಯಂ ಭೀಮಸೇನನು, ಏದೊರೆಯಂ ಕಂಜೋದರನ (ಕಮಲನಾಭ) ಮೈದುನಂ, ತಾಮೇದೊರೆಯರು ಅಮಳ್ಗಳ್ ಅವರ್ಗಂ ಈಯಿರವಾಯ್ತೇ

ಪದ್ಯ-೧೭:ಅರ್ಥ: ಎಂಥವನು ಧರ್ಮರಾಜನು ಅಸಮಾನನು, ಭೀಮಸೇನನು ಎಂತಹವನು, ಕೃಷ್ಣನ ಮೈದುನನಾದ ಅರ್ಜುನನು ಎಂಥವನು;

ಅವಳಿಗಳಾದ

ನಕುಲಸಹದೇವರೆಂಥವರು.

ಅವರಿಗೂ ಈ

ಸ್ಥಿತಿಯಾಯಿತೇ!

ಕಂ||ಜೂದಾಡಿ ಸೋಲ್ತು ನನ್ನಿಗೆ

ಮೇದಿನಿಯಂ ಕೊಟ್ಟು

ಪಾಂಡುನಂದನರೀಗಳ್|

ಪೋದೊಡಮೇನ್

ತಿಣುಕಾಗದೆ

ಪೋದಪುದೇ ನಮ್ಮ

ನೃಪತಿಗವು ತವುದಲೆಯೊಳ್||

೧೮ ||

ಪದ್ಯ-೧೮:ಪದವಿಭಾಗ-

ಅರ್ಥ:ಜೂದಾಡಿ ಸೋಲ್ತು ನನ್ನಿಗಂ ಮೇದಿನಿಯಂ ಕೊಟ್ಟು, ಪಾಂಡುನಂದನರ್ ಈಗಳ್ ಪೋದೊಡಂ ಏನ್! ತಿಣುಕಾಗದೆ ಪೋದಪುದೇ(ಕಷ್ಟ- ಕೆಡುಕಾಗದೇ ಹೋಗುವುದೇ?) ನಮ್ಮ ನೃಪತಿಗೆ ಅವು

ತವುದಲೆಯೊಳ್ (ಅವು
-ರಾಜ್ಯಾಪಹಾರ ಅಂತ್ಯದಲ್ಲಿ)
ಪದ್ಯ-೧೮:ಅರ್ಥ: ಜೂಜಾಡಿ
ಸೋತು, ಸತ್ಯಕ್ಕಾಗಿ
ರಾಜ್ಯವನ್ನು ಕೊಟ್ಟು,
ಪಾಂಡವರು ಹೋದರೇನು?
ರಾಜನಾದ ದುರ್ಯೋಧನನಿಗೆ
ಕೊನೆಯಲ್ಲಿ ಅವು-
ರಾಜ್ಯಾಪಹಾರ ಕೆಡುಕಾಗದೇ
ಹೋಗುವುದೇ??

ಕಂ||ಜೂದಿನ ಗೆಲ್ಲದೊಳಾದೀ

ಮೇದಿನಿಯಂ ಕಂಡು ಕಜ್ಜಮಂ ಕಾಣದೆ ದು|
ಜ್ಜೋದನನದೇನದೇಂ ಮರುಳಾದನೊ ಬಡಿಗಂಡನಿಲ್ಲ
ಪಾಲನೆ ಕಂಡಂ|| ೧೯||

ಪದ್ಯ-೧೯:ಪದವಿಭಾಗ-ಅರ್ಥ:ಜೂದಿನ ಗೆಲ್ಲದೊಳಾದ ಈ ಮೇದಿನಿಯಂ ಕಂಡು ಕಜ್ಜಮಂ ಕಾಣದೆ (ಮುಂದಿನ ಕಾರ್ಯವನ್ನು ಕಾಣದೆ) ದುಜ್ಜೋದನಂ ಅದೇನ್

ಅದೇಂ ಮರುಳಾದನೊ ಬಡಿಗಂಡನಿಲ್ಲ (ಎತ್ತಿದ ಬಡಿಗೆಯನ್ನು ಕಂಡನಿಲ್ಲ - ಕಾಣಲಿಲ್ಲ.) ಪಾಲನೆ ಕಂಡಂ

ಪದ್ಯ-೧೯:ಅರ್ಥ: ಜೂಜಿನ ಗೆಲುವಿನಲ್ಲಿ ಬಂದ ಈ ರಾಜ್ಯವನ್ನು ನೋಡಿ, ಮುಂದಾಗುವ ಕಾರ್ಯವನ್ನು ಕಾಣದೆ ದುರ್ಯೋಧನನು ಅದೇತಕ್ಕೆ ಅತ್ಯಂತ ಹುಚ್ಚನಾದನೊ! ಎತ್ತಿದ

ಬಡಿಗೆಯನ್ನು ಕಾಣಲಿಲ್ಲ!
ಹಾಲನ್ನು ಮಾತ್ರ ಕಂಡನು.

ಎನಿತಾನುಮಂದದಿಂ ಜೂ
ದನಿಕ್ಕೆಯುಂ
ದ್ರುಪದಸುತೆಯನೆೞೆದುಯ್ಯೆ
ಯುಮಿಂ|
ತಿನಿತೊಂದಾದುದು ದುಶ್ಶಾ
ಸನನಿಂದಂ ಶಕುನಿಯೆಂಬ
ಬೆಳ್ಪೊೞಸಿಂದಂ|| ೨೦||

ಪದ್ಯ-೨೦:ಪದವಿಭಾಗ-
ಅರ್ಥ:ಎನಿತಾನುಂ ಅಂದದಿಂ

(ಎಷ್ಟೋ ರೀತಿಯಲ್ಲಿ)
ಜೂದನು ಇಕ್ಕೆಯುಂ
(ಜೂಜನ್ನು ಹೂಡಿಯೂ)
ದ್ರುಪದಸುತೆಯನು
ಎೞೆದುಯ್ಯೆಯುಂ (ಸಭೆಗೆ
ಎಳೆದು ಒಯ್ದುದೂ)
ಇಂತಿನಿತು ಒಂದು ಆದುದು
(ಇಷ್ಟೆಲ್ಲಾ ಒಂದು-ಕಟ್ಟ ಕೆಲಸ-
ಆದುದು) ದುಶ್ಶ್ಯಾಸನನಿಂದಂ
ಶಕುನಿಯೆಂಬ
ಬೆಳ್ಪೊಱಸಿಂದಂ

(ಬಿಳಿಪೊರನಿಂದ- ಬಿಳಿ ಪಾರಿವಾಳದಿಂದ)

ಪದ್ಯ-೨೦:ಅರ್ಥ: ಎಷ್ಟೋ ರೀತಿಯಲ್ಲಿ ಜೂಜನ್ನು ಹೂಡಿಯೂ ದ್ರೌಪದಿಯನ್ನು ಸಭೆಗೆ ಎಳೆದು ಒಯ್ದುದೂ, ಇಷ್ಟೆಲ್ಲಾ ಒಂದು-ಕಟ್ಟ ಕೆಲಸ- ಆದುದು ಆ ದುಶ್ಯಾಸನನಿಂದ ಮತ್ತು ಶಕುನಿಯೆಂಬ ಕೇಡು ಸೂಚಿಸುವ ಬಿಳಿ

ಪಾರಿವಾಳದಿಂದ, ಎಂದರು
ಜನ.

ವ|| ಎಂದಿರ್ದರಿರ್ದಲ್ಲಿಯೆ ತಂತಮ್ಮ ಕಂಡುದನೆ ನುಡಿಯೆಯುಂ, ಕೆಲರವರ ಪೋಗಿಂಗಱಿಲ್ದು ಕಣ್ಣನೀರನಿಕ್ಕೆಯುಂ ಕೆಲರ್ ಪರಸಿ ಸೇಸೆಯನಿಕ್ಕೆಯುಂ ಪೊೞಲಂ ಪೊಱಮಟ್ಟು ಪುರದ ಬಾಹಿಗೆಯನೆಯ್ದುವಾಗಳ್

ಗಾಂಗೇಯ ದ್ರೋಣ ಕೃಪ
ವಿದುರಾದಿಗಳ್
ಕೊಂತಿವೆರಸೆಯ್ದೆವಂದು
ಕಿಱಿದಂತರಮಂ ಕಳಿಪುತ್ತುಂ
ಬರೆ (ಕುಂತಿಯೊಡಗೂಡಿ
ಸ್ವಲ್ಪದೂರ ಬಂದು ಕಳುಹಿಸಿ
ಬರಲು) ಧರ್ಮಪುತ್ರನೆಮಗೆ
ತಕ್ಕ ಬುದ್ಧಿಯಂ ಪೇೞ್ದು
ಮಗುೞಿಮೆಂದೊಡನಿಬರುಂ
ಮನಂ ಬಂಧಿಸಿದ ಮೋಹದಿಂ

ಗಳಗಳನೆ ಕಣ್ಣ ನೀರ್ಗಳಂ ಸುರಿದು-

ವಚನ:ಪದವಿಭಾಗ-

ಅರ್ಥ:ಎಂದು ಇರ್ದರು ಇರ್ದಲ್ಲಿಯೆ ತಂತಮ್ಮ ಕಂಡುದನೆ ನುಡಿಯೆಯುಂ ಕೆಲರು ಅವರ ಪೋಗಿಂಗೆ ಅಱಲ್ದು ಕಣ್ಣ ನೀರನು ಇಕ್ಕೆಯುಂ (ಕೆಲವರು ಪಾಂಡವರು ಹಾಗೆ ಹೋಗುತ್ತಿರುವುದಕ್ಕೆ ಅತ್ತು

ಕಣ್ಣೀರನ್ನು ಸುರಿಸಿದರು.)
ಕೆಲರ್ ಪರಸಿ
ಸೇಸೆಯನಿಕ್ಕೆಯುಂ (ಕೆಲವರು
ಹರಸಿ ಅಕ್ಷತೆಯನ್ನಿಕ್ಕಿದರು)
ಪೊಱಲಂ ಪೊಱಮಟ್ಟು
ಪುರದ
ಬಾಹಿಗೆಯನೆಯ್ದುವಾಗಳ್
(ಪಟ್ಟಣವನ್ನು ಬಿಟ್ಟು
ಹೊರಟು ಹೊರಭಾಗವನ್ನು
ಸೇರುವಾಗ) ಗಾಂಗೇಯ
ದ್ರೋಣ ಕೃಪ ವಿದುರಾದಿಗಳ್

ಕೊಂತಿವೆರಸಿ ಎಯ್ದೆವಂದು ಕಿಱಿದಂತರಮಂ ಕಳಿಪುತ್ತುಂ ಬರೆ (ಕುಂತಿಯೊಡಗೂಡಿ ಸ್ವಲ್ಪದೂರ ಬಂದು ಕಳುಹಿಸಿ ಬರಲು) ಧರ್ಮಪುತ್ರಂ ಎಮಗೆ ತಕ್ಕ ಬುದ್ಧಿಯಂ ಪೇೞ್ದು ಮಗುೞಿಂ ಎಂದೊಡನೆ ('ನಮಗೆ ಯೋಗ್ಯವಾದ ನೀತಿಯನ್ನು ಹೇಳಿ ಹಿಂತಿರುಗಿ' ಎಂದಾಗ) ಇಬರುಂ ಮನಂ ಬಂಧಿಸಿದ ಮೋಹದಿಂ

ಗಳಿಗಳಿನೆ ಕಣ್ಣ ನೀರ್ಗಳಂ ಸುರಿದು (ತಮ್ಮ ಮನಸ್ಸನ್ನು ಕಟ್ಟಿದ ಪ್ರೀತಿಯಿಂದ ಗಳಗಳನೆ ಕಣ್ಣೀರನ್ನು ಸುರಿಸಿದರು)-

ವಚನ:ಅರ್ಥ:ಎಂದು ಇದ್ದವರು ಇದ್ದ ಕಡೆಯಲ್ಲಿಯೇ ತಾವು ತಾವು ನೋಡಿದುದನ್ನು ನುಡಿಯುತ್ತಿದ್ದರು. ಕೆಲವರು ಪಾಂಡವರು ಹಾಗೆ ಹೋಗುತ್ತಿರುವುದಕ್ಕೆ ಅತ್ತು ಕಣ್ಣೀರನ್ನು ಸುರಿಸಿದರು. ಮತ್ತೆ

ಕೆಲವರು ಹರಸಿ
ಅಕ್ಷತೆಯನ್ನಿಕ್ಕಿದರು.
ಪಟ್ಟಣವನ್ನು ಬಿಟ್ಟು ಹೊರಟು
ಹೊರಭಾಗವನ್ನು ಸೇರುವಾಗ
ಭೀಷ್ಮ ದ್ರೋಣ ಕೃಪ
ವಿದುರರೇ ಮೊದಲಾದವರು
ಕುಂತಿಯೊಡಗೂಡಿ ಸ್ವಲ್ಪದೂರ
ಬಂದು ಕಳುಹಿಸಿ ಬರಲು,
ಧರ್ಮರಾಜನು ‘ನಮಗೆ
ಯೋಗ್ಯವಾದ ನೀತಿಯನ್ನು
ಹೇಳಿ ಹಿಂತಿರುಗಿ’ ಎಂದಾಗ .

ಅವರೆಲ್ಲರೂ ತಮ್ಮ
ಮನಸ್ಸನ್ನು ಕಟ್ಟಿದ
ಪ್ರೀತಿಯಿಂದ ಗಳಗಳನೆ
ಕಣ್ಣೀರನ್ನು ಸುರಿಸಿದರು.

ಚಂ||
ಪುಗುವುದರಣ್ಯಮಿರ್ಪಿರವು
ಪನ್ನೆರಡಬ್ದಮದಲ್ಲದಲ್ಲಿ ಕೋ
ಟ್ಮಿಗದ ವನೇಚರಾಪರ
ದಾಯಿಗರತ್ತಣಿನಪ್ಪಪಾಯ
ಕೋ|

ಟಿಗೆ ಪವಣಿಲ್ಲ

ಕಲ್ಪಿಗೆಡೆಯಾವುದೊ

ಪಾಟಿಯ ಬಟ್ಟೆದಪ್ಪಿ ಮುಂ

ನೆಗೞ್ದೆಡೆಯಿಲ್ಲ ಪೋಗು

ಜಯಮಕ್ಕೆ ಶುಭಂ ನಿಮಗಕ್ಕೆ

ಮಂಗಳಂ|| ೨೧ ||

ಪದ್ಯ-೨೧:ಪದವಿಭಾಗ-

ಅರ್ಥ:ಪುಗುವುದರಣ್ಯಂ

ಇರ್ಪಿರವು ಪನ್ನೆರಡು ಅಬ್ದಂ

(ವರ್ಷ) ಅದಲ್ಲದೆ ಅಲ್ಲಿ

ಕೋಟ್ಟಿಗದ (ಕೊಂಬಿನ

ಪ್ರಾಣಿಗಳ) ವನೇಚರ ಆಪರ (ಬೇಡರ ನಾಯಕರ) ದಾಯಿಗರತ್ತಣಿಂ ಅಪ್ಪ ಅಪಾಯ (ದಾಯಾದಿಗಳ ಕಡೆಯಿಂದ ಬರುವ ಅಪಾಯ), ಕೋಟಿಗೆ ಪವಣಿಲ್ಲ (ಬರುವ ಅಪಾಯಕ್ಕೆ ಲೆಕ್ಕವಿಲ್ಲ) ಕಲ್ಪಿಗೆ ಎಡೆಯಾವುದೊ (ಬುದ್ಧಿ ಹೇಳುವುದಕ್ಕೆ ಅವಕಾಶವೆಲ್ಲಿದಯೊ!)

ಪಾಟಿಿಯ ಬಟ್ಟೆದಪ್ಪಿ ಮುಂ
ನೆಗೆಟ್ಟೆ ಎಡೆಯಿಲ್ಲ
(ಧರ್ಮಮಾರ್ಗವನ್ನು ಬಿಟ್ಟು
ಮೊದಲು ನೀವು ನಡೆದ
ಸಂದರ್ಭವೇ ಇಲ್ಲ) ಪೋಗು
ಜಯಮಕ್ಕೆ ಶುಭಂ ನಿಮಗೆ
ಅಕ್ಕೆ (ಆಗಲಿ) ಮಂಗಳಂ|
ಪದ್ಯ-೨೧:ಅರ್ಥ: ನೀವು
ಪ್ರವೇಶಮಾಡಬೇಕಾಗಿರುವು
ದು ಕಾಡು, ಇರಬೇಕಾದ ಕಾಲ
ಹನ್ನೆರಡುವರ್ಷ;

ಅದಲ್ಲದೆಯೂ ಅಲ್ಲಿ
ಕೊಂಬುಳ್ಳ ಕ್ರೂರಮೃಗಗಳ,
ಬೇಡನಾಯಕರ,
ದಾಯಾದಿಗಳ ಕಡೆಯಿಂದ
ಬರುವ ಅಪಾಯಕ್ಕೆ ಲೆಕ್ಕವಿಲ್ಲ;
ಬುದ್ಧಿ ಹೇಳುವುದಕ್ಕೆ
ಅವಕಾಶವೆಲ್ಲಿದಯೊ!
ಧರ್ಮಮಾರ್ಗವನ್ನು ಬಿಟ್ಟು
ಮೊದಲು ನೀವು ನಡೆದ
ಸಂದರ್ಭವೇ ಇಲ್ಲ ;
'ಧರ್ಮರಾಜ! ಹೋಗು ನಿನಗೆ

ಶುಭವಾಗಲಿ ಮಂಗಳವಾಗಲಿ'
ಎಂದು ಆಶೀರ್ವದಿಸಿದರು

ವ|| ಎಂದೊಡಲ್ಲಿರ್ದ ನಿಮ್ಮ ಮನಕ್ಕೆ ಕೊಕ್ಕರಿಕ್ಕೆಯಾಗಿಯುಂ ಪಾಟಿಗೆ ಗೆಂಟಾಗಿಯುಂ ನೆಗಱ್ವಮಲ್ಲೆಂದು ಪೊಡವಟ್ಟು ಕೊಂತಿಯಂ ವಿದುರನ ಮನೆಯೊಳಿರಲ್ವೇೞ್ದು ಸುಭದ್ರೆಯನಭಿಮನ್ಯುವರೆಸು ನಾರಾಯಣನಲ್ಲಿಗೆ ದ್ವಾರಾವತಿಗೆ ಕಳಿಪಿ ನಿಜ

ಪರಿಜನಂಬೆರಸು ಗಂಗೆಯಂ ಪಾಯ್ದದಱ ಪಡುವಣ ದೆಸೆಯ ಕಾಮ್ಯಕವನದ ಬಟ್ಟೆಯಂ ತಗುಳ್ದು ಪೋಗೆ ಪೋಗೆ-

ವಚನ:ಪದವಿಭಾಗ-

ಅರ್ಥ:ಎಂದೊಡೆ ಅಲ್ಲಿರ್ದು ನಿಮ್ಮ ಮನಕ್ಕೆ ಕೊಕ್ಕರಿಕ್ಕೆಯಾಗಿಯುಂ (ಅಸಹ್ಯವಾಗುವ ಹಾಗೆಯೂ) ಪಾಟಿಗೆ ಗೆಂಟಾಗಿಯುಂ

ನೆಗೞ್ವಿಮಲ್ಲೆಂದು (ಧರ್ಮಕ್ಕೆ
ದೂರವಾಗಿಯೂ
ನಡೆಯುವವರಲ್ಲ)
ಪೊಡವಟ್ಟು (ನಮಸ್ಕರಿಸಿ)
ಕೊಂತಿಯಂ ವಿದುರನ
ಮನೆಯೊಳಿರಲ್ ವೇೞ್ದು (
ಹೇಳಿ) ಸುಭದ್ರೆಯನು
ಅಭಿಮನ್ಯುವರೆಸು
(ಸುಭದ್ರೆಯನ್ನು
ಅಭಿಮನ್ಯುವಿನೊಡನೆ)
ನಾರಾಯಣನಲ್ಲಿಗೆ

ದ್ವಾರಾವತಿಗೆ ಕಳಿಪಿ ನಿಜ ಪರಿಜನಂಬೆರಸು (ತಮ್ಮ ಪರಿವಾರದೊಡನೆ) ಗಂಗೆಯಂ ಪಾಯ್ದು ಅದಱ ಪಡುವಣ ದೆಸೆಯ (ಪಶ್ಚಿಮ ದಿಕ್ಕಿನ) ಕಾಮ್ಯಕವನದ ಬಟ್ಟೆಯಂ ತಗುಳ್ದು ಪೋಗೆ (ಬಟ್ಟೆ-ದಾರಿಯನ್ನು ಅನುಸರಿಸಿ ಹೋಗಲು) ಪೋಗೆ-

ವಚನ:ಅರ್ಥ:ಧರ್ಮರಾಜನು ‘ನಾವು ಅಲ್ಲಿದ್ದರೂ ನಿಮ್ಮ

ಮನಸ್ಸಿಗೆ ಅಸಹ್ಯವಾಗುವ
ಹಾಗೆಯೂ ಧರ್ಮಕ್ಕೆ
ದೂರವಾಗಿಯೂ
ನಡೆಯುವವರಲ್ಲ' ಎಂದು
ಹೇಳಿ ನಮಸ್ಕಾರ ಮಾಡಿ
ಕುಂತಿಯನ್ನು ವಿದುರನ
ಮನೆಯಲ್ಲಿರಹೇಳಿ
ಸುಭದ್ರೆಯನ್ನು
ಅಭಿಮನ್ಯುವಿನೊಡನೆ
ದ್ವಾರಾವತಿಗೆ ಕೃಷ್ಣನ ಹತ್ತಿರಕ್ಕೆ
ಕಳುಹಿಸಿ, ತಮ್ಮ

ಪರಿವಾರದೊಡನೆ ಮುಂದಕ್ಕೆ ನಡೆದರು. ಗಂಗಾನದಿಯನ್ನೂ ದಾಟಿ ಅದರ ಪಶ್ಚಿಮದಿಕ್ಕಿನಲ್ಲಿರುವ ಕಾಮ್ಯಕವನದ ದಾರಿಯನ್ನು ಅನುಸರಿಸಿ ಹೋದರು. -

ಹಾಗೆ ಹೋಗಲು-

ಕಾಮ್ಯಕವನ - ಮಳೆಗಾಲದ ವರ್ಣನೆ

ಚಂ|| ದೆಸೆ ಪಸುರೇಱಿ ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾೞ್ಕೆಯಾದುದಾ ಗಸಮಳಿ ನೀಳ ನೀಳ ಗಳಕಂಠ ತಮಾಳ ವಿನೀಳನೀರದ| ಪ್ರಸರ ವಿಭಾಸಿಯಾದುದು ಸಮೀರನುದಾರ ಕದಂಬ ಕೇತಕೀ

ಪ್ರಸರ ರಜಸ್ವರ ಪ್ರಕಟ ಪಾಂಸುಳಮಾದುದು ಮೇಘಕಾಲದೊಳ್|| ೨೨

ಪದ್ಯ-೨೨:ಪದವಿಭಾಗ-ಅರ್ಥ:ದೆಸೆ ಪಸುರೇಱೆ (ದಿಕ್ಕು - ಎಲ್ಲಾ ದಿಕ್ಕಿನಲ್ಲೂ ಪಸಿರು ಏರೆ- ಹಸಿರು ಹೆಚ್ಚಲು) ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾಟ್ಕೆಯಾದುದು (ಪಚ್ಚೆಯ ರತ್ನದಿಂದ ಹೊದಿಸಿದ

ಹಾಗಾಯಿತು) ಆಗಸಂ ಅಳಿ
(ದುಂಬಿ) ನೀಳ ನೀಳ ಗಳಕಂಠ
(ಶಿವನ ಕಂಠ) ತಮಾಳ
(ಹೊಂಗೆಯ ಮರ) ವಿನೀಳ
ನೀರದ ಪ್ರಸರ (ಬಹಳ
ನೀಲಿಯ ಮೋಡದ
ಹರಡುವಿಕೆ)
ವಿಭಾಸಿಯಾದುದು
(ಆಕಾಶವು ದುಂಬಿಯಂತೆ
ಶಿವನ ಕೊರಳಿನಂತೆ,
ಹೊಂಗೆಯ ಮರದಂತೆ

ಕಪ್ಪಗಿರುವ ಅತ್ಯಂತ ನೀಲ ಬಣ್ಣದ ಮೋಡಗಳ ಹರಡುವಿಕೆಯಿಂದ ಶೋಭಿಸಿತು.) ಸಮೀರಂ (ಗಾಳಿ) ಉದಾರ (ವಿಸ್ತಾರವಾಗಿ ಹಬ್ಬಿರುವ) ಕದಂಬ ಕೇತಕೀ ಪ್ರಸರ (ಸಮೂಹದಿಂದ) ರಜಸ್ವರ ಪ್ರಕಟ ಪಾಂಸುಳಂ-ದೂಳಿನಿಂದ (ಕೇದಗೆಯ ಹೊರಬರು ಪರಾಗದ

ಧೂಳಿನಂದ ಗಾಳಿ
ತುಂಬಿದುದು) ಆದುದು
ಮೇಘಕಾಲದೊಳ್
(ಮಳೆಗಾಲದಲ್ಲಿ)
ಪದ್ಯ-೨೨:ಅರ್ಥ: ೨೨.
ಮಳೆಗಾಲವು
ಪ್ರಾರಂಭವಾಯಿತು.
ದಿಕ್ಕುಗಳು ಪಚ್ಚೆ-ಹಸಿರು
ಪೈರುಗಳಿಂದ ಹಸಿರುಹತ್ತಲು
ಪಚ್ಚೆಯ ರತ್ನದಿಂದ ಹೊದಿಸಿದ
ಹಾಗಾಯಿತು. ಆಕಾಶವು

ದುಂಬಿಯಂತೆ ಶಿವನ
ಕೊರಳಿನಂತೆ, ಹೊಂಗೆಯ
ಮರದಂತೆ ಕಪ್ಪಗಿರುವ
ಅತ್ಯಂತ ನೀಲ ಬಣ್ಣದ
ಮೋಡಗಳ
ಹರಡುವಿಕೆಯಿಂದ
ಶೋಭಿಸಿತು. ಮಳಗಾಲದಲ್ಲಿ
ಗಾಳಿಯು ವಿಸ್ತಾರವಾಗಿ
ಹಬ್ಬಿರುವ ಕದಂಬ ಮತ್ತು
ಕೇದಗೆ ಹೂವುಗಳ
ಸಮೂಹದಿಂದ ಹೊರಗೆ

ಚೆಲ್ಲುತ್ತಿರುವ ಪರಾಗದಿಂದ ತುಂಬಿತು.

ಚಂ|| ಕರಿಯ ಮುಗಿಲ್ಗಳಿಂ ಗಗನಮಂಡಳಮೊಪ್ಪಿರೆ ಸೋಗೆಯಿಂ ವನಾಂ ತರಮೆಸೆದೊಪ್ಪೆ ತೋರ್ಪ ಮೊಳೆವುಲ್ಗಳಿನೀ ಧರಣೀವಿಭಾಗಮೊ| ಪ್ಪಿರೆ ಪೊಸ ವೇಟಕಾಱರೆರ್ದೆಗಳ್ ಪೊಸ ಕಾರ ಪೊಡರ್ಪುಗಂಡದೇಂ

ಕರಿತುವದೇಂ

ಕಲಂಕಿದುವದೇಂ

ಕುೞಿಗೊಂಡುವದೇಂ

ಕನಲ್ದುವೊ॥ ೨೩

ಪದ್ಯ-೨೩:ಪದವಿಭಾಗ-ಅರ್ಥ: ಕರಿಯ ಮುಗಿಲ್ಗಳಿಂ ಗಗನಮಂಡಳಂ ಒಪ್ಪಿರೆ (ಕಪ್ಪಾಗಿರುವ ಮೋಡಗಳಿಂದ ಆಕಾಶವು ಒಪ್ಪಿರಲು ಚಂದಕಾಣಲು) ಸೋಗೆಯಿಂ ವನಾಂತರಂ ಎಸೆದೊಪ್ಪೆ

(ಕಾಡು ನವಿಲುಗಳಿಂದ
ಸೊಗಸಾಗಿರಲು) ತೋರ್ಪ
ಮೊಳೆವುಲ್ಗಳಿಂ ಈ ಧರಣೀ
ವಿಭಾಗಮೊಪ್ಪಿರೆ (ಈ
ಭೂಭಾಗವು
ಮೊಳೆಯುತ್ತಿರುವ
ಹುಲ್ಲುಗಳಿಂದ ಚಂದಕಾಣಲು)
ಪೊಸ ವೇಟಕಾಱರ
ಎರ್ದೆಗಳ್ (ಹೊಸ
ಪ್ರಣಯಿಗಳ ಹೃದಯವು)
ಪೊಸ ಕಾರ

ಪೊಡರ್ಪುಗಂಡದೇಂ
(ಪೊಡರ್ಪು ಕಂಡು ಅದೇಂ)
ಕರಿತುವದೇಂ(ಹೊಸ
ಮಾಳೆಗಾಲದ ವೈಭವವನ್ನು
ಕಂಡು ಅದೇನು
ಕರ್ರ್ರಗಾದವೇ!) ಕಲಂಕಿದುವು
ಅದೇಂ, ಕುಟಿಗೊಂಡುವು
ಅದೇಂ ಕನಲ್ದುವೋ

ಪದ್ಯ-೨೩:ಅರ್ಥ:
ಕಪ್ಪಾಗಿರುವ ಮೋಡಗಳಿಂದ
ಆಕಾಶವೊಪ್ಪಿರಲು,

ನವಿಲುಗಳಿಂದ ಕಾಡಿನ
ಮಧ್ಯಭಾಗವ ಒಪ್ಪಿರಲು, ಈ
ಭೂಭಾಗವು
ಮೊಳೆಯುತ್ತಿರುವ
ಹುಲ್ಲುಗಳಿಂದ ಚಂದಕಾಣಲು,
ಹೊಸ ಪ್ರಣಯಿಗಳ
ಹೃದಯವು ಹೊಸ
ಮಾಳೆಗಾಲದ ವೈಭವವನ್ನು
ಕಂಡು ಅದೇನು ಕರ್‍ರಗಾದವೇ!,
ಅದೆಷ್ಟು ಕೆರಳಿದುವೋ;

ಅದೆಷ್ಟು ಗುಳಿಗೊಂಡವೋ!
ಉದ್ರೇಕಗೊಂಡವೂ!

ವ|| ಅದಲ್ಲದೆಯುಂ-

ವಚನ:ಅರ್ಥ: ಅಷ್ಟೇ ಅಲ್ಲದೆ

.

ಮ|| ಭವ

ಲಾಲಾಟವಿಲೋಚನಾಗ್ನಿಶಿಖೆ

ಯಿಂ ಬೆಂದಳ್ಕಿ ಮತ್ತಂ

ಮನೋ

ಭವನೆಚ್ಚಿತ್ತೊಡೆ ಕಾಮಕಾಂತೆ

ಬಱಿಯಂ ತನ್ನಿಚ್ಚೆಯಿಂ ಮೆಚ್ಚಿ

ಬ|

ಣ್ಣಪುರಂ ತೀವಿದ

ಮಾಟ್ಕೆಯಾಯ್ತು ನವಿಲಿಂ

ಕುಂದಂಗಳಿಂದಿಂದ್ರಗೋ

ಪವಿಳಾಸಂಗಳಿನಾಳಿಕಲ್ಲ

ಪರಲಿಂ ಕಾರೊಳ್

ಮಹೀಮಂಡಲಂ|| ೨೪ ||

ಪದ್ಯ-೨೪:ಪದವಿಭಾಗ-

ಅರ್ಥ:ಭವ ಲಾಲಾಟ

ವಿಲೋಚನ ಅಗ್ನಿಶಿಖೆಯಿಂ

(ಶಿವನ ಹಣೆಗಣ್ಣ ಉರಿಯ

ಜ್ವಾಲೆಯಿಂದ) ಬೆಂದು ಅಳ್ಕಿ
ಮತ್ತಂ ಮನೋಭವನು
ಎಟ್ಚಿತ್ತೊಡೆ (ಸುಟ್ಟು ಬಳಲಿ
ಮತ್ತೆ ಮನೋಭವನಾದ
ಕಾಮನು ಸಜೀವನಾಗಿ
ಎಚ್ಚರಗೊಂಡರೆ) ಕಾಮಕಾಂತೆ
ಬಟಿಯಂ (ರತಿ ನಂತರ)
ತನ್ನಿಚ್ಚೆಯಿಂ ಮೆಚ್ಚಿ
ಬಣ್ಣಪುರಂ ತೀವಿದ
ಮಾಟ್ಕೆಯಾಯ್ತು (ತನ್ನ
ಇಷ್ಟದಂತೆ ಮೆಚ್ಚಿಕೊಂಡು

ಬಣ್ಣದ ಬಣ್ಣದ ವರ್ಣಪೂರ
ಎಂಬ ಬಟ್ಟೆಯಿಂದ -ಮುಚ್ಚಿದ
ತೆರನಾಯಿತು-
ಯಾವುದೆಂದರೆ-) ನವಿಲಿಂ
ಕುಂದಂಗಳಿಂ(ಕುಂದ
ಹೂಗಳಿಂದಲೂ)
ಇಂದ್ರಗೋಪ ವಿಳಾಸಂಗಳಿಂ
(ಮಿಂಚುಹುಳಗಳ
ವಿಲಾಸದಿಂದಲೂ) ಆಳಿಕಲ್ಲ
ಪರಲಿಂ
(ಆಲಿಕಲ್ಲುಗಳಿಂದಲೂ)

ಕಾರೊಳ್ (ಮಳೆಗಾಲದಲ್ಲಿ) ಮಹೀಮಂಡಲಂ (ಭೂಮಂಡಲವು)|

ಪದ್ಯ-೨೪:ಅರ್ಥ:

ಮಳೆಗಾಲದಲ್ಲಿ ಭೂಮಂಡಲವು ನವಿಲುಗಳಿಂದಲೂ, ಕುಂದ ಹೂಗಳಿಂದಲೂ, ಮಿಂಚುಹುಳಗಳ ಲೀಲೆಯಿಂದಲೂ, ಆಲಿಕಲ್ಲುಗಳಿಂದಲೂ

ಕೂಡಿರಲು ಈಶ್ವರನ
ಹಣೆಗಣ್ಣಿನ ಬೆಂಕಿಯ
ಜ್ವಾಲೆಯಿಂದ ಸತ್ತ ಮನ್ಮಥನು
ಪುನ ಸಜೀವನಾಗಲು
ಅದರಿಂದ ಸಂತೋಷಗೊಂಡ
ಕಾಮನ ಸತಿಯಾದ ರತಿಯು
ತನ್ನಿಷ್ಟಬಂದಂತೆ ನೆಲಕ್ಕೆ
ಹಾಸಿದ ವಿವಿಧ ಬಣ್ಣದ
ವಸ್ತ್ರದಂತೆ ಭೂಮಿಯು
ಶೋಭಿಸಿತು.

ಚಂ||
ಪೊಳೆವಮರೇಂದ್ರಗೋಪದ
ಪಸುರ್ತೆವುಲ್ಗಳ ತಳ್ತ
ಕಾರ್ಮುಗಿ
ಲ್ಗಳ ಕಿಱುಗೊಂಕುಗೊಂಕಿದ
ಪೊನಲ್ಗಳ ಕೆಂಪು ಪಸುರ್ಪು
ಕರ್ಪು ಬೆ|
ಳ್ಪೊಳಕೊಳೆ ಶಕ್ರ ಕಾರ್ಮುಕ
ವಿಳಾಸಮನೇನೆರ್ದೆಗೊಂಡು
ಬೇಟದ

ತ್ತಳಗಮನುಂಟುಮಾಡಿದುದೊ ಕಾಮನ ಕಾರ್ಮುಕದಂತೆ ಕಾರ್ಮುಕಂ|| ೨೫ ||

ಪದ್ಯ-೨೪:ಪದವಿಭಾಗ-ಅರ್ಥ:ಪ್ರೊಳೆವಮರೇಂದ್ರ ಗೋಪದ (ಹೊಳೆಯುವ ಮಿಂಚುಹುಳುಗಳ) ಪಸುರ್ತೆ ಪುಲ್ಗಳ (ಹಸುರಾದ ಎಳೆಯ ಹುಲ್ಲುಗಳ) ತಳ್ತ ಕಾರ್ಮುಗಿಲ್ಗಳ (ಒತ್ತಾಗಿ ಸೇರಿರುವವರುವ

ಕರಿಯಮೋಡಗಳ)
ಕಿಱುಗೊಂಕುಗೊಂಕಿದ
ಪೊನಲ್ಗಳ (ಸಣ್ಣ
ಅಂಕುಡೊಂಕಿನ ಪ್ರವಾಹಗಳ)
ಕೆಂಪು ಪಸುರ್ಪು ಕರ್ಪು ಬೆಳ್ಪು
ಒಳಕೊಳೆ (ಕೆಂಪು ಹಸುರು
ಬಿಳುಪು ಬಣ್ಣಗಳು ಒಟ್ಟಾಗಿ
ಸೇರಿ ಒಳಗಳಡಿರಲು) ಶಕ್ರ
ಕಾರ್ಮುಕ ವಿಳಾಸಮನು
(ಕಾಮನಬಿಲ್ಲಿನ
ಶೋಭೆಯನ್ನು) ಏನ್

ಎರ್ದೆಗೊಂಡು (ಮನವನ್ನು ಸೂರೆಕೊಂಡು) ಬೇಟದ ಅತ್ತಳಗಮನು (ಪ್ರೇಮದ ಆಧಿಕ್ಯವನ್ನು) ಉಂಟುಮಾಡಿದುದೊ ಕಾಮನ ಕಾರ್ಮುಕದಂತೆ (ಮನ್ಮಥನ ಬಿಲ್ಲಿನಂತೆ) ಕಾರ್ಮುಕಂ (ಕಾರ್ ಮುಖಂ -ಮಳೆಗಾಲದ ಆರಂಭವು)

ಪದ್ಯ-೨೪:ಅರ್ಥ: .

ಹೊಳೆಯುವ

ಮಿಂಚುಹುಳುಗಳ, ಹಸುರಾದ
ಎಳೆಯ ಹುಲ್ಲುಗಳ, ಒತ್ತಾಗಿ
ಸೇರಿರುವರುವ
ಕರಿಯಮೋಡಗಳ, ಸಣ್ಣ
ಅಂಕುಡೊಂಕಿನ ಪ್ರವಾಹಗಳ,
ಕೆಂಪು ಹಸುರು ಬಿಳುಪು
ಬಣ್ಣಗಳು ಒಟ್ಟಾಗಿ ಸೇರಿ
ಒಳಗೊಂಡಿರಲು,
ಕಾಮನಬಿಲ್ಲಿನ ಶೋಭೆಯು
ಮನವನ್ನು ಸೂರೆಕೊಂಡು
ಮಳೆಗಾಲದ ಆರಂಭವು

ಮನ್ಮಥನ ಬಿಲ್ಲಿನಂತೆಯೇ
ಮನವನ್ನು ಸೂರೆಕೊಂಡು
ಪ್ರೇಮದ ಆಧಿಕ್ಯವನ್ನು
ಉಂಟುಮಾಡಿತೊ!

ವ|| ಅಂತು ತಮಗಿದಿರಂ ಬರ್ಪಂತೆ ಬಂದ ಪಯೋಧರಕಾಲದೊಳೆರಡು ತಡಿಯುಮಂ ಪೊಯ್ದು ಪರಿವ ತೊಗಳುಮಂ ತೊವಲ್ತು ಸೊಗಯಿಸುವಡವಿಗಳುಮಂ ಪಸಿಯ ನೇತ್ರಮಂ

ಪಚ್ಚವಡಿಸಿದಂತೆ

ಪಸುರ್ಪುವಡೆದ ನೆಲದೊಳ್

ಪದ್ಮರಾಗದ ಪರಲ್ಗಳಂ

ಬಲಿಗೆದಱಿದಂತೆ

ಉಪಾಶ್ರಯಂಬಡೆದಳಂಕರಿ

ಸುವಿಂದ್ರಗೋಪಂಗಳುಮಂ

ಕಿಸುಗಾಡ ನೆಲಂಗಳೆಳೆದಳಿರ

ಬಣ್ಣಮಂ ಕೆಯ್ಕೊಂಡು

ವಿರಹಿಗಳ

ಮನಮನೊಲಿಸುವಂತೆ

ಜಲಜಲನೆ ಪರಿವ

ಜರಿವೊನಲ್ಗಳುಮಂ ಕಂಡು ತಮ್ಮ ಕಣ್ಗಂ ಮನಕಂ ಸೊಗಯಿಸೆ ಪಯಣಂಬಂದು ಕಾಮ್ಯಕವನಮಂ ಪುಗುತಂದರದೆಂತೆಂದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ತಮಗೆ ಇದಿರಂ ಬರ್ಪಂತೆ ಬಂದ ಪಯೋಧರ ಕಾಲದೊಳು (ತಮಗೆ ಎದುರಾಗಿ ಬರುವಂತೆ ಬಂದ ಮಳೆಗಾಲದಲ್ಲಿ) ಎರಡು

ತಡಿಯುಮಂ ಪೊಯ್ದು ಪರಿವ
ತೊಗಳುಮಂ (ಎರಡು
ದಡಗಳನ್ನು ಘಟ್ಟಿಸಿ
ಹರಿಯುವ ನದಿಗಳನ್ನೂ)
ತೊವಲ್ತು ಸೊಗಯಿಸುವ
ಅಡವಿಗಳುಮಂ (ಚಿಗುರಿ
ಸೊಗಯಿಸುವ
ಕಾಡುಗಳನ್ನೂ) ಪಸಿಯ
ನೇತ್ರಮಂ ಪಚ್ಚವಡಿಸಿದಂತೆ
ಪಸುರ್ಪುವಡೆದ ನೆಲದೊಳ್
(ಹಸಿರು ಬಟ್ಟೆಯನ್ನು

ಹರಡಿದಂತೆ ಹಸುರಾದ
ನೆಲದಲ್ಲಿ) ಪದ್ಮರಾಗದ
ಪರಲ್ಗಳಂ ಬಲಿಗೆದಱಿದಂತೆ
(ಪದ್ಮರಾಗರತ್ನದ
ಹರಳುಗಳನ್ನು ಬಲಿಗೆ?
ಕೆದರಿದಂತೆ ಚೆಲ್ಲಿದಂತೆ)
ಉಪಾಶ್ರಯಂ ಬಡೆದು
ಅಳಂಕರಿಸುವ
ಇಂದ್ರಗೋಪಂಗಳುಮಂ
(ಪಡೆದು ಅಲಂಕಾರವಾಗಿರುವ
ಮಿಂಚುಹುಳುಗಳನ್ನೂ)

ಕಿಸುಗಾಡ ನೆಲಂಗಳು

ಎಳೆದಳಿರ ಬಣ್ಣಮಂ

ಕೆಯ್ಕೊಂಡು (ಕೆಂಪುನೆಲದ

ಕಾಡುಗಳ ನೆಲಗಳ ಎಲೆಯ

ಚಿಗುರಿನ ಬಣ್ಣವನ್ನು ಹೊಂದಿ)

ವಿರಹಿಗಳ

ಮನಮನೊಲಿಸುವಂತೆ

ಜಲಜಲನೆ ಪರಿವ

(ಹರಿಯುವ)

ಜರಿವೊನಲ್ಗಳುಮಂ

(ಝರಿಗಳ ಪ್ರವಾಹವನ್ನೂ)

ಕಂಡು ತಮ್ಮ ಕಣ್ಗಂ ಮನಕಂ
ಸೊಗಯಿಸೆ ಪಯಣಂಬಂದು
(ಕಣ್ಣಿಗೂ ಮನಸ್ಸಿಗೂ
ಆನಂದಕೊಡುವ
ಪ್ರಯಾಣಮಾಡಿ)
ಕಾಮ್ಯಕವನಮಂ
ಪುಗುತಂದರು; ಅದು
ಎಂತೆಂದೊಡೆ (ಪಾಂಡವರು
ಕಾಮ್ಯಕವನವನ್ನು ಪ್ರವೇಶ
ಮಾಡಿದರು. ಅದು
ಹೇಗಿತ್ತೆಂದರೆ)-

ವಚನ:ಅರ್ಥ:ಹಾಗೆ ತಮಗೆ ಎದುರಾಗಿ ಬರುವಂತೆ ಬಂದ ಮಳೆಗಾಲದಲ್ಲಿ ಎರಡು ದಡಗಳನ್ನು ಘಟ್ಟಿಸಿ ಹರಿಯುವ ನದಿಗಳನ್ನೂ, ಚಿಗುರಿ ಸೊಗಯಿಸುವ ಕಾಡುಗಳನ್ನೂ, ಹಸುರುಬಟ್ಟೆಯನ್ನು ಹರಡಿದಂತೆ ಹಸುರಾದ ನೆಲದಲ್ಲಿ ಪದ್ಮರಾಗರತ್ನದ ಹರಳುಗಳನ್ನು ಚೆಲ್ಲಿದಂತೆ

ಅವಲಂಬನವನ್ನು ಪಡೆದು
ಅಲಂಕಾರವಾಗಿರುವ
ಮಿಂಚುಹುಳುಗಳನ್ನೂ
ಕೆಂಪುನೆಲದ ಕಾಡುಗಳ
ನೆಲಗಳ ಎಲೆಯ ಚಿಗುರಿನ
ಬಣ್ಣವನ್ನು ಹೊಂದಿ ವಿರಹಿಗಳ
ಮನಸ್ಸನ್ನು ಕೆರಳಿಸುವಂತೆ
ಜಲಜಲನೆ ಹರಿಯುವ
ಝರಿಗಳ ಪ್ರವಾಹವನ್ನೂ
ನೋಡಿ ಕಣ್ಣಿಗೂ ಮನಸ್ಸಿಗೂ
ಆನಂದವಾಗಿರಲು

ಪ್ರಯಾಣಮಾಡಿ ಪಾಂಡವರು ಕಾಮ್ಯಕವನವನ್ನು ಪ್ರವೇಶ ಮಾಡಿದರು. ಅದು ಹೇಗಿತ್ತೆಂದರೆ

ಮ|| ದೆಸೆಗೆತ್ತಂ
ಗಜಯುತ್ತುಮಿರ್ಪ ಪುಲಿಯಿಂ
ನೀಳಾಭ್ರಮಂ ದಂತಿಗೆ
ತ್ತು ಸಿಡಿಲ್ದಾಗಸಕೆಯ್ದೆ ಪಾಯ್ವ
ಪಲವುಂ ಸಿಂಗಂಗಳಿಂದೆತ್ತಗು|
ರ್ವಿಸಿ ಪಾಯ್ವರ್ವಿಗಳಿಂ
ಮದಾಂಧ

ವನಗಂಧೇಭಂಗಳಿಂ ಕಣ್ಗಗು ರ್ವಿಸೆಯುಂ ಚಿತ್ತದೊಳಂದು ಕಾಮ್ಯಕವನಂ ಮಾಡಿತ್ತತಿ ಪ್ರೀತಿಯಂ|| ೨೬ ||

ಪದ್ಯ-೨೬:ಪದವಿಭಾಗ-ಅರ್ಥ:ದೆಸೆಗೆತ್ತಂ ಗಜಱುತ್ತುಮಿರ್ಪ ಪುಲಿಯಿಂ (ಎಲ್ಲ ದಿಕ್ಕುಗಳಲ್ಲಿಯೂ ಗರ್ಜಿಸುತ್ತಿರುವ ಹುಲಿಗಳಿಂದಲೂ) ನೀಳಾಭ್ರಮಂ ದಂತಿಗೆತ್ತು

(ಕಪ್ಪುಮೋಡವನ್ನು
ಆನೆಯೆಂದು ಭ್ರಮಿಸಿ)
ಸಿಡಿಲ್ದು ಆಗಸಕೆ ಎಯ್ದೆ
ಪಾಯ್ವ (ಸಿಡಿದು ಆಕಾಶಕ್ಕೆ
ವಿಶೇಷವಾಗಿ ಹಾರುವ)
ಪಲವುಂ ಸಿಂಗಂಗಳಿಂದ
(ಹಲವು ಸಿಂಹಗಳಿಂದಲೂ)
ಎತ್ತಗುರ್ವಿಸಿ ಪಾಯ್ವ
ಅರ್ವಿಗಳಿಂ (ಎಲ್ಲೆಲ್ಲಿಯೂ
ಭಯವನ್ನುಂಟುಮಾಡಿ
ಹರಿಯುವ ಬೆಟ್ಟದ

ಝುರಿಗಳಿಂದಲೂ) ಮದಾಂಧ ವನ ಗಂಧೇಭಂಗಳಿಂ (ಮದದಿಂದ ಸೊಕ್ಕಿದ ಕಾಡಾನೆಗಳಿಂದಲೂ) ಕಣ್ಗೆ ಅಗುರ್ವಿಸೆಯುಂ (ಕಣ್ಣಿಗೆ ಭಯವನ್ನುಂಟುಮಾಡಿದರೂ) ಚಿತ್ತದೊಳಂದು ಕಾಮ್ಯಕವನಂ ಮಾಡಿತ್ತು ಅತಿ ಪ್ರೀತಿಯಂ.

ಪದ್ಯ-೨೬:ಅರ್ಥ: ಎಲ್ಲ ದಿಕ್ಕುಗಳಲ್ಲಿಯೂ ಗರ್ಜಿಸುತ್ತಿರುವ

ಹುಲಿಗಳಿಂದಲೂ,
ಕಪ್ಪುಮೋಡವನ್ನು
ಆನೆಯೆಂದು ಭ್ರಮಿಸಿ ಸಿಡಿದು
ಆಕಾಶಕ್ಕೆ ವಿಶೇಷವಾಗಿ
ಹಾರುವ ಹಲವು
ಸಿಂಹಗಳಿಂದಲೂ,
ಎಲ್ಲೆಲ್ಲಿಯೂ
ಭಯವನ್ನುಂಟುಮಾಡಿ
ಹರಿಯುವ ಬೆಟ್ಟದ
ಝರಿಗಳಿಂದಲೂ, ಮದದಿಂದ
ಸೊಕ್ಕಿದ ಕಾಡಾನೆಗಳಿಂದಲೂ

ಕಾಮ್ಯಕವನವು ಕಣ್ಣಿಗೆ ಭಯವನ್ನುಂಟುಮಾಡಿದರೂ ಮನಸ್ಸಿಗೆ ಅತ್ಯಂತ ಪ್ರೀತಿಯನ್ನುಂಟುಮಾಡಿತು.

ವ|| ಅಂತು ಸೌಮ್ಯಭಯಂಕರಾಕರಾಮಪ್ಪ ಕಾಮ್ಯಕವನಮಂ ಪುಗುತಂದಲ್ಲಿ ತದ್ವನಾಪತಿಯಪ್ಪ ದೈತ್ಯಂ ಕಿವಿರನವರಂ ಪುಗಲೀಯದಡ್ಡಮಾಗಿರೆ-

ವಚನ:ಪದವಿಭಾಗ-

ಅರ್ಥ:ಅಂತು ಸೌಮ್ಯ ಭಯಂಕರ ಆಕರಾಮಪ್ಪ ಕಾಮ್ಯಕವನಮಂ ಪುಗುತಂದು (ಪ್ರವೇಶಿಸಿದಾಗ) ಅಲ್ಲಿ ತದ್ವನಾಪತಿಯಪ್ಪ ದೈತ್ಯಂ ಕಿವಿರನು ಅವರಂ ಪುಗಲೀಯದೆ ಅಡ್ಡಮಾಗಿರೆ-

ವಚನ:ಅರ್ಥ:ಹಾಗೆ ಸೌಮ್ಯವೂ ಭಯಂಕರವೂ ಆದ ಕಾಮ್ಯಕವನವನ್ನು

ಪ್ರವೇಶಿಸಿದಾಗ, ಆ ಕಾಡಿಗೆ ಒಡೆಯನಾದ ಕಿಮ್ಮೀರನೆಂಬ ರಾಕ್ಷಸನು ಅವರು ಪ್ರವೇಶ ಮಾಡುವುದಕ್ಕೆ ಅವಕಾಶಕೊಡದೆ ತಡೆದನು. ಹಾಗೆ ತಡೆದಾಗ-

ಕಿಮ್ಮೀರನ ಸಂಹಾರ

ಮ|| ಮಸಿಯಂ ಪುಂಜಿಸಿದಂತುಟಪ್ಪ ತನು ನೀಳಾಂಭೋಧರಂ ದಾಡೆಗಳ್

ಪೊಸ ಮಿಂಚುಗ್ರ
ವಿಲೋಚನಂ ದಿವಿಜ ಗೋಪಂ
ಕಾರೊ ಮೇಣ್ ಕಾಳ ರ|
ಕ್ಕಸನೋ ಪೇಟ್ನೆ ಬಂದು
ತಾಗೆ ಗದೆಯಂ ಕೊಂಡೆಯ್ದೆ
ಭೀಮಂ ಸಿಡಿ
ಲ್ದ ಸಿಡಿಲ್ ಪೊಯ್ದವೊಲಾಗೆ
ಪೊಯ್ದನಿಳೆಯೊಳ್ ಕಿವಿರನಂ
ವೀರನಂ|| ೨೭ ||

ಪದ್ಯ-೨೭:ಪದವಿಭಾಗ-

ಅರ್ಥ:മസിയം

ಪುಂಜಿಸಿದಂತುಟಪ್ಪ ತನು
ನೀಳಾಂಭೋಧರಂ -ನೀಲ
ಅಂಬ ಧರ +ಉ=ಕಾರ್ಮೋಡ
(ಕಪ್ಪು ಇದ್ದಿಲನ್ನು ಯನ್ನು
ಒಟ್ಟುಗೂಡಿಸಿದ ಹಾಗಿದ್ದ
ಅವನ ಶರೀರವೇ
ಕರಿಯಮೋಡ) ದಾಡೆಗಳ್
ಪೊಸ ಮಿಂಚು, ಉಗ್ರ
ವಿಲೋಚನಂ (ಕಣ್ಣು)
ದಿವಿಜಗೋಪಂ
(ಮಿಂಚುಹುಳುಗಳು) ಕಾರೊ

(ಮಳೆಗಾಲದ ರೂಪವ್ರೋ)
ಮೇಣ್ ಕಾಳ ರಕ್ಕಸನೋ
ಪೇಱು ಎನೆ ಬಂದು ತಾಗೆ
(ಬಂದು ಮೇಲೆಬೀಳಲು)
ಗದೆಯಂ ಕೊಂಡು ಎಯ್ದೆ
ಭೀಮಂ (ಭೀಮನು
ಗದೆಯನ್ನು ತೆಗೆದುಕೊಂಡು
ಅವನ ಹತ್ತರ ಹೋಗಿ) ಸಿಡಿಲ್ದು
ಸಿಡಿಲ್ ಪೊಯ್ದವೊಲಾಗೆ
ಪೊಯ್ದನು ಇಳೆಯೊಳ್
ಕಿವಿರನಂ

ವೀರನಂ(ಸಿಡಿಲುಹೊಡೆದ ಹಾಗೆ ವೀರನಾದ ಕಿಮ್ಮೀರನನ್ನು ಹೊಡೆದು ಭೂಮಿಯಲ್ಲಿ ಕೆಡವಿದನು)

ಪದ್ಯ-೨೭:ಅರ್ಥ: . ಕಪ್ಪು ಇದ್ದಿಲನ್ನು ಯನ್ನು ಒಟ್ಟುಗೂಡಿಸಿದ ಹಾಗಿದ್ದ ಅವನ ಶರೀರವೇ ಕರಿಯಮೋಡ, ಕೋರೆಹಲ್ಲುಗಳೇ ಮಿಂಚು, ಭಯಂಕರವಾದ ಕಣ್ಣುಗಳೇ

ಮಿಂಚುಹುಳುಗಳು, ಇದು ಮಳೆಗಾಲವೋ ಕಾಳರಾಕ್ಷಸನೋ ಎನ್ನುವ ಹಾಗೆ ಬಂದು ಮೇಲೆಬೀಳಲು, ಭೀಮನು ಗದೆಯನ್ನು ತೆಗೆದುಕೊಂಡು ಅವನ ಹತ್ತರ ಹೋಗಿ ಸಿಡಿದು-ಆರ್ಭಟಿಸಿ ಸಿಡಿಲುಹೊಡೆದ ಹಾಗೆ ವೀರನಾದ ಕಿರ್ಮ್ಮೀರನನ್ನು ಹೊಡೆದು ಭೂಮಿಯಲ್ಲಿ ಕೆಡವಿದನು.

<u>ಕಾಮ್ಯಕ ವನದಲ್ಲಿ ವಾಸ</u>

ವ|| ಅಂತು ಕಿವಿರನಂ ಕೊಂದು ಕಾಮ್ಯಕವನಮಂ ಪೊಕ್ಕು ತತ್ವನ ತಪೋಧನರ ಗೋಷ್ಠಿಯೊಳಮಾಟವಿಕರಟ್ಟ ಟ್ಟಿಯೊಳಂ ತಮಗಿಂದ್ರಪ್ರಸ್ಥದ ರಾಜ್ಯಶ್ರೀಯಂ ಮಸುಳಿಸೆ-

ವಚನ:ಪದವಿಭಾಗ-

ಅರ್ಥ:ಅಂತು ಕಿವಿರನಂ ಕೊಂದು ಕಾಮ್ಯಕವನಮಂ ಪೊಕ್ಕು (ಹೊಕ್ಕು) ತತ್ ವನ

ತಪೋಧನರ ಗೋಷ್ಠಿಯೊಳಂ ಆ ಅಟವಿಕರ ಅಟ್ಟಟ್ಟಿಯೊಳಂ ತಮಗೆ ಇಂದ್ರಪ್ರಸ್ಥದ ರಾಜ್ಯಶ್ರೀಯಂ ಮಸುಳಿಸೆ (ಕಂದಿಸುವಂತೆ ಇದ್ದರು.)-

ವಚನ:ಅರ್ಥ:ಹಾಗೆ ಕಿಮ್ಮೀರನನ್ನು ಕೊಂದು ಕಾಮ್ಯಕವನವನ್ನು ಪ್ರವೇಶಿಸಿ ಆ ಕಾಡಿನಲ್ಲಿದ್ದ ತಪಸ್ವಿಗಳ ಗುಂಪಿನಲ್ಲಿಯೂ ಅಲ್ಲಿಯ ಕಾಡುಜನರ ಸೇವೆಗಳಲ್ಲಿಯೂ

ಸುಖದಿಂದಿದ್ದರು. ಅಲ್ಲಿಯ ಸೌಖ್ಯವು ಅವರಿಗೆ ಇಂದ್ರಪ್ರಸ್ಥದ ರಾಜ್ಯವೈಭವವನ್ನು ಕಂದಿಸುವಂತೆ ಇದ್ದರು.

ಪಿರಿಯಕ್ಕರ|| ಪಿರಿಯ ಮರಂಗಳೆ ಮಾಡಮಾಗೆ ಪೊಳೆವೆಳದಳಿರ್ಗಳೆ ಸೆಜ್ಜೆಯಾಗೆ ಪಿರಿಯ ಮಡುಗಳೆ ಮಜ್ಜನಮಾಗೆ ಪೊಸ ನಾರೆ

ದೇವಾಂಗವಸ್ತ್ರಮಾಗೆ|

ಪರೆದ ತಙಗೆಲೆಯೆ

ಪರಿಯಣಮಾಗೆ

ಪಣ್ಪಲಮೆತ್ತಿದ ಬೋನಮಾಗೆ

ಸಿರಿಯ ಮಹಿಮೆಯಂ

ಮೆರೆಯಲೇನಾರ್ತುದೊ

ಬನದೊಳಿರ್ಪಿರವಾ

ಪಾಂಡವರಾ|| ೨೮ ||

ಪದ್ಯ-೨೮:ಪದವಿಭಾಗ-

ಅರ್ಥ:ಪಿರಿಯ ಮರಂಗಳೆ

ಮಾಡಮಾಗೆ

(ಮನೆಯಾಗಲು)
ಪೊಳೆವೆಳದಳಿರ್ಗಳೆ
ಸೆಜ್ಜೆಯಾಗೆಪಿರಿಯ (ಎಳೆಯ
ಚಿಗುರೆಲೆಗಳೇ
ಹಾಸಿಗೆಯಾಗಲು) ಮಡುಗಳೆ
ಮಜ್ಜನಮಾಗೆ (ಆಳವಾದ
ಹೊಂಡಗಳೇ
ಸ್ನಾನಗೃಹವಾಗಲು) ಪೊಸ
ನಾರೆ ದೇವಾಂಗವಸ್ತ್ರಮಾಗೆ
(ಹೊಸ ನಾರುಗಳೇ
ವಸ್ತ್ರಕ್ಕಾಗಲು- ನಾರುಮಡಿ)

ಪರೆದ ತಱಗೆಲೆಯೆ
ಪರಿಯಣಮಾಗೆ (ಹರಡಿದ/
ಹರವಾದ ತರಗೆಲೆಯೇ
ಹರಿವಾಣ - ಊಟದ
ತಟ್ಟೆಯಾಗಲು,) ಪಣ್ಫಲಂ
(ಪಣ್ ಫಲಂ) ಎತ್ತಿದ
ಬೋನಮಾಗೆ, ಸಿರಿಯ
ಮಹಿಮೆಯಂ ಮೆರೆಯಲು
ಏನು ಆರ್ತುದೊ
(ಸಮರ್ಥವೊ, ಅರ್ಹವೊ)

ಬನದೊಳು ಇರ್ಪ ಇರವ ಆ ಪಾಂಡವರಾ

ಪದ್ಯ-೨೮:ಅರ್ಥ:

ದೊಡ್ಡಮರಗಳೇ ಮನೆಯಾಗಲು, ಆಳವಾದ ಹೊಂಡಗಳೇ ಸ್ನಾನಗೃಹವಾಗಲು ಹೊಸ ನಾರೆ ರೇಷ್ಮೆಯ ಬಟ್ಟೆಯಾಯಿತು. ಹರಡಿದ/ ಹರವಾದ ತರಗೆಲೆಯೇ ಹರಿವಾಣ - ಊಟದ

ತಟ್ಟೆಯಾಗಲು. ಹಣ್ಣು ಹಂಪಲುಗಳೇ ಶ್ರೇಷ್ಠವಾದ ಭೋಜನವಾಗಲು, ಪಾಂಡವರ ವನವಾಸವೂ ಐಶ್ವರ್ಯದ ಮಹತ್ವವನ್ನು ಪ್ರಕಟಿಸಲು ಏನು ಅರ್ಹವಾಯಿತೊ!. ಹೀಗೆ ಸರಳತನವೇ ಐಶ್ವರ್ಯವಾಯಿತು!

ಉ|| ಪಾಸ ಸಿಂಹಪೀಠಮಳಿನೀರುತಿ

ಮಂಗಳಗೀತಿ ಭೂತಳಂ
ಪಾಸು ಮೃಗವ್ರಜಂ ಪರಿಜನಂ
ಪೊದರೋಲಗಸಾಲೆ
ಮೊಕ್ಕಳಂ|
ಬೀಸುವ ಗಾಳಿ ಚಾಮರದ
ಗಾಳಿಯೆನಲ್ ದೊರೆವೆತ್ತದೇಂ
ಸುಖಾ
ವಾಸ ನಿಮಿತ್ತವಾಯ್ತೊ
ವನವಾಸನಿವಾಸಮೆ
ಪಾಂಡುಪುತ್ರರಾ|| ೨೯||

ಪದ್ಯ-೨೯:ಪದವಿಭಾಗ-ಅರ್ಥ:ಪಾಸ ಸಿಂಹಪೀಠಂ ಅಳಿನೀರುತಿ ಮಂಗಳಗೀತಿ (ದುಂಬಿಯ ಸದ್ದೇ ಮಂಗಳವಾದ್ಯ,) ಭೂತಳಂ ಪಾಸು (ಭೂಮಿಯೇ ಹಾಸಿಗೆ) ಮೃಗವ್ರಜಂ ಪರಿಜನಂ (ಮೃಗಗಳ ಸಮೂಹವೇ ಪರಿವಾರ), ಪೊದರೋಲಗಸಾಲೆ (ಗಿಡಗಳ ಹೊದರುಗಳೇ ಸಭಾಸ್ಥಾನ)

ಮೊಕ್ಕಳಂ (ವಿಶೇಷವಾಗಿ)
ಬೀಸುವ ಗಾಳಿ ಚಾಮರದ
ಗಾಳಿಯೆನಲ್ (ಚಾಮರದ
ಗಾಳಿ ಎನ್ನುವ ಹಾಗಿರಲು)
ದೊರೆವೆತ್ತದು ಏಂ(ಎಷ್ಟೊಂದು
ಸಮಾನವಾಯಿತು) ಸುಖ
ಆವಾಸ ನಿಮಿತ್ತವಾಯ್ತೊ
ವನವಾಸ ನಿವಾಸಮೆ
ಪಾಂಡುಪುತ್ರರಾ (ಪಾಂಡವರ
ವನವಾಸವೇ ರಾಜ್ಯವಾಸಕ್ಕೆ
ಸಮಾನವಾಗಿ ಅವರ

ಸುಖಾವಾಸಕ್ಕೆ

ಕಾರಣವಾಯಿತು)|

ಪದ್ಯ-೨೯:ಅರ್ಥ: ಹಾಸು

ಬಂಡೆಯೇ ಸಿಂಹಾಸನ,

ದುಂಬಿಯ ಸದ್ದೇ

ಮಂಗಳವಾದ್ಯ, ಭೂಮಿಯೇ

ಹಾಸಿಗೆ, ಮೃಗಗಳ

ಸಮೂಹವೇ ಪರಿವಾರ,

ಹೊದರುಗಳೇ ಸಭಾಸ್ಥಾನ,

ವಿಶೇಷವಾಗಿ ಬೀಸುವ

ಗಾಳಿಯೇ ಚಾಮರದ ಗಾಳಿ

ಎನ್ನುವ ಹಾಗಿರಲು ಪಾಂಡವರ ವನವಾಸವೇ ರಾಜ್ಯವಾಸಕ್ಕೆ ಸಮಾನವಾಗಿ ಅವರ ಸುಖಾವಾಸಕ್ಕೆ ಕಾರಣವಾಯಿತು.

ದ್ವೈತವನಕ್ಕೆ ಪಾಂಡವರ ಪಯಣ

ವ|| ಅಂತು ಕಾಮ್ಯಕವನದೊಳಯ್ದು ವರುಷಮಿರ್ದಾಱನೆಯ

ವರುಷದೊಳದಱ
ಕೆಲದೊಳೊಂದಿ ಸಂದಿಸಿ
ಗಗನತಳಮಂ
ತಱುಂಬುವಂತಿರ್ದ
ಶಿಖರಿಶಿಖರಂಗಳಿಂದಂ
ದೆಸೆಗಳಂ ತಡವರಿಸಿ ಕೊಳ್ವಂತೆ
ಬಳ್ವವ ಬಳೆದು ಸೊಗಯಿಸುವ
ಪೆರ್ಮರಂಗಳಿಂದಂ
ವನಲಕ್ಷ್ಮಿಯ
ಗೋಮಂಡಲದಂತಿರ್ದ ಕಡವಿ
ಕಾಡೆರ್ಮೆಯ ಪಿಂಡುಗಳಿಂದಂ

ದೆಸೆಗಳ್ಗೆ ಬೆರ್ಚಿ ಮೂಂಕಿಱಿದ ವನಮಹಿಷಿಗಳಿಂ ಮದಹಸ್ತಿಯಂತೆ ಮರವಾಯ್ವ ಪುಲಿಗಳಿನತಿ ಭಯಂಕರಾಕಾರಮಪ್ಪ ದ್ವೈತವನಕ್ಕೆ ಬಂದು ತದ್ವನೋಪಕಂಠವರ್ತಿಗಳಪ್ಪ ತಾಪಸಾಶ್ರಮಂಗಳೊಳ್ ವಿಶ್ರಮಿಸಲ್ ಬಗೆದು-

ವಚನ:ಪದವಿಭಾಗ-

ಅರ್ಥ:ಅಂತು

ಕಾಮ್ಯಕವನದೊಳು ಅಯ್ದು ವರುಷಮಂ ಇರ್ದು ಆಱನೆಯ ವರುಷದೊಳು ಅದಱ ಕೆಲದೊಳು ಪಕ್ಕದಲ್ಲಿ ಒಂದಿ ಸಂದಿಸಿ ಗಗನತಳಮಂ ತಱುಂಬುವಂತೆ ಇರ್ದ (ಆಕಾಶಪ್ರದೇಶವನ್ನು ಅಪ್ಪುವ ಹಾಗಿದ್ದ) ಶಿಖರಿ ಶಿಖರಂಗಳಿಂದಂ (ಬೆಟ್ಟ ಶಿಖರಗಳಿಂದಲೂ,) ದೆಸೆಗಳಂ ತಡವರಿಸಿ ಕೊಳ್ವಂತೆ ಬಳ್ವವ

ಬಳೆದು ಸೊಗಯಿಸುವ
ಪೆರ್ಮರಂಗಳಿಂದಂ
(ದಿಕ್ಕುಗಳನ್ನೂ ಹುಡುಕುವಂತೆ
ಕೊಬ್ಬಿ ಬೆಳೆದು
ಸೊಗಯಿಸುತ್ತಿರುವ ದೊಡ್ಡ
ಮರಗಳಿಂದಲೂ)
ವನಲಕ್ಷ್ಮಿಯ
ಗೋಮಂಡಲದಂತಿರ್ದ ಕಡವಿ
ಕಾಡೆರ್ಮೆಯ ಪಿಂಡುಗಳಿಂದಂ
(ವನಲಕ್ಷ್ಮಿಯ ಗೋವುಗಳ
ಗುಂಪಿನ ಹಾಗಿರುವ ಕಡವು

ಮತ್ತು ಕಾಡುಕೋಣಗಳ
ಹಿಂಡುಗಳಿಂದಲೂ), ದೆಸೆಗಳ್ಗೆ
ಬೆರ್ಚಿ ಮೂಂಕಿಱಿದ
ವನಮಹಿಷಿಗಳಿಂ
(ದಿಕ್ಕುದಿಕ್ಕುಗಳಿಗೆ ಹೆದರಿ
ವಾಸನೆ ನೋಡಲು ಮೂಗನ್ನು
ಚಾಚುತ್ತಿರುವ
ಕಾಡೆಮ್ಮೆಗಳಿಂದಲೂ),
ಮದಹಸ್ತಿಯಂತೆ ಮರವಾಯ್ವ
ಪುಲಿಗಳಿನ ಅತಿ
ಭಯಂಕರಾಕಾರಮಪ್ಪ

ದ್ವೈತವನಕ್ಕೆ ಬಂದು
(ಮದ್ದಾನೆಯಂತೆ ಬಂದು
ಮರಕ್ಕೆ ಹಾಯುವ
ಹುಲಿಗಳಿರುವ ಅತ್ಯಂತ
ಭಯಂಕರವಾಗಿರುವ
ದ್ವೈತವನಕ್ಕೆ ಬಂದು) ತದ್ ವನ
ಉಪಕಂಠ ವರ್ತಿಗಳಪ್ಪ (ಆ
ವನದ ಸಮೀಪದಲ್ಲಿರುವ)
ತಾಪಸಾಶ್ರಮಂಗಳೊಳ್
ವಿಶ್ರಮಿಸಲ್ ಬಗೆದು

(ವಿಶ್ರಮಿಸಿಕೊಳ್ಳಲು ಯೋಚಿಸಿ)-

ವಚನ:ಅರ್ಥ:|| ಹಾಗೆ ಕಾಮ್ಯಕವನದಲ್ಲಿ ಪಾಂಡವರು ಅಯ್ದು ವರ್ಷಗಳ ಕಾಲವಿದ್ದು ಆರನೆಯ ವರ್ಷದಲ್ಲಿ ಅದರ ಪಕ್ಕದಲ್ಲಿಯೇ ಸೇರಿಕೊಂಡು ಆಕಾಶಪ್ರದೇಶವನ್ನು ಅಪ್ಪುವ ಹಾಗಿದ್ದ ಬೆಟ್ಟ ಶಿಖರಗಳಿಂದಲೂ, ದಿಕ್ಕುಗಳನ್ನೂ ಹುಡುಕುವಂತೆ

ಕೊಬ್ಬಿ ಬೆಳೆದು
ಸೊಗಯಿಸುತ್ತಿರುವ ದೊಡ್ಡ
ಮರಗಳಿಂದಲೂ,
ವನಲಕ್ಷ್ಮಿಯ ಗೋವುಗಳ
ಗುಂಪಿನ ಹಾಗಿರುವ ಕಡವು
ಮತ್ತು ಕಾಡುಕೋಣಗಳ
ಹಿಂಡುಗಳಿಂದಲೂ,
ದಿಕ್ಕುದಿಕ್ಕುಗಳಿಗೆ ಹೆದರಿ
ವಾಸನೆ ನೋಡಲು ಮೂಗನ್ನು
ಚಾಚುತ್ತಿರುವ
ಕಾಡೆಮ್ಮೆಗಳಿಂದಲೂ,

ಮದ್ದಾನೆಯಂತೆ ಬಂದು
ಮರಕ್ಕೆ ಹಾಯುವ
ಹುಲಿಗಳಿರುವ ಅತ್ಯಂತ
ಭಯಂಕರವಾಗಿರುವ
ದ್ವೈತವನಕ್ಕೆ ಬಂದು ಆ ವನದ
ಸಮೀಪದಲ್ಲಿರುವ ತಪಸ್ವಿಗಳ
ಆಶ್ರಮಗಳಲ್ಲಿ
ವಿಶ್ರಮಿಸಿಕೊಳ್ಳಲು
ಯೋಚಿಸಿದರು. ಯೋಚಿಸಿ

ಮ|| ಪುಗಲಿಲ್ಲೀ
ಬನಮಾರ್ಗಮಿಂಬು ನೆಲಸಲ್

ನಾರುಂಟುಡಲ್ ಮೆಲ್ಲೆ ಕೊಂ
ಬುಗಳೊಳ್ ಪಣ್ಪಲಮುಂಟು
ಮೀಯೆ ಕುಡಿಯಲ್
ನೀರುಂಟು ಪದ್ಮಾಕರಾ|
ಳಿಗಳೊಳ್ ತಣ್ಪುಗಳುಂಟು
ಹೇಮಲತಿಕಾ
ಕುಂಜಂಗಳೊಳ್ ನಮ್ಮ ನ
ನ್ನಿಗೆ ಬನ್ನಂ ಬರಲೀಯದೀ
ಬನದೊಳಿರ್ದೇಂ ಕಾಲಮಂ
ಪಾರೆವೇ|| ೩೦||

ಪದ್ಯ-೦೩೦:ಪದವಿಭಾಗ-ಅರ್ಥ:ಪುಗಲು ಇಲ್ಲ ಈ ಬನಂ ಆರ್ಗಂ ಇಂಬು ನೆಲಸಲ್ (ಈ ವನವು ಯಾರಿಗೂ ಹೊಗಲು ನಲೆಸಲು ಇಂಬಿಲ್ಲ-ಅವಕಾಶವಿಲ್ಲ), ನಾರುಂಟು ಉಡಲ್, ಮೆಲ್ಲೆ ಕೊಂಬುಗಳೊಳ್ (ರೆಂಬೆಗಳಲ್ಲಿ) ಪಣ್ ಫಲಮುಂಟು, ಮೀಯೆ(ಸ್ನಾನಕ್ಕೆ) ಕುಡಿಯಲ್

ನೀರುಂಟು,
ಪದ್ಮಾಕರಾಳಿಗಳೊಳ್
ತಣ್ಪುಗಳುಂಟು (ತವರೆಯ
ಸಾಲು ಕೊಳಗಳಲ್ಲಿ ತಂಪಿದೆ)
ಹೇಮಲತಿಕಾ
ಕುಂಜಂಗಳೊಳ್
(ಹೊಂಬಣ್ಣದ
ಬಳ್ಳಿಮನೆಗಳಲ್ಲಿ ವಾಸವಿದ್ದರೆ,)
ನಮ್ಮ ನನ್ನಿಗೆ ಬನ್ನಂ
ಬರಲೀಯದು (ನಮ್ಮ
ಸತ್ಯಪರಿಪಾಲನೆಗೆ

ಭಂಗಬರುವುದಿಲ್ಲ.) ಈ ಬನದೊಳಿರ್ದು ಏಂ ಕಾಲಮಂ ಪಾರೆವೇ (ಈ ವನದಲ್ಲಿಯೇ ಇದ್ದು ಕಾಲಯಾಪನೆ ಮಾಡಮಾಡೋಣವೇ?)

ಪದ್ಯ-೩೦:ಅರ್ಥ: ಈ ವನವನ್ನು ಯಾರಿಗೂ ಹೊಗಲು ನಲೆಸಲು ಇಂಬಿಲ್ಲ- ಅವಕಾಶವಿಲ್ಲ ; ಇರುವುದಕ್ಕೆ ಸ್ಥಳಾವಕಾಶವೂ ಉಡಲು ನಾರೂ ಉಂಟು;

ಊಟಮಾಡಲು
ಕೊಂಬೆಗಳಲ್ಲಿ ಹಣ್ಣು
ಹಂಪಲುವುಂಟು;
ಸ್ನಾನಮಾಡಲೂ ಕುಡಿಯಲೂ
ಕೊಳಗಳಲ್ಲಿ ನೀರುಂಟು;
ಹೊಂಬಣ್ಣದ ಬಳ್ಳಿಮನೆಗಳಲ್ಲಿ
ತಂಪುಂಟು; ಈ ವನದಲ್ಲಿ
ನಮ್ಮ ಸತ್ಯಪರಿಪಾಲನೆಗೆ
ಭಂಗಬರುವುದಿಲ್ಲ. ಈ
ವನದಲ್ಲಿಯೇ ಇದ್ದು
ಕಾಲಯಾಪನೆ

ಮಾಡಮಾಡೋಣವೇ-
(ಎಂದು ಯೋಚಿಸಿ ಅಲ್ಲಿಯೇ
ವಾಸಿಸಲು ನಿರ್ಧರಿಸಿದರು)

<u>ಸೈಂಧವನಿಂದ ದ್ರೌಪದಿಯ ಅಪಹರಣ- ಭೀಮಾರ್ಜುನರಿಂದ ಸೋಲು ಅಪಮಾನ</u>

ವ|| ಎಂದು ತಮ್ಮೊಳಯ್ವರುಮೇಕ ಕಾರ್ಯಾಳೋಚನಪರರಾಗಿ ದ್ವೈತವನದೊಳದ್ವೈತ

ಸಾಹಸರಿರ್ಪನ್ನೆಗಮೊಂದು ದಿವಸಂ ದುರ್ಯೋಧನನ ಮಯ್ದುನಂ ಸಿಂಧುದೇಶಾಶ್ವರಂ ಸೈಂಧವನವರಂ ಛಿದ್ರಿಸಲೆಂದು ಮೆಯ್ಗರೆದು ಬಂದು-

ವಚನ:ಪದವಿಭಾಗ-

ಅರ್ಥ:ಎಂದು ತಮ್ಮೊಳು ಐಯ್ವರುಂ ಏಕ ಕಾರ್ಯಾಳೋಚನ ಪರರಾಗಿ (ಅಲ್ಲಿ ವಾಸಿಸುವ ಕಾರ್ಯಲ್ಲಿ ಆಲೋಚಿಸಿ, ಅಲ್ಲಿರಲು

ನಿರ್ಧರಿಸಿದರು)
ದ್ವೈತವನದೊಳು ಅದ್ವೈತ
ಸಾಹಸರು ಇರ್ಪನ್ನೆಗಂ
(ಅದ್ವಿತೀಯ ಬಲಶಾಲಿಗಳಾದ
ಅವರು ಆ ದ್ವೈತವನದಲ್ಲಿ
ಇರುವಾಗ) ಒಂದು ದಿವಸಂ
ದುರ್ಯೋಧನನ ಮಯ್ದುನಂ
ಸಿಂಧುದೇಶಾಶ್ವರಂ
ಸೈಂಧವನು ಅವರಂ
ಛಿದ್ರಿಸಲೆಂದು (ಛಿದ್ರಿಸು-
ರಹಸ್ಯವಾಗಿ ಮೋಸಮಾಡು

ಹಿಂಸಿಸು) ಮೆಯ್ಗರೆದು ಬಂದು (ಪಾಂಡವರನ್ನು ರಹಸ್ಯವಾಗಿ ಹಿಂಸಿಸಬೇಕೆಂದು ಮೈಮರೆಸಿಕೊಂಡು ಬಂದರು)- **ವಚನ:ಅರ್ಥ**:ಐದು ಜನ ಪಾಂಡವರೂ ತಮ್ಮಲ್ಲಿ ಅಲ್ಲಿ ವಾಸಿಸುವ ಕಾರ್ಯಲ್ಲಿ ಆಲೋಚಿಸಿ, ಅದ್ವಿತೀಯ ಬಲಶಾಲಿಗಳಾದ ಅವರು ಆ ದ್ವೈತವನದಲ್ಲಿ ಇರುವಾಗ, ಅಷ್ಟರಲ್ಲಿ ಒಂದು ದಿವಸ

ದುರ್ಯೋಧನನ ಮೈದುನನೂ ಸಿಂಧುದೇಶಾಪತಿಯೂ ಆದ ಸೈಂಧವನು ಪಾಂಡವರನ್ನು ರಹಸ್ಯವಾಗಿ ಹಿಂಸಿಸಬೇಕೆಂದು ಮೈಮರೆಸಿಕೊಂಡು ಬಂದರು.

ಮ|| ಮೃಗಯಾಕ್ರೀಡೆಗೆ ಪಾಂಡುರಾಜತನಯರ್ ಪೋಪನ್ನೆಗಂ ಬಂದು ತೊ ಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ದನ|

ನ್ನೆಗಮಂತಾ

ಪಡೆಮಾತುಗಳೇಳ್ದತಿಬಳರ್

ಭೀಮಾರ್ಜುನರ್ ಕಾಯ್ವು ಕೆ

ಯ್ಮೆಗೆ ಬೆನ್ನಂ ಪರಿದೆತ್ತ

ಪೋಪೆಯೆಲವೋ ಪೋ

ಪೋಗಲೆಂದೆಯ್ದಿದರ್|| ೩೧||

ಪದ್ಯ-೩೧:ಪದವಿಭಾಗ-

ಅರ್ಥ:ಮೃಗಯಾಕ್ರೀಡೆಗೆ

ಪಾಂಡುರಾಜತನಯರ್

ಪೋಪನ್ನೆಗಂ ಬಂದು (ಆ

ಪಾಂಡುಪುತ್ರರು ಬೇಟೆಗೆ

ಹೋಗಿರುವ ಸಮಯವನ್ನೇ ನೋಡಿ ಬಂದು) ತೊಟ್ಟಗೆ ಪಾಂಚಾಳಿಯನು ಎತ್ತಿ ತನ್ನ ರಥದೊಳ್ ತಂದಿಟ್ಟುಕೊಂಡು ಉಯ್ದನು (ಇದ್ದಕ್ಕಿದ್ದ ಹಾಗೆ ದ್ರೌಪದಿಯನ್ನೆತ್ತಿ ತನ್ನ ರಥದಲ್ಲಿಟ್ಟುಕೊಂಡು ಹೋದನು); ಅನ್ನೆಗಂ ಅಂತು ಆ ಪಡೆಮಾತುಗಳ ಏಳ್ದತಿಬಳರ್ ಭೀಮಾರ್ಜುನರ್ ಕಾಯ್ದು -

ಕೆಯ್ಮೆಗೆ- ಕೈ ಮಿಗೆ- ಕೋಪ ಮಿತಿಮೀರಿಹೆಚ್ಚಲು (ಅಷ್ಟರಲ್ಲಿ ಆ ಸಮಾಚಾರವನ್ನು ಕೇಳಿ ಬಹುಸಾಹಸಿಗಳಾದ ಭೀಮಾರ್ಜುನರ ಕೋಪವು ಮಿತಿಮೀರಿ ಹೆಚ್ಚಲು) ಬೆನ್ನಂ ಪರಿದು (ಅವನ ಬೆನ್ನಿನ ಹಿಂದೆಯೇ ಓಡಿ) ಎತ್ತ ಪೋಪೆ ಯೆಲವೋ ಪೋ ಪೋಗಲ್ ಎಂದು ಎಯ್ದಿದರ್

(ಹೋಗಬೇಡ ಎಂದು ಅವನನ್ನು ಸಮೀಪಿಸಿದರು)

ಪದ್ಯ-೩೧:ಅರ್ಥ: ಆ ಪಾಂಡುಪುತ್ರರು ಬೇಟೆಗೆ ಹೋಗಿರುವ ಸಮಯವನ್ನೇ ನೋಡಿ, ಸಿಂಧುದೇಶದರಾಜ ಸೈಂಧವನು ಬಂದು ಇದ್ದಕ್ಕಿದ್ದ ಹಾಗೆ ದ್ರೌಪದಿಯನ್ನೆತ್ತಿ ತನ್ನ ರಥದಲ್ಲಿಟ್ಟುಕೊಂಡು ಹೋದನು. ಅಷ್ಟರಲ್ಲಿ ಆ ಸಮಾಚಾರವನ್ನು ಕೇಳಿ

ಬಹುಸಾಹಸಿಗಳಾದ
ಭೀಮಾರ್ಜುನರ ಕೋಪವು
ಮಿತಿಮೀರಿ ಹೆಚ್ಚಲು, ಅವನ
ಬೆನ್ನಿನ ಹಿಂದೆಯೇ ಓಡಿ ಎಲ್ಲಿಗೆ
ಹೋಗುವೆಯೋ?
ಹೋಗಬೇಡ ಎಂದು
ಅವನನ್ನು ಸಮೀಪಿಸಿದರು.

ವ|| ಅಂತೆಯ್ದಿ
ತದ್ಗದಾಘಾತದೊಳಂ
ಬಾಣಪಾತದೊಳಮವನ
ರಥಮಂ ಶತಚೂರ್ಣಂ ಮಾಡಿ

ಜಯದ್ರಥನಂ

ಕೋಡಗಗಟ್ಟುಗಟ್ಟಿ ಬೆನ್ನಂ

ಬಿಲ್ಲ ಕೊಪ್ಪಿನೊಳಿೞಿದು

ನಡೆಯೆಂದು ನಡೆಯಿಸಿ

ಪಾಂಚಾಳಿಯಂ

ಲೀಲೆಯಿಂದೊಡಗೊಂಡು

ಬೀಡಿಂಗೆ ವಂದಿ

ಧರ್ಮಪುತ್ರಂಗೆ

ತೋೞಿದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಎಯ್ದಿ ತದ್

ಗದಾಘಾತದೊಳಂ
ಬಾಣಪಾತದೊಳಂ ಅವನ
ರಥಮಂ ಶತಚೂರ್ಣಂ ಮಾಡಿ
(ಆ ಗದೆಯ
ಹೊಡೆತದಿಂದಲೂ ಬಾಣ
ಪ್ರಯೋಗದಿಂದಲೂ ಅವನ
ರಥವನ್ನು ನೂರು
ಚೂರುಮಾಡಿ) ಜಯದ್ರಥನಂ
ಕೋಡಗಗಟ್ಟುಗಟ್ಟಿ
(ಕಪಿಯನ್ನು ಬಿಗಿಯುವಂತೆ
ಬಿಗಿದು) ಬೆನ್ನಂ ಬಿಲ್ಲ

ಕೊಪ್ಪಿನೊಳ ಇಱಿದು (ಬಿಲ್ಲಿನ ತುದಿಯಿಂದ ತಿವಿದು) ನಡೆಯೆಂದು ನಡೆಯಿಸಿ ಪಾಂಚಾಳಿಯಂ ಲೀಲೆಯಿಂದ ಒಡಗೊಂಡು ಬೀಡಿಂಗೆ ವಂದಿ ಧರ್ಮಪುತ್ರಂಗೆ ತೋಱಿದೊಡೆ-

ವಚನ:ಅರ್ಥ:ಹಾಗೆ ಹೋಗಿ ಅವನ/ಆ ಗದೆಯ ಹೊಡೆತದಿಂದಲೂ ಬಾಣ ಪ್ರಯೋಗದಿಂದಲೂ ಅವನ

ರಥವನ್ನು ನೂರು
ಚೂರುಮಾಡಿ, ಸೈಂಧವನನ್ನು
ಕಪಿಯನ್ನು ಬಿಗಿಯುವಂತೆ
ಬಿಗಿದು ಅವನ ಬೆನ್ನನ್ನು
ಬಿಲ್ಲಿನ ತುದಿಯಿಂದ ತಿವಿದು
ಗಾಯಮಾಡಿ ನಡೆ ಎಂದು
ನಡೆಯಿಸಿ, ದ್ರೌಪದಿಯೊಡನೆ
ಸಂತಸದಿಂದ ಬಿಡದಿಗೆ ಬಂದು
ಧರ್ಮರಾಜನಿಗೆ ಅವನನ್ನು
ತೋರಿಸಿದರು.

ಕಂ|| ಲಾಕ್ಷಾಗೃಹಮಂ ಪುಗಿಸಲು ಮಕ್ಷಕ್ರೀಡೆಯೊಳ್ ಧರಣಿಯಂ ಕೊಳಲುಂ ಪಿಂ| ಗಾಕ್ಷಂಗೆವೇೞ್ದು ಸೈರಿಸ ದಾಕ್ಷೇಪದಿನೆಮ್ಮನಿಲ್ಲಿ ಛಿದ್ರಿಸ ಬಂದೈ|| ೩೨ ||

ಪದ್ಯ-೩೨:ಪದವಿಭಾಗ-ಅರ್ಥ:ಲಾಕ್ಷಾಗೃಹಮಂ ಪುಗಿಸಲುಂ(ಅರಗಿನ ಮನೆಯನ್ನು

ಪ್ರವೇಶಮಾಡಿಸಲೂ)
ಅಕ್ಷಕ್ರೀಡೆಯೊಳೆ ಧರಣಿಯಂ
ಕೊಳಲುಂ ಪಿಂಗಾಕ್ಷಂಗೆ
ವೇಲ್ದಿ (ಪಗಡೆಯಾಟದಿಂದ
ರಾಜ್ಯವನ್ನು ಕಸಿದುಕೊಳಲೂ
ದುರ್ಯೋಧನನಿಗೆ
ಪ್ರೇರೇಪಿಸಿ) ಸೈರಿಸದೆ
ಆಕ್ಷೇಪದಿಂ ಎಮ್ಮನು ಇಲ್ಲಿ
ಛಿದ್ರಿಸ ಬಂದೈ (ನಮ್ಮನ್ನು
ದೌಷ್ಟ್ಯದಿಂದ ಇಲ್ಲಿಯೂ
ಛಿದ್ರಿಸಲು ಬಂದೆಯಾ?')

ಪದ್ಯ-೩೨:ಅರ್ಥ: ಅರಗಿನ ಮನೆಯನ್ನು ಪ್ರವೇಶಮಾಡಿಸಲೂ ಪಗಡೆಯಾಟದಿಂದ ರಾಜ್ಯವನ್ನು ಕಸಿದುಕೊಳಲೂ ದುರ್ಯೋಧನನಿಗೆ ಪ್ರೇರೇಪಿಸಿ (ಅಷ್ಟಕ್ಕೇ) ತೃಪ್ತಿಪಡದೆ ನಮ್ಮನ್ನು ದೌಷ್ಟ್ಯದಿಂದ ಇಲ್ಲಿಯೂ ಛಿದ್ರಿಸಲು ಬಂದೆಯಾ?’

ದ್ವೈತವನದಲ್ಲಿ ಗಂಧರ್ವರಿಂದ ದುರ್ಯೋಧನನ ಸೋದರರ ಬಂಧನ- ಧರ್ಮಜನ ಕರುಣೆಯಿಂದ ಜೀವದಾನ- ಅಪಮಾನ

ವ|| ಎಂದು ನಿನ್ನಂ ಪರಿಭವಕ್ಕೆ ತಂದು ನಿನ್ನ ಯಶಮಂ ಕಿಡಿಸಿದೆವಿನ್ ಕೊಂದೊಡೇವಂದಪುದೆಂದು ದುರ್ಯೋಧನನಲ್ಲಿಗೆ ಪೋಗೆಂದು ಕಟ್ಟಿದ ಕಟ್ಟುಗಳಂ

ಬಿಟ್ಟು ಕಳೆದೊಡೆ ಜಯದ್ರಥಂ
ಸಿಗ್ಗಾಗಿ ಕೈಲಾಸದೊಳೀಶ್ವರಂಗೆ
ತಪಂಗೆಯ್ದು ಮೆಚ್ಚಿಸಿ
ಪಾಂಡವರನೊಂದು
ದಿವಸದನುವರದೊಳ್
ಗೆಲ್ವೆನಕ್ಕೆಂದು ಬರಂಬಡೆದು
ಪೋದನಿತ್ತ ದುರ್ಯೋಧನಂ
ಸಮಸ್ತಸಾಧನಸಹಿತನಾಗಿ
ಕಾಡೊಳ್ ಬೇಡರಂತೆ
ತೊಳಲ್ವ ದಾಯಿಗರ ಕಂದಿ
ಕುಂದಿದ ಮೊಗಂಗಳಂ

ನೋಡುವುದುಮೆನ್ನನವರಿಂ
ನೋಡಿಸುವುದಮೀಯೆರಡೆ
ಸಂಸಾರಫಲಮೆಂದು,
ನಾಗಪುರದಿಂ ಪೊಱಮಟ್ಟು
ದುಶ್ಶ್ಯಾಸನಾದಿಗಳಪ್ಪ
ನೂರ್ವರ್ ತಮ್ಮಂದಿರುಂ
ಭಾನುಮತಿಯುಂ
ಚಂದ್ರಮತಿಯುಮೆಂಬ
ಬೇಟದರಸಿಯರುಂ ಲಕ್ಕಣಂ
ಮೊದಲಾಗೆ ನೂರ್ವರ್
ಮಕ್ಕಳುಂ ಗಾಂಗೇಯ ದ್ರೋಣ

ಕೃಪ ವಿದುರ
ಪ್ರಭೃತಿಗಳುಮಶ್ವತ್ಥಾಮ ಕರ್ಣ
ಶಲ್ಯ ಶಕುನಿ ಸೈಂಧವ
ಪ್ರಮುಖನಾಯಕರುಂಬೆರಸು
ಬೇಂಟೆಯ ನೆವದಿಂ ಬಂದು
ದ್ವೈತವನದ ಕೆಲದ
ನಂದನವನದೊಳ್
ಪಾಂಡವರ್ಗೆ ಸಮೀಪಮಾಗೆ
ಬೀಡು ಬಿಟ್ಟು ಪಾಡಿಸುತ್ತುಂ
ಪೊಗೞಿಸುತ್ತಮಿರ್ದನನ್ನೆಗಂ
ಪಗೆಯಿೞಿಯಬಂದರ

ಮೂಗನರಿದರೆಂಬಂತನಿಬರಂ
ಬಾಯಂ ಬಿಟ್ಟು ನೋಡೆ
ಮೂಗನರಿದರೆಂಬಂತನಿಬರಂ
ಬಾಯಂ ನೋಡೆ ನೋಡೆ
ಪೂರ್ವಜನ್ಮದ ಪಗೆ
ಚಿತ್ರಾಂಗದನೆಂಬ
ಗಂಧರ್ವನಱುವತ್ತು ಕೋಟಿ
ಗಾಂಧರ್ವಬಲಂಬೆರಸು
ಬಂದು ದುರ್ಯೋಧನ
ದುಶ್ಶ್ಯಾಸನರಿರ್ವರುಮಂ
ಕೋಡಗಗಟ್ಟುಗಟ್ಟಿ-

ವಚನ:ಪದವಿಭಾಗ-ಅರ್ಥ:ಎಂದು ನಿನ್ನಂ ಪರಿಭವಕ್ಕೆ ತಂದು (ನಿನ್ನನ್ನು ಸೋಲಿಸಿ ಅವಮಾನ ಪಡಿಸಿ) ನಿನ್ನ ಯಶಮಂ ಕಿಡಿಸಿದೆವಿನ್ ಕೊಂದೊಡೆ ಏವಂದಪುದೆಂದು (ಕೊಂದರೆ ಏನು ಬರುತ್ತದೆ, ನಿನ್ನ ಯಶಸ್ಸನ್ನು ಕೆಡಿಸಿದೆವು. ಇನ್ನು ನಿನ್ನನ್ನು ಕೊಂದರೆ ಏನು ಬರುತ್ತದೆ',) ದುರ್ಯೋಧನನಲ್ಲಿಗೆ

ಪೋಗೆಂದು ಕಟ್ಟಿದ ಕಟ್ಟುಗಳಂ
ಬಿಟ್ಟು ಕಳೆದೊಡೆ, ಜಯದ್ರಥಂ
ಸಿಗ್ಗಾಗಿ (ನಾಚಿಕೆಪಟ್ಟು)
ಕೈಲಾಸದೊಳು ಈಶ್ವರಂಗೆ
ತಪಂಗೆಯ್ದು (ತಪಸ್ಸುಮಾಡಿ)
ಮೆಚ್ಚಿಸಿ ಪಾಂಡವರನು ಒಂದು
ದೆವಸದ ಅನುವರದೊಳ್
ಗೆಲ್ವೆನಕ್ಕೆಂದು ಬರಂಬಡೆದು
(‘ಪಾಂಡವರನ್ನು ಒಂದು
ದಿನದ ಯುದ್ಧದಲ್ಲಿಯಾದರೂ
ಗೆಲ್ಲುವಂತಾಗಲಿ’ ಎಂದು

ವರವನ್ನು ಪಡೆದು) ಪೋದನು;
ಇತ್ತ ದುರ್ಯೋಧನಂ
ಸಮಸ್ತಸಾಧನಸಹಿತನಾಗಿ
ಕಾಡೊಳ್ ಬೇಡರಂತೆ
ತೊಟಿಲ್ವ ದಾಯಿಗರ ಕಂದಿ
ಕುಂದಿದ ಮೊಗಂಗಳಂ
ನೋಡುವುದುಂ ಎನ್ನನು
ಅವರಿಂ ನೋಡಿಸುವುದಂ
ಈಯೆರಡೆ
ಸಂಸಾರಫಲಮೆಂದು (ಬಾಡಿ
ಕೃಶವಾದ ಮುಖಗಳನ್ನು

ನೋಡುವುದೂ
ವೈಭವಯುಕ್ತವಾದ ತನ್ನನ್ನು
ಅವರಿಂದ ನೋಡಿಸುವುದೂ
ಇವೆರಡೇ ಸಂಸಾರದ
ಫಲವೆಂದು ಭಾವಿಸಿ),
ನಾಗಪುರದಿಂ ಪೊಱಮಟ್ಟು
(ಹಸ್ತಿನಾಪುರದಿಂದ ಹೊರಟು)
ದುಶ್ಶ್ಯಾಸನಾದಿಗಳಪ್ಪ
ನೂರ್ವರ್ ತಮ್ಮಂದಿರುಂ
ಭಾನುಮತಿಯುಂ
ಚಂದ್ರಮತಿಯುಮೆಂಬ

ಬೇಟದರಸಿಯರುಂ
(ಪ್ರೀತಿಪಾತ್ರರಾದ
ರಾಣಿಯರನ್ನು) ಲಕ್ಕಣಂ
ಮೊದಲಾಗೆ ನೂರ್ವರ್
ಮಕ್ಕಳುಂ ಗಾಂಗೇಯ
ದ್ರೋಣ ಕೃಪ ವಿದುರ
ಪ್ರಭೃತಿಗಳುಮಶ್ವತ್ಥಾಮ ಕರ್ಣ
ಶಲ್ಯ ಶಕುನಿ ಸೈಂಧವ
ಪ್ರಮುಖನಾಯಕರುಂ ಬೆರಸು
(ಕೂಡಿಕೊಂಡು) ಬೇಂಟೆಯ
ನೆವದಿಂ ಬಂದು ದ್ವೈತವನದ

ಕೆಲದ ನಂದನವನದೊಳ್
ಪಾಂಡವರ್ಗೆ ಸಮೀಪಮಾಗೆ
ಬೀಡು ಬಿಟ್ಟು ಪಾಡಿಸುತ್ತುಂ
ಪೊಗಱಿಸುತ್ತಂ ಇರ್ದನು
ಅನ್ನೆಗಂ
ಪಗೆಯಿಱಿಯಬಂದರ
ಮೂಗನರಿದರು (ಹಗೆಯನ್ನು
ಕೊಲ್ಲಲು ಬಂದವರ
ಮೂಗನ್ನು ಕತ್ತರಿಸಿದರು')
ಎಂಬಂತೆ ಅನಿಬರಂ ಬಾಯಂ
ಬಿಟ್ಟು ನೋಡೆ

ಮೂಗನರಿದರೆಂಬಂತನಿಬರಂ
ಬಾಯಂ ನೋಡೆ ನೋಡೆ
ಪೂರ್ವಜನ್ಮದ ಪಗೆ
ಚಿತ್ರಾಂಗದನೆಂಬ ಗಂಧರ್ವನು
ಅಱುವತ್ತು ಕೋಟಿ ಗಾಂಧರ್ವ
ಬಲಂಬೆರಸು
(ಗಂಧರ್ವಸೈನ್ಯದೊಡನೆ
ಕೂಡಿ) ಬಂದು ದುರ್ಯೋಧನ
ದುಶ್ಶ್ಯಾಸನರು ಇರ್ವರುಮಂ
ಕೋಡಗಗಟ್ಟುಗಟ್ಟಿ

(ಕಪಿಯನ್ನು ಕಟ್ಟುವ ಹಾಗೆ ಕಟ್ಟಿ)-
ವಚನ:ಅರ್ಥ:ನಿನ್ನನ್ನು ಸೋಲಿಸಿ ಅವಮಾನ ಪಡಿಸಿ ನಿನ್ನ ಯಶಸ್ಸನ್ನು ಕೆಡಿಸಿದೆವು. ಇನ್ನು ನಿನ್ನನ್ನು ಕೊಂದರೆ ಏನು ಬರುತ್ತದೆ', ದುರ್ಯೋಧನನ ಹತ್ತಿರಕ್ಕೆ ಹೋಗಿ ಬದುಕು ಎಂದು ಕಟ್ಟಿದ್ದ ಕಟ್ಟುಗಳನ್ನೆಲ್ಲ ಬಿಚ್ಚಿ ಕಳುಹಿಸಲು, ಸೈಂಧವನು ನಾಚಿಕೆಪಟ್ಟು ಕೈಲಾಸಕ್ಕೆ

ಹೋಗಿ ಈಶ್ವರನನ್ನು ಕುರಿತು ತಪಸ್ಸುಮಾಡಿ ಮೆಚ್ಚಿಸಿ 'ಪಾಂಡವರನ್ನು ಒಂದು ದಿನದ ಯುದ್ಧದಲ್ಲಿಯಾದರೂ ಗೆಲ್ಲುವಂತಾಗಲಿ' ಎಂದು ವರವನ್ನು ಪಡೆದು ಹೋದನು. ಈ ಕಡೆ ದುರ್ಯೋಧನನು ಕಾಡಿನಲ್ಲಿ ಬೇಡರಂತೆ ತೊಳಲುತ್ತಿರುವ ದಾಯಾದಿಗಳ ಬಾಡಿ ಕುಂದಿದ ಮುಖಗಳನ್ನು ನೋಡುವುದೂ

ವೈಭವಯುಕ್ತವಾದ ತನ್ನನ್ನು
ಅವರಿಂದ ನೋಡಿಸುವುದೂ
ಇವೆರಡೇ ಸಂಸಾರದ
ಫಲವೆಂದು ಯೋಚಿಸಿ,
ಸಮಸ್ತ ಸಲಕರಣೆಗಳೊಡನೆ
ಹಸ್ತಿನಾಪುರದಿಂದ ಹೊರಟು
ದುಶ್ಯಾಸನನೇ ಮೊದಲಾದ
ನೂರ್ವರು ತಮ್ಮಂದಿರನ್ನೂ
ಭಾನುಮತಿ ಮತ್ತು ಚಂದ್ರಮತಿ
ಎಂಬ ಇಬ್ಬರು
ಪ್ರೀತಿಪಾತ್ರರಾದ

ರಾಣಿಯರನ್ನೂ, ಲಕ್ಷಣನೇ
ಮೊದಲಾದ ನೂರುಜನ
ಮಕ್ಕಳನ್ನೂ, ಭೀಷ್ಮ, ದ್ರೋಣ
ಕೃಪ ವಿದುರ ಮೊದಲಾದ
ಪ್ರಭೃತಿಗಳನ್ನೂ ಅಶ್ವತ್ಥಾಮ,
ಕರ್ಣ, ಶಲ್ಯ, ಶಕುನಿ
ಸೈಂಧವನೇ ಮೊದಲಾದ
ನಾಯಕರನ್ನೂ, ಕೂಡಿಕೊಂಡು
ಬೇಟೆಯ ನೆಪದಿಂದ ಬಂದು
ದ್ವೈ ತವನದ ಪಕ್ಕದ
ನಂದನವನದೊಳಗೆ

ಪಾಂಡವರಿಗೆ
ಸಮೀಪವಾಗಿರುವ ಹಾಗೆ
ಬೀಡು ಬಿಟ್ಟು, ತನ್ನ
ವೈಭವವನ್ನು ಹಾಡಿಸುತ್ತಲೂ
ಹೊಗಳಿಸುತ್ತಲೂ ಇದ್ದನು.
ಅಷ್ಟರಲ್ಲಿ ‘ಹಗೆಯನ್ನು
ಕೊಲ್ಲಲು ಬಂದವರ
ಮೂಗನ್ನು ಕತ್ತರಿಸಿದರು’
ಎಂಬಂತೆ ಎಲ್ಲರೂ
ಆಶ್ಚರ್ಯದಿಂದ
ಬಾಯಿಬಿಟ್ಟುಕೊಂಡು

ನೋಡುತ್ತಿದ್ದ ಹಾಗೆಯೇ
ಹಿಂದಿನ ಜನ್ಮದ ಶತ್ರುವಾದ
ಚಿತ್ರಾಂಗದನೆಂಬ ಗಂಧರ್ವನು
ಅರುವತ್ತು ಕೋಟಿ
ಗಂಧರ್ವಸೈನ್ಯದೊಡನೆ ಕೂಡಿ
ಬಂದು ದುರ್ಯೋಧನ
ದುಶ್ಯಾಸನರಿಬ್ಬರನ್ನೂ
ಕಪಿಯನ್ನು ಕಟ್ಟುವ ಹಾಗೆ
ಕಟ್ಟಿ- (ಕಟ್ಟಿದನು).

ದ್ವೈತವನವಿಹಾರದಲ್ಲಿ ಗಂಧರ್ವರಿಂದ ದುರ್ಯೋಧನನ ಗರ್ವಭಂಗ-ಅವಮಾನ

ಚಂ|| ಮಿಡುಕದೆ ಭೀಷ್ಮ ನೋಡುತಿರು ಕುಂಭಜ ಸುರ್ಕಿರು ಕರ್ಣ ಮಿಕ್ಕ ಮಾ ನ್ರ್ಡಿಯದೆ ಮೂಗುವಟ್ಟಿರು ಗುರು ಪ್ರಿಯನಂದನ ಕೂಗಡಂಗದಿ|

ರ್ದೋಡೆ ಬರ್ದುಕಾವುದಿರ್
ಪೊಡರ್ದೋಡೀಗಡೆ
ಕೊಂದಪೆನೆಂದು ಕೂಡೆ ಕ
ಣ್ಗಿಡೆ ಜಡಿದುಯ್ದನಾ
ಖಚರನಿರ್ವರುಮಂ
ಪರಮಾಣುಮಾರ್ಗದಿಂ|| ೩೩||

ಪದ್ಯ-೩೩:ಪದವಿಭಾಗ-
ಅರ್ಥ:ಮಿಡುಕದೆ ಭೀಷ್ಮ
ನೋಡುತಿರು ಕುಂಭಜ
ಸುರ್ಕಿರು (ಸುಕ್ಕಿಕೊ-
ಮುದುರಿಕೊಂಡಿರು) ಕರ್ಣ

ಮಿಕ್ಕು ಮಾರ್ನುಡಿಯದೆ

ಮೂಗುವಟ್ಟಿರು (ಎದುರಾಡದೆ

ಸುಮ್ಮನಿರು) ಗುರು

ಪ್ರಿಯನಂದನ ಕೂಗು

ಅಡಂಗದಿರ್ದೊಡೆ ಬರ್ದುಕು

ಆವುದು ಇರ್,(ಅಶ್ವತ್ಥಾಮ

ನಿನ್ನ ಕೂಗು ಅಡಗದಿದ್ದರೆ

ಬದುಕುವುದೆಲ್ಲಿ ಬಂತು)

ಪೊಡರ್ದೊಡೀಗಡೆ

ಕೊಂದಪೆನು ಎಂದು

(ಪೊಗರು ತೋರಿದರೆ

ಮಾಡಿದರೆ ಈಗಲೆ ಕೊಲ್ಲುತ್ತೇನೆ) ಕೂಡೆ ಕಣ್ಗಿಡೆ ಜಡಿದು ಉಯ್ದನು ಆ ಖಚರನು ಇರ್ವರುಮಂ ಪರಮಾಣುಮಾರ್ಗದಿಂ (ಆ ಕ್ಷಣದಲ್ಲಿ ಹೆದರುವಂತೆ ಬೆದರಿಸಿ ಇಬ್ಬರನ್ನೂ ಆ ಚಿತ್ರಾಂಗದನು ಆಕಾಶಮಾರ್ಗದಿಂದ ಎತ್ತಿಕೊಂಡು ಹೋದನು.)

ಪದ್ಯ-೩೩:ಅರ್ಥ: ‘ಭೀಷ್ಮ ಅಲುಗಾಡದೆ ನೋಡುತ್ತಿರು, ದ್ರೋಣನೇ ಮುದುರಿಕೊಂಡಿರು; ಕರ್ಣನೇ ಮೀರಿ ಎದುರಾಡದೆ ಸುಮ್ಮನಿರು; ಅಶ್ವತ್ಥಾಮ ನಿನ್ನ ಕೂಗು ಅಡಗದಿದ್ದರೆ ನೀನು ಬದುಕುವುದೆಲ್ಲಿ ಬಂತು, ಸುಮ್ಮನಿರು; ಪೊಗರು ತೋರಿದರೆ ಮಾಡಿದರೆ ಈಗಲೆ ಕೊಲ್ಲುತ್ತೇನೆ’ ಎಂದು ಆ

ಕ್ಷಣದಲ್ಲಿ ಹೆದರುವಂತೆ ಬೆದರಿಸಿ ಇಬ್ಬರನ್ನೂ ಆ ಚಿತ್ರಾಂಗದನು ಆಕಾಶಮಾರ್ಗದಿಂದ ಎತ್ತಿಕೊಂಡು ಹೋದನು.

ವ|| ಅಂತುಯ್ವುದುಂ ನೆಗೞ್ತೆಯ ಬೀರರೆಲ್ಲಂ ಬಡವರ ಪಿತರರಂತೆ ಮಿೞ್ಮಿೞ ನೋಡುತ್ತಿರೆ ಮಿಕ್ಕುದುಂಡರಂತೆ ತಲೆಯಂ ಬಾಗಿ ಬಿಲ್ಗಳಂ ಮುಂದಿಟ್ಟು

ಬಿಲ್ಲುಂ ಬೆಱಗುಮಾಗಿರೆ ಸುಯೋಧನನ ಮಹಾದೇವಿ ಭಾನುಮತಿ ಬಾಯಱಿದು ಪುಯ್ಯಲಿಡುತುಂ ಬಂದು ಧರ್ಮನಂದನನ ಕಾಲ ಮೇಲೆ ಕವಿದುಪಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಉಯ್ಯುವದುಂ ನೆಗೞ್ತೆಯ ಬೀರರೆಲ್ಲಂ (ಎತ್ತಿಕೊಂಡು ಹೋಗಲು ಪ್ರಸಿದ್ಧರಾದ ವೀರರೆಲ್ಲ)

ಬಡವರ ಪಿತರರಂತೆ ಮಿಳ್ಮಿಳ
ನೋಡುತ್ತಿರೆ (ಬಡವರ
ತಂದೆಯರಂತೆ ಮಿಳಮಿಳನೆ
ನೋಡುತ್ತಿಂದಂತೆ,)
ಮಿಕ್ಕುದುಂಡರಂತೆ
(ಎಂಜಲನ್ನು ತಿಂದವರಹಾಗೆ)
ತಲೆಯಂ ಬಾಗಿ ಬಿಲ್ಗಳಂ
ಮುಂದಿಟ್ಟು ಬಿಲ್ಲುಂ
ಬೆಱಗುಮಾಗಿರೆ (ಏನು
ಮಾಡಲೂ ತೋರದೆ
ಆಶ್ಚರ್ಯಚಕಿತರಾಗಿರಲು,)

ಸುಯೋಧನನ ಮಹಾದೇವಿ ಭಾನುಮತಿ ಬಾಯಟಿದು ಪುಯ್ಯಲಿಡುತುಂ (ಬಾಯಿಹರಿಯುವ ಹಾಗೆ ಅರಚುತ್ತಲೂ) ಬಂದು ಧರ್ಮನಂದನನ ಕಾಲ ಮೇಲೆ ಕವಿದುಪಟ್ಟು (ಎರಗಿಬಿದ್ದಳು)- ಎರಗಿಬಿದ್ದು-

ವಚನ:ಅರ್ಥ:ಹಾಗೆ ಎತ್ತಿಕೊಂಡು ಹೋಗಲು ಪ್ರಸಿದ್ಧರಾದ ವೀರರೆಲ್ಲ

ಬಡವರ ತಂದೆಯರಂತೆ
ಮಿಳಮಿಳನೆ
ನೋಡುತ್ತಿಂದಂತೆ, ಎಂಜಲನ್ನು
ತಿಂದವರಹಾಗೆ ತಲೆಯನ್ನು
ತಗ್ಗಿಸಿಕೊಂಡರು. ಬಿಲ್ಲುಗಳನ್ನು
ತಮ್ಮ ಮುಂದಿಟ್ಟುಕೊಂಡು
ಏನು ಮಾಡಲೂ ತೋರದೆ
ಆಶ್ಚರ್ಯಚಕಿತರಾಗಿರಲು,
ದುರ್ಯೋಧನನ
ಮಹಾರಾಣಿಯಾದ
ಭಾನುಮತಿಯು

ಬಾಯಿಹರಿಯುವ ಹಾಗೆ
ಅರಚುತ್ತಲೂ ಬಂದು
ಧರ್ಮರಾಜನ ಕಾಲಿನ ಮೇಲೆ
ಎರಗಿಬಿದ್ದಳು.(ಎರಗಿಬಿದ್ದು)

ಕಂ|| ನೋಂತರ
ಪಗೆವರನೆಟ್ಟೆೞ
ದಂತಾಯ್ತೆಂದಿರದೆ
ಪುರುಷಕಾರದ ಪೆಂಪಂ|
ಚಿಂತಿಸಿ ತರಿಸಿ ಮಹೀಶನ
ನೆಂತಪ್ಪೊಡಮೆನಗೆ
ಪುರುಷಭಿಕ್ಷಮನಿಕ್ಕಂ|| ೩೪

ಪದ್ಯ-೩೪:ಪದವಿಭಾಗ-ಅರ್ಥ:ನೋಂತರ ಪಗೆವರನ ಎಟ್ಟಿಇರಿದಂತೆ ಆಯ್ತು ಎಂದು ಇರದೆ(‘ತಾನೇ ಕೊಲ್ಲಲು ಪ್ರತಜ್ಞೆಮಾಡಿದ್ದವರ ಹಗೆಯನ್ನು ಎತ್ತು ಇರಿದ ಹಾಗಾಯ್ತು' ಎಂದು ಸುಮ್ಮನಿರದೆ) ಪುರುಷಕಾರದ ಪೆಂಪಂಚಿಂತಿಸಿ ತರಿಸಿ ಮಹೀಶನನು (ಪುರುಷಪ್ರಯತ್ನದ

(ಗಂಡಸುತನದ)
ಶ್ರೇಷ್ಠತೆಯನ್ನು ಯೋಚಿಸಿ
ಹೇಗಾದರೂ
ಮಹಾರಾಜನನ್ನು ತರಿಸಿ)
ಎಂತಪ್ಪೊಡಂ ಎನಗೆ
ಪುರುಷಭಿಕ್ಷಮನು
ಇಕ್ಕಿಂ(ಪುರುಷಭಿಕ್ಷೆಯನ್ನು-
ಹೇಗಾದರೂ ಗಂಡನನ್ನು
ಬದುಕಿಸಿ ಕೊಡಿ)
ಪದ್ಯ-೩೪:ಅರ್ಥ: ‘ತಾನೇ
ಕೊಲ್ಲಲು ಪ್ರತಜ್ಞೆಮಾಡಿದ್ದವರ

ಹಗೆಯನ್ನು ಎತ್ತು ಇರಿದ ಹಾಗಾಯ್ತು' ಎಂದು ಸುಮ್ಮನಿರದೆ ಪುರುಷಪ್ರಯತ್ನದ (ಗಂಡಸುತನದ) ಶ್ರೇಷ್ಠತೆಯನ್ನು ಯೋಚಿಸಿ ಮಹಾರಾಜನನ್ನು ತರಿಸಿ, ನನಗೆ ಪುರುಷಭಿಕ್ಷೆಯನ್ನು ಹೇಗಾದರೂ(ಗಂಡನನ್ನು ಬದುಕಿಸಿ ಕೊಡಿ) ಕೊಡಿ

ವ|| ಎಂದು ಪುಯ್ಯಲಿಡುವ ಭಾನುಮತಿಯ ಪುಯ್ಯಲಂ ಕೇಳ್ದು ಸುಯೋಧನಂ ಬಂದ ವೃತ್ತಾಂತಮನಱಿದು-

ವಚನ:ಪದವಿಭಾಗ-

ಅರ್ಥ:ಎಂದು ಪುಯ್ಯಲಿಡುವ ಭಾನುಮತಿಯ ಪುಯ್ಯಲಂ ಕೇಳ್ದು ಸುಯೋಧನಂ ಬಂದ ವೃತ್ತಾಂತಮನಱಿದು-

ವಚನ:ಅರ್ಥ:ಎಂದು ಹೊಯಿಲಿಡುತ್ತಿರುವ/

ಕೂಗಿಕೊಳ್ಳುತ್ತಿರುವ ಭಾನುಮತಿಯ ಗೋಳನ್ನು ಕೇಳ್ಳಿ, ದುರ್ಯೋಧನನು ದ್ವೈತ ವನಕ್ಕೆ ಬಂದ ಕಾರಣವನ್ನು ಧರ್ಮಜನು ತಿಳಿದು-

ಮ|| ಪಿರಿದುಂ
ಕಾಯ್ಪಿನೊಳೆಯ್ದೆ ಕಾಯ್ವ
ಸಮಕಟ್ಟಿಂ ದೋಷಮಲ್ತಕ್ಕ
ಮ
ಚ್ಚರಮಂ
ಮೋಘಮೊಡಂಬಡುಂ

ಕಲುಷಮುಂ

ಮುನ್ನುಳ್ಳುದಂತೆತ್ತಿಯುಂ|

ಪೊರೆಯುಂ

ಪಂತಮುಮಿಲ್ಲದಂತೆ

ಮನದೊಳ್ ನಿಷ್ಕಾರಣಂ

ಕಾಯ್ವರಂ

ಪರ ಚಿಂತಾಕರ ಏಹಿ ಎಂಬ

ನುಡಿಯಂ ಮುಂ

ಕೇಳ್ದೆನಿಲ್ಲಾಗದೇ|| ೩೫

ಪದ್ಯ-೩೫:ಪದವಿಭಾಗ-

ಅರ್ಥ: ಪಿರಿದುಂ

ಕಾಯ್ಪಿನೊಳು ಎಯ್ದು (ಬಹಳ
ಉದ್ವೇಗದಿಂದ ಬಂದು,)
ಕಾಯ್ವ ಸಮಕಟ್ಟಿಂ
ದೋಷಮಲ್ತು ಅಕ್ಕ
(ಕಾಪಾಡಲು ಕೇಳಿದಾಗ
ವ್ಯವಸ್ಥೆಮಾಡುವುದರಿಂದ
ದೋಷವಿಲ್ಲ ಅಕ್ಕ!),
ಮಚ್ಚರಮಂ (ಮತ್ಸರವೂ,)
ಮೋಘಂ ಒಡಂಬಡುಂ
(ನಿಷ್ಪ್ರಯೋಜಕವಾದ
ಎಡವಟ್ಟು ಕೆಲಸ,)

ಕಲುಷಮುಂ (ವೈರವೂ) ಮುನ್ನುಳ್ಳುದು (ಮೊದಲಿಂದಲೂ ಇದೆ), ಅಂತೆ ಎತ್ತಿಯುಂ (ಹಾಗೆ ಅದನ್ನು ಎತ್ತಿಕೊಂಡು) ಪೊರೆಯುಂ(ಕೊಳೆ, ಹೊಲಸು- ಬರಹಶಬ್ದಕೋಶ) ಪಂತಮುಂ (ಪಂಥ- ದ್ವೇಷ) ಇಲ್ಲದಂತೆ ಮನದೊಳ್ (ಕೊಳೆ ದ್ವೇಷ ಮನಸ್ಸಿನಲ್ಲಿ ಇಲ್ಲದಂತೆ ಎಂಬ ಮಾತನ್ನು ಮೊದಲು

ಕೇಳಿಲ್ಲವೇ ಕೇಳಿದ್ದೇನೆ)
'ನಿಷ್ಕಾರಣಂ ಕಾಯ್ವರಂ ಪರ
ಚಿಂತಾಕರ ಏಹಿ
(ನಿಷ್ಕಾರಣವಾಗಿ
ಸಿಟ್ಟುಮಾಡುವ-
ಬೇರೆಯವರಿಗೆ ಚಿಂತೆಕೊಡುವ
ಹಿಂಸಿಸುವಗುಣವೇ ಏಹಿ
ಹೋಗು)' ಎಂಬ ನುಡಿಯಂ
ಮುಂ ಕೇಳ್ದೆನು ಇಲ್ಲಾಗದೇ (ಈ
ನೀತಿಯಮಾತನ್ನು ಮೊದಲು
ಕೇಳಿದ್ದೇನೆ, ಅದನ್ನು ಇಲ್ಲಿ

ಅನುಸರಿಸಲು ಆಗದೇ?
ಅನುಸರಿಸುವೆನು.)
ಪದ್ಯ-೩೫:ಅರ್ಥ: ಬಹಳ
ಉದ್ವೇಗದಿಂದ ಬಂದು,
ಕಾಪಾಡಲು ಕೇಳಿದಾಗ
ವ್ಯವಸ್ಥೆಮಾಡುವುದರಿಂದ
ದೋಷವಿಲ್ಲ ಅಕ್ಕ!,
ಮತ್ಸರವೂ,
ನಿಷ್ಪ್ರಯೋಜಕವಾದ
ಎಡವಟ್ಟು ಕೆಲಸ, ವೈರವೂ,
ದುರ್ಯೋಧನನಿಗೆ

ಮೊದಲಿಂದಲೂ ಇದೆ, ಹಾಗೆ ಅದನ್ನು ಎತ್ತಿಕೊಂಡು-ದ್ವೇಷ ಮಾಡುವವನಲ್ಲ. ಮನಸ್ಸಿನಲ್ಲಿ ಕೊಳೆ ದ್ವೇಷ ಇಲ್ಲದಂತೆ ಆಗಲಿ,ಎಂದರೆ 'ನಿಷ್ಕಾರಣಂ ಕಾಯ್ಬರಂ ಪರ ಚಿಂತಾಕರ ಏಹಿ' ನಿಷ್ಕಾರಣವಾಗಿ ಸಿಟ್ಟುಮಾಡುವ-ಬೇರೆಯವರಿಗೆ ಚಿಂತೆಕೊಡುವ ಹಿಂಸಿಸುವ ಗುಣವೇ ಏಹಿ ಹೋಗು' ಎಂಬ ಈ ನೀತಿಯ

ಮಾತನ್ನು ಮೊದಲು ಕೇಳಿದ್ದೇನೆ, ಅದನ್ನು ಇಲ್ಲಿ ಅನುಸರಿಸಲು ಆಗದೇ? ಅನುಸರಿಸುವೆನು.

- ಅಥವಾ: ಬಹಳ ಉದ್ವೇಗದಿಂದ ಬಂದು, ಕಾಪಾಡಲು ಕೇಳಿದಾಗ ವ್ಯವಸ್ಥೆಮಾಡುವುದರಿಂದ ದೋಷವಿಲ್ಲ ಅಕ್ಕ! ಆದರೆ ಅಸೂಯೆಯೂ ವ್ಯರ್ಥವಾದ ತೊಂದರೆಯೂ ದ್ವೇಷವೂ

ದುರ್ಯೋಧನನಿಗೆ ಸಹಜವಾದುದೇ. ಅದನ್ನೇ ಅನುಸರಿಸಿಕೊಂಡು ನಾನು ದುಖದಿಂದ ನಿಷ್ಕಾರಣವಾಗಿ ಕೋಪಿಸಿಕೊಳ್ಳುವುದು ನನಗೆ ಯೋಗ್ಯವಲ್ಲ. ಇತರರಿಗೆ ಹಿಂಸೆಮಾಡುವ ಸ್ವಭಾವವು ನನ್ನಿಂದ ದೂರವಿರಲಿ ಎಂಬ ಮಾತನ್ನು ನಾನು ಹಿಂದೆಯೇ ಕೇಳಿಲ್ಲವೇ?

ಗಂಧರ್ವರ ಸೆರೆಯಲ್ಲಿದ್ದ ದುರ್ಯೋಧನ ದುಶ್ಶಾಸನರನ್ನು ಅರ್ಜುನ ರಕ್ಷಿಸಿದುದು

ವ|| ಎಂದು ತನ್ನೊಳೆ ಬಗೆದು ಭಾನುಮತಿಯನಿಂತೆಂದಂ-

> **ವಚನ:ಪದವಿಭಾಗ-**
>
> **ಅರ್ಥ:**ಎಂದು ತನ್ನೊಳೆ ಬಗೆದು ಭಾನುಮತಿಯನು ಇಂತು ಎಂದಂ-

ವಚನ:ಅರ್ಥ:ಎಂದು ತನ್ನಲ್ಲಿ ಯೋಚಿಸಿ ಭಾನುಮತಿಯನ್ನು ಕುರಿತು ಹೀಗೆಂದನು.

ಮ|| ಸುರಿಯಲ್ವೇಡಮದರ್ಕೆ ಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂ ದಿರದಾಂ ಕೂಡುವೆವೆಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂ|

ರ್ವರೆ ದಲ್

ಕೌರವರಾಮುಮಯ್ವರೆ ವಲಂ

ಮತ್ತೊರ್ವರೊಳ್ ತೊಟ್ಟ ಸಂ

ಗರರಂಗಕ್ಕೆ ಜಸಕ್ಕೆ

ಕೂಡುವೆಡೆಯೊಳ್

ನೂಱಯ್ವರಾವಲ್ಲವೇ|| ೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಸುರಿಯಲ್ವೇಡಂ ಅದರ್ಕೆ ಬಾಷ್ಪಜಳಮಂ (ಅದಕ್ಕಾಗಿ ನೀನು ಕಣ್ಣೀರನ್ನು ಸುರಿಸಬೇಡ) ನಿನ್ನ ಆಣ್ಮಾನಂ

ನಿನ್ನೊಳ್ ಇಂದು ಇರದೆ ಆಂ
ಕೂಡುವೆವು (ತಡಮಾಡದೆ
ನಿನ್ನ ಗಂಡನನ್ನು ಈ ದಿನವೇ
ತಂದು ಸೇರಿಸುವೆವು;)
ಎಮ್ಮೊಳಾದ ಕಲಹಕ್ಕೆ
ಎಂತಾದೊಡಂ ಕೇಳ
ನೂರ್ವರೆ ದಲ್ ಕೌರವರುಂ,
ಆಮುಂ ಅಯ್ವರೆ ವಲಂ
(ನಮ್ಮಲ್ಲಿಯೇ ಉಂಟಾದ
ಜಗಳಕ್ಕೆ ಕೌರವರು ನೂರು
ಜನ, ನಾವು ಅಯ್ದು ಜನವೇ

ದಿಟ) ಮತ್ತೊರ್ವರೊಳ್
ತೊಟ್ಟ ಸಂಗರ ರಂಗಕ್ಕೆ ಜಸಕ್ಕೆ
ಕೂಡುವೆಡೆಯೊಳ್ (ಆದರೆ
ಮತ್ತೊಬ್ಬರಲ್ಲಿ ಉಂಟಾದ
ಯುದ್ಧ ಸೇರುವ
ಸಂದರ್ಭದಲ್ಲಿ)
ನೂಱಯ್ವರಾವಲ್ಲವೇ (ನಾವು
ನೂರೈದು ಜನವಲ್ಲವೇ?)
ಪದ್ಯ-೩೬:ಅರ್ಥ: ಅದಕ್ಕಾಗಿ
ನೀನು ಕಣ್ಣೀರನ್ನು
ಸುರಿಸಬೇಡ; ತಡಮಾಡದೆ

ನಿನ್ನ ಗಂಡನನ್ನು ಈ ದಿನವೇ ತಂದು ಸೇರಿಸುವೆವು; ಕೇಳು ನಮ್ಮಲ್ಲಿಯೇ ಉಂಟಾದ ಜಗಳಕ್ಕೆ ಕೌರವರು ನೂರು ಜನ, ನಾವು ಅಯ್ದು ಜನವೇ ಸರಿ. ಆದರೆ ಮತ್ತೊಬ್ಬರೊಡನೆ ಉಂಟಾದ ಯುದ್ಧ ಕೂಡಿದ ಸಂದರ್ಭದಲ್ಲಿ ನಾವು ನೂರೈದು ಜನವಲ್ಲವೇ?

ವ|| ಎಂದು ಯುಧಿಷ್ಠಿರಂ ಪಾೞಿಯ ಪಸುಗೆಯನಱಿದು

ನುಡಿದೊಡಾ ಪೂಣ್ಡ ಬೆಸನಂ ಕರಮಾಸೆವಟ್ಟು ತನ್ನ ಕೆಲದೊಳಿರ್ದ ಸಾಹಸಾಭರಣನ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಎಂದು ಯುಧಿಷ್ಠಿರಂ ಪಾಟಿಯ ಪಸುಗೆಯನು ಅಱಿದು ನುಡಿದೊಡೆ ಆ ಪೂಣ್ಡ ಬೆಸನಂ ಕರಂ ಆಸೆವಟ್ಟು (ತಾನು ಹೇಳಿದ ಆ

ಮಾತನ್ನು / ಕಾರ್ಯವನ್ನು ಶೀಘ್ರವಾಗಿ ಸಾಧಿಸಲು ಬಯಸಿ) ತನ್ನ ಕೆಲರ್ದೊಳಿರ್ದ ಸಾಹಸಾಭರಣನ ಮೊಗಮಂ ನೋಡಿ-

ವಚನ:ಅರ್ಥ:ಎಂದು ಧರ್ಮರಾಜನು ಧರ್ಮದ ವಿವೇಕವನ್ನು ತಿಳಿದು ಹೇಳಿದಾಗ, ತಾನು ಹೇಳಿದ ಆ ಮಾತನ್ನು / ಕಾರ್ಯವನ್ನು ಶೀಘ್ರವಾಗಿ ಸಾಧಿಸಲು

ಬಯಸಿ, ತನ್ನ ಪಕ್ಕದಲ್ಲಿದ್ದ ಸಾಹಸಾಭರಣನಾದ ಅರ್ಜುನನ ಮುಖವನ್ನು ನೋಡಿ-

ಕಂ|| ಪಿಡಿದುಯ್ದುದು ಗಂಧರ್ವರ
ಪಡೆ ಗಡ ನಿಮ್ಮಣ್ಣನಂ ಸುಯೋಧನನನಿದಂ|
ಕಡೆಗಣಿಸಲಾಗ ನಮಗೀ
ಗಡೆ ಬೇಗಂ ಬಿಡಿಸಿ ತರ್ಪುದಾತನ ಸೆಯಂ|| ೩೭ ||

ಪದ್ಯ-00:ಪದವಿಭಾಗ-ಅರ್ಥ:ಪಿಡಿದು ಉಯ್ದುದು (ಗಂಧರ್ವಸೈನ್ಯವು ಹಿಡಿದುಕೊಂಡು ಹೋಗಿದೆ) ಗಂಧರ್ವರ ಪಡೆ ಗಡ ನಿಮ್ಮಣ್ಣನಂ, ಸುಯೋಧನನನು ಇದಂ ಕಡೆಗಣಿಸಲಾಗ (ಕಡೆಗಣಿಸಬಾರದು) ನಮಗೀ ಗಡೆ ಬೇಗಂ ಬಿಡಿಸಿ ತರ್ಪುದು

ಆತನ ಸೆರೆಯಂ
(ಬಂಧನವನ್ನು -ಬಿಡಿಸಿ)
ಪದ್ಯ-00:ಅರ್ಥ:
ನಿಮ್ಮಣ್ಣನಾದ
ದುರ್ಯೋಧನನನ್ನು
ಗಂಧರ್ವಸೈನ್ಯವು
ಹಿಡಿದುಕೊಂಡು ಹೋಗಿದೆ.
ನಾವು ಇದನ್ನು
ಕಡೆಗಣಿಸಬಾರದು; ಈಗಲೇ
ಬೇಗ ಆತನ ಬಂಧನವನ್ನು

ಬಿಡಿಸಿ ತರತಕ್ಕದ್ದು. ಎಂದನು ಧರ್ಮಜ.

ವ|| ಎಂಬುದುಂ ಮಹಾಪ್ರಸಾದಮಂತೆಗೆಯ್ವೆನೆಲ್ಲಿವೊಕ್ಕೊಡಂ ಕೊಂಡು ಬಂದೆಪೆನೆಂದು ಬಗೆಯದಿದಿರಂ ನೋಡುತ್ತಿರಿಮೆಂದು ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು ಗಂಧರ್ವರ

ಪೋಪ ಬಱಿಯಂ

ಬೆಸಗೊಂಡು ಹಿಮವಂತದಲ್ಲಿ

ರಾಕ್ಷಸಿ ಕೊಟ್ಟ ಚಕ್ಷುಸಿಯೆಂಬ

ವಿದ್ಯೆಯಿಂ ತನ್ನ

ಕಣ್ಣನಭಿಮಂತ್ರಿಸಿಕೊಂಡು

ಪಾಱುವ ಗಂಧರ್ವಬಲಮಂ

ಜಲಕ್ಕನೆ ಕಂಡು-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಮಹಾಪ್ರಸಾದಂ

ಅಂತೆಗೆಯ್ವೆನು

ಎಲ್ಲಿವೊಕ್ಕೊಡಂ (ಎಲ್ಲಿ ಹೊಕ್ಕರೂ) ಕೊಂಡು ಬಂದೆಪೆನು ಎಂದು (ಎಲ್ಲಿ ಹೊಕ್ಕಿದ್ದರೂ ಅವರನ್ನು ತೆಗೆದುಕೊಂಡು ಬರುತ್ತೇನೆ,ಎಂದು) ಬಗೆಯದೆ ಇದಿರಂ (ವಿರೋಧಿಗಳನ್ನು ಲೆಕ್ಕಿಸದೆ) ನೋಡುತ್ತಿರ್ದಿಂ ಎಂದು ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ (ಅಕ್ಷಯತೂಣೀರವನ್ನು

ಬಿಗಿದುಕೊಂಡು ಗಾಂಡೀವಕ್ಕೆ
ಹೆದೆಯನ್ನೇರಿಸಿ) ನೀವಿ
ಜೇವ್ರೊಡೆದು (ಸವರಿ
ಶಬ್ದಮಾಡಿ ನೋಡಿ)
ಗಂಧರ್ವರ ಪ್ರೋಪ
ಬಟಿಯಂ ಬೆಸಗೊಂಡು
(ಗಂಧರ್ವರು ಹೋದ
ದಾರಿಯನ್ನು ಕೇಳಿಕೊಂಡು/
ಹುಡುಕಿಕೊಂಡು ಹೊರಟನು)
ಹಿಮವಂತದಲ್ಲಿ ರಾಕ್ಷಸಿ ಕೊಟ್ಟ
ಚಕ್ಷುಸಿಯೆಂಬ ವಿದ್ಯೆಯಿಂ ತನ್ನ

ಕಣ್ಣನು ಅಭಿಮಂತ್ರಿಸಿಕೊಂಡು ಪಾಱುವ ಗಂಧರ್ವಬಲಮಂ ಜಲಕ್ಕನೆ ಕಂಡು (ಹಾರಿಹೋಗುತ್ತಿದ್ದ ಗಂಧರ್ವಸೈನ್ಯವನ್ನು ಸ್ಪಷ್ಟವಾಗಿ ಕಂಡನು.)-

ವಚನ:ಅರ್ಥ:ಎನ್ನಲು ಮಹಾಪ್ರಸಾದ, ಹಾಗೆಯೇ ಮಾಡುತ್ತೇನೆ; ಎಲ್ಲಿ ಹೊಕ್ಕಿದ್ದರೂ ಅವರನ್ನು ತೆಗೆದುಕೊಂಡು ಬರುತ್ತೇನೆ

ಎಂದು, ವಿರೋಧಿಗಳನ್ನು
ಲೆಕ್ಕಿಸದೆ, ಆ ವಿಷವಾಗಿ
ಚಿಂತಿಸದೆ ನಿರೀಕ್ಷಣೆ
ಮಾಡುತ್ತಿರಿ ಎಂದು ತನ್ನ
ಅಕ್ಷಯತೂಣೀರವನ್ನು
ಬಿಗಿದುಕೊಂಡು ಗಾಂಡೀವಕ್ಕೆ
ಹೆದೆಯನ್ನೇರಿಸಿ ಸವರಿ
ಶಬ್ದಮಾಡಿ ನೋಡಿ
ಗಂಧರ್ವರು ಹೋದ
ದಾರಿಯನ್ನು ಕೇಳಿಕೊಂಡು/
ಹುಡುಕಿಕೊಂಡು ಹೊರಟನು.

ಹಿಮವತ್ಪರ್ವತದಲ್ಲಿ
ರಾಕ್ಷಸಿಯು ಕೊಟ್ಟ
ಚಕ್ಷುಸಿಯೆಂಬ ವಿದ್ಯೆಯನ್ನು
ತನ್ನ ಕಣ್ಣನ್ನು
ಅಭಿಮಂತ್ರಿಸಿಕೊಂಡು
ನೋಡಲು ಹಾರಿಹೋಗುತ್ತಿದ್ದ
ಗಂಧರ್ವಸೈನ್ಯವನ್ನು
ಸ್ಪಷ್ಟವಾಗಿ ಕಂಡನು.ಕಂಡು-

ಕಂ|| ಕೊಳ್ ಕೊಳ್ಳೆಂದೆಚ್ಚೊಡೆ ವಿಳ

ಯೋಳ್ಕದ ತೆಱದಿಂದೆ ಮುಸುಱಿ ದಿವ್ಯಾಸ್ತ್ರಚಯಂ| ಗಳ್ ಕೊಳೆ ಗಾಂಧರ್ವಬಲಂ ಗಳ್ ಕೆಡೆದುವು ಮಿಟ್ಟೆಗೊಂಡ ಚಿಟ್ಟೆಯ ತೆಱದಿಂ|| ೩೮ ||

ಪದ್ಯ-೩೮:ಪದವಿಭಾಗ-ಅರ್ಥ:ಕೊಳ್ ಕೊಳ್ಳೆಂದು ಎಚ್ಚೊಡೆ (ತೆಗೆದುಕೊ ತೆಗೆದುಕೊ ಎಂದು ಹೊಡೆಯಲು) ವಿಳಯ ಉಳ್ಕದ ತೆಱದಿಂದೆ ಮುಸುಱಿ

(ಪ್ರಳಯಕಾಲದ ಬೆಂಕಿಯ
ಚೂರಿನಂತೆ ಮುತ್ತಿ)
ದಿವ್ಯಾಸ್ತ್ರಚಯಂಗಳ್ ಕೊಳೆ
(ದಿವ್ಯಾಸ್ತ್ರಗಳ ಸಮೂಹವು
ಆಕ್ರಮಿಸಲು)
ಗಾಂಧರ್ವಬಲಂಗಳ್
ಕೆಡೆದುವು ಮಿಟ್ಟೆಗೊಂಡ
ಚಿಟ್ಟೆಯ ತೆಱದಿಂ
(ಗಂಧರ್ವಸೈನ್ಯಗಳು ಮಣ್ಣು
ಹೆಂಟೆಯು ತಗುಲಿದ ಚಿಟ್ಟೆಯ

ಹುಳುವಿನ ಹಾಗೆ ಉರುಳಿ ಬಿದ್ದುವು)
ಪದ್ಯ-೩೮:ಅರ್ಥ:ಅರ್ಜುನನು ತೆಗೆದುಕೊ ತೆಗೆದುಕೊ ಎಂದು ಹೊಡೆಯಲು, ದಿವ್ಯಾಸ್ತ್ರಗಳ ಸಮೂಹವು ಆಕ್ರಮಿಸಲು ಪ್ರಳಯಕಾಲದ ಬೆಂಕಿಯ ಚೂರಿನಂತೆ ಮುತ್ತಿ ನಾಟಲಾಗಿ ಗಂಧರ್ವಸೈನ್ಯಗಳು ಮಣ್ಣು ಹೆಂಟೆಯು ತಗುಲಿದ ಚಿಟ್ಟೆಯ

ಹುಳುವಿನ ಹಾಗೆ ಉರುಳಿ

ಬಿದ್ದುವು.

ವ|| ಅಂತಲ್ಲಿ

ಪದಿನಾಲ್ಸಾಸಿರ್ವರ್

ಗಂಧರ್ವರಂ ಕೊಂದೊಡೆ

ಚಿತ್ರಾಂಗದಂ ಬೆರ್ಚಿಕೊಳ್

ನಿನ್ನ ನಚ್ಚಿನ ಸೆರೆಯನೆಂದು

ಬಿಸುಟ್ಟೊಡೆ

ನೋಯಲೀಯದೆ

ನೆಲದಾಕಾಶದೆಡೆಯೊಳಂಬುಗ

ಳುಂ ತರತರದಿಂದೆಚ್ಚು

ಸೋಪಾನಂ ಮಾಡಿ
ದುರ್ಯೋಧನ
ದುಶ್ಶ್ಯಾಸನರನಿಱಿಪಿ
ಕಟ್ಟುಗಳುಂ
ಬಿಡದೊಡಗೊಂಡು ಬಂದು
ಧರ್ಮಪುತ್ರಂಗೆ
ತೋಱಿದೊಡೆ
ಸಾಹಸಾಭರಣಾನ
ಸಾಹಸಮನಳವಲ್ಲದೆ
ಪೊಗಳ್ದು
ತೊಡೆಯನೇಱಿಸಿಕೊಂಡು

ಬಾಯೊಳ್ ತಂಬುಲಂಗೊಟ್ಟಂ

ಪಾಂಚಾಲರಾಜತನೂಜೆ

ಪಗೆವರ

ಕಟ್ಟುವಟ್ಟಿರ್ದೇಳಿದಿಕ್ಕೆಗೆ

ಸಂತಸಂಬಟ್ಟು

ಸೈರಿಸಲಾಱದಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಅಂತಲ್ಲಿ ಪದಿನಾಲ್

ಸಾಸಿರ್ವರ್ ಗಂಧರ್ವರಂ

ಕೊಂದೊಡೆ (ಕೊಂದಾಗ)

ಚಿತ್ರಾಂಗದಂ ಬೆರ್ಚಿಕೊಳ್

(ಹೆದರಿ) ನಿನ್ನ ನಚ್ಚಿನ
ಸೆರೆಯನೆಂದು (ಪ್ರೀಯಿಯ
ಸೆರೆಯವರನ್ನು)
ಬಿಸುಟ್ಟೊಡೆ(ಎಸೆದಾಗ)
ನೋಯಲು ಈಯದೆ
(ನೋವಾಗಲು ಅವಕಾಶ
ಕೊಡದೆ) ನೆಲದ
ಆಕಾಶದೆಡೆಯೊಳು
ಅಂಬುಗಳುಂ ತರತರದಿಂದ
ಎಚ್ಚು ಸೋಪಾನಂ ಮಾಡಿ
(ಭೂಮ್ಯಾಕಾಶಗಳ ಮಧ್ಯದಲ್ಲಿ

ಬಾಣಗಳನ್ನು ನಾನಾವಿಧವಾಗಿ
ಪ್ರಯೋಗಮಾಡಿ
ಮೆಟ್ಟಿಲುಗಳನ್ನು ಕಟ್ಟಿ)
ದುರ್ಯೋಧನ
ದುಶ್ಯಾಸನರನು ಇೞಿಪಿ
(ಕೆಳಗೆ ಇಳಿಸಿ) ಕಟ್ಟುಗಳುಂ
ಬಿಡದೆ ಎಡಗೊಂಡು ಬಂದು
(ಕಟ್ಟುಗಳನ್ನು ಬಿಡಿಸದೆಯೆ
ಕರೆತಂದು) ಧರ್ಮಪುತ್ರಂಗೆ
ತೋಱಿದೊಡೆ
(ಧರ್ಮರಾಯನಿಗೆ

ತೋರಿಸಿದಾಗ),
ಸಾಹಸಾಭರಣನ
ಸಾಹಸಮನು ಅಳವಲ್ಲದೆ
ಪೊಗೞ್ದು (ಅಳತೆಯಿಲ್ಲದಷ್ಟು
ಹೊಗಳಿ) ತೊಡೆಯನು
ಏಱಿಸಿಕೊಂಡು ಬಾಯೊಳ್
ತಂಬುಲಂಗೊಟ್ಟಂ (ತೊಡೆಯ
ಮೇಲೆ ಕುಳ್ಳಿರಿಸಿಕೊಂಡು
ಬಾಯಲ್ಲಿ ತಾಂಬೂಲವನ್ನು
ಕೊಟ್ಟನು).
ಪಾಂಚಾಲರಾಜತನೂಜೆ

(ದ್ರೌಪದಿ) ಪಗೆವರ ಕಟ್ಟುವಟ್ಟಿರ್ದ ಏಳಿದಿಕ್ಕೆಗೆ ಸಂತಸಂಬಟ್ಟು (ಕಟ್ಟುಗಳನ್ನು ಕಟ್ಟಿಸಿಕೊಂಡ ಸ್ಥಿತಿಗೆ ಸಂತಸಪಟ್ಟು) ಸೈರಿಸಲಾಱದೆ ಇಂತೆಂದಳ್-

ವಚನ:ಅರ್ಥ:|| ಅಲ್ಲಿ ಹದಿನಾಲ್ಕು ಸಾವಿರ ಗಂಧರ್ವರನ್ನು ಕೊಂದಾಗ ಚಿತ್ರಾಂಗದನು ಹೆದರಿ ನಿನ್ನ ಪ್ರೀತಿಯ ಬಂಧಿತರನ್ನು

ತೆಗೆದುಕೋ ಎಂದು

ದುರ್ಯೋಧನ ಮತ್ತು

ದುಶ್ಯಾಸನರನ್ನು ಎಸೆದನು.

ಅವರು ನೋವಾಗಲು

ಅವಕಾಶ ಕೊಡದೆ

ಭೂಮ್ಯಾಕಾಶಗಳ ಮಧ್ಯದಲ್ಲಿ

ಬಾಣಗಳನ್ನು ನಾನಾವಿಧವಾಗಿ

ಪ್ರಯೋಗಮಾಡಿ

ಮೆಟ್ಟಿಲುಗಳನ್ನು ಕಟ್ಟಿ

ದುರ್ಯೋಧನ

ದುಶ್ಯಾಸನರನ್ನು ಇಳಿಸಿ

ಕಟ್ಟುಗಳನ್ನು ಬಿಡಿಸದೆಯೆ ಕರೆತಂದು ಧರ್ಮರಾಯನಿಗೆ ತೋರಿಸಿದನು. ಆಗ ಅವನು ಸಾಹಸಾಭರಣ ಅರ್ಜುನನ ಸಾಹಸವನ್ನು ಅಳತೆಯಿಲ್ಲದಷ್ಟು ಹೊಗಳಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಬಾಯಲ್ಲಿ ತಾಂಬೂಲವನ್ನು ಕೊಟ್ಟನು. ದ್ರೌಪದಿಯು ಅವರು ಕಟ್ಟುಗಳನ್ನು ಕಟ್ಟಿಸಿಕೊಂಡ

ಸ್ಥಿತಿಗೆ (ಅವಮಾನ ಪಟ್ಟುದಕ್ಕೆ)
ಸಂತೋಷಪಟ್ಟು
ಸಹಿಸಲಾರದೆ ಹೀಗೆಂದಳು.

ಕಂ|| ಎಮ್ಮಂ
ಪಿಡಿದೆೞೆವಂದಿನ
ನಿಮ್ಮದಟುಗಳೀಗಳೆತ್ತವೋದ
ವೊ ಪಿಡಿವ|
ಟ್ಟಮ್ಮ ಬೞಲ್ದಿರೆ ಕಂಡಿರೆ
ನಿಮ್ಮಳವಂ
ನಿಮಗವಮೀಗಳೀಯೆಡರಾ
ಯ್ತೇ|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ:ಎಮ್ಮಂ ಪಿಡಿದು ಎೞೆವ ಅಂದಿನ ನಿಮ್ಮ ಅದಟುಗಳು ಈಗಳು ಎತ್ತವೋದವೊ (ನಮ್ಮನ್ನು ಹಿಡಿದೆಳೆದ ಅಂದಿನ ನಿಮ್ಮ ಪರಾಕ್ರಮಗಳು ಈಗ ಎಲ್ಲಿಗೆ ಹೋದವೊ) ಪಿಡಿವಟ್ಟು ಅಮ್ಮ ಬೞಿಲ್ದಿರೆ (ಹಿಡಿಸಿಕೊಂಡು ಅಪ್ಪ ಬಳಲಿದಿರಲ್ಲಾ) ಕಂಡಿರೆ ನಿಮ್ಮ

ಅಳವಂ (ನಿಮ್ಮ ಶಕ್ತಿಯ ಪ್ರಮಾಣ ತಿಳಿಯಿತೇ), ನಿಮಗಂ ಈಗಳ್ ಈ ಯೆಡರಾಯ್ತೇ (ನಿಮಗೂ ಈಗ ಈ ಕಷ್ಟ ಬಂತೇ?)

ಪದ್ಯ-೩೯:ಅರ್ಥ: ನಮ್ಮನ್ನು ಹಿಡಿದೆಳೆದ ಆ ದಿನದ ನಿಮ್ಮ ಪರಾಕ್ರಮಗಳು ಈಗ ಎಲ್ಲಿಗೆ ಹೋದವು; ಹಿಡಿಸಿಕೊಂಡು ಅಪ್ಪ ಬಳಲಿದಿರಲ್ಲಾ; ನಿಮ್ಮ ಶಕ್ತಿಯ ಪ್ರಮಾಣ ತಿಳಿಯಿತೇ;

ಛೀ, ನಿಮಗೂ ಈಗ ಈ ಕಷ್ಟ ಬಂತೇ?

ವ|| ಎಂದು ಸಾಯೆ ಸರಸಂ ನುಡಿದು ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟು ಕಳೆದು ಭಾನುಮತಿಗೆ ನಿರ್ನ್ನಾಣ್ಮನುಮಂ ನಿನ್ನ ಮಯ್ದುನನುಮಂ ನೀನೊಪ್ಪುಗೊಳ್ಳೆಂಬುದುಂ ದುರ್ಯೋಧನಂದಾಡೆಗಳೆದ ಕುಳಿಕನಂತೆಯುಂ ಕೋಡುಡಿದ

ಮದಹಸ್ತಿಯಂತೆಯುಂ
ನಖಮುಡಿದ ಸಿಂಹದಂತೆಯುಂ
ಗಳಿತಗರ್ವನಾಗಿ ಪಾಂಡವರ
ಮೊಗಮಂ ನೋಡಲ್ ನಾಣ್ಚಿ
ಮದಗಜಪುರಕ್ಕೆ ಪೋಗಿ
ಜೂದಿನೊಳ್ ಗೆಲ್ದ ನೆಲನಂ
ನಯಜ್ಞನಾಗಿ ತನ್ನೊಳ್ ಪತ್ತಿಸಿ
ದುಶ್ಶಾಸನನಂ ಯುವರಾಜನಂ
ಮಾಡಿ
ನಿರ್ವ್ಯಾಜಮರಸುಗೆಯ್ಯುತ್ತು
ಮಿರ್ದನಿತ್ತ ಯುಷ್ಠಿರನಟ್ಟಿದ

ಕಿರಾತದೂತಂ ತಾಪಸ ವ್ಯಾಜನಾಗಿ ಪೋಗಿ ಸುಯೋಧನನ ವಾರ್ತೆಯೆಲ್ಲಮುಮನಱಿದು ಬಂದಜಾತಕಶತ್ರುಗಿಂತೆಂದು ಬಿನ್ನಪಂಗೆಯ್ದಂ-

ವಚನ:ಪದವಿಭಾಗ-

ಅರ್ಥ:ಎಂದು ಸಾಯೆ ಸರಸಂ ನುಡಿದು (ಸಾಯುವ ಹಾಗೆ ಹಾಸ್ಯಮಾಡಿ) ಕಟ್ಟಿದ ಕಟ್ಟುಗಳಂ ತಾನೆ ಬಿಟ್ಟು ಕಳೆದು

(ಬಿಚ್ಚಿ) ಭಾನುಮತಿಗೆ ನಿನ್ನ ಆಣ್ಮನುಮಂ ನಿನ್ನ ಮಯ್ದುನನುಮಂ ನೀನೊಪ್ಪುಗೊಳ್ಳ್ ಎಂಬುದುಂಒಪ್ಪಿಸಿಕೊ (ತೆಗೆದುಕೊ) ಎಂದಾಗ), ದುರ್ಯೋಧನಂ ದಾಡೆಗಳೆದ ಕುಳಿಕನಂತೆಯುಂ (ದುರ್ಯೋಧನನು ಹಲ್ಲುಕಿತ್ತ ಕ್ರೂರಸರ್ಪದಂತೆಯೂ) ಕೋಡು ಉಡಿದ

ಮದಹಸ್ತಿಯಂತೆಯುಂ
(ಕೊಂಬುಮುರಿದ
ಮದ್ದಾನೆಯಂತೆಯೂ) ನಖಂ
ಉಡಿದ ಸಿಂಹದಂತೆಯುಂ
(ಉಗುರು ಉದುರಿದ
ಸಿಂಹದಂತೆಯೂ) ಗಳಿತ
ಗರ್ವನಾಗಿ (ಗರ್ವಹೀನನಾಗಿ)
ಪಾಂಡವರ ಮೊಗಮಂ
ನೋಡಲ್ ನಾಣ್ಚಿ (ನಾಚಿ)
ಮದಗಜಪುರಕ್ಕೆ ಪೋಗಿ
ಜೂದಿನೊಳ್ ಗೆಲ್ದ ನೆಲನಂ

ನಯಜ್ಞನಾಗಿ ತನ್ನೊಳ್ ಪತ್ತಿಸಿ ದುಶ್ಶ್ಯಾಸನನಂ ಯುವರಾಜನಂ ಮಾಡಿ ನಿರ್ವ್ಯಾಜಂ (ನೀತಿಯುಕ್ತವಾಗಿ) ಅರಸುಗೆಯ್ಯುತ್ತು ಇರ್ದನು. (ಸುಖದಿಂದ ರಾಜ್ಯಭಾರ ಮಾಡುತ್ತಿದ್ದನು) ಇತ್ತ ಯುಷ್ಠಿರನು ಅಟ್ಟಿದ ಕಿರಾತದೂತಂ ತಾಪಸ ವ್ಯಾಜನಾಗಿ ಪೋಗಿ (ಕಿರಾತದೂತನು ತಪಸ್ವಿ

ವೇಷದಿಂದ ಹೋಗಿ)
ಸುಯೋಧನನ
ವಾರ್ತೆಯೆಲ್ಲಮುಮನು
ಅಱಿದು ಬಂದು
ಅಜಾತಕಶತ್ರುಗೆ ಇಂತೆಂದು
ಬಿನ್ನಪಂಗೆಯ್ದಂ-
ವಚನ:ಅರ್ಥ:ಎಂದು
ಸಾಯುವ ಹಾಗೆ ಹಾಸ್ಯಮಾಡಿ,
ಕಟ್ಟಿದ ಕಟ್ಟುಗಳನ್ನು ತಾನೇ
ಬಿಚ್ಚಿ, ಭಾನುಮತಿಗೆ ನಿನ್ನ
ಗಂಡನನ್ನೂ ಮೈದುನನನ್ನೂ

ಒಪ್ಪಿಸಿಕೊ (ತೆಗೆದುಕೊ)
ಎಂದಳು. ದುರ್ಯೋಧನನು
ಹಲ್ಲುಕಿತ್ತ
ಕ್ರೂರಸರ್ಪದಂತೆಯೂ,
ಕೊಂಬುಮುರಿದ
ಮದ್ದಾನೆಯಂತೆಯೂ,
ಉಗುರು ಉದುರಿದ
ಸಿಂಹದಂತೆಯೂ
ಗರ್ವಹೀನನಾಗಿ, ಪಾಂಡವರ
ಮುಖವನ್ನು ನೋಡಲು ನಾಚಿ,
ಹಸ್ತಿನಾಪುರಕ್ಕೆ ಹೋಗಿ

ಜೂಜಿನಲ್ಲಿ ಗೆದ್ದ ರಾಜ್ಯವನ್ನು ನೀತಿಯುಕ್ತವಾಗಿ ಆಳುತ್ತಾ ದುಶ್ಯಾಸನನನ್ನೂ ಯುವರಾಜನನ್ನಾಗಿ ಮಾಡಿ ಸುಖದಿಂದ ರಾಜ್ಯಭಾರ ಮಾಡುತ್ತಿದ್ದನು. ಈ ಕಡೆ ಯುಷ್ಠಿರನು ಕಳುಹಿಸಿದ ಕಿರಾತದೂತನು ತಪಸ್ವಿ ವೇಷದಿಂದ ಹೋಗಿ ದುರ್ಯೋಧನನ ಸಮಾಚಾರವನ್ನೆಲ್ಲ ತಿಳಿದು

ಬಂದು ಧರ್ಮರಾಯನಿಗೆ

ವಿಜ್ಞಾಪಿಸಿದನು-

ಚಂ|| ಕಿವಿಗಿನಿದುಂ ನೃಪಂದೆ

ಹಿತಮಂ ನುಡಿಯೆಲ್ಲಿಯುಮಿಲ್ಲ

ಕೇಳ ಬಿ

ನ್ನವಿಸುವೆನೆನ್ನ ಕಂಡುದನೆ

ಜೂದಿನೊಳುಕ್ಕೆವದಿಂದೆ ಗೆಲ್ದ

ನಿ|

ನ್ನವನಿತಳಂ

ಕರಾತಳದವೋಲ್ ತನಗಂ

ಬೆಸಕೆಯ್ಯೆ ಕೆಯ್ಗೆ ಮಾ

ಡುವ ನಯಮಾ

ಬೃಹಸ್ಪತಿಯುಮಂ

ಗೆಲೆವಂದುದು

ಧಾರ್ತರಾಷ್ಟ್ರನಾ|| ೪೦||

ಪದ್ಯ-೪೦:ಪದವಿಭಾಗ-ಅರ್ಥ:ಕಿವಿಗೆ ಇನಿದುಂ ನೃಪಂದೆ ಹಿತಮಂ ನುಡಿಯೆಲ್ಲಿಯುಂ ಇಲ್ಲ, ಕೇಳ ಬಿನ್ನವಿಸುವೆನು ಎನ್ನ ಕಂಡುದನೆ (ನಾನು ಕಂಡುದನ್ನು ವಿಜ್ಞಾಪಿಸುತ್ತೇನೆ)

ಜೂದಿನೊಳು ಉಕ್ಕೈವದಿಂದೆ ಗೆಲ್ದ (ಜೂಜಿನಲ್ಲಿ ಮೋಸದಿಂದ ಗೆದ್ದ) ನಿನ್ನ ಅವನಿತಳಂ ಕರಾತಳದವೋಲ್ (ಅಂಗಯ್ಯ್ಯಲ್ಲಿರುವ ಹಾಗೆ) ತನಗಂ ಬೆಸಕೆಯ್ಯೆ ಕೆಯ್ಗೆ ಮಾಡುವ ನಯಮ್ (ತನಗೆ ಸೇವೆ ಮಾಡುವ) ಆ ಬೃಹಸ್ಪತಿಯುಮಂ ಗೆಲೆವಂದುದು

ಧಾರ್ತರಾಷ್ಟ್ರನಾ (ದುರ್ಯೋಧನನ ಆ ಹೊಸರಾಜನೀತಿ ಬೃಹಸ್ಪತಿಯನ್ನೂ ಮೀರಿಸಿದೆ).

ಪದ್ಯ-೪೦:ಅರ್ಥ: ಒಂದೇ ಮಾತು ಕಿವಿಗಿಂಪಾಗಿಯೂ ಶ್ರೇಯಸ್ಕರವಾಗಿಯೂ ಇರಲು ಸಾಧ್ಯವಿಲ್ಲ. ನಾನು ಕಂಡುದನ್ನು ವಿಜ್ಞಾಪಿಸುತ್ತೇನೆ. ಜೂಜಿನಲ್ಲಿ ಮೋಸದಿಂದ ಗೆದ್ದ ನಿನ್ನ ರಾಜ್ಯವು ಅವನ

ಅಂಗಯ್ಯಲ್ಲಿರುವ ಹಾಗೆ,
ತನಗೆ ಸೇವೆ ಮಾಡುವ, ಹಾಗೆ
ಮಾಡಿಕೊಳ್ಳುವ
ದುರ್ಯೋಧನನ ಆ
ಹೊಸರಾಜನೀತಿ
ಬೃಹಸ್ಪತಿಯನ್ನೂ ಮೀರಿಸಿದೆ,
ಎಂದನು ದೂತ.

ಮ|| ಮೊದಲೊಳ್
ತಿಣ್ಣಮದೊಪ್ಪಿ
ತಪ್ಪಿದುದನೀಯೆಂದಟ್ಟಿದಂ
ದಂಡನ

ಟ್ಟದೆ
ಸಾಮರ್ಥ್ಯದಿನಟ್ಟಿದೋಲೆಗೆ
ಮಹಾಪ್ರತ್ಯಂತ ಭೂಪಾಳರ|
ಟ್ಟಿದ ಕಾಳಿಂಗ ಗಜೇಂದ್ರ
ದಾನಜಲಧಾರಾಸಾರದಿಂ
ನೋಡ ಕುಂ
ದಿದುದಿಲ್ಲೊಳ್ಗೆಸಱು
ಸುಯೋಧನ
ನೃಪದ್ವಾರೋಪಕಂಠಗಳೊಳ್|
| ೪೧ ||

ಪದ್ಯ-೪೧:ಪದವಿಭಾಗ-ಅರ್ಥ:ಮೊದಲೊಳ್ ತಿಣ್ಣಮದೆ ಒಪ್ಪಿ ತಪ್ಪಿದುದನು ಈಯೆಂ ದಟ್ಟಿದಂ ದಂಡನಟ್ಟದೆ (ಗಟ್ಟಿಯಾಗಿ ಒಪ್ಪಿದುದನ್ನು ಕೊಡದೆ ತಪ್ಪಿದವರಿಗೆ ಸೈನ್ಯವನ್ನು್ಟ ಕಳುಹಿಸದೆ) ಸಾಮರ್ಥ್ಯದಿಂ ಅಟ್ಟಿದ ಓಲೆಗೆ ಮಹಾಪ್ರತ್ಯಂತ ಭೂಪಾಳರು ಅಟ್ಟಿದ ಕಾಳಿಂಗ ಗಜೇಂದ್ರ ದಾನಜಲಧಾರಾ

ಸಾರದಿಂ (ಸಾಮಂತರಾಜರು
ಕಳುಹಿಸಿದ ಕಳಿಂಗ) ನೋಡ
ಕುಂದಿದುದಿಲ್ಲ ಒಳ್ಗೆಸಱು
ಸುಯೋಧನ ನೃಪದ್ವಾರ
ಉಪಕಂಠಗಳೊಳ್(ಆನೆಗಳ
ಮದೋದಕದ
ಧಾರಾಪ್ರವಾಹದಿಂದ
ಉಂಟಾದ ಕೆಸರು ಆ
ದುರ್ಯೋಧನ ರಾಜನ
ಅರಮನೆಯ ಬಾಗಿಲುಗಳ

;ಸಮೀಪಪ್ರದೇಶದಲ್ಲಿ
ಕಡಿಮೆಯೇ ಆಗಿಲ್ಲ.
ಪದ್ಯ-೪೧:ಅರ್ಥ: ಮೊದಲು
ಗಟ್ಟಿಯಾಗಿ ಒಪ್ಪಿದುದನ್ನು
ಕೊಡದೆ ತಪ್ಪಿದವರಿಗೆ
ಸೈನ್ಯವನ್ನುಟ್ಟ ಕಳುಹಿಸದೆ,
ಕೊಡು ಎಂದು ಸಾಮದ
ಪತ್ರದ ಸಾಮರ್ಥ್ಯದಿಂದಲೇ
ಹೇಳಿ ತರಿಸುವನು. ಹಾಗೆ
ರಾಜ್ಯಾಕಾರದಿಂದ ಕಳುಹಿಸಿದ
ಇವನ ಆಜ್ಞಾಪತ್ರಕ್ಕೆ ರಾಜ್ಯದ

ಎಲ್ಲೆಡೆಗಳಲ್ಲಿದ್ದ
ಸಾಮಂತರಾಜರು ಕಳುಹಿಸಿದ
ಕಳಿಂಗ ದೇಶದ ಉತ್ತಮವಾದ
ಆನೆಗಳ ಮದೋದಕದ
ಧಾರಾಪ್ರವಾಹದಿಂದ
ಉಂಟಾದ ಕೆಸರು ಆ
ದುರ್ಯೋಧನ ರಾಜನ
ಅರಮನೆಯ ಬಾಗಿಲುಗಳ
ಸಮೀಪ ಪ್ರದೇಶದಲ್ಲಿ
ಕಡಿಮೆಯೇ ಆಗಿಲ್ಲ.

ಕಂ|| ಕುಸಿದಂ ರಿಪುವಿಜಯದೆ
ನಿ
ದ್ರಿಸಿದಂ ಕಂಡೆಂದಿನಂದಮಂ
ತಪ್ಪಿದನಾ|
ಳ್ವೆಸಕಗಿಯೆ ನುಡಿದನೆಂಬೀ
ಪಿಸುಣಾನಣಾಂ ಕೇಳ್ದೆನಿಲ್ಲ
ಬೀಡಿನೊಳವನಾ|| ೪೨ ||

ಪದ್ಯ-೪೨:ಪದವಿಭಾಗ-ಅರ್ಥ: ಕುಸಿದಂ (ಧರ್ಮಜನು ಆನು ದುರ್ಯೋಧನನ ಯಶಸ್ಸು ಕೇಳಿ ಕುಸಿದನು)

ರಿಪು ವಿಜಯದೆ ನಿದ್ರಿಸಿದಂ
ಕಂಡು ಎಂದಿನ ಅಂದಮಂ
(ಶತ್ರುವು ವಿಜಯದಿಂದ
ಗೆಲುವಿನಿಂದ ನಿದ್ರಿಸಿದುದನ್ನು
ಕಂಡ,) ತಪ್ಪಿದನು
ಆಳ್ವೆಸಕಗಿಯೆ ನುಡಿದನೆಂಬ
ಈ ಪಿಸುಣಿನ ಅಣಿಂ ಕೇಳ್ದೆನಿಲ್ಲ
ಬೀಡಿನೊಳು ಆವನಾ
(ಕೆಟ್ಟಮಾತನಾಡಿದ ಎಂಬ ಈ
ಚಾಡಿ ಮಾತುಗಳನ್ನೂ ಅವನ
ಬೀಡಿನಲ್ಲಿ ಸ್ವಲ್ಪವೂ ಕೇಳಿಲ್ಲ)

ಪದ್ಯ-೪೨:ಅರ್ಥ:ಧರ್ಮಜ ನು, ತಾನು ದುರ್ಯೋಧನನ ಯಶಸ್ಸು ಕೇಳಿ ಕುಸಿದನು -ಕುಗ್ಗಿದನು; ಶತ್ರುವು ವಿಜಯದಿಂದ ಗೆಲುವಿನಿಂದ ನಿದ್ರಿಸಿದುದನ್ನು ಕಂಡ, ಹಿಂದಿನಿಂದ ಇದ್ದ ರೀತಿಯನ್ನು ತಪ್ಪಿದ, ಸೇವೆಮಾಡುವ ವಿಷಯದಲ್ಲಿ ಕೆಟ್ಟಮಾತನಾಡಿದ ಎಂಬ ಈ

ಚಾಡಿ ಮಾತುಗಳನ್ನೂ ಅವನ ಬೀಡಿನಲ್ಲಿ ಸ್ವಲ್ಪವೂ ಕೇಳಿಲ್ಲ.

ಕಂ||ನೆಗೞ್ದರಿಗನ ಸಾಹಸಮೊ
ರ್ಮೆಗೊರ್ಮೆ ಮೆ ಕೆಲದವರ
ಮಾತಿನೊಳ್ ತನ್ನ ಮನಂ|
ಬುಗೆ ಮಂತ್ರಪದಕ್ಕುರಗಂ
ಸುಗಿವಂತೆವೊಲಗಿದು ಸುಗಿದು
ತಲೆಗರೆದಿರ್ಪಂ|| ೪೩||

ಪದ್ಯ-೪೩:ಪದವಿಭಾಗ-ಅರ್ಥ:ನೆಗೞ್ದ ಅರಿಗನ (ಪ್ರಸಿದ್ಧನಾದ ಅರಿಕೇಸರಿಯ/

ಅರ್ಜುನನ) ಸಾಹಸಂ
ಒರ್ಮೆಗೊರ್ಮೆ (ಒಮ್ಮೊಮ್ಮೆ)
ಕೆಲದವರ ಮಾತಿನೊಳ್
(ಪಕ್ಕದವರ ಮಾತಿನಲ್ಲಿ) ತನ್ನ
ಮನಂಬುಗೆ ಮಂತ್ರಪದಕ್ಕೆ
ಉರಗಂ ಸುಗಿವಂತೆವೊಲ್
(ಮನಸ್ಸನ್ನು ಹೊಗಲು
ಮಂತ್ರಮುಗ್ಧವಾದ ಹಾವು
ಹೆದರುವ ಹಾಗೆ) ಉಗಿದು
ಸುಗಿದು
ತಲೆಗರೆದಿರ್ಪಂ(ಹೆದರಿ ಹೆದರಿ

ತಲೆಯನ್ನು ಬಗ್ಗಿಸಿ ಮರೆಸಿಕೊಂಡಿರುತ್ತಾನೆ.)

ಪದ್ಯ-೪೩:ಅರ್ಥ:ಆದರೆ ಪ್ರಸಿದ್ಧನಾದ ಅರಿಕೇಸರಿಯ/ ಅರ್ಜುನನ ಸಾಹಸವು ಒಂದೊಂದು ಸಲ ಪಕ್ಕದವರ ಮಾತಿನಲ್ಲಿ ತನ್ನ ಮನಸ್ಸನ್ನು ಹೊಗಲು ಮಂತ್ರಮುಗ್ಧವಾದ ಹಾವು ಹೆದರುವ ಹಾಗೆ ಹೆದರಿ ಹೆದರಿ ತಲೆಯನ್ನು ಬಗ್ಗಿಸಿ ಮರೆಸಿಕೊಂಡಿರುತ್ತಾನೆ.

ಕಂ||ಅಱಿವಿಂತು ರಾಜಕಾರ್ಯದ ತೆಱನೆನಗಱಿವಂತು ಮೊಗ್ಗೆ ದೇವರ ಮುಂದಾ|
ನಱಿಯೆಂ ಪಿರಿದುಂ ಗಱಿಪಲ್ ಮಱಸೊಂದಿದನಲ್ಲನಹಿತನೆಳ್ಚಿತ್ತಿರ್ದಂ|| ೪೪ ||

ಪದ್ಯ-೪೪:ಪದವಿಭಾಗ-ಅರ್ಥ:ಅಱಿವು ಇಂತು ರಾಜಕಾರ್ಯದ ತೆಱಂ ಎನಗೆ ಅಱಿವಂತು ಮೊಗ್ಗೆ (ನನಗೆ

ತಿಳಿಯುವುದು ಸಾಧ್ಯವೇ)
ದೇವರ ಮುಂದೆ ಆನು
ಅಱಿಯೆಂ (ನನಗೆ
ತಿಳಿಯದು) ಪಿರಿದುಂ
ಗೞಪಲ್ (ಬಹಳ ಹೇಳಲು),
ಮಱಸೊಂದಿದನಲ್ಲನು
ಅಹಿತನು (ಶತ್ರು) ಎಚ್ಚತ್ತಿರ್ದಂ
(ಶತ್ರು ದುರ್ಯೋಧನನು
ಮೈಮರೆತಿಲ್ಲ ;
ಎಚ್ಚರದಿಂದಿದ್ದಾನೆ)

ಪದ್ಯ-೪೪:ಅರ್ಥ:ನನಗೆ ತಿಳಿದ ಸಮಾಚಾರ ಹೀಗಿದೆ, ರಾಜಕಾರ್ಯದ ರೀತಿಯನ್ನು ತಿಳಿಯುವುದು ನನಗೆ ಸಾಧ್ಯವೇ? ಪ್ರಭುವಿನ ಮುಂದೆ ಹೆಚ್ಚಾಗಿ ಹರಟುವುದು ನನಗೆ ತಿಳಿಯದು; ಶತ್ರು ದುರ್ಯೋಧನನು ಮೈಮರೆತಿಲ್ಲ ; ಎಚ್ಚರದಿಂದಿದ್ದಾನೆ

ವ|| ಎಂದು ಬಿನ್ನಪಂಗೆಯ್ದು ಕಿರಾತದೂತಂ ಪೋಪುದುಮಾ ಮಾತೆಲ್ಲಮಂ ಕೇಳ್ದು ಯಜ್ಞಸೇನತನೂಜೆ ಯಮತನೂಜಂಗಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಎಂದು ಬಿನ್ನಪಂಗೆಯ್ದು ಕಿರಾತದೂತಂ ಪೋಪುದುಂ (ಎಂದು ಬಿನ್ನವಿಸಿ ಕಿರಾತದೂತನು ಹೋಗಲು) ಆ ಮಾತೆಲ್ಲಮಂ ಕೇಳ್ದು

ಯಜ್ಞಸೇನತನೂಜೆ
ಯಮತನೂಜಂಗೆ
ಇಂತೆಂದಳ್- (ಆ
ಮಾತೆಲ್ಲವನ್ನೂ ಕೇಳಿ ಅಗ್ನಿಯ
ಮಗಳು- ದ್ರೌಪದಿಯು
ಯಮನ ಮಗ-
ಧರ್ಮರಾಜನಿಗೆ ಹೀಗೆಂದಳು)

<u>ಧರ್ಮರಾಜನಿಗೆ ದ್ರೌಪದಿಯ ಪ್ರಶ್ನೆ</u>

ವಚನ:ಅರ್ಥ:ಎಂದು ಬಿನ್ನವಿಸಿ ಕಿರಾತದೂತನು ಹೋಗಲು ಆ ಮಾತೆಲ್ಲವನ್ನೂ ಕೇಳಿ ದ್ರೌಪದಿಯು ಧರ್ಮರಾಜನಿಗೆ ಹೀಗೆಂದಳು-

ಚಂ|| ನುಡಿವೊಡೆ ರಾಜಕಾರ್ಯ ನಯಮೆತ್ತಬಲಾಜನದೊಂದು ಬುದ್ಧಿಯೆ

ತ್ತುಡುಪತಿವಂಶ
ನೋಡುವೊಡಿದೊಂದಘಟಂ
ಬಗೆವಾಗಳೆಂತು ಕೇಳ್|
ನುಡಿಯದೆ
ಕೆಮ್ಮಗಿರ್ದೊಡಮಿರಲ್ಕಮಣ
ಮೀಯದೆ ನಿಮ್ಮೊಳೆನ್ನುಮಂ
ನುಡಿಯಿಸಿದಪ್ಪುವಾ
ಕುರುಕುಳರ್ಕಳ್
ಗೆಯ್ದಪರಾಧಕೋಟಿಗಳ್|| ೪೫
||

ಪದ್ಯ-೪೫:ಪದವಿಭಾಗ-ಅರ್ಥ:ನುಡಿವೊಡೆ ರಾಜಕಾರ್ಯ ನಯಮೆತ್ತ ಅಬಲಾ ಜನದೊಂದು ಬುದ್ಧಿಯೆತ್ತ (ಹೇಳುವುದಾದರೆ ರಾಜಕಾರ್ಯದ ಬುದ್ಧಿ ಎತ್ತ? ರೀತಿಯೆಲ್ಲಿ ಸ್ತ್ರೀಜನರ ಬುದ್ಧಿಯೆಲ್ಲಿ?) ಉಡುಪತಿವಂಶ ನೋಡುವೊಡೆ ಇದೊಂದು ಅಘಟಂ (ಈಗ ನಡೆದಿರುವ

ಘಟನಗಳು ವಂಶಕ್ಕೆ ಹೊಂದಿಕೊಳ್ಳದಿರುವ ಅಸಂಗತವು) ಬಗೆವಾಗಳು ಎಂತು ಕೇಳ್ (ಯೋಚನೆಮಾಡಿದರೆ ಹೇಗೆಂಬುದನ್ನು ಕೇಳು) ನುಡಿಯದೆ ಕೆಮ್ಮಗಿರ್ದೊಡಂ ಇರಲ್ಕೆಂ ಅಣಂ ಈಯದೆ (ಮಾತನಾಡದೆ ಸುಮ್ಮನಿರಬೇಕೆಂದಿದ್ದರೂ ಇರುವುದಕ್ಕೆ ಅಣುವಷ್ಟೂ

ಅವಕಾಶಕೊಡದೆ) ನಿಮ್ಮೊಳು
ಎನ್ನುಮಂ ನುಡಿಯಿಸಿದಪ್ಪುವು
ಆ (ನಿಮ್ಮಲ್ಲಿ ನನ್ನನ್ನು
ಮಾತನಾಡುವಂತೆ
ಮಾಡುತ್ತಿವೆ.
ಯಾವುದೆಂದರೆ-) ಆ
ಕುರುಕುಳರ್ಕಳ್ ಗೆಯ್ದ
ಅಪರಾಧ ಕೋಟಿಗಳ್ (ಆ
ಕುರಕುಲದವರು ಮಾಡಿದ
ಅಪರಾಧಗಳು ಕೋಟಿಗಳು)

ಪದ್ಯ-೪೫:ಅರ್ಥ:
ಹೇಳುವುದಾದರೆ
ರಾಜಕಾರ್ಯದ ಬುದ್ಧಿ ಎತ್ತ?
ರೀತಿಯೆಲ್ಲಿ ಸ್ತ್ರೀಜನರ
ಬುದ್ಧಿಯೆಲ್ಲಿ? ಎಲೈ
ಚಂದ್ರವಂಶನಾದ
ಧರ್ಮರಾಜನೇ
ವಿಚಾರಮಾಡುವುದಾದರೆ
ಚಂದ್ರವಂಶ, ಅದರಲ್ಲಿ ಈಗ
ನಡೆದಿರುವ ಘಟನಗಳು
ವಂಶಕ್ಕೆ ಹೊಂದಿಕೊಳ್ಳದಿರುವ

ಅಸಂಗತವು)
ಯೋಚನೆಮಾಡಿದರೆ
ಹೇಗೆಂಬುದನ್ನು ಕೇಳು;
ಮಾತನಾಡದೆ
ಸುಮ್ಮನಿರಬೇಕೆಂದಿದ್ದರೂ
ಇರುವುದಕ್ಕೆ ಅಣುವಷ್ಟೂ
ಅವಕಾಶಕೊಡದೆ ಆ
ಕುರಕುಲದವರು ಮಾಡಿದ
ಅಪರಾಧದ ಕೋಟಿಗಳು
ನಿಮ್ಮಲ್ಲಿ ನನ್ನನ್ನು

ಮಾತನಾಡುವಂತೆ

ಮಾಡುತ್ತಿವೆ.

ಕಂ|| ಆವಡವಿಗಳೊಳ್

ಪಣ್ಬಲ

ಮಾವಗಮೊಳವಲ್ಲಿಗಱಿಸಿ

ಪರಿಪರಿದು ಕರಂ|

ತಾವಡಿಗೊಳ್ವೀ ಭೀಮನ

ಬೇವಸಮಿದು ನಿನ್ನ

ಮನಮನೊನಲಿಸಿತಿಲ್ಲಾ||

೪೬||

ಪದ್ಯ-೪೬:ಪದವಿಭಾಗ-ಅರ್ಥ:ಆವ ಅಡವಿಗಳೊಳ್ ಪಣ್ಪಲಂ ಆವಗಂ ಒಳವು ಅಲ್ಲಿಗೆ ಅಱಸಿ ಪರಿಪರಿದು (ಯಾವ ಕಾಡುಗಳಲ್ಲಿ ಹಣ್ಣುಹಂಪಲುಗಳು ಯಾವಾಗಲೂ ಇರುವುವೊ, ಅಲ್ಲಿಗೆ ಹುಡುಕಿಕೊಂಡು ಓಡಿ ಓಡಿ) ಕರಂ ತಾವಡಿಗೊಳ್ವ (ಬಹಳ ಅಲೆಯುತ್ತಿರುವ)ಈ ಭೀಮನ ಬೇವಸಂ ಇದು ನಿನ್ನ

ಮನಮನು ಒನಲಿಸಿತಿಲ್ಲಾ
(ಭೀಮನ ಈ ಶ್ರಮವು ನಿನ್ನ
ಮನಸ್ಸನ್ನು ಕೆರಳಿಸಿಲ್ಲವೇ?)
ಪದ್ಯ-೪೬:ಅರ್ಥ: ಯಾವ
ಕಾಡುಗಳಲ್ಲಿ
ಹಣ್ಣುಹಂಪಲುಗಳು
ಯಾವಾಗಲೂ ಇರುವುವೊ,
ಅಲ್ಲಿಗೆ ಹುಡುಕಿಕೊಂಡು ಓಡಿ
ಓಡಿ ಬಹಳ ಅಲೆಯುತ್ತಿರುವ
ಈ ಭೀಮನ ಶ್ರಮವು ನಿನ್ನ
ಮನಸ್ಸನ್ನು ಕೆರಳಿಸಿಲ್ಲವೇ?

ಉ|| ಪೋಗಿ
ಸುಪರ್ವಪರ್ವತದ
ಕಾಂಚನರೇಣುಗಳುಂ
ಪರಾಕ್ರಮೋ
ದ್ಯೋಗದಿನೆತ್ತಿ ತಂದು
ನಿನಗಿತ್ತದಟಂ ಬಡಪಟ್ಟು
ಬೆಟ್ಟದೊಳ್|
ಪೋಗಿ ತೋಟಿಲ್ದು
ನಾರ್ಗಳನುಡಲ್ ತರುತಿರ್ದಲೆ
ಮಾಡಲಾರ್ತನಿ

ಲ್ಲಾಗಳೆ ಕೋಪಮಂ ನಿನಗೆ ಸಂಚಿತಶೌರ್ಯಧನಂ ಧನಂಜಯಂ|| ೪೭||

ಪದ್ಯ-೪೭:ಪದವಿಭಾಗ-ಅರ್ಥ:ಪ್ರೋಗಿ ಸುಪರ್ವಪರ್ವತದ ಕಾಂಚನರೇಣುಗಳುಂ ಪರಾಕ್ರಮ ಉದ್ಯೋಗದಿಂ ಎತ್ತಿ ತಂದು ನಿನಗಿತ್ತ ಅದಟಂ (ಮೇರುಪರ್ವತಕ್ಕೆ ಹೋಗಿ ಪೌರುಷಕಾರ್ಯದಿಂದ ಚಿನ್ನದ

ಕಣಗಳನ್ನು ನಿನಗೆ
ತಂದುಕೊಟ್ಟ ಸಾಹಸಿ
ಅರ್ಜುನನು) ಬಡಪಟ್ಟು
ಬೆಟ್ಟದೊಳ್ ಪೋಗಿ ತೊಟಿಲ್ದು
(ಕೃಶವಾಗಿ ಬೆಟ್ಟದಲ್ಲಿ ತೊಳಲಿ)
ನಾರ್ಗಳನು ಉಡಲ್
ತರುತಿರ್ದ (ಉಡುವುದಕ್ಕೆ
ನಾರುಗಳನ್ನು ತರುತ್ತಿರುವ)
ಎಲೆ ಮಾಡಲು
ಆರ್ತನಿಲ್ಲಾಗಳೆ ಕೋಪಮಂ
ನಿನಗೆ ಸಂಚಿತ ಶೌರ್ಯಧನಂ

ಧನಂಜಯಂ(ಶೌರ್ಯವನ್ನೇ ಕೂಡಿಟ್ಟ ಧನವಾಗಿ ಉಳ್ಳ ಪರಾಕ್ರಮಶಾಲಿಯಾದ ಧನಂಜಯನೂ (ಅರ್ಜುನನೂ) ಎಲ್ಲೈ ನಿನಗೆ ಕೋಪವನ್ನುಂಟು ಮಾಡಲು ಶಕ್ತನಾಗಲಿಲ್ಲವೆ?)

ಪದ್ಯ-೪೭:ಅರ್ಥ: ಮೇರುಪರ್ವತಕ್ಕೆ ಹೋಗಿ ಪೌರುಷಕಾರ್ಯದಿಂದ ಚಿನ್ನದ ಕಣಗಳನ್ನು ನಿನಗೆ

ತಂದುಕೊಟ್ಟ ಸಾಹಸಿ
ಅರ್ಜುನನು, ಕೃಶವಾಗಿ
ಬೆಟ್ಟದಲ್ಲಿ ತೊಳಲಿ
ಉಡುವುದಕ್ಕೆ ನಾರುಗಳನ್ನು
ತರುತ್ತಿರುವ ಶೌರ್ಯವನ್ನೇ
ಕೂಡಿಟ್ಟ ಧನವಾಗಿ ಉಳ್ಳ
ಪರಾಕ್ರಮಶಾಲಿಯಾದ
ಧನಂಜಯನೂ
(ಅರ್ಜುನನೂ) ಎಲ್ಲೈ ನಿನಗೆ
ಕೋಪವನ್ನುಂಟು ಮಾಡಲು
ಶಕ್ತನಾಗಲಿಲ್ಲವೆ?

ಕಂ|| ಕಾಯ ಕ್ಲೇಶದಿನಡವಿಯ
ಕಾಯಂ ಪಣ್ಣುಮನುದಿರ್ಪಿ
ತಿಂದಗಲದೆ ನಿಂ|
ದೀ ಯಮಳರಾವ ತೆಱದಿಂ
ನೋೀಯಿಸರಯ್ ನಿನ್ನ
ನನ್ನಿಕಾಱನ ಮನಮಂ|| ೪೮ ||

ಪದ್ಯ-೪೮:ಪದವಿಭಾಗ-

ಅರ್ಥ:ಕಾಯ ಕ್ಲೇಶದಿಂ ಅಡವಿಯ ಕಾಯಂ ಪಣ್ಣುಮನು ಉದಿರ್ಪಿ ತಿಂದು ಅಗಲದೆ ನಿಂದ(ಅಲುಗಾಡದೆ,

ನಿನ್ನ ಜೊತ್ಎ ಬಿಡದೆ ನಿಂತ)
ಈ ಯಮಳರು (ಅವಳಿ
ಸೋದರರರು -ನಕುಲ
ಸಹದೇವರು), ಆವ ತೆಱದಿಂ
ನೋಯಿಸರಯ್ ನಿನ್ನ
ನನ್ನಿಕಾಱಿನ (ಸತ್ಯವಂತನಾದ
ನಿನ್ನ ಮನಸ್ಸನ್ನು ನೋಯಿಸದೆ
ಇರುವರು?) ಮನಮಂ

ಪದ್ಯ-೪೮:ಅರ್ಥ:

ದೇಹಶ್ರಮದಿಂದ ಕಾಡಿನ
ಕಾಯನ್ನೂ ಹಣ್ಣನ್ನೂ

ಉದುರಿಸಿ ತಿಂದು ನಿಮ್ಮನ್ನು
ಅಗಲದೆ ನಿಂತ ಈ
ಯಮಳರಾದ ನಕುಲ
ಸಹದೇವರು ಸತ್ಯವಂತನಾದ
ನಿನ್ನ ಮನಸ್ಸನ್ನು ನೋಯಿಸದೆ
ಇರುವರು?

**ಕಂ||ಆ ದುಶ್ಶ್ಯಾಸನನಿಂದೆನ
ಗಾದ ಪರಾಭವಮನೇನುಮಂ
ಬಗೆಯದೊಡಿಂ|
ತಾದರಮೆ ತೊವಲ್ವಾರುಮ**

ನಾದರದೇಂ ನಿನ್ನ ಮನಕೆ ಚಿಂತೆಯುಮಿಲ್ಲಾ|| ೪೯ ||

ಪದ್ಯ-೪೯:ಪದವಿಭಾಗ-ಅರ್ಥ:ಆ ದುಶ್ಶ್ಯಾಸನನಿಂದ ಎನಗಾದ ಪರಾಭವಮನು ಏನುಮಂ ಬಗೆಯದೊಡೆ (ಸ್ವಲ್ಪವೂ ಲೆಕ್ಕಿಸದಿರುವ) ಇಂತು ಆದರಮೆ ತೊವಲ್ನಾರುಂ, ಅನಾದರ ಅದೇಂ (ಈ ತೊಗಲುನಾರುಗಳು ಆದರಕ್ಕೆ

ಪಾತ್ರವಾದುವೇ? ಈ ಅನಾಸಕ್ತಿಯೇತಕ್ಕೆ?) ನಿನ್ನ ಮನಕೆ ಚಿಂತೆಯುಂ ಇಲ್ಲಾ (ನಿನ್ನ ಮನಸ್ಸಿಗೆ ಚಿಂತೆಯೇ ಇಲ್ಲವೇ?)

ಪದ್ಯ-೪೯:ಅರ್ಥ: ಆ ದುಶ್ಯಾಸನನಿಂದ ನನಗುಂಟಾದ ಅವಮಾನವನ್ನು ಸ್ವಲ್ಪವೂ ಲೆಕ್ಕಿಸದಿರುವ ನಿನಗೆ ಈ ತೊಗಲುನಾರುಗಳು ಆದರಕ್ಕೆ

ಪಾತ್ರವಾದುವೇ? ಈ ಅನಾಸಕ್ತಿಯೇತಕ್ಕೆ? ನಿನ್ನ ಮನಸ್ಸಿಗೆ ಚಿಂತೆಯೇ ಇಲ್ಲವೇ?

ಕಂ||ಎಮ್ಮಯ್ವರ ಬೇವಸಮಂ
ನೀಂ ಮನದೊಳ್
ನೆನೆಯೆಯಪ್ಪೊಡಂ ನಿನ್ನಿರವಂ|
ನೀಂ ಮರುಳೆ ಬಗೆಯದಂತುಂ
ಘುಮ್ಮೆಂಬಡವಿಯೊಳಡಂಗಿ
ಚಿಂತಿಸುತಿರ್ಪಾ|| ೫೦

ಪದ್ಯ-೫೦:ಪದವಿಭಾಗ-

ಅರ್ಥ:ಎಮ್ಮ ಐಯ್ವರ

ಬೇವಸಮಂ (ನಮ್ಮ ಐದು
ಜನರ ದುಮ್ಮಾನ, ಕಷ್ಟವನ್ನೂ)
ನೀಂ ಮನದೊಳ್
ನೆನೆಯೆಯಪ್ಪೊಡಂ
(ನೆನೆಯದಿದ್ದರೂ)ನಿನ್ನಿರವಂ
ನೀಂ ಮರುಳೆ ಬಗೆಯದೆ
ಅಂತುಂ ಘುಮ್ಮೆಂಬ
ಅಡವಿಯೊಳು ಅಡಂಗಿ (ನಿನ್ನ
ಸ್ಥಿತಿಯನ್ನು ಯೋಚಿಸಿ
ನೋಡು ಈ ಘುಮ್ಮೆನ್ನುವ
ಕಾಡಿನಲ್ಲಿ ಅಡಗಿಕೊಂಡು)

ಚಿಂತಿಸುತಿರ್ಪಾ (ಚಿಂತಿಸುತ್ತಾ
ಇರಬಹುದೇ?)

ಪದ್ಯ-೫೦:ಅರ್ಥ: ನಮ್ಮ
ಐದು ಜನರ ದುಮ್ಮಾನ,
ಕಷ್ಟವನ್ನೂ ನೀನು ಮನಸ್ಸಿನಲ್ಲಿ
ನೆನೆಯದಿದ್ದರೂ ಎಲ್ಲೈ ಹುಚ್ಚೀ
ನಿನ್ನ ಸ್ಥಿತಿಯನ್ನು ಯೋಚಿಸಿ
ನೋಡು ಈ ಘುಮ್ಮೆನ್ನುವ
ಕಾಡಿನಲ್ಲಿ ಅಡಗಿಕೊಂಡು
ಚಿಂತಿಸುತ್ತಾ ಇರಬಹುದೇ?

ಕಂ||ಶಮಮನೆ ಕೆಯ್ಕೊಳ್ವೊಡೆ ಬಿ

ಲ್ಲುಮಂಬುಮಂ ಬಿಸುಟು

ತಪಕೆ ನೀಂ ಬಗೆವೊಡೆ ವಿ||

ಕ್ರಮಮಂ ಪಗೆಯಂ ಕಿಡಿಸುವ

ಶಮದಿಂ ಮುನಿಗಾಯ್ತು ಸಿದ್ಧಿ

ಭೂಪತಿಗಾಯ್ತು|| ೫೧ ||

ಪದ್ಯ-೫೧:ಪದವಿಭಾಗ-

ಅರ್ಥ:ಶಮಮನೆ

ಕೆಯ್ಕೊಳ್ವೊಡೆ (ನೀನು

ಶಾಂತಿಯನ್ನೇ

ಅನುಸರಿಸುವುದಾದರೆ)
ಬಿಲ್ಲುಂ ಅಂಬುಮಂ ಬಿಸುಟು,
ತಪಕೆ ನೀಂ ಬಗೆವೊಡೆ
(ತಪಸ್ಸನ್ನೇ ನೀನು
ಇಷ್ಟಪಡುವುದಾದರೆ,)
ವಿಕ್ರಮಮಂ ಪಗೆಯಂ
ಕಿಡಿಸುವ ಶಮದಿಂ
ಮುನಿಗಾಯ್ತು ಸಿದ್ಧಿ,
(ವಿಕ್ರಮವನ್ನೂ ದ್ವೇಷವನ್ನೂ
ಹೋಗಲಾಡಿಸುವ
ಶಾಂತಿಯಿಂದ ಮುನಿಗೆ

ಸಿದ್ಧಿಯಗಬಹುದು,)
ಭೂಪತಿಗಾಯ್ತೆ (ಕ್ಷತ್ರಿಯನಾದ
ರಾಜನಿಗೆ ಆಗುತ್ತದೆಯೇ?
ಇಲ್ಲ.)
ಪದ್ಯ-೫೧:ಅರ್ಥ: ನೀನು
ಶಾಂತಿಯನ್ನೇ
ಅನುಸರಿಸುವುದಾದರೆ ಬಿಲ್ಲು
ಬಾಣಗಳನ್ನೂ ಬಿಸಾಡಿ
ತಪಸ್ಸನ್ನೇ ನೀನು
ಇಷ್ಟಪಡುವುದಾದರೆ,
ವಿಕ್ರಮವನ್ನೂ ದ್ವೇಷವನ್ನೂ

ಹೋಗಲಾಡಿಸುವ
ಶಾಂತಿಯಿಂದ ಮುನಿಗೆ
ಸಿದ್ಧಿಯಗಬಹುದು, ವಿನಾ
ಕ್ಷತ್ರಿಯನಾದ ರಾಜನಿಗೆ
ಆಗುತ್ತದೆಯೇ? ಇಲ್ಲ.

ಕಂ||ತಪ್ಪುಮನೆ
ನುಡಿಯೆನೆಂಬುದಿ
ದೊಪ್ಪದು ನಿನಗಹಿತರೆಯ್ದೆ
ತಪ್ಪಿದರ್ದರವರ್|
ತಪ್ಪಿದ ಬಟಿಕ್ಕೆ ತಪ್ಪಿದ

ತಪ್ಪೇಂ ಗಳ ನನ್ನಿಗೊಪ್ಪಮಲ್ಲದ ತಪ್ಪೇ|| ೫೨

ಪದ್ಯ-೫೨:ಪದವಿಭಾಗ-ಅರ್ಥ:ತಪ್ಪುಮನೆ ನುಡಿಯೆನೆಂಬುದಿದು ಒಪ್ಪದು (ತಪ್ಪಾದುದನ್ನೇ ನಾನು ಮಾತನಾಡುವುದಿಲ್ಲವೆಂಬ ಮಾತು ಒಪ್ಪುವ ವಿಚಾರವಲ್ಲ) ನಿನಗೆ ಅಹಿತರು ಎಯ್ದೆ (ಶತ್ರುಗಳಾದವರು ತಪ್ಪು ಮಾಡಿದ್ದರೆ) ತಪ್ಪಿರ್ದರ್

ಅವರ್ (ಅವರು ತಪ್ಪುಮಾಡಿದ್ದಾರೆ) ತಪ್ಪಿದ ಬಟಿಕ್ಕೆ ತಪ್ಪಿದತಪ್ಪು (ವರು ತಪ್ಪು ಮಾಡಿದ ಬಳಿಕ ನೀನು ತಪ್ಪುಮಾಡಿದರೆ)ಎಂಗಳ ನನ್ನಿಗೆ ಒಪ್ಪಮಲ್ಲದ ತಪ್ಪೇ (ಆ ತಪ್ಪು ನಿನ್ನ ಸತ್ಯಕ್ಕೆ ವಿರೋದವಾದ ತಪ್ಪಾಗುತ್ತದೆಯೇ?)

ಪದ್ಯ-೫೨:ಅರ್ಥ:ತಪ್ಪಾದುದ ನ್ನೇ ನಾನು

ಮಾತನಾಡುವುದಿಲ್ಲವೆಂಬ
ಮಾತು ಒಪ್ಪುವ ವಿಚಾರವಲ್ಲ ;
ಶತ್ರುಗಳಾದವರು ತಪ್ಪು
ಮಾಡಿದ್ದರೆ. ಅವರು
ತಪ್ಪುಮಾಡಿದ್ದಾರೆ; ಅವರು
ತಪ್ಪು ಮಾಡಿದ ಬಳಿಕ ನೀನು
ತಪ್ಪುಮಾಡಿದರೆ ಆ ತಪ್ಪು ನಿನ್ನ
ಸತ್ಯಕ್ಕೆ ವಿರೋದವಾದ
ತಪ್ಪಾಗುತ್ತದೆಯೇ?

<u>ದ್ರೌಪಡಿಯ ಮಾತಿಗೆ ಭೀಮನ ಸಹಮತ</u>

ವ|| ಎಂದು

ಪಾಂಚಾಳರಾಜತನೂಜೆಯ

ಮಾತಿಂಗೆ

ಬೆಂಬಲಂಬಾಯ್ದಂತೆ

ಭೀಮಸೇನ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಪಾಂಚಾಳರಾಜತನೂಜೆಯ (ದ್ರೌಪದಿಯ) ಮಾತಿಂಗೆ

ಬೆಂಬಲಂಬಾಯ್ದಂತೆ
(ಬೆಂಬಲವಾಗುವ ಹಾಗೆ)
ಭೀಮಸೇನನು ಇಂತೆಂದಂ-
ವಚನ:ಅರ್ಥ:ಎಂಬುದಾಗಿ
ಹೇಳಿದ ದ್ರೌಪದಿಯ ಮಾತಿಗೆ
ಬೆಂಬಲವಾಗುವ ಹಾಗೆ
ಭೀಮಸೇನನು ಹೀಗೆಂದನು-

ಕಂ|| ನುಡಿಯದೆ ಪೆಱತಂ ದ್ರೌಪದಿ
ನುಡಿದಳ್ ತಕ್ಕುದನೆ ಕೇಳಿಮಿಂ ಕೇಳದಿರಿಂ|

ನುಡಿಯಲೆಡೆಯಿಲ್ಲ ನಿಮ್ಮಂ ನುಡಿಯಿಸಿದಪುದೆನ್ನ ಮನದ ಮುನಿಸವನಿಪತೀ|| ೫೩||

ಪದ್ಯ-೫೩:ಪದವಿಭಾಗ-ಅರ್ಥ:ನುಡಿಯದೆ ಪೆಱತಂ (ಬೇಡವಾದದ್ದನ್ನು ಹೇಳದೆ) ದ್ರೌಪದಿ ನುಡಿದಳ್ ತಕ್ಕುದನೆ, ಕೇಳಿಮಿಂ ಕೇಳದಿರಿಂ (ನೀವು ಕೇಳಿರಿ, ಕೇಳದೆಬಿಡಿ) ನುಡಿಯಲು ಎಡೆಯಿಲ್ಲ. ನಿಮ್ಮಂ ನುಡಿಯಿಸಿದಪುದು

ಎನ್ನ ಮನದ ಮುನಿಸ ಅವನಿಪತೀ.

ಪದ್ಯ-೫೩:ಅರ್ಥ: ದ್ರೌಪದಿಯು ಬೇಡವಾದದ್ದನ್ನು ಹೇಳದೆ ಯೋಗ್ಯವಾದುದನ್ನೇ ಹೇಳಿದಳು. ನೀವು ಕೇಳಿರಿ, ಕೇಲದೆಬಿಡಿ; ಇನ್ನು ಮಾತನಾಡಲು ಅವಕಾಶವೇ ಇಲ್ಲ; ರಾಜನೇ, ನನ್ನ ಮನಸ್ಸಿನ ಕೋಪ ನನ್ನನ್ನೂ ನಿಮ್ಮನ್ನು

ಕುರಿತು ಮಾತನಾಡುವ ಹಾಗೆ ಮಾಡುತ್ತದೆ

ಕಂ||ನಾಲ್ಕುಂ ನೃಪವಿದ್ಯೆಯನಾ
ಡಲ್ ಕಲ್ತುಂ ನೆರೆಯೆ
ಕಲ್ತೆಯಿಲ್ಲಾಗದೆ ಸೋ|
ಲಲ್ಕೆ ನೃಪ ದೊರೆಯೆ ನೆಲನಂ
ವಲ್ಕಲವಸನಕ್ಕೆ
ಮೆಯ್ಯನಾಂಪುದು ಪೆಂಪೇ||
೫೪

ಪದ್ಯ-೫೪:ಪದವಿಭಾಗ-

ಅರ್ಥ:ನಾಲ್ಕುಂ

ನೃಪವಿದ್ಯೆಯನು ಆಡಲ್
ಕಲ್ತುಂ (ನಾಲ್ಕು
ರಾಜನೀತಿಗಳನ್ನು
ಅನುಸರಿಸಲು ಕಲಿತೂ)
ನೆರೆಯೆ ಕಲ್ತೆಯಿಲ್ಲಾಗದೆ
(ಪೂರ್ಣ
ಕಲಿತವನಾಗಲಿಲ್ಲವಲ್ಲಾ)
ಸೋಲಲ್ಕೆ ನೃಪ ದೊರೆಯೆ
ನೆಲನಂ(ರಾಜ್ಯವನ್ನು
ಸೋಲುವುದು ಉಚಿತವೇ?)

ವಲ್ಕಲ ವಸನಕ್ಕೆ ಮೆಯ್ಯನು ಆಂಪುದು ಪೆಂಪೇ

ಪದ್ಯ-೫೪:ಅರ್ಥ:ರಾಜನಿಗೆ ಯೋಗ್ಯವಾದ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ರಾಜನೀತಿಗಳನ್ನು ತಿಳಿದಿದ್ದರೂ ನೀನು ಪೂರ್ಣ ಕಲಿತವನಾಗಲಿಲ್ಲವಲ್ಲಾ; ರಾಜ್ಯವನ್ನು ಸೋಲುವುದು ಉಚಿತವೇ? ದೇಹಕ್ಕೆ

ನಾರುಮಡಿಯನ್ನು
ಧರಿಸಿರುವುದು ಹಿರಿಮೆಯೇ?

ಉ|| ನನ್ನಿಗೆ
ದಾಯಿಗಂಗೆಳೆಯನೊಪ್ಪಿಸಿದೆಂ
ಗಡಿಮೆಂಬ ಮಾತುಗಳ್
ನಿನ್ನವು ಕೂರದರ್
ನೆಲನನೊಟ್ಟಜೆಯಿಂ ಕೊಳೆ
ಕೊಟ್ಟು ಮುಟ್ಟುಗೆ|
ಟ್ಟಿನ್ನುಮರಣ್ಯದೊಳ್
ನಮೆದಪಂ

ಯಮನಂದನನೆಂಬ ಬನ್ನಮುಂ ಮುನ್ನಮೆ ಸೋಂಕಿ ಕಣ್ಮಲೆವ ಮಾತುಗಳೆಲ್ಲರ ಪೇೞ್ವ ಮಾತುಗಳ್|| ೫೫||

ಪದ್ಯ-೫೫:ಪದವಿಭಾಗ-ಅರ್ಥ:ನನ್ನಿಗೆ ದಾಯಿಗಂಗೆ ಎಳೆಯನು ಒಪ್ಪಿಸಿದೆಂ ಗಡಿಂ (ಸತ್ಯಪರಿಪಾಲನೆಗಾಗಿ ದಾಯಾದಿಗಳಿಗೆ ರಾಜ್ಯವನ್ನೂ ಒಪ್ಪಿಸಿದೆನು. ಗಡ! ಅಲ್ಲವೇ!)

ಎಂಬ ಮಾತುಗಳ್ ನಿನ್ನವು,
ಕೂರದರ್ ನೆಲನನು
ಒಟ್ಟಜೆಯಿಂ ಕೊಳೆ (ಪ್ರೀತಿಸದ
ವಿರೋಧಿಗಳು ರಾಜ್ಯವನ್ನು
ಒಟ್ಟಾರೆ-ಹೇಗೋ
ಕಿತ್ತುಕೊಳ್ಳಲು) ಕೊಟ್ಟು
ಮುಟ್ಟುಗೆಟ್ಟು (ಕೊಟ್ಟು
ಸಾಧನಗಳಿಲ್ಲದೆ) ಇನ್ನುಂ
ಅರಣ್ಯದೊಳ್ ನಮೆದಪಂ
(ಮರಮುಟ್ಟುಗಳಿಲ್ಲದೆ-
ಸಾಧನಳಿಲ್ಲದೆ

ಧರ್ಮರಾಯನು ಕಾಡಿನಲ್ಲಿ ನವೆಯುತ್ತಿದ್ದಾನೆ, ಯಮನಂದನನು), ಎಂಬ ಬನ್ನಮುಂ (ಅವಮಾನವು) ಮುನ್ನಮೆ ಸೋಂಕಿ (ಮೊದಲೇ ನಮಗೆ ಸೋಂಕಿದೆ) ಕಣ್ಮಲೆವ ಮಾತುಗಳು (ಕಣ್ ಮಲೆವ-ಕಣ್ಣು ಕೆರಳಿಸುವ ಮಾತುಗಳು), ಇದು ಎಲ್ಲರ ಪೇೞ್ವ ಮಾತುಗಳ್ (ಇದು

ಎಲ್ಲರೂ ಹೇಳುವ ಮಾತುಗಳು)

ಪದ್ಯ-೫೫:ಅರ್ಥ:.

ಸತ್ಯಪರಿಪಾಲನೆಗಾಗಿ ದಾಯಾದಿಗಳಿಗೆ ರಾಜ್ಯವನ್ನೂ ಒಪ್ಪಿಸಿದೆನು ಅಲ್ಲವೇ! ಎಂಬುದು ನೀವು ಹೇಳುವ ಮಾತುಗಳು; ಪ್ರೀತಿಸದ ವಿರೋಧಿಗಳು ರಾಜ್ಯವನ್ನು ಒಟ್ಟಾರೆ-ಹೇಗೋ ಕಿತ್ತುಕೊಳ್ಳಲು, ಸಾಧನಳಿಲ್ಲದೆ

ನಿಸ್ಸಹಾಯಕನಾಗಿ
ಧರ್ಮರಾಯನು ಕಾಡಿನಲ್ಲಿ
ನವೆಯುತ್ತಿದ್ದಾನೆ ಎಂಬ
ಕಣ್ಣನ್ನು ಕೆರಳಿಸುವ
ಅವಮಾನಕರವಾದ ಎಲ್ಲರೂ
ಹೇಳುವ ಮಾತುಗಳು,
ನಮ್ಮನ್ನು ಹಿಂದೆಯೇ
ತಲುಪಿವೆ. ಇದು ಎಲ್ಲರೂ
ಹೇಳುವ ಮಾತುಗಳು.

ಕಂ|| ಸಲೆ ಸಂದಿರ್ಪತ್ತೊಂದುಂ

ತಲೆವರೆಗಂ ನಮಗೆ ಪರಿಭವಂ ಕೃಷ್ಣೆಯ ಮುಂ|
ದಲೆಯಂ ಪಿಡಿದೆಳೆವಲ್ಲಿಯೆ
ತಲೆವಿಡಿದರ್ ನಮ್ಮ ಬೀರಮಂ ಕೌರವರುಂ|| ೫೬ ||

ಪದ್ಯ-೫೬:ಪದವಿಭಾಗ-ಅರ್ಥ:ಸಲೆಸಂದ ಇರ್ಪತ್ತೊಂದುಂ ತಲೆವರೆಗಂ (ವಿಶೇಷವೆಂದರೆ ಪ್ರಸಿದ್ಧವಾದ ನಮ್ಮ ಇಪ್ಪತ್ತೊಂದು ತಲೆಮಾರಿನವರೆಗೂ) ನಮಗೆ

ಪರಿಭವಂ (ನಮ್ಮ ಸೋಲು ಅಂಟುವುದು.) ಕೃಷ್ಣೆಯ ಮುಂದಲೆಯಂ ಪಿಡಿದು ಎೞೆವಲ್ಲಿಯೆ (ದ್ರೌಪದಿಯ ಮುಂದಲೆಯನ್ನು ಹಿಡಿದು ಎಳೆದಾಗಲೇ) ತಲೆವಿಡಿದರ್ ನಮ್ಮ ಬೀರಮಂ ಕೌರವರುಂ(ಕೌರವರು ನಮ್ಮ ಶೌರ್ಯವನ್ನು ಸೆರೆಹಿಡಿದರು.)

ಪದ್ಯ-೫೬:ಅರ್ಥ: ವಿಶೇಷವೆಂದರೆ ಪ್ರಸಿದ್ಧವಾದ

ನಮ್ಮ ಇಪ್ಪತ್ತೊಂದು
ತಲೆಮಾರಿನವರೆಗೂ ನಮಗೆ
ಸೋಲಿನ
ಅವಮಾನಅಂಟುವುದು.
ದ್ರೌಪದಿಯ ಮುಂದಲೆಯನ್ನು
ಹಿಡಿದೆಳೆದಾಗಲೇ ಕೌರವರು
ನಮ್ಮ ಶೌರ್ಯವನ್ನು
ಸೆರೆಹಿಡಿದರು.

ಚಂ|| ಮಲೆ ಮಲೆದುರ್ಕಿ
ಸೊರ್ಕಿ ಸಭೆಯೊಳ್

ಕುಲಂಪಾಸುಲನೀ ಶಿರೀಷ

ಕೋ

ಮಲೆಯ ವಿಲೋಲ ನೀಲ

ಕಬರೀಭರಮಂ ತೆಗೆವಾಗಳಲ್ಲಿ

ಕೆ|

ಯ್ಯಲೆ ಪದೆದಂತೆ ಪತ್ತಿ

ಬೆರಲಚ್ಚುಗಳಚ್ಚಿಱದಂತೆ

ಕೊಂಕುಗಳ್

ತಲೆ ನವಿರೊಂದಿ

ಮೂದಲಿಸುವಂತೆವೊಲಿರ್ದು

ವು ನಮ್ಮ ವೀರಮಂ|| ೫೭ ||

ಪದ್ಯ-೫೭:ಪದವಿಭಾಗ-ಅರ್ಥ:ಮಲೆ ಮಲೆದು ಉರ್ಕಿ ಸೊರ್ಕಿ ಸಭೆಯೊಳ್ (ಉದ್ಧಟತನದಿಂದ ಮಲೆತು ಉಬ್ಬಿ ಸೊಕ್ಕಿ ಸಭೆಯಲ್ಲಿ) ಕುಲಂಪಾಸುಲನು ಈ ಶಿರೀಷ ಕೋಮಲೆಯ (ಈ ಕುಲಕಲಂಕಿತಕನಾದ ದುಶ್ಯಾಸನನು ಸಭೆಯಲ್ಲಿ ಬಾಗೆಯ ಹೂವಿನಂತೆ ಕೋಮಲೆಯ/ ಈ

ದ್ರೌಪದಿಯ) ವಿಲೋಲ ನೀಲ
ಕಬರೀಭರಮಂ ತೆಗೆವಾಗಳೆ
(ಓಲಾಡುತ್ತಿರು ಕಪ್ಪು
ಕೂದಲಿನ ರಾಶಿಯನ್ನು
ಎಳೆದಾಗಲೆ,) ಅಲ್ಲಿ ಕೆಯ್ಯಲೆ
ಸದೆದಂತೆ ಪತ್ತಿ ಬೆರಲಚ್ಚುಗಳು
ಅಚ್ಚೊಱದಂತೆ (ಕೈಯಿಂದ
ಹೊಡೆದ ಹಾಗೆ ಬೆರಳಿನ
ಗುರುತುಗಳು ಅಂಟಿಕೊಂಡು
ಬೆರಲಚ್ಚು ಮುದ್ರಿಸುವ ಹಾಗೆ)
ಕೊಂಕುಗಳ್ ತಲೆ ನವಿರೊಂದಿ

(ತಲೆಕೂದಲೊಡನೆ ಸೇರಿ)
ಮೂದಲಿಸುವಂತೆವೊಲ್
ಇರ್ದುವು ನಮ್ಮ ವೀರಮಂ
ಪದ್ಯ-೫೭:ಅರ್ಥ:
ಉದ್ಧಟತನದಿಂದ ಮಲೆತು
ಉಬ್ಬಿ ಸೊಕ್ಕಿ ಸಭೆಯಲ್ಲಿ ಈ
ಕುಲಕಲಂಕಿತಕನಾದ
ದುಶ್ಶ್ಯಾಸನನು ಸಭೆಯಲ್ಲಿ
ಬಾಗೆಯ ಹೂವಿನಂತೆ
ಕೋಮಲವೂ ಮೃದುವೂ
ಚಂಚಲವೂ ಕರ್ರಗೂ ಇರುವ

ಓಲಾಡುತ್ತಿರು ಕಪ್ಪು ಕೂದಲಿನ
ರಾಶಿಯನ್ನು ಎಳೆದಾಗಲೆ,
ಕೈಯಿಂದ ಹೊಡೆದ ಹಾಗೆ
ಬಾಸುಂಡೆಯ ಬೆರಳಿನ
ಗುರುತುಗಳು ಅಂಟಿಕೊಂಡು
ಬೆರಳಚ್ಚು ಮುದ್ರಿಸುವ ಹಾಗೆ
ದ್ರೌಪದಿಯ ಕೊಂಕಾದ
ಮುಂಗುರುಳು
ತಲೆಕೂದಲೊಡನೆ ಸೇರಿ
ಈಗಲೂ ನಮ್ಮ ಶೌರ್ಯವನ್ನು
ಮೂದಲಿಸುವಂತಿವೆ.

ಮ||

ಅಸಿತೇಂದೀವರಲೋಲ

ಲೋಚನೆಯನಂದಂತಾ

ಸಭಾಮಧ್ಯದೊಳ್

ಪಸುವಂ ಮೋದುವವೋಲೆ

ಮೋದೆಯುಮದಂ ಕಂಡಂತೆ

ಪಲ್ಗರ್ಚಿ ಸೈ|

ಸಿರಿದೆಂ ನಿನ್ನಯ

ನನ್ನಿಗಿನ್ನೆವರಮಾ

ದುಶ್ಶ್ಯಾಸನೋರಸ್ಥಳೋ

ಷ್ಣಸೃತಾಸೃಗ್ಜಲಪಾನಮಂ ಬಯಸಿ ಬಾಯ್ ತೇರ್ಸೈಸೆ ಸೈತಿರ್ಪೆನೇ|| ೫೮||

ಪದ್ಯ-೫೮:ಪದವಿಭಾಗ-

ಅರ್ಥ:ಅಸೀತು (ಅಸಿತ -ನೀಲಿಬಣ್ಣದ) ಇಂದೀವರ ಲೋಲ ಲೋಚನೆಯನು (ನೀಲ ಕನ್ನೈದಿಲೆಯ ವಿಲಾಸವುಳ್ಳ ಕಣ್ಣುಳ್ಳ ದ್ರೌಪದಿಯನ್ನು) ಅಂದು ಅಂತು ಆ ಸಭಾಮಧ್ಯದೊಳ್

ಪಸುವಂ ಮೋದುವವೋಲೆ
ಮೋದೆಯುಮದಂ
(ಪಶುವನ್ನು ಹೊಡೆಯುವ
ಹಾಗೆ ಹೊಡೆದುದನ್ನು) ಕಂಡು,
ಅಂತೆ ಪಲ್ಗರ್ಚಿ ಸೈಸಿರಿದೆಂ
ನಿನ್ನಯ ನನ್ನಿಗೆ
(ಹಲ್ಲುಕಚ್ಚಿಕೊಂಡು ನಿನ್ನ
ಸತ್ಯಕ್ಕಾಗಿ ಸಹಿಸಿದೆನು)
ಇನ್ನೆವರಂ (ಇದುವರೆಗೂ) ಆ
ದುಶ್ಶಾಸನ ಉರಸ್ಥಳ
ಉಷ್ಣಸೃತ ಅಸೃಗ್ಜಲ

ಪಾನಮಂ (ಆ ದುಶ್ಶ್ಯಾಸನನ ಎದೆಯ ಬಿಸಿ ರಕ್ತವನ್ನು ಪಾನಮಾಡಲು) ಬಯಸಿ ಬಾಯ್ ತೇರ್ರೈಸೆ (ಬಾಯಿ ಬಯಸಿ ಆತುರ ಪಡುತ್ತಿರಲು) ಸೈತಿರ್ಪೆನೇ (ಸುಮ್ಮನಿರುತ್ತೇನೆಯೇ?)

ಪದ್ಯ-೫೮:ಅರ್ಥ:. ನೀಲ ಕನ್ನೈದಿಲೆಯ ವಿಲಾಸದ ಕಣ್ಣುಳ್ಳ ದ್ರೌಪದಿಯನ್ನು, ಆ ದಿನ ಆ ಸಭಾಮಧ್ಯದಲ್ಲಿ

ಪಶುವನ್ನು ಹೊಡೆಯುವ
ಹಾಗೆ ಹೊಡೆದುದನ್ನು ಕಂಡು
ನಿನ್ನ ಸತ್ಯಕ್ಕಾಗಿ
ಹಲ್ಲುಕಚ್ಚಿಕೊಂಡು
ಸಹಿಸಿದೆನು. ಆ ದುಶ್ಯಾಸನನ
ಎದೆಯ ಬಿಸಿರಕ್ತವನ್ನು
ಪಾನಮಾಡಲು ನನ್ನ ಬಾಯಿ
ಬಯಸಿ ಆತುರ ಪಡುತ್ತಿರಲು
ನಾನು ಇನ್ನು
ಸುಮ್ಮನಿರುತ್ತೇನೆಯೇ?

ವ|| ಎಂದು ಗದಾದಂಡಮಂ
ಭುಜಾದಂಡದೊಳಳವಡಿಸಿ
ಕೊಂಡು ಪಗೆವರಿರ್ದ ದೆಸೆಯಂ
ನೋಡಿ ತಳಲರ್ ಬಗೆದ
ಭೀಮಸೇನನಂ ಧರ್ಮಪುತ್ರಂ
ಕೋಪತಾಪದಿಂ ಮಸಗಿದ
ಮದಗಜಮನೆ
ಮಾಣಿಸುವಂತೆಂತಾನುಂ
ಮೃದುವಚನಂಗಳಿಂ
ಮುಳಿಸನಾಱಿಸುತಿರ್ದನಿರ್ಪನ್ನೆ
ಗಂ-

ವಚನ:ಪದವಿಭಾಗ-ಅರ್ಥ:ಎಂದು ಗದಾದಂಡಮಂ ಭುಜಾದಂಡದೊಳ್ ಅಳವಡಿಸಿಕೊಂಡು ಪಗೆವರು ಇರ್ದ ದೆಸೆಯಂ ನೋಡಿ ತಳಲರ್ ಬಗೆದ (ತೆರಳಲು ಯೋಚಿಸಿದ) ಭೀಮಸೇನನಂ ಧರ್ಮಪುತ್ರಂ ಕೋಪತಾಪದಿಂ ಮಸಗಿದ (ಕೆರಳಿದ) ಮದಗಜಮನೆ

ಮಾಣಿಸುವಂತೆ
(ತಡೆಯುವಂತೆ) ಎಂತಾನುಂ
(ಹೇಗೋ)ಮೃದುವಚನಂಗಳಿಂ
ಮುಳಿಸನಾಱಿಸುತಿರ್ದನಿರ್ಪ
ನ್ನೆಗಂ-
ವಚನ:ಅರ್ಥ:ಎಂದು ತನ್ನ ಗದೆಯನ್ನು ಭುಜ ದಂಡದಲ್ಲಿ ಅಳವಡಿಸಿಕೊಂಡು ಶತ್ರುಗಳಿದ್ದ ಕಡೆಯನ್ನು ನೋಡಿ ತೆರಳಲು ಯೋಚಿಸಿದ ಭೀಮಸೇನನನ್ನು

ಧರ್ಮರಾಜನು
ಕೋಪಾಗ್ನಿಯಿಂದ ಕೆರಳಿದ
ಮದಗಜವನ್ನು ತಡೆಯುವಂತೆ
ಹೇಗೋ ಮೃದುವಾದ
ಮಾತುಗಳಿಂದ
ಸಮಾಧಾನಮಾಡಿದನು.
ಅಷ್ಟರಲ್ಲಿ-

<u>ವ್ಯಾಸ ಮಹರ್ಷಿಯ ಆಗಮನ</u>

ಚಂ|| ಕನಕ ಪಿಶಂಗ ತುಂಗ
ಜಟಿಕಾವಳಯಂ

ಕುಡುಮಿಂಚಿನೋೞಿಯಂ
ನೆನೆಯಿಸೆ ನೀಲ ನೀರದ
ತನುಚ್ಛವಿ ಭಸ್ಮ
ರಜೋವಿಲಿಪ್ತಮಂ|
ಜನ ಗಿರಿಯಂ ಶರಜ್ಜಳಧರಂ
ಕವಿದಂತಿರೆ ಚೆಲ್ವನಾಳ್ದು
ಭೋಂ
ಕನೆ
ನಭದಿಂದಮಂದಿೞಿದನಲ್ಲಿಗೆ
ವೃದ್ಧ ಪರಾಶರಾತ್ಮಜಂ|| ೫೯||

ಪದ್ಯ-೫೯:ಪದವಿಭಾಗ-ಅರ್ಥ: ಕನಕ ಪಿಶಂಗ (ಕಪ್ಪು ಕೆಂಪು ಮಿಶ್ರಬಣ್ಣದ) ತುಂಗ ಜಟಿಕಾವಳಯಂ (ಉದ್ದ ಜಟೆಯ) ಕುಡುಮಿಂಚಿನೋಳಿಯಂ ನೆನೆಯಿಸೆ (ಮಿಂಚಿನ ಸಾಲನ್ನು ನೆನೆಸುವಂತೆ) ನೀಲ ನೀರದ ತನುಚ್ಛವಿ (ಕಪ್ಪು ಮೋಡದ ದೇಹದ) ಭಸ್ಮ ರಜೋವಿಲಿಪ್ತಂ

ಆಂಜನಗಿರಿಯಂ
ಶರಜ್ಜಳಧರಂ ಕವಿದಂತಿರೆ
(ಅಂಜನಾದ್ರಿಯನ್ನು
ಶರತ್ಕಾಲದ ಮೋಡಗಳು
ಕವಿದಂತಿರಲು) ಚೆಲ್ವನು ಆಳ್ದು
(ಚೆಲುವನ್ನು ಹೊಂದಿ)
ಭೋಂಕನೆ (ಇದ್ದಕ್ಕಿದ್ದ ಹಾಗೆ
)ನಭದಿಂದಂ ಅಂದು
ಇೞಿದನು ಅಲ್ಲಿಗೆ ವೃದ್ಧ
ಪರಾಶರಾತ್ಮಜಂ (ಅಂದು

ಆಕಾಶದಿಂದ ವೃದ್ಧ ವ್ಯಾಸನು ಅಲ್ಲಿಗೆ ಇಳಿದು ಬಂದನು)

ಪದ್ಯ-೫೯:ಅರ್ಥ: ಕಪ್ಪು ಕೆಂಪು ಮಿಶ್ರಬಣ್ಣದ (ಹೊಂಬಣ್ಣದ) ಉದ್ದವ ಜಟೆಯ ಸಮೂಹವೂ ಸುಳಿಮಿಂಚಿನ ಸಾಲನ್ನು ನೆನೆಸುವಂತೆ ಬಿಳಿ ವಿಭೂತಿ ಹಚ್ಚಿದ ಕೃಷ್ಣಮೇಘದಂತಿದ್ದ ಶರೀರಕಾಂತಿಯು ಅಂಜನಾದ್ರಿಯನ್ನು

ಶರತ್ಕಾಲದ ಮೋಡಗಳು
ಕವಿದಂತಿರುವ
ಸೌಂದರ್ಯದಿಂದ ಕೂಡಿದ
ವೃದ್ಧನಾದ
ವ್ಯಾಸಮಹರ್ಷಿಯು ಇದ್ದಕ್ಕಿದ್ದ
ಹಾಗೆ ಅಂದು ಆಕಾಶದಿಂದ
ಅಲ್ಲಿಗೆ ಇಳಿದು ಬಂದನು.

ವ|| ಅಂತು ನಭೋವಿಭಾಗದಿಂ
ಧರಾವಿಭಾಗಕ್ಕಿೞಿತಂದ
ಕೃಷ್ಣದ್ವೈಪಾಯನನಂ
ಕಂಡಜಾತ ಶತ್ರು ತನ್ನೇೞಿದ

ಸಟಿತ ಶಿಳಾತಳದ
ಪಟ್ಟಕದಿಂದಿೞಿದು
ನಿಜಾನುಜಸಹಿತಮಿದಿರ್ವಂದು
ಧರಾತಳನಿಷ್ಠ ಲಲಾಟಪಟ್ಟಂ
ಸಾಷ್ಟಾಂಗವೆಱಗಿ ಪೊಡವಟ್ಟು
ತದೀಯಾಶೀರ್ವಾದಮನಾಂ
ತು ತಚ್ಛಿಳಾತಳದೊಳ್
ಕುಳ್ಳಿರಿಸಿ
ವನಕುಸುಮಂಗಳಿಂದರ್ಘ್ಯಮೆ
ತ್ತಿ ಸರೋವರಜಲಂಗಳಂ
ಪದ್ಮಪತ್ರ ಪುಟಂಗಳಿಂ ತಂದು

ಪದಪದ್ಮಂಗಳಂ ಕರ್ಚಿ ತತ್ಪಾದ ಪವಿತ್ರೋದಕಂಗಳನನಿಬರು ಮುತ್ತಮಾಂಗದೊಳ್ ತಳಿದುಕೊಂಡಿರ್ದಾಗಳ್ ಸತ್ಯವತೀನಂದನಂ ತನ್ನ ಮಕ್ಕಳ ಸಾಯಸಂಗಳ್ಗೆ ಮನ್ಯುಮಿಕ್ಕು ಕಣ್ಣನೀರಂ ನೆಗಪೆ ಮಹಾಪ್ರಸಾದಮೆಂದು ಧರ್ಮನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು

ನಭೋವಿಭಾಗದಿಂ
(ಆಕಾಶಪ್ರದೇಶದಿಂದ)
ಧರಾವಿಭಾಗಕ್ಕಿೞಿತಂದ
ಕೃಷ್ಣದ್ವೈಪಾಯನನಂ
(ಭೂಪ್ರದೇಶಕ್ಕೆ ಇಳಿದು ಬಂದ
ವ್ಯಾಸಮಹರ್ಷಿಯನ್ನು) ಕಂಡ
ಅಜಾತ ಶತ್ರು
(ಧರ್ಮರಾಯನು) ತನ್ನ
ಏಱಿದ ಸಟಿತ ಶಿಳಾತಳದ
ಪಟ್ಟಕದಿಂದಿೞಿದು (ತಾನು
ಕುಳಿತಿದ್ದ ಸ್ಫಟಿಕ ಕಲ್ಲಿನತಲದ

ಪೀಠದಿಂದ ಕೆಳಗಿಳಿದು) ನಿಜ
ಅನುಜಸಹಿತಂ ಇದಿರ್ವಂದು
(ತನ್ನ ತಮ್ಮಂದಿರೊಡನೆ
ಇದಿರಾಗಿ ಬಂದು)
ಧರಾತಳನಿಷ್ಠ ಲಲಾಟಪಟ್ಟಂ
ಸಾಷ್ಟಾಂಗವೆಱಗಿ ಪೊಡವಟ್ಟು
(ಭೂಮಿಯಲ್ಲಿಟ್ಟ
ಹಣೆವುಳ್ಳವನಾಗಿ ಸಾಷ್ಟಾಂಗ
ನಮಸ್ಕಾರಮಾಡಿ) ತದೀಯ
ಆಶೀರ್ವಾದಮನು ಆಂತು
(ಅವನ ಆಶೀರ್ವಾದಗಳನ್ನು

ಪಡೆದು) ತತ್ ಶಿಳಾತಳದೊಳ್ ಕುಳ್ಳಿರಿಸಿ (ಶಿಲಾಪಟ್ಟದಲ್ಲಿಯೇ ಅವನನ್ನು ಕುಳ್ಳಿರಿಸಿ) ಅದೇ ವನಕುಸುಮಂಗಳಿಂದರ್ಘ್ಯಮಿತ್ತಿ (ಕಾಡುಹೂವುಗಳಿಂದ ಅರ್ಘ್ಯವನ್ನು ಕೊಟ್ಟು) ಸರೋವರಜಲಂಗಳಂ ಪದ್ಮಪತ್ರ ಪುಟಂಗಳಿಂ ತಂದು (ಕಮಲದೆಲೆಗಳಲ್ಲಿ ಸರೋವರದ ನೀರನ್ನು ತಂದು) ಪದಪದ್ಮಂಗಳಂ ಕರ್ಚಿ ತತ್ಪಾದ

ಪವಿತ್ರೋದಕಂಗಳಂ
ಅನಿಬರುಂ
ಉಮುತ್ತಮಾಂಗದೊಳ್
(ತಲೆಯಲ್ಲಿ)
ತಳಿದುಕೊಂಡಿರ್ದಾಗಳ್
(ಪಾದಕಮಲಗಳನ್ನು ತೊಳೆದು
ಆ ಪವಿತ್ರವಾದ
ಪಾದೋದಕವನ್ನು ಎಲ್ಲರೂ
ತಲೆಯಲ್ಲಿ ಧರಿಸಿಕೊಂಡರು)
ಸತ್ಯವತೀನಂದನಂ
(ವ್ಯಾಸಮಹರ್ಷಿಯು) ತನ್ನ

ಮಕ್ಕಳ ಸಾಯಸಂಗಳ್ಗೆ
ಮನ್ಯುಮಿಕ್ಕು ಕಣ್ಣನೀರಂ
ನೆಗಪೆ (ವ್ಯಾಸಮಹರ್ಷಿಯು
ತನ್ನ ಮೊಮ್ಮಕ್ಕಳ
ವಿಶೇಷವಾದ ಶ್ರಮಕಷ್ಟಕ್ಕಾಗಿ
ದುಃಖ ಮೀರಿ ಕಣ್ಣ ನೀರನ್ನು
ತುಂಬಿಕೊಳ್ಳಲು)
ಮಹಾಪ್ರಸಾದಮೆಂದು
ಧರ್ಮನಂದನನಿಂತೆಂದಂ-
ವಚನ:ಅರ್ಥ:ಹಾಗೆ
ಆಕಾಶಪ್ರದೇಶದಿಂದ

ಭೂಭಾಗಕ್ಕೆ ಇಳಿದು ಬಂದ ವ್ಯಾಸಮಹರ್ಷಿಯನ್ನು ನೋಡಿ ಧರ್ಮರಾಯನು ತಾನು ಕುಳಿತಿದ್ದ ಸ್ಫಟಿಕ ಕಲ್ಲಿನತಲದ ಪೀಠದಿಂದ ಕೆಳಗಿಳಿದು ತನ್ನ ತಮ್ಮಂದಿರೊಡನೆ ಇದಿರಾಗಿ ಬಂದು ಭೂಮಿಯಲ್ಲಿಟ್ಟ ಹಣೆವುಳ್ಳವನಾಗಿ ಸಾಷ್ಟಾಂಗ ನಮಸ್ಕಾರಮಾಡಿ, ಅವನ ಆಶೀರ್ವಾದಗಳನ್ನು ಪಡೆದು

ಆ ಶಿಲಾಪಟ್ಟದಲ್ಲಿಯೇ
ಅವನನ್ನು ಕುಳ್ಳಿರಿಸಿ
ಕಾಡುಹೂವುಗಳಿಂದ
ಅರ್ಘ್ಯವನ್ನು ಕೊಟ್ಟು
ಕಮಲದೆಲೆಗಳಲ್ಲಿ
ಸರೋವರದ ನೀರನ್ನು ತಂದು
ಪಾದಕಮಲಗಳನ್ನು ತೊಳೆದು
ಆ ಪವಿತ್ರವಾದ
ಪಾದೋದಕವನ್ನು ಎಲ್ಲರೂ
ತಲೆಯಲ್ಲಿ ಧರಿಸಿಕೊಂಡರು.
ವ್ಯಾಸಮಹರ್ಷಿಯು ತನ್ನ

ಮೊಮ್ಮಕ್ಕಳ ವಿಶೇಷವಾದ ಆಯಾಸ(ಶ್ರಮ)ಕ್ಕಾಗಿ ದುಃಖ ಮೀರಿ ಕಣ್ಣ ನೀರನ್ನು ತುಂಬಿಕೊಳ್ಳಲು. ಅವರು ಬಂದುದು ಮಹಾ ಅನುಗ್ರಹವೆಂದು ಧರ್ಮರಾಜನು ಅವರನ್ನು ಕುರಿತು ಹೀಗೆಂದನು-

ಉ|| ನೀಗಿದುದೀಗಳೆಮ್ಮ ವನವಾಸಪರಿಶ್ರಮಮೀಗಳಾಳ್ದೆವಾ

ಸಾಗರ ಮೇಖಳಾವೃತ

ಧರಿತ್ರಿಯನೀಗಳಡಂಗಿತೆಮ್ಮ

ಹೃ

ದ್ರ್ಯೋಗಮನೇಕ

ಮಂಗಳಪರಂಪರೆಗಳ್

ದೊರೆಕೊಂಡುವೀಗಳೇ

ನಾಗದೊ ಪೇೞ್

ಭವಚ್ಚರಣಪದ್ಮನಿರೀಕ್ಷಣದಿಂ

ಮುನೀಶ್ವರಾ|| ೬೦ ||

ಪದ್ಯ-೬೦:ಪದವಿಭಾಗ-

ಅರ್ಥ:ನೀಗಿದುದು ಈಗಳೆಮ್ಮ

ವನವಾಸ ಪರಿಶ್ರಮಂ (ನಮ್ಮ
ವನವಾಸದ
ಆಯಾಸಗಳೆಲ್ಲವೂ
ಮಾಯವಾದುವು) ಈಗಳು
ಆಳ್ದೆವು ಆ ಸಾಗರ
ಮೇಖಳಾವೃತ ಧರಿತ್ರಿಯನು
(ಕಡಲೆಂಬವೆಂಬ
ಒಡ್ಯಾಣದಿಂದ
ಸುತ್ತುವರಿಯಲ್ಪಟ್ಟ
ಭೂಮಂಡಲವನ್ನು ನಾವು
ಈಗ ಆಳಿದವರಾದೆವು)

ಈಗಳು ಅಡಂಗಿತು ಎಮ್ಮ
ಹೃದ್ರೋಗಂ (ನಮ್ಮ
ಹೃದಯಬೇನೆಗಳು
ಅಡಗಿದುವು) ಅನೇಕ
ಮಂಗಳ ಪರಂಪರೆಗಳ್
ದೊರೆಕೊಂಡುವು ಈಗಳೇ
ಏನಾಗದೊ ಪೇೞು
ಭವಚ್ಚರಣಪದ್ಮನಿರೀಕ್ಷಣದಿಂ
ಮುನೀಶ್ವರಾ
ಪದ್ಯ-೬೦:ಅರ್ಥ: ಎಲೈ
ಮುನೀಶ್ವರನೇ ನಿಮ್ಮ

ಪಾದಕಮಲದ ದರ್ಶನದಿಂದ ನಮ್ಮ ವನವಾಸದ ಆಯಾಸಗಳೆಲ್ಲವೂ ಮಾಯವಾದುವು. ಕಡಲೆಂಬವೆಂಬ ಒಡ್ಯಾಣದಿಂದ ಸುತ್ತುವರಿಯಲ್ಪಟ್ಟ ಭೂಮಂಡಲವನ್ನು ನಾವು ಈಗ ಆಳಿದವರಾದೆವು. ನಮ್ಮ ಹೃದಯಬೇನೆಗಳು ಅಡಗಿದುವು. ನಮಗೆ ಅನೇಕ

ಶುಭಪರಂಪರೆಗಳುಂಟಾದವು. ಇನ್ನೇನು ತಾನೆ ಆಗವುದಿಲ್ಲ ಹೇಳು? ನಿಮ್ಮ ದರ್ಶನದಿಂದ ಎಲ್ಲವೂ ದೊರಕಿದಂತಾಯಿತು.

ಕಂ|| ಆಪತ್ಪಯೋಧಿಯೊಳಗ
ತ್ಯಾಪತ್ತಿಂದುಳ್ಕಿಮುೞ್ಕಿ
ನಮೆವೆಮಗೆ ಶರಣ್|
ಪಾಪಹರ ನೀಮೆ ಬಗೆದೆಮ
ಗಾಪತ್ಪ್ರತಿಕಾರಮಾವುದೀಗಳೆ
ಬೆಸಸಿಂ|| ೬೧ ||

ಪದ್ಯ-೬೧:ಪದವಿಭಾಗ-ಅರ್ಥ:ಆಪತ್ ಪಯೋಧಿಯೊಳಗೆ (ಆಪತ್ತುಗಳ ಸಮುದ್ರದಲ್ಲಿ) ಅತಿ ಆಪತ್ತಿಂದ ಅಳ್ಕಿಮುೞ್ಕಿ (ಅತಿ ಅಪಾಯಗಳಿಂದ ಹೆದರಿ ಮುಳುಗಿ) ನಮೆವ ಎಮಗೆ ಶರಣ್ ಪಾಪಹರ ನೀಮೆ (ನವೆಯುತ್ತಿರುವ ನಮಗೆ ಪಾಪ ಹೋಗಲಾಡಿಸುವ ನೀವೇ) ಬಗೆದು ಎಮಗೆ

ಆಪತ್ಪ್ರತಿಕಾರಂ - ಆಪತ್ ಪ್ರತೀಕಾರಂ ಆವುದೀಗಳೆ ಬೆಸಸಿಂ (ನೀವೇ ಯೋಚಿಸಿ ಈ ಆಪತ್ತಿಗೆ ಪರಿಹಾರವಾವುದೆಂಬುದನ್ನು ಈಗಲೆ ಹೇಳಿ)

ಪದ್ಯ-೬೧:ಅರ್ಥ:ಆಪತ್ತುಗಳ ಸಮುದ್ರದಲ್ಲಿ ಅತಿ ಅಪಾಯಗಳಿಂದ ಹೆದರಿ ಮುಳುಗಿ ನವೆಯುತ್ತಿರುವ ನಮಗೆ ಪಾಪ

ಹೋಗಲಾಡಿಸುವ ನೀವೇ ಶರಣು(ಆಶ್ರಯ). ನೀವೇ ಯೋಚಿಸಿ ಈ ಆಪತ್ತಿಗೆ ಪರಿಹಾರವಾವುದೆಂಬುದನ್ನು ಈಗಲೆ ಹೇಳಿ.

ವ|| ಎಂಬುದುಮಾ ಮುನೀಂದ್ರನಾಮುಮಂತೆಂದೆ ಬಂದೆವೆಂದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ

ಮುನೀಂದ್ರನು ಆಮುಂ

ಅಂತೆಂದೆ ಬಂದೆವೆಂದು-

ವಚನ:ಅರ್ಥ:ಎನ್ನಲು ಆ

ಋಷಿಶ್ರೇಷ್ಠನು ನಾವೂ

ಅದಕ್ಕಾಗಿಯೇ ಬಂದಿದ್ದೇವೆ

ಎಂದು-

ಕಂ|| ಸುರರ್ಗಮೃತಮನುಂತೆ

ಕಳಾಂ

ತರದಿಂದಿತ್ತಸಿಯನಾದ

ಚಂದ್ರನವೋಲ್ ಭೂ|

ಭರಮಂ ನನ್ನಿಗೆ ದಾಯಿಗ

ಗಿರದಿತ್ತೆರಡರೊತ್ತೆ ನೀನೆ ಧನ್ಯನೆಯಲ್ತೇ|| ೬೨||

ಪದ್ಯ-೬೨:ಪದವಿಭಾಗ-ಅರ್ಥ:ಸುರರ್ಗೆ (ದೇವತೆಗಳಿಗೆ) ಅಮೃತಮನುಂ ಉಂತೆ (ಪ್ರತಿಫಲವಿಲ್ಲದೆ) ಕಳಾಂತರದಿಂದ ಇತ್ತು ಅಸಿಯನಾದ (ಕೊಟ್ಟು ಕೃಶವಾದ) ಚಂದ್ರನವೋಲ್ ಭೂಭರಮಂ ನನ್ನಿಗೆ

ದಾಯಿಗರ್ಗೆ (ತ್ಯಕ್ಕಾಗಿ
ದಾಯಾದ್ಯರಿಗೆ
ಭೂಭಾರವನ್ನು) ಇರದೆ ಇತ್ತು
ಎರಡರು ಒತ್ತೆ () ನೀನೆ
ಧನ್ಯನೆಯಲ್ತೇ

ಪದ್ಯ-೬೨:ಅರ್ಥ: .
ಪ್ರತಿಫಲವಿಲ್ಲದೆಸುಮ್ಮನೆ
ದೇವತೆಗಳಿಗೆ ತನ್ನ
ಕಲಾಸಮೂಹಗಳಿಂದ
ಅಮೃತವನ್ನು ಕೊಟ್ಟು
ಕೃಶವಾದ ಚಂದ್ರನ ಹಾಗೆ

ಸತ್ಯಕ್ಕಾಗಿ ದಾಯಾದ್ಯರಿಗೆ ಭೂಭಾರವನ್ನು ಕೊಟ್ಟು ತಂದರೆಗಳು ಒತ್ತುತ್ತಿರಲು, ನೀನೇ ಧನ್ಯನಲ್ಲವೇ? ನೀನೇ ಧನ್ಯ.

ಕಂ||ನೀಂ ಬೇರೆಮಗೆ
ಸುಯೋಧನ
ನೇಂ ಬೇರೆಯೆ
ಕೂಸುತನದೊಳಾದೊಡಮಿನ್
ನೇ|
ನೆಂಬುದೊ ಪಿರಿದೈವರೊಳಂ

ಪಂಬಲ್ ಗುಣಪಕ್ಷಪಾತಮಪ್ಪುದು ನಿಮ್ಮೊಳ್|| ೬೩||

ಪದ್ಯ-೬೩:ಪದವಿಭಾಗ-ಅರ್ಥ:ನೀಂ ಬೇರೆಮಗೆ ಸುಯೋಧನನೇಂ ಬೇರೆಯೆ (ಬೇರೆಯೇ?- ಬೇರೆಯಲ್ಲ; ನಮಗೆ ಬಾಲ್ಯದಿಂದಲೂ ನೀವೂ ಬೇರೆಯಿಲ್ಲ ಸುಯೋಧನನು ಬೇರೆಯಲ್ಲ) ಕೂಸುತನದೊಳು ಆದೊಡಂ

ಈನ್ನೇನೆಂಬುದೊ (ಆದರೂ ಇನ್ನೇನನ್ನು ಹೇಳುವುದೊ?) ಪಿರಿದು ಐವರೊಳ್ ಪಂಬಲ್ (ನಿಮ್ಮೈವರ ಬಗೆಗೆ ನನ್ನು ಹಂಬಲ - ಹಿತದ ಅಪೇಕ್ಷೆ) ಗುಣಪಕ್ಷಪಾತಂ ಅಪ್ಪುದು ನಿಮ್ಮೊಳ್ ()

ಪದ್ಯ-೯೩:ಅರ್ಥ:ನಮಗೆ ಬಾಲ್ಯದಿಂದಲೂ ನೀವೂ ಬೇರೆಯಿಲ್ಲ ಸುಯೋಧನನು ಬೇರೆಯಲ್ಲ. ಆದರೂ

ಇನ್ನೇನನ್ನು ಹೇಳುವುದೊ?
ಈಗ ಹೇಳುವುದು ತಾನೆ
ಏನಿದೆ. ನಿನಿಮ್ಮೈವರ ಬಗೆಗೆ
ನನ್ನು ಹಂಬಲ - ಹಿತದ
ಅಪೇಕ್ಷೆ ಇದೆ.
ಗುಣಪಕ್ಷಪಾತದಿಂದ ನನ್ನ
ಮೆಚ್ಚಿಗೆ ನಿಮ್ಮಲ್ಲಿ ಹೆಚ್ಚಾಗಿದೆ.

ವ|| ಎಂದು ತನ್ನ ವರ್ತನಮುಂ ಮೋಹಮನುಂಟುಮಾಡೆ ಮತ್ತಮುಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ವರ್ತನಮುಂ ಮೋಹಮನುಂ ಉಂಟುಮಾಡೆ ಮತ್ತಂ ಇಂತೆಂದಂ-

ವಚನ:ಅರ್ಥ: ಎಂದು ಹೇಳಿ ತನ್ನ ನಡತೆಯನ್ನೂ ಮೋಹವನ್ನೂ ಸ್ಪಷ್ಟಪಡಿಸುವ ಹಾಗೆ ಪುನ ಹೀಗೆಂದನು

ಕಂ|| ಪನ್ನೆರಡು ವರುಷದವಯು

ಮಿನ್ನೆರೆಯಲ್

ಬಂದುದಹಿತನಿಳೆಯಂ

ಕುಡನಾ|

ಸನ್ನಂ ಕಾಳೆಗಮಱಿಯಿರೆ

ಪನ್ನಗಕೇತನನ ಚಲದ

ಕಲಿತನದಳವಂ|| ೬೪||

ಪದ್ಯ-೬೪:ಪದವಿಭಾಗ-

ಅರ್ಥ:ಪನ್ನೆರಡು ವರುಷದ, ವಯುಂ ಇನ್ನು ನೆರೆಯಲ್ ಬಂದುದು (ಗಡುವು ಮುಗಿಯುತ್ತ ಬಂದಿದೆ)

ಅಹಿತನು ಇಳೆಯಂ ಕುಡನು
(ಶತ್ರುವಾದ ಕೌರವನು
ರಾಜ್ಯವನ್ನು ಕೊಡುವುದಿಲ್ಲ)
ಆಸನ್ನಂ ಕಾಳೆಗಂ (ಯುದ್ಧ
ಹತ್ತಿರ ಬಂದಿದೆ) ಅಱಿಯಿರೆ
ಪನ್ನಗಕೇತನನ ಚಲದ
ಕಲಿತನದ ಅಳವಂ
(ದುರ್ಯೋಧನನ ಹಟದ
ಮತ್ತು ಪರಾಕ್ರಮದ
ಪ್ರಮಾಣವು ನಿಮಗೆ
ತಿಳಿದಿಲ್ಲವೇ?)

ಪದ್ಯ-೬೪:ಅರ್ಥ: ಇನ್ನೇನು ಹನ್ನೆರಡು ವರ್ಷದ ಅವಧಿಯು ಮುಗಿಯುತ್ತ ಬಂದಿದೆ. ಶತ್ರು ಕೌರವನು ರಾಜ್ಯವನ್ನು ಕೊಡುವುದಿಲ್ಲ. ಯುದ್ಧ ಹತ್ತಿರ ಬಂದಿದೆ. ದುರ್ಯೋಧನನ ಹಟದ ಮತ್ತು ಪರಾಕ್ರಮದ ಪ್ರಮಾಣವು ನಿಮಗೆ ತಿಳಿದಿಲ್ಲವೇ?

ಅನವದ್ಯಂ||
ಪರಶುರಾಮನನಂಜಿಸಿ
ಬೀರಕ್ಕ್ಯಾಗರಮಾದ ನದೀಜನೇ
ದೊರೆಯನೇದೊರೆಯಂಗಳ
ಕುಂಭಪ್ರೋದ್ಭವನಾತನ
ಪುತ್ರನೇ|
ದೊರೆಯನೇದೊರೆಯಂ
ಕೃಪನಂತಾ ಪಾಟಿಯೊಳಂಕದ
ಕರ್ಣನೇ
ದೊರೆಯನಿಂತಿವರೊರ್ಬರಿ
ನೊರ್ಬರ್

ಗರ್ವಿತರಗ್ಗಳಮಲ್ಲರೇ|| ೬೫ ||

ಪದ್ಯ-೬೫:ಪದವಿಭಾಗ-

ಅರ್ಥ: ಪರಶುರಾಮನನು ಅಂಜಿಸಿ ಬೀರಕ್ಕೆ ಆಗರಮಾದ ನದೀಜನು(ಭೀಷ್ಮ) ಏ ದೊರೆಯನೇ (ಪರಶುರಾಮನನ್ನು ಹೆದರಿಸಿ ಪರಾಕ್ರಮಕ್ಕೆ ಆಗರವಾದ ಭೀಷ್ಮನು ಸಾಮಾನ್ಯನೇ? ಅವನ ಸಮಾನರುಂಟೇ) ದೊರೆಯಂಗಳ-

ಕುಂಭಪ್ರೋದ್ಭವನು,
(ದ್ರೋಣನು ಸಾಮಾನ್ಯನೇ?)
ಆತನ ಪುತ್ರನೇ ದೊರೆಯನೇ
(ಅವನ ಮಗ
ಅಶ್ವತ್ಥಾಮನೇನು
ಸಾಮಾನ್ಯನೇ) ದೊರೆಯಂ
ಕೃಪನಂತು ಆ ಪಾಟಿಯೊಳು
ಅಂಕದ ಕರ್ಣನು ಏ
ದೊರೆಯನೆ, ಇಂತು
ಇವರೊರ್ಬರಿನೊರ್ಬರ್
ಗರ್ವಿತರ್ ಅಗ್ಗಳಮಲ್ಲರೇ

(ಹೀಗೆ ಗರ್ವಿಷ್ಠರಾದ ಇವರಲ್ಲಿ ಒಬ್ಬರಿಗಿಂತೊಬ್ಬರು ಶ್ರೇಷ್ಠರು.)

ಪದ್ಯ-೬೫:ಅರ್ಥ:

ಪರಶುರಾಮನನ್ನು ಹೆದರಿಸಿ ಪರಾಕ್ರಮಕ್ಕೆ ಆಗರವಾದ ಭೀಷ್ಮನು ಸಾಮಾನ್ಯನೇ? ಅವನ ಸಮಾನರುಂಟೇ? ಕುಂಭಸಂಭವನಾದ ದ್ರೋಣನು ಸಾಮಾನ್ಯನೇ? ಅವನ ಮಗ ಅಶ್ವತ್ಥಾಮನೇನು ಸಾಮಾನ್ಯನೇ, ಕೃಪನೇನು

ಸಾಮಾನ್ಯನೇ? ಅದೇ ಕ್ರಮದಲ್ಲಿ ಶೂರನಾದ ಕರ್ಣನ ಸಮಾನನು ಯಾರು? ಹೀಗೆ ಗರ್ವಿಷ್ಠರಾದ ಇವರಲ್ಲಿ ಒಬ್ಬರಿಗಿಂತೊಬ್ಬರು ಶ್ರೇಷ್ಠರು.

ಕಂ|| ಪ್ರಳಯದುರಿ
ಕಾಳಕೂಟದ
ಗುಳಿಗೆ ಪುರಾಂತಕ
ಲಲಾಟನೇತ್ರಾನಳನೊಂ|
ದಳವಿಗಮಗ್ಗಳಮವರ್ಗಳ

ಮುಳಿಸುಗಳುಂ ಮುಳಿದು ತುಡುವ ದಿವ್ಯೇಷುಗಳುಂ|| ೬೬ ||

ಪದ್ಯ-೬೬:ಪದವಿಭಾಗ-ಅರ್ಥ:ಪ್ರಳಯದ ಉರಿ (ಬೆಂಕಿ) ಕಾಳಕೂಟದ ಗುಳಿಗೆ (ವಿಷಗುಳಿಗೆ) ಪುರಾಂತಕ ಲಲಾಟನೇತ್ರಾನಳನ (ಶಿವನ) ಒಂದಳವಿಗಂ ಅಗ್ಗಳಂ (ಇವುಗಳ ಪ್ರಮಾಣಕ್ಕಿಂತ ಹೆಚ್ಚಿನವು) ಅವರ್ಗಳ

ಮುಳಿಸುಗಳುಂ ಮುಳಿದು
ತುಡುವ ದಿವ್ಯ ಈಷುಗಳುಂ
(ಅವರ ಕೋಪಗಳು,
ಕೋಪದಿಂದ ಬಿಡುವ
ದಿವ್ಯಾಸ್ತ್ರಗಳು)
ಪದ್ಯ-೬೬:ಅರ್ಥ: ಅವರ
ಕೋಪಗಳು, ಕೋಪದಿಂದ
ಬಿಡುವ ದಿವ್ಯಾಸ್ತ್ರಗಳು
ಪ್ರಳಯಕಾಲದ ಬೆಂಕಿ,
ಕಾಳಕೂಟವೆಂಬ ವಿಷಗುಳಿಗೆ,
ಶಿವನ ಹಣೆಗಣ್ಣಿನ ಅಗ್ನಿ,

ಇವುಗಳ ಪ್ರಮಾಣಕ್ಕಿಂತ
ಹೆಚ್ಚಿನವು.

ವ|| ಅದು ಕಾರಣದಿಂದವರಂ ಗೆಲ್ವಾಗಳ್ ವಿಕ್ರಮಾರ್ಜುನನಲ್ಲದೆ ಗೆಲ್ಲನದಱಿಂದಾತಂಗೆ ದಿವ್ಯಾಸ್ತ್ರಂಗಳಂ ಪಡೆಯಲ್ವೇೞ್ಪುದದಂ ಪಡೆವುಪಾಯಮುಮಂ ಮಂತ್ರಮುಮನುಪದೇಶಂಗೆ ಯ್ಯಲ್ ಬಂದೆವೆಂದು

ಯುಷ್ಠಿರಂಗೆ ವೇೞ್ದು
ವಿಕ್ರಮಾರ್ಜುನಂಗೆ
ಮಂತ್ರಾಕ್ಷರಂಗಳನುಪದೇಶಂಗೆ
ಯ್ದು ಗುಹ್ಯಕನೆಂಬನಂ
ಸ್ಮರಣಮಾತ್ರದೊಳ್ ಬರಿಸಿ
ಸಾಹಸಾಭರಣನನಿಂದ್ರಕೀಲನ
ಗೇಂದ್ರಮನೆಯ್ದಿಸಿ
ಬರ್ಪುದೆಂದು ಪೇೞ್ವುದುಂ
ಧರ್ಮಪುತ್ರನಾ ಮುನೀಂದ್ರಂಗೆ
ಸಾಷ್ಟಾಂಗವೆಱಗಿ ಪೊಡವಡೆ
ಪರಸಿ

ಪಯೋಧರಪಥಕ್ಕೊಗೆದನಿತ್ತ ವಿಕ್ರಾಂತತುಂಗನುಂ ಧರ್ಮಪುತ್ರಂಗಂ ವಾಯುಸುತಂಗಂ ಪೊಡವಟ್ಟು ಬೆಸಕೇಳ್ವೆನೆಂದಾಗಳ್ ಪಾಂಚಾಳರಾಜತನೂಜೆಯಿಂ ತೆಂದಳ್-

ವಚನ:ಪದವಿಭಾಗ-

ಅರ್ಥ:ಅದು ಕಾರಣದಿಂದ ಅವರಂ ಗೆಲ್ವಾಗಳ್ (ಆ ಕಾರಣ, ಅವರನ್ನು

ಗೆಲ್ಲಬೇಕಾದರೆ)
ವಿಕ್ರಮಾರ್ಜುನನು ಅಲ್ಲದೆ
ಗೆಲ್ಲನು (ಬೇರೆಯವನು
ಗೆಲ್ಲಲಾರ) ಅದಱಿಂದ
ಆತಂಗೆ ದಿವ್ಯಾಸ್ತ್ರಂಗಳಂ
ಪಡೆಯಲ್ ವೇೞ್ಪುದು
(ಆದುದರಿಂದ ಅವನನ್ನು
ದಿವ್ಯಾಸ್ತ್ರಗಳನ್ನು
ಪಡೆಯುವಂತೆ ಹೇಳಬೇಕು);
ಅದಂ ಪಡೆವ
ಉಪಾಯಮುಮಂ

ಮಂತ್ರಮುಮನು
ಉಪದೇಶಂಗೆಯ್ಯಲ್
ಬಂದೆವು ಎಂದು ಯುಷ್ಠಿರಂಗೆ
ವೇೞ್ದು, (ಮಂತ್ರವನ್ನೂ
ಉಪದೇಶ
ಮಾಡುವುದಕ್ಕಾಗಿಯೇ
ಬಂದಿದ್ದೇವೆ ಎಂಬುದಾಗಿ
ಧರ್ಮರಾಜನಿಗೆ ಹೇಳಿ)
ವಿಕ್ರಮಾರ್ಜುನಂಗೆ
ಮಂತ್ರಾಕ್ಷರಂಗಳನು
ಉಪದೇಶಂ ಗೆಯ್ದು

(ಅರ್ಜುನನಿಗೆ
ಮಂತ್ರಾಕ್ಷರಗಳನ್ನು
ಉಪದೇಶಮಾಡಿದರು.
ಮಾಡಿ-) ಗುಹ್ಯಕನೆಂಬನಂ
ಸ್ಮರಣಮಾತ್ರದೊಳ್ ಬರಿಸಿ
(ಗುಹ್ಯಕನೆಂಬುವನನ್ನು
ಸ್ಮರಿಸಿಕೊಳ್ಳುವುದರಿಂದಲೇ
ಬರಮಾಡಿ)
ಸಾಹಸಾಭರಣನನು
ಇಂದ್ರಕೀಲನಗೇಂದ್ರಮನು
ಐಯ್ದಿಸಿ ಬರ್ಪುದೆಂದು

ಪೇೞ್ವುದುಂ (ಅರ್ಜುನನನ್ನು ಇಂದ್ರಕೀಲಪರ್ವತವನ್ನು ಸೇರಿಸಿ ಬರುವುದು ಎಂದು ಹೇಳಿದರು) ಧರ್ಮಪುತ್ರನು ಆ ಮುನೀಂದ್ರಂಗೆ ಸಾಷ್ಟಾಂಗವೆಱಗಿ ಪೊಡವಡೆ (ಧರ್ಮರಾಜನು ಋಷಿಶ್ರೇಷ್ಠನಿಗೆ ಸಾಷ್ಟಾಂಗಪ್ರಣಾಮ ಮಾಡಿ ನಮಸ್ಕರಿಸಲು) ಪರಸಿ ಪಯೋಧರ ಪಥಕ್ಕೆ ಒಗೆದನು

(ವ್ಯಾಸನು ಆಶೀರ್ವದಿಸಿ
ಆಕಾಶಪ್ರದೇಶಕ್ಕೆ ತೆರಳಿದನು)
ಇತ್ತ ವಿಕ್ರಾಂತತುಂಗನುಂ
ಧರ್ಮಪುತ್ರಂಗಂ
ವಾಯುಸುತಂಗಂ
ಪೊಡವಟ್ಟು ಬೆಸಕೇಳ್ವೆಂ
ಎಂದಾಗಳ್ (ಈ ಕಡೆ
ಪರಾಕ್ರಮದಲ್ಲಿ ಶ್ರೇಷ್ಠನಾದ
ಅರ್ಜುನನು
ಧರ್ಮರಾಜನಿಗೂ
ಭೀಮಸೇನನಿಗೂ

ನಮಸ್ಕಾರಮಾಡಿ ಅಪ್ಪಣೆಯನ್ನು ಕೇಳುತ್ತಿದ್ದೇನೆ ಎಂದಾಗ) ಪಾಂಚಾಳರಾಜತನೂಜೆ ಇಂತೆಂದಳ್-

ವಚನ:ಅರ್ಥ:|| ಆ ಕಾರಣ, ಅವರನ್ನು ಗೆಲ್ಲಬೇಕಾದರೆ ವಿಕ್ರಮಾರ್ಜುನನಲ್ಲದೆ ಬೇರೆಯವನು ಗೆಲ್ಲಲಾರ. ಆದುದರಿಂದ ಅವನನ್ನು ದಿವ್ಯಾಸ್ತ್ರಗಳನ್ನು

ಪಡೆಯುವಂತೆ ಹೇಳಬೇಕು.
ಅದನ್ನು ಪಡೆಯುವ
ಉಪಾಯವನ್ನೂ
ಮಂತ್ರವನ್ನೂ ಉಪದೇಶ
ಮಾಡುವುದಕ್ಕಾಗಿಯೇ
ಬಂದಿದ್ದೇವೆ ಎಂಬುದಾಗಿ
ಧರ್ಮರಾಜನಿಗೆ ಹೇಳಿ
ಅರ್ಜುನನಿಗೆ
ಮಂತ್ರಾಕ್ಷರಗಳನ್ನು
ಉಪದೇಶಮಾಡಿದರು.
ಗುಹ್ಯಕನೆಂಬುವನನ್ನು

ಸ್ಮರಿಸಿಕೊಳ್ಳುವುದರಿಂದಲೇ
ಬರಮಾಡಿ
ಸಾಹಸಾಭರಣನಾದ
ಅರ್ಜುನನನ್ನು
ಇಂದ್ರಕೀಲಪರ್ವತವನ್ನು
ಸೇರಿಸಿ ಬರುವುದು ಎಂದು
ಹೇಳಿದರು. ಧರ್ಮರಾಜನು
ಋಷಿಶ್ರೇಷ್ಠನಿಗೆ
ಸಾಷ್ಟಾಂಗಪ್ರಣಾಮ ಮಾಡಿ
ನಮಸ್ಕರಿಸಲು ವ್ಯಾಸನು
ಆಶೀರ್ವದಿಸಿ

ಆಕಾಶಪ್ರದೇಶಕ್ಕೆ ತೆರಳಿದನು. ಈ ಕಡೆ ಪರಾಕ್ರಮದಲ್ಲಿ ಶ್ರೇಷ್ಠನಾದ ಅರ್ಜುನನು ಧರ್ಮರಾಜನಿಗೂ ಭೀಮಸೇನನಿಗೂ ನಮಸ್ಕಾರಮಾಡಿ ಅಪ್ಪಣೆಯನ್ನು ಕೇಳುತ್ತಿದ್ದೇನೆ ಎಂದಾಗ, ದ್ರೌಪದಿಯು ಹೀಗೆಂದಳು.

ಕಂ|| ಬಗೆಯದೆ ಮೆಯ್ಯೊಕಮಂ ಬಗೆ

ಪಗೆವರ ಕಡುವೆರ್ಚನೆನ್ನ

ಪೂಣ್ಕೆಯನೆರ್ದೆಯೊಳ್|

ಬಗೆ ಮುನಿಯ

ಮಂತ್ರಪದಮಂ

ಬಗೆ ಕೂಡುಗೆ ನಿನ್ನ ಬಗೆದ

ಬಗೆಯೊಳ್ ಪಾರ್ಥಾ|| ೬೭ ||

ಪದ್ಯ-೬೭:ಪದವಿಭಾಗ-

ಅರ್ಥ:ಬಗೆಯದೆ

ಮೆಯ್ಸೊಕಮಂ (ನಿನ್ನ

ದೇಹಸೌಖ್ಯವನ್ನು ಚಿಂತಿಸದೆ

ಶ) ಬಗೆ ಪಗೆವರ

ಕಡುವೆರ್ಚನು ಎನ್ನ
ಪೂಣ್ಕೆಯನು (ಶತ್ರುಗಳ
ಹೆಚ್ಚಿನ ಅಭಿವೃದ್ಧಿಯನ್ನೂ ನನ್ನ
ಪ್ರತಿಜ್ಞೆಯನ್ನೂ ನೆನೆಸು.)
ಎರ್ದೆಯೊಳ್ ಬಗೆ ಮುನಿಯ
ಮಂತ್ರಪದಮಂ ಬಗೆ
(ಋಷಿಯ
ಮಂತ್ರೋಪದೇಶವನ್ನೂ
ಹೃದಯದಲ್ಲಿ ಚಿಂತಿಸು.)
ಕೂಡುಗೆ ನಿನ್ನ ಬಗೆದ
ಬಗೆಯೊಳ್ ಪಾರ್ಥಾ (ನಿನ್ನ

ಇಷ್ಟಾರ್ಥ ಅಪೇಕ್ಷಿಸಿದಂತೆಯೇ ಸಿದ್ಧಿಯಾಗಲಿ, ಎಂದಳು)

ಪದ್ಯ-೬೭:ಅರ್ಥ: ನಿನ್ನ ದೇಹಸೌಖ್ಯವನ್ನು ಚಿಂತಿಸದೆ ಶತ್ರುಗಳ ಹೆಚ್ಚಿನ ಅಭಿವೃದ್ಧಿಯನ್ನೂ ನನ್ನ ಪ್ರತಿಜ್ಞೆಯನ್ನೂ ಋಷಿಯ ಮಂತ್ರೋಪದೇಶವನ್ನೂ ಹೃದಯದಲ್ಲಿ ಚಿಂತಿಸು, ಅರ್ಜುನ ನಿನ್ನ ಇಷ್ಟಾರ್ಥ

ಅಪೇಕ್ಷಿಸಿದಂತೆಯೇ ಸಿದ್ಧಿಯಾಗಲಿ

ವ|| ಎಂದು ಬುದ್ಧಿವೇೞ್ದು ಮನದೞಿಕಂ ಮನೋವೇಗದಿಂ ಪಱಿಯೆ ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಎಂದು ಬುದ್ಧಿ ವೇೞ್ದು ಮನದ ಎೞಿಕಂ ಮನೋವೇಗದಿಂ ಪಱಿಯೆ, ಸೈರಿಸಲಾಱದೆ-

ವಚನ:ಅರ್ಥ:ವ|| ಎಂದು ಬುದ್ಧಿಹೇಳಿ ಮನಸ್ಸಿನ ಪ್ರೀತಿಯು ಮನೋವೇಗದಿಂದ ಹರಿಯುತ್ತಿರಲು, ಸಹಿಸಲಾರದೆ-

ಉ|| ಬಳ್ವಳ ನೀಳ್ದ ಕಣ್ಮಲರ ತಳ್ತೆಮೆಯಿಂ ಕರೆಗಣ್ಮೆ ಬೆಳ್ಗಡ ಲ್ಗಳ್ವರಿಯಲ್ಕಮಾಟಿಸಿದೊಡೊ ಯ್ಯನೆ ಮಂಗಳ ಭಂಗ ಭೀತಿಯಂ|

ತಳ್ವದೆ ಮಾಡೆ ಬಾಷ್ಪಜಳಮಂ
ಕಳೆದಟ್ಟಿಱನೀಯೆ ಸಂಬಳಂ
ಗೊಳ್ವವೊಲಾ ತಳೋದರಿಯ
ಚಿತ್ತಮನಿಟ್ಟಿಱಗೊಂಡನರ್ಜು
ನಂ|| ೬೮ ||

ಪದ್ಯ-೬೮:ಪದವಿಭಾಗ-
ಅರ್ಥ:ಬಳ್ವಳ ನೀಳ್ದ ಕಣ್ಮಲರ ತಳ್ತೆಮೆಯಿಂ(ಬಹಳ ನೀಳವಾದ ಕಣ್ ಅಲರ- ಅಲರ್ ಕಣ್ಣ್- ಹೂವಿನಂತಿರುವ ರೆಪ್ಪೆಯಿಂದ

ಕೋಡಿದ ಕಣ್ಣಿನ) ಕರೆಗೆ ಅಣ್ಮಿ
ಬೆಳ್ಗಡಲ್ಗಳ್ ಪರಿಯಲ್ಕಂ
(ಕರೆಗೆ ಉಕ್ಕಿ ಬಿಳಿಯ
ಕಾಂತಿಯ ಕಡಲು ಹರಿಯಲು)
ಆಟಿಸಿದೊಡೆ (ಬಯಸಿದರೆ),
ಒಯ್ಯನೆ ಮಂಗಳ ಭಂಗ
ಭೀತಿಯಂ (ಮೆಲ್ಲಗೆ
ಅಮಂಗಳವಾಗುವ
ಹೆದರಿಕೆಯನ್ನು) ತಳ್ವದೆ ಮಾಡೆ
(ಕೂಡಲೆ ಹೊಂದಿ)
ಬಾಷ್ಪಜಳಮಂ ಕಳೆದು

ಅೞ್ಕಱಿನು ಈಯೆ (ಕಣ್ಣೀರನ್ನು ಒರೆಸಿಕೊಂಡು, ಅರ್ಜುನನಿಗೆ ಪ್ರೀತಿಯನ್ನು-ಚುಂಬನವನ್ನು ಕೊಡಲು,) ಸಂಬಳಂಗೊಳ್ವವೊಲು (ಪ್ರಯಾಣದ ಬುತ್ತಿಯನ್ನು ಅವಳಿಂದ ತೆಗೆದುಕೊಂಡಂತೆ) ಆ ತಳೋದರಿಯ ಚಿತ್ತಮನು ಇೞ್ಕುೞಿಗೊಂಡಂ ಅರ್ಜುನಂ (ಅರ್ಜುನನು ಆ ಸಣ್ಣ ನಡುವಿನ ದ್ರೌಪದಿಯ

ಮನಸ್ಸನ್ನು
ಸೆಳೆದುಕೊಂಡನು.)

ಪದ್ಯ-೬೮:ಅರ್ಥ:
ದ್ರೌಪದಿಯ ಬಹಳ ನೀಳವಾದ ಹೂವಿನಂತಿರುವ ರೆಪ್ಪೆಯಿಂದ ಕೋಡಿಡಿದ ಕಣ್ಣಿನ ಕರೆಗೆ ಉಕ್ಕಿ ಬಿಳಿಯ ಕಾಂತಿಯ ಕಡಲು ಹರಿಯಲು ಬಯಸಿದರೆ, (ಕಣ್ಣೀರಿನಿಂದಾಗುವ ಅಮಂಗಲವನ್ನು)ಮೆಲ್ಲಗೆ ಅಮಂಗಳವಾಗುವ

ಹೆದರಿಕೆಯನ್ನು ಕೂಡಲೆ
ಹೊಂದಿ, ಅಗಲಿಕೆಯ ವಿರಹದ
ಕಣ್ಣೀರನ್ನು ತಡೆದುಕೊಂಡು,
ಅರ್ಜುನನಿಗೆ ಪ್ರೀತಿಯನ್ನು-
ಚುಂಬನವನ್ನು ಕೊಡಲು,
ಅದನ್ನು ಪ್ರಯಾಣದ
ಬುತ್ತಿಯನ್ನು ಅವಳಿಂದ
ತೆಗೆದುಕೊಂಡಂತೆ,
ಅರ್ಜುನನು ಆ ಸಣ್ಣ
ನಡುವಿನ ದ್ರೌಪದಿಯ
ಮನಸ್ಸನ್ನು ಸೆಳೆದುಕೊಂಡನು.

ವ|| ಅಂತು
ಯಾತ್ರೋದ್ಯುಕ್ತನಾಗಿ
ಗುಹ್ಯಕನ ಪೆಗಲನೇಱಿ
ಗಂಧೇಭ ವಿದ್ಯಾಧರಂ
ವಿದ್ಯಾಧರನಂತೆ
ಗಗನತಳಕ್ಕೊಗೆದು
ಮಹೇಂದ್ರಕೀಲಾಭಿಮುಖನಾ
ದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಯಾತ್ರೆಯ ಉದ್ಯುಕ್ತನಾಗಿ ಗುಹ್ಯಕನ

(ವ್ಯಾಸನ ದೂತ, ಅಮಾನುಷ ಯಕ್ಷ) ಪೆಗಲನು ಏಱಿ (ಏರಿ,ಹೆಗಲಮೇಲೆ ಕುಳಿತು) ಗಂಧೇಭ ವಿದ್ಯಾಧರಂ ವಿದ್ಯಾಧರನಂತೆ (ವೀರಕೇಸರಿಯ ಬಿರುದು-) ಅರ್ಜುನನು ಗಗನತಳಕ್ಕೆ ಒಗೆದು (ಆಕಾಶಕ್ಕೆ ನೆಗೆದು) ಮಹೇಂದ್ರಕೀಲ ಅಭಿಮುಖನಾದ ಆಗಳ್ ()-

ವಚನ:ಅರ್ಥ:ಹಾಗೆ ಪ್ರಯಾಣಕ್ಕೆ ಸಿದ್ಧನಾಗಿ ಯಕ್ಷನ ಹೆಗಲಮೇಲೆ ಕುಳಿತು ಅರ್ಜುನನು ವಿದ್ಯಾಧರನಂತೆ ಅರ್ಜುನನು ಆಕಾಶಕ್ಕೆ ನೆಗೆದು, ಮಹೇಂದ್ರಕೀಲದ ಕಡೆಗೆ ನಡೆದನು, ಆಗ-

ಶರತ್ಕಾಲದ ವರ್ಣನೆ

ಚಂ|| ಕಡವಿನ ಕಂಪಡಂಗಿದುದು ಜಾದಿಯ

ಕಂಪೊಂದವಿತ್ತು ಸೋಗೆಯು
ರ್ಕುಡುಗಿದುದಂಚೆಯುರ್ಕು
ಪೊಸತಾಯ್ತು ಮುಗಿಲ್ಗಳ
ಕರ್ಪುಪೀ ನವೋ|
ಗಡಿಸಿದುದಿಂದುಮಂಡಳದ
ಕರ್ಪೆಸೆದತ್ತು ಘನಾಗಮಂ
ಮೊದ
ಲ್ಗಿಡೆ ಶರದಾಗಮಂ ನೆಯೆ
ಪರ್ಬೆ ಸಮಸ್ತ
ಮಹೀವಿಭಾಗಮಂ|| ೬೯ ||

ಪದ್ಯ-೬೯:ಪದವಿಭಾಗ-ಅರ್ಥ:ಕಡವಿನ ಕಂಪು ಅಡಂಗಿದುದು (ಕದಂಬಹೂವಗಳ ಪರಿಮಳಯು ಅಡಗಿತು.) ಜಾದಿಯ ಕಂಪು ಒದವಿತ್ತು (ಜಾಜಿಯ ಪರಿಮಳವು ಹೆಚ್ಚಿತು.) ಸೋಗೆಯುರ್ಕು ಉಡುಗಿದುದು (ನವಿಲಿನ ವೈಭವವು ನಿಂತಿತು), ಅಂಚೆಯುರ್ಕು ಪೊಸತಾಯ್ತು

(ಹಂಸದ ವೈಭವವೂ
ಹೊಸದಾಗಿ ಬಂದಿತು),
ಮುಗಿಲ್ಗಳ ಕರ್ಪುರ್ಪೀನಂ
ಓಗಡಿಸಿದುದು(ಮೋಡಗಳ
ಕಪ್ಪು ಸಂಪೂರ್ಣವಾಗಿ
ಹಿಂಜರಿಯಿತು),
ಇಂದುಮಂಡಳದ ಕರ್ಪು
ಎಸೆದತ್ತು (ಚಂದ್ರಮಂಡಲದ
ಕಪ್ಪುಮಚ್ಚೆಯು ಶೋಭಿಸಿತು);
ಘನಾಗಮಂ ಮೊದಲ್ ಕಿಡೆ
(ಮಳೆಗಾಲ ಹೋಗಲು)

ಶರದಾಗಮಂ ನೆಯೆ ಪರ್ಬೆ ಸಮಸ್ತ ಮಹೀವಿಭಾಗಮಂ (ಸಮಸ್ತ ಭೂಭಾಗವನ್ನೂ ಶರತ್ ಆಗಮನ ಹೊಸದಾಗಿ ಹಬ್ಬಿಕೊಂಡಿತು.)

ಪದ್ಯ-೬೯:ಅರ್ಥ:

ವರ್ಷಾಕಾಲವು ಕಳೆದು ಶರತ್ಕಾಲವು ಪ್ರಾಪ್ತವಾಗಲು ಕದಂಬಹೂವುಗಳ ಪರಿಮಳ ಅಡಗಿತು. ಜಾಜಿಯ ಪರಿಮಳವು ಹೆಚ್ಚಿತು. ನವಿಲಿನ

ವೈಭವವು ನಿಂತಿತು. ಹಂಸದ ವೈಭವವೂ ಹೊಸದಾಗಿ ಬಂದಿತು. ಮೋಡಗಳ ಕಪ್ಪು ಸಂಪೂರ್ಣವಾಗಿ ಹಿಂಜರಿಯಿತು. ಚಂದ್ರಮಂಡಲದ ಕಪ್ಪುಮಚ್ಚೆಯು ಶೋಭಿಸಿತು. ಪ್ರಕಾಶಮಾಯವಾಯಿತು; ಮಳೆಗಾಲ ಹೋಗಲು ಸಮಸ್ತ ಭೂಭಾಗವನ್ನೂ ಶರತ್

ಆಗಮನ ಹೊಸದಾಗಿ

ಹಬ್ಬಿಕೊಂಡಿತು.

ಅಳಿ ಬಿರಿದಿರ್ದ ಜಾದಿಯೊಳೆ

ಪಲ್ಮೊರೆಯುತ್ತಿರೆ ಹಂಸೆ ಪೂತ

ಪೂ

ಗೊಳದೊಳೆ ರಾಗಿಸುತ್ತಿರೆ

ಶುಕಾವಳಿ ಬಂಧುರ ಗಂಧಶಾಳಿ

ಸಂ|

ಕುಳದೊಳೆ ಪಾಯ್ದು ವಾಯ್ದು

ನಲಿಯುತ್ತಿರೆ ಸಾರೆ

ಚಕೋರಮಿಂದುಮಂ

ಡಳ

ಗಳಿತಾಮೃತಾಸವಮನುಂಡುಸಿ

ರುತ್ತಿರೆ ಚೆಲ್ವು ಶಾರದಂ|| ೭೦ ||

ಪದ್ಯ-೭೦:ಪದವಿಭಾಗ-

ಅರ್ಥ:ಅಳಿ ಬಿರಿದಿರ್ದ

ಜಾದಿಯೊಳೆ

ಪಲ್ಮೊರೆಯುತ್ತಿರೆ (

ಜೇನುಗಳು ಅರಳಿದ

ಜಾಜಿಯಲ್ಲಿ

ಝೇಂಕರಿಸುತ್ತಿರಲು,) ಹಂಸೆ

ಪೂತ ಪೂಗೊಳದೊಳೆ

ರಾಗಿಸುತ್ತಿರೆ (ಹಂಸಪಕ್ಷಿಯು
ಸುಮಭರಿತವಾದ
ಪುಷ್ಪಸರೋವರದಲ್ಲಿ
ಆನಂದಪಡುತ್ತಿರಲು)
ಶುಕಾವಳಿ ಬಂಧುರ
ಗಂಧಶಾಳಿ (ಪರಿಮಳದ ಭತ್ತ)
ಸಂಕುಳದೊಳೆ ಪಾಯ್ದು
ವಾಯ್ದು ನಲಿಯುತ್ತಿರೆ
(ಗಿಳಿಗಳ ಹಿಂಡು
ಮನೋಹರವಾದ
ಸುಗಂಧದಿಂದ ಕೂಡಿದ ಬತ್ತದ

ತೆನೆಗಳಲ್ಲಿ ಹಾದು ನುಗ್ಗಿ
ನಲಿಯತ್ತಿರಲು,) ಸಾರೆ
ಚಕೋರಂ ಇಂದುಮಂಡಳ
ಗಳಿತ ಅಮೃತ ಆಸವಮಂ
ಉಂಡು ಉಸಿರುತ್ತಿರೆ
(ಪಕ್ಕದಲ್ಲಿಯೇ ಚಕೋರ
ಪಕ್ಷಿಯು ಚಂದ್ರಬಿಂಬದಿಂದ
ಸ್ರವಿಸುತ್ತಿರುವ ಅಮೃತವೆಂಬ
ಮಕರಂದವನ್ನುಂಡು
ಉಲಿಯುತ್ತಿರಲು,) ಚೆಲ್ವು
ಶಾರದಂ(ಶರದ್ಋತು)

ಪದ್ಯ-೭೦:ಅರ್ಥ:

ಜೇನುಗಳು ಅರಳಿದ ಜಾಜಿಯಲ್ಲಿ ಝೇಂಕರಿಸುತ್ತಿರಲು, ಹಂಸಪಕ್ಷಿಯು ಸುಮಭರಿತವಾದ ಪುಷ್ಪಸರೋವರದಲ್ಲಿ ಆನಂದಪಡುತ್ತಿರಲು, ಗಿಳಿಗಳ ಹಿಂಡು ಮನೋಹರವಾದ ಸುಗಂಧದಿಂದ ಕೂಡಿದ ಬತ್ತದ ತೆನೆಗಳಲ್ಲಿ ಹಾದು ನುಗ್ಗಿ

ನಲಿಯತ್ತಿರಲು. ಪಕ್ಕದಲ್ಲಿಯೇ ಚಕೋರ ಪಕ್ಷಿಯು ಚಂದ್ರಬಿಂಬದಿಂದ ಸ್ರವಿಸುತ್ತಿರುವ ಅಮೃತವೆಂಬ ಮಕರಂದವನ್ನುಂಡು ಉಲಿಯುತ್ತಿರಲು,. ಇವುಗಳಿಂದ ಶರತ್ಕಾಲವು ಸುಂದರವಾಯಿತು

ಮ|| ಪುಳಿಯೊಳ್ ಕರ್ಚಿದ ಬಾಳ ಬಣ್ಣಮನೆ ಪೋಲ್ತ್ವಾಕಾಶಮಾಕಾಶಮಂ

ಡಳಮಂ ಪರ್ವಿದ ಬೆಳ್ಮುಗಿಲ್

ಮುಗಿಲ ಬೆಳ್ಪೊಳ್ಪೊಕ್ಕು

ತಳ್ಪೊಯ್ಯೆ ಬ|

ಳ್ವಳ ನಿಳ್ದಿರ್ದ ದಿಶಾಳಿಶಾಳಿವನ

ಗಂಧಾಂಧ ದ್ವಿರೇಫಾಳಿ ಕ

ಣ್ಗೊಳಿಸಿತ್ತೊರ್ಮೆಯ

ಬಂದುದಂದು ಶರದಂ

ಲೋಕಕ್ಕೆ ಕಣ್ ಬರ್ಪಿನಂ||

೭೧||

ಪದ್ಯ-೭೧:ಪದವಿಭಾಗ-

ಅರ್ಥ:ಪುಳಿಯೊಳ್ ಕರ್ಚಿದ

ಬಾಳ ಬಣ್ಣಮನೆ ಪೋಲ್ವ
ಆಕಾಶಂ ((ನಿಂಬೆ)ಹುಳಿಯಲ್ಲಿ
ತೊಳೆದ ಕತ್ತಿಯ ನೀಲಿಯ
ಬಣ್ಣವನ್ನೇ ಹೋಲುವ
ಆಕಾಶವು,)
ಆಕಾಶಮಂಡಳಮಂ ಪರ್ವಿದ
ಬೆಳ್ಮುಗಿಲ್ (ಆಕಾಶ
ಪ್ರದೇಶದಲ್ಲಿ ಹಬ್ಬಿರುವ
ಬಿಳಿಯ ಮೋಡ), ಮುಗಿಲ
ಬೆಳ್ಪು ಒಳ್ಪೊಕ್ಕು ತಳ್ಪೊಯ್ಯೆ
(ಮೋಡಗಳ ಬಿಳುಪು

ಆಕಾಶದ ಒಳಗೆಲ್ಲಾ
ವಿಸ್ತಾರವಾಗಿ ವ್ಯಾಪಿಸಿರಲು),
ಬಳ್ವಳ ನಿಳ್ದು ಇರ್ದ ದಿಶಾಳಿ
(ವಿಶೇಷವಾಗಿ ಉದ್ದಕ್ಕೂ
ತೋರುತ್ತಿರುವ ದಿಕ್ಕುಗಳು),
ಶಾಳಿವನ ಗಂಧಾಂಧ ದ್ವಿರೇಫ
(ದುಂಬಿ) ಆಳಿ (ಶಾಳಿವನದ
(ಬತ್ತದ ಗದ್ದೆಯ)
ಸುವಾಸನೆಯಿಂದ ಸೊಕ್ಕಿರುವ
ದುಂಬಿಗಳ ಸಮೂಹ,)
ಕಣ್ಗೊಳಿಸಿತ್ತು ಒರ್ಮೆಯ

ಬಂದುದು ಅಂದು ಶರದಂ ಲೋಕಕ್ಕೆ ಕಣ್ ಬರ್ಪಿನಂ (ಇವುಗಳಿಂದ ಆಕರ್ಷಕವಾಗಿರುವ ಶರತ್ಕಾಲವು ಲೋಕಕ್ಕೆ ಕಣ್ಣು ಬರುವಂತೆ ಪ್ರಾಪ್ತವಾಯಿತು)

ಪದ್ಯ-೭೧:ಅರ್ಥ: ೭೧. (ನಿಂಬೆ)ಹುಳಿಯಲ್ಲಿ ತೊಳೆದ ಕತ್ತಿಯ ನೀಲಿಯ ಬಣ್ಣವನ್ನೇ ಹೋಲುವ ಆಕಾಶ, ಆಕಾಶ ಪ್ರದೇಶದಲ್ಲಿ ಹಬ್ಬಿರುವ

ಬಿಳಿಯ ಮೋಡ, ಮೋಡಗಳ
ಬಿಳುಪು ಆಕಾಶದ ಒಳಗೆಲ್ಲಾ
ವಿಸ್ತಾರವಾಗಿ ವ್ಯಾಪಿಸಿರಲು,
ವಿಶೇಷವಾಗಿ ಉದ್ದಕ್ಕೂ
ತೋರುತ್ತಿರುವ ದಿಕ್ಕುಗಳು,
ಶಾಳಿವನದ (ಬತ್ತದ ಗದ್ದೆಯ)
ಸುವಾಸನೆಯಿಂದ ಸೊಕ್ಕಿರುವ
ದುಂಬಿಗಳ ಸಮೂಹ,
ಇವುಗಳಿಂದ
ಆಕರ್ಷಕವಾಗಿರುವ

ಶರತ್ಕಾಲವು ಲೋಕಕ್ಕೆ ಕಣ್ಣು
ಬರುವಂತೆ ಪ್ರಾಪ್ತವಾಯಿತು.

ವ|| ಆಗಳ್ ವಿಜಯಂ ತನ್ನ ವಿಜಯಶ್ರೀಯ ಬರವಿಂಗಿದಿರ್ವಂದಂತೆ ಬಂದ ಶರತ್ಕಾಲಶ್ರೀಯನುತ್ಕಂಠಿತಹೃದಯನಾಗಿ ಮೆಚ್ಚಿ ನೋಡುತ್ತುಂ ಬರ್ಪನ್ನೆಗಂ ಮುಂದೆ ಶಾರದ ನೀರದಂಗಳೆಲ್ಲಮೊಂದೆಡೆಗೆ ತೆರಳ್ದೊಟ್ಟಿ ಬೆಟ್ಟಾದಂತಿರ್ದ

ನೀಹಾರಗಿರಿಯಂ ಕಂಡಿದಾವುದೆಂದು ಬೆಸಗೊಳೆ ಗುಹ್ಯಕನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್ ವಿಜಯಂ ತನ್ನ ವಿಜಯಶ್ರೀಯ ಬರವಿಂಗೆ ಇದಿರ್ವಂದಂತೆ ಬಂದ (ಆಗ ಅರ್ಜುನನು ತನ್ನ ವಿಜಯಲಕ್ಷ್ಮಿಯ ಆಗಮನವನ್ನು ಸ್ವಾಗತ ಮಾಡುವುದಕ್ಕೆ ಇದಿರಾಗಿ

ಬಂದಂತೆ ಬಂದ)
ಶರತ್ಕಾಲಶ್ರೀಯನು
ಉತ್ಕಂಠಿತಹೃದಯನಾಗಿ
ಮೆಚ್ಚಿ ನೋಡುತ್ತುಂ
ಬರ್ಪನ್ನೆಗಂ
(ಶರತ್ಕಾಲಲಕ್ಷ್ಮಿಯನ್ನು
ಸಂತುಷ್ಟ ಹೃದಯದಿಂದ ಮೆಚ್ಚಿ
ನೋಡುತ್ತ ಬರುವಷ್ಟರಲ್ಲಿ),
ಮುಂದೆ ಶಾರದ
ನೀರದಂಗಳೆಲ್ಲಂ ಒಂದೆಡೆಗೆ
ತೆರಳ್ದು ಒಟ್ಟೈ ಬೆಟ್ಟಾದಂತೆ

ಇರ್ದ(ಮುಂದೆ ಶರತ್ಕಾಲದ ಮೋಡಗಳೆಲ್ಲ ಒಟ್ಟಾಗಿ ಸೇರಿ ಬೆಟ್ಟವಾದಂತೆ ಇದ್ದ) ನೀಹಾರಗಿರಿಯಂ (ಹಿಮವತ್ಪರ್ವತವನ್ನು) ಕಂಡು ಇದು ಆವುದು ಎಂದು ಬೆಸಗೊಳೆ ಗುಹ್ಯಕನು ಇಂತೆಂದಂ-

ವಚನ:ಅರ್ಥ:ಆಗ ಇಂದ್ರಕೀಲಕ್ಕೆ ಬಂದ ಅರ್ಜುನನು ತನ್ನ

ವಿಜಯಲಕ್ಷ್ಮಿಯ
ಆಗಮನವನ್ನು ಸ್ವಾಗತ
ಮಾಡುವುದಕ್ಕೆ ಇದಿರಾಗಿ
ಬಂದಂತೆ ಬಂದ
ಶರತ್ಕಾಲಲಕ್ಷ್ಮಿಯನ್ನು ಸಂತುಷ್ಟ
ಹೃದಯದಿಂದ ಮೆಚ್ಚಿ
ನೋಡುತ್ತ ಬರುವಷ್ಟರಲ್ಲಿ,
ಮುಂದೆ ಶರತ್ಕಾಲದ
ಮೋಡಗಳೆಲ್ಲ ಒಟ್ಟಾಗಿ ಸೇರಿ
ಬೆಟ್ಟವಾದಂತೆ ಇದ್ದ
ಹಿಮವತ್ಪರ್ವತವನ್ನು ನೋಡಿ

ಇದು ಯಾವುದು ಎಂದು ಪ್ರಶ್ನೆಮಾಡಲು, ಗುಹ್ಯಕನು ಹೀಗೆಂದು ಹೇಳಿದನು-

ಇಂದ್ರಕೀಲದಲ್ಲಿ ಅರ್ಜುನ

ಮ|| ವಿದಳತ್ಕುಂದ ಶಶಾಂಕ
ಶಂಖಧವಳಂ ಗಂಧೇಭ
ದಾನಾಂಬು ಪೂ
ರ್ಣ ದರೀ ಸುಂದರ ಕಂದರಂ
ಮೃಗಪತಿ ಪ್ರಧ್ವಾನ
ಗರ್ಜದ್ಗುಹಂ|

ಮದಿರೋನ್ಮತ್ತ ನಿಳಿಂಪ ಕಿಂಪುರುಷ ಕಾಂತಾರಬ್ಧ ಸಂಗೀತಮೊ ಪ್ಪಿದುದಲ್ತೇ ಸುರ ಸಿದ್ಧ ದಂಪತಿ ರತಿ ಶ್ರೀ ರಮ್ಯ ಹೈಮಾಚಳಂ|| ೭೨ ||

ಪದ್ಯ-೭೨:ಪದವಿಭಾಗ-ಅರ್ಥ:ವಿದಳತ್ ಕುಂದ ಶಶಾಂಕ ಶಂಖಧವಳಂ ಗಂಧೇಭ (ಬಿರಿಯುತ್ತಿರುವ ಕುಂದ ಹೂವಿನಂತಿರುವ

ಹಾಗೂ ಚಂದ್ರನಂತೆಯೂ
ಶಂಖದಂತೆಯೂ ಬೆಳ್ಳಗಿರುವ
ಮದ್ದಾನೆಗಳ) ದಾನಾಂಬು
ಪೂರ್ಣ ದರೀ ಸುಂದರ
ಕಂದರಂ (ಮದೋದಕದಿಂದ
ತುಂಬಿದ ದರಿಗಳಿಂದ ಕೂಡಿ
ಸುಂದರ
ಕಣಿವೆಗಳನ್ನುಳ್ಳುದ್ದೂ),
ಮೃಗಪತಿ ಪ್ರಧ್ವಾನ ಗರ್ಜತ್
ಗುಹಂ (ಸಿಂಹದ ವಿಶೇಷವಾದ
ಶಬ್ದದಿಂದ ಕೂಡಿದ

ಗರ್ಜನೆಯನ್ನುಳ್ಳ
ಗುಹೆಯನ್ನುಳ್ಳುದೂ)
ಮದಿರೋನ್ಮತ್ತ (ಮದಿರ
ಉನ್ಮತ್ತ) ನಿಳಿಂಪ
(ದೇವತೆಗಳ) ಕಿಂಪುರುಷ
ಕಾಂತ ಆರಬ್ಧ (ಸ್ತ್ರೀಯರಿಂದ
ಆರಂಭಿಸಿದ) ಸಂಗೀತಂ
ಒಪ್ಪಿದುದಲ್ತೇ (ಮದ್ಯಪಾನದ
ಅಮಲೇರಿದ ದೇವತೆಗಳ
ಮತ್ತು
ಕಿಂಪುರುಷಸ್ತ್ರೀಯರಿಂದ

ಪ್ರಾರಂಭಿಸಲ್ಪಟ್ಟ
ಸಂಗೀತವನ್ನುಳ್ಳುದ್ದೂ ಅಲ್ಲದೆ)
ಸುರ ಸಿದ್ಧ ದಂಪತಿ ರತಿ ಶ್ರೀ
ರಮ್ಯ ಹೈಮಾಚಳಂ
(ದೇವತೆಗಳು ಮತ್ತು
ಸಿದ್ಧದಂಪತಿಗಳ ರತಿಕ್ರೀಡೆಯ
ವೈಭವದಿಂದ
ಮನೋಹರವಾಗಿರುವುದೂ
ಆದ ಇದು ಹಿಮವತ್ಪರ್ವತ
ಎಂದು ಹೇಳಿದನು)

ಪದ್ಯ-೭೨:ಅರ್ಥ: .

ಬಿರಿಯುತ್ತಿರುವ ಕುಂದ ಹೂವಿನಂತಿರುವ ಚಂದ್ರನಂತೆಯೂ ಶಂಖದಂತೆಯೂ ಬೆಳ್ಳಗಿರುವ ಮದ್ದಾನೆಗಳ ಮದೋದಕದಿಂದ ತುಂಬಿದ ದರಿಗಳಿಂದ ಕೂಡಿ ಸುಂದರ ಕಣಿವೆಗಳನ್ನುಳ್ಳುದ್ದೂ, ಸಿಂಹದ ವಿಶೇಷವಾದ ಶಬ್ದದಿಂದ ಕೂಡಿದ ಗರ್ಜನೆಯನ್ನುಳ್ಳ

ಗುಹೆಯನ್ನುಳ್ಳುದೂ,
ಮದ್ಯಪಾನದ ಅಮಲೇರಿದ
ದೇವತೆಗಳ ಮತ್ತು
ಕಿಂಪುರುಷಸ್ತ್ರೀಯರಿಂದ
ಪ್ರಾರಂಭಿಸಲ್ಪಟ್ಟ
ಸಂಗೀತವನ್ನುಳ್ಳುದೂ
ದೇವತೆಗಳು ಮತ್ತು
ಸಿದ್ಧದಂಪತಿಗಳ ರತಿಕ್ರೀಡೆಯ
ವೈಭವದಿಂದ
ಮನೋಹರವಾಗಿರುವುದೂ

ಆದ ಇದು ಹಿಮವತ್ಪರ್ವತ
ಎಂದು ಹೇಳಿದನು

ಕಂ|| ಲಳಿತೋತ್ಸವ
ಧ್ವಜಾಂಶುಕ
ವಿಳಸನಮಂ ಮುಂದೆ ನಿನಗೆ
ತೋರ್ಪಂತಿರೆ ಕ|
ಣ್ಗೊಳಿಸಿರ್ದುದು ನೋಡ
ಹಿಮಾ
ಚಳ ಶಿಖರದ ಮೇಲೆ ಪಾಯ್ವ
ಗಂಗಾಸ್ರೋತಂ|| ೭೩ ||

ಪದ್ಯ-೭೩:ಪದವಿಭಾಗ-ಅರ್ಥ:ಲಳಿತ ಉತ್ಸವ ಧ್ವಜಾಂಶುಕ ವಿಳಸನಮಂ (ಸುಂದರ ಉತ್ಸವ ಸೂಚಕವಾದ ಬಟ್ಟೆಯ ವಿಲಾಸವನ್ನು) ಮುಂದೆ ನಿನಗೆ ತೋರ್ಪಂತಿರೆ (ನಿನ್ನೆದುರಿಗೆ ತೋರುವಂತಿರಲು) ಕಣ್ಗೊಳಿಸಿರ್ದುದು ನೋಡ ಹಿಮಾಚಳ ಶಿಖರದ ಮೇಲೆ ಪಾಯ್ವ ಗಂಗಾಸ್ರೋತಂ

(ಹಿಮವತ್ಪರ್ವತದ ಶಿಖರದ ಮೇಲೆ ಹರಿಯುತ್ತಿರುವ ಗಂಗಾಪ್ರವಾಹವು ಕಣ್ಣುಗಳಿಗೆ ಸುಂದರವಾಗಿ ತೋರುತ್ತಿದೆ ನೋಡು)

ಪದ್ಯ-೭೩:ಅರ್ಥ: . ಅದೋ ನಿನಗೆ ಸುಂದರ ಉತ್ಸವ ಸೂಚಕವಾದ ಬಾವುಟದ ಬಟ್ಟೆಯ ವಿಲಾಸವನ್ನು ನಿನ್ನೆದುರಿಗೆ ತೋರುವಂತಿರಲು,

ಹಿಮವತ್ಪರ್ವತದ ಶಿಖರದ ಮೇಲೆ ಹರಿಯುತ್ತಿರುವ ಗಂಗಾಪ್ರವಾಹವು ಕಣ್ಣುಗಳಿಗೆ ಸುಂದರವಾಗಿ ತೋರುತ್ತಿದೆ ನೋಡು.

ವ|| ಎಂದು ಗುಹ್ಯಕಂ ಹಿಮವನ್ಮಹೀಧರಮಂ ತೋಱುತ್ತುಂ ಬಂದು ಕೈಲಾಸ ಪರ್ವತಮಂ ಕಂಡು-

ವಚನ:ಪದವಿಭಾಗ-

ಅರ್ಥ:ಎಂದು ಗುಹ್ಯಕಂ ಹಿಮವತ್(ನ್) ಮಹೀಧರಮಂ (ಬೆಟ್ಟವನ್ನು)

ತೋಱುತ್ತುಂ ಬಂದು ಕೈಲಾಸ ಪರ್ವತಮಂ ಕಂಡು-

ವಚನ:ಅರ್ಥ:ವ|| ಎಂದು ಗುಹ್ಯಕನು ಹಿಮಾಲಯಪರ್ವತವನ್ನು ತೋರಿಸುತ್ತ ಮುಂದೆ ಬಂದು ಕೈಲಾಸಪರ್ವತವನ್ನು ಕಂಡು-

ಮ|| ಸ್ರ|| ಇದು ಕೈಲಾಸಂ ಭವಾನೀಧವನ ನೆಲೆ ಮನೋಜಾತನಂ ಬೂದಿಮಾಡಿ

ತ್ತಿದರೊಳ್

ದಕ್ಷಾಧ್ವರಧ್ವಂಸಕನ ನೊಸಲ

ಕಣ್ಣಾತನೊಳ್ ತನ್ನ ದೋರ್ಗ|

ರ್ವದಗುರ್ವಂ ಪ್ರಾಕಟಂ

ಮಾಡುವ ಬಗೆಯೊಳಿದಂ ಪತ್ತಿ

ಕಿೞ್ತೊತ್ತಿ ಪೊತ್ತೆ

ತ್ತಿದೊಡಿತ್ತಂ ಮೆಚ್ಚಿ

ಲಂಕಾಪತಿಗೆ ಬರವಂ ರಾಗದಿಂ

ನೀಳಕಂಠಂ|| ೭೪||

ಪದ್ಯ-೭೪:ಪದವಿಭಾಗ-

ಅರ್ಥ:ಇದು ಕೈಲಾಸಂ,

ಭವಾನೀ ಧವನ ನೆಲೆ (ಪಾರ್ವತೀಪತಿಯ ವಾಸಸ್ಥಾನ,) ಮನೋಜಾತನಂ ಬೂದಿಮಾಡಿತ್ತು ಇದರೊಳ್ (ಇಲ್ಲಿ ಮನ್ಮಥನನ್ನು ಬೂದಿಮಾಡಿತ್ತು) ದಕ್ಷಾಧ್ವರಧ್ವಂಸಕನ (ಶಿವನ) ನೊಸಲ ಕಣ್ಣು (ಶಿವನ ಹಣೆಗಣ್ಣು,) ಆತನೊಳ್ ತನ್ನ ದೋರ್ಗರ್ವದ (ಬಾಹುಬಲದ ಹೆಮ್ಮೆಯ) ಉಗುರ್ವಂ

ಪ್ರಾಕಟಂ ಮಾಡುವ ಬಗೆಯೊಳ್ (ಶಿವನ ಮುಂದೆ ತನ್ನ ಬಾಹುಬಲದ ಹೆಮ್ಮೆಯನ್ನೂ ಅತಿಶಕ್ತಿಯನ್ನೂ ತೋರಿಸುವ ಆಶೆಯಿಂದ) ಇದಂ ಪತ್ತಿ (ಹತ್ತಿ-ಅಂಟಿ,ಅಪ್ಪಿಕೊಂಡು ಕಿಬ್ಳೊತ್ತಿ ಪೊತ್ತು ಎತ್ತಿದೊಡೆ (ಈ ಪರ್ವತವನ್ನು ಕಿತ್ತು ಹೊತ್ತು ಮೇಲಕ್ಕೆತ್ತಲು) ಇತ್ತಂ ಮೆಚ್ಚಿ ಲಂಕಾಪತಿಗೆ ಬರವಂ ರಾಗದಿಂ

ನೀಳಕಂಠಂ (ಈಶ್ವರನು ಮೆಚ್ಚಿ ಲಂಕಾಪತಿಯಾದ ರಾವಣನಿಗೆ ಶಿವನು ಸಂತೋಷದಿಂದ ವರವನ್ನು ಕೊಟ್ಟನು.

ಚಂ|| ತೊ ತೊಯೆಂಬ ಮಾತನಿನಿತಿಲ್ಲದೊಡಾಂ ತೊವೆಂ ದಲೆಂದೊಡಾ)

ಪದ್ಯ-೭೪:ಅರ್ಥ: ಇದು ಕೈಲಾಸಪರ್ವತ; ಪಾರ್ವತೀಪತಿಯ ವಾಸಸ್ಥಾನ, ದಕ್ಷಬ್ರಹ್ಮನ ಯಜ್ಞವನ್ನು

ನಾಶಮಾಡಿದ ಈಶ್ವರನ ಹಣೆಗಣ್ಣು ಇಲ್ಲಿ ಮನ್ಮಥನನ್ನು ಬೂದಿಮಾಡಿದುದು, ಶಿವನ ಮುಂದೆ ತನ್ನ ಬಾಹುಬಲದ ಹೆಮ್ಮೆಯನ್ನೂ ಅತಿಶಕ್ತಿಯನ್ನೂ ತೋರಿಸುವ ಆಶೆಯಿಂದ ಈ ಪರ್ವತವನ್ನು ಕಿತ್ತು ಹೊತ್ತು ಮೇಲಕ್ಕೆತ್ತಲು ಈಶ್ವರನು ಮೆಚ್ಚಿ ಲಂಕಾಪತಿಯಾದ ರಾವಣನಿಗೆ

ಶಿವನು ಸಂತೋಷದಿಂದ

ವರವನ್ನು ಕೊಟ್ಟನು.

ಚಂ|| ತೊರೆ ತೊರೆಯೆಂಬ ಮಾತನಿನಿತಿಲ್ಲದೊಡಾಂ ತೊರೆವೆಂ ದಲೆಂದೊಡಾ ತೊರೆಯೊಳೆ ಪೋಯ್ತು ಸೂರುಳನೆ ಸೂರುಳವೇವುವೊ ನಂಬೆನೆಂಬುದುಂ| ಕರೆಗೊರಲಾತನಾತ್ಮ ವಿಟತತ್ತ್ವಮನುಂಟೊಡೆತಾಗಿ

ಮಾಡಿ ಬಾಂ

ದೊರೆಯನೆ ಪೊತ್ತು ಗೌರಿಗೆ

ಕವಲ್ದೊಗೆಯ್ಸಿದನೀ

ಪ್ರದೇಶದೊಳ್|| ೭೫ ||

ಪದ್ಯ-೭೫:ಪದವಿಭಾಗ-

ಅರ್ಥ:ತೊರೆ (ಬಿಡು)

ತೊರೆಯೆಂಬ ಮಾತನು

(ನದಿಯೆಂಬ/ ಗಂಗೆಯೆಂಬ

ಮಾತನ್ನು) ಇನಿತಿಲ್ಲದೊಡೆ ಆಂ

ತೊರೆವೆಂ (ಇಷ್ಟು

ಮಾಡದಿದ್ದರೆ ನಾನು

ಬಿಡುವೆನು, ದಲ್
ನಿಜವಾಗಿಯೂ!) ಎಂದೊಡೆ
ಆ ತೊರೆಯೊಳೆ ಪೋಯ್ತು
ಸೂರುಳನೆ (ಆ ನಿನ್ನ
ಪ್ರತಿಜ್ಞೆಯು ಆ ನದಿಯ
ಜೊತೆಯಲ್ಲಿಯೇ
ಹೋಯಿತು,)
ಸೂರುಳವೇವುವೊ ನಂಬೆನು
ಎಂಬುದುಂ(ಆ
ಪ್ರತಿಜ್ಞೆಯದೇನು ನಾನು
ನಂಬುವುದಿಲ್ಲ ಎನ್ನಲು)

ಕರೆಗೊರಲಾತನು (ಶಿವನು)
ಆತ್ಮ ವಿಟತತ್ತ್ವಮನು (ತನ್ನ
ಪ್ರೇಮ ವಿದ್ಯೆಯನ್ನು)
ಉಂಟೊಡೆ ತಾಗಿ ಮಾಡಿ
(ಅವುದಾದರೆ ಆ ತತ್ವ ಇದೆ
ಎಂದು ಮಾಡಿ)
ಬಾಂದೊರೆಯನೆ ಪೊತ್ತು
(ಶಿವನು ತೊರೆಯನೆ ಹೊತ್ತು
-ಗಂಗೆಯನ್ನು ಹೊತ್ತು) ಗೌರಿಗೆ-
ಗಂಗೆಯನ್ನು ಬಿಟ್ಟೆನೆಂದು
ತೋರಿಸಲು- ಕವಲು ತೊರೆ

ಗೆಯ್ಸಿದನು (ಗಂಗೆಯ ಒಂದು ಕವಲು ಧಾತೆಯನ್ನು ಹರಿಸಿದನು) ಈ ಪ್ರದೇಶದೊಳ್

ಪದ್ಯ-೭೫:ಅರ್ಥ:ಗಂಗೆಯ ಮೇಲಿನ ಸವ ತಿಮತ್ಸರದಿಂದ ಪಾರ್ವತಿ ಹೇಳುವಳು: ನದಿ (ಗಂಗೆ)ಯೆಂಬ ಮಾತನ್ನು ತಕ್ಷಣ ಬಿಟ್ಟುಬಿಡು. ಹಾಗಿಲ್ಲವಾದರೆ ನಾನು ಖಂಡಿತವಾಗಿಯೂ ನಿನ್ನನ್ನು

ಬಿಟ್ಟುಬಿಡುತ್ತೇನೆ. ಎಂದು ಹೇಳಿದಳು. ಶಿವನು ಆ ನಿನ್ನ ಪ್ರತಿಜ್ಞೆಯು ಆ ನದಿಯ ಜೊತೆಯಲ್ಲಿಯೇ ಹೋಯಿತು, ಎಂದನು. ಗೌರಿಯು ಆ ಪ್ರತಿಜ್ಞೆಯದೇನು ನಾನು ನಂಬುವುದಿಲ್ಲ ಎನ್ನಲು ಕಪ್ಪು ಕೊರಳಿನ ಈಶ್ವರನು ಆ ಗೌರಿಯನ್ನು ನಂಬಿಸುವುದಕ್ಕಾಗಿಯೂ ತನ್ನ ವಿಟವಿದ್ಯೆಯನ್ನು

ಪ್ರದರ್ಶಿಸುವುದಕ್ಕಾಗಿ ಗಂಗೆಯನ್ನು ತಲೆಯಲ್ಲಿ ಮರೆಮಾಡಿ ಇಟ್ಟುಕೊಂಡು ಈ ಸ್ಥಳದಲ್ಲಿ ಕವಲೊಡೆದ ಗಂಗೆಯ ಒಂದು ಕವಲು ಧಾರೆಯನ್ನು ಭೂಮಿಗೆ ಹರಿಸಿದನು. ಅಂದರೆ ತಲೆಯಲ್ಲಿಯೇ ಗಂಗೆಯನ್ನಿಟ್ಟುಕೊಂಡು ಕವಲೊಡೆದ ಒಂದು ಪ್ರವಾಹವನ್ನು ಹೊರಕ್ಕೆ

ಬಿಟ್ಟನು. (ತಾತ್ಪರ್ಯ: ಶಿವನು ಇಲ್ಲಿ ತನ್ನ ಜಟೆಯಿಂದ ಗಂಗೆಯ ಒಂದು ಸಣ್ಣ ಪ್ರವಾಹವನ್ನು ಹರಿಸಿದನು.)

ವ|| ಎಂದು ಗುಹ್ಯಕಂ ಕೈಲಾಸಶೈಲದೆಲ್ಲೆಡೆಗಳುಮಂ ವಿಕ್ರಮಾರ್ಜುನಂಗೆ ತೋಱುತ್ತುಂ ಬಂದು-

ವಚನ:ಪದವಿಭಾಗ-

ಅರ್ಥ:ಎಂದು ಗುಹ್ಯಕಂ ಕೈಲಾಸ ಶೈಲದ

ಎಲ್ಲೆಡೆಗಳುಮಂ
ವಿಕ್ರಮಾರ್ಜುನಂಗೆ
ತೋಱುತ್ತುಂ ಬಂದು-
ವಚನ:ಅರ್ಥ:ಎಂದು
ಗುಹ್ಯಕನು ಕೈಲಾಸಪರ್ವತದ
ಎಲ್ಲಾ ಸ್ಥಳಗಳನ್ನೂ
ಅರ್ಜುನನಿಗೆ ತೋರಿಸುತ್ತಾ
ಬಂದನು.

**ಉ|| ಸಾಳ ತಮಾಳ
ಕಾನನಭರೋದ್ಧತ
ಸಿಂಧುರಕಂಠಗರ್ಜನಾ**

ಭೀಳಮನಂಬರೇಚರವಧೂಕ ರಪಲ್ಲವಸಂಚಳಲ್ಲತಾಂ| ದೋಳಮನಾಶ್ರಿತಾದ್ರಿ ನದ ಕೂಳಮನತ್ಯಧರೀಕೃತಾನ್ಯ ಕು ತ್ಕೀಳಮನಿಂದುಕಾಂತ ಸುಸಲೀಳಮನೆಯ್ದಿನಿಂದ್ರಕೀಳ ಮಂ|| ೭೬ ||

ಪದ್ಯ-೭೬:ಪದವಿಭಾಗ-ಅರ್ಥ:ಸಾಳ (ತೇಗ) ತಮಾಳ (ಹೊಂಗೆ)ಕಾನನ, ಭರೋದ್ಧತ (ಭರ-ತುಂಬಿದ, ಉದ್ಧತ

-ಸೊಕ್ಕಿದ)
ಸಿಂಧುರಕಂಠಗರ್ಜನ
(ಸಿಂಧುರ-ಆನೆಗಳ ಕಂಠದ
ಘೀಳು ಸದ್ದು) ಆಭೀಳಮಂ
(ಭಯಂಕರ), ಅಂಬರೇಚರ
ವಧೂಕರ ಪಲ್ಲವ
(ಆಕಾಶಗಾಮಿಗಳಾದ
ಖೇಚರಸ್ತ್ರೀಯರ
ಚಿಗುರಿನಂತಿರುವ ಕೈಗಳಿಂದ)
ಸಂಚಳಲ್ಲತಾಂದೋಳಮನಾ
ಶ್ರಿತಾದ್ರಿ (ಸಂಚಲತ್

-ಅಲುಗುತ್ತಿರುವ,
ಲತಾಂದೋಳಂ-ಬಳ್ಳಿಗಳ
ಉಯ್ಯಾಲೆಯು) ನದ
ಕೂಳಮಂ (ನದಿಯ
ತೀರವನ್ನು) ಅತ್ಯಧರೀಕೃತ
(ಅತಿ ಅದರೀಕೃತ-
ಕಡಿಮೆಮಾಡವ,
ಕೀಳುಮಾಡುವ) ಅನ್ಯ
ಕುತ್ಕೀಳಮಂ (ಬೇರೆ ಸಣ್ಣ
ಬೆಟ್ಟಗಳನ್ನು) ಇಂದುಕಾಂತ
(ಚಂದ್ರಕಾಂತ ಶಿಲೆಯ)

ಸುಸಲೀಳಮನು ಎಯ್ದಿಂ ಇಂದ್ರಕೀಳಮಂ (ಸುಸಶೀಲವಾದ-ಚೆನ್ನಾದ ಉತ್ತಮ ಲೀಲೆಯುಳ್ಳ ಇಂದ್ರಕೀಲವನ್ನು ಎಯ್ದಿಂ- ತಲುಪಿದನು)

ಪದ್ಯ-೭೬:ಅರ್ಥ: ಅಲ್ಲಿ ಒತ್ತಾಗಿ ಬೆಳೆದ ತೇಗ ಮತ್ತು ಹೊಂಗೆಯ ಮರಗಳಿಂದ ತುಂಬಿದ ಕಾಡಿನಲ್ಲಿ ಸೊಕ್ಕಿದ ಮದ್ದಾನೆಗಳ ಕಂಠದ

ಘೀಳಿಡುವಿಕೆಯ
ಭಯಂಕರವಾಗಿದ್ದು,
ಆಕಾಶಗಾಮಿಗಳಾದ
ಖೇಚರಸ್ತ್ರೀಯರ
ಚಿಗುರಿನಂತಿರುವ ಕೈಗಳಿಂದ
ಚಲಿಸಲ್ಪಟ್ಟ ಬಳ್ಳಿಗಳ
ಉಯ್ಯಾಲೆಗಳನ್ನುಳ್ಳದ್ದೂ
(ತನ್ನ ಔನ್ನತ್ಯದಿಂದ) ಇತರ
ಎಲ್ಲ ಪರ್ವತಗಳನ್ನೂ ಬಹು
ಕೀಳುಮಾಡುವ
ಚಂದ್ರಕಾಂತಶಿಲೆಯ ಉತ್ತಮ

ಲೀಲೆಯುಳ್ಳ
ಇಂದ್ರಕೀಲಪರ್ವತವನ್ನು
ಅರ್ಜುನನು ಬಂದು
ತಲುಪಿದನು.

ಮ|| ಕಮಳಾಂತರ್ಗತ ಗಂಧ
ಬಂಧು ನಯದಿಂ
ಬಂದಪ್ಪಿಕೊಳ್ವಂತೆ ಗಾ
ಳಿ ಮನಂಗೊಂಡಿರೆ ತೀಡೆ
ಭೃಂಗರುತಿಗಳ್
ಮಾಂಗಲ್ಯಗೇಯಂಗಳಂ|

ದಮನಂದೀಯೆ ಮಡಲ್ತು ಪೂತ ಲತೆಗಳ್ ಕೆಯ್ಗೆಯ್ದು ಪೂನೀಡಲ್ಕ ಘ್ರ್ಯಮನೀವಂತೆವೊಲಾದುದ ದ್ರಿ ಹರಿಗಂಗಿಷ್ಟಾರ್ಥಸಂಸಿದ್ಧಿಯಂ| | ೭೭ ||

ಪದ್ಯ-೭೭:ಪದವಿಭಾಗ-ಅರ್ಥ:ಕಮಳ ಅಂತರ್ಗತ ಗಂಧ ಬಂಧು ನಯದಿಂ (ಕಮಲದ ಹೂವಿನಲ್ಲಿರುವ

ಪರಿಮಳಕ್ಕೆ ಸ್ನೇಹಿತನಾದ
ವಾಯುವು ವಿನಯದಿಂದ)
ಬಂದು ಅಪ್ಪಿಕೊಳ್ವಂತೆ ಗಾಳಿ
ಮನಂಗೊಂಡಿರೆ ತೀಡೆ
(ಬಂದು ಅಪ್ಪಿಕೊಳ್ಳುವ ಹಾಗೆ
ಆಹ್ಲಾದಕರವಾಗಿ ಬೀಸಿ
ತಾಗಲು) ಭೃಂಗರುತಿಗಳ್
(ದುಂಬಿಯ ಸದ್ದು)
ಮಾಂಗಲ್ಯ ಗೇಯಂಗಳ
ಅಂದಮನು ಅಂದು ಈಯೆ
(ಮಂಗಳವಾದ್ಯದ

ಸೊಗಸನ್ನುಂಟುಮಾಡುತ್ತಿರ
ಲು-ಸೊಗಸನ್ನು ಕೊಡಲು)
ಮಡಲ್ತು (ಹಬ್ಬಿ) ಪೂತ
ಲತೆಗಳ್ (ಹೂವು ಬಿಟ್ಟ
ಬಳ್ಳಿಗಳು) ಕೆಯ್ಗೆಯ್ದು
ಪೂನೀಡಲ್ಕೆ ಅರ್ಘ್ಯಮನು
ಈವಂತೆವೊಲಾದುದು (ಹಬ್ಬಿ
ಹೂವಿನಿಂದ ಕೂಡಿರುವ
ಬಳ್ಳಿಗಳು ಅಲಂಕಾರ
ಮಾಡಿಕೊಂಡು ಕೈಗೆ ನೀರನ್ನು
ಕೊಡುವ ಹಾಗೆ ಹೂವನ್ನು

ಕೊಡಲು) ಅದ್ರಿ (ಪರ್ವತ) ಹರಿಗಂಗೆ (ಅರ್ಜುನನಿಗೆ) ಇಷ್ಟಾರ್ಥ ಸಂಸಿದ್ಧಿಯಂ (ಅರ್ಜುನನಿಗೆ ಆ ಪರ್ವತವು ಇಷ್ಟಾರ್ಥಸಿದ್ಧಿಯನ್ನುಂಟು ಮಾಡುವ ಹಾಗೆ ಕಂಡಿತು.)

ಪದ್ಯ-೭೭:ಅರ್ಥ: ಕಮಲದ ಹೂವಿನಲ್ಲಿರುವ ಪರಿಮಳಕ್ಕೆ ಸ್ನೇಹಿತನಾದ ವಾಯುವು ವಿನಯದಿಂದ ಬಂದು ಅಪ್ಪಿಕೊಳ್ಳುವ ಹಾಗೆ

ಆಹ್ಲಾದಕರವಾಗಿ ಬೀಸಿ
ತಾಗಲು, ದುಂಬಿಯ ಸದ್ದು
ಮಂಗಳವಾದ್ಯದ
ಸೊಗಸನ್ನುಂಟುಮಾಡುತ್ತಿರ
ಲು ಹಬ್ಬಿ ಹೂವಿನಿಂದ
ಕೂಡಿರುವ ಬಳ್ಳಿಗಳು
ಅಲಂಕಾರ ಮಾಡಿಕೊಂಡು
ಕೈಗೆ ನೀರನ್ನು ಕೊಡುವ ಹಾಗೆ
ಹೂವನ್ನು ಕೊಡಲು
ಅರ್ಜುನನಿಗೆ ಆ ಪರ್ವತವು

ಇಷ್ಟಾರ್ಥಸಿದ್ಧಿಯನ್ನುಂಟು
ಮಾಡುವ ಹಾಗೆ ಕಂಡಿತು.

ವ|| ಆಗಳ್ ಗುಹ್ಯಕನು ಇಂದ್ರಸುತನನಿಂದ್ರಕೀಲನ ಗೇಂದ್ರದ ಚಂದ್ರಕಾಂತಶಿಲಾ ತಲದೊಳಿರಿಪಿ ಬೀಳ್ಕೊಂಡು ಪೋದನಿತ್ತ ವಿಕ್ರಮಾರ್ಜುನಂ ಪರಂತಪಂ ತಪೋನಿಯಮ ನಿಯಮಿತನಾಗಿ-

ವಚನ:ಪದವಿಭಾಗ-

ಅರ್ಥ:ಆಗಳ್ ಗುಹ್ಯಕನು

ಇಂದ್ರಸುತನನು ಇಂದ್ರಕೀಲ
ನಗೇಂದ್ರದ ಚಂದ್ರಕಾಂತಶಿಲಾ
ತಲದೊಳು ಇಱಿಪಿ
(ಚಂದ್ರಕಾಂತಶಿಲಾ ತಲದಲ್ಲಿ
ಇಳಿಸಿ) ಬೀೞ್ಕೊಂಡು
ಪೋದನು, ಇತ್ತ
ವಿಕ್ರಮಾರ್ಜುನಂ ಪರಂತಪಂ
(ಶತ್ರುಗಳನ್ನು ಸುಡುವವನು)
ತಪೋನಿಯಮ
ನಿಯಮಿತನಾಗಿ- (ಇದ್ದನು)

ವಚನ:ಅರ್ಥ:ಆಗ ಗುಹ್ಯಕನು ಅರ್ಜುನನನ್ನು ಶ್ರೇಷ್ಠವಾದ ಇಂದ್ರಕೀಲಪರ್ವತದ ಚಂದ್ರಕಾಂತಶಿಲಾ ತಲದಲ್ಲಿ ಇಳಿಸಿ ಅವನ ಅಪ್ಪಣೆ ಪಡೆದು ಹೋದನು. ಈ ಕಡೆ ಅರ್ಜುನನು ತಪೋನಿಯಮದಲ್ಲಿ ಇದ್ದನು.

ಮ|| ಸ್ರ|| ಭಸಿತಂ ಕರ್ಪೂರ ಕಾಳಾಗರು ಬಹುಳ ರಜಂ

ವಲ್ಕಲಂ ಕಲ್ಪವೃಕ್ಷ
ಪ್ರಸವಂ ಯಜ್ಞೋಪವೀತಂ
ಕನಕ ಕಮಳನಾಳೋತ್ಕರಂ
ನಿಚ್ಚನಿಚ್ಚಂ|
ಪೊಸತೆಂಬಂತಾಗೆ
ಪಾರ್ಥಂಗೊಸೆದು
ತುಡಲುಡಲ್ ಪೂಸಲುಂ
ಸಾಲ್ವಿನಂ ಸಾಧಿ
ಸಿತುದ್ಯದ್ಭಕ್ತಿ ಭಾರಾನತ
ವನವನಿತಾವೃಂದಮಾನಂದ
ದಿಂದಂ|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ:ಭಸಿತಂ (ಬೂದಿ-ಭಸ್ಮ) ಕರ್ಪೂರ ಕಾಳಾಗರು ಬಹುಳ ರಜಂ (ಅಗರಿನ ವಿಶೇಷ ಪುಡಿ,) ಕಲ್ಪವೃಕ್ಷಪ್ರಸವಂ ವಲ್ಕಲಂ (ಕಲ್ಪವೃಕ್ಷದಿಂದ ಹುಟ್ಟಿದ ನಾರು ಮಡಿ) ಯಜ್ಞೋಪವೀತಂ ಕನಕ ಕಮಳನಾಳ ಉತ್ಕರಂ (ಚಿನ್ನದ ಕಮಲದ ದಂಟಿನ ನಾರಿನ ಉಪವೀತ) ನಿಚ್ಚನಿಚ್ಚಂ

ಪೊಸತೆಂಬಂತೆ ಆಗೆ (ದಿನದಿನೂ ಹೊಸತೆಂಬ ಹಾಗೆ) ಪಾರ್ಥಂಗೆ ಒಸೆದು ತುಡಲುಡಲ್ ಪೂಸಲುಂ ಸಾಲ್ವಿನಂ (ಅರ್ಜುನನಿಗೆ ಸಂತಸದಿಂದ ಉಡಲು-ತೊಡಲು ಹಚ್ಚಿಕೊಳ್ಳಲುಭಸ್ಮ ಇವುಗಳನ್ನು ಸಾಕಾಗುವಷ್ಟನ್ನು) ಸಾಧಿಸಿತು (ಒದಗಿಸಿತು.) ಉದ್ಯದ್ಭಕ್ತಿ (ಅತಿಭಕ್ತಿಯ) ಭಾರಾನತ

(ಭಾರದಿಂದ ಬಗ್ಗಿದ)
ವನವನಿತಾ ವೃಂದಂ (
ವನದೇವತಾಸ್ತ್ರೀಯರ
ಸಮೂಹವು) ಆನಂದದಿಂದಂ|

ಪದ್ಯ-೭೮:ಅರ್ಥ:
ಅರ್ಜುನನ ಬಗೆಗೆ ಅತಿಭಕ್ತಿಯ
ಭಾರದಿಂದ ಬಗ್ಗಿದ
ವನದೇವತಾಸ್ತ್ರೀಯರ
ಸಮೂಹವು ಅವನಿಗೆ
ದಿನದಿನೂ ಹೊಸತೆಂಬ ಹಾಗೆ
ಉಡಲು-ತೊಡಲು

ಹಚ್ಚಿಕೊಳ್ಳಲುವಿಭೂತಿ, ಪಚ್ಚಕರ್ಪೂರ, ಕರಿಯ ಅಗರಿನ ಶ್ರೇಷ್ಠವಾದ ಧೂಳು, ಕಲ್ಪವೃಕ್ಷದಿಂದ ಹುಟ್ಟಿದ ನಾರುಮಡಿ, ಚಿನ್ನದ ಕಮಲದ ದಂಟಿನ ನಾರಿನ ಉಪವೀತ/ ಜನಿವಾರ ಇವುಗಳನ್ನು ಆನಂದದಿಂದ ಒದಗಿಸಿತು.

ಚಂ|| ಅದಿರದ ಚಿತ್ತಮಳ್ಕದ ಮನಂ ಬಗೆಗೊಳ್ಳದ ಮೋಹಮೆತ್ತಿ ಕ

ಟ್ಟಿದ ಜಡೆ ತೊಟ್ಟ ರತ್ನಕವಚಂ
ಕೊರಲೊಳ್ ಸಲೆ ಕೋದ
ಬಿಲ್ ಪ್ರಯ|
ತ್ನದೆ ಬಿಗಿದಿರ್ದೆರಆರ್ದ್ದಣೆ
ಮಿಸುಪ್ಪಸಿಖೇಟಕಮಿಂತಿವೊಂ
ದುಂ ಗುಂ
ದದೆ ನಿಲೆ ನೋೞ್ಪ
ನೋಟಕರ್ಗೆ
ಸೌಮ್ಯಭಯಂಕರನಾದನರ್ಜು
ನಂ|| ೭೯ ||

ಪದ್ಯ-೭೯:ಪದವಿಭಾಗ-ಅರ್ಥ:ಅದಿರದ ಚಿತ್ತಂ ಅಳ್ಕದ ಮನಂ, ಬಗೆಗೊಳ್ಳದ ಮೋಹಂ (ಮನಸ್ಸನ್ನು ಅವರಿಸದ ಮೋಹ) ಎತ್ತಿ ಕಟ್ಟಿದ ಜಡೆ, ತೊಟ್ಟ ರತ್ನಕವಚಂ, ಕೊರಲೊಳ್ ಸಲೆ ಕೋದ ಬಿಲ್, ಪ್ರಯತ್ನದೆ ಬಿಗಿದಿರ್ದ ಎರೞ್ದೊಣೆ (ಎರಳ್ ದೊಣೆ -ಎರಡು ಬತ್ತಳಿಕೆ) ಮಿಸುಪ್ಪ ಅಸಿ ಖೇಟಕಂ (ಹೊಳೆಯುವ

ಕತ್ತಿ ಗುರಾಣಿಗಳು) ಇಂತು
ಇವೊಂದುಂ ಗುಂದದೆ (ಹೀಗೆ
ಇವು ಸ್ವಲ್ಪವೂ ಕಡಿಮೆ ಇಲ್ಲದೆ)
ನಿಲೆ (ಇರಲು) ನೋೞ್ಪ
ನೋಟಕರ್ಗೆ ಸೌಮ್ಯ
ಭಯಂಕರನಾದನು
ಅರ್ಜುನಂ (ನೋಡುವವರಿಗೆ
ಅರ್ಜುನನು
ಸೌಮ್ಯವಾಗಿಯೂ
ಭಯಂಕರವಾಗಿಯೂ
ಕಂಡನು)

ಪದ್ಯ-೭೯:ಅರ್ಥ:

ಚಂಚಲವಾಗದ ಚಿತ್ತ, ಹೆದರದ ಅಳುಕದ ಮನಸ್ಸು, ಮನಸ್ಸನ್ನು ಅವರಿಸದಿರುವ ಮೋಹ (-ವಿರಕ್ತಿ), ಎತ್ತಿಕಟ್ಟಿರುವ ಜಡೆ, ತೊಟ್ಟಿರುವ ರತ್ನಖಚಿತವಾದ ಕವಚ, ಕತ್ತಿನಲ್ಲಿ ಚೆನ್ನಾಗಿ ಸಿಕ್ಕಿಸಿಕೊಂಡ ಬಿಲ್ಲು, ಪ್ರಯತ್ನಪೂರ್ವಕವಾಗಿ ಬಿಗಿದುಕೊಂಡಿರುವ ಎರಡು

ಬತ್ತಳಿಕೆಗಳು, ಹೊಳೆಯುವ ಕತ್ತಿ ಗುರಾಣಿಗಳು, ಹೀಗೆ ಇವು ಸ್ವಲ್ಪವೂ ಕಡಿಮೆಇಲ್ಲದೆ ನೆಲಸಿರಲು, ನೋಡುವವರಿಗೆ ಅರ್ಜುನನು ಸೌಮ್ಯವಾಗಿಯೂ ಭಯಂಕರವಾಗಿಯೂ ಕಂಡನು.

ವ|| ಅಂತು ಪರಾಶರನಂದನನುಪದೇಶ

ದೊಳ್ ತಪನಪ್ರಭಂ ತಪಂಗೆಯ್ಯೆಲ್ ತಗುಳ್ದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಪರಾಶರನಂದನನ (ವ್ಯಾಸನ) ಉಪದೇಶದೊಳ್ ತಪನಪ್ರಭಂ (ಸೂರ್ಯನ ಕಾಂತಿಯ ಅರ್ಜುನನು) ತಪಂ ಗೆಯ್ಯೆಲ್ ತಗುಳ್ದೊಡೆ-

ವಚನ:ಅರ್ಥ:|| ಹಾಗೆ ವ್ಯಾಸಮಹರ್ಷಿಯ

ಉಪದೇಶದಿಂದ ಸೂರ್ಯನ ಕಾಂತಿಯನ್ನುಳ್ಳ ಅರ್ಜುನನು ತಪಸ್ಸು ಮಾಡಲು ಪ್ರಾರಂಭಿಸಿದನು- ಪ್ರಾರಂಭಿಸಿದಾಗ

ಚಂ|| ಕರಿಣಿಯ ಸೀಯನಪ್ಪ ಮೊಲೆವಾಲ್ಗೆ ತಗುಳ್ದುದು ತತ್ಕಿಶೋರ ಕೇ ಸರಿ ಹರಿಪೋತಮಂ ಬೆದಱುತುಂ

ಕರಿಪೋತಮವುಂಡುಗರ್ಚಿ

ಕೇ|

ಸರಿಣಿಯ ಕೆಚ್ಚಲಂ

ತುಡುಕುತುಂ ಪರಿದತ್ತು

ಕುರಂಗಯೂಥದೊಳ್

ಬೆರಸಿದುವಂದು

ಪೆರ್ಬುಲಿಗಳಿಂದ್ರತನೂಜತಪ

ಪ್ರಭಾವದಿಂ|| ೮೦ ||

ಪದ್ಯ-೮೦:ಪದವಿಭಾಗ-

ಅರ್ಥ:ಕರಿಣಿಯ (ಕರಿ-ಕರಿಣಿ-

ಹೆಣ್ಣಾನೆಯ) ಸೀಯನಪ್ಪ

ಮೊಲೆವಾಲ್ಗೆ (ಸಿಹಿಯಾದ
ಮೊಲೆಹಾಲಿಗಾಗಿ) ತಗುಳ್ದುದು
ತತ್ ಕಿಶೋರ ಕೇಸರಿ (ಆ
ಸಿಂಹದ ಮರಿಗಳು ಅದರ
ಹಿಂದೆಯೇ ಹೋದುವು)
ಹರಿಪೋತಮಂ ಬೆದಱುತುಂ
(ಸಿಂಹದ ಮರಿಗಳನ್ನು
ಹೆದರಿಸುತ್ತ) ಕರಿಪೋತಂ
ಅವುಂಡುಗರ್ಚಿ ಕೇಸರಿಣಿಯ
ಕೆಚ್ಚಲಂ ತುಡುಕುತುಂ
ಪರಿದತ್ತು (ಆನೆಯ ಮರಿಗಳು

ಅವಡುಗಚ್ಚಿ ಹೆಣ್ಣು ಸಿಂಹದ
ಕೆಚ್ಚಲನ್ನು ಹಿಡಿದುಕೊಳ್ಳುತ್ತ
ಓಡಿದುವು.)
ಕುರಂಗಯೂಥದೊಳ್
(ಕುರಂಗ- ಜಿಂಕೆ)
ಬೆರಸಿದುವಂದು
ಪೆರ್ಬುಲಿಗಳ್ (ಹೆಬ್ಬುಲಿಗಳು
ಜಿಂಕೆಯ ಸಮೂಹದಲ್ಲಿ
ಬೆರಸಿಕೊಂಡವು.),
ಇಂದ್ರತನೂಜ
ತಪಪ್ರಭಾವದಿಂ

(ಇಂದ್ರಪುತ್ರನಾದ ಅರ್ಜುನನ ತಪಸ್ಸಿನ ಪ್ರಭಾವದಿಂದ).

ಪದ್ಯ-೮೦:ಅರ್ಥ:ಇಂದ್ರಕೀಲದಲ್ಲಿ, ಇಂದ್ರನ ಮಗ ಅರ್ಜುನನ ತಪಸ್ಸಿನ ಪ್ರಭಾವದಿಂದ ಆ ಸಿಂಹದ ಮರಿಗಳು ಹೆಣ್ಣಾನೆಯ ಸಿಹಿಯಾದ ಮೊಲೆಹಾಲಿಗಾಗಿ ಅದರ ಹಿಂದೆಯೇ ಹೋದುವು. ಆನೆಯ ಮರಿಗಳು ಸಿಂಹದ

ಮರಿಗಳನ್ನು ಹೆದರಿಸುತ್ತ ಅವಡುಗಚ್ಚಿ (ತುಟಿಯನ್ನು ಕಚ್ಚಿಕೊಂಡು) ಹೆಣ್ಣು ಸಿಂಹದ ಕೆಚ್ಚಲನ್ನು ಹಿಡಿದುಕೊಳ್ಳುತ್ತ ಓಡಿದುವು. ಹೆಬ್ಬುಲಿಗಳು ಜಿಂಕೆಯ ಸಮೂಹದಲ್ಲಿ ಬೆರಸಿಕೊಂಡವು.

ಅರ್ಜುನನ ತಪೋಭಂಗಕ್ಕೆ ಅಪ್ಸರೆಯರ ಆಗಮನ

ವ|| ಮತ್ತಮಾ ಗಿರೀಂದ್ರಕಂದರದೊಳ್ ತಪಂಗೆಯ್ವ ತಪೋಧನರ ತಪಂಗಳೆಲ್ಲಮಾತನ ತಪೋಮಯಶಿಖಿಗಳಿಂ ಬೆಂದು ಬೆಂದ ನುಲಿಯಂತೇತರ್ಕಂ ಮುಟ್ಟಿಲ್ಲದೆ ಮುಟ್ಟಗಿಡೆ ದೇವೇಂದ್ರಂ ತನಗಾದ

ಹೃತ್ಕಂಪದೊಳಮಾಸನಕಂಪ
ದೊಳಂ ನರೇಂದ್ರತಾಪಸಂ
ತನ್ನಿಂದ್ರತ್ವಮಂ ಕೊಳಲೆಂದು
ತಪಂಗೆಯ್ದಪನೆಂಬ
ಸಂಕೆಯೊಳ್ ತಪೋವಿಘಾತಂ
ಮಾಡಿಮೆಂದು ತನ್ನ
ನೆಚ್ಚಿನಚ್ಚರಸೆಯರು
ಮನಾಱುಂ ಋತುಗಳುಮಂ
ಗಂಧರ್ವರುಮಂ
ಕಾಮದೇವನಂ

ದಂಡನಾಯಕಂ ಮಾಡಿ ಪೇಟ್ದಾಗಳ್-

ವಚನ:ಪದವಿಭಾಗ-

ಅರ್ಥ:ಮತ್ತಂ ಆ ಗಿರೀಂದ್ರ ಕಂದರದೊಳ್ (ಶ್ರೇಷ್ಠಪರ್ವತದ ಕಣಿವೆಗಳಲ್ಲಿ) ತಪಂ ಗೆಯ್ವ ತಪೋಧನರ ತಪಂಗಳೆಲ್ಲಂ (ತಪಸ್ಸು ಮಾಡುತ್ತಿದ್ದ ತಪೋಧನರ ತಪಸ್ಸುಗಳೆಲ್ಲವೂ)ಆತನ ತಪೋಮಯ ಶಿಖಿಗಳಿಂ

(ಬೆಂಕಿಯಿಂದ) ಬೆಂದು ಬೆಂದ
ನುಲಿಯಂತೆ ಏತರ್ಕಂ
ಮುಟ್ಟಿಲ್ಲದೆ ಮುಟ್ಟಗಿಡೆ
(ಸುಟ್ಟುಹೋಗಿ ಸುಟ್ಟ
ಹಗ್ಗದಂತೆ ಉಪಯೋಗವಿಲ್ಲದೆ
ನಿಷ್ಪ್ರಯೋಜನವಾಗಲು-)
ದೇವೇಂದ್ರಂ ತನಗಾದ
ಹೃತ್ಕಂಪದೊಳ್
(ದೇವೇಂದ್ರನು ತನಗುಂಟಾದ
ಎದೆ ನಡುಕದಿಂದ)
ಆಸನಕಂಪದೊಳಂ (ತನ್ನ

ಸಿಂಹಾಸನದ ನಡುಗುವಿಕೆ)
ನರೇಂದ್ರತಾಪಸಂ
ತನ್ನಿಂದ್ರತ್ವಮಂ ಕೊಳಲೆಂದು
ತಪಂಗೆಯ್ದಪನೆಂಬ
ಸಂಕೆಯೊಳ್
(ಮನುಷ್ಯತಪಸ್ವಿಯು ತನ್ನ
ಇಂದ್ರಪದವಿಯನ್ನು
ಪಡೆಯಲು ತಪಸ್ಸು
ಮಾಡುತ್ತಿದ್ದಾನೆಂಬ
ಸಂದೇಹದಿಂದ)
ತಪೋವಿಘಾತಂ

ಮಾಡಿಮೆಂದು (ತಪಸ್ಸಿಗೆ
ವಿಘ್ನಮಾಡಿ ಎಂದು) ತನ್ನ
ನೆಚ್ಚಿನಚ್ಚರಸೆಯರು
ಮನಾಱುಂ ಋತುಗಳುಮಂ
(ತನಗೆ
ಪರಮಪ್ರೀತಿಪಾತ್ರರಾದ
ಅಪ್ಸರಸ್ತ್ರೀಯರನ್ನೂ ಆರು
ಋತುಗಳನ್ನೂ)
ಗಂಧರ್ವರುಮಂ
ಕಾಮದೇವನಂ
ದಂಡನಾಯಕಂ ಮಾಡಿ

ಪೇಟ್ದಾಗಳ್- (ಗಂಧರ್ವರನ್ನೂ ಕಾಮದೇವನನ್ನು ದಂಡನಾಯಕನನ್ನಾಗಿ ಮಾಡಿ ಹೇಳಿಕಳುಹಿಸಿದಾಗ)

ವಚನ:ಅರ್ಥ:ಮತ್ತು ಆ ಶ್ರೇಷ್ಠಪರ್ವತದ ಕಣಿವೆಗಳಲ್ಲಿ ತಪಸ್ಸು ಮಾಡುತ್ತಿದ್ದ ತಪೋಧನರ ತಪಸ್ಸುಗಳೆಲ್ಲವೂ ಆತನ ತಪ್ಪಸ್ಸಿನಿಂದುಂಟಾದ ಬೆಂಕಿಯಿಂದ ಸುಟ್ಟುಹೋಗಿ

ಸುಟ್ಟ ಹಗ್ಗದಂತೆ
ಉಪಯೋಗವಿಲ್ಲದೆ
ನಿಷ್ಪ್ರಯೋಜನವಾಗಲು,
ದೇವೇಂದ್ರನು ತನಗುಂಟಾದ
ಎದೆ ನಡುಕದಿಂದ ಮತ್ತು ತನ್ನ
ಸಿಂಹಾಸನದ
ನಡುಗುವಿಕೆಯಿಂದ
ಮನುಷ್ಯತಪಸ್ವಿಯು ತನ್ನ
ಇಂದ್ರಪದವಿಯನ್ನು
ಪಡೆಯಲು ತಪಸ್ಸು
ಮಾಡುತ್ತಿದ್ದಾನೆಂಬ

ಸಂದೇಹದಿಂದ ಅವನ ತಪಸ್ಸಿಗೆ ವಿಘ್ನಮಾಡಿ ಎಂದು ತನಗೆ ಪರಮಪ್ರೀತಿಪಾತ್ರರಾದ ಅಪ್ಸರ ಸ್ತ್ರೀಯರನ್ನೂ ಆರು ಋತುಗಳನ್ನೂ ಗಂಧರ್ವರನ್ನೂ, ಕಾಮದೇವನನ್ನು ದಂಡನಾಯಕನನ್ನಾಗಿ ಮಾಡಿ ಹೇಳಿಕಳುಹಿಸಿದಾಗ-

ಚಂ|| ವನರುಹಗರ್ಭನೆಂಬವನ ಮುನ್ನಿನ ಗೆಯ್ದ ತಪಂ

ತಿಲೋತ್ತಮಾಂ
ಗನೆಯಿನದಂತುಟಾದುದೆನೆ
ಮತ್ತಿನ ಬೂತು ತಂಪಗಳೆಮ್ಮ
ಪು|
ರ್ವಿನ ಕಡೆಯೊಂದು
ಜರ್ವಿನೊಳೆ ತೀರ್ವುವವಲ್ಲದೆ
ದೇವ ಬೆಂಬಲಂ
ಮನಸಿಜನೀಗಳಾಱು
ಋತುವುಂ ನೆರವೆಂದೊಡೆ
ಸೋಲದಿರ್ಪರಾರ್|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ವನರುಹ ಗರ್ಬನೆಂಬವನ ಮುನ್ನಿನ ಗೆಯ್ದ ತಪಂ (ಹಿಂದೆ ತಾವರೆಯಲ್ಲಿ ಹುಟ್ಟಿದವನು ಮಾಡಿದ ತಪಸ್ಸು) ತಿಲೋತ್ತಮಾಂಗನೆಯಿಂ ಅದಂತುಟಾದುದೆನೆ (ತಿಲೋತ್ತಮೆಯಿಂದ ಅದು ಹಾಗೆ ನಷ್ಟ ಆಯಿತು ಎನ್ನುವಾಗ) ಮತ್ತಿನ ಬೂತು

ತಂಪಗಳೆಮ್ಮ ಪುರ್ವಿನ
ಕಡೆಯೊಂದು ಜರ್ವಿನೊಳೆ
ತೀವ್ರುವವಲ್ಲದೆ (ಉಳಿದ
ಪ್ರಾಣಿಗಳ ತಪಸ್ಸು ನಮ್ಮ
ಹುಬ್ಬಿನ ಕೊನೆಯ ಒಂದು
ಅಲುಗಾಟದಿಂದಲೇ
ತೀರಿಹೋಗುವುದು) ದೇವ
ಬೆಂಬಲಂ ಮನಸಿಜನು
ಈಗಳಾಱು ಋತುವುಂ
ನೆರವೆಂದೊಡೆ
ಸೋಲದಿರ್ಪರಾರ್! (ಮತ್ತೆ

ಈಗ ಮನ್ಮಥನ ಬೆಂಬಲವೂ ಆರುಋತುಗಳ ಸಹಾಯವೂ ಇರುವಾಗ ಸೋಲದಿರುವವರಾರಿದ್ದಾರೆ?)

ಪದ್ಯ-೮೧:ಅರ್ಥ: ಎಲ್ಲೈ ಇಂದ್ರದೇವನೇ ಹಿಂದೆ ಬ್ರಹ್ಮನು ಮಾಡಿದ ತಪಸ್ಸು ತಿಲೋತ್ತಮೆಯಿಂದ ಅದು ಹಾಗೆ ನಷ್ಟ ಆಯಿತು ಎನ್ನುವಾಗ, ಉಳಿದ ಪ್ರಾಣಿಗಳ ತಪಸ್ಸು ನಮ್ಮ ಹುಬ್ಬಿನ

ಕೊನೆಯ ಒಂದು
ಅಲುಗಾಟದಿಂದಲೇ
ತೀರಿಹೋಗುವುದು. ಮತ್ತೆ
ಈಗ ಮನ್ಮಥನ ಬೆಂಬಲವೂ
ಆರುಋತುಗಳ ಸಹಾಯವೂ
ಇರುವಾಗ
ಸೋಲದಿರುವವರಾರಿದ್ದಾರೆ!

ವ|| ಎಂದು
ದೇವಪ್ಸರೋವೃಂದಂ
ಎನಿತಾನುಮಂದದಿಂ
ಪುರಂದರನ ಪಕ್ಕದೆ ಪೂಣ್ದು

ಬಂದು ಗಗನತಳಮೆಲ್ಲಂ ತಮ್ಮ
ತೊಟ್ಟ
ದಿವ್ಯಾಭರಣಕಿರಣಂಗಳೊಳ್
ತೊಳಗಿ ಬೆಳಗೆ ಬಂದು
ಮಹೀತಳಕ್ಕವತರಿಸಿ
ನದನದೀಪುಳಿನಪರಿಸರಪ್ರದೇ
ಶಂಗಳೊಳಂ
ಕದಳೀವನಂಗಳೊಳಂ
ಕನಕಲತಾಮಂಟಪಂಗಳೊಳ
ಮಿಡಿದೆಡೆಗೊಳೆ ಪೂತ
ಮಲ್ಲಿಗೆಯ

ಬಳ್ಳಿಗಾವಣಂಗಳೊಳಂ
ನನೆಯ ಜೊಂಪಂಗಳೊಳಂ
ಗಗನಗಮನಜನಿತಶ್ರಮವನಾ
ಗಜಗಮನಯರಾಱಿಸಿ
ಪಾಲ್ಗಡಲೊಳ
ಮಮರ್ದಿನೊಳಂ ಪುಟ್ಟಿದ
ಕಳ್ಳ ಸೊರ್ಕಿನೊಳಮುಂತೆ
ನಡುಗುವ ಬಡನಡುಗಳ್ಗೆ
ನಡುಕಮುಮನುಂತೆ
ಪೊಡರ್ವ ಪುರ್ವುಗಳ್ಗೆ
ಪೊಡರ್ಪುಮನುಂತೆ

ಸೊಗಯಿಸುವ ಬೆಳರ್ವಾರ್ಯ್ಗಳ್ಗೆ

ತನಿಗೆತ್ತುಮನುಂತೆ ಪೊಳೆವ

ನಿಡಿಯಲರ್ಗಣ್ಗಳ್ಗೆ

ಮಳಮಳಿಪ

ನೋಟಮುಮನುಂತೆ

ತೊದಳಿಸುವ ನುಡಿವ

ನುಡಿಗಳ್ಗೆ

ತೊದಳುಮನೆಕ್ಕೆಯಿಂ ತಳೆಯೆ

ನೆರೆಯೆ ಕೆಯ್ಗೆಯ್ದು

ಮುನ್ನಮಾಱುಂ

ಋತುಗಳುಮಂ ನಿಮ್ಮ ನಿಮ್ಮ

**ಸ್ವರೂಪಂಗಳುಮನಾತನಿರ್ದ
ಲ್ಲಿಗೆ ಪೋಗಿ
ತೋಱಿಮೆಂದಾಗಳ್-**

ವಚನ:ಪದವಿಭಾಗ-

ಅರ್ಥ:ಎಂದು ದೇವ ಅಪ್ಸರ
ವೃಂದಂ ಎನಿತಾನುಮಂದದಿಂ
ಪುರಂದರರನ ಪಕ್ಕದೆ ಪೊಣ್ದು
ಬಂದು (ಪ್ಲೋ ರೀತಿಯಲ್ಲಿ
ಪ್ರತಿಜ್ಞೆಮಾಡಿ ಬಂದು ಆ)
ಗಗನತಳಂ ಎಲ್ಲಂ ತಮ್ಮ
ತೊಟ್ಟ ದಿವ್ಯ

ಆಭರಣಕಿರಣಂಗಳೊಳ್
ತೊಳಗಿ ಬೆಳಗೆ (ದಿವ್ಯವಾದ
ಒಡವೆಗಳ ಕಾಂತಿಯಿಂದ
ಬೆಳಗುತ್ತಿರಲು), ಬಂದು
ಮಹೀತಳಕ್ಕೆ ಅವತರಿಸಿ
(ಭೂಮಿಗೆ ಇಳಿದು) ನದನದೀ
ಪುಳಿನಪರಿಸರ
ಪ್ರದೇಶಂಗಳೊಳಂ
(ನದನದಿಗಳ ಮರಳು
ದಿಣ್ಣೆಗಳಲ್ಲಿಯೂ)
ಕದಳೀವನಂಗಳೊಳಂ

ಕನಕಲತಾಮಂಟಪಂಗಳೊ
ಳಂ ಇಡಿದು ಎಡೆಗೊಳೆ
(ಬಾಳೆಯ ತೋಟಗಳಲ್ಲಿಯೂ
ಹೊಂಬಣ್ಣದ
ಲತಾಮಂಟಪಗಳಲ್ಲಿಯೂ
ಒತ್ತಾಗಿ ಸೇರಿ) ಪೂತ
ಮಲ್ಲಿಗೆಯ
ಬಳ್ಳಿಗಾವಣಂಗಳೊಳಂ
ನನೆಯ ಜೊಂಪಂಗಳೊಳಂ
(ಹೂ ಬಿಟ್ಟಿರುವ
ಲತಾಗೃಹಗಳಲ್ಲಿಯೂ

ಹೂವಿನಗೊಂಚಲುಗಳಲ್ಲಿ
ಯೂ) ಗಗನ ಗಮನ ಜನಿತ
ಶ್ರಮವನು ಆ
ಗಜಗಮನಯರಾಱಿಸಿ
(ಆಕಾಶದಲ್ಲಿ ಸಂಚರಿಸಿದ
ಬಳಲಿಕೆಯನ್ನು ಆನೆಯಂತೆ
ನಡಗೆಯುಳ್ಳ
ಅಪ್ಸರಸ್ತ್ರೀಯರು
ಪರಿಹರಿಸಿಕೊಂಡರು)
ಪಾಲ್ಗಡಲೊಳಂ
ಅಮರ್ದಿನೊಳಂ ಪುಟ್ಟಿದ ಕಳ್ಳ

ಸೊರ್ಕಿನೊಳಂ
(ಕ್ಷೀರಸಮುದ್ರದಲ್ಲಿ ಹುಟ್ಟಿದ
ಅಮೃತದಿಂದ ಉತ್ಪನ್ನವಾದ
ಮದ್ಯಕುಡಿದ ಸೊಕ್ಕಿನಿಂದ
ಕೂಡಿದವರಾಗಿ) ಅಂತೆ
ನಡುಗುವ ಬಡನಡುಗಳ್ಗೆ
ನಡುಕಮುಮನು ಅಂತೆ
(ಸುಮ್ಮನೆ ನಡುಗುತ್ತಿರುವ
ಕೃಶವಾದ ಸೊಂಟಗಳಿಗೆ
ಮತ್ತಷ್ಟು
ನಡುಕವನ್ನುಂಟುಮಾಡಿಕೊಂ

ಡು,) ಪೊಡರ್ವ ಪುರ್ವುಗಳ್ಗೆ
ಪೊಡರ್ಪುಮನುಂತೆ
(ಕುಣಿಯುತ್ತಿರುವ
ದೀರ್ಘವಾದ ಹುಬ್ಬುಗಳಿಗೆ
ಮತ್ತಷ್ಟು ಕುಣಿತವನ್ನು
ಮಾಡಿ,) ಸೊಗಯಿಸುವ
ಬೆಳರ್ವಾಯ್ಗಳ್ಗೆ
ತನಿಗೆತ್ತುಮನುಂತೆ
(ಸೊಗಯಿಸುವ ಬಿಳಿಯ
ಬಾಯಿಗಳಿಗೆ ಹೊಸದಾದ
ಅದಿರಾಟವನ್ನು ಕೊಟ್ಟು,)

ಪೊಳೆವ ನಿಡಿಯಲರ್ಗಣ್ಗಳ್ಗೆ
ಮಳಮಳಿಪ
ನೋಟಮುಮನುಂತೆ
(ಹೊಳೆಯುತ್ತಿರುವ
ದೀರ್ಘವಾದ
ಹೂವಿನಂತಿರುವ ಕಣ್ಣುಗಳಿಗೆ
ಕೆಂಪಾಗಿ ಕದಡಿದ
ನೋಟವನ್ನು ಕೊಟ್ಟು,)
ತೊದಳಿಸುವ ನುಡಿವ
ನುಡಿಗಳ್ಗೆ ತೊದಳುಮನು
ಎಕ್ಕೆಯಿಂ ತಳೆಯೆ ನೆರೆಯೆ

ಕೆಯ್ಗೆಯ್ದು (ಸುಮ್ಮನೆ
ತೊದಳಿನಿಂದ
ನುಡಿಯುತ್ತಿರುವ
ತೊದಳುಮಾತಿಗೆ ಮತ್ತಷ್ಟು
ತೊದಳುವಿಕೆಯನ್ನು
ಏಕಕಾಲದಲ್ಲಿ
ಕೂಡಿಕೊಳ್ಳುವಂತೆ
ಪೂರ್ಣವಾಗಿ
ಅಲಂಕರಿಸಿಕೊಂಡು
ನಡೆಯುತ್ತಿರಲು)
ಮುನ್ನಮಾಱುಂ

ಋತುಗಳುಮಂ ನಿಮ್ಮ ನಿಮ್ಮ ಸ್ವರೂಪಂಗಳುಂ ಆ ನಾತನಿರ್ದಲ್ಲಿಗೆ ಪೋಗಿ ತೋಱಿಮೆಂದಾಗಳ್-(ಆರು ಋತುಗಳೂ ತಮ್ಮ ತಮ್ಮ ಸ್ವರೂಪಗಳಿಂದ ಆತನಿದ್ದ ಸ್ಥಳಕ್ಕೆ ಹೋಗಿ ತೋರಿಕೊಳ್ಳಿ ಎಂದಾಗ-)

ವಚನ:ಅರ್ಥ:ಎಂದು ದೇವಲೋಕದ ಅಪ್ಸರಸ್ತ್ರೀಯರ ಸಮೂಹವು

ಇಂದ್ರನ ಹತ್ತಿರ ಎಷ್ಟೋ
ರೀತಿಯಲ್ಲಿ ಪ್ರತಿಜ್ಞೆಮಾಡಿ
ಬಂದು
ಆಕಾಶಪ್ರದೇಶವೆಲ್ಲವೂ ತಾವು
ಧರಿಸಿದ್ದ ದಿವ್ಯವಾದ
ಒಡವೆಗಳ ಕಾಂತಿಯಿಂದ
ಬೆಳಗುತ್ತಿರಲು ಭೂಮಿಗೆ
ಇಳಿದು, ನದನದಿಗಳ ಮರಳು
ದಿಣ್ಣೆಗಳಲ್ಲಿಯೂ ಬಾಳೆಯ
ತೋಟಗಳಲ್ಲಿಯೂ
ಹೊಂಬಣ್ಣದ

ಲತಾಮಂಟಪಗಳಲ್ಲಿಯೂ
ಒತ್ತಾಗಿ ಸೇರಿ ಹೂ ಬಿಟ್ಟಿರುವ
ಲತಾಗೃಹಗಳಲ್ಲಿಯೂ
ಹೂವಿನಗೊಂಚಲುಗಳಲ್ಲಿ
ಯೂ ಆಕಾಶದಲ್ಲಿ ಸಂಚರಿಸಿದ
ಬಳಲಿಕೆಯನ್ನು ಆನೆಯಂತೆ
ನಡಗೆಯುಳ್ಳ
ಅಪ್ಸರಸ್ತ್ರೀಯರು
ಪರಿಹರಿಸಿಕೊಂಡರು.
ಕ್ಷೀರಸಮುದ್ರದಲ್ಲಿ ಹುಟ್ಟಿದ
ಅಮೃತದಿಂದ ಉತ್ಪನ್ನವಾದ

ಮದ್ಯದ ಸೊಕ್ಕಿನಿಂದ
ಕೂಡಿದವರಾಗಿ ಸುಮ್ಮನೆ
ನಡುಗುತ್ತಿರುವ ಕೃಶವಾದ
ಸೊಂಟಗಳಿಗೆ ಮತ್ತಷ್ಟು
ನಡುಕವನ್ನುಂಟುಮಾಡಿಕೊಂ
ಡು, ಕುಣಿಯುತ್ತಿರುವ
ದೀರ್ಘವಾದ ಹುಬ್ಬುಗಳಿಗೆ
ಮತ್ತಷ್ಟು ಕುಣಿತವನ್ನು ಮಾಡಿ,
ಸೊಗಯಿಸುವ ಬಿಳಿಯ
ಬಾಯಿಗಳಿಗೆ ಹೊಸದಾದ
ಅದಿರಾಟವನ್ನು,

ಹೊಳೆಯುತ್ತಿರುವ

ದೀರ್ಘವಾದ

ಹೂವಿನಂತಿರುವ ಕಣ್ಣುಗಳಿಗೆ

ಕೆಂಪಾಗಿ ಕದಡಿದ

ನೋಟವನ್ನುಕೊಟ್ಟು,

ಈಗಾಗಲೆ ಸುಮ್ಮನೆ

ತೊದಳಿನಿಂದ

ನುಡಿಯುತ್ತಿರುವ

ತೊದಳುಮಾತಿಗೆ ಮತ್ತಷ್ಟು

ತೊದಳುವಿಕೆಯನ್ನು

ಏಕಕಾಲದಲ್ಲಿ

ಕೂಡಿಕೊಳ್ಳುವಂತೆ
ಪೂರ್ಣವಾಗಿ
ಅಲಂಕರಿಸಿಕೊಂಡು
ನಡೆಯುತ್ತಿರಲು ಆರು
ಋತುಗಳೂ ತಮ್ಮ ತಮ್ಮ
ಸ್ವರೂಪಗಳಿಂದ ಆತನಿದ್ದ
ಸ್ಥಳಕ್ಕೆ ಹೋಗಿ ತೋರಿಕೊಳ್ಳಿ
ಎಂದಾಗ-
(ತೋರ್ಪಡಿಸಿಕೊಂಡವು)

ಕಂ|| ಆಱುಂ ಋತುಗಳ

ಪೂಗಳು

ಮಾಱುಂ ಋತುಗಳ ಪೊದಳ್ದ ಚೆಲ್ವುಗಳುಮಣಂ| ಬೇಱಿಲ್ಲದೊಂದು ಸೂೞು ಮೆ ಯ್ದೋಱಿದುವೊಡನೊಡನೆ ನೆಲದೊಳಂ ಗಗನದೊಳಂ|| ೮೨ ||

ಪದ್ಯ-೮೨:ಪದವಿಭಾಗ-ಅರ್ಥ:ಆಱುಂ ಋತುಗಳ ಪೂಗಳುಂ ಆಱುಂ ಋತುಗಳ ಪೊದಳ್ದ ಚೆಲ್ವುಗಳುಂ ಅಣಂ ಬೇಱಿಲ್ಲದೆ (ಸ್ವಲ್ಪವೂ ಬೇರೆ

ಬೇರೆಯಾಗಿರದೆ) ಒಂದು ಸೂಱು (ಒಂದೇ ಬಾರಿಗೆ) ಮೆಯ್ದೋಱಿದುವು (ಕಾಣಿಸಿಕೊಂಡವು) ಒಡನೊಡನೆ ನೆಲದೊಳಂ ಗಗನದೊಳಂ(ಭೂಮಿಯಲ್ಲಿ ಯೂ ಆಕಾಶದಲ್ಲಿಯೂ)

ಪದ್ಯ-೮೨:ಅರ್ಥ: ಅರ್ಜುನ ತಪಸ್ಸು ಮಾಡುವಲ್ಲಿ ; ಆರು ಋತುಗಳ ಹೂವುಗಳೂ ಆರು ಋತುಗಳಲ್ಲಿ ವ್ಯಾಪಿಸಿರುವ

ಸೌಂದರ್ಯವೂ ಸ್ವಲ್ಪವೂ
ಬೇರೆ ಬೇರೆಯಾಗಿರದೆ ಒಟ್ಟಿಗೇ
ಭೂಮಿಯಲ್ಲಿಯೂ
ಆಕಾಶದಲ್ಲಿಯೂ ಒಂದೇ
ಬಾರಿಗೆ ಕಾಣಿಸಿಕೊಂಡವು

ಮೆಯ್ದೋಱಿದೊಡವರೊಡನೆ
ಯೆ
ಮೆಯ್ದೋಱಲ್
ಬಗೆದನಂಗಜಂಗಮಲತೆಗಳ್|
ಮೆಯ್ದೋಱುವಂತೆ ಮೆಲ್ಲನೆ

ಮೆಯ್ದೋಱಿದರಮರಗಣಿಕೆಯರ್ ವಂದಾಗಳ್|| ೮೩||

ಪದ್ಯ-೮೩:ಪದವಿಭಾಗ-ಅರ್ಥ:ಮೆಯ್ದೋಱಿದೊಡೆ ಅವರೊಡನೆಯೆ ಮೆಯ್ದೋಱಿಲ್ ಬಗೆದ ಅನಂಗ ಜಂಗಮಲತೆಗಳ್ (ಆರು ಋತುಗಳೊಡನೆಯೇ ತಾವೂ ಕಾಣಿಸಿಕೊಳ್ಳಬೇಕೆಂದು ಭಾವಿಸಿ ಮನ್ಮಥನ ಚಲಿಸುವ ಲತೆಗಳು) ಮೆಯ್ದೋಱುವಂತೆ

(ಕಾಣಿಸಿಕೊಳ್ಳುವ ಹಾಗೆ)
ಮೆಲ್ಲನೆ ಮೆಯ್ದೋಱಿದರ್
ಅಮರಗಣಿಕೆಯರ್
(ಅಪ್ಸರಸ್ತ್ರೀಯರು)ವಂದು
ಆಗಳ್ (ಕಾಣಿಸಿಕೊಳ್ಳುವ
ಹಾಗೆ ಅಪ್ಸರಸ್ತ್ರೀಯರೂ
ಬಂದು ನಿಧಾನವಾಗಿ
ಕಾಣಿಸಿಕೊಂಡರು.)
ಪದ್ಯ-೮೩:ಅರ್ಥ:ಆರು
ಋತುಗಳೊಡನೆಯೇ ತಾವೂ
ಕಾಣಿಸಿಕೊಳ್ಳಬೇಕೆಂದು

ಭಾವಿಸಿ ಮನ್ಮಥನ ಚಲಿಸುವ ಲತೆಗಳು ಕಾಣಿಸಿಕೊಳ್ಳುವ ಹಾಗೆ ಅಪ್ಸರಸ್ತ್ರೀಯರೂ ಬಂದು ನಿಧಾನವಾಗಿ ಕಾಣಿಸಿಕೊಂಡರು.

ಸಮದ ಗಜಗಮನೆಯರ್
ಮುಗಿ
ಲ ಮೇಲೆ
ನಡೆಪಾಡುವಾಕೆಗಳ್ ತಮಗೆ
ಧರಾ|
ಗಮನಂ ಪೊಸತಪ್ಪುದಱಿಂ

ದಮರ್ದಿರೆ ನಡೆ ನಡೆದು ನಡೆಯಲಾಱದೆ ಸುೞಿದರ್॥೮೪ ॥

ಪದ್ಯ-೮೪:ಪದವಿಭಾಗ-

ಅರ್ಥ:ಸ-

ಮದಗಜಗಮನೆಯರ್ ಮುಗಿಲ ಮೇಲೆ ನಡೆಪಾಡುವಾಕೆಗಳ್ (ಮೋಡಗಳ ಮೇಲೆ ನಡೆದಾಡುವ ಸ್ವಭಾವವುಳ್ಳ ಆ ಮದಗಜಮನೆಯರು) ತಮಗೆ

ಧರಾಗಮನಂ
ಪೊಸತಪ್ಪುದಱಿಂ (ನೆಲದ
ಮೇಲೆ ನಡೆಯುವುದು ತಮಗೆ
ಹೊಸದಾದುದರಿಂದ) ಅದು
ಅಮರ್ದಿರೆ (ನೆಲಕ್ಕೆ ಪಾದ
ಅಮರದಿರಲು) ನಡೆ ನಡೆದು
ನಡೆಯಲಾಱದೆ ಸುೞಿದರ್
(ನಡೆದೂ ನಡೆದೂ ನೆಲಕ್ಕೆ
ಪಾದ ತಾಗದಿದ್ದರೂ
ಸುತ್ತಾಡಿದರು)

ಪದ್ಯ-೮೪:ಅರ್ಥ:

ಮೋಡಗಳ ಮೇಲೆ ನಡೆದಾಡುವ ಸ್ವಭಾವವುಳ್ಳ ಆ ಮದಗಜಮನೆಯರು ನೆಲದ ಮೇಲೆ ನಡೆಯುವುದು ತಮಗೆ ಹೊಸದಾದುದರಿಂದ ನಡೆದೂ ನಡೆದೂ ನೆಲಕ್ಕೆ ಪಾದ ತಾಗದಿದ್ದರೂ ಸುತ್ತಾಡಿದರು

ಕಂ|| ಮುಡಿಯ ಕುಚಯುಗದ ಜಘನದ

ಕಡುವಿಣ್ಪಿಂ ಮಣಲೊಳಟ್ದು
ಬರೆ ಮೆಲ್ಲಡಿಗಳ್|
ನಡೆಯದ ಬೇವಸಮಂ ತಾಂ
ನಡೆಯಿಸುವಂತವರ್ಗಳೊಯ್ಯ
ನೊಯ್ಯನೆ ನಡೆದರ್|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ:ಮುಡಿಯ ಕುಚಯುಗದ ಜಘನದ ಕಡುವಿಣ್ಪಿಂ (ತುರುಬಿನ, ಮೊಲೆಗಳ,ಜಘನಗಳ, ಅತಿಯಾದ ಭಾರದಿಂದ)

ಮಣಲೊಳಚ್ಚು ಬರೆ ಮೆಲ್ಲಡಿಗಳ್ (ಮೃದು ಪಾದಗಳು ಮರಳಿನಲ್ಲಿ ಹೂತುಹೋಗಲು) ನಡೆಯದ ಬೇವಸಮುಂ ತಾಂ ನಡೆಯಿಸುವಂತೆ ಅವರ್ಗಳು ಒಯ್ಯನೊಯ್ಯನೆ ನಡೆದರ್ (ತಮ್ಮ ಆಯಾಸವನ್ನು ಪ್ರದರ್ಶಿಸುವಂತೆ ಮೆಲ್ಲಮೆಲ್ಲಗೆ ನಡೆದರು.)

ಪದ್ಯ-೮೫:ಅರ್ಥ: .
ತುರುಬಿನ,
ಮೊಲೆಗಳ,ಜಘನಗಳ,
ಅತಿಯಾದ ಭಾರದಿಂದ ಅವರ
ಮೃದುವಾದ ಪಾದಗಳು
ಮರಳಿನಲ್ಲಿ ಹೂತುಹೋಗಲು
ನಡೆಯಲು ಅಭ್ಯಾಸವಿಲ್ಲದ
ತಮ್ಮ ಆಯಾಸವನ್ನು
ಪ್ರದರ್ಶಿಸುವಂತೆ ಮೆಲ್ಲಮೆಲ್ಲಗೆ
ನಡೆದರು.

ಮ|| ಮುಡಿಯಂ
ಸೋಗೆಯೆಗೆತ್ತು ಸೋಗೆ
ನಡೆಯಂ ಪೆಣ್ಣಂಚೆಗೆತ್ತಂಚೆ ಮೆ
ಲ್ನುಡಿಯಂ ಕೋಗಿಲೆಗೆತ್ತು
ಕೋಗಿಲೆ ಘನೋತ್ತುಂಗ
ಸ್ತನದ್ವಂದ್ವದಿ|
ಟ್ಟೆಡೆಯಂ ಕೋಕಮೆಗೆತ್ತು
ಕೋಕಮಳಕಾನೀಕಂಗಳಂ
ಸೋರ್ಕಿದಾ
ಅಡಿಗೆತ್ತಾಅಡಿ ಸುತ್ತುತುಂ ಬರೆ
ಬನಂ ಬರ್ಪಂತೆ

ಬಂದಾಕೆಗಳ್|| ೮೬ ||

ಪದ್ಯ-೮೬:ಪದವಿಭಾಗ-ಅರ್ಥ:ಮುಡಿಯಂ ಸೋಗೆಯೆಗೆತ್ತು (ಕೂದಲನ್ನು ನೋಡಿ) ಸೋಗೆ (ಗಂಡು) ನಡೆಯಂ ಪೆಣ್ಣಂಚೆಗೆತ್ತು (ಹೆಣ್ಣು ಹಂಸವೆಂದು ಭಾವಿಸಿ) ಅಂಚೆ ಮೆಲ್ನುಡಿಯಂ ಕೋಗಿಲೆಗೆತ್ತು (ಗಂಡುಹಂಸವು ಮೃದುವಾದ ಮಾತನ್ನು ಹೆಣ್ಣುಕೋಗಿಲೆಯೆಂದು

ಭಾವಿಸಿ) ಕೋಗಿಲೆ (ಯು)
ಘನೋತ್ತುಂಗ
ಸ್ತನದ್ವಂದ್ವದಿಟ್ಟೆಡೆಯಂ
ಕೋಕಮೆಗೆತ್ತು
(ಗಂಡುಕೋಗಿಲೆಯೂ
ದಪ್ಪವೂ ಎತ್ತರವೂ ಆದ
ಮೊಲೆಗಳ ಇಕ್ಕಟ್ಟಿನ /
ಒತ್ತಡವನ್ನು ಕಂಡು
ಚಕ್ರವಾಕದ ಜೋಡಿಯೆಂದು
ಭ್ರಮಿಸಿ) ಕೋಕಂ
ಅಳಕಾನೀಕಂಗಳಂ ಸೊರ್ಕಿದ

ಆಱಡಿಗೆ ಎತ್ತಾಱಡಿ ಸುತ್ತುತುಂ
ಬರೆ (ಮುಂಗುರುಗಳ ಸಾಲನ್ನು
ಸೊಕ್ಕಿದ
ಹೆಣ್ಣುದುಂಬಿಯೆಂದೇ ಭ್ರಮಿಸಿ
ಗಂಡುದುಂಬಿಗಳೂ ಆ
ಅಪ್ಸರೆಯನ್ನು ಸುತ್ತಿಕೊಂಡು
ಬರುತ್ತಿರಲು) ಬನಂ ಬರ್ಪಂತೆ
ಬಂದ ಆಕೆಗಳ್ (ಅಪ್ಸರೆಯರು
ವನವೇ ಬರುವಂತೆ ಬಂದರು.
)

ಪದ್ಯ-೮೬:ಅರ್ಥ:
ಉದ್ದನೆಯ ತಲೆಕೂದಲನ್ನು
ನೊಡಿ ನವಿಲೆಂದುಭಾವಿಸಿ
ಗಂಡುನವಿಲೂ, ನಡಗೆಯನ್ನು
ಹೆಣ್ಣು ಹಂಸವೆಂದು ಭ್ರಮಿಸಿ,
ಗಂಡುಹಂಸವು ಮೃದುವಾದ
ಮಾತನ್ನು
ಹೆಣ್ಣುಕೋಗಿಲೆಯೆಂದು
ಭಾವಿಸಿ ಗಂಡುಕೋಗಿಲೆಯೂ
ದಪ್ಪವೂ ಎತ್ತರವೂ ಆದ
ಮೊಲೆಗಳ ಒತ್ತಡವನ್ನು ಕಂಡು

ಚಕ್ರವಾಕದ ಜೋಡಿಯೆಂದು
ಭ್ರಮಿಸಿ ಚಕ್ರವಾಕವ್ರೂ,
ಮುಂಗುರುಗಳ ಸಾಲನ್ನು
ಸೊಕ್ಕಿದ
ಹೆಣ್ಣುದುಂಬಿಯೆಂದೇ ಭ್ರಮಿಸಿ
ಗಂಡುದುಂಬಿಗಳೂ ಆ
ಅಪ್ಸರೆಯನ್ನು ಸುತ್ತಿಕೊಂಡು
ಬರುತ್ತಿರಲು, ಅಪ್ಸರೆಯರು
ವನವೇ ಬರುವಂತೆ ಬಂದರು.

ವ|| ಅಂತು

ನರೇಂದ್ರತಾಪಸನಂ

ಸೋಲಿಸಲೆಂದು ವಂದಾಕೆಗಳ್ ತಾಮೆ ಸೋಲ್ತು ಮುಂದು ಮುಂದನೆ ಸುೞಿಯೆ-

ವಚನ:ಅರ್ಥ:ಹಾಗೆ ರಾಜತಪಸ್ವಿಯನ್ನು ಸೋಲಿಸುವುದಕ್ಕಾಗಿ ಬಂದ ಅವರು ತಾವೇ ಸೋತು ಅವನ ಮುಂದು ಮುಂದಕ್ಕೆ ಸುಳಿಯಲು-(ಸುಳಿದಾಡಿದರು).

ಊರ್ವಸಿಯ ನೃತ್ಯ

ಚಂ|| ಮಗಮಗಿಸುತ್ತುಮಿರ್ಪ

ಮೃಗನಾಭಿಯ ನೀರ್ದಳಿವಲ್ಲಿ

ಕಂಪನಾ

ಳ್ದುಗುಟ್ಟಿಲಸು(ಸುX

ರು)ತ್ತುಮಿರ್ಪ ಪದದೊಳ್

ಪದವಟ್ಟು ಪೊದಳ್ದ ತೋರ

ಮ|

ಲ್ಲಿಗೆಯ ತುಱುಂಬು ರಾಹು

ತವೆ ನುಂಗಿದ

ಚಂದ್ರನನೊಯ್ಯನೊಯ್ಯನಂ

ದುಗುಟ್ಟಿವೊಲೊಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್|| ೮೭ ||

ಪದ್ಯ-೮೭:ಪದವಿಭಾಗ-ಅರ್ಥ:ಮಗಮಗಿಸುತ್ತುಂ ಇರ್ಪ ಮೃಗನಾಭಿಯ (ಕಸ್ತೂರಿ) ನೀರ್ ತಳಿವಲ್ಲಿ (ಗಮಗಮಿಸುವ ಸುವಾಸನೆಯ ಕಸ್ತೂರಿಯ ನೀರನ್ನು ಚಿಮುಕಿಸುವುದರಿಂದ)

ಕಂಪನಾಳ್ದು ಉಗುಳ್ದು
ಅಲುತ್ತುಮಿರ್ಪ ಪದದೊಳ್
(ವಾಸನಾಯುಕ್ತವಾಗಿ
ಸುಟಗೊಂಡು ಅರಳುತ್ತಿರುವ
ಸಮಯದಲ್ಲಿ) ಪದವಟ್ಟು
ಪೊದಳ್ದು ತೋರ ಮಲ್ಲಿಗೆಯ
ತುಱುಂಬು ರಾಹು ತವೆ
(ಹೂವಿನಲ್ಲಿ ಹದವರಿತು
ಸೇರಿದ ದಪ್ಪಮಲ್ಲಿಗೆಯ
ದಂಡೆಯು ತುರುಬಿನ ಮೇಲೆ
ಗ್ರಹಣಕಾಲದಲ್ಲಿ ರಾಹುವು)

ನುಂಗಿದ ಚಂದ್ರನನು
ಒಯ್ಯ್ಯನೊಯ್ಯ್ಯನೆ ಅಂದು
ಉಗುಟ್ವಿವೊಲ್ ಒಪ್ಪಿರಲ್
(ನುಂಗಿದ ಚಂದ್ರನನ್ನು
ನಿಧಾನವಾಗಿ ಹೊರಗೆ
ಉಗುಳುವ ಹಾಗೆ
ಸೊಗಸಾಗಿರಲು) ಬಲದೊಳು
ಉರ್ವಸಿ ದೇಸಿಗೆ
ದೇಸಿಯಾಡಿದಳ್ (ದೇಶೀಯ
ನೃತ್ಯಕ್ಕಿಂತಲೂ ಉತ್ತಮವಾದ
ನೃತ್ಯವನ್ನಾಡಿದಳು).

ಪದ್ಯ-೮೭:ಅರ್ಥ:
ಗಮಗಮಿಸುವ ಸುವಾಸನೆಯ
ಕಸ್ತೂರಿಯ ನೀರನ್ನು
ಚಿಮುಕಿಸುವುದರಿಂದ
ವಾಸನಾಯುಕ್ತವಾಗಿ
ಅರಳುತ್ತಿರುವ ಸಮಯದಲ್ಲಿ
ಹೂವಿನಲ್ಲಿ ಹದವರಿತು ಸೇರಿ
ದಪ್ಪಮಲ್ಲಿಗೆಯ ದಂಡೆಯು
ತುರುಬಿನ ಮೇಲೆ
ಗ್ರಹಣಕಾಲದಲ್ಲಿ ರಾಹುವು
ನುಂಗಿದ ಚಂದ್ರನನ್ನು

ನಿಧಾನವಾಗಿ ಹೊರಗೆ
ಉಗುಳುವ ಹಾಗೆ
ಸೊಗಸಾಗಿರಲು
ಬಲಗಡೆಯಲ್ಲಿ ಊರ್ವಶಿಯ
ದೇಶೀಯ ನೃತ್ಯಕ್ಕಿಂತಲೂ
ಉತ್ತಮವಾದ
ನೃತ್ಯವನ್ನಾಡಿದಳು.
(**ತಾತ್ಪರ್ಯ**: ಊರ್ವಸಿಯು
ನೃತ್ಯ ಮಾಡುವಾಗ, ಅವಳ
ಗಂಟುಹಾಕಿದ ದೊಡ್ಡ
ತುರುಬು ಮತ್ತು ಮತ್ತು ಆ

ತುರುಬಿನಿಮದ ಜೊಲುಬಿಟ್ಟ
ಕೂದಲು ಒಲಾಡುತ್ತಿತ್ತು.
ಅವಳ ಮುಖವು
ಪೂರ್ಣಚಂದ್ರನಂತೆಯೂ,
ಮತ್ತು ಉದ್ದ ಬಾಲಬಿಟ್ಟು
ಕಟ್ಟಿದ ಅವಳ ತುರುಬು,
ಚಂದ್ರಗ್ರಹಣ ಕಾಲದಲ್ಲಿ,
ಬಾಲವುಳ್ಳ ರಾಹು ತಾನು
ನುಂಗಿದ ಚಂದ್ರನನನ್ನು
ಉಗುಳುವಂತೆ ಕಾಣುತ್ತಿತ್ತು.

ರಾಹುವು ಉದ್ದ ಬಾಲವುಳ್ಳ
ಹಾವಿನ ರೂಪ ಎಂಬ
ನಂಬುಗೆ ಇದೆ.

ಮೇನಕೆಯ ಗಾನ

ಚಂ|| ಪದ
ಕೊರಲಿಂಪನಪ್ಪುಕೆಯೆ
ಕೊಂಕು ನಯಂ ಗಮಕಂಗಳಿಂ
ಪೊದ
ಕೋದಳೆಟೆದಿಕ್ಕಿದಂತೆ
ಸುತಿಯೊಳ್ ಸಮವಾಗಿರೆ

ಜಾಣನಾಂತು ಮೆ|

ಚ್ಚಿದ

ತೆಱದಾಸೆವಟ್ಟಲಸದೆತ್ತಿದವೋ

ಲ್ ದೊರೆವೆತ್ತು ದೂಱದಾ

ಱದ ದನಿ ಮುಟ್ಟೆ ಮೇನಕೆ

ಸರಸ್ವತಿ ಬಾಯ್ದೆರೆದಂತೆ

ಪಾಡಿದಳ್|| ೮೮ ||

ಪದ್ಯ-೮೮:ಪದವಿಭಾಗ-

ಅರ್ಥ:ಪದಕೊರಲ್

(ಹದವಾದ ಶಾರೀರ) ಇಂಪನು

ಅಪ್ಪುಕೆಯೆ (ಹೊಂದಿದೆ)

ಕೊಂಕು ನಯಂ ಗಮಕಂಗಳಿಂ
ಪೊದಕೋ್ದಳೆಟ್ಟಿದಿಕ್ಕಿದಂತೆ
(ಪೊದರ್ ಕೊದಳ್ ಎಟ್ಟಿದ
ಇಕ್ಕಿದಂತೆ- ಸ್ಫುರಣೆಗೊಂಡ
ಮಧುರವಾದ ಮಾತು
ತಂತಿಎಳೆದ ಹಾಗೆ)
ಸುತಿಯೊಳ್ (ಶ್ರುತಿ)
ಸಮವಾಗಿರೆ ಜಾಣನಾಂತು,
ಮೆಚ್ಚಿದ ತೆಱದಾಸೆವಟ್ಟ (ತಾನೆ
ಮೆಚ್ಚಿ ಇಷ್ಟಪಟ್ಟ ರಾಗವನ್ನು)
ಅಲಸದೆ ಎತ್ತಿದವೋಲ್

ದೊರೆವೆತ್ತು ದೂಱಿದ ಆಱಿದ (ದೂರಿದ ಆರಿದ-ದೂರು ಆರಿದ ಇಲ್ಲದ- ದೋಷವಿಲ್ಲದ?) ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆರೆದಂತೆ (ಬಾಯಿ ತೆರೆದಂತೆ) ಪಾಡಿದಳ್

ಪದ್ಯ-೮೮:ಅರ್ಥ:ಮೇನಕೆಯ ಗಾನ: ಅವಳದು ಹದವಾದ ಶಾರೀರ(ದನಿ), ಇಂಪಿನಿಂದ ಕೂಡಿಕೊಂಡಿರಲು ಕೊಂಕು

(ಪಲುಕು) ನಯ
(ಮಾಧುರ್ಯ) ಗಮಕಗಳಿಂದ
ಸ್ಫುರಣೆಗೊಂಡ ಮಧುರವಾದ
ಮಾತು ತಂತಿಎಳೆದ ಹಾಗೆ
ಶ್ರುತಿಯು ಸೇರಿರಲು,
ಜಾಣತನದಿಂದ ಕೂಡಿ ತಾನೆ
ಮೆಚ್ಚಿ ಇಷ್ಟಪಟ್ಟ ರಾಗವನ್ನು
ಎತ್ತಿಕೊಂಡು ಹಾಗೆ ಸ್ವಲ್ಪವೂ
ಆಯಾಸ ಪಡದೆ
ಮಧ್ಯಮಸ್ವರದಿಂದ
ಹೃದಯಸ್ಪರ್ಶಿಯಾಗಿರಲು

ಸರಸ್ವತಿಯೇ ಬಾಯಿತೆರೆದ
ಹಾಗೆ ಮೇನಕೆಯು
ಹಾಡಿದಳು.

ಚಂ||ನಡು ನಡುಗಲ್ಕೆ ಪುರ್ವು
ಪೊಡರಲ್ಕೆ ಕುರುಳ್ ಮಿಳಿರಲ್ಕೆ
ಬಾಯ್ ಬೆಡಂ
ಗಿಡಿದೆಳಸಲ್ ತೆರಳ್ತು
ತುಡುಕಲ್ಕೆ ತಗುಳ್ದುದು
ಕೆಂದನೀಕೆ ಕ|
ನ್ನಡಿಪಳೊ ಪಾಡಿದೀ
ನೆವದಿನೆಂಬಿನೆಗಂ ದನಿಯಿಂಪು

ಬೀಣೆಯಂ ಮಿಡಿದವೊಲಾಗೆ ಗಾನದೊಳೊಡಂಬಡೆ ಮೇನಕೆ ಮುಂದೆ ಪಾಡಿದಳ್|| ೮೯ ||

ಪದ್ಯ-೮೯:ಪದವಿಭಾಗ-ಅರ್ಥ:ನಡು ನಡುಗಲ್ಕೆ ಪುರ್ವು ಪೊಡರಲ್ಕೆ ಕುರುಳ್ ಮಿಳಿರಲ್ಕೆ (ಅಲುಗಲು) ಬಾಯ್ ಬೆಡಂಗೆ ಇಡಿದೆಳಸಲ್ ತೆರಳ್ತು ತುಡುಕಲ್ಕೆ ತಗುಳ್ದುದು

(ಅನುಸರಿಸಿತು) ಕೆಂದಂ
(ರತಿಪ್ರೇಮವನ್ನು) ಈಕೆ
ಕನ್ನಡಿಪಳೊ
(ಪ್ರತಿಬಿಂಬಿಸುತ್ತಿದ್ದಾಳೆಯೋ)
ಪಾಡಿದ ಈ ನೆವದಿಂ
ಎಂಬಿನೆಗಂ (ಎನ್ನುವಂತಿರಲು)
ದನಿಯಿಂಪು ಬೀಣೆಯಂ
ಮಿಡಿದವೊಲಾಗೆ ಗಾನದೊಳು
ಒಡಂಬಡೆ (ವೀಣೆಯನ್ನು
ಮೀಟಿದ ಹಾಗೆ

ಹೊಂದಿಕೊಂಡಿರಲು) ಮೇನಕೆ ಮುಂದೆ ಪಾಡಿದಳ್

ಪದ್ಯ-೮೯:ಅರ್ಥ: ಸೊಂಟವು ನಡುಗುತ್ತಿರಲು, ಹುಬ್ಬುಗಳು ಅದುರುತ್ತಿರಲು, ಮುಂಗುರುಳು ಅಲುಗಾಡುತ್ತಿರಲು, ಬಾಯಿ ಬೆಡಗಿನಿಂದ ಕೂಡಿ ತವಕಪಟ್ಟು ಹಿಡಿಯಲು ಅನುಸರಿಸಿತು (ಎನ್ನುವಂತಿತ್ತು). ಹಾಡಿದ ಈ

ನೆಪದಿಂದ ಇವಳು
ರತಿಪ್ರೇಮವನ್ನು
ಪ್ರತಿಬಿಂಬಿಸುತ್ತಿದ್ದಾಳೆಯೋ
ಎನ್ನುವ ಹಾಗೆ ಧ್ವನಿಯ ಇಂಪು
ವೀಣೆಯನ್ನು ಮೀಟಿದ ಹಾಗೆ
ಹೊಂದಿಕೊಂಡಿರಲು
ಮೇನಕೆಯು ಅರ್ಜುನನ
ಮುಂದೆ ಬಂದು ಹಾಡಿದಳು.

ಒದವಿದ ಕೆತ್ತ ಕಂಕಣದ ಪುರ್ವಿನ ಜರ್ವು ಲಯಕ್ಕೆ ಲಕ್ಕಲೆ

ಕ್ಕದ ಗತಿ
ನಾಟಕಾಭಿನಯಮಾಯ್ತೆನೆ
ಗೇಯದೊಳೀಕೆ ಸೊರ್ಕನಿ|
ಕ್ಕಿದಳೆನೆ ಕಳ್ಗೆ
ಚಕ್ಕಣಮೆನಿಪ್ಪುದು
ಸಾಗೆನಿಸಲ್ಕೆ ಸಾಲ್ವ ಸ
ಗ್ಗದ ಪೊಸ
ದೇಸಿಯೋಳಿಗಳನೊರ್ವಳೊ
ಱಲ್ದು ನೆಱಲ್ದು ಪಾಡಿದಳ್||
೯೦||

ಪದ್ಯ-೯೦:ಪದವಿಭಾಗ-ಅರ್ಥ:ಒದವಿದ ಕೆತ್ತ ಕಂಕಣದ ಪುರ್ವಿನ ಜರ್ವು(ಜರ್ಕು-ಅಲುಗಾಟವೂ) ಲಯಕ್ಕೆ ಲಕ್ಕ ಲೆಕ್ಕದ ಗತಿ ನಾಟಕಾಭಿನಯಮಾಯ್ತೆನೆ ಗೇಯದೊಳಯ ಈಕೆ ಸೊರ್ಕನು ಇಕ್ಕಿದಳು ಎನೆ (ಹಾಡುಗಾರಿಕೆಯಲ್ಲಿ ಈಕೆ ಮಾದಕತೆನ್ನುಂಟುಮಾಡಿದಳು ಎನ್ನುವ ಹಾಗೆ) ಕಳ್ಗೆ (ಕಳ್ಳು

-ಮದ್ಯಕ್ಕೆ) ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ (ಚಾಕಣವನ್ನು ಬೆರಸಿದ ಹಾಗಿದೆ) ಸಾಲ್ವ ಸಗ್ಗದ ಪೊಸ ದೇಸಿಯ ಓಳಿಗಳನು ಒರ್ವಳ ಒಱಲ್ದು ನೆಱಲ್ದು ಪಾಡಿದಳ್ (ದೇಸಿರಾಗಗಳ ಸಮೂಹವನ್ನು ಒಬ್ಬಳು ಅಪ್ಸರಸ್ತ್ರೀ ಪ್ರೀತಿಯಿಂದ ನೆರವಿಯಲ್ಲಿ ಹಾಡಿದಳು)|

ಪದ್ಯ-೯೦:ಅರ್ಥ: ಅವಳು ಧರಿಸಿದ ಬಳೆಗಳ

ಚಲನೆಯಿಂದ ಉಂಟಾದ
ಸದ್ದೂ ಹುಬ್ಬಿನ
ಅಲುಗಾಟವೂ ತಾಳದ
ಲಯಕ್ಕೆ ಅನುಗುಣವಾಗಿ
ಲಕ್ಷಸಂಖ್ಯೆಯ ಗತಿಯನ್ನುಳ್ಳ
ನಾಟಕಾಭಿನಯವಾಯಿತು
ಎನ್ನುವ ಹಾಗೆ
ಹಾಡುಗಾರಿಕೆಯಲ್ಲಿ ಈಕೆ
ಮಾದಕತೆನ್ನುಂಟುಮಾಡಿದಳು
ಎನ್ನುಂತೆ, ಇವಳ ಗೀತವು
ಮದ್ಯಕ್ಕೆ ಚಾಕಣವನ್ನು

ಬೆರಸಿದ ಹಾಗಿದೆ.
ಹಾಗೆನಿಸಿಕೊಳ್ಳಲೂ ಸಾಕು
ಎನ್ನಿಸಿಕೊಳ್ಳುವ ಸ್ವರ್ಗದ
ಹೊಸ ದೇಸಿರಾಗಗಳ
ಸಮೂಹವನ್ನು ಒಬ್ಬಳು
ಅಪ್ಸರಸ್ತ್ರೀ ಪ್ರೀತಿಯಿಂದ
ನೆರವಿಯಲ್ಲಿ ಹಾಡಿದಳು.

ತಿಲೋತ್ತಮೆಯ ನೃತ್ಯ

ಉ|| ಆಡದ ಮೆಯ್ಗಳಿಲ್ಲ
ನಿಡುಮೆಯ್ಗಳುಮಾಡಿದುವಂತೆ

ಮೆಟ್ಟುವಳ್
ನೋಡಿದರೆಲ್ಲರಂ ಪಿಡಿದು
ಮೆಟ್ಟಿದಳಿಟ್ಟಳಮಾಯ್ತು ದೇಸಿ
ಕೆ|
ಯ್ಯೊಡಿದುದಿಲ್ಲ ಮಾರ್ಗಮೆನೆ
ವಿಸ್ಮಯಮಾಗಿರೆ ತನ್ನ ಮುಂದೆ
ಬಂ
ದಾಡಿದಳಾ
ತಿಳೋತ್ತಮೆಯನೊಲ್ದನುಮಿಲ್ಲ
ನರೇಂದ್ರತಾಪಸಂ|| ೯೧||

ಪದ್ಯ-೯೧:ಪದವಿಭಾಗ-ಅರ್ಥ:ಆಡದ ಮೆಯ್ಗಳಿಲ್ಲ ನಿಡುಮೆಯ್ಗಳುಂ ಆಡಿದುವು (ಎತ್ತರದ ದೇಹವಿಡೀ ಚಲಿಸಿತು) ಅಂತೆ ಮೆಟ್ಟುವಳ್ ನೋಡಿದರ್ ಎಲ್ಲರಂ ಪಿಡಿದು ಮೆಟ್ಟಿದಳ್ ಇಟ್ಟಳಮಾಯ್ತು (ರಮಣೀಯವಾಯಿತು) ದೇಸಿ ಕೆಯ್ಗೂಡಿದುದಿಲ್ಲಂ ಆರ್ಗಂ ಎನೆ (ದೇಶೀವಿದ್ಯೆ ಯಾರಿಗೂ ವಶವಾಗಲಿಲ್ಲ ಎನ್ನುವಂತೆ)

ವಿಸ್ಮಯಮಾಗಿರೆ ತನ್ನ ಮುಂದೆ
ಬಂದು ಆಡಿದಳು
(ನಾಟ್ಯವಾಡಿದಳು)
(ಆಶ್ಚರ್ಯವಾಗುವ ಹಾಗೆ ತನ್ನ
ಮುಂದೆ ನಾಟ್ಯವಾಡಿದ) ಆ
ತಿಳೋತ್ತಮೆಯನು
ಒಲ್ದನುಮಿಲ್ಲ
ನರೇಂದ್ರತಾಪಸಂ
(ರಾಜತಾಪಸನಾದ
ಅರ್ಜುನನು ಮೋಹಿಸಲಿಲ್ಲ)

ಪದ್ಯ-೯೧:ಅರ್ಥ: ದೇಹದ ಯಾವ ಭಾಗವೂ ಚಲಿಸದೆ ಇರಲಿಲ್ಲ; ಎತ್ತರದ ದೇಹವಿಡೀ ಚಲಿಸಿತು. ಅವಳು ಪ್ರೇಕ್ಷಕರೆಲ್ಲರನ್ನು ಹಿಡಿದು ಮೆಟ್ಟಿದಳು; ಮಾರ್ಗಮಿಶ್ರವಿಲ್ಲದ ಇವಳ ದೇಶೀಯತೆ ಬಹು ರಮಣೀಯವಾಯಿತು; ದೇಶೀವಿದ್ಯೆ ಯಾರಿಗೂ ವಶವಾಗಲಿಲ್ಲ ಎನ್ನುವಂತೆ

ಆಶ್ಚರ್ಯವಾಗುವ ಹಾಗೆ ತನ್ನ
ಮುಂದೆ ನಾಟ್ಯವಾಡಿದ
ತಿಲೋತ್ತಮೆಯನ್ನೂ
ರಾಜತಾಪಸನಾದ
ಅರ್ಜುನನು ಮೋಹಿಸಲಿಲ್ಲ

ವ||
ಅಂತಾಕೆಗಳೆಡೆಯಾಡಿಯುಂ
ಮನಂಗೊಳೆ ಪಾಡಿಯುಂ
ಮನುಜಮಾಂಧಾತನಂ
ಸೋಲಿಸಲಾಱದೆ
ಸಹಜಮನೋಜನ

ರೂಪಿಂಗಂ

ಸುರತಮಕರಧ್ವಜನ

ಸೌಂದರ್ಯಕ್ಕಂ

ಗಂಧೇಭವಿದ್ಯಾಧರನ

ಗಂಡಗಾಡಿಗಂ ತಾಮೆ

ಸೋಲ್ತೆಯ್ದೆ ವಂದು-

ವಚನ:ಪದವಿಭಾಗ-

ಅರ್ಥ:ಅಂತು ಆಕೆಗಳು

(ಅಪ್ಸರಸ್ತ್ರೀಯರು)

ಎಡೆಯಾಡಿಯುಂ

ಮನಂಗೊಳೆ ಪಾಡಿಯುಂ

(ಸಮೀಪದಲ್ಲಿಯೇ
ಕುಣಿದರೂ,
ಮನೋಹರವಾಗಿರುವ ಹಾಗೆ
ಹಾಡಿಯೂ)
ಮನುಜಮಾಂಧಾತನಂ
ಸೋಲಿಸಲಾಱದೆ
(ಸೋಲಿಸಲಾರದೆ)
ಸಹಜಮನೋಜನ
(ಅರ್ಜುನನ) ರೂಪಿಂಗಂ
ಸುರತಮಕರಧ್ವಜನ
(ಅರ್ಜುನನ) ಸೌಂದರ್ಯಕ್ಕಂ

ಗಂಧೇಭವಿದ್ಯಾಧರನ (ಅರ್ಜುನನ) ಗಂಡಗಾಡಿಗಂ(ಪೌರುಷದ ಸೊಬಗಿಗೂ) ತಾಮೆ ಸೋಲ್ತು ಐಯ್ದೆ ವಂದು (ತಾವೇ ಸೋತು ಅವನ ಸಮೀಪಕ್ಕೆ ಬಂದು)-

ವಚನ:ಅರ್ಥ:|| ಹಾಗೆ ಆ ಅಪ್ಸರಸ್ತ್ರೀಯರು ಸಮೀಪದಲ್ಲಿಯೇ ಕುಣಿದರೂ, ಮನೋಹರವಾಗಿರುವ ಹಾಗೆ

ಹಾಡಿಯೂ
ಮನುಜಮಾಂಧಾತನಾದ
ಅರ್ಜುನನನ್ನು ಸೋಲಿಸಲು
ಅಶಕ್ತರಾಗಿ
ಸಹಜಮನ್ಮಥನಾದ
ಅರ್ಜುನನ ರೂಪಕ್ಕೂ ಸುರತ
ಮಕರ ಧ್ವಜನಾದ ಅವನ
ಸೌಂದರ್ಯಕ್ಕೂ
ಗಂಧೇಭವಿದ್ಯಾಧರನ
ಪೌರುಷದ ಸೊಬಗಿಗೂ ತಾವೇ
ಸೋತು ಅವನ ಸಮೀಪಕ್ಕೆ

ಬಂದು- (ಅವನನ್ನೇ ಪ್ರಶ್ನಿಸಿದರು)

ಕಂ|| ಬೂದಿ ಜೆಡೆ ಲಕ್ಕಣಂ ತಪ
ಕಾದುವೆರಱೊರ್ದೊಣೆ ಶರಾಸನಂ ಕವಚಮಿವೆಂ|
ತಾದುವೊ ಮುತ್ತುಂ ಮೆಱಸುಂ
ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ|| ೯೨ ||

ಪದ್ಯ-೯೨:ಪದವಿಭಾಗ-ಅರ್ಥ:ಬೂದಿ ಜೆಡೆ ಲಕ್ಕಣಂ ತಪಕಾದುವು (ಭಸ್ಮ ಮತ್ತು

ಜಟೆಯ ಲಕ್ಷಣಗಳು ತಪಸ್ಸಿಗೆ ಹೊಂದಿಕೊಳ್ಳುತ್ತವೆ.) ಎರಟಿಯ್ದೊಣೆ (ಎರಳ್ ದೊಣೆ -ಎರಡು ಬತ್ತಳಿಕೆ)ಶರಾಸನಂ ಕವಚಂ ಇಂವೆಂತಾದುವೊ (ಇವು ಹೇಗೆ ಹೊಂದಿಕೊಳ್ಳುತ್ತವೆ?) ಮುತ್ತುಂ ಮೆಱಸುಂ ಕೋದಂತುಟೆ (ಮೆಳಸುಂ- ಮಣಸು:-ಮುತ್ತನ್ನೂ ಮೆಣಸನ್ನೂ ಕೋದಂತಿರುವ)

ನಿನ್ನ ತಪದ ಪಾಂಗೆಂತು ಗಡಾ (ಈ ನಿನ್ನ ತಪಸ್ಸಿನ ರೀತಿ ಅದೆಂತಹುದಪ್ಪಾ!)

ಪದ್ಯ-೯೨:ಅರ್ಥ: ಭಸ್ಮ ಮತ್ತು ಜಟೆಯ ಲಕ್ಷಣಗಳು ತಪಸ್ಸಿಗೆ ಹೊಂದಿಕೊಳ್ಳುತ್ತವೆ. ಆದರೆ ಎರಡು ಬತ್ತಳಿಕೆ ಬಿಲ್ಲು ಕವಚ ಇವು ಹೇಗೆ ಹೊಂದಿಕೊಳ್ಳುತ್ತವೆ? ಮುತ್ತನ್ನೂ ಮೆಣಸನ್ನೂ ಕೋದಂತಿರುವ ಈ ನಿನ್ನ

ತಪಸ್ಸಿನ ರೀತಿ

ಅದೆಂತಹುದಪ್ಪಾ!

ಚಂ|| ಕಡು ತಪದಿಂದೆ ನಿನ್ನ

ಪಡೆವಾವುದೊ ಗಾವಿಲ

ಸಗ್ಗಮಲ್ತೆ ಪೋ

ನುಡಿಯವೊ ಮೂರ್ಖ ಸಗ್ಗದ

ಫಲಂ ಸುಖಮಲ್ತೆ ಸುಖಕ್ಕೆ

ಪೇಱೊಡಂ|

ಬಡದವರಾರೊ

ಪೆಂಡಿರೊಳಗಾರ್ ಪೆಱರಾಮೆ

ದಲಾಮೆ ಬಂದು ಕಾ

ಲ್ವಿಡಿದಪೆವಿಂಬುಕೆಯ್ವೊಡಿವು ಮೆಲ್ಲಡಿಗಳ್ ಗಡ ಕರ್ಚುವ ಬೂದಿಯಂ|| ೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಕಡು ತಪದಿಂದೆ ನಿನ್ನ ಪಡೆವಾವುದೊ ಗಾವಿಲ (ದಡ್ಡಾ) ಸಗ್ಗಮಲ್ತೆ ಪೋ ನುಡಿಯವ್ರೊ ಮೂರ್ಖ ಸಗ್ಗದ ಫಲಂ ಸುಖಮಲ್ತೆ ಸುಖಕ್ಕೆ (ಸ್ವರ್ಗದ ಫಲವ್ರೂ ಸುಖವೇ ಅಲ್ಲವೇ?) ಪೇಟ್

ಒಡಂಬಡದವರಾರೊ(ಹೇಳು
ಒಪ್ಪದವರಾರಿದ್ದಾರೆ)!
ಪೆಂಡಿರೊಳಗಾರ್ ಪೆಱರ್
ಆಮೆ ದಲ್(ಸ್ತ್ರೀಯರಲ್ಲಿ
ನಮಗಿಂತ
ಸೌಂದರ್ಯವತಿಯರಾದವರು
? ನಾವೇ ಅಲ್ಲವೇ) ಆಮೆ
ಬಂದು ಕಾಲ್ವಿಡಿದಪೆವು
ಇಂಬುಕೆಯ್ದೊಡಿವು
(ಆಶ್ರಯಿಸುವುದಕ್ಕೆ)
ಮೆಲ್ಲಡಿಗಳ್ ಗಡ (ನಿನ್ನ

ಕಾಲುಗಳು ನಾವು ಆಶ್ರಯಿಸುವುದಕ್ಕೆ ಯೋಗ್ಯವಾದುವಲ್ಲವೇ?) ಕರ್ಚು ಬೂದಿಯಂ (ಬೂದಿಯನ್ನು ತೊಳೆದುಕೊ)

ಪದ್ಯ-೯೩:ಅರ್ಥ: ಎಲೋ ದಡ್ಡ, ತೀವ್ರವಾದ ತಪಸ್ಸಿನಿಂದ ನೀನು ಪಡೆಯಬೇಕಾದ ವಸ್ತು ತಾನೆ ಏನು? ಸ್ವರ್ಗವಲ್ಲವೇ, ಹೋಗು ಮೂರ್ಖ, ಮಾತನಾಡಬೇಡ. ಸ್ವರ್ಗದ

ಫಲವೂ ಸುಖವೇ ಅಲ್ಲವೇ? ಸುಖಕ್ಕೆ ಒಪ್ಪದವರಾರಿದ್ದಾರೆ, ಸ್ತ್ರೀಯರಲ್ಲಿ ನಮಗಿಂತ ಸೌಂದರ್ಯವತಿಯರಾದವರು ? ನಾವೇ ಅಲ್ಲವೇ (ಪರಮ ಸೌಂದರ್ಯವತಿಯರಾದವರು) ನಾವೇ ಬಂದು ನಿನ್ನ ಕಾಲನ್ನು ಹಿಡಿಯುತ್ತಿದ್ದೇವೆ. ಈ ಮೃದುವಾದ ನಿನ್ನ ಕಾಲುಗಳು ನಾವು ಆಶ್ರಯಿಸುವುದಕ್ಕೆ ಯೋಗ್ಯವಾದುವಲ್ಲವೇ?

ಬೂದಿಯನ್ನು ತೊಳೆದುಕೊ,

ಎಂದರು ದೇವಕನ್ಯೆಯರು.

ಕಂ|| ಕೋಕಿಳಕುಳಕಳ ಗಳನಿನ

ದಾಕುಳರವಮಿಂಪನಾಗಳುಂ

ಪಡೆದುದು ನೋ|

ಡೀಕೆಗಳ ಚಳಿತ ಲುಳಿತ

ಭ್ರೂಕುಟಿಯೇ ಪರಮ ಸುಖದ

ಕೋಟಿಯನೀಗುಂ|| ೯೪ ||

ಪದ್ಯ-೯೪:ಪದವಿಭಾಗ-

ಅರ್ಥ:ಕೋಕಿಳ ಕುಳಕಳ

ಗಳನಿನದ (ಕಂಠಧ್ವನಿ)

ಆಕುಳರವಂ ಇಂಪನಾಗಳುಂ
ಪಡೆದುದು (ಕೋಗಿಲೆಗಳ
ಸಮೂಹದ ಕಂಠಧ್ವನಿ
ಯಾವಾಗಲೂ
ಮಾಧುರ್ಯವನ್ನು ಪಡೆದಿದೆ)
ನೋಡು ಈಕೆಗಳ ಚಳಿತ
ಲುಳಿತ ಭ್ರೂಕುಟಿಯೇ(ಈ
ಅಪ್ಸರೆಯರ ಚಲಿಸುತ್ತಿರುವ
ವಕ್ರವಾದ ಹುಬ್ಬುಗಳ
ತುದಿಗಳೇ) ಪರಮ ಸುಖದ
ಕೋಟಿಯನು ಈಗುಂ

(ಪರಮ ಸುಖದ ಕೋಟಿಯನ್ನು ಈಯುವುದು - ಕೊಡುವುದು)

ಪದ್ಯ-೯೪:ಅರ್ಥ:ಅವರ ಮಾತು, ಇಗೋ ಕೋಗಿಲೆಗಳ ಸಮೂಹದ ಕಂಠಧ್ವನಿ ಯಾವಾಗಲೂ ಮಾಧುರ್ಯವನ್ನು ಪಡೆದಿದೆ. ನೋಡು ಈ ಅಪ್ಸರೆಯರ ಚಲಿಸುತ್ತಿರುವ ವಕ್ರವಾದ ಹುಬ್ಬುಗಳ ತುದಿಗಳೇ ಪರಮ

ಸುಖದ ಕೋಟಿಯನ್ನು
ಕೊಡುವುದು.

<u>ಇಂದ್ರನ ಆಗಮನ</u>

ವ|| ಎಂದೆನಿತಾನುಂ ತೆಱದೊಳಱಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳುಂ ನುಡಿದುಂ ಕಾಲ್ವಿಡಿದುಮಚಳಿತಧೈರ್ಯನ ಮನಮಂ

ಚಳಿಯಿಸಲಾಱದಚ್ಚರಸೆಯರ
ಚ್ಚಿಗಂಗೊಂಡಂತಾಗೆಯುಂ
ಗಂಧರ್ವರ್ ಗರ್ವಮನುೞಿದು
ಪೋಗೆಯುಂ
ಕಾಮದೇವನೇವಮಂ
ಕೆಯ್ಕೊಂಡು ಸೀಂತಂತೆ
ಮೊಗಮಾಡಿ ಪೋಗೆ
ದೇವೇಂದ್ರನ ಮೊಗಮಂ
ನೋಡಲ್
ನಾಣ್ಚಿರ್ದನಾಗಳಿಂದ್ರಂ
ನರೇಂದ್ರತಾಪಸನ ಧೈರ್ಯಕ್ಕೆ

ಮೆಚ್ಚಿ ಧರಾಮರವೇಷದೊಳಿಂದ್ರಕೀಲನಗೇಂದ್ರಮನಯ್ದೆವಂದು-

ವಚನ:ಪದವಿಭಾಗ-

ಅರ್ಥ:ಎಂದು ಎನಿತಾನುಂ ತೆಱದೊಲು ಅಱಿಪಿನ ಲಲ್ಲೆಯ ಚೆಲ್ಲದ ಪುರುಡಿನ ಮುಳಿಸಿನ ನೆವದ ಪಡೆಮಾತುಗಳುಂ (ಎಷ್ಟೋ ರೀತಿಯ ಪ್ರೇಮದ, ಮದ್ದಿನ, ಚೆಲ್ಲಾಟದ, ಹುರುಡಿನ,

ಕೋಪದ, ನೆಪದ ರೂಡಿಯ ಮಾತುಗಳನ್ನು) ನುಡಿದುಂ ಕಾಲ್ವಿಡಿದುಂ ಅಚಳಿತಧೈರ್ಯನ ಮನಮಂ ಚಳಿಯಿಸಲಾಱದೆ(ಚಲಿಸಲಾರದೆ) -(ಆಡಿಯೂ ಕಾಲು ಹಿಡಿದೂ ಸ್ಥಿರಚಿತ್ತನಾದ ಅರ್ಜುನನ ಮನಸ್ಸನ್ನು ಕದಲಿಸಲಾರದೆ ಹೋದರು) ಅಚ್ಚರಸೆಯರು ಅಚ್ಚಿಗಂಗೊಂಡು

ಅಂತಾಗೆಯುಂ

(ಅಪ್ಸರಸ್ತ್ರೀಯರು

ವ್ಯಸನಗೊಂಡವರಂತೆ

ಅಸಮಾಧಾನವನ್ನು

ಹೊಂದಿದರು) ಗಂಧರ್ವರ್

ಗರ್ವಮನುೞಿದು

ಪೋಗೆಯುಂ (ಗಂಧರ್ವರು

ತಮ್ಮ ಅಹಂಕಾರವನ್ನು

ತೊರೆದು ಹೋದರು.)

ಕಾಮದೇವನೇವಮಂ

ಕೆಯ್ಕೊಂಡು ಸೀಂತಂತೆ

ಮೊಗಮಾಡಿ ಪೋಗಿ
(ಮನ್ಮಥನು ಅವಮಾನವನ್ನು
ಹೊಂದಿ ಸೀದಹಾಗೆ (ಸುಟ್ಟ)
ಮುಖವನ್ನು ಮಾಡಿಕೊಂಡು
ಹೋಗಿ) ದೇವೇಂದ್ರನ
ಮೊಗಮಂ ನೋಡಲ್ ನಾಣ್ಚಿ
ಇರ್ದನು,(ದೇವೇಂದ್ರನ
ಮುಖವನ್ನು ನೋಡಲು
ನಾಚಿಕೆಗೊಂಡನು.) ಆಗಳ್
ಇಂದ್ರಂ ನರೇಂದ್ರತಾಪಸನ
ಧೈರ್ಯಕ್ಕೆ ಮೆಚ್ಚಿ

ಧರಾಮರವೇಷದೊಳ್
ಇಂದ್ರಕೀಲ ನಗೇಂದ್ರಮನು
ಎಯ್ದೆವಂದು (ಆಗ ಇಂದ್ರನು
ರಾಜತಾಪಸನಾದ ಅರ್ಜುನನ
ಧೈರ್ಯಕ್ಕೆ ಮೆಚ್ಚಿ ಬ್ರಾಹ್ಮಣ
ವೇಷದಲ್ಲಿ ತಾನೇ
ಇಂದ್ರಕೀಲಪರ್ವತಕ್ಕೆ ಬಂದು-
(ಬಂದನು)
ವಚನ:ಅರ್ಥ:ಎಂಬುದಾಗಿ
ಎಷ್ಟೋ ರೀತಿಯ ಪ್ರೇಮದ,
ಮದ್ದಿನ, ಚೆಲ್ಲಾಟದ,

ಹುರುಡಿನ, ಕೋಪದ, ನೆಪದ
ರೂಡಿಯಮಾತುಗಳನ್ನು
ಆಡಿಯೂ ಕಾಲು ಹಿಡಿದೂ
ಸ್ಥಿರಚಿತ್ತನಾದ ಅರ್ಜುನನ
ಮನಸ್ಸನ್ನು
ಕದಲಿಸಲಸಮರ್ಥರಾದರು.
ಅಪ್ಸರಸ್ತ್ರೀಯರು
ವ್ಯಸನಗೊಂಡವರಂತೆ
ಅಸಮಾಧಾನವನ್ನು
ಹೊಂದಿದರು. ಗಂಧರ್ವರು
ತಮ್ಮ ಅಹಂಕಾರವನ್ನು

ತೊರೆದರು. ಮನ್ಮಥನು ಅವಮಾನವನ್ನು ಹೊಂದಿ ಸುಟ್ಟಹಾಗೆ ಮುಖವನ್ನು ಮಾಡಿಕೊಂಡು ಹೋಗಿ ದೇವೇಂದ್ರನ ಮುಖವನ್ನು ನೋಡಲು ನಾಚಿಕೆಗೊಂಡನು. ಆಗ ಇಂದ್ರನು ರಾಜತಾಪಸನಾದ ಅರ್ಜುನನ ಧೈರ್ಯಕ್ಕೆ ಮೆಚ್ಚಿ ಬ್ರಾಹ್ಮಣ ವೇಷದಲ್ಲಿ ತಾನೇ ಇಂದ್ರಕೀಲ ಪರ್ವತಕ್ಕೆ ಬಂದನು

ಮ|| ಸ್ರ|| ಕಣಿಯಂ
ಶೌರ್ಯಾಭಿಮಾನಕ್ಕೆಡಱಿದ
ರಿಪುಸೈನ್ಯಕ್ಕೆ ಸಂಗ್ರಾಮದೊಳ್
ಬ
ಲ್ಕಣಿಯಂ ಕಲ್ಹಾರ ಸಾರಾಮೃತ
ಶಶಿ ವಿಶದಾತ್ಮೀಯವಂಶಕ್ಕೆ
ಚೂಡಾ|
ಮಣಿಯಂ ತೀವ್ರ ಪ್ರತಾಪ
ದ್ಯುಮಣಿಯನೆರೆದರ್ಥಿವ್ರಜಂ
ಗಳ್ಗೆ ಚಿಂತಾ

ಮಣಿಯಂ ಸಾಮಂತಚೂಡಾಮಣಿಯನ ಣಿಯರಂ ಬಂದು ಕಂಡಂ ಸುರೇಂದ್ರಂ|| ೯೫ ||

ಪದ್ಯ-೯೫:ಪದವಿಭಾಗ-ಅರ್ಥ:ಕಣಿಯಂ ಶೌರ್ಯಾಭಿಮಾನಕ್ಕೆ (ಶೌರ್ಯಾಭಿಮಾನಿಗಳಿಗೆ ಗಣಿಯಾದ) ಎಡಱಿದ ರಿಪುಸೈನ್ಯಕ್ಕೆ ಸಂಗ್ರಾಮದೊಳ್ ಬಲ್ಕಣಿಯಂ (ವಿರೋಧಿಸಿದ

ಶತ್ರುಸೈನ್ಯಕೆ ಯುದ್ಧದಲ್ಲಿ ಬಹು
ಶೂರನೂ) ಕಲ್ಹಾರ
ಸಾರಾಮೃತ, ಶಶಿ
ವಿಶದಾತ್ಮೀಯವಂಶಕ್ಕೆ,
ಚೂಡಾ|ಮಣಿಯಂ (ಕಲ್ಹಾರ
ಪುಷ್ಪದಂತೆಯೂ ಸಾರವತ್ತಾದ
ಅಮೃತದಂತೆಯೂ,
ಚಂದ್ರಮಂಡಲದಂತೆಯೂ
ಸ್ವಚ್ಛವಾಗಿರುವ ತನ್ನ ವಂಶಕ್ಕೆ
ತಲೆಯಾಭರಣವೂ) ತೀವ್ರ
ಪ್ರತಾಪ

ದ್ಯುಮಣಿಯನೆರೆದರ್ಥಿವ್ರಜಂ
ಗಳ್ಗೆ ಚಿಂತಾಮಣಿಯಂ
ಸಾಮಂತಚೂಡಾಮಣಿಯನ
ಣಿಯರಂ ಬಂದು ಕಂಡಂ
ಸುರೇಂದ್ರಂ

ಪದ್ಯ-೯೫ಅರ್ಥ:
ಶೌರ್ಯಾಭಿಮಾನಿಗಳಿಗೆ
ಗಣಿಯಾದ, ವಿರೋಧಿಸಿದ
ಶತ್ರುಸೈನ್ಯಕೆ ಯುದ್ಧದಲ್ಲಿ ಬಹು
ಶೂರನೂ, ಕಲ್ಹಾರ
ಪುಷ್ಪದಂತೆಯೂ ಸಾರವತ್ತಾದ

ಅಮೃತದಂತೆಯೂ,
ಚಂದ್ರಮಂಡಲದಂತೆಯೂ
ಸ್ವಚ್ಛವಾಗಿರುವ ತನ್ನ ವಂಶಕ್ಕೆ
ತಲೆಯಾಭರಣವೂ
ತೀಕ್ಷ್ಣವಾದ ಪ್ರತಾಪದಲ್ಲಿ
ಸೂರ್ಯನೂ ಬೇಡುವ
ಯಾಚಕವರ್ಗಕ್ಕೆ ಕೇಳಿದ್ದನ್ನು
ಕೊಡುವ ಚಿಂತಾಮಣಿಯೂ,
ಸಾಮಂತ ಚೂಡಾಮಣಿಯೂ
(ಸಾಮಂತರಲ್ಲಿ ಶ್ರೇಷ್ಠ -
ವೀರಕೇಸರಿ) ಆದ

ಅರ್ಜುನನನ್ನು ಇಂದ್ರನು ಬಂದು ಕಂಡನು.

ॐ

||ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವ ವಿರಚಿತಮಪ್ಪ ವಿಕ್ರಮಾರ್ಜುನ

ವಿಜಯದೊಳ್
ಸಪ್ತಮಾಶ್ವಾಸಂ ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ

ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಏಳನೆಯ ಆಶ್ವಾಸ.||
♦♣♣♣♣♣♣♣♣♣♣♣♣♣♣♣♣♣♣♦

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?

title=ಪಂಪಭಾರತ_ಸಪ್ತಮಾಶ್ವಾಸಂ&oldid=242775" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೩ ಜನವರಿ ೨೦೨೧, ೦೧:೦೭ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಅಷ್ಟಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ಅಷ್ಟಮಾಶ್ವಾಸಂ

- (XV.IV.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಅರ್ಜುನ ಶಿವನಿಂದ ಪಾಶುಪತಾಸ್ತ್ರ ಪಡೆದುದು

ಕಂ|| ಶ್ರೀಯಂ ಭುಜಬಳದಿಂ ನಿ
ರ್ದಾಯಾದ್ಯಂ ಮಾಳ್ಪಿ
ಬಗೆಯಿನವಿಕಳನಿಯಮ|
ಶ್ರೀಯನಳವಡಿಸಿ ನಿಂದ ಧ
ರಾಯುವತೀಶನನುದಾತ್ತನಾ
ರಾಯಣನಂ|| ೧ ||

ಪದ್ಯ-೦೧:ಪದವಿಭಾಗ-ಅರ್ಥ:ಶ್ರೀಯಂ (ರಾಜ್ಯಲಕ್ಷ್ಮಿಯನ್ನು) ಭುಜಬಳದಿಂ ನಿರ್ದಾಯಾದ್ಯಂ ಮಾಳ್ಪಿ ಬಗೆಯಿಂ (ತನ್ನ

ಬಾಹುಬಲದಿಂದ
ರಾಜ್ಯಲಕ್ಷ್ಮಿಯನ್ನು
ದಾಯಾದಿಗಳಿಲ್ಲದಂತೆ
ಮಾಡಬೇಕೆಂಬ ಆಸೆಯಿಂದ)
ಅವಿಕಳ ನಿಯಮಶ್ರೀಯಂ
ಅಳವಡಿಸಿ (ಸ್ವಲ್ಪವೂ
ದೋಷವಿಲ್ಲದ
ತಪೋನಿಷ್ಠೆಯೆಂಬ
ಲಕ್ಷ್ಮಿಯನ್ನು ಕೂಡಿಕೊಂಡು)
ನಿಂದ ಧರಾಯುವತಿ
ಈಶನನು (ಭೂಮಿಪತಿಯನ್ನು

ಅಂದರೆ)
ಉದಾತ್ತನಾರಾಯಣನಂ
(ಅರ್ಜುನನ್ನು-)
ಪದ್ಯ-೧:ಅರ್ಥ:ತನ್ನ
ಬಾಹುಬಲದಿಂದ
ರಾಜ್ಯಲಕ್ಷ್ಮಿಯನ್ನು
ದಾಯಾದಿಗಳಿಲ್ಲದಂತೆ
ಮಾಡಬೇಕೆಂಬ ಆಸೆಯಿಂದ
ಸ್ವಲ್ಪವೂ ದೋಷವಿಲ್ಲದ
ತಪೋನಿಷ್ಠೆಯೆಂಬ
ಲಕ್ಷ್ಮಿಯನ್ನು ಕೂಡಿಕೊಂಡು

ತಪಸ್ಸು ಮಾಡುತ್ತಿದ್ದ ಭೂಪತಿಯೂ ಉದಾತ್ತ ನಾರಾಯಣನೂ ಆದ ಅರ್ಜುನನನ್ನು- (ಇಂದ್ರನು ಕಂಡನು).

ಕಂಡು ನಿಜತನಯನಳವೆರ್ದೆ
ಗೊಂಡಿರೆ ಮುದುಪಾರ್ವನಾಗಿ
ಮೆಲ್ಲನೆ ಸಾರ್ವಾ|
ಖಂಡಳನಂ ಕಾಣಲೊಡಂ
ಗಾಂಡಿವಿಗಿರದುರ್ಚಿ
ಪಾಯ್ದುವಶ್ರುಜಲಂಗಳ್|| ೨ ||

ಪದ್ಯ-೨:ಪದವಿಭಾಗ-ಅರ್ಥ:ಕಂಡು ನಿಜ ತನಯನ ಅಳವು ಎರ್ದೆಗೊಂಡಿರೆ (ತನ್ನ ಮಗನ ಪರಾಕ್ರಮವನ್ನು ನೋಡಿ ಇಂದ್ರನ ಎದೆಯು ಮೆಚ್ಚಿಕೊಂಡಿತು) ಮುದುಪಾರ್ವನಾಗಿ (ಮುದಿಬ್ರಾಹ್ಮಣನ ವೇಷದಲ್ಲಿ) ಮೆಲ್ಲನೆ ಸಾರ್ವಾ ಖಂಡಳನಂ ಕಾಣಲು (ಬರುತ್ತಿದ್ದ ಇಂದ್ರನನ್ನು ನೋಡಲು) ಒಡಂ

ಗಾಂಡಿವಿಗೆ
ಇರದುರ್ಚಿ(ಅರ್ಜುನನಿಗೆ
ಕಣ್ಣೀರು ಥಟ್ಟನೆ ಚಿಮ್ಮಿ)
ಪಾಯ್ದುವಶ್ರುಜಲಂಗಳ್(ಕಣ್
ಣೀರು)
ಪದ್ಯ-೨:ಅರ್ಥ: ೨. ತನ್ನ
ಮಗನ ಪರಾಕ್ರಮವನ್ನು
ನೋಡಿ ಇಂದ್ರನ ಎದೆಯು
ಮೆಚ್ಚಿಕೊಂಡಿತು.
ಮುದಿಬ್ರಾಹ್ಮಣನ ವೇಷದಲ್ಲಿ
ಬರುತ್ತಿದ್ದ ಇಂದ್ರನನ್ನು

ನೋಡಲು ಅರ್ಜುನನಿಗೆ

ಕಣ್ಣೀರು ಥಟ್ಟನೆ ಚಿಮ್ಮಿತು.

ವ|| ಅಂತು ಮನದೊಳಾದ

ಮೋಹರಸಮೆ ಕಣ್ಣಿಂ

ತುಳುಂಕುವಂತೆ

ಪೊಱಪೊಣ್ಮುವ

ನಯನಜಲಂಗಳನುತ್ತರೀಯ

ವಲ್ಕಲವಸ

ನೋಪಾಂತದೊಳೊತ್ತುತ್ತುಮ

ತಿಥಿಗತಿಥಿಸತ್ಕಾರಮೆಲ್ಲಮಂ

ನೆಯೆ

ಮಾಡಿದಾಗಳಿಂದ್ರಂನರೇಂದ್ರ ತಾಪಸನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಮನದೊಳು ಆದ ಮೋಹರಸಮೆ (ಹಾಗೆ ಮನಸ್ಸಿನಲ್ಲುಂಟಾದ ಪ್ರೀತಿರಸವೇ) ಕಣ್ಣಿಂ ತುಳುಂಕುವಂತೆ ಪೊಱಪೊಣ್ಮುವ (ಹೊರಹೊಮ್ಮುವ) ನಯನಜಲಂಗಳನು

(ಕಣ್ಣೀರನ್ನು) ಉತ್ತರೀಯ
ವಲ್ಕಲವಸನ
ಉಪಾಂತದೊಳು ಒತ್ತುತ್ತಂ
(ಕಣ್ಣೀರನ್ನು ಮೇಲೆ ಹೊದೆದಿದ್ದ
ನಾರುಮಡಿಯ ಅಂಚಿನಿಂದ
ಒರೆಸಿಕೊಳ್ಳುತ್ತ) ಅತಿಥಿಗೆ
ಅತಿಥಿಸತ್ಕಾರಮೆಲ್ಲಮಂ ನೆಯೆ
(ಅತಿಥಿ ಸತ್ಕಾರವೆಲ್ಲವನ್ನೂ
ಮಾಡಿದಾಗ) ಮಾಡಿದಾಗಳ್
ಇಂದ್ರಂ ನರೇಂದ್ರ ತಾಪಸನನು
ಇಂತೆಂದಂ(ಇಂದ್ರನು ರಾಜ

ತಪಸ್ವಿಯನ್ನು ಕುರಿತು ಹೀಗೆ ಹೇಳಿದನು.)

ವಚನ:ಅರ್ಥ:ವ|| ಹಾಗೆ ಮನಸ್ಸಿನಲ್ಲುಂಟಾದ ಪ್ರೀತಿರಸವೇ ಕಣ್ಣಿನಿಂದ ತುಳುಕುವಂತೆ ಹೊರಹೊಮ್ಮುವ ಕಣ್ಣೀರನ್ನು ಮೇಲೆ ಹೊದೆದಿದ್ದ ನಾರುಮಡಿಯ ಅಂಚಿನಿಂದ ಒರೆಸಿಕೊಳ್ಳುತ್ತ ಅತಿಥಿಯಾದ ಇಂದ್ರನಿಗೆ ಅತಿಥಿ

ಸತ್ಕಾರವೆಲ್ಲವನ್ನೂ ಮಾಡಿದಾಗ ಇಂದ್ರನು ರಾಜ ತಪಸ್ವಿಯನ್ನು ಕುರಿತು ಹೀಗೆ ಹೇಳಿದನು.

ಕಂ|| ನೀನಾರ್ಗೆ ನಿನ್ನ ಪೆಸರೇ
ನೀ ನಿಯಮಕ್ಕೆಂತು
ಮೆಯ್ಯನೊಡ್ಡಿದೆಯಿದು ದಲ್|
ತಾನಾಶ್ಚರ್ಯಮಿದೇನ
ಜ್ಞಾನಿಯವೋಲ್ ತಪಕೆ
ಬಿಲ್ಲುಮಂಬುಂ ದೊರೆಯೇ|| ೩
||

ಪದ್ಯ-೦೩:ಪದವಿಭಾಗ-ಅರ್ಥ:ನೀನಾರ್ಗೆ ನಿನ್ನ ಪೆಸರೇನು ಈ ನಿಯಮಕ್ಕೆಂತು ಮೆಯ್ಯನು ಒಡ್ಡಿದೆ (ನೀನು ಯಾರು? ನಿನ್ನ ಹೆಸರೇನು? ಈ ನಿಯಮಕ್ಕೆ ಶರೀರವನ್ನು ಏಕೆ ಒಡ್ಡಿದೆ) ಯಿದು ದಲ್ ತಾನಾಶ್ಚರ್ಯಂ (ಇದು ದಲ್- ನಿಜವಾಗಿಯೂ ತನಗೆ ಆಶ್ಚರ್ಯ.) ಇದೇನು ಅಜ್ಞಾನಿಯವೋಲ್ ತಪಕೆ

ಬಿಲ್ಲುಂ ಅಂಬುಂ ದೊರೆಯೇ (ಬಿಲ್ಲು ಬಾಣಗಳು ಅಗತ್ತ್ಯವೇ?)

ಪದ್ಯ-೩:ಅರ್ಥ: ನೀನು ಯಾರು? ನಿನ್ನ ಹೆಸರೇನು? ಈ ನಿಯಮಕ್ಕೆ ಶರೀರವನ್ನು ಏಕೆ ಒಡ್ಡಿದೆ. ಇದು ನಿಜವಾಗಿಯೂ ತನಗೆ ಆಶ್ಚರ್ಯ. ಅಜ್ಞಾನಿಯ ಹಾಗೆ ಇದೇನು ತಪಸ್ಸಿಗೆ ಯೋಗ್ಯವಲ್ಲದ ಬಿಲ್ಲು

ಬಾಣಗಳು ಅಗತ್ತ್ಯವೇ?
ಎಂದನು ಇಂದ್ರ.

ವ||ಎನೆ ಸಾಹಸಾಭರಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ ಸಾಹಸಾಭರಣನು (ಅರ್ಜುನನು)ಇಂತು ಎಂದಂ-

ವಚನ:ಅರ್ಥ:ಎನ್ನಲು ಸಾಹಸಾಭರಣನಾದ ಅರ್ಜುನನು ಹೀಗೆಂದನು.

ಕಂ|| ನಿನ್ನೆಂದಂತುಟೆ ಮೋಕ್ಷ ಕ್ಕೆನ್ನಿರ್ಪಿರವಫಟಮಾನವೈಹಿಕ ದ ತೊಡ|
ರ್ಪೆನ್ನಿರವಿನೊಳುಂಟಱಿಪದೆ ನಿನ್ನಂ ಪುಸಿಯಾಡಿ ಕಾಡೆನಗೇಂ ದೊರೆಯೇ|| ೪||

ಪದ್ಯ-೪:ಪದವಿಭಾಗ-ಅರ್ಥ:ನಿನ್ನೆಂದಂತುಟೆ (ನೀನು ಹೇಳಿದ ಹಾಗೆಯೇ) ಮೋಕ್ಷಕ್ಕೆ ಎನ್ನಿರ್ಪಿರವು ಅಫಟಮಾನಂ (ಮೋಕ್ಷಸಾಧನೆಗೆ

ಹೊಂದಿಕೊಳ್ಳತಕ್ಕುದಲ್ಲ)
ಐಹಿಕದ ತೊಡರ್ಪು
ಎನ್ನಿರವಿನೊಳುಂಟು
ಅಱಿಪದೆ ನಿನ್ನಂ ಪುಸಿಯಾಡಿ
ಕಾಡೆ ಎನಗೇಂ ದೊರೆಯೇ
(ಹೇಳದೆ ಸುಳ್ಳು ಹೇಳಿ
ನಿಮ್ಮನ್ನು ಕಾಡುವುದು ನನಗೆ
ಯೋಗ್ಯವೇ? ಅಲ್ಲ.)
ಪದ್ಯ-೪:ಅರ್ಥ:ನೀನು
ಹೇಳಿದ ಹಾಗೆಯೇ ನನ್ನ ಸ್ಥಿತಿ
ಮೋಕ್ಷಸಾಧನೆಗೆ

ಹೊಂದಿಕೊಳ್ಳತಕ್ಕುದಲ್ಲ; ಇದು ಇಹಲೋಕದ ಬಂಧನಕ್ಕೊಳಗಾದುದು. ಅದನ್ನು ಹೇಳದೆ ಸುಳ್ಳು ಹೇಳಿ ನಿಮ್ಮನ್ನು ಕಾಡುವುದು ನನಗೆ ಯೋಗ್ಯವೇ? ಅಲ್ಲ.

ಮ|| ನಿನಗಂ ಪೇೞ್ವೊಡೆ ಪಾಂಡುರಾಜತನಯಂ ಗಾಂಡೀವಿಯೆಂ ದಾಯಿಗಂ ಗೆ ನೆಲಂ ಜೂದಿನೊಳೊತ್ತೆವೋಗೆ

ಬನಮಂ

ಪೊಕ್ಕಣ್ಣನೆಂದೊಂದು ಮಾ|

ತನಣಂ ಮೀಱದೆ ನಿಂದು

ಶಂಕರನ

ನೀನಾರಾಧಿಸೆಂದಿಂತಿದಂ

ಮುನಿ ಪಾರಾಶರನೊಲ್ದು

ಪೇೞೆ ಹರ ಬರ್ಪನ್ನಂ

ತಪಂಗೆಯ್ದಪೆಂ|| ೫||

ಪದ್ಯ-೫:ಪದವಿಭಾಗ-

ಅರ್ಥ:ನಿನಗಂ ಪೇೞ್ವೊಡೆ

ಪಾಂಡುರಾಜತನಯಂ

ಗಾಂಡೀವಿಯೆಂ (ನಿನಗೆ ಹೇಳುವುದಾದರೆ ನಾನು ಪಾಂಡುರಾಜನ ಮಗ, ಗಾಂಡೀವಿಯು.) ದಾಯಿಗಂಗೆ ನೆಲಂ ಜೂದಿನೊಳು ಒತ್ತೆವೋಗೆ ಬನಮಂ ಪೊಕ್ಕ (ರಾಜ್ಯವು ಜೂಜಿನಲ್ಲಿ ದಾಯಾದಿಯಾದ ದುರ್ಯೋಧನನಿಗೆ ಒತ್ತೆಯಾಗಿ ಹೋಗಲು ವನವಾಸಕ್ಕೆ ಹೋದ) ಅಣ್ಣನೆಂದ ಒಂದು

ಮಾತನು ಅಣಂ ಮೀಱದೆ
ನಿಂದು (ಅಣ್ಣನ ಮಾತನ್ನು
ಸ್ವಲ್ಪವೂ ಮೀರದೆ ಅರಣ್ಯ
ಪ್ರವೇಶಮಾಡಿ ಸ್ಥಿರವಾಗಿ
ನಿಂತೆವು-) ಶಂಕರನ ನೀನು
ಆರಾಧಿಸು ಎಂದಿಂತಿದಂ
ಮುನಿ ಪಾರಾಶರನು ಒಲ್ದು
ಪೇೞೆ (ಶಂಕರನನ್ನು
ಆರಾಧಿಸು ಎಂದು
ವ್ಯಾಸಮಹರ್ಷಿಯು
ಪ್ರೀತಿಯಿಂದ ಹೇಳಲಾಗಿ

ಅದರ ಪ್ರಕಾರ) ಹರ ಬರ್ಪನ್ನಂ ತಪಂ ಗೆಯ್ದಪೆಂ

ಪದ್ಯ-೫:ಅರ್ಥ: ನಿನಗೆ ಹೇಳುವುದಾದರೆ ನಾನು ಪಾಂಡುರಾಜನ ಮಗ, ಗಾಂಡೀವಿಯು. ರಾಜ್ಯವು ಜೂಜಿನಲ್ಲಿ ದಾಯಾದಿಯಾದ ದುರ್ಯೋಧನನಿಗೆ ಒತ್ತೆಯಾಗಿ ಹೋಗಲು ವನವಾಸಕ್ಕೆ ಹೋದ ಅಣ್ಣನ ಮಾತನ್ನು ಸ್ವಲ್ಪವೂ ಮೀರದೆ ಅರಣ್ಯ

ಪ್ರವೇಶಮಾಡಿ ಸ್ಥಿರವಾಗಿ ನಿಂತೆವು. ಶಂಕರನನ್ನು ಆರಾಧಿಸು ಎಂದು ವ್ಯಾಸಮಹರ್ಷಿಯು ಪ್ರೀತಿಯಿಂದ ಹೇಳಲಾಗಿ, ಈಶ್ವರನು ಪ್ರತ್ಯಕ್ಷವಾಗುವವರೆಗೆ ತಪಸ್ಸನ್ನು ಮಾಡುವೆನು ಎಂದನು ಅರ್ಜುನ.

ವ|| ಅಂತುಮಲ್ಲದೆ-

ವಚನ:ಪದವಿಭಾಗ-

ಅರ್ಥ:ಅಂತುಂ ಅಲ್ಲದೆ-

ವಚನ:ಅರ್ಥ:ಅಷ್ಟೇ ಅಲ್ಲದೆ

ಚಂ|| ಸ್ಫುರಿತ ತಪೋಮಯಾನಳನಿನೀಯೊಡಲಂ ನೆಗಳ್ದೀ ಗಿರೀಂದ್ರ ಕಂದರದೊಳಗಿಂತೆ ದಲ್ ಕರಗಿಪೆಂ ಪೆಱತೇಂ ಪಡೆಮಾತೊ ಮೇಣ್ ಪುರಂ| ದರನೊಸೆದಿತ್ತುದೊಂದು ಬರದಿಂದುಱದೆನ್ನ

ವಿರೋಧಿವರ್ಗಮಂ ಕರಗಿಪೆನಲ್ಲದಿಲ್ಲಿ ಪೆರಗಂ ಬೆರಗಂ ಬಗೆಯೆಂ ದ್ವಿಜೋತ್ತಮಾ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಸ್ಫುರಿತ ತಪೋಮಯ ಆನಳನಿಂ (ಪ್ರಕಾಶಮಾನವಾದ ತಪಸ್ಸೆಂಬ ಬೆಂಕಿಯಿಂದ) ಈ ಒಡಲಂ ನೆಗಳ್ದ ಈ ಗಿರೀಂದ್ರ ಕಂದರದೊಳಗೆ ಇಂತೆ ದಲ್

ಕರಗಿಪೆಂ(ಈ ನನ್ನ
ಶರೀರವನ್ನು ಪ್ರಸಿದ್ಧವಾದ ಈ
ಕಣಿವೆಯಲ್ಲಿ ಹೀಗೆಯೇ ದಲ್
-ದಿಟವಾಗಿ ಕರಗಿಸುತ್ತೇನೆ)
ಪೆಱತೇಂ ಪಡೆಮಾತೊ
ಮೇಣ್ ಪುರಂದರರನು
(ಶಿವನು) ಒಸೆದಿತ್ತ ಅದೊಂದು
ಬರದಿಂದ ಉಱದೆ (ವರದಿಂದ
ಬಿಡದೆ) ಎನ್ನ
ವಿರೋಧಿವರ್ಗಮಂ
ಕರಗಿಪೆನು (ನನ್ನ

ಶತ್ರುಸಮೂಹವನ್ನು ಕರಗಿಸುತ್ತೇನೆ:) ಅಲ್ಲದಿಲ್ಲಿ (ಹಾಗಲ್ಲದೆ ಇಲ್ಲಿ) ಸೆರಗಂ ಬೆರಗಂ ಬಗೆಯೆಂ (ಬಗೆಯೆನು - ಯೊಚಿಸೆನು) ದ್ವಿಜೋತ್ತಮಾ (ಅಪಾಯ ಉಪಾಯಗಳಾವುದನ್ನೂ ಯೋಚನೆಮಾಡುವುದಿಲ್ಲ)

ಪದ್ಯ-೬:ಅರ್ಥ: ಎಲೈ ಬ್ರಾಹ್ಮಣಶ್ರೇಷ್ಠನೇ ಪ್ರಕಾಶಮಾನವಾದ ತಪಸ್ಸೆಂಬ

ಬೆಂಕಿಯಿಂದ ಈ ನನ್ನ ಶರೀರವನ್ನು ಪ್ರಸಿದ್ಧವಾದ ಈ ಕಣಿವೆಯಲ್ಲಿ ಹೀಗೆಯೇ ಕರಗಿಸುತ್ತೇನೆ ನನಗೆ ಬೇರೆ ಮಾತೇ ಇಲ್ಲ. ಮತ್ತು ಆ ಶಿವನು ಪ್ರೀತಿಯಿಂದ ಕೊಡುವ ಒಂದು ವರದಿಂದ ಬಿಡದೆ ನನ್ನ ಶತ್ರುಸಮೂಹವನ್ನು ಕರಗಿಸುತ್ತೇನೆ: ಹಾಗಲ್ಲದೆ ಇಲ್ಲಿ ನಾನು ಅಪಾಯ

ಉಪಾಯಗಳಾವುದನ್ನೂ
ಯೋಚನೆಮಾಡುವುದಿಲ್ಲ

ಚಂ||ಎನೆಯನೆ ರತ್ನ ರಶ್ಮಿ
ಜಟಿಳಂ ಮಕುಟಂ
ಮಣಿಕುಂಡಳಂ ಕನ
ತ್ಕನಕ ಪಿಶಂಗ ದೇಹರುಚಿ
ನೀಳಸರೋಜವನಂಗಳಾಗಳು
|
ಳ್ಳನಿತುಮರಲ್ವವೋಲ್
ಪೊಳೆವ

ಕಣ್ಗಳುಮುಚ್ಚುವಿನೀಯೆ
ವಿಕ್ರಮಾ
ರ್ಜುನನ ಮನಕ್ಕೆ
ತೋಱಿದನಿಳಾಮರನಂದಮ
ರೇಂದ್ರರೂಪಮಂ|| ೭ ||

ಪದ್ಯ-೭:ಪದವಿಭಾಗ-
ಅರ್ಥ:ಎನೆಯನೆ
(ಎನ್ನುತ್ತಿರುವಾಗಲೇ) ರತ್ನ ರಶ್ಮಿ
ಜಟಿಳಂ ಮಕುಟಂ (ರತ್ನಗಳ
ಕಾಂತಿಯು ಹೆಣೆದಿರುವ
ಕಿರೀಟವೂ) ಮಣಿಕುಂಡಳಂ

ಕನತ್ಕನಕ ಪಿಶಂಗ ದೇಹರುಚಿ
(ರತ್ನಖಚಿತವಾದ
ಕಿವಿಯಾಭರಣವೂ
ಹೊಳೆಯುವ ಚಿನ್ನದಂತೆ
ಕೆಂಪುಮಿಶ್ರವಾದ
ಹೊಂಬಣ್ಣದ
ದೇಹಕಾಂತಿಯೂ)
ನೀಳಸರೋಜ ವನಂಗಳು
ಆಗಳು ಉಳ್ಳ ಅನಿತುಂ
ಅರಲ್ವವೋಲ್ (ಕನ್ನೆ ದಿಲೆಯ
ವನಗಳನ್ನು ಪೂರ್ಣವಾಗಿ

ಅರಳುವ ಹಾಗೆ ಮಾಡುವ)
ಪೊಳೆವ ಕಣ್ಗಳುಂ ಅಟ್ಟಿಱಿನು
(ಪ್ರೀತಿಯನ್ನು) ಈಯೆ
ವಿಕ್ರಮಾರ್ಜುನನ ಮನಕ್ಕೆ
(ಸಾವಿರ ಕಣ್ಣುಗಳೂ
ವಿಕ್ರಮಾರ್ಜುನನ ಮನಸ್ಸಿಗೆ
ಪ್ರೀತಿಯನ್ನುಂಟುಮಾಡುತ್ತಿರ
ಲು) ತೋಱಿದನು
ಇಳಾಮರಂ (ಇಳೆಯ ಅಮರ-
ಭೂಸುರ, ಬ್ರಾಹ್ಮಣ) ಅಂದು
ಅಮರೇಂದ್ರ ರೂಪಮಂ (ಆ

ಬ್ರಾಹ್ಮಣನ ವೇಷದಲ್ಲಿದ್ದ ಇಂದ್ರನು ತನ್ನ ನಿಜಸ್ವರೂಪವನ್ನು ತೋರಿಸಿದನು).

ಪದ್ಯ-೭:ಅರ್ಥ:ಎನ್ನುತ್ತಿರುವಾಗಲೇ, ರತ್ನಗಳ ಕಾಂತಿಯು ಹೆಣೆದಿರುವ ಕಿರೀಟವೂ, ರತ್ನಖಚಿತವಾದ ಕಿವಿಯಾಭರಣವೂ ಹೊಳೆಯುವ ಚಿನ್ನದಂತೆ ಕೆಂಪುಮಿಶ್ರವಾದ

ಹೊಂಬಣ್ಣದ
ದೇಹಕಾಂತಿಯೂ ಕನ್ನೆ
ದಿಲೆಯ ವನಗಳನ್ನು
ಪೂರ್ಣವಾಗಿ ಅರಳುವ ಹಾಗೆ
ಮಾಡುವ ಸಾವಿರ ಕಣ್ಣುಗಳೂ
ವಿಕ್ರಮಾರ್ಜುನನ ಮನಸ್ಸಿಗೆ
ಪ್ರೀತಿಯನ್ನುಂಟುಮಾಡುತ್ತಿರ
ಲು ಆ ಬ್ರಾಹ್ಮಣನ
ವೇಷದಲ್ಲಿದ್ದ ಇಂದ್ರನು ತನ್ನ
ನಿಜಸ್ವರೂಪವನ್ನು
ತೋರಿಸಿದನು.

ವ|| ಅಂತು ತನ್ನ ಸಹಜರೂಪಮಂ ತೋಱಿ ಮನದಱ್ಕಱಿಂ ತೋಱಲೆಂದು ಮಗನನಪ್ಪಿಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ಸಹಜರೂಪಮಂ ತೋಱಿ (ತೋರೆ- ತೋರಿಸಲು)ಮನದ ಅಱ್ಕಱಿಂ (ಮನಸ್ಸಿನ ಪ್ರೀತಿಯನ್ನು) ತೋಱಲೆಂದು ಮಗನನಪ್ಪಿಕೊಂಡು-

ವಚನ:ಅರ್ಥ: ಹಾಗೆ ತನ್ನ ನಿಜ ರೂಪವನ್ನು ತೋರಿಸಿ, ಮನಸ್ಸಿನ ಪ್ರೀತಿಯನ್ನು ತೋರಬೇಕೆಂದು ಮಗನನ್ನು ತಬ್ಬಿಕೊಂಡು -

ಕಂ||
ಸಾಧಿಸುವೊಡಮರಿನೃಪಂ
ಸಾಧಿಸುವೊಡಮಸ್ತ್ರಚಯಮ
ನಿನ್ನುಂ ತನುವಂ|
ಬಾಧಿಸು ತಪೋಗ್ನಿಯಿಂದಾ

ರಾಧಿಸು ನೀಂ ಮಗನೆ

ದುರಿತಹರನಂ ಹರನಂ|| ೮ ||

ಪದ್ಯ-೮:ಪದವಿಭಾಗ-

ಅರ್ಥ:ಸಾಧಿಸುವೊಡಂ

ಅರಿನೃಪಂ ಸಾಧಿಸುವೊಡಂ

ಅಸ್ತ್ರಚಯಮನು (ನೀನು

ಶತ್ರುರಾಜರನ್ನು

ಗೆಲ್ಲುವುದಕ್ಕಾಗಿ ಬಾಣ(ಅಸ್ತ್ರ)

ಸಮೂಹವನ್ನು

ಪಡೆಯಬೇಕಾದರೆ) ಇನ್ನುಂ

ತನುವಂ ಬಾಧಿಸು

ತಪೋಗ್ನಿಯಿಂದ (ಇನ್ನೂ ತಪೋಗ್ನಿಯಿಂದ ನಿನ್ನ ಶರೀರವನ್ನು ಇನ್ನೂ ದಂಡಿಸು) ಆರಾಧಿಸು ನೀಂ ಮಗನೆ ದುರಿತಹರನಂ ಹರನಂ (ಪಾಪವನ್ನು ಹೋಗಲಾಡಿಸುವ ಶಿವನನ್ನು ನೀನು ಆರಾಧನೆ ಮಾಡು)

ಪದ್ಯ-೮:ಅರ್ಥ: ಮಗನೇ ನೀನು ಶತ್ರುರಾಜರನ್ನು ಗೆಲ್ಲುವುದಕ್ಕಾಗಿ ಬಾಣ(ಅಸ್ತ್ರ)

ಸಮೂಹವನ್ನು

ಪಡೆಯಬೇಕಾದ ಪಕ್ಷದಲ್ಲಿ

ಇನ್ನೂ ತಪೋಗ್ನಿಯಿಂದ ನಿನ್ನ

ಶರೀರವನ್ನು ಇನ್ನೂ ದಂಡಿಸು.

ಪಾಪವನ್ನು ಹೋಗಲಾಡಿಸುವ

ಶಿವನನ್ನು ನೀನು ಆರಾಧನೆ

ಮಾಡು, ಎಂದನು ಇಂದ್ರ.

ಕಂ||ಎಂದು ತಿರೋಹಿತನಾಗಿ

ಪು

ರಂದರನುಂ ಪೋದನಿತ್ತ

ತಪದೊಳ್ ನರನಿಂ|

ತೊಂದಿ ನಿಲೆ ತಪದ ಬಿಸುಪಿಂ ಬೆಂದಱಿದುದು ವನದೊಳುಳ್ಳ ತಪಸಿಯರ ತಪಂ|| ೯||

ಪದ್ಯ-೯:ಪದವಿಭಾಗ-ಅರ್ಥ:ಎಂದು ತಿರೋಹಿತನಾಗಿ (ಅದೃಶ್ಯನಾಗಿ) ಪುರಂದರನುಂ ಪೋದನು ಇತ್ತ (ಇಂದ್ರನು ಹೋದನು)ಇತ್ತ ತಪದೊಳ್ ನರನು ಇಂತೊಂದಿ ನಿಲೆ (ಇತ್ತ ಈ ಕಡೆ ಅರ್ಜುನನು

ತಪಸ್ಸಿನಲ್ಲಿ ನಿರತನಾಗಿರಲು) ತಪದ ಬಿಸುಪಿಂ ಬೆಂದು ಅೞಿದುದು (ತಪಸ್ಸಿನ ಬೇಗೆಯಿಂದ ಬೆಂದು ನಾಶವಾದುವು) ವನದೊಳುಳ್ಳ ತಪಸಿಯರ ತಪಂ (ಆ ಕಾಡಿನಲ್ಲಿದ್ದ ತಪಸ್ವಿಗಳ ತಪಸ್ಸೆಲ್ಲವೂ)

ಪದ್ಯ-೯:ಅರ್ಥ: ಎಂಬುದಾಗಿ ಹೇಳಿ ಇಂದ್ರನು ಅದೃಶ್ಯನಾಗಿ ಹೋದನು. ಇತ್ತ ಈ ಕಡೆ

ಅರ್ಜುನನು ತಪಸ್ಸಿನಲ್ಲಿ ನಿರತನಾಗಿರಲು, ತಪಸ್ಸಿನ ಬೇಗೆಯಿಂದ ಆ ಕಾಡಿನಲ್ಲಿದ್ದ ತಪಸ್ವಿಗಳ ತಪಸ್ಸೆಲ್ಲವೂ ಬೆಂದು ನಾಶವಾದುವು.

ಕಂ||ಖರಕರಕಿರಣಾವಳಿಯಂ
ಪರಿದೆಬ್ಬಿಟ್ಟಿದುವು ಪಗಲಿರುಳ್
ಶಶಿರುಚಿಯಂ|
ಪರಿಭವಿಸಿ ನಭಮನಡರ್ದುವು
ನರೇಂದ್ರತಾಪಸತಪೋಮ
ಯೂಖಾವಳಿಗಳ್|| ೧೦||

ಪದ್ಯ-೧೦:ಪದವಿಭಾಗ-ಅರ್ಥ:ಖರಕರ (ಸೂರ್ಯ) ಕಿರಣಾವಳಿಯಂ ಪರಿದೆಬ್ಬಿಟ್ಟಿದುವು ಪಗಲ್ (ಅರ್ಜುನನ ತಪಸ್ಸಿನ ಕಿರಣಸಮೂಹಗಳು ಹಗಲಿನಲ್ಲಿ ಸೂರ್ಯಕಿರಣಗಳ ಸಮೂಹವನ್ನು ಹಿಮ್ಮೆಟ್ಟಿ ಎಬ್ಬಿಸಿ ಓಡಿಸಿದುವು) ಇರುಳ್ ಶಶಿರುಚಿಯಂ ಪರಿಭವಿಸಿ ನಭಮನು ಅಡರ್ದುವು

(ರಾತ್ರಿಯಲ್ಲಿ ಚಂದ್ರನ
ಕಾಂತಿಯನ್ನು ಹಿಯ್ಯಾಳಿಸಿ
ಆಕಾಶಕ್ಕೇರಿದುವು)
ನರೇಂದ್ರತಾಪಸ ತಪೋ
ಮಯೂಖ ಆವಳಿಗಳ್
(ಅರ್ಜುನನ ತಪಸ್ಸಿನ
ಕಿರಣಸಮೂಹಗಳು)
ಪದ್ಯ-೧೦:ಅರ್ಥ: .
ರಾಜತಪಸ್ವಿ ಅರ್ಜುನನ
ತಪಸ್ಸಿನ ಕಿರಣಜ್ವಾಲೆಗಳು
ಹಗಲಿನಲ್ಲಿ ಸೂರ್ಯಕಿರಣಗಳ

ಸಮೂಹವನ್ನು ಹಿಮ್ಮೆಟ್ಟಿ
ಎಬ್ಬಿಸಿ ಓಡಿಸಿದುವು.
ರಾತ್ರಿಯಲ್ಲಿ ಚಂದ್ರನ
ಕಾಂತಿಯನ್ನು ಹಿಯ್ಯಾಳಿಸಿ
ಆಕಾಶಕ್ಕೇರಿದುವು.

ವ|| ಅಂತುಗ್ರೋಗ್ರತಪಂಗೆಯ್ಯೆ ತತ್ತಪತ್ಸಪನವಿಪುಳಮರೀಚಿಗಳ್ ತಮಗೆ ತಪವಿಘಾತಮಂ ಮಾಡುವುದುಮಿಂದ್ರಕೀಲನಗೇಂದ್ರದ ತಪೋಧನರೆಲ್ಲಂ ನೆರೆದು ಬಂದು ಕೈಲಾಸದೊಳ್

ವಿಳಾಸಂಬೆರಸು ಗಿರಿಜೆಯೊಳ್ ತಳ್ತಿರ್ದ ಬಾಳೇಂದುಚೂಡಾಮಣಿಗೆ ಸಾಮಂತಚೂಡಾಮಣಿಯ ತಪಪ್ರಭಾವಮನಿಂತೆಂದು ಬಿನ್ನಪಂಗೆಯ್ದರ್-

ವಚನ:ಪದವಿಭಾಗ-

ಅರ್ಥ:ಅಂತುಲು ಉಗ್ರೋಗ್ರ ತಪಂಗೆಯ್ಯೆ ತತ್ತಪತ್ಸಪನವಿಪುಳ (ತತ್ ತಪಸ್ ಸಪನ(ತಪನ) ವಿಪುಳ)

ಮರೀಚಿಗಳ್ (ಆ
ತಪೋಗ್ನಿಯ ವಿಶೇಷ
ಕಿರಣಗಳು) ತಮಗೆ
ತಪವಿಘಾತಮಂ
ಮಾಡುವುದುಂ
ಇಂದ್ರಕೀಲನಗೇಂದ್ರದ
ತಪೋಧನರೆಲ್ಲಂ ನೆರೆದು
ಬಂದು (ಆ ತಪೋಗ್ನಿಯ
ವಿಶೇಷ ಕಿರಣಗಳು ತಮ್ಮ
ತಪಸ್ಸಿಗೆ
ಹಾನಿಯನ್ನುಂಟುಮಾಡಲು

ಇಂದ್ರಕೀಲಪರ್ವತದಲ್ಲಿದ್ದ
ತಪೋಧನರೆಲ್ಲರೂ
ಒಟ್ಟುಗೂಡಿ ಬಂದು)
ಕೈಲಾಸದೊಳ್
ವಿಳಾಸಂಬೆರಸು
(ಕೈಲಾಸಪರ್ವತದಲ್ಲಿ
ವಿಲಾಸದಿಂದ ಸೇರಿ,)
ಗಿರಿಜೆಯೊಳ್ ತಳ್ತಿರ್ದ
ಬಾಳೇಂದುಚೂಡಾಮಣಿಗೆ
(ಪಾರ್ವತಿಯೊಡನಿದ್ದ
ಶಿವನಿಗೆ)

ಸಾಮಂತಚೂಡಾಮಣಿಯ ತಪಪ್ರಭಾವಮನು ಇಂತೆಂದು ಬಿನ್ನಪಂಗೆಯ್ದರ್ (ಸಾಮಂತಚೂಡಾಮಣಿ ಅರ್ಜುನನ ತಪಸ್ಸಿನ ಪ್ರಭಾವವನ್ನು ಹೀಗೆಂದು ವಿಜ್ಞಾಪನೆ ಮಾಡಿದರು-)-

ವಚನ:ಅರ್ಥ:ವ|| ಹಾಗೆ ಅತ್ಯುಗ್ರಹವಾದ ತಪಸ್ಸನ್ನು ಮಾಡಲು ಆ ತಪೋಗ್ನಿಯ ವಿಶೇಷ ಕಿರಣಗಳು ತಮ್ಮ

ತಪಸ್ಸಿಗೆ
ಹಾನಿಯನ್ನುಂಟುಮಾಡಲು
ಇಂದ್ರಕೀಲಪರ್ವತದಲ್ಲಿದ್ದ
ತಪೋಧನರೆಲ್ಲರೂ
ಒಟ್ಟುಗೂಡಿ ಬಂದು
ಕೈಲಾಸಪರ್ವತದಲ್ಲಿ
ವಿಲಾಸದಿಂದ ಸೇರಿ,
ಪಾರ್ವತಿಯೊಡನಿದ್ದ ಶಿವನಿಗೆ
ಸಾಮಂತಚೂಡಾಮಣಿ
ಅರ್ಜುನನ ತಪಸ್ಸಿನ

ಪ್ರಭಾವವನ್ನು ಹೀಗೆಂದು
ವಿಜ್ಞಾಪನೆ ಮಾಡಿದರು-

<u>ಶಿವನಲ್ಲಿ ಮುನಿಗಳ ದೂರು</u>

ಮಲ್ಲಿಕಾಮಾಲೆ||
ಆವನೆಂದಱಿಯಲ್ಕೆ
ಬಾರದಪೂರ್ವನೊರ್ವನರಾತಿ
ವಿ
ದ್ರಾವಣಂ ತಪಕೆಂದು
ನಿಂತೊಡೆ
ತತ್ತಪೋಮಯಪಾವಕಂ|

**ದಾವಪಾವಕನಂತೆವೊೞ್
ಸುಡೆ ಬೆಂದುವೆಮ್ಮ ತಪಂಗಳಿ
ನ್ನಾವ
ಶೈಳದೊಳಿರ್ಪೆವಿರ್ಪೆಡೆವೇೞಿ
ನೀಂ ತ್ರಿಪುರಾಂತಕಾ|| ೧೧ ||**

ಪದ್ಯ-೧೧:ಪದವಿಭಾಗ-

ಅರ್ಥ: ಆವನೆಂದು ಅಱಿಯಲ್ಕೆ ಬಾರದು ಅಪೂರ್ವನೊರ್ವಂ ಅರಾತಿವಿದ್ರಾವಣಂ ತಪಕೆಂದು ನಿಂತೊಡೆ (ಹಿಂದೆಂದೂ

ಕಾಣದಿರುವ ಒಬ್ಬ ಅಪೂರ್ವ
ವ್ಯಕ್ತಿ, ಶತ್ರುಸಂಹಾರಕನಾದ
ಅವನು ತಪಸ್ಸಿಗೆಂದು
ನಿಂತಾಗ) ತತ್
ತಪೋಮಯಪಾವಕಂ
(ಅವನ ತಪಸ್ಸಿನಿಂದುಂಟಾದ
ಜ್ವಾಲೆಯಿಂದ) ದಾವ
ಪಾವಕನಂತೆವೋಲ್ ಸುಡೆ
(ಬೆಂಕಿಯು ಕಾಡಕಿಚ್ಚನಂತೆ
ಸುಡಲು ಹಾಗೆ) ಬೆಂದುವೆಮ್ಮ
ತಪಂಗಳು ಇನ್ನಾವ (ನಮ್ಮ

ತಪಸ್ಸುಗಳೆಲ್ಲ ಬೆಂದು ಹೋದುವು. ಇನ್ನು ಯಾವ-) ಶೈಳದೊಳು ಇರ್ಪೆವು, ಇರ್ಪೆಡೆ ವೇಟಿ ನೀಂ ತ್ರಿಪುರಾಂತಕಾ (ಬೇರೆ ಯಾವ ಪರ್ವತದಲ್ಲಿರೋಣ, ನಾವು ಇರಬೇಕಾದ ಸ್ಥಳವನ್ನು ಶಿವನೇ ನೀನು ಹೇಳು)

ಪದ್ಯ-೧೧:ಅರ್ಥ:ಯಾರೆಂದು ತಿಳಿಯಲು ಆಗುವುದಿಲ್ಲ. ಹಿಂದೆಂದೂ ಕಾಣದಿರುವ ಒಬ್ಬ

ಅಪೂರ್ವ ವ್ಯಕ್ತಿ,
ಶತ್ರುಸಂಹಾರಕನಾದ ಅವನು
ತಪಸ್ಸಿಗೆಂದು ನಿಂತಾಗ ಅವನ
ತಪಸ್ಸಿನಿಂದುಂಟಾದ
ಜ್ವಾಲೆಯಿಂದ ಬೆಂಕಿಯು
ಕಾಡಕಿಚ್ಚನಂತೆ ಸುಡಲು ನಮ್ಮ
ತಪಸ್ಸುಗಳೆಲ್ಲ ಬೆಂದು
ಹೋದುವು. ಬೇರೆ ಯಾವ
ಪರ್ವತದಲ್ಲಿರೋಣ, ನಾವು
ಇರಬೇಕಾದ ಸ್ಥಳವನ್ನು ಶಿವನೇ
ನೀನು ಹೇಳು

ಕಂ|| ಆರೊಪಿತಚಾಪಂ ಸಂ
ಧಾರಿತಕವಚಂ
ಧೃತೋಗ್ರಶರಯುಗಂ ತಾ|
ನಾರಂದಮಲ್ಲವಂ ತ್ರಿಪು
ರಾರೀ ಕೇಳ್ ತ್ರಿಪುರಮಿಸುವ
ನಿನ್ನನೆ ಪೋಲ್ವಂ|| ೧೨ ||

ಪದ್ಯ-೧೨:ಪದವಿಭಾಗ-ಅರ್ಥ:ಆರೊಪಿತಚಾಪಂ ಸಂಧಾರಿತಕವಚಂ (ಹೆದೆಯೇರಿಸಿದ ಬಿಲ್ಲು, ತೊಟ್ಟ ಕವಚ) ಧೃತೋಗ್ರ, ಶರಯುಗಂ

ತಾನು ಆರಂದಂ ಅಲ್ಲ ಅವಂ ತ್ರಿಪುರಾರೀ ಕೇಳ್ (ಇವನ್ನುಳ್ಳ ಅವನು ಯಾವ ರೀತಿಯವನೂ ಅಲ್ಲ. ಪರಶಿವನೇ ಕೇಳು,) ತ್ರಿಪುರಂ ಇಸುವ ನಿನ್ನನೆ ಪೋಲ್ವಂ (ತ್ರಿಪುರಾಸುರಸಂಹಾರಕ್ಕೆ ಬಾಣಸಂಧಾನ ಮಾಡಿದ ನಿನ್ನನ್ನೇ ಹೋಲುತ್ತಾನೆ) ಎಂದರು.

ಪದ್ಯ-೧೨:ಅರ್ಥ:ಹೆದೆಯೇರಿಸಿದ ಬಿಲ್ಲು, ತೊಟ್ಟ ಕವಚ, ಬೆನ್ನಲ್ಲಿ ಧರಿಸಿರುವ ಭಯಂಕರವಾದ ಎರಡು ಬತ್ತಳಿಕೆಗಳು. ಇವನ್ನುಳ್ಳ ಅವನು ಯಾವ ರೀತಿಯವನೂ ಅಲ್ಲ. ಪರಶಿವನೇ ಕೇಳು, ತ್ರಿಪುರಾಸುರಸಂಹಾರಕ್ಕೆ ಬಾಣಸಂಧಾನ ಮಾಡಿದ

ನಿನ್ನನ್ನೇ ಹೋಲುತ್ತಾನೆ ಎಂದರು.

ವ|| ಎಂಬುದುಮದೆಲ್ಲಮಂ ಕೇಳ್ದಾತನಾವನೆಂಬುದನಱಿಯಲೆಂದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅದೆಲ್ಲಮಂ ಕೇಳ್ದು ಆತನು ಆವನು ಎಂಬುದನು ಅಱಿಯಲೆಂದು(ತಿಳಿಯಬೇಕೆಂದು)-

ವಚನ:ಅರ್ಥ:ಎಂದುದೆಲ್ಲವ
ನ್ನೂ ಕೇಳಿ ಅವನು
ಯಾರೆಂಬುದನ್ನು
ತಿಳಿಯಬೇಕೆಂದು-

ಕಂ|| ಧ್ಯಾನದೊಳಭವಂ
ನೆರೆದಿನಿ
ಸಾನುಮನರೆ ಮುಚ್ಚಿ ಕಣ್ಗಳಂ
ನಿಶ್ಚಳಿತಂ|
ತಾನಿರ್ದು ಮರೆದು ಕೆಂದಿದ
ಮೀನಂ ತಳ್ತಾಡದಿರ್ದ
ಮಡುವಂ ಪೋಲ್ತಂ|| ೧೩ ||

ಪದ್ಯ-೧೩:ಪದವಿಭಾಗ-ಅರ್ಥ:ಧ್ಯಾನದೊಳು ಅಭವಂ (ಶಿವನು) ನೆರೆದು ಇನಿಸಾನುಮಂ (ಬಹಳ ಸ್ವಲ್ಪ) ಅರೆ ಮುಚ್ಚಿ ಕಣ್ಗಳಂ ನಿಶ್ಚಳಿತಂ ತಾನಿರ್ದು (ತಾನು ನಿಶ್ಚಲನಾಗಿದ್ದು) ಮರೆದು ಕೆಂದಿದಮೀನಂ ತಳ್ತು ಆಡದಿರ್ದ ಮಡುವಂ ಪೋಲ್ತಂ (ಮೈಮರೆತು ಮಲಗಿರುವ ಮೀನುಗಳಿಂದ

ಕೂಡಿದ ನಿಶ್ಚಲವಾಗಿರುವ ಮಡುವನ್ನು ಹೋಲುತ್ತಿದ್ದನು)

ಪದ್ಯ-೧೩:ಅರ್ಥ:ಶಿವನು ಧ್ಯಾನದಲ್ಲಿ ಪೂರ್ಣ ಕಣ್ಣುಗಳನ್ನು ಅರ್ಧಮುಚ್ಚಿ ತಾನು ನಿಶ್ಚಲನಾಗಿದ್ದು ಮೈಮರೆತು ಮಲಗಿರುವ ಮೀನುಗಳಿಂದ ಕೂಡಿದ ನಿಶ್ಚಲವಾಗಿರುವ ಮಡುವನ್ನು ಹೋಲುತ್ತಿದ್ದನು

ವ|| ಅಂತು ಪೋಲ್ತು
ದಿವ್ಯಜ್ಞಾನದೊಳ್
ಮಹೇಶ್ವರನುದಾರಮಹೇಶ್ವರ
ನಪ್ಪುದನಱಿದು ಬೆರಲಂ
ಮಿಡಿದು ಮುಗುಳ್ನಗೆ ನಕ್ಕು
ನೆನೆದಾತಂಗೆ ತಕ್ಕುದನಾನೆ
ಬಲ್ಲೆನೆಂದು ಮುನೀಂದ್ರ
ವೃಂದಮಂ ಪೋಗಲ್ವೇೞ್ದು
ಮುನ್ನ ದೇವೇಂದ್ರಂ ತನಗೆ
ಮೂಕದಾನವನ ಪುಯ್ಯಲಂ
ಬಿನ್ನಪಂಗೆಯ್ದುದನವಧಾರಿಸಿ

ಮೂಕದಾನವನಾದಿವರಾಹ
ರೂಪದೊಳಿರ್ದುದುಮನಱಿ
ದು ಮನುಜ
ಮಾಂಧಾತನಿಂದಮಾ
ದೈತ್ಯನಂ ಕೊಲಿಸಲುಂ
ಸಾಹಸಾಭರಣನೊಳೇನಾನು
ಮೊಡಂಬಡಂ ಮಾಡಿ
ಮಾಯಾಯುದ್ಧದೊಳಾತನ
ಸಾಹಸದ ಬಲದ
ಬಿಲ್ಲಾಳ್ತನದಳವಿಗಳನಳೆದು
ನೋಡಿ

ವರದನಪ್ಪೆನೆಂಬುದುಮಂ ಬಗೆದು-

ವಚನ:ಪದವಿಭಾಗ-

ಅರ್ಥ:ಅಂತು ಪೋಲ್ತು ದಿವ್ಯಜ್ಞಾನದೊಳ್ ಮಹೇಶ್ವರನು (ಹಾಗೆ ಹೋಲಿಕೆಹೊಂದಿ ತನ್ನ ದಿವ್ಯಜ್ಞಾನದಿಂದ ಶಿವನು) ಉದಾರಮಹೇಶ್ವರನು ಅಪ್ಪುದನು ಅಱಿದು (ಅರ್ಜುನನು ಎಂದು ಅರಿತು)

ಬೆರಲಂ ಮಿಡಿದು (ಚಿಟಿಕೆ
ಹೊಡೆದು) ಮುಗುಳ್ನಗೆ ನಕ್ಕು
ನೆನೆದ ಆತಂಗೆ ತಕ್ಕುದನಾನೆ
ಬಲ್ಲೆನೆಂದು ಮುನೀಂದ್ರ
ವೃಂದಮಂ ಪೋಗಲ್ವೇೞ್ದು
(ಹೋಗಲು ಹೇಳಿ-) ಮುನ್ನ
ದೇವೇಂದ್ರಂ ತನಗೆ
ಮೂಕದಾನವನ ಪುಯ್ಯಲಂ
ಬಿನ್ನಪಂಗೆಯ್ದುದನು
ಅವಧಾರಿಸಿ (ಹಿಂದೆ
ದೇವೇಂದ್ರನು ತನಗೆ

ಮೂಕದಾನವನಿಂದಾದ
ಕೇಡನ್ನು ತನ್ನೊಡನೆ
ವಿಜ್ಞಾಪಿಸಿಕೊಂಡುದನ್ನು
ಜ್ಞಾಪಿಸಿಕೊಂಡು)
ಮೂಕದಾನವನ
ಆದಿವರಾಹರೂಪದೊಳು
ಇರ್ದುದುಮಂ ಅಱಿದು (ಆ
ಮೂಕದಾನವನು
ಆದಿವರಾಹರೂಪದಲ್ಲಿರುವು
ದನ್ನು ತಿಳಿದು) ಮನುಜ
ಮಾಂಧಾತನಿಂದಂ ಆ

ದೈತ್ಯನಂ ಕೊಲಿಸಲುಂ
(ಅರ್ಜುನನಿಂದ ಆ ದೈತ್ಯನನ್ನು
ಕೊಲ್ಲಿಸಲೂ,)
ಸಾಹಸಾಭರಣನೊಳು
ಏನಾನುಂ ಒಡಂಬಡಂ ಮಾಡಿ
(ಅರ್ಜುನನೊಡನೆ
ಏನಾದರೂ ಕೀಟಲೆ ಮಾಡಿ)
ಮಾಯಾಯುದ್ಧದೊಳು
ಆತನ ಸಾಹಸದ ಬಲದ
ಬಿಲ್ಲಾಳ್ತನದ ಅಳವಿಗಳನು
ಅಳೆದು ನೋಡಿ

(ಮಾಯಾಯುದ್ಧದಲ್ಲಿ ಆತನ ಸಾಹಸದ ಚಲದ ಬಲದ ಬಿಲ್ಲಾಳ್ತನದ ಶಕ್ತಿಯನ್ನು ಅಳೆದು ನೋಡಿ,) ವರದನು ಅಪ್ಪೆನೆಂಬುದುಮಂ ಬಗೆದು (ವರವನ್ನು ಕೊಡುವವನಾಗುತ್ತೇನೆ ಎಂದು ನಿಶ್ಚಯಿಸಿ)-

ವಚನ:ಅರ್ಥ:ಹಾಗೆ ಹೋಲಿಕೆಹೋದಿ ತನ್ನ ದಿವ್ಯಜ್ಞಾನದಿಂದ ಶಿವನು,

ತಪಸ್ಸು ಮಾಡುತ್ತಿದ್ದವನು ಉದಾರಮಹೇಶ್ವರನಾದ ಅರ್ಜುನನು ಎಂದು ತಿಳಿದನು. (ಸಂತೋಷದಿಂದ) ಬೆರಳನ್ನು ಚಿಟಿಕೆಹೊಡೆದು, ಹುಸಿನಗೆ ನಕ್ಕು ಜ್ಞಾಪಿಸಿಕೊಂಡು ಆತನಿಗೆ ಯೋಗ್ಯವಾದುದನ್ನು ಮಾಡುವುದಕ್ಕೆ ನಾನು ಬಲ್ಲೆ, ಎಂದು ಋಷಿಶ್ರೇಷ್ಠರ ಸಮೂಹವನ್ನು ಹೋಗಲು ಹೇಳಿದನು. ಹಿಂದೆ

ದೇವೇಂದ್ರನು ತನಗೆ ಮೂಕದಾನವನಿಂದಾದ ಕೇಡನ್ನು ತನ್ನೊಡನೆ ವಿಜ್ಞಾಪಿಸಿಕೊಂಡುದನ್ನು ಜ್ಞಾಪಿಸಿಕೊಂಡನು. ಆ ಮೂಕದಾನವನು ಆದಿವರಾಹರೂಪದಲ್ಲಿರುವು ದನ್ನು ತಿಳಿದು ಅರ್ಜುನನಿಂದ ಆ ದೈತ್ಯನನ್ನು ಕೊಲ್ಲಿಸಲೂ, ಅರ್ಜುನನೊಡನೆ ಏನಾದರೂ ಕೀಟಲೆ ಮಾಡಿ

ಮಾಯಾಯುದ್ಧದಲ್ಲಿ ಆತನ ಸಾಹಸದ ಚಲದ ಬಲದ ಬಿಲ್ಲಾಳ್ತನದ ಶಕ್ತಿಯನ್ನು ಅಳೆದು ನೋಡಿ ; ಅನಂತರ ಅವನಿಗೆ ವರದ (ವರವನ್ನು ಕೊಡುವವ)ನಾಗುತ್ತೇನೆ ಎಂದು ನಿಶ್ಚಯಿಸಿ-(ನಿಶ್ಚಯಿಸಿದನು).

ಶಿವನು ಕಿರಾತನಾಗಿ ಇಂದ್ರಕೀಲ ವನಕ್ಕೆ ಬೇಟೆಗಾಗಿ ಮುತ್ತಿಗೆ

ಚಂ|| ವನಚರನಾಗಿ ಶಂಭು
ಗಿರಿಜಾತೆಯನೋತು ಪುಳಿಂದಿ
ಮಾಡಿ ನ
ಚ್ಚಿನ ಗುಹನ ಕಿರಾತಬಲ
ನಾಯಕನಾಗಿರೆ ಮಾಡಿ
ಭೂತಮು|
ಳ್ಳನಿತುಮನೆಯ್ದೆ ಬೇಡವಡೆ
ಮಾಡಿ ಯುಗಾಂತ

ಪಯೋಧರಾಳಿ ಭೋಂ
ಕೆನೆ ಕವಿವಂದದಿಂ ಕವಿದನಾ
ಬನಮಂ
ಮೃಗಯಾನಿಧಾನಮಂ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ವನಚರನಾಗಿ ಶಂಭು, ಗಿರಿಜಾತೆಯನೋತು ಪುಳಿಂದಿ ಮಾಡಿ, (ಈಶ್ವರನು ತಾನು ಬೇಡನಾಗಿಯೂ ಪಾರ್ವತಿಯನ್ನು ಪ್ರೀತಿಯಿಂದ ಬೇಡಿತಿಯಾಗಿಯೂ ಮಾಡಿ)

ನಚ್ಚಿನ ಗುಹನ ಕಿರಾತಬಲ ನಾಯಕನಾಗಿರೆ (ತನ್ನ ನಂಬಿಕೆಗೆ ಪಾತ್ರನಾದ ಷಣ್ಮುಖನು ಬೇಡರ ಸೈನ್ಯಕ್ಕೆ ನಾಯಕನಾಗಿರುವಂತೆ ಮಾಡಿ) ಭೂತಮುಳ್ಳ ಅನಿತುಮನ ಎಯ್ದೆ ಬೇಡವಡೆ ಮಾಡಿ (ತನ್ನಲ್ಲಿರುವಷ್ಟು ಭೂತಗಣವನ್ನು ಬೇಡರ ಪಡೆಯನ್ನಾಗಿ ಮಾಡಿದನು.) ಯುಗಾಂತ ಪಯೋಧರಾಳಿ

ಭೋಂಕೆನೆ ಕವಿವ ಅಂದದಿಂ (ಪ್ರಳಯಕಾಲದ ಮೇಘಸಮೂಹವು ಇದ್ದಕ್ಕಿದ್ದಂತೆ ಕವಿಯುವ ಹಾಗೆ) ಕವಿದನು ಆ ಬನಮಂ ಮೃಗಯಾನಿಧಾನಮಂ (ಬೇಟೆಗೆ ಆಕರವಾದ ಆ ಕಾಡನ್ನು ಮುತ್ತಿದನು.)

ಪದ್ಯ-೧೪:ಅರ್ಥ:ಈಶ್ವರನು ತಾನು ಬೇಡನಾಗಿಯೂ ಪಾರ್ವತಿಯನ್ನು ಪ್ರೀತಿಯಿಂದ

ಬೇಡಿತಿಯಾಗಿಯೂ ಮಾಡಿ,
ತನ್ನ ನಂಬಿಕೆಗೆ ಪಾತ್ರನಾದ
ಷಣ್ಮುಖನು ಬೇಡರ ಸೈನ್ಯಕ್ಕೆ
ನಾಯಕನನಾಗಿರಲು,
ತನ್ನಲ್ಲಿರುವಷ್ಟು
ಭೂತಗಣವನ್ನು ಬೇಡರ
ಪಡೆಯನ್ನಾಗಿ ಮಾಡಿದನು.
ಪ್ರಳಯಕಾಲದ
ಮೇಘಸಮೂಹವು
ಇದ್ದಕ್ಕಿದ್ದಂತೆ ಕವಿಯುವ ಹಾಗೆ

ಬೇಟೆಗೆ ಆಕರವಾದ ಆ ಕಾಡನ್ನು ಶಿವನು ಮುತ್ತಿದನು

ವ|| ಅಂತು ಕವಿದೊಡಾ ಕಳಕಳಕ್ಕೇವಯಿಸಿ ವರಾಹರೂಪದ ಮೂಕದಾನವಂ-

ವಚನ:ಪದವಿಭಾಗ-

ಅರ್ಥ:ಅಂತು ಕವಿದೊಡೆ ಆ ಕಳಕಳಕ್ಕೆ ಏವಯಿಸಿ (ಆ ಕೋಲಾಹಲಶಬ್ದಕ್ಕೆ ಬೇಸರಿಸಿ)

ವರಾಹರೂಪದ

ಮೂಕದಾನವಂ-

ವಚನ:ಅರ್ಥ:ವ||ಕಾಡನ್ನು

ಶಿವನ ಪಡೆ, ಹಾಗೆ ಮುತ್ತಿದಾಗ

ಆ ಕೋಲಾಹಲಶಬ್ದಕ್ಕೆ

ಬೇಸರಿಸಿ ಹಂದಿಯ

ರೂಪದಲ್ಲಿದ್ದ ಆ

ಮೂಕದಾನವನು

ತರಳ|| ಪೊರಳೆ ವಾರಿಗಳ್

ಕಲಂಕಿದುವುರ್ದೆ

ಮೆಯ್ಯನುದಗ್ರಮಂ

ದರಮುದಂದಲುಗಿತ್ತು ಬಾಯ್ಗ್ಗಿಯೆ ದಿಗ್ಗಜಂ ಪೆಱಗಿಟ್ಟುವಾಂ|
ತರದೆ ತೊಟ್ಟನೆ ದಾಡೆಗುಟ್ಟೆ ಕಱಿಲ್ದು ತಾರಗೆಗಳ್ ನಭಂ ಬೆರಸು ಬೀೞ್ದುವು ಪೆಂಪಿದೇಂ ಪಿರಿದಾಯ್ತೊ ದೈತ್ಯವರಾಹನಾ|| ೧೫ ||

ಪದ್ಯ-೧೫:ಪದವಿಭಾಗ-ಅರ್ಥ:ಪೊರಳೆ ವಾರಿಗಳ್ ಕಲಂಕಿದುವು (ಹೊರಳಲು

ಸಮುದ್ರಗಳು ಕಲಕಿದವು)
ಉರ್ದೆ ಮೆಯ್ಯನು ಉದಗ್ರ
ಮಂದರಂ ಅದಂದು
ಅಲುಗಿತ್ತು (ಮೆಯ್ಯನ್ನು
ಉಜ್ವಲು ಎತ್ತರದ
ಮಂದರಪರ್ವತವು ಅಂದು
ಅಲುಗಾಡಿತು) ಬಾಯ್ಗೆಯೆ
(ಬಾಯಿಂದ ಡುರ್ರೆಂದು
ಕೂಗಿದರೆ) ದಿಗ್ಗಜಂ
ಪೆಱಗಿಟ್ಟುವು ಆಂತರದೆ (
ದಿಗ್ಗಜಗಳು ಸ್ವಲ್ಪ

ಹಿಮ್ಮೆಟ್ಟಿದುವು.) ತೊಟ್ಟನೆ
ದಾಡೆಗುಟ್ಟೆ ಕಲಿಲ್ದು
ತಾರಗೆಗಳ್ ನಭಂ ಬೆರಸು
ಬಿಲ್ದುವು (ಮಧ್ಯದಲ್ಲಿ
ಇದ್ದಕ್ಕಿದ್ದ ಹಾಗೆ
ಕೋರೆಹಲ್ಲುಗಳನ್ನು
ಕಡಿಯಲು ನಕ್ಷತ್ರಗಳು
ಆಕಾಶಸಹಿತ ಕಳಚಿಬಿದ್ದವು)
ಪೆಂಪಿದೇಂ ಪಿರಿದಾಯ್ತೊ
ದೈತ್ಯವರಾಹನಾ (ಹಂದಿಯ
ರೂಪದಲ್ಲಿದ್ದ ಆ ರಾಕ್ಷಸನ

ಹಿರಿಮೆಯೂ ಅದ್ಭುತವಾಯಿತೋ)

ಪದ್ಯ-೧೫:ಅರ್ಥ:

ಹೊರಳಲು ಸಮುದ್ರಗಳು ಕಲಕಿದವು, ಮೆಯ್ಯನ್ನು ಉಜ್ಜಲು ಎತ್ತರದ ಮಂದರಪರ್ವತವು ಅಂದು ಅಲುಗಾಡಿತು. ಬಾಯಿಂದ ಡುರ್ರೆಂದು ಕೂಗಿದರೆ ದಿಗ್ಗಜಗಳು ಸ್ವಲ್ಪ ಹಿಮ್ಮೆಟ್ಟಿದುವು. ಮಧ್ಯದಲ್ಲಿ

ಇದ್ದಕ್ಕಿದ್ದ ಹಾಗೆ
ಕೋರೆಹಲ್ಲುಗಳನ್ನು
ಕಡಿಯಲು ನಕ್ಷತ್ರಗಳು
ಆಕಾಶಸಹಿತ ಕಳಚಿಬಿದ್ದವು.
ಹಂದಿಯ ರೂಪದಲ್ಲಿದ್ದ ಆ
ರಾಕ್ಷಸನ ಹಿರಿಮೆಯೂ
ಅದ್ಭುತವಾಯಿತೋ

ವ|| ಅಂತಾ
ವರಾಹನಾದಿವರಾಹನಾದ
ಮುರಾಂತಕನುಮನಿಱಿಸಿ
ನೆಲಂ ಕಪ್ಪಂಗವಿಯು ಮಾಗೆ

ಬರೆ ಪೆಱಗೆ ಕೃತಕ

ಕಿರಾತನಟ್ಟುತ್ತುಂ ಬರೆ ತನ್ನತ್ತ

ಮೊಗದೆ ಬರ್ಪುದಂ

ಕಂಡಮೋಘಾಸ್ತ್ರ

ಧನಂಜಯನೊಂದಮೋಘಾ

ಸ್ತ್ರಮನಕ್ಷೂಣಬಾಣಧಿಯಿಂದ

ಮುರ್ಚಿಕೊಂಡು

ಗಾಂಡೀವದೊಳ್ ಪೂಡಿ-

ವಚನ:ಪದವಿಭಾಗ-

ಅರ್ಥ:ಅಂತು ಆ ವರಾಹನು

ಆದಿವರಾಹನಾದ

ಮುರಾಂತಕನುಮಂ ಇೞಿಸಿ (ಆದಿವರಾಹಾವತಾರ ಮಾಡಿದವಿಷ್ಣುವನ್ನು ಮೀರಿಸಿ (ತಿರಸ್ಕರಿಸಿ)) ನೆಲಂ ಕಪ್ಪಂಗವಿಯು ಮಾಗೆ ಬರೆ (ನೆಲವು ಮುಚ್ಚುವ ಮುಚ್ಚಳವಾಗುವ ಹಾಗೆ ನೆಲವನ್ನು ನಡುಗಿಸುತ್ತ ಬರುತ್ತಿರಲು) ಪೆಱಗೆ ಕೃತಕ ಕಿರಾತನು ಅಟ್ಟುತ್ತುಂ ಬರೆ (ಕೃತಕ ಕಿರಾತನಾದ ಶಿವನು

ಅದನ್ನಟ್ಟಿಕೊಂಡು ಬರಲು,)
ತನ್ನತ್ತ ಮೊಗದೆ ಬರ್ಪುದಂ
ಕಂಡ ಅಮೋಘಾಸ್ತ್ರ
ಧನಂಜಯನು ಒಂದು
ಅಮೋಘಾಸ್ತ್ರಮನು
ಅಕ್ಷೂಣಬಾಣಧಿಯಿಂದಂ
ಉರ್ಚಿಕೊಂಡು(ಬಾಣವನ್ನು
ತನ್ನ ಅಕ್ಷಯ ಬತ್ತಳಿಕೆಯಿಂದ
ಸೆಳೆದುಕೊಂಡು)
ಗಾಂಡೀವದೊಳ್ ಪೂಡಿ
(ಹೂಡಿ)-

ವಚನ:ಅರ್ಥ:|| ಆ ಹಂದಿಯು ಆದಿವರಾಹಾವತಾರ ಮಾಡಿದವಿಷ್ಣುವನ್ನು ಮೀರಿಸಿ (ತಿರಸ್ಕರಿಸಿ) ನೆಲವು ಮುಚ್ಚುವ ಮುಚ್ಚಳವಾಗುವ ಹಾಗೆ (ನೆಲವನ್ನಲ್ಲಾಡಿಸುತ್ತ) ಬರುತ್ತಿರಲು ಹಿಂಭಾಗದಿಂದ ಕೃತಕ ಕಿರಾತನಾದ ಶಿವನು ಅದನ್ನಟ್ಟಿಕೊಂಡು ಬರಲು, ತನ್ನ ಕಡೆಗೆ ಬರುತ್ತಿರುವುದನ್ನು

ಧನಂಜಯನು ಕಂಡು ಒಂದು ಅಮೋಘವಾದ ಬಾಣವನ್ನು ತನ್ನ ಅಕ್ಷಯ ಬತ್ತಳಿಕೆಯಿಂದ ಸೆಳೆದುಕೊಂಡು ಗಾಂಡೀವದಲ್ಲಿ ಹೂಡಿ- (ಹೂಡಿದನು).

ಮ|| ತೆಗೆದೆಚ್ಚರ್ಜುನನಂಬು

ತೀವೆ ತುದಿಯಿಂ ಬಾಲಂಬರಂ

ಪಂದಿ ಸೌ

ಳಗೆವೋಪಂತಿರೆ ನೋಡ

ಸಂಬಳಿಗೆವೋಯ್ತೆಂಬನ್ನೆಗಂ

ಕೊಂಡುದೊ|

ಯ್ಯಗೆ ಪಾರ್ದೆಚ್ಚ

ವೃಷಾಂಕನಂಬು ತನುವಂ

ಪಚ್ಚಂತೆ ಕೊಂಡತ್ತು ತೊ

ಟ್ಟಗೆ ವೈಮಾನಿಕಕೋಟಿಗಂದು

ಪಿರಿದೊಂದುತ್ಸಾಹಮಪ್ಪನ್ನೆಗಂ|

| ೧೬||

ಪದ್ಯ-೧೬:ಪದವಿಭಾಗ-ಅರ್ಥ:ತೆಗೆದೆಚ್ಚ ಅರ್ಜುನನ ಅಂಬು ತೀವೆ ತುದಿಯಿಂ ಬಾಲಂಬರಂ (ಹೆದೆಯೆಳೆದು

ಪ್ರಯೋಗ ಮಾಡಿದ
ಅರ್ಜುನನ ಬಾಣವು
ತುದಿಯಿಂದ ಬಾಲದವರೆಗೂ
ಹೊಕ್ಕು) ಪಂದಿ ಸೌಳಗೆ
ವ್ರೋಪಂತಿರೆ ನೋಡ
ಸಂಬಳಿಗೆವ್ರೋಯ್ತೆಂಬನ್ನೆಗಂ
(ಸೌಳೆಂದು ಶಬ್ದಮಾಡುತ್ತ
ಸೀಳಿಕೊಂಡು ಹೋಗಿ
ಸಂಪುಟದಲ್ಲಿ ಸೇರುವಂತೆ
ಮೆಯ್ಯ್ಯಲ್ಲಿಯೇ
ಅಡಗಿತೆನ್ನುವಾಗ),

ಕೊಂಡುದು ಒಯ್ಯಗೆ
(ಮೆಲ್ಲಗೆ) ಪಾರ್ದು ಎಚ್ಚ
ವೃಷಾಂಕನ ಅಂಬು ತನುವಂ
ಪಚ್ಚಂತೆ ಕೊಂಡತ್ತು
ತೊಟ್ಟಗೆ(ಕೂಡಲೆ)(ಇದನ್ನು
ನೋಡುತ್ತಿದ್ದ ಶಿವನು
ನಿಧಾನವಾಗಿ ಗುರಿಯಿಟ್ಟು
ಹೊಡೆದ ಬಾಣವು
ಶರೀರವನ್ನು ಭಾಗಮಾಡಿದ
ಹಾಗೆ ಕೂಡಲೆ ಒಳಹೊಕ್ಕಿತು.)
ವೈಮಾನಿಕಕೋಟಿಗೆ ಅಂದು

ಪಿರಿದೊಂದು ಉತ್ಸಾಹಮಪ್ಪ ಅನ್ನೆಗಂ (ವಿಮಾನದಲ್ಲಿ ಕುಳಿತು ನೋಡುತ್ತಿದ್ದ ದೇವತೆಗಳಿಗೆ ಅಂದು ಅದು ಒಂದು ದೊಡ್ಡ ಉತ್ಸವವಾಯಿತು) ಅನ್ನೆಗಂ- ಅಷ್ಟುಹೊತ್ತಿಗೆ-

ಪದ್ಯ-೧೬:ಅರ್ಥ:
ಹೆದೆಯೆಳೆದು ಪ್ರಯೋಗ ಮಾಡಿದ ಅರ್ಜುನನ ಬಾಣವು ತುದಿಯಿಂದ ಬಾಲದವರೆಗೂ

ಹೊಕ್ಕು, ಸೌಳೆಂದು
ಶಬ್ದಮಾಡುತ್ತ ಸೀಳಿಕೊಂಡು
ಹೋಗಿ ಸಂಪುಟದಲ್ಲಿ
ಸೇರುವಂತೆ ಮೆಯ್ಯಲ್ಲಿಯೇ
ಅಡಗಿತೆನ್ನುವಾಗ. ಇದನ್ನು
ನೋಡುತ್ತಿದ್ದ ಶಿವನು
ನಿಧಾನವಾಗಿ ಗುರಿಯಿಟ್ಟು
ಹೊಡೆದ ಬಾಣವು
ಶರೀರವನ್ನು ಭಾಗಮಾಡಿದ
ಹಾಗೆ ಕೂಡಲೆ ಒಳಹೊಕ್ಕಿತು.
ವಿಮಾನದಲ್ಲಿ ಕುಳಿತು

ನೋಡುತ್ತಿದ್ದ ದೇವತೆಗಳ ಸಮೂಹಕ್ಕೆ ವಿಶೇಷ ಸಂತೋಷವಾಯಿತು. ಅಷ್ಟುಹೊತ್ತಿಗೆ-

ವ|| ಅಂತು ಮೂಕದಾನವನನಾ ನೆವದೊಳೆ ಕೊಂದು ವರಾಹಾರುಣಜಲಧಾರಾರುಣ ಮಾಗಿರ್ದಾರ್ತ್ತೀಯಬಾಣಮಂ ಪರಾಕ್ರಮ ಧವಳನೊಯ್ಯನೆ ಕೊಂಡು ಬಾಣಧಿಯೊಳಿಟ್ಟು

ಪೋಗಿ ಪೊಗೊಳದೊಳ್ ಕರಚರಣಪ್ರಕ್ಷಾಳನಂಗೆಯ್ದು ಮಗುಳ್ದಿಮೇಕಪಾದ ತಪದೊಳ್ ನಿಲೆ ಗೀರ್ವಾಣನಾಥಾತ್ಮಜನಲ್ಲಿಗೆ ಗುಹನನಹಿಭೂಷಣನೆಂಬಂ ಬೇಡಿಯಟ್ಟಿದೊಡಾತಂ ಬಂದು-

ವಚನ:ಪದವಿಭಾಗ-

ಅರ್ಥ:ಅಂತು ಮೂಕದಾನವನನು ಆ

ನೆವದೊಳೆ ಕೊಂದು, ವರಾಹ
ಅರುಣಜಲ ಧಾರಾ ಅರುಣ
ಮಾಗಿರ್ದ
ಆತ್ಮೀಯಬಾಣಮಂ
(ರಕ್ತಧಾರೆಯಿಂದ ಕೆಂಪಾಗಿದ್ದ
ತನ್ನ ಬಾಣವನ್ನು) ಪರಾಕ್ರಮ
ಧವಳನು ಒಯ್ಯನೆ ಕೊಂಡು
ಬಾಣಧಿಯೊಳಿಟ್ಟು
(ಪರಾಕ್ರಮಧವಳನು
ನಿಧಾನವಾಗಿ ತೆಗೆದುಕೊಂಡು
ಬಂದು ಬತ್ತಳಿಕೆಯಲ್ಲಿ ಇಟ್ಟು)

ಪೋೀಗಿ ಪೊಗೊಳದೊಳ್ ಕರ
ಚರಣ ಪ್ರಕ್ಷಾಳನಂ ಗೆಯ್ಯು
(ಪಕ್ಕದಲ್ಲಿದ್ದ ಹೂಗೊಳದಲ್ಲಿ ಕೈ
ಕಾಲುಗಳನ್ನು ತೊಳೆದು)
ಮಗುೞ್ದುಂ ಏಕಪಾದ
ತಪದೊಳ್ ನಿಲೆ (ಪುನ
ಏಕಪಾದತಪಸ್ಸಿನಲ್ಲಿ ನಿಲ್ಲಲು)
ಗೀರ್ವಾಣನಾಥನ
ಆತ್ಮಜನಲ್ಲಿಗೆ (ಇಂದ್ರನಮಗ
ಅರ್ಜುನನಲ್ಲಿಗೆ) ಗುಹನನು
ಅಹಿಭೂಷಣನ ಎಂಬಂ

(ಅಂಬಂ) ಬೇಡಿಯಟ್ಟಿದೊಡೆ (ಶಿವನು ತನ್ನ ಬಾಣವನ್ನು ಬೇಡಲು ಗುಹನನ್ನು ಅಟ್ಟಿದೊಡೆ- ಕಳುಹಿಸಿದಾಗ-) ಆತಂ ಬಂದು-

ವಚನ:ಅರ್ಥ:ಹಾಗೆ ಮೂಕದಾನವನನ್ನು ಆ ನೆಪದಿಂದ ಕೊಂದ ಹಂದಿಯ ರಕ್ತಧಾರೆಯಿಂದ ಕೆಂಪಾಗಿದ್ದ ತನ್ನ ಬಾಣವನ್ನು ಪರಾಕ್ರಮಧವಳನು

ನಿಧಾನವಾಗಿ ತೆಗೆದುಕೊಂಡು ಬಂದು ಬತ್ತಳಿಕೆಯಲ್ಲಿ ಇಟ್ಟು, ಪಕ್ಕದಲ್ಲಿದ್ದ ಹೂಗೊಳದಲ್ಲಿ ಕೈ ಕಾಲುಗಳನ್ನು ತೊಳೆದು ಪುನ ಏಕಪಾದತಪಸ್ಸಿನಲ್ಲಿ ನಿಲ್ಲಲು ಅರ್ಜುನನ ಹತ್ತಿರಕ್ಕೆ ಸರ್ಪಾಭರಣನಾದ ಶಿವನು ತನ್ನ ಬಾಣವನ್ನು ಬೇಡಲು ಗುಹನನ್ನು ಕಳುಹಿಸಿದನು. ಅವನು ಬಂದು

ಚಂ|| ಗೊರವರೆ ಬೂದಿಯುಂ
ಜಡೆಯುಮಕ್ಕೆ ತಪಕ್ಕೆ
ತನುತ್ರಮೀ ಭಯಂ
ಕರ ಧನು
ಖಿಗ್ಗಿಮತ್ತಪರಮಿಂತೆರಡುಂ
ದೊಣೆ ತೀವಿದಂಬುಮೊಂ|
ದಿರವು ತಪಕ್ಕಿದೆಂತುಟೊ
ತಪಂಗಳುಮಿಲ್ಲಮವುಳ್ಳೊಡೀ
ಗಳೆ
ಮ್ಮರಸರ ನಚ್ಚಿತೆಚ್ಚ ಶರಮಂ
ಸೆರಗಿಲ್ಲದೆ ಕೊಂಡು ಬರ್ಪಿರೇ||

೧೭ ||

ಪದ್ಯ-೧೭:ಪದವಿಭಾಗ-ಅರ್ಥ:ಗೊರವರೆ (ತಪಸ್ವಿಗಳೇ) ಬೂದಿಯುಂ ಜಡೆಯುಂ ಅಕ್ಕೆ ತಪಕ್ಕೆ (ಬೂದಿಯೂ ಜಡೆಯೂ ತಪಸ್ಸಿಗೆ ಅಕ್ಕೆ- ಸರಿ) ತನುತ್ರಂ (ಕವಚ) ಭಯಂಕರ ಧನು ಖಡ್ಗಂ (ಖಡ್ಗ) ಅತ್ತಪರಂ (ಗುರಾಣಿ) ಇಂತೆರಡುಂ ದೊಣೆ (ಬತ್ತಳಿಕೆ) ತೀವಿದಂಬು

(ತುಂಬಿದ ಬಾಣ) ಒಂದಿರವು (ಒಂದು ಸ್ಥಿತಿ?- ಹೊಂದಿಕೊಳ್ಳಲಾರವು) ತಪಕ್ಕೆ ಇದೆಂತುಟೊ (ಇದು ಹೇಗೊ) ತಪಂಗಳುಂ ಇಲ್ಲಂ ಅವು ಉಳ್ಳೊಡೆ (ತಪಸ್ಸು ಕೂಡ ಇಲ್ಲ, ಅದು ಇದ್ದ ಪಕ್ಷದಲ್ಲಿ) ಈಗಳು ಎಮ್ಮ ಅರಸರ ನಚ್ಚಿತ ಎಚ್ಚ ಶರಮಂ (ನಮ್ಮ ರಾಜರು ನಂಬಿಕೆಯಿಂದ ಹೊಡೆದ ಬಾಣವನ್ನು) ಸೆರಗಿಲ್ಲದೆ

ಕೊಂಡು ಬರ್ಪಿರೇ
(ಭಯವಿಲ್ಲದೆ ಕೊಂಡು
ಬರುತ್ತಿದ್ದಿರಾ?)
ಪದ್ಯ-೧೭:ಅರ್ಥ:
ತಪಸ್ವಿಗಳೇ, ಬೂದಿಯೂ
ಜಡೆಯೂ ತಪಸ್ಸಿಗೆ ಸರಿ;
ಕವಚ, ಈ ಭಯಂಕರವಾದ
ಬಿಲ್ಲು ಕತ್ತಿ ಗುರಾಣಿ,
ಬಾಣದಿಂದ ತುಂಬಿದ ಈ
ಎರಡು ಬತ್ತಳಿಕೆಗಳು -ಇವು
ತಪಸ್ಸಿಗೆ

ಹೊಂದಿಕೊಳ್ಳಲಾರವು. ಇದು ಹೇಗೊ! ತಪಸ್ಸು ಕೂಡ ಇಲ್ಲ, ಅದು ಇದ್ದ ಪಕ್ಷದಲ್ಲಿ, ನಮ್ಮ ರಾಜರು ನಂಬಿಕೆಯಿಂದ (ಗುರಿಯಿಟ್ಟು) ಹೊಡೆದ ಬಾಣವನ್ನು ಭಯವಿಲ್ಲದೆ ಕೊಂಡು ಬರುತ್ತಿದ್ದಿರಾ? ಎಂದನು ಗಹನನ ವೇಶದಲ್ಲಿದ್ದ ಷಣ್ಮುಖನು.

ಕಂ|| ಅಱಿಯದೆ ತಂದೊಡಮೇನೆ

ಮ್ಮರೆಯಂಗದನೆಮ್ಮ

ಕೆಯ್ಯೊಳಟ್ಟಿಂ ನೀಮಿಂ|

ತಱಿಯುತ್ತುಂ

ಪೆಱರೊಡಮೆಯ

ನುರೆ

ಸೆವಿಡಿದಿರ್ಪಿರಿನ್ನುರುರ್ವಿಯೊ

ಳೊಳರೇ|| ೧೮ ||

ಪದ್ಯ-೧೮:ಪದವಿಭಾಗ-ಅರ್ಥ: ಅಱಿಯದೆ ತಂದೊಡಂ ಏಂ (ತಿಳಿಯದೆ ತಂದರೆ ತಾನೆ ಏನು?

(ದೋಷವಿಲ್ಲ))
ಎಮ್ಮೆರೆಯಂಗದನು ಎಮ್ಮ
ಕೆಯ್ಯೊಳ್ ಅಟ್ಟಿಂ (ನಮ್ಮ
ಯಜಮಾನರಿಗೆ ಅದನ್ನು ನನ್ನ
ಕಯ್ಯಲ್ಲಿ ಕಳುಹಿಸಿಕೊಡಿ.)
ನೀಂ ಇಂತು ಅಱಿಯುತ್ತುಂ
(ಅರಿತವರಾಗಿ) ಪೆಱರ
ಒಡಮೆಯನು ಉರೆ
ಸೆವಿಡಿದಿರ್ಪಿರಿ (ನೀವು ಹೀಗೆ
ಅರಿತವರಾಗಿದ್ದರೂ ಇತರರ
ವಸ್ತುವನ್ನು

ವಶಪಡಿಸಿಟ್ಟಿದ್ದೀರಲ್ಲ!) ಇನ್ನರ್ ಉರ್ವಿಯೊಳ್ ಒಳರೇ (ಇಂತಹವರೂ ಭೂಮಿಯಲ್ಲಿ ಇದ್ದಾರೆಯೇ?)

ಪದ್ಯ-೧೮:ಅರ್ಥ: . ತಿಳಿಯದೆ ತಂದರೆ ತಾನೆ ಏನು? (ದೋಷವಿಲ್ಲ). ನಮ್ಮ ಯಜಮಾನರಿಗೆ ಅದನ್ನು ನನ್ನ ಕಯ್ಯಲ್ಲಿ ಕಳುಹಿಸಿಕೊಡಿ. ನೀವು ಹೀಗೆ ಅರಿತವರಾಗಿದ್ದರೂ ಇತರರ

ವಸ್ತುವನ್ನು
ವಶಪಡಿಸಿಟ್ಟಿದ್ದೀರಲ್ಲ!
ಇಂತಹವರೂ ಭೂಮಿಯಲ್ಲಿ
ಇದ್ದಾರೆಯೇ?

ವ|| ಎಂದು ಕಿರಾತದೂತಂ ತನ್ನನತಿಕ್ರಮಿಸಿ ನುಡಿದುದರ್ಕೆ ಮುಳಿದು ಪರಾಕ್ರಮಧವಳನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಕಿರಾತದೂತಂ
ತನ್ನನು ಅತಿಕ್ರಮಿಸಿ

ನುಡಿದುದರ್ಕೆ ಮುಳಿದು (ಮಾತನಾಡಿದುದಕ್ಕೆ ಕೋಪಿಸಿ)ಪರಾಕ್ರಮಧವಳನು (ಅರ್ಜುನನು) ಇಂತೆಂದಂ-

ವಚನ:ಅರ್ಥ:ಎಂದು ಆ ಬೇಡನ ದೂತನಾದ ಗುಹನು ತನ್ನನ್ನು ಮೀರಿ ಮಾತನಾಡಿದುದಕ್ಕೆ ಕೋಪಿಸಿ ಪರಾಕ್ರಮಧವಳನಾದ ಅರ್ಜುನನು ಹೀಗೆಂದನು-

ಕಂ|| ದಸಿಕೊಂದಕ್ಕುಂ ಬೇಡಂ

ಗಿಸಲ್ಕೆ ದೊರೆ ಮೃಗಮನೀ

ಜಗಂಗಳನಳ್ಳಾ|

ಡಿಸುವ ಮದೀಯೋಗ್ರಾಸ್ತ್ರಂ

ಪೆಸರ್ಗೊಳಲೇಂ ತನಗೆ

ದೊರೆಯೆ ಖಳನಳವಱಿಯಂ||

೧೯ ||

ಪದ್ಯ-೧೯:ಪದವಿಭಾಗ-ಅರ್ಥ:ದಸಿಕೆ ಒಂದು ಅಕ್ಕುಂ ದೊರೆ(ಸಮಾನ)(ದಸಿಕೆ- ಚೂಪಾದ ಕಡ್ಡಿ, ಮೊಳೆಯ ಸಮಾನವಸ್ತು ಒಂದು ಸಾಕು)

ಬೇಡಂಗೆ ಇಸಲ್ಕೆ
ಮೃಗಮನು(ಬೇಡನಿಗೆ
'ಹಂದಿಯನ್ನು' ಹೊಡೆಯಲು),
ಈ ಜಗಂಗಳನು ಅಳ್ಳಾಡಿಸುವ
ಮದೀಯ ಉಗ್ರಾಸ್ತ್ರಂ (ಈ
ಲೋಕಗಳನ್ನೇ ನಡುಗಿಸುವಂತೆ
ಮಾಡುವ ನನ್ನ
ಭಯಂಕರವಾದ ಅಸ್ತ್ರದ)
ಪೆಸರ್ಗೊಳಲ್ (ಹೆಸರು
ಹೇಳಲು) ಏಂ ತನಗೆ
ದೊರೆಯೆ ಖಳನ ಅಳವ

ಅಱಿಯಂ (ಅರಿಯನು).
(ತಾನೆ ಅವನಿಗೆ (ಆ ನಿನ್ನ
ಒಡೆಯನಿಗೆ) ಸಾಧ್ಯವೇ. ಆ
ದುಷ್ಟನು ನನ್ನ ಶಕ್ತಿಯನ್ನು
ಇನ್ನೂ ತಿಳಿದಿಲ್ಲ.)
ಪದ್ಯ-೧೯:ಅರ್ಥ: ಬೇಡನಿಗೆ
(ಶಿವನಿಗ ಈ) ಒಂದು
ಪ್ರಾಣಿಯನ್ನು ಹೊಡೆಯಲು
ಒಂದು ಕಡ್ಡಿ ಸಾಕು. ಈ
ಲೋಕಗಳನ್ನೇ ನಡುಗಿಸುವಂತೆ
ಮಾಡುವ ನನ್ನ

ಭಯಂಕರವಾದ ಅಸ್ತ್ರದ ಹೆಸರು ಹೇಳಲು ತಾನೆ ಅವನಿಗೆ (ಆ ನಿನ್ನ ಒಡೆಯನಿಗೆ) ಸಾಧ್ಯವೇ. ಆ ದುಷ್ಟನು ನನ್ನ ಶಕ್ತಿಯನ್ನು ಇನ್ನೂ ತಿಳಿದಿಲ್ಲ.

ಉ|| ಏಱನೆ ಸೂಗೊಂಡು ನುಡಿವೀ ನುಡಿಯಲ್ಲದೆ ಮತ್ತಮಾಸನಂ ದೋಱುವ ಬಲ್ಪುದೋಱುವೆರ್ದೆದೋಱು

ವ ಕಯ್ಪೆಸರಂಗಳೆಮ್ಮನುಂ|

ತೇಱಿವು ಬೇಡ ಬೇಡದಿರು

ಬೇಡ

ಚಲಂಬೆರಸಂಬನಂಬನಿನ್

ಕಾಱುತೆ ಮೋದಲಾಟಿಪೊಡೆ

ನೀಂ ಬರವೇೞ್ಟುದು

ನಿನ್ನನಾಳ್ದನಂ|| ೨೦ ||

ಪದ್ಯ-೨೦:ಪದವಿಭಾಗ-

ಅರ್ಥ:ಏಱಿನೆ ಸೂರೆಗೊಂಡು

ನುಡಿವ ಈ ನುಡಿಯಲ್ಲದೆ

(ಕೇವಲ ಕಲಹವನ್ನೇ

ಉದ್ದೇಶಮಾಡಿಕೊಂಡು
ಹೇಳುವ ಈ ಮಾತಲ್ಲದೇ)
ಮತ್ತಂ ಆಸನಂದೋಱುವ
(ಉಪೇಕ್ಷೆ ತೋರಿಸುವ)
ಬಲ್ಪುದೋಱುವ
ಎರ್ದೆದೋಱುವ (ಬಲುಹು
ತೋರಿಸುವ,
ಧೈರ್ಯಮೆರೆಯುವ)
ಕಯ್ಪುಸರಂಗಳಯ ಎಮ್ಮನುಂ
(ಕಹಿಮಾತುಗಳು
ನಮ್ಮನ್ನು)ಉಂತೆ ಏಱುವು

(ನಮ್ಮಲ್ಲಿ ನೆಡೆಯವು.) ಬೇಡ ಬೇಡದಿರು ಬೇಡ ಚಲಂ ಬೆರಸಿ ಅಂಬನು (ಎಲೋ ಬೇಡ, ಬೇಡ ನಿನಗೆ, ಹಟಹಿಡಿದು ಬಾಣವನ್ನು ಕೇಳದಿರು.) ಅಂಬನು ಇನ್ನಾಂಚುತೆ (ಬಾಣವನ್ನು ಇನ್ನು ಕಾರುತ್ತಾ) ಮೋದಲು ಆಟಿಪೊಡೆ (ಅಟಕಾಯಿಸುವುದಾದರೆ- ಬಾಣದ ಮೇಲೆ ಬಾಣವನ್ನು ಕಾರಿಸುತ್ತ ಯುದ್ಧಮಾಡುವ

ಅಪೇಕ್ಷೆಯೇ ಇದ್ದರೆ) ನೀಂ ಬರವೇಳ್ಪುದು ನಿನ್ನನು ಆಳ್ದನಂ (ನೀನು ನಿನ್ನ ಯಜಮಾನನನ್ನು ಬರಹೇಳು)

ಪದ್ಯ-೨೦:ಅರ್ಥ: . ಕೇವಲ ಕಲಹವನ್ನೇ ಉದ್ದೇಶಮಾಡಿಕೊಂಡು ಹೇಳುವ ಈ ಮಾತಲ್ಲದೇ ಮತ್ತೆ ಬಲುಹು ತೋರಿಸುವ, ಧೈರ್ಯಮೆರೆಯುವ ಇಂತಹ ಕಹಿಮಾತುಗಳು ನಮ್ಮಲ್ಲಿ

ನೆಡೆಯುವು. ಈ ಕಹಿಯಾದ ಮಾತುಗಳು ನಮ್ಮ ಮೇಲೆ ಯಾವ ಪ್ರಭಾವವನ್ನೂ ಬೀರಲಾರವು (ನಮ್ಮನ್ನು ಹೆದರಿಸಲಾರವು). ಎಲೋ ಬೇಡ ನಿನಗೆ ಹಟಬೇಡ, ಬಾಣವನ್ನು ಕೇಳದಿರು. ಬಾಣದ ಮೇಲೆ ಬಾಣವನ್ನು ಕಾರಿಸುತ್ತ ಯುದ್ಧಮಾಡುವ ಅಪೇಕ್ಷೆಯೇ ಇದ್ದರೆ, ನೀನು ನಿನ್ನ ಯಜಮಾನನನ್ನು

ಬರಹೇಳು, ಎಂದನು
ಅರ್ಜುನ.

<u>ಶಿವ ಅರ್ಜುಹರ ಯುದ್ಧ</u>

**ವ|| ಎಂದು ಬಂದ
ಕಿರಾತದೂತನಂ
ವಿಕ್ರಾಂತತುಂಗಂ
ಬಗ್ಗಿಸಿದೊಡಾ ಮಾತೆಲ್ಲಮನಾ
ಮಾಱ್ಕೆಯೊಳೆ ಪೋಗಿ ಕಪಟ
ಕಿರಾತಂಗಱಿಪಿದೊಡಾತನುಂ
ಮಾಯಾಯುದ್ಧಮಂ**

ಪೊಣರ್ಚಲ್ ಬಗೆದು ಹಸ್ತ್ಯಶ್ವರಥಪದಾತಿಬಲಂಗಳನೆ ನಿತಾನುಮನಿದಿರೊಳ್ ತಂದೊಡ್ಡಿದಾಗಳ್ ಪರಸೈನ್ಯಭೈರವಂ ಮಹಾಪ್ರಳಯಭೈರವಾಕಾರ ಮಂ ಕೆಯ್ಕೊಂಡು ಪೆರಗಿಲ್ಲದೆ ಬಂದು ತಾಗಿ-

ವಚನ:ಪದವಿಭಾಗ-

ಅರ್ಥ:ಎಂದು ಬಂದ ಕಿರಾತದೂತನಂ

ವಿಕ್ರಾಂತತುಂಗಂ (ಅರ್ಜುನನು) ಬಗ್ಗಿಸಿದೊಡೆ (ಗದರಿಸಿದರೆ) ಆ ಮಾತೆಲ್ಲಮನು ಆ ಮಾಱ್ಕೆಯೊಳೆ ಪೋಗಿ ಕಪಟ ಕಿರಾತಂಗೆ ಅಱಿಪಿದೊಡೆ (ಅವನು ಆ ಮಾತೆಲ್ಲವನ್ನೂ ಆ ರೀತಿಯಲ್ಲಿಯೇ ಹೋಗಿ ಆ ಕಪಟಕಿರಾತನಾದ ಶಿವನಿಗೆ ತಿಳಿಸಿದಾಗ,) ಆತನುಂ ಮಾಯಾಯುದ್ಧಮಂ

ಪೊಣರ್ಚಲ್ ಬಗೆದು (ಆತನು ಮಾಯಾಯುದ್ಧವನ್ನು ಹೂಡಲು ಯೋಚಿಸಿ,) ಹಸತಿ ಅಶ್ವ ರಥ ಪದಾತಿ ಬಲಂಗಳನು ಎನಿತಾನುಮಂ (ಅಸಂಖ್ಯಾತ) ಇದಿರೊಳ್ ತಂದೊಡ್ಡಿದಾಗಳ್ (ಆನೆ, ಕುದುರೆ, ತೇರು ಮತ್ತು ಕಾಲಾಳು ಸೈನ್ಯವನ್ನು ಇದಿರಿನಲ್ಲಿ ತಂದೊಡ್ಡಿದಾಗ,) ಪರಸೈನ್ಯಭೈರವಂ

ಮಹಾಪ್ರಳಯಭೈರವಾಕಾರ
ಮಂ ಕೆಯ್ಕೊಂಡು
(ಅರ್ಜುನನು ಪ್ರಳಯಕಾಲದ
ಭೈರವನ ಆಕಾರವನ್ನು ತಾಳಿ)
ಸೆರಗಿಲ್ಲದೆ ಬಂದು ತಾಗಿ
(ಭಯವಿಲ್ಲದೆ ಬಂದು
ಎದುರಿಸಿ)-
ವಚನ:ಅರ್ಥ:ಎಂದು ಬಂದ
ದೂತನಾದ ಗುಹನನ್ನು
ವಿಕ್ರಾಂತತುಂಗನಾದ
ಅರ್ಜುನನು ಗದರಿಸಿ

ಕಳುಹಿಸಿದನು. ಅವನು ಆ ಮಾತೆಲ್ಲವನ್ನೂ ಆ ರೀತಿಯಲ್ಲಿಯೇ ಹೋಗಿ ಆ ಕಪಟಕಿರಾತನಾದ ಶಿವನಿಗೆ ತಿಳಿಸಿದಾಗ, ಆತನು ಮಾಯಾಯುದ್ಧವನ್ನು ಹೂಡಲು ಯೋಚಿಸಿ, ಅಸಂಖ್ಯಾತ ಆನೆ, ಕುದುರೆ, ತೇರು ಮತ್ತು ಕಾಲಾಳು ಸೈನ್ಯವನ್ನು ಇದಿರಿನಲ್ಲಿ ತಂದೊಡ್ಡಿದನು.

ಪರಸೈನ್ಯಭೈರವನಾದ ಅರ್ಜುನನು ಪ್ರಳಯಕಾಲದ ಭೈರವನ ಆಕಾರವನ್ನು ತಾಳಿ ಭಯವಿಲ್ಲದೆ ಬಂದು ಎದುರಿಸಿ- (ಎದುರಿಸಿದನು).

ಚಂ|| ಕೆದರೆ ಚತುರ್ಬಲಂ
ಬೆದರೆ ತಳ್ತ ದೞಿಂ ಕೆಡೆದೆೞ್ಗೆ
ತೞ್ಗೆ ಮಾ
ಣದೆ ಪೆಱಗಿಟ್ಟು ಬಾಯ್ಬಿಡೆ
ಘಟಾಳಿ ಗುಣಾರ್ಣವನಂಬು
ಲಕ್ಕಲೆ|

ಕ್ಕದೆ ಕೊಳೆ

ಚಾತುರಂಗಬಲಮಂತಟಿದ

ಟ್ಗೆ ಕನಲ್ದೊನಲ್ದು ಮಾ

ಣದೆ ಪೆಣೆದಂ ಹರಂ

ದಿಗಿಭದೊಳ್ ದಿಗಿಭಂ

ಪೆಣೆವಂತೆ ಪಾರ್ಥನೊಳ್||

೨೧||

ಪದ್ಯ-೨೧:ಪದವಿಭಾಗ-

ಅರ್ಥ:ಕೆದರೆ ಚತುರ್ಬಲಂ (ಚತುರಂಗಸೈನ್ಯವು ಚದುರಿತು; ಚದುರಲು,) ಬೆದರೆ

ತಳ್ತ ದಟಿಂ (ನೆರೆದಿದ್ದ ಸೈನ್ಯವು ಬೆದರಿತು. ಬೆದರಲು,) ಕೆಡೆದು ಅೞ್ಗಿ ತೞ್ಗಿ ಮಾಣದೆ ಪೆಱಗಿಟ್ಟು ಬಾಯ್ಬಿಡೆ ಘಟಾಳಿ (ಆನೆಗಳ ಗುಂಪು ಕೆಳಗುರುಳಿ ನಾಶವಾಗಿ ನಿಲ್ಲದೆ ಹಿಂಜರಿದು ಕೂಗಿಕೊಂಡವು.)

ಗುರ್ಣಾವನ ಅಂಬು ಲಕ್ಕಲೆಕ್ಕದೆ ಕೊಳೆ (ಅರ್ಜುನನ ಬಾಣವು ಲಕ್ಷಲೆಕ್ಕದಲ್ಲಿ ನಾಟಿದುದರಿಂದ)

ಚಾತುರಂಗಬಲಂ ಅಂತು
ಅೞಿದು ಅೞ್ಗೆ ಕನಲ್ದ ಒನಲ್ದು
(ಚತುರಂಗಸೈನ್ಯವೂ
ನಾಶವಾಗಿ ಕುಗ್ಗಲು,ಶಿವನು
ವಿಶೇಷವಾಗಿ
ಕೋಪಿಸಿಕೊಂಡು) ಮಾಣದೆ
ಪೆಣೆದಂ ಹರಂ ದಿಗಿಭದೊಳ್
ದಿಗಿಭಂ ಪೆಣೆವಂತೆ
ಪಾರ್ಥನೊಳ್
(ಉದಾಸೀನಮಾಡದೆ
ಅರ್ಜುನನೊಡನೆ ದಿಗ್ಗಜವು

ದಿಗ್ಗಜನೊಡನೆ ಹೆಣೆದುಕೊಳ್ಳುವಂತೆ ಅರ್ಜುನನೊಡನೆ ಶಿವನು ಹೆಣೆದುಕೊಂಡು ಹೋರಾಡಿದನು.)

ಪದ್ಯ-೨೧:ಅರ್ಥ:ಚತುರಂಗ ಸೈನ್ಯವು ಚದುರಿತು. ನೆರೆದಿದ್ದ ಸೈನ್ಯವು ಬೆದರಿತು. ಆನೆಗಳ ಗುಂಪು ಕೆಳಗುರುಳಿ ನಾಶವಾಗಿ ನಿಲ್ಲದೆ ಹಿಂಜರಿದು ಕೂಗಿಕೊಂಡವು. ಅರ್ಜುನನ

ಬಾಣವು ಲಕ್ಷಲೆಕ್ಕದಲ್ಲಿ
ನಾಟಿದುದರಿಂದ
ಚತುರಂಗಸೈನ್ಯವೂ ನಾಶವಾಗಿ
ಕುಗ್ಗಲು, ಶಿವನು ವಿಶೇಷವಾಗಿ
ಕೋಪಿಸಿಕೊಂಡು,
ಉದಾಸೀನಮಾಡದೆ
ಅರ್ಜುನನೊಡನೆ ದಿಗ್ಗಜವು
ದಿಗ್ಗಜನೊಡನೆ
ಹೆಣೆದುಕೊಳ್ಳುವಂತೆ
ಅರ್ಜುನನೊಡನೆ ಶಿವನು

ಹೆಣೆದುಕೊಂಡು
ಹೋರಾಡಿದನು.

ವ|| ಅಂತು ಶೂನ್ಯಹಸ್ತದೊಳಿರ್ವರುಂ ಪೆಣೆದು ಪಲವುಂ ಗಾಯದೊಳಾಯಂದಪ್ಪದೆ ಪಿರಿದುಂ ಪೊೞ್ತು ಸಂತರ್ಪಿನಂ (?) ಪೋರೆ ದೇವರೆಲ್ಲರುಮಂಬರತಳದೊಳಿರ್ದು ತಮ್ಮಂ (?)ನೋೞ್ಪಂತೆ ನೋಡೆ-

ವಚನ:ಪದವಿಭಾಗ-ಅರ್ಥ:ಅಂತು ಶೂನ್ಯಹಸ್ತದೊಳು (ನಿರಾಯುಧರಾಗಿ) ಇರ್ವರುಂ ಪೆಣೆದು ಪಲವುಂ ಗಾಯದೊಳ್ ಆಯಂದಪ್ಪದೆ ಪಿರಿದುಂ ಪೊಱ್ತು (ಹಲವು ಪಟ್ಟುಗಳಲ್ಲಿ ಕ್ರಮತಪ್ಪದೆ ಬಹುಕಾಲ ಸಹಿಸಿಕೊಂಡು) ಸಂತರ್ಪಿನಂ (ಸಂತೃಪ್ತಿಯಾಗುವಂತೆ?)

ಪೋರೆ (ಹೋರೆ-
ಹೋರಾಡಲು) ದೇವರೆಲ್ಲರುಂ
ಅಂಬರ ತಳದೊಳಿರ್ದು
ತಮ್ಮಂ ನೋೞ್ಪಂತೆ ನೋಡೆ
(ದೇವತೆಗಳು
ಆಕಾಶಪ್ರದೇಶದಲ್ಲಿ
ಇದ್ದುಕೊಂಡು ಅವರ ದ್ವಂದ್ವ
ಯುದ್ಧವನ್ನು ತಮ್ಮದೇ
ಯುದ್ಧವೆಂಬಂತೆ
ನೋಡುತ್ತಿದ್ದರು.)

ವಚನ:ಅರ್ಥ:ಹಾಗೆ ನಿರಾಯುಧರಾಗಿ ಇಬ್ಬರೂ ಹೆಣೆದುಕೊಂಡು ಹಲವು ಪಟ್ಟುಗಳಲ್ಲಿ ಕ್ರಮತಪ್ಪದೆ ಬಹುಕಾಲ ಸಹಿಸಿಕೊಂಡು ಕಾದಿದರು. ದೇವತೆಗಳು ಆಕಾಶಪ್ರದೇಶದಲ್ಲಿದ್ದುಕೊಂಡು ಅವರ ದ್ವಂದ್ವ ಯುದ್ಧವನ್ನು ನೋಡುತ್ತಿದ್ದರು.

ಕಂ|| ಇಕ್ಕಿದನಭವಂ ಪಾರ್ಥನ

ನಿಕ್ಕಿದನಾ

ತ್ರಿಪುರಹರನನರ್ಜುನನೆನೆ ಗೆ|

ಲ್ಲಕ್ಕೆ ಮುಡಿಗಿಕ್ಕುವಂತೆವೊ

ಲಿಕ್ಕಿದನವಯವದೆ

ನೆಲದೊಳರಿಗಂ ಹರನಂ|| ೨೨

||

ಪದ್ಯ-೨೨:ಪದವಿಭಾಗ-ಅರ್ಥ:ಇಕ್ಕಿದನು ಅಭವಂ(ಶಿವ) ಪಾರ್ಥನನು (ಶಿವನು ಪಾರ್ಥನನ್ನು ಬೀಳಿಸಿದನು;), ಇಕ್ಕಿದನು ಆ

ತ್ರಿಪುರಹರನನ ಅರ್ಜುನನು
ಎನೆ ಗೆಲ್ಲಕ್ಕೆ
ಮುಡಿಗಿಕ್ಕುವಂತೆವೊಲ್
(ವಿಜಯಕ್ಕೆ ಸವಾಲು
ಮಾಡುವ ಹಾಗೆ ಅರ್ಜುನನು
ಶಿವನನ್ನು ಶ್ರಮವಿಲ್ಲದೆ
ನೆಲದಲ್ಲಿ ಬೀಳಿಸಿ) ಇಕ್ಕಿದ
ಅವಯವದೆ (ಶ್ರಮವಿಲ್ಲದೆ)
ನೆಲದೊಳು ಅರಿಗಂ ಹರನಂ
(ರ್ಜುನನು ಶಿವನನ್ನು

ಶ್ರಮವಿಲ್ಲದೆ ನೆಲದಲ್ಲಿ ಬೀಳಿಸಿದನು)

ಪದ್ಯ-೨೨:ಅರ್ಥ:ಶಿವನು ಪಾರ್ಥನನ್ನು ಬೀಳಿಸಿದನು; ಪಾರ್ಥನು ಶಿವನನ್ನು ಬೀಳಿಸಿದನು. ವಿಜಯಕ್ಕೆ ಸವಾಲು ಮಾಡುವ ಹಾಗೆ ಅರ್ಜುನನು ಶಿವನನ್ನು ಶ್ರಮವಿಲ್ಲದೆ ನೆಲದಲ್ಲಿ ಬೀಳಿಸಿದನು.

ವ|| ಅಂತು ನೆಲಕ್ಕಿಕ್ಕಿ ಗಂಟಲಂ ಮೆಟ್ಟಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ನೆಲಕ್ಕೆ ಇಕ್ಕಿ ಗಂಟಲಂ ಮೆಟ್ಟಿದಾಗಳ್-

ವಚನ:ಅರ್ಥ:ವ|| ಹಾಗೆ ನೆಲಕ್ಕೆ ಹಾಕಿ ಅವನ ಗಂಟಲನ್ನು ಮೆಟ್ಟಿದಾಗ-

ಅರ್ಜುನನಿಗೆ ಪಾಶುಪತಾಸ್ತ್ರ ಪ್ರದಾನ

ಕಂ|| ಪೊಱಕಣ್ಗಂ ಮುನ್ನಂ
ತಾಂ
ಮಱಸಿದ ನೊಸಲೊಂದು
ಕಣ್ಣುಮಾಗಳ್ ನೊಸಲಿಂ|
ಪೊಱಮಟ್ಟಂತಿರೆ ತೋಱದ
ನೆಱಕದೆ ಹರಿಗಂಗೆ
ರುದ್ರನಗ್ಗಳಗಣ್ಣಂ||೨೩||

ಪದ್ಯ-೨೩:ಪದವಿಭಾಗ-

ಅರ್ಥ:ಪೊಱಕಣ್ಗಂ ಮುನ್ನಂ

ತಾಂ ಮಱಸಿದ (ಕಣ್ಣುಗಳಿಗೆ
ಹೊರಗೆ ಕಾಣದಂತೆ ಮೊದಲೇ
ಮರಮಾಡಿದ್ದ)
ನೊಸಲೊಂದು ಕಣ್ಣುಮಾಗಳ್
(ಹಣೆಗಣ್ಣೊಂದು) ನೊಸಲಿಂ
ಪೊಱಮಟ್ಟಂತಿರೆ (ಆಗ
ಹಣೆಯಿಂದ ಹೊರ ಹೊರಟ
ಹಾಗಿರಲು) ತೋಱದಂ
ಎಱಕದೆ (ಪ್ರೀತಿಯಿಂದ -
ತೋರಿದನು) ಹರಿಗಂಗೆ
ರುದ್ರನು ಅಗ್ಗಳಗಣ್ಣಂ

(ಶ್ರೇಷ್ಠವಾದ ಕಣ್ಣನ್ನು) (ಶಿವನು ಅರ್ಜುನನಿಗೆ ಶ್ರೇಷ್ಠವಾದ ಆ ಕಣ್ಣನ್ನು ಪ್ರೀತಿಯಿಂದ ತೋರಿಸಿದನು)

ಪದ್ಯ-೨೩:ಅರ್ಥ: ಕಣ್ಣುಗಳಿಗೆ ಹೊರಗೆ ಕಾಣದಂತೆ ಮೊದಲೇ ಮರಮಾಡಿದ್ದ ಹಣೆಗಣ್ಣೊಂದು ಆಗ ಹಣೆಯಿಂದ ಹೊರ ಹೊರಟ ಹಾಗಿರಲು ಶಿವನು ಅರ್ಜುನನಿಗೆ ಶ್ರೇಷ್ಠವಾದ ಆ

ಕಣ್ಣನ್ನು ಪ್ರೀತಿಯಿಂದ ತೋರಿಸಿದನು.

ಉರದೊಳ್ ಫಣಿ ಕರದೊಳ್ ಬಿಲ್
ಶಿರದೊಳ್ ತೊರೆ ತೊರೆಯ ಕೆಲದೊಳೆಸೆದಿರೆ ಪೆರೆ ಮುಂ|
ಗೊರಲೊಳ್ ಕರೆ ಮರೆಯಿಲ್ಲದೆ ದೊರೆಕೊಳೆ ಮೃಡನಡಿಗೆ ಹರಿಗನೆಱಗಿದನಾಗಳ್|| ೨೪ ||

ಪದ್ಯ-೨೪:ಪದವಿಭಾಗ-ಅರ್ಥ:ಉರದೊಳ್ ಫಣಿ

(ಎದೆಯಲ್ಲಿ ಹಾವು,)
ಕರದೊಳ್ ಬಿಲ್ (ಕಯ್ಯಲ್ಲಿ
ಬಿಲ್ಲು,) ಶಿರದೊಳ್ ತೊರೆ
(ತಲೆಯಲ್ಲಿ ಗಂಗಾನದಿ,)
ತೊರೆಯ ಕೆಲದೊಳ್ ಎಸೆದಿರೆ
ಪೆರೆ (ನದಿಯ ಪಕ್ಕದಲ್ಲಿ ಚಂದ್ರ
ಶೋಭಿಸಿರಲು,)
ಮುಂಗೊರಲೊಳ್ ಕರೆ
(ಮುಂಭಾಗದ ಕೊರಳಿನಲ್ಲಿ
ಕಪ್ಪುಕಲೆ) ಮರೆಯಿಲ್ಲದೆ
ದೊರೆಕೊಳೆ (ಅಡಗದೆ

ಕಾಣಿಸಿಕೊಳ್ಳಲು), ಮೃಡನಡಿಗೆ ಹರಿಗನು ಎಱಗಿದನು ಆಗಳ್ (ಶಿವನ ಪಾದಕ್ಕೆ ಅರ್ಜುನನು ತಕ್ಷಣ ನಮಸ್ಕರಿಸಿದನು)

ಪದ್ಯ-೨೪:ಅರ್ಥ:ಎದೆಯಲ್ಲಿ ಹಾವು, ಕಯ್ಯಲ್ಲಿ ಬಿಲ್ಲು, ತಲೆಯಲ್ಲಿ ಗಂಗಾನದಿ, ನದಿಯ ಪಕ್ಕದಲ್ಲಿ ಚಂದ್ರ,ಶೋಭಿಸಿರಲು, ಮುಂಭಾಗದ ಕೊರಳಿನಲ್ಲಿ ಕಪ್ಪುಕಲೆ, ಅಡಗದೆ

ಕಾಣಿಸಿಕೊಳ್ಳಲು ಶಿವನ ಪಾದಕ್ಕೆ ಅರ್ಜುನನು ತಕ್ಷಣ ನಮಸ್ಕರಿಸಿದನು.

ವ|| ಅಂತೆಱಗಿ ಪೊಡವಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಎಱಗಿ ಪೊಡವಟ್ಟು-

ವಚನ:ಅರ್ಥ: ಹಾಗೆ ಬಗ್ಗಿ ನಮಸ್ಕಾರಮಾಡಿ-

ಕಂ||

ನೀನಪ್ಪುದನಣಮಱಿಯದೆ

ದಾನವ ಮಾನವ ಸುರೇಂದ್ರ ಮಣಿಮಕುಟತಟಾ| ವ್ಯಾನಪದಂಗಾ ನೆಗಳ್ದುದ ನಾನೇತರೊಳೆಂತು ನೀಗುವೆಂ ನೀಂ ಬೆಸಸಾ|| ೨೫ ||

ಪದ್ಯ-೨೫:ಪದವಿಭಾಗ-ಅರ್ಥ:ನೀನಪ್ಪುದಂ ಅಣಂ ಅಱಿಯದೆ, ದಾನವ ಮಾನವ ಸುರೇಂದ್ರ (ಇಂದ್ರ) ಮಣಿಮಕುಟತಟ ಆವ್ಯಾನ(ರತ್ನಖಚಿತವಾದ

ಕಿರೀಟಪ್ರದೇಶಗಳಿಂದ

ಆವರಿಸಲ್ಪಟ್ಟ) ಪದಂಗೆ

(ಪಾದಗಳುಳ್ಳ ಶಿವನಾದ

ನಿನಗೆ) ನೆಗಳ್ದಿದನು (ಹಾಗೆ

ಮಾಡಿದ್ದನ್ನು) ಆನು

ಏತರೊಳ್ ಎಂತು ನೀಗುವೆಂ

(ಅಪಚಾರವನ್ನು

ಯಾವುದರಲ್ಲಿ ಹೇಗೆ

ಕಳೆಯಲಿ) ನೀಂ ಬೆಸಸಾ

(ನೀನೇ ಹೇಳು- ಅಪ್ಪಣೆ

ಕೊಡಿಸು.)

ಪದ್ಯ-೨೫:ಅರ್ಥ: . (ನನ್ನನ್ನು ಪ್ರತಿಭಟಿಸಿದವನು ಶಿವನಾದ) ನೀನು ಎಂಬುದನ್ನು ತಿಳಿಯದೆ ರಾಕ್ಷಸ, ಮನುಷ್ಯ, ದೇವೇಂದ್ರ ಇವರುಗಳ ರತ್ನಖಚಿತವಾದ ಕಿರೀಟಪ್ರದೇಶಗಳಿಂದ ಆವರಿಸಲ್ಪಟ್ಟ ಪಾದಗಳುಳ್ಳ ಶಿವನಾದ ನಿನಗೆ ನಾನು ಮಾಡಿದ ಅಪಚಾರವನ್ನು ಯಾವುದರಲ್ಲಿ ಹೇಗೆ ಕಳೆಯಲಿ

ಎಂಬುದನ್ನು ನೀನೇ ಹೇಳು-
ಅಪ್ಪಣೆ ಕೊಡಿಸು.

ವ|| ಎಂದು ವಿನಯವಿನಮಿತೋತ್ತಮಾಂಗನಾಗಿ ಕರಕಮಳಂಗಳಂ ಮುಗಿದು ತನ್ನ ಮುಂದಿರ್ದ ಪರಾಕ್ರಮಧವಳನ ಪರಾಕ್ರಮಕ್ಕಂ ವಿನಯಕ್ಕಂ ಮೆಚ್ಚಿ ಮೆಚ್ಚಿದೆಂ ಬರವಂ ಬೇಡಿಕೊಳ್ಳೆನೆ ಮಹಾಪ್ರಸಾದಂ

ಪೆಱತೇನುಮನೊಲ್ಲೆನೆನಗೆ ನಿಮ್ಮಡಿ ಪಾಶುಪತಾಸ್ತ್ರಮಂ ದಯೆಗೆಯ್ವುದೆನೆ ನಿನ್ನ ತಪಶ್ಯಕ್ತಿಗಂ ಭಕ್ತಿಗಂ ಮೆಚ್ಚಿತ್ತೆನೆಂದು-

ವಚನ:ಪದವಿಭಾಗ-

ಅರ್ಥ:ಎಂದು ವಿನಯ ವಿನಮಿತ ಉತ್ತಮಾಂಗನಾಗಿ (ವಿನಯದಿಂದ ಬಗ್ಗಿದ ತಲೆಯುಳ್ಳವನಾಗಿ) ಕರಕಮಳಂಗಳಂ ಮುಗಿದು

(ಎರಡೂ ಕೈಗಳನ್ನು ಮುಗಿದು) ತನ್ನ ಮುಂದಿರ್ದ ಪರಾಕ್ರಮಧವಳನ ಪರಾಕ್ರಮಕ್ಕಂ ವಿನಯಕ್ಕಂ ಮೆಚ್ಚಿ (ತನ್ನ ಮುಂದುಗಡೆ ನಿಂತಿದ್ದ ಪರಾಕ್ರಮಧವಳನ / ಅರ್ಜುನನ ಪರಾಕ್ರಮಕ್ಕೂ ವಿನಯಕ್ಕೂ ಮೆಚ್ಚಿ,) ಮೆಚ್ಚಿದೆಂ ಬರವಂ ಬೇಡಿಕೊಳ್ಳ್ ಎನೆ ('ಮೆಚ್ಚಿದ್ದೇನೆ ವರವನ್ನು ಕೇಳಿಕೊ' ಎನ್ನಲು,)

ಮಹಾಪ್ರಸಾದಂ
ಪೇಱತೇನುಮನು ಒಲ್ಲೆನು
ಎನಗೆ ನಿಮ್ಮಡಿ (ನಿಮ್ಮ
ಪಾದದ) ಪಾಶುಪತಾಸ್ತ್ರಮಂ
ದಯೆಗೆಯ್ವುದು ಎನೆ
(ಬೇರೆಯೇನೂ ಬೇಡ, ನನಗೆ
ತಮ್ಮ ಪಾಶುಪತಾಸ್ತ್ರವನ್ನು
ದಯಮಾಡಿ ಕೊಡಬೇಕು
ಎನ್ನಲು-) ನಿನ್ನ ತಪಶ್ಶಕ್ತಿಗಂ
ಭಕ್ತಿಗಂ ಮೆಚ್ಚಿ ಇತ್ತೆನು ಎಂದು-
(ನಿನ್ನ ತಪ್ಪಶ್ಯಕ್ತಿಗೂ ಭಕ್ತಿಗೂ

ಮೆಚ್ಚಿ ಕೊಟ್ಟಿದ್ದೇನೆ ಎಂದು ಶಿವನು ಹೇಳಿದನು.)

ವಚನ:ಅರ್ಥ:ಎಂದು ವಿನಯದಿಂದ ಬಗ್ಗಿದ ತಲೆಯುಳ್ಳವನಾಗಿ (ನಮಸ್ಕರಿಸಿ) ಎರಡೂಕೈಗಳನ್ನು ಮುಗಿದು, ತನ್ನ ಮುಂದುಗಡೆ ನಿಂತಿದ್ದ ಪರಾಕ್ರಮಧವಳನ ಪರಾಕ್ರಮಕ್ಕೂ ವಿನಯಕ್ಕೂ ಮೆಚ್ಚಿ ಶಿವನು 'ಮೆಚ್ಚಿದ್ದೇನೆ

ವರವನ್ನು ಕೇಳಿಕೊ’ ಎಂದನು. ಅರ್ಜುನನು ಮಹಾಪ್ರಸಾದ, ಬೇರೆಯೇನೂ ಬೇಡ, ನನಗೆ ತಮ್ಮ ಪಾಶುಪತಾಸ್ತ್ರವನ್ನು ದಯಮಾಡಿ ಕೊಡಬೇಕು ಎಂದಾಗ, ನಿನ್ನ ತಪಶ್ಶಕ್ತಿಗೂ ಭಕ್ತಿಗೂ ಮೆಚ್ಚಿ ಕೊಟ್ಟಿದ್ದೇನೆ ಎಂದು ಶಿವನು ಹೇಳಿದನು.

ಕಂ|| ಕ್ಲೇಶದ

ಫಳಮೆರ್ದೆಗೊಳ್ಳದೆ

ಈಶಂ ಮನಮೊಸೆದು ನೆಗಳ್ದಿ ದಿವ್ಯಾಸ್ತ್ರಮನಾ. ಪಾಶುಪತಾಸ್ತ್ರಮನಿತ್ತು ವಿ ನಾಶಿತರಿಪುವಕ್ಕೆ ಹರಿಗನೆಂದಂ ದಯೆಯಿಂ|| ೨೬ ||

ಪದ್ಯ-೨೬:ಪದವಿಭಾಗ-ಅರ್ಥ:ಕ್ಲೇಶದ ಫಳಮ್ ಎರ್ದೆಗೊಳ್ಳದೆ (ಕಷ್ಟದಿಂದ ಬರುವ ಫಲ ಹೃದ್ಯವಾಗದೇ ಇರುವುದೆ?) ಈಶಂ ಮನಮ್ ಒಸೆದು ನೆಗಳ್ದಿ ದಿವ್ಯಾಸ್ತ್ರಮನು

ಆ ಪಾಶುಪತಾಸ್ತ್ರಮನು ಇತ್ತು
(ಈಶ್ವರನು ಮನಪ್ರೀತಿಯಿಂದ
ಪ್ರಸಿದ್ಧವಾದ ದಿವ್ಯಾಸ್ತ್ರವಾದ
ಪಾಶುಪತಾಸ್ತ್ರವನ್ನು
ದಯೆಯಿಂದ ಕೊಟ್ಟು)
ವಿನಾಶಿತ ರಿಪುವಕ್ಕೆ ಹರಿಗನು
ಎಂದಂ ದಯೆಯಿಂ
(ಅರ್ಜುನನನ್ನು 'ಶತ್ರುಗಳನ್ನು
ನಾಶಮಾಡಿದವನಾಗು' ಎಂದು
ಹರಸಿದನು.)

ಪದ್ಯ-೨೬:ಅರ್ಥ:ಕಷ್ಟದಿಂದ ಬರುವ ಫಲ ಹೃದ್ಯವಾಗದೇ ಇರುವುದೆ? ಈಶ್ವರನು ಮನಪ್ರೀತಿಯಿಂದ ಪ್ರಸಿದ್ಧವಾದ ದಿವ್ಯಾಸ್ತ್ರವಾದ ಪಾಶುಪತಾಸ್ತ್ರವನ್ನು ದಯೆಯಿಂದ ಕೊಟ್ಟು ಅರ್ಜುನನನ್ನು ‘ಶತ್ರುಗಳನ್ನು ನಾಶಮಾಡಿದವನಾಗು’ ಎಂದು ಹರಸಿದನು

ವ|| ಆಗಳೀಶ್ವರಂ ಕೊಟ್ಟುದರ್ಕೆ
ತೆಲ್ಲಂಟಿಯೆಂದು
ಗೌರಿದೇವಿಯುಮಂಜರಿಕಾಸ್ತ್ರ
ಮೆಂಬ ಮೋಘಾಸ್ತ್ರಮಂ
ವಿಕ್ರಮಾರ್ಜುನಂಗೆ ಕುಡೆ
ಮೂವತ್ತುಮೂದೇವರುಂ
ತಂತಮ್ಮ ನಚ್ಚಿನಂಬುಗಳಂ
ತಂದೀಯೆ ಗುಣಾರ್ಣವಂ
ಸಂಪೂರ್ಣ
ಮನೋರಥನಾಗಿರ್ದಾಗಳಿಂ
ದ್ರಂ ಪರಾಕ್ರಮಧವಳನ

ಪರಾಕ್ರಮಕ್ಕಮೇಗೆಯ್ವ
ತೆಱನುಮಱಿಯದೆಯುಮತಿ
ಸ್ನೇಹದಿಂ
ಪುಷ್ಪವೃಷ್ಟಿಯುಮನಾನಂದ
ಬಾಷ್ಪ
ವೃಷ್ಟಿಯುಮನೊಡನೊಡನೆ
ಸುರಿದು ಪಲವು
ದಿವಸಮುಗ್ರೋಗ್ರತಪದೊಳ್
ಮೆಯ್ಯಂ ದಂಡಿಸಿದ
ಪರಿಶ್ರಮಂ ಪೋಗೆ ಕೆಲವು
ದಿವಸಮನೆಮ್ಮ ಲೋಕದೊಳ್

ವಿಶ್ರಮಿಸಿ ಬರ್ಪೆ ಬಾ

ಪ್ೋಪಮೆಂದು ತನ್ನೊಡನೆ

ರಥಮನೇಱಿಸಿಕೊಂಡು

ಗಗನತಳಕ್ಕೊಗೆದು

ತನ್ನಮರಾವತೀಪುರಮನೆಯ್ದಿ

ಮಗಂ ಬಂದೊಸಗೆಗೆ

ಪೊೞಲೊಳಷ್ಟ ಶೋಭೆಯಂ

ಮಾಡಿಸಿ ಪೊೞಲಂ

ಪೊಕ್ಕಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಈಶ್ವರಂ

ಕೊಟ್ಟುದರ್ಕೆ ತೆಲ್ಲಂಟಿಯೆಂದು (ಬಹುಮಾನವೆಂದು) ಗೌರಿದೇವಿಯುಂ ಅಂಜರಿಕಾಸ್ತ್ರಮೆಂಬ ಅಮೋಘಾಸ್ತ್ರಮಂ ವಿಕ್ರಮಾರ್ಜುನಂಗೆ ಕುಡೆ (ಗೌರೀದೇವಿಯು ಅಂಜರಿಕಾಸ್ತ್ರವೆಂಬ ಅಮೋಘವಾದ ಅಸ್ತ್ರವನ್ನು ವಿಕ್ರಮಾರ್ಜುನನಿಗೆ ಕೊಡಲು, - ಕೊಟ್ಟಳು)

ಮೂವತ್ತುಮೂದೇವರುಂ
ತಂತಮ್ಮ ನಚ್ಚಿನಂಬುಗಳಂ
ತಂದು ಈಯೆ (ಮೂವತ್ತು
ಮೂರು ದೇವರುಗಳು ತಮ್ಮ
ಪ್ರಧಾನಾಸ್ತ್ರಗಳನ್ನು ತಂದು)
ಗುಣಾರ್ಣವಂ ಸಂಪೂರ್ಣ
ಮನೋರಥನಾಗಿಇರ್ದು(ಗು
ಣಾರ್ಣವನಾದ ಅರ್ಜುನನು
ಸಂಪೂರ್ಣ ಮನಸ್ಸಿನ ಆಸೆ
ನೆರವೇರಿದವನಾದನು.)
ಆಗಳು ಇಂದ್ರಂ

ಪರಾಕ್ರಮಧವಳನ
(ಅರ್ಜುನನ) ಪರಾಕ್ರಮಕ್ಕ
ಮೇಗೆಯ್ವ ತೆಱನುಂ
ಅಱಿಯದೆಯುಂ
(ಗೌರವಿಸುವ ಬಗೆಯನ್ನು
ತಿಳಿಯದೆ) ಅತಿಸ್ನೇಹದಿಂ
ಪುಷ್ಪವೃಷ್ಟಿಯುಮಂ
ಆನಂದಬಾಷ್ಪ
ವೃಷ್ಟಿಯುಮನು ಒಡನೊಡನೆ
ಸುರಿದು ಒಟ್ಟಿಗೆ ಸುರಿಸಿ
(ಪುಷ್ಪವೃಷ್ಟಿಯನ್ನೂ

ಆನಂದಬಾಷ್ಪವನ್ನೂ ಜೊತೆಜೊತೆಯಲ್ಲಿಯೇ ಸುರಿಸಿದನು); ಪಲವು ದಿವಸಂ ಉಗ್ರೋಗ್ರತಪದೊಳ್ ಮೆಯ್ಯಂ ದಂಡಿಸಿದ ಪರಿಶ್ರಮಂ ಪೋಗೆ (‘ಅನೇಕ ದಿನ ಬಹು ಕಠಿಣವಾದ ತಪಸ್ಸಿನಲ್ಲಿ ಶರೀರವನ್ನು ದಂಡಿಸಿದ್ದೀಯೆ. ಆಯಾಸ ಹೋಗಲು,) ಕೆಲವು ದಿವಸಮನು ಎಮ್ಮ

ಲೋಕದೊಳ್ ವಿಶ್ರಮಿಸಿ
ಬರ್ಪೆ ಬಾ ಪೋಪಮೆಂದು
(ಕೆಲವು ಕಾಲ ನಮ್ಮ
ಲೋಕದಲ್ಲಿ ವಿಶ್ರಾಂತಿಯನ್ನು
ಪಡೆದು ಬರುವೆಯಂತೆ
ಹೋಗೋಣ ಬಾ' ಎಂದು)
ತನ್ನೊಡನೆ
ರಥಮನೇಱಿಸಿಕೊಂಡು
ಗಗನತಳಕ್ಕೊಗೆದು ತನ್ನ
ಅಮರಾವತೀಪುರಮನು
ಎಯ್ದಿ,(ತನ್ನ ಜೊತೆಯಲ್ಲಿಯೇ

ರಥವನ್ನು ಹತ್ತಿಸಿಕೊಂಡು ಆಕಾಶ ಪ್ರದೇಶಕ್ಕೆ ನೆಗೆದು ತನ್ನ ರಾಜಧಾನಿಯಾದ ಅಮರಾವತೀಪಟ್ಟಣವನ್ನು ಸೇರಿದನು) ಮಗಂ ಬಂದ ಒಸಗೆಗೆ ಪೊಟಿಲೊಳಷ್ಟ ಶೋಭೆಯಂ ಮಾಡಿಸಿ ಪೊಟಿಲಂ ಪೊಕ್ಕಾಗಳ್ (ಮಗನು ಬಂದ ಸಂತೋಷಕ್ಕಾಗಿ ಪಟ್ಟಣವನ್ನು ತಳಿರು ತೋರಣಾದಿ

ಎಂಟುಬಗೆಯ
ಅಲಂಕಾರಗಳಿಂದ ಸಿಂಗರಿಸಿ
ಪುರಪ್ರವೇಶ ಮಾಡಿಸಿದನು-
ಮಾಡಿಸಿದಾಗ)-
ವಚನ:ಅರ್ಥ:ಆಗ ಈಶ್ವರನು
ಕೊಟ್ಟುದಕ್ಕೆ
ಬಹುಮಾನವೆಂದು
ಗೌರೀದೇವಿಯು
ಅಂಜರಿಕಾಸ್ತ್ರವೆಂಬ
ಅಮೋಘವಾದ ಅಸ್ತ್ರವನ್ನು
ವಿಕ್ರಮಾರ್ಜುನನಿಗೆ ಕೊಟ್ಟಳು.

ಮೂವತ್ತು ಮೂರು
ದೇವರುಗಳು ತಮ್ಮ
ಪ್ರಧಾನಾಸ್ತ್ರಗಳನ್ನು
ತಂದುಕೊಡಲು,
ಗುಣಾರ್ಣವನಾದ
ಅರ್ಜುನನು ಸಂಪೂರ್ಣ
ಮನಸ್ಸಿನ ಆಸೆ
ನೆರವೇರಿದವನಾದನು.
ಇಂದ್ರನು
ಪರಾಕ್ರಮಧವಳನಾದ
ಅರ್ಜುನನ

ಶೌರ್ಯಪರಾಕ್ರಮಗಳಿಗೆ ಯಾವ ರೀತಿಯ ಗೌರವ ಸತ್ಕಾರಗಳನ್ನು ಮಾಡಬೇಕೆಂಬುದನ್ನು ತಿಳಿಯದೆ ವಿಶೇಷವಾದ ಸ್ನೇಹದಿಂದ ಪುಷ್ಪವೃಷ್ಟಿಯನ್ನೂ ಆನಂದಬಾಷ್ಪವನ್ನೂ ಜೊತೆಜೊತೆಯಲ್ಲಿಯೇ ಸುರಿಸಿದನು. ‘ಅನೇಕ ದಿನ ಬಹು ಕಠಿಣವಾದ ತಪಸ್ಸಿನಲ್ಲಿ

ಶರೀರವನ್ನು ದಂಡಿಸಿದ್ದೀಯೆ.
ಆಯಾಸ ಹೋಗಲು, ಹಾಗೆ
ಕೆಲವು ಕಾಲ ನಮ್ಮ
ಲೋಕದಲ್ಲಿ ವಿಶ್ರಾಂತಿಯನ್ನು
ಪಡೆದು ಬರುವೆಯಂತೆ
ಹೋಗೋಣ ಬಾ' ಎಂದು ತನ್ನ
ಜೊತೆಯಲ್ಲಿಯೇ ರಥವನ್ನು
ಹತ್ತಿಸಿಕೊಂಡು ಆಕಾಶ
ಪ್ರದೇಶಕ್ಕೆ ನೆಗೆದು ತನ್ನ
ರಾಜಧಾನಿಯಾದ
ಅಮರಾವತೀಪಟ್ಟಣವನ್ನು

ಸೇರಿದನು. ಮಗನು ಬಂದ ಸಂತೋಷಕ್ಕಾಗಿ ಪಟ್ಟಣವನ್ನು ತಳಿರು ತೋರಣಾದಿ ಎಂಟುಬಗೆಯ ಅಲಂಕಾರಗಳಿಂದ ಸಿಂಗರಿಸಿ ಪುರಪ್ರವೇಶ ಮಾಡಿಸಿದನು-ಮಾಡಿಸಿದಾಗ

<u>ಅಮರಾವತಿಯಲ್ಲಿ ಅರ್ಜುನ-ನಿವಾತ ಕವಚರ ಸಂಹಾರ</u>

ಮ||
ಪರಿತಂದಂದಮರಾವತೀಪುರದ ವಾರಸ್ತ್ರೀಯರೇನೀತನೇ
ನರನಾ ಖಾಂಡವಮೆಲ್ಲಮಂ ಶಿಖಿಗುಣಲ್
ಕೊಟ್ಟಾತನೀಗಳ್ ಮಹೇ|
ಶ್ವರನಂ ಮೆಚ್ಚಿಸಿ ಮಿಕ್ಕ ಪಾಶುಪತಮಂ ಪೆತ್ತಾತನೇ ಸಾಹಸಂ

ಪಿರಿದುಂ ಚೆಲ್ವನುಮಪ್ಪನೆಂದು ಮನದೊಳ್ ಸೋಲ್ತಿಟ್ಟಿಱಿಂ ನೋಡಿದರ್|| ೨೭ ||

ಪದ್ಯ-೨೭:ಪದವಿಭಾಗ-ಅರ್ಥ:ಪರಿತಂದು (ಓಡಿಬಂದು) ಅಂದು ಅಮರಾವತೀಪುರದ ವಾರಸ್ತ್ರೀಯರು ಏನು ಈತನೇ ನರನಾ!, ಆ ಖಾಂಡವಮೆಲ್ಲಮಂ ಶಿಖಿಗೆ ಉಣಲ್ ಕೊಟ್ಟಾತನ್ (ಅಗ್ನಿಗೆ

ಖಾಂಡವವನವೆಲ್ಲವನ್ನೂ
ಉಣ್ಣಲು ಕೊಟ್ಟನೇನು)
ಈಗಳ್ ಮಹೇಶ್ವರನಂ
ಮೆಚ್ಚಿಸಿ ಮಿಕ್ಕ ಪಾಶುಪತಮಂ
ಪೆತ್ತಾತನೇ (ಪಡೆದವನೆ)
ಸಾಹಸಂ ಪಿರಿದುಂ
ಚೆಲ್ವನುಮ್ ಅಪ್ಪನೆಂದು
(ಪರಾಕ್ರಮಶಾಲಿಯೂ
ವಿಶೇಷ ಸುಂದರನೂ
ಆಗಿದ್ದಾನೆ) ಮನದೊಳ್
ಸೋಲ್ತು ಅಟ್ಕಿಱಿಂ

ನೋಡಿದರ್(ಮನಸ್ಸಿನಲ್ಲಿ ಸೋತು ಪ್ರೀತಿಯಿಂದ ನೋಡಿದರು)

ಪದ್ಯ-೨೭:ಅರ್ಥ: .

ಅಮರಾವತೀ ಪಟ್ಟಣದ ವೇಶ್ಯಾಸ್ತ್ರೀಯರು ಓಡಿಬಂದು ಇವನೇ ಅರ್ಜುನನೇನು! ಅಗ್ನಿಗೆ ಖಾಂಡವವನವೆಲ್ಲವನ್ನೂ ಉಣ್ಣಲು ಕೊಟ್ಟನೇನು, ಈಗ ಮಹೇಶ್ವರನನ್ನು ಮೆಚ್ಚಿಸಿ

ಶ್ರೇಷ್ಠವಾದ

ಪಾಶುಪತಾಸ್ತ್ರವನ್ನು

ಪಡೆದವನೆ.

ಪರಾಕ್ರಮಶಾಲಿಯೂ ವಿಶೇಷ

ಸುಂದರನೂ ಆಗಿದ್ದಾನೆ.

ಎಂದು ಮನಸ್ಸಿನಲ್ಲಿ ಸೋತು

ಪ್ರೀತಿಯಿಂದ ನೋಡಿದರು

ವ|| ಅಂತು ನೋಡಿ ಕಡೆಗಣ್ಣ

ಚೆಲ್ಲಂಬೆರಸು ಸೂಸುವ

ವಾಸವಸ್ತ್ರೀಯರ

ಮುಖಾಬ್ಜಾಸವ ಸಂಬಂಗಳಪ್ಪ

ಶೇಷಾಕ್ಷತಂಗಳನೀಶ್ವರನಂ
ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ
ಸೇಸೆಗೊಳುತ್ತುಂ
ದೇವರಾಜನೊಡನೆ
ದೇವಾಪ್ಸರೋನಿಚಯನಿಚಿತ
ಮಪ್ಪ ದೇವವಿಮಾನಮಂ
ಪೊಕ್ಕಾಗಳ್ ದೇವೇಂದ್ರಂ
ತನ್ನೊಡನೆ ಮಜ್ಜನಂಬುಗಿಸಿ
ದಿವ್ಯಾಹಾರಂಗಳನೊಡನಾ
ರೋಗಿಸಿ ತಂಬುಲಂಗೊಂಡು
ತನ್ನ ತುಡುವ

ತುಡುಗೆಗಳೆಲ್ಲಮಂ ತುಡಿಸಿ
ಕಿರೀಟಿಯಂ ಕೋಟಿ
ಮಾಟ್ಕೆಯಿಂ ಕೊಂಡಾಡಿ
ಕೆಲವು ದಿವಸಮನಿರ್ದು
ತನಗವಧ್ಯರುಮಸಾಧ್ಯರುಮಾ
ಗಿರ್ದ ನಿವಾತಕವಚ
ಕಾಳಕೇಯ ಪೌಲೋಮ
ತಳತಾಳುಕರೆಂಬಱುವತ್ತು
ಕೋಟಿ ರಕ್ಕಸರನೆನಗೆ
ಗೆಲ್ದೀಯಲ್ವೇೞ್ಕುಮೆಂದು
ಮಾತಳಿಯೆಂಬ ಸಾರಥಿವೆರಸು

ವಿವಿಧಾಸ್ತ್ರಗರ್ಭಮಪ್ಪ ರಥಮಂ ಕೊಟ್ಟೊಡದನೇಱಿ ಪೋಗಿ-

ವಚನ:ಪದವಿಭಾಗ-

ಅರ್ಥ:ಅಂತು ನೋಡಿ ಕಡೆಗಣ್ಣ ಚೆಲ್ಲಂಬೆರಸು ಸೂಸುವ (ಕಡಗಣ್ಣಿನ ವಿಲಾಸದಿಂದ ಕೂಡಿದ ಇಂದ್ರಲೋಕ ಸ್ತ್ರೀಯರ ಬೀಸುವ, ಕುಡಿನೋಟದ) ವಾಸವಸ್ತ್ರೀಯರ

ಮುಖಾಬ್ಜಾಸವ ಸಂಬಂಗಳಪ್ಪ
(ಮುಖಕಮಲದ ವಧುವಿನ
ಸಂಬಂಧವುಳ್ಳ)
ಶೇಷಾಕ್ಷತಂಗಳನು ಈಶ್ವರನಂ
ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ
ಸೇಸೆಗೊಳುತ್ತುಂ
(ಮಂತ್ರಾಕ್ಷತೆಯನ್ನು
ಈಶ್ವರನನ್ನು ಜಯಿಸಿದ
ಜಯಕ್ಕೆ ಸೇಸೆಯೆಂಬಂತೆ
ಸ್ವೀಕರಿಸುತ್ತ),
ದೇವರಾಜನೊಡನೆ ದೇವ

ಅಪ್ಸರೋನಿಚಯ
ನಿಚಿತಮಪ್ಪ
ದೇವವಿಮಾನಮಂ
ಪೊಕ್ಕಾಗಳ್
(ದೇವೇಂದ್ರನೊಡನೆ
ದೇವಲೋಕದ
ಅಪ್ಸರಸ್ತ್ರೀಯರ
ಸಮೂಹದಿಂದ ತುಂಬಿದ್ದ
ದೇವವಿಮಾನವನ್ನು
ಪ್ರವೇಶಿಸಿದನು; ಆಗ)
ದೇವೇಂದ್ರಂ ತನ್ನೊಡನೆ

ಮಜ್ಜನಂಬುಗಿಸಿ ದಿವ್ಯ ಆಹಾರಂಗಳನು ಒಡನೆ ಆರೋಗಿಸಿ (ಉಂಡು) ತಂಬುಲಂಗೊಂಡು ತನ್ನ ತುಡುವ (ತೊಡುವ)ತುಡುಗೆಗಳೆಲ್ಲಮಂ ತುಡಿಸಿ, ಕಿರೀಟಿಯಂ ಕೋಟಿ ಮಾಟ್ಕೆಯಿಂ (ಕೋಟಿ ರೀತಿಯಿಂದ) ಕೊಂಡಾಡಿ ಕೆಲವು ದಿವಸಮಂ ಇರ್ದು, ತನಗೆ ಅವಧ್ಯರುಂ

ಅಸಾಧ್ಯರುಮ್ ಆಗಿರ್ದ
ನಿವಾತಕವಚ ಕಾಳಕೇಯ
ಪೌಲೋಮ ತಳತಾಳುಕರು
ಎಂಬ ಅಱುವತ್ತು ಕೋಟಿ
ರಕ್ಕಸರನು (ಅರುವತ್ತು
ಕೋಟಿ ರಾಕ್ಷಸರನ್ನು) ಎನಗೆ
ಗೆಲ್ದು ಈಯಲ್ವೇೞ್ಕುಂ (ಗೆದ್ದು
ಕೊಡಬೇಕು) ಎಂದು
ಮಾತಳಿಯೆಂಬ
ಸಾರಥಿವೆರಸು
(ಮಾತಲಿಯೊಡನೆ)

ವಿವಿಧಾಸ್ತ್ರಗರ್ಭಮಪ್ಪ
(ಅನೇಕ ರೀತಿಯ ಅಸ್ತ್ರ
ಬಾಣಗಳಿಂದ ತುಂಬಿದ)
ರಥಮಂ ಕೊಟ್ಟೊಡೆ
ಅದನೇಱಿ ಪೋಗಿ-
ವಚನ:ಅರ್ಥ:ಹಾಗೆ
ಕಡಗಣ್ಣಿನ ವಿಲಾಸದಿಂದ
ಕೂಡಿದ ಇಂದ್ರಲೋಕ
ಸ್ತ್ರೀಯರ ಮುಖಕಮಲದ
ವಧುವಿನ ಸಂಬಂಧವುಳ್ಳ
ಮಂತ್ರಾಕ್ಷತೆಯನ್ನು

ಈಶ್ವರನನ್ನು ಜಯಿಸಿದ
ಜಯಕ್ಕೆ ಸೇಸೆಯೆಂಬಂತೆ
ಸ್ವೀಕರಿಸುತ್ತ
ದೇವೇಂದ್ರನೊಡನೆ
ದೇವಲೋಕದ
ಅಪ್ಸರಸ್ತ್ರೀಯರ
ಸಮೂಹದಿಂದ ತುಂಬಿದ್ದ
ದೇವವಿಮಾನವನ್ನು
ಪ್ರವೇಶಿಸಿದನು. ದೇವೇಂದ್ರನು
ಅರ್ಜುನನಿಗೆ ತನ್ನೊಡನೆ
ಸ್ನಾನಮಾಡಿಸಿ ದಿವ್ಯಾಹಾರಗಳ

ಸಹಪಂಕ್ತಿ ಭೋಜನವನ್ನು ಮಾಡಿದನು. ಜೊತೆಯಲ್ಲಿಯೇ ತಾಂಬೂಲವನ್ನು ಸ್ವೀಕರಿಸಿದನು. ತಾನು ಧರಿಸುವ ಎಲ್ಲ ಆಭರಣಗಳನ್ನು ತೊಡಿಸಿ ಅರ್ಜುನನನ್ನು ಕೋಟಿ ರೀತಿಯಿಂದ ಹೊಗಳಿ, ಕೆಲವು ದಿನಗಳಿದ್ದು ತಾನು ಕೊಲ್ಲಲು ಅಸಾಧ್ಯರಾಗಿದ್ದ ನಿವಾತಕವಚ ಕಾಲಕೇಯ ಪೌಲೋಮ

ತುಳುತಾಳುಕರೆಂಬ ಅರುವತ್ತು ಕೋಟಿ ರಾಕ್ಷಸರನ್ನು ಗೆದ್ದು ಕೊಡಬೇಕು ಎಂದು ಕೇಳಿದನು. ಅರ್ಜುನನು ಸಾರಥಿಯಾದ ಮಾತಲಿಯೊಡನೆ ಕೂಡಿ ಅನೇಕ ರೀತಿಯ ಅಸ್ತ್ರ ಬಾಣಗಳಿಂದ ತುಂಬಿದ ತೇರನ್ನು ಹತ್ತಿ ಹೋಗಿ-

ಮ|| ದನುಜಾನೀಕದ ನಿಂದದೊಂದು ನೆಲೆಯಂ

ಮುಟ್ಟುತ್ತೆ ಮಾದೇವನಿ
ತ್ತ ನಿಜೋಗ್ರಾಸ್ತ್ರದೆ ದೈತ್ಯರೆಂಬ
ಪೆಸರಿಲ್ಲೆಂಬಂತುಟಂ ಮಾಡಿ
ಬಂ|
ದೆನಿತಾನುಂ ಮಹಿಮಾಗುಣಕ್ಕೆ
ಕಣಿಯಾಗಿರ್ದೊಂದು
ಪೆಂಪಿಂದಮಿಂ
ದ್ರನೊಳರ್ಧಾಸನಮೇಱಿದೊ
ಳ್ಪು ಹರಿಗಂಗಕ್ಕುಂ
ಪೆಱಂಗಕ್ಕುಮೇ|| ೨೮ ||

ಪದ್ಯ೨೮:ಪದವಿಭಾಗ-ಅರ್ಥ:ದನುಜಾನೀಕದ (ರಾಕ್ಷಸ ಸಮೂಹವು ಇರುವ) ನಿಂದ ಅದೊಂದು ನೆಲೆಯಂ ಮುಟ್ಟುತ್ತೆ (ಒಂದೊಂದು ಸ್ಥಳವನ್ನು ತಲುಪಿ) ಮಾದೇವನು ಇತ್ತ ನಿಜ ಉಗ್ರಾಸ್ತ್ರದೆ ದೈತ್ಯರೆಂಬ ಪೆಸರಿಲ್ಲೆಂಬಂತುಟಂ ಮಾಡಿ (ಮಹಾದೇವನು ತನಗೆ ಕೊಟ್ಟ ಭಯಂಕರವಾದ

ಪಾಶುಪತಾಸ್ತ್ರದಿಂದ ಆ
ರಾಕ್ಷಸರನ್ನು ಹೆಸರಿಲ್ಲದಂತೆ
ಮಾಡಿ) ಬಂದು ಎನಿತಾನುಂ
ಮಹಿಮಾಗುಣಕ್ಕೆ
ಕಣಿಯಾಗಿರ್ದ ಒಂದು
ಪೆಂಪಿಂದಂ ಇಂದ್ರನೊಳು
ಅರ್ಧಾಸನಂ ಏಱಿದ ಉಳ್ಳು
(ವಿಶೇಷ ಮಹಾತ್ಮೆಗೆ
ಆಕರವಾದ ಗೌರವದಿಂದ
ಇಂದ್ರನೊಡನೆ ಅರ್ಧಾಸನ
(ಒಂದೇ ಸಿಂಹಾಸನದಲ್ಲಿ

ಕೂರುವ)ವನ್ನು ಹತ್ತುವ ಸೌಭಾಗ್ಯವು) ಹರಿಗಂಗೆ ಅಕ್ಕುಂ ಪೆಱಂಗೆ ಅಕ್ಕುಮೇ (ಅರ್ಜುನನಿಗಲ್ಲದೆ ಬೇರೆಯವರಿಗೆ ಸಾಧ್ಯವಾಗುವುದೇ!)

ಪದ್ಯ-೨೮:ಅರ್ಥ:ರಾಕ್ಷಸ ಸಮೂಹವು ಇರುವ ಒಂದೊಂದು ಸ್ಥಳವನ್ನು ತಲುಪಿ ಮಹಾದೇವನು ತನಗೆ ಕೊಟ್ಟ ಭಯಂಕರವಾದ

ಪಾಶುಪತಾಸ್ತ್ರದಿಂದ ಆ ರಾಕ್ಷಸರನ್ನು ಹೆಸರಿಲ್ಲದಂತೆ ಮಾಡಿ ಬಂದು ವಿಶೇಷ ಮಹಾತ್ಮೆಗೆ ಆಕರವಾದ ಗೌರವದಿಂದ ಇಂದ್ರನೊಡನೆ ಅರ್ಧಾಸನ (ಸಮಪೀಠ)ವನ್ನು ಹತ್ತುವ ಸೌಭಾಗ್ಯವು ಅರ್ಜುನನಿಗಲ್ಲದೆ ಬೇರೆಯವರಿಗೆ ಸಾಧ್ಯವಾಗುವುದೇ!.

<u>ರಂಬೆಯ ಶಾಪ</u>

ವ|| ಅಂತು ದೇವಲೋಕದೊಳ್ ತನ್ನ ಮಾತೆ ಮಾತಾಗಿರ್ದ ಪರಾಕ್ರಮಧವಳನ ಪರಾಕ್ರಮಕ್ಕಂ ಗಂಡಗಾಡಿಗಂ ರಂಭೆ ಸೋಲ್ತು ಸೈರಿಸಲಾಱದೇಕಾಂತದೊಳ್ ಮೇಲೆ ಬಿೞ್ದೊಡೆ-

ವಚನ:ಪದವಿಭಾಗ-ಅರ್ಥ:

ಅಂತು ದೇವಲೋಕದೊಳ್ ತನ್ನ ಮಾತೆ ಮಾತಾಗಿರ್ದ

ಪರಾಕ್ರಮಧವಳನ ಪರಾಕ್ರಮಕ್ಕಂ ಗಂಡಗಾಡಿಗಂ (ಪರಾಕ್ರಮಧವಳನ ಪೌರುಷಕ್ಕೂ ಸೌಂದರ್ಯಕ್ಕೂ) ರಂಭೆ ಸೋಲ್ತು ಸೈರಿಸಲಾಱದೇ ಏಕಾಂತದೊಳ್ ಮೇಲೆ ಬಿೞ್ದೊಡೆ- ()

ವಚನ:ಅರ್ಥ:ಹಾಗೆ ದೇವಲೋಕದಲ್ಲಿ ತನ್ನ ಮಾತೇ ಮಾತಾಗಿದ್ದ

ಪರಾಕ್ರಮಧವಳನ
ಪೌರುಷಕ್ಕೂ ಸೌಂದರ್ಯಕ್ಕೂ
ರಂಭೆಯು ಸೋತು
ಸಹಿಸಲಾರದೆ ರಹಸ್ಯವಾಗಿ
ಬಂದು ಮೇಲೆ ಬಿದ್ದು ತನ್ನನ್ನು
ಸ್ವೀಕರಿಸಬೇಕೆಂದು
ಪ್ರಾರ್ಥಿಸಿದಳು

ಕಂ|| ಎಂದು
ಪುರಂದರನರಸಿಯ
ಯಂದು ದಲೆನಗಬ್ಬೆಯೇ
ತೊದಳ್ ನುಡಿಯದೆ ಪೋ|

ಗೆಂದೊಡದೊಂದಬ್ಬದೊಳೆ ಬೃಹಂದಳೆಯಾಗೆಂದು ಮುನಿದು ಶಾಪವನಿತ್ತಳ್|| ೨೯ ||

ಪದ್ಯ-೨೯:ಪದವಿಭಾಗ-ಅರ್ಥ:ಎಂದು ಪುರಂದರನ ಅರಸಿಯಯ್ ಅಂದು ದಲ್ (ನಿಜಕ್ಕೂ) ಎನಗೆ ಅಬ್ಬೆಯೇ(ಎಲ್ಲಿಯವರೆಗೆ ನೀನು ಇಂದ್ರನ ರಾಣಿಯಾಗಿದ್ದೀಯೋ ಅಲ್ಲಿಯವರೆಗೆ ನೀನು

ನಿಜವಾಗಿಯೂ ನನಗೆ
ತಾಯಿಯಾಗಿದ್ದೀಯೆ)
ತೊದಳ್ ನುಡಿಯದೆ
ಪೋಗೆಂದೊಡೆ (ಕೆಟ್ಟ
ಮಾತನಾಡದೆ ಹೋಗಿ ಎಂದು
ಹೇಳಿದರೆ ಅರ್ಜುನನು,)
ಅದೊಂದು ಅಬ್ಬದೊಳೆ
ಬೃಹಂದಳೆಯಾಗೆಂದು
ಮುನಿದು ಶಾಪವನಿತ್ತಳ್
(ಒಂದು ವರ್ಷಕಾಲ

ಬೃಹಂದಳೆಯಾಗು’ ಎಂದು ಶಾಪವನ್ನು ಕೊಟ್ಟಳು)

ಪದ್ಯ-೨೯:ಅರ್ಥ:

‘ಎಲ್ಲಿಯವರೆಗೆ ನೀನು ಇಂದ್ರನ ರಾಣಿಯಾಗಿದ್ದೀಯೋ ಅಲ್ಲಿಯವರೆಗೆ ನೀನು ನಿಜವಾಗಿಯೂ ನನಗೆ ತಾಯಿಯಾಗಿದ್ದೀಯೆ. ಕೆಟ್ಟ ಮಾತನಾಡದೆ ಹೋಗಿ ಎಂದು ಹೇಳಿದರೆ ಅರ್ಜುನನು, ರಂಭೆಗೆ ಕೋಪ ಬಂದಿತು.

‘ಒಂದು ವರ್ಷಕಾಲ ಬೃಹಂನ್ನಳೆಯಾಗು’ ಎಂದು ಶಾಪವನ್ನು ಕೊಟ್ಟಳು

ವ|| ಇತ್ತೊಡೆಂತುಮಾನ್ ಪರಸ್ತ್ರೀಯರ ದೆಸೆಯೊಳಮಣ್ಣನ ನನ್ನಿಯ ವರ್ಷಾವಧಿಯೊಳಮೋತು ಪಿಡಿವೆಂ ನಿನ್ನ ನುಡಿಯೊಳೇ ದೋಷಮೆಂದು ತನ್ನ ಶೌಚದ ಮೇಗಣ ಕಲಿತನಮುಮಂ ಸೌಭಾಗ್ಯದ ಮೇಗಣ

ಬಲ್ಲಾಳ್ತನಮುಮನಿಂದ್ರಲೋಕ
ದಿಂ ಪೊಗೞಿಸಿ
ಸುಖಮಿರ್ಪನ್ನೆಗಮಿತ್ತ
ವಿಕ್ರಾಂತತುಂಗನ ತಡೆದುದರ್ಕೆ
ಯುಷ್ಠಿರ ಭೀಮಸೇನ ನಕುಳ
ಸಹದೇವರುಂ ದ್ರೌಪದಿಯುಂ
ವ್ಯಾಕುಳಚಿತ್ತರಾಗಿ-

ವಚನ:ಪದವಿಭಾಗ-

ಅರ್ಥ:ಇತ್ತೊಡೆ ಎಂತುಮ್
ಆನ್ ಪರಸ್ತ್ರೀಯರ
ದೆಸೆಯೊಳಂ ಅಣ್ಣನ ನನ್ನಿಯ

ವರ್ಷಾವಧಿಯೊಳಂ ಓತು
ಪಿಡಿವೆಂ,(ನಮ್ಮಣ್ಣನ
ಪ್ರತಿಜ್ಞೆಯ ವರ್ಷಾವಧಿಯಲ್ಲಿ
ಪರಸ್ತ್ರೀಯರ ಬಳಿ
ಇರಬೇಕಾಗಿ ಬರುವ
ಸಂದರ್ಭಕ್ಕಾಗಿ ಈ ಶಾಪವನ್ನು
ವ್ರತವಾಗಿ ಸಂತೋಷದಿಂದ
ಅಂಗೀಕಾರ ಮಾಡುತ್ತೇನೆ)
ನಿನ್ನ ನುಡಿಯೊಳೇ ದೋಷಂ
(ನಿನ್ನ ಮಾತಿನಲ್ಲಿ
ದೋಷವೇನು? ಇಲ್ಲ

ಎಂದನು.) ಎಂದು ತನ್ನ
ಶೌಚದ ಮೇಗಣ
ಕಲಿತನಮುಮಂ ಸೌಭಾಗ್ಯದ
ಮೇಗಣ ಬಲ್ಲಾಳ್ತನಮುಮನು
(ಪೌರುಷವನ್ನೂ
ಸೌಭಾಗ್ಯದಿಂದ ಕೂಡಿದ
ಪರಾಕ್ರಮವನ್ನೂ)
ಇಂದ್ರಲೋಕದಿಂ ಪೊಗೞಿಸಿ
ಸುಖಂ ಇರ್ಪ ಅನ್ನೆಗಂ
(ಹೊಗಳಿಸಿಕೊಂಡು
ಕೆಲವುಕಾಲ ಇಂದ್ರಲೋಕದಲ್ಲಿ

ಸುಖವಾಗಿದ್ದನು. ಅಷ್ಟರಲ್ಲಿ)
ಇತ್ತ ವಿಕ್ರಾಂತತುಂಗನ
ತಡೆದುದರ್ಕೆ ಯುಷ್ಠಿರ
ಭೀಮಸೇನ ನಕುಳ
ಸಹದೇವರುಂ ದ್ರೌಪದಿಯುಂ
ವ್ಯಾಕುಳಚಿತ್ತರಾಗಿ
(ಅರ್ಜುನನು
ಹಿಂತಿರುಗುವುದಕ್ಕೆ
ಸಾವಕಾಶಮಾಡಿದುದಕ್ಕಾಗಿ
ಧರ್ಮರಾಜ, ಭೀಮ, ನಕುಳ,
ಸಹದೇವ, ದ್ರೌಪದಿ

ಮೊದಲಾದವರು ಚಿಂತಾಕ್ರಾಂತರಾಗಿ)-

ವಚನ:ಅರ್ಥ:ಶಾಪವನ್ನು ಕೊಟ್ಟರೆ, ಹೇಗೂ ನಮ್ಮಣ್ಣನ ಪ್ರತಿಜ್ಞೆಯ ವರ್ಷಾವಧಿಯಲ್ಲಿ ಪರಸ್ತ್ರೀಯರ ಬಳಿ ಇರಬೇಕಾಗಿ ಬರುವ ಸಂದರ್ಭಕ್ಕಾಗಿ ಈ ಶಾಪವನ್ನು ವ್ರತದಂತೆ ಸಂತೋಷದಿಂದ ಅಂಗೀಕಾರ ಮಾಡುತ್ತೇನೆ ಎಂದನು. ನಿನ್ನ ಮಾತಿನಲ್ಲಿ

ದೋಷವೇನು? ಇಲ್ಲ ಎಂದನು. ಹೀಗೆ ತನ್ನ ಶುದ್ಧನಡತೆಯೊಡನೆ ಕೂಡಿದ ಪೌರುಷವನ್ನೂ ಸೌಭಾಗ್ಯದಿಂದ ಕೂಡಿದ ಪರಾಕ್ರಮವನ್ನೂ ಇಂದ್ರಲೋಕದವರಿಂದ ಹೊಗಳಿಸಿಕೊಂಡು ಕೆಲವುಕಾಲ ಇಂದ್ರಲೋಕದಲ್ಲಿ ಸುಖವಾಗಿದ್ದನು. ಅಷ್ಟರಲ್ಲಿ ಈ ಕಡೆ ವಿಕ್ರಾಂತತುಂಗನಾದ

ಅರ್ಜುನನು ಹಿಂತಿರುಗುವುದಕ್ಕೆ ಸಾವಕಾಶಮಾಡಿದುದಕ್ಕಾಗಿ ಧರ್ಮರಾಜ, ಭೀಮ, ನಕುಳ, ಸಹದೇವ, ದ್ರೌಪದಿ ಮೊದಲಾದವರು ಚಿಂತಾಕ್ರಾಂತರಾದರು.ಆಗ ಉಳಿದ ಪಾಂಡವರು ದ್ರೌಪದಿ ಅರ್ಜುನನ ಸುಳಿವು ಕಾಣದೆ ಚಿಂತೆ

ಸ್ರ|| ಆ ದಿವ್ಯಾಸ್ತ್ರಂಗಳಂ
ಸಾಧಿಸಲೆ ನೆಗೞ್ದಿ ಪಾರಾಸರಂ
ಪೇೞೆ ಮುನ್ನಂ
ಪೋದಂ
ಸಂದಿಂದ್ರಕೀಲಕ್ಕದನಱಿವಮ
ದೇನಾದುದೋ ಕಾರ್ಯಸಿದ್ಧಿ|
ಪ್ರಾದುರ್ಭಾವಕ್ಕೆ ವಿಘ್ನಂ
ಪಲವೊಳವಱಿಯಲ್ಬುರ್ಕು
ಮೇ ಬಾರದಲ್ಲಿಂ
ಪೋದಂ ವಿಕ್ರಾಂತತುಂಗಂ
ಗಡಮದನಱಿಯಲ್ಕಾಗದಿನ್ನೆಲ್ಲಿ

ಕಾಣ್ಬಂ|| ೩೦ ||

ಪದ್ಯ-೩೦:ಪದವಿಭಾಗ-

ಅರ್ಥ:ಆ ದಿವ್ಯಾಸ್ತ್ರಂಗಳಂ ಸಾಧಿಸಲೆ ನೆಗೞ್ದ ಪಾರಾಸರಂ ಪೇೞೆ (ಆ ದಿವ್ಯಾಸ್ತ್ರಗಳನ್ನು ಪಡೆಯಲೇಬೇಕು ಎಂದು ಪ್ರಸಿದ್ಧನಾದ ವ್ಯಾಸಮಹರ್ಷಿಯು ಹೇಳಲು) ಮುನ್ನಂ ಪೋದಂ ಸಂದ ಇಂದ್ರಕೀಲಕ್ಕೆ (ಅರ್ಜುನನು ಪ್ರಸಿದ್ಧವಾದ ಇಂದ್ರಕೀಲಕ್ಕೆ

ಹೋದನು.) ಅದನು
ಅಱಿವಂ ಅದೇನಾದುದೋ
(ಅದೇನಾಯಿತೋ ಅದನ್ನು
ಅರಿಯೋಣ) ಕಾರ್ಯಸಿದ್ಧಿ
ಪ್ರಾದುರ್ಭಾವಕ್ಕೆ ವಿಘ್ನಂ
ಪಲವು ಒಳವು ಅಱಿಯಲ್
ಬರ್ಕುಮೇ
(ಫಲಪ್ರಾಪ್ತಿಯಾಗುವುದಕ್ಕೆ
ಅನೇಕ ವಿಘ್ನಗಳಿವೆ. ಅದನ್ನು
ತಿಳಿಯಲೂ ನಮಗೆ
ಸಾಧ್ಯವೇ? ಆಗುವುದಿಲ್ಲ)

ಬಾರದೆ ಅಲ್ಲಿಂ ಪೋದಂ
ವಿಕ್ರಾಂತತುಂಗಂ ಗಡ
(ಅರ್ಜುನನು ಇಲ್ಲಿ ಬರದೆ
ಇಂದ್ರಕೀಲದಿಂದ ಮುಂದೆ
ಎಲ್ಲಿ ಹೋದನೋ ಗಡ!)
ಅದನು ಅಱಿಯಲ್ಕಾಗದು
ಇನ್ನೆಲ್ಲಿ ಕಾಣ್ಬಂ (ಅದನ್ನು
ತಿಳಿಯಲಾಗುವುದಿಲ್ಲ;
ಅವನನ್ನು ಇನ್ನೆಲ್ಲಿ
ಹುಡುಕೋಣ.)

ಪದ್ಯ-೩೦:ಅರ್ಥ:
ಪರಾಶರನಮಗ ಪ್ರಸಿದ್ಧನಾದ ವ್ಯಾಸಮಹರ್ಷಿಯು ಆ ದಿವ್ಯಾಸ್ತ್ರಗಳನ್ನು ಪಡೆಯಲೇಬೇಕು ಎಂದು ಹೇಳಲು ಅರ್ಜುನನು ಪ್ರಸಿದ್ಧವಾದ ಇಂದ್ರಕೀಲಕ್ಕೆ ಹೋದನು. ಅದೇನಾಯಿತೋ ಫಲಪ್ರಾಪ್ತಿಯಾಗುವುದಕ್ಕೆ ಅನೇಕ ವಿಘ್ನಗಳಿವೆ. ಅದನ್ನು ತಿಳಿಯಲೂ ನಮಗೆ

ಸಾಧ್ಯವಾಗುವುದಿಲ್ಲ. ಅರ್ಜುನನು ಇಲ್ಲಿ ಬರದೆ ಇಂದ್ರಕೀಲದಿಂದ ಮುಂದೆ ಎಲ್ಲಿ ಹೋದನೋ! ಅದನ್ನು ತಿಳಿಯಲಾಗುವುದಿಲ್ಲ; ಅವನನ್ನು ಇನ್ನೆಲ್ಲಿ ಹುಡುಕೋಣ.

ಗಂದಮಾದನ ಪರ್ವತದಲ್ಲಿ

ವ|| ಎಂದು ಪೋದ ದೆಸೆಯನಱಿಯದೆ ಚಿಂತಾಕ್ರಾಂತರಾಗಿ

ಮಾರ್ಕಂಡೇಯನೆಂಬ
ದಿವ್ಯಜ್ಞಾನಿಗಳ
ದಿವ್ಯೋಪದೇಶದೊಳಯ್ವರುಂ
ಗಂಧಮಾದನಗಿರಿಗೆವಂದು
ತದ್ಗಿರೀಂದ್ರದೊಳ್
ಭೀಮಸೇನಂ ದ್ರೌಪದಿಯ
ಬಯಕೆಗೆ ಧನದನ
ಕೊಳದೊಳಗಣ
ಕನಕಕಮಳಂಗಳಂ ತರಲೆಂದು
ಪೋಗಿ-

ವಚನ:ಪದವಿಭಾಗ-ಅರ್ಥ:

ಎಂದು ಪೋದ ದೆಸೆಯನು ಅಱಿಯದೆ (ಅರಿಯದೆ) ಚಿಂತಾಕ್ರಾಂತರಾಗಿ ಮಾರ್ಕಂಡೇಯನೆಂಬ ದಿವ್ಯಜ್ಞಾನಿಗಳ ದಿವ್ಯೋಪದೇಶದೊಳು ಅಯ್ವರುಂ (ಐವರು) ಗಂಧಮಾದನಗಿರಿಗೆ ವಂದು (ಬಂದು) ತತ್ ಗಿರೀಂದ್ರದೊಳ್ ಭೀಮಸೇನಂ

ದ್ರೌಪದಿಯ ಬಯಕೆಗೆ ಧನದನ (ಕುಬೇರನ) ಕೊಳದೊಳಗಣ ಕನಕಕಮಳಂಗಳಂ (ಚಿನ್ನದ ಕಮಲಗಳನ್ನು) ತರಲೆಂದು ಪೋಗಿ-

ವಚನ:ಅರ್ಥ:ಎಂದು ಅರ್ಜುನನು ಹೋದ ದಿಕ್ಕನ್ನು ತಿಳಿಯದೆ ಚಿಂತಾಕ್ರಾಂತರಾಗಿ ಮಾರ್ಕಂಡೇಯನೆಂಬ ದಿವ್ಯಜ್ಞಾನಿಯ

ದಿವ್ಯೋಪದೇಶದಿಂದ ಅಯ್ದು ಮಂದಿಯೂ ಗಂಧಮಾದನಪರ್ವತಕ್ಕೆ ಬಂದರು. ಆ ಶ್ರೇಷ್ಠಪರ್ವತದಲ್ಲಿ ಭೀಮಸೇನನು ದ್ರೌಪದಿಯ ಆಶೆಯನ್ನು ತೀರಿಸುವುದಕ್ಕಾಗಿ ಕುಬೇರನ ಸರೋವರದಲ್ಲಿದ್ದ ಚಿನ್ನದ ಕಮಲಗಳನ್ನು ತರಲು ಹೋಗಿ-

ಕಂ|| ಪ್ರಕಟಿತ ಸಾಹಸನಱುವ

ತ್ತು ಕೋಟಿ

ಧನದಾನುಚರರನತಿ

ರೌದ್ರಭಯಾ|

ನಕಮಾಗೆ ಕೊಂದು ಸೌಗಂ

ಕಕಾಂಚನಕಮಳಹರಣಪರಿಣ

ತನಾದಂ|| ೩೧ ||

ಪದ್ಯ-೩೧:ಪದವಿಭಾಗ-

ಅರ್ಥ:ಪ್ರಕಟಿತ ಸಾಹಸನು

ಅಱುವತ್ತು ಕೋಟಿ ಧನದಾ

ಅನುಚರರನು ಅತಿ ರೌದ್ರ

ಭಯಾನಕಮ್ ಆಗೆ ಕೊಂದು

(ಬೀಮನು ಸಾಹಸವನ್ನು ತೋರಿ ಕುಬೇರನ ಅರವತ್ತು ಕೋಟಿ ಭಟರನ್ನು ಬಹಳ ರೌದ್ರವೂ ಭಯಂಕರವೂ ಆಗಿರುವ ರೀತಿಯಲ್ಲಿ ಕೊಂದು) ಸೌಗಂಕ ಕಾಂಚನ ಕಮಳ ಹರಣ ಪರಿಣತನಾದಂ (ಸುಗಂಧದಿಂದ ಕೂಡಿದ ಚಿನ್ನದ ಕಮಲಗಳನ್ನು ಅಪಹರಿಸಿಕೊಂಡು (ಪರಿಣತ-ಜಾಣನಾಗಿ) ಬಂದನು.)

ಪದ್ಯ-೩೧:ಅರ್ಥ: ಬೀಮನು ಸಾಹಸವನ್ನು ತೋರಿ ಕುಬೇರನ ಅರವತ್ತು ಕೋಟಿ ಭಟರನ್ನು ಬಹಳ ರೌದ್ರವೂ ಭಯಂಕರವೂ ಆಗಿರುವ ರೀತಿಯಲ್ಲಿ ಕೊಂದು ಸುಗಂಧದಿಂದ ಕೂಡಿದ ಚಿನ್ನದ ಕಮಲಗಳನ್ನು ಅಪಹರಿಸಿಕೊಂಡು ಬಂದನು.

ವ|| ಮತ್ತಂ ಜಟಾಸುರನೆಂಬಸುರನನಾ

ಗಿರೀಂದ್ರಕಂದರದೊಳ್ ಸೀಳ್ದು ಸೀೞುಂಬುೞಾಡಿ ಕೆಲವು ದಿವಸಮನಿರ್ದೊಂದು ದಿವಸಮೊರ್ವನೆ ಬೇಂಟೆಯ ನೆವದಿಂದಲ್ಲಿಂ ತಳರ್ದು ಬಟ್ಟೆಯ ಕಣ್ಣೊಳಡ್ಡಂಬಿೞ್ದಿರ್ದ ವೃದ್ಧ ವಾನರನಂ ಕಂಡು-

ವಚನ:ಪದವಿಭಾಗ-

ಅರ್ಥ:ಮತ್ತಂ ಜಟಾಸುರನೆಂಬ ಅಸುರನನು

ಆ ಗಿರೀಂದ್ರಕಂದರದೊಳ್
ಸೀಳ್ದು (ಆ ಪರ್ವತದ
ಗುಹೆಯಲ್ಲಿ ಸೀಳಿ)
ಸೀಱುಂಬುಳಾಡಿ (ಚೆಲ್ಲಾಪಿಲ್ಲಿ
ಮಾಡಿ) ಕೆಲವು ದಿವಸಮನು
ಇರ್ದು, ಒಂದು ದಿವಸಂ
ಓರ್ವನೆ ಬೇಂಟೆಯ ನೆವದಿಂದ
ಅಲ್ಲಿಂ ತಳರ್ದು (ಒಂದು
ದಿವಸ ಒಬ್ಬನೇ ಬೇಟೆಗಾಗಿ
ಅಲ್ಲಿಂದ ಹೊರಟು) ಬಟ್ಟೆಯ
ಕಣ್ಣೊಳು (ನಡು ದಾರಿಯಲ್ಲಿ)

ಅಡ್ಡಂ ಬಿೞ್ದಿರ್ದ ವೃದ್ಧ ವಾನರನಂ ಕಂಡು (ಅಡ್ಡಲಾಗಿ ಬಿದ್ದಿದ್ದ ಮುದಿಕಪಿಯನ್ನು ಕಂಡು)-

ವಚನ:ಅರ್ಥ:. ಮತ್ತು ಜಟಾಸುರನೆಂಬ ರಾಕ್ಷಸನನ್ನು ಆ ಪರ್ವತದ ಗುಹೆಯಲ್ಲಿ ಸೀಳಿ ಚೆಲ್ಲಾಪಿಲ್ಲಿ ಮಾಡಿ ಅಲ್ಲಿ ಕೆಲವು ದಿವಸವಿದ್ದನು. ಒಂದು ದಿವಸ ಒಬ್ಬನೇ ಬೇಟೆಗಾಗಿ ಅಲ್ಲಿಂದ ಹೊರಟು

ನಡುದಾರಿಯಲ್ಲಿ ಅಡ್ಡಲಾಗಿ
ಬಿದ್ದಿದ್ದ ಮುದಿಕಪಿಯನ್ನು
ಕಂಡು

<u>ಭೀಮ ಮಾರುತಿ ಸಮಾಗಮ</u>

ಚಂ|| ತೊಲಗೆನೆ ಬಟ್ಟೆಯಿಂ
ತೊಲಗಲಾನಶಕ್ತನೆನಾಪೊ಼ಡೆ
ನ್ನನಿನ್
ತೊಲಗಿಸಿ ಪೋಗು ನೀನೆನೆ
ವೃಕೋದರನೊಯ್ಯನೆ ನಕ್ಕು
ಬಾಲಮಂ|

ಸಲೆ ಮುರಿದೆತ್ತಲಾಟಿಸೆ

ಧರಿತ್ರಿಗೆ ಕೀಲಿಸಿದಂತುಟಾಗೆ

ದೋ

ರ್ವಲದ ಪೊಡರ್ಪುಗೆಟ್ಟು ನಡೆ

ನೋಡಿ ಮರುತ್ಸುತನಂ

ಮರುತ್ಸುತಂ|| ೩೨||

ಪದ್ಯ-೩೨:ಪದವಿಭಾಗ-

ಅರ್ಥ:ತೊಲಗು ಎನೆ

ಬಟ್ಟೆಯಿಂ (ಬಟ್ಟೆಯಿಂ-

ದಾರಿಯಿಂದ

ಹೊರಟುಹೋಗು) ತೊಲಗಲು

ಆನು ಅಶಕ್ತನೆಂ ಆಪ್ಪೊರ್ಡೆ
ಎನ್ನಂ ಇನ್ ತೊಲಗಿಸಿ
ಪೋಗು ನೀನು ಎನೆ ('ನಾನು
ತೊಲಗಲು ಅಶಕ್ತನಾಗಿದ್ದೇನೆ.
ನೀನು ನನ್ನನ್ನು ತೊಲಗಿಸಿ
ಹೋಗು' ಎಂದಾಗ)
ವೃಕೋದರನು ಒಯ್ಯನೆ ನಕ್ಕು
ಬಾಲಮಂ ಸಲೆ ಮುರಿದೆತ್ತಲು
(ಚನ್ನಾಗಿ ತಿರುಚಿ ಎತ್ತಲು)
ಆಟಿಸೆ (ಭೀಮನು ಮೆಲ್ಲನೆ
ಹುಸಿನಗೆ ನಕ್ಕು ಬಾಲವನ್ನು

ಚೆನ್ನಾಗಿ ತಿರುಚಿ ಎತ್ತಲು
ಪ್ರಯತ್ನಿಸಿದರೂ) ಧರಿತ್ರಿಗೆ
ಕೀಲಿಸಿದಂತುಟಾಗೆ (ಭೂಮಿಗೆ
ಬೆಸೆದಿರುವಂತಿರಲು)
ದೋರ್ವಲದ ಪೊಡರ್ಪುಗೆಟ್ಟು
(ತನ್ನ ಬಾಹುಬಲದ
ಸಾಮರ್ಥ್ಯವು
ನಾಶವಾಯಿತೆನಿಸಿದಾಗ)ನಡೆ
ನೋಡಿ ಮರುತ್ಸುತನಂ
ಮರುತ್ಸುತಂ (ಭೀಮಸೇನನು
ಆ ವಾನರನಾದ

ಆಂಜನೇಯನನ್ನು ದೀರ್ಘವಾಗಿ ನೋಡಿ-)

ಪದ್ಯ-೩೨:ಅರ್ಥ:ಭೀಮನು ಕಪಿಗೆ ‘ದಾರಿಯಿಂದ ತೊಲಗು’ ಎಂದನು ಅದಕ್ಕೆ ಆ ಕಪಿಯು 'ನಾನು ತೊಲಗಲು ಅಶಕ್ತನಾಗಿದ್ದೇನೆ. ನೀನು ನನ್ನನ್ನು ತೊಲಗಿಸಿ ಹೋಗು’ ಎಂದಿತು. ಭೀಮನು ಮೆಲ್ಲನೆ ಹುಸಿನಗೆ ನಕ್ಕು ಬಾಲವನ್ನು ಚೆನ್ನಾಗಿ ಬಗ್ಗಿಸಿ ಎತ್ತಲು

ಪ್ರಯತ್ನಿಸಿದರೂ, ಭೂಮಿಗೆ ಬೆಸೆದಿರುವಂತಿರಲು ತನ್ನ ಬಾಹುಬಲದ ಸಾಮರ್ಥ್ಯವು ನಾಶವಾಯಿತೆನಿಸಿದಾಗ, ಭೀಮಸೇನನು ಆ ವಾನರನಾದ ಆಂಜನೇಯನನ್ನು ದೀರ್ಘವಾಗಿ ನೋಡಿ-

ಕಂ|| ನೀನೆಮ್ಮಣ್ಣನೆ ವಂಶದ
ವಾನರನಲ್ಲಯ್ ವಲಂ
ಮಹಾಬಲ ಪೇೞ್|

ಕೀ ನಗದೊಳಿರ್ದೆಯೆನೆ ತ

ದ್ವಾನರನಟ್ಟಿತುರ್ಜ

ಭೀಮನೆಂಬಂ ನೀನೇ|| ೩೩ ||

ಪದ್ಯ-೩೩:ಪದವಿಭಾಗ-

ಅರ್ಥ:ನೀನು ಎಮ್ಮಣ್ಣನೆ ವಂಶದ ವಾನರನಲ್ಲಯ್ ವಲಂ ಮಹಾಬಲ (ನೀನು ವಲಂ-ನಿಜವಾಗಿಯೂ ನಮ್ಮಣ್ಣನಾದ ವಾಯುಪುತ್ರನೇ ಅಲ್ಲವೇ? ಬಲಶಾಲಿಯೇ) ಪೇಟ್ ಏಕೀ

ನಗದೊಳು ಇರ್ದೆ ಎನೆ (ಏಕೆ ಈ ಪರ್ವತದಲ್ಲಿದ್ದೀಯೆ ಎಂಬುದನ್ನು ಹೇಳು' ಎಂದಾಗ) ತತ್ ವಾನರನು ಅಲ್ಕಿರ್ತು ಭೀಮನೆಂಬಂ ನೀನೇ (ಆ ವಾನರನು ಪ್ರೀತಿಯಿಂದ ನೋಡಿ ಓಹೋ ಭೀಮನೆಂಬುವವನು ನೀನೆಯೊ ಎಂದನು.)

ಪದ್ಯ-೩೩:ಅರ್ಥ: ನೀನು ನಿಜವಾಗಿಯೂ ನಮ್ಮಣ್ಣನಾದ

ವಾಯುಪುತ್ರನೇ
(ಆಂಜನೇಯನೇ) ಅಲ್ಲವೇ?
ಬಲಶಾಲಲಿಯೇ ಏಕೆ ಈ
ಪರ್ವತದಲ್ಲಿದ್ದೀಯೆ
ಎಂಬುದನ್ನು ಹೇಳು' ಎಂದು
ಕೇಳಿದನು. ಆ ವಾನರನು
ಪ್ರೀತಿಯಿಂದ ನೋಡಿ ಓಹೋ
ಭೀಮನೆಂಬುವವನು
ನೀನೆಯೊ ಎಂದನು.

ವ|| ಎಂಬುದುಮಪ್ಪೆನೆಂದೊಡೆ ನಿಮ್ಮಣ್ಣನಪ್ಪಣುವನೆ

ನಾನಪ್ಪೆನೆಂದು ಪೇೞ್ವುದುಮಾಗಳ್ ಸಾಷ್ಟಾಂಗಮೆಱಗಿ ಪೊಡವಟ್ಟ ಭೀಮಸೇನನಂ ಪರಸಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಪ್ಪೆನೆಂದೊಡೆ (ಎನ್ನಲು 'ನಾನು ಭೀಮನೇ' ಎಂದಾಗ) ನಿಮ್ಮಣ್ಣನು ಅಪ್ಪ ಅಣುವನೆ (ನಿಮ್ಮಣ್ಣನಾದ ಹನುಮಂತನೆ) ನಾನಪ್ಪೆನೆಂದು

(ನಾನೇ ಅಪ್ಪೆನು-ಆಗಿರುವೆನು, ನಾನೇಸರಿ ಎಂದನು) ಪೇೞ್ದುದುಂ ಆಗಳ್ ಸಾಷ್ಟಾಂಗಮೆಱಗಿ ಪೊಡವಟ್ಟ ಭೀಮಸೇನನಂ (ಆಗ ಸಾಷ್ಟಾಂಗ ನಮಸ್ಕಾರ ಮಾಡಿದ ಭೀಮನನ್ನು) ಪರಸಿ-ಹರಸಿ-

ವಚನ:ಅರ್ಥ:|| ಎನ್ನಲು 'ನಾನು ಭೀಮನೇ ಹೌದು,' ಎಂದನು. ಹಾಗಾದರೆ

ನಿಮ್ಮಣ್ಣನಾದ ಹನುಮಂತನೆ ನಾನೇಸರಿ ಎಂದನು, ಆಗ ಸಾಷ್ಟಾಂಗ ನಮಸ್ಕಾರ ಮಾಡಿದ ಭೀಮನನ್ನು ಆಂಜನೇಯನು ಹರಸಿದನು.

ಆಗ-

ಕಂ|| ಎನ್ನಂತಪ್ಪೊಡವುಟ್ಟಿದ
ರಿನ್ನಿನಗೊಳರಾಗಲಹಿತರಿದಿ
ರಾಂಪರೆ ಪೇೞು|
ನಿನ್ನಂ ಪಗೆವರ ಬೇರೊಳ್

ಬೆನ್ನೀರಂ ಪೊಯ್ದು ನಿನಗೆ ಮಾಱ್ಪೆಂ ಧರೆಯಂ|| ೩೪ ||

ಪದ್ಯ-೩೪:ಪದವಿಭಾಗ-ಅರ್ಥ:ಎನ್ನಂತಪ್ಪ ಒಡವುಟ್ಟಿದರ್ ಇಂ ನಿನಗೊಳರಾಗಲ್ ಅಹಿತರು ಇದಿರಾಂಪರೆ ಪೇಱು(ನನ್ನಂತಹ ಸಹೋದರರು ನಿನಗೆ ಇನ್ನೂ ಇರುವಾಗ ಶತ್ರುಗಳಾದವರು ನಿನ್ನನ್ನು ಪ್ರತಿಭಟಿಸಲು

ಶಕ್ತರಾಗುತ್ತಾರೆಯೇ) ನಿನ್ನಂ ಪಗೆವರ ಬೇರೊಳ್ ಬೆನ್ನೀರಂ ಪೊಯ್ದು (ನಿನ್ನ ಶತ್ರುಗಳ ಬೇರಿನಲ್ಲಿ ಬಿಸಿನೀರನ್ನು ಸುರಿದು) ನಿನಗೆ ಮಾೞ್ಪೆಂ ಧರೆಯಂ (ರಾಜ್ಯವನ್ನು ದೊರಕಿಸುತ್ತೇನೆ ಎಂದನು)

ಪದ್ಯ-೩೪:ಅರ್ಥ: ನನ್ನಂತಹ ಸಹೋದರರು ನಿನಗೆ ಇನ್ನೂ ಇರುವಾಗ ಶತ್ರುಗಳಾದವರು ನಿನ್ನನ್ನು ಪ್ರತಿಭಟಿಸಲು

ಶಕ್ತರಾಗುತ್ತಾರೆಯೇ. ನಿನ್ನ ಶತ್ರುಗಳ ಬೇರಿನಲ್ಲಿ ಬಿಸಿನೀರನ್ನು ಸುರಿದು ನಿನಗೆ ರಾಜ್ಯವನ್ನು ದೊರಕಿಸುತ್ತೇನೆ ಎಂದನು.

ವ|| ಎಂಬುದುಂ ಭೀಮಸೇನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಭೀಮಸೇನನು ಇಂತು ಎಂದಂ-

ವಚನ:ಅರ್ಥ: ಅದಕ್ಕೆ ಭೀಮಸೇನನು ಹೀಗೆ ಹೇಳಿದನು.

ಮ|| ಬೆಸನಂ ಪೂಣ್ದು ಕಡಂಗಿ ಪಾಯ್ದು ಕಡಲಂ ಮುಂ ಪೂಣ್ದರಂ ಕೊಂದು ಪೊ
ಕ್ಕು ಸಮಂತಾಗಡೆ ಲಂಕೆಯಂ ಬನಮನಾಟಂದುರ್ಕಿ ಕಿೞ್ತಿಕ್ಕಿ ಸಂ|
ತಸಮಂ ಸೀತೆಗೆ ಮಾಡಿ ಸುಟ್ಟು ಪೊೞಲಂ ಕಾಳಾನಳಂಗಿತ್ತು

ಬೇ

ವಸಮಂ ರಾಮನಿನುಯ್ದ

ನೀಂಬರೆಗಮೇನಾ ಕೌರವರ್

ಗಂಡರೇ|| ೩೫ ||

ಪದ್ಯ-೩೫:ಪದವಿಭಾಗ-

ಅರ್ಥ:ಬೆಸನಂ ಪೂಣ್ದು

ಕಡಂಗಿ ಪಾಯ್ದು ಕಡಲಂ

(ಹೇಳಿದಕಾರ್ಯಕ್ಕಾಗಿ

ಪ್ರತಿಜ್ಞೆಮಾಡಿ

ಉತ್ಸಾಹಗೊಂಡು ಕಡಲನ್ನು

ದಾಟಿದೆ) ಮುಂ ಪೂಣ್ದರಂ

ಕೊಂದು (ಮೊದಲು ಪೂಣ್
-ಎದುರಿಸು,
ಎದುರಿಸಿದವರನ್ನು ಕೊಂದೆ)
ಪೊಕ್ಕು ಸಮಂತು ಆಗಡೆ
ಲಂಕೆಯಂ ಬನಮನು
ಆಟಂದು (ಆಗಲೇ ಚೆನ್ನಾಗಿ
ಲಂಕೆಯನ್ನು ಪ್ರವೇಶಮಾಡಿದೆ,
ಅಶೋಕವನ್ನು ಅಕ್ರಮಿಸಿ)
ಉರ್ಕಿ ಕಿಟ್ಟಿಕ್ಕಿ
(ಉತ್ಸಾಹದಿಂದ ಉಬ್ಬಿ
(ವನವನ್ನು) ನಾಶಪಡಿಸಿದೆ)

ಸಂತಸಮಂ ಸೀತೆಗೆ ಮಾಡಿ
ಸುಟ್ಟು ಪೊಟಿಲಂ
ಕಾಳಾನಳಂಗೆ ಇತ್ತು (ಲಂಕಾ
ಪಟ್ಟಣವನ್ನು ಸುಟ್ಟು ಹಾಕಿದೆ)
ಬೇವಸಮಂ (ದುಖವನ್ನು)
ರಾಮನಿಂ ಉಯ್ದು ನೀಂ
(ನೀನು ರಾಮನ ದುಖವನ್ನು
ಪರಿಹಾರಮಾಡಿದೆ.) ಬರೆಗಂ
ಏನು ಆ ಕೌರವರ್ ಗಂಡರೇ
(ಎದುರಿಸಿ ಬರಲು ಆ
ಕೌರವರು ಅಷ್ಟು ಶೂರರೇ)

ಪದ್ಯ-೩೫:ಅರ್ಥ: ಅಣ್ಣಾ ; ಹೇಳಿದಕಾರ್ಯಕ್ಕಾಗಿ ಪ್ರತಿಜ್ಞೆಮಾಡಿ ಉತ್ಸಾಹಗೊಂಡು ಕಡಲನ್ನು ದಾಟಿದೆ, ಮೊದಲು ಎದುರಿಸಿದವರನ್ನು ಕೊಂದೆ, ಆಗಲೇ ಚೆನ್ನಾಗಿ ಲಂಕೆಯನ್ನು ಪ್ರವೇಶಮಾಡಿದೆ, ಅಶೋಕವನ್ನು ಅಕ್ರಮಿಸಿ ಉತ್ಸಾಹದಿಂದ ಉಬ್ಬಿ (ವನವನ್ನು) ನಾಶಪಡಿಸಿದೆ.

ಸೀತಾದೇವಿಗೆ ಸಂತೋಷವನ್ನುಂಟುಮಾಡಿದೆ. ಲಂಕಾ ಪಟ್ಟಣವನ್ನು ಸುಟ್ಟು ಹಾಕಿದೆ (ಕಾಲಾಗ್ನಿಗೆ ಕೊಟ್ಟು) ನೀನು ರಾಮನ ದುಖವನ್ನು ಪರಿಹಾರಮಾಡಿದೆ. ನಿನ್ನನ್ನು ಎದುರಿಸಿ ಬರಲು ಆ ಕೌರವರು ಅಷ್ಟು ಶೂರರೇ!

ಕಂ|| ಎನಗೆ ದಯೆಗೆಯ್ವುದೊಂದನೆ

ಮೊನೆಯೊಳ್ ವಿಜಯಂಗೆ ವಿಜಯಮಾಗಿರೆ ನೀಮಾ| ತನ ಕೇತನದೊಳ್ ಫಣಿಕೇತನಬಲಕುತ್ಪಾತಕೇತುವಪ್ಪುದೆ ಸಾಲ್ಗುಂ|| ೩೬||

ಪದ್ಯ-೩೬:ಪದವಿಭಾಗ-ಅರ್ಥ:ಎನಗೆ ದಯೆಗೆಯ್ವುದು ಒಂದನೆ (ನನಗೆ ದಯಮಾಡಿ ಒಂದನ್ನು ಕರುಣಿಸಬೇಕು) ಮೊನೆಯೊಳ್ (ಯುದ್ಧದಲ್ಲಿ) ವಿಜಯಂಗೆ ವಿಜಯಮಾಗಿರೆ

ನೀಂ ಆತನ ಕೇತನದೊಳ್
(ಅರ್ಜುನನಿಗೆ
ವಿಜಯವಾಗುವ ಹಾಗೆ ನೀವು
ಆತನ ಧ್ವಜದಲ್ಲಿದ್ದು)
ಫಣಿಕೇತನ ಬಲಕೆ ಉತ್ಪಾತ
ಕೇತುವಪ್ಪುದೆ ಸಾಲ್ಗುಂ
(ದುರ್ಯೋಧನನ ಸೈನ್ಯಕ್ಕೆ
ಪ್ರತಿಶಕುನವನ್ನೂ ಸೂಚಿಸುವ
ಕೇತುಗ್ರಹವಾಗಿರುವುದೇ
ಸಾಕು)|

ಪದ್ಯ-೩೬:ಅರ್ಥ: ನನಗೆ ದಯಮಾಡಿ ಒಂದನ್ನು ಕರುಣಿಸಬೇಕು; ಯುದ್ಧದಲ್ಲಿ ಅರ್ಜುನನಿಗೆ ವಿಜಯವಾಗುವ ಹಾಗೆ ನೀವು ಆತನ ಧ್ವಜದಲ್ಲಿದ್ದು ದುರ್ಯೋಧನನ ಸೈನ್ಯಕ್ಕೆ ಪ್ರತಿಶಕುನವನ್ನೂ ಸೂಚಿಸುವ ಕೇತುಗ್ರಹವಾಗಿರುವುದೇ ಸಾಕು; ಎಂದು ಬೇಡಿದನು.

ವ|| ಎಂದು
ಬೇಡಿಕೊಂಡೊಡದೇವಿರಿದಿತ್ತೆ
ನೆಂದಣುವನದೃಶ್ಯಮಾದನಾಗ
ಳ್ ಭೀಮಸೇನಂ ಬೀಡಿಂಗೆ
ವಂದು ಧರ್ಮಪುತ್ರಂಗಾ
ಮಾತೆಲ್ಲಮಂ ಪೇೞ್ದು
ವಿಕ್ರಮಾರ್ಜುನನ ಬರವನೆ
ಪಾರುತ್ತಿರ್ಪನ್ನೆಗಮಿತ್ತ
ವಿಬುಧವನಜವನಕಳಹಂಸ
ನುಂ ಪಲವುಂ
ದಿವಸಮಗಲ್ದಿರ್ದ

ತನ್ನೊಡವುಟ್ಟಿದರಂ ನೆನೆದು
ಪೋಪೆನೆಂದಿಂದ್ರನಂ
ಬೀೞ್ಕೊಂಡು ತನಗೆ
ದೇವೇಂದ್ರನಿತ್ತ ಐಂದ್ರಮೆಂಬ
ದಿವ್ಯಾಸ್ತ್ರಮುಮಂ
ನೈಷ್ಠಿಕಮೆಂಬ ಮುಷ್ಟಿಯುಮಂ
ಕೆಯ್ಕೊಂಡು ದೇವಸ್ತ್ರೀಯರ
ಮನಮನಿೞ್ಕುಳಿಗೊಂಡಿಂದ್ರಂ
ತನ್ನ ಪುಷ್ಪಕಮನೇಱಿಸಿ
ಮಾತಳಿಯಂ
ಸಾರಥಿಯಾಗಲ್ವೇೞ್ದು ಕಱಿಪೆ

ನಾಕಲೋಕದ್ವಾರಮಾಗಿರ್ದ
ಗಂಧಮಾದನಗಿರಿಗೆವಂದು
ಕಾರ್ಗಾಲದ ಬರವಂ ಚಾದಗೆ
ಪಾರ್ವಂತೆ ತನ್ನ ಬರವನೆ
ಪಾರುತ್ತಿರ್ದ ಧರ್ಮಪುತ್ರನ
ಮರುತ್ಸುತನ
ಪಾದಕಮಲಂಗಳಂ
ನಿಜಮಕುಟಮರೀಚಿಗಳಿಂದ
ಮರ್ಚಿಸಿ
ತದೀಯಾಶೀರ್ವಚನಮನಾಂ
ತು ತನಗ ಪೊಡವಟ್ಟ ನಕುಳ

ಸಹದೇವರಿರ್ಬರುಮನಟ್ಟಿಱಿಂ
ಪರಸಿ
ಬೞಿಯಮಿಂದ್ರಕೀಲನಗೇಂದ್ರ
ದೊಳೀಶ್ವರನ ವರ ಪ್ರಸಾದದಿಂ
ಪಡೆದ ದಿವ್ಯಾಸ್ತ್ರಮಂ ತೋಱಿ
ತನ್ನನಿಂದ್ರನೊಡಗೊಂಡು
ಪೋದುದುಮನಿಂದ್ರಲೋಕ
ದೊಳಾತನಲ್ಲಿ ಪಡೆದ
ಮಹಿಮೆಯುಮನಱಿಯೆ
ಪೇೞ್ದು ನಾವಿಲ್ಲಿರಲ್ವೇಡ
ದ್ವೈತವನದೊಳಿರ್ಪಂ

ಬನ್ನಿಮೆಂದು ಮಾತಳಿಯಂ ಬೀೞ್ಕೊಟ್ಟು ಕಱಿಪಿ ನಿಜಪರಿಜನಸಹಿತಂ ಬಂದು ಸುಖಮಿರ್ಪನ್ನೆಗಮೊಂದು ದಿವಸಮೊಂದು ಮಾಯಾ ಮತ್ತಹಸ್ತಿ-

ವಚನ:ಪದವಿಭಾಗ-

ಅರ್ಥ:ಎಂದು ಬೇಡಿಕೊಂಡೊಡೆ ಅದೇಂ ಪಿರಿದು ಇತ್ತೆನು (‘ಅದೇನು ದೊಡ್ಡದು ಕೊಟ್ಟೆನು,

ಆಗಬಹುದು’) ಎಂದು ಅಣುವನು (ಹನುಮಂತನು) ಅದೃಶ್ಯಮಾದನು ಆಗಳ್ | ಭೀಮಸೇನಂ ಬೀಡಿಂಗೆ ವಂದು (ಬೀಡಿಗೆ/ಕುಟೀರಕ್ಕೆ ಬಂದು) ಧರ್ಮಪುತ್ರಂಗೆ ಆ ಮಾತೆಲ್ಲಮಂ ಪೇೞ್ದು (ಹೇಳಿ)ವಿಕ್ರಮಾರ್ಜುನನ ಬರವನೆ ಪಾರುತ್ತಿರ್ಪ ಅನ್ನೆಗಂ (ಬರವನ್ನೇ ಇದಿರುನೋಡುತ್ತಿರುವಾಗ)

ಇತ್ತ ವಿಬುಧವನಜ
ವನಕಳಹಂಸನುಂ
(ವಿದ್ವಾಂಸರೆಂಬ ಕಮಲವನಕ್ಕೆ
ಶ್ರೇಷ್ಠವಾದ ಹಂಸದಂತಿರುವ
ಅರ್ಜುನನು) ಪಲವುಂ
ದಿವಸಂ ಅಗಲ್ದಿರ್ದ ತನ್ನ
ಒಡವುಟ್ಟಿದರಂ ನೆನೆದು
ಪೋಪೆನೆಂದು ಇಂದ್ರನಂ
ಬೀೞ್ಕೊಂಡು
(ಹೋಗುವೆನೆಂದು ಹೇಳಿ,
ಇಂದ್ರನನ್ನು ಬೀಳ್ಕೊಟ್ಟು)

ತನಗೆ ದೇವೇಂದ್ರನಿತ್ತ
ಐಂದ್ರಮೆಂಬ
ದಿವ್ಯಾಸ್ತ್ರಮುಮಂ
ನೈಷ್ಠಿಕಮೆಂಬ
ಮುಷ್ಟಿಯುಮಂ ಕೆಯ್ಕೊಂಡು
(ಪಡೆದು,) ದೇವಸ್ತ್ರೀಯರ
ಮನಮನು ಇಲ್ಕುಳಿಗೊಂಡು
(ಅಪ್ಸರೆಯರನ್ನು ಮನವನ್ನು
ಸೆಳೆದು) ಇಂದ್ರಂ ತನ್ನ
ಪುಷ್ಪಕಮನು ಏಱಿಸಿ
ಮಾತಳಿಯಂ

ಸಾರಥಿಯಾಗಲು ವೇಟ್ಬಿ
ಕಟಿಪೆ (ಕಳುಹಿಸಲು)
ನಾಕಲೋಕದ್ವಾರಮಾಗಿರ್ದ
ಗಂಧಮಾದನಗಿರಿಗೆ ವಂದು
(ಸ್ವರ್ಗಲೋಕದ ಬಾಗಿಲಾಗಿದ್ದ
ಗಂಧಮಾದನಪರ್ವತಕ್ಕೆ
ಬಂದು,) ಕಾರ್ಗಾಲದ ಬರವಂ
ಚಾದಗೆ ಪಾರ್ವಂತೆ
(ಮಳೆಗಾಲದ ಆಗಮನವನ್ನು
ಚಾತಕಪಕ್ಷಿಯು
ನಿರೀಕ್ಷಿಸುವಂತೆ) ತನ್ನ ಬರವನೆ

ಪಾರುತ್ತಿರ್ದ ಧರ್ಮಪುತ್ರನ
ಮರುತ್ಸುತನ (ಧರ್ಮರಾಜ
ಮತ್ತು ಭೀಮರ)
ಪಾದಕಮಲಂಗಳಂ
ನಿಜಮಕುಟಮರೀಚಿಗಳಿಂದಂ
ಅರ್ಚಿಸಿ (ತನ್ನ ಕಿರೀಟದ
ಕಿರಣಗಳಿಂದ ಪೂಜಿಸಿ -
ನಮಿಸಿ) ತದೀಯ
ಆಶೀರ್ವಚನಮನು ಆಂತು
(ಪಡೆದು) ತನಗೆ ಪೊಡವಟ್ಟ
ನಕುಳ

ಸಹದೇವರಿರ್ಬರುಮನು
ಅಲ್ಕಿಱಿಂ ಪರಸಿ (ಪ್ರೀತಿಯಿಂದ
ಆಶೀರ್ವಾದ ಮಾಡಿ)
ಬೞಿಯಂ ಇಂದ್ರಕೀಲ
ನಗೇಂದ್ರದೊಳು
(ಪರ್ವತದಲ್ಲಿ) ಈಶ್ವರನ ವರ
ಪ್ರಸಾದದಿಂ ಪಡೆದ
ದಿವ್ಯಾಸ್ತ್ರಮಂ ತೋಱಿ ತನ್ನನು
ಇಂದ್ರನೊಡಗೊಂಡು
ಪೋದುದುಮನು
ಇಂದ್ರಲೋಕದೊಳು ಆತನಲ್ಲಿ

ಪಡೆದ ಮಹಿಮೆಯುಮು
ಅಱಿಯೆ ಪೇೞ್ದು
(ಮಹಿಮೆಯನ್ನು (ಗೌರವ)
ತಿಳಿಯುವ ಹಾಗೆ ವಿಸ್ತಾರವಾಗಿ
ಹೇಳಿ) ನಾವು ಇಲ್ಲಿರಲ್ವೇಡ
(ನಾವು ಇಲ್ಲಿರುವುದು ಬೇಡ)
ದ್ವೈತವನದೊಳಿರ್ಪಂ
ಬನ್ನಿಮೆಂದು ಮಾತಳಿಯಂ
ಬೀಱ್ಕೊಟ್ಟು ಕೞಿಪಿ
(ಕಳುಹಿಸಿ) ನಿಜ-ತನ್ನ
ಪರಿಜನಸಹಿತಂ ಬಂದು

ಸುಖಂ ಇರ್ಪನ್ನೆಗಂ ಒಂದು ದಿವಸಂ ಒಂದು ಮಾಯಾ ಮತ್ತಹಸ್ತಿ (ಮಾಯಾಗಜವು ಬಂದಿತು! -)-

ವಚನ:ಅರ್ಥ:‘ ‘ಅದೇನು ದೊಡ್ಡದು ಕೊಟ್ಟೆನು, ಆಗಬಹುದು’ ಎಂದು ಹೇಳಿ ಹನುಮಂತನು ಆಗ ಅದೃಶ್ಯನಾದನು. ಭೀಮಸೇನನು ಬೀಡಿಗೆ/ ಕುಟೀರಕ್ಕೆ ಬಂದು

ಧರ್ಮರಾಜನಿಗೆ ಆ ಸಮಾಚಾರವೆಲ್ಲವನ್ನೂ ತಿಳಿಸಿದನು. ಎಲ್ಲರೂ ವಿಕ್ರಮಾರ್ಜುನನ ಬರವನ್ನೇ ಇದಿರುನೋಡುತ್ತಿರುವಾಗ, ಈ ಕಡೆ ವಿದ್ವಾಂಸರೆಂಬ ಕಮಲವನಕ್ಕೆ ಶ್ರೇಷ್ಠವಾದ ಹಂಸದಂತಿರುವ ಅರ್ಜುನನು ಅನೇಕಕಾಲ ಅಗಲಿದ್ದ ತನ್ನ ಸಹೋದರರನ್ನು ನೆನಸಿಕೊಂಡು ಹಿಂದಿರುಗಿ

ಹೋಗುವೆನೆಂದು ಹೇಳಿ,
ಇಂದ್ರನನ್ನು ಬೀಳ್ಕೊಟ್ಟು ತನಗೆ
ದೇವೇಂದ್ರನು ಕೊಟ್ಟ
ಐಂದ್ರವೆಂಬ ದಿವ್ಯಾಸ್ತ್ರವನ್ನೂ
ನೈಷ್ಠಿಕವೆಂಬ ಮುಷ್ಟಿಯನ್ನೂ
ಪಡೆದು, ಅಪ್ಸರೆಯರನ್ನು
ಮನವನ್ನು ಸೆಳೆದು
ಹೊರಟನು, ಇಂದ್ರನು
ಅವನನ್ನು
ಪುಷ್ಪಕವಿಮಾನವನ್ನು ಹತ್ತಿಸಿ,
ಮಾತಲಿಯನ್ನು

ಸಾರಥಿಯಾಗಿರ ಹೇಳಿ
ಕಳುಹಿಸಲು ಸ್ವರ್ಗಲೋಕದ
ಬಾಗಿಲಾಗಿದ್ದ
ಗಂಧಮಾದನಪರ್ವತಕ್ಕೆ
ಬಂದನು. ಮಳೆಗಾಲದ
ಆಗಮನವನ್ನು
ಚಾತಕಪಕ್ಷಿಯು
ನಿರೀಕ್ಷಿಸುವಂತೆ, ತನ್ನ
ಬರವನ್ನೇ ಎದುರು
ನೋಡುತ್ತಿದ್ದ ಧರ್ಮರಾಜ
ಮತ್ತು ಭೀಮರ

ಪಾದಕಮಲಗಳನ್ನು ತನ್ನ ಕಿರೀಟದ ಕಿರಣಗಳಿಂದ ಪೂಜಿಸಿ ಅವರ ಆಶೀರ್ವಾದವನ್ನು ಪಡೆದು, ತನಗೆ ನಮಸ್ಕಾರಮಾಡಿದ ನಕುಲಸಹದೇವರಿಬ್ಬರನ್ನೂ ಪ್ರೀತಿಯಿಂದ ಆಶೀರ್ವಾದ ಮಾಡಿದನು. ಆನಂತರ ಇಂದ್ರಕೀಲಪರ್ವತದಲ್ಲಿ ಈಶ್ವರನ ವರಪ್ರಸಾದದಿಂದ ಪಡೆದ ದಿವ್ಯಾಸ್ತ್ರ

(ಪಾಶುಪತಾಸ್ತ್ರ)ವನ್ನು ತೋರಿ ತನ್ನನ್ನು ಇಂದ್ರನು ಜೊತೆಯಲ್ಲಿ ಕರೆದುಕೊಂಡು ಹೋದುದನ್ನೂ ಇಂದ್ರಲೋಕದಲ್ಲಿ ಇಂದ್ರನಿಂದ ಪಡೆದ ಮಹಿಮೆಯನ್ನು (ಗೌರವ) ತಿಳಿಯುವ ಹಾಗೆ ವಿಸ್ತಾರವಾಗಿ ಹೇಳಿದನು. ನಾವು ಇಲ್ಲಿರುವುದು ಬೇಡ ದ್ವೈತವನದಲ್ಲಿರೋಣ ಬನ್ನಿ ಎಂದು ಹೇಳಿ, ಮಾತಲಿಯನ್ನು

ಕಳುಹಿಸಿಕೊಟ್ಟು ತನ್ನ ಬಂಧುಗಳ ಸಮೇತ ದ್ವೈತವನಕ್ಕೆ ಬಂದು ಸುಖವಾಗಿದ್ದನು. ಹಾಗೆ ಇರುವಾಗ ಮಾಯಾಗಜವು ಬಂದಿತು!- ಅದು-

ದ್ವೈತವನದಲ್ಲಿ ಯಕ್ಷ ಪ್ರಸಂಗ

ಮ|| ಮಸಕಂ ಕಾಯ್ಪು ಜವಂ ಜವಂಗಮಿದಿರೊಳ್ ನೋಡಲ್ಕಗುರ್ವಾಗೆ ಮಾಂ

ದಿಸಿಮೀ ವಂದುದು
ಕೊಂದುದೆಂದು ಭಯದಿಂ
ವಿಪ್ರರ್ ತೆರಳ್ದೋಡೆ ತಾ|
ಪಸರಂ ಬೆರ್ಚಿಸಿ ತೂಳ್ದಿ
ಬೇಳ್ವರಣಿಯಂ
ಕೊಂಡಾಶ್ರಮಕ್ಕಿಂತು ಬೇ
ವಸಮಂ
ಮಾಡುವುದಾಯ್ತದೊಂದು
ವಿಭವಂ ಮತ್ತೇಭವಿಕ್ರೀಡಿತಂ||
೩೭||

ಪದ್ಯ-೩೭:ಪದವಿಭಾಗ-ಅರ್ಥ:ಮಸಕಂ ಕಾಯ್ಪು ಜವಂ (ರಭಸ ಕೋಪ ಮತ್ತು ವೇಗದಲ್ಲಿ) ಜವಂಗಂ ಇದಿರೊಳ್ ನೋಡಲ್ಕೆ ಅಗುರ್ವ್ ಆಗೆ (ಯಮನಿಗೂ ಅದರ ಎದುರಿನಲ್ಲಿ ನಿಂತು ನೋಡುವುದಕ್ಕೆ ಭಯಂಕರವಾಗುವ ಹಾಗೆ) ಮಾಂದಿಸಿಂ (ತಡೆಯಿರಿ) ಈ ವಂದುದು ಕೊಂದುದು ಎಂದು

ಭಯದಿಂ ವಿಪ್ರರ್ ತೆರಳ್ದು ಓಡೆ
(ಎಂದು ಬ್ರಾಹ್ಮಣರು
ಭಯದಿಂದ ಗುಂಪಾಗಿ
ಓಡಲು) ತಾಪಸರಂ ಬೆರ್ಚಿಸಿ
ತೂಳ್ದಿ ಬೇಳ್ವ (ಹೋಮದ)
ಅರಣಿಯಂ ಕೊಂಡು
(ತಪಸ್ವಿಗಳನ್ನು ಹೆದರಿಸಿ ನೂಕಿ
ಅವರು
ಹೋಮಮಾಡುವುದಕ್ಕೆ
ಸಹಾಯಕವಾದ
ಅರಣಿಯನ್ನು ತೆಗೆದುಕೊಂಡು

ಹೋಯಿತು-) ಆಶ್ರಮಕ್ಕೆ ಇಂತು ಬೇವಸಮಂ ಮಾಡುವುದಾಯ್ತು ಅದೊಂದು ವಿಭವಂ ಮತ್ತೇಭವಿಕ್ರೀಡಿತಂ (ಹೀಗೆ ಮದಿಸಿದ ಆನೆಯು ಒಂದು ಆಟದ ವೈಭವದಲ್ಲಿ ಆಶ್ರಮಕ್ಕೆ ಸಂಕಟವನ್ನು ಉಂಟುಮಾಡಿತು.)

ಪದ್ಯ-೩೭:ಅರ್ಥ:

ಹಾಗಿರುವಾಗ ಆ ಮದವೇರಿದ

ಆನೆ- ‘ರಭಸ ಕೋಪ ಮತ್ತು ವೇಗದಲ್ಲಿ ಯಮನಿಗೂ ಅದರ ಎದುರಿನಲ್ಲಿ ನಿಂತು ನೋಡುವುದಕ್ಕೆ ಭಯಂಕರವಾಗುವ (ಹಾಗೆ ಇರುವ ಮಾಯಾಗಜವು) ಬಂದಿತು! ತಡೆಯಿರಿ, ಕೊಂದುಹಾಕುತ್ತಿದೆ’ ಎಂದು ಬ್ರಾಹ್ಮಣರು ಭಯದಿಂದ ಗುಂಪಾಗಿ ಓಡಲು, ತಪಸ್ವಿಗಳನ್ನು ಹೆದರಿಸಿ ನೂಕಿ

ಅವರು
ಹೋಮಮಾಡುವುದಕ್ಕೆ
ಸಹಾಯಕವಾದ
ಅರಣಿಯನ್ನು
(ಅಗ್ನಿಯನ್ನುಂಟುಮಾಡುವ
ಕಡೆಗೋಲು) ಕೊಂಡು
ಓಡಿತು. ಹೀಗೆ ಮದಿಸಿದ
ಆನೆಯು ಒಂದು ಆಟದ
ವೈಭವದಲ್ಲಿ ಆಶ್ರಮಕ್ಕೆ
ಸಂಕಟವನ್ನು
ಉಂಟುಮಾಡಿತು.

ವ|| ಆಗಳಾ
ಮದಾಂಧಗಂಧಸಿಂಧುರದ
ಕೋಳಾಹಳಮಂ ತಾಪಸರ್
ಬಂದು ಯುಷ್ಠಿರಂಗಱಿಪಿ
ನೀಮೆಮಗದಱ ಕೈಗೆ
ಪೋದರಣಿಯಂ
ತಂದೀಯದಾಗಳಿಷ್ಟಿ
ವಿಘ್ನಂಗಳಂ
ಮಾಡಿದಿರೆಂದೊಡಯ್ವರುಂ
ಪ್ರಚಂಡಕೋದಂಡಹಸ್ತರ್
ಕಾಳಕಾಳಸ್ವರೂಪಮಂ

ಕೆಯ್ಕೊಂಡು
ಮದಾಂಧಗಂಧಸಿಂಧುರದ-
ಬೞಿಯಂ ನಿರ್ವಂದದಿಂ
ತಗುಳ್ವುದುಮಾ ಮಾಯಾ
ಮತ್ತಹಸ್ತಿಯುಂ ಮೂಱು
ಜಾವರಂಬರಂ
ರೂಪುದೋಱಿ ಪಱಿದು
ಬೞಿಯಮದೃಶ್ಯಮಾದೊಡ
ಯ್ವರುಂ ಚೋದ್ಯಂ ಬಟ್ಟು
ಘರ್ಮಕಿರಣಸಂತಾಪತಾಪಿತ
ಶರೀರರೊಂದಾಲದ ಮರದ

ಕೆಳಗೆ ವಿಶ್ರಮಿಸೆ ಧರ್ಮ ಪುತ್ರಂ
ನೀರಡಸಿ
ಸಹದೇವನನೆಲ್ಲಿಯಾದೊಡಂ
ನೀರಂ ಕೊಂಡು ಬೇಗಂ
ಬಾಯೆಂದು ಪೇೞ್ದುದು
ಮಂತೆಗೆಯ್ವೆನೆಂದು
ಕೂಜಜ್ಜಳಚರಕುಳಕಳರವ
ದೊಳಂ
ಕಮಳಕುವಳಯರಜಕಷಾಯ
ಪರಿಮಿಳದಳಿಪಟಳಜಟಿಳ
ಮಾಗಿ ಬಂದು ತೀಡುವ

ಮಂದಾನಿಳನಿಂ ನೀರ ದೆಸೆಯನಱಿದು ಪೋಗೆ ವೋಗೆ-

ವಚನ:ಪದವಿಭಾಗ-

ಅರ್ಥ:ಆಗಳಾ ಮದಾಂಧಗಂಧಸಿಂಧುರದ ಕೋಳಾಹಳಮಂ ತಾಪಸರ್ ಬಂದು ಯುಷ್ಠಿರಂಗೆ ಅಱಿಪಿ (ತಪಸ್ವಿಗಳು ಬಂದು ಧರ್ಮರಾಜನಿಗೆ ತಿಳಿಸಿ) ನೀಂ ಎಮಗೆ ಅದಱ ಕೈಗೆ ಪೋದ

ಅರಣಿಯಂ ತಂದು
ಈಯದಾಗಳು ಇಷ್ಟಿ
ವಿಘ್ನಂಗಳಂ ಮಾಡಿದಿರಿ
ಎಂದೊಡೆ (ಅದು ಕೊಂಡು
ಹೋಗಿರುವ ಅರಣಿಯನ್ನು
ನೀವು ನಮಗೆ
ತಂದುಕೊಡದಿದ್ದರೆ ಯಜ್ಞಕ್ಕೆ
ವಿಘ್ನಮಾಡಿದವರಾಗುತ್ತೀರಿ
ಎಂದಾಗ) ಅಯ್ವರುಂ
ಪ್ರಚಂಡಕೋದಂಡ ಹಸ್ತರ್
(ಅಯ್ದು ಜನವೂ

ಭಯಂಕರವಾದ ಬಿಲ್ಲನ್ನು
ಕೈಯಲ್ಲಿ ಹಿಡಿದು)
ಕಾಳಕಾಳಸ್ವರೂಪಮಂ
ಕೆಯ್ಕೊಂಡು
ಮದಾಂಧಗಂಧಸಿಂಧುರದ-
ಬೞಿಯಂ (ಪ್ರಳಯಕಾಲದ
ಯಮನ ಆಕಾರವನ್ನು ತಾಳಿ
ಆ ಮದ್ದಾನೆಯ ಮಾರ್ಗವನ್ನೇ
ಅನುಸರಿಸಿ) ನಿರ್ವಂದದಿಂ
ತಗುಳ್ಚುದುಂ (ನಿರ್ಬಂಧದಿಂದ
ಅಟ್ಟಿಕೊಂಡು ಹೋಗಲು) ಆ

ಮಾಯಾ ಮತ್ತಹಸ್ತಿಯುಂ
ಮೂಱು ಜಾವರಂಬರಂ (ಆ
ಮಾಯಾಮದಗಜವು
ಮೂರು ಜಾವದವರೆಗೂ)
ರೂಪುದೋಱಿ ಪರಿದು
ಬೞಿಯಂ ಅದೃಶ್ಯಮಾದೊಡೆ
(ತನ್ನ ಆಕಾರವನ್ನು
ತೋರಿಕೊಂಡಿದ್ದು ಓಡಿ ಬಳಿಕ
ಕಣ್ಮರೆಯಾಯಿತು.)
ಅಯ್ವರುಂ ಚೋದ್ಯಂ ಬಟ್ಟು
(ಅಯ್ದು ಜನವೂ

ಆಶ್ಚರ್ಯಪಟ್ಟು)
ಘರ್ಮಕಿರಣಸಂತಾಪ ತಾಪಿತ
ಶರೀರರು (ಸೂರ್ಯನ
ಬಿಸಿಲಿನ ಬೇಗೆಯಿಂದ
ಸುಡಲ್ಪಟ್ಟ
ಶರೀರವುಳ್ಳವರಾಗಿ) ಒಂದು
ಆಲದ ಮರದ ಕೆಳಗೆ
ವಿಶ್ರಮಿಸೆ ಧರ್ಮ ಪುತ್ರಂ
ನೀರಡಸಿ (ಬಾಯಾರಿ)
ಸಹದೇವನನು
ಎಲ್ಲಿಯಾದೊಡಂ ನೀರಂ

ಕೊಂಡು ಬೇಗಂ ಬಾಯೆಂದು
ಪೇೞ್ದುದುಂ(ಬಾ ಎಂದು
ಹೇಳಿದನು), ಅಂತೆ
ಗೆಯ್ವೆನೆಂದು ಕೂಜಜ್ಜಳ
ಚರಕುಳಕಳ ರವದೊಳಂ
(ಶಬ್ದಮಾಡುತ್ತಿರುವ ಜಲಚರ
ಪ್ರಾಣಿಗಳ ಕಲಕಲ
ಶಬ್ದದಿಂದಲೂ)
ಕಮಳಕುವಳಯ
ರಜಕಷಾಯ ಪರಿಮಿಳದ
ಅಳಿಪಟಳ ಜಟಿಳಮಾಗಿ

(ಕುಮಲ ಕನ್ನೈದಿಲೆಗಳ
ಧೂಳಿನ ಒಗರಿನಿಂದ ಕೂಡಿದ
ದುಂಬಿಗಳ ಸಮೂಹದಿಂದ
ವ್ಯಾಪ್ತವಾಗಿ) ಬಂದು ತೀಡುವ
ಮಂದಾನಿಳನಿಂ (ಬಂದು
ಬೀಸುವ
ಮಂದಮಾರುತದಿಂದಲೂ)
ನೀರ ದೆಸೆಯನು ಅಱಿದು
ಪೋಗೆ ಪೋಗೆ (ನೀರಿರುವ
ಸ್ಥಳವನ್ನು ತಿಳಿದು ಆ ಕಡೆ
ಹೋದಾಗ)-

ವಚನ:ಅರ್ಥ: ಆಗ ಆ ಮದ್ದಾನೆಯು ಮಾಡಿದ ಕೋಲಾಹಲವನ್ನು ತಪಸ್ವಿಗಳು ಬಂದು ಧರ್ಮರಾಜನಿಗೆ ತಿಳಿಸಿ ಅದು ಕೊಂಡು ಹೋಗಿರುವ ಅರಣಿಯನ್ನು ನೀವು ನಮಗೆ ತಂದುಕೊಡದಿದ್ದರೆ ಯಜ್ಞಕ್ಕೆ ವಿಘ್ನಮಾಡಿದವರಾಗುತ್ತೀರಿ ಎಂದರು. ಅಯ್ದು ಜನವೂ ಭಯಂಕರವಾದ ಬಿಲ್ಲನ್ನು ಕೈಯಲ್ಲಿ ಹಿಡಿದು,

ಪ್ರಳಯಕಾಲದ ಯಮನ ಆಕಾರವನ್ನು ತಾಳಿ ಆ ಮದ್ದಾನೆಯ ಮಾರ್ಗವನ್ನೇ ಅನುಸರಿಸಿ ಹಿಂದೆ ನಿರ್ಬಂಧದಿಂದ ಅಟ್ಟಿಕೊಂಡು ಹೋಗಲು ಆ ಮಾಯಾಮದಗಜವು ಮೂರು ಜಾವದವರೆಗೂ ತನ್ನ ಆಕಾರವನ್ನು ತೋರಿಕೊಂಡಿದ್ದು ಓಡಿ ಬಳಿಕ ಕಣ್ಮರೆಯಾಯಿತು. ಅಯ್ದು

ಜನವೂ ಆಶ್ಚರ್ಯಪಟ್ಟು
ಸೂರ್ಯನ ಬಿಸಿಲಿನ
ಬೇಗೆಯಿಂದ ಸುಡಲ್ಪಟ್ಟ
ಶರೀರವುಳ್ಳವರಾಗಿ ಒಂದು
ಆಲದಮರದ ಕೆಳಗೆ
ವಿಶ್ರಮಿಸಿಕೊಂಡರು
ಧರ್ಮರಾಜನು ಬಾಯಾರಿ
ಸಹದೇವನನ್ನು
ಎಲ್ಲಿಂದಲಾದರೂ ಬೇಗ
ನೀರನ್ನು ತೆಗೆದುಕೊಂಡು ಬಾ
ಎಂದು ಹೇಳಿದನು. ಹಾಗೆಯೇ

ಮಾಡುತ್ತೇನೆ ಎಂದು
ಶಬ್ದಮಾಡುತ್ತಿರುವ
ಜಲಚರಪ್ರಾಣಿಗಳ
ಕಲಕಲಶಬ್ದದಿಂದಲೂ ಕುಮಲ
ಕನ್ನೈದಿಲೆಗಳ ಧೂಳಿನ
ಒಗರಿನಿಂದ ಕೂಡಿದ
ದುಂಬಿಗಳ ಸಮೂಹದಿಂದ
ವ್ಯಾಪ್ತವಾಗಿ ಬಂದು ಬೀಸುವ
ಮಂದಮಾರುತದಿಂದಲೂ
ನೀರಿರುವ ಸ್ಥಳವನ್ನು ತಿಳಿದು

ಆ ಕಡೆ ಹೋದನು. ಹಾಗೆ
ಹೋದಾಗ-

ಕಂ|| ಬಕ ಕಲಹಂಸ ಬಲಾಕ
ಪ್ರಕರ
ಮೃದುಕ್ವಣಿತರಮ್ಯಮಿದಿರೊ
ಳ್ ತೋಱ
ತ್ತು ಕೊಳಂ ಪರಿ ವಿಕಸಿತ ಕನ
ಕ
ಕಂಜಕಿಂಜಲ್ಕಪುಂಜಪಿಂಜರಿತ
ಜಳಂ|| ೩೮ ||

ಪದ್ಯ-೩೮:ಪದವಿಭಾಗ-ಅರ್ಥ:ಬಕ ಕಲಹಂಸ ಬಲಾಕ ಪ್ರಕರ (ಸಮೂಹ) ಮೃದುಕ್ವಣಿತ (ಮೃದುವಾದ ಶಬ್ದದಿಂದಲೂ) ರಮ್ಯಂ ಇದಿರೊಳ್ ತೋಱಿತ್ತು ಕೊಳಂ (ರಮ್ಯವಾದ ಸರೋವರವೊಂದು ಇದಿರಿನಲ್ಲಿ ಕಾಣಿಸಿಕೊಂಡಿತು.-ಅದು-) ಪರಿ ವಿಕಸಿತ ಕನಕ ಕಂಜ ಕಿಂಜಲ್ಕಪುಂಜ

(ಕೇಸರಗಳ ರಾಶಿ) ಪಿಂಜರಿತ ಜಳಂ (ಚೆನ್ನಾಗಿ ಅರಳಿದ ಹೊಂದಾವರೆಯ ಕೇಸರಗಳ ರಾಶಿಯಿಂದಲೂ ಕೆಂಪು ಮಿಶ್ರವಾದ ಬಣ್ಣವನ್ನುಳ್ಳ ಜಲದ - ಕೊಳಂ ಇದಿರೊಳ್ ತೋಱಿತ್ತು)

ಪದ್ಯ-೩೮:ಅರ್ಥ: ಆ ಕೊಳದಲ್ಲಿ, ಬಕ, ಹಂಸ ಮತ್ತು ಬೆಳ್ಳಕ್ಕಿಗಳ ಸಮೂಹದ ಮೃದುವಾದ ಶಬ್ದದಿಂದಲೂ

ರಮ್ಯವಾಗಿ ಅರಳಿರುವ
ಹೊಂದಾವರೆಯ ಕೇಸರಗಳ
ರಾಶಿಯಿಂದಲೂ ಕೆಂಪು
ಮಿಶ್ರವಾದ ಹಳದಿಯ
ಬಣ್ಣವನ್ನುಳ್ಳ ನೀರಿನಿಂದ
ಕೂಡಿದ ಸರೋವರವೊಂದು
ಇದಿರಿನಲ್ಲಿ ಕಾಣಿಸಿತು.

ವ|| ಅಂತು ಸೊಗಯಿಸುವ ಸರೋವರಮಂ ಕಂಡು ತಾನುಂ ನೀರಡಸಿದನಪ್ಪುದಱಿಂದದಱ

ಕೆಲದ ಲತೆಯ ಮೆಳೆಯೊಳ್ ಬಿಲ್ಲುಮಂಬುಮಂ ಸಾರ್ಚಿ ಕೊಳನಂ ಪೊಕ್ಕು ಕರಚರಣ ವದನಪ್ರಕ್ಷಾಲನಂಗೆಯ್ದು ನೀರಂ ಕುಡಿಯಲೆಂದು ನಿಜಾಂಜಲಿಪುಟಮಂ ನೀಡಿದಾಗಳೊಂದು ದಿವ್ಯವಚನಮಾಕಾಶದೊಳ್-

ವಚನ:ಪದವಿಭಾಗ-

ಅರ್ಥ:ಅಂತು ಸೊಗಯಿಸುವ ಸರೋವರಮಂ ಕಂಡು,

ತಾನುಂ ನೀರಡಸಿದನ್
ಅಪ್ಪುದಱಿಂದ ಅದಱ ಕೆಲದ
(ತಾನೂ ಬಾಯಾರಿದ್ದುದರಿಂದ
ಅದರ ಪಕ್ಕದ) ಲತೆಯ
ಮೆಳೆಯೊಳ್ ಬಿಲ್ಲುಂ
ಅಂಬುಮಂ ಸಾರ್ಚಿ (ಸಾಚಿ
ಇಟ್ಟು) ಕೊಳನಂ ಪೊಕ್ಕು ಕರ
ಚರಣ ವದನ
ಪ್ರಕ್ಷಾಲನಂಗೆಯ್ದು
(ಕೈಕಾಲುಮುಖವನ್ನು
ತೊಳೆದುಕೊಂಡು) ನೀರಂ

ಕುಡಿಯಲೆಂದು
ನಿಜಾಂಜಲಿಪುಟಮಂ
(ಕೈಬೊಗಸೆಯನ್ನು)
ನೀಡಿದಾಗಳ್ ಒಂದು
ದಿವ್ಯವಚನಂ ಆಕಾಶದೊಳ್-
(ಆಕಾಶದಲ್ಲಿ ಒಂದು
ಅಶರೀರವಾಣಿಯು
ಹೀಗೆಂದಿತು)
ವಚನ:ಅರ್ಥ:ಹಾಗೆ
ಸೊಗಯಿಸಾಗಿ ಶೋಭಿಸುವ
ಸರೋವರವನ್ನು ಕಂಡು,

ತಾನೂ ಬಾಯಾರಿದ್ದುದರಿಂದ
ಅದರ ಪಕ್ಕದ ಬಳ್ಳಿಯ
ಮೆಳೆಯಲ್ಲಿ ಬಿಲ್ಲನ್ನೂ
ಬಾಣವನ್ನೂ ಇಟ್ಟು
ಸರೋವರವನ್ನು ಪ್ರವೇಶಿಸಿ
ಕೈಕಾಲುಮುಖವನ್ನು
ತೊಳೆದುಕೊಂಡು ನೀರನ್ನು
ಕುಡಿಯುವುದಕ್ಕೋಸ್ಕರ ತನ್ನ
ಕೈಬೊಗಸೆಯನ್ನು ನೀಡಿದಾಗ
ಆಕಾಶದಲ್ಲಿ ಒಂದು

ಅಶರೀರವಾಣಿಯು ಹೀಗೆಂದಿತು.

ಕಂ||

ತೋಯಜಷಂಡಮನಿದನಾ
ನಾಯತಿಯಿಂ ಕಾವೆನೆನ್ನ
ಮಾತಿಂಗಲೆ ಕೌಂ|
ತೇಯ ಮಱುಮಾತನಿತ್ತು ಮ
ದೀಯ ಸರೋವರದ
ತೋಯಮಂ ಕುಡಿ
ಕೊಂಡುಯ್|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ:ತೋಯಜ ಷಂಡಮನು ಇದಂ ಆನ್ ಆಯತಿಯಿಂ ಕಾವೆನು (ಈ ಸರೋವರವನ್ನು ನಾನು ಶೋಭೆಯಿಂದ/ಎಚ್ಚರದಿಂದ ಕಾಯುತ್ತಿದ್ದೇನೆ) ಎನ್ನ ಮಾತಿಂಗೆ ಎಲೆ ಕೌಂತೇಯ ಮಱುಮಾತನಿತ್ತು (ಪ್ರತ್ಯುತ್ತರವನ್ನು ಕೊಟ್ಟು) ಮದೀಯ ಸರೋವರದ (ನನ್ನ

ಸರೋವರದ) ತೋಯಮಂ (ನೀರನ್ನು) ಕುಡಿ ಕೊಂಡುಯ್

ಪದ್ಯ-೩೯:ಅರ್ಥ: . 'ಈ ಸರೋವರವನ್ನು ನಾನು ಶೋಭೆಯಿಂದ/ಎಚ್ಚರದಿಂದ ಕಾಯುತ್ತಿದ್ದೇನೆ. ಎಲೈ ಕೌಂತೇಯನೆ ನನ್ನ ಮಾತಿಗೆ ಪ್ರತ್ಯುತ್ತರವನ್ನು ಕೊಟ್ಟು ನನ್ನ ಸರೋವರದ ನೀರನ್ನು ಕುಡಿದು, ತೆಗದುಕೊಂಡು ಹೋಗು'

ವ|| ಎಂಬುದುಮಾ
ದಿವ್ಯವಚನಮನುಲ್ಲಂಘಿಸಿ
ನೀರಟ್ಕೆಪ್ಪೋಪಿನಂ ನೀರಂ
ಕುಡಿದು ಪದ್ಯಪತ್ರೌಘಂಗಳಿಂ
ತಮ್ಮಣ್ಣಂಗೆ ನೀರಂ
ತೀವಿಕೊಂಡು ಸರೋವರದಿಂ
ಪೋಱಮಟ್ಟೊಂದೆರಡಡಿಯನಿ
ಡುತೆ ಗತಪ್ರಾಣನಾಗಿ
ಬೀೞ್ದನಿತ್ತ ಧರ್ಮಪುತ್ರಂ
ಸಹದೇವಂ
ತಡೆದುದರ್ಕುಮ್ಮಳಿಸಿ ನಕುಲನ

ಮೊಗಮಂ ನೋಡಿ ಸಹದೇವನೊಡಂಗೊಂಡು ನೀರಂ ಕೊಂಡು ಬೇಗಂ ಬಾಯೆಂದು ಪೇೞ್ದೊಡಂತೆಗೆಯ್ವೆನೆಂದು ಸಹದೇವನ ಪೋದ ಪಜ್ಜೆಯನೆ ಪೋಗಿ ಕೊಳದ ತಡಿಯೊಳ್ ಬೀೞ್ದರ್ದ ತಮ್ಮನಂ ಕಂಡು ಚೋದ್ಯಂಬಟ್ಟು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ

ದಿವ್ಯವಚನಮನು
ಉಲ್ಲಂಘಿಸಿ ನೀರಙ್ಕೆ
ಪೋಪಿನಂ (ಬಾಯಾರಿಕೆ
ಹೋಗಲು) ನೀರಂ ಕುಡಿದು
ಪದ್ಯಪತ್ರೌಘಂಗಳಿಂ
(ಕಮಲಪತ್ರಗಳ
ಸಮೂಹದಲ್ಲಿ) ತಮ್ಮಣ್ಣಂಗೆ
ನೀರಂ ತೀವಿಕೊಂಡು
(ತುಂಬಿಕೊಂಡು)
ಸರೋವರದಿಂ ಪೊಱಮಟ್ಟು
(ಹೊರಟು) ಒಂದೆರಡು

ಅಡಿಯನು ಇಡುತೆ ಗತಪ್ರಾಣನಾಗಿ ಬೀಳ್ದನು (ಹೆಜ್ಜೆಯಿಡುವಷ್ಟರಲ್ಲಿಯೇ ಕೆಳಗೆ ಬಿದ್ದು ಗತಪ್ರಾಣನಾದನು), ಇತ್ತ ಧರ್ಮಪುತ್ರಂ ಸಹದೇವಂ ತಡೆದುದರ್ಕೆ ಉಮ್ಮಳಿಸಿ (ಬರದಿದ್ದುದರಿಂದ ಕಳವಳಪಟ್ಟು) ನಕುಲನ ಮೊಗಮಂ ನೋಡಿ ಸಹದೇವನು ಒಡಂಗೊಂಡು

ನೀರಂ ಕೊಂಡು ಬೇಗಂ ಬಾಯೆಂದು ಪೇೞ್ದೊಡೆ ಅಂತೆಗೆಯ್ವೆನೆಂದು (ಹಾಗೇ ಮಾಡುವೆನೆಂದು) ಸಹದೇವನ ಪೋದ ಪಜ್ಜೆಯನೆ ಪೋಗಿ ಕೊಳದ ತಡಿಯೊಳ್ ಬಿೞ್ದಿರ್ದ ತಮ್ಮನಂ ಕಂಡು ಚೋದ್ಯಂಬಟ್ಟು-

ವಚನ:ಅರ್ಥ:|| ಎನ್ನಲು ಆ ದಿವ್ಯವಚನವನ್ನುಲಂಘನೆ ಮಾಡಿ ಬಾಯಾರಿಕೆ ಹೋಗಲು

ನೀರು ಕುಡಿದು
ಕಮಲಪತ್ರಗಳ ಸಮೂಹದಲ್ಲಿ
ತಮ್ಮಣ್ಣನಿಗೆ ನೀರನ್ನು
ತುಂಬಿಕೊಂಡು
ಸರೋವರದಿಂದ ಹೊರಟನು.
ಒಂದೆರಡು
ಹೆಜ್ಜೆಯಿಡುವಷ್ಟರಲ್ಲಿಯೇ
ಕೆಳಗೆ ಬಿದ್ದು
ಗತಪ್ರಾಣನಾದನು. ಎಷ್ಟು
ಹೊತ್ತಾದರೂ ಸಹದೇವನು
ಹಿಂತಿರುಗಿ ಬರದಿದ್ದುದರಿಂದ

ಕಳವಳಪಟ್ಟು ಯುಧಿಷ್ಠಿರನು ನಕುಲನನ್ನು ನೋಡಿ ಸಹದೇವನನ್ನು ಕರೆದುಕೊಂಡು ನೀರನ್ನು ತೆಗೆದುಕೊಂಡು ಬಾ, ಎಂದು ಹೇಳಲು, ಹಾಗೇ ಮಾಡುವೆನೆಂದು ಸಹದೇವನ ಹೋದ ಹೆಜ್ಜೆಯನ್ನು ಅನುಸರಿಸಿ ಹೋಗಿ ಕೊಳದ ತಡಿಯಲ್ಲಿ ಬಿದ್ದಿದ್ದ ತಮ್ಮನನ್ನು ಕಂಡು ಚಕಿತನಾಗಿ-

ಕಂ|| ತಾನುಂ

ಸರೋಜಷಂಡಮ

ನಾನತರಿಪು ಪೊಕ್ಕು

ದಿವ್ಯವಚನಮನದನಂ|

ತೇನು ಬಗೆಯದೆ ಕುಡಿದ

ಜ್ಞಾನತೆಯಿಂ

ನಂಜುಗುಡಿದರಂತಿರೆ ಕೆಡೆದಂ||

೪೦||

ಪದ್ಯ-೪೦:ಪದವಿಭಾಗ-

ಅರ್ಥ:ತಾನುಂ

ಸರೋಜಷಂಡಮನು

ಆನತರಿಪು (ಶತ್ರುಗಳನ್ನು
ಆನತ-
ಅಧೀನಮಾಡಿಕೊಂಡಿದ್ದ
ನಕುಲನು) ಪೊಕ್ಕು
ದಿವ್ಯವಚನಮನು ಅದನಂತೆ
ಏನು ಬಗೆಯದೆ (ಆ
ದೇವತೆಯ ಮಾತನ್ನು ಹೇಗೂ
ಲಕ್ಷ್ಯಮಾಡದೆ) ಕುಡಿದು
ಅಜ್ಞಾನತೆಯಿಂ
ನಂಜುಗುಡಿದರಂತಿರೆ ಕೆಡೆದಂ

(ನಂಜು-ವಿಷ,ವಿಷಪಾನ ಮಾಡಿದವರ ಹಾಗೆ ಬಿದ್ದನು.)

ಪದ್ಯ-೪೦:ಅರ್ಥ: ಅವನೂ ಸರೋವರವನ್ನು ಪ್ರವೇಶಿಸಿ ಶತ್ರುಗಳನ್ನು ಆನತ-ಅಧೀನಮಾಡಿಕೊಂಡಿದ್ದ ಆ ನಕುಲನು ಆ ದೇವತೆಯ ಮಾತನ್ನು ಹೇಗೂ ಲಕ್ಷ್ಯಮಾಡದೆ ಅಜ್ಞಾನತೆಯಿಂದ ಕುಡಿದು

ವಿಷಪಾನ ಮಾಡಿದವರ ಹಾಗೆ ಬಿದ್ದನು.

ವ|| ಅನ್ನೆಗಂ ಯಮನಂದನನಿರ್ವರ ಬರವುಮಂ ಕಾಣದೆ ಶಂಕಾಕುಳಿತಚಿತ್ತನಾಗಿ ಕಿರೀಟಿಯಂ ಬೇಗಂ ಪೋಗಿ ನೀನಾ ಕೂಸುಗಳನೊಡಂಗೊಂಡು ನೀರಂ ಕೊಂಡು ತಡೆಯದೆ ಬಾಯೆಂಬುದುಮಂತೆಗೆಯ್ವೆ

ನೆಂದು ಬಂದು ಕೊಳನ ತಡಿಯೊಳಚೇತನರಾಗಿ ಬಿೞರ್ದ ತಮ್ಮಂದಿರಿರ್ವರುಮಂ ಕಂಡು ವಿಸ್ಮಯಂಬಟ್ಟು-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಯಮನಂದನನು ಇರ್ವರ ಬರವುಮಂ ಕಾಣದೆ ಶಂಕ ಆಕುಳಿತ ಚಿತ್ತನಾಗಿ (ಸಂದೇಹದಿಂದ ಕಲಕಿದ

ಮನಸ್ಸುಳ್ಳವನಾಗಿ)
ಕಿರೀಟಿಯಂ ಬೇಗಂ ಪೋಗಿ
ನೀನಾ ಕೂಸುಗಳನು
ಒಡಂಗೊಂಡು ನೀರಂ
ಕೊಂಡು ತಡೆಯದೆ
ಬಾಯೆಂಬುದುಮಂ
ಅಂತೆಗೆಯ್ವೆನೆಂದು (ಹಾಗೆಯೇ
ಮಾಡುತ್ತೇನೆ ಎಂದು) ಬಂದು
ಕೊಳನ ತಡಿಯೊಳು
ಅಚೇತನರಾಗಿ ಬೀೞ್ದಿರ್ದ
(ಸತ್ತು ಬಿದ್ದಿದ್ದ) ತಮ್ಮಂದಿರು

ಇರ್ವರುಮಂ(ಇಬ್ಬರು ತಮ್ಮಂದಿರನ್ನು) ಕಂಡು ವಿಸ್ಮಯಂಬಟ್ಟು-

ವಚನ:ಅರ್ಥ:ಆಗ ಧರ್ಮಜನು ಇಬ್ಬರ ಬರುವಿಕೆಯನ್ನೂ ಕಾಣದೆ ಸಂದೇಹದಿಂದ ಕಲಕಿದ ಮನಸ್ಸುಳ್ಳವನಾಗಿ ಅರ್ಜುನನನ್ನು ನೀನು ಬೇಗಹೋಗಿ ಆ ಮಕ್ಕಳುಗಳನ್ನೊಳಗೊಂಡು

ನೀರನ್ನೂ ತೆಗೆದುಕೊಂಡು ಸಾವಕಾಶಮಾಡದೆ ಬಾ ಎಂದನು. ಹಾಗೆಯೇ ಮಾಡುತ್ತೇನೆ ಎಂದು ಅರ್ಜುನನು ಬಂದು ಕೊಳದ ದಡದಲ್ಲಿ ಸತ್ತು ಬಿದ್ದಿದ್ದ ಇಬ್ಬರು ತಮ್ಮಂದಿರನ್ನು ನೋಡಿ ಆಶ್ಚರ್ಯಪಟ್ಟು-.

ಕಂ|| ಆ ಕಮಳಾಕರಮಂ ಪೊ
ಕ್ಕಾಕಾಶಧ್ವನಿಯನುಱದೆ
ಕುಡಿದರಿಭೂಪಾ|

ನೀಕಭಯಂಕರನುಂ ಗಡ
ಮೇಕೆಂದಱಿಯೆಂ ಬಱಿಲ್ದು
ಜೋಲ್ದಂ ಧರೆಯೊಳ್|| ೪೧ ||

ಪದ್ಯ-೪೧:ಪದವಿಭಾಗ-
ಅರ್ಥ: ಆ ಕಮಳಾಕರಮಂ (ಕಮಲಾಕರ - ಸರೋವರ) ಪೊಕ್ಕು ಆಕಾಶಧ್ವನಿಯನು ಉಱದೆ (ಲಕ್ಷಮಾಡದೆ) ಕುಡಿದು ಅರಿಭೂಪ ಆನೀಕಭಯಂಕರನುಂ(ಶತ್ರು ರಾಜರ ಸಮೂಹಕ್ಕೆ

ಭಯವನ್ನುಂಟುಮಾಡುವ) ಗಡಂ-ಅಬ್ಬಾ ಕುಡಿದನು ಏಕೆಂದಱಿಯೆಂ (ಏಕೆಂದು ತಿಳಿಯೆನು!) ಬೞಿಲ್ದು ಜೋಲ್ದಂ ಧರೆಯೊಳ್ (ಶಕ್ತಿಗುಂದಿ ಭೂಮಿಯಲ್ಲಿ ಜೋತುಬಿದ್ದನು)

ಪದ್ಯ-೪೧:ಅರ್ಥ:

ಅರ್ಜುನನು ಆ ಸರೋವರವನ್ನು ಪ್ರವೇಶಿಸಿ ಆಕಾಶಧ್ವನಿಯನ್ನು

ಲಕ್ಷಮಾಡದೆ, ಏಕೆಂದು
ತಿಳಿಯೆನು, ನೀರು ಕುಡಿದು
ಶಕ್ತಿಗುಂದಿ ಭೂಮಿಯಲ್ಲಿ
ಜೋತುಬಿದ್ದನು

ವ|| ಅನ್ನೆಗಮತ್ತ ಯಮನಂದನಂ ಮೂವರ್ ತಮ್ಮಂದಿರ ಬರವಂ ಕಾಣದೆ ಭಗ್ನಮನನಾಗಿ ಭೀಮಸೇನನಂ ನೀಂ ಪೋಗಿ ಮೂವರುಮನೊಡಂಗೊಂಡು ನೀರಂ ಕೊಂಡು

ಬಾಯೆಂದೊಡಂತೆಗೆಯ್ವೆನೆಂ
ದು ವಾಯುವೇಗದಿಂ ಬಂದು
ಪುಂಡರೀಕಷಂಡೋಪಾಂತ
ದೊಳ್ ವಿಗತಜೀವಿತರಾಗಿರ್ದ
ಮೂವರನುಜರುಮಂ
ಕಂಡಿದು
ಮನುಜರಿಂದಾದುಪದ್ರವಮಲ್ಲ
ಮೇನಾನುಮೊಂದು
ದೇವತೋಪದ್ರವಮಾಗಲೆ
ವೇಳ್ಕುಮೆಂದು

ವಚನ:ಪದವಿಭಾಗ-ಅರ್ಥ:ಅನ್ನೆಗಮತ್ತ ಯಮನಂದನಂ ಮೂವರ್ ತಮ್ಮಂದಿರ ಬರವಂ ಕಾಣದೆ ಭಗ್ನಮನನಾಗಿ (ಕೆಟ್ಟುಹೋದ/ ಒಡೆದ ಮನಸ್ಸುಳ್ಳವನಾಗಿ) ಭೀಮಸೇನನಂ ನೀಂ ಪೋಗಿ (ನೀನು ಹೊಗಿ) ಮೂವರುಮನು ಒಡಂಗೊಂಡು ನೀರಂ ಕೊಂಡು ಬಾಯೆಂದೊಡೆ

ಅಂತೆಗೆಯ್ವೆನೆಂದು (ಹಾಗೆಯೇ
ಮಾಡುತ್ತೇನೆ)
ವಾಯುವೇಗದಿಂ ಬಂದು,
ಪುಂಡರೀಕಷಂಡ
ಉಪಾಂತದೊಳ್
ವಿಗತಜೀವಿತರು ಆಗಿರ್ದ
ಮೂವರು ಅನುಜರುಮಂ
(ಸರೋವರದ ಸಮೀಪದಲ್ಲಿ
ಜೀವವಿಲ್ಲದೆ ಬಿದ್ದಿದ್ದ
ಮೂವರು ತಮ್ಮಂದಿರನ್ನು
ನೋಡಿ) ಕಂಡು ಇದು

ಮನುಜರಿಂದಾದ ಉಪದ್ರವಂ ಅಲ್ಲಂ ಏನಾನುಮೊಂದು (ಯಾವುದಾದರೂ ಒಂದು) ದೇವತ ಉಪದ್ರವಂ ಆಗಲೆ ವೇಟ್ಕುಂ (ದೇವತೆಯ ಹಿಂಸೆಯಾಗಿರಬೇಕೆಂದು) ಎಂದು

ವಚನ:ಅರ್ಥ:ಅಷ್ಟರಲ್ಲಿ ಆ ಕಡೆ ಧರ್ಮಜನು ಮೂವರು ತಮ್ಮಂದಿರ ಬರವನ್ನು ಕಾಣದೆ ಒಡೆದ ಮನಸ್ಸುಳ್ಳವನಾಗಿ

ಭೀಮಸೇನನನ್ನು ‘ನೀನು ಹೋಗಿ ಮೂವರನ್ನೂ ಕೂಡಿಕೊಂಡು ನೀರನ್ನೂ ತೆಗೆದುಕೊಂಡು ಬಾ’ ಎಂದನು, ‘ಹಾಗೆಯೇ ಮಾಡುತ್ತೇನೆ’ ಎಂದು, ವಾಯುವೇಗದಿಂದ ಬಂದು ಸರೋವರದ ಸಮೀಪದಲ್ಲಿ ಜೀವವಿಲ್ಲದೆ ಬಿದ್ದಿದ್ದ ಮೂವರು ತಮ್ಮಂದಿರನ್ನು ನೋಡಿ ಇದು ಮನುಷ್ಯರಿಂದಾದ ಕೇಡಲ್ಲ;

ಯಾವುದಾದರೂ ಒಂದು ದೇವತೆಯ ಹಿಂಸೆಯಾಗಿರಬೇಕೆಂದು ಊಹಿಸಿ-

ಕಂ|| ಬಿಡದೆ ಕಡುಕೆಯ್ದ ದಿವ್ಯದ
ನುಡಿಗೆ ಕಿವುಚ್ಕೇಳ್ದು ಕುಡಿದು ನೀರಂ ಭೀಮಂ|
ಪಿಡಿದ ಗದೆವೆರಸು ಭೋಂಕೆನೆ
ಕೆಡೆದಂ ಗಿರಿಶಿಖರದೊಡನೆ ಕೆಡೆವಂತಾಗಳ್|| ೪೨ ||

ಪದ್ಯ-೪೨:ಪದವಿಭಾಗ-ಅರ್ಥ:ಬಿಡದೆ ಕಡುಕೆಯ್ದು (ಕಟುವಾದ ಎಚ್ಚರಿಕೆಗೆ) ದಿವ್ಯದನುಡಿಗೆ ಕಿವುಡ್ಗೆಯ್ದು (ಕಿವುಡಾಗಿ)ಕುಡಿದು ನೀರಂ ಭೀಮಂ ಪಿಡಿದ ಗದೆವೆರಸು (ಹಿಡಿದ ಗದೆಯೊಡನೆಯೇ) ಭೋಂಕನೆ ಕೆಡೆದಂ ಗಿರಿಶಿಖರದೊಡನೆ ಕೆಡೆವಂತಾಗಳ್

ಪದ್ಯ-೪೨:ಅರ್ಥ:ಭೀಮನು, ತನಗೂ ಅವಕಾಶಕೊಡದೆ ತಡೆದ ದೇವತೆಯ ಕಟುವಾದ ಎಚ್ಚರಿಕೆ ದಿವ್ಯಮಾತಿಗೆ ಕಿವುಡಾಗಿ ಉದಾಸೀನಮಾಡಿ ನೀರನ್ನು ಕುಡಿದು ಹಿಡಿದ ಗದೆಯೊಡನೆಯೇ ಶಿಖರಸಹಿತವಾಗಿ ಪರ್ವತವು ಉರುಳುವಂತೆ ತಟಕ್ಕನೆ ಬಿದ್ದನು.

ವ|| ಅಂತು ನಾಲ್ವರುಂ
ವಿಳಯಕಾಲವಾತಾಹತಿಯಿಂ
ಕೆಡೆದ ಕುಲಗಿರಿಗಳಂತೆ ಕೆಡೆದು
ವಿಗತಜೀವಿತರಾಗಿರ್ದ
ಪದದೊಳತ್ತ ದುರ್ಯೋಧನನ
ಬೆಸದೊಳಾತನ ಪುರೋಹಿತಂ
ಕನಕಸ್ವಾಮಿಯೆಂಬಂ
ಪಾಂಡವರ್ಗಾಭಿಚಾರಮಾಗೆ
ಬೇಳ್ವ ಬೇಳ್ವೆಯ
ಕೊಂಡದೊಳಗಣಿಂದ
ಮಂಜನ ಪುಂಜದಂತಪ್ಪ

ಮೆಯ್ಯುಂ
ಸಿಡಿಲನಡಸಿದಂತಪ್ಪ
ದಾಡೆಯುಮುರಿಯುರುಳಿಯಂ
ತಪ್ಪ ಕಣ್ಣುಂ
ಕೃತಾಂತನಂತಾಕಾರಮಾಗಿ
ತಱತಱಿಸಿ ಪೊಳೆವ
ಕತ್ತಿಗೆಯುಂ ಬೆರಸು
ಪೊಱಮಟ್ಟು
ಕೀರ್ತಿಗೆಯೆಂಬುಗ್ರದೇವತೆ
ಬೆಸಸು ಬೆಸಸೆಂದು ಬೆಸನಂ
ಬೇಡೆ

ಪಾಂಡವರನೆಲ್ಲಿರ್ವೊಕ್ಕೊಡಂ ಕೊಲ್ಲೆಂದೊಡಂತೆ ಗೆಯ್ವೆನೆಂದು ಪೋಗೆಲ್ಲಿಯುಮಱಿಸಿ ಕಾಣದೆ ಕೊಳನ ತಡಿಯೊಳ್ ಬಿಱಿರ್ದ ನಾಲ್ವರುಮಂ ಕಂಡು ಬಾಪ್ಪು ಬಱ್ದೆನೆಂದು ತಿನಲ್ ಸಾರ್ವಾಗಳವರ್ಗಳ್ಗನಿತಂ ಮಾಡಿದ ದೈವಂ ಪ್ರತ್ಯಕ್ಷಮಾಗಿ ಗಜಱಿ ಗರ್ಜಿಸುತ್ತುಂ ಬಂದು-

ವಚನ:ಪದವಿಭಾಗ-ಅರ್ಥ:

ಅಂತು ನಾಲ್ವರುಂ

ವಿಳಯಕಾಲ ವಾತಾಹತಿಯಿಂ
(ಪ್ರಳಯಕಾಲದ ಗಾಳಿಯ
ಪೆಟ್ಟಿನಿಂದ) ಕೆಡೆದ
ಕುಲಗಿರಿಗಳಂತೆ ಕೆಡೆದು
(ಬಿದ್ದು) ವಿಗತಜೀವಿತರಾಗಿರ್ದ
ಪದದೊಳು ಅತ್ತ
(ಪ್ರಾಣಹೋದವರಾಗಿದ್ದ
ಸ್ಥಿತಿಯಲ್ಲಿ) ದುರ್ಯೋಧನನ
ಬೆಸದೊಳು ಆತನ
(ಆಜ್ಞೆಯಿಂದ ಅವನ)
ಪುರೋಹಿತಂ

ಕನಕಸ್ವಾಮಿಯೆಂಬಂ
(ಕನಕಸ್ವಾಮಿಯೆಂಬುವವನು)
ಪಾಂಡವರ್ಗೆ ಅಭಿಚಾರಮಂ
ಆಗೆ ಬೇಳ್ವ ಬೇಳ್ವೆಯ
ಕೊಂಡದೊಳಗಣಿಂದ
(ಮಾಟಮಾಡಲು ಒಂದು
ಹೋಮಮಾಡುತ್ತಿದ್ದ ಅದರ
ಹೋಮಕುಂಡದಿಂದ)
ಮಂಜನ ಪುಂಜದಂತಪ್ಪ
ಮೆಯ್ಯುಂ (ಕತ್ತಲೆಯ
ಸಮೂಹದಂತಿರುವ

ಶರೀರವೂ) ಸಿಡಿಲನು
ಅಡಸಿದಂತಪ್ಪ ದಾಡೆಯುಂ
(ಸಿಡಿಲನ್ನು ತುಂಬಿಕೊಂಡ
ಹಾಗಿದ್ದ ಕೋರೆಹಲ್ಲುಗಳೂ)
ಮುರಿಯುರುಳಿಯಂತಪ್ಪ
ಕಣ್ಣುಂ (ಬೆಂಕಿಯ ಉಂಡೆಯ
ಹಾಗಿದ್ದ ಕಣ್ಣೂ) ಕೃತಾಂತನಂತೆ
ಆಕಾರಮಾಗಿ ತಱಿತಱಿಸಿ
ಪೊಳೆವ ಕತ್ತಿಗೆಯುಂ ಬೆರಸು
(ಯಮನ ಹಾಗಿರುವ
ಸ್ವರೂಪವೂ ಇವುಗಳನ್ನು

ತಾಳಿ ಥಳಥಳನೆ
ಹೊಳೆಯುತ್ತಿರುವ ಕತ್ತಿಯಿಂದ
ಕೂಡಿ) ಪೊಱಮಟ್ಟು
(ಹೊರಟು) ಕೀರ್ತಿಗೆಯೆಂಬ
ಉಗ್ರದೇವತೆ- ಬೆಸಸು
ಬೆಸಸೆಂದು ಬೆಸನಂ ಬೇಡೆ
(ನಾನು ಏನು
ಮಾಡಬೇಕೆಂಬುದನ್ನು
ಅಪ್ಪಣೆಕೇಳಲು’)
ಪಾಂಡವರನು
ಎಲ್ಲಿವೊಕ್ಕೊಡಂ

ಕೊಲ್ಲೆಂದೊಡೆ (ಪಾಂಡವರು ಎಲ್ಲಿ ಹೊಕ್ಕಿದ್ದರೂ ಕೊಲ್ಲು ಎಂದಾಗ) ಅಂತೆ ಗೆಯ್ವೆನು ಎಂದು (ಹಾಗೆಯೇ ಮಾಡುತ್ತೇನೆ ಎಂದು) ಪೋಗಿ ಎಲ್ಲಿಯುಂ ಅಱಸಿ ಕಾಣದೆ (ಹೋಗಿ ಅರಸಿ-ಹುಡುಕಿ ಎಲ್ಲಿಯೂ ಕಾಣದೆ) ಕೊಳನ ತಡಿಯೊಳ್ ಬಿೞ್ದಿರ್ದ ನಾಲ್ವರುಮಂ ಕಂಡು (ಕೊಳದ ದಡದಲ್ಲಿ ಬಿದ್ದಿದ್ದ ನಾಲ್ವರನ್ನೂ

ಕಂಡು) ಬಾಪ್ಪು ಬಟ್ಟಿನೆಂದು (
'ಶಹಭಾಸ್ ಬದುಕಿದೆನು'
ಎಂದು) ತಿನಲ್ ಸಾರ್ವಾಗಳ್
ಅವರ್ಗಳ್ಗೆ ಅನಿತಂ ಮಾಡಿದ
ದೈವಂ ಪ್ರತ್ಯಕ್ಷಮಾಗಿ
(ಅವರುಗಳಿಗೆ ಆ
ಸ್ಥಿತಿಯನ್ನುಂಟು ಮಾಡಿದ
ದೈವವು ಎದುರಿಗೆ
ಕಾಣಿಸಿಕೊಂಡು) ಗಜಱ
ಗರ್ಜಿಸುತ್ತುಂ ಬಂದು (ರೇಗಿ
ಆರ್ಭಟಮಾಡುತ್ತ ಬಂದು)-

ವಚನ:ಅರ್ಥ:ಹಾಗೆ ನಾಲ್ಕು ಮಂದಿಯೂ ಪ್ರಳಯಕಾಲದ ಗಾಳಿಯ ಹೊಡೆತದಿಂದ ಬಿದ್ದ ಕುಲಪರ್ವತಗಳಂತೆ ಬಿದ್ದು, ಪ್ರಾಣಹೋದವರಾಗಿದ್ದ ಸ್ಥಿತಿಯಲ್ಲಿ ಆ ಕಡೆ ದುರ್ಯೋಧನನ ಆಜ್ಞೆಯಿಂದ ಆತನ ಪುರೋಹಿತನಾದ ಕನಕಸ್ವಾಮಿಯೆಂಬುವವನು ಪಾಂಡವರಿಗೆ ಮಾಟಮಾಡಲು ಒಂದು ಹೋಮಮಾಡುತ್ತಿದ್ದು,

ಆ ಹೋಮಕುಂಡದಿಂದ
ಕತ್ತಲೆಯ ಸಮೂಹದಂತಿರುವ
ಶರೀರವೂ ಸಿಡಿಲನ್ನು
ತುಂಬಿಕೊಂಡ ಹಾಗಿದ್ದ
ಕೋರೆಹಲ್ಲುಗಳೂ ಬೆಂಕಿಯ
ಉಂಡೆಯ ಹಾಗಿದ್ದ ಕಣ್ಣೂ
(ಇವುಗಳಿಂದ ಕೂಡಿ)
ಯಮನ ಹಾಗಿರುವ
ಸ್ವರೂಪವೂ ಇವುಗಳನ್ನು
ತಾಳಿ ಥಳಥಳನೆ
ಹೊಳೆಯುತ್ತಿರುವ ಕತ್ತಿಯಿಂದ

ಕೂಡಿ ಹೊರಟು ಕೀರ್ತಿಗೆಯೆಂಬ ಒಂದು ಭಯಂಕರವಾದ ದೇವತೆಯು ‘ಹೇಳು ಹೇಳು, ನಾನು ಏನು ಮಾಡಬೇಕೆಂಬುದನ್ನು ಅಪ್ಪಣೆಕೇಳಲು’ ಎಂದು ಆ ಶಕ್ತಿ ಕೇಳಲು. ‘ಪಾಂಡವರು ಎಲ್ಲಿ ಹೊಕ್ಕಿದ್ದರೂ ಕೊಲ್ಲು’ ಎಂದು ಆಣತಿಯಿತ್ತನು. ಹಾಗೆಯೇ ಮಾಡುತ್ತೇನೆ ಎಂದು ಹೋಗಿ ಹುಡುಕಿ

ಎಲ್ಲಿಯೂ ಕಾಣದೆ ಕೊಳದ
ದಡದಲ್ಲಿ ಬಿದ್ದಿದ್ದ ನಾಲ್ವರನ್ನೂ
ಕಂಡು 'ಶಹಭಾಸ್
ಬದುಕಿದೆನು' ಎಂದು
ತಿನ್ನುವುದಕ್ಕೆ ಬಂದಾಗ
ಅವರುಗಳಿಗೆ- ಪಾಂಡು
ಪುತ್ರರಿಗೆ, ಆ ಸ್ಥಿತಿಯನ್ನುಂಟು
ಮಾಡಿದ ದೈವವು ಎದುರಿಗೆ
ಕಾಣಿಸಿಕೊಂಡು ರೇಗಿ
ಆರ್ಭಟಮಾಡುತ್ತ ಬಂದು-
ಹೀಗೆ ಹೇಳಿತು-

ಕಂ|| ಎಲೆ ಪಿಱಿತಿನಿ ಪೋ

ಮುಟ್ಟದೆ

ತೊಲಗೀ

ನಾಲ್ವರ್ಕಳಸುವನವರ್ಗಳ

ಮೆಯ್ಯಿಂ|

ತೊಲಗಿಸಿ ಮುನ್ನಮೆ ಕಾದಿ

ದರ್ಲಂಘ್ಯಬಲನೆನಿಸಿದೆನಗೆ

ನೀನಗ್ಗಳಮೇ|| ೪೩ ||

ಪದ್ಯ-೪೩:ಪದವಿಭಾಗ-

ಅರ್ಥ:ಎಲೆ ಪಿಱಿತಿನಿ

(ಮಾಂಸಭಕ್ಷಕ ಪಿಶಾಚಿಯೇ)

ಪೋ (ಹೋಗು)
ಮುಟ್ಟದೆತೊಲಗು, ಈ
ನಾಲ್ವರ್ಕಳ ಅಸುವನು
ಅವರ್ಗಳ ಮೆಯ್ಯಿಂ ತೊಲಗಿಸಿ
ಮುನ್ನಮೆ ಕಾದಿರ್ದ (ಈ
ನಾಲ್ಕು ಜನರ ಪ್ರಾಣವನ್ನು
ಅವರ ಶರೀರದಿಂದ
ತೊಲಗಿಸಿದ ಮೊದಲಿಂದ
ಕಾದಿರುವ,) ಅಲಂಘ್ಯಬಲನು
ಎನಿಸಿದ ಎನಗೆ ನೀನು
ಅಗ್ಗಳಮೇ (ಯಾರಿಗೂ

ಮೀರಲಾಗದ ಶಕ್ತಿಯುಳ್ಳವನು ಎನಿಸಿಕೊಂಡಿರುವ ನನಗೆ ನೀನು ಹೆಚ್ಚಿನವಳೇ?)

ಪದ್ಯ-೪೩:ಅರ್ಥ: ಎಲೆ ಮಾಂಸಭಕ್ಷಕ ಪಿಶಾಚಿಯೆ, ತೊಲಗಿಹೋಗು. ಈ ನಾಲ್ಕು ಜನರ ಪ್ರಾಣವನ್ನು ಅವರ ಶರೀರದಿಂದ ತೊಲಗಿಸಿದ ಮೊದಲಿಂದ ಕಾದಿರುವ, ಯಾರಿಗೂ ಮೀರಲಾಗದ ಶಕ್ತಿಯುಳ್ಳವನು

ಎನಿಸಿಕೊಂಡಿರುವ ನನಗೆ

ನೀನು ಹೆಚ್ಚಿನವಳೇ?

ವ|| ಅದಲ್ಲದೆಯುಂ ನೀನೆ ಜಾತಿದೇವತೆಯಪ್ಪೊಡೆನ್ನೆಂಜಲನೆಂತು ತಿಂಬೆಯೆಂಬುದುಂ ಪಾಂಡವರ್ ಮುನ್ನಮೆ ನಿನ್ನ ಕೆಯ್ಗೆ ವಂದರೆನಗಮಾ ಬೆಸಂ ತಪ್ಪಿದುದಾನಾರಂ ತಿಂಬೆಂ ಪೇೞೆನೆ ನಿನ್ನನಾವನೊರ್ವನಕಾರಣಂ ಪುಟ್ಟಿಸಿದನಾತನನೆ

ತಿನ್ನೆಂಬುದುಮಂತೆಗೆಯ್ವೆನೆಂದು ಪೋಗಿ-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ ನೀನೆ ಜಾತಿದೇವತೆಯಪ್ಪೊಡೆ ಎನ್ನ ಎಂಜಲನು ಎಂತು ತಿಂಬೆಯೆಂಬುದುಂ (ಉತ್ತಮಜಾತಿಯ ದೇವತೆಯೇ ಆಗಿದ್ದ ಪಕ್ಷದಲ್ಲಿ ನನ್ನ ಎಂಜಲನ್ನು ಹೇಗೆ ತಿನ್ನುತ್ತೀಯೆ) ಪಾಂಡವರ್

ಮುನ್ನಮೆ ನಿನ್ನ ಕೆಯ್ಗೆ ವಂದರೆ (ಪಾಂಡವರು ಮೊದಲೇ ನಿನ್ನ ಕೈಗೆ ಸಿಕ್ಕಿ ಆಹಾರದಾವರು) ಎನಗಂ ಆ ಬೆಸಂ ತಪ್ಪಿದುದು (ಆದುದರಿಂದ ನನಗೆ ಆ ಕಾರ್ಯವು ತಪ್ಪಿಹೋಯಿತು) ಆನು ಆರಂ ತಿಂಬೆಂ ಪೇೞ್ನೆ (ನಾನು ಈಗ ಯಾರನ್ನು ತಿನ್ನಲಿ ಹೇಳು ಎಂದು ಕೇಳಿತು ಕೀರ್ತಿಯೆಂಬ ಶಕ್ತಿ), ನಿನ್ನನು ಆವನು ಒರ್ವನ ಅಕಾರಣಂ

ಪುಟ್ಟಿಸಿದನು ಆತನನೆ ತಿನ್ನು
ಎಂಬುದುಂ ಅಂತೆ
ಗೆಯ್ವೆನೆಂದು ಪೋಗಿ (ನಿನ್ನನ್ನು
ಯಾವನು ಅಕಾರಣವಾಗಿ
ಹುಟ್ಟಿಸಿದನೋ ಅವನನ್ನೇ
ತಿನ್ನು ಎಂದು ಹೇಳಲು,
ಹಾಗೆಯೇ ಮಾಡುತ್ತೇನೆ
ಎಂದು ಹೋಗಿ)-
ವಚನ:ಅರ್ಥ:ಹಾಗೆಲ್ಲದೆ
'ನೀನು ಉತ್ತಮಜಾತಿಯ
ದೇವತೆಯೇ ಆಗಿದ್ದ ಪಕ್ಷದಲ್ಲಿ

ನನ್ನ ಎಂಜಲನ್ನು ಹೇಗೆ ತಿನ್ನುತ್ತೀಯೆ’ ಎಂದಿತು. ಪಾಂಡವರು ಮೊದಲೇ ನಿನ್ನ ಕೈಗೆ ಸಿಕ್ಕಿ ಆಹಾರದಾವರು; ಆದುದರಿಂದ ನನಗೆ ಆ ಕಾರ್ಯವು ತಪ್ಪಿಹೋಯಿತು. ನಾನು ಈಗ ಯಾರನ್ನು ತಿನ್ನಲಿ ಹೇಳು ಎಂದು ಕೇಳಿದಳು. ನಿನ್ನನ್ನು ಯಾವನು ಅಕಾರಣವಾಗಿ ಹುಟ್ಟಿಸಿದನೋ ಅವನನ್ನೇ

ತಿನ್ನು ಎಂದು ಹೇಳಲು
ಹಾಗೆಯೇ ಮಾಡುತ್ತೇನೆ
ಎಂದು ಹೋಗಿ

ಕಂ|| ಕನಕನ ಬೇಳ್ವೆ ತಗುಳ್ದುದು
ಕನಕನನೆಂಬೊಂದು ಮಾತು
ಧರೆಗೆಸೆಯೆ ಸುಯೋ|
ಧನನ ಪುರೋಹಿತನಪ್ಪಾ
ಕನಕಸ್ವಾಮಿಯನೆ ಮುನಿದು
ಕೀರ್ತಿಗೆ ತಿಂದಳ್|| ೪೪ ||

ಪದ್ಯ-೪೪:ಪದವಿಭಾಗ-
ಅರ್ಥ:ಕನಕನ ಬೇಳ್ವೆ (ಯಜ್ಞ)

ತಗುಳ್ದುದು ಕನಕನನು ಎಂಬೊಂದು ಮಾತು ಧರೆಗೆ ಎಸೆಯೆ (ಪ್ರಖ್ಯಾತವಾಗುವ ಹಾಗೆ) ಸುಯೋಧನನ ಪುರೋಹಿತನಪ್ಪ ಆ ಕನಕಸ್ವಾಮಿಯನೆ ಮುನಿದು ಕೀರ್ತಿಗೆ ತಿಂದಳ್ (ಕನಕಸ್ವಾಮಿಯನ್ನೇ ಕೋಪಿಸಿಕೊಂಡು ಕೀರ್ತಿಯೇ ತಿಂದುಹಾಕಿದಳು)

ಪದ್ಯ-೪೪:ಅರ್ಥ: . ‘ಕನಕನ ಯಜ್ಞ ಕನಕನನ್ನೇ ಬೆನ್ನುಹತ್ತಿತು’ ಎಂಬ ಒಂದು ಗಾದೆಮಾತು ಭೂಮಿಯಲ್ಲಿ ಪ್ರಖ್ಯಾತವಾಗುವ ಹಾಗೆ ದುರ್ಯೋಧನನ ಪುರೋಹಿತನಾದ ಆ ಕನಕಸ್ವಾಮಿಯನ್ನೇ ಕೋಪಿಸಿಕೊಂಡು ಕೀರ್ತಿಗಯೇ ತಿಂದುಹಾಕಿದಳು.

ವ|| ಅನ್ನೆಗಮಿತ್ತ ಕೃತಾಂತನಂದನಂ ತನ್ನ ನಾಲ್ವರ್ ತಮ್ಮಂದಿರುಂ ಬಾರದೆ ತಡೆದುದರ್ಕೆ ಚಿಂತಾಕ್ರಾಂತನಾಗಿ-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಇತ್ತ ಕೃತಾಂತನಂದನಂ(ಧರ್ಮಜನು) ತನ್ನ ನಾಲ್ವರ್ ತಮ್ಮಂದಿರುಂ ಬಾರದೆ

ತಡೆದುದರ್ಕೆ
ಚಿಂತಾಕ್ರಾಂತನಾಗಿ-

ವಚನ:ಅರ್ಥ:ಅಷ್ಟರಲ್ಲಿ ಈ ಕಡೆ ಧರ್ಮಜನು ತನ್ನ ನಾಲ್ಕು ತಮ್ಮಂದಿರೂ ಬರದೆ ತಡ ಮಾಡಿದುದಕ್ಕಾಗಿ ಚಿಂತಿತನಾಗಿ-

ಕಂ|| ಪೋದರನೊಡಗೊಂಡು ಬರಲ್
ಪೋದರುಮಾ ಪೋದ ಪೋಗೆ ಪೋದರ್ ತಡೆಯಲ್|

ಪೋದವರಲ್ತೆಂದು ಮನ ಖೇದಂಬೆರಸೆಯ್ದವಂದನಬ್ಜಾಕರಮಂ|| ೪೫ ||

ಪದ್ಯ-೪೫:ಪದವಿಭಾಗ-ಅರ್ಥ:ಪೋದರನು ಒಡಗೊಂಡು ಬರಲ್ ಪೋದರುಂ ಆ ಪೋದ ಪೋಗೆ ಪೋದರ್ (ಹೋದಂತೆಯೇ ಹೋದರು), ತಡೆಯಲ್ ಪೋದವರು ಅಲ್ತು ಎಂದು (ಅವರು ಹಾಗೆ ತಡ

ಮಾಡುವವರಲ್ಲ ಎಂದು)
ಮನಖೇದಂ ಬೆರಸೆ
ಎಯ್ದುವಂದನ್ ಅಬ್ಜಾಕರಮಂ
(ಮನಸ್ಸಿನಲ್ಲಿ ಖೇದಹೊಂದಿ
ತಾನೇ ಸರೋವರದ
ಸಮೀಪಕ್ಕೆ ಬಂದನು)

ಪದ್ಯ-೪೫:ಅರ್ಥ:
ಹೋದವರನ್ನು ಒಡಗೊಂಡು
ಬರಲು ಹೋದವರೂ ಅವರು
ಹೋದಂತೆಯೇ ಹೋದರು.
ಅವರು ಹಾಗೆ ತಡ

ಮಾಡುವವರಲ್ಲ, ಎಂಬ ಮನಸ್ಸಿನ ಖೇದದಿಂದ ತಾನೇ ಸರೋವರದ ಸಮೀಪಕ್ಕೆ ಬಂದನು.

ವ||ಅಂತೆಯ್ದೆವಂದು ಬಱಸಿಡಿಲ್ ಪೊಡೆಯೆ ಕೆಡೆದ ಶಾಲತರುಗಳಿರ್ಪಂತಿರ್ದ ನಾಲ್ವರ್ ತಮ್ಮಂದಿರುಮಂ ಕಂಡು ಬೆಕ್ಕಸಂಬಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಎಯ್ದೆವಂದು

ಬಱಿಸಿಡಿಲ್ ಪೊಡೆಯೆ ಕೆಡೆದ (ಸಮೀಪಿಸಿ ಬರಸಿಡಿಲು ಹೊಡೆಯಲು ಬಿದ್ದ) ಶಾಲತರುಗಳು ಇರ್ಪಂತೆ ಇರ್ದ (ಸಾಲವೃಕ್ಷಗಳಂತಿದ್ದ) ನಾಲ್ವರ್ ತಮ್ಮಂದಿರುಮಂ ಕಂಡು ಬೆಕ್ಕಸಂಬಟ್ಟು- (ಆಶ್ಚರ್ಯಪಟ್ಟು-)

ವಚನ:ಅರ್ಥ:ಹಾಗೆ ಸಮೀಪಿಸಿ ಬರಸಿಡಿಲು ಹೊಡೆಯಲು ಬಿದ್ದ

ಸಾಲವೃಕ್ಷಗಳಂತಿದ್ದ ನಾಲ್ವರು ತಮ್ಮಂದಿರನ್ನೂ ನೋಡಿ ಆಶ್ಚರ್ಯಪಟ್ಟನು.

ಕಂ|| ಆರಿಂದಮಿವರ್ಗಿದಾಯ್ತೆಂ
ದಾರಯ್ವೆಂ
ಬೞಿಯಮಾದೊಡೇನಾಯ್ತೆಂ
ದಂ|
ಭೋರುಹರಜಪಟಾವೃತ
ವಾರಿಯನಾ ನೃಪತಿ
ಕುಡಿಯಲೊಡರಿಸಿದಾಗಳ್||
೪೬||

ಪದ್ಯ-೪೬:ಪದವಿಭಾಗ-ಅರ್ಥ: ಆರಿಂದಂ ಇವರ್ಗಿದಾಯ್ತೆಂದು ಆರಯ್ವೆಂ (ಯಾರಿಂದ ಇವರಿಗೆ ಈ ರೀತಿಯಾಯಿತು ಎಂಬುದನ್ನು ಅನಂತರ ವಿಚಾರಿಸುತ್ತೇನೆ) ಬಱಿಯಂ ಆದೊಡೆ ಏನಾಯ್ತೆಂದು ಅಂಭೋರುಹ ರಜಪಟಾವೃತ ವಾರಿಯನು (ಕಮಲದಪರಾಗ ಧೂಳೆಂಬ ಬಟ್ಟೆಯಿಂದ ಮುಚ್ಚಿದ

ನೀರನ್ನು) ಆ ನೃಪತಿ ಕುಡಿಯಲು ಒಡರಿಸಿದಾಗಳ್ (ತೊಡಗಿದಾಗ)

ಪದ್ಯ-೪೬:ಅರ್ಥ:ಯಾರಿಂದ ಇವರಿಗೆ ಈ ರೀತಿಯಾಯಿತು ಎಂಬುದನ್ನು ಅನಂತರ ವಿಚಾರಿಸುತ್ತೇನೆ. ಆದರೆ ಏನಾಯ್ತು ಎಂದು ಕಮಲದಪರಾಗ ಧೂಳೆಂಬ ಬಟ್ಟೆಯಿಂದ ಮುಚ್ಚಿದ

ನೀರನ್ನು ಆ ರಾಜನು ಕುಡಿಯಲು ತೊಡಗಿದಾಗ-

ಮರುಳಾಗದೆನ್ನ ನುಡಿಗು
ತ್ತರಮಂ ಮುನ್ನಿತ್ತು ಕುಡಿಯೆ
ಕಜ್ಜಂ ನಿನಗು|
ತ್ತರಿಸುಗುಮಂತಲ್ಲದಿವಂ
ದಿರಂತೆ ನೀನುಂತೆ
ಮೂರ್ಖನಾಗದಿರರಸಾ|| ೪೭||

ಪದ್ಯ-೪೭:ಪದವಿಭಾಗ-

ಅರ್ಥ:ಮರುಳಾಗದೆ ಎನ್ನ ನುಡಿಗೆ ಉತ್ತರಮಂ ಮುನ್ನ

ಇತ್ತು ಕುಡಿಯೆ ಕಜ್ಜಂ
(ಮೊದಲು ಉತ್ತರವನ್ನು
ಕೊಟ್ಟು ನೀರು ಕುಡಿಯುವುದು
ನಿನ್ನ ಕರ್ತವ್ಯ,) ನಿನಗೆ
ಉತ್ತರಿಸುಗುಂ (ಉತ್ತರೋತ್ತರ
ಅಭಿವೃದ್ಧಿಯಾಗುವುದು)
ಅಂತಲ್ಲದೆ ಇವಂದಿರಂತೆ
ನೀನು ಉಂತೆ (ಎಲೈ ರಾಜನೇ,
ಇವರುಗಳ ಹಾಗೆ ನೀನೂ
ಸುಮ್ಮನೆ

ಮೂರ್ಖನಾಗಬೇಡ)
ಮೂರ್ಖನಾಗದಿರು ಅರಸಾ.
ಪದ್ಯ-೪೭:ಅರ್ಥ:ಧರ್ಮಜ
ನೇ, ವಿವೇಕವಿಲ್ಲದ
ಮರುಳನಾಗದೆ ನನ್ನ ಮಾತಿಗೆ
ಮೊದಲು ಉತ್ತರವನ್ನು
ಕೊಟ್ಟು ನೀರು ಕುಡಿಯುವುದು
ನಿನ್ನ ಕರ್ತವ್ಯ, ಉತ್ತರೋತ್ತರ
ಅಭಿವೃದ್ಧಿಯಾಗುವುದು.
ಹಾಗಲ್ಲದೆ ಎಲೈ ರಾಜನೇ

ಇವರುಗಳ ಹಾಗೆ ನೀನೂ

ಸುಮ್ಮನೆ ಮೂರ್ಖನಾಗಬೇಡ’

ವ||ಎಂಬುದುಮೆನ್ನ

ತಮ್ಮಂದಿರ್ಗಿನಿತಂ ಮಾಡಿದ

ದಿವ್ಯಮೀ

ದಿವ್ಯಮಕ್ಕುಮೆಂದದಱ

ಬೆಸಗೊಂಡುದರ್ಕೆಲ್ಲಂ

ಮಱುಮಾತುಗುಡುವುದುಂ

ಮೆಚ್ಚಿ ತನ್ನ ಸ್ವರೂಪಮಂ

ತೋಱಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಎನ್ನ ತಮ್ಮಂದಿರ್ಗೆ ಇನಿತಂ ಮಾಡಿದ ದಿವ್ಯಮು ಈ ದಿವ್ಯಮಕ್ಕುಮೆಂದು (ನನ್ನ ತಮ್ಮಂದಿರಿಗೆ ಇಷ್ಟು ಮಾಡಿದೆ ದೇವತೆಯಿದೇ ಆಗಿರಬಹುದೆಂದು ತಿಳಿದು) ಅದಱ ಬೆಸಗೊಂಡುದರ್ಕೆ ಎಲ್ಲಂ (ಅದು ಹಾಕಿದ ಪ್ರಶ್ನೆಗಳಿಗೆಲ್ಲ)

ಮಱುಮಾತುಗುಡುವುದುಂ ಮೆಚ್ಚಿ (ಪ್ರತ್ಯುತ್ತರವನ್ನಿತ್ತುದಕ್ಕೆ ತೃಪ್ತಿಪಟ್ಟು) ತನ್ನ ಸ್ವರೂಪಮಂ ತೋಱಿ-

ವಚನ:ಅರ್ಥ:ಎನ್ನಲು ನನ್ನ ತಮ್ಮಂದಿರಿಗೆ ಇಷ್ಟು ಮಾಡಿದೆ ದೇವತೆಯಿದೇ ಆಗಿರಬಹುದೆಂದು ತಿಳಿದು ಅದು ಹಾಕಿದ ಪ್ರಶ್ನೆಗಳಿಗೆಲ್ಲ ಪ್ರತ್ಯುತ್ತರವನ್ನಿತ್ತುದಕ್ಕೆ

ತೃಪ್ತಿಪಟ್ಟು. ಮೆಚ್ಚಿ ದೈವವು
ಹೀಗೆ ಹೇಳಿತು.

ಚಂ|| ಕನಕನ
ಬೇಳ್ವೆಯಿಂದೊಗೆದ
ಕೀರ್ತಿಗೆಯಿಂ
ನಿನಗಪ್ಪಪಾಯಮಂ
ನೆನೆದು ಮದೇಭರೂಪಮನೆ
ತೋಱಿ ನಿಜಾಶ್ರಮದಿಂದಗಲ್ಚಿ
ನಿ|
ನ್ನನುಜರನೀಯುಪಾಯದೊಳೆ
ಕೀರ್ತಿಗೆಯೊಡ್ಡಿಸೆ ಕಾದೆನಾಂ

ಕೃತಾಂ
ತನೆನೆನಗಮ್ಮ ನೀಂ
ಮಗನೆಯಿನ್ ಪೆಱತೇಂ
ನಿನಗುತ್ತರೋತ್ತರಂ|| ೪೮ ||

ಪದ್ಯ-೪೮:ಪದವಿಭಾಗ-ಅರ್ಥ:ಕನಕನ ಬೇಳ್ವೆಯಿಂದ ಒಗೆದ ಕೀರ್ತಿಗೆಯಿಂ (ಕನಕನ ಯಜ್ಞದಿಂದ ಹುಟ್ಟಿದ ಕೀರ್ತಿಗೆಯೆಂಬ ಶಕ್ತಿಯಿಂದ) ನಿನಗಪ್ಪ ಅಪಾಯಮಂ ನೆನೆದು ಮದೇಭರೂಪಮನೆ

ತೋಱಿ (ಮದಗಜದ
ಆಕಾರವನ್ನು ತೋರಿಸಿ) ನಿಜ
ಆಶ್ರಮದಿಂದ ಅಗಲ್ಚಿ (ನಿಮ್ಮ
ಆಶ್ರಮದಿಂದ ಆಗಲಿಸಿ) ನಿನ್ನ
ಅನುಜರನು ಈ
ಉಪಾಯದೊಳೆ ಕೀರ್ತಿಗೆ
ಒಡ್ಡಿಸೆ ಕಾದೆ (ಆ ಶಕ್ತಿಗೆ
ಪ್ರತೀಕಾರ ಮಾಡಿ ನಿನ್ನ
ತಮ್ಮಂದಿರನ್ನು ರಕ್ಷಿಸಿದೆ)ನಾಂ
ಕೃತಾಂತನು ಎನೆ ಎನಗೆ ಅಮ್ಮ
(ನಾನು ಯಮ ಎನ್ನಲು,

ನಾನು ತಂದೆ.) ನೀಂ
ಮಗನೆಯಿನ್ (ನೀನು ನನ್ನ
ಮಗನಯ್ಯಾ,) ಪೆಱತೇಂ
ನಿನಗೆ ಉತ್ತರೋತ್ತರಂ
(ಇದಕ್ಕಿಂತ ಬೇರೆಯೇನು?
ನಿನಗೆ ಉತ್ತರೋತ್ತರಂ
ಅಭಿವೃದ್ಧಿಯಾಗಲಿ ಎಂದನು
ಯಮ.)
ಪದ್ಯ-೪೮:ಅರ್ಥ:ಕನಕನ
ಯಜ್ಞದಿಂದ ಹುಟ್ಟಿದ
ಕೀರ್ತಿಗೆಯೆಂಬ ಶಕ್ತಿಯಿಂದ

ನಿನಗಾಗಬಹುದಾದ
ಅಪಾಯವನ್ನು ತಿಳಿದು,
(ಅದನ್ನು ತಪ್ಪಿಸಬೇಕೆಂದು
ಹೀಗೆ ಮಾಡಿದೆ) ಮದಗಜದ
ಆಕಾರವನ್ನು ತೋರಿಸಿ ನಿಮ್ಮ
ಆಶ್ರಮದಿಂದ ಆಗಲಿಸಿ (ಬೇರೆ
ಮಾಡಿ) ಈ ಉಪಾಯದಿಂದ
ಕೀರ್ತಿಗೆಯೆಂಬ ಆ ಶಕ್ತಿಗೆ
ಪ್ರತೀಕಾರ ಮಾಡಿ ನಿನ್ನ
ತಮ್ಮಂದಿರನ್ನು ರಕ್ಷಿಸಿದೆ. ನಾನು
ಯಮ ಎನ್ನಲು, ನಾನು ತಂದೆ.

ನೀನು ನನ್ನ ಮಗನಯ್ಯಾ!.
ನಿನಗೆ ಉತ್ತರೋತ್ತರಂ
ಅಭಿವೃದ್ಧಿಯಾಗಲಿ ಎಂದನು
ಯಮ.

ವ|| ಎಂದು ಮಱಿಕೆಂದಿದರನೆತ್ತುವಂತೆ ನಾಲ್ವರುಮನೆತ್ತಿ ತಾಂ ಮುನ್ನಂ ತಂದರಣಿಯಂ ಕೊಟ್ಟು ಕೃತಾಂತನಂತರ್ಧಾನಕ್ಕೆ ಸಂದಂ ಧರ್ಮತನೂಜನುಮನುಜರ್ ಸಹಿತಂ ನಿಜನಿವಾಸಕ್ಕೆ

**ವಂದರಣಿಯಂ ಪಾರ್ವಗೆ್ಗ
ಕೊಟ್ಟು ಕೆಲವು ದಿವಸಮಿರ್ದು
ಧೌಮ್ಯ
ಪುರೋಹಿತಂಬೆರಸಯ್ವರು
ಮಾಳೋಚಿಸಿ-**

ವಚನ:ಪದವಿಭಾಗ-

ಅರ್ಥ:ಎಂದು
ಮಱಿಕೆಂದಿದರನು ಎತ್ತುವಂತೆ
(ಮೈಮರೆತುಮಲಗಿದ್ದವರನ್ನು
ಎಬ್ಬಿಸುವ ಹಾಗೆ)
ನಾಲ್ವರುಮನು ಎತ್ತಿ,(ಎಬ್ಬಿಸಿ)

ತಾಂ ಮುನ್ನಂ ತಂದ
ಅರಣಿಯಂ ಕೊಟ್ಟು
ಕೃತಾಂತನು ಅಂತರ್ಧಾನಕ್ಕೆ
ಸಂದಂ (ಯಮನು
ಅದೃಶ್ಯನಾದನು.)
ಧರ್ಮತನೂಜನುಂ
ಅನುಜರ್ ಸಹಿತಂ
(ಧರ್ಮಜನು
ಸೋದರರೊಡನೆ)
ನಿಜನಿವಾಸಕ್ಕೆ ವಂದು
ಅರಣಿಯಂ ಪಾರ್ವರ್ಗೆ

(ಬ್ರಾಹ್ಮಣರಿಗೆ) ಕೊಟ್ಟು ಕೆಲವು ದೆವಸಂ ಇರ್ದು ಧೌಮ್ಯ ಪುರೋಹಿತಂ ಬೆರಸು ಅಯ್ವರುಂ ಆಳೋಚಿಸಿ (ಧೌಮ್ಯನೆಂಬ ಪುರೋಹಿತನೊಡಗೂಡಿ ಅಯ್ದು ಜನರೂ ಆಲೋಚಿಸಿ)-

ವಚನ:ಅರ್ಥ:|| ಎಂಬುದಾಗಿ ಹೇಳಿ, ಯಕ್ಷನು, ಮೈಮರೆತು ಮಲಗಿದ್ದವರನ್ನು ಎಬ್ಬಿಸುವ

ಹಾಗೆ ನಾಲ್ಕು ಜನರನ್ನೂ ಎಬ್ಬಿಸಿ ತಾನು ತಂದಿದ್ದ ಅರಣಿಯನ್ನು ಕೊಟ್ಟು ಯಮನು ಅದೃಶ್ಯನಾದನು. ಧರ್ಮರಾಜನೂ ತಮ್ಮಂದಿರೊಡನೆ ತನ್ನ ವಾಸಸ್ಥಳಕ್ಕೆ ಬಂದು ಅರಣಿಯನ್ನು ಬ್ರಾಹ್ಮಣರಿಗೆ ಕೊಟ್ಟನು. ಕೆಲವು ದಿನಗಳಿದ್ದು ಧೌಮ್ಯನೆಂಬ

ಪುರೋಹಿತನೊಡಗೂಡಿ

ಅಯ್ದು ಜನರೂ ಆಲೋಚಿಸಿ-

ವಿರಾಟನಗರದಲ್ಲಿ ಪಾಂಡವರ ಅಜ್ಞಾತವಾಸ

ಚಂ|| ನೆರೆದುವು ಪನ್ನೆರಟ್ಬರಿಸಮುಗ್ರವಿರೋಧಿ ಜನಕ್ಕೆ ಮಿಱ್ತುಗಳ್ ನೆರೆವವೊಲಾಗದಿನ್ನಱಿದಿರಲ್ ನಮಗಬ್ದಮನೊಂದನಿರ್ದೊ ಡೇ|

ತಱಿ ಪಡೆಮಾತೊ

ಮತ್ತಮಿರವೇೞ್ಪುದು

ಪನ್ನೆರಡಬ್ದಮಂ ಮನಂ

ಮಱುಗೆ ಬನಂಗಳೊಳ್

ನುಡಿದ ನನ್ನಿಗೆ ಪೇೞಿಮಿದರ್ಕೆ

ಕಜ್ಜಮಂ|| ೪೯||

ಪದ್ಯ-೪೯:ಪದವಿಭಾಗ-

ಅರ್ಥ:ನೆರೆದುವು

ಪನ್ನೆರಬ್ಬರಿಸಂ (ಹನ್ನೆರಡು

ವರ್ಷಗಳು ನೆರೆದವು-

ತುಂಬಿದುವು.)

ಉಗ್ರವಿರೋಧಿರೋಜನಕ್ಕೆ
ಮಿೞ್ತುಗಳ್ ನೆರೆವವೊಲ್
(ಶತ್ರುಗಳಿಗೆ ಮೃತ್ಯುಗಳು
ಪೂರ್ಣವಾಗುವ/
ಹತ್ತಿರವಾಗುವಂತೆ) ಆಗದು
ಇನ್ನು ಅೞಿದು ಇರಲ್ (ಇನ್ನು
ಅರೆದು-ಮರೆಯಾಗಿ ಇರಲ್
ಆಗದು- ಅಡಗದೆ ಇದ್ದ
ಪಕ್ಷದಲ್ಲಿ) ನಮಗೆ ಅಬ್ದಮನು
ಒಂದನು (ಇನ್ನು ಒಂದು ವರ್ಷ
ನಾವು ಯಾರೂ ತಿಳಿಯದಂತೆ

ಇರಬೇಕು) ಇರ್ದೊಡೆ
(ಅಡಗದೆ ಇದ್ದರೆ- ಇದ್ದ
ಪಕ್ಷದಲ್ಲಿ - ನಾವು ಇರುವುದು
ಗೊತ್ತಾದರೆ) ಏತಱ
ಪಡೆಮಾತೊ (ಆ ಕಡೆ ಏನು
ಸುದ್ದಿಯೊ) ಮತ್ತಂ
ಇರವೇೞ್ಪುದು
ಪನ್ನೆರಡಬ್ದಮಂ (ಇನ್ನೂ
ಹನ್ನೆರಡು ವರ್ಷಗಳ ಕಾಲ
ಕಾಡಿನಲ್ಲಿರಬೇಕಾಗುತ್ತದೆ)
ಮನಂ ಮಱುಗೆ

ಬನಂಗಳೊಳ್ ನುಡಿದ ನನ್ನಿಗೆ (ನನ್ನಿ-ಸತ್ಯ)(ಮನಸ್ಸಿಗೆ ದುಖವಾಗುವ ಹಾಗೆ ಕಾಡಿನಲ್ಲಿ ಇರಕಾಗುತ್ತದೆ, ಕೊಟ್ಟ ಸತ್ಯವಚನಕ್ಕಾಗಿ) ಪೇೞಿಂ ಇದರ್ಕೆ ಕಜ್ಜಮಂ (ಇದಕ್ಕೆ ಮಾಡಬೇಕಾದ ಕಾರ್ಯವನ್ನು ತಿಳಿಸಿ)

ಪದ್ಯ-೪೯:ಅರ್ಥ: ಪಾಂಡವ ಸೋದರರರಲ್ಲಿ ಒಬ್ಬನು ಹೇಳಿದನು; ಕ್ರೂರಿಗಳಾದ

ಶತ್ರುಗಳಿಗೆ
ಮೃತ್ಯುಪ್ರೂರ್ಣವಾಗುವ ಹಾಗೆ
ಹನ್ನೆರಡು ವರ್ಷಗಳು
ತುಂಬಿದುವು. ಇನ್ನು ಒಂದು
ವರ್ಷ ನಾವು ಯಾರೂ
ತಿಳಿಯದಂತೆ ಇರಬೇಕು. ಅದು
ತಪ್ಪಿದರೆ ಆಡಿದ ಸತ್ಯವಾಕ್ಕಿಗೆ
ಅನುಗುಣವಾಗಿ ಮನಸ್ಸಿಗೆ
ದುಃಖವಾಗುವ ಹಾಗೆ ಇನ್ನೂ
ಹನ್ನೆರಡು ವರ್ಷಗಳ ಕಾಲ
ಕಾಡಿನಲ್ಲಿರಬೇಕಾಗುತ್ತದೆ.

ಇದಕ್ಕೆ ಮಾಡಬೇಕಾದ ಕಾರ್ಯ (ಉಪಾಯ)ವನ್ನು ತಿಳಿಸಿ.

ವ|| ಎನೆ ಯಮನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ ಯಮನಂದನನು ಇಂತೆಂದಂ-

ವಚನ:ಅರ್ಥ:ಎನ್ನಲು ಧರ್ಮರಾಯನು ಹೀಗೆಂದನು-

ಮ|| ಅಪವಾದಂ

ಪೆಱತೊಂದುಮಿಲ್ಲ

ನಮಗಿನ್ನುಂ ಪೊಕ್ಕಿರಲ್ಕಿಂಬು

ಮ

ತ್ಸ್ಯಪುರಂ ಶತ್ರುಗೆ ಶತ್ರು

ಮತ್ಸ್ಯನದಱಿಂದಜ್ಞಾತವಾಸಕ್ಕೆ

ಚಿಂ|

ತಿಪೊಡಿನ್ನನ್ನವು

ತಾಣಮಿಲ್ಲದಱಿನುಂತಾರ್ಗಪ್

ಪೊಡಂ ಮಿಕ್ಕ ರೂ

ಪ ಪರಾವರ್ತನದಿಂ

ವಿರಾಟಪುರಮಂ

ಪೊಕ್ಕಿರ್ದದಂ ನೀಗೆಮೇ|| ೫೦||

ಪದ್ಯ-೫೦:ಪದವಿಭಾಗ-

ಅರ್ಥ:ಅಪವಾದಂ ಪೆಱತೊಂದುಮಿಲ್ಲ ನಮಗಿನ್ನುಂ (ನಮಗೆ ಇದುವರೆಗೆ ಯಾವುದೇ ಅಪವಾದವೂ ಇಲ್ಲ) ಪೊಕ್ಕಿರಲ್ಕೆ ಇಂಬು (ಹೊಕ್ಕು ಅಡಗಲು ತಾಣ- ಆಶ್ರಯ)

ಮತ್ಸ್ಯಪುರಂ ಶತ್ರುಗೆ ಶತ್ರು ಮತ್ಸ್ಯನು(ಮತ್ಸ್ಯಪುರವು ಆಶ್ರಯವು. ನಮ್ಮ ಶತ್ರು ಕೌರವನಿಗೆ ಮತ್ಸ್ಯರಾಜನು ಶತ್ರು) ಅದಱಿಂದ ಅಜ್ಞಾತವಾಸಕ್ಕೆ ಚಿಂತಿಪೊಡೆ ಇನ್ನು ಅನ್ನವು ತಾಣಮಿಲ್ಲ ಅದಱಿಂ (ನು) ಉಂತೆ ಆರ್ಗಪ್ಪೊಡಂ ಮಿಕ್ಕ ರೂಪ ಪರಾವರ್ತನದಿಂ(ಉಂತೆ ಯಾರಿಗಾದರೂ ಮೀರಿದ/

ತಿಳಿಯದ ರೂಪ ಬದಲಾಯಿಸುವುದರಿಂದ) ವಿರಾಟಪುರಮಂ ಪೊಕ್ಕಿಉ ಇರ್ದದಂ ನೀಗೆಮೇ (ನೀಗಲಾರವೇ- ಕಳೆಯಲಾರೆವೇ?)

ಪದ್ಯ-೫೦:ಅರ್ಥ: 'ನಮಗೆ ಇದುವರೆಗೆ ಯಾವುದೇ ಅಪವಾದವೂ ಇಲ್ಲ ; ಸುಖವಾಗಿರುವುದಕ್ಕೆ ಮತ್ಸ್ಯಪುರವು

ಆಶ್ರಯವಾಗಿರುತ್ತದೆ. ನಮ್ಮ
ಶತ್ರುವಾದ ಕೌರವನಿಗೆ
ಮತ್ಸ್ಯರಾಜನು ಶತ್ರು ;
ಆದುದರಿಂದ ಅಜ್ಞಾತವಾಸದ
ವಿಷಯವಾಗಿ
ಯೋಚಿಸುವುದಾದರೆ
ಇದಕ್ಕಿಂತ ಉತ್ತಮವಾದ
ಸ್ಥಳವಿಲ್ಲ. ಆದುದರಿಂದ
ಯಾರಿಗೂ ತಿಳಿಯದಂತೆ
ವೇಷವನ್ನು ಮರೆಸಿಕೊಂಡು
ವಿರಾಟಪುರವನ್ನು ಪ್ರವೇಶಿಸಿ

ಇರೋಣ; ನೀಗಲಾರವೇ-
ಕಳೆಯಲಾರೆವೇ?

ವ|| ಎಂದು ಯುಷ್ಠಿಧಿರಂ ನಿಷ್ಠಿತಕಾರ್ಯಮನನನುಷ್ಠಿಸೆ ನಿಜ ಪರಿಜನಮೆಲ್ಲಮನೀಯೊಂದು ವರುಷಮುಂ ನಿಮ್ಮ ನಿಮ್ಮ ಬಲ್ಲಂದದೊಳಿರಿಮೆಂದು ಧೌಮ್ಯಸಮೇತಂ ಪೋಗಲ್ವೇೞ್ದು ತಮ್ಮಯ್ವರುಂ ಪಾಂಚಾಳಿವೆರಸು ಪೋದ

ದೆಸೆಯನಾರುಮಱಿಯದಂತು ದ್ವೈತವನಮಂ ಪೊಱಮಟ್ಟು ಜಗುನೆಯಂ ಪಾಯ್ದು ಮೂಡಮೊಗದೆ ಪಯಣಂಬೋಗಿ ಮತ್ಸ್ಯದೇಶಮಂ ಪುಗುತಂದರರದೆಂತಪ್ಪುದೆಂದೊಡೆ- ಬ

ವಚನ:ಪದವಿಭಾಗ-

ಅರ್ಥ:ಎಂದು ಯುಧಿಷ್ಠಿರಂ ನಿಶ್ಚಿತಕಾರ್ಯಮನು

ಅನನುಷ್ಠಿಸೆ (ಮಾಡಬೇಕಾದ ಕಾರ್ಯವನ್ನು ಸೂಚಿಸಲು) ನಿಜ ಪರಿಜನಂ ಎಲ್ಲಮನು ಈಯೊಂದು ವರುಷಮುಂ ನಿಮ್ಮ ನಿಮ್ಮ ಬಲ್ಲ ಅಂದದೊಳು ಇರಿಮೆಂದು (ನಿಮಗೆ ತಿಳಿದ ರೀತಿಯಲ್ಲಿ ಇರಿ ಎಂದು) ಧೌಮ್ಯಸಮೇತಂ ಪೋಗಲ್ವೇಳ್ದು (ಧೌಮ್ಯನೊಡನೆ ಹೋಗಲು ಹೇಳಿದನು.) ತಮ್ಮ ಐಯ್ವರುಂ

ಪಾಂಚಾಳಿವೆರಸು ಪೋದ ದೆಸೆಯನು ಆರುಂ ಅಱಿಯದಂತು ದ್ವೈತವನಮಂ ಪೊಱಮಟ್ಟು (ತಾವೈದು ಜನರೂ ದ್ರೌಪದಿಯೊಡಗೂಡಿ ತಾವು ಹೋದ ದಿಕ್ಕನ್ನು ಯಾರೂ ತಿಳಿಯದಂತೆ ದ್ವೈತವನದಿಂದ ಹೊರಟು) ಜಗುನೆಯಂ ಪಾಯ್ದು (ಯಮುನಾ ನದಿಯನ್ನು ದಾಟಿ)

ಮೂಡಮೊಗದೆ
ಪಯಣಂಬೋಗಿ
(ಪೂರ್ವಾಭಿಮುಖವಾಗಿ
ಪ್ರಯಾಣಮಾಡಿ)
ಮತ್ಸ್ಯದೇಶಮಂ
ಪುಗುತಂದರು
(ಮತ್ಸ್ಯದೇಶವನ್ನು
ಪ್ರವೇಶಮಾಡಿದರು.);
ಅದೆಂತಪ್ಪುದು ಎಂದೊಡೆ
(ಅದು ಹೇಗಾಯಿತೆಂದರೆ)-

ವಚನ:ಅರ್ಥ:|| ಎಂದು ಧರ್ಮಜನು ಮಾಡಬೇಕಾದ ಕಾರ್ಯವನ್ನು ಸೂಚಿಸಲು, ತನ್ನ ಪರಿವಾರದವರನ್ನೆಲ್ಲ ಈ ಒಂದು ವರ್ಷ ಕಾಲ ನಿಮಗೆ ತಿಳಿದ ರೀತಿಯಲ್ಲಿ ಇರಿ ಎಂದು ಧೌಮ್ಯನೊಡನೆ ಹೋಗಲು ಹೇಳಿದನು. ತಾವೈದು ಜನರೂ ದ್ರೌಪದಿಯೊಡಗೂಡಿ ತಾವು ಹೋದ ದಿಕ್ಕನ್ನು ಯಾರೂ ತಿಳಿಯದಂತೆ ದ್ವೈತವನದಿಂದ

ಹೊರಟು, ಯಮುನಾ
ನದಿಯನ್ನು ದಾಟಿ
ಪೂರ್ವಾಭಿಮುಖವಾಗಿ
ಪ್ರಯಾಣಮಾಡಿ
ಮತ್ಸ್ಯದೇಶವನ್ನು
ಪ್ರವೇಶಮಾಡಿದರು. ಅದು
ಹೇಗಾಯಿತೆಂದರೆ-

**ಕಂ|| ಇಂಚೆಯ ಪಸವಿನ
ಬಱಿದ ಕ
ಳಿಂಚಿನ ಡಾವರದ
ಬಾಧೆಯಿಲ್ಲದ ಪದದೊಳ್|**

ಮುಂಚದೆ ಪಿಂಚದೆ ಬಳೆದು ವಿರಿಂಚಿಯ ಕೆಯ್ಪಿಡಿವೊಲಾದುವಾ ನಾಡೂರ್ಗಳ್|| ೫೧ ||

ಪದ್ಯ-೫೧:ಪದವಿಭಾಗ-ಅರ್ಥ:ಇಂಚೆಯ ಪಸವಿನ (ಹಿಂಸೆಯ, ಹಸಿವಿನ/ ಕ್ಷಾಮದ) ಬಱಿದ (ಬರಗಾಲದ) ಕಳಿಂಚಿನ (ಮೋಸದ) ಡಾವರದ (ಕ್ಷೋಭೆಯ)ಬಾಧೆಯಿಲ್ಲದ

ಪದದೊಳ್ (ಸ್ಥಿತಿಯಲ್ಲಿ) ಮುಂಚದೆ ಪಿಂಚದೆ ಬಳೆದು (ಹೆಚ್ಚು, ಕಡಿಮೆಯಿಲ್ಲದೆ ಅಭಿವೃದ್ಧಿಯಾಗಿ) ವಿರಿಂಚಿಯ ಕೆಯ್ಪಿಡಿವೊಲು ಆದುವು ಆ ನಾಡ ಊರ್ಗಳ್ (ಆ ನಾಡಿನ ಊರುಗಳು ಬ್ರಹ್ಮನ ಕೈಗನ್ನಡಿಯ ಹಾಗಿದ್ದುವು.)

ಪದ್ಯ-೫೧:ಅರ್ಥ: ಆ ನಾಡಿನ ಊರುಗಳು ಹಿಂಸೆಯ, ಕ್ಷಾಮದ, ಬರಗಾಲದ,

ಮೋಸದ, ಕ್ಷೋಭೆಗಳ ಉಪದ್ರವವಿಲ್ಲದ ಸ್ಥಿತಿಯಲ್ಲಿ ಯಾವ ಹೆಚ್ಚು, ಕಡಿಮೆಯಿಲ್ಲದೆ ಅಭಿವೃದ್ಧಿಯಾಗಿ ಆ ನಾಡಿನ ಊರುಗಳು ಬ್ರಹ್ಮನ ಕೈಗನ್ನಡಿಯ ಹಾಗಿದ್ದುವು.

ವ|| ಆ ನಾಡಂ ನಾಡಾಡಿಯಲ್ಲದೆ ಮೆಚ್ಚುತ್ತುಂ ಬಂದು-

ವಚನ:ಪದವಿಭಾಗ-

ಅರ್ಥ:ಆ ನಾಡಂ

ನಾಡಾಡಿಯಲ್ಲದೆ ಮೆಚ್ಚುತ್ತುಂ (ವಿಶೇಷವಾಗಿ ಮೆಚ್ಚುತ್ತಾ) ಬಂದು-

ವಚನ:ಅರ್ಥ:ವ|| ಆ ದೇಶವನ್ನು ನೋಡಿ ವಿಶೇಷವಾಗಿ ಮೆಚ್ಚುತ್ತಾ ಬಂದು,

ಕಂ|| ಧ್ವನದಳಿಕುಳಾಕುಳೀಕೃತ
ವನಂಗಳಿಂದೆಸೆವ
ಪದ್ಮಷಂಡಂಗಳ ಚೆ|
ಲ್ವಿನೊಳಂ ಕಣ್ಣಂ ಮನಮುಮ

ನನುವಿಸುವ ವಿರಾಟಪುರಮನೆಯ್ದಿದರವರ್ ಗಳ್|| ೫೨||

ಪದ್ಯ-೫೨:ಪದವಿಭಾಗ-ಅರ್ಥ:ಧ್ವನದ ಅಳಿಕುಳ ಆಕುಳೀಕೃತ ವನಂಗಳಿಂದ ಎಸೆವ (ಘೇಂಕಾರದ ಸದ್ದು ಮಾಡುತ್ತಿರುವ ದುಂಬಿಗಳ ಸಮೂಹದಿಂದ ಆವರಿಸಲ್ಪಟ್ಟ ವನಗಳಿಂದ ಶೋಭಿಸುತ್ತಿರುವ)

ಪದ್ಮಷಂಡಂಗಳ ಚೆಲ್ವಿನೊಳಂ (ಕಮಲಗಳಿಂದ ಕೂಡಿದಸರೋವರಗಳ ಸೌಂದರ್ಯದಿಂದ) ಕಣ್ಣಂ ಮನಮುಮನು ಅನುವಿಸುವ (ಕಣ್ಣಿಗೂ ಮನಸ್ಸಿಗೂ ಸಂತೋಷವನ್ನುಂಟು ಮಾಡುವ) ವಿರಾಟಪುರಮನು ಎಯ್ದಿದರು ಅವರ್ಗಳ್

(ವಿರಾಟಪುರವನ್ನು ಅವರು ಬಂದು ಸೇರಿದರು.)

ಪದ್ಯ-೫೨:ಅರ್ಥ:

ಘೇಂಕಾರದ ಸದ್ದು ಮಾಡುತ್ತಿರುವ ದುಂಬಿಗಳ ಸಮೂಹದಿಂದ ಆವರಿಸಲ್ಪಟ್ಟ ವನಗಳಿಂದ ಶೋಭಿಸುತ್ತಿರುವ, ಕಮಲಗಳಿಂದ ಕೂಡಿದಸರೋವರಗಳ ಸೌಂದರ್ಯದಿಂದ ಮನಸ್ಸಿಗೆ ಸಂತೋಷವನ್ನುಂಟು

ಮಾಡುವ ವಿರಾಟಪುರವನ್ನು
ಅವರು ಬಂದು ಸೇರಿದರು.

ವ|| ಅಂತೆಯ್ದೆವಂದು ತಮ್ಮ ದಿವ್ಯಾಯುಧಂಗಳನೆಲ್ಲಮನಾ ಪುರೋಪವನದ ಪಿತೃವನದ ಕೆಲದ ಶವಿವೃಕ್ಷದ ಮೇಲೆ ಪುರುಷಾಕೃತಿಯಾಗಿ ನೇಲ್ಗಟ್ಟಿ ಕೆಲದ ಪೆಣಂಗಳೆಲ್ಲಮನವಱ ಮೇಲೊಟ್ಟಿ ಪರೆದೋರೊರ್ವರೊಂದೊಂದು ಬಟ್ಟೆಯೊಳ್ ಪೋಗಿ ಬೇರೆ

ಬೇರೆ ಪೊೞಲಂ ಪೊಕ್ಕು
ಧರ್ಮಪುತ್ರಂ
ಧರಾಮರವೇಷದೊಳ್
ವಿರಾಟನಂ
ಕಂಡಾಶೀರ್ವಾದಮಂ ಕುಡೆ
ವಿರಾಟಂ ನೀಮೆತ್ತಣಿಂ
ಬಂದಿರೆಂಬುದುಮಾಂ
ಧರ್ಮರಾಜನ
ಸಮೀಪದೊಳಿರ್ಪವರಸಂಗೆ
ಪೋೞ್ತು
ಪೋಗದಾಗಳೆಮ್ಮೊಡನೆ

ನೆತ್ತಮನಾಡುವನದಲ್ಲದೆಯುಂ

-

ವಚನ:ಪದವಿಭಾಗ-

ಅರ್ಥ:ಅಂತು ಎಯ್ದೆವಂದು (ಹಾಗೆ ಬಂದು) ತಮ್ಮ ದಿವ್ಯಾಯುಧಂಗಳನೆಲ್ಲಮನು ಆ ಪುರ ಉಪವನದ ಪಿತೃವನದ ಕೆಲದ (ಆ ಪಟ್ಟಣದ ಸಮೀಪದ ಸ್ಮಶಾನದ ಪಕ್ಕದಲ್ಲಿದ್ದ) ಶವಿವೃಕ್ಷದ ಮೇಲೆ

ಪುರುಷಾಕೃತಿಯಾಗಿ ನೇಲ್ಗಟ್ಟಿ
(ಬನ್ನಿಮರದ ಮೇಲೆ
ಮನುಷ್ಯಾಕೃತಿಯಾಗಿ ಮಾಡಿ
ನೇತುಹಾಕಿದರು) ಕೆಲದ
ಪೆಣಂಗಳೆಲ್ಲಮನು ಅವಱ
ಮೇಲೆ ಒಟ್ಟಿ (ಪಕ್ಕದಲ್ಲಿದ್ದ
ಹೆಣಗಳೆಲ್ಲವನ್ನೂ ಅದರ
ಮೇಲೆ ರಾಶಿ ಹಾಕಿ) ಪರೆದು
ಓರೊರ್ವರು ಒಂದೊಂದು
ಬಟ್ಟೆಯೊಳ್ ಪೋಗಿ ಬೇರೆ
ಬೇರೆ ಪೊೞಲಂ ಪೊಕ್ಕು

(ಚದುರಿ-ಒಬ್ಬೊಬ್ಬರೂ
ಒಂದೊಂದು ದಾರಿಯಲ್ಲಿ
ಬೇರೆಬೇರೆವಾಗಿ
ಪುರಪ್ರವೇಶಮಾಡಿ-)
ಧರ್ಮಪುತ್ರಂ ಧರಾಮರ
(ಧರೆಯ ಅಮರ-
ಬ್ರಾಹ್ಮಣ)ವೇಷದೊಳ್
ವಿರಾಟನಂ ಕಂಡು
ಆಶೀರ್ವಾದಮಂ ಕುಡೆ
(ನೋಡಿ ಆಶೀರ್ವಾದವನ್ನು
ಕೊಡಲು- ಮಾಡಲು)

ವಿರಾಟಂ ನೀಂ ಎತ್ತಣಿಂ ಬಂದಿರೆಂಬುದುಂ ('ನೀವೆಲ್ಲಿಂದ ಬಂದಿರಿ' ಎನ್ನಲು) ಆಂ ಧರ್ಮರಾಜನ ಸಮೀಪದೊಳು ಇರ್ಪೆವು (ನಾವು ಧರ್ಮರಾಜನ ಸಮೀಪದಲ್ಲಿದ್ದೆವು) ಅರಸಂಗೆ ಪೋೞ್ತು ಪೋಗದಾಗಳು ಎಮ್ಮೊಡನೆ ನೆತ್ತಮನಾಡುವನು(ರಾಜನಿಗೆ ಹೊತ್ತುಹೋಗದೆ ಇರುನಾಗ

ಅವನು ನಮ್ಮೊಡನೆ ಪಗೆಯಾಡುತ್ತಿದ್ದನು) ಅದಲ್ಲದೆಯುಂ-

ವಚನ:ಅರ್ಥ:ಹಾಗೆ ಬಂದು, ತಮ್ಮ ದಿವ್ಯಾಯುಧಗಳೆಲ್ಲವನ್ನೂ ಆ ಪಟ್ಟಣದ ಸಮೀಪದ ಸ್ಮಶಾನದ ಪಕ್ಕದಲ್ಲಿದ್ದ ಬನ್ನಿಮರದ ಮೇಲೆ ಮನುಷ್ಯಾಕೃತಿಯಾಗಿ ಮಾಡಿ ನೇತುಹಾಕಿದರು. ಪಕ್ಕದಲ್ಲಿದ್ದ

ಹೆಣಗಳೆಲ್ಲವನ್ನೂ ಅದರ ಮೇಲೆ ರಾಶಿ ಹಾಕಿದರು. ಚದುರಿ ಬೇರೆಬೇರೆಯಾಗಿ ಒಬ್ಬೊಬ್ಬರೂ ಒಂದೊಂದು ದಾರಿಯಲ್ಲಿ ಬೇರೆಬೇರೆವಾಗಿ ಪುರಪ್ರವೇಶಮಾಡಿದರು. ಧರ್ಮರಾಯನು ಬ್ರಾಹ್ಮಣವೇಷದಲ್ಲಿ ವಿರಾಟನನ್ನು ನೋಡಿ ಆಶೀರ್ವಾದ ಮಡಲು, ವಿರಾಟನು ‘ನೀವೆಲ್ಲಿಂದ

ಬಂದಿರಿ’ ಎನ್ನಲು ನಾವು ಧರ್ಮರಾಜನ ಸಮೀಪದಲ್ಲಿದ್ದೆವು. ರಾಜನಿಗೆ ಹೊತ್ತುಹೋಗದೆ ಇರುದಾಗ ಅವನು ನಮ್ಮೊಡನೆ ಪಗೆಯಾಡುತ್ತಿದ್ದನು. ಅದಲ್ಲದೆ

ಕಂ|| ಕನವರಿಸೆ ನಾಲ್ಕು
ವೇದಮು
ಮೆನಗೆ
ಮುಖೋದ್ಗತಮದಲ್ಲದಾಱಂಗ
ದ ಮಾ|

ತನಿತೆ ಗಡ ನೃಪತಿ ಬಂದೆಂ ನಿನಗಾಳಾಗಲ್ಕೆ ಕಂಕಭಟ್ಟನೆನೆಂಬೆಂ|| ೫೩ ||

ಪದ್ಯ-೫೩:ಪದವಿಭಾಗ-ಅರ್ಥ:ಕನವರಿಸೆ ನಾಲ್ಕು ವೇದಮುಂ ಎನಗೆ ಮುಖೋದ್ಗತಂ (ನನಗೆ ಕನಸಿನಲ್ಲಿಯೂ ನಾಲ್ಕು ವೇದಗಳನ್ನು ಹೇಳವಷ್ಟು ಬಾಯಿಪಾಠವಾಗಿದೆ.) ಅದಲ್ಲದೆ ಆಱು ಅಂಗದ

ಮಾತು ಅನಿತೆ ಗಡ (ಅದಲ್ಲದೆ ಶಿಕ್ಷಾ ಮೊದಲಾದ ಆರು ವೇದಾಂಗಗಳೂ ಹಾಗೆಯೇ ಕಂಠಪಾಠವಾಗಿವೆ. ಗಡ!) ನೃಪತಿ ಬಂದೆಂ ನಿನಗೆ ಆಳಾಗಲ್ಕೆ ಕಂಕಭಟ್ಟನು ಎನೆ ಎಂಬೆಂ (ನಿನಗೆ ಆಳಾಗಿರುವುದಕ್ಕೆ ಬಂದಿದ್ದೇನೆ. ಕಂಕಭಟ್ಟನೆಂದು ನನ್ನ ಹೆಸರು)

ಪದ್ಯ-೫೩:ಅರ್ಥ: ನನಗೆ ಕನಸಿನಲ್ಲಿಯೂ ನಾಲ್ಕು

ವೇದಗಳನ್ನು ಹೇಳುವಷ್ಟು ಬಾಯಿಪಾಠವಾಗಿದೆ. ಅದಲ್ಲದೆ ಶಿಕ್ಷಾ ಮೊದಲಾದ ಆರು ವೇದಾಂಗಗಳೂ ಹಾಗೆಯೇ ಕಂಠಪಾಠವಾಗಿವೆ. ನಿನಗೆ ಆಳಾಗಿರುವುದಕ್ಕೆ ಬಂದಿದ್ದೇನೆ. ಕಂಕಭಟ್ಟನೆಂದು ನನ್ನ ಹೆಸರು, ಎಂದನು.

ವ|| ಎಂಬುದುಂ ವಿರಾಟನಾತನ ಭದ್ರಾಕಾರಮುಮಂ

ಮೃದುಮಧುರಗಂಭೀರ
ವಾಣಿಯುಮಂ ಕಂಡು ಕರಂ
ಮನದೆಗೊಂಡು
ಕರೆಮೊಳ್ಳಿತೆಂದು
ಕಂಕಭಟ್ಟನನಿರಿಸಿದನನನ್ನೆಗಂ
ಭೀಮಸೇನನುಂ
ಬೋನವೇಳಿಗೆಯಂ
ಸಟ್ಟುಗಮುಮನೊರ್ವ
ಪರಿಚಾರಕನಿಂ
ಪಿಡಿಯಿಸಿಕೊಂಡು ಬಂದು
ನಿಂದನಂ ಕಂಡು ವಿರಾಟಂ

ನಿನ್ನ ಬಿನ್ನಾಣಮೇನೆಂದು ಬೆಸಗೊಳೆ-

ವಚನ:ಪದವಿಭಾಗ-

ಅರ್ಥ:ಎಂಬುದುಂ ವಿರಾಟನು ಆತನ ಭದ್ರಾಕಾರಮುಮಂ ಮೃದುಮಧುರಗಂಭೀರ ವಾಣಿಯುಮಂ (ಗಂಭೀರವಾದ ಮಾತನ್ನೂ) ಕಂಡು ಕರಂ (ವಿಶೇಷವಾಗಿ) ಮನದೆಗೊಂಡು ಕರೆಮು

ಒಳ್ಳಿತೆಂದು ಕಂಕಭಟ್ಟನನು ಇರಿಸಿದನಂ(+ನ; ಇರಿಸಿಕೊಂಡನು). ಅನ್ನೆಗಂ ಭೀಮಸೇನನುಂ ಬೋನ ವೇಳಿಗೆಯಂ ಸಟ್ಟುಗಮುಮಂ ಓರ್ವ ಪರಿಚಾರಕನಿಂ ಪಿಡಿಯಿಸಿಕೊಂಡು(ಊಟದ ಪೆಟ್ಟಿಗೆಯನ್ನೂ ಸೌಟನ್ನೂ ಒಬ್ಬ ಆಳಿನ ಕಯ್ಯಲ್ಲಿ ತೆಗೆಸಿಕೊಂಡು) ಬಂದು ನಿಂದನಂ ಕಂಡು ವಿರಾಟಂ

ನಿನ್ನ ಬಿನ್ನಾಣಮೇನೆಂದು ಬೆಸಗೊಳೆ (ವಿಶೇಷವೇನು ಎಂದು ಪ್ರಶ್ನೆಮಾಡಲು)-

ವಚನ:ಅರ್ಥ: ವಿರಾಟನು ಆತನ ಮಂಗಳ ರೂಪವನ್ನೂ ಮೃದುಮಧುರ ಮತ್ತು ಗಂಭೀರವಾದ ಮಾತನ್ನೂ ನೋಡಿ ವಿಶೇಷವಾಗಿ ಸಂತೋಷಪಟ್ಟು ಬಹಳ ಒಳ್ಳೆಯದು ಎಂದು ಕಂಕಭಟ್ಟನನ್ನು ತನ್ನಲ್ಲಿ

ಇರಿಸಿಕೊಂಡನು. ಅಷ್ಟರಲ್ಲಿ ಭೀಮಸೇನನು ಊಟದ ಪೆಟ್ಟಿಗೆಯನ್ನೂ ಸೌಟನ್ನೂ ಒಬ್ಬ ಆಳಿನ ಕಯ್ಯಲ್ಲಿ ತೆಗೆಸಿಕೊಂಡು ಬಂದು ನಿಂತನು. ಅವನನ್ನು ನೋಡಿ ನಿನ್ನ ವಿದ್ಯೆಯೇನು/ ವಿಶೇಷವೇನು ಎಂದು ಪ್ರಶ್ನೆಮಾಡಲು - (ಪ್ರಶ್ನೆಮಾಡಿದನು)

ಕಂ||

ಎನ್ನಟ್ಟಡುಗೆಯನುಂಡೊಡೆ

ಬಿನ್ನಣಮೇನರಸ

ನರೆಗಳಾಗವು ಸವಿಯೊಳ್|

ನಿನ್ನಂ ಮೆಚ್ಚಿಪೆನೆಡಱಿದೊ

ಡೆನ್ನರೊಳಂ ಮಲ್ಲನೊರ್ವ

ವಲ್ಲಲನೆಂಬೆಂ|| ೫೪ ||

ಪದ್ಯ-೫೪:ಪದವಿಭಾಗ-

ಅರ್ಥ:ಎನ್ನ ಅಟ್ಟ

ಅಡುಗೆಯನು ಉಂಡೊಡೆ

(ನಾನು ಮಾಡಿದ

ಅಡಿಗೆಯನ್ನು
ಊಟಮಾಡಿದರೆ)
ಬಿನ್ನಣಮೇನು
(ವಿಶೇಷವೇನು? ಎಂದರೆ-)
ಅರಸ ನರೆಗಳಾಗವು
(ಅರಸನೇ ತಲೆಯಲ್ಲಿ
ನರೆಕೂದಲೇ ಬರುವುದಿಲ್ಲ-
ಮುಪ್ಪು ಬರುವುದಿಲ್ಲ)
ಸವಿಯೊಳ್ ನಿನ್ನಂ ಮೆಚ್ಚೆಪೆನು
ಎಡಱಿದೊಡೆ

(ಎದುರುಬಿದ್ದರೆ) ಎನ್ನರೊಳಂ ಮಲ್ಲನೊರ್ವ ವಲ್ಲಲನೆಂಬೆಂ **ಪದ್ಯ-೫೪:ಅರ್ಥ**: ಅದಕ್ಕೆ ಭೀಮನು ವಿರಾಟನಿಗೆ ಹೇಳಿದ, ನಾನು ಮಾಡಿದ ಅಡಿಗೆಯನ್ನು ಊಟಮಾಡಿದರೆ ವಿಶೇಷವೇನು ಎಂದರೆ, ಮುಪ್ಪು ಬರುವುದಿಲ್ಲ. ಎಲೈ ರಾಜನೆ ರುಚಿಯಲ್ಲಿ ನಾನು ನಿಮ್ಮನ್ನು ತೃಪ್ತಿಪಡಿಸಬಲ್ಲೆ,

ಎದರಿಸಿ ಬಂದರೆ ಎಂತಹವರಿಗೂ ಮಲ್ಲನು, ಸಮರ್ಥನಾದ ಒಬ್ಬ ಜಟ್ಟಿ ನಾನು, ವಲಲನೆಂಬುದು ನನ್ನ ಹೆಸರು ಎಂದನು.

ವ|| ಎಂಬುದುಂ ನಿನ್ನನಾಳ್ವೆನೆಂದು ಬಾಣಸಿನ ಕರಣಕ್ಕೆ ನಿರೂಪಣಂಗೆಯ್ದನನ್ನೆಗಂ ನಕುಳನುಮಂಕವಣಿಯುಂ ಬಾಳುಂ ಬಾರುಂ

ಚಮ್ಮಟಿಗೆಯುಮನೊರ್ವ
ಕೀಱೊಳಿಂ ಪಿಡಿಯಿಸಿಕೊಂಡು
ಬಂದು ವಿರಾಟನಂ
ಕಂಡೆಂತಪ್ಪ
ದುಷ್ಟಾಶ್ವಂಗಳುಮನೇಱಲುಂ
ತೀರ್ದಲುಂ ಬಲ್ಲೆನೆಂದು
ಪೇೞ್ದಾಳಾಗಿ ತಂತ್ರಪಾಳ
ವೆಸರೊಳ್
ಮಾಸಾದಿಯಾಗಿರ್ದಂ
ಸಹದೇವನುಂ
ಗೋಪಾಳವೇಷದೊಳ್

ಬಂದು ಕಂಡವನ ಗೋಮಂಡಳಾಧ್ಯಕ್ಷನಾಗಿದಾ೯ ಗಳ್-

ವಚನ:ಪದವಿಭಾಗ-

ಅರ್ಥ:ಎಂಬುದುಂ (ಎಂದಾಗ) ನಿನ್ನನು ಆಳ್ವೆನು ಎಂದು ಬಾಣಸಿನ ಕರಣಕ್ಕೆ ನಿರೂಪಣಂ ಗೆಯ್ದನು (ನಿನ್ನನ್ನು ಆಳು ಮಾಡಿಕೊಳ್ಳುವೆನು ಎಂದು ವಿರಾಟನು ಅವನನ್ನು

ಅಡುಗೆಯವನ ಕೆಲಸಕ್ಕೆ
ನೇಮಿಸಿ ಆಜ್ಞೆಮಾಡಿದನು.)
ಅನ್ನೆಗಂ(ಅಷ್ಟರಲ್ಲಿ) ನಕುಳನು
ಅಂಕವಣಿಯುಂ (ಕುದುರೆಯ
ರಿಕಾಪು,) ಬಾಳುಂ ಬಾರುಂ
(ಕತ್ತಿಯನ್ನೂ ಚರ್ಮದ
ಲಗಾಮನ್ನೂ)
ಚಮ್ಮಟಿಗೆಯುಮನು ಓರ್ವ
ಕೀಲಿಖೊಳಿಂ ಪಿಡಿಯಿಸಿಕೊಂಡು
(ಒಬ್ಬ ಆಳಿನ ಕೈಯಲ್ಲಿ
ಹಿಡಿಸಿಕೊಂಡು) ಬಂದು

ವಿರಾಟನಂ ಕಂಡು ಎಂತಪ್ಪ
ದುಷ್ಟ ಅಶ್ವಂಗಳುಮನು
ಏಱಲುಂ ತೀರ್ದಲುಂ
ಬಲ್ಲೆನೆಂದು ಪೇೞ್ದು ಆಳಾಗಿ
(ಎಂತಹ
ದುಷ್ಟಕುದುರೆಯನ್ನಾದರೂ
ಹತ್ತಲು ತಿದ್ದಲೂ ಬಲ್ಲೆ ಎಂದು
ಹೇಳಿ ಆತನಲ್ಲಿ ಆಳಾಗಿ)
ತಂತ್ರಪಾಳ ವೆಸರೊಳ್
ಮಾಸಾದಿಯಾಗಿರ್ದಂ
(ತಂತ್ರಪಾಲನೆಂಬ ಹೆಸರಿನಿಂದ

ಕುದುರೆಯ ರಕ್ಷಕನಾಗಿದ್ದನು)
ಸಹದೇವನುಂ
ಗೋಪಾಳವೇಷದೊಳ್
ಬಂದು ಕಂಡವನ
ಗೋಮಂಡಳ
ಅಧ್ಯಕ್ಷನಾಗಿರ್ದಾಗಳ್
(ಸಹದೇವನೂ
ದನಕಾಯುವವನ ವೇಷದಲ್ಲಿ
ಬಂದು ಕಂಡು ಅವನ
ಗೋಸಮೂಹದ
ಮುಖ್ಯಾಕಾರಿಯಾಗಿದ್ದನು)-

ವಚನ:ಅರ್ಥ:ಭೀಮನು ಹೀಗೆ ಎಂದಾಗ, ವಿರಾಟನು ನಿನ್ನನ್ನು ಆಳು ಮಾಡಿಕೊಳ್ಳುವೆನು ಎಂದು ಅವನನ್ನು ಅಡುಗೆಯವನ ಕೆಲಸಕ್ಕೆ ನೇಮಿಸಿ ಆಜ್ಞೆಮಾಡಿದನು. ಅಷ್ಟರಲ್ಲಿ ನಕುಳನು ಕುದುರೆಯ ಮೇಲಿನ ತಡಿಯನ್ನೂ ಕತ್ತಿಯನ್ನೂ ಚರ್ಮದ ಲಗಾಮನ್ನೂ ಚಾವಟಿಯನ್ನೂ

ಒಬ್ಬ ಸೇವಕನಿಂದ
ತೆಗೆಯಿಸಿಕೊಂಡು ಬಂದು
ವಿರಾಟನನ್ನು ಕುರಿತು ಎಂತಹ
ದುಷ್ಟಕುದುರೆಯನ್ನಾದರೂ
ಹತ್ತಲು ತಿದ್ದಲೂ ಬಲ್ಲೆ ಎಂದು
ಹೇಳಿ ಆತನಲ್ಲಿ ಆಳಾಗಿ ಸೇರಿ
ತಂತ್ರಪಾಲನೆಂಬ ಹೆಸರಿನಿಂದ
ಕುದುರೆಯ ರಕ್ಷಕನಾಗಿದ್ದನು.
ಸಹದೇವನೂ
ದನಕಾಯುವವನ ವೇಷದಲ್ಲಿ
ಬಂದು ಕಂಡು ಅವನ

ಗೋಸಮೂಹದ ಮುಖ್ಯಾಕಾರಿಯಾಗಿದ್ದನು. ಆಗ

ಮ|| ಎಳೆಯಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ ಪೋ
ದೆಳೆಯಂ ದಾಯಿಗರಂ ಪಡಲ್ವಡಿಸಿ ಕೊಂಡಾಳಲ್ಕಮಾದೇವದಿಂ|
ಮುಳಿಸಿಂ ರಂಭೆಯ ಕೊಟ್ಟ ಶಾಪಮನದಂ

ನೀಗಲ್ಕಮಾಗಳ್ ಬೃಹಂ ದಳೆಯಾದಂ ನರನಾತ್ಮಕಾರ್ಯವಶದಿಂ ಶುದ್ಧಾಂತದೊಳ್ ಮತ್ಸ್ಯನಾ|| ೫೫ ||

ಪದ್ಯ-೫೫:ಪದವಿಭಾಗ-ಅರ್ಥ:ಎಳೆಯಂ (ಭೂಮಿಯನ್ನು) ವಿಕ್ರಮದಿಂ ತರಲ್ (ಪೌರುಷದಿಂದ ತರಲು) ಮಹಿಧರಂ (ವಿಷ್ಣುವು) ಮುನ್

ಪಂದಿಯಾದಂತೆ (ಹಿಂದೆ
ಹಂದಿಯಾದಂತೆ) ಪೋದ
ಎಳೆಯಂ (ಹೋದ
ರಾಜ್ಯವನ್ನು) ದಾಯಿಗರಂ
ಪಡಲ್ವಡಿಸಿ ಕೊಂಡು
ಆಳಲ್ಕಮ್, ಆದ ಏವದಿಂ
(ದಾಯಾದಿಗಳಿಂದ
ಬಿಡಿಸಿಕೊಂಡು ಆಳುವುಕ್ಕೂ
ತನಗುಂಟಾದ
ಅವಮಾನದಿಂದಲೂ)
ಮುಳಿಸಿಂ ರಂಭೆಯ ಕೊಟ್ಟ

ಶಾಪಮನು ಅದಂ
ನೀಗಲ್ಕಮ್ ಆಗಳ್
(ರಂಭೆಯು ಕೊಟ್ಟ ಶಾಪವನ್ನು
ನೀಗುವುದಕ್ಕೂ, ಆಗ)
ಬೃಹಂದಳೆಯಾದಂ ನರನು
ಆತ್ಮಕಾರ್ಯವಶದಿಂ(ಆಗ
ಅರ್ಜುನನು ತನ್ನ
ಕಾರ್ಯಸಾಧನೆಗಾಗಿ
ಬೃಹಂದಳೆಯೆಂಬ
ನಪುಂಸಕನಾದನು)
ಶುದ್ಧಾಂತದೊಳ್ ಮತ್ಸ್ಯನಾ

(ಮತ್ಸ್ಯರಾಜ ವಿರಾಟನ ಅಂತಪುರದಲ್ಲಿ)

ಪದ್ಯ-೫೫:ಅರ್ಥ: ವಿಷ್ಣುವು ಭೂಮಿಯನ್ನು ಪೌರುಷದಿಂದ ತರಲು ಹಿಂದೆ ಹಂದಿಯಾದಂತೆ (ವರಾಹವತಾರವನ್ನೆತ್ತಿದ ಹಾಗೆ) ಹೋದ ರಾಜ್ಯವನ್ನು ದಾಯಾದಿಗಳಿಂದ ಬಿಡಿಸಿಕೊಂಡು ಆಳುವುಕ್ಕೂ ತನಗುಂಟಾದ ಅವಮಾನದಿಂದಲೂ

ಕೋಪದಿಂದಲೂ, ರಂಭೆಯು ಕೊಟ್ಟ ಶಾಪವನ್ನು ನೀಗುವುದಕ್ಕೂ, ಆಗ ಅರ್ಜುನನು ತನ್ನ ಕಾರ್ಯಸಾಧನೆಗಾಗಿ ಮತ್ಸ್ಯರಾಜ ವಿರಾಟನ ಅಂತಪುರದಲ್ಲಿ ಬೃಹಂದಳೆಯೆಂಬ ನಪುಂಸಕನಾದನು.

ವ|| ಅಂತು ಬೃಹಂದಳೆಯಾಗಿ ಗಾಂಡೀವ

ಜ್ಯಾಘಾತದೊಳಿಂದ್ರನೀಲಂಗ
ಳನಡಸಿದಂತಿರ್ದೆರಡುಂ
ಮುಂಗೆಯ್ಗಳ ಕರ್ಪಂ ತೀವೆ
ತೊಟ್ಟ ಬಳೆಗಳ್ ಮಱಸೆ
ವಿರಾಟನ ಮಗಳಪ್ಪುತ್ತರೆ
ಮೊದಲಾಗೆ ಪಲವುಂ
ಪಾತ್ರಂಗಳನಾಡಿಸುತ್ತುಂ
ಮಹಾ ಭಾರವತಾರದೊಳಪ್ಪ
ಸಂಗ್ರಾಮರಂಗದೊಳರಾತಿನಾ
ಯಕರ
ಕಬಂಧಪಾತ್ರಂಗಳನಾಡಿಸುವು

ದನುದಾಹರಿಸುವಂತಿರ್ದಂ

ಪಾಂಚಾಳ

ರಾಜತನೂಜೆಯುಂ

ರೂಪುಗರೆದು

ಸೈರಂವೇಷದೊಳ್ ಪೋಗಿ

ವಿರಾಟನ ಮಹಾದೇವಿ

ಸುದೇಷ್ಣೆಯಂ

ಕಾಣ್ಬುದುಮಾಕೆಯುಂ

ಕೃಷ್ಣೆಯ ರೂಪಂ ಕಂಡು

ಚೋದ್ಯಂಬಟ್ಟು

ಸಾಮಾನ್ಯೆಯಲ್ಲೆ

ನೀನಾರ್ಗೇನೆಂಬೆಯೆಂದು ಬೆಸಗೊಳೆ-

ವಚನ:ಪದವಿಭಾಗ-

ಅರ್ಥ:ಅಂತು ಬೃಹಂದಳೆಯಾಗಿ ಗಾಂಡೀವ ಜ್ಯಾಘಾತದೊಳ್ ಇಂದ್ರನೀಲಂಗಳನು ಅಡಸಿದಂತೆ ಇರ್ದ ಎರಡುಂ ಮುಂಗೆಯ್ಗಳ ಕರ್ಪಂ (ಅರ್ಜುನನ, ಗಾಂಡೀವ ಧನುಸ್ಸಿನ ಹೆದೆಯ

ಪೆಟ್ಟಿನಿಂದಾದ
ಇಂದ್ರನೀಲಮಣಿಗಳನ್ನು
ಕೆತ್ತಿಸಿದ ಹಾಗಿದ್ದ ಎರಡು
ಮುಂಗೈಗಗಳ ಕಪ್ಪನ್ನು) ತೀವೆ
ತೊಟ್ಟ ಬಳೆಗಳ್ ಮಱಸೆ
(ಪೂರ್ಣವಾಗಿ
ತೊಟ್ಟುಕೊಂಡಿದ್ದ ಬಳೆಗಳು
ಮರೆಮಾಡಲು-) ವಿರಾಟನ
ಮಗಳ್ ಪೃತ್ತರೆ ಮೊದಲಾಗೆ
ಪಲವುಂ ಪಾತ್ರಂಗಳನು
ಆಡಿಸುತ್ತುಂ (ವಿರಾಟನ

ಮಗಳಾದ ಉತ್ತರೆಯೇ ಮೊದಲಾದವರಿಗೆ ಅನೇಕ ಪಾತ್ರಗಳನ್ನು ನಾಟ್ಯವಾಡಿಸುತ್ತಿರುವಾಗ ಅದು) ಮಹಾ ಭಾರವತಾರದೊಳಪ್ಪ ಸಂಗ್ರಾಮರಂಗದೊಳ್ ಅರಾತಿನಾಯಕರ ಕಬಂಧಪಾತ್ರಂಗಳನು (ಕಬಂಧ-ರುಂಡವಿಲ್ಲದ ದೇಹ) ಆಡಿಸುವುದನು

ಉದಾಹರಿಸುವಂತಿರ್ದಂ
(ಶತ್ರುನಾಯಕರ ದೇಹಗಳೆಂಬ
ಪಾತ್ರಗಳನ್ನು ಈ ರೀತಿಯಲ್ಲಿ
ಆಡಿ ತೋರಿಸುತ್ತೇನೆ
ಎನ್ನುವಂತಿದ್ದಿತು) ಪಾಂಚಾಳ
ರಾಜತನೂಜೆಯುಂ
(ದ್ರೌಪದಿಯೂ) ರೂಪುಗರೆದು
ಸೈರಂವೇಷದೊಳ್
(ದ್ರೌಪದಿಯೂ ರೂಪವನ್ನು
ಮರೆಸಿಕೊಂಡು
ಸೈರಂವೇಷದಿಂದ) ಪೋಗಿ

ವಿರಾಟನ ಮಹಾದೇವಿ
ಸುದೇಷ್ಣೆಯಂ ಕಾಣ್ಬುದುಂ
(ಸುದೇಷ್ಣೆಯನ್ನು ಕಂಡಾಗ)
ಆಕೆಯುಂ ಕೃಷ್ಣೆಯ ರೂಪಂ
ಕಂಡು ಚೋದ್ಯಂಬಟ್ಟು
(ರೂಪವನ್ನು ನೋಡಿ
ಆಶ್ಚರ್ಯಪಟ್ಟು)
ಸಾಮಾನ್ಯೆಯಲ್ಲೆ ನೀನಾರ್ಗೆ
ಏನೆಂಬೆಯೆಂದು ಬೆಸಗೊಳೆ
('ನೀನು ಸಾಮಾನ್ಯಳಲ್ಲ,
ನೀನು ಯಾರವಳು? ನಿನ್ನ

ಹೆಸರೇನು?’ ಎಂದು ಪ್ರಶ್ನೆಮಾಡಲು)-

ವಚನ:ಅರ್ಥ:ಅರ್ಜುನನ, ಗಾಂಡೀವ ಧನುಸ್ಸಿನ ಹೆದೆಯ ಪೆಟ್ಟಿನಿಂದಾದ ಇಂದ್ರನೀಲಮಣಿಗಳನ್ನು ಕೆತ್ತಿಸಿದ ಹಾಗಿದ್ದ ಎರಡು ಮುಂಗೈಗಳ ಕಪ್ಪನ್ನು ಪೂರ್ಣವಾಗಿ ತೊಟ್ಟುಕೊಂಡಿದ್ದ ಬಳೆಗಳು ಮರೆಮಾಡಿದುವು. ವಿರಾಟನ

ಮಗಳಾದ ಉತ್ತರೆಯೇ ಮೊದಲಾದವರಿಗೆ ಅನೇಕ ಪಾತ್ರಗಳನ್ನು ನಾಟ್ಯವಾಡಿಸುತ್ತಿರುವಾಗ ಅದು; ಮುಂದೆ ಅದು ಬರುವ ಮಹಾಭಾರತ ಯುದ್ಧಭೂಮಿಯಲ್ಲಿ ಶತ್ರುನಾಯಕರ ದೇಹಗಳೆಂಬ ಪಾತ್ರಗಳನ್ನು ಈ ರೀತಿಯಲ್ಲಿ ಆಡಿ ತೋರಿಸುತ್ತೇನೆ ಎನ್ನುವಂತಿದ್ದಿತು.

ದ್ರೌಪದಿಯೂ ರೂಪವನ್ನು
ಮರೆಸಿಕೊಂಡು
ಸೈರಂಧ್ರೀವೇಷದಿಂದ ಹೋಗಿ
ವಿರಾಟನ ಮಹಾರಾಣಿಯಾದ
ಸುದೇಷ್ಣೆಯನ್ನು ಕಂಡಾಗ
ಅವಳು ದ್ರೌಪದಿಯ
ರೂಪವನ್ನು ನೋಡಿ
ಆಶ್ಚರ್ಯಪಟ್ಟು 'ನೀನು
ಸಾಮಾನ್ಯಳಲ್ಲ, ನೀನು
ಯಾರವಳು? ನಿನ್ನ

ಹೆಸರೇನು?’ ಎಂದು

ಪ್ರಶ್ನೆಮಾಡಿದಳು-

ಕಂ|| ನವ ಮೃಗಮದ

ಪರಿಮಳಮುಮ

ನಿವು ಮಸುಳಿಪುವೆನಿಪ

ವಿವಿಧ ಗಂಧಂಗಳನಾ|

ನವಯವದೊಳ್ ಮಾಡುವ

ಘ

ಟ್ಟಿವಳ್ತಿಯೆಂ ದೇವಿ

ಗಂಡವಳ್ತಿಯೆನಲ್ಲೆಂ|| ೫೬||

ಪದ್ಯ-೫೬:ಪದವಿಭಾಗ-ಅರ್ಥ:ನವ ಮೃಗಮದ ಪರಿಮಳಮುಮನು (ಹೊಸದಾದ ಕಸ್ತೂರಿಯ ಪರಿಮಳವನ್ನೂ) ಇವು ಮಸುಳಿಪುವು ಎನಿಪ (ಕಂದಿಸುವ - ಅವನ್ನು ಮೀರಿಸುವ ಹಾಗಿರುವ) ವಿವಿಧ ಗಂಧಂಗಳನ ಆಂ ಅವಯವದೊಳ್ ಮಾಡುವ (ಶ್ರಮವಿಲ್ಲದೆ ಅರೆದು

ಸಿದ್ಧಪಡಿಸಬಲ್ಲ)
ಘಟ್ಟಿಗಿತ್ತಿಯು, ದೇವಿ
ಗಂಡವಳ್ತಿಯು
ಅಲ್ಲೆಂ(ಗಂಡನಿಲ್ಲದವಳು)
ಪದ್ಯ-೫೬:ಅರ್ಥ:ದ್ರೌಪದಿ
ಯು ಹೇಳಿದಳು, ಹೊಸದಾದ
ಕಸ್ತೂರಿಯ ಪರಿಮಳವನ್ನೂ
ಮೀರಿಸುವ ಹಾಗಿರುವ
ನಾನಾಬಗೆಯಾದ
ಗಂಧಗಳನ್ನು ಶ್ರಮವಿಲ್ಲದೆ
ಅರೆದು ಸಿದ್ಧಪಡಿಸಬಲ್ಲ

ಗಟ್ಟಿವಳ್ತಿಯು ನಾನು. ದೇವಿ ಗಂಡನಿಲ್ಲದವಳು ತಾನು ಎಂದಳು-

ಕೀಚಕನು ದ್ರೌಪದಿಯ ಅಂದಕ್ಕೆ ಸೋತುದು - ಕೀಚಕ ವಧೆ

ಪೆಸರೊಳ್ ಸೈರಂಧ್ರಿಯೆನಱಿ ವೆಸನದ ದೆಸೆಯಱಿಯೆನೆನಗೆ ಗಂಧರ್ವರ ಕಾ| ಪಸದಳಮುಂಟಿರಿಸುವೊಡಾಂ

ಬೆಸಕೆಯ್ವಂ ನಿನ್ನ ಬೆಸಸಿದಂದದೊಳಿರ್ಪೆಂ|| ೫೭ ||

ಪದ್ಯ-೫೭:ಪದವಿಭಾಗ-ಅರ್ಥ:ಪೆಸರೊಳ್ ಸೈರಂಧ್ರಿಯೆನೆ (ಹೆಸರಿನಲ್ಲಿ ಸೈರಂಯೆಂಬುದು) ಅಱಿವೆಸನದ ದೆಸೆಯಱಿಯೆನು (ನೀಚಕಾರ್ಯದ ವಿಷಯ ತಿಳಿಯೆನು) ಎನಗೆ ಗಂಧರ್ವರ

ಕಾಪು ಅಸದಳಮುಂಟು
(ನನಗೆ ಗಂಧರ್ವರ ರಕ್ಷಣೆ
ಪೂರ್ಣವಾಗುಂಟು)
ಇರಿಸುವೊಡೆ ಆಂ ಬೆಸಕೆಯ್ವೆಂ
(ಇರಿಸಿಕೊಂಡರೆ
ದಾಸಿಯಾಗಿರುತ್ತೇನೆ) ನಿನ್ನ
ಬೆಸಸಿದ ಅಂದದೊಳು ಇರ್ಪೆಂ
(ನಿನ್ನ ಆಜ್ಞೆಯ ಪ್ರಕಾರ
ನಡೆದುಕೊಳ್ಳುತ್ತೇನೆ.)
ಪದ್ಯ-೫೭:ಅರ್ಥ: ನನ್ನ
ಹೆಸರು ಸೈರಂಧ್ರಿಯೆಂಬುದು .

ನೀಚಕಾರ್ಯದ ವಿಷಯ ತಿಳಿಯೆನು, ನನಗೆ ಗಂಧರ್ವರ ರಕ್ಷಣೆ ಪೂರ್ಣವಾಗುಂಟು. ಇರಿಸಿಕೊಂಡರೆ ದಾಸಿಯಾಗಿರುತ್ತೇನೆ. ನಿನ್ನ ಆಜ್ಞೆಯ ಪ್ರಕಾರ ನಡೆದುಕೊಳ್ಳುತ್ತೇನೆ.

ವ||ಎಂದು ವಿರಾಟನ ಮಹಾದೇವಿಗಾವಗಮಣುಗೆ ಯಾಗಿ ಪಾಂಚಾಳಿಯಿರ್ದಳಂತು

ಪಾಂಡವರೀ
ಮಾೞ್ಕೆಯಿಂದಿರ್ಪನ್ನೆಗಮೊಂ
ದು ದೆವಸಂ ವಿರಾಟಂ
ನೆಲದೊಳುಳ್ಳಮಲ್ಲರೆಲ್ಲರುಮಂ
ಬರಿಸಿ ಮಲ್ಲಯುದ್ಧಮಂ
ನೋಡಿ ಸುಯೋಧನನಮಲ್ಲಂ
ವಿಷಖರ್ಪರನೆಂಬಂ ತನ್ನ
ಮಲ್ಲರೆಲ್ಲರು ಮಂ ಕೊಂದೊಡೆ
ಸಿಗ್ಗಾಗಿ ತನ್ನ
ಬಾಣಸಿಗನಾಗಿರ್ದ ವಲ್ಲಲನಂ
ಕರೆದು ಪೇೞುಗಳ್-

ವಚನ:ಪದವಿಭಾಗ-ಅರ್ಥ:ಎಂದು ವಿರಾಟನ ಮಹಾದೇವಿಗೆ ಆವಗಂ ಅಣುಗೆಯಾಗಿ (ಪ್ರೀತಿಪಾತ್ರಳಾಗಿ) ಪಾಂಚಾಳಿಯಿರ್ದಳು, ಅಂತು ಪಾಂಡವರ ಈ ಮಾಟ್ಕೆಯಿಂದ ಇರ್ಪನ್ನೆಗಂ (ಪಾಂಡವರು ಈ ರೀತಿಯಿಂದಿರುವಾಗ ಒಂದುದಿನ) ಓಂದು ದೆವಸಂ

ವಿರಾಟಂ ನೆಲದೊಳುಳ್ಳ
ಮಲ್ಲರೆಲ್ಲರುಮಂ ಬರಿಸಿ
(ಭೂಮಿಯಲ್ಲಿರುವ
ಜಟ್ಟಿಗಳೆಲ್ಲರನ್ನೂ ಬರಮಾಡಿ)
ಮಲ್ಲಯುದ್ಧಮಂ ನೋಡಿ
ಸುಯೋಧನನ ಮಲ್ಲಂ
ವಿಷಖರ್ಪರನೆಂಬಂ(ದುರ್
ಯೋಧನನ ಜಟ್ಟಿಯಾದ
ವಿಷಖರ್ಪರನೆಂಬುವನು)
ತನ್ನ ಮಲ್ಲರು ಎಲ್ಲರುಮಂ
ಕೊಂದೊಡೆ (ವಿರಾಟನ

ಜಟ್ಟಿಗಳೆಲ್ಲರನ್ನೂ ಕೊಲ್ಲಲು)
ಸಿಗ್ಗಾಗಿ ತನ್ನ
ಬಾಣಸಿಗನಾಗಿರ್ದ ವಲ್ಲಲನಂ
ಕರೆದು ಪೇಱುಗಳ್
(ಅಡುಗೆಯವನಾಗಿದ್ದ
ವಲಲನನ್ನು ಕರೆದು ಕಾದಲು
ಹೇಳಿದನು)-
ವಚನ:ಅರ್ಥ:ಎಂದು
ದ್ರೌಪದಿಯು ವಿರಾಟನ
ಮಹಾರಾಣಿಗೆ ಅತ್ಯಂತ
ಪ್ರೀತಿಪಾತ್ರಳಾಗೆ ದ್ರೌಪದಿ

ದಾಸಿಯಾಗಿದ್ದಳು.
ಪಾಂಡವರು ಈ
ರೀತಿಯಿಂದಿರುವಾಗ
ಒಂದುದಿನ ವಿರಾಟನು
ಭೂಮಿಯಲ್ಲಿರುವ
ಜಟ್ಟಿಗಳೆಲ್ಲರನ್ನೂ ಬರಮಾಡಿ
ಜಟ್ಟಿಕಾಳಗವನ್ನು ಆಡಿಸಿ
ನೋಡಿದನು.
ದುರ್ಯೋಧನನ ಜಟ್ಟಿಯಾದ
ವಿಷಖರ್ಪರನೆಂಬುವನು
ವಿರಾಟನ ಜಟ್ಟಿಗಳೆಲ್ಲರನ್ನೂ

ಕೊಲ್ಲಲು ಅವಮಾನಿತನಾಗಿ ತನ್ನ ಅಡುಗೆಯವನಾಗಿದ್ದ ವಲಲನನ್ನು ಕರೆದು ಕಾದಲು ಹೇಳಿದನು;

ಕಂ|| ಪರ್ಪರಿಕೆಗಿಡದೆ ಕಲಿ ವಿಷ
ಖರ್ಪರನಿದಿರಾಂತೊಡಾಂತು ವಲಲಂ ತಳಮಂ|
ಮಾರ್ಪೊಸೆದು ತಳ್ತು ಕಣ್ತಿರಿ
ತರ್ಪಿನೆಗಮಪ್ಪುಂಕಿ ಸಿಂಹನಾದದಿನಾರ್ದಂ|| ೫೮ ||

ಪದ್ಯ-೫೮:ಪದವಿಭಾಗ-ಅರ್ಥ: ಪರ್ಪರಿಕೆ ಗಿಡದೆ ಕಲಿ ವಿಷಖರ್ಪರನು (ಕ್ರೂರಶೌರ್ಯ ಕೆಡದೆ ಕಲಿ ವಿಷಖರ್ಪರನು) ಇದಿರಾಂತೊಡೆ ಆಂತು ವಲಲಂ ತಳಮಂ ಮಾರ್ಪೊಸೆದು ತಳ್ತು (ವಲಲನು ಭೂಮಿಯನ್ನು ಕಯ್ಯಿಂದ ಉಜ್ಜಿ, ಎದುರಿಸಿ) ಕಣ್ತೆ ತರಿತರ್ಪಿನೆಗಂ ಅವುಂಕಿ

(ಕಣ್ಣುಗಳು ಅವನ ತಿರುಗುವಂತೆ ಅವುಕಿಕೊಂಡು) ಸಿಂಹನಾದದಿಂ ಆರ್ದಂ (ಸಿಂಹನಾದದಿಂದ ಘರ್ಜಿಸಿದನು)|

ಪದ್ಯ-೫೮:ಅರ್ಥ:

ಕ್ರೂರಶೌರ್ಯ ಕೆಡದೆ ಕಲಿ ವಿಷಖರ್ಪರನು ತನ್ನ ವಿಶೇಷ ಕ್ರೌರ್ಯದಿಂದ ಪ್ರತಿಭಟಿಸಲು ವಲಲನು ಭೂಮಿಯನ್ನು ಕಯ್ಯಿಂದ ಉಜ್ಜಿ, ಎದುರಿಸಿ

ಕಣ್ಣುಗಳು ತಿರುಗುವ ಹಾಗೆ
ಅವುಕಿಕೊಂಡು
ಸಿಂಹನಾದದಿಂದ
ಘರ್ಜಿಸಿದನು

ವ|| ಅಂತು ಸುಯೋಧನನ ಮಲ್ಲನಂ ಕೊಂದು ವಲಲಂ ವಿರಾಟನ ಮನೆಯೊಳ್ ತನ್ನ ಮಾತೆ ಮಾತಾಗಿರ್ದನನ್ನೆಗಂ ವಿರಾಟನ ಮೈದುನಂ ಸುದೇಷ್ಣೆಯೊಡವುಟ್ಟಿದನೊರ್ ವಂ ಸಿಂಹಬಲಂ

ಕೀಚಕನೆಂಬಂ ಸುಯೋಧನನ ದಂಡೆಲ್ಲಮನಿರಿದೋಡಿಸಿ ಬಂದು ವಿರಾಟನಂ ಕಂಡು ತಮ್ಮಕ್ಕನಂ ಕಾಣಲ್ ಪೋದಾತನಾ ಮಹಾದೇವಿಯ ಕೆಲದೊಳಿರ್ದ-

ವಚನ:ಪದವಿಭಾಗ-

ಅರ್ಥ:ಅಂತು ಸುಯೋಧನನ ಮಲ್ಲನಂ ಕೊಂದು ವಲಲಂ ವಿರಾಟನ ಮನೆಯೊಳ್ ತನ್ನ ಮಾತೆ ಮಾತಾಗಿರ್ದನು

(ವಿರಾಟನ ಮನೆಯಲ್ಲಿ
ವಲಲನ-ಅವನ ಸುದ್ದಿಯ
ಮಾತೇ ಮಾತಾಗಿದ್ದನು)
ಅನ್ನೆಗಂ ವಿರಾಟನ ಮೈದುನಂ
ಸುದೇಷ್ಣೆಯೊಡವುಟ್ಟಿದನು
ಒರ್ವಂ ಸಿಂಹಬಲಂ
ಕೀಚಕನೆಂಬಂ (ಸುದೇಷ್ಣೆಯ
ಸೋದರನು
ಸಿಂಹಬಲವುಳ್ಳವನು)
ಸುಯೋಧನನ ದಂಡೆಲ್ಲಮನು
(ಸೈನ್ಯವನ್ನು) ಇರಿದು ಓಡಿಸಿ

ಬಂದು ವಿರಾಟನಂ ಕಂಡು ತಮ್ಮ ಅಕ್ಕನಂ ಕಾಣಲ್ ಪೋದ ಆತನು ಆ ಮಹಾದೇವಿಯ ಕೆಲದೊಳಿರ್ದ (ಮಹಾರಾಣಿಯ ಸಮೀಪದಲ್ಲಿದ್ದ)-

ವಚನ:ಅರ್ಥ:ದುರ್ಯೋಧನ ನ ಜಟ್ಟಿಯನ್ನು ಕೊಂದು ವಲಲನು ವಿರಾಟನ ಮನೆಯಲ್ಲಿ ವಲಲನ-ಅವನ ಸುದ್ದಿಯ ಮಾತೇ

ಮಾತಾಗಿದ್ದನು. ಅಷ್ಟರಲ್ಲಿ ವಿರಾಟನ ಮೈದುನನು ಸುದೇಷ್ಣೆಯ ಸೋದರನು ಸಿಂಹಬಲವುಳ್ಳವನು ಆದ ಕೀಚಕನೆಂಬುವನು ದುರ್ಯೋಧನನ ಸೈನ್ಯವನ್ನೆಲ್ಲ ಶೀಘ್ರವಾಗಿ ಓಡಿಸಿ ಬಂದು ವಿರಾಟನನ್ನು ನೋಡಿಯಾದ ಮೇಲೆ ತಮ್ಮಕ್ಕನನ್ನು ನೋಡಲು ಹೋದನು. ಆ ಮಹಾರಾಣಿಯ

ಸಮೀಪದಲ್ಲಿದ್ದ-

(ದ್ರೌಪದಿಯನ್ನು ಕಂಡನು).

ಚಂ|| ಸೊಗಯಿಸೆ ತೋಳ

ಮೊತ್ತಮೊದಲೊಳ್

ಪೊಗರ್ವಟ್ಟೆಸೆವೊಂದು ನುಣ್ಪು

ಸಾ

ವಗಿಸುವ ಮೇಲುದಂ

ಮೊಲೆಗಳಳ್ಳಿಱಿಯುತ್ತಿರೆ

ಪೊಣ್ಮೆ ಘರ್ಮ ಬಿಂ|

ದುಗಳಲರಂಬುವೋಲೆಳಸೆ

ಪಾಟಲಲೋಲವಿಲೋಚನಂ

ಮನಂ

ಬುಗೆ ನಳಿತೋಳ ಕೋಳೆಸೆಯೆ

ಘಟ್ಟಿಮಗುಳ್ಚುವ

ಘಟ್ಟಿವಳ್ತಿಯಂ|| ೫೯ ||

ಪದ್ಯ-೫೯:ಪದವಿಭಾಗ-

ಅರ್ಥ:ಸೊಗಯಿಸೆ ತೋಳ

ಮೊತ್ತ ಮೊದಲೊಳ್ (ತೋಳ

ಮೊತ್ತಮೊದಲಿನಲ್ಲಿ- ಮೇಲೆ)

ಪೊಗರ್ವಟ್ಟು ಎಸೆವೊಂದು

ನುಣ್ಪು (ವಿಶೇಷಸೊಗಸಿನಲ್ಲಿ

ಪೊಗರಾಗಿ-ಎದ್ದು ನುಣುಪು

ಎಸೆಯುತ್ತು) ಸಾವಗಿಸುವ ಮೇಲುದಂ ಮೊಲೆಗಳ್ ಅಳ್ಳಿಱಿಯುತ್ತಿರೆ (ಸಾವರಿಸಿ-ಸರಿಪಡಿಸಿ ಹೊದೆಯುವ ಮೇಲು ಸೆರಗನ್ನು ಅವಳ ಮೊಲೆಗಳು ಇರಿದು ನಡುಗಿಸುತ್ತಿರಲು) ಪೊಣ್ಮೆ ಘರ್ಮ ಬಿಂದುಗಳ್ (ಬೆವರಹನಿಗಳು ಹೊರಹೊಮ್ಮುತ್ತಿರಲು) ಅಲರಂಬುವೋಲ್

(ಪುಷ್ಪಬಾಣದಂತೆ) ಎಳಸೆ
(ವ್ಯಾಪಿಸಿ) ಪಾಟಲಲೋಲ
ವಿಲೋಚನಂ
ಮನಂಬುಗೆ(ನಸುಗೆಂಪಾದ
ಕಣ್ಣುಗಳನೋಟ,
ಪುಷ್ಪಬಾಣದಂತೆ ಮನಸ್ಸನ್ನು
ಆಕರ್ಷಿಸುತ್ತಿದ್ದುವು)
ನಳಿತೋಳ ಕೋಳ್ ಎಸೆಯೆ
ಘಟ್ಟಿಮಗುಳ್ಚುವ
ಘಟ್ಟಿವಳ್ತಿಯಂ (ಗಂದ
ತೇಯುವಾಗ ಗಟ್ಟಿಯಾಗಿ

ಮಿಗಚುವ ಸಮಯದಲ್ಲಿ ಕೋಮಲವಾದ ತೋಳಿನ ಹಿಡಿತವು ಶೋಭಿಸಿರಲು ಆ ಘಟ್ಟಿವಳ್ತಿಯನ್ನು)

ಪದ್ಯ-೫೯:ಅರ್ಥ:ದ್ರೌಪದಿಯ ತೋಳ ಮೊತ್ತಮೊದಲಿನ ಮೇಲೆ, ವಿಶೇಷಸೊಗಸಿನಲ್ಲಿ ಪೊಗರಾಗಿ-ಎದ್ದು ನುಣುಪು ಎಸೆಯುತ್ತು. ಸರಿಪಡಿಸಿ ಹೊದೆಯುವ ಮೇಲು ಸೆರಗನ್ನು ಅವಳ ಮೊಲೆಗಳು

ಇರಿದು ನಡುಗಿಸುತ್ತಿರಲು,
ಬೆವರಹನಿಗಳು
ಹೊರಹೊಮ್ಮುತ್ತಿರಲು,
ನಸುಗೆಂಪಾದ ಕಣ್ಣುಗಳು
ಪುಷ್ಪಬಾಣದಂತೆ
ಮನಸ್ಸನ್ನಾಕರ್ಷಿಸುತ್ತಿದ್ದುವು.
ಗಂಡ ತೇಯುವಾಗ
ಗಟ್ಟಿಯಾಗಿ ಮಗಚುವ
ಸಮಯದಲ್ಲಿ ಕೋಮಲವಾದ
ತೋಳಿನ ಹಿಡಿತವು
ಶೋಭಿಸಿರಲು ಆ

ಘಟ್ಟಿವಳ್ತಿಯನ್ನು
ಸೈರಂಧ್ರಿಯನ್ನು ಕೀಚಕನು
ನೋಡಿದನು.)

ವ|| ಭೋಂಕನೆ ಕಂಡು ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪಟಿಿದಳಿಪಿ ನೋಡಿ ತನ್ನ ಮನದೊಳಿಂತೆಂದು ಬಗೆದಂ-

ವಚನ:ಪದವಿಭಾಗ-ಅರ್ಥ:ಭೋಂಕನೆ ಕಂಡು ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ (ಭಿಕ್ಷುಕನಂತೆ) ಕರಮೆ ನಾಣ್ಗೆಟ್ಟು (ಪೂರಾ ನಾಚಿಕೆಗೆಟ್ಟು) ಮನಂಗಾಪು ಅೞಿದು ಅಳಿಪಿ (ಮನಸ್ಸಿನ ಕಾಪು-ಎಚ್ಚರಿಗೆ ಹೋಗಿ,ಆಸೆಪಟ್ಟು)ನೋಡಿ

ತನ್ನ ಮನದೊಳಿಂತೆಂದು ಬಗೆದಂ-

ವಚನ:ಅರ್ಥ:ಅನಿರೀಕ್ಷಿತವಾಗಿ ಅವಳನ್ನು ನೋಡಿ ಕೀಚಕನು ಕಾಮದೇವನು ಮಾಡಿದ ಭಿಕ್ಷುಕನಂತೆ ಪೂರಾ ನಾಚಿಕೆಗೆಟ್ಟು ಮನಸ್ಸಿನ ಹಿಡಿತ ತಪ್ಪಿ ಆಸೆಪಟ್ಟು ನೋಡಿ ತನ್ನ ಮನಸ್ಸಿನಲ್ಲಿ ಹೀಗೆಂದು ಯೋಚಿಸಿದನು

ಚಂ|| ಸುರಿಯೆ ಬೆಮರ್
ಕುರುಳ್ವಿಡಿದು ಮುತ್ತುಗಳಂ
ಮಱದುಂಬಿ ಕಾಱುವಂ
ತಿರೆ ನಳಿತೋಳ ಬಳ್ವಳಿಕೆ
ಕಣ್ಗೊಳೆ
ಘಟ್ಟಿಮಗುಳ್ಚುವಂದಮ|
ಲ್ತರೆದು ಮಗುಳ್ಚುವಂದಮೆ
ದಲೆನ್ನೆರ್ದೆಯಂ
ಪೆಱತೇನದೆಂತು ಪೇೞ
ಪರಿಕಿಪೆನೀ ಮೃಗೋದ್ಭವದ
ಕಂಪುಮನೀಕೆಯ ಸುಯ್ಯ

ಕಂಪುಮಂ|| ೬೦||

ಪದ್ಯ-೬೦:ಪದವಿಭಾಗ-ಅರ್ಥ:ಸುರಿಯೆ ಬೆಮರ್ ಕುರುಳ್ವಿಡಿದು (ಮುಂಗುರುಳುಗಳನ್ನು ಅನುಸರಿಸಿ) ಮುತ್ತುಗಳಂ ಮಱಿದುಂಬಿ ಕಾಱುವಂತಿರೆ (ಮರಿದುಂಬಿಗಳು ಮುತ್ತುಗಳನ್ನು ಕಾರುವ ಹಾಗೆ ಬೆವರು ಮುಂಗುರುಳುಗಳನ್ನು ಅನುಸರಿಸಿ ಸುರಿಯುತ್ತಿರಲು,)

ನಳಿತೋಳ ಬಳ್ವಳಿಕೆ ಕಣ್ಗೊಳೆ
(ದುಂಡಾದ ತೋಳಿನ
ಸೌಂದರ್ಯವು
ಆಕರ್ಷಕವಾಗಿರಲು,)
ಘಟ್ಟಿಮಗುಳ್ಚುವಂದಮಲ್ತು
ಅರೆದು ಮಗುಳ್ಚುವಂದಮೆ
ದಲ್ ಎನ್ನೆರ್ದೆಯಂ (ನನ್ನ
ಎದೆಯನ್ನು ಅರೆದು
ಹಿಂದುಮುಂದು ಮಾಡುವ
ರೀತಿಯೇ ಸರಿ) ಪೆಱತೇನ್
ಅದೆಂತು ಪೇೞು

(ಬೇರೆಯೇನು) ಪರಿಕಿಪೆನು ಈ ಮೃಗೋದ್ಭವದ ಕಂಪುಮನು ಈಕೆಯ ಸುಯ್ಯ (ಉಸಿರಿನ) ಕಂಪುಮಂ (ನಾನು ಈ ಕಸ್ತೂರಿಯ ಪರಿಮಳವನ್ನೂ ಈಕೆಯ ಉಸುರಿನ ಗಾಳಿಯ ಸುವಾಸನೆಯನ್ನೂ ಹೇಗೆ ಪರೀಕ್ಷಿಸಲಿ?)

ಪದ್ಯ-೬೦:ಅರ್ಥ:ದ್ರೌಪದಿಯ ದೇಹದಲ್ಲಿ ಮರಿದುಂಬಿಗಳು ಮುತ್ತುಗಳನ್ನು ಕಾರುವ ಹಾಗೆ

ಬೆವರು ಮುಂಗುರುಳುಗಳನ್ನು
ಅನುಸರಿಸಿ ಸುರಿಯುತ್ತಿವೆ.
ದುಂಡಾದ ತೋಳಿನ
ಸೌಂದರ್ಯವು
ಆಕರ್ಷಕವಾಗಿದೆ. ಇದು
ಗಂಧವನ್ನು ತೇಯುವ
ಕ್ರಮವಲ್ಲ; ಆದರೆ ನನ್ನ
ಎದೆಯನ್ನು ಅರೆದು
ಹಿಂದುಮುಂದು ಮಾಡುವ
ರೀತಿಯೇ ಸರಿ. ನಾನು ಈ
ಕಸ್ತೂರಿಯ ಪರಿಮಳವನ್ನೂ

ಈಕೆಯ ಉಸುರಿನ ಗಾಳಿಯ ಸುವಾಸನೆಯನ್ನೂ ಹೇಗೆ ಪರೀಕ್ಷಿಸಲಿ?

ಕಂ|| ಇದೆ ಮದನಭವನಮಿಂತಿದೆ ಮದನಾಮೃತಮಿದುವೆ ಮದನಸಾಯಕಮಿದೆ ಪೋ| ಮದನಮಹೋತ್ಸವ ಪದಮೆನಿ ಸಿದುದು ಕಟಾಕ್ಷೇಕ್ಷಣಾಂ ವಿಲೋಲೇಕ್ಷಣೆಯಾ|| ೬೧ ||

ಪ

ಕುಮಾರವಸ-ವ್ಯಾಸ ಭಾರತದಲ್ಲಿ

ಕೀಚಕನ ಮೊದಲ ದ್ರೌಪದಿಯ ದರ್ಶನ:

(ಪರ್ವ-೪||ಸಂ.೨||)

ತಿಳಿಯಿವಳು ಮೂಜಗವ ಮೋಹಿಪ
ತಿಲಕವೋ ಕಾಮಂಗೆ ಕಟ್ಟಿದ
ಕಳನ ಭಾಷೆಗೆ ನಿಂದ ಮಾಸಾಳೋ ಮಹಾದೇವ||
ಕೊಲೆಗಡಿಗ ಕಂದರ್ಪಕನ ಕೂ
ರಲಗೊ ಮದನನ ಸೊಕ್ಕಿದಾನೆಯೊ
ನಳಿನಮುಖಿಯಿವಳಾರ ಸತಿಯೆಂದಳುಪಿ ನೋಡಿದನು ||8||

ಜಗವ ಕೆಡಹಲು ಜಲಜವಿಶಿಖನು
ಬಿಗಿದ ಬಲೆಯಿವಳಲ್ಲಲೇ ಯೋ
ಗಿಗಳ ಯತಿಗಳನೆಸಲು ಕಾಮನು ಮಸೆದ ಕೂರಲಗು ||
ಮುಗುದನಾದನು ಕಾಮನಂಬುಗ
ಳುಗಿದವೆದೆಯಲಿ ನಟ್ಟ ದೃಷ್ಟಿಯ
ತೆಗೆಯಲಾರದೆ ಸೋತು ಕೀಚಕ ಪಾತಕವ ನೆನೆದ ||9||

ಸೂರೆವೋಯಿತು ಚಿತ್ತ ಕಂಗಳು
ಮಾರುವೋದವು ಖಳನ ಧೈರ್ಯವು
ತೂರಿ ಪೋದದು ಕರಣದಲಿ ಕಳವಳದ ಬೀಡಾಯ್ತು||

ದ್ರೌಪದಿ - ಕೀಚಕನ ಮನೆಗೆ ಹೋದ ಸಂದರ್ಭ

(ಪರ್ವ-೪||ಸಂ-೩||)

ಚಾರು ನೂಪುರ ಝುಣಝುಣದ ಝೇಂ
ಕಾರ ರವದುಬ್ಬಿನಲಿ ಭವನ ಮ

ಯೂರ ಕುಣಿದವುವರಕಟಾಕ್ಷದ ಮಿಂಚು ಥಳಥಳಿಸೆ |
ಆರು ಹೊಗಳುವರಂಗವಟ್ಟದ
ಸೌರಭದ ಭಾರಣೆಗೆ ತುಂಬಿಯ
ಸಾರ ಕಟ್ಟಿತು ಬಂದಲಂಗನೆ ಕೀಚಕಾಲಯಕೆ||೭||

ಮನುಮಥನ ಮದದಾನೆ ಕಂದ
ರ್ಪನ ಮಹಾ ಮಂತ್ರಾಧಿದೇವತೆ
ಜನವು ಮರುಳಹ ಮದ್ದು ಸಂಸ್ಫತಿಸುಖದ ಸಾಕಾರೆ|
ಮನಸಿಜನ ಮಸೆದಲಗು ಮುನಿಮೋ
ಹನ ತಿಲಕ ಲಾವಣ್ಯ ಸಾಗರ
ಜನಿತ ಲಕ್ಷಿ ಲತಾಂಗಿ ಬಂದಳು ಕೀಚಕನ ಮನೆಗೆ||೮||

ಕುಡಿತೆಗಂಗಳ ಚಪಲೆಯುಂಗುರ
ವಿಡಿಯ ನಡುವಿನ ನೀರೆ ಹಂಸೆಯ
ನಡೆಯ ಗಮನದ ಮೌಳಿಕಾತಿ ಪಯೋಜ ಪರಿಮಳದ
ಕಡುಚೆಲುವೆ ಬರಲವನ ತನು ನಡ
ನಡುಗಿ ನಿಂದುದದಾವ ಹೆಂಗಸು
ಪಡೆದಳೀ ಚೆಲುವಿಕೆಯನೆನುತೀಕ್ಷಿಸಿದನಂಗನೆಯ ||೯ ||

ಅರಿದು ನೆತ್ತರುಗಾಣದಲಗಿದು
ನೆರೆ ಬಿಗಿಯೆ ಮೈ ಬಾಸುಳೇಳದ
ಹುರಿ ಬಲಿದ ನೇಹ್ಸೋಂಕಿದೊಡೆ ಹೊಗೆ ಮಸಗದೆದೆಗಿಚ್ಚು
ಅರರೆ ಕಂಗಳ ಧಾರೆ ಯಾವನ
ಕೊರಳ ಕೊಯ್ಯದದಾವನರಿಕೆಯ
ಹುರುಳುಗೆಡಿಸದಿದಾವ ನಿಲುವನು ಶಿವ ಶಿವಾಯೆಂದ ||೧೦||

ತರುಣಿ ಬಾ ಕುಳ್ಳಿರು ಮದಂತಃ ಕರಣದೆಡರಡಗಿತ್ತು ಕಾಮನ ದುರುಳತನಕಿನ್ನಂಜುವೆನೆ ನೀನೆನಗೆ ಬಲವಾಗೆ ಬಿರುದ ಕಟ್ಟುವೆನಿಂದುವಿಗೆ ಮಧು ಕರಗೆ ಕೋಗಿಲೆಗೆಂದು ಖಳನ ಬ್ಬರಿಸಿ ನುಡಿಯಲು ಖಾತಿಗೊಂಡಿಂತೆಂದಳಿಂದುಮುಖಿ ||೧೨||

ದ್ಯ-೬೧:ಪದವಿಭಾಗ-ಅರ್ಥ:ಇದೆ ಮದನಭವನಂ (ಕಡೆಗಣ್ಣಿನ ನೋಟವೇ ಮದನನ ಮನೆ) ಇಂತು ಇದೆ ಮದನ ಅಮೃತಂ (ಇದೇ ಮದನನ ಕಾಮದ ಅಮೃತ,) ಇದುವೆ ಮದನಸಾಯಕಂ (ಇದೇ ಮದನನ ಬಾಣ), ಇದೆ

ಪ್ರೋ ಮದನ ಮಹೋತ್ಸವ ಪದಂ ಎನಿಸಿದುದು (ಹೊಗು! ಇದೇ ಮದನಮಹೋತ್ಸವದ ತಾಣ ಎನ್ನಿಸಿತು ಕೀಚಕನಿಗೆ).

<-ಕಟ್ಟಾಕ್ಷೇಕ್ಷಣಂ (ಕಡೆಗಣ್ಣುನೊಟವು) ವಿಲೋಲೇಕ್ಷಣೆಯಾ (ಚಂಚಲವಾದ ಕಣ್ಣನೋಟದ)

ಪದ್ಯ-೬೧:ಅರ್ಥ: ಈ ಚಂಚಲಾಕ್ಷಿಯ ಕಡೆಗಣ್ಣಿನ ನೋಟವೇ ಮನ್ಮಥನ-

ಮದನನ ಮನೆ, ಇದೇ
ಮದನನ ಕಾಮದ ಅಮೃತ,
ಇದೇ ಮದನಬಾಣ. ಹೋಗು!
ಇದೇ ಮದನಮಹೋತ್ಸವದ
ತಾಣ ಎನ್ನಿಸಿತು ಕೀಚಕನಿಗೆ.

ಉ|| ಮಾಸಿದ ರೂಪು
ನೋಳ್ಪೊಡರೆ ಮಾಸಿದ ಚಿತ್ರದ
ಪೆಣ್ಣ ರೂಪುಮಂ
ಮಾಸಿಸೆ ನಾಡೆ ಮಾಸದಿಕೆಯಂ
ಪಡೆದಪ್ಪುದು ಕಂಡ
ಕಣ್ಗಳೊಳ್|

ಸೂಸುವ ಮಾಙ್ಕೆಯಿಂ

ಪೊಱಗೆ

ಪೊಣ್ಮುವುದಂದಮಿದೆಂತೊ

ಕಾಯ್ದು ಕೈ

ವೀಸುವ ಕಾವನಂದಮಿವಳೇಂ

ಕುಲನಾರಿಯೊ

ವಾರನಾರಿಯೋ|| ೬೨ ||

ಪದ್ಯ-೬೨:ಪದವಿಭಾಗ-

ಅರ್ಥ:ಮಾಸಿದ ರೂಪು

ನೋಳ್ಪೊಡೆ (ಇವಳ

ಮಲಿನವಾದ ರೂಪವನ್ನು

ನೋಡಿದರೆ) ಅರೆ ಮಾಸಿದ ಚಿತ್ರದ ಪೆಣ್ಣ ರೂಪುಮಂ(ಅರ್ಧಕೊಳೆಯಾದ ಚಿತ್ರಪಟದಲ್ಲಿರುವ ಸುಂದರವಾದ ಹೆಣ್ಣಿನ ರೂಪವನ್ನು) ಮಾಸಿಸೆ (ಕೀಳುಮಾಡಿ ಮೀರಿಸುವಂತಿರಲು.) ನಾಡೆ ಮಾಸದಿಕೆಯಂ ಪಡೆದಪ್ಪುದು (ಚೆನ್ನಾಗಿ ಮಾಸದೆ ಇರುವ ರೂಪವನ್ನು ಪಡೆಯುವುದು)

ಕಂಡ ಕಣ್ಗಳೊಳ್ ಸೂಸುವ
ಮಾಟ್ಕೆಯಿಂ (ಇವಳನ್ನು
ಕಂಡ ಕಣ್ಣುಗಳಲ್ಲಿ ಸೂಸುವ
ಇವಳ ರೂಪು) ಪೊಱಗೆ
ಪೊಣ್ಮುವುದು ಅಂದಮು
ಇದೆಂತೊ (ಇದೇನಪ್ಪಾ
ಹೊರಗೆ ಹೊಮ್ಮುತ್ತಿರುವ
ಸೌಂದರ್ಯವು ;) ಕಾಯ್ದು
ಕೈವೀಸುವ ಕಾವನಂದಂ
(ಕೆರಳಿ ಕೈಬೀಸಿಕರೆಯುವ
ಕಾಮನ ರೀತಿ ಇದೆ) ಇವಳೇಂ

ಕುಲನಾರಿಯೊ
ವಾರನಾರಿಯೋ (ಇವಳೇನು
ಕುಲಸ್ತ್ರೀಯೋ ಅಥವಾ
ವೇಶ್ಯಾಸ್ತ್ರೀಯೋ?)
ಪದ್ಯ-೬೨:ಅರ್ಥ:ಇವಳ
ಮಲಿನವಾದ ರೂಪವನ್ನು
ನೋಡಿದರೆ
ಅರ್ಥಕೊಳೆಯಾದ
ಚಿತ್ರಪಟದಲ್ಲಿರುವ
ಸುಂದರವಾದ ಹೆಣ್ಣಿನ
ರೂಪವನ್ನು ಕೀಳುಮಾಡಿ

ಮೀರಿಸುವಂತಿದೆ. ಇವಳನ್ನು ಕಂಡ ಕಣ್ಣುಗಳಲ್ಲಿ ಸೂಸುವ ಇವಳ ರೂಪು, ನೋಡಿದರೆ ಮನ್ಮಥನೇ ವಿಲಾಸದಿಂದ ಕೆರಳಿ ಕೈಬೀಸಿಕರೆಯುವ ರೀತಿ ಇದೆ. ಇವಳೇನು ಕುಲಸ್ತ್ರೀಯೋ ಅಥವಾ ವೇಶ್ಯಾಸ್ತ್ರೀಯೋ? ಎಂದು ಕೀಚಕ ಅವಳ ರೂಪು ನೊಡಿ ದಿಗ್ಭ್ರಮೆಗೊಡ.

ಮಲ್ಲಿಕಾಮಾಲೆ||
ಆವಳಪ್ಪೊಡಮಕ್ಕೆ ಪೋ
ತಲೆಯಿಂದೆ ಪೋದೊಡಮಿಂದೆ
ಮಾ
ದೇವನಾರ್ತೆಡೆಗೋದೊಡಂ
ಲಯಮಿಂದೆ
ಬರ್ಪೊಡಮೆನ್ನುರಂ|
ತೀವಿ ತಳ್ತಿವಳೀ
ಕುಚಂಗಳನಟ್ಟಿಱಿಂದಮರ್ದ
ಪ್ಪಿ ಪೋ

ಗಾವುಪಾಯದೊಳಾದೊಡಂ ನೆರೆದಲ್ಲದಿನ್ನಿರೆನೀಕೆಯೊಳ್॥ ೬೩ ॥

ಪದ್ಯ-೬೩:ಪದವಿಭಾಗ-ಅರ್ಥ:ಆವಳು ಅಪ್ಪೊಡಂ ಅಕ್ಕೆ (ಯಾರಾದರೂ ಆಗಿರಲಿ), ಪೋ (ಹೋಗು) ತಲೆ ಯಿಂದೆ ಪೋದೊಡಂ (ಈ ದಿನವೇ ತಲೆಹೋದರೂ) ಇಂದೆ ಮಾದೇವನು ಆರ್ತು ಎಡೆಗೋದೊಡಂ

(ಎಡೆಗೊಂಡೊಡಂ-
ಮಹಾದೇವನೇ ಸಮರ್ಥವಾಗಿ
ಮಧ್ಯ ಪ್ರವೇಶಿಸಿದರೂ, ಇಂದೆ)
ಲಯಂ ಇಂದೆ ಬರ್ಪೊಡಂ,
(ಈ ದಿನವೇ ನಾಶವು
ಬಂದರೂ) ಎನ್ನ ಉರಂ (ನನ್ನ
ಎದೆ) ತೀವಿ ತಳ್ತು ಇವಳ ಈ
ಕುಚಂಗಳನು
(ಕುಚಾಗ್ರಗಳನು-
ಮೊಲೆಗಳತುದಿಗಳನ್ನು/
ಎಂಬಪಾಠವೂ ಇದೆ-

ಡಿ.ಎಲ್.ಎನ್.)(ನನ್ನ ಎದೆ ತುಂಬಿ ಸೇರಿದ ಇವಳ ಮೊಲೆಗಳನ್ನು) ಅಟ್ಟಿಱಿಂದ (ಪ್ರೀತಿಯಿಂದ) ಅಮರ್ದು ಅಪ್ಪಿ (ಪ್ರೀತಿಯಿಂದ ಗಟ್ಟಿಯಾಗಿ ಅಪ್ಪಿಕೊಂಡು) ಅ ಪೋಗ್ (ಹೋಗು) ಆವ ಉಪಾಯದೊಳಾದೊಡಂ (ಯಾವ ಉಪಾಯದಿಂದಲಾದರೂ) ನೆರೆದಲ್ಲದೆ(ನರೆದು ಅಲ್ಲದೆ

-ಸೇರಿ- ಕೂಡಿ ಅಲ್ಲದೆ ಇರೆನು,)
ಇನ್ನಿರೆನು ಈಕೆಯೊಳ್
(ಈಕೆಯೊಡನೆ ಕೂಡಿಯಲ್ಲದೆ
ಇರುವುದಿಲ್ಲ)
ಪದ್ಯ-೬೩:ಅರ್ಥ: ಅವಳು
ಯಾವಳಾದರೂ ಆಗಲಿ.
ಹೋಗು, ಈ ದಿನವೇ
ತಲೆಹೋದರೂ
ಮಹಾದೇವನೇ ಸಮರ್ಥವಾಗಿ
ಮಧ್ಯ ಪ್ರವೇಶಿಸಿದರೂ ಈ
ದಿನವೇ ನಾಶವು ಬಂದರೂ,

ನನ್ನ ಎದೆ ತುಂಬಿ ಸೇರಿದ
ಇವಳ ಮೊಲೆಗಳನ್ನು
ಪ್ರೀತಿಯಿಂದ ಗಟ್ಟಿಯಾಗಿ
ಅಪ್ಪಿಕೊಂಡು ಯಾವ
ಉಪಾಯದಿಂದಲಾದರೂ
ಈಕೆಯೊಡನೆ ಕೂಡಿಯಲ್ಲದೆ
ಇರುವುದಿಲ್ಲ, ಎಂದು
ಕೀಚಕನು ನಿರ್ಧರಿಸಿದನು.

ವ||ಎಂದು ಸೈರಂಧ್ರಿಯಂ ನೋಡಿ ಸೈರಿಸಲಾಱದೆ ಸಿಂಹಬಲನಂತನಂಗಮತ್ತಮಾ

ತಂಗ

ಕೋಳಾಹಳೀಕೃತಾಂತರಂಗ

ನಾಗಿ

ತಮ್ಮಕ್ಕನನೀಕೆಯಾರ್ಗೆಂದು

ಬೆಸಗೊಂಡೊಡಾತನ ಸೋಲ್ತ

ಕಣ್ಣಱಿದೀಕೆ

ಸಾಮಾನ್ಯವನಿತೆಯಲ್ಲಿವಳ್

ಗಂಧರ್ವವನಿತೆಯೆನ್ನೊಳಾದ

ಮಚ್ಚುಂ ಮೋಹಮುಂ

ಕಾರಣಮಾಗಿರ್ಪಳೆಂಬುದು

ಮಾ ಮಾತಿನೊಳ್

ಬೇಟಮುಗ್ಗಳಿಸೆ ನಿಜನಿವಾಸಕ್ಕೆ
ಬಂದಕ್ಕನೆನಗೆ ತನ್ನ
ಘಟ್ಟಿವಳ್ತಿಯಂ
ಕೆಯ್ಯೊಳಪೂರ್ವ
ವಿಲೇಪನಂಗಳನಟ್ಟುವುದೆಂದ
ಟ್ಟುವುದುಂ
ತಮ್ಮನುಪರೋಧಕ್ಕಾಱದೆ
ಸೈರಂಧ್ರಿಯಂ
ಪೋಗಲ್ವೇೞ್ದುದುಮಾಕೆಯವ
ನ ಮನದ

ಪಱುವಗೆಯನಱಿಯದಂತೆಗೆಯ್ವೆನೆಂದು-

ವಚನ:ಪದವಿಭಾಗ-

ಅರ್ಥ:ಎಂದು ಸೈರಂಧ್ರಿಯಂ ನೋಡಿ ಸೈರಿಸಲಾಱದೆ (ಸಹಿಸಲಾರದೆ) ಸಿಂಹಬಲನು ಅಂತು (ಸಿಂಹಬಲನು ಆ ರೀತಿ) ಅನಂಗ ಮತ್ತಮಾತಂಗ ಕೋಳಾಹಳೀ ಕೃತ ಅಂತರಂಗನಾಗಿ (ಮನ್ಮಥನೆಂಬ ಮದವೇರಿದ

ಆನೆಯಿಂದ ಗಲಭೆಯುಳ್ಳ
ಮನಸ್ಸುಳ್ಳವನಾಗಿ)
ತಮ್ಮಕ್ಕನನು ಈಕೆ
ಯಾರ್ಗೆಂದು ಬೆಸಗೊಂಡೊಡೆ
(ತಮ್ಮ ಅಕ್ಕನನ್ನು ಈಕೆ
ಯಾರವಳು ಎಂದು
ಕೇಳಿದಾಗ,) ಆತನ ಸೋಲ್ತ
ಕಣ್ಣ ಅಱಿದು ಈಕೆ ಸಾಮಾನ್ಯ
ವನಿತೆಯಲ್ಲಿವಳ್
ಗಂಧರ್ವವನಿತೆ (ಅವನ
ಮೋಹಪರವಶವಾದ ಕಣ್ಣನ್ನು

ತಿಳಿದು ಈಕೆಯು ಸಾಮಾನ್ಯ
ಸ್ತ್ರೀಯಲ್ಲ, ಇವಳು
ಗಂಧರ್ವಪತ್ನಿ) ಎನ್ನೊಳು ಆದ
ಮಚ್ಚುಂ ಮೋಹಮುಂ
ಕಾರಣಮಾಗಿರ್ಪಳು
ಎಂಬುದುಂ (ನನ್ನಲ್ಲಾದ
ಮೆಚ್ಚಿಗೆಯಿಂದಲೂ
ಪ್ರೀತಿಯಿಂದಲೂ ಇಲ್ಲಿ ಇದ್ದಾಳೆ
ಎಂದಾಗ) ಆ ಮಾತಿನೊಳ್
ಬೇಟಂ ಅಗ್ಗಳಿಸೆ(ಆ
ಮಾತಿನಿಂದ ಅವನ

ಪ್ರೀತಿಯೂ ಮೋಹವೂ ಮತ್ತೂ ಅಧಿಕವಾಗಲು,) ನಿಜ ನಿವಾಸಕ್ಕೆ ಬಂದು(ತನ್ನ ಮನೆಗೆ ಬಂದು) ಅಕ್ಕನೆ ಎನಗೆ ತನ್ನ ಘಟ್ಟಿವಳ್ತಿಯಂ ಕೆಯ್ಯೊಳು (ಅಕ್ಕನನ್ನು ತನ್ನ ಗಂಧ ಅರೆಯುವವಳ ಕಯ್ಯಲ್ಲಿ) ಅಪೂರ್ವ ವಿಲೇಪನಂಗಳನು ಅಟ್ಟುವುದೆಂದು ಅಟ್ಟುವುದುಂ(ಅಪೂರ್ವವಾದ ಸುಗಂಧದ್ರವ್ಯವನ್ನು

ಕಳುಹಿಸಿಕೊಡುವುದು ಎಂದು ದೂತರನ್ನು ಕಳಿಸಿದಾಗ,) ತಮ್ಮನ ಉಪರೋಧಕ್ಕಾಱದೆ (ತಮ್ಮನ ಒತ್ತಾಯಕ್ಕೆ ತಡೆಯಲಾರದೆ) ಸೈರಂಧ್ರಿಯಂ ಪೋಗಲ್ವೇೞ್ದುದುಂ (ತಮ್ಮನ ಒತ್ತಾಯಕ್ಕೆ ತಡೆಯಲಾರದೆ ಸೈರಂಧ್ರಿಯನ್ನು ಹೋಗಲು ಹೇಳಲು,) ಆಕೆಯು ಅವನ ಮನದ ಪೞುವಗೆಯನು (ಕೆಟ್ಟಬುದ್ಧಿಯನ್ನು)

ಅಱಿಯದೆ ಅಂತೆ
ಗೆಯ್ವೆನೆಂದು (ಅವಳು ಅವನ
ಮನಸ್ಸಿನ ಕೆಟ್ಟಬುದ್ಧಿಯನ್ನು
ತಿಳಿಯದೆ ಹಾಗೆಯೇ
ಮಾಡುವೆನೆಂದು)-
ವಚನ:ಅರ್ಥ:ಎಂದು
(ಕೀಚಕನು ಹಾಗೆ ನಿಶ್ಚಯಿಸಿ,)
ಸೈರಂಧ್ರಿಯನ್ನು ನೋಡಿ
ಸಹಿಸಲಾರದೆ ಸಿಂಹಬಲನು ಆ
ರೀತಿ ಮನ್ಮಥನೆಂಬ
ಮದವೇರಿದ ಆನೆಯಿಂದ

ಗಲಭೆಯುಳ್ಳ
ಮನಸ್ಸುಳ್ಳವನಾಗಿ ತಮ್ಮ
ಅಕ್ಕನನ್ನು ಈಕೆ ಯಾರವಳು
ಎಂದು ಕೇಳಿದಾಗ,
ಸುದೇಷ್ಣೆಯು ಅವನ
ಮೋಹಪರವಶವಾದ ಕಣ್ಣನ್ನು
ತಿಳಿದು ಈಕೆಯು
ಸಾಮಾನ್ಯಸ್ತ್ರೀಯಲ್ಲ, ಇವಳು
ಗಂಧರ್ವಪತ್ನಿ ; ನನ್ನಲ್ಲಾದ
ಮೆಚ್ಚಿಗೆಯಿಂದಲೂ
ಪ್ರೀತಿಯಿಂದಲೂ ಇಲ್ಲಿ ಇದ್ದಾಳೆ

ಎಂದಾಗ, ಆ ಮಾತಿನಿಂದ
ಅವನ ಪ್ರೀತಿಯೂ
ಮೋಹವೂ ಮತ್ತೂ
ಅಧಿಕವಾಗಲು, ತನ್ನ ಮನೆಗೆ
ಬಂದು, ಅಕ್ಕನನ್ನು ತನ್ನ ಗಂಧ
ಅರೆಯುವವಳ ಕಯ್ಯಲ್ಲಿ
ಅಪೂರ್ವವಾದ
ಸುಗಂಧದ್ರವ್ಯವನ್ನು
ಕಳುಹಿಸಿಕೊಡುವುದು ಎಂದು
ದೂತರನ್ನು ಕಳಿಸಿದಾಗ,
ತಮ್ಮನ ಒತ್ತಾಯಕ್ಕೆ

ತಡೆಯಲಾರದೆ
ಸೈರಂಧ್ರಿಯನ್ನು ಹೋಗಲು
ಹೇಳಲು, ಅವಳು ಅವನ
ಮನಸ್ಸಿನ ಕೆಟ್ಟಬುದ್ಧಿಯನ್ನು
ತಿಳಿಯದೆ ಹಾಗೆಯೇ
ಮಾಡುವೆನೆಂದು- (ಅವನ
ಅರಮನೆಗೆ ಹೋದಳು)

ಚಂ|| ಸ್ಮರನರಲಂಬು
ಕೈಬರ್ದುಕಿ
ಬರ್ಪವೊಲೊಯ್ಯನೆ ಬಂದು
ನಿಂದ ಸುಂ

ದರಿಯನೊಱಲ್ದು

ಸಿಂಹಬಳನಂತಿರು

ಮಾಸಿದೆಯಾದೆ ಮೇಣುಡಲ್|

ತರಿಪೆನೆ ತಂಬುಲಂಬಿಡಿ

ಮನೋಜಶಿಖಾಳಿಗಳಟ್ಟಿ

ಮುನ್ನಮೆ

ನ್ನುರಿವೆರ್ದೆ ಕಂಡು

ನಿನ್ನನಿನಿಸಾಱಿದುದಂಬುಜ

ಲೋಲಲೋಚನೇ|| ೬೪ ||

ಪದ್ಯ-೦೬೪:ಪದವಿಭಾಗ-

ಅರ್ಥ:ಸ್ಮರನ ಅರಲಂಬು

ಕೈಬರ್ದುರ್ಕಿ ಬರ್ಪವ್ವೊಲ್
ಒಯ್ಯನೆ ಬಂದು ನಿಂದ
(ಮನ್ಮಥನ (ಅಲರ್ =ಹೂವು,
ಅಂಬು ಬಾಣ, ಅಲರಂಬು,
ಮನ್ಮಥನ
ಬಾಣ)ಪುಷ್ಪಬಾಣವೇ
ಕೈಯಿಂದ ತಪ್ಪಿಸಿಕೊಂಡು
ಬರುವ ಹಾಗೆ ಮೆಲ್ಲಗೆ ಬಂದು
ನಿಂತ) ಸುಂದರಿಯನು
ಒಱಲ್ದು (ಒಲಿದು-
ಸ್ನೇಹದಿಂದ) ಸಿಂಹಬಳನು

ಅಂತೆ ಇರು (ಆ ಸುಂದರಿಯನ್ನು ಸಿಂಹಬಲನು ಪ್ರೀತಿಯಿಂದ ಎಲ್ಲಿ, ಹಾಗೆಯೇ ಇರು), ಮಾಸಿದೆಯಾದೆ (ಮಲಿನವಾಗಿದ್ದೀಯಲ್ಲ!) ಮೇಣ್ ಉಡಲ್ ತರಿಪೆನೆ (ಮತ್ತೆ ಉಡುವುದಕ್ಕೆ ಹೊಸ-ವಸ್ತ್ರವನ್ನು ತರಿಸಲೇ?), ತಂಬುಲಂಬಿಡಿ (ತಾಂಬೂಲವನ್ನು ಹಿಡಿ ತೆಗೆದುಕೊ,) ಮನೋಜ

ಶಿಖಾಳಿಗಳ ಅಟ್ಟೆ (ಮನ್ಮಥನ ಬಾಣಜ್ವಾಲೆಗಳ ಸಮೂಹ ಸುಡಲು) ಮುನ್ನಮೆ ಎನ್ನುರಿವ ಎರ್ದೆ ಕಂಡು ನಿನ್ನನು (ನನ್ನ ಉರಿಯುವ ಎದೆಯು ನಿನ್ನನ್ನು ನೋಡಿ) ಇನಿಸು ಆಱಿದುದು ಅಂಬುಜಲೋಲಲೋಚನೇ (ಹೇ ಕಮಲದಂತಿರುವ ಚಂಚಲ ಕಣ್ಣಿನವಳೇ ನಿನ್ನನ್ನು ನೋಡಿ ಸ್ವಲ್ಪ

ಉಪಶಮನವಾಯಿತು.)
ಎಂದನು ಕೀಚಕ|
ಪದ್ಯ-೬೪:ಅರ್ಥ: ಮನ್ಮಥನ ಪುಷ್ಪಬಾಣವೇ ಕೈಯಿಂದ ತಪ್ಪಿಸಿಕೊಂಡು ಬರುವ ಹಾಗೆ ಮೆಲ್ಲಗೆ ಬಂದು ನಿಂತ ಆ ಸುಂದರಿಯನ್ನು ಸಿಂಹಬಲನು ಪ್ರೀತಿಯಿಂದ ನೋಡಿ ಹಾಗೆಯೇ ಇರು, ಮಲಿನವಾಗಿದ್ದೀಯಲ್ಲ!, ಉಡುವುದಕ್ಕೆ ವಸ್ತ್ರವನ್ನು

ತರಿಸಲೇ? ತಾಂಬೂಲವನ್ನು ಹಿಡಿ ತೆಗೆದುಕೊ, ಮೊದಲು ಮನ್ಮಥನ ಬಾಣಗಳ ಸಮೂಹವು ಸುಡುತ್ತಿರಲು, ಹೇ ಕಮಲದಂತಿರುವಚಂಚಲಮಣ್ಣಿವಳೇ ನನ್ನ ಉರಿಯುವ ಎದೆಯು ನಿನ್ನನ್ನು ನೋಡಿ ಸ್ವಲ್ಪ ಉಪಶಮನವಾಯಿತು. (ಎಂದನು ಕೀಚಕ)

ಕಂ|| ಪರೆದ ಕುರುಳಲುಗೆ ಘಟ್ಟಿಯ
ನರೆಯುತ್ತುಂ ನಾಣ್ಚಿ ತೆಗೆದು ನೋೞ್ಪುದುಮೆನ್ನಂ|
ಸ್ಮರ ಕುಳಿಕಾಗ್ನಿಯೆ ಕೊಂಡಂ
ತಿರೆ ಕೊಂಡುದು ನೋಡ ನಿನ್ನ ನೋಡಿದ ನೋಟಂ|| ೬೫||

ಪದ್ಯ-೬೫:ಪದವಿಭಾಗ-ಅರ್ಥ:ಪರೆದ ಕುರುಳು ಅಲುಗೆ ಘಟ್ಟಿಯನ ಅರೆಯುತ್ತುಂ (ಗಂಧವನ್ನು

ಅರೆಯುತ್ತಿರುವಾಗ ನಿನ್ನ
ಚದುರಿದ ಮುಂಗುರುಳು
ಅಲುಗುತ್ತಾ) ನಾಣ್ಚಿ ತೆಗೆದು
ನೋಟ್ಟುದು
ಎನ್ನಂ(ಲಜ್ಜೆಯಿಂದ ನನ್ನನ್ನು
ಮೋಹಿಸಿ ನೋಡುವುದು.)
ಸ್ಮರ ಕುಳಿಕಾಗ್ನಿಯೆ (ಕುಳಿಕ /
ಕುಲಿಕ -ಎಂಟು
ವಿಷಸರ್ಪಗಳಲ್ಲಿ ಒಂದು)
ಕೊಂಡಂತಿರೆ ಕೊಂಡುದು
ನೋಡ (ಮನ್ಮಥನೆಂಬ/

ಕಾಮವೆಂಬ ಸರ್ಪದ ವಿಷಾಗ್ನಿಯೇ ಸುಟ್ಟ ಹಾಗೆ ಸುಟ್ಟಿತು ನೋಡು) ನಿನ್ನ ನೋಡಿದ ನೋಟಂ (ನೋಡಿದ ಆ ನಿನ್ನ ನೋಟ!)

ಪದ್ಯ-೬೫:ಅರ್ಥ:ಕೀಚಕ ಹೇಳಿದ, ನೀನು ಗಂಧವನ್ನು ಅರೆಯುತ್ತಿರುವಾಗ ನಿನ್ನ ಚದುರಿದ ಮುಂಗುರುಳು ಅಲುಗುತ್ತಾ ಲಜ್ಜೆಯಿಂದ ನನ್ನನ್ನು ಮೋಹಿಸಿ

ನೋಡುವುದು. ನೋಡಿದ ಆ
ನಿನ್ನ ನೋಟ, ನನ್ನನ್ನು
ಮನ್ಮಥನೆಂಬ ಸರ್ಪದ
ವಿಷಾಗ್ನಿಯೇ ಸುಟ್ಟ ಹಾಗೆ
ಸುಟ್ಟಿತು ನೋಡು!

ಮ|| ಮದನಾಸ್ತ್ರಂ ಕರ
ಸಾಣೆಗಾಣಿಸಿದುದೆಂಬಂತಾಗೆ
ನಿನ್ನೊಂದು ಕಂ
ದಿದ ಮೆಯ್ಯೆನ್ನಯ
ತೋಳೊಳೊಂದೆ ಸಿರಿಯಂ
ನೀನುಯ್ದು ತೊಱ್ತಾಳ್ದ ರಾ|

**ಗದಿನೆನ್ನೊಳ್
ಸುಕಮಿರ್ಪುದೆನ್ನ ನುಡಿಯಂ
ನೀಂ ಕೇಳ್ದುವೊಂದಂಚೆಯಂ
ಪೊದೆಯೊಂದಂಚೆಯನುಟ್ಟ
ನಿನ್ನಿರವಿದೇನಂಭೋಜಪತ್ರೇಕ್ಷ
ಣೇ|| ೬೬ ||**

**ಪದ್ಯ-೬೬:ಪದವಿಭಾಗ-
ಅರ್ಥ:**ಮದನಾಸ್ತ್ರಂ ಕರ
ಸಾಣೆಗಾಣಿಸಿದುದು ಎಂಬಂತೆ
ಆಗೆ (ಮದನನ ಬಾಣವು
ಅತಿಯಾಗಿ ಹರಿತಮಾಡಿ

ಮಸೆದಂತೆ ಆಗಲು)
ನಿನ್ನೊಂದು ಕಂದಿದ ಮೆಯ್ಯೆ
ಎನ್ನಯ ತೋಳ್ಗೊಳು ಒಂದಿ
(ನಿನ್ನ ಕಂದಿದ ಶರೀರವು ನನ್ನ
ತೋಳಿನಲ್ಲಿ ಸೇರಿ) ಸಿರಿಯಂ
ನೀನು ಉಯ್ದು ತೋಱ್ತಾಳ್ದು
(ನನ್ನ ಈ ಐಶ್ವರ್ಯವನ್ನು
ತೆಗೆದುಕೊಂಡು ನಿನ್ನ
ತೊತ್ತನ್ನಾಗಿನ ಮಾಡಿಕೊ)
ರಾಗದಿಂ ಎನ್ನೊಳ್
ಸುಕಮಿರ್ಪುದು;

(ಪ್ರೀತಿಯಿಂದ ನನ್ನಲ್ಲಿ
ಸುಖವಾಗಿರು) ಎನ್ನ
ನುಡಿಯಂ ನೀಂ ಕೇಳ್ದುಂ
ಒಂದಂಚೆಯಂ ಪೊದೆಯೆ
(ನನ್ನ ಮಾತನ್ನು ಕೇಳಿಯೂ,
ಒಂದೇ ವಸ್ತ್ರ ಹೊದೆಯಲು,)
ಒಂದು ಅಂಚೆಯನು ಉಟ್ಟ
(ಒಂದೇ ವಸ್ತ್ರ ಉಡಲು-
ಬಡತನ ಏಕೆ?) ನಿನ್ನ ಇರವು
ಇದೇನ ಅಂಭೋಜಪತ್ರೇಕ್ಷಣೇ
(ಈ ನಿನ್ನ ಬಡತನದ ಇರವು

ಇದೇನು ಕಮಲದಳದಂತೆ ಕಣ್ಣುಳ್ಳವಳೇ?)|

ಪದ್ಯ-೬೬:ಅರ್ಥ:ಮದನನ ಬಾಣವು ಅತಿಯಾಗಿ ಹರಿತಮಾಡಿ ಮಸೆದಂತೆ ಆಗಲು. ನಿನ್ನ ಕಂದಿದ ಶರೀರವು ನನ್ನ ತೋಳಿನಲ್ಲಿ ಸೇರಿ ನನ್ನ ಈ ಐಶ್ವರ್ಯವನ್ನು ತೆಗೆದುಕೊಂಡು ನಿನ್ನ ತೊತ್ತನ್ನಾಗಿ ನನ್ನ ಮಾಡಿಕೊ, ಪ್ರೀತಿಯಿಂದ ನನ್ನಲ್ಲಿ

ಸುಖವಾಗಿರು. ನನ್ನ ಮಾತನ್ನು ಕೇಳಿಯೂ, ಒಂದು ವಸ್ತ್ರ ಹೊದೆಯಲು, ಒಂದೇ ವಸ್ತ್ರ ಉಡಲು- ಬಡತನ ಏಕೆ? ಈ ನಿನ್ನ ಬಡತನದ ಇರವು, ದುರವಸ್ಥೆಯಿದೇನು? ಕಮಲದಳದಂತೆ ಕಣ್ಣುಳ್ಳವಳೇ! (ಬಡತನ ಏಕೆ? ನೀನು ಒಪ್ಪಿದರೆ ನನ್ನ ಐಶ್ವರ್ಯವನ್ನೆಲ್ಲಾ ನಿನಗೆ ಕೊಡಲು ಸಿದ್ಧನು, ಎಂದರ್ಥ)

ಕಂ|| ಬಿಗಿದೊಲೆದ ನಿನ್ನ
ಮೊಲೆಗಳ
ಮೃಗಮದದ ಪುಳಿಂಚುಗಳ್
ಪಗಿಲ್ತಿರಲೆಡೆಯಾ|
ದಗಲುರಮನೆನಗೆ ಪಡೆದಜ
ನೊಗಸುಗಮಲ್ತೆಲಗೆ
ನಿನ್ನನೆನಗೆಯೆ ಪಡೆದಂ|| ೬೭ ||

ಪದ್ಯ-೬೭:ಪದವಿಭಾಗ-ಅರ್ಥ:ಬಿಗಿದ ಒಲೆದ ನಿನ್ನ ಮೊಲೆಗಳ ಮೃಗಮದದ ಪುಳಿಂಚುಗಳ್ ಪಗಿಲ್ತಿರಲು

(ಬಿಗಿದುಕೊಂಡು ಪಕ್ಕಕ್ಕೆ
ಒಲೆದು ಹೊರಚಿಮ್ಮುತ್ತಿರುವ
ನಿನ್ನ ಮೊಲೆಗಳ ಕಸ್ತೂರಿಯ
ಹನಿಗಳು/ ಗುಳ್ಳೆಗಳು
ಅಂಟಿಕೊಂಡಿರುವ,) (ಅದಕ್ಕೆ)
ಎಡೆಯಾದ ಅಗಲ
ಉರಮನು ಎನಗೆ ಪಡೆದ
ಅಜನು (ಅದಕ್ಕೆ ಇರಲು
ತಾಣವಾದ ನನ್ನ ಎದೆಯನ್ನು
ಬ್ರಹ್ಮನು ವಿಶಾಲವಾಗಿ)
ಒಗಸುಗಮಲ್ತು(ಅತಿಶಯವ

ಲ್ಲ) ಎಲಗೆ (ಎಲೆ ಸುಂದರಿ)
ನಿನ್ನನು ಎನಗೆಯೆ ಪಡೆದಂ
(ನಿನ್ನನು ನನಗಾಗಿಯೇ
ಸೃಷ್ಟಿಸಿದನು, ಇದು
ಅತಿಶಯವಲ್ಲ.)

ಪದ್ಯ-೬೭:ಅರ್ಥ:

ಬಿಗಿದುಕೊಂಡು ಪಕ್ಕಕ್ಕೆ
ಒಲೆದು ಹೊರಚಿಮ್ಮುತ್ತಿರುವ
ನಿನ್ನ ಮೊಲೆಗಳ ಕಸ್ತೂರಿಯ
ಗುಳ್ಳೆಗಳು ಅಂಟಿಕೊಂಡಿರುವ
ಅದಕ್ಕೆ ಇರಲುತಾಣವಾದ ನನ್ನ

ಎದೆಯನ್ನು ಬ್ರಹ್ಮನು
ವಿಶಾಲವಾಗಿ ಸೃಷ್ಟಿಸಿದ್ದಾನೆ.
ಎಲೆ ಸುಂದರಿ ನಿನ್ನನ್ನು
ಬ್ರಹ್ಮನು ನನಗಾಗಿಯೇ
ಸೃಷ್ಟಿಸಿದನು, ಇದು
ಅತಿಶಯವಲ್ಲ.

**ಕಂ|| ಎನಗರಸಿಯಾಣೆ
ನಿನ್ನೊಡ
ನೆನಗೇಗೆಟ್ಟಪುದಿದೆಂದು
ರೋಡಾಡಲ್ ಕೆ|
ಮ್ಮನೆ ನುಡಿದೊಡೆನ್ನ ಕಣ್ಗಂ**

ಮನಕ್ಕೆ ವಂದಿರ್ದ ನಿನ್ನೊಳೆನಗೆರಡುಂಟೇ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ಎನಗೆ ಅರಸಿಯಾಣೆ (ನನಗೆ ರಾಣಿಯಾದ ಸುದೇಷ್ಣೆಯಾಣೆ.) ನಿನ್ನೊಡನೆ ಎನಗೆ ಏಗೆಟ್ಟಪುದು ಇದು ಎಂದು ರೋಡಾಡಲ್ (ನಿನ್ನೊಡನೆ ಪರಿಹಾಸ್ಯ ಮಾಡಲು ನನಗೆ ಯಾಕಾಗಿ ಕೆಡುಕು ಮಾಡಬೇಕು?

ಪರಿಹಾಸ್ಯ ಮಾಡುವುದಕ್ಕಲ್ಲ)
ಕೆಮ್ಮನೆ ನುಡಿದೊಡೆ ಎನ್ನ
ಕಣ್ಗಂ ಮನಕ್ಕೆ ವಂದಿರ್ದ
ನಿನ್ನೊಳು ಎನಗೆ
ಎರಡುಂಟೇ(ಮೋಸಮಾಡು
ವುದುಂಟೇ)

ಪದ್ಯ-೬೮:ಅರ್ಥ:
ರಾಣಿಯಾದ ಸುದೇಷ್ಣೆಯಾಣೆ.
ಇಂದು ನಾನು ಸುಮ್ಮನೆ
ನಿನ್ನೊಡನೆ ಹೇಳಿದರೆ
ಆದೀತೇ?, ನನ್ನ ಕಣ್ಣಿಗೂ

ಮನಸ್ಸಿಗೂ

ಒಪ್ಪಿಗೆಯಾಗಿರುವ ನಿನ್ನಲ್ಲಿ

ನನಗೆ (ಕಪಟವುಂಟೇ?)

ಮೋಸಮಾಡುವುದುಂಟೇ?

ಬಾಯಱಿದೆನಿತೆರೆದೊಡಮಾ

ಹಾಯೆನ್ನಯ ಕರಮೆ ಮಱುಗೆ

ಮೆಯ್ಶಿಡಿದುರಿವೆ|

ನ್ನೀ ಯೆರ್ದೆಯನಾಱಿಸಲ್

ನೀಂ

ಬಾಯೊಳ್ದಂಬುಲಮನಪ್ಪೊ

ಡಂ ದಯೆಗೆಯ್ವೋ|| ೬೯ ||

ಪದ್ಯ-೬೯:ಪದವಿಭಾಗ-ಅರ್ಥ:ಬಾಯಬಿದು ಎನಿತ್ತೆರೆದೊಡಂ ಆಹಾ ಯೆನ್ನಯ (ಬಾಯಿಸೋಲುವಷ್ಟು ಬೇಡಿದರೂ ಆಹಾ! ಎಂದು ಮೆಚ್ಚಲಾರೆಯಲ್ಲ!) ಕರಮೆ ಮಱುಗೆ (ಬಹಳ ವ್ಯಥೆಪಟ್ಟು) ಮೆಯ್ವಿಡಿದು ಉರಿವ ಎನ್ನ ಈ ಯೆರ್ದೆಯನು ಆಱಿಸಲ್ (ದೇಹವನ್ನು ವ್ಯಾಪಿಸಿ

ಉರಿಯುತ್ತಿರುವ ನನ್ನ ಎದೆಯನ್ನು ಆರಿಸಲು) ನೀಂ ಬಾಯೊಳ್ ತಂಬುಲಮನಪ್ಪೊಡಂ ದಯೆಗೆಯ್ವೋ (ನಿನ್ನ ಬಾಯಿ ತಾಂಬುಲವನ್ನಾದರೂ ದಯಮಾಡಿ ಕೊಡುವೆಯೋ!)

ಪದ್ಯ-೬೯:ಅರ್ಥ: ಬಾಯಿಸೋಲುವಷ್ಟು ಬೇಡಿದರೂ ಅಯ್ಯೋ ಎಂದು ಹೇಳಲಾರೆಯಲ್ಲ. ಬಹಳ

ವ್ಯಥೆಪಟ್ಟು ದೇಹವನ್ನು
ವ್ಯಾಪಿಸಿ ಉರಿಯುತ್ತಿರುವ
ನನ್ನ ಎದೆಯನ್ನು ಆರಿಸಲು/
ಸಮಾಧಾನಮಾಡಲು ನಿನ್ನ
ಬಾಯಿ ತಾಂಬುಲವನ್ನಾದರೂ
ದಯಮಾಡಿ ಕೊಡುವೆಯೋ!

ವ|| ಎಂದು ಮತ್ತಮೆನಿತಾನುಂ ತೆಱದ ಲಲ್ಲೆಯಿನಳಿಪಂ ತೋಱೆ ಬಾಯಟೆದು ತನ್ನ ನುಡಿಗಳಳಿಪಿಳಿವ್ರೋಗೆ ಸೈರಿಸಲಾಱದೆ ಪಿಡಿವುದುಂ

ಪಾಂಚಾಲರಾಜತನೂಜೆಯಿಂ ತೆಂದಳ್-

ವಚನ:ಪದವಿಭಾಗ-ಅರ್ಥ: ಎಂದು ಮತ್ತೆಂ ಎನಿತಾನುಂ ತೆಱದ ಲಲ್ಲೆಯಿಂ ಅಳಿಪಂ ತೋಱಿ (ಮತ್ತೆ ಇನ್ನೂ ಎಷ್ಟೋ ರೀತಿಯ ಮುದ್ದುಮಾತುಗಳಿಂದ ಆಸೆಯನ್ನು ತೋರಿಸಿ) ಬಾಯಬಿದು (ಬಾಯಿ ಸೋಲುವಷ್ಟು ಗೋಗರೆದು)

ತನ್ನ ನುಡಿಗಳ ಅಳಿಪಿ
ಇಳಿವ್ರೋಗೆ (ತನ್ನ ಮಾತುಗಳ
ಬಯಕೆಯು
ತಿರಸ್ಕೃತವಾಗಲು)
ಸೈರಿಸಲಾಱದೆ ಪಿಡಿವುದುಂ
(ಸಹಿಸಲಾರದೆ ಕೀಚಕನು
ಅವಳನ್ನು ಹಿಡಿಕೊಳ್ಳಲು)
ಪಾಂಚಾಲರಾಜತನೂಜೆ
ಯಿಂತೆಂದಳ್ (ದ್ರೌಪದಿಯು
ಹೀಗೆಂದಳು)-

ವಚನ:ಅರ್ಥ:ಎಂದು ಮತ್ತೆ ಇನ್ನೂ ಎಷ್ಟೋ ರೀತಿಯ ಮುದ್ದುಮಾತುಗಳಿಂದ ಆಸೆಯನ್ನು ತೋರಿಸಿ ಬಾಯಿ ಸೋಲುವಷ್ಟು ಗೋಗರೆದು ತನ್ನ ಮಾತುಗಳ ಬಯಕೆಯು ತಿರಸ್ಕೃತವಾಗಲು ಸಹಿಸಲಾರದೆ ಕೀಚಕನು ಅವಳನ್ನು ಹಿಡಿಕೊಳ್ಳಲು, ದ್ರೌಪದಿಯು ಹೀಗೆಂದಳು-

ಮ|| ಸ್ರ||

ನುಡಿಯಲ್ಬೇಡೆನ್ನೊಳಿಂತಪ್ಪಳಿ

ಪಿನ ನುಡಿಯಂ ನಿನ್ನ ಮಾತಿಂಗೆ

ಚಿ ಮೆ

ಳ್ಪುಡುವಂತಪ್ಪಾಕೆಯಲ್ಲೆಂ ಬಿಡು

ಗಡ ಬಿಡದಂದೆನ್ನ

ಗಂಧರ್ವರಿಂದಂ|

ಮಡಿವಯ್

ನೀನೆಂದೊಂಡಂತಪ್ಪೊಡೆ

ಬಿಡೆನೆನಗಂ

ಮೇಗುವೇೞ್ದಪ್ಪೆಯಿಲ್ಲಾ

ಪೊರ್ಡೆ ನಿನ್ನಂ ಕಾವ ಗಂಧರ್ವರೆ ಬಿಡಿಸುಗೆ ಪೋಗೆಂದು ಪೊಯ್ದಂ ದುರಾತ್ಮಂ|| ೭೦

ಪದ್ಯ-೭೦:ಪದವಿಭಾಗ-ಅರ್ಥ:ನುಡಿಯಲ್ಬೇಡ ಎನ್ನೊಳು ಇಂತಪ್ಪ ಅಳಿಪಿನ ನುಡಿಯಂ (ನನ್ನಲ್ಲಿ ಇಂತಹ ದುರಾಸೆಯ ಮಾತುಗಳನ್ನಾಡಬೇಡ.) ನಿನ್ನ ಮಾತಿಂಗೆ ಚಿ

ಮೆಳ್ಪಡುವಂತಪ್ಪಾಕೆಯಲ್ಲೆಂ (ಚಿ ನಿನ್ನ ಮಾತಿಗೆ ಮೋಸಹೋಗುವಂತಹವಳಲ್ಲ) ಬಿಡು ಗಡ (ಬಿಡೋ!) ಬಿಡದಂದು ಎನ್ನ ಗಂಧರ್ವರಿಂದಂ ಮಡಿವಯ್ (ಬಿಡದಿದ್ದರೆ ನೀನು ನನ್ನ ಗಂಧರ್ವರಿಂದ ಸಾಯುವೆಯೊ) ನೀನೆಂದೊಡೆ ಅಂತಪ್ಪೊಡೆ ಬಿಡೆನು (ನೀನು ಹಾಗೆಂದರೆ ಹಾಗೇ ಆಗಲಿ-

ಬಿಡುವುದಿಲ್ಲ.) ಎನಗಂ
ಮೇಗುವೇೞ್ದಿಪ್ಪೆ (ನನಗೂ
ಮೋಸದ ಮಾತುಗಳನ್ನು
ಹೇಳುತ್ತಿರುವೆ) ಇಲ್ಲ (ಇಲ್ಲವೇ)
ಆರ್ಪೊಡೆ ನಿನ್ನಂ ಕಾವ
ಗಂಧರ್ವರೆ ಬಿಡಿಸುಗೆ
(ಸಾದ್ಯವಾದರೆ ನಿನ್ನನ್ನು
ರಕ್ಷಿಸುವ ಗಂಧರ್ವರೆ
ಬಿಡಿಸಿಕೊಳ್ಳಲಿ,) ಪೋಗೆಂದು
ಪೊಯ್ದಂ ದುರಾತ್ಮಂ (ಹೋಗು

ಎಂದು ದುರಾತ್ಮನಾದ ಅವನು ಅವಳನ್ನು ಹೊಡೆದನು.)

ಪದ್ಯ-20:ಅರ್ಥ: ನನ್ನಲ್ಲಿ ಇಂತಹ ದುರಾಸೆಯ ಮಾತುಗಳನ್ನಾಡಬೇಡ. ಚಿ ನಿನ್ನ ಮಾತಿಗೆ ಮೋಸಹೋಗುವಂತಹವಳಲ್ಲ. ಬಿಡೋ, ಬಿಡದಿದ್ದರೆ ನೀನು ನನ್ನ ಗಂಧರ್ವರಿಂದ ಸಾಯುವೆಯೊ ಎಂದಳು. ನೀನು ಹಾಗೆಂದರೆ ಹಾಗೇ

ಆಗಲಿ- ಬಿಡುವುದಿಲ್ಲ. ನನಗೂ ಮೋಸದ ಮಾತುಗಳನ್ನು ಹೇಳುತ್ತಿರುವೆ; ಸಾಧ್ಯವಾದರೆ ನಿನ್ನನ್ನು ರಕ್ಷಿಸುವ ಗಂಧರ್ವರೆ ಬಿಡಿಸಿಕೊಳ್ಳಲಿ, ಹೋಗು ಎಂದು ದುರಾತ್ಮನಾದ ಅವನು ಅವಳನ್ನು ಹೊಡೆದನು.

ವ|| ಪೊಯ್ದೊಡೆ ಬಱುಬಂ ಪೊಯಿಲ್ವೆತ್ತೆಂತೇನುಮನಱ ಯದೆ ಪರಿಭವಾನಿಲನಿಂ ಶೋಕಾನಲನಿರ್ಮುಡಿಸೆ

ನಡನಡುಗಿ ಕಾಯ್ವಿನೊಳ್
ಪಿಡುಗಿ ತಳೋದರಿ
ವೃಕೋದರರನಲ್ಲಿಗೆ ವಂದು
ಕಟ್ಟೇಕಾಂತದೊಳಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಪೊಯ್ದೊಡೆ ಬಱುಬಂ (ಹೊಡೆದಾಗ ದುರ್ಬಲನು) ಪೊಯಿಲ್ ವೆತ್ತಂತೆ (ಕೂಗಿ ಹೊಯಿಲು ಇಟ್ಟಂತೆ) ಏನುಮನು ಅಱಿಯದೆ (ಏನು ಮಾಡಲೂ ತಿಳಿಯದೆ)

ಪರಿಭವ ಅನಿಲನಿಂ
(ಅವಮಾನದ ಗಾಳಿಯಿಂದ)
ಶೋಕ ಅನಲನು ಇರ್ಮಡಿಸೆ
(ದುಖಾಗ್ನಿಯು
ಇಮ್ಮಡಿಯಾಗಲು)
ನಡನಡುಗಿ ಕಾಯ್ಪಿನೊಳ್
ಪಿಡುಗಿ (ಕೋಪದಿಂದ
ನಡುನಡುಗಿ, ಸಿಡಿದು)
ತಳೋದರಿ ವೃಕೋದರನಲ್ಲಿಗೆ
ವಂದು (ದ್ರೌಪದಿಯು
ಭೀಮನ ಬಳಿಗೆ)

ಕಟ್ಟೇಕಾಂತದೊಳ್ ಇಂತೆಂದಳ್-(ಅತ್ಯಂತ ರಹಸ್ಯವಾಗಿ -) ಹೀಗೆಂದು ಹೇಳಿದಳು-

ವಚನ:ಅರ್ಥ:ಹೊಡೆದಾಗ ಪೆಟ್ಟುತಿಂದ ದುರ್ಬಲನುನು ಕೂಗಿಕೊಳ್ಳುವಂತೆ, ಏನು ಮಾಡಲೂ ತಿಳಿಯದೆ ಅವಮಾನದ ಗಾಳಿಯಿಂದ ದುಖಾಗ್ನಿಯು ಇಮ್ಮಡಿಯಾಗಲು,

ಕೋಪದಿಂದ ನಡುನಡುಗಿ,

ಸಿಡಿದು, ದ್ರೌಪದಿಯು

ಭೀಮನ ಬಳಿಗೆ ಬಂದು

ಅತ್ಯಂತ ರಹಸ್ಯವಾಗಿ

ಹೀಗೆಂದು ಹೇಳಿದಳು-

ಮ||ಸ್ರ||

ಪೆಱನಿಕ್ಕುಂಗೂಱೊಳಂ

ಕೀೞಿಲೊಳಮಳವಿಗೆಟ್ಟಿರ್ಪ

ನಿಮ್ಮಿರ್ಪುದರ್ಕಂ

ಮಱುಗುತ್ತಿರ್ಪಳ್ಗೆ

ನೋಡಾದೞಲನೆನಗೆ

ಕಣ್ಪೋಲದಿಂ ಕೀಚಕಂ ಬಂ|

ದುಱಿದೆನ್ನಂ ಕಾಡಿ

ಕೈಗೆಲ್ದುಗಿದನವನದೊಂದುರ್ಕ

ನೇವೇಱ್ವೆನಿನ್ನೀ

ನಱಿವಯ್

ಪೂಣ್ದೆನ್ನದೊಂದಂ

ಪರಿಭವಮನಿದಂ ನೀಗು ನೀಂ

ಭೀಮಸೇನಾ|| ೭೧

ಪದ್ಯ-೭೧:ಪದವಿಭಾಗ-

ಅರ್ಥ:ಪೆಱಿನ

ಇಕ್ಕುಂಗೂಱೊಳಂ (ಪರರು

ಇಕ್ಕುವ ಕೂಳಿನಲ್ಲೊ)
ಕೀೞಿಲೊಳಂ ಅಳವಿಗೆಟ್ಟು
ಇರ್ಪ (ಕೀಳುಜನರ
ಮನೆಯಲ್ಲಿ ಗೌರವವಿಲ್ಲದೆ
ಇರುವ) ನಿಮ್ಮ ಇರ್ಪುದರ್ಕಂ
ಮಱುಗುತ್ತಿರ್ಪಳ್ಗೆ ನೋಡು
ಅದ ಅೞಲನು ಎನಗೆ (ನಿಮ್ಮ
ದುಸ್ಥಿತಿಯನ್ನು ನೋಡಿ
ದುಃಖಪಡುತ್ತಿರುವ ನನಗೆ
ಉಂಟಾದ ದು:ಖವನ್ನು
ನೋಡು.) ಕಣ್ಸೋಲದಿಂ

ಕೀಚಕಂ ಬಂದು ಉಱದೆ
ಎನ್ನಂ ಕಾಡಿ (ನನ್ನನ್ನು ನೋಡಿ
ಮೋಹಿಸಿ ಬಂದು,
ಸುಮ್ಮನಿರದೆ ಕಾಟಕೊಟ್ಟು)
ಕೈಗೆಲ್ದು ಉಗಿದನು (ಕೈಯಿಂದ
ಹೊಡೆದು, ಹಿಡಿದು
ಎಳೆದಾಡಿದನು)
ಅವನದೊಂದು ಉರ್ಕಂ
ಏವೇೞ್ವೆಂ (ಅವನ ದೊಂದು
ಸೊಕ್ಕನ್ನು ಏನು ಹೇಳಲಿ?)
ಇನ್ನು ನೀನು ಅೞಿವಯ್,

ಪೂಣ್ದ ಎನ್ನದೊಂದಂ ಪರಿಭವಮನು,(ಇನ್ನು ನೀನು ತಿಳಿದೆಯಲ್ಲವೇ, ಅರಿವಾಯಿತೇ- ನಾನು ಅನುಭವಿಸಿದ ನನ್ನದೊಂದು ಅವಮಾನವನ್ನು.) ಇದಂ ನೀಗು ನೀಂ ಭೀಮಸೇನಾ ()

ಪದ್ಯ-೭೧:ಅರ್ಥ: ಪರರು ಇಕ್ಕುವ ಕೂಳಿನಲ್ಲೂ ಕೀಳುಜನರ ಮನೆಯಲ್ಲಿ ಗೌರವವಿಲ್ಲದೆ ಇರುವ ನಿಮ್ಮ

ದುಸ್ಥಿತಿಯನ್ನು ನೋಡಿ ದುಃಖಪಡುತ್ತಿರುವ ನನಗೆ ಉಂಟಾದ ದು:ಖವನ್ನು ನೋಡು. ಕೀಚಕನು ನನ್ನನ್ನು ನೋಡಿ ಮೋಹಿಸಿ ಬಂದು, ಸುಮ್ಮನಿರದೆ ಕಾಟಕೊಟ್ಟು, ಕೈಯಿಂದ ಹೊಡೆದು, ಹಿಡಿದು ಎಳೆದಾಡಿದನು; ಅವನದೊಂದು ಸೊಕ್ಕನ್ನು ಏನು ಹೇಳಲಿ? ಇಷ್ಟನ್ನೂ ನೀನು ತಿಳಿದೆಯಲ್ಲವೇ,

ಅರಿವಾಯಿತೇ- ನಾನು ಅನುಭವಿಸಿದ ನನ್ನದೊಂದು ಅವಮಾನವನ್ನು. ಭೀಮಸೇನಾ ಇದನ್ನು ನೀನು ಪರಿಹಾರಮಾಡು, ಎಂದಳು.

ವ|| ಎಂಬುದುಂ ಭೀಮಸೇನನೇದೊಳ್ ಕಣ್ಗಾಣದಿವನೊರ್ವಂ ದುಶ್ಶ್ಯಾಸನನ ನಂಟನಕ್ಕುಮಾದೊಡೇನಾಯ್ತು-

ವಚನ:ಪದವಿಭಾಗ-ಅರ್ಥ:ಎಂಬುದುಂ ಭೀಮಸೇನು ಏವದೊಳ್ (ಕೋಪದಲ್ಲಿ) ಕಣ್ಗಾಣದ ಇವನೊರ್ವಂ ದುಶ್ಯಾಸನನ ನಂಟನಕ್ಕುಂ ಆದೊಡೇನಾಯ್ತು-

ವಚನ:ಅರ್ಥ:ಭೀಮಸೇನನು ಕೋಪದಿಂದ, ಕುರುಡನಾಗಿರುವ ಇವನು ಮತ್ತೊಬ್ಬ ದುಶ್ಯಾಸನನ

ನೆಂಟನಾಗಿರಬೇಕು,

ಆದರೇನಾಯ್ತು? ಎಂದನು-

ಕಂ|| ಮುಳಿಸೆಂಬುದೆನಗೆ

ಕೌರವ

ರೊಳೆ ಪಿರಿದಾ ಬಲಿದ

ಬಯಕೆಯಂ ಮಾದುರದೊಳ್|

ಕಳೆವಂತನ್ನೆಗಮಿವನೊಳ್

ಕಳೆವೆಂ ನಿನ್ನೊಂದು

ಮುಳಿಸನಬ್ಜದಳಾಕ್ಷೀ|| ೭೨ ||

ಪದ್ಯ-೭೨:ಪದವಿಭಾಗ-

ಅರ್ಥ:ಮುಳಿಸೆಂಬುದು ಎನಗೆ

ಕೌರವರೊಳೆ ಪಿರಿದು (ನನಗೆ ಕೌರವರಲ್ಲಿ ಬಹಳ ಸಿಟ್ಟು ಎಂಬುದು ಇದೆ,) ಆ ಬಲಿದ ಬಯಕೆಯಂ (ಮಾ) ಆ ದುರದೊಳ್ ಕಳೆವಂತ ಅನ್ನೆಗಂ (ಆ ಬಲಿತಸಿಟ್ಟಿನ ಬಯಕೆಯನ್ನು ಮಹಾಯುದ್ಧದಲ್ಲಿ ಕಳೆಯುವವರೆಗೆ) ಇವನೊಳ್ ಕಳೆವೆಂ ನಿನ್ನೊಂದು ಮುಳಿಸನಬ್ಜದಳಾಕ್ಷೀ (ಎಲೌ

ಕಮಲದಳನೇತ್ರೇ ಇವನಲ್ಲಿ ತೀರಿಸಿಕೊಳ್ಳುತ್ತೇನೆ)

ಪದ್ಯ-೭೨:ಅರ್ಥ:ನನಗೆ ಕೌರವರಲ್ಲಿ ಬಹಳ ಸಿಟ್ಟು ಎಂಬುದು ಇದೆ. ಆ ಬಲಿತಸಿಟ್ಟಿನ ಬಯಕೆಯನ್ನು ಮಹಾಯುದ್ಧದಲ್ಲಿ ಕಳೆಯುವವರೆಗೆ ನಿನ್ನ ಒಂದು ಸಿಟ್ಟಿನ ಪರಿಹಾರಕ್ಕಾಗಿ, ಎಲೌ ಕಮಲದಳನೇತ್ರೇ ಇವನಲ್ಲಿ ತೀರಿಸಿಕೊಳ್ಳುತ್ತೇನೆ.

ವ|| ಎಂದು ನೀನೀ ವಿರಾಟನ
ನಾಟಕಶಾಲೆಯನೆ
ಸಂಕೇತನಿಕೇತನಂ ಮಾಡಿ
ನೇಸರ್ಪಡಲೊಡಮೆನ್ನಿಂ
ಮುನ್ನಮೆ
ಪೋಗಿರ್ಪುದಾನಲ್ಲಿಗೆ
ವರ್ಪೆನೆಂದಾ ಪಾಣ್ಬನಂ ನಂಬೆ
ನುಡಿದಾ ಪೋಲಿಗೆನ್ನನಲ್ಲಿಗೆ
ವರಿಸವಂಗೆ ತಕ್ಕುದನಾನೆ
ಬಲ್ಲೆನೆಂದು ನುಡಿದು
ಕಟಿಪಲಾ ದ್ರೌಪದಿ

ಸಂತಸಂಬಟ್ಟಂತೆಗೆಯ್ವೆನೆಂದು ಪೋಗಿ-

ವಚನ:ಪದವಿಭಾಗ-

ಅರ್ಥ:ಎಂದು ನೀನು ಈ ವಿರಾಟನ ನಾಟಕಶಾಲೆಯನೆ ಸಂಕೇತನಿಕೇತನಂ ಮಾಡಿ (ನೀನು ಈ ವಿರಾಟನ ನಾಟಕಶಾಲೆಯನ್ನೇ ರಹಸ್ಯವಾಗಿ ಕೂಡುವ ತಾಣವನ್ನಾಗಿ ಮಾಡಿಕೊಂಡು) ನೇಸರ್ ಪಡಲೊಡಂ ಎನ್ನಿಂ

ಮುನ್ನಮೆ ಪೋಗಿರ್ಪುದು;
(ಸೂರ್ಯ ಮುಳುಗಿದ
ಕೂಡಲೇ ನಮಗಿಂತ
ಮುಂಚೆಯೇ ನೀನು
ಹೋಗಿರು,) ಆನು ಅಲ್ಲಿಗೆ
ವರ್ಪೆನೆಂದು (ನಾನು ಅಲ್ಲಿಗೆ
ಬರುತ್ತೇನೆಂದು) ಆ ಪಾಣ್ಬನಂ
ನಂಬೆ ನುಡಿದು (ಕಾಮುಕನನ್ನು
ನಂಬಿಕೆ ಬರುವಂತೆ ಹೇಳಿ,) ಆ
ಪೋೞ್ತಿಂಗೆ ಎನ್ನನು ಅಲ್ಲಿಗೆ
ವರಿಸವಂಗೆ (ಆ ಹೊತ್ತಿಗೆ

ನನ್ನನ್ನೂ ಅಲ್ಲಿಗೆ ಬರಮಾಡು)
ತಕ್ಕುದನು ಆನೆ ಬಲ್ಲೆನೆಂದು
ನುಡಿದು ಕಟಿಪಲು (ಅವನಿಗೆ
ತಕ್ಕುದನ್ನು ಮಾಡಲು ನಾನು
ಬಲ್ಲೆ ಎಂದು
ಹೇಳಿಕಳುಹಿಸಿದನು), ಆ
ದ್ರೌಪದಿ ಸಂತಸಂಬಟ್ಟು
ಅಂತೆಗೆಯ್ವೆನೆಂದು ಪೋಗಿ
(ದ್ರೌಪದಿಯು
ಸಂತೋಷಪಟ್ಟು ಹಾಗೆಯೇ
ಮಾಡುತ್ತೇನೆಂದು ಹೋಗಿ-)-

ವಚನ:ಅರ್ಥ:ನೀನು ಈ ವಿರಾಟನ ನಾಟಕಶಾಲೆಯನ್ನೇ ರಹಸ್ಯವಾಗಿ ಕೂಡುವ ತಾಣವನ್ನಾಗಿ ಮಾಡಿಕೊಂಡು, ಸೂರ್ಯ ಮುಳುಗಿದ ಕೂಡಲೇ ನಮಗಿಂತ ಮುಂಚೆಯೇ ನೀನು ಹೋಗಿರು; ನಾನು ಅಲ್ಲಿಗೆ ಬರುತ್ತೇನೆಂದು, ಕಾಮುಕನನ್ನು ನಂಬಿಕೆ ಬರುವಂತೆ ಹೇಳಿ, ಆ ಹೊತ್ತಿಗೆ ನನ್ನನ್ನೂ ಅಲ್ಲಿಗೆ

ಬರಮಾಡು. ಅವನಿಗೆ ತಕ್ಕುದನ್ನು ಮಾಡಲು ನಾನು ಬಲ್ಲೆ ಎಂದು ಹೇಳಿಕಳುಹಿಸಿದನು. ದ್ರೌಪದಿಯು ಸಂತೋಷಪಟ್ಟು ಹಾಗೆಯೇ ಮಾಡುತ್ತೇನೆಂದು ಹೋಗಿ-

ಚಂ|| ಮಱುದೆವಸಂ ಲತಾಲಲಿತೆ ಕೀಚಕನಲ್ಲಿಗೆ ಕಾಮನೊಂದು ಕೈ

**ಸೆರೆಯೆನಿಪಂಗರಾಗಮನಿಳೇಶ್ವ
ರವಲ್ಲಭೆಯಟ್ಟಲುಯ್ದೊಡಾ|
ನಱಿಯದೆ ನಿನ್ನೆ
ನೋಯಿಸಿದೆನಿಂದೆನಗೆಂಬುದ
ನೆಂಬುದೆಂದು ಕಾ
ಲ್ಗೆಱಗಿದೊಡೊಳ್ಳಿತಾಗೆ
ನಿನಗಿಂತಿನಿತೊಂದೊಲವುಳ್ಳೊ
ಡೊಲ್ಲೆನೇ|| ೭೩ |**

ಪದ್ಯ-೭೩:ಪದವಿಭಾಗ-

ಅರ್ಥ:ಮಱುದಿವಸಂ
ಲತಾಲಲಿತೆ ಕೀಚಕನಲ್ಲಿಗೆ

ಕಾಮನೊಂದು ಕೈಸೆರೆಯೆನಿಪ
ಅಂಗರಾಗಮಂ (ಮರುದಿನ
ಲತೆಯಂತೆ ಕೋಮಲವಾದ
ದ್ರೌಪದಿಯ ಕಯ್ಯಲ್ಲಿ
ಮಹಾರಾಣಿ ಸುದೇಷ್ಣೆಯು
ಕಾಮನ ಬಂದಿಯೆಂಬ ಒಂದು
ಲೇಪನದ್ರವ್ಯವನ್ನು)
ನಿಳೇಶ್ವರವಲ್ಲಭೆಯು ಅಟ್ಟಲು
(ಮಹಾರಾಣಿ ಸುದೇಷ್ಣೆಯು
ಕಳಿಸಲು,) ಉಯ್ದೊಡೆ
(ಅದನ್ನು ತೆಗೆದುಕೊಂಡು

ಹೋದಾಗ), ಆನ್ ಅಱಿಯದೆ ನಿನ್ನೆ ನೋಯಿಸಿದೆನು ('ನಾನು ತಿಳಿಯದೆ ನಿನ್ನೆಯ ದಿನ ನಿನಗೆ ನೋಯಿಸಿದೆ.) ಇಂದು ಎನಗೆ ಎಂಬುದನು ಎಂಬುದೆಂದು ಕಾಲ್ಗೆ ಎಱಗಿದೊಡೆ (ಈ ದಿನ ನನಗೆ ಹೇಳಬೇಕಾದುದನ್ನು ಹೇಳು' ಎಂದು ಅವಳ ಕಾಲಿಗೆ ಬಿದ್ದನು.) ಒಳ್ಳಿತಾಗೆ ನಿನಗೆ ಇತಿನಿತೊಂದು ಒಲವು ಉಳ್ಳೊಡೆ ಒಲ್ಲೆನೇ?

(‘ಒಳ್ಳೆಯದು ನಿನಗೆ ಇಷ್ಟು ಪ್ರೀತಿಯಿರುವುದಾದರೆ ನಾನು ಬೇಡವೆನ್ನುತ್ತೇನೆಯೆ?’ ಎಂದಳು)

ಪದ್ಯ-೭೩:ಅರ್ಥ: ಮರುದಿನ ಲತೆಯಂತೆ ಕೋಮಲವಾದ ದ್ರೌಪದಿಯ ಕಯ್ಯಲ್ಲಿ ಮಹಾರಾಣಿ ಸುದೇಷ್ಣೆಯು ಕಾಮನ ಬಂದಿಯೆಂಬ ಒಂದು ಲೇಪನದ್ರವ್ಯವನ್ನು ಮಹಾರಾಣಿ ಸುದೇಷ್ಣೆಯು

(ಕೀಚಕನಿಗೆ) ಕಳಿಸಲು. ಕೀಚಕನು ದ್ರೌಪದಿಯನ್ನು ಕುರಿತು 'ನಾನು ತಿಳಿಯದೆ ನಿನ್ನೆಯ ದಿನ ನಿನಗೆ ನೋಯಿಸಿದೆ. ಈ ದಿನ ನನಗೆ ಹೇಳಬೇಕಾದುದನ್ನು ಹೇಳು' ಎಂದು ಅವಳ ಕಾಲಿಗೆ ಬಿದ್ದನು. 'ಒಳ್ಳೆಯದು ನಿನಗೆ ಇಷ್ಟು ಪ್ರೀತಿಯಿರುವುದಾದರೆ ನಾನು ಬೇಡವೆನ್ನುತ್ತೇನೆಯೆ?' ಎಂದಳು.

<u>ಕೀಚಕ ವಧೆ</u>

ವ|| ಎಂದು ನಂಬೆ ನುಡಿದು
ವಿರಾಟನ ನಾಟಕಶಾಲೆಯನೆ
ಪೂರ್ವಸೂಚಿತಕ್ರಮದೊಳ್
ಕುಱುಪುವೇೞ್ದು
ಸೂರ್ಯಾಸ್ತಮಯಸಮಯ
ದೊಳ್ ಭೀಮಸೇನಂಗೆ ತದ್ವೃ
ತ್ತಕಮನಱಪಿದೊಡೆ
ಬಾಹುಯುದ್ಧಸನ್ನದ್ಧನಾಗಿ
ಕಲಿಗಂಟಿಕ್ಕಿ
ಗಂಡುಡೆಯುಮನುಟ್ಟು

ಮೇಲುದನಿೞಿಯೆ ಮುಸುಕಿಟ್ಟು

ಪೋಗಿ ಗುಣಣೆಯ

ಬಾಗಿಲೊಳ್ ದ್ರೌಪದಿಯನಿರಿಸಿ

ವೀರಶ್ರೀಯ

ವಿವಾಹಮಂಟಪಮಂ

ಪುಗುವಂತೊಳಪೊಕ್ಕು-

ವಚನ:ಪದವಿಭಾಗ-

ಅರ್ಥ:ಎಂದು ನಂಬೆ ನುಡಿದು (ನಂಬುವ ಹಾಗೆ ಮಾತನಾಡಿ) ವಿರಾಟನ ನಾಟಕಶಾಲೆಯನೆ ಪೂರ್ವಸೂಚಿತ ಕ್ರಮದೊಳ್

ಕುಱುಪುವೇೞ್ದು (ಗುರುತು ಹೇಳಿ) ಸೂರ್ಯಾಸ್ತಮಯ ಸಮಯದೊಳ್ ಭೀಮಸೇನಂಗೆ ತದ್ ವೃತ್ತಕಮನು ಅಱಿಪಿದೊಡೆ (ಆ ಸಮಾಚಾರವನ್ನು ತಿಳಿಸಿದಾಗ) ಬಾಹುಯುದ್ಧ ಸನ್ನದ್ಧನಾಗಿ ಕಲಿಗಂಟಿಕ್ಕಿ (ವೀರಗಚ್ಚೆಯನ್ನು ಹಾಕಿ) ಗಂಡುಡೆಯುಮನುಟ್ಟು ಮೇಲುದನಿೞಿಯೆ

ಮುಸುಕಿಟ್ಟು ಪೋಗಿ (ಮೇಲುಹೊದಿಕೆಯನ್ನು ಮುಸುಕುಹಾಕಿಕೊಂಡು ಹೋಗಿ) ಗುಣಣೆಯ (ನಾಟ್ಯಶಾಲೆಯ) ಬಾಗಿಲೊಳ್ ದ್ರೌಪದಿಯನಿರಿಸಿ ವೀರಶ್ರೀಯ ವಿವಾಹಮಂಟಪಮಂ ಪುಗುವಂತೆ ಒಳಪೊಕ್ಕು-

ವಚನ:ಅರ್ಥ:(ದ್ರೌಪದಿಯು ಕೀಚಕನಿಗೆ), ಎಂದು ನಂಬುವ ಹಾಗೆ ಮಾತನಾಡಿ ಹಿಂದೆಯೇ

ಸೂಚಿತವಾದಂತೆ ವಿರಾಟನ ನಾಟಕಶಾಲೆಯನ್ನೇ ಗುರುತು ಹೇಳಿ ಸೂರ್ಯನು ಮುಳುಗುವ ವೇಳೆಯಲ್ಲಿ ಭೀಮಸೇನನಿಗೆ ಆ ಸಮಾಚಾರವನ್ನು ತಿಳಿಸಿದಾಗ, ಭೀಮಸೇನನು ಮಲ್ಲಯುದ್ಧಮಾಡುವುದಕ್ಕೆ ಸಿದ್ಧನಾಗಿ ವೀರಗಚ್ಚೆಯನ್ನು ಹಾಕಿ ಗಂಡಸಿನ ಉಡುಪನ್ನು ಧರಿಸಿ ಮೇಲುಹೊದಿಕೆಯನ್ನು

ಮುಸುಕುಹಾಕಿಕೊಂಡು
ಹೋಗಿ ದ್ರೌಪದಿಯನ್ನು
ನಾಟ್ಯಶಾಲೆಯ ಬಾಗಿಲಿನಲ್ಲಿ
ದ್ರೌಪದಿಯನ್ನು ಇರಿಸಿ
ವೀರಲಕ್ಷ್ಮಿಯ
ವಿವಾಹಮಂಟಪವನ್ನು
ಪ್ರವೇಶಮಾಡುವ ಹಾಗೆ
ಒಳಹೊಕ್ಕು- (ಒಳಹೊಕ್ಕನು)

ಕಂ|| ಸಿಂಗಬಲನೆಂಬಗುರ್ವಿನ
ಸಿಂಗಮನಸಿಧೇನುಕಿರಣಕೇಸ
ರಮಾಲಾ|

ಸಂಗತಮನಡಸಿ ನುಂಗಲ್
ಸಂಗತಬಲನೊಂದು
ಶರಭಮಿರ್ಪಂತಿರ್ದಂ|| ೭೪ ||

ಪದ್ಯ-೭೪:ಪದವಿಭಾಗ-ಅರ್ಥ: ಸಿಂಗಬಲನೆಂಬ ಅಗುರ್ವಿನ ಸಿಂಗಮನು (ಸಿಂಹಬಲನೆಂಬ ಅಹಂಕಾರದ ಸಿಂಹವನ್ನು) ಅಸಿಧೇನು ಕಿರಣ(ಕಠಾರಿಯ ಕಿರಣಗಳೆಂಬ) ಕೇಸರಮಾಲಾ ಸಂಗತಮನು ಅಡಸಿ (ಕೇಸರ

ಕೂದಲಿನ ಮಾಲೆಯಿಂದ ಕೂಡಿರುವ ಆ ಕೀಚಕನೆಂಬ ಸಿಂಹವನ್ನು ಅಡಸಿ- ಹಿಡಿದು) ನುಂಗಲ್ ಸಂಗತಬಲನು (ನುಂಗಲು ಶಕ್ತಿಯುಳ್ಳ ಭೀಮನು) ಒಂದು ಶರಭಂ ಇರ್ಪಂತೆ ಇರ್ದಂ (ಶರಭಮೃಗವಿರುವ ಹಾಗಿದ್ದನು.)

ಪದ್ಯ-೭೪:ಅರ್ಥ: . ಕತ್ತಿಯ ಕಿರಣಗಳೆಂಬ ಕೇಸರದ

ಮಾಲೆಯಿಂದ ಕೂಡಿರುವ ಸಿಂಹಬಲ (ಕೀಚಕ)ನೆಂಬ ಸಿಂಹವನ್ನು ಹಿಡಿದು ನುಂಗಲು ಭೀಮನು ಶಕ್ತಿಯುತವಾದ ಶರಭಮೃಗವಿರುವ ಹಾಗಿದ್ದನು. (ಶರಭವು ಎಂಟು ಕಾಲಿನ ಆನೆಯ ತಲೆ ಸಿಂಹದ ದೇಹವಿರುವ ಸಿಂಹವನ್ನೂ ಆನೆಯನ್ನೂ ಸೋಲಿಸುವ ಕಾಲ್ಪನಿಕ ಪ್ರಾಣಿ; ಕೆಲವೊಮ್ಮೆ ಸಿಂಹದ ತಲೆಯನ್ನೂ

ಸೇರಿಸುವರು. ಕರ್ನಾಟಹದ ಗಂಡಬೇರುಂಡ ಚಿಹ್ನೆಯನ್ನು ಎರಡು ಶರಭಗಳು ಎತ್ತಿ ಹಿಡಿದಿವೆ.)

ಕರ್ನಾಟಕದ ಮುದ್ರೆಯ ಚಹ್ನೆ -ಗಂಡಬೇರುಂಡ ಚಿಹ್ನೆಯನ್ನು ಎರಡು **ಶರಭಗಳು** ಎತ್ತಿ ಹಿಡಿದಿವೆ

ವ|| ಅನ್ನೆಗಮಿತ್ತ ಕೀಚಕನೆಂಬ ಪಾಣ್ಬಂ-

ವಚನ:ಪದವಿಭಾಗ-ಅರ್ಥ: ಅನ್ನೆಗಮಿತ್ತ ಕೀಚಕನೆಂಬ ಪಾಣ್ಬಂ-

ವಚನ:ಅರ್ಥ: ಆಷ್ಟುಹೊತ್ತಿಗೆ ಈ ಕಡೆ ಕೀಚಕನೆಂಬ ಜಾರನು-

ಉ||

ಅಚ್ಚಿಗದಿಂದಬಿಲ್ದಿನನಡಂಗದ ಬೇಸಳಂತೆ ನೀರೊಳಂ ಕಿಚ್ಚಿನೊಳಂ ಪೊರಳ್ದು ಪಗಲಂದಿರುಳಾದೊಡೆ ರಾಜ್ಯಮಾದವೋಲ್|

ಪೆರ್ಚೆ ಮನಕ್ಕೆ
ಬಿಚ್ಚತಿಕೆವಂದಿರೆ
ನಾಟಕಶಾಲೆವೊಕ್ಕು ವಿ
ದ್ಯುಚ್ಚಪಳಂ
ಮನೋಜಪರಿತಾಪದಿನೋಪ
ಳೆಗತ್ತು ಭೀಮನಂ|| ೭೫||

ಪದ್ಯ-೭೫:ಪದವಿಭಾಗ-

ಅರ್ಥ: ಅಚ್ಚಿಗದಿಂದ ಅಬಿಲ್ದು ಇನನು ಅಡಂಗದ ಬೇಸಳಂತೆ (ಕೀಚಕನು, ಸೂರ್ಯನು ಇನ್ನೂ ಅಸ್ತಮಯವಾಗದ

ಬೇಸರದಿಂದ ಅಳಲ್ದು-
ವ್ಯಥೆಪಟ್ಟು) ನೀರೊಳಂ
ಕಿಚ್ಚಿನೊಳಂ ಪೊರಳ್ದು
(ನೀರಿನಲ್ಲಿಯೂ
ಉರಿಯಲ್ಲಿಯೂ ಹೊರಳಾಡಿ)
ಪಗಲು ಅಂದು ಇರುಳಾದೊಡೆ
(ಹಗಲು ಕಳೆದು ರಾತ್ರಿಯಾದ
ತಕ್ಷಣ) ರಾಜ್ಯಮಾದವೋಲ್
ಪೆರ್ಚಿ(ರಾಜ್ಯಪ್ರಾಪ್ತಿಯಾದ
ಹಾಗೆ ಹೆಚ್ಚಿ- ಉಬ್ಬಿ) ಮನಕ್ಕೆ
ಬಿಚ್ಚತಿಕೆ ವಂದಿರೆ (ಮನಸ್ಸಿಗೆ

ಬಿಚ್ಚುವಿಕೆ ಬಂದಿರಲು,
ಹಿಗ್ಗಿರಲು, ಅರಳಿರಲು-
ಸಂತೋಷವುಂಟಾಗಿರಲು)
ನಾಟಕಶಾಲೆ ವೊಕ್ಕು ವಿದ್ಯುತ್
ಚಪಳಂ
ಮನೋಜಪರಿತಾಪದಿನ್
(ಮಿಂಚಿನ ಹಾಗೆ ಚಪಲನಾದ
ಕೀಚಕನು) ಓಪಳೆಗತ್ತು
ಭೀಮನಂ (ಓಪಳೆ- ಪ್ರಿಯೆ
ಗತ್ತು) (ಭೀಮನನ್ನು
ಪ್ರಿಯೆಯೆಂದೇ ಭಾವಿಸಿ-)

ಪದ್ಯ-೭೫:ಅರ್ಥ:
(ಕೀಚಕನು) ಸೂರ್ಯನು ಇನ್ನೂ ಅಸ್ತಮಯವಾಗದ ಬೇಸರದಿಂದ, ವ್ಯಥೆಪಟ್ಟು, ನೀರಿನಲ್ಲಿಯೂ ಉರಿಯಲ್ಲಿಯೂ ಹೊರಳಾಡಿ ಹಗಲು ಕಳೆದು ರಾತ್ರಿಯಾದ ತಕ್ಷಣ ರಾಜ್ಯಪ್ರಾಪ್ತಿಯಾದ ಹಾಗೆ ಉಬ್ಬಿ ಮನಸ್ಸಿಗೆ ಸಂತೋಷವುಂಟಾಗಿರಲು ನಾಟಕಶಾಲೆಯನ್ನು ಪ್ರವೇಶಿಸಿ

ಮಿಂಚಿನ ಹಾಗೆ ಚಪಲನಾದ ಕೀಚಕನು ಕಾಮತಾಪದಿಂದ ಭೀಮನನ್ನು ಪ್ರಿಯೆಯೆಂದೇ ಭಾವಿಸಿ-

ಚಂ|| ನುಡಿಯದೆ ಕೆಮ್ಮನಿರ್ಪಿರವಿದಾವುದು ಕಾರಣಮಾವುದೀ ಮೊಗಂ ಗುಡದಿರವಿಂತು ಕಣ್ಬಡಿಗರಪ್ಪರೆ ಮಾನಸರಪ್ಪರೆದು ಮೆ|

ಳ್ಪಡೆ ನುಡಿದೆಯ್ದವಂದು ಮುಸುಕಂ ತೆಗೆದಾಗಡೆ ಮೇಲೆವಾಯ್ದು ಬ ಲ್ದಡಿಗನವುಂಕಿ ಬಲ್ದಡಿಗನಂ ಪಿಡಿದೊರ್ಮೆಯೆ ಮಲ್ಲಯುದ್ಧದೊಳ್|| ೭೬ ||

ಪದ್ಯ-೭೬:ಪದವಿಭಾಗ-ಅರ್ಥ:ನುಡಿಯದೆ ಕೆಮ್ಮನಿರ್ಪ ಇರವು ಇದಾವುದು ಕಾರಣಂ ಆವುದು (ಮಾತನಾಡದೆ ಸುಮ್ಮನೆ

ಇರುವ ಈ ಸ್ಥಿತಿ ಇದಕ್ಕೆ
ಕಾರಣವೇನು?) ಈ
ಮೊಗಂಗುಡದೆ ಇರವಿಂತು
(ಮುಖವನ್ನು ತೋರಿಸದೇ
ಇರುವ ಈ ಸ್ಥಿತಿ ಇಂತು ಏಕೆ?)
ಕಣ್ಬಡಿಗರಪ್ಪರೆ
(ಕಣ್ಣುಕಟ್ಟುಮಾಡುವರು
ಅಪ್ಪರೇ?
ಮೋಸಗಾರರಾಗುವುದುಂಟೇ
?) ಮಾನಸರಪ್ಪರೆದು
ಮೆಳ್ಪಡೆ(ಮನುಷ್ಯರಾದವರು

ಕಪಟವೇ) ನುಡಿದು
ಎಯ್ದೆವಂದು (ಹೇಳಿ
ಸಮೀಪಕ್ಕೆ ಬಂದು) ಮುಸುಕಂ
ತೆಗೆದಾಗಡೆ ಮೇಲೆವಾಯ್ದು
(ಮುಸುಕನ್ನು ತೆಗೆದ ತಕ್ಷಣ
ಮೇಲೆಬಿದ್ದು) ಬಲ್ದಡಿಗನು
ಅವುಂಕಿ (ಒತ್ತಿ) ಬಲ್ದಡಿಗನಂ
ಪಿಡಿದು (ಬಲುದಾಂಡಿಗನಾದ
ಭೀಮನು ಬಲುದಾಂಡಿಗನಾದ
ಕೀಚಕನನ್ನು ಒತ್ತಿ
ಹಿಡಿದುಕೊಂಡು) ಒರ್ಮೆಯೆ

ಮಲ್ಲಯುದ್ಧದೊಳ್
(ಮಲ್ಲಯುದ್ಧದಲ್ಲಿ ಒಂದೇ
ಸಲಕ್ಕೆ-)
ಪದ್ಯ-೭೬:ಅರ್ಥ:
(ಇದೇನಿದು ಪ್ರಿಯೆ)
ಮಾತನಾಡದೆ ಸುಮ್ಮನೆ
ಇರುವ ಈ ಸ್ಥಿತಿ ಇದಕ್ಕೆ
ಕಾರಣವೇನು? ಮುಖವನ್ನು
ತೋರಿಸದೇ ಇರುವ ಈ ಸ್ಥಿತಿ
ಇಂತು ಏಕೆ?
ಮನುಷ್ಯರಾದವರು ಈ

ಸ್ಥಿತಿಯಲ್ಲಿ
ಮೋಸಗಾರರಾಗುವುದುಂಟೇ
?’ ಎಂದು ಹೇಳಿ ಸಮೀಪಕ್ಕೆ
ಬಂದು ಮುಸುಕನ್ನು ತೆಗೆದ
ತಕ್ಷಣ ಬಲುದಾಂಡಿಗನಾದ
ಭೀಮನು ಬಲುದಾಂಡಿಗನಾದ
ಕೀಚಕನನ್ನು ಅಮುಕಿ
ಹಿಡಿದುಕೊಂಡು
ಮಲ್ಲಯುದ್ಧದಲ್ಲಿ ಒಂದೇ
ಸಲಕ್ಕೆ-

ವ|| ಪೋರ್ದು
ಮಲ್ಲಾಮಲ್ಲಿಯಾಗೆ ಪಲವುಂ
ಗಾಯಗಳೊಳಾಯಂದಪ್ಪದೆ
ತನಗವಂ
ಸಮಾನಬಳನಪ್ಪುದಱಂ
ಪಿರಿದು ಪೊೞ್ತು ಸಂತರ್ಪಿನಂ
(?) ಪೋರ್ದು ಬಳೆಯ
ಪೇಱನಾನೆ ಮೆಟ್ಟಿದಂತೆ
ನುರ್ಚುನೂಱಪ್ಪಿನಮವುಂಕಿ
ಪಿಡಿದಡಸಿಯಗುರ್ವು ಪರ್ವೆ
ಬೀಸಿ ಗುಣಣೆಯ

ಕಂಭಂಗಳೊಳಂ ಕೇರ್ಗಳೊಳಮಾಸ್ಫೋಟಿಸಿ ತಾಟಿಸಿದಾಗಳ್-

ವಚನ:ಪದವಿಭಾಗ-

ಅರ್ಥ:ಪೋರ್ದು (ಹೋರಾಡಿ) ಮಲ್ಲಾಮಲ್ಲಿಯಾಗೆ (ದ್ವಂದ್ವ ಮಲ್ಲಯುದ್ಧವಾಗಲು) ಪಲವುಂ ಗಾಯಗಳೊಳು ಆಯಂದಪ್ಪದೆ (ಅನೇಕ ಪಟ್ಟುಗಳಲ್ಲಿ ತಂತ್ರಗಳನ್ನು

ತಪ್ಪದೆ) ತನಗವಂ ಸಮಾನ ಬಳನಪ್ಪುದಱಿಂ (ತನಗೆ ಅವನು ಸಮಾನಬಲನಾದುದರಿಂದ) ಪಿರಿದು ಪೊೞ್ತು ಸಂತರ್ಪಿನಂ ಪೋರ್ದುರ್(ಬಹಳ ಹೊತ್ತು ಸಮಾನನಾಗಿ ಹೋರಾಡಿ) ಬಳೆಯ ಪೇಱಿನು ಆನೆ ಮೆಟ್ಟಿದಂತೆ (ಬಳೆಯ ಪೇರು- ಹೇರು- ರಾಶಿಯನ್ನು ಆನೆಯು ತುಳಿದ ಹಾಗೆ)

ನುರ್ಚುನೂಱಿಪ್ಪಿನಂ ಅವುಂಕಿ (ನುಚ್ಚುನೂರಾಗುವಂತೆ ಅಮುಕಿ) ಪಿಡಿದು ಅಡಸಿಯು ಅಗುರ್ವು ಪರ್ವೆ (ಹಿಡಿದು ಬಿಗಿಯಾಗಿ ಒತ್ತಿ ಭಯವು ಹಬ್ಬಲು) ಬೀಸಿ ಗುಣಣೆಯ ಕಂಭಂಗಳೊಳಂ ಕೇರ್ಗಳೊಳಂ (ಬೀಸಿ ನಾಟ್ಯಶಾಲೆಯ ಕಂಭಗಳಿಗೂ ಗೋಡೆಗಳಿಗೂ) ಮಾಸ್ಫೋಟಿಸಿ

ತಾಟಿಸಿದಾಗಳ್- (ದೇಹ ಒಡೆಯುವಂತೆ ಬಡಿದಾಗ)
ವಚನ:ಅರ್ಥ:ಹೋರಾಡಿ ದ್ವಂದ್ವ ಮಲ್ಲಯುದ್ಧವಾಗಲು ಅನೇಕ ಪಟ್ಟುಗಳಲ್ಲಿ ತಂತ್ರಗಳನ್ನು ತಪ್ಪದೆ ತನಗೆ ಅವನು ಸಮಾನಬಲನಾದುದರಿಂದ ಬಹಳ ಹೊತ್ತು ಸಮಾನನಾಗಿ ಕಾದಿ ಬಳೆಯ ರಾಶಿಯನ್ನು ಆನೆಯು ತುಳಿದ ಹಾಗೆ

ನುಚ್ಚುನೂರಾಗುವಂತೆ
ಅಮುಕಿ ಹಿಡಿದು ಬಿಗಿಯಾಗಿ
ಒತ್ತಿ ಭಯವು ಹಬ್ಬಲು, ಬೀಸಿ
ನಾಟ್ಯಶಾಲೆಯ ಕಂಭಗಳಿಗೂ
ದೇಹ ಒಡೆಯುವಂತೆ
ಬಡಿದಾಗ-

ಕಂ|| ಬಿಸುನೆತ್ತರ್ ನೆಣನಡಗೆ
ಲ್ಪು ಸಮಸ್ತಂ ಸುರಿಯೆ ಕೈಗೆ
ತೊವಲುಱಿಯಲಗು|
ರ್ವಿಸಿದುದು ತೀವಿದ ಗುಳ್ಳೆಯ

ಪಸುಬೆಂಯಂ ಸೋರ್ಚಿದಂತೆ ತನು ಕೀಚಕನಾ|| ೭೭ ||

ಪದ್ಯ-೭೭:ಪದವಿಭಾಗ-ಅರ್ಥ:ಬಿಸುನೆತ್ತರ್ ನೆಣನ್ ಅಡಗು ಎಲ್ವು ಸಮಸ್ತಂ ಸುರಿಯೆ (ಬಿಸಿರಕ್ತ, ಕೊಬ್ಬು, ಮಾಂಸ, ಎಲುಬು ಎಲ್ಲವೂ ಸುರಿದುಹೋಗಲು) ಕೈಗೆ ತೊವಲು ಉೞಿಯಲು (ಕೈಯಲ್ಲಿ ಚರ್ಮ ಮಾತ್ರ ಉಳಿಯಲು)

ಅಗುರ್ವಿಸಿದುದು
(ಭಯಂಕರವಾಯಿತು)
ತೀವಿದ ಗುಳ್ಳೆಯ
ಪಸುಬೆಂಯಂ ಸೋರ್ಚಿದಂತೆ
ತನು ಕೀಚಕನಾ (ತುಂಬಿ
ಉಬ್ಬಿಕೊಂಡಿದ್ದ ದೇಹವು
ಹಸುಬೆಯ ಚೀಲವನ್ನು
ಅದರಲ್ಲಿದ್ದ ವಸ್ತುವನ್ನು
ಸುರುಗಿದಂತೆ) (ಕೀಚಕನ
ದೇಹವು
ಭಯಂಕರವಾಯಿತು)

ಪದ್ಯ-೭೭:ಅರ್ಥ: ಬಿಸಿರಕ್ತ, ಕೊಬ್ಬು, ಮಾಂಸ, ಎಲುಬು ಎಲ್ಲವೂ ಸುರಿದುಹೋಗಲು, ಕೈಯಲ್ಲಿ ಚರ್ಮ ಮಾತ್ರ ಉಳಿಯಿತು. (ಪದಾರ್ಥದಿಂದ) ತುಂಬಿ ಉಬ್ಬಿಕೊಂಡಿದ್ದ ಹಸುಬೆಯ ಚೀಲವನ್ನು ಅದರಲ್ಲಿದ್ದ ವಸ್ತುವನ್ನು ಖಾಲಿಮಾಡಿದಂತೆ ಕೀಚಕನ ದೇಹವು ಭಯಂಕರವಾಯಿತು.

ಉ|| ಆಂ ಜಗದೊಳ್

ಬಲಸ್ಥನೆನಿದಿರ್ಚುವರಾರೆನಗೆಂ

ದು ಸೋಲದಿಂ

ಕಂಜದಳಾಕ್ಷಿಯಂ ಪಿಡಿದನೀ

ಖಳನೆಂಬಟಿಲಿಂದಮತ್ತಮಿ|

ತ್ತಂ ಜವನೊಕ್ಕಲಿಕ್ಕಿದೊಡೆ

ನಾಟಕಶಾಲೆಯೊಳೆಯ್ದೆ ರಕ್ತ

ಪು

ಷ್ಪಾಂಜಳಿಗೆಯ್ದೆ

ಮಾೞ್ಕೆಯವೊಲಿರ್ದುವು

ಸೂಸಿದ ಖಂಡದಿಂಡೆಗಳ್|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ: ಆಂ ಜಗದೊಳ್ ಬಲಸ್ಥನೆಂ ಇದಿರ್ಚುವವರಾರು ಎನಗೆಂದು (ಜಗತ್ತಿನಲ್ಲಿ ನಾನೇ ಬಲಿಷ್ಠನು. ನನ್ನನ್ನು ಇದಿರಿಸುವವರಾರಿದ್ದಾರೆ ಎಂದು) ಸೋಲದಿಂ (ಮೋಹದಿಂದ) ಕಂಜದಳಾಕ್ಷಿಯಂ(ವಿಶಾಲಕಣ್ಣಿ

ನ ದ್ರೌಪದಿಯನ್ನು) ಪಿಡಿದನು
ಈ ಖಳನೆಂಬ ಅೞಲಿಂದಂ-
ಅಳಲು (ಈ ದುಷ್ಟನು
ಹಿಡಿದನು ಎಂಬ ದುಖದಿಂದ)
ಅತ್ತ ಮಿತ್ತಂ ಜವನು
ಒಕ್ಕಲಿಕ್ಕಿದೊಡೆ (ಯಮನು ಆ
ಕಡೆ ಈ ಕಡೆಗೆ
ಬಡಿದುಹಾಕಲಾಗಿ)
ನಾಟಕಶಾಲೆಯೊಳು ಎಯ್ದೆ
ರಕ್ತ ಪುಷ್ಪಾಂಜಳಿಗೆಯ್ದ
ಮಾೞ್ಕೆಯವೊಲ್ ಇರ್ದುವು

ಸೂಸಿದ ಖಂಡದಿಂಡೆಗಳ್ (ನಾಟಕಶಾಲೆಯಲ್ಲಿ ಚೆಲ್ಲಿದ ಮಾಂಸರಾಶಿಗಳು ಕೆಂಪುಹೂವುಗಳನ್ನು ಎರಚಿದ ರೀತಿಯಲ್ಲಿ ಇದ್ದುವು)

ಪದ್ಯ-೭೮:ಅರ್ಥ: ಜಗತ್ತಿನಲ್ಲಿ ನಾನೇ ಬಲಿಷ್ಠನು. ನನ್ನನ್ನು ಇದಿರಿಸುವವರಾರಿದ್ದಾರೆ ಎಂದು ಮೋಹದಿಂದ ಕಮಲದಳನೇತ್ರೆಯಾದ ದ್ರೌಪದಿಯನ್ನು ಈ ದುಷ್ಟನು

ಹಿಡಿದನು ಎಂಬ ದುಖದಿಂದ
ಯಮನು ಆ ಕಡೆ ಈ ಕಡೆಗೆ
ಬಡಿದುಹಾಕಲಾಗಿ
ನಾಟಕಶಾಲೆಯಲ್ಲಿ ಚೆಲ್ಲಿದ
ಮಾಂಸರಾಶಿಗಳು
ಕೆಂಪುಹೂವುಗಳನ್ನು ಎರಚಿದ
ರೀತಿಯಲ್ಲಿ ಇದ್ದುವು.

ವ|| ಅಂತು ಸಂಧಿ
ಸಂಧಿಯೊಳ್ ಸಹಸ್ರ
ಸಿಂಹಬಲನೆನಿಪ
ಸಿಂಹಬಲನನು ಅಶ್ರಮದೊಳೆ

ಬಾಣಸಿನ ಮನೆಯೊಳ್ ಬಂದಿರ್ದನಿತ್ತ ದ್ರೌಪದಿಯುಮುಪಾಯದೊಳ್ ಗುಣಿಣಿಯ ಮನೆಯ ಮುಂದೆ ನಿಂದು-

ವಚನ:ಪದವಿಭಾಗ-ಅರ್ಥ:

ಅಂತು ಸಂಧಿ ಸಂಧಿಯೊಳ್ ಸಹಸ್ರ ಸಿಂಹಬಲನೆನಿಪ ಸಿಂಹಬಲನನು ಶ್ರಮದೊಳೆ (ಕೀಲುಕೀಲುಗಳಲ್ಲಿಯೂ ಸಾವಿರ ಸಿಂಹದ

ಬಲವುಳ್ಳವನೆನಿಸಿದ
ಕೀಚಕನನ್ನು
ಅನಾಯಾಸದಿಂದ - ಕೊಂದು-
'ಅಧ್ಯಾಹಾರವಾಗಿದೆ')
ಬಾಣಸಿನ ಮನೆಯೊಳ್
ಬಂದಿರ್ದನು
(ಅಡುಗೆಮನೆಯನ್ನು
ಸೇರಿದನು). ಇತ್ತ
ದ್ರೌಪದಿಯುಂ
ಉಪಾಯದೊಳ್ ಗುಣಣೆಯ
ಮನೆಯ ಮುಂದೆ ನಿಂದು-

ವಚನ:ಅರ್ಥ:ಹಾಗೆ
ಭೀಮನು
ಕೀಲುಕೀಲುಗಳಲ್ಲಿಯೂ
ಸಾವಿರ ಸಿಂಹದ
ಬಲವುಳ್ಳವನೆನಿಸಿದ
ಕೀಚಕನನ್ನು
ಅನಾಯಾಸದಿಂದ ಕೊಂದು,
ಅಡುಗೆಮನೆಯನ್ನು
ಸೇರಿದನು. ಈ ಕಡೆ
ದ್ರೌಪದಿಯು ಉಪಾಯದಿಂದ

ನಾಟ್ಯಶಾಲೆಯ ಮುಂದುಗಡೆ ನಿಂತುಕೊಂಡು-

ಕಂ|| ಗಂಧರ್ವವನಿತೆಯೆಂ ನಿ
ರ್ಬಂಧಂ ಬೇಡಳಿಪೆ
ಸಾವೆಯೆನೆ ಮಾಣದೆ ಕಾ|
ಮಾಂಧಂ ಕೀಚಕನಾಟಿಸಿ
ಗಂಧರ್ವರಿನಱಿದನೆನಗೆ
ದೂಱಪ್ಪಿನೆಗಂ|| ೭೯ ||

ಪದ್ಯ-00:ಪದವಿಭಾಗ-

ಅರ್ಥ:ಗಂಧರ್ವವನಿತೆಯೆಂ ನಿರ್ಬಂಧಂ ಬೇಡ (ನಾನು

ಗಂಧರ್ವಪತ್ನಿ, ಬಲಾತ್ಕಾರ ಮಾಡಬೇಡ;) ಅಳಿಪೆ ಸಾವೆಯೆನೆ (ನನಗೆ ಅಳುಕಿದರೆ ಸಾಯುವೆ ಎನ್ನಲು,) ಮಾಣದೆ ಕಾಮಾಂಧಂ ಕೀಚಕನು (ಬಿಡದೆ ಕಾಮಾಂಧನಾದ ಕೀಚಕನು) ಆಟಿಸಿ (ಬಯಸಿ) ಗಂಧರ್ವರಿಂ ಅೞಿದಂ ಎನಗೆ ದೂಱಪ್ಪಿನೆಗಂ -ದೂರು ಅಪ್ಪುವಹಾಗೆ (ನನಗೆ ಅಪವಾದ ಬರುವಹಾಗೆ

ಗಂಧರ್ವರಿಂದ ಮರಣಹೊಂದಿದನು.)

ಪದ್ಯ-00:ಅರ್ಥ: ನಾನು ಗಂಧರ್ವಪತ್ನಿ, ಬಲಾತ್ಕಾರ ಮಾಡಬೇಡ; ನನಗೆ ಅಳುಕಿದರೆ ಸಾಯುವೆ ಎಂದರೂ, ಬಿಡದೆ ಕಾಮಾಂಧನಾದ ಕೀಚಕನು ಬಯಸಿ ನನಗೆ ಅಪವಾದ ಬರುವಹಾಗೆ ಗಂಧರ್ವರಿಂದ

ಮರಣಹೊಂದಿದನು.(ಎಂದು ದ್ರೌಪದಿ ಕೂಗಿಕೊಂಡಳು.)

ವ|| ಎಂದು ಗಗ್ಗರಿಕೆಗೊಳ್ವ ಪರಮಂ ಕರ್ಣಪರಂಪರೆಯಂ ಕೇಳ್ದು ಸಿಂಹಬಲನೊಡವುಟ್ಟಿದರ್ ನೂರ್ವರ್ ಕೀಚಕರುಂ ಪರಿತಂದು ಮುಳಿಸಿನೊಳ್ ಕಣ್ಗಾಣದೆಲ್ಲಮೀಡಾಮರ ಡಾಕಿನಿಯಿಂದಮಾದುದೀಕೆಗ ಮೆಮ್ಮಣ್ಣಂಗಮೊಂದೆ

ವಿಧಿಯಂ
ಮಾೞ್ತೆಮೆಂದಾಕೆಯಂ
ಮುಂದಿಟ್ಟು
ಪೋದರಿವನನಿರುಳೊಳೆ
ಸಂಸ್ಕರಿಸಲ್ವೇೞ್ಕುಮೆಂದು
ಕೊಂಡುಪೋಪಾಗಳಾ
ಕಳಕಳಮಂ ಭೀಮಸೇನಂ
ಕೇಳ್ದವಂದಿರೊಡನೆ
ರೂಪುಗರೆದು ಪೊೞಲಂ
ಪೊಱಮಟ್ಟು
ಬಱಸಿಡಿಲೆಱಗುವಂತೆ

ನಿಜಭುಜಶಿಖರಾಸ್ಫಾಲನಂಗೆಯ್ದು-

ವಚನ:ಪದವಿಭಾಗ-

ಅರ್ಥ:ಎಂದು ಗಗ್ಗರಿಕೆಗೊಳ್ವ ಸರಮಂ ಕರ್ಣಪರಂಪರೆಯಂ ಕೇಳ್ದು (ದುಃಖದಿಂದ ಗದ್ಗದಿಸುತ್ತಿರುವ ಕೂಗಿಕೊಳ್ಳುವ ದನಿಯನ್ನು ಕಿವಿಯಿಂದ ಕಿವಿಗೆ ಕೇಳಿ,) ಸಿಂಹಬಲನ್ ಒಡವುಟ್ಟಿದರ್ ನೂರ್ವರ್ ಕೀಚಕರುಂ

ಪರಿತಂದು (ಸಿಂಹಬಲರಾದ
ಕೀಚಕನ ಸಹೋದರರು
ನೂರುಜನ ಕೀಚಕರು
ಓಡಿಬಂದು) ಮುಳಿಸಿನೊಳ್
ಕಣ್ಗಾಣದೆ ಎಲ್ಲಂ ಈ ಡಾಮರ
ಡಾಕಿನಿಯಿಂದಂ ಆದುದು
ಈಕೆಗಂ ಎಮ್ಮಣ್ಣಂಗಂ ಒಂದೆ
ವಿಧಿಯಂ ಮಾೞ್ಪೆಮೆಂದು
(ಕೋಪದಿಂದ ಕುರುಡರಾಗಿ
ಎಲ್ಲವೂ ಈ ಕಷ್ಟಕೊಡುವ
ಡಾಕಿನಿಯಿಂದಾಯಿತು,

ಇವಳಿಗೂ ನಮ್ಮಣ್ಣನಿಗೂ ಒಂದೇ ರೀತಿಯ ಸಂಸ್ಕಾರವನ್ನು ಮಾಡುವೆವು ಎಂದು) ಆಕೆಯಂ ಮುಂದಿಟ್ಟು ಪೋದರು (ಅವಳನ್ನು ಮುಂದಿರಿಸಿಕೊಂಡು ಹೋದರು.) ಇವನನು ಇರುಳೊಳೆ ಸಂಸ್ಕರಿಸಲ್ವೇಱ್ಕುಂ ಎಂದು ಕೊಂಡುಪೋಪಾಗಳ್ (ಇವನನ್ನು ಈ ರಾತ್ರಿಯೇ ದಹನಕ್ರಿಯಾದಿಗಳಿಂದ

ಸಂಸ್ಕಾರ ಮಾಡಬೇಕು ಎಂದು ತೆಗೆದುಕೊಂಡು ಹೋಗುವಾಗ) ಆ ಕಳಕಳಮಂ ಭೀಮಸೇನಂ ಕೇಳ್ದು ಅವಂದಿರೊಡನೆ ರೂಪುಗರೆದು (ಆ ಗಲಭೆಯ ಶಬ್ದವನ್ನು ಭೀಮಸೇನನು ಕೇಳಿ ಅವರ ಜೊತೆಯಲ್ಲಿಯೇ ಆಕಾರವನ್ನು ಮರೆಮಾಡಿಕೊಂಡು) ಪೊೞಲಂ ಪೊಱಮಟ್ಟು (ಪಟ್ಟಣದಿಂದ ಹೊರಟು)

ಬಱಿಸಿಡಿಲ್ ಎಱಗುವಂತೆ ನಿಜಭುಜಶಿಖರ ಆಸ್ಫಾಲನಂಗೆಯ್ದು (ಬರಸಿಡಿಲು ಮೇಲೆ ಬೀಳುವ ಹಾಗೆ ತನ್ನ ತೋಳುಗಳನ್ನು ತಟ್ಟಿಕೊಂಡು)-

ವಚನ:ಅರ್ಥ:ಎಂದು ದುಃಖದಿಂದ ಗದ್ಗದಿಸುತ್ತಿರುವ ಕೂಗಿಕೊಳ್ಳುವ ದನಿಯನ್ನು ಕಿವಿಯಿಂದ ಕಿವಿಗೆ ಕೇಳಿ, ಸಿಂಹಬಲರಾದ ಕೀಚಕನ

ಸಹೋದರರು ನೂರುಜನ
ಕೀಚಕರು ಓಡಿಬಂದು
ಕೋಪದಿಂದ ಕುರುಡರಾಗಿ
ಎಲ್ಲವೂ ಈ
ಪಿಶಾಚಿಯಿಂದಾಯಿತು,
ಇವಳಿಗೂ ನಮ್ಮಣ್ಣನಿಗೂ
ಒಂದೇ ರೀತಿಯ
ಸಂಸ್ಕಾರವನ್ನು ಮಾಡುವೆವು
ಎಂದು, ಅವಳನ್ನು
ಮುಂದಿರಿಸಿಕೊಂಡು
ಹೋದರು. ಇವನನ್ನು ಈ

ರಾತ್ರಿಯೇ
ದಹನಕ್ರಿಯಾದಿಗಳಿಂದ
ಸಂಸ್ಕಾರ ಮಾಡಬೇಕು ಎಂದು
ತೆಗೆದುಕೊಂಡು ಹೋಗುವಾಗ
ಆ ಗಲಭೆಯ ಶಬ್ದವನ್ನು
ಭೀಮಸೇನನು ಕೇಳಿ ಅವರ
ಜೊತೆಯಲ್ಲಿಯೇ ಆಕಾರವನ್ನು
ಮರೆಮಾಡಿಕೊಂಡು
ಪಟ್ಟಣದಿಂದ ಹೊರಟು
ಬರಸಿಡಿಲು ಮೇಲೆ ಬೀಳುವ

ಹಾಗೆ ತನ್ನ ತೋಳುಗಳನ್ನು ತಟ್ಟಿಕೊಂಡು-

ಮ|| ವನಿತಾಹೇತುವೆ ಕೇತುವಾಯ್ತು ನಿಮಗಂ ಗಾಂಧರ್ವರಿಂದಿಂದು ನಿಮ್ಮ ನಿಷೇಕಂ ನೆರೆದತ್ತು ಸತ್ತಿರೆನುತ್ತುಂ ಪೊಕ್ಕಾರ್ದು ಕಾಳಾಂಬುದ|

ಧ್ವನಿಯಿಂ ಬಾೞೆಯ ಚೆಲ್ವನಪ್ಪ ಬನಮಂ ಕಾಡಾನೆ ಪೊಯ್ದಂತೆ ಪೊ

ಯ್ದಿನಿಸುಂ ಮಾಣದೆ ನೀಚ ಕೀಚಕನಿಕಾಯ ಧ್ವಂಸನಂ ಮಾಡಿದಂ|| ೮೦

ಪದ್ಯ-೮೦:ಪದವಿಭಾಗ-ಅರ್ಥ:ವನಿತಾಹೇತುವೆ ಕೇತುವಾಯ್ತು ನಿಮಗಂ (ನಿಮಗೂ ಹೆಣ್ಣಿನ ಕಾರಣವೇ ಕೇಡಿನ ಕೇತುಗ್ರಹವಾಯಿತು.) ಗಾಂಧರ್ವರಿಂದ ಇಂದು ನಿಮ್ಮ ನಿಷೇಕಂ ನೆರೆದತ್ತು (ಗಂಧರ್ವರಿಂದ ಈ ದಿನ

ನಿಮಗೆ ಪ್ರಸ್ಥವಾಯಿತು.)
ಸತ್ತಿರಿ ಎನುತ್ತುಂ ಪೊಕ್ಕು
ಆರ್ದು (ಸತ್ತಿರಿ ಎನ್ನುತ್ತ
ಹೊಕ್ಕು ಆರ್ಭಟಿಸಿ)
ಕಾಳಾಂಬುದ ಧ್ವನಿಯಿಂ
(ಕಾಲಮೇಘದ ಧ್ವನಿಯಿಂದ)
ಬಾಱೆಯ ಚೆಲ್ವನಪ್ಪ ಬನಮಂ
ಕಾಡಾನೆ ಪೊಯ್ದಂತೆ
(ಸುಂದರವಾದ ಬಾಳೆಯ
ತೋಟವನ್ನು ಕಾಡಾನೆಯು
ನಾಶಮಾಡುವಂತೆ) ಪೊಯ್ದು

ಇನಿಸುಂ ಮಾಣದೆ (ಹೊಡೆದು ಸ್ವಲ್ಪವೂ ಬಿಡದೆ) ನೀಚ ಕೀಚಕನಿಕಾಯ ಧ್ವಂಸನಂ (ಮಂ) ಮಾಡಿದಂ (ನೀಚರಾದ ಕೀಚಕಸಮೂಹವನ್ನು ಧ್ವಂಸಮಾಡಿದನು)

ಪದ್ಯ-೮೦:ಅರ್ಥ: ನಿಮಗೂ ಹೆಣ್ಣಿನ ಕಾರಣವೇ ಕೇಡಿನ ಕೇತುಗ್ರಹವಾಯಿತು. ಗಂಧರ್ವರಿಂದ ಈ ದಿನ ನಿಮಗೆ ಪ್ರಸ್ಥವಾಯಿತು. ಸತ್ತಿರಿ;

ಎನ್ನುತ್ತ ಹೊಕ್ಕು ಆರ್ಭಟಿಸಿ
ಕಾಲಮೇಘದ ಧ್ವನಿಯಿಂದ
ಸುಂದರವಾದ ಬಾಳೆಯ
ತೋಟವನ್ನು ಕಾಡಾನೆಯು
ನಾಶಮಾಡುವಂತೆ ಹೊಡೆದು
ಸ್ವಲ್ಪವೂ ಬಿಡದೆ ನೀಚರಾದ
ಕೀಚಕಸಮೂಹವನ್ನು
ಧ್ವಂಸಮಾಡಿದನು.

ವ|| ಅಂತಳವಿಗೞಿಯೆ ಕೊರ್ವಿದ ಕೀಚಕವನಮೆಲ್ಲಮೊಂದಿರು

ಚೊಳೆ ಸಾಹಸ

ಭೀಮನುದ್ದಾಮಕೋಪದವದ

ಹನಜ್ವಾಲಾ

ಸಹಸ್ರಂಗಳಿನಳ್ಕಿಮೆಳ್ಕಿದಂತಪ್

ಪುದುಂ ನೇಸಱು

ಮೂಡಿದಾಗಳಾ

ಪಡೆಮಾತನಿರ್ದರಿರ್ದಲ್ಲಿಯೆ

ಕೇಳ್ದು-

ವಚನ:ಪದವಿಭಾಗ-

ಅರ್ಥ:ಅಂತು ಅಳವಿಗೞಿಯೆ

ಕೊರ್ವಿದ (ಹಾಗೆ ಅಳತೆ

ಮೀರಿ ಕೊಬ್ಬಿದ)
ಕೀಚಕವನಮೆಲ್ಲಮಂ
ಒಂದಿರುಳೊಳೆ ಸಾಹಸ
ಭೀಮನು (ಕೀಚಕರೆಂಬ
ಕಾಡೆಲ್ಲವನ್ನೂ ಒಂದೇ
ರಾತ್ರಿಯಲ್ಲಿ ಸಾಹಸಭೀಮನು
) ಉದ್ದಾಮ ಕೋಪ ದವ
ದಹನಜ್ವಾಲಾ ಸಹಸ್ರಂಗಳಿಂ
(ಅತಿ ದೊಡ್ಡದಾದ
ಕೋಪವೆಂಬ ಕಾಡುಗಿಚ್ಚಿನ
ಸಾವಿರಾರು ಉರಿಗಳಿಂದ)

ಅಳ್ಕಿಮೆಳ್ಕಿದಂತಪ್ಪುದುಂ (ಅಳಿದು/ಸಿ ಸಾರಿಸಿದಂತೆ) ನೇಸಱು ಮೂಡಿದಾಗಳು ಆ ಪಡೆಮಾತನು ಇರ್ದರು ಇರ್ದಲ್ಲಿಯೆ ಕೇಳ್ದು- (ಸೂರ್ಯೋದಯವಾಗಲು ಆ ಸಮಾಚಾರವನ್ನು ಇದ್ದವರು ಇದ್ದಲ್ಲಿಯೇ ಕೇಳಿ)- **ವಚನ:ಅರ್ಥ:**ಹಾಗೆ ಅಳತೆ ಮೀರಿ ಕೊಬ್ಬಿದ ಕೀಚಕರೆಂಬ ಕಾಡೆಲ್ಲವನ್ನೂ ಒಂದೇ

ರಾತ್ರಿಯಲ್ಲಿ ಸಾಹಸಭೀಮನು ಅತಿ ದೊಡ್ಡದಾದ ಕೋಪವೆಂಬ ಕಾಡುಗಿಚ್ಚಿನ ಸಾವಿರಾರು ಉರಿಗಳಿಂದ ಅಳಿಸಿ ಸಾರಿಸಿದಂತೆ ಅಗಲು ಸೂರ್ಯೋದಯವಾಗಲು, ಆ ಸಮಾಚಾರವನ್ನು ಇದ್ದವರು ಇದ್ದಲ್ಲಿಯೇ ಕೇಳಿ-

ಮ|| ಪಡಲಿಟ್ಟಂತೆವೊಲಾಯ್ತು ಕೀಚಕಬಲಂ ಗಂಧರ್ವರಿಂದಿಂದಿರು

ಳ್ಗಡಿದೇಂ
ಸಂಗಡಮಿಱ್ತುವಾಯ್ತೆ
ಪೆಱವೆಣ್ಗೊಲ್ದಂಗಮೇನಾಗದಿಂ
|
ದುಡಿದತ್ತಾಗದೆ ಮತ್ಸ್ಯನೊಂದು
ಬಲಗೆಯ್ಯೊಂದಕ್ಕಟಾ
ಎಂಬುದಂ
ನುಡಿಯಲ್ಕಾರ್ತರುಮಿಲ್ಲ
ಪಾರದರದೊಳ್
ಸತ್ತಂಗಱಿಲ್ವನ್ನರಾರ್|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ಪಡಲಿಟ್ಟಂತೆವೊಲಾಯ್ತು ಕೀಚಕಬಲಂ (ಕೀಚಕರ ಗುಂಪು/ಸಮೂಹ ಚೆಲ್ಲಾಪಿಲ್ಲಿಯಾಯಿತು) ಗಂಧರ್ವರಿಂದ, ಇಂದು ಇರುಳ್ ಗಡ ಇದೇಂ ಸಂಗಡಮಿಟ್ಟುವಾಯ್ತೆ (ಈ ರಾತ್ರಿ ಗಡ-ನಿಜಕ್ಕೂ ಏನು ಸಾಮೂಹಿಕ ಮೃತ್ಯುವಾಯಿತೇ!) ಪೆಱವೆಣ್ಗೆ

ಒಲ್ದಂಗಂ ಏನಾಗದು
(ಪರಸ್ತ್ರೀಗೆ ಒಲಿದವನಿಗೆ
ಏನುತಾನೆ ಆಗುವುದಿಲ್ಲ?)
ಇಂದು ಉಡಿದತ್ತಾಗದೆ
ಮತ್ಸ್ಯನ (ವಿರಾಟನ) ಒಂದು
ಬಲಗೆಯ್ಯೆಂದು ಅಕ್ಕಟಾ (ಈ
ದಿನ ವಿರಾಟನ ಒಂದು ಬಲಗೈ
ಮುರಿದುಹೋಯಿತಲ್ಲವೇ,
ಅಕ್ಕಟಾ) ಎಂಬುದಂ
ನುಡಿಯಲ್ಕೆ ಆರ್ತರುಮಿಲ್ಲ
(ಅಯ್ಯೋ ಎಂದು ಹೇಳುವ

ದುಃಖಿತರೂ ಇಲ್ಲವಲ್ಲಾ)
ಪಾರದರದೊಳ್ ಸತ್ತಂಗೆ
ಅೞಲ್ವನ್ನರಾರ್ (ಹಾದರದಲ್ಲಿ
ಸತ್ತವರಿಗೆ ಅಳುವವರಾರು!)
ಪದ್ಯ-೮೧:ಅರ್ಥ: ಕೀಚಕರ
ಗುಂಪು/ಸಮೂಹ ರಾತ್ರಿ
ಗಂಧರ್ವರಿಂದ
ಚೆಲ್ಲಾಪಿಲ್ಲಿಯಾಯಿತು. ಈ
ರಾತ್ರಿ ಗಡ ಏನು ಸಾಮೂಹಿಕ
ಮೃತ್ಯವಾಯಿತೇ! ಪರಸ್ತ್ರೀಗೆ
ಒಲಿದವನಿಗೆ ಏನುತಾನೆ

ಆಗುವುದಿಲ್ಲ? ಈ ದಿನ
ವಿರಾಟನ ಒಂದು ಬಲಗೈ
ಮುರಿದುಹೋಯಿತಲ್ಲವೇ,
ಅಯ್ಯೋ ಎಂದು
ಹೇಳುವವರೂ ಇಲ್ಲವಲ್ಲಾ,
ಹಾದರರದಲ್ಲಿ ಸತ್ತವರಿಗೆ
ಅಳುವವರಾರು!

ಕಂ|| ರಾವಣನುಂ ಗಡ ಸೀತಾ
ದೇವಿಗೆ ಸೋಲ್ತದಱ
ಫಲಮನೆಯ್ದಿದನಿವನಾ|
ರಾವಣನಿಂ ಪಿರಿಯನೆ ಪೇ

ಟೀವುದೊ ಶುಚಿಯಲ್ಲದವನ ಗಂಡುಂ ತೊಂಡುಂ|| ೮೨||

ಪದ್ಯ-೮೨:ಪದವಿಭಾಗ-ಅರ್ಥ:ರಾವಣನುಂ ಗಡ ಸೀತಾದೇವಿಗೆ ಸೋಲ್ತದಱ ಫಲಮನು ಎಯ್ದಿದನು (ರಾವಣನೂ ಸಹ ಸೀತಾದೇವಿಗೆ ಮೋಹಿಸಿ ಅದರ ಫಲವನ್ನು ಹೊಂದಿದನು ಗಡ!) ಇವನು ಆ ರಾವಣನಿಂ ಪಿರಿಯನೆ ಪೇೞ್

(ಇವನು ಆ ರಾವಣನಿಗಿಂತ ದೊಡ್ಡವನೇ ಹೇಳು.) ಪೇಟ್, ಏವುದೊ ಶುಚಿಯಲ್ಲದವನ ಗಂಡುಂ ತೊಂಡುಂ (ಶುದ್ಧನಡತೆಯಿಲ್ಲದವನ ಪೌರುಷವು ಕೇವಲ ತೊಂಡು - ಪುಂಡತನ)

ಪದ್ಯ-೮೨:ಅರ್ಥ:ರಾವಣನೂ ಸಹ ಸೀತಾದೇವಿಗೆ ಮೋಹಿಸಿ ಅದರ ಫಲವನ್ನು ಹೊಂದಿದನು ಗಡ!. ಇವನು ಆ

ರಾವಣನಿಗಿಂತ ದೊಡ್ಡವನೇ ಹೇಳು. ಶುದ್ಧನಡತೆಯಿಲ್ಲದವನ ಪೌರುಷವು ಕೇವಲ ತೊಂಡು - ಪುಂಡತನ.

<u>ಕೌರವರಿಂದ ಗೋಗ್ರಹಣ</u>

ವ|| ಎಂದು ಪೊಱಲ ಜನಂಗಳ್ ಗುಜುಗುಜುಗೊಂಡು ಕೀಚಕನ ಪಡೆಮಾತನೆ ನುಡಿಯೆ

ವಿರಾಟನ ಮಹಾದೇವಿಯುಂ
ಪೇಡಿ
ಸತ್ತಂತೇನುಮನೆನಲಱಿಯದೆ
ನಾಣ್ಚಿ ತನ್ನೊಳೆ
ಮೂಗೞ್ಕೆಯನಱ್ತು
ಕೆಮ್ಮನಿರ್ದಳಿತ್ತ
ದುರ್ಯೋಧನನ
ಗೂಢಪ್ರಣಿಧಿಗಳಾ ಮಾತಂ
ಜಲಕ್ಕನಱಿದು ನಾಗಪುರಕ್ಕೆ
ವಂದು ಸುಯೋಧನ

ಸಭಾಮಧ್ಯದೊಳಿಂತೆಂದು ಬಿನ್ನಪಂಗೆಯ್ದರ್-

ವಚನ:ಪದವಿಭಾಗ-

ಅರ್ಥ:ಎಂದು ಪೊೞಲ ಜನಂಗಳ್ ಗುಜುಗುಜುಗೊಂಡು (ಈ ರೀತಿ ಪಟ್ಟಣದ ಜನಗಳು ಗುಂಪುಕೂಡಿಕೊಂಡು) ಕೀಚಕನ ಪಡೆಮಾತನೆ ನುಡಿಯೆ (ಕೀಚಕನ ವಿಷಯವಾದ ಸುದ್ದಿಯನ್ನೇ

ಆಡುತ್ತಿರಲು) ವಿರಾಟನ
ಮಹಾದೇವಿಯುಂ ಪೇಡಿ
ಸತ್ತಂತೆ ಏನುಮನು
ಎನಲಱಿಯದೆ ನಾಣ್ಚಿ
ತನ್ನೊಳೆ
ಮೂಗೞ್ಕೆಯನಟ್ಟು(ವಿರಾಟ
ನ ಮಹಾರಾಣಿಯಾದ
ಸುದೇಷ್ಣೆಯೂ ಹೇಡಿ ಸತ್ತ
ಹಾಗಾಗಲು, ಏನನ್ನು
ಹೇಳಲೂ ತಿಳಿಯದೆ
ಲಜ್ಜೆಪಟ್ಟು ತನ್ನಲ್ಲಿಯೇ

ಮೂಗಳುವನ್ನು ಅತ್ತು)
ಕೆಮ್ಮನಿರ್ದಳು
(ಸುಮ್ಮನಿದ್ದಳು) ಇತ್ತ
ದುರ್ಯೋಧನನ
ಗೂಢಪ್ರಣಿಧಿಗಳು (ಈ ಕಡೆ
ದುರ್ಯೋಧನನ
ಗೂಢಚಾರರು) ಆ ಮಾತಂ
ಜಲಕ್ಕನಱಿದು ನಾಗಪುರಕ್ಕೆ
ವಂದು (ಆ ಮಾತನ್ನು ಥಟ್ಟನೆ
ತಿಳಿದು ಹಸ್ತಿನಾವತಿಗೆ ಬಂದು)
ಸುಯೋಧನ

ಸಭಾಮಧ್ಯದೊಳ್ ಇಂತೆಂದು ಬಿನ್ನಪಂಗೆಯ್ದರ್ (ದುರ್ಯೋಧನನ ಸಭೆಯ ಮಧ್ಯದಲ್ಲಿ ಹೀಗೆಂದು ವಿಜ್ಞಾಪನೆ ಮಾಡಿದರು)-

ವಚನ:ಅರ್ಥ:ಈ ರೀತಿ ಪಟ್ಟಣದ ಜನಗಳು ಗುಂಪುಕೂಡಿಕೊಂಡು ಕೀಚಕನ ವಿಷಯವಾದ ಸುದ್ದಿಯನ್ನೇ ಆಡುತ್ತಿರಲು ವಿರಾಟನ ಮಹಾರಾಣಿಯಾದ

ಸುದೇಷ್ಣೆಯೂ ಹೇಡಿ ಸತ್ತ
ಹಾಗಾಗಲು, ಏನನ್ನು
ಹೇಳಲೂ ತಿಳಿಯದೆ
ಲಜ್ಜೆಪಟ್ಟು ತನ್ನಲ್ಲಿಯೇ
ಮೂಗಳುವನ್ನು ಅತ್ತು
ಸುಮ್ಮನಿದ್ದಳು. ಈ ಕಡೆ
ದುರ್ಯೋಧನನ
ಗೂಢಚಾರರು ಆ ಮಾತನ್ನು
ಥಟ್ಟನೆ ತಿಳಿದು ಹಸ್ತಿನಾವತಿಗೆ
ಬಂದು ದುರ್ಯೋಧನನ

ಸಭೆಯ ಮಧ್ಯದಲ್ಲಿ ಹೀಗೆಂದು ವಿಜ್ಞಾಪನೆ ಮಾಡಿದರು.

ಮ|| ಗುಡಿಗಂ
ಬದ್ದವಣಕ್ಕಮಪ್ಪ
ಪಡೆಮಾತೇಮಾತಿದಂ
ಕೇಳ್ದೊಡೀ
ಗಡೆ ಮೆಚ್ಚೀಯಲೆವೇೞ್ಪುದೆಯ್ದೆ
ಪರಮದ್ರೋಹರ್ಕಳಾಗಿರ್ದ
ನಿ
ಮ್ಮಡಿಯೊಳ್ ಪೋಗದೆ
ಕಾಡುತಿರ್ದ ಸುಭಟರ್ಕಳ್

ನೂರ್ವರುಂ ಕೀಚಕರ್ ಮಡಿದರ್ ದೇವರದೊಂದು ಪುಣ್ಯಬಲದಿಂ ಗಂಧರ್ವಯುದ್ಧಾಗ್ರದೊಳ್|| ೮೩ ||

ಪದ್ಯ-೮೩:ಪದವಿಭಾಗ-ಅರ್ಥ:ಗುಡಿಗಂ ಬದ್ದವಣಕ್ಕಂ ಅಪ್ಪ ಪಡೆಮಾತು ('ಬಾವುಟ ಹಾರಿಸಲೂ ಮಂಗಳವಾದ್ಯಕ್ಕೂ ಯೋಗ್ಯವಾದ ಸಮಾಚಾರ')

ಏ ಮಾತು ಇದಂ ಕೇಳ್ದೊಡೆ (ಅದೇನು ಅಂತಹ ಸುದ್ದಿ ಎಂದು ಕೇಳಿದರೆ,) ಈಗಡೆ ಮೆಚ್ಚ ಈಯಲೆವೇಟ್ಟುದು ಎಯ್ದೆ (ಇದನ್ನು ಕೇಳಿದ ತಕ್ಷಣವೇ ನಮಗೆ ಬಹುಮಾನವನ್ನು ಕೊಟ್ಟೇ ತೀರಬೇಕಾದುದು) ಪರಮದ್ರೋಹರ್ಕಳು ಆಗಿರ್ದು ನಿಮ್ಮಡಿಯೊಳ್ ಪೋಗದೆ ಕಾಡುತಿರ್ದ (ನಿಮ್ಮ

ಪರಮ ದ್ರೋಹಿಗಳಾಗಿದ್ದು
ನಿಮ್ಮನ್ನು ಸದಾ ಹಿಂಸಿಸುತ್ತಿದ್ದ)
ಸುಭಟರ್ಕಳ್ ನೂರ್ವರುಂ
ಕೀಚಕರ್ ಮಡಿದರ್
(ನೂರುಜನ ಕೀಚಕರೂ ನಿಮ್ಮ
ಒಂದು ಪುಣ್ಯಬಲದಿಂದ
ಗಂಧರ್ವರೊಡನೆ ಆದ
ಯುದ್ಧದಲ್ಲಿ ಸತ್ತರು)
ದೇವರದೊಂದು
ಪುಣ್ಯಬಲದಿಂ
ಗಂಧರ್ವಯುದ್ಧಾಗ್ರದೊಳ್

(ನಿಮ್ಮ ಒಂದು ಪುಣ್ಯಬಲದಿಂದ ಗಂಧರ್ವರೊಡನೆ ಆದ ಯುದ್ಧದಲ್ಲಿ ಸತ್ತರು.)

ಪದ್ಯ-೮೨:ಅರ್ಥ:

ಗುಪ್ತಚರರು,‘ಬಾವುಟ ಹಾರಿಸಲೂ ಮಂಗಳವಾದ್ಯಕ್ಕೂ ಯೋಗ್ಯವಾದ ಸಮಾಚಾರ’ ಎಂದರು. ಅದೇನು ಅಂತಹ ಸುದ್ದಿ ಎಂದು ಕೇಳಿದರೆ,

ಇದನ್ನು ಕೇಳಿದ ತಕ್ಷಣವೇ
ನಮಗೆ ಬಹುಮಾನವನ್ನು
ಕೊಟ್ಟೇ ತೀರಬೇಕಾದುದು.
‘ನಿಮ್ಮ ಪರಮ
ದ್ರೋಹಿಗಳಾಗಿದ್ದು ನಿಮ್ಮನ್ನು
ಸದಾ ಹಿಂಸಿಸುತ್ತಿದ್ದ
ನೂರುಜನ ಕೀಚಕರೂ ನಿಮ್ಮ
ಪುಣ್ಯಬಲದಿಂದ
ಗಂಧರ್ವರೊಡನೆ ಆದ
ಯುದ್ಧದಲ್ಲಿ ಸತ್ತರು, ಎಂದರು.

ವ|| ಅದು ಕಾರಣದಿಂದಾ ವಿರಾಟನ ಮಂಡಲಂ ಗೋಮಂಡಲದಂತೆ ಹೇಳಾಸಾಧ್ಯಮಾಗಿ ಕೈಗೆವರ್ಕುಮೆಂಬುದುಂ ಕುರುರಾಜಂ ಸಿಂಧುತನೂಜನ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಅದು ಕಾರಣದಿಂದ ಆ ವಿರಾಟನ ಮಂಡಲಂ ಗೋಮಂಡಲದಂತೆ (ಆದ

ಕಾರಣದಿಂದ ವಿರಾಟದೇಶವು
ಪಶುವಿನ ಹಿಂಡಿನಂತೆ) ಹೇಳಾ
ಸಾಧ್ಯಮಾಗಿ ಕೈಗೆವರ್ಕುಂ
ಎಂಬುದುಂ (ಆಟದಷ್ಟು
ಸುಲಭಸಾಧ್ಯವಾಗಿ
ಕೈವಶವಾಗುತ್ತದೆ’ ಎಂದು
ಹೇಳಲು) ಕುರುರಾಜಂ
ಸಿಂಧುತನೂಜನ ಮೊಗಮಂ
ನೋಡಿ(ದುರ್ಯೋಧನನು
ಭೀಷ್ಮಾಚಾರ್ಯರ
ಮುಖವನ್ನು ನೋಡಿ)-

ವಚನ:ಅರ್ಥ:ಆದ ಕಾರಣದಿಂದ ವಿರಾಟದೇಶವು ಪಶುವಿನ ಹಿಂಡಿನಂತೆ ಆಟದಷ್ಟು ಸುಲಭಸಾಧ್ಯವಾಗಿ ಕೈವಶವಾಗುತ್ತದೆ’ ಎಂದು ಹೇಳಲು, ದುರ್ಯೋಧನನು ಭೀಷ್ಮಾಚಾರ್ಯರ ಮುಖವನ್ನು ನೋಡಿ- ಹೇಳಿದನು-

ಮ|| ಇದು ದಲ್

ಚೋದ್ಯಮತರ್ಕ್ಯಮದ್ಭುತಮ

ಸಂಭಾವ್ಯಂ ವಿಚಾರಕ್ಕೆ ಬಾ
ದುದೆಂತೆಂದೊಡೆ ಸಂದ
ಸಿಂಹಬಲನಂ ಕೊಲ್ವನ್ನರಾರ್
ಭೀಮನ
ಲ್ಲದವರ್ ಕೀಚಕ ಭೀಮ ಶಲ್ಯ
ಬಲದೇವರ್ಕಳ್ ಸಮಾನರ್ಕಳ
ಪ್ಪುದಱಿಂ ತೋಳ್ವಲದೊಳ್
ಪೆಱಂಗಮರಿದೀ
ವಿಕ್ರಾಂತಮುಂ ಗರ್ವಮುಂ||
ಲಳ ||

ಪದ್ಯ-೮೪:ಪದವಿಭಾಗ-ಅರ್ಥ:ಇದು ದಲ್ ಚೋದ್ಯಂ (ಮ) ಅತರ್ಕ್ಯಂ ಅದ್ಭುತಂ ಅಸಂಭಾವ್ಯಂ ವಿಚಾರಕ್ಕೆ ಬಾರದುದು ಎಂತೆಂದೊಡೆ (ಇದು ನಿಜವಾಗಿಯೂ ಆಶ್ಚರ್ಯಕರವಾದುದು, ತರ್ಕಿಸಲಾಗದುದು, ಅದ್ಭುತವಾದುದು, ನಡೆಯಲಾರದುದು, ವಿಚಾರ ಸಿಗದ್ದು; ಹೇಗೆಂದರೆ) ಸಂದ

ಸಿಂಹಬಲನಂ (ಪ್ರಸಿದ್ಧನಾದ
ಸಿಂಹಬಲನನ್ನು) ಕೊಲ್ವ
ಅನ್ನರಾರ್ ಭೀಮನು
ಅಲ್ಲದವರ್ (ಪ್ರಸಿದ್ಧನಾದ
ಸಿಂಹಬಲನನ್ನು
ಭೀಮನಲ್ಲದವರುಕೊಲ್ಲುವವ
ರು ಬೇರೆ ಯಾರಿದ್ದಾರೆ?)
ಕೀಚಕ ಭೀಮ ಶಲ್ಯ
ಬಲದೇವರ್ಕಳ್
ಸಮಾನರ್ಕಳು ಅಪ್ಪುದಱಿಂ
(ಬಾಹುಬಲದಲ್ಲಿ ಕೀಚಕ,

ಭೀಮ, ಶಲ್ಯ,
ಬಲದೇವರುಗಳು
ಸಮಾನರಾಗಿರುವುದರಿಂದ)
ತೋಳ್ವಲದೊಳ್ ಪೆಱಂಗಂ
ಅರಿದು ಈ ವಿಕ್ರಾಂತಮುಂ
ಗರ್ವಮುಂ(ತೋಳುಬಲದಲ್ಲಿ
ಈ ಪರಾಕ್ರಮವೂ ಗರ್ವವೂ
ಇತರರಿಗೆ ಅಸಾಧ್ಯ.)

ಪದ್ಯ-೮೪:ಅರ್ಥ: ಇದು
ನಿಜವಾಗಿಯೂ
ಆಶ್ಚರ್ಯಕರವಾದುದು,

ತರ್ಕಿಸಲಾಗದುದು,
ಅದ್ಭುತವಾದುದು,
ನಡೆಯಲಾರದುದು, ವಿಚಾರ
ಸಿಗದ್ದು; ಹೇಗೆಂದರೆ
ಪ್ರಸಿದ್ಧನಾದ ಸಿಂಹಬಲನನ್ನು
ಭೀಮನಲ್ಲದವರುಕೊಲ್ಲುವವ
ರು ಬೇರೆ ಯಾರಿದ್ದಾರೆ?
ಬಾಹುಬಲದಲ್ಲಿ ಕೀಚಕ,
ಭೀಮ, ಶಲ್ಯ,
ಬಲದೇವರುಗಳು
ಸಮಾನರಾಗಿರುವುದರಿಂದ,

ತೋಳುಬಲದಲ್ಲಿ ಈ
ಪರಾಕ್ರಮವೂ ಗರ್ವವೂ
ಇತರರಿಗೆ ಅಸಾಧ್ಯ.

**ವ|| ಅದಱಿಂ
ಪಾಂಡವರೈವರುಂ
ವಿರಾಟಪುರದೊಳಿರ್ದರಾಗಲೆ
ವೇೞ್ಕುಮವರಿರ್ದರಪ್ಪೊಡೆ-**

ವಚನ:ಪದವಿಭಾಗ-

ಅರ್ಥ:ಅದಱಿಂ ಪಾಂಡವರು
ಐವರುಂ ವಿರಾಟಪುರದೊಳು
ಇರ್ದರ್ ಆಗಲೆವೇೞ್ಕುಂ

(ಇರುವುದು ನಿಜವಾಗಿರಲೇಬೇಕು) ಅವರ್ ಇರ್ದರಪ್ಪೊಡೆ-

ವಚನ:ಅರ್ಥ: ಆದುದರಿಂದ ಪಾಂಡವರೈದು ಜನವೂ ವಿರಾಟನಗರದಲ್ಲಿ ಇರುವುದು ನಿಜವಾಗಿರಲೇಬೇಕು. ಅವರು ಇರುವುದಾದರೆ-

ಚಂ|| ಪರಿಭವದೊಂದು ತುತ್ತ ತುದಿ ಕೃಷ್ಣೆಯ ಬನ್ನದೊಳಾಗೆ ಜೂದಿನೊಳ್

ಪೊರಸಟ್ಟಿವಂತೆ

ತಮ್ಮರಸುಗೆಟ್ಟು

ಕಟಿಲ್ದೆರ್ದೆಗೆಟ್ಟರಣ್ಯದೊಳ್|

ತಿರಿತರುತಿರ್ದ ಕಣ್ಬಡಿಗರನ್

ಮಗುಳ್ದುಂ ಬಿಱುತೋಡಿ

ಬೇಡರೊಳ್

ನೆರೆದಿರಲಲ್ಲದೊಡ್ಡಯಿಸಿ

ರಾಜ್ಯದೊಳೇಂ ನೆರೆಯಲ್ಕೆ

ತೀರ್ಗುಮೋ|| ೮೫ ||

ಪದ್ಯ-೮೫:ಪದವಿಭಾಗ-

ಅರ್ಥ:ಪರಿಭವದ ಒಂದು

ತುತ್ತ ತುದಿ ಕೃಷ್ಣೆಯ
ಬನ್ನದೊಳಾಗೆ (ಸೋಲಿನ
ಪರಾಕಾಷ್ಠೆಯು ದ್ರೌಪದಿಯ
ಅವಮಾನದಲ್ಲಾಗಲು)
ಜೂದಿನೊಳ್
ಪೊರಸಟೀವಂತೆ
(ಪಾರಿವಾಳವು
ನಾಶವಾಗುವಂತೆ) ತಮ್ಮ
ಅರಸುಗೆಟ್ಟು ಕಟಿಲ್ದ
ಎರ್ದೆಗೆಟ್ಟು (ಜೂಜಿನಲ್ಲಿ ತಮ್ಮ
ರಾಜ್ಯವನ್ನು ಕಳೆದುಕೊಂಡು,

ದುರ್ಬಲರಾಗಿ ಧೈರ್ಯಗೆಟ್ಟು)
ಅರಣ್ಯದೊಳ್ ತಿರಿತರುತಿರ್ದ
ಕಣ್ಬಡಿಗರನ್(ಕಾಡಿನಲ್ಲಿ
ಅಲೆದಾಡುತ್ತಿರುವ
ಮೋಸಗಾರರು) ಮಗುಳ್ದುಂ
ಬಿಱುತೋಡಿ (ಪುನ ಹೆದರಿ
ಓಡಿಹೋಗಿ) ಬೇಡರೊಳ್
ಬೆರೆದಿರಲಲ್ಲದೆ (ಬೇಡರಲ್ಲಿ
ಸೇರಿರಬೇಕಲ್ಲದೆ) ಒಡ್ಡಯಿಸಿ
ರಾಜ್ಯದೊಳೇಂ ನೆರೆಯಲ್ಕೆ
ತೀರ್ಗುಮೋ (ಗುಂಪಾಗಿ

ರಾಜ್ಯದಲ್ಲಿ ಸೇರಿರುವುದು ಸಾಧ್ಯವೇ?)

ಪದ್ಯ-೮೫:ಅರ್ಥ:ಸೋಲಿನ ಪರಾಕಾಷ್ಠೆಯು ದ್ರೌಪದಿಯ ಅವಮಾನದಲ್ಲಾಗಲು ಪಾರಿವಾಳವು ನಾಶವಾಗುವಂತೆ ಜೂಜಿನಲ್ಲಿ ತಮ್ಮ ರಾಜ್ಯವನ್ನು ಕಳೆದುಕೊಂಡು, ದುರ್ಬಲರಾಗಿ ಧೈರ್ಯಗೆಟ್ಟು, ಕಾಡಿನಲ್ಲಿ ಅಲೆದಾಡುತ್ತಿರುವ

ಮೋಸಗಾರರು ಪುನ ಹೆದರಿ ಓಡಿಹೋಗಿ ಬೇಡರಲ್ಲಿ ಸೇರಿರಬೇಕಲ್ಲದೆ ಗುಂಪಾಗಿ ರಾಜ್ಯದಲ್ಲಿ ಸೇರಿರುವುದು ಸಾದ್ಯವೇ? ಎಂದ ದುರ್ಯೋಧನ.

ವ|| ಎಂಬುದುಮಾ ಕೌರವನ ಮಾತಿಂಗಮರಾಪಗಾನಂದನ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ

ಕೌರವನ ಮಾತಿಂಗೆ

ಅಮರಾಪಗಾನಂದನನು

(ಗಂಗೆಯ ಮಗ ಭೀಷ್ಮ)

ಇಂತೆಂದಂ-

ವಚನ:ಅರ್ಥ:ವ|| ಆ

ದುರ್ಯೋಧನನ ಮಾತಿಗೆ

ಭೀಷ್ಮನು ಹೇಳಿದನು

ಮ|| ಸ್ರ|| ರಸೆಯೊಳ್

ಕಾಲಾಗ್ನಿರುದ್ರಂ

ಜಲಶಯನದೊಳಂಭೋಜನಾ

ಭಂ ಪೊದಳ್ದಾ|

ಗಸದಿಂ
ಸುತ್ತಿರ್ದಜಾಂಡೋದರದೊಳ
ಜನಡಂಗಿರ್ಪವೋಲ್
ಕಾರಣಕ್ಕೆಂ||
ದೊಸೆದಿರ್ದರ್ ಪಾಂಡವರ್
ಕಾನನದೊಳಿರದವರ್
ನನ್ನಿಯಂ ತಪ್ಪೆಯುಂ ಸ
ಪ್ತಸಮುದ್ರಂ ಮೇರೆಯಂ
ತಪ್ಪೆಯುಮೊಳರೆ
ಬಿಗುರ್ತಾಂಪವರ್
ರಾಜರಾಜಾ|| ೮೬ ||

ಪದ್ಯ-೮೬:ಪದವಿಭಾಗ-ಅರ್ಥ:ರಸೆಯೊಳ್ ಕಾಲಾಗ್ನಿರುದ್ರಂ (ಕಾಲಾಗ್ನಿರುದ್ರನು ರಸಾತಳದಲ್ಲಿಯೂ) ಜಲಶಯನದೊಳ್ ಅಂಭೋಜನಾಭಂ (ವಿಷ್ಣುವು ಜಲಶಯನದಲ್ಲಿಯೂ) ಪೊದಳ್ದ ಆಗಸದಿಂ ಸುತ್ತಿರ್ದ ಅಜಾಂಡೋದರದೊಳು ಅಜನು ಅಡಂಗಿರ್ಪವೋಲ್ (

ಆಕಾಶದಿಂದ ಸುತ್ತಿರುವ ಬ್ರಹ್ಮಾಂಡದ ಮಧ್ಯಭಾಗದಲ್ಲಿ ಬ್ರಹ್ಮನು ಅಡಗಿರುವ ಹಾಗೆ) ಕಾರಣಕ್ಕೆ ಎಂದು ಒಸೆದಿರ್ದರ್ ಪಾಂಡವರ್ ಕಾನನದೊಳು ಇರ್ದರ್ (ಒಂದು ಕಾರಣಕ್ಕಾಗಿ ಪಾಂಡವರು ಇಷ್ಟಪಟ್ಟು ಕಾಡಿನಲ್ಲಿ ಇದ್ದರು.) ನನ್ನಿಯಂ ತಪ್ಪೆಯುಂ ಸಪ್ತಸಮುದ್ರಂ ಮೇರೆಯಂ ತಪ್ಪೆಯುಮೊಳರೆ

ಬಿಗುರ್ತು ಆಂಪವರ್
ರಾಜರಾಜಾ
ಪದ್ಯ-೮೬:ಅರ್ಥ:
ಕಾಲಾಗ್ನಿರುದ್ರನು
ರಸಾತಳದಲ್ಲಿಯೂ ವಿಷ್ಣುವು
ಜಲಶಯನದಲ್ಲಿಯೂ
(ವ್ಯಾಪ್ತವಾದ) ಆಕಾಶದಿಂದ
ಸುತ್ತಿರುವ ಬ್ರಹ್ಮಾಂಡದ
ಮಧ್ಯಭಾಗದಲ್ಲಿ ಬ್ರಹ್ಮನು
ಅಡಗಿರುವ ಹಾಗೆ ಒಂದು
ಕಾರಣಕ್ಕಾಗಿ ಪಾಂಡವರು

ಇಷ್ಟಪಟ್ಟು ಕಾಡಿನಲ್ಲಿ ಇದ್ದರು. ಅವರು ಹಾಗೆ ಏಳು ಸಮುದ್ರಗಳು ಮೇಲೆದಪ್ಪಿದರೂ ಸತ್ಯವನ್ನು ತಪ್ಪದವರೂ (ಕಥಿಣ ಪರಿಸ್ಥಿತಿಯನ್ನು) ಬಿಗುರ್ತು- ಧೃಢವಾಗಿ ಎದುರಿಸುವವರು ದುರ್ಯೋಧನ ರಾಜನೇ ಯಾರು ಇದ್ದಾರೆ? (ಯಾರೂ ಇಲ್ಲ.)ಎಂದು ಭೀಷ್ಮರು ಹೇಳಿದರು

ವ|| ಎನೆ

ಕುಂಭಸಂಭವನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ ಕುಂಭಸಂಭವಂ

ಇಂತು ಎಂದಂ-

ವಚನ:ಅರ್ಥ:ಎನ್ನಲು

ದ್ರೋಣಾಚಾರ್ಯರು

ಹೀಗೆಂದರು

ಮ|| ಕೃತಶಾಸ್ತ್ರರ್

ಧೃತಶಾಸ್ತ್ರರಪ್ರತಿಹತ

ಪ್ರಾಗಲ್ಭ್ಯರೀಗಳ್ ಪೃಥಾ

ಸುತರುದ್ಯೋಗಮನೆತ್ತಿಕೊಳ್ವ
ದಿವಸಂ ಸಾರ್ಚಿತ್ತು ಕಾಲಾವ|
ಸ್ಥಿತಿಯುಂ ಬಂದುದಿದರ್ಕೆ
ಮಾಣ್ದಿರದೆ
ಮಂತ್ರಾವಾಸದೊಳ್ ಮಂತ್ರ
ನಿ
ಶ್ಚಿತನಾಗೀಗಡೆ
ಕಾದಿದಲ್ಲದಿಳೆಯಂ
ನೀನೆಂತುಮೇನಿತ್ತಪಯ್|| ೮೭
||

ಪದ್ಯ-೮೭:ಪದವಿಭಾಗ-ಅರ್ಥ:ಕೃತಶಾಸ್ತ್ರರ್ (ಶಾಸ್ತ್ರವನ್ನು ತಿಳಿದು ಮಾಡಿದವರು,) ಧೃತ (ಶಾ?)ಶಸ್ತ್ರರ್ ಅಪ್ರತಿಹತ ಪ್ರಾಗಲ್ಭ್ಯರ್ (ಶಸ್ತ್ರವನ್ನು ಧರಿಸಿರುವವರು. ತಡೆಯಿಲ್ಲದ ಪ್ರೌಢಿಮೆಯನ್ನುಳ್ಳವರು) ಈಗಳ್ ಪೃಥಾಸುತರು ಉದ್ಯೋಗಮನು ಎತ್ತಿಕೊಳ್ವ ದೆವಸಂ ಸಾರ್ಚಿತ್ತು

ಕಾಲಾವಸ್ಥಿತಿಯುಂ ಬಂದುದು (ಅವರು ಈಗ ಕುಂತಿಮಕ್ಕಳು ಕಾರ್ಯಾರಂಭಮಾಡುವ ದಿನ ಸಮೀಪಿಸಿದ್ದು ಗಡುವಿನ ಕಾಲ ಬಂದಿದೆ) ಇದರ್ಕೆ ಮಾಣ್ದಿರದೆ ಮಂತ್ರಾವಾಸದೊಳ್ ಮಂತ್ರ ನಿಶ್ಚಿತನಾಗೀಗಡೆ (ಇದಕ್ಕೆ ತಡಮಾಡದೆ ಮಂತ್ರಾಲೋಚನಾಸಭೆಯಲ್ಲಿ ಈಗಲೇ ನಿಶ್ಚಿತವಾದ ಸೂಕ್ತವಾದ ಕಾರ್ಯವನ್ನು

ನಿಶ್ಚಯಿಸು.) ಕಾದಿದಲ್ಲದೆ
ಇಳೆಯಂ ನೀನೆಂತುಂ
ಏನಿತ್ತಪಯ್
(ಯುದ್ಧಮಾಡದೆ
ಭೂಮಿಯನ್ನು ನೀನು ಹೇಗೂ
ಕೊಡುವೆಯಾ?)

ಪದ್ಯ-೮೭:ಅರ್ಥ:

ಪಾಂಡವರು ಶಾಸ್ತ್ರವನ್ನು
ತಿಳಿದು ಮಾಡಿದವರು.
ಶಸ್ತ್ರವನ್ನು ಧರಿಸಿರುವವರು.
ತಡೆಯಿಲ್ಲದ

ಪ್ರೌಢಿಮೆಯನ್ನುಳ್ಳವರು. ಅವರು ಈಗ ಕುಂತಿಮಕ್ಕಳು ಕಾರ್ಯಾರಂಭಮಾಡುವ ದಿನ ಸಮೀಪಿಸಿದೆ. ಇದಕ್ಕೆ ತಡಮಾಡದೆ ಮಂತ್ರಾಲೋಚನಾಸಭೆಯಲ್ಲಿ ಈಗಲೇ ನಿಶ್ಚಿತವಾದ ಸೂಕ್ತವಾದ ಕಾರ್ಯವನ್ನು ನಿಶ್ಚಯಿಸು. ಯುದ್ಧಮಾಡದೆ ಭೂಮಿಯನ್ನು ನೀನು ಹೇಗೂ ಕೊಡುವುದಿಲ್ಲವಲ್ಲವೆ?

ವ|| ಎಂದೊಡೆ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದೊಡೆ ಕರ್ಣನು ಇಂತೆಂದಂ-

ವಚನ:ಅರ್ಥ:ಎನ್ನಲು ಕರ್ಣನು ಹೀಗೆ ಹೇಳಿದನು-

ಚಂ|| ಬಗೆಯದೆ ಸಾಮಮಂ ಬಿಸುಟು ಭೇದಮನೊಲ್ಲದುದಗ್ರದಾನ ಮಂ

ನೆಗಱಿದೆ ದಂಡಮುಂ ನಿನಗೆ
ಮಾಡಿದಕೃತ್ಯರನಂತು
ಮಾಣ್ಬುದೇ|
ಬಗೆ ಪಗೆ ನೀಗೆಯುಂ ಮುಳಿಸು
ಪೋಗೆಯುಮಾಯತಿ
ಪೆರ್ಚೆಯುಂ ಜಗಂ
ಪೊಗೞೆಯುಮಾಂತರಾತಿನೃ
ಪರಂ ತವೆ
ಕೊಲ್ವುದಹೀಂದ್ರಕೇತನಾ|| ೮೮
||

ಪದ್ಯ-೮೮:ಪದವಿಭಾಗ-ಅರ್ಥ:ಬಗೆಯದೆ ಸಾಮಮಂ ಬಿಸುಟು ಭೇದಮನು ಒಲ್ಲದೆ ಉದಗ್ರದಾನಮಂ ನೆಗಟಿದೆ ದಂಡಮಂ (ಸಾಮೋಪಾಯವನ್ನು ಯೋಚಿಸದೆ ಭೇದೋಪಾಯವನ್ನು ಬಿಸಾಡಿ ಶ್ರೇಷ್ಠರಾದ ದಾನೋಪಾಯವನ್ನು ಒಪ್ಪದೆ, ದಂಡೋಪಾಯವನ್ನೂ

ಮಾಡದೆ) ನಿನಗೆ ಮಾಡಿದ
ಅಕೃತ್ಯರನು ಅಂತು
ಮಾಣ್ಬುದೇ (ನಿನಗೆ
ಕೆಡುಕುಮಾಡಿದವರನ್ನು ರನ್ನು
ಹಾಗೆಯೇ ಬಿಡುವುದೇ? ಅದು
ಯೋಗ್ಯವಲ್ಲ.) ಬಗೆ
(ಅಪೇಕ್ಷಿಸು) ಪಗೆ ನೀಗೆಯುಂ
(ಶತ್ರು ತೊಲಗುವಂತೆಯೂ)
ಮುಳಿಸು ಪೋಗೆಯುಂ
ಆಯತಿ ಪೆರ್ಚೆಯುಂ
(ಕೋಪವು

ಹೋಗುವಂತೆಯೂ
ಪೌರುಷವು ಹೆಚ್ಚುವಂತೆಯೂ)
ಜಗಂ ಪೊಗೞೆಯುಂ ಆಂತ
ಅರಾತಿ ನೃಪರಂ ತವೆ
ಕೊಲ್ವುದು
ಅಹೀಂದ್ರಕೇತನಾ(ಲೋಕವು
ಹೊಗಳುವಂತೆಯೂ
ಪ್ರತಿಭಟಿಸಿದ ಶತ್ರುರಾಜರನ್ನು
ಪೂರ್ಣವಾಗಿ ಕೊಲ್ಲುವುದು
ಸೂಕ್ತವಾದ ಮಾರ್ಗ

ಸರ್ಪಕೇತನನೇ ಎಂದನು
ಕರ್ಣ)

ಪದ್ಯ-೮೮:ಅರ್ಥ: .
ದುರ್ಯೋಧನ,
ಸಾಮೋಪಾಯವನ್ನು
ಯೋಚಿಸದೆ
ಭೇದೋಪಾಯವನ್ನು ಬಿಸಾಡಿ
ಶ್ರೇಷ್ಠರಾದ
ದಾನೋಪಾಯವನ್ನು ಒಪ್ಪದೆ,
ದಂಡೋಪಾಯವನ್ನೂ
ಮಾಡದೆ ನಿನಗೆ

ಕೆಡುಕುಮಾಡಿದವರನ್ನು ರನ್ನು
ಹಾಗೆಯೇ ಬಿಡುವುದೇ? ಅದು
ಯೋಗ್ಯವಲ್ಲ. ಶತ್ರು
ತೊಲಗುವಂತೆಯೂ
ಕೋಪವು ಹೋಗುವಂತೆಯೂ
ಪೌರುಷವು ಹೆಚ್ಚುವಂತೆಯೂ
ಲೋಕವು
ಹೊಗಳುವಂತೆಯೂ
ಪ್ರತಿಭಟಿಸಿದ ಶತ್ರುರಾಜರನ್ನು
ಪೂರ್ಣವಾಗಿ ಕೊಲ್ಲುವುದು
ಸೂಕ್ತವಾದ ಮಾರ್ಗ

ಸರ್ಪಕೇತನನೇ ಎಂದನು ಕರ್ಣ.

ವ|| ಎಂಬುದುಂ ಸುಯೋಧನನಿರ್ವರ ನುಡಿಯುಮಂ ಕೇಳ್ದು ತನ್ನ ಮನದೊಳಾದ ಕಜ್ಜಮನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಸುಯೋಧನನು ಇರ್ವರ ನುಡಿಯುಮಂ ಕೇಳ್ದು ತನ್ನ

ಮನದೊಳು ಆದ ಕಜ್ಜಮನು ಇಂತೆಂದಂ-

ವಚನ:ಅರ್ಥ:. ಎನ್ನಲು ದುರ್ಯೋಧನನು ಇಬ್ಬರ ಮಾತನ್ನು ಕೇಳಿ ತನ್ನ ಮನಸ್ಸಿನಲ್ಲಿ ತೋರಿದ ಕಾರ್ಯವನ್ನು ಸೂಚಿಸಿ ಹೀಗೆಂದನು.

ಚಂ||

ಅಱಿಯಲೆವೇೞ್ಪುದಿರ್ದೆಡೆಯ

ನಿರ್ದೆಡೆಯಿಂ
ತೆಗೆದಾಜಿರಂಗದೊಳ್
ನಿಱಿಸಲೆವೇೞ್ಪುದಂತವರನಂ
ತವರಿರ್ಪೆಡೆಯುಂ ವಿರಾಟನಿ|
ರ್ಪಱಿಕೆಯ ಪಟ್ಟಣಂ
ನಮಗಿದೇವಿರಿದಪ್ಪುದು
ತಳ್ವದೆಯ್ದಿ ನಾಂ
ತುಱುವನೆ ಕೊಳ್ವಮಂತು
ತುಱುಗೊಂಡೊಡೆ
ಪಾಂಡವರಿರ್ಪ ಗಂಡರೇ|| ೮೯

ಪದ್ಯ-೮೯:ಪದವಿಭಾಗ-ಅರ್ಥ:ಅಱಿಯಲೆವೇೞ್ಪುದು ಇರ್ದ ಎಡೆಯನು (ಅವರು ಇರುವ ಸ್ಥಳವನ್ನು ತಿಳಿಯಲೇಬೇಕು) ಇರ್ದೆಡೆಯಿಂ ತೆಗೆದು ಆಜಿರಂಗದೊಳ್ ನಿಱಿಸಲೆವೇೞ್ಪುದು ಅಂತು ಅವರನು (ಹೀಗೆ ಅವರನ್ನು ಅವರಿರುವ ಸ್ಥಳದಿಂದ ಹೊರಡಿಸಿ

ಯುದ್ಧಭೂಮಿಯಲ್ಲಿ
ನಿಲ್ಲಿಸಬೇಕು), ಅಂತವರು
ಇರ್ಪೆಡೆಯುಂ ವಿರಾಟನು
ಇರ್ಪಱಿಕೆಯ ಪಟ್ಟಣಂ
(ಅಂತು ಅವರು ಇರುವ ಸ್ಥಳ
ವಿರಾಟನು ವಾಸಿಸುವ
ಪ್ರಸಿದ್ಧವಾದ ವಿರಾಟನಗರ.)
ನಮಗೆ ಇದು ಏವಿರಿದಪ್ಪುದು
(ನಮಗೆ ಈ ವಿರಾಟನಗರವು
ಏನು ದೊಡ್ಡದು?) ತಳ್ವದೆ
ಎಯ್ದಿಂ ನಾಂ ತುಱುವನೆ

ಕೊಳ್ವಂ (ತಡಮಾಡದೆ ನಾವು ಹೋಗಿ ಗೋವುಗಳನ್ನು ಹಿಡಿಯೋಣ) ಅಂತು ತುಱುಗೊಂಡೊಡೆ ಪಾಂಡವರಿರ್ಪ ಗಂಡರೇ (ಹಾಗೆ ಹಸುಗಳನ್ನು ಹಿಡಿದರೆ ಪಾಂಡವರು ಸುಮ್ಮನಿರುವ ಶೂರರೇ? ಅಲ್ಲ!.)

ಪದ್ಯ-೮೯:ಅರ್ಥ:ಕೌರವನು ಹೇಳಿದ: ಅವರು ಇರುವ ಸ್ಥಳವನ್ನು ತಿಳಿಯಲೇಬೇಕು.

ಹೀಗೆ ಅವರನ್ನು ಅವರಿರುವ ಸ್ಥಳದಿಂದ ಹೊರಡಿಸಿ ಯುದ್ಧಭೂಮಿಯಲ್ಲಿ ನಿಲ್ಲಿಸಬೇಕು. ವಿರಾಟನು ವಾಸಿಸುವ ಪ್ರಸಿದ್ಧವಾದ ವಿರಾಟನಗರವು ಅವರಿರುವ ಸ್ಥಳ. ನಮಗೆ ಈ ವಿರಾಟನಗರವು ಏನು ದೊಡ್ಡದು? ತಡಮಾಡದೆ ನಾವು ಹೋಗಿ ಗೋವುಗಳನ್ನು ಹಿಡಿಯೋಣ. ಹಾಗೆ

ಹಸುಗಳನ್ನು ಹಿಡಿದರೆ
ಪಾಂಡವರು ಸುಮ್ಮನಿರುವ
ಶೂರರೇ? ಅಲ್ಲ!.

ವ|| ಎಂದು ಪಿರಿದುಮಾಗ್ರಹಂಬೆರಸು ಗೋಗ್ರಹಣಪ್ರಪಂಚಮನೆ ನಿಶ್ಚಯಿಸಿ ವಿರಾಟನ ದಾಯಿಗಂ ತ್ರಿಗರ್ತಾಧೀಶಂ ಸುಶರ್ಮನುಮಂ ನಾಲ್ಛಾಸಿರ ರಥಂಬೆರಸು

ದಕ್ಷಿಣದಿಶಾಭಾಗಕ್ಕೆ ವೇೞ್ದು ತುೞುವಂ ಕೊಳಿಸಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ಪಿರಿದುಂ ಆಗ್ರಹಂ ಬೆರಸು ಗೋಗ್ರಹಣ ಪ್ರಪಂಚಮನೆ ನಿಶ್ಚಯಿಸಿ (ಎಂದು ವಿಶೇಷ ಹಠದಿಂದ ಕೂಡಿ ಪಶುಗಳನ್ನು ಹಿಡಿಯುವ ವಿಚಾರವನ್ನೇ ನಿಶ್ಚಯಿಸಿ,) ವಿರಾಟನ ದಾಯಿಗಂ ತ್ರಿಗರ್ತಾಶಂ

ಸುಶರ್ಮನುಮಂ (ವಿರಾಟನ ದಾಯಾದಿಯೂ ತ್ರಿಗರ್ತ ರಾಜನೂ ಆದ ಸುಶರ್ಮನನ್ನು) ನಾಲ್ಬಾಸಿರ ರಥಂಬೆರಸು ದಕ್ಷಿಣದಿಶಾಭಾಗಕ್ಕೆ ವೇೞ್ದು ತುಱುವಂ ಕೊಳಿಸಿದಾಗಳ್ (ನಾಲ್ಕು ಸಾವಿರ ರಥಗಳೊಡನೆ ದಕ್ಷಿಣ ದಿಕ್ಕಿಗೆ ಕಳುಹಿಸಿ ಗೋವುಗಳನ್ನು ಹಿಡಿಸಿದಾಗ)-

ವಚನ:ಅರ್ಥ:ಎಂದು ವಿಶೇಷ ಹಠದಿಂದ ಕೂಡಿ ಪಶುಗಳನ್ನು ಹಿಡಿಯುವ ವಿಚಾರವನ್ನೇ ನಿಶ್ಚಯಿಸಿ, ವಿರಾಟನ ದಾಯಾದಿಯೂ ತ್ರಿಗರ್ತ ರಾಜನೂ ಆದ ಸುಶರ್ಮನನ್ನು ನಾಲ್ಕು ಸಾವಿರ ರಥಗಳೊಡನೆ ದಕ್ಷಿಣ ದಿಕ್ಕಿಗೆ ಕಳುಹಿಸಿ ಗೋವುಗಳನ್ನು ಹಿಡಿಸಿದರು.

ಚಂ|| ಕರೆದು ವಿರಾಟನುತ್ತರನನಾತ್ಮತನೂಜ

ನನಾ ಪೊಟಿಲ್ಗೆ ಕಾ

ಪಿರಿಸಿ ಧರಾತಳಂ

ತಳರ್ವವೋಲ್ ನಡೆದಾಗಳೆ

ಪಾಂಡುಪುತ್ರರ|

ಯ್ವರುಮಿದು ನಮ್ಮನಾರಯಲೆ

ವೈರಿಯ ಮಾಡಿದ ಗೊಡ್ಡಮಿಲ್ಲಿ

ಮಾ

ಣ್ದಿರಲಣಮಾಗ

ಪೂರ್ಣ್ದವಧಿಯುಂ ನೆರೆದತ್ತು

ಕಡಂಗಿ ಕಾದುವಂ|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ:ಕರೆದು ವಿರಾಟನು ಉತ್ತರನನು ಆತ್ಮತನೂಜನನು ಆ ಪೊಳಲ್ಗೆ ಕಾಪಿರಿಸಿ (ವಿರಾಟನು ತನ್ನ ಮಗನಾದ ಉತ್ತರನನ್ನು ಕರೆದು ಆ ಪಟ್ಟಣಕ್ಕೆ ಕಾವಲಾಗಿರಿಸಿ) ಧರಾತಳಂ ತಳರ್ವವೋಲ್ ನಡೆದು ಆಗಳೆ (ಭೂಮಂಡಲವೇ ಚಲಿಸುವ ಹಾಗೆ ಯುದ್ಧಕ್ಕೆ

ನಡೆದನು. ಅದೇ ಸಮಯ)
ಪಾಂಡುಪುತ್ರರು ಅಯ್ವರುಂ
ಇದು ನಮ್ಮನಾರಯಲೆ
ವೈರಿಯ ಮಾಡಿದ
ಗೊಡ್ಡಮ್('ನಮ್ಮನ್ನು ಕಂಡು
ಹಿಡಿಯಲು ಶತ್ರುವಾದ
ದುರ್ಯೋಧನನು ಹೂಡಿದ
ಚೇಷ್ಟೆಯಿದು.) ಇಲ್ಲಿ ಮಾಣ್ದು
ಇರಲ್ ಅಣಂ ಆಗ (ಇಲ್ಲಿ
ತಡೆದು ಕ್ಷಣವೂ ಇರಲಾಗದು.)
ಪೂಣ್ದ ಅವಧಿಯುಂ ನೆರೆದತ್ತು

(ಪ್ರತಿಜ್ಞೆ ಮಾಡಿದ ಗಡುವೂ ಪೂರ್ಣವಾಗಿದೆ.) ಕಡಂಗಿ ಕಾದುವಂ (ಉತ್ಸಾಹದಿಂದ ಯುದ್ಧಮಾಡೋಣ'), ಎಂದು ತೀರ್ಮಾನಿಸಿದರು.

ಪದ್ಯ-೯೦:ಅರ್ಥ:.
ವಿರಾಟನು ತನ್ನ ಮಗನಾದ ಉತ್ತರನನ್ನು ಕರೆದು ಆ ಪಟ್ಟಣಕ್ಕೆ ಕಾವಲಾಗಿರಿಸಿ, ಭೂಮಂಡಲವೇ ಚಲಿಸುವ ಹಾಗೆ ಯುದ್ಧಕ್ಕೆ ನಡೆದನು.

ಪಾಂಡವರು ಐವರೂ 'ನಮ್ಮನ್ನು ಕಂಡು ಹಿಡಿಯಲು ಶತ್ರುವಾದ ದುರ್ಯೋಧನನು ಹೂಡಿದ ಚೇಷ್ಟೆಯಿದು. ಇಲ್ಲಿ ತಡೆದು ಕ್ಷಣವೂ ಇರಲಾಗದು. ಪ್ರತಿಜ್ಞೆ ಮಾಡಿದ ಗಡುವೂ ಪೂರ್ಣವಾಗಿದೆ. ಉತ್ಸಾಹದಿಂದ ಯುದ್ಧಮಾಡೋಣ' ಎಂದರು ಪಾಂಡವರು.

ವ|| ಎಂದು ತಮ್ಮಯ್ವರುಮಾಳೋಚಿಸಿ ವಿಕ್ರಮಾರ್ಜುನನಂ ಪೆಱಗಣ ಕಾಪಿಂಗಿರಲ್ವೇೞ್ದು ನಾಲ್ವರುಂ ನಾಲ್ಕು ಸಮುದ್ರಂಗಳೆ ಮೇರೆದಪ್ಪಿದಂತೆ ವಿರಾಟನೊಳ್ ಕೂಡಿ ಪೋಗಿ ತಾಗಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ತಮ್ಮ ಅಯ್ವರುಂ ಆಳೋಚಿಸಿ

ವಿಕ್ರಮಾರ್ಜುನನಂ ಪೆಱಗಣ ಕಾಪಿಂಗೆ ಇರಲ್ವೇೞ್ಕು(ನಗರದ ಹಿಂಗಾವಲಿಗೆ ಇರಹೇಳಿ) ನಾಲ್ವರುಂ ನಾಲ್ಕು ಸಮುದ್ರಂಗಳೆ ಮೇರೆದಪ್ಪಿದಂತೆ ವಿರಾಟನೊಳ್ ಕೂಡಿ ಪೋಗಿ ತಾಗಿದಾಗಳ್ ()-

ವಚನ:ಅರ್ಥ:ಎಂದು ತಾವು ಐದು ಜನವೂ ತಮ್ಮಲ್ಲಿ ಆಲೋಚಿಸಿ ಅರ್ಜುನನನ್ನು

ನಗರದ ಹಿಂಗಾವಲಿಗೆ

ಇರಹೇಳಿ ನಾಲ್ಕು ಜನರೂ

ನಾಲ್ಕು ಸಮುದ್ರಗಳೇ

ಮೇರೆದಪ್ಪಿದಂತೆ

ವಿರಾಟನೊಡನೆ ಕೂಡಿ ಹೋಗಿ

ಎದುರಿಸಿದಾಗ-

ಚಂ|| ಕಡಲ ಪೊದಳ್ದ

ಪೆರ್ದೆರೆಗಳೆಯ್ದೆ

ಕುಲಾದ್ರಿಗಳೊಳ್ ಪಳಂಚಿ

ತೂ

ಳ್ದೊಡನೆ ಮರಲ್ದವೋಲ್ ಕೆಡೆಯೆ ಪಾಯಿಸಿದುಗ್ರರಥಂಗಳಟ್ಟಿಗ್ತ|| ಳ್ತಡಿಗಿಡೆ ಪಾಯ್ದರಾತಿನೃಪರಂ ತಱಿದಾಂತಿರದಾ ಸುಶರ್ಮನಂ ಪಿಡಿದು ನೆಗೞ್ತೆಯಂ ಪಡೆದು ಸಾಹಸದಿಂ ತುಱುವಂ ಮಗುೞ್ಚಿದರ್|| ೯೧ ||

ಪದ್ಯ-೯೧:ಪದವಿಭಾಗ-

ಅರ್ಥ:ಕಡಲ ಪೊದಳ್ದ ಪೆರ್ದೆರೆಗಳು ಎಯ್ದೆ

ಕುಲಾದ್ರಿಗಳೊಳ್ ಪಳಂಚಿ
(ಸಮುದ್ರದಲ್ಲಿ ಹರಡಿದ
ದೊಡ್ಡ ಅಲೆಗಳು
ಕುಲಪರ್ವತಗಳನ್ನು) ತೂಳ್ದು
ಒಡನೆ ಮರಲ್ದವೋಲ್
(ತಗುಲಿ ಹಿಂದಕ್ಕೆ
ಮರಳಿದಂತೆ) ಕೆಡೆಯೆ
ಪಾಯಿಸಿದ ಉಗ್ರರಥಂಗಳ್
ಅೞ್ಗಿ (ಹಾಳಾಗಿ, ತಳ್ಳಿ,) ತಳ್ತು
ಅಡಿಗಿಡೆ (ಬೀಳಿಸಿ ತಳಭಾಗವು
ನಾಶವಾಗಲು) ಪಾಯ್ದು

ಅರಾತಿನೃಪರಂ
ತೞಿದಾಂತಿರದಾ
ಸುಶರ್ಮನಂ ಪಿಡಿದು (ನುಗ್ಗಿದ
ಶತ್ರುರಾಜರನ್ನು
ಸುಶರ್ಮನನ್ನೂ ಬಿಡದೆ)
ನೆಗೞ್ತೆಯಂ ಪಡೆದು
(ಪ್ರಸಿದ್ಧಿಯನ್ನು ಪಡೆದು)
ಸಾಹಸದಿಂ ತುಱುವಂ
ಮಗುೞ್ಚಿದರ್(ಸಾಹಸದಿಂದ
ಪಾಂಡವರು ವಿರಾಟನ

ಗೋಪುಗಳನ್ನು ಹಿಂದಕ್ಕೆ ತಿರುಗಿಸಿದರು)

ಪದ್ಯ-೬೧:ಅರ್ಥ:ಸಮುದ್ರದಲ್ಲಿ ಹರಡಿದ ದೊಡ್ಡ ಅಲೆಗಳು ಕುಲಪರ್ವತಗಳನ್ನು ತಗುಲಿ ಹಿಂದಕ್ಕೆ ಮರಳಿದಂತೆ ಮುಂದಕ್ಕೆ ನುಗ್ಗಿಸಿದ ಭಯಂಕರವಾದ ರಥಗಳನ್ನು ಹಿಂದಕ್ಕೆ ತಳ್ಳಿ ಬೀಳಿಸಿ ತಳಭಾಗವು ನಾಶವಾಗಲು ಅಡಿಮೇಲಾಗಲು ನುಗ್ಗಿದ

ಶತ್ರುರಾಜರನ್ನು
ಸುಶರ್ಮನನ್ನೂ ಬಿಡದೆ
ಎದುರಿಸಿ ಹಿಡಿದು
ಪ್ರಸಿದ್ಧಿಯನ್ನು ಪಡೆದು
ಸಾಹಸದಿಂದ ಪಾಂಡವರು
ವಿರಾಟನ ಗೋವುಗಳನ್ನು
ಹಿಂದಕ್ಕೆ ತಿರುಗಿಸಿದರು.

ಉತ್ತರ ದಿಕ್ಕಿನ ಗೋಗ್ರಹಣ

ವ|| ಅನ್ನೆಗಮತ್ತ
ಸುಯೋಧನಂ ಸಮಸ್ತ

ಸಾಧನಂಬೆರಸು-

ವಚನ:ಪದವಿಭಾಗ-ಅರ್ಥ: ಅನ್ನೆಗಂ ಅತ್ತ ಸುಯೋಧನಂ ಸಮಸ್ತ ಸಾಧನಂ ಬೆರಸು (ಸಾಧನಗಳ ಒಡಗೂಡಿ)-

ವಚನ:ಅರ್ಥ:ಅಷ್ಟರಲ್ಲಿ ಆ ಕಡೆ ದುರ್ಯೋಧನನು ಸಮಸ್ತ ಸೈನ್ಯ ಸಾಧನಗಳ ಒಡಗೂಡಿ-

ಉ|| ಉತ್ತರಂ ಗೋಗ್ರಹಂ ಪಿರಿದುಮಾಗ್ರಹಮಂ ಮನದೊಳ್ ತಗುಳ್ಚೆ ದಿ

ಗ್ಭಿತ್ತಿ ವಿಭೇದಿ ಪೆರ್ಚೆ
ಕದನಾನಕರಾವಮಗುರ್ವಿನು
ರ್ವು ಪ|
ರ್ವುತ್ತಿರೆ ಚಾರು ವೀರ ಭಟ
ಕೋಟಿಗೆ ರಾಗರಸಂ ಪೊದಳ್ದು
ತು
ಳ್ಕುತ್ತಿರೆ ಬಂದು ಮುತ್ತಿ
ಮೊಗೆದಂ ವಿಭು
ಗೋಕುಲಮಂ ವಿರಾಟನಾ||
೬೨ ||

ಪದ್ಯ-೯೨:ಪದವಿಭಾಗ-ಅರ್ಥ:ಉತ್ತರಂ ಗೋಗ್ರಹಂ ಪಿರಿದುಂ ಆಗ್ರಹಮಂ ಮನದೊಳ್ ತಗುಳ್ಚೆ (ಉತ್ತರದಿಕ್ಕಿನ ಗೋವುಗಳನ್ನು ಹಿಡಿಯಲು ಮನಸ್ಸು ಬಹಳ ಬಯಸಲು, ಅದನ್ನೇ ನಿಶ್ಚಯಿಸಿ,) ದಿಗ್ಭಿತ್ತಿ ವಿಭೇದಿ ಪೆರ್ಚೆ ಕದನ ಆನಕರಾವಂ ಅಗುರ್ವಿನುರ್ವು ಪರ್ವುತ್ತಿರೆ (ದಿಗಂತವನ್ನು ಒಡೆಯುತ್ತಿರುವ

ಯುದ್ಧಭೇರಿಯ
ಭಯಂಕರವಾದ ಶಬ್ದವು
ಹೆಚ್ಚುತ್ತಿರಲು) ಚಾರು ವೀರ
ಭಟ ಕೋಟಿಗೆ ರಾಗರಸಂ
ಪೊದಳ್ದು ತುಳ್ಕುತ್ತಿರೆ
(ಪ್ರಸಿದ್ಧರಾದ ಶೂರರನೇಕರಿಗೆ
ಸಂತೋಷರಸವು ಹೆಚ್ಚಿ
ಹೊರಹೊಮ್ಮುತ್ತಿರಲು)
ಬಂದು ಮುತ್ತಿ ಮೊಗೆದಂ
ವಿಭು ಗೋಕುಲಮಂ
ವಿರಾಟನಾ (ವಿಭು-

ಪ್ರಭುವಾದ ದುರ್ಯೋಧನನು ಬಂದು ವಿರಾಟನ ಗೋಸಮೂಹವನ್ನು ಆಕ್ರಮಿಸಿ ಸೆರೆಹಿಡಿದನು.)

ಪದ್ಯ-೯೨:ಅರ್ಥ:ಉತ್ತರದಿಕ್ಕಿನ ಗೋವುಗಳನ್ನು ಹಿಡಿಯಲು ಮನಸ್ಸು ಬಹಳ ಬಯಸಲು, ದಿಗಂತವನ್ನು ಒಡೆಯುತ್ತಿರುವ ಯುದ್ಧಭೇರಿಯ ಭಯಂಕರವಾದ ಶಬ್ದವು ಹೆಚ್ಚುತ್ತಿರಲು ಪ್ರಸಿದ್ಧರಾದ

ಶೂರರನೇಕರಿಗೆ

ಸಂತೋಷರಸವು ಹೆಚ್ಚು

ಹೊರಹೊಮ್ಮುತ್ತಿರಲು,

ಪ್ರಭುವಾದ ದುರ್ಯೋಧನನು

ಬಂದು ವಿರಾಟನ

ಗೋಸಮೂಹವನ್ನು ಆಕ್ರಮಿಸಿ

ಸೆರೆಹಿಡಿದನು.

ಬಂದು ವಿರಾಟನ ಗೋಸಮೂಹವನ್ನು ಆಕ್ರಮಿಸಿ ಸೆರೆಹಿಡಿದನು

ಚಂ|| ಪಸರಿಸಿ ಪೊಕ್ಕು

ಕೂಕಿಱಿದು ಕಾದುವ

ಬಲ್ಲಣಿಗಳ್ ಪಳಂಚೆ ಪಾ

ಯಿಸುವ ದೞಿಕ್ಕಗುರ್ವೆಸೆಯೆ
ನೂಂಕಿದ ಬಲ್ಲಣಿಗೆತ್ತಮೆಯ್ದೆ
ಚೋ।
ದಿಸುವ ರಥಕ್ಕೆ
ಪೆಳ್ಪಳಿಸದೊರ್ವರಿನೊರ್ವರೆ
ಮಿಕ್ಕು ಪಾರ್ದು ಸಾ
ರ್ದೆಸೆ ತುೞುಗಾೞಿರಂದಿನಿಸು
ಬಲ್ವಲನಾದುದೊಂದು
ಕಾಳೆಗಂ|| ೯೩ ||

ಪದ್ಯ-೯೩:ಪದವಿಭಾಗ-

ಅರ್ಥ:ಪಸರಿಸಿ ಪೊಕ್ಕು

ಕೂಕಿಱಿದು ಕಾದುವ

ಬಲ್ಲಣಿಗಳ್ ಪಳಂಚೆ

(ಎಲ್ಲಡೆಚದುರಿ ಹೊಕ್ಕು

ಮೇಲಕ್ಕೆ ಹಾರಿ ಹೋರಾಡುವ

ಬಲವಾದ ಕಾಲಾಳುಗಳು

ಎದರಿಸಲು) ಪಾಯಿಸುವ

ದೞಿಕ್ಕೆ ಅಗುರ್ವೆಸೆಯೆ

(ಮುನ್ನುಗ್ಗುವ ಸೈನ್ಯಕ್ಕೆ

ಭಯವುಂಟಾಗಲು) ನೂಂಕಿದ

ಬಲ್ಲಣಿಗೆ ಎತ್ತಂ ಎಯ್ದೆ

(ಮುಂದೆನುಗ್ಗಿದ ಬಲವಾದ

ಕಾಲಾಳುಗಳಿಗೆ ಎಲ್ಲೆಡೆಯೂ
ಹೋಗುವಂತೆ) ಚೋದಿಸುವ
ರಥಕ್ಕೆ (ವೇಗವಾಗಿ
ನಡೆಸುತ್ತಿರುವ ರಥಕ್ಕೆ)
ಪೆಳ್ಪಳಿಸದೆ ಒರ್ವರಿಂ ಒರ್ವರೆ
ಮಿಕ್ಕು ಪಾರ್ದು ಸಾರ್ದಿಸೆ
(ಹೆದರದೆ ಒಬ್ಬರನ್ನೊಬ್ಬರು
ಮೀರಿ ಗುರಿಯಿಟ್ಟು ನೋಡಿ
ಸಮೀಪಕ್ಕೆ ಬಂದು)
ತುಱುಗಾಱರ ಅಂದಿನಿಸು
ಬಲ್ವಲನಾದುದೊಂದು

ಕಾಳೆಗಂ(ದನಕಾಯುವವರ
ಅಂದಿನ ಯುದ್ಧವು ಸ್ವಲ್ಪ
ಬಲಿಷ್ಠವೇ ಆಯಿತು.)

ಪದ್ಯ-೯೩:ಅರ್ಥ:

ಎಲ್ಲಡೆಚದುರಿ ಹೊಕ್ಕು
ಮೇಲಕ್ಕೆ ಹಾರಿ ಹೋರಾಡುವ
ಬಲವಾದ ಕಾಲಾಳುಗಳು
ಎದರಿಸಲು, ಮುನ್ನುಗ್ಗುವ
ಸೈನ್ಯಕ್ಕೆ ಭಯವುಂಟಾಗಲು
ಮುಂದೆ ನುಗ್ಗಿದ ಬಲವಾದ
ಕಾಲಾಳುಗಳಿಗೆ ಎಲ್ಲೆಡಯೂ

ಹೋಗುವಂತೆ, ವೇಗವಾಗಿ ನಡೆಸುತ್ತಿರುವ ರಥಕ್ಕೆ ಹೆದರದೆ ಒಬ್ಬರನ್ನೊಬ್ಬರು ಮೀರಿ ಗುರಿಯಿಟ್ಟು ನೋಡಿ ಸಮೀಪಕ್ಕೆ ಬಂದು ಬಾಣಪ್ರಯೋಗಮಾಡಲು ದನಕಾಯುವವರ ಅಂದಿನ ಯುದ್ಧವು ಸ್ವಲ್ಪ ಬಲಿಷ್ಠವೇ ಆಯಿತು.

ಕಂ||

ಮಚ್ಚರದಿನೊರ್ವರೊರ್ವರ

ಕುಮಾರವ್ಯಾಸ ಭಾರತದಲ್ಲಿ ಉತ್ತರಕುಮಾರನು ಕೌರವಸೇನೆ ಎದುರಿಸಿದ ಸಂಧರ್ಭ

(ಸಂಧಿ -೫)

ಹಿಡಿದು ರಾಜ್ಯವ ಕೊಂಡು ಹೆಂಗುಸ
ಬಡಿದು ಪಾಂಡವ ರಾಯರನು ಹೊರ
ವಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋರಿದನೆ |
ಬಡ ಯುಧಿಷ್ಠಿರನೆಂದು ಬಗೆದನೆ
ಕಡುಗಿದೊಡೆ ಕೌರವನ ಕೀರ್ತಿಯ
ತೊಡೆವೆನರಿಯನಲಾಯೆನುತ ಸುಕುಮಾರ ಖತಿಗೊಂಡ|| ೧೭||

ಜವನ ಮೀಸೆಯ ಮುರಿದನೋ ಭೈ
ರವನ ದಾಡೆಯನಲುಗಿದನೊ ಮೃ
ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೊ|
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು||೧೯ ||

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ
ಯೂರವರು ಕೆಲರಧಮ ಕುಲದಲಿ ಸಂದು ಬಂದವರು |
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದುರಿನಲಿ ||೨೦||

(ವಿರಾಟಪರ್ವ-ಸಂಧಿ - ೬)

(ಉತ್ತರನು ಕುರುಸೇನೆಯನ್ನು ಸಮೀಪಿಸಿದಾಗ:)
ಕರಿಘಟಾವಳಿಯೊಡ್ಡುಗಲ್ಲಿನ
ತುರಗ ನಿಕರದ ತೆರೆಯ ತೇರಿನ
ಹೊರಳಿಗಳ ಸುಳಿಯಾತಪತ್ರದ ಬಹಳ ಬುದ್ಬುದದ|
ನರನಿಕಾಯದ ಜಲಚರೌಘದ
ತರದ ವಾದ್ಯಧ್ವನಿಯ ರವದು
ಬ್ಬರದೊಳಿದ್ದುದು ಬಹಳ ಜಲನಿಧಿಯಂತೆ ಕುರುಸೇನೆ ||೨ ||

ಜಡಿವ ಖಡ್ಗದ ಕಿಡಿಯ ಸೇನೆಯ
ಕಡುಹುಗಳ ಕೇಸುರಿಯ ಬಲದು
ಗ್ಗಡದ ರಭಸದ ರೌದ್ರರವ ಛಟಛಟಿತ ನಿಸ್ವನದ |
ಇಡಿದ ಧೂಳಿಯ ಧೂಮ ರಾಶಿಯ
ಪಡೆ ವಿರಾಟನ ಮಗನ ಕಂಗಳಿ
ಗೊಡನೊಡನೆ ದಾವಾಗ್ನಿಯಂತಿರೆ ತೋರಿತಿದಿರಿನಲಿ || ೩ ||

ಪ್ರಳಯ ಮೇಘದ ಮಾತೃಕೆಯೊ ಕರಿ
ಕುಲವೊ ಸಿಡಿಲಿನ ಗರುಡಿಯೊ ಕಳ
ಕಳವೊ ಕಲ್ಪಾನಲನ ಧೂಮಾವಳಿಯೊ ಕೈದುಗಳೊ |
ನೆಲನ ದಡ್ಡಿಯ ಬೆಟ್ಟದಡವಿಯೊ
ತಳಿತ ಟೆಕ್ಕೆಯವೋ ಜಗಂಗಳ
ನಳಿವ ಜಲಧಿಯೊ ಸೇನೆಯೋ ನಾವರಿಯೆವಿದನೆಂದ || ೪ ||

ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ

ರೊಡನೆ ಕಾದುವನಾವನಾತನೆ
ಮೃಡನು ಶಿವ ಶಿವ ಕಾದಿ ಗೆಲಿದೆವು ಬಲಕೆ ನಮೊಯೆಂದ || ೬ ||

ಹಸಿದ ಮಾರಿಯ ಮಂದೆಯಲಿ ಕುರಿ
ನುಸುಳಿದಂತಾದೆನು ಬೃಹನ್ನಳೆ
ಯೆಸಗದಿರು ತೇಜಿಗಳ ತಡೆ ಚಿಮ್ಮಟಿಗೆಯನು ಬಿಸುಡು
ಮಿಸುಕಬಾರದು ಪ್ರಳಯ ಕಾಲನ
ಮುಸುಕನುಗಿವವನಾರು ಕೌರವ
ನಸಮ ಬಲನೈ ರಥವ ಮರಳಿಚು ಜಾಳಿಸುವೆನೆಂದ || ೭ ||

ಎಲೆ ಕುಮಾರಕ ಮೊದಲ ಚುಂಬನ
ದೊಳಗೆ ಹಲು ಬಿದ್ದಂತೆ ಕಾಳಗ
ದೊಳಗೆ ಬೆರೆಯದ ಮುನ್ನ ಹಿಡಿದೈ ಸಮರ ಭೀತಿಯನು
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ
ಗೆಲವಿನಲಿ ಕಾದೆನುತ ರಥವನು ಬೇಗ ಹರಿಸಿದನು || ೮ ||

ಹಿಡಿ ಹಯವನಿರಿಗಾರ ಸಾರಥಿ
ನುಡಿವವರು ನಾವ್ ಹಗೆಗಳೇ ನಿ
ನ್ನೊಡೆಯರಲ್ಲಾ ಸ್ವಾಮಿ ದುರುಹಿಕೆ ಲೇಸು ಲೇಸೆಂದ || ೧೧||

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ |
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ

ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ || ೧೨ ||

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ |
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ || ೧೨ ||

ನೋಡಿದನು ಕಲಿಪಾರ್ಥನೀ ಕೇ
ಡಾಡಿ ಕೆದರಿದ ಕೇಶದಲಿ ಕೆ
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯಬೇಕೆನುತ |
ಕೂಡೆ ಸೂಟಿಯೊಳಟ್ಟಲಿಳೆಯ
ಲ್ಲಾಡಲಹಿಪತಿ ಹೆದರಲಿತ್ತಲು
ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ || ೧೩ ||

ಹಲುಗಿರಿದು ಬಾಯೊಳಗೆ ಬೆರಳಿ
ಟ್ಟಳುಕಿ ತಲೆವಾಗಿದನು ಸಾರಥಿ
ಕಳುಹಿ ಕಳೆಯೈ ನಿನ್ನ ಬಸುರಲಿ ಮರಳಿ ಬಂದವನು |
ಕೊಳುಗುಳದೊಳೀಯೊಡ್ಡ ಮುರಿವ
ಗ್ಗಳೆಯರುಂಟೇ ಲೋಗರಿಂದವೆ
ಕೊಲಿಸದಿರು ನೀ ಕುತ್ತಿ ಕೆಡಹು ಕಠಾರಿಯಿದೆಯೆಂದ || ೧೪ ||

OOO----

ನಿನಗೆ ತಲೆಬಾಗಿದ್ದೇನೆ ಸಾರಥಿಯೇ, ಕಳುಹಿಸಿ ಜೀವವುಳಿಸು ನಿನ್ನ ಹೊಟ್ಟೆಯಲ್ಲಿ ಮತ್ತೆ ಹುಟ್ಟಿ ಬಂದವನಾಗತ್ತೇನೆ.

ಯುದ್ಧದಲ್ಲಿ ಈ ದೊಡ್ಡ ಸೈನ್ಯವನ್ನು ಸೋಲಿಸುವವರು ಉಂಟೇ? ಅವರಿಂದ ಕೊಲ್ಲಿಸ ಬೇಡ - ನೀನೇ ಕೊಲ್ಲು, ತಗೋ ಕಠಾರಿಯನ್ನು ಎಂದ, ಉತ್ತರ.
(ಕುಮಾರವ್ಯಾಸ ೪ ಸಂಧಿಯಲ್ಲಿ, ೨೫೫ ಪದ್ಯದಲ್ಲಿ,
ಅಧ್ಭುತ ಹಾಸ್ಯರಸವನ್ನು ಹರಿಸಿದ್ದಾನೆ.
ಉತ್ತರನ ಪೌರುಷ ಮನೆಮಾತಾಗಿದೆ)

ನುಚ್ಚಳಿಸಿ ತಗುಳ್ದು ಗೋವರಾರ್ದಿಸೆ ಕೀಱಿಂ| ಕರ್ಚೆ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜವಾಜಿಗಳ್ ಕೆಲವಾಗಳ್|| ೯೪ ||

ಪದ್ಯ-೯೪:ಪದವಿಭಾಗ-ಅರ್ಥ:ಮಚ್ಚರದಿಂ

ಒರ್ವರೊರ್ವರಂ ಉಚ್ಚಳಿಸಿ
ತಗುಳ್ದು ಗೋವರು ಆರ್ದು
ಇಸೆ (ಮತ್ಸರದಿಂದ
ಒಬ್ಬರನ್ನೊಬ್ಬರು ಹಾರಿಸಿ
ದನಕಾಯುವವರು ಆರ್ಭಟಿಸಿ
ಹೊಡೆಯಲು) ಕೀಟಿಂ ಕರ್ಚಿ
(ಕಡಿವಾಣವನ್ನು
ಕಚ್ಚಿಕೊಂಡೇ) ಪುಡಿಯೊಳ್
ಪೊರಳ್ದುವುನಚ್ಚಿನ
ಕಾಂಭೋಜವಾಜಿಗಳ್
ಕೆಲವಾಗಳ್ (ಕೆಲವು ನೆಚ್ಚಿನ

ಕಾಂಭೋಜದೇಶದ ಕುದುರೆಗಳು ಕಡಿವಾಣವನ್ನು ಕಚ್ಚಿಕೊಂಡೇ ಹುಡಿಯಲ್ಲಿ ಹೊರಳಿದುವು)

ಪದ್ಯ-೯೫:ಅರ್ಥ:

ಮತ್ಸರದಿಂದ ಒಬ್ಬರನ್ನೊಬ್ಬರು ಹಾರಿಸಿ ದನಕಾಯುವವರು ಆರ್ಭಟಿಸಿ ಹೊಡೆಯಲು, ಕೆಲವು ನೆಚ್ಚಿನ ಕಾಂಭೋಜದೇಶದ ಕುದುರೆಗಳು ಕಡಿವಾಣವನ್ನು

ಕಚ್ಚಿಕೊಂಡೇ ಹುಡಿಯಲ್ಲಿ ಹೊರಳಿದುವು.

ವ|| ಅಂತು ಮತ್ತು ಮನದೊಳೊಡಂಬಟ್ಟಂತೆ ಮನಮನೆಡಗಲಿಸಿ ಪರಿವ ಜಾತ್ಯಶ್ವಂಗಳೆಲ್ಲ ಮಱಿಗಾಳೆಗದೊಳ್ ಸತ್ತೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಮತ್ತು ಮನದೊಳು ಒಡಂಬಟ್ಟಂತೆ (ಮನವೊಪ್ಪುವಂತೆ)

ಮನಮನು ಎಡಗಲಿಸಿ ಪರಿವ (ಮೀರಿ ಓಡುವ) ಜಾತ್ಯಶ್ವಂಗಳೆಲ್ಲಂ ಅಱಿಗಾಳೆಗದೊಳ್ (ಆ ಸಣ್ಣಯುದ್ಧದಲ್ಲಿ)ಸತ್ತೊಡೆ-

ವಚನ:ಅರ್ಥ:ಹಾಗೆ ತಮ್ಮ ಮನವೊಪ್ಪುವಂತೆ ಮನಸ್ಸನ್ನೂ ಮೀರಿ ಓಡುವ ಜಾತಿಕುದುರೆಗಳೆಲ್ಲ ಆ ಸಣ್ಣಯುದ್ಧದಲ್ಲಿ ಸತ್ತಾಗ.

ಚಂ|| ತುಱು ಪರಿವಾಗಳೆಮ್ಮ
ಪೆಣನಂ ತುಱಿದುಂ ಪರಿಗುಂ
ದಲೆಂದು ಚಿ
ತುಱುಗೊಳೆ ಬಾಱಿಮೆಂದು
ತುಱುಗೋಳೊಳೆ ಸಾವುದು
ಸೈಪಿದೆಂದು ಪಾ|
ಯ್ದಱಿಕೆಯ ಗೋವರಣ್ಮೆ ಬರೆ
ಪಾಯಿಸಿ ಘೋಟಿಯಿಲರ್
ತಗುಳ್ದು ತ
ತ್ತಱ ತಱಿದಿಕ್ಕಿ ದೇಗುಲಕೆ
ಪೆರ್ಮರನಂ ಕಡಿವಂತೆ

ಮಾಡಿದರ್|| ೯೫ ||

ಪದ್ಯ-೯೫:ಪದವಿಭಾಗ-ಅರ್ಥ:ತುಱು ಪರಿವಾಗಳು (ದನಗಳು ಓಡುವಾಗ) ಎಮ್ಮ ಪೆಣನಂ ತುೞಿದುಂ ಪರಿಗುಂ (ನಮ್ಮ ಹೆಣವನ್ನು ತುಳಿದುಕೊಂಡು ಓಡುತ್ತವೆಯಲ್ಲ,) ದಲ್ (ನಿಜಕ್ಕೂ) ಎಂದು ಚಿ ! ತುಱುಗೊಳೆ (ತುರು ಕೊಳೆ-ಕೊಳ್ಳಲು) ಬಾೞ್ಮೆಂದು

(ದನಗಳನ್ನು ಶತ್ರುಗಳು
ಹಿಡಿದರೆ ನಾವು
ಬದುಕಿರಲಾರೆವು.)
ತುಱುಗೋಳೊಳೆ ಸಾವುದು
ಸೈಪಿದೆಂದು (ತುರುಗಾಳಗದಲ್ಲಿ
ಸಾಯುವುದು ನಮ್ಮ
ಪುಣ್ಯವೇ ಸರಿ ಎಂದು)
ಪಾಯ್ದು ಅಱಕೆಯ ಗೋವರ್
ಅಣ್ಮಿ ಬರೆ (ಹಾಯ್ದು
ಪ್ರಸಿದ್ಧರಾದ ಗೋಪಾಲಕರು
ಪೌರುಷಪ್ರದರ್ಶನಮಾಡಿ

ಬರಲು) ಪಾಯಿಸಿ
ಘೋೞಿಯಿಲರ್ (ರಾವುತರು
ಕುದರೆ ಹಾಯಿಸಿ) ತಗುಳ್ದು
ತತ್ತಱಿ ತಱಿದಿಕ್ಕಿ (ಬೆನ್ನಟ್ಟಿ
ಕಡಿಯುವಂತೆ
ಚೂರುಚೂರಾಗಿ
ಕತ್ತರಿಸಿದರು.) ದೇಗುಲಕೆ
ಪೆರ್ಮರನಂ ಕಡಿವಂತೆ
ಮಾಡಿದರ್ (ದೇವಾಲಯಕ್ಕೆ
ದೊಡ್ಡಮರವನ್ನು
ಕಡಿಯುವಂತೆ ಮಾಡಿದರು.)

ಪದ್ಯ-೯೫:ಅರ್ಥ: ದನಗಳು ಓಡುವಾಗ ನಮ್ಮ ಹೆಣವನ್ನು ತುಳಿದುಕೊಂಡು ಓಡುತ್ತವೆಯಲ್ಲ, ದನಗಳನ್ನು ಶತ್ರುಗಳು ಹಿಡಿದರೆ ನಾವು ಬದುಕಿರಲಾರೆವು. ತುರುಗಾಳಗದಲ್ಲಿ ಸಾಯುವುದು ನಮ್ಮ ಪುಣ್ಯವೇ ಸರಿ ಎಂದು ಹಾಯ್ದು ಪ್ರಸಿದ್ಧರಾದ ಗೋಪಾಲಕರು ಪೌರುಷ

ಪ್ರದರ್ಶನಮಾಡಿ ಬರಲು,
ಕುದುರೆಯ ರಾವುತರು
ಕುದುರೆಗಳನ್ನು ಮುನ್ನುಗ್ಗಿಸಿ
ಅವರನ್ನು ಬೆನ್ನಟ್ಟಿ
ದೇವಾಲಯಕ್ಕೆ
ದೊಡ್ಡಮರವನ್ನು
ಕಡಿಯುವಂತೆ
ಚೂರುಚೂರಾಗಿ ಕತ್ತರಿಸಿದರು.

**ವ|| ಆಗಳೊರ್ವ
ಗೋವಳನನಿಬರ ಸಾವುಮಂ
ಕಂಡು ಮನದೊಳಾದೇವಂ**

ಪೆರ್ಚೆಯುಂ ತುಱುವ ಪೋಗಿಂಗಾಱಿದೆ ವಿರಾಟಪುರಕ್ಕೆ ವಂದುತ್ತರಂಗೆ ಪೇೞುಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಒರ್ವ ಗೋವಳನು ಅನಿಬರ ಸಾವುಮಂ (ಅಷ್ಟುಮಂದಿಯ ಸಾವನ್ನು) ಕಂಡು ಮನದೊಳು ಆದೇವಂ ಪೆರ್ಚೆಯುಂ ತುಱುವ ಪೋಗಿಂಗೆ ಆಱಿದೆ

(ಮನಸ್ಸಿನಲ್ಲಿ ಕೋಪವು ಹೆಚ್ಚಿಯೂ ಪಶುಗಳ ನಾಶವನ್ನು ಸಹಿಸಲಾರದೆಯೂ) ವಿರಾಟಪುರಕ್ಕೆ ವಂದು ಉತ್ತರಂಗೆ ಪೇಟುಗಳ್ (ಬಂದು ಉತ್ತರನಿಗೆ ಆ ವಿಷಯವನ್ನು ತಿಳಿಸಿದನು)-

ವಚನ:ಅರ್ಥ: ಆಗ ಒಬ್ಬ ಗೋಪಾಲಕನು ಅಷ್ಟುಮಂದಿಯ ಸಾವನ್ನು

ಕಂಡು ಮನಸ್ಸಿನಲ್ಲಿ ಕೋಪವು ಹೆಚ್ಚಿಯೂ ಪಶುಗಳ ನಾಶವನ್ನು ಸಹಿಸಲಾರದೆಯೂ ವಿರಾಟನಗರಕ್ಕೆ ಬಂದು ಉತ್ತರನಿಗೆ ಆ ವಿಷಯವನ್ನು ತಿಳಿಸಿದನು.

ಚಂ|| ಪೆಱಗಣ ಕಾಪೆನ್ನನೆ ಮಹೀಪತಿ ಪೂಣಿಸಿ ಪೋದನಾಂ ಗಡಂ

ತುಱುಗೊಳೆ ಮಾಣೆನೆನ್ನಿದಿರ್ಗೆ
ರಾವಣ
ಕೋಟಿಯುಮಾಂತುಮೇಂ
ಗೆಲಲ್|
ನೆರೆಗುಮೆ ತನ್ನಿಮಿನ್ನೆನಗೆ
ಸಾರಥಿಯಪ್ಪನನೀಗಳೆಂದು
ಪೊ
ಚ್ಚಱಿಸೆ
ವಿರಾಟನಂದನನದೆಲ್ಲಮನಾಗ
ಡೆ ವಿಕ್ರಮಾರ್ಜುನಂ|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ಪೆಱಗಣ ಕಾಪು ಎನ್ನನೆ (ನಗರದ ಹಿಂಗಾವಲಿಗೆ ನನ್ನನ್ನು) ಮಹೀಪತಿ ಪ್ರೂಣಿಸಿ ಪೋದನು (ರಾಜನು ನಿಯಮಿಸಿ ಹೋದನು) ಆಂ ಗಡಂ ತುಱುಗೊಳೆ ಮಾಣೆನು (ಆದರೂ ಪಶುಗಳನ್ನು ಸೆರೆಹಿಡಿಯುವುದಕ್ಕೆ ನಾನು ಬಿಡೆನು,) ಎನ್ನಿದಿರ್ಗೆ ರಾವಣ ಕೋಟಿಯುಂ ಆಂತುಮ್ ಏಂ

ಗೆಲಲ್ ನೆಗುಮೆ (ನನ್ನ
ಇದಿರಾಗಿ ಕೋಟಿ ರಾವಣರು
ಬಂದ ಎದುರಿಸಿದರೆ ತಾನೆ
ನನ್ನನ್ನು ಗೆಲ್ಲಲು ಸಾಧ್ಯವೇ?)
ತನ್ನಿಂ ಇನ್ನು ಎನಗೆ
ಸಾರಥಿಯಪ್ಪನನು
ಈಗಳೆಂದು ಪೊಚ್ಚಱಿಸೆ
(ನನಗೆ
ಸಾರಥಿಯಾಗುವವನನ್ನು
ಈಗಲೆ ತನ್ನಿರಿ ಎಂದು
ಉತ್ತರಕುಮಾರನು

ಉತ್ಸಾಹಿಸಲು))
ವಿರಾಟನಂದನನ
ಅದೆಲ್ಲಮನು ಆಗಡೆ
ವಿಕ್ರಮಾರ್ಜುನಂ (ವಿರಾಟನ
ಮಗನ ಅದೆಲ್ಲವನ್ನೂ
ಅರ್ಜುನನು ಆಗ
ಕೇಳುತ್ತಿದ್ದನು)
ಪದ್ಯ-೬೬:ಅರ್ಥ: ನಗರದ
ಹಿಂಗಾವಲಿಗೆ ರಾಜನು ನನ್ನನ್ನು
ನಿಯಮಿಸಿ ಹೋದನು.
ಆದರೂ ಪಶುಗಳನ್ನು

ಸೆರೆಹಿಡಿಯುವುದಕ್ಕೆ ನಾನು ಬಿಡೆನು, ನನ್ನ ಇದಿರಾಗಿ ಕೋಟಿ ರಾವಣರು ಬಂದರೆ ತಾನೆ ನನ್ನನ್ನು ಗೆಲ್ಲಲು ಸಾಧ್ಯವೇ? ನನಗೆ ಸಾರಥಿಯಾಗುವವನನ್ನು ಈಗಲೆ ತನ್ನಿರಿ ಎಂದು ಉತ್ತರಕುಮಾರನು ಉತ್ಸಾಹಿಸಲು, ವಿರಾಟನ ಮಗನ ಅದೆಲ್ಲವನ್ನೂ

ಅರ್ಜುನನು ಆಗ

ಕೇಳುತ್ತಿದ್ದನು.

ವ|| ಕೇಳ್ದಾ ಪೊೞ್ತೆ ಪೊೞ್ತಾಗೆ ದ್ರೌಪದಿಗೆ ಬೞಿಯನಟ್ಟಿ ಬರಿಸಿ-

ವಚನ:ಪದವಿಭಾಗ-

ಅರ್ಥ:ಕೇಳ್ದು ಆ ಪೊೞ್ತೆ ಪೊೞ್ತಾಗೆ (ಆಹೊತ್ತೇ ಹೋತಾಗಿರಲು,) ದ್ರೌಪದಿಗೆ ಬೞಿಯನಟ್ಟಿ ಬರಿಸಿ

(ದೂತರನ್ನು ಕಳುಹಿಸಿ ಬರಮಾಡಿದನು)-

ವಚನ:ಅರ್ಥ:ತಕ್ಷಣವೇ ದ್ರೌಪದಿಗೆ ದೂತರನ್ನು ಕಳುಹಿಸಿ ಅವಳನ್ನು ಬರಮಾಡಿದನು.

ಉ|| ಸಾರಥಿ ಮಾಡು ಮತ್ಸ್ಯಸುತನುತ್ತರನಂ ತದರಾತಿಸೈನ್ಯ ಕೂ ಪಾರದ ಪಾರಮಂ ತಡೆಯದೆಯ್ದುವೆನೆಂಬುದು

ಮಂತೆ ಬಂದು ಪಂ|
ಕೇರುಹವಕ್ತ್ರೆ ಮತ್ಸ್ಯಸುತನಂ
ನುಡಿದಳ್
ನಿನಗಾಜಿರಂಗದೊಳ್
ಸಾರಥಿಯಪ್ಪೊಡಪ್ಪುದು
ಶಿಖಂಡಿಯೆ ನಿನ್ನೊರೆಗುಂತೆ
ಗಂಡರಾರ್|| ೯೭ ||

ಪದ್ಯ-೯೭:ಪದವಿಭಾಗ-ಅರ್ಥ:ಸಾರಥಿ ಮಾಡು ಮತ್ಸ್ಯಸುತನು ಉತ್ತರನಂ (ಮತ್ಸ್ಯನ ಮಗನಾದ

ಉತ್ತರನಿಗೆ ನನ್ನನ್ನು ಸಾರಥಿಯನ್ನಾಗಿ ಮಾಡು.) ತದ್ ಅರಾತಿಸೈನ್ಯ ಕೂಪಾರದ ಪಾರಮಂ (ಅವನ ಶತ್ರುಸೇನಾ ಸಮುದ್ರದ ಆಚೆಯ ತೀರವನ್ನು,) ತಡೆಯದೆ ಎಯ್ದುವೆನೆಂಬುದುಂ (ತಡಮಾಡದೆ ಸೇರುತ್ತೇನೆ, - ಗೆಲ್ಲುತ್ತೇನೆ), ಅಂತೆ ಬಂದು ಪಂಕೇರುಹವಕ್ತ್ರೆ (ಕಮಲದ ಕಣ್ಣಿನ ದ್ರೌಪದಿ)

ಮತ್ಸ್ಯಸುತನಂ (ಉತ್ತರನಿಗೆ)
ನುಡಿದಳ್ (ದ್ರೌಪದಿಯು
ಉತ್ತರನಿಗೆ ಹಾಗೆಯೇ ಬಂದು
ತಿಳಿಸಿದಳು) ನಿನಗೆ
ಆಜಿರಂಗದೊಳ್
ಸಾರಥಿಯಪ್ಪೊಡೆ ಅಪ್ಪುದು
ಶಿಖಂಡಿಯೆ, (ನಿನಗೆ
ಯುದ್ಧರಂಗದಲ್ಲಿ
ಸಾರಥಿಯಾಗಬೇಕಾದರೆ
ಶಿಖಂಡಿಯೇ ಆಗಬಹುದು,)
ನಿನ್ನ ಒರೆಗೆ ಉಂತೆ (ಸುಮ್ಮನೆ)

ಗಂಡರಾರ್ (ನಿನಗೆ ಸಮಾನರಾದ ಶೂರರಾಗಿದ್ದಾರೆ? -ಎಂದಳು.)

ಪದ್ಯ-೯೭:ಅರ್ಥ:ಅರ್ಜುನ ದ್ರೌಪದಿಗೆ ಹೇಳಿದ: ‘ಮತ್ಸ್ಯನ ಮಗ ಉತ್ತರನಿಗೆ ನನ್ನನ್ನು ಸಾರಥಿಯನ್ನಾಗಿ ಮಾಡು. ಅವನ ಶತ್ರುಸೇನಾಸಮುದ್ರದ ಆಚೆಯ ತೀರವನ್ನು ತಡಮಾಡದೆ ಸೇರುತ್ತೇನೆ, -ಗೆಲ್ಲುತ್ತೇನೆ, ಎಂದು ಹೇಳಿದನು.

ದ್ರೌಪದಿಯು ಉತ್ತರನಿಗೆ
ಹಾಗೆಯೇ ಬಂದು ತಿಳಿಸಿದಳು.
ನಿನಗೆ ಯುದ್ಧರಂಗದಲ್ಲಿ
ಸಾರಥಿಯಾಗಬೇಕಾದರೆ
ಶಿಖಂಡಿಯೇ ಆಗಬಹುದು.
ಸುಮ್ಮನೆ- ನಿನಗೆ
ಸಮಾನರಾದ
ಶೂರರಾಗಿದ್ದಾರೆ? ಎಂದಳು.

ವ||ಎಂಬುದುಂ
ಬೃಹಂದಳೆಯಲ್ಲಿಗುತ್ತರಂ ತನ್ನ

ತಂಗೆಯುತ್ತರೆಯನೆ ಬೞಿಯನಟ್ಟಿ ಬರಿಸಿ-

ವಚನ:ಪದವಿಭಾಗ-ಅರ್ಥ: ಎಂಬುದುಂ ಬೃಹಂದಳೆಯಲ್ಲಿಗೆ ಉತ್ತರಂ ತನ್ನ ತಂಗೆಯು ಉತ್ತರೆಯನೆ ಬೞಿಯನು ಅಟ್ಟಿ ಬರಿಸಿ-

ವಚನ:ಅರ್ಥ:ಸೈರಂಧ್ರಿಯು ಎಂದಾಗ- ಉತ್ತರನು ತನ್ನ ತಂಗಿಯಾದ ಉತ್ತರೆಯ ಮೂಲಕ ಸಮಾಚಾರವನ್ನು

ಕಳುಹಿಸಿ ಬೃಹಂದಳೆಯನ್ನು
ಬರಮಾಡಿದನು

ಉ||
ಸಾರಥಿಯಪ್ಪೊಡಪ್ಪನೆನಗೀತ
ನೆ ಪೋ ಪೆಱರೇವರಿನ್ ನೆರಂ
ಬಾರೆನೆನುತ್ತೆ ತನ್ನ ರಥಮಂ
ತರವೇೞ್ದಿರದೆಯ್ದೆ ಘೋರ
ಕಾಂ||
ತಾರಮನೊಂದು ಬೇಗೆ
ಪಱಿವಂತು ರಥಂ ಪಱಿದತ್ತು
ವೈರಿ ಕಾಂ

ತಾರಮನಟ್ಟಿಲಂಕದ ಬೃಹಂದಳೆ ಚೋದಿಸೆ ಚೋದ್ಯಮುಪ್ಪಿನಂ|| ೯೮ ||

ಪದ್ಯ-೯೮:ಪದವಿಭಾಗ-ಅರ್ಥ: ಸಾರಥಿಯಪ್ಪೊಡೆ ಅಪ್ಪನು ಎನಗೆ ಈತನೆ (ನನಗೆ ಸಾರಥಿಯಾಗುವುದಾದರೆ ಈತನೇ ಆಗುವನು, ಸಮರ್ಥ) ಪೋ ಪೆಱರ್ ಏವರಿನ್ ನೆರಂ ಬಾರೆನು ಎನುತ್ತೆ (ಹೋಗು, ಇತರರು ಏಕೆಬೇಕು? ಇನ್ನು

ಯಾರ ನೆರವನ್ನೂ ನಾನು ಅಪೇಕ್ಷಿಸುವುದಿಲ್ಲ ಎನ್ನುತಾ) ತನ್ನ ರಥಮಂ ತರವೇೞ್ದು ಇರದೆ ಎಯ್ದೆ (ತನ್ನ ತೇರನ್ನು ತರಹೇಳಿ ಸಾವಕಾಶಮಾಡದೆ ಹೋದಾಗ,) ಘೋರ ಕಾಂತಾರಮನೊಂದು ಬೇಗೆ (ಬೆಂಕಿ)) ಪರಿವಂತು ರಥಂ ಪರಿದತ್ತು (ಭಯಂಕರವಾದ ಕಾಡನ್ನು ಕಿಚ್ಚು ಆವರಿಸಿದ ಹಾಗೆ ರಥವು ಹರಿದೋಡಿತು.)

ವೈರಿ ಕಾಂತಾರಮನು
ಉಚ್ಚಿಲ್ (ಶತ್ರುಗಳೆಂಬ
ಕಾಡಿನ್ನು ಸುಡಲು) ಅಂಕದ
ಬೃಹಂದಳೆ ಚೋದಿಸೆ
ಚೋದ್ಯಮುಪ್ಪಿನಂ (ಪ್ರಸಿದ್ಧ
ಬೃಹಂದಳೆ ಪ್ರೇರೇಪಿಸಲು
ಆಶ್ಚರ್ಯವುಂಟಾಗುವ ಹಾಗೆ)
(ಪ್ರಸಿದ್ಧ ಬೃಹಂದಳೆ
ಪ್ರೇಪಿಸಲು
ಆಶ್ಚರ್ಯವುಂಟಾಗುವ ಹಾಗೆ
ಶತ್ರುಗಳೆಂಬ ಕಾಡಿನ್ನು

ಸುಡಲು ಭಯಂಕರವಾದ ಕಾಡನ್ನು ಕಿಚ್ಚು ಆವರಿಸಿದ ಹಾಗೆ ರಥವು ಹರಿದೋಡಿತು.)

ಪದ್ಯ-೯೮:ಅರ್ಥ: ನನಗೆ ಸಾರಥಿಯಾಗುವುದಾದರೆ ಈತನೇ ಆಹುವನು,ಸಮರ್ಥ; ಇತರರು ಏನು ಮಾಡಿಯಾರು? ಇನ್ನು ಯಾರ ನೆರವನ್ನೂ ನಾನು ಅಪೇಕ್ಷಿಸುವುದಿಲ್ಲ, ಎನ್ನುತಾ ತನ್ನ ತೇರನ್ನು ತರಹೇಳಿ

ಸಾವಕಾಶಮಾಡದೆ
ಹೋದಾಗ. ಭಯಂಕರವಾದ
ಕಾಡನ್ನು ಕಿಚ್ಚು ಆವರಿಸಿದ
ಹಾಗೆ ರಥವು ಹರಿದೋಡಿತು.
ಶತ್ರುಗಳೆಂಬ ಕಾಡಿನ ಕಡೆಗೆ
ತೇರು ಧಾವಿಸಿತು. ಪ್ರಸಿದ್ಧ
ಬೃಹಂದಳೆ ಪ್ರೇರೇಪಿಸಲು
ಆಶ್ಚರ್ಯವುಂಟಾಗುವ ಹಾಗೆ
ಶತ್ರುಗಳೆಂಬ ಕಾಡಿನ್ನು
ಸುಡಲು ಭಯಂಕರವಾದ

ಕಾಡನ್ನು ಕಿಚ್ಚು ಆವರಿಸಿದ ಹಾಗೆ ರಥವು ಹರಿದೋಡಿತು.

ವ|| ಅಂತು ಕಿಱಿದಂತರಮಂ ಪೋಗೆವೋಗೆ-

ವಚನ:ಪದವಿಭಾಗ-

ಅರ್ಥ:ಅಂತು ಕಿಱಿದು ಅಂತರಮಂ ಪೋಗೆವೋಗೆ-

ವಚನ:ಅರ್ಥ:ವ|| ಹಾಗೆ ಸ್ವಲ್ಪ ದೂರ ಹೋಗುಹೋಗುತ್ತಾ

ಚಂ|| ಕರಿಘಟೆ ನೀಳಮೇಘಘಟೆಯಂತೆ

ತುರಂಗದಟಿಂ ಸಮುದ್ರದೊಳ್
ತರತರದಿಂದಮೇೞ್ವಿ
ತೆರೆಯಂತೆ ರಥಂ
ಮಕರಂಗಳಂತಗು
ರ್ವುರಿವರಿಯುತ್ತಮಿರ್ಪಣಿ
ಬೃಹದ್ಬಡಬಾನಳನಂತೆ ತೋರೆ
ಭೀ
ಕರತರಮಾದುದುತ್ತರನ ಕಣ್ಗೆ
ಸುಯೋಧನಸೈನ್ಯಸಾಗರಂ||
೯೯ ||

ಪದ್ಯ-೯೯:ಪದವಿಭಾಗ-ಅರ್ಥ:ಕರಿಘಟೆ (ಆನೆಯ ಸಮೂಹ) ನೀಳಮೇಘ ಘಟೆಯಂತೆ ತುರಂಗ ದಳಿಂ (ಆನೆಯ ಸಮೂಹವು ಕರಿಯ ಮೋಡಗಳ ಸಮೂಹದಂತೆಯೂ, ಕುದುರೆಯ ಸೈನ್ಯವು) ಸಮುದ್ರದೊಳ್ ತರತರದಿಂದಂ ಏೞ್ವ ತೆರೆಯಂತೆ (ಸಮುದ್ರದಲ್ಲಿ

ವಿಧವಿಧವಾಗಿ ಏಳುವ ಅಲೆಗಳಂತೆ;) ರಥಂ ಮಕರಂಗಳಂತೆ (ರಥಗಳು ಮೊಸಳೆಗಳಂತೆಯೂ) ಅಗುರ್ವ ಉರಿ ವರಿಯುತ್ತಂ ಇರ್ಪ ಅಣಿ- ಕಾಲಾಳು ಸೈನ್ಯ (ಭಯಂಕರವಾದ ಬೆಂಕಿಯ ಹರಿದುಬರುತ್ತಿರುವಂತೆಯೂ, ಪದಾತಿಸೈನ್ಯವು) ಬೃಹದ್ಬಡಬಾನಳನಂತೆ ತೋರೆ (ದೊಡ್ಡ

ಬಡಬಾಗ್ನಿಯಂತೆಯೂ
ಕಾಣಲು)
ಭೀಕರತರಮಾದುದು
ಉತ್ತರನ ಕಣ್ಗೆ
ಸುಯೋಧನಸೈನ್ಯಸಾಗರಂ
(ದುರ್ಯೋಧನನ
ಸೇನಾಸಮುದ್ರವು ಉತ್ತರನ
ಕಣ್ಣಿಗೆ ಅತ್ಯಂತ
ಭಯಂಕರವಾಗಿ ಕಂಡಿತು)
ಪದ್ಯ-೯೯:ಅರ್ಥ:ಉತ್ತರನ
ಎದುರು: ಆನೆಯ

ಸಮೂಹವು ಕರಿಯ
ಮೋಡಗಳ
ಸಮೂಹದಂತೆಯೂ,
ಕುದುರೆಯ ಸೈನ್ಯವು
ಸಮುದ್ರದಲ್ಲಿ ವಿಧವಿಧವಾಗಿ
ಏಳುವ ಅಲೆಗಳಂತೆಯೂ,
ರಥಗಳು
ಮೊಸಳೆಗಳಂತೆಯೂ,
ಪದಾತಿಸೈನ್ಯವು ದೊಡ್ಡ
ಕಿಚ್ಚಿನಂತೆ ಹರಿದುಬರುತ್ತಿರುವ
ದೊಡ್ಡ

ಬಡಬಾಗ್ನಿಯಂತೆಯೂ, ಕಾಣಲು ದುರ್ಯೋಧನನ ಸೇನಾಸಮುದ್ರವು ಉತ್ತರನ ಕಣ್ಣಿಗೆ ಅತ್ಯಂತ ಭಯಂಕರವಾಗಿ ಕಂಡಿತು.

ವ|| ಆಗಳದಂ ಕಂಡುತ್ತರನೊತ್ತರಮೊತ್ತಿದಂತೆ ಬೆರ್ಚಿ ಬೆಗಡುಗೊಂಡು-

ವಚನ:ಪದವಿಭಾಗ-ಅರ್ಥ: ಆಗಳದಂ ಕಂಡು ಉತ್ತರನು ಒತ್ತರಮೊತ್ತಿದಂತೆ ಬೆರ್ಚಿ

(ಒಂದೇಸಲಕ್ಕೆ

ಆಕ್ರಮಿಸಲ್ಪಟ್ಟವನ ಹಾಗೆ

ಬೆದರಿ) ಬೆಗಡುಗೊಂಡು-

ವಚನ:ಅರ್ಥ:ಅದನ್ನು

ನೋಡಿ ಉತ್ತರನು

ಒಂದೇಸಲಕ್ಕೆ

ಆಕ್ರಮಿಸಲ್ಪಟ್ಟವನ ಹಾಗೆ

ಬೆದರಿ ಭಯವನ್ನು ಹೊಂದಿ-

ಉ||

ನೋಡಲಱುಂಬಮೆಂದೊಡಿದ

ನಾಂತಿಱಿದಾರ್
ತವಿಪನ್ನರೆಂದು ನಾ
ಣೋಡೆ ವಿರಾಟಸೂನು
ರಥದಿಂದಿೞಿದೋಡಿದೊಡೆ
ಯ್ದೆ ಪೂಣ್ದು ಬೆ|
ಚೋಁಡೆ ಕಿರೀಟಿ
ತನ್ನನಱಿಪುತ್ತೆ
ಶವಿದ್ರುಮದಲ್ಲಿಗಾತನಂ
ನೀಡಿರದುಯ್ದು
ನೀಡಿಸಿದನಾತನಿನಲ್ಲಿಯ
ಕೈದುವೆಲ್ಲಮಂ|| ೧೦೦ ||

ಪದ್ಯ-೧೦೦:ಪದವಿಭಾಗ-ಅರ್ಥ:ನೋಡಲ್ ಅರಿಂಬಮೆಂದೊಡೆ (ನೋಡುವುದಕ್ಕೇ ಅಸಾಧ್ಯವಾಗಿರುವಾಗ) ಇದನು ಆಂತು ಇಱಿದು ಅರ್ ತವಿಪನ್ನರ್ ಎಂದು (ಇದನ್ನು ಎದುರಿಸಿ ಹೊಡೆದು ನಾಶಮಾಡುವವರಾರು' ಎಂದು) ನಾಣ್ ಓಡೆ (ನಾಚಿಕೆ ಹೊಗಲು) ವಿರಾಟಸೂನು

ರಥದಿಂದಿೞಿದು ಓಡಿದೊಡೆ
(ಉತ್ತರನು ನಾಚಿಕೆಗೆಟ್ಟು
ತೇರಿನಿಂದಿಳಿದು ಓಡಲು-)
ಎಯ್ದೆ ಪೂಣ್ದು ಬೆರ್ಚೋೞಡೆ
(ಹೀಗೆ ಚೆನ್ನಾಗಿ ಪ್ರತಿಜ್ಞೆಮಾಡಿ
ಈಗ ಹೆದರಿ ಭಯದಿಂದ
ಓಡಲು,) ಕಿರೀಟಿ ತನ್ನನು
ಅಱಿಪುತ್ತೆ (ಅರ್ಜುನನು ತನ್ನ
ಪರಿಚಯವನ್ನು ತಿಳಿಸುತ್ತ),
ಶವಿದ್ರುಮದಲ್ಲಿಗೆ ಆತನಂ
ನೀಡಿರದೆ ಉಯ್ದು (ಅವನನ್ನು

ಬನ್ನಿಯ ಮರದ ಹತ್ತಿರಕ್ಕೆ ತಕ್ಷಣ ಕರೆದುಕೊಂಡು ಹೋಗಿ) ನೀಡಿಸಿದನು ಆತನಿಂ ಅಲ್ಲಿಯ ಕೈದುವೆಲ್ಲಮಂ (ಅವನಿಂದ ಆಯುಧಗಳೆಲ್ಲವನ್ನೂ ತನಗೆ ನೀಡುವ ಹಾಗೆ ಮಾಡಿದನು-)

ಪದ್ಯ-೧೦೦:ಅರ್ಥ: . ‘ನೋಡುವುದಕ್ಕೇ ಅಸಾಧ್ಯವಾಗಿರುವಾಗ, ಇದನ್ನು ಎದುರಿಸಿ ಹೊಡೆದು ನಾಶಮಾಡುವವರಾರು’

ಎಂದು ಉತ್ತರನು
ನಾಚಿಕೆಗೆಟ್ಟು, ತೇರಿನಿಂದಿಳಿದು
ಓಡಲು. ಚೆನ್ನಾಗಿ ಪ್ರತಿಜ್ಞೆಮಾಡಿ
ಈಗ ಹೆದರಿ ಭಯದಿಂದ
ಓಡಲು, ಉತ್ತರನಿಗೆ
ಅರ್ಜುನನು ತನ್ನ
ಪರಿಚಯವನ್ನು ತಿಳಿಸುತ್ತ,
ಅವನನ್ನು ಬನ್ನಿಯ ಮರದ
ಹತ್ತಿರಕ್ಕೆ ತಕ್ಷಣ ಕರೆದುಕೊಂಡು
ಹೋಗಿ, ಅವನಿಂದ
ಆಯುಧಗಳೆಲ್ಲವನ್ನೂ ತನಗೆ

ನೀಡುವ ಹಾಗೆ ಮಾಡಿದನು-
(ತೆಗೆಸಿಕೊಂಡನು)

ವ|| ಹಾಗೆ ಅರ್ಜುನನು ಗಾಂಡೀವವೇ ಮೊದಲಾದ ದಿವ್ಯವಾದ ಬಿಲ್ಲುಬತ್ತಳಿಕೆಗಳನ್ನೂ ಬಾನಗಳನ್ನೂ ವಿಚಿತ್ರವಾದ ಕವಚಗಳನ್ನೂ ತನಗೆ ವಿಜಯಸೂಚಕವಾಗಿಯೇ ಅಂಗೀಕರಿಸಿದನು. ಶತ್ರುಗಳ ಗಂಟಲ ಬಳೆಯನ್ನು ಒಡೆದು

ಹಾಕುವುದನ್ನು ಅನುಸರಿಸುವಂತೆ ಪೂರ್ಣವಾಗಿ

ವಚನ:ಪದವಿಭಾಗ-ಅರ್ಥ:

ಅಂತು ಗಾಂಡೀವಿ ಗಾಂಡೀವಂ ಮೊದಲಾಗೆ (ಮೊದಲಾದ) ದಿವ್ಯಶರಾಸನಶರ ವಿಚಿತ್ರ ತನುತ್ರಂಗಳೆಲ್ಲಮಂ ಎಲ್ಲಮಂ (ದಿವ್ಯವಾದ ಬಿಲ್ಲುಬತ್ತಳಿಕೆಗಳನ್ನೂ ಬಾಣಗಳನ್ನೂ ವಿಚಿತ್ರವಾದ

ಕವಚಗಳನ್ನೂ) ತನಗೆ ಆವಗಂ
ಕೊಳ್ವಂತೆ ಕೊಂಡು (ತನಗೆ
ಪೂರ್ತಿಯಾಗಿ
ತೆಗೆದುಕೊಳ್ಳುವಂತೆ ಪಡೆದು)
ಪಗೆವರ ಗಂಟಲ ಬಳೆಯನು
ಒಡೆದು ಕಳೆವುದನನು
ಅಕರಿಸುವಂತೆ (ಶತ್ರುಗಳ
ಗಂಟಲ ಬಳೆಯನ್ನು ಒಡೆದು
ಹಾಕುವುದನ್ನು
ಅನುಸರಿಸುವಂತೆ) ತೀವಿ
ತೊಟ್ಟ ಮುಂಗೈಯ್ಯ

ಬಳೆಗಳನೊಡೆದು ಕಳೆದು (ಪೂರ್ಣವಾಗಿ ತೊಟ್ಟಿದ್ದ ಮುಂಗಯ್ಯಿನ ಬಳೆಗಳನ್ನು ಒಡೆದುಹಾಕಿದನು)-

ವಚನ:ಅರ್ಥ:ಹಾಗೆ ಗಾಂಡೀವಿ ಗಾಂಡೀವವೇ ಮೊದಲಾದ ದಿವ್ಯವಾದ ಬಿಲ್ಲುಬತ್ತಳಿಕೆಗಳನ್ನೂ ಬಾಣಗಳನ್ನೂ ವಿಚಿತ್ರವಾದ ಕವಚಗಳನ್ನೂ ತನಗೆ ಪೂರ್ತಿಯಾಗಿ

ತೆಗೆದುಕೊಳ್ಳುವಂತೆ ಪಡೆದು

ಪಗೆವರ ಗಂಟಲ

ಬಳೆಯನೊಡೆದು

ಕಳೆವುದನನುಕರಿಸುವಂತೆ

ತೀವಿ ತೊಟ್ಟ ಮುಂಗೈಯ್ಯ

ಬಳೆಗಳನೊಡೆದು ತೆಗೆದು

ತೊಟ್ಟಿದ್ದ ಮುಂಗಯ್ಯಿನ

ಬಳೆಗಳನ್ನು

ಒಡೆದುಹಾಕಿದನು.

ಚಂ|| ಬಿಡೆ ಪಿಣಿಲಂ

ಕುರುಧ್ವಜಿನಿ ತೊಟ್ಟನೆ

ಬಾಯನೆ ಬಿಟ್ಟುದಂದು ಗಂ
ಡುಡೆಯುಡೆ ಗಂಡುಗೆಟ್ಟುದು
ನೆಗೞ್ತೆಯ ಗಾಂಡಿವಮಂ
ತಗುಳ್ದು ಜೇ|
ವೊಡೆಯೆ ಸಿಡಿಲ್ ಸಿಡಿಲ್ದು
ಪೊಡೆವಂತೆವೊಲಾಯ್ತನೆ
ಗಂಡಗಾಡಿ ನೂ
ರ್ಮಡಿ ಮಿಗಿಲಾದುದಾ
ರಥಮನೇಱಲೊಡಂ
ಪಡೆಮೆಚ್ಚೆಗಂಡನಾ|| ೧೦೧ ||

ಪದ್ಯ-೧೦೧:ಪದವಿಭಾಗ-ಅರ್ಥ:ಬಿಡೆ ಪಿಣಿಲಂ (ಹೆರಳನ್ನು ಬಿಡೆ- ಬಿಚ್ಚಲು) ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ಅಂದು (ಕೌರವ ಸೈನ್ಯವು ಇದ್ದಕ್ಕಿದ್ದ ಹಾಗೆ ಬಾಯಿಬಿಟ್ಟು ನೋಡಿತು) ಗಂಡುಡೆಯುಂ ಉಡೆ ಗಂಡುಗೆಟ್ಟುದು (ಪುರುಷನಿಗೆ ಯೋಗ್ಯವಾದ ಗಂಡುಗಚ್ಚೆಯ ಉಡುಪನ್ನು

ಧರಿಸಲು (ನಪುಂಸಕತನ
ಹೋಗಿ) ತನ್ನ ಪುರುಷತನ
ತೋರಿತು.) ನೆಗೞ್ತೆಯ
ಗಾಂಡಿವಮಂ ತಗುಳ್ದು
ಜೇವೊಡೆಯೆ (ಪ್ರಸಿದ್ಧ
ಗಾಂಡೀವವನ್ನು ಹಿಡಿದು
ಹೆದೆಯ ಝೇಂಕಾರ
ಶಬ್ದಮಾಡಲು) ಸಿಡಿಲ್
ಸಿಡಿಲ್ದು ಪೊಡೆವಂತೆವೊಲ್
ಆಯ್ತೆನೆ (ಸಿಡಿಲು ಸಿಡಿದು
ಹೊಡೆದಂತೆ ಆಯಿತು,

ಎನ್ನುವಾಗ) ಗಂಡಗಾಡಿ ನೂರ್ಮಡಿ ಮಿಗಿಲಾದುದು ಆ ರಥಮನು ಏಱಲೊಡಂ ಪಡೆಮೆಚ್ಚೆಗಂಡನಾ (ಪಡೆಮೆಚ್ಚೆಗಂಡನಾದ ಅರ್ಜುನನು ರಥವನ್ನು ಹತ್ತಲು ಅವನ ಪೌರುಷವೂ ಸೌಂದರ್ಯವೂ ನೂರುಮಡಿ ಹೆಚ್ಚಾಯಿತು.)|

ಪದ್ಯ-೧೦೧:ಅರ್ಥ:

ಬೃಹನ್ನಳೆಯಾಗಿ ಕಟ್ಟಿದ್ದ

ಕೂದಲಿನ ಗಂಟನ್ನು (ಹೆರಳನ್ನು) ಬಿಚ್ಚಲು ಕೌರವ ಸೈನ್ಯವು ಇದ್ದಕ್ಕಿದ್ದ ಹಾಗೆ ಆಶ್ಚರ್ಯ ಮತ್ತು ಭಯದಿಂದ ಬಾಯಿಬಿಟ್ಟಿತು. ಪುರುಷನಿಗೆ ಯೋಗ್ಯವಾದ ಗಂಡುಗಚ್ಚೆಯ ಉಡುಪನ್ನು ಧರಿಸಲು ನಪುಂಸಕತನ ಹೋಗಿ ತನ್ನ ಪುರುಷತನ ತೋರಿತು. ಪ್ರಸಿದ್ಧ ಗಾಂಡೀವವನ್ನು ಹಿಡಿದು ಹೆದೆಯ ಝೇಂಕಾರ

ಶಬ್ದಮಾಡಲು ಸಿಡಿಲು ಸಿಡಿದು
ಹೊಡೆದಂತೆ ಆಯಿತು
ಎನ್ನುವಾಗ,
ಪಡೆಮೆಚ್ಚೆಗಂಡನಾದ
ಅರ್ಜುನನು ರಥವನ್ನು ಹತ್ತಲು
ಅವನ ಪೌರುಷವೂ
ಸೌಂದರ್ಯವೂ ನೂರುಮಡಿ
ಹೆಚ್ಚಾಯಿತು.

ವ|| ಅನ್ನೆಗಮತ್ತ ಪರಸೈನ್ಯಭೈರವನ ಬರವಿಂಗಳ್ಕಿ ಗಾಂಡಿಗೊಡ್ಡಿದ

ಸೊಡರಂತೆ ನಡನಡ
ನಡುಗುವ ಕುರುಧ್ವಜಿನಿಯಂ
ಕಂಡು ಸುಯೋಧನಂಗೆ
ಗಾಂಗೇಯನಿಂತೆಂದಂ-

ವಚನ:ಪದವಿಭಾಗ-ಅರ್ಥ:
ಅನ್ನೆಗಂ ಅತ್ತ ಪರಸೈನ್ಯಭೈರವನ ಬರವಿಂಗೆ ಅಳ್ಕಿ (ಅಷ್ಟರಲ್ಲಿ ಆ ಕಡೆ ಪರಸೈನ್ಯಭೈರವನಾದ ಅರ್ಜುನನ ಬರವಿಕೆಯನ್ನು ಕಂಡು ಹೆದರಿ) ಗಾಂಡಿಗೊಡ್ಡಿದ

ಸೊಡರಂತೆ ನಡನಡ
ನಡುಗುವ ಕುರುಧ್ವಜಿನಿಯಂ
ಕಂಡು (ಹೆದರಿ ಗಾಳಿಗೊಡ್ಡಿದ
ದೀಪದ ಹಾಗೆ ಗಡಗಡ
ನಡುಗುತ್ತಿರುವ
ಕೌರವಸೈನ್ಯವನ್ನು ಕಂಡು)
ಸುಯೋಧನಂಗೆ
ಗಾಂಗೇಯನು (ಭೀಷ್ಮನು)
ಇಂತೆಂದಂ-
ವಚನ:ಅರ್ಥ: ಅಷ್ಟರಲ್ಲಿ ಆ
ಕಡೆ ಪರಸೈನ್ಯಭೈರವನಾದ

ಅರ್ಜುನನ ಬರವಿಕೆಯನ್ನು ಕಂಡು ಹೆದರಿ ಗಾಳಿಗೊಡ್ಡಿದ ದೀಪದ ಹಾಗೆ ಗಡಗಡ ನಡುಗುತ್ತಿರುವ ಕೌರವಸೈನ್ಯವನ್ನು ಕಂಡು ದುರ್ಯೋಧನನಿಗೆ ಭೀಷ್ಮನು ಹೀಗೆಂದನು.

ಚಂ|| ಅವಧಿಯ ಲೆಕ್ಕಮಂ
ನೆಱಪಿ ನನ್ನಿಗೆ ಮಾಣದೆ
ಕಾದಲೆಂದು ಬಂ

ದವನಿವನರ್ಜುನಂ ತೊಡರ್ದು ನಿಲ್ಲದೆ ನೀನೊಡಗೊಂಡು ಪೋಗು ಗೋ| ವಹಮನಂಗರಾಜ ಕೃಪ ಕುಂಭಭವ ಪ್ರಮುಖ ಪ್ರವೀರರೆಂ ಬಿವರ್ವೆರಸಾಂಪೆನಾನಿನಿಸನೀ ಯೆಡೆಯೊಳ್ ಕದನತ್ರಿಣೇತ್ರನಂ|| ೧೦೨ ||

ಪದ್ಯ-೧೦೨:ಪದವಿಭಾಗ-

ಅರ್ಥ:ಅವಧಿಯ ಲೆಕ್ಕಮಂ

ನೆಱಪಿ (ಅಜ್ಞಾತವಾಸದ
ಗಡುವಿನ ಲೆಕ್ಕವನ್ನು
ಪೂರ್ಣಮಾಡಿ) ನನ್ನಿಗೆ
ಮಾಣದೆ ಕಾದಲೆಂದು
ಬಂದವನು ಇವನು
ಅರ್ಜುನಂ(ಯುದ್ಧಮಾಡುವು
ದಕ್ಕಾಗಿ ಬಂದ ಇವನು
ಅರ್ಜುನ), ತೊಡರ್ದು ನಿಲ್ಲದೆ
ನೀನು ಪೋಗು, (ಇವನಲ್ಲಿ
ಸಿಕ್ಕಿ ನಿಂತುಕೊಳ್ಳದೆ ನೀನು
ಒಡಗೊಂಡು--

ಹಿಂತಿರುಗಿಹೋಗು)
ಗೋವಹಮನು
(ಪಶುಸಮೂಹವನ್ನು);
ಅಂಗರಾಜ ಕೃಪ ಕುಂಭಭವ
ಪ್ರಮುಖ ಪ್ರವೀರರೆಂಬ
ಇವರ್ವೆರಸಿ ಆಂಪೆನು ಆನ್
ಇನಿಸಂ ಈ ಯೆಡೆಯೊಳ್
ಕದನತ್ರಿಣೇತ್ರನಂ (ಈ
ಸ್ಥಳದಲ್ಲಿ ನಾನು
ಕದನತ್ರಿಣೇತ್ರನಾದ
ಅರ್ಜುನನನ್ನು ಇನಿಸಂ-

ಸ್ವಲ್ಪಮಟ್ಟಿಗೆ ಆಂಪೆನು-ಎದುರಿಸುತ್ತೇನೆ ಎಂದನು)

ಪದ್ಯ-೧೦೨:ಅರ್ಥ:ಸತ್ಯವಾಕ್ಕಿಗೆ ತಪ್ಪದೆನಡೆದು, ಅಜ್ಞಾತವಾಸದ ಗಡುವಿನ ಲೆಕ್ಕವನ್ನು ಪೂರ್ಣಮಾಡಿ, ಯುದ್ಧಮಾಡುವುದಕ್ಕಾಗಿ ಬಂದ ಇವನು ಅರ್ಜುನ. ಇವನಲ್ಲಿ ಸಿಕ್ಕಿ ನಿಂತುಕೊಳ್ಳದೆ ನೀನು ಪಶುಸಮೂಹವನ್ನು ಒಡಗೊಂಡು

ಹಿಂತಿರುಗಿಹೋಗು. ಕರ್ಣ, ಕೃಪ, ದ್ರೋಣರೇ ಮುಖ್ಯರಾದ ಪ್ರವೀರರೆಂಬ ಇವರನ್ನು ಸೇರಿಕೊಂಡು ಈ ಸ್ಥಳದಲ್ಲಿ ನಾನು ಕದನತ್ರಿಣೇತ್ರನಾದ ಅರ್ಜುನನನ್ನು ಸ್ವಲ್ಪಮಟ್ಟಿಗೆ ಎದುರಿಸುತ್ತೇನೆ ಎಂದನು.

ವ|| ಎಂಬುದುಂ ಸುಯೋಧನಂ ಪಿರಿದುಮಾಕುಳಂಬೆರಸು ಗೋಕುಲಮಂ

ಕೊಂಡುಪೋಗೆ ಪೋಗಲೀಯದುತ್ತರನಂ ರಥಮಂ ಚೋದಿಸೆಂದು ಮುಟ್ಟೆವಂದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಸುಯೋಧನಂ ಪಿರಿದುಂ ಆಕುಳಂಬೆರಸು (ವಿಶೇಷ ಗಾಬರಿಯಿಂದ ಕೂಡಿ) ಗೋಕುಲಮಂ ಕೊಂಡುಪೋಗೆ

(ಪಶುಸಮೂಹವನ್ನು ಒಡಗೊಂಡು ಹೋಗಲು) ಪೋಗಲೀಯದೆ ಉತ್ತರನಂ ರಥಮಂ ಚೋದಿಸೆಂದು ಮುಟ್ಟೆವಂದು (ಹಾಗೆ ಹೋಗುವುದಕ್ಕೆ ಬಿಡದೆ ಉತ್ತರನನ್ನು ತೇರನ್ನು ನಡೆಸುವಂತೆ ಹೇಳಿ- ಸಮೀಪಕ್ಕೆ ಬಂದು-)

ವಚನ:ಅರ್ಥ:ದುರ್ಯೋಧನನು ವಿಶೇಷ ಗಾಬರಿಯಿಂದ

ಕೂಡಿ ಪಶುಸಮೂಹವನ್ನು ಒಡಗೊಂಡು ಹೋಗಲು ಹಾಗೆ ಹೋಗುವುದಕ್ಕೆ ಬಿಡದೆ ಉತ್ತರನನ್ನು ತೇರನ್ನು ನಡೆಸುವಂತೆ ಹೇಳಿ (ಅರ್ಜುನನು ದುರ್ಯೋಧನನ) ಸಮೀಪಕ್ಕೆ ಬಂದನು.

ಮ|| ಪಗೆ ತೀರ್ಗುಂ ಬಗೆ ತೀರ್ಗುಮಾ

ಕುರುಕುಳಪ್ರಖ್ಯಾತನಂ ಕಾದಿ
ತೊ
ಟ್ಟಗೆ ಗೋವೃಂದಮನಾಂ
ಮಗುೞ್ಚಿದಪೆನೆಂದಾರ್ದೆಚ್ಚು
ತನ್ನಂಕದಂ|
ಬುಗಳೊಂದೊಂದಱಿಲೊಂದು
ಲಕ್ಕ ಬಲಮಂದಱ್ಕಾಡೆ
ದುರ್ಯೋಧನಂ
ಮಿಗೆ ಸೋಲ್ತೋಡೆ
ಮಗುೞ್ಚಿದಂ ತುಱುಗಳಂ
ವಿದ್ವಿಷ್ಟವಿದ್ರಾವಣಂ|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ: ಪಗೆ ತೀರ್ಗುಂ ಬಗೆ ತೀರ್ಗುಂ (ಶತ್ರುವೂ ನಾಶವಾಗುತ್ತದೆ. ಇಷ್ಟಾರ್ಥವೂ ನೆರವೇರುತ್ತದೆ.) ಆ ಕುರುಕುಳಪ್ರಖ್ಯಾತನಂ ಕಾದಿ ತೊಟ್ಟಗೆ ಗೋವೃಂದಮನು ಆ ಮಗುಳ್ಚಿದಪೆನೆಂದು ಆರ್ದು ಎಚ್ಚು (ಆದುದರಿಂದ ಕುರುಕುಲದಲ್ಲಿ ಪ್ರಖ್ಯಾತನಾದ ಈ ದುರ್ಯೋಧನನೊಡನೆ

ನಾನು ಯುದ್ಧಮಾಡಿ ಗೋಸಮೂಹವನ್ನು ಹಿಂತಿರುಗಿಸುತ್ತೇನೆ ಎಂದು ಆರ್ಭಟಿಸಿ ಬಾಣವನ್ನು ಹೊಡೆದು) ತನ್ನ ಅಂಕದ ಅಂಬುಗಳೊಂದೊಂದಱಲಿ ಒಂದು ಲಕ್ಕ ಬಲಮಂ ಅಂದು ಅೞ್ಕಾಡೆ (ತನ್ನ ಪ್ರಸಿದ್ಧವಾದ ಒಂದೊಂದು ಬಾಣದಿಂದಲೂ ಲಕ್ಷಸೈನ್ಯವು ನಾಶವಾಗಲು) ದುರ್ಯೋಧನಂಮಿಗೆ

ಸೋಲ್ತೋಡೆ (
ದುರ್ಯೋಧನನು
ಪೂರ್ಣವಾಗಿ ಸೋತು
ಓಡಿಹೋದಾಗ) ಮಗುೞ್ಚಿದಂ
ತುಱುಗಳಂ
ವಿದ್ವಿಷ್ಟವಿದ್ರಾವಣಂ (-
ಅರ್ಜುನ);(ಅರ್ಜುನನು
ಗೋವುಗಳನ್ನು
ಹಿಂತಿರುಗಿಸಿದನು.)

ಪದ್ಯ-೧೦೩:ಅರ್ಥ:
ಶತ್ರುತ್ವವೂ ನಾಶವಾಗುತ್ತದೆ.

ಇಷ್ಟಾರ್ಥವೂ ನೆರವೇರುತ್ತದೆ.
ಆದುದರಿಂದ ಕುರುಕುಲದಲ್ಲಿ
ಪ್ರಖ್ಯಾತನಾದ ಈ
ದುರ್ಯೋಧನನೊಡನೆ ನಾನು
ಯುದ್ಧಮಾಡಿ
ಗೋಸಮೂಹವನ್ನು
ಹಿಂತಿರುಗಿಸುತ್ತೇನೆ ಎಂದು
ಆರ್ಭಟಿಸಿ ಹೊಡೆದು ತನ್ನ
ಪ್ರಸಿದ್ಧವಾದ ಒಂದೊಂದು
ಬಾಣದಿಂದಲೂ ಲಕ್ಷಸೈನ್ಯವು
ನಾಶವಾಗಲು

ದುರ್ಯೋಧನನು
ಪೂರ್ಣವಾಗಿ ಸೋತು
ಓಡಿಹೋದಾಗ ಅರ್ಜುನನು
ಗೋವುಗಳನ್ನು
ಹಿಂತಿರುಗಿಸಿದನು.

ಚಂ|| ಅದಟರ ಚೆನ್ನಪೊಂಗರ
ಸಬಂಗಳ ತೊಱ್ತುಱಿಯೊಳ್
ತೊಡಂಕಿ ನಿ
ಲ್ಲದೆ ಪೊಱಮಟ್ಟ ತಮ್ಮ
ಮನದೊಳ್ ಮಿಗೆ
ಬೆಚ್ಚಸಿದಂತೆ ತೋಱುವ|

ಗ್ಗದ ನಿಡುಗೋಡು
ಮೇಡುಮಮರುತ್ತುಮಿಱುಂಕಿ
ದ ಕೆಚ್ಚಲೆತ್ತಮೆ
ತ್ತಿದ ಕುಡಿವಾಲಮಂದೆಸೆಯೆ
ಕರ್ಬಸುಗಳ್
ಪರಿಗೊಂಡುವಾಜಿಯೊಳ್||
೧೦೪ ||

ಪದ್ಯ-೧೦೪:ಪದವಿಭಾಗ-
ಅರ್ಥ:ಅದಟರ
ಚೆನ್ನಪೊಂಗರ ಸಬಂಗಳ
ತೊಟ್ಟಿಟಿಯೊಳ್ ತೊಡಂಕಿ

(ಶೂರರ ಮತ್ತು ವೀರರ
ಶವಗಳ ತುಳಿದಾಟದಲ್ಲಿ
ಸಿಕ್ಕಿಕೊಂಡು) ನಿಲ್ಲದೆ
ಪೊಱಮಟ್ಟ ತಮ್ಮ
ಮನದೊಳ್ ಮಿಗೆ
ಬೆಚ್ಚಿಸಿದಂತೆ (ನಿಲ್ಲದೆ
ಹೊರಟು ತಮ್ಮ ಮನಸ್ಸಿನಲ್ಲಿ
ವಿಶೇಷವಾಗಿ ಹೆದರಿದಂತೆ)
ತೋಱುವಗ್ಗದ ನಿಡುಗೋಡು
ಮೇಡುಂ ಅಮರುತ್ತುಂ
ಇಱುಂಕಿದ ಕೆಚ್ಚಲ್ (ಕಾಣುವ

ಕೊನೆ ಬಾಗಿಯೂ
ನೀಳವಾಗಿಯೂ ಇರುವ
ಕೊಂಬುಗಳೂ ಹಿಣಿಲೂ,
ಒಳಗೆ ಸೇರಿಕೊಂಡು
ಬಿಗಿದುಕೊಂಡಿರುವ ಕೆಚ್ಚಲೂ)
ಎತ್ತಮೆತ್ತಿದ ಕುಡಿವಾಲಂ
ಅಂದು ಎಸೆಯೆ ಕರ್ಬಸುಗಳ್
(ಕಪ್ಪು ಹಸುಗಳು)
ಪರಿಗೊಂಡವು ಆಜಿಯೊಳ್
(ಯುದ್ಧರಂಗದಲ್ಲಿ
ಓಡಿಹೋದುವು.)

ಪದ್ಯ-೧೦೪:ಅರ್ಥ: . ಶೂರರ ಮತ್ತು ವೀರರ ಶವಗಳ ತುಳಿದಾಟದಲ್ಲಿ ಸಿಕ್ಕಿಕೊಂಡು ನಿಲ್ಲದೆ ಹೊರಟು ತಮ್ಮ ಮನಸ್ಸಿನಲ್ಲಿ ವಿಶೇಷವಾಗಿ ಹೆದರಿದಂತೆ ಕಾಣುವ ಕೊನೆ ಬಾಗಿಯೂ ನೀಳವಾಗಿಯೂ ಇರುವ ಕೊಂಬುಗಳೂ ಹಿಣಿಲೂ, ಒಳಗೆ ಸೇರಿಕೊಂಡು ಬಿಗಿದುಕೊಂಡಿರುವ ಕೆಚ್ಚಲೂ, ಸಂಪೂರ್ಣವಾಗಿ

ಮೇಲೆತ್ತಿಕೊಂಡಿರುವ ಬಾಲದ ತುದಿಯೂ ಪ್ರಕಾಶಿಸುತ್ತಿರಲು ಕರಿಯ ಹಸುಗಳು, ಯುದ್ಧರಂಗದಲ್ಲಿ ಓಡಿಹೋದುವು.

ವ|| ಅಂತು ತುಱುವಂ ಮಗುಳ್ಚಿ ಮಗುೞದೆ ತನಗಿದಿರೊಡ್ಡಿ ನಿಂದರಿನೃಪಬಲಮನರೆದು ಪದೆದು-

ವಚನ:ಪದವಿಭಾಗ-ಅರ್ಥ:ಅಂತು ತುಱುವಂ ಮಗುೞ್ಚಿ (ಹಸುಗಳನ್ನು ಹಿಂತಿರುಗಿಸಿ) ಮಗುೞದೆ ತನಗೆ ಇದಿರೊಡ್ಡಿ ನಿಂದ ಅರಿನೃಪಬಲಮನು(ಹಿಂತಿರುಗದೆ ತನಗೆ ಎದುರಿಸಿ ನಿಂತ ಶತ್ರುಸೈನ್ಯವನ್ನು) ಅರೆದು ಸದೆದು (ಪುಡಿಮಾಡಿ ನಾಶಪಡಿಸಿದನು)-

ವಚನ:ಅರ್ಥ: ಹಾಗೆ ಹಸುಗಳನ್ನು ಹಿಂತಿರುಗಿಸಿ, ಹಿಂತಿರುಗದೆ ತನಗೆ ಎದುರಸಿ ನಿಂತ ಶತ್ರುಸೈನ್ಯವನ್ನು ಪುಡಿಮಾಡಿ ನಾಶಪಡಿಸಿದನು

<u>ಅರ್ಜುನನು ಕೌರವರನ್ನು ಸೋಲಿಸಿ - ಉತ್ತರನೊಡನೆ ವಿರಾಟನಗರ ಪ್ರವೇಶ</u>

ಚಂ|| ಪಟುವಟಿಯಂ ತಗುಳ್ದಳುರ್ವ ಬೇಗೆವೊಲೆಚ್ಚ ಶರಾಳಿಗಳ್ ಭಟಿಲ್

ಛಱಿಲೆನೆ ಪಾಯೆ ಪಾಯ್ವ

ಬಿಸುನೆತ್ತರ ಸುಟ್ಟುರೆ

ಚಾತುರಂಗಮಂ|

ಕಱಿಕುಱಿಮಾಗೆ

ಪೇಱಿಪೆಸರಿಲ್ಲೆನೆ ಪಾಯಿಸಿ

ತೇರನೆಯ್ದೆ ತೊ

ತ್ತಱದುಱಿದತ್ತು

ವೈರಿಬಲಮೆಲ್ಲಮನಮ್ಮನ

ಗಂಧವಾರಣಂ|| ೧೦೫ ||

ಪದ್ಯ-೧೦೫:ಪದವಿಭಾಗ-

ಅರ್ಥ: ಪಱುವಱಿಯಂ

ತಗುಳ್ದ ಅೞುರ್ವ

(ಅರಣ್ಯಮಾರ್ಗವನ್ನು

ಅನುಸರಿಸಿ ವ್ಯಾಪಿಸುವ)

ಬೇಗೆವೊಲ್ ಎೞ್ಚ ಶರಾಳಿಗಳ್

-ಶರ ಆಳಿಗಳ್ (ಬಿಟ್ಟ

ಅರ್ಜುನನ

ಬಾಣಸಮೂಹಗಳು)

ಛಟಿಲ್ಛಟಿಲೆನೆ ಪಾಯೆ

(ಛಳಿಲ್ ಛಳಿಲ್ ಎಂದು

ನುಗ್ಗಲು) ಪಾಯ್ವ ಬಿಸುನೆತ್ತರ

(ಹರಿದುಬರುತ್ತಿರುವ

ಬಿಸಿರಕ್ತದ) ಸುಟ್ಟುರೆ
(ಸುಂಟರಗಾಳಿಯಿಂದ)
ಚಾತುರಂಗಮಂ
ಕಟಿಕುಱಿಮಾಗೆ
(ಚತುರಂಗಸೈನ್ಯವನ್ನು
ಅಸ್ತವ್ಯಸ್ತವಾಗುವ ಹಾಗೆ
ಮಾಡಿ) ಪೇೞ್ಪೆಸರಿಲ್ಲೆನೆ
(ಹೇಳುವುದಕ್ಕೂ ಒಂದು
ಹೆಸರಿಲ್ಲ ಎನ್ನುವ
ಹಾಗೆ)ಪಾಯಿಸಿ ತೇರನು
ಎಯ್ದೆ(ತೇರನ್ನು ಚೆನ್ನಾಗಿ

ಹಾಯಿಸಿ) ತೊತ್ತಳಿದುಳಿದತ್ತು- ತೊತ್ತಳ ತುಳಿದತ್ತು(ತುಳಿದುತುಳಿದು ಹಾಕಿತ್ತು.) ವೈರಿಬಲಮೆಲ್ಲಮಂ ಅಮ್ಮನ ಗಂಧವಾರಣಂ (ಪ್ರೀತಿಯ/ ಅಪ್ಪನ? ಸೊಕ್ಕಾನೆ- ಅರ್ಜುನ) |

ಪದ್ಯ-೧೦೫:ಅರ್ಥ: . ಅರಣ್ಯಮಾರ್ಗವನ್ನು ಅನುಸರಿಸಿ ವ್ಯಾಪಿಸುವ ಕಿಚ್ಚಿನ ಹಾಗೆ ಬಿಟ್ಟ ಅರ್ಜುನನ

ಬಾಣಸಮೂಹಗಳು ಛಳಿಲ್
ಛಳಿಲ್ ಎಂದು ನುಗ್ಗಲು
ಹರಿದುಬರುತ್ತಿರುವ ಬಿಸಿರಕ್ತದ
ಸುಂಟರಗಾಳಿಯಿಂದ
ಚತುರಂಗಸೈನ್ಯವನ್ನು
ಅಸ್ತವ್ಯಸ್ತವಾಗುವ ಹಾಗೆ
ಮಾಡಿ. ಹೇಳುವುದಕ್ಕೂ
ಒಂದು ಹೆಸರಿಲ್ಲ ಎನ್ನುವ ಹಾಗೆ
ತೇರನ್ನು ಚೆನ್ನಾಗಿ ಹಾಯಿಸಿ
ಅರ್ಜುನನೆಂಬ ಸೊಕ್ಕಿದಾನೆ
ಶತ್ರುಸೈನ್ಯವನ್ನೆಲ್ಲ

ಸಂಪೂರ್ಣವಾಗಿ

ತುಳಿದುತುಳಿದು ಹಾಕಿತ್ತು.

ಕುರುಬಲದೊಳ್ ಕರಂ ನೆಗಳ್ದಿ

ಬೀರರ ಚೆನ್ನರ ಸಂದ

ಚೆನ್ನಪೊಂ

ಗರ ತಲೆ ತಾಟಿಪಣ್

ಕೆದಱಿದಂತೆ

ನಿರಂತರಮಾಜಿರಂಗದೊಳ್|

ಪರೆದಿರೆ

ಲೋಹಿತಾಂಬುಯೊಳಾನೆಗಳ

ಟ್ಟೆಗಳಾಡೆ ನೋಡಲ

ಚ್ಚರಿಯುಮಗುರ್ವುಮದ್ಭುತ ಮುಮಾಯ್ತು ರಣಾಂ ಕದನತ್ರಿಣೇತ್ರನಾ|| ೧೦೬ ||

ಪದ್ಯ-೧೦೬:ಪದವಿಭಾಗ-ಅರ್ಥ:ಕುರುಬಲದೊಳ್ ಕರಂ ನೆಗಟ್ದಿ ಬೀರರರ ಚೆನ್ನರ (ಕೌರವನ ಸೈನ್ಯದಲ್ಲಿ ಬಹಳ ಪ್ರಸಿದ್ಧರಾದ ವೀರರ ಸೌಂದರ್ಯಶಾಲಿಗ) ಸಂದ ಚೆನ್ನಪೊಂಗರ ತಲೆ (ಪ್ರಸಿದ್ಧರಾದ ಶೂರರುಗಳ

ತಲೆಗಳು) ತಾಟಿಪಣ್

ಕೆದಱಿದಂತೆ ನಿರಂತರಂ

ಆಜಿರಂಗದೊಳ್ ಪರೆದಿರೆ

(ತಾಳೆಯ ಹಣ್ಣು ಹರಡಿರುವ

ಹಾಗೆ ಅವಿಚ್ಛಿನ್ನವಾಗಿ

ಯುದ್ಧಭೂಮಿಯಲ್ಲಿ

ಚದುರಿರಲು-)

ಲೋಹಿತಾಂಬುಯೊಳು

ಆನೆಗಳಟ್ಟೆಗಳಾಡೆ

(ರಕ್ತಸಮುದ್ರದಲ್ಲಿ ಆನೆಯ

ಶರೀರಗಳು ಆಡುತ್ತಿರಲು/

ತೇಲು-) ನೋಡಲು ಅಚ್ಚರಿಯುಂ ಅಗುರ್ವುಂ ಅದ್ಭುತಮುಂ ಆಯ್ತು (ನೋಡುವುದಕ್ಕೆ ಆಶ್ಚರ್ಯವೂ ಭಯಂಕರವೂ ಅದ್ಭುತವೂ ಆಯಿತು) ರಣಂ ಕದನತ್ರಿಣೇತ್ರನಾ (ಕದನತ್ರಿಣೇತ್ರನಾದ ಅರ್ಜುನನ ಯುದ್ಧವು)

ಪದ್ಯ-೧೦೬:ಅರ್ಥ: ಕೌರವನ ಸೈನ್ಯದಲ್ಲಿ ಬಹಳ ಪ್ರಸಿದ್ಧರಾದ

ವೀರರ, ಸುಂದರರ,
ಪ್ರಸಿದ್ಧರಾದ ಶೂರರುಗಳ
ತಲೆಗಳು ತಾಳೆಯ ಹಣ್ಣು
ಹರಡಿರುವ ಹಾಗೆ
ಅವಿಚ್ಛಿನ್ನವಾಗಿ
ಯುದ್ಧಭೂಮಿಯಲ್ಲಿ
ಚದುರಿದುವು.
ರಕ್ತಸಮುದ್ರದಲ್ಲಿ ಆನೆಯ
ಶರೀರಗಳು ಆಡುತ್ತಿರಲು,
ಕದನತ್ರಿಣೇತ್ರನಾದ
ಅರ್ಜುನನ ಯುದ್ಧವು

ನೋಡುವುದಕ್ಕೆ ಆಶ್ಚರ್ಯವೂ ಭಯಂಕರವೂ ಅದ್ಭುತವೂ ಆಯಿತು

ವ|| ಆಗಳದಂ ಕಂಡಂಗರಾಜಂ ರಾಜರಾಜನ ನಡಪಿದುದುಮಂ ತನ್ನ ಬಲ್ಲಾಳ್ತನಮುಮಂ ನೆನೆದು ವಿಕರ್ಣಂಬೆರಸರ್ಣವನಿನಾದ ದಿಂದಾರುತ್ತುಂ ಬಂದ ಗುಣಾರ್ಣವನೊಳ್ ತಾಗೆ-

ವಚನ:ಪದವಿಭಾಗ-ಅರ್ಥ:ಆಗಳದಂ ಕಂಡು ಅಂಗರಾಜಂ (ಕರ್ಣನು) ರಾಜರಾಜನನು ಅಡಪಿದುದುಮಂ (ದುರ್ಯೋಧನನು ತನ್ನನ್ನು ಸಲಹಿದುದನ್ನೂ) ತನ್ನ ಬಲ್ಲಾಳ್ತನಮುಮಂ ನೆನೆದು (ತನ್ನ ಪರಾಕ್ರಮವನ್ನೂ ನೆನೆದು) ವಿಕರ್ಣಂಬೆರಸು ಅರ್ಣವನಿನಾದದಿಂದ

ಆರುತ್ತುಂ ಬಂದ
(ಸಮುದ್ರಘೋಷದಿಂದ
ಆರ್ಭಟಿಸುತ್ತ ಬಂದ)
ಗುಣಾರ್ಣವನೊಳ್ ತಾಗೆ
(ಅರ್ಜುನನನ್ನು
ಎದುರಿಸಿದಾಗ)-
ವಚನ:ಅರ್ಥ:ಆಗ ಕರ್ಣನು
ಅದನ್ನು ನೋಡಿ,
ದುರ್ಯೋಧನನು ತನ್ನನ್ನು
ಸಲಹಿದುದನ್ನೂ ತನ್ನ
ಪರಾಕ್ರಮವನ್ನೂ ನೆನೆದು

ವಿಕರ್ಣನೊಡಗೂಡಿ

ಸಮುದ್ರಘೋಷದಿಂದ

ಆರ್ಭಟಿಸುತ್ತ ಬಂದ

ಗುಣಾರ್ಣವನಾದ

ಅರ್ಜುನನನ್ನು

ಎದುರಿಸಿದಾಗ-.

ಚಂ|| ಸಮೆದುದು ಪೋಗು

ಗೋಗ್ರಹಣದಲ್ಲಿಯೆ

ಭಾರತಮೆಂಬ ಮಾತನಂ

ದಮರ ನರೋರಗರ್ ನುಡಿಯೆ

ರೌದ್ರಶರಂಗಳಿನೆಚ್ಚು

ಯುದ್ಧದೊಳ್|

ಸಮಸಮನಾಗಿ ಕಾದಿದೊಡೆ

ಕರ್ಣನ ವಕ್ಷಮನೆಚ್ಚು

ಗರ್ವಮಂ

ಸಮೆಯಿಸಿ ಕೊಂದನಂಕದ

ವಿಕರ್ಣನನೊಂದೆ ವಿಕರ್ಣದಿಂ

ನರಂ|| ೧೦೭ ||

ಪದ್ಯ-೧೦೭:ಪದವಿಭಾಗ-

ಅರ್ಥ:ಸಮೆದುದು ಪೋಗು

ಗೋಗ್ರಹಣದಲ್ಲಿಯೆ

ಭಾರತಮೆಂಬ ಮಾತನು

ಅಂದು ಅಮರ ನರೋರಗರ್
ನುಡಿಯೆ
(ಮಹಾಭಾರತಯುದ್ಧವು
ಗೋಗ್ರಹಣದಲ್ಲಿಯೆ
ಮುಗಿದುಹೋಯಿತು ಹೊಗು!
ಎಂಬ ಮಾತನ್ನು ಆ ದಿನ
ದೇವತೆಗಳೂ ಮನುಷ್ಯರೂ
ಉರಗರೂ ಹೇಳಲು,)
ರೌದ್ರಶರಂಗಳಿನು ಎಚ್ಚು
ಯುದ್ಧದೊಳ್ ಸಮಸಮನಾಗಿ
ಕಾದಿದೊಡೆ (ಭಯಂಕರವಾದ

ಬಾಣಗಳಿಂದ ಹೊಡೆದು,
ತನಗೆ ಯುದ್ಧದಲ್ಲಿ
ಸರಿಸಮವಾಗಿ ಕಾದಿದಾಗ,)
ಕರ್ಣನ ವಕ್ಷಮನು ಎಚ್ಚು
ಗರ್ವಮಂ ಸಮೆಯಿಸಿ
(ಕರ್ಣನ ಎದೆಗೆ ಹೊಡೆದು
ಅವನ ಅಹಂಕಾರವನ್ನು
ಇಳಿಸಿ/ ಕಡಿಮೆಮಾಡಿ)
ಕೊಂದನು ಅಂಕದ
ವಿಕರ್ಣನನು ಒಂದೆ
ವಿಕರ್ಣದಿಂ (ಕಿವುವರೆಗೆ

ಎಳೆದ ಒಂದೇ ಬಾಣ) ನರಂ-
ಅರ್ಜುನ. (ಶೂರನಾದ
ವಿಕರ್ಣನನ್ನು ಒಂದೆ
ಬಾಣದಿಂದ ಕೊಂದನು.)
ಪದ್ಯ-೧೦೭:ಅರ್ಥ:ಗೋಗ್ರಹ
ಣದಲ್ಲಿಯೇ
ಮಹಾಭಾರತಯುದ್ಧವು
ಮುಗಿದುಹೋಯಿತು ಎಂಬ
ಮಾತನ್ನು ಆ ದಿನ
ದೇವತೆಗಳೂ ಮನುಷ್ಯರೂ
ಉರಗರೂ (ಮೂರು

ಲೋಕದವರೂ) ಹೇಳುವ
ಹಾಗೆ ಅರ್ಜುನನು
ಭಯಂಕರವಾದ
ಬಾಣಗಳಿಂದ ಹೊಡೆದು,
ತನಗೆ ಯುದ್ಧದಲ್ಲಿ
ಸರಿಸಮವಾಗಿ ಕಾದಿದಾಗ,
ಕರ್ಣನ ಎದೆಗೆ ಹೊಡೆದು
ಅವನ ಅಹಂಕಾರವನ್ನು ಇಳಿಸಿ
ಶೂರನಾದ ವಿಕರ್ಣನನ್ನು
ಒಂದೆ ಬಾಣದಿಂದ ಕೊಂದನು.

ವ|| ಅಂತು ಕರ್ಣನ ನೋವುಮಂ ವಿಕರ್ಣನ ಸಾವುಮಂ ಕಂಡು-

ವಚನ:ಅರ್ಥ:ಹಾಗೆ ಕರ್ಣನ ನೋವನ್ನೂ ವಿಕರ್ಣನ ಸಾವನ್ನೂ ನೋಡಿ-

ಉ|| ತಕ್ಕಿನ ಕುಂಭಸಂಭವ ನದೀಜ ಕೃಪ ಪ್ರಮುಖ ಪ್ರವೀರರೆ ಕ್ಕೆಕ್ಕೆಯಿನೊರ್ವರೊರ್ವರೆ ಬಿಗುರ್ತಿರದಾಂತು ನಿಶಾತ

ಬಾಣ ಜಾ|

ಲಕ್ಕೆ ಸಿಡಿಲ್ದು ಜೋಲ್ದು ಸೆರಗಂ

ಬಗೆದೋಡಿದರೊಂದು

ಪೋೞ್ತುಮೊಂ

ದರ್ಕಮಿದಿರ್ಚಲಾಱದೆ

ಮನಂಗಲಿಗಳ್

ಕದನತ್ರಿಣೇತ್ರನಾ|| ೧೦೮ ||

ಪದ್ಯ-೧೦೮:ಪದವಿಭಾಗ-

ಅರ್ಥ:ತರ್ಕಿನ (ತರ್ಕ

ಯೊಗ್ಯತೆಯ,) ಕುಂಭಸಂಭವ

ನದೀಜ ಕೃಪ ಪ್ರಮುಖ

ಪ್ರವೀರರ ಎಕ್ಕೆಕ್ಕೆಯಿಂ
ಒರ್ವರೊರ್ವರೆ
(ಗುಂಪುಗುಂಪಾಗಿ
ಒಬ್ಬೊಬ್ಬರೂ) ಬಿಗುರ್ತು
ಇರದೆ ಆಂತು (ಸುಮ್ಮನಿರದೆ
ಹೆದರಿಸಿ ಆಂತುಎದುರಿಸಿ)
ನಿಶಾತ ಬಾಣ ಜಾಲಕ್ಕೆ ಸಿಡಿಲ್ದು
ಜೋಲ್ದು ಸೆರಗಂ ಬಗೆದು
(ಅಪಾಯವೆಂದು ತಿಳಿದು)
ಓಡಿದರು (ಅರ್ಜುನನ
ಹರಿತವಾದ ಬಾಣ ಜಾಲಕ್ಕೆ

ತಡೆಯಲಾರದೆ

ಅಪಾಯವೆಂದು ತಿಳಿದು

ಹೆದರಿ ಓಡಿಹೋದರು)

ಬಗೆದು- ಓಡಿದರು-; ಒಂದು

ಪೋೞ್ತುಂ ಒಂದರ್ಕಂ

ಇದಿರ್ಚಲಾಱದೆ (ಒಂದು

ಹೊತ್ತಿನ ಯುದ್ಧಕ್ಕೂ,

ಒಂದರ್ಕಂ- ಒಂದಕ್ಕೂ- ಒಂದು

ಬಾನಕ್ಕೂ) ಮನಂಗಲಿಗಳ್

(ಮನಂ ಕಲಿಗಳ್, ತಮ್ಮ

ಮನದಲ್ಲಿಯೇ

ಶೂರರಾದವರು,)
ಕದನತ್ರಿಣೇತ್ರನಾ
(ಅರ್ಜುನನ.)
ಪದ್ಯ-೧೦೮:ಅರ್ಥ: . ತಕ್ಕ
ಯೊಗ್ಯತೆಯ ದ್ರೋಣ, ಭೀಷ್ಮ
ಕೃಪರೇ ಮುಖ್ಯರಾದ
ವೀರಾಗ್ರೇಸರರೂ
ಗುಂಪುಗುಂಪಾಗಿ
ಒಬ್ಬೊಬ್ಬರೂ ಸುಮ್ಮನಿರದೆ
ಹೆದರಿಸಿ ಎದುರಿಸಿ, ಅರ್ಜುನನ
ಹರಿತವಾದ ಬಾಣ ಜಾಲಕ್ಕೆ

ತಡೆಯಲಾರದೆ ಹೆದರಿ ಓಡಿಹೋದರು. ಮನಸ್ಸಿನಲ್ಲಿ ಮಾತ್ರ ಶೂರರಾದ ಅವರು ಕದನತ್ರಿಣೇತ್ರನಾದ ಅರ್ಜುನನ ಒಂದು ಹೊತ್ತಿನ ಯುದ್ಧಕ್ಕೂ ಒಂದು ಬಾಣಕ್ಕೂ ಪ್ರತಿಭಟಿಸಿ ನಿಲ್ಲಲಾರದೆ ತಮ್ಮ ಮನದಲ್ಲಿಯೇ ಶೂರರೆಂದುಕೊಂಡವರು ಹೋದರು.

ಕಂ|| ಮನದೊಳ್ ಕರುಣಿಸಿ ಸಂಮೋ
ಹನಾಸ್ತ್ರದಿಂದೆಚ್ಚು ಬೀರರಂ ಬೀರದ ಶಾ|
ಸನಮನೆ ನಿಱಿಸುವ ಬಗೆಯಿಂ ದನಿಬರ
ಪಟಿವಿಗೆಯನೆಟಿದುಕೊಂಡಂ ಹರಿಗಂ|| ೧೦೯ ||

ಪದ್ಯ-೧೦೯:ಪದವಿಭಾಗ-ಅರ್ಥ: ಮನದೊಳ್ ಕರುಣಿಸಿ (ಆಗ ಅರ್ಜುನನು

ಮನಸಲಅವರ ಮೇಲೆ ದಯೆ
ತೋರಿ)
ಸಂಮೋಹನಾಸ್ತ್ರದಿಂದೆ ಎಚ್ಚು
ಬೀರರಂ
(ಸಮ್ಮೋಹನಾಸ್ತ್ರವನ್ನು
ಉಪಯೋಗಿಸಿ ಹೊಡೆದು,)
ಬೀರದ ಶಾಸನಮನೆ
ನಿಱಿಸುವ ಬಗೆಯಿಂದ
(ವೀರರ ಚಲನೆಯನ್ನೇ
ಎಚ್ಚರವಿಲ್ಲದಂತೆ ನಿಲ್ಲಸುವ
ಕ್ರಮದಿಂದ) ಅನಿಬರ

ಪಟಿವಿಗೆಯನು

ಎಟೆದುಕೊಂಡಂ

ಹರಿಗಂ(ತನ್ನ

ವೀರಶಾಸನವನ್ನು ಸ್ಥಾಪಿಸುವ

ಮನಸ್ಸಿನಿಂದ ಹರಿಗನು

-ಅರ್ಜುನನು ಅವರೆಲ್ಲರ

ಧ್ವಜವನ್ನೂ ಕಸಿದುಕೊಂಡನು)

ಪದ್ಯ-೧೦೯:ಅರ್ಥ:ಆಗ

ಅರ್ಜುನನ ಅವರ ಮೇಲೆ

ದಯೆತೋರಿ

ಸಮ್ಮೋಹನಾಸ್ತ್ರವನ್ನು

ಉಪಯೋಗಿಸಿ ಹೊಡೆದು,
ವೀರರ ಚಲನೆಯನ್ನೇ
ಎಚ್ಚರವಿಲ್ಲದಂತೆ ನಿಲ್ಲಿಸುವ
ಕ್ರಮದಿಂದ, ಅವರು
ಮೈಮರೆತಿರಲು
ವೀರಶಾಸನವನ್ನು ಸ್ಥಾಪಿಸುವ
ಮನಸ್ಸಿನಿಂದ ಅವರೆಲ್ಲರ
ಧ್ವಜವನ್ನೂ ಕಸಿದುಕೊಂಡನು

ವ|| ಅಂತು ವರ ಶಶಿ
ವಿಶದಯಶಪಟಂಗಳಂ
ನನ್ನಿಪಟಂಗೊಳ್ವಂತೆ ವಿವಿಧ

ಧ್ವಜಪಟಂಗಳಂ ಕೊಂಡು ಗೆಲ್ಲಂಗೊಂಡು ತಾನುಮುತ್ತರನುಂ ವಿರಾಟಪುರಕ್ಕೆ ಮಗುೞ್ದು ಬರ್ಪಾಗಳ್-

ವಚನ:ಪದವಿಭಾಗ-ಅರ್ಥ: ಅಂತು ವರ ಶಶಿ ವಿಶದ (ಚಂದ್ರನಂತೆ ಬೆಳ್ಳಗಿರುವ) ಯಶಪಟಂಗಳಂ (ಯಶಸ್ಸೆಂಬ ವಸ್ತ್ರಗಳನ್ನು) ನನ್ನಿ ಪಟಂಗೊಳ್ವಂತೆ (

ಸತ್ಯಶಾಸನದ ಕಡತವನ್ನು
ಸ್ವೀಕರಿಸುವ ಹಾಗೆ) ವಿವಿಧ
ಧ್ವಜಪಟಂಗಳಂ ಕೊಂಡು
(ನಾನಾ ರೀತಿಯ
ಬಾವುಟಗಳನ್ನು
ತೆಗೆದುಕೊಂಡು)
ಗೆಲ್ಲಂಗೊಂಡು
(ಜಯಪ್ರದನಾಗಿ) ತಾನುಂ
ಉತ್ತರನುಂ ವಿರಾಟಪುರಕ್ಕೆ
ಮಗುಟ್ದು ಬರ್ಪಾಗಳ್
(ತಾನೂ (ಅರ್ಜುನನೂ)

ಉತ್ತರನೂ ವಿರಾಟನಗರಕ್ಕೆ ಹಿಂತಿರುಗಿ ಬಂದರು)-

ವಚನ:ಅರ್ಥ:ವ|| ಹಾಗೆ ಶ್ರೇಷ್ಠವಾದ ಚಂದ್ರನಂತೆ ವಿಸ್ತಾರವಾಗಿರುವ ಯಶಸ್ಸೆಂಬ ವಸ್ತ್ರಗಳನ್ನು ಸತ್ಯಶಾಸನದ ಕಡತವನ್ನು ಸ್ವೀಕರಿಸುವ ಹಾಗೆ ನಾನಾ ರೀತಿಯ ಬಾವುಟಗಳನ್ನು ತೆಗೆದುಕೊಂಡು ತಾನೂ (ಅರ್ಜುನನೂ) ಉತ್ತರನೂ

ವಿರಾಟನಗರಕ್ಕೆ ಹಿಂತಿರುಗಿ
ಬಂದರು

ಉ|| ಸೂಸುವ ಸೇಸೆ ಬೀಸುವ
ಚಳಚ್ಚಮರೀರುಹಮೆಕ್ಕೆಯಿಂ
ರಣಾ
ಯಾಸ ಪರಿಶ್ರಮಾಂಬು
ಲವಮಂ ತವೆ ಪೀರೆ
ಪುರಾಂಗನಾಮುಖಾ|
ಬ್ಜಾಸವಗಂಧದೊಳ್
ಬೆರಸಿದೊಂದೆಲರೊಯ್ಯನೆ
ತೀಡೆ ಪೊಕ್ಕನಾ

ವಾಸವನಂತೆ

ಮತ್ಸ್ಯಮಹಿಪಾಳಕಮಂದಿರ

ಮಂ ಗುಣಾರ್ಣವಂ|| ೧೧೦ ||

ಪದ್ಯ-೦೦:ಪದವಿಭಾಗ-ಅರ್ಥ:ಸೂಸುವ ಸೇಸೆ (ಅವರಮೇಲೆ ಹಾಕುತ್ತಿರಿವ ಮಂತ್ರಾಕ್ಷತೆಗಳೂ) ಬೀಸುವ ಚಳಚ್ಚಮರೀರುಹಂ (ಬೀಸುತ್ತಿರುವ ಚಾಮರಗಳೂ) ಎಕ್ಕೆಯಿಂ ರಣಾಯಾಸ ಪರಿಶ್ರಮ

ಅಂಬುಲವಮಂ ತವೆ ಪೀರೆ

(ಒಟ್ಟಿಗೆ ಸೇರಿ

ಯುದ್ಧಾಯಾಸದಿಂದುಂಟಾದ

ಬೆವರುಹನಿಗಳನ್ನು

ಸಂಪೂರ್ಣವಾಗಿ ಹೀರಲು)

ಪುರಾಂಗನಾಮುಖ

ಅಬ್ಜಾಸವ(ಮುಖವೆಂಬ ಅಬ್ಜ-

ಕಮಲದ ಆಸವ-ಮಧು)

ಗಂಧದೊಳ್ (ಪುರಸ್ತ್ರೀಯರ

ಮುಖಕಮಲದ

ಸುಗಂಧದಿಂದ)

ಬೆರಸಿದೊಂದು ಅಲರ
ಒಯ್ಯನೆ ತೀಡೆ (ಬೆರಸಿದ
ಗಾಳಿಯು ನಿಧಾನವಾಗಿ
ಬೀಸುತ್ತಿರಲು) ಪೊಕ್ಕನು
ಆವಾಸವನಂತೆ (ಹೀಗೆ
ವಿರಾಟನ ಅರಮನೆಯನ್ನು
ದೇವೇಂದ್ರನಮತೆ
ಅರ್ಜುನನು ಹೊಕ್ಕನು->)
ಮತ್ಸ್ಯಮಹಿಪಾಳಕ
ಮಂದಿರಮಂ ಗುಣಾರ್ಣವಂ|

ಪದ್ಯ-೧೧೦:ಅರ್ಥ: .
ಅವರಮೇಲೆ ಹಾಕುತ್ತಿರಿವ
ಮಂತ್ರಾಕ್ಷತೆಗಳೂ
ಬೀಸುತ್ತಿರುವ ಚಾಮರಗಳೂ
ಒಟ್ಟಿಗೆ ಸೇರಿ
ಯುದ್ಧಾಯಾಸದಿಂದುಂಟಾದ
ಬೆವರುಹನಿಗಳನ್ನು
ಸಂಪೂರ್ಣವಾಗಿ ಹೀರಲು,
ಪುರಸ್ತ್ರೀಯರ ಮುಖಕಮಲದ
ಸುಗಂಧದಿಂದ ಬೆರಸಿದ
ಗಾಳಿಯು ನಿಧಾನವಾಗಿ

ಬೀಸುತ್ತಿರಲು ದೇವೇಂದ್ರನಂತೆ ವಿರಾಟನ ಅರಮನೆಯನ್ನು ಅರ್ಜುನನು ಪ್ರವೇಶ ಮಾಡಿದನು-

ॐ

|| ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವವಿರಚಿತ

ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ಅಷ್ಟಮಾಶ್ವಾಸಂ ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ

ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಎಂಟನೆಯ ಆಶ್ವಾಸ.|| ♦♣♣♣♣♣♣♣♣♣♣♣♣♣♣♣♣♣♣♣♦

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	**8**	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ಅಷ್ಟಮಾಶ್ವಾಸಂ&

oldid=165507" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೩ ಅಕ್ಟೋಬರ್ ೨೦೧೮, ೧೫:೦೭ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ನವಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ನವಮಾಶ್ವಾಸಂ

- (XVII.IV.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಅವಧಿ ಮುಗಿಸಿದ ಪಾಂಡವರಿಗೆ ಅರ್ಧರಾಜ್ಯ ಕೊಡಿಸಲು ಕೃಷ್ಣ ಸಂಧಾನ - ವಿಫಲವಾಗಿ - ಯುದ್ಧನಿರ್ಣಯ

ಕಂ|| ಶ್ರೀಗೆ ನೆಗೞ್ತೆಗೆ ವೀರ ಶ್ರೀಗಾಗರಮಪ್ಪೆನೆಂಬ ಕಳ ಕಳ ವಿಜಯೋ|
ದ್ಯೋಗದೊಳೆ ನೆಗೞ್ವೆನೆಂಬು ದ್ಯೋಗಿಗೆ ಮಲೆವನ್ಯನೃಪತಿಮಂಡಳಮೊ ಳವೇ|| ೧ ||

ಪದ್ಯ-೦೧:ಪದವಿಭಾಗ-ಅರ್ಥ:ಶ್ರೀಗೆ ನೆಗೞ್ತೆ ಗೆ ವೀರಶ್ರೀಗೆ ಆಗರಮಪ್ಪೆನೆಂಬ (ಸಿರಿಸಂಪತ್ತಿಗೆ, ಕೀರ್ತಿಗೆ,

ಜಯಲಕ್ಷ್ಮಿಗೆ
ಆಶ್ರಯವಾಗುತ್ತೇನೆಂಬ) ಕಳ
ಕಳ ವಿಜಯೋದ್ಯೋಗದೊಳೆ
(ಸಡಗರದ ವಿಜಯಪ್ರದ
ಕಾರ್ಯದಲ್ಲಿ) ನೆಗೞ್ವೆನೆಂಬ
ಉದ್ಯೋಗಿಗೆ
(ತೊಡಗಿರುವೆನೆಂಬ
ಕಾರ್ಯಶೀಲನಿಗೆ) ಮಲೆವ
ಅನ್ಯನೃಪತಿಮಂಡಳಮೊಳವೇ
(ಎದುರುಬೀಳುವ
ಶತ್ರುರಾಜಸಮೂಹವುಂಟೇ)

ಪದ್ಯ-೦೧:ಅರ್ಥ:

ಸಿರಿಸಂಪತ್ತಿಗೆ, ಕೀರ್ತಿಗೆ, ಜಯಲಕ್ಷ್ಮಿಗೆ ಆಶ್ರಯವಾಗುತ್ತೇನೆಂಬ, ಸಡಗರದ ವಿಜಯಪ್ರದ ಕಾರ್ಯದಲ್ಲಿ ತೊಡಗಿರುವೆನೆಂಬ ಕಾರ್ಯಶೀಲನಿಗೆ ಎದುರುಬೀಳುವ ಶತ್ರುರಾಜಸಮೂಹವುಂಟೇ

ಎಂದು ಜಗಜ್ಜನಮಳವನ

ಗುಂದಲೆಯಾಗಡರೆ ಬಿಡದೆ

ಪೊಗಳುತ್ತಿರೆ ಕುಂ|

ದೇಂದು ಯಶಂ

ರಥಂದಿಂದಿಳಿ

ತಂದೆಱಗಿದನಗ್ರಜನ್ಮ ಪದ

ಸರಸಿಜದೊಳ್|| ೨

ಪದ್ಯ-0೨:ಪದವಿಭಾಗ-ಅರ್ಥ:ಎಂದು ಜಗಜ್ಜನಂ ಅಳವಂ ಅಗುಂದಲೆಯಾಗಿ ಅಡರೆ (ಎಂದು ಲೋಕದ ಜನಗಳು, ಅವನ ಶಕ್ತಿಯನ್ನು,

ಅತಿಶಯವಾಗಿ ಹೆಚ್ಚಲು)
ಬಿಡದೆ ಪೊೀಗೞುತ್ತಿರೆ (ಒಂದೇ
ಸಮನಾಗಿ ಹೊಗಳುತ್ತಿರಲು)
ಕುಂದೇಂದು ಯಶಂ
(ಕುಂದಪುಷ್ಪ ಮತ್ತು
ಚಂದ್ರನಂತೆ ಇರುವ
ಯಶಸ್ಸುಳ್ಳ ಅರ್ಜುನನು)
ರಥಂದಿಂದ ಇೞಿತಂದು
ಎಱಗಿದನು (ಇಳಿತಂದು
ಎರಗಿದನು) ಅಗ್ರಜನ್ಮಪದ
ಸರಸಿಜದೊಳ್

(ರಥದಿಂದಿಳಿದು ಬಂದು, ಮೊದಲು ಜನಿಸಿದವನ ಪದತಲ - ಅಣ್ಣನ ಪಾದಕಮಲಕ್ಕೆ ನಮಸ್ಕಾರ ಮಾಡಿದನು)

ಪದ್ಯ-೦೨:ಅರ್ಥ: ಎಂದು ಲೋಕದ ಜನಗಳು, ಅವನ ಶಕ್ತಿಯನ್ನು, ಅತಿಶಯವಾಗಿ ಹೆಚ್ಚಲು ಹಾಗೆ ಒಂದೇ ಸಮನಾಗಿ ಹೊಗಳುತ್ತಿರಲು ಕುಂದಪುಷ್ಪದಂತೆಯೂ

ಚಂದ್ರನಂತೆಯೂ ಇರುವ ಯಶಸ್ಸುಳ್ಳ ಅರ್ಜುನನು, ರಥದಿಂದಿಳಿದು ಬಂದು ಅಣ್ಣನ ಪಾದಕಮಲಕ್ಕೆ ನಮಸ್ಕಾರ ಮಾಡಿದನು.

ಅಱಮಗನ ಪವನತನಯನ ನೆರೆದಾಶೀರ್ವಚನಶತಮನಾಂ ತನುನಯದಿಂ|
ದೆಱಗಿದಮಳರುಮನಪ್ಪೞ್ ನೊಱಲ್ದು ತೆಗೆದಪ್ಪಿ ಪರಸೆ ನಲ್ವರಕೆಗಳಿಂ|| ೩ ||

ಪದ್ಯ-೦೩:ಪದವಿಭಾಗ-ಅರ್ಥ:ಅಱಿಮಗನ(ಅರ-ಧರ್ಮ ದರ್ಮನ ಮಗ) ಪವನತನಯನ (ಭೀಮ) ನೆರೆದ ಆಶೀರ್ವಚನ ಶತಮನು ಆಂತು(ಪೂರ್ಣ ನೂರು ಆಶೀರ್ವಾದಗಳನ್ನೂ ಪಡೆದು) ಅನುನಯದಿಂ(ಪ್ರೀತಿಯಿಂದ ನಮಿಸಿದ) ಎಱಗಿದ ಅಮಳರುಮನು ಅಪ್ಪುಕೆಯ್ಯಿಂ ಒಱಲ್ದು (ನಮಿಸಿದ ಅವಳಿ

ನಕುಲಸಹದೇವರನ್ನು ಪ್ರೀತಿಯಿಂದ ಒಲಿದು) ತೆಗೆದಪ್ಪಿ ಪರಸೆ ನಲ್ವರಕೆಗಳಿಂ (ಅಪ್ಪಿಕೊಂಡು ಒಳ್ಳೆಯ ಹರಕೆಗಳಿಂದ ಹರಸಿದನು.) **ಪದ್ಯ-೦೩:ಅರ್ಥ**:ಧರ್ಮಜನ ಮತ್ತು ಭೀಮನ ಪೂರ್ಣ ನೂರು ಆಶೀರ್ವಾದಗಳನ್ನು ಪಡೆದು, ನಮಿಸಿದ ಅವಳಿ ನಕುಲಸಹದೇವರನ್ನು ಪ್ರೀತಿಯಿಂದ ಒಲಿದು

ಅಪ್ಪಿಕೊಂಡು ಒಳ್ಳೆಯ ಹರಕೆಗಳಿಂದ ಹರಸಿದನು.

ಚಲ ಚಲದಿನುಱದೆ ಪಗೆವರ
ತಲೆಗಳನರಿದಂದು ಬಂದು
ಪಾಂಡುತನೂಜರ್|
ತಲೆದೋಱಿರೆ ರಾಗಮಗುಂ
ದಲೆಯುಂ
ಪೊಂಪುೞಿಯಮಾಯ್ತು
ಮತ್ಸ್ಯಂಗಾಗಳ್|| ೪ ||

ಪದ್ಯ-೦೪:ಪದವಿಭಾಗ-
ಅರ್ಥ:ಚಲ ಚಲದಿನುಱದೆ

ಪಗೆವರತಲೆಗಳನರಿದಂದು
ಬಂದು ಪಾಂಡುತನೂಜರ್|
ತಲೆದೋಱಿರೆ
ರಾಗಮಗುಂದಲೆಯುಂ
ಪೊಂಪುಱಿಯಮಾಯ್ತು
ಮತ್ಸ್ಯಂಗಾಗಳ್|
ಪದ್ಯ-೦೪:ಅರ್ಥ: ೪.
ಪಾಂಡವರು
ಉದಾಸೀನರಾಗಿರದೆ
ಹಟದಿಂದ ಶತ್ರುಗಳ
ತಲೆಗಳನ್ನು ಕತ್ತರಿಸಿ ಅಂದು

ಕಾಣಿಸಿಕೊಳ್ಳಲು
ವಿರಾಟರಾಜನಿಗೆ
ಅತ್ಯತಿಶಯವಾದ
ಸಂತೋಷವುಂಟಾಯಿತು.

ಮ|| ಗುಡಿಯಂ ಕಟ್ಟಿಸಿ ಪೊಯ್ಸಿ ಬದ್ದವಣಮಂ ಪ್ರಾಣಕ್ಕಮರ್ಥಕ್ಕಮಿ ನ್ನೆಡರೇನೇತರೊಳೊಪ್ಪುದೆಂದು ಕುರುಡಂ ಕಣ್ಬೆತ್ತವೋಲ್ ರಾಗದಿಂ|

ದೊಡೆಯಂತಾಂ ಬಗೆದುಳ್ಳ
ಸಾರ ಧನಮಂ ಮುಂದಿಟ್ಟತಿ
ಪ್ರೀತಿಯಂ
ಪಡೆದಂ ಮತ್ಸ್ಯಮಹೇಶನಂದು
ಮನದೊಳ್
ತತ್ಪಾಂಡುಪುತ್ರರ್ಕಳಾ|| ೫ ||

ಪದ್ಯ-೦೫:ಪದವಿಭಾಗ-ಅರ್ಥ:ಗುಡಿಯಂ ಕಟ್ಟಿಸಿ ಪೊಯ್ಸಿ ಬದ್ದವಣಮಂ (ಬಾವುಟಗಳನ್ನು ಕಟ್ಟಿಸಿ, ಮಂಗಳವಾದ್ಯಗಳನ್ನು

ನುಡಿಸಿ,) ಪ್ರಾಣಕ್ಕಂ ಅರ್ಥಕ್ಕಂ
ಇನ್ನು ಎಡರೇನು ಏತರೊಳ್
ಅಪ್ಪುದು ಎಂದು (ನನ್ನ
ಪ್ರಾಣಕ್ಕೂ ಐಶ್ವರ್ಯಕ್ಕೂ
ಇನ್ನು ಯಾವುದರಿಂದಲೂ
ವಿಘ್ನವುಂಟಾಗುವುದಿಲ್ಲ
ಎಂದು ಭಾವಿಸಿ) ಕುರುಡಂ
ಕಣ್ಬೆತ್ತವೋಲ್ (ಕುರುಡನು
ಕಣ್ಣನ್ನು ಪಡೆದ ಹಾಗೆ)
ರಾಗದಿಂದೆ ಒಡೆಯಂ ತಾಂ
(ಕುರುಡನು ಕಣ್ಣನ್ನು ಪಡೆದ

ಹಾಗೆ ವಿರಾಟನು) ಬಗೆದುಳ್ಳ
ಸಾರ ಧನಮಂ ಮುಂದಿಟ್ಟು
(ತನ್ನಲ್ಲಿದ್ದ ಉತ್ತಮವಾದ
ಐಶ್ವರ್ಯವನ್ನೆಲ್ಲ ಪಾಂಡವರ
ಮುಂದಿಟ್ಟು) ಅತಿ ಪ್ರೀತಿಯಂ
ಪಡೆದಂ ಮತ್ಸ್ಯಮಹೇಶನು
ಅಂದು ಮನದೊಳ್
(ವಿರಾಟನು) ತತ್
ಪಾಂಡುಪುತ್ರರ್ಕಳಾ (ಆ
ಪಾಂಡುಪತ್ರರ ಮನಸ್ಸಿನಲ್ಲಿ
ಅತ್ಯಂತ

ಸಂತೋಷವನ್ನುಂಟುಮಾಡಿದ
ನು.)||

ಪದ್ಯ-೦೫:ಅರ್ಥ:
ಬಾವುಟಗಳನ್ನು ಕಟ್ಟಿಸಿ, ಮಂಗಳವಾದ್ಯಗಳನ್ನು ನುಡಿಸಿ, ನನ್ನ ಪ್ರಾಣಕ್ಕೂ ಐಶ್ವರ್ಯಕ್ಕೂ ಇನ್ನು ಯಾವುದರಿಂದಲೂ ವಿಘ್ನವುಂಟಾಗುವುದಿಲ್ಲ ಎಂದು ಭಾವಿಸಿ ಕುರುಡನು ಕಣ್ಣನ್ನು ಪಡೆದ ಹಾಗೆ ವಿರಾಟನು ಸಂತೋಷಿಸಿದನು.

ತನ್ನಲ್ಲಿದ್ದ ಸಾರವತ್ತಾದ ಐಶ್ವರ್ಯವನ್ನೆಲ್ಲ ಪಾಂಡವರ ಮುಂದಿಟ್ಟು ಆ ಪಾಂಡುಪತ್ರರ ಮನಸ್ಸಿನಲ್ಲಿ ಅತ್ಯಂತ ಸಂತೋಷವನ್ನುಂಟುಮಾಡಿದನು.

ಉ|| ಕೇಳಿರೆ ಕಂಕಭಟ್ಟನೆ ಯುಷ್ಠಿರನಾ ವಲಲಂ ವೃಕೋದರಂ ಬಾಳೆಯರಂ ದಲಾಡಿಪ ಬೃಹಂದಳೆ ಫಲ್ಗುಣನಂಕದಶ್ವ

ಗೋ|

ಪಾಳಕರೆಂಬರಾ ನಕುಳನುಂ

ಸಹದೇವನುಮಾದರೇಂ

ಮಹೀ

ಪಾಳರೊಳಾದ

ಕಾರ್ಯಗತಿಗಳ್ ಬಗೆಯಲ್ಕೆ

ಬಹು ಪ್ರಕಾರಮೋ|| ೬ ||

ಪದ್ಯ-೦೬:ಪದವಿಭಾಗ-

ಅರ್ಥ:ಕೇಳಿರೆ ಕಂಕಭಟ್ಟನೆ

ಯುಷ್ಠಿರನು ಆ ವಲಲಂ

ವೃಕೋದರಂ (ಕಂಕಭಟ್ಟನೇ

ಧರ್ಮರಾಜನು. ವಲಲನು
ಭೀಮಸೇನ,) ಬಾಳೆಯರಂ
ದಲ್ ಆಡಿಪ ಬೃಹಂದಳೆ
ಫಲ್ಗುಣನು (ಬಾಲಕಿಯರನ್ನು
ಆಡಿಸುವ ಬೃಹಂದಳೆಯು
ನಿಜಕ್ಕೂ ಅರ್ಜುನ.) ಅಂಕದ
ಅಶ್ವ ಗೋಪಾಳಕರೆಂಬರು ಆ
ನಕುಳನುಂ ಸಹದೇವನುಂ
ಆದರು(ಕುದುರೆ ಮತ್ತು
ಗೋವುಗಳ ಪಾಲಕರಾದವರು
ಪ್ರಸಿದ್ಧರಾದ ನಕುಲ ಮತ್ತು

ಸಹದೇವರುಗಳಾಗಿದ್ದಾರೆ.)
ಏಂ-> ಮಹೀಪಾಳರೊಳು
ಆದ ಕಾರ್ಯಗತಿಗಳ್
ಬಗೆಯಲ್ಕೆ(ಈ ರಾಜರುಗಳ
ಜೀವನದಲ್ಲಿ ಆದ ಘಟನೆಗಳ
ಪರಿಣಾಮವನ್ನು ಯೋಚನೆ
ಮಾಡಿದರೆ,) ಬಹು
ಪ್ರಕಾರಮೋ (ಏನು ಬಹಳ
ವಿಚಿತ್ರಪ್ರಕಾರದ
ಘಟನೆಗಳೊ!)

ಪದ್ಯ-೦೬:ಅರ್ಥ:(ಜನರ ಮಾತುಗಳು)ಕೇಳಿ- ಕೇಳಿರಯ್ಯಾ, ಕಂಕಭಟ್ಟನೇ ಧರ್ಮರಾಜನು. ವಲಲನು ಭೀಮಸೇನ, ಬಾಲಕಿಯರನ್ನು ಆಡಿಸುವ ಬೃಹಂದಳೆಯು ನಿಜಕ್ಕೂ ಅರ್ಜುನ. ಕುದುರೆ ಮತ್ತು ಗೋವುಗಳ ಪಾಲಕರಾದವರು ಪ್ರಸಿದ್ಧರಾದ ನಕುಲ ಮತ್ತು ಸಹದೇವರುಗಳಾಗಿದ್ದಾರೆ. ಈ

ರಾಜರುಗಳಲ್ಲಿ ಆದ ಕಾರ್ಯಗಳ ಪರಿಣಾಮವನ್ನು ಯೋಚನೆ ಮಾಡುವುದಾದರೆ ಏನು ಬಹಳ ವಿಚಿತ್ರಪ್ರಕಾರದ ಘಟನೆಗಳೊ!?

ವ|| ಎಂಬ ಪುರಜನಾಳಾಪಂಗಳ್ ನೆಗೞೆ ವಿರಾಟನ ಮಹಾದೇವಿ ಸುದೇಷ್ಣೆ ಕೃಷ್ಣೆಗಾಗಳೆಱಗಿ ಪೊಡೆವಡೆ ಧರ್ಮತನೂಜಂಗೆ

ವಿರಾಟನವನತಮಣಿಮಕುಟ ನಿಂತೆಂದು ಬಿನ್ನಪಂಗೆಯ್ದಂ-

ವಚನ:ಪದವಿಭಾಗ-

ಅರ್ಥ:ಎಂಬ ಪುರಜನಾಳಾಪಂಗಳ್ ನೆಗಱೆ (ಹೆಚ್ಚಾಗಿರಲು)ವಿರಾಟನ ಮಹಾದೇವಿ ಸುದೇಷ್ಣೆ ಕೃಷ್ಣೆಗೆ ಆಗಳ್ ಎಱಗಿ ಪೊಡೆವಡೆ (ದ್ರೌಪದಿಗೆ ಆಗ ಬಗ್ಗಿ ನಮಸ್ಕಾರ ಮಾಡಿದಳು), ಧರ್ಮತನೂಜಂಗೆ ವಿರಾಟನು

ಅವನತಮಣಿಮಕುಟನು
ಇಂತೆಂದು ಬಿನ್ನಪಂಗೆಯ್ದಂ
(ಧರ್ಮಜನಿಗೆ ವಿರಾಟನು
ಬಗ್ಗಿದ ಕಿರೀಟವುಳ್ಳವನಾಗಿ
ಎಂದರೆ ನಮಸ್ಕರಿಸಿ
ಹೀಗೆಂದು ವಿಜ್ಞಾಪನೆ
ಮಾಡಿದನು-)-
ವಚನ:ಅರ್ಥ:ಎಂಬ
ಪುರಜನರ ಮಾತುಗಳು
ಎಲ್ಲೆಡೆ ಕೇಳಲು, ವಿರಾಟನ
ಮಹಾರಾಣಿ ಸುದೇಷ್ಣೆಯು

ದ್ರೌಪದಿಗೆ ಬಗ್ಗಿ ನಮಸ್ಕಾರ ಮಾಡಿದಳು.ಧರ್ಮಜನಿಗೆ ವಿರಾಟನು ಬಗ್ಗಿದ ಕಿರೀಟವುಳ್ಳವನಾಗಿ ಎಂದರೆ ನಮಸ್ಕರಿಸಿ ಹೀಗೆಂದು ವಿಜ್ಞಾಪನೆ ಮಾಡಿದನು.

ಕೃಷ್ಣನ ಆಗಮನ- ಉತ್ತರ ಅಭಿಮನ್ಯು ವಿವಾಹ

ಚಂ|| ಇರದುಱಿದಾವ

ಮಂಡಲದೊಳಂ ನೃಪ ನೀಂ

ದಯೆಯಿಂದಮಿಲ್ಲಿ ಬಂ
ದಿರೆ ದೊರೆವೆತ್ತುದನ್ನ
ಮೆರೆವಾಳ್ವೆಸನೆನ್ನ
ತನೂಜೆಗಂಕದು|
ತ್ತರೆಗೆ
ವಿವಾಹಮಂಗಳಮನಿನ್ನಭಿಮ
ನ್ಯುಗೆ ಮಾಳ್ಪುದುತ್ತರೋ
ತ್ತರಮೆನೆ ಮಾಡು ನಿನ್ನ
ದಯೆಯಿಂ ಮೆರೆವೆಂ
ಯಮರಾಜನಂದನಾ|| ೭ ||

ಪದ್ಯ-೭:ಪದವಿಭಾಗ-ಅರ್ಥ:ಇರದೆ ಉಱಿದಾವ ಮಂಡಲದೊಳಂ ನೃಪ ನೀಂ ದಯೆಯಿಂದಂ ಇಲ್ಲಿ ಬಂದಿರೆ ದೊರೆವೆತ್ತುದು (ನೀವು ಬೇರೆ ದೇಶದಲ್ಲಿ ತಂಗದೆ ಕೃಪೆಯಿಂದ ಇಲ್ಲಿಗೆ ಬಂದು ಇರುವುದು ಒಳ್ಳೆಯದಾಯಿತು) ಎನ್ನ ಮೆರೆವ ಆಳ್ವೆಸನಂ (ನನ್ನ ಉತ್ತಮ ಸೇವೆಗೆ); ಎನ್ನ ತನೂಜೆಗೆ ಅಂಕದ ಉತ್ತರೆಗೆ

ವಿವಾಹಮಂಗಳಮನು
(ಉತ್ತಮಕನ್ಯೆ ನನ್ನ ಮಗಳು
ಉತ್ತರೆಗೆ ಮದುವೆಯ
ಮಂಗಳಕಾರ್ಯವನ್ನು) ಇನ್ನು
ಅಭಿಮನ್ಯುಗೆ ಮಾಳ್ಪುದು
ಉತ್ತರೋತ್ತರಮೆನೆ
ಮಾಡು(ಅಭಿಮನ್ಯುವಿನೊಡ
ನೆ
ಉತ್ತರೋತ್ತರಾಭಿವೃದ್ಧಿಯಾಗು
ವ ಹಾಗೆ ಮಾಡುವುದು) ನಿನ್ನ
ದಯೆಯಿಂ ಮೆರೆವೆಂ

ಯಮರಾಜನಂದನಾ (ಧರ್ಮರಾಜನೇ ನಿನ್ನ ದಯೆಯಿಂದ ನಾನು ಪ್ರಸಿದ್ಧಿಪಡೆಯುತ್ತೇನೆ.)

ಪದ್ಯ-೭:ಅರ್ಥ:

ಧರ್ಮರಾಜನೇ ನೀವು ಬೇರೆ ದೇಶದಲ್ಲಿ ತಂಗದೆ ಕೃಪೆಯಿಂದ ಇಲ್ಲಿಗೆ ಬಂದು ಇರುವುದು ಒಳ್ಳೆಯದಾಯಿತು. ಉತ್ತಮಕನ್ಯೆ ನನ್ನ ಮಗಳು ಉತ್ತರೆಗೆ ನಿನ್ನ ಮಗನಾದ

ಅಭಿಮನ್ಯುವಿನೊಡನೆ
ಉತ್ತರೋತ್ತರಾಭಿವೃದ್ಧಿಯಾಗು
ವ ಹಾಗೆ ಮದುವೆಯ
ಮಂಗಳಕಾರ್ಯವನ್ನು
ಮಾಡುವುದು. ನಿನ್ನ
ದಯೆಯಿಂದ ನಾನು
ಪ್ರಸಿದ್ಧಿಪಡೆಯುತ್ತೇನೆ.

ವ|| ಎಂಬುದುಮಂತೆಗೆಯ್ವೆಂ ನಿಮ್ಮೆಮ್ಮ ನಣ್ಪುಗಳೀಗಳಾದುವಲ್ಲ ಹಿರಣ್ಯಗರ್ಭ ಬ್ರಹ್ಮರಿಂ

ತಗುಳ್ದವ್ಯವಚ್ಛಿನ್ನಮಾಗಿ
ಬಂದುವು ನಿನ್ನ ದೊರೆಯ
ನಂಟನುಮನೆಲ್ಲಿ ಪಡೆವೆನೆಂದು
ವಿರಾಟನಂ ಸಂತಸಂಬಡೆ
ನುಡಿದು ಚಾಣೂರಾರಿಯಂ
ಸುಭದ್ರೆಯುಮನಭಿಮನ್ಯುವು
ಮನೊಡ ಗೊಂಡು
ಬರ್ಪುದೆಂದು ಬೞಿಯನಟ್ಟಿ
ಬರವೞಿದು
ಪಾಂಡವರಯ್ವರುಂ ವಿರಾಟ

ಸಮೇತಮಿದಿರ್ವೋ೯ಗಿ ಕಂಡಾಗಳ್-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂತೆಗೆಯ್ವೆಂ (ಎನ್ನಲು ಹಾಗೆಯೇ ಮಾಡುತ್ತೇನೆ.) ನಿಮ್ಮ ಎಮ್ಮ ನಣ್ಪುಗಳು ಈಗಳಾದುವಲ್ಲ ಹಿರಣ್ಯಗರ್ಭ ಬ್ರಹ್ಮರಿಂ ತಗುಳ್ದು ಅವ್ಯವಚ್ಛಿನ್ನಮಾಗಿ ಬಂದಿರುವುವು (ನಿಮ್ಮ ನಮ್ಮ

ಸ್ನೇಹ ಸಂಬಂಧಗಳು ಈಗ
ಆದುವಲ್ಲ.
ಹಿರಣ್ಯಗರ್ಭಬ್ರಹ್ಮನಿಂದ
ಹಿಡಿದು ಎಡಬಿಡದೆ
ಏಕಪ್ರಕಾರವಾಗಿ ಬಂದವು.)
ನಿನ್ನ ದೊರೆಯ
ನಂಟನುಮನು ಎಲ್ಲಿ
ಪಡೆವೆನು ಎಂದು (ನಿನಗೆ
ಸಮಾನವಾದ ಬಂಧುವನ್ನು
ನಾನೆಲ್ಲಿ ಪಡೆಯಲು ಸಾಧ್ಯ?
ಎಂದು) ವಿರಾಟನಂ

ಸಂತಸಂಬಡೆ ನುಡಿದು
(ಎಂದು ವಿರಾಟನಿಗೆ
ಸಂತೋಷವಾಗುವಂತೆ
ಮಾತನಾಡಿ)
ಚಾಣೂರಾರಿಯಂ
ಸುಭದ್ರೆಯುಮನು
ಅಭಿಮನ್ಯುವುಮನೊಡಗೊಂ
ಡು ಬರ್ಪುದೆಂದು(ಶ್ರೀಕೃಷ್ಣನಿಗೆ
ಸುಭದ್ರೆಯನ್ನೂ
ಅಭಿಮನ್ಯುವನ್ನೂ
ಜೊತೆಯಲ್ಲಿ ಕರೆದುಕೊಂಡು

ಬರಬೇಕು ಎಂದು) ಬಱಿಯನಟ್ಟಿ (ದೂತರನ್ನು ಕಳಿಸಿ)ಬರವಱಿದು (ಸಮಾಚಾರವನ್ನು ದೂತರ ಮೂಲಕ ಕಳುಹಿಸಿದರು), ಪಾಂಡವರು ಅಯ್ವರುಂ ವಿರಾಟ ಸಮೇತಂ ಎದಿರ್ ಹೋಗಿ ಕಂಡಾಗಳ್ (ಅವರ ಬರುವಿಕೆಯನ್ನು ತಿಳಿದು ಪಾಂಡವರೈದುಮಂದಿಯೂ ವಿರಾಟನೊಡಗೊಂಡು

ಎದುರಾಗಿ ಹೋಗಿ
ಕಂಡರು.)ಆಗ-
ವಚನ:ಅರ್ಥ:ಎನ್ನಲು
ಹಾಗೆಯೇ ಮಾಡುತ್ತೇನೆ.
ನಿಮ್ಮ ನಮ್ಮ ಸ್ನೇಹ
ಸಂಬಂಧಗಳು ಈಗ
ಆದುವಲ್ಲ.
ಹಿರಣ್ಯಗರ್ಭಬ್ರಹ್ಮನಿಂದ
ಹಿಡಿದು ಎಡಬಿಡದೆ
ಏಕಪ್ರಕಾರವಾಗಿ
ಬಂದಿರುವವು. ನಿನಗೆ

ಸಮಾನವಾದ ಬಂಧುವನ್ನು
ನಾನೆಲ್ಲಿ ಪಡೆಯಲು ಸಾಧ್ಯ?
ಎಂದು ವಿರಾಟನಿಗೆ
ಸಂತೋಷವಾಗುವಂತೆ
ಮಾತನಾಡಿ ಶ್ರೀಕೃಷ್ಣನಿಗೆ
ಸುಭದ್ರೆಯನ್ನೂ
ಅಭಿಮನ್ಯುವನ್ನೂ
ಜೊತೆಯಲ್ಲಿ ಕರೆದುಕೊಂಡು
ಬರಬೇಕು ಎಂದು
ಸಮಾಚಾರವನ್ನು ದೂತರ
ಮೂಲಕ ಕಳುಹಿಸಿದರು.

ಅವರ ಬರುವಿಕೆಯನ್ನು
ತಿಳಿದು
ಪಾಂಡವರೈದುಮಂದಿಯೂ
ವಿರಾಟನೊಡಗೊಂಡು
ಎದುರಾಗಿ ಹೋಗಿ ಕಂಡರು.

ಚಂ|| ಮುರರಿಪು
ಧರ್ಮನಂದನ
ಪದಾಬ್ಜಯುಗಕ್ಕೆ
ಮರುತ್ಸುತಾದಿಗಳ್
ಹರಿ
ಚರಣಾಂಬುಜಕ್ಕೆಱಗೆಯುತ್ಸವ

ದಿಂದಭಿಮನ್ಯು ತಮ್ಮುತ್ತೈ|

ವರ ಲಲಿತಾಂಘ್ರಿ

ಪದ್ಮನಿವಹಕ್ಕೆಱಗುತ್ತಿರೆ

ತನ್ಮುಖಾಬ್ಜದೊಳ್

ಪರಕೆಗಳುಣ್ಮಿ ಪೊಣ್ಮಿದುವು

ಪಂಕಜದಿಂ

ಮಕರಂದದಂತೆವೋಲ್|| ೮ ||

ಪದ್ಯ-೮:ಪದವಿಭಾಗ-

ಅರ್ಥ:ಮುರರಿಪು

ಧರ್ಮನಂದನ

ಪದಾಬ್ಜಯುಗಕ್ಕೆ (ಕೃಷ್ಣನು

ಧರ್ಮರಾಜನ
ಪಾದಯುಗಳಗಳಿಗೂ)
ಮರುತ್ಸುತಾದಿಗಳ್ ಹರಿ
ಚರಣಾಂಬುಜಕ್ಕೆ
(ಭೀಮಸೇನಾದಿಗಳು ಕೃಷ್ಣನ
ಪಾದಕಮಲಕ್ಕೂ) ಎಱಗೆ
(ನಮಸ್ಕಾರಮಾಡಲು,)
ಉತ್ಸವದಿಂದ ಅಭಿಮನ್ಯು
ತಮ್ಮುತ್ತೈವರ (ತಾವು
-ಅಯ್ವರ) ಲಲಿತಾಂಘ್ರಿ
ಪದ್ಮನಿವಹಕ್ಕೆ ಎಱಗುತ್ತಿರೆ

(ಸಂತೋಷದಿಂದ
ಅಭಿಮನ್ಯುವು ಆ
ಅಯ್ದುಜನರ
ಮನೋಹರವಾದ
ಪಾದಕಮಲಗಳಿಗೆ
ನಮಸ್ಕಾರಮಾಡಲು) ತನ್
ಮುಖಾಬ್ಜದೊಳ್ ಪರಕೆಗಳು
(ಮುಖಕಮಲದಲ್ಲಿ
ಕಮಲದಿಂದ ಹರಕೆಗಳು)
ಉಣ್ಮಿ ಪೊಣ್ಮಿದುವು (ಉಕ್ಕಿ
ಚಿಮ್ಮಿದುವು.) ಪಂಕಜದಿಂ

ಮಕರಂದದಂತೆವ್ರೋಲ್(ಕಮ
ಲದಿಂದ ಮಕರಂದದಂತೆ)
(ಅವರ ಮುಖಕಮಲದಲ್ಲಿ
ಕಮಲದಿಂದ ಮಕರಂದವು
ಉಕ್ಕಿ ಹರಿಯುವಂತೆ
ಹರಕೆಗಳು ಉಕ್ಕಿ
ಹೊರಹೊಮ್ಮಿದುವು.)
ಪದ್ಯ-೮:ಅರ್ಥ: ಕೃಷ್ಣನು
ಧರ್ಮರಾಜನ
ಪಾದಯುಗಳಗಳಿಗೂ
ಭೀಮಸೇನಾದಿಗಳು ಕೃಷ್ಣನ

ಪಾದಕಮಲಕ್ಕೂ
ನಮಸ್ಕಾರಮಾಡಿದರು.
ಸಂತೋಷದಿಂದ
ಅಭಿಮನ್ಯುವು ಆ
ಅಯ್ದುಜನರ
ಮನೋಹರವಾದ
ಪಾದಕಮಲಗಳಿಗೆ
ನಮಸ್ಕಾರಮಾಡಿದನು. ಅವರ
ಮುಖಕಮಲದಲ್ಲಿ
ಕಮಲದಿಂದ ಮಕರಂದವು
ಉಕ್ಕಿ ಹರಿಯುವಂತೆ

ಹರಕೆಗಳು ಉಕ್ಕಿ
ಹೊರಹೊಮ್ಮಿದುವು.

ವ|| ಅಂತು ಮಂದರಧರನುಂ ತಾಮುಮೊಂದೊರ್ವರನಗಲ್ದಿಂ ಬೞಿಯಮಾದ ಸುಖದುಃಖಗಳನನ್ಯೋನ್ಯನಿವೇದನಂಗೆಯ್ದಾನಂದದಿಂ ಪೊೞಲಂ ಪೊಕ್ಕು ಮಜ್ಜನ ಭೋಜನಾದಿಗಳಿಂದಮಪಗತ ಪರಿಶ್ರಮನಂ ಮಾಡಿ ಮುರಾಂತಕನನಂತಕನಂದನ

ನಭಿಮನ್ಯು ವಿವಾಹಕಾರ್ಯ ಪರ್ಯಾಲೋಚನೆಯೊಳೊ ಡಂಬಡಿಸಿ ಶುಭಲಗ್ನೋದಯದೊಳ್-

ವಚನ:ಪದವಿಭಾಗ-

ಅರ್ಥ:ಅಂತು ಮಂದರಧರನುಂ (ಶ್ರೀಕೃಷ್ಣನೂ) ತಾಮುಂ ಒಂದೊರ್ವರಂ ಅಗಲ್ದಿಂ (ತಾವು ಒಬ್ಬರನ್ನೊಬ್ಬರು ಅಗಲಿದ) ಬಟೆಯಂ ಆದ

ಸುಖದುಃಖಗಳನು ಅನ್ಯೋನ್ಯ
ನಿವೇದನಂಗೆಯ್ದು ಆನಂದದಿಂ
ಪೊಱಲಂ ಪೊಕ್ಕು (ಪುರವನ್ನು
ಪ್ರವೇಶಮಾಡಿದರು.) ಮಜ್ಜನ
ಭೋಜನಾದಿಗಳಿಂದಂ
ಅಪಗತಪರಿಶ್ರಮನಂ ಮಾಡಿ
(ಸ್ನಾನ ಊಟಾದಿಗಳ ನಂತರ
ಪ್ರಯಾಣ ಆಯಾಸ
ಪರಿಹರಿಸಿಕೊಂಡು)
ಮುರಾಂತಕನನು
ಅಂತಕನಂದನನು ಅಭಿಮನ್ಯು

ವಿವಾಹಕಾರ್ಯ
ಪರ್ಯಾಲೋಚನೆಯೊಳು
ಒಡಂಬಡಿಸಿ (ಧರ್ಮರಾಜನು
ಕೃಷ್ಣನೊಡನೆ ಅಭಿಮನ್ಯುವಿನ
ಮದುವೆಯ ವಿಚಾರವಾಗಿ
ಆಲೋಚನೆ ಮಾಡಿ ಅವನನ್ನು
ಒಪ್ಪಿಸಿದನು)
ಶುಭಲಗ್ನೋದಯದೊಳ್-
(ಶುಭ ಮುಹೂರ್ತದ
ಉದಯದಲ್ಲಿ)

ವಚನ:ಅರ್ಥ:ಹಾಗೆ ಶ್ರೀಕೃಷ್ಣನೂ ತಾವು ಒಬ್ಬರನ್ನೊಬ್ಬರು ಅಗಲಿದ ಬಳಿಕ ಆದ ಸುಖದುಖಗಳನ್ನು ಪರಸ್ಪರ ತಿಳಿಯಪಡಿಸಿ ಸಂತೋಷದಿಂದ ಪುರವನ್ನು ಪ್ರವೇಶಮಾಡಿದರು. ಧರ್ಮರಾಜನು ಕೃಷ್ಣನೊಡನೆ ಅಭಿಮನ್ಯುವಿನ ಮದುವೆಯ ವಿಚಾರವಾಗಿ ಆಲೋಚನೆ ಮಾಡಿ ಅವನನ್ನು

ಒಪ್ಪಿಸಿದನು. ಶುಭ
ಮುಹೂರ್ತದ ಉದಯದಲ್ಲಿ

ಉ||
ವಾರಿಧಿಘೋಷದಂತೆಸೆವ
ಮಂಗಳತೂರ್ಯರವಂಗಳಿಂ
ಬಿಯಂ
ಮೇರುವ ಪೊನ್ನಣಂ
ನೆರೆಯದೆಂಬಿನಮಿಟ್ಟಳಮಾಗೆ
ವಾರನಾ|
ರೀ ರಮಣೀಯ
ನೃತ್ತಮಮರುತ್ತಿರೆ ಸಂದ

ವಿರಾಟನೆಂದು ಕೆ

ಯ್ಯೇರೆರೆದೀಯೆ

ಗೆಯ್ದರಭಿಮನ್ಯುಗಮುತ್ತರೆಗಂ

ವಿವಾಹಮಂ|| ೯

ಪದ್ಯ-೯:ಪದವಿಭಾಗ-

ಅರ್ಥ:ವಾರಿಧಿಘೋಷದಂತೆ

ಎಸೆವ (ಕಡಲ ಮೊರೆಯಂತೆ

ಘೋಷಿಸುತ್ತಿರಲು)

ಮಂಗಳತೂರ್ಯರವಂಗಳಿಂ

(ಮಂಗಳವಾದ್ಯಗಳಿಂದ)

ಬಿಯಂ ಮೇರುವ ಪೊನ್ನಣಂ

ನೆರೆಯದು(ದಾನಮಾಡಿದ
ಸುವರ್ಣಕ್ಕೆ (ದಕ್ಷಿಣೆ)
ಮೇರುಪರ್ವತವೂ
ಸಮಾನವಾಗಲಾರದು)
ಎಂಬಿನಂ ಇಟ್ಟಳಮಾಗೆ
(ಎನ್ನುವಷ್ಟು
ಅತಿಶಯವಾಗಿರಲು)
ವಾರನಾರೀ ರಮಣೀಯ
ನೃತ್ತಮಮರುತ್ತಿರೆ
(ವೇಶ್ಯಸ್ತ್ರೀಯರ
ಮನೋಹರವಾದ ನೃತ್ಯವು

ರಮಣೀಯವಾಗಿರಲು)
ಸಂದ ವಿರಾಟನೆಂದು
ಕಯ್ಯ್ಯೇರೆರೆದು ಈಯೆ
(ಪ್ರಸಿದ್ಧನಾದ
ವಿರಾಟಮಹಾರಾಜನು
ಕೈನೀರೆರೆದು /
ಧಾರಾಜಲವನ್ನೆರೆದು
ಕನ್ಯಾದಾನಮಾಡಲು)
ಗೆಯ್ದರು ಅಭಿಮನ್ಯುಗಂ
ಉತ್ತರೆಗಂ ವಿವಾಹಮಂ
(ಉತ್ತರೆಗೂ

ಅಭಿಮನ್ಯುವಿಗೂ
ಮದುವೆಯನ್ನು ಮಾಡಿದರು.)

ಪದ್ಯ-೯:ಅರ್ಥ:

ಮಂಗಳವಾದ್ಯವು ಕಡಲ
ಮೊರೆಯಂತೆ ಮೊಳಗುತ್ತಿರಲು
ದಾನಮಾಡಿದ ಸುವರ್ಣಕ್ಕೆ
(ದಕ್ಷಿಣೆ) ಮೇರುಪರ್ವತವೂ
ಸಮಾನವಾಗಲಾರದು
ಎನ್ನುವಷ್ಟು
ಅತಿಶಯವಾಗಿರಲು,
ವೇಶ್ಯಸ್ತ್ರೀಯರ

ಮನೋಹರವಾದ ನೃತ್ಯವು
ರಮಣೀಯವಾಗಿರಲು
ಪ್ರಸಿದ್ಧನಾದ
ವಿರಾಟಮಹಾರಾಜನು
ಕೈನೀರೆರೆದು /
ಧಾರಾಜಲವನ್ನೆರೆದು
ಕನ್ಯಾದಾನಮಾಡಲು
ಉತ್ತರೆಗೂ ಅಭಿಮನ್ಯುವಿಗೂ
ಮದುವೆಯನ್ನು ಮಾಡಿದರು..

ವ|| ಅಂತಾ ವೀರನಂ
ವೀರಶ್ರೀಯೊಳ್

ನೆರಪುವಂತುತ್ತರೆಯೊಳ್
ನೆರಪಿ ಕಂಸಧ್ವಂಸಿಯಂ
ದ್ವಾರಾವತಿಗೆ ಕಳಿಪಿ-

ವಚನ:ಪದವಿಭಾಗ-

ಅರ್ಥ:ಅಂತಾ ವೀರನಂ ವೀರಶ್ರೀಯೊಳ್ ನೆರಪುವಂತೆ ಉತ್ತರೆಯೊಳ್ ನೆರಪಿ (ಕೂಡಿಸುವಂತೆ ಅಭಿಮನ್ಯುವನ್ನು ಉತ್ತರೆಯಲ್ಲಿ ಕೂಡಿಸಿ) ಕಂಸಧ್ವಂಸಿಯಂ ದ್ವಾರಾವತಿಗೆ

ಕಳಿಪಿ (ಶ್ರೀಕೃಷ್ಣನನ್ನು ದ್ವಾರಕಾಪಟ್ಟಣಕ್ಕೆ ಕಳುಹಿಸಿದನು)-

ವಚನ:ಅರ್ಥ:ಆ ವೀರನನ್ನು ವೀರಲಕ್ಷ್ಮಿಯನ್ನು ಕೂಡಿಸುವಂತೆ ಅಭಿಮನ್ಯುವನ್ನು ಉತ್ತರೆಯಲ್ಲಿ ಕೂಡಿಸಿ ಶ್ರೀಕೃಷ್ಣನನ್ನು ದ್ವಾರಕಾಪಟ್ಟಣಕ್ಕೆ ಕಳುಹಿಸಿದನು.

ಅರ್ಜುನ ದುರ್ಯೋಧನರಿಂದ ಕೃಷ್ಣನಲ್ಲಿ ಸಹಾಯ ಕೋರಿಕೆ

ಮ|| ಮಲೆಪರ್ ಮಂಡಳಿಕರ್ ಕಱುಂಬರದಟರ್ ವೀರರ್ಕಳುಂ ತಮ್ಮ ಬಾ ಬ್ದಿಲೆಯಂ ಬೇಡಿದ ವಸ್ತುವಾಹನಮುಮಂ ಮುಂದಿಟ್ಟು ಮೂವಿಟ್ಟಿಯೊ| ಕ್ಕಲವೋಲಿಂ ಬೆಸಕೆಯ್ಯೆ ಸಂತಮಿರುತುಂ ಕುಂತೀಸುತರ್ ತಮ್ಮ ತೋ

ಳ್ವಲಮಂ ನಚ್ಚರೆ ದಾಯಿಗರ್ ಧರೆಯನಾಳ್ದಂದಟ್ಟಿರೆಂಬೇವ ದಿಂ|| ೧೦||

ಪದ್ಯ-೦೦:ಪದವಿಭಾಗ-ಅರ್ಥ:ಮಲೆಪರ್ ಮಂಡಳಿಕರ್ ಕಱುಂಬರ್ ಅದಟರ್ (ಎದುರುಬೀಳಬಲ್ಲ ಸಾಮಂತರೂ, ಅಸೂಯಾಪರ ರಾಜರೂ, ಪರಾಕ್ರಮಶಾಲಿಗಳೂ) ವೀರರ್ಕಳುಂ ತಮ್ಮ

ಬಾಳ್ದಿಲೆಯಂ ಬೇಡಿದ
ವಸ್ತುವಾಹನಮುಮಂ
ಮುಂದಿಟ್ಟು (ತಮ್ಮ
ಜೀವವನ್ನೂ, ಕೇಳಿದ ಎಲ್ಲ
ವಸ್ತು ಸಮೂಹಗಳನ್ನೂ
ಪಾಂಡವರ ಮುಂದಿಟ್ಟು)
ಮೂವಿಟ್ಟಿಯ ಒಕ್ಕಲವೋಲಿಂ
ಬೆಸಕೆಯ್ಯೆ ಸಂತಮಿರುತುಂ
ಕುಂತೀಸುತರ್ (ಮೂರು
ಬಗೆಯಾದ ಬಿಟ್ಟಿಸೇವೆಯನ್ನು
ಮಾಡುವ ಜನರಂತೆ

ಆಜ್ಞಾಧಾರಿಗಳಾಗಿದ್ದು, ಕ್ಷೇಮವಾಗಿದ್ದರೂ,) ತಮ್ಮ ತೋಳ್ವಲಮಂ ನಚ್ಚರೆ (ತಮ್ಮ ಬಾಹುಬಲವನ್ನೇ ನೆಚ್ಚದಂತಿದ್ದರು) ದಾಯಿಗರ್ ಧರೆಯನಾಳ್ದಂದು ಅಟ್ಟಿರ್ ಎಂಬ ಏವದಿಂ (ತಮ್ಮ ದಾಯಿಗರಾದ ಕೌರವರು ತಮ್ಮ ರಾಜ್ಯವನ್ನು ಅಪಹರಿಸಿ ಅಳ್ದರು-ಮುಳುಗಿಸಿದರು ಎಂಬ ದುಃಖದಿಂದಿದ್ದರು)

ಪದ್ಯ-00:ಅರ್ಥ:ಎದುರುಬೀಳಬಲ್ಲ ಸಾಮಂತರೂ, ಅಸೂಯಾಪರ ರಾಜರೂ, ಪರಾಕ್ರಮಶಾಲಿಗಳೂ, ವೀರರೂ, ತಮ್ಮ ಜೀವವನ್ನೂ, ಕೇಳಿದ ಎಲ್ಲ ವಸ್ತು ಸಮೂಹಗಳನ್ನೂ ಪಾಂಡವರ ಮುಂದಿಟ್ಟು ಮೂರು ಬಗೆಯಾದ ಬಿಟ್ಟಿಸೇವೆಯನ್ನು ಮಾಡುವ ಜನರಂತೆ ಆಜ್ಞಾಧಾರಿಗಳಾಗಿದ್ದರೂ,

ತಮ್ಮ ಬಾಹುಬಲವನ್ನೇ
ನೆಚ್ಚದಂತಿದ್ದರು, ತಮ್ಮ
ದಾಯಿಗರಾದ ಕೌರವರು
ತಮ್ಮ ದಾಯಿಗರಾದ
ಕೌರವರು ತಮ್ಮ ರಾಜ್ಯವನ್ನು
ಅಪಹರಿಸಿ ಅಳ್ದರು-
ಮುಳುಗಿಸಿದರು ಎಂಬ
ದುಃಖದಿಂದಿದ್ದರು

**ವ|| ಅಂತು ತಮ್ಮ ಪೂಣ್ದ
ವರ್ಷಾವಧಿ
ನೆರೆದೊಡಮರಾತಿಗಳ್ಗಂತ್ಯಕಾ**

ಲಂ ನೆಯದುದರ್ಕುಮ್ಮಳಿಸಿ
ನಮಗೆ ಕೆಮ್ಮಗಿರಲಾಗದು
ದುರ್ಯೋಧನನಪ್ಪೊಡೆ ಶ್ವೇತ
ಕೃಷ್ಣಾಕಾರಕಂ ಕೃಷ್ಣನಂ ತನಗೆ
ಮಾಡದನ್ನೆಗಂ ಮುನ್ನಮೆ
ಪನ್ನಗಶಯನನಂ ನಮಗೆ
ಮಾಡುವುದುತ್ತಮಪಕ್ಷಮೆಂ
ಬೀ ಪ್ರಧಾನ ಕಾರ್ಯಮಂ
ತಮ್ಮೊಳಾಳೋಚಿಸಿ
ವಿಕ್ರಮಾರ್ಜುನನಂ ನೀನೆ
ಪೋಗಲ್ವೇಱ್ಕುಮಂಬುದು

ಮಪ್ರತಿರಥಂ ರಥಮನೇಱಿ
ಮನಪವನವೇಗದಿಂ
ದ್ವಾರಾವತಿಯನೆಯ್ದಿ
ರಾಜಮಂದಿರಮಂ ಪೊಕ್ಕು
ದುಗ್ಧಾಬ್ಧಿಧವಳ
ಶಯ್ಯಾತಳದೊಳ್
ಮರೆದೊಱಗಿದ
ಮಧುಮಥನನನೆತ್ತಲಣ್ಮದೆ
ಕಾಲ ದೆಸೆಯೊಳುಸಿರದೆ
ಕುಳ್ಳಿರೆ
ದುಯೋ೯ಧನನುಮಾಗಳೆ

ಬಂದು ಬಲಿಬಂಧನನ ತಲೆದೆಸೆಯೊಳ್ ಕುಳ್ಳಿರೆ ಕಿಱಿದಾನುಂ ಬೇಗದಿಂ-

ವಚನ:ಪದವಿಭಾಗ-

ಅರ್ಥ:ಅಂತು ತಮ್ಮ ಪೂಣ್ದ ವರ್ಷಾವಧಿ ನೆರೆದೊಡಂ (ಹಾಗೆ ತಾವು ಪ್ರತಿಜ್ಞೆ ಮಾಡಿದ್ದ ಗಡುವು ತೀರಿದರೂ) ಆರಾತಿಗಳ್ಗೆ ಅಂತ್ಯಕಾಲಂ ನೆರೆಯದುದರ್ಕೆ ಉಮ್ಮಳಿಸಿ (ಶತ್ರುಗಳಿಗೆ ಅಂತ್ಯಕಾಲವು

ತುಂಬದೇ ಇದ್ದುದಕ್ಕಾಗಿ
ದುಃಖಪಟ್ಟು) ನಮಗೆ
ಕೆಮ್ಮಗಿರಲಾಗದು
ದುರ್ಯೋಧನನು ಅಪ್ಪೊಡೆ
ಶ್ವೇತ ಕೃಷ್ಣಾಕಾರಕಂ (‘ನಾವು
ಸುಮ್ಮನಿರಲಾಗದು,
ದುರ್ಯೋಧನನಾದರೆ
ಬಿಳಿಯದನ್ನು ಕಪ್ಪನ್ನಾಗಿ
ಮಾಡುವ ಮೋಸಗಾರ),
ಕೃಷ್ಣನಂ ತನಗೆ ಮಾಡದ
ಅನ್ನೆಗಂ ಮುನ್ನಮೆ

ಪನ್ನಗಶಯನನಂ ನಮಗೆ ಮಾಡುವುದು ಉತ್ತಮಪಕ್ಷಂ ಎಂಬ(ಅವನು ಕೃಷ್ಣನನ್ನು ತನ್ನವನನ್ನಾಗಿ ಮಾಡಿಕೊಳ್ಳುವುದಕ್ಕೆ ಮೊದಲೇ ಶ್ರೀಕೃಷ್ಣನನ್ನು ನಮಗೆ ಸಹಾಯಕನನ್ನಾಗಿ ಮಾಡಿಕೊಳ್ಳುವುದು ಉತ್ತಮಪಕ್ಷ ಎಂಬ) ಈ ಪ್ರಧಾನ ಕಾರ್ಯಮಂ ತಮ್ಮೊಳು ಆಲೋಚಿಸಿ (ಈ

ಪ್ರಧಾನ ಕಾರ್ಯವನ್ನು ತಮ್ಮಲ್ಲಿ ಆಲೋಚಿಸಿ,) ವಿಕ್ರಮಾರ್ಜುನನಂ ನೀನೆ ಪೋಗಲ್ವೇೞ್ಕುಂ ಎಂಬುದುಂ (ಆ ಕಾರ್ಯಕ್ಕೆ ವಿಕ್ರಮಾರ್ಜುನನನ್ನು ‘ನೀನೇ ಹೋಗಬೇಕು’ ಎಂದರು) ಅಪ್ರತಿರಥಂ ರಥಮನೇಱಿ ಮನ-ಪವನ-ವೇಗದಿಂ ದ್ವಾರಾವತಿಯನೆಯ್ದಿ ರಾಜಮಂದಿರಮಂ ಪೊಕ್ಕು

(ಅಪ್ರತಿರಥನಾದ ಅವನು
ರಥವನ್ನು ಹತ್ತಿ
ಮನಸ್ಸು,ವಾಯುವೇಗದಿಂದ
ದ್ವಾರಾವತೀ ಪಟ್ಟಣವನ್ನು
ಸೇರಿ, ಅರಮನೆಯನ್ನು
ಪ್ರವೇಶಿಸಿದನು);
ದುಗ್ಧಾಬ್ಧಿಧವಳ
ಶಯ್ಯಾತಳದೊಳ್ ಮರೆದ
ಒಱಗಿದ (ನಿದ್ರಿಸುತ್ತಿದ್ದ)
ಮಧುಮಥನನನು ಎತ್ತಲು
ಅಣ್ಮದೆ (ಕ್ಷೀರಸಮುದ್ರದಷ್ಟು

ಬೆಳ್ಳಗಿರುವ ಹಾಸಿಗೆಯ ಮೇಲೆ
ನಿದ್ರಿಸುತ್ತಿದ್ದ ಕೃಷ್ಣನನ್ನು
ನೋಡಿ, ಅವನನ್ನು ಎಬ್ಬಿಸಲು
ಇಷ್ಟಪಡದೆ) ಕಾಲ ದೆಸೆಯೊಳು
ಉಸಿರದೆ ಕುಳ್ಳಿರೆ (ಅವನ
ಕಾಲಿನ ಕಡೆಯಲ್ಲಿ
ಮಾತನಾಡದೆ ಕುಳಿತಿರಲು.)
ದುರ್ಯೋಧನನುಂ ಆಗಳೆ
ಬಂದು ಬಲಿಬಂಧನನ
ತಲೆದೆಸೆಯೊಳ್ ಕುಳ್ಳಿರೆ
(ದುರ್ಯೋಧನನೂ ಆಗಲೇ

ಬಂದು ಶ್ರೀಕೃಷ್ಣನ ತಲೆದೆಸೆಯಲ್ಲಿ ಕುಳಿತನು), ಕಿಱಿದಾನುಂ ಬೇಗದಿಂ (ಸ್ವಲ್ಪಕಾಲದ ನಂತರ)-

ವಚನ:ಅರ್ಥ:ಹಾಗೆ ತಾವು ಪ್ರತಿಜ್ಞೆ ಮಾಡಿದ್ದ ಗಡುವು ತೀರಿದರೂ ಶತ್ರುಗಳಿಗೆ ಅಂತ್ಯಕಾಲವು ತುಂಬದೇ ಇದ್ದುದಕ್ಕಾಗಿ ದುಖಪಟ್ಟು ‘ನಾವು ಸುಮ್ಮನಿರಲಾಗದು, ದುರ್ಯೋಧನನಾದರೆ

ಬಿಳಿಯದನ್ನು ಕಪ್ಪನ್ನಾಗಿ
ಮಾಡುವ ಮೋಸಗಾರ.
ಅವನು ಕೃಷ್ಣನನ್ನು
ತನ್ನವನನ್ನಾಗಿ
ಮಾಡಿಕೊಳ್ಳುವುದಕ್ಕೆ
ಮೊದಲೇ ಶ್ರೀಕೃಷ್ಣನನ್ನು
ನಮಗೆ ಸಹಾಯಕನನ್ನಾಗಿ
ಮಾಡಿಕೊಳ್ಳುವುದು
ಉತ್ತಮಪಕ್ಷ ಎಂಬ ಈ
ಪ್ರಧಾನ ಕಾರ್ಯವನ್ನು
ತಮ್ಮಲ್ಲಿ ಆಲೋಚಿಸಿ, ಆ

ಕಾರ್ಯಕ್ಕೆ ವಿಕ್ರಮಾರ್ಜುನನನ್ನು ‘ನೀನೇ ಹೋಗಬೇಕು’ ಎಂದರು. ಅಪ್ರತಿರಥನಾದ ಅವನು ರಥವನ್ನು ಹತ್ತಿ ಮನಪವನವೇಗ (ಮನಸ್ಸಷ್ಟೂ ಗಾಳಿಯಷ್ಟೂ ವೇಗ)ದಿಂದ ದ್ವಾರಾವತೀಪಟ್ಟಣವನ್ನು ಸೇರಿ ಅರಮನೆಯನ್ನು ಪ್ರವೇಶಿಸಿದನು.

ಕ್ಷೀರಸಮುದ್ರದಷ್ಟು
ಬೆಳ್ಳಗಿರುವ ಹಾಸಿಗೆಯ ಮೇಲೆ
ನಿದ್ರಿಸುತ್ತಿದ್ದ ಕೃಷ್ಣನನ್ನು
ನೋಡಿ, ಅವನನ್ನು ಎಬ್ಬಿಸಲು
ಇಷ್ಟಪಡದೆ ಕಾಲ ದೆಸೆಯಲ್ಲಿ
ಮಾತನಾಡದೆ ಕುಳಿತಿರಲು.
ದುರ್ಯೋಧನನೂ ಆಗಲೇ
ಬಂದು ಶ್ರೀಕೃಷ್ಣನ
ತಲೆದೆಸೆಯಲ್ಲಿ ಕುಳಿತನು.
ಸ್ವಲ್ಪಕಾಲದ ನಂತರ-

ಕಂ|| ಪವಡಿಸಿದನಂತನೊಸೆದು

ಪ್ಪವಡಿಸಿ

ತನ್ನೆರಡುಮಡಿಯನೊತ್ತುತ್ತಿರ್

ದಾ|

ಹವ ವಿಜಯಿಯಪ್ಪ ವಿಜಯನ

ನೆ ವಲಂ ಮುಂ ಕಂಡು ಬೞಿಕೆ

ನೃಪನಂ ಕಂಡಂ|| ೧೧ ||

ಪದ್ಯ-೦೦:ಪದವಿಭಾಗ-

ಅರ್ಥ:ಪವಡಿಸಿದ ಅನಂತನು

ಒಸೆದು ಉಪ್ಪವಡಿಸಿ

ತನ್ನೆರಡುಂ

ಅಡಿಯನೊತ್ತುತ್ತಿರ್ದ(ಮಲಗಿ

ದ್ದ ಶ್ರೀಕೃಷ್ಣನು
ಸಂತೋಷದಿಂದ ಎದ್ದು ತನ್ನ
ಎರಡು ಪಾದಗಳನ್ನು
ಒತ್ತುತ್ತಿದ್ದ) ಆಹವ
ವಿಜಯಿಯಪ್ಪ ವಿಜಯನನೆ
ವಲಂ ಮುಂ
ಕಂಡು(ಯುದ್ಧದಲ್ಲಿ
ಜಯಶಾಲಿಯಾಗುವ
ಅರ್ಜುನನ್ನೇ ಮೊದಲು
ನೋಡಿ) ಬಟಿಕೆ ನೃಪನಂ
ಕಂಡಂ(ಬಳಿಕ

ದುರ್ಯೋಧನನನ್ನು ನೋಡಿದನು.)

ಪದ್ಯ-00:ಅರ್ಥ:ಮಲಗಿದ್ದ ಅನಂತನಾದ ಶ್ರೀಕೃಷ್ಣನು ಸಂತೋಷದಿಂದ ಎದ್ದು ತನ್ನ ಎರಡು ಪಾದಗಳನ್ನು ಒತ್ತುತ್ತಿದ್ದ, ಯುದ್ಧದಲ್ಲಿ ಜಯಶಾಲಿಯಾಗುವ ಅರ್ಜುನನ್ನೇ ಮೊದಲು ನೋಡಿ ಬಳಿಕ

ದುರ್ಯೋಧನನನ್ನು
ನೋಡಿದನು.

ವ|| ಕಂಡು ತನಗೆ ಪೊಡೆವಟ್ಟಿರ್ವರುಮಂ ಪರಸಿ ನೀವಿರ್ವರುಂ ಬಂದಂದಮುಮಂ ಮನೆವಾೞ್ತೆಯಂ ಪೇೞಿಮೆಂದೊಡೆಮ್ಮಮ್ಮಂ ಕೆಯ್ಕೊಂಡು ಗೆಲಿಸಲ್ವೇೞ್ಕುಮೆಂದು ಬಂದೆವೆನೆ-

ವಚನ:ಪದವಿಭಾಗ-ಅರ್ಥ:ಕಂಡು ತನಗೆ ಪೊಡೆವಟ್ಟೆ ಇರ್ವರುಮಂ ಪರಸಿ (ನೋಡಿ ತನಗೆ ನಮಸ್ಕರಿಸಿದ ಇಬ್ಬರನ್ನೂ ಆಶೀರ್ವದಿಸಿ) ನೀವು ಇರ್ವರುಂ ಬಂದ ಅಂದಮುಮಂ ಮನೆವಾಳ್ತೆಯುಂ ಪೇೞಿಮೆಂದೊಡೆ (ನೀವಿಬ್ಬರೂ ಬಂದ

ಕಾರಣವನ್ನೂ,
ಗೃಹಸಮಾಚಾರವನ್ನೂ ಹೇಳಿ
ಎಂದನು) ಎಮ್ಮಂ ಎಮ್ಮಂ
ಕೆಯ್ಕೊಂಡು ಗೆಲಿಸಲ್ವೇೞ್ಕುಂ
ಎಂದು ಬಂದೆವು ಎನೆ
(ನಮ್ಮನ್ನು ನಮ್ಮನ್ನು
ಅಂಗೀಕಾರ ಮಾಡಿ
ಗೆಲ್ಲಿಸಬೇಕೆಂದು'
ಕೇಳಿಕೊಳ್ಳಲು ಬಂದೆವು
ಎನ್ನಲು)-

ವಚನ:ಅರ್ಥ: ಹೀಗೆ ನೋಡಿದವನು; ನೋಡಿ ತನಗೆ ನಮಸ್ಕರಿಸಿದ ಇಬ್ಬರನ್ನೂ ಆಶೀರ್ವದಿಸಿ, ನೀವಿಬ್ಬರೂ ಬಂದ ಕಾರಣವನ್ನೂ, ಗೃಹಸಮಾಚಾರವನ್ನೂ ಹೇಳಿ ಎಂದನು. ಆಗ, 'ನಮ್ಮನ್ನು ನಮ್ಮನ್ನು ಅಂಗೀಕಾರ ಮಾಡಿ ಗೆಲ್ಲಿಸಬೇಕೆಂದು' ಕೇಳಿಕೊಳ್ಳಲು ಬಂದೆವು ಎಂದರು;- ಎನ್ನಲು

- **ಟಿಪ್ಪಣಿ**:೧. ಕೃಷ್ನ ಮತ್ತ ಜಾಂಬವತಿಯ ಮಗ ಸಾಂಬನಿಗೆ ದುರ್ಯೋಧನನ ಮಗಳು ಲಕ್ಷ್ಮಣೆಯನ್ನು ಕೊಟ್ಟುವಿವಾಹವಾಗಿದೆ. ಅವರು ಪರಸ್ಪರ ಬೀಗರು.
- **ಟಿಪ್ಪಣಿ**:೨. ಕೃಷ್ಣನ ಸೋದರತ್ತೆ, ಎಂದರೆ ಅವನ ತಂದೆ ವಸುದೇವನ ಅಕ್ಕ ಕುಂತಿಯ ಮಗ ಅರ್ಜುನ, ಅಲ್ಲದೆ ಕೃಷ್ಣನ ತಂಗಿ

ಸುಭದ್ರೆಯ ಗಂಡ ಅರ್ಜುನ.
ಹೀಗೆ ಇಬ್ಬರೂ ಹತ್ತಿರದ
ಬಂಧುಗಳು ಕೃಷ್ಣನಿಗೆ.

ಕಂ||
ಮನ್ನಣೆಗನರ್ಗಿರ್ವರುಮೋ
ರನ್ನರೆ ವಿಜಯನನೆ ಮುನ್ನೆ
ಕಂಡುದಱಿಂದಾ|
ನೆನ್ನಂ ಕೊಟ್ಟೆಂ ನಿನಗಂ
ಪನ್ನಗಕೇತನ
ಚತುರ್ವಲಂಗಳನಿತ್ತೆಂ|| ೧೨ ||

ಪದ್ಯ-೧೨:ಪದವಿಭಾಗ-ಅರ್ಥ:ಮನ್ನಣೆಗೆ ಎನಗೆ ಇರ್ವರುಂ ಓರನ್ನರೆ (ನನ್ನ ಮನ್ನಣೆಗೆ ನೀವಿಬ್ಬರೂ ಸಮಾನರೆ; ಆದರೂ) ವಿಜಯನನೆ ಮುನ್ನೆ ಕಂಡುದಱಿಂದ ಆನು ಎನ್ನಂ ಕೊಟ್ಟೆಂ (ಅರ್ಜುನನನ್ನು ಮೊದಲು ಕಂಡದ್ದರಿಂದ ನಾನು ನನ್ನನ್ನು ಅವನಿಗೆ ಕೊಟ್ಟಿದ್ದೇನೆ) ನಿನಗಂ, ಪನ್ನಗಕೇತನ

(ಸರ್ಪಧ್ವಜ)
ಚತುರ್ವಲಂಗಳನು
ಇತ್ತೆಂ(ದುರ್ಯೋಧನ! ನಿನಗೆ
ನನ್ನ ಚತುರ್ಬಲಗಳನ್ನೂ
ಕೊಟ್ಟಿದ್ದೇನೆ.)
ಪದ್ಯ-೧೨:ಅರ್ಥ:ನನ್ನ
ಮನ್ನಣೆಗೆ ನೀವಿಬ್ಬರೂ
ಸಮಾನರೇ; ಆದರೂ
ಅರ್ಜುನನನ್ನು ಮೊದಲು
ಕಂಡದ್ದರಿಂದ ನಾನು ನನ್ನನ್ನು
ಅವನಿಗೆ ಕೊಟ್ಟಿದ್ದೇನೆ.

ದುರ್ಯೋಧನ! ನಿನಗೆ ನನ್ನ ಚತುರ್ಬಲಗಳನ್ನೂ ಕೊಟ್ಟಿದ್ದೇನೆ, ಎಂದನು ಕೃಷ್ಣ.

ವ|| ಎಂದು ತನ್ನೊಳ್ ಸಮಾನಬಲನಪ್ಪ ತನ್ನ ತಮ್ಮಂ ಕೃತವರ್ಮನುಮಂ ತನ್ನೊಡನಾಡಿಗಳಪ್ಪ ತೊಂಬತ್ತಾಱು ಸಾಸಿರ ಗೋಪಕುಮಾರರೊಡನೆ ಕೂಡಿ ಕಳಿಪಿ ವಿಕ್ರಮಾರ್ಜುನನುಂ ತಾನುಂ

ವಿರಾಟಪುರಕ್ಕೆ ವಂದು ಮಜ್ಜನ ಭೋಜನಾದಿಗಳೊಳ್ ವಿಗತ ಪರಿಶ್ರಮರಾಗಿ ಮಱುದಿವಸಮಱುವರುಮಾ ಱುಂಗುಣಂಗಳೆ ಮೂರ್ತಿಮಂತಂಗಳಾದಂತೆ ಮಂತ್ರಶಾಲೆಯಂ ಪೊಕ್ಕಿರ್ದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ತನ್ನೊಳ್ ಸಮಾನ ಬಲನಪ್ಪ ತನ್ನ

ತಮ್ಮಂ
ಕೃತವರ್ಮನುಮಂ(ತನಗೆ
ಸಮಾನವಾದ ಶಕಿಯುಳ್ಳ ತನ್ನ
ತಮ್ಮನಾದ ಕೃತವರ್ಮನನ್ನು)
ತನ್ನ ಒಡನಾಡಿಗಳಪ್ಪ
ತೊಂಬತ್ತಾಱು ಸಾಸಿರ
ಗೋಪಕುಮಾರರೊಡನೆ
ಕೂಡಿ ಕಳಿಪಿ (ತನ್ನ
ಜೊತೆಗಾರರಾದ
ತೊಂಬತ್ತಾರುಸಾವಿರ
ಗೋಪಕುಮಾರರೊಡನೆ

ಸೇರಿಸಿ ಕಳುಹಿಸಿದನು.)
ವಿಕ್ರಮಾರ್ಜುನನುಂ ತಾನುಂ
ವಿರಾಟಪುರಕ್ಕೆ ವಂದು,
ಮಜ್ಜನ ಭೋಜನಾದಿಗಳೊಳ್
ವಿಗತ ಪರಿಶ್ರಮರಾಗಿ
(ಅರ್ಜುನನೂ ತಾನೂ
ವಿರಾಟನಗರಕ್ಕೆ ಬಂದು
ಸ್ನಾನಭೋಜನಾದಿಗಳಿಂದ
ಶ್ರಮ ಪರಿಹಾರ
ಮಾಡಿಕೊಂಡು,)
ಮಱುದೆವಸಂ ಅಱುವರುಂ

ಆಱುಂಗುಣಂಗಳೆ
ಮೂರ್ತಿಮಂತಂಗಳಾದಂತೆ
(ಮಾರನೆಯ ದಿನ
ಆರುಮಂದಿಯೂ
ರಾಜ್ಯಶಾಸ್ತ್ರದ ಆರುಗುಣಗಳೇ
ಪ್ರತ್ಯಕ್ಷವಾಗಿ ಮೂರ್ತಿತಾಳಿದ
ಹಾಗೆ) ಮಂತ್ರಶಾಲೆಯಂ
ಪೊಕ್ಕಿರ್ದಾಗಳ್
(ಆಲೋಚನಾಮಂದಿರವನ್ನು
ಪ್ರವೇಶಮಾಡಿದರು; ಆಗ)-

ವಚನ:ಅರ್ಥ: ಹೀಗೆ ಹೇಳಿ ತನಗೆ ಸಮಾನವಾದ ಶಕ್ತಿಯುಳ್ಳ ತನ್ನ ತಮ್ಮನಾದ ಕೃತವರ್ಮನನ್ನೂ, ತನ್ನ ಜೊತೆಗಾರರಾದ ತೊಂಬತ್ತಾರುಸಾವಿರ ಗೋಪಕುಮಾರರೊಡನೆ ಸೇರಿಸಿ ಕಳುಹಿಸಿದನು. ಅರ್ಜುನನೂ ತಾನೂ ವಿರಾಟನಗರಕ್ಕೆ ಬಂದು ಸ್ನಾನಭೋಜನಾದಿಗಳಿಂದ

ಶ್ರಮ ಪರಿಹಾರ
ಮಾಡಿಕೊಂಡರು. ಮಾರನೆಯ
ದಿನ ಆರುಮಂದಿಯೂ
ರಾಜ್ಯಶಾಸ್ತ್ರದ ಆರುಗುಣಗಳೇ
ಪ್ರತ್ಯಕ್ಷವಾಗಿ ಮೂರ್ತಿತಾಳಿದ
ಹಾಗೆ
ಆಲೋಚನಾಮಂದಿರವನ್ನು
ಪ್ರವೇಶಮಾಡಿದರು. ಆಗ-

<u>ಕೃಷ್ಣನೊಡನೆ ಪಾಂಡವರ ಮಂತ್ರಾಲೋಚನೆ</u>

ಕಂ|| ಪ್ರಿಯ

ವಿಷಯಕಾಂಕ್ಷೆಯಿಂದಿಂ

ದ್ರಿಯಂಗಳೆಂತೆಯ್ದೆ

ಮನಮನಾಶ್ರಯಿಸುಗುಮಂ|

ತಯ ನಯ ಪರರಯ್ವರುಮಾ

ಶ್ರಯಿಸಿರ್ದರ್

ವಿಷಯಕಾಂಕ್ಷೆಯಿಂ

ಮುರರಿಪುವಂ|| ೧೩ ||

ಪದ್ಯ-೧೩:ಪದವಿಭಾಗ-ಅರ್ಥ:ಪ್ರಿಯ ವಿಷಯ ಆಕಾಂಕ್ಷೆಯಿಂದೆ ಇಂದ್ರಿಯಂಗಳ್ (ಕಿವಿ, ಕಣ್ಣು ಮೊದಲಾದ ಪಂಚೇಂದ್ರಿಯಗಳು ತಮ್ಮ ಪ್ರಿಯಳಾದ ವಸ್ತುಗಳ ಅಪೇಕ್ಷೆಯಿಂದ) ಎಂತು ಎಯ್ದೆ ಮನಮನು ಆಶ್ರಯಿಸುಗುಂ ಅಂತು (ಮನಸ್ಸನ್ನು ಸೇರಿ ಹೇಗೆ ಆಶ್ರಯಿಸುತ್ತವೆಯೋ

ಹಾಗೆ) ಅಯನಯಪರರ್
(ಉತ್ತಮ ವಿಧಿ
ನಿಯಮಗಳಲ್ಲಿ ಆಸಕ್ತರಾದ)
ಅಯ್ವರುಮ್
ಆಶ್ರಯಿಸಿರ್ದರ್
ವಿಷಯಕಾಂಕ್ಷೆಯಿಂ
ಮುರರಿಪುವಂ (ಅಯ್ದುಜನ
ಪಾಂಡವರೂ ತಮ್ಮ
ಇಷ್ಟಾರ್ಥಸಿದ್ಧಿಗಾಗಿ
ಶ್ರೀಕೃಷ್ಣನನ್ನು
ಆಶ್ರಯಿಸಿದ್ದರು).

ಪದ್ಯ-೧೩:ಅರ್ಥ:೧೩. ಕಿವಿ, ಕಣ್ಣು ಮೊದಲಾದ ಪಂಚೇಂದ್ರಿಯಗಳು ತಮ್ಮ ಪ್ರಿಯಳಾದ ವಸ್ತುಗಳ ಅಪೇಕ್ಷೆಯಿಂದ ಮನಸ್ಸನ್ನು ಸೇರಿ, ಹೇಗೆ ಆಶ್ರಯಿಸುತ್ತವೆಯೋ ಹಾಗೆ ಉತ್ತಮ ವಿಧಿ ನಿಯಮಗಳಲ್ಲಿ ಆಸಕ್ತರಾದ ಅಯ್ದುಜನ ಪಾಂಡವರೂ ತಮ್ಮ

ಇಷ್ಟಾರ್ಥಸಿದ್ಧಿಗಾಗಿ ಶ್ರೀಕೃಷ್ಣನನ್ನು ಆಶ್ರಯಿಸಿದ್ದರು.

ಲೋಕಕ್ಕಿದರ್ಥಶಾಸ್ತ್ರದ ಟೀಕೆನಿಸಿದ ತನ್ನ ನುಡಿ ಮನಂಗೊಳಿಸೆ ದಳ| ತ್ತ್ಯೋಕನದ ಜಠರನಂ ನಿ ವ್ಯಾಕುಳಮಿಂತೆಂದು ಧರ್ಮತನಯಂ ನುಡಿದಂ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ಲೋಕಕ್ಕಿದರ್ಥಶಾಸ್ತ್ರದ

ಟೀಕೆನಿಸಿದ ತನ್ನ ನುಡಿ
ಮನಂಗೊಳಿಸೆ
ದಳತ್ಸ್ಯೋಕನದ ಜಠರನಂ
ನಿರ್ವ್ಯಾಕುಳಮಿಂತೆಂದು
ಧರ್ಮತನಯಂ ನುಡಿದಂ
ಪದ್ಯ-೧೪:ಅರ್ಥ: ೧೪.
ಧರ್ಮರಾಜನು
ರಾಜನೀತಿಶಾಸ್ತ್ರದ
ವ್ಯಾಖ್ಯಾನದಂತಿದ್ದ ತನ್ನ
ಮಾತು ಆಕರ್ಷಕವಾಗಿರಲು
ಅರಳಿದ ತಾವರೆಯನ್ನು

ನಾಭಿಯಲ್ಲುಳ್ಳ
(ಕಮಲನಾಭನಾದ)
ಶ್ರೀಕೃಷ್ಣನಿಗೆ ಅನಾಯಾಸವಾಗಿ
ಈ ರೀತಿ ಹೇಳಿದನು.

ಎಳೆ ರಸೆಯೊಳಳ್ದುದಂ ಭುಜ
ಬಳದಿಂ ಮುನ್ನೆತ್ತಿದಂತೆ
ವಿಷಯಾಂಬುಯೊಳ್|
ಮುಳುಗಿರ್ದೆಮ್ಮಯ್ವರುಮಂ
ಬಳಿಹರ ಪಿಡಿದೆತ್ತಲೆಂದು
ಬಂದೈ ಬರವಂ|| ೧೫ ||

ಪದ್ಯ-00:ಪದವಿಭಾಗ-ಅರ್ಥ: ಎಳೆ (ಭೂಮಿ) ರಸೆಯೊಳ್ ಅೞ್ದಿದಂ-ಮುಳುಗಿದ್ದ (ಮೊದಲು ಪಾತಾಳದಲ್ಲಿ ಮುಳುಗಿದ್ದ ಭೂಮಿಯನ್ನು) ಭುಜಬಳದಿಂ ಮುನ್ನ ಎತ್ತಿದಂತೆ (ಬಾಹುಬಲದಿಂದ ಹಿಂದೆ ಎತ್ತಿದ ಹಾಗೆ) ವಿಷಯಾಂಬುಯೊಳ್ ಮುೞುಗಿರ್ದ

ಎಮ್ಮಯ್ವರುಮಂ
(ಇಂದ್ರಿಯಭೋಗವೆಂಬ
ಸಮುದ್ರದಲ್ಲಿ ಮುಳುಗಿದ್ದ
ನಮ್ಮ ಐದು ಜನರನ್ನೂ)
ಬಳಿಹರ (ಬಲಿಹರ-
ಬಲಿಯನ್ನು ತಡೆದವನು)
ಪಿಡಿದು ಎತ್ತಲೆಂದು ಬಂದೈ
ಬರವಂ(ಹಿಡಿದು ಎತ್ತಿ
ಉದ್ಧಾರಮಾಡಬೇಕೆಂದೇ
ಬಂದಿದ್ದೀಯೆ)

ಪದ್ಯ-00:ಅರ್ಥ: ಕೃಷ್ಣನೇ ನೀನು ಮೊದಲು ಪಾತಾಳದಲ್ಲಿ ಮುಳುಗಿದ್ದ ಭೂಮಿಯನ್ನು ನಿನ್ನ ಬಾಹುಬಲದಿಂದ ಹಿಂದೆ ಎತ್ತಿದ ಹಾಗೆ ಇಂದ್ರಿಯಭೋಗವೆಂಬ ಸಮುದ್ರದಲ್ಲಿ ಮುಳುಗಿದ್ದ ನಮ್ಮ ಐದು ಜನರನ್ನೂ ಹಿಡಿದು ಎತ್ತಿ ಉದ್ಧಾರಮಾಡಬೇಕೆಂದೇ

ಬಂದಿದ್ದೀಯೆ, ಎಂದನು ಧರ್ಮಜ.

ಬಸಿರೊಳ್ ಜಗತೀತ್ರಯಮುಮ ನೊಸೆದಿಟ್ಟೋರಂತೆ ಕಾದ ಪೆಂಪಿನ ನಿಮ್ಮೀ|
ಬಸಿಱಂ ಪೊಕ್ಕೆಮ್ಮಯ್ವರ ನಸುರಕುಳಾಂತಕ ಕಡಂಗಿ ಕಾವುದು ಪಿರಿದೇ|| ೧೬ ||

ಪದ್ಯ-೧೬:ಪದವಿಭಾಗ-ಅರ್ಥ:ಬಸಿರೊಳ್

ಜಗತೀತ್ರಯಮುಮನು
ಒಸೆದು ಇಟ್ಟು (ಮೂರು
ಲೋಕಗಳನ್ನೂ ಸಂತಸದಿಂದ
ಹೊಟ್ಟೆಯಲ್ಲಿಟ್ಟು) ಓರಂತೆ
ಕಾದ ಪೆಂಪಿನ ನಿಮ್ಮ ಈ
ಬಸಿಱಿಂ (ಕ್ರಮದಿಂದ ರಕ್ಷಿಸಿದ
ಮಹಿಮೆಯುಳ್ಳ ನಿಮ್ಮ
ಅಂತರಂಗದಲ್ಲಿರುವ ಈ
ಭೂಲೋಕವನ್ನು) ಪೊಕ್ಕು
ಎಮ್ಮಯ್ವರನು
ಅಸುರಕುಳಾಂತಕ ಕಡಂಗಿ

ಕಾವುದು ಪಿರಿದೇ (ಹೊಕ್ಕು
ನಾವು ಐದುಜನರನ್ನು
ಉತ್ಸಾಹದಿಂದ ರಕ್ಷಿಸುವುದು
ನಿಮಗೆ ದೊಡ್ಡದೇ?)
ಪದ್ಯ-೧೬:ಅರ್ಥ:ಕೃಷ್ಣಾ,
ಮೂರು ಲೋಕಗಳನ್ನೂ
ಸಂತಸದಿಂದ
ಹೊಟ್ಟೆಯಲ್ಲಿಟ್ಟು ಕ್ರಮದಿಂದ
ರಕ್ಷಿಸಿದ ಮಹಿಮೆಯುಳ್ಳ
ನಿಮ್ಮ ಅಂತರಂಗದಲ್ಲಿರುವ
ಈ ಭೂಲೋಕವನ್ನು ಹೊಕ್ಕು

ನಾವು ಐದುಜನರನ್ನು
ಉತ್ಸಾಹದಿಂದ ರಕ್ಷಿಸುವುದು
ನಿಮಗೆ ದೊಡ್ಡದೇ?

ಮಲ್ಲಿಕಾಮಾಲೆ|| ಎನ್ನ ನನ್ನಿಯ ಪೆಂಪು ನಿನ್ನ ಮಹತ್ವದಿಂದಮೆ ಸಂದುದೆಂ
ತೆನ್ನ ಪನ್ನಗಕೇತನಂಗೆ ಧರಾವಿಭಾಗಮನಿತ್ತು ಸಂ|
ಪನ್ನ ಯೋಗ ನಿಯೋಗದಿಂದಮರಣ್ಯದೊಳ್ ನೆಲಸಿರ್ದುಣಲ್

ಬನ್ನಮಿಲ್ಲದೆ ಬಾೞ್ವುದೇಂ ಪುೞುವಾನಸಂಗೆನಗಕ್ಕುಮೇ|| ೧೭ ||

ಪದ್ಯ-೧೭:ಪದವಿಭಾಗ-ಅರ್ಥ:ಎನ್ನ ನನ್ನಿಯ ಪೆಂಪು ನಿನ್ನ ಮಹತ್ವದಿಂದಮೆ ಸಂದುದು (ನನ್ನ ಸತ್ಯದ ಹಿರಿಮೆ ನಿನ್ನ ಮಹಿಮೆಯಿಂದಲೇ ಸಾಧ್ಯವಾಯಿತು) ಎಂತು ಎನ್ನ (ಅದು ಹೇಗೆನ್ನುವೆಯೊ-)

ಪನ್ನಗಕೇತನಂಗೆ (ಸರ್ಪಧ್ವಜ
ದುರ್ಯೋಧನನಿಗೆ)
ಧರಾವಿಭಾಗಮನು ಇತ್ತು
ಸಂಪನ್ನ ಯೋಗ
ನಿಯೋಗದಿಂದಮ್
(ಭೂಮಿಯ ಭಾಗವನ್ನು
ಕೊಟ್ಟು ಪರಿಪೂರ್ಣವಾದ
ಯೋಗಮಾರ್ಗದಲ್ಲಿ)
ಅರಣ್ಯದೊಳ್ ನೆಲಸಿರ್ದು
ಉಣಲ್ ಬನ್ನಮಿಲ್ಲದೆ
(ಕಾಡಿನಲ್ಲಿ ನೆಲಸಿ

ನಿರ್ವಿಘ್ನವಾಗಿ ಕೊರತೆಇಲ್ಲದೆ (ನಾಚದೆ) ಊಟಮಾಡುತ್ತ) ಬಾಳ್ವುದೇಂ ಪುಱುವಾನಸಂಗೆ ಎನಗೆ ಅಕ್ಕುಮೇ (ಬದುಕುವುದು ಸಾಮಾನ್ಯ ಹುಲುಮನುಷ್ಯನಾದ ನನಗೆ ಸಾಧ್ಯವಾಗುತ್ತದೆಯೇ.)

ಪದ್ಯ-೧೭:ಅರ್ಥ: ನ್ನ ಸತ್ಯದ ಹಿರಿಮೆ ನಿನ್ನ ಮಹಿಮೆಯಿಂದಲೇ ಸಾಧ್ಯವಾಯಿತು. ಅದು

ಹೇಗೆನ್ನುವೆಯೊ-
ದುರ್ಯೋಧನನಿಗೆ
ಭೂಮಿಯ ಭಾಗವನ್ನು
ಕೊಟ್ಟು ಪರಿಪೂರ್ಣವಾದ
ಯೋಗಮಾರ್ಗದಲ್ಲಿ ಕಾಡಿನಲ್ಲಿ
ನೆಲಸಿ ನಿರ್ವಿಘ್ನವಾಗಿ
ಕೊರತೆಇಲ್ಲದೆಊಟಮಾಡುತ್ತ
ಬದುಕುವುದು ಸಾಮಾನ್ಯ
ಹುಲುಮನುಷ್ಯನಾದ ನನಗೆ
ಸಾಧ್ಯವಾಗುತ್ತದೆಯೇ?

ವ|| ಅದಲ್ಲದೆಯುಮೀ
ಸೂಟಿಯೊಂದುಮೊಡಂಬಡಿಲ್ಲ
ದೆ ಗೋಗ್ರಹಣಮನೆ ನೆವಂ
ಮಾಡಿ ಸುಯೋಧನನೆಂಬ
ಪಾಪಕರ್ಮನ
ಮಾಡಿದನುವರಂ
ನಿಮ್ಮನುಬಲದೊಳಮರಿಕೇಸ
ರಿಯ
ಭುಜಬಲದೊಳಮೆಮಗಿಂಬು
ವಂದುದು-

ವಚನ:ಪದವಿಭಾಗ-ಅರ್ಥ:ಅದಲ್ಲದೆಯುಂ ಈ ಸೂೞ್ ಒಂದುಮ್ ಒಡಂಬಡಿಲ್ಲದೆ (ಅದಲ್ಲದೆ ಈ ಸಲವೂ ಒಂದೂ ಎಡಟ್ಟಿಲ್ಲದೆ ಇಲ್ಲದೆ) ಗೋಗ್ರಹಣಮನೆ ನೆವಂ ಮಾಡಿ ಸುಯೋಧನನೆಂಬ ಪಾಪಕರ್ಮನ ಮಾಡಿದ (ಗೋಗ್ರಹಣವನ್ನು ನೆಪಮಾಡಿಕೊಂಡು

ದುರ್ಯೋಧನನೆಂಬ
ಪಾಪಿಯು ಏರ್ಪಡಿಸಿದ)
ಅನುವರಂ (ಯುದ್ಧವು) ನಿಮ್ಮ
ಅನುಬಲದೊಳಂ
ಅರಿಕೇಸರಿಯ
ಭುಜಬಲದೊಳಮೆ
(ಬಾಹುಬಲದಲ್ಲಿ ಸೇರಿ)
ಎಮಗೆ ಇಂಬುವಂದುದು
ವಚನ:ಅರ್ಥ: ಅದಲ್ಲದೆ ಈ
ಸಲವೂ ಒಂದೂ ಎಡಟ್ಟಿಲ್ಲದೆ
ಇಲ್ಲದೆ ಗೋಗ್ರಹಣವನ್ನು

ನೆಪಮಾಡಿಕೊಂಡು
ದುರ್ಯೋಧನನೆಂಬ
ಪಾಪಿಯು ಏರ್ಪಡಿಸಿದ
ಯುದ್ಧವು ನಿಮ್ಮ ಅನುಗ್ರಹ
ಅರಿಕೇಸರಿಯಾದ ಅರ್ಜುನನ
ಬಾಹುಬಲದಲ್ಲಿ ಸೇರಿ ನಮಗೆ
ಅನುಕೂಲವಾಯಿತು.

<u>ಸಾಮೋಪಾಯವನ್ನು ಮೊದಲು ಅನುಸರಿಸಲು ಕೃಷ್ಣನ ಸಲಹೆ</u>

ಉ|| ಕಾದದೆ

ಪನ್ನಗಧ್ವಜನಿಳಾತಳಮಂ

ಕುಡನಾನುಮಿರ್ಪುದುಂ

ಸೋದರರರೆಂದು ನಾಣ್ಚಿ

ಸೆಡೆದಿರ್ದಪೆನಿರ್ದೊಡವಸ್ತು

ಭೂತನೆಂ|

ದಾದಮೆ ಭೂತಳಂ ಪಟಿಯೆ

ತೇಜಮೆ ಕೆಟ್ಟಪುದಿಂತಿದರ್ಕೆ ಪ

ದ್ಮೋದರ ನೀನೆ ಪೇೞು ಬಗೆದು ಕಜ್ಜಮನೀಗಳೆ ದಿವ್ಯಚಿತ್ತದಿಂ|| ೧೮ ||

ಪದ್ಯ-೧೮:ಪದವಿಭಾಗ-ಅರ್ಥ:ಕಾದದೆ ಪನ್ನಗಧ್ವಜನು ಇಳಾತಳಮಂ ಕುಡನು (ದುರ್ಯೋಧನನು ಯುದ್ಧಮಾಡದೆ ರಾಜ್ಯವನ್ನು ಕೊಡುವುದಿಲ್ಲ;) ಆನುಂ ಇರ್ಪ್ರುದುಂ ಸೋದರರರೆಂದು ನಾಣ್ಚಿ ಸೆಡೆದಿರ್ದಪೆನ್

ಇರ್ದೊಡೆ (ನಾನೂ
ಒಡಹುಟ್ಟಿದವರೆಂದು
ನಾಚಿಕೆಯಿಂದ
ಸಂಕೋಚದಿಂದಿದ್ದೇನೆ.
ಹಾಗಿದ್ದರೆ)
ಅವಸ್ತುಭೂತನೆಂದು ಆದಮೆ,
(ಇವನು ಆಸ್ತಿತ್ತ್ವ, ಇಲ್ಲದವನು,
ಲೆಕ್ಕಕ್ಕಿಲ್ಲದವನು, ಎಂದು)
ಭೂತಳಂ ಪೞಿಯೆ ತೇಜಮೆ
ಕೆಟ್ಟಪುದು (ಲೋಕವು
ನಿಂದಿಸಿದರೆ ನನ್ನ ಕೀರ್ತಿಯೂ

ಮಾಸಿಹೋಗುತ್ತದೆ)
ಇಂತಿದರ್ಕೆ ಪದ್ಮೋದರ
(ಕಮಲನಾಭ) ನೀನೆ ಪೇೞ
ಬಗೆದು ಕಜ್ಜಮನೀಗಳೆ
ದಿವ್ಯಚಿತ್ತದಿಂ (ಎಲೈ
ಕಮಲನಾಭನೇ ಹೀಗಿರುವಾಗ
ಇದಕ್ಕೆ ಮಾಡಬೇಕಾದ
ಕಾರ್ಯವನ್ನು ನೀನು ನಿನ್ನ
ದಿವ್ಯಚಿತ್ತದಲ್ಲಿ ಯೋಚಿಸಿ
ಹೇಳು.)

ಪದ್ಯ-೧೮:ಅರ್ಥ: ಸರ್ಪಧ್ವಜ ದುರ್ಯೋಧನನು ಯುದ್ಧಮಾಡದೆ ರಾಜ್ಯವನ್ನು ಕೊಡುವುದಿಲ್ಲ; ನಾನೂ ಒಡಹುಟ್ಟಿದವರೆಂದು ನಾಚಿಕೆಯಿಂದ ಸಂಕೋಚದಿಂದಿದ್ದೇನೆ. ಹಾಗಿದ್ದರೆ ಲೋಕದ ಜನರೆಲ್ಲ ಇವನು ಆಸ್ತಿತ್ವ ಇಲ್ಲದವನು- ಲೆಕ್ಕಕ್ಕಿಲ್ಲದವನು, ಎಂದು ಲೋಕವು ನಿಂದಿಸಿದರೆ ನನ್ನ

ಕೀರ್ತಿಯೂ

ಮಾಸಿಹೋಗುತ್ತದೆ. ಎಲೈ

ಕಮಲನಾಭನೇ ಹೀಗಿರುವಾಗ

ಇದಕ್ಕೆ ಮಾಡಬೇಕಾದ

ಕಾರ್ಯವನ್ನು ನೀನು ನಿನ್ನ

ದಿವ್ಯಚಿತ್ತದಲ್ಲಿ ಯೋಚಿಸಿ

ಹೇಳು, ಎಂದನು ಧರ್ಮಜ

ವ||

ಎಂಬುದುಮಂಬುಜೋದರಂ

ನಯದ ವಿನಯದ ಮಾತು

ನೀನೆಂದಂತು ತೋಱೆಗೆ

ನೀರಡಕರಲುಮಾದಿತ್ಯಂಗೆ

ಸೊಡರಿಡಲುಮಿಂದ್ರಂಗೆ

ದೇವಲೋಕಮಂ

ಬಣ್ಣಿಸುವಂತೆಯುಂ

ನಿನಗೇನೆಂದು

ಕಜ್ಜಂಬೇಳ್ಪುದಾದೊಡಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಅಂಬುಜೋದರಂ (ಎನ್ನಲು

ಶ್ರೀಕೃಷ್ಣನು) ನಯದ

ವಿನಯದ ಮಾತು ನೀನು

ಎಂದ ಅಂತು (ನೀತಿ ಮತ್ತು ವಿನಯನಡತೆಯ ದೃಷ್ಟಿಯಿಂದ ನೋಡಿದರೆ ನೀನು ಹೇಳಿದ ಹಾಗೆಯೆ ಸರಿ.) ತೊಱೆಗೆ ನೀರಡಕರಲುಂ ಆದಿತ್ಯಂಗೆ ಸೊಡರಿಡಲುಂ ಇಂದ್ರಂಗೆ ದೇವಲೋಕಮಂ ಬಣ್ಣಿಸುವಂತೆಯುಂ(ನದಿಗೆ ನೀರು ತುಂಬುವ ಹಾಗೆ, ಸೂರ್ಯನಿಗೆ ದೀಪವನ್ನು ಹಚ್ಚುವ ಹಾಗೆ, ಇಂದ್ರನಿಗೆ

ಸ್ವರ್ಗಲೋಕವನ್ನು ಬಣ್ಣಿಸುವ ಹಾಗೆ ಆಗುತ್ತದೆ->). ನಿನಗೆ ಏನೆಂದು ಕಜ್ಜಂ ಬೇಟ್ಟುದು ಆದೊಡಂ (ನಿನಗೆ ಕಾರ್ಯರೀತಿಯನ್ನು ಹೇಗೆಂದು ತಿಳಿಸುವುದು? ಆದರೂ-)

ವಚನ:ಅರ್ಥ: ಎನ್ನಲು ಶ್ರೀಕೃಷ್ಣನು (ಧರ್ಮರಾಜನನ್ನು ಕುರಿತು) ‘ಧರ್ಮರಾಜ ನೀತಿ ಮತ್ತು ವಿನಯನಡತೆಯ

ದೃಷ್ಟಿಯಿಂದ ನೋಡಿದರೆ ನೀನು ಹೇಳಿದ ಹಾಗೆಯೆ ಸರಿ. ನದಿಗೆ ನೀರು ತುಂಬುವ ಹಾಗೆ, ಸೂರ್ಯನಿಗೆ ದೀಪವನ್ನು ಹಚ್ಚುವ ಹಾಗೆ, ಇಂದ್ರನಿಗೆ ಸ್ವರ್ಗಲೋಕವನ್ನು ಬಣ್ಣಿಸುವ ಹಾಗೆ ಆಗುತ್ತದೆ. ನಿನಗೆ ಕಾರ್ಯರೀತಿಯನ್ನು ಹೇಗೆಂದು ತಿಳಿಸುವುದು? ಆದರೂ

ಮ|| ಬೆಸಮಾರ್
ಕೊಂಡವೊಲಕ್ಕುಮೊಂದೆ
ನಯಮಂ ಕೇಳ್ ನಿನ್ನ
ಮುಂದೀಗಳಾ
ನುಸಿರ್ದಪ್ಪೆಂ ಸಲೆ ಮೆಲ್ಪು
ಬಲ್ಪನಱಿಗುಂ ಕೈವಾರಮುಂ
ಕೂಡೆ ಕೂ|
ರಿಸುಗುಂ ನಿಕ್ಕುವಮಪ್ಪ
ಕಾರಣದಿನಿಂತೀ ಸಾಮಮಂ
ಮುಂ ಪ್ರಯೋ

ಗಿಸಿದೇಕೆಟ್ಟಪುದಂದು ದಂಡಮನೆ ಮುಂ ಮುಂತಿಕ್ಕುವಂ ಮಂತ್ರಿಯೇ|| ೧೯ ||

ಪದ್ಯ-೧೯:ಪದವಿಭಾಗ-ಅರ್ಥ:ಬೆಸಂ (ಕೆಲಸವು) ಆರ್ (ಯಾರಾದರೂ, ನಾವು)ಕೊಂಡವೊಲ್ ಅಕ್ಕುಂ ಒಂದೆ ನಯಮಂ ಕೇಳ್ (ಆರಂಭಿಸಿದ ಕಾರ್ಯವು ನಾವು ಉದ್ದೇಶಿಸಿದ ಹಾಗೆಯೇ

ಆಗುವುದಿಲ್ಲ. ಕೇಳು) ನಿನ್ನ ಮುಂದೆ ಈಗಳ್ ಆನು ಉಸಿರ್ದಪ್ಪೆಂ (ನಿನ್ನ ಮುಮದೆ ಈಗ ಒಂದು ಮಾತನ್ನು ನಾನು ಹೇಳುತ್ತೇನೆ.) ಸಲೆ ಮೆಲ್ಪು ಬಲ್ಪನು ಅಱಿಗುಂ (ವಿಶೇಷ ಶಾಂತ ಮೃದುಸ್ವಭಾವ ಗಡುಸಿನ ಬಲಿಷ್ಠರನ್ನೂ ಇರಿದು ಸೋಲಿಸುತ್ತದೆ). ಕೈವಾರಮುಂ ಕೂಡೆ ಕೂರಿಸುಗುಂ (ಹೊಗಳಿಕೆಯೂ ಕೂಡಲೆ

ಒಲಿಯುವಂತೆ ಮಾಡುತ್ತದೆ.) ನಿಕ್ಕುವಮಪ್ಪ ಕಾರಣದಿನಿಂತೀ (ನಿಜ ಮತ್ತು ನ್ಯಾಯವಾಗಿರುವ ಕಾರಣದಿಂದ) ಸಾಮಮುಂ ಮುಂ ಪ್ರಯೋಗಿದೆ ಏಕೆಟ್ಟಪುದು ಎಂದು(ಸಾಮೋಪಾಯವನ್ನು ಮೊದಲು ಉಪಯೋಗಿಸದರಲ್ಲಿ ಏನು ಕೆಡುಕು ಎಂದು ಚಿಂತಿಸದೆ,)

ದಂಡಮನೆ ಮುಂ
ಮುಂತಿಕ್ಕುವಂ ಮಂತ್ರಿಯೇ
(ಮೊದಲು
ದಂಡೋಪಾಯವನ್ನು
ಸೂಚಿಸುವವನು
ಮಂತ್ರಿಯಾಗಬಲ್ಲನೇ?)

ಪದ್ಯ-೧೯:ಅರ್ಥ:

ಆರಂಭಿಸಿದ ಕಾರ್ಯವು
ನಾವು ಉದ್ದೇಶಿಸಿದ ಹಾಗೆಯೇ
ಆಗುವುದಿಲ್ಲ. ನಿನ್ನ ಮುಮದೆ
ಈಗ ಒಂದು ಮಾತನ್ನು ನಾನು

ಹೇಳುತ್ತೇನೆ. ವಿಶೇಷ ಶಾಂತ ಮೃದುಸ್ವಭಾವ ಗಡುಸಿನ ಬಲಿಷ್ಠರನ್ನೂ ಇರಿದು ಸೋಲಿಸುತ್ತದೆ. ಹೊಗಳಿಕೆಯು ತಕ್ಷಣವೇ ಪ್ರೀತಿಯನ್ನುಂಟುಮಾಡುತ್ತದೆ. ನಿಜ ಮತ್ತು ನ್ಯಾಯವಾಗಿರುವ ಕಾರಣದಿಂದ, ಸಾಮೋಪಾಯವನ್ನು ಮೊದಲು ಉಪಯೋಗಿಸುವುದಲ್ಲಿ ಏನು

ಕೆಡುವುದು? ಎಂದು ಚಿಂತಿಸದೆ, ಎಂದು ಮೊದಲು ದಂಡೋಪಾಯವನ್ನು ಸೂಚಿಸುವವನು ಮಂತ್ರಿಯಾಗಬಲ್ಲನೇ? ಎಂನು ಕೃಷ್ಣ.

ಬಲಿಯಂ ವಾಮನರೂಪದಿಂದಮೆ ವಲಂ ಮುಂ ಬೇಡಿದೆಂ ಭೂರಿ ಭೂ ತಲಮಂ ಕುಂದೆನಗಾಯ್ತೆ ಕೊಂಡೆನಿಳೆಯಂ

ಕಟ್ಟಿಟ್ಟೆನಿನ್ನುಂ ರಸಾ|

ತಲದೊಳ್ ದೈತ್ಯನನಂತೆ

ನೀನುಮಿಳೆಯಂ ಮುಂ

ಬೇಡಿಯಟ್ಟಟ್ಟೆ ಮಾ

ರ್ಮಲೆದಾತಂ

ಕುಡದಿರ್ದೊಡಂದಿಱಿಯ

ನೀಂ ಲೋಕಂ

ಗುಣಂಗೊಳ್ವಿನಂ|| ೨೦ ||

ಪದ್ಯ-೨೦:ಪದವಿಭಾಗ-

ಅರ್ಥ:ಬಲಿಯಂ

ವಾಮನರೂಪದಿಂದಮೆ ವಲಂ

ಮುಂ ಬೇಡಿದೆಂ ಭೂರಿ ಭೂತಲಮಂ (ಹಿಂದಿನ ಕಾಲದಲ್ಲಿ ವಾಮನನ ಆಕಾರದಲ್ಲಿ ಬಲಿಚಕ್ರವರ್ತಿಯಿಂದ ಈ ವಿಸ್ತಾರವಾದ ಭೂಮಿಯನ್ನು ಬೇಡಿ ತೆಗೆದುಕೊಂಡೆನು.) ಕುಂದೆನಗಾಯ್ತೆ ಕೊಂಡೆನಿಳೆಯಂ ಕಟ್ಟಿಟ್ಟೆನಿನ್ನುಂ ರಸಾತಲದೊಳ್ ದೈತ್ಯನನು (

ಆ ರಾಕ್ಷಸನನ್ನು ಇನ್ನೂ ಪಾತಾಳದಲ್ಲಿಯೇ ಕಟ್ಟಿಟ್ಟಿದ್ದೇನೆ.) ಅಂತೆ ನೀನುಂ ಇಳೆಯಂ ಮುಂ ಬೇಡಿಯು ಅಟ್ಟಟ್ಟೆ (ಹಾಗೆಯೇ ನೀನು ರಾಜ್ಯಕ್ಕಾಗಿ ಮೊದಲು ಬೇಡಿ ದೂತನನ್ನು ಕಳುಹಿಸಿಕೊಡು; ಹಾಗೆ ಕಳಿಸಿದಾಗ) ಮಾರ್ಮಲೆದಾತಂ ಕುಡದಿರ್ದೊಡೆ ಅಂದು ಇಱಿಯ ನೀಂ (ಆತನು

ಪ್ರತಿಭಟಿಸಿ ಕೊಡದಿದ್ದರೆ ಅಂದು- ಅಗ ನೀನು ಇರಿಯಯ್ಯಾ) ಲೋಕಂ ಗುಣಂಗೊಳ್ವಿನಂ (ಆಗ ಲೋಕವೆಲ್ಲ ನಿನ್ನಗುಣವನ್ನು ಹೊಗಳುವಂತೆ)

ಪದ್ಯ-೨೦:ಅರ್ಥ: ಹಿಂದಿನ ಕಾಲದಲ್ಲಿ ವಾಮನನ ಆಕಾರದಲ್ಲಿ ಬಲಿಚಕ್ರವರ್ತಿಯಿಂದ ಈ ವಿಸ್ತಾರವಾದ ಭೂಮಿಯನ್ನು

ಬೇಡಿ ತೆಗೆದುಕೊಂಡೆನು.
ಅದರಿಂದ ನನಗೆ ಕುಂದು
ಉಂಟಾಯಿತೇ? ಆ
ರಾಕ್ಷಸನನ್ನು ಇನ್ನೂ
ಪಾತಾಳದಲ್ಲಿಯೇ
ಕಟ್ಟಿಟ್ಟಿದ್ದೇನೆ. ಹಾಗೆಯೇ
ನೀನು ರಾಜ್ಯಕ್ಕಾಗಿ ಮೊದಲು
ಬೇಡಿ ದೂತನನ್ನು
ಕಳುಹಿಸಿಕೊಡು;ಹಾಗೆ
ಕಳಿಸಿದಾಗ ಆತನು ಪ್ರತಿಭಟಿಸಿ
ಕೊಡದಿದ್ದರೆ ಆಗ ಲೋಕವೆಲ್ಲ

ನಿನ್ನಗುಣವನ್ನು

ಹೊಗಳುವಂತೆ

ಯುದ್ಧಮಾಡಯ್ಯಾ.

ವ|| ಎಂದು ನುಡಿದ ಮಂದರಧರನ ನುಡಿಗೆ ಕಿನಿಸಿ ಕಿಂಕಿಱಿವೋಗಿ ಭೀಮಸೇನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಮಂದರಧರನ ನುಡಿಗೆ ಕಿನಿಸಿ ಕಿಂಕಿಱಿವೋಗಿ (ಕೆರಳಿ

ಅಸಹನೆಹೊಂದಿ)

ಭೀಮಸೇನನು ಇಂತೆಂದಂ-

ವಚನ:ಅರ್ಥ: ವ||

ಎಂಬುದಾಗಿ ಹೇಳಿದ ಕೃಷ್ಣನ

ಮಾತಿಗೆ ಕೆರಳಿ

ಅಸಹನೆಹೊಂದಿ

ಭೀಮಸೇನನು ಹೀಗೆಂದನು-

ಕಂ|| ನಿಜ ಮತಮನೆನಗೆ

ಮೀಱಿ

ಲ್ಕಜಾತ

ದೊರೆಯಲ್ಲವಲ್ಲದಿರ್ದೊಡಮೆ

ನ್ನಿಂ|
ದ ಜನಿಸಿ ನುಡಿಯಿಸಿದುವಹಿ
ಧ್ವಜನೋವದೆ ಮುನ್ನೆ ನೆಗಟ್ದಿ
ದುಶ್ಚರಿತಂಗಳ್|| ೨೧||

ಪದ್ಯ-೨೧:ಪದವಿಭಾಗ-ಅರ್ಥ:ನಿಜ ಮತಮಂ ಎನಗೆ ಮೀಱಲ್ಕೆ ಅಜಾತ ದೊರೆಯಲ್ಲವು (ಅಜಾತ ಕೃಷ್ಣ, ನಿನ್ನ ಮಾತನ್ನು ಮೀರುವುದು ನನಗೆ ಯೋಗ್ಯವಲ್ಲ) ಅಲ್ಲದಿರ್ದೊಡಂ ಎನ್ನಿಂದ

ಜನಿಸಿ ನುಡಿಯಿಸಿದುವು ಅಹಿಧ್ವಜನು ಓವದೆ ಮುನ್ನೆ ನೆಗಟ್ದಿ ದುಶ್ಚರಿತಂಗಳ್ (ಅದಲ್ಲದಿದ್ದರೂ ದುರ್ಯೋಧನನು ರಕ್ಷಿಸದೆ ಮಾಡಿದ ಕೆಟ್ಟಕೆಲಸಗಳು ನನ್ನಿಂದ ಒರಟಾಗಿ ಮಾತನಾಡಿಸುತ್ತಿವೆ.)

ಪದ್ಯ-೨೧:ಅರ್ಥ:೨೧. ಅಜಾತ ಕೃಷ್ಣ, ನಿನ್ನ ಮಾತನ್ನು ಮೀರುವುದು ನನಗೆ

ಯೋಗ್ಯವಲ್ಲ. ಅದಲ್ಲದಿದ್ದರೂ ದುರ್ಯೋಧನನು ರಕ್ಷಿಸದೆ ಮಾಡಿದ ಕೆಟ್ಟಕೆಲಸಗಳು ನನ್ನಿಂದ ಒರಟಾಗಿ ಮಾತನಾಡಿಸುತ್ತಿವೆ.

ಶಾ|| ಆ ಲಾಕ್ಷಾಗೃಹ
ದಾಹಮೊಂದೆ
ವಿಷಸಂಯುಕ್ತಾನ್ನಮಂತೊಂದೆ
ಪಾಂ
ಚಾಲೀ ನಿಗ್ರಹಮೊಂದೆ
ಟಕ್ಕುವಗೆಯಿಂ ಗೆಲ್ದಿರ್ದ

ಜೂದೊಂದೆ ಶಾ|

ದೂರ್ಲಾಭೀಲ ವನಂಗಳೊಳ್

ತಿರಿಪಿದೀಯುರ್ಕೊಂದೆ

ಲೆಕ್ಕಂಗೊಳಲ್

ಕಾಲಂ ಸಾಲವೆ

ಕಂಡುಮುಂಡುಮೆಮಗಿನ್ನಾತಂ

ಗಳೊಳ್ ಪಾಟಿಯೇ|| ೨೨ ||

ಪದ್ಯ-೨೨:ಪದವಿಭಾಗ-

ಅರ್ಥ:ಆ ಲಾಕ್ಷಾಗೃಹ

ದಾಹಮೊಂದೆ (ಆ ಅರಗಿನ

ಮನೆಯಲ್ಲಿ ಸುಟ್ಟುದೊಂದೇ),

ವಿಷಸಂಯುಕ್ತ ಅನ್ನಮಂತು ಒಂದೆ (ವಿಷಮಿಶ್ರವಾದ ಆಹಾರವನ್ನು ತಿನ್ನಿಸಿದುದೊಂದೇ,) ಪಾಂಚಾಲೀ ನಿಗ್ರಹಮೊಂದೆ (ದ್ರೌಪದಿಗೆ ಅವಮಾನಪಡಿಸಿದುದೊಂದೇ), ಟಕ್ಕುವಗೆಯಿಂ (ಠಕ್ಕು ಬಗೆಯಿಂದ) ಗೆಲ್ದಿರ್ದ ಜೂದೊಂದೆ (ಮೋಸದ ರೀತಿಯಿಂದ ಗೆದ್ದ ಜೂಜು

ಒಂದೇಯೇ?,) ಶಾರ್ದೂಲ
ಆಭೀಲ ವನಂಗಳೊಳ್
ತಿರಿಪಿದ ಈ ಯುರ್ಕು ಒಂದೆ
(ಹುಲಿಗಳಿಂದ ತುಂಬಿದ
ಭಯಂಕರವಾದ ಕಾಡಿನಲ್ಲಿ
ಅಲೆಯುವ ಹಾಗೆ ಮಾಡಿದ ಆ
ಅಹಂಕಾರದ ಸೊಕ್ಕು
ಒಂದೇಯೇ?) ಲೆಕ್ಕಂಗೊಳಲ್
ಕಾಲಂ ಸಾಲವೆ (ಈ
ಅನ್ಯಾಯಗಳನ್ನು ಲೆಕ್ಕ
ಮಾಡುವುದಕ್ಕೆ ಕಾಲಾವೇ

ಸಾಕಾಗುವುದಿಲ್ಲ!) ಕಂಡುಂ ಉಂಡುಂ ಎಮಗೆ ಇನ್ನೂ ಆತಂಗಳೊಳ್ ಪಾಟಿಯೇ (ನೋಡಿಯೂ, ಅನುಭವಿಸಿಯೂ, ಇನ್ನೂ ಅವರಲ್ಲಿ ನಮಗೆ ಧರ್ಮಪಾಲನೆಯೆ?)

ಪದ್ಯ-೨೨:ಅರ್ಥ: ದುರ್ಯೋಧನನು ನಮ್ಮನ್ನು, ಆ ಅರಗಿನ ಮನೆಯಲ್ಲಿ ಸುಟ್ಟಿರುವುದು ಒಂದೇ? ಇಷ್ಟೇ

ಅಲ್ಲ ಇನ್ನೂ ಅನೇಕ ದ್ರೋಹ ಚಿಂತನೆಗಳಿವೆ ಇದೆ, ವಿಷಮಿಶ್ರವಾದ ಆಹಾರವನ್ನು ತಿನ್ನಿಸಿದುದು ಒಂದೇ, ದ್ರೌಪದಿಗೆ ಅವಮಾನಪಡಿಸಿದುದೊಂದೇ, ಮೋಸದ ರೀತಿಯಿಂದ ಗೆದ್ದ ಜೂಜು ಒಂದೇಯೇ?, ಹುಲಿಗಳಿಂದ ತುಂಬಿದ ಭಯಂಕರವಾದ ಕಾಡಿನಲ್ಲಿ ಅಲೆಯುವ ಹಾಗೆ ಮಾಡಿದ ಆ

ಅಹಂಕಾರದ ಸೊಕ್ಕು ಒಂದೇಯೇ? ಈ ಅನ್ಯಾಯಗಳನ್ನು ಲೆಕ್ಕ ಮಾಡುವುದಕ್ಕೆ ಕಾಲಾವೇ ಸಾಕಾಗುವುದಿಲ್ಲ! ನೋಡಿಯೂ, ಅನುಭವಿಸಿಯೂ, ಇನ್ನೂ ಅವರಲ್ಲಿ ನಮಗೆ ಧರ್ಮಪಾಲನೆಯೆ?

ಕಂ|| ಜಟಮಟಿಸಿಕೊಂಡು ನಿಮ್ಮೀ

ಘಟಿಯಿಸುವೀ ಸಂಧಿ
ಕೌರವರ್ಕಳೊಳೆನ್ನಿಂ|
ಘಟಿತ ಜರಾಸಂಧೋರ
ಸ್ತಟ ಸಂಧಿವೊಲೊಂದೆ
ಪೊೞ್ತಿಳ್ ವಿಘಟಿಸದೇ|| ೨೩ ||

ಪದ್ಯ-೨೩:ಪದವಿಭಾಗ-

ಅರ್ಥ:ಜಟಮಟಿಸಿಕೊಂಡು (ಸಡಗರದಿಂದ) ನಿಮ್ಮ ಈ ಘಟಿಯಿಸುವ ಈ ಸಂಧಿ ಕೌರವರ್ಕಳೊಳ್ (ಈಗ ನೀವು ಕೌರವರಲ್ಲಿ

ಮಾಡಬೇಕೆಂದಿರುವ
ಸಂಧಿಕಾರ್ಯವು) ಎನ್ನಿಂ
(ನನ್ನಿಂದ), ಘಟಿತ ಜರಾಸಂಧ
ಓರಸ್ತಟ ಸಂಧಿವೊಲ್
(ಜರಾಸಂಧನ ಸೇರಿರುವ
ಎದೆಯ ಜೋಡಣೆಯ ಹಾಗೆ)
ಒಂದೆ ಪೊೞ್ತಿಳ್
ವಿಘಟಿಸದೇ(ಒಂದೇ ಹಗಲಲ್ಲಿ
ಮುರಿದುಹೋಗದೆ
ಇರುತ್ತದೆಯೇ?)

ಪದ್ಯ-೨೩:ಅರ್ಥ:ಸಡಗರದಿಂ
ದ ಈಗ ನೀವು ಕೌರವರಲ್ಲಿ
ಮಾಡಬೇಕೆಂದಿರುವ
ಸಂಧಿಕಾರ್ಯವು ಜರಾಸಂಧನ
ಸೇರಿರುವ ಎದೆಯ
ಜೋಡಣೆಯ ಹಾಗೆ ನನ್ನಿಂದ
ಒಂದೇ ಹಗಲಲ್ಲಿ
ಮುರಿದುಹೋಗದೆ
ಇರುತ್ತದೆಯೇ?

ಉ||

ತೋಡುವೆನೊರ್ವನೊಳ್ಗರುಳ

ನುರ್ವಿಗೆ ನೆತ್ತರನೆಯ್ದೆ
ಪೀರ್ದುವಿ
ದಾರ್ಡುವೆನೊರ್ವನೂರುಗಳ
ನೆನ್ನ ಗದಾಶನಿಘಾತದಿಂದೆ ನು|
ಗಾರ್ಡುವೆನೆಂದು
ಲೋಕಮಱಿಯುತ್ತಿರೆ
ಪೂಣ್ದೆನಗಂತೆ ಸಂತಸಂ
ಮಾಡದೆ ಸಂಧಿ ಮಾಡಿ
ಕುರುಪುತ್ರರೊಳೆನ್ನನೆ
ಜೋಡುಮಾೞ್ಪಿರೇ|| ೨೪ ||

ಪದ್ಯ-೨೪:ಪದವಿಭಾಗ-ಅರ್ಥ:ತೋಡುವೆನು ಒರ್ವನ ಉಳ್ಗರುಳನು ಉರ್ವಿಗೆ (ಒಬ್ಬನ ಹೊಟ್ಟೆಯೊಳಗಿನ ಕರುಳನ್ನು ನೆಲಕ್ಕೆ ಬಗಿದುಹಾಕುತ್ತೇನೆ) ನೆತ್ತರನು ಎಯ್ದೆಪೀರ್ದು ವಿರ್ದಾಡುವೆನು (ರಕ್ತವನ್ನು ಚೆನ್ನಾಗಿ ಹೀರಿ ಔತಣಮಾಡುತ್ತೇನೆ) ಒರ್ವನ ಊರುಗಳನು ಎನ್ನ ಗದಾ

ಅಶನಿಘಾತದಿಂದೆ
ನುರ್ಗಾಡುವೆನು ಎಂದು
(ಒಬ್ಬನ/ ದುರ್ಯೋಧನನ
ತೊಡೆಗಳನ್ನು ನನ್ನ ಗದೆಯೆಂಬ
ವಜ್ರಾಯುಧದಿಂದ ಅಥವಾ
ಗದೆ ಎಂಬ ಸಿಡಿಲಿನ
ಹೊಡೆತದಿಂದ ನುಚ್ಚುನೂರಾಗಿ
ಮಾಡುತ್ತೇನೆ)
ಲೋಕಮಱಿಯುತ್ತಿರೆ ಪೂಣ್ದ
ಎನಗೆ (ಎಂದು ಪ್ರಪಂಚವೆಲ್ಲ
ತಿಳಿದ ಹಾಗೆ ಪ್ರತಿಜ್ಞೆಮಾಡಿದ

ನನಗೆ) ಅಂತೆ ಸಂತಸಂ
ಮಾಡದೆ ಸಂಧಿ ಮಾಡಿ
(ಸಂತೋಷವನ್ನುಂಟು
ಮಾಡದೆ ಕೌರವರೊಡನೆ
ಸಂಧಿಮಾಡಿ)
ಕುರುಪುತ್ರರೊಳ್ ಎನ್ನನೆ
ಜೋಡುಮಾಟ್ಪಿರೇ
(ಕೌರವರೊಡನೆ ನನ್ನನ್ನು
ಅವರಿಗೆ
ಜೊತೆಮಾಡುತ್ತೀರಾ?)

ಪದ್ಯ-೨೪:ಅರ್ಥ:ಆ ಒಬ್ಬ ದುಶ್ಯ್ಯಾಸನನ ಹೊಟ್ಟೆಯೊಳಗಿನ ಕರುಳನ್ನು ನೆಲಕ್ಕೆ ಬಗಿದುಹಾಕುತ್ತೇನೆ. ರಕ್ತವನ್ನು ಚೆನ್ನಾಗಿ ಹೀರಿ ಔತಣಮಾಡುತ್ತೇನೆ. ಒಬ್ಬನ (ದುರ್ಯೋಧನನ) ತೊಡೆಗಳನ್ನು ನನ್ನ ಗದೆಯೆಂಬ ವಜ್ರಾಯುಧದ ಅಥವಾ ಗದೆ ಎಂಬ ಸಿಡಿಲಿನ ಹೊಡೆತದಿಂದ ನುಚ್ಚುನೂರಾಗಿ ಮಾಡುತ್ತೇನೆ,

ಎಂದು ಪ್ರಪಂಚವೆಲ್ಲ ತಿಳಿದ
ಹಾಗೆ ಪ್ರತಿಜ್ಞೆಮಾಡಿದ ನನಗೆ
ಸಂತೋಷವನ್ನುಂಟು
ಮಾಡದೆ ಸಂಧಿಮಾಡಿ
ಕೌರವರೊಡನೆ ನನ್ನನ್ನು
ಅವರಿಗೆ ಜೊತೆಮಾಡುತ್ತೀರಾ?

ವ|| ಎಂದು ಮಸಗಿದ ಮದಾಂಧಗಂಧಸಿಂಧುರದಂತೆ ದೆಸೆಗೆ ಮಸಗಿದ ವಾಯುಪುತ್ರನಂ ಧರ್ಮಪುತ್ರಂ ಸಂತೈಸಿ-

ವಚನ:ಪದವಿಭಾಗ-ಅರ್ಥ:ಎಂದು ಮಸಗಿದ (ಸೊಕ್ಕೇರಿದ) ಮದಾಂಧಗಂಧ ಸಿಂಧುರದಂತೆ (ಸೊಕ್ಕೇರಿದ ಮದದಿಂದ ಕುರುಡಾದ ಮದ್ದಾನೆಯಂತೆ) ದೆಸೆಗೆ ಮಸಗಿದ ವಾಯುಪುತ್ರನಂ (ದಿಕ್ಕುದಿಕ್ಕಿಗೂ ತಿರುಗಿ ವಿಜೃಂಭಿಸಿದ ಭೀಮಸೇನನನ್ನು) ಧರ್ಮಪುತ್ರಂ ಸಂತೈಸಿ-

ವಚನ:ಅರ್ಥ:ಎಂದು

ಸೊಕ್ಕೇರಿದ ಮದದಿಂದ

ಕುರುಡಾದ ಮದ್ದಾನೆಯಂತೆ

ದಿಕ್ಕುದಿಕ್ಕಿಗೂ ತಿರುಗಿ

ವಿಜೃಂಭಿಸಿದ

ಭೀಮಸೇನನನ್ನು

ಧರ್ಮರಾಯನು

ಸಮಾಧಾನಪಡಿಸಿ-

ಮ|| ಬಕ ಕಿಮ್ಮೀರ

ಜಟಾಸುರೋದ್ಧತ

ಜರಾಸಂಧರ್ಕಳಂ ಸಂದ ಕೀ

ಚಕರಂ ನೂರ್ವರುಮಂ
ಪಡಲ್ವಡಿಸಿದೀ
ತ್ವಚ್ಚಂಡದೋರ್ದಂಡಮು|
ಗ್ರ ಕುರುಕ್ಷ್ಮಾಪ
ಮಹೀರುಹಪ್ರಕರಮಂ
ಮತ್ತೇಭವಿಕ್ರೀಡಿತ
ಕ್ಕೆ ಕರಂ ಪೋಲ್ವೆಗೆ ವಂದು
ಭೀಮ ರಣದೊಳ್
ನುಗ್ಗಾಡದೇಂ ಪೋಕುಮೇ||
೨೫ ||

ಪದ್ಯ-೨೫:ಪದವಿಭಾಗ-ಅರ್ಥ:ಬಕ ಕಿಮ್ಮೀರ ಜಟಾಸುರೋದ್ಧತ ಜರಾಸಂಧರ್ಕಳಂ, ಸಂದ ಕೀಚಕರಂ ನೂರ್ವರುಮಂ (ಪ್ರಸಿದ್ಧರಾದ ನೂರು ಕೀಚಕರನ್ನೂ), ಪಡಲ್ವಡಿಸಿದ ಈ ತ್ವಚ್ಚಂಡದೋರ್ದಂಡಂ (ಕೆಳಗೆ ಕೆಡವಿದ ನಿನ್ನ ಭಯಂಕರವಾದ ತೋಳುಗಳು,) ಉಗ್ರ

ಕುರುಕ್ಷ್ಮಾಪ ಮಹೀರುಹ
ಪ್ರಕರಮಂ (ಉಗ್ರ ಕೌರವ
ರಾಜರೆಂಬ ಮರಗಳ
ಸಮೂಹವು)
ಮತ್ತೇಭವಿಕ್ರೀಡಿತಕ್ಕೆ ಕರಂ
ಪೋಲ್ವೆಗೆ
ವಂದು(ಮದ್ದಾನೆಯಾಟಕ್ಕೆ
ಸಮ ಸಮನಾಗಿ ನಿಂತು)
ಭೀಮ ರಣದೊಳ್
ನುರ್ಗಾಡದೇಂ ಪೋಕುಮೇ

(ಭೀಮನೇ ಯುದ್ಧದಲ್ಲಿ ನುಚ್ಚು ಮಾಡದೇ ಬಿಡುತ್ತದೆಯೆ?)

ಪದ್ಯ-೨೫:ಅರ್ಥ:ಬಕ, ಕಿಮ್ಮೀರ, ಜಟಾಸುರ, ಗರ್ವಿಷ್ಠರಾದ ಜರಾಸಂಧಾದಿಗಳನ್ನೂ ಪ್ರಸಿದ್ಧರಾದ ನೂರು ಕೀಚಕರನ್ನೂ ಕೆಳಗೆ ಕೆಡವಿದ ನಿನ್ನ ಭಯಂಕರವಾದ ತೋಳುಗಳು, ಉಗ್ರ ಕೌರವರಾಜರೆಂಬ ಮರಗಳ

ಸಮೂಹವು
ಮದ್ದಾನೆಯಾಟಕ್ಕೆ ಸಮನಾಗಿ
ಭೀಮನೇ ಯುದ್ಧದಲ್ಲಿ ನುಚ್ಚು
ಮಾಡದೇ ಬಿಡುತ್ತದೆಯೆ?

ವ|| ಎಂದು ನಾರಾಯಣನುಂ ಧರ್ಮಪುತ್ರನುಂ ವೃಕೋದರನ ಮನಮನಾರೆ ನುಡಿದು ಮತ್ತಂ ನಾರಾಯಣಂಗೆ ಯುಧಿಷ್ಠಿರಂ ನಿಷ್ಠಿತ ಕಾರ್ಯಮನನುಷ್ಠಿಸಲೆಂದಿಂ ತೆಂದಂ-

ವಚನ:ಪದವಿಭಾಗ-ಅರ್ಥ:ಎಂದು ನಾರಾಯಣನುಂ ಧರ್ಮಪುತ್ರನುಂ ವೃಕೋದರನ ಮನಮನು ಆರೆ ನುಡಿದು (ಭೀಮನ ಮನಸ್ಸಿಗೆ ಸಮಾಧಾನವಾಗುವಂತೆ ಹೇಳಿ-) ಮತ್ತಂ ನಾರಾಯಣಂಗೆ ಯುಧಿಷ್ಠಿರಂ ನಿಷ್ಠಿತ ಕಾರ್ಯಮನು ಅನುಷ್ಠಿಸಲೆಂದು

(ಕಾರ್ಯವನ್ನು ಮಾಡಬೇಕೆಂದು) ಇಂತೆಂದಂ-

ವಚನ:ಅರ್ಥ:ವ|| ಎಂದು ಕೃಷ್ಣನೂ ಧರ್ಮರಾಯನೂ ಭೀಮನ ಮನಸ್ಸಿಗೆ ಸಮಾಧಾನವಾಗುವಂತೆ ಹೇಳಿ- ಪುನ ಧರ್ಮರಾಯನು ಕೃಷ್ಣನಿಗೆ ನಿರ್ಧರಿಸಿದ ಕಾರ್ಯವನ್ನು ಮಾಡಬೇಕೆಂದು ಹೀಗೆಂದು ತಿಳಿಸಿದನು.

ಕೃಷ್ಣ ರಾಯಭಾರಿಯಾಗಿ ಹಸ್ತಿನಾವತಿಗೆ ಪಯಣ

ಮ|| ಅವನೀನಾಥನ ಗೆಯ್ದ
ಪೊಲ್ಲಮೆಗಮೆನ್ನೊಳ್ಪಿಂಗಮಿಂ
ಸಕ್ಕಿಯಾ
ಗವನೀವಂತುಟನೀಯದಂತು
ಟನದಂ ಬಲ್ಲಂತು
ಕಾಲ್ಗುತ್ತಿನೋ|
ಡವನೀ ಭಾಗದೊಳೆನ್ನ
ಭಾಗಮನದಂ
ತಾನೀಯದಿರ್ದಾಗಳೆ

ನ್ನವನೀ ರಕ್ಷಣ ದಕ್ಷ ದಕ್ಷಿಣ ಭುಜಸ್ತಂಭಂ ಕೊಲಲ್ ಸಾಲದೇ|| ೨೬ ||

ಪದ್ಯ-೨೬:ಪದವಿಭಾಗ-ಅರ್ಥ:ಅವನೀನಾಥನ ಗೆಯ್ದ ಪೊಲ್ಲಂ ಎಮಗಂ ಎನ್ನೊಳ್ಪಿಂಗಂ (ಇಂ) ಸಕ್ಕಿಯಾಗು (ರಾಜನಾದ ದುರ್ಯೋಧನನು ಮಾಡಿದ ಕಡುಕಿಗೂ, ನನ್ನ ಒಳ್ಳೆಯ ಸ್ವಭಾವಕ್ಕೂ ನೀನು

ಸಾಕ್ಷಿಯಾಗು,) ಅವನು
ಈವಂತುಟಂ
ಈಯದಂತುಟನು (ಅವನು
ಭೂಮಿಯನ್ನು
ಕೊಡುವುದನ್ನೂ
ಕೊಡದಿರುವುದನ್ನೂ) ಅದಂ
ಬಲ್ಲಂತು ಕಾಲ್ಗುತ್ತಿ (ಕಾಲಲ್ಲಿ
ಕುಕ್ಕಿ) ನೋಡು, (ನೀನು
ತಿಳಿದಂತೆ ವಿಚಾರಮಾಡಿ
ನೋಡು.) ಅವನೀ
ಭಾಗದೊಳು ಎನ್ನ ಭಾಗಮನು

ಅದಂ ತಾನು
ಈಯದಿರ್ದಾಗಳು
(ನ್ಯಾಯಯುತವಾಗಿ ನನಗೆ
ಬರಬೇಕಾದುದನ್ನು ಅವನು
ಕೊಡದಿದ್ದಾಗ) ಎನ್ನ ಅವನೀ
ರಕ್ಷಣ ದಕ್ಷ ದಕ್ಷಿಣ
ಭುಜಸ್ತಂಭಂ ಕೊಲಲ್
ಸಾಲದೇ(ಭೂರಕ್ಷಣೆಗೆ
ನನ್ನಸಮರ್ಥವಾದ
ಕುಂಭದಂತಿರುವ ಬಲತೋಳು

ಅವನನ್ನು ಕೊಲ್ಲಲು ಸಾಲದೇ?)

ಪದ್ಯ-೨೬:ಅರ್ಥ:ರಾಜನಾದ ದುರ್ಯೋಧನನು ಮಾಡಿದ ಕೆಡುಕಿಗೂ ನನ್ನ ಒಳ್ಳೆಯ ಸ್ವಭಾವಕ್ಕೂ ನೀನು ಸಾಕ್ಷಿಯಾಗಿರುವೆ. ಅವನು ಭೂಮಿಯನ್ನು ಕೊಡುವುದನ್ನೂ ಕೊಡದಿರುವುದನ್ನೂ ನೀನು ತಿಳಿದಂತೆ ವಿಚಾರಮಾಡಿ

ನೋಡು. ನ್ಯಾಯಯುತವಾಗಿ
ನನಗೆ ಬರಬೇಕಾದುದನ್ನು
ಅವನು ಕೊಡದಿದ್ದಾಗ
ಭೂರಕ್ಷಣೆಗೆ
ನನ್ನಸಮರ್ಥವಾದ
ಕುಂಭದಂತಿರುವ ಬಲತೋಳು
ಅವನನ್ನು ಕೊಲ್ಲಲು ಸಾಲದೇ
ಹೋಗುತ್ತದೆಯೇ?

ವ|| ಎಂದು ಧರ್ಮರಾಜಂ ರಾಜರಾಜನಲ್ಲಿಗೆ ನಿರ್ವ್ಯಾಜದಿಂ ದಿತಿಜಕುಳ

ವಿಜಯಿಯಪ್ಪಜಿತನನೆ
ದೂತಕಾರ್ಯಕ್ಕಟ್ಟಿದೊಡಸುರ
ವಿಜಯಿಯುಂ ಕತಿಪಯ
ಪ್ರಯಾಣಂಗಳಿಂ
ಮದಗಜೇಂದ್ರಪುರಮನೆಯ್ದಿ-

ವಚನ:ಪದವಿಭಾಗ-

ಅರ್ಥ:ಎಂದು ಧರ್ಮರಾಜಂ ರಾಜರಾಜನಲ್ಲಿಗೆ ನಿರ್ವ್ಯಾಜದಿಂ (ಕೌರವಚಕ್ರವರ್ತಿಯ ಹತ್ತಿರಕ್ಕೆ ನಿಷ್ಕಪಟಿಯಾಗಿ) ದಿತಿಜಕುಳ

ವಿಜಯಿಯಪ್ಪ ಅಜಿತನನೆ
(ರಾಕ್ಷಸರನ್ನು ಗೆಲ್ಲಬಲ್ಲ
ಸೋಲಿಲ್ಲದ ಕೃಷ್ಣನನ್ನೇ)
ದೂತಕಾರ್ಯಕ್ಕೆ ಅಟ್ಟಿದೊಡೆ
(ದೂತಕಾರ್ಯಕ್ಕಾಗಿ
ಸಂಧಿಯನ್ನು ಏರ್ಪಡಿಸುವ
ರಾಯಭಾರಿಯಾಗಿ
ಕಳುಹಿಸಿದಾಗ) ಅಸುರ
ವಿಜಯಿಯುಂ ಕತಿಪಯ
ಪ್ರಯಾಣಂಗಳಿಂ
ಮದಗಜೇಂದ್ರ ಪುರಮನು

ಎಯ್ದಿ (ಕೃಷ್ಣನು ಕೆಲವು ದಿವಸದ ಪ್ರಯಾಣದಿಂದ ಹಸ್ತಿನಾಪಟ್ಟಣವನ್ನು ಸೇರಿ)- **ವಚನ:ಅರ್ಥ**:ಎಂದು ಧರ್ಮರಾಯನು ಕೌರವಚಕ್ರವರ್ತಿಯ ಹತ್ತಿರಕ್ಕೆ ನಿಷ್ಕಪಟಿಯಾಗಿ- ರಾಕ್ಷಸರಬ್ಬು ಗೆದ್ದವನಾದ ಸೋಲಿಲ್ಲದ ಕೃಷ್ಣನನ್ನು ದೂತಕಾರ್ಯಕ್ಕಾಗಿ ಸಂಧಿಯನ್ನು ಏರ್ಪಡಿಸುವ ರಾಯಭಾರಿಯಾಗಿ

ಕಳುಹಿಸಿದಾಗ, ಅಸುರರನ್ನು ಗೆದ್ದ ಕೃಷ್ಣನು ಕೆಲವು ದಿವಸದ ಪ್ರಯಾಣದಿಂದ ಹಸ್ತಿನಾಪಟ್ಟಣವನ್ನು ಸೇರಿದನು. ಹಾಗೆ ಹೋಗಿ-

ಕೃಷ್ಣನಿಂದ ಕುಂತಿಯ ಭೇಟಿ

ಚಂ|| ಮದಗಜ ಬೃಂಹಿತಧ್ವನಿ ತುರಂಗಮ ಹೇಷಿತಘೋಷದೊಳ್ ಪೊದ

ಚಿಳ್ದಿದವೆ ಗಭೀರ ಧೀರ ಮುರಜಧ್ವನಿ ಯೌವನ ಮತ್ತಕಾಮಿನೀ|
ಮೃದು ಪದ ನೂಪುರ ಕ್ವಣಿತದೊಳ್ ಪೆಣೆದೊಂದಿರೆ ಚಕ್ರಿಗುಂಟುಮಾ ಡಿದುದು ಪೊಟಿಲ್ ಸುರಾದ್ರಿಮಥಿತಾಂಬುಧಿಜಾತ ನಿನಾದ ಶಂಕೆಯಂ|| ೨೭ ||

ಪದ್ಯ-೨೭:ಪದವಿಭಾಗ-

ಅರ್ಥ:ಮದಗಜ ಬೃಂಹಿತಧ್ವನಿ

(ಮದ್ದಾನೆಗಳ
ಘೀಂಕಾರಶಬ್ದವು) ತುರಂಗಮ
ಹೇಷಿತಘೋಷದೊಳ್
(ಕುದುರೆಗಳ
ಹೇಷಾರವದಜೊತೆ)
ಪೊದಱ್ದೆ ಒದವೆ
(ಸೇರಿಕೊಂಡು ಕೇಳುತ್ತಿರಲು)
ಗಭೀರ ಧೀರ ಮುರಜಧ್ವನಿ
(ಮದ್ದಲೆಗಳ ಗಂಭೀರನಾದ
ನಾದವು,) ಯೌವನ
ಮತ್ತಕಾಮಿನೀ ಮೃದು ಪದ

ನೂಪುರ ಕ್ವಣಿತದೊಳ್
(ಯೌವನದ ಮದಿಸಿದ
ಸ್ತ್ರೀಯರ ಕಾಲಂದಿಗೆಗಳ ಶಬ್ದ
ಇವುಗಳಿಂದ) ಪೆಣೆದೊಂದಿರೆ
(ಹೆಣೆದು ಹೊಂದಿರಲು,
ಕೂಡಿರಲು) ಚಕ್ರಿಗೆ (ಕೃಷ್ಣನಿಗೆ)
ಉಂಟುಮಾಡಿದುದು
ಪೊೞಲ್ ಸುರಾದ್ರಿಮಥಿತ
(ಮಂದರ ಪರ್ವತದಿಂದ
ಕಡೆಯಲ್ಪಟ್ಟ) ಅಂಬುಧಿಜಾತ
ನಿನಾದ ಶಂಕೆಯಂ

(ಕ್ಷೀರಸಮುದ್ರದದಿಂದ ಉಂಟಾದ ಸದ್ದೋ ಎಂಬ ಶಂಕೆಯನ್ನು ಆ ನಗರವು ಕೃಷ್ಣನಿಗೆ ಉಂಟುಮಾಡಿತು.)

ಪದ್ಯ-೨೭:ಅರ್ಥ:ಆ ಹಸ್ತಿನಾಪುರವು, ಕುದುರೆಗಳ ಹೇಷಾರವಜೊತೆ ಮದ್ದಾನೆಗಳ ಘೀಂಕಾರಶಬ್ದವು ಸೇರಿಕೊಂಡು ಕೇಳುತ್ತಿರಲು ಮದ್ದಲೆಗಳ ಗಂಭೀರನಾದ ನಾದ, ಯೌವನದ ಮದಿಸಿದ

ಸ್ತ್ರೀಯರ ಕಾಲಂದಿಗೆಗಳ ಶಬ್ದ
ಇವುಗಳಿಂದ ಕೂಡಿರಲು
ಮಂದರ ಪರ್ವತದಿಂದ
ಕಡೆಯಲ್ಪಟ್ಟ
ಕ್ಷೀರಸಮುದ್ರದದಿಂದ
ಉಂಟಾದ ಸದ್ದೋ ಎಂಬ
ಶಂಕೆಯನ್ನು ಕೃಷ್ಣನಿಗೆ
ಉಂಟುಮಾಡಿತು.

ವ|| ಅಂತು
ನಾಗಪುರಮನಿೞಿಸುವ
ನಾಗಪುರಮನಾ

ನಾಗಶಯನಂ ಪೊಕ್ಕು
ವಿದುರಂ ಪಾಂಡವ
ಪಕ್ಷಪಾತಿಯಪ್ಪುದಱಿಂದಾತನ
ಮನೆಗೆ ವರೆ ತನಗಿದಿರ್ವಂದ
ಕೊಂತಿಗಸುರಾಂತಕನೆಱಗಿ
ತನಗೆಱಗಿದ ವಿದುರನಂ ಪರಸಿ
ರಥದಿಂದಮಿೞಿದು
ಮಣಿಮಯ ಪೀಠದೊಳ್
ಕುಳ್ಳಿರ್ದು ಪಾಂಡುತನೂಜರ
ಕುಶಲವಾರ್ತೆಯನಱಿಪೆ
ತದನಂತರಂ

ವಿದುರನಜನನೇಗೆಯ್ವ ತೆಱನುಮನಱಿಯದೆ-

ವಚನ:ಪದವಿಭಾಗ-

ಅರ್ಥ:ಅಂತು ನಾಗಪುರಮನ ಇೞಿಸುವ (ಆದಿ ಶೇಷನ ಭೋಗವತೀಪಟ್ಟಣವನ್ನು ಕೀಳುಮಾಡುವ ಎಂದರೆ ಮೀರಿಸುವ) ನಾಗಪುರಮನು (ಹಸ್ತಿನಾಪಟ್ಟಣವನ್ನು) ಆ ನಾಗಶಯನಂ ಪೊಕ್ಕು (ನಾಗ-ಶೇಷಶಯನನಾದ ಶ್ರೀಕೃಷ್ಣನು

ಪ್ರವೇಶಿಸಿ,) ವಿದುರಂ
ಪಾಂಡವ
ಪಕ್ಷಪಾತಿಯಪ್ಪುದಱಿಂದ
ಆತನ ಮನೆಗೆ ವರೆ
(ವಿದುರನು
ಪಾಂಡವಪಕ್ಷಪಾತಿಯಾದುದ
ರಿಂದ ಆತನ ಮನೆಗೆ ಬರೆ-
ಬರಲು) ತನಗೆ ಇದಿರ್ವಂದ
ಕೊಂತಿಗೆ ಅಸುರಾಂತಕನು
ಎಱಗಿ (ತನಗೆ ಎದುರಾಗಿ
ಬಂದ ಕುಂತಿದೇವಿಗೆ ಕೃಷ್ಣನು

ಎರಗಿ- ನಮಸ್ಕಾರ ಮಾಡಿ,)
ತನಗೆ ಎಱಗಿದ ವಿದುರನಂ
ಪರಸಿ (ತನಗೆ ನಮಸ್ಕಾರ
ಮಾಡಿದ ವಿದುರನನ್ನು
ಹರಸಿದನು) ರಥದಿಂದಂ
ಇೞಿದು ಮಣಿಮಯ
ಪೀಠದೊಳ್ ಕುಳ್ಳಿರ್ದು
(ರಥದಿಂದ ಇಳಿದು
ರತ್ನಖಚಿತವಾದ ಪೀಠದಲ್ಲಿ
ಕುಳಿತುಕೊಂಡು)
ಪಾಂಡುತನೂಜರ

ಕುಶಲವಾರ್ತೆಯು ಅಱಿಪೆ
(ಪಾಂಡವರ
ಕ್ಷೇಮಸಮಾಚಾರವನ್ನು ತನ್ನ
ಸೋದರತ್ತೆ ಕುಂತಿಗೆ
ತಿಳಿಸಿದನು. ಅರಿಪೆ-
ತಿಳಿಸಲು,) ತದನಂತರಂ
ವಿದುರನು ಅಜನನು
(ಕೃಷ್ಣನನ್ನು) ಏಗೆಯ್ವ
ತೆಱನುಮನು ಅಱಿಯದೆ
-ಏನು ಗಯ್ಯಬೇಕೆಂಬ
ತೆರವನ್ನು ಅರಿಯದೆ, (

ಕೃಷ್ಣನನ್ನು ಹೇಗೆ ಸತ್ಕಾರಮಾಡಬೇಕೆಂದು ವಿದುರನಿಗೆ ಅರಿಯದಾಯಿತು/ ತಿಳಿಯದಾಯಿತು)-

ವಚನ:ಅರ್ಥ:ಆದಿ ಶೇಷನ ಭೋಗವತೀಪಟ್ಟಣವನ್ನು ಮೀರಿಸುವ ಹಸ್ತಿನಾಪಟ್ಟಣವನ್ನು ಶ್ರೀಕೃಷ್ಣನು ಪ್ರವೇಶಿಸಿದನು. ವಿದುರನು

ಪಾಂಡವಪಕ್ಷಪಾತಿಯಾದುದ
ರಿಂದ ಆತನ ಮನೆಗೆ ಬಂದನು.
ಆಗ ತನಗೆ ಎದುರಾಗಿ ಬಂದ
ಕುಂತಿದೇವಿಗೆ ಕೃಷ್ಣನು
ನಮಸ್ಕಾರ ಮಾಡಿ, ತನಗೆ
ನಮಸ್ಕಾರ ಮಾಡಿದ
ವಿದುರನನ್ನು ಹರಸಿದನು.
ರಥದಿಂದ ಇಳಿದು
ರತ್ನಖಚಿತವಾದ ಪೀಠದಲ್ಲಿ
ಕುಳಿತುಕೊಂಡು ಪಾಂಡವರ
ಕ್ಷೇಮಸಮಾಚಾರವನ್ನು ತನ್ನ

ಸೋದರತ್ತೆ ಕುಂತಿಗೆ ತಿಳಿಸಿದನು. ಕೃಷ್ಣನಿಗೆ ಹೇಗೆ ಸತ್ಕಾರಮಾಡಬೇಕೆಂದು ವಿದುರನಿಗೆ ತಿಳಿಯದಾಯಿತು.

- **ಟಿಪ್ಪಣಿ**:ದುರ್ಯೋಧನನು ತನಗೆ ಬೀಗನಾದರೂ, ಕೃಷ್ನನು ವಿದುರನ ಮನೆಗೆ ಮೊದಲು ಬೇಟಿಕೊಡಲು ಮುಖ್ಯ ಕಾರಣ, ಅಲ್ಲಿ ಪಾಂಡವರ ತಾಯಿ ಕುಂತಿ ೧೩ ವರ್ಷದಿಂದ ಕಾಡಿನಲ್ಲಿದ್ದ ತನ್ನ ಮಕ್ಕಳಾದ

ಪಾಂಡವರು ಹೇಗಿದ್ದಾರೋ
ಎಂಬ ಚಿಂತೆಯಲ್ಲಿದ್ದಳು,
ಮೊದಲು ಅವಳಿಗೆ
ಪಾಂಡವರ ಕ್ಷೇಮ ಸಮಾಚರ
ತಿಳಿಸಿ ಅವಳನ್ನು
ಸಂತೈಸುವದು ಮೊದಲ
ಕರ್ತವ್ಯವಾಗಿತ್ತು, ಅದರ ಜೊತೆ
ವಿದುರನು ಪಾಂಡವರ
ಹಿತೈಷಿಯೂ ಆಗಿದ್ದ.

ಕಂ|| ತೀವಿದ ಮಜ್ಜನದಿಂ ಸ

ದ್ಭಾವದಿನೊಸೆದೆತ್ತಿದೊಂದು
ಬೋನದೊಳಂ ನಾ|
ನಾ ವಿಧದ ಪದೆಪಿನೊಳ್ ಹರಿ
ಗಾವಗಮಾಱಿದುದು
ಪಥಪರಿಶ್ರಮಮೆಲ್ಲಂ|| ೨೮ ||

ಪದ್ಯ-೨೮:ಪದವಿಭಾಗ-ಅರ್ಥ:ತೀವಿದ ಮಜ್ಜನದಿಂ (ತುಂಬಿದ, ಚೆನ್ನಾಗಿಮಾಡಿದ ಸ್ನಾನದಿಂದಲೂ) ಸದ್ಭಾವದಿಂ ಒಸೆದು ಎತ್ತಿದ ಒಂದು ಬೋನದೊಳಂ (ಪ್ರೀತಿಯಿಂದ

ಬಡಿಸಿದ ಊಟದಿಂದಲೂ)
ನಾನಾ ವಿಧದ ಪದೆಪಿನೊಳ್
(ನಾನಾರೀತಿಯಾದ ಇಷ್ಟದ
ಸತ್ಕಾರಗಳಿಂದಲೂ) ಹರಿಗೆ
ಆವಗಮ್ ಆಱಿದುದು
ಪಥಪರಿಶ್ರಮ ಂ ಎಲ್ಲಂ
(ಕೃಷ್ಣನಿಗೆ
ಮಾರ್ಗಾಯಾಸವೆಲ್ಲ
ಪೂರ್ಣವಾಗಿ ಆರಿತು,
ಶಮನವಾಯಿತು.)

ಪದ್ಯ-೨೮:ಅರ್ಥ:ಅವನು ಸಿದ್ಧಪಡಿಸಿದ ಚೆನ್ನಾಗಿಮಾಡಿದ ಸ್ನಾನದಿಂದಲೂ, ಪ್ರೀತಿಯಿಂದ ಬಡಿಸಿದ ಊಟದಿಂದಲೂ, ನಾನಾರೀತಿಯಾದ ಇಷ್ಟದ ಸತ್ಕಾರಗಳಿಂದಲೂ ಕೃಷ್ಣನಿಗೆ ಮಾರ್ಗಾಯಾಸವೆಲ್ಲ ಪೂರ್ಣವಾಗಿ ಶಮನವಾಯಿತು.

ವ|| ಅಂತು ವಿದುರನಜನನುಚಿತ

ಪ್ರತಿಪತ್ತಿಗಳಿಂ ಸಂತಸಂಬಡಿಸಿ
ಬಂದ ಬರವನಾಗಳೆ
ಸುಯೋಧನಂಗಱಿಪುವುದುಂ
ರಾಜರಾಜನುಱದೆ ಕಿಱುನಗೆ
ನಕ್ಕು ನಾಳಿನೋಲಗದೊಳ್
ತಂದು ಕಾಣಿಸೆಂಬುದುಂ
ಮಱುದಿವಸಂ ನೇಸಱು
ಮೂಡಿದಾಗಳಾದಿತ್ಯನಂತನೇ
ಕಮಣಿಮಯೂಖ
ವಿಜೃಂಭಮಾಣಾಖಂಡಳ
ವಿಳಂಬಿತಾಭೀಳ

ಕೋದಂಡವಿಳಾಸ ವಿಭ್ರಮ
ಸಿಂಹಾಸನಾಸೀನನುಂ
ಪ್ರಮದಾಹಸ್ತವಿನ್ಯಸ್ತ
ವಾಮಕ್ರಮಕಮಳನು
ಮನವರತ ಸ್ಫುರಿತ
ತಾರಕಾಕಾರ ಮುಕ್ತಾಭರಣ
ಕಿರಣ ನಿಕರ ವಿಳಸಿತ
ವಿಶಾಲೋರಸ್ಥಳನುಮನಂತ
ಸಾಮಂತ ಮಕುಟ ಮಾಣಿಕ್ಯ
ಮಯೂಖ ಮಂಜರೀಜಾಳ
ಪಲ್ಲವಿತಾಸ್ಥಾನಮಂಟಪನು

ಮಾಗಿ
ಸಭಾಮಂಟಪದೊಳೊಡ್ಡೋ
ಲಗಂಗೊಟ್ಟೆಡೆ ವಱಿಯದೆ
ಅವರವರ ಪಡೆದ
ಪ್ರತಿಪತ್ತಿಗಳನಱಿದಿಇಕ್ಕಿದ
ಲೋಹಾಸನಂಗಳೊಳಂ
ಮಣಿಖಚಿತ ಕನಕ
ಪೀಠಂಗಳೊಳಂ ಕಟ್ಟಿದ
ಚಿನ್ನದ ಬೊಂದರಿಗೆಯೊಳಂ
ಭೀಷ್ಮ ದ್ರೋಣಾಶ್ವತ್ಥಾಮ ಕೃಪ
ಕೃತವರ್ಮ ಶಲ್ಯ ಶಕುನಿ

ಬಾಹ್ಲೀಕ ಸೋಮದತ್ತ ಭಗದತ್ತ
ಭೂರಿಶ್ರವ ಪ್ರಭೃತಿಗಳನಿರಿಸಿ
ಮತ್ತಮನೇಕ
ದೇಶಾಶ್ವರರೆಲ್ಲರುಮನೆಡೆಯ
ಱಿದು ಕುಳ್ಳಿರಿಸಿ
ಪೆಂಡವಾಸದೊಳ್ವೆಂಡಿರನೆರ
ಡೋಳಿಯೊಳಮಿರಿಸಿ
ನೂರ್ವರ್ ತಮ್ಮಂದಿರುಮಂ
ಪಿಂತಿರಿಸಿ ಲಕ್ಕಣಂ ಮೊದಲಾಗೆ
ನೂರ್ವರ್ ಮಕ್ಕಳುಮಂ
ಮುಂತಿರಿಸಿ

ಯುವರಾಜನಪ್ಪಣುಗ ದುಶ್ಶ್ಯಾಸನನುಮನಂಗರಾಜನ ಪ್ಪಣುಗಾಳ್ ಕರ್ಣನು ಮನೆರಡುಂ ಕೆಲದೊಳಂ ತೊಡೆ ಸೋಂಕೆ ಕುಳ್ಳಿರಿಸಿ-

ವಚನ:ಪದವಿಭಾಗ-ಅರ್ಥ:

ಅಂತು ವಿದುರನು ಅಜನನು (ಹುಟ್ಟು ಇಲ್ಲದವನು) ಉಚಿತ ಪ್ರತಿಪತ್ತಿಗಳಿಂ ಸಂತಸಂಬಡಿಸಿ (ವಿದುರನು ಕೃಷ್ಣನನ್ನು ಯೋಗ್ಯವಾದ ಸನ್ಮಾನಗಳಿಂದ

ಸಂತೋಷಪಡಿಸಿ) ಬಂದ ಬರವನಾಗಳೆ ಸುಯೋಧನಂಗೆ ಅಱಿಪುವುದುಂ ರಾಜರಾಜನು ಉಱದೆ (ಇರದೆ) ಕಿಱುನಗೆ ನಕ್ಕು (ಅವನ ಬರುವಿಕೆಯನ್ನು ದುರ್ಯೋಧನನಿಗೆ ತಿಳಿಸಿದನು. ಚಕ್ರವರ್ತಿಯು ಸುಮ್ಮನಿರದೆ ಹುಸಿನಗೆ ನಕ್ಕು), ನಾಳಿನ ಓಲಗದೊಳ್ ತಂದು ಕಾಣಿಸೆಂಬುದುಂ (ನಾಳೆಯ ಸಭೆಯಲ್ಲಿ ತಂದು

ಭೇಟಿಮಾಡಿಸು ಎನ್ನಲು,)
ಮಱುದಿವಸಂ ನೇಸಱು
ಮೂಡಿದಾಗಳ್ (ಮಾರನೆಯ
ದಿನ
ಸೂರ್ಯೋದಯವಾದಾಗ
ಸೂರ್ಯನಂತೆ,) ಆದಿತ್ಯನಂತೆ
ಅನೇಕಮಣಿಮಯೂಖ
ವಿಜೃಂಭಮಾಣ ಅಖಂಡಳ
(ಸೂರ್ಯನಂತೆ ಅನೇಕ
ರತ್ನಕಿರಣಗಳಿಂದ
ಮೆರೆಯುತ್ತಿರುವ ಇಂದ್ರನಂತೆ)

ವಿಳಂಬಿತ ಆಭೀಳ (ಉದ್ದವೂ ಭಯಂಕರವೂ ಆದ) ಕೋದಂಡವಿಳಾಸ ವಿಭ್ರಮ (ಬಿಲ್ಲಿನ ವಿಲಾವೈಭವದಿಂದ ಕೂಡಿದ) ಸಿಂಹಾಸನ ಆಸೀನನುಂ (ಸಿಂಹಾಸನದಲ್ಲಿ ಕುಳಿತ,) ಪ್ರಮದ(ಸ್ತ್ರೀಯರ) ಹಸ್ತವಿನ್ಯಸ್ತ (ಕೈಯಿಟ್ಟಿರುವ) ವಾಮಕ್ರಮಕಮಳನು (ಕಮಲದಂತ ಎಡಪಾದವನ್ನು ಸದಾ ಕೈಯಿಂದ ಒತ್ತುತ್ತಿದ್ದರು)

ಅನವರತ ಸ್ಫುರಿತ
ತಾರಕಾಕಾರ ಮುಕ್ತಾಭರಣ
ಕಿರಣ ನಿಕರ ವಿಳಸಿತ (ಸದಾ
ಹೊಳೆಯುತ್ತಿರುವ ನಕ್ಷತ್ರದ
ಆಕಾರದ ಮುತ್ತಿನ
ಆಭರಣಗಳ
ಕಿರಣಸಮೂಹದಿಂದ
ಶೋಭಿಸುವ) ವಿಶಾಲ
ಓರಸ್ಥಳನುಮನು (ವಿಶಾಲ
ಎದೆಯ) ಅಂತ ಸಾಮಂತ
ಮಕುಟ ಮಾಣಿಕ್ಯ ಮಯೂಖ

ಮಂಜರೀಜಾಳ ಪಲ್ಲವಿತ ಆಸ್ಥಾನ ಮಂಟಪನುಮಾಗಿ (ಅನಂತ ಸಾಮಂತ ರಾಜರ ಕಿರೀಟದ ಮಾಣಿಕ್ಯರತ್ನಕಾಂತಿಸಮೂಹ ದಿಂದ ಸಭಾಮಂಟಪವು ವಿರಾಜಮಾನವಾಗಿದ್ದಿತು.) ಸಭಾಮಂಟಪದೊಳು ಒಡ್ಡೋಲಗಂಗೊಟ್ಟೆಡೆ (ಆ ಸಭಾಮಂಟಪದಲ್ಲಿ ದುರ್ಯೋಧನನು ಒಡ್ಡೋಲಗ

ಕೊಟ್ಟಾಗ) ವಱಿಯದೆ
(ಅವಕಾಶವೇ ಇಲ್ಲದೆ)
ಅವರವರ ಪಡೆದ
ಪ್ರತಿಪತ್ತಿಗಳನು ಅಱಿದು
ಇಕ್ಕಿದ
ಲೋಹಾಸನಂಗಳೊಳಂ
ಮಣಿಖಚಿತ ಕನಕ
ಪೀಠಂಗಳೊಳಂ ಕಟ್ಟಿದ
ಚಿನ್ನದ ಬೊಂದರಿಗೆಯೊಳಂ
(ಆ ಸಭಾಮಂಟಪದ ಮಧ್ಯೆ
ಅವಕಾಶವೇ ಇಲ್ಲದೆ ಒತ್ತಾಗಿ

ಅವರ ಮರ್ಯಾದೆಗೆ ಅನುಗುಣವಾಗಿ ಸಿದ್ಧಪಡಿಸಿದ್ದ ಲೋಹಪೀಠಗಳಲ್ಲಿಯೂ ರತ್ನಖಚಿತವಾದ ಸುವರ್ಣಾಸನಗಳಲ್ಲಿ) ಭೀಷ್ಮ ದ್ರೋಣಾಶ್ವತ್ಥಾಮ ಕೃಪ ಕೃತವರ್ಮ ಶಲ್ಯ ಶಕುನಿ ಬಾಹ್ಲೀಕ ಸೋಮದತ್ತ ಭಗದತ್ತ ಭೂರಿಶ್ರವ ಪ್ರಭೃತಿಗಳನು ಇರಿಸಿ, (ಕೂರಿಸಿ,) ಮತ್ತಂ ಅನೇಕ

ದೇಶಾಶ್ವರರೆಲ್ಲರುಮನು
ಎಡೆಯಱಿದು ಕುಳ್ಳಿರಿಸಿ
(ಇತರ ಅನೇಕದೇಶಾಶರೆಲ್ಲ
ಅವರವರ ಸ್ಥಾನಕ್ಕೆ
ಅನುಗುಣವಾಗಿ
ಕೂರಿಸಿದ್ದರು.) ಪೆಂಡವಾಸದ
ಒಳ್ವೆಂಡಿರನು ಎರಡು
ಓಳಿಯೊಳಂ ಇರಿಸಿ
(ರಾಣಿವಾಸದ
ಉತ್ತಮಸ್ತ್ರೀಯರು
ಎರಡುಪಕ್ಕದಲ್ಲಿಯೂ ಇದ್ದರು;

ಇರಿಸಿ,) ನೂರ್ವರ್
ತಮ್ಮಂದಿರುಮಂ ಪಿಂತಿರಿಸಿ
(ನೂರುಜನ ತಮ್ಮಂದಿರೂ
ಹಿಂದುಗಡೆ ಇರಿಸಿ,) ಲಕ್ಕಣಂ
ಮೊದಲಾಗೆ ನೂರ್ವರ್
ಮಕ್ಕಳುಮಂ ಮುಂತಿರಿಸಿ
(ಲಕ್ಷಣನೇ ಮೊದಲಾದ
ನೂರು ಜನ ಮಕ್ಕಳು
ಮುಂಭಾಗವನ್ನು
ಅಲಂಕರಿಸಿದ್ದರು.)
ಯುವರಾಜನಪ್ಪ ಅಣುಗ

ದುಶ್ಶ್ಯಾಸನನುಮಂ
ಅಂಗರಾಜನಪ್ಪ ಅಣುಗಾಳ್
ಕರ್ಣನು ಮನೆರಡುಂ
ಕೆಲದೊಳಂ ತೊಡೆ ಸೋಂಕೆ
ಕುಳ್ಳಿರಿಸಿ (ಪ್ರೀತಿಯ ತಮ್ಮ
ಯುವರಾಜ ದುಶ್ಶ್ಯಾಸನನೂ,
ಆಪ್ತನಾದ ಕರ್ಣನೂ, ಎರಡು
ಪಕ್ಕಗಳಲ್ಲಿಯೂ
ತೊಡೆಸೋಂಕುವ ಹಾಗೆ
ಹತ್ತಿರದಲ್ಲಿ ಕುಳಿತಿದ್ದರು)-

ವಚನ:ಅರ್ಥ:ವ|| ವಿದುರನು ಕೃಷ್ಣನನ್ನು ಯೋಗ್ಯವಾದ ಸನ್ಮಾನಗಳಿಂದ ಸಂತೋಷಪಡಿಸಿ, ಅವನ ಬರುವಿಕೆಯನ್ನು ದುರ್ಯೋಧನನಿಗೆ ತಿಳಿಸಿದನು. ಚಕ್ರವರ್ತಿಯು ಸುಮ್ಮನಿರದೆ ಹುಸಿನಗೆ ನಕ್ಕು, ನಾಳೆಯ ಸಭೆಯಲ್ಲಿ ತಂದು ಭೇಟಿಮಾಡಿಸು ಎಂದನು. ಮಾರನೆಯ ದಿನ

ಸೂರ್ಯೋದಯವಾದಾಗ,
ಸೂರ್ಯನಂತೆ ಅನೇಕ
ರತ್ನಕಿರಣಗಳಿಂದ
ಮೆರೆಯುತ್ತಿರುವ ಇಂದ್ರನಂತೆ
ಉದ್ದವೂ ಭಯಂಕರವೂ
ಆದ ಬಿಲ್ಲಿನ
ವೈಭವಯುಕ್ತವಾದ
ವಿಳಾಸದಿಂದ ಕೂಡಿದ
ಸಿಂಹಾಸನದಲ್ಲಿ ಕುಳಿತನು.
ಸ್ತ್ರೀಯರು ತಮ್ಮ ಕಯ್ಯಿಂದ
ಅವನ ಎಡಗಾಲನ್ನು

ಒತ್ತುತ್ತಿದ್ದರು. ಅವನ
ವಿಸ್ತಾರವಾದ ಎದೆಯನ್ನು
ಅಲಂಕರಿಸಿದ ಸದಾ
ಹೊಳೆಯುತ್ತಿರುವ ನಕ್ಷತ್ರದ
ಆಕಾರದ ಮುತ್ತಿನ
ಆಭರಣಗಳ
ಕಿರಣಸಮೂಹದಿಂದ
ಶೋಭಿಸುತ್ತಿತ್ತು. ಅನಂತ
ಸಾಮಂತ ರಾಜರ ಕಿರೀಟದ
ಮಾಣಿಕ್ಯರತ್ನಕಾಂತಿಸಮೂಹ
ದಿಂದ ಸಭಾಮಂಟಪವು

ವಿರಾಜಮಾನವಾಗಿದ್ದಿತು. ಆ ಸಭಾಮಂಟಪದಲ್ಲಿ ದುರ್ಯೋಧನನು ಒಡ್ಡೋಲಗದಲ್ಲಿದ್ದನು. ಆ ಸಭಾಮಂಟಪದ ಮಧ್ಯೆ ಅವಕಾಶವೇ ಇಲ್ಲದೆ ಒತ್ತಾಗಿ ಅವರ ಮರ್ಯಾದಾನುಗುಣವಾಗಿ ಸಿದ್ಧಪಡಿಸಿದ್ದ ಲೋಹಪೀಠಗಳಲ್ಲಿಯೂ ರತ್ನಖಚಿತವಾದ

ಸುವರ್ಣಾಸನಗಳಲ್ಲಿ ಸೇರಿಸಿರುವ ಮೆತ್ತೆಗಳಲ್ಲಿಯೂ ಭೀಷ್ಮ, ದ್ರೋಣ, ಅಶ್ವತ್ಥಾಮ, ಕೃಪ, ಕೃತವರ್ಮ, ಶಲ್ಯ, ಶಕುನಿ, ಬಾಹ್ಲೀಕ, ಸೋಮದತ್ತ, ಭಗದತ್ತ, ಭೂರಿಶ್ರವರೇ ಮೊದಲಾದವರು ಕುಳಿತಿದ್ದರು (ಕೂರಿಸಿ). ಇತರ ಅನೇಕದೇಶಾಶರೆಲ್ಲ ತಲಅವರವರ ಸ್ಥಾನಕ್ಕೆ ಅನುಗುಣವಾಗಿ ಕೂರಿಸಿದ್ದರು.

ರಾಣಿವಾಸದ
ಉತ್ತಮಸ್ತ್ರೀಯರು
ಎರಡುಪಕ್ಕದಲ್ಲಿಯೂ ಇದ್ದರು.
ನೂರುಜನ ತಮ್ಮಂದಿರೂ
ಹಿಂದುಗಡೆ ಇದ್ದರು. ಲಕ್ಷಣನೇ
ಮೊದಲಾದ ನೂರು ಜನ
ಮಕ್ಕಳು
ಮುಂಭಾಗವನ್ನಲಂಕರಿಸಿದ್ದರು
. ಪ್ರೀತಿಯ ತಮ್ಮ ಯುವರಾಜ
ದುಶ್ಯಾಸನನೂ, ಆಪ್ತನಾದ
ಕರ್ಣನೂ, ಎರಡು

ಪಕ್ಕಗಳಲ್ಲಿಯೂ
ತೊಡೆಸೋಂಕುವ ಹಾಗೆ
ಹತ್ತಿರದಲ್ಲಿ ಕುಳಿತಿದ್ದರು.

<u>ಕೌರವನ ರಾಜಸಭೆಯಲ್ಲಿ ಶ್ರೀಕೃಷ್ಣ</u>

ಮ|| ನನೆಯಂಬಂ
ಮಸೆದನ್ನರಪ್ಪ
ಪಲರೊಳ್ವೆಂಡಿರ್
ಮನಂಗೊಂಡೊಱ

ಲ್ವಿನಮೆತ್ತಂ ಕೊಳೆ ಪಾಡೆ ಜೇನ

ಮೞೆ ಕೊಂಡಂತಪ್ಪ ಗೇಯಂ

ಮನ|

ಕ್ಕೆ ನೆಲಕ್ಕಿಟ್ಟಳಮಾಗೆ ಸಂದ

ರಥಿಕರ್ ಕಣ್ಗೊಳ್ವಿನಂ

ತತ್ಸುಯೋ

ಧನನೊಡ್ಡೋಲಗಮಿಂದ್ರನೋ

ಲಗಮುಮಂ ಕೀೞ್ಮಾಡಿ

ಕಣ್ಗೊಪ್ಪುಗುಂ|| ೨೯ ||

ಪದ್ಯ-೨೯:ಪದವಿಭಾಗ-

ಅರ್ಥ: ನನೆಯಂಬಂ

(ಮನ್ಮಥನು) ಮಸೆದನ್ನರಪ್ಪ
ಪಲರೊಳ್ವೆಂಡಿರ್ (ಮಸೆದ
ಪುಷ್ಪಬಾಣದ ಹಾಗಿರುವ
ಅನೇಕ ಒಳ್ಳೆಯ ಸ್ತ್ರೀಯರು)
ಮನಂಗೊಂಡು ಒಱಲ್ವಿನಂ
(ಆಕರ್ಷಕವಾಗಿ ಪ್ರೀತಿಯಿಂದ
ಹಾಡುತ್ತಿರಲು,) ಎತ್ತಂ ಕೊಳೆ
(ಎತ್ತಲೂ ಹರಡಿರಲು,) ಪಾಡೆ
ಜೇನ ಮೞೆ ಕೊಂಡಂತಪ್ಪ
ಗೇಯಂ (ಮತ್ತೊಂದುಕಡೆ
ಜೇನಮಳೆಯನ್ನು

ಸುರಿಸಿದಂತಿರುವ ಸಂಗೀತವು
ಎಲ್ಲೆಡೆಯೂ ವ್ಯಾಪಿಸಿದ್ದಿತು.)
ಮನಕ್ಕೆ ನೆಲಕ್ಕೆ ಇಟ್ಟಳಮಾಗೆ
(ಮನಸ್ಸಿಗೂ
ಆಸ್ಥಾನಮಂಟಪಕ್ಕೂ
ರಮಣೀಯವಾಗಿರುವಂತೆ)
ಸಂದ ರಥಿಕರ್ ಕಣ್ಗೊಳ್ವಿನಂ ()
ತತ್ಸುಯೋಧನನ ಒ
ಡ್ಡೋಲಗಂ ಇಂದ್ರನ
ಓಲಗಮುಮಂ ಕೀಱ್ಮಾಡಿ
ಕಣ್ಗೊಪ್ಪುಗುಂ(ಆ

ದುರ್ಯೋಧನನ
ಆಸ್ಥಾನಮಂಟಪವು ಇಂದ್ರನ
ಸಭೆಯನ್ನು ಕೀಳುಮಾಡಿ/
ಮೀರಿಸಿ ಕಣ್ಣಿಗೆ
ಶೋಭಿಸುತಿತ್ತು.)
ಪದ್ಯ-೨೯:ಅರ್ಥ:ಮನ್ಮಥನು
ಮಸೆದ ಪುಷ್ಪಬಾಣಗಳ
ಹಾಗಿರುವ ಅನೇಕ ಒಳ್ಳೆಯ
ಸ್ತ್ರೀಯರು ಆಕರ್ಷಕವಾಗಿ
ಪ್ರೀತಿಯಿಂದ ಹಾಡುತ್ತಿದ್ದರು.
ಜೇನಮಳೆಯನ್ನು

ಸುರಿಸಿದಂತಿರುವ ಸಂಗೀತವು ಎಲ್ಲೆಡೆಯಲ್ಲಿಯೂ ವ್ಯಾಪಿಸಿದ್ದಿತು. ಮನಸ್ಸಿಗೂ ಆಸ್ಥಾನಮಂಟಪಕ್ಕೂ ರಮಣೀಯವಾಗಿರುವಂತೆ ಪ್ರಸಿದ್ಧವಾಗಿರುವ ರಥಿಕರು ಚಿತ್ತಾಕರ್ಷಕವಾಗಿರಲು ಆ ದುರ್ಯೋಧನನ ಆಸ್ಥಾನಮಂಟಪವು ಇಂದ್ರನ ಸಭೆಯನ್ನು ಮೀರಿಸಿ ಕಣ್ಣಿಗೆ ಶೋಭಿಸುತಿತ್ತು. .

ವ|| ಅಂತು ಪಿರಿದೋಲಗಂಗೊಟ್ಟಿರ್ಪನ್ನೆಗಂ ಮುನ್ನಮೆ ಮೂಱನೆಯ ಬಾಗಿಲೊಳ್ ಬಂದಿರ್ದನಂತನ ಬರವಂ ಪಡಿಯಱಂ ಬಿನ್ನಪಂಗೆಯ್ಯೆ ಕುರುರಾಜಂ ಸಿಂಧುತನೂಜನ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು ಪಿರಿದು ಓಲಗಂಗೊಟ್ಟು ಇರ್ಪ ಅನ್ನೆಗಂ

(ಅಂತಹ ಒಡ್ಡೋಲಗದಲ್ಲಿ
ಇರವ ಸಮಯದಲ್ಲಿ)
ಮುನ್ನಮೆ ಮೂಱನೆಯ
ಬಾಗಿಲೊಳ್ ಬಂದಿರ್ದ
(ಮೊದಲೇ ಮೂರನೆಯ
ಬಾಗಿಲಿನಲ್ಲಿ ಬಂದಿದ್ದ)
ಅನಂತನ ಬರವಂ
ಪಡಿಯಱಂ ಬಿನ್ನಪಂಗೆಯ್ಯೆ
(ಕೃಷ್ಣನ ಆಗಮನವನ್ನು
ಪ್ರತೀಹಾರಿಯು ಬಂದು
ತಿಳಿಸಲು) ಕುರುರಾಜಂ

ಸಿಂಧುತನೂಜನ (ನದಿಯ ಮಗನ) ಮೊಗಮಂ ನೋಡಿ (ದುರ್ಯೋಧನನು ಭೀಷ್ಮನ ಮುಖವನ್ನು ನೋಡಿ) - **ವಚನ:ಅರ್ಥ**:ದುರ್ಯೋಧನನು ಅಂತಹ ದೊಡ್ಡ ಒಡ್ಡೋಲಗದಲ್ಲಿ ಇರವ ಸಮಯದಲ್ಲಿ, ಮೊದಲೇ ಮೂರನೆಯ ಬಾಗಿಲಿನಲ್ಲಿ ಬಂದಿದ್ದ ಕೃಷ್ಣನ ಆಗಮನವನ್ನು

ಪ್ರತೀಹಾರಿಯು ಬಂದು ತಿಳಿಸಲು, ದುರ್ಯೋಧನನು ಭೀಷ್ಮನ ಮುಖವನ್ನು ನೋಡಿ -

ಕಂ|| ಲೋಕ ಗುರು ಶಂಖ ಚಕ್ರ ಗ
ದಾಕರನತಿಶಯ ಚತುರ್ಭುಜಂ ಜನಜನಿತ|
ವ್ಯಾಕುಳದೆ ಬಂದನೆಂದೊಡೆ
ಲೋಕದೊಳಿನ್ನೆನ್ನ ದೊರೆಗೆ ಪಿರಿಯರುಮೊಳರೇ|| ೩೦ ||

ಪದ್ಯ-೩೦:ಪದವಿಭಾಗ-ಅರ್ಥ:ಲೋಕ ಗುರು ಶಂಖ ಚಕ್ರ ಗದಾಕರನು ಅತಿಶಯ ಚತುರ್ಭುಜಂ (ಅತಿಶಯವಾದ ನಾಲ್ಕುತೋಳುಗಳುಳ್ಳವನೂ ಆದ ಕೃಷ್ಣನೇ) ಜನಜನಿತ ವ್ಯಾಕುಳದೆ ಬಂದನೆಂದೊಡೆ (ಜನರಲ್ಲಿ ಪ್ರಸಿದ್ಧನಾದ ಕೃಷ್ಣನೇ ಚಿಂತೆಯಿಂದ/ ಹಂಬಲದಿಂದ ಬೇಡಲು ನನ್ನ

ಬಳಿಗೆ ಬಂದಿದ್ದಾನೆ
ಎನ್ನುವಾಗ,) ಲೋಕದೊಳು
ಇನ್ನೆನ್ನ ದೊರೆಗೆ (ಸಮಾನಕ್ಕೆ)
ಪಿರಿಯರು ಮೊಳರೇ
(ಲೋಕದಲ್ಲಿ ನನ್ನ
ಸಮಾನಕ್ಕೂ ದೊಡ್ಡವರು
ಇದ್ದಾರೆಯೇ ಎಂದನು,)
ಪದ್ಯ-೩೦:ಅರ್ಥ:ಲೋಕಗು
ರುವೂ
ಶಂಖಚಕ್ರಗದಾಪಾಣಿಯೂ
ಅತಿಶಯವಾದ

ನಾಲ್ಕುತೋಳುಗಳುಳ್ಳವನೂ ಆದ, ಜನರಲ್ಲಿ ಪ್ರಸಿದ್ಧನಾದ ಕೃಷ್ಣನೇ ಹಂಬಲದಿಂದ ಬೇಡಲು ನನ್ನ ಬಳಿಗೆ ಬಂದಿದ್ದಾನೆ ಎನ್ನುವಾಗ ಲೋಕದಲ್ಲಿ ನನ್ನ ಸಮಾನಕ್ಕೂ ದೊಡ್ಡವರು ಇದ್ದಾರೆಯೇ ಎಂದನು. (ಕೃಷ್ನನು ನನ್ನ ಬಳಿ ದುಃಖದಿಂದ ಬೇಡಲು ಬಂದಿರುವಾಗ, ಲೋಕದಲ್ಲಿ

ನನಗಿಂತ ದೊಡ್ಡವರು ಇದ್ದಾರೆಯೇ!)

ವ|| ಎಂದು ತನ್ನ ಬೆಸನನೆ ಪಾರ್ದು ಲಲಾಟ ತಟ ಘಟಿತ ಮುಕುಳಿತ ಕರಕಮಳನಾಗಿರ್ದ ಮಹಾಪ್ರತಿಹಾರನ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಬೆಸನನೆ ಪಾರ್ದು (ಹಾರೈಸಿ?) (ತನ್ನ ಅಪ್ಪಣೆಯನ್ನೇ ನಿರೀಕ್ಷಿಸುತ್ತ)

ಲಲಾಟ ತಟ (ಹಣೆಯ ಹತ್ತಿರ)ಘಟಿತ ಮುಕುಳಿತ (ಮುಗಿದ ಸ್ಥಿತಿಯ) ಕರಕಮಳನಾಗಿರ್ದ (ಕಮಲದ ಮೊಗ್ಗಾಗಿ ಮಾಡಿದ್ದ ಕೈಯನ್ನು) ಮಹಾಪ್ರತಿಹಾರನ ಮೊಗಮಂ (ಮುಖವನ್ನು) ನೋಡಿ-

ವಚನ:ಅರ್ಥ:ತನ್ನ ಅಪ್ಪಣೆಯನ್ನೇ ನಿರೀಕ್ಷಿಸುತ್ತ ಕೈಮುಗಿದು (ಕಮಲದ ಮೊಗ್ಗಾಗಿ ಮಾಡಿದ್ದ ಕೈಯನ್ನು

ಹಣೆಯ ಸಮೀಪದಲ್ಲಿ
ಸೇರಿಸಿದ್ದ) ನಿಂತಿದ್ದ
ಮಹಾದ್ವಾರಪಾಲಕನ
ಮುಖವನ್ನು ನೋಡಿ-

ಮ||

ಬರವೇೞ್ಕೆಂಬುದುಮಂಜನಾ ಚಲದವೋಲ್ ಕಣ್ಗೊಪ್ಪಿ ಬರ್ಪಂಬುಜೋ ದರನಂ ಮೆಲ್ಲನೆ ನೋಡಿ ಮೆಯ್ಯಲಸಿದಂತೆಂತಾನುಮೆ ೞ್ದಿರ್ದು ಕೇ|

ಸರಿ ಪೀಠಾಗ್ರದಿನಪ್ಪಿಕೊಂಡು ಪೊಡೆವಟ್ಟುಚ್ಚಾಸನಾಸೀನನಾ ಗಿರವೇೞ್ದಿರ್ಘ್ಯಮನಿತ್ತನಂತರ ಮೆ ತಾಂ ಕುಳ್ಳಿರ್ದ ದುಯೋ೯ಧನಂ|| ೩೧ ||

ಪದ್ಯ-೩೧:ಪದವಿಭಾಗ-ಅರ್ಥ:ಬರವೇೞ್ ಎಂಬುದುಮಂ ಅಂಜನಾಚಲದವೋಲ್ ಕಣ್ಗೊಪ್ಪಿ ('ಬರಹೇಳು' ಎಂದಾಗ, ಅಂಜನ

ಪರ್ವತದಂತೆ ಕಣ್ಣಿಗೆ
ಮನೋಹರವಾಗಿರುವ)
ಬರ್ಪ
ಅಂಬುಜೋದರನಂ(ಹೊಕ್ಕಳ
ಲ್ಲಿ ಕಮಲ ಇರುವವನು)
ಮೆಲ್ಲನೆ ನೋಡಿ
(ಪ್ರವೇಶಿಸುತ್ತಿರುವ ಕೃಷ್ಣನನ್ನು
ಮೆಲ್ಲನೆ ನೋಡಿ) ಮೆಯ್ಯ
ಅಲಸಿದಂತೆ ಎಂತಾನುಮೆ
ಎೞ್ದಿರ್ದು ಕೇಸರಿಪೀಠಾಗ್ರದಿಂ
(ದೇಹಾಲಸ್ಯವಾದಂತೆ

ಏಳಲಾರದೆ ಹೇಗೋ
ಸಿಂಹಾಸನದಿಂದ ಎದ್ದು)
ಅಪ್ಪಿಕೊಂಡು ಪೊಡೆವಟ್ಟು
ಉಚ್ಚಾಸನಾಸೀನನು
ಆಗಿರವೇಳ್ದು (ಅಪ್ಪಿಕೊಂಡು
ನಮಸ್ಕಾರಮಾಡಿ ಎತ್ತರವಾದ
ಆಸನದಲ್ಲಿ
ಕುಳಿತುಕೊಳ್ಳಬೇಕೆಂದು
ಹೇಳಿ,) ಅರ್ಘ್ಯಮನು ಇತ್ತ
ಅನಂತರಮೆ (ಅರ್ಘ್ಯವನ್ನು
ಕೊಟ್ಟಾದ ಮೇಲೆ) ತಾಂ

ಕುಳ್ಳಿರ್ದ ದುರ್ಯೋಧನಂ (ದುರ್ಯೋಧನನು ತಾನೂ ಕುಳಿತುಕೊಂಡನು.)

ಪದ್ಯ-೩೧:ಅರ್ಥ:೩೧. 'ಬರಹೇಳು' ಎಂದಾಗ, ಅಂಜನ ಪರ್ವತದಂತೆ ಕಣ್ಣಿಗೆ ಮನೋಹರವಾಗಿರುವ ಪ್ರವೇಶಿಸುತ್ತಿರುವ ಕೃಷ್ಣನನ್ನು ಮೆಲ್ಲನೆ ನೋಡಿ ದೇಹಾಲಸ್ಯವಾದಂತೆ ಏಳಲಾರದೆ ಹೇಗೋ

ಸಿಂಹಾಸನದಿಂದ ಎದ್ದು, ಅಪ್ಪಿಕೊಂಡು ನಮಸ್ಕಾರಮಾಡಿ ಎತ್ತರವಾದ ಆಸನದಲ್ಲಿ ಕುಳಿತುಕೊಳ್ಳಬೇಕೆಂದು ಹೇಳಿ, ಅರ್ಘ್ಯವನ್ನು ಕೊಟ್ಟಾದ ಮೇಲೆ, ದುರ್ಯೋಧನನು ತಾನೂ ಕುಳಿತುಕೊಂಡನು.

ವ|| ಅಂತು ಮಧುಕೈಟಭಾರಾತಿಯ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು ಮಧುಕೈಟಭ ಆರಾತಿಯ (ಮಧುಕೈಟಭರೆಂಬವರ ಶತ್ರುವಾದ ಕೃಷ್ಣನ) ಮೊಗಮಂ ನೋಡಿ-

ವಚನ:ಅರ್ಥ: ಕೃಷ್ಣನ ಮುಖವನ್ನು ನೋಡಿ ಹೇಳಿದನು.

ಕಂ|| ಸಂಸಾರದೊಳಿನ್ನೆನ್ನವೊ

ಲೇಂ ಸ್ಪೈಪಂ ಪಡೆದರೊಳರೆ

ನೀಂ ಬರೆ ಪೆಱತೇಂ|

ಕಂಸಾರೀ ಯುಷ್ಮತ್ಪದ

ಪಾಂಸುಗಳಿಂದಾಂ

ಪವಿತ್ರಗಾತ್ರನೆನಾದೆಂ|| ೩೨ ||

ಪದ್ಯ-೩೨:ಪದವಿಭಾಗ-

ಅರ್ಥ:ಸಂಸಾರದೊಳು ಇನ್ನು ಎನ್ನವೊಲು ಏಂ ಸ್ಪೈಪಂ ಪಡೆದರೊಳರೆ (ಜಗತ್ತಿನಲ್ಲಿ ಇನ್ನು ಬೇರೆಯವರು ನನ್ನಂತೆ ಪುಣ್ಯಪಡೆದವರು

ಯಾರಾದರೂ ಇದ್ದಾರೆಯೇ?) ನೀಂ ಬರೆ ಪೆಱತೇಂ ಕಂಸಾರೀ ಯುಷ್ಮತ್ ಪದ ಪಾಂಸುಗಳಿಂದ (ಮತ್ತೇನು ಹೇಳಲಿ? ನೀನು ಬರಲಾಗಿ ನಿನ್ನ ಪಾದಧೂಳಿಯಿಂದ) ಆಂ ಪವಿತ್ರಗಾತ್ರನೆನಾದೆಂ (ನಾನು ಪರಿಶುದ್ಧವಾದ ಶರೀರವುಳ್ಳವನಾದೆನು.)

ಪದ್ಯ-೩೨:ಅರ್ಥ: ೩೨. 'ಕೃಷ್ಣ, (ನೀನು ಬರಲಾಗಿ) ಜಗತ್ತಿನಲ್ಲಿ

ಇನ್ನು ಬೇರೆಯವರು ನನ್ನಂತೆ
ಪುಣ್ಯಪಡೆದವರು
ಯಾರಾದರೂ ಇದ್ದಾರೆಯೇ?
ಮತ್ತೇನು ಹೇಳಲಿ ಕೃಷ್ಣಾ
ನೀನು ಬರಲು ನಿನ್ನ
ಪಾದಧೂಳಿಯಿಂದ ನಾನು
ಪರಿಶುದ್ಧವಾದ
ಶರೀರವುಳ್ಳವನಾದೆನು.

ಬಂದ ಬರವಾವುದಿದು ಬಿಸ
ವಂದಂ ಬೆಸನಾವುದಾವ
ಬೆಸನಂ ಬೆಸಸಲ್|

ಬಂದಿರ್ ಬರವಿನೊಳೀಗಳ ಗುಂದಲೆಯಾಯ್ತೆನಗಮೀಗ ಳೆಂಬುದುಮಾಗಳ್|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಬಂದ ಬರವು ಆವುದು (ಬಂದ ಕಾರಣ ಯಾವುದು? -ಕಾರಣವೇನು?) ಇದು ಬಿಸವಂದಂ (ಇದು - ನಿಮ್ಮ ಆಗಮನ ಆಶ್ಚರ್ಯವಾದುದು.) ಬೆಸನಾವುದು ಆವ ಬೆಸನಂ

ಬೆಸಸಲ್ ಬಂದಿರ್ (ಯಾವ
ಕಾರ್ಯವನ್ನು ಅಪ್ಪಣೆ
ಮಾಡಲು ಬಂದಿದ್ದೀರಿ?)
ಬರವಿನೊಳು ಈಗಳು
ಅಗುಂದಲೆಯಾಯ್ತು ಎನಗಂ
ಈಗಳೆ (ಈಗ ನಿಮ್ಮ
ಬರುವಿಕೆಯಿಂದ ನನಗೆ
ಗೌರವವುಂಟಾಗಿದೆ)
ಎಂಬುದುಂ ಆಗಳ್ (ಎಂದು
ಪ್ರಶ್ನೆ ಮಾಡಿದಾಗ-)

ಪದ್ಯ-೩೩:ಅರ್ಥ: ತಾವು ಬಂದ ಕಾರಣ ಯಾವುದು? ನಿಮ್ಮ ಆಗಮನ ಆಶ್ಚರ್ಯಕರವಾದುದು; ಯಾವ ಕಾರ್ಯವನ್ನು ಅಪ್ಪಣೆ ಮಾಡಲು ಬಂದಿದ್ದೀರಿ? ಈಗ ನಿಮ್ಮ ಬರುವಿಕೆಯಿಂದ ನನಗೆ ಗೌರವವುಂಟಾಗಿದೆ, ಎಂದು ಪ್ರಶ್ನೆ ಮಾಡಿದಾಗ-

<u>ಶ್ರೀಕೃಷ್ಣನ ಸಂಧಾನದ ಮಾತುಗಳು</u>

ಕಂ||ಅಂದಾ ಸಭೆಯೊಳ್ ಕರ

ವಿನ್ಯಾ

ಸಂಗಗಳ್ ನುಡಿಯುಂ

ಅಡಕುವಂತಿರೆ |

ದಂತಪ್ರಭೆಗಳ್ ಪಾಸುಂ ಪೊ

ಕ್ಕುಂ ಪರೆದು ಸಭಾಸದನಂ

ತೊಳಗಿ ಬೆಳಗೆ ನುಡಿದಂ ||೩೪||

ಪದ್ಯ-೩೪:ಪದವಿಭಾಗ-

ಅರ್ಥ:ಅಂದು ಆ ಸಭೆಯೊಳ್

ಕರ ವಿನ್ಯಾಸಂಗಗಳ್
(ಹಸ್ತಾಭಿನಯಪೂರ್ವಕ
ಮಾತುಗಳನ್ನು) ನುಡಿಯುಂ
ಅಡಕುವಂತಿರೆ (ಮಾತುಗಳು
ಅರ್ಥಪೂರ್ಣವಾಗಿರುವಂತೆ)
ದಂತಪ್ರಭೆಗಳ್ ಪಾಸುಂ
ಪೊಕ್ಕುಂ ಪರೆದು ಸಭಾಸದನಂ
ತೊಳಗಿ ಬೆಳಗೆ ನುಡಿದಂ

ಪದ್ಯ-೩೪:ಅರ್ಥ:ಆ
ಸಭೆಯಲ್ಲಿ ಕೃಷ್ಣನು ತನ್ನ
ಹಸ್ತಾಭಿನಯಪೂರ್ವಕ

ಮಾತುಗಳು
ಅರ್ಥಪೂರ್ಣವಾಗಿರುವಂತೆ,
ಹಲ್ಲುಗಳಕಾಂತಿಯು
ಹಾಸುಹೊಕ್ಕಾಗಿ ಹರಡಿ
ಸಭಾಭವನವು ಬಹಳ
ಶೋಭಿಸುವಂತೆ
ಮಾತನಾಡಿದನು.

ಕಂ||ಅಯ ನಯ
ಪರಾಕ್ರಮೋಪಾ
ಶ್ರಯಂಗಳಂ
ಶ್ರೀಗಡರ್ಪುಮಾಡಿದ ನಿನ್ನಿಂ|

ದ್ರಿಯ ಜಯಮೆ ಕೂಡೆ ಲೋಕ ತ್ರಯದಿಂ ಪೊಗೞಿಸಿದುದಿಂತು ಪಿರಿಯರುಮೊಳರೇ|| ೩೫ ||

ಪದ್ಯ-೩೫:ಪದವಿಭಾಗ-

ಅರ್ಥ:ಅಯ ನಯ ಪರಾಕ್ರಮ ಉಪಾಶ್ರಯಂಗಳಂ (ರಾಜನು ಹೊಂದಬೇಕಾದ ಅವಲಂಬನಗಳನ್ನು) ಶ್ರೀಗೆ ಅಡಪ್ರುಮಾಡಿದ (ಯಶೋಲಕ್ಷ್ಮಿಗೆ

ಆಶ್ರಯವಾಗಿರುವ) ನಿನ್ನ
ಇಂದ್ರಿಯ ಜಯಮೆ
(ಯಶೋಲಕ್ಷ್ಮಿಗೆ
ಆಶ್ರಯವಾಗಿರುವ ಇಂದ್ರಿಯ
ಜಯವು/ ಅತಿಯಾಸೆಪಡದ
ಗುಣವು) ಕೂಡೆ (ನಿನ್ನಲ್ಲಿ
ಸೇರಲು) ಲೋಕತ್ರಯದಿಂ
ಪೊಗೞಿಸಿದುದು ಇಂತು
ಪಿರಿಯರುಮೊಳರೇ(ಆಗ
ನಿನ್ನಂತಹ ದೊಡ್ಡಗುಣದವರು
ಯಾರಿದ್ದಾರೆ?)

ಪದ್ಯ-೩೫:ಅರ್ಥ:ನಯ ನೀತಿ ಪರಾಕ್ರಮ ರಾಜನು ಹೊಂದಬೇಕಾದ ಅವಲಂಬನಗಳನ್ನು ಯಶೋಲಕ್ಷ್ಮಿಗೆ ಆಶ್ರಯವಾಗಿರುವ ಇಂದ್ರಿಯ ಜಯವು/ ಅತಿಯಾಸೆಪಡದೆಯಿರುವ ಗುಣವು ನಿನ್ನಲ್ಲಿ ಸೇರಲು ಮೂರು ಲೋಕಗಳಿಂದಲೂ ಹೊಗಳಿಕೆ ಸಿಗುವುದು, ಆಗ

ನಿನ್ನಂತಹ ದೊಡ್ಡಗುಣದವರು ಯಾರಿದ್ದಾರೆ?

ಕಂ|| ಉನ್ನತನೆ ಆಗಿಯುಂ
ನುಡಿ
ನನ್ನಿಯನಳವಣ್ಮನಱಿವು
ವಿನಯಮನಾದಂ|
ಮನ್ನಣೆ ಗುರುಜನಮಂ ನೆರೆ
ಮನ್ನಿಸಿದುದು ಪಿರಿಯ
ಸಿರಿಯೊಳೇಂ ಸುಜನತೆಯೋ||
೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಉನ್ನತನೆ ಆಗಿಯುಂ (ಉನ್ನತ ವ್ಯಕ್ತಿಯಾಗಿದ್ದರೂ,) ನುಡಿ ನನ್ನಿಯನು (ನಿನ್ನ ಮಾತಿನಲ್ಲಿ ಸತ್ಯಸಂಧತೆಯೂ,) ಅಳವು ಅಣ್ಮಂ ಅಱಿವು ವಿನಯಮನು (ಶಕ್ತಿ, ಪರಾಕ್ರಮ, ತಿಳುವಳಿಕೆ, ವಿನಯವು,) ಆದಂ ಮನ್ನಣೆ ಗುರುಜನಮಂ (ಹಿರಿಯರಲ್ಲಿ

ವಿಶೇಷ ಗೌರವ) ನೆರೆ ಮನ್ನಿಸಿದುದು (ನಿನ್ನಲ್ಲಿ ಚೆನ್ನಾಗಿ ಶೋಭಿಸುತ್ತಿವೆ.) ಪಿರಿಯ ಸಿರಿಯೊಳೇಂ ಸುಜನತೆಯೋ (ಈ ದೊಡ್ಡ ಸಂಪತ್ತಿದ್ದರೂ ನಿನ್ನಲ್ಲಿ ಎಷ್ಟೊಂದು ಸೌಜನ್ಯವೋ!) **ಪದ್ಯ-೩೬:ಅರ್ಥ**: ಉನ್ನತ ವ್ಯಕ್ತಿಯಾಗಿದ್ದರೂ, ನಿನ್ನ ಮಾತಿನಲ್ಲಿ ಸತ್ಯಸಂಧತೆಯೂ, ಶಕ್ತಿ, ಪರಾಕ್ರಮ, ತಿಳುವಳಿಕೆ,

ವಿನಯವು, ಹಿರಿಯರಲ್ಲಿ
ಗೌರವ ನಿನ್ನಲ್ಲಿ ಚೆನ್ನಾಗಿ
ಶೋಭಿಸುತ್ತಿವೆ. ಈ ದೊಡ್ಡ
ಸಂಪತ್ತಿದ್ದರೂ ನಿನ್ನಲ್ಲಿ
ಎಷ್ಟೊಂದು ಸೌಜನ್ಯವೋ!

ಕಂ||
ಕುವಳಯಬಾಂಧವನೆಸೆವನೆ
ಕುವಳಯಮಂ ಬೆಳಸಿ
ಕುವಳಯಂ ಪೊಱಗೆನೆ ಪಾಂ|
ಡವರೆ ಪೊಱಗಾಗೆ ನಿನಗೀ

ಕುವಳಯಪತಿಯೆಂಬ ಪೆಂಪ್ವೊಡಂಬಡೆ ನೃಪತೀ|| ೩೭ ||

ಪದ್ಯ-೩೭:ಪದವಿಭಾಗ-ಅರ್ಥ:ಕುವಳಯಬಾಂಧವಂ (ಕನ್ನೈದಿಲೆಯ ಬಾಂಧವ- ಚಂದ್ರನು) ಎಸೆವನೆ ಕುವಳಯಮಂ (ಕನ್ನೆದಿಲೆಯನ್ನು ಮಾತ್ರ ಬಳಗಿ ಕಾಪಾಡವೆನು ಎನ್ನುವಂತಿರುವನೆ?) ಬೆಳಸಿ(-

ಬೆಳಗಿಸಿ) ಕುವಳಯಂ
ಪೊಱಗು ಎನೆ (ಕುವಲಯ-
ಚಂದ್ರನು ಭೂಮಿಯನ್ನೆಲ್ಲ
ಬೆಳಗಿಸುವನು ಎನ್ನುವಾಗ)
ಪಾಂಡವರೆ ಪೊಱಗಾಗೆ
(ಹಾಗೆಯೇ ಪಾಂಡವರು
ಹೊರಗಿದ್ದರೆ) ನಿನಗೆ ಈ
ಕುವಳಯಪತಿಯೆಂಬ ಪೆಂಪು
ಒಡಂಬಡೆ ನೃಪತೀ (ಹಾಗೆಯೇ
ಪಾಂಡವರು(ರಾಜತ್ವದಿಂದ)
ಹೊರಗಿದ್ದರೆ ರಾಜನೇ ನಿನಗೆ

ರಾಜನೆಂಬ ಹಿರಿಮೆ ಒಪ್ಪುತ್ತದೆಯೇ?)

ಪದ್ಯ-೩೭:ಅರ್ಥ:

ಕನ್ನೆದಿಲೆಯನ್ನು ಮಾತ್ರ ಬೆಳಸಿ ಕಾಪಾಡವೆನು ಎನ್ನುವಂತಿರುವನೆ? ಚಂದ್ರನು ಭೂಮಿಯನ್ನೆಲ್ಲ ಬೆಳಗಿಸುವನು ಎನ್ನುವಾಗ, ಹಾಗೆಯೇ ಪಾಂಡವರು(ರಾಜತ್ವದಿಂದ) ಹೊರಗಿದ್ದರೆ ರಾಜನೇ ನಿನಗೆ

ರಾಜನೆಂಬ ಹಿರಿಮೆ

ಒಪ್ಪುತ್ತದೆಯೇ?

ಕಂ||ಮನಕತದಿಂದೊರ್ವರ

ನಿನಿಸನಗಲ್ದಿರ್ದರಿನಿಸೆ

ನಿಮಗಂ ತಮಗಂ|

ಮುನಿಸುಂಟೆ ಕಾಯ್ದ ಬೆನ್ನೀರ್

ಮನೆ ಸುಡದೆಂಬೊಂದು

ನುಡಿಯವೋಲ್

ಕುರುರಾಜಾ|| ೩೮ ||

ಪದ್ಯ-೩೮:ಪದವಿಭಾಗ-

ಅರ್ಥ:ಮನಕತದಿಂದೆ

(ಮನಕ್ಷತದಿಂದ- ಏನೋ
ಮನಸ್ತಾಪದಿಂದ) ಒರ್ವರನು
ಇನಿಸಂ ಅಗಲ್ದು ಇರ್ದಿರಿ,
ಇನಿಸೆ ನಿಮಗಂ ತಮಗಂ
ಮುನಿಸುಂಟೆ (ನಿಮಗೂ
ಅವರಿಗೂ ಪರಸ್ಪರ
ಕೋಪವುಂಟೆ?) ಕಾಯ್ದ
ಬೆನ್ನೀರ್ ಮನೆ
ಸುಡದೆಂಬೊಂದು
ನುಡಿಯವೋಲ್ ಕುರುರಾಜಾ
(ಕಾದ ಬಿಸಿನೀರು ಮನೆಯನ್ನು

ಸುಡುವುದೆ ಎಂಬ ಗಾದೆಯ
ಮಾತಿನಂತೆ, ದುರ್ಯೋಧನಾ.
)
ಪದ್ಯ-೩೮:ಅರ್ಥ:ಇದುವರೆಗೆ
ಏನೋ ಮನಸ್ತಾಪದಿಂದ
ಒಬ್ಬರನ್ನೊಬ್ಬರು ಅಗಲಿದ್ದಿರಿ;
ಇಷ್ಟೇ, ನಿಮಗೂ ಅವರಿಗೂ
ಪರಸ್ಪರ ಕೋಪವುಂಟೆ?
ದುರ್ಯೋಧನ, ಕಾದ
ಬಿಸಿನೀರು ಮನೆಯನ್ನು
ಸುಡುವುದೆ? ಇಲ್ಲ (ಎಂಬ

ಗಾದೆಯ ಮಾತಿನಂತೆ)

ದುರ್ಯೋಧನಾ.

ಕಂ||ಪೊಂಗುವ ಮಲೆಪರ ಮಲೆಗಳ ಡಂಗಂ ಕಣ್ಮಲೆವ ಮಂಡಲಂಗಳ್ ಪ್ರತ್ಯಂ| ತಂಗಳೆನಲೊಳವೆ ಪಾಂಡವ ರಂ ಗೆಡೆಗೊಳೆ ನಿನಗೆ ಕುರುಕುಳಾಂಬರಭಾನೂ|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ:ಪೊಂಗುವ (ಸೊಕ್ಕಿನಿಂದ ವಿರೋಧಿಸುವ) ಮಲೆಪರ ಮಲೆಗಳ (ಪರ್ವತರಾಜರ) (ಬೆಟ್ಟಗಳಲ್ಲಿರುವ) ಡಂಗಂ (ಸುಂಕದ ಕಟ್ಟೆಗಳ) ಕಣ್ಮಲೆವ ಮಂಡಲಂಗಳ್ (ವಿರೋಧಿಸುವ ದೇಶಗಳೂ) ಪ್ರತ್ಯಂತಂಗಳ್ ಎನಲ್ ಒಳವೆ, (ಪ್ರತಿಭಟಿಸುವ

ಗಡಿಪ್ರದೇಶಗಳೂ ಎನ್ನುವುವು ಇರುತ್ತವೆಯೇ?) ಪಾಂಡವರಂ ಗೆಡೆಗೊಳೆ (ಗೆಳೆಗೊಡೆ, ಎಡೆಗೊಳೆ) ನಿನಗೆ, ಕುರುಕುಳಾಂಬರಭಾನೂ (ಕೌರವವಂಶವೆಂಬ ಆಕಾಶಕ್ಕೆ ಸೂರ್ಯನಂತಿರುವ ಎಲೈ ದುರ್ಯೋಧನನೇ ಪಾಂಡವರನ್ನು ಸೇರಿಸಿಕೊಂಡರೆ, ನಿನಗೆ-

ವಿರೋಧಿಗಳು
ಎರುತ್ತಾರೆಯೇ? ಇಲ್ಲ)
ಪದ್ಯ-೩೯:ಅರ್ಥ:ಕೌರವವಂ
ಶವೆಂಬ ಆಕಾಶಕ್ಕೆ
ಸೂರ್ಯನಂತಿರುವ ಎಲೈ
ದುರ್ಯೋಧನನೇ
ಪಾಂಡವರನ್ನು
ಸೇರಿಸಿಕೊಂಡರೆ, ನಿನಗೆ
ಪ್ರತಿಭಟಿಸುವ ಪರ್ವತರಾಜರ
ಬೆಟ್ಟಗಳಲ್ಲಿರುವ ಸುಂಕದ
ಕಟ್ಟೆಗಳೂ ವಿರೋಧಿಸುವ

ದೇಶಗಳೂ ಪ್ರತಿಭಟಿಸುವ ಗಡಿಪ್ರದೇಶಗಳೂ ಎನ್ನುವುವು ಇರುತ್ತವೆಯೇ? ಇಲ್ಲ.

ಕಂ||ಪಟ್ಟದ ಮೊದಲಿಗರಾಜಿಗೆ
ಜಟ್ಟಿಗರವರೆಂದುಮಾಳ್ವ
ಮುನ್ನಿನ ನೆಲನಂ|
ಕೊಟ್ಟು ಬೞಿಯಟ್ಟು
ನಿನಗೊಡ
ವುಟ್ಟಿದರಾ ದೊರೆಯರಾಗೆ
ತೀರದುದುಂಟೇ|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ಪಟ್ಟದ ಮೊದಲಿಗರ್, ಆಜಿಗೆ(ಯುದ್ಧಕ್ಕೆ) ಜಟ್ಟಿಗರ್ (ಅವರು ರಾಜ್ಯಪಟ್ಟಕ್ಕೆ ಮೊದಲು ಅರ್ಹರಾದವರು, ಯುದ್ಧದಲ್ಲಿ ಶೂರರಾದವರು.) ಅವರು ಎಂದುಂ (ಅವರು ಯಾವಾಗಲೂ) ಆಳ್ವ ಮುನ್ನಿನ ನೆಲನಂ ಕೊಟ್ಟು (ಮೊದಲಿಂದ ಆಳುತ್ತಿದ್ದ ರಾಜ್ಯವನ್ನು ಅವರಿಗೆ ಕೊಟ್ಟು)

ಬಿಟ್ಟಿಯಟ್ಟು (ದೂತರ
ಮೂಲಕ ಆ ಸಮಾಚಾರವನ್ನು
ಹೇಳಿಕಳುಹಿಸು.)
ನಿನಗೊಡವುಟ್ಟಿದರು (ನಿನ್ನ
ಒಡಹುಟ್ಟಿದ ಸಹೋದರರು)
ಆ ದೊರೆಯರು
(ಅಸಮಾನರು) ಆಗೆ
ತೀರದುದು ಉಂಟೇ (ಅಂತಹ
ಸಮರ್ಥರಾಗಿರಲು
ನಿನಗಸಾಧ್ಯವಾದುದೂ
ಉಂಟೇ?)

ಪದ್ಯ-೪೦:ಅರ್ಥ:ಅದೂ ಹೇಗೂ ಇರಲಿ, ಅವರು ರಾಜ್ಯಪಟ್ಟಕ್ಕೆ ಮೊದಲು ಅರ್ಹರಾದವರು, ಯುದ್ಧದಲ್ಲಿ ಶೂರರಾದವರು. ಅವರು ಯಾವಾಗಲೂ ಮೊದಲಿಂದ ಆಳುತ್ತಿದ್ದ ರಾಜ್ಯವನ್ನು ಅವರಿಗೆ ಕೊಟ್ಟು ಆ ದೂತರ ಮೂಲಕ ಆ ಸಮಾಚಾರವನ್ನು ಹೇಳಿಕಳುಹಿಸು. ನಿನ್ನ ಒಡಹುಟ್ಟಿದ ಸಹೋದರರು

ಅಂತಹ ಸಮರ್ಥರಾಗಿರಲು
ನಿನಗೆ ಅಸಾಧ್ಯವಾದುದೂ
ಉಂಟೇ? ಇಲ್ಲ.

ಕಂ||ಮುನ್ನಿನ ನೆಲನಂ
ಕುಡುಗೆಮ
ಗೆನ್ನರ್
ದಾಯಿಗರೆಮೆನ್ನರಂತಲ್ತಿಂತ|
ಲ್ತೆನ್ನರ್ ಕರುಣಿಸಿ ದಯೆಯಿಂ
ದಿನ್ನಿತ್ತುದೆ
ಸಾಲ್ಗುಮೆಂಬರೆಂಬುದನೆಂಬರ್
|| ೪೧

ಪದ್ಯ-೪೧:ಪದವಿಭಾಗ-ಅರ್ಥ:ಮುನ್ನಿನ ನೆಲನಂ ಕುಡುಗೆ ಎಮಗೆ ಎನ್ನರ್ (ಅವರು ನಮಗೆ ಮೊದಲಿನ ಭೂಮಿಯನ್ನೆಲ್ಲಾ ಕೊಡು ಎನ್ನುವುದಿಲ್ಲ) ದಾಯಿಗರೆಂ ಎನ್ನರ್ (ನಾವು ದಾಯಾದಿಗಳು (ಸಮಭಾಗಿಗಳು) ಎನ್ನುವುದಿಲ್ಲ.) ಅಂತಲ್ತು ಇಂತಲ್ತು ಎನ್ನರ್ (ಹೀಗಲ್ಲ

ಹಾಗಲ್ಲ ಎನ್ನುವುದಿಲ್ಲ)
ಕರುಣಿಸಿ ದಯೆಯಿಂದ ಇನ್ನು
ಇತ್ತುದೆ ಸಾಲ್ಗುಂ ಎಂಬರ್
(ನೀನು ದಯೆಯಿಂದ
ಕೊಟ್ಟುದು ಸಾಕು ಎನ್ನುತ್ತಾರೆ.)
ಎಂಬುದನೆ ಎಂಬರ್ (ನೀನು
ಹೇಳಿದ್ದನ್ನೇ ಆಯಿತು
ಎನ್ನುವರು.)
ಪದ್ಯ-೪೧:ಅರ್ಥ:ಅವರು
ನಮಗೆ ಮೊದಲಿನ
ಭೂಮಿಯನ್ನೆಲ್ಲಾ ಕೊಡು

ಎನ್ನುವುದಿಲ್ಲ. ನಾವು ದಾಯಾದಿಗಳು (ಸಮಭಾಗಿಗಳು) ಎನ್ನುವುದಿಲ್ಲ. ಹೀಗಲ್ಲ ಹಾಗಲ್ಲ ಎನ್ನುವುದಿಲ್ಲ. ನೀನು ಹೇಳಿದ್ದನ್ನೇ ಆಯಿತು ಎನ್ನುವರು.

ಚಂ|| ಕರಿ ಕಳಭ ಪ್ರಚಂಡ ಮೃಗರಾಜ ಕಿಶೋರ ಕಠೋರ ಘೋರ ಹೂಂ

ಕರಣ ಭಯಂಕರಾಟವಿಯೊಳಿನ್ನೆವ ರಂ ನೆಲಸಿರ್ದ ಸೇದೆ ನೀಂ| ಕರುಣಿಸಿದಾಗಳಲ್ಲದವರ್ಗಾಱಿ ದು ಕೆಮ್ಮಗೆ ನಾಡ ಚಲ್ಲವ ತ್ತರ ನುಡಿಗೊಳ್ಳದಿರ್ ನಿನಗೆ ಪಾಂಡವರಪ್ಪುದನಾರುಮಪ್ಪ ರೇ|| ೪೨ ||

ಪದ್ಯ-೪೨:ಪದವಿಭಾಗ-ಅರ್ಥ:ಕರಿ ಕಳಭ ಪ್ರಚಂಡ ಮೃಗರಾಜ ಕಿಶೋರ (ಸಿಂಹದ

ಮರಿಗಳ) ಕಠೋರ ಘೋರ
ಹೂಂಕರಣ ಭಯಂಕರ
ಅಟವಿಯೊಳ್ (ಆನೆ,
ಭಯಂಕರ ಸಿಂಹದ ಮರಿಗಳ
ಕರ್ಕಶವೂ ಭಯಂಕರವೂ
ಆದ ಹೂಂಕರಣ ಶಬ್ದದಿಂದ
ಕೂಡಿದ ಘೋರವಾದ
ಕಾಡಿನಲ್ಲಿ) ಇನ್ನೆವರಂ
ನೆಲಸಿರ್ದ ಸೇದೆ
(ಇದುವರೆಗೂ ಅವರು
ವಾಸಮಾಡಿದ ಆಯಾಸವು)

ನೀಂ ಕರುಣಿಸಿದಾಗಳಲ್ಲದೆ ಅವರ್ಗೆ ಆಱದು (ನೀನು ದಯೆತೋರಿಸಿದಲ್ಲದೆ ಶಮನವಾಗುವುದಿಲ್ಲ) ಕೆಮ್ಮಗೆ ನಾಡ (ಸುಳ್ಳರಾದ) ಚಲ್ಲವತ್ತರ ನುಡಿಗೊಳ್ಳದಿರ್ (ಸುಮ್ಮನೆ ಸುಳ್ಳರಾದ ನಂಬಿಸಿಹೊಟ್ಟೆಹೊರೆಯುವವವರ ಮಾತುಗಳನ್ನು ಕೇಳಬೇಡ.) ನಿನಗೆ ಪಾಂಡವರಪ್ಪುದಂ ಆರುಂ

ಅಪ್ಪರೇ (ನಿನಗೆ ಪಾಂಡವರಾಗುವಂತೆ ಇತರರಾಗುತ್ತಾರೆಯೆ?)

ಪದ್ಯ-೪೨:ಅರ್ಥ: ಆನೆ, ಭಯಂಕರ ಸಿಂಹದ ಮರಿಗಳ ಕರ್ಕಶವೂ ಭಯಂಕರವೂ ಆದ ಹೂಂಕರಣ ಶಬ್ದದಿಂದ ಕೂಡಿದ ಘೋರವಾದ ಕಾಡಿನಲ್ಲಿ ಇದುವರೆಗೂ ಅವರು ವಾಸಮಾಡಿದ ಆಯಾಸವು ನೀನು

ದಯೆತೋರಿಸಿದಲ್ಲದೆ ಶಮನವಾಗುವುದಿಲ್ಲ. ಸುಮ್ಮನೆ ನಂಬಿಸಿಹೊಟ್ಟೆಹೊರೆಯುವವವರ ಮಾತುಗಳನ್ನು ಕೇಳಬೇಡ. ಆಪತ್ಕಾಲದಲ್ಲಿ ನಿನಗೆ ಪಾಂಡವರಾಗುವಂತೆ ಇತರರರಾಗುತ್ತಾರೆಯೆ?

ಉ|| ಒಂದುಮೊಡಂಬಡುಂ ಪೊರೆಯುಮಿಲ್ಲವರ್ಗೆಂಬುದನೆಯ್ದ ನಂಬಿ ನಾ

ಡಂ ದಯೆಗೆಯ್ದು ನೀಂ

ಕುಡುವಿನಂ ಪೆಱತೇ

ಪಡೆಮಾತೊ ಪಳ್ಳಿರ|

ಲ್ಕೆಂದವರ್ಗೀವುದೊಳ್ಳು ನಿಲೆ

ಕಂಚಿ ನೆಗೞ್ತೆಯ ವಾರಣಾಸಿ

ಕಾ

ಕಂದಿ ಕುರುಸ್ಥಳಂ ವರ

ವೃಕಸ್ಥಳಮೆಂಬಿವನಯ್ದು

ಬಾಡಮಂ|| ೪೩ ||

ಪದ್ಯ-೪೩:ಪದವಿಭಾಗ-

ಅರ್ಥ:ಒಂದುಂ ಒಡಂಬಡುಂ

ಪೊರೆಯುಂ ಇಲ್ಲ
ಅವರ್ಗೆ(ಯಾವ ಒಂದು
ವ್ಯವಸ್ಥೆಯೂ ರಕ್ಷಣೆಯೂ
ಇಲ್ಲ ಅವರಿಗೆ)- ಎಂಬುದನು
ಎಯ್ದ ನಂಬಿ ನಾಡಂ
ದಯೆಗೆಯ್ದು ನೀಂ
ಕುಡುವಿನಂ(ಅವರ
ರಾಜ್ಯವನ್ನು ಅವರಿಗೆ ಕೊಡಲು
ಇಷ್ಟವಿಲ್ಲದಿದ್ದರೆ --ಎಂದು
ಚೆನ್ನಾಗಿ ತೀಳಿದು ಬೇರೆ
ಮಾತಿಲ್ಲದೆ ಗ್ರಾಮಗಳನ್ನು

ದಯೆಮಾಡಿ
ಕೊಡುವುದಾದರೆ) ಪೆಱತೇ
ಪಡೆಮಾತೊ (ಬೇರೇನು
ಬಿದ್ದುಹೋಗುವ ಬೀದಿ
ಮಾತೋ?) ಪಳ್ಳಿರಲ್ಕೆಂದು
(ಹಾಸಿಮಲಗುವ ಮಟ್ಟಿಗೆ)
ಅವರ್ಗೆ ಈವುದು ಒಳ್ಪು ನಿಲೆ
(ನಿನ್ನ ಒಳ್ಳೆಯತನ
ಶಾಸ್ವತವಾಗಿ ನಿಲ್ಲಲು) ಕಂಚಿ
ನೆಗೞ್ತೆಯ ವಾರಣಾಸಿ
ಕಾಕಂದಿ ಕುರುಸ್ಥಳಂ ವರ

ವೃಕಸ್ಥಳಮೆಂಬಿವನಯ್ದು
ಬಾಡಮಂ

ಪದ್ಯ-೪೩:ಅರ್ಥ:ಅವರ ರಾಜ್ಯವನ್ನು ಅವರಿಗೆ ಕೊಡಲು ಇಷ್ಟವಿಲ್ಲದಿದ್ದರೆ, ಪಾಂಡವರಿಗೆ ಯಾವ ಒಂದು ವ್ಯವಸ್ಥೆಯೂ ರಕ್ಷಣೆಯೂ ಅವರಿಗೆ ಇಲ್ಲ, ಬೇರೇನು ಬಿದ್ದುಹೋಗುವ ಬೀದಿ ಮಾತೋ? ಅಲ್ಲ ಎಂದು ಚೆನ್ನಾಗಿ ತಿಳಿದು ಬೇರೆ ಮಾತಿಲ್ಲದೆ ಗ್ರಾಮಗಳನ್ನು

ದಯೆಮಾಡಿ
ಕೊಡುವುದಾದರೆ, ಕಂಚಿ,
ಶ್ರೇಷ್ಠವಾದ ವಾರಣಾಸಿ,
ಕಾಕಂದಿ, ಕುರುಸ್ಥಳ,
ಉತ್ತಮವಾದ ವೃಕಸ್ಥಳ ಎಂಬ
ಅಯ್ದು ಹಳ್ಳಿಗಳನ್ನು ಅವರಿಗೆ
ಮಲಗುವುದಕ್ಕೆ ಮಟ್ಟಿಗೆ
ಮತ್ತು ನಿನ್ನ ಒಳ್ಳೆಯತನ
ಶಾಸ್ವತವಾಗಿ ನಿಲ್ಲಲು ಕೊಟ್ಟರೆ
ಸಾಕು, ಎಂದನು ಕೃಷ್ಣ.

ವ|| ಎಂಬುದು ಸುಯೋಧನಂ ಕ್ರೋಧಾನಲೋದ್ದೀಪಿತ ಹೃದಯನಾಗಿ ಶೌರ್ಯಮದಾಡಂಬರದೊಳಂ ಬರಂಬರಂ ಸಿಡಿಲ್ದು-

ವಚನ:ಪದವಿಭಾಗ-

ಅರ್ಥ:ಎಂಬುದು ಸುಯೋಧನಂ ಕ್ರೋಧ ಅನಲ ಉದ್ದೀಪಿತ ಹೃದಯನಾಗಿ (ಕ್ರೋಧಾಗ್ನಿಯಿಂದ ಉರಿಯುತ್ತಿರುವ

ಹೃದಯವುಳ್ಳವನಾಗಿ)
ಶೌರ್ಯಮದಾಡಂಬರದೊಳಂ
ಬರಂಬರಂ - ಶೌರ್ಯ ಮದ
ಆಡಂಬರದೊಳ್
ಅಂಬರಂಬರಂ ಸಿಡಿಲ್ದು
(ಆಕಾಶ- ಅಂಬರ
ಸಿಡಿಯುವಂತೆ,)-
ವಚನ:ಅರ್ಥ:ವ|| ಎನ್ನಲು
ದುರ್ಯೋಧನನು
ಕ್ರೋಧಾಗ್ನಿಯಿಂದ
ಉರಿಯುತ್ತಿರುವ

ಹೃದಯವುಳ್ಳವನಾಗಿ
ಶೌರ್ಯದ ಮದದ
ಪ್ರದರ್ಶನದಲ್ಲಿ ಆಕಾಶ-
ಅಂಬರ ಸಿಡಿಯುವಂತೆ,-
ಕೃಷ್ಣನನ್ನು ಕುರಿತು ಹೇಳಿದನು.

ಚಂ|| ತೊಲಗದೆ ಗೋವುಗಾದ
ಕಿಱಿಯಂದಿನ ಗೋವಿಕೆ ನಿನ್ನ
ಚಿತ್ತದೊಳ್
ನೆಲಸಿದುದಕ್ಕುಮಗ್ಗಳದ
ವೈಷ್ಣವ ಮೋಹಮೆ ನಿನ್ನ
ಮೆಯ್ಯೊಳ|

ಗ್ಗಲಿಸಿದುದಕ್ಕುಮಾ ಜಡಧಿ ಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಮಲ್ಲದೊಡೆ ನೀನಿನಿತಂ ನುಡಿವೈ ಪಳಾಳಮಂ|| ೪೪ ||

ಪದ್ಯ-00:ಪದವಿಭಾಗ-ಅರ್ಥ:ತೊಲಗದೆ (ಹೋಗದೆ) ಗೋವುಗಾದ ಕಿಱಿಯಂದಿನ (ಚಿಕ್ಕಂದಿನ, ಬಾಲ್ಯದ) ಗೋವಿಕೆ (ದನಕಾಯುವ

ಮನೋಭಾವ) ನಿನ್ನ
ಚಿತ್ತದೊಳ್ ನೆಲಸಿದುದು
ಅಕ್ಕುಂ (ನಿನ್ನಲ್ಲಿ ಬಾಲ್ಯದಲ್ಲಿ
ದನಕಾಯುತ್ತಿದ್ದ
ಮನೋಭಾವ ಹೋಗದೆ
ಇನ್ನೂ ನೆಲೆಸಿರುವಂತಿದೆ.)
ಅಗ್ಗಳದ ವೈಷ್ಣವ ಮೋಹಮೆ
(ಅತಿಶಯ/ ಹೆಚ್ಚಿನ
ವಿಷ್ಣುಭಕ್ತರಾದ
ಪಾಂಡವರಮೇಲಿನ
ಮೋಹವು) ನಿನ್ನ ಮೆಯ್ಯೊಳು

ಅಗ್ಗಲಿಸಿದುದು (ಅತಿಶಯವಾಗಿ) ಅಕ್ಕುಂ ಆ ಜಡಧಿ ಸಂಗತಿಯಿಂ (ಸಂಗ, ಸಹವಾಸ) (ನಿನ್ನ ಮೈಯಲ್ಲಿ ಆ ಜಡಸಮುದ್ರದ ಸಹವಾಸದಿಂದ ಅತಿಶಯವಾಗಿ ಇರಬೇಕು.) ಜಡಬುದ್ಧಿ ಬುದ್ಧಿಯಂ (ವಿವೇಕವನ್ನು) ತೊಲಗಿಸಿತಕ್ಕುಂ (ಆ ಜಡಬುದ್ಧಿಯು ವಿವೇಕವನ್ನು

ತೊಲಗಿಸಿರಬೇಕು);
ಅಲ್ಲದೊಡೆ ನೀನು ಇನಿತಂ ನುಡಿವೈ ಪಳಾಳಮಂ (ಜೊಳ್ಳು ಮಾತುಗಳನ್ನು) (ಇಲ್ಲದಿದ್ದರೆ ನೀನು ಇಷ್ಟೊಂದು ಜೊಳ್ಳು ಮಾತುಗಳನ್ನು ಹೇಳುತ್ತೀಯಾ?)

ಪದ್ಯ-00:ಅರ್ಥ:“ನಿನ್ನಲ್ಲಿ ಬಾಲ್ಯದಲ್ಲಿ ದನಕಾಯುವ ಮನೋಭಾವ ಹೋಗದೆ ಇನ್ನೂ ನೆಲೆಸಿರುವಂತಿದೆ.

ಹೆಚ್ಚಿನ ವಿಷ್ಣುಭಕ್ತರಾದ ಪಾಂಡವರಮೇಲಿನ ಮೋಹವು ನಿನ್ನ ಮೈಯಲ್ಲಿ ಆ ಜಡಸಮುದ್ರದ ಸಹವಾಸದಿಂದ ಅತಿಶಯವಾಗಿ ಇರಬೇಕು. ಆ ಜಡಬುದ್ಧಿಯು ವಿವೇಕವನ್ನು ತೊಲಗಿಸಿರಬೇಕು. ಇಲ್ಲದಿದ್ದರೆ ನೀನು ಇಷ್ಟೊಂದು ಜೊಳ್ಳು ಮಾತುಗಳನ್ನು ಹೇಳುತ್ತೀಯಾ?)

ಕಂ|| ಪಱಿಪಟ್ಟ ಪಗೆವರಂ ನೆರೆ ಪಱಿಪಡಲಣಮೀಯದವರನ ವರ್ಗಳ ಬಾಱಿೊಳ್| ನಿಱಿಸಲ್ ಬಗೆದೈ ಕರಮೆನ ಗುಱಿದಿರ್ಕುಮೆ ನಿನ್ನ ಪೇೞ್ದ ಧರ್ಮಶ್ರವಣಂ|| ೪೫ ||

ಪದ್ಯ-00:ಪದವಿಭಾಗ-ಅರ್ಥ:ಪಱಿಪಟ್ಟ ಪಗೆವರಂ (ಕತ್ತರಿಸಿಹೋಗಿರುವ) ಸಂಬಂಧವುಳ್ಳ ಶತ್ರುಗಳನ್ನು) ನೆರೆ ಪಱಿಪಡಲ್

ಅಣವೀಯದೆ (ಸಂಬಂಧವುಳ್ಳ ಶತ್ರುಗಳನ್ನು ಸಂಪೂರ್ಣವಾಗಿ ನಾಶಮಾಡುವುದಕ್ಕೆ ಅವಕಾಶಕೊಡದೆ) ಅವರಂ ಅವರ್ಗಳ ಬಾೞ್ಕೆಯೊಳ್ (ಸಂಪತ್ತಿನಲ್ಲಿ) ನಿಱಿಸಲ್ ಬಗೆದ್ದೈ (ಅವರ- ಪಾಂಡವರ ಮೊದಲ ಉನ್ನತಸ್ಥಿತಿಯಲ್ಲಿ ಪುನ ಸ್ಥಾಪಿಸಲು ಬಯಸಿದ್ದೀಯಾ.) ಕರಂ ಎನಗೆ

ಉಱದೆ (ಹೊಂದದೆ)
ಇರ್ಕುಮೆ ನಿನ್ನ ಪೇೞ್ದ (ನೀನು
ಹೇಳಿದ) ಧರ್ಮಶ್ರವಣಂ
(ನೀನು ಹೇಳಿದ
ಧರ್ಮಶ್ರವಣವು ನನಗೆ
ಹಿಡಿಸುವಂತೆ ಇರುವುದೇ?
ಇಲ್ಲ.)
ಪದ್ಯ-00:ಅರ್ಥ:ಹರಿದು
ಹೋದ (ಕತ್ತರಿಸಿಹೋಗಿರುವ)
ಸಂಬಂಧವುಳ್ಳ ಶತ್ರುಗಳನ್ನು
ಸಂಪೂರ್ಣವಾಗಿ

ನಾಶಮಾಡುವುದಕ್ಕೆ
ಅವಕಾಶಕೊಡದೆ ಅವರ-
ಪಾಂಡವರ ಮೊದಲ
ಉನ್ನತಸ್ಥಿತಿಯಲ್ಲಿ ಪುನ
ಸ್ಥಾಪಿಸಲು ಬಯಸಿದ್ದೀಯಾ?.
ನೀನು ಹೇಳಿದ
ಧರ್ಮಶ್ರವಣವು ನನಗೆ
ಹಿಡಿಸುವಂತೆಇರುವುದೇ?
ಇಲ್ಲ.

ಉ|| ಭಾಗಮನಾಸೆವಟ್ಟಳಿಪಿ ಬೇಳ್ಪುದು ನಿನ್ನಯ ಕಲ್ತ ವಿದ್ದೆ

ನೀ

ನಾಗಳುಮಣ್ಣ ಬೇಡಿದಪೆ

ಸಜ್ಜನದಂತೆನಗೆಕ್ಕಬಾಗೆ ನೋ|

ಡೀಗಳಿಳಾಲತಾಂಗಿ

ಪುದವಲ್ಲಳದೆಂತೆನೆ ಮುನ್ನ

ನೂಲ ತೋ

ಡಾಗದೆ ಕೆಟ್ಟು ಪೋದವರನಿಂ

ಮಗುಳ್ದುಂ ನಿಱಪಂತು

ಬೆಳ್ಳನೇ|| ೪೬ ||

ಪದ್ಯ-೪೬:ಪದವಿಭಾಗ-

ಅರ್ಥ:ಭಾಗಮನು ಆಸೆವಟ್ಟು

ಅಳಿಪಿ ಬೇಱ್ಪುದು ನಿನ್ನಯ
ಕಲ್ತ ವಿದ್ದೆ (ಭೂಭಾಗವನ್ನು
ಆಶೆಪಟ್ಟು ಕೊಡೆಂದು
ಕೇಳಿಕೊಳ್ಳುವುದು ನೀನು
ಮೊದಲಿಂದ ಕಲಿತ ವಿದ್ಯೆ.)
ನೀನು ಆಗಳುಂ ಅಣ್ಣ
ಬೇಡಿದಪೆ (ಅಣ್ಣಾ, ನೀನು
ಯಾವಾಗಲೂ ಬೇಡುವ
ಸ್ವಭಾವವುಳ್ಳವನು);
ಸಜ್ಜನದಂತೆ (ಕುಲಸ್ತ್ರೀಯಂತೆ)
ಎನಗೆ ಎಕ್ಕಬಾಗೆ (ಒಂದೇ

ಭಾಗವಳ್ಳವಳು) ನೋಡು
ಈಗಳ್ ಇಳಾಲತಾಂಗಿ (ಇಳೆ
ಭೂಮಿ- ರಾಜ್ಯಲಕ್ಷ್ಮಿ)
ಪುದವಲ್ಲಳು (ಮತ್ತೊಬ್ಬನ
ಜೊತೆ
ಹೊಂದಿಕೊಂಡಿರುವವಳಲ್ಲ)
ಅದೆಂತೆನೆ ಮುನ್ನ ನೂಲ
ತೋಡಾಗದೆ (ಅದು
ಹೇಗೆಂದರೆ ಮೊದಲು
ತುಂಡಾದ ನೂಲು ಮತ್ತೆ
ಸೇರುವುದೇ?) ಕೆಟ್ಟು

ಪೋದವರನಿಂ (ಹಾಳಾದವರನ್ನು)ಮಗುಳ್ದಿಂ ನಿಱಿಪಂತು ಬೆಳ್ಳನೇ (ಮತ್ತೆ ತಿರುಗಿ ನಿಲ್ಲಿಸಲು ನಾನು ದಡ್ಡನೇ?) ಅಲ್ಲ.

ಪದ್ಯ-೪೬:ಅರ್ಥ:ಭೂಭಾಗ ವನ್ನು ಆಶೆಪಟ್ಟು ಕೊಡೆಂದು ಕೇಳಿಕೊಳ್ಳುವುದು ನೀನು ಮೊದಲಿಂದ ಕಲಿತ ವಿದ್ಯೆ. ಅಣ್ಣಾ, ನೀನು ಯಾವಾಗಲೂ ಬೇಡುವ ಸ್ವಭಾವವುಳ್ಳವನು.

ಕುಲಸ್ತ್ರೀಯಂತೆ
ರಾಜ್ಯಲಕ್ಷ್ಮಿಯು ನನಗೆ ಒಂದೇ
ಭಾಗವಳ್ಳವಳು. ಮತ್ತೊಬ್ಬನ
ಜೊತೆ
ಹೊಂದಿಕೊಂಡಿರುವವಳಲ್ಲ,
ಅದು ಹೇಗೆಂದರೆ ಮೊದಲು
ತುಂಡಾದ ನೂಲು ಮತ್ತೆ
ಸೇರುವುದೇ? ಹಾಳಾದವರನ್ನು
ಮತ್ತೆ ತಿರುಗಿ ನಿಲ್ಲಿಸಲು ನಾನು
ದಡ್ಡನೇ? ಅಲ್ಲ.

ಮ|| ವಿಜಿಗೀಷುತ್ವದೊಳೊಂದಿ
ಗೋವುಳಿಗನಪ್ಪಂ
ಮತ್ಸ್ಯನಾಳಾಗಿ ವಾ
ರಿಜನಾಭಂ ಹರಿಯೆಂಬ
ದೊಡ್ಡಿವೆಸರಂ ಪೊತ್ತಿರ್ದ ನೀಂ
ಮಂತ್ರಿಯಾ|
ಗೆ
ಜಯೋದ್ಯೋಗಮನೆತ್ತಿಕೊಂ
ಡು ರಣದೊಳ್ ಭೂಭಾಗಮಂ
ನೆಟ್ಟನೊ

ಟ್ಟಜೆಯಿಂದಂಜಿಸಿಕೊಳ್ಳದಿರ್ಪಿರೆ ಸಮಂತಾ ಗಂಡರೀ ಗಂಡರಂ|| ೪೭ ||

ಪದ್ಯ-೪೭:ಪದವಿಭಾಗ-ಅರ್ಥ: ವಿಜಿಗೀಷುತ್ವದೊಳ್ ಒಂದಿ (ಜಯದ ಅಪೇಕ್ಷೆಯನ್ನು ಹೊಂದಿ) ಗೋವುಳಿಗನಪ್ಪಂ (ದನಗಾಹಿಯಾದ ನೀನು) ಮತ್ಸ್ಯನು ಆಳಾಗಿ (ಮೀನು ಆಗಿದ್ದವನು ಮನುಷ್ಯನಾಗಿ)

ವಾರಿಜನಾಭಂ ಹರಿಯೆಂಬ ದೊಡ್ಡಿವೆಸರಂ ಪೊತ್ತಿರ್ದ ನೀಂ (ಕಮಲನಾಭ, ಹರಿ, ಎನ್ನುವ ದೊಡ್ಡ ಹೆಸರನ್ನು ಹೊತ್ತಿರುವ ನೀನು) ಮಂತ್ರಿಯಾಗೆ (ಮಂತ್ರಿಯಾಗಿರುವಾಗ) ಜಯೋದ್ಯೋಗಮನೆತ್ತಿಕೊಂಡು ರಣದೊಳ್ (ಯುದ್ಧದಲ್ಲಿ ಯುದ್ಧದಲ್ಲಿ ಗೆಲ್ಲುವ ಕಾರ್ಯದಲ್ಲಿ ತೊಡಗಿ) ಭೂಭಾಗಮಂ ನೆಟ್ಟನೆ

ಒಟ್ಟಜೆಯಿಂದ ಅಂಜಿಸಿ ಕೊಳ್ಳದೆ ಇರ್ಪಿರೆ ಸಮಂತು-ಪೂರ್ಣವಾಗಿ (ದೊಡ್ಡ ಪರಾಕ್ರಮದಿಂದ ಹೆದರಿಸಿ ಯುದ್ಧದಲ್ಲಿ ನೇರವಾಗಿ ಭೂಮಿಯ ಭಾಗವನ್ನು ಪೂರ್ಣವಾಗಿ ಪಡೆಯದೇ ಇರುತ್ತಾರೆಯೇ?) ಆ ಗಂಡರ್ ಈ ಗಂಡರಂ (ಆ ಶೂರರು ಈ ಕೌರವ ಶೂರರನ್ನು)

ಪದ್ಯ-೪೭:ಅರ್ಥ:

'ದನಗಾಹಿಯಾದ ನೀನು ಜಯಾಕಾಂಕ್ಷೆಯಿಂದ ಕೂಡಿ, ಮೀನು ಆಗಿದ್ದವನು ಈಗ ಮನುಷ್ಯನಾಗಿ, ಕಮಲನಾಭ, ಹರಿ, ಎನ್ನುವ ದೊಡ್ಡ ಹೆಸರನ್ನು ಹೊತ್ತಿರುವ ನೀನು ಮಂತ್ರಿಯಾಗಿರುವಾಗ, ಆ ಶೂರರಾದ ಪಾಂಡವರು ಯುದ್ಧದಲ್ಲಿ ಗೆಲ್ಲುವ ಕಾರ್ಯದಲ್ಲಿ ತೊಡಗಿ

ಶೂರರಾದ ನಮ್ಮನ್ನು ದೊಡ್ಡ ಪರಾಕ್ರಮದಿಂದ ಹೆದರಿಸಿ ಯುದ್ಧದಲ್ಲಿ ನೇರವಾಗಿ ಭೂಮಿಯ ಭಾಗವನ್ನು ಪೂರ್ಣವಾಗಿ ಪಡೆಯದೇ ಇರುತ್ತಾರೆಯೇ!' ಎಂದು ವ್ಯಂಗ್ಯವಾಗಿ ಹಾಸ್ಯಮಾಡಿ ದುರ್ಯೋಧನನು ಹೇಳಿದನು.

ಟಿಪ್ಪಣಿ-:(ಅಂದರೆ ಅವನಿಗೆ ಆ ಅವತಾರದ ಪುರಾಣ ಕಥೆಗಳಲ್ಲಿ ನಂಬುಗೆ ಇರಲಿಲ್ಲ

ಎಂದು ತೋರುವುದು,
ಶಿಶುಪಾಲನೂ ಹಾಗೆಯೇ
ಹೇಳಿದ್ದ.)

ಚಂ|| ಪುಸಿಯೆನೆ ಸಾಮಮಂ ನುಡಿದು ಭೇದಮನುಂಟೊಡತಾಗೆ ಮಾಡಿ ಛೀ ದ್ರಿಸಲೊಳಪೊಕ್ಕು ಮಿಕ್ಕು ನೆಗಳ್ದುಗ್ರವಿರೋಗಳೆತ್ತಮೆಯ್ದೆ ಬಂ|

ಚಿಸಿ ಪೊಱಗಣ್ಗೆ ಸಯ್ದರೆನೆ

ತಾವೊಳಗಂ ತವೆ ತೋಡಿ

ತಿಂದು ರ

ಕ್ಕಸಿಯರ ಕಂಡ ಕುಂಬಳದ

ಮಾೞ್ಕೆವೊಲಾಗಿರೆ

ಮಾಡದಿರ್ಪಿರೇ|| ೪೮ ||

ಪದ್ಯ-೪೮:ಪದವಿಭಾಗ-

ಅರ್ಥ:ಪುಸಿಯೆನೆ ಸಾಮಮಂ

ನುಡಿದು (ಸುಳ್ಳೇ

ಸಾಮೋಪಾಯವನ್ನು ಹೇಳಿ)

ಭೇದಮನು ಉಂಟೊಡತಾಗೆ

ಮಾಡಿ (ನಮ್ಮಲ್ಲಿ ಭೇದ
ಉಂಟಾಗುವಹಾಗೆ ಮಾಡಿ)
ಛೀದ್ರಿಸಲು ಒಳಪೊಕ್ಕು
(ಒಳಹೊಕ್ಕು
ಒಡಕುಂಟುಮಢಲು) ಮಿಕ್ಕು
ನೆಗಳ್ದು ಉಗ್ರವಿರೋಧಿಗಳ್
ಎತ್ತಮ್
(ಎಲ್ಲಾಕಡೆಯೂ)ಎಯ್ದೆ
(ಚೆನ್ನಾಗಿ) ಬಂಚಿಸಿ (ಉಗ್ರ
ವಿರೋಧಿಗಳಾದ ನೀವು ಎಲ್ಲ
ರೀತಿಯಿಂದಲೂ

ವಂಚನೆಮಾಡಿ) ಪೊೞಗಣ್ಗೆ ಸಯ್ದರೆನೆ (ಹೊರನೋಟಕ್ಕೆ ಮಾತ್ರ ನ್ಯಾಯವಾಗಿ ಇರುವವರಂತೆ ತೋೞ) ತಾವು ಒಳಗಂ ತವೆ ತೋಡಿ ತಿಂದು (ತಾವು- ಪಾಂಡವರು ಹೊರನೋಟಕ್ಕೆ ಮಾತ್ರ ನ್ಯಾಯವಾಗಿ ಇರುವವರಂತೆ ತೋೞ ಒಳಗೆಯೆ ಕೆಡುಕುಬುದ್ಧಿಯನ್ನು ಹೊಂದಿದವರಂತೆ)

ರಕ್ಕಸಿಯರ ಕಂಡ ಕುಂಬಳದ ಮಾಟ್ಕೆವ್ರೊಲ್ ಆಗಿರೆ ಮಾಡದಿರ್ಪಿರೇ ('ರಾಕ್ಷಸಿಯರು ನೋಡಿದ ಕುಂಬಳಕಾಯಿಯಂತೆ' ಮೋಸ ಮಾಡದೆ ಇರುತ್ತೀರಾ!)

ಪದ್ಯ-೪೮:ಅರ್ಥ:(ಇಲ್ಲಿ ಬಂದು) ಸುಳ್ಳೇ ಸಾಮೋಪಾಯವನ್ನು ಹೇಳಿ, ನಮ್ಮಲ್ಲಿ ಭೇದ ಉಂಟಾಗುವಹಾಗೆ ಮಾಡಿ,

ಒಳಹೊಕ್ಕು
ಒಡಕುಂಟುಮಢಲು , ಉಗ್ರ
ವಿರೋಗಳಾದ ನೀವು ಎಲ್ಲ
ರೀತಿಯಿಂದಲೂ
ವಂಚನೆಮಾಡಿ,
ಹೊರನೋಟಕ್ಕೆ ಮಾತ್ರ
ನ್ಯಾಯವಾಗಿ ಇರುವವರಂತೆ
ತೋರಿ ಒಳಗೆಯೆ
ಕೆಡುಕುಬುದ್ಧಿಯನ್ನು
ಹೊಂದಿದವರಂತೆ,
'ರಾಕ್ಷಸಿಯರು ನೋಡಿದ

ಕುಂಬಳಕಾಯಿಯಂತೆ'
ಮೋಸ ಮಾಡದಿರುತ್ತೀರಾ!
(ಕುಂಬಳಕಾಯಿ ಮೇಲೆಮೇಲೆ
ನೋಡಲು ಚೆನ್ನಾಗಿದ್ದು ಒಳಗೆ
ಕೊಳೆತಿರುವುದು- ಇದಕ್ಕೆ
ರಾಕ್ಷಸಿಯರ/ ಕೆಟ್ಟ ಕಣ್ಣು
ಬಿದ್ದಿದೆ ಎಂಬ ನಂಬುಗೆ ಇತ್ತು)
ಟಿಪ್ಪಣಿ -:(ಕೌರವ
ಹೇಳುವುದು- ಇಲ್ಲಿ ಕೃಷ್ಣನು
ಸಾಮದಿಂದ ರಾಜ್ಯ ಕೇಳಲು
ಬಂದಿರುವುದು ಕಪಟಕ್ಕಾಗಿ,

ಆದರಿಂದ ಕೌರವನ ಕಡೆ
ಇರುವವರು ಪಾಂಡವರಿಗಾಗಿ
ಅವರ ಪಾಲಿನ ರಾಜ್ಯವನ್ನೂ
ಕೊಡಲಿಲ್ಲ, ಐದು ಹಳ್ಳಿಗಳನ್ನು
ಕೇಳಿದರೂ ಕೊಡಲಿಲ್ಲ, ಎಂದು
ಕೌರವನ ಬಗ್ಗೆ ಅಸಮಾಧನ
ಮೂಡಿಸಿ ಅವನ
ಕಡೆಯವರಲ್ಲಿ ಒಡಕು
ಮೂಡಿಸಲು ಕೃಷ್ಣ
ಸಾಮೋಪಾಯದ ನೆವ
ಮಾಡಿಕೊಂಡು, ಅರ್ದ ರಾಜ್ಯ

ಅಥವಾ ಐದು ಹಳ್ಳಿ ಕೇಳಲು ಬಂದಿರುವನು, ಕೌರವರ ಬೆಂಬಲಿಗರಲ್ಲಿ ಒಡಕುಂಡು ಮಾಡಿ, ಭೇದೋಪಾಯ ಸಾಧಿಸಲು ಬಂದಿರುವನು ಎಂದು ಭಾವ.)

ವ|| ನಾಮೆಲ್ಲಮೊಂದೆ ಗರುಡಿಯೊಳೋದಿದ ಮಾನಸರೆವೆಮ್ಮಂ ನಿಮ್ಮಡಿ ಕೆಮ್ಮನೆ ಬೞಲಿಸಲ್ವೇಡ ಬಂದು ಬಟ್ಟೆಯಿನೆ

ಬಿಜಯಂಗೆಯ್ಯೆಮೆನೆ ಮುರಾಂತಕನಂತಕನಂತೆ ಮಾಮಸಕಂ ಮಸಗಿ ದುರ್ಯೋಧನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ನಾಮೆಲ್ಲಂ ಒಂದೆ ಗರುಡಿಯೊಳು ಓದಿದ ಮಾನಸರೆವು (ನಾವೆಲ್ಲ ಒಂದೇ ಗರಡಿಯಲ್ಲಿ ಕಲಿತ ಮನುಷ್ಯರು ಅಹೆವು-) ಎಮ್ಮಂ ನಿಮ್ಮಡಿ ಕೆಮ್ಮನೆ

ಬೞಲಿಸಲ್ವೇಡ (ನಿಮ್ಮ
ಪಾದವು (ವ್ಯಂಗ್ಯ, ನೀವು)
ನಮ್ಮನ್ನು ಸುಮ್ಮನೆ
ಆಯಾಸಪಡಿಸಬೇಡಿ) ಬಂದು
ಬಟ್ಟೆಯಿನೆ ಬಿಜಯಂಗೆಯ್ಯಿಂ
ಎನೆ (ಬಂದ ದಾರಿಯಲ್ಲಿ
ಬಿಜಯಮಾಡಿಸಿ ಎಂದನು.
ಎನ್ನಲು-) ಮುರಾಂತಕನು
(ಮುರನಿಗೆ ಯಮನಾದವನು)
ಅಂತಕನಂತೆ (ಯಮನಂತೆ)
ಮಾಮಸಕಂ ಮಸಗಿ

ದುರ್ಯೋಧನನಿಂತೆಂದಂ(ಉಗ್ರವಾಗಿ ಕೋಪಿಸಿಕೊಂಡು ದುರ್ಯೋಧನನಿಗೆ ಹೀಗೆಂದನು.)-
ವಚನ:ಅರ್ಥ:ದುರ್ಯೋಧನನು, ನಾವೆಲ್ಲ ಒಂದೇ ಗರಡಿಯಲ್ಲಿ ಕಲಿತ ಮನುಷ್ಯರು. ನಿಮ್ಮ ಪಾದವು (ವ್ಯಂಗ್ಯ, ನೀವು) ನಮ್ಮನ್ನು ಸುಮ್ಮನೆ ಆಯಾಸಪಡಿಸಬೇಡಿ; ಬಂದ

ದಾರಿಯಲ್ಲಿ ಬಿಜಯಮಾಡಿಸಿ ಎಂದನು. ಹಾಗೆ ಹೇಳಲು ಕೃಷ್ಣನು ಯಮನಂತೆ ಉಗ್ರವಾಗಿ ಕೋಪಿಸಿಕೊಂಡು ದುರ್ಯೋಧನನಿಗೆ ಹೀಗೆಂದನು.

ಕೃಷ್ಣನ ಕೋಪ - ದುರ್ಯೋಧನನಿಗೆ ಎಚ್ಚರಿಕೆ

ಉ|| ಸೀತೆಯ

ದೂಸಱಿಂದಱಿದ

ರಾವಣನಂತಿರೆ
ನೀನುಮೀಗಳೀ
ಸೀತೆಯ
ದೂಸಱಿಂದಱಿಯಲಾಟಿಸಿದ್ಯೆ
ನಿನಗಂತು ಸೀತೆಯೇ|
ಸೀತೆ ಕಡಂಗಿ ಕಾಯ್ದು
ಕಡೆಗಣ್ಚಿದಳಪ್ಪೊಡೆ ಧಾತ್ರನಿಂ
ತೊದ
ಖ್ಯಾತಿನೊಳೇನೊ ಪಾಂಡವರ
ಕೆಯ್ಯೊಳೆ ನಿನ್ನ
ನಿಸೇಕಮಾಗದೇ|| ೪೯ ||

ಪದ್ಯ-೪೯:ಪದವಿಭಾಗ-ಅರ್ಥ:ಸೀತೆಯ ದೂಸಱಿಂದ ಅೞಿದ ರಾವಣನಂತಿರೆ (ಸೀತಾದೇವಿಯ ಕಾರಣದಿಂದ ಅಳಿದ-ನಾಶವಾದ ರಾವಣನ ಹಾಗೆ) ನೀನುಂ ಈಗಳ್ ಈ ಸೀತೆಯ (ಈ ಭೂಮಿಯ) ದೂಸಱಿಂದ ಅೞಿಯಲು ಆಟಿಸಿದ್ದೈ (ಈಗ ನೀನೂ ಈ ಭೂಮಿಯ) ಆಸೆಯಿಂದ ನಾಶವಾಗಲು

ಆಶೀಸುತ್ತಿದ್ದೀಯೆ) ನಿನಗೆ
ಅಂತು ಸೀತೆಯೇ ಸೀತೆ
ಕಡಂಗಿ (ನಿನಗೆ ಈ
ಭೂಮಿಯೇ ಆ ಸೀತೆಯಾಗಿ
ತಿರುಗಿಬಿದ್ದು) ಕಾಯ್ದು
ಕಡೆಗಣ್ಚಿದಳಪ್ಪೊಡೆ (ಕೋಪಿಸಿ
ಕಡೆಗಣಿಸಿದ್ದಾರೆ) ಧಾತ್ರನಿಂ
(ವಿಧಿಯಾದ ಬ್ರಹ್ಮನ
ಸಹಾಯದಿಂದ,ವಿಧಿಯ
ನಿಯಮದಮತೆ)
ತೊದಳ್ವಾತಿನೊಳೇನೊ

(ತೊದಲು ಮಾತಿನಿಂದೇನೋ-ಅಸ್ಪಷ್ಟಮಾತಿನಿಂದೇನೋ, ಸ್ಪಷ್ಟನುಡಿ ಕೇಳು-) ಪಾಂಡವರ ಕೆಯ್ಯೊಳೆ ನಿನ್ನ ನಿಸೇಕಮಾಗದೇ (ವಿಧಿಯ ನಿಯಮದಂತೆ, ಪಾಂಡವರ ಕಯ್ಯಿಂದಲೇ ನಿನಗೆ ನಿಷೇಕ (ತಕ್ಕ ಶಾಸ್ತಿ, ಪ್ರಸ್ತ, ಹಬ್ಬ) ಆಗದಿರುತ್ತದೆಯೇ! ಆಗಿಯೇ ಆಗುವುದು.)

ಪದ್ಯ-೪೯:ಅರ್ಥ:ಸೀತಾದೇವಿಯ ಕಾರಣದಿಂದ ನಾಶವಾದ ರಾವಣನ ಹಾಗೆ ಈಗ ನೀನೂ ಈ ಭೂಮಿಯ ಆಸೆಯಿಂದ ನಾಶವಾಗಲು ಆಶೀಸುತ್ತಿದ್ದೀಯೆ; ನಿನಗೆ ಈ ಭೂಮಿಯೇ ಆ ಸೀತೆಯಾಗಿ ತಿರುಗಿಬಿದ್ದು ಕೋಪಿಸಿ ಕಡೆಗಣಿಸಿದ್ದಾರೆ, ಅಸ್ಪಷ್ಟಮಾತಿನಿಂದೇನೋ, ಸ್ಪಷ್ಟನುಡಿ ಕೇಳು- ವಿಧಿಯ

ನಿಯಮಮಂತೆ ಪಾಂಡವರ
ಕಯ್ಯಿಂದಲೇ ನಿನಗೆ ತಕ್ಕಶಾಸ್ತಿ,
ಆಗದಿರುತ್ತದೆಯೇ?

ಆರ್ಕಡುಕೆಯ್ದು
ಪಾಂಡವರೊಳಾಂತಿೞಿಯಲ್
ನೆರೆವನ್ನರಿಂತಿದೇ
ತರ್ಕೆ ಬಿಗುರ್ತಪ್ಪೈ ನೆಲನೊಪ್ಪಿಸಿ
ತಪ್ಪದೆ ಬಾೞ್ವೆನೆನ್ನದೀ|
ಯುರ್ಕಿನೊಳೆಂತು ನಿಂದು
ಸೆಣಸಲ್ ಬಗೆ ಬಂದುದು ನಿನ್ನ
ಮೆಯ್ಯ ನೆ

ತ್ತರ್ಕುದಿದುರ್ಕಿ ಸಾವ ಬಗೆಯಿಂ ಸೆಣಸಲ್ ಬಗೆ ಬಂದುದಾಗದೇ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ಆರ್ ಕೆಡುಕೆಯ್ದು ಪಾಂಡವರೊಳು ಆಂತು ಇಱಿಯಲ್ ನೆರೆವನ್ನರು (ಪಾಂಡವರೊಡನೆ ಯಾರು ಸೆಟೆದುನಿಂತು ಯುದ್ಧಮಾಡಲು ಯಾರು ಸಮರ್ಥರು?) ಇಂತು ಇದು

ವಿತರ್ಕೆ ಬಿಗುರ್ತುರ್ಪೈ (ಹೀಗೇಕೆ ಬೆದರಿಸುತ್ತೀಯಾ?) ನೆಲನ ಒಪ್ಪಿಸಿ ತಪ್ಪದೆ ಬಾಜ್ವೆಂ ಎನ್ನದೆ (ಅವರಿಗೆ ಸಲ್ಲಬೇಕಾದ ಭೂಮಿಯನ್ನು ಒಪ್ಪಿಸಿ ನ್ಯಾಯವಾಗಿ ಬದುಕುತ್ತೇನೆ ಎನ್ನದೆ) ಯು/ಉರ್ಕಿನೊಳು ಎಂತು ನಿಂದು ಸೆಣಸಲ್ ಬಗೆ ಬಂದುದು (ಹೀಗೆ ಅಹಂಕಾರದಿಂದ ಪ್ರತಿಭಟಿಸಿ ಸೆಣಸಲು ಹೇಗೆ ನಿನಗೆ

ಮನಸ್ಸು ಬಂದಿತು?) ನಿನ್ನ ಮೆಯ್ಯ ನೆತ್ತರ್ ಕುದಿದು ಉರ್ಕಿ ಸಾವ ಬಗೆಯಿಂ (ನಿನ್ನ ದೇಹದ ರಕ್ತ ಕುದಿದು ಉಕ್ಕಿ ಸಾಯುವ ಬಯಕೆಯಿಂದಲೇ) ಸೆಣಸಲ್ ಬಗೆ ಬಂದುದಾಗದೇ (ಯುದ್ಧಮಾಡಲು ನಿನಗೆ ಮನಸ್ಸು ಬಂದಿರಬೇಕಲ್ಲವೇ?)

ಪದ್ಯ-೫೦:ಅರ್ಥ:ಪಾಂಡವ ರೊಡನೆ ಯಾರು ಸೆಟೆದುನಿಂತು

ಯುದ್ಧಮಾಡಲು ಯಾರು
ಸಮರ್ಥರು? ಹೀಗೇಕೆ
ಹೆದರಿಸುತ್ತೀಯಾ? ಅವರಿಗೆ
ಸಲ್ಲಬೇಕಾದ ಭೂಮಿಯನ್ನು
ಒಪ್ಪಿಸಿ ನ್ಯಾಯವಾಗಿ
ಬದುಕುತ್ತೇನೆ ಎನ್ನದೆ ಹೀಗೆ
ಅಹಂಕಾರದಿಂದ ಪ್ರತಿಭಟಿಸಿ
ಸೆಣಸಲು ಹೇಗೆ ನಿನಗೆ
ಮನಸ್ಸು ಬಂದಿತು? ನಿನ್ನ
ದೇಹದ ರಕ್ತ ಕುದಿದು ಉಕ್ಕಿ
ಸಾಯುವ ಇಚ್ಛೆಯಿಂದಲೇ

ಯುದ್ಧಮಾಡಲು ನಿನಗೆ ಮನಸ್ಸು ಬಂದಿರಬೇಕಲ್ಲವೇ?

ಕಂ|| ಮುಳಿಯಿಸಿ ಬರ್ದುಂಕಲಾದನು ಮೊಳನೆ ಯುಷ್ಠಿರನನಮಳರಳವೆಂಬು ದು ಭೂ| ವಳಯ ಪ್ರಸಿದ್ಧಮರಿನೃಪ ಬಳಂಗಳವರಿಱಿಯೆ ಪೆಳರೆವೆಂಬರುಮೊಳರೇ|| ೫೧ ||

ಪದ್ಯ-೫೧:ಪದವಿಭಾಗ-ಅರ್ಥ:ಮುಳಿಯಿಸಿ (ಕೋಪ ಬರುವ ಹಾಗೆ ಮಾಡಿ) ಬದುರ್ಕಂಕಲು ಆದನುಂ ಒಳನೆ ಯುಷ್ಠಿರನನು, (ಯುಧಿಷ್ಠಿರನಿಗೆ ಕೋಪ ಬರುವ ಹಾಗೆ ಮಾಡಿ ಬದುಕಬಲ್ಲವನೂ ಇದ್ದಾನೆಯೇ?) ಅಮಳರ ಅಳವೆಂಬುದು ಭೂವಳಯ ಪ್ರಸಿದ್ಧಂ (ಯಮಳರಾದ

ನಕುಲ ಸಹದೇವರ
ಪರಾಕ್ರಮವೆಂಬುದು
ಲೋಕಪ್ರಸಿದ್ಧವಾದುದು)
ಅರಿನೃಪ ಬಳಂಗಳು ಅವರು
ಇಱಿಯೆ ಪೆಳರೆವು(ಹೆದರೆವು)
ಎಂಬರುಂ ಒಳರೇ (ಶತ್ರುಗಳ
ಬಳಗದಲ್ಲಿ, ಅವರು-
ಯಮಳರು ಯುದ್ಧಮಾಡಲು,
ಹೆದರೆವು ಎನ್ನುವವರು
ಇದ್ದಾರೆಯೇ? ಇಲ್ಲ.)

ಪದ್ಯ-೫೧:ಅರ್ಥ:ಯುಧಿಷ್ಠಿರನಿಗೆ ಕೋಪ ಬರುವ ಹಾಗೆ ಮಾಡಿ ಬದುಕಬಲ್ಲವನೂ ಇದ್ದಾನೆಯೇ? ಯಮಳರಾದ ನಕುಲ ಸಹದೇವರ ಪರಾಕ್ರಮವೆಂಬುದು ಲೋಕಪ್ರಸಿದ್ಧವಾದುದು. ಶತ್ರುಗಳ ಬಳಗದಲ್ಲಿ, ಅವರು-ಯಮಳರು ಯುದ್ಧಮಾಡಲು, ಹೆದರೆವು ಎನ್ನುವವರು ಇದ್ದಾರೆಯೇ? ಇಲ್ಲ.

ಚಂ|| ಗಜೆಗೊಳೆ

ಭೀಮಸೇನನಿದಿರಾಂತು

ಬರ್ದುಂಕುವ ವೈರಿ ಭೂಭುಜ

ಧ್ವಜಿನಿಗಳಿಲ್ಲದಲ್ಲದೆಯುಮೀ

ಯುವರಾಜನ ನೆತ್ತರಂ ಕುರು|

ಧ್ವಜಿನಿಯೆ ನೋಡೆ ಪೀರ್ದು

ಭವದೂರುಯುಗಂಗಳನಾಜಿ

ರಂಗದೊಳ್

ಗಿಜಿಗಿಜಿ ಮಾಡಲೆಂದವನ

ಪೂಣ್ದುದು

ನಿಕ್ಕುವಮಾಗದಿರ್ಕುಮೇ||
೫೨||

ಪದ್ಯ-೫೨:ಪದವಿಭಾಗ-ಅರ್ಥ:ಗಜೆಗೊಳೆ ಭೀಮಸೇನನು ಇದಿರಾಂತು (ಭೀಮಸೇನನು ಗದೆಯನ್ನು ಹಿಡಿಯಲು ಎದರಿಸಿ) ಬರ್ದುಂಕುವ ವೈರಿ ಭೂಭುಜಧ್ವಜಿನಿಗಳ್ (ಬದುಕಿರಬಲ್ಲ ವೈರಿ ಸೈನ್ಯವಿಲ್ಲ) ಇಲ್ಲದೆ

ಅಲ್ಲದೆಯುಂ (ಇಷ್ಟು ಅಲ್ಲದೆ) ಈ ಯುವರಾಜನ ನೆತ್ತರಂ ಕುರುಧ್ವಜಿನಿಯೆ ನೋಡೆ ಪೀರ್ದು (ಈ ಯುವರಾಜನಾದ ದುಶ್ಶ್ಯಾಸನನ ರಕ್ತವನ್ನು ಕೌರವಸೈನ್ಯವು ನೋಡುತ್ತಿರುವ ಹಾಗೆಯೇ ಹೀರಿ) ಭವತ್ ಊರುಯುಗಂಗಳನು ಆಜಿರಂಗದೊಳ್ ಗಜಿಗಿಜಿ

ಮಾಡಲೆಂದು (ನಿನ್ನ ಎರಡು ತೊಡೆಗಳನ್ನೂ ಯುದ್ಧಭೂಮಿಯಲ್ಲಿ ಜಜ್ಜಿ ಅಜಗಿಜಿ ಮಾಡುತ್ತೇನೆಂದು) ಅವನ ಪ್ರೂಣ್ದುದು ನಿಕ್ಕುವಮಾಗದೆ ಇರ್ಕುಮೇ (ಅವನು ಪ್ರತಿಜ್ಞೆ ಮಾಡಿದುದು ನಿಜವಾಗದೇ ಹೋಗುತ್ತದೆಯೇ?)

ಪದ್ಯ-೫೨:ಅರ್ಥ:ಭೀಮಸೇನನು ಗದೆಯನ್ನು ಹಿಡಿಯಲು

ಎದರಿಸಿ ಬದುಕುವ ವೈರಿ ಸೈನ್ಯವಿಲ್ಲ? ಇಷ್ಟು ಅಲ್ಲದೆ ಈ ಯುವರಾಜನಾದ ದುಶ್ಯಾಸನನ ರಕ್ತವನ್ನು ಕೌರವಸೈನ್ಯವು ನೋಡುತ್ತಿರುವ ಹಾಗೆಯೇ ಹೀರಿ, ನಿನ್ನ ಎರಡು ತೊಡೆಗಳನ್ನೂ ಯುದ್ಧಭೂಮಿಯಲ್ಲಿ ಜಜ್ಜಿ ಅಜಗಿಜಿ ಮಾಡುತ್ತೇನೆಂದು ಅವನು ಪ್ರತಿಜ್ಞೆ ಮಾಡಿದುದು

ನಿಜವಾಗದೇ

ಹೋಗುತ್ತದೆಯೇ?

ವ|| ಅದಲ್ಲದೆಯುಂ

ರಾಜಸೂಯ ವ್ಯತಿಕರದೊಳ್

ದಿಗ್ವಿಜಯಂ ಗೆಯ್ದು ಲಂಕೆಯ

ವಿಭೀಷಣನನೊಂದೆ

ದಿವ್ಯಾಸ್ತ್ರದೊಳೆಚ್ಚು

ಕಪ್ಪಂಗೊಂಡ

ವಿಕ್ರಮಾರ್ಜುನನ

ವಿಕ್ರಮಮುಮಂ ಕಾಪಿನ

ದೇವರೊಂದು

ಪೊಣ್ಮುಮಗಲದ ನೂಱು
ಯೋಜನದಳವಿ
ಖಾಂಡವವನಮನನಲಂ
ಗೂಡಿದರಾತಿಕಾಳಾನಳನಳವು
ವಂ ಜವನನವಯವದೊಳ್
ಗೆಲ್ದು ಪಾರ್ವರ ಪಿಳ್ಳೆಯ
ಪೋದ ಪ್ರಾಣಮಂ ತಂದ
ಸಾಹಸಾಭರಣನ
ಸಾಹಸಮುಮನಿಂದ್ರಕೀಲ
ನಗೇಂದ್ರದೊಳಿಂದ್ರನ
ಬೆಸದೊಳ್ ತಪೋವಿಘಾತಂ

ಮಾಡಲೆಂದು ಬಂದ
ಪುರಂದರನ ಗಣಿಕೆಯರ
ಕಡೆಗಣ್ಣ ನೋಟಕ್ಕಂ ಕಾಟಕ್ಕ
ಮಳ್ಕದ ಶೌಚಾಂಜನೇಯನ
ಶೌಚಮುಮಂ ದಾನವಾಪನಪ್ಪ
ಮೂಕದಾನವ
ಸೂಕರನನೊಂದೆ
ಸೂಟಿಂಬಿನೊಳೆಚ್ಚು ಕೊಂದ
ಪರಾಕ್ರಮಧವಳನ
ಪರಾಕ್ರಮಮುಮಂ
ತ್ರಿಣೇತ್ರನೊಳ್ ಕಾದಿ

ಪಾಶುಪತಾಸ್ತ್ರಮಂ ಪಡೆದ
ಕದನತ್ರಿಣೇತ್ರನ
ಗಂಡಗರ್ವಮುಮನಿಂದ್ರಲೋ
ಕಕ್ಕೆ ಪೋಗಿ ದೇವೇಂದ್ರನ
ಪಗೆವರಪ್ಪ ನಿವಾತಕವಚ
ಕಾಳಕೇಯ ಪೌಳೋಮ
ತಳತಾಳುಕರೆಂಬ ದೈತ್ಯರುಂ
ಪಡಲ್ವಡಿಸಿದ ಪಡೆಮೆಚ್ಚೆ
ಗಂಡನ ಗಂಡುಮಂ
ದೇವೇಂದ್ರನೊಳರ್ಧಾಸನಮೇ
ಱಿದ ಗುಣಾರ್ಣವನ

ಮಹಿಮೆಯುಮಂ
ಚಳುಕ್ಯಕುಳತಿಳಕನಪ್ಪ
ವಿಜಯಾದಿತ್ಯಂಗೆ
ಗೋವಿಂದರಾಜಂ ಮುಳಿಯೆ
ತಳರದೆ ಪೆಱಗಿಕ್ಕಿ ಕಾದ
ಶರಣಾಗತ ಜಳನಿಯ
ಪೆಂಪುಮಂ ಗೊಜ್ಜಿಗನೆಂಬ
ಸಕಲ ಚಕ್ರವರ್ತಿ ಬೆಸಸೆ
ದಂಡುವಂದ
ಮಹಾಸಾಮಂತರಂ
ಮರಲಿಱಿದು ಗೆಲ್ದ ಸಾಮಂತ

ಚೂಡಾಮಣಿಯ
ಬೀರಮುಮನತಿವರ್ತಿಯಾಗಿ
ಮಾರ್ಮಲೆವ ಚಕ್ರವರ್ತಿಯಂ
ಕಿಡಿಸಿ ತನ್ನ ನಂಬಿ ಬಂದ ಬದ್ದೆಗ
ದೇವಂಗೆ ಸಕಳ
ಸಾಮ್ರಾಜ್ಯಮನೋರಂತು
ಮಾಡಿ ನಿಱಿಸಿದರಿಕೇಸರಿಯ
ತೋಳ್ವಲಮುಮಂ
ಸಮದಗಜಘಟಾಟೋಪಂಬೆ
ರಸು ನೆಲನದಿರೆವಂದು ತಾಗಿದ
ಕಕ್ಕಲನ ತಮ್ಮನಪ್ಪ

ಬಪ್ಪುವನಂಕಕಾಱನನೊಂದೆ ಮದಾಂಧಗಂಧಸಿಂಧುರದೊ ಳೋಡಿಸಿದ ವೈರಿಗಜಘಟಾ ವಿಘಟನನದಟುಮಂ ಪರಚಕ್ರಂಗಳನಂಜಿಸಿದ ಪರಸೈನ್ಯ ಭೈರವನ ಮೇಗಿಲ್ಲದ ಬಲ್ಲಾಳ್ತನಮುಮಂ ಕಂಡುಂ ಕೇಳ್ದುಂ ನಿನಗೆ ಸೆಣಸಲೆಂತು ಬಗೆ ಬಂದಪುದು-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ

ರಾಜಸೂಯ ವ್ಯತಿಕರದೊಳ್
ದಿಗ್ವಿಜಯಂ ಗೆಯ್ದು
(ರಾಜಸೂಯದ
ಸಂದರ್ಭದಲ್ಲಿ
ದಿಗ್ವಿಜಯವನ್ನು ಮಾಡಿ)
ಲಂಕೆಯ ವಿಭೀಷಣನನು
ಒಂದೆ ದಿವ್ಯಾಸ್ತ್ರದೊಳು ಎಚ್ಚು
(ಹೊಡೆದು) ಕಪ್ಪಂಗೊಂಡ
(ಕಪ್ಪ ಪಡೆದ)
ವಿಕ್ರಮಾರ್ಜುನನ
ವಿಕ್ರಮಮುಮಂ

(ಸಾಹಸವನ್ನು), ಕಾಪಿನ
ದೇವರು ಒಂದು ಪೊೞ್ತಿಂ
(ಕಾವಲಿಗೋಸ್ಕರ ಇದ್ದ
ದೇವತೆಗಳು ಒಂದು ಹೊತ್ತೂ
ಅಗಲದಿದ್ದ ನೂರು ಯೋಜನ)
ಅಗಲದ ನೂಱು ಯೋಜನದ
ಅಳಮಿ (ಅಳತೆಯ)
ಖಾಂಡವವನಮನು
ಅನಲಂಗೆ (ಅಗ್ನಿಯು)
ಊಡಿದ ಆರಾತಿಕಾಳಾನಳನ
(ಅರ್ಜುನನ) ಅಳವುವಂ

(ಸಾಮರ್ಥ್ಯವನ್ನು) ಜವನನ ಅವಯವದೊಳ್ ಗೆಲ್ದು (ಯಮನನ್ನು ಶ್ರಮವಿಲ್ಲದೆ ಗೆದ್ದು) ಪಾರ್ವರ ಪಿಳ್ಳೆಯ ಪೋದ ಪ್ರಾಣಮಂ ತಂದ (ಬ್ರಾಹ್ಮಣನ ಮಗನ ಹೋಗಿದ್ದ ಪ್ರಾಣವನ್ನು ತಂದ) ಸಾಹಸಾಭರಣನ ಸಾಹಸಮುಂ (ಸಾಹಾಸಭರಣ ಅರ್ಜುನನ ಸಾಹಸವನ್ನೂ,) (**ಟಿಪ್ಪಣಿ**: ಈ ಕಥೆಯನ್ನು

ಎಲ್ಲಿಂದ ಪಂಪ ಎಲ್ಲಿಂದ
ತೆಗೆದುಕೊಂಡನೆಂಬುದು
ತಿಳಿದಿಲ್ಲ) ಇಂದ್ರಕೀಲ
ನಗೇಂದ್ರದೊಳು ಇಂದ್ರನ
ಬೆಸದೊಳ್ (ಆಜ್ಞೆಯ) ತಪೋ
ವಿಘಾತಂ (ವಿಘ್ನ)
ಮಾಡಲೆಂದು ಬಂದ
ಪುರಂದರನ ಗಣಿಕೆಯರ
ಕಡೆಗಣ್ಣ ನೋಟಕ್ಕಂ ಕಾಟಕ್ಕಂ
ಅಳ್ಕದ ಶೌಚಾಂಜನೇಯನ
ಶೌಚಮುಮಂ

(ಶುಚಿತ್ವವನ್ನೊ) ದಾನವ
ಆಪನಪ್ಪ ಮೂಕದಾನವ
ಸೂಕರನನು ಒಂದೆ
ಸೂಟಿಂಬಿನೊಳ್ ಎಚ್ಚು
(ಹಂದಿಯನ್ನು ಒಂದೇ
ಬಾಣದಲ್ಲಿ ಹೊಡೆದು ಕೊಂದ)
ಕೊಂದ ಪರಾಕ್ರಮಧವಳನ
ಪರಾಕ್ರಮಮುಮಂ,
ತ್ರಿಣೇತ್ರನೊಳ್ ಕಾದಿ
ಪಾಶುಪತಾಸ್ತ್ರಮಂ ಪಡೆದ
(ಈಶ್ವರನಲ್ಲಿ ಕಾದಿ

ಪಾಶುಪತಾಸ್ತ್ರವನ್ನು ಪಡೆದ)
ಕದನತ್ರಿಣೇತ್ರನ
ಗಂಡಗರ್ವಮುಮಂ
ಇಂದ್ರಲೋಕಕ್ಕೆ ಪೋಗಿ
ದೇವೇಂದ್ರನ ಪಗೆವರಪ್ಪ
ನಿವಾತಕವಚ ಕಾಳಕೇಯ
ಪೌಳೋಮ ತಳತಾಳುಕರೆಂಬ
ದೈತ್ಯರುಂ ಪಡಲ್ವಡಿಸಿದ (ಕೆಳಗೆ
ಬೀಲುವ ಹಾಗೆ ಮಾಡಿದ)
ಪಡೆಮೆಚ್ಚೆ ಗಂಡನ ಗಂಡುಮಂ
(ಪೌರುಷವನ್ನೂ)

ದೇವೇಂದ್ರನೊಳು
ಅರ್ಧಾಸನಮಂ ಏಱಿದ
(ಏರಿದ) ಗುಣಾರ್ಣವನ
ಮಹಿಮೆಯುಮಂ, (ಇದು
ರಾಜ ವೀರಕೇಸರಿಯ ಸಾಹಸ:
ಚಳುಕ್ಯಕುಳ ತಿಳಕನಪ್ಪ
ವಿಜಯಾದಿತ್ಯಂಗೆ
ಗೋವಿಂದರಾಜಂ ಮುಳಿಯೆ
(ಪ್ರತಿಭಟಿಸಲು) ತಳರದೆ
ಪೆಱಗಿಕ್ಕಿ ಕಾದ ಶರಣಾಗತ
ಜಳನಿಯ ಪೆಂಪುಮಂ

ಗೊಜ್ಜಿಗನೆಂಬ ಸಕಲ
ಚಕ್ರವರ್ತಿ ಬೆಸಸೆ ದಂಡುವಂದ
ಮಹಾಸಾಮಂತರಂ
ಮರಲಿಱಿದು ಗೆಲ್ದ ಸಾಮಂತ
ಚೂಡಾಮಣಿಯ
ಬೀರಮುಮನತಿವರ್ತಿಯಾಗಿ
ಮಾರ್ಮಲೆವ ಚಕ್ರವರ್ತಿಯಂ
ಕಿಡಿಸಿ ತನ್ನ ನಂಬಿ ಬಂದ
ಬದ್ದೆಗ ದೇವಂಗೆ ಸಕಳ
ಸಾಮ್ರಾಜ್ಯಮನೋರಂತು
ಮಾಡಿ ನಿಱಿಸಿದ

ಅರಿಕೇಸರಿಯ
ತೋಳ್ವಲಮುಮಂ
ಸಮದಗಜ ಘಟಾಟೋಪಂ
ಬೆರಸು ನೆಲನು ಅದಿರೆವಂದು
ತಾಗಿದ ಕಕ್ಕಲನ ತಮ್ಮನಪ್ಪ
ಬಪ್ಪುವನಂಕಕಾಱನನೊಂದೆ
ಮದಾಂಧಗಂಧಸಿಂಧುರದೊ
ಳೋಡಿಸಿದ ವೈರಿಗಜಘಟಾ
(ಶತ್ರುಗಳ ಆನೆಯ
ಸಮೂಹವನ್ನು
ಒಡೆದುಹಾಕುವ

ಶಕ್ತಿಯನ್ನುಳ್ಳ))
ವಿಘಟನನದಟುಮಂ
ಪರಚಕ್ರಂಗಳನಂಜಿಸಿದ
ಪರಸೈನ್ಯ ಭೈರವನ ಮೇಗಿಲ್ಲದ
ಬಲ್ಲಾಳ್ತನಮುಮಂ ಕಂಡುಂ
ಕೇಳ್ದುಂ ನಿನಗೆ ಸೆಣಸಲೆಂತು
ಬಗೆ ಬಂದಪುದು-
ವಚನ:ಅರ್ಥ:ಅದಲ್ಲದೆ
ರಾಜಸೂಯದ ಸಂದರ್ಭದಲ್ಲಿ
ದಿಗ್ವಿಜಯವನ್ನು ಮಾಡಿ
ಲಂಕಾಪಟ್ಟಣದ

ವಿಭೀಷಣನನ್ನು ಒಂದೇ
ದಿವ್ಯಾಸ್ತ್ರದಿಂದ ಹೊಡೆದು
ಕಪ್ಪವನ್ನು ತೆಗೆದುಕೊಂಡ
ವಿಕ್ರಮಾರ್ಜುನನ
ಪರಾಕ್ರಮವನ್ನು,
ಕಾವಲಿಗೋಸ್ಕರ ಇದ್ದ
ದೇವತೆಗಳು ಒಂದು ಹೊತ್ತೂ
ಅಗಲದಿದ್ದ ನೂರು ಯೋಜನ
ವಿಸ್ತಾರದ ಖಾಂಡವವನವನ್ನು
ಅಗ್ನಿಗೆ ಸಮರ್ಪಿಸಿದ
ಅರಾತಿಕಾಳಾನಳನ

ಶಕ್ತಿಯನ್ನೂ, ಯಮನನ್ನು
ಶ್ರಮವಿಲ್ಲದೆ ಗೆದ್ದು ಬ್ರಾಹ್ಮಣನ
ಮಗನ ಹೋಗಿದ್ದ ಪ್ರಾಣವನ್ನು
ತಂದ ಸಾಹಾಸಭರಣ
ಅರ್ಜುನನ ಸಾಹಸವನ್ನೂ,
ಇಂದ್ರಕೀಲಪರ್ವತದಲ್ಲಿ
ಇಂದ್ರನ ಆಜ್ಞೆಯ ಪ್ರಕಾರ
ತಪಸ್ಸಿಗೆ
ವಿಘ್ನಮಾಡಬೇಕೆಂದು ಬಂದ
ಇಂದ್ರನ ವೇಶ್ಯೆಯರ
ಕಟಾಕ್ಷದೃಷ್ಟಿಗೂ ಅವರ

ಹಿಂಸೆಗೂ ಹೆದರದ
ಶೌಚಾಂಜನೇಯನ
ಶುಚಿತ್ವವನ್ನೂ,
ರಾಕ್ಷಾಸಾಪತಿಯಾದ
ಮೂಕರಾಕ್ಷಸನೆಂಬ
ಹಂದಿಯನ್ನು ಒಂದೇ
ಬಾಣದಲ್ಲಿ ಹೊಡೆದು ಕೊಂದ
ಪರಾಕ್ರಮಧವಳನ
ಪರಾಕ್ರಮವನ್ನೂ ಈಶ್ವರನಲ್ಲಿ
ಕಾದಿ ಪಾಶುಪತಾಸ್ತ್ರವನ್ನು
ಪಡೆದ ಕದನತ್ರಿಣೇತ್ರನ

ಪೌರುಷಾಹಂಕಾರವನ್ನೂ

ಇಂದ್ರಲೋಕಕ್ಕೆ ಹೋಗಿ

ದೇವೇಂದ್ರನ ಶತ್ರುಗಳಾಗಿದ್ದ

ನಿವಾಚಕವಚ, ಕಾಳಕೇಯ,

ಪೌಳೋಮ, ತಳತಾಳುಕರೆಂಬ

ರಾಕ್ಷಸರನ್ನು ಕೆಳಗೆ ಬೀಲುವ

ಹಾಗೆ ಮಾಡಿದ

ಪಡೆಮೆಚ್ಚೆಗಂಡನ

ಪೌರುಷವನ್ನೂ,

ದೇವೇಂದ್ರನಲ್ಲಿ

ಅರ್ಧಾಸನವನ್ನು ಪಡೆದು

ಗಣಾರ್ಣವನ

ಮಹಿಮೆಯನ್ನೂ, *[ಇದು ಪಂಪನ*

ರಾಜ ವೀರಕೇಸರಿಯ ಸಾಹಸ:

ಚಾಳುಕ್ಯಕುಲತಿಲಕನಾದ

ವಿಜಯಾದಿತ್ಯನಿಗೆ

ಗೋವಿಂದರಾಜನು ಪ್ರತಿಭಟಿಸಲು

ಅವನನ್ನು ಸಾವಕಾಶಮಾಡದೆ

ಹಿಂದಕ್ಕೆ ನೂಕಿ ರಕ್ಷಿಸಿದ ಶರಣಾಗತ

ಸಮುದ್ರನ ಮಹಿಮೆಯನ್ನೂ

ಗೊಜ್ಜಿಗನೆಂಬ ಸಕಲಚಕ್ರವರ್ತಿಯು

ಆಜ್ಞೆಮಾಡಲು ದಂಡೆತ್ತಿಬಂದ

ಮಹಾಸಾಮಂತರನ್ನೆಲ್ಲ
ಹಿಮ್ಮೆಟ್ಟುವಂತೆ ಹೊಡೆದು ಗೆದ್ದ
ಸಾಮಂತ ಚೂಡಾಮಣಿಯ
ವೀರ್ಯವನ್ನೂ, ಎಲ್ಲೆ ಮೀರಿ
ಪ್ರತಿಭಟಿಸುವ ಚಕ್ರವರ್ತಿಯನ್ನು
ಹಾಳುಮಾಡಿ ತನ್ನನ್ನೇ ನಂಬಿ ಬಂದ
ಬದ್ದೆಗದೇವನಿಗೆ
ಸಕಲಸಾಮ್ರಾಜ್ಯವನ್ನು
ಏಕಪ್ರಕಾರವಾಗಿ ಮಾಡಿ ಸ್ಥಾಪಿಸಿದ
ಅರಿಕೇಸರಿಯ ತೋಳ ಬಲವನ್ನು
ಮದ್ದಾನೆಗಳ ಗುಂಪಿನ

ಆರ್ಭಟದಿಂದ ಕೂಡಿ ಭೂಮಿಯು ನಡುಗುವಂತೆ ಬಂದು ತಾಗಿದ ಕಕ್ಕಲನ ತಮ್ಮನಾದ ಬಪ್ಪುವನೆಂಬ ಜಟ್ಟಿಯನ್ನು ಒಂದೇ ಮದ್ದಾನೆಯಿಂದ ಓಡಿಸಿದ ವೈರಿಗಜ ಘಟಾವಿಘಟನ ಪಟುವಾದ (ಶತ್ರುಗಳ ಆನೆಯ ಸಮೂಹವನ್ನು ಒಡೆದುಹಾಕುವ ಶಕ್ತಿಯನ್ನುಳ್ಳ] ಅರ್ಜುನನ ಪರಾಕ್ರಮವನ್ನೂ, ಶತ್ರುಸೈನ್ಯವನ್ನು ಹೆದರಿಸಿದ ಪರಸೈನ್ಯಭೈರವನ

ಅತಿಶಯವಾದ
ಪೌರುಷವನ್ನೂ ಕಂಡೂ
ಕೇಳಿಯೂ ನಿನಗೆ
ಹೋರಾಡಲು ಹೇಗೆ ಮನಸ್ಸು
ಬರುತ್ತದೆ.

**ಉ|| ನೆಟ್ಟನೆ ಬೂತುಗೊಳ್ವ
ತೆಱದಿಂ ದಶಕಂಧರನಾಡಿ
ಪಾಡಿ ನಾ
ಣ್ಗೆಟ್ಟಿರೆ ಕೊಂಡನಲ್ಲದೆ
ಬರಂಗಳನೀಶ್ವರನಲ್ಲಿ
ಪೇೞಿಮಾ|**

ಪೊಟ್ಟಜೆಯಿಂದೆ ಕೊಂಡನೆನುತುಂ ವಿಜಯಂ ನೆಲಕಿಕ್ಕಿ ಗಂಟಲಂ ಮೆಟ್ಟದೆ ಕೊಂಡನೇ ಹರನ ಪಾಶುಪತಾಸ್ತ್ರಮನಿಂದ್ರಕೀಲದೊಳ್|| ೫೩ ||

ಪದ್ಯ-೫೩:ಪದವಿಭಾಗ-ಅರ್ಥ:ನೆಟ್ಟನೆ ಬೂತುಗೊಳ್ವ (ಕೊಳ್ವ) ತೆಱದಿಂ (ನೇರವಾಗಿ ಬಡಪ್ರಾಣಿ ತೆಗೆದುಕೊಳ್ಳುವ ಹಾಗೆ) ದಶಕಂಧರನು ಆಡಿ

ಪಾಡಿ (ರಾವನನು ಹಾಡಿ ಕುಣಿದು)ನಾಣ್ಗೆಟ್ಟಿರೆ (ನಾಣ್ ಕೆಟ್ಟಿರೆ- ನಾಚಿಗೆ ಕೆಟ್ಟಂತೆ) ಕೊಂಡನಲ್ಲದೆ ಬರಂಗಳಂ ಈಶ್ವರನಲ್ಲಿ (ಈಶ್ವರನಿಂದ ವರಗಳನ್ನು ಪಡೆದು ಅಲ್ಲದೆ) ಪೇಟಿಂ ಆ ವ್ಪೊಟ್ಟಜೆಯಿಂದೆ (ಪರಾಕ್ರಮ) ಕೊಂಡನೆ (ತನ್ನ ಪರಾಕ್ರಮದಿಂದ ತೆಗೆದುಕೊಂಡನೆ.) ಎನುತುಂ ವಿಜಯಂ

(ಅರ್ಜುನನಾದರೋ) ನೆಲಕೆ
ಇಕ್ಕಿ ಗಂಟಲಂ ಮೆಟ್ಟದೆ
ಕೊಂಡನೇ
(ಅರ್ಜುನನಾದರೋ
ಶಿವನನ್ನು ನೆಲಕ್ಕೆ ತಳ್ಳಿ
ಗಂಟಲನ್ನು ಮೆಟ್ಟದೆ
ತೆಗೆದುಕೊಂಡನೆ?) ಹರನ
ಪಾಶುಪತಾಸ್ತ್ರಮಂ
ಇಂದ್ರಕೀಲದೊಳ್ (ಈಶ್ವರನ
ಪಾಶುಪತಾಸ್ತ್ರವನ್ನು
ಇಂದ್ರಕೀಲಪರ್ವತದಲ್ಲಿ

ಗಂಟಲನ್ನು ಮೆಟ್ಟಿ
ತೆಗೆದುಕೊಂಡನು.)
ಪದ್ಯ-೫೩:ಅರ್ಥ:ದುರ್ಯೋಧನನ್ನು ಕುರಿತು
ಮತ್ತೂಹೇಳಿದ ಕೃಷ್ಣ:
ರಾವಣನು ಸಾಮಾನ್ಯವಾದ
ಬಡಪ್ರಾಣಿಯಂತೆ ಹಾಡಿ ಪಾಡಿ
ಬೇಡಿ ನಾಚಿಕೆಯಾಗುವ
ರೀತಿಯಲ್ಲಿ ಈಶ್ವರನಿಂದ
ವರಗಳನ್ನು ಪಡೆದನಲ್ಲದೆ ತನ್ನ
ಪರಾಕ್ರಮದಿಂದ

ತೆಗೆದುಕೊಂಡನೆ. ಹೇಳು.
ಅರ್ಜುನನಾದರೋ ಶಿವನನ್ನು
ನೆಲಕ್ಕೆ ತಳ್ಳಿ ಗಂಟಲನ್ನು
ಮೆಟ್ಟದೆ ಈಶ್ವರನ
ಪಾಶುಪತಾಸ್ತ್ರವನ್ನು
ಪಡೆದನೇ?
ಇಂದ್ರಕೀಲಪರ್ವತದಲ್ಲಿ
ಗಂಟಲನ್ನು ಮೆಟ್ಟಿ
ತೆಗೆದುಕೊಂಡನು.
(ಅರ್ಜುನನು ರಾವಣನಿಗಿಂತ
ಪರಾಕ್ರಮಿ ಎಂದರ್ಥ)

ಪೊಂಗಿ ಕಡಂಗಿ ಬೀರದೊಳ್
ಬೀಗುವ ನಿನ್ನಣುಗಾಳೆ ನೋಡೆ
ನಿ
ನ್ನಂಗನೆಯರ್ ತೊವಲ್ಗೊಳೆ
ಭಯಂಗೊಳೆ
ಕೋಡಗಗಟ್ಟುಗಟ್ಟಿ ಚಿ|
ತ್ರಾಂಗದನುಯ್ಯೆ
ನಿನ್ನನೆಡೆಮಾಡದಸುಂಗೊಳೆ
ಕಾದಿ ತಂದ ವೀ
ರಂಗರಿಗಂಗೆ ನೀಂ ಮಲೆದು
ನಿಲ್ವುದು ಪಾಟಿವಲಂ

ಸುಯೋಧನಾ|| ೫೪ ||

ಪದ್ಯ-೫೪:ಪದವಿಭಾಗ-ಅರ್ಥ:ಪೊಂಗಿ ಕಡಂಗಿ ಬೀರದೊಳ್ ಬೀಗುವ ನಿನ್ನಣುಗಾಳೆ ನೋಡೆ (ಸೊಕ್ಕಿನಿಂದ ಉತ್ಸಾಹಿಸಿ ಶೌರ್ಯದಿಂದ ಅಹಂಕಾರಪಡುವ ನಿನ್ನ ಪ್ರೀತಿಪಾತ್ರರಾದ ಯೋಧರೇ ನೋಡುತ್ತಿರಲು) ನಿನ್ನ ಅಂಗನೆಯರ್ ತೊವಲ್ಗೊಳೆ

(ತೊವಲ್ ಕೊಳೆ ಭಯದಿಂದ
ಹೆದರಿದಾಗ ರಕ್ಷಣೆಗಾಗಿ
ಚಿಗುರು ಕೊಂಬೆ
ಹಿಡಿಯುವುದು) ಭಯಂಗೊಳೆ
(ನಿನ್ನ ಸ್ತ್ರೀಯರು ತಮ್ಮ
ಚಿಗುರನ್ನು ಹಿಡಿದುಕೊಂಡು
ಹೆದರಿರಲು,)
ಕೋಡಗಗಟ್ಟುಗಟ್ಟಿ
ಚಿತ್ರಾಂಗದನು ಉಯ್ಯೆ
(ನಿನ್ನನ್ನು ಕೋತಿಯನ್ನು
ಕಟ್ಟುವಂತೆ ಕಟ್ಟಿ

ಚಿತ್ರಾಂಗಧನು ತೆಗೆದುಕೊಂಡು ಹೋಗುತ್ತಿರಲು) ನಿನ್ನನು ಎಡೆಮಾಡದೆ ಅಸುಂಗೊಳೆ ಕಾದಿ (ತಡೆಮಾಡದೆ ಪ್ರಾಣವನ್ನೇ ಸೆಳೆಯುವಂತೆ ಯುದ್ಧಮಾಡಿ) ತಂದ ವೀರಂಗೆ ಅರಿಗಂಗೆ ನೀಂ ಮಲೆದು ನಿಲ್ವುದು ಪಾೞೆ ವಲಂ ಸುಯೋಧನಾ|()

ಪದ್ಯ-೫೪:ಅರ್ಥ:ಸೊಕ್ಕಿನಿಂದ ಉತ್ಸಾಹಿಸಿ ಶೌರ್ಯದಿಂದ

ಅಹಂಕಾರಪಡುವ ನಿನ್ನ
ಪ್ರೀತಿಪಾತ್ರರಾದ ಯೋಧರೇ
ನೋಡುತ್ತಿರಲು ನಿನ್ನ
ಸ್ತ್ರೀಯರು ತಮ್ಮ ಚಿಗುರನ್ನು
ಹಿಡಿದುಕೊಂಡು ಹೆದರಿರಲು
ಚಿತ್ರಾಂಗದನೆಂಬ ಗಂಧರ್ವನು
ನಿನ್ನನ್ನು ಕೋತಿಯನ್ನು
ಕಟ್ಟುವಂತೆ ಕಟ್ಟಿ
ತೆಗೆದುಕೊಂಡು
ಹೋಗುತ್ತಿರಲು ತಡೆಮಾಡದೆ
ಪ್ರಾಣವನ್ನೇ ಸೆಳೆಯುವಂತೆ

ಯುದ್ಧಮಾಡಿ ತಂದ
ವೀರನಾದ ಅರ್ಜುನನಿಗೆ
ಮಲೆತು ನೀನು ಎದುರಿಸಿ
ನಿಲ್ಲುವುದು ಕ್ರಮವಾದ
ಸರತಿಯ ನೆಡಯೇ ವಲಂ!
ಅಬ್ಬಾ! ದುರ್ಯೋಧನಾ?
ಪಾಂಡವರಿಗೆ ಅವಕಾಶದ
ಸರತಿ/ ಪಾಳಿ ಬಂದಾಗ
ದುರ್ಯೋಧನನ್ನು ರಕ್ಷಿಸಿದರು,
ಈಗ ದುರ್ಯೋಧನನ ಸರತಿ,

ಈಗ ಕೆಡುಕು, ಅನ್ಯಾಯ
ಮಾಡುವುದೇ?

ಮ||ಸ್ರ|| ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ ಕೃಪಾಚಾರ್ಯನಿಲ್ಲಾ ಕುರುರಾಜಾ ನಿನ್ನ ತಮ್ಮಂದಿರೊಳಿನಿಬರೊಳಾರಿಲ್ಲ ಗಾಂಗೇಯನಿಲ್ಲಾ| ಮರುಳೇ ಗಾಂಡೀವಿಯಾರೆಂದೆಣಿಕೆಗಳೆ

ವೆ ಗಂಧರ್ವರುಯ್ವುಂದು ನಿನ್ನಂ ಕರುವಿಟ್ಟಂತಿರ್ದುದಿಲ್ಲಾ ನೆರೆದ ಕುರುಬಲಂ ತಂದವಂ ಪಾರ್ಥನಲ್ಲಾ|| ೫೫ ||

ಪದ್ಯ-೫೫:ಪದವಿಭಾಗ-ಅರ್ಥ:ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ ಕೃಪಾಚಾರ್ಯನಿಲ್ಲಾ ಕುರುರಾಜಾ ನಿನ್ನ ತಮ್ಮಂದಿರೊಳು

ಇನಿಬರೊಳಾರಿಲ್ಲ
ಗಾಂಗೇಯನು ಇಲ್ಲಾ (ನಿನ್ನ
ಆಪತ್ಕಾಲದಲ್ಲಿ ಇವರಾರೂ
ಇಲ್ಲ,) ಮರುಳೇ ಗಾಂಡೀವಿ
ಯಾರೆಂದು, ಎಣಿಕೆಗೆ ಅಳೆವೆ
(ಬುಧ್ಧಿಗೇಡಿಯೇ,ಅರ್ಜುನನು
ಯಾರೆಂದು ತಿಳಿದೆ! ಅವನ
ಶಕ್ತಿಯನ್ನು ಊಹಿಸಲು
ಸಾಧ್ಯವೇ?) ಗಂಧರ್ವರು
ಉಯ್ಯಂದು ನಿನ್ನಂ
ಕರುವಿಟ್ಟಂತೆ ಇರ್ದುದಿಲ್ಲಾ

ನೆರೆದ ಕುರುಬಲಂ (ನಿನ್ನನ್ನು ಗಂಧರ್ವರು ಹೊತ್ತುಕೊಂಡು ಹಾದಾಗ ಕುರುಸೈನ್ಯವು ಮರಗಟ್ಟಿದಂತೆ ಸ್ತಬ್ಧವಾಗಿತ್ತಲ್ಲವೆ?) ತಂದವಂ ಪಾರ್ಥನಲ್ಲಾ (ನಿನ್ನನ್ನು ಬಿಡಿಸಿ ತಂದವನು ಅರ್ಜುನನಲ್ಲವೇ?)

ಪದ್ಯ-೫೫:ಅರ್ಥ:ನಿನ್ನನ್ನು ಗಂಧರ್ವರು ಸೆಳೆದುಕೊಂಡು ಹೋದಾಗ,

ದ್ರೋಣಾಚಾರ್ಯರಿಲ್ಲ, ಕರ್ಣನಿಲ್ಲ, ಅಶ್ವತ್ಥಾಮನಿಲ್ಲ, ಕೃಪಾಚಾರ್ಯನೂ ಇಲ್ಲ, ನಿನ್ನ ಇಷ್ಟು ಜನ ತಮ್ಮಂದಿರಲ್ಲಿ ಯಾರೂ ಇಲ್ಲ, ಭೀಷ್ಮನೂ ಇಲ್ಲ. ಯಾರೂ ಸಮಯಕ್ಕಾಗಲಿಲ್ಲ. ಬುಧ್ಧಿಗೇಡಿಯೇ,ಅರ್ಜುನನು ಯಾರೆಂದು ತಿಳಿದೆ! ಅವನ ಶಕ್ತಿಯನ್ನು ಊಹಿಸಲು ಸಾದ್ಯವೇ? ನಿನ್ನನ್ನು

ಗಂಧರ್ವರು ಹೊತ್ತುಕೊಂಡು ಹಾದಾಗ ಕುರುಸೈನ್ಯವು ಮರಗಟ್ಟಿದಂತೆ ಸ್ತಬ್ಧವಾಗಿತ್ತಲ್ಲವೆ? ನಿನ್ನನ್ನು ಬಿಡಿಸಿ ತಂದವನು ಅರ್ಜುನನಲ್ಲವೇ?

ಮ||

ಬವರಂಗೆಯ್ವಮೋಘಮೆಂಬ ಬಗೆಯಿಂ ನೀಮೆಲ್ಲಮಾದಂ ರಣೋ

ತ್ಸವದಿಂ ನಿನ್ನೆಯೆ ಪೋದ

ಗೋಗ್ರಹಣದಂದೇನಾದಿರಂ

ತಾ ಪರಾ|

ಭವಮಂ ಚಿಃ

ಮದಿರ್ದಿರಪ್ಪೊಡಮದೇನೇ

ವೋದುದಿನ್ನುಂ ಗುಣಾ

ರ್ಣವನಿಂ ನಾಳೆಯೆಂ

ಕೇಳದಿರ್ಪಿರೆ ಮಹಾ

ಗಾಂಡೀವ ನಿರ್ಘೋಷಮಂ||

೫೬ ||

ಪದ್ಯ-೫೬:ಪದವಿಭಾಗ-ಅರ್ಥ:ಬವರಂ ಗೆಯ್ವುಮ್ ಅಮೋಘಮೆಂಬ ಬಗೆಯಿಂ (ಅಮೋಘವಾದ ರೀತಿಯಲ್ಲಿ ಯುದ್ಧಮಾಡಬೇಕು ಎಂಬ ಮನಸ್ಸಿನಿಂದ) ನೀಮೆಲ್ಲಮು ಆದಂ ರಣೋತ್ಸವದಿಂ (ನೀವೆಲ್ಲರೂ ರಣೋತ್ಸಾಹದಿಂದ ಹೊಗಿ) ನಿನ್ನೆಯೆ ಪೋದ ಗೋಗ್ರಹಣದಂದ ಏನಾದಿರಿ

(ನಿನ್ನೆ ನಡೆದ ದನಗಳನ್ನು
ಹಿಡಿಯುವ ಸಂದರ್ಭದಲ್ಲಿ
ಏನಾದಿರಿ?) ಅಂತಾ
ಪರಾಭವಮಂ ಚಿಃ
ಮದಿರ್ದಿರಪ್ಪೊಡೆ
(ಆಗುಂಟಾದ ಸೋಲನ್ನು ಚಿ
ಮರೆತಿರುವಿರಾದರೆ) ಅದೇನ್
ಏವ್ರೋದುದು (ಅದೇನು,
ಏನಾದುದು?) ಇನ್ನುಂ
ಗುಣಾರ್ಣವನಿಂ ನಾಳೆಯೆಂ
ಕೇಳದಿರ್ಪಿರೆ ಮಹಾ

ಗಾಂಡೀವ ನಿರ್ಘೋಷಮಂ (ಅರ್ಜುನನಿಂದ ನಾಳೆಯೇ ಮಹಾಗಾಂಡೀವದ ಠಂಕಾರ ಶಬ್ದವನ್ನು ಕೇಳದೆ ಇರುವಿರಾ)

ಪದ್ಯ-೫೬:ಅರ್ಥ:ಅಮೋಘ ವಾದ ರೀತಿಯಲ್ಲಿ ಯುದ್ಧಮಾಡಬೇಕು ಎಂಬ ಮನಸ್ಸಿನಿಂದ ನೀವೆಲ್ಲರೂ ರಣೋತ್ಸಾಹದಿಂದ ಹೊಗಿ ನಿನ್ನೆ ನಡೆದ ದನಗಳನ್ನು ಹಿಡಿಯುವ ಸಂದರ್ಭದಲ್ಲಿ

ಏನಾದಿರಿ? ಆಗುಂಟಾದ
ಸೋಲನ್ನು ಚಿ
ಮರೆತಿರುವಿರಾದರೆ ಏನಂತೆ?
ಇನ್ನೂ ಗುಣಾರ್ಣವನಾದ
ಅರ್ಜುನನಿಂದ ನಾಳೆಯೇ
ಮಹಾಗಾಂಡೀವದ ಠಂಕಾರ
ಶಬ್ದವನ್ನು ಕೇಳದೆ ಇರುವಿರಾ?
ಕೇಳಿಯೇ ಕೇಳುವಿರಿ.

ಕೃಷ್ಣನಿಂದ ಬರಲಿರುವ ಯುದ್ಧದ ವರ್ಣನೆ

ಚಂ|| ಸುರಿವ ಸರಲ್ ನರಲ್ವ

ಭಟರೆತ್ತಮುರುಳ್ವ ದಟಿಂ

ಪೊರಳ್ವ ಸಿಂ

ಧುರ ಘಟೆ ಬರ್ಪ ನೆತ್ತರ

ಕಡಲ್

ಕುಣಿವಟ್ಟೆಗಳಾಜಿಯೊಳ್

ಭಯಂ|

ಕರತರಮಪ್ಪಿನಂ

ಪಗೆವರೊಕ್ಕಲೊಳೋವೆನಲೊ

ರ್ವರಿಲ್ಲದಂ

ತಿರೆ ತವೆ

ಕೊಲ್ಗುಮಂತುಮರಿಕೇಸರಿಗಾಂ

ತು ಬರ್ದುಂಕಲಕ್ಕುಮೇ|| ೫೭ ||

ಪದ್ಯ-೫೭:ಪದವಿಭಾಗ-

ಅರ್ಥ:ಸುರಿವ ಸರಲ್

(ಬಾಣ) ನರಲ್ವ ಭಟರ

ಎತ್ತಮ್ ಉರುಳ್ವ ದಳಿಂ

(ಸೈನ್ಯ) ಪೊರಳ್ವ ಸಿಂಧುರ

ಘಟೆ (ಹೊರಳುವ ಆನೆಗಳ

ಸಮೂಹ) ಬರ್ಪ ನೆತ್ತರ

ಕಡಲ್ (ಹರಿದು ಬರುತ್ತಿರುವ
ರಕ್ತಸಮುದ್ರ,) ಕುಣಿವ
ಅಟ್ಟೆಗಳು (ಕುಣಿಯುವ
ತಲೆಯಿಲ್ಲದ ಮುಂಡಗಳು,)
ಆಜಿಯೊಳ್ ಭಯಂಕರ ತರಂ
ಅಪ್ಪಿನಂ (ಮುಂದಿನ
ಯುದ್ಧದಲ್ಲಿ
ಭಯಂಕರವಾಗುವ ಹಾಗೆ)
ಪಗೆವರು ಒಕ್ಕಲೊಳ್
ಓವೆನಲ್ ಒರ್ವರು
ಇಲ್ಲದಂತಿರೆ (ಶತ್ರುಶಿಬಿರದಲ್ಲಿ

ಓ ಎನ್ನುವುದಕ್ಕೆ ಒಬ್ಬರೂ ಇಲ್ಲದಂತೆ) ತವೆ ಕೊಲ್ಗುಂ (ಸಂಪೂರ್ಣವಾಗಿ ಕೊಲ್ಲುತ್ತಾನೆ.) ಅಂತುಂ ಅರಿಕೇಸರಿಗೆ ಆಂತು ಬರ್ದುಂಕಲ್ ಅಕ್ಕುಮೇ (ಹಾಗೆ ಅರಿಕೇಸರಿಗೆ/ ಅರ್ಜುನನಿಗೆ ಎದರಿಸಿ ಬದುಕಲು ಸಾಧ್ಯವೇ?)

ಪದ್ಯ-೫೭:ಅರ್ಥ:ಕೃಷ್ಣನು ಹೇಳಿದ:ಮುಂದಿನ ಯುದ್ಧದ

ವರ್ಣನೆ: ಸುರಿಯುವ ಬಾಣಗಳು, ನರಳುತ್ತಿರುವ ಯೋಧರು, ಉರುಳುತ್ತಿರುವ ಸೈನ್ಯ, ಹೊರಳುವ ಆನೆಗಳ ಸಮೂಹ, ಹರಿದು ಬರುತ್ತಿರುವ ರಕ್ತಸಮುದ್ರ, ಕುಣಿಯುವ ತಲೆಯಿಲ್ಲದ ಮುಂಡಗಳು, ಮುಂದಿನ ಯುದ್ಧದಲ್ಲಿ ಭಯಂಕರವಾಗುವ ಹಾಗೆ ಶತ್ರುಶಿಬಿರದಲ್ಲಿ ಓ

ಎನ್ನುವುದಕ್ಕೆ ಒಬ್ಬರೂ
ಇಲ್ಲದಂತೆ ಸಂಪೂರ್ಣವಾಗಿ
ಕೊಲ್ಲುತ್ತಾನೆ. ಹಾಗೆ
ಅರಿಕೇಸರಿಗೆ/ ಅರ್ಜುನನಿಗೆ
ಎದರಿಸಿ ಬದುಕಲು
ಸಾಧ್ಯವೇ?

ವ|| ಎಂದು ಕಾಳನೀಳಮೇಘದಂತು ಮಸಗಿ ಗರ್ಜಿಸುವಸುರಕುಳವಿಷಯ

ಕೇತುಗೆ ಫಣಿಕೇತು ಮುಳಿದು ತಳಮಳಿಸಿ ಕಣ್ಗಾಣದೆ

ವಚನ:ಪದವಿಭಾಗ-ಅರ್ಥ:ಎಂದು ಕಾಳನೀಳಮೇಘದ ಅಂತು (ಪ್ರಳಯಕಾಲದ ಕಪ್ಪುಮೋಡದ ಹಾಗೆ) ಮಸಗಿ ಗರ್ಜಿಸುವ ಅಸುರಕುಳವಿಷಯಕೇತುಗೆ (ರೇಗಿ ಗರ್ಜನೆ ಮಾಡುವ ಕೃಷ್ಣನಿಗೆ) ಫಣಿಕೇತು ಮುಳಿದು

ತಳಮಳಿಸಿ ಕಣ್ಣಾಗಣದೆ (ದುರ್ಯೋಧನನು ಕೋಪಿಸಿಕೊಂಡು ಕುದಿದು ದಿಕ್ಕುತೋರದೆ)-

ವಚನ:ಅರ್ಥ:ಎಂದು ಪ್ರಳಯಕಾಲದ ಕಪ್ಪುಮೋಡದ ಹಾಗೆ ರೇಗಿ ಗರ್ಜನೆ ಮಾಡುವ ಕೃಷ್ಣನಿಗೆ ದುರ್ಯೋಧನನು ಕೋಪಿಸಿಕೊಂಡು ಕುದಿದು ದಿಕ್ಕುತೋರದೆ-

ಕಂ|| ಎೞ್ಪೋಗು ದೂತನಪ್ಪನ ಬೆೞ್ಪಿನ ನುಡಿಗೇಳ್ದು ಮುಳಿಯಲಾಗದು ನೀನುಂ| ಮೇೞ್ಪಿಟ್ಟು ವಿದುರನೆಂಬೀ ತೊೞ್ಪುಟ್ಟಿಯ ಮನೆಯ ಕೂೞ್ ನುಡಿಯಿಸೆ ನುಡಿದೈ|| ೫೮ ||

ಪದ್ಯ-೫೮:ಪದವಿಭಾಗ-ಅರ್ಥ:ಎೞ್ ಪೋಗು ದೂತನಪ್ಪನ ಬೆೞ್ಪಿನ ಬೆಳ್ಪಿನ ನುಡಿ ಕೇಳ್ದು

ಮುಳಿಯಲಾಗದು (ಏಳು, ಹೋಗು; ದೂತನಾದವನ ಬೇಡುವ, ಬೆಳ್ಪಿನ - ಅಪ್ರಯೋಜಕ ಮಾತನ್ನು ಕೇಳಿ ಕೋಪಿಸಬಾರದು.) ನೀನು ಮೆಚ್ಚಿಟ್ಟು ವಿದುರನೆಂಬ ಈ ತೊಟ್ಟುಟ್ಟಿಯ ಮನೆಯ ಕೂಟ (ನೀನು ಮೇಲೆಬಿದ್ದು ಯೋಚಿಸದೆ ಹೋಗಿ ತಿಂದ, ವಿದುರನೆಂಬ ದಾಸೀಪುತ್ರನ ಮನೆಯ ಕೂಳಿನ ಕೊಬ್ಬು)

ನುಡಿಯಿಸೆ ನುಡಿದೈ (ಮಾತನಾಡಿಸಲು ನೀನು ಹೇಗೆ ಮಾತನಾಡಿದ್ದೀಯೆ.)

ಪದ್ಯ-೫೮:ಅರ್ಥ:“ಏಳು, ಹೋಗು; ದೂತನಾದವನ ಅಪ್ರಯೋಜಕ ಮಾತನ್ನು ಕೇಳಿ ಕೋಪಿಸಬಾರದು. ನೀನು ಮೇಲೆಬಿದ್ದು ಯೋಚಿಸದೆ ಹೋಗಿ, ವಿದುರನೆಂಬ ದಾಸೀಪುತ್ರನ ಮನೆಯ ಕೂಳಿನ ಕೊಬ್ಬು

ಮಾತನಾಡಿಸಲು ನೀನು ಹೇಗೆ
ಮಾತನಾಡಿದ್ದೀಯೆ. (ನಿನ್ನ
ಮಾತು ನೀಚ ಆಹಾರದ
ಪ್ರಭಾವ, ಎಂದು ಭಾವ)

ವ|| ಎನೆ
ವಿದುರನತಿಕುಪಿತಮನನಾಗಿ-

ವಚನ:ಪದವಿಭಾಗ-

ಅರ್ಥ:ಎನೆ ವಿದುರನು
ಅತಿಕುಪಿತ ಮನನಾಗಿ-

ವಚನ:ಅರ್ಥ:ಎನ್ನಲು
ವಿದುರನು ಬಹಳ ಕೋಪ

ಮಾನಸನಾಗಿ- ಹೀಗೆಂದನು,

ಕಂ|| ಕಡು ಮುಳಿದು ನಿನ್ನ ತೊಡೆಗಳ ನುಡಿವೆಡೆಯೊಳ್ ಭೀಮಸೇನನಾನಾ ಪದದೊಳ್| ಪಿಡಿಯಲ್ಕೆಂದಿರ್ದೆನಿದಂ ಪಿಡಿಯೆಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ|| ೫೯ ||

ಪದ್ಯ-00:ಪದವಿಭಾಗ-ಅರ್ಥ:ಕಡು ಮುಳಿದು ನಿನ್ನ ತೊಡೆಗಳನು ಉಡಿವ ಎಡೆಯೊಳ್ (ಮುಂದೆ ಭೀಮಸೇನನು ಅತಿಯಾಗಿ ಕೋಪಿಸಿಕೊಂಡು ನಿನ್ನ ತೊಡೆಯನ್ನು ಒಡೆಯುವ ಸಂದರ್ಭದಲ್ಲಿ) ಭೀಮಸೇನನು ಆನು ಆ ಪದದೊಳ್ ಪಿಡಿಯಲ್ಕೆಂದು ಇರ್ದೆನು (ಇದನ್ನು ಹಿಡಿದು

ಪ್ರಯೋಗಿಸಬೇಕೆಂದಿದ್ದೆನು.) ಇದಂ ಪಿಡಿಯೆಂ (ಇದನ್ನು ಇನ್ನು ಹಿಡಿಯುವುದಿಲ್ಲ) ಪೋಗೆಂದು ಸಭೆಯೊಳು ಉಡಿದಂ ಬಿಲ್ಲಂ (ಹೋಗು ಎಂದು ಸಭೆಯಲ್ಲಿ ಎಲ್ಲರೆದುರಿಗೂ ಬಿಲ್ಲನ್ನು ಮುರಿದು ಹಾಕಿದನು)

ಪದ್ಯ-00:ಅರ್ಥ:ಎಲವೊ ದುರ್ಯೋಧನ, ಮುಂದೆ ಭೀಮಸೇನನು ಅತಿಯಾಗಿ

ಕೋಪಿಸಿಕೊಂಡು ನಿನ್ನ ತೊಡೆಯನ್ನು ಒಡೆಯುವ ಸಂದರ್ಭದಲ್ಲಿ ಇದನ್ನು ಪ್ರಯೋಗಿಸಬೇಕೆಂದಿದ್ದೆ. ಇದನ್ನು ಇನ್ನು ಹಿಡಿಯುವುದಿಲ್ಲ ಹೋಗು ಎಂದು ಸಭೆಯಲ್ಲಿ ಎಲ್ಲರೆದುರಿಗೂ ಬಿಲ್ಲನ್ನು ಮುರಿದು ಹಾಕಿದನು

ಶ್ರೀಕೃಷ್ಣನಿಂದ ವಿಶ್ವರೂಪ ದರ್ಶನ

ವ|| ಅಂತು ವಿದುರಂ ವಿಚ್ಛಿದುರಮನನಾಗಿ ಬಿಲ್ಲನುಡಿವುದುಂ ಸುಯೋಧನಂ ತನ್ನ ಬಲದ ತೋಳುಡಿದಂತಾಗಿ ಸಿಗ್ಗಾಗಿ ಬಾಳಂ ಕಿಱಿೞ್ತೊದಱಿ ಮನದೊಳಾದೇವದಿಂ ದೇವಕೀನಂದನನ ಮೇಲೆವಾಯ್ವುದುಂ ನಂಜಿನ

ಮೇಲೆವಾಯ್ವ ನೊಳರಿನಂತುರುಳ್ತರೆ ಪಾಯ್ದು-

ವಚನ:ಪದವಿಭಾಗ-

ಅರ್ಥ:ಅಂತು ವಿದುರಂ ವಿಚ್ಛಿದುರಮನನಾಗಿ (ವಿಚ್ಛಿದ್ರ ಮನ, ಭಗ್ನಮನಸ್ಕನಾಗಿ) ಬಿಲ್ಲನು ಉಡಿವುದುಂ ಸುಯೋಧನಂ ತನ್ನ ಬಲದ ತೋಳು ಉಡಿದಂತಾಗಿ ಸಿಗ್ಗಾಗಿ (ಬಿಲ್ಲನ್ನು ಮುರಿದುಹಾಕಲು ದುರ್ಯೋಧನನಿಗೆ ತನ್ನ

ಬಲತೋಳೇ ಭಿನ್ನವಾದಂತೆ ಆಯಿತು. ಅವಮಾನಿತನಾಗಿ) ಬಾಳಂ ಕಿೞ್ತೊದಱ ಬಾಳಂ-ಕತ್ತಿಯನ್ನು, ಕಿಳ್ತು (ಒರೆಯಿಂದ ಸೆಳೆದು) ಮನದೊಳು ಆದ ಏವದಿಂ (ಮನಸ್ಸಿನಲ್ಲುಂಟಾದ ಕೋಪದಿಂದ) ದೇವಕೀನಂದನನ ಮೇಲೆವಾಯ್ವುದುಂ (ಕೃಷ್ಣನ ಮೇಲೆ ಹಾಯಲು) ನಂಜಿನ ಮೇಲೆವಾಯ್ವ ನೊಳರಿನಂತು

ಉರುಳ್ತರೆ ಪಾಯ್ದು (ವಿಷದ ಮೇಲೆ ಹಾಯುವ ನೊಣದಂತೆ ಉರುಳಿ ಬೀಳುವ ಹಾಗೆ ನುಗ್ಗಲು)-

ವಚನ:ಅರ್ಥ:ಹಾಗೆ ವಿದುರನು ಒಡೆದ ಮನಸ್ಕನಾಗಿ ಬಿಲ್ಲನ್ನು ಮುರಿದುಹಾಕಲು ದುರ್ಯೋಧನನಿಗೆ ತನ್ನ ಬಲತೋಳೇ ಭಿನ್ನವಾದಂತೆ ಆಯಿತು. ಅವಮಾನಿತನಾಗಿ

ಒರೆಯಿಂದ ಕತ್ತಿಯನ್ನು
ಒರೆಯಿಂದ ಸೆಳೆದು, ಒದರಿ
ಮನಸ್ಸಿನಲ್ಲುಂಟಾದ
ಕೋಪದಿಂದ ಕೃಷ್ಣನ ಮೇಲೆ
ಹಾಯಲು ಅದು ವಿಷದ
ಮೇಲೆ ಹಾಯುವ ನೊಣದಂತೆ
ಉರುಳಿ ಬೀಳುವ ಹಾಗೆ
ನುಗ್ಗಲು-

ಉ|| ಮೂಱಡಿ ಮಾಡಿದಂದು
ನೆಲನೆಲ್ಲಮನಾ ಬಲಿಗಾದ
ರೂಪಮಂ

ತೋಱಿದನೀ

ಜಗತ್ತ್ರಯಮನೊರ್ಮೆಯೆ

ನುಂಗುವ ಕಾಲ ರೂಪಮಂ|

ತೋಱಿದನಂತೆ ರೌದ್ರತರ

ರೂಪಮನೊರ್ಮೆಯೆ

ವಿಶ್ವರೂಪಮಂ

ತೋಱಿದನಿರ್ದರಂ ನೆರೆಯೆ

ಮೋಹಿಸಿ ವೈಷ್ಣವದಿಂ

ಮುರಾಂತಕಂ|| ೬೦ ||

ಪದ್ಯ-೬೦:ಪದವಿಭಾಗ-

ಅರ್ಥ: ಮೂಱಿಡಿ

ಮಾಡಿದಂದು ನೆಲನೆಲ್ಲಮನು ಆ ಬಲಿಗೆ ಆದ ರೂಪಮಂ ತೋಱಿದನು (ಭೂಮಿಯನ್ನೆಲ್ಲ ಮೂರಡಿಯಾಗಿ ಅಳೆದಾಗ ಬಲಿಚಕ್ರವರ್ತಿಗೆ ತೋರಿದ ದೊಡ್ಡ ರೂವವನ್ನೇ ತೋರಿಸಿದನು.) ಈ ಜಗತ್ತ್ರಯಮನು ಒರ್ಮೆಯೆ ನುಂಗುವ ಕಾಲ ರೂಪಮಂ ತೋಱಿದನು (ಈ ಮೂರು

ಲೋಕಗಳನ್ನೂ ಒಂದೇ ಸಲಕ್ಕೆ ನುಂಗುವ ಪ್ರಳಯಕಾಲದ ರೂಪವನ್ನು ತೋರಿಸಿದನು) ಅಂತೆ ರೌದ್ರತರ ರೂಪಮನು ಒರ್ಮೆಯೆ ವಿಶ್ವರೂಪಮಂ ತೋಱಿದನು (ಹಾಗೆಯೇ ಭಯಂಕರ ರೂಪವನ್ನು ಇದ್ದಕ್ಕಿದ್ದಹಾಗೆ ತೋರಿಸಿದನು.) ಇರ್ದರಂ ನೆರೆಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ (ಅಲ್ಲಿದ್ದವರನ್ನು

ಬಹಳ ಸಂಮೋಹಕ್ಕೆ ಒಳಪಡಿಸಿ ವೈಷ್ಣವ ಮಾಯೆಯಿಂದ ವಿಶ್ವರೂಪವನ್ನು ತೋರಿಸಿದನು.)

ಪದ್ಯ-೬೦:ಅರ್ಥ:ಶ್ರೀಕೃಷ್ಣನು ತನ್ನ ವಿಷ್ಣುಮಾಯೆಯಿಂದ ಸಭೆಯಲ್ಲಿದ್ದವರನ್ನೆಲ್ಲಾ ಪೂರ್ಣವಾಗಿ ಮೂರ್ಛೆಗೊಳಿಸಿ ಭೂಮಿಯನ್ನೆಲ್ಲ

ಮೂರಡಿಯಾಗಿ ಅಳೆದಾಗ ಬಲಿಚಕ್ರವರ್ತಿಗೆ ತೋರಿದ ದೊಡ್ಡ ರೂಪವನ್ನೇ ತೋರಿಸಿದನು. ಈ ಮೂರು ಲೋಕಗಳನ್ನೂ ಒಂದೇ ಸಲಕ್ಕೆ ನುಂಗುವ ಪ್ರಳಯಕಾಲದ ರೂಪವನ್ನು ತೋರಿಸಿದನು. ಹಾಗೆಯೇ ಭಯಂಕರ ರೂಪವನ್ನು ಇದ್ದಕ್ಕಿದ್ದ ಹಾಗೆ ತೋರಿಸಿದನು. ಅಲ್ಲಿದ್ದವರನ್ನು ಬಹಳ ಸಂಮೋಹಕ್ಕೆ

ಒಳಪಡಿಸಿ ವೈಷ್ಣವ
ಮಾಯೆಯಿಂದ
ವಿಶ್ವರೂಪವನ್ನು
ತೋರಿಸಿದನು.

ವ|| ಆಗಳ್ ಧೃತರಾಷ್ಟ್ರಂ ಬಂದು ಮುಕುಂದನನೇಕಸ್ತುತಿಶತಸಹಸ್ರಂಗಳಿಂ ಸ್ತುತಿಯಿಸಿದೊಡಾತಂಗೆ ವರದನಾಗಿ ದಿವ್ಯ ದೃಷ್ಟಿಯಂ ದಯೆಗೆಯ್ದು ಮುನ್ನಿನಂತೆ

ಮನುಷ್ಯದೇಹಮಂ
ಕೆಯ್ಕೊಂಡು ತ್ರೈಲೋಕ್ಯ ಗುರು
ಗುರುತನೂಜನ ಕೆಯ್ಯಂ
ಪಿಡಿದರಮನೆಯಂ
ಪೊಱಮಟ್ಟು ಕಪಟ
ಪ್ರಪಂಚದಿಂದಾತನುಮಂ
ತನಗೆ ಮಾಡಿ ಬೀಡಿಂಗೆ ವಂದು
ಕುಂತಿಗೇಕಾಂತದೊಳಿಂತೆಂದಂ
-

ವಚನ:ಪದವಿಭಾಗ-

ಅರ್ಥ:ಆಗಳ್ ಧೃತರಾಷ್ಟ್ರಂ

ಬಂದು ಮುಕುಂದನ ಅನೇಕ
ಸ್ತುತಿಶತಸಹಸ್ರಂಗಳಿಂ
ಸ್ತುತಿಯಿಸಿದೊಡೆ (ಆಗ
ಧೃತರಾಷ್ಟ್ರನು ಬಂದು ನೂರು
ಸಾವಿರಾರು ಸ್ತೋತ್ರಗಳನ್ನು
ಸ್ತುತಿಸಲು) ಆತಂಗೆ
ವರದನಾಗಿ ದಿವ್ಯ ದೃಷ್ಟಿಯಂ
ದಯೆಗೆಯ್ದು (ಆತನಿಗೆ
ವರಪ್ರದನಾಗಿ
ದಿವ್ಯದೃಷ್ಟಿಯನ್ನು
ದಯಪಾಲಿಸಿ) ಮುನ್ನಿನಂತೆ

ಮನುಷ್ಯದೇಹಮಂ
ಕೆಯ್ಕೊಂಡು ತ್ರೈಲೋಕ್ಯ ಗುರು
(ಮೂರುಲೋಕದ ಗುರುವಾದ
ಕೃಷ್ಣನು) ಗುರುತನೂಜನ
ಕೆಯ್ಯಂ ಪಿಡಿದು
ಅರಮನೆಯಂ ಪೊಱಮಟ್ಟು
(ಅಶ್ವತ್ಥಾಮನ ಕೈಹಿಡಿದು
ಅರಮನೆಯಿಂದ ಹೊರಟು)
ಕಪಟ ಪ್ರಪಂಚದಿಂದ
ಆತನುಮಂ ತನಗೆ ಮಾಡಿ
(ಅವನನ್ನು ಕಪಟದಿಂದ

ತನ್ನವನನ್ನಾಗಿ ಮಾಡಿಕೊಂಡು) ಬೀಡಿಂಗೆ ವಂದು ಕುಂತಿಗೆ ಏಕಾಂತದೊಳು ಇಂತೆಂದಂ (ತನ್ನ ವಸತಿಗೆ ಬಂದು ಕುಂತೀದೇವಿಗೆ ರಹಸ್ಯವಾಗಿ ಹೀಗೆ ಹೇಳಿದನು-)-

ವಚನ:ಅರ್ಥ:ಆಗ ಧೃತರಾಷ್ಟ್ರನು ಬಂದು ನೂರು ಸಾವಿರಾರು ಸ್ತೋತ್ರಗಳನ್ನು ಸ್ತುತಿಸಲು ಆತನಿಗೆ ವರಪ್ರದನಾಗಿ

ದಿವ್ಯದೃಷ್ಟಿಯನ್ನು
ದಯಪಾಲಿಸಿ ಮೊದಲಿನ
ಮನುಷ್ಯರೂಪವನ್ನು ತಾಳಿ
ಮೂರುಲೋಕದ ಗುರುವಾದ
ಕೃಷ್ಣನು ಅಶ್ವತ್ಥಾಮನ
ಕೈಹಿಡಿದು ಅರಮನೆಯಿಂದ
ಹೊರಟು ಅವನನ್ನು
ಕಪಟದಿಂದ ತನ್ನವನನ್ನಾಗಿ
ಮಾಡಿಕೊಂಡು ತನ್ನ ವಸತಿಗೆ
ಬಂದು ಕುಂತೀದೇವಿಗೆ
ರಹಸ್ಯವಾಗಿ ಹೀಗೆ ಹೇಳಿದನು-

ಚಂ|| ಗುರು ಕೃಪ ಶಲ್ಯ
ಸಿಂಧುಸುತರಪ್ಪೊಡೆ ನಮ್ಮಯ
ಪಕ್ಷಮೊಂದಿದಂ
ಗುರುಸುತನೀಗಳೆಮ್ಮೊಳಖಿಳಾ
ಸ್ತ್ರ ವಿಶಾರದನಪ್ಪನುಂ ಗೆಲ|
ಲ್ಕರಿಯನುಮೊಂದಿ
ಬಾರದನುಮಂಕದ ಕರ್ಣನೆ
ಬೀರಮಾತನಿಂ
ದುರಿವರಿದತ್ತು
ಚಾಗಮವನಿಂದೆಸೆದತ್ತು
ಸಮಸ್ತ ಧಾತ್ರಿಯೊಳ್|| ೬೧ ||

ಪದ್ಯ-00:ಪದವಿಭಾಗ-ಅರ್ಥ:ಗುರು ಕೃಪ ಶಲ್ಯ ಸಿಂಧುಸುತರು ಅಪ್ಪೊಡೆ ನಮ್ಮಯ ಪಕ್ಷಮೊಂದಿದಂ (ಭೀಷ್ಮರಾದರೆ ನಮ್ಮ ಪಕ್ಷದವರೇ ಆಗಿರುವರು) ಗುರುಸುತನು ಈಗಳೆ ಎಮ್ಮೊಳು (ಈಗ ಅಶ್ವತ್ಥಾಮನೂ ನಮ್ಮಲ್ಲಿ ಸೇರಿದನು) ಅಖಿಳಾಸ್ತ್ರ ವಿಶಾರದನಪ್ಪನುಂ ಗೆಲಲ್ಕೆ

ಅರಿಯನುಂ ಒಂದಿ
ಬಾರದನುಂ ಅಂಕದ ಕರ್ಣನೆ
ಬೀರಂ (ಸಮಸ್ತ ಶಾಸ್ತ್ರದಲ್ಲಿ
ವಿಶಾರದನೂ ಜಯಿಸುವುದಕ್ಕೆ
ಅಸಾಧ್ಯನೂ ನಮ್ಮ
ಜೊತೆಯಲ್ಲಿ ಸೇರುವುದಕ್ಕೆ
ಒಪ್ಪದವನೂ ಆದವನು
ಪ್ರಸಿದ್ಧನಾದ ಕರ್ಣನೊಬ್ಬನೇ
ವೀರನು) ಆತನಿಂದ
ಉರಿವರಿದತ್ತು (ಅವನ
ಶೌರ್ಯಪ್ರತಾಪವು

ಬೆಂಕಿಯಂತೆ ಪ್ರಸರಿಸಿದೆ.)
ಚಾಗಂ ಅವನಿಂದ ಎಸೆದತ್ತು
ಸಮಸ್ತ ಧಾತ್ರಿಯೊಳ್
(ಜಗತ್ತಿನಲ್ಲಿ ತ್ಯಾಗವೂ
ಅವನಿಂದಲೇ
ಪ್ರಕಾಶಮಾನವಾಗಿದೆ)
ಪದ್ಯ-00:ಅರ್ಥ:ಗುರು, ಕೃಪ,
ಶಲ್ಯ, ಭೀಷ್ಮರಾದರೆ ನಮ್ಮ
ಪಕ್ಷದವರೇ ಆಗಿರುವರು. ಈಗ
ಅಶ್ವತ್ಥಾಮನೂ ನಮ್ಮಲ್ಲಿ
ಸೇರಿದನು. ಸಮಸ್ತ ಶಾಸ್ತ್ರದಲ್ಲಿ

ವಿಶಾರದನೂ ಜಯಿಸುವುದಕ್ಕೆ
ಅಸಾಧ್ಯನೂ ನಮ್ಮ
ಜೊತೆಯಲ್ಲಿ ಸೇರುವುದಕ್ಕೆ
ಒಪ್ಪದವನೂ ಆದವನು
ಪ್ರಸಿದ್ಧನಾದ ಕರ್ಣನೊಬ್ಬನೇ
ವೀರನು. ಸಮಸ್ತ
ಪ್ರಪಂಚದಲ್ಲಿ ಅವನ
ಶೌರ್ಯಪ್ರತಾಪವು
ಬೆಂಕಿಯಂತೆ ಪ್ರಸರಿಸಿದೆ.
ಜಗತ್ತಿನಲ್ಲಿ ತ್ಯಾಗವೂ

ಅವನಿಂದಲೇ

ಪ್ರಕಾಶಮಾನವಾಗಿದೆ.

ಉ|| ಎಂತೆನೆ ವಜ್ರಿ

ವಜ್ರಕವಚಕ್ಕೆ

ನಿಜೋಜ್ಜ್ವಳಕುಂಡಳಕ್ಕೆ ಕೆ

ಯ್ಯಾಂತೊಡೆ

ಪಾಂಡುಪುತ್ರರನೆ

ಕಾದೆರೆವಂದುಗಿವಂ

ದಲೆಂದಿನಂ|

ಮಂತಣದಿಂದೆ

ಬಾರಿಸೆಯುಮೆಂದುದನೆನ್ನದೆ

ಮೀಱಿ ಕೊಟ್ಟನೋ
ರಂತು ಜಸಕ್ಕೆ ನೋಂತು ಬಿಡೆ
ನೇರ್ದೊಡಲೊಳ್ ತೊಡರ್ದಾ
ತನುತ್ರಮಂ|| ೬೨ ||

ಪದ್ಯ-೬೨:ಪದವಿಭಾಗ-
ಅರ್ಥ:ಎಂತೆನೆ ವಜ್ರಿ (ಇಂದ್ರನು) ವಜ್ರಕವಚಕ್ಕೆ ನಿಜ ಉಜ್ವಳ ಕುಂಡಳಕ್ಕೆ ಕೆಯ್ಯಂ ಆಂತೊಡೆ (ಕರ್ಣನ ವಜ್ರಕವಚವನ್ನೂ ಅವನ ಬಹುಪ್ರಕಾಶವಾದ

ಕಿವಿಯಾಭರಣ ಗಳನ್ನೂ
ಕೈನೀಡಿ ಯಾಚಿಸಿದಾಗ)
ಪಾಂಡುಪುತ್ರರನೆ ಕಾದು
ಎರೆವಂದು
("ಪಾಂಡುಪುತ್ರರನ್ನು
ರಕ್ಷಿಸುವುದಕ್ಕಾಗಿ ಇಂದ್ರನು
ಬಂದು ನಿನ್ನನ್ನು ಬೇಡಿದಾಗ)
ಉಗಿವಂ ದಲ್ ಎಂದು ಇನಂ
ಮಂತಣದಿಂದೆ ಬಾರಿಸೆಯುಂ
(ಎಂದು ಸೂರ್ಯನು ಬಂದು
ಬುದ್ಧಿ ಹೇಳಿ ತಡೆದರೂ)

ಎಂದುದನು ಎನ್ನದೆ (ಅವನು
ಹೇಳಿದುದನ್ನು, ಕೊಡಲಾರೆ
ಎಂದು ಹೇಳದೆ) ಮೀಱಿ
ಕೊಟ್ಟನು ಓರಂತು ಜಸಕ್ಕೆ
ನೋಂತು (ಯಶಸ್ಸಿಗಾಗಿ
ಆಶೆಪಟ್ಟು ಸೂರ್ಯನ
ಮಾತನ್ನು ಮೀರಿ ಕೊಟ್ಟನು)
ಬಿಡೆ ನೇರ್ದ ಒಡಲೊಳ್
ತೊಡರ್ದಾ ತನುತ್ರಮಂ (ತನ್ನ
ಶರೀರದಲ್ಲಿ ಅಂಟಿಕೊಂಡಿದ್ದ
ಆ ವಜ್ರಕವಚವನ್ನು

ಸುಲಿದುಬರುವ ಹಾಗೆ ಕತ್ತರಿಸಿ ದಾನವಾಗಿ ಬಿಡದೆ ಕೊಟ್ಟನು.)

ಪದ್ಯ-೬೨:ಅರ್ಥ: ಅದು ಹೇಗೆ ಎಂದರೆ ಇಂದ್ರನು ಕರ್ಣನ ವಜ್ರಕವಚವನ್ನೂ ಅವನ ಬಹುಪ್ರಕಾಶವಾದ ಕಿವಿಯಾಭರಣ ಗಳನ್ನೂ ಕೈನೀಡಿ ಯಾಚಿಸಿದಾಗ “ಪಾಂಡುಪುತ್ರರನ್ನು ರಕ್ಷಿಸುವುದಕ್ಕಾಗಿ ಇಂದ್ರನು ಬಂದು ನಿನ್ನನ್ನು

ಛಿದ್ರಿಸುತ್ತಿದ್ದಾನೆ, ಕೊಡಬೇಡ ಎಂದು ಸೂರ್ಯನು ಬಂದು ಬುದ್ಧಿ ಹೇಳಿ ತಡೆದರೂ ಅವನು ಹೇಳಿದುದನ್ನು, ಕೊಡಲಾರೆ ಎಂದು ಹೇಳದೆ ಯಶಸ್ಸಿಗಾಗಿ ಆಶೆಪಟ್ಟು ತನ್ನ ಶರೀರದಲ್ಲಿ ಅಂಟಿಕೊಂಡಿದ್ದ ಆ ವಜ್ರಕವಚವನ್ನು ಸುಲಿದುಬರುವ ಹಾಗೆ ಕತ್ತರಿಸಿ ದಾನವಾಗಿ ಬಿಡದೆ ಕೊಟ್ಟನು.

ಮ|| ಬರವಂ ಬೇಡಿದರ್ಗೀವ
ದೇವನೆ ವಲಂ ನಾಣ್ಗೆಟ್ಟು
ಬಂದೆನ್ನನಿಂ
ತೆರೆದಂ ಬರ್ದರೊಳಾನೆ
ಬರ್ದನೆನುತುಂ ನೇರ್ವಲ್ಲಿ
ಕೆನ್ನೆತ್ತರುಂ|
ಬಿರಿ ಕಂಡಂಗಳೆ ಬೀಟಿಲುಣ್ಮೆ
ಮನದೊಂದಣ್ಮೆಟ್ಟಳಂ ಪೊಣ್ಮೆ
ವೀ
ರರಸಕ್ಕಾಗರಮಾಯ್ತು ನೋಡೆ
ಕವಚಂಗೊಂಡಂದಮಾ

ಕರ್ಣನಾ|| ೬೩ ||

ಪದ್ಯ-೬೩:ಪದವಿಭಾಗ-ಅರ್ಥ:ಬರವಂ (ವರವಂ) ಬೇಡಿದರ್ಗೆ ಈವ ದೇವನೆ ವಲಂ ನಾಣ್ಗೆಟ್ಟು ಬಂದು ಎನ್ನನು ಇಂತು ಎರೆದಂ (ಕೇಳಿದವರಿಗೆ ವರವನ್ನು ಕೊಡುವ ಇಂದ್ರದೇವನೇ ನಾಚಿಕೆಗೆಟ್ಟು ಬಂದು ನನ್ನನ್ನು ಈ ರೀತಿ ಬೇಡಿದನು.) ಬರ್ದರೊಳು ಆನೆ

ಬರ್ದನೆನುತುಂ
(ಬಾಳಿದವರಲ್ಲೆಲ್ಲ ನಾನೆ
ಬಾಳಿದವನು) ನೇರ್ವಲ್ಲಿ
ಕೆನ್ನೆತ್ತರುಂ ಬಿರಿ ಕಂಡಂಗಳೆ
ಬೀಟಿಲುಣ್ಮೆ (ಧಾರೆಯಾಗಿ
ಸುರಿಯುತ್ತಿರಲು)
(ಎಂದುಕೊಳ್ಳುತ್ತ ದೇಹದಿಂದ
ಕವಚವನ್ನು ಕೆಂಪಾದ ರಕ್ತವೂ
ಸೀಳಿದ ಮಾಂಸಖಂಡವೂ
ಧಾರೆಯಾಗಿ ಸುರಿಯುತ್ತಿರಲು)
ಮನದ ಒಂದು ಅಣ್ಮೆಟ್ಟಳಂ

ಪೊಣ್ಮೆ (ಒಂದು ಮನೋದಾರ್ಢ್ಯವೂ ಬಹಳಯವಾಗಿ ಹೆಚ್ಚುತ್ತಿರಲು) ವೀರರಸಕ್ಕೆ ಆಗರಮಾಯ್ತು (ವೀರರಸಕ್ಕೆ ಆಗರವಾಗಿತ್ತು) ನೋಡೆ ಕವಚಂಗೊಂಡಂದಂ (ಕವಚವನ್ನು ಶರೀರದಿಂದ ಕಿತ್ತ ರೀತಿ ನೋಡುವವರಿಗೆ) ಆ ಕರ್ಣನಾ (ಆ ಕರ್ಣನ ರೀತಿ.)

ಪದ್ಯ-೬೩:ಅರ್ಥ:ಕೇಳಿದವರಿಗೆ ವರವನ್ನು ಕೊಡುವ

ಇಂದ್ರದೇವನೇ ನಾಚಿಕೆಗೆಟ್ಟು
ಬಂದು ನನ್ನನ್ನು ಈ ರೀತಿ
ಬೇಡಿದನು. ಬಾಳಿದವರಲ್ಲೆಲ್ಲ
ನಾನೆ ಬಾಳಿದವನು
ಎಂದುಕೊಳ್ಳುತ್ತ ದೇಹದಿಂದ
ಕವಚವನ್ನು ಕೆಂಪಾದ ರಕ್ತವೂ
ಸೀಳಿದ ಮಾಂಸಖಂಡವೂ
ಒಂದೇ ಸಮನಾಗಿ
ಸುರಿಯುತ್ತಿರಲು
ಮನೋದಾರ್ಢ್ಯವೂ
ಬಹಳಯವಾಗಿ ಹೆಚ್ಚುತ್ತಿರಲು

ಕರ್ಣನು ಕವಚವನ್ನು ಶರೀರದಿಂದ ಕಿತ್ತ ರೀತಿ ನೋಡುವವರಿಗೆ ವೀರರಸಕ್ಕೆ ಆಗರವಾಗಿತ್ತು.

<u>ಕರ್ಣ ಭೇದನ</u>

ವ|| ಅಂತು ಸಹಜಕವಚ ರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ ತಿದಿಯುಗಿವಂತುಗಿದು ಕೊಟ್ಟುದರ್ಕೆ ಮೆಚ್ಚಿ

ದೇವೇಂದ್ರನಾತಂಗಮೋಘಶ
ಕ್ತಿಯನಿತ್ತನಾತನಂ ನಾನುಮೆನ್ನ
ಬಲ್ಲ ಮಾೞ್ಕೆಯಿಂ
ಭೇದಿಸಿದಪ್ಪೆಂ ನೀಮುಂ ನಿಮ್ಮ
ಚೊಚ್ಚಿಲ ಮಗನಪ್ಪ
ಸೂರ್ಯಸೂನುವಂ
ಸೂರ್ಯದಿನದಂದು ಕಂಡು
ಕಾರ್ಯಸಿದ್ಧಿಯಂ ಮಾಡಿ
ಬನ್ನಿಮೆಂದು ಕೊಂತಿಯಂ
ಬೀೞ್ಕೊಂಡು ಪರಕೆಯಂ
ಕೈಕೊಂಡು ರಥಾಂಗಧರಂ

ರಥಮನೇಱಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬೀೞ್ದಿಮ್ಮಂ ಕಿಱಿದಂತರಂ ಕಳಿಪಿ ಮಗುೞ್ಚೆ ಬಾ ಪೋಪಮೆಂದು ತನ್ನೊಡನೆ ರಥಮನೇಱಿಸಿಕೊಂಡುಪೋಗಿ ಮುಂದೊಂದೆಡೆಯೊಳ್ ನಿಂದು-

ವಚನ:ಪದವಿಭಾಗ-

ಅರ್ಥ:ಅಂತು ಸಹಜಕವಚ

ರತ್ನಕುಂಡಲಂಗಳಂ ನೆತ್ತರ್ ಪನಪನ ಪನಿಯೆ (ಹನಿಹನಿಯಾಗಿ ಹನಿಯಲು) ತಿದಿಯುಗಿವಂತುಗಿದು ಕೊಟ್ಟುದರ್ಕೆ ಮೆಚ್ಚಿ (ಚರ್ಮವನ್ನು ಸುಲಿಯುವ ಹಾಗೆ ಸುಲಿದುಕೊಟ್ಟುದಕ್ಕೆ ಮೆಚ್ಚಿ) ದೇವೇಂದ್ರನು ಆತಂಗೆ ಅಮೋಘಶಕ್ತಿಯನು (ಶಕ್ತಾಯುಧವನ್ನು ಕೊಟ್ಟನು->) ಇತ್ತನು. ಆತನಂ ನಾನುಂ

ಎನ್ನ ಬಲ್ಲ ಮಾೞ್ಕೆಯಿಂ
ಭೇದಿಸಿದಪ್ಪೆಂ (ಆತನನ್ನು
ನಾನೂ ನನಗೆ ತಿಳಿದ ಮಟ್ಟಿನ
ರೀತಿಯಲ್ಲಿ ಬೇಧಿಸುತ್ತೇನೆ.)
ನೀಮುಂ ನಿಮ್ಮ ಚೊಚ್ಚಿಲ
ಮಗನಪ್ಪ
ಸೂರ್ಯಸೂನುವಂ
(ಸೂರ್ಯಪುತ್ರನಾದ
ಕರ್ಣನನ್ನು)
ಸೂರ್ಯದಿನದಂದು
(ಭಾನುವಾರದ ದಿನ) ಕಂಡು

ಕಾರ್ಯಸಿದ್ಧಿಯಂ ಮಾಡಿ
ಬನ್ನಿಮೆಂದು ಕೊಂತಿಯಂ
ಬೀೞ್ಕೊಂಡು(ಬೀಳ್ಕೊಂಡು-
ಕಳಿಸಿ), ಪರಕೆಯಂ ಕೈಕೊಂಡು
(ಅವಳ ಆಶೀರ್ವಾದವನ್ನು
ಪಡೆದು) ರಥಾಂಗಧರಂ
(ಚಕ್ರಪಾಣಿ, ಕೃಷ್ಣ)
ರಥಮನೇಱಿ ಕರ್ಣನ
ಮನೆಯ ಮುಂದನೆ ಬಂದು,
ಮೇಲೆ ಬಿೞ್ದಿಮ್ಮಂ
ಕಿಱಿದಂತರಂ ಕಳಿಪಿ

ಮಗುಱ್ವೆ ಬಾ (ಕರ್ಣನ
ಮನೆಯ ಮುಂದುಗಡೆಯೇ
ಬಂದು ತಾನೇ ಮೇಲೆ ಬಿದ್ದು
‘ಕರ್ಣ! ನಮ್ಮನ್ನು ಸ್ವಲ್ಪ ದೂರ
ಕಳುಹಿಸಿಕೊಟ್ಟು
ಬರುವೆಯಂತೆ ಬಾ
ಹೋಗೋಣ’) ಪೋಪಂ (
ಹೋಗೋಣ’) ಎಂದು
ತನ್ನೊಡನೆ ರಥಮನು
ಏಱಿಸಿಕೊಂಡು ಪೋಗಿ
ಮುಂದೊಂದೆಡೆಯೊಳ್

ನಿಂದು (ಮುಂದೆ ಬಂದು ಒಂದು ಕಡೆಯಲ್ಲಿ ನಿಂತು) - **ವಚನ:ಅರ್ಥ**: ಹಾಗೆ ಅವನಿಗೆ ಸಹಜವಾಗಿ ಇದ್ದ ಕವಚ ಮತ್ತು ರತ್ನಕುಂಡಲಗಳನ್ನು ರಕ್ತವು ಹನಿಹನಿಯಾಗಿ ಹನಿಯುತ್ತಿರಲು, ಚರ್ಮವನ್ನು ಸುಲಿಯುವ ಹಾಗೆ ಸುಲಿದುಕೊಟ್ಟುದಕ್ಕೆ ಮೆಚ್ಚಿ ದೇವೇಂದ್ರನಾತನಿಗೆ

ಬೆಲೆಯಿಲ್ಲದ
ಶಕ್ತ್ರಾಯುಧವನ್ನು ವರವಾಗಿ
ಕೊಟ್ಟಿದ್ದಾನೆ. ಆತನನ್ನು
ನಾನೂ ನನಗೆ ತಿಳಿದ ಮಟ್ಟಿನ
ರೀತಿಯಲ್ಲಿ ಬೇಧಿಸುತ್ತೇನೆ.
ನೀವೂ ನಿಮ್ಮ
ಚೊಚ್ಚಲಮಗನಾದ
ಸೂರ್ಯಪುತ್ರನಾದ
ಕರ್ಣನನ್ನು ಭಾನುವಾರದ ದಿನ
ನೋಡಿ ಕಾರ್ಯಸಿದ್ಧಿಯನ್ನು
ಮಾಡಿಕೊಂಡು ಬನ್ನಿ ಎಂದು

ಕುಂತಿಯನ್ನು ಕಳುಹಿಸಿಕೊಟ್ಟನು. ಅವಳ ಆಶೀರ್ವಾದವನ್ನು ಪಡೆದು ಕೃಷ್ಣನು ತೇರನ್ನು ಹತ್ತಿ ಕರ್ಣನ ಮನೆಯ ಮುಂದುಗಡೆಯೇ ಬಂದು ತಾನೇ ಮೇಲೆ ಬಿದ್ದು 'ಕರ್ಣ! ನಮ್ಮನ್ನು ಸ್ವಲ್ಪ ದೂರ ಕಳುಹಿಸಿಕೊಟ್ಟು ಬರುವೆಯಂತೆ ಬಾ ಹೋಗೋಣ' ಎಂದು ತನ್ನೊಡನೆ ರಥದಲ್ಲಿ

ಹತ್ತಿಸಿಕೊಂಡು ಹೋಗಿ
ಮುಂದೆ ಬಂದು ಒಂದು
ಕಡೆಯಲ್ಲಿ ನಿಂತು ಹೇಳಿದನು.

ಉ|| ಭೇದಿಸಲೆಂದೆ ದಲ್
ನುಡಿದರೆನ್ನದಿರೊಯ್ಯನೆ ಕೇಳ
ಕರ್ಣ ನಿ
ನ್ನಾದಿಯೊಳಬ್ಬೆ ಕೊಂತಿ
ನಿನಗಮ್ಮನಹರ್ಪತಿ
ಪಾಂಡುನಂದನರ್|
ಸೋದರರರೆಯ್ದೆ
ಮಯ್ದುನನೆನಾಂ ಪೆಱತೇಂ

ಪಡೆ
ಮಾ
ತೊ
ನಿನ್ನ
ದೀ
ಮೇ
ದಿನಿ
ಪ
ಟ್ಟ

ಕುಮಾರವ್ಯಾಸ ಭಾರದಲ್ಲಿ ಕರ್ಣಭೇದನ;

- (ಪರ್ವ ಉದ್ಯೋಗ||ಸಂ-೧೦||)

ಕೃಷ್ಣನ ಮಾತು

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡವೆನು ಪಾಂಡವ
ಜನಪ ಕೌರವಜನಪರೋಲೈಸುವರು ಗದ್ದುಗೆಯ||
ನಿನಗೆ ಕಿಂಕರರೆಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾದಂಬುಲಕೆ ಕೈಯಾನುವರೆ ಹೇಳೆಂದ||೮||

ಎಡದ ಮೈಯಲಿಕೌರವೇಂದ್ರರ
ಗಡಣ ಬಲದಲಿ ಪಾಂಡುತನಯರ
ಗಡಣವಿದಿರಲಿ ಮಾದ್ರ ಮಾಗದ ಯಾದವಾದಿಗಳು ||
ನಡುವೆ ನೀನೋಲಗದೊಳೊಪ್ಪುವ
ಕಡು ವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ||೯||
--
ಆರುಸರಿಯೈ ಕರ್ಣ ನೆಡೆ ನೆಡೆ
ಧಾರಣೀಪತಿಯಾಗು ನೀನಿರೆ
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ||೧೦ ||

ಕರ್ಣನ ಪ್ರತಿಕ್ರಿಯೆ

ಕೊರಳಸೆರೆ ಹಿಗ್ಗಿದುದು ದೃಗುಜಲ(ಕಣ್ಣೀರು)
ಉರವಣಿಸಿ ಕಡುನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ||
ಹರಿಯ ಹಗೆ ಹೊಗೆದೋರದುರಹದೆ
ಬರಿದೆ ಹೋಹುದೆ **ತನ್ನ ವಂಶವ**
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ||೧೧||
(ಹೊಗೆದೋರದೆ ಉರಹದೆ)(ವಂಶವನು ಅರುಹಿ)

ಕಾದಿಕೊಲುವೊಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವಂಗವನಿಯಲಿ ಹೊಗಲಿಲ್ಲ ||
ಭೇದದಲಿ ಹೊಕ್ಕಿರಿದನೋ ಮಧು
ಸೂದನನಕಟೆನುತ ಘನಚಿಂ
ತೋದಧಿಯಲದ್ದವೊಲ್ ಮೌನದೊಳಿದ್ದನಾ ಕರ್ಣ ||೧೨ ||

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧರನೆಗೆ ಬೆಸಕೈವಲ್ಲ ಮನವಿಲ್ಲ||
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸವೆನೆಂಬೀ
ಭರದೊಳಿದ್ದೆನು ಕೌರವೇಂದ್ರನ ಕೊಂದೆನೀನೆಂದ||೧೪||

ಒಡನೆ ಹುಟ್ಟದರೆಂಬ ಕಥನವ
ನೆಡಗುಡದೆ ಬಣ್ಣಿಸಿದೆ ವಿಜಯನ
ಗಡುಬಾಣಕೆ ಬಲಿಯನಿಕ್ಕುವ ಹದನು ಮಾಣಿಸಿದೆ ||
ನುಡಿದು ಫಲವೇನಿನ್ನು **ಕೇಳೆ**

ನ್ನೊಡೆಯನಾದಂತೆಹೆನು ಬಾರೆನು
ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ|| ೧೫||

ಸಲಹಿದನು ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ **ಹೀನ ವೃತ್ತಿಯ**
ಬಳಸಿ ನೆಡೆಸೆನು ಕೌರವೇಂದ್ರನನೆಂತು ಮರೆದಪೆನು||೧೭||

ಮಾರಿಗೌತಣವಾಯ್ತು ನಾಳಿನ
ಭಾರತವುಚತುರಂಗ ಬಲದಲಿ
ಕೌರವನ ರುಣ ಹಿಂಗೆ ರಣದಲಿ ಸುಭಟಕೋಟಿಯನು ||
ತೀರಿಸಿಯೆ ಪತಿಯವಸರಕ್ಕೆ **ಶ**
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ || ೨೧ ||

ಕೃಷ್ಣ

(ಕುಂತಿಯ ಮಗನೆಂದು ಗೊತ್ತಿದ್ದೂ ಹೇಳದಿದ್ದರೆ ನನ್ನ ಮನಸ್ಸಿಗೆ ನೋವು ಆಗುವುದು; ಅದಕ್ಕೇ ಹೇಳಿದೆ, ಎಂದ)
ಮನಕೆ ಖತಿಯಹುದರುಹದಿರ್ದೊಡೆ
ತನಗೆ ಗುಣವಲ್ಲೆಂಬ ಕಾರಣ
ವಿನಿತನೊಡ್ಡೈಸಿದೆನು ನೀ ಸುಖಿಯಾಗು ಹೋಗೆಂದ|| ೨೧ ||

ಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ|| ೬೪ ||

ಪದ್ಯ-೬೪:ಪದವಿಭಾಗ-ಅರ್ಥ:ಭೇದಿಸಲೆಂದೆ (ನಿನ್ನ ಮನಸ್ಸನ್ನು ಒಡೆಯಲು ದಲ್ ಓಹೊ!->) ನುಡಿದರು ಎನ್ನದಿರು ಒಯ್ಯನೆ ಕೇಳ ಕರ್ಣ (ಸಮಾಧಾನದಿಂದ ಕೇಳಯ್ಯಾ ಕರ್ಣಾ) ನಿನ್ನ ಆದಿಯೊಳ್ ಅಬ್ಬೆ ಕೊಂತಿ (ಕುಂತಿಯು ನಿನ್ನ ತಾಯಿ ಹಿಂದೆ) ನಿನಗೆ ಅಮ್ಮಂ ಅಹರ್ಪತಿ (ನಿನಗೆ ತಂದೆ

ಸೂರ್ಯನು)
ಪಾಂಡುನಂದನರ್
ಸೋದರರರು (ಪಾಂಡವರು
ನಿನ್ನ ಸಹೋದರರರು) ಎಯ್ದೆ
ಮಯ್ದುನನೆ ನಾಂ (ನಿಜಕ್ಕೂ
ನಾನು ನಿನಗೆ ಮೈದುನ.)
ಪೆಱತೇಂ ಪಡೆಮಾತೊ (ಹೆಚ್ಚು
ಹೇಳುವುದೇನು? ಬೇರೆ
ಬೀಳುಮಾತುಗಳು) ನಿನ್ನದು
ಈ ಮೇದಿನಿ (ಈ
ಭೂಮಿಯೆಲ್ಲವೂ ನಿನ್ನದೇ)

ಪಟ್ಟಮುಂ ನಿನತೆ ನೀನು ಇರೆ ಮತ್ತೆ ಪೆಱರ್ ನರೇಂದ್ರರೇ(ಪಟ್ಟವೂ ನಿನ್ನದೇ. ನೀನಿರುವಲ್ಲಿ ಮತ್ತೆ ಇತರರು ರಾಜರಾಗಬಲ್ಲರೇ?)

ಪದ್ಯ-೬೪:ಅರ್ಥ:ಕರ್ಣ ಕೇಳು, ನಿನ್ನ ಮನಸ್ಸನ್ನು ಒಡೆಯಲು (ನಿನ್ನನ್ನು ಭೇದಿಸಲು)ಹೀಗೆ ಹೇಳಿದೆನೆಂದು ನುಡಿಯದಿರು ಸಮಾಧಾನದಿಂದ ಕೇಳಯ್ಯಾ

ಕರ್ಣಾ. ಕುಂತಿಯು ನಿನ್ನ ತಾಯಿ ಹಿಂದೆ, ಸೂರ್ಯನು ನಿನ್ನ ತಂದೆ, ಪಾಂಡವರು ನಿನ್ನ ಸಹೋದರರು, ನಿಜಕ್ಕೂ ನಾನು ನಿನಗೆ ಮೈದುನ. ಹೆಚ್ಚು ಹೇಳುವುದೇನು? ಬೀಳುಮಾತುಗಳು! ಈ ಭೂಮಿಯೆಲ್ಲವೂ ನಿನ್ನದೇ. ಪಟ್ಟವೂ ನಿನ್ನದೇ. ನೀನಿರುವಲ್ಲಿ ಮತ್ತೆ ಇತರರು ರಾಜರಾಗಬಲ್ಲರೇ?

ಕಂ|| ಗಂಗೆಗೆ ಕೆಯ್ಯೆಡೆಯೆಂದು

ತ್ತುಂಗಸ್ತನಿ ಕೊಟ್ಟು ಪೋಗೆ

ಸೂತಂ ಕಂಡಾ|

ತ್ಮಾಂಗನೆಗೆ ರಾಧೆಗಿತ್ತು ಮ

ನಂಗೊಳೆ ರಾಧೇಯನೆನಿಸಿ

ಸೂತಜನಾದೈ|| ೬೫ ||

ಪದ್ಯ-೬೫:ಪದವಿಭಾಗ-

ಅರ್ಥ:ಗಂಗೆಗೆ

ಕೆಯ್ಯೆಡೆಯೆಂದು

ಉತ್ತುಂಗಸ್ತನಿ (ಉಬ್ಬಿದೆದೆಯ

ಯುವತಿಯಾದ ಅಡವಾಗಿ

ಗಂಗೆಗೆ) ಕೊಟ್ಟು ಪೋಗೆ
ಸೂತಂ ಕಂಡು (ಕೊಟ್ಟು
ಹೋಗಲು ಅದನ್ನು ನೋಡಿದ
ಸೂತನು) ಆತ್ಮ ಅಂಗನೆಗೆ
ರಾಧೆಗಿತ್ತು ಮನಂಗೊಳೆ (ತನ್ನ
ಹೆಂಡತಿಯಾದ ರಾಧೆಗೆ
ಕೊಟ್ಟು ಸಂತಸಪಡಲು)
ರಾಧೇಯನು ಎನಿಸಿ
ಸೂತಜನಾದೈ(ನೀನು
ರಾಧೇಯನೆನು ಎಸಿಕೊಂಡು
ಸೂತಪುತ್ರನಾಗಿದ್ದೀಯೆ)

ಪದ್ಯ-೬೫:ಅರ್ಥ:ನಿನ್ನನ್ನು ಉಬ್ಬಿದೆದೆಯ ಯುವತಿಯಾದ ನಿನ್ನ ತಾಯಿ ಕುಂತಿಯು ಗಂಗೆಗೆ ಅಡವಾಗಿ (ರಕ್ಷಿಸಲು) ಕೊಟ್ಟು ಹೋಗಲು ಅದನ್ನು ನೋಡಿದ ಸೂತನು ತನ್ನ ಹೆಂಡತಿಯಾದ ರಾಧೆಗೆ ಕೊಟ್ಟು ಸಂತಸಪಡಲು,ದರಿಂದ ನೀನು ರಾಧೇಯನೆನು ಎಸಿಕೊಂಡು

ಸೂತಪುತ್ರನಾಗಿದ್ದೀಯೆ.

ಎಂದನು ಕೃಷ್ಣ.

ನಿನ್ನುತ್ಪತ್ತಿಯನಿಂತೆಂ

ದೆನ್ನರುಮಣಮಯರಱಿವೆ

ನಾಂ ಸಹದೇವಂ|

ಪನ್ನಗಕೇತು ದಿನೇಶಂ

ನಿನ್ನಂಬಿಕೆ ಕುಂತಿಯಿಂತಿವರ್

ನೆರೆ ಬಲ್ಲರ್|| ೬೬||

ಪದ್ಯ-೬೬:ಪದವಿಭಾಗ-

ಅರ್ಥ:ನಿನ್ನ ಉತ್ಪತ್ತಿಯನು

ಇಂತೆಂದು ಎನ್ನರುಂ ಅಣಂ

ಅರಿಯರ್ (ನಿನ್ನ ಹುಟ್ಟಿನ ರೀತಿ ಹೀಗೆಂದು ಯಾರಿಗೂ ಸ್ವಲ್ಪವೂ ತಿಳಿಯದು) ಅಱಿವೆ ನಾಂ,(ನಾನು ತಿಳಿದಿದ್ದೇನೆ) ಸಹದೇವಂ, ಪನ್ನಗಕೇತು (ದುರ್ಯೋಧನ), ದಿನೇಶಂ (ಸೂರ್ಯ), ನಿನ್ನ ಅಂಬಿಕೆ ಕುಂತಿಯು ಇಂತಿವರ್ ನೆರೆ ಬಲ್ಲರ್ (ನಿನ್ನ ತಾಯಿಯಾದ ಕುಂತಿ ಇವರು ಪೂರ್ಣವಾಗಿ ಬಲ್ಲೆವು.)

ಪದ್ಯ-೬೬:ಅರ್ಥ:ಕೃಷ್ಣನು ಕರ್ಣನಿಗೆ ಹೇಳಿದ: ನಿನ್ನ ಹುಟ್ಟಿನ ರೀತಿ ಹೀಗೆಂದು ಯಾರಿಗೂ ಸ್ವಲ್ಪವೂ ತಿಳಿಯದು. ನಾನು ತಿಳಿದಿದ್ದೇನೆ, ಮತ್ತೆ ಸಹದೇವ, ದುರ್ಯೋಧನ, ಸೂರ್ಯ, ನಿನ್ನ ತಾಯಿಯಾದ ಕುಂತಿ ಇವರು ಪೂರ್ಣವಾಗಿ ಬಲ್ಲೆವು.

**ವ|| ದುರ್ಯೋಧನಂ ನಿನ್ನನೇತಳ್

ನಂಬಿವನೆಂದೊಡೆ ನೀನುಂ
ತಾನುಮೊರ್ಮೆ
ಗಂಗಾನದೀತೀರದೊಳ್
ಬೇಂಟೆಯಾಡುವಲ್ಲಿ
ತತ್ಸಮೀಪದ
ತಾಪಸಾಶ್ರಮದೊಳ್
ಸತ್ಯಂತಪರೆಂಬ
ದಿವ್ಯಜ್ಞಾನಿಗಳಂ ಕಂಡು
ಪೊಡೆವಟ್ಟಿರ್ವರುಮಂ ಪರಸಿ
ನಿನಗೆ ಮುನ್ನಮೇೞಿಲ್
ತರಿಸಿದೊಡೆ

ಸುಯೋಧನನೇವಯಿಸಿ ನಿನ್ನಂ ಪೋಗಲ್ವೇಳ್ದು-

ವಚನ:ಪದವಿಭಾಗ-

ಅರ್ಥ:ದುರ್ಯೋಧನಂ ನಿನ್ನನು ಏತರೊಳ್ ನಂಬಿದವನೆಂದೊಡೆ (ದುರ್ಯೋಧನನು ನಿನ್ನನ್ನು ಯಾವ ಕಾರಣದಿಂದ ನಂಬಿದವನೆಂದರೆ) ನೀನುಂ ತಾನುಂ ಒರ್ಮೆ ಗಂಗಾನದೀತೀರದೊಳ್

ಬೇಂಟೆಯಾಡುವಲ್ಲಿ ತತ್
ಸಮೀಪದ
ತಾಪಸಾಶ್ರಮದೊಳ್
(ತಪಸ್ವಿಗಳ ಆಶ್ರಮದಲ್ಲಿ)
ಸತ್ಯಂತಪರೆಂಬ
ದಿವ್ಯಜ್ಞಾನಿಗಳಂ ಕಂಡು
ಪೊಡೆವಟ್ಟು ಇರ್ವರುಮಂ
ಪರಸಿ (ನಮಸ್ಕಾರಮಾಡಿದಿರಿ.
ನಿಮ್ಮಿಬ್ಬರನ್ನೂ ಹರಸಿ) ನಿನಗೆ
ಮುನ್ನಮೇ ಏಱಿಲ್
ತರಿಸಿದೊಡೆ (ನಿನಗೆ ಮೊದಲು

ಏರಲು, ಕುಳಿತುಕೊಳ್ಳಲು ಆಸನವನ್ನು ತರಿಸಿಕೊಟ್ಟರು.) ಸುಯೋಧನನು ಏವಯಿಸಿ ನಿನ್ನಂ ಪೋಗಲ್ವೇಳ್ದು- (ದುರ್ಯೋಧನನು ಲಜ್ಜಿತನಾಗಿ ನಿನ್ನನ್ನು ಹೊರಗೆ ಹೋಗಹೇಳಿ)

ವಚನ:ಅರ್ಥ:ವ||

ದುರ್ಯೋಧನನು ನಿನ್ನನ್ನು ಯಾವ ಕಾರಣದಿಂದ ನಂಬಿದವನೆಂದರೆ ನೀನೂ

ಆತನೂ ಒಂದು ಸಲ ಗಂಗಾತೀರದಲ್ಲಿ ಬೇಟೆಯಾಡುತ್ತಿರುವಾಗ ಸಮೀಪದಲ್ಲಿದ್ದ ತಪಸ್ವಿಗಳ ಆಶ್ರಮದಲ್ಲಿ ಸತ್ಯಂತಪರೆಂಬ ದಿವ್ಯಜ್ಞಾನಿಗಳನ್ನು ಕಂಡು ನಮಸ್ಕಾರಮಾಡಿದಿರಿ. ನಿಮ್ಮಿಬ್ಬರನ್ನೂ ಹರಸಿ ಅವರು ನಿನಗೆ ಮೊದಲು ಆಸನವನ್ನು ತರಿಸಿಕೊಟ್ಟರು.

ದುರ್ಯೋಧನನು ಲಜ್ಜಿತನಾಗಿ ನಿನ್ನನ್ನು ಹೊರಗೆ ಹೋಗಹೇಳಿ

ಉ|| ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇೞಿಮೆಂ ದಾ ನರನಾಥನಂ ತಿಳಿಪೆ ತನ್ಮನಿ ಭೂಭುಜನೆಯ್ದೆ ನಂಬಿ ಕಾ|

ನೀನ ಸಮಂತು ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾ

ನೀ ನಯದಿಂದೆ ಪೆರ್ಚಿ ಪೊರೆದಟ್ಟಿಕೊಳಂದೊಡನುಂ ಡನಲ್ಲನೇ|| ೬೭ ||

ಪದ್ಯ-೬೭:ಪದವಿಭಾಗ-

ಅರ್ಥ:ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ (ಮೀಂಗುಲಿಗನಿಗೆ ಮೀನನ್ನು ಕೊಲ್ಲುವ ಸ್ವಭಾವವುಳ್ಳವನು-ಬೆಸ್ತ) (ನಾನಿರುವಾಗ ತಾವಿದೇಕೆ ಆ) ಪೇೞಿಂ

ಎಂದು ಆ ನರನಾಥನಂ ತಿಳಿಪೆ (ಆ ಋಷಿಯನ್ನು ರಾಜನು ಹೇಳಿ ಎಂದಾಗ) ತನ್ ಮುನಿ ಭೂಭುಜನು ಎಯ್ದೆ ನಂಬಿ (ಎಂದಾಗ ಅವರು ದೊರೆಗಯನ್ನು ನಂಬಿ) ಕಾನೀನ (ಅವನು ಕುಂತಿಗೆ ಮದುವೆಗೆ ಮೊದಲೇ ಜನಿಸಿದವನು; ಕಾನೀನ ಎಂದನು) ಸಮಂತು ಪಾಟಿಸುವೆನು

ಒಯ್ಯನೆ(ಚೆನ್ನಾಗಿ ಮೆಲ್ಲಗೆ
ಕೀಳುವೆನು, ತೆಗೆಯುವೆನು)
ಮುಳ್ಳೊಳೆ ಮುಳ್ಳನೆಂದು
(ಮುಳ್ಳನ್ನು ಮುಳ್ಳಿನಿಂದಲೇ
ತೆಗೆಯುವ ಉಪಾಯವನ್ನು
ಮಾಡುವೆನೆಂದು) ತಾನು ಈ
ನಯದಿಂದೆ ಪೆರ್ಚಿ(ಈ
ಉದ್ದೇಶದಿಂದ ಬಹಳ)
ಪೊರೆದು ಅಟ್ಟಿಕೊಳ್ ಅಂದು
ಒಡನುಂಡನಲ್ಲನೇ
(ಪ್ರೀತಿಯಿಂದ ನಿನ್ನೊಡನೆ

ಉಂಡನಲ್ಲವೇ?”) ಬೇರೆ ಉದ್ದೇಶವಿಲ್ಲ.

ಪದ್ಯ-೬೭:ಅರ್ಥ: ೬೭. ‘ನಾನಿರುವಾಗ ತಾವಿದೇಕೆ ಆ ಬೆಸ್ತರವನಿಗೆ ದಯೆಗೆಯ್ದಿರಿ’ ಎಂದು ಆ ಋಷಿಯನ್ನು ಹೇಳಿ ಎಂದಾಗ ಅವರು ದೊರೆಗಯನ್ನು ನಂಬಿ ಎಲ್ಲವನ್ನೂ ತಿಳಿಸಿದರು. ದೊರೆಯು ನಂಬಿ ಕರ್ಣ! ಮುಳ್ಳನ್ನು ಮುಳ್ಳಿನಿಂದಲೇ

ತೆಗೆಯುವ ಉಪಾಯವನ್ನು ಮಾಡುವೆನೆಂದು ನಿನ್ನನ್ನು ಈ ಉದ್ದೇಶದಿಂದ ಬಹಳ ಪೋಷಿಸುತ್ತ ಪ್ರೀತಿಯಿಂದ ನಿನ್ನೊಡನೆ ಉಂಡನಲ್ಲವೇ?" ಬೇರೆ ಉದ್ದೇಶವಿಲ್ಲ.

ಚಂ|| ಎನೆಯೆನೆ ಬಾಷ್ಪವಾರಿ ಪುಳಕಂಬೆರಸೊರ್ಮೆಯೆ ಪೊಣ್ಮೆ ಮುನ್ನೆ ನೀ ವೆನಗಿದನೇಕೆ ಪೇೞ್ದಿರೊ ನೆಗೞ್ತೆ

ಪೊಗೞ್ತೆಯನಾಂಪಿನಂ ಸುಯೋ|
ಧನನೆನಗೊಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನ ಣ್ಪಿನ ನೆವದಿಂದೆ ಪಾಂಡವರನಾನೊಳವೊಕ್ಕೊಡೆ ನೀಮೆ ಪೇಸಿರೇ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ಎನೆಯೆನೆ (ಎನೆ- ಹೀಗೆ ಹೇಳಲು) ಬಾಷ್ಪವಾರಿ ಪುಳಕಂಬೆರಸು ಒರ್ಮೆಯೆ

ಪೊಣ್ಮೆ
(ರೋಮಾಂಚನದೊಡನೆ
ಕಣ್ಣೀರು ಸುರಿಯಲು,) ಮುನ್ನೆ
ನೀವು ಎನಗೆ ಇದನೇಕೆ
ಪೇೞ್ದಿರೊ (*ಯುದ್ಧದ
ಆರಂಭಕ್ಕೆ*--'ಮೊದಲೇ ನೀವು
ನನಗೆ ಏಕೆ ತಿಳಿಸಿದರೋ?)
ನೆಗೞ್ತೆ ಪೊಗೞ್ತೆಯನು
ಆಂಪಿನಂ ಸುಯೋಧನನು
ಎನಗೆ ಒಳ್ಳೆ ಕೆಯ್ದ ಕೃತಮಂ
(ನನ್ನ ಕಾರ್ಯ ಪ್ರಸಿದ್ಧಿಗೂ

ಹೊಗಳಿಕೆಗೂ ಹೊಂದುತ್ತರಲು
ದುರ್ಯೋಧನನು ನನಗೆ
ಮಾಡಿದ ಒಳ್ಳೆಯ
ಕಾರ್ಯಗಳನ್ನು) ಪೆಱಗಿಕ್ಕಿ
(ದುರ್ಯೋಧನನು ನನಗೆ
ಮಾಡಿದ ಒಳ್ಳೆಯ
ಕಾರ್ಯಗಳನ್ನು ಹೊರಗಿಕ್ಕಿ-
ಲೆಕ್ಕಿಸದೆ,) ನೆಗೞ್ತೆ ಮಾಸೆ
(ನನ್ನ ಕೀರ್ತಿ ಕುಂದುವ ಹಾಗೆ)
ನಣ್ಪಿನ ನೆವದಿಂದೆ
ಪಾಂಡವರನೆ ಆನು

ಒಳವೊಕ್ಕೊಡೆ (ನೆಂಟಿನ ನೆಪದಿಂದ ಪಾಂಡವರಲ್ಲಿ ಸೇರಿಕೊಂಡರೆ) ನೀಮೆ ಪೇಸಿರೇ (ನೀವೂ ಹೇಸುವುದಿಲ್ಲವೇ?)

ಪದ್ಯ-೬೮:ಅರ್ಥ: ಕೃಷ್ಣನು ಹೀಗೆ ಹೇಳಲು, ಕರ್ಣನಿಗೆ ರೋಮಾಂಚನದೊಡನೆ ಕಣ್ಣೀರು ಸುರಿಯಲು, ಅವನು ಕೃಷ್ಣನನ್ನು ಕುರಿತು 'ಮೊದಲೇ ನೀವು ನನಗೆ ಏಕೆ

ತಿಳಿಸಿದರೋ? ನನ್ನ ಕಾರ್ಯ
ಪ್ರಸಿದ್ಧಿಗೂ ಹೊಗಳಿಕೆಗೂ
ಹೊಂದುತ್ತರಲು,
ದುರ್ಯೋಧನನು ನನಗೆ
ಮಾಡಿದ ಒಳ್ಳೆಯ
ಕಾರ್ಯಗಳನ್ನು ಹೊರಗಿಕ್ಕಿ-
ಲೆಕ್ಕಿಸದೆ, ನನ್ನ ಕೀರ್ತಿ
ಕುಂದುವ ಹಾಗೆ ನೆಂಟಿನ
ನೆಪದಿಂದ ಪಾಂಡವರಲ್ಲಿ
ಸೇರಿಕೊಂಡರೆ ನೀವೂ
ಹೇಸುವುದಿಲ್ಲವೇ?

ಉ|| ನೆತ್ತಮನಾಡಿ ಭಾನುಮತಿ
ಸೋಲ್ತೊಡೆ
ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ
ಮುತ್ತಿನ ಕೇಡನೆ ನೋಡಿ
ನೋಡಿ ಬ|
ಳ್ಕುತ್ತಿರೆಯೇವಮಿಲ್ಲದಿವನಾ
ಯ್ದುದೊ ತಪ್ಪದೆ ಪೇಱಿಮೆಂಬ
ಭೂ
ಪೊತ್ತಮನಂ ಬಿಸುಟ್ಟಿರದೆ
ನಿಮ್ಮೊಳೆ ಪೊಕ್ಕೊಡೆ

ಬೇಡನಲ್ಲನೇ|| ೬೯ ||

ಪದ್ಯ-೬೯:ಪದವಿಭಾಗ-ಅರ್ಥ:ನೆತ್ತಮನಾಡಿ ಭಾನುಮತಿ ಸೋಲ್ತೊಡೆ (ಕರ್ಣನೊಡನೆ--ದುರ್ಯೋಧನನ ರಾಣಿಯಾದ ಭಾನುಮತಿಯು ಪಗಡೆಯಾಡಿ ಭಾನುಮತಿ ಸೋತಾಗ) ಸೋಲಮನು ಈವುದೆಂದು ಕಾಡುತ್ತಿರೆ (ಪಣವನ್ನು ಕೊಟ್ಟು ಹೋಗು ಎಂದು

ಕಾಡುತ್ತಿರಲು) ಲಂಬಣಂ
ಪಟಿಯೆ (ಮುತ್ತಿನಹಾರವು
ಹರಿಯಲು,) ಮುತ್ತಿನ ಕೇಡನೆ
ನೋಡಿ ನೋಡಿ ಬಳ್ಕುತ್ತಿರೆ
(ಮುತ್ತಿನ ಕೇಡನ್ನೇ ನೋಡುತ್ತ
ನಡುಗುತ್ತಿರಲು) ಏವಮಿಲ್ಲದೆ
ಇವನು ಆಯ್ವುದೊ
(ಸಂಕೋಚವಿಲ್ಲದೆ ಪ್ರೇಕ್ಷನಾದ
ಇವನು ದುರ್ಯೋಧನನು
ಮುತ್ತುಗಳನ್ನು ಆಯುವುದೇ-
ಹೆಕ್ಕುವದೇ!) ತಪ್ಪದೆ ಪೇಟಿಂ

ಎಂಬ ಭೂಪೋತ್ತಮನಂ (ತಪ್ಪದೇ ಹೇಳು' ಬಿಡದೆ ಕೊಡಲು ಹೇಳು, ಎಂದು ಹೇಳುವ ರಾಜಶ್ರೇಷ್ಠನಾದ ದುರ್ಯೋಧನನ್ನು) ಬಿಸುಟ್ಟು ಇರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ (ಬಿಟ್ಟು ನಿಮ್ಮಲ್ಲಿ ಸೇರಿಕೊಂಡರೆ, ನಾನು ಯಾರಿಗೂ ಬೇಡದವನಾಗುತ್ತೇನಲ್ಲವೇ? ಎಂದನು.)

ಪದ್ಯ-೬೯:ಅರ್ಥ:

ಕರ್ಣನೊಡನೆ-
ದುರ್ಯೋಧನನ ರಾಣಿಯಾದ
ಭಾನುಮತಿಯು ಪಗಡೆಯಾಡಿ
ಭಾನುಮತಿ ಸೋತಾಗ,
(ಪಗಡೆ ಹಾಸಿನ/
ಹಲಗೆಮಣೆಯ ಪಕ್ಕದಲ್ಲಿ
ಫಣವಾಗಿಟ್ಟಿದ್ದ ತನ್ನ ಮುತ್ತಿನ
ಹಾರವನ್ನು ಭಾನುಮತಿ
ಕೊಡಲು ಇಷ್ಟಪಡದೆ
ತೆಗೆದುಕೊಂಡು ಹೊರಟಾಗ,

ಪಣವನ್ನು ಕೊಟ್ಟು ಹೋಗು ಎಂದು, ಅದನ್ನು ತೆಗೆದುಕೊಳ್ಳಲು ಕರ್ಣನೂ ಕೈಹಾಕಿ ಮುತ್ತಿನ ಸರವನ್ನು ಎಳೆದಾಗ) ಕೈಯಲ್ಲಿ ಹಿಡಿದ ಮುತ್ತಿನಹಾರವು ಹರಿಯಿತು, (ತಾನು, ಕರ್ಣನು) ಮುತ್ತಿನ ಹಾರ ಹರಿದು ಮುತ್ತು ಚೆಲ್ಲಿದ್ದನ್ನೇ ನೋಡುತ್ತ ನಡುಗುತ್ತಿರಲು ಇವನು- ದುರ್ಯೋಧನನು

ಸಂಕೋಚವಿಲ್ಲದೆ
ಮುತ್ತುಗಳನ್ನು ಹೆಕ್ಕುವದೇ?!
ತನ್ನ ಪರವಹಿಸಿ, ತಪ್ಪದೇ
(ಹಾರವನ್ನು ಕೊಡಲು) ಹೇಳು'
ಎಂದು ಹೇಳುವ
ರಾಜಶ್ರೇಷ್ಠನಾದ
ದುರ್ಯೋಧನನ್ನು ಬಿಟ್ಟು
ನಿಮ್ಮಲ್ಲಿ ಸೇರಿಕೊಂಡರೆ,
ನಾನು ಯಾರಿಗೂ
ಬೇಡದವನಾಗುತ್ತೇನಲ್ಲವೇ?
ಎಂದನು. (ಅಷ್ಟೊಂದು

ನಂಬುಗೆ ಇಟ್ಟ ಅವನನ್ನು ಬಿಸುಟರೆ ತಿರಸ್ಕಾರ ಯೋಗ್ಯನಾಗುವೆನು, ಎಂದನು.)

ವ|| ಎಂಬುದುಂ ಕರ್ಣಂ ತನಗೆಂತುಮೊಡಂಬಡದುದಂ ನಿರ್ಣಯಮಾಗಱಿದು ಮಗುೞ್ದೇೞ್ದು ನಾರಾಯಣಂ ಪೋದನಿತ್ತಲಂಗ ರಾಜನುಮಾತ್ಮಾಲಯಕ್ಕೆ ವಂದು ಚಿಂತಾಕ್ರಾಂತನಾಗಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಕರ್ಣಂ ತನಗೆ ಅಂತುಂ ಒಡಂಬಡದುದಂ ನಿರ್ಣಯಮಾಗ ಅಱಿದು (ಅರಿತು)- (ಅವನು ಹೇಗೂ ತನ್ನ ಮಾತಿಗೆ ಒಪ್ಪುವುದಿಲ್ಲವೆಂಬುದು ಗಟ್ಟಿ ತಿಳಿಯಲು) ಮಗುೞ್ದೇೞ್ದು (ಹಿಂತಿರುಗಲು ಹೇಳಿ) ನಾರಾಯಣಂ ಪೋದನು

ಇತ್ತಲು ಅಂಗ ರಾಜನುಂ ಆತ್ಮಾಲಯಕ್ಕೆ ವಂದು (ಬಂದು) ಚಿಂತಾಕ್ರಾಂತನಾಗಿ-

ವಚನ:ಅರ್ಥ:ಕರ್ಣನು ಹಾಗೆ ಹೇಳಲು, ಅವನು ಹೇಗೂ ತನ್ನ ಮಾತಿಗೆ ಒಪ್ಪುವುದಿಲ್ಲವೆಂಬುದು ಗಟ್ಟಿ ತಿಳಿಯಲು, ಕೃಷ್ಣನು ಅವನಿಗೆ ಹಿಂತಿರುಗಲು ಹೇಳಿ ತಾನೂ ಹೋದನು. ಈ ಕಡೆ ಅಂಗ

ರಾಜ ಕರ್ಣನು ತನ್ನ ಮನೆಗೆ
ಬಂದು ಚಿಂತೆಯಿಂದ ಕೂಡಿ-

ಚಂ|| ಕುರುಪತಿಗಿಲ್ಲ
ದೈವಬಲಮಾಜಿಗೆ
ಮೇಲ್ಮಲೆಗೆಯ್ವರಾಗಳುಂ
ಗುರು ಗುರುಪುತ್ರ
ಸಿಂಧುಸುತರಾಳ್ದನುಮೆನ್ನನೆ
ನಚ್ಚಿ ಪೆರ್ಚಿ ಮುಂ|
ಪೊರೆದನಿದಿರ್ಚಿ
ಕಾದುವರುಮೆನ್ನಯ
ಸೋದರರೆಂತು ನೋಡಿ ಕೊ

ಕ್ಕರಿಸದೆ ಕೊಲ್ವೆನೆನ್ನೊಡಲನಾಂತವಿಪೆಂ ರಣರಂಗಭೂಮಿಯೊಳ್|| ೭೦ ||

ಪದ್ಯ-೭೦:ಪದವಿಭಾಗ-ಅರ್ಥ:ಕುರುಪತಿಗಿಲ್ಲ ದೈವಬಲಂ; ಆಜಿಗೆ ಮೇಲ್ಮಲೆಗೆಯ್ವರ್ ಆಗಳುಂ ಗುರು ಗುರುಪುತ್ರ ಸಿಂಧುಸುತರು (ದ್ರೋಣ ಅಶ್ವತ್ಥಾಮ ಭೀಷ್ಮರು ತೋರಿಕೆಯ

ಯುದ್ಧವನ್ನು ಮಾಡುವವರು) ಆಳ್ದನುಂ ಎನ್ನನೆ ನಚ್ಚಿ ಪೆರ್ಚಿ (ದುರ್ಯೋಧನನು ನನ್ನನ್ನೇ ನಂಬಿ ಉಬ್ಬಿ) ಮುಂ-ಪೊರೆದನು (ಮೊದಲಿಂದಲೂ ಸಲಹಿದ್ದಾನೆ.); ಇದಿರ್ಚಿ ಕಾದುವರುಂ ಎನ್ನಯ ಸೋದರರು (ಎದುರಿಸಿ ಯುದ್ಧಮಾಡುವವರು ನನ್ನ ಸಹೋದರರು) ಎಂತು ನೋಡಿ ಕೊಕ್ಕರಿಸದೆ ಕೊಲ್ವೆನು

(ತಿಳಿದು ತಿಳಿದು ಹೇಸದೆ ಅವರನ್ನು ಹೇಗೆ ಕೊಲ್ಲಲಿ.) ಎನ್ನ ಉಡಲನು ಆಂ ತವಿಪೆಂ ರಣರಂಗಭೂಮಿಯೊಳ್ ()

ಪದ್ಯ-೭೦:ಅರ್ಥ:

ದುರ್ಯೋಧನನಿಗೆ ದೈವಬಲವಿಲ್ಲ, ದ್ರೋಣ ಅಶ್ವತ್ಥಾಮ ಭೀಷ್ಮರು ತೋರಿಕೆಯ ಯುದ್ಧವನ್ನು ಮಾಡುವವರು, ನನ್ನ ಯಜಮಾನನಾದ

ದುರ್ಯೋಧನನು ನನ್ನನ್ನೇ ನಂಬಿ ಉಬ್ಬಿ ಮೊದಲಿಂದಲೂ ಸಲಹಿದ್ದಾನೆ. ಎದುರಿಸಿ ಯುದ್ಧಮಾಡುವವರು ನನ್ನ ಸಹೋದರರು. ತಿಳಿದು ತಿಳಿದು ಹೇಸದೆ ಅವರನ್ನು ಹೇಗೆ ಕೊಲ್ಲಲಿ. ರಣರಂಗಭೂಮಿಯಲ್ಲಿ ನನ್ನ ಶರೀರವನ್ನೇ ನಾಶಮಾಡುತ್ತೇನೆ. ಎಂದು ಕರ್ಣನು ನಿಶ್ಚಯಿಸಿದನು.

ಮ|| ಅಱಿದೆಂ
ಸೋದರರೆಂದು
ಪಾಂಡವರನಿನ್ನೆಂತೆನ್ನರಂ
ಕೊಲ್ವೆನ
ಟ್ಟಿಳೊಳೆನ್ನಂ ಪೊರೆದೆಯ್ದೆ
ನಂಬಿದ
ನೃಪಂಗೆಂತಾಜಿಯೊಳ್
ತಪ್ಪುವೆಂ|
ತಱಿಸಂದುದ್ಧತ ವೈರಿ ಭೂಪ
ಬಲದೊಡ್ಡಳ್ಳಾಡೆ ಲೆಕ್ಕಕ್ಕೆ ತ

ಳ್ತಿಱಿದೆನ್ನಾಳ್ದನಿವಾನೆ ಮುಂಚೆ ನಿಱಿಪೆಂ ಕೆಯ್ಕೊಂಡು ಕಟ್ಟಾಯಮಂ|| ೭೧ ||

ಪದ್ಯ-೭೧:ಪದವಿಭಾಗ-ಅರ್ಥ:ಅಱಿದೆಂ ಸೋದರರೆಂದು ಪಾಂಡವರನು (ಸೋದರರೆಂದು ತಿಳಿದೆನು) ಇನ್ನೆಂತು ಎನ್ನರಂ ಕೊಲ್ವೆನು (ಇನ್ನು ನನ್ನವರನ್ನು ಹೇಗೆ ಕೊಲ್ಲಲಿ?) ಅಟ್ಟಿಕ್ಕೊಳ್ ಎನ್ನಂ

ಪೊರೆದು ಎಯ್ದೆ ನಂಬಿದ
ನೃಪಂಗೆ (ಪ್ರೀತಿಯಿಂದ
ನನ್ನನ್ನು ಸಲಹಿ ಪೂರ್ಣವಾಗಿ
ನಂಬಿದ ರಾಜನಿಗೆ) ಎಂತು
ಆಜಿಯೊಳ್ ತಪ್ಪುವೆಂ (ಹೇಗೆ
ಯುದ್ಧದಲ್ಲಿ ತಪ್ಪಿ ನಡೆಯಲಿ)
ತಱಿಸಂದು ಉದ್ಧತ ವೈರಿ
ಭೂಪ ಬಲದ ಒಡ್ಡು ಅಳ್ಕಾಡೆ
(ನಿಶ್ಚಯವಾಗಿ ಉದ್ಧತರಾದ
ಶತ್ರುಸೈನ್ಯಸಮೂಹವು
ನಾಶವಾಗುವ ಹಾಗೆ) ಲೆಕ್ಕಕ್ಕೆ

ತಳ್ಳು ಇಱಿದು (ಲೆಕ್ಕಕ್ಕೆ ಮಾತ್ರ ಎದುರಿಸಿ ಹೋರಾಡಿ) ಎನ್ನಾಳ್ದನಿಂ ಆನೆ ಮುಂಚೆ ನಿಱಿಪೆಂ (ನನ್ನ ಒಡೆಯನಿಗಿಂತ ಮೊದಲು ನಾನೇ ದೇವರ ಸೇರುವೆನು) (ನಿಳಿಪೆಂ - ನಿಳಿ=ಪೆರುಮಾಳು, ದೊಡ್ಡವ ದೇವರು ಜಿ.ವೆಂ.ಸು. ದೇವರಪಾದ ಸೇರು) (ನನ್ನ ಒಡೆಯನಿಗಿಂತ ನಾನೇ ಮೊದಲು ಸಾಯುವೆನು.)

ಕೆಯ್ಕೊಂಡು ಕಟ್ಟಾಯಮಂ (ಪರಾಕ್ರಮವನ್ನು ತೋರಿಸಿ) **ಪದ್ಯ-೭೧:ಅರ್ಥ**:ಪಾಂಡವರನ್ನು ಸೋದರರೆಂದು ತಿಳಿದೆನು. ಇನ್ನು ನನ್ನವರನ್ನು ಹೇಗೆ ಕೊಲ್ಲಲಿ? ಪ್ರೀತಿಯಿಂದ ನನ್ನನ್ನು ಸಲಹಿ ಪೂರ್ಣವಾಗಿ ನಂಬಿದ ರಾಜನಿಗೆ ಹೇಗೆ ಯುದ್ಧದಲ್ಲಿ ತಪ್ಪಿ ನಡೆಯಲಿ. ಎರಡೂ ಸಾಧ್ಯವಿಲ್ಲ. ನಿಶ್ಚಯವಾಗಿ ಉದ್ಧತರಾದ

ಶತ್ರುಸೈನ್ಯಸಮೂಹವು
ನಾಶವಾಗುವ ಹಾಗೆ ಲೆಕ್ಕಕ್ಕೆ
ಮಾತ್ರ ಎದುರಿಸಿ ಹೋರಾಡಿ
ನನ್ನ ಒಡೆಯನಿಗಿಂತ
ಮೊದಲು ನಾನೇ
ಪರಾಕ್ರಮವನ್ನು ತೋರಿಸಿ
ಸಾಯುವೆನು.

ವ|| ಎಂದು ಮುಂತಪ್ಪ ಕಜ್ಜಮಂ ತನ್ನೊಳೆ ಬಗೆದವಾರ್ಯ ವೀರ್ಯಂ ಸೂರ್ಯದಿನದಂದು

ಮಂದಾಕಿನಿಯಂ ಮೀಯಲೆಂದು ಬಂದು ದುರ್ಯೋರ್ಧನನಟ್ಟಿದ ದೇವಸವಳದ ಪದಿನೆಂಟು ಕೋಟಿ ಪೊನ್ನುಮನೊಟ್ಟಿ ಬೆಟ್ಟಾಗ ಪುಂಜಿಸಿ-

ವಚನ:ಪದವಿಭಾಗ-

ಅರ್ಥ:ಎಂದು ಮುಂತಪ್ಪ ಕಜ್ಜಮಂ ತನ್ನೊಳೆ ಬಗೆದ ಅವಾರ್ಯ ವೀರ್ಯಂ (ಎದುರಿಸಲಾಗದ ವೀರನು,

ಕರ್ಣನು)
ಸೂರ್ಯದಿನದಂದು
ಮಂದಾಕಿನಿಯಂ
ಮೀಯಲೆಂದು
(ಆದಿತ್ಯವಾರದ ದಿನ
ಗಂಗೆಯಲ್ಲಿ
ಸ್ನಾನಮಾಡಬೇಕೆಂದು)
ಬಂದು ದುರ್ಯೋಧನನು
ಅಟ್ಟಿದ ದೇವಸವಳದ
ಪದಿನೆಂಟು ಕೋಟಿ
ಪೊನ್ನುಮನು ಒಟ್ಟಿ ಬೆಟ್ಟಾಗ

ಪುಂಜಿಸಿ (ಹದಿನೆಂಟು ಕೋಟಿ ಚಿನ್ನವನ್ನು ಒಟ್ಟಾಗಿ ಬೆಟ್ಟದಂತೆ ರಾಶಿಮಾಡಿದನು.)-

ವಚನ:ಅರ್ಥ:ಎಂದು ಮುಂದೆ ಆಗಬೇಕಾದ ಕಾರ್ಯವನ್ನು ತನ್ನಲ್ಲಿ ಯೋಚಿಸಿದ, ಅವಾರ್ಯವೀರ್ಯನಾದ ಕರ್ಣನು ಒಂದು ಆದಿತ್ಯವಾರದ ದಿನ ಗಂಗೆಯಲ್ಲಿ

ಸ್ನಾನಮಾಡಬೇಕೆಂದು ಬಂದು ದುರ್ಯೋಧನನು ಕಳುಹಿಸಿದ ದೇವಮಾನದ ಹದಿನೆಂಟು ಕೋಟಿ ಚಿನ್ನವನ್ನು ಒಟ್ಟಾಗಿ ಬೆಟ್ಟದಂತೆ ರಾಶಿಮಾಡಿ ಪೂಜಿಸಿ,

ಕಂ|| ಸೋರ್ವ ವಸುಧಾರೆಯಂ ಕೆ ಯ್ಸಾರ್ವ ನಿಧಾನಮುಮನೀಜಿಸಿ
ತನ್ನೀವಳವಿಂ| ಪಾರ್ವಂಗಮಳಿಪಿ ಬೇಡಿದ ಪಾರ್ವಂಗಂ
ಪಿರಿದನಿತ್ತನಂಗಮಹೀಶಂ|| ೭೨ ||

ಪದ್ಯ-೭೨:ಪದವಿಭಾಗ-ಅರ್ಥ:ಸೋರ್ವ ವಸುಧಾರೆಯಂ (

ಧಾರಾಕಾರವಾಗಿ ಸುರಿಯುವ)
ಕೆಯ್ಸಾರ್ವ ನಿಧಾನಮುನು
ಇಟಿಸಿ (ಕೈಯಲ್ಲಿಬಂದ
ನಿಧೀಯನ್ನ ಎಷ್ಟೆಂದು
ನೋಡದೆ ಕಡೆಗಣಿಸಿ) ತನ್ನ
ಈವ ಅಳವಿಂ (ತಾನು
ಕೊಡುವ ಶಕ್ತಿಯಿಂದ)
ಪಾರ್ವಂಗಮ್ ಅಳಿಪಿ ಬೇಡಿದ
ಪಾರ್ವಂಗಂ(ಆಸೆಪಡುವವನಿ
ಗೂ ಆಶೆಪಟ್ಟು ಬೇಡಿದ
ಬ್ರಾಹ್ಮಣರಿಗೂ) ಪಿರಿದನು

ಇತ್ತನು
ಅಂಗಮಹೀಶಂ(ಕರ್ಣನು
ದೊಡ್ಡನಿಧಿಯನ್ನು
ದಾನಮಾಡಿದನು)
ಪದ್ಯ-೭೨:ಅರ್ಥ: ತಾನು
ಮಾಡುವ ದಾನವು
ಧಾರಾಕಾರವಾಗಿ ಸುರಿಯುವ
ಸುವರ್ಣವೃಷ್ಟಿಯನ್ನೂ
ಕೈಯಲ್ಲಿಬಂದ ನಿಧೀಯನ್ನ
ಎಷ್ಟೆಂದು ನೋಡದೆ ಕಡೆಗಣಿಸಿ
ಆಸೆಪಡುವವನಿಗೂ

ಆಶೆಪಟ್ಟು ಬೇಡಿದ
ಬ್ರಾಹ್ಮಣರಿಗೂ ಕರ್ಣನು
ದೊಡ್ಡನಿಧಿಯನ್ನು
ದಾನಮಾಡಿದನು

<u>ಕುಂತಿ ಕರ್ಣ ಸಮಾಗಮ</u>

ವ|| ಅಂತು ಚಾಗಂಗೆಯ್ದು ಜಗನ್ಮಂಗಳ ಗಂಗಾವಾರಿಯೊಳನಿವಾರಿತ ಪರಾಕ್ರಮನಘಮರ್ಷಣಪೂರ್ವಕಂ ಮಿಂದು

ಕನಕಪಾತ್ರದೊಳ್ ತೆಕ್ಕನೆ

ತೀವಿದ ಕನಕ

ಕಮಳಂಗಳಿಂದಾದಿತ್ಯತೇಜನಾ

ದಿತ್ಯಂಗರ್ಘ್ಯಮೆತ್ತಿ

ಸೂರ್ಯಜಂ

ಸೂರ್ಯಮಂತ್ರಂಗಳನೋದಿ

ನೀರಂ ಸೂಸಿ

ತ್ರಿಪದಕ್ಷಿಣಂಗೆಯ್ದ್ವಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಚಾಗಂ ಗೆಯ್ದು

(ಹಾಗೆ ತ್ಯಾಗ ಮಾಡಿ)

ಜಗನ್ಮಂಗಳ
ಗಂಗಾವಾರಿಯೊಳು
ಅನಿವಾರಿತ ಪರಾಕ್ರಮನು
ಅಘಮರ್ಷಣಪೂರ್ವಕಂ
ಮಿಂದು(ಗಂಗಾನದಿಯಲ್ಲಿ
ತಡೆಯಿಲ್ಲದ ಪರಾಕ್ರಮವುಳ್ಳ
ಕರ್ಣನು ಪಾಪ ಪರಿಹಾರಕ
ಮಂತ್ರೋಚ್ಚಾರಣಪೂರ್ವಕ
ವಾಗಿ ಸ್ನಾನಮಾಡಿ)
ಕನಕಪಾತ್ರದೊಳ್ ತೆಕ್ಕನೆ
ತೀವಿದ (ಚಿನ್ನದ ಪಾತ್ರೆಯಲ್ಲಿ

ಪೂರ್ಣವಾಗಿ ತುಂಬಿದ) ಕನಕ
ಕಮಳಂಗಳಿಂದ
ಅದಿತ್ಯತೇಜನು ಆದಿತ್ಯಂಗೆ
ಅರ್ಘ್ಯಮೆತ್ತಿ
(ಆದಿತ್ಯತೇಜನಾದ ಕರ್ಣನು
ಸೂರ್ಯನಿಗೆ ಅರ್ಘ್ಯವನ್ನು
ಕೊಟ್ಟು) ಸೂರ್ಯಜಂ
ಸೂರ್ಯಮಂತ್ರಂಗಳನ ಓದಿ
ನೀರಂ
ಸೂಸಿ(ಸೂರ್ಯಮಂತ್ರವನ್ನು
ಜಪಿಸಿ ನೀರು ಚಿಮುಕಿಸಿ,)

ತ್ರಿಪದಕ್ಷಿಣಂ ಗೆಯ್ವಾಗಳ್
(ಮೂರುಪ್ರದಕ್ಷಿಣೆ
ಮಾಡುವಾಗ-)-
ವಚನ:ಅರ್ಥ: ಹಾಗೆ ತ್ಯಾಗ
ಮಾಡಿ ಲೋಕಮಂಗಳ
ಸ್ವರೂಪೆಯಾದ
ಗಂಗಾನದಿಯಲ್ಲಿ ತಡೆಯಿಲ್ಲದ
ಪರಾಕ್ರಮವುಳ್ಳ ಕರ್ಣನು
ಪಾಪಪರಿಹಾರಕ
ಮಂತ್ರೋಚ್ಚಾರಣಪೂರ್ವಕ
ವಾಗಿ ಸ್ನಾನಮಾಡಿ ಚಿನ್ನದ

ಪಾತ್ರೆಯಲ್ಲಿ ಪೂರ್ಣವಾಗಿ
ತುಂಬಿದ ಚಿನ್ನದ
ಕಮಲಗಳಿಂದ
ಆದಿತ್ಯತೇಜನಾದ ಕರ್ಣನು
ಸೂರ್ಯನಿಗೆ ಅರ್ಘ್ಯವನ್ನು
ಕೊಟ್ಟು ಸೂರ್ಯಮಂತ್ರವನ್ನು
ಜಪಿಸಿ ನೀರು ಚಿಮುಕಿಸಿ,
ಮೂರುಪ್ರದಕ್ಷಿಣೆ
ಮಾಡುವಾಗ-

ಕಂ|| ಸಂಗತ
ತರಂಗಯುತೆಯಂ

ಮಂಗಳಲಕ್ಷಣೆಯನಂದು

ಭೋಂಕನೆ ಕಂಡಂ|

ಗಂಗಾಂಗನೆಯಂ ಕಾಣ್ಬವೊ

ಲಂಗನೃಪಂ ಮುಂದೆ ನಿಂದ

ಕೊಂತಿಯನಾಗಳ್|| ೭೩ ||

ಪದ್ಯ-೭೩:ಪದವಿಭಾಗ-

ಅರ್ಥ:ಸಂಗತ

ತರಂಗಯುತೆಯಂ (ಆಗ

ಅಲೆಗಳಿಂದ ಕೂಡಿದವಳೂ)

ಮಂಗಳಲಕ್ಷಣೆಯನು ಅಂದು

ಭೋಂಕನೆ ಕಂಡಂ

(ಮಂಗಳಲಕ್ಷಣವುಳ್ಳವಳು
ಆದ ಕುಂತಿದೇವಿಯನ್ನು
ಕರ್ಣನು ಥಟಕ್ಕನೆ ಕಂಡನು)
ಗಂಗಾಂಗನೆಯಂ ಕಾಣ್ಬವೊಲ್
(ಗಂಗಾದೇವಿಯನ್ನು ಕಾಣುವ
ಹಾಗೆ) ಅಂಗನೃಪಂ ()ಕರ್ನನು
ಮುಂದೆ ನಿಂದ ಕೊಂತಿಯನು
ಆಗಳ್ (<- ಮೊದಲ ಪದ)
(ಮುಂದೆ ನಿಂತಿದ್ದ
ಕುಂತಿದೇವಿಯನ್ನು ಕರ್ಣನು
ಥಟಕ್ಕನೆ ಕಂಡನು)

ಪದ್ಯ-೭೩:ಅರ್ಥ:ಆಗ ಅಲೆಗಳಿಂದ ಕೂಡಿದವಳೂ ಮಂಗಳಲಕ್ಷಣವುಳ್ಳವಳು ಆದ ಗಂಗಾದೇವಿಯನ್ನು ಕಾಣುವ ಹಾಗೆ, ಮುಂದೆ ನಿಂತಿದ್ದ ಕುಂತಿದೇವಿಯನ್ನು ಕರ್ಣನು ಥಟಕ್ಕನೆ ಕಂಡನು.

ವ|| ಅಂತು ಕಂಡು ಮನದೊಳಾದೆಱಕದಿಂ ಸಾಷ್ಟಾಂಗಮೆಱಗಿ ಪೊಡೆವಟ್ಟ ನಿಜನಂದನನ

ನಿಟ್ಟಿಱೀಂದಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿ-

ವಚನ:ಪದವಿಭಾಗ-

ಅರ್ಥ:ಅಂತು ಕಂಡು ಮನದೊಳು ಆದ ಎಱಕದಿಂ (ಪ್ರೀತಿಯಿಂದ) ಸಾಷ್ಟಾಂಗಮೆಱಗಿ ಪೊಡೆವಟ್ಟ (ಸಾಷ್ಟಾಂಗನಮಸ್ಕಾರ ಮಾಡಿದ) ನಿಜ ನಂದನನು ಅಟ್ಟಿಱಿಂದ ಅಪ್ಪಿಕೊಂಡು

(ತನ್ನ ಮಗನನ್ನು ಪ್ರೀತಿಯಿಂದ ಆಲಿಂಗನಮಾಡಿಕೊಂಡು) ಪರಮ ಆಶೀರ್ವಚನಂಗಳಿಂ ಪರಸಿ (ಒಳ್ಳೆಯ ಹರಕೆಗಳಿಂದ ಹರಸಿ)-

ವಚನ:ಅರ್ಥ:ಮನಸ್ಸಿನಲ್ಲುಂಟಾದ ಪ್ರೀತಿಯಿಂದ ಸಾಷ್ಟಾಂಗನಮಸ್ಕಾರ ಮಾಡಿದನು. ಕುಂತಿಯು ತನ್ನ ಮಗನನ್ನು ಪ್ರೀತಿಯಿಂದ

ಆಲಿಂಗನಮಾಡಿಕೊಂಡು

ಒಳ್ಳೆಯ ಹರಕೆಗಳಿಂದ ಹರಸಿ-.

ಕಂ|| ತೊರೆದ

ಕುಚಯುಗಳವಂದಂ

ಬಿರಿವಿಡೆ

ಮೊಲೆವಾಲನಬ್ಕಿಱಿಂದಂ

ಮೆಯ್ಯಂ|

ಕುರಿಸೆ ಸುರಿವಶ್ರುಜಲಮು

ಬ್ಧರಿಸಿ ಪೊನಲ್ ಪೊನಲಟ್ಟೆ

ಜನನುತೆಗಾಗಳ್|| ೭೪ ||

ಪದ್ಯ-೭೪:ಪದವಿಭಾಗ-ಅರ್ಥ:ತೊರೆದ (ಸೊರೆತ, ಹಾಲುಉಕ್ಕುವ) ಕುಚಯುಗಳಂ ಅಂದು ಅಂಬಿರಿವಿಡೆ (ಎರಡು ಮೊಲೆಗಳೂ ಧಾರಾಕಾರವಾಗಿ ಸುರಿಸಲು) ಮೊಲೆವಾಲನು (ಎದೆಯ ಹಾಲನ್ನು) ಅೞ್ಕಱಿಂದಂ ಮೆಯ್ಯ್ ಅಂಕುರಿಸೆ (ಪ್ರೀತಿಯಿಂದ ಶರೀರದಲ್ಲಿ

ರೋಮಾಂಚನವುಂಟಾಗಲು)
ಸುರಿವ ಅಶ್ರುಜಲಮು
ಉಬ್ಬರಿಸಿ ಪೊನಲ್ ಪೊನಲ್
ಅಟ್ಟೆ (ಹರಿಯುತ್ತಿರುವ
ಕಣ್ಣೀರು ಅತ್ಯಧಿಕ
ಪ್ರವಾಹವಾಗಿ ಗಂಗೆಯ
ಪ್ರವಾಹವನ್ನು ಹೆಚ್ಚಿಸಿ)
ಜನನುತೆಗೆ ಆಗಳ್ (ಆಗ
ಜನರಿಂದ ಸ್ತುತಿಸಲ್ಪಡುವ
ಗಂಗಾನದಿಗೆ- ಪ್ರವಾಹವನ್ನು
ಹೆಚ್ಚಿಸಿತು)

ಪದ್ಯ-೭೪:ಅರ್ಥ: ಸೊರೆತ ಎರಡು ಮೊಲೆಗಳೂ ಆಗ ಎದೆಯ ಹಾಲನ್ನು ಧಾರಾಕಾರವಾಗಿ ಸುರಿಸಲು, ಪ್ರೀತಿಯಿಂದ ಶರೀರದಲ್ಲಿ ರೋಮಾಂಚನವುಂಟಾಯಿತು . ಸಂತೋಷದಿಂದ ಹರಿಯುತ್ತಿರುವ ಕಣ್ಣೀರು ಅತ್ಯಧಿಕ ಪ್ರವಾಹವಾಗಿ ಜನರಿಂದ ಸ್ತುತಿಸಲ್ಪಡುವ

ಗಂಗೆಯ ಪ್ರವಾಹವನ್ನು ಹೆಚ್ಚಿಸಿತು.

ಆಗಳೆ ಮಗನಂ ಪೆತ್ತವೊ

ಲಾಗಿ ಲತಾಲಲಿತೆ ನೊಸಲ

ಕಣ್ಬೆತ್ತವೊಲಂ|

ತಾಗಡೆ ರಾಗಕ್ಕಾಗರ

ಮಾಗೆ

ದಿನಾಧಿಪತನೂಜನೊಸೆದಿರ್ಪಿ

ನೆಗಂ|| ೭೫ ||

ಪದ್ಯ-೭೫:ಪದವಿಭಾಗ-

ಅರ್ಥ:ಆಗಳೆ ಮಗನಂ

ಪೆತ್ತವೊಲಾಗಿ (ಆಗತಾನೆ
ಮಗನನ್ನು ಹೆತ್ತಂತಾಯಿತು)
ಲತಾಲಲಿತೆ ನೊಸಲ
ಕಣ್ಬೆತ್ತವೊಲಂತು ಆಗಡೆ
(ಬಳ್ಳಿಯಂತೆ ಕೋಮಲೆಗೆ
ಹಣೆಗಣ್ಣನ್ನು ಪಡೆದಷ್ಟು
ಸಂತೋಷವಾಯಿತು ಆಗ)
ರಾಗಕ್ಕೆ ಆಗರಮಾಗೆ
ದಿನಾಧಿಪತನೂಜನು
ಒಸೆದಿರ್ಪಿನೆಗಂ

(ಸೂರ್ಯಪುತ್ರನಾದ ಕರ್ಣನು ಸಂತಸಪಡುತ್ತಿರಲು.)

ಪದ್ಯ-೭೫:ಅರ್ಥ:ಆಗತಾನೆ ಮಗನನ್ನು ಹೆತ್ತಂತಾಯಿತು. ಸೂರ್ಯಪುತ್ರನಾದ ಕರ್ಣನು ಸಂತಸಪಡುತ್ತಿರಲು, ಬಳ್ಳಿಯಂತಿರಯವ ಕೋಮಲೆಗೆ ಹಣೆಗಣ್ಣನ್ನು ಪಡೆದಷ್ಟು ಆಗ ಸಂತೋಷವಾಯಿತು.

ವ|| ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು-

ವಚನ:ಪದವಿಭಾಗ-

ಅರ್ಥ:ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು (ಗಂಗಾದೇವಿಯು ದಿವ್ಯಾಕಾರವನ್ನು ತಾಳಿ) ಬಂದು-

ವಚನ:ಅರ್ಥ:ಆ ವೇಳೆಗೆ ಸರಿಯಾಗಿ ಗಂಗಾದೇವಿಯು

ದಿವ್ಯಾಕಾರವನ್ನು ತಾಳಿ ಬಂದು

ಕಂ|| ಒಪ್ಪಿಸಿದೆಂ ಕೆಯ್ಯೆಡೆಯೆಂ

ದಪ್ಪೈಸಿದ ನಿನ್ನ ಮಗನನೀಗಳೆ

ನಿನಗೆಂ|

ದಪ್ಪೈಸಿದ ಗಂಗೆ ಪೋಪುದು

ಮೊಪ್ಪುವ

ನಿಜಬಿಂಬದೊಳಗಣಿಂದಂ

ದಿನಪಂ|| ೭೬ ||

ಪದ್ಯ-೭೬:ಪದವಿಭಾಗ-

ಅರ್ಥ:ಒಪ್ಪಿಸಿದೆಂ

ಕೆಯ್ಯೆಡೆಯೆಂದು ಅಪ್ಪೈಸಿದ

ನಿನ್ನ ಮಗನನು ಈಗಳೆ
ನಿನಗೆಂದು (‘ನನಗೆ
ಕೈಗಡವಾಗಿ ಒಪ್ಪಿಸಿದ್ದ ನಿನ್ನ
ಮಗನನ್ನು ನಿನಗೆ ಈಗ
ಒಪ್ಪಿಸಿದ್ದೇನೆ’ ಎಂದು ಹೇಳಿ)
ಅಪ್ಪೈಸಿದ ಗಂಗೆ ಪೋಪುದುಂ
(ಹೇಳಿ ಗಂಗೆಯು ಹೋಗಲು)
ಒಪ್ಪುವ
ನಿಜಬಿಂಬದೊಳಗಣಿಂದಂ
ದಿನಪಂ (ಸೂರ್ಯನು ತನ್ನ

ಪ್ರಕಾಶಮಾನವಾದ ಬಿಂಬದಿಂದ - ಬಂದನು)

ಪದ್ಯ-೭೬:ಅರ್ಥ: ೭೬. ಕುಂತಿಯನ್ನು ಕುರಿತು ‘ನನಗೆ ಕೈಗಡವಾಗಿ ಒಪ್ಪಿಸಿದ್ದ ನಿನ್ನ ಮಗನನ್ನು ನಿನಗೆ ಈಗ ಒಪ್ಪಿಸಿದ್ದೇನೆ’ ಎಂದು ಹೇಳಿ ಗಂಗೆಯು ಹೋಗಲು. ಸೂರ್ಯನು ತನ್ನ ಪ್ರಕಾಶಮಾನವಾದ ಬಿಂಬದಿಂದ - ಬಂದನು

ಪೊಱಮಟ್ಟು ಬರಲ್ ತನ್ನಡಿ ಗೆಱಗಿದ ನಿಜಸುತನನಕ್ಕಱಿಂ ಪರಸಿ ಮನಂ|
ಮಱುಗಿ ರವಿ ನುಡಿದನೆನ್ನುಮ ನುಱಿದೆ ಮರುಳ್ಮಗನೆ ಹರಿಗೆ ಕವಚಮನಿತ್ತೈ|| ೭೭ ||

ಪದ್ಯ-00:ಪದವಿಭಾಗ-

ಅರ್ಥ:ಪೊಱಮಟ್ಟು ಬರಲ್ (ಸೂರ್ಯನು ಹೊರಟು ಬರಲು) ತನ್ನ ಅಡಿಗೆ ಎಱಗಿದ ನಿಜಸುತನನು(ತನ್ನ ಪಾದಕ್ಕೆ

ನಮಸ್ಕರಿಸಿದ ಮಗನನ್ನು)
ಅಟ್ಕಱಿಂ ಪರಸಿ (ಪ್ರೀತಿಯಿಂದ
ಹರಸಿ) ಮನಂ ಮಱುಗಿ ರವಿ
ನುಡಿದನು (ಮನಸ್ಸಿನಲ್ಲಿ
ದುಃಖಪಟ್ಟು ರವಿ ಹೇಳಿದನು)
ಎನ್ನುಮನು ಅಱಿದೆ ಮರುಳ್
ಮಗನೆ ಹರಿಗೆ ಕವಚಮನಿತ್ತೈ
('ಹಿಂದೆ ನನ್ನನ್ನೂ
ಲಕ್ಷ್ಯಮಾಡದೆ ಮಗನೇ
ಇಂದ್ರನಿಗೆ ಕವಚವನ್ನು
ಕೊಟ್ಟೆ.)

ಪದ್ಯ-00:ಅರ್ಥ:ಸೂರ್ಯನು ಹೊರಟು ಬರಲು ತನ್ನ ಪಾದಕ್ಕೆ ನಮಸ್ಕರಿಸಿದ ಮಗನನ್ನು ಪ್ರೀತಿಯಿಂದ ಹರಸಿ ಮನಸ್ಸಿನಲ್ಲಿ ದುಃಖಪಟ್ಟು ರವಿ ಹೇಳಿದನು, 'ಹಿಂದೆ ನನ್ನನ್ನೂ ಲಕ್ಷ್ಯಮಾಡದೆ ಮಗನೇ ಇಂದ್ರನಿಗೆ ಕವಚವನ್ನು ಕೊಟ್ಟೆ.

ನುಡಿಯೆನಿದಂ ನಿನ್ನಂಬಿಕೆ

ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ|
ಲ್ಕೊಡರಿಸಿ ಬಂದಳ್ ಸುತರಂ ಕುಡದಿರ್ ಪುರಿಗಣೆಯನೆನಿತು ಲಲ್ಲೆ ಸಿದೊಡಂ|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ:ನುಡಿಯೆನು ಇದಂ (ಇದನ್ನು ಈಗ ಹೇಳುತ್ತಿಲ್ಲ) ನಿನ್ನ ಅಂಬಿಕೆ ಪಡೆಮಾತೇಂ (ಬೇರೆಮಾತು ಏಕೆ, ಬೇಡ) ಕೊಂತಿ ಹರಿಯ ಮತದಿಂ

ಕಾಯಲ್ಕೆ ಒಡರಿಸಿ ಬಂದಳ್ ಸುತರಂ (ಈಗ ನಿನ್ನ ತಾಯಿ ಕುಂತೀದೇವಿಯು ಕೃಷ್ಣನ ಸೂಚನೆಯ ಪ್ರಕಾರ ತನ್ನ ಮಕ್ಕಳ ರಕ್ಷಣೆಗೆ ತೊಡಗಿ ಬಂದಿದ್ದಾಳೆ.) ಕುಡದಿರ್ ಪುರಿಗಣೆಯನು ಎನಿತು ಲಲ್ಲೆಸಿದೊಡಂ (ಎಷ್ಟು ಲಲ್ಲೆಯ (ಪ್ರೀತಿಯ) ಮಾತುಗಳನ್ನಾಡಿದರೂ ದಿವ್ಯಾಸ್ತ್ರಗಳನ್ನು ಕೊಡಬೇಡ)

ಪದ್ಯ-೭೮:ಅರ್ಥ: ಇದನ್ನು ಈಗ ಹೇಳುತ್ತಿಲ್ಲ ; ಇಂದಿನ ಮಾತು ಬೇರೆ. ಈಗ ನಿನ್ನ ತಾಯಿ ಕುಂತೀದೇವಿಯು ಕೃಷ್ಣನ ಸೂಚನೆಯ ಪ್ರಕಾರ ತನ್ನ ಮಕ್ಕಳ ರಕ್ಷಣೆಗೆ ತೊಡಗಿ ಬಂದಿದ್ದಾಳೆ. ಎಷ್ಟು ಪ್ರೀತಿಯ ಮಾತುಗಳನ್ನಾಡಿದರೂ ದಿವ್ಯಾಸ್ತ್ರಗಳನ್ನು ಕೊಡಬೇಡ.

ಎಂದರವಿಂದಪ್ರಿಯಸಖ

ನಂದಂಬರತಳಮನಡರ್ವು
ದುಂ ಕೆಯ್ಮುಗಿದಿಂ|
ತೆಂದಂ ಕುಂತಿಯನಬ್ಬೇಂ
ವಂದಿರ್ಪುದದೆನಗೆ ಸಯ್ಪು
ಬರ್ಪಂತೀಗಳ್|| ೭೯ ||

ಪದ್ಯ-೭೯:ಪದವಿಭಾಗ-ಅರ್ಥ:ಎಂದು ಅರವಿಂದಪ್ರಿಯಸಖನು ಅಂದು ಅಂಬರತಳಮನು ಅಡರ್ವುದುಂ (ಎಂದು ಹೇಳಿ ಸೂರ್ಯನು ಆಕಾಶಕ್ಕೆ

ಏರಿದಾಗ,) ಕೆಯ್ಮುಗಿದು
ಇಂತೆಂದಂ ಕುಂತಿಯನು
ಅಬ್ಬೇ ಏಂವಂದಿರ್ಪುದು
(ಅಮ್ಮಾ ನೀವು ಬಂದಿರುವ
ಕಾರಣವಾವುದು?) ಅದ
ಎನಗೆ ಸಯ್ಪು ಬರ್ಪಂತೆ
ಈಗಳ್ (ನನಗೆ ಪುಣ್ಯಬಂದ
ಹಾಗೆ ಅಮ್ಮಾ ನೀವು
ಬಂದಿರುವ
ಕಾರಣವಾವುದು?)

ಪದ್ಯ-೭೯:ಅರ್ಥ:ಎಂದು ಹೇಳಿ ಸೂರ್ಯನು ಆಕಾಶಕ್ಕೆ ಏರಿದಾಗ, ಕರ್ಣನು ಕುಂತಿಗೆ ಕೈಮುಗಿದು ಹೀಗೆಂದನು: ನನಗೆ ಪುಣ್ಯಬಂದ ಹಾಗೆ ಅಮ್ಮಾ ನೀವು ಬಂದಿರುವ ಕಾರಣವಾವುದು? ಎಂದು ಕರ್ಣ ಕೇಳಿದನು.

ಚಲಮುಂ ಚಾಗಮುಮಳವುಂ
ಕಲಿತನಮುಂ
ಕುಲಮುಮೀಗಳೆನ್ನಯ

ಮೆಯ್ಯೊಳ್|
ನೆಲಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು
ಮಗನೆಂದುದರಿಂ|| ೮೦ ||

ಪದ್ಯ-೮೦:ಪದವಿಭಾಗ-ಅರ್ಥ:ಚಲಮುಂ ಚಾಗಮುಂ ಅಳವುಂ ಕಲಿತನಮುಂ ಕುಲಮುಂ (ಛಲವೂ ತ್ಯಾಗವೂ ಮೇಲ್ಮೆಯೂ ಪರಾಕ್ರಮವೂ ಕುಲವೂ)ಈಗಳ್ ಎನ್ನಯ

ಮೆಯ್ಯೊಳ್ ನೆಲಸಿದುವು (ನನ್ನ ಶರೀರದಲ್ಲಿ ನೆಲಸಿದುವು) ನಿಮ್ಮ ಕರುಣಾಬಲದಿಂ, (ತಮ್ಮ ಕರುಣೆಯ ಬಲದಿಂದ) ನೀವು ಎನ್ನನು ಇಂದು ಮಗನೆಂದುದಱಿಂ (<-ನೀವು ಈಗ ನನ್ನನ್ನು ಮಗನೆಂದು ಹೇಳಿದುದರಿಂದ)

ಪದ್ಯ-೮೦:ಅರ್ಥ: ನನಗೆ ಛಲವೂ ತ್ಯಾಗವೂ

ಮೇಲ್ಮೆಯೂ ಪರಾಕ್ರಮವೂ ಕುಲವೂ ನೀವು ಈಗ ನನ್ನನ್ನು ಮಗನೆಂದು ಹೇಳಿದುದರಿಂದ ತಮ್ಮ ಕರುಣೆಯ ಬಲದಿಂದ ನನ್ನ ಶರೀರದಲ್ಲಿ ನೆಲಸಿದುವು.

ಪಡೆದರ್ ತಾಯುಂ ತಂದೆಯು
ಮೊಡಲಂ
ಪ್ರಾಣಮುಮನವರವವು
ಕೆಯ್ಯೆಡೆಯಂ|
ಕುಡುವುದರಿದಾಯ್ತೆ ನೀಮೆನ

ಗೆಡೆ ಮಡಗದೆ ಬೆಸಪ ತೊೞ್ತುವೆಸನಂ ಬೆಸಸಿಂ|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ಪಡೆದರ್ ತಾಯುಂ ತಂದೆಯುಂ ಒಡಲಂ ಪ್ರಾಣಮುಮನು (ತಾಯಿಯೂ ತಂದೆಯೂ ಮಗನ ದೇಹವನ್ನೂ ಪ್ರಾಣವನ್ನೂ ಪಡೆದವರು- ಹಡೆದವರು,) ಅವರವು ಅವು

(ಅವರಿಗೇ ಸೇರಿದುವು)
ಕೆಯ್ಯೆಡೆಯಂ ಕುಡುವುದು
ಅರಿದಾಯ್ತೆ (ಕೊಟ್ಟಿರುವ
ಅವನ್ನು ಅವರಿಗೇ ಹಿಂದಿರುಗಿ
ಕೊಡುವುದು ಅಸಾಧ್ಯವೇ?)
ನೀಂ ಎನಗೆ ಎಡೆ ಮಡಗದೆ
(ನೀವು ನನಗೆ ಏನೂ
ಮರೆಮಾಚದೆ) ಬೆಸಪ
ತೊಟ್ತುವೆಸನಂ
(ಹೇಳಬೇಕಾದ

ಸೇವಾಕಾರ್ಯವನ್ನು) ಬೆಸಸಿಂ
(ತಿಳಿಸಿ)

ಪದ್ಯ-೮೧:ಅರ್ಥ:ತಾಯಿ
ಯೂ ತಂದೆಯೂ ಮಗನ
ದೇಹವನ್ನೂ ಪ್ರಾಣವನ್ನೂ
ಪಡೆದವರು, ಆದುದರಿಂದ
ಅದು ಅವರಿಗೇ ಸೇರಿದುವು.
ಅವರು ಕೊಟ್ಟಿರುವ ಅವನ್ನು
ಅವರಿಗೇ ಹಿಂದಿರುಗಿ
ಕೊಡುವುದು ಅಸಾಧ್ಯವೇ?
ನೀವು ನನಗೆ ಏನೂ

ಮರೆಮಾಚದೆ ಹೇಳಬೇಕಾದ

ಸೇವಾಕಾರ್ಯವನ್ನು

ಮರೆಮಾಚದೆ ತಿಳಿಸಿ

ಎಂಬುದುಮಂಬಿಕೆ ಮಗನೆ ಮ

ನಂಬೆಳಱದೆ

ನೀನುಮಿತ್ತೆಯಾನುಂ ಪೆತ್ತೆಂ|

ನಂಬಿದ ನಿನ್ನನುಜರ್ ನಿ

ನ್ನಂ ಬೆಸಕೆಯೆ ನೀನೆ

ನೆಲನನಾಳ್ವುದು ಕಂದಾ|| ೮೨ ||

ಪದ್ಯ-೮೨:ಪದವಿಭಾಗ-

ಅರ್ಥ:ಎಂಬುದುಂ ಅಂಬಿಕೆ

ಮಗನೆ ಮನಂ ಬೆಳಱಿದೆ (ತಾಯಿಯು ‘ಮಗನೆ ಮನಸ್ಸಿನಲ್ಲಿ ಹೆದರದೆ) ನೀನುಂ ಇತ್ತೆ, ಆನುಂ ಪೆತ್ತೆಂ (ನೀನೂ ಕೊಟ್ಟೆ ನಾನೂ ಪಡೆದೆ) ನಂಬಿದ ನಿನ್ನ ಅನುಜರ್ ನಿನ್ನಂ ಬೆಸಕೆಯೆ(ನಂಬಿರುವ ನಿನ್ನ ತಮ್ಮಂದಿರು ನಿನಗೆ ಸೇವೆ ಮಾಡುವ ಹಾಗೆ) ನೀನೆ ನೆಲನನು ಆಳ್ವುದು ಕಂದಾ

(ನೀನೇ ರಾಜ್ಯವನ್ನು ಆಳಬೇಕು ಕಂದಾ.)

ಪದ್ಯ-೮೨:ಅರ್ಥ: ಎಂದಾಗ ತಾಯಿಯು, ಮಗನೆ ಮನಸ್ಸಿನಲ್ಲಿ ಹೆದರದೆ ನೀನೂ ಕೊಟ್ಟೆ ನಾನೂ ಪಡೆದೆ. ನಿನ್ನನ್ನೇ ನಂಬಿರುವ ನಿನ್ನ ತಮ್ಮಂದಿರು ನಿನಗೆ ಸೇವೆ ಮಾಡುವ ಹಾಗೆ (ನಿನ್ನ ಆಜ್ಞಾಧಾರಕರಾಗಿರುವ ಹಾಗೆ)

ನೀನೇ ರಾಜ್ಯವನ್ನು ಆಳಬೇಕು ಕಂದಾ, ಎಂದಳು.

ಕಂ|| ನಿನಗಪ್ಪರಸಂ ದುರ್ಯೋ
ಧನನೊಲವಂ ಮುಂದುಗೆಯ್ದು
ಬೆಸಕೆಯ್ವರೆ ನಿ|
ನ್ನನುಜರೆರಟ್ಟಿಸೆಗಂ ಕಿಸು
ಱನಿಸಾಗದು ಮಗನೆ
ನೀನೊಡಂಬಡವೇೞ್ಕುಂ|| ೮೩
||

ಪದ್ಯ-೮೩:ಪದವಿಭಾಗ-ಅರ್ಥ: ನಿನಗಪ್ಪ ಅರಸಂ

(ನಿನಗೆ ಆಗುವ ರಾಜತನಕ್ಕೆ)
ದುರ್ಯೋಧನನ ಒಲವಂ
ಮುಂದುಗೆಯ್ದು ಬೆಸಕೆಯ್ವರೆ
ನಿನ್ನ
ಅನುಜರ್(ದುರ್ಯೋಧನನ
ಪ್ರೀತಿಯನ್ನು
ಮುಂದಿಟ್ಟುಕೊಂಡು ನಿನ್ನ
ಸೋದರರು ಸೇವೆ
ಮಾಡುವರು) ಎರಱ್ ದೆಸೆಗಂ
ಕಿಸುಱು ಇನಿಸಾಗದು (ಎರಡು
ಪಕ್ಷಕ್ಕೂ ಸ್ವಲ್ಪವೂ) ಮಗನೆ

ನೀನು ಒಡಂಬಡವೇಟ್ಕುಂ (ಮಗನೇ ನೀನು ಒಪ್ಪಬೇಕು’)

ಪದ್ಯ-೮೩:ಅರ್ಥ:ನಿನಗೆ ಆಗುವ ರಾಜತನಕ್ಕೆ ದುರ್ಯೋಧನನ ಪ್ರೀತಿಯನ್ನು ಮುಂದಿಟ್ಟುಕೊಂಡು ಸೇವೆ ಮಾಡುವರು, ಇದರಿಂದ ಎರಡುಪಕ್ಷಕ್ಕೂ ಸ್ವಲ್ಪವೂ ದ್ವೇಷವುಂಟಾಗುವುದಿಲ್ಲ.

ಮಗನೇ, ನೀನು ಒಪ್ಪಬೇಕು, ಎಂದಳು

ವ|| ಎಂಬುದುಮದೆಲ್ಲಮಂ ಕೇಳ್ದು ಕರ್ಣಂ ಮುಗುಳ್ನಗೆ ನಕ್ಕು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅದೆಲ್ಲಮಂ ಕೇಳ್ದು ಕರ್ಣಂ ಮುಗುಳ್ನಗೆ ನಕ್ಕು-

ವಚನ:ಅರ್ಥ:ಅದನ್ನೆಲ್ಲವನ್ನೂ ಕರ್ಣನು ಕೇಳಿ ಹುಸಿನಗೆ ನಕ್ಕನು.

ಮ|| ಭಯಮಂ
ಲೋಭಮುಮೆಂಬ
ತಮ್ಮುತೆರಡುಂ ಪಾಪಕ್ಕೆ
ಪಕ್ಕಾಗೆ ಪಾ
ಟಿಯನೊಕ್ಕಾಳ್ದನ ಗೆಯ್ದ
ಸತ್ಕೃತಮುಮಂ ಪಿಂತಿಕ್ಕಿ
ಜೋಳಕ್ಕೆ ತ|
ಪ್ಪಿಯುಮಿಂ ಬಾಳ್ವುದೆ ಪೂಣ್ದು
ನಿಲ್ಲದಿಕೆಯಿಂ ಬಾಳ್ವಿಂತು
ವಿಖ್ಯಾತ ಕೀ

ತ್ತಿಯವ್ರೋಲೀಯೊಡಲಬ್ಬೆ ಪೇೞಿಮೆನಗೇಂ ಕಲ್ಪಾಂತರಸ್ಥಾಯಿಯೇ|| ೮೪ ||

ಪದ್ಯ-೮೪:ಪದವಿಭಾಗ-ಅರ್ಥ:ಭಯಮಂ ಲೋಭಮುಮೆಂಬ ತಮ್ಮುತ ಎರಡುಂ ಪಾಪಕ್ಕೆ ಪಕ್ಕಾಗೆ (ಯವ್ರೂ ಅತಿಯಾಸೆಯು ಎಂಬ ಇವೆರಡೂ ಪಾಪಕ್ಕೆ ಭಾಗಿಯಾಗಿರಲು) ಪಾೞಿಯನೋಕ್ಕು ಆಳ್ದನ

ಗೆಯ್ದ ಸತ್ಕೃತಮುಮಂ
(ಧರ್ಮಕ್ರಮವನ್ನು ಬಿಟ್ಟು
ಸ್ವಾಮಿಯು ಮಾಡಿರುವ
ಸತ್ಕಾರ್ಯಗಳನ್ನೆಲ್ಲ) ಪಿಂತಿಕ್ಕಿ
(ಹಿಂದಕ್ಕೆ ಹಾಕಿ ,ಮರೆತು)
ಜೋಳಕ್ಕೆ ತಪ್ಪಿಯುಮಿಂ
ಬಾೞ್ವುದೆ (ಅನ್ನದ ಋಣಕ್ಕೆ
ತಪ್ಪಿನೆಡೆದು ಬಾಳುವುದೇ?)
ಪೂಣ್ದು ನಿಲ್ಲದಿಕೆಯಿಂ
ಬಾೞ್ವಿಂತು (ಶಾಶ್ವತವಾಗಿ
ನಿಲ್ಲದಿರುವ ಸ್ಥಿತಿಯನ್ನು

ಪೊಣ್ದು- ಹೊತ್ತಿರುವ ಈ
ಒಡಲು ಶರೀರ) ವಿಖ್ಯಾತ
ಕೀರ್ತಿಯವೊಲ್
(ಪ್ರಖ್ಯಾತಕೀರ್ತಿಯು ಬಾಳುವ
ಹಾಗೆ) ಈ ಒಡಲು ಅಬ್ಬೆ
ಪೇೞಿಂ ಎನಗೇಂ
ಕಲ್ಪಾಂತರಸ್ಥಾಯಿಯೇ (ಈ
ದೇಹ ಆನೆಕ ಯುಗಗಳಕಾಲ
ನಿಲ್ಲುವಂತಹುದೇ? ಹೇಳಿ
ತಾಯಿ.)

ಪದ್ಯ-೮೪:ಅರ್ಥ: ಭಯವೂ ಅತಿಯಾಸೆಯು ಎಂಬ ಇವೆರಡೂ ಪಾಪಕ್ಕೆ ಭಾಗಿಯಾಗಿರಲು ಧರ್ಮಕ್ರಮವನ್ನು ಬಿಟ್ಟು ಸ್ವಾಮಿಯು ಮಾಡಿರುವ ಸತ್ಕಾರ್ಯಗಳನ್ನೆಲ್ಲ ಮರೆತು, ಅನ್ನದ ಋಣಕ್ಕೆ ತಪ್ಪಿನೆಡೆದು ಬಾಳುವುದೇ? ಶಾಶ್ವತವಾಗಿ ನಿಲ್ಲದಿರುವ ಸ್ಥಿತಿಯನ್ನು ಹೊತ್ತಿರುವ ಈ ಶರೀರವು,

ಪ್ರಖ್ಯಾತಕೀರ್ತಿಯು ಬಾಳುವ ಹಾಗೆ, ಆನೇಕ ಯುಗಗಳಕಾಲ ನಿಲ್ಲುವಂತಹುದೇ? ಹೇಳಿ ತಾಯಿ.

ಕಂ||

ಮೀಂಗುಲಿಗನೆನಾಗಿಯುಮಣ
ಮಾಂ ಗುಣಮನೆ ಬಿಸುಟೆನಿಲ್ಲ
ನಿಮಗಂ ಮಗನಾ|
ದಂಗೆನಗೆ ಬಿಸುಡಲಕ್ಕುಮೆ
ನೀಂ ಗಳ ಪಂಬಲನೆ
ಬಿಸುಡಿಮಿನ್ನೆನ್ನೆಡೆಯೊಳ್|| ೮೫

||

ಪದ್ಯ-೮೫:ಪದವಿಭಾಗ-ಅರ್ಥ:ಮೀಂಗುಲಿಗನೆನ್ ಆಗಿಯುಂ ಅಣಂ ಆಂ ಗುಣಮನೆ ಬಿಸುಟೆನಿಲ್ಲ (ಮೀನನ್ನು ಕೊಲ್ಲುವ ಬೆಸ್ತನಾಗಿದ್ದರೂ ಸ್ವಲ್ಪವೂ ನಾನು ಸದ್ಗುಣವನ್ನು ಬಿಟ್ಟಿಲ್ಲ.) ನಿಮಗಂ ಮಗನಾದಂಗೆ ಎನಗೆ ಬಿಸುಡಲಕ್ಕುಮೆ (ನಿಮ್ಮಂತವರಿಗೆ ಮಗನಾದ

ನನಗೆ ಆ ಗುಣ
ಬಿಡಲಾಗುವಿದೇ?) ನೀಂ ಗಳ
ಪಂಬಲನೆ (ಗಲ- ಹೆಚ್ಚಿನ
ಹಂಬಲವನ್ನೇ) ಬಿಸುಡಿಂ ಇನ್ನು
ಎನ್ನೆಡೆಯೊಳ್ (ಇನ್ನು ನೀವು
ನನ್ನ ವಿಚಾರದಲ್ಲಿ ಹೆಚ್ಚಿನ
ಹಂಬಲವನ್ನೇ ಬಿಟ್ಟುಬಿಡಿ.)
ಪದ್ಯ-೮೫:ಅರ್ಥ:ಮೀನನ್ನು
ಕೊಲ್ಲುವ ಬೆಸ್ತನಾಗಿದ್ದರೂ
ಸ್ವಲ್ಪವೂ ನಾನು ಸದ್ಗುಣವನ್ನು
ಬಿಟ್ಟಿಲ್ಲ. ನಿಮ್ಮಂತವರಿಗೆ

ಮಗನಾದ ನನಗೆ ಆ ಗುಣ ಆ ಗುಣ ಬಿಡಲಾಗುವಿದೇ? ಇನ್ನು ನೀವುಗಳು ನನ್ನ ವಿಚಾರದಲ್ಲಿ ಹೆಚ್ಚಿನ ಹಂಬಲವನ್ನೇ ಬಿಟ್ಟುಬಿಡಿ.

ವ|| ಎಂಬುದುಂ ಕೊಂತಿ ಭೋಂಕನೆರ್ದೆದೆದು-

ವಚನ:ಪದವಿಭಾಗ-

ಅರ್ಥ:ಎಂಬುದುಂ ಕೊಂತಿ ಭೋಂಕನೆ

ಎರ್ದೆರೆದೆದು(ಇದ್ದಕ್ಕಿದ್ದ ಹಾಗೆ ಎದೆಬಿರಿದು)-

ವಚನ:ಅರ್ಥ:ಎನ್ನಲು ಕುಂತಿ ಇದ್ದಕ್ಕಿದ್ದ ಹಾಗೆ ಎದೆಬಿರಿದು-

ಮ|| ಅಱಿದೆಂ ನೆಟ್ಟನೆ ಬೆಟ್ಟನಿಂತು ನುಡಿವೈ ನೀಂ ಕಂದ ಪೋಗಿಂದೆ ಕೆ ಟ್ಟೞಿದತ್ತಾಗದೆ ಸೋಮವಂಶಮೆನಗಿಂ ಬಾೞುಸೆಯೆಲ್ಲಿತ್ತೊ ಬಿ|

ಟ್ಟುೞಿದೆಂ ಮತ್ತಿನ ಮಕ್ಕಳಾಸೆಯುಮನಾನೆಂದಳ್ಗೆ ಶೋಕಾಗ್ನಿ ಪೊಂ ಪುೞಿವೋಗುತ್ತಿರೆ ಕರ್ಣನೆಂದನಿನಿತೇಂ ಪೇೞಿಬ್ಬೆ ಚಿಂತಾಂತರಂ|| ೮೬||

ಪದ್ಯ-೮೬:ಪದವಿಭಾಗ-ಅರ್ಥ:ಅೞಿದೆಂ (ಅಳಿದೆಂ- ಅಯ್ಯೋ! ಹಾಳಾದೆನು) ನೆಟ್ಟನೆ ಬೆಟ್ಟನಿಂತು ನುಡಿವೈ ನೀಂ ಕಂದ (ಮಗನೇ, ನೀನು

ನೇರವಾಗಿ ಇಷ್ಟು ಬಿರುಸಾಗಿ
ಮಾತನಾಡುವೆ) ಪೋಗು
ಇಂದೆ ಕೆಟ್ಟು ಅೞಿದತ್ತಾಗದೆ
ಸೋಮವಂಶಂ (ಹೋಗು,
ಚಂದ್ರವಂಶವು ಇಂದೇ ಕೆಟ್ಟು
ನಾಶವಾದಂತಾಗಲಿಲ್ಲವೇ.)
ಎನಗಿಂ ಬಾೞುಸೆಯೆಲ್ಲಿತ್ತೊ
(ನನಗೆ ಇನ್ನು ಬದುಕುವ
ಆಸೆಯೆಲ್ಲಿಯೋ!)
ಬಿಟ್ಟುೞಿದೆಂ ಮತ್ತಿನ
(ಉಳಿದ) ಮಕ್ಕಳಾಸೆಯುಮಂ

ಆನೆಂದು ಎಂದಳ್ಗೆ (ಉಳಿದ
ಮಕ್ಕಳ ಆಸೆಯನ್ನು ಬಿಟ್ಟು
ಬಿಟ್ಟೆನು ನಾನು ಎಂದವಳಿಗೆ)
ಶೋಕಾಗ್ನಿ
ಪೊಂಪುಳಿವೋಗುತ್ತಿರೆ
(ದುಃಖಾಗ್ನಿಯು
ಹೆಚ್ಚಾಗುತ್ತಿರಲು)
ಕರ್ಣನೆಂದನು ಇನಿತೇಂ
ಪೇಱು ಅಬ್ಬೆ ಚಿಂತಾಂತರಂ
(ಕರ್ಣ ಹೇಳಿದ, ತಾಯಿ

ಇಷ್ಟೊಂದು ಚಿಂತೆಯೇಕೆ?
ಬೇರೆ ಏನು?,)

ಪದ್ಯ-೮೬:ಅರ್ಥ:ಅಯ್ಯೋ
ನಾನು ಹಾಳಾದೆ ಕಂದ, ನೀನು
ನೇರವಾಗಿ ಇಷ್ಟು ಬಿರುಸಾಗಿ
ಮಾತನಾಡುವೆ.
ಚಂದ್ರವಂಶವು ಇಂದೇ ಕೆಟ್ಟು
ನಾಶವಾಗಲಿಲ್ಲವೇ. ನನಗೆ
ಇನ್ನು ಬದುಕುವ
ಆಸೆಯೆಲ್ಲಿಯೋ! ಉಳಿದ
ಮಕ್ಕಳ ಆಸೆಯನ್ನು ಬಿಟ್ಟು

ಬಿಟ್ಟೆನು ಎಂದು ಹೇಳಿದ ಕುಂತೀದೇವಿಗೆ ಕರ್ಣನು ದುಃಖಾಗ್ನಿಯು ಹೆಚ್ಚಾಗುತ್ತಿರಲು, ಕರ್ಣ ಹೇಳಿದ, ತಾಯಿ ಇಷ್ಟೊಂದು ಚಿಂತೆಯೇಕೆ? ಬೇರೆ ಏನು?,

ಕಂ|| ಪಿಡಿಯೆಂ ಪುರಿಗಣೆಯಂ ನರ

ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ|

ದೋಡಮೞಿಯೆಂ

ಪೆರ್ಜಸಮನೆ

ಪಿಡಿದೆನ್ನನೆ

ರಣದೊಳೞಿವೆನಿರದಡಿಯೆತ್

ತಿಂ|| ೮೭

ಪದ್ಯ-೮೭:ಪದವಿಭಾಗ-

ಅರ್ಥ:ಪಿಡಿಯೆಂ

ಪುರಿಗಣೆಯಂ (ದಿವ್ಯಾಸ್ತ್ರವನ್ನು

ಹಿಡಿಯುವುದಿಲ್ಲ) ನರನು

ಎಡೆಗೊಂಡೊಡಂ

(ಅರ್ಜುನನು

ಎದುರುಬಿದ್ದರೂ) ಉೞಿದ
ನಿನ್ನ ಮಕ್ಕಳನು ಇನ್ನು
ಏರ್ದೊಡಂ ಅೞಿಯೆಂ
(ಉಳಿದ ನಿನ್ನ ಮಕ್ಕಳು ಎನ್ನು
ನನ್ನ ಮೇಲೆ ಏರಿ ಯುದ್ಧಕ್ಕೆ
ಬಂದರೂ ಕೊಲ್ಲೆನು.)
ಪೆರ್ಜಸಮನೆ ಪಿಡಿದು (ಹೆಚ್ಚಿನ
ಕೀರ್ತಿಯನ್ನೇ ಹಿಡಿದು) ಎನ್ನನೆ
ರಣದೊಳು ಅೞಿವೆನು
(ಯುದ್ಧದಲ್ಲಿ ನನ್ನನ್ನೇ
ನಾಶಮಾಡಿಕೊಳ್ಳುವೆನು.)

ಇರದೆ ಅಡಿಯೆತ್ತಿಂ (ಇನ್ನು ಇಲ್ಲಿ ಇರದೆ ಅಡಿಎತ್ತಿ- ಪಾದ ತೆಗೆಯಿರಿ, ಪಾದಬೆಳಸಿ, ಹೊರಡಿರಿ)

ಪದ್ಯ-೮೭:ಅರ್ಥ:

ಅರ್ಜುನನು ಪ್ರತಿಭಟಿಸಿದರೂ ದಿವ್ಯಾಸ್ತ್ರವನ್ನು ಹಿಡಿಯುವುದಿಲ್ಲ. ಉಳಿದ ನಿನ್ನ ಮಕ್ಕಳು ನನ್ನ ಮೇಲೆ ಏರಿ ಯುದ್ಧಕ್ಕೆ ಬಂದರೂ ಕೊಲ್ಲೆನು. ಹೆಚ್ಚಿನ ಕೀರ್ತಿಯನ್ನೇ ಹಿಡಿದು

ಯುದ್ಧದಲ್ಲಿ ನನ್ನನ್ನೇ
ನಾಶಮಾಡಿಕೊಳ್ಳುವೆನು.
ಇನ್ನು ಇಲ್ಲಿ ಇರದೆ ಹೊರಡಿರಿ.

ವ|| ಎಂದು ಕೊಂತಿಯಂ ವಿಸರ್ಜಿಸಿ ಚಲದ ಚಾಗದ ಕುಲದ ನನ್ನಿಯನಾವರ್ಜಿಸಿ ರಾಧೇಯನೊಳ್ಪಿಂಗಾಧೇಯ ಮಾಗಿರ್ದನಿತ್ತ ಪುರುಷೋತ್ತಮನುಂ ಕತಿಪಯ ಪ್ರಯಾಣಂಗಳಿಂ ವಿರಾಟಪುರ

ನಿಕಟವರ್ತಿಯಪ್ಪ
ದಿವಿಜಾಪಗಾತಟದುಪವನ
ದೊಳರಿನೃಪವನಕ್ಕುಪ
ದ್ರವಕಾರಿಯಾಗಿ ನೆಲಂ
ಮೂರಿವಿಟ್ಟಂತೆ
ಬಿಟ್ಟಿರ್ದಜಾತಶತ್ರುವನವನ
ತೋತ್ತಮಾಂಗನಾಗಿ ಕಂಡು-

ವಚನ:ಪದವಿಭಾಗ-

ಅರ್ಥ:ಎಂದು ಕೊಂತಿಯಂ ವಿಸರ್ಜಿಸಿ (ಎಂದು ಕುಂತಿಯನ್ನು ಕಳುಹಿಸಿ.)

ಚಲದ ಚಾಗದ ಕುಲದ
ನನ್ನಿಯನು ಆವರ್ಜಿಸಿ (ಛಲ,
ತ್ಯಾಗ, ಕುಲ ಮತ್ತು ಸತ್ಯವನ್ನು
ಬರಮಾಡಿಕೊಂಡು)
ರಾಧೇಯನು ಒಳ್ಪಿಂಗೆ
ಆಧೇಯಂ ಆಗಿರ್ದನು
(ಕರ್ಣನು ಒಳ್ಳೆಯತನಕ್ಕೆ-
ಸದ್ಗುಣಕ್ಕೆ
ಆಶ್ರಯವಾಗಿದ್ದನು.); ಇತ್ತ
ಪುರುಷೋತ್ತಮನುಂ
ಕತಿಪಯ ಪ್ರಯಾಣಂಗಳಿಂ

(ಈ ಕಡೆ ಕೃಷ್ಣನು ಕೆಲವು ದಿನ
ಪ್ರಯಾಣಮಾಡಿ)
ವಿರಾಟಪುರ
ನಿಕಟವರ್ತಿಯಪ್ಪ
(ವಿರಾಟನಗರದ
ಸಮೀಪದಲ್ಲಿದ್ದ) ದಿವಿಜಾಪಗಾ
(ಗಂಗೆ) ತಟದ
ಉಪವನದೊಳು
(ಗಂಗಾನದಿಯ ದಡದ
ಉಪವನದಲ್ಲಿ)
ಅರಿನೃಪವನಕ್ಕೆ

ಉಪದ್ರವಕಾರಿಯಾಗಿ (ಶತ್ರುರಾಜರೆಂಬ ಕಾಡಿಗೆ ಹಿಂಸಾಕಾರಿಯಾಗಿ) ನೆಲಂ ಮೂರಿವಿಟ್ಟಂತೆ (ಜಗತ್ತಿನ ಜನವೆಲ್ಲ ಗುಂಪುಗೂಡಿದಂತೆ) ಬಿಟ್ಟಿರ್ದ ಅಜಾತಶತ್ರುವನು (ಬೀಡುಬಿಟ್ಟಿದ್ದ ಧರ್ಮರಾಜನನ್ನು) ಅವನತೋತ್ತಮಾಂಗನಾಗಿ ಕಂಡು - ಅವನತ, ಬಗ್ಗಿದ, ಉತ್ತಮಾಂಗ-ತಲೆ ಪೂರ್ವಕ

(ನಮಸ್ಕಾರ ಪೂರ್ವಕ
ಕಂಡು)-
ವಚನ:ಅರ್ಥ:ಎಂದು
ಕುಂತಿಯನ್ನು ಕಳುಹಿಸಿ. ಛಲ,
ತ್ಯಾಗ, ಕುಲ ಮತ್ತು ಸತ್ಯವನ್ನು
ಬರಮಾಡಿಕೊಂಡು ಕರ್ಣನು
ಸದ್ಗುಣಕ್ಕೆ ಆಶ್ರಯವಾಗಿದ್ದನು.
ಈ ಕಡೆ ಕೃಷ್ಣನು ಕೆಲವು ದಿನ
ಪ್ರಯಾಣಮಾಡಿ
ವಿರಾಟನಗರದ
ಸಮೀಪದಲ್ಲಿದ್ದ

ಗಂಗಾನದಿಯ ದಡದ
ಉಪವನದಲ್ಲಿ
ಶತ್ರುರಾಜರೆಂಬ ಕಾಡಿಗೆ
ಹಿಂಸಾಕಾರಿಯಾಗಿ ಜಗತ್ತಿನ
ಜನವೆಲ್ಲ ಗುಂಪುಕೂಡಿದಂತೆ
ಬೀಡುಬಿಟ್ಟಿದ್ದ
ಧರ್ಮರಾಜನನ್ನು
ನಮಸ್ಕಾರಪೂರ್ವಕ ಕಂಡು-

<u>ಕೃಷ್ಣನು ಸಂಧಿ ಮುರಿದಿದ್ದು ಯುದ್ಧಕ್ಕೆ ಸಿದ್ಧರಾಗಲು ಧರ್ಮಜನಿಗೆ ಹೇಳಿದುದು</u>

ಮ|| ಹಿಮಕೃದ್ವಂಶಜರಪ್ಪ
ಪಾಂಡುಸುತರಂ ಕೆಯ್ಕೊಂಡು
ನಿನ್ನಯ್ದು ಬಾ
ಡಮನಿತ್ತು ನಡಪೆಂದು
ಸಾಮಮನೆ ಮುಂ
ಮುಂತಿಟ್ಟೊಡಾತಂ ಪರಾ|
ಕ್ರಮಮಂ ತೋಱಿ ಸಿಡಿಲ್ದು
ಪಾಯ್ವುದುಮಸುಂಗೊಳ್ವನ್ನೆ

ಗಂ ವಿಶ್ವರೂ

ಪಮನಾಂ ತೋೞಿದೆನಿಂ

ಕಡಂಗಿ ರಣದೊಳ್ ನೀಂ

ತೋೞು ನಿನ್ನಾರ್ಪುಮಂ|| ೮೮

||

ಪದ್ಯ-೮೮:ಪದವಿಭಾಗ-

ಅರ್ಥ:ಹಿಮಕೃದ್ವಂಶಜರಪ್ಪ

(ಚಂದ್ರವಂಶದವರಾದ)

ಪಾಂಡುಸುತರಂ ಕೆಯ್ಕೊಂಡು

ನಿನ್ನ ಐಯ್ದು ಬಾಡಮನು ಇತ್ತು

(ನಿನ್ನ ಅಯ್ದು ಹಳ್ಳಿಗಳನ್ನು

ಕೊಟ್ಟು) ನಡಪೆಂದು
ಸಾಮಮೆನೆ ಮುಂ
ಮುಂತಿಟ್ಟೊಡೆ (ಧರ್ಮವನ್ನು
ನಡಸು ಎಂದು ಮೊದಲು
ಸಾಮೋಪಾಯವನ್ನೇ
ಮುಂದಿಟ್ಟರೆ) ಆತಂ
ಪರಾಕ್ರಮಮಂ ತೋಱಿ
ಸಿಡಿಲ್ದು (ಅವನು ತನ್ನ
ಪರಾಕ್ರಮವನ್ನೇ ಪ್ರದರ್ಶಿಸಿ
ಸಿಡಿದು) ಪಾಯ್ವುದುಂ
ಅಸುಂಗೊಳ್ವನ್ನೆಗಂ (ಅಸುಂ-

ಪ್ರಾಣವನ್ನು ಕೊಳ್ವ ಅನ್ನೆಗಂ-)
ವಿಶ್ವರೂಪಮನಾಂ
ತೋಱಿದೆನ್ (ಮೇಲೆ
ಹಾಯ್ದ.ನನ್ನ ಪ್ರಾಣವನ್ನು
ಸೆಳೆದುಕೊಳ್ಳುವವದರೊಳಗೆ
ನಾನು ವಿಶ್ವರೂಪವನ್ನು
ತೋರಿದೆ.) ಇಂ ಕಡಂಗಿ
ರಣದೊಳ್ ನೀಂ ತೋಱು
ನಿನ್ನ ಆರ್ಪುಮಂ (ಇನ್ನು
ನೀನು ಉತ್ಸಾಹದಿಂದ

ಯುದ್ಧದಲ್ಲಿ ನಿನ್ನ ಶಕ್ತಿಯನ್ನು ತೋರಿಸು.)

ಪದ್ಯ-೮೮:ಅರ್ಥ:ಚಂದ್ರವಂಶದವರಾದ ಪಾಂಡವರನ್ನು ಸ್ವೀಕರಿಸಿ ನಿನ್ನ ಅಯ್ದು ಹಳ್ಳಿಗಳನ್ನು ಕೊಟ್ಟು ಧರ್ಮವನ್ನು ನಡಸು ಎಂದು ಮೊದಲು ಸಾಮೋಪಾಯವನ್ನೇ ಮುಂದಿಟ್ಟರೆ, ಅವನು ತನ್ನ ಪರಾಕ್ರಮವನ್ನೇ ಪ್ರದರ್ಶಿಸಿ

ಸಿಡಿದು ಮೇಲೆ ಹಾಯ್ದ. ನನ್ನ ಪ್ರಾಣಾಪಹರಣ ಮಾಡವುದರೊಳೊಗೆ ನಾನು ವಿಶ್ವರೂಪವನ್ನು ತೋರಿದೆನು. ಇನ್ನು ನೀನು ಉತ್ಸಾಹದಿಂದ ಯುದ್ಧದಲ್ಲಿ ನಿನ್ನ ಶಕ್ತಿಯನ್ನು ತೋರಿಸು. ಎಂದು ಧರ್ಮರಾಯನಿಗೆ ಕೃಷ್ಣ ಸಂಧಿ ಮರಿದ ವಿಚಾರ ಹೇಳಿದನು.

ವ|| ಎಂಬನ್ನೆಗಂ ದುರ್ಯೋಧನನಟ್ಟಿದ ದೂತಂ

ಸಂಜಯನೆಂಬಂ ಬಂದು ಸಕಲ ಸಾಮಂತ ಮಣಿಮಕುಟ ಮರೀಚಿ ಮಸೃಣಿತ ಚರಣಾರವಿಂದನಪ್ಪ ಧರ್ಮನಂದನನಂ ಕಂಡು-

ವಚನ:ಪದವಿಭಾಗ-

ಅರ್ಥ:ಎಂಬ ಅನ್ನೆಗಂ (ಎನ್ನುವಷ್ಟರಲ್ಲಿ) ದುರ್ಯೋಧನನು ಅಟ್ಟಿದ ದೂತಂ ಸಂಜಯನೆಂಬಂ ಬಂದು(ದುರ್ಯೋಧನನು

ಕಳುಹಿಸಿದ ಸಂಜಯನೆಂಬ ದೂತನು ಬಂದು) ಸಕಲ ಸಾಮಂತ ಮಣಿಮಕುಟ ಮರೀಚಿ ಮಸೃಣಿತ (ಎಲ್ಲಾ ಸಾಮಂತರ ರತ್ನಕಿರೀಟದ ಕಾಂತಿಯಿಂದ ನುಣುಪಾಗಿ ಪ್ರಕಾಶವಾದ) ಚರಣಾರವಿಂದನಪ್ಪ (ಪಾದಕಮಲಗಳನ್ನುಳ್ಳ) ಧರ್ಮನಂದನನಂ ಕಂಡು-

ವಚನ:ಅರ್ಥ:ಎನ್ನುವಷ್ಟರಲ್ಲಿ ದುರ್ಯೋಧನನು ಕಳುಹಿಸಿದ ಸಂಜಯನೆಂಬ ದೂತನು ಬಂದು ಎಲ್ಲಾ ಸಾಮಂತರ ರತ್ನಕಿರೀಟದ ಕಾಂತಿಯಿಂದ ಪ್ರಕಾಶವಾದ ಪಾದಕಮಲಗಳನ್ನುಳ್ಳ ಧರ್ಮರಾಜನನ್ನು ನೋಡಿ-

ಉ|| ಅಟ್ಟಿದ ನಿಮ್ಮ ಪೆರ್ಗಡೆ ಬರ್ದುಂಕಿದನೆಂಬುದನಿಂದ್ರಜಾಲಮಂ

ತೊಟ್ಟನೆ ತೋಱಿ ಬಂದು ಬರ್ದುಕಾಡಿದನಿನ್ನಳಿಪಿಂದವ ಟ್ಟುವ|
ಟ್ಟಟ್ಟಿಗಳಂ ಬಿಸುಟ್ಟುದೆಮಗಂ ತಮಗಂ ಮುಳಿಸಿಂದಮೀಗಳ ಟ್ಟಟ್ಟಿಗಳಪ್ಪುವೆಂದಿದನೆ ದಲ್ ನುಡಿದಟ್ಟಿದನೆಮ್ಮ ಭೂಭುಜಂ|| ೮೯ ||

ಪದ್ಯ-00:ಪದವಿಭಾಗ-

ಅರ್ಥ:ಅಟ್ಟಿದ ನಿಮ್ಮ ಪೆರ್ಗಡೆ ಬರ್ದುಂಕಿದನೆಂಬುದನು

ಇಂದ್ರಜಾಲಮಂ ತೊಟ್ಟನೆ
ತೋಱಿ ಬಂದು (ನೀವು
ಕಳುಹಿಸಿದ ಹೆಗ್ಗಡೆಯು
ಇಂದ್ರಜಾಲವನ್ನು ತಟಕ್ಕನೆ
ತೋರಿಸಿ) ಬರ್ದುಕಾಡಿದನು
(ಬದುಕಿ ಉಳಿದನು). ಇನ್ನ್
ಅಳಿಪಿಂದಂ
ಅಟ್ಟುವಟ್ಟಟ್ಟಿಗಳಂ
ಬಿಸುಟ್ಟುದು (ಇನ್ನು
ದೂತರನ್ನು ಕಳುಹಿಸುವುದನ್ನು
ಬಿಡಿ, ನಿಲ್ಲಿಸಿರಿ.) ಎಮಗಂ

ತಮಗಂ ಮುಳಿಸಿಂದಂ
ಈಗಳು ಅಟ್ಟಿಟ್ಟಿಗಳ್
ಅಪ್ಪುವೆಂದು (ಇನ್ನು ಮೇಲೆ
ನಮಗೂ ನಿಮಗೂ
ಕೋಪದಿಂದ
ಅಟ್ಟಿಟ್ಟಿಯಾಡುವ
ಯುದ್ಧಕಾರ್ಯವು
ಪ್ರಾಪ್ತವಾಗುವುದು) ಅದನೆ
ದಲ್ ನುಡಿದಟ್ಟಿದನು ಎಮ್ಮ
ಭೂಭುಜಂ (ಎಂಬ ಈ
ಸಂದೇಶವನ್ನು ಹೇಳಿ ನಮ್ಮ

ರಾಜನು ನಮ್ಮನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾನೆ) ಎಂದನು ಸಂಜಯ.

ಪದ್ಯ-00:ಅರ್ಥ:ನೀವು ಕಳುಹಿಸಿದ ರಾಯಭಾರಿಯು/ ಹೆಗ್ಗಡೆಯು ಇಂದ್ರಜಾಲವನ್ನು ತೋರಿ ಬದುಕಿ ಬಂದಿದ್ದಾನೆ. ಇನ್ನು ದೂತರನ್ನು ಕಳುಹಿಸುವುದನ್ನು ನಿಲ್ಲಿಸಿರಿ. ಇನ್ನು ಮೇಲೆ ಕೋಪದಿಂದ ನಮಗೂ ನಿಮಗೂ

ಕೋಪದಿಂದ ಅಟ್ಟಟ್ಟಿಯಾಡುವ ಯುದ್ಧಕಾರ್ಯವು ಪ್ರಾಪ್ತವಾಗುವುದು ಎಂಬ ಈ ಸಂದೇಶವನ್ನು ಹೇಳಿ ನಮ್ಮ ರಾಜನು ನಮ್ಮನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾನೆ, ಎಂದನು ಸಂಜಯ.

ಮ|| ಬಳ ಸಂಪನ್ನರನಾಸೆಗೆಯ್ಗೆ ಚತುರಂಗಾನೀಕಮಂ ಕೂಡಿ ಕೊ

ಳ್ಗಳಮಂ
ಗಂಡುಮನಪ್ಪುಕೆಯ್ಗೆ
ಮನಮಂ ಬಲ್ಲಿತ್ತು
ಮಾೞ್ಕೆಂದುಮಾ|
ನೆಳೆಯಂ
ಕಾದಿದೊಡಲ್ಲದೀಯೆನೞಿದಿ
ರ್ಕೆಂದಾ ಕುರುಕ್ಷೇತ್ರಮಂ
ಕಳವೇೞ್ದಿಟ್ಟಿದನಣ್ಮಿ
ಸಾಯಿಮುೞಿಯಿಂ
ನಿಮ್ಮೊಂದು ಬಾೞುಸೆಯಂ||
೯೦ ||

ಪದ್ಯ-೯೦:ಪದವಿಭಾಗ-ಅರ್ಥ:ಬಳ (ಬಲ- ಸೈನ್ಯ) ಸಂಪನ್ನರನ್ ಆಸೆಗೆಯ್ಗೆ (ಸೈನ್ಯ ಉಳ್ಳವರನ್ನು ಸೇರಿಸಿಕೊಳ್ಳುವ ತಾರ್ಯವಾಗಲಿ) ಚತುರಂಗ ಆನೀಕಮಂ ಕೂಡಿ ಕೊಳ್ಗುಳಮಂ (ಚತುರಂಗ ಸೈನ್ಯವನ್ನು ಕೂಡಿಸಿ ರಣರಂಗವನ್ನು - ಸೇರಿ) ಗಂಡುಮನು ಅಪ್ಪುಕೆಯ್ಗೆ (ಪರಾಕ್ರಮವನ್ನು

ಅಂಗೀಕರಿಸಲಿ), ಮನಮಂ
ಬಲ್ಲಿತ್ತು ಮಾೞ್ಕೆ (ಮನಸ್ಸನ್ನು
ಗಟ್ಟಿ ಮಾಡಿಕೊಳ್ಳಲಿ;)
ಎಂದುಂ ಆನ್ ಎಳೆಯಂ
(ಇಳೆ- ಭೂಮಿಯನ್ನು)
ಕಾದಿದೊಡಲ್ಲದೆ ಈಯೆನು
ಅಱಿದಿರ್ಕೆ (ನಾನು ಎಂದೂ
ಯುದ್ಧಮಾಡಿದಲ್ಲದೆ
ಭೂಮಿಯನ್ನು ಕೊಡುವುದಿಲ್ಲ
ತಿಳಿದಿರಲಿ) ಎಂದು
ಕುರುಕ್ಷೇತ್ರಮಂ ಕಳಂ ವೇೞ್ದು

(ಹೇಳಿ) ಅಟ್ಟಿದಂ (ಎಂದು ಕುರುಕ್ಷೇತ್ರವನ್ನು ಯುದ್ಧರಂಗವನ್ನಾಗಿ ಗೊತ್ತು ಮಾಡಿ ಕಳುಹಿಸಿದ್ದಾನೆ.) ಅಣ್ಮಿ ಸಾಯಿಂ (ಹೋರಾಡಿ ಸಾಯಿರಿ,) ಉೞಿಯಿಂ(ಬಿಡಿ) ನಿಮ್ಮೊಂದು ಬಾೞುಸೆಯಂ(ಬಾಳುವ ಆಸೆಯನ್ನು ಬಿಡಿರಿ)

ಪದ್ಯ-೯೦:ಅರ್ಥ:ಸೈನ್ಯ ಉಳ್ಳವರನ್ನು ಸೇರಿಸಿಕೊಳ್ಳುವ

ತಾಯರ್ವಾಗಲಿ; ಚತುರಂಗ
ಸೈನ್ಯವನ್ನು ಕೂಡಿಸಿ
ರಣರಂಗವನ್ನು ಸೇರಿ
ಪರಾಕ್ರಮವನ್ನು
ಅಂಗೀಕರಿಸಲಿ; ಮನಸ್ಸನ್ನು
ಗಟ್ಟಿ ಮಾಡಿಕೊಳ್ಳಲಿ; ನಾನು
ಎಂದೂ ಯುದ್ಧಮಾಡಿದಲ್ಲದೆ
ಭೂಮಿಯನ್ನು ಕೊಡುವುದಿಲ್ಲ
ತಿಳಿದಿರಲಿ ಎಂದು
ಕುರುಕ್ಷೇತ್ರವನ್ನು
ಯುದ್ಧರಂಗವನ್ನಾಗಿ ಗೊತ್ತು

ಮಾಡಿ ಕಳುಹಿಸಿದ್ದಾನೆ.
ಹೋರಾಡಿ ಸಾಯಿರಿ, ಬಾಳುವ
ಆಸೆಯನ್ನು ಬಿಡಿರಿ.

ವ|| ಎಂಬುದುಂ ವೃಕೋದರಂ ಮುಳಿದಾಸ್ಫೋಟಿಸಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ವೃಕೋದರಂ ಮುಳಿದು ಆಸ್ಫೋಟಿಸಿ-

ವಚನ:ಅರ್ಥ:ಎನ್ನಲು ಭೀಮಸೇನನು

ಕೋಪಿಸಿಕೊಂಡು ಆರ್ಭಟಿಸಿ ನುಡಿದನು.

ಚಂ||

ವಿಸಸನರಂಗಮಪ್ಪುದೆನಗಂ
ತನಗಂ ದೊರೆ
ಕಾಯ್ಪುಮೇವಮುಂ
ಪಸರಿಸಿ ಪರ್ವಿ
ತನ್ನೊಳಮದೆನ್ನೊಳಮಿರ್ದು
ದು ಭೀಮನೆಂದೊಡಾ|
ಪೆಸರನೆ ಕೇಳ್ದು ಸೈರಿಸದ
ನಿನ್ನರಸಂ ಕಲಿಯಾಗಿ ನಾಳೆ ಸೈ

ರಿಸುಗುಮೆ ವೈರಿಭೂಪ ರುರಾರ್ದ್ರ ಮದೀಯ ಗದಾಭಿಘಾತಮಂ|| ೯೧ ||

ಪದ್ಯ-೯೧:ಪದವಿಭಾಗ-ಅರ್ಥ:ವಿಸಸನರಂಗಂ ಅಪ್ಪುದು ಎನಗಂ ತನಗಂ (ರಣರಂಗವು ನನಗೂ ದುಯೋ೯ಧನನಿಗೂ ದೊರೆಅಪ್ಪುದು- ಆಗುವುದು) - <ದೊರೆ ಅಪ್ಪುದು; ಕಾಯ್ಪುಂ ಏವಮುಂ (ಕೋಪ

ಮಾತ್ಸರ್ಯಗಳು) ಪಸರಿಸಿ
ಪರ್ವಿ (ಪ್ರಸರಿಸಿ ಹಬ್ಬಿ)
ತನ್ನೊಳಂ ಅದು ಎನ್ನೊಳಂ
ಇರ್ದುದು (ಕೋಪ
ಮಾತ್ಸರ್ಯಗಳು ಪ್ರಸರಿಸಿ
ಹಬ್ಬಿ ನನ್ನಲ್ಲಿಯೂ
ಅವನಲ್ಲಿಯೂ ಇವೆ)
ಭೀಮನೆಂದೊಡೆ ಆ ಪೆಸರನೆ
ಕೇಳ್ದು ಸೈರಿಸದ ನಿನ್ನ ಅರಸಂ
(ಭೀಮನೆಂಬ ಹೆಸರನ್ನೇ ಕೇಳಿ
ಸಹಿಸದ ನಿಮ್ಮ ರಾಜನು)

ಕಲಿಯಾಗಿ ನಾಳೆ
ಸೈರಿಸುಗುಮೆ (ಶೂರನಾಗಿ
ನಾಳೆಯ ಯುದ್ಧದಲ್ಲಿ
ಸೈರಿಸುತ್ತಾನೆಯೇ?-
ತಡೆದುಕೊಳ್ಳುತ್ತಾನೆಯೇ?)
ವೈರಿಭೂಪ ರುರಾರ್ದ್ರ
ಮದೀಯ ಗದಾಭಿಘಾತಮಂ
(ಶತ್ರುರಾಜರ ರಕ್ತದಿಂದ
ಒದ್ದೆಯಾದ ನನ್ನ ಗದೆಯ
ಪೆಟ್ಟನ್ನು)

ಪದ್ಯ-೯೧:ಅರ್ಥ:ಯುದ್ಧರಂಗವು ನನಗೂ ದುರ್ಯೋಧನನಿಗೂ ಆಗುವುದು. ಕೋಪ ಮಾತ್ಸರ್ಯಗಳು ಪ್ರಸರಿಸಿ ಹಬ್ಬಿ ನನ್ನಲ್ಲಿಯೂ ಅವನಲ್ಲಿಯೂ ಇವೆ. ಭೀಮನೆಂಬ ಹೆಸರನ್ನೇ ಕೇಳಿ ಸಹಿಸದ ನಿಮ್ಮ ರಾಜನು ಶೂರನಾಗಿ ನಾಳೆಯ ಯುದ್ಧದಲ್ಲಿ ಶತ್ರುರಾಜರ

ರಕ್ತದಿಂದ ಒದ್ದೆಯಾದ ನನ್ನ ಗದೆಯ ಪೆಟ್ಟನ್ನು ತಡೆದುಕೊಳ್ಳುತ್ತಾನೆಯೇ?

ವ|| ಎಂಬುದುಂ ಪರಾಕ್ರಮಧವಳನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಪರಾಕ್ರಮಧವಳನು (ಅರ್ಜುನನು) ಇಂತೆಂದಂ-

ವಚನ:ಅರ್ಥ:ವ|| ಎನ್ನಲು ಅರ್ಜುನನು ಹೀಗೆಂದನು

ಮ|| ಕಱುಪ್ಪುಂ

ಕಾಯ್ದುಮನುಂಟುಮಾಡಿ

ನೆಲನಂ ದುರ್ಯೋಧನಂ ತಾಗಿ

ತ್ತ

ಳ್ತಿಱಿದಂದಲ್ಲದೆ ಕೂಡನಾಜಿ

ಭರಮುಂ ಸಾರ್ಚಿತ್ತದೇನೆಂದು

ಮು|

ನ್ನಱಿದಿಂಗಳ್

ಜಱುಚುತ್ತುಮಿರ್ಪುದೆ

ರಣಕ್ಕಾರೆನ್ನರೆಂದೀಗಳೆಂ

ತಱಿಯಲ್ ಬರ್ಕುಮೆ ಬರ್ಕೆ ಬಂದೊಡಱಿಯಲ್ಕಕ್ಕುಂ ಕುರುಕ್ಷೇತ್ರದೊಳ್|| ೯೨ ||

ಪದ್ಯ-೯೨:ಪದವಿಭಾಗ-

ಅರ್ಥ:ಕಱುಪುಂ ಕಾಯ್ದುಮನು ಉಂಟುಮಾಡಿ (ಕೋಪವನ್ನೂ ತಾಪವನ್ನೂ ಉಂಟುಮಾಡಿ)ನೆಲನಂ ದುರ್ಯೋಧನಂ ತಾಗಿ ತಳ್ತಿಱಿದಂದು ಅಲ್ಲದೆ ಕೂಡನು ಆಜಿ (ಪ್ರತಿಭಟಿಸಿ

ಯುದ್ಧಮಾಡಿದಲ್ಲದೆ
ದುರ್ಯೋಧನನು ರಾಜ್ಯವನ್ನು
ಕೊಡುವುದಿಲ್ಲ) ಆಜಿ
ಭರಮುಂ ಸಾರ್ಚಿತ್ತು
ಅದೇನೆಂದು
ಮುನ್ನಱುದಿಂಗಳ್
(ಯುದ್ಧಭಾರವೂ
ಸಮೀಪಿಸಿದೆ. ರಣದಲ್ಲಿ ಅದು
ಏನು ಯಾರು ಎಂಥವರು
ಎಂಬುದನ್ನು ಈಗ
ತಿಳಿಯುವುದು ಸಾಧ್ಯವೇ?)

ಅಱುಚುತ್ತುಂ ಇರ್ಪುದೆ
(ಅರಚುತ್ತ ಇರುವುದೇ?)
ರಣಕ್ಕೆ ಆರು ಎನ್ನರ್
ಎಂದೀಗಳೆ ಎಂತು
ಅಱಿಯಲ್ ಬರ್ಕುಮೆ
(ರಣದಲ್ಲಿ ಅದು ಏನು ಯಾರು
ಎಂಥವರು ಎಂಬುದನ್ನು ಈಗ
ತಿಳಿಯುವುದು ಸಾಧ್ಯವೇ?)
ಬರ್ಕೆ ಬಂದೊಡೆ ಅಱಿಯಲ್ಕೆ
ಅಕ್ಕುಂ ಕುರುಕ್ಷೇತ್ರದೊಳ್

(ಕುರುಕ್ಷೇತ್ರಕ್ಕೆ ಬರಲಿ, ಬಂದರೆ ತಿಳಿಯುತ್ತದೆ)

ಪದ್ಯ-೬೨:ಅರ್ಥ:
ಕೋಪವನ್ನೂ ತಾಪವನ್ನೂ ಉಂಟುಮಾಡಿ ಪ್ರತಿಭಟಿಸಿ ಯುದ್ಧಮಾಡಿದಲ್ಲದೆ ದುರ್ಯೋಧನನು ರಾಜ್ಯವನ್ನು ಕೊಡುವುದಿಲ್ಲ. ಯುದ್ಧಭಾರವೂ ಸಮೀಪಿಸಿದೆ. ಅದೇನಾಗುತ್ತದೆಂದು

ಅರಚುತ್ತ ಇರುವುದೇ?
ರಣದಲ್ಲಿ ಅದು ಏನು ಯಾರು
ಎಂಥವರು ಎಂಬುದನ್ನು ಈಗ
ತಿಳಿಯುವುದು ಸಾಧ್ಯವೇ?
ಕುರುಕ್ಷೇತ್ರಕ್ಕೆ ಬರಲಿ, ಬಂದರೆ
ತಿಳಿಯುತ್ತದೆ

ವ|| ಎಂಬುದುಂ
ಯಮನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ
ಯಮನಂದನನು ಇಂತೆಂದಂ-

ವಚನ:ಅರ್ಥ:ಎನ್ನಲು

ಧರ್ಮರಾಜನು ಹೀಗೆಂದನು

ಮ||ಸ್ರ|| ಎಳೆಯಂ
ದುರ್ಯೋಧನಂ ತಳ್ತಿಱಿಯದೆ
ಕುಡೆನೆಂದಟ್ಟಿ ಕಾದಲ್ಕಮೀಗಳ್
ಕಳನಂ ಪೇೞ್ದಿಂ
ಕುರುಕ್ಷೇತ್ರಮನೆನೆ
ತಡವಿನ್ನಾವುದುಗ್ರಾಜಿಯೊಳ್
ದೋ|
ರ್ವಳದಿಂದಂ ತನ್ನ ಮೆಚ್ಚಂ
ಸಲಿಸಿಯೆ ನೆಲನಂ ಕೊಳ್ವೆನಿಂ

ತಳ್ವೆನೆಮ್ಮೊಳ್
ಕಳನಂ ಬೇಡೆಯ್ದೆ ಕೇಳ್ದೆಂ
ಬಗೆಯನಱಿಯಲಾಯ್ತೇಱಿ
ಮಂತೆಂದೆ ಪೇಱಿಂ|| ೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಎಳೆಯಂ ದುರ್ಯೋಧನಂ ತಳ್ತು ಇಱಿಯದೆ ಕುಡೆನೆ ಎಂದು (ದುರ್ಯೋಧನನನ್ನು ಎದುರಿಸಿ ಯುದ್ಧಮಾಡಿದ ಹೊರತು ಭೂಮಿಯನ್ನು

ಕೊಡುವುದಿಲ್ಲ ಎಂದು) ಅಟ್ಟಿ
ಕಾದಲ್ಕಂ ಈಗಳ್ ಕಳನಂ
ಪೇೞ್ದಿಂ ಕುರುಕ್ಷೇತ್ರಮನು
(ದೂತನ ಮೂಲಕ ಹೇಳಿ
ಕಳುಹಿಸಿ ಈಗ
ಕುರುಕ್ಷೇತ್ರವನ್ನು
ಯುದ್ಧರಂಗವನ್ನಾಗಿ
ನಿಶ್ಚಯಿಸಿದ್ದೇನೆ) ಎನೆ
ತಡವಿನ್ನಾವುದು (ಎಂದ
ಮೇಲೆ ಇನ್ನು ತಡವೇತಕ್ಕೆ?)
ಉಗ್ರಾ ಆಜಿಯೊಳ್ (ಘೋರ

ಯುದ್ಧದಲ್ಲಿ)
ದೋರ್ವಳದಿಂದಂ ತನ್ನ
ಮೆಚ್ಚಂ ಸಲಿಸಿಯೆ
(ದೋರ್ವಳದಿಂದಂ -
ತೋಳ್ಬಲದಿಂದ, - ನನ್ನ
ಬಾಹುಬಲದಿಂದಲೇ ಅವನ
ಆಶೆಯನ್ನು ಪೂರೈಸಿ) ನೆಲನಂ
ಕೊಳ್ವೆನ್ ಇಂ ತಳ್ವೆನ್ (ಇನ್ನು
ತಡ ಮಾಡುವುದಿಲ್ಲ.)
ಎಮ್ಮೊಳ್ ಕಳನಂ ಬೇಡಿ
ಎಯ್ದೆ ಕೇಳ್ದೆಂ (ನಮ್ಮಲ್ಲಿ

ಯುದ್ಧಮಾಡುವುದನ್ನು ಬಯಸಿ ಚೆನ್ನಾಗಿ/ಸ್ಪಷ್ಟವಾಗಿ ಕೇಳಿದ್ದಾನೆ.) ಬಗೆಯನು ಅಱಿಯಲಾಯ್ತು (ಅವನ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯಲಾಯ್ತು) ಏಱಿಂ ಅಂತೆಂದೆ ಪೇಱಿಂ (ಹಾಗೆಯೇ ಹೇಳಿ ಎಂದು ಸಂಜಯನನ್ನು ಕಳುಹಿಸಿದನು.)

ಪದ್ಯ-೯೩:ಅರ್ಥ:ದುರ್ಯೋಧನನನ್ನು ಎದುರಿಸಿ

ಯುದ್ಧಮಾಡಿದ ಹೊರತು ಭೂಮಿಯನ್ನು ಕೊಡುವುದಿಲ್ಲ ಎಂದು ದೂತನ ಮೂಲಕ ಹೇಳಿ ಕಳುಹಿಸಿ ಈಗ ಕುರುಕ್ಷೇತ್ರವನ್ನು ಯುದ್ಧರಂಗವನ್ನಾಗಿ ನಿಶ್ಚಯಿಸಿದ್ದೇನೆ ಎಂದ ಮೇಲೆ ಇನ್ನು ತಡವೇತಕ್ಕೆ? ಘೋರ ಯುದ್ಧದಲ್ಲಿ ನನ್ನ ಬಾಹುಬಲದಿಂದಲೇ ಅವನ ಆಶೆಯನ್ನು ಪೂರೈಸಿ

ರಾಜ್ಯವನ್ನು ತೆಗೆದುಕೊಳ್ಳುತ್ತೇನೆ. ಇನ್ನು ತಡ ಮಾಡುವುದಿಲ್ಲ. ನಮ್ಮಲ್ಲಿ ಯುದ್ಧಮಾಡುವುದನ್ನು ಬಯಸಿ ಚೆನ್ನಾಗಿ/ಸ್ಪಷ್ಟವಾಗಿ ಕೇಳಿದ್ದಾನೆ. ಅವನ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯಲಾಯ್ತು; ಇನ್ನು ಏಳಿ; ದುರ್ಯೋಧನನಿಗೆ ಹಾಗೆಯೇ ಹೇಳಿ ಎಂದು ಸಂಜಯನನ್ನು ಕಳುಹಿಸಿದನು.

ಕುರುಕ್ಷೇತ್ರಕ್ಕೆ ಸೈನ್ಯಸಮೇತ ಪಾಂಡವರ ಪಯಣ ಆರಂಭ

ವ|| ಎಂದಜಾತಶತ್ರು ಶತ್ರುಪಕ್ಷಕ್ಷಯಂ ಮಾಡುವುದ್ಯೋಗಮನೆತ್ತಿ ಕೊಂಡು ಪ್ರಯಾಣ ಭೇರಿಯಂ ಪೊಯ್ಸಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ಅಜಾತಶತ್ರು (ಧರ್ಮಜನು) ಶತ್ರುಪಕ್ಷ ಕ್ಷಯಂ (ಶತ್ರುಗಳ

ಕಡೆಯವರನ್ನು
ನಾಶಮಾಡುವ) ಮಾಡುವ
ಉದ್ಯೋಗಮನು
ಎತ್ತಿಕೊಂಡು (ಅಂಗೀಕರಿಸಿ)
ಪ್ರಯಾಣ ಭೇರಿಯಂ
ಪೊಯ್ಸಿದಾಗಳ್-
ವಚನ:ಅರ್ಥ:ಧರ್ಮಜನು
ಶತ್ರುಗಳ ಕಡೆಯವರನ್ನು
ನಾಶಮಾಡುವ ಕಾರ್ಯವನ್ನು
ಅಂಗೀಕರಿಸಿ

ಪ್ರಯಾಣಭೇರಿಯನ್ನು
ಹೊಡೆಯಿಸಿದನು-

**ಮ|| ದೆಸೆಯಂ ಪೊತ್ತ
ಮದೇಭರಾಜಿ
ದೆಸೆಗೆಟ್ಟೋಡಲ್ತಗುಳ್ದತ್ತು ಸ
ಪ್ತ ಸಮುದ್ರಂ ಕರೆಗಣ್ಮಿ
ತನ್ನವಧಿಯಂ
ದಾಂಟಿತ್ತಜಾಂಡಂ ಸಿಡಿ|
ಲ್ದು ಸಿಡಿಲ್ಪೊಯ್ದೊಡೆದೊಂದು
ತತ್ತಿಯವೊಲಾಯ್ತೆಂಬೊಂದು
ಸಂದೇಹಮಂ**

ಪೊಸತಂ ಭೂಭುವನಕ್ಕೆ ಮಾಡಿದುದು ತತ್ಸನ್ನಾಹಭೇರೀರವಂ|| ೯೪ ||

ಪದ್ಯ-೯೪:ಪದವಿಭಾಗ-ಅರ್ಥ:ದೆಸೆಯಂ ಪೊತ್ತ ಮದೇಭರಾಜಿ (ದಿಗ್ಗಜಗಳ ಸಾಲು) ದೆಸೆಗೆಟ್ಟು ಓಡಲ್ ತಗುಳ್ದತ್ತು (ಪ್ರಾರಂಭಿಸಿದವು,)ಸಪ್ತ ಸಮುದ್ರಂ ಕರೆಗಣ್ಮಿ (ಮೇರೆಮೀರಿ) ತನ್ನವಧಿಯಂ

ದಾಂಟಿತ್ತು (ಎಲ್ಲೆಯನ್ನು ದಾಟಿತ್ತು,) ಅಜಾಂಡಂ ಸಿಡಿಲ್ದು ಸಿಡಿಲ್ ಪೊಯ್ದು (ಹೊಡೆದು) ಒಡೆದ ಒಂದು ತತ್ತಿಯವೊಲ್ ಆಯ್ತೆಂಬ ಒಂದು ಸಂದೇಹಮಂ ಪೊಸತಂ ಭೂಭುವನಕ್ಕೆ ಮಾಡಿದುದು ತತ್ ಸನ್ನಾಹ ಭೇರೀರವಂ (ಆ ಸೈನ್ಯಸಿದ್ಧತೆಯ ಭೇರಿಯು ಶಬ್ದವು)

ಪದ್ಯ-೯೫:ಅರ್ಥ:ಭೂಭಾಗದ ದಿಕ್ಕುಗಳನ್ನು ಹೊತ್ತಿರುವ ಎಂಟು ದಿಕ್ಕಿನ ಆನೆಗಳು ಮದದಿಂದ ಕೂಡಿದ ದಿಗ್ಗಜಗಳ ಸಾಲು ದಿಕ್ಕೆಟ್ಟು ಓಡಲು ಪ್ರಾರಂಭಿಸಿದವೋ, ಏಳು ಸಮುದ್ರಗಳೂ ಮೇರೆಮೀರಿ ತಮ್ಮ ಎಲ್ಲೆಯನ್ನು ದಾಟಿದುವೋ, ಬ್ರಹ್ಮಾಂಡವು ಸಿಡಿದು ಹೋಗಿ ಸಿಡಿಲು ಹೊಡೆದು ಒಡೆದು

ಚೂರಾದ ಒಂದು ಮೊಟ್ಟೆಯಂತಾಯಿತೋ ಎಂಬ ಒಂದು ಸಂದೇಹವನ್ನು ಆ ಸೈನ್ಯಸಿದ್ಧತೆಯ ಭೇರಿಯು ಶಬ್ದವು ಭೂಲೋಕಕ್ಕೆಲ್ಲ ಉಂಟುಮಾಡಿತು.

ಮ||ಕರಿಗಳ್ ಭೃಂಗಕುಳಾಕುಳೀಕೃತ ಕಟೋಪೇತಂಗಳೊಂಬತ್ತು ಸಾ

ಸಿರಮಂತೊಂದು ಗಜಕ್ಕೆ
ನೂಱು ರಥಮಂತಾ
ಸ್ಯಂದನಕ್ಕೊಂದರೊಳ್|
ತುರಗಂ ನೂಱನಿತುಂ
ತುರಂಗದಳಮೊಂದೊಂದರ್ಕೆ
ನೂಱಾಳ್ ತಗು
ಳ್ದಿರೆ ಬಲ್ಲರ್ ನಡೆ ನೋಡಿ
ಕೂಡೆ
ಪಡೆದತ್ತಕ್ಷೋಹಿಣೀಸಂಖ್ಯೆ
ಯಂ|| ೯೫ ||

ಪದ್ಯ-೯೫:ಪದವಿಭಾಗ-ಅರ್ಥ:ಕರಿಗಳ್ (ಆನೆಗಳು) ಭೃಂಗಕುಳ ಆಕುಳೀಕೃತ (ದುಂಬಿಗಳ ಸಮೂಹದಿಂದ ಹಿಂಸಿಸಲ್ಪಟ್ಟ) ಕಟೋಪೇತಂಗಳ (ಕಪೋಲಗಳನ್ನುಳ್ಳ) ಒಂಬತ್ತು ಸಾಸಿರಂ, ಅಂತೊಂದು ಗಜಕ್ಕೆ ನೂಱು ರಥಮ್ (ಅಂತಹ ಒಂದು ಆನೆಗೆ ನೂರು ತೇರುಗಳು;) ಆಂತು ಆ

ಸ್ಯಂದನಕ್ಕ (ರಥಕ್ಕೆ)
ಅದರೊಳ್ ತುರಗಂ ನೂಱು
(ಆ ತೇರು ಒಂದೊಂದಕ್ಕೆ
ನೂರು ಕುದುರೆಗಳು,)
ಅನಿತುಂ ತುರಂಗದಳಂ
ಒಂದೊಂದರ್ಕೆ ನೂಱು ಆಳ್
ತಗುಳ್ದಿರೆ (ಒಂದೊಂದಕ್ಕೆ
ನೂರು ಆಳು) ಬಲ್ಲರ್ ನಡೆ
ನೋಡಿ ಕೂಡೆ (ಒಟ್ಟು)
ಪಡೆದತ್ತು ಅಕ್ಷೋಹಿಣೀ

ಸಂಖ್ಯೆಯಂ (ಒಂದು ಅಕ್ಷೋಹಿಣೀ ಎಂದೆನಿಸಿತು)
ಪದ್ಯ-೯೫:ಅರ್ಥ:ದುಂಬಿಗಳ ಸಮೂಹದಿಂದ ಹಿಂಸಿಸಲ್ಪಟ್ಟ ಕಪೋಲಗಳನ್ನುಳ್ಳ ಒಂಬತ್ತು ಸಾವಿರ ಆನೆಗಳು, ಅಂತಹ ಒಂದು ಆನೆಗೆ ನೂರು ತೇರುಗಳು; ಆ ತೇರು ಒಂದೊಂದಕ್ಕೆ ನೂರು ಕುದುರೆಗಳು, ಅಷ್ಟು ಕುದುರೆಯ ಸೈನ್ಯದ

ಒಂದೊಂದಕ್ಕೆ ನೂರು ಆಳು ಸೇರಿಕೊಂಡಿರಲು, ಅದು ತಿಳಿದವರ ಗಣನೆಯ ಪ್ರಕಾರ ಒಟ್ಟು ಒಂದು ಅಕ್ಷೋಹಿಣೀ ಎಂದೆನಿಸಿತು (ಆನೆ ೯೦೦೦;+ ರಥ ೯೦೦೦X ನೂರು; + ಕುದುರೆ೯೦೦೦X ನೂರು X ನೂರು; + ಪದಾತಿ ೯೦೦೦X ನೂರು X ನೋರು X ನೂರು : ಇದು ಪಂಪನ ಲೆಕ್ಕ, ಬೇರೆ ರೀತಿಯೂ ಇದೆ.)

ವ|| ಅಂತು ಮಾಡಿದ
ಪರಿಸಂಖ್ಯೆಯೊಳೊಂದು
ಅಕ್ಷೋಹಿಣೀ ಬಲಂಬರೆಸು
ತಲೆಬೞಿವೞಿಯೆಂದು
ಅಭಿಮನ್ಯುಗೆ ಕೂಸಂ ಕೊಟ್ಟ
ಜಟ್ಟಿಗಂ ವಿರಾಟಂ
ಶ್ವೇತನುತ್ತರಂ ಶಂಖನೆಂಬ
ಮೂವರ್ ಮಕ್ಕಳುಂ
ಶತಾನೀಕ ಶತದ್ಯುಮ್ನ
ಶತಚಂದ್ರಂ ಮೊದಲಾಗಿ
ಪನ್ನೊರ್ವರ್

ತಮ್ಮಂದಿರುಂಬೆರಸು
ನೆಲನದಿರೆ ಮುಂಗೋಳೊಳ್
ನಡೆಯೆ ದ್ರೌಪದಿಯ ಕೊಟ್ಟ
ನಣ್ಪುಮಂ ದ್ರೋಣನೊಳಾದ
ಪರಿಭವಮುಮಂ
ನೆನೆದೊಂದಕ್ಷೋಹಿಣೀ
ಬಲಂಬೆರಸು ದ್ರುಪದಂ
ಧೃಷ್ಟದ್ಯುಮ್ನ ಶಿಖಂಡಿ
ಚೇಕಿತಾನ
ಯುಧಾಮನ್ಯೂತ್ತಮೌಜ
ಪುರುಕುತ್ಸು ವಿಚಿತ್ರಾದಿಗಳಪ್ಪ

ತನ್ನ ಮಕ್ಕಳ್ವೆರಸು ನೆಲಂ
ಮೂರಿವಿಟ್ಟಂತೆ
ಬಲವಕ್ಕದೊಳ್ ನಡೆಯೆ
ಸುಭದ್ರೆಯ ಕೊಟ್ಟ
ನಣ್ಪಿಂಗನುಬಲಮಾಗಿ
ಪುಂಡರೀಕಾಕ್ಷನ ತಮ್ಮಂ
ಸಾತ್ಯಕಿ ವೃಷ್ಣಿ
ಕಾಂಭೋಜಕುಳತಿಳಕರಪ್ಪ
ಯಾದವರ
ಕುಲದೊಡನೆಯಕ್ಷೋಹಿಣೀಪ
ತಿ ನಾಯಕಂ

ಭೂಪತಿಯೆಡವಕ್ಕದೊಳ್
ನಡೆಯೆ ಕೇಕಯ
ವಿಷಯಾಶ್ವರರಪ್ಪ
ಕೈಕಯರಯ್ವರುಮೊಂದಕ್ಷೋ
ಹಿಣೀ ಬಲದೊಡನೆ
ಸಿಡಿಲನುರುಳಿ ಮಾಡಿದಂತು
ಪಿಂಗೋಳೊಳ್ ನಡೆಯೆ
ಪಾಂಡ್ಯಂ
ಶ್ರೀಜಯಸೋಮಕರೊಡ
ನೊಂದಕ್ಷೋಹಿಣೀ
ಬಲಂಬೆರಸು ಸುತ್ತಿಱಿದು

ಬಳಸಿ ಬರೆ ಧರಣೀಂದ್ರನ

ತಂಗೆಯಪ್ಪ ಕನಕಲತೆಗಂ

ವಿಕ್ರಮಾರ್ಜುನಂಗಂ ಪುಟ್ಟಿದ

ಮಗನಿಳಾವಂತನನಂತ

ನಾಗರಾಜ ಬಲಂಬೆರಸು

ನಾಗಲೋಕಮೆ

ಕಿೞ್ತೆೞ್ದುಬರ್ಪಂತೆ ಬರೆ

ಹಿಡಿಂಬೆಗಂ ಭೀಮಂಗಂ

ಪುಟ್ಟಿದ ಮಗಂ

ಘಟೋತ್ಕಚನಱುವತ್ತೆಂಟು

ಕೋಟಿ ರಾಕ್ಷಸ ಬಲಂಬರೆಸು

ಬರೆ ಸಾಮಂತ
ಚೂಡಾಮಣಿಯ
ಕೃತೋಪಕಾರಮಂ
ನೆನದಂಗದರ್ಪಣನೆಂಬ
ಗಂಧರ್ವಂ ನಾಲ್ಕು ಕೋಟಿ
ಗಂಧರ್ವಬಲಮುಮಱುವತ್ತು
ಸಾಸಿರ ಗಿಳಿಯ ಬಣ್ಣದ
ಕುದುರೆಗಳುಂ ಬೆರಸು
ಗಂಧರ್ವಲೋಕಮೆ ಕಿೞ್ತೆೞ್ದು
ಬರ್ಪಂತೆ ಬರೆ ಮಹಾ
ಪ್ರಚಂಡರುಂ

ಪ್ರತಾಪಿಗಳುಮಪ್ಪ
ಪಂಚಪಾಂಡವರುಮಂಕದ
ಅಭೀಮನ್ಯುವುಂ ಕೆಲ
ಕೆಲದೊಳೋಲಗಿಸುತ್ತುಂ ಬರೆ
ಕೊಂತಿಯ ಮಾವನಪ್ಪ
ಕೊಂತಿಭೋಜನುಂ
ಸೋಮಕಂ
ಬೆರಸೊಂದಕ್ಷೋಹಿಣೀ
ಬಲಂಬೆರಸು ಬರೆ ಮತ್ತಂ
ಪ್ರಭದ್ರೈಬಲಮುಮಂಗ ವಂಗ
ಕಳಿಂಗ ಕೊಂಗ ಕೊಂಕಣ

ಗೌಲ್ಲ ಕಾಂಭೋಜ ಮಗಧ
ಸೌರಾಷ್ಟ್ರ ವರಾಟ ಲಾಟ
ಕರ್ಣಾಟಕ ರಹಾಟ ಮಳಯ
ಮಾಳವ ನೇಪಾಳ ಪಾರಿವ
ಪಾರಿಯಾತ್ರ ಬರ್ಬರ ಕೋಸಳ
ಕಾಶಿ ಕಾಶ್ಮೀರ ಕೌಶಿಕಾಂಧ್ರ
ದ್ರವಿಳ ಗಜಮುಖಾಶ್ವ
ಮುಖೋಷ್ಟ್ರಮುಖ ಖರಮುಖ
ಮೇಷಮುಖ ಲಂಬಕರ್ಣ
ಹಸ್ತಿಕರ್ಣಾಶ್ವಕರ್ಣ ತುರುಷ್ಕ
ಪ್ರವರ ನಾನಾದ್ವೀಪ

ದೇಶಾಶ್ವರರುಂ ಪಗೆಗಂ
ಪಾೞಿಗಂ ಪರಿಭವಕ್ಕಂ
ಪೞಿವೆಗಂ ಪಾಗುಡಕ್ಕಂ
ಪಳಬದ್ದಕ್ಕಂ ವೈವಾಹಿಕ
ಸಂಬಂಧಕ್ಕಂ ಮೈತ್ರಕ್ಕಂ
ಮೇರೆಗಂ ಅಟ್ಟಟ್ಟಿಗಂ ಸ್ವಾಮಿ
ಭೃತ್ಯ ಸಂಬಂಧಕ್ಕಂ
ದೋರ್ವಲಕ್ಕಂ ಮೈಮೆಗಂ
ಮೋಕ್ಷಕ್ಕಂ
ಮಹಾಸಮುದ್ರದೊಳ್
ಮಹಾನದಿಗಳ್

ಕೂಡುವಂತೇೞಿಕ್ಷೋಹಿಣೀ
ಬಲಂ ಕೂಡಿ ನಡೆಯೆ ತನ್ನ
ನಾಲ್ವರ್ ತಮ್ಮಂದಿರೊಡನೆ
ಮಂಗಳವಸದನಂಗೊಂಡು
ಮಂಗಳ ಪ್ರಧಾನೋಚಿತ
ವಿಜಯಗಜಮನೇಱಿ
ವಿದ್ಯೋತಮಾಗಿ
ದಕ್ಷಿಣಾವರ್ತಮಪ್ಪ
ಹೋಮಾಗ್ನಿಯಂ
ಬಲಂಗೊಂಡು ಬಲದ ಕೋಡ
ಮೇಲೆ ಕೆಯ್ಯಂ ಪೇಱಿ

ಮುಖವಿಕ್ಷೇಪಣಂಗೆಯ್ದು
ಘನಾಘನನಿನಾದದಿಂ
ಬೃಂಹಿತಂಗೆಯ್ವು
ವಿಜಯಗಜಮಂ ನೆಲನಂ
ಪೊಕ್ಕಡಂಗಿದ
ಪಗೆವರನಗುಳ್ದಿ
ಕೊಲ್ವುದನುದಾಹರಿಸುವಂತೆ
ದಕ್ಷಿಣ ಚರಣದೊಳ್ ನೆಲನಂ
ಪರಡಿ ಗಂಭೀರನಿನಾದದಿಂ
ಹೇಷಿತಂಗೆಯ್ವು

ವಿಜಯಹಯಮುಂ ವಿಜಯನ ವಿಜಯಮನೆ ಸೂಚಿಸೆ-

ವಚನ:ಪದವಿಭಾಗ-

ಅರ್ಥ:ಅಂತು ಮಾಡಿದ ಪರಿಸಂಖ್ಯೆಯೊಳು ಒಂದಕ್ಷೋಹಿಣೀ ಬಲಂ ಬರೆಸು ತಲೆಬಱಿವಱೆಯೆಂದು (ತಲೆಯನ್ನೇ ಬಳುವಳಿಯನ್ನಾಗಿ) ಅಭಿಮನ್ಯುಗೆ ಕೂಸಂ (ಮಗಳನ್ನು) ಕೊಟ್ಟ ಜಟ್ಟಿಗಂ

(ವೀರ) ವಿರಾಟಂ ಶ್ವೇತನು
ಉತ್ತರಂ ಶಂಖನೆಂಬ
ಮೂವರ್ ಮಕ್ಕಳುಂ,
ಶತಾನೀಕ ಶತದ್ಯುಮ್ನ
ಶತಚಂದ್ರಂ ಮೊದಲಾಗಿ
ಪನ್ನೊರ್ವರ್
ತಮ್ಮಂದಿರುಂಬೆರಸು
(ಪತ್ತು+ಒಬ್ಬ, ಹನ್ನೊಂದು
ತಮ್ಮಂದಿರೊಡಗೂಡಿ) ನೆಲನು
ಅದಿರೆ ಮುಂಗೋಳ್ಳೊಳ್
(ಮುಂದಿನಭಾಗದಲ್ಲಿ) ನಡೆಯೆ

ದ್ರೌಪದಿಯ ಕೊಟ್ಟ ನಣ್ಪುಮಂ
(ಬಾಂಧವ್ಯವನ್ನೂ)
ದ್ರೋಣನೊಳಾದ
ಪರಿಭವಮುಮಂ
(ಸೋಲನ್ನೂ
ಅವಮಾನವನ್ನೂ) ನೆನೆದು
ಒಂದು ಅಕ್ಷೋಹಿಣೀ
ಬಲಂಬೆರಸು
(ಸೈನ್ಯಸಮೇತನಾಗಿ) ದ್ರುಪದಂ
ಧೃಷ್ಟದ್ಯುಮ್ನ ಶಿಖಂಡಿ
ಚೇಕಿತಾನ

ಯುಧಾಮನ್ಯೂತ್ತಮೌಜ
ಪುರುಕುತ್ಸು ವಿಚಿತ್ರಾದಿಗಳಪ್ಪ
ತನ್ನ ಮಕ್ಕಳ್ವೆರಸು ನೆಲಂ
ಮೂರಿವಿಟ್ಟಂತೆ
ಬಲವಕ್ಕದೊಳ್ (ಭೂಮಿಯ
ಜನವೆಲ್ಲ ಗುಂಪುಕೂಡಿದ
ಹಾಗೆ ಬಲಪಾರ್ಶ್ವದಲ್ಲಿ)
ನಡೆಯೆ ಸುಭದ್ರೆಯ ಕೊಟ್ಟ
ನಣ್ಪಿಂಗ ಅನುಬಲಮಾಗಿ
ಪುಂಡರೀಕಾಕ್ಷನ ತಮ್ಮಂ
ಸಾತ್ಯಕಿ (ನಂಟುತನಕ್ಕೆ

ಅನುಗುಣವಾಗಿ ಶ್ರೀಕೃಷ್ಣನ
ತಮ್ಮನಾದ ಸಾತ್ಯಕಿಯು)
ವೃಷ್ಣಿ ಕಾಂಭೋಜ
ಕುಳತಿಳಕರಪ್ಪ ಯಾದವರ
ಕುಲದೊಡನು
ಅಕ್ಷೋಹಿಣೀಪತಿ ನಾಯಕಂ
ಭೂಪತಿಯ ಎಡವಕ್ಕದೊಳ್
ನಡೆಯೆ (ಒಂದು ಅಕ್ಷೋಹಿಣೀ
ಸೈನ್ಯದ ನಾಯಕನಾಗಿ ರಾಜನ
ಎಡಭಾಗದಲ್ಲಿ ನಡೆದನು.)
ಕೇಕಯ ವಿಷಯಾಶ್ವರರಪ್ಪ

ಕೈಕಯರು ಅಯ್ವರುಂ
ಒಂಮೊಂದಕ್ಷೋಹಿಣೀ
ಬಲದೊಡನೆ ಸಿಡಿಲನು
ಉರುಳಿ ಮಾಡಿದಂತು
ಪಿಂಗೋಳ್ಳೊಳ್ ನಡೆಯೆ
(ಹಿಂಭಾಗದಲ್ಲಿ ನಡೆದರು.)
ಪಾಂಡ್ಯಂ
ಶ್ರೀಜಯಸೋಮಕರೊಡನೆ
ಒಂದು ಅಕ್ಷೋಹಿಣೀ
ಬಲಂಬೆರಸು ಸುತ್ತಿಱಿದು
ಬಳಸಿ ಬರೆ ಧರಣೀಂದ್ರನ

ತಂಗೆಯಪ್ಪ ಕನಕಲತೆಗಂ
ವಿಕ್ರಮಾರ್ಜುನಂಗಂ ಪುಟ್ಟಿದ
ಮಗನಿಳಾವಂತನನಂತ
ನಾಗರಾಜ ಬಲಂಬೆರಸು
ನಾಗಲೋಕಮೆ
ಕಿೞ್ತೆೞ್ದುಬರ್ಪಂತೆ ಬರೆ
ಹಿಡಿಂಬೆಗಂ ಭೀಮಂಗಂ
ಪುಟ್ಟಿದ ಮಗಂ
ಘಟೋತ್ಕಚನಱುವತ್ತೆಂಟು
ಕೋಟಿ ರಾಕ್ಷಸ ಬಲಂಬರೆಸು
ಬರೆ ಸಾಮಂತ

ಚೂಡಾಮಣಿಯ
ಕೃತೋಪಕಾರಮಂ ನೆನದು
ಅಂಗದರ್ಪಣನೆಂಬ
ಗಂಧರ್ವಂ ನಾಲ್ಕು ಕೋಟಿ
ಗಂಧರ್ವಬಲಮುಂ
ಅಱುವತ್ತು ಸಾಸಿರ ಗಿಳಿಯ
ಬಣ್ಣದ ಕುದುರೆಗಳುಂ ಬೆರಸು
ಗಂಧರ್ವಲೋಕಮೆ ಕಿೞ್ತೆೞ್ದು
ಬರ್ಪಂತೆ ಬರೆ (ಕಿತ್ತು ಎದ್ದು
ಬರುವ ಹಾಗೆ) ಮಹಾ
ಪ್ರಚಂಡರುಂ

ಪ್ರತಾಪಿಗಳುಮಪ್ಪ
ಪಂಚಪಾಂಡವರುಮಂಕದ
ಅಭೀಮನ್ಯುವುಂ ಕೆಲ
ಕೆಲದೊಳೋಲಗಿಸುತ್ತುಂ ಬರೆ
ಕೊಂತಿಯ ಮಾವನಪ್ಪ
ಕೊಂತಿಭೋಜನುಂ
ಸೋಮಕಂ
ಬೆರಸೊಂದಕ್ಷೋಹಿಣೀ
ಬಲಂಬೆರಸು ಬರೆ ಮತ್ತಂ
ಪ್ರಭದ್ರೈಬಲಮುಮಂಗ ವಂಗ
ಕಳಿಂಗ ಕೊಂಗ ಕೊಂಕಣ

ಗೊಲ್ಲ ಕಾಂಭೋಜ ಮಗಧ
ಸೌರಾಷ್ಟ್ರ ವರಾಟ ಲಾಟ
ಕರ್ಣಾಟಕ ರಹಾಟ ಮಳಯ
ಮಾಳವ ನೇಪಾಳ ಪಾರಿವ
ಪಾರಿಯಾತ್ರ ಬರ್ಬರ
ಕೋಸಳ ಕಾಶಿ ಕಾಶ್ಮೀರ
ಕೌಶಿಕಾಂಧ್ರ ದ್ರವಿಳ
ಗಜಮುಖಾಶ್ವ
ಮುಖೋಷ್ಟ್ರಮುಖ
ಖರಮುಖ ಮೇಷಮುಖ
ಲಂಬಕರ್ಣ

ಹಸ್ತಿಕರ್ಣಾರ್ಶ್ವಕರ್ಣ ತುರುಷ್ಕ
ಪ್ರವರ ನಾನಾದ್ವೀಪ
ದೇಶಾಶ್ವರರುಂ ಪಗೆಗಂ
ಪಾೞಿಗಂ ಪರಿಭವಕ್ಕಂ
ಪೞಿವೆಗಂ (ಧರ್ಮಕ್ಕೂ
ಸೋಲಿಗೂ ಹಳೆಯ
ಸಂಬಂಧಕ್ಕೂ)ಪಾಗುಡಕ್ಕಂ
ಪಳಬದ್ದಕ್ಕಂ ವೈವಾಹಿಕ
ಸಂಬಂಧಕ್ಕಂ (ಕಪ್ಪಕಾಣಿಕೆಗೂ
ಲಾಭ ಮತ್ತು
ಪ್ರಯೋಜನಾದಿಗಳಿಗೂ

ಮದುವೆಯ ನಂಟುತನಕ್ಕೂ)
ಮೈತ್ರಕ್ಕಂ ಮೇರೆಗಂ
ಅಟ್ಟಟ್ಟಿಗಂ ಸ್ವಾಮಿ ಭೃತ್ಯ
ಸಂಬಂಧಕ್ಕಂ (ಸ್ನೇಹಕ್ಕೂ
ಗಡಿಯಲ್ಲಿದ್ದುದಕ್ಕೂ
ದೌತ್ಯಕ್ಕೂ) ದೋರ್ವಲಕ್ಕಂ
ಮೈಮೆಗಂ ಮೋಕ್ಷಕ್ಕಂ
(ಆಳರಸರ ಸಂಬಂಧಕ್ಕೂ
ತೋಳಬಲಕ್ಕೂ ಮಹಿಮೆಗೂ
ಮೋಕ್ಷಕ್ಕೂ ಹೀಗೆ ನಾನಾ
ಕಾರಣಕ್ಕಾಗಿ)

ಮಹಾಸಮುದ್ರದೊಳ್
ಮಹಾನದಿಗಳ್ ಕೂಡುವಂತೆ
ಏಟಿಕ್ಷೋಹಿಣೀ (ಏಳು
ಅಕ್ಷೋಹಿಣಿ) ಬಲಂ ಕೂಡಿ
ನಡೆಯೆ ತನ್ನ ನಾಲ್ವರ್
ತಮ್ಮಂದಿರೊಡನೆ
ಮಂಗಳವಸದನಂ ಗೊಂಡು
ಮಂಗಳ ಪ್ರಧಾನೋಚಿತ
ವಿಜಯಗಜಮನೇಱ
ವಿದ್ಯೋತಮಾಗಿ
ದಕ್ಷಿಣಾವರ್ತಮಪ್ಪ

ಹೋಮಾಗ್ನಿಯಂ
ಬಲಂಗೊಂಡು ಬಲದ ಕೋಡ
ಮೇಲೆ ಕೆಯ್ಯಂ ಪೇಱಿ
ಮುಖವಿಕ್ಷೇಪಣಂಗೆಯ್ದು
ಘನಾಘನನಿನಾದದಿಂ
ಬೃಂಹಿತಂಗೆಯ್ವ
ವಿಜಯಗಜಮಂ (ಮಂಗಳ
ಆಭರಣಗಳಿಂದ
ಅಲಂಕೃತನಾಗಿ
ಮಂಗಳಪ್ರಧಾನವಾದ)
ನೆಲನಂ ಪೊಕ್ಕಡಂಗಿದ

ಪಗೆವರನು ಉಗುಳ್ದು
ಕೊಲ್ವುದನು
ಉದಾಹರಿಸುವಂತೆ
(ಭೂಮಿಯನ್ನು ಪ್ರವೇಶಿಸಿ
ಅಡಗಿಕೊಂಡಿರುವ
ಶತ್ರುಗಳನ್ನು ಅಗೆದು
ಕೊಲ್ವುದನ್ನು
ಉದಾಹರಿಸುವಂತೆ) ದಕ್ಷಿಣ
ಚರಣದೊಳ್ ನೆಲನಂ ಪರಡಿ
ಗಂಭೀರನಿನಾದದಿಂ
ಹೇಷಿತಂಗೆಯ್ವು

ವಿಜಯಹಯಮುಂ
ವಿಜಯನ ವಿಜಯಮನೆ
ಸೂಚಿಸೆ(ಬಲಗಾಲಿನಿಂದ
ನೆಲವನ್ನು ಕೆದರಿ ಗಂಭೀರ
ಧ್ವನಿಯಿಂದ ಕೆನೆಯುವ
ವಿಜಯಹಯವೂ ಅರ್ಜುನನ
ವಿಜಯವನ್ನೇ
ಸೂಚಿಸಿದುವು)-
ವಚನ:ಅರ್ಥ:ವ|| ಹೀಗೆ
ಮಾಡಿದ ಲೆಕ್ಕದ (ಈ ಗಣನೆಗೆ
ಅನುಗುಣವಾದ) ಒಂದು

ಅಕ್ಷೋಹಿಣೀ ಸೈನ್ಯದಿಂದ
ಕೂಡಿ ತನ್ನ ತಲೆಯನ್ನೇ
ಬಳುವಳಿಯನ್ನಾಗಿ ಮಾಡಿ
ಉತ್ತರನಿಗೆ ಮಗಳನ್ನು ಕೊಟ್ಟ
ಶೂರನಾದ ವಿರಾಟನು, ಶ್ವೇತ,
ಉತ್ತರ, ಶಂಖರೆಂಬ ಮೂರು
ಮಕ್ಕಳನ್ನೂ ಶತಾನೀಕ,
ಶತದ್ಯುಮ್ನ, ಶತಚಂದ್ರ
ಮೊದಲಾದ ಹನ್ನೊಂದು
ತಮ್ಮಂದಿರೊಡಗೂಡಿ
ಭೂಮಿಯು ನಡುಗುವಂತೆ

ಮುಂಭಾಗದಲ್ಲಿ ನಡೆದನು.
ದ್ರೌಪದಿಯನ್ನು ಕೊಟ್ಟಿರುವ
ಬಾಂಧವ್ಯವನ್ನೂ
ದ್ರೋಣಾಚಾರ್ಯನಿಂದು
ಉಂಟಾದ ಅವಮಾನವನ್ನೂ
ನೆನೆಸಿಕೊಂಡು ಒಂದು
ಅಕ್ಷೋಹಿಣೀ
ಸೈನ್ಯಸಮೇತನಾಗಿ ದ್ರುಪದನು
ಧೃಷ್ಟದ್ಯುಮ್ನ, ಶಿಖಂಡಿ,
ಚೇಕಿತಾನ,
ಯುಧಾಮನ್ಯೂತ್ತಮೌಜ,

ಪುರುಕುತ್ಸು, ವಿಚಿತ್ರರೇ
ಮೊದಲಾದ ತನ್ನ
ಮಕ್ಕಳೊಡಗೂಡಿ ಭೂಮಿಯ
ಜನವೆಲ್ಲ ಗುಂಪುಕೂಡಿದ
ಹಾಗೆ ಬಲಪಾರ್ಶ್ವದಲ್ಲಿ
ನಡೆದನು. ಸುಭದ್ರೆಯನ್ನು
ಕೊಟ್ಟಿರುವ ನಂಟುತನಕ್ಕೆ
ಅನುಗುಣವಾಗಿ ಶ್ರೀಕೃಷ್ಣನ
ತಮ್ಮನಾದ ಸಾತ್ಯಕಿಯು ವೃಷ್ಣಿ
ಕಾಂಭೋಜಕುಲತಿಲಕರಾದ
ಯಾದವಕುಲದವರೊಡನೆ

ಒಂದು ಅಕ್ಷೋಹಿಣೀ ಸೈನ್ಯದ
ನಾಯಕನಾಗಿ ರಾಜನ
ಎಡಭಾಗದಲ್ಲಿ ನಡೆದನು.
ಕೇಕಯ ದೇಶಾಶರಾದ
ಕೈಕಯರು ಐದು ಮಂದಿಯೂ
ಒಂದು ಅಕ್ಷೋಹಿಣೀ
ಬಲದೊಡನೆ ಸಿಡಿಲನ್ನು
ಉಂಡೆ ಮಾಡಿದ ಹಾಗೆ
ಹಿಂಭಾಗದಲ್ಲಿ ನಡೆದರು.
ಪಾಂಡ್ಯನು ಶ್ರೀಜಯ
ಸೋಮಕರೊಡನೆ

ಒಂದಕ್ಷೋಹಿಣೀ
ಸೈನ್ಯಸಮೇತನಾಗಿ ಸುತ್ತಲೂ
ವ್ಯಾಪಿಸಿ ಬಂದನು. ರಾಜನ
ತಂಗಿಯಾದ ಕನಕಲತೆಗೂ
ವಿಕ್ರಮಾರ್ಜುನನಿಗೂ ಹುಟ್ಟಿದ
ಮಗನಾದ ಇಳಾವಂತನು
ಸಮಸ್ತ
ನಾಗರಾಜಸೈನ್ಯದೊಡನೆ
ಪಾತಾಳಲೋಕವೇ ಕಿತ್ತು
ಎದ್ದುಬರುವಂತೆ ಬಂದನು.
ಹಿಡಿಂಬೆಗೂ ಭೀಮನಿಗೂ

ಹುಟ್ಟಿದ ಘಟೋತ್ಕಚನು ಅರವತ್ತೆಂಟು ಕೋಟಿ ರಾಕ್ಷಸ ಸೈನ್ಯದೊಡಗೂಡಿ ಬಂದನು. ಅರ್ಜುನನು ಮಾಡಿದ ಉಪಕಾರವನ್ನು ನೆನೆಸಿಕೊಂಡು ಅಂಗದರ್ಪಣನೆಂಬ ಗಂಧರ್ವನು ನಾಲ್ಕು ಕೋಟಿ ಗಂಧರ್ವಸೈನ್ಯವೂ ಅರವತ್ತು ಸಾವಿರ ಗಿಳಿಯ ಬಣ್ಣದ ಕುದುರೆಗಳೂ ಕೂಡಿ

ಗಂಧರ್ವಲೋಕವೇ ಕಿತ್ತು
ಎದ್ದು ಬರುವ ಹಾಗೆ ಬಂದನು.
ಮಹಾಪ್ರಚಂಡರೂ
ಪ್ರತಾಪಿಗಳೂ ಆದ
ಶ್ರುತಸೋಮಕರೇ
ಮೊದಲಾದ ಪಂಚ
ಉಪಪಾಂಡವರೂ
ಶೂರನಾದ ಅಭಿಮನ್ಯುವೂ
ಪಕ್ಕಪಕ್ಕದಲ್ಲಿ ಸೇವೆ
ಮಾಡುತ್ತಿದ್ದರು. ಕುಂತಿಯ
ಮಾವನಾದ ಕುಂತಿಭೋಜನು

ಸೋಮಕನೊಡಗೂಡಿ
ಒಂದಕ್ಷೋಹಿಣೀ ಸೈನ್ಯದ
ಜೊತೆಯಲ್ಲಿ ಬಂದು
ಸೇರಿದನು. ಮತ್ತು ಪ್ರಭದ್ರೈಕ
ಬಲವೂ ಅಂಗ ವಂಗ ಕಳಿಂಗ
ಕೊಂಗ ಕೊಂಕಣ ಗೊಲ್ಲ
ಕಾಂಭೋಜ ಮಗಧ ಸೌರಾಷ್ಟ್ರ
ವರಾಟ ಲಾಟ ಕರ್ಣಾಟ
ಕರಹಾಟ ಮಳಯ ಮಾಳವ
ನೇಪಾಳ ಪಾರಿವ ಪಾರಿಯಾತ್ರ
ಬರ್ಬರ ಕೋಸಳ ಕಾಶಿ

ಕಾಶ್ಮೀರ ಕೌಶಿಕ ಆಂಧ್ರ ದ್ರವಿಡ
ಗಜಮುಖ ಅಶ್ವಮುಖ
ಉಷ್ಟ್ರಮುಖ ಖರಮುಖ
ಮೇಷಮುಖ ಲಂಬಕರ್ಣ
ಹಸ್ತಿಕರ್ಣ ಅಶ್ವಕರ್ಣ
ತುರುಷ್ಕರೇ ಮುಖ್ಯರಾದ
ನಾನಾದ್ವೀಪದ ಒಡೆಯರೂ
ಧರ್ಮಕ್ಕೂ ಸೋಲಿಗೂ
ಹಳೆಯ ಸಂಬಂಧಕ್ಕೂ
ಕಪ್ಪಕಾಣಿಕೆಗೂ ಲಾಭ ಮತ್ತು
ಪ್ರಯೋಜನಾದಿಗಳಿಗೂ

ಮದುವೆಯ ನಂಟುತನಕ್ಕೂ
ಸ್ನೇಹಕ್ಕೂ ಗಡಿಯಲ್ಲಿದ್ದುದಕ್ಕೂ
ದೌತ್ಯಕ್ಕೂ ಆಳರಸರ
ಸಂಬಂಧಕ್ಕೂ ತೋಳಬಲಕ್ಕೂ
ಮಹಿಮೆಗೂ ಮೋಕ್ಷಕ್ಕೂ ಹೀಗೆ
ನಾನಾ ಕಾರಣಕ್ಕಾಗಿ
ಮಹಾಸಮುದ್ರಕ್ಕೆ
ಮಹಾನದಿಗಳು ಬಂದು
ಕೂಡುವಂತೆ ಏಳು
ಅಕ್ಷೋಹಿಣೀ
ಸೈನ್ಯಸಮೇತರಾಗಿ ಬಂದು

ಸೇರಿದರು. ತನ್ನ ನಾಲ್ಕು ಜನ
ತಮ್ಮಂದಿರೊಡನೆ ಮಂಗಳ
ಆಭರಣಗಳಿಂದ
ಅಲಂಕೃತನಾಗಿ
ಮಂಗಳಪ್ರಧಾನವಾದ
ವಿಜಯಗಜವನ್ನೇರಿ
ಪ್ರಕಾಶಿಸುತ್ತ ಬಲಗಡೆಯ
ಸುಳಿಯನ್ನುಳ್ಳ
ಹೋಮಾಗ್ನಿಯನ್ನು ಪ್ರದಕ್ಷಿಣೆ
ಮಾಡಿ ಬಲದ ಕೊಂಬಿನ
ಮೇಲೆ ಸೊಂಡಿಲನ್ನಿಟ್ಟು

ಮುಖವನ್ನು ಅತ್ತಿತ್ತ ಕೊಡವಿ
ಗುಡುಗಿನ ಶಬ್ದದಿಂದ
ಘೀಳಿಡುವ ವಿಜಯಗಜವೂ
ಭೂಮಿಯನ್ನು ಪ್ರವೇಶಿಸಿ
ಅಡಗಿಕೊಂಡಿರುವ
ಶತ್ರುಗಳನ್ನು ಅಗೆದು
ಕೊಲ್ಲುವುದನ್ನು
ಉದಾಹರಿಸುವಂತೆ
ಬಲಗಾಲಿನಿಂದ ನೆಲವನ್ನು
ಕೆದರಿ ಗಂಭೀರ ಧ್ವನಿಯಿಂದ
ಕೆನೆಯುವ ವಿಜಯಹಯವೂ

ಅರ್ಜುನನ ವಿಜಯವನ್ನೇ
ಸೂಚಿಸಿದುವು.

ಮಂ||
ಎಸಗಿತ್ತೆಂದನುಕೂಲಮಂದಪ
ವನಂ ಪೆಣ್ದುಂಬಿಗಳ್
ಮುತ್ತುತುಂ
ಮುಸುಱುತ್ತುಂ ಬರೆ
ಬಂದುದಿಂದ್ರವನದಿಂ
ಪೂದಂದಲಂಭೋಧಿ ಗ|
ರ್ಜಿಸುವಂತಾದುದು
ದೇವದುಂದುಭಿ

ಜಯಪ್ರಾರಂಭಮಂ

ಸಾಱುವಂ

ತೆಸೆದತ್ತಚ್ಚರಿಯಪ್ಪಿನಂ

ಜಯಜಯಧ್ವಾನಂ

ದಿಗಂತಂಗಳೊಳ್|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ಎಸಗಿತ್ತು ಅಂದು ಅನುಕೂಲ ಮಂದಪವನಂ (ಅಂದು ಗಾಳಿಯು ಮೆಲ್ಲಗೆ ಹಿತಕರವಾಗಿ ಬೀಸಿತು.) ಪೆರ್ಬ್ದುಂಬಿಗಳ್ ಮುತ್ತುತುಂ

ಮುಸುಱುತ್ತುಂ ಬರೆ
(ಹೆಣ್ಣುದುಂಬಿಗಳು
ಮುತ್ತುತ್ತಲೂ ಕವಿಯುತ್ತಲೂ
ಬರಲು) ಬಂದುದು
ಇಂದ್ರವನದಿಂ ಪೂತ ಅಂದಂ (
ಇಂದ್ರವನದಿಂದ
ಪುಷ್ಪವೃಷ್ಟಿಯಾಯಿತು.) ದಲ್
ಅಂಭೋಧಿ
ಗರ್ಜಿಸುವಂತಾದುದು
(ನಿಜಕ್ಕೂ ಅದು ಸಮುದ್ರವು
ಘೋಷಿಸುವ ಹಾಗಾಯಿತು.)

ದೇವದುಂದುಭಿ
ಜಯಪ್ರಾರಂಭಮಂ
ಸಾಱುವಂತೆ
(ದೇವದುಂದುಭಿರವವು
ಜಯೋದ್ಯೋಗವನ್ನು
ಸಾರುವಂತೆ) ಎಸೆದತ್ತು
ಅಚ್ಚರಿಯಪ್ಪಿನಂ
ಜಯಜಯಧ್ವಾನಂ
ದಿಗಂತಂಗಳೊಳ್ (ಜಯ
ಜಯ ಧ್ವನಿಯು

ಆಶ್ಚರ್ಯವಾಗುವಂತೆ
ಶೋಭಿಸಿತು)

ಪದ್ಯ-೯೬:ಅರ್ಥ:ಅಂದು ಗಾಳಿಯು ಮೆಲ್ಲಗೆ ಹಿತಕರವಾಗಿ ಬೀಸಿತು. ಹೆಣ್ಣುದುಂಬಿಗಳು ಮುತ್ತುತ್ತಲೂ ಕವಿಯುತ್ತಲೂ ಬರಲು ಇಂದ್ರವನದಿಂದ ಪುಷ್ಪವೃಷ್ಟಿಯಾಯಿತು. ಅದು ಸಮುದ್ರವು ಘೋಷಿಸುವ ಹಾಗಾಯಿತು. ದಿಕ್ಕುಗಳ

ಅಂಚಿನಲ್ಲಿ ಜಯ ಜಯ ಧ್ವನಿಯು ಆಶ್ಚರ್ಯರ್ವಾಗುವಂತೆ ದೇವದುಂದುಭಿರವವು ಜಯೋದ್ಯೋಗವನ್ನು ಸಾರುವಂತೆ ಶೋಬಿಸಿತು.

ವ|| ಆ ಪ್ರಸ್ತಾದೊಳ್-

ವಚನ:ಅರ್ಥ:ವ|| ಆ ಸಂದರ್ಭದಲ್ಲಿ-

ಶಾ|| ವಾತ್ಯಾ ದುರ್ಧರ ಗಂಧ ಸಿಂಧುರ ಕಟ

ಸ್ರೋತಸ್ಸಮುದ್ಯನ್ಮದ
ವ್ರಾತೇಂದಿಂದಿರ ಚಂಡ
ತಾಂಡವ ಕಲ ಸ್ವಾಭಾವಿಕ
ಶ್ರೇಯಸ|
ಕಿಂಚಾಕಸ್ಮಿಕ ಪಾಂಸು ಪಲ್ಲವ
ಜಳಸ್ಯಂದೀ ಸದಾ ಸಿಂಧುರ
ಪ್ರಾಗೇಯಂ ಪ್ರಿಯಗಳ್ಳ
ಭೂಪತಿ
ಚಮೂಪ್ರಸ್ಥಾನಮಾಚಕ್ಷತೇ||
೯೭||

ಪದ್ಯ-೯೭:ಪದವಿಭಾಗ-ಅರ್ಥ:ವಾತ್ಯಾ (ಬೀಸುವ ಗಾಳಿಯಿಂದ) ದುರ್ಧರ ಗಂಧಸಿಂಧುರ (ಧರಿಸಲಸಾಧ್ಯವಾದ ಮದ್ದಾನೆಗಳ ಕಪೋಲಪ್ರದೇಶದ) ಕಟ ಸ್ರೋತಃ (ಮದಧಾರೆಯನ್ನುಳ್ಳ) ಸಮುದ್ಯತ್ ಮದವ್ರಾತ ಇಂದಿಂದಿರ (ಚಿಮ್ಮುತ್ತಿರುವ

ಮದೋದಕದ ಮುತ್ತುತ್ತಿರುವ
ದುಂಬಿಗಳ) ಚಂಡ ತಾಂಡವ
ಕಲ (ದುಂಬಿಗಳ ವೇಗವಾದ
ಕುಣಿತದ ರಮಣೀಯ
ನಾದದಿಂದ) ಸ್ವಾಭಾವಿಕ
ಶ್ರೇಯಸ (ಸಹಜವಾದ
ಶ್ರೇಯಸ್ಸನ್ನುಳ್ಳ) ಕಿಂಚ
(ಮತ್ತು) ಆಕಸ್ಮಿಕ ಪಾಂಸು
(ಅಕಸ್ಮಾತ್ತಾಗಿ ಎದ್ದ
ಧೂಳನ್ನುಳ್ಳ) ಪಲ್ಲವ
ಜಳಸ್ಯಂದೀ ಸದಾ ಸಿಂಧು(ರ)

(ಆನೆಯ ಸೊಂಡಿಲಿನ
ತುದಿಯ ನೀರಿನ
ಪ್ರವಾಹದಿಂದ ಯಾವಾಗಲೂ
ಹರಿಯುತ್ತಿರುವ
ನದಿಯನ್ನುಳ್ಳುದೂ)
ಅಪ್ರಾಗೇಯಂ(ಪ್ರಾಗ್ -
ಹಿಂದಿನ, ಪೂರ್ವ,ಅಪೂರ್ವ
ಏಯಂ? ಅಪೂರ್ವ
ರೀತಿಯಲ್ಲಿ) ಪ್ರಿಯಗಳ್ಳ
ಭೂಪತಿ (ಪ್ರಿಯಗಳ್ಳನೆಂಬ
ಬಿರುದುಳ್ಳ

ಅರಿಕೇಸರಿರಾಜನು/
ಅರ್ಜುನನು) ಚಮೂ
ಪ್ರಸ್ಥಾನಂ
(ಸೇನಾಪ್ರಯಾಣವನ್ನು)
ಆಚಕ್ಷತೇ (ನಿರೀಕ್ಷಿಸುತ್ತಿದ್ದಾನೆ.)
ಪದ್ಯ-೯೭:ಅರ್ಥ:ಬೀಸುವ
ಗಾಳಿಯಿಂದ
ಧರಿಸಲಸಾಧ್ಯವಾದ
ಮದ್ದಾನೆಗಳ
ಕಪೋಲಪ್ರದೇಶದ
ಮದಧಾರೆಯನ್ನುಳ್ಳುದೂ

ಚಿಮ್ಮುತ್ತಿರುವ ಮದೋದಕದ
ಮುತ್ತುತ್ತಿರುವ ದುಂಬಿಗಳ
ವೇಗವಾದ ಕುಣಿತದ
ರಮಣೀಯ ನಾದದಿಂದ
ಸಹಜವಾದ ಶ್ರೇಯಸ್ಸನ್ನುಳ್ಳ
ಮತ್ತು ಅಕಸ್ಮಾತ್ತಾಗಿ ಎದ್ದ
ಧೂಳನ್ನುಳ್ಳ ಆನೆಯ
ಸೊಂಡಿಲಿನ ತುದಿಯ ನೀರಿನ
ಪ್ರವಾಹದಿಂದ ಯಾವಾಗಲೂ
ಹರಿಯುತ್ತಿರುವ
ನದಿಯನ್ನುಳ್ಳುದೂ ಆದ

ಸೇನಾಪ್ರಯಾಣವನ್ನು
ಪ್ರಿಯಗಳ್ಳನೆಂಬ ಬಿರುದುಳ್ಳ
ಅರಿಕೇಸರಿರಾಜನು ಅಪೂರ್ವ
ರೀತಿಯಲ್ಲಿ ನಿರೀಕ್ಷಿಸುತ್ತಿದ್ದಾನೆ.

ವ|| ಎಂಬ ಮಂಗಳಪಾಠಕರ ಮಂಗಳ ವೃತ್ತೋಚ್ಚಾರಣೆಗಳೆಸೆಯೆ ಧರ್ಮಪುತ್ರಂ ಕುರುಕ್ಷೇತ್ರಾಭಿಮುಖನಾದಾಗಳ್-

ವಚನ:ಪದವಿಭಾಗ-

ಅರ್ಥ:ಎಂಬ,

ಮಂಗಳಪಾಠಕರ ಮಂಗಳ

ವೃತ್ತೋಚ್ಚಾರಣೆಗಳು ಎಸೆಯೆ

(ಶೋಬಿಸಲು)ಧರ್ಮಪುತ್ರಂ

ಕುರುಕ್ಷೇತ್ರ ಆಭಿಮುಖನಾದ

ಆಗಳ್-

ವಚನ:ಅರ್ಥ:ಎಂಬ

ಅರ್ಥದಿಂದ ಕೂಡಿದ

ಹೊಗಳುಭಟ್ಟರ

ಮಂಗಳಶ್ಲೋಕ ಪಠಣವು

ಶೋಭಿಸಲು ಧರ್ಮರಾಜನು
ಕುರುಕ್ಷೇತ್ರಕ್ಕೆ
ಅಭಿಮುಖನಾದನು/
ಹೊರಟನು.

**ಚಂ||ಧ್ವಜಮಯಮಂಬರಂ
ಗಜಮಯಂ ಭುವನಂ
ಪ್ರಳಯ ಪ್ರಚಂಡ ಭೂ
ಭುಜಮಯಮಷ್ಟದಿಗ್ವಳಯ
ಮಶ್ವಮಯಂ ಜಗತೀತಳಂ
ರಥ|**

ವ್ರಜಮಯಮುಂ

ಪದಾತಿಮಯಮುಂ

ನೆರೆಯಾದುದು ಕಾಡು

ಕೋಡುಮಾರ್

ತ್ರಿಜಗದೊಳಾಂಪರೀ

ಬಲಮನಿನ್ನೆನಿಸಿತ್ತು

ಚತುರ್ಬಲಾರ್ಣವಂ|| ೯೮ ||

ಪದ್ಯ-೯೮:ಪದವಿಭಾಗ-

ಅರ್ಥ:ಧ್ವಜಮಯಂ

ಅಂಬರಂ (ಆಕಾಶವು

ಬಾವುಟಗಳಿಂದ ತುಂಬಿತು)

ಗಜಮಯಂ ಭುವನಂ (ಲೋಕವೆಲ್ಲ ಆನೆಗಳಿಂದ ತುಂಬಿತು) ಪ್ರಳಯ ಪ್ರಚಂಡ ಭೂಭುಜಮಯಂ ಅಷ್ಟದಿಗ್ವಳಯಂ (ಎಂಟು ದಿಕ್ಕುಗಳ ಸಮೂಹವು ಪ್ರಳಯಕಾಲದ ಭಯಂಕರರಾದ ರಾಜರಿಂದ ತುಂಬಿತು) ಅಶ್ವಮಯಂ ಜಗತೀತಳಂ (ಭೂಮಂಡಲವು ಕುದುರೆಯಿಂದ ತುಂಬಿತು.)

ರಥ ವ್ರಜಮಯಮುಂ
ಪದಾತಿಮಯಮುಂ
ನೆರೆಯಾದುದು ಕಾಡು
ಕೋಡುಂ (ಕಾಡು
ಕೋಡುಗಳು ರಥಗಳ
ಸಮೂಹದಿಂದಲೂ
ಕಾಲಾಳುಗಳ
ಸಮೂಹದಿಂದಲೂ
ಸಂಪೂರ್ಣವಾಗಿ
ತುಂಬಿತು)ಆರ್ತ್ರಿಜಗದೊಳು
ಆಂಪರು ಈ ಬಲಮನು ಇನ್ನು

ಎನಿಸಿತ್ತು (ಮೂರುಲೋಕಗಳಲ್ಲಿ ಯಾರು ಈ ಸೈನ್ಯವನ್ನು ಪ್ರತಿಭಟಿಸುತ್ತಾರೆ ಎನ್ನುವ ಹಾಗೆ ಎನ್ನಿಸಿತ್ತು) ಚತುರ್ಬಲ ಆರ್ಣವಂ (<- ಚತುರಂಗಸೇನಾ ಸಮುದ್ರವು)

ಪದ್ಯ-೯೮:ಅರ್ಥ: ಆಕಾಶವು ಬಾವುಟಗಳಿಂದ ತುಂಬಿತು ; ಲೋಕವೆಲ್ಲ ಆನೆಗಳಿಂದ ತುಂಬಿತು. ಎಂಟು ದಿಕ್ಕುಗಳ

ಸಮೂಹವು ಪ್ರಳಯಕಾಲದ ಭಯಂಕರರಾದ ರಾಜರಿಂದ ತುಂಬಿತು. ಭೂಮಂಡಲವು ಕುದುರೆಯಿಂದ ತುಂಬಿತು. ಕಾಡು ಕೋಡುಗಳು ರಥಗಳ ಸಮೂಹದಿಂದಲೂ ಕಾಲಾಳುಗಳ ಸಮೂಹದಿಂದಲೂ ಸಂಪೂರ್ಣವಾಗಿ ತುಂಬಿತು. ಮೂರುಲೋಕಗಳಲ್ಲಿ ಯಾರು ಈ ಸೈನ್ಯವನ್ನು

ಪ್ರತಿಭಟಿಸುತ್ತಾರೆ ಎನ್ನುವ
ಹಾಗೆ ಚತುರಂಗಸೇನಾ
ಸಮುದ್ರವು ಎನ್ನಿಸಿತು.

ಚಂ||ಎಣಿಕೆಗಳುಂಬಮುಂ
ಪಿರಿದುಮಾದ ಪದಾತಿ ವರೂಥ
ವಾಜಿ ವಾ
ರಣ ಬಲದಿಂದಮಿರ್ಮಡಿಸೆ
ಧಾತ್ರಿಯ
ಬಿಣ್ಪೆನಗೆಂದಿನಂದವ|
ಲ್ತಣಕಮಿದೆಂದು ಕಣ್
ತುಮುಳ್ ಪೆರ್ಬೆಡೆಯಿಂ ಮಣಿ

ಸೂಸೆ ಬೇಸಱಿಂ ತಿ;ಣುಕಿದನಾನಲುಮ್ಮಳಿಸಿ ಶೇಷನಶೇಷಮಹೀವಿಭಾಗ ಮಂ|| ೯೯ ||

ಪದ್ಯ-೯೯:ಪದವಿಭಾಗ-ಅರ್ಥ:ಎಣಿಕೆಗೆ ಅಳುಂಬಮುಂ ಪಿರಿದುಂ ಆದ (ಲೆಕ್ಕಕ್ಕೆ ಮೀರಿದುದೂ ದೊಡ್ಡದೂ ಆದ) ಪದಾತಿ ವರೂಥ ವಾಜಿ ವಾರಣ ಬಲದಿಂದಂ ಇರ್ಮಡಿಸೆ

ಧಾತ್ರಿಯ ಬಿಣ್ಪು
(ಚತುರಂಗಸ್ಸೈನ್ಯದ ಭಾರದಿಂದ
ಭೂಮಿಯ ಭಾರವು
ಎರಡರಷ್ಟಾಗಲು) ಎನಗೆ
ಎಂದಿನಂದವಲ್ತು ಅಣಕಂ
ಇದೆಂದು (ಈ ಹಿಂಸೆ ನನಗೆ
ಎಂದಿನ ರೀತಿಯದಲ್ಲ ಎಂದು)
ಕಣ್ಬುಮ್ ಉಱೆ (ಕಣ್ಣು
ಹೊರಕ್ಕೆ ಬರಲು)
ಪೆರ್ಬೆಡೆಯಿಂ ಮಣಿ ಸೂಸೆ
(ದೊಡ್ಡ ಹೆಡೆಯಿಂದ ರತ್ನಗಳು

ಚೆಲ್ಲುತ್ತಿರಲು) ಬೇಸಱಿಂ ತಿಣುಕಿದನು ಆನಲ್ ಉಮ್ಮಳಿಸಿ (ಬೇಸರದಿಂದ ಹೊರಲು ದುಃಖಪಟ್ಟು ತಿಣುಕಿದನು- ಕಷ್ಟಪಟ್ಟನು) ಶೇಷನು ಅಶೇಷ ಮಹೀವಿಭಾಗಮಂ (ಸಮಸ್ತ ಭೂಭಾಗವನ್ನು ಶೇಷನು -ಹೊರಲು ತಿಣುಕಿದನು.)

ಪದ್ಯ-೯೯:ಅರ್ಥ: ಲೆಕ್ಕಕ್ಕೆ ಮೀರಿದುದೂ ದೊಡ್ಡದೂ ಆದ

ಚತುರಂಗಸೈನ್ಯದ ಭಾರದಿಂದ
ಭೂಮಿಯ ಭಾರವು
ಎರಡರಷ್ಟಾಗಲು ಈ ಹಿಂಸೆ
ನನಗೆ ಎಂದಿನ ರೀತಿಯದಲ್ಲ
ಎಂದು ಆದಿಶೇಷನ ಕಣ್ಣು
ಹೊರಕ್ಕೆ ಬರಲು, ದೊಡ್ಡ
ಹೆಡೆಯಿಂದ ರತ್ನಗಳು
ಚೆಲ್ಲುತ್ತಿರಲು ಸಮಸ್ತ
ಭೂಮಂಡಲದ ಭಾರವನ್ನು
ಹೊರಲು ಬೇಸರದಿಂದ ಮತ್ತು

ದುಃಖದಿಂದ ಕಷ್ಟಪಟ್ಟನು
ತಿಣುಕಿದನು.

ಉ|| ಏಱಿದ ಪೊನ್ನ
ಪಣ್ಣುಗೆಯ ಪೆರ್ವಿಡಿ
ಕಟ್ಟದಿರಾಗೆ ಮುಂದೆ ಬಂ
ದೇಱಿದ ಚೆನ್ನಗನ್ನಡಿಯ
ಚೇಟಿಕೆ ಬೀಸುವ
ಕುಂಚಮೆಯ್ದೆ ಮೆ|
ಯ್ದೋಱುವ ಗಾಡಿ ಕಾಂಚನದ
ದಂಡದ ಸೀಗುರಿ
ನೋೞ್ಪೊಡಾರುಮಂ

ಮಾರೆ ಮನೋಜನೊಡ್ಡೆನಿಸಿದರ್ ನಡೆತಂದ ನರೇಂದ್ರಕಾಂತೆಯರ್|| ೧೦೦ ||

ಪದ್ಯ-೧೦೦:ಪದವಿಭಾಗ-ಅರ್ಥ:ಏಱಿದ ಪೊನ್ನ ಪಣ್ಣುಗೆಯ (ಹತ್ತಿದ ಚನ್ನದ ಅಲಂಕಾರದಿಂದ ಕೂಡಿದ) ಪೆರ್ಬಿಡಿ (ಪೆರ್ ಇಡಿ; ದೊಡ್ಡ ಹೆಣ್ಣಾನೆಯು) ಕಟ್ಟದಿರಾಗೆ

ಮುಂದೆ ಬಂದು ಏಱಿದ (ತೀರ ಹತ್ತಿರ ಬರಲು ಮುಂದೆ ಬಂದು ಹತ್ತಿದ) ಚೆನ್ನಗನ್ನಡಿಯ ಚೇಟಿಕೆ ಬೀಸುವ ಕುಂಚಂ ಎಯ್ದೆ (ಚಂದದ ಕನ್ನಡಿಯನ್ನುಳ್ಳ ದಾಸಿಯು ಬೀಸುವ ನವಿಲುಗರಿಯ ಕುಂಚವು ಚೆನ್ನಾಗಿ) ಮೆಯ್ದೋಱುವ ಗಾಡಿ (ಕಾಣಿಸುವ ಸೊಗಸು,) ಕಾಂಚನದ ದಂಡದ ಸೀಗುರಿ (ಚಿನ್ನದ ಕಾವನ್ನುಳ್ಳ

ಸೀಗುರಿಗಳೂ/ ಕೊಡೆಗಳು)
ನೋಟ್ಪೊಡೆ ಆರುಮಂ
(ಕೂಡಿ ನೋಡಿದರೆ
ಯಾರನ್ನಾದದೂ) ಮಾರೆ
(ಮಾರು ಹೋಗುವಂತೆ)
ಮನೋಜನ ಒಡ್ಡೆನಿಸಿದರ್
ನಡೆತಂದ
ನರೇಂದ್ರಕಾಂತೆಯರ್(ಯಾರ
ನ್ನಾದದೂ
ಮಾರುಹೋಗುವಂತೆ

ಆಕರ್ಷಕವಾಗಿರಲು ಮನ್ಮಥನ ಸೈನ್ಯವೆನ್ನಿಸಿ ಪ್ರಕಾಶಿಸಿದರು.)

ಪದ್ಯ-೧೦೦:ಅರ್ಥ:ತಾವು ಹತ್ತಿದ ಚನ್ನದ ಅಲಂಕಾರದಿಂದ ಕೂಡಿದ ದೊಡ್ಡ ಹೆಣ್ಣಾನೆಯು ತೀರ ಹತ್ತಿರ ಬರಲು ಮುಂದೆ ಬಂದು ಹತ್ತಿದ ರಾಜಪತ್ನಿಯರು ಆ ಸೈನ್ಯದೊಂದಿಗೆ ವೈಭವಯುಕ್ತವಾದ ಆನೆಯನ್ನೇರಿ ಬಂದರು.

ಸೌಂದರ್ಯವತಿಯರಾದ
ದಾಸಿಯರು
ಸುವರ್ಣಾಲಂಕೃತವಾದ
ಆನೆಗಳನ್ನೇರಿ ತಾವು
ಧರಿಸಿರುವ ರತ್ನಗನ್ನಡಿಗಳೂ,
ಚಿನ್ನದ ಕಾವನ್ನುಳ್ಳ
ಸೀಗುರಿಗಳೂ ತಮ್ಮ
ಶರೀರಕಾಂತಿಯಿಂದ ಕೂಡಿ
ನೋಡಿದರೆ ಯಾರನ್ನಾದರೂ
ಮಾರುಹೋಗುವಂತೆ

ಆಕರ್ಷಕವಾಗಿರಲು ಮನ್ಮಥನ ಸೈನ್ಯವೆನ್ನಿಸಿ ಪ್ರಕಾಶಿಸಿದರು.

ಕಂ|| ಅಂತು ತಿರುವಿಂ
ಬರ್ದುಂಕಿದ
ಕಂತುವ
ನನೆಗಣೆಗಳಂತೆವೋಲ್
ನಡೆತಂದರ್|
ಸಂತಸದೆ ಪೊನ್ನ ಕಳಸದ
ದಂತದ ಸಿವಿಗೆಗಳನೇಱಿ
ಭೋಗಿಯರರೆಬರ್|| ೧೦೧ ||

ಪದ್ಯ-೧೦೧:ಪದವಿಭಾಗ-ಅರ್ಥ:ಅಂತು ತಿರುವಿಂ (ಹಾಗೆ ಬಿಲ್ಲಿನ ಹಗ್ಗದಿಂದ) ಬರ್ದುಂಕಿದ ಕಂತುವ (ತಪ್ಪಿಸಿಕೊಂಡ ಮನ್ಮಥನ)ನನೆಗಣೆಗಳಂತೆ ವೋಲ್ (ಪುಷ್ಪಬಾಣದಂತೆ) ನಡೆತಂದರ್ ಸಂತಸದೆ (ಸಂತೋಷದಿಂದ ಬಂದರು.->) ಪೊನ್ನ ಕಳಸದ ದಂತದ ಸಿವಿಗೆಗಳನು (ಚಿನ್ನದ

ಕಲಶವನ್ನುಳ್ಳ ದಂತದ ಪಲ್ಲಕ್ಕಿಗಳನ್ನು) ಏಜಿ ಭೋಗಿಯರ್ ಅರೆಬರ್ (ಕೆಲವರು)(ಕೆಲವರು ವಿಲಾಸಿನಿಯರು ಹತ್ತಿ ಸಂತೋಷದಿಂದ ಬಂದರು.)

ಪದ್ಯ-೧೦೧:ಅರ್ಥ:ಹಾಗೆ ಬಿಲ್ಲಿನ ಹಗ್ಗದಿಂದ ತಪ್ಪಿಸಿಕೊಂಡ ಮನ್ಮಥನ ಪುಷ್ಪಬಾಣದಂತೆ ಕೆಲವರು ವಿಲಾಸಿನಿಯರು ಚಿನ್ನದ

ಕಲಶವನ್ನುಳ್ಳ ದಂತದ
ಪಲ್ಲಕ್ಕಿಗಳನ್ನು ಹತ್ತಿ
ಸಂತೋಷದಿಂದ ಬಂದರು.

ಹರಿಣೀಪ್ಲುತಂ|| ನಡೆಯೆ
ತುರಗಂ
ಪೊನ್ನಾಯೋಗಂಗಳಿಂದಮರ್
ದಟ್ಟಿಯಿಂ
ಪಡೆಯೆ ನೆಱಲಂ
ಚಂಚತ್ಪಿಂಛಾತಪತ್ರಮೆ ಕೂಡೆ
ತ|

ಮ್ಕೊಡನೆ ಬರೆ ಬಂದೆತ್ತಂ

ಪತ್ತೆಂಟು ದೇಸೆ ವಿಳಾಸದೊಳ್

ತೊಡರೆ ಚರಿತಂಬಂದರ್

ಕಣ್ಗೊಪ್ಪಿರಲ್ ವರ

ಭೋಗಿಯರ್|| ೧೦೨ ||

ಪದ್ಯ-೧೦೨:ಪದವಿಭಾಗ-

ಅರ್ಥ:ನಡೆಯೆ ತುರಗಂ

ಪೊನ್ನಾಯೋಗಂಗಳಿಂದಂ

ಅಮರ್ದು ಅೞ್ತಿಯಿಂ

ಪಡೆಯೆ (ಕುದುರೆಗಳು ಚಿನ್ನದ

ಅಲಂಕಾರಗಳಿಂದ ಕೂಡಿ

ಸಂತೋಷದಿಂದ ನಡೆದು
ಬರಲು,) ನೆಬಿಲಂ ಚಂಚತ್
ಪಿಂಛಾತ ಪತ್ರಮೆ
(ಚಲಿಸುತ್ತಿರುವ
ನವಿಲುಗರಿಯ ಕೊಡೆಯು
ನೆರಳನ್ನುಂಟು ಮಾಡುತ್ತ)
ಕೂಡೆ ತಮ್ಮೊಡನೆ ಬರೆ
(ಜೊತೆಯಲ್ಲಿ ತಮ್ಮೊಡನೆ
ಬರಲು,) ಬಂದು ಎತ್ತಂ
ಪತ್ತೆಂಟು ದೇಸೆ (ಎಲ್ಲೆಲ್ಲಿಯೂ
ಹತ್ತೆಂಟು ಚೆಲವುಗಳು)

ವಿಳಾಸದೊಳ್ ತೊಡರೆ
(ಶೋಭಾಯಮಾನವಾಗಿರಲು
) ಚರಿತಂ ಬಂದರ್ (ಬೇಗನೆ
ಬಂದರು.->) ಕಣ್ಗೊಪ್ಪಿರಲ್
ವರ ಭೋಗಿಯರ್
(ಶ್ರೇಷ್ಠರಾದ ಭೋಗಸ್ತ್ರೀಯರು
ಕಣ್ಣಿಗೆ ಆಕರ್ಷಕವಾಗಿರುವ
ರೀತಿಯಲ್ಲಿ)
ಪದ್ಯ-೧೦೨:ಅರ್ಥ:ಕುದುರೆಗ
ಳು ಚಿನ್ನದ ಅಲಂಕಾರಗಳಿಂದ
ಕೂಡಿ ಸಂತೋಷದಿಂದ

ನಡೆದು ಬರಲು,
ಚಲಿಸುತ್ತಿರುವ ನವಿಲುಗರಿಯ
ಕೊಡೆಯು ನೆರಳನ್ನುಂಟು
ಮಾಡುತ್ತ ಜೊತೆಯಲ್ಲಿ
ತಮ್ಮೊಡನೆ ಬರಲು,
ಎಲ್ಲೆಲ್ಲಿಯೂ ಹತ್ತೆಂಟು
ಚೆಲವುಗಳು
ಶೋಭಾಯಮಾನವಾಗಿರಲು
ಶ್ರೇಷ್ಠರಾದ ಭೋಗಸ್ತ್ರೀಯರು
ಕಣ್ಣಿಗೆ ಆಕರ್ಷಕವಾಗಿರುವ
ರೀತಿಯಲ್ಲಿ ಬೇಗನೆ ಬಂದರು.

ಚಂ|| ಸಡಹುಡನಪ್ಪ ಕೞ್ತೆ
ಕೊಡೆ ಸಂತಸದಿಂ ಪೆಱಗೇೞ
ಬರ್ಪ ಕ
ನ್ನಡಿವಿಡಿದಾಕೆ ಚಿನ್ನದ
ಸವಂಗಮಪೂರ್ವದ
ಮೊಚ್ಚೆಯಂ ಪವ|
ಣ್ಬಡೆದ ಸುವರ್ಣ ಪಾರಿವದ
ಕುಪ್ಪಸಮೊಪ್ಪೆ ಬೆಡಂಗನಾಳ್ದ
ಕ
ಣ್ಗೆಡೞದೆ ಪೆಂಡವಾಸದ
ವಿಳಾಸದ ಸೂಳೆಯರೊಪ್ಪಿ

ತೋಱದರ್|| ೧೦೩ ||

ಪದ್ಯ-೦೧೦೩:ಪದವಿಭಾಗ-ಅರ್ಥ: ಸಡಹುಡನಪ್ಪ ಕಟ್ಟಿ ಕೊಡೆ (ಚಡಪಡಿಸುತ್ತಿರುವ ಹೇಸರಗತ್ತೆಯ ಮೇಲೆ) ಸಂತಸದಿಂ ಪೆಱಗೆ ಏಱ ಬರ್ಪ (ಸಂತೋಷದಿಂದ ಹಿಂದೆ ಕುಳಿತು ಬರುವ) ಕನ್ನಡಿವಿಡಿದಾಕೆ ಚೆನ್ನದ ಸವಂಗಂ ಅಪೂರ್ವದ ಮೊಚ್ಚೆಯಂ (ಕನ್ನಡಿಯನ್ನು

ಹಿಡಿದಿರುವ ದಾಸಿಯೂ
ಚಿನ್ನದ ಸರಿಗೆಯ ಕವಚವೂ,
ಅಪೂರ್ವವಾದ
ಪಾದರಕ್ಷೆಯೂ) ಪವಣ್ಬಡೆದ
ಸುವರ್ಣ ಪಾರಿವದ
ಕುಪ್ಪಸಮೊಪ್ಪೆ
(ಪ್ರಯಾಣಕ್ಕನುಗುಣವಾದ
ಹೊಂಬಣ್ಣದ ಪಾರಿವಾಳದ
ಬಣ್ಣದ ಕುಪ್ಪಸವೂ
ಸುಂದರವಾಗಿರಲು)
ಬೆಡಂಗನಾಳ್ದು ಕಣ್ಗೆಡಱಿದೆ

(ಕಣ್ಣಿಗೆ ಎಡರಾಗದೆ;
ಸುಂದರವಾಗಿರಲು)
ಪೆಂಡವಾಸದ ವಿಳಾಸದ
ಸೂಳೆಯರೊಪ್ಪಿ ತೋಱಿದರ್
(ರಾಣಿವಾಸದ ವಿಳಾಸವನ್ನುಳ್ಳ
ವೇಶ್ಯಾಸ್ತ್ರೀಯರು
ಚೆಲುವಿನಿಂದ ಕೂಡಿ
ಕಾಣಿಸಿಕೊಂಡರು.)
ಪದ್ಯ-೧೦೩:ಅರ್ಥ:ಚಡಪಡಿ
ಸುತ್ತಿರುವ ಹೇಸರಗತ್ತೆಯ
ಮೇಲೆ ಸಂತೋಷದಿಂದ ಹಿಂದೆ

ಕುಳಿತು ಬರುವ ಕನ್ನಡಿಯನ್ನು
ಹಿಡಿದಿರುವ ದಾಸಿಯೂ,
ಚಿನ್ನದ ಸರಿಗೆಯ ಕವಚವೂ,
ಅಪೂರ್ವವಾದ
ಪಾದರಕ್ಷೆಯೂ,
ಪ್ರಯಾಣಕ್ಕನುಗುಣವಾದ
ಹೊಂಬಣ್ಣದ ಪಾರಿವಾಳದ
ಬಣ್ಣದ ಕುಪ್ಪಸವೂ
ಸುಂದರವಾಗಿರಲು
ಬೆಡಗಿನಿಂದ ಕೂಡಿ ಕಣ್ಣಿಗೆ
ಸಹ್ಯವಾದ ರೀತಿಯಲ್ಲಿ

(ಹಿತವಾಗಿ) ರಾಣಿವಾಸದ
ವಿಳಾಸವನ್ನುಳ್ಳ
ವೇಶ್ಯಾಸ್ತ್ರೀಯರು
ಚೆಲುವಿನಿಂದ ಕೂಡಿ
ಕಾಣಿಸಿಕೊಂಡರು.

ಮ|| ನಡೆಯಲ್ಪಂದಿಱೆಯಲ್ಕೆ
ತಕ್ಕ ತುರಂಗಂ ಭೋರೆಂದು
ಬರ್ಪೊಂದೊಡಂ
ಬಡು ಬಂದೆತ್ತಿಸಿದೊಂದು
ಸತ್ತಿಗೆ ಕರಂ ಮೆಯ್ವೆತ್ತು
ಮುಯ್ಯಾಗಮಾ|

ಗಡುಮಾರ್ಗಂ ಕುಡುತಿರ್ಪ

ಕಪ್ಪುರದ ಬಂಬಲ್ದಂಬುಲಂ

ರಾಗಮಂ

ಪಡೆಗೆಲ್ಲಂ ಪಡೆವನ್ನೆಗಂ

ನಡೆದರಂದೆತ್ತಂ ಕೆಲರ್

ನಾಯಕರ್|| ೧೦೪ ||

ಪದ್ಯ-೧೦೪:ಪದವಿಭಾಗ-ಅರ್ಥ:ನಡೆಯಲ್ ಬಂದು ಇಱಿಯಲ್ಕೆ (ಯುದ್ಧಕ್ಕೆ) ತಕ್ಕ ತುರಂಗಂ ಭೋರೆಂದು ಬರ್ಪೊಂದು ಒಡಂಬಡು

(ಯುದ್ಧಕ್ಕೆಂದು ಬಂದ
ಯೋಗ್ಯವಾದ ಕುದುರೆಯು
ಭೋರೆಂದು ರೀತಿಯಲ್ಲಿ
ನಡೆಯಲು ಬರುವ ಒಂದು
ಕ್ರಮವು,) ಬಂದು ಎತ್ತಿಸಿದ
ಒಂದು ಸತ್ತಿಗೆ ಕರಂ ಮೆಯ್ವೆತ್ತು
ಮುಯ್ವಾಗಂ (ತಮಗೆ ಒಪ್ಪುವ
ರೀತಿಯಲ್ಲಿ ಹಿಡಿದು
ಬರುತ್ತಿರುವ ಛತ್ರಿ,
ಪೂರ್ಣವಾಗಿ ಪುಷ್ಟವಾಗಿ
ಬೆಳೆದ ತಮ್ಮ ಭುಜಭಾಗವು,)

ಆಗಡುಂ ಆರ್ಗಂ ಕುಡುತಿರ್ಪ
ಕಪ್ಪುರದ ಬಂಬಲ್ದಂಬುಲಂ
ರಾಗಮಂ (ಎಲ್ಲ
ಕಾಲದಲ್ಲಿಯೂ ಎಲ್ಲರಿಗೂ
ಕೊಡುತ್ತಿರುವ ಕರ್ಪೂರ ರಾಶಿ
ತಾಂಬೂಲದ ಸಂತೋಷನ್ನು)
ಪಡೆಗೆಲ್ಲಂ ಪಡೆವ ಅನ್ನೆಗಂ
(ಸೈನ್ಯಕ್ಕೆಲ್ಲ ಸಂತೋಷವನ್ನು
ಉಂಟುಮಾಡುವಂತೆ ಕೊಟ್ಟು)
ನಡೆದರಂದು ಎತ್ತಂ ಕೆಲರ್
ನಾಯಕರ್ (ಕೆಲವು

ನಾಯಕರು ಎತ್ತಲೋ-
ಮನಬಂದ ಕಡೆ ನಡೆದರು.)

ಪದ್ಯ-೧೦೪:ಅರ್ಥ:

ಯುದ್ಧಕ್ಕೆಂದು ಬಂದ
ಯೋಗ್ಯವಾದ ಕುದುರೆಯು
ಭೋರೆಂದು ರೀತಿಯಲ್ಲಿ
ನಡೆಯಲು ಬರುವ ಒಂದು
ಕ್ರಮವು, ತಮಗೆ ಒಪ್ಪುವ
ರೀತಿಯಲ್ಲಿ ಹಿಡಿದು
ಬರುತ್ತಿರುವ ಛತ್ರಿ,
ಪೂರ್ಣವಾಗಿ ಪುಷ್ಟವಾಗಿ

ಬೆಳೆದ ತಮ್ಮ ಭುಜಭಾಗವು,
ಎಲ್ಲ ಕಾಲದಲ್ಲಿಯೂ
ಎಲ್ಲರಿಗೂ ಕೊಡುತ್ತಿರುವ
ಕರ್ಪೂರ ತಾಂಬೂಲ ರಾಶಿ
ಇವು ಸೈನ್ಯಕ್ಕೆಲ್ಲ
ಸಂತೋಷವನ್ನು
ಉಂಟುಮಾಡುವಂತೆ ಕೊಟ್ಟು,
ಕೆಲವು ನಾಯಕರು
ಮನಬಂದ ಕಡೆ ನಡೆದರು.

ವ|| ಮತ್ತಂ ಸಸಂಭ್ರಮ ಪ್ರಚಳಿತ ಸಮದ ಗಜ ಘಟಾ

ಘಂಟಾರವಂಗಳಿಂದಂ
ತುರಂಗಮಹೇಷಿತಂಗಳಿಂದಂ
ಮಹಾಸಾಮಂತರ ಪದಿರ
ಪರೆಗಳಿಂದಮಗುರ್ವಾಗೆ
ನಡೆವ ಬೀಡಿಂಗೆ
ಬೀಡುವಿಡಲ್
ನೆಲನುಮೊಲೆಗಲ್ಗಳ್ಗೆ
ಬೆಟ್ಟುಗಳುಂ ಗುಡಿಯ
ಗೂಂಟಕ್ಕೆ ಬಲ್ಲಡವಿಂಗಳುಂ
ದಂಡಿಗೆಗೆ
ವೇಣುವನಂಗಳುಮಾನೆಗಂಬ

ಕ್ಕೆ ಪೆರ್ಮರುಂಗಳುಮಾ ಪಡೆಗೆ
ನೆರೆರೆಯವೆನಿಸಿ
ಪಾಂಡವರೇೞಕ್ಷೋಹಿಣೀ
ಬಲಂಬೆರಸೇೞುಂ
ಸಮುದ್ರಂಗಳುಂ ಮೇರೆದಪ್ಪಿ
ಬರ್ಪಂತಿರೆ ಬಂದು
ಕಡಿತಮಿಕ್ಕಿದಂತಿರ್ದ
ಸಮಚತುರಶ್ರಂ
ನಾಲ್ವತ್ತೆಣ್ಗಾವುದು ಪರಿ
ಪ್ರಮಾಣಮೆನಿಪ
ಕುರುಕ್ಷೇತ್ರಮನೆಯ್ದೆವಂದದೞ

ಪಶ್ಚಿಮ ದಿಶಾಭಾಗದೊಳ್
ಮುನ್ನೆ ಪರಶುರಾಮನೀ
ಲೋಕದೊಳುಳ್ಳರಸುಮಕ್ಕಳೆ
ಲ್ಲರುಮನಿರ್ಪತ್ತೊಂದುಸೂಳ್ವೆ
ರಂ ಪೇಱ್ ಪೆಸರಿಲ್ಲದಂತೆ
ಕೊಂದು ತಂದೆಯ
ಪಗೆಗೆಂದಲ್ಲಿಯೆ ತಂದು
ನಿಜನಿಶಿತ ಪರಶುಧಾರೆಗಳಿಂ
ನೆತ್ತರ್ ಸೂಸಿ ಪಾಯೆ
ಕಡಿದವರ ನೆತ್ತರ ಧಾರೆಯೊಳ್
ತೀವಿ ತನ್ನ ತಾಯಂ

ನೀರೀಱಿಪಲುಂ ತಾನುಂ ಮಿಂದು ತನ್ನ ತಂದೆಗೆ ನೀರ್ಗುಡಲುಮೆಂದು ಮಾಡಿದ ಶಮಂತ ಪಂಚಕಂಗಳೆಂಬಯ್ದು ಪೆರ್ಮಡುಗಳ ಕೆಲದೊಳೆಡೆಯಱಿದು ಬೀಡಂ ಬಿಡಿಸಿ-

ವಚನ:ಪದವಿಭಾಗ-

ಅರ್ಥ:ಮತ್ತಂ ಸಸಂಭ್ರಮ ಪ್ರಚಳಿತ ಸಮದ ಗಜ ಘಟಾ (ಸಂಭ್ರಮದಿಂದ ಕೂಡಿದ

ಮದ್ದಾನೆಗಳ)
ಘಂಟಾರವಂಗಳಿಂದಂ
(ಮದ್ದಾನೆಗಳ ಗಂಟೆಗಳ ಶಬ್ದ)
ತುರಂಗಮ ಹೇಷಿತಂಗಳಿಂದಂ
(ಕುದುರೆಗಳ ಕೆನೆಯುವಿಕೆ)
ಮಹಾಸಾಮಂತರ ಪದಿರ
ಪರೆಗಳಿಂದಂ ಅಗುರ್ವಾಗೆ (
ಮಹಾಸಾಮಂತರ
ಸಂಕೇತವಾದ್ಯ -ಇವು
ಭಯಂಕರವಾಗಿರಲು) ನಡೆವ
ಬೀಡಿಂಗೆ (ನಡೆಯುತ್ತಿರುವ

ಸೈನ್ಯಕ್ಕೆ) ಬೀಡುವಿಡಲ್
ನೆಲನುಂ ಒಲೆಗಲ್ಗಳ್ಗೆ (ಬೀಡು
ಬಿಡಲು ಒರಳುಕಲ್ಲುಗಳಿಗೆ)
ಬೆಟ್ಟುಗಳುಂ ಗುಡಿಯ
ಗೂಂಟಕ್ಕೆ (ಗುಡಾರ ಕಟ್ಟಲು
ಗೂಟಕ್ಕೆ) ಬಲ್ಲ ಅಡವಿಂಗಳುಂ
(ಹಿರಿಯ ಕಾಡುಗಳು)
ದಂಡಿಗೆಗೆ ವೇಣುವನಂಗಳುಂ
ಆನೆಗಂಬಕ್ಕೆ
ಪೆರ್ಮರುಂಗಳುಂ ಆ ಪಡೆಗೆ
ನೆರೆ ಅರೆಯವೆನಿಸಿ

(ಸಾಲದಾಯಿತು,) ಪಾಂಡವರ
ಏೞಕ್ಷೋಹಿಣೀ ಬಲಂ ಬೆರಸು
ಏೞುಂ ಸಮುದ್ರಂಗಳುಂ
ಮೇರೆದಪ್ಪಿ ಬರ್ಪಂತಿರೆ
(ಪಾಂಡವರ ಏಳಕ್ಷೋಹಿಣೀ
ಸೈನ್ಯದಿಂದ ಕೂಡಿ ಏಳು
ಸಮುದ್ರಗಳೂ ಎಲ್ಲೆ ಮೀರಿ
ಬರುತ್ತಿರುವ ಹಾಗೆ ಇರಲು)
ಬಂದು ಕಡಿತಂ ಇಕ್ಕಿದಂತೆ
ಇರ್ದ ಸಮಚತುರಶ್ರಂ
ನಾಲ್ವತ್ತೆಣ್ಗಾವುದು ಪಱಿ

ಪ್ರಮಾಣಮೆನಿಪ
ಕುರುಕ್ಷೇತ್ರಮನು ಎಯ್ದೆವಂದು
(ಬರೆದಂತಿದ್ದ
ಚಚ್ಚೌಕವಾಗಿರುವ
ನಲವತ್ತೆಂಟು ಗಾವುದ
ಸುತ್ತಳತೆಯನ್ನುಳ್ಳ
ಕುರುಕ್ಷೇತ್ರಕ್ಕೆ ಬಂದು ಸೇರಿ)
ಅದಱ ಪಶ್ಚಿಮ
ದಿಶಾಭಾಗದೊಳ್ (ಅದರ
ಪಶ್ಚಿಮ ದಿಗ್ಭಾಗದಲ್ಲಿ
ಶಮಂತಪಂಚಕಗಳು) ಮುನ್ನೆ

ಪರಶುರಾಮನು ಈ
ಲೋಕದೊಳುಳ್ಳ
ಅರಸುಮಕ್ಕಳೆಲ್ಲರುಮನು
ಇರ್ಪತ್ತೊಂದು ಸೂೞ್ವರಂ
ಪೇೞ್ ಪೆಸರಿಲ್ಲದಂತೆ ಕೊಂದು
(ಇವು ಪೂರ್ವಕಾಲದಲ್ಲಿ ಈ
ಲೋಕದಲ್ಲಿರುವ
ಅರಸುಮಕ್ಕಳನ್ನೆಲ್ಲ ಹೇಳಲು
ಹೆಸರಿಲ್ಲದಂತೆ ಇಪ್ಪತ್ತೊಂದು
ಸಲ ತಿರುಗಿ ಕೊಂದು)
ತಂದೆಯ ಪಗೆಗೆಂದು ಅಲ್ಲಿಯೆ

ತಂದು ನಿಜನಿಶಿತ
ಪರಶುಧಾರೆಗಳಿಂ ನೆತ್ತರ್
ಸೂಸಿ (ತನ್ನ ತಂದೆಯ
ಹಗೆತನಕ್ಕಾಗಿ ಅಲ್ಲಿಗೆ ತಂದು
ತನ್ನ ಹರಿತವಾದ ಕೊಡಲಿಯ
ಅಲಗಿನಿಂದ ರಕ್ತವು ಚೆಲ್ಲಿ)
ಪಾಯೆ ಕಡಿದವರ ನೆತ್ತರ
ಧಾರೆಯೊಳ್ ತೀವಿ ತನ್ನ
ತಾಯಂ ನೀರಿೞಿಪಲುಂ
ತಾನುಂ ಮಿಂದು
(ಹರಿಯುವಂತೆ ಕತ್ತರಿಸಿ ಅವರ

ರಕ್ತಧಾರೆಯಿಂದ ತುಂಬಿ ತನ್ನ ತಾಯಿಗೆ ಸ್ನಾನ ಮಾಡಿಸುವುದಕ್ಕೂ ತಾನು ಸ್ನಾನ ಮಾಡಿ) ತನ್ನ ತಂದೆಗೆ ನೀರ್ ಕುಡಲುಮೆಂದು ಮಾಡಿದ ಶಮಂತ ಪಂಚಕಂಗಳೆಂಬ(ತನ್ನ ತಂದೆಗೆ ತರ್ಪಣ ಕೊಡುವುದಕ್ಕೂ ಮಾಡಿದ ಅಯ್ದು ಶಮಂತಪಂಚಕಗಳೆಂಬ ದೊಡ್ಡ ಮಡುಗಳಾದುವು.)

ಅಯ್ದು ಪೆರ್ಮಡುಗಳ
ಕೆಲದೊಳು ಎಡೆಯಱಿದು
(ಎಡೆ ಅರಿದು- ತಿಳಿದು)
ಬೀಡಂ ಬಿಡಿಸಿ (ಅವುಗಳ
ಸಮೀಪದಲ್ಲಿ ಸ್ಥಳವನ್ನು
ತಿಳಿದು ಬೀಡನ್ನು ಬಿಟ್ಟಿತು)-
ವಚನ:ಅರ್ಥ:ಮತ್ತು
ಸಂಭ್ರಮದಿಂದ ಕೂಡಿದ
ಮದ್ದಾನೆಗಳ ಗಂಟೆಗಳ ಶಬ್ದ,
ಕುದುರೆಗಳ ಕೆನೆಯುವಿಕೆ,
ಮಹಾಸಾಮಂತರ

ಸಂಕೇತವಾದ್ಯ -ಇವು ಭಯಂಕರವಾಗಿರಲು ನಡೆಯುತ್ತಿರುವ ಸೈನ್ಯಕ್ಕೆ ತಂಗುವುದಕ್ಕೆ ನೆಲವೇ ಸಾಲದಾಯಿತು. ಒಲೆಯ ಕಲ್ಲುಗಳಿಗೆ ಪರ್ವತಗಳು ಸಾಲದಾಯಿತು, ಬಾವುಟಗಳ ಗೂಟಕ್ಕೆ (ಗೂಡಾರದ ಗೂಟಕ್ಕೆ?) ಹಿರಿಯ ಕಾಡುಗಳು ಸಾಲದಾದುವು. ಪಲಕ್ಕಿಗಳಿಗೆ ಬಿದರ

ಕಾಡುಗಳು ಸಾಲದಾದುವು.
ಆನೆಯನ್ನು ಕಟ್ಟುವ
ಕಂಬಗಳಿಗೆ ದೊಡ್ಡ ಮರಗಳು
ಸಾಲದಾದುವು ಎನ್ನಿಸಿ
ಪಾಂಡವರ ಏಳಕ್ಷೋಹಿಣೀ
ಸೈನ್ಯದಿಂದ ಕೂಡಿ ಏಳು
ಸಮುದ್ರಗಳೂ ಎಲ್ಲೆ ಮೀರಿ
ಬರುತ್ತಿರುವ ಹಾಗೆ ಇರಲು,
ಒಂದು ಕಡಿತದಲ್ಲಿ
(ಬಟ್ಟೆಯನ್ನು ಮಡಿಸಿ
ಮಾಡಿರುವ ಪುಸ್ತಕ)

ಬರೆದಂತಿದ್ದ ಚಚ್ಚೌಕವಾಗಿರುವ
ನಲವತ್ತೆಂಟು ಗಾವುದ
ಸುತ್ತಳತೆಯನ್ನುಳ್ಳ
ಕುರುಕ್ಷೇತ್ರಕ್ಕೆ ಬಂದು
ಸೇರಿದರು. ಅದರ ಪಶ್ಚಿಮ
ದಿಗ್ಭಾಗದಲ್ಲಿ
ಶಮಂತಪಂಚಕಗಳು. ಇವು
ಪೂರ್ವಕಾಲದಲ್ಲಿ ಈ
ಲೋಕದಲ್ಲಿರುವ
ಅರಸುಮಕ್ಕಳನ್ನೆಲ್ಲ ಹೇಳಲು
ಹೆಸರಿಲ್ಲದಂತೆ ಇಪ್ಪತ್ತೊಂದು

ಸಲ ತಿರುಗಿ ಕೊಂದು ತನ್ನ
ತಂದೆಯ ಹಗೆತನಕ್ಕಾಗಿ ಅಲ್ಲಿಗೆ
ತಂದು ತನ್ನ ಹರಿತವಾದ
ಕೊಡಲಿಯ ಅಲಗಿನಿಂದ
ರಕ್ತವು ಚೆಲ್ಲಿ ಹರಿಯುವಂತೆ
ಕತ್ತರಿಸಿ ಅವರ
ರಕ್ತಧಾರೆಯಿಂದ ತುಂಬಿ ತನ್ನ
ತಾಯಿಗೆ ಸ್ನಾನ
ಮಾಡಿಸುವುದಕ್ಕೂ ತಾನು
ಸ್ನಾನ ಮಾಡಿ ತನ್ನ ತಂದೆಗೆ
ತರ್ಪಣ ಕೊಡುವುದಕ್ಕೂ

ಮಾಡಿದ ಅಯ್ತು ದೊಡ್ಡ ಮಡುಗಳಾದುವು. ಅವುಗಳ ಸಮೀಪದಲ್ಲಿ ಸ್ಥಳವನ್ನು ನಿಷ್ಕರ್ಷಿಸಿ ಬೀಡನ್ನು ಬಿಟ್ಟಿತು.

ಶಾ||

ವೀರಕ್ಷೇತ್ರಮಗುರ್ವಿಗಂಕದ ಕುರುಕ್ಷೇತ್ರಂ ಬಲಸ್ಥರ್ ಮಹಾ ಕ್ರೂರಾರಾತಿಗಳೆನ್ನ ದೋರ್ವಲಗುರ್ವಿಂದಂ ತ್ರಿಲೋಕಕ್ಕೆ ಸಂ|

ಹಾರಂ ಮಾಡಿದ ಭೈರವ ಪ್ರಭುವಿನೊಂದಾಕಾರದಿಂ ವೈರಿ ಸಂ ಹಾರಂ ಮಾಡದೆ ಮಾಣೆನೆಂದು ಹರಿಗಂ ಕೆಯ್ಕೊಂಡನುತ್ಸಾಹಮಂ|| ೧೦೫

ಪದ್ಯ-೧೦೫:ಪದವಿಭಾಗ-ಅರ್ಥ:ವೀರಕ್ಷೇತ್ರಂ ಅಗುರ್ವಿಗೆ (ಭಯಂಕರವಾದ) ಅಂಕದ ಕುರುಕ್ಷೇತ್ರಂ

(ಭಯಂಕರವಾದ
ಯುದ್ಧಭೂಮಿ ಕುರುಕ್ಷೇತ್ರವು
ವೀರಕ್ಷೇತ್ರವೂ ಆಗಿದೆ.)
ಬಲಸ್ಥರ್ ಮಹಾಕ್ರೂರ
ಆರಾತಿಗಳು
(ಮಹಾಕ್ರೂರರಾದ ನನ್ನ
ಶತ್ರುಗಳು ಶಕ್ತಿವಂತರು,) ಎನ್ನ
ದೋರ್ವಲ ಅಗುರ್ವಿಂದಂ ()
ತ್ರಿಲೋಕಕ್ಕೆ ಸಂಹಾರಂ
ಮಾಡಿದ ಭೈರವ ಪ್ರಭುವಿನ
ಒಂದಾಕಾರದಿಂ (ಹಿಂದೆ

ಭಯಂಕರವಾಗಿ ಮೂರು
ಲೋಕವನ್ನು
ಸಂಹಾರಮಾಡಿದ
ಭೈರವಸ್ವಾಮಿಯ
ಆಕಾರವನ್ನು ತಾಳಿ) ವೈರಿ
ಸಂಹಾರಂ ಮಾಡದೆ
ಮಾಣೆನೆಲು ಎಂದು
(ವೈರಿಸಂಹಾರ ಮಾಡದೆ
ಬಿಡುವುದಿಲ್ಲ ಎಂದು) ಹರಿಗಂ
ಕೆಯ್ಕೊಂಡನು ಉತ್ಸಾಹಮಂ

(ಅರ್ಜುನನು ಉತ್ಸಾಹವನ್ನು ತಾಳಿದನು)

ಪದ್ಯ-೧೦೫:ಅರ್ಥ:

ಭಯಂಕರವಾದ ಯುದ್ಧಭೂಮಿ ಕುರುಕ್ಷೇತ್ರವು ವೀರಕ್ಷೇತ್ರವೂ ಆಗಿದೆ. ಮಹಾಕ್ರೂರರಾದ ನನ್ನ ಶತ್ರುಗಳು ಶಕ್ತಿವಂತರು, ಬಲಿಷ್ಠರೆಂಬುದೂ ನಿಜ. ಆದರೂ (ಅವರನ್ನು) ನಾನು ನನ್ನ ತೋಳಿನ ಶಕ್ತಿಯಿಂದ,

ಹಿಂದೆ ಭಯಂಕರವಾಗಿ,
ಮೂರು ಲೋಕವನ್ನು
ಸಂಹಾರಮಾಡಿದ
ಭೈರವಸ್ವಾಮಿಯ
ಆಕಾರವನ್ನು ತಾಳಿ
ವೈರಿಸಂಹಾರ ಮಾಡದೆ
ಬಿಡುವುದಿಲ್ಲ ಎಂದು
ಅರ್ಜುನನು ಉತ್ಸಾಹವನ್ನು
ತಾಳಿದನು.

♦

|| ಇದು ವಿವಿಧ
ವಿಬುಧಜನವಿನುತ
ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ನವಮಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ

ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ
ರಚಿತವಾದುದೂ ಆದ
ವಿಕ್ರಮಾರ್ಜುನವಿಜಯದಲ್ಲಿ
ಒಂಬತ್ತನೆಯ ಆಶ್ವಾಸ||

♦♣♣♣♣♣♣♣♣♣♣♣♣
♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	**9**	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?

title=ಪಂಪಭಾರತ_ನವಮಾಶ್ವಾಸಂ&o
ldid=145821" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೧ ಜೂನ್ ೨೦೧೮,
೧೩:೫೭ ರಂದು ಕೊನೆಯಾಗಿ
ಸಂಪಾದಿಸಲಾಯಿತು. •
ವಿಶೇಷವಾಗಿ ಟಿಪ್ಪಣಿ ಮಾಡದಿದ್ದ
ಹೊರತು ಪಠ್ಯ "CC BY-SA 4.0 "
ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ದಶಮಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ದಶಮಾಶ್ವಾಸಂ

- (X.V.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಕುರುಕ್ಷೇತ್ರದಲ್ಲಿ ಮೊದಲ ದಿನದ ಯುದ್ಧ - ಪಾಂಡವರ ಕಡೆ ಸೇನಾಧಿಪತಿ ಶ್ವೇತನ ಮರಣ

ಕಂ|| ಶ್ರೀ ನಾರೀವಲ್ಲಭನಭಿ

ಮಾನಧನಂ ಹರಿಗನಾ

ಕುರುಕ್ಷೇತ್ರದೊಳಂ|

ತೇನುಂ ಮಾಣದೆ ಬಿಟ್ಟುದ

ನಾ ನೆಗೆಟ್ಟಿ ಸುಯೋಧನಂಗೆ

ಚರರಱಿಪುವುದುಂ|| ೧ ||

ಪದ್ಯ-೦೧:ಪದವಿಭಾಗ-

ಅರ್ಥ:ಶ್ರೀ ನಾರೀವಲ್ಲಭಂ

ಅಭಿಮಾನಧನಂ ಹರಿಗನು

(ಸಂಪತ್ತೆಂಬ ಹೆಣ್ಣಿಗೆ

ಪತಿಯೂ, ಅಭಿಮಾನವೇ

ಧನವಾಗಿ ಉಳ್ಳವನೂ ಆದ ಅರ್ಜುನನು) ಆ ಕುರುಕ್ಷೇತ್ರದೊಳಂ ಅಂತು ಏನುಂ ಮಾಣದೆ ಬಿಟ್ಟುದನು(ಕುರುಕ್ಷೇತ್ರದಲ್ಲಿ ಯಾವ ತಡಮಾಡದೆ ಯುದ್ಧಕ್ಕಾಗಿ ಬೀಡುಬಿಟ್ಟುದನ್ನು) ಆ ನೆಗಳ್ದಿ ಸುಯೋಧನಂಗೆ ಚರರ್ ಅಱಿಪುವುದುಂ(ದೂತರು ತಿಳಿಸಿದರು)

ಪದ್ಯ-೦೧:ಅರ್ಥ:ಸಂಪತ್ತೆಂಬ ಹೆಣ್ಣಿಗೆ ಪತಿಯೂ, ಅಭಿಮಾನವೇ ಧನವಾಗಿ ಉಳ್ಳವನೂ ಆದ ಅರ್ಜುನನು ಕುರುಕ್ಷೇತ್ರದಲ್ಲಿ ಯಾವ ತಡಮಾಡದೆ ತಾವು ಯುದ್ಧಕ್ಕಾಗಿ ಬೀಡುಬಿಟ್ಟುದನ್ನು ಆ ಪ್ರಸಿದ್ಧನಾದ ದುರ್ಯೋಧನನಿಗೆ ದೂತರು ತಿಳಿಸಿದರು.

ಗುರು ಗುರುಸುತ ಶಕುನಿ ಕೃಪಾಂ
ಗರಾಜರಂ ಬರಿಸಿ ನುಡಿದನವನಿಪನೇಂ ಕೇ|
ಳ್ದಿರೆ ಪಾಂಡುಸುತರ ಮುನಿಸಿನ ತೞಿಸಲವಿನ ಚಲದ ಬಲದ ಕಲಿತನದಳವಂ|| ೨ ||

ಪದ್ಯ-೦೨:ಪದವಿಭಾಗ-ಅರ್ಥ:ಗುರು ಗುರುಸುತ ಶಕುನಿ ಕೃಪ ಅಂಗರಾಜರಂ (ಕರ್ಣ) ಬರಿಸಿ

(ಬರಮಾಡಿಕೊಂಡು) ನುಡಿದನು ಅವನಿಪಂ (ದುರ್ಯೋಧನನು ಹೇಳಿದನು), ಏಂ ಕೇಳ್ದಿರೆ ಪಾಂಡುಸುತರ ಮುನಿಸಿನ ತಱಿಸಲವಿನ (ತರಿಸಲವಿನ-ನಿರ್ಧಾರದ) ಚಲದ ಬಲದ ಕಲಿತನದ ಅಳವಂ(ಪ್ರಮಾಣವನ್ನು, ಸಾಮರ್ಥ್ಯನನ್ನು)

ಪದ್ಯ-೦೨:ಅರ್ಥ:೨.
ದ್ರೋಣ, ಅಶ್ವತ್ಥಾಮ, ಶಕುನಿ, ಕೃಪ, ಕರ್ಣರನ್ನು ಬರಮಾಡಿಕೊಂಡು ದುರ್ಯೋಧನನು ಹೇಳಿದನು- ಪಾಂಡವರ ಕೋಪದ, ನಿಶ್ಚಯದ, ಛಲದ, ಬಲದ, ಪರಾಕ್ರಮದ ಸಾಮರ್ಥ್ಯವನ್ನು ಕೇಳಿದಿರಾ?

ಬಂದು ಕುರುಕ್ಷೇತ್ರದೊಳಳ

ವೊಂದಿರೆ ನಮ್ಮೊಳ್ ಕಡಂಗಿ

ಮಿಗೆ ತಳ್ತಿಱಿಯ|

ಲ್ಕೆಂದಾನುಂ ಬಂದಿರ್ದರಿ

ದೇಂ

ದಾಯಿಗತನಮನೆಮಗವರ್

ತೋಱಿದಪರ್|| ೩ ||

ಪದ್ಯ-0೩:ಪದವಿಭಾಗ-

ಅರ್ಥ:ಬಂದು

ಕುರುಕ್ಷೇತ್ರದೊಳು

ಅಳವೊಂದಿರೆ (ಕುರುಕ್ಷೇತ್ರಕ್ಕೆ

ಬಂದು ಸಾಮರ್ಥ್ಯ

ಹೊಂದಿಸಿಕೊಂಡಿರಲು)
ನಮ್ಮೊಳ್ ಕಡಂಗಿ ಮಿಗೆ
ತಳ್ತಿಱಿಯಲ್ಕೆಂದಾನುಂ
ಬಂದಿರ್ದರ್ (ತಳ್ತು ಇರಿಯಲ್ಕೆ
ಎಂದಾನುಂ- ನಮ್ಮೊಡನೆ
ಬಹಳ ಉತ್ಸಾಹದಿಂದ
ಯುದ್ಧಮಾಡುವ
ಉದ್ದೇಶದಿಂದ ಬಂದಿದ್ದಾರೆ.)
ಇದೇಂ ದಾಯಿಗತನಮನೆ
ಎಮಗವರ್ ತೋಱಿದಪರ್
(ಅವರು ನಮ್ಮಲ್ಲಿ

ದಾಯಾದಿತನವನ್ನೇ
ತೋರಿಸುತ್ತಿದ್ದಾರೆ!),
ಪದ್ಯ-೦೩:ಅರ್ಥ:
ಕುರುಕ್ಷೇತ್ರಕ್ಕೆ ಬಂದು
ಸಾಮರ್ಥ್ಯ
ಹೊಂದಿಸಿಕೊಂಡಿರಲು,
ನಮ್ಮೊಡನೆ ಬಹಳ
ಉತ್ಸಾಹದಿಂದ
ಯುದ್ಧಮಾಡುವ
ಉದ್ದೇಶದಿಂದ ಬಂದಿದ್ದಾರೆ.
ಅವರು ನಮ್ಮಲ್ಲಿ

ದಾಯಾದಿತನವನ್ನೇ ತೋರಿಸುತ್ತಿದ್ದಾರೆ!

ಮ|| ಪಡೆವಳ್ಳಂ ಗಡಮಾ ಬಲಕ್ಕೆ ದಲೆ ಧೃಷ್ಟದ್ಯುಮ್ನನೆಂಬೊಳ್ಳೆಯಾ ಪಡೆಯೊಳ್ ಗಂಡನುಮಾ ಮೊಲಂ ದ್ರುಪದನುಂ ಪೇರೊಟ್ಟೆಯಾ ಮತ್ಸ್ಯನುಂ| ಗಡಮಂತಾ ಬಲಕಾಳ್ದನೇನಱಿಯಿರೇ ಧರ್ಮಜ್ಞನಾ ಧರ್ಮಜಂ

ಗಡಮೇಂ ನಾಯಕರೊಳ್ಳಿದರ್ ನೆರೆದರೋ ಕಾದಲ್ಕೆ ಮತ್ಸ್ಯೈನ್ಯದೊಳ್|| ೪ ||

ಪದ್ಯ-೦೪:ಪದವಿಭಾಗ-ಅರ್ಥ:ಪಡೆವಳ್ಳಂ (ಸೇನಾನಾಯಕ) ಗಡಂ ಆ ಬಲಕ್ಕೆ ದಲೆ (ನಿಜಕ್ಕೂ) ಧೃಷ್ಟದ್ಯುಮ್ನನೆಂಬ ಒಳ್ಳೆಯು (ಆ ಪಾಂಡವರ ಸೈನ್ಯಕ್ಕೆ ನಿಜಕ್ಕೂ ಸೇನಾನಾಯಕನಾಗಿರುವವನು

ಧೃಷ್ಟದ್ಯುಮ್ನನೆಂಬ
ನೀರುಹಾವು) ಆ ಪಡೆಯೊಳ್
ಗಂಡನುಮ್ ಆ ಮೊಲಂ
ದ್ರುಪದನುಂ, (ಆ ಸೈನ್ಯದಲ್ಲಿ
ಶೂರನಾಗಿರುವವರು
ದ್ರುಪದನೆಂಬ ಮೊಲ,) ಪೇರ್
ಒಟ್ಟೆಯು ಆ ಮತ್ಸ್ಯನುಂ
ಗಡಂ (ಮತ್ಸ್ಯನೆಂಬ ಒಂಟೆ,
ಓಹೋ!) ಅಂತು ಆ ಬಲಕೆ
ಆಳ್ದನು ಏನ್ ಅಱಿಯಿರೇ
ಧರ್ಮಜ್ಞನು ಆ ಧರ್ಮಜಂ

ಗಡಂ (ಆ ಸೈನ್ಯಕ್ಕೆ
ಯಜಮಾನ ಧರ್ಮದ
ಗೊಡ್ಡಾದ ಧರ್ಮರಾಯ,
ಅವರ ಯೋಗ್ಯತೆ ಏನೆಂಬುದು
ತಿಳಿಯದೇ?) ಏಂ ನಾಯಕರು
ಒಳ್ಳಿದರ್ ನೆರೆದರೋ ಕಾದಲ್ಕೆ
ಮತ್ಸೈನ್ಯದೊಳ್ - ಮತ್
ಸೈನ್ಯದೊಳ್ (ಒಳ್ಳೆಯ
ನಾಯಕರು ನನ್ನ
ಸೈನ್ಯದೊಡನೆ

ಯುದ್ಧಮಾಡುವುದಕ್ಕೆ ಸೇರಿದ್ದಾರೆ!)

ಪದ್ಯ-೦೪:ಅರ್ಥ:ಆ ಪಾಂಡವರ ಸೈನ್ಯಕ್ಕೆ ನಿಜಕ್ಕೂ ಸೇನಾನಾಯಕನಾಗಿರುವವನು ಧೃಷ್ಟದ್ಯುಮ್ನನೆಂಬ ನೀರುಹಾವು, ಆ ಸೈನ್ಯದಲ್ಲಿ ಶೂರನಾಗಿರುವವರು ದ್ರುಪದನೆಂಬ ಮೊಲ, ಮತ್ಸ್ಯನೆಂಬ ಒಂಟೆ, ಆ ಸೈನ್ಯಕ್ಕೆ ಯಜಮಾನ ಧರ್ಮದ

ಗೊಡ್ಡಾದ ಧರ್ಮರಾಯ,
ಅವರ ಯೋಗ್ಯತೆ ಏನೆಂಬುದು
ತಿಳಿಯದೇ? ಒಳ್ಳೆಯ
ನಾಯಕರು ನನ್ನ
ಸೈನ್ಯದೊಡನೆ
ಯುದ್ಧಮಾಡುವುದಕ್ಕೆ
ಸೇರಿದ್ದಾರೆ!

ವ|| ಎಂಬುದುಂ ಕುಂಭಸಂಭವನಿಂತೆಂದಂ-

ವಚನ:ಪದವಿಭಾಗ-ಅರ್ಥ:

ಎಂಬುದುಂ ಕುಂಭಸಂಭವನು

ಇಂತೆಂದಂ-

ವಚನ:ಅರ್ಥ:ಎಂಬುದಾಗಿ ಹೇಳಲು ದ್ರೋಣಾಚಾರ್ಯನು ಹೀಗೆಂದನು.

ಮ|| ಕಳವೇಱ್ದ್ ಕುರುಭೂಮಿಯಂ ಕಳಕವರ್ ವಂದಿರ್ದರೆಂದಂತೆ ದೋರ್ವಳ ಚಾತುರ್ವಳ ತತ್ಸುಹೃದ್ಬಳಮನಿನ್ನೇಗೇಳ್ದಪ್ಪೆ ಪಾಂಡವರ್|

ಬಳಸಂಪನ್ನರುದಗ್ರದೈವಬಲ ಸಂಪನ್ನರ್ ಮರುಳ್ಮಾತನಿನ್ನುೞಿ ಗಾಂಗೇಯರ ಪೇೞ್ದೊಂದು ತೆಱದಿಂ ನೀಂ ಕಾದು ದುರ್ಯೋಧನಾ|| ೫ ||

ಪದ್ಯ-೦೫:ಪದವಿಭಾಗ-ಅರ್ಥ:ಕಳವೇೞ್ದೆ ಕುರುಭೂಮಿಯಂ (ಕಳಂ ಏಳ್ದೆ- ಕುರುಕ್ಷೇತ್ರವನ್ನು ಯುದ್ಧ ಭೂಮಿಯಾಗಿ ಹೇಳಿದ್ದೀಯ) ಕಳಕವರ್ ವಂದಿರ್ದರು

ಎಂದಂತೆ ದೋರ್ವಳ (ತೋಳು ಬಲ) ಚಾತುರ್ವಳ ತತ್ ಸುಹೃದ್ಬಳಮನು (ಸುಹೃತ್ ಬಲ- ಸ್ನೇಹಿತರ ಸೈನ್ಯ) ಇನ್ನು ಏಗೆ ಕೇಳ್ದಪ್ಪೆ (ಅವರ ಬಾಹುಬಲವನ್ನೂ ಚತುರಂಗಸೈನ್ಯದ ಬಲವನ್ನೂ ಅವರ ಮಿತ್ರವರ್ಗದ ಶಕ್ತಿಯನ್ನೂ ಇನ್ನು ಹೇಗೆಂದು ಕೇಳುತ್ತೀಯಾ?) ಪಾಂಡವರ್ ಬಳಸಂಪನ್ನರು ಉದಗ್ರ

ದೈವಬಲಸಂಪನ್ನರ್
(ಪಾಂಡವರು ಬಲಸಂಪನ್ನರು,
ಉತ್ತಮವಾದ ದೈವಬಲದಿಂದ
ಕೂಡಿರುವವರು.) ಮರುಳ್
ಮಾತನು ಇನ್ನುೞಿ (ಮರುಳು
ಮಾತನ್ನು ಬಿಟ್ಟುಬಿಡು)
ಗಾಂಗೇಯರ ಪೇೞ್ದ
ಅದೊಂದು ತೆಱದಿಂ ನೀಂ
ಕಾದು ದುರ್ಯೋಧನಾ
(ದುರ್ಯೋಧನಾ, ಭೀಷ್ಮರು

ಹೇಳಿದ ರೀತಿಯಲ್ಲಿಯೇ ಯುದ್ಧಮಾಡು.)

ಪದ್ಯ-0೫:ಅರ್ಥ:ನೀನು ಕುರುಕ್ಷೇತ್ರವನ್ನು ಯುದ್ಧ ಭೂಮಿಯಾಗಿ ಹೇಳಿದ್ದೀಯ. ನೀನು ಹೇಳಿದ ಹಾಗೆ (ಅದರಂತೆ) ಅವರು ಯುದ್ಧರಂಗಕ್ಕೆ ಬಂದಿದ್ದಾರೆ. ಅವರ ಬಾಹುಬಲವನ್ನೂ ಚತುರಂಗಸೈನ್ಯದ ಬಲವನ್ನೂ ಅವರ ಮಿತ್ರವರ್ಗದ

ಶಕ್ತಿಯನ್ನೂ, ಇನ್ನು ಹೇಗೆಂದು ಕೇಳುತ್ತೀಯಾ? ಪಾಂಡವರು ಬಲಸಂಪನ್ನರು, ಉತ್ತಮವಾದ ದೈವಬಲದಿಂದ ಕೂಡಿರುವವರು. ಮರುಳು ಮಾತನ್ನು ಬಿಟ್ಟುಬಿಡು. ದುರ್ಯೋಧನಾ, ಭೀಷ್ಮರು ಹೇಳಿದ ರೀತಿಯಲ್ಲಿ ಯುದ್ಧಮಾಡು.

ದುರ್ಯೋಧನನ ಜಾಣ ರಾಜತಂತ್ರ

ವ|| ಎಂಬುದುಮಾ ಮಾತಂ ಮನದೇಗೊಂಡಂತೆಗೆಯ್ವೆನೆಂ ದನಿಬರುಮಂ ವಿಸರ್ಜಿಸಿ ನಿಶಾಸಮಯದೊಳ್ ಪತ್ತೆಂಟು ಕೆಯ್ದೀವಿಗೆಗಳ ಬೆಳಗಿನೊಳಂ ಕತಿಪಯ ಪರಿಜನ ಪರಿವೃತನಾಗಿ ರಾಜರಾಜಂ ಸಿಂಧುಜನರಮನೆಗೆವಂದು ವಾಹನದಿಂದಮಿೞಿದು

ಕುರುಪಿತಾಮಹಂಗೆಱಗಿ
ಪೊಡೆವಡುವುದುಂ ಪರಸಿ
ಮಂಚದೊಳೇಱಲ್
ಕರೆದೊಡೊಲ್ಲೆಂ
ಮಹಾಪ್ರಸಾದಮಿಂತಿರ್ಪೆನೆಂ
ದು ಮಣಿಮಯ
ಹೇಮಾಸನದೊಳ್
ಕುಳ್ಳಿರ್ದನಂ ನೋಡಿ ಕಜ್ಜಂ
ಪುಟ್ಟಿದೊಡೆಮಗೆ
ಬೞಿಯಟ್ಟದೀ
ಪೊೞ್ತಿದಾವುದು

ಮನವಾಱೆಗೆಟ್ಟಿಂದೆಯೆಂದೊಡೆ ಸುಯೋಧನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಆ ಮಾತಂ ಮನದೇಗೊಂಡು ಅಂತೆಗೆಯ್ವೆನೆಂದು ಅನಿಬರುಮಂ ವಿಸರ್ಜಿಸಿ (ಎನ್ನಲು ಆ ಮಾತನ್ನು ಅಂಗೀಕರಿಸಿ ಹಾಗೆಯೇ ಮಾಡುತ್ತೇನೆಂದು ಒಪ್ಪಿ, ಅವರೆಲ್ಲರನ್ನೂ ಕಳಿಸಿ,)

ನಿಶಾಸಮಯದೊಳ್
ಪತ್ತೆಂಟು ಕೆಯ್ದೀವಿಗೆಗಳ
ಬೆಳಗಿನೊಳಂ ಕತಿಪಯ
ಪರಿಜನ ಪರಿವೃತನಾಗಿ (
ರಾತ್ರಿಯ ಸಮಯದಲ್ಲಿ
ಹತ್ತೆಂಟು ಕೈದೀವಿಗೆಗಳ
ಬೆಳಕಿನಲ್ಲಿ ಕೆಲವೇ ಜನ
ಸೇವಕರಿಂದ ಕೂಡಿದವನಾಗಿ)
ರಾಜರಾಜಂ ಸಿಂಧುಜನ
ಅರಮನೆಗೆ ವಂದು
ವಾಹನದಿಂದಮ್ ಇೞಿದು

(ಚಕ್ರವರ್ತಿಯಾದ
ದುರ್ಯೋಧನನು ಭೀಷ್ಮನ
ಅರಮನೆಗೆ ಬಂದು
ವಾಹನದಿಂದಿಳಿದು)
ಕುರುಪಿತಾಮಹಂಗೆ ಎಱಗಿ
ಪೊಡೆವಡುವುದುಂ
(ಕುರುಪಿತಾಮಹನಾದ
ಭೀಷ್ಮನಿಗೆ ಬಗ್ಗಿ ನಮಸ್ಕಾರ
ಮಾಡಿದನು.) ಪರಸಿ
ಮಂಚದೊಳೇಱಲ್ ಕರೆದೊಡೆ
ಒಲ್ಲೆಂ ಮಹಾಪ್ರಸಾದಂ

ಇಂತಿರ್ಪೆನೆಂದು (ಅವರು ಹರಸಿ ಅವನನ್ನು ಮಂಚದ ಮೇಲೆ ಹತ್ತಿ ಕುಳಿತುಕೊಳ್ಳಹೇಳಲು ‘ಒಲ್ಲೆ ಹಾಗೆ ಮಾಡಲಾರೆ, ಇದೇ ನನಗೆ ಪರಮಾನುಗ್ರಹ, ಹೀಗಿರುತ್ತೇನೆ,) ಮಣಿಮಯ ಹೇಮಾಸನದೊಳ್ ಕುಳ್ಳಿರ್ದನಂ ನೋಡಿ (ಎಂದು ರತ್ನಖಚಿತವಾದ ಚಿನ್ನದ ಪೀಠದ ಮೇಲೆಯೇ

ಕುಳಿತುಕೊಂಡವನನ್ನು
ಭೀಷ್ಮನು ನೋಡಿ) ಕಜ್ಜಂ
ಪುಟ್ಟಿದೊಡೆ ಎಮಗೆ
ಬೞಿಯಟ್ಟದೆ
(‘ಕಾರ್ಯವುಂಟಾದರೆ ನಮಗೆ
ದೂತರ ಮೂಲಕ
ಹೇಳಿಕಳುಹಿಸದೆ) ಈ
ಪೊೞ್ತಿದಾವುದು
ಮನವಾೞ್ತೆಗೆ ಎೞ್ತಿಂದೆ
ಯೆಂದೊಡೆ (ಈ
ಹೊತ್ತಿನಲ್ಲಿಯೂ

ಮನೆವಾರ್ತೆಗಾಗಿ ಏತಕ್ಕಾಗಿ ಬಂದೆ’ ಎಂದರು) ಸುಯೋಧನನಿಂತೆಂದಂ(ದುರ್ಯೋಧನನು ಹೀಗೆಂದನು-)-

ವಚನ:ಅರ್ಥ:ದ್ರೋಣರು ದುರ್ಯೋಧನನಿಗೆ ಭೀಷ್ಮರು ಹೇಳಿದಂತೆ ಯುದ್ಧಮಾಡು ಎನ್ನಲು, ಆ ಮಾತನ್ನು ಅಂಗೀಕರಿಸಿ ಹಾಗೆಯೇ ಮಾಡುತ್ತೇನೆಂದು ಒಪ್ಪಿ,

ಅವರೆಲ್ಲರನ್ನೂ ಕಳಿಸಿ,
ರಾತ್ರಿಯ ಸಮಯದಲ್ಲಿ
ಹತ್ತೆಂಟು ಕೈದೀವಿಗೆಗಳ
ಬೆಳಕಿನಲ್ಲಿ ಕೆಲವೇ ಜನ
ಸೇವಕರಿಂದ ಕೂಡಿದವನಾಗಿ
ಚಕ್ರವರ್ತಿಯಾದ
ದುರ್ಯೋಧನನು ಭೀಷ್ಮನ
ಅರಮನೆಗೆ ಬಂದು,
ವಾಹನದಿಂದ ಇಳಿದು,
ಕುರುಪಿತಾಮಹನಾದ
ಭೀಷ್ಮನಿಗೆ ಬಗ್ಗಿ ನಮಸ್ಕಾರ

ಮಾಡಿದನು. ಅವರು ಹರಸಿ ಅವನನ್ನು ಮಂಚದ ಮೇಲೆ ಹತ್ತಿ ಕುಳಿತುಕೊಳ್ಳಹೇಳಲು, ‘ಒಲ್ಲೆ ಹಾಗೆ ಮಾಡಲಾರೆ, ಇದೇ ನನಗೆ ಪರಮಾನುಗ್ರಹ, ಹೀಗಿರುತ್ತೇನೆ, ಎಂದು ರತ್ನಖಚಿತವಾದ ಚಿನ್ನದ ಪೀಠದ ಮೇಲೆಯೇ ಕುಳಿತುಕೊಂಡವನನ್ನು ಭೀಷ್ಮನು ನೋಡಿ ‘ಕಾರ್ಯವುಂಟಾದರೆ ನಮಗೆ

ದೂತರ ಮೂಲಕ
ಹೇಳಿಕಳುಹಿಸದೆ ಈ
ಹೊತ್ತಿನಲ್ಲಿಯೂ
ಮನೆವಾರ್ತೆಗಾಗಿ ಏತಕ್ಕಾಗಿ
ಬಂದೆ’ ಎಂದರು.
ದುರ್ಯೋಧನನು
ಹೀಗೆಂದನು-

ಕಂ|| ಹರಿ ಬಲದಿಂ
ಪಾಂಡವರನು
ವರಮಂ ಪೊತ್ತಿಸಿದರೆನ್ನೊಳಾಂ
ಕರಮಱಿದಾ|

ಹರಿಯಂ ಕೋಡಗಗಟ್ಟಾ ಗಿರೆ ಕಟ್ಟಿದೊಡಂದು ನೀಮೆ ಬಿಡಿಸಿದಿರಲ್ತೇ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಹರಿ ಬಲದಿಂ ಪಾಂಡವರ್ ಅನುವರಮಂ (ಯುದ್ಧ) ಪೊತ್ತಿಸಿದರು ಎನ್ನೊಳು (ಪಾಂಡವರು ಕೃಷ್ಣನ ಬಲದಿಂದ ನಮ್ಮಲ್ಲಿ ಯುದ್ಧವನ್ನು ಹತ್ತಿಸಿದ್ದಾರೆ.) ಆಂ ಕರಮ್ ಅಱಿದು

(ಇದನ್ನು ನಾನು ತಿಳಿದೇ) ಆ ಹರಿಯಂ ಕೋಡಗಗಟ್ಟಾಗಿರೆ ಕಟ್ಟಿದೊಡೆ (ಅಂದು ಕೃಷ್ಣನನ್ನು ಕೋಡಗಗಟ್ಟಿನಿಂದ- ಕಪಿಯನ್ನು ಕಟ್ಟುವರೀತಿ ಕಟ್ಟಿದರೆ) ಅಂದು ನೀಮೆ ಬಿಡಿಸಿದಿರಲ್ತೇ

ಪದ್ಯ-೬:ಅರ್ಥ:ಆ ಪಾಂಡವರು ಕೃಷ್ಣನ ಬಲದಿಂದ ನಮ್ಮಲ್ಲಿ ಯುದ್ಧವನ್ನು ಹತ್ತಿಸಿದ್ದಾರೆ. ಇದನ್ನು ನಾನು

ತಿಳಿದೇ ಅಂದು ಕೃಷ್ಣನನ್ನು
ಕಪಿಯನ್ನು ಕಟ್ಟುವರೀತಿ
ಕಟ್ಟಿದರೆ ಆ ದಿನ ನೀವೆ
ಬಿಡಿಸಿದಿರಲ್ಲವೇ?

ಕರಿಗಂ ಪರಮಾಣುಗಮಂ
ತರಮಾವುದೊ
ನಿಮಗಮಸುರವೈರಿಗಮೇನಂ|
ತರಮಂತೆ ನಿಮ್ಮೊಳಗ್ಗದ
ಪರಶುಧರಂ ಪೊಣರ್ದು
ತಾನದಂದೇನಾದಂ|| ೭ ||

ಪದ್ಯ-೭:ಪದವಿಭಾಗ-ಅರ್ಥ:ಕರಿಗಂ ಪರಮಾಣುಗಂ ಅಂತರಮಾವುದೊ ನಿಮಗಂ ಅಸುರವೈರಿಗಂ ಏನಂತರಮ್ (ನಿಮಗೂ ಕೃಷ್ಣನಿಗೂ ಎಷ್ಟೊಂದು ಅಂತರ?) ಅಂತೆ ನಿಮ್ಮೊಳು ಅಗ್ಗದ ಪರಶುಧರಂ ಪೊಣರ್ದು ತಾನು ಅದು ಅಂದು ಏನಾದಂ (ಆ ಪ್ರಸಿದ್ಧನಾದ ಪರಶುರಾಮನು

ನಿಮ್ಮೊಡನೆ ಜಗಳವಾಡಿ ಆ ದಿನ ತಾನೇ ಏನಾದ?)

ಪದ್ಯ-೭:ಅರ್ಥ: ಆನೆಗೂ ಸೂಕ್ಷ್ಮವಾದ ಅಣುವಿಗೂ ಎಷ್ಟೊಂದು ವ್ಯತ್ಯಾಸ! ನಿಮಗೂ ಕೃಷ್ಣನಿಗೂ ಎಷ್ಟೊಂದು ಅಂತರ? ಆ ಪ್ರಸಿದ್ಧನಾದ ಪರಶುರಾಮನು ನಿಮ್ಮೊಡನೆ ಜಗಳವಾಡಿ ಆ ದಿನ ತಾನೇ ಏನಾದ? (ನೀವು

ಆನೆ ಕೃಷ್ಣ ಅಣು,ಎಂದು
ಭಾವ)

ಪಿಡಿದರವರಸುರವೈರಿಯ
ನೊಡಂಬಡಿಂ
ತೊೞ್ತುವೆಸದಿನಾಂ
ನಿಮ್ಮಡಿಯಂ|
ಪಿಡಿದೆನದೇಂ ತಾನೆೞ್ಚುಂ
ಪಿಡಿದೊಡವರ್ವಂದು
ಪಿಡಿದರೆನ್ನರೆ ಗೆಲ್ಲಂ|| ೮||

ಪದ್ಯ-೮:ಪದವಿಭಾಗ-
ಅರ್ಥ:ಪಿಡಿದರು ಅವರು

ಅಸುರವೈರಿಯನು
ಒಡಂಬಡಿಂ (ಅವರು
ಶ್ರೀಕೃಷ್ಣನನ್ನು ಒಪ್ಪಿಸಿಕೊಂಡು
ಆಶ್ರಯಿಸಿದ್ದಾರೆ)
ತೊೞ್ತುವೆಸದಿಂ ಆಂ (ನಾನು)
ನಿಮ್ಮಡಿಯಂ ಪಿಡಿದೆನು
(ನಾನು ನಿಮ್ಮ ಪಾದವನ್ನು
ಸೇವಕನಾಗಿ ಹಿಡಿದಿದ್ದೇನೆ.)
ಅದೇಂ ತಾ ನೆಚ್ಚುಂ(ನಂಬಿಕೆ
ಇಟ್ಟು) ಪಿಡಿದೊಡೆ, ಅವರ್
ವಂದು ಪಿಡಿದರೆ ಎನ್ನರೆ ಗೆಲ್ಲಂ

(ಅವರೂ ಬಂದು ನಿಮ್ಮನು ಹಿಡಿದರೆ, ತಮ್ಮನ್ನು ಗೆಲ್ಲಿಸಿ ಎನ್ನರೇ?)

ಪದ್ಯ-೮:ಅರ್ಥ:ಅವರು ಶ್ರೀಕೃಷ್ಣನನ್ನು ಒಪ್ಪಿಸಿಕೊಂಡು ಆಶ್ರಯಿಸಿದ್ದಾರೆ. ನಾನು ನಿಮ್ಮ ಪಾದವನ್ನು ಸೇವಕನಾಗಿ ಹಿಡಿದಿದ್ದೇನೆ. ಅದು ಏನು ತಾನು ನಿಮ್ಮನ್ನು ನಂಬುಗೆ ಇಟ್ಟು ಆಶ್ರಯಿಸಿದ್ದೇನೆ; ಅವರೂ ಬಂದು ನಿಮ್ಮನು

ಹಿಡಿದರೆ, ತಮ್ಮನ್ನು ಗೆಲ್ಲಿಸಿ ಎನ್ನರೇ? (ನನ್ನನ್ನು ಕೈ ಬಿಡಬೇಡಿ ಎಂದು ಭಾವವಿರಬಹುದು, ಮುಂದಿನ ಪದ್ಯ ಅದ್ನೇಹೇಳುವುದು)

ಮ|| ಕೊರಲೊಳ್ ಕಟ್ಟಿದ ದೇವಿಯಂತಿರುರದೊಳ್ ಶ್ರೀ ತೊಟ್ಟಲೊಳ್ ತೊಟ್ಟನಂ ತರಮೆನ್ನೊಳ್ ನೆಲಸಿತ್ತು ನಿಮ್ಮ ದಯೆಯಿಂ ನಿಮ್ಮಂ ಕರಂ ನಚ್ಚಿ ಸಂ|

ಗರಮಂ ಬಲ್ಲಿದರೊಳ್ ಪೊಣರ್ಚಿದೆನದರ್ಕೆನ್ನೊಳ್ ರಣಶ್ರೀ ರಣಾ ಜಿರದೊಳ್ ಮಾಣದೆ ಪೊರ್ದುವಂತೆ ಬೆಸಸಿಂ ನಿಮ್ಮೊಂದಭಿಪ್ರಾಯಮಂ|| ೯ ||

ಪದ್ಯ-೯:ಪದವಿಭಾಗ-ಅರ್ಥ:ಕೊರಲೊಳ್ ಕಟ್ಟಿದ ದೇವಿಯಂತೆ ಇರೆ, (ರಾಜ್ಯಲಕ್ಷ್ಮಿಯು ಕೊರಳಲ್ಲಿ

ಕಟ್ಟಿದ ದುರ್ಗಾಪದಕದಂತೆ
ಇರಲು) ಉರದೊಳ್
(ಎದೆಯಲ್ಲಿ) ಶ್ರೀ
ತೊಟ್ಟಲೊಳ್ ತೊಟ್ಟನಂತರಂ
ಎನ್ನೊಳ್ ನೆಲಸಿತ್ತು
(ತೊಟ್ಟಿಲಲ್ಲಿಯ
ಬಾಲ್ಯತನದಿಂದಲೂ
ರಾಜ್ಯಲಕ್ಷ್ಮಿಯು ನನ್ನ
ಎದೆಯಲ್ಲಿ ಇಲ್ಲಿಯವರೆಗೂ
ನನ್ನಲ್ಲಿ ನೆಲಸಿದ್ದಾಳೆ,) ನಿಮ್ಮ
ದಯೆಯಿಂ (ನಿಮ್ಮ

ದಯೆಯಿಂದ) ನಿಮ್ಮಂ ಕರಂ
ನಚ್ಚಿ ಸಂಗರಮಂ
ಬಲ್ಲಿದರೊಳ್
ಪೊಣರ್ಚಿದೆನ್(ನಿಮ್ಮನ್ನು
ಬಹಳವಾಗಿ ನಂಬಿ
ಬಲಿಷ್ಠರಾದವರಲ್ಲಿ
ಯುದ್ಧವನ್ನು ಹೂಡಿದ್ದೇನೆ.)
ಅದರ್ಕೆ ಎನ್ನೊಳ್ ರಣಶ್ರೀ
ರಣಾಜಿರದೊಳ್ ಮಾಣದೆ
ಪೊರ್ದುವಂತೆ (ಅದಕ್ಕೆ ಈಗ
ರಣರಂಗದಲ್ಲಿ ಜಯಲಕ್ಷ್ಮಿಯು

ಯುದ್ಧದಲ್ಲಿ ನನ್ನನ್ನೇ ತಪ್ಪದೆ ಸೇರುವಂತೆ ಮಾಡಬೇಕು)

ಬೆಸಸಿಂ ನಿಮ್ಮೊಂದು ಅಭಿಪ್ರಾಯಮಂ (ನಿಮ್ಮ ಅಭಿಪ್ರಾಯವನ್ನು ಕೊಡಿರಿ.)

ಪದ್ಯ-೯:ಅರ್ಥ: ನಿಮ್ಮ ದಯೆಯಿಂದ ರಾಜ್ಯಲಕ್ಷ್ಮಿಯು ಕೊರಳಲ್ಲಿ ಕಟ್ಟಿದ ದುರ್ಗಾಪದಕದಂತೆ ಇರಲು, ತೊಟ್ಟಿಲಲ್ಲಿಯ ಬಾಲ್ಯತನದಿಂದಲೂ

ಎದೆಯಲ್ಲಿದ್ದ ರಾಜ್ಯಲಕ್ಷ್ಮಿಯು ಇಲ್ಲಿಯವರೆಗೂ ನನ್ನಲ್ಲಿ ನೆಲಸಿದ್ದಾಳೆ. ನಿಮ್ಮನ್ನು ಬಹಳವಾಗಿ ನಂಬಿ ಬಲಿಷ್ಠರಾದವರಲ್ಲಿ ಯುದ್ಧವನ್ನು ಹೂಡಿದ್ದೇನೆ. ಅದಕ್ಕೆ ಈಗ ರಣರಂಗದಲ್ಲಿ ಜಯಲಕ್ಷ್ಮಿಯು ಯುದ್ಧದಲ್ಲಿ ನನ್ನನ್ನೇ ತಪ್ಪದೆ ಸೇರುವಂತೆ ಮಾಡಬೇಕು. ನಿಮ್ಮ ಅಭಿಪ್ರಾಯವನ್ನು ಕೊಡಿರಿ.

ವ|| ಎಂದು ನುಡಿದ ತನ್ನ ಮೊಮ್ಮನ ನಯದ ವಿನಯದ ನುಡಿಗಳ್ಗೆ ಕರುಣಿಸಿ ಕುರುವೃದ್ಧನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ತನ್ನ ಮೊಮ್ಮನ ನಯದ ವಿನಯದ (ಮೊಮ್ಮಗನ ವಿನಯದಿಂದ ಕೂಡಿದ)ನುಡಿಗಳ್ಗೆ ಕರುಣಿಸಿ ಕುರುವೃದ್ಧನು ಇಂತು ಎಂದಂ-

ವಚನ:ಅರ್ಥ:ಎಂದು ಹೇಳಿದ

ತನ್ನ ಮೊಮ್ಮಗನ

ವಿನಯದಿಂದ ಕೂಡಿದ

ಮಾತುಗಳಿಗೆ ಕರುಣಿಸಿ

ಭೀಷ್ಮನು ಹೀಗೆ ಹೇಳಿದನು.

ಮ|| ಧೃತರಾಷ್ಟ್ರಂ

ನುಡಿದಾರ್ತನೇ ಹರಿ

ಭರಂಗೆಯ್ದಾರ್ತನೇ ನೀಂ

ಪೃಥಾ

ಸುತರಂ

ನೋಯಿಸಲಾಗದೆಂದು

ನುಡಿದೇನಾಮಾರ್ತೆಮೇ
ನಿನ್ನೊರಂ|
ಟುತನಂ
ಕೈಗೞಿವಾಯ್ತುದಪ್ಪೊಡೆ
ಮಹಾಭಾರಾವತಾರಂ ರಣೋ
ದ್ಯತನಾಗೆಂಬುದನೆಮ್ಮನನ್ಯರ
ವೊಲೇಂ ನೀಂ
ಪ್ರಾರ್ಥಿಸಲ್ವೇೞ್ಬುದೇ|| ೧೦ ||

ಪದ್ಯ-೦೦:ಪದವಿಭಾಗ-
ಅರ್ಥ:ಧೃತರಾಷ್ಟ್ರಂ ನುಡಿದು ಆರ್ತನೇ (ಧೃತರಾಷ್ಟ್ರನು ಹೇಳಿ

ನಿನ್ನನ್ನು ತಿದ್ದಲು ಆಯಿತೇ?)
ಹರಿ ಭರಂಗೆಯ್ದು ಆರ್ತನೇ
(ಕೃಷ್ಣನು ಆರ್ಭಟಮಾಡಿ ಹೇಳಿ
ನಿನ್ನನ್ನು ತಿದ್ದಲುಆಯಿತೇ?.)
ನೀಂ ಪೃಥಾಸುತರಂ
ನೋಯಿಸಲಾಗದೆಂದು
ನುಡಿದೇನಾಮಾರ್ತೆಮೇ-
ನುಡಿದು,ಏನು ಆಂ (ನಾವು)
ಆರ್ತೆಮೇ (ಕುಂತೀ ಪುತ್ರರನ್ನು
ನೋಯಿಸಬಾರದೆಂದು ಹೇಳಿ
ನಾವು ಸಮರ್ಥರಾದೆವೇ?)

ನಿನ್ನ ಒರಂಟುತನಂ ಕೈಗೆ ಅಱಿವಾಯ್ತು ಅದಪ್ಪೊಡೆ (ನಿನ್ನ ಒರಟುತನ ಕೈಮೀರಿದ್ದಾಯಿತು.) ಮಹಾಭಾರಾವತಾರಂ (ಮಹಾಭಾರ ಅವತಾರಂ- ಭೂಮಿಯ ಮಹಾಭಾರವನ್ನು ಇಳಿಸುವುದು) ರಣ ಉದ್ಯತನಾಗು ('ಯುದ್ಧಕ್ಕೆ ಸಿದ್ಧನಾಗು') ಎಂಬುದನು ಎಮ್ಮನು ಅನ್ಯರವೊಲ್ ಏಂ

ನೀಂ ಪ್ರಾರ್ಥಿಸಲ್ ವೇಱ್ಪುದೇ
(ಇತರರ ಹಾಗೆ ನೀನು
ಪ್ರಾರ್ಥಿಸಬೇಕೆ?)
ಪದ್ಯ-೦೦:ಅರ್ಥ: ೧೦.
ನೀನು ಪಾಂಡವರನ್ನು
ನೋಯಿಸಬಾರದು ಎಂದು
ನಿನ್ನ ತಂದೆಯಾದ
ಧೃತರಾಷ್ಟ್ರನು ಹೇಳಿ ನಿನ್ನನ್ನು
ತಿದ್ದಲುಆಯಿತೇ?. ಕೃಷ್ಣನು
ಆರ್ಭಟಮಾಡಿ ಹೇಳಿ ನಿನ್ನನ್ನು
ತಿದ್ದಲುಆಯಿತೇ?.

ಅವರಿಬ್ಬರೂ ಸಮರ್ಥರಾಗಲಿಲ್ಲ. ಕುಂತೀ ಪುತ್ರರನ್ನು ನೋಯಿಸಬಾರದೆಂದು ಹೇಳಿ ನಾವು ಸಮರ್ಥರಾದೆವೇ? ನಿನ್ನ ಒರಟುತನ ಕೈಮೀರಿದ್ದಾಯಿತು. ಮುಂದೆ ಭೂಮಿಯ ಮಹಾ ಭಾರವನ್ನು ಇಳಿಸುವುದು. 'ಯುದ್ಧಕ್ಕೆ ಸಿದ್ಧನಾಗು' ಎಂದು ನಮ್ಮನ್ನು ಇತರರ ಹಾಗೆ ನೀನು

ಪ್ರಾರ್ಥಿಸಬೇಕೆ? (ಈಗ ಯುದ್ಧ ಮಾಡುವುದು ನಮ್ಮ ಕರ್ತವ್ಯ)

ವ|| ಎಂಬುದುಂ ಮಹಾಪ್ರಸಾದಮೆಂದು ದುರ್ಯೋಧನಂ ಪೋದನು ಇತ್ತ ಗಾಂಗೇಯಂ ತನ್ನಂತರ್ಗತದೊಳ್-

ವಚನ:ಪದವಿಭಾಗ-

ಅರ್ಥ:ಎಂಬುದುಂ ಮಹಾಪ್ರಸಾದಂ ಎಂದು ದುರ್ಯೋಧನಂ ಪೋದನು

ಇತ್ತ ಗಾಂಗೇಯಂ ತನ್ನ ಅಂತರ್ಗತದೊಳ್-(ಭೀಷ್ಮನು ತನ್ನ ಮನಸ್ಸಿನಲ್ಲಿ-) **ವಚನ:ಅರ್ಥ**:ಎನ್ನಲು ದುರ್ಯೋಧನನು ಮಹಾಪ್ರಸಾದ ಎಂದು ಹೇಳಿ ದುರ್ಯೋಧನನು ಹೋದನು. ಈ ಕಡೆ ಭೀಷ್ಮನು ತನ್ನ ಮನಸ್ಸಿನಲ್ಲಿ (ಚಿಂತಾಕ್ರಾಂತನಾದನು).

-

-

ಕಂ|| ಅಣಿಯರಮೊದವಿದ ಮುಳಿಸಿನೊ ಳಣಮಱಿದವರೆಂದು ರಣದೆ ಜಯಿಸಲ್ ನಾರಾ ಯಣನೊಳಮುದಾತ್ತನಾರಾ ಯಣನೊಳಮಿಂತೆತ್ತಿಕೊಂಡ ಗಂಡರುಮೊಳರೇ|| ೧೧||

- **ಪದ್ಯ-೧೧:ಪದವಿಭಾಗ-ಅರ್ಥ:**ಅಣಿಯರಂ (ವಿಷೇಶ) ಒದವಿದ ಮುಳಿಸಿನೊಳ್

ಅಣಮ್ ಉಱದವರೆಂದು
(ತನಲ್ಲುಂಟಾದ ವಿಶೇಷ
ಕೋಪದಲ್ಲಿ ಪಾಂಡವರು
ಸ್ವಲ್ಪವೂ ಶಕ್ತಿಇಲ್ಲದವರು
ಎಂದು)ರಣದೆ ಜಯಿಸಲ್
ನಾರಾಯಣನೊಳಂ
(ಕೃಷ್ಣನೊಡನೆ)
ಉಮುದಾತ್ತನಾರಾಯಣನೊ
ಳಂ (ಅರ್ಜುನ ಇವರೊಡನೆ)
ಇಂತು ಎತ್ತಿಕೊಂಡ (ಹೀಗೆ

ಯುದ್ಧವನ್ನು ನಿಶ್ಚಯಿಸಸುವ)
ಗಂಡರುಮೊಳರೇ

ಪದ್ಯ-೧೧:ಅರ್ಥ:

ದುರ್ಯೋಧನನು
ತನಲ್ಲುಂಟಾದ ವಿಶೇಷ
ಕೋಪದಲ್ಲಿ ಪಾಂಡವರು
ಅಶಕ್ತರು ಎಂದು, ಜಯ
ಪಡೆಯುವುದಕ್ಕಾಗಿ ಕೃಷ್ಣನ್ನೂ
ಅರ್ಜುನನ್ನೂ ಹೀಗೆ
ಯುದ್ಧದಲ್ಲಿ ತೊಡಗುವ
ಇಂತಹ ಶೂರನು ಬೇರೆ

ಇದ್ದಾನೆಯೇ?
(ಮೂರ್ಖತನದ ಸಾಹಸ
ಎಂಬ ಭಾವ)

ನಿನ್ನನೆ ನಚ್ಚಿದನನುವರ
ಕೆನ್ನನೆ
ಪೂಣಿಸಿದನೆನಗೆರಚ್ಚಿಂಡಮು
ಮೋ|
ರನ್ನರೆ ದಲೆಂತು ಕಾದುವೆ
ನೆನ್ನಯ ಮಕ್ಕಳೊಳಮೆನ್ನ
ಮೊಮ್ಮಕ್ಕಳೊಳಂ|| ೧೨ ||

ಪದ್ಯ-೧೨:ಪದವಿಭಾಗ-ಅರ್ಥ:ನಿನ್ನನೆ ನಚ್ಚಿದನು ಅನುವರಕೆ ಎನ್ನನೆ ಪೂಣಿಸಿದನು (ನನಗೆ, ನಿನ್ನನ್ನೇ ನಂಬಿದ್ದೇನೆ ಎಂದು ಹೇಳಿ. ಯುದ್ಧಮಾಡುತ್ತೇನೆಂದು ನನ್ನಿಂದ ಪ್ರತಿಜ್ಞೆ ಮಾಡಿಸಿದ್ದಾನೆ.) ಎನಗೆ ಎರಟ್ಟಿಂಡಮುಂ ಓರನ್ನರೆ ದಲ್(ನನಗೆ ಎರಡು ಗುಂಪಿನವರೂ ಸಮಾನರೆ

ನಿಜಕ್ಕೂ!) ಎಂತು ಕಾದುವೆನು ಎನ್ನಯ ಮಕ್ಕಳೊಳಮ್ ಎನ್ನ ಮೊಮ್ಮಕ್ಕಳೊಳಂ (ನನ್ನ ಮಕ್ಕಳೊಡನೆಯೂ ಮೊಮ್ಮಕ್ಕಳೊಡನೆಯೂ ಹೇಗೆ ಯುದ್ಧಮಾಡಲಿ?)

ಪದ್ಯ-೧೨:ಅರ್ಥ:ದುರ್ಯೋಧನನು, ನನಗೆ, ನಿನ್ನನ್ನೇ ನಂಬಿದ್ದೇನೆ ಎಂದು ಹೇಳಿ. ಯುದ್ಧಮಾಡುತ್ತೇನೆಂದು ನನ್ನಿಂದ ಪ್ರತಿಜ್ಞೆ

ಮಾಡಿಸಿದ್ದಾನೆ. ನನಗೆ ಎರಡು ಗುಂಪಿನವರೂ ಸಮಾನರೇ ನಿಜಕ್ಕೂ! ನನ್ನ ಮಕ್ಕಳೊಡನೆಯೂ ಮೊಮ್ಮಕ್ಕಳೊಡನೆಯೂ ಹೇಗೆ ಯುದ್ಧಮಾಡಲಿ?

ಮಕ್ಕಳ ಮೊಮ್ಮಕ್ಕಳ ರಥ
ಮೆಕ್ಕೆಯಿನೆಡೆಗೊಂಡೊಡವರ
ನೋವದೆ ರಣದೊಳ್|
ಮಕ್ಕಳನಾಂ ಕೊಂದೊಡೆ ತ

ನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ|| ೧೩ ||

ಪದ್ಯ-೧೩:ಪದವಿಭಾಗ-ಅರ್ಥ:ಮಕ್ಕಳ ಮೊಮ್ಮಕ್ಕಳ ರಥಮ್ ಎಕ್ಕೆಯಿಂ ಎಡೆಗೊಂಡೊಡೆ (ಮಕ್ಕಳ ಮೊಮ್ಮಕ್ಕಳ ರಥಗಳು ಒಟ್ಟಾಗಿ ಎದುರಿಸಿದರೆ) ಅವರನು ಓವದೆ ರಣದೊಳ್ ಮಕ್ಕಳನು ಆಂ ಕೊಂದೊಡೆ (ಅವರನ್ನು ರಕ್ಷಿಸದೆ ಯುದ್ಧದಲ್ಲಿ

ಮಕ್ಕಳನ್ನು ಕೊಂದೆನಾದರೆ)
ತನ್ನ ಇಕ್ಕಿದ ತತ್ತಿಯನೆ ಪಾವು
ನೊಣೆವಂತೆ ಅಕ್ಕುಂ (ಹಾವು
ತಾನು ಇಟ್ಟ ಮೊಟ್ಟೆಗಳನ್ನು
ತಾನೆ ನುಂಗಿದಂತೆ
ಆಗುವುದು!)

ಪದ್ಯ-೧೩:ಅರ್ಥ: ಮಕ್ಕಳ
ಮೊಮ್ಮಕ್ಕಳ ರಥಗಳು ಒಟ್ಟಾಗಿ
ಎದುರಿಸಿದರೆ, ಅವರನ್ನು
ರಕ್ಷಿಸದೆ ಯುದ್ಧದಲ್ಲಿ
ಮಕ್ಕಳನ್ನು ಕೊಂದೆನಾದರೆ,

ಹಾವು ತಾನು ಇಟ್ಟ
ಮೊಟ್ಟೆಗಳನ್ನು ತಾನೆ
ನುಂಗಿದಂತೆ ಆಗುವುದು!

ನರ ನಾರಾಯಣರಿರ್ವರೆ
ಧುರದೊಳ್
ಮಾರ್ಕೊಳ್ವರೆನ್ನನೊರ್ವಂ
ಮೊಮ್ಮಂ|
ಪರಮಗುರುವೊರ್ವನವರಿ
ರ್ವರುಮಂ ಕಾದಱವೆನುೞಿದ
ರಿಪುನೃಪಬಲಮಂ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ನರ ನಾರಾಯಣರು ಇರ್ವರೆ ಧುರದೊಳ್ ಮಾರ್ಕೊಳ್ವರು ಎನ್ನನು (ಕೃಷ್ಣ ಅರ್ಜುನರಿಬ್ಬರೇ ಯುದ್ಧದಲ್ಲಿ ನನ್ನನ್ನು ಎದುರಿಸುವವರು) ಒರ್ವಂ ಮೊಮ್ಮಂ, ಪರಮಗುರು ಪೊರ್ವನ್ ಅವರಿರ್ವರುಮಂ ಕಾದು, (ಅವರಿಬ್ಬರನ್ನೂ ರಕ್ಷಿಸಿ) ಅಱಿವೆನು ಎಱಿದ ರಿಪು

ನೃಪಬಲಮಮಂ (ಉಳಿದ ಶತ್ರುರಾಜಸೈನ್ಯವನ್ನು ನಾಶಪಡಿಸುತ್ತೇನೆ.)

ಪದ್ಯ-೧೪:ಅರ್ಥ:

ನರನಾರಾಯಣರು ಇಬ್ಬರೇ- ಕೃಷ್ಣ ಅರ್ಜುನರಿಬ್ಬರೇ ಯುದ್ಧದಲ್ಲಿ ನನ್ನನ್ನು ಎದುರಿಸುವವರು. ಅವರಲ್ಲಿ ಒಬ್ಬ ಮೊಮ್ಮಗ, ಮತ್ತೊಬ್ಬ ಪರಮಗುರು. ಅವರಿಬ್ಬರನ್ನೂ ರಕ್ಷಿಸಿ ಉಳಿದ

ಶತ್ರುರಾಜಸೈನ್ಯವನ್ನು ನಾಶಪಡಿಸುತ್ತೇನೆ.

ಭೀಷ್ಮನಿಗೆ ಸೇನಾಧಿಪತಿಯಾಗಿ ವೀರಪಟ್ಟಾಭಿಷೇಕ

ವ|| ಎಂದು ತನ್ನೊಳ್ ಬಗೆಯುತ್ತಿರ್ಪಿನಮತ್ತ ದುರ್ಯೋಧನಂ ಸಹಸ್ರ ಕಿರಣೋದಯದೊಳನೇಕಸಹಸ್ರನರಪತಿ ಪರಿವೃತನುಮಾಗಿ ಮಂದಾಕಿನೀತನೂಜಂಗೆ

ಬೞಿಯನಟ್ಟಿ ಬರಿಸಿ

ಮಣಿಮಯಪೀಠದೊಳ್

ಕುಳ್ಳಿರಿಸಿ

ದೇವಾಸುರಯುದ್ಧದೊಳ್

ಗುಹಂಗೆ ವೀರಪಟ್ಟಮಂ

ಕಟ್ಟುವ ಪುರಂದರನಂದಮನೆ

ಪೋಲ್ತು-

ವಚನ:ಪದವಿಭಾಗ-

ಅರ್ಥ:ಎಂದು ತನ್ನೊಳ್

ಬಗೆಯುತ್ತಿರ್ಪಿನಂ (ಎಂದು

ಭೀಷ್ಮನು ತನ್ನಲ್ಲಿ

ಯೋಚಿಸುತ್ತಿರುವಾಗ) ಅತ್ತ
ದುರ್ಯೋಧನಂ ಸಹಸ್ರ
ಕಿರಣೋದಯದೊಳು ಅನೇಕ
ಸಹಸ್ರ ನರಪತಿ
ಪರಿವೃತನುಮಾಗಿ (ಆ ಕಡೆ
ದುರ್ಯೋಧನನು
ಸೂರ್ಯೋದಯದಲ್ಲಿ ಅನೇಕ
ಸಾವಿರ ರಾಜರುಗಳಿಂದ
ಸುತ್ತುವರಿಯಲ್ಪಟ್ಟು)
ಮಂದಾಕಿನೀತನೂಜಂಗೆ
(ಭೀಷ್ಮನಿಗೆ) ಬೞಿಯನಟ್ಟೆ

ಬರಿಸಿ (ದೂತರ ಮೂಲಕ ಹೇಳಿಕಳುಹಿಸಿ ಬರಮಾಡಿಕೊಂಡು) ಮಣಿಮಯಪೀಠದೊಳ್ ಕುಳ್ಳಿರಿಸಿ ದೇವಾಸುರ ಯುದ್ಧದೊಳ್ ಗುಹಂಗೆ (ಷಣ್ಮುಖನಿಗೆ) ವೀರಪಟ್ಟಮಂ ಕಟ್ಟುವ ಪುರಂದರನಂದಮನೆ ಪೋಲ್ತು (ಇಂದ್ರನ ರೀತಿಯನ್ನೇ ಹೋಲುವಂತೆ)-

ವಚನ:ಅರ್ಥ:ಎಂದು ಭೀಷ್ಮನು ತನ್ನಲ್ಲಿ ಯೋಚಿಸುತ್ತಿರುವಾಗ, ಆ ಕಡೆ ದುರ್ಯೋಧನನು ಸೂರ್ಯೋದಯದಲ್ಲಿ ಅನೇಕ ಸಾವಿರ ರಾಜರುಗಳಿಂದ ಸುತ್ತುವರಿಯಲ್ಪಟ್ಟು ಭೀಷ್ಮನಿಗೆ ದೂತರ ಮೂಲಕ ಹೇಳಿಕಳುಹಿಸಿ ಬರಮಾಡಿದನು. ರತ್ನಖಚಿತವಾದ ಪೀಠದಲ್ಲಿ

ಕುಳ್ಳಿರಿಸಿದನು.

ದೇವಾಸುರಯುದ್ಧದಲ್ಲಿ

ಷಣ್ಮುಖನಿಗೆ ವೀರಪಟ್ಟವನ್ನು

ಕಟ್ಟುವ ಇಂದ್ರನ ರೀತಿಯನ್ನೇ

ಹೋಲುವಂತೆ-

ಉ|| ತುಂಗ ಮೃದಂಗ ಶಂಖ

ಪಟಹಧ್ವನಿ ದಿಕ್ತಟದಂತನೆಯ್ದೆ

ವಾ

ರಾಂಗನೆಯರ್ ಚಳಲ್ಲುಳಿತ

ಚಾಮರಮಂ ನೆರೆದಿಕ್ಕೆ ಪಂಚ

ರ|

ತ್ನಂಗಳುಮಂ ಪುದುಂಗೊಳಿಸಿ ಪೊಂಗಳಸಂಗಳೊಳಿರ್ದ ಪುಣ್ಯತೋ ಯಂಗಳೊಳಟ್ಟಿಱಿಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ|| ೧೫ ||

ಪದ್ಯ-೧೫:ಪದವಿಭಾಗ-ಅರ್ಥ:ತುಂಗ ಮೃದಂಗ ಶಂಖ ಪಟಹಧ್ವನಿ (ಶ್ರೇಷ್ಠವಾದ ಮೃದಂಗ, ಶಂಖ, ತಮಟೆಗಳ ಧ್ವನಿಯು) ದಿಕ್ತಟದಂತನು

ಎಯ್ದೆ (ದಿಕ್ಕುಗಳ ಕೊನೆಯನ್ನು ಮುಟ್ಟುತ್ತಿರಲು) ವಾರಾಂಗನೆಯರ್ ಚಳಲ್ಲುಳಿತ ಚಾಮರಮಂ ನೆರೆದಿಕ್ಕೆ (ವೇಶ್ಯಾಸ್ತ್ರೀಯರು ಚಲಿಸುತ್ತಿರುವ ಚಾಮರವನ್ನು ಗುಂಪಾಗಿ ಬೀಸುತ್ತಿರಲು) ಪಂಚ ರತ್ನಂಗಳುಮಂ ಪುದುಂಗೊಳಿಸಿ (ಪಂಚರತ್ನಗಳ ರಾಶಿಗಳ ರಾಶಿಮಾಡಿ,)

ಪೊಂಗಳಸಂಗಳೊಳಿರ್ದ
ಪುಣ್ಯತೋಯಂಗಳೊಳು
(ಚಿನ್ನದ ಕಲಶಗಳಲ್ಲಿದ್ದ ಪುಣ್ಯ
ತೀರ್ಥಗಳಿಂದ) ಅಟ್ಟಿಕಱಿಂ
ಮಿಸಿಸಿ (ಮೀಯು-
ಸ್ನಾನ,ಮೀಸು-ಮೀಸಿಸಿ ಸ್ನಾನ
ಮಾಡಿಸಿ) (ಪ್ರೀತಿಯಿಂದ ಸ್ನಾನ
ಮಾಡಿಸಿ) ಕಟ್ಟಿದನು ಆ ವಿಭು
ವೀರಪಟ್ಟಮಂ
(ಚಕ್ರವರ್ತಿಯಾದ

ದುರ್ಯೋಧನನು ಭೀಷ್ಮನಿಗೆ ವೀರಪಟ್ಟವನ್ನು ಕಟ್ಟಿದನು.)

ಪದ್ಯ-೧೫:ಅರ್ಥ: ಶ್ರೇಷ್ಠವಾದ ಮೃದಂಗ, ಶಂಖ, ತಮಟೆಗಳ, ಧ್ವನಿಯು ದಿಕ್ಕುಗಳ ಕೊನೆಯನ್ನು ಮುಟ್ಟುತ್ತಿರಲು, ವೇಶ್ಯಾಸ್ತ್ರೀಯರು ಚಲಿಸುತ್ತಿರುವ ಚಾಮರವನ್ನು ಗುಂಪಾಗಿ ಬೀಸುತ್ತಿರಲು ಪಂಚರತ್ನಗಳ ರಾಶಿಗಳ ರಾಶಿಮಾಡಿ, ಚಿನ್ನದ

ಕಲಶಗಳಲ್ಲಿದ್ದ ಪುಣ್ಯ ತೀರ್ಥಗಳಿಂದ ಪ್ರೀತಿಯಿಂದ ಸ್ನಾನ ಮಾಡಿಸಿ, ಚಕ್ರವರ್ತಿಯಾದ ದುರ್ಯೋಧನನು ಭೀಷ್ಮನಿಗೆ ವೀರಪಟ್ಟವನ್ನು ಕಟ್ಟಿದನು.

ವ|| ಅಂತು ಪರಶುರಾಮನನಂಜಿಸಿದ ವೀರಂಗೆ ವೀರಪಟ್ಟಮಂ ಕಟ್ಟಿ ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನೆಂದು

ಪೊಟ್ಟಳಿಸುವ ಸುಯೋಧನನ ನುಡಿಯನವಕರ್ಣಿಸಿ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಪರಶುರಾಮನನು ಅಂಜಿಸಿದ ವೀರಂಗೆ ವೀರಪಟ್ಟಮಂ ಕಟ್ಟಿ (ಹಾಗೆ ಪರಶುರಾಮನನ್ನು ಹೆದರಿಸಿದ ವೀರನಿಗೆ ವೀರಪಟ್ಟವನ್ನು ಕಟ್ಟಿ) ಪಗೆವರನು ಎನ್ನ ಮಂಚದ

ಕಾಲೊಳ್ ಕಟ್ಟಿದೆನೆಂದು (ಶತ್ರುಗಳನ್ನು ನನ್ನ ಮಂಚದ ಕಾಲಿನಲ್ಲಿ ಕಟ್ಟಿದೆನೆಂದು) ಪೊಟ್ಟಳಿಸುವ ಸುಯೋಧನನ ನುಡಿಯನು ಅವಕರ್ಣಿಸಿ (ಅಹಂಕಾರ ಪಡುತ್ತಿರುವ ದುರ್ಯೋಧನನ ಮಾತನ್ನು ಕೇಳಿ) ಕರ್ಣನು ಇಂತೆಂದಂ-

ವಚನ:ಅರ್ಥ:ಹಾಗೆ ಪರಶುರಾಮನನ್ನು ಹೆದರಿಸಿದ ವೀರನಿಗೆ ವೀರಪಟ್ಟವನ್ನು

ಕಟ್ಟಿ, ಶತ್ರುಗಳನ್ನು ನನ್ನ
ಮಂಚದ ಕಾಲಿನಲ್ಲಿ
ಕಟ್ಟಿದೆನೆಂದು ಅಹಂಕಾರ
ಪಡುತ್ತಿರುವ ದುರ್ಯೋಧನನ
ಮಾತನ್ನು ಕೇಳಿ ಕರ್ಣನು
ಹೀಗೆಂದನು

**ಚಂ|| ಭಗವತಿಯೇಱುವೇೞ್ವ
ತೆರದಿಂ ಕಥೆಯಾಯ್ತಿವರೇಱು
ನೀನಿದಂ
ಬಗೆದಿವರಿನ್ನುಮಾಂತಿಱಿವರೆಂ
ದು ವಿಮೋಹಿಸಿ**

ವೀರಪಟ್ಟಮಂ|
ಬಗೆಯದೆ ಕಟ್ಟಿದೈ ಗುರುಗಳಂ
ಕುಲವೃದ್ಧರನಾಜಿಗುಯ್ದು ಕೆ
ಮ್ಮಗೆ ಪಗೆವಾಡಿಯೊಳ್
ನಗಿಸಿಕೊಂಡೊಡೆ
ಬಂದಪುದೇಂ ಸುಯೋಧನಾ||
೧೬ ||

ಪದ್ಯ-೧೬:ಪದವಿಭಾಗ-
ಅರ್ಥ:ಭಗವತಿಯ
ಏಱುವೇಟ್ವಿ (ಯುದ್ಧದಕಥೆ)
ತೆರದಿಂ ಕಥೆಯಾಯ್ತು ಇವರ

ಏಱು (ದುರ್ಗಾದೇವಿಯ
ಯುದ್ಧದ ಕಥೆಯಂತೆ,
ಕಟ್ಟುಕಥೆಯಾಯಿತು ಇವರ
ಯುದ್ಧದ ಕತೆ) ನೀನು ಇದಂ
ಬಗೆದು ಇವರು ಇನ್ನುಮ್
ಆಂತು ಇಱಿವರೆಂದು
ವಿಮೋಹಿಸಿ (ಇದನ್ನು ಭಾವಿಸಿ
ನೀನು ಇವರು ಇನ್ನೂ
ಪ್ರತಿಭಟಿಸಿ
ಯುದ್ಧಮಾಡುತ್ತಾರೆ ಎಂದು)
ವೀರಪಟ್ಟಮಂ ಬಗೆಯದೆ

ಕಟ್ಟಿದ್ದೈ (ಎಂದು
ವಿಚಾರಮಾಡದೆ ಇವರಿಗೆ
ಸೇನಾಧಿಪತ್ಯದ ಪಟ್ಟವನ್ನು
ಕಟ್ಟಿದೆಯಲ್ಲವೆ.) ಗುರುಗಳಂ
ಕುಲವೃದ್ಧರನು ಆಜಿಗೆ
ಉಯ್ದು (ಗುರುಗಳೂ
ಕುಲವೃದ್ಧರೂ ಆದ ಇವರನ್ನು
ಯುದ್ಧರಂಗಕ್ಕೆ
ತೆಗೆದುಕೊಂಡುಹೋಗಿ,)
ಕೆಮ್ಮಗೆ ಪಗೆವಾಡಿಯೊಳ್ (
ಸುಮ್ಮನೆ ಶತ್ರುಗಳ

ಗುಂಪಿನಲ್ಲಿ) ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ (ನಗೆ ಬರುವ ಪ್ರಯೋಜನವೇನು ದುರ್ಯೋಧನ?)

ಪದ್ಯ-೧೬:ಅರ್ಥ:ಹಿಂದಿನ ದುರ್ಗಾದೇವಿಯ ಯುದ್ಧದ ಕಥೆಯಂತೆ, ಕಟ್ಟುಕಥೆಯಾಯಿತು ಇವರ ಯುದ್ಧದ ಕತೆ. ಇದನ್ನು ಭಾವಿಸಿ ನೀನು ಇವರು ಇನ್ನೂ

ಪ್ರತಿಭಟಿಸಿ
ಯುದ್ಧಮಾಡುತ್ತಾರೆ ಎಂದು
ವಿಚಾರಮಾಡದೆ ಇವರಿಗೆ
ಸೇನಾಧಿಪತ್ಯದ ಪಟ್ಟವನ್ನು
ಕಟ್ಟಿದೆ. ಗುರುಗಳೂ
ಕುಲವೃದ್ಧರೂ ಆದ ಇವರನ್ನು
ಯುದ್ಧರಂಗಕ್ಕೆ
ತೆಗೆದುಕೊಂಡುಹೋಗಿ,
ಸುಮ್ಮನೆ ಶತ್ರುಗಳ ಗುಂಪಿನಲ್ಲಿ
ನಗಿಸಿಕೊಂಡರೆ ನಿನಗೆ ಬರುವ

ಪ್ರಯೋಜನವೇನು

ದುರ್ಯೋಧನ?

ಕಂ|| ಕಟ್ಟಿದ ಪಟ್ಟಮೆ ಪರವಿಗೆ

ನೆಟ್ಟನೆ ದೊರೆ ಪಿಡಿದ ಬಿಲ್ಲೆ

ದಂಟಿಂಗೆಣೆ ಕ|

ಣ್ಗೆಟ್ಟ ಮುದುಪಂಗೆ ಪಗೆವರ

ನಿಟ್ಟೆಲ್ವಂ ಮುಱಿವೊಡೆನಗೆ

ಪಟ್ಟಂಗಟ್ಟಾ|| ೧೭ ||

ಪದ್ಯ-೧೭:ಪದವಿಭಾಗ-

ಅರ್ಥ:ಕಟ್ಟಿದ ಪಟ್ಟಮೆ

(ಕಟ್ಟಿದ ವೀರಪಟ್ಟವು)

ಸರವಿಗೆ ನೆಟ್ಟನೆ ದೊರೆ (ಕಟ್ಟಿದ ವೀರಪಟ್ಟವು ಹಗ್ಗದ ಉರುಲಿಗೆ ಸಮಾನ.; ಸರ-ಉಲಿ ಕ.ಸಾ.ಪ.ನಿಘಂಟು) ಪಿಡಿದ ಬಿಲ್ಲೆ ದಂಟಿಂಗೆ ಎಣೆ (ಆತನು ಧರಿಸಿರುವ ಬಿಲ್ಲು ಊರು ಗೋಲಿಗೆ ಸಮಾನ) ಕಣ್ಗೆಟ್ಟ ಮುದುಪಂಗೆ (ಕಣ್ಣು ಕಾಣದ ಮುದುಕನಿಗೆ - ಕಟ್ಟಿದ ವೀರಪಟ್ಟವು;) ಪಗೆವರ

ನಿಟ್ಟೆಲ್ವಂ ಮುಱಿವೊಡೆ ಎನಗೆ ಪಟ್ಟಂಗಟ್ಟಾ ()

ಪದ್ಯ-೧೭:ಅರ್ಥ: ಕಣ್ಣು ಕಾಣದ ಮುದುಕನಿಗೆ ಕಟ್ಟಿದ ವೀರಪಟ್ಟವು ಹಗ್ಗದ ಉರುಲಿಗೆ ಸಮಾನ. ಆತನು ಧರಿಸಿರುವ ಬಿಲ್ಲು ಊರುಗೋಲಿಗೆ ಸಮಾನ. ಶತ್ರುಗಳ ಉದ್ದ ಮೂಳೆಗಳನ್ನು ಪುಡಿಮಾಡಬೇಕಾದರೆ ನನಗೆ ಪಟ್ಟ ಕಟ್ಟಯ್ಯ.

ಆದಿಯೊಳವರಂ ಪಿರಿದೊಂ

ದಾದರದಿಂ

ನಡಪಿದಜ್ಜರಪ್ಪುದಱಿಂದಂ|

ಕಾದರಿವರವರೊಳವರುಂ

ಕಾದರ್ ನೆರೆದಿವರೊಳೆಂತು

ನಂಬುವೆ ನೃಪತೀ|| ೧೮ ||

ಪದ್ಯ-೧೮:ಪದವಿಭಾಗ-ಅರ್ಥ:ಆದಿಯೊಳ್ ಅವರಂ ಪಿರಿದೊಂದು ಆದರದಿಂ ನಡಪಿದ ಅಜ್ಜರಪ್ಪುದಱಿಂದಂ (ಮೊದಲು ಚಿಕ್ಕಂದಿನಿಂದಲೂ

ಅವರನ್ನು ವಿಶೇಷ ಪ್ರೀತಿಯಿಂದ ಸಾಕಿದ ಅಜ್ಜರಾದುದರಿಂದ) ಕಾದರು ಇವರು ಅವರೊಳು (ಇವರು ಅವರೊಡನೆ ಅವರೊಡನೆ ಮನಸ್ಸಿಟ್ಟು ಯುದ್ಧಮಾಡುವುದಿಲ್ಲ.) ಅವರುಂ ಕಾದರ್ ನೆರೆದು ಇವರೊಳು (ಅವರೂ ಇವರೊಡನೆ ಹೆಚ್ಚು ಎದುರಿಸಿ ಕಾದುವುದಿಲ್ಲ.) ಎಂತು

ನಂಬುವೆ ನೃಪತೀ (ಇವರನ್ನು ಹೇಗೆ ನಂಬುತ್ತೀಯೆ?)

ಪದ್ಯ-೧೮:ಅರ್ಥ: ಮೊದಲು ಚಿಕ್ಕಂದಿನಿಂದಲೂ ಅವರನ್ನು ವಿಶೇಷ ಪ್ರೀತಿಯಿಂದ ಸಾಕಿದ ಅಜ್ಜರಾದುದರಿಂದ ಇವರು ಅವರೊಡನೆ ಮನಸ್ಸಿಟ್ಟು ಯುದ್ಧಮಾಡುವುದಿಲ್ಲ. ಅವರೂ ಇವರೊಡನೆ ಹೆಚ್ಚು ಎದುರಿಸಿ ಕಾದುವುದಿಲ್ಲ.

ರಾಜನೇ ಇವರನ್ನು ಹೇಗೆ ನಂಬುತ್ತೀಯೆ?

ವ|| ಎಂಬುದುಮಾ ನುಡಿಗೆ ಸಿಡಿಲ್ದು ಕುಂಭಸಂಭವನಿಂತೆಂದಂ-

ವಚನ:ಪದವಿಭಾಗ-ಅರ್ಥ: ಎಂಬುದುಮಾ ನುಡಿಗೆ ಸಿಡಿಲ್ದು ಕುಂಭಸಂಭವನು ಇಂತೆಂದಂ-

ವಚನ:ಅರ್ಥ:ಎನ್ನಲು ಆ ಮಾತಿಗೆ ದ್ರೋಣನು ಸಿಡಿದು ಹೀಗೆಂದನು.

ಕಂ|| ಸಿಂಗದ ಮುಪ್ಪು ನೆಗ್ದಳ್ದೀ
ಗಾಂಗೇಯರ
ಮುಪ್ಪುಮಿೞಿಕೆವಡೆಗುಮೆ
ವನಮಾ|
ತಂಗಂಗಳಿನಸುಹೃಚ್ಚತು
ರಂಗಬಲಂಗಳಿದನದೆಂತುಮಂ
ಗಾಪಧಿತೀ|| ೧೯ ||

ಪದ್ಯ-೧೯:ಪದವಿಭಾಗ-

ಅರ್ಥ:ಸಿಂಗದ ಮುಪ್ಪು ನೆಗ್ದಳ್ದ ಈ ಗಾಂಗೇಯರ ಮುಪ್ಪುಂ ಇೞಿಕೆವಡೆಗುಮೆ (ಸಿಂಹದ

ಮುಪ್ಪನ್ನೂ ಭೀಷ್ಮರ
ಮುಪ್ಪನ್ನೂ ಇಳಿಕೆ-ಕೀಳು
ಕಡಿಮೆ ಎಂದು
ಎಣಿಸಯಬೇಡ,)
ವನಮಾತಂಗಂಗಳಿಂ
ಅಸುಹೃತ್ (ಶತ್ರುಗಳ)
ಚತುರಂಗಬಲಂಗಳ್ ಇದನ್
ಅದೆಂತುಂ
ಅಂಗಾಪಧಿತೀ(ಚತುರಂಗಸ್ಸೈ
ನ್ಯವು ಅವರನ್ನು ಅದು ಹೇಗೆ

ಎದುರಿಸಬಲ್ಲದು? ಅಸಾಧ್ಯ
,ಎಲೈ ಕರ್ಣಾ.)
ಪದ್ಯ-೧೯:ಅರ್ಥ: ಸಿಂಹದ
ಮುಪ್ಪನ್ನೂ ಭೀಷ್ಮರ
ಮುಪ್ಪನ್ನೂ ಕಡಿಮೆ ಎಂದು
ಎಣಿಸಯಬೇಡ,
ಕಾಡಾನೆಗಳಿಂದ ಮುಪ್ಪು
ಸಿಂಹವನ್ನು ಎದುರಿಸಲಾರದು,
ಇದೂ ಹಾಗೆಯೇ ಭೀಷ್ಮರು
ಮುದುಕರಾದುದರಿಂದ
ಶತ್ರುಗಳ ಚತುರಂಗಸೈನ್ಯವು

ಅವರನ್ನು ಅದು ಹೇಗೆ ಎದುರಿಸಬಲ್ಲದು? ಅಸಾಧ್ಯ ,ಎಲೈ ಕರ್ಣಾ.

ಕುಲಜರನುದ್ಧತರಂ ಭುಜ ಬಲಯುತರಂ ಹಿತರನೀ ಸಭಾಮಧ್ಯದೊಳ| ಗ್ಗಲಿಸಿದ ಮದದಿಂ ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ|| ೨೦ ||

ಪದ್ಯ-೨೦:ಪದವಿಭಾಗ-

ಅರ್ಥ:ಕುಲಜರನುದ್ಧತರಂ

ಭುಜಬಲಯುತರಂ ಹಿತರನು (ಸತ್ಕುಲದವರನ್ನು ಶ್ರೇಷ್ಠರನ್ನು ಭಾಹುಬಲವುಳ್ಳವರನ್ನು, ಎಲ್ಲರಿಗೂ ಹಿತರಾದವರನ್ನು ಕುರಿತು) ಈ ಸಭಾಮಧ್ಯದೊಳ್ ಅಗ್ಗಲಿಸಿದ ಮದದಿಂ (ಹೆಚ್ಚಿದ ಕೊಬ್ಬಿನಿಂದ) ನಾಲಗೆ ಕುಲಮಂ ತುಬ್ಬುವವೊಲ್ (ಕುಲವನ್ನು ನಾಲಗೆ ಆಡಿ ತೋರಿಸುವಂತೆ) ಉಱದೆ

ನೀಂ ಕೆಡೆನುಡಿವೈ (ನೀನು ಸಮ್ಮನೆ ಕೆಟ್ಟದಾಗಿ ಮಾತನಾಡಿದ್ದೀಯೆ.)

ಪದ್ಯ-೨೦:ಅರ್ಥ:

ಸತ್ಕುಲದವರನ್ನು ಶ್ರೇಷ್ಠರನ್ನು ಭಾಹುಬಲವುಳ್ಳವರನ್ನು, ಎಲ್ಲರಿಗೂ ಹಿತರಾದವರನ್ನು ಕುರಿತು ಈ ಸಭಾಮಧ್ಯದಲ್ಲಿ ಹೆಚ್ಚಿದ ಕೊಬ್ಬಿನಿಂದ ಕುಲವನ್ನು ನಾಲಗೆ ಆಡಿ ತೋರಿಸುವಂತೆ, ನೀನು

ಸಮ್ಮನೆ ಕೆಟ್ಟದಾಗಿ ಮಾತನಾಡಿದ್ದೀಯೆ.

ವ|| ಎಂದು ನುಡಿದ ಗುರುವಿನ ಕರ್ಣಕಠೋರವಚನಂಗಳ್ಗೆ ಕರ್ಣಂ ಕಿನಿಸಿ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಗುರುವಿನ ಕರ್ಣಕಠೋರ ವಚನಂಗಳ್ಗೆ ಕರ್ಣಂ ಕಿನಿಸಿ (ಕೋಪಿಸಿ)-

ವಚನ:ಅರ್ಥ:ಎಂದು ನುಡಿದ
ಕಿವಿಗೆ ಕರ್ಕಶವಾದ
ಮಾತುಗಳಿಗೆ ಕರ್ಣನು
ಕೋಪಿಸಿಕೊಂಡು

**ಚಂ|| ಕುಲಮೆನೆ
ಮುನ್ನಮುಗ್ಗಡಿಪಿರೇಂ ಗಳ
ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ
ಕುಲಂ ಕುಲಮಲ್ತು ಚಲಂ
ಕುಲಂ ಗುಣಂ|**

ಕುಲಮಭಿಮಾನಮೊಂದೆ

ಕುಲಮಣ್ಮು ಕುಲಂ

ಬಗೆವಾಗಳೀಗಳೀ

ಕಲಹದೊಳಣ್ಣ ನಿಮ್ಮ

ಕುಲವಾಕುಲಮಂ

ನಿಮಗುಂಟುಮಾಡುಗುಂ|| ೨೧

||

ಪದ್ಯ-೨೧:ಪದವಿಭಾಗ-

ಅರ್ಥ:ಕುಲಮೆನೆ ಮುನ್ನಂ

ಉಗ್ಗಡಿಪಿರೇಂಗಳ (ಮಾತಿಗೆ

ಮೊದಲು ಕುಲವನ್ನೇ ಏಕೆ

ಕುರಿತು ದೊಡ್ಡದಾಗಿ
ಹೇಳುತ್ತೀರಿ?) ನಿಮ್ಮ
ಕುಲಂಗಳು ಆಂತು
ಮಾರ್ಮಲೆವನನು ಅಟ್ಟಿ
ತಿಂಬುವೆ (ನಿಮ್ಮ ಕುಲಗಳು
ಪ್ರತಿಭಟಿಸಿದವರನ್ನು ಎದುರಿಸಿ
ಬೆನ್ನಟ್ಟಿ ತಿಂದು
ಹಾಕುತ್ತವೆಯೇ?) ಕುಲಂ
ಕುಲಮಲ್ತು ಚಲಂ ಕುಲಂ
(ಹುಟ್ಟಿದ ಜಾತಿ ನಿಜವಾದ
ಕುಲವಲ್ಲ; ಛಲವೇ-ಕುಲ)

ಗುಣಂ ಕುಲಂ (ಸದ್ಗುಣವೇ-
ಕುಲ) ಅಭಿಮಾನಮೊಂದೆ
ಕುಲಂ (ಆತ್ಮಗೌರವಮಾತ್ರಾ
ಕುಲ) ಅಣ್ಮು ಕುಲಂ
(ಪರಾಕ್ರಮವು ಕುಲ)
ಬಗೆವಾಗಳ್
(ವಿಚಾರಮಾಡುವುದಾದರೆ)
ಈಗಳು ಈ ಕಲಹದೊಳು
ಅಣ್ಣ (ಈಗ ಈ ಯುದ್ಧದಲ್ಲಿ
ಅಣ್ಣಾ) ನಿಮ್ಮ ಕುಲವು
ಆಕುಲಮಂ ನಿಮಗೆ

ಉಂಟುಮಾಡುಗುಂ (ಕುಲದ ವಿಷಯವು ನಿಮಗೆ ಏಕೆ ಬೇಸರವನ್ನುಂಟುಮಾಡುತ್ತದೆ ?)

ಪದ್ಯ-೨೧:ಅರ್ಥ:ಮಾತಿಗೆ ಮೊದಲು ಕುಲವನ್ನೇ ಏಕೆ ಕುರಿತು ದೊಡ್ಡದಾಗಿ ಹೇಳುತ್ತೀರಿ? ನಿಮ್ಮ ಕುಲಗಳು ಪ್ರತಿಭಟಿಸಿದವರನ್ನು ಎದುರಿಸಿ ಬೆನ್ನಟ್ಟಿ ತಿಂದು ಹಾಕುತ್ತವೆಯೇ? ಹುಟ್ಟಿದ

ಜಾತಿ ನಿಜವಾದ ಕುಲವಲ್ಲ ;
ಛಲವೇ-ಕುಲ, ಸದ್ಗುಣವೇ-
ಕುಲ, ಆತ್ಮಗೌರವಮಾತ್ರ
ಕುಲ, ಪರಾಕ್ರಮವು ಕುಲ,
ವಿಚಾರಮಾಡುವುದಾದರೆ
ಈಗ ಈ ಯುದ್ಧದಲ್ಲಿ ಅಣ್ಣಾ,
ನಿಮ್ಮ ಕುಲದ ವಿಷಯವು
ನಿಮಗೆ ಏಕೆ
ಬೇಸರವನ್ನುಂಟುಮಾಡುತ್ತದೆ
?

ಕಂ|| ಗಂಗಾಸುತಂ ಪೃಥಾಸುತ

ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್| ಗಾಂಗೇಯನಳಿದೊಡಹಿತರ ನಾಂ ಗೆಲೆ ತಳ್ತಿಱಿವೆನನ್ನೆಗಂ ಬಿಲ್ವಿಡಿಯೆಂ|| ೨೨ ||

ಪದ್ಯ-೨೨:ಪದವಿಭಾಗ-ಅರ್ಥ:ಗಂಗಾಸುತಂ ಪೃಥಾಸುತರಂ ಗೆಲ್ದೊಡೆ ತಪಕೆ ಪೋಪೆನು (ಭೀಷ್ಮನು ಪಾಂಡವರನ್ನು ಗೆದ್ದರೆ ನಾನು ತಪಸ್ಸಿಗೆ ಹೋಗಿಬಿಡುತ್ತೇನೆ.)

ಅವರ್ಗಳ ಕೆಯ್ಯೊಳ್
ಗಾಂಗೇಯನು ಅೞಿದೊಡೆ
(ಅವರುಗಳ ಕಯ್ಯಲ್ಲಿ
ಭೀಷ್ಮನು
ಮರಣಹೊಂದಿದರೆ)
ಅಹಿತರನು ಆಂ ಗೆಲೆ ತಳ್ತು
ಇಱಿವೆಂ (ಶತ್ರುಗಳನ್ನು
ಗೆಲ್ಲುವುದಕ್ಕಾಗಿ ನಾನು
ಸೇರಿಕೊಂಡು
ಯುದ್ಧಮಾಡುತ್ತೇನೆ.) ಅನ್ನೆಗಂ
ಬಿಲ್ವಿಡಿಯೆಂ (ಅಲ್ಲಿಯವರೆಗೆ

ನಾನು ಬಿಲ್ಲನ್ನು ಹಿಡಿಯುವುದಿಲ್ಲ.)

ಪದ್ಯ-೨೨:ಅರ್ಥ:ಕರ್ಣ ಹೇಳಿದ, ಭೀಷ್ಮನು ಪಾಂಡವರನ್ನು ಗೆದ್ದರೆ ನಾನು ತಪಸ್ಸಿಗೆ ಹೋಗಿಬಿಡುತ್ತೇನೆ. ಅವರುಗಳ ಕಯ್ಯಲ್ಲಿ ಭೀಷ್ಮನು ಮರಣಹೊಂದಿದರೆ ಶತ್ರುಗಳನ್ನು ಗೆಲ್ಲುವುದಕ್ಕಾಗಿ ನಾನು ಸೇರಿಕೊಂಡು ಯುದ್ಧಮಾಡುತ್ತೇನೆ.

ಅಲ್ಲಿಯವರೆಗೆ ನಾನು ಬಿಲ್ಲನ್ನು ಹಿಡಿಯುವುದಿಲ್ಲ.

ವ|| ಎಂದು ಕರ್ಣಂ ಪ್ರತಿಜ್ಞೆಗೆಯ್ವುದುಂ ಸಿಂಧುತನೂಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಕರ್ಣಂ ಪ್ರತಿಜ್ಞೆ ಗೆಯ್ವುದುಂ ಸಿಂಧುತನೂಜನು ಇಂತೆಂದಂ-

ವಚನ:ಅರ್ಥ:ವ||

ಎಂಬುದಾಗಿ ಕರ್ಣನು ಪ್ರತಿಜ್ಞೆ

ಮಾಡಲು ಭೀಷ್ಮನು ಹೀಗೆ ಹೇಳಿದನು.

ಚಂ|| ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ|
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ

ಚಲೆದಪೆಯಣ್ಣಾ ಸೂೞ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್|| ೨೩ ||

ಪದ್ಯ-00:ಪದವಿಭಾಗ-ಅರ್ಥ:ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು (ಶೌರ್ಯದ ಗರ್ವ, ಯವ್ವನದ ಮದ, ಸ್ವಾಮಿಯ ನಂಬಿಕೆ,ನಿಷ್ಠೆ) ಮಿಕ್ಕ ತೋಳ್ವಲದ ಪೊಡರ್ಪು (ಮೀರಿದ ಬಾಹುಬಲದ ಶಕ್ತಿ)

ಕರ್ಣನೇ, ನಿನಗೆ ಉಳ್ಳ ಅನಿತು ಏನು ಎನಗುಂಟೆ (ಕರ್ಣನೇ, ಇವು ನಿನಗಿರುವಷ್ಟು ನನಗಿದೆಯೇನಪ್ಪ.) ಭಾರತಂ ಕಲಹಂ(ಇದು ಭಾರತದ ಯುದ್ಧ,) ಇದಿರ್ಚುವಂ ಹರಿಗನು ಅಪ್ಪೊಡೆ (ಎದುರಿಸುವವನು ಹರಿಗನಾಗಿರುವಾಗ) ಮೊಕ್ಕಳಂ (ವಿಶೇಷವಾಗಿ) ಏಕೆ ನೀಂ ಪಳಂಚಿ ಅಲೆದಪೆಯ್

ಅಣ್ಣ (ಏಕೆ ನೀನು ವಿರೋಧಿಸಿ ಹೀಯಾಳಿಸುವೆ ಏಕೆ, ಕರ್ಣಾ) ಸೂಟ್ (ಸರದಿಯು) ಪಡೆಯಲಪ್ಪುದು ಕಾಣ ಮಹ ಅಜಿರಂಗದೊಳ್- ಆಜಿ- ಯುದ್ಧ; (ಈ ಮಹಾಯುದ್ಧದಲ್ಲಿ ನಿನಗೂ ಸರದಿ ಬರುತ್ತದೆ ಕಾಣಯ್ಯಾ)

ಪದ್ಯ-00:ಅರ್ಥ: ಕರ್ಣನಲ್ಲಿ, ಶೌರ್ಯದ ಗರ್ವ, ಯವ್ವನದ ಮದ, ಸ್ವಾಮಿಯ ನಂಬಿಕೆ,

ಮೀರಿದ ಬಾಹುಬಲದ ಶಕ್ತಿ
-ಇವು ನಿನಗಿರುವಷ್ಟು
ನನಗಿದೆಯೇನಪ್ಪ. ಇದು
ಭಾರತದ ಯುದ್ಧ,
ಎದುರಿಸುವವನು
ಹರಿಗನಾಗಿರುವಾಗ ಏಕೆ
ನೀನು ವಿರೋಧಿಸಿ
ಹೀಯಾಳಿಸುವೆ ಏಕೆ?, ಕರ್ಣಾ;
ಈ ಮಹಾಯುದ್ಧದಲ್ಲಿ
ನಿನಗೂ ಸರದಿ ಬರುತ್ತದೆ
ಕಾಣಯ್ಯಾ

ವ|| ಎಂದು ಮತ್ತಮಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಮತ್ತಂ ಇಂತೆಂದಂ-

ವಚನ:ಅರ್ಥ:ವ|| ಎಂದು ಪುನ ಹೀಗೆಂದನು-

ಕಂ|| ಮುದುಪರ ಬಿಲ್ಬಲ್ಮೆಯುಮಿಱಿ ವದಟುಂ ಬಗೆವಾಗಳಣ್ಣನೆಂದಂತುಟೆ ತ ಪ್ಪದು ಕರಮೆ ತುಚ್ಛಮಕ್ಕುಂ

ಕದನದೊಳಿನ್ನೆನ್ನ ನುಡಿದ ನುಡಿಯಂ ಕೇಳಿಂ|| ೨೪ ||

ಪದ್ಯ-00:ಪದವಿಭಾಗ-ಅರ್ಥ:ಮುದುಪರ ಬಿಲ್ ಬಲ್ಮೆಯುಂ ಇಱಿವ ಅದಟುಂ (ಮುದುಕರ ಅಸ್ತ್ರವಿದ್ಯಾಕೌಶಲ್ಯವನ್ನೂ ಯುದ್ಧಮಾಡುವ ಪರಾಕ್ರಮವನ್ನೂ) ಬಗೆವಾಗಳ್ ಅಣ್ಣಂ ಎಂದಂತುಟೆ (ವಿಚಾರಮಾಡಿ

ನೋಡಿದರೆ ಕರ್ಣನು ಹೇಳಿದ ಹಾಗೆಯೇ,) ತಪ್ಪದು ಕರಮೆ ತುಚ್ಛಮಕ್ಕುಂ ಕದನದೊಳ್ (ತಪ್ಪದೆ ಬಹಳ ಹೀನಾಯಸ್ಥಿತಿಯಾಗುವುದು ಈ ಯುದ್ಧದಲ್ಲಿ.) ಇನ್ನೆನ್ನ ನುಡಿದ ನುಡಿಯಂ ಕೇಳಿಂ (ಇನ್ನು ಮೇಲೆ ನನ್ನ ಪ್ರತಿಜ್ಞೆಯನ್ನು ಕೇಳಿರಿ-)

ಪದ್ಯ-00:ಅರ್ಥ:

ನಾನೇನೋ ಮುದುಕ.

ಮುದುಕರ
ಅಸ್ತ್ರವಿದ್ಯಾಕೌಶಲ್ಯವನ್ನೂ
ಯುದ್ಧಮಾಡುವ
ಪರಾಕ್ರಮವನ್ನೂ
ವಿಚಾರಮಾಡಿ ನೋಡಿದರೆ
ಕರ್ಣನು ಹೇಳಿದ ಹಾಗೆಯೇ.
ತಪ್ಪೇನಿಲ್ಲ, ತಪ್ಪದೆ ಬಹಳ
ಹೀನಾಯಸ್ಥಿತಿಯಾಗುವುದು.
ಇನ್ನು ಮೇಲೆ ನನ್ನ
ಪ್ರತಿಜ್ಞೆಯನ್ನು ಕೇಳಿರಿ-

<u>**ಭೀಷ್ಮನ ಪ್ರತಿಜ್ಞೆ**</u>

ಮ|| ಪಿಡಿಯೆಂ ಚಕ್ರಮನೆಂಬ
ಚಕ್ರಿಯನಿಳಾಚಕ್ರಂ
ಭಯಂಗೊಳ್ವಿನಂ
ಪಿಡಿಯೆಪ್ಪೆಂ ಕರಚಕ್ರಮಂ
ನರರಥಂ ತೂಳ್ದಾ
ಕುರುಕ್ಷೇತ್ರದಿಂ|
ಪಡುವೆಣ್ಗಾವುದು ಪೋಗೆ
ಪೋಗಡಿಸುವೆಂ ನಿಚ್ಚಂ
ಧರಾಧೀಶರಂ

ಪಡಲಿಟ್ಟಂತಿರೆ

ಮಾಱ್ಪೊನೋವದೆ

ಪಯಿಂಭಾಸಿರ್ವರಂ

ಯುದ್ಧದೊಳ್|| ೨೫ ||

ಪದ್ಯ-00:ಪದವಿಭಾಗ-

ಅರ್ಥ:ಪಿಡಿಯೆಂ

ಚಕ್ರಮನೆಂಬ ಚಕ್ರಿಯನು

(ಚಕ್ರವನ್ನು

ಹಿಡಿಯುವುದಿಲ್ಲವೆಂದು

ಪ್ರತಿಜ್ಞೆ ಮಾಡಿರುವ ಕೃಷ್ಣನನ್ನು)

ಇಳಾಚಕ್ರಂ ಭಯಂಗೊಳ್ವಿನಂ

(ಭೂಮಂಡಲವೆಲ್ಲ
ಭಯಪಡುವ ಹಾಗೆ)
ಪಿಡಿಯೆಪ್ಪೆಂ ಕರಚಕ್ರಮಂ
(ಭೂಮಂಡಲವೆಲ್ಲ
ಭಯಪಡುವ ಹಾಗೆ ಕೈಯಲ್ಲಿ
ಚಕ್ರವನ್ನು ಹಿಡಿಯುವಂತೆ
ಮಾಡುತ್ತೇನೆ.) ನರರಥಂ
ತೂಳ್ದು ಆ ಕುರುಕ್ಷೇತ್ರದಿಂ
(ಅರ್ಜುನನ ರಥ ತಳ್ಳಿ/ತೂರಿ
ಕುರುಕ್ಷೇತ್ರದಿಂದ) ಪಡುವು
ಎಣ್ಗಾವುದು ಪೋಗೆ

(ಪಶ್ಚಿಮಕ್ಕೆ ಎಂಟುಗಾವುದ
ಹೋಗುವ ಹಾಗೆ) ಪೋ ಗಡ
ಇಸುವೆಂ (ಪೋ ಗಡ!
ಬಾಣಪ್ರಯೋಗ
ಮಾಡುತ್ತೇನೆ) ನಿಚ್ಚಂ
(ನಿತ್ಯವೂ) ಧರಾಧೀಶರಂ
ಪಡಲಿಟ್ಟಂತಿರೆ (ಚದುರಿ
ಬೀಳುವಂತೆ) ಮಾೞ್ಪೆನು
ಓವದೆ (ಜೀವರಕ್ಷಣೆಮಾಡದೆ -
--ಮಾಡುವೆನು) ಪಯಿಂ
ಭಾಸಿರ್ವರಂ ಯುದ್ಧದೊಳ್

(ಹತ್ತು ಸಾವಿರಯೋಧರನ್ನು
ಯುದ್ಧದಲ್ಲಿ)
ಪದ್ಯ-00:ಅರ್ಥ:ಚಕ್ರವನ್ನು
ಹಿಡಿಯುವುದಿಲ್ಲವೆಂದು
ಪ್ರತಿಜ್ಞೆ ಮಾಡಿರುವ ಕೃಷ್ಣನನ್ನು,
ಭೂಮಂಡಲವೆಲ್ಲ
ಭಯಪಡುವ ಹಾಗೆ ಕೈಯಲ್ಲಿ
ಚಕ್ರವನ್ನು ಹಿಡಿಯುವಂತೆ
ಮಾಡುತ್ತೇನೆ. ಅರ್ಜುನನ ರಥ
ತಳ್ಳಿ/ತೂರಿ ಕುರುಕ್ಷೇತ್ರದಿಂದ
ಪಶ್ಚಿಮಕ್ಕೆ ಎಂಟುಗಾವುದ

ಹೋಗುವ ಹಾಗೆ
ಬಾಣಪ್ರಯೋಗ ಮಾಡುತ್ತೇನೆ.
ಪ್ರತಿದಿನವೂ ಯುದ್ಧದಲ್ಲಿ
ಹತ್ತು ಸಾವಿರ ಯೋಧರನ್ನು
ಜೀವರಕ್ಷಣೆಮಾಡದೆ ಚದುರಿ
ಸತ್ತುಬೀಳುವಂತೆ
ಮಾಡುತ್ತೇನೆ.

ವ|| ಎಂದು
ಮಹಾಪ್ರತಿಜ್ಞಾರೂಢನಾದ
ಗಾಂಗೇಯನಳವನಳವಲ್ಲದೆ
ಪೊಗೞ್ದವರಂ ಬೀಡಿಂಗೆ

ಬಿಜಯಂಗೆಯ್ಯೆಮೆಂದು ಕಳಿಪಿ ಮಱುದಿವಸಂ ಯುದ್ಧಸನ್ನದ್ಧರಾಗಿ ಪ್ರಯಾಣಭೇರಿಯಂ ಪೊಯ್ಸಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ಮಹಾಪ್ರತಿಜ್ಞೆ ರೂಢನಾದ (ಮಹಾಪ್ರತಿಜ್ಞೆ ಮಾಡಿದ) ಗಾಂಗೇಯನ ಅಳವನು ಅಳವಲ್ಲದೆ ಪೊಗೞ್ದವರಂ (ಭೀಷ್ಮನ

ಶಕ್ತಿಯನ್ನು ಅಳತೆಯಿಲ್ಲದಷ್ಟು ಹೊಗಳಿದ ಎಲ್ಲರನ್ನೂ) ಬೀಡಿಂಗೆ ಬಿಜಯಂಗೆಯ್ಯಿಮ್ ಎಂದು ಕಳಿಪಿ (‘ಬೀಡಿಗೆ ಹೋಗಿರಿ’ ಎಂದು ಕಳುಹಿಸಿ), ಮಱುದಿವಸಂ ಯುದ್ಧಸನ್ನದ್ಧರಾಗಿ ಪ್ರಯಾಣ-ಭೇರಿಯಂ ಪೊಯ್ಸಿದಾಗಳ್ (ಮಾರನೆಯದಿನ ಯುದ್ಧಕ್ಕೆ ಸಿದ್ಧನಾಗಿ

ಪ್ರಯಾಣಸೂಚಕವಾದ ಭೇರಿಯನ್ನು ಹೊಎಸಿದಾಗ.)- **ವಚನ:ಅರ್ಥ:**ವ|| ಎಂದು ಮಹಾಪ್ರತಿಜ್ಞೆಯನ್ನು ಮಾಡಿದ ಭೀಷ್ಮನ ಶಕ್ತಿಯನ್ನು ಅಳತೆಯಿಲ್ಲದಷ್ಟು ಎಲ್ಲರೂ ಹೊಗಳಿದರು. ಹೊಗಳಿದ ಎಲ್ಲರನ್ನೂ 'ಬೀಡಿಗೆ ಹೋಗಿರಿ' ಎಂದು ಕಳುಹಿಸಿಕೊಟ್ಟನು. ಮಾರನೆಯದಿನ ಯುದ್ಧಕ್ಕೆ ಸಿದ್ಧನಾಗಿ

ಪ್ರಯಾಣಸೂಚಕವಾದ
ಭೇರಿಯನ್ನು ಹೊಎಸಿದಾಗ-

ಮ|| ಕೆಡೆದಂ
ಪದ್ಮಜನಾಸನಾಂಬುರುಹದಿಂ
ದಾಗಳ್ ಸುರೇಂದ್ರಾಚಳಂ
ನಡುಗಿತ್ತರ್ಕನಳುರ್ಕೆಗೆಟ್ಟು
ನಭದಿಂ ತೂಳ್ದಂ
ಮರುಳ್ದಪ್ಪಿದಳ್|
ಮೃಡನಂ ಗೌರಿ ಸಮಸ್ತಮೀ
ತ್ರಿಭುವನಂ
ಪಂಕೇಜಪತ್ರಾಂಬುವೋಲ್

ನಡುಗಿತ್ತೆಂಬಿನಮುರ್ವಿ ಪರ್ವಿದುದು ತತ್ಸನ್ನಾಹಭೇರೀರವಂ|| ೨೬ ||

ಪದ್ಯ-00:ಪದವಿಭಾಗ-

ಅರ್ಥ:ಕೆಡೆದಂ (ಬಿದ್ದನು) ಪದ್ಮಜನು ಆಸನ ಅಂಬುರುಹದಿಂದ ಆಗಳ್ (ಬ್ರಹ್ಮನು ಕಮಲದ ಆಸನದಿಂದ ಉರುಳಿದನು;) ಸುರೇಂದ್ರಾಚಳಂ (ಮೇರುಪರ್ವತವು) ನಡುಗಿತ್ತು

ಅರ್ಕನು ಅಳುರ್ಕೆಗೆಟ್ಟು
ನಭದಿಂ ತೂಳ್ದಂ (ಸೂರ್ಯನು
ದಾರಿತಪ್ಪಿ ಆಕಾಶದಿಂದ
ಜಾರಿದನು.) ಮರುಳ್ದಪ್ಪಿದಳ್
ಮೃಡನಂ ಗೌರಿ (ಪಾರ್ವತಿಯು
ಹೆದರಿ/ ಭ್ರಾಂತಿಗೊಂಡು
ಈಶ್ವರನ್ನು ತಬ್ಬಿಕೊಂಡಳು.)
ಸಮಸ್ತಂ ಈ ತ್ರಿಭುವನಂ (ಈ
ಸಮಸ್ತ ಮೂರು ಲೋಕವೂ)
ಪಂಕೇಜಪತ್ರಾಂಬುವೋಲ್
(ಕಮಲದೆಲೆಯ ಮೇಲಿನ

ನೀರಿನ ಹಾಗೆ) ನಡುಗಿತ್ತೆಂಬಿನಂ (ನಡುಗಿತು ಎನ್ನುವಂತೆ) ಉರ್ವಿ ಪರ್ವಿದುದು (ಭೂಮಿಯಲ್ಲಿ ಹಬ್ಬು; ಭೂಮಿಯ ಮೇಲೆ ಹಬ್ಬಿತು) ತತ್ ಸನ್ನಾಹ ಭೇರೀ ರವಂ (ಆ ಪ್ರಯಾಣ ಸಿದ್ಧತೆಯ ಭೇರೀ ಶಬ್ದವು).

ಪದ್ಯ-00:ಅರ್ಥ: ಆ ಭೇರಿಯ ಶಬ್ದವನ್ನು ಕೇಳಿ ಬ್ರಹ್ಮನು ಕಮಲದ

ಆಸನದಿಂದ ಉರುಳಿದನು;
ಮೇರುಪರ್ವತವು ನಡುಗಿತು.
ಸೂರ್ಯನು ದಾರಿತಪ್ಪಿ
ಆಕಾಶದಿಂದ ಜಾರಿದನು.
ಪಾರ್ವತಿಯು ಭ್ರಾಂತಿಗೊಂಡು
ಈಶ್ವರನ್ನು ತಬ್ಬಿಕೊಂಡಳು. ಈ
ಸಮಸ್ತ ಮೂರು ಲೋಕವೂ
ಕಮಲದೆಲೆಯ ಮೇಲಿನ
ನೀರಿನ ಹಾಗೆ ನಡುಗಿತು
ಎನ್ನುವಂತೆ ಆ ಪ್ರಯಾಣ

ಸಿದ್ಧತೆಯ ಭೇರೀ ಶಬ್ದವು
ಭೂಮಿಯ ಮೇಲೆ ಹಬ್ಬಿತು.

<u>ಕೌರವಸೈನ್ಯ ಕುರುಕ್ಷೇತ್ರ ಸೇರಿದ ವರ್ಣನೆ</u>

ವ|| ಅಂತು ಮೊೞಗುವ ಭೇರೀರವದೊಡನೆ ನೆಲಂ ಮೊೞಗೆಯುಂ ತಳ್ತೆತ್ತಿದ ವಿಚಿತ್ರಕೇತುಗಳೊಡನುತ್ಪಾತ ಕೇತುಗಳ್ ಮೂಡೆಯುಂ ಪೆರ್ವೆಂಡಿರ್ ಸೇಸೆಯೊಡನೆ

ರುಧಿರವರ್ಷಂ ಸುರಿಯೆಯುಂ
ಹಿತ ಪುರೋಹಿತ ಜಯ ಜಯ
ಧ್ವನಿಗಳೊಡನೆ ಹಾಹಾಕ್ರಂದನ
ಧ್ವನಿಗಳ
ನಿಮಿತ್ತಮಾಕಾಶದೊಳ್
ನೆಗೞೆಯುಂ ಕಾದುವೆನೆಂದು
ನೆಗೞೆ ನುಡಿದ ನುಡಿಯುಮಂ
ಪಿಡಿದ ಚಲಮುಮಂ ಬಗೆದು
ಸೆರಗಂ ಬೆರಗುಮಂ ಬಗೆಯದೆ
ಮಂಗಳಾಭರಣದೊಳ್
ನೆರೆಯೆ ಕೆಯ್ಗೆಯ್ದು ಮುತ್ತಿನ

ಮಾಣಿಕದ ಮಂಡನಾಯೋಗಂಗಳೊಳಾ ಯೋಗಂಗೊಂಡು ಬಂದ ಮದಾಂಧಗಂಧಸಿಂಧುರಮಪ್ಪ ಪಟ್ಟವರ್ಧನದ ಬೆಂಗೆವಾಯ್ದು-

ವಚನ:ಪದವಿಭಾಗ-

ಅರ್ಥ:ಅಂತು ಮೊಟಿಗುವ ಭೇರೀರವದೊಡನೆ (ಹಾಗೆ ಮೊಳಗುವ ಭೃಇಯ ಶಬ್ದದದೊಡನೆ) ನೆಲಂ ಮೊಟಿಗೆಯುಂ (ಭೂಮಿಯು

ಗುಡುಗಲು,) ತಳ್ತೆತ್ತಿದ
ವಿಚಿತ್ರಕೇತುಗಳೊಡನೆ (ಎತ್ತಿ
ಕಟ್ಟಿರುವ ಚಿತ್ರಮಯವಾದ
ಧ್ವಜಗಳೊಡನೆ)
ಉತ್ಪಾತಕೇತುಗಳ್
ಮೂಡೆಯುಂ (ಅಪಶಕುನ
ಸೂಚಕವಾದ ನಕ್ಷತ್ರಗಳು
ಬೀಳುವುದು
ಕಾಣಿಸಿಕೊಂಡವು)
ಪೆರ್ವೆಂಡಿರ್ ಸೇಸೆಯೊಡನೆ
ರುಧಿರವರ್ಷಂ ಸುರಿಯೆಯುಂ

(ವೃದ್ಧಸ್ತ್ರೀಯರು ಚೆಲ್ಲುವ ಮಂತ್ರಾಕ್ಷತೆಗಳೊಡನೆ ರಕ್ತದ ಮಳೆಯು ಸುರಿಯಿತು.) ಹಿತ ಪುರೋಹಿತ ಜಯ ಜಯ ಧ್ವನಿಗಳೊಡನೆ ಹಾಹಾಕ್ರಂದನ ಧ್ವನಿಗಳ ನಿಮಿತ್ತಮಾಕಾಶದೊಳ್ ನೆಗೞ್ದೆಯುಂ (ಹಿತರಾದ ಪುರೋಹಿತರ ಜಯಜಯಶಬ್ದಗಳೊಡನೆ ಅಳುವ ಶಬ್ದವು

ಅಕಾರಣವಾಗಿ ಆಕಾಶದಲ್ಲಿ
ಉಂಟಾಯಿತು.)
ಕಾದುವೆನೆಂದು ನೆಗೞೆ
ನುಡಿದ ನುಡಿಯುಮಂ ಪಿಡಿದ
ಚಲಮುಮಂ ಬಗೆದು
(ಆದರೂ ದುರ್ಯೋಧನನು
ಯುದ್ಧ ಮಾಡುತ್ತೇನೆಂದು
ಸ್ಪಷ್ಟವಾಗಿ ಆಡಿದ ಮಾತನ್ನೂ
ಹಿಡಿದ ಛಲವನ್ನೂ ನೆನೆದು)
ಸೆರಗಂ ಬೆರಗುಮಂ ಬಗೆಯದೆ
(ಭಯವನ್ನೂ ಅಪಾಯವನ್ನೂ

ಯೋಚನೆಮಾಡದೆ,)
ಮಂಗಳಾಭರಣದೊಳ್
ನೆರೆಯೆ (ಮಂಗಳಕರವಾದ
ಒಡವೆಗಳಿಂದ ಪೂರ್ಣವಾಗಿ
ಅಲಂಕಾರಮಾಡಿಕೊಂಡು)
ಕೆಯ್ಗೆಯ್ದು ಮುತ್ತಿನ
ಮಾಣಿಕದ
ಮಂಡನಾಯೋಗಂಗಳೊಳು
ಆಯೋಗಂಗೊಂಡು ಬಂದ
ಮದಾಂಧಗಂಧಸಿಂಧುರಮಪ್ಪ
ಪಟ್ಟವರ್ಧನದ ಬೆಂಗೆವಾಯ್ದು

-ಬೆಂಗೆ ವಾಯ್ದು-ಹಾಯ್ದು=
ಬೆನ್ನಿನ ಮೇಲೆ ಹತ್ತಿ(ಮುತ್ತು
ಮಾಣಿಕ್ಯದ ಆಭರಣಗಳಿಂದ
ಅಲಂಕೃತವಾಗಿ ಬಂದ
ಮದಗಜವಾದ
ಪಟ್ಟದಾನೆಯನ್ನು ಹತ್ತಿ)-
ವಚನ:ಅರ್ಥ:ವ|| ಹಾಗೆ
ಮೊಳಗುವ ಭೃಇಯ
ಶಬ್ದದದೊಡನೆ ಭೂಮಿಯು
ಗುಡುಗಲು, ಎತ್ತಿ ಕಟ್ಟಿರುವ
ಚಿತ್ರಮಯವಾದ

ಧ್ವಜಗಳೊಡನೆ, ಅಪಶಕುನ ಸೂಚಕವಾದ ನಕ್ಷತ್ರಗಳು ಬೀಳುವುದು ಕಾಣಿಸಿಕೊಂಡವು. ವೃದ್ಧಸ್ತ್ರೀಯರು ಚೆಲ್ಲುವ ಮಂತ್ರಾಕ್ಷತೆಗಳೊಡನೆ ರಕ್ತದ ಮಳೆಯು ಸುರಿಯಿತು. ಹಿತರಾದ ಪುರೋಹಿತರ ಜಯಜಯಶಬ್ದಗಳೊಡನೆ ಅಳುವ ಶಬ್ದವು ಅಕಾರಣವಾಗಿ ಆಕಾಶದಲ್ಲಿ

ಉಂಟಾಯಿತು. ಆದರೂ ದುರ್ಯೋಧನನು ಯುದ್ಧ ಮಾಡುತ್ತೇನೆಂದು ಸ್ಪಷ್ಟವಾಗಿ ಆಡಿದ ಮಾತನ್ನೂ ಹಿಡಿದ ಛಲವನ್ನೂ ನೆನೆದು, ಭಯವನ್ನೂ ಅಪಾಯವನ್ನೂ ಯೋಚನೆಮಾಡದೆ, ಮಂಗಳಕರವಾದ ಒಡವೆಗಳಿಂದ ಪೂರ್ಣವಾಗಿ ಅಲಂಕಾರಮಾಡಿಕೊಂಡು , ಮುತ್ತು ಮಾಣಿಕ್ಯದ

ಆಭರಣಗಳಿಂದ
ಅಲಂಕೃತವಾಗಿ ಬಂದ
ಮದಗಜವಾದ
ಪಟ್ಟದಾನೆಯನ್ನು ಹತ್ತಿ -

ಕಂ|| ನಯಮನಯಂ
ಜಯಮೆನಗಪ
ಜಯವಿದು
ಯಶಮಯಶಮೆಂಬಿದಂ
ಬಗೆಯದೆ ನಿ|
ಶ್ಚಯಿಸಿ ಕಲಹಮನೆ
ಮನದೊಳ್

ಭಯಮಱಿಯದ ಕಲಿ ಸುಯೋಧನಂ ಪೊಱಮಟ್ಟಂ|| ೨೭ ||

ಪದ್ಯ-೨೭:ಪದವಿಭಾಗ-ಅರ್ಥ:ನಯಮ್ ಅನಯಂ ಜಯಮೆನಗೆ ಅಪಜಯವಿದು ಯಶಮ್ ಅಯಶಮೆಂಬ ಇದಂ ಬಗೆಯದೆ (ನೀತಿ-ಅನೀತಿ, ಇದು ಜಯ ಇದು ಅಪಜಯ, ಇದು ಯಶಸ್ಸು ಇದು ಅಪಯಶಸ್ಸು ಎಂದು

ವಿಚಾರಮಾಡದೆ) ನಿಶ್ಚಯಿಸಿ ಕಲಹಮನೆ (ಯುದ್ಧವನ್ನೇ ಮನಸ್ಸಿನಲ್ಲಿ ನಿಶ್ಚಮಾಡಿ) ಮನದೊಳ್ ಭಯಮ್ ಅಱಿಯದ ಕಲಿ ಸುಯೋಧನಂ ಪೊಱಮಟ್ಟಂ (ಭಯವನ್ನೇ ತಿಳಿಯದ ಶೂರನಾದ ದುರ್ಯೋಧನನು ಯುದ್ಧಕ್ಕೆ ಹೊರಟನು.)

ಪದ್ಯ-೨೭:ಅರ್ಥ: ಇದು ನೀತಿ ಇದು ಅನೀತಿ, ಇದು ಜಯ

ಇದು ಅಪಜಯ, ಇದು ಯಶಸ್ಸು ಇದು ಅಪಯಶಸ್ಸು ಎಂದು ವಿಚಾರಮಾಡದೆ ಯುದ್ಧವನ್ನೇ ಮನಸ್ಸಿನಲ್ಲಿ ನಿಶ್ಚಮಾಡಿ ಭಯವನ್ನೇ ತಿಳಿಯದ ಶೂರನಾದ ದುರ್ಯೋಧನನು ಯುದ್ಧಕ್ಕೆ ಹೊರಟನು.

ವ|| ಅಂತು ಪೊಱಮಟ್ಟು ಮುಂದೆ ಪರಿವ ಧವಳಚ್ಛತ್ರಚಾಮರಂಗಳುಂ

ಮಿಳಿರ್ವ ಪಾಳಿ ಕೇತನಂಗಳುಂ
ಪೊಯ್ವ
ಪಂಚಮಹಾಶಬ್ದಂಗಳುಂ
ತನಗೆ ರಾಜರಾಜ
ಶಬ್ದಮನನ್ವರ್ಥಂ ಮಾಡೆ
ಜಯದ್ರಥ ಜಯತ್ಸೇನ
ಸುದಕ್ಷಿಣ ಶಲ್ಯ ಶಕುನಿ
ಧೃಷ್ಟಕೇತು ನೀಳ ಭಗದತ್ತ
ಶ್ರುತಾಯುಧ
ನಿಯತಾಯುಧಾಚ್ಯುತಾಯು
ಧಾದಿಗಳಪ್ಪ

ಪನ್ನೊಂದಕ್ಷೋಹಿಣೀಪತಿಗ
ಳುಂ ಗಾಂಗೇಯ
ದ್ರೋಣಾಶ್ವತ್ಥಾಮ ಕೃಪ
ಕೃತವರ್ಮ ಪ್ರಭೃತಿಗಳುಂ
ಕರ್ಣ ವೃಷಸೇನ
ಚಿತ್ರಸೇನರೆಂಬ ತಂದೆ ಮಕ್ಕಳ್
ಮೂವರುಂ ಬೆರಸು ಬರೆ
ಬಾಹ್ಲಿಕ
ಭೂರಿಶ್ರವಸೋಮದತ್ತರೆಂಬ
ಮೂವರುಮನಂತ ಬಲಂ
ಬೆರಸು

ಕೂಡಿಬರೆಯವಂತಿದೇಶಾಶ್ವರ
ರಪ್ಪ ವಿಂದಾನುವಿಂದರೆಣ್ಬತ್ತು
ನಾಲ್ಸಾಸಿರ ಮದದಾನೆ ವರೆಸು
ಬಂದು ಕೂಡೆ ಕಳಿಂಗರಾಜಂ
ಕ್ಷೇಮಧೂರ್ತಿಯುಂ
ಭೀಮಸೇನನ ಕೆಯ್ಯೊಳ್ ಸತ್ತ
ಬಕಾಸುರ ಜಟಾಸುರರ
ಮಕ್ಕಳ್ ಚತುಸ್ತ್ರಿಂಶತ್ಸಹಸ್ರ
ನಕ್ತಂಚರ ಪರಿವೃತ
ಹಳಂಭೂಷ ಮುಸಲಾಯುಧ
ಕಾಳನೀಳ

ವಿದ್ಯುನ್ಮಾಲ್ಯಾದಿಗಳುಂ ಬಂದು
ಕೂಡೆ ತ್ರಿಗರ್ತಾಶಂ
ಸುಶರ್ಮನುಂ ಸಂಸಪ್ತಕರ್
ಪದಿನೆಂಟು ಕೋಟಿ ರಥಂ
ಬೆರಸು ಬಂದು ಕೂಡೆ
ಮತ್ತಮನೇಕ ದೇಶಾಶ್ವರರುಂ
ಬರೆ ಯುಯುತ್ಸು ದುಶ್ಯಾಸನ
ಚಿತ್ರಸೇನ ದುಸ್ಸಹ ದುಸ್ಸಳ
ವಿಂದಾನುವಿಂದ ದುರ್ಧರ್ಷಣ
ದುರ್ಮರ್ಷಣ ದುಸ್ಸ ರ್ಶನ
ಸುಬಾಹು ದುರ್ಮುಖ

ದುಷ್ಕರ್ಣ ವಿಕರ್ಣ ವಿವಿಂಶತಿ

ಸುಲೋಚನ ಚಿತ್ರೋಪಚಿತ್ರ

ನಂದೋಪನಂದ ಚಿತ್ರಾಂಗದ

ಚಿತ್ರಕುಂಡಲ ಜರಾಸಂಧ

ಸತ್ಯಸಂಧ ಸುಹಸ್ತ ದೃಢಹಸ್ತ

ಪ್ರಮಾಥಿ ದೀರ್ಘಬಾಹು

ಮಹಾಬಾಹುಗಳ್ ಮೊದಲಾಗೆ

ತನ್ನ ನೂರ್ವರ್ ತಮ್ಮಂದಿರುಂ

ಲಕ್ಕಣಂ ಮೊದಲಾಗೆ

ನೂರ್ವರ್ ಮಕ್ಕಳುಂ

ಸುತ್ತಿಱಿದು ಬಳಸಿ ಬರೆ

ವಿಳಯಕಾಳ ವಾತಾಹತಿಯಿಂ ಜಳನಿಯೆ ತಳರ್ವಂತೆ ತಳರ್ದು ಕುರುಕ್ಷೇತ್ರಕ್ಕೆ ಮೊಗಸಿದಾಗಳ್-

ವಚನ:ಪದವಿಭಾಗ-ಅರ್ಥ:

ಅಂತು

ಪೊಱಮಟ್ಟು(ಹೊರಟು)

ಮುಂದೆ ಪಱಿವ

ಧವಳಚ್ಛತ್ರಚಾಮರಂಗಳುಂ

(ನಡೆಯುತ್ತಿದ್ದ

ಶ್ವೇತಚ್ಛತ್ರಚಾಮರಗಳೂ)

ಮಿಳಿರ್ವ ಪಾಳಿ ಕೇತನಂಗಳುಂ

(ಅಲುಗಾಡುತ್ತಿದ್ದ ಸಾಲು ಬಾವುಟಗಳಿಂದಲೂ) ಪೊಯ್ಸ್ವ ಪಂಚಮಹಾಶಬ್ದಂಗಳುಂ (ಕೊಂಬು, ತಮಟೆ, ಭೇರಿ, ಘಂಟೆ ಮತ್ತು ಬಿನ್ನಹಂಗಳಗಳೆಂಬ ಪಂಚಮಹಾವಾದ್ಯಗಳೂ) ತನಗೆ ರಾಜರಾಜ ಶಬ್ದಮನು ಅನ್ವರ್ಥಂ ಮಾಡೆ (ತನ್ನ ಚಕ್ರವರ್ತಿ ಎಂಬ ಶಬ್ದವನ್ನು ಅನ್ವರ್ಥವಾಗಿ

ಮಾಡುತ್ತಿರಲು,) ಜಯದ್ರಥ
ಜಯತ್ಸೇನ ಸುದಕ್ಷಿಣ ಶಲ್ಯ
ಶಕುನಿ ಧೃಷ್ಟಕೇತು ನೀಳ
ಭಗದತ್ತ ಶ್ರುತಾಯುಧ
ನಿಯತಾಯುಧ,
ಅಚ್ಯುತಾಯುಧ ಆದಿಗಳಪ್ಪ
ಪನ್ನೊಂದು
ಅಕ್ಷೋಹಿಣೀಪತಿಗಳುಂ(ಮೊ
ದಲಾದ ಹನ್ನೊಂದಕ್ಷೋಹಿಣೀ
ನಾಯಕರೂ) ಗಾಂಗೇಯ
ದ್ರೋಣಾಶ್ವತ್ಥಾಮ ಕೃಪ

ಕೃತವರ್ಮ ಪ್ರಭೃತಿಗಳುಂ
ಕರ್ಣ ವೃಷಸೇನ
ಚಿತ್ರಸೇನರೆಂಬ ತಂದೆ ಮಕ್ಕಳ್
ಮೂವರುಂ ಬೆರಸು ಬರೆ
(ಕರ್ಣ, ವೃಷಸೇನ
ಚಿತ್ರಸೇನರೆಂಬ ತಂದೆ ಮಕ್ಕಳು
ಮೂವರೂ ಒಟ್ಟುಗೂಡಿ
ಬರಲು,) ಬಾಹ್ಲಿಕ ಭೂರಿಶ್ರವ
ಸೋಮದತ್ತರೆಂಬ
ಮೂವರುಂ ಅನಂತ ಬಲಂ
ಬೆರಸು ಕೂಡಿಬರೆ

(ಮೂವರೂ ಕಡೆಯಿಲ್ಲದಷ್ಟು ಸೇನಾಸಮೇತರಾಗಿ ಬಂದು ಸೇರಿದರು.) ಅವಂತಿದೇಶ ಆಶ್ವರರಪ್ಪ ವಿಂದಾನುವಿಂದರು ಎಂಣ್ಬತ್ತು ನಾಲ್ಸಾಸಿರ ಮದದಾನೆ ವರೆಸು ಬಂದು ಕೂಡೆ (ಅವಂತೀದೇಶದ ಒಡೆಯರಾದ ವಿಂದಾನುವಿಂದರು ಎಂಬತ್ತುನಾಲ್ಕು ಸಾವಿರ ಮದ್ದಾನೆಯೊಡಗೂಡಿ ಬಂದು

ಕೂಡಿದರು) ಕಳಿಂಗರಾಜಂ
ಕ್ಷೇಮಧೂರ್ತಿಯುಂ
ಭೀಮಸೇನನ ಕೆಯ್ಯೊಳ್ ಸತ್ತ
ಬಕಾಸುರ ಜಟಾಸುರರ
ಮಕ್ಕಳ್ ಚತುಸ್ತ್ರಿಂಶತ್ಸಹಸ್ರ
(ಭೀಮಸೇನನ ಕಯ್ಯಲ್ಲಿ ಸತ್ತ
ಬಕಾಸುರ ಜಟಾಸುರರ
ಮಕ್ಕಳಾದ ಹಳಂಭೂಷ
ಮುಸಲಾಯುಧ ಕಾಳ ನೀಳ)
ನಕ್ತಂಚರ ಪರಿವೃತ
ಹಳಂಭೂಷ ಮುಸಲಾಯುಧ

ಕಾಳನೀಳ
ವಿದ್ಯುನ್ಮಾಲ್ಯಾದಿಗಳುಂ ಬಂದು
ಕೂಡೆ (ವಿದ್ಯುನ್ಮಾಲಿ
ಮೊದಲಾದವರೂ
ಮೂವತ್ತುನಾಲ್ಕುಸಾವಿರ
ರಾಕ್ಷಸರಿಂದ
ಸುತ್ತುವರಿಯಲ್ಪಟ್ಟು ಬಂದು
ಜೊತೆಗೂಡಿದರು)
ತ್ರಿಗರ್ತಾಶಂ ಸುಶರ್ಮನುಂ
ಸಂಸಪ್ತಕರ್ ಪದಿನೆಂಟು
ಕೋಟಿ ರಥಂ ಬೆರಸು ಬಂದು

ಕೂಡೆ (ತ್ರಿಗರ್ತಾಶ್ವರನಾದ
ಸುಶರ್ಮನೂ ಸಂಶಪ್ತಕರೂ
ಹದಿನೆಂಟು ಕೋಟಿ
ತೇರಿನೊಡನೆ ಬಂದು
ನೆರೆದರು.) ಮತ್ತಂ ಅನೇಕ
ದೇಶಾಶ್ವರರುಂ (ರಾಜರೂ)
ಬರೆ ಯುಯುತ್ಸು ದುಶ್ಯಾಸನ
ಚಿತ್ರಸೇನ ದುಸ್ಸಹ ದುಸ್ಸಳ
ವಿಂದಾನುವಿಂದ ದುರ್ಧರ್ಷಣ
ದುರ್ಮರ್ಷಣ ದುಸ್ಸ ರ್ಶನ
ಸುಬಾಹು ದುರ್ಮುಖ

ದುಷ್ಕರ್ಣ ವಿಕರ್ಣ ವಿವಿಂಶತಿ
ಸುಲೋಚನ ಚಿತ್ರೋಪಚಿತ್ರ
ನಂದೋಪನಂದ ಚಿತ್ರಾಂಗದ
ಚಿತ್ರಕುಂಡಲ ಜರಾಸಂಧ
ಸತ್ಯಸಂಧ ಸುಹಸ್ತ ದೃಢಹಸ್ತ
ಪ್ರಮಾಥಿ ದೀರ್ಘಬಾಹು
ಮಹಾಬಾಹುಗಳ್
ಮೊದಲಾಗೆ ತನ್ನ ನೂರ್ವರ್
ತಮ್ಮಂದಿರುಂ ಲಕ್ಕಣಂ
ಮೊದಲಾಗೆ ನೂರ್ವರ್
ಮಕ್ಕಳುಂ ಸುತ್ತಿಱಿದು ಬಳಸಿ

ಬರೆ (ನೂರುಜನ
ತಮ್ಮಂದಿರೂ ಲಕ್ಷಣನೇ
ಮೊದಲಾದ ನೂರುಜನ
ಮಕ್ಕಳೂ ಸುತ್ತುಗಟ್ಟಿ
ಬಂದರು.) ವಿಳಯಕಾಳ
ವಾತಾಹತಿಯಿಂ ಜಳನಿಯೆ
ತಳರ್ವಂತೆ (ಪ್ರಳಯಕಾಲದ
ಗಾಳಿಯ ಪೆಟ್ಟಿನಿಂದ
ಸಮುದ್ರವೇ ಚಲಿಸುವಂತೆ)
ತಳರ್ದು ಕುರುಕ್ಷೇತ್ರಕ್ಕೆ
ಮೊಗಸಿದಾಗಳ್ (ಚಲಿಸಿ

ಸೈನ್ಯವು ಕುರುಕ್ಷೇತ್ರವನ್ನು ಮುತ್ತಿಕೊಂಡಾಗ-)-

ವಚನ:ಅರ್ಥ:ವ|| ಹಾಗೆ ಹೊರಟು ತನ್ನ ಮುಂದೆ ನಡೆಯುತ್ತಿದ್ದ ಶ್ವೇತಚ್ಛತ್ರಚಾಮರಗಳೂ ಅಲುಗಾಡುತ್ತಿದ್ದ ಸಾಲು ಬಾವುಟಗಳಿಂದಲೂ ಕೊಂಬು, ತಮಟೆ, ಭೇರಿ, ಘಂಟೆ ಮತ್ತು ಬಿನ್ನಹಂಗಳಗಳೆಂಬ ಪಂಚಮಹಾವಾದ್ಯಗಳೂ ತನ್ನ

ಚಕ್ರವರ್ತಿ ಎಂಬ ಶಬ್ದವನ್ನು
ಅನ್ವರ್ಥವಾಗಿ ಮಾಡುತ್ತಿದ್ದವು.
ಜಯದ್ರಥ, ಜಯತ್ಸೇನ,
ಸುದಕ್ಷಿಣ, ಶಲ್ಯ, ಶಕುನಿ,
ಧೃಷ್ಟಕೇತು, ನೀಳ, ಭಗದತ್ತ,
ಶ್ರುತಾಯುಧ,
ನಿಯತಾಯುಧ,
ಅಚ್ಯುತಾಯುಧರೇ
ಮೊದಲಾದ
ಹನ್ನೊಂದಕ್ಷೋಹಿಣೀ
ನಾಯಕರೂ ಭೀಷ್ಮ, ದ್ರೋಣ,

ಅಶ್ವತ್ಥಾಮ, ಕೃಪ, ಕೃತವರ್ಮ
ಮೊದಲಾದವರೂ ಕರ್ಣ,
ವೃಷಸೇನ ಚಿತ್ರಸೇನರೆಂಬ
ತಂದೆ ಮಕ್ಕಳು ಮೂವರೂ
ಒಟ್ಟುಗೂಡಿ ಬಂದರು. ಬಾಹ್ಲಿಕ
ಭೂರಿಶ್ರವ ಸೋಮದತ್ತರೆಂಬ
ಮೂವರೂ ಕಡೆಯಿಲ್ಲದಷ್ಟು
ಸೇನಾಸಮೇತರಾಗಿ ಬಂದು
ಸೇರಿದರು. ಅವಂತೀದೇಶದ
ಒಡೆಯರಾದ
ವಿಂದಾನುವಿಂದರು

ಎಂಬತ್ತುನಾಲ್ಕು ಸಾವಿರ ಮದ್ದಾನೆಯೊಡಗೂಡಿ ಬಂದು ಕೂಡಿದರು. ಕಳಿಂಗ ರಾಜನಾದ ಕ್ಷೇಮಧೂರ್ತಿಯೂ ಭೀಮಸೇನನ ಕಯ್ಯಲ್ಲಿ ಸತ್ತ ಬಕಾಸುರ ಜಟಾಸುರರ ಮಕ್ಕಳಾದ ಹಳಂಭೂಷ ಮುಸಲಾಯುಧ ಕಾಳ ನೀಳ ವಿದ್ಯುನ್ಮಾಲಿ ಮೊದಲಾದವರೂ

ಮೂವತ್ತುನಾಲ್ಕುಸಾವಿರ ರಾಕ್ಷಸರಿಂದ ಸುತ್ತುವರಿಯಲ್ಪಟ್ಟು ಬಂದು ಜೊತೆಗೂಡಿದರು. ತ್ರಿಗರ್ತೇಶ್ವರನಾದ ಸುಶರ್ಮನೂ ಸಂಶಪ್ತಕರೂ ಹದಿನೆಂಟು ಕೋಟಿ ತೇರಿನೊಡನೆ ಬಂದು ನೆರೆದರು. ಇನ್ನೂ ಅನೇಕ ದೇಶಾಶರು ಬಂದು ಒಟ್ಟುಗೂಡಿದರು.

ಯುಯುತ್ಸು, ದುಶ್ಯಾಸನ,
ಚಿತ್ರಸೇನ, ದುಸ್ಸಹ, ದುಸ್ಸಳ,
ವಿಂದಾನುವಿಂದ, ದುರ್ಧರ್ಷಣ,
ದುರ್ಮರ್ಷಣ, ದುಸ್ಪರ್ಶನ,
ದುಷ್ಕರ್ಣ, ಸುಬಾಹು,
ದುರ್ಮುಖ, ವಿಕರ್ಣ,
ವಿವಿಂಶತಿ, ಸುಲೋಚನ,
ಚಿತ್ರೋಪಚಿತ್ರ, ದೃಢಹಸ್ತ,
ಪ್ರಮಾಥಿ, ದೀರ್ಘಬಾಹು,
ಮಹಾಬಾಹುಗಳೇ
ಮೊದಲಾದ ನೂರುಜನ

ತಮ್ಮಂದಿರೂ ಲಕ್ಷಣನೇ ಮೊದಲಾದ ನೂರುಜನ ಮಕ್ಕಳೂ ಸುತ್ತುಗಟ್ಟಿ ಬಂದರು. ಪ್ರಳಯಕಾಲದ ಗಾಳಿಯ ಪೆಟ್ಟಿನಿಂದ ಸಮುದ್ರವೇ ಚಲಿಸುವಂತೆ ಚಲಿಸಿ ಸೈನ್ಯವು ಕುರುಕ್ಷೇತ್ರವನ್ನು ಮುತ್ತಿಕೊಂಡಾಗ-

ಚಂ|| ಕರಿ ಮಕರಂಗಳಂ ಕರಿ

ಘಟಾವಳಿಯಬ್ದಕುಳಂಗಳಂ

ಭಯಂ
ಕರತರಮಾದ ಪೆರ್ದೆರೆಗಳಂ
ಹಯಸಂತತಿ
ಮತ್ಸ್ಯಕೋಟಿಯಂ|
ಸುರಿತ ನಿಶಾತಹೇತಿಯುತ
ಸದ್ಭಟಕೋಟಿ ನಿರಂತರಂ ತಿರ
ಸ್ಕರಿಸಿರೆ
ಘೂರ್ಣಿತಾರ್ಣವಮನೊತ್ತರಿ
ಸಿತ್ತು ಚತುರ್ಬಲಾರ್ಣವಂ||
೨೮ ||

ಪದ್ಯ-೨೮:ಪದವಿಭಾಗ-ಅರ್ಥ:ಕರಿ ಮಕರಂಗಳಂ, (ಬಿಡಿ ಆನೆಗಳು ಮೊಸಳೆಗಳನ್ನೂ,) ಕರಿ ಘಟಾವಳಿಯು ಅಬ್ಧಕುಳಂಗಳಂ -(ಮೋಡ) (ಆನೆಯ ಸಮೂಹವು ಮೋಡ ಸಮೂಹವನ್ನೂ,) ಭಯಂಕರ ತರಮಾದ ಪೆರ್ ತೆರೆಗಳಂ ಹಯಸಂತತಿ (ಹಯ- ಕುದುರೆ) (ಕುದುರೆಗಳ

ಸಮೂಹವು
ಅತಿಭಯಂಕರವಾದ ದೊಡ್ಡ
ಅಲೆಗಳನ್ನೂ,)
ಮತ್ಸ್ಯಕೋಟಿಯಂ ಸುರಿತ
ನಿಶಾತ (ಹರಿತವಾದ)
ಹೇತಿಯುತ (ಕತ್ತಿಯುಳ್ಳ)
ಸದ್ಭಟಕೋಟಿ
(ಪ್ರಕಾಶಮಾನವೂ ಹರಿತವೂ
ಆದ ಕತ್ತಿಗಳಿಂದ ಕೂಡಿದ
ಒಳ್ಳೆಯ ಭಟಸಮೂಹವು
ಮೀನಿನ ಸಮೂಹವನ್ನೂ)

ನಿರಂತರಂ ತಿರಸ್ಕರಿಸಿರೆ (ಸದಾ ಸಮುದ್ರವನ್ನು ಕೀಳು ಸ್ಥಿತಿಮಾಡುವಂತೆ) ಘೂರ್ಣಿತ ಆರ್ಣವಮಂ (ಆರ್ಬಟಿಸುವ ಸಮುದ್ರವನ್ನು) ಒತ್ತರಿಸಿತ್ತು ಚತುರ್ಬಲ ಆರ್ಣವಂ ()

ಪದ್ಯ-೨೮:ಅರ್ಥ:ಆ ಸೈನ್ಯದಲ್ಲಿ ಬಿಡಿ ಆನೆಗಳು ಮೊಸಳೆಗಳನ್ನೂ, ಆನೆಯ ಸಮೂಹವು ಮೋಡ ಸಮೂಹವನ್ನೂ,

ಅತಿಭಯಂಕರವಾದ ದೊಡ್ಡ ಅಲೆಗಳನ್ನೂ, ಪ್ರಕಾಶಮಾನವೂ ಹರಿತವೂ ಆದ ಕತ್ತಿಗಳಿಂದ ಕೂಡಿದ ಭಟರು ಮೀನಿನ ಸಮೂಹವನ್ನೂ, ಭಟಸಮೂಹದ ಚತುರಂಗಸೇನಾಸಮುದ್ರವು ಘೋಷಿಸುತ್ತಿರುವ ಸಮುದ್ರವನ್ನೇ ಮೀರಿ ತಿರಸ್ಕರಿಸುವಂತೆ ಬಂದಿತು.

ಮ|| ಮದವದ್ದಂತಿ ವರೂಥ
ವಾಜಿ ಭಟ ಸಂಘಾತಂಗಳೀ
ಲೆಕ್ಕಮೆಂ
ಬುದನಾಂ
ನಿಟ್ಟಿಸಲಾರೆನೊಂದನಱಿವೆಂ
ತತ್ಸೈನ್ಯ ಪಾದೋತ್ಥಿತಂ|
ಪುದಿದೆತ್ತಂ
ರಜಮಂಬರಸ್ಥಳಮುಮಂ
ಮುಟ್ಟಿತ್ತು ತಳ್ತುರ್ವಿ ಪ
ರ್ವಿದೊಡಾ ಮುನ್ನಿನ
ತೆಳ್ಪುಗೆಟ್ಟು ಕೆಸಱುಯ್ತಾಕಾಶ

ಗಂಗಾಜಲಂ|| ೨೯ ||

ಪದ್ಯ-೨೯:ಪದವಿಭಾಗ-ಅರ್ಥ:ಮದವದ್ದಂತಿ (ಮದ್ದಾನೆ,) ವರೂಥ ವಾಜಿ ಭಟ ಸಂಘಾತಂಗಳು ಈ ಲೆಕ್ಕಮೆಂಬುದನು ಆ ನಿಟ್ಟಿಸಲಾರೆಂ (ನಿಟ್ಟಿಸು -ನೋಡು, ನಿರ್ಧರಿಸು?)(ಈ ಲೆಕ್ಕವುಳ್ಳದ್ದು ಎಂದು ನಾನು ನಿರ್ಧರಿಸಲಾರೆ.) ಒಂದನು ಅಱಿವೆಂ ತತ್ ಸೈನ್ಯ

ಪಾದೋತ್ಥಿತಂ
ಪುದಿದು(ತುಂಬಿ- ವ್ಯಾಪಿಸಿ)
ಎತ್ತಂ (ಎತ್ತಲೂ,
ಎಲ್ಲಾಕಡೆಯೂ) (ಆ ಸೈನ್ಯದ
ತುಳಿತದಿಂದ ಮೇಲೆದ್ದ
ಧೂಳು) ರಜಂ (ಧೂಳು)
ಅಂಬರಸ್ಥಳಮುಮಂ
ಮುಟ್ಟಿತ್ತು (ಧೂಳು
ಆಕಾಶಪ್ರದೇಶವನ್ನು
ಮುಟ್ಟಿತ್ತು.) ತಳ್ತು ಉರ್ವಿ
(ಸೇರಿ ವ್ಯಾಪಿಸಲು)

ಪರ್ವಿದೊಡೆ (ಹರಡಿದಾಗ) ಆ
ಮುನ್ನಿನ ತೆಳ್ಪುಗೆಟ್ಟು -
ತಿಳಿನೀರು ಕೆಟ್ಟು(ಮತ್ತೂ
ಹೆಚ್ಚಾಗಿ ಸೇರಿ ವ್ಯಾಪಿಸಲು
ಎಲ್ಲ ಕಡೆಯಲ್ಲೂ ವ್ಯಾಪಿಸಿ,
ಗಂಗಾನದಿಯ ಮೊದಲಿನ
ತಿಳಿನೀರು ಕೆಟ್ಟು) ಕೆಸಱುಯ್ತು
ಆಕಾಶ ಗಂಗಾಜಲಂ (ಆಕಾಶ
ಮತ್ತು ಗಂಗಾನದಿಯ ನೀರು
ತನ್ನ ಮೊದಲಿನ ಸ್ವಚ್ಛತೆ ಕೆಟ್ಟು
ಬಗ್ಗಡವಾಯಿತು.)

ಪದ್ಯ-೨೯:ಅರ್ಥ: ಮದ್ದಾನೆ, ರಥ, ಕುದುರೆ, ಕಾಲಾಳುಗಳು ಈ ಲೆಕ್ಕವುಳ್ಳದ್ದು ಎಂದು ನಾನು ನಿರ್ಧರಿಸಲಾರೆ. ಇಷ್ಟು ಮಾತ್ರ ಹೇಳಬಲ್ಲೆ. ಆ ಸೈನ್ಯದ ತುಳಿತದಿಂದ ಮೇಲೆದ್ದು ಎಲ್ಲ ಕಡೆಯೂ ವ್ಯಾಪಿಸಿ ಧೂಳು ಆಕಾಶಪ್ರದೇಶವನ್ನು ಮುಟ್ಟಿತ್ತು. ಆಕಾಶ ಮತ್ತು ಗಂಗಾನದಿಯ ನೀರು ತನ್ನ

ಮೊದಲಿನ ಸ್ವಚ್ಛತೆ ಕೆಟ್ಟು
ಬಗ್ಗಡವಾಯಿತು.

**ಚಂ|| ರವಿಕಿರಣಾಳಿಗಳ್
ಧ್ವಜಪಟಾಳಿಯ
ತಿಂತಿಣಿಯಿಂದಮುರ್ಚಲಾ
ಱವೆ ರವಿವಾಜಿಗಳ್ ನೆಗೆದ
ಪಾಂಸುಗಳಿಂ ದೆಸೆಗೆಟ್ಟು
ಪೋಗಲಾ|
ಱವೆ
ರವಿಬಿಂಬಮಂದೆಸೆಯಲಾಱ
ದೆ ಪೆಂಪಿನ ತಿಣ್ಪನಾಂತ ಕೌ**

ರವಬಳಲದಂತು ಮೇರೆ ಪವಣೆಂಬುದನಿನ್ನಱಿವಂದ ಮಾವುದೋ|| ೩೦ ||

ಪದ್ಯ-00:ಪದವಿಭಾಗ-

ಅರ್ಥ:ರವಿಕಿರಣಾಳಿಗಳ್ ('ಸೂರ್ಯನ ಕಿರಣಗಳ ಸಾಲುಗಳು,) ಧ್ವಜಪಟಾಳಿಯ ತಿಂತಿಣಿಯಿಂದಂ ಉರ್ಚಲಾಱಿವೆ (ಬಾವುಟದ ಬಟ್ಟೆಗಳ ಸಮೂಹವನ್ನು ಭೇದಿಸಿಕೊಂಡು ಬರಲಾರವು,)

ರವಿವಾಜಿಗಳ್ ನೆಗೆದ
ಪಾಂಸುಗಳಿಂ (ಸೂರ್ಯನ
ಕುದುರೆಗಳು ಮೇಲೆದ್ದ
ಧೂಳಿನಿಂದ) ದೆಸೆಗೆಟ್ಟು
ಪೋಗಲಾಱವೆ (ಸೂರ್ಯನ
ಕುದುರೆಗಳು ಮೇಲೆದ್ದ
ಧೂಳಿನಿಂದ ದಿಕ್ಕು
ಕಾಣಲಾರದೆ ಮುಂದೆ
ಹೋಗಲಾರದ ಹಾಗಾಯಿತು,)
ರವಿಬಿಂಬಮಂದು
ಎಸೆಯಲಾಱದೆ

(ಸೂರ್ಯಬಿಂಬವು
ಪ್ರಕಾಶಹೀನವಾಗಿತ್ತು.)
ಪೆಂಪಿನ ತಿಣ್ಪನಾಂತ
ಕೌರವಬಳದ ಅಂತು ಮೇರೆ
ಪವಣೆಂಬುದನು ಇನ್ನು
ಅಱಿವಂದಮು ಆವುದೋ
(ಇನ್ನು ತಿಳಿಯುವ ರೀತಿ
ಯಾವುದೊ! -
ಕೌರವಸೇನೆಯ ಕೊನೆಯ
ಅಳತೆ ಎಂಬುದನ್ನು, ಎಲ್ಲೆ,

ಪ್ರಮಾಣಗಳನ್ನು
ತಿಳಿಯಲಾರದಂತಿದ್ದುವು)
ಪದ್ಯ-00:ಅರ್ಥ:ಸೂರ್ಯನ
ಕಿರಣಗಳ ಸಾಲುಗಳು,
ಬಾವುಟದ ಬಟ್ಟೆಗಳ
ಸಮೂಹವನ್ನು
ಭೇದಿಸಿಕೊಂಡು ಬರಲಾರವು,
ಸೂರ್ಯನ ಕುದುರೆಗಳು
ಮೇಲೆದ್ದ ಧೂಳಿನಿಂದ ದಿಕ್ಕು
ಕಾಣಲಾರದೆ ಮುಂದೆ
ಹೋಗಲಾರದ ಹಾಗಾಯಿತು,

ಸೂರ್ಯಬಿಂಬವು
ಪ್ರಕಾಶಹೀನವಾಗಿ ಹಿರಿಮೆಯ
ಭಾರದಿಂದ ಕೂಡಿದ
ಕೌರವಸೇನೆಯಂತೆಯೇ
ಕೊನೆ, ಎಲ್ಲೆ, ಪ್ರಮಾಣಗಳನ್ನು
ಇನ್ನು ತಿಳಿಯುವ ರೀತಿ
ಯಾವುದೊ!
ತಿಳಿಯಲಾರದಂತಿದ್ದುವು.

ಮ|| ಮದವದ್ದಂತಿ
ಮದಾಂಬುಧಾರೆಗಳವಂದೊಂ
ದೊಂದರೊಳ್ ಕೂಡೆ ಪ

ಣ್ಣಿದ ಜಾತ್ಯಶ್ವ ರಥಾಶ್ವ ಸಂಕುಳ ಖಲೀನೋದ್ಭೂತ ಲಾಲಾಜಲಂ|
ಕದಡೆೞ್ದತ್ತಮವುಂಕೆ ಬೇರೆ ಪರಭಾಗಂಬೆತ್ತು ಲೋಕಕ್ಕೆ ಸನ್ನಿದಮಾಗಿರ್ದುವು ಕೌರವಧ್ವಜಿನಿಯೊಳ್ ಕಾಳಿಂದಿಯುಂ ಗಂಗೆಯುಂ||
೩೧ ||

ಪದ್ಯ-೩೧:ಪದವಿಭಾಗ-ಅರ್ಥ:ಮದವದ್ದಂತಿ

ಮದಾಂಬುಧಾರೆಗಳು ಅವು ಒಂದೊಂದೊಂದರೊಳ್ ಕೂಡೆ (ಮದ್ದಾನೆಗಳ ಮದೋದಕದ ಒಟ್ಟುಗೂಡಿದ ಪ್ರವಾಹವು ಒಂದೊಂದರಲ್ಲಿ ಒಂದೊಂದು ಕೂಡಿದಾಗ) ಪಣ್ಣಿದ (ಸಿದ್ಧ ಮಾಡಿದ, ಅಲಂಕಾರ ಮಾಡಿದ) ಜಾತ್ಯಶ್ವ ರಥಾಶ್ವ ಸಂಕುಳ (ಕುದುರೆಗಳ ಸಮೂಹ೦ ಖಲೀನೋದ್ಭೂತ ಲಾಲಾಜಲಂ(ಕಡಿವಾಣದಲ್ಲಿ

ಉಂಟಾದ ಜೊಲ್ಲುನೀರು)
ಕದಡೆ ಎೞ್ದು
ಎತ್ತಮ(ಎಲ್ಲಾಕಡೆ) ಅವುಂಕೆ
(ಕದಡಿಎದ್ದು ಎಲ್ಲಾಕಡೆ
ಒತ್ತರಿಸಿ ಹೋಗಲು) ಬೇರೆ
ಪರಭಾಗಂಬೆತ್ತು (ಬೇರೆ
ಹೊಸಬಗೆಯ ಸೊಗಸನ್ನು
ಹೊಂದಿ) ಲೋಕಕ್ಕೆ
ಸನ್ನಿದಮಾಗಿರ್ದುವು (ಜನರಿಗೆ
ಹತ್ತರವಾಗಿದ್ದವು)
ಕೌರವಧ್ವಜಿನಿಯೊಳ್ (ಕೌರವ

ಸೈನ್ಯದಲ್ಲಿ) ಕಾಳಿಂದಿಯುಂ ಗಂಗೆಯುಂ (ಗಂಗಾ ಯುಮುನಾ ನದಿಗಳಂತೆ ಕೌರವ ಸೈನ್ಯದಲ್ಲಿ ಹರಿಯುವ ಹಾಗಿದ್ದುವು.)

ಪದ್ಯ-೩೧:ಅರ್ಥ:ಮದ್ದಾನೆಗಳ ಮದೋದಕದ ಒಟ್ಟುಗೂಡಿದ ಪ್ರವಾಹವು ಒಂದೊಂದರಲ್ಲಿ ಒಂದೊಂದು ಕೂಡಿದಾಗ, ಸಿದ್ಧವಾಗಿ ಅಲಂಕೃತವಾಗಿರುವ ಜಾತ್ಯಶ್ವ

ಮತ್ತು ರಥಾಶ್ವ (ಜಾತಿ ಕುದುರೆ
ಮತ್ತು ತೇರಿನ ಕುದುರೆ)ಗಳ
ಕಡಿವಾಣಗಳ ಸಮೂಹದಿಂದ
ಹುಟ್ಟಿದ ಜೊಲ್ಲಿನ ರಸವೂ
ಒಂದರೊಡನೊಂದುಗೂಡಲು
(ಒಂದನ್ನೊಂದು ಒತ್ತರಿಸಲು)
ಬೇರೆ ಹೊಸಬಗೆಯ
ಸೊಗಸನ್ನು ಹೊಂದಿ ಗಂಗಾ
ಯುಮುನಾ ನದಿಗಳಂತೆ
ಕೌರವ ಸೈನ್ಯ ಪ್ರದೇಶದಲ್ಲಿ
ಹರಿಯುವ ಹಾಗಿದ್ದುವು.

ವ|| ಅಂತು ದುರ್ಯೋಧನಂ
ತನ್ನ ಬಲದ ಕರಿಘಟೆಗಳ ಕರ್ಣ
ತಾಳಾಹತಿಯಿಂ
ಕುಲಗಿರಿಗಳಳ್ಳಾಡೆಯುಂ ತನ್ನ
ಬಲದ ಪದಾಭಿಘಾತದೊಳಂ
ಕುಲಗಿರಿಗಳ್ ಜೀರೇೞ್ದು
ಪಾೞೆಯುಂ ತನ್ನ ಬಲದ
ಪದೋತ್ಥಿತ ರಜಮೆ
ಮಹಾಸಮುದ್ರಂಗಳಂ ತೆಕ್ಕನೆ
ತೀವೆಯುಂ ನಿಚ್ಚವಯಣದಿಂ
ಬಂದು ಕುರುಕ್ಷೇತ್ರದ ಪೂರ್ವ

ದಿಗ್ಭಾಗದೊಳ್ ಪ್ರಳಯಂ ಮೂರಿವಿಟ್ಟಂತೆ ಬೀಡಂಬಿಟ್ಟು ಧರ್ಮಪುತ್ರನಲ್ಲಿ ಗುಳೂಕನೆಂಬ ದೂತನನಿಂತೆಂದಟ್ಟಿದಂ

ವಚನ:ಪದವಿಭಾಗ-ಅರ್ಥ:ಅಂತು ದುರ್ಯೋಧನಂ ತನ್ನ ಬಲದ ಕರಿಘಟೆಗಳ ಕರ್ಣ ತಾಳಾಹತಿಯಿಂ (ಕಿವಿಯ ಬೀಸುವಿಕೆಯ ಪೆಟ್ಟಿನಿಂದ)

ಕುಲಗಿರಿಗಳು ಅಳ್ಳಾಡೆಯುಂ
ತನ್ನ ಬಲದ
ಪದಾಭಿಘಾತದೊಳಂ (ಅವನ
ಸೈನ್ಯದ ಕಾಲಿನ ತುಳಿತದಿಂದ
ಕುಲಪರ್ವತಗಳು ಪುಡಿಯಾಗಿ
ಮೇಲಕ್ಕೆದ್ದು ಹಾರಿದುವು.)
ಕುಲಗಿರಿಗಳ್ ಜೀರೇಱ್ದು
ಪಾರೇಱೆಯುಂ
(ಕುಲಪರ್ವತಗಳು ಜೀರೆಂದ
ಸದ್ದುಮಾಡುತ್ತಾ ಮೇಲಕ್ಕೆದ್ದು
ಹಾರಿದುವು.) ತನ್ನ ಬಲದ

ಪದೋತ್ಥಿತ ರಜಮೆ (ಅವನ
ಸೈನ್ಯದ ಕಾಲಿನಿಂದ ಎದ್ದ
ಧೂಳೇ)
ಮಹಾಸಮುದ್ರಂಗಳಂ ತೆಕ್ಕನೆ
ತೀವೆಯುಂ (ಇದ್ದಕ್ಕಿದ್ದ ಹಾಗೆ
ತುಂಬಿ,) ನಿಚ್ಚವಯಣದಿಂ
(ನಿತ್ಯಪ್ರಯಾಣದಿಂದ) ಬಂದು
ಕುರುಕ್ಷೇತ್ರದ ಪೂರ್ವ
ದಿಗ್ಭಾಗದೊಳ್ (ಪೂರ್ವದಿಕ್ಕಿನ
ಭಾಗದಲ್ಲಿ) ಪ್ರಳಯಂ
ಮೂರಿವಿಟ್ಟಂತೆ ಬೀಡಂಬಿಟ್ಟು

(ಗುಂಪುಕೂಡಿದ ಹಾಗೆ ಬೀಡನ್ನು ಬಿಟ್ಟು) ಧರ್ಮಪುತ್ರನಲ್ಲಿ ಗುಳೂಕನೆಂಬ ದೂತನನು ಇಂತೆಂದು ಅಟ್ಟಿದಂ (ಉಳೂಕನೆಂಬ ಆಳಿನ ಮೂಲಕ ಹೀಗೆಂದು ಹೇಳಿ ಕಳುಹಿಸಿದನು.)

ವಚನ:ಅರ್ಥ: ಹೀಗೆ ದುರ್ಯೋಧನನ ಸೈನ್ಯದ ಆನೆಗಳ ಹಿಂಡಿನ ಕಿವಿಯ

ಬೀಸುವಿಕೆಯ ಪೆಟ್ಟಿನಿಂದ
ಕುಲಪರ್ವತಗಳಳ್ಳಾಡಿದುವು.
ಅವನ ಸೈನ್ಯದ ಕಾಲಿನ
ತುಳಿತದಿಂದ ಕುಲಪರ್ವತಗಳು
ಜೀರೆಂದ ಸದ್ದುಮಾಡುತ್ತಾ
ಮೇಲಕ್ಕೆದ್ದು ಹಾರಿದುವು.
ಅವನ ಸೈನ್ಯದ ಕಾಲಿನಿಂದ
ಎದ್ದ ಧೂಳೇ
ಮಹಾಸಮುದ್ರಗಳನ್ನು
ಇದ್ದಕ್ಕಿದ್ದ ಹಾಗೆ ತುಂಬಿತು.
ಹೀಗೆ ನಿತ್ಯಪ್ರಯಾಣದಿಂದ

ಬಂದು ಕುರುಕ್ಷೇತ್ರದ
ಪೂರ್ವದಿಕ್ಕಿನ ಭಾಗದಲ್ಲಿ
ಪ್ರಳಯ ಕಾಲವೇ
ಗುಂಪುಕೂಡಿದ ಹಾಗೆ
ಬೀಡನ್ನು ಬಿಟ್ಟು
ದುರ್ಯೋಧನನು
ಧರ್ಮರಾಜನ ಹತ್ತಿರಕ್ಕೆ
ಉಳೂಕನೆಂಬ ಆಳಿನ
ಮೂಲಕ ಹೀಗೆಂದು ಹೇಳಿ
ಕಳುಹಿಸಿದನು.

ಚಂ|| ಮಸೆಯಿಸುಗುಳ್ಳ
ಕೆಯ್ದುಗಳನರ್ಚಿಸುಗಾನೆಗಳಂ
ತಗುಳ್ದು ಪೂ
ಜಿಸುಗೆ ವಿಶುದ್ಧ
ವಾಜಿಗಳನಾಜಿಗೆ ಜೆಟ್ಟಿಗರಾಗಿ
ಕೊಳ್ಳಿವೀ|
ಸೀಸುಗೆ ನಿರಂತರಂ ರವಳಿ
ಘೋಷಿಸುಗಿಂದೆ ಕಡಂಗಿ
ಸಾರ್ಚಿ ಬಿ
ಟ್ಟುಸಿರದೆ ನಿಲ್ವ
ಕಾರಣಮದಾವುದೊ ನೆಟ್ಟನೆ

ನಾಳೆ ಕಾಳೆಗಂ|| ೩೨ ||

ಪದ್ಯ-೩೨:ಪದವಿಭಾಗ-ಅರ್ಥ:ಮಸೆಯಿಸುಗೆ ಉಳ್ಳ ಕೆಯ್ದುಗಳನು (ಇರುವ ಆಯುಧಗಳನ್ನು ಮಸೆದು ಹರಿತಮಾಡಲಿ) ಅರ್ಚಿಸುಗೆ ಆನೆಗಳಂ (ಆನೆಗಳನ್ನು ಪೂಜಿಸಲಿ,) ತಗುಳ್ದು ಪೂಜಿಸುಗೆ ವಿಶುದ್ಧ ವಾಜಿಗಳನು (ಪರಿಶುದ್ಧರಾದ ಕುದುರೆಗಳನ್ನು ಹೊಂದಿಸಿ

ಶ್ರದ್ಧೆಯಿಂದ ಪೂಜಿಸಲಿ;)
ಆಜಿಗೆ ಜೆಟ್ಟಿಗರಾಗಿ
ಕೊಳ್ಳಿವೀಸೀಸುಗೆ (
ಯುದ್ಧವೀರರಾಗಿ ಯುದ್ಧ
ಸೂಚಕಗಳಾದ
ದೀವಟಿಗೆಗಳನ್ನು ಬೀಸಿಸಲಿ.)
ನಿರಂತರಂ
ರವಳಿ(ಶಬ್ದ,ಕೂಗು)
ಘೋಷಿಸುಗೆ (ನಿಲ್ಲಿಸದೆ
ಒಂದೇಸಮನಾಗಿ ಯುದ್ಧ
ಕೂಗು ಘೋಷವಾಗುತ್ತಿರಲಿ;)

ಇಂದೆ ಕಡಂಗಿ ಸಾರ್ಚೆ
(ಉತ್ಸಾಹದಿಂದ ಕೂಡಿ
ಮುಂದೆ ಸತ್ತಿರ ಬಂದು) ಬಿಟ್ಟು
ಉಸಿರದೆ ನಿಲ್ವ ಕಾರಣಂ
ಅದಾವುದೊ
(ಯುದ್ಧಮಾಡಬೇಕಾದ
ಯುದ್ಧರಂಗದಲ್ಲಿ
ಸುಮ್ಮನಿರಲು
ಕಾರಣವೇನೋ?) ನೆಟ್ಟನೆ
ನಾಳೆ ಕಾಳೆಗಂ (ನೇರವಾಗಿ

ನಾಳೆಯಿಂದಲೇ ಕಾಳಗ ಪ್ರಾರಂಭ.)

ಪದ್ಯ-೩೨:ಅರ್ಥ: ಇರುವ ಆಯುಧಗಳನ್ನು ಮಸೆದು ಹರಿತಮಾಡಲಿ, ಆನೆಗಳನ್ನು ಪೂಜಿಸಲಿ, ಪರಿಶುದ್ಧರಾದ ಕುದುರೆಗಳನ್ನು ಹೊಂದಿಸಿ ಶ್ರದ್ಧೆಯಿಂದ ಪೂಜಿಸಲಿ; ಯುದ್ಧವೀರರಾಗಿ ಯುದ್ಧ ಸೂಚಕಗಳಾದ ದೀವಟಿಗೆಗಳನ್ನು ಬೀಸಿಸಲಿ.

ನಿಲ್ಲಿಸದೆ ಒಂದೇಸಮನಾಗಿ
ಯುದ್ಧ ಕೂಗು
ಘೋಷವಾಗುತ್ತಿರಲಿ; ಇಂದೇ
ಉತ್ಸಾಹದಿಂದ ಕೂಡಿ ಮುಂದೆ
ಸತ್ತಿರ ಬಂದು
ಯುದ್ಧಮಾಡಬೇಕಾದ
ಯುದ್ಧರಂಗದಲ್ಲಿ
ಸುಮ್ಮನಿರಲು
ಕಾರಣವೇನೋ? ನೇರವಾಗಿ
ನಾಳೆಯಿಂದಲೇ ಕಾಳಗ
ಪ್ರಾರಂಭ.

ವ|| ಎಂದಾ ದೂತನಾ ಮಾಱ್ಕೆಯೊಳೆ ಬಂದು ಪೇೞೆ ಕೇಳ್ದು ಯಮನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಆ ದೂತನು ಆ ಮಾಱ್ಕೆಯೊಳೆ ಬಂದು ಪೇೞೆ (ದೂತನು ಆ ರೀತಿಯಿಂದಲೇ ಬಂದು ಹೇಳಲು)ಕೇಳ್ದು ಯಮನಂದನನು ಇಂತೆಂದಂ-

ವಚನ:ಅರ್ಥ:ವ|| ಎಂದು ಹೇಳಿದ ಆ ಮಾತನ್ನು ಆ ದೂತನು ಆ ರೀತಿಯಿಂದಲೇ ಬಂದು ಹೇಳಲು ಧರ್ಮರಾಜನು ಕೇಳಿ ಹೀಗೆಂದನು.

ಚಂ|| ಪಗೆ ಮಸೆದಂದೆ ಕೆಯ್ದು ಮಸೆದಿರ್ದುವು ಪೂಡಿಸುವಂಕದಾನೆ ವಾ ಜಿಗಳೆಮಗಿಲ್ಲ ಜಟ್ಟಿಗರೆ ಎನ್ನೊಡವುಟ್ಟಿದರಲ್ತೆ

ನಾಲ್ಕುಮಾ|

ನೆಗಳಿವನಾಂ ದಲಿಂ

ರಣದೊಳರ್ಚಿಸಿ ಬಿಟ್ಟಪೆನೇಕೆ

ಮಾಣ್ಬೆನಾ

ವಗಮಿದನಂತೆ ಪೇೞ ನೆರೆಯೆ

ನಾಳೆಯೆ ಕಾಳೆಗಮಂತೆ

ಗೆಯ್ವಮಾಂ|| ೩೩

ಪದ್ಯ-೩೩:ಪದವಿಭಾಗ-

ಅರ್ಥ:ಪಗೆ ಮಸೆದಂದೆ ಕೆಯ್ದು (ಆಯುಧಗಳು) ಮಸೆದಿರ್ದುವು (ಹಗೆತನ

ಪ್ರಾರಂಭವಾದ ದಿನವೇ
ಆಯುಧಗಳು
ಸಾಣೆಹಿಡಿಯಲ್ಪಟ್ಟಿವೆ.)
ಪೂಡಿಸುವ ಅಂಕದಾನೆ
ವಾಜಿಗಳು ಎಮಗಿಲ್ಲ (
ಪೂಜಿಸಬೇಕಾದ ಪಟ್ಟದ ಆನೆ
ಕುದುರೆಗಳು ನಮಗಿಲ್ಲ)
ಜಟ್ಟಿಗರೆ ಎನ್ನ
ಒಡವುಟ್ಟಿದರಲ್ತೆ (ನನ್ನೊಡನೆ
ಹುಟ್ಟಿದವರೇ
ಜಟ್ಟಿಗಳಾದವರಲ್ಲವೇ?)

ನಾಲ್ಕುಂ ಆನೆಗಳು ಅವನು ಆಂ ದಲ್ ಇಂ ರಣದೊಳು ಅರ್ಚಿಸಿ ಬಿಟ್ಟಪೆನು (ಈ ನಾಲ್ಕು ಆನೆಗಳನ್ನೇ ಪೂಜಿಸಿ ಯುದ್ಧದಲ್ಲಿ ಬಿಡುತ್ತೇನೆ.) ಏಕೆ ಮಾಣ್ಬೆನು (ಏಕೆ ತಡೆಯಲಿ?) ಆವಗಂ (ಪೂರ್ಣವಾಗಿ? ಅಷ್ಟನ್ನೂ,) ಇದನು ಅಂತೆ ಪೇೞು (ಇದನ್ನು ಹೀಗೆಯೇ ಪೂರ್ಣವಾಗಿ ಹೇಳು) ನೆರೆಯೆ ನಾಳೆಯೆ ಕಾಳೆಗಮ್ ಅಂತೆ

ಗೆಯ್ವಂ ಆಂ (ನಾವು)
(ಹೆಚ್ಚಾಗಿ, ನಾಳೆಯೇ
ಯುದ್ಧವಾಗಲಿ. ನಾವೂ
ಹಾಗೆಯೇ ಮಾಡುತ್ತೇವೆ)
ಪದ್ಯ-೩೩:ಅರ್ಥ: ಹಗೆತನ
ಪ್ರಾರಂಭವಾದ ದಿನವೇ
ಆಯುಧಗಳು
ಸಾಣೆಹಿಡಿಯಲ್ಪಟ್ಟಿವೆ.
ಪೂಜಿಸಬೇಕಾದ ಪಟ್ಟದ ಆನೆ
ಕುದುರೆಗಳು ನಮಗಿಲ್ಲ;
ನನ್ನೊಡನೆ ಹುಟ್ಟಿದವರೇ

ಜಟ್ಟಿಗಳಾದವರಲ್ಲವೇ? ಈ ನಾಲ್ಕು ಆನೆಗಳನ್ನೇ ಪೂಜಿಸಿ ಯುದ್ಧದಲ್ಲಿ ಬಿಡುತ್ತೇನೆ. ಏಕೆ ತಡೆಯಲಿ? ಇದನ್ನು ಹೀಗೆಯೇ ಪೂರ್ಣವಾಗಿ ಹೇಳು. ಹೆಚ್ಚಾಗಿ, ನಾಳೆಯೇ ಯುದ್ಧವಾಗಲಿ. ನಾವೂ ಹಾಗೆಯೇ ಮಾಡುತ್ತೇವೆ.

<u>ದ್ರುಪದನ ಮಗ ಶ್ವೇತನಿಗೆ ವೀರಪಟ್ಟ</u>

ವ|| ಎಂದಾ ದೂತನಂ ವಿಸರ್ಜಿಸಿ ಪುಂಡರೀಕಾಕ್ಷಂಗೆ ಬೞಿಯನಟ್ಟಿ ಬರಿಸಿ ನಮ್ಮ ಪಡೆಯೊಳಾರ್ಗೆ ವೀರಪಟ್ಟಮಂ ಕಟ್ಟುವಂ ಪೇೞಿಮೆನೆ-

ವಚನ:ಪದವಿಭಾಗ-

ಅರ್ಥ:ಎಂದಾ ದೂತನಂ ವಿಸರ್ಜಿಸಿ (ಕಳುಹಿಸಿ,)

ಪುಂಡರೀಕಾಕ್ಷಂಗೆ ಬಱಿಯನಟ್ಟಿ ಬರಿಸಿ (ದೂತರ ಮೂಲಕ ಕಳುಹಿಸಿ ಬರಮಾಡಿಕೊಂಡು) ನಮ್ಮ ಪಡೆಯೊಳಾರ್ಗೆ ವೀರಪಟ್ಟಮಂ ಕಟ್ಟುವಂ ಪೇೞಿಂ ಎನೆ ()-

ವಚನ:ಅರ್ಥ:ವ|| ಎಂದು ಆ ದೂತನನ್ನು ಕಳುಹಿಸಿ, ಶ್ರೀಕೃಷ್ಣನಿಗೆ ಸಮಾಚಾರವನ್ನು ದೂತರ ಮೂಲಕ ಕಳುಹಿಸಿ

ಬರಮಾಡಿಕೊಂಡು, ‘ನಮ್ಮ ಸೈನ್ಯದಲ್ಲಿ ಯಾರಿಗೆ ವೀರಪಟ್ಟವನ್ನು ಕಟ್ಟೋಣ ಅಪ್ಪಣೆ ಕೊಡಿ’ ಎಂದು ಕೇಳಲು-

ಶಾ||

ಮಾತಂಗಾಸುರವೈರಿಯಲ್ಲಿ
ಪಡೆದುಂ ಬಿಲ್ಲಂ
ಧನುರ್ವಿದ್ಯೆಗಂ
ತಾತಂಗಗ್ಗಳಮಾರುಮಲ್ಲದೞ್
ನಾ ಶ್ವೇತಂಗಮಂತಾ ನದೀ

ಜಾತಂಗಂ ದೊರೆ

ಯುದ್ಧಮೆಂದಱಿದು

ತಚ್ಛ್ವೇತಂಗೆ ಭೂಲೋಕವಿ

ಖ್ಯಾತಂಗಗ್ಗಳ

ವೀರಪಟ್ಟಮನುದಾರಂ

ಕಟ್ಟಿದಂ ಧರ್ಮಜಂ|| ೩೪ ||

ಪದ್ಯ-೩೪:ಪದವಿಭಾಗ-

ಅರ್ಥ:ಮಾತಂಗಾಸುರವೈರಿ

ಯಲ್ಲಿ (ಶಿವನಲ್ಲಿ) ಪಡೆದುಂ

ಬಿಲ್ಲಂ (ಈಶ್ವರನಲ್ಲಿ ಬಿಲ್ಲನ್ನು

ಪಡೆದಿದ್ದಾನೆ.) ಧನುರ್ವಿದ್ಯೆಗಂ

ತಾತಂಗೆ ಅಗ್ಗಳಂ ಆರುಂ ಅಲ್ಲ ಅದಱಿಂ (ಬಿಲ್ವಿದ್ಯೆಯಲ್ಲಿ ಆತನನ್ನು ಮೀರಿಸುವವರಾರೂ ಇಲ್ಲ.) ಆ ಶ್ವೇತಂಗಂ ಅಂತು ಆ ನದೀಜಾತಂಗಂ ದೊರೆ ಯುದ್ಧಮೆಂದು ಅಱಿದು (ಆದುದರಿಂದ ಆ ಶ್ವೇತನಿಗೂ ಭೀಷ್ಮನಿಗೂ ಯುದ್ಧವು ಸಮಾನವಾದುದು ಎಂದು ತಿಳಿದು) ತಚ್ಛ್ವೇ ತಂಗೆ (ತತ್

ಶ್ವೇತಂಗೆ)
ಭೂಲೋಕವಿಖ್ಯಾತಂಗೆ ಅಗ್ಗಳ
ವೀರಪಟ್ಟಮನು ಉದಾರಂ
ಕಟ್ಟಿದಂ ಧರ್ಮಜಂ
(ಉದಾರಿಯಾದ
ಧರ್ಮರಾಜನು
ಭೂಲೋಕವಿಖ್ಯಾತನಾದ
ಶ್ವೇತನಿಗೆ ಅತಿಶಯವಾದ
ವೀರಪಟ್ಟವನ್ನು ಕಟ್ಟಿದನು.)
ಪದ್ಯ-೩೪:ಅರ್ಥ: ಶ್ವೇತನು
ಶಿವನಲ್ಲಿ ಬಿಲ್ಲನ್ನು

ಪಡೆದಿದ್ದಾನೆ. ಬಿಲ್ವಿದ್ಯೆಯಲ್ಲಿ ಆತನನ್ನು ಮೀರಿಸುವವರಾರೂ ಇಲ್ಲ. ಆದುದರಿಂದ ಆ ಶ್ವೇತನಿಗೂ ಭೀಷ್ಮನಿಗೂ ಯುದ್ಧವು ಸಮಾನವಾದುದು ಎಂದು ತಿಳಿದು ಆ ಉದಾರಿಯಾದ ಧರ್ಮರಾಜನು ಭೂಲೋಕವಿಖ್ಯಾತನಾದ ಶ್ವೇತನಿಗೆ ಅತಿಶಯವಾದ ವೀರಪಟ್ಟವನ್ನು ಕಟ್ಟಿದನು.

ವ|| ಅಂತು ವಿರಾಟನಂದನನಂ ಧರ್ಮನಂದನಂ ಸೇನಾನಾಯಕನಂ ಮಾಡೆ ನಾಳೆ ಕಾಳಗಮೆಂದು ಪಡೆವಳರ್ ಪೋಗಿ ಸಾಱಿಮೆಂಬುದುಮವರ್ ಬೀಡುವೀಡುಗಳ್ಗೆಲ್ಲಂ ಸಾಱಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ವಿರಾಟನಂದನನಂ

ಧರ್ಮನಂದನಂ
ಸೇನಾನಾಯಕನಂ ಮಾಡೆ
ನಾಳೆ ಕಾಳಗಮೆಂದು
ಪಡೆವಳರ್ ಪೋಗಿ
(ಸೇನಾಪತಿಗಳು ಹೋಗಿ)
ಸಾಱಿಂ ಮೆಂಬುದುಂ ಅವರ್
ಬೀಡುವೀಡುಗಳ್ಗೆಲ್ಲಂ
ಸಾಱಿದಾಗಳ್ (ಸಾರಿರಿ
ಎನ್ನಲು ಅವರು
ಬೀಡುಬೀಡುಗಳಲ್ಲೆಲ್ಲ
ಘೋಷಿಸಿದರು-)-

ವಚನ:ಅರ್ಥ:ಹಾಗೆ
ವಿರಾಟನ ಮಗನಾದ
ಶ್ವೇತನನ್ನು ಧರ್ಮರಾಜನು
ಸೇನಾನಾಯಕನನ್ನಾಗಿ
ಮಾಡಲು, ನಾಳೆಯೇ
ಯುದ್ಧವೆಂದು ಸೇನಾಪತಿಗಳು
ಹೋಗಿ ಸಾರಿರಿ ಎನ್ನಲು
ಅವರು ಬೀಡುಬೀಡುಗಳಲ್ಲೆಲ್ಲ
ಘೋಷಿಸಿದರು-

ಚಂ|| ಪಗೆ ಸುಗಿವನ್ನೆಗಂ
ಮಸೆವ ವೀರಭಟರ್ಕಳ

ರೌದ್ರಮಪ್ಪ ಕೆ
ಯ್ದುಗಳಿನಗುರ್ವಿನದ್ಭುತದಿನು
ರ್ವಿದ ಕೆಂಗಿಡಿಗಳ್ ಪಳಂಚಿ
ತೊ|
ಟ್ಟಗೆ ಕೊಳೆ ಪಾಯ್ದವ್ರೋಲ್
ಪೊಳೆವ ಸಂಜೆಯ ಕೆಂಪದು
ಸಾಣೆಗೊಡ್ಡಿದಿ
ಟ್ಟಗೆಯ
ರಜಂಬೊಲೆಂಬಿನೆಗಮಸ್ತಮ
ಯಕ್ಕಿಱಿದಂ ದಿವಾಕರಂ|| ೩೫
||

ಪದ್ಯ-೩೫:ಪದವಿಭಾಗ-ಅರ್ಥ:ಪಗೆ ಸುಗಿವ ಅನ್ನೆಗಂ (ಶತ್ರುವು ಹೆದರುವಂತೆ) ಮಸೆವ ವೀರಭಟರ್ಕಳ ರೌದ್ರಮಪ್ಪ ಕೆಯ್ದುಗಳಿಂ (ಮಸೆದಿರುವ ವೀರಭಟರುಗಳ ಭಯಂಕರವಾದ ಆಯುಧಗಳಿಂದ) ಅಗುರ್ವಿನ ಅದ್ಭುತದಿಂ ಉರ್ವಿದ ಕೆಂಗಿಡಿಗಳ್ (ಭಯಂಕರವ್ರಾ

ಆಶ್ಚರ್ಯಕರವ್ರೊ ಆಗಿ
ಎದ್ದಿರುವ ಕೆಂಗಿಡಿಗಳು)
ಪಳಂಚಿ ತೊಟ್ಟಗೆ ಕೊಳೆ
ಪಾಯ್ದವ್ರೋಲ್ (ತಾಗಿ
ಕೂಡಲೆ ಹಿಡಿಯಲು
ನುಗ್ಗಿದಂತೆ ಕಾಣುವ,) ಪೊಳೆವ
ಸಂಜೆಯ ಕೆಂಪದು
(ಹೊಳೆಯುತ್ತಿರುವ ಆ
ಸಂಜೆಗೆಂಪು, ಅದು) ಸಾಣೆಗೆ
ಒಡ್ಡಿದ ಇಟ್ಟಗೆಯ
ರಜಂಬೊಲ್ ಎಂಬಿನೆಗಂ

(ಸಾಣೆಗೆ ಕೊಟ್ಟ ಇಟ್ಟಿಗೆಯ ಧೂಳೆನ್ನುವ ಹಾಗಿರಲು) ಅಸ್ತಮಯಕ್ಕೆ ಇೞಿದಂ ದಿವಾಕರಂ (ಸೂರ್ಯನು ಅಸ್ತವಾಗಲು ಇಳಿದನು)

ಪದ್ಯ-೩೫:ಅರ್ಥ: ಶತ್ರುವು ಹೆದರುವ ಹಾಗೆ ಮಸೆದಿರುವ ವೀರಭಟರುಗಳ ಭಯಂಕರವಾದ ಆಯುಧಗಳಿಂದ ಭಯಂಕರವೂ

ಆಶ್ಚರ್ಯಕರವೂ ಆಗಿ
ಎದ್ದಿರುವ ಕೆಂಗಿಡಿಗಳು ತಾಗಿ
ಕೂಡಲೆ ಹಿಡಿಯಲು
ನುಗ್ಗಿದಂತೆ ಕಾಣುವ,
ಹೊಳೆಯುತ್ತಿರುವ ಆ
ಸಂಜೆಗೆಂಪು ಸಾಣೆಗೆ ಕೊಟ್ಟ
ಇಟ್ಟಿಗೆಯ ಧೂಳೆನ್ನುವ
ಹಾಗಿರಲು ಸೂರ್ಯನು
ಅಸ್ತವಾಗಲು ಇಳಿದನು

ವ||

ಆಗಳುಭಯಬಲಂಗಳೊಳಂ

ಚಾತುರ್ಯಾಮಾವಸಾನಘಟಿ
ತ ಘಂಟಿಕಾಧ್ವನಿಗಳುಂ
ಸಂಧ್ಯಾಸಮಯಸಮುದಿತ
ಶಂಖಧ್ವನಿಗಳುಂ
ಪಂಚಮಹಾಶಬ್ದಧ್ವನಿಗಳು
ಮೊಡನೊಡನೆ
ನೆಗೞ್ದುವಾಗಳೆರಡುಂ
ಬೀಡುಗಳೊಳಂ
ಭೋರೆಂದಾರ್ದು ರವಳಿ
ಘೋಷಿಸಿ
ಕೊಳ್ಳಿವೀಸಿದಾಗಳ್-

ವಚನ:ಪದವಿಭಾಗ-ಅರ್ಥ:ಆಗಳು ಉಭಯ ಬಲಂಗಳೊಳಂ ಚಾತುರ್ಯಾಂ ಆವಸಾನಘಟಿತ ಘಂಟಿಕಾಧ್ವನಿಗಳುಂ (ನಾಲ್ಕು ಜಾವಗಳ ಕಡೆಯಲ್ಲಿ ಉಂಟಾಗುವ ಗಂಟೆಯ ಶಬ್ದಗಳೂ) ಸಂಧ್ಯಾಸಮಯ ಸಮುದಿತ ಶಂಖಧ್ವನಿಗಳುಂ (ಸಂಧ್ಯಾಕಾಲದಲ್ಲಿ ಶಂಖಧ್ವನಿಗಳೂ)

ಪಂಚಮಹಾಶಬ್ದಧ್ವನಿಗಳುಂ
ಒಡನೊಡನೆ ನೆಗೞ್ದುವು
(ಪಂಚಮಹಾಧ್ವನಿಗಳೂ
ಜೊತೆಜೊತೆಯಲ್ಲಿಯೇ
ಉಂಟಾದುವು) ಆಗಳ್
ಎರಡುಂ ಬೀಡುಗಳೊಳಂ (<-
ಆಗ ಎರಡೂ ಸೈನ್ಯಗಳಲ್ಲಿ)
ಭೋರೆಂದು ಆರ್ದು ರವಳಿ
(ಸದ್ದು) ಘೋಷಿಸಿ
ಕೊಳ್ಳಿವೀಸಿದಾಗಳ್
(ಭೋರೆಂದು ಸಾಮೂಹಿಕ

ಶಬ್ದವನ್ನು ಘೋಷಿಸಿ ಆ ಯುದ್ಧಸೂಚಕವಾದ ಕೊಳ್ಳಿಯ/ ದೀವಟಿಗೆಗಳನ್ನು ಬೀಸಿದರು)-

ವಚನ:ಅರ್ಥ:ಆಗ ಎರಡೂ ಸೈನ್ಯಗಳಲ್ಲಿ ನಾಲ್ಕು ಜಾವಗಳ ಕಡೆಯಲ್ಲಿ ಉಂಟಾಗುವ ಗಂಟೆಯ ಶಬ್ದಗಳೂ ಸಂಧ್ಯಾಕಾಲದಲ್ಲಿ ಶಂಖಧ್ವನಿಗಳೂ ಪಂಚಮಹಾಧ್ವನಿಗಳೂ

ಜೊತೆಜೊತೆಯಲ್ಲಿಯೇ
ಉಂಟಾದುವು. ಆಗ ಎರಡು
ಬೀಡುಗಳಲ್ಲಿಯೂ
ಭೋರೆಂದು ಸಾಮೂಹಿಕ
ಶಬ್ದವನ್ನು ಘೋಷಿಸಿ ಆ
ಯುದ್ಧಸೂಚಕವಾದ
ದೀವಟಿಗೆಗಳನ್ನು ಬೀಸಿದರು.

ಕಂ||
ಉರಿಮುಟ್ಟಿದರಳೆಯಂತಂ
ಬರಮುರಿದತ್ತಜನ
ಪದ್ಮವಿಷ್ಟರದೆಸಳಂ|

ದರೆಸೀದುವಖಿಳ ದಿಗ್ದ್ವ ರ ದರದಂಗಳ್ ಕರಮೆ ಕರಿಪುಗಾಱಿದುವಾಗಳ್|| ೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಉರಿಮುಟ್ಟಿದ ಅರಳೆಯಂತೆ ಅಂಬರಂ ಉರಿದತ್ತು (ಬೆಂಕಿ ತಗುಲಿದ ಹತ್ತಿಯಂತೆ ಆಕಾಶವು ಉರಿದುಹೋಯಿತು.) ಅಜನ ಪದ್ಮವಿಷ್ಟರದ ಎಸಳು ಅಂದು

ಅರೆಸೀದುವು ಅಖಿಳ ದಿಕ್
ದ್ವಿರದ ರದಂಗಳ್ (ಎಲ್ಲ
ದಿಗ್ಗಜಗಳ ದಂತಗಳೂ) ಕರಮೆ
ಕರಿಪುಗಾಱಿದುವು ಆಗಳ್
ಪದ್ಯ-೩೬:ಅರ್ಥ:ಬೆಂಕಿ
ತಗುಲಿದ ಹತ್ತಿಯಂತೆ
ಆಕಾಶವು
ಉರಿದುಹೋಯಿತು. ಬ್ರಹ್ಮನ
ಕಮಲಾಸನದ ದಳಗಳು
ಅರ್ಧ ಸುಟ್ಟವು. ಎಲ್ಲ
ದಿಗ್ಗಜಗಳ ದಂತಗಳೂ

ವಿಶೇಷವಾಗಿ (ಕರುಕಲು) ಕರ್ರ್ರಗಾದುವು

ವ|| ಅಂತು ಕೊಳ್ಳಿವೀಸಿದಿಂಬಱಿಯಂ-

ವಚನ:ಪದವಿಭಾಗ-

ಅರ್ಥ:ಅಂತು ಕೊಳ್ಳಿವೀಸಿದ ಇಂಬಱಿಯಂ-

ವಚನ:ಅರ್ಥ:ಹಾಗೆ ಕೊಳ್ಳಿ ಬೀಸಿದ ಅನಂತರ-

ಕಂ|| ಧೃತ ಧವಳವಸನರಾರಾ

ಧಿತಶಿವರರ್ಚಿತ ಸಮಸ್ತಶಸ್ತ್ರರ್ ನೀರಾ|
ಜಿತತುರಗರೊಪ್ಪಿದರ್ ಕೆಲ ರತಿರಥ ಸಮರಥ ಮಹಾರಥಾರ್ಧರಥರ್ಕಳ್|| ೩೭ ||

ಪದ್ಯ-೩೭:ಪದವಿಭಾಗ-ಅರ್ಥ:ಧೃತ (ಧರಿಸಿದ) ಧವಳವಸನರ್ ಆರಾಧಿತ ಶಿವರ್ ಅರ್ಚಿತ ಸಮಸ್ತಶಸ್ತ್ರರ್ (ಬಿಳಿವಸ್ತ್ರವನ್ನು

ಧರಿಸಿದವರೂ ಶಿವನನ್ನು ಆರಾಸಿದವರೂ ಸಮಸ್ತ ಆಯುಧಗಳನ್ನು ಪೂಜಿಸಿದವರೂ) ನೀರಾಜಿತ ತುರಗರ್ ಒಪ್ಪಿದರ್ (ಆರತಿಯನ್ನೆತ್ತಿದ ಕುದುರೆಗಳುಳ್ಳವರೂ ಶೋಭಿಸಿದರು.) ಕೆಲರು ಅತಿರಥ ಸಮರಥ ಮಹಾರಥ ಅರ್ಧರಥರ್ಕಳ್ (- ಒಪ್ಪಿದರ್) (ಕೆಲವರು ಅತಿರಥ, ಸಮರಥ,

ಮಹಾರಥ, ಅರ್ಧರಥರುಗಳು ಪ್ರಕಾಶಿಸಿದರು)

ಪದ್ಯ-೩೭:ಅರ್ಥ: ಆ ಸೈನ್ಯದಲ್ಲಿ ಬಿಳಿವಸ್ತ್ರವನ್ನು ಧರಿಸಿದವರೂ ಶಿವನನ್ನು ಆರಾಸಿದವರೂ ಸಮಸ್ತ ಆಯುಧಗಳನ್ನು ಪೂಜಿಸಿದವರೂ, ಆರತಿಯನ್ನೆತ್ತಿದ ಕುದುರೆಗಳುಳ್ಳವರೂ ಶೋಭಿಸಿದರು. ಕೆಲವರು

ಅತಿರಥ, ಸಮರಥ, ಮಹಾರಥ, ಅರ್ಧರಥರುಗಳು ಪ್ರಕಾಶಿಸಿದರು.

ಉಡಲುಂ ತುಡಲುಂ ವಸ್ತ್ರಂ ತುಡುಗೆಯನಾನೆಯುಮನರ್ಥಿ ಸಂತತಿಗೀಯಲ್|
ಬಿಡುವೊನ್ನುಮನಾಳ್ಗಟ್ಟುವ ತೊಡರೊಳ್ ತೊಡರ್ದಿರ್ದರರಸುಮಕ್ಕಳ್ ಕೆಲಬರ್|| ೩೮ ||

ಪದ್ಯ-೩೮:ಪದವಿಭಾಗ-ಅರ್ಥ:ಉಡಲುಂ ತುಡಲುಂ ವಸ್ತ್ರಂತುಡುಗೆಯಂ ಆನೆಯುಮಂ ಅರ್ಥಿಸಂತತಿಗೆ ಈಯಲ್ (ಉಡಲು ವಸ್ತ್ರವನ್ನೂ ತೊಡಲು ಆಭರಣವನ್ನೂ ಆನೆಯನ್ನೂ ಯಾಚಕಸಮೂಹಕ್ಕೆ ಕೊಡಲು) ಬಿಡುವೊನ್ನುಮಂ ಆಳ್ಗೆ ಅಟ್ಟುವ ತೊಡರೊಳ್ (ಬಿಡಿ ಹೊನ್ನುಗಳನ್ನೂ

ಸೇವಕರಿಗೆ ಕಳುಹಿಸುವ
ತೊಡಕಿನಲ್ಲಿ) ತೊಡರ್ದಿರ್ದರು
ಅರಸುಮಕ್ಕಳ್ ಕೆಲಬರ್
(ಬಿಡಿ ಹೊನ್ನುಗಳನ್ನೂ
ಸೇವಕರಿಗೆ ಕಳುಹಿಸುವ
ತೊಡಕಿನಲ್ಲಿ ಕೆಲವು ಅರಸು
ಮಕ್ಕಳು ತೊಡಗಿದ್ದರು.)
ಪದ್ಯ-೩೮:ಅರ್ಥ:ಉಡಲು
ವಸ್ತ್ರವನ್ನೂ ತೊಡಲು
ಆಭರಣವನ್ನೂ ಆನೆಯನ್ನೂ
ಯಾಚಕಸಮೂಹಕ್ಕೆ ಕೊಡಲು

ಬಿಡಿ ಹೊನ್ನುಗಳನ್ನೂ
ಸೇವಕರಿಗೆ ಕಳುಹಿಸುವ
ತೊಡಕಿನಲ್ಲಿ ಕೆಲವು ಅರಸು
ಮಕ್ಕಳು ತೊಡಗಿದ್ದರು.

<u>ಸೈನಿಕ ಶೂರರ ವೀರಾಲಾಪ ಮತ್ತು ಸಿದ್ಧತೆ</u>

ವ|| ಆ ಪ್ರಸ್ತಾವದೊಳೊರ್ವಂ ತನ್ನ ದೋರ್ವಲದಗುರ್ವಿನೊಳುರ್ ವೀಪತಿಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆ ಪ್ರಸ್ತಾವದೊಳು ಒರ್ವಂ ತನ್ನ ದೋರ್ವಲದ ಅಗುರ್ವಿನೊಳು ಉರ್ವೀಪತಿಯನು ಇಂತೆಂದಂ-

ವಚನ:ಅರ್ಥ:ಆ ಸಂದರ್ಭದಲ್ಲಿ ಒಬ್ಬನು ತನ್ನ ತೋಳಬಲದ ಆಧಿಕ್ಯದಿಂದ ರಾಜನಿಗೆ ಹೀಗೆ ಹೇಳಿದನು-

ಉ|| ನಾಳೆ ವಿರೋಧಿ ಸಾಧನ
ಘಟಾಘಟಿತಾಹವದಲ್ಲಿ ನಿನ್ನ
ಕ
ಟ್ಟಾಳಿರೆ ಮುಂಚಿ
ತಾಗದೊಡಮಳ್ಕುರೆ ತಾಗಿ
ವಿರೋಸೈನ್ಯ ಭೂ|
ಪಾಳರನೊಂದೆ
ಪೊಯ್ಯದೊಡಮೀ ತಲೆ
ಪೋದೊಡಮಟ್ಟೆಯಟ್ಟಿ ಕ
ಟ್ಟಾಳನೆ ಮುಟ್ಟಿ
ತಳ್ತಿಱಿಯದಿರ್ದೊಡಮಂಜಿದೆ

ನಾಂ ಮಹೀಪತೀ|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ:ನಾಳೆ ವಿರೋಧಿ ಸಾಧನ ಘಟಾಘಟಿತ ಆಹವದಲ್ಲಿ (ನಾಳೆ ನಡೆಯಲಿರುವ ಶತ್ರುಸೈನ್ಯದ ಗಜಯುದ್ಧದಲ್ಲಿ) ನಿನ್ನ ಕಟ್ಟಾಳಿರೆ (ನಿನ್ನ ಶೂರರಿರಲು) ಮುಂಚಿ ತಾಗದೊಡೆ ಅಳ್ಕುರೆ (ಅಳುಕುವಂತೆ ಹೆದರುವಂತೆ) ತಾಗಿ (ಅವರನ್ನು ಮೊದಲೇ

ಹೋಗಿ ಹೆದರುವಂತೆ
ಎದುರಿಸದಿದ್ದರೆ)
ವಿರೋಧಿಸೈನ್ಯ ಭೂಪಾಳರನು
ಒಂದೆ ಪೊಯ್ಯುದೊಡಂ ಈ
ತಲೆ ಪೋದೊಡಂ (ವಿರೋಧಿ
ಸೈನ್ಯದ ರಾಜರನ್ನು ಒಟ್ಟಿಗೆ
ಹೊಡೆಯದಿದ್ದರೆ ಈ ತಲೆ
ಹೊದರೂ) ಅಟ್ಟೆಯಟ್ಟಿ
ಕಟ್ಟಾಳನೆ ಮುಟ್ಟಿ (ಮುಂಡವು
ಹೋಗಿ ಶೂರನ್ನು ಹಿಡಿದು)
ತಳ್ತಿಱಿಯದಿರ್ದೊಡಂ

(ತಾಗಿಹೊಡೆಯದಿದ್ದರೆ)
ಅಂಜಿದೆನ್ ಆಂ ಮಹೀಪತೀ
(ರಾಜನೇ ನಾನು
ಅಂಜಿದವನಾಗುತ್ತೇನೆ.)
ಪದ್ಯ-೩೯:ಅರ್ಥ:(ರಾಜನೇ,)
ನಾಳೆ ನಡೆಯಲಿರುವ
ಶತ್ರುಸೈನ್ಯದ ಗಜಯುದ್ಧದಲ್ಲಿ,
ನಿನ್ನ ಶೂರರಿರಲು ಶತ್ರುಗಳು
ಹೆದರುವಂತೆ, ಅವರನ್ನು
ಮೊದಲೇ ಹೋಗಿ
ಹೆದರುವಂತೆ ಎದುರಿಸದಿದ್ದರೆ,

ವಿವಿರೋಧಿ ಸೈನ್ಯದ
ರಾಜರನ್ನು ಒಟ್ಟಿಗೆ
ಹೊಡೆಯದಿದ್ದರೆ ಈ ನನ್ನ ತಲೆ
ಹೊದರೂ ಮುಂಡವು ಹೋಗಿ
ಶೂರನ್ನು ಹಿಡಿದು
ತಾಗಿಹೊಡೆಯದಿದ್ದರೆ,
ರಾಜನೇ ನಾನು
ಅಂಜಿದವನಾಗುತ್ತೇನೆ.

ವ|| ಎಂದು ತನ್ನ ಮನದ ಪೊಡರ್ಪುಮಂ ಕೂರ್ಪುಮನುಂಟುಮಾಡಿ

ನುಡಿದಂ ಮತ್ತೊರ್ವಂ

ತನ್ನನಾಳ್ದಂ ಪೆರ್ಚಿ

ಪೊರೆದುದರ್ಕೆ ಕರಂ

ಮೆಯ್ಬೆರ್ಚಿ ನುಡಿದಂ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಮನದ ಪೊಡರ್ಪುಮಂ ಕೂರ್ಪುಮಂ ಉಂಟುಮಾಡಿ ನುಡಿದಂ (ಎಂದು ತನ್ನ ಮನದ ಉತ್ಸಾಹವನ್ನೂ ಕೆಚ್ಚನ್ನೂ ಪ್ರದರ್ಶನ ಮಾಡಿ

ಹೇಳಿಸಿದನು.) ಮತ್ತೊರ್ವಂ ತನ್ನನು ಆಳ್ದಂ ಪೆರ್ಚೆ ಪೊರೆದುದರ್ಕೆ (ಸಾಕಿದುದಕ್ಕೆ) ಕರಂ ಮೆಯ್ವೆರ್ಚಿ (ಬಹಳ ಮೆಯ್ಯುಬ್ಬಿ) ನುಡಿದಂ -

ವಚನ:ಅರ್ಥ:ಎಂದು ತನ್ನ ಮನದ ಉತ್ಸಾಹವನ್ನೂ ಕೆಚ್ಚನ್ನೂ ಪ್ರದರ್ಶನ ಮಾಡಿ ಹೇಳಿಸಿದನು. ಮತ್ತೊಬ್ಬನು ತನ್ನ ಯಜಮಾನನು ತನ್ನನ್ನು ವಿಶೇಷವಾಗಿ ಸಾಕಿದುದಕ್ಕೆ

ಬಹಳ ಮೆಯ್ಯುಬ್ಬಿ

ಮಾತನಾಡಿದನು-

ಚಂ|| ಒದವಿದ ನಿನ್ನದೊಂದು

ದಯೆ ಮೇಣ್ ಪಿರಿದೋ

ನೆಗೞ್ದನ್ನ ಗಂಡುಮಾ

ದದಟುಮಳುರ್ಕೆಯುಂ

ಪಿರಿದೊ

ಸಂದೆಯಮಾದಪುದಿಂತಿದಿಲ್ಲಿ

ತೂ|

ಗಿದೊಡಱಿಯಲ್ಕೆ ಬಾರದದು

ಕಾರಣದಿಂ ರಿಪುಭೂಪ

ದಂತಿದಂ
ತದ ತೊಲೆಯೊಳ್
ಪರಾಕ್ರಮದಿನೆನ್ನನೆ ಭೂಪತಿ
ತೂಗಿ ತೋರೆನೇ|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ಒದವಿದ ನಿನ್ನದೊಂದು ದಯೆ ಮೇಣ್ ಪಿರಿದೋ (ನನ್ನಲ್ಲಿ ನಿನಗುಂಟಾದ ದಯೆ ಹೆಚ್ಚಿನದೊ ಅಥವಾ) ನೆಗಳ್ದಿ ಎನ್ನ ಗಂಡುಂ ಆದ ಅದಟುಂ ಅಳುರ್ಕೆಯುಂ ಪಿರಿದೊ

ಸಂದೆಯಮಾದಪುದು (ನನ್ನ ಶೌರ್ಯದ ಕೀರ್ತಿಯು ದೊಡ್ಡದೋ ಎನ್ನುವುದು ಸಂದೇಹವಾಗಿದೆ.) ಇಂತು ಇದು ಇಲ್ಲಿ ತೂಗಿದೊಡೆ ಅಱಿಯಲ್ಕೆ ಬಾರದು (ಇಲ್ಲಿ ಇವೆರಡರನ್ನೂ ತೂಗಿ ನೋಡಲು ಆಗದು.) ಅದು ಕಾರಣದಿಂ ರಿಪುಭೂಪ (ಆದುದರಿಂದ ಶತ್ರುರಾಜರ) ದಂತಿದಂತದ ತೊಲೆಯೊಳ್

(ಆನೆಯ ದಂತದ ತಕ್ಕಡಿಯಲ್ಲಿ) ಪರಾಕ್ರಮದಿಂ ಎನ್ನನೆ ಭೂಪತಿ ತೂಗಿ ತೋರೆನೇ (ನನ್ನ ಪರಾಕ್ರಮದಿಂದ ನನ್ನನ್ನು ತೂಗಿ ತೋರಿಸುತ್ತೇನೆ.)

ಪದ್ಯ-೪೦:ಅರ್ಥ: ಮತ್ತೊಬ್ಬ ವೀರನ ಹೇಳಿಕೆ: ನನ್ನ ಬಗೆಗೆ ನಿನಗುಂಟಾದ ದಯೆ ಹೆಚ್ಚಿನದೊ, ಪ್ರಸಿದ್ಧವಾದ ನನ್ನ ಪೌರುಷವೂ ಅಥವಾ ನನ್ನ

ಶೌರ್ಯದ ಕೀರ್ತಿಯು ದೊಡ್ಡದೋ ಎನ್ನುವುದು ಸಂದೇಹವಾಗಿದೆ. ಇಲ್ಲಿ ಇವೆರಡರನ್ನೂ ತೂಗಿ ನೋಡಲು ಸಾಧ್ಯವಿಲ್ಲ. ಆದುದರಿಂದ ಶತ್ರುರಾಜರ ಆನೆಯ ದಂತದ ತಕ್ಕಡಿಯಲ್ಲಿ ನನ್ನ ಪರಾಕ್ರಮದಿಂದ ನನ್ನನ್ನು ತೂಗಿ ತೋರಿಸುತ್ತೇನೆ.

ವ|| ಎಂದು ತನ್ನ ಸೆರಗುಂ ಬೆರಗುಮಿಲ್ಲದ

ಕಲಿತನಮನಱಿಯೆ ನುಡಿದಂ ಮತ್ತಮೊಂದೆಡೆಯೊಳೊರ್ವ ವೀರಭಟನುದಾರ ವೀರರಸರಸಿಕನಾಗಿ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಸೆರಗುಂ ಬೆರಗುಂ ಇಲ್ಲದ ಕಲಿತನಮನು(ಭಯವೂ ಅಪಾಯವೂ ಇಲ್ಲದ ಶೌರ್ಯವನ್ನು) ಅಱಿಯೆ ನುಡಿದಂ (ಸ್ಪಷ್ಟವಾಗಿ

ತಿಳಿಯುವಂತೆ
ಹೇಳಿದನು.)ಮತ್ತಮೊಂದೆಡೆ
ಯೊಳ್ಬೊರ್ವ
ವೀರಭಟನುದಾರ
ವೀರರಸರಸಿಕನಾಗಿ-
ವಚನ:ಅರ್ಥ:ವ|| ಎಂದು
ತನ್ನ ಭಯವೂ ಅಪಾಯವೂ
ಇಲ್ಲದ ಶೌರ್ಯವನ್ನು
ಸ್ಪಷ್ಟವಾಗಿ ತಿಳಿಯುವಂತೆ
ಹೇಳಿದನು. ಬೇರೊಂದು
ಸ್ಥಳದಲ್ಲಿ ವೀರಭಟನು

ಔದಾರ್ಯದಿಂದ ಕೂಡಿದ ವೀರರಸದಲ್ಲಿ ಮಗ್ನನಾಗಿ ನುಡಿದನು.

ಚಂ||

ಕುದುರೆಯನೇಱಿದಂಬೆರಸು

ಪೌಳಿನೆ ಪೋಗಿರೆ

ಪೊಯ್ದುಮೆಯ್ದೆ ಕ

ಟ್ಟಿದಿರೊಳೆ ನೂಂಕಿದಾನೆಗಳ

ಕೋಡುಗಳಂ ಬಳೆವೋಗೆ

ಪೊಯ್ದುಮಾಂ|

ತದಟರನೊಂದೆವ್ರೊಯ್ದುಮೆರ

ಡುಂ ಬಲಮೆನ್ನನೆ ನೋಡೆ

ತಕ್ಕಿನೆ

ನ್ನದಟುಮನೆನ್ನ

ವೀರಮುಮನಾಜಿಯೊಳೆನ್ನರ

ಸಂಗೆ ತೋಱುವೆಂ|| ೪೧ ||

ಪದ್ಯ-೪೧:ಪದವಿಭಾಗ-

ಅರ್ಥ:ಕುದುರೆಯನು

ಏಱಿದಂ ಬೆರಸು - ಏರಿದ

ಸವಾರನು ಕುದುರೆಯೊಡನೆ

ಸೇರಿ (ಹತ್ತಿದ ಕುದುರೆಯೊಡನೆ

ಸವಾರನು) ಸೌಳೆನೆ ವ್ರೋಗಿರೆ ಪೊಯ್ಯುಂ (‘ಸಿಳ್’ ಎಂದು ಕತ್ತರಿಸುವ ಹಾಗೆ ನುಗ್ಗಿ ಚೆನ್ನಾಗಿ ಹೊಡೆದು,) ಎಯ್ದೆ ಕಟ್ಟಿದಿರೊಳೆ ನೂಂಕಿದಾನೆಗಳ ಕೋಡುಗಳಂ (ನೇರ ಎದುರಾಗಿ ನುಗ್ಗಿದ ಆನೆಗಳ ಕೊಂಬುಗಳನ್ನು) ಬಳೆವ್ರೋಗೆ ಪೊಯ್ಯುಂ (ಅವುಗಳ ಹಾಕಿದ ಅಣಸುಬಳೆ ಬಿದ್ದುಹೋಗುವಂತೆ

ಹೊಡೆದು) ಆಂತ ಅದಟರನು ಒಂದೆವ್ರೊಯ್ದುಂ (ಎದುರಿಸಿದ ಶೂರರರನ್ನೂ ಒಟ್ಟಿಗೆ ಧ್ವಂಸ ಮಾಡಿ) ಎರಡುಂ ಬಲಮೆನ್ನನೆ ನೋಡೆ (ಎರಡು ಸೈನ್ಯಗಳೂ ನನ್ನನ್ನೇ ನೋಡುವಂತೆ) ತಕ್ಕಿನ ಎನ್ನ ಅದಟುಮನು ಎನ್ನ ವೀರಮುಮಂ ಆಜಿಯೊಳ್ ಎನ್ನ ಅರಸಂಗೆ ತೋಱುವೆಂ (ಸಮರ್ಥವಾದ ನನ್ನ ಪರಾಕ್ರಮವನ್ನೂ ನನ್ನ

ವೀರವನ್ನೂ ಯುದ್ಧದಲ್ಲಿ ನನ್ನ ಸ್ವಾಮಿಗೆ ತೋರಿಸುತ್ತೇನೆ)

ಪದ್ಯ-೪೧:ಅರ್ಥ:ಹತ್ತಿದ ಕುದುರೆಯೊಡನೆ ಸವಾರನು 'ಸಿಳ್' ಎಂದು ಕತ್ತರಿಸುವ ಹಾಗೆ ನುಗ್ಗಿ ಚೆನ್ನಾಗಿ ಹೊಡೆದು, ನೇರ ಎದುರಾಗಿ ನುಗ್ಗಿದ ಆನೆಗಳ ಕೊಂಬುಗಳನ್ನು ಅವುಗಳ ಹಾಕಿದ ಅಣಸುಬಳೆ ಬಿದ್ದುಹೋಗುವಂತೆ ಹೊಡೆದು, ಎದುರಿಸಿದ ಶೂರರನ್ನೂ

ಒಟ್ಟಿಗೆ ಧ್ವಂಸ ಮಾಡಿ ಎರಡು ಸೈನ್ಯಗಳೂ ನನ್ನನ್ನೇ ನೋಡುವಂತೆ ಸಮರ್ಥವಾದ ನನ್ನ ಪರಾಕ್ರಮವನ್ನೂ ನನ್ನ ವೀರವನ್ನೂ ಯುದ್ಧದಲ್ಲಿ ನನ್ನ ಸ್ವಾಮಿಗೆ ತೋರಿಸುತ್ತೇನೆ

ವ|| ಎಂದತಿರಭಸ ರಣವ್ಯಸನಮನಾತ್ಮೀಯಶಾಸನಾಯತ್ತಂ ಮಾಡಿದಂ ಮತ್ತೊರ್ವ ನತ್ಯುಗ್ರ

ಮಂಡಳಾಗ್ರಮನನುಗೆಯ್ದು ವೀರಗ್ರಹಗ್ರಸ್ತನಾಗಿ-

ವಚನ:ಪದವಿಭಾಗ-ಅರ್ಥ:ಎಂದು ಅತಿರಭಸ ರಣವ್ಯಸನಮನು (ಎಂದು ಅತ್ಯಂತ ರಭಸದ ತನ್ನ ಯುದ್ಧಾಸಕ್ತಿಯನ್ನು) ಆತ್ಮೀಯ ಶಾಸನಾಯತ್ತಂ ಮಾಡಿದಂ (ಆತ್ಮೀಯ-ತನ್ನ ಶಾಸನ, ಆಜ್ಞೆಗೆ ಅಧಿನನ್ನಾಗಿ ಮಾಡಿದನು-) ಮತ್ತೊರ್ವನು

ಅತ್ಯುಗ್ರ
ಮಂಡಳಾಗ್ರಮನನು(ಕತ್ತಿ)
ಗೆಯ್ದು ವೀರ-ಗ್ರಹ- ಗ್ರಸ್ತನಾಗಿ-
(ಮತ್ತೊಬ್ಬನು ಬಹಳ
ಭಯಂಕರವಾದ ಕತ್ತಿ
ಸಿದ್ಧಪಡಿಸಿಕೊಂಡು
ಪರಾಕ್ರಮವೆಂಬ ಗ್ರಹದಿಂದ
ಹಿಡಿಯಲ್ಪಟ್ಟವನಾದನು.)
ವಚನ:ಅರ್ಥ:ಎಂದು
ಅತ್ಯಂತ ರಭಸದ ತನ್ನ
ಯುದ್ಧಾಸಕ್ತಿಯನ್ನು

ತೋರ್ಪಡಿಸಿಕೊಂಡನು.

ಮತ್ತೊಬ್ಬನು ಬಹಳ

ಭಯಂಕರವಾದ ಕತ್ತಿ

ಸಿದ್ಧಪಡಿಸಿಕೊಂಡು

ಪರಾಕ್ರಮವೆಂಬ ಗ್ರಹದಿಂದ

ಹಿಡಿಯಲ್ಪಟ್ಟವನಾದನು.

ಚಂ|| ಸಿಡಿಲೊಳೆ ತಳ್ತು

ಪೋರ್ವ ಸಿಡಿಲಂತಿರೆ

ಬಾಳೊಳೆ ಬಾಳ್ ಪಳಂಚಿ

ಮಾ

ಕಿಡಿವಿಡೆ ನೋಡಲಂಜಿ
ದೆಸೆದೇವತೆಗಳ್ ಪೆಱಪಿಂಗ್
ತೋಳ ತೀನ್|
ಕಿಡೆ
ನಲಿದೊಂದೆರಱ್ಕುದುರೆಯಟ್ಟೆ
ಯುಮೊಂದೆರಡಾನೆಯಟ್ಟೆ
ಯುಂ
ತೊಡರ್ದೊಡನಾಡೆ
ತಳ್ತಿಱಿಯದಿರ್ದೊಡೆ
ಜೋಳಮನೆಂತು ನೀಗುವೆಂ||
೪೨ ||

ಪದ್ಯ-೪೨:ಪದವಿಭಾಗ-ಅರ್ಥ:ಸಿಡಿಲೊಳೆ ತಳ್ತು ಪೋರ್ವ ಸಿಡಿಲಂತಿರೆ ಬಾಳೊಳೆ (ಬಾಳ್-ಕತ್ತಿ) ಬಾಳ್ ಪಳಂಚೆ (ಕತ್ತಿಯಲ್ಲಿ ಕತ್ತಿಯು ಘಟ್ಟಿಸಿ) ಮಾರ್ ಕಿಡಿವಿಡೆ (ಎದುರು ಕಿಡಿಗಳನ್ನು ಸೂಸುತ್ತಿರಲು,) ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗ್ ತೋಳ ತೀನ್ ಕಿಡೆ (ಅದನ್ನು ನೋಡಿ ದಿಗ್ದೇವತೆಗಳೆಲ್ಲ ಹೆದರಿ

ಹಿಮ್ಮೆಟ್ಟುತ್ತಿರಲು ತೋಳಿನ
ತೀಟೆಯು ಕಿಡೆ- ತೀರಲು)
ನಲಿದು, ಒಂದು ಅರಬ್ಬ್
ಕುದುರೆಯು ಅಟ್ಟೆಯುಂ
ಯುಂ
ಒಂದೆರಡಾನೆಯಟ್ಟೆಯುಂ
(ಒಂದೆರಡು ಕುದುರೆಯ
ಮುಂಡಗಳೂ
ಒಂದೆರಡಾನೆಯ
ಮುಂಡಗಳೂ) ತೊಡರ್ದು
ಒಡನಾಡೆ (ಜೊತೆಯಲ್ಲಿ

ಕುಣಿಯುತ್ತಿರಲು,) ತಳ್ತು
ಇಱಿಯದಿರ್ದೊಡೆ ()
ಜೋಳಮನೆಂತು ನೀಗುವೆಂ
(ನಾನು ಸೆಣಸಿ ಕಾದದಿದ್ದರೆ
ಜೋಳದ ಋಣವನ್ನು ನಾನು
ಹೇಗೆ ತೀರಿಸುತ್ತೇನೆ?)

ಪದ್ಯ-೪೨:ಅರ್ಥ:

ಸಿಡಿಲಿನಲ್ಲಿಯೇ ಸೇರಿಕೊಂಡು
ಸೆಣಸಿ ಹೋರಾಡುವ
ಸಿಡಿಲಿನಂತೆ, ಕತ್ತಿಯಲ್ಲಿ
ಕತ್ತಿಯು ಘಟ್ಟಿಸಿ, ಎದುರು

ಕಿಡಿಗಳನ್ನು ಸೂಸುತ್ತಿರಲು
ಅದನ್ನು ನೋಡಿ
ದಿಗ್ದೇವತೆಗಳೆಲ್ಲ ಹೆದರಿ
ಹಿಮ್ಮೆಟ್ಟುತ್ತಿರಲು ತೋಳಿನ
ನವೆಯು ತೀರಲು, ಒಂದೆರಡು
ಕುದುರೆಯ ಮುಂಡಗಳೂ
ಒಂದೆರಡಾನೆಯ
ಮುಂಡಗಳೂ ಜೊತೆಯಲ್ಲಿ
ಕುಣಿಯುತ್ತಿರಲು, ನಾನು
ಸೆಣಸಿ ಕಾದದಿದ್ದರೆ ಜೋಳದ

ಋಣವನ್ನು ನಾನು ಹೇಗೆ ತೀರಿಸುತ್ತೇನೆ?

ವ|| ಎಂದು ನಿಜಭುಜವಿಜಯಮನಪ್ಪುಕೆಯ್ದು ನುಡಿದಂ ಮತ್ತೊರ್ವನಲ್ಲಿಯೆ-

ವಚನ:ಪದವಿಭಾಗ-

ಅರ್ಥ:ಎಂದು ನಿಜಭುಜವಿಜಯಮನು ಅಪ್ಪುಕೆಯ್ದು ನುಡಿದಂ (ತನ್ನ ತೋಳಿನ ಜಯವನ್ನು ನಂಬಿ

ಮಾತನಾಡಿದನು)
ಮತ್ತೊರ್ವನು ಅಲ್ಲಿಯೆ
(ಅಲ್ಲಿಯೇ ಮತ್ತೊಬ್ಬನು)-
ವಚನ:ಅರ್ಥ:ವ|| ಎಂದು
ತನ್ನ ತೋಳಿನ ಜಯವನ್ನು
ನಂಬಿ ಮಾತನಾಡಿದನು.
ಅಲ್ಲಿಯೇ ಮತ್ತೊಬ್ಬನು-

ಮ|| ಸುರಲೋಕಂ
ದೊರೆಕೊಳ್ವುದೊಂದು ಪರಮ
ಶ್ರೀಲಕ್ಷ್ಮಿಯುಂ ಬರ್ಪುದಾ

ದರದಿಂ ದೇವನಿಕಾಯದೊಳ್
ನೆರೆವುದೊಂದುತ್ಸಾಹಮುಂ
ತನ್ನ ಮೆ|
ಯ್ಸಿರಿ ಭಾಗ್ಯಂ
ನೆರಮಪ್ಪುದೊಂದೆ ರಣದೊಳ್
ಗೆಲ್ದಾಜಿಯಂ ತಳ್ತು ಸಂ
ಗರದೊಳ್ ಜೋಳದ
ಪಾೞಿಯಂ ನೆರಪಿದಂ ಗಂಡಂ
ಪೆಱಂ ಗಂಡನೇ|| ೪೩ ||

ಪದ್ಯ-೪೩:ಪದವಿಭಾಗ-

ಅರ್ಥ:ಸುರಲೋಕಂ

ದೊರೆಕೊಳ್ವುದೊಂದು,
(ದೇವಲೋಕ
ಪ್ರಾಪ್ತಿಯಾಗುವುದು ಒಂದು
ಫಲ) ಪರಮ ಶ್ರೀಲಕ್ಷ್ಮಿಯುಂ
ಬರ್ಪುದು (ಹಾಗೆಯೇ
ಉತ್ತಮ ಐಶ್ವರ್ಯವೂ
ಪ್ರಾಪ್ತವಾಗುವುದು
ಮತ್ತೊಂದು ಫಲ.) ಅದರದಿಂ
ದೇವನಿಕಾಯದೊಳ್
ನೆರೆವುದೊಂದು (ದೇವತೆಗಳ
ಸಮೂಹದಲ್ಲಿ ಸೇರುವುದು,)

ಉತ್ಸಾಹಮುಂ ತನ್ನ ಮೆಯ್ಸಿರಿ ಭಾಗ್ಯಂ ನೆರಮಪ್ಪುದು (ನನ್ನ ಉತ್ಸಾಹವೂ ದೇಹಕಾಂತಿಯೂ ಹೆಚ್ಚುವುದು.) ಒಂದೆ ರಣದೊಳ್ ಗೆಲ್ದು ಆಜಿಯಂ (ಯುದ್ಧವನ್ನು) ತಳ್ತು ಸಂಗರದೊಳ್ (ಇಂತಹ ಒಂದು ಯುದ್ಧದಲ್ಲಿ ಭಾಗವಹಿಸಿ ಗೆದ್ದು) ಜೋಳದ ಪಾಟಿಯಂ ನೆರಪಿದಂ

(ಅನ್ನದ ಋಣವನ್ನು ತೀರಿಸಿದವನೇ) ಗಂಡಂ ಪೆಱಂ ಗಂಡನೇ (ನಿಜವಾಗಿ ಶೂರ. ಬೇರೆಯವನು ಶೂರನೇ? ಅಲ್ಲ!)

ಪದ್ಯ-೪೩:ಅರ್ಥ:ಯುದ್ಧದಲ್ಲಿ ಮಡಿದರೆ, ದೇವಲೋಕ ಪ್ರಾಪ್ತಿಯಾಗುವುದು ಒಂದು ಫಲ, ಹಾಗೆಯೇ ಉತ್ತಮ ಐಶ್ವರ್ಯವೂ ಪ್ರಾಪ್ತವಾಗುವುದು

ಮತ್ತೊಂದು ಫಲ.ದೇವತೆಗಳ ಸಮೂಹದಲ್ಲಿ ಸೇರುವುದು, ನನ್ನ ಉತ್ಸಾಹವೂ ದೇಹಕಾಂತಿಯೂ ಹೆಚ್ಚುವುದು. ಇಂತಹ ಒಂದು ಯುದ್ಧದಲ್ಲಿ ಭಾಗವಹಿಸಿ ಗೆದ್ದು, ಅನ್ನದ ಋಣವನ್ನು ತೀರಿಸಿದವನೇ ನಿಜವಾಗಿ ಶೂರ. ಬೇರೆಯವನು ಶೂರನೇ? ಅಲ್ಲ.

ವ|| ಎಂದು ನುಡಿದಂ-

ವಚನ:ಅರ್ಥ:ವ||

ಎಂಬುದಾಗಿ ಹೇಳಿದನು.

ಮ|| ತವೆ ಮಾಱುಂತ ಬಲಂ

ಕಱುತ್ತಿಱಿದು ತನ್ನಾಳ್ದಂ ಕರಂ

ಮೆಚ್ಚೆ ಗೆ

ಲ್ದವನಂ ಶ್ರೀವಧು ಪತ್ತುಗುಂ

ಮಡಿದನಂ

ದೇವಾಂಗನಾನೀಕಮು|

ತ್ಸವದಿಂದುಯ್ಗುಮದೆಂತುಮಿಂ

ಬು ಸುಭಟಂಗಿಂತಪ್ಪುದಂ

ಕಂಡುಮಂ

ಜುವನೇಕಂಜುವನೆಂದು ಪೆರ್ಚಿ ನುಡಿದಂ ಮತ್ತೊರ್ವನಾಸ್ಥಾನದೊಳ್‌|| ೪೪||

ಪದ್ಯ-೪೪:ಪದವಿಭಾಗ-ಅರ್ಥ:ತವೆ (ಬಹಳ) ಮಾಱುಂತ ಬಲಂ ಕಱುತ್ತು (ಕೋಪದಿಂದ) ಇಱಿದು (ಹೊಡೆದು) ತನ್ನಾಳ್ದಂ ಕರಂ ಮೆಚ್ಚೆ ಗೆಲ್ದವನಂ (ತನ್ನ ಸ್ವಾಮಿಯು ವಿಶೇಷವಾಗಿ

ಮೆಚ್ಚುವಂತೆ ಗೆದ್ದವನು)
ಶ್ರೀವಧು ಪತ್ತುಗುಂ (ತನ್ನ
ಸ್ವಾಮಿಯು ವಿಶೇಷವಾಗಿ
ಮೆಚ್ಚುವಂತೆ ಗೆದ್ದವನನ್ನು
ಅಪಾರವಾದ ಐಶ್ವರ್ಯವು
ಸೇರುತ್ತದೆ.) ಮಡಿದನಂ
ದೇವಾಂಗನಾನೀಕಂ
ಉತ್ಸವದಿಂದ ಉಯ್ಗುಂ
(ಮಡಿದವನನ್ನು
ದೇವತಾಸ್ತ್ರೀಯರ
ಸಮೂಹವು ಸಂತೋಷದಿಂದ

ಒಯ್ಯುತ್ತದೆ.) ಅದು ಎಂತುಂ ಇಂಬು ಸುಭಟಂಗೆ ಇಂತಪ್ಪುದಂ ಕಂಡುಂ ಅಂಜುವನು (ಅದು ಹೇಗೂ ಸುಭಟನಿಗೆ ಹೀಗಿರುವುದನ್ನು ತಿಳಿದೂ ಹೆದರುವವನು) ಏಕಂಜುವನು ಎಂದು (ಏಕೆ ಹೆದರುತ್ತಾನೆ ಎಂದು) ಪೆರ್ಚಿ (ಉಬ್ಬಿ) ನುಡಿದಂ ಮತ್ತೊರ್ನ್ನ ಆಸ್ಥಾನದೊಳ್ (ಎಂದು ಮತ್ತೊಬ್ಬನು ಆ

ರಾಜಸಭೆಯಲ್ಲಿ ಉಬ್ಬಿ ಹೇಳಿದನು.)

ಪದ್ಯ-೪೪:ಅರ್ಥ:
ಪ್ರತಿಭಟಿಸಿದ ಸೈನ್ಯವು ಬಹಳ ಕೋಪದಿಂದ ಹೊಡೆದು, ತನ್ನ ಸ್ವಾಮಿಯು ವಿಶೇಷವಾಗಿ ಮೆಚ್ಚುವಂತೆ ಗೆದ್ದವನನ್ನು ಅಪಾರವಾದ ಐಶ್ವರ್ಯವು ಸೇರುತ್ತದೆ. ಮಡಿದವನನ್ನು ದೇವತಾಸ್ತ್ರೀಯರ ಸಮೂಹವು ಸಂತೋಷದಿಂದ

ಒಯ್ಯುತ್ತದೆ. ಅದು ಹೇಗೂ ಸುಭಟನಿಗೆ ಹೀಗಿರುವುದನ್ನು ತಿಳಿದೂ ಹೆದರುವವನು ಏಕೆ ಹೆದರುತ್ತಾನೆ ಎಂದು ಮತ್ತೊಬ್ಬನು ಆ ರಾಜಸಭೆಯಲ್ಲಿ ಉಬ್ಬಿ ಹೇಳಿದನು.

ವ|| ಅಂತು ನುಡಿದೆರಡುಂ ಬಲಂಗಳುಂ ತಂತಮ್ಮ ವೀರಮಂ ಚಾಗಮಂ ಮೆದು ತಮ್ಮ ಕೆಯ್ದುಗಳನರ್ಚಿಸಿ

ದರ್ಭಶಯನಂ ಮಾಡಿ ಪಲ್ಲಂ
ಸುಲಿದು ಶಸ್ತ್ರಸಂಗ್ರಹರಾಗಿ
ಪಲರುಂ ವೀರಭಟರ್ ತಮ್ಮಂ
ತಾಮೆ ಪರಿಚ್ಛೇದಿಸಿರ್ದರತ್ತ
ಮತ್ತಮೊರ್ವಂ ತನ್ನ
ನಲ್ಲಳೊಳಿಂತೆಂದನೀ ಪೊೞ್ತೆ
ಪೊೞ್ತು ನಾಳೆ ದೇವಲೋಕದ
ಕನ್ಯಕೆಯರೋಲಗದೊಳಿರ್ಪೆ
ನೆಂದು ನುಡಿಯೆ ನೀನೆಂದಂತು
ಪೋಗಲ್ ತೀರದು ನಾಳೆ
ಮಗುೞ್ದು ಬಂದೆನ್ನೊಳ್

ನೆರೆವೆಯೆಂದು ಪೇೞೆ ನಿನಗೞಿವುಂಟೆ ಎಂದು ಕೇಳೆಯೆನ್ನೋಲೆವಾಗ್ಯಮುಂ ಟೆಂದಳ್ ಮತ್ತಮೊಂದೊಡೆಯೊಳೊರ್ವಳ್ ದರ್ಭಶಯನಸ್ಥನಾದ ನಿಜಪ್ರಾಣೇಶ್ವರನ ಪರಿಚ್ಛೇದಮನಱಿದು ತನ್ನ ಸಾವಂ ಪರಿಚ್ಛೇದಿಸಿ-

ವಚನ:ಪದವಿಭಾಗ-

ಅರ್ಥ:ಅಂತು ನುಡಿದೆರಡುಂ

ಬಲಂಗಳುಂ ತಂತಮ್ಮ
ವೀರಮಂ ಚಾಗಮಂ ಮೆದು
ತಮ್ಮ ಕೆಯ್ದುಗಳನರ್ಚಿಸಿ
ದರ್ಭಶಯನಂ ಮಾಡಿ ಪಲ್ಲಂ
ಸುಲಿದು ಶಸ್ತ್ರಸಂಗ್ರಹರಾಗಿ
ಪಲರುಂ
(ಹಲವರು)ವೀರಭಟರ್
ತಮ್ಮಂ ತಾಮೆ ಪರಿಚ್ಛೇದಿಸಿರ್;
ಅತ್ತ ಮತ್ತಮೊರ್ವಂ ತನ್ನ
ನಲ್ಲಳೊಳು ಇಂತೆಂದನು (ತನ್ನ
ಪ್ರಿಯಳೊಡನೆ ಹೀಗೆಂದನು.)

ಈ ಪೊೞ್ತೆ ಪೊೞ್ತು ನಾಳೆ
ದೇವಲೋಕದ ಕನ್ಯಕೆಯರ
ಓಲಗದೊಳು ಇರ್ಪೆನೆಂದು
ನುಡಿಯೆ (ಈ ಹೊತ್ತೇ ಹೊತ್ತು.
ನಾಳೆ ದೇವಲೋಕದ ಸ್ತ್ರೀಯರ
ಸಭೆಯಲ್ಲಿ ಇರುತ್ತೇನೆ ಎಂದು
ಹೇಳಲು,) ನೀನು ಎಂದು
ಅಂತು ಪೋಗಲ್ ತೀರದು
(ಅವಳು 'ನೀನು ಹೇಳಿದ ಹಾಗೆ
ಹೋಗುವುದು ಸಾಧ್ಯವಿಲ್ಲ.)
ನಾಳೆ ಮಗುೞ್ದು ಬಂದು

ಎನ್ನೊಳ್ ನೆರೆವೆಯೆಂದು
ಪೇೞೆ (ನಾಳೆ ಪುನ ನೀನು
ಬಂದು ನನ್ನಲ್ಲಿ
ಸೇರುತ್ತೀಯೆ'ಎಂದು
ಹೇಳಲು,) ನಿನಗೆ ಅಱಿವುಂಟೆ
ಎಂದು ಕೇಳೆ ('ಅದು ನಿನಗೆ
ಹೇಗೆ ಗೊತ್ತು' ಎಂದು
ಪ್ರಶ್ನಿಸಲು,)
ಎನ್ನೋಲೆವಾಗ್ಯಮುಂಟು
ಎಂದಳ್ (ಅವಳು 'ನನ್ನ
ಓಲೆಭಾಗ್ಯವುಂಟು' ಎಂದಳು)

ಮತ್ತಮ್ ಒಂದೊಡೆಯೊಳು
ಒರ್ವಳ್
ದರ್ಭಶಯನಸ್ಥನಾದ
ನಿಜಪ್ರಾಣೇಶ್ವರನ (ದರ್ಭೆಯ
ಹಾಸಿಗೆಯಲ್ಲಿದ್ದ ತನ್ನ ಪತಿಯ)
ಪರಿಚ್ಛೇದಮನು ಅಱಿದು ತನ್ನ
ಸಾವಂ ಪರಿಚ್ಛೇದಿಸಿ (ತನ್ನ
ಸಾವನ್ನು ನಿಷ್ಕರ್ಷಿಸಿ)-
ವಚನ:ಅರ್ಥ:ಹೀಗೆ
ಮಾತನಾಡಿ ಎರಡು
ಸೈನ್ಯದವರೂ ತಮ್ಮ ತಮ್ಮ

ಶೌರ್ಯವನ್ನೂ, ತ್ಯಾಗವನ್ನೂ ಪ್ರದರ್ಶಿಸಿ ತಮ್ಮ ಆಯುಧಗಳನ್ನು ಪೂಜಿಸಿ ದರ್ಭೆಯ ಮೇಲೆ ಮಲಗಿ, ಹಲ್ಲನ್ನು ತೊಳೆದು, ಶಸ್ತ್ರಧಾರಿಗಳಾಗಿ ಅನೇಕ ವೀರಭಟರು ತಮ್ಮ ವಿಷಯವನ್ನು ತಾವೇ ನಿಶ್ಚಯಿಸಿದರು. ಆ ಕಡೆ ಮತ್ತೊಬ್ಬನು ತನ್ನ ಪ್ರಿಯಳೊಡನೆ ಹೀಗೆಂದನು.

ಈ ಹೊತ್ತೇ ಹೊತ್ತು. ನಾಳೆ ದೇವಲೋಕದ ಸ್ತ್ರೀಯರ ಸಭೆಯಲ್ಲಿ ಇರುತ್ತೇನೆ ಎಂದು ಹೇಳಿದನು. ಅವಳು ‘ನೀನು ಹೇಳಿದ ಹಾಗೆ ಹೋಗುವುದು ಸಾಧ್ಯವಿಲ್ಲ. ನಾಳೆ ಪುನ ನೀನು ಬಂದು ನನ್ನಲ್ಲಿ ಸೇರುತ್ತೀಯೆ’ ಎನ್ನಲು, ‘ಅದು ನಿನಗೆ ಹೇಗೆ ಗೊತ್ತು’ ಎಂದು ಪ್ರಶ್ನಿಸಿದನು. ಅವಳು ‘ನನ್ನ ಓಲೆಭಾಗ್ಯವುಂಟು’ ಎಂದಳು.

ಬೇರೊಂದು ಕಡೆಯಲ್ಲಿ
ಒಬ್ಬಳು ದರ್ಭೆಯ
ಹಾಸಿಗೆಯಲ್ಲಿದ್ದ ತನ್ನ ಪತಿಯ
ನಿಶ್ಚರ್ಯವನ್ನು ತಿಳಿದು ತನ್ನ
ಸಾವನ್ನು ನಿಷ್ಕರ್ಷಿಸಿ

ಉ|| ತಾಂ ಗಡ ನಾಳೆ ಪೋಗಿ
ದಿವಿಜಾಂಗನೆಯೊಳ್
ತೊಡರ್ದಿರ್ಪನಿಲ್ಲಿ ಮಾ
ಣ್ದಾಂ ಗಡಮಿರ್ಪೆನಂತನಿತು
ಬೆಳ್ಪೆನೆ ಮುನ್ನಮೆ ಪೋಗಿ
ನಲ್ಮೆಗೆ

ಲ್ಲಂಗೊಳೆ

ದೇವಲೋಕದೊಳಧೀಶನನಾ

ದಿರ್ಗೊಳ್ವೆನೋವೊ ಸ

ಗ್ಗಂಗಳೊಳಿರ್ಪ ದೇವಡಿತಿ

ತೊಟ್ಟಿರೊಳಟ್ಟಿಯನಾಗಲೀ

ವೆನೇ|| ೪೫ ||

ಪದ್ಯ-೪೫:ಪದವಿಭಾಗ-

ಅರ್ಥ:ತಾಂ ಗಡ ನಾಳೆ ಪೋಗಿ

ದಿವಿಜಾಂಗನೆಯೊಳ್

ತೊಡರ್ದಿರ್ಪನು (ಓಹೋ!

ನನ್ನ ಪತಿಯು ನಾಳೆ ಹೋಗಿ

ದೇವತಾಸ್ತ್ರೀಯರಲ್ಲಿ
ಸೇರಿರುತ್ತಾನೆ,) ಇಲ್ಲಿ ಮಾಣ್ದು
ಆಂ ಗಡಂ ಇರ್ಪೆನಂತು (ಇಲ್ಲಿ
ನಾನು ಮಾತ್ರ ಹೇಗೆ ಇರಲಿ?)
ಅನಿತು ಬೆಳ್ಪನೆ (ದಡ್ಡಳೇ)
ಮುನ್ನಮೆ ಪೋಗಿ
ನಲ್ಮೆಗೆಲ್ಲಂಗೊಳೆ
ದೇವಲೋಕದೊಳು
(ಮೊದಲೇ ಹೋಗಿ ನನ್ನ
ಸದ್ಗುಣವು ಪ್ರಕಾಶವಾಗುವ
ಹಾಗೆ ದೇವಲೋಕದಲ್ಲಿ)

ಅಧೀಶನನು ಇದಿರ್ಗೊಳ್ವೆನು (ನನ್ನ ಪತಿಯನ್ನು ಇದಿರುಗೊಳ್ಳುತ್ತೇನೆ.) ಓವೊ ಸಗ್ಗಂಗಳೊಳಿರ್ಪ ದೇವಡಿತಿ ತೊೞ್ತಿರೊಳ್ ಅೞ್ತಿಯನು ಆಗಲು ಈವೆನೇ (ಓಹೋ ಸ್ವರ್ಗದಲ್ಲಿರುವ ದೇವಸ್ತ್ರೀಯರೆಂಬ ದಾಸಿಯರಲ್ಲಿ (ನನ್ನ ಪತಿಯು) ಪ್ರೀತಿಸುವುದಕ್ಕೆ ಅವಕಾಶ ಕೊಡುತ್ತೇನೆಯೇ?)

ಪದ್ಯ-೪೫:ಅರ್ಥ:ನನ್ನ ಪತಿಯು ನಾಳೆ ಹೋಗಿ ದೇವತಾಸ್ತ್ರೀಯರಲ್ಲಿ ಸೇರಿರುತ್ತಾನೆ, ಇಲ್ಲಿ ನಾನು ಮಾತ್ರ ಹೇಗೆ ಇರಲಿ? ಅಷ್ಟು ದಡ್ಡಳೇ ನಾನು! ಮೊದಲೇ ಹೋಗಿ ನನ್ನ ಸದ್ಗುಣವು ಪ್ರಕಾಶವಾಗುವ ಹಾಗೆ ದೇವಲೋಕದಲ್ಲಿ ನನ್ನ ಪತಿಯನ್ನು ಇದಿರುಗೊಳ್ಳುತ್ತೇನೆ. ಓಹೋ

ಸ್ವರ್ಗದಲ್ಲಿರುವ
ದೇವಸ್ತ್ರೀಯರೆಂಬ
ದಾಸಿಯರಲ್ಲಿ (ನನ್ನ ಪತಿಯು)
ಪ್ರೀತಿಸುವುದಕ್ಕೆ ಅವಕಾಶ
ಕೊಡುತ್ತೇನೆಯೇ?

ವ|| ಎಂದು ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಳ್ ಮತ್ತೊರ್ವಳ್ ತನ್ನಾಣ್ಮನ ದೋರ್ವಲದಗುರ್ವಂ ನೆಚ್ಚಿ-

ವಚನ:ಪದವಿಭಾಗ-ಅರ್ಥ:ಎಂದು ಕೈದವಮಿಲ್ಲದ (ಕಪಟವಿಲ್ಲದ) ನಲ್ಮೆಯಂ (ಪ್ರೇಮವನ್ನು) ನಾಲಗೆಯ ತುದಿಗೆ ತಂದು ನುಡಿದಳ್ ಮತ್ತೊರ್ವಳ್ ತನ್ನ ಆಣ್ಮನ ದೋರ್ವಲದ ಅಗುರ್ವಂ ನೆಚ್ಚಿ (ತನ್ನ ಪ್ರಿಯ ಗಂಡನ ಬಾಹುಬಲದ ಆಧಿಕ್ಯವನ್ನು ನಂಬಿ)-

ವಚನ:ಅರ್ಥ:ವ|| ಎಂದು ಕಪಟವಿಲ್ಲದ ತನ್ನ ಪ್ರೇಮವನ್ನು ನಾಲಗೆಯ ತುದಿಗೆ ತಂದು ಸ್ಪಷ್ಟವಾಗಿ ಹೇಳಿದಳು. ಮತ್ತೊಬ್ಬಳು ತನ್ನ ಪ್ರಿಯ ಗಂಡನ ಬಾಹುಬಲದ ಆಧಿಕ್ಯವನ್ನು ನಂಬಿ

ಚಂ|| ಜಲಧಿಯೊಳಾದ ಮುತ್ತುಗಳವೇಂ ಪೊಸತಾದುವೆ ನಿನ್ನ ತೋಳ ಬಾ

ಚೊಳೆ ಬಲಗರ್ವದಿಂ

ತೆಗೆದುದಗ್ರ ವಿರೋಧಿ ಮದೇಭ

ಮಸ್ತಕ|

ಸ್ಥಳ ಜಳರಾಶಿಯೊಳ್ ಬಳೆದ

ನಿರ್ಮಳ ನಿರ್ವ್ರಣ

ವೃತ್ತಮೌಕ್ತಿಕಾ

ವಳಿಯನೆ ತರ್ಪುದೆಂದು

ನುಡಿದಟ್ಕಿರೊಳಾಱಿಸಿದಳ್

ನಿಜೇಶನಂ|| ೪೬ ||

ಪದ್ಯ-೪೬:ಪದವಿಭಾಗ-

ಅರ್ಥ:ಜಲಧಿಯೊಳಾದ

ಮುತ್ತುಗಳವೇಂ
ಪೊಸತಾದುವೆ (ಸಮುದ್ರದಲ್ಲಿ
ಹುಟ್ಟಿದ ಮುತ್ತುಗಳು
ಹೊಸದಾದುದೇನು?) ನಿನ್ನ
ತೋಳ ಬಾಳೊಳೆ (ತೋಳೆಂಬ
ಕತ್ತಿಯಿಂದ) ಬಲಗರ್ವದಿಂ
ತೆಗೆದ (ಬಲಪ್ರದರ್ಶನಮಾಡಿ
ತೆಗೆದ) ಉದಗ್ರ ವಿರೋಧಿ
ಮದೇಭ ಮಸ್ತಕಸ್ಥಳ
ಜಳರಾಶಿಯೊಳ್
(ಭಯಂಕರವಾದ ಶತ್ರುರಾಜರ

ಮದ್ದಾನೆಯ ಕುಂಭಸ್ಥಳದ
ಜಲರಾಶಿಯಿಂದ) ಬಳೆದ
ನಿರ್ಮಳ ನಿರ್ವ್ರಣ
ವೃತ್ತಮೌಕ್ತಿಕಾವಳಿಯನೆ
(ಬೆಳೆದ ನಿರ್ಮಲವಾದ
ಮುಕ್ಕಾಗದ ಮುತ್ತುಗಳನ್ನೇ)
ತರ್ಪುದೆಂದು ನುಡಿದು
ಅಟ್ಟಿರೊಳು ಆೞಿಸಿದಳ್
ನಿಜೇಶನಂ
(ತಂದುಕೊಡಬೇಕು ಎಂದು
ಪ್ರೀತಿಯಿಂದ ತನ್ನ ಗಂಡನನ್ನು

ಕುರಿತು ಸಮಾಧಾವಾಗಿ ಹೇಳಿದಳು)

ಪದ್ಯ-೪೬:ಅರ್ಥ:
ಸಮುದ್ರದಲ್ಲಿ ಹುಟ್ಟಿದ ಮುತ್ತುಗಳು ಹೊಸದಾದುದೇನು? ನಿನ್ನ ತೋಳೆಂಬ ಕತ್ತಿಯಿಂದ ಬಲಪ್ರದರ್ಶನಮಾಡಿ ತೆಗೆದ ಭಯಂಕರವಾದ ಶತ್ರುರಾಜರ ಮದ್ದಾನೆಯ ಕುಂಭಸ್ಥಳದ ಜಲರಾಶಿಯಲ್ಲಿ ಬೆಳೆದ

ನಿರ್ಮಲವಾದ ಮುಕ್ಕಾಗದ
ಮುತ್ತುಗಳನ್ನೇ
ತಂದುಕೊಡಬೇಕು ಎಂದು
ಪ್ರೀತಿಯಿಂದ ತನ್ನ ಗಂಡನನ್ನು
ಕುರಿತು ಸಮಾಧಾವಾಗಿ
ಹೇಳಿದಳು.

**ವ|| ಅಂತುಭಯ
ಬಲಂಗಳೊಳಂ
ವೀರಜನಜನಿತಾಳಾಪಂಗಳ್
ನೆಗೞೆ
ವಿಕ್ರಮಾರ್ಜುನನನಂತನುಂ**

ತಾನುಂ ಜಲಕ್ಕನಿರೆ ಪಲ್ಲಂ
ಸುಲಿದಗಣ್ಯ ಪುಣ್ಯ
ತೀರ್ಥೋದಕಂಗಳಂ ಮಿಂದು
ಮಂಗಳವಸದನಂಗೊಂಡು
ಸಾಮಾನ್ಯಯಜ್ಞಂಗೆಯ್ದು
ಪಲವುಂ ತೆಱದ ಪಗಳೆಸೆಯೆ
ನಾಂದೀಮುಖಮಂ
ನಿರ್ವರ್ತಿಸಿ
ಶುಭಲಕ್ಷಣಲಕ್ಷಿತನುಂ
ಸನ್ನಾಹಕರ್ಮನಿರ್ಮಿತನುಂ
ಹಸ್ತಾಯುಧ ಕುಶಳನುಂ

ಭದ್ರಮನನುಮಪ್ಪ ವಿಜಯಗಜಮುಮನಕ್ಷಯರಥಾಶ್ವಕೇತನ ಶರಾಸನ ಶರ ವಿಚಿತ್ರ ತನುತ್ರ ವಿವಿಧಾಸ್ತ್ರಶಸ್ತ್ರಂಗಳುಮಂ ಗಂಧ ಧೂಪ ದೀಪಾದಿಗಳಿಂದರ್ಚಿಸಿ ಪೊಡೆವಟ್ಟಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಉಭಯ ಬಲಂಗಳೊಳಂ

ವೀರಜನಜನಿತ ಆಳಾಪಂಗಳ್
ನೆಗೞೆ (ಹಾಗೆ ಎರಡು
ಸೈನ್ಯಗಳಲ್ಲಿ ವೀರಲಾಪಗಳು
ಹೆಚ್ಚಲು,) ವಿಕ್ರಮಾರ್ಜುನನು
ಅನಂತನುಂ ತಾನುಂ
ಜಲಕ್ಕನಿರೆ ಪಲ್ಲಂ ಸುಲಿದು
(ಅರ್ಜುನನೂ ಕೃಷ್ಣನೂ
ನಿರ್ಮಲವಾಗಲು ಹಲ್ಲನ್ನು
ತೊಳೆದು) ಅಗಣ್ಯ ಪುಣ್ಯ
ತೀರ್ಥೋದಕಂಗಳಂ ಮಿಂದು
(ಅಸಂಖ್ಯಾತವಾದ ಪವಿತ್ರ

ತೀರ್ಥದ ನೀರಿನಲ್ಲಿ
ಸ್ನಾನಮಾಡಿ,)
ಮಂಗಳವಸದನಂಗೊಂಡು
ಸಾಮಾನ್ಯಯಜ್ಞಂಗೆಯ್ದು
(ಮಂಗಳಾಭರಣಗಳನ್ನು
ತೊಟ್ಟು ನಿತ್ಯಕರ್ಮಗಳನ್ನು
ಮುಗಿಸಿ) ಪಲವುಂ ತೆಱದ
ಪಗಳೆಸೆಯೆ (ನಾನಾ ರೀತಿಯ
ವಾದ್ಯಗಳು ಮೊಳಗುತ್ತಿರಲು)
ನಾಂದೀಮುಖಮಂ
ನಿರ್ವರ್ತಿಸಿ

(ನಾಂದಿಮುಖವೆಂಬ
ಪಿತೃಯಜ್ಞವನ್ನು
ಮುಗಿಸಿದರು.) ಶುಭಲಕ್ಷಣ
ಲಕ್ಷಿತನುಂ ಸನ್ನಾಹ ಕರ್ಮ
ನಿರ್ಮಿತನುಂ
(ಶುಭಲಕ್ಷಣಗಳಿಂದ
ಕೂಡಿದುದೂ
ಯುದ್ಧಕಾರ್ಯಕ್ಕೆ
ಸಿದ್ಧಮಾಡಲಟ್ಟುದೂ)
ಹಸ್ತಾಯುಧ ಕುಶಳನುಂ
ಭದ್ರಮನನುಮಪ್ಪ

ವಿಜಯಗಜಮುಮನು
(ಕರಕೌಶಲ್ಯ ಉಳ್ಳುದೂ
ಭದ್ರಜಾತಿಗೆ ಸೇರಿದುದೂ ಆದ
ವಿಜಯಗಜವನ್ನೂ)
ಅಕ್ಷಯರಥ ಅಶ್ವ ಕೇತನ
ಶರಾಸನ ಶರ ವಿಚಿತ್ರ ತನುತ್ರ
ವಿವಿಧಾಸ್ತ್ರಶಸ್ತ್ರಂಗಳುಮಂ
(ನಾಶವಿಲ್ಲದ ತೇರು, ಕುದುರೆ,
ಧ್ವಜ, ಬಿಲ್ಲು, ಬಾಣ, ಕವಚ,
ವಿವಿಧ ಅಸ್ತ ಶಸ್ತ್ರ
-ಮೊದಲಾದವುಗಳನ್ನು) ಗಂಧ

ಧೂಪ ದೀಪಾದಿಗಳಿಂದ ಅರ್ಚಿಸಿ ಪೊಡೆವಟ್ಟ ಆಗಳ್- (ಗಂಧ, ಧೂಪ, ದೀಪ, ಮೊದಲಾದವುಗಳಿಂದ ಪೂಜಿಸಿ ನಮಸ್ಕರಿಸಿದರು.)

ವಚನ:ಅರ್ಥ:ಹಾಗೆ ಎರಡು ಸೈನ್ಯಗಳಲ್ಲಿ ವೀರಲಾಪಗಳು ಹೆಚ್ಚಲು, ವಿಕ್ರಮಾರ್ಜುನನೂ ಕೃಷ್ಣನೂ ನಿರ್ಮಲವಾಗಲು ಹಲ್ಲನ್ನು ತೊಳೆದು ಅಸಂಖ್ಯಾತವಾದ ಪವಿತ್ರ

ತೀರ್ಥದ ನೀರಿನಲ್ಲಿ ಸ್ನಾನಮಾಡಿ, ಮಂಗಳಾಭರಣಗಳನ್ನು ತೊಟ್ಟು ನಿತ್ಯಕರ್ಮಗಳನ್ನು ಮುಗಿಸಿದರು. ನಾನಾ ರೀತಿಯ ವಾದ್ಯಗಳು ಮೊಳಗುತ್ತಿರಲು ನಾಂದಿಮುಖವೆಂಬ ಪಿತೃಯಜ್ಞವನ್ನು ಮುಗಿಸಿದರು. ಶುಭಲಕ್ಷಣಗಳಿಂದ ಕೂಡಿದುದೂ ಯುದ್ಧಕಾರ್ಯಕ್ಕೆ

ಸಿದ್ಧಮಾಡಲಟ್ಟುದೂ
ಕರಕೌಶಲ್ಯ ಉಳ್ಳುದೂ
ಭದ್ರಜಾತಿಗೆ ಸೇರಿದುದೂ ಆದ
ವಿಜಯಗಜವನ್ನೂ
ನಾಶವಿಲ್ಲದ ತೇರು, ಕುದುರೆ,
ಧ್ವಜ, ಬಿಲ್ಲು, ಬಾಣ, ಕವಚ,
ವಿವಿಧ ಅಸ್ತ ಶಸ್ತ್ರ
-ಮೊದಲಾದವುಗಳನ್ನು, ಗಂಧ,
ಧೂಪ, ದೀಪ,
ಮೊದಲಾದವುಗಳಿಂದ

ಪೂಜಿಸಿ ನಮಸ್ಕರಿಸಿದರು.

ಆಗ-

ಕಂ|| ಬೆಳಗುವ ಸೊಡರ್ಗಳ
ಬೆಳಗುಮ
ನಿಳಿಸಿ ತಱಿತ್ತಱಿಸಿ ಪೊಳೆಯೆ
ತಮ್ಮಯ ಬೆಳಗ|
ಗ್ಗಳಿಸಿ ತಱಿತಱಿಸಿ ವಿದ್ಯು
ದ್ವಿಳಸಿತಮನೆನಿಸಿದುವು ನರನ
ದಿವ್ಯಾಸ್ತ್ರಂಗಳ್|| ೪೭ ||

ಪದ್ಯ-೪೭:ಪದವಿಭಾಗ-

ಅರ್ಥ:ಬೆಳಗುವ ಸೊಡರ್ಗಳ

ಬೆಳಗುಮನ ಇಳಿಸಿ
ತಳಿತ್ತಳಿಸಿ ಪೊಳೆಯೆ
(ಬೆಳಗುವ ದೀಪದ ಬೆಳಕನ್ನು
ಕೀಳುಮಾಡಿ ಥಳಥಳನೆ
ಹೊಳೆಯಲು) ತಮ್ಮಯ
ಬೆಳಗ ಅಗ್ಗಳಿಸಿ ತಳಿತಳಿಸಿ (
ತಮ್ಮ ಕಾಂತಿಯು
ಅತ್ಯಧಿಕವಾಗಿ ಮಿಂಚಿನಿಂದ
ಕೂಡಿದುವೋ ಎಂಬಂತೆ
ಪ್ರಕಾಶಿಸಿದುವು.)
ವಿದ್ಯುದ್ವಿಳಸಿತಮನ

ಎನಿಸಿದುವು ನರನ
ದಿವ್ಯಾಸ್ತ್ರಂಗಳ್ (
ಅತ್ಯಧಿಕವಾಗಿ ಮಿಂಚಿನಿಂದ
ಕೂಡಿದುವೋ ಎಂಬಂತೆ
ಎನಿಸಿದವು.)
ಪದ್ಯ-೪೭:ಅರ್ಥ:ಅರ್ಜುನನ
ದಿವ್ಯಾಸ್ತ್ರಗಳು ಅಲ್ಲಿ
ಕಾಂತಿಯುಕ್ತವಾಗಿ ಬೆಳಗುವ
ದೀಪದ ಬೆಳಕನ್ನು
ಕೀಳುಮಾಡಿ ಥಳಥಳನೆ
ಹೊಳೆಯಲು ತಮ್ಮ

ಕಾಂತಿಯು ಅತ್ಯಕವಾಗಿ
ಮಿಂಚಿನಿಂದ ಕೂಡಿದುವೋ
ಎಂಬಂತೆ ಪ್ರಕಾಶಿಸಿದುವು.

ಕಂ|| ಸೊಡರ್ಗುಡಿಯ
ಕೆಂಪಿನೊಳ್ ಕೆಂ
ಪಿಡಿದಿರೆ ರಿಪುನೃಪತಿಬಲದ
ಶೋಣಿತಜಳಮಂ|
ಕುಡಿಯದೆಯುಂ ದಲ್
ಮುನ್ನಮೆ
ಕುಡಿದಂತೆಸೆದಿರ್ದುವರಿಗನಸ್ತ್ರ
ಚಯಂಗಳ್|| ೪೮ ||

ಪದ್ಯ-೪೮:ಪದವಿಭಾಗ-ಅರ್ಥ:ಸೊಡರ್ಗುಡಿಯ ಕೆಂಪಿನೊಳ್ ಕೆಂಪು ಇಡಿದಿರೆ (ದೀಪದ ಕುಡಿಯ ಕೆಂಪುಬಣ್ಣದಿಂದ ಕೆಂಪು ಬಣ್ಣ ತುಂಬಿರಲು,) ರಿಪುನೃಪತಿಬಲದ (ಶತ್ರುರಾಜರ) ಶೋಣಿತಜಳಮಂ ಕುಡಿಯದೆಯುಂ (ರಕ್ತಜಲವನ್ನು

ಕುಡಿಯದಿದ್ದರೂ) ದಲ್,
ಮುನ್ನಮೆ ಕುಡಿದಂತೆ
ಎಸೆದಿರ್ದುವು ಅರಿಗನ
ಅಸ್ತ್ರಚಯಂಗಳ್ (ನಿಜಕ್ಕೂ
ಅದಕ್ಕೆ ಮೊದಲೇ ಅವು
ಕುಡಿದಿದ್ದಂತೆ
ಶೋಭಾಯಮಾನವಾಗಿದ್ದುವು
, ಅರ್ಜುನನ
ಬಾಣಸಮೂಹವು)
ಪದ್ಯ-೪೮:ಅರ್ಥ:ಅರ್ಜುನನ
ಬಾಣಸಮೂಹವು ದೀಪದ

ಕುಡಿಯ ಕೆಂಪುಬಣ್ಣದಿಂದ
ಕೆಂಪು ಬಣ್ಣ ತುಂಬಿರಲು
ಶತ್ರುರಾಜರ ರಕ್ತಜಲವನ್ನು
ಕುಡಿಯದಿದ್ದರೂ ಅದಕ್ಕೆ
ಮೊದಲೇ ಅವು ಕುಡಿದಿದ್ದಂತೆ
ಶೋಭಾಯಮಾನವಾಗಿದ್ದುವು

.

ವ|| ಅಂತಾಯಿರುಳುಂ
ವಿಜಯಂ
ವಿಜಯೋದ್ಯೋಗದೊಳ್
ಕಳೆಯೆ ಬೆಳಗಪ್ಪ ಜಾವದೊಳ್

ಬೀಡುವೀಡುಗಳ್ಗೆಲ್ಲಂ ತೋಱಲ್ದೇಕಿರ್ಪಿರೇಱಿಂ ಪಣ್ಣಿಮನೆ-

ವಚನ:ಪದವಿಭಾಗ-ಅರ್ಥ:

ಅಂತು ಆ ಯಿರುಳುಂ ವಿಜಯಂ ವಿಜಯೋದ್ಯೋಗದೊಳ್ ಕಳೆಯೆ (ಆ ರಾತ್ರಿಯನ್ನು ಅರ್ಜುನನು ಯುದ್ಧೋದ್ಯೋಗದಲ್ಲಿಯೇ ಕಳೆದು) ಬೆಳಗಪ್ಪ

ಜಾವದೊಳ್
ಬೀಡುವೀಡುಗಳ್ಗೆ ಎಲ್ಲಂ
(ಬೀಡು ಬೀಡುಗಳಲ್ಲೆಲ್ಲ)
ತೋಟಿಲ್ದು ಏಕಿರ್ಪಿರಿ ಏಟಿಂ
ಪಣ್ಣಿಂ ಎನೆ-(ಅಲೆದು 'ಏಕೆ
ಸುಮ್ಮನಿದ್ದೀರಿ ಎದ್ದು
ಸಿದ್ಧರಾಗಿ' ಎಂದನು. ಎನ್ನಲು-)
ವಚನ:ಅರ್ಥ:ಹಾಗೆ ಆ
ರಾತ್ರಿಯನ್ನು ಅರ್ಜುನನು
ಯುದ್ಧೋದ್ಯೋಗದಲ್ಲಿಯೇ
ಕಳೆದು ಬೆಳಗಿನ ಜಾವದಲ್ಲಿ

ಬೀಡು ಬೀಡುಗಳಲ್ಲೆಲ್ಲ
ಅಲೆದು 'ಏಕೆ ಸುಮ್ಮನಿದ್ದೀರಿ
ಎದ್ದು ಸಿದ್ಧರಾಗಿ' ಎಂದನು.
ಎನ್ನಲು-

ಉ|| ತಂಡದೆ ಕೀಱಿ ಸಾಱುವ
ಪಲರ್ ಪಡೆವಳ್ಳರ
ಮಾತುಗಳ್ ಮನಂ
ಗೊಂಡಿರೆ ಸನ್ನಣಂದುಡುವ
ಪಣ್ಣುವ ಬಾಱ್ತೆಯವಂದಿರಂ
ಮರು|

ಳ್ಗೊಂಡವೊಲೂಳ್ವ ಬಗ್ಗಿಸುವ ಬೇಗದೊಳಾ ಕಟಕಂಗಳೆಯ್ದೆ ಕೆಯ್ಕೊಂಡುವು ಮಂದರ ಕ್ಷುಭಿತ ದುಗ್ಧಪಯೋಧಿ ಗಭೀರನಾದಮಂ|| ೪೯ ||

ಪದ್ಯ-೪೯:ಪದವಿಭಾಗ-ಅರ್ಥ:ತಂಡದೆ ಕೀಱಿ (ಕೀಳಿ-ಕಿರುಚಿ ಕೋಪಿಸಿ) ಸಾಱುವ ಪಲರ್ ಪಡೆವಳ್ಳರ ಮಾತುಗಳ್ (ಗುಂಪುಗುಂಪಾಗಿ ಕಿರುಚಿ

ಸಾರಿ ಹೇಳುತ್ತಿರುವ ಅನೇಕ ಸೇನಾನಾಯಕರ ಮಾತುಗಳು) ಮನಂಗೊಂಡಿರೆ ಸನ್ನಣಿಂದುಡುವ (ಸೆಳೆಯುತ್ತಿರಲು, ಕವಚವನ್ನು ತೊಡಿಸುವ,) ಪಣ್ಣುವ (ಯುದ್ಧಕ್ಕೆ ಅಣಿಮಾಡುತ್ತಿರುವ,) ಬಾಜ್ಶೆಯವಂದಿರಂ ಮರುಳ್ಗೊಂಡವೊಲ್ (ಕೆಲಸದಲ್ಲಿರುವವರನ್ನು

ಹುಚ್ಚು ಹಿಡಿದವರ ಹಾಗೆ)
ಊಳ್ವ ಬಗ್ಗಿಸುವ ಬೇಗದೊಳು
(ಕೂಗುವ, ಹೆದರಿಸುತ್ತಿರುವ
ಸಮಯದಲ್ಲಿ,) ಆ
ಕಟಕಂಗಳು ಎಯ್ದೆ (ಆ
ಸೈನ್ಯವು ಬರಲು)
ಕೆಯ್ಕೊಂಡುವು
(ಅನುಕರಿಸಿದವು) ಮಂದರ
ಕ್ಷುಭಿತ
(ಮಂದರಪರ್ವತದಿಂದ
ಕಡೆಯಲ್ಪಟ್ಟ) ದುಗ್ಧಪಯೋಧಿ

ಗಭೀರನಾದಮಂ (ಕ್ಷೀರಸಮುದ್ರದ ಗಭೀರನಾದವನ್ನು-- ಕೆಯ್ಕೊಂಡುವು- ಅನುಕರಿಸಿದವು.)

ಪದ್ಯ-೪೯:ಅರ್ಥ:ಗುಂಪುಗುಂಪಾಗಿ ಕಿರುಚಿ ಸಾರಿ ಹೇಳುತ್ತಿರುವ ಅನೇಕ ಸೇನಾನಾಯಕರ ಮಾತುಗಳು ಮನಸ್ಸನ್ನು ಸೆಳೆಯುತ್ತಿರಲು, ಕವಚವನ್ನು ತೊಡಿಸುವ,

ಯುದ್ಧಕ್ಕೆ ಅಣಿಮಾಡುತ್ತಿರುವ,
ಕೆಲಸದಲ್ಲಿರುವವರನ್ನು ಹುಚ್ಚು
ಹಿಡಿದವರ ಹಾಗೆ ಕೂಗುವ,
ಹೆದರಿಸುತ್ತಿರುವ
ಸಮಯದಲ್ಲಿ, ಆ ಸೈನ್ಯವು
ವೇಗದಲ್ಲಿ ಬರಲು,
ಮಂದರಪರ್ವತದಿಂದ
ಕಡೆಯಲ್ಪಟ್ಟ ಕ್ಷೀರಸಮುದ್ರದ
ಗಭೀರನಾದವನ್ನು
ಅನುಕರಿಸಿದವು.

ಚಂ|| ಕೃತ ವಿವಿಧಾಸ್ತ್ರ
ವೀರಭಟಕೋಟಿ
ಭಯಂಕರಮಾಗೆ ಬೀಸುವಾ
ವೃತಿಯ ಕಳಂಕ ಪಂಕದೊಳೆ
ಪೆರ್ಚಿದ ಕಟ್ಟಿಲೆ ತೀವ್ರ ಶಸ್ತ್ರಸಂ|
ಹತಿಗಳ ದೀಪ್ತಿಯಿಂ
ಬಿಸುಗೆಯಾಗಿ ಕರಂ
ಪೊಗರ್ವಟ್ಟುಗುರ್ವುಮ
ದ್ಭುತಮುಮನೀಯೆ
ಪಣ್ಣಿದುವು ಪಾಂಡವ ಕೌರವ
ರೌದ್ರಸಾಧನಂ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ಕೃತ ವಿವಿಧಾಸ್ತ್ರ ವೀರಭಟಕೋಟಿ ಭಯಂಕರಮಾಗೆ (ನಾನಾವಿಧವಾದ ಅಸ್ತ್ರಶಸ್ತ್ರಗಳಲ್ಲಿ ಪೂರ್ಣಪಾಂಡಿತ್ಯವನ್ನು ಪಡೆದಿರುವ ವೀರಭಟರ ಸಮೂಹವು ಭಯವಾಗುವ ಹಾಗೆ) ಬೀಸುವ ಆವುತಿಯ ಕಳಂಕ (ಸ್ವಚ್ಛವಾದ)

ಪಂಕದೊಳೆ (ಬೀಸುತ್ತಿರುವ
ಆವೃತಿಯೆಂಬ ಆಯುಧದ
ಸ್ವಚ್ಛವಾದ ಬೀಸಣಿಕೆಯಲ್ಲಿ /
ಸಾಲಿನಲ್ಲಿ) ಪೆರ್ಚಿದ ಕಟ್ತಿಲೆ
ತೀವ್ರ ಶಸ್ತ್ರಸಂ ಹತಿಗಳ
ದೀಪ್ತಿಯಿಂ (ಹೆಚ್ಚಿದ
ಕತ್ತಲೆಯು ಹರಿತವಾದ ಶಸ್ತ್ರ
ಸಮೂಹಗಳ ಕಾಂತಿಯೊಡನೆ)
ಬಿಸುಗೆಯಾಗಿ ಕರಂ
ಪೊಗರ್ವಟ್ಟು ಅಗುರ್ವುಂ
ಅದ್ಭುತಮುಮನು ಈಯೆ

(ಸೇರಿಕೊಂಡು ಬಹಳ
ಕಾಂತಿಯುಕ್ತವಾಗಿ
ಭಯವನ್ನೂ ಆಶ್ಚರ್ಯವನ್ನೂ
ಏಕಕಾಲದಲ್ಲಿ
ಉಂಟುಮಾಡುತ್ತಿರಲು)
ಪಣ್ಣಿದುವು ಪಾಂಡವ ಕೌರವ
ರೌದ್ರಸಾಧನಂ (ಪಾಂಡವ
ಕೌರವರ ಭಯಂಕರ
ಸೈನ್ಯಗಳು ಪಣ್ಣಿದವು-
ಸಿದ್ಧವಾದವು.)

ಪದ್ಯ-೫೦:ಅರ್ಥ:

ನಾನಾವಿಧವಾದ

ಅಸ್ತ್ರಶಸ್ತ್ರಗಳಲ್ಲಿ

ಪೂರ್ಣಪಾಂಡಿತ್ಯವನ್ನು

ಪಡೆದಿರುವ ವೀರಭಟರ

ಸಮೂಹವು ಭಯವಾಗುವ

ಹಾಗೆ ಬೀಸುತ್ತಿರುವ

ಆವೃತಿಯೆಂಬ ಆಯುಧದ

ಸ್ವಚ್ಛವಾದ ಬೀಸಣಿಕೆಯಲ್ಲಿ

ಹೆಚ್ಚಿದ ಕತ್ತಲೆಯು ಹರಿತವಾದ

ಶಸ್ತ್ರ ಸಮೂಹಗಳ

ಕಾಂತಿಯೊಡನೆ ಚೆನ್ನಾಗಿ
ಸೇರಿಕೊಂಡು ಬಹಳ
ಕಾಂತಿಯುಕ್ತವಾಗಿ
ಭಯವನ್ನೂ ಆಶ್ಚರ್ಯವನ್ನೂ
ಏಕಕಾಲದಲ್ಲಿ
ಉಂಟುಮಾಡುತ್ತಿರಲು,
ಪಾಂಡವ ಕೌರವರ ಭಯಂಕರ
ಸೈನ್ಯಗಳು ಸಿದ್ಧವಾದವು.

ವ|| ಅಂತೆರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣಿ ಕಾಳೆಗಕ್ಕೆ ನಡೆಯಲೊಡರಿಸಿದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ಎರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣಿ (ಮೆಲ್ಲಮೆಲ್ಲನೆ ಯುದ್ಧಸನ್ನದ್ಧವಾಗಿ) ಕಾಳೆಗಕ್ಕೆ ನಡೆಯಲು ಒಡರಿಸಿದಾಗಳ್ (ತೊಡಗಿದಾಗ)-

ವಚನ:ಅರ್ಥ:ವ|| ಹಾಗೆ ಎರಡು ಸೈನ್ಯಗಳೂ ಮೆಲ್ಲಮೆಲ್ಲನೆ ಯುದ್ಧಸನ್ನದ್ಧವಾಗಿ ಯುದ್ಧಕ್ಕೆ

ಹೊರಡಲು ತೊಡಗಿದಾಗ (ಸೂರ್ಯೋದಯವಾಯಿತು.)

<u>ಕುರುಕ್ಷೇತ್ರ ರಣಭೂಮಿಯಲ್ಲಿ ಸೈನ್ಯಗಳ ವಿವರ</u>

ಕಂ|| ಲೋಕೈಕಚಕ್ಷು ನವ ಕಮ
ಲಾಕರ ಬಾಂಧವನನೇಕ
ದಿತಿಸುತ ಸಮರಾ|
ನೀಕ ಭಯಂಕರನೆರಡುಮ
ನೀಕಂಗಳನಡರೆ
ನೋಡುವಂತುದಯಿಸಿದಂ||

೫೧

ಪದ್ಯ-೫೧:ಪದವಿಭಾಗ-ಅರ್ಥ:ಲೋಕೈಕಚಕ್ಷು (ಲೋಕ ಏಕ ಚಕ್ಷು-ಲೋಕಕ್ಕೆ ಒಂದೇ ಕಣ್ಣಾಗಿರುವ) ನವ ಕಮಲಾಕರ ಬಾಂಧವನು (ಹೊಸ ತಾವರೆಕೊಳದ ಬಾಂಧವನೂ) ಅನೇಕ ದಿತಿಸುತ ಸಮರಾನೀಕ ಭಯಂಕರನು (ದಿತಿಯ ಮಕ್ಕಳಾದ ಅನೇಕ ರಾಕ್ಷಸರ

ಸೈನ್ಯಕ್ಕೆ
ಭಯವನ್ನುಂಟುಮಾಡವ
ಸೂರ್ಯನು) ಎರಡುಂ
ಅನೀಕಂಗಳನು (ಎರಡು
ಸೈನ್ಯಗಳನ್ನು) ಅಡರೆ
ನೋಡುವಂತೆ ಉದಯಿಸಿದಂ
(ಮೇಲೆ ಏರಿ ನೋಡುವಂತೆ
ಉದಯಿಸಿದನು.)
ಪದ್ಯ-೫೧:ಅರ್ಥ:ಲೋಕಕ್ಕೆ
ಒಂದೇ ಕಣ್ಣಾಗಿರುವವನೂ,
ಹೊಸ ತಾವರೆಕೊಳದ

ಬಾಂಧವನೂ, ದಿತಿಯ
ಮಕ್ಕಳಾದ ಅನೇಕ ರಾಕ್ಷಸರ
ಸೈನ್ಯಕ್ಕೆ
ಭಯವನ್ನುಂಟುಮಾಡುವ
ಸೂರ್ಯನು, ಎರಡು
ಸೈನ್ಯಗಳನ್ನು ಮೇಲೆ ಹತ್ತಿ
ನೋಡುವಂತೆ
ಉದಯಿಸಿದನು.

ವ|| ಆಗಳೇಱಿಸಿದ ಬಿಸುಗೆಗಳುಮಿಕ್ಕಿದ ಲೋಹವಕ್ಕರೆಗಳುಮುರ್ಚಿದ

ಮೊಗವಡಂಗಳುಂ ಕಟ್ಟಿದ
ಪಟಿಯಿಗೆಗಳುಮೊಟ್ಟಿದ
ಮೂವತ್ತೆರಡಾಯುಧಂಗಳುಂ
ಬೆರಸೆಱಂಕೆವೆರಸಿದ
ಕುಲಗಿರಿಗಳೆ ತಳರ್ವಂತೆ
ತಳರ್ವ
ಮದಾಂಧಗಂಧಸಿಂಧುರಂಗಳು
ಮಂ ಚಕ್ರಚೇತ್ಕೃತ
ನಾದದೊಳ್ ದಿಕ್ಚಕ್ರಮುಮಂ
ಚಕ್ರಘಾತದೊಳ್
ಧರಾಚಕ್ರಮನಾಕ್ರಮಿಸಿ

ನಿಶಾತಹೇತಿಗರ್ಭಂಗಳುಮನೇ
ಕ ಪ್ರಕಾರ ಕೇತನ
ವಾಜಿರಾಜಿಗಳುಮಾಗಿ
ದೊಮ್ಮಳಿಸಿ ನಡೆವ
ರಥಂಗಳುಮಂ ಕಣ್ಣಂ
ಖುರಮುಂ ತೋರೆ
ಪಕ್ಕರೆಯಿಕ್ಕಿ ಪೊಳೆವ ಪೊನ್ನ
ಪರ್ಯಾಣಂಗಳುಮೆಸೆಯೆ
ಘೋಳಾಯ್ಲರ್ ಪೊಳೆಯಿಸೆ
ಬಿಸಿಲ್ಗುದುರೆಗಳ್ ಪೊಳೆವಂತೆ
ಪೊಳೆವ

ಕಡುಗುದುರೆಗಳುಮಂ
ಮಿಡುಮಿಡುಕನೆ ಮಿಡುಕುವ
ಸಿಡಿಲೇಱುಗೆಯುಮಂ
ಕೋಳ್ಕ್ಮಸಗಿದ ಪುಲಿಯ
ಪಿಂಡುಗಳುಮನನುಕರಿಸಿ
ನಡೆವಣಿಯ ಸಂದಣಿಯುಮಂ
ಕಾಱ್ತುಱು ಮಸಗಿದಂತೆ
ಮಸಗಿದ ದುರ್ಧರ
ಧನುರ್ಧರಬಲಮುಮಂ ಶ್ವೇತ
ಭೀಷ್ಮರ
ಪೇೞ್ದೋಜೆಯೊಳೆರಡುಂ

ಪಡೆಗಳ ಪಡೆವಳರ್ಕಳ್ ಕುರುಕ್ಷೇತ್ರದೊಳ್ ಚಿತ್ರಿಸಿದಂತೊಡ್ಡಿ ನಿಂದಾಗಳ್-ಪದ್ಯ-೫೨:ಪದವಿಭಾಗ-ಅರ್ಥ:ಆಗಳು ಏೞಿಸಿದ ಬಿಸುಗೆಗಳುಂ (ಎತ್ತಿ ಕಟ್ಟಿದ ಅಂಬಾರಿಗಳು) ಇಕ್ಕಿದ ಲೋಹವಕ್ಕರೆಗಳಂ (ಹಾಕಿದ ಲೋಹದ ಪಕ್ಷರಕ್ಷೆಗಳು) ಉರ್ಚಿದ ಮೊಗವಡಂಗಳುಂ (ಬಿಚ್ಚಿರುವ ಮುಖವಾಡಗಳು)

ಕಟ್ಟಿದ ಪಟಿಯಿಗೆಗಳುಂ (ಕಟ್ಟಿದ ಧ್ವಜಗಳು) ಒಟ್ಟಿದ ಮೂವತ್ತೆರಡು ಆಯುಧಂಗಳುಂ ಬೆರಸಿ ಎಱಂಕೆವೆರಸಿದ ಕುಲಗಿರಿಗಳೆ ತಳರ್ವಂತೆ ತಳರ್ವ (ರೆಕ್ಕೆಗಳಿಂದ ಕೂಡಿದ ಕುಲಪರ್ವತಗಳೇ ನಡೆಯುವಂತೆ ನಡೆಯುವ) ಮದಾಂಧಗಂಧ ಸಿಂಧುರಂಗಳುಮಂ

(ಮದಾಂಧವಾದ ಆನೆಗಳು---

ನಡೆದುವು.) ಚಕ್ರಚೀತ್ಕೃತ

ನಾದದೊಳ್ (ಚಕ್ರಗಳ

ಚೀತ್ಕಾರ ಸದ್ದಿನಿಂದ)

ದಿಕ್ಚಕ್ರಮುಮಂ

ಚಕ್ರಘಾತದೊಳ್

ಧರಾಚಕ್ರಮನು ಆಕ್ರಮಿಸಿ

(ಚಕ್ರಗಳ ಹೊಡೆತದಿಂದ

ಭೂಮಂಡಲವನ್ನೂ

ಆಕ್ರಮಿಸಿ)

ನಿಶಾತಹೇತಿಗರ್ಭಂಗಳುಂ

(ಹರಿತವಾದ ಆಯುಧಗಳನ್ನು)
ಅನೇಕ ಪ್ರಕಾರ ಕೇತನ
ವಾಜಿರಾಜಿಗಳುಂ ಆಗಿ (ನಾನಾ
ರೀತಿಯ ಬಾವುಟ ಮತ್ತು
ಕುದುರೆಗಳ
ಸಮೂಹಗಳನ್ನುಳ್ಳುದಾಗಿ)
ದೊಮ್ಮಳಿಸಿ ನಡೆವ
ರಥಂಗಳುಮಂ
(ಸಂಭಭ್ರದಿಂದ ತೇರುಗಳು)
ಕಣ್ಣುಂ ಖುರಮುಂ ತೋರೆ
ಪಕ್ಕರೆಯಿಕ್ಕಿ (ಕಣ್ಣು

ಗೊರಸುಗಳನ್ನುಳಿದು
ಪಾರ್ಶ್ವಕ್ಕೆ ಹಾಕಿದ) ಪೊಳೆವ
ಪೊನ್ನ ಪರ್ಯಾಣಂಗಳುಂ
ಎಸೆಯೆ (ಗುಳದಿಂದಲೂ
ಹೊಳೆಯುತ್ತಿರುವ ಚಿನ್ನದ
ಜೀನುಗಳು ಶೋಭಿಸಲು,)
ಘೋಳಾಯ್ಲರ್
(ಕುದುರೆಸವಾರರು)
ಪೊಳೆಯಿಸೆ ಬಿಸಿಲ್ಗುದುರೆಗಳ್
ಪೊಳೆವಂತೆ (ಬಿಸಿಲ್ಗುದುರೆಗಳ
ಹಾಗೆ ಹೊಳೆಯುತ್ತಿರುವ

ಕುದುರೆಸವಾರರು,) ಪೊಳೆವ
ಕಡುಗುದುರೆಗಳುಮಂ
(ವೇಗಶಾಲಿಗಳಾದ
ಕುದುರೆಗಳನ್ನು)
ಮಿಡುಮಿಡುಕನೆ ಮಿಡುಕುವ
ಸಿಡಿಲ ಏೞ್ಗೆಯುಮಂ
(ಮಿಡುಮಿಡುಕನೆ ಮಿಡುಕುವ
ಸಿಡಿಲಿನ ವೈಭವವನ್ನೂ)
ಕೋೞ್ಮಸಗಿದ ಪುಲಿಯ
ಪಿಂಡುಗಳುಮನು ಅನುಕರಿಸಿ
(ಸರೆಸಿಕ್ಕ ಹುಲಿಗಳ ಹಿಂಡನ್ನೂ

ಅನುಕರಿಸಿ) ನಡೆವ ಅಣಿಯ ಸಂದಣಿಯುಮಂ (ನಡೆಯುವ ಕಾಲಾಳುಗಳ ಸಮೂಹ) ಕಾಱ್ತುಱು ಮಸಗಿದಂತೆ ಮಸಗಿದ (ಕಾಡ ಹಸು ರೇಗಿದ ಹಾಗೆ ರೇಗಿರುವ) ದುರ್ಧರ ಧನುರ್ಧರ ಬಲಮುಮಂ (ಧರಿಸಲಸಾಧ್ಯವಾದ ಬಿಲ್ಲಾಳಿನ ಸೈನ್ಯವು) ಶ್ವೇತ ಭೀಷ್ಮರ ಪೇೞ್ದ ಓಜೆಯೊಳ್ (ಹೇಳಿದ ಕ್ರಮದಲ್ಲಿ) ಎರಡುಂ

ಪಡೆಗಳ (ರಡು ಸೈನ್ಯವೂ ಶ್ವೇತ
ಮತ್ತು ಭೀಷ್ಮರು ಆಜ್ಞೆ
ಮಾಡಿದ ರೀತಿಯಲ್ಲಿ ನಡೆದು)
ಪಡೆವಳರ್ಕಳ್
(ಸೇನಾಪಾಲಕರು)
ಕುರುಕ್ಷೇತ್ರದೊಳ್ ಚಿತ್ರಿಸಿದಂತೆ
ಒಡ್ಡಿ ನಿಂದಾಗಳ್
(ಕುರುಕ್ಷೇತ್ರದ ರಣರಂಗದಲ್ಲಿ
ಎದುರುಬದರು ನಂತಾಗ
ಅವು ಚಿತ್ರದಲ್ಲಿ ಬರೆದ ಹಾಗೆ
ಕಂಡವು.)-

ವಚನ:ಅರ್ಥ: ಆಗ ಎತ್ತಿ ಕಟ್ಟಿದ ಅಂಬಾರಿಗಳು, ಹಾಕಿದ ಲೋಹದ ಪಕ್ಷರಕ್ಷೆಗಳು, ಬಿಚ್ಚಿರುವ ಮುಖವಾಡಗಳು, ಕಟ್ಟಿದ ಧ್ವಜಗಳು, ರಾಶಿಮಾಡಿರುವ ಮೂವತ್ತೆರಡಾಯುಧಗಳು, ಇವುಗಳಿಂದ ಕೂಡಿ ರೆಕ್ಕೆಗಳಿಂದ ಕೂಡಿದ ಕುಲಪರ್ವತಗಳೇ ನಡೆಯುವಂತೆ ನೆಡೆಯುವ

ಮದಾಂಧವಾದ ಆನೆಗಳು
ನಡೆದುವು. ಚಕ್ರಗಳ ಚೀತ್ಕಾರ
ಸದ್ದಿನಿಂದ ದಿಕ್ಕುಗಳ
ಸಮೂಹವನ್ನೂ, ಚಕ್ರಗಳ
ಹೊಡೆತದಿಂದ
ಭೂಮಂಡಲವನ್ನೂ ಆಕ್ರಮಿಸಿ
ಹರಿತವಾದ ಆಯುಧಗಳನ್ನೂ,
ನಾನಾ ರೀತಿಯ ಬಾವುಟ
ಮತ್ತು ಕುದುರೆಗಳ
ಸಮೂಹಗಳನ್ನುಳ್ಳುದಾಗಿ
ಸಂಭಭ್ರದಿಂದ ತೇರುಗಳು

ನಡೆದುವು. ಕಣ್ಣು
ಗೊರಸುಗಳನ್ನುಳಿದು
ಪಾರ್ಶ್ವಕ್ಕೆ ಹಾಕಿದ
ಗುಳದಿಂದಲೂ
ಹೊಳೆಯುತ್ತಿರುವ ಚಿನ್ನದ
ಜೀನುಗಳು ಶೋಭಿಸಲು,
ಬಿಸಿಲ್ಗುದುರೆಗಳ ಹಾಗೆ
ಹೊಳೆಯುತ್ತಿರು
ವಕುದುರೆಸವಾರರು,
ವೇಗಶಾಲಿಗಳಾದ
ಕುದುರೆಗಳನ್ನು,

ಮಿಡುಮಿಡುಕನೆ ಮಿಡುಕುವ
ಸಿಡಿಲಿನ ವೈಭವವನ್ನೂ
ಸರೆಸಿಕ್ಕ ಹುಲಿಗಳ ಹಿಂಡನ್ನೂ
ಅನುಕರಿಸಿ ನಡೆಯುವ
ಕಾಲಾಳುಗಳ ಸಮೂಹ
(ಮುಂದೆ ನಡೆಯಿತು) ಕಾಡ
ಹಸು ರೇಗಿದ ಹಾಗೆ ರೇಗಿರುವ
ಧರಿಸಲಸಾಧ್ಯವಾದ ಬಿಲ್ಲಾಳಿನ
ಸೈನ್ಯವು (ಮುನ್ನುಗ್ಗಿತು).
ಎರಡು ಸೈನ್ಯವೂ ಶ್ವೇತ ಮತ್ತು
ಭೀಷ್ಮರು ಆಜ್ಞೆ ಮಾಡಿದ

ರೀತಿಯಲ್ಲಿ ನಡೆದು
ಸೇನಾನಾಯಕರು
ಕುರುಕ್ಷೇತ್ರದ ರಣರಂಗದಲ್ಲಿ
ಎದುರುಬದರು ನಂತಾಗ
ಅವು ಚಿತ್ರದಲ್ಲಿ ಬರೆದ ಹಾಗೆ
ಕಂಡವು.

ಚಂ||
ಜಲಶಯನೋದರಾಂತರದಿ
ನೀ ತ್ರಿಜಗಂ
ಪೊಱಮಟ್ಟುದೀಗಳೆಂ

ಬುಲಿ ಸಲೆ ತಮ್ಮ ತಮ್ಮ

ಶಿಬಿರಂಗಳಿನುಗ್ರ

ಚತುರ್ಬಲಂಗಳಂ|

ಪಲವುಮನೊಂದೆ ಮಾಡಿ

ದೆಸೆಗಳ್ ಮಸುಳಲ್

ನಡೆತಂದರಾಜಿಗಿ

ರ್ವಲದಲರಾತಿನಾಯಕರುಮೊ

ರ್ಬರನೊರ್ಬರೆ ಗೆಲ್ವ

ತಕ್ಕಿನೊಳ್|| ೫೨ ||

ಪದ್ಯ-೫೨:ಪದವಿಭಾಗ-

ಅರ್ಥ:ಜಲಶಯನ

ಉದರಾಂತರದಿಂ ಈ ತ್ರಿಜಗಂ
ಪೊಱಮಟ್ಟುದು ಈಗಳ್
(ಕ್ಷೀರಸಾಗರದಲ್ಲಿ ಮಲಗಿದ
ವಿಷ್ಣುವಿನ ಗರ್ಭದ ಒಳಗಿಂದ
ಮೂರುಲೋಕಗಳೂ ಈಗ
ಹೊರಹೊರಟವು) ಎಂಬ
ಉಲಿ ಸಲೆ(ಎಂಬ ಮಾತು
ಸಲ್ಲಲು,) ತಮ್ಮ ತಮ್ಮ
ಶಿಬಿರಂಗಳಿನಂ ಉಗ್ರ
ಚತುರ್ಬಲಂಗಳಂ
ಪಲವುಮನು ಒಂದೆ ಮಾಡಿ

(ಚತುರ್ಬಲ ಸೈನ್ಯಗಳನ್ನೂ ಒಂದುಗೂಡಿಸಿಕೊಂಡು) ದೆಸೆಗಳ್ ಮಸುಳಲ್ (ದಿಕ್ಕುಗಳು ಕಪ್ಪಾಗಲು) ನಡೆತಂದರ್ (ನಡೆದು ಬಂದರು.->) ಆಜಿಗೆ ಇರ್ವಲದಲ್ ಆರಾತಿನಾಯಕರುಂ ಒರ್ಬರನೊರ್ಬರೆ ಗೆಲ್ವ ತಕ್ಕಿನೊಳ್ (ಯುದ್ಧಕ್ಕೆ ಎರಡೂದಳದವರ

ಶತ್ರುನಾಯಕರು
ಒಬ್ಬರನ್ನೊಬ್ಬರು ಗೆಲ್ಲುವ
ಸಾಮರ್ಥ್ಯದಿಂದ -
ನಡೆತಂದರ್)

ಪದ್ಯ-೫೨:ಅರ್ಥ:
ಕ್ಷೀರಸಾಗರದಲ್ಲಿ ಮಲಗಿದ
ವಿಷ್ಣುವಿನ ಗರ್ಭದ ಒಳಗಿಂದ
ಮೂರುಲೋಕಗಳೂ ಈಗ
ಹೊರಹೊರಟವು ಎಂಬ
ಮಾತು ಸಲ್ಲಲು, ದಿಕ್ಕುಗಳು
ಕಾಂತಿಹೀನವಾಗುತ್ತಿರಲು

ತಮ್ಮ ತಮ್ಮ ಶಿಬಿರಗಳಿಂದ ಚತುರ್ಬಲ ಸೈನ್ಯಗಳನ್ನೂ ಒಂದುಗೂಡಿಸಿಕೊಂಡು ಯುದ್ಧಕ್ಕೆ ಎರಡೂದಳದವರ ಶತ್ರುನಾಯಕರು ಒಬ್ಬರನ್ನೊಬ್ಬರು ಗೆಲ್ಲುವ ಸಾಮರ್ಥ್ಯದಿಂದ ಯುದ್ಧಕ್ಕೆ ನಡೆದು ಬಂದರು.

ವ|| ಆಗಳ್ ಕೌರವಬಲದ ಸೇನಾನಾಯಕಂ ಗಾಂಗೇಯನಡ್ಡಮಾಗೆ

ತನ್ನೊಡ್ಡಿದ ಮಕರವ್ಯೂಹದ
ಮೊನೆಯೊಳ್ ಸುತ್ತಿಱಿದೆತ್ತಿದ
ಪೊನ್ನ ತೊಳಪ
ಪಱಿಯಿಗೆಗಳುಂ ಮೆರೆವ
ಬೆಳ್ಳಿಯ ರಥಮುಮಾ
ರಥದೊಳೊಡಂಬಡೆ ಪೂಡಿದ
ಕುದುರೆಗಳುಂ ಜೋಲ್ದ
ಪುರ್ವನೆತ್ತಿ ಕಟ್ಟಿದ
ಲಲಾಟಪಟ್ಟದೊಳಿಟ್ಟಳಮೊ
ಪ್ಪುವ
ಬೀರವಟ್ಟಮುಮಸದಳಮೆಸೆ

ಯೆ ದಿವ್ಯಕವಚಮಂ ತೊಟ್ಟು
ಪರಶುರಾಮಂ ಬಾಟ್ಗೆಂದು
ಪ್ರಚಂಡ ಕೋದಂಡಮಂ
ಕೊಂಡು ಪಾಂಡವಬಲಮಂ
ಮಾರ್ಕೊಂಡು ನಿಂದಾಗಳ್
ಶ್ವೇತನುಮಾ ವ್ಯೂಹಕ್ಕೆ
ಪ್ರತಿವ್ಯೂಹಮಾಗಿ
ಸೂಚೀವ್ಯೂಹಮನೊಡ್ಡಿ
ಕನಕಕವಚಾಲಂಕೃತ
ಶರೀರನುಮಾರೂಢ ಸಮರ
ರಸನುಮುಪಾರೂಢ

ಕನಕರಥನುಮಾಗಿ

ಕೈಲಾಸವಾಸಿಗೆ ಪೊಡೆವಟ್ಟು

ಬಿಲ್ಲಂ ಕೊಂಡು

ಗಂಗಾಸುತಂಗದಿರದಿದಿರ್ಚಿ

ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಕೌರವಬಲದ ಸೇನಾನಾಯಕಂ ಗಾಂಗೇಯನು ಅಡ್ಡಮಾಗೆ (ಅಡ್ಡಲಾಗಿ ನಿಂತನು) ತನ್ನ ಒಡ್ಡಿದ ಮಕರವ್ಯೂಹದ

ಮೊನೆಯೊಳ್ (ಮೊಸಳೆಯ ಆಕಾರದ ಒಡ್ಡಿದ ತನ್ನ ಸೈನ್ಯರಚನೆಯ ತುದಿಯಲ್ಲಿ ಅಡ್ಡಲಾಗಿ ನಿಂತನು.) ಸುತ್ತಿಱಿದೆತ್ತಿದ ಪೊನ್ನ ತೊಳಪ ಪಟಿಯಿಗೆಗಳುಂ (ಅದರ ಮುಂಭಾಗದಲ್ಲಿ- ಸುತ್ತಲೂ ಎತ್ತಿ ಕಟ್ಟಿರುವ ಪ್ರಕಾಶಮಾನವಾದ ಚಿನ್ನದ ಬಾವುಟಗಳೂ) ಮೆರೆವ ಬೆಳ್ಳಿಯ ರಥಮುಂ ಆ

ರಥದೊಳು ಒಡಂಬಡೆ
(ಶೋಭಾಯಮಾನವಾಗಿರುವ
ಬೆಳ್ಳಿಯ ತೇರು, ಆ ರಥಕ್ಕೆ
ಹೊಂದಿಕೊಳ್ಳುವ ಹಾಗೆ)
ಪೂಡಿದ ಕುದುರೆಗಳುಂ
(ಹೂಡಿರುವ ಕುದುರೆಗಳು)
ಜೋಲ್ದ ಪುರ್ವನು ಎತ್ತಿ ಕಟ್ಟಿದ
ಲಲಾಟಪಟ್ಟದೊಳು (ಜೋತು
ಹೋಗಿರುವ ಹುಬ್ಬನ್ನು ಎತ್ತಿ
ಕಟ್ಟಿರುವ ಹಣೆಯಲ್ಲಿ)
ಇಟ್ಟಳಮೊಪ್ಪುವ

ಬೀರವಟ್ಟಮುಂ ಅಸದಳಂ ಎಸೆಯೆ (ಸೊಗಸಾಗಿ ಪ್ರಕಾಶಿಸುತ್ತಿರುವ ವೀರಪಟ್ಟವು ಅತಿಶಯವಾಗಿ ಮೆರೆಯುತ್ತಿರಲು) ದಿವ್ಯಕವಚಮಂ ತೊಟ್ಟು (ದಿವ್ಯವಾದ ಕವಚವನ್ನು ತೊಟ್ಟು) ಪರಶುರಾಮಂ ಬಾೞ್ಗೆಂದು (‘ಪರಶುರಾಮನು ಬಾಳಲಿ’ ಎಂದು ತನ್ನ ಆಚಾರ್ಯನನ್ನು ನೆನೆದನು.)

ಪ್ರಚಂಡ ಕೋದಂಡಮಂ
ಕೊಂಡು ಪಾಂಡವಬಲಮಂ
ಮಾರ್ಕೊಂಡು ನಿಂದಾಗಳ್
(ಹೀಗೆ ಭಯಂಕರವಾದ
ಬಿಲ್ಲನ್ನು ಹಿಡಿದು
ಪಾಂಡವಸೈನ್ಯವನ್ನು
ಪ್ರತಿಭಟಿಸಿ ನಿಂತಾಗ)
ಶ್ವೇತನುಂ ಆ ವ್ಯೂಹಕ್ಕೆ
ಪ್ರತಿವ್ಯೂಹಮಾಗಿ
ಸೂಚೀವ್ಯೂಹಮನೊ ಒಡ್ಡಿ (
ಈ ಕಡೆ ಶ್ವೇತನೂ ಆ

ಮಕರವ್ಯೂಹಕ್ಕೆ ಪ್ರತಿಯಾಗಿ
ಸೂಜಿಯ ಆಕಾರದ
ಸೇನಾರಚನೆಯನ್ನು
ಒಡ್ಡಿದನು.)
ಕನಕಕವಚಾಲಂಕೃತ
ಶರೀರನುಂ ಆರೂಢ
ಸಮರರಸನುಂ
(ಯುದ್ಧೋತ್ಸಾಹದಿಂದ
ಕೂಡಿದವನೂ) ಉಪಾರೂಢ
ಕನಕರಥನುಮಾಗಿ (ಚಿನ್ನದ
ಕವಚದಿಂದ ಅಲಂಕೃತವಾದ

ಶರೀರವುಳ್ಳವನೂ ಯುದ್ಧೋತ್ಸಾಹದಿಂದ ಕೂಡಿದವನೂ ಆಗಿ) ಕೈಲಾಸವಾಸಿಗೆ ಪೊಡೆವಟ್ಟು ಬಿಲ್ಲಂ ಕೊಂಡು ಗಂಗಾಸುತಂಗೆ ಅದಿರದೆ ಇದಿರ್ಚಿ ನಿಂದಾಗಳ್ (ಭೀಷ್ಮನಿಗೆ ಹೆದರದೆ ಎದುರಿಸಿ ನಿಂತನು)-ನಿಂತಾಗ-

ವಚನ:ಅರ್ಥ:ಆಗ ಕೌರವ ಸೈನ್ಯದ ನಾಯಕನಾದ ಭೀಷ್ಮನು ಮೊಸಳೆಯ

ಆಕಾರದ ಒಡ್ಡಿದ ತನ್ನ ಸೈನ್ಯರಚನೆಯ ತುದಿಯಲ್ಲಿ ಅಡ್ಡಲಾಗಿ ನಿಂತನು. ಅದರ ಮುಂಭಾಗದಲ್ಲಿ ಸುತ್ತಲೂ ಎತ್ತಿ ಕಟ್ಟಿರುವ ಪ್ರಕಾಶಮಾನವಾದ ಚಿನ್ನದ ಬಾವುಟಗಳೂ ಶೋಭಾಯಮಾನವಾಗಿರುವ ಬೆಳ್ಳಿಯ ತೇರು, ಆ ರಥಕ್ಕೆ ಹೊಂದಿಕೊಳ್ಳುವ ಹಾಗೆ ಹೂಡಿರುವ ಕುದುರೆಗಳು ಸಿದ್ಧವಾಗಿದ್ದುವು. ಜೋತು

ಹೋಗಿರುವ ಹುಬ್ಬನ್ನು ಎತ್ತಿ ಕಟ್ಟಿರುವ ಹಣೆಯಲ್ಲಿ ಸೊಗಸಾಗಿ ಪ್ರಕಾಶಿಸುತ್ತಿರುವ ವೀರಪಟ್ಟವು ಅತಿಶಯವಾಗಿ ಮೆರೆಯುತ್ತಿರಲು ದಿವ್ಯವಾದ ಕವಚವನ್ನು ತೊಟ್ಟು 'ಪರಶುರಾಮನು ಬಾಳಲಿ' ಎಂದು ತನ್ನ ಆಚಾರ್ಯನನ್ನು ನೆನೆದನು. ಹೀಗೆ ಭಯಂಕರವಾದ ಬಿಲ್ಲನ್ನು ಹಿಡಿದು ಪಾಂಡವಸೈನ್ಯವನ್ನು

ಪ್ರತಿಭಟಿಸಿ ನಿಂತಾಗ, ಈ ಕಡೆ ಶ್ವೇತನೂ ಆ ಮಕರವ್ಯೂಹಕ್ಕೆ ಪ್ರತಿಯಾಗಿ ಸೂಜಿಯ ಆಕಾರದ ಸೇನಾರಚನೆಯನ್ನು ಒಡ್ಡಿದನು. ಚಿನ್ನದ ಕವಚದಿಂದ ಅಲಂಕೃತವಾದ ಶರೀರವುಳ್ಳವನೂ ಯುದ್ಧೋತ್ಸಾಹದಿಂದ ಕೂಡಿದವನೂ ಆಗಿ ಕೈಲಾಸವಾಸಿಯಾದ ಈಶ್ವರನಿಗೆ ನಮಸ್ಕರಿಸಿ

ಬಿಲ್ಲನ್ನು ಹಿಡಿದು ಭೀಷ್ಮನಿಗೆ
ಹೆದರದೆ ಎದುರಿಸಿ ನಿಂತನು;
ನಿಂತಾಗ-

ಕಂ|| ಶ್ವೇತನ ಗಂಗಾಜಾತನ
ಮಾತನೆ
ಪಾರ್ದೆರಡುಮೊಡ್ಡಣಂ
ಕಾದಲ್ಕೆಂ|
ದೀ ತೆಱದಿನೊಡ್ಡಿ ನಿಂದುವು
ಭೂತಳಮಳ್ಳಾಡೆ ಕೆಸಱ
ಕಡಿತದ ತೆಱದಿಂ|| ೫೩ ||

ಪದ್ಯ-೫೩:ಪದವಿಭಾಗ-ಅರ್ಥ:ಶ್ವೇತನ ಗಂಗಾಜಾತನ ಮಾತನೆ ಪಾರ್ದು (ಶ್ವೇತ ಮತ್ತು ಭೀಷ್ಮರ ಆಜ್ಞೆಯನ್ನೇ ನಿರೀಕ್ಷಿಸುತ್ತಾ) ಎರಡುಂ ಒಡ್ಡಣಂ ಕಾದಲ್ಕೆಂದು ಈ ತೆಱದಿಂ ಒಡ್ಡಿ ನಿಂದುವು ಭೂತಳಂ ಅಳ್ಳಾಡೆ (ಎರಡು ಸೈನ್ಯವೂ ಯುದ್ಧ ಮಾಡುವುದಕ್ಕಾಗಿ ಬೂಮಿಯೇ ಅಲ್ಲಾಡುವ

ರೀತಿಯಲ್ಲಿ ಎದರಿಸಿ ನಿಂತವು.)
ಕೆಸಱ ಕಡಿತದ ತೆಱದಿಂ
(ಸೈನ್ಯವು ಕೆಸರಿನ ಮೇಲೆ
ದಟ್ಟವಾಗಿ ಹರಡಿ ಕುಳಿತ
ಕಡಿನೊಣದಂತೆ ಇತ್ತು)
ಪದ್ಯ-೫೩:ಅರ್ಥ:ಸೇನಾಧಿಪ
ತಿಗಳಾದ ಶ್ವೇತ ಮತ್ತು ಭೀಷ್ಮರ
ಆಜ್ಞೆಯನ್ನೇ ನಿರೀಕ್ಷಿಸುತ್ತಾ,
ಎರಡು ಸೈನ್ಯವೂ ಯುದ್ಧ
ಮಾಡುವುದಕ್ಕಾಗಿ
ಬೂಮಿಯೇ ಅಲ್ಲಾಡುವ

ರೀತಿಯಲ್ಲಿ ಎದರಿಸಿ ನಿಂತವು.
ಸೈನ್ಯವು ಕೆಸರಿನ ಮೇಲೆ
ದಟ್ಟವಾಗಿ ಹರಡಿ ಕುಳಿತ
ಕಡಿನೊಣದಂತೆ ಇತ್ತು.

ವ|| ಆಗಳ್ ಧರ್ಮಪುತ್ರಂ
ಪುರುಷೋತ್ತಮನ ಮೊಗಮಂ
ನೋಡಿ ಕೌರವ
ಬಲದೊಡ್ಡಣದ
ನಾಯಕರಿವರಾರೆಂದು
ಬೆಸಗೊಳೆ ಮಕರ

ಮಸ್ತಕಭೂಮಿಯೊಳ್ ಯುದ್ಧಸನ್ನದ್ಧನಾಗಿ-

ವಚನ:ಪದವಿಭಾಗ-ಅರ್ಥ:

ಆಗಳ್ ಧರ್ಮಪುತ್ರಂ ಪುರುಷೋತ್ತಮನ ಮೊಗಮಂ ನೋಡಿ ಕೌರವ ಬಲದ ಒಡ್ಡಣದ ನಾಯಕರು ಅವರು ಆರೆಂದು ಬೆಸಗೊಳೆ(ಸೇನಾವ್ಯೂಹದ ನಾಯಕರು ಅವರು ಯಾರು ಯಾರು ಎಂದು ಪ್ರಶ್ನಿಸಲು-)

ಮಕರ ಮಸ್ತಕ ಭೂಮಿಯೊಳ್ (ಮಕರವ್ಯೂಹದ ತಲೆಯ ಪ್ರದೇಶದಲ್ಲಿ - ಮುಂಭಾಗದಲ್ಲಿ) ಯುದ್ಧಸನ್ನದ್ಧನಾಗಿ-

ವಚನ:ಅರ್ಥ:ಆಗ ಧರ್ಮರಾಜನು ಕೃಷ್ಣನ ಮುಖವನ್ನು ನೋಡಿ ಕೌರವ ಸೇನಾವ್ಯೂಹದ ನಾಯಕರು ಅವರು ಯಾರು ಯಾರು ಎಂದು ಪ್ರಶ್ನಿಸಲು-

ಮಕರವ್ಯೂಹದ ತಲೆಯ ಪ್ರದೇಶದಲ್ಲಿ (ಮುಂಭಾಗದಲ್ಲಿ) ಯುದ್ಧ ಸನ್ನದ್ಧನಾಗಿ-

ಕಂ|| ಕೆಂಬಣ್ಮದ ಕುದುರೆಗಳೊಳೊಡಂಬಡೆ ನಿಜರಜತರಥಮಗುರ್ವುರ್ವರೆಯಂ|

ತಿಂಬೆ ಕಳಶಧ್ವಜಂ ಮಿಳಿ

ರ್ದಂಬರಮಂ ಬಳಸೆ ನಿಂದನಾತಂ ದ್ರೋಣಂ|| ೫೪ ||

ಪದ್ಯ-೫೪:ಪದವಿಭಾಗ-ಅರ್ಥ: ಕೆಂಬಣ್ಣದ ಕುದುರೆಗಳೊಳು ಒಡಂಬಡೆ (ಒಪ್ಪಿರಲು- ಜೊತೆ ಇರುವ) ನಿಜ ರಜತ ರಥಂ ಅಗುರ್ವು ಉರ್ವರೆಯಂ ತಿಂಬೆ (ತನ್ನ ಬೆಳ್ಳಿಯ ರಥದಲ್ಲಿ ಬೂಮಿಯಲ್ಲಿ ಭಯವನ್ನು ತುಂಬುವಂತೆ) ಕಳಶಧ್ವಜಂ

ಮಿಳಿರ್ದಂಬರಮಂ ಬಳಸೆ
(ಕಲಶದ ಧ್ವಜವು ಆಕಾಶದಲ್ಲಿ
ಹಾರುವಂತಿರುವಲ್ಲಿ)
ನಿಂದನಾತಂ ದ್ರೋಣಂ
(ನೀತಿರುವವನು ದ್ರೋಣನು)
ಪದ್ಯ-೫೪:ಅರ್ಥ: ತನ್ನ
ಬೆಳ್ಳಿಯ ತೇರು ಕೆಂಪು ಬಣ್ಣದ
ಕುದುರೆಗಳಿಂದ ಒಪ್ಪಿರಲು,
ಭಯಂಕರನಾದ ಕಳಶ
ಚಿಹ್ನೆಯುಳ್ಳ ಬಾವುಟವು
ಚಲಿಸುತ್ತ ಆಕಾಶದಲ್ಲಿ

ಹಾರುವಂತೆ ನಿಂತಿರುವವನು ದ್ರೋಣಾಚಾರ್ಯ.

ಆತನ ಸಾರೆ ಕಮಂಡಲು
ಕೇತನಮಂಬರಮನಡರೆ
ಚತುರಂಗ ಬಲೋ|
ಪೇತನತಿ ಧವಳ ರಥನಭಿ
ಜಾತಂ ಕ್ಷತ್ರಿಯರನುಱದ ಕಲಿ
ಕೃಪನಾತಂ|| ೫೫ ||

ಪದ್ಯ-೫೫:ಪದವಿಭಾಗ-

ಅರ್ಥ:ಆತನ ಸಾರೆ ಕಮಂಡಲು ಕೇತನಂ

ಅಂಬರಮನು ಅಡರೆ
(ಪಕ್ಕದಲ್ಲಿಯೇ ಕಮಂಡಲು
ಗುರುತಿನ ಬಾವುಟವು
ಆಕಾಶವನ್ನು ವ್ಯಾಪಿಸಿರಲು)
ಚತುರಂಗ ಬಲೋಪೇತನು
ಅತಿ ಧವಳ ರಥನು
ಅಭಿಜಾತಂ
(ಚತುರಂಗಸ್ಸೈನ್ಯದಿಂದ
ಕೂಡಿರುವವನೂ ಅತ್ಯಂತ
ಬಿಳುಪಾದ ತೇರನ್ನುಳ್ಳವನೂ
ಒಳ್ಳೆಯ ಕುಲದಲ್ಲಿ

ಹುಟ್ಟಿದವನೂ) ಕ್ಷತ್ರಿಯರನು ಉಱಿದ (ಲೆಕ್ಕಿಸದ) ಕಲಿ ಕೃಪನಾತಂ (ಕ್ಷತ್ರಿಯರನ್ನು ಲಕ್ಷ್ಯಮಾಡದವನೂ ಶೂರನೂ ಆದವನು ಕೃಪಾಚಾರ್ಯ)|

ಪದ್ಯ-೫೫:ಅರ್ಥ:ಅವನ ಪಕ್ಕದಲ್ಲಿಯೇ ಕಮಂಡಲು ಗುರುತಿನ ಬಾವುಟವು ಆಕಾಶವನ್ನು ವ್ಯಾಪಿಸಿರಲು ಚತುರಂಗಸೈನ್ಯದಿಂದ

ಕೂಡಿರುವವನೂ ಅತ್ಯಂತ ಬಿಳುಪಾದ ತೇರನ್ನುಳ್ಳವನೂ ಒಳ್ಳೆಯ ಕುಲದಲ್ಲಿ ಹುಟ್ಟಿದವನೂ ಕ್ಷತ್ರಿಯರನ್ನು ಲಕ್ಷ್ಯಮಾಡದವನೂ ಶೂರನೂ ಆದವನು ಕೃಪಾಚಾರ್ಯ.

ವ|| ಮತ್ತಿತ್ತ ಗಾಂಗೇಯನ ದಕ್ಷಿಣೋಪಾಂತದೊಳ್ ಕರ್ಣನೆ ಕರ್ಗಿದ ಸಮದ ಗಜಘಟಾಟೋಪದ ನಡುವೆ-

ವಚನ:ಪದವಿಭಾಗ-ಅರ್ಥ:ಮತ್ತೆ ಇತ್ತ ಗಾಂಗೇಯನ ದಕ್ಷಿಣ ಉಪಾಂತದೊಳ್ (ಭೀಷ್ಮನ ಬಲಗಡೆಯ ಪಕ್ಕದಲ್ಲಿ) ಕರ್ಗನೆ ಕರ್ಗಿದ ಸಮದ ಗಜಘಟೆ ಆಟೋಪದ ನಡುವೆ (ಬಹಳ ಕಪ್ಪಾದ ಮದ್ದಾನೆಗಳ ಸಮೂಹದ ಆರ್ಭಟದ ನಡುವೆ)-

ವಚನ:ಅರ್ಥ:ಮತ್ತು ಈ ಕಡೆ ಭೀಷ್ಮನ ಬಲಗಡೆಯ ಪಕ್ಕದಲ್ಲಿ ಬಹಳ ಕಪ್ಪಾದ ಮದ್ದಾನೆಗಳ ಸಮೂಹದ ಆರ್ಭಟದ ನಡುವೆ

ಕಂ|| ಸರದದ ಮುಗಿಲನೆ ಬಿಡದನು
ಕರಿಸುವ ಧವಳಾಶ್ವದಿಂದಮೆಸೆದೊಪ್ಪುವ ಲೋ|

ಹ ರಥಮದು ಪುಲಿಯ ಪೞಯಿಗೆ ವೆರಸು ತೞತ್ತೞಿಸೆ ನಿಂದನಾತಂ ಶಲ್ಯಂ|| ೫೬ ||

ಪದ್ಯ-೫೬:ಪದವಿಭಾಗ-ಅರ್ಥ:ಸರದದ ಮುಗಿಲನೆ (ಶರತ್ಕಾಲದ ಮೋಡವನ್ನು) ಬಿಡದೆ ಅನುಕರಿಸುವ (ಹಾಗೆಯೇ ಅನುಕರಿಸುತ್ತಿರುವ) ಧವಳಾಶ್ವದಿಂದಂ ಎಸೆದು

ಒಪ್ಪುವ (ಬಿಳಿಯ
ಕುದುರೆಗಳಿಂದ
ಪ್ರಕಾಶಿಸುತ್ತಿರುವ) ಲೋಹ
ರಥಂ ಅದು (ಆ ಕಬ್ಬಿಣದ
ರಥದಲ್ಲಿ) ಪುಲಿಯ ಪಟಿಯಿಗೆ
ವೆರಸು (ಹುಲಿಯ
ಬಾವುಟದಿಂದ ಕೂಡಿ)
ತಟಿತ್ತಟಿಸೆ ನಿಂದನಾತಂ
ಶಲ್ಯಂ (ಥಳಥಳಿಸುತ್ತ
ನಿಂತಿರುವವನು ಶಲ್ಯ)

ಪದ್ಯ-೫೬:ಅರ್ಥ:ಶರತ್ಕಾಲದ ಮೋಡವನ್ನು ಹಾಗೆಯೇ ಅನುಕರಿಸುತ್ತಿರುವ ಬಿಳಿಯ ಕುದುರೆಗಳಿಂದ ಪ್ರಕಾಶಿಸುತ್ತಿರುವ ಆ ಕಬ್ಬಿಣದ ರಥದಲ್ಲಿ ಹುಲಿಯ ಬಾವುಟದಿಂದ ಕೂಡಿ ಥಳಥಳಿಸುತ್ತ ನಿಂತಿರುವವನು ಶಲ್ಯ,

ವ|| ಮತ್ತಿತ್ತ ಗಂಗಾಸುತನ ವಾಮಭಾಗದೊಳಂಬರಭಾಗ

ಮಂ ಕಟ್ಟಿ ಮೆಡಱಿದಂತಾಗಿ ತನ್ನ ರಥದೊಳೊಟ್ಟಿದ ಕೆಯ್ದುಗಳ ಬೆಳಗೆ ಬೆಳಗಾಗೆ-

ವಚನ:ಪದವಿಭಾಗ-

ಅರ್ಥ:ಮತ್ತೆ ಇತ್ತ ಗಂಗಾಸುತನ ವಾಮಭಾಗದೊಳ್ (ಭೀಷ್ಮನ ಎಡಬದಿಯಲ್ಲಿ) ಅಂಬರಭಾಗಮಂ (ತ)ಕಟ್ಟಿ ಮೆಡಱಿದಂತಾಗಿ (ತಡಿಕೆಯಿಂದ ಹೆಣೆದ ಹಾಗೆ)

ತನ್ನ ರಥದೊಳು ಒಟ್ಟಿದ ಕೆಯ್ದುಗಳ ಬೆಳಗೆ ಬೆಳಗಾಗೆ (ರಾಶಿ ಹಾಕಿದ ಆಯುಧಗಳ ಬೆಳಕೇ ಬೆಳಕಾಗಿರುವಂತೆ-)-

ವಚನ:ಅರ್ಥ:ವ|| ಮತ್ತು ಈ ಕಡೆ ಭೀಷ್ಮನ ಎಡಬದಿಯಲ್ಲಿ ಆಕಾಶ ಭಾಗವನ್ನು ತಡಿಕೆಯಿಂದ ಹೆಣೆದ ಹಾಗೆ ಮಾಡಿ ತನ್ನ ರಥದಲ್ಲಿ ರಾಶಿ ಹಾಕಿದ ಆಯುಧಗಳ ಬೆಳಕೇ ಬೆಳಕಾಗಿರುವಂತೆ-

ಕಂ|| ಕರೆ ಕೊರಲೊಳ್

ಕಣ್ಬೊಸಲೊಳ್

ಪೆರೆ ಮಕುಟದೊಳುಗ್ರಧನು

ಕರಾಗ್ರದೊಳಿರೆಯ|

ಳ್ಕೆಱೆಯೆ ಹರಿಕೇತು

ನಭದೊಳ್

ಮಿಱುಗುವ ಚೆಂಬೊನ್ನ

ರಥದನಶ್ವತ್ಥಾಮಂ|| ೫೭ ||

ಪದ್ಯ-೫೭:ಪದವಿಭಾಗ-

ಅರ್ಥ:ಕರೆ ಕೊರಲೊಳ್

(ಕೊರಳಿನಲ್ಲಿ ಕರಿಯ ಮಚ್ಚೆ)

ಕಣ್ಣು ನೊಸಲೊಳ್, ಪರೆ
ಮಕುಟದೊಳು (ಕೊರಳಿನಲ್ಲಿ
ಕರಿಯ ಮಚ್ಚೆ ಹಣೆಯಲ್ಲಿ
ಕಣ್ಣು ಕಿರೀಟದ ತುದಿಯಲ್ಲಿ
ಚಂದ್ರ) ಉಗ್ರ ಧನು
ಕರಾಗ್ರದೊಳ್ (ಕೈಯಲ್ಲಿ
ಉಗ್ರವಾದ ಬಿಲ್ಲು) ಇರೆ
(ಇರಲು) ಅಳ್ಕೆಱೆಯೆ
(ಮಿಡುಕುತ್ತಿರಲು,
ಹಾರುತ್ತಿರಲು,-) ಹರಿಕೇತು
ನಭದೊಳ್ (ಆಕಾಶದಲ್ಲಿ

ಸಿಂಹಧ್ವಜವು) ಮಿಱುಗುವ ಚೆಂಬೊನ್ನ ರಥದನು ಅಶ್ವತ್ಥಾಮಂ (ಪ್ರಕಾಶವಾದ ಹೊಂಬಣ್ಣದ ತೇರಿನಲ್ಲಿರುವವನು ಅಶ್ವತ್ಥಾಮನು)

ಪದ್ಯ-೫೭:ಅರ್ಥ: ಕೊರಳಿನಲ್ಲಿ ಕರಿಯ ಮಚ್ಚೆ ಹಣೆಯಲ್ಲಿ ಕಣ್ಣು ಕಿರೀಟದ ತುದಿಯಲ್ಲಿ ಚಂದ್ರ ಕೈಯಲ್ಲಿ ಉಗ್ರವಾದ ಬಿಲ್ಲು ಇರಲು,

ಇವುಗಳಿಂದ ಕೂಡಿ
ಆಕಾಶದಲ್ಲಿ ಸಿಂಹಧ್ವಜವು
ಮಿಡುಕುತ್ತಿರಲು, ಪ್ರಕಾಶವಾದ
ಹೊಂಬಣ್ಣದ
ತೇರಿನಲ್ಲಿರುವವನು
ಅಶ್ವತ್ಥಾಮನು.

ವ|| ಆ ರುದ್ರಾವತಾರನ ಕೆಲದೊಳ್ ಕಿಕ್ಕಿಱಿಗಿಱಿದ ತಱಿದುಱುಗಲ ನಡುವೆ ಪೊನ್ನ ರಥಮನೇಱಿ ನಿಂದಂ ಭೂರಿಶ್ರವನಾತನ ಕೆಲದೊಳ್

ಬಾಳಬಟ್ಟಂ ತೂಂತಿಟ್ಟಂತೆ
ಸಂದಣಿಸಿ ನಿಂದ
ಗೋಪಕುಮಾರರಣಿಯ
ನಡುವೆ ಪೊನ್ನ ರಥಮನೇಱಿ
ನಿಂದಾತನೆನ್ನ ತಮ್ಮಂ
ಕೃತವರ್ಮನಾತನ
ಕೆಲದೊಳೊಂದಕ್ಷೋಹಿಣೀ
ಬಲಂಬೆರಸು ಸುತ್ತಿಱಿದು
ಕನಕ ದಂಡ ಮಂಡಿತ
ವಿಚಿತ್ರಾತಪತ್ರಂಗಳ ನಡುವೆ
ಮಣಿಮಕುಟ ಮರೀಚಿಗಳ್

ಪೊಳೆಯೆ ನಾನಾ
ವಾಹನಂಗಳನೇಱಿ ನಿಂದರ್
ಜಯತ್ಸೇನ ಕಾಂಭೋಜ
ಸುದಕ್ಷಿಣ ದಂಡಧಾರ
ಶತದಂಡಧರರವರ
ಕೆಲದೊಳ್ ನೀಳ ಶ್ರುತಾಯುಧ
ನಿಯುತಾಯುಧಾಚ್ಯುತಾಯು
ಧರೆಂಬರವರ ಕೆಲದೊಳ್ ನಿಲೆ
ಬಲದ ಸೆರೆಕೋಲೊಳೊಂದ
ಕ್ಷೋಹಿಣೀಬಲಂಬೆರಸುಮ
ಯ್ವತ್ತುಸಾಸಿರ

ಮದದಾನೆವೆರಸು ನಿಂದಂ
ಸುಯೋಧನನಣುಗ
ಮಯ್ದುನಂ ಸಿಂಧು
ದೇಶಾಶ್ವರಂ ಜಯದ್ರಥನಾತನ
ಕೆಲದೊಳ್
ಮಕರಮಸ್ತಕಭೂಮಿಯೊಳ್
ಕರಟತಟಗಳಿತ
ಮದಜಳಧಾರಾಪೂರ
ಪರಿಪ್ಲಾವಿತ ಸಕಳ
ಭೂತಳಮಪ್ಪ ನಾಲ್ಕು ಲಕ್ಕ
ಭದ್ರಹಸ್ತಿಯುಮನೊಂದು

ಮಾಡಿ ಘಟೆಯ ಮೊನೆಯೊಳ್
ದಿಗ್ಗಜೇಂದ್ರಮೆನಿಸಿದ
ಸುಪ್ರತೀಕ ಗಜೇಂದ್ರಮನೇಱಿ
ನಿಂದಾತನಿಂದ್ರನ ಕೆಳೆಯಂ
ಭಗದತ್ತನಾತನ
ಕೆಲದೊಳೊಂದು ಲಕ್ಕ
ಕುದುರೆಯುಮಱುವತ್ತು
ಸಾಸಿರ ರಥಮುಮೊಂದ
ಕ್ಷೋಹಿಣಿಯ ಕಾಲಾಳ್ವೆರಸು
ನಿಂದರ್ ಸೋಮದತ್ತ
ಬಾಹ್ಲೀಕರವರ ಕೆಲದೊಳ್

ದೇವೇಂದ್ರಂಗೆ ಪಗೆವರಾಗಿ
ವಿಕ್ರಮಾರ್ಜುನನ ಕೆಯ್ಯೊಳ್
ಸತ್ತ ನಿವಾತಕವಚ ಕಾಳಕೇಯ
ಪೌಳೋಮ ತಳತಾಳುಕರೆಂಬ
ದೈತ್ಯರ್ ವೃದ್ಧ ವೈರಮಂ ನೆರೆದು
ತ್ರಿಗರ್ತಾಶ ಸುಶರ್ಮ
ಪ್ರಭೃತಿಗಳುಂ
ಸಂಸಪ್ತಕುರಮಾಗಿ ಪುಟ್ಟಿ
ಮೂರು
ಕೋಟಿಯುಮಱುವತ್ತು
ಸಾಸಿರ

ದೈತ್ಯಪ್ರಧಾನನಾಯಕರುಮರ್
ಜುನನೊಳ್ ಕಾದುವ ಬೆಸನಂ
ದುರ್ಯೋಧನನೊಳ್ ಬೇಡಿ
ಪಡೆದು ಪದಿನೆಂಟು ಕೋಟಿ
ರಥಂಬೆರಸು ಬೇರೊಡ್ಡಿ
ನಿಂದರ್; ಮತ್ತಿತ್ತ
ಚತುರಂಗಬಳಜಳನಿಯ
ನಡುವೆ ಕಳಿಂಗರಾಜ ವಂಗ
ಕೊಂಗ ದೇಶಾಧೀಶ್ವರ
ರೆಣ್ಬತ್ತುಸಾಸಿರ
ಗಜಘಟೆಗಳುಂ ಮೂಱುಲಕ್ಕ

ರಥಮುಮಱುವತ್ತು ಕೋಟಿ
ಪದಾತಿಯುಂ ಬೆರಸು ನಿಂದರ್
ಮತ್ತಂ ಕ್ಷೇಮಧೂರ್ತಿಯುಂ
ಭೀಮಸೇನನ ಕೆಯ್ಯೊಳ್ ಸತ್ತ
ಬಕಾಸುರ ಜಟಾಸುರರನ
ಮಕ್ಕಳಳಂಭೂಷ ಹಲಾಯುಧ
ಮುಸಲಾಯುಧ ಕಾಳ ನೀಳ
ಪ್ರಮುಖ ರೂಕ್ಷರಾಕ್ಷಸ
ಬಲಂಬೆರಸು ಸುತ್ತಿಱಿದು
ಬಳಸಿಯುಮಿರೆ ದುಶ್ಶ್ಯಾಸನಂ
ಮೊದಲಾಗೆ ನೂರ್ವರ್

ತಮ್ಮಂದಿರುಂ ಲಕ್ಕಣಂ
ಮೊದಲಾಗೆ ನೂರ್ವರ್
ಮಕ್ಕಳುಮಱುವತ್ತು ಸಾಸಿರ
ರಥಮುಂ ಪದಿನೆಂಟು ಸಾಸಿರ
ಮದಾಂಧಗಂಧಸಿಂಧುರಂಗ
ಳುಂ ಬೆರಸು ಪೊಯ್ತು
ಪಂಚಮಹಾಶಬ್ದಂಗಳ್ ಕಾಳ
ನೀಳ ಜಳಧರಂಗಳ್
ಮೊೞಗುವಂತೆ ಮೊೞಗೆ
ಗಗನತಳಂ ತಳ್ತಿರ್ಪಂತೆ
ಪೊಳೆದು ಮಿಳಿರ್ವ ಪಾಳಿ

ಮಹಾಧ್ವಜಂಗಳುಂ ಗಗನಸಿಂಧು ಫೇನ ಪಟಳ ಶಂಖ ಸಂಕಾಶ ಪಾಂಡು ಛತ್ರಚಾಮರಂಗಳುಂ ಪೆಱವುಂ ರಾಜಚಿಹ್ನಂಗಳುಮೆಸೆಯೆ-

ವಚನ:ಪದವಿಭಾಗ-

ಅರ್ಥ:ಆ ರುದ್ರಾವತಾರನ ಕೆಲದೊಳ್ ಕಿಕ್ಕಿಱಿಗಿಱಿದ (ಕಿಕ್ಕಿರಿದು ಸೇರಿದ) ತೞೆದುಱುಗಲ (ಪಕ್ಕದಲ್ಲಿ

ಒಟ್ಟಾಗಿ ಸೇರಿಕೊಂಡಿರುವ ಛತ್ರಿಗಳ) ನಡುವೆ ಪೊನ್ನ ರಥಮನೇಱಿ (ರಥವನ್ನು ಹತ್ತಿ)ನಿಂದಂ ಭೂರಿಶ್ರವನು ಆತನ ಕೆಲದೊಳ್ (ಪಕ್ಕದಲ್ಲಿ) ಬಾಳಬಟ್ಟಂ ತೂಂತಿಟ್ಟಂತೆ ಸಂದಣಿಸಿ (ತೂತುಮಾಡಿದ ಹಾಗೆ ಗುಂಪುಕೂಡಿಸಿ) ನಿಂದ ಗೋಪಕುಮಾರರಣಿಯ ನಡುವೆ ಪೊನ್ನ ರಥಮನೇಱಿ (ರಥವನ್ನು ಹತ್ತಿ) ನಿಂದಾತನು

ಎನ್ನ ತಮ್ಮಂ ಕೃತವರ್ಮನು.
ಆತನ ಕೆಲದೊಳ್ ಒಂದು
ಅಕ್ಷೋಹಿಣೀ ಬಲಂಬೆರಸು
ಸುತ್ತಿಱಿದು (ಸುತ್ತುವರಿದು,
)ಕನಕ ದಂಡ ಮಂಡಿತ
(ಸೈನ್ಯದಿಂದ ಕೂಡಿ
ಸುತ್ತುವರಿದು ವ್ಯಾಪಿಸಿ ಚಿನ್ನದ
ದಂಡಿಗೆಯಿಂದಲಂಕೃತವಾದ)
ವಿಚಿತ್ರಾತಪತ್ರಂಗಳ ನಡುವೆ
ಮಣಿಮಕುಟ ಮರೀಚಿಗಳ್
ಪೊಳೆಯೆ ನಾನಾ

ವಾಹನಂಗಳನೇಱಿ
(ವಾಹನಗಳನ್ನು ಏರಿ)
ನಿಂದರ್ ಜಯತ್ಸೇನ
ಕಾಂಭೋಜ ಸುದಕ್ಷಿಣ
ದಂಡಧಾರ ಶತದಂಡಧರರು.
ಅವರ ಕೆಲದೊಳ್ ನೀಳ
ಶ್ರುತಾಯುಧ ನಿಯುತಾಯುಧ
ಅಚ್ಯುತಾಯುಧರೆಂಬರು;
ಅವರ ಕೆಲದೊಳ್ ನಿಲೆ ಬಲದ
ಸೆರೆಕೋಲೊಳ್
(ಬಲದಂಚಿನಲ್ಲಿ) ಒಂದು

ಕ್ಷೋಹಿಣೀ ಬಲಂ ಬೆರಸುಂ
ಐಯ್ವತ್ತುಸಾಸಿರ ಮದದಾನೆ
ವೆರಸು ನಿಂದಂ
ಸುಯೋಧನನ ಅಣುಗ
ಮಯ್ದುನುಂ (ಪ್ರೀತಿಯ
ಮೈದುನನು) ಸಿಂಧು
ದೇಶಾಶ್ವರಂ ಜಯದ್ರಥನು.
ಆತನ ಕೆಲದೊಳ್ (ಪಕ್ಕದಲ್ಲಿ)
ಮಕರಮಸ್ತಕ ಭೂಮಿಯೊಳ್
ಕರಟತಟಗಳಿತ
ಮದಜಳಧಾರಾಪೂರ

ಪರಿಪ್ಲಾವಿತ
(ಕಪೋಲಪ್ರದೇಶದಿಂದ
ಧಾರಾಕಾರವಾಗಿ
ಹರಿಯುತ್ತಿರುವ
ಮದೋದಕದಿಂದ) ಸಕಳ
ಭೂತಳಮಪ್ಪ ನಾಲ್ಕು ಲಕ್ಕ
ಭದ್ರಹಸ್ತಿಯುಮನು ಒಂದು
ಮಾಡಿ ಘಟೆಯ
ಮೊನೆಯೊಳ್
ದಿಗ್ಗಜೇಂದ್ರಮೆನಿಸಿದ
(ಮುಂಭಾಗದಲ್ಲಿ ದಿಗ್ಗಜವೆಂದು

ಪ್ರಸಿದ್ಧಿಗೊಂಡಿರುವ)
ಸುಪ್ರತೀಕ ಗಜೇಂದ್ರಮನು
ಏಱಿ (ಹತ್ತಿ) ನಿಂದಾತನು
ಇಂದ್ರನ ಕೆಳೆಯಂ ಭಗದತ್ತನು.
ಆತನ ಕೆಲದೊಳು (ಪಕ್ಕದಲ್ಲಿ)
ಒಂದು ಲಕ್ಕ ಕುದುರೆಯುಂ
ಅಱುವತ್ತು ಸಾಸಿರ ರಥಮುಂ
ಒಂದು ಅಕ್ಷೋಹಿಣಿಯ
ಕಾಲಾಳ್ವೆರಸು ನಿಂದರ್
ಸೋಮದತ್ತ ಬಾಹ್ಲೀಕರವರ
ಕೆಲದೊಳ್ ದೇವೇಂದ್ರಂಗೆ

ಪಗೆವರಾಗಿ ವಿಕ್ರಮಾರ್ಜುನನ
ಕೆಯ್ಯ್ಯಾಳ್ ಸತ್ತ ನಿವಾತಕವಚ
ಕಾಳಕೇಯ ಪೌಳೋಮ
ತಳತಾಳುಕರೆಂಬ ದೈತ್ಯರ್
ವೃದ್ಧ ವೈರಮಂ ನೆರೆದು
ತ್ರಿಗರ್ತಾಶ ಸುಶರ್ಮ
ಪ್ರಭೃತಿಗಳುಂ, ಸಂಸಪ್ತಕುರಂ
ಆಗಿ ಪುಟ್ಟಿ (ಆಗಿ ಹುಟ್ಟಿ)
ಮೂರು ಕೋಟಿಯುಂ
ಅಱುವತ್ತು (೬೦) ಸಾಸಿರ
ದೈತ್ಯಪ್ರಧಾನನಾಯಕರುಂ

ಅರ್ಜುನನೊಳ್ ಕಾದುವ
ಬೆಸನಂ (ಯುದ್ಧಮಾಡಲು
ಆಜ್ಞೆಯನ್ನು)
ದುರ್ಯೋಧನನೊಳ್ ಬೇಡಿ
ಪಡೆದು, ಪದಿನೆಂಟು ಕೋಟಿ
ರಥಂಬೆರಸು ಬೇರೊಡ್ಡಿ
ನಿಂದರ್; ಮತ್ತಿತ್ತ
ಚತುರಂಗಬಳ ಜಳನಿಯ
(ಸೈನ್ಯ ಸಮುದ್ರದ) ನಡುವೆ
ಕಳಿಂಗರಾಜ ವಂಗ ಕೊಂಗ
ದೇಶಾಧೀಶ್ವರ ರೆ

ಎಣ್ಬತ್ತುಸಾಸಿರ (೮೦,೦೦೦)
ಗಜಘಟೆಗಳುಂ (ಆನೆ)
ಮೂಱುಲಕ್ಕ ರಥಮುಂ
ಅಱುವತ್ತು (೬೦)ಕೋಟಿ
ಪದಾತಿಯುಂ ಬೆರಸು (ಸೇರಿ)
ನಿಂದರ್; ಮತ್ತಂ
ಕ್ಷೇಮಧೂರ್ತಿಯುಂ
ಭೀಮಸೇನನ ಕೆಯ್ಯೊಳ್ ಸತ್ತ
ಬಕಾಸುರ ಜಟಾಸುರರನ
ಮಕ್ಕಳ್-> ಅಳಂಭೂಷ
ಹಲಾಯುಧ ಮುಸಲಾಯುಧ

ಕಾಳ ನೀಳ ಪ್ರಮುಖ

ರೂಕ್ಷರಾಕ್ಷಸ ಬಲಂಬೆರಸು

(ಸೈನ್ಯ ಸಮೇತ) ಸುತ್ತಿಱಿದು

(ಸುತ್ತುವರಿದು) ಬಳಸಿಯುಂ

ಇರೆ ದುಶ್ಯಾಸನಂ ಮೊದಲಾಗೆ

ನೂರ್ವರ್ ತಮ್ಮಂದಿರುಂ

ಲಕ್ಕಣಂ ಮೊದಲಾಗೆ

ನೂರ್ವರ್ ಮಕ್ಕಳುಂ

ಅಱುವತ್ತು (೬೦)ಸಾಸಿರ

ರಥಮುಂ ಪದಿನೆಂಟು (೧೮)

ಸಾಸಿರ

ಮದಾಂಧಗಂಧಸಿಂಧುರಂಗ
ಳುಂ (ಆನೆಗಳು) ಬೆರಸು
(ಸೇರಿ) ಪೊಯ್ವ
ಪಂಚಮಹಾಶಬ್ದಂಗಳ್ ಕಾಳ
ನೀಳ ಜಳಧರಂಗಳ್
(ಮೋಡಗಳು) ಮೊಳಗುವಂತೆ
(ಪಂಚಮಹಾಶಬ್ದಗಳು
ಪ್ರಳಯಕಾಲದ ಕರಿಯ
ಮೋಡಗಳು ಮೊಳಗುವ
ಹಾಗೆ) ಮೊಳಗೆ (ಮೊಲಗೆ)
ಗಗನತಳಂ ತಳ್ತಿರ್ದಂತೆ

ಪೊಳೆದು ಮಿಳಿರ್ವ ಪಾಳಿ
(ಅಲುಗುವ ಬಾವುಟ)
ಮಹಾಧ್ವಜಂಗಳುಂ
(ಹೊಳೆದು ಚಲಿಸುತ್ತಿರುವ
ಧ್ವಜ ಮಹಾಧ್ವಜಗಳೂ)
ಗಗನಸಿಂಧು ಫೇನ ಪಟಳ
ಶಂಖ ಸಂಕಾಶ ಪಾಂಡು
ಛತ್ರಚಾಮರಂಗಳುಂ
ಪೆಱವುಂ ರಾಜಚಿಹ್ನಂಗಳುಂ
ಎಸೆಯೆ (ಇನ್ನೂ ಇತರ

ರಾಜ್ಯಚಿಹ್ನೆಗಳೂ
ಪ್ರಕಾಶಿಸುತ್ತಿರಲು-)-
ವಚನ:ಅರ್ಥ: ಆ ರುದ್ರನ
ಅವತಾರ ಅಶ್ವತ್ಥಾಮನ
ಪಕ್ಕದಲ್ಲಿ ಒಟ್ಟಾಗಿ
ಸೇರಿಕೊಂಡಿರುವ ಛತ್ರಿಗಳ
ಸಮೂಹದ ಮಧ್ಯದಲ್ಲಿ ಚಿನ್ನದ
ರಥವನ್ನು ಹತ್ತಿ
ನಿಂತಿರುವವನು ಭೂರಿಶ್ರವ;
ಆತನ ಪಕ್ಕದಲ್ಲಿ ಆಕಾಶ
ಪ್ರದೇಶವನ್ನು ತೂತುಮಾಡಿದ

ಹಾಗೆ ಗುಂಪುಕೂಡಿಸಿ
ನಿಂತಿರುವ ಗೋಪಕುಮಾರರ
ಸೈನ್ಯದ ನಡುವೆ ಚಿನ್ನದ
ತೇರನ್ನು ಹತ್ತಿ ನಿಂತಿರುವವನು
ನನ್ನ ತಮ್ಮನಾದ ಕೃತವರ್ಮ,
ಆತನ ಪಕ್ಕದಲ್ಲಿ
ಒಂದಕ್ಷೋಹಿಣೀ ಸೈನ್ಯದಿಂದ
ಕೂಡಿ ಸುತ್ತಲೂ ವ್ಯಾಪಿಸಿ
ಚಿನ್ನದ
ದಂಡಿಗೆಯಿಂದಲಂಕೃತವಾದ
ಚಿತ್ರಖಚಿತವಾದ ಛತ್ರಿಗಳ

ನಡುವೆ ರತ್ನಖಚಿತವಾದ
ಕಿರೀಟವು ಹೊಳೆಯುವ ಹಾಗೆ
ಅನೇಕ ವಿಧವಾದ
ವಾಹನಗಳನ್ನು ಹತ್ತಿ
ನಿಂತಿರುವವರು ಜಯತ್ಸೇನ,
ಕಾಂಭೋಜ, ಸುದಕ್ಷಿಣ,
ದಂಡಧಾರ, ಶತದಂಡಧರರು.
ಅವರ ಪಕ್ಕದಲ್ಲಿ
ಬಲದಂಚಿನಲ್ಲಿ
ಒಂದಕ್ಷೋಹಿಣೀ
ಸೈನ್ಯದಿಂದಲೂ ಐಯ್ವತ್ತು

ಸಾವಿರ ಮದ್ದಾನೆಯಿಂದಲೂ
ಕೂಡಿ ನಿಂತಿರುವವನು
ದುರ್ಯೋಧನ ಪ್ರೀತಿಯ
ಮೈದುನನೂ
ಸಿಂಧುದೇಶಾಶ್ವರನೂ ಆದ
ಜಯದ್ರಥ. ಆತನ ಪಕ್ಕದಲ್ಲಿ
ಮಕರವ್ಯೂಹದ
ಮುಂಭಾಗದಲ್ಲಿ
ಕಪೋಲಪ್ರದೇಶದಿಂದ
ಧಾರಾಕಾರವಾಗಿ
ಹರಿಯುತ್ತಿರುವ

ಮದೋದಕದಿಂದ
ತೊಳೆಯಲ್ಪಟ್ಟ
ಭೂಮಿಯನ್ನುಳ್ಳ ನಾಲ್ಕು ಲಕ್ಷ
ಭದ್ರಜಾತಿಯ ಆನೆಗಳನ್ನು
ಒಟ್ಟುಗೂಡಿಸಿಕೊಂಡು
ಅವುಗಳ ಮುಂಭಾಗದಲ್ಲಿ
ದಿಗ್ಗಜವೆಂದು
ಪ್ರಸಿದ್ಧಿಗೊಂಡಿರುವ
ಸುಪ್ರತೀಕವೆಂಬ ಆನೆಯನ್ನು
ಹತ್ತಿ ನಿಂತಿರುವವನು ಇಂದ್ರನ
ಸ್ನೇಹಿತನಾದ ಭಗದತ್ತ. ಆತನ

ಪಕ್ಕದಲ್ಲಿ ಒಂದು ಲಕ್ಷ ಕುದುರೆಯನ್ನು ಅರವತ್ತು ಸಾವಿರ ರಥವನ್ನು ಒಂದು ಲಕ್ಷ ಕಾಲಾಳನ್ನು ಕೂಡಿಕೊಂಡು ನಿಂತವರು ಸೋಮದತ್ತ ಬಾಹ್ಲಿಕರು. ಅವರ ಪಕ್ಕದಲ್ಲಿ ದೇವೇಂದ್ರನಿಗೆ ಶತ್ರುಗಳಾಗಿ ವಿಕ್ರಮಾರ್ಜುನನ ಕಯ್ಯಲ್ಲಿ ಸತ್ತ ನಿವಾತಕವಚ, ಕಾಳಕೇಯ, ಪೌಳೋಮ, ತಳತಾಳುಕರೆಂಬ ರಾಕ್ಷಸರು

ಹಳೆಯ ಶತ್ರುತ್ವವನ್ನು
ನೆನೆಸಿಕೊಂಡು ಈಗ
ತ್ರಿಗರ್ತಾಶ, ಸುಶರ್ಮರೇ
ಮೊದಲಾದವರಾಗಿಯೂ
ಸಂಸಪ್ತಕರಾಗಿಯೂ ಹುಟ್ಟಿ
ಬಂದಿರುವ ಮೂರುಕೋಟಿ
ಅರವತ್ತು ಸಾವಿರ
ರಾಕ್ಷಸಮುಖ್ಯರಾದ
ನಾಯಕರು ಅರ್ಜುನನೊಡನೆ
ಯುದ್ಧ ಮಾಡುವ
ಕಾರ್ಯವನ್ನು

ದುರ್ಯೋಧನನಲ್ಲಿ ಬೇಡಿ ಪಡೆದು ಹದಿನೆಂಟು ಕೋಟಿ ರಥದಿಂದ ಕೂಡಿ ಪ್ರತ್ಯೇಕವಾಗಿ ಸನ್ನದ್ಧರಾಗಿ ನಿಂತಿದ್ದಾರೆ. ಅಲ್ಲದೆ ಈ ಕಡೆ ಚತುರಂಗ ಸೇನಾಸಮುದ್ರದ ಮಧ್ಯದಲ್ಲಿ ಕಳಿಂಗ ಕೊಂಗ ವಂಗಾಶರು ಎಂಬತ್ತು ಸಾವಿರ ಆನೆಯ ಗುಂಪುಗಳನ್ನೂ ಮೂರುಲಕ್ಷ ರಥವನ್ನೂ ಅರವತ್ತು ಕೋಟಿ ಕಾಲಾಳು ಸೈನ್ಯವನ್ನೂ ಕೂಡಿ

ನಿಂತಿದ್ದಾರೆ. ಅಲ್ಲದೆ ಕ್ಷೇಮಧೂರ್ತಿಯೂ ಭೀಮನ ಕಯ್ಯಲ್ಲಿ ಸತ್ತ ಬಕಾಸುರ ಜಟಾಸುರರ ಮಕ್ಕಳಾದ ಅಳಂಭೂಷ, ಹಲಾಯುಧ, ಮುಸಲಾಯುಧ, ಕಾಳನೀಳರೇ ಮೊದಲಾದವರೂ ಕ್ರೂರರಾಕ್ಷಸಸೈನ್ಯದೊಡನೆ ಸುತ್ತಲೂ ವ್ಯಾಪಿಸಿ ಬಳಸಿ ನಿಂತಿದ್ದಾರೆ. ದುಶ್ಯಾಸನನೇ

ಮೊದಲಾದ ನೂರು ಜನ
ಮಕ್ಕಳೂ ಅರವತ್ತು ಸಾವಿರ
ರಥದಿಂದಲೂ ಹದಿನೆಂಟು
ಸಾವಿರ ಮದದಿಂದ
ಕುರುಡಾದ ಶ್ರೇಷ್ಠವಾದ
ಆನೆಗಳಿಂದಲೂ ಕೂಡಿ
ಪಂಚಮಹಾಶಬ್ದಗಳು
ಪ್ರಳಯಕಾಲದ ಕರಿಯ
ಮೋಡಗಳು ಮೊಳಗುವ
ಹಾಗೆ ಮೊಳಗುತ್ತಿರಲು ಆಕಾಶ
ಪ್ರದೇಶವೇ ಚಿಗುರಿದ ಹಾಗೆ

ಹೊಳೆದು ಚಲಿಸುತ್ತಿರುವ ಧ್ವಜ ಮಹಾಧ್ವಜಗಳೂ ದೇವಗಂಗಾನದಿಯ ನೊರೆ ಮತ್ತು ಶಂಖಗಳಿಗೆ ಸಮಾನವಾದ ಬಿಳಿಯ ಬಣ್ಣದಿಂದ ಕೂಡಿದ ಛತ್ರಚಾಮರಗಳೂ ಇನ್ನೂ ಇತರ ರಾಜ್ಯಚಿಹ್ನೆಗಳೂ ಪ್ರಕಾಶಿಸುತ್ತಿರಲು-

ಚಂ|| ಕನಕ ಗಿರೀಂದ್ರ ರುಂದ್ರ ಶಿಖರಸ್ಥಿತ

ಬಾಳದಿನೇಶಬಿಂಬಮಂ
ನೆನೆಯಿಸೆ ತನ್ನ ಪೊನ್ನ
ರಥದೊಳ್ ನೆಲಸಿರ್ದು
ವಿಳಾಸದಿಂದೆ ಭೀ|
ಮನ ಮೊನೆಯಂ
ವನೀಪಕರನಾರಯಲಟ್ಟಿ
ಯುಗಾಂತವಾರ್ಧಿ ಭೋಂ
ಕೆನೆ ತಳರ್ವಂದದಿಂ
ತಳರಲಟ್ಟಿಪನಲ್ತೆ
ಫಣೀಂದ್ರಕೇತನಂ|| ೫೮||

ಪದ್ಯ-೫೮:ಪದವಿಭಾಗ-ಅರ್ಥ:ಕನಕಗಿರೀಂದ್ರ ರುಂದ್ರ (ಮೇರುಪರ್ವತದ ವಿಶಾಲವಾದ) ಶಿಖರಸ್ಥಿತ ಬಾಳದಿನೇಶ ಬಿಂಬಮಂ (ಶಿಖರದಲ್ಲಿ ಇರುವ ಬಾಲಸೂರ್ಯನ ಬಿಂಬವನ್ನು) ನೆನೆಯಿಸೆ (ನೆನಪಿಸುವ) ತನ್ನ ಪೊನ್ನ ರಥದೊಳ್ ನೆಲಸಿರ್ದು ವಿಳಾಸದಿಂದೆ (ತನ್ನ ಚಿನ್ನದ ರಥದಲ್ಲಿ ವೈಭವದಿಂದ

ಕುಳಿತಿದ್ದು) ಭೀಮನ
ಮೊನೆಯಂ (ಭೀಮನ
ಯುದ್ಧಯೊಜನೆಯನ್ನು)
ವನೀಪಕರನು(ಗೂಢಚಾರರ
ನ್ನು) ಆರಯಲು ಅಟ್ಟಿ
(ವಿಚಾರಮಾಡಿ ಬರಲು
ಗೂಢಚಾರರರನ್ನು ಕಳುಹಿಸಿ)
ಯುಗಾಂತವಾರ್ಧಿ ಭೋಂಕನೆ
ತಳರ್ವಂದದಿಂ (
ಪ್ರಳಯಕಾಲದ ಸಮುದ್ರವು
ಇದ್ದಕ್ಕಿದ್ದ ಹಾಗೆ ಚಲಿಸುವಂತೆ)

ತಳರಲ್ (ತೆರಳಲು, ಚಲಿಸಲು) ಅಟ್ಟಿಪನಲ್ತೆ ಫಣೀಂದ್ರಕೇತನಂ (ಚಲಿಸಲು ದುರ್ಯೋಧನನು ಸಂದೇಶವನ್ನು ಕಳುಹಿಸಿದನಲ್ಲವೇ!)

ಪದ್ಯ-೫೮:ಅರ್ಥ:ಮೇರುಪರ್ವತದ ವಿಶಾಲವಾದ ಶಿಖರದಲ್ಲಿ ಇರುವ ಬಾಲಸೂರ್ಯನ ಬಿಂಬವನ್ನು ನೆನಪಿಸುವ ತನ್ನ ಚಿನ್ನದ

ರಥದಲ್ಲಿ ವೈಭವದಿಂದ
ಕುಳಿತಿದ್ದು, ಭೀಮನ
ಯುದ್ಧಯೊಜನೆಯನ್ನು
ವಿಚಾರಮಾಡಿ ಬರಲು
ಗೂಢಚಾರರನ್ನು ಕಳುಹಿಸಿ,
ಪ್ರಳಯಕಾಲದ ಸಮುದ್ರವು
ಇದ್ದಕ್ಕಿದ್ದ ಹಾಗೆ ಚಲಿಸುವಂತೆ
ಚಲಿಸಲು ದುರ್ಯೋಧನನು
ಸಂದೇಶವನ್ನು
ಕಳುಹಿಸಿದನಲ್ಲವೇ!
ಕಳುಹಿಸಿದನು.

ಕಂ|| ಸೆರೆಕೋೕಲ್ ಸೆರೆಕೋೕಲಿಂ
ಪ
ತ್ತೞುಗಾವುದ ಬಲದ
ಪವಣನನಿತಿನಿತೆಂದಾ|
ನೞಿಯೆಂ ದೇವಾಸುರರೊಳ
ಮೞಿಯೆಂ ಕಂಡಿನಿತು
ಬಲಮನಾನವನಿಪತೀ|| ೫೯ ||

ಪದ್ಯ-೫೯:ಪದವಿಭಾಗ-
ಅರ್ಥ:ಸೆರೆಕೋೕಲ್
ಸೆರೆಕೋೕಲಿಂ (ಒಂದು ಬದಿಯ
ಅಂಚಿನಿಂದ ಇನ್ನೊಂದು

ಬದಿಯ ಅಂಚಿನವರೆಗಿರುವ) ಪತ್ತೞುಗಾವುದ ಬಲದ (ಹತ್ತು ಆರು; ಹದಿನಾರು ಗಾವುದ ವಿಸ್ತಾರದ ಪ್ರದೇಶದಲ್ಲಿರುವ ಸೈನ್ಯದ) ಪವಣನು ಅನಿತಿನಿತೆಂದು ಆನಱಿಯೆಂ (ಪ್ರಮಾಣವನ್ನು ಅಷ್ಟಿಷ್ಟೆಂದು ನಾನು ಅರಿಯೆನು.) ದೇವಾಸುರರೊಳಂ ಅಱಿಯೆಂ (ಅರಿಯೆಂ) ಕಂಡ ಇನಿತು ಬಲಮನು ಆನು

ಅವನಿಪತೀ (ರಾಜನೇ, ದೇವಾಸುರರ ಯುದ್ಧದಲ್ಲಿಯೂ ಇಷ್ಟು ಸೈನ್ಯವನ್ನು ನಾನು ಕಂಡಿರಲಿಲ್ಲ.)

ಪದ್ಯ-೫೯:ಅರ್ಥ:ಒಂದು ಬದಿಯ ಅಂಚಿನಿಂದ ಇನ್ನೊಂದು ಬದಿಯ ಅಂಚಿನವರೆಗಿರುವ ಹದಿನಾರು ಗಾವುದ ವಿಸ್ತಾರದ ಪ್ರದೇಶದಲ್ಲಿರುವ ಸೈನ್ಯದ

ಪ್ರಮಾಣವನ್ನು ಅಪ್ಪಿಷ್ಟೆಂದು ನಾನು ಅರಿಯೆನು. ರಾಜನೇ ದೇವಾಸುರರ ಯುದ್ಧದಲ್ಲಿಯೂ ಇಷ್ಟು ಸೈನ್ಯವನ್ನು ನಾನು ಕಂಡಿರಲಿಲ್ಲ, ಎಂದು ಕೃಷ್ಣನು ಧರ್ಮರಾಯನಿಗೆ ಹೇಳಿದನು.

ವ|| ಎಂದು ನಾಮುಂ ನಮ್ಮ ಬಲದ ನಾಯಕರನೆಡೆಯಱಿದೊಡ್ಡು ವಮೆಂದು ದ್ರೋಣನ

ಮೊನೆಗಱುವತ್ತು ಸಾಸಿರ

ರಥಂಬೆರಸು

ಧೃಷ್ಟದ್ಯುಮ್ನನುಮನಶ್ವತ್ಥಾಮ

ನ ಮೊನೆಗೆ ನಾಲ್ವತ್ತು ಸಾಸಿರ

ರಥಂ ಬೆರಸು

ಶಿಖಂಡಿಯುಮಂ ಕೃತವರ್ಮನ

ಮೊನೆಗೊಂದಕ್ಷೋಹಿಣೀ

ಬಲಂ ಬೆರಸು

ಸಾತ್ಯಕಿಯುಮಂ

ದುರ್ಯೋಧನನ

ಮೊನೆಗೊಂದು ಕೋಟಿ

ರಥಮುಮೊಂದು ಲಕ್ಕ
ಭದ್ರಹಸ್ತಿಯುಂ ಬೆರಸು
ಭೀಮನುಮಂ ಬೃಹದಬಳನ
ಮೊನೆಗೆ ಮೂವತ್ತು ಸಾಸಿರ
ರಥಂಬೆರಸಭಿಮನ್ಯುವುಮಂ
ದುಶ್ಶ್ಯಾಸನನ ಮೊನೆಗೆ ನಾಲ್ವತ್ತು
ಸಾಸಿರ ರಥಂಬೆರಸು
ನಕುಲನುಮಂ ಶಕುನಿಯ
ಮೊನೆಗೆ ನಾಲ್ವತ್ತು ಸಾಸಿರ
ರಥಂಬೆರಸು ಸಹದೇವನುಮಂ
ಕೃಪನ

ಮೊನೆಗೊಂದಕ್ಷೋಹಿಣೀ
ಬಲಂಬೆರಸು ಕೇಕಯರುಮಂ
ಸಿಂಧುರಾಜನ
ಮೊನೆಗೊಂದಕ್ಷೋಹಿಣೀ
ಬಲಂಬೆರಸು ದ್ರುಪದನುಮಂ
ಭಗದತ್ತನ
ಮೊನೆಗೊಂದಕ್ಷೋಹಿಣೀ
ಬಲಂಬೆರಸು ವಿರಾಟನುಮಂ
ಜಟಾಸುರ ಬಕಾಸುರರ
ಮಕ್ಕಳಳಂಭೂಷ ಹಳಾಯುಧ
ಮುಸಳಾಯುಧ ಕಾಳ ನೀಳ

ನಕ್ತಂಚರರ
ಮೊನೆಗೊಂದಕ್ಷೋಹಿಣೀ
ಬಲಂಬೆರಸು
ಘಟೋತ್ಕಚನುಮಂ ವಿಂದನ
ಮೊನೆಗೆ ಪದಿನೆಂಟು ಸಾಸಿರ
ರಥಮುಮೊಂದುಲಕ್ಕ
ಮದದಾನೆಯುಂ ಬೆರಸು
ಕೊಂತಿಯ ಮಾವನಪ್ಪ
ಕೊಂತಿಭೋಜನುಮಂ
ವಿಂದಾನುವಿಂದರ
ಮೊನೆಗಱುವತ್ತು ಸಾಸಿರ

ರಥಂಬೆರಸು
ನಾಗಕುಮಾರನನಂತ
ಬಲಸಮನ್ವಿತನಿಳಾವಂತನು
ಮಂ ಭೂರಿಶ್ರವನ ಮೊನೆಗೆ
ನಾಲ್ವತ್ತು ಸಾಸಿರ ರಥಮುಂ
ನಾಲ್ವತ್ತು ಸಾಸಿರ
ಮದಹಸ್ತಿಗಳುಂ ಬೆರಸು
ಮದಗಜಾರೂಢನುತ್ತರನು
ಮಂ ಸುಯೋಧನನ ಮಕ್ಕಳ್
ಲಕ್ಕಣಂ ಮೊದಲಾಗೆ
ನೂರ್ವರ ಮೊನೆಗಱುವತ್ತು

ಸಾಸಿರ ರಥಂಬೆರಸು ಸುತ
ಸೋಮಕ ಪ್ರಮುಖರಪ್ಪ
ಪಂಚಪಾಂಡವರುಮಂ
ಪೇೞ್ದ ಕಾಂಭೋಜ ಸುದಕ್ಷಿಣ
ದಂಡಧಾರರೆಂಬ
ಮೂವರಕ್ಷೋಹಿಣೀಪತಿಗಳ
ಮೊನೆಗೆ ಮೂಱುಕೋಟಿ
ರಥಂಬೆರಸು ಪಾಂಡ್ಯ
ಶ್ರೀಜಯ ಸೋಮಕರಂ
ಪೇೞ್ದ ವೀರ ಪುಷ್ಕರ
ಪಾರಿಯಾತ್ರ ಬರ್ಬರ ಶಬರ

ನೇಪಾಳ ಮಹೀಪಾಳರ
ಮೊನೆಗೆರಡು ಕೋಟಿ
ರಥಂಬೆರಸು ಹೈಹಯರಂ
ಪೇಳ್ದು ನೀಳನನಱುವತ್ತು
ಸಾಸಿರ ಭದ್ರಹಸ್ತಿವೆರಸು ತನ್ನ
ಚಕ್ರರಕ್ಷೆಗೆ ಪೇಳ್ದು ಸಂಸಪ್ತಕರ
ಪದಿನೆಂಟು ಕೋಟಿ
ರಥಕ್ಕರಿಕೇಸರಿಯ
ರಥಮನೊಂದನೆ ಪೇಳ್ದು
ಯುಧಿಷ್ಠಿರಂ ಶಲ್ಯನ ಮೊನೆಗೆ
ನೆರೆದು ನಿಂದು ಕೆಯ್ವೀಸುವಾ

ಪ್ರಸ್ತಾವದೊಳ್ ‘ಶೂರಂ ಭೇದೇನ ಯೋಜಯೇತ್’ ಎಂಬ ನಯಮಂ ಕೆಯ್ಕೊಂಡು ವಿನಯಮನೆ ಮುಂದಿಟ್ಟು-

ವಚನ:ಪದವಿಭಾಗ-

ಅರ್ಥ:ಎಂದು ನಾಮುಂ ನಮ್ಮ ಬಲದ ನಾಯಕರನು ಎಡೆಯಱಿದು ಒಡ್ಡುವಂ ಎಂದು (ಆಯಕಟ್ಟುನೋಡಿ ಎದುರು ನಿಲ್ಲಿಸೋಣ ಎಂದು), ದ್ರೋಣನ ಮೊನೆಗೆ (ಸೈನ್ಯಕ್ಕೆ)

ಅಱುವತ್ತು ಸಾಸಿರ ರಥಂ
ಬೆರಸು (ಸೇರಿ)
ಧೃಷ್ಟದ್ಯುಮ್ನನುಮನು;
ಅಶ್ವತ್ಥಾಮನ ಮೊನೆಗೆ
ನಾಲ್ವತ್ತು ಸಾಸಿರ ರಥಂ ಬೆರಸು
ಶಿಖಂಡಿಯುಮಂ;
ಕೃತವರ್ಮನ ಮೊನೆಗೆ
ಒಂದಕ್ಷೋಹಿಣೀ ಬಲಂ
ಬೆರಸು ಸಾತ್ಯಕಿಯುಮಂ;
ದುರ್ಯೋಧನನ
ಮೊನೆಗೊಂದು ಕೋಟಿ

ರಥಮುಮೊಂದು ಲಕ್ಕ
ಭದ್ರಹಸ್ತಿಯುಂ ಬೆರಸು
ಭೀಮನುಮಂ; ಬೃಹದಬಳನ
ಮೊನೆಗೆ ಮೂವತ್ತು ಸಾಸಿರ
ರಥಂಬೆರಸು
ಅಭಿಮನ್ಯುವುಮಂ
ದುಶ್ಶ್ಯಾಸನನ ಮೊನೆಗೆ
ನಾಲ್ವತ್ತು ಸಾಸಿರ ರಥಂಬೆರಸು
ನಕುಲನುಮಂ; ಶಕುನಿಯ
ಮೊನೆಗೆ ನಾಲ್ವತ್ತು ಸಾಸಿರ
ರಥಂಬೆರಸು

ಸಹದೇವನುಮಂ; ಕೃಪನ
ಮೊನೆಗೆ ಒಂದು ಅಕ್ಷೋಹಿಣೀ
ಬಲಂ ಬೆರಸು
ಕೇಕಯರುಮಂ;
ಸಿಂಧುರಾಜನ ಮೊನೆಗೆ ಒಂದು
ಅಕ್ಷೋಹಿಣೀ ಬರಂಬೆರಸು
ದ್ರುಪದನುಮಂ; ಭಗದತ್ತನ
ಮೊನೆಗೆ ಒಂದು ಅಕ್ಷೋಹಿಣೀ
ಬಲಂ ಬೆರಸು ವಿರಾಟನುಮಂ;
ಜಟಾಸುರ ಬಕಾಸುರರ
ಮಕ್ಕಳ ಅಳಂಭೂಷ

ಹಳಾಯುಧ ಮುಸಳಾಯುಧ
ಕಾಳ ನೀಳ ನಕ್ತಂಚರರ
ಮೊನೆಗೊಂದು ಅಕ್ಷೋಹಿಣೀ
ಬಲಂ ಬೆರಸು
ಘಟೋತ್ಕಚನುಮಂ; ವಿಂದನ
ಮೊನೆಗೆ ಪದಿನೆಂಟು ಸಾಸಿರ
ರಥಮುಂ ಒಂದುಲಕ್ಕ
ಮದದಾನೆಯುಂ ಬೆರಸು
ಕೊಂತಿಯ ಮಾವನಪ್ಪ
ಕೊಂತಿಭೋಜನುಮಂ;
ವಿಂದಾನುವಿಂದರ ಮೊನೆಗೆ

ಅಱುವತ್ತು ಸಾಸಿರ ರಥಂ
ಬೆರಸು ನಾಗಕುಮಾರನ
ಅನಂತ ಬಲಸಮನ್ವಿತನು
ಇಳಾವಂತನುಮಂ;
ಭೂರಿಶ್ರವನ ಮೊನೆಗೆ
ನಾಲ್ವತ್ತು ಸಾಸಿರ ರಥಮುಂ
ನಾಲ್ವತ್ತು ಸಾಸಿರ
ಮದಹಸ್ತಿಗಳುಂ ಬೆರಸು
ಮದಗಜ ಆರೂಢನು
ಉತ್ತರನುಮಂ;
ಸುಯೋಧನನ ಮಕ್ಕಳ್

ಲಕ್ಕಣಂ ಮೊದಲಾಗೆ ನೂರ್ವರ ಮೊನೆಗೆ ಅಱುವತ್ತು ಸಾಸಿರ ರಥಂಬೆರಸು ಸುತ ಸೋಮಕ ಪ್ರಮುಖರಪ್ಪ ಪಂಚಪಾಂಡವರುಮಂ ಪೇೞ್ದು (ಅವರಿಗೆ ಎದುರಿಸಲು ಹೇಳಿ); ಕಾಂಭೋಜ ಸುದಕ್ಷಿಣ ದಂಡಧಾರರೆಂಬ ಮೂವರ ಅಕ್ಷೋಹಿಣೀಪತಿಗಳ ಮೊನೆಗೆ ಮೂಱುಕೋಟಿ ರಥಂಬೆರಸು ಪಾಂಡ್ಯ ಶ್ರೀಜಯ

ಸೋಮಕರಂ ಪೇೞ್ದು; ವೀರ
ಪುಷ್ಕರ ಪಾರಿಯಾತ್ರ ಬರ್ಬರ
ಶಬರ ನೇಪಾಳ ಮಹೀಪಾಳರ
ಮೊನೆಗೆರಡು ಕೋಟಿ
ರಥಂಬೆರಸು ಹೈಹಯರಂ
ಪೇೞ್ದು; ನೀಳನನ ಅಱುವತ್ತು
ಸಾಸಿರ ಭದ್ರಹಸ್ತಿವೆರಸು ತನ್ನ
ಚಕ್ರರಕ್ಷೆಗೆ ಪೇೞ್ದು; ಸಂಸಪ್ತಕರ
ಪದಿನೆಂಟು ಕೋಟಿ
ರಥಕ್ಕರಿಕೇಸರಿಯ
ರಥಮನೊಂದನೆ ಪೇೞ್ದು;

ಯುಧಿಷ್ಠಿರಂ ಶಲ್ಯನ ಮೊನೆಗೆ ನೆರೆದು ನಿಂದು; ಕೆಯ್ವೀಸುವಾ ಪ್ರಸ್ತಾವದೊಳ್ (ಯುದ್ಧಕ್ಕೆ ಆರಂಭ ಮಾಡಿ ಎಂದು ಕೈಬೀಸುವ ಸಮಯಕ್ಕೆ ಮೊದಲು,) 'ಶೂರಂ ಭೇದೇನ ಯೋಜಯೇತ್' ಎಂಬ ನಯಮಂ ಕೆಯ್ಕೊಂಡು ವಿನಯಮನೆ ಮುಂದಿಟ್ಟು-

ವಚನ:ಅರ್ಥ:ಎಂದು ನಾವೂ ನಮ್ಮ ಸೈನ್ಯದ ನಾಯಕರನ್ನು

ಆಯಕಟ್ಟುನೋಡಿ ಎದುರು ನಿಲ್ಲಿಸೋಣ ಎಂದನು. ದ್ರೋಣನ ಸೈನ್ಯಕ್ಕೆ ಪ್ರತಿಯಾಗಿ ಅರವತ್ತು ಸಾವಿರ ರಥದೊಡನೆ ಕೂಡಿದ ಧೃಷ್ಟದ್ಯುಮ್ನನನ್ನು ಗೊತ್ತುಮಾಡಿದನು. ಅಶ್ವತ್ಥಾಮನ ಸೈನ್ಯಕ್ಕೆ ನಲವತ್ತು ಸಾವಿರ ತೇರಿನಿಂದ ಕೂಡಿದ ಶಿಖಂಡಿಯನ್ನು ನೇಮಿಸಿದನು. ಕೃತವರ್ಮನ ಕಾಳಗಕ್ಕೆ ಒಂದಕ್ಷೋಹಿಣೀ

ಸೈನ್ಯದಿಂದ ಕೂಡಿದ ಸಾತ್ಯಕಿಯನ್ನು ನಿಯಮಿಸಿದನು. ದುರ್ಯೋಧನನೊಡನೆ ಯುದ್ಧ ಮಾಡುವುದಕ್ಕೆ ಒಂದು ಕೋಟಿ ರಥವನ್ನೂ ಒಂದುಲಕ್ಷ ಉತ್ತಮಜಾತಿಯ ಆನೆಗಳನ್ನೂ ಒಳಗೊಂಡ ಭೀಮನನ್ನು ಸಿದ್ಧಪಡಿಸಿದನು. ಬೃಹದ್ಬಳನನ್ನು ಎದುರಿಸುವುದಕ್ಕೆ ಮೂವತ್ತು

ಸಾವಿರ ರಥದಿಂದ ಕೂಡಿದ
ಅಭಿಮನ್ಯುವೂ ದುಶ್ಶ್ಯಾಸನನ
ಕಾಳಗಕ್ಕೆ ನಲವತ್ತು ಸಾವಿರ
ರಥದಿಂದ ಕೂಡಿದ ನಕುಲನೂ
ಕೃಪನೊಡನೆ ಯುದ್ಧ
ಮಾಡುವುದಕ್ಕೆ
ಒಂದಕ್ಷೋಹಿಣೀ ಬಲದಿಂದ
ಕೂಡಿದ ಕೇಕಯರೂ
ಸೈಂಧವನ ಯುದ್ಧಕ್ಕೆ
ಒಂದಕ್ಷೋಹಿಣೀ ಬಲದಿಂದ
ಕೂಡಿದ ದ್ರುಪದನೂ

ಸಿದ್ಧರಾದರು. ಭಗದತ್ತನ ಸೈನ್ಯಕ್ಕೆ ವಿಂದನೊಡನೆ ಯುದ್ಧಮಾಡುವುದಕ್ಕೆ ಹದಿನೆಂಟು ಸಾವಿರ ರಥವೂ ಒಂದು ಲಕ್ಷ ಮದ್ದಾನೆಗಳೂ ಕೂಡಿದ ಕುಂತಿಯ ಮಾವನಾದ ಕುಂತಿಭೋಜನು ಸಿದ್ಧನಾದನು. ವಿಂದಾನುವಿಂದರ ಸೈನ್ಯಕ್ಕೆ ಅರವತ್ತು ಸಾವಿರರಥದೊಡಗೂಡಿ

ನಾಗಕುಮಾರನನ್ನೂ
ಅನಂತಬಲದಿಂದ ಕೂಡಿದ
ಇಳಾವಂತನನ್ನೂ
ಭೂರಿಶ್ರವನೊಡನೆ ಯುದ್ಧ
ಮಾಡುವುದಕ್ಕೆ ನಲವತ್ತು
ಸಾವಿರ ತೇರುಗಳನ್ನೂ
ನಲವತ್ತು ಸಾವಿರ
ಮದ್ದಾನೆಗಳನ್ನೂ ಕೂಡಿ
ಮದ್ದಾನೆಯನ್ನೇರಿದ್ದ
ಉತ್ತರನನ್ನೂ ಏರ್ಪಡಿಸಿದನು.
ದುರ್ಯೋಧನನ ಮಕ್ಕಳಾದ

ಲಕ್ಷಣನೇ ಮೊದಲಾದ ನೂರು ಜನಗಳ ಯುದ್ಧಕ್ಕೆ ಅರವತ್ತು ಸಾವಿರ ತೇರಿನೊಡನೆ ಕೂಡಿದ ಸುತ ಸೋಮಕರೇ ಮುಖ್ಯರಾದ ಪಂಚಪಾಂಡವರನ್ನು ನೇಮಿಸಿದನು. ಕಾಂಭೋಜ ಸುದಕ್ಷಿಣ ದಂಡಧಾರರೆಂಬ ಮೂರುಮಂದಿ ಅಕ್ಷೋಹಿಣೀಪತಿಗಳ ಯುದ್ಧಕ್ಕೆ ಮೂರುಕೋಟಿ

ರಥಗಳಿಂದ ಕೂಡಿದ ಪಾಂಡ್ಯ ಶ್ರೀಜಯ ಸೋಮಕರನ್ನೂ ಗೊತ್ತುಮಾಡಿದನು. ವೀರರಾದ ಪುಷ್ಕರ ಪಾರಿಯಾತ್ರ ಬರ್ಬರ ಶಬರ ನೇಪಾಳ ರಾಜರುಗಳ ಬಲಕ್ಕೆ ಎರಡುಕೋಟಿ ರಥಗಳಿಂದ ಕೂಡಿದ ಹೈಹಯರನ್ನು ನಿಯಮಿಸಿದನು. ಅರವತ್ತು ಸಾವಿರ ಭದ್ರಗಜಗಳೊಡನೆ ನೀಲನನ್ನು ತನ್ನ ಸೇನಾರಕ್ಷಣೆಗೆ

ಇರಹೇಳಿದನು. ಸಂಸಪ್ತಕರ ಹದಿನೆಂಟುಕೋಟಿ ರಥಕ್ಕೆ ಅರಿಕೇಸರಿಯ (ಅರ್ಜುನ) ರಥವೊಂದನ್ನೇ ಸಿದ್ಧಪಡಿಸಿದನು. ಧರ್ಮರಾಯನು ತಾನೇ ಶಲ್ಯನ ಇದಿರಾಗಿ ನಿಂತನು. ಯುದ್ಧಕ್ಕೆ ಆರಂಭ ಮಾಡಿ ಎಂದು ಕೈಬೀಸುವ ಸಮಯಕ್ಕೆ ಮೊದಲು ‘ಶೂರನನ್ನು ಭೇದೋಪಾಯದಿಂದಲೇ

ಗೆಲ್ಲಬೇಕು’ ಎಂಬ ನೀತಿಯನ್ನು ಅಂಗೀಕರಿಸಿ ವಿನಯವನ್ನೇ ಮುಂದು ಮಾಡಿಕೊಂಡು (ಧರ್ಮರಾಯನು ಹಿರಿಯರನ್ನು ನಮಸ್ಕರಿಸಿ ಆಶೀರ್ವಾದ ಪಡೆಯಲು ಮುಂದಾದನು.)-

ಕಂ|| ಬಳಮೆರಡುಂ ತನ್ನನೆ ಮಿಳ
ಮಿಳ ನೋಡೆ ನರೇಂದ್ರನೊಂದೇ

ರಥದಿಂದಸುಹೃ|
ದ್ಬಳಮನಿರದೆಯ್ದಿ ಭೀಷ್ಮರ
ಚಳಣಯುಗಕ್ಕೆಱಗೆ ನಿನಗೆ
ಜಯಮಕ್ಕೆಂದಂ|| ೬೦ ||

ಪದ್ಯ-೬೦:ಪದವಿಭಾಗ-ಅರ್ಥ:ಬಳಮೆರಡುಂ ತನ್ನನೆ ಮಿಳಮಿಳ ನೋಡೆ (ಎರಡು ಸೈನ್ಯಗಳೂ ತನ್ನನ್ನೇ ಬಿಟಕಣ್ಣುಬಿಟ್ಟಂತೆ ಅಚ್ಚರಿಯಿಂದ ಮಿಟಮಿಟನೆ ನೋಡುತ್ತಿರಲು) ನರೇಂದ್ರನು

ಒಂದೇ ರಥದಿಂದ (ಒಂದೇ ರಥದಿಂದ ಏಕಾಕಿಯಾಗಿ) ಅಸುಹೃತ್ ಬಳಮನು ಇರದೆ ಎಯ್ದಿ (ಸಾವಕಾಶಮಾಡದೆ ಶತ್ರುಸೈನ್ಯವನ್ನು ಸೇರಿ) ಭೀಷ್ಮರ ಚಳಣಯುಗಕ್ಕೆ (ಳ-ಪ್ರಾಸಕ್ಕಾಗಿ ಮಾತ್ರ; ಚರಣಯುಗಕ್ಕೆ) ಎಱಗೆ (ಎರಗಿದಾಗ) ನಿನಗೆ ಜಯಮಕ್ಕೆಂದಂ (ಭೀಷ್ಮರ ಎರಡು ಕಾಲುಗಳಿಗೂ

ನಮಸ್ಕಾರ ಮಾಡಲು, ಅವರು ನಿನಗೆ ಜಯವಾಗಲಿ ಎಂದು ಆಶೀರ್ವದಿಸಿದರು)

ಪದ್ಯ-೬೦:ಅರ್ಥ:ಎರಡು ಸೈನ್ಯಗಳೂ ತನ್ನನ್ನೇ ಬಿಟಕಣ್ಣುಬಿಟ್ಟಂತೆ ಅಚ್ಚರಿಯಿಂದ ಮಿಟಮಿಟನೆ ನೋಡುತ್ತಿರಲು ಧರ್ಮರಾಯನು ಒಂದೇ ರಥದಿಂದ ಏಕಾಕಿಯಾಗಿ ಸಾವಕಾಶಮಾಡದೆ

ಶತ್ರುಸೈನ್ಯವನ್ನು ಸೇರಿ ಭೀಷ್ಮರ ಎರಡು ಕಾಲುಗಳಿಗೂ ನಮಸ್ಕಾರ ಮಾಡಲು, ಅವರು ನಿನಗೆ ಜಯವಾಗಲಿ ಎಂದು ಆಶೀರ್ವದಿಸಿದರು.

ವ|| ಎಂದು ಭೀಷ್ಮರ್ ತಮ್ಮ ಮೊಮ್ಮನ ವಿನಯಕ್ಕೆ ಮೆಚ್ಚಿ ಪರಸೆ ಪರಕೆಯಂ ಕೆಯ್ಕೊಂಡು-

ವಚನ:ಪದವಿಭಾಗ-

ಅರ್ಥ:ಎಂದು ಭೀಷ್ಮರ್ ತಮ್ಮ ಮೊಮ್ಮನ

(ಮೊಮ್ಮಗನ) ವಿನಯಕ್ಕೆ ಮೆಚ್ಚಿ ಪರಸೆ ಪರಕೆಯಂ ಕೆಯ್ಕೊಂಡು-

ವಚನ:ಅರ್ಥ:ಭೀಷ್ಮರು ತಮ್ಮ ಮೊಮ್ಮಗನ ವಿನಯಕ್ಕೆ ಮೆಚ್ಚಿ ವಿಜಯವಾಗಲಿ ಎಂದು ಹರಸಲು, ಆ ಹರಕೆಯನ್ನು ಸ್ವೀಕರಿಸಿ-

ಕಂ|| ಗುರು ಕೃಪ ಗುರುಸುತ ಶಲ್ಯರ

ಚರಣಂಗಳ್ಗೆಱಗಿ ಪೋಗಿ ಪೊಡೆವಡುವುದುಮಾ| ದರದಿಂದಂ ನಲ್ಮೆಯೊಳಂ ಪರಸಿ ಮನಗೊಂಡು ನುಡಿದರವರಾ ನೃಪನಂ|| ೬೧ ||

ಪದ್ಯ-೦೦:ಪದವಿಭಾಗ-ಅರ್ಥ:ಗುರು ಕೃಪ ಗುರುಸುತ ಶಲ್ಯರ ಚರಣಂಗಳ್ಗೆ ಎಱಗಿ ಪೋಗಿ ಪೊಡೆವಡುವುದುಂ (ಹೋಗಿ ನಮಸ್ಕಾರ ಮಾಡಿದಾಗ,) ಆದರದಿಂದಂ

ನಲ್ಮೆಯೊಳಂ ಪರಸಿ ಮನಗೊಂಡು (ಹರಸಿ ತೃಪ್ತರಾಗಿ) ನುಡಿದರು ಅವರು ಆ ನೃಪನಂ.

ಪದ್ಯ-00:ಅರ್ಥ:ದ್ರೋಣ ಕೃಪ ಅಶ್ವತ್ಥಾಮ ಶಲ್ಯರ ಪಾದಗಳಿಗೂ ಹಾಗೆಯೇ ಹೋಗಿ ನಮಸ್ಕಾರ ಮಾಡಿದಾಗ, ಅವರೂ ಸಂತಸದಿಂದಲೂ ಆದರದಿಂದಲೂ

ಸದ್ಭಾವದಿಂದಲೂ ಹರಸಿ
ತೃಪ್ತರಾಗಿ ರಾಜನನ್ನು ಕುರಿತು
ಹೇಳಿದರು.

**ನಿನ್ನ ಬರವಿಂದವೆಮ್ಮ ಮ
ನನ್ನಿನಗೆಱಗಿದುದು
ಜಯಮುಮೆಮ್ಮೀ ದೆಸೆಯಿಂ|
ದನ್ನಿನಗೆ ಸಾರ್ಗೆ ಪೋಗೆನೆ
ಮನ್ನಿಸಿ
ಗುರುಜನಮನಾಗಳಂತಕನತನ
ಯಂ|| ೬೨ ||**

ಪದ್ಯ-೦೦:ಪದವಿಭಾಗ-ಅರ್ಥ:ನಿನ್ನ ಬರವಿಂದಂ ಎಮ್ಮ ಮನಂ ನಿನಗೆ ಎಱಗಿದುದು (ನಮ್ಮ ಮನಸ್ಸು ನಿನ್ನ ಕಡೆಗೆ ಒಲಿಯಿತು) ಜಯಮಂ ಎಮ್ಮೀ ದೆಸೆಯಿಂದಂ ನಿನಗೆ ಸಾರ್ಗೆ (ನಮ್ಮ ಕಡೆಯಿಂದ ನಿನಗೆ ಜಯವು ಬರಲಿ,) ಪೋಗು ಎನೆ ಮನ್ನಿಸಿ ಗುರುಜನಮನು ಆಗಳ್ ಅಂತಕನತನಯಂ()

ಪದ್ಯ-00:ಅರ್ಥ:ಧರ್ಮರಾಜನು ತಮ್ಮ ಹಿರಿಯರನ್ನು ಗೌರವಿಸಲು.ನಿನ್ನ ಬರುವಿಕೆಯಿಂದ ನಮ್ಮ ಮನಸ್ಸು ನಿನ್ನ ಕಡೆಗೆ ಒಲಿಯಿತು. ಹಾಗೆಯೇ ನಮ್ಮ ಕಡೆಯಿಂದ ನಿನಗೆ ಜಯವು ಬರಲಿ, ಹೋಗು ಎಂದರು.

ವ|| ಮಗುಳ್ದು ತನ್ನೊಡ್ಡಣಕ್ಕೆ ಬರುತ್ತುಂ ದುರ್ಯೋಧನನ

ತಮ್ಮನಪ್ಪ ಯುಯುತ್ಸುವಂ ಕಂಡು-

ವಚನ:ಪದವಿಭಾಗ-

ಅರ್ಥ:ಮಗುಟ್ಟಿ (ಹಿಂತಿರುಗಿ) ತನ್ನ ಒಡ್ಡಣಕ್ಕೆ ಬರುತ್ತುಂ (ಸೈನ್ಯಕ್ಕೆ ಹಿಂತಿರುಗಿ ಬರುತ್ತ) ದುರ್ಯೋಧನನ ತಮ್ಮನಪ್ಪ ಯುಯುತ್ಸುವಂ ಕಂಡು-

ವಚನ:ಅರ್ಥ: ತನ್ನ ಸೈನ್ಯಕ್ಕೆ ಹಿಂತಿರುಗಿ ಬರುತ್ತ ದಾರಿಯಲ್ಲಿ

ದುರ್ಯೋಧನನ ತಮ್ಮನಾದ ಯುಯುತ್ಸುವನ್ನು ಕಂಡು-,

ಚಂ|| ಪವನಜನಿಂದೆ ಕೌರವಕುಲಂ ಪಡಲಿಟ್ಟವೊಲಕ್ಕುಮಾದೊಡಿ ನ್ನವರವರಾರುವಿಲ್ಲಣಮೆ ಸಂತತಿ ಕೆಟ್ಟಪುದಿಲ್ಲಿ ಕಾವೆನೀ| ಬವರದೊಳೀಗಳಾನಿವನನೆಂ ದು ನೃಪಂ ದಯೆಯಿಂದಮಾ ಯುಯು

ತ್ಸುವನೊಡಗೊಂಡು ಬಂದನೆನಿತಾದೊಡಮೇಂ ಪ್ರಭು ಪೊಲ್ಲಕೆಯ್ಯುಗಮೇ|| ೬೩ ||

ಪದ್ಯ-೬೩:ಪದವಿಭಾಗ-ಅರ್ಥ:ಪವನಜನಿಂದೆ ಕೌರವಕುಲಂ ಪಡಲಿಟ್ಟವೊಲಕ್ಕುಂ (ಭೀಮನಿಂದ ಕೌರವಕುಲವು ನಾಶವಾದಂತಾಗುತ್ತದೆ.) ಆದೊಡೆ ಇನ್ನವರವರು

ಆರುವಿಲ್ಲಣಮೆ (ಅವರ
ಕಡೆಯವರು ಆರೂ
ಇಲ್ಲದಂತಾಗುತ್ತದೆ.) ಸಂತತಿ
ಕೆಟ್ಟಪುದು (ಅವರ
ಸಂತತಿಯು ಸಂಪೂರ್ಣವಾಗಿ
ನಾಶವಾಗುತ್ತದೆ.) ಇಲ್ಲಿ
ಕಾವೆನು ಈ ಬವರದೊಳು
ಈಗಳು ಆನು ಇವನನೆಂದು (
ಈ ಯುದ್ಧದಲ್ಲಿ
ಇವನನ್ನಾದರೂ ರಕ್ಷಿಸುತ್ತೇನೆ
ಎಂದು) ನೃಪಂ ದಯೆಯಿಂದಂ

ಆ ಯುಯುತ್ಸುಲು
ಒನೊಡಗೊಂಡು ಬಂದಂ
(ರಾಜನು ದಯೆಯಿಂದ ಆ
ಯುಯುತ್ಸುವನ್ನು
ಒಡಗೊಂಡು ಬಂದನು)
ಎನಿತಾದೊಡಂ ಏಂ ಪ್ರಭು
ಪೊಲ್ಲಕೆಯ್ಯುಗುಮೇ
(ಪ್ರಭುವಾದವನು ಏನೇ
ಆದರೂ ಕೆಟ್ಟದ್ದನ್ನು
ಮಾಡುತ್ತಾನೆಯೇ?)

ಪದ್ಯ-೬೩:ಅರ್ಥ:ಹೇಗೂ ಭೀಮನಿಂದ ಕೌರವಕುಲವು ನಾಶವಾದಂತಾಗುತ್ತದೆ. ಅವರ ಕಡೆಯವರಾರೂ ಇಲ್ಲದಂತಾಗುತ್ತದೆ. ಅವರ ಸಂತತಿಯು ಸಂಪೂರ್ಣವಾಗಿ ನಾಶವಾಗುತ್ತದೆ. ಈ ಯುದ್ಧದಲ್ಲಿ ಇವನನ್ನಾದರೂ ರಕ್ಷಿಸುತ್ತೇನೆ ಎಂದು ರಾಜನು ದಯೆಯಿಂದ ಆ ಯುಯುತ್ಸುವನ್ನು

ಒಡಗೊಂಡು ಬಂದನು.
ಪ್ರಭುವಾದವನು ಏನೇ
ಆದರೂ ಕೆಟ್ಟದ್ದನ್ನು
ಮಾಡುತ್ತಾನೆಯೇ?

ವ|| ಅಂತಾ ಯುಯುತ್ಸುವನೊಡಗೊಂಡು ಬಂದು ಧರ್ಮಪುತ್ರನುತ್ಸಾಹದೊಳಿರ್ಪ ಪದದೊಳ್ ವಿಕ್ರಮಾರ್ಜುನನ ಮನದೊಳಾದ ವ್ಯಾಮೋಹಮಂ

ಕಳೆಯಲೆಂದು ಮುಕುಂದಂ ದಿವ್ಯಸ್ವರೂಪಮಂ ತೋಱಿ-

ವಚನ:ಪದವಿಭಾಗ-ಅರ್ಥ:

ಅಂತು ಆ ಯುಯುತ್ಸುವನು ಒಡಗೊಂಡು ಬಂದು ಧರ್ಮಪುತ್ರನು ಉತ್ಸಾಹದೊಳಿರ್ಪ ಪದದೊಳ್, ವಿಕ್ರಮಾರ್ಜುನನ (ಅರ್ಜುನನ) ಮನದೊಳು ಆದ ವ್ಯಾಮೋಹಮಂ ಕಳೆಯಲೆಂದು (ಅರ್ಜುನನ

ಮನಸ್ಸಿನಲ್ಲುಂಟಾದ ವ್ಯಾಮೋಹವನ್ನು ಕಳೆಯುವುದಕ್ಕಾಗಿ) ಮುಕುಂದಂ ದಿವ್ಯಸ್ವರೂಪಮಂ ತೋಱೆ (ಕೃಷ್ಣನು ಅನಿಗೆ ವಿಶ್ವರೂಪವನ್ನು ತೋರಿಸಿ.)- **ವಚನ:ಅರ್ಥ**:ಯುಯುತ್ಸುವನ್ನು ಒಡಗೊಂಡು ಬಂದು ಧರ್ಮರಾಜನು ಉತ್ಸಾಹದಿಂದಿರುವ

ಸಮಯದಲ್ಲಿ, ಅರ್ಜುನನ ಮನಸ್ಸಿನಲ್ಲುಂಟಾದ ವ್ಯಾಮೋಹವನ್ನು ಕಳೆಯುವುದಕ್ಕಾಗಿ ಕೃಷ್ಣನು ಅನಿಗೆ ವಿಶ್ವರೂಪವನ್ನು ತೋರಿದನು.ತೋರಿಸಿ-

ಚಂ|| ಅದಿರದಿದಿರ್ಚಿ ತಳ್ತಿಱಿಯಲೀ ಮಲೆದೊಡ್ಡಿದ ಚಾತುರಂಗಮೆಂ ಬುದು ನಿನಗೊಡ್ಡಿ ನಿಂದುದಿದನೋವದೆ ಕೊಲ್ವಡೆ

ನೀನುಮೆನ್ನ ಕ|

ಜ್ಜದೊಳೆಸಗೆಂದು

ಸೈತಜಿತನಾದಿಯ

ವೇದರಹಸ್ಯದೊಳ್ ನಿರಂ

ತದ ಪರಿಚರ್ಯೆಯಿಂ ನೆರೆಯೆ

ಯೋಜಿಸಿದಂ

ಕದನತ್ರಿಣೇತ್ರನಂ|| ೬೪ ||

ಪದ್ಯ-೬೪:ಪದವಿಭಾಗ-

ಅರ್ಥ:ಅದಿರದೆ ಇದಿರ್ಚಿ ತಳ್ತು

(ತಾಗಿ, ಪ್ರತಿಭಟಿಸಿ)

ಇಱಿಯಲು ಈ ಮಲೆದೊಡ್ಡಿದ

ಚಾತುರಂಗಂ ಎಂಬುದು
ನಿನಗೊಡ್ಡಿ ನಿಂದುದು(ನೀನು
ಹೆದರದೆ ಎದುರಿಸಿ ಪ್ರತಿಭಟಿಸಿ
ಯುದ್ಧಮಾಡಲು ಮಲೆತು
ಚಾಚಿದ ಈ ಚತುರಂಗ
ಸೈನ್ಯವು ನಿನಗೆ ಪ್ರತಿಭಟಿಸಿ
ನಿಂತಿದೆ) ಇದನು ಓವದೆ
(ಕರುಣೆ ತೋರಿ ಮೋಹದಿಂದ
ಕಾಪಾಡದೆ) ಕೊಲ್ವುಡೆ (ಇದನ್ನು
ಕರುಣೆ ತೋರಿ ಮೋಹದಿಂದ
ಕಾಪಾಡದೆ ಕೊಲ್ಲಬೇಕಾದರೆ),

ನೀನುಂ ಎನ್ನ ಕಜ್ಜದೊಳು
ಎಸಗೆಂದು (ನೀನು ನನ್ನು
ಕಾರ್ಯದಲ್ಲಿ ಸಹಾಯವನ್ನು
ನಾನು ಹೇಳಿದ ರೀತಿಯಲ್ಲಿ
ಕೆಲಸ ಮಾಡು") ಸೈತಜಿತನು
(ಶ್ರೀಕೃಷ್ಣನು) ಆದಿಯ
ವೇದರಹಸ್ಯದೊಳ್ ನಿರಂತದ
ಪರಿಚರ್ಯೆಯಿಂ ನೆರೆಯೆ
(ಆದಿಕಾಲದಿಂದ ಬಂದ ವೇದ
ರಹಸ್ಯವನ್ನು
ಮನದಟ್ಟಾಗುವಂತೆ ನಿರಂತರ

ಸೇವೆ/ ಕರ್ತವ್ಯಡಿಂದ
ಸಿದ್ಧಿಯೆಂದು ಉಪದೇಶಿಸಿ)
ಯೋಜಿಸಿದಂ
ಕದನತ್ರಿಣೇತ್ರನಂ
(ಅರ್ಜುನನನ್ನು
ಯುದ್ಧಕಾರ್ಯದಲ್ಲಿ
ನಿಯೋಜಿಸಿದನು.)

ಪದ್ಯ-೬೪:ಅರ್ಥ:“ಅರ್ಜುನ
ನೇ ನೀನು ಹೆದರದೆ ಎದುರಿಸಿ
ಪ್ರತಿಭಟಿಸಿ ಯುದ್ಧಮಾಡಲು
ಮಲೆತು ಚಾಚಿದ ಈ

ಚತುರಂಗ ಸೈನ್ಯವು ನಿನಗೆ ಪ್ರತಿಭಟಿಸಿ ನಿಂತಿದೆ. ಇದನ್ನು ಕರುಣೆ ತೋರಿ ಮೋಹದಿಂದ ಕಾಪಾಡದೆ ಕೊಲ್ಲಬೇಕಾದರೆ ನೀನು ನನ್ನು ಕಾರ್ಯದಲ್ಲಿ ಸಹಾಯವನ್ನು ನಾನು ಹೇಳಿದ ರೀತಿಯಲ್ಲಿ ಕೆಲಸ ಮಾಡು" ಎಂದು ಶ್ರೀಕೃಷ್ಣನು ಆದಿಕಾಲದಿಂದ ಬಂದ ವೇದ ರಹಸ್ಯವನ್ನು ಮನದಟ್ಟಾಗುವಂತೆ ನಿರಂತರ

ಸೇವೆ/ ಕರ್ತವ್ಯಡಿಂದ
ಸಿದ್ಧಿಯೆಂದು ಉಪದೇಶಿಸಿ
ಅರ್ಜುನನನ್ನು
ಯುದ್ಧಕಾರ್ಯದಲ್ಲಿ
ನಿಯೋಜಿಸಿದನು.

**ವ|| ಆಗಳ್ ಪರಸೈನ್ಯಭೈರವಂ
ಪುರಾಣಪುರುಷನಪ್ಪ
ಪುರುಷೋತ್ತಮಂಗೆಱಗಿ
ಪೊಡಮಟ್ಟು
ರಿಪುಪಕ್ಷಕ್ಷಯಕರಮಪ್ಪ
ವಿಶ್ವಕರ್ಮ ನಿರ್ಮಿತಮಾದ**

ತನ್ನ ದಿವ್ಯರಥಮಂ

ಮನೋರಥಂ ಬೆರಸು

ರಥಾಂಗಧರನಂ

ಮುನ್ನಮೇಱಲ್ವೇಱ್ದು ಮೂಱು

ಸೂಱು ಬಲವಂದು

ಪೊಡಮಟ್ಟು ಬೞಿಯಂ

ತಾನೇಱಿ ವಜ್ರಕವಚಮಂ

ತೊಟ್ಟು

ತವದೊಣೆಗಳನೆರಡುಂ

ದೆಸೆಯೊಳಂ ಬಿಗಿದು

ದ್ರೋಣಾಚಾರ್ಯಂಗೆ

ಮನದೊಳ್
ನಮಸ್ಕಾರಂಗೆಯ್ದು ದ್ರೋಣಂ
ಬಾಟ್ಗೆಂದು ಮಹಾಪ್ರಚಂಡ
ಗಾಂಡೀವಮಂ ಕೊಂಡೇಱಿಸಿ
ನೀವಿ ಜೇವೊಡೆದು ದೇವದತ್ತ
ಶಂಖಮಂ ಪೂರಿಸಿ
ಸಂಸಪ್ತಕರೊಡ್ಡಣದತ್ತ
ರಥಾಂಗಧರನಂ ರಥಮಂ
ಚೋದಿಸಲ್ವೇೞ್ದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್

ಪರಸೈನ್ಯಭೈರವಂ
ಪುರಾಣಪುರುಷನಪ್ಪ
ಪುರುಷೋತ್ತಮಂಗೆ ಎಱಗಿ
ಪೊಡಮಟ್ಟು (ಅರ್ಜುನನು
ಪುರಾಣಪುರುಷನಾದ
ಶ್ರೀಕೃಷ್ಣನಿಗೆ
ನಮಸ್ಕಾರಮಾಡಿ) ರಿಪುಪಕ್ಷ
ಕ್ಷಯಕರಮಪ್ಪ ವಿಶ್ವಕರ್ಮ
ನಿರ್ಮಿತಮಾದ
(ಶತ್ರುಪಕ್ಷವನ್ನು
ನಾಶಮಾಡುವ

ಶಕ್ತಿಯನ್ನುಳ್ಳವಿಶ್ವಕರ್ಮನಿಂದ
ನಿರ್ಮಿತವಾದ) ತನ್ನ
ದಿವ್ಯರಥಮಂ ಮನೋರಥಂ
ಬೆರಸು (ತನ್ನ ದಿವ್ಯರಥವನ್ನು
ತನ್ನ ಮನಸ್ಸಿನ
ಸಂಕಲ್ಪದೊಡನೆ)
ರಥಾಂಗಧರನಂ
(ಚಕ್ರಧರನಾದ ಶ್ರೀಕೃಷ್ಣನನ್ನು)
ಮುನ್ನಮೇ ಏಱಿಲ್ವೇೞ್ದು
(ಮೊದಲು ಹತ್ತಲುಹೇಳಿ)
ಮೂಱು ಸೂಱು ಬಲವಂದು

ಪೊಡಮಟ್ಟು
ಬಟಿಯಂ(ಅದನ್ನು
ಮೂರುಸಲ ಪ್ರದಕ್ಷಿಣೆ ಮಾಡಿ
ನಮಸ್ಕರಿಸಿದ ಬಳಿಕ) ತಾನು
ಏೞ್ ವಜ್ರಕವಚಮಂ ತೊಟ್ಟು
(ತಾನೂ ಹತ್ತಿ ವಜ್ರಕವಚವನ್ನು
ಧರಿಸಿದನು) ತವದೊಣೆಗಳನು
ಎರಡುಂ ದೆಸೆಯೊಳಂ ಬಿಗಿದು
(ಅಕ್ಷಯತೂಣೀರ
(ಬತ್ತಳಿಕೆ)ಗಳನ್ನು ಎರಡು
ಕಡೆಯಲ್ಲಿಯೂ ಬಿಗಿದು)

ದ್ರೋಣಾಚಾರ್ಯಂಗೆ
ಮನದೊಳ್
ನಮಸ್ಕಾರಂಗೆಯ್ದು ದ್ರೋಣಂ
ಬಾೞ್ಗೆಂದು
(ದ್ರೋಣಾಚಾರ್ಯರಿಗೆ
ಮನಸ್ಸಿನಲ್ಲಿಯೇ ನಮಸ್ಕರಿಸಿ
'ದ್ರೋಣಾಚಾರ್ಯರು
ಬಾಳಲಿ' ಎಂದು
ಪ್ರಾರ್ಥಿಸಿದನು.)
ಮಹಾಪ್ರಚಂಡ
ಗಾಂಡೀವಮಂ ಕೊಂಡು

ಏಱಿಸಿ ನೀವಿ ಜೇವೊಡೆದು
ದೇವದತ್ತ ಶಂಖಮಂ ಪೂರಿಸಿ
(ಮಹಾಪ್ರಚಂಡವಾದ ತನ್ನ
ಗಾಂಡೀವವೆಂಬ ಬಿಲ್ಲಿಗೆ
ಹೆದೆಯನ್ನೇರಿಸಿ ನೀವಿ
ಟಂಕಾರಮಾಡಿ, ದೇವದತ್ತ
ಶಂಖವನ್ನು ಊದಿ)
ಸಂಸಪ್ತಕರ ಒಡ್ಡಣದತ್ತ
(ಸಂಸಪ್ತಕರ ಸೈನ್ಯದ ಕಡೆಗೆ)
ರಥಾಂಗಧರನಂ ರಥಮಂ
ಚೋದಿಸಲ್ವೇೞ್ದಾಗಳ್-

(ರಥವನ್ನು ನಡೆಸುವಂತೆ ಕೃಷ್ಣನಿಗೆ ಹೇಳಿದನು; ಹಾಗೆ ಹೇಳಿಧಾಗ-)

ವಚನ:ಅರ್ಥ: ಆಗ ಅರ್ಜುನನು ಪುರಾಣಪುರುಷನಾದ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ ಶತ್ರುಪಕ್ಷವನ್ನು ನಾಶಮಾಡುವ ಶಕ್ತಿಯನ್ನುಳ್ಳವಿಶ್ವಕರ್ಮನಿಂದ ನಿರ್ಮಿತವಾದ ತನ್ನ ದಿವ್ಯರಥವನ್ನು ತನ್ನ ಮನಸ್ಸಿನ

ಸಂಕಲ್ಪದೊಡನೆ ಶ್ರೀಕೃಷ್ಣನನ್ನು ಮೊದಲು ಹತ್ತಲುಹೇಳಿ ಅದನ್ನು ಮೂರುಸಲ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ ಬಳಿಕ ತಾನೂ ಹತ್ತಿ ವಜ್ರಕವಚವನ್ನು ಧರಿಸಿದನು. ಅಕ್ಷಯತೂಣೀರ (ಬತ್ತಳಿಕೆ)ಗಳನ್ನು ಎರಡು ಕಡೆಯಲ್ಲಿಯೂ ಬಿಗಿದು, ದ್ರೋಣಾಚಾರ್ಯರಿಗೆ ಮನಸ್ಸಿನಲ್ಲಿಯೇ ನಮಸ್ಕರಿಸಿ 'ದ್ರೋಣಾಚಾರ್ಯರು

ಬಾಳಲಿ’ ಎಂದು
ಪ್ರಾರ್ಥಿಸಿದನು.
ಮಹಾಪ್ರಚಂಡವಾದ ತನ್ನ
ಗಾಂಡೀವವೆಂಬ ಬಿಲ್ಲಿಗೆ
ಹೆದೆಯನ್ನೇರಿಸಿ ನೀವಿ
ಟಂಕಾರಮಾಡಿ, ದೇವದತ್ತ
ಶಂಖವನ್ನು ಊದಿ,
ಸಂಸಪ್ತಕರ ಸೈನ್ಯದ ಕಡೆಗೆ
ರಥವನ್ನು ನಡೆಸುವಂತೆ
ಕೃಷ್ಣನಿಗೆ ಹೇಳಿದನು.ಹಾಗೆ
ಹೇಳಿಧಾಗ-

ಮ||ಸ್ರ||
ಕುಳಶೈಳೇಂದ್ರಂಗಳಂಭೋನಿ
ಧಿಗಳಖಿಳ ದಿಗ್ದಂತಿಗಳ್
ವಿಶ್ವಧಾತ್ರೀ
ವಳಯಂ ಪಾತಾಳಮೂಲಂ
ಸಕಲ
ಭುವನಮೊಂದೊಂದರೊಳ್
ಕೇಣಿಗೊಂಡು|
ಚ್ಚಳಿಸಲ್ ಸೂಸಲ್
ಪಳಂಚಲ್

ಸಿಡಿದೊಡೆದಳಱಲ್ ಪಾೞ್

ಜೇಳ್ಗೇೞಲಂದು

ಮ್ಮಳಿಸುತ್ತತ್ತಿರ್ದರಾವಂ

ಹರಿಗನೊಳಿದಿರಂ ಮೀಱ್

ಮಾಱಾಂಪ ಗಂಡಂ|| ೬೫ ||

ಪದ್ಯ-೬೫:ಪದವಿಭಾಗ-ಅರ್ಥ:ಕುಳಶೈಳೇಂದ್ರಂಗಳ್, ಅಂಭೋನಿಧಿಗಳ್, ಅಖಿಳ ದಿಗ್ದಂತಿಗಳ್, ವಿಶ್ವಧಾತ್ರೀ ವಳಯಂ (ಸಮಗ್ರ ಭೂಮಂಡಲವೂ)

ಪಾತಾಳಮೂಲಂ ಸಕಲ
ಭುವನಮಂ
ಒಂದೊಂದರೊಳ್
ಕೇಣಿಗೊಂಡು ಉಚ್ಚಳಿಸಲ್
(ಸಮಸ್ತಲೋಕಗಳೂ
ಒಂದೊಂದೂ ಸಾಲಾಗಿ
ಮೇಲಕ್ಕೆ ಚಿಮ್ಮಿ) ಸೂಸಲ್
ಪಳಂಚಲ್ ಸಿಡಿದೊಡೆದು
ಅಳಱಿಲ್ (ಒಂದೊಂದೂ
ಸಾಲಾಗಿ ಮೇಲಕ್ಕೆ ಚಿಮ್ಮಿ,
ಚೆಲ್ಲಾಡಿ, ತಾಗಿ,

ಸಿಡಿಲೊಡೆದು,ಹೆದರಲು,)
ಪಾಱೆ ಜೀಳ್ಕೇಱಿಲು ಅಂದು
ಉಮ್ಮಳಿಸುತ್ತ ಅತ್ತಿರ್ದರ್
(ಹಾರಿ, ಜೀರೆಂದು ಶಬ್ದಮಾಡಿ
ವ್ಯಾಕುಲಪಟ್ಟವು.) ಆವಂ?
ಯಾವನು?- ಹರಿಗನೊಳು
ಇದಿರಂ ಮೀಱೆ ಮಾಱಾಂಪ
ಗಂಡಂ (ಅರ್ಜುನನಿಗೆ
ಇದಿರಾಗಿ ಪ್ರತಿಭಟಿಸುವ
ಶೂರನು ಯಾವನಿದ್ದಾನೆ?)

ಪದ್ಯ-೬೫:ಅರ್ಥ:

ಕುಲಪರ್ವತಗಳೂ,

ಸಮುದ್ರಗಳೂ, ಎಲ್ಲಾ

ದಿಗ್ಗಜಗಳೂ, ಸಮಗ್ರ

ಭೂಮಂಡಲವೂ

ಪಾತಾಳಲೋಕದ

ತಳಭಾಗವೂ

ಸಮಸ್ತಲೋಕಗಳೂ

ಒಂದೊಂದೂ ಸಾಲಾಗಿ

ಮೇಲಕ್ಕೆ ಚಿಮ್ಮಿ, ಚೆಲ್ಲಾಡಿ,

ತಾಗಿ, ಸಿಡಿಲೊಡೆದು,ಹೆದರಲು-

ನಡುಗಿ, ಹಾರಿ, ಜೀರೆಂದು ಶಬ್ದಮಾಡಿ ವ್ಯಾಕುಲಪಟ್ಟವು. ಅರ್ಜುನನಿಗೆ ಇದಿರಾಗಿ ಪ್ರತಿಭಟಿಸುವ ಶೂರನು ಯಾವನಿದ್ದಾನೆ?

ವ|| ಎಂಬನ್ನೆಗಂ ಪ್ರಳಯಕಾಲ ಜಾತೋತ್ಪಾತ ವಾತ ನಿರ್ಘಾತದಿಂದಮಳ್ಳಾಡಿ ತಳ್ಳಂಕಂಗುಟ್ಟುವ ಜಳನಿಧಿಗಳಂತೆ ಮೇರೆದಪ್ಪಲ್ ಬಗೆವುಭಯಸೈನ್ಯಂಗಳಂ

ಕಂಡತ್ತ ರಾಜರಾಜನು ಮಿತ್ತ ಧರ್ಮರಾಜನುಮೊಡನೊಡನೆ ಕೆಯ್ವೀಸಿದಾಗಳ್-

ವಚನ:ಪದವಿಭಾಗ-

ಅರ್ಥ:ಎಂಬ ಅನ್ನೆಗಂ ಪ್ರಳಯಕಾಲ ಜಾತೋತ್ಪಾತ ವಾತ ನಿರ್ಘಾತದಿಂದಂ ಅಳ್ಳಾಡಿ (ಪ್ರಳಯಕಾಲದಲ್ಲಿ ಹುಟ್ಟಿ ಉತ್ಪಾತದ ಗಾಳಿಯ ಹೊಡೆತದಿಂದ ಅಲುಗಿ) ತಳ್ಳಂಕಂಗುಟ್ಟುವ

ಜಳನಿಧಿಗಳಂತೆ
(ಕಲ್ಲೋಲಗೊಂಡ
ಸಮುದ್ರಗಳಂತೆ)
ಮೇರೆದಪ್ಪಲ್ ಬಗೆವ
(ಎಲ್ಲೆಯನ್ನು ಮೀರಲು
ಯೋಚಿಸುತ್ತಿರುವ) ಉಭಯ
ಸೈನ್ಯಂಗಳಂ ಕಂಡು ಅತ್ತ
ರಾಜರಾಜನುಂ ಇತ್ತ
ಧರ್ಮರಾಜನುಂ ಒಡಂ
ಒಡನೊಡನೆ (ತಕ್ಷಣ
ಒಟ್ಟೊಟ್ಟಿಗೆ)

ಕೆಯ್ವೀಸಿದಾಗಳ್- (ಯುದ್ಧ ಆರಂಭಿಸಲು ಕೈ ಬೀಸಿದಾಗ)-

ವಚನ:ಅರ್ಥ:ಆ ಸಮಯಕ್ಕೆ ಪ್ರಳಯಕಾಲದಲ್ಲಿ ಹುಟ್ಟಿ ಉತ್ಪಾತದ ಗಾಳಿಯ ಹೊಡೆತದಿಂದ ಅಲುಗಿ ಅಲ್ಲೋಲ ಕಲ್ಲೋಲಗೊಂಡ ಸಮುದ್ರಗಳಂತೆ, ಎಲ್ಲೆಯನ್ನು ಮೀರಲು ಯೋಚಿಸುತ್ತಿರುವ ಎರಡು ಕಡೆಯ ಸೈನ್ಯಗಳನ್ನೂ ಕಂಡು ಈ ಕಡೆ

ಚಕ್ರವರ್ತಿಯಾದ ದುರ್ಯೋಧನನೂ ಆ ಕಡೆ ಧರ್ಮರಾಜನೂ ಯುದ್ಧ ಆರಂಭಿಸಲು ಸೂಚಕವಾಗಿ ಕೈಬೀಸಿದರು. ಆಗ-

<u>ಯುದ್ಧದ ವರ್ಣನೆ</u>

ಕಂ|| ಪೂರ್ವಾಪರ ಜಳನಿಧಿಗಳ ಗುರ್ವಿಸುವಿನಮೊಂದನೊಂದು ತಾಗುವವೊಲಗು|

ವ್ರ್ರ್ವಿರೆ ಪರ್ವಿ ಚತುರ್ವಲ

ಮೇರ್ವೆಸದಿಂದಂದು ಬಂದು

ತಾಗಿತ್ತಾಗಳ್|| ೬೬ ||

ಪದ್ಯ-೬೬:ಪದವಿಭಾಗ-

ಅರ್ಥ:ಪೂರ್ವ ಅಪರ

(ಪಶ್ಚಿಮ) ಜಳನಿಧಿಗಳ್ (

ಪೂರ್ವ ಮತ್ತು ಪಶ್ಚಿಮ

ಸಮುದ್ರಗಳು)

ಅಗುರ್ವಿಸುವಿನಂ

ಒಂದನೊಂದು ತಾಗುವವೊಲ್

(ಭಯವನ್ನುಂಟುಮಾಡುತ್ತ

ಒಂದನ್ನೊಂದು ತಗಲುವ ಹಾಗೆ) ಅಗುರ್ವು ಉರ್ವಿರೆ ಪರ್ವಿ (ಭಯವು ಹೆಚ್ಚಿಸುತ್ತಾ ಹಬ್ಬಿ) ಚತುರ್ವಲಂ ಏರ್ವೆಸದಿಂದೆ (ಯುದ್ಧೋದ್ಯೋಗದಿಂದ) ಅಂದು ಬಂದು ತಾಗಿತ್ತಾಗಳ್ (ಬಂದು ಸಂಘಟ್ಟಿಸಿದುವು,) **ಪದ್ಯ-೬೬:ಅರ್ಥ**: ಪೂರ್ವ ಮತ್ತು ಪಶ್ಚಿಮ ಸಮುದ್ರಗಳು ಭಯವನ್ನುಂಟುಮಾಡುತ್ತ

ಒಂದನ್ನೊಂದು ತಗಲುವ
ಹಾಗೆ ಚತುರಂಗಸೇನೆಗಳು
ಉತ್ಸಾಹದಿಂದಲೂ
ಯುದ್ಧೋದ್ಯೋಗದಿಂದಲೂ
ಬಂದು ಸಂಘಟ್ಟಿಸಿದುವು.

ಘಟೆಯ ದಟಿದುಲಿವು ಲಯ
ಘನ
ಘಟೆಗಳ ಮೊಟಿಗೆನಿಸೆ
ಪೊಟ್ಟಗೊಡೆದತ್ತು ರಟ|
ತ್ಪುಟು ಪಟಹ ಶಂಖ ಭೇರಿಯ

ಚಟುವಳಿತದಿಂದಟಳಪಟಳ ಮಂಬರಪಟಳಂ|| ೬೭ ||

ಪದ್ಯ-೬೭:ಪದವಿಭಾಗ-ಅರ್ಥ:ಘಟೆಯ ದಟಿದ ಉಲಿವು (ಆನೆಯ ಸೈನ್ಯದ ಘೀಂಕಾರ ಸದ್ದು), ಲಯ ಘನಘಟೆಗಳ ಮೊಟಿಗು ಎನಿಸೆ (ಪ್ರಳಯಕಾಲದ ಮೋಡಗಳ ಸಮೂಹದ ಗುಡುಗು ಎನ್ನಿಸಲು,) ಪೊಟ್ಟಗೆ ಒಡೆದತ್ತು (ಪಟ್ಟೆಂದು

ಒಡೆದಿತ್ತು.) ರಟತ್ಪಟು (ರಟತ್
ಎಂದು ಪಟುವಾಗಿ,
ದೊಡ್ಡದಾಗಿ) ಪಟಹ, ಶಂಖ,
ಭೇರಿಯ ಚಟುವಳಿತದಿಂದ
(ಬಡಿತದ ಶಬ್ದದಿಂದ) ಅಟಳ-
ಪಟಳಮಂ ಅಂಬರ ಪಟಳಂ
(ಪೊಟ್ಟಗೆ ಒಡೆದತ್ತು)
(ಅತಲವೆಂಬ ಪಾತಾಳ
ಲೋಕದ ಮಾಳಿಗೆಯೂ
ಆಕಾಶದ ಮೇಲ್ಛಾವಣಿಯೂ

ಏಕಕಾಲದಲ್ಲಿ ಪಟ್ಟೆಂದು ಒಡೆದಿತ್ತು.)

ಪದ್ಯ-೬೭:ಅರ್ಥ: ಆನೆಯ ಸೈನ್ಯದ ಘೀಂಕಾರ ಸದ್ದು, ಪ್ರಳಯಕಾಲದ ಮೋಡಗಳ ಸಮೂಹದ ಗುಡುಗು ಎನ್ನಿಸಲು, ಉಗ್ರವಾಗಿ ಶಬ್ದಮಾಡುತ್ತಿರುವ ದಮಟೆ, ಶಂಖ, ನಗಾರಿಯ ಬಡಿತದ ಸದ್ದಿನಿಂದ ಅತಲವೆಂಬ ಪಾತಾಳ ಲೋಕದ

ಮಾಳಿಗೆಯೂ ಆಕಾಶದ
ಮೇಲ್ಬಾವಣಿಯೂ
ಏಕಕಾಲದಲ್ಲಿ ಪಟ್ಟೆಂದು
ಒಡೆದಿತ್ತು.

ಕರಿ ತುರಗ ರಥ ಪದಾತಿಯ
ಚರಣಾಸಂಘಾತ ಜಾತ
ರಜಮಾಜಸ್ರಂ।
ನೆರೆದಂಬರಕೊಗೆಯಲ್ ಬಳ
ಭರದಿಂ ಧರೆಯೆಱ್ದು
ಪಾಱುವಂತಾಯ್ತಾಗಳ್॥ ೬೮
॥

ಪದ್ಯ-೬೮:ಪದವಿಭಾಗ-ಅರ್ಥ:ಕರಿ ತುರಗ ರಥ ಪದಾತಿಯ ಚರಣಾಸಂಘಾತ ಜಾತ (ಪಾದಘಟ್ಟಣೆಯಿಂದ ಉಂಟಾದ) ರಜಮ್ ಅಜಸ್ರಂ ನೆರೆದು ಅಂಬರಕೆ ಒಗೆಯಲ್ (ಧೂಳು ಒಟ್ಟಿಗೆ ಕೂಡಿ ಆಕಾಶಕ್ಕೆ ಹಾರಲು,) ಬಳಭರದಿಂ (ಬಳ-ಬಲ-ಸೈನ್ಯದ ವೇಗದಿಂದ) ಧರೆಯೆಬ್ಬು (ಭೂಮಿಯೇ

ಎದ್ದು) ಪಾಱುವಂತಾಯ್ತು ಆಗಳ್ (ಹಾರುವ ಹಾಗಾಯಿತು. ಆಗ-)

ಪದ್ಯ-೬೮:ಅರ್ಥ:ಆನೆ ಕುದುರೆ ತೇರು ಕಾಲಾಳುಗಳ ಪಾದಘಟ್ಟಣೆಯಿಂದ ಉಂಟಾದ ಧೂಳು ಒಟ್ಟಿಗೆ ಕೂಡಿ ಆಕಾಶಕ್ಕೆ ಹಾರಲು, ಸೈನ್ಯದ ವೇಗದಿಂದ ಆಗ ಭೂಮಿಯೇ ಎದ್ದು ಹಾರುವ ಹಾಗಾಯಿತು.

ಸಮರ ರಸಪ್ರಿಯರೊಳ್ ಸ

ತ್ತ್ವಮುಮಿಳೆಯೊಳ್

ರಜಮುಮೊದವೆ

ರಣಗಟ್ಟಿಲೆಯೊಳ್|

ತಮಮುಂ ಮಿಗೆ ಸತ್ತ್ವ ರಜ

ಸ್ತಮಂಗಳುಂ

ಕಾಣಲಾದುವೆರಡುಂ

ಪಡೆಯೊಳ್|| ೬೯ ||

ಪದ್ಯ-೬೯:ಪದವಿಭಾಗ-

ಅರ್ಥ:ಸಮರ

ರಸಪ್ರಿಯರೊಳ್

ಸತ್ತ್ವಮುಮಿಳೆಯೊಳ್
ರಜಮುಮೊದವೆ
ರಣಗೞ್ತಿಲೆಯೊಳ್|ತಮಮುಂ
ಮಿಗೆ ಸತ್ತ್ವ ರಜಸ್ತಮಂಗಳುಂ
ಕಾಣಲಾದುವೆರಡುಂ
ಪಡೆಯೊಳ್
ಪದ್ಯ-೬೯:ಅರ್ಥ:
ಯುದ್ಧಾಸಕ್ತರಾದವರಲ್ಲಿ
ಸತ್ತ್ವಗುಣವೂ (ಶಕ್ತಿಯೂ)
ಭೂಮಿಯಲ್ಲಿ
ರಜೋಗುಣವೂ (ಧೂಳೂ)

ರಣಗತ್ತಲೆಯಲ್ಲಿ ತಮೋ
ಗುಣವ್ತೂ (ಕತ್ತಲೆ)
ಉಂಟಾಗಲು ಎರಡು
ಸೈನ್ಯಗಳಲ್ಲಿಯೂ
ಸತ್ತ್ವರಜಸ್ತಮೋಗುಣಗಳು
ತೋರಿಬಂದುವು.

ಪಡೆಯ ಪೊರೆಗಗಿದು ಶೇಷಂ
ಪೆಡೆಗಳನುಡುಗುವುದುಮೆಳೆ
ಬೊದಿಲ್ಲೆನೆ ಬಿಱ್ದು|
ತ್ತಡಿಗಿಡೆ ಕೂರ್ಮನ ಬೆನ್ನಂ

ದೊಡೆದು ಸಿಡಿಲ್ದೊಡನೆ ನುಚ್ಚುನೂಱಪ್ಪಿನೆಗಂ|| ೨೦ ||

ಪದ್ಯ-೨೦:ಪದವಿಭಾಗ-ಅರ್ಥ:ಪಡೆಯ ಪೊರೆಗೆ ಅಗಿದು ಶೇಷಂ ಪೆಡೆಗಳನು ಉಡುಗುವುದುಂ (ಸೈನ್ಯಗಳ ಭಾರಕ್ಕೆ ಹೆದರಿ ಆದಿಶೇಷನು ಹೆಡೆಗಳನ್ನು ಕುಗ್ಗಿಸಿಕೊಂಡನು.) ಎಳೆ (ಇಳೆ- ಭೂಮಿ) ಬೊದಿಲ್ಲೆನೆ ಬಿಣ್ದತ್ತು (ಭೂಮಿಯು ಬೊದಿಲ್ಲೆಂದು

ಕುಸಿಯಿತು) ಅಡಿಗಿಡೆ (ಅಡಿ+ ಕಿಡೆ: ಅಡಿ- ತಳ ಕಿಡೆ ಭೂಮಿಯ ತಳಭಾಗವು ಕೆಡಲು) ಕೂರ್ಮನ ಬೆನ್ನು ಒಂದೊಡೆದು ಸಿಡಿಲ್ದು ಒಡನೆ ನುಚ್ಚುನೂಱಪ್ಪಿನೆಗಂ (ಭೂಮಿಯನ್ನು ಹೊತ್ತ ಆಮೆಯ ಬೆನ್ನು ಒಡೆದು ತಕ್ಷಣ ನುಚ್ಚುನೂರಾಗುವಂತಾಯಿತು)

ಪದ್ಯ-೨೦:ಅರ್ಥ:ಸೈನ್ಯಗಳ ಭಾರಕ್ಕೆ ಹೆದರಿ ಆದಿಶೇಷನು ಹೆಡೆಗಳನ್ನು ಕುಗ್ಗಿಸಿಕೊಂಡನು. ಭೂಮಿಯು ಬೊದಿಲ್ಲೆಂದು ಕುಸಿಯಿತು. ಭೂಮಿಯ ತಳಭಾಗವು ಕೆಡಲು, ಭೂಮಿಯನ್ನು ಹೊತ್ತ ಆಮೆಯ ಬೆನ್ನು ಒಡೆದು ತಕ್ಷಣ ನುಚ್ಚುನೂರಾಗುವಂತಾಯಿತು

ವ|| ಅಂತು ನೆಲನುಮಾಕಾಶಮೊಂದೊಂದ

ಳ್ ತಾಗಿದ ಬೇಗದೊಳಂಬರಂ
ಬರಂ ನೆಗೆದ ಧೂಳಿಯೊಳ್
ದೆಸೆಯಱಿಯದೆಯುಂ ತಮ್ಮ
ಬಲಮಂ
ಮಾರ್ವಲಮನಱಿಯದೆಯುಂ
ಚಾತುರ್ವಲಂಗಳ್ ಮೊದಲ
ಸಮಕಟ್ಟುಗೆಟ್ಟು ತಡವರಿಸಿ
ತಟ್ಟುಪೊಟ್ಟೆಂದಚ್ಚುಮಿಟ್ಟು
ಮಿರಿದು ತಱಿದು
ಘಟ್ಟಿಸೆಯುಮಾಂಕೆಗೊಂಡು
ಕಿಱಿದುಪೊೞ್ತು ಕಾದೆ ಕಾದೆ

ಸುರಿವ ಬಿಸುನೆತ್ತರ
ಸರಿಯೊಳಮಂಬಿನ
ಸರಿಯೊಳಮಂಬಿರಿವಿಟ್ಟು
ಪಾಯ್ವ ಮದಗಜಂಗಳ
ಮದಜಲದೊಳಂ ಬಲದ
ಕಳಕಳಕ್ಕೆ ಮಸಗಿ
ದೆಸೆಯಱಿಯದೆಯುಂ
ಪಱಿಯೆ ಘಟ್ಟಿಸಿದ ಕೀಳ
ಘಟ್ಟಣೆಯೊಳ್
ಪೊಟ್ಟಗೊಡೆದ ತಾಳುಗೆಗಳ
ರುಧಿರಜಲದೊಳ್ ಬೆರಸಿ

ಪದಗೆಂಪಪನಾಳ್ದ ಜಾತ್ಯಶ್ವದ
ಲಾಳಾಜಳದೊಳಂ
ನೆಲದೊಳೊಗೆವ ರಜಂ
ಮೊದಲ್ಮೂಲಂಗಿಡೆಯುಂ
ತಿಱಿದಿಕ್ಕಿದಂತೆ ತಲೆಗಳ್
ಪಱಿದುರುಳ್ದೊಡೆ
ಪೆರ್ಮರಂಗಳ
ಪೋೞ್ಗಳೊಳಗಣಿಂದಮೊಗೆದ
ಕೇಸುರಿಗಳ
ಬಳಗದಂತಟ್ಟೆಗಳಿಂದ
ಬರಂಬರಂ ನೆಗೆದು ಪಾಱುವ

ನೆತ್ತರ ಸುಟ್ಟುರೆಗಳಿಂದಂ ಮೇಗೆ
ನೆಗೆದ ರಜಂ ಮಸುಳನಾಗೆ
ದೆಸೆಯೞಿದು ತಮ್ಮ
ಬಲಮುಮಂ
ಮಾರ್ವಲಮುಮನೞಿದು
ನವರುಧಿರಜಳ
ಚಳತ್ಸೇಚನದೊಳ್ ಘಟ್ಟಿಸಿ
ಸಿಂದುರದೊಳ್
ನೆಲಗಟ್ಟಿಸಿದಂತಿರ್ದ
ರಂಗಭೂಮಿಯೊಳೆರಡುಂ

ಪಡೆಯ ನಾಯಕರ್ ಬಿಲ್ಲಾಳೆಗಂಗಾದುವಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ನೆಲನುಂ ಆಕಾಶಮಂ ಒಂದೊಂದಳ್ ತಾಗಿದ ಬೇಗದೊಳ್ ಅಂಬರಂ ಬರಂ (ವೇಗ) ನೆಗೆದ ಧೂಳಿಯೊಳ್ (ಆಕಾಶದವರೆಗೆ ಹಾರಿದ ಧೂಳಿನಿಂದ) ದೆಸೆಯು ಅಱಿಯದೆಯುಂ (ದಿಕ್ಕು

ಅರಿಯದೆಯುಂ-
ಕಾಣದೆಯೂ) ತಮ್ಮ ಬಲಮಂ
ಮಾರ್ವಲಮನಱಿಯದೆ
ಯುಂ (ತಮ್ಮ ಪಕ್ಷ
ಪ್ರತಿಪಕ್ಷಗಳನ್ನರಿಯದೆಯೂ)
ಚಾತುರ್ವಲಂಗಳ್ ಮೊದಲ
ಸಮಕಟ್ಟುಗೆಟ್ಟು (ವ್ಯವಸ್ಥೆ
ತಪ್ಪಿಹೋಗಿ) ತಡವರಿಸಿ
ತಟ್ಟುಪೊಟ್ಟೆಂದು
ಅಚ್ಚುಮಿಟ್ಟು ಮಿರಿದು
ತಱಿದು (ಥಟ್ ಪೊಟ್ಟೆಂದು

ಹೊಡೆದು ಇಟ್ಟು ಕತ್ತರಿಸಿ
ತರಿದು) ಘಟ್ಟಿಸೆಯುಂ
ಆಂಕೆಗೊಂಡು
ಕಿಱಿದುಪೊೖತ್ತು ಕಾದೆ
(ಪ್ರತಿಭಟಿಸಿ ಕೆಲವು ಕಾಲ
ಯುದ್ಧ ಮಾಡಲು,) ಕಾದೆ
ಸುರಿವ ಬಿಸುನೆತ್ತರ
ಸರಿಯೊಳಂ (ಸುರಿಯುತ್ತಿರುವ
ಬಿಸಿರಕ್ತದ ಮಳೆಯಲ್ಲಿ)
ಅಂಬಿನ ಸರಿಯೊಳಂ
(ಬಾಣವರ್ಷದಿಂದ

ಪ್ರವಾಹವಾಗಿ) ಅಂಬು
ಇರಿವಿಟ್ಟು ಪಾಯ್ವ
ಮದಗಜಂಗಳ
ಮದಜಲದೊಳಂ (ಹರಿಯುವ
ಮದ್ದಾನೆಗಳ
ಮದೋದಕದಲ್ಲಿ,) ಬಲದ
ಕಳಕಳಕ್ಕೆ ಮಸಗಿ (ಸೈನ್ಯದ
ಗದ್ದಲಕ್ಕೆ ರೇಗಿ) ದೆಸೆಯ
ಅಱಿಯದೆಯುಂ
ಪಱಿಯೆ(ದಿಕ್ಕು ತೋಚದಂತೆ
ಓಡಲು, ಪರಿಯೆ- ಹರಿಯೆ -

ಓಡಲು) ಘಟ್ಟಿಸಿದ ಕೀಳ
ಘಟ್ಟಣೆಯೊಳ್
ಪೊಟ್ಟಗೊಡೆದ ತಾಳುಗೆಗಳ
ರುಧಿರಜಲದೊಳ್ ಬೆರಸಿ
(ತಾಗಿದ ಕಡಿವಾಣದ
ಹೊಡೆತದಿಂದ ಪೂರ್ಣವಾಗಿ
ಸೀಳಿದ ನಾಲಗೆಗಳ ರಕ್ತದಲ್ಲಿ
ಸೇರಿ,) ಪದಗೆಂಪನಾಳ್ದ
ಜಾತ್ಯಶ್ವದ ಲಾಳಾಜಳದೊಳಂ
(ಹದವಾದ ಕೆಂಪುಬಣ್ಣವನ್ನು
ತಾಳಿದ ಜಾತಿಕುದುರೆಗಳ

ಜೊಲ್ಲು ರಸವು)
ನೆಲದೊಳೊಗೆವ ರಜಂ
(ಇವುಗಳಿಂದ ನೆಲದಿಂದ
ಹೊರಟ ಧೂಳಿನ) ಮೊದಲ್
ಮೂಲಂ ಗಿಡೆಯುಂ (ಧೂಳಿನ
ಮೂಲವು ನಾಶವಾಯಿತು).
ತಿಱಿದು ಇಕ್ಕಿದಂತೆ ತಲೆಗಳ್
ಪಱಿದು ಉರುಳ್ದೊಡೆ
ಪೆರ್ಮರಂಗಳ ಪೋೞ್ಗಳೊಳು
(ಕತ್ತರಿಸಿ ಹಾಕಿದ ತಲೆಗಳು
ಹರಿದು ಹಾರಲು ದೊಡ್ಡ

ಮರಗಳ ಹೋಳುಗಳ
ಒಳಭಾಗದಿಂದ) ಅಗಣಿಂದಂ
ಒಗೆದ ಕೇಸುರಿಗಳ ಬಳಗದಂತೆ
(ಒಳಭಾಗದಿಂದ ಹುಟ್ಟಿದ
ಕೆಂಪುಜ್ವಾಲೆಯ
ಸಮೂಹದಂತೆ) ಅಟ್ಟೆಗಳಿಂದ
ಬರಂಬರಂ ನೆಗೆದು ಪಾಱುವ
(ಮುಂಡಗಳಿಂದ
ಆಕಾಶದವರೆಗೆ ಚಿಮ್ಮಿ
ಹಾರುವ) ನೆತ್ತರ ಸುಟ್ಟ
ಉರೆಗಳಿಂದಂ ಮೇಗೆ ನೆಗೆದ

ರಜಂ ಮಸುಳನಾಗೆ (ರಕ್ತದಿಂದ ಕೂಡಿದ ಸುಂಟರುಗಾಳಿಯಿಂದ ಮೇಲೆ ಎದ್ದಿದ್ದ ಧೂಳೂ ಮಾಯವಾಯಿತು.) ದೆಸೆಯ ಅಱಿದು (ದಿಕ್ಕನ್ನು ತಿಳಿದು; ಧೂಳು ಅಡಗಲಾಗಿ ದಿಕ್ಕುಗಳನ್ನು ತಿಳಿದು) ತಮ್ಮ ಬಲಮುಮಂ ಮಾರ್ವಲಮುನು ಅಱಿದುಂ (ತಮ್ಮ ಸೈನ್ಯವನ್ನೂ

ಪರಸ್ಯೆನ್ಯವನ್ನೂ ತಿಳಿದು)
ನವರುಧಿರಜಳ
ಚಳತ್ಸೇಚನದೊಳ್ ಘಟ್ಟಿಸಿ
(ಹೊಸದಾದ ರಕ್ತವನ್ನು
ಚಿಮಿಕಿಸುವುದರಿಂದ)
ಸಿಂದುರದೊಳ್ (ಕೆಂಪುಕಲ್ಲು)
ನೆಲಗಟ್ಟಿಸಿದಂತಿರ್ದ
(ದಮ್ಮಸ್ಸು ಮಾಡಿ ಕೆಂಪು
ಕಾವಿಕಲ್ಲನ್ನು ನೆಲಕ್ಕೆ
ಹಾಸಿದಂತಿದ್ದ)
ರಂಗಭೂಮಿಯೊಳ್ ಎರಡುಂ

ಪಡೆಯ ನಾಯಕರ್ ಬಿಲ್ಗ
ಕಾಳೆಗಂ ಕಾದುವಾಗಳ್
(ಎರಡು ಸೈನ್ಯದ ನಾಯಕರು
ಬಿಲ್ಲಿನ ಕಾಳಗವನ್ನು
ಕಾದಿದರು. ಆಗ)-
ವಚನ:ಅರ್ಥ:ವ|| ಹಾಗೆ
ಭೂಮಿ ಆಕಾಶಗಳು
ಒಂದೊಂದರಲ್ಲಿ ತಗುಲಿದ
ವೇಗದಲ್ಲಿ ಆಕಾಶದವರೆಗೆ
ಹಾರಿದ ಧೂಳಿನಿಂದ ದಿಕ್ಕು
ಕಾಣದೆಯೂ ತಮ್ಮ ಪಕ್ಷ

ಪ್ರತಿಪಕ್ಷಗಳನ್ನರಿಯದೆಯೂ
ಚತುರಂಗ ಸೈನ್ಯವು ತಮ್ಮ
ಮೊದಲಿನ ವ್ಯವಸ್ಥೆ
ತಪ್ಪಿಹೋಗಿ ಹುಡುಕಾಡುತ್ತ
ಥಟ್ ಪ್ರೊಟ್ಟೆಂದು ಹೊಡೆದು
ಇಟ್ಟು ಕತ್ತರಿಸಿ ತರಿದು
ಪ್ರತಿಭಟಿಸಿ ಕೆಲವು ಕಾಲ
ಯುದ್ಧ ಮಾಡಲು,
ಸುರಿಯುತ್ತಿರುವ ಬಿಸಿರಕ್ತದ
ಮಳೆಯಲ್ಲಿ, ಬಾಣವರ್ಷದಿಂದ
ಪ್ರವಾಹವಾಗಿ ಹರಿಯುವ

ಮದ್ದಾನೆಗಳ
ಮದೋದಕದಲ್ಲಿ, ಸೈನ್ಯದ
ಗದ್ದಲಕ್ಕೆ ರೇಗಿ ದಿಕ್ಕು
ತೋಚದಂತೆ ಓಡಲು, ತಾಗಿದ
ಕಡಿವಾಣದ ಹೊಡೆತದಿಂದ
ಪೂರ್ಣವಾಗಿ ಸೀಳಿದ
ನಾಲಗೆಗಳ ರಕ್ತದಲ್ಲಿ ಸೇರಿ,
ಹದವಾದ ಕೆಂಪು ಬಣ್ಣವನ್ನು
ತಾಳಿದ, ಜಾತಿಕುದುರೆಗಳ
ಜೊಲ್ಲು ರಸ, ಇವುಗಳಿಂದ
ನೆಲದಿಂದ ಹೊರಟ ಧೂಳಿನ

ಮೂಲವು ನಾಶವಾಯಿತು.
(ನೆಲವು ಒದ್ದೆಯಾದುದರಿಂದ
ಧೂಳೇಳುವುದೂ
ನಿಂತುದರಿಂದ); ಕತ್ತರಿಸಿ
ಹಾಕಿದ ತಲೆಗಳು ಹರಿದು
ಹಾರಲು ದೊಡ್ಡ ಮರಗಳ
ಹೋಳುಗಳ ಒಳಭಾಗದಿಂದ
ಹುಟ್ಟಿದ ಕೆಂಪುಜ್ವಾಲೆಯ
ಸಮೂಹದಂತೆ
ಮುಂಡಗಳಿಂದ
ಆಕಾಶದವರೆಗೆ ಚಿಮ್ಮಿ

ಹಾರುವ ರಕ್ತದಿಂದ ಕೂಡಿದ ಸುಂಟರುಗಾಳಿಯಿಂದ ಮೇಲೆ ಎದ್ದಿದ್ದ ಧೂಳೂ ಮಾಯವಾಯಿತು. ಧೂಳು ಅಡಗಲಾಗಿ ದಿಕ್ಕುಗಳನ್ನು ತಿಳಿದು, ತಮ್ಮ ಸೈನ್ಯವನ್ನೂ ಪರಸೈನ್ಯವನ್ನೂ ತಿಳಿದು ಹೊಸದಾದ ರಕ್ತವನ್ನು ಚಿಮಿಕಿಸುವುದರಿಂದ ದಮ್ಮಸ್ಸು ಮಾಡಿ ಕೆಂಪು ಕಾವಿಕಲ್ಲನ್ನು ನೆಲಕ್ಕೆ

ಹಾಸಿದಂತಿದ್ದ
ಯುದ್ಧಭೂಮಿಯಲ್ಲಿ ಎರಡು
ಸೈನ್ಯದ ನಾಯಕರು ಬಿಲ್ಲಿನ
ಕಾಳಗವನ್ನು ಕಾದಿದರು.; ಆಗ

ಕಂ|| ಪಿಡಿಕೆಯ್ ತೀವಿದ
ಕೂರ್ಗಣೆ
ಮಡಕಾಲ್ವರಮಲೆವ ಕಚ್ಚೆ
ನಿಡಿಯಸಿಯೊರೆ ಕ|
ರ್ಪಿಡಿದ ಪಣೆಗಟ್ಟು ಕೆಯ್ಪೊಡೆ
ಬೆಡಂಗನೊಳಕೊಳೆ
ಧನುರ್ಧರರ್ ಪೆಣೆದೆಚ್ಚರ್||

೭೧ ||

ಪದ್ಯ-೭೧:ಪದವಿಭಾಗ-ಅರ್ಥ:ಪಿಡಿಕೆಯ್ ತೀವಿದ ಕೂರ್ಗಣೆ (ಮುಷ್ಟಿಕ್ಕೈ ತುಂಬ ತುಂಬಿದ ಹರಿತವಾದ ಬಾಣ,) ಮಡಕಾಲ್ವರಂ ಅಲೆವ ಕಚ್ಚೆ (ಮೊಳಕಾಲುವರೆಗೆ ಜೋಲಾಡುವ ವೀರಗಚ್ಚೆ) ನಿಡಿಯ ಅಸಿಯ ಒರೆ (ಉದ್ದವಾದ ಕತ್ತಿಯ ಒರೆ) ಕರ್ಪಿಡಿದ ಪಣೆಗಟ್ಟು (ಕಪ್ಪಾದ

ಹಣೆಗಟ್ಟು,) ಕೆಯ್ಪೊಡೆ ಬೆಡಂಗನು ಒಳಕೊಳೆ (ಇವು ಬೆಡಗನ್ನು ಹೊಂದಿರಲು) ಧನುರ್ಧರರ್ ಪೆಣೆದು ಎಚ್ಚರ್ (ಬಿಲ್ಗಾರರು ಪರಸ್ಪರ ಹೆಣೆದುಕೊಂಡು ಹೊಡೆದಾಡಿದರು.)

ಪದ್ಯ-೭೧:ಅರ್ಥ:ಮುಷ್ಟಿಕ್ಕೈ ತುಂಬ ತುಂಬಿದ ಹರಿತವಾದ ಬಾಣ, ಮೊಳಕಾಲುವರೆಗೆ ಜೋಲಾಡುವ ವೀರಗಚ್ಚೆ,

ಉದ್ದವಾದ ಕತ್ತಿಯ ಒರೆ,
ಕಪ್ಪಾದ ಹಣೆಗಟ್ಟು, ಕೈಚೀಲ
ಇವು ಬೆಡಗನ್ನು ಹೊಂದಿರಲು
ಬಿಲ್ಲಾಗ್ರರು ಪರಸ್ಪರ
ಹೆಣೆದುಕೊಂಡು
ಹೊಡೆದಾಡಿದರು.

**ಶರಸಂಧಾನಂ ನಿಟ್ಟಿಸ
ಲರಿದೆಂಬಿನಮೆರಡು ಬಲದ
ಕಡುವಿಲ್ಲರ್ ಭೋ|
ರ್ಗರೆದಿಸೆ ಕೂರ್ಗಣೆಯೊಳ್
ಪಂ**

ದರಿಕ್ಕಿದಂತಾಯ್ತು ಗಗನಮಂಡಳಮೆಲ್ಲಂ|| ೭೨ ||

ಪದ್ಯ-೭೨:ಪದವಿಭಾಗ-ಅರ್ಥ:ಶರಸಂಧಾನಂ ನಿಟ್ಟಿಸಲು ಅರಿದೆಂಬಿನಂ (ಬಾಣವನ್ನು ಹೂಡುವುದನ್ನು ನೋಡಲಸಾಧ್ಯವೆನ್ನುವ ಹಾಗೆ) ಎರಡು ಬಲದ ಕಡುವಿಲ್ಲರ್ (ಎರಡು ಸೈನ್ಯದ ಗಟ್ಟಿಗರಾದ ಬಿಲ್ಗಾರರರು) ಭೋರ್ಗರೆದು ಇಸೆ (ಶಬ್ದಮಾಡಿ

ಹೊಡೆಯಲಾಗಿ)
ಕೂರ್ಗಣೆಯೊಳ್ ಪಂದರ
(ಪಂಜರ) ಇಕ್ಕಿದಂತಾಯ್ತು
ಗಗನಮಂಡಳಮೆಲ್ಲಂ
(ಆಕಾಶಮಂಡಳವೆಲ್ಲ ಚಪ್ಪರ
ಹಾಕಿದಂತಾಯಿತು)
ಪದ್ಯ-೭೨:ಅರ್ಥ:ಬಾಣವನ್ನು
ಹೂಡುವುದನ್ನು
ನೋಡಲಸಾಧ್ಯವೆನ್ನುವ ಹಾಗೆ
ಎರಡು ಸೈನ್ಯದ ಗಟ್ಟಿಗರಾದ
ಬಿಲ್ಗಾರರು ಶಬ್ದಮಾಡಿ

ಹೊಡೆಯಲಾಗಿ
ಆಕಾಶಮಂಡಳವೆಲ್ಲ ಚಪ್ಪರ
ಹಾಕಿದಂತಾಯಿತು.

ಗಱಿಸನ್ನೆಗೆಯ್ದು ತೆಗೆನೆರೆ
ದೆಱಗಿ ಪರಂಕಲಿಸಿ ಪರ್ಮಿ
ಕೂಕಿಱಿದಿಸೆ ಕೆಂ|
ಗಱಿಯ ಮೊನೆಯಂಬುಗಳ್
ಕ
ಣ್ದೆರೆಯಿಸಿದುವು ಪೊಣರ್ವ
ಬಿಲ್ಲ ಕಡುವಿತ್ತೆಗರಂ|| ೭೩ ||

ಪದ್ಯ-೭೩:ಪದವಿಭಾಗ-ಅರ್ಥ:ಗಱಿ ಸನ್ನೆಗೆಯ್ದು (ಬಿಲ್ಲುಗಾರರು ಬಾಣಗಳ ಗರಿಸನ್ನೆ ಮಾಡಿ) ತೆಗೆನೆರೆದು ಎೞಿಗಿ (ದೀರ್ಘವಾಗಿ ಸೆಳೆದು ಗುರಿ ಇಡಲು ಬಾಗಿ) ಪರಂಕಲಿಸಿ ಪರ್ಮಿ (ವಿಸ್ತಾರವಾಗಿ ಬಿಲ್ಲನ್ನು ಬಗ್ಗಿಸಿ) ಕೂಕಿಱಿದು ಇಸೆ (ಕಾಕುಹೊಡೆದು -ಕೂಗಿ ಬಾಣ ಬಿಡಲು) ಕೆಂಗಱಿಯ

ಮೊನೆಯಂಬುಗಳ್ (ಕೆಂಪಾದ ಗರಿಯನ್ನುಳ್ಳ ಬಾಣಗಳು) ಕಣ್ದ್ ಎರೆಯಿಸಿದುವು ಪೊಣರ್ವ ಬಿಲ್ಲ ಕಡುವಿತ್ತೆಗರಂ (ಕಣ್ಣು ತೆರೆಯುವ ಹಾಗೆ ಮಾಡಿದುವು - ಯುದ್ಧ ಮಾಡುತ್ತಿರುವ ಶೂರರಾದ ಬಿಲ್ಗಾರರನ್ನು)

ಪದ್ಯ-೭೩:ಅರ್ಥ:ಬಿಲ್ಲುಗಾರರು ಬಾಣಗಳ ಗರಿಸನ್ನೆ ಮಾಡಿ ದೀರ್ಘವಾಗಿ ಸೆಳೆದು ಬಾಗಿ,

ವಿಸ್ತಾರವಾಗಿ ಬಿಲ್ಲನ್ನು ಹಿಗ್ಗಿಸಿ ಹಬ್ಬಿ ಕೂಗಿ ಬಾಣಪ್ರಯೋಗ ಮಾಡಲು ಕೆಂಪಾದ ಗರಿಯನ್ನುಳ್ಳ ಬಾಣಗಳು ಯುದ್ಧ ಮಾಡುತ್ತಿರುವ ಶೂರರಾದ ಬಿಲ್ಗಾರರರನ್ನು ಕಣ್ಣು ತೆರೆಯುವ ಹಾಗೆ ಮಾಡಿದುವು. (ಅಚ್ಚರಿಯನ್ನುಂಟು ಮಾಡಿದವು)

ಅರಿವ ನಡುವುಡಿವ ನೇಗೋೕ

ಲ್ವರಿದುರ್ಚುವ ನಟ್ಟು ತೊನೆವ ಕಣೆಗಳ್ಗೆ ಸೊಗಂ| ದಿರಿಯದಿದಿರಿದಿರನದಿರದೆ ಸುರಿಗಿಱಿವಂತೆಚ್ಚರಂಬನಂಬ ಟ್ಟುವಿನಂ|| ೭೪

ಪದ್ಯ-00:ಪದವಿಭಾಗ-ಅರ್ಥ:ಅರಿವ ನಡುವ ಉಡಿವ (ಕತ್ತರಿಸುವ, ನಾಟುವ, ಮುರಿದು ಹಾಕುವ,) ನೇರ್ಗೋಲ್‌ವರಿದು ಉರ್ಚುವ (ನೇರವಾಗಿ

ಬಾಣಗಳು ಹಾರಿಬಂದು
ಸೀಳುವ,) ನಟ್ಟು ತೊನೆವ
(ನಾಟಿಕೊಂಡು ತೂಗಾಡುವ)
ಕಣೆಗಳ್ಗೆ
ಸೊಗಂದಿರಿಯದಿದಿರಿದಿರನದಿ
ರದೆ (ಸೊಗಂದು?-ಇರಿಯದೆ
ಪ್ರೀತಿ/ ಮೋಹದಿಂದ
ಹೊಡೆಯದೆ ಸಿಟ್ಟಿನಿಂದ
ಇರಿದರು;-ಮೊಗಂದು?
ಇರಿಯದೆ ಇದಿರಿದಿರಂ
ಅದಿರದೆ: ಮುಖವನ್ನು

ತಿರುಗಿಸಿಕೊಳ್ಳದೆ
ಎದುರಿನವರನ್ನು
ಪ್ರತಿಭಟಿಸುವುದಕ್ಕೆ ಹೆದರದೆ)
ಸುರಿಗಿ ಇಱಿವಂತೆ ಎಚ್ಚರು
ಅಂಬನು (ಕತ್ತಿಯಿಂದ
ಹೊಡೆದ ಹಾಗೆ ಬಾಣವನ್ನು
ಬಾಣವು ಹಿಂಬಾಲಿಸುವ ಹಾಗೆ
ಹೊಡೆದರು) ಅಂಬ
ಅಟ್ಟುವಿನಂ (ಬಾಣವು
ಹಿಂಬಾಲಿಸುವ ಹಾಗೆ)

ಪದ್ಯ-00:ಅರ್ಥ:ಕತ್ತರಿಸುವ, ನಾಟುವ, ಮುರಿದು ಹಾಕುವ, ನೇರವಾಗಿ ಬಾಣಗಳು ಹಾರಿಬಂದು ಸೀಳುವ, ನಾಟಿಕೊಂಡು ತೂಗಾಡುವ ಬಾಣಗಳಿಗೆ ಮುಖವನ್ನು ತಿರುಗಿಸಿಕೊಳ್ಳದೆ ಎದುರಿನವರನ್ನು ಪ್ರತಿಭಟಿಸುವುದಕ್ಕೆ ಹೆದರದೆ ಕತ್ತಿಯಿಂದ ಹೊಡೆದ ಹಾಗೆ ಬಾಣವನ್ನು ಬಾಣವು

ಹಿಂಬಾಲಿಸುವ ಹಾಗೆ

ಹೊಡೆದರು.

ಪಿಡಿಕೆಯ್ಯ ದೊಣೆಯ
ಪೊದೆಯಂ
ಬಿಡೆ ಮುಡಿವಿನಮೆಚ್ಚು
ಸುರಿಗೆಗಿಟ್ತಿದಿರಿದಿರಂ|
ಪಡೆ ಪೆಣೆದಿಱಿದುಂ ಬಿಲ್ವಡೆ
ಪಡೆದುದು ಭೋರ್ಗರೆದು
ಪರಿವ ನೆತ್ತರ ಕಡಲಂ|| ೭೫ ||

ಪದ್ಯ-00:ಪದವಿಭಾಗ-

ಅರ್ಥ:ಪಿಡಿಕೆಯ್ಯ ದೊಣೆಯ

(ಬತ್ತಳಿಕೆಯ) ಪೊದೆಯ
ಆಂಬು ಇಡೆ (ತೆಗೆದ ರಾಸಿರಾಶಿ
ಬಾಣಗಳನ್ನು ಇಟ್ಟು)
ಮುಡಿವಿನಂ ಎಚ್ಚು
(ಸಂಪೂರ್ಣವಾಗಿ
ಮುಗಿಯುವವರೆಗೂ
ಪ್ರಯೋಗಮಾಡಿ) ಸುರಿಗೆಗೆ
ಎಟ್ಚಿ (ಕತ್ತಿಯನ್ನು ಸೆಳೆದು)
ಇದಿರಿದಿರಂ ಪಡೆ ಪೆಣೆದು
ಅಱಿದುಂ (ಎದುರೆದುರಿಗೆ
ಬಂದವರನ್ನು ಹೊಡೆಹೊಡೆದು

ಸೈನ್ಯದಲ್ಲಿ ಹೆಣೆದುಕೊಂಡು ಅರಿದು- ಕತ್ತರಿಸಿ), ಬಿಲ್ವಡೆ ಪಡೆದುದು ಭೋರ್ಗರೆದು ಪರಿವ ನೆತ್ತರ ಕಡಲಂ (ಬಿಲ್ಲುಗಾರರ ಪಡೆ ಆರ್ಭಟಮಾಡಿ ರಕ್ತ ಸಮುದ್ರವನ್ನು ಪಡೆದರು - ಹರಿಯಿಸಿದರು)

ಪದ್ಯ-00:ಅರ್ಥ: ಕಯ್ಯಲ್ಲಿ ಹಿಡಿದಿರುವ ಬತ್ತಳಿಕೆಯಿಂದ ತೆಗೆದ ರಾಸಿರಾಶಿ ಬಾಣಗಳು

ಸಂಪೂರ್ಣವಾಗಿ
ಮುಗಿಯುವವರೆಗೂ
ಪ್ರಯೋಗಮಾಡಿ ಅದು
ಮುಗಿಯಲು ಕತ್ತಿಯನ್ನು
ಸೆಳೆದು ಎದುರೆದುರಿಗೆ
ಬಂದವರನ್ನು ಹೊಡೆಹೊಡೆದು
ಸೈನ್ಯದಲ್ಲಿ ಹೆಣೆದುಕೊಂಡು
ಅರಿದು ಕತ್ತರಿಸಿ, ಬಿಲ್ಲುಗಾರರ
ಪಡೆ ಆರ್ಭಟಮಾಡಿ ರಕ್ತ
ಸಮುದ್ರವನ್ನು ಹರಿಯಿಸಿದರು.

ವ|| ಅಂತುಭಯಬಲ ಧನುರ್ಧರಬಲಂಗಳುಮಟ್ಗಿ ಮಟ್ಗಿದಾಗಳ್-

ವಚನ:ಪದವಿಭಾಗ-ಅರ್ಥ: ಅಂತು ಉಭಯ ಬಲ ಧನುರ್ಧರ ಬಲಂಗಳುಂ ಅಟ್ಗಿ ಮಟ್ಗಿದಾಗಳ್ (ಬಿಲ್ಲುಗಾರರ ಸೈನ್ಯವು ಸತ್ತು ಮಲಗಿದಾಗ)-

ವಚನ:ಅರ್ಥ:ವ|| ಹಾಗೆ ಎರಡೂ ಸೈನ್ಯದ ಬಿಲ್ಲುಗಾರರ ಸೈನ್ಯವು ಸತ್ತು ನಾಶವಾಗಲು,

ಚಂ|| ತೊಳಗುವ ಬಾಳ್
ತಱಿತ್ತಱಿಪ ಕಕ್ಕಡೆ
ಬುಂಭುಕದೊಳ್ ತಗುಳ್ದು ಪ
ಜ್ಜಳಿಸುವ
ಪಂಚರಾಯುಧಮಗುರ್ವಿಸು
ವಾವುತಿ ಪೂಸಿದಂತಿರೆ|
ಟ್ಟಳಮಮರ್ದಿರ್ದ ಮಾಳಜಿಗೆ
ಪಕ್ಕರೆಯಿಕ್ಕಿದ ಜಾಯಿಲಂ
ಭಯಂ
ಗೊಳಿಸೆ ಕಡಂಗಿ
ತಾಗಿದುದಸುಂಗೊಳೆ ತುಂಗ

ತುರಂಗ ಸಾಧನಂ|| ೭೬||

ಪದ್ಯ-೭೬:ಪದವಿಭಾಗ-ಅರ್ಥ:ತೊಳಗುವ ಬಾಳ್ (ಹೊಳೆಯುವ ಕತ್ತಿ,) ತಳಿತ್ತಳಿಪ ಕಕ್ಕಡೆ(ತಳತಳಿಸುತ್ತಿರುವ ಕಕ್ಕಡೆಯೆಂಬ ಆಯುಧ) ಬುಂಭುಕದೊಳ್ ? ತಗುಳ್ದು ಪಜ್ಜಳಿಸುವ ಪಂಚರಾಯುಧಂ (ಪ್ರಜ್ವಲಿಸುವ ಪಂಚರಾಯುಧ,)

ಅಗುರ್ವಿಸುವ ಆವೃತಿ
(ಹೆದರಿಸುವ ಆವೃತಿಎಂಬ
ಆಯುಧ,) ಪೂಸಿದಂತಿರೆ
ಇಟ್ಟಳಂ ಅಮರ್ದಿರ್ದ
ಮಾಳಜಿಗೆ (ಒತ್ತಾಗಿ ಸೇರಿರುವ
ಮಾಳಜಿಗೆ) ಪಕ್ಕರೆಯಿಕ್ಕಿದ
ಜಾಯಿಲಂ (ಜೀನುಹಾಕಿದ
ಜಾತಿಯ ಕುದುರೆಗಳು -)
ಭಯಂಗೊಳಿಸೆ ಕಡಂಗಿ
ತಾಗಿದುದು ಅಸುಂಗೊಳೆ
ತುಂಗ ತುರಂಗ ಸಾಧನಂ

(ಇವು
ಭಯವನ್ನುಂಟುಮಾಡಲು
ದೊಡ್ಡ ಕುದುರೆಯ ಸೈನ್ಯವು
ಪ್ರಾಣವನ್ನಪಹರಿಸುವ ಹಾಗೆ
ತಾಗಿದು.)
ಪದ್ಯ-೭೬:ಅರ್ಥ:ಹೊಳೆಯು
ವ ಕತ್ತಿ, ತಳತಳಿಸುತ್ತಿರುವ
ಕಕ್ಕಡೆಯೆಂಬ ಆಯುಧ
(ಮುಳ್ಳುಗೋಲು),
ಕುಚ್ಚೆಲಿನಲ್ಲಿ ಸೇರಿ
ಪ್ರಜ್ವಲಿಸುವ ಪಂಚರಾಯುಧ,

ಹೆದರಿಸುವ ಆವೃತಿಎಂಬ ಆಯುಧ, ಲೇಪಮಾಡಿದಂತೆ ಒತ್ತಾಗಿ ಸೇರಿರುವ ಮಾಳಜಿಗೆ, ಜೀನುಹಾಕಿದ ಜಾತಿಯ ಕುದುರೆಗಳು -ಇವು ಭಯವನ್ನುಂಟುಮಾಡಲು ದೊಡ್ಡ ಕುದುರೆಯ ಸೈನ್ಯವು ಪ್ರಾಣವನ್ನಪಹರಿಸುವ ಹಾಗೆ ತಾಗಿದು. (ಟಿ: ಇಲ್ಲಿ ಬರುವ ಪಂಚರಾಯುಧ, ಆವೃತಿ, ಮಾಳಜಿಗೆ ಮೊದಲಾದ ಆ

ಕಾಲದ ಆಯುಧಗಳು, ಈಗ ಅರ್ಥ ಆಗದು)

ವ| ಅಂತು ವಿಳಯಕಾಳದ ಕಾಳ್ಕಿರ್ಚಿನ ಬೇಗೆ ಸಾರ್ವಂತಿರ್ವಲದಳವುಂ ಕಿರ್ಚುಂ ಕಿಡಿಯುಮಾಗೆ ತಾಗಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ವಿಳಯಕಾಳದ ಕಾಳ್ಕಿರ್ಚಿನ (ಪ್ರಳಯಕಾಲದ ಕಾಡುಗಿಚ್ಚಿನ) ಬೇಗೆ ಸಾರ್ವಂತೆ

ಇರ್ವಲ ದಳವುಂ (ಎರಡು ಸೈನ್ಯದ) ಕಿರ್ಚುಂ ಕಿಡಿಯುಂ ಆಗೆ ತಾಗಿದಾಗಳ್-(ಸಿಟ್ಟಿನಿಂದ ಎದುರಿಸಿದಾಗ.)

ವಚನ:ಅರ್ಥ:ವ|| ಹಾಗೆ ಪ್ರಳಯಕಾಲದ ಕಾಡುಗಿಚ್ಚಿನ ಬೆಂಕಿಯು ಶಾಖ ಬರುವ ಹಾಗೆ ಎರಡು ಸೈನ್ಯದ ಸಾಮರ್ಥ್ಯವೂ ಕಿಚ್ಚು ಕಿಡಿಯಾಗಿ/ ಸಿಟ್ಟಿನಿಂದ ಎದುರಿಸಿದಾಗ.

ಚಂ|| ಪಸುಗೆ ನೆಲಂ ಜಲಂ
ಪಯದೊಡಂಬಡು ವಂಚನೆ
ಕೇಣಮಾಸನಂ
ಕೊಸೆ ದೆಸೆ ದಿಟ್ಟಿ ಮುಟ್ಟಿ
ಕೆಲಜಂಕೆ ನಿವರ್ತನೆ ಕಾಣ್ಕೆ
ಪರ್ವಿದೇ|
ರ್ವೆಸನದೊಳಾದ
ಬಲ್ಮೆಯೊಳೊಡಂಬಡೆ
ತಳ್ತಿಱಿವಲ್ಲಿ ಮಿಂಚಿನೊಳ್
ಮುಸುಕಿದ ಮಾಳ್ಕೆಯಾಯ್ತು
ಸಮರಾಂಗಣಮುಳ್ಕುವ

ಬಾಳ್ಗಳುಳ್ಕದಿಂ|| ೭೭ ||

ಪದ್ಯ-೭೭:ಪದವಿಭಾಗ-ಅರ್ಥ:ಪಸುಗೆ ನೆಲಂ ಜಲಂ, ಹಯದ ಒಡಂಬಡು, (ನೆಲ ಒಡೆಯಲು ಜಲವೆದ್ದಿತು , ಕುದುರೆಗಳು ಸೇರಿಕೊಂಡವು,) ವಂಚನೆ ಕೇಣಂ (ಮೋಸ, ಮಾತ್ಸರ್ಯ) ಆಸನಂ ಕೊಸೆ (ಜಡತೆ, ಕೊಸರಾಟ,) ದೆಸೆ ದಿಟ್ಟಿ (ದಿಕ್ಕು ದೃಷ್ಟಿ) ಮುಟ್ಟಿ ಕೆಲಜಂಕೆ (ಮುನ್ನುಗ್ಗುವಿಕೆ,

ಹೆದರಿಸುವಿಕೆ?) ನಿವರ್ತನೆ
ಕಾಣ್ಕೆ (ಹಿಂದಿರುಗುವಿಕೆ, ಪುನ
ಕಾಣಿಸಿಕೊಳ್ಳುವಿಕೆ) ಪರ್ವಿದ
ಏರ್ವೆಸನದೊಳು ಆದ
(ಹಬ್ಬಿದ ಹೊಡೆದಾಟದಲ್ಲಿ
ಆದ) ಬಲ್ಮೆಯೊಳು ಒಡಂಬಡೆ
(ಶಕ್ತಿ/ ಬಲುಮೆಯಲ್ಲಿ
ಸಮಾನವಾಗಿ) ತಳ್ತು
ಇೞಿವಲ್ಲಿ (ತಳುಕಿ
ಇರಿಯುವಾಗ/
ಹತ್ತಿರಬಂದುತಾಗಿ

ಯುದ್ಧಮಾಡುವಾಗ)
ಮಿಂಚಿನೊಳ್ ಮುಸುಕಿದ
ಮಾಳ್ಕೆಯಾಯ್ತು (ಮಿಂಚಿನಲ್ಲಿ
ಮುಸುಕಿದಂತಾಯಿತು.)
ಸಮರಾಂಗಣಂ ಉಳ್ಕುವ
ಬಾಳ್ಗಳ ಉಳ್ಕದಿಂ (ಆ
ಯುದ್ಧರಂಗವು ಹೊಳೆಯುವ
ಕತ್ತಿಗಳ ಕಾಂತಿಯಿಂದ-
-ಮಿಂಚಿನಲ್ಲಿ
ಮುಸುಕಿದಂತಾಯಿತು.)

ಪದ್ಯ-೭೭:ಅರ್ಥ: ನೆಲ ಒಡೆಯಲು ಜಲವೆದ್ದಿತು , ಕುದುರೆಗಳು ಒಂದಕ್ಕೊಂದು ಸೇರಿಕೊಂಡವು, ಮೋಸ, ಮಾತ್ಸರ್ಯ, ಜಡತೆ, ಕೊಸರಾಟ, ದಿಕ್ಕು ದೃಷ್ಟಿ ಮುಷ್ಟಿ, ಮುನ್ನುಗ್ಗುವಿಕೆ, ಹೆದರಿಸುವಿಕೆ, ಹಿಂದಿರುಗುವಿಕೆ, ಪುನ ಕಾಣಿಸಿಕೊಳ್ಳುವಿಕೆ ಇವು ಹಬ್ಬಿದ ಹೊಡೆದಾಟದಲ್ಲಿ ಆದ ಶಕ್ತಿ/ ಬಲುಮೆಯಲ್ಲಿ

ಸಮಾನವಾಗಿ

ಸೇರಿಕೊಂಡಿರಲು

ಹತ್ತಿರಬಂದುತಾಗಿ

ಯುದ್ಧಮಾಡುವಾಗ ಆ

ಯುದ್ಧರಂಗವು

ಪ್ರಕಾಶಮಾನವಾದ

ಹೊಳೆಯುವ ಕತ್ತಿಗಳ

ಕಾಂತಿಯಿಂದ ಮಿಂಚಿನಲ್ಲಿ

ಮುಸುಕಿದಂತಾಯಿತು.

ಕರ

ಕರವಾಳಘಾತದೊಳರಾತಿಯ

ಪಂದಲೆ ಪಂಚರಾಯುಧಂ
ಬೆರಸೆಸೆವಟ್ಟೆ ತೊಟ್ಟ
ಕವಚಂಬೆರಸೇಱಿದ ವಾಜಿ
ಲೋಹವ|
ಕ್ಕರೆವೆರಸೊಂದೆ ಸೂೞೊಳೆ
ಪಡಲ್ವಡೆ ದೋರ್ವಲದುರ್ವು
ಬೀರದೊಳ್
ಪೊರೆದಿರೆ ಬಿನ್ನಣಂ ನೆಗೞೆ
ತಳ್ತಿಱಿದರ್
ಕೆಲರಾಜಿರಂಗದೊಳ್|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ:ಕರ ಕರವಾಳಘಾತದೊಳು ಆರಾತಿಯ ಪಂದಲೆ (ಪಂದಲೆ-ಪಸಿ,ಹಸಿ ತಲೆ) (ಕೈಯಲ್ಲಿಹಿಡಿದ ಕೈಗತ್ತಿಯ ಪೆಟ್ಟಿನಿಂದ ಕೂಡಿದ ಶತ್ರುವಿನ ಹಸಿಯ ತಲೆ) ಪಂಚರ ಆಯುಧಂ ಬೆರಸು ಅಸೆವಟ್ಟೆ (ಪಂಚರವೆಂಬ ಆಯುಧದಿಂದ ಕೂಡಿದ

ಕಣ್ಣಿಗೆ ಎಸೆಯುತ್ತಿರುವ
ಮುಂಡ,) ತೊಟ್ಟ ಕವಚಂ
ಬೆರಸು ಏಱಿದ ವಾಜಿ
(ಧರಿಸಿದ ಕವಚದೊಡನೆ
ಕೂಡಿ ಹತ್ತಿರುವ ಕುದುರೆ)
ಲೋಹವ ಅಕ್ಕರೆವೆರಸು
(ಕಬ್ಬಿಣದ ಗುಳ/ ಬಡಿಗೆ
ಸಮೇತವಾಗಿ) ಒಂದೆ
ಸೂಱೊಳೆ ಪಡಲ್ವಡೆ (ಒಂದೇ
ಬಾರಿಗೆ ಕೆಳಗೆ ಬೀಳಲು)
ದೋರ್ವಲದ ಉರ್ವು

(ಬಾಹುಬಲದ ಆಧಿಕ್ಯವು)
ಬೀರದೊಳ್ ಪರೆದಿರೆ
(ಪರಾಕ್ರಮದಲ್ಲಿ ತೋರಿ
ಬರುತ್ತಿರಲು) ಬಿನ್ನಣಂ ನೆಗೞೆ
(ಯುದ್ಧದ ಪ್ರೌಢಿಮೆ ಹೆಚ್ಚಲು)
ತಳ್ತು ಇಱಿದರ್ ಕೆಲರು
ಆಜಿರಂಗದೊಳ್(ನುಗ್ಗಿ
ಕೆಲವರು ಯುದ್ಧರಂಗದಲ್ಲಿ
ಕೂಡಿಕೊಂಡು
ಹೊಯ್ದಾಡಿದರು.)

ಪದ್ಯ-೭೮:ಅರ್ಥ:ಕೈಯಲ್ಲಿಹಿಡಿದ ಕೈಗತ್ತಿಯ ಪೆಟ್ಟಿನಿಂದ ಕೂಡಿದ ಶತ್ರುವಿನ ಹಸಿಯ ತಲೆ ಪಂಚರವೆಂಬ ಆಯುಧದಿಂದ ಕೂಡಿದ ಕಣ್ಣಿಗೆ ಎಸೆಯುತ್ತಿರುವ ಮುಂಡ, ಧರಿಸಿದ ಕವಚದೊಡನೆ ಕೂಡಿ ಹತ್ತಿರುವ ಕುದುರೆ, ಕಬ್ಬಿಣದ ಗುಳ/ ಬಡಿಗೆ ಸಮೇತವಾಗಿ ಒಂದೇ ಬಾರಿಗೆ ಕೆಳಗೆ ಬೀಳಲು

ಬಾಹುಬಲದ ಆಧಿಕ್ಯವು ಪರಾಕ್ರಮದಲ್ಲಿ ತೋರಿ ಬರುತ್ತಿರಲು ಯುದ್ಧದ ಪ್ರೌಢಿಮೆ ಹೆಚ್ಚಲು, (ಆ ರೀತಿಯಲ್ಲಿ) ನುಗ್ಗಿ ಕೆಲವರು ಯುದ್ಧರಂಗದಲ್ಲಿ ಕೂಡಿಕೊಂಡು ಹೊಯ್ದಾಡಿದರು.

ಕಂ|| ಪಿಡಿದುದಿರ್ವ ಬಾಳ ಕಿಡಿಗಳ

ನೊಡನೊಡನರೆವೊತ್ತಿ ತೊಟ್ಟ ಸನ್ನಣವುರಿಯ|
ಲ್ಕೊಡರಿಸಿದೊಡವಱ ಪರ್ವಂ ಬಿಡೆಯರಿದರಿಸಮಿತಿಯೊಡನೆ ಕಾದಿದರರರೆಬರ್|| ೭೯ ||

ಪದ್ಯ-೭೯:ಪದವಿಭಾಗ-ಅರ್ಥ:ಪಿಡಿದು ಉದಿರ್ವ ಬಾಳ ಕಿಡಿಗಳನು ಒಡನೊಡನೆ ಅರೆವೊತ್ತಿ (ಎಡಬಿಡದೆ ಉದುರುತ್ತಿರುವ ಕತ್ತಿಯ ಕಿಡಿಗಳಿಂದ ತಕ್ಷಣವೇ ಅರ್ಧ

ಹತ್ತಿಕೊಂಡ) ತೊಟ್ಟ ಸನ್ನಣವು
ಉರಿಯಲ್ಕೆ(ತೊಟ್ಟ ಕವಚವು
ಉರಿಯುವುದಕ್ಕೆ
ಮೊದಲಾಗಲು)
ಒಡರಿಸಿದೊಡೆ ಅವಱ ಪರ್ವಂ
ಬಿಡೆಯರಿದು (ಆ ಕವಚಗಳ
ಜೋಡಣೆಯನ್ನು
ಬಿರಿಯುವಂತೆ ಬಿರಿಯುವಂತೆ
ಕತ್ತರಿಸಿ) ಅರಿ ಸಮಿತಿಯೊಡನೆ
ಕಾದಿದರ್ ಅರೆಬರ್/
ಅನೇಕರು (ಅನೇಕರು

ಶತ್ರುಸಮೂಹದೊಡನೆ ಕಾದಿದರು.)

ಪದ್ಯ-೨೯:ಅರ್ಥ:ಕತ್ತಿಗೆ ಕತ್ತಿತಾಗಿ, ಎಡಬಿಡದೆ ಉದುರುತ್ತಿರುವ ಕತ್ತಿಯ ಕಿಡಿಗಳಿಂದ ತಕ್ಷಣವೇ ಅರ್ಧ ಹತ್ತಿಕೊಂಡ ತೊಟ್ಟ ಕವಚವು ಉರಿಯುವುದಕ್ಕೆ ಮೊದಲಾಗಲು ಆ ಕವಚಗಳ ಜೋಡಣೆಯನ್ನು ಬಿರಿಯುವಂತೆ ಕತ್ತರಿಸಿ

ಅನೇಕರು

ಶತ್ರುಸಮೂಹದೊಡನೆ

ಕಾದಿದರು.

ಚಂ|| ಭುಗಭುಗನುರ್ಚಿ

ಪಾಯ್ವ ಬಿಸುನೆತ್ತರ

ಸುಟ್ಟುರೆಯಂ ನೆಲಕ್ಕೆ ಪ

ರ್ದುಗಳುಗಲೀಯದವ್ವಳಿಸಿ

ಪೀರ್ವಿನಮೊರ್ಮೆಯೆ ಪೊಯ್ವ

ಪೊಯ್ಗಳಿಂ|

ನೆಗೆದು

ಮುಗಿಲ್ಗಳಿಟ್ಟೆಡೆಗಳೊಳ್

ತಲೆಗಳ್ ತೊಡರ್ದಿರ್ದ

ಜೇನಪು

ಟ್ಟಿಗಳನೆ ಪೋಲ್ತುವೇಂ

ಕಲಹಮಚ್ಚರಿಯಾಯ್ತೊ

ತುರಂಗಸೈನ್ಯದೊಳ್|| ೮೦ ||

ಪದ್ಯ-೮೦:ಪದವಿಭಾಗ-

ಅರ್ಥ:ಭುಗಭುಗನೆ ಉರ್ಚಿ

ಪಾಯ್ವ ಬಿಸುನೆತ್ತರ

(ಭುಗುಭುಗನೆ ಎಡಬಿಡದೆ

ಉಕ್ಕಿ ಸುರಿಯುತ್ತಿರುವ

ಬಿಸಿರಕ್ತದ) ಸುಟ್ಟುರೆಯಂ

ನೆಲಕ್ಕೆ (ಸುಳಿಧಾರೆಯನ್ನು
ನೆಲಕ್ಕೆ ಬೀಳಲು ಬಿಡದಂತೆ)
ಪರ್ದುಗಳು ಉಗಲೀಯದೆ
ಅವ್ವಳಿಸಿ ಪೀರ್ವಿನಂ
(ಹದ್ದುಗಳು ಮೇಲಕ್ಕೆ ಹಾರಿ
ಹೀರುತ್ತಿರಲು) ಒರ್ಮೆಯೆ
ಪೊಯ್ವು ಪೊಯ್ಗಳಿಂ (ಒಂದೇ
ಸಲ ಹೊಡೆದ ಹೊಡತದಿಂದ)
ನೆಗೆದು ಮುಗಿಲ್ಗಳ್
ಇಟ್ಟೆಡೆಗಳೊಳ್ ತಲೆಗಳ್
ತೊಡರ್ದಿರ್ದು (ಹಾರಿ

ಮೋಡಗಳ ಸಂದುಗಳೊಳಕ್ಕೆ ಸಿಕ್ಕಿಕೊಂಡಿರುವ ತಲೆಗಳು) ಜೇನಪುಟ್ಟಿಗಳನೆ ಪೋಲ್ತುವು (ಜೇನಿನ ಗೂಡುಗಳನ್ನೇ ಹೋಲಿದುವು) ಏಂ ಕಲಹಂ ಅಚ್ಚರಿಯಾಯ್ತೊ ತುರಂಗ ಸೈನ್ಯದೊಳ್ (ಕುದುರೆಯ ಸೈನ್ಯದಲ್ಲಿ ಕಾಳಗವು ಎಷ್ಟು ಆಶ್ಚರ್ಯಕರವಾಯಿತೋ!)

ಪದ್ಯ-೮೦:ಅರ್ಥ:ಭುಗುಭುಗನೆ ಎಡಬಿಡದೆ ಉಕ್ಕಿ

ಸುರಿಯುತ್ತಿರುವ ಬಿಸಿರಕ್ತದ
ಸುಳಿಧಾರೆಯನ್ನು ನೆಲಕ್ಕೆ
ಬೀಳಲು ಬಿಡದಂತೆ ಹದ್ದುಗಳು
ಮೇಲಕ್ಕೆ ಹಾರಿ ಹೀರುತ್ತಿರಲು,
ಒಂದೇ ಸಲ ಹೊಡೆದ
ಹೊಡತದಿಂದ ಹಾರಿ
ಮೋಡಗಳ ಸಂದುಗಳೊಳಕ್ಕೆ
ಸಿಕ್ಕಿಕೊಂಡಿರುವ ತಲೆಗಳು
ಜೇನಿನ ಗೂಡುಗಳನ್ನೇ
ಹೋಲಿದುವು. ಕುದುರೆಯ

ಸೈನ್ಯದಲ್ಲಿ ಕಾಳಗವು ಎಷ್ಟು
ಆಶ್ಚರ್ಯಕರವಾಯಿತೋ!

ವ|| ಅಂತೆರಡುಂ ಬಲದ ದೞಿಂಗಳ್ ಕೋಲಾಟಮಾಡುವಂತೆ ಕಿಱಿದಾನುಂ ಬೇಗಂ ತಟ್ಟುಪೊಟ್ಟೆಂದು ಕೋಲ್ಕುಟ್ಟಿ ಪತ್ತೆಂಟು ಸಾಸಿರ ಕುದುರೆಯಟ್ಟೆಯುಮೇೞಿಂಟು ನೆತ್ತರ ಕಡಲ್ ಕಡಲನಟ್ಟೆಯುಂ ಕಾದಿ

ಬಸಮಱಿದು ಪೆಱಪಿಂಗಿ
ನಿಂದಾಗಳ್
ಪ್ರಳಯದುರಿಯನುರುಳಿ
ಮಾಡಿದಂತಾನುಂ
ಬಡವಾಗ್ನಿಯನನುವಿಸಿದಂತಾ
ನುಂ ಬಱಸಿಡಿಲ ಕಿಡಿಗಳ
ಬಳಗಮನೊಳಗು
ಮಾಡಿದಂತಾನುಂ ಗೊಂದಣಿಸಿ
ಸಂದಣಿಸಿ
ನಿಂದಣಿಯನೆರಡುಂ ಬಲದ
ಕಡಿತಲೆಯ ನಾಯಕರ್

ಕೆಯ್ಕೊಂಡು ಬಳ್ಳುಗೆಡೆದೆಕ್ಕೆವಾಱುವಾಱೆ ಪಲಗೆವಾಡಿ ಗೂಳಿಸೊರ್ಕಿ ಮಾರ್ಕೊಂಡು ಕಾದೆ-

ವಚನ:ಪದವಿಭಾಗ-

ಅರ್ಥ:ಅಂತು ಎರಡುಂ ಬಲದ ದೞಂಗಳ್ (ಎರಡು ಸೈನ್ಯದ ಸಾಮಾನ್ಯದಳಗಳೂ) ಕೋಲಾಟಮಾಡುವಂತೆ ಕಿಱಿದಾನುಂ ಬೇಗಂ (ಸ್ವಲ್ಪ ಹೊತ್ತು) ತಟ್ಟುಪೊಟ್ಟೆಂದು

ಕೋಲ್ಕುಟ್ಟಿ (ಥಾಟ್ ಪೆಟ್
ಎಂದು ಬಾಣಗಳಿಂದ
ಹೊಡೆದಾಡಲು) ಪತ್ತೆಂಟು
ಸಾಸಿರ ಕುದುರೆಯ
ಅಟ್ಟೆಯುಂ (ಹತ್ತೆಂಟುಸಾವಿರ
ಕುದುರೆಯ ಶರೀರಗಳು
ನಾಶವಾದವು.) ಏೞೆಂಟು
ನೆತ್ತರ ಕಡಲ್ ಕಡಲು
ಅಟ್ಟೆಯುಂ (ಏಳೆಂಟು ರಕ್ತದ
ಸಮುದ್ರಗಳು ಸಮುದ್ರವು
ಕುದುರೆಗಳ ಶರೀರವನ್ನು

ಮುಂದಕ್ಕೆ ನೂಕುವಂತೆ
ಹರಿದುವು) ಕಾದಿ
ಬಸಮೞಿದು ಪೆಱಪಿಂಗಿ
ನಿಂದಾಗಳ್ (ಸವಾರರು ಕಾದಿ
ಶಕ್ತಿಗುಂದಿ ಹಿಂಜರಿದು
ನಿಂದಾಗ) ಪ್ರಳಯದ
ಉರಿಯನು ಉರುಳಿ
ಮಾಡಿದಂತಾನುಂ
(ಪ್ರಳಯಕಾಲದ ಉರಿಯನ್ನು
ಉಂಡೆಮಾಡಿದ ಹಾಗೂ)
ಬಡವಾಗ್ನಿಯನು

ಅನುವಿಸಿದಂತಾನುಂ
(ಬಡಬಾಗ್ನಿಯನ್ನು
ಒಟ್ಟುಗೂಡಿಸಿದ ಹಾಗೂ)
ಬಱಸಿಡಿಲ ಕಿಡಿಗಳ
ಬಳಗಮನು ಒಳಗು
ಮಾಡಿದಂತಾನುಂ
(ಬರಸಿಡಿಲಿನ ಕಿಡಿಗಳ
ಸಮೂಹವನ್ನು ತನ್ನಲ್ಲಿ
ಸೇರಿಕೊಂಡ ಹಾಗೂ)
ಗೊಂದಣಿಸಿ ಸಂದಣಿಸಿ
ನಿಂದಣಿಯನು ಎರಡುಂ

ಬಲದ ಕಡಿತಲೆಯ

ನಾಯಕರ್ ಕೆಯ್ಕೊಂಡು

(ಗುಂಪಾಗಿ ಒಂದುಕೂಡಿ ನಿಂತ

ಎರಡೂ ಸೇನೆಯ ಮುಂದಿನ

ಸಾಲಿನ ನಾಯಕರು

ಯುದ್ಧವನ್ನು ಮಾಡಿ)

ಬಳ್ಳುಗೆಡೆದು

ಎಕ್ಕೆವಾಱುವಾಱಿ

(ನರಿಯಂತೆ ಕೂಗಿ ಒಂದೇ

ನೆಗೆತವನ್ನು ಹಾರಿ)

ಪಲಗೆವಾಡಿ ಗೂಳಿಸೊರ್ಕಿ

ಮಾರ್ಕೊಂಡು ಕಾದೆ (ಗುರಾಣಿ
- ಕತ್ತಿಗಳನ್ನು ಝಳಪಿಸಿ
ಹೋರಿಯಂತೆ ಸೊಕ್ಕಿನಿಂದ
ಪ್ರತಿಭಟಿಸಿ ಕಾದಿದರು.
ಕಾದಲು-)-
ವಚನ:ಅರ್ಥ: ಹಾಗೆ ಎರಡೂ
ಸೈನ್ಯದ ಸಾಮಾನ್ಯದಳಗಳೂ
ಕೋಲಾಟವಾಡುವ ಹಾಗೆ
ಸ್ವಲ್ಪ ಹೊತ್ತು ಥಾಟ್ ಪೆಟ್
ಎಂದು ಬಾಣಗಳಿಂದ
ಹೊಡೆದಾಡಲು

ಹತ್ತೆಂಟುಸಾವಿರ ಕುದುರೆಯ ಶರೀರಗಳು ನಾಶವಾದವು. ಏಳೆಂಟು ರಕ್ತದ ಸಮುದ್ರಗಳು ಸಮುದ್ರವು ಕುದುರೆಗಳ ಶರೀರವನ್ನು ಮುಂದಕ್ಕೆ ನೂಕುವಂತೆ ಹರಿದುವು. ಸವಾರರು ಕಾದಿ ಶಕ್ತಿಗುಂದಿ ಹಿಂಜರಿದು ನಿಂದಾಗ ಎರಡು ಪಕ್ಷದ ಕತ್ತಿಯ ನಾಯಕರು ಪ್ರಳಯಕಾಲದ ಉರಿಯನ್ನು ಉಂಡೆಮಾಡಿದ ಹಾಗೂ

ಬಡಬಾಗ್ನಿಯನ್ನು
ಒಟ್ಟುಗೂಡಿಸಿದ ಹಾಗೂ
ಬರಸಿಡಿಲಿನ ಕಿಡಿಗಳ
ಸಮೂಹವನ್ನು ತನ್ನಲ್ಲಿ
ಸೇರಿಕೊಂಡ ಹಾಗೂ
ಗುಂಪಾಗಿ ಒಂದುಕೂಡಿ ನಿಂತ
ಎರಡೂ ಸೇನೆಯ ಮುಂದಿನ
ಸಾಲಿನ ನಾಯಕರು
ಯುದ್ಧವನ್ನು ಮಾಡಿ
ನರಿಯಂತೆ ಕೂಗಿ ಒಂದೇ
ನೆಗೆತವನ್ನು ಹಾರಿ ಗುರಾಣಿ -

ಕತ್ತಿಗಳನ್ನು ಝಳಪಿಸಿ
ಹೋರಿಯಂತೆ ಸೊಕ್ಕಿನಿಂದ
ಪ್ರತಿಭಟಿಸಿ ಕಾದಿದರು.
ಕಾದಲು-

ಕಂ|| ಪುಸಿ ನಸುವಂಚನೆ
ನೋರ್ಪನು
ವಸಿದಗಲಿತು ತಕ್ಕುದಕ್ಕು ಪಗೆ
ಕೆಯ್ಬಗೆ ಕೆ|
ಯ್ಯುಸುರಿ ನುಸುಳೆಂಬ ಕೇಣದ
ಕುಸುರಿಯನಱಿದಱಿದು
ಮೆದು ನೆರೆದುಱಿದರೆಬರ್|| ೮೧

||

ಪದ್ಯ-೮೧:ಪದವಿಭಾಗ-ಅರ್ಥ:ಪುಸಿ, ನಸುವಂಚನೆ, ನೋರ್ಪ ಅನುವು (ಪುಸಿ, ನಸುವಂಚನೆ, ನೋಡುವ ನೋಟ,ಅನುವು ಅವವಕಾಶಕ್ಕೆ ಕಾಯುವುದು,) ಅಸಿದು ಅಗಲಿತು (ಹತ್ತಿರ ಮತ್ತ ದೂರಸರಿಯುವುದು,-ಅಸಿ-ಕೃಶ, ಅಗಲ-ದೂರ) ತಕ್ಕುದು ಅಕ್ಕು (ತಕ್ಕುದಾದುದು

ಸರಿಯಾದುದು,) ಪಗೆ ಕೆಯ್ಬಗೆ (ವಿರೋಧ, ಕೈಚಳಕ,) ಕೆಯ್ ಕಸುರಿ ನುಸುಳೆಂಬ ಕೇಣದ ಕುಸುರಿಯನು (ವಿರೋಧ, ಕೈಚಳಕ, ಕೈ ಚಮತ್ಕಾರ, ನುಸುಳುವಿಕೆ, ಎನ್ನುವ ವಿರೋಧಿಸುದ ಸೂಕ್ಷ್ಮ ವಿವರವನ್ನು) ಅಱಿದಱಿದು ಮೆದು ನೆರೆದು ಉಱದೆ ಅರೆಬರ್(ತಿಳಿದು ದಕ್ಷತೆಯಿಂದ ಹೊಡೆದು

ಕೆಲವರು
ಉತ್ಸಾಹಶೂನ್ಯರಾಗದೆ
ಹೊಯ್ದಾಡಿದರು.)
ಪದ್ಯ-೮೧:ಅರ್ಥ: ಪುಸಿ,
ನಸುವಂಚನೆ, ನೋಡುವ
ನೋಟ,ಅನುವು
ಅವಕಾಶಕ್ಕೆ ಕಾಯುವುದು,
ಹತ್ತಿರ ಮತ್ತ
ದೂರಸರಿಯುವುದು,
ತಕ್ಕುದಾದುದು
ಸರಿಯಾದುದು, ವಿರೋಧ,

ಕೈಚಳಕ, ಕೈ ಚಮತ್ಕಾರ,
ನುಸುಳುವಿಕೆ, ಎನ್ನುವ
ವಿರೋಧಿಸುದ ಸೂಕ್ಷ್ಮ
ವಿವರವನ್ನು ತಿಳಿದು
ದಕ್ಷತೆಯಿಂದ ಹೊಡೆದು
ಕೆಲವರು
ಉತ್ಸಾಹಶೂನ್ಯರಾಗದೆ
ಹೊಯ್ದಾಡಿದರು.

ಬಊಸಿಡಿಲೆಊಪಂತಿರೆ ಬಂ
ದೆಊಗಿದರಂ ತಳ್ತು ಬಾಳ
ಕೀಊೊ್ಮನೆಯಿಂ ತ

ಳ್ತಱಿದಱಿದುಬ್ಬರಮೆಂಬಿವ

ನಱಿದಿಱಿದಿರ್

ಪೆಣಬಣಂಬೆಗಳ್

ನೆಗೆವಿನೆಗಂ|| ೮೨||

ಪದ್ಯ-೮೨:ಪದವಿಭಾಗ-ಅರ್ಥ:ಬಱಿಸಿಡಿಲು ಎಱಿಪಂತಿರೆ ಬಂದು ಎಱಗಿದರಂ ತಳ್ತು (ಬರಸಿಡಿಲು ಮೇಲೆ ಬೀಳುವಂತೆ ಮೇಲೆ ಬಿದ್ದವರನ್ನು ತಾಗಿಕೊಂಡು)

ಬಾಳ ಕೀೞ್ಮೊನೆಯಿಂ
(ಕತ್ತಿಯ ಕೆಳತುದಿಯಿಂದ)
ತಳ್ತು ಅಱಿದೞ್ದು
(ಹತ್ತಿರಹೋಗಿ
ಚೂರುಚೂರಾಗಿ ತರಿದು)
ಉಬ್ಬರಮೆಂಬಿವಂ
ಅೞ್ದಿೞ್ದಿರ್;
(ಹೆಣದರಾಶಿಗಳು
ಉಂಟಾಗುವಂತೆ ,-
ಉತ್ಸಾಹದಿಂದ ಸಮುದ್ರದ?-
ಉಬ್ಬರವೆಂಬಂತೆ ಅರಿದು

ಇರಿದರು.) ಪೆಣಬಣಂಬೆಗಳ್ ನೆಗೆವಿನೆಗಂ (ಹೆಣದರಾಶಿಗಳು ಉಂಟಾಗುವಂತೆ,-)

ಪದ್ಯ-೮೨:ಅರ್ಥ:ಬರಸಿಡಿಲು ಮೇಲೆ ಬೀಳುವಂತೆ ಮೇಲೆ ಬಿದ್ದವರನ್ನು ತಾಗಿಕೊಂಡು ಕತ್ತಿಯ ಕೆಳತುದಿಯಿಂದ ಹತ್ತಿರಹೋಗಿ ಚೂರುಚೂರಾಗಿ ತರಿದು, (ಉತ್ಸಾಹದಿಂದ ಸಮುದ್ರದ?) ಉಬ್ಬರವೆಂಬಂತೆ ಅರಿದು

ಇರಿದರು. ಹೆಣದ ರಾಶಿಗಳು ಬೀಳುವವರೆಗೆ ಹೊಡೆದಾಡಿದರು.

ಚಾರಿಸಿ ಬಾಳಾಗಮಮವ
ತಾರಂ ಗೆಯ್ದಂತೆ
ಕಾಲದಂತಕನನೆ ಪೋ।
ಲ್ತಾರುತ್ತುಂ ಕವಿವದಟರ
ನೋರೊಂದೋರೊಂದವೊ
ಯ್ದು ಕೊಂದರ್ ಪಲರಂ॥ ೮೩
॥

ಪದ್ಯ-೮೩:ಪದವಿಭಾಗ-ಅರ್ಥ:ಚಾರಿಸಿ(ಝಳಪಿಸಿ) ಬಾಳ ಆಗಮಂ ಅವತಾರಂ ಗೆಯ್ದಂತೆ (ಶಸ್ತ್ರಶಾಸ್ತ್ರವೇ ಅವತಾರಮಾಡಿದ ಹಾಗೆ ಕತ್ತಿಯನ್ನು ಝಳಪಿಸಿ) ಕಾಲದ ಅಂತಕನನೆ ಪೋಲ್ತು (ಪ್ರಳಯಕಾಲದ ಯಮನ ಹಾಗೆ) ಆರುತ್ತುಂ ಕವಿವ ಅದಟರನು ಓರೊಂದು ಓರೊಂದೆ (ಆರ್ಭಟ ಮಾಡುತ್ತ

ಮೇಲೆ ಬೀಳುವ ಒಬ್ಬರಾದ ಮೇಲೆ ಒಬ್ಬರಂತೆ) ವೊಯ್ದು ಕೊಂದರ್ ಪಲರಂ (ಅನೇಕರನ್ನು ಹೊಡೆದು ಕೊಂದರು.)

ಪದ್ಯ-೮೩:ಅರ್ಥ:ಶಸ್ತ್ರಶಾಸ್ತ್ರವೇ ಅವತಾರಮಾಡಿದ ಹಾಗೆ ಕತ್ತಿಯನ್ನು ಝಳಪಿಸಿ ಪ್ರಳಯಕಾಲದ ಯಮನ ಹಾಗೆ ಆರ್ಭಟ ಮಾಡುತ್ತ ಮೇಲೆ ಬೀಳುವ

ಪರಾಕ್ರಮಶಾಲಿಗಳನ್ನು
ಒಬ್ಬರಾದ ಮೇಲೆ ಒಬ್ಬರಂತೆ
ಅನೇಕರನ್ನು ಹೊಡೆದು
ಕೊಂದರು.

ಬಾಳ್ವಾಳ್ಗಳ ಘಟ್ಟಣೆಯೊಳ್
ಬಳ್ವಳ ಬಳೆದೊಗೆದು ನೆಗೆದ
ಕಿಡಿಗಳ ಬಂಬ|
ಲ್ಗಳ್ವೆರಸು ಪೊಳೆದು ನೆಗೆದುದು
ಬಾಳ್ಪೊಗೆ ಕಾಱಮುಗಿಲ್
ಬಳ್ಳಿಮಿಂಚಿನಿಂದುಳ್ಕುವವೋ
ಲ್|| ೮೪||

ಪದ್ಯ-೮೪:ಪದವಿಭಾಗ-ಅರ್ಥ:ಬಾಳ್ (ವ) ಬಾಳ್ಗಳ ಘಟ್ಟಣೆಯೊಳ್ ಬಳ್ವಳ (ಕತ್ತಿಕತ್ತಿಗಳ ಹೊಡೆತದಿಂದ ಬಹಳ) ಬಳೆದು ಒಗೆದು (ಬೆಳೆದು ಹುಟ್ಟಿ ಹೆಚ್ಚಿ) ನೆಗೆದ ಕಿಡಿಗಳ (ಮೇಲಕ್ಕೆ ಹಾರಿದ ಕಿಡಿಗಳ) ಬಂಬಲ್ಗಳ್ ವೆರಸು ಪೊಳೆದು (ಸಮೂಹದಿಂದ ಕೂಡಿ ಹೊಳೆದು) ನೆಗೆದುದು ಬಾಳ್ವೊಗೆ (ಹೊಳೆದು ಕತ್ತಿಯ

ಹೊಗೆಯು- - - ಹಾರಿತು,)
ಕಾಱಮುಗಿಲ್
ಬಳ್ಳಿಮಿಂಚಿನಿಂದೆ
ಉಳ್ಕುವವೋಲ್
(ಮಳೆಗಾಲದ ಮೋಡವು
ಬಳ್ಳಿಮಿಂಚಿನಿಂದ
ಪ್ರಕಾಶಿಸುವ ಹಾಗೆ ಹೊಳೆದು
ಮೇಲಕ್ಕೆ ಹಾರಿತು.)
ಪದ್ಯ-೮೪:ಅರ್ಥ: ಕತ್ತಿಕತ್ತಿಗಳ
ಹೊಡೆತದಿಂದ ಬಹಳ ಹುಟ್ಟಿ
ಹೆಚ್ಚಿ ಮೇಲಕ್ಕೆ ಹಾರಿದ

ಕಿಡಿಗಳ ಸಮೂಹದಿಂದ ಕೂಡಿ
ಹೊಳೆದು ಕತ್ತಿಯ ಹೊಗೆಯು
ಮಳೆಗಾಲದ ಮೋಡವು
ಬಳ್ಳಿಮಿಂಚಿನಿಂದ
ಪ್ರಕಾಶಿಸುವ ಹಾಗೆ ಹೊಳೆದು
ಮೇಲಕ್ಕೆ ಹಾರಿತು.

**ತಲೆ ನೆಲದೊಳುರುಳ್ದೊಡಂ ಮೆ
ಯ್ಗಲಿಯೊರ್ವಂ ಪಿಡಿದು
ತಲೆಯನಿಟ್ಟಟ್ಟೆಯೊಳ|
ಗ್ಗಲಿಸಿದ ಮುಳಿಸಿಂ ಮಾಟದ**

ತಲೆಯಿಟ್ಟಾಡುವನನಿನಿಸು ಪೋಲ್ತನುಗೆಯ್ದಂ|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ:ತಲೆ ನೆಲದೊಳು ಉರುಳ್ದೊಡಂ (ತಲೆಯು ನೆಲದಲ್ಲಿ ಉರುಳಿದರೂ) ಮೆಯ್ಗಲಿಯೊರ್ವಂ (ಮೆಯ್ ಕಲಿಯೊರ್ವಂ- ಶೂರನೊಬ್ಬನು) ಪಿಡಿದು ತಲೆಯನು (ಆ ತಲೆಯನ್ನು ಹಿಡಿದು) ಇಟ್ಟಟ್ಟೆಯೊಳು

ಅಗ್ಗಲಿಸಿದ ಮುಳಿಸಿಂ (ಮುಂಡದಲ್ಲಿಟ್ಟುಕೊಂಡು ಅಧಿಕವಾದ ಕೋಪದಿಂದ) ಮಾಟದ ತಲೆಯಿಟ್ಟಾಡುವ (ಕೃತಕವಾದ ತಲೆಯನ್ನು ಧರಿಸಿ ಆಟವಾಡುವ) ಅನನು ಇನಿಸು ಪೋಲ್ತನುಗೆಯ್ದಂ (ಅವನನ್ನು ಸ್ವಲ್ಪಮಟ್ಟಿಗೆ ಅನುಕರಿಸಿ ಕಾದಿದನು.)

ಪದ್ಯ-೮೫:ಅರ್ಥ: ತಲೆಯು ನೆಲದಲ್ಲಿ ಉರುಳಿದರೂ

ಶೂರನೊಬ್ಬನು ಆ ತಲೆಯನ್ನು ಹಿಡಿದು ಮುಂಡದಲ್ಲಿಟ್ಟುಕೊಂಡು ಅಧಿಕವಾದ ಕೋಪದಿಂದ ಕೃತಕವಾದ ತಲೆಯನ್ನು ಧರಿಸಿ ಆಟವಾಡುವ ಅವನನ್ನು ಸ್ವಲ್ಪಮಟ್ಟಿಗೆ ಅನುಕರಣೆಮಾಡಿ ಕಾದಿದನು.

ವ|| ಅಂತಣಿ ಮಣಿಯದೆ ಸೆಣಸಿ ಪೊಣರ್ದು

ಕಿಱುಪೊೞ್ತು ಕಾದಿ ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ವ|| ಅಂತು ಅಣಿ (ಹಾಗೆ ಸೇನೆಯ ಸಾಲು) ಮಣಿಯದೆ ಸೆಣಸಿ ಪೊಣರ್ದು (ಭಯಪಡದೆ ಮತ್ಸರಿಸಿ ಹೋರಾಡಿ) ಕಿಱಿದು ಪೊೞ್ತು ಕಾದಿ ನಿಂದಾಗಳ್ (ಸ್ವಲ್ಪ ಕಾಲ ಕಾದಿ ನಿಂತಾಗ)-

ವಚನ:ಅರ್ಥ: ಹಾಗೆ ಸೇನೆಯ ಸಾಲು ಭಯಪಡದೆ ಮತ್ಸರಿಸಿ ಹೋರಾಡಿ ಸ್ವಲ್ಪ ಕಾಲ ಕಾದಿ ನಿಂತಾಗ-

ಉ|| ಮಾರುತ ಘಾತ ಸಂಚಳಿತ ಕೇತು ಸಮೂಹಮುದಗ್ರ ಚಕ್ರ ಚೀ ತ್ಕಾರಮುದಾರ ವೀರಭಟ ಸಿಂಹನಿನಾದ ವಿಮಿಶ್ರಿತೋತ್ಕಟ|

ಜ್ಯಾರಾವಮಂಬರತರಮನಳ್ಳಿ

ಱಿದವ್ವಳಿಪನ್ನೆಗಂ ಶಾರಾ

ಸಾರದಗುರ್ವುಱ್ ಪರ್ವಿನಿಲೆ

ತಾಗಿದುವುಗ್ರರಥಂ

ರಥಾಳಿಯೊಳ್|| ೮೬ ||

ಪದ್ಯ-೮೬:ಪದವಿಭಾಗ-

ಅರ್ಥ:ಮಾರುತ ಘಾತ

ಸಂಚಳಿತ ಕೇತು ಸಮೂಹಂ

(ಗಾಳಿಯ ಹೊಡೆತದಿಂದ

ಚಲಿಸುತ್ತಿರುವ ಬಾವುಟಗಳ

ಸಮೂಹವೂ) ಉದಗ್ರ ಚಕ್ರ

ಚೀತ್ಕಾರಮಂ (ಎತ್ತರವಾದ
ಚಕ್ರಗಳ ಚೀತ್ಕಾರ ಶಬ್ದವೂ)
ಉದಾರ ವೀರಭಟ
ಸಿಂಹನಿನಾದ (ಶ್ರೇಷ್ಠರಾದ
ವೀರಭಟರ ಸಿಂಹನಾದದಿಂದ)
ವಿಮಿಶ್ರಿತ ಉತ್ಕಟ ಜ್ಯಾ
ರಾವಂ (ಕೂಡಿದ
ಅತಿಶಯವಾದ ಬಿಲ್ಲಿನ
ಹೆದೆಯ ಟಂಕಾರಧ್ವನಿಯೂ)
ಅಂಬರತರಮನು ಅಳ್ಳಿಱಿದು
ಅವ್ವಳಿಪ ಅನ್ನೆಗಂ

(ಆಕಾಶಪ್ರದೇಶವನ್ನು
ನಡುಗುವಂತೆ ಮಾಡಿ
ಅಪ್ಪಳಿಸುತ್ತಿರಲು/
ಮುನ್ನುಗ್ಗುತ್ತಿರಲು.) ಶಾರ
ಆಸಾರದ ಅಗುರ್ವು
ಪರ್ವಿನಿಲೆ (ಶರ ಆಸಾರದ
ಬಾಣದ ಮಳೆಯು ಭೀಕರತೆ
ಹಬ್ಬು ಹಬ್ಬಿ ನಿಲ್ಲಲು.)
ತಾಗಿದುವು ಉಗ್ರರಥಂ
ರಥಾಳಿಯೊಳ್
(ಭಯಂಕರವಾದ ರಥಗಳು

ರಥಸಮೂಹದೊಡನೆ
ತಾಗಿದುವು- ಎದುರಾಗಿ
ಹೋರಾಡಿದವು.)
ಪದ್ಯ-೮೬:ಅರ್ಥ:ಗಾಳಿಯ
ಹೊಡೆತದಿಂದ ಚಲಿಸುತ್ತಿರುವ
ಬಾವುಟಗಳ ಸಮೂಹವೂ,
ಎತ್ತರವಾದ ಚಕ್ರಗಳ ಚೀತ್ಕಾರ
ಶಬ್ದವೂ, ಶ್ರೇಷ್ಠರಾದ
ವೀರಭಟರ ಸಿಂಹನಾದದಿಂದ
ಕೂಡಿದ ಅತಿಶಯವಾದ
ಬಿಲ್ಲಿನ ಹೆದೆಯ

ಟಂಕಾರಧ್ವನಿಯೂ
ಆಕಾಶಪ್ರದೇಶವನ್ನು
ನಡುಗುವಂತೆ ಮಾಡಿ
ಅಪ್ಪಳಿಸುತ್ತಿರಲು/
ಮುನ್ನುಗ್ಗುತ್ತಿರಲು. ಬಾಣದ
ಮಳೆಯು ಭೀಕರತೆ ಹಬ್ಬು
ಹಬ್ಬಿ ನಿಲ್ಲಲು.
ಭಯಂಕರವಾದ ರಥಗಳು
ರಥಸಮೂಹದೊಡನೆ
ತಾಗಿದುವು- ಎದುರಾಗಿ
ಹೋರಾಡಿದವು..

ವ|| ಅಂತು ತಾಗಿದಾಗಳ್

ವಚನ:ಅರ್ಥ: ವ||

ಎದುರಾಗಿ ಹೋರಾಡಿದಾಗ-

ಚಂ|| ಕುದುರೆಯ ಬಣ್ಣದಿಂ

ರಥದ ತೋರ್ಕೆಯಿನೆತ್ತಿದ

ಚಿತ್ರಕೇತು ವೃಂ

ದದ ಕುಱುಪಿಂದುದಗ್ರ

ರಥಚೋದಕ

ಚಿಹ್ನದಿನಾತನೀತನೆಂ|

ಬುದನಱಿದೊರ್ವರೊರ್ವರನೆ

ಮಚ್ಚರದಿಂ ಗಱಿಸನ್ನೆಗೆಯ್ದಿದಿ

ರ್ಚಿದ ಪದದೊಳ್ ಪತತ್ರಿಮಯಮೆಂಬಿನಿತಾಯ್ತು ಸಮಸ್ತ ದಿಕ್ತಟಂ|| ೮೭ ||

ಪದ್ಯ-೮೭:ಪದವಿಭಾಗ-

ಅರ್ಥ:ಕುದುರೆಯ ಬಣ್ಣದಿಂ ರಥದ ತೋರ್ಕೆಯಿಂ ಎತ್ತಿದ ಚಿತ್ರಕೇತು ವೃಂದದ ಕುಋಪಿಂದ (ಕುದುರೆಯ ಬಣ್ಣದಿಂದಲೂ ರಥಗಳ ತೋರಿಕೆಯಿಂದಲೂ ಎತ್ತಿ ಕಟ್ಟಿರುವ ಚಿತ್ರಖಚಿತವಾದ

ಧ್ವಜಗಳ ಗುರುತಿನಿಂದಲೂ)
ಉದಗ್ರ ರಥಚೋದಕ
ಚಿಹ್ನದಿಂ ಆತನು
ಈತನೆಂಬುದನು ಅಱಿದು
(ಶ್ರೇಷ್ಠರಾದ ಸಾರಥಿಗಳ
ಚಿಹ್ನೆಗಳಿಂದಲೂ ಅವನು
ಇವನೇ ಎಂಬುದನ್ನ ಗುರುತು
ಹಿಡಿದು), ಒರ್ವರೊರ್ವರನೆ
ಮಚ್ಚರದಿಂ ಗಱಿ ಸನ್ನೆಗೆಯ್ದು
ಇದಿರ್ಚಿದ ಪದದೊಳ್
(ಒಬ್ಬರನೊಬ್ಬರು

ಮತ್ಸರದಿಂದ ಬಾಣದ ಗರಿಯ ಮೂಲಕ ಸನ್ನೆಮಾಡಿ ಎದುರಿಸಿದ ಸಂದರ್ಭದಲ್ಲಿ) ಪತತ್ರಿಮಯಂ ಎಂಬಿನಿತಾಯ್ತು ಸಮಸ್ತ ದಿಕ್ತಟಂ (ಸಮಸ್ತವಾದ ದಿಕ್ತಟವೂ ಬಾಣಮಯವೆನ್ನುವ ಹಾಗಾಯಿತು.)

ಪದ್ಯ-೮೭:ಅರ್ಥ:ಕುದುರೆಯ ಬಣ್ಣದಿಂದಲೂ ರಥಗಳ

ಲಕ್ಷಣದಿಂದಲೂ, ಎತ್ತಿ
ಕಟ್ಟಿರುವ ಚಿತ್ರಖಚಿತವಾದ
ಧ್ವಜಗಳ ಗುರುತಿನಿಂದಲೂ,
ಶ್ರೇಷ್ಠರಾದ ಸಾರಥಿಗಳ
ಚಿಹ್ನೆಗಳಿಂದಲೂ ಪರಸ್ಪರ
ಪರಿಚಯ ಮಾಡಿಕೊಂಡು
(ಗುರುತು ಹಿಡಿದು)
ಒಬ್ಬರನೊಬ್ಬರು ಮತ್ಸರದಿಂದ
ಬಾಣದ ಗರಿಯ ಮೂಲಕ
ಸನ್ನೆಮಾಡಿ ಎದುರಿಸಿದ
ಸಂದರ್ಭದಲ್ಲಿ ಸಮಸ್ತವಾದ

ದಿಕ್ತಟವೂ

ಬಾಣಮಯವೆನ್ನುವ

ಹಾಗಾಯಿತು.

ಕಂ|| ಪರಶು ಶರ ನಿಕರದಿಂ ಕು

ಮ್ಮರಿಗಡಿದವೊಲೊಡನೆ

ಕಡಿಯೆ ರಥಿಗಳ್ ರಥದಿಂ|

ಧರೆಗೞಿದು ವಿರಥರತಿರಥ

ರರೆಬರ್ ಮೇಲ್ವಾಯ್ದು

ರಥಿಗಳಂ ಸುರಿಗೆಱಿದರ್|| ೮೮

||

ಪದ್ಯ-೮೮:ಪದವಿಭಾಗ-ಅರ್ಥ:ಪರಶು ಶರ ನಿಕರದಿಂ ಕುಮ್ಮರಿಗಡಿದವೊಲ್ (ಕೊಡಲಿಯಿಂದ ಕಾಡಿನ ಮರಗಳನ್ನು ಕಡಿಯುವಂತೆ, ಬಾಣಗಳ ಸಮೂಹದಿಂದ) ಒಡನೆ ಕಡಿಯೆ(ಬಾಣಗಳ ಸಮೂಹದಿಂದ ತಕ್ಷಣವೇ ಸೈನ್ಯವನ್ನು ತರಿದು ಹಾಕಲು) ರಥಿಗಳ್ ರಥದಿಂ ಧರೆಗಿಟಿದು(ರಥದಲ್ಲಿದ್ದವರು

ಭೂಮಿಗಿಳಿದು) ವಿರಥರು ಅತಿರಥರು ಅರೆಬರ್ (ರಥವಿಲ್ಲದವರು, ಅನೇಕ ಅತಿರಥರು) ಮೇಲ್ವಾಯ್ದು ರಥಿಗಳಂ ಸುರಿಗಿಱಿದರ್ (ಮೇಲೆ ಬಿದ್ದು ರಥದಲ್ಲಿದ್ದವರನ್ನು ಕತ್ತಿಯಿಂದ ಕತ್ತರಿಸಿದರು).

ಪದ್ಯ-೮೮:ಅರ್ಥ:ಕೊಡಲಿ ಯಿಂದ ಕಾಡಿನ ಮರಗಳನ್ನು ಕಡಿಯುವಂತೆ, ಬಾಣಗಳ

ಸಮೂಹದಿಂದ ತಕ್ಷಣವೇ
ಸೈನ್ಯವನ್ನು ತರಿದು ಹಾಕಲು
ರಥದಲ್ಲಿದ್ದವರು
ಭೂಮಿಗಿಳಿದು
ರಥವಿಲ್ಲದವರು, ಅನೇಕ
ಅತಿರಥರು ಮೇಲೆ ಬಿದ್ದು
ರಥದಲ್ಲಿದ್ದವರನ್ನು ಕತ್ತಿಯಿಂದ
ಕತ್ತರಿಸಿದರು.

ತೇರಂ ಪಾಯಿಸಿ ನೋಯಿಸಿ ಪಾರುವ ಕುದುರೆಗಳನರೆಬರೆರ್ದೆಯುರಿ

ಯೆಚ್ಚರ್|

ಸಾರಥಿಯ ರಥಿಯ ತಲೆಗಳ

ನೋರೊಂದಸ್ತ್ರದೊಳೆ ಪಾಱ

ಜೀೞ್ವನೆಗಂ|| ೮೯ ||

ಪದ್ಯ-೮೯:ಪದವಿಭಾಗ-

ಅರ್ಥ:ತೇರಂ ಪಾಯಿಸಿ

ನೋಯಿಸಿ ಪಾರುವ

ಕುದುರೆಗಳನು

ಅರೆಬರ್(ಕೆಲವರು ತೇರನ್ನು

ಹರಿಯಿಸಿ ಶತ್ರುಗಳನ್ನು

ನೋಯಿಸಿ ಹಾರುತ್ತಿರುವ

ಕುದುರೆಗಳನ್ನು ಕೆಲವರು)
ಎರ್ದೆಯುರಿಯೆ ಎಚ್ಚರ್
(ಎದೆಯುರಿಯುವಂತೆ
ಹೊಡೆದರು.) ಸಾರಥಿಯ
ರಥಿಯ ತಲೆಗಳನು ಓರಂದು
ಅಸ್ತ್ರದೊಳೆ (ಸಾರಥಿಯನ್ನು
ಮತ್ತು ರಥದೊಳಗಿರುವವ
ಯೋಧನನ್ನು ಒಂದೊಂದು
ಬಾಣದಿಂದ ತಲೆಯು) ಪಾಱೆ
ಜೇಱ್ ಅವೆನೆಗಂ (ಹಾರಿ

ಜೀರೆಂದು ಶಬ್ದ ಮಾಡುವ ಹಾಗೆ ಹೊಡೆದರು.)

ಪದ್ಯ-೮೯:ಅರ್ಥ: ಕೆಲವರು ತೇರನ್ನು ಹರಿಯಿಸಿ ಶತ್ರುಗಳನ್ನು ನೋಯಿಸಿ ಹಾರುತ್ತಿರುವ ಕುದುರೆಗಳನ್ನು ಕೆಲವರು ಎದೆಯುರಿಯುವಂತೆ ಹೊಡೆದರು. ಸಾರಥಿಯನ್ನು ಮತ್ತು ರಥದೊಳಗಿರುವವ ಯೋಧನನ್ನು ಒಂದೊಂದು

ಬಾಣದಿಂದ ತಲೆಯು ಹಾರಿ ಜೀರೆಂದು ಶಬ್ದ ಮಾಡುವ ಹಾಗೆ ಹೊಡೆದರು.

ನೆತ್ತರ ಕೆಸರೊಳ್ ಗಾಲಿಗ
ಳೆತ್ತಂ ತಳರದೆ ಜಿಗಿಲ್ತು ನಿಲೆ
ಧರೆಗಿೞಿದಾ|
ರ್ದೆತ್ತಿ ಪರಿಯಿಸಿದರೇಂ ಮೆ
ಯ್ವೆತ್ತುದೊ ರಥಕಲ್ಪಮಲ್ಲಿ
ಸೂತರ್ ಕೆಲಬರ್|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ:ನೆತ್ತರ ಕೆಸರೊಳ್

ಗಾಲಿಗಳು ಎತ್ತಂ ತಳರದೆ
ಜಿಗಿಲ್ತು ನಿಲೆ (ರಕ್ತದ ಕೆಸರಿನಲ್ಲಿ
ಚಕ್ರಗಳು ಹೂತುಹೋಗಿ
ಯಾವ ಕಡೆಯೂ ಚಲಿಸದೆ
ಅಂಟಿಕೊಂಡು ನಿಲ್ಲಲು) ಧರೆಗೆ
ಇೞಿದು ಆರ್ದು ಎತ್ತಿ
ಪರಿಯಿಸಿದರು
(ಭೂಮಿಗಿಳಿದು
ಆರ್ಭಟಮಾಡಿ ಕೆಲವರು
ಸೂತರು ಎತ್ತಿ ಹರಿಯುವ
ಹಾಗೆ ಮಾಡಿದರು) ಏಂ

ಮೆಯ್ವೆತ್ತುದೊ ರಥಕಲ್ಪಂ (ಸಾರಥಿ ವಿದ್ಯೆ) ಅಲ್ಲಿ ಸೂತರ್ ಕೆಲಬರ್ (ಸಮಯದಲ್ಲಿ ಅಲ್ಲಿ ಅವರ ರಥಸಾರಥ್ಯ ಕೌಶಲವು ಅದ್ಭುತವಾಗಿ ತೋರಿತೊ!)

ಪದ್ಯ-೬೦:ಅರ್ಥ: ರಕ್ತದ ಕೆಸರಿನಲ್ಲಿ ಚಕ್ರಗಳು ಹೂತುಹೋಗಿ ಯಾವ ಕಡೆಯೂ ಚಲಿಸದೆ ಅಂಟಿಕೊಂಡು ನಿಲ್ಲಲು ಭೂಮಿಗಿಳಿದು ಆರ್ಭಟಮಾಡಿ

ಕೆಲವರು ಸೂತರು ಎತ್ತಿ
ಹರಿಯುವ ಹಾಗೆ ಮಾಡಿದರು.
ಆ ಸಮಯದಲ್ಲಿ ಅಲ್ಲಿ ಅವರ
ರಥಸಾರಥ್ಯ ಕೌಶಲವು
ಅದ್ಭುತವಾಗಿ ತೋರಿತೊ!

ವ|| ಅಂತುಭಯ ವರೂಥಿನಿಯ ವರೂಥಂಗಳ್ ಮಲ್ಲಾಮಲ್ಲಿಯಾಗೆ ಕಾದುವಾಗಳ್-

ವಚನ:ಪದವಿಭಾಗ-ಅರ್ಥ:

ಅಂತು ಉಭಯ

ವರೂಥಿನಿಯ ವರೂಥಂಗಳ್ (ಎರಡೂ ರಥಸೈನ್ಯದ ರಥಗಳು) ಮಲ್ಲಾಮಲ್ಲಿಯಾಗೆ ಕಾದುವಾಗಳ್ (ಪರಸ್ಪರ ಎದುರು ಎದುರಾಗಿ ಯುದ್ಧ ಮಾಡುತ್ತಿರಲು)-

ವಚನ:ಅರ್ಥ:ಹಾಗೆ ಎರಡೂ ರಥಸೈನ್ಯದ ರಥಗಳು ಪರಸ್ಪರ ಎದುರು ಎದುರಾಗಿ ಯುದ್ಧ ಮಾಡುತ್ತಿರಲು-

ಮ|| ಉಡಿದಿರ್ದಚ್ಚುಱಿದೀಸು
ತೞ್ಗಿದ ನೊಗಂ ಜೀರ್ಬ್ದಿ ಚಕ್ರಂ
ಸಿಡಿಲ್
ಪೊಡೆದಂತೊರ್ಮೆಯೆ ಸೂಸಿ
ಪಾಱಿದ ಮಡಂ ನುರ್ಗಾದ
ಕೀಲ್ ಸಾಯಕಂ|
ನಡೆ ನೊಂದೆಯ್ದೆ ಸುರುಳ್ದುರುಳ್ದ
ತುರಗಂ ಸುರ್ಕಿರ್ದ ಸೂತಂ
ಕಡಲ್
ಕಡಲಂ ಮುಟ್ಟೆ ತೆರಳ್ವ ನೆತ್ತರ
ಪೊನಲ್

ಕಣ್ಗೊಂಡುದುಗ್ರಾಜಿಯೊಳ್|| ೯೧ ||

ಪದ್ಯ-೯೧:ಪದವಿಭಾಗ-ಅರ್ಥ:ಉಡಿದಿರ್ದ ಅಚ್ಚು ಅಱಿದ ಈಸು (ಒಡೆದುಹೋದ ಗಾಲಿಯಕೇಂದ್ರದ ಅಚ್ಚಿನ ಗುಂಭವೂ ಮುರಿದ ಎರಡು ಗಾಲಿ ಜೋಡಿಸಿದ ಈಸು - ಕಬ್ಬಿಣದ ಹಾರೆ) ತಱ್ಗಿದ ನೊಗಂ ಜೀಽಿದ ಚಕ್ರಂ (ತಗ್ಗಿಹೋದ ನೊಗವೂ,

ಜೀರೆಂದು ಶಬ್ದಮಾಡುತ್ತಿರುವ
ಚಕ್ರಗಳು) ಸಿಡಿಲ್ ಪೊಡೆದಂತೆ
ಒರ್ಮೆಯೆ ಸೂಸಿ ಪಾಱಿದ
ಮಡಂ (ಸಿಡಿಲು ಹೊಡೆದ
ಹಾಗೆ ಒಂದೇ ಸಲ ಹಾರಿದ
ಹಾರೆಯ ದಿಂಡೂ) ನುರ್ಗಾದ
ಕೀಲ್ (ಜಜ್ಜಿಹೋದ ಗಾಲಿ
ಹೊರಕ್ಕೆ ಜಾರದಂತೆ ಹಾಕಿದ
ಕೀಲು,) ಸಾಯಕಂ ನಡೆ
ನೊಂದು ಎಯ್ದೆ(ಬಹಳ)
ಸುರುಳ್ದುರುಳ್ದ ತುರಗಂ

(ಇಷ್ಟಲ್ಲದೆ ಬಾಣವು
ನಾಟಲಾಗಿ ನೊಂದು ಬಹಳ
ಸೊರಗಿಕೊಂಡು ಬಿದ್ದ
ಕುದುರೆ,) ಸುರ್ಕಿರ್ದ ಸೂತಂ
ಕಡಲ್ಕಡಲಂ ಮುಟ್ಟಿ ತೆರಳ್ವ
ನೆತ್ತರ ಪೊನಲ್ (ಸಮುದ್ರವು
ಸಮುದ್ರವನ್ನು ಮುಟ್ಟುವಂತೆ
ಹರಿಯುವ ರಕ್ತಪ್ರವಾಹವು)
ಕಣ್ಗೊಂಡುದು ಉಗ್ರ
ಆಜಿಯೊಳ್ (ಭಯಂಕರ
ಯುದ್ಧದಲ್ಲಿ ಕಣ್ಣಿಗೆ ಕಂಡವು.)

ಪದ್ಯ-೯೧:ಅರ್ಥ:ಒಡೆದು ಹೋದ ಗಾಲಿಯಕೇಂದ್ರದ ಅಚ್ಚಿನ ಗುಂಭವೂ ಮುರಿದ ಎರಡು ಗಾಲಿ ಜೋಡಿಸಿದ ಈಸು - ಕಬ್ಬಿಣದ ಹಾರೆ, ತಗ್ಗಿಹೋದ ನೊಗವೂ, ಜೀರೆಂದು ಶಬ್ದಮಾಡುತ್ತಿರುವ ಚಕ್ರಗಳೂ ಸಿಡಿಲು ಹೊಡೆದ ಹಾಗೆ ಒಂದೇ ಸಲ ಹಾರಿದ ಹಾರೆಯ ದಿಂಡೂ, ಜಜ್ಜಿಹೋದ ಕೀಲು, ಇಷ್ಟಲ್ಲದೆ

ಬಾಣವು ನಾಟಲಾಗಿ ನೊಂದು ಬಹಳ ಸೊರಗಿಕೊಂಡು ಬಿದ್ದ ಕುದುರೆಯು, ಸಮುದ್ರವು ಸಮುದ್ರವನ್ನು ಮುಟ್ಟುವಂತೆ ಹರಿಯುವ ರಕ್ತಪ್ರವಾಹವು, ಭಯಂಕರ ಯುದ್ಧದಲ್ಲಿ ಕಣ್ಣಿಗೆ ಕಂಡವು.

ವ|| ಅಂತು ಪತ್ತೆಂಟು ನೆತ್ತರ ಕಡಲ್ ಕಡಲನಟ್ಟೆಯುಂ ವರೂಥಯೂಥಂಗಳಳ್ಕಿ ಮೆಳ್ಕಿದಂತಾದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ಪತ್ತೆಂಟು (ಹತ್ತೆಂಟು) ನೆತ್ತರ ಕಡಲ್ ಕಡಲನು- (ಮೀರಿಸಿತು,) ಅಟ್ಟೆಯುಂ ವರೂಥಯೂಥಂಗಳು (ಮುಂಡಗಳು ರಥಸಮೂಹಗಳು) ಅಳ್ಕಿ ಮೆಳ್ಕಿದಂತೆ ಆದಾಗಳ್- (ಅಳಿದು ನಾಶವಾದಂತೆ ಆಗಲು)-

ವಚನ:ಅರ್ಥ: ಹಾಗೆ
ಹತ್ತೆಂಟು ರಕ್ತ ಸಮುದ್ರವು
ಸಮುದ್ರವನ್ನು ಮೀರಿಸಿತು,
ಮುಂಡಗಳು
ರಥಸಮೂಹಗಳು ಅಳಿದು
ನಾಶವಾದಂತೆ ಆಗಲು.

ಉ|| ಇಕ್ಕಿದ ಲೋಹವಕ್ಕರೆಯ ಕರ್ಪುಗಳಿಂ ಕವಿತರ್ಪ ವಿಂಧ್ಯ ಶೈ ಲಕ್ಕೆಣೆಯಾಗೆ ಜೋದರಿಸುವಂಬಿನ ಬಲ್ಸರಿ

ತಿಣ್ಣಮಾಗಿ ಕೆ|

ಯ್ಮಿಕ್ಕು ವಿರೋಧಿ ಸಾಧನ

ಘಟಾಳಿಯನೋಡಿಸಲಾಗಳಾ

ರ್ದು ಬಿ

ಟ್ಟಕ್ಕಿದರುಗ್ರ ಸಿಂಧುರ

ಘಟಾವಳಿಯಂ ಮುಳಿಸಿಂ

ನಿಷಾದಿಗಳ್|| ೯೨ ||

ಪದ್ಯ-೯೨:ಪದವಿಭಾಗ-

ಅರ್ಥ:ಇಕ್ಕಿದ

ಲೋಹವಕ್ಕರೆಯ ಕರ್ಪುಗಳಿಂ

ಕವಿತರ್ಪು (ತೊಡಿಸಿದ

ಕಬ್ಬಿಣದ ತೊಡಿಗೆಯ
ಕಪ್ಪುಬಣ್ಣದಿಂದ ಕೂಡಿದ
ಕವಿದುಮುತ್ತಿ ಬರುವ) ವಿಂಧ್ಯ
ಶೈಲಕ್ಕೆಣೆಯಾಗೆ ಜೋದರ್
ಇಸುವ ಅಂಬಿನ ಬಲ್ಸರಿ
ತಿಣ್ಣಮಾಗಿ (ಆನೆಗಳು ವಿಂಧ್ಯ
ಪರ್ವತಕ್ಕೆ ಸಮಾನವಾಗಿರಲು
ಮಾವಟಿಗರು ಪ್ರಯೋಗಿಸುವ
ಬಾಣದ ಬಲವಾದ ಮಳೆಯು
ಅಧಿಕವಾಗಿ) ಕೆಯ್ಮೆಕ್ಕು
ವಿರೋಧಿ ಸಾಧನ

ಘಟಾಳಿಯನು (ಕೈಮೀರಿದಾಗ
ಶತ್ರುಪಕ್ಷದ ಆನೆಯ
ಸಮೂಹವನ್ನು) ಓಡಿಸಲು
ಆಗಳು ಆರ್ದು (ಓಡಿಸಲು
ಆಗ ಘಟ್ಟಿಯಾಗಿ
ಕೂಗಿಕೊಂಡು), ಬಿಟ್ಟಕ್ಕಿದರು
(ನುಗ್ಗಿಸಿದರು) ಉಗ್ರ ಸಿಂಧುರ
ಘಟಾವಳಿಯಂ ಮುಳಿಸಿಂ
ನಿಷಾದಿಗಳ್ (ಮಾವಟಿಗರು)
(ಮಾವಟಿಗರು
ಭಯಂಕರವಾದ ಆನೆಯ

ಸಮೂಹವನ್ನು
ನುಗ್ಗಿಸಿಬಿಟ್ಟರು)

ಪದ್ಯ-೯೨:ಅರ್ಥ: ತೊಡಿಸಿದ ಕಬ್ಬಿಣದ ತೊಡಿಗೆಯ ಕಪ್ಪುಬಣ್ಣದಿಂದ ಕೂಡಿದ ಕವಿದು -ತೊಡಿಸಿದ ಕಬ್ಬಿಣದ ತೊಡಿಗೆಯ ಕಪ್ಪುಬಣ್ಣದಿಂದ ಕೂಡಿದ ಕವಿದು -ಮುತ್ತಿ ಬರುವ ಆನೆಗಳು ವಿಂಧ್ಯ ಪರ್ವತಕ್ಕೆ ಸಮಾನವಾಗಿರಲು ಮಾವಟಗರು ಪ್ರಯೋಗಿಸುವ

ಬಾಣದ ಬಲವಾದ ಮಳೆಯು
ಅಧಿಕವಾಗಲು, ಕೈಮೀರಿದಾಗ
ಶತ್ರುಪಕ್ಷದ ಭಯಂಕರ
ಆನೆಯ ಸಮೂಹವನ್ನು
ಓಡಿಸುವುದಕ್ಕಾಗಿ
ಮಾವಟಿಗರು ಸಿಟ್ಟಿನಿಂದ ಆಗ
ಘಟ್ಟಿಯಾಗಿ ಕೂಗಿಕೊಂಡು
ಮಾವಟಿಗರು
ಭಯಂಕರವಾದ ಆನೆಯ
ಸಮೂಹವನ್ನು
ನುಗ್ಗಿಸಿಬಿಟ್ಟರು.

ಶಾ|| ಆದಿತ್ಯಂ ಮಸುಳ್ವನ್ನೆಗಂ
ಧ್ವಜ ಘಟಾಟೋಪಂಗಳಿಂದಂ
ಲಯಾಂ
ಭೋದಂಗಳ್
ಕವಿವಂತೆವ್ರೋಲ್ ಕವಿವುದುಂ
ಕಾಲ್ಗಾಪು ಕಾಲ್ಗಾಪಿನೊಳ್|
ಜೋದರ್
ಜೋದರೊಳಾನೆಯಾನೆಯೊಳ
ಗುರ್ವಪ್ಪನ್ನೆಗಂ ಕಾದೆ ಕ
ಣ್ಣಾಗದಂ ಚೆಲ್ವೆಸೆದತ್ತು ಮೂಱು
ನೆಲೆಯಿಂ

ಮಾದ್ಯದ್ಗಜೇಂದ್ರಾಹವಂ|| ೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಆದಿತ್ಯಂ ಮಸುಳ್ವನ್ನೆಗಂ ಧ್ವಜ ಘಟಾಟೋಪಂಗಳಿಂದಂ (ಸೂರ್ಯನು ಮಸುಕಾಗುವ ಹಾಗೆ ಧ್ವಜದಿಂದ ಕೂಡಿದ ಆನೆಗಳು) ಲಯಾಂಭೋದಂಗಳ್ (ಲಯ ಅಂಬೋಧಂಗಳು

-ಪ್ರಳಯಕಾಲದ ಮೋಡಗಳು)
ಕವಿವಂತೆವೋಲ್ ಕವಿವುದುಂ
(ಮುತ್ತುವ ಹಾಗೆ ಮುತ್ತಲು)
ಕಾಲ್ಗಾಪು ಕಾಲ್ಗಾಪಿನೊಳ್
(ಪದಾತಿ ಸೈನ್ಯವು
ಪದಾತಿಗಳೊಡನೆ) ಜೋದರ್
ಜೋ ದರೊಳು, ಆನೆಯು
ಆನೆಯೊಳು
ಉಗುರ್ವಪ್ಪನ್ನೆಗಂ ಕಾದೆ
(ಪದಾತಿ ಸೈನ್ಯವು
ಪದಾತಿಗಳೊಡನೆಯೂ

ಮಾವಟಿಗರು
ಮಾವಟಿಗರೊಡನೆ
ಭಯವುಂಟಾಗುವ ಹಾಗೆ
ಕಾದುತ್ತಿರಲು) ಕಣ್ಗಾದಂ
ಚೆಲ್ವೆಸೆದತ್ತು ಮೂಱು
ನೆಲೆಯಿಂ (ಆ ಮದಿಸಿದ
ಆನೆಗಳ ಕಾಳಗವು ಮೂರು
ಅವಸ್ಥೆಗಳಲ್ಲಿಯೂ ನೋಡಲು
ಕಣ್ಣಿಗೆ ಸೊಗಸಾಗಿತ್ತುಗಿದ್ದಿತು)
ಮಾದ್ಯದ್ ಗಜೇಂದ್ರ

ಆಹವಂ(ಆ ಮದಿಸಿದ ಆನೆಗಳ ಕಾಳಗವು)

ಪದ್ಯ-೯೩:ಅರ್ಥ:ಸೂರ್ಯನು ಮಸುಕಾಗುವ ಹಾಗೆ ಧ್ವಜದಿಂದ ಕೂಡಿದ ಆನೆಗಳು ವಿಜೃಂಭಣೆಯಿಂದ ಪ್ರಳಯಕಾಲದ ಮೋಡಗಳು ಮುತ್ತುವ ಹಾಗೆ ಮುತ್ತಲು ಪದಾತಿ ಸೈನ್ಯವು ಪದಾತಿಗಳೊಡನೆಯೂ ಮಾವಟಿಗರು

ಮಾವಟಿಗರೊಡನೆ
ಭಯವುಂಟಾಗುವ ಹಾಗೆ
ಕಾದುತ್ತಿರಲು ಆ ಮದಿಸಿದ
ಆನೆಗಳ ಕಾಳಗವು ಮೂರು
ಅವಸ್ಥೆಗಳಲ್ಲಿಯೂ ನೋಡಲು
ಕಣ್ಣಿಗೆ ಸೊಗಸಾಗಿತ್ತುಗಿದ್ದಿತು.

ವ|| ಅಂತಾ ದಂತಿಘಟೆಗಳನಾರೋಹಕರ್ ತೋಱಿಕೊಟ್ಟೊಂದೊಂದರ್ಕೆ ಮೊಗಂಬುಗಿಸಿದಾಗಳುಭಯ ವ್ಯಾಳದಂತಿ

ವಧ್ಯಕ್ರಮಂಗಳೊಳ್

ಭಾರ್ಗವರ್

ಸುರಿಗಿಱಿವಂತಿಱಿಯೆ

ಸೂಸುವ ಕೆನ್ನೆತ್ತರ್

ಕಱಿಲ್ದುದಿರ್ವ ಸಕ್ಕದ

ಸಿಪ್ಪುಗಳುಂ ಸಿಡಿಲ್ದು ಜೀರೇಱ್ವಿ

ಕೋಱ್ಕಿಳುಮಗುರ್ವಂ

ಪಡೆಯೆ-

ವಚನ:ಪದವಿಭಾಗ-

ಅರ್ಥ:ಅಂತು ಆ

ದಂತಿಘಟೆಗಳನು

ಆರೋಹಕರ್ ತ್ತೋಱಿಕೊಟ್ಟು
ಒಂದೊಂದರ್ಕೆ
ಮೊಗಂಬುಗಿಸಿದಾಗಳ್ (ಆ
ಮಂದೆಯ ಆನೆಯ
ಸಮೂಹಗಳನ್ನು ಮೇಲಿದ್ದ
ಮಾವಟಿಗರು ಅಟ್ಟಿಸಲು
ಬಿಟ್ಟು ಎದುರುಬದರು
ನಿಲ್ಲಸಿದಾಗ) ಉಭಯವ್ಯಾಳ
ದಂತಿ ವಧ್ಯಕ್ರಮಂಗಳೊಳ್
(ಎರಡು ಕಡೆಯ
ತುಂಟಾನೆಗಳೂ ಪರಸ್ಪರ

ಕೊಲ್ಲುವ ವಿಧಾನಗಳಲ್ಲಿ)
ಭಾರ್ಗವರ್ ಸುರಿಗಿ
ಇಱಿವಂತಿಎ ಇಱಿಯೆ
(ಧನುರ್ಧರರು ಕತ್ತಿಯಿಂದ
ಇರಿಯುವಂತೆ ಇರಿಯಲು)
ಸೂಸುವ ಕೆನ್ನೆತ್ತರ್ ಕಟಿಲ್ದು
ಉದಿರ್ವ ಸಕ್ಕದ ದಂತದ
ಸಿಪ್ಪುಗಳುಂ (ಚೆಲ್ಲುವ ರಕ್ತವೂ
ಸಡಿಲವಾಗಿ ಕೆಳಗೆ ಬೀಳುವ
ದಂತದ ಕಟವಾಯಿ
ಚಪ್ಪುಗಳು) ಸಿಡಿಲ್ದು ಜೀರೇಟ್ಬಿ

ಕೋೞ್ಕಿಳುಂ ಅಗುರ್ವಂ ಪಡೆಯೆ (ಜೀರೆಂದು ಸಿಡಿಯುವ ಕೊಂಬುಗಳೂ ಭಯವನ್ನುಂಟುಮಾಡಿದುವು.)-

ವಚನ:ಅರ್ಥ: ಹಾಗೆಆ ಮಂದೆಯ ಆನೆಯ ಸಮೂಹಗಳನ್ನು ಮೇಲಿದ್ದ ಮಾವಟಿಗರು ಅಟ್ಟಿಸಲು ಬಿಟ್ಟು ಎದುರುಬದರು ನಿಲ್ಲಸಿದಾಗ ಎರಡು ಕಡೆಯ

ತುಂಟಾನೆಗಳೂ ಪರಸ್ಪರ
ಕೊಲ್ಲುವ ವಿಧಾನಗಳಲ್ಲಿ,
ಧನುರ್ಧರರರು ಕತ್ತಿಯಿಂದ
ಇರಿಯುವಂತೆ ಇರಿಯಲು,
ಚೆಲ್ಲುವ ರಕ್ತವೂ ಸಡಿಲವಾಗಿ
ಕೆಳಗೆ ಬೀಳುವ ಕಟವಾಯಿ
ದಂತದ ಚಪ್ಪುಗಳು ಜೀರೆಂದು
ಸಿಡಿಯುವ ಕೊಂಬುಗಳೂ
ಭಯವನ್ನುಂಟುಮಾಡಿದುವು.

ಚಂ|| ನಡುವ ಸರಲ್ಗೆ ಮೆಯ್ಯೊಳಗಡಂಗುವ ಸಂಕುಗೆ

ದಿಂಕುಗೊಳ್ವ ಕ
ಕ್ಕಡೆಗಿದಿರುರ್ಚುವಿಟ್ಟಿಗಿದಿರಾನೆ
ಯ ಕೋಟ್ಕಳ ಕೋಳ್ಗೆ
ನೊಂದು ಬಾ|
ಯ್ವಿಡದಿನಿಸಪ್ಪೊಡಂ
ಪೆಳಱದಳ್ಕದೆ
ಪಾವಿನಲಿಟ್ಟವೋಲ್ ಪೊಡ
ರ್ಪುಡುಗದೆ ಬಿೞ್ದುವಿರ್ದ
ನೆಲೆಯಿಂ ಕೆಳವುನ್ಮದ
ಗಂಧಸಿಂಧುರಂ|| ೯೪ ||

ಪದ್ಯ-೦೯೪:ಪದವಿಭಾಗ-ಅರ್ಥ:ನಡುವ ಸರಲ್ಗೆ ಮೆಯ್ಯೊಳಗೆ ಅಡಂಗುವ ಸಂಕುಗೆ (ದೇಹದೊಳಕ್ಕೆ ನಾಟಿಕೊಳ್ಳುವ ಬಾಣಗಳಿಗೂ ಮೆಯ್ಯೊಳಕ್ಕೆ ಹೋಗಿ ಅಡಗಿಕೊಳ್ಳುವ ಕಠಾರಿಗಳಿಗೂ) ದಿಂಕುಗೊಳ್ವ ಕಕ್ಕಡೆಗೆ ಇದಿರು ಉರ್ಚುವ ಇಟ್ಟಿಗೆ (ಹಾರಿ ಬರುವ ಮುಳ್ಳು ಕೋಲುಗಳಿಗೂ ಎದುರಾಗಿ

ಚುಚ್ಚಿ ಬರುತ್ತಿರುವ
ಈಟಿಗಳಿಗೂ) ಇದಿರು ಆನೆಯ
ಕೋಟ್ಕಿಳ ಕೋಳ್ಗೆ (ಆನೆಯ
ಕೊಂಬುಗಳ ತಿವಿತಕ್ಕೂ)
ನೊಂದು ಬಾಯ್ವಿಡದೆ
ಇನಿಸಪ್ಪೊಡಂ (ನೊಂದು
ಕೂಗಿಕೊಳ್ಳದೆ) ಪೆಳಱದೆ
ಅಳ್ಕದೆ (ಸ್ವಲ್ಪವೂ ಹೆದರದೆ
ಶಕ್ತಿಗುಂದದೆ) ಪಾವಿನಲ
ಇಟ್ಟವೋಲ್ ಪೊಡರ್ಪು
ಉಡುಗದೆ (ಹಾವು

ಹೊಡೆದಾಗ ಆಗುವ ಹಾಗೆ ಸಾಮರ್ಥ್ಯವನ್ನು ಕಡಿಮೆಮಾಡಿಕೊಳ್ಳದೆ) ಬಿೞ್ದುವು ಇರ್ದ ನೆಲೆಯಿಂ ಕೆಳವುಂ ಮದ ಗಂಧಸಿಂಧುರಂ (ಕೆಲವು ಮದ್ದಾನೆಗಳು ತಾವಿದ್ದ ಸ್ಥಳದಲ್ಲೇ ಬಿೞ್ದುವು- ಬಿಳ್ದವು - ಬಿದ್ದವು - ಉರುಳಿದುವು)

ಪದ್ಯ-೯೪:ಅರ್ಥ:

ದೇಹದೊಳಕ್ಕೆ ನಾಟಿಕೊಳ್ಳುವ ಬಾಣಗಳಿಗೂ ಮೆಯ್ಯೊಳಕ್ಕೆ

ಹೋಗಿ ಅಡಗಿಕೊಳ್ಳುವ
ಕಠಾರಿಗಳಿಗೂ ಹಾರಿ ಬರುವ
ಮುಳ್ಳು ಕೋಲುಗಳಿಗೂ
ಎದುರಾಗಿ ಚುಚ್ಚಿ ಬರುತ್ತಿರುವ
ಈಟಿಗಳಿಗೂ, ಆನೆಯ
ಕೊಂಬುಗಳ ತಿವಿತಕ್ಕೂ
ನೊಂದು ಕೂಗಿಕೊಳ್ಳದೆ
ಸ್ವಲ್ಪವೂ ಹೆದರದೆ
ಶಕ್ತಿಗುಂದದೆ ಹಾವು ಕಚ್ಚಿದಾಗ
ಆಗುವ ಹಾಗೆ
ಸಾಮರ್ಥ್ಯವನ್ನು

ಕಡಿಮೆಮಾಡಿಕೊಳ್ಳದೆಯಿದ್ದ
ರೂ, ಕೆಲವು ಮದ್ದಾನೆಗಳು
ತಾವಿದ್ದ ಸ್ಥಳದಲ್ಲೇ
ಉರುಳಿದುವು.

**ಕಂ|| ಪಾಱುವ ಪಾಱುಂಬಳೆ
ಕೊಳೆ
ಜೇಟ್ದಿಂಬರಕೆ ತಲೆ
ಸಿಡಿಲ್ದೊಡಮಾ ಕಾ|
ಯ್ಪಾಱದೆ ಹರಣಂಗೆಯ್ದುವು
ಜಾಱಿಲ್ಲದೆ ಜೋದರಟ್ಟೆಗಳ್
ಕೆಲವಾಗಳ್|| ೯೫ ||**

ಪದ್ಯ-೯೫:ಪದವಿಭಾಗ-ಅರ್ಥ:ಪಾಱುವ ಪಾಱುಂಬಳೆ (ಹಾರಿ ಬರುವ ಚಕ್ರಾಯುಧವು) ಕೊಳೆ (ಕೊಳ್ಳಲು ,ತಲೆಗಳನ್ನು ಕತ್ತರಿಸಲು,) ಜೀರೇಱ್ದು ಅಂಬರಕೆ ತಲೆ ಸಿಡಿಲ್ದೊಡಂ (ಜೀರೆಂದು ಶಬ್ದಮಾಡುತ್ತ ಆಕಾಶಕ್ಕೆ ತಲೆ ಸಿಡಿದರೂ) ಆ ಕಾಯ್ಪಾಱದೆ (ಆಗಿನ ಸಿಟ್ಟು ಕುಂದದೆ) ಹರಣಂಗೆಯ್ದುವು

(ಕೊಂದು ಹಾಕಿದುವು.)
ಜಾಡಿಲ್ಲದೆ (ಹಿಮ್ಮೆಟ್ಟದೆ),
ಜೋದರ ಅಟ್ಟೆಗಳ್ ಕೆಲವು
ಆಗಳ್ (ಮಾವಟಿಗರ ಕೆಲವು
ಮುಂಡಗಳು ಆಗ)
ಪದ್ಯ-೯೫:ಅರ್ಥ:ಹಾರಿ
ಬರುವ ಚಕ್ರಾಯುಧವು
ತಲೆಗಳನ್ನು ಕತ್ತರಿಸಲು
ಜೀರೆಂದು ಶಬ್ದಮಾಡುತ್ತ
ಆಕಾಶಕ್ಕೆ ತಲೆ ಸಿಡಿದರೂ
ಮಾವಟಿಗರ ಕೆಲವು

ಮುಂಡಗಳು ಆಗಿನ ಸಿಟ್ಟು
ಕುಂದದೆ ಹಿಂಜರಿಯದೆ
ಶತ್ರುಗಳನ್ನು ಕೊಂದು
ಹಾಕಿದುವು.

**ಚಂ|| ಕಣಕೆನೆ ಚಕ್ರತೀವ್ರ ತಲೆ
ಪೋದೊಡೆ ಜೋದರಟ್ಟೆ ಸಂ
ದಣಿಸಿದ ಬಂಧದಿಂ
ಬಿಸುಗೆಯೊಳ್
ನೆಲಸಿರ್ದೆಸೆದಾಡೆ ನಟ್ಟ ಕೂ|
ರ್ಗಣೆವೆರಸಿರ್ದ
ಕೂರ್ಗಣೆಗಳುಚ್ಚಳಿಸುತ್ತಿರೆ**

ಸುಯ್ದು ಪುಣ್ಣಿತಿಂ ಥಿಣಿಗಳಿನಂದಗುರ್ವುವೆರಸಾ ಡಿದುವೊಂದೆರಡಾನೆಯಟ್ಟೆಗಳ್|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ಕಣಕೆನೆ ಚಕ್ರತೀವ್ರ ತಲೆ ಪೋದೊಡೆ (ಚಕ್ರಾಯುಧದ ತೀವ್ರವಾದ ಪೆಟ್ಟಿನಿಂದ ತಲೆಗಳು ಕಣಕ್ಕೆಂದು ಕತ್ತರಿಸಿ ಹೋದರೂ) ಜೋದರ ಅಟ್ಟೆ ಸಂದಣಿಸಿದ ಬಂಧದಿಂ

(ಮಾವಟಿಗರ ಮುಂಡಗಳು
ಗುಂಪಾಗಿ ಸೇರಿ)
ಬಿಸುಗೆಯೊಳ್ ನೆಲಸಿರ್ದು
ಎಸೆದು (ಸೊಗಸಿ) ಆಡೆ
(ಅಂಬಾರಿಯಲ್ಲಿಯೇ ನೆಲಸಿ
ಇದ್ದು ಸೊಗಸಾಗಿ ನೆಗೆದು
ಕುಣಿತ್ತಿರಲು,) ನಟ್ಟ
ಕೂರ್ಗಣೆವೆರಸಿರ್ದ
(ಹರಿತವಾದ ಬಾಣಗಳು
ನಾಟಿಕೊಂಡಿದ್ದ-)
ಕೂರ್ಗಣೆಗಳು ಉಚ್ಚಳಿಸುತ್ತಿರೆ

(ಚೂಪು ಬಾಣಗಳು
ಮೇಲಕ್ಕೆದ್ದು ಹಾರುತ್ತಿದ್ದರೂ)
ಸುಯ್ದು ಪುಣ್ಣತಿಂಥಿಣಿಗಳಿಂ
(ಸುರಿಯುತ್ತಿದ್ದ ಹುಣ್ಣುಗಳ
ಸಮೂಹದಿಂದ) ಅಂದು
ಅಗುರ್ವುವೆರಸಿ
(ಭೀಕರತೆಯಿಂದ ಕೂಡಿ)
ಆಡಿದುವು ಒಂದೆರಡಾನೆಯ
ಅಟ್ಟೆಗಳ್ (ಒಂದೆರಡು
ಆನೆಯ ಮುಂಡಗಳು

ಭೀಕರತೆಯಿಂದ ಕೂಡಿ ಕುಣಿದಾಡಿದುವು.)

ಪದ್ಯ-೯೬:ಅರ್ಥ:ಚಕ್ರಾಯುಧದ ತೀವ್ರವಾದ ಪೆಟ್ಟಿನಿಂದ ತಲೆಗಳು ಕಣಕ್ಕೆಂದು ಕತ್ತರಿಸಿ ಹೋದರೂ, ಮಾವಟಿಗರ ಮುಂಡಗಳು ಗುಂಪಾಗಿ ಸೇರಿ ಅಂಬಾರಿಯಲ್ಲಿಯೇ ನೆಲಸಿ ಇದ್ದು ಸೊಗಸಾಗಿ ನೆಗೆದು ಕುಣಿತ್ತಿರಲು, ಹರಿತವಾದ ಬಾಣಗಳು ನಾಟಿಕೊಂಡಿದ್ದ,

ಚೂಪು ಬಾಣಗಳು

ಮೇಲಕ್ಕೆದ್ದು ಹಾರುತ್ತಿದ್ದರೂ

ಸುರಿಯುತ್ತಿದ್ದ ಹುಣ್ಣುಗಳ

ಸಮೂಹದಿಂದ

ಭಯಂಕರವಾಗಿ

ಕಾಣುತ್ತಿದ್ದರೂ ಒಂದೆರಡು

ಆನೆಯ ಮುಂಡಗಳು

ಭೀಕರತೆಯಿಂದ ಕೂಡಿ

ಕುಣಿದಾಡಿದುವು.

ವ||ಅಂತೆರಡುಂ ಬಲದ

ಕರಿಘಟೆಗಳೊಂದೊಂದರೊ

ಳ್ ತಾಗಿತಟ್ಟಳಿಯೆ ಬಿಸುನೆತ್ತರಬರ್ಗಿಗುಳುವರ್ಗಿ, ಪಾಯೆ ಪೇರವರ್ಗಿಗಳ್ವೆರಸು, ಜಾಜಿನ ಪರ್ವತಗಳಂತೆಕಡೆದಳ್ಗಿತಳ್ಗಿ ದಾಗಳ್,

ವಚನ:ಪದವಿಭಾಗ-

ಅರ್ಥ:ಅಂತೆ ಎರಡುಂ ಬಲದ ಕರಿಘಟೆಗಳು ಒಂದೊಂದರೊಳ್ ತಾಗಿ ತಟ್ಟಳಿಯೆ (ಸೇರಿಕೊಂಡು

ತಾಗಿ ಹೋರಾಡಿ ಅಪ್ಪಳಿಸಿ ಹೊಡೆಯಲು) ಬಿಸುನೆತ್ತರ ಅರ್ಬಿಗುಳು ಉರ್ವಿ ಪಾಯೆ(ಬಿಸಿರಕ್ತದ ಜರಿಗಳಂತೆ ಉಕ್ಕಿ ಹರಿಯಲು.), ಪೇರ್ ಅರ್ವಿಗಳ್ ವೆರಸು, (ದೊಡ್ಡ ಝರಿಗಳಿಂದ ಕೂಡಿದ) ಜಾಜಿನ ಪರ್ವತಗಳಂತೆ ಕಡೆದು ಅಳ್ಳಿಗ್ಗಿ ತಳ್ಳಿಗ್ಗಿದಾಗಳ್ (ಕೆಂಪುಕಲ್ಲಿನ ಬೆಟ್ಟಗಳಂತೆ

ಆನೆಗಳು ಕೆಳಗೆ ಬಿದ್ದು ಸತ್ತು ರಾಶಿಯಾದುವು),

ವಚನ:ಅರ್ಥ: ಹಾಗೆ ಎರಡು ಸೈನ್ಯದ ಆನೆಯ ಸಮೂಹಗಳು ಒಂದಕ್ಕೊಂದು ಸೇರಿಕೊಂಡು ತಾಗಿ-ಹೋರಾಡಿ ಅಪ್ಪಳಿಸಿ ಹೊಡೆಯಲು ಬಿಸಿರಕ್ತದ ಜರಿಗಳಂತೆ ಉಕ್ಕಿ ಹರಿಯಲು. ದೊಡ್ಡ ಝರಿಗಳಿಂದ ಕೂಡಿದ ಕೆಂಪುಕಲ್ಲಿನ ಬೆಟ್ಟಗಳಂತೆ

ಆನೆಗಳು ಕೆಳಗೆ ಬಿದ್ದು ಸತ್ತು ರಾಶಿಯಾದುವು.

[ಭೀಮನ ಯುದ್ಧ]

ಕಂ|| ಆನಿರಿಯೇನಿೞಿವುದು
ಗಡ
ಮೀ ನಾಲ್ಕುಂ ಬಲಮಿದಲ್ತೆ
ಪರಿಭವಮೆನಗಂ|
ದೇನುಂ ಮಾಣದೆ ಭೀಮನ
ನೂನಬಲಂ ಬಂದು ತಾಗಿದಂ
ಕುರುಬಲದೊಳ್|| ೯೭ ||

ಪದ್ಯ-೯೭:ಪದವಿಭಾಗ-ಅರ್ಥ:ಆನು ಇರೆ (ನಾನು ಇರಲು) ಯೇನು ಇಱಿವುದು ಗಡಂ ಈ ನಾಲ್ಕುಂ ಬಲಂ (ನಾನು ಇರಲು ಈ ಚತುರಂಗಬಲವು ಯುದ್ಧ ಮಾಡುತ್ತದೆಯಲ್ಲವೇ?) ಇದಲ್ತೆ ಪರಿಭವಂ ಎನಗೆಎಂದು ಏನುಂ ಮಾಣದೆ (ಇದಲ್ಲವೇ ನನಗೆ ಅವಮಾನಕರ’ ಎಂದು

ಯಾವುದನ್ನೂ ಲಕ್ಷಿಸದೆ) ಭೀಮನು ಅನೂನಬಲಂ ಬಂದು ತಾಗಿದಂ ಕುರುಬಲದೊಳ್ (ಸ್ವಲ್ಪವೂ ಕಡಿಮೆಯಿಲ್ಲದ, ಅಸಮಾನ್ಯ ಶಕ್ತಿಯುಳ್ಳ ಭೀಮನು ಕೌರವಸೈನ್ಯವನ್ನು ಬಂದು ತಾಗಿದನು.)

ಪದ್ಯ-೯೭:ಅರ್ಥ:‘ನಾನು ಇರಲು ಈ ಚತುರಂಗಬಲವು ಯುದ್ಧ ಮಾಡುತ್ತದೆಯಲ್ಲವೇ?

ಇದಲ್ಲವೇ ನನಗೆ
ಅವಮಾನಕರ’ ಎಂದು
ಯಾವುದನ್ನೂ ಲಕ್ಷಿಸದೆ,
ಅಸಮಾನ್ಯ ಶಕ್ತಿಯುಳ್ಳ
ಭೀಮನು ಕೌರವಸೈನ್ಯವನ್ನು
ಬಂದು ತಾಗಿದನು/
ಎದುರಿಸಿದನು.

ವ|| ಅಂತು ಕುರುಬಲದ ಕರಿಘಟೆಗಳಂ ನುಂಗುವಂತೆ ದೆಸೆದೆಸೆಗೆ ಮಿಳಿರ್ದು ಮಿಳ್ಳಿಸಿದ ಸಿಂಗದ

ಪಱಿವಿಗೆಯುಂ ಕುರುಬಲಕ್ಕೆ
ಮಿೞ್ತು ಪಲ್ಮೊರೆವಂತೆ
ಮೊರೆದು ಪಱಿವ ತನ್ನ
ಕಿಸುವೊನ್ನ ರಥಮುಂ
ಭಯಂಕರಾಕಾರಮಾಗೆ
ಪಗೆವರ ಗಂಟಲನೊತ್ತುವಂತೆ
ಪೌಂಡ್ರಮೆಂಬ ಶಂಖಮನೊತ್ತಿ
ಮುಂದೊಡ್ಡಿದೊಡ್ಡೆಲ್ಲಮನಂಬಿ
ನ ಬಂಬಲೊಳೆ
ಪಡಲ್ವಡಿಸುತ್ತುಂ ಬರ್ಪ
ಭೀಮಸೇನಂಗೆ

ದುರ್ಯೋಧನನ ದಿರದಿದಿರಾಂತಾಗಳ್-

ವಚನ:ಪದವಿಭಾಗ-ಅರ್ಥ:ಅಂತು ಕುರುಬಲದ ಕರಿಘಟೆಗಳಂ ನುಂಗುವಂತೆ (ಕೌರವಸೈನ್ಯದ ಆನೆಗಳ ಸಮೂಹವನ್ನು ನುಂಗುವ ಹಾಗೆ) ದೆಸೆದೆಸೆಗೆ ಮಿಳಿರ್ದು ಮಿಳ್ಳಿಸಿದ ಸಿಂಗದ ಪಟಿವಿಗೆಯುಂ (ದಿಕ್ಕುದಿಕ್ಕಿಗೂ ಕಂಪಿಸಿ ಚಲಿಸುತ್ತಿದ್ದ

ಸಿಂಹಧ್ವಜವು) ಕುರುಬಲಕ್ಕೆ
ಮಿೞ್ತು ಪಲ್ಮೊರೆವಂತೆ
ಮೊರೆದು (ಕೌರವಸೈನ್ಯಕ್ಕೆ
ಮೃತ್ಯುದೇವತೆಯೇ
ಹಲ್ಲುಕಡಿಯುವಂತೆ
ಶಬ್ದಮಾಡಿಕೊಂಡು
ಬರುತ್ತಿದೆಯೋ ಎಂಬಂತೆ)
ಪಱಿವ ತನ್ನ ಕಿಸುಪ್ಪೊನ್ನ
ರಥಮುಂ (ಹರಿದು ಬರುತ್ತಿದ್ದ
ತಾಮ್ರದ ತನ್ನ ತೇರು)
ಭಯಂಕರಾಕಾರಮಾಗೆ

ಪಗೆವರ ಗಂಟಲನೊತ್ತುವಂತೆ
(ಭಯಂಕರವಾಗಿರಲು
ಶತ್ರುಗಳ ಗಂಟಲನ್ನು ಒತ್ತುವ
ಹಾಗೆ) ಪೌಂಡ್ರಮೆಂಬ
ಶಂಖಮನು ಒತ್ತಿ
(ಪೌಂಡ್ರವೆಂಬ ಶಂಖವನ್ನು
ಊದುತ್ತಾ,) ಮುಂದೊಡ್ಡಿದ
ಒಡ್ಡೆಲ್ಲಮನು ಅಂಬಿನ
ಬಂಬಲೊಳೆ ಪಡಲ್ವಡಿಸುತ್ತುಂ
(ಮುಂದೆ ಒಡ್ಡಿದ್ದ
ಸೈನ್ಯವೆಲ್ಲವನ್ನೂ ಬಾಣಗಳ

ಸಮೂಹದಿಂದ ಕೆಳಗೆ ಬೀಳಿಸುತ್ತ) ಬರ್ಪ ಭೀಮಸೇನಂಗೆ ದುರ್ಯೋಧನನು ಅದಿರದೆ ಇದಿರಾಂತಾಗಳ್ (ಬರುತ್ತಿದ್ದ ಭೀಮಸೇನನಿಗೆ ಹೆದರದೆ ದುರ್ಯೋಧನನು ಪ್ರತಿಭಟಿಸಿದಾಗ) -

ವಚನ:ಅರ್ಥ:ಹಾಗೆ ಕೌರವಸೈನ್ಯದ ಆನೆಗಳ ಸಮೂಹವನ್ನು ನುಂಗುವ

ಹಾಗೆ ದಿಕ್ಕುದಿಕ್ಕಿಗೂ ಕಂಪಿಸಿ
ಚಲಿಸುತ್ತಿದ್ದ ಸಿಂಹಧ್ವಜವು,
ಕೌರವಸೈನ್ಯಕ್ಕೆ
ಮೃತ್ಯುದೇವತೆಯೇ
ಹಲ್ಲುಕಡಿಯುವಂತೆ
ಶಬ್ದಮಾಡಿಕೊಂಡು
ಬರುತ್ತಿದೆಯೋ ಎಂಬಂತೆ
ಹರಿದು ಬರುತ್ತಿದ್ದ ತಾಮ್ರದ
ತನ್ನ ತೇರು
ಭಯಂಕರವಾಗಿರಲು
ಶತ್ರುಗಳ ಗಂಟಲನ್ನು ಒತ್ತುವ

ಹಾಗೆ ಪೌಂಡ್ರವೆಂಬ
ಶಂಖವನ್ನು ಊದುತ್ತಾ,
ಮುಂದೆ ಒಡ್ಡಿದ್ದ
ಸೈನ್ಯವೆಲ್ಲವನ್ನೂ ಬಾಣಗಳ
ಸಮೂಹದಿಂದ ಕೆಳಗೆ
ಬೀಳಿಸುತ್ತ ಬರುತ್ತಿದ್ದ
ಭೀಮಸೇನನಿಗೆ ಹೆದರದೆ
ದುರ್ಯೋಧನನು
ಪ್ರತಿಭಟಿಸಿದಾಗ-

ಉ|| ಎಂತಿದಿರಾಂತೆಯಂತೆ ಕಲಿಯಾಗೊಳಸೋರದಿರೆಂದು

ಭೀಮನೋ
ರಂತೆ ಕನಲ್ದು ತಿಣ್ಣಮಿಸೆ
ಪಾಯ್ವ
ಸರಲ್ಗಳನೆಯ್ದಲೀಯದಾಂ|
ತಾಂತು ನಿರಂತರಂ ತಱಿದು
ಸೂತನನಾತನ ವಾಜಿಯಂ
ಮಹೀ
ಶಂ ತೆಗೆದೆಚ್ಚನಚ್ಚ ಬಿಸುನೆತ್ತರ
ಸುಟ್ಟುರೆ ಸೂಸುವನ್ನೆಗಂ|| ೯೮
||

ಪದ್ಯ-೯೮:ಪದವಿಭಾಗ-ಅರ್ಥ:ಎಂತು ಇದಿರಾಂತೆಯೋ ಅಂತೆ ಕಲಿಯಾಗು ಒಳಸೋರದಿರು ಎಂದು (ಹೇಗೆ ಎದುರಿಸಿದೆಯೋ ಹಾಗೆಯೇ ಶೂರನೂ ಆಗು; ಹಿಂಜರಿಯಬೇಡ ಎಂದು) ಭೀಮನು ಓರಂತೆ ಕನಲ್ದು ತಿಣ್ಣಂ ಇಸೆ, (ಭೀಮನು ಒಂದೇ ಸಮನಾಗಿ ಕೋಪಿಸಿಕೊಂಡು

ಬಲವಾಗಿ ಬಾಣಪ್ರಯೋಗ
ಮಾಡಲು) ಪಾಯ್ವ
ಸರಲ್ಗಳನು (ಹಾರಿಬರುತ್ತಿದ್ದ
ಬಾಣಗಳನ್ನು) ಯ್ದಲೀಯದೆ
ಆಂತು ಆಂತು ನಿರಂತರಂ
ತಱಿದು (ದುರ್ಯೋಧನನು
ಅದನ್ನು ಪ್ರತಿಭಟಿಸಿ ಒಂದೇ
ಸಮನಾಗಿ ಕತ್ತರಿಸಿ)
ಸೂತನನು ಆತನ ವಾಜಿಯಂ
ಮಹೀಶಂ ತೆಗೆದು ಎಚ್ಚನು
((ಭೀಮನ) ಸಾರಥಿಯನ್ನೂ

ಆತನ ಕುದುರೆಯನ್ನೂ ಬಾಣದಿಂದ ಹೊಡೆದನು.) ಅಚ್ಚ ಬಿಸುನೆತ್ತರ ಸುಟ್ಟುರೆ ಸೂಸುವನ್ನೆಗಂ (ಆಗ ಅಪ್ಪಟ ಬಿಸಿರಕ್ತದ ಪ್ರವಾಹವನ್ನು ಹರಿಯಿಸಿದನು.)

ಪದ್ಯ-೯೮:ಅರ್ಥ:ಹೇಗೆ ಎದುರಿಸಿದೆಯೋ ಹಾಗೆಯೇ ಶೂರನೂ ಆಗು; ಹಿಂಜರಿಯಬೇಡ ಎಂದು ಭೀಮನು ಒಂದೇ ಸಮನಾಗಿ

ಕೋಪಿಸಿಕೊಂಡು ಬಲವಾಗಿ ಬಾಣಪ್ರಯೋಗ ಮಾಡಲು (ಹಾಗೆ) ಹಾರಿಬರುತ್ತಿದ್ದ ಬಾಣಗಳನ್ನು ತನ್ನಲ್ಲಿಗೆ ಬರಲು ಅವಕಾಶಮಾಡದೆ ದುರ್ಯೋಧನನು ಅದನ್ನು ಪ್ರತಿಭಟಿಸಿ ಒಂದೇ ಸಮನಾಗಿ ಕತ್ತರಿಸಿ (ಭೀಮನ) ಸಾರಥಿಯನ್ನೂ ಆತನ ಕುದುರೆಯನ್ನೂ ಬಾಣದಿಂದ ಹೊಡೆದನಿ, ಆಗ ಅಪ್ಪಟ

ಬಿಸಿರಕ್ತದ ಪ್ರವಾಹವನ್ನು ಹರಿಯಿಸಿದನು.

ಕಂ|| ಇಸೆ ಮಸಗಿ ಭೀಮನೀರ
ಯ್ದು ಶಿತಾಸ್ತ್ರದಿನುರುಳೆ
ಸೂತನುಡಿಯೆ ರಥಂ ಕೀ|
ಲಿಸೆ ಕುದುರೆ ಮುಱಿಯೆ
ಪೞವಿಗೆ
ಮಸಕದಿನೆಚ್ಚೆಚ್ಚನೊಂದೆ
ಸರಲೊಳ್ ನೊಸಲಂ|| ೯೯ ||

ಪದ್ಯ-೯೯:ಪದವಿಭಾಗ-

ಅರ್ಥ:ಇಸೆ ಮಸಗಿ ಭೀಮನು

ಈರಯ್ದು ಶಿತಾಸ್ತ್ರದಿಂ ಉರುಳೆ
ಸೂತನು ಉಡಿಯೆ(ಹಾಗೆ
ಹೊಡೆಯಲಾಗಿ ಭೀಮನು
ರೇಗಿ ಹರಿತವಾದ ಹತ್ತು
ಬಾಣಗಳಿಂದ ಸೂತನು
ಉರುಳುವ ಹಾಗೆ) ರಥಂ
ಕೀಲಿಸೆ ಕುದುರೆ (ರಥವೂ
ಒಡೆದುಹೋಗುವ ಹಾಗೆ.)
ಮುಱಿಯೆ ಪಱಿವಿಗೆ (ಧ್ವಜವು
ಮುರಿದು ಹೋಗುವ)
ಮಸಕದಿಂ ಎಚ್ಚೆ (ಧ್ವಜವು

ಮುರಿದು ಹೋಗುವ ಹಾಗೆ ಹೊಡೆದು,) ಎಚ್ಚನು ಒಂದೆ ಸರಲೊಳ್ ನೊಸಲಂ (ಒಂದೇ ಬಾಣದಿಂದ ದುರ್ಯೋಧನನ ಹಣೆಗೆ ಹೊಡೆದನು.)

ಪದ್ಯ-೯೯:ಅರ್ಥ:ಹಾಗೆ ಹೊಡೆಯಲಾಗಿ ಭೀಮನು ರೇಗಿ ಹರಿತವಾದ ಹತ್ತು ಬಾಣಗಳಿಂದ ಸೂತನು ಉರುಳುವ ಹಾಗೆ, ರಥವೂ ಒಡೆದುಹೋಗುವ ಹಾಗೆ.

ಕುದುರೆಯು ಮೊಳೆಯಿಂದ
ನಾಟಿಕೊಂಡಹಾಗೆಯೂ,
ಧ್ವಜವು ಮುರಿದು ಹೋಗುವ
ಹಾಗೆ ಹೊಡೆದು, ಕೋಪದಿಂದ
ಒಂದೇ ಬಾಣದಿಂದ
ದುರ್ಯೋಧನನ ಹಣೆಗೆ
ಹೊಡೆದನು.

ಪಟ್ಟಂಗಟ್ಟಿದ ನೊಸಲಂ
ನಟ್ಟ ಸರಲ್ಪಿಡಿದು
ನೆತ್ತರಂಬಿರಿವಿಡೆ ಕ|
ಣ್ಗೆಟ್ಟಿರ್ದ ನೃಪನನಂಕದ

ಕಟ್ಟಾಳ್ಗಳ್ ಕಾದು ಕಳಿಪೆ ದುರ್ಯೋಧನನಂ|| ೧೦೦/ 100||

ಪದ್ಯ-೧೦೦:ಪದವಿಭಾಗ-ಅರ್ಥ:ಪಟ್ಟಂಗಟ್ಟಿದ ನೊಸಲಂನು ಅಟ್ಟ (ಪಟ್ಟಕಟ್ಟಿದ ದುರ್ಯೋಧನ ಹಣೆಯನ್ನು ನಾಟಿದ) ಸರಲ್ (ವಿ) ಇಡಿದು (ಬಾಣದವನ್ನು ಅನುಸರಿಸಿ) ನೆತ್ತರು ಅಂಬಿರಿವಿಡೆ (ರಕ್ತವು

ಧಾರಾಕಾರವಾಗಿ ಹರಿಯಲು)
ಕಣ್ಗೆಟ್ಟಿರ್ದ ನೃಪನನು ಅಂಕದ
ಕಟ್ಟಾಳ್ಗಳ್ (ದಿಕ್ಕುಗೆಟ್ಟಿದ್ದ
ರಾಜನನ್ನು ಪ್ರಸಿದ್ಧರಾದ
ಶೂರರು) ಕಾದು ಕಳಿಪೆ
ದುರ್ಯೋಧನನಂ (ರಕ್ಷಿಸಿ
ಶಿಬಿರಕ್ಕೆ ಕಳುಹಿಸಲು-)
ಪದ್ಯ-೧೦೦:ಅರ್ಥ:ಪಟ್ಟಕಟ್ಟಿ
ದ ದುರ್ಯೋಧನ ಹಣೆಯನ್ನು
ನಾಟಿದ ಬಾಣದವನ್ನು
ಅನುಸರಿಸಿ ರಕ್ತವು

ಧಾರಾಕಾರವಾಗಿ ಹರಿಯಲು
ದಿಕ್ಕುಗೆಟ್ಟಿದ್ದ ರಾಜನನ್ನು
ಪ್ರಸಿದ್ಧರಾದ ಶೂರರು ರಕ್ಷಿಸಿ
ಶಿಬಿರಕ್ಕೆ ಕಳುಹಿಸಲು-

**ವ|| ಆಗಳವನನುಜರ್
ನೂರ್ವರುಂ ಬಂದು
ತನ್ನನೊರ್ವನಂ
ತಾಗಿದೊಡನಿಬರುಮಂ
ವಿರಥರ್ಮಾಡಿ
ಭಾರತಮನಿಂದೆ
ಸಮೆಯಿಸುವೆನೆಂದು**

ಕೋದಂಡಮಂ ಬಿಸುಟು ಗದಾದಂಡಮಂ ಭುಜಾದಂಡದೊಳಳವಡಿಸಿ ಕೊಂಡು-

ವಚನ:ಪದವಿಭಾಗ-

ಅರ್ಥ:ಆಗಳ್ ಅವನ ಅನುಜರ್ ನೂರ್ವರುಂ ಬಂದು ತನ್ನನೊರ್ವನಂ ತಾಗಿದೊಡೆ ಅನಿಬರುಮಂ ವಿರಥರ್ಮಾಡಿ(ಆಗ ಅವನ ನೂರು ತಮ್ಮಂದಿರೂ ಬಂದು

ತನ್ನೊಬ್ಬನನ್ನು ತಾಗಲು ಅಷ್ಟು ಜನವನ್ನೂ ರಥದಿಂದ ಉರುಳಿಸಿ) ಭಾರತಮನು ಇಂದೆ ಸಮೆಯಿಸುವೆನೆಂದು (ಭಾರತಯುದ್ಧವನ್ನು ಈ ದಿನವೇ ಮುಗಿಸಿಬಿಡುತ್ತೇನೆ ಎಂದು) ಕೋದಂಡಮಂ ಬಿಸುಟು ಗದಾದಂಡಮಂ ಭುಜಾದಂಡದೊಳು ಅಳವಡಿಸಿಕೊಂಡು (ಬಿಲ್ಲನ್ನು ಬಿಸಾಡಿ ಗದಾದಂಡವನ್ನು

ದಂಡದಂತಿರುವ ತನ್ನ ತೋಳಿನಲ್ಲಿ ಅಳವಡಿಸಿಕೊಂಡು)- **ವಚನ:ಅರ್ಥ**: ಆಗ ಅವನ-ದುರ್ಯೋಧನನ ನೂರು ತಮ್ಮಂದಿರೂ ಬಂದು ತನ್ನೊಬ್ಬನನ್ನು ಎದುರಿಸಲು, ಅಷ್ಟು ಜನವನ್ನೂ ರಥದಿಂದ ಉರುಳಿಸಿ ಭಾರತಯುದ್ಧವನ್ನು ಈ ದಿನವೇ ಮುಗಿಸಿಬಿಡುತ್ತೇನೆ

ಎಂದು ಬಿಲ್ಲನ್ನು ಬಿಸಾಡಿ ಗದಾದಂಡವನ್ನು ದಂಡದಂತಿರುವ ತನ್ನ ತೋಳಿನಲ್ಲಿ ಅಳವಡಿಸಿಕೊಂಡನು.

ಚಂ|| ಕುರುಬಲಮಂ
ಪಡಲ್ವಡಿಪ ತಕ್ಕಿನೊಳೆಯ್ತರೆ
ಬರ್ಪ ಭೀಮನಂ
ಬರೆ ಬರಲೀಯದಿರ್ದವರನಾ
ಪದದೊಳ್ ಪೆಱಗಿಕ್ಕಿ
ಗಂಧಸಿಂ|

ಧುರ ಘಟೆ ನಾಲ್ಕು ಕೋಟಿವೆರಸಾಗಡೆ ಬಂದು ಕಳಿಂಗರಾಜನಾಂ ತಿರೆ ಪಗೆ ಕೆಯ್ಗೆವಂದು ಬರ್ದುಕಾಡಿದ ಬಲ್ಮುಳಿಸಿಂ ವೃಕೋದರಂ|| ೧೦೧ ||

ಪದ್ಯ-೧೦೧:ಪದವಿಭಾಗ-ಅರ್ಥ:ಕುರುಬಲಮಂ ಪಡಲ್ವಡಿಪ ತಕ್ಕಿನೊಳು ಎಯ್ತರೆ (ಕೌರವಸೈನ್ಯವನ್ನು ನಾಶಮಾಡವ

ಸಾಮರ್ಥ್ಯದಿಂದ
ಭೀಮಸೇನನು ಬರಲು) ಬರ್ಪ
ಭೀಮನಂ ಬರೆ (ಬರುವ
ಭೀಮನನ್ನು ಬರುವುದಕ್ಕೆ
ಅವಕಾಶಮಾಡದೆ) ಬರಲು
ಈಯದೆ ಇರ್ದವರನು ಆ
ಪದದೊಳ್ ಪೆಱಗಿಕ್ಕಿ
(ಅಲ್ಲಿದ್ದವರನ್ನು (ಅಲ್ಲಿಂದ)
ಹೊರಕ್ಕೆ ಕಳಿಸಿ) ಗಂಧಸಿಂಧುರ
ಘಟೆ ನಾಲ್ಕು ಕೋಟಿವೆರಸು
ಆಗಡೆ ಬಂದು ಕಳಿಂಗರಾಜನು

ಆಂತಿರೆ (ಶ್ರೇಷ್ಠವಾದ
ನಾಲ್ಕುಕೋಟಿ
ಮದ್ದಾನೆಗಳೊಡಗೂಡಿ
ಕಳಿಂಗರಾಜನು ಬಂದು
ಎದುರಿಸಲು,) ಪಗೆ
ಕೆಯ್ಗೆವಂದು ಬರ್ದುಕಾಡಿದ
ಬಲ್ ಮುಳಿಸಿಂ ವೃಕೋದರಂ
(ಶತ್ರುವು ಕೈಗೆ ಸಿಕ್ಕಿಯೂ
ನುಣುಚಿಕೊಂಡುದಕ್ಕೆ ವಿಶೇಷ
ಕೋಪವನ್ನು ಭೀಮನು
(ತಾಳಿ)-)|

ಪದ್ಯ-೧೦೧:ಅರ್ಥ:ಕೌರವಸೈ
ನ್ಯವನ್ನು ನಾಶಮಾಡುವ
ಸಾಮರ್ಥ್ಯದಿಂದ
ಭೀಮಸೇನನು ಬರಲು,
ಬರುವ ಭೀಮನನ್ನು
ಬರುವುದಕ್ಕೆ
ಅವಕಾಶಮಾಡದೆ
ಅಲ್ಲಿದ್ದವರನ್ನು (ಅಲ್ಲಿಂದ)
ಹೊರಕ್ಕೆ ಕಳಿಸಿ ಶ್ರೇಷ್ಠವಾದ
ನಾಲ್ಕುಕೋಟಿ
ಮದ್ದಾನೆಗಳೊಡಗೂಡಿ

ಕಳಿಂಗರಾಜನು ಬಂದು ಎದುರಿಸಿದನು. ಶತ್ರುವು ಕೈಗೆ ಸಿಕ್ಕಿಯೂ ನುಣುಚಿಕೊಂಡುದಕ್ಕೆ ವಿಶೇಷ ಕೋಪವನ್ನು ಭೀಮನು (ತಾಳಿ)-

ವ|| ಅಂತು ಕಳಿಂಗರಾಜ ಮತ್ತಮಾತಂಗಘಟೆಗಳ ಮೇಲೆ ಮುಳಿಸಂ ಕಳೆವೆನೆಂದು ಸಿಂಹನಾದದಿನಾರ್ದು-

ವಚನ:ಪದವಿಭಾಗ-ಅರ್ಥ:ಅಂತು ಕಳಿಂಗರಾಜ ಮತ್ತಮಾತಂಗಘಟೆಗಳ ಮೇಲೆ ಮುಳಿಸಂ ಕಳೆವೆನೆಂದು (ಮದ್ದಾನೆಗಳ ಸಮೂಹದ ಮೇಲೆ ತನ್ನ ಸಿಟ್ಟನ್ನು ತೀರಿಸಿಕೊಳ್ಳುತ್ತೇನೆ ಎಂದು) ಸಿಂಹನಾದದಿಂ ಆರ್ದು (ಸಿಂಹಗರ್ಜನೆಯಿಂದ ಆರ್ಭಟಿಸಿ)-

ವಚನ:ಅರ್ಥ:ವ||

ಕಳಿಂಗರಾಜನ ಮದ್ದಾನೆಗಳ ಸಮೂಹದ ಮೇಲೆ ತನ್ನ ಸಿಟ್ಟನ್ನು ತೀರಿಸಿಕೊಳ್ಳುತ್ತೇನೆ ಎಂದು ಸಿಂಹಗರ್ಜನೆಯಿಂದ ಆರ್ಭಟಿಸಿದನು.

ಮ|| ಗಜೆಯಂ ಭೋರೆನೆ

ಪರ್ವಿ ಬೀಸಿ

ಕಡುಪಿಂದೆಯ್ತಂದು

ಮಾಱಾಂತ ಸಾ

ಮಜಸಂಘಾತಮನೊಂದುಗೊ
ಳ್ಳೆರಡುಗೊಳ್ಳೆಂದುರ್ವಿ
ಪೊಯ್ಯೊಂದು ಪೊ|
ಯ್ಗೆ ಜವಂಗುಂದಿ ಸಿಡಿಲ್ದು
ಮುನ್ನಡಿಗುರುಳ್ತರ್ಪನ್ನೆಗಂ
ಬೀೞ್ದೆ ದಿ
ಗ್ಗಜಮಂ ಪೋಲ್ವ ಗಜಂಗಳಂ
ಪಲವುಮಂ ಕೊಂದು
ಮರುನ್ನಂದನಂ|| ೧೦೨ ||

ಪದ್ಯ-೧೦೨:ಪದವಿಭಾಗ-

ಅರ್ಥ:ಗಜೆಯಂ ಭೋರೆನೆ

ಪರ್ವಿ ಬೀಸಿ (ಭೀಮನು
ಗದೆಯನ್ನು ಭೋರೆಂದು
ವಿಸ್ತಾರವಾಗಿ ಬೀಸಿ)
ಕಡುಪಿಂದೆ ಎಯ್ತಂದು
ಮಾಱಾಂತ
ಸಾಮಜಸಂಘಾತಮನು
(ಕ್ರೌರ್ಯದಿಂದ ಬಂದು
ಪ್ರತಿಭಟಿಸಿದ ಆನೆಗಳ
ಸಮೂಹವನ್ನು) ಒಂದುಗೊಳ್
ಎರಡುಗೊಳ್ ಎಂದು (ಒಂದು
ತಕ್ಕೊ, ಎರಡು ತಕ್ಕೋ

ಎಂದು) ಉರ್ವಿ ಪೊಯ್ವೊಂದು
ಪೊಯ್ಗೆ (ಉಬ್ಬಿ ಹೊಡೆಯುವ
ಹೊಡೆತಕ್ಕೆ) ಜವಂಗುಂದಿ
ಸಿಡಿಲ್ದು ಮುನ್ನೆ
ಅಡಿಗುರುಳ್ತರ್ಪ ಅನ್ನೆಗಂ
ಬೀೞೆ (ಆನೆಗಳು ತಮ್ಮ
ವೇಗವನ್ನು ಕಳೆದುಕೊಂಡು
ಸಿಡಿದು ಮೊದಲೇ
ಅಡಿಗುರುಳುವ ಹಾಗೆ
ಉರುಳಿ ಬೀಳಲು) ದಿಗ್ಗಜಮಂ
ಪೋಲ್ವ ಗಜಂಗಳಂ

ಪಲವುಮಂ ಕೊಂದು ಮರುನ್ನಂದನಂ(ಭೀಮ) (ದಿಗ್ಗಜಗಳಂತಿದ್ದ ಅನೇಕ ಆನೆಗಳನ್ನು ಭೀಮನು ಕೊಂದನು.)

ಪದ್ಯ-೧೦೨:ಅರ್ಥ:ಭೀಮನು ಗದೆಯನ್ನು ಭೋರೆಂದು ವಿಸ್ತಾರವಾಗಿ ಬೀಸಿ ಕ್ರೌರ್ಯದಿಂದ ಬಂದು ಪ್ರತಿಭಟಿಸಿದ ಆನೆಗಳ ಸಮೂಹವನ್ನು ಒಂದು ತಕ್ಕೊ

ಎರಡು ತಕ್ಕೋ ಎಂದು ಉಬ್ಬಿ ಹೊಡೆಯುವ ಹೊಡೆತಕ್ಕೆ ಆನೆಗಳು ತಮ್ಮ ವೇಗವನ್ನು ಕಳೆದುಕೊಂಡು ಸಿಡಿದು ಮೊದಲೇ ಅಡಿಗುರುಳುವ ಹಾಗೆ ಉರುಳಿಬೀಳಲು, ದಿಗ್ಗಜಗಳಂತಿದ್ದ ಅನೇಕ ಆನೆಗಳನ್ನು ಭೀಮನು ಕೊಂದನು.

ಕಂ|| ಬಡಿಗೊಳೆ ಬಿದು ಬಿಬ್ಬರ ಬಿರಿ

ದೊಡನುಗೆ ಪೊಸಮುತ್ತು ಕೋಡನೂಱ್ ಮದೇಭಂ। ಕೆಡೆದುವು ಕೊಲ್ಲದಿರೆಂದಿರ ದಡಿಗೆಱಗುವ ತೆಱನನಿನಿಸನನುಕರಿಸುವಿನಂ। । ೧೦೩

ಪದ್ಯ-೧೦೩:ಪದವಿಭಾಗ-ಅರ್ಥ:ಬಡಿಗೊಳೆ (ಭೀಮನು ಗದೆಯಿಂದ ಹೊಡೆಯಲು,) ಬಿದು (ಕುಂಭಸ್ಥಳವು) ಬಿಚ್ಚರ ಬಿರಿದೊಡನೆ ಉಗೆ

ಪೊಸಮುತ್ತು ಕೋಡನೂೞ್
(ಕುಂಭಸ್ಥಳವು
ಸಂಪೂರ್ಣವಾಗಿ
ಬಿರಿದುಹೋಗಲು,
ಜೊತೆಯಲ್ಲಿಯೇ
ಕುಂಭಸ್ಥಳದಲ್ಲಿದ್ದ
ಹೊಸಮುತ್ತುಗಳು
ಚೆಲ್ಲಾಡಲು) ಮದೇಭಂ
ಕೆಡೆದುವು ಕೊಲ್ಲದಿರೆಂದು
ಇರದ ಅಡಿಗೆೞಗುವ ತೆೞನಂ
(ಮದ್ದಾನೆಗಳು ಕೊಂಬನ್ನು

ಕೆಳಕ್ಕೆ ಊರಿ ‘ನಮ್ಮನ್ನು ಕೊಲ್ಲಬೇಡ’ ಎಂದು ಭೀಮನ ಕಾಲಿಗೆ ಬೀಳುವ ರೀತಿಯನ್ನು) ಇನಿಸನು ಅನುಕರಿಸುವಿನಂ (ಸ್ವಲ್ಪ ಮಟ್ಟಿಗೆ ಅನುಕರಿಸುತ್ತ ಕೆಡೆದವು- ಬಿದ್ದುವು.)

ಪದ್ಯ-೧೦೩:ಅರ್ಥ:ಭೀಮನು ಗದೆಯಿಂದ ಹೊಡೆಯಲು, ಕುಂಭಸ್ಥಳವು ಸಂಪೂರ್ಣವಾಗಿ ಬಿರಿದುಹೋಗಲು,

ಜೊತೆಯಲ್ಲಿಯೇ (ಕುಂಭಸ್ಥಳದಲ್ಲಿದ್ದ) ಹೊಸಮುತ್ತುಗಳು ಚೆಲ್ಲಾಡಿದುವು. ಮದ್ದಾನೆಗಳು ಕೊಂಬನ್ನು ಕೆಳಕ್ಕೆ ಊರಿ 'ನಮ್ಮನ್ನು ಕೊಲ್ಲಬೇಡ' ಎಂದು ಭೀಮನ ಕಾಲಿಗೆ ಬೀಳುವ ರೀತಿಯನ್ನು, ಸ್ವಲ್ಪ ಮಟ್ಟಿಗೆ ಅನುಕರಿಸುತ್ತ ಬಿದ್ದುವು.

ವ|| ಅಂತು ಪತ್ತೆಂಟುಸಾಸಿರಮಾನೆಯಂ

ಪಡಲ್ವಡಿಸಿಯುಂ ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಅಂತು ಪತ್ತೆಂಟು ಸಾಸಿರಂ ಆನೆಯಂ ಪಡಲ್ವಡಿಸಿಯುಂ ಸೈರಿಸಲಾಱದೆ (ನಾಶಪಡಿಸಿದರೂ ತೃಪ್ತಿಹೊಂದದೆ)-

ವಚನ:ಅರ್ಥ: ವ|| ಹಾಗೆ ಹತ್ತೆಂಟು ಸಾವಿರ ಆನೆಗಳನ್ನೂ

ನಾಶಪಡಿಸಿದರೂ

ತೃಪ್ತಿಹೊಂದದೆ,

ಮ|| ಪಿಡಿದೊಂದೊಂದಱ

ಗಾತ್ರಮಂ

ತಿರಿಪಿಕೊಂಡೊಂದೊಂದರೊ

ಳ್ ಪೊಯ್ದುಮೆ

ಲ್ವಡಗಪ್ಪನ್ನೆಗಮೆತ್ತಿಕೊಂಡಸಗ

ವೊಯ್ವೊಯ್ಲೊಳ್

ತಡಂಬೊಯ್ದುಮು|

ಳ್ಳಡುಗುಂ ನೆತ್ತರುಮೆಲ್ವುಮೆಲ್ಲ

ದೆಸೆಗಂ ಜೀರೇಱ್ದು ಪಾರೇರಿ ಬ

ಲ್ದಡಿಗಂ ಬೀಸಿಯುಮೊಂದು ಕೋಟಿವರೆಗಂ ಕೊಂದಂ ಮದೇಭಂಗಳಂ|| ೧೦೪ ||

ಪದ್ಯ-೧೦೪:ಪದವಿಭಾಗ-ಅರ್ಥ:ಪಿಡಿದು ಒಂದೊಂದಱ ಗಾತ್ರಮಂ ತಿರಿಪಿಕೊಂಡು ಒಂದೊಂದರೊಳ್ (ಒಂದು ಆನೆಯ ಶರೀರವನ್ನು ಹಿಡಿದುಕೊಂಡು ವೇಗವಾಗಿ ತಿರುಗಿಸಿ ಒಂದರೊಡನೆ ಒಂದನ್ನು) ಪೊಯ್ದುಂ ಎಲ್ವು

ಅಡಗು ಅಪ್ಪನ್ನೆಗಂ,(ಎಲುಬೂ ಮಾಂಸವೂ ಆಗುವ ಹಾಗೆ) ಎತ್ತಿಕೊಂಡು ಅಸಗ ಪೊಯ್ ಪೊಯ್ಲೊಳ್ ತಡಂ ಬೊಯ್ದುಂ (ಮೇಲಕ್ಕೆತ್ತಿಕೊಂಡು ಅಗಸನು ಒಗೆಯುವ ರೀತಿಯಲ್ಲಿ ಬಿರುಸಾಗಿ ಮೇಲಕ್ಕೆತ್ತಿ ಹೊಡೆದನು;) ಉಳ್ಳ ಅಡುಗುಂ ನೆತ್ತರುಂ ಎಲ್ಲುಂ ಎಲ್ಲ ದೆಸೆಗಂ (ಆಗ ಒಳಗಿದ್ದ ಮಾಂಸವೂ ರಕ್ತವೂ ಎಲ್ಲ ದಿಕ್ಕುಗಳಿಗೂ)

ಜೀರ್ ಏೞ್ದು ಪಾರು ಏರಿ
(ಜೀರೆಂದು ಶಬ್ದಮಾಡುತ್ತ
ಎದ್ದು ಹಾರಿ ಚಿಮ್ಮಿ) ಬಲ್ದಡಿಗಂ
(ಬಲು ಬಲಶಾಲಿಯಾದ
ಭೀಮನು) ಬೀಸಿಯುಂ
ಒಂದು ಕೋಟಿವರೆಗಂ
ಕೊಂದಂ ಮದೇಭಂಗಳಂ
(ಬಲು ಬಲಶಾಲಿಯಾದ
ಭೀಮನು ಒಂದುಕೋಟಿ
ಲೆಕ್ಕದವರೆಗಿನ
ಮದ್ದಾನೆಗಳನ್ನು ಬೀಸಿಯುಂ-

ಬೀಸಿ,ಬೀಸಿ ಬಡಿದು ಕೊಂದನು)

ಪದ್ಯ-೧೦೪:ಅರ್ಥ:ಭೀಮನು , ಒಂದು ಆನೆಯ ದೇಹವನ್ನು ಹಿಡಿದುಕೊಂಡು ವೇಗವಾಗಿ ತಿರುಗಿಸಿ ಒಂದರೊಡನೆ ಒಂದನ್ನು ಎಲುಬೂ ಮಾಂಸವೂ ಆಗುವ ಹಾಗೆ ಹೊಡೆದು ಮೇಲಕ್ಕೆತ್ತಿಕೊಂಡು ಅಗಸನು ಒಗೆಯುವ ರೀತಿಯಲ್ಲಿ ಬಿರುಸಾಗಿ

ಮೇಲಕ್ಕೆತ್ತಿ ಹೊಡೆದನು; ಆಗ ಒಳಗಿದ್ದ ಮಾಂಸವೂ ರಕ್ತವೂ ಎಲುಬುಗಳೂ ಜೀರೆಂದು ಶಬ್ದಮಾಡುತ್ತ ಎದ್ದು ಹಾರಿ ಚಿಮ್ಮಿ ಎಲ್ಲ ದಿಕ್ಕುಗಳಿಗೂ ಹಾರಿ ನೆಗೆಯುವ ಹಾಗೆ ಬೀಸಿ ಬಲು ಬಲಶಾಲಿಯಾದ ಭೀಮನು ಒಂದುಕೋಟಿ ಲೆಕ್ಕದವರೆಗಿನ ಮದ್ದಾನೆಗಳನ್ನು ಕೊಂದನು.-

ಮ|| ಸಿಡಿಲಂತೊರ್ಮೆಯೆ
ಪೊಯ್ಯೆ ಪೊಯ್ದ
ಭರದಿಂದೊಂದಾನೆ ತೋಲ್
ನೆತ್ತರೆ
ಲ್ವಡಗೊಂದೊಂದರೊಳೊಂ
ದುಮೊಂದದೆ
ಗದಾನಿರ್ಘಾತದಿಂ
ಮಾಯಮಾ|
ದೊಡೆ ಪೋ ತಪ್ಪಿದೆನೆಂದು
ಪಲ್ಮೊರೆದಗುರ್ವಪ್ಪನ್ನೆಗಂ
ಮೀಸೆಯಂ

ಕಡಿದಂ ತೋಳ್ವಲದೇಟ್ಗೆ ಮೆಚ್ಚುವನಿತರ್ಕುಗ್ರಾಜಿಯೊಳ್ ಭೀಮನಾ|| ೧೦೫ ||

ಪದ್ಯ-೧೦೫:ಪದವಿಭಾಗ-ಅರ್ಥ:ಸಿಡಿಲಂತೆ ಒರ್ಮೆಯೆ ಪೊಯ್ಯೆ ಪೊಯ್ದ ಭರದಿಂದೆ (ಡಿಲಿನ ಹಾಗೆ ಒಂದೇ ಸಲ ಹೊಡೆಯಲು ಹೊಡೆದ ವೇಗಕ್ಕೆ) ಒಂದಾನೆ ತೋಲ್ ನೆತ್ತರ್ ಎಲ್ವು ಅಡಗು ಒಂದೊಂದರೊಳೆ ಒಂದುಂ

ಒಂದದೆ (ಆನೆಯ ಚರ್ಮ ರಕ್ತ
ಎಲುಬು ಮಾಂಸಗಳು
ಒಂದರಲ್ಲಿ ಒಂದು ಸೇರಿರದೆ)
ಗದಾ ನಿರ್ಘಾತದಿಂ ಮಾಯಂ
ಆದೊಡೆ ಪೋ ತಪ್ಪಿದೆನೆಂದು
(ಗದೆಯ ಪೆಟ್ಟಿನಿಂದ
ಮಾಯವಾಗಲು ಭೀಮನು
‘ಹೋಗಲಿ! ತಪ್ಪುಮಾಡಿದೆ’
ಎಂದು) ಪಲ್ಮೊರೆದು
ಉಗುರ್ವು ಅಪ್ಪನ್ನೆಗಂ
ಮೀಸೆಯಂ ಕಡಿದಂ

(ಹಲ್ಲುಕಡಿದು
ಭಯಹುಟ್ಟುವಂತೆ
ಮೀಸೆಯನ್ನು ಕಡಿದನು.)
ತೋಳ್ವಲದ ಏೞ್ಗೆ
ಮೆಚ್ಚುವನಿತರ್ಕೆ
ಅಗ್ರಾಜಿಯೊಳ್ ಭೀಮನಾ (ಆ
ಯುದ್ಧರಂಗದಲ್ಲಿ ತನ್ನ
ಬಾಹುಶಕ್ತಿಯ ಏಳಿಗೆಯನ್ನು
ಮೆಚ್ಚುವಷ್ಟು --- ಹಲ್ಲುಕಡಿದು
ಭಯಹುಟ್ಟುವಂತೆ
ಮೀಸೆಯನ್ನು ಕಡಿದನು.)

ಪದ್ಯ-೧೦೫:ಅರ್ಥ:ಸಿಡಿಲಿನ ಹಾಗೆ ಒಂದೇ ಸಲ ಹೊಡೆಯಲು ಹೊಡೆದ ವೇಗಕ್ಕೆ ಆನೆಯ ಚರ್ಮ ರಕ್ತ ಎಲುಬು ಮಾಂಸಗಳು ಒಂದರಲ್ಲಿ ಒಂದು ಸೇರಿರದೆ ಗದೆಯ ಪೆಟ್ಟಿನಿಂದ ಮಾಯವಾಗಲು ಭೀಮನು ‘ಹೋಗಲಿ! ತಪ್ಪುಮಾಡಿದೆ’ ಎಂದು ಹಲ್ಲುಕಡಿದು ಭಯಹುಟ್ಟುವಂತೆ ಆ

ಯುದ್ಧರಂಗದಲ್ಲಿ ತನ್ನ ಬಾಹುಶಕ್ತಿಯ ಏಳಿಗೆಯನ್ನು ಮೆಚ್ಚುವಷ್ಟು ಭಯಂಕರವಾದ ರೀತಿಯಲ್ಲಿ ಮೀಸೆಯನ್ನು ಕಡಿದನು.

ಕಂ|| ಧ್ವಜಮುಂ
ಬಿಸುಗೆಯುಮೇಱ
ರ್ದ ಜೋದರುಂ ಬೆರಸು
ಗಜೆಯನರಿಗಜಘಟೆಯಂ|
ಗಿಜಿಗಿಜಿಯಾಗಿರೆ ಪೊಯ್ದೊಡೆ

ಗುಜುಗುಜುಗೊಂಡಾರ್ದರಮ ರರಂಬರತಳದೊಳ್|| ೧೦೬||

ಪದ್ಯ-೧೦೬:ಪದವಿಭಾಗ-ಅರ್ಥ:ಧ್ವಜಮುಂ ಬಿಸುಗೆಯು ಮೇಱಿರ್ದ ಜೋದರುಂ ಬೆರಸು (ಧ್ವಜ ಮತ್ತು ಅಂಬಾರಿಯನ್ನು ಹತ್ತಿದ್ದ ಯೋಧರನ್ನೂ ಕೂಡಿ) ಗಜೆಯಿಂ ಅರಿಗಜ ಘಟೆಯಂ ಗಿಜಿಗಿಜಿಯಾಗಿರೆ ಪೊಯ್ದೊಡೆ (ಗದೆಯಿಂದ ಅಜ್ಜಿಗುಜ್ಜಾಗುವ

ಹಾಗೆ ಹೊಡೆಯಲು) ಗುಜುಗುಜುಗೊಂಡು ಆರ್ದರು ಅಮರರ್ ಅಂಬರತಳದೊಳ್ (ಆಕಾಶಪ್ರದೇಶದಲ್ಲಿ ದೇವತೆಗಳು ತಮ್ಮಲ್ಲಿ ಪಿಸುಗುಟ್ಟಿಮಾತಾಡಿ ಆರ್ಭಟ ಮಾಡಿದರು.)

ಪದ್ಯ-೧೦೬:ಅರ್ಥ: ಧ್ವಜ ಮತ್ತು ಅಂಬಾರಿಯನ್ನು ಹತ್ತಿದ್ದ ಯೋಧರನ್ನೂ ಕೂಡಿ ಗದೆಯಿಂದ ಅಜ್ಜಿಗುಜ್ಜಾಗುವ

ಹಾಗೆ ಹೊಡೆಯಲು ಆಕಾಶಪ್ರದೇಶದಲ್ಲಿ ದೇವತೆಗಳು ಪಿಸುಗುಟ್ಟಿಮಾತಾಡಿ ಆರ್ಭಟ ಮಾಡಿದರು.

<u>ಧರ್ಮರಾಯ ಶಲ್ಯರ ಯುದ್ಧ</u>

ವ|| ಅಂತು ಗಾಳಿಗೊಡ್ಡಿದ ಘನಘಟೆಯಂತೆ ತನಗೊಡ್ಡಿದ ಕಳಿಂಗರಾಜ ಮತ್ತಮಾತಂಗ ಘಟೆಗಳಂ ಕಲಿಕುಲಿಂ

ಮಾಡಿದನನ್ನೆಗಮಿತ್ತ ಶಲ್ಯನ ಮೊನೆಯೊಳ್ ಧರ್ಮಪುತ್ರಂ ಕಾದಿ ನಾಲ್ಕು ಕಲ್ಲಂಬುಗಳಿಂದಾತನ ವರೂಥ ಸೂತಕೇತನಂಗಳಂ ಕಡಿದು-

ವಚನ:ಪದವಿಭಾಗ-

ಅರ್ಥ:ಅಂತು ಗಾಳಿಗೆ ಒಡ್ಡಿದ ಘನಘಟೆಯಂತೆ (ಹಾಗೆ ಗಾಳಿಗೆ ಸಿಕ್ಕಿದ ಮೋಡಗಳ ಸಮೂಹದ ಹಾಗೆ) ತನಗೆ ಒಡ್ಡಿದ ಕಳಿಂಗರಾಜ

ಮತ್ತಮಾತಂಗ ಘಟೆಗಳಂ
(ತನಗೆ ಎದುರಾದ
ಕಳಿಂಗರಾಜನ ಮದ್ದಾನೆಗಳ
ಸಮೂಹವನ್ನು) ಕಱಿಕುಱಿಂ
ಮಾಡಿದನು (ಕಳಕಳ-
ಕಳವಳ?- ಸಂಕಟಕ್ಕೀಡು
ಮಾಡಿದನು.) ಅನ್ನೆಗಂ ಇತ್ತ
ಶಲ್ಯನ ಮೊನೆಯೊಳ್
ಧರ್ಮಪುತ್ರಂ ಕಾದಿ (ಅಷ್ಟರಲ್ಲಿ
ಈ ಕಡೆ ಶಲ್ಯನ ಯುದ್ಧದಲ್ಲಿ
ಧರ್ಮರಾಜನು

ಯುದ್ಧಮಾಡಿ) ನಾಲ್ಕು ಕಲ್ಲಂಬುಗಳಿಂದ ಆತನ ವರೂಥ ಸೂತಕೇತನಂಗಳಂ ಕಡಿದು (ನಾಲ್ಕು ಮೊನಚಾದ ಬಾಣಗಳಿಂದ ಅವನ ತೇರು ಸಾರಥಿ ಧ್ವಜಗಳನ್ನು ಕತ್ತರಿಸಿ)-

ವಚನ:ಅರ್ಥ: ಹಾಗೆ ಗಾಳಿಗೆ ಎದುರಾದ ಮೋಡಗಳ ಸಮೂಹದ ಹಾಗೆ ತನಗೆ ಎದುರಾದ ಕಳಿಂಗರಾಜನ ಮದ್ದಾನೆಗಳ ಸಮೂಹವನ್ನು

ಸಂಕಟಕ್ಕೀಡು ಮಾಡಿದನು.
ಅಷ್ಟರಲ್ಲಿ ಈ ಕಡೆ ಶಲ್ಯನ
ಸೈನ್ಯದಲ್ಲಿ/ ಯುದ್ಧದಲ್ಲಿ
ಧರ್ಮರಾಜನು ಯುದ್ಧಮಾಡಿ
ನಾಲ್ಕು ಮೊನಚಾದ
ಬಾಣಗಳಿಂದ ಅವನ ತೇರು
ಸಾರಥಿ ಧ್ವಜಗಳನ್ನು ಕತ್ತರಿಸಿ-.

ಕಂ|| ಉರಮಂ ಬಿರಿವಿನಮಿಸೆ
ಮ
ದ್ರರಾಜನಳಿಯನ
ಪರಾಕ್ರಮಕ್ಕೊಸೆದು ಮೊಗಂ|

ಮುರಿಯದೆ ಪೆಱತುಂ ರಥಮಂ ತರಿಸಿ ಕನಲ್ದಡರ್ದು ಕದನಕಾಗಳೆ ನೆರೆದಂ|| ೧೦೭ ||

ಪದ್ಯ-೧೦೭:ಪದವಿಭಾಗ-ಅರ್ಥ:ಉರಮಂ ಬಿರಿವಿನಂ ಇಸೆ (ಶಲ್ಯನ ಎದೆಯನ್ನು ಬಿರಿದು ಹೋಗುವ ಹಾಗೆ ಹೊಡೆಯಲು) ಮದ್ರರಾಜನು ಅಳಿಯನ ಪರಾಕ್ರಮಕ್ಕೆ ಒಸೆದು (ಶಲ್ಯನು ಅಳಿಯನಾದ ಧರ್ಮರಾಜನ

ಪರಾಕ್ರಮಕ್ಕೆ
ಸಂತೋಷಪಟ್ಟು) ಮೊಗಂ
ಮುರಿಯದೆ (ಬೇಸರದಿಂದ
ಹಿಮ್ಮೆಟ್ಟದೆ) ಪೆಱತುಂ
ರಥಮಂ ತರಿಸಿ (ಬೇರೊಂದು
ರಥವನ್ನು ತರಿಸಿ) ಕನಲ್ದು
ಅಡರ್ದು ಕದನಕೆ ಆಗಳೆ
ನೆರೆದಂ(ಕೋಪದಿಂದ ಹತ್ತಿ
ಆಗಲೇ ಯುದ್ಧಕ್ಕೆ
ಸಿದ್ಧವಾದನು)

ಪದ್ಯ-೧೦೭:ಅರ್ಥ: ಶಲ್ಯನ ಎದೆಯನ್ನು ಬಿರಿದು ಹೋಗುವ ಹಾಗೆ ಹೊಡೆಯಲು, ಶಲ್ಯನು ಅಳಿಯನಾದ ಧರ್ಮರಾಜನ ಪರಾಕ್ರಮಕ್ಕೆ ಸಂತೋಷಪಟ್ಟು, ಹಿಮ್ಮೆಟ್ಟದೆ ಬೇರೊಂದು ರಥವನ್ನು ತರಿಸಿ ಕೋಪದಿಂದ ಹತ್ತಿ ಆಗಲೇ ಯುದ್ಧಕ್ಕೆ ಸಿದ್ಧವಾದನು.

ಮುಱಿದು ರಥಮಂ
ರಥಾಶ್ವಮ
ನುಱದೆರಡುಂ ಶರದೆ
ನಾಲ್ಕಱಿಂ ಸೂತನನೊಂ|
ದಱಿಕೆಯ ಸರಲೊಳ್
ಮಾಣದೆ
ತಱಿದಂ ಪಱಿವಿಗೆಯನೇಂ
ಕೃತಾಸ್ತ್ರನೊ ಶಲ್ಯಂ|| ೧೦೮ ||

ಪದ್ಯ-೧೦೮:ಪದವಿಭಾಗ-
ಅರ್ಥ:ಮುಱಿದು ರಥಮಂ
ರಥಾಶ್ವಮನು ಉಱದೆ

ಎರಡುಂ ಶರದೆ (ಶಲ್ಯನು
ರಭಸದಿಂದ ಅವನ ತೇರನ್ನು
ರಥದ ಕುದುರೆಯನ್ನೂ ಎರಡು
ಬಾಣಗಳಿಂದ ಮುರಿದು,)
ನಾಲ್ಕಱಿಂ ಸೂತನನು ಒಂದು
ಅಱಿಕೆಯ ಸರಲೊಳ್
(ನಾಲ್ಕರಿಂದ ಸಾರಥಿಯನ್ನೂ
ಒಂದು ಪ್ರಸಿದ್ಧವಾದ
ಬಾಣದಿಂದ) ಮಾಣದೆ
ತಱಿದಂ ಪಱಿವಿಗೆಯನು
(ಧ್ವಜವನ್ನೂ ಬಿಡದೆ ತರಿದು

ಹಾಕಿದನು.) ಏಂ ಕೃತಾಸ್ತ್ರನೊ ಶಲ್ಯಂ ()

ಪದ್ಯ-೧೦೮:ಅರ್ಥ: ಶಲ್ಯನು ರಭಸದಿಂದ ಅವನ ತೇರನ್ನು ರಥದ ಕುದುರೆಯನ್ನೂ ಎರಡು ಬಾಣಗಳಿಂದ ಮುರಿದು, ನಾಲ್ಕರಿಂದ ಸಾರಥಿಯನ್ನೂ ಒಂದು ಪ್ರಸಿದ್ಧವಾದ ಬಾಣದಿಂದ ಧ್ವಜವನ್ನೂ ಬಿಡದೆ ತರಿದು ಹಾಕಿದನು. ಶಲ್ಯನು ಶಸ್ತ್ರವಿದ್ಯೆಯಲ್ಲಿ

ಮಹಾಪಂಡಿತನೋ!

ಪಂಡಿತನೇ ಸರಿ!

ವ|| ಅಂತು ವಿರಥನಂ ಮಾಡಿ ಧರ್ಮಪುತ್ರನಂ ಪಿಡಿಯಲೆಯ್ತರ್ಪ ಮದ್ರರಾಜನಂ ಪನ್ನಿರ್ಛಾಸಿರಮಾನೆವೆರಸು ನೃಪನ ಚಕ್ರರಕ್ಷಕಂ ನೀಳನೆಡೆಗೊಂಡು ತಾಗಿದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ವಿರಥನಂ ಮಾಡಿ ಧರ್ಮಪುತ್ರನಂ (ಹಾಗೆ ಧರ್ಮರಾಜನನ್ನು ರಥವಿಲ್ಲದವನನ್ನಾಗಿ) ಪಿಡಿಯಲ್ ಐ/ಎಯ್ತರ್ಪ ಮದ್ರರಾಜನಂ (ಅವನನ್ನು ಹಿಡಿಯಲು ಬರುತ್ತಿದ್ದ ಶಲ್ಯನನ್ನು,) ಪನ್ನಿರ್ಛಾಸಿರಮುಂ ಆನೆ ವೆರಸು (ಹನ್ನೆರಡು ಸಾವಿರ

ಆನೆಗಳೊಡನೆ ಕೂಡಿ) ನೃಪನ ಚಕ್ರರಕ್ಷಕಂ ನೀಳನು ಎಡೆಗೊಂಡು ತಾಗಿದಾಗಳ್ (ಧರ್ಮರಾಜನ ಸೇನಾಪತಿ ಯಾದ ನೀಲನು ಮಧ್ಯೆ ನುಗ್ಗಿ ಪ್ರತಿಭಟಿಸಿದಾಗ-)

ವಚನ:ಅರ್ಥ:ಹಾಗೆ ಧರ್ಮರಾಜನನ್ನು ರಥವಿಲ್ಲದವನನ್ನಾಗಿ ಮಾಡಿ ಅವನನ್ನು ಹಿಡಿಯಲು ಬರುತ್ತಿದ್ದ ಶಲ್ಯನನ್ನು,

ಧರ್ಮರಾಜನ ಸೇನಾಪತಿ
ಯಾದ ನೀಲನು ಮಧ್ಯೆ ನುಗ್ಗಿ
ಹನ್ನೆರಡು ಸಾವಿರ
ಆನೆಗಳೊಡನೆ ಕೂಡಿ
ಶಲ್ಯನನ್ನು ಎದುರಿಸಿದನು.

ಕಂ|| ಮೃಗರಾಜನಖರ ಬಾಣಾ
ಳಿಗಳಿಂ ತೆಗೆರೆನೆರೆದು
ಶಲ್ಯನುಱದಿಸೆ ಬಿದುವಂ|
ಮೃಗರಾಜಂಗಳೆ ಪೋೞ್ವವೊ
ಲಗಲ್ವಿನಂ ಪೋೞ್ದುವುಗ್ರ
ಬಾಣಾವಳಿಗಳ್|| ೧೦೯ ||

ಪದ್ಯ-೧೦೯:ಪದವಿಭಾಗ-ಅರ್ಥ:ಮೃಗರಾಜನಖರ ಬಾಣಾಳಿಗಳಿಂ (ಸಿಂಹದ ಉಗುರಿನಂತಿದ್ದ ಬಾಣಗಳ ಸಮೂಹದಿಂದ) ತೆಗೆರೆನೆರೆದು (ಪೂರ್ಣವಾಗಿ ಎಳೆದು) ಶಲ್ಯನು ಉಱದೆ ಇಸೆ (ಉರದೆ- ಬಿಡದೆ ಹೊಡೆಯಲು) ಬಿದುವಂ ಮೃಗರಾಜಂಗಳೆ ಪೋೞ್ವಿವೊಲ್

(ಹೋಳುವಂತೆ, ಸೀಳುವಂತೆ) ಅಗಲ್ಚಿನಂ (ಅಗಲಿಸುವಂತೆ) (ಕುಂಭಸ್ಥಳಗಳನ್ನು ಸಿಂಹಗಳೇ ಸೀಳುವ ಹಾಗೆ) ಪೋೞ್ದುವು ಉಗ್ರ ಬಾಣಾವಳಿಗಳ್ (ಉಗ್ರ ಬಾಣಸಮೂಹಗಳು ಹೋಳಗಳಾಗುವ ಹಾಗೆ ಸೀಳಿ ಹಾಕಿದುವು)

ಪದ್ಯ-೧೦೯:ಅರ್ಥ:ಸಿಂಹದ ಉಗುರಿನಂತಿದ್ದ ಬಾಣಗಳ ಸಮೂಹದಿಂದ ಶಲ್ಯನು

ಪೂರ್ಣವಾಗಿ ಎಳೆದು ಹೊಡೆಯಲಾಗಿ ಕುಂಭಸ್ಥಳಗಳನ್ನು ಸಿಂಹಗಳೇ ಸೀಳುವ ಹಾಗೆ ಆ ತೀಕ್ಷ್ಣವಾದ ಬಾಣಸಮೂಹಗಳು ಕುಂಭಸ್ಥಳಗಳನ್ನು ಬೇರೆಯಾಗುವ ಹಾಗೆ ಹೋಳಗಳಾಗುವ ಹಾಗೆ ಸೀಳಿ ಹಾಕಿದುವು.

ವ|| ಅಂತಾ ದಂತಿಘಟೆಯಂ ಪಡಲ್ವಡಿಸಿ

ನೀಳನೇಱಿದಾನೆಯುಮನೂಱಿ ಕೊಂಡೆಚ್ಚಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಆ ದಂತಿಘಟೆಯಂ ಪಡಲ್ವಡಿಸಿ (ಆನೆಯ ಸಮೂಹವನ್ನು ಚೆಲ್ಲಾಪಿಲ್ಲಿಯಾಗುವ ಹಾಗೆ ಮಾಡಿ) ನೀಳನು ಏಱಿದ ಆನೆಯುಮಂ ಊಱಿ (ಊರಿ) ಕೊಂಡು ಎಚ್ಚಾಗಳ್ (ನೀಲನು ಹತ್ತಿದ ಆನೆಯನ್ನು

ಬಲವಾಗಿ ಅಮುಕಿ ಹೊಡೆದಾಗ)-

ವಚನ:ಅರ್ಥ:ಹಾಗೆ ಆ ಆನೆಯ ಸಮೂಹವನ್ನು ಚೆಲ್ಲಾಪಿಲ್ಲಿಯಾಗುವ ಹಾಗೆ ಮಾಡಿ ನೀಲನು ಹತ್ತಿದ ಆನೆಯನ್ನೂ ಬಲವಾಗಿ ಅಮುಕಿ ಹೊಡೆದನು.

ಕಂ|| ಪೆಱಗಿಡುವ ದಂತಿಯಂ ಕಲಿ

ನಿಱಿಸಿ ಚಲಂ ನೆಲಸೆ ತೋಱಿಕುಡುವುದುಮಾಗಳ್| ಪೊಱಮುಯ್ಯುವರಂ ತೆಗೆನೆರೆ ದುಱಿದೆಚ್ಚಂ ಶಲ್ಯನಾಂತ ನೀಳನ ತಲೆಯಂ|| ೧೧೦ ||

ಪದ್ಯ-೧೧೦:ಪದವಿಭಾಗ-ಅರ್ಥ:ಪೆಱಗಿಡುವ ದಂತಿಯಂ ಕಲಿ ನಿಱಿಸಿ (ನಿರಿಸಿ- ನಿಲ್ಲಿಸಿ; ಹಿಮ್ಮೆಟ್ಟುತ್ತಿದ್ದ ಆನೆಯನ್ನು ಶೂರನಾದ ನೀಲನು ನಿಲ್ಲಿಸಿ) ಚಲಂ ನೆಲಸೆ

(ಹಟವು ಹೆಚ್ಚಲು, ಹೆಚ್ಚಿನ
ಛಲದಿಂದ) ತೋಱಿ
ಕುಡುವುದುಂ ಆಗಳ್
(ಶಲ್ಯನನ್ನು ತೋರಿಸಿ
ಛೂಬಿಡಲು)
ಪೊಱಮುಯ್ವುವರಂ
(ಭುಜದವರೆಗೆ)
ತೆಗೆನೆರೆದು(ಕಿವಿಯವರೆಗೆ
ಎಳೆದು) ಉಱದೆ ಎಚ್ಚಂ
(ಭುಜದವರೆಗೆ ಬಾಣಗಳನ್ನು
ಸೆಳೆದು ಉರದೆ-ಸಾವಕಾಶ

ಮಾಡದೆ- ಹೊಡೆದನು.)
ಶಲ್ಯನು ಆಂತ ನೀಳನ
ತಲೆಯಂ (ಆಗ ಶಲ್ಯನು
ಪ್ರತಿಭಟಿಸಿದ ನೀಲನ
ತಲೆಯನ್ನು)

ಪದ್ಯ-೧೧೦:ಅರ್ಥ:
ಹಿಮ್ಮೆಟ್ಟುತ್ತಿದ್ದ ಆನೆಯನ್ನು
ಶೂರನಾದ ನೀಲನು ನಿಲ್ಲಿಸಿ
ಹೆಚ್ಚಿನ ಛಲದಿಂದ ಅದನ್ನು
ಶಲ್ಯನ ಮೇಲೆ ತೋರಿಸಿ
ಛೂಬಿಡಲು, ಆಗ ಶಲ್ಯನು

ಭುಜದವರೆಗೆ ಬಾಣಗಳನ್ನು ಸೆಳೆದು ತನ್ನನ್ನು ಪ್ರತಿಭಟಿಸಿದ ನೀಲನ ತಲೆಯನ್ನು ಸಾವಕಾಶಮಾಡದೆ-ವೇಗವಾಗಿ ಹೊಡೆದನು.

ವ|| ಅಂತು ನೀಳಂ ನೀಳಗಿರಿಯ ಮೇಗಣಿಂ ಬಱಸಿಡಿಲ್ ಪೊಡೆಯೆ ಕೆಡೆವ ಮೃಗರಾಜನಂತೆ ಹಸ್ತಿಮಸ್ತಕದಿಂ ಕೆಡೆವುದುಮತ್ತ ಭೂರಿಶ್ರವನ ಮೊನೆಯೊಳ್

ಕಾದುತ್ತಿರ್ದುತ್ತರಂ ನಾಲ್ವತ್ತು ಸಾಸಿರಮಾನೆವೆರಸಪರಸನಂ ಪೆಱಗಿಕ್ಕಿ ಬಂದಾಂತಾಗಳ್-

ಉತ್ತರನ ಮರಣ

ವಚನ:ಪದವಿಭಾಗ-

ಅರ್ಥ:ಅಂತು ನೀಳಂ ನೀಳಗಿರಿಯ ಮೇಗಣಿಂ (ನೀಲನು ಬರಸಿಡಿಲು ಹೊಡೆಯಲು ನೀಲಪರ್ವತದ ಮೇಲಿನಿಂದ) ಬಱಸಿಡಿಲ್

ಪೊಡೆಯೆ ಕೆಡೆವ
ಮೃಗರಾಜನಂತೆ (ವೇಗವಾಗಿ
ಕೆಳಗುರುಳುವ ಸಿಂಹದ ಹಾಗೆ)
ಹಸ್ತಿಮಸ್ತಕದಿಂ ಕೆಡೆವುದುಂ
ಅತ್ತ (ಆನೆಯ
ಕುಂಭಸ್ಥಳದಿಂದ ಕೆಳಗೆ
ಬಿದ್ದನು. ಆ ಕಡೆ) ಭೂರಿಶ್ರವನ
ಮೊನೆಯೊಳ್ ಕಾದುತ್ತಿರ್ದ
ಉತ್ತರಂ (ಆ ಕಡೆ ಭೂರಿಶ್ರವನ
ಯುದ್ಧದಲ್ಲಿ ಕಾದಾಡುತ್ತಿದ್ದ
ಉತ್ತರನು) ನಾಲ್ವತ್ತು ಸಾಸಿರಂ

ಆನೆವೆರಸು ಅರಸನಂ ಪೆಱಗಿಕ್ಕಿ ಬಂದು ಆಂತಾಗಳ್ (ನಲವತ್ತುಸಾವಿರ ಆನೆಯೊಡನೆ ಕೂಡಿ ಬಂದು ರಾಜನನ್ನು ಹಿಂದಿಕ್ಕಿ ಪ್ರತಿಭಟಿಸಿದಾಗ)-

ವಚನ:ಅರ್ಥ:ಹಾಗೆ ನೀಲನು ಬರಸಿಡಿಲು ಹೊಡೆಯಲು ನೀಲಪರ್ವತದ ಮೇಲಿನಿಂದ ವೇಗವಾಗಿ ಕೆಳಗುರುಳುವ ಸಿಂಹದ ಹಾಗೆ ಆನೆಯ

ಕುಂಭಸ್ಥಳದಿಂದ ಕೆಳಗೆ ಬಿದ್ದನು. ಆ ಕಡೆ ಭೂರಿಶ್ರವನ ಯುದ್ಧದಲ್ಲಿ ಕಾದಾಡುತ್ತಿದ್ದ ಉತ್ತರನು ನಲವತ್ತುಸಾವಿರ ಆನೆಯೊಡನೆ ಕೂಡಿ ಬಂದು ರಾಜನನ್ನು ಹಿಂದಿಕ್ಕಿ ಪ್ರತಿಭಟಿಸಿದನು. ಆಗ-

ಚಂ|| ನಗೆ ಪಗೆವಾಡಿ
ಗೋಗ್ರಹಣದೊಳ್
ಪೊಱಮಾಱಿದ
ಬನ್ನಮೊಂದು ನೆ

ಟ್ಟಗೆ ಮನಮಂ ಪಳಂಚಲೆಯೆ
ಮಾಣದೆ
ಶಲ್ಯನನಂದಶಲ್ಯನಂ|
ಬಗೆವವೊಲೇೞಿದಂ ಬಗೆದು
ದಂತಿಯನಾಗಡೆ
ತೋೞಿಕೊಟ್ಟು ತೊ
ಟ್ಟಗೆ ರಥಮಂ ಪಡಲ್ವಡಿಸಿ
ಪೊೞ್ದನರಾತಿಯನಸ್ತ್ರಕೋಟಿ
ಯಿಂ|| ೧೧೧||

ಪದ್ಯ-೧೧೧:ಪದವಿಭಾಗ-

ಅರ್ಥ:ನಗೆ ಪಗೆವಾಡಿ

ಗೋಗ್ರಹಣದೊಳ್
ಪೊಱಮಾಱಿದ
ಬನ್ನಮೊಂದು
(ಗೋಗ್ರಹಣಕಾಲದಲ್ಲಿ
ಶತ್ರುಸೈನ್ಯವು ನುಗ್ಗುವ ಹಾಗೆ
ಬೆನ್ನಿತ್ತುಹೋದ
ಅವಮಾನವೊಂದು) ನೆಟ್ಟಗೆ
ಮನಮಂ ಪಳಂಚಲೆಯೆ
(ನೇರವಾಗಿ ತನ್ನ ಮನಸ್ಸನ್ನು
ತಗುಲಿ ಹಿಂಸಿಸಲು) ಮಾಣದೆ
ಶಲ್ಯನಂ ಅಂದು ಅಶಲ್ಯನಂ

ಬಗೆವವೊಲು ಏಳಿದಂ ಬಗೆದು
(ತಡೆಯದೆ ಉತ್ತರನು
ಶತ್ರುರಾಜನನ್ನು
ಅಸ್ತ್ರರಹಿತನಾದವನನ್ನು
ನೋಡುವ ಹಾಗೆ
ಉದಾಸೀನದಿಂದ ಕಡೆಗಣಿಸಿ
ನೋಡಿ) ದಂತಿಯನು ಆಗಡೆ
ತೋಱಿಕೊಟ್ಟು ತೊಟ್ಟಗೆ (ಆಗ
ತನ್ನ ಆನೆಯನ್ನು ಅವನ
ಮೇಲೆ ಛೂಬಿಟ್ಟು ಒಮ್ಮೆಯೇ)
ರಥಮಂ ಪಡಲ್ವಡಿಸಿ

(ರಥವನ್ನು ಕೆಳಗುರುಳಿಸಿ ಶತ್ರುವನ್ನು ಬಾಣಸಮೂಹದಿಂದ ಹೂಳಿದನು.) ಪೂೞ್ದಿನ್ (ಹೂಳಿದನು) (ಆ) ಅರಾತಿಯನು ಅಸ್ತ್ರಕೋಟಿಯಿಂ (ಬಾಣಸಮೂಹದಿಂದ ಹೂಳಿದನು.)

ಪದ್ಯ-೧೧೧:ಅರ್ಥ:ಉತ್ತರನಿಗೆ, ಹಿಂದೆ

ಗೋಗ್ರಹಣಕಾಲದಲ್ಲಿ
ಶತ್ರುಸೈನ್ಯವು ನುಗ್ಗುವ ಹಾಗೆ
ಬೆನ್ನಿತ್ತುಹೋದ ಅವಮಾನವು
ನೇರವಾಗಿ ತನ್ನ ಮನಸ್ಸನ್ನು
ತಗುಲಿ ಹಿಂಸಿಸಲು ತಡೆಯದೆ
ಉತ್ತರನು ಶತ್ರುರಾಜನನ್ನು
ಅಸ್ತ್ರರಹಿತನಾದವನನ್ನು
ನೋಡುವ ಹಾಗೆ
ಉದಾಸೀನದಿಂದ ಕಡೆಗಣಿಸಿ
ನೋಡಿ (ತನ್ನ) ಆನೆಯನ್ನು
ಅವನ ಮೇಲೆ ಛೂಬಿಟ್ಟು

ಒಮ್ಮೆಯೇ ರಥವನ್ನು ಕೆಳಗುರುಳಿಸಿ ಶತ್ರುವನ್ನು ಬಾಣಸಮೂಹದಿಂದ ಹೂಳಿದನು.

ವ|| ಅಂತುತ್ತರಂ ತನಗಳವುಮದಟುಂ ರಾಜೋತ್ತರಮಾಗೆ ಕಾದಿದೊಡೆ ಶಲ್ಯಂ ವಿರಥನಾಗಿ ಸಿಗ್ಗಾಗಿ-

ವಚನ:ಪದವಿಭಾಗ-

ಅರ್ಥ:ಅಂತು ಉತ್ತರಂ ತನಗೆ

ಅಳವುಂ ಅದಟುಂ
(ಪರಾಕ್ರಮವೂ ಶಕ್ತಿಯೂ)
ರಾಜೋತ್ತರಂ ಆಗೆ
(ರಾಜಯೋಗ್ಯವಾಗುವಂತೆ)
ಕಾದಿದೊಡೆ ಶಲ್ಯಂ ವಿರಥನಾಗಿ
(ಯುದ್ಧಮಾಡಲು ಶಲ್ಯನು
ರಥಹೀನನಾಗಿ) ಸಿಗ್ಗಾಗಿ
(ಅವಮಾನಗೊಂಡು-)-
ವಚನ:ಅರ್ಥ:ವ|| ಹಾಗೆ
ಉತ್ತರನು ತನಗೆ
ಪರಾಕ್ರಮವೂ ಶಕ್ತಿಯೂ

ರಾಜಯೋಗ್ಯವಾಗುವಂತೆ

ಯುದ್ಧಮಾಡಲು ಶಲ್ಯನು

ರಥಹೀನನಾಗಿ

ಅವಮಾನಗೊಂಡು-

ಉ|| ತಾರಕನಂ ಗುಹಂ

ಮುಳಿದು

ಶಕ್ತಿಯಿನಾಂತಿಡುವಂತರಾತಿ

ಸಂ

ಹಾರಕವಪ್ಪ ವಿಸ್ಫುರಿತ

ಶಕ್ತಿಯಿನಾತನನಿಟ್ಟು ಖಡ್ಗದಿಂ|

ವಾರಣಮಂ ಪಡಲ್ವಡಿಸಿ ತಾಂ ಪೆಱಪಿಂಗುವುದುಂ ಬಲಕ್ಕೆ ಹಾ ಹಾ ರವಮುಣ್ಮೆ ದಂತಿವೆರಸಾಜಿಯೊಳುತ್ತರನ ೞ್ಗಿ ತೞ್ಗಿದಂ|| ೧೧೨ ||

ಪದ್ಯ-೧೧೨:ಪದವಿಭಾಗ-ಅರ್ಥ:ತಾರಕನಂ ಗುಹಂ ಮುಳಿದು (ತಾರಕಾಸುರನನ್ನು ಷಣ್ಮುಖನು ಸಿಟ್ಟಿನಿಂದ ಎದುರಿಸಿ) ಶಕ್ತಿಯಿಂ ಆಂತು ಇಡುವಂತೆ ಆರಾತಿ

ಸಂಹಾರಕವಪ್ಪ
(ಶಕ್ತ್ಯಾಯುಧದಿಂದ
ತೆಗೆದುಕೊಂಡು ಹೊಡೆದ ಹಾಗೆ
ಶತ್ರುಸಂಹಾರವೂ
ಕಾಂತಿಯುಕ್ತವೂ ಆದ)
ವಿಸ್ಫುರಿತ ಶಕ್ತಿಯಿಂ ಆತನನು
ಇಟ್ಟು (ಶಕ್ತ್ಯಾಯುಧದಿಂದ
ಉತ್ತರನನ್ನು ಹೊಡೆದು)
ಖಡ್ಗದಿಂ ವಾರಣಮಂ
ಪಡಲ್ವಡಿಸಿ (ತನ್ನ ಖಡ್ಗದಿಂದ
ಆನೆಯನ್ನು ಕೆಳಗುರುಳಿಸಿ)

ತಾಂ ಪೆಱಪಿಂಗುವುದುಂ (ಶಲ್ಯನು ತಾನು ಹಿಂದೆ ಸರಿಯುತ್ತಿರಲು) ಬಲಕ್ಕೆ ಹಾಹಾ ರವಮುಣ್ಮೆ (ಪಾಂಡವಸೈನ್ಯದಲ್ಲಿ ಹಾ ಹಾ ಕಾರ ಕೂಗನ್ನುಂಟುಮಾಡಿ) ದಂತಿವೆರಸು ಆಜಿಯೊಳು ಉತ್ತರನು ಅೞ್ಗಿ ತೞ್ಗಿದಂ(ಉತ್ತರನು ಆನೆಯೊಡನೆ ಸತ್ತು ಕೆಳಗುರುಳಿದನು)

ಪದ್ಯ-೧೧೨:ಅರ್ಥ:ಹಿಂದೆ ತಾರಕಾಸುರನನ್ನು ಷಣ್ಮುಖನು ಸಿಟ್ಟಿನಿಂದ ಎದುರಿಸಿ ಶಕ್ತ್ಯಾಯುಧದಿಂದ ತೆಗೆದುಕೊಂಡು ಹೊಡೆದ ಹಾಗೆ ಶತ್ರುಸಂಹಾರವೂ ಕಾಂತಿಯುಕ್ತವೂ ಆದ ಶಕ್ತ್ಯಾಯುಧದಿಂದ ಉತ್ತರನನ್ನು ಹೊಡೆದು ಆತನ ಆನೆಯನ್ನು ಕೆಳಗುರುಳಿಸಿದನು.

ಪಾಂಡವಸೈನ್ಯದಲ್ಲಿ ಹಾ ಹಾ ಕಾರ ಕೂಗನ್ನುಂಟುಮಾಡಿ ಶಲ್ಯನು ತಾನು ಹಿಂದೆ ಸರಿಯುತ್ತಿರಲು ಯುದ್ಧದಲ್ಲಿ ಉತ್ತರನು ಆನೆಯೊಡನೆ ಸತ್ತು ಕೆಳಗುರುಳಿದನು (ಕುಸಿದನು).

ವ|| ಅಂತುತ್ತರನಂ ಜವಂಗೆ ಪೊಸತಿಕ್ಕುವಂತಿಕ್ಕಿ ಬಸವೞಿದ ಶಲ್ಯನಂ ಕೃತವರ್ಮಂ ತನ್ನ ರಥಮನೇಱಿಸಿಕೊಂಡು

**ನಿಂದನನ್ನೆಗ
ಮಿತ್ತಲಮರಾಪಗಾಸುತನ
ಮೊನೆಯೊಳ್ ಭರಂಗೆಯ್ದು
ಕಾದುವ ಸೇನಾನಾಯಕಂ
ಶ್ವೇತಂ ತನ್ನ
ತಮ್ಮನತೀತನಾದುದಂ ಕೇಳ್ದು-**

ವಚನ:ಪದವಿಭಾಗ-ಅರ್ಥ:

ಅಂತು ಉತ್ತರನಂ ಜವಂಗೆ
ಪೊಸತಿಕ್ಕುವಂತೆ ಇಕ್ಕಿ
(ಉತ್ತರನನ್ನು ಯಮನಿಗೆ
ಹೊಸದಾಗಿ ಬಲಿ ಕೊಡುವ

ಹಾಗೆ ಬಲಿಕೊಟ್ಟು)
ಬಸವಳಿದ ಶಲ್ಯನಂ
ಕೃತವರ್ಮಂ ತನ್ನ ರಥಮನು
ಏಱಿಸಿಕೊಂಡು (ಶಕ್ತಿಗುಂದಿದ
ಶಲ್ಯನನ್ನು ಕೃತವರ್ಮನು ತನ್ನ
ರಥದಲ್ಲಿ ಹತ್ತಿಕೊಂಡು)
ನಿಂದನು ಅನ್ನೆಗಂ ಇತ್ತಲ್
ಅಮರಾಪಗಾಸುತನ
(ಅಷ್ಟರಲ್ಲಿ ಈಕಡೆ ಭೀಷ್ಮನು;
ಅಮರಾಪಗಾ ಸುತ -
ಸ್ವರ್ಗದಿಂದ ಇಳಿದ ಗಂಗೆಯ

ಮಗ) ಮೊನೆಯೊಳ್
(ಯುದ್ಧದಲ್ಲಿ) ಭರಂಗೆಯ್ದು
ಕಾದುವ ಸೇನಾನಾಯಕಂ
ಶ್ವೇತಂ (ಆರ್ಭಟಿಸಿ ವೇಗದಿಂದ
ಯುದ್ಧಮಾಡುತ್ತಿದ್ದ
ಸೇನಾನಾಯಕನಾದ ಶ್ವೇತನು)
ತನ್ನ ತಮ್ಮನು
ಅತೀತನಾದುದಂ ಕೇಳ್ದು
(ಸತ್ತುಹೋದುದನ್ನು ಕೇಳಿ)-
ವಚನ:ಅರ್ಥ:ಹಾಗೆ
ಉತ್ತರನನ್ನು ಯಮನಿಗೆ

ಹೊಸದಾಗಿ ಬಲಿ ಕೊಡುವ ಹಾಗೆ ಬಲಿಕೊಟ್ಟು ಶಕ್ತಿಗುಂದಿದ ಶಲ್ಯನನ್ನು ಕೃತವರ್ಮನು ತನ್ನ ರಥದಲ್ಲಿ ಹತ್ತಿಕೊಂಡು ತಾನು ಯುದ್ಧಕ್ಕೆ ನಿಂತನು. ಅಷ್ಟರಲ್ಲಿ ಈಕಡೆ ಭೀಷ್ಮನು ಯುದ್ಧದಲ್ಲಿ ಆರ್ಭಟಿಸಿ ವೇಗದಿಂದ ಯುದ್ಧಮಾಡುತ್ತಿದ್ದ ಸೇನಾನಾಯಕನಾದ ಶ್ವೇತನು

ತನ್ನ ತಮ್ಮನು

ಸತ್ತುಹೋದುದನ್ನು ಕೇಳಿದನು-

ಚಂ||

ಪ್ರಳಯಪಯೋಧಿವೋಲಳು

ರ್ದು ಪೆಂಕುಳಿಗೊಂಡ

ಮದೇಭವೈರಿವೋಲ್

ಕೆಳರ್ದು

ಲಯಾಗ್ನಿವೋಲಳುರ್ದು

ಮದ್ರಮಹೀಶನನೆಯ್ದೆ ತಾಗೆ

ಬ|

ಳ್ವಳ ಬಳೆದತ್ತು ಶಲ್ಯನೊಳೆ

ಕಾಳೆಗಮೀಗಳೆನುತ್ತುಮಂತೆ ಕೆ

ಯ್ಕೊಳಲಹಿಕೇತು

ಸಿಂಧುತನಯಂಬೆರಸಾಗಡೆ

ಬಂದು ತಾಗಿದಂ|| ೧೧೩

ಪದ್ಯ-೧೧೩:ಪದವಿಭಾಗ-

ಅರ್ಥ:ಪ್ರಳಯಪಯೋಧಿ

ವೋಲ್ ಅಳುರ್ದು

(ಪ್ರಳಯಕಾಲದ

ಸಮುದ್ರದಂತೆ ವ್ಯಾಪಿಸಿ)

ಪೆಂಕುಳಿಗೊಂಡ

ಮದೇಭವೈರಿವೋಲ್
ಕೆಳದರ್ುು (ಹುಚ್ಚುಹಿಡಿದ
ಸಿಂಹದಂತೆ ಕೆರಳಿ,)
ಲಯಾಗ್ನಿವೋಲ್ ಅಳುರ್ದುು
(ಪ್ರಳಯಾಗ್ನಿಯಂತೆ ಹರಡಿ)
ಮದ್ರಮಹೀಶನನು ಎಯ್ದೆ
ತಾಗೆ (ಶಲ್ಯರಾಜನನ್ನು
ವೇಗದಿಂದ ಬಂದು
ಎದುರಿಸಿದನು. ಹೀಗೆ
ತಾಗಲು,) ಬಳ್ವಳ ಬಳೆದತ್ತು
ಶಲ್ಯನೊಳೆ ಕಾಳೆಗಂ ಈಗಳೆ

ಎನುತ್ತುಂ (ಈಗ ಶಲ್ಯನಲ್ಲಿ
ಯುದ್ಧವು ಶಕ್ತಿಮೀರಿ
ಅಧಿಕವಾಗಿ ಬೆಳೆದಿದೆ ಎಂದು
ಹೇಳುತ್ತಾ)ಅಂತೆ ಕೆಯ್ಕೊಳಲ್
(ತಾನೇ ವಹಿಸಿಕೊಳ್ಳಲು)
ಅಹಿಕೇತು (ಅಹಿ- ಸರ್ಪ
ಕೇತನ- ಧ್ವಜದವ; ಹಾಗೆಯೇ
ದುರ್ಯೋಧನನು ಶಲ್ಯನನ್ನು
ರಕ್ಷಿಸುವುದಕ್ಕಾಗಿ ಆ
ಯುದ್ಧಭಾರವನ್ನು ತಾನೇ
ವಹಿಸುವುದಕ್ಕಾಗಿ)

ಸಿಂಧುತನಯಂಬೆರಸು ಆಗಡೆ ಬಂದು ತಾಗಿದಂ (ಭೀಷ್ಮನೊಡನೆ ಅಲ್ಲಿಗೆ ಬಂದು ಯುದ್ಧಕ್ಕೆನಿಂತನು.)

ಪದ್ಯ-00:ಅರ್ಥ:ಸೇನಾಧಿಪತಿ ದ್ರುಪದನ ಮಗ ಶ್ವೇತನು ಪ್ರಳಯಕಾಲದ ಸಮುದ್ರದಂತೆ ವ್ಯಾಪಿಸಿ ಹುಚ್ಚುಹಿಡಿದ ಸಿಂಹದಂತೆ ಕೆರಳಿ, ಪ್ರಳಯಾಗ್ನಿಯಂತೆ ಹರಡಿ ಸುಟ್ಟು, ಶಲ್ಯರಾಜನನ್ನು

ವೇಗದಿಂದ ಬಂದು ಎದುರಿಸಿದನು/ ತಾಗಲು. ಈಗ ಶಲ್ಯನಲ್ಲಿ ಯುದ್ಧವು ಶಕ್ತಿಮೀರಿ ಅಧಿಕವಾಗಿ ಬೆಳೆದಿದೆ ಎಂದು ಹೇಳುತ್ತಾ, ಕೂಡಲೆ ದುರ್ಯೋಧನನು ಶಲ್ಯನನ್ನು ರಕ್ಷಿಸುವುದಕ್ಕಾಗಿ ಆ ಯುದ್ಧಭಾರವನ್ನು ತಾನೇ ವಹಿಸುವುದಕ್ಕಾಗಿ ಭೀಷ್ಮನೊಡನೆ ಅಲ್ಲಿಗೆ ಬಂದು ಯುದ್ಧಕ್ಕೆನಿಂತನು.

ವ|| ಇತ್ತ ಧರ್ಮಪುತ್ರನುಂ
ವಿರಾಟ ಧೃಷ್ಟದ್ಯುಮ್ನ ಶಿಖಂಡಿ
ಚೇಕಿತಾನ ಕೇಕಯ ಸಾತ್ಯಕಿ
ನಕುಳ ಸಹದೇವ ಸೌಭದ್ರ
ಪ್ರಮುಖ ನಾಯಕರ್ವೆರಸು
ರಣಪಟಹಂಗಳಂ ನೆಗಱ್ಚೆ
ಕೃಪ ಕೃತವರ್ಮ ವಿವಿಂಶತಿ
ವಿಕರ್ಣ ಚಿತ್ರಸೇನ
ಸೋಮದತ್ತ ಭಗದತ್ತ ಬಾಹ್ಲೀಕ
ಭೂರಿಶ್ರವ ಪ್ರಭೃತಿಗಳ್

ಗಣಿಸನ್ನೆಗೈದು ಕಾದುವಾಗಳ್-

ವಚನ:ಪದವಿಭಾಗ-

ಅರ್ಥ:ಇತ್ತ ಧರ್ಮಪುತ್ರನುಂ ವಿರಾಟ ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಕೇಕಯ ಸಾತ್ಯಕಿ ನಕುಳ ಸಹದೇವ ಸೌಭದ್ರ ಪ್ರಮುಖ ನಾಯಕರ್ವೆರಸು (ನಾಯಕರೊಡಗೂಡಿ) ರಣಪಟಹಂಗಳಂ ನೆಗೞ್ಚೆ (ರಣಭೇರಿಯನ್ನು

ಹೊಡೆಯಿಸಿ) ಕೃಪ ಕೃತವರ್ಮ ವಿವಿಂಶತಿ ವಿಕರ್ಣ ಚಿತ್ರಸೇನ ಸೋಮದತ್ತ ಭಗದತ್ತ ಬಾಹ್ಲೀಕ ಭೂರಿಶ್ರವ ಪ್ರಭೃತಿಗಳ್ ಗಱಿ ಸನ್ನೆಗೈದು (ಬಾಣದ ಗರಿಗಳಿಂದಲೇ ಸನ್ನೆಮಾಡಿ) ಕಾದುವಾಗಳ್-

ವಚನ:ಅರ್ಥ:ಈ ಕಡೆ ಧರ್ಮರಾಜನೂ ವಿರಾಟ, ಧೃಷ್ಟದ್ಯುಮ್ನ, ಶಿಖಂಡಿ, ಚೇಕಿತಾನ, ಕೇಕಯ, ಸಾತ್ಯಕಿ,

ನಕುಲ, ಸಹದೇವ,
ಅಭಿಮನ್ಯುವೇ ಮೊದಲಾದ
ನಾಯಕರೊಡಗೂಡಿ
ಯುದ್ಧರಂಗಕ್ಕೆ ಬಂದು
ರಣಭೇರಿಯನ್ನು
ಹೊಡೆಯಿಸಿದನು. ಕೃಪ,
ಕೃತವರ್ಮ, ವಿವಿಂಶತಿ,
ವಿಕರ್ಣ, ಚಿತ್ರಸೇನ,
ಸೋಮದತ್ತ, ಭಗದತ್ತ,
ಬಾಹ್ಲಿಕ, ಭೂರಿಶ್ರವರೇ
ಮೊದಲಾದ ಪ್ರತಿಪಕ್ಷದವರು

ಬಾಣದ ಗರಿಗಳಿಂದಲೇ ಸನ್ನೆಮಾಡಿ ಯುದ್ಧಮಾಡಲು ಪ್ರಾರಂಭಿಸಿದರು. ಆಗ-

ಚಂ|| ನಡುವ ಸರಲ್ ಸರಲ್ಕೊಳೆ ಸುರುಳ್ವ ಹಯಂ ಹಯದುಳ್ಗರುಳ್ಗಳೊಳ್ ತೊಡರ್ವ ಭಟರ್ ಭಟರ್ಕಳೊಳೆ ತೊಟ್ತುೞಿಮಾೞ್ಪ ರಥಂ ರಥಕ್ಕೆ ವಾ|

ಯ್ದಡಿಗಿಡೆ ಮೆಯ್ವೊಣರ್ಚುವ ಮಹಾರಥರಾಜಿಯೊಳಂತಗುರ್ವಿನ ಚ್ಚುಡಿದಿರೆ ಕಾದಿ ಬಿಚ್ಚಟಿಸಿದರ್ ಬಿಸುನೆತ್ತರ ಸುಟ್ಟುರೆ ಸೂಸುವನ್ನೆಗಂ|| ೧೧೪ ||

ಪದ್ಯ-೧೧೪:ಪದವಿಭಾಗ-ಅರ್ಥ: ನಡುವ ಸರಲ್ (ನಾಟುವ ಬಾಣಗಳು) ಸರಲ್ಕೊಳೆ ಸುರುಳ್ವ ಹಯಂ (ಬಾಣ ನಾಟಲು ಬೀಳುವ

ಸುರುಳಿಕೊಂಡು ಕುದುರೆಗಳು)
ಹಯದ ಉಳ್ಗರುಳ್ಗಳೊಳ್
ತೊಡರ್ವ ಭಟರ್
(ಕುದುರೆಗಳ ಒಳಗರುಳಿನಲ್ಲಿ
ಸಿಕ್ಕಿಕೊಳ್ಳುವ ಶೂರರು)
ಭಟಕೋರ್ಣಳೊಳೆ
(ಭಟರಲ್ಲಿಯೇ) ತೊಟ್ಟು
ಉಟಿಮಾಟ್ಪಿ ರಥಂ
(ತಾಗಿಕೊಂಡು ಪಡಿಮಾಡುವ
ರಥಗಳು) ರಥಕ್ಕೆ ವಾಯ್ದು
ಅಡಿಗಿಡೆ (ಹತ್ತುವಾಗ ಪಾದ

ಜಾರಲು) ಮೆಯ್ ಒಣರ್ಚುವ
ಮಹಾರಥರಾಜಿಯೊಳ್
(ಮಹಾರಥರು ನುಗ್ಗಿ ತೇರನ್ನು
ಹತ್ತುವಾಗ ಕಾಲು ಜಾರಿ
ಮೈಯನ್ನು ಸೇರುವವರು,)
ಅಂತು ಅಗುರ್ವಿಂ ಅಚ್ಚು
ಉಡಿದಿರೆ ಕಾದಿ (ಹಾಗೆ
ಭಯದ ಭಾವವು ಕುಗ್ಗಿರಲು
ಯುದ್ಧಮಾಡಿ) ಬಿಚ್ಚಟಿಸಿದರ್
(ವಿಸ್ತಸಿದರು) ಬಿಸುನೆತ್ತರ್
ಅಸುಟ್ಟುರೆ? ಸೂಸುವನ್ನೆಗಂ

(ಬಿಸಿರಕ್ತದ ಪ್ರವಾಹವು ಹರಿಯುವವರೆಗೆ ಅದ್ಭುತವಾಗಿ ವಿಸ್ತರಿಸಿ ಯುದ್ಧಮಾಡಿದರು)

ಪದ್ಯ-00:ಅರ್ಥ: ನಾಟುವ ಬಾಣಗಳು, ಬಾಣ ನಾಟಲು ಬೀಳುವ ಸುರುಳಿಕೊಂಡು ಕುದುರೆಗಳು, ಕುದುರೆಗಳ ಒಳಗರುಳಿನಲ್ಲಿ ಸಿಕ್ಕಿಕೊಳ್ಳುವ ಶೂರರು. ಅವರನ್ನು ತಾಗಿ ಪಡಿಮಾಡುವ ರಥಗಳು (

ಹರಿದು ಅವರನ್ನು ಅಜ್ಜುಗುಜ್ಜಿ ಮಾಡುವ ತೇರುಗಳು.) ಮಹಾರಥರು ನುಗ್ಗಿ ತೇರನ್ನು ಹತ್ತುವಾಗ ಕಾಲು ಜಾರಿ ಮುರಿದು ಬಿದ್ದು ನೆಲಕ್ಕೆ ಸೇರುವವರು, ಹಾಗೆ ಭಯದ ಭಾವವು ಕುಗ್ಗಿರಲು ಯುದ್ಧಮಾಡಿ ಬಿಸಿರಕ್ತದ ಪ್ರವಾಹವು ಹರಿಯುವವರೆಗೆ ಅದ್ಭುತವಾಗಿ ಯುದ್ಧಮಾಡಿದರು

ವ|| ಅಂತೆರಡುಂ ಪಡೆಯ ನಾಯಕರೊರ್ವರೊರ್ವರೊಳ್ ತಲೆಮಟ್ಟು ಕಾದುವಾಗಳ್ ಶ್ವೇತಂ ತನ್ನ ತಮ್ಮನ ಅೞಿವಿನೊಳಾದ ಮುಳಿಸಿನೊಳ್ ಕಣ್ಗಾಣದೆ ಶಲ್ಯನಂ ಮುಟ್ಟೆವಂದು-

ವಚನ:ಪದವಿಭಾಗ-ಅರ್ಥ:

ಅಂತು ಎರಡುಂ ಪಡೆಯ ನಾಯಕರ್ ಒರೊರ್ವರೊಳ್ ತಲೆಮಟ್ಟು ಕಾದುವಾಗಳ್

(ಪರಸ್ಪರ ಕೊನೆಮುಟ್ಟುವಂತೆ ಯುದ್ಧಮಾಡುತ್ತಿದ್ದಾಗ) ಶ್ವೇತಂ ತನ್ನ ತಮ್ಮನ ಅೞಿವಿನೊಳು () ಆದ ಮುಳಿಸಿನೊಳ್ (ಸಾವಿನಿಂದ ಆದ ಕೋಪದಿಂದ) ಕಣ್ಗಾಣದೆ ಶಲ್ಯನಂ ಮುಟ್ಟೆವಂದು (ಶಲ್ಯನ ಸಮೀಪಕ್ಕೆ ಬಂದು)-

ವಚನ:ಅರ್ಥ: ವ|| ಹಾಗೆ ಎರಡುಸೈನ್ಯದ ನಾಯಕರೂ ಪರಸ್ಪರ ಕೊನೆಮುಟ್ಟುವಂತೆ

ಯುದ್ಧಮಾಡುತ್ತಿದ್ದಾಗ, ಶ್ವೇತನು ತನ್ನ ತಮ್ಮನ ಸಾವಿನಿಂದ ಆದ ಕೋಪದಿಂದ ಮುಂದಾಲೋಚನೆಯಿಲ್ಲದೆ ಶಲ್ಯನ ಸಮೀಪಕ್ಕೆ ಬಂದನು.

ಚಂ|| ಮುಳಿಸಿನೊಳೆಯ್ದೆ
ಕೆಂಪಡರ್ದ ಕಣ್ಗಳಿನೊರ್ಮೆಯೆ
ನುಂಗುವಂತಸುಂ
ಗೊಳೆ ನಡೆ ನೋಡಿ
ಮಾಣದುರಮಂ

ಬಿರಿಯೆಚ್ಚೊಡೆ ಸೂಸಿ
ಪಾಯ್ವಸೃ|
ಗ್ಜಳಮವನುಗ್ರ ಕೋಪಶಿಖಿ
ತಳ್ತಳುರ್ವಂತೆವೊಲಾಗೆ
ಶಲ್ಯನಾ
ಗಳೆ ರಣದೊಳ್
ನೆಱಿಲ್ದೊಡವನಂ ಪೆಱಗಿಕ್ಕಿ
ಸುರಾಪಗಾತ್ಮಜಂ|| ೧೧೫

ಪದ್ಯ-೧೧೫:ಪದವಿಭಾಗ-

ಅರ್ಥ: ಮುಳಿಸಿನೊಳು ಎಯ್ದೆ ಕೆಂಪಡರ್ದ ಕಣ್ಗಳಿಂ

ಒರ್ಮೆಯೆ ನುಂಗುವಂತೆ ಅಸುಂಗೊಳೆ (ಕೋಪದಿಂದ ವಿಶೇಷವಾಗಿ ಕೆಂಪೇರಿದ್ದ ಕಣ್ಣುಗಳಿಂದ ಒಂದೇಸಲ ನುಂಗುವಹಾಗೆಯೂ ಪ್ರಾಣಾಪಹಾರ ಮಾಡುವ ಹಾಗೆ) ನಡೆ ನೋಡಿ ಮಾಣದೆ ಉರಮಂ ಬಿರಿಯೆ ಎಚ್ಚೊಡೆ (ಗುರಿಯಿಟ್ಟು ನೋಡಿ ಅಷ್ಟಕ್ಕೇ ಬಿಡದೆ ಎದೆಯು ಸೀಳುವ ಹಾಗೆ ಹೊಡೆದಾಗ) ಸೂಸಿ

ಪಾಯ್ವ (ಚೆಲ್ಲಿ ಹರಿಯುವ) ಅಸೃಗ್ ಜಳಂ (ರಕ್ತದನೀರು - ರಕ್ತವು) ಅವನ ಉಗ್ರ ಕೋಪಶಿಖಿ ತಳ್ತ ಅಳುರ್ವಂತೆವೊಲ್ ಆಗೆ (ಅವನ ತೀಕ್ಷ್ಣವಾದ ಕೋಪಾಗ್ನಿಯು ಸೇರಿ ವ್ಯಾಪಿಸುವ ಹಾಗೆ) ಶಲ್ಯನು ಆಗಳೆ ರಣದೊಳ್ ನೆಱಿಲ್ದೊಡೆ ಅವನಂ ಪೆಱಗಿಕ್ಕಿ (ಶಲ್ಯನು ಆಗಲೇ ಯುದ್ಧದಲ್ಲಿ

ನಿಶ್ಚೇಷ್ಟನಾಗಲು ಭೀಷ್ಮನು ಅವನನ್ನು ಹಿಂದಿಕ್ಕಿದನು-) ಸುರಾಪಗಾತ್ಮಜಂ (ಭೀಷ್ಮನು)

ಪದ್ಯ-೧೧೫:ಅರ್ಥ:ಕೋಪ ದಿಂದ ವಿಶೇಷವಾಗಿ ಕೆಂಪೇರಿದ್ದ ಕಣ್ಣುಗಳಿಂದ ಒಂದೇಸಲ ನುಂಗುವಹಾಗೆಯೂ ಪ್ರಾಣಾಪಹಾರ ಮಾಡುವ ಹಾಗೆಯೂ ಗುರಿಯಿಟ್ಟು ನೋಡಿ ಅಷ್ಟಕ್ಕೇ ಬಿಡದೆ

ಎದೆಯು ಸೀಳುವ ಹಾಗೆ
ಹೊಡೆದಾಗ ಅದರಿಂದ ಶ್ವೇತನ
ತೀಕ್ಷ್ಣವಾದ ಕೋಪಾಗ್ನಿಯು
ಸೇರಿ ವ್ಯಾಪಿಸುವ ಹಾಗೆ
ರಕ್ತಪ್ರವಾಹವು ಹರಿಯಿತು.
ಶಲ್ಯನು ಆಗಲೇ ಯುದ್ಧದಲ್ಲಿ
ನಿಶ್ಚೇಷ್ಟನಾದನು. ಭೀಷ್ಮನು
ಅವನನ್ನು ಹಿಂದಿಕ್ಕಿ ತಾನು
ಮುನ್ನುಗ್ಗಿದನು.

ವ|| ಅಂತು

ಪ್ರಳಯಕಾಲದಂದು

ಮೂಡುವ ಪನ್ನಿರ್ವರಾದಿತ್ಯರ ತೇಜಮುಮಂ ಮಹೇಶ್ವರ ಭೈರವಾಡಂಬರಮುಮಂ ಯುಗಾಂತ ಕಾಲಾಂತಕನ ಮಸಕಮುಮಂ ತನ್ನೊಳಳವಡಿಸಿಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ಪ್ರಳಯಕಾಲದಂದು ಮೂಡುವ ಪನ್ನಿರ್ವರಾದಿತ್ಯರ ತೇಜಮುಮಂ

(ದ್ವಾದಶಾದಿತ್ಯರ ತೇಜಸ್ಸನ್ನು)
ಮಹೇಶ್ವರ
ಭೈರವಾಡಂಬರಮುಮಂ
(ಮಹೇಶ್ವರನ
ಭಯಂಕರವಾದ
ಅಟಾಟೋಪವನ್ನು)
ಯುಗಾಂತ ಕಾಲಾಂತಕನ
ಮಸಕಮುಮಂ
(ಯುಗಾಂತದ ಯಮನ
ರೇಗುವಿಕೆಯನ್ನು) ತನ್ನೊಳು
ಅಳವಡಿಸಿಕೊಂಡು-

ವಚನ:ಅರ್ಥ:ಹಾಗೆ(ಭೀಷ್ಮನು ?) ಪ್ರಳಯಕಾಲದ ದ್ವಾದಶಾದಿತ್ಯರ ತೇಜಸ್ಸನ್ನು ಮಹೇಶ್ವರನ ಭಯಂಕರವಾದ ಅಟಾಟೋಪವನ್ನು ಯುಗಾಂತದ ಯಮನ ರೇಗುವಿಕೆಯನ್ನು ತನ್ನಲ್ಲಿ ಅಳವಡಿಸಿಕೊಂಡನು.

ಚಂ|| ಖರ ಕಿರಣ ಪ್ರಚಂಡ ಕಿರಣಾವಳಿ ಲೋಕಮನೆಯ್ದೆ ಪರ್ವವಂ

ತಿರೆ ಕಡುಕೆಯ್ದು ತನ್ನೆರಡು
ಕೆಯ್ಯೊಳಮೆಚ್ಚ ಶರಾಳಿಗಳ್
ಭಯಂ|
ಕರತರಮಾಗೆ
ಭೂಭುವನಮೆಲ್ಲಮನೊರ್ಮೆ
ಯೆ ಸುತ್ತಿ ಮುತ್ತಿ ಕೊಂ
ಡಿರೆ ದೆಸೆಗಾಣಲಾಗದು ದಲಾ
ರಣಗತ್ತಲೆ
ಮಂದಮಾದುದೋ|| ೧೧೬ ||

ಪದ್ಯ-೧೧೬:ಪದವಿಭಾಗ-

ಅರ್ಥ:ಖರ ಕಿರಣ ಪ್ರಚಂಡ

ಕಿರಣಾವಳಿ (ತೀಕ್ಷ್ಣವಾದ
ಸೂರ್ಯನ ಕಿರಣ
ಸಮೂಹಗಳು) ಲೋಕಮನು
ಎಯ್ದೆ ಪರ್ವುವಂತಿರೆ
(ಲೋಕವನ್ನೆಲ್ಲ ಪೂರ್ಣವಾಗಿ
ಹಬ್ಬುವ/ ಆವರಿಸುವ ಹಾಗೆ)
ಕಡುಕೆಯ್ದು ತನ್ನೆರಡು
ಕೆಯ್ಯೊಳಂ ಎಚ್ಚ ಶರಾಳಿಗಳ್
(ವೇಗಶಾಲಿಯಾದ ತನ್ನ
ಎರಡು ಕೈಗಳಿಂದಲೂ ಬಿಟ್ಟ
ಬಾಣಸಮೂಹಗಳು)

ಭಯಂಕರ ತರಮಾಗೆ
ಭೂಭುವನಮೆಲ್ಲಮನು
ಒರ್ಮೆಯೆ ಸುತ್ತಿ
ಮುತ್ತಿಕೊಂಡಿರೆ (ಅತ್ಯಂತ
ಭಯಂಕರವಾಗಿ
ಪ್ರಪಂಚವೆಲ್ಲವನ್ನೂ ಒಟ್ಟಿಗೆ
ಸುತ್ತಿಮುತ್ತಿಕೊಂಡುವು.)
ದೆಸೆಗಾಣಲಾಗದು ದಲಾ
ರಣಗಟ್ಟಿಲೆ (ಆ ಯುದ್ಧದ
ಕತ್ತಲೆಯಿಂದ ನಿಜವಾಗಿಯೂ
ದಿಕ್ಕೇ ಕಾಣದಂತಾಯಿತು.)

ಮಂದಮಾದುದೋ (ಆ ರಣಗತ್ತಲೆ ಅತ್ಯಂತ ಸಾಂದ್ರವಾಗಿತ್ತೋ!.)

ಪದ್ಯ-೧೧೬:ಅರ್ಥ:ತೀಕ್ಷ್ಣವಾದ ಸೂರ್ಯನ ಕಿರಣ ಸಮೂಹಗಳು ಲೋಕವನ್ನೆಲ್ಲ ಪೂರ್ಣವಾಗಿ ಆವರಿಸುವ ಹಾಗೆ ವೇಗಶಾಲಿಯಾದ ತನ್ನ ಎರಡು ಕೈಗಳಿಂದಲೂ ಬಿಟ್ಟ ಬಾಣಸಮೂಹಗಳು ಅತ್ಯಂತ ಭಯಂಕರವಾಗಿ

ಪ್ರಪಂಚವೆಲ್ಲವನ್ನೂ ಒಟ್ಟಿಗೆ ಸುತ್ತಿಮುತ್ತಿಕೊಂಡುವು. ಆ ಯುದ್ಧದ ಕತ್ತಲೆಯಿಂದ ನಿಜವಾಗಿಯೂ ದಿಕ್ಕೇ ಕಾಣದಂತಾಯಿತು. ಆ ರಣಗತ್ತಲೆ ಅತ್ಯಂತ ಸಾಂದ್ರವಾಗಿತ್ತೋ!.

ವ|| ಎಂಬಿನಮಂಬಿನ ಬಂಬಲೊಳಂ ಜೋಡಾಗಿ ಕೋಡನೂಱಿ ಕೆಡೆದ ಗಜ ವ್ರಜಂಗಳ

ಡೊಣೆವುಗಳಿಂದೊರೆತು
ಪಱಿವ ನೆತ್ತರ ಕಡಲ್ಗಳುಂ ನೆತ್ತರ
ಕಡಲ್ಗಲೊಳ್ ಮಿಳಿರ್ವ
ಪಱಿವಿಗೆಗಳ್ ತಲೆದೋಱೆ
ಮುೞುಂಗಿದ ರಥಂಗಳುಂ
ರಥಂಗಳ ಗಾಲಿಗಳ್ಗಡ್ಡಮಾಗಿ
ಬೀೞ್ದಿರ್ದ ಮದಹಸ್ತಿಗಳುಂ
ಮದಹಸ್ತಿಮಸ್ತಕಂಗಳನೋಸ
ಱಿಸಿ ರಥಮಂ ಪಱಿಯಿಸುವ
ರಥಚೋದಕರುಂ
ರಥಚೋದಕರ ಬಿಟ್ಟ ಬಾಯ್

ಬಿಟ್ಟಂತಿರೆ ಬಿಟ್ಟ ತಮ್ಮ

ಕರುಳ್ಗಳೊಳ್ ತವೆ ತೊಡರ್ದು

ಕೀೞಿಂ ಕರ್ಚಿ ದಿಂಡುಮಗುಳ್ದು

ಕೆಡೆವ ಜಾತ್ಯಶ್ವಂಗಳುಂ

ಜಾತ್ಯಶ್ವಂಗಳ ಪೆಣದ

ತಿಂತಿಣಿಯೊಳ್

ತೊಡರ್ದೆಡಪುತ್ತುಮಾಡುವ

ಸುಭಟರಟ್ಟೆಗಳುಂ

ಸುಭಟರಟ್ಟೆಗಳನೆಬ್ಬಿಟ್ಟಿ

ಕುಟ್ಟುವ ತೊಂಡು

ಮರುಳ್ಗಳುಂ

ಮರುಳ್ಗಳಾಟಮಂ

ಪಳಪಳನೆಮೆಯಿಕ್ಕದೆ ನೋಡಿ

ಮುಗುಳ್ನಗೆ ನಗುವ

ವೀರಭಟರ

ಪಂದಲೆಗಳುಮಗುರ್ವುಮದ್ಭು

ತ ಭಯಾನಕ ವೀರ ಬೀಭತ್ಸ

ರೌದ್ರ ರಸಂಗಳಂ

ಪುದುಂಗೊಳಿಸೆ ಗಾಂಗೇಯಂ

ನಾಡೆಯುಂ ಪೋೞ್ತು ಕಾದೆ-

ವಚನ:ಪದವಿಭಾಗ-

ಅರ್ಥ:ಎಂಬಿನಮಂಬಿನ

ಬಂಬಲೊಳಂ ಜೋಡಾಗಿ ಕೋಡನೂಱ (ಬಾಣಗಳ ರಾಶಿ ಸಮೂಹದಿಂದ ಜೊತೆ ಜೊತೆಯಾಗಿ ಕೊಂಬನ್ನೂರಿ) ಕೆಡೆದ ಗಜ ವ್ರಜಂಗಳ ಡೊಣೆವ್ರುಗಳಿಂದ (ಕೆಡೆದು ಬಿದ್ದ ಆನೆಗಳ ಗಾಯದ ಡೊಗರುಗಳಿಂದ) ಒರೆತು ಪರಿವ ನೆತ್ತರ ಕಡಲ್ಗಳುಂ (ಜಿನುಗಿ ಹರಿಯುವ ರಕ್ತದ ಸಮುದ್ರಗಳೂ,) ನೆತ್ತರ

ಕಡಲ್ಗಲೊಳ್ ಮಿಳಿರ್ವ
ಪಟವಿಗೆಗಳ್
(ರಕ್ತಸಮುದ್ರದಲ್ಲಿ
ಚಲಿಸುತ್ತಿರುವ ಬಾವುಟಗಳ
ತುದಿಗಳು) ತಲೆದೋರೆ
ಮುಳುಂಗಿದ ರಥಂಗಳುಂ
(ಮಾತ್ರ ತೋರುತ್ತ ಮುಳುಗಿದ್ದ
ತೇರುಗಳೂ) ರಥಂಗಳ
ಗಾಲಿಗಳ್ಗಡ್ಡಮಾಗಿ ಬಿೞ್ದಿರ್ದ
ಮದಹಸ್ತಿಗಳುಂ (ತೇರುಗಳಿಗೆ
ಅಡ್ಡವಾಗಿ ಬಿದ್ದಿದ್ದ

ಮದ್ದಾನೆಗಳೂ) ಮದಹಸ್ತಿ
ಮಸ್ತಕಂಗಳನೊ ಓಸರಿಸಿ
ರಥಮಂ ಪರಿಯಿಸುವ
ರಥಚೋದಕರುಂ
(ತೇರುಗಳಿಗೆ ಅಡ್ಡವಾಗಿ
ಬಿದ್ದಿದ್ದ ಮದ್ದಾನೆಗಳೂ
ಮದ್ದಾನೆಗಳ ತಲೆಗಳನ್ನು
ಒಂದು ಕಡೆಗೆ ಓಸರಿಸಿ
ತೇರನ್ನು ಹರಿಯಿಸುವ
ಸಾರಥಿಗಳೂ), ರಥಚೋದಕರ
ಬಿಟ್ಟ ಬಾಯ್ ಬಿಟ್ಟಂತಿರೆ ಬಿಟ್ಟ

ತಮ್ಮ ಕರುಳ್ಗಳೊಳ್ ತವೆ
ತೊಡರ್ದುರ್ (ಸಾರಥಿಗಳು ಬಿಟ್ಟ
ಬಾಯಿ ಬಿಟ್ಟ ಹಾಗೆ ತಮ್ಮ
ಕರುಳುಗಳೂ ಸೇರಿಕೊಂಡ)
ಕೀಲಿಂ ಕರ್ಚಿ ದಿಂಡುಮಗುಳ್ದು
ಕೆಡೆವ ಜಾತ್ಯಶ್ವಂಗಳುಂ
(ಹಾಗೆಯೇ ಕಡಿವಾಣವನ್ನು
ಕಚ್ಚಿಕೊಂಡು ರಾಶಿರಾಶಿಯಾಗಿ
ಬಿದ್ದಿದ್ದ ಉತ್ತಮವಾದ
ಜಾತ್ಯಶ್ವಗಳೂ) ಜಾತ್ಯಶ್ವಂಗಳ
ಪೆಣದ ತಿಂತಿಣಿಯೊಳ್

ತೊಡರ್ದು ಎಡಪುತ್ತುಂ
ಆಡುವ ಸುಭಟರ ಅಟ್ಟೆಗಳುಂ
(ಜಾತಿಕುದುರೆಗಳ
ಸಮೂಹದಲ್ಲಿ ಸೇರಿಕೊಂಡು
ಎಡವುತ್ತ ಆಡುತ್ತಿರುವ
ಶೂರರ ಮುಂಡಗಳೂ)
ಸುಭಟರ ಅಟ್ಟೆಗಳನೆ ಎಟ್ಟಿಟ್ಟಿ
ಕುಟ್ಟುವ ತೊಂಡು
ಮರುಳ್ಗಳುಂ (ಆ ಶೂರರ
ಮುಂಡಗಳನ್ನು ಎಬ್ಬಿಸಿ ಓಡಿಸಿ
ಬಡಿಯುತ್ತಿರುವ ತುಂಟ

ಪಿಶಾಚಿಗಳ) ಮರುಳ್ಗಳ
ಆಟಮಂ
ಪಳಪಳನೆಮೆಯಿಕ್ಕದೆ ನೋಡಿ
(ಆಟವನ್ನು ಪಳಪಳನೆ
ರೆಪ್ಪೆಬಡಿಯದೆ ನೋಡಿ)
ಮುಗುಳ್ನಗೆ ನಗುವ
ವೀರಭಟರ ಪಂದಲೆಗಳುಂ,
(ಹುಸಿನಗೆ ನಗುವ
ಪರಾಕ್ರಮಶಾಲಿಗಳ ಹಸಿಯ
ತಲೆಗಳೂ) ಅಗುರ್ವುಂ
ಅದ್ಭುತ ಭಯಾನಕ ವೀರ

ಬೀಭತ್ಸ ರೌದ್ರ ರಸಂಗಳಂ ಪುದುಂಗೊಳಿಸೆ (ಭಯ, ಆಶ್ಚರ್ಯ, ಅದ್ಭುತ, ಭಯಾನಕ, ವೀರ, ಬೀಭತ್ಸ, ರೌದ್ರರಸಗಳನ್ನು ಒಟ್ಟುಗೂಡಿಸಿದ್ದಂತೆ) ಗಾಂಗೇಯಂ ನಾಡೆಯುಂ ಪೋೞ್ತು ಕಾದೆ (ಭೀಷ್ಮನು ತುಂಬ ಹೊತ್ತು ಯುದ್ಧ ಮಾಡಲು.)-

ವಚನ:ಅರ್ಥ:ಭೀಷ್ಮನು ತುಂಬ ಹೋತ್ತು ಯುದ್ಧ ಮಾಡಲು. ಬಾಣಗಳ ರಾಶಿ ರಾಶಿ ಸಮೂಹದಿಂದ ಜೊತೆ ಜೊತೆಯಾಗಿ ಕೊಂಬನ್ನೂರಿ ಕೆಡೆದು ಬಿದ್ದ ಆನೆಗಳ ಗಾಯದ ಡೊಗರುಗಳಿಂದ ಜಿನುಗಿ ಹರಿಯುವ ರಕ್ತದ ಸಮುದ್ರಗಳೂ, ರಕ್ತಸಮುದ್ರದಲ್ಲಿ ಚಲಿಸುತ್ತಿರುವ ಬಾವುಟಗಳ

ತುದಿಗಳು ಮಾತ್ರ ತೋರುತ್ತ
ಮುಳುಗಿದ್ದ ತೇರುಗಳೂ,
ತೇರುಗಳಿಗೆ ಅಡ್ಡವಾಗಿ ಬಿದ್ದಿದ್ದ
ಮದ್ದಾನೆಗಳೂ, ಮದ್ದಾನೆಗಳ
ತಲೆಗಳನ್ನು ಒಂದು ಕಡೆಗೆ
ಓಸರಿಸಿ ತೇರನ್ನು ಹರಿಯಿಸುವ
ಸಾರಥಿಗಳೂ, ಸಾರಥಿಗಳು
ಬಿಟ್ಟ ಬಾಯಿ ಬಿಟ್ಟ ಹಾಗೆ
ತಮ್ಮ ಕರುಳುಗಳೂ
ಸೇರಿಕೊಂಡ ಹಾಗೆಯೇ
ಕಡಿವಾಣವನ್ನು ಕಚ್ಚಿಕೊಂಡು

ರಾಶಿರಾಶಿಯಾಗಿ ಬಿದ್ದಿದ್ದ
ಉತ್ತಮವಾದ ಜಾತ್ಯಶ್ವಗಳೂ,
ಜಾತಿಕುದುರೆಗಳ
ಸಮೂಹದಲ್ಲಿ ಸೇರಿಕೊಂಡು
ಎಡವೃತ್ತ ಆಡುತ್ತಿರುವ
ಶೂರರ ಮುಂಡಗಳೂ, ಆ
ಶೂರರ ಮುಂಡಗಳನ್ನು
ಎಬ್ಬಿಸಿ ಓಡಿಸಿ
ಬಡಿಯುತ್ತಿರುವ ತುಂಟ
ಪಿಶಾಚಿಗಳ ಆಟವನ್ನು
ಪಳಪಳನೆ ರೆಪ್ಪೆಬಡಿಯದೆ

ನೋಡಿ ಹುಸಿನಗೆ ನಗುವ ಪರಾಕ್ರಮಶಾಲಿಗಳ ಹಸಿಯ ತಲೆಗಳೂ, ಇವೆಲ್ಲವೂ ಭಯ, ಆಶ್ಚರ್ಯ, ಅದ್ಭುತ, ಭಯಾನಕ, ವೀರ, ಬೀಭತ್ಸ, ರೌದ್ರರಸಗಳನ್ನು ಒಟ್ಟುಗೂಡಿಸಿದ್ದಂತೆ ಕಾಣುತ್ತಿತ್ತು.

ಮ|| ಪಟ್ಟಂಗಟ್ಟಿದಿಳಾನಾಥರೆ ಪಯಿಂಥಾಸಿರ್ವರೊಳ್ಯಾನೆಗಳ್

ಪಟ್ಟಂಗಟ್ಟಿದುವೊಂದು ಲಕ್ಕ ತುರಗಂ ಪತ್ತೆಂಟು ಲಕ್ಕಂ ಪಡ| ಲ್ವಟ್ಟೞ್ಕುಡಿದುವೊಂದೆ ಬಿಲ್ಗೆನೆ ನದೀಪುತ್ರಂಗೆ ಪೇೞಿರ್ ಚಲಂ ಬಟ್ಟುಂ ಮಾರ್ಮಲೆದಂಬುದೊಟ್ಟುಮು ೞಿವರ್ ಸಂಗ್ರಾಮರಂಗಾಗ್ರದೊಳ್|| ೧೧೭ ||

ಪದ್ಯ-೧೧೭:ಪದವಿಭಾಗ-ಅರ್ಥ:ಪಟ್ಟಂಗಟ್ಟಿದ

ಇಳಾನಾಥರೆ
(ಪಟ್ಟಾಭಿಷಿಕ್ತರಾದ
ಚಕ್ರವರ್ತಿಗಳೂ)
ಪಯಿಂಛಾಸಿರರ್ (ಹತ್ತು
ಸಾವಿರ) ಒಳ್ಳಾನೆಗಳ್
ಪಟ್ಟಂಗಟ್ಟಿದ ಅವೊಂದು ಲಕ್ಕ
(ಪಟ್ಟಾಭಿಷಿಕ್ತವಾದ ಒಂದು
ಲಕ್ಷ ಭದ್ರಗಜಗಳೂ) ತುರಗಂ
ಪತ್ತೆಂಟು ಲಕ್ಕಂ (ಹತ್ತೆಂಟುಲಕ್ಷ
ಕುದುರೆಗಳೂ) ಪಡಲ್ವಟ್ಟು
ಅೞ್ಕಾಡಿದುವು ಒಂದೆ ಬಿಲ್ಗೆ

ಎನೆ (ಚದುರಿ ಕೆಳಗುರುಳಿ
ನಾಶವಾದುವು ಎನ್ನಲು,ಒಂದೇ
ಬಿಲ್ಲಿಗೆ ಎಂದಾಗ)
ನದೀಪುತ್ರಂಗೆ ಪೇೞಿರ್
ಚಲಂಬಟ್ಟುಂ ಮಾರ್ಮಲೆದು
(ಭೀಷ್ಮನಿಗೆ, ಹೇಳಯ್ಯಾ ಹಟ
ಹಿಡಿದು ಪ್ರತಿಭಟಿಸಿ --
ಉಳಿಯುವವರು
ಯಾರಿದ್ದಾರೆ?)
ಅಂಬುದೊಟ್ಟುಂ ಉೞಿವರ್
ಸಂಗ್ರಾಮ ರಂಗಾಗ್ರದೊಳ್

(ಬಾಣಪ್ರಯೋಗಮಾಡಿಯೂ ಯುದ್ಧದ ರಣರಂಗದಲ್ಲಿ ಉಳಿಯುವವರು ಯಾರಿದ್ದಾರೆ? ಹೇಳಯ್ಯಾ)

ಪದ್ಯ-೧೧೭:ಅರ್ಥ: ೧೧೭. ಭೀಷ್ಮನ ಒಂದೇ ಬಿಲ್ಲಿಗೆ ಪಟ್ಟಾಭಿಷಿಕ್ತರಾದ ಹತ್ತು ಸಾವಿರ ಚಕ್ರವರ್ತಿಗಳೂ ಪಟ್ಟಾಭಿಷಿಕ್ತವಾದ ಒಂದು ಲಕ್ಷ ಭದ್ರಗಜಗಳೂ (ಮಂಗಳಕರವಾದ ಆನೆ)

ಹತ್ತೆಂಟುಲಕ್ಷ ಕುದುರೆಗಳೂ
ಕೆಳಗುರುಳಿ ನಾಶವಾದುವು
ಒಂದೇ ಬಿಲ್ಲಿಗೆ ಎಂದಾಗ,
ಯುದ್ಧದಲ್ಲಿ ಪಣದೊಟ್ಟು
(ಹಟಮಾಡಿ) ಭೀಷ್ಮನಿಗೆ
ಪ್ರತಿಭಟಿಸಿ
ಬಾಣಪ್ರಯೋಗಮಾಡಿಯೂ
ಯುದ್ಧದ ರಣರಂಗದಲ್ಲಿ
ಉಳಿಯುವವರು
ಯಾರಿದ್ದಾರೆ? ಹೇಳಯ್ಯಾ!

ಭೀಶ್ಮ ಮತ್ತು ಶ್ವೇತರ ಯುದ್ಧ: ಶ್ವೇತನ ಮರಣ

ವ|| ಎಂಬನ್ನೆಗಂ

ಶ್ವೇತನುಮನವರತ

ಶರಾಸಾರದಿಂ

ಕುರುಬಲಮೆಲ್ಲಮನರೆದು

ಸಣ್ಣಿಸಿದಂತೆ ಮಾಡಿ ತವೆ

ನೆರವಿಯನೆನಿತಂ

ಕೊಂದೊಡಮೇವಂದಪುದೆಂ

ದು ಗಾಂಗೇಯಂಗದಿರದಿದಿರಂ

ಮಾರ್ಕೊಂಡು ಬಿಲ್ಬೊಯ್ದು ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಎಂಬನ್ನೆಗಂ (ಎನ್ನುವಷ್ಟರಲ್ಲಿ) ಶ್ವೇತನುಂ ಅನವರತ ಶರ ಆಸಾರದಿಂ (ಶ್ವೇತನು ಒಂದೇಸಮನೆ ಬಾಣದ ಮಳೆಯಿಂದ) ಕುರುಬಲಮೆಲ್ಲಮಂ ಅರೆದು ಸಣ್ಣಿಸಿದಂತೆ ಮಾಡಿ (ಕೌರವಸೈನ್ಯವನ್ನೆಲ್ಲ ಅರೆದು

ಪುಡಿಮಾಡಿದಂತೆ ಮಾಡಿ) ತವೆ
ನೆರವಿಯನು ಎನಿತಂ
ಕೊಂದೊಡಂ
ಏವಂದಪುದೆಂದು (ಈ
ಸಾಮಾನ್ಯ ಸೈನ್ಯವಷ್ಟನ್ನೂ
ಕೊಂದರೆ ಏನು ಪ್ರಯೋಜನ
ಎಂಬುದಾಗಿ) ಗಾಂಗೇಯಂಗೆ
ಇದಿರದೆ ಇದಿರಂ
ಮಾರ್ಕೊಂಡು (ಭೀಷ್ಮನಿಗೆ
ಹೆದರದೆ ಇದಿರಾಗಿ
ಪ್ರತಿಭಟಿಸಿ) ಬಿಲ್ (ವ)

ಹೊಯ್ದು ನಿಂದಾಗಳ್
(ಬಿಲ್ಲನ್ನು ಸೆಳೆದು
ರೇಂಕಾರಮಾಡಿ ನಿಂತನು)-
ವಚನ:ಅರ್ಥ:ಎನ್ನುವಷ್ಟರಲ್ಲಿ
ಶ್ವೇತನು ಒಂದೇಸಮನೆ
ಬಾಣದ ಮಳೆಯಿಂದ
ಕೌರವಸೈನ್ಯವನ್ನೆಲ್ಲ ಅರೆದು
ಪುಡಿಮಾಡಿದಂತೆ ಮಾಡಿ
ನಾಶಪಡಿಸಿ ಈ ಸಾಮಾನ್ಯ
ಸೈನ್ಯವಷ್ಟನ್ನೂ ಕೊಂದರೆ ಏನು
ಪ್ರಯೋಜನ ಎಂಬುದಾಗಿ

ಭೀಷ್ಮನಿಗೆ ಹೆದರದೆ ಇದಿರಾಗಿ ಪ್ರತಿಭಟಿಸಿ ಬಿಲ್ಲನ್ನು ಸೆಳೆದು ರೇಂಕಾರಮಾಡಿ ನಿಂತನು-

ಉ|| ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪೆರ್ದೆಗೊಳ್ವುದುಂ ನದೀ ಜಾತನುದಾತ್ತ ಭಕ್ತಿಯಳೆ ಕೆಯ್ಮುಗಿದಾಗಳಿದೆಂತೊ ನಿಮ್ಮ ಪೆ|

ರ್ಮಾತಿನ ಬೀರಮೀಯೆಡೆಗೆವಂದುದೆ

ಮುಪ್ಪಿನೊಳೆಯ್ದೆ ಲೋಕ ವಿ
ಖ್ಯಾತರಿರಾಗಿ
ಕೆಯ್ದುವಿಡಿವಲ್ಲಿಯೆ
ಕಾಲ್ವಿಡಿಯಲ್ಕೆ ತಕ್ಕುದೇ||
೧೧೮||

ಪದ್ಯ-೧೧೮:ಪದವಿಭಾಗ-
ಅರ್ಥ:ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪು (ಶ್ವೇತನ ಬಿಲ್ಲಿನಲ್ಲಿದ್ದ ಮಹಾಶಿವನ ರೂಪವು) ಎರ್ದೆಗೊಳ್ವುದುಂ (ಹೃದಯವನ್ನು ಆಕರ್ಶಿಸಲು,)

ನದೀಜಾತನು ಉದಾತ್ತ
ಭಕ್ತಿಯಳೆ ಕೆಯ್ಮುಗಿದಾಗಳ್
(ಭೀಷ್ಮನು ಅತಿಶಯವಾದ
ಭಕ್ತಿಯಿಂದ ಶ್ವೇತನ ಎದುರು
ಕೈಮುಗಿದು ನಿಂತಾಗ-)
ಇದೆಂತೊ ನಿಮ್ಮ ಪೆರ್ಮಾತಿನ
ಬೀರಮು (ಇದೇನಿದು? ನಿಮ್ಮ
ಪ್ರಸಿದ್ಧವಾದ ದೊಡ್ಡದಾಗಿ
ಹೇಳಿಕೊಳ್ಳುವ ಪರಾಕ್ರಮವು)
ಎಡೆಗೆವಂದುದೆ ಮುಪ್ಪಿನೊಳು
ಎಯ್ದೆ (ಮುಪ್ಪಿನಲ್ಲಿ ಈ ಸ್ಥಿತಿಗೆ

ಬಂದಿತೇ?) ಲೋಕ
ವಿಖ್ಯಾತರಿರಾಗಿ ಕೆಯ್ದು
ವಿಡಿವಲ್ಲಿಯೆ
(ಲೋಕಪ್ರಸಿದ್ಧವಾಗಿರುವ
ನೀವು ಶಸ್ತ್ರಹಿಡಿಯವಲ್ಲಿಯೇ)
ಕಾಲ್ವಿಡಿಯಲ್ಕೆ ತಕ್ಕುದೇ
(ಮಾಡಬೇಕಾದ ಕಾಲದಲ್ಲಿ
ಕಾಲುಹಿಡಿಯುವದು ಅಂದರೆ
ಶರಣಾಗತರಾಗುವುದು
ಯೋಗ್ಯವೇ? ಎಂದನು ಶ್ವೇತ)

ಪದ್ಯ-೧೧೮:ಅರ್ಥ:ಶ್ವೇತನ ಬಿಲ್ಲಿನಲ್ಲಿದ್ದ ಮಹಾಶಿವನ ರೂಪವು ತನ್ನ ಹೃದಯವನ್ನು ಆಕರ್ಶಿಸಲು, ಭೀಷ್ಮನು ಅತಿಶಯವಾದ ಭಕ್ತಿಯಿಂದ ಶ್ವೇತನ ಎದುರು ಕೈಮುಗಿದು ನಿಂತಾಗ, (ಶ್ವೇತನು ಅವರನ್ನು ಕುರಿತು) ಇದೇನಿದು? ನಿಮ್ಮ ದೊಡ್ಡದಾಗಿ ಹೇಳಿಕೊಳ್ಳುವ ಪ್ರಸಿದ್ಧವಾದ ಪರಾಕ್ರಮವು! ಮುಪ್ಪಿನಲ್ಲಿ ಈ ಸ್ಥಿತಿಗೆ

ಬಂದಿತೇ?
ಲೋಕಪ್ರಸಿದ್ಧವಾಗಿರುವ
ನೀವು ಶಸ್ತ್ರಹಿಡಿಯವಲ್ಲಿ
ಮಾಡಬೇಕಾದ ಕಾಲದಲ್ಲಿ
ಕಾಲುಹಿಡಿಯುವದು ಅಂದರೆ
ಶರಣಾಗತರಾಗುವುದು
ಯೋಗ್ಯವೇ? ಎಂದನು ಶ್ವೇತ.

ಚಂ|| ಎನಗೆ ರಣಾಗ್ರದೊಳ್
ಪೊಣರ್ವೊಡಂಕದ ಪೊಂಕದ
ಸಿಂಧುಪುತ್ರನೊ

ರ್ವನೆ ದೊರೆಯೆಂದು ನಿಮ್ಮೊಳೆ

ವಲಂ ತಱಸಂದಿಱಯಲ್ಕೆ

ಪೂಣ್ದೆನಾ|

ನೆನಗಿೞಿವೞ್ತಿಯಂ ಕಿಡಿಸಿ

ನಿಮ್ಮಳವಂ ಪೆಱಗಿಕ್ಕಿ

ನೀಮುಮಿಂ

ತಿನಿತೆರ್ದೆಗೆಟ್ಟಿರಿಂ ತುೞಿಲ

ಸಂದರನಾರುಮನೆಂತು

ನಂಬುವರ್|| ೧೧೯ ||

ಪದ್ಯ-೧೧೯:ಪದವಿಭಾಗ-

ಅರ್ಥ:ಎನಗೆ ರಣಾಗ್ರದೊಳ್

(ಅಗ್ರ- ದೊಡ್ಡ ರಣ-ಯುದ್ಧ)
ಪೊಣರ್ವೊಡೆ ಅಂಕದ
ಪೊಂಕದ
ಸಿಂಧುಪುತ್ರನೊರ್ವನೆ
ದೊರೆಯೆಂದು (ಡೊಡ್ಡ
ಯುದ್ಧದಲ್ಲಿ ಕಾದಬೇಕಾದರೆ
ಪ್ರಸಿದ್ಧನೂ ಹೆಮ್ಮೆಯವನೂ
ಆದ ಭೀಷ್ಮನೊಬ್ಬನೇ ನನಗೆ
ಸಮಾನನಾದವನು ಎಂದು)
ನಿಮ್ಮೊಳೆ ವಲಂ ತಱಿಸಂದು
ಇಱಿಯಲ್ಕೆ (ನಿಮ್ಮೊಡನೆ

ನಿಜಕ್ಕೂ ಸರಿಯಾಗಿ
ಯುದ್ಧಮಾಡಲು) ಪೂಣ್ದೆನು
ಆನು (ನಾನು ಪ್ರತಿಜ್ಞೆ ಮಾಡಿ
ಬಂದೆ) ಎನಗೆ ಇಱಿವಱ್ತೆಯಂ
ಕಿಡಿಸಿ (ನನಗುಂಟಾದ
ಯುದ್ಧೋತ್ಸಾಹವನ್ನು ಕೆಡಿಸಿ)
ನಿಮ್ಮ ಅಳವಂ ಪೆಱಗಿಕ್ಕಿ
(ನಿಮ್ಮ ಪರಾಕ್ರಮವನ್ನು
ಕೈಬಿಟ್ಟು, ಪಕ್ಕಕ್ಕಿಟ್ಟು)
ನೀಮುಂ ಇಂತು ಇನಿತು
ಎರ್ದೆಗೆಟ್ಟಿರ್ (ನೀವೂ ಹೇಗೆ

ಧೈರ್ಯಹೀನರಾಗಿದ್ದೀರಿ) ತುಟಿಲ ಸಂದರನು (ಯುದ್ಧಕ್ಕೆ ಬಂದವರನ್ನು) ಆರುಮನು ಎಂತು ನಂಬುವರ್ (ಇನ್ನು ಮೇಲೆ ಯುದ್ಧಕ್ಕೆ ಬಂದವರನ್ನು ಯಾರನ್ನಾದರೂ ಹೇಗೆ ನಂಬುವುದು?)

ಪದ್ಯ-೧೧೯:ಅರ್ಥ:
ಯುಧ್ಧವನ್ನು ಬಿಟ್ಟು ಭೀಷ್ಮನು ಎರಡೂ ಕೈಮುಗಿದು ನಿಂತಾಗ, (ನನಗೆ) ಡೊಡ್ಡ ಯುದ್ಧದಲ್ಲಿ

ಕಾದಬೇಕಾದರೆ ಪ್ರಸಿದ್ಧನೂ ಹೆಮ್ಮೆಯವನೂ ಆದ ಭೀಷ್ಮನೊಬ್ಬನೇ ನನಗೆ ಸಮಾನನಾದವನು ಎಂದು ನಿಮ್ಮೊಡನೆ ಸರಿಯಾಗಿ ಯುದ್ಧ ಮಾಡುವುದಕ್ಕೆ ನಾನು ಪ್ರತಿಜ್ಞೆ ಮಾಡಿ ಬಂದೆ. ನನಗುಂಟಾದ ಯುದ್ಧೋತ್ಸಾಹವನ್ನು ಕೆಡಿಸಿ ನಿಮ್ಮ ಪರಾಕ್ರಮವನ್ನು ಕೈಬಿಟ್ಟು ನೀವೂ ಹೇಗೆ ಧೈರ್ಯಹೀನರಾಗಿದ್ದೀರಿ. ಇನ್ನು

ಮೇಲೆ ಯುದ್ಧಕ್ಕೆ ಬಂದವರನ್ನು ಯಾರನ್ನಾದರೂ ಹೇಗೆ ನಂಬುವುದು?

ವ|| ಎಂದು ತನ್ನಂ ನೋಯೆ ನುಡಿದೊಡೆ ಸಿಂಧುಪುತ್ರನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ತನ್ನಂ ನೋಯೆ (ನೋವುಂಟಾಗುವ ಹಾಗೆ) ನುಡಿದೊಡೆ ಸಿಂಧುಪುತ್ರನು ಇಂತೆಂದಂ-

ವಚನ:ಅರ್ಥ:ಎಂದು ತನಗೆ ನೋವುಂಟಾಗುವ ಹಾಗೆ ನುಡಿಯಲು ಭೀಷ್ಮನು ಹೀಗೆ ಹೇಳಿದನು-

ಮ||

ನಿನಗೇನೆಂದೊಡಮೆಂದುದೊ ಪ್ಪಿದಪುದಂತೇಕೆನ್ನನಿನ್ನೀ ಶರಾ ಸನದೊಳ್

ಶೂಲಕಪಾಲಪಾಣಿ ದಯೆಯಿಂ ಬಂದಿರ್ದನುಂತಾನುಮಿಂ|

ತಿನಿತಂ ನೀಂ ನುಡಿವನ್ನೆಗಂ

ತಡೆವೆನೇ ತ್ರೈಲೋಕ್ಯನಾಥಂ

ಕಣಾ

ವಿನಮನ್ಮಸ್ತಕನಾದೆನಣ್ಮುವೊ

ಡೆ ನೀನೀ ದೇವನಂ

ತೋಱುವೈ|| ೧೨೦ ||

ಪದ್ಯ-೧೨೦:ಪದವಿಭಾಗ-

ಅರ್ಥ:ನಿನಗೇನೆಂದೊಡಂ

ಎಂದುದು ಒಪ್ಪಿದಪುದು

ಅಂತು ಏಕೆ ಎನ್ನ - (ನೀನು

ಏನು ಹೇಳಿದರೂ ನಿನಗೆ

ಒಪ್ಪುತ್ತದೆ. ಹಾಗೆ ಏಕೆ ಎಂದು ಎನ್ನ ಕೇಳುವೆಯಾ) ನಿನ್ನ ಈ ಶರಾಸನದೊಳ್ (ನಿನ್ನ ಬಿಲ್ಲಿನಲ್ಲಿ) ಶೂಲಕಪಾಲಪಾಣಿ ದಯೆಯಿಂ ಬಂದಿರ್ದನು ಉಂತೆ ಆನುಂ ಇಂತಿನಿತಂ (ಶೂಲಕಪಾಲಪಾಣಿಯಾದ ಈಶ್ವರನು ದಯೆಯಿಂದ ಬಂದು ಇರುವನು, ಹೀಗೆ ಇಷ್ಟನ್ನು) ನೀಂ ನುಡಿವನ್ನೆಗಂ ತಡೆವೆನೇ (ಹಾಗಿಲ್ಲದ ಪಕ್ಷದಲ್ಲಿ

ನೀನು ಇಷ್ಟು ಹರಟುವವರೆಗೆ
ತಡೆಯುತ್ತಿದ್ದೆನೇ?)
ತ್ರೈಲೋಕ್ಯನಾಥಂ ಕಣಾ
ವಿನಮನ್ ಮಸ್ತಕನಾದೆನು
(ಶಿವನು ಮೂರುಲೋಕದ
ಒಡೆಯನಲ್ಲವೇ?
ಆದುದರಿಂದ ನಮಸ್ಕಾರ
ಮಾಡಿದೆ) ಅಣ್ಮುವೊಡೆ
(ಯುದ್ಧ ಮಾಡುವುದಕ್ಕೆ)
ನೀನು ಈ ದೇವನಂ
ತೋಱುವೈ (ನೀನು

ಈಶ್ವರದೇವನನ್ನು ತೋರಿಸುತ್ತೀಯೆ)

ಪದ್ಯ-೧೨೦:ಅರ್ಥ: ನೀನು ಏನು ಹೇಳಿದರೂ ನಿನಗೆ ಒಪ್ಪುತ್ತದೆ. ಹಾಗೆ ಏಕೆ ಎಂದು ಎನ್ನ ಕೇಳುವೆಯಾ? ನಿನ್ನ ಈ ಬಿಲ್ಲಿನಲ್ಲಿ ಶೂಲಕಪಾಲಪಾಣಿಯಾದ ಈಶ್ವರನು ದಯೆಯಿಂದ ಬಂದು ಇರುವನು. ಹಾಗಿಲ್ಲದ ಪಕ್ಷದಲ್ಲಿ ನೀನು ಇಷ್ಟು

ಹರಟುವವರೆಗೆ

ತಡೆಯುತ್ತಿದ್ದೆನೇ? ಶಿವನು

ಮೂರುಲೋಕದ

ಒಡೆಯನಲ್ಲವೇ?

ಆದುದರಿಂದ ನಮಸ್ಕಾರ

ಮಾಡಿದೆ. ನಾನು ಯುದ್ಧ

ಮಾಡುವುದಕ್ಕೆ ಬರಲು ನೀನು

ಈಶ್ವರದೇವನನ್ನು

ತೋರಿಸುತ್ತೀಯೆ.

ಕಂ|| ಇಱಿವಂತು ನಿನಗೆ

ಮನದೊಳ್

ತಱಿಸಲವುಂಟಪ್ಪೊಡೆಲವೊ

ದೇವೇಶನನೇಂ|

ಸೆರೆವಿಡಿದೆ ತೊಲಗು ದೇವನ

ಮರೆಯಂ

ಬಱಿಕಱಿಯಲಕ್ಕುಮೆನಗಂ

ನಿನಗಂ|| ೧೨೧ ||

ಪದ್ಯ-00:ಪದವಿಭಾಗ-

ಅರ್ಥ:ಇಱಿವಂತು

(ಯುದ್ಧಮಾಡುವ ಹಾಗೆ)

ನಿನಗೆ ಮನದೊಳ್

ತಱಿಸಲವುಂಟು ಅಪ್ಪೊಡೆ

(ನಿನಗೆ ಮನಸ್ಸಿನಲ್ಲಿ
ಯುದ್ಧಮಾಡುವ ಹಾಗೆ
ನಿಶ್ಚಯವೇ ಇದ್ದರೆ) ಎಲವೊ
ದೇವೇಶನನು ಏಂ ಸೆರೆವಿಡಿದೆ
(ದೇವಶ್ರೇಷ್ಠನಾದ
ಈಶ್ವರನನ್ನೇಕೆ
ಮರೆಹೊಕ್ಕಿದ್ದೀಯೆ?) ತೊಲಗು
ದೇವನಮರೆಯಂ (ದೇವನ
ಆಶ್ರಯವನ್ನು ಬಿಟ್ಟು ಬಿಡು.)
ಬೞಿಕ ಅಱಿಯಲಕ್ಕುಂ
ಎನಗಂ ನಿನಗಂ (ಬಳಿಕ

ನನಗೂ ನಿನಗೂ ಯುದ್ಧವಾಗಬಹುದು; ಅರಿ -ಯುದ್ಧ, ತಿಳಿ; ; ಆಥವಾ ಇರುವ ಸಾಮರ್ಥ್ಯವನ್ನು ತಿಳಿಯಲು ಸಾಧ್ಯವಾಗುತ್ತದೆ)

ಪದ್ಯ-00:ಅರ್ಥ: ೧೨೧. ನಿನಗೆ ಮನಸ್ಸಿನಲ್ಲಿ ಯುದ್ಧಮಾಡುವ ಹಾಗೆ ನಿಶ್ಚಯವೇ ಇದ್ದರೆ ದೇವಶ್ರೇಷ್ಠನಾದ ಈಶ್ವರನನ್ನೇಕೆ

ಮರೆಹೊಕ್ಕಿದ್ದೀಯೆ? ದೇವನ ಆಶ್ರಯವನ್ನು ಬಿಟ್ಟು ಬಿಡು. ಬಳಿಕ ನನಗೂ ನಿನಗೂ ಯುದ್ಧವಾಗಬಹುದು; ಆಥವಾ ಇರುವ ಸಾಮರ್ಥ್ಯವನ್ನು ತಿಳಿಯಲು ಸಾಧ್ಯವಾಗುತ್ತದೆ.

ವ|| ಎಂಬುದುಂ ಶ್ವೇತನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಶ್ವೇತನಿಲು ಇಂತೆಂದಂ-

ವಚನ:ಅರ್ಥ:ಎನ್ನಲು

ಶ್ವೇತನು ಹೀಗೆಂದನು.

ಉ|| ಕಾಗೆವೊಲಿಂತು ಬಿಲ್ಗೆ

ಕರಮಂಜುವಿರಂಜಲಿಮಾ

ತ್ರಿಣೇತ್ರನಂ

ಪೋ ಗೆಡೆಗೊಂಡು ಕಾದುವೆನೆ

ಕಾದೆನಿದಂ ಹರನಿತ್ತನೆಂದು

ನೋ|

ಡಾಗಡುಮೞ್ತಿಯಿಂ

ಪಿಡಿವೆನಕ್ಕಟ

ನಿಮ್ಮನದಿರ್ಪುವಲ್ಲಿ ಚಾ

ಪಾಗಮಮೇವುದಂತೆನಗೆ ಬಿಲ್ವರಮಾಜಿಯೊಳಾಂಪ ಗಂಡರಾರ್|| ೧೨೨ ||

ಪದ್ಯ-೧೨೨:ಪದವಿಭಾಗ-ಅರ್ಥ:ಕಾಗೆವೊಲ್ ಇಂತು ಬಿಲ್ಗೆ ಕರಂ ಅಂಜುವಿರ್? ಅಂಜಲಿಮ್ (ಕಾಗೆಯ ಹಾಗೆ ಬಿಲ್ಲಿಗೆ ಹೆದರುತ್ತೀರಿ; ಹೆದರಬೇಡಿ) ಆ ತ್ರಿಣೇತ್ರನಂ ಪೋಗೆ ಎಡೆಗೊಂಡು ಕಾದುವೆನೆ (ಆ ಶಿವನು

ಹೋಗಲಿ-ಆ ಮುಕ್ಕಣ್ಣನನ್ನು
ಆಶ್ರಯಿಸಿ ಕಾದುತ್ತೇನೆಯೆ?)
ಕಾದೆನು ಇದಂ ಹರನು
ಇತ್ತನೆಂದು ನೋಡು
ಆಗಡುಂ(ಯಾವಾಗಲೂ)
ಅಱ್ತಿಯಿಂ ಪಿಡಿವೆನು (ಇದನ್ನು
ಈಶ್ವರನು ಕೊಟ್ಟನೆಂದು
ಯಾವಾಗಲೂ ಪ್ರೀತಿಯಿಂದ
ಕಾದುಕೊಂಡಿದ್ದೇನೆ-
ಹಿಡಿದಿದ್ದೇನೆ) ಅಕ್ಕಟ ನಿಮ್ಮನು
ಇದಿರ್ಪುವಲ್ಲಿ ಚಾಪಾಗಮಂ

ಏವುದು (ಅಯ್ಯೋ ನಿಮ್ಮನ್ನು ಅಡಗಿಸುವುದಕ್ಕೆ ಧನುರ್ವಿದ್ಯೆ ಯಾವುದು ಮಹಾ?) ಅಂತು ಎನಗೆ ಬಿಲ್ವರಂ ಆಜಿಯೊಳ್ ಆಂಪ ಗಂಡರಾರ್ (ಅಲ್ಲದೆ ನಾನು ಬಿಲ್ಲನ್ನು ಹಿಡಿದರೆ ನನ್ನನ್ನು ಪ್ರತಿಭಟಿಸುವ ಶೂರರಾರು?)

ಪದ್ಯ-೧೨೨:ಅರ್ಥ: ೧೨೨. ಕಾಗೆಯ ಹಾಗೆ ಬಿಲ್ಲಿಗೆ ಹೆದರುತ್ತೀರಿ; ಹೆದರಬೇಡಿ, ಆ

ಶಿವನು ಹೋಗಲಿ-ಆ
ಮುಕ್ಕಣ್ಣನನ್ನು ಆಶ್ರಯಿಸಿ
ಕಾದುತ್ತೇನೆಯೆ? ಇದನ್ನು
ಈಶ್ವರನು ಕೊಟ್ಟನೆಂದು
ಯಾವಾಗಲೂ ಪ್ರೀತಿಯಿಂದ
ಧರಿಸಿದ್ದೇನೆ. ಅಯ್ಯೋ
ನಿಮ್ಮನ್ನು ಅಡಗಿಸುವುದಕ್ಕೆ
ಧನುರ್ವಿದ್ಯೆ ಯಾವುದು
ಮಹಾ? ಅಲ್ಲದೆ ನಾನು
ಬಿಲ್ಲನ್ನು ಹಿಡಿದರೆ ನನ್ನನ್ನು
ಪ್ರತಿಭಟಿಸುವ ಶೂರರಾರು?

ಮ|| ಬಿಸುಟೆಂ
ಬಿಲ್ಲನದೇವುದೆಂದು
ಕಡುಪಿಂದೀಡಾಡಿ
ಸೂರ್ಯಪ್ರಭಾ
ಪ್ರಸರಂಗಳ್ ಮಸುಳ್ವನ್ನೆಗಂ
ಪೊಳೆವುದೊಂದಂ ಶಕ್ತಿಯಂ
ಕೊಂಡಗು|
ರ್ವಿಸಿ
ಗಾಂಗೇಯನನಿಟ್ಟನಿಟ್ಟೊಡದ
ನೀರಯ್ದಸ್ತ್ರದಿಂದೆಚ್ಚು ಖಂ

ಡಿಸಿ ಪೇರಾಳ ತಿಱಿದಿಕ್ಕಿದಂತೆ ತಲೆಯಂ ಪೋಗೆಚ್ಚನಾ ಶ್ವೇತನಾ|| ೧೨೩ ||

ಪದ್ಯ-00:ಪದವಿಭಾಗ-ಅರ್ಥ: ಬಿಸುಟೆಂ ಬಿಲ್ಲನು ಅದೇವುದು ಎಂದು ಕಡುಪಿಂದ ಈಡಾಡಿ (ಇದೋ ಬಿಲ್ಲನ್ನು ಬಿಸುಟಿದ್ದೇನೆ. ಅದರಿಂದೇನಾಗಬೇಕು, ಎಣದು ಪರಾಕ್ರಮದಿಂದ ಎಸೆದು) ಸೂರ್ಯಪ್ರಭಾ

ಪ್ರಸರಂಗಳ್ ಮಸುಳ್ವ

ಅನ್ನೆಗಂ (ಸಂಜೆಯ

ಸೂರ್ಯಕಾಂತಿಯ

ಕಿರಣಗಳು ಕಾಂತಿಯು

ಮಸುಕಾಗುತ್ತಿರಲು,)

ಪೊಳೆವುದು ಒಂದಂ ಶಕ್ತಿಯಂ

ಕೊಂಡು ಅಗುರ್ವಿಸಿ

ಗಾಂಗೇಯನನು ಇಟ್ಟಂ

(ಹೊಳೆಯುವ ಒಂದು

ಶಕ್ತಾಯುಧವನ್ನು

ತೆಗೆದುಕೊಂಡು ಹೆದರಿಸಿ

ಭೀಷ್ಮನನ್ನು ಹೊಡೆದನು.)
ಇಟ್ಟೊಡೆ ಅದನು ಈರಯ್ದು
ಅಸ್ತ್ರದಿಂದ ಎಚ್ಚು ಖಂಡಿಸಿ
(ಅದನ್ನು ಹತ್ತು ಬಾಣಗಳಿಂದ
ಹೊಡೆದು ತಡೆದು - ಕತ್ತರಿಸಿ)
ಪೇರಾಳ (ಪೇರ್ ಆಳ >
ಪಿರಿಯ ಆಳಾದ (ದೊಡ್ಡ ಆಳು
ಆದ- ಮಹಾ ಪುರಷ
ಭೀಷ್ಮನು) ತಿಱಿದು ಇಕ್ಕಿದಂತೆ
(ಆ ಶಕ್ತ್ಯಾಯುಧವು ಹಿಂದಕ್ಕೆ
ತಿರುಗಿ ಚಿಮ್ಮುವಂತೆ)

ತಲೆಯಂ ಪೋಗೆ ಎಚ್ಚನು ಆ ಶ್ವೇತನಾ (ಆ ಶ್ವೇತನ ತಲೆಯು ಹೋಗುವಂತೆ ಹೊಡೆದನು.)

ಪದ್ಯ-00:ಅರ್ಥ: ಇದೋ ಬಿಲ್ಲನ್ನು ಬಿಸುಟಿದ್ದೇನೆ. ಅದರಿಂದೇನಾಗಬೇಕು ಎಂದು ಪರಾಕ್ರಮದಿಂದ ಎಸೆದು ಸಂಜೆಯ ಸೂರ್ಯಕಾಂತಿಯ ಕಿರಣಗಳು ಕಾಂತಿಯು ಮಸುಕಾಗುತ್ತಿರಲು, ಹೊಳೆಯುವ ಒಂದು

ಶಕ್ತ್ಯಾಯುಧವನ್ನು
ತೆಗೆದುಕೊಂಡು ಹೆದರಿಸಿ
ಹೊಡೆದನು. ಆ ಮಹಾ
ಪುರಷ ಭೀಷ್ಮನು ಅದನ್ನು
ಹತ್ತು ಬಾಣಗಳಿಂದ ಹೊಡೆದು
ಖಂಡಿಸಿ- ತಡೆದು, ಅದು
ಹಿಂದಕ್ಕೆ ತಿರುಗಿ ಚಿಮ್ಮುವಂತೆ
ಆ ಶ್ವೇತನ ತಲೆಯು
ಹೋಗುವಂತೆ ಹೊಡೆದನು.

ಕಂ|| ಶ್ವೇತನ
ಬೀರಮನುಪಮಾ

ತೀತಮನೀ ಧರೆಗೆ ನೆಗೞೆ
ನೆಗೞ್ದುದನಿದನಾಂ|
ಪಾತಾಳಕ್ಕೞಿಪುವೆನೆಂ
ಬೀ ತೆಱದೊಳೆ
ದಿನಪನಪರಜಲನಿಧಿಗಿೞಿದಂ|
| ೧೨೪ ||

ಪದ್ಯ-00:ಪದವಿಭಾಗ-
ಅರ್ಥ:ಶ್ವೇತನ ಬೀರಮನು ಉಪಮಾತೀತಮನು ಈ ಧರೆಗೆ ನೆಗೞೆ (ಹೋಲಿಕೆಗೂ ಮೀರಿದ್ದ ಈ ಶ್ವೇತನ

ಪರಾಕ್ರಮವು ಈ ಲೋಕದಲ್ಲಿ ಪ್ರಸಿದ್ಧವಾಗಿದ್ದು) ನೆಗೞ್ದುದನು ಇದನು ಆಂ ಪಾತಾಳಕ್ಕೆ ಅಱಿಪುವೆನು ಎಂಬ ಈ ತೆಱದೊಳೆ (ನಾನು ಅದನ್ನು ಪಾತಾಳಕ್ಕೂ ತಿಳಿಸುತ್ತೇನೆ ಎನ್ನುವ ರೀತಿಯಲ್ಲಿ) ದಿನಪನು ಅಪರಜಲನಿಧಿಗೆ ಇೞಿದಂ (ಸೂರ್ಯನು ಪಶ್ಚಿಮಸಮುದ್ರಕ್ಕೆ ಇಳಿದನು)

ಪದ್ಯ-00:ಅರ್ಥ:ಹೋಲಿಕೆ
ಗೂ ಮೀರಿದ್ದ ಈ ಶ್ವೇತನ
ಪರಾಕ್ರಮವು ಈ ಲೋಕದಲ್ಲಿ
ಪ್ರಸಿದ್ಧವಾಗಿದ್ದು ನಾನು
ಅದನ್ನು ಪಾತಾಳಕ್ಕೂ
ತಿಳಿಸುತ್ತೇನೆ ಎನ್ನುವ
ರೀತಿಯಲ್ಲಿ ಸೂರ್ಯನು
ಪಶ್ಚಿಮಸಮುದ್ರಕ್ಕೆ ಇಳಿದನು.

ವ|| ಆಗಳೆರಡುಂ ಪಡೆಯ ನಾಯಕರಪಹಾರತೂರ್ಯಂಗ ಳಂ ಬಾಜಿಸಿ ತಮ್ಮ ತಮ್ಮ

ಬೀಡುಗಳ್ಗೆ ಪೋದರನ್ನೆಗಮಿತ್ತ
ಸಂಸಪ್ತಕಬಲಮನೆಲ್ಲಮನೊಂ
ದೆ ರಥದೊಳಾದಿತ್ಯ
ನಸುರರನದಿರ್ಪುವಂತಾಟಂ
ದು
ವಿಕ್ರಮಾರ್ಜುನನುಮರಾತಿಕಾ
ಳಾನಳನುಮತಿರಥ
ಮಥನನುಂ
ರಿಪುಕುರಂಗಕಂಠೀರವನುಂ
ಸಾಹಸಾಭರಣನುಮಮ್ಮನ
ಗಂಧವಾರಣನುಂ

ಪಡೆಮುಚ್ಚೆಗಂಡನುಂ ಪರಸೈನ್ಯಭೈರವನುಮೆಂಬ ಪೆಸರ್ಗಳನನ್ವರ್ಥಂ ಮಾಡಿ-

ವಚನ:ಪದವಿಭಾಗ-

ಅರ್ಥ:ಆಗಳೆರಡುಂ ಪಡೆಯ ನಾಯಕರು ಅಪಹಾರತೂರ್ಯಂಗಳಂ ಬಾಜಿಸಿ (ಆಗ ಎರಡು ಸೈನ್ಯದ ನಾಯಕರೂ ಯುದ್ಧವನ್ನು ನಿಲ್ಲಿಸಲು ಸೂಚಕವಾದ ವಾದ್ಯಗಳನ್ನು ಬಾರಿಸಿ) ತಮ್ಮ

ತಮ್ಮ ಬೀಡುಗಳ್ಗೆ ಪೋದರು (ತಮ್ಮ ತಮ್ಮ ಬೀಡುಗಳಿಗೆ ಹೋದರು.) ಅನ್ನೆಗಂ ಇತ್ತ ಸಂಸಪ್ತಕಬಲಮನು ಎಲ್ಲಮನು ಒಂದೆ ರಥದೊಳು (ಅಷ್ಟರಲ್ಲಿ ಈ ಕಡೆ ಸಂಸಪ್ತಕ ಸೈನ್ಯವೆಲ್ಲವನ್ನೂ ಒಂದೇ ತೇರಿನಲ್ಲಿ ಕುಳಿತು) ಆದಿತ್ಯನು ಅಸುರರನು ಅದಿರ್ಪುವಂತು ಆಟಂದು (ಸೂರ್ಯನು ರಾಕ್ಷಸರನ್ನು ಅಡಗಿಸುವಂತೆ

ಶತ್ರುಗಳ ಮೇಲೆ ಬಿದ್ದು)
ವಿಕ್ರಮಾರ್ಜುನನುಂ
ಆರಾತಿಕಾಳಾನಳನುಂ,
ಅತಿರಥ ಮಥನನುಂ,
ರಿಪುಕುರಂಗ ಕಂಠೀರವನುಂ,
ಸಾಹಸಾಭರಣನುಂ, ಅಮ್ಮನ
ಗಂಧವಾರಣನುಂ,
ಪಡೆಮಚ್ಚೆಗಂಡನುಂ,
ಪರಸೈನ್ಯಭೈರವನುಂ ಎಂಬ
ಪೆಸರ್ಗಳನು ಅನ್ವರ್ಥಂ
ಮಾಡಿ(ಎಂಬ ತನ್ನ

ಹೆಸರುಗಳನ್ನು
ಸಾರ್ಥಕವಾಗುವಂತೆ ಮಾಡಿ)-
ವಚನ:ಅರ್ಥ:ಆಗ ಎರಡು
ಸೈನ್ಯದ ನಾಯಕರೂ
ಯುದ್ಧವನ್ನು ನಿಲ್ಲಿಸಲು
ಸೂಚಕವಾದ ವಾದ್ಯಗಳನ್ನು
ಬಾರಿಸಿ ತಮ್ಮ ತಮ್ಮ
ಬೀಡುಗಳಿಗೆ ಹೋದರು.
ಅಷ್ಟರಲ್ಲಿ ಈ ಕಡೆ ಸಂಸಪ್ತಕ
ಸೈನ್ಯವೆಲ್ಲವನ್ನೂ ಒಂದೇ
ತೇರಿನಲ್ಲಿ ಕುಳಿತು,

ಸೂರ್ಯನು ರಾಕ್ಷಸರನ್ನು
ಅಡಗಿಸುವಂತೆ ಶತ್ರುಗಳ
ಮೇಲೆ ಬಿದ್ದು ಅರ್ಜುನನೂ
ಕೂಡಿ ತನ್ನ ಅರಾತಿಕಾಳಾನಳ,
ಅತಿರಥಮಥನ, ರಿಪುಕುರಂಗ
ಕಂಠೀರವ, ಸಾಹಸಾಭರಣ,
ಗಂಧವಾರಣ,
ಪಡೆಮೆಚ್ಚಗಂಡ,
ಪರಸೈನ್ಯಭೈರವ ಎಂಬ ತನ್ನ
ಹೆಸರುಗಳನ್ನು

ಸಾರ್ಥಕವಾಗುವಂತೆ

ಮಾಡಿದನು.

ಚಂ|| ನೆರೆದನುರಾಗದಿಂ

ಪಡೆಯ ಪಾಡಿಯ ಬೀರರ

ಪೆಂಡಿರಟ್ಟಿಱಿಂ

ಪರಸಿಯೊಱಲ್ತು ಸೇಸೆಗಳನಿಕ್ಕೆ

ಮುರಾರಿಯ ಪಾಂಚಜನ್ಯ ವಿ|

ಸುರಿತ ರವಂ ಜಯತ್ಸೋವದ

ಘೋಷಣೆಯಂತಿರೆ

ಪೊಕ್ಕನಾತ್ಮ ಮಂ

ಧಿರಮನುದಾತ್ತಚಿತ್ತನವನೀತ ಳ ಪೂಜ್ಯಗುಣಾಂ ಗುಣಾರ್ಣವಂ|| ೧೨೫ ||

ಪದ್ಯ-00:ಪದವಿಭಾಗ-ಅರ್ಥ:ನೆರೆದ ಅನುರಾಗದಿಂ ಪಡೆಯ ಪಾಡಿಯ (ಪ್ರೀತಿಯಿಂದ ಸೈನ್ಯವನ್ನು ಹಾಡಿ) ಬೀರರ ಪೆಂಡಿರ್ ಅಟ್ಟಿಚಿಂ (ವೀರರ ಪತ್ನಿಯರು ಪ್ರೀತಿಯಿಂದ) ಪರಸಿಯೊಱಲ್ತು (ಪರಸಿ

ಒರಲ್ದು) ಸೇಸೆಗಳನಿಕ್ಕೆ (ಹರಸಿ
ಹಾಡಿ ಸೇಸೆಯನ್ನಿಕ್ಕಿದರು.)
ಮುರಾರಿಯ ಪಾಂಚಜನ್ಯ
ವಿಸ್ಫುರಿತ ರವಂ
ಜಯತ್ಸೋವದ
ಘೋಷಣೆಯಂತಿರೆ
(ಶ್ರೀಕೃಷ್ಣನ ಪಾಂಚಜನ್ಯವೆಂಬ
ಶಂಖದ ವಿಜೃಂಭಿತ ಧ್ವನಿಯು
ವಿಜಯೋತ್ಸವದ
ಡಂಗುರದಂತಿರಲು) ಪೊಕ್ಕನು
ಆತ್ಮ ಮಂದಿರಮನು

ಉದಾತ್ತಚಿತ್ತನು ಅವನೀತಳ ಪೂಜ್ಯಗುಣಂ ಗುಣಾರ್ಣವಂ (ಉದಾತ್ತಚಿತ್ತನೂ ಭೂಮಂಡಲದಲ್ಲಿ ಪೂಜಿಸಲ್ಪಡುವ ಗುಣಗಳಿಂದ ಕೂಡಿದವನೂ ಆದ ಗುಣಾರ್ಣವ ಅರ್ಜುನನು ತನ್ನ ಮಂದಿರವನ್ನು ಪ್ರವೇಶಿಸಿದನು.)

ಪದ್ಯ-00:ಅರ್ಥ:ಸೈನ್ಯಸ ಮೂಹದಲ್ಲಿದ್ದ ವೀರರ

ಪತ್ನಿಯರು ಒಟ್ಟುಗೂಡಿ
ಪ್ರೀತಿಯಿಂದ ಸೈನ್ಯವನ್ನು
ಹರಸಿ ಹಾಡಿ
ಸೇಸೆಯನ್ನಿಕ್ಕಿದರು. ಶ್ರೀಕೃಷ್ಣನ
ಪಾಂಚಜನ್ಯವೆಂಬ ಶಂಖದ
ವಿಜೃಂಭಿತ ಧ್ವನಿಯು
ವಿಜಯೋತ್ಸವದ
ಡಂಗುರದಂತಿತ್ತು.
ಉದಾತ್ತಚಿತ್ತನೂ
ಭೂಮಂಡಲದಲ್ಲಿ
ಪೂಜಿಸಲ್ಪಡುವ ಗುಣಗಳಿಂದ

ಕೂಡಿದವನೂ ಆದ ಗುಣಾರ್ಣವ ಅರ್ಜುನನು ತನ್ನ ಮಂದಿರವನ್ನು ಪ್ರವೇಶಿಸಿದನು.

♦

|| ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವವಿರಚಿತ

ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ದಶಮಾಶ್ವಾಸಂ ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ

ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಹತ್ತನೆಯ ಆಶ್ವಾಸ||

♦♣♣♣♣♣♣♣♣♣♣♣♣♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	**10**	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?

title=ಪಂಪಭಾರತ_ದಶಮಾಶ್ವಾಸಂ&oldid=145826" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೧ ಜೂನ್ ೨೦೧೮, ೧೯:೦೮ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಏಕಾದಶಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ಏಕಾದಶಾಶ್ವಾಸಂ

- (I.VI.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಕುರುಕ್ಷೇತ್ರದಲ್ಲಿ ಭೀಷ್ಮನ ಶರಶಯ್ಯೆ - ದ್ರೋಣನಿಗೆ ಸೇನಾಧಿಪತಿ ಪಟ್ಟ - ಅಭಿಮನ್ಯುವಿನ ಮರಣ - ಸೈಂಧವ ವಧೆ

ಕಂ|| ಶ್ರೀ ಯುವತಿಯನಾ ವೀರ ಶ್ರೀ ಯುವತಿಗೆ ಸವತಿಮಾೞ್ಪೆನೆಂದರಿ ನೃಪರು| ಳ್ಳಾಯವೆರಸೆೞೆದುಕೊಂಡು ಧ ರಾ ಯುವತಿಗೆ ನೆಗೞ್ದ ಹರಿಗನೊರ್ವನೆ ಗಂಡಂ|| ೧ ||

ಪದ್ಯ-೧:ಪದವಿಭಾಗ-

ಅರ್ಥ:ಶ್ರೀ ಯುವತಿಯನು ಆ

ವೀರಶ್ರೀ ಯುವತಿಗೆ ಸವತಿ
ಮಾಟ್ಪೆನೆಂದು
(ಸಂಪತ್ತೆಂಬಲಕ್ಷ್ಮಿಗೆ
(ಒಡೆಯನಾಗಿ)
ಜಯಲಕ್ಷ್ಮಿಯನ್ನು
ಸವತಿಯನ್ನಾಗಿ
ಮಾಡುತ್ತೇನೆಂದು) ಅರಿ
ನೃಪರು ಉಳ್ಳಾಯವೆರಸೆ
ಎಚಿದುಕೊಂಡು
(ಶತ್ರುರಾಜರನ್ನು ಅವರ
ಸಮರಸಾಮರ್ಥ್ಯದಿಂದ

ಸೆಳೆದು ವಶಪಡಿಸಿಕೊಂಡು)
ಧರಾ ಯುವತಿಗೆ ನೆಗಳ್ದಿ
ಹರಿಗನೊರ್ವನೆ ಗಂಡಂ
(ಭೂದೇವಿಯ ಒಡೆಯನಾದ
(ಭೂಪತಿ - ಅರಿಕೇಸರಿ)
ಅರ್ಜುನನೊಬ್ಬನೇ
ಶೂರನಾದವನು)

ಪದ್ಯ-೧:ಅರ್ಥ:

ಸಂಪತ್ತೆಂಬಲಕ್ಷ್ಮಿಗೆ
(ಒಡೆಯನಾಗಿ)
ಜಯಲಕ್ಷ್ಮಿಯನ್ನು

ಸವತಿಯನ್ನಾಗಿ
ಮಾಡುತ್ತೇನೆಂದು
ಶತ್ರುರಾಜರನ್ನು ಅವರ
ಸಮರಸಾಮರ್ಥ್ಯದಿಂದ
ಸೆಳೆದು ವಶಪಡಿಸಿಕೊಂಡು
ಭೂದೇವಿಯ ಒಡೆಯನಾದ
(ಭೂಪತಿ - ಅರಿಕೇಸರಿ)
ಅರ್ಜುನನೊಬ್ಬನೇ
ಶೂರನಾದವನು.

ಎಂಬ ನಿಜ ಚರಿತಮಂ ಪಲ

ರುಂ ಬಣ್ಣಿಸೆ ಕಿವಿಯನಾಂತು ಕೇಳುತ್ತುಮಳುಂ|
ಬಂ ಬೀರಮೆನಿಸಿ ತನಗಿದಿ
ರಂ ಬಂದು ಕಡಂಗಿ ಸತ್ತರಂ ಪೊಗಱುತ್ತುಂ|| ೨ ||

ಪದ್ಯ-೨:ಪದವಿಭಾಗ-ಅರ್ಥ:ಎಂಬ ನಿಜ ಚರಿತಮಂ ಪಲರುಂ ಬಣ್ಣಿಸೆ ಕಿವಿಯನಾಂತು ಕೇಳುತ್ತುಂ (ಎಂಬ ತನ್ನ ಚರಿತ್ರವನ್ನು ಅನೇಕರು ವರ್ಣಿಸುತ್ತಿರಲು

ಅದನ್ನು ಕಿವಿಗೊಟ್ಟು ಕೇಳುತ್ತಲೂ) ಅಳುಂಬಂ ಬೀರಮೆನಿಸಿ (ಅತಿಶಯ ಶೂರರೆನಿಸಿಕೊಂಡು) ತನಗಿದಿರಂ ಬಂದು ಕಡಂಗಿ ಸತ್ತರಂ ಪೊಗೞುತ್ತುಂ (ತನಗೆ ಇದಿರಾಗಿ ಬಂದು ಶೌರ್ಯದಿಂದ ಹೋರಾಡಿ ಸತ್ತವರನ್ನು ಹೊಗಳುತ್ತಲೂ ಇದ್ದನು.)

ಪದ್ಯ-೨:ಅರ್ಥ: ಎಂಬ ತನ್ನ ಚರಿತ್ರವನ್ನು ಅನೇಕರು ವರ್ಣಿಸುತ್ತಿರಲು ಅದನ್ನು ಕಿವಿಗೊಟ್ಟು ಕೇಳುತ್ತಲೂ ಅತಿಶಯ ಶೂರರೆನಿಸಿಕೊಂಡು ತನಗೆ ಇದಿರಾಗಿ ಬಂದು ಶೌರ್ಯದಿಂದ ಹೋರಾಡಿ ಸತ್ತವರನ್ನು ಹೊಗಳುತ್ತಲೂ ಇದ್ದನು.

ವ|| ಅಂತು ವಿಕ್ರಾಂತ ತುಂಗನಿರ್ಪನ್ನೆಗಮಿತ್ತಲೆರಡುಂ

ಪಡೆಯ ನಾಯಕರಱಿಯೆ
ನೊಂದ ತಮ್ಮಣುಗಾಳ್ಗಳ
ಕೊಂಡಾಟದಾನೆಗಳ ನಚ್ಚಿನ
ಕುದುರೆಗಳ
ಪುಣ್ಗಳನುಡಿಯಲುಮೋವ
ಲುಂ
ಮರ್ದುಬೆಜ್ಜರಮನಟ್ಟುತ್ತುಮಿ
ಕ್ಕಿದ ಸನ್ನಣಂಗಳಂ ಗೆಲ್ದು
ಕಣಕೆನೆ ಪೋಗುರ್ಚೆ ತಮ್ಮ
ಮೆಯ್ಯೊಳುಡಿದಂಬುಗಳುಮನೆ
ಲ್ವಂ ನಟ್ಟುಡಿದ ಬಾಳ

ಕಕ್ಕಡೆಯುಡಿಗಳುಮನಯಸ್
ಕಾಂತಮಂ ತೋಱಿ
ತೆಗೆಯಿಸುತ್ತುಂ ವಜ್ರಮುಷ್ಟಿಯ
ಪೊಯ್ಲೊಳಂ ಬಾಳ
ಕೊಳೊಳಮುಚ್ಚಳಿಸಿದ
ಕಪಾಲದೋಡುಗಳಂ
ಗಂಗೆಗಟ್ಟುತ್ತುಂ-

ವಚನ:ಪದವಿಭಾಗ-ಅರ್ಥ:

ಅಂತು ವಿಕ್ರಾಂತ ತುಂಗನು
ಇರ್ಪನ್ನೆಗಂ (ಹಾಗೆ ಅತ್ಯಂತ
ಪರಾಕ್ರಮಿಯಾದ

ಅರ್ಜುನನು ಇರುತ್ತಿರಲು)
ಇತ್ತಲೆರಡುಂ ಪಡೆಯ
ನಾಯಕರು ಅೞಿಯೆ
(ಅಳಿಯೆ- ಸಾಯುವಷ್ಟು)
ನೊಂದ ತಮ್ಮ ಅಣುಗ ಆಳ್ಗಳ
(ಎರಡು ಸೈನ್ಯದ ನಾಯಕರೂ
ಸಾಯುವಷ್ಟು ನೋವನ್ನು
ಪಡೆದಿದ್ದ ತಮ್ಮ
ಪ್ರೀತಿಪಾತ್ರರಾದ ಸೇವಕರ,)
ಕೊಂಡಾಟದಾನೆಗಳ ನಚ್ಚಿನ
ಕುದುರೆಗಳ ಪುಣ್ಗಳನು

ಉಡಿಯಲುಂ ಓವಲುಂ (ತಮ್ಮ ಹೊಗಳಿಕೆಗೆ ಪಾತ್ರವಾದ ಆನೆಗಳ, ತಮ್ಮ ಮೆಚ್ಚಿನ ಕುದುರೆಗಳ ಹುಣ್ಣುಗಳನ್ನು (ಗಾಯವನ್ನು) ಗುಣಪಡಿಸುವುದಕ್ಕೂ ರಕ್ಷಿಸುವುದಕ್ಕೂ) ಮದ್ದುರ್ ಬೆಜ್ಜರಮನು ಅಟ್ಟುತ್ತುಂ (ಔಷಧವನ್ನೂ ಲೇಪನವನ್ನೂ ವೈದ್ಯರನ್ನೂ ಕಳುಹಿಸುತ್ತಾ-ಇದ್ದರು.) ಇಕ್ಕಿದ ಸನ್ನಣಂಗಳಂ

ಗೆಲ್ದು ಕಣಕೆನೆ ಪೋಗುರ್ಚಿ
ತಮ್ಮ ಮೆಯ್ಯೊಳು
ಉಡಿದಂಬುಗಳುಮನು
ಎಲ್ವಂ (ಅವರು ಧರಿಸಿದ್ದ
ಕವಚಗಳನ್ನೂ
ಭೇದಿಸಿಕೊಂಡು ನೇರವಾಗಿ
ಒಳಕ್ಕೆ ಪ್ರವೇಶಿಸಿ
ಚುಚ್ಚಿಕೊಂಡು ಶರೀರದೊಳಗೆ
ಮುರಿದುಹೋಗಿದ್ದ
ಬಾಣಗಳನ್ನೂ
ಎಲುಬುಗಳನ್ನೂ) ನಟ್ಟುಡಿದ

ಬಾಳ ಕಕ್ಕಡೆಯುಡಿಗಳುಂ ಅನಯಸ್ಕಾಂತಮಂ (ಕತ್ತಿ ಮತ್ತು ಮುಳ್ಳುಗೋಲುಗಳ ಚೂರುಗಳನ್ನೂ ಸೂಜಿಗಲ್ಲನ್ನು (ಅಯಸ್ಕಾಂತ)) ತೋಱಿ ತೆಗೆಯಿಸುತ್ತುಂ (ತೋರಿಸಿ ತೆಗೆಯಿಸುತ್ತಿದ್ದರು.) ವಜ್ರಮುಷ್ಟಿಯ ಪೊಯ್ಲೊಳಂ (ವಜ್ರಮುಷ್ಟಿಯ ಪೆಟ್ಟಿನಿಂದಲೂ) ಬಾಳ ಕೊಳೊಳಂ ಉಚ್ಚಳಿಸಿದ

ಕಪಾಲದೋಡುಗಳಂ (ಕತ್ತಿಯ ಇರಿತದಿಂದಲೂ ಸಿಡಿದುಹೋದ ತಲೆಯ ಚಿಪ್ಪುಗಳನ್ನು) ಗಂಗೆಗಟ್ಟುತ್ತುಂ (ಗಂಗಾನದಿಗೆ ಕಳುಹಿಸುತ್ತಿದ್ದರು.)-

ವಚನ:ಅರ್ಥ:ಹಾಗೆ ಅತ್ಯಂತ ಪರಾಕ್ರಮಿಯಾದ ಅರ್ಜುನನು ಇರುತ್ತಿರಲು ಎರಡು ಸೈನ್ಯದ ನಾಯಕರೂ ಸಾಯುವಷ್ಟು ನೋವನ್ನು

ಪಡೆದಿದ್ದ ತಮ್ಮ
ಪ್ರೀತಿಪಾತ್ರರಾದ ಸೇವಕರ,
ತಮ್ಮ ಹೊಗಳಿಕೆಗೆ ಪಾತ್ರವಾದ
ಆನೆಗಳ, ತಮ್ಮ ಮೆಚ್ಚಿನ
ಕುದುರೆಗಳ ಹುಣ್ಣುಗಳನ್ನು
(ಗಾಯವನ್ನು)
ಗುಣಪಡಿಸುವುದಕ್ಕೂ
ರಕ್ಷಿಸುವುದಕ್ಕೂ ಔಷಧವನ್ನೂ
ಲೇಪನವನ್ನೂ ವೈದ್ಯರನ್ನೂ
ಕಳುಹಿಸುತ್ತಿದ್ದರು. ಅವರು
ಧರಿಸಿದ್ದ ಕವಚಗಳನ್ನೂ

ಭೇದಿಸಿಕೊಂಡು ನೇರವಾಗಿ
ಒಳಕ್ಕೆ ಪ್ರವೇಶಿಸಿ
ಚುಚ್ಚಿಕೊಂಡು ಶರೀರದೊಳಗೆ
ಮುರಿದುಹೋಗಿದ್ದ
ಬಾಣಗಳನ್ನೂ
ಎಲುಬುಗಳನ್ನೂ ಕತ್ತಿ ಮತ್ತು
ಮುಳ್ಳುಗೋಲುಗಳ
ಚೂರುಗಳನ್ನೂ ಸೂಜಿಗಲ್ಲನ್ನು
(ಅಯಸ್ಕಾಂತ) ತೋರಿಸಿ
ತೆಗೆಯಿಸುತ್ತಿದ್ದರು.
ವಜ್ರಮುಷ್ಟಿಯ

ಪೆಟ್ಟಿನಿಂದಲೂ ಕತ್ತಿಯ ಇರಿತದಿಂದಲೂ ಸಿಡಿದುಹೋದ ತಲೆಯ ಚಿಪ್ಪುಗಳನ್ನು ಗಂಗಾನದಿಗೆ ಕಳುಹಿಸುತ್ತಿದ್ದರು.

ಉ||

ಉನ್ನತಮಸ್ತಕಸ್ಥಳದೊಳಂಬು
ಗಳೆಬ್ಬಿಡಿದಿರ್ದೊಡತ್ತಮಿ
ತ್ತನ್ನೆರೆ ತಂದು
ಬಲ್ದಡಿಗರಿಬ್ಬುಟಿನೊಳ್ ಕಿಟಿ
ನೊಂದೆನೆನ್ನದ|

ಎನ್ನದಣಿಂ ಮೊಗಂ ಮುರಿಯದಳ್ಕದೆ ಬೇನೆಗಳೊಳ್ ಮೊಗಂಗಳಂ ಬಿನ್ನಗೆ ಮಾಡದಿರ್ದರಳವಚ್ಚರಿಯಾಗೆ ಕೆಲರ್ ಮಹಾರಥರ್|| ೩ ||

ಪದ್ಯ-೩:ಪದವಿಭಾಗ-ಅರ್ಥ:ಉನ್ನತ ಮಸ್ತಕಸ್ಥಳದೊಳು ಅಂಬುಗಳ್ ಅಟ್ಟು ಉಡಿದಿರ್ದೊಡೆ (ತಲೆಯ

ಮೇಲಿನ ಪ್ರದೇಶದಲ್ಲಿ ಬಾಣಗಳು ನಾಟಿಕೊಂಡು ಮುರಿದಿರಲು) ಅತ್ತಂ ಇತ್ತ ಎನ್ನೆರೆ ತಂದು ಬಲ್ದಡಿಗರು ಉಬ್ಕುಟಿನೊಳ್ ಕಿಟೆ (ಬಲಿಷ್ಠರಾದ ದಾಂಡಿಗರು ಆ ಕಡೆಯಿಂದ ಈ ಕಡೆಯಿಂದ ಒಟ್ಟಾಗಿ ಬಂದು ಸೇರಿ ಇಕ್ಕಳದಿಂದ ಅವುಗಳನ್ನು ಕೀಳಲು) ನೊಂದೆನು ಎನ್ನದ ಎನ್ನದ ಅಣಂ

(ನೋವಾಯಿತು ಎನ್ನದೆ ಅ ಎನ್ನದೆ ಸ್ವಲ್ಪವೂ) ಮೊಗಂ ಮುರಿಯದೆ ಅಳ್ಕದೆ (ಮುಖವನ್ನು ತಿರುಗಿಸದೆ ಹೆದರದೆ) ಬೇನೆಗಳ್ಗೊಳ್ ಮೊಗಂಗಳಂ ಬಿನ್ನಗೆ ಮಾಡದಿರ್ದರ್ (ಮುಖವನ್ನು ಪೆಚ್ಚಾಗಿ ಮಾಡಿಕೊಳ್ಳದೆ ಇದ್ದರು) ಅಳವಚ್ಚರಿಯಾಗೆ ಕೆಲರ್ ಮಹಾರಥರ್ (ಕೆಲವು ಮಹಾರಥರು ತಮ್ಮ

ಸಾಮರ್ಥ್ಯವು ಆಶ್ಚರ್ಯಕರವಾಗುವ ಹಾಗೆ ಇದ್ದರು.)

ಪದ್ಯ-೩:ಅರ್ಥ: ತಲೆಯ ಮೇಲಿನ ಪ್ರದೇಶದಲ್ಲಿ ಬಾಣಗಳು ನಾಟಿಕೊಂಡು ಮುರಿದಿರಲು ಬಲಿಷ್ಠರಾದ ದಾಂಡಿಗರು ಆ ಕಡೆಯಿಂದ ಈ ಕಡೆಯಿಂದ ಒಟ್ಟಾಗಿ ಬಂದು ಸೇರಿ ಇಕ್ಕಳದಿಂದ ಅವುಗಳನ್ನು ಕೀಳುತ್ತಿದ್ದರೂ

ನೋವಾಯಿತು ಎನ್ನದೆ ಅ ಎನ್ನದೆ ಸ್ವಲ್ಪವೂ ಮುಖವನ್ನು ತಿರುಗಿಸದೆ ಹೆದರದೆ ಮುಖವನ್ನು ಪೆಚ್ಚಾಗಿ ಮಾಡಿಕೊಳ್ಳದೆ ಇದ್ದರು. ಕೆಲವು ಮಹಾರಥರು ತಮ್ಮ ಸಾಮರ್ಥ್ಯವು ಆಶ್ಚರ್ಯಕರವಾಗುವ ಹಾಗೆ ಇದ್ದರು.

ಚಂ|| ರಸಮೊಸರ್ವನ್ನೆಗಂ ತಗುಳೆ ಪಾಡುವ ಗಾಣರ

ಗೇಯಮಟ್ಟಿಱಿಂ
ಪೊಸಯಿಸೆ
ಸೋಂಕುವೊಲ್ದೊಲಿಸುವೋ
ಪಳ ಸೋಂಕು ಪೊದಟ್ಟಿ
ಜಾದಿಯೊಳ್|
ಮಸಗಿದ ಕಂಪು
ಕಂಪನೊಳಕೊಂಡಲೆವೊಂದೆ
ಲರೆಂಬಿವಂದು ಪಾ
ಱಿಸುವುವುದಗ್ರ ವೀರ
ಭಟರಾಹವಕೇಳಿ
ಪರಿಶ್ರಮಂಗಳಂ|| ೪ ||

ಪದ್ಯ-೪:ಪದವಿಭಾಗ-ಅರ್ಥ:ರಸಂ ಒಸರ್ವನ್ನೆಗಂ ತಗುಳೆ ಪಾಡುವ (ರಸವು ಸೂಸುವವರೆಗೂ ಬಿಡದೆ ಹಾಡುವ) ಗಾಣರ ಗೇಯಮ ಅಲ್ಕಱಿಂ ಪೊಸಯಿಸೆ (ಸಂಗೀತಗಾರರ ಗಾನ, ಪ್ರೀತಿಯನ್ನು ಹೊಸದಾಗಿ ಉಂಟುಮಾಡುವಂತೆ) ಸೋಂಕುವ ಒಲ್ದು ಒಲಿಸುವ (ಹತ್ತಿರವೇ ಕುಳಿತು ಪ್ರೀತಿಸಿ

ಸುಖವನ್ನು ಹೆಚ್ಚಿಸುತ್ತಿರುವ)
ಓಪಳ ಸೋಂಕು ಪೊದಳ್ದಿ
ಜಾದಿಯೊಳ್ ಮಸಗಿದ ಕಂಪು
(ಪ್ರಿಯಳ ಸ್ಪರ್ಶ, ಎಲ್ಲೆಡೆಯೂ
ಹರಡಿದ ಜಾಜಿಯ ತುಂಬಿದ
ಪರಿಮಳದಿಂದ)
ಕಂಪನೊಳಕೊಂಡ ಅಲೆವ
ಒಂದು ಎಲರ್ ಎಂಬ
ಇವಂದು (ಸುವಾಸನೆಯಿಂದ
ಕೂಡಿದ ಗಾಳಿ ಎಂಬ ಇವು
ಬಂದು) ಪಾಱಿಸುವುವು

ಉದಗ್ರ ವೀರ ಭಟರ ಆಹವ ಕೇಳಿ ಪರಿಶ್ರಮಂಗಳಂ (ಶ್ರೇಷ್ಠರಾದ ವೀರಭಟರ ಯುದ್ಧ ಪರಿಶ್ರಮವನ್ನು ಪಾಱಿಸುವುವು- ಹೋಗಲಾಡಿಸುತ್ತಿದ್ದುವು.)

ಪದ್ಯ-೪:ಅರ್ಥ: ೪. ರಸವು ಸೂಸುವವರೆಗೂ ಬಿಡದೆ ಹಾಡುವ ಸಂಗೀತಗಾರರ ಗಾನ, ಪ್ರೀತಿಯನ್ನು ಹೊಸದಾಗಿ

ಉಂಟುಮಾಡುವಂತೆ
ಹತ್ತಿರವೇ ಕುಳಿತು ಪ್ರೀತಿಸಿ
ಸುಖವನ್ನು ಹೆಚ್ಚಿಸುತ್ತಿರುವ
ಪ್ರಿಯಳ ಸ್ಪರ್ಶ, ಎಲ್ಲೆಡೆಯೂ
ಹರಡಿದ ಜಾಜಿಯ ತುಂಬಿದ
ಪರಿಮಳದಿಂದ
ಸುವಾಸನೆಯಿಂದ ಕೂಡಿದ
ಗಾಳಿ ಎಂಬ ಇವು ಬಂದು
ಶ್ರೇಷ್ಠರಾದ ವೀರಭಟರ
ಯುದ್ಧಪರಿಶ್ರಮವನ್ನು
ಹೋಗಲಾಡಿಸುತ್ತಿದ್ದುವು.

ವ|| ಆಗಳ್ ಧರ್ಮನಂದನಂ ಮುಕುಂದಂಗೆ ಬಱಿಯನಟ್ಟಿ ಬರಿಸಿ ನಮ್ಮ ಸೇನಾನಾಯಕ ನುತ್ತಾಯಕನಾಗಿ ಗಾಂಗೇಯರಿಂದಮಱಿದ ನಿನ್ನಾರ್ಗೆ ವೀರಪಟ್ಟಮಂ ಕಟ್ಟುವಂ ಪೇಱಿಮೆನೆ-

ವಚನ:ಪದವಿಭಾಗ-

ಅರ್ಥ:ಆಗಳ್ ಧರ್ಮನಂದನಂ ಮುಕುಂದಂಗೆ ಬಱಿಯನಟ್ಟಿ

ಬರಿಸಿ (ದೂತನನ್ನು ಕಳುಹಿಸಿ ಬರಮಾಡಿಕೊಂಡು) ನಮ್ಮ ಸೇನಾನಾಯಕನು ಉತ್ತಾಯಕನಾಗಿ ಗಾಂಗೇಯರಿಂದಂ ಅೞಿದನು ('ನಮ್ಮ ಸೇನಾನಾಯಕನು ತನ್ನ ಪ್ರತಾಪವನ್ನು ಮೆರೆದು ಭೀಷ್ಮರಿಂದ ಮರಣಹೊಂದಿದನು) ಇನ್ನಾರ್ಗೆ ವೀರಪಟ್ಟಮಂ ಕಟ್ಟುವಂ ಪೇೞಿಮೆನೆ (ಇನ್ನು

ಯಾರಿಗೆ ವೀರಪಟ್ಟವನ್ನು ಕಟ್ಟೋಣ ಹೇಳಿ’ ಎಂದು ಕೇಳಿದನು; ಕೇಳಲು-)

<u>ಪ್ರದ್ಯುಮ್ನನಿಗೆ ಪಾಂಡವಸೇನಾಧಿಪತಿ ಪಟ್ಟ</u>

ವಚನ:ಅರ್ಥ: ವ|| ಆಗ ಧರ್ಮರಾಜನು ಶ್ರೀಕೃಷ್ಣನಲ್ಲಿಗೆ ದೂತನನ್ನು ಕಳುಹಿಸಿ ಬರಮಾಡಿಕೊಂಡು ‘ನಮ್ಮ ಸೇನಾನಾಯಕನು ತನ್ನ

ಪ್ರತಾಪವನ್ನು ಮೆರೆದು ಭೀಷ್ಮರಿಂದ ಮರಣಹೊಂದಿದನು. ಇನ್ನು ಯಾರಿಗೆ ವೀರಪಟ್ಟವನ್ನು ಕಟ್ಟೋಣ ಹೇಳಿ’ ಎಂದು ಕೇಳಿದನು; ಕೇಳಲು-

ಕಂ|| ಬೇಳ್ವೆಯ ಕೊಂಡದೊಳುರ್ಚಿದ ಬಾಳ್ವೆರಸರಿಬಲಮನರಿಯಲೆಂದಂಕದ ಕ| ಟ್ಟಾಳ್ವೀರನತಿ ಬಲಂ ನಿನ

ಗಾಳ್ವೆಸಕೆಂದಿರ್ದನಲ್ತೆ ಧೃಷ್ಟದ್ಯುಮ್ನಂ|| ೫ ||

ಪದ್ಯ-೫:ಪದವಿಭಾಗ-ಅರ್ಥ:ಬೇಳ್ವೆಯ ಕೊಂಡದೊಳು ಉರ್ಚಿದ ಬಾಳ್ ವೆರಸು (ಯಜ್ಞಕುಂಡದಿಂದ ಬಿಚ್ಚಿದ ಕತ್ತಿಯ ಸಮೇತ) ಅರಿಬಲಮನ ಅರಿಯಲೆಂದು ಅಂಕದ ಕಟ್ಟಾಳ್ ವೀರನು (ಶತ್ರುಸೈನ್ಯವನ್ನು

ಕತ್ತರಿಸುವುದಕ್ಕಾಗಿಯೇ ಉದ್ಭವಿಸಿದ, ಸುಪ್ರಸಿದ್ಧನೂ ಮಹಾಬಲಿಷ್ಠನೂ ವೀರನೂ ಆದ) ಅತಿ ಬಲಂ ನಿನಗೆ ಆಳ್ವೆಸಕೆಂದು ಇರ್ದನಲ್ತೆ ಧೃಷ್ಟದ್ಯುಮ್ನಂ (ನಿನಗೆ ಸೇವೆಮಾಡಲೆಂದೇ ಇದ್ದಾನಲ್ಲವೇ?)

ಪದ್ಯ-೫:ಅರ್ಥ:ಯಜ್ಞಕುಂಡ ದಿಂದ ಬಿಚ್ಚಿದ ಕತ್ತಿಯ ಸಮೇತ ಶತ್ರುಸೈನ್ಯವನ್ನು

ಕತ್ತರಿಸುವುದಕ್ಕಾಗಿಯೇ
ಉದ್ಭವಿಸಿದ, ಸುಪ್ರಸಿದ್ಧನೂ
ಮಹಾಬಲಿಷ್ಠನೂ ವೀರನೂ
ಆದ ಧೃಷ್ಟದ್ಯುಮ್ನನು ನಿನಗೆ
ಸೇವೆಮಾಡಲೆಂದೇ
ಇದ್ದಾನಲ್ಲವೇ?

ವ|| ಎಂಬುದುಮೀ ಕಜ್ಜಮೆನ್ನ ಮನದೊಳೊಡಂಬಟ್ಟ ಕಜ್ಜಮಾತನೆ ವೀರಪಟ್ಟಕ್ಕೆ ತಕ್ಕನೆಂದು ಧರ್ಮನಂದನಂ ದ್ರುಪದನಂದನಂಗೆ

ಬಱಿಯನಟ್ಟಿ ಬರಿಸಿ ಪಿರಿದುಮೊಸಗೆವೆರಸು ತಾನೆ ವೀರಪಟ್ಟಮಂ ಕಟ್ಟಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಈ ಕಜ್ಜಮ್ ಎನ್ನ ಮನದೊಳು ಒಡಂಬಟ್ಟ ಕಜ್ಜಮ್ (ಎನ್ನಲು ಈ ಕಾರ್ಯ ನನ್ನ ಮನಸ್ಸಿಗೂ ಒಪ್ಪಿದ ಕಾರ್ಯವೇ.) ಆತನೆ ವೀರಪಟ್ಟಕ್ಕೆ ತಕ್ಕನೆಂದು ಧರ್ಮನಂದನಂ

ದ್ರುಪದನಂದನಂಗೆ
ಬೞಿಯನಟ್ಟಿ ಬರಿಸಿ (ಅವನೇ
ವೀರಪಟ್ಟಕ್ಕೆ
ಯೋಗ್ಯನಾದವನು ಎಂದು
ಧರ್ಮರಾಜನು ದ್ರುಪದನ
ಮಗನಾದ ಧೃಷ್ಟದ್ಯುಮ್ನನಿಗೆ
ಹೇಳಿಕಳುಹಿಸಿ
ಬರಮಾಡಿಕೊಂಡು)
ಪಿರಿದುಮ್ ಒಸಗೆವೆರಸು
ತಾನೆ ವೀರಪಟ್ಟಮಂ ಕಟ್ಟಿ

(ವಿಶೇಷಪ್ರೀತಿಯಿಂದ ಕೂಡಿ ತಾನೆ ವೀರಪಟ್ಟವನ್ನು ಕಟ್ಟಿ-)- **ವಚನ:ಅರ್ಥ**:ಎನ್ನಲು ಈ ಕಾರ್ಯ ನನ್ನ ಮನಸ್ಸಿಗೂ ಒಪ್ಪಿದ ಕಾರ್ಯವೇ. ಅವನೇ ವೀರಪಟ್ಟಕ್ಕೆ ಯೋಗ್ಯನಾದವನು ಎಂದು ಧರ್ಮರಾಜನು ದ್ರುಪದನ ಮಗನಾದ ಧೃಷ್ಟದ್ಯುಮ್ನನಿಗೆ ಹೇಳಿಕಳುಹಿಸಿ ಬರಮಾಡಿಕೊಂಡು,

ವಿಶೇಷಪ್ರೀತಿಯಿಂದ ಕೂಡಿ ತಾನೆ ವೀರಪಟ್ಟವನ್ನು ಕಟ್ಟಿದನು. ಕಟ್ಟಿ-

ಕಂ|| ಆ ಸಮರಮುಖದೊಳೆಸೆವರಿ
ಕೇಸರಿಯ ವಿರೋಧಿ ರುಧಿರ ಜಲನಿಧಿವೊಲ್ ಸಂ|
ಧ್ಯಾಸಮಯಮೆಸೆಯೆ ತೞತೞ
ನೇಸಱು ಮೂಡುವುದುಮೊಡ್ಡಣಕ್ಕೆೞ್ತಂ

ದರ್|| ೬ ||

ಪದ್ಯ-೦೬:ಪದವಿಭಾಗ-ಅರ್ಥ:ಆ ಸಮರಮುಖದೊಳು ಎಸೆವ ಅರಿಕೇಸರಿಯ ವಿರೋಧಿ ರುಧಿರ ಜಲನಿಧಿವೊಲ್ (ಆ ಯುದ್ಧದ ಆರಂಭದಲ್ಲಿ ಪ್ರಸಿದ್ಧನಾದ ಅರ್ಜುನನ ಶತ್ರುಗಳ ರಕ್ತ ಸಮುದ್ರದ ಹಾಗೆ) ಸಂಧ್ಯಾಸಮಯಂ ಎಸೆಯೆ ತಟಿತಟಿ ನೇಸಱು

ಮೂಡುವುದುಂ ಒಡ್ಡಣಕ್ಕೆ ಎಟ್ಟಿಂದರ್ (ಸಂಧ್ಯಾಕಾಲವು ಪ್ರಕಾಶಿಸುತ್ತಿರಲು ಸೂರ್ಯನು ತಳತಳನೆ ಉದಯಿಸಲು, ಎಲ್ಲರೂ ಯುದ್ಧರಂಗಕ್ಕೆ ಬಂದರು.)

ಪದ್ಯ-೦೬:ಅರ್ಥ:೬. ಆ ಯುದ್ಧದ ಆರಂಭದಲ್ಲಿ ಪ್ರಸಿದ್ಧನಾದ ಅರ್ಜುನನ ಶತ್ರುಗಳ ರಕ್ತ ಸಮುದ್ರದ ಹಾಗೆ ಸಂಧ್ಯಾಕಾಲವು

ಪ್ರಕಾಶಿಸುತ್ತಿರಲು ಸೂರ್ಯನು ತಳತಳನೆ ಉದಯಿಸಲು, ಎಲ್ಲರೂ ಯುದ್ಧರಂಗಕ್ಕೆ ಬಂದರು.

ವ|| ಅಂತಜಾತಶತ್ರು ಮುನ್ನಮೆ ಬಂದೊಡ್ಡಿ ಶತ್ರುಬಲಜಲನಿಯಳ್ಳಾಡೆ ವಿಳಯ ಕಾಳಾನಿಳನೆ ಬೀಸುವಂತೆ ಕೆಯ್ವೀಸಿದಾಗಳ್-

ವಚನ:ಪದವಿಭಾಗ-ಅರ್ಥ:ಅಂತಜಾತಶತ್ರು ಮುನ್ನಮೆ ಬಂದು ಒಡ್ಡಿ (ಧರ್ಮರಾಜನು ಮೊದಲೇ ಬಂದು ಸೈನ್ಯವನ್ನು ಒಡ್ಡಿ) ಶತ್ರುಬಲಜಲನಿಯ ಅಳ್ಳಾಡೆ (ಶತ್ರುಸೇನಾಸಮುದ್ರವು ನಡುಗುವಂತೆಯೂ) ವಿಳಯ ಕಾಳಾನಿಳನೆ ಬೀಸುವಂತೆ (ಪ್ರಳಯಕಾಲದ ಮಾರುತವು ಬೀಸುವ ಹಾಗೆ)

ಕೆಯ್ವೀಸಿದಾಗಳ್ - ಕೈ
ಬೀಸಿದಾಗಳ್- (
ಯುದ್ದಪ್ರಾರಂಭಸೂಚಕವಾಗಿ
ಕೈಬೀಸಿದಾಗ)
ವಚನ:ಅರ್ಥ:ಧರ್ಮರಾಜ
ನು ಮೊದಲೇ ಬಂದು
ಸೈನ್ಯವನ್ನು ಒಡ್ಡಿ
ಶತ್ರುಸೇನಾಸಮುದ್ರವು
ನಡುಗುವಂತೆಯೂ
ಪ್ರಳಯಕಾಲದ ಮಾರುತವು
ಬೀಸುವ ಹಾಗೆ

ಯುದ್ಧಪ್ರಾರಂಭಸೂಚಕವಾಗಿ
ಕೈಬೀಸಿದಾಗ-

ಮ|| ಚತುರಂಗಂ ಚತುರಂಗ
ಸೈನ್ಯದೊಳಡುತ್ತುರ್ತಂ
ತಿಱ್ರನೆಯ್ತಂದು ತಾ
ಗಿ ತಡಂಮೆಟ್ಟದೆ ಕಾದೆ
ಬಾಳ್ಗಳುಡಿಗಳ್ ಜೀರೆೞ್ದು
ಮಾರ್ತಾಗಿ ಶೋ|
ಣಿತ ಧಾರಾಳಿಗಳುರ್ಚೆ ಪೆರ್ಚೆ
ಸಿಡಿಯಲ್ ತೇಂಕಲ್
ವಿಮಾನಂಗಳ

ಳ್ಕಿ ತಗುಳ್ದಾಗಳೆ ಮತ್ತಮತ್ತ ತಳರ್ದರ್ ದೇವರ್ ನಭೋಭಾಗದೊಳ್|| ೭ ||

ಪದ್ಯ-೭:ಪದವಿಭಾಗ-ಅರ್ಥ:ಚತುರಂಗಂ ಚತುರಂಗ ಸೈನ್ಯದೊಳ್ ಅಡುರ್ತ್ತುಂ ತಿಱ್ರಿನೆಯ್ತುಂದು ತಾಗಿ (ಒಂದು ಚತುರಂಗಸೈನ್ಯವು ಮತ್ತೊಂದು ಚತುರಂಗಸೈನ್ಯವನ್ನು ಸಮೀಪಿಸಿ ಬಂದು ಸುತ್ತಿ

ಆಕ್ರಮಿಸಿ,) ತಡಂಮೆಟ್ಟದೆ
ಕಾದೆ (ಸಾವಕಾಶ ಮಾಡದೆ
ಯುದ್ಧಮಾಡಲು) ಬಾಳ್ಗಳ
ಉಡಿಗಳ್ ಜೀರೆಬ್ದು
ಮಾರ್ತಾಗಿ (ಕತ್ತಿಯ
ಮುರುಕುಗಳು ಜೀರ್ ಎಂದು
ಶಬ್ದ ಮಾಡಿಕೊಂಡು ಕತ್ತಿಯ
ಮುರುಕುಗಳು ಜೀರ್ ಎಂದು
ಶಬ್ದ ಮಾಡಿಕೊಂಡು
ಒಂದಕ್ಕೊಂದು ತಗಲಿ-)
ಶೋಣಿತ ಧಾರಾಳಿಗಳು

ಉರ್ಚಿ ಪೆರ್ಚಿ ಸಿಡಿಯಲ್ (ರಕ್ತಧಾರೆಗಳು ಮೇಲಕ್ಕೆದ್ದು ಹಾರಿ ಸಿಡಿಯಲು-) ತೇಂಕಲ್ ವಿಮಾನಂಗಳು (ಮೇಲೆ ದೇವತೆಗಳ ವಿಮಾನಗಳು ತೇಲಾಡಿದುವು.) ಅಳ್ಕಿ ತಗುಳ್ದು (ಅಂತರಿಕ್ಷಭಾಗದಲ್ಲಿ ದೇವತೆಗಳು ಹೆದರಿ ಒಟ್ಟಾಗಿ ಸೇರಿ) ಆಗಳೆ ಮತ್ತಮತ್ತ ತಳರ್ದರ್ (ಅತ್ತಿತ್ತ ಜಾರಿದರು.) ದೇವರ್

ನಭೋಭಾಗದೊಳ್
(ಅಂತರಿಕ್ಷಭಾಗದಲ್ಲಿ
ದೇವತೆಗಳು)
ಪದ್ಯ-೭:ಅರ್ಥ:ಒಂದು
ಚತುರಂಗಸೈನ್ಯವು
ಮತ್ತೊಂದು
ಚತುರಂಗಸೈನ್ಯವನ್ನು
ಸಮೀಪಿಸಿ ಬಂದು ಸುತ್ತಿ
ಆಕ್ರಮಿಸಿ, ಸಾವಕಾಶ ಮಾಡದೆ
ಯುದ್ಧಮಾಡಲು,. ಕತ್ತಿಯ
ಮುರುಕುಗಳು ಜೀರ್ ಎಂದು

ಶಬ್ದ ಮಾಡಿಕೊಂಡು
ಒಂದಕ್ಕೊಂದು ತಗಲಿ-
ರಕ್ತಧಾರೆಗಳು ಮೇಲಕ್ಕೆದ್ದು
ಹಾರಿ ಸಿಡಿದುವು. ಮೇಲೆ
ದೇವತೆಗಳ ವಿಮಾನಗಳು
ತೇಲಾಡಿದುವು.
ಅಂತರಿಕ್ಷಭಾಗದಲ್ಲಿ
ದೇವತೆಗಳು ಹೆದರಿ ಒಟ್ಟಾಗಿ
ಸೇರಿ ಅತ್ತಿತ್ತ ಜಾರಿದರು.

ವ|| ಆಗಳೆರಡುಂ ಪಡೆಯ ನಾಯಕರೊಂದೊರ್ವರೊಳ್

ತಾಗಿ ಕಿಡಿಗುಟ್ಟಿದಂತೆ
ಕಾದುವಾಗಳಭಿಮನ್ಯು
ಉಗ್ರತೇಜನಪ್ಪ ಮಗಧ
ತನೂಜನನೊಂದೆ
ಪಾರೆಯಂಬಿನೊಳ್ ಕೆಯ್ಯ
ಕೂಸನಿಕ್ಕುವಂತಿಕ್ಕುವುದುಂ
ನೆಪ್ಪಿಂಗೆ ನೆಪ್ಪುಗೊಳ್ಳದೆ
ಮಾಣೆನೆಂಬಂತೆ ಬಕಾಸುರನ
ಮಗನಳಂಭೂಷನರ್ಜುನನ
ಮಗನಿಳಾವಂತನನಂತಕಲೋ
ಕಮನೆಯ್ದಿಸುವುದುಂ

ಘಟೋತ್ಕಚನಿಳಾವಂತನ

ಸಾವಂ ಕಂಡು ಸೈರಿಸದಳಂ

ಭೂಷನನೆಬ್ಬಿಟ್ಟುವುದುಮವನ

ಳ್ಕಿ ಭಗದತ್ತನಾನೆಯ

ಮರೆಯಂ

ಪುಗುವುದುಮಳಂಭೂಷನಂ

ಪಿಂತಿಕ್ಕಿ ಭಗದತ್ತಂ

ಘಟೋತ್ಕಚನಂ

ಮಾರ್ಕೊಂಡು-

ವಚನ:ಪದವಿಭಾಗ-

ಅರ್ಥ:ಆಗಳೆರಡುಂ ಪಡೆಯ

ನಾಯಕರ್ ಒಂದ್
ಓರ್ವರೊಳ್ ತಾಗಿ (ಆಗ
ಎರಡು ಸೈನ್ಯದ ನಾಯಕರೂ
ಬಂದು ಒಬ್ಬರಲ್ಲಿ ಒಬ್ಬರು
ತಾಗಿ- ಎದುರಿಸಿ)
ಕಿಡಿಗುಟ್ಟಿದಂತೆ ಕಾದುವಾಗಳ್
(ಕೆಂಡವನ್ನ ಕುಟ್ಟಿದ ಹಾಗೆ
ಯುದ್ಧಮಾಡಲು) ಅಭಿಮನ್ಯು
ಉಗ್ರತೇಜನಪ್ಪ ಮಗಧ
ತನೂಜನನು (ಅಭಿಮನ್ಯುವು
ಬಹಳ ಉಗ್ರವಾದ

ತೇಜಸ್ಸನ್ನುಳ್ಳ ಭಗದತ್ತನನ್ನು)
ಒಂದೆ ಪಾರೆಯಂಬಿನೊಳ್
ಕೆಯ್ಯ ಕೂಸನಿಕ್ಕುವಂತೆ
ಇಕ್ಕುವುದುಂ (ಒಂದೇ
ಹಾರುವ ಬಾಣದಿಂದ
ಕಯ್ಯಲ್ಲಿರುವ ಕೂಸನ್ನು
ಬಡಿಯುವಂತೆ ನೆಲಕ್ಕೆ
ಅಪ್ಪಳಿಸಿದನು-) ನೆಪ್ಪಿಂಗೆ
ನೆಪ್ಪುಗೊಳ್ಳದೆ ಮಾಣೆನೆಂಬಂತೆ
(ನೆಪ್ಪು- ಕತ್ತರಿಸು; ಕೊಲೆಗೆ
ಪ್ರತಿಯಾಗಿ ಕೊಲೆಮಾಡದೆ

ಬಿಡುವುದಿಲ್ಲ ಎನ್ನುವ ಹಾಗೆ)
ಬಕಾಸುರನ ಮಗನ
ಅಳಂಭೂಷನು ಅರ್ಜುನನ
ಮಗನು ಇಳಾವಂತನನು
ಅಂತಕಲೋಕಮನು
ಎಯ್ದಿಸುವುದುಂ (ಹಾಗೆ
ಬಕಾಸುರನ ಮಗನಾದ
ಅಳಂಭೂಷನೆಂಬುವನು
ಅರ್ಜುನನ ಮಗನಾದ
ಇಳಾವಂತನೆಂಬುವನನ್ನು
ಯಮಲೋಕಕ್ಕೆ

ಕಳುಹಿಸಿದನು.)
ಘಟೋತ್ಕಚನು ಇಳಾವಂತನ
ಸಾವಂ ಕಂಡು ಸೈರಿಸದೆ
ಅಳಂಭೂಷನನು
ಎಚ್ಚಿಟ್ಟುವುದುಂ ಅವನು ಅಳ್ಕಿ
ಭಗದತ್ತನ ಆನೆಯ ಮರೆಯಂ
ಪುಗುವುದುಂ
(ಘಟೋತ್ಕಚನು ಇಳಾವಂತನ
ಸಾವನ್ನು ಸೈರಿಸಲಾರದೆ
ಅಳಂಭೂಷನನ್ನು
ಎದುರಿಸಲು ಅವನು ಹೆದರಿ

ಭಗದತ್ತನ ಆನೆಯನ್ನು ಮರೆಹೊಕ್ಕನು.)
ಮಳಂಭೂಷನಂ ಪಿಂತಿಕ್ಕಿ ಭಗದತ್ತಂ ಘಟೋತ್ಕಚನಂ ಮಾರ್ಕೊಂಡು (ಭಗದತ್ತನು ಅಳಂಭೂಷನನ್ನು ಹಿಂದಕ್ಕೆ ತಳ್ಳಿ ಘಟೋತ್ಕಚನನ್ನು ಪ್ರತಿಭಟಿಸಿದನು)-
ವಚನ:ಅರ್ಥ:ಆಗ ಎರಡು ಸೈನ್ಯದ ನಾಯಕರೂ ಒಬ್ಬರಲ್ಲಿ ಒಬ್ಬರು ಎದುರಿಸಿ, ಕೆಂಡವನ್ನ

ಕುಟ್ಟಿದ ಹಾಗೆ
ಯುದ್ಧಮಾಡಲು
ಅಭಿಮನ್ಯುವು ಬಹಳ
ಉಗ್ರವಾದ ತೇಜಸ್ಸನ್ನುಳ್ಳ
ಭಗದತ್ತನನ್ನು ಒಂದೇ ಹಾರುವ
ಬಾಣದಿಂದ ಕಯ್ಯಲ್ಲಿರುವ
ಕೂಸನ್ನು ಬಡಿಯುವಂತೆ
ನೆಲಕ್ಕೆ ಅಪ್ಪಳಿಸಿದನು. ಕೊಲೆಗೆ
ಪ್ರತಿಯಾಗಿ ಕೊಲೆಮಾಡದೆ
ಬಿಡುವುದಿಲ್ಲ ಎನ್ನುವ ಹಾಗೆ
ಬಕಾಸುರನ ಮಗನಾದ

ಅಳಂಭೂಷನೆಂಬುವನು ಅರ್ಜುನನ ಮಗನಾದ ಇಳಾವಂತನೆಂಬುವನನ್ನು ಯಮಲೋಕಕ್ಕೆ ಕಳುಹಿಸಿದನು. ಘಟೋತ್ಕಚನು ಇಳಾವಂತನ ಸಾವನ್ನು ಸೈರಿಸಲಾರದೆ ಅಳಂಭೂಷನನ್ನು ಎದುರಿಸಲು ಅವನು ಹೆದರಿ ಭಗದತ್ತನ ಆನೆಯನ್ನು ಮರೆಹೊಕ್ಕನು. ಭಗದತ್ತನು

ಅಳಂಭೂಷನನ್ನು ಹಿಂದಕ್ಕೆ ತಳ್ಳಿ ಘಟೋತ್ಕಚನನ್ನು ಪ್ರತಿಭಟಿಸಿದನು.

ಕಂ|| ಉತ್ಕ್ಷೇಪ ದಹನದೊಡನೆ ಪೃಷತ್ಕಂಗಳ್ ಕೋಟಿ ಗಣಿತದಿಂದುಱುವಿನಮಾ| ದುರ್ತ್ಕಚ ದಿತಿಜನನುಱದೆ ಘಟೋತ್ಕಚನಂ ಬಿಱ್ದು ಮೂರ್ಛೆವೋಪಿನಮೆಚ್ಚಂ|| ೮ ||

ಪದ್ಯ-೮:ಪದವಿಭಾಗ-ಅರ್ಥ:ಉತ್ಕ್ಷೇಪ ದಹನದೊಡನೆ (ಅತಿಯಾದ ಕೋಪಾಗ್ನಿಯೊಡನೆ) ಪೃಷತ್ಕಂಗಳ್ ಕೋಟಿ ಗಣಿತದಿಂದ (ಬಾಣಗಳು ಕೋಟಿ ಸಂಖ್ಯೆಯಿಂದ) ಉಱುವಿನಂ ಆರ್ದು ಉತ್ಕಟ ದಿತಿಜನಂ ಉಱಿದೆ (ಹೆಚ್ಚುತ್ತಿರಲು ಆರ್ಭಟಿಸಿ ಕೆದರಿದ ಕೂದಲನ್ನುಳ್ಳ)

ಘಟೋತ್ಕಚನಂ ಬಿಬ್ಬಿ ಮೂರ್ಛೆವೋಪಿನಂ ಎಚ್ಚಂ (ರಾಕ್ಷಸನಾದ ಘಟೋತ್ಕಚನನ್ನು ಮೂರ್ಛೆಹೋಗುವ ಹಾಗೆ ಭಗದತ್ತನು ಹೊಡೆದನು.)

ಪದ್ಯ-೮:ಅರ್ಥ:ಅತಿಯಾದ ಕೋಪಾಗ್ನಿಯೊಡನೆ ಬಾಣಗಳು ಕೋಟಿ ಸಂಖ್ಯೆಯಿಂದ ಹೆಚ್ಚುತ್ತಿರಲು ಆರ್ಭಟಿಸಿ ಕೆದರಿದ

ಕೂದಲನ್ನುಳ್ಳ ರಾಕ್ಷಸನಾದ ಘಟೋತ್ಕಚನನ್ನು ಮೂರ್ಛೆಹೋಗುವ ಹಾಗೆ ಭಗದತ್ತನು ಹೊಡೆದನು.

ವ|| ಅನ್ನೆಗಂ ವೃಕೋದರಂ ಚತುರ್ದಶ ಭುವನಂಗಳೆಲ್ಲಮಂ ತೆರಳ್ಚಿ ತೇರ್ರೈಸಿ ನುಂಗುವಂತೆ ಮಸಕದಿಂ ಭಗದತ್ತನಂ ಮಾರ್ಕೊಂಡು-

ವಚನ:ಪದವಿಭಾಗ-ಅರ್ಥ:ಅನ್ನೆಗಂ ವೃಕೋದರಂ ಚತುರ್ದಶ ಭುವನಂಗಳೆಲ್ಲಮಂ ತೆರಳ್ಚಿ ತೇರ್ರೈಸಿ (ಭೀಮನು ಹದಿನಾಲ್ಕು ಲೋಕಗಳನ್ನೂ ಉಂಡೆ ಮಾಡಿ ಚಪ್ಪರಿಸಿ ನುಂಗುವಂತೆ) ಮಸಕದಿಂ ಭಗದತ್ತನಂ ಮಾರ್ಕೊಂಡು (ಸಿಟ್ಟಿನಿಂದ ಭಗದತ್ತನನ್ನು ಪ್ರತಿಭಟಿಸಿದನು.)-

ವಚನ:ಅರ್ಥ:ಅಷ್ಟರಲ್ಲಿ ಭೀಮನು ಹದಿನಾಲ್ಕು ಲೋಕಗಳನ್ನೂ ಉಂಡೆ ಮಾಡಿ ಚಪ್ಪರಿಸಿ ನುಂಗುವಂತೆ ಸಿಟ್ಟಿನಿಂದ ಭಗದತ್ತನನ್ನು ಪ್ರತಿಭಟಿಸಿದನು.

ಚಂ|| ಇಸುವುದುಮೆಚ್ಚ ಶಾತ
ಶರ ಸಂತತಿಯಂ
ಭಗದತ್ತನೆಯ್ದೆ ಖಂ
ಡಿಸಿ ರಥಮಂ ಪಡಲ್ವಡಿಸೆ
ಮಚ್ಚರದಿಂ ಗಜೆಗೊಂಡು ತಾಗೆ

ಮಾ|

ಣಿಸಲಮರಾಪಗಾಸುತನಿದಿರ್

ಚುವುದುಂ ರಥಮೆಟ್ಟಿ

ಪೊಯ್ದು ಶಂ

ಕಿಸದಿದಿರಾಂತ

ಸೈಂಧವನುಮಂ

ಪವನಾತ್ಮಜನೋಡೆ ಕಾದಿದಂ||

೯ ||

ಪದ್ಯ-೯:ಪದವಿಭಾಗ-

ಅರ್ಥ:ಇಸುವುದುಂ ಎಚ್ಚ

ಶಾತ ಶರ ಸಂತತಿಯಂ

(ಬಾಣಪ್ರಯೋಗ ಮಾಡಿದ ಅವನ ಆ ಹರಿತವಾದ ಬಾಣಸಮೂಹವನ್ನು) ಭಗದತ್ತನ ಎಯ್ದ ಖಂಡಿಸಿ (ಬರಲು ಭಗದತ್ತನು ಪೂರ್ಣವಾಗಿ ಕತ್ತರಿಸಿ) ರಥಮಂ ಪಡಲ್ವಡಿಸೆ (ರಥವನ್ನು ಉರುಳಿಸಲು) ಮಚ್ಚರದಿಂ ಗಜೆಗೊಂಡು ತಾಗೆ (ಭೀಮನು ಮತ್ಸರದಿಂದ ಗದೆಯನ್ನು ತೆಗೆದುಕೊಂಡು ಎದುರಿಸಲು,) ಮಾಣಿಸಲು

ಅಮರಾಪಗಾಸುತನು
ಇದಿರ್ಚುವುದುಂ (ಅದನ್ನು
ತಪ್ಪಿಸಲು ಭೀಷ್ಮನು ಅವನನ್ನು
ಎದುರಿಸಲು,) ರಥಮೆಟ್ಟಿ
ಪೊಯ್ದು (ಭೀಮನು ಅವನ
ರಥವನ್ನು ನಾಶವಾಗುವಂತೆ
ಹೊಡೆದು) ಶಂಕಿಸದೆ
ಇದಿರಾಂತ ಸೈಂಧವನುಮಂ ()
ಪವನಾತ್ಮಜನು ಓಡೆ ಕಾದಿದಂ
(ಸಂದೇಹವೇ ಪಡದೆ, ತನ್ನನ್ನು
ಎದುರಿಸಿದ ಸೈಂಧವನನ್ನು

ಪಲಾಯನಗೊಳ್ಳುವಂತೆ ಕಾದಿದನು.)

ಪದ್ಯ-೯:ಅರ್ಥ:

ಬಾಣಪ್ರಯೋಗ ಮಾಡಿದ ಅವನ ಆ ಹರಿತವಾದ ಬಾಣಸಮೂಹವನ್ನು ಬರಲು ಭಗದತ್ತನು ಪೂರ್ಣವಾಗಿ ಕತ್ತರಿಸಿ ರಥವನ್ನು ಉರುಳಿಸಲು ಭೀಮನು ಮತ್ಸರದಿಂದ ಗದೆಯನ್ನು ತೆಗೆದುಕೊಂಡು ಎದುರಿಸಲು,

ಅದನ್ನು ತಪ್ಪಿಸಲು ಭೀಷ್ಮನು ಅವನನ್ನು ಎದುರಿಸಿದನು. ಭೀಮನು ಅವನ ರಥವನ್ನು ನಾಶವಾಗುವಂತೆ ಹೊಡೆದು ಸಂದೇಹವೇ ಪಡದೆ, ತನ್ನನ್ನು ಎದುರಿಸಿದ ಸೈಂಧವನನ್ನು ಪಲಾಯನಗೊಳ್ಳುವಂತೆ ಕಾದಿದನು.

ವ|| ಅಂತು ಕಾದೆ ಸಿಂಧುರಾಜನ ಬೆಂಬಲದೊಳ್ ಕಾದಲೆಂದು ಬಂದ ನೂರ್ವರ್

ಕೌರವರುಂ ಭೀಮನೊಳ್

ತಾಗೆ ತಾಗಿದ ಬೇಗದಿಂ

ದುರ್ಧರ್ಷಣ ದುರ್ಧರ್ಷಣ

ದೀರ್ಘಬಾಹು ಮಹಾಬಾಹು

ಚಿತ್ರೋಪಚಿತ್ರ

ನಂದೋಪನಂದರ್

ಮೊದಲಾಗೆ ಮೂವತ್ತು

ಮೂವರಂ ಜವಂಗೆ

ಬಿರ್ದನಿಕ್ಕುವಂತಿಕ್ಕಿ

ಮತ್ತಿನುೞಿದರುಮನುೞಿಯ

ಲೀಯದೆ ಬೞಿಸಂದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ಕಾದೆ ಸಿಂಧುರಾಜನ ಬೆಂಬಲದೊಳ್ ಕಾದಲೆಂದು ಬಂದ ನೂರ್ವರ್ ಕೌರವರುಂ ಭೀಮನೊಳ್ ತಾಗೆ (ಸೈಂಧವನ ಸಹಾಯಕನಾಗಿ ಕಾದಲು ಬಂದ ನೂರುಮಂದಿ ಕೌರವರೂ ಭೀಮನನ್ನು ಮುತ್ತಲು,) ತಾಗಿದ ಬೇಗದಿಂ (ಮತ್ತಿದ ಸಂಘರ್ಷದಿಂದ)

ದುರ್ಧರ್ಷಣ ದುರ್ಧರ್ಷಣ
ದೀರ್ಘಬಾಹು ಮಹಾಬಾಹು
ಚಿತ್ರೋಪಚಿತ್ರ
ನಂದೋಪನಂದರ್
ಮೊದಲಾಗೆ ಮೂವತ್ತು
ಮೂವರಂ ಜವಂಗೆ ಬಿರ್ದನು
ಇಕ್ಕುವಂತೆ ಇಕ್ಕಿ (ಯಮನಿಗೆ
ಬಲಿಯನ್ನು ಇಡುವ ಹಾಗೆ
ಹೊಡೆದು ಕೊಂದು) ಮತ್ತಿನ
ಉೞಿದರುಮನು

ಉಟಿಯಲೀಯದೆ
ಬಟಿಸಂದಾಗಳ್ ()-
ವಚನ:ಅರ್ಥ:ಹಾಗೆ
ಯುದ್ಧವಾಗುತ್ತಿರಲು,
ಸೈಂಧವನ ಸಹಾಯಕನಾಗಿ
ಕಾದಲು ಬಂದ ನೂರುಮಂದಿ
ಕೌರವರೂ ಭೀಮನನ್ನು
ಮುತ್ತಲು, ಮತ್ತಿದ
ಸಂಘರ್ಷದಿಂದ ತಕ್ಷಣವೇ
ದುರ್ಧರ್ಷಣ, ದುರ್ಮರ್ಷಣ,
ದೀರ್ಘಬಾಹು, ಮಹಾಬಾಹು,

ಚಿತ್ರೋಪಚಿತ್ರ,
ನಂದೋಪನಂದರೇ
ಮೊದಲಾದ
ಮೂವತ್ತುಮೂರು ಜನರನ್ನು
ಭೀಮನು ಯಮನಿಗೆ
ಬಲಿಯನ್ನು ಇಡುವ ಹಾಗೆ
ಹೊಡೆದು ಕೊಂದು.
ಇನ್ನುಳಿದವರನ್ನು
ಬದುಕುವುದಕ್ಕೆ ಅವಕಾಶ
ಕೊಡದೆ ಸಮೀಪಕ್ಕೆ ಬಂದಾಗ-

ಮ|| ಮೊದಲಿಟ್ಟಂ
ಕೊಲಲೆಂದು
ಕೌರವರನಿನ್ನೇಕಿರ್ಪನಾರ್ದುರ್
ಚಿ ಮು
ಕ್ಕದಿವಂಗಾಂ ಕರಮೆಯ್ದೆ
ಕೂರ್ಪೆನಿವರುಂ
ಸತ್ತಪ್ಪರಿಂದಿಂಗೆ ಕಾ|
ವುದನಾಂ ಕಾವೆನೆನುತ್ತ ಬೇರೆ
ರಥಮಂ ಬಂದೇಱ ಪೋ
ಪೋಗಲೆಂ

ದೊದಱುತ್ತುಂ ಪರಿತಂದು ತಾಗಿ ತಗರ್ದಂ ಗಂಗಾಸುತಂ ಭೀಮನಂ|| ೧೦ ||

ಪದ್ಯ-೧೦:ಪದವಿಭಾಗ-ಅರ್ಥ:ಮೊದಲಿಟ್ಟಂ ಕೊಲಲೆಂದು ಕೌರವರನ ಇನ್ನೇಕೆ ಇರ್ಪನು (‘ಇವನು ಕೌರವರನ್ನು ಕೊಲ್ಲಬೇಕೆಂದು ಪ್ರಾರಂಭಿಸಿದ್ದಾನೆ. --ಇನ್ನು ಸುಮ್ಮನೆ ಬಿಡುವುದಿಲ್ಲ.) ಆರ್ದು ಉರ್ಚಿ ಮುಕ್ಕದೆ (

ಆರ್ಭಟಮಾಡಿ ಕತ್ತರಿಸಿ
ನುಂಗದೇ-- ಬಿಡುವುದಿಲ್ಲ)
ಇವಂಗೆ ಆಂ ಕರಂ ಎಯ್ದೆ
ಕೂರ್ಪೆನು (ಇವನನ್ನು ನಾನು
ವಿಶೇಷವಾಗಿ ಪ್ರೀತಿಸುತ್ತೇನೆ.)
ಇವರುಂ ಸತ್ತಪ್ಪರು ಇಂದಿಂಗೆ
ಕಾವುದನು ಆಂ ಕಾವೆನು
ಎನುತ್ತ (ಇವನನ್ನು ನಾನು
ವಿಶೇಷವಾಗಿ ಪ್ರೀತಿಸುತ್ತೇನೆ.
ಇವರೂ ಸತ್ತುಹೋಗುತ್ತಾರೆ;
ಈ ದಿನ ನಾನು

ಸಾಧ್ಯವಾದಷ್ಟು ರಕ್ಷಿಸುತ್ತೇನೆ ಎನ್ನುತ್ತ), ಬೇರೆ ರಥಮಂ ಬಂದೇಱಿ (ಬೇರೊಂದು ರಥವನ್ನು ತರಿಸಿ ಅದನ್ನು ಏರಿಕೊಂಡು) ಪೋ ಪೋಗಲ್ ಎಂದು ಒದಱುತ್ತುಂ ಪರಿತಂದು ('ಹೋ, ಹೋಗಬೇಡ' ಎಂಬುದಾಗಿ ಕೂಗಿಕೊಳ್ಳುತ್ತಾ ಓಡಿ ಬಂದು) ತಾಗಿ ತಗರ್ದಂ ಗಂಗಾಸುತಂ ಭೀಮನಂ(ಭೀಷ್ಮನು

ಎದುರಿಸಿ, ಭೀಮನನ್ನು ತಡೆಗಟ್ಟಿದನು)

ಪದ್ಯ-೧೦:ಅರ್ಥ:

(ಭೀಮನು-) ‘ಇವನು ಕೌರವರನ್ನು ಕೊಲ್ಲಬೇಕೆಂದು ಪ್ರಾರಂಭಿಸಿದ್ದಾನೆ. ಇನ್ನು ಸುಮ್ಮನೆ ಬಿಡುವುದಿಲ್ಲ. ಆರ್ಭಟಮಾಡಿ ಕತ್ತರಿಸಿ ನುಂಗದೇ ಬಿಡುವುದಿಲ್ಲ. ಇವನನ್ನು ನಾನು ವಿಶೇಷವಾಗಿ ಪ್ರೀತಿಸುತ್ತೇನೆ. ಇವರೂ

ಸತ್ತುಹೋಗುತ್ತಾರೆ ಎಂಬುದು ನಿಜವೇ ಆದರೂ ಈ ದಿನ ನಾನು ಸಾಮರ್ಥ್ಯವಾದಷ್ಟು ರಕ್ಷಿಸುತ್ತೇನೆ ಎನ್ನುತ್ತ ಬೇರೊಂದು ರಥವನ್ನು ತರಿಸಿ ಅದನ್ನು ಏರಿಕೊಂಡು 'ಹೋ, ಹೋಗಬೇಡ' ಎಂಬುದಾಗಿ ಕೂಗಿಕೊಳ್ಳುತ್ತಾ ಓಡಿ ಬಂದು ಭೀಷ್ಮನು ಎದುರಿಸಿ, ಭೀಮನನ್ನು ತಡೆಗಟ್ಟಿದನು

ವ|| ಅನ್ನಗೆಮತ್ತ ಸಂಸಪ್ತಕ ಬಲಮೆಲ್ಲಮನಳರೆ ಪೆಳರೆ ಕಿವುಱಿದುಱಿದು ಕೊಲ್ವಲ್ಲಿ ವಿಕ್ರಮಾರ್ಜುನಂ ಮುರಾಂತಕನೊಳಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅನ್ನಗೆಮ್ ಅತ್ತ ಸಂಸಪ್ತಕ ಬಲಮೆಲ್ಲಮನು ಅಳರೆ ಪೆಳರೆ (ಹೆದರಿ ಬೆವರುವಂತೆ) ಕಿವುಱಿ ದುಱಿದು ಕೊಲ್ವಲ್ಲಿ (ಅವುಕಿ

ಹಿಂಡಿ ಕೊಲ್ಲುವಸಮಯದಲ್ಲಿ)
ವಿಕ್ರಮಾರ್ಜುನಂ
ಮುರಾಂತಕನೊಳು
ಇಂತೆಂದಂ-

ವಚನ:ಅರ್ಥ: ಅಷ್ಟರಲ್ಲಿ ಆ
ಕಡೆ ವಿಕ್ರಮಾರ್ಜುನನು
ಸಂಸಪ್ತಕ ಸೈನ್ಯವನ್ನೆಲ್ಲ ಹೆದರಿ
ಬೆವರುವಂತೆ ಅವುಕಿ ಹಿಂಡಿ
ಕೊಲ್ಲುವಸಮಯದಲ್ಲಿ
ಕೃಷ್ಣನೊಡನೆ ಹೀಗೆಂದನು-

ಚಂ|| ಪ್ರಳಯ ಪಯೋಧಿ
ನಾದಮನೆ ಪೊೀಲ್ತು ರಣಾನಕ
ರಾವಮೀಗಳ
ಗ್ಗಳಮೆಸೆದಪ್ಪುದತ್ತ
ಕರಿವಂಬಿನ ಬಲ್ಸರಿಯಿಂದಮಾ
ದಿಶಾ|
ವಳಿ ಮಸುಳ್ದಿಂತು ನೀಳ್ದಪುದು
ಪೊೀಗದೆ ಕಾದುವ ಗಂಡರಿಲ್ಲ
ನಿ
ನ್ನಳಿಯನುಮಾ
ವೃಕೋದರನುಮಲ್ಲದರಿಲ್ಲ

ಪೆಱರ್ ಮುರಾಂತಕಾ||
೧೧/11||

ಪದ್ಯ-೧೧:ಪದವಿಭಾಗ-ಅರ್ಥ:ಪ್ರಳಯ ಪಯೋಧಿ ನಾದಮನೆ ಪೋಲ್ತು ರಣಾನಕ ರಾವಂ (ರವ- ಧ್ವನಿ) ಈಗಳ್ (ಈಗ ರಣಭೇರಿಯ ಧ್ವನಿಯು ಪ್ರಳಯಸಮುದ್ರದ ಧ್ವನಿಯಂತೆ ಕೇಳಿಸುತ್ತಿದೆ.) ಅಗ್ಗಳಮ್ ಎಸೆದಪ್ಪುದು (ವಿಶೇಷವಾಗಿ ಕೇಳಿಸುತ್ತಿದೆ)

ಅತ್ತ ಕರೆವ ಅಂಬಿನ
ಬಲ್ಸರಿಯಿಂದಮ್ ಆ
ದಿಶಾವಳಿ ಮಸುಳ್ದು
(ಮಸುಕಾಗಿ) ಇಂತು
ನೀಳ್ದಪುದು ಪೋಗದೆ (ಆ ಕಡೆ
ಸುರಿಯುತ್ತಿರುವ ಬಾಣದ
ಮಳೆಯಿಂದ ಆ ದಿಕ್ಕುಗಳ
ಸಮೂಹವು ಮಾಸಲಾಗಿ
ಕಾಂತಿಹೀನವಾಗಿ
ಚಾಚಿಕೊಂಡಿದೆ) ಪೋಗದೆ
ಕಾದುವ ಗಂಡರಿಲ್ಲ

(ವೀರರಿಲ್ಲ) ನಿನ್ನಳಿಯನುಮ್
ಆ ವೃಕೋದರನುಂ
ಅಲ್ಲದರಿಲ್ಲ ಪೆಱರ್
ಮುರಾಂತಕಾ (ಕೃಷ್ಣ,
ನಿನ್ನಳಿಯನಾದ ಅಭಿಮನ್ಯು
ಮತ್ತು ಭೀಮನು ವಿನಾ
ಕಾದುವ ಶೂರರು ಮತ್ತಾರೂ
ಅಲ್ಲಿ ಇಲ್ಲ)
ಪದ್ಯ-೧೧:ಅರ್ಥ: ಈಗ
ರಣಭೇರಿಯ ಧ್ವನಿಯು
ಪ್ರಳಯಸಮುದ್ರದ

ಧ್ವನಿಯಂತೆ ವಿಶೇಷವಾಗಿ ಕೇಳಿಸುತ್ತಿದೆ. ಆ ಕಡೆ ಸುರಿಯುತ್ತಿರುವ ಬಾಣದ ಮಳೆಯಿಂದ ಆ ದಿಕ್ಕುಗಳ ಸಮೂಹವು ಮಾಸಲಾಗಿ ಕಾಂತಿಹೀನವಾಗಿ ಚಾಚಿಕೊಂಡಿದೆ. ಕೃಷ್ಣ, ನಿನ್ನಳಿಯನಾದ ಅಭಿಮನ್ಯು ಮತ್ತು ಭೀಮನು ವಿನಾ ಕಾದುವ ಶೂರರು ಮತ್ತಾರೂ

ಅಲ್ಲಿ ಇಲ್ಲ, ಎಂದನು ಅರ್ಜುನ.

ಚಂ|| ಗುರು ಗುರುಪುತ್ರ ಶಲ್ಯ ಭಗದತ್ತ ನದೀಸುತರೆಂಬ ಸಂದ ಬೀ ರರೆ ಮಱುವಕ್ಕಮಣ್ಣನೊಡನಿರ್ವ ರೆ ಕೂಸುಗಳೆಂಬ ಶಂಕೆಯುಂ| ಪಿರಿದೆನಗೀಗಳಾದಪುದು ಮಾಣದೆ ಚೋದಿಸು ಬೇಗಮತ್ತಲ

ತ್ತ ರಥಮನೆಂದು
ಭೋರ್ಗರೆಯೆ ಬಂದನರಾತಿಗೆ
ಮಿೞ್ತು ಬರ್ಪವೋಲ್|| ೧೨ ||

ಪದ್ಯ-೧೨:ಪದವಿಭಾಗ-

ಅರ್ಥ:ಗುರು ಗುರುಪುತ್ರ ಶಲ್ಯ ಭಗದತ್ತ ನದೀಸುತರೆಂಬ ಸಂದ ಬೀರರರೆ ಮಱುವಕ್ಕಂ (ಪ್ರಸಿದ್ಧ ವೀರರರೆ ಎದುರುಪಕ್ಷ) ಅಣ್ಣನೊಡನೆ ಇರ್ವರೆ ಕೂಸುಗಳೆಂಬ ಶಂಕೆಯುಂ (ನಮ್ಮ ಕಡೆ ಅಣ್ಣನಾದ

ಭೀಮನೊಡನೆ ಅಭಿಮನ್ಯು ಮತ್ತು ಘಟೋತ್ಕಚರು ಎಂಬ ಮಕ್ಕಳಿಬ್ಬರೇ ಇದ್ದಾರಲ್ಲ ಶಂಕೆಯಾಗಿದೆ.) ಪಿರಿದು ಎನಗೆ ಈಗಳು ಆದಪುದು (ದೊಡ್ಡ ಚಿಂತೆ ನನಗೆ ಈಗ ಆಗಿದೆ.) ಮಾಣದೆ ಚೋದಿಸು ಬೇಗಂ ಅತ್ತಲು ಅತ್ತ ರಥಮನೆಂದು (ಆದುದರಿಂದ ಜಾಗ್ರತೆಯಾಗಿ ರಥವನ್ನು ತಡೆಯದೆ ಆ ಕಡೆ ನಡೆಯಿಸು ಎಂದು)

ಘೋರ್ಗರೆಯೆ ಬಂದನು ಅರಾತಿಗೆ ಮಿೞ್ತು ಬರ್ಪವೋಲ್ (ಶತ್ರುವಿಗೆ ಮೃತ್ಯು ಬರುವ ಹಾಗೆ ಆ ಕಡೆಗೆ ಬಂದನು.)

ಪದ್ಯ-೧೨:ಅರ್ಥ:

ಅರ್ಜುನನು ಕೃಷ್ಣನನ್ನು ಕುರಿತು, ಶತ್ರುಪಕ್ಷದಲ್ಲಿ ದ್ರೋಣ, ಅಶ್ವತ್ಥಾಮ, ಶಲ್ಯ, ಭಗದತ್ತ, ಭೀಷ್ಮ ಮೊದಲಾದ ಪ್ರಸಿದ್ಧ ವೀರರಿದ್ದಾರೆ. ನಮ್ಮ

ಕಡೆ ಅಣ್ಣನಾದ
ಭೀಮನೊಡನೆ ಅಭಿಮನ್ಯು
ಮತ್ತು ಘಟೋತ್ಕಚರು ಎಂಬ
ಮಕ್ಕಳಿಬ್ಬರೇ ಇದ್ದಾರಲ್ಲ ಎಂಬ
ದೊಡ್ಡ ಚಿಂತೆ ನನಗೆ ಈಗ
ಆಗಿದೆ. ಆದುದರಿಂದ
ಜಾಗ್ರತೆಯಾಗಿ ರಥವನ್ನು
ತಡೆಯದೆ ಆ ಕಡೆ ನಡೆಯಿಸು
ಎಂದು ಶಬ್ದಮಾಡುತ್ತ
ಶತ್ರುವಿಗೆ ಮೃತ್ಯು ಬರುವ
ಹಾಗೆ (ಆ ಕಡೆಗೆ) ಬಂದನು.

ವ|| ಅಂತು ನೆಲನದಿರೆ ಬರ್ಪ ವಿಕ್ರಮಾರ್ಜುನನ ಬರವಿಂಗೆ ಕುರುಬಲಮೆಲ್ಲ ಮೊಲ್ಲನುಲಿದೋಡಿ ಸುರಾಪಗಾನಂದನನ ಮರೆಯಂ ಪೊಕ್ಕ್ಕಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ನೆಲನು ಅದಿರೆ ಬರ್ಪ ವಿಕ್ರಮಾರ್ಜುನನ ಬರವಿಂಗೆ (ನೆಲವು ನಡುಗುವ ಹಾಗೆ ಬರುತ್ತಿರುವ ಅರ್ಜುನನ

ಬರುವಿಕೆಗೆ) ಕುರುಬಲಂ ಎಲ್ಲ ಮೊಲ್ಲನೆ ಉಲಿದೋಡಿ ಸುರಾಪಗಾನಂದನನ ಮರೆಯಂ ಪೊಕ್ಕ್ಕಾಗಳ್ (ಕೌರವಸೈನ್ಯವೆಲ್ಲ ಒಟ್ಟಿಗೆ ಕೂಗಿಕೊಂಡು ಓಡಿ ಭೀಷ್ಮನ ಮರೆಹೊಕ್ಕವು. ಆಗ)-

ವಚನ:ಅರ್ಥ:ವ|| ಹಾಗೆ ನೆಲವು ನಡುಗುವ ಹಾಗೆ ಬರುತ್ತಿರುವ ಅರ್ಜುನನ ಬರುವಿಕೆಗೆ ಕೌರವಸೈನ್ಯವೆಲ್ಲ

ಒಟ್ಟಿಗೆ ಕೂಗಿಕೊಂಡು ಓಡಿ
ಭೀಷ್ಮನ ಮರೆಹೊಕ್ಕವು.

**ಮ|| ಎಡೆಗೊಂಡಂಕದ ಶಲ್ಯ ಸೈಂಧವ ಕೃಪ ದ್ರೋಣಕರ್ಣಳುಂ ಸಾಯಕಂ
ಗಿಡೆ ತನ್ನೆಚ್ಚ ಶರಾಳಿಗಳ್ ವಿಲಯ ಕಾಲೋಲ್ಕಂಗಳಂ ತಾಗಿದಾ|
ಗಡೆ ತತ್ಸೂತ ರಥಾಶ್ವ ಕೇತನ ಶರವ್ರಾತಂಗಳುಂ ನುರ್ಗಿ ಕ**

**ಣ್ಗಿಡೆ ಬೆನ್ನಟ್ಟಿದನಂತು ನಮ್ಮ
ಹರಿಗಂ ಗಂಡಂ ಪೆಱರ್
ಗಂಡರೇ|| ೧೩ ||**

ಪದ್ಯ-೧೩:ಪದವಿಭಾಗ-ಅರ್ಥ:ಎಡೆಗೊಂಡು (ನಡುವೆ ಬಂದ) ಅಂಕದ ಶಲ್ಯ ಸೈಂಧವ ಕೃಪ ದ್ರೋಣರ್ಕಳುಂ ಸಾಯಕಂ ಗಿಡೆ (ಬಾಣಗಳು ನಿಷ್ಪ್ರಯೋಜಕವಾಗಲು) ತನ್ನ ಎಚ್ಚ ಶರಾಳಿಗಳ್ ವಿಲಯ ಕಾಲೋಲ್ಕಂಗಳಂ

(ಅfಜುನನು / ತಾನು ಹೊಡೆದ
ಬಾಣಗಳು ಪ್ರಳಯಕಾಲದ
ಉಲ್ಕಾಪಾತಗಳು)
ತಾಗಿದಾಗಡೆ (ತಗಲಿದ
ಕೂಡಲೆ) ತತ್ಸೂತ ರಥಾಶ್ವ
ಕೇತನ ಶರವ್ರಾತಂಗಳುಂ
(ಅದರ ಸೂತ ಆ ಸಾರಥಿ,
ತೇರು, ಕುದುರೆ, ಬಾವುಟ,
ಬಾಣಸಮೂಹ) ನುರ್ಗಿ
ಕಣ್ಗಿಡೆ (ನುರಿಯಾಗಿ
ಕಂಗೆಡಲು) ಬೆನ್ನಟ್ಟಿದನು

ಅಂತು (ಹಾಗೆ ನಮ್ಮ
ಅರಿಕೇಸರಿ
ಬೆನ್ನಟ್ಟಿದನು)ನಮ್ಮ ಹರಿಗಂ
ಗಂಡಂ ಪೆಱರ್
ಗಂಡರೇ(ಶೂರನೆಂದರೆ ನಮ್ಮ
ಅರಿಕೇಸರಿ, ಅವನಂತೆ
ಮತ್ತಾರಿದ್ದಾರೆ.)

ಪದ್ಯ-೧೩:ಅರ್ಥ:೧೩.
ನಡುವೆ ಬಂದ ಶಲ್ಯ ಸೈಂಧವ
ಕೃಪ ದ್ರೋಣಾದಿಗಳ ಭೀಷ್ಮರು
ಬಾಣಗಳು

ನಿಷ್ಪ್ರಯೋಜಕವಾಗಲು, ಅರ್ಜುನನು ಪ್ರಯೋಗಿಸದ ಬಾಣಸಮೂಹಗಳು ಪ್ರಳಯಕಾಲದ ಉಲ್ಕಾಪಾತಗಳಂತೆ ಅವರ ಆ ಸಾರಥಿ, ತೇರು, ಕುದುರೆ, ಬಾವುಟ, ಬಾಣಸಮೂಹ -ಎಲ್ಲವೂ ನುರಿಯಾಗಿ- ಪುಡಿಯಾಗಿ ಕಂಗೆಡಲು, ಹಾಗೆ ನಮ್ಮ ಅರ್ಜುನನು ಬೆನ್ನಟ್ಟಿದನು. ಶೂರನೆಂದರೆ

ನಮ್ಮ ಅರಿಕೇಸರಿ, ಅವನಂತೆ ಮತ್ತಾರಿದ್ದಾರೆ.

ವ|| ಅಂತತಿರಥ ಸಮರಥ ಮಹಾರಥಾರ್ಧರಥರ್ಕಳನಾನೆ ಮೆಟ್ಟಿದ ಕುಳುಂಪೆಯ ನೀರಂತೆ ದೆಸೆದೆಸೆಗೆ ಕೆದಱುವನ್ನಮೆಟ್ಟಿಟ್ಟಿ ದಾಗಳ್ ಸೋಲ್ತ ತನ್ನ ಬಲಮನಳುಂಬಮಾದ ವಿಕ್ರಮಾರ್ಜುನನ ಭುಜಬಲಮುಮಂ ಕಂಡು

ಕನಕತಾಳಧ್ವಜಂಗೆ ಪನ್ನಗಧ್ವಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಅತಿರಥ ಸಮರಥ ಮಹಾರಥ ಅರ್ಧರರ್ಥರ್ಕಳನು ಆನೆ ಮೆಟ್ಟಿದ ಕುಳುಂಪೆಯ (ಕೊಳ, ಹೊಂಡದ) ನೀರಂತೆ ದೆಸೆದೆಸೆಗೆ ಕೆದಱುವನ್ನಂ (ದಿಕ್ಕುದಿಕ್ಕಿಗೂ ಸಿಡಿದು ಚದುರಿ) ಎಟ್ಬಿಟ್ಟಿದಾಗಳ್ ಸೋಲ್ತ ತನ್ನ

ಬಲಮನು (ಓಡುತ್ತಿರಲು,
ಸೋತ ತನ್ನ ಸೈನ್ಯವನ್ನೂ,)
ಅಳುಂಬಮಾದ
(ಅತಿಶಯವಾದ)
ವಿಕ್ರಮಾರ್ಜುನನ
ಭುಜಬಲಮುಮಂ ಕಂಡು,
(ಅರ್ಜುನನ ಶೌರ್ಯನ್ನೂ
ನೋಡಿ) ಕನಕತಾಳಧ್ವಜಂಗೆ
(ಹೊಂದಾಳೆಯ ಚಿಹ್ನೆಯ
ಧ್ವಜವುಳ್ಳ ಭೀಷ್ಮನಿಗೆ)
ಪನ್ನಗಧ್ವಜನಿಂತೆಂದಂ (

ಸರ್ಪಧ್ವಜದ
ದುರ್ಯೋಧನನು ಭೀಷ್ಮನನ್ನು
ಕುರಿತು ಹೀಗೆಂದನು.)-
ವಚನ:ಅರ್ಥ:ಹಾಗೆ ಅತಿರಥ
ಸಮರಥ ಮಹಾರಥ
ಅರ್ಧರಥರುಗಳನ್ನು ಆನೆ
ತುಳಿದು ಕದಡಿದ ಕುಂಟೆಯ
ನೀರಿನ ಹಾಗೆ ದಿಕ್ಕುದಿಕ್ಕಿಗೂ
ಸಿಡಿದು ಓಡುತ್ತಿರಲು, ಸೋತ
ತನ್ನ ಸೈನ್ಯವನ್ನೂ, ಅರ್ಜುನನ
ಶೌರ್ವನ್ನೂ ನೋಡಿ

ದುರ್ಯೋಧನನು ಭೀಷ್ಮನನ್ನು ಕುರಿತು ಹೀಗೆಂದನು.

ತರಳ|| ಮುಳಿಯೆ ಬಿನ್ನಪಮಜ್ಜ
ದಾಯಿಗರೊಳ್
ವಿರೋಧಮನಿಂತು ಬ
ಳ್ವಳನೆ ಮಾಳ್ಪುದನಂದು
ನಿಮ್ಮನೆ ನಂಬಿ ಮಾಡಿದೆನಿಂತು
ಗೋ|
ವಳಿಗನಂ ಗೆಡೆಗೊಂಡು ಮುಂ
ಬಳೆದೊಟ್ಟ ಪೇಡಿಯೆ
ನಿಮ್ಮನಿಂ

ತಿಳಿಸಿ ಮದ್ದಲಮೆಲ್ಲಮಂ ಕೊಲೆ ನೋಡುತಿರ್ಪುದು ಪಾಟಿಯೇ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ಮುಳಿಯೆ ಬಿನ್ನಪಂ ಅಜ್ಜ (ಅಜ್ಜ, ವಿಜ್ಞಾಪನೆ; ಕೋಪಮಾಡಬೇಡಿ) ದಾಯಿಗರೊಳ್ ವಿರೋಧಮನು ಇಂತು ಬಳ್ವಳನೆ (ಬಹಳವಾಗಿ) ಮಾಳ್ಪುದನು ಅಂದು ನಿಮ್ಮನೆ

ನಂಬಿ ಮಾಡಿದೆನು
(ದಾಯಾದಿಗಳಲ್ಲಿ ಈ ರೀತಿಯ
ವಿರೋಧವನ್ನು ಮಾಡುವಾಗ
ನಿಮ್ಮ ವಿಶೇಷವಾದ
ಸಹಾಯಮಾಡುವುದನ್ನೇ
ನಂಬಿ ಮಾಡಿದೆನು) ಇಂತು
ಗೋವಳಿಗನಂ ಗೆಡೆಗೊಂಡು
(ಹೀಗಿರುವಲ್ಲಿ ಈಗ ಹೀಗೆ
ದನಕಾಯುವವನೊಬ್ಬನ
ಸ್ನೇಹಮಾಡಿಕೊಂಡು) ಮುಂ
ಬಳೆದೊಟ್ಟ ಪೇಡಿಯೆ

(ಹೀಗಿರುವಲ್ಲಿ ಈಗ ಹೀಗೆ
ದನಕಾಯುವವನೊಬ್ಬನ
ಸ್ನೇಹಮಾಡಿಕೊಂಡು
ಬಳೆದೊಟ್ಟ ಹೇಡಿಯೊಬ್ಬನು)
ನಿಮ್ಮನು ಇಂತು ಇಳಿಸಿ ಮದ್
ಬಲಮೆಲ್ಲಮಂ ಕೊಲೆ
ನೋಡುತಿರ್ಪುದು ಪಾಟಿಯೇ
(ನನ್ನ ಸೈನ್ಯವೆಲ್ಲವನ್ನೂ
ಕೊಲ್ಲುತ್ತಿರಲು ಅದನ್ನು ನೀವು
ಉದಾಸೀನವಾಗಿ

ನೋಡುತ್ತಿರುವುದು ಧರ್ಮವೇ? ಅಲ್ಲ.)

ಪದ್ಯ-೧೪:ಅರ್ಥ:ಅಜ್ಜನೇ, ವಿಜ್ಞಾಪನೆ; ಕೋಪಮಾಡಬೇಡಿ, ದಾಯಾದಿಗಳಲ್ಲಿ ಈ ರೀತಿಯ ವಿರೋವನ್ನು ಮಾಡುವಾಗ ನಿಮ್ಮ ವಿಶೇಷವಾದ ಸಹಾಯಮಾಡುವುದನ್ನೇ ನಂಬಿ ಮಾಡಿದೆನು. ಹೀಗಿರುವಲ್ಲಿ ಈಗ ಹೀಗೆ

ದನಕಾಯುವವನೊಬ್ಬನ
ಸ್ನೇಹಮಾಡಿಕೊಂಡು
ಬಳೆದೊಟ್ಟ ಹೇಡಿಯೊಬ್ಬನು
ನಿಮ್ಮನ್ನು ಹೀಗೆ
ಅವಮಾನಮಾಡಿ ನನ್ನ
ಸೈನ್ಯವೆಲ್ಲವನ್ನೂ
ಕೊಲ್ಲುತ್ತಿರಲು ಅದನ್ನು ನೀವು
ಉದಾಸೀನವಾಗಿ
ನೋಡುತ್ತಿರುವುದು
ಧರ್ಮವೇ? ಅಲ್ಲ.

ಕಂ|| ಮೇಳದೊಳೆಂತುಂ ಪ್ರೋ
ಪೆಱ
ರಾಳಂ ಛಿದ್ರಿಸುವೆವೆಂಬ
ಪಾಡವರೊಳ್ ನೀಂ|
ಮೇಳಿಸಿ ನಣ್ಪನೆ ಬಗೆದಿರ್
ಜೋಳದ
ಪಾಟಿಯುಮನಿನಿಸು
ಬಗೆಯಿಂ ನಿಮ್ಮೊಳ್|| ೧೫ ||

ಪದ್ಯ-೧೫:ಪದವಿಭಾಗ-

ಅರ್ಥ:ಮೇಳದೊಳ್ (ಸ್ನೇಹದಲ್ಲಿ) ಎಂತುಂ

ಪೋ(ಬಿಡು) ಪೆಱರ ಆಳಂ ಭಿದ್ರಿಸುವು ಎಂಬ (ಸ್ನೇಹದಿಂದಿರುವಾಗ ಎದುರು ಪಕ್ಷದ ಶೂರರನ್ನು- ಹೇಗೆ- ಭೇದಿಸಬಲ್ಲೆವು? ಹೋಗಲಿ ಬಿಡು!) ಪಾಡವರೊಳ್ ನೀಂ ಮೇಳಿಸಿ ನಣ್ಪನೆ (ನಂಟತನವನ್ನು)ಬಗೆದಿರ್ (ಪಾಂಡವರಲ್ಲಿ ನೀವು ಸೇರಿಕೊಂಡು ಬಾಂಧವ್ಯವನ್ನೇ ಬಗೆದಿರಿ; ಬಗೆಯದಿರಿ?)

ಜೋಳದ ಪಾಟಿಯುಮನು (ಅನ್ನದ ಧರ್ಮವನ್ನು;) ಇನಿಸು ಬಗೆಯಿಂ ನಿಮ್ಮೊಳ್ (ನಿಮ್ಮ ಮನಸ್ಸಿನಲ್ಲಿ ಅನ್ನದ ಋಣವನ್ನು ಸ್ವಲ್ಪ ಯೋಚಿಸಿ.)

ಪದ್ಯ-೧೫:ಅರ್ಥ: ೧೫. 'ಸ್ನೇಹದಿಂದಿರುವಾಗ ಎದುರು ಪಕ್ಷದ ಶೂರರನ್ನು ಹೇಗೆ ಭೇದಿಸಬಲ್ಲೆವು? ಹೋಗಲಿ ಬಿಡು!' ಎಂಬುದಾಗಿರುವ ಪಾಂಡವರಲ್ಲಿ ನೀವು

ಸೇರಿಕೊಂಡು ಬಾಂಧವ್ಯವನ್ನೇ ಬಗೆದಿರಿ; ನಿಮ್ಮ ಮನಸ್ಸಿನಲ್ಲಿ ಅನ್ನದ ಋಣವನ್ನು ಸ್ವಲ್ಪ ಯೋಚಿಸಿ.

ವ|| ಎಂಬುದುಂ ಸಿಂಧುತನೂಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಸಿಂಧುತನೂಜನು ಇಂತೆಂದಂ-

ವಚನ:ಅರ್ಥ: ಎನ್ನಲು ಭೀಷ್ಮನು ಹೀಗೆ ಹೇಳಿದನು

ಮ|| ತ್ರಿಜಗಕ್ಕಂ ಗುರು
ದೇವನಾದಿಪುರುಷಂ
ಕೇಳೊರ್ವನೊರ್ವಂ ರಿಪು
ಧ್ವಜಿನೀ ಧ್ವಂಸಕನಾಗಿ ಸಂದ
ಕಲಿಯುಂ
ಬಿಲ್ಲಾಳುಮಿನ್ನೆಂದೊಡೆಂ|
ತು ಜಗತ್ಖ್ಯಾತರನೇಳಿಪ್ಪೆ
ಮರೆವೆನೇ ಮುಂ ಪೂಣ್ದುದಂ
ಬಿಲ್ ರಥಂ
ಕಧ್ವಜಮಂಬೆಂಬಿವನೆಯ್ದೆ
ಸಂಧಿಸು ಜಸಂ ನಿಲ್ವನ್ನೆಗಂ

ಕಾದುವೆಂ|| ೧೬ ||

ಪದ್ಯ-೧೬:ಪದವಿಭಾಗ-ಅರ್ಥ:ತ್ರಿಜಗಕ್ಕಂ ಗುರು ದೇವನು ಆದಿಪುರುಷಂ ಕೇಳು ಒರ್ವನ್ (ಧುರ್ಯೋಧನನೇ, ಕೇಳು, ಅವರಲ್ಲಿ ಒಬ್ಬನಾದ ಕೃಷ್ಣನು ಮೂರುಲೋಕಕ್ಕೂ ಗುರು, ಒಡೆಯ, ಆದಿಪುರುಷ,) ಒರ್ವಂ ರಿಪುಧ್ವಜಿನೀ ಧ್ವಂಸಕನಾಗಿ ಸಂದ ಕಲಿಯುಂ ಬಿಲ್ಲಾಳುಂ (ಮತ್ತೊಬ್ಬನಾದ

ಅರ್ಜುನನು ಶತ್ರುಪಕ್ಷವನ್ನು ನಾಶಮಾಡುವುದರಲ್ಲಿ ಪ್ರಸಿದ್ಧನಾದ ಶೂರ.) ಇನ್ನು ಎಂದೊಡೆ ಎಂತು ಜಗತ್ ಖ್ಯಾತರನು ಏಳಿಪ್ಪೆ ಮರೆವೆನೇ ಮುಂ ಪೂಣ್ದುದಂ (ಹೀಗಿರುವಾಗ, ಲೋಕಪ್ರಸಿದ್ಧರಾದವರನ್ನು ಹೇಗೆ ತಿರಸ್ಕರಿಸುತ್ತೀಯೆ? ನಾನು ಮೊದಲು ಮಾಡಿದ ಪ್ರತಿಜ್ಞೆಯನ್ನು

ಮರೆಯುತ್ತೇನೆಯೆ?) ಬಿಲ್ ರಥ ಅಂಕ ಧ್ವಜಂ ಎಂಬ ಎಂಬಿವನು ಎಯ್ದೆ ಸಂಧಿಸು (ಬಿಲ್ಲು, ಬಾವುಟ, ಬಾಣ, ತೇರುಗಳನ್ನು ತರಿಸಿ-ಸಿದ್ಧಮಾಡಿದರೆ) ಜಸಂ ನಿಲ್ವನ್ನೆಗಂ ಕಾದುವೆಂ (ಯಶಸ್ಸು ಶಾಶ್ವತವಾಗಿ ನಿಲ್ಲುವ ಹಾಗೆ ಕಾದುತ್ತೇನೆ)

ಪದ್ಯ-೧೬:ಅರ್ಥ:“ಧುರ್ಯೋಧನನೇ, ಕೇಳು, ಅವರಲ್ಲಿ

ಒಬ್ಬನಾದ ಕೃಷ್ಣನು
ಮೂರುಲೋಕಕ್ಕೂ ಗುರು,
ಒಡೆಯ, ಆದಿಪುರುಷ,
ಮತ್ತೊಬ್ಬನಾದ ಅರ್ಜುನನು
ಶತ್ರುಪಕ್ಷವನ್ನು
ನಾಶಮಾಡುವುದರಲ್ಲಿ
ಪ್ರಸಿದ್ಧನಾದ ಶೂರ.
ಹೀಗಿರುವಾಗ,
ಲೋಕಪ್ರಸಿದ್ಧರಾದವರನ್ನು
ಹೇಗೆ ತಿರಸ್ಕರಿಸುತ್ತೀಯೆ?
ನಾನು ಮೊದಲು ಮಾಡಿದ

ಪ್ರತಿಜ್ಞೆಯನ್ನು
ಮರೆಯುತ್ತೇನೆಯೆ? ಬಿಲ್ಲು,
ಬಾವುಟ, ಬಾಣ, ತೇರುಗಳನ್ನು
ಸಿದ್ಧಮಾಡು. ಯಶಸ್ಸು
ಶಾಶ್ವತವಾಗಿ ನಿಲ್ಲುವ ಹಾಗೆ
ಕಾದುತ್ತೇನೆ

ವ|| ಎಂಬುದುಮನೇಕ ಶರಭರಿತ ಶಕಟಸಹಸ್ರಮನೊಂದುಮಾಡಿ ಗಾಂಗೇಯನ ಪೆಱಗೆ ನಿಲಿಸಿದಾಗಳಮರಾಪಗಾನಂ

ದನನುಮ
ಮರೇಂದ್ರನಂದನನುಮೊರ್ವ
ರೊರ್ವರುಂ ಗಱಿಸನ್ನೆಗೆಯ್ದು
ಕಾದುವಾಗಳಂಬರತಳದೊಳೆ
ಲ್ಲಂ ಬಿಳಿಯ ಮುಗಿಲ್ಗಳ
ಚೌಪಳಿಗೆಗಳೊಳ್ ಬಂದಿರ್ದ
ದೇವ
ವಿಮಾನಂಗಳುಮೊಡನೊಡನೆ
ಕಲಂಕೆ ಕುಲಗಿರಿಗಳುಂ
ದಿಕ್ಕರಿಗಳುಮೊಡನೊಡನೆ
ತಾಗಿದಂತೆ ತಾಗಿದಾಗಳ್-

ವಚನ:ಪದವಿಭಾಗ-ಅರ್ಥ:.ಎಂಬುದುಂ ಅನೇಕ ಶರಭರಿತ ಶಕಟಸಹಸ್ರಮನು ಒಂದುಮಾಡಿ (ಎಂದು ಹೇಳಲು, ದುರ್ಯೋಧನನು ಅನೇಕ ಬಾಣಗಳಿಂದ ತುಂಬಿದ ಸಾವಿರಾರು ಬಂಡಿಗಳನ್ನು ಒಟ್ಟುಗೂಡಿಸಿ) ಗಾಂಗೇಯನ ಪೆಱಗೆ ನಿಲಿಸಿದಾಗಳ್ ಅಮರಾಪಗಾನಂದನನುಂ

ಅಮರೇಂದ್ರನಂದನನುಂ
ಒರ್ವರೊರ್ವರುಂ (ಭೀಷ್ಮನೂ
ಅರ್ಜುನನೂ
ಒಬ್ಬರನ್ನೊಬ್ಬರು)
ಗಱಿಸನ್ನೆಗೆಯ್ದು
ಕಾದುವಾಗಳ್ (ಬಾಣದ
ಗರಿಯಿಂದ ಸನ್ನೆಮಾಡಿ
ಯುದ್ಧಮಾಡಲು
ಪ್ರಾರಂಭಿಸಿದಾಗ-)
ಅಂಬರತಳದೊಳ್ ಎಲ್ಲಂ
ಬಿಳಿಯ ಮುಗಿಲ್ಗಳ

ಚೌಪಳಿಗೆಗಳೊಳ್ (
ಆಕಾಶಪ್ರದೇಶದಲ್ಲೆಲ್ಲ
ಚೌಕಾಕಾರದ ಮಂಟಪ
(ತೇರು)ಗಳಲ್ಲಿ) ಬಂದಿರ್ದ
ದೇವ ವಿಮಾನಂಗಳುಂ
ಒಡನೊಡನೆ ಕಲಂಕೆ (ಬಂದಿದ್ದ
ದೇವವಿಮಾನಗಳು ಜೊತೆ
ಜೊತೆಯಲ್ಲಿಯೇ ಕ್ರಮತಪ್ಪಿ
ಕಲಕಿಹೋದುವು)
ಕುಲಗಿರಿಗಳುಂ ದಿಕ್ಕರಿಗಳುಂ
ಒಡನೊಡನೆ ತಾಗಿದಂತೆ

ತಾಗಿದಾಗಳ್
(ಕುಲಪರ್ವತಗಳೂ
ದಿಗ್ಗಜಗಳೂ ಒಟ್ಟಿಗೆ ತಾಗುವ
ಹಾಗೆ ಹೋರಾಡಿದಾಗ-)-
ವಚನ:ಅರ್ಥ:ಎಂದು
ಹೇಳಲು, ದುರ್ಯೋಧನನು
ಅನೇಕ ಬಾಣಗಳಿಂದ
ತುಂಬಿದ ಸಾವಿರಾರು
ಬಂಡಿಗಳನ್ನು ಒಟ್ಟುಗೂಡಿಸಿ
ಭೀಷ್ಮನ ಹಿಂದೆ ನಿಲ್ಲಿಸಿದಾಗ,
ಭೀಷ್ಮನೂ ಅರ್ಜುನನೂ

ಒಬ್ಬರನ್ನೊಬ್ಬರು ಬಾಣದ ಗರಿಯಿಂದ ಸನ್ನೆಮಾಡಿ ಯುದ್ಧಮಾಡಲು ಪ್ರಾರಂಭಿಸಿದರು. ಆಕಾಶಪ್ರದೇಶದಲ್ಲೆಲ್ಲ ಚೌಕಾಕಾರದ ಮಂಟಪ (ತೇರು)ಗಳಲ್ಲಿ ಬಂದಿದ್ದ ದೇವವಿಮಾನಗಳು ಜೊತೆ ಜೊತೆಯಲ್ಲಿಯೇ ಕ್ರಮತಪ್ಪಿ ಕಲಕಿಹೋದುವು. ಕುಲಪರ್ವತಗಳೂ

ದಿಗ್ಗಜಗಳೂ ಒಟ್ಟಿಗೆ ತಾಗುವ ಹಾಗೆ ಹೋರಾಡಿದಾಗ-

<u>ಭೀಷ್ಮಾರ್ಜುನರ ಯುದ್ಧ</u>

ಮ|| ಉಪಮಾತೀತದ ಬಿಲ್ಲ ಬಲ್ಮೆ
ಸಮಸಂದೊಂದೊರ್ವರೊಳ್ ಪರ್ವೆ ಪ
ರ್ವಿ ಪರವ್ಯೂಹ ಭಯಂಕರಂ ನೆಗೆದು
ಪಾರ್ದಾರ್ದೆಚ್ಚೊಡಂಬಂಬನ|

ಟ್ಟಿ ಪಳಂಚುತ್ತೆ ಸಿಡಿಲ್ದ ತೋರಗಿಡಿಯಿಂದೊಂದೊಂದ ಳ್ ಬೇವುದುಂ ತ್ರಿಪುರಂಬೊತ್ತಿಸಿದಂತೆ ಪೊತ್ತಿ ಪೊಗೆದತ್ತೆತ್ತಂ ವಿಯನ್ಮಂಡಳಂ|| ೧೭ ||

ಪದ್ಯ-೧೭:ಪದವಿಭಾಗ-ಅರ್ಥ:ಉಪಮಾತೀತದ ಬಿಲ್ಲ ಬಲ್ಮೆ ಸಮಸಂದು ಒಂದೊರ್ವರೊಳ್ (ಒಬ್ಬೊಬ್ಬರಲ್ಲಿಯೂ

ಹೋಲಿಕೆಮೀರಿದ ಅಸ್ತ್ರವಿದ್ಯಾ
ನೈಪುಣ್ಯವು) ಪರ್ವೆ
(ವ್ಯಾಪಿಸಿರಲು) ಪರ್ವಿ (ಹಬ್ಬಿ)
ಪರವ್ಯೂಹ ಭಯಂಕರಂ
ನೆಗೆದು ಪಾರ್ದು ಆರ್ದೆಲು
ಎಚ್ಚೊಡೆ ಅಂಬಂಬನಟ್ಟಿ
ಪಳಂಚುತ್ತೆ
(ಶತ್ರುಸೈನ್ಯಭಯಂಕರನಾದ
ಅರ್ಜುನನು
ಎದುರುನೋಡುತ್ತ ಆರ್ಭಟಿಸಿ
ಹೊಡೆಯಲು ಅವನ ಒಂದು

ಬಾಣವು ಮತ್ತೊಂದನ್ನು
ಹಿಂಬಾಲಿಸುತ್ತ ತಟ್ಟನೆ ತಗುಲಿ)
ಸಿಡಿಲ್ದ ತೋರಗಿಡಿಯಿಂದ
(ದೊಡ್ಡ ಕಿಡಿಗಳಿಂದ)
ಒಂದೊಂದಳ್ ಬೇವುದುಂ (
ಸಿಡಿದು ಅದರ ದೊಡ್ಡ
ಕಿಡಿಗಳಿಂದ
ಒಂದೊಂದರಲ್ಲಿಯೂ
ಬೇಯುತ್ತಿರಲು) ತ್ರಿಪುರಂ
ಬೊತ್ತಿಸಿದಂತೆ ಪೊತ್ತಿ
(ತ್ರಿಪುರಾಸುರರ ಪಟ್ಟಣಗಳು

ಹತ್ತಿ ಉರಿದಂತೆ
ಆಕಾಶಮಂಡಲವು ಹತ್ತಿ)
ಪೊಗೆದತ್ತು
(ಹೊಗೆಯಾಡುತ್ತಿತ್ತು) ಎತ್ತಂ
ವಿಯನ್ಮ್ಂಡಳಂ (ಹತ್ತಿ
ಉರಿದಂತೆ ಆಕಾಶಮಂಡಲವು
ಹೊಗೆಯಾಡುತ್ತಿತ್ತು.)

ಪದ್ಯ-೧೭:ಅರ್ಥ:
ಒಬ್ಬೊಬ್ಬರಲ್ಲಿಯೂ
ಹೋಲಿಕೆಮೀರಿದ ಅಸ್ತ್ರವಿದ್ಯಾ
ನೈಪುಣ್ಯಾವು ಕೂಡಿಕೊಂಡು

ವ್ಯಾಪಿಸಿರಲು,
ಶತ್ರುಸೈನ್ಯಭಯಂಕರನಾದ
ಅರ್ಜುನನು
ಎದುರುನೋಡುತ್ತ ಆರ್ಭಟಿಸಿ
ಹೊಡೆಯಲು ಅವನ ಒಂದು
ಬಾಣವು ಮತ್ತೊಂದನ್ನು
ಹಿಂಬಾಲಿಸುತ್ತ ತಟ್ಟನೆ ತಗುಲಿ
ಸಿಡಿದು ಅದರ ದೊಡ್ಡ
ಕಿಡಿಗಳಿಂದ
ಒಂದೊಂದರಲ್ಲಿಯೂ
ಬೇಯುತ್ತಿರಲು

ತ್ರಿಪುರಾಸುರರ ಪಟ್ಟಣಗಳು
ಹತ್ತಿ ಉರಿದಂತೆ
ಆಕಾಶಮಂಡಲವು ಹತ್ತಿ
ಎಲ್ಲೆಡೆಯಲ್ಲಿಯೂ
ಹೊಗೆಯಾಡುತ್ತಿತ್ತು.

ವ|| ಅಂತು ಬ್ರಹ್ಮಾಂಡಮುರಿಯೆ ಕಾದೆ-

ವಚನ:ಪದವಿಭಾಗ-

ಅರ್ಥ:ಅಂತು ಬ್ರಹ್ಮಾಂಡಂ ಉರಿಯೆ ಕಾದೆ-

ವಚನ:ಅರ್ಥ: ವ|| ಹಾಗೆ ಬ್ರಹ್ಮಾಂಡವೇ ಉರಿಯುವ ಹಾಗೆ ಕಾದಾಡುತ್ತಿರಲು-

ಚಂ|| ನಡಪಿದನಜ್ಜನೆಂದು ವಿಜಯಂ ಕಡುಕೆಯ್ದಿಸನೆನ್ನ ಮಂಮನಾಂ ನಡಪಿದನೆಂದು ಸಿಂಧುತನಯಂ ಕಡುಕೆಯ್ದಿಸನಿಂತು ಪಾಡುಗಾ| ದೊಡನೊಡನಿರ್ವರುಂ ಮೆರೆಯಲೆಂದೆ ಶರಾಸನ

ವಿದ್ಯೆಯ ಪಡ ಲ್ವಡಿಸಿದರೆತ್ತಮಿದಿರೊಳ್ ಮಲೆದೊಡ್ಡಿದ ಚಾತುರಂಗಮಂ|| ೧೮ ||

ಪದ್ಯ-೧೮:ಪದವಿಭಾಗ-ಅರ್ಥ:ನಡಪಿದನು ಅಜ್ಜನೆಂದು ವಿಜಯಂ ಕಡುಕೆಯ್ದ ಇಸನು (ಅಜ್ಜನು ತನ್ನನ್ನು ಸಾಕಿದನು ಎಂದು ಅರ್ಜುನನೂ ತೀವ್ರವಾಗಿ ಬಾಣಪ್ರಯೋಗಮಾಡುವುದಿ

ಲ್ಲ) ಎನ್ನ ಮಂಮನು ಆಂ
ನಡಪಿದನೆಂದು
ಸಿಂಧುತನಯಂ ಕಡುಕೆಯ್ದು
ಇಸನು (ತಾನು ಸಾಕಿದ ಎನ್ನ/
ತನ್ನ ಮೊಮ್ಮಗ ಎಂದು
ಭೀಷ್ಮನೂ ಕ್ರೂರವಾಗಿ
ಬಾಣಪ್ರಯೋಗ
ಮಾಡುವುದಿಲ್ಲ) ಇಂತು
ಪಾಡುಗಾದು ಒಡನೊಡನೆ
ಇರ್ವರುಂ ಮೆರೆಯಲೆಂದೆ
(ಹೀಗೆ ಇಬ್ಬರೂ

ಸಾಂಪ್ರದಾಯಕವಾಗಿ
ಶಸ್ತ್ರಕೌಶಲವನ್ನು
ಮೆರೆಯುವುದಕ್ಕಾಗಿ ಮಾತ್ರ)
ಶರಾಸನ ವಿದ್ಯೆಯ
ಪಡಲ್ಪಡಿಸಿದರು ಎತ್ತಂ
ಇದಿರೊಳ್ ಮಲೆತು ಒಡ್ಡಿದ
ಚಾತುರಂಗಮಂ
(ಪ್ರತಿಭಟನೆಯಿಂದ ಕೂಡಿದ
ಚತುರಂಗಸೈನ್ಯವನ್ನು
ಎಲ್ಲೆಡೆಯಲ್ಲಿಯೂ
ಉರುಳಿಸಿದರು.)

ಪದ್ಯ-೧೮:ಅರ್ಥ:ಅಜ್ಜನು ತನ್ನನ್ನು ಸಾಕಿದನು ಎಂದು ಅರ್ಜುನನೂ ತೀವ್ರವಾಗಿ ಬಾಣಪ್ರಯೋಗಮಾಡುವುದಿಲ್ಲ; ತಾನು ಸಾಕಿದ ಎನ್ನ/ ತನ್ನ ಮೊಮ್ಮಗ ಎಂದು ಭೀಷ್ಮನೂ ಕ್ರೂರವಾಗಿ ಬಾಣಪ್ರಯೋಗ ಮಾಡುವುದಿಲ್ಲ. ಹೀಗೆ ಇಬ್ಬರೂ ಸಾಂಪ್ರದಾಯಕವಾಗಿ ಶಸ್ತ್ರಕೌಶಲವನ್ನು

ಮೆರೆಯುವುದಕ್ಕಾಗಿ ಮಾತ್ರ
ಬಾಣಪ್ರಯೋಗಮಾಡಿ
ಪ್ರತಿಭಟನೆಯಿಂದ ಕೂಡಿದ
ಚತುರಂಗಸೈನ್ಯವನ್ನು
ಎಲ್ಲೆಡೆಯಲ್ಲಿಯೂ
ಉರುಳಿಸಿದರು.

ವ|| ಅಂತು ಕಿಱಿದು ಪೊೞ್ತು ಕೆಯ್ಗಾದು ಕಾದೆ ಸರಿತ್ಸುತನ ಸುರಿವ ಸರಲ ಮೞೆಯೊಳೞಿದ ನಿಜ

ವರೂಥಿನಿಯ ಸಾವುಂ ನೋವುಮೇವಮಂ ಮಾಡೆ-

ವಚನ:ಪದವಿಭಾಗ-

ಅರ್ಥ:ಅಂತು ಕಿಱಿದು ಪೊೞ್ತು ಕೆಯ್ಗಾದು ಕಾದೆ (ಹಾಗೆ ಭೀಷ್ಮನು ಸ್ವಲ್ಪಕಾಲ ಶತ್ರುವಿಗೆ ರಕ್ಷಣೆಕೊಟ್ಟು ಕಾದಿದರೂ) ಸರಿತ್ಸುತನ ಸುರಿವ ಸರಲ ಮೞೆಯೊಳು (ಭೀಷ್ಮನ ಧಾರಾಕಾರವಾಗಿ ಸುರಿಯುತ್ತಿರುವ ಬಾಣದ

ಮಳೆಯಲ್ಲಿಯೇ) ಅಳಿದ
ನಿಜ ವರೂಥಿನಿಯ
(ನಾಶವಾದ ತನ್ನ ಸೈನ್ಯದ)
ಸಾವುಂ ನೋವುಮ ಏವಮಂ
ಮಾಡೆ (ಸಾವೂ ನೋವೂ
ಅರ್ಜುನನಿಗೆ ವಿಶೇಷ
ಕೋಪವನ್ನುಂಟುಮಾಡಿತು.)-
ವಚನ:ಅರ್ಥ: ಹಾಗೆ
ಭೀಷ್ಮನು ಸ್ವಲ್ಪಕಾಲ ಶತ್ರುವಿಗೆ
ರಕ್ಷಣೆಕೊಟ್ಟು ಕಾದಿದರೂ
ಭೀಷ್ಮನ ಧಾರಾಕಾರವಾಗಿ

ಸುರಿಯುತ್ತಿರುವ ಬಾಣದ ಮಳೆಯಲ್ಲಿಯೇ ನಾಶವಾದ ತನ್ನ ಸೈನ್ಯದ ಸಾವೂ ನೋವೂ ಅರ್ಜುನನಿಗೆ ವಿಶೇಷ ಕೋಪವನ್ನುಂಟುಮಾಡಿತು.

ಚಂ|| ಮುನಿದೆರಡಂಬಿನೊಳ್
ರಥಮುಮಂ
ಪದವಿಲ್ಲುಮನೆಯ್ದೆ ಪಾರ್ದು ನೆ
ಕ್ಕನೆ
ಕಡಿದಿಂದ್ರನಂದನನಳುರ್ಕೆಯಿ
ನಾರ್ದೊಡೆ ದಿವ್ಯ ಸಿಂಧುನಂ|

ದನನಿರದೇಱ ಬೇರೆ ಪೆಱತೊಂದು ಶರಾಸನಕ್ಕೆ ಮೆಲ್ಲನೆ ನಿಡುದೋಳನುಯ್ದು ಕರಮಚ್ಚರಿಯಾಗೆ ಕಡಂಗಿ ಕಾದಿದಂ|| ೧೯ ||

ಪದ್ಯ-೧೯:ಪದವಿಭಾಗ-ಅರ್ಥ:ಮುನಿದು ಎರಡಂಬಿನೊಳ್ ರಥಮುಮಂ ಪದವಿಲ್ಲುಮನು ಎಯ್ದೆ (ಕೋಪಿಸಿಕೊಂಡು ಭೀಷ್ಮರ ರಥವನ್ನು ಹದವಾದ

ಬಿಲ್ಲನ್ನು ಚೆನ್ನಾಗಿ ನೋಡಿ
ನೆಕ್ಕನೆ ಕತ್ತರಿಸಿ
ಅತಿಶಯವಾಗಿ) ಪಾರ್ದು
ನೆಕ್ಕನೆ ಕಡಿದು (ಕೂಗಿ ನೆಕ್ಕನೆ
ಕತ್ತರಿಸಿ ಅತಿಶಯವಾಗಿ
ಆರ್ಭಟಮಾಡಿದನು)
ಇಂದ್ರನಂದನನು
ಅಳುರ್ಕೆಯಿಂ ಆರ್ದೊಡೆ
(ಅರ್ಜುನನು ಅತಿಶಯವಾಗಿ
ಆರ್ಭಟಮಾಡಿದಾಗ) ದಿವ್ಯ
ಸಿಂಧುನಂದನನು ಇರದೆ ಏಚ

ಬೇರೆ ಪೆಱತೊಂದು
ಶರಾಸನಕ್ಕೆ (ಭೀಷ್ಮನು
ಸಾವಕಾಶಮಾಡದೆ ಬೇರೆ
ರಥವನ್ನು ಹತ್ತಿಕೊಂಡು,
ಬಿಲ್ಲಗೆ) ಮೆಲ್ಲನೆ
ನಿಡುದೋಳನು ಉಯ್ದು (ತನ್ನ
ದೀರ್ಘವಾದ ತೋಳನ್ನು
ಬತ್ತಳಿಕೆಗೆ ನೀಡಿ) ಕರಂ
ಅಚ್ಚರಿಯಾಗೆ ಕಡಂಗಿ
ಕಾದಿದಂ (ವಿಶೇಷ
ಆಶ್ಚರ್ಯಕರವಾಗುವ ಹಾಗೆ

ಉತ್ಸಾಹದಿಂದ
ಯುದ್ಧಮಾಡಿದನು.)

ಪದ್ಯ-೧೯:ಅರ್ಥ:

ಅರ್ಜುನನು ಕೋಪಿಸಿಕೊಂಡು ಭೀಷ್ಮರ ರಥವನ್ನು ಹದವಾದ ಬಿಲ್ಲನ್ನು ಚೆನ್ನಾಗಿ ನೋಡಿ ನೆಕ್ಕನೆ ಕತ್ತರಿಸಿ ಅತಿಶಯವಾಗಿ ಆರ್ಭಟಮಾಡಿದನು. ಭೀಷ್ಮನು ಸಾವಕಾಶಮಾಡದೆ ಬೇರೆ ರಥವನ್ನು ಹತ್ತಿಕೊಂಡು ತನ್ನ ದೀರ್ಘವಾದ ತೋಳನ್ನು

ಬತ್ತಳಿಕೆಗೆ ನೀಡಿ ವಿಶೇಷ
ಆಶ್ಚರ್ಯಕರವಾಗುವ ಹಾಗೆ
ಉತ್ಸಾಹದಿಂದ
ಯುದ್ಧಮಾಡಿದನು.

ವ|| ಅಂತು ತೋಡುಂ ಬೀಡು ಕಾಣಲಾಗದೆರ್ದೆಗಾಯಲೆಕ್ಕೆ ಯಿನೆಂಬತ್ತು ನಾಲ್ಕು ಲಕ್ಕ ಬಂಡಿಯೊಳ್ತಂಡ ತಂಡದೆ ತೀವಿದಕಾಂಡ ಪ್ರಳಯಾನಳ ವಿಸ್ಫುಲಿಂಗೋಪಮಾನಂಗಳ ಪ್ಪ ನಿಶಿತ

ಕಾಂಡಂಗಳಿಂದೊಡ್ಡಿದ
ಚತುರ್ಬಲಂಗಳ ಮೆಯ್ಯ್ವೊಳ್
ರೋಮ ರೋಮಂದಪ್ಪುದೆ
ನಡುವನ್ನಮೆಚ್ಚು
ಪಯಿಂಭಾಸಿರ್ವರ್
ಮಕುಟಬದ್ಧರುಮನೊಂದು
ಲಕ್ಕ ಮದದಾನೆಯುಮಂ
ಮೂಱುಲಕ್ಕ
ರಥಮುಮನೊಂದು ಕೋಟಿ
ತುರುಷ್ಕ ತುರಂಗಂಗಳುಮಂ
ಪದಿನೆಂಟು ಕೋಟಿ

ಪದಾತಿಯುಮನಲಸದೆ ಪೇಸೇಟಿ ಕೊಂದು ಪರಶುರಾಮನಲ್ಲಿ ಪಡೆದ ದಿವ್ಯಾಸ್ತ್ರಂಗಳನೊಂದನೊಂದು ಸೂಟಿೊಳೆ ತೊಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ತೋಡುಂ ಬೀಡು ಕಾಣಲಾಗದೆ ಎರ್ದೆಗಾಯಲ್ ಎಕ್ಕೆಯಿಂ(ಆ ರೀತಿಯಲ್ಲಿ ಬಾಣವನ್ನು ತೊಡುವುದೂ ಬಿಡುವುದೂ

ಕಾಣಲಾಗದ ರೀತಿಯಲ್ಲಿ
ಮನಸ್ಸನ್ನು
ಹತೋಟಿಯಲ್ಲಿಟ್ಟುಕೊಂಡು
ಒಂದೇಸಲ) ಎಂಬತ್ತು ನಾಲ್ಕು
ಲಕ್ಕ ಬಂಡಿಯೊಳ್ ತಂಡ
ತಂಡದೆ ತೀವಿದ (ಎಂಬತ್ತು
ನಾಲ್ಕು ಲಕ್ಷ ಬಂಡಿಯಲ್ಲಿ
ರಾಶಿರಾಶಿಯಾಗಿ ತುಂಬಿದ್ದ)
ಅಕಾಂಡ ಪ್ರಳಯಾನಳ
(ಅಕಾಲದ ಪ್ರಳಯಾಗ್ನಿಯ)
ವಿಸ್ಫುಲಿಂಗ

ಉಪಮಾನಂಗಳಪ್ಪ (ಪ್ರಳಯಾಗ್ನಿಯ ಕಿಡಿಗಳಿಗೆ ಸಮಾನವಾದ) ನಿಶಿತ ಕಾಂಡಂಗಳಿಂದ ಒಡ್ಡಿದ ಚತುರ್ಬಲಂಗಳ ಮೆಯ್ಯೊಳ್ (ಹರಿತವಾದ ಬಾಣಗಳಿಂದ ಚತುರಂಗಸೈನ್ಯದ ಶರೀರದಲ್ಲಿ) ರೋಮ ರೋಮಂದಪ್ಪದೆ ನಡುವನ್ನಂ ಎಚ್ಚು (ಒಂದು ಕೂದಲೂ ತಪ್ಪದೆ ನಾಟುವ ಹಾಗೆ ಹೊಡೆದು)

ಪಯಿಂಛಾಸಿರ್ವರ್
ಮಕುಟಬದ್ಧರುಮನು ಒಂದು
ಲಕ್ಕ ಮದದಾನೆಯುಮಂ
(ಹತ್ತು ಸಾವಿರ ರಾಜರನ್ನೂ,
ಒಂದು ಲಕ್ಷ
ಮದದಾನೆಯನ್ನೂ)
ಮೂಱುಲಕ್ಕ ರಥಮುಮನು
ಒಂದು ಕೋಟಿ ತುರುಷ್ಕ
ತುರಂಗಂಗಳುಮಂ (ಒಂದು
ಕೋಟಿ ತುರುಷ್ಕ
ಕುದುರೆಗಳನ್ನು) ಪದಿನೆಂಟು

ಕೋಟಿ ಪದಾತಿಯುಮನು ಅಲಸದೆ ಪೇಸೇಟಿ ಕೊಂದು (ಶ್ರಮವಿಲ್ಲದೆ ಜುಗುಪ್ಸೆಯಾಗುವ ಹಾಗೆ ಕೊಂದನು.) ಪರಶುರಾಮನಲ್ಲಿ ಪಡೆದ ದಿವ್ಯಾಸ್ತ್ರಂಗಳನೊಂದನೊಂದು ಸೂಟಿೊಳೆ ತೊಟ್ಟು (ಪರಶುರಾಮನಿಂದ ಪಡೆದಿದ್ದ ದಿವ್ಯಾಸ್ತ್ರಗಳೊಂದೊಂದನ್ನೂ

ಒಂದೊಂದು ಸರದಿಯಿಂದ ತೊಟ್ಟು)-
ವಚನ:ಅರ್ಥ:ಆ ರೀತಿಯಲ್ಲಿ ಬಾಣವನ್ನು ತೊಡುವುದೂ ಬಿಡುವುದೂ ಕಾಣಲಾಗದ ರೀತಿಯಲ್ಲಿ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಒಂದೇಸಲ ಎಂಬತ್ತು ನಾಲ್ಕು ಲಕ್ಷ ಬಂಡಿಯಲ್ಲಿ ರಾಶಿರಾಶಿಯಾಗಿ ತುಂಬಿದ್ದ ಅಕಾಲದ ಪ್ರಳಯಾಗ್ನಿಯ

ಕಿಡಿಗಳಿಗೆ ಸಮಾನವಾದ
ಹರಿತವಾದ ಬಾಣಗಳಿಂದ
ಚತುರಂಗಸೈನ್ಯದ ಶರೀರದಲ್ಲಿ
ಒಂದು ಕೂದಲೂ ತಪ್ಪದೆ
ನಾಟುವ ಹಾಗೆ ಹೊಡೆದು,
ಹತ್ತು ಸಾವಿರ ರಾಜರನ್ನೂ,
ಒಂದು ಲಕ್ಷ
ಮದದಾನೆಯನ್ನೂ, ಒಂದು
ಕೋಟಿ ತುರುಷ್ಕ
ಕುದುರೆಗಳನ್ನು ಹದಿನೆಂಟು
ಕೋಟಿ ಕಾಲಾಳುಬಲವನ್ನೂ

ಶ್ರಮವಿಲ್ಲದೆ
ಜುಗುಪ್ಸೆಯಾಗುವ ಹಾಗೆ
ಕೊಂದನು.
ಪರಶುರಾಮನಿಂದ ಪಡೆದಿದ್ದ
ದಿವ್ಯಾಸ್ತ್ರಗಳೊಂದೊಂದನ್ನೂ
ಒಂದೊಂದು ಸರದಿಯಿಂದ
ತೊಟ್ಟು=

ಕಂ|| ನುಡಿವಳಿಗೆ ನರನ
ರಥಮಂ
ಪಡುವಣ್ಗಾವುದುವರಂ
ಸಿಡಿಲ್ವಿನಮೆಚ್ಚ|

ಚ್ಚುಡಿಯೆ ಭುಜಬಲದೆ ಹರಿಯುರ ದೆಡೆಯಂ ಬಿರಿಯೆಟ್ಟು ಮೆರೆದನಳವಂ ಭೀಷ್ಮಂ|| ೨೦||

ಪದ್ಯ-೨೦:ಪದವಿಭಾಗ-ಅರ್ಥ:ನುಡಿವಳಿಗೆ (ಹಿಂದೆಹೇಳಿದ ಹಾಗೆ) ನರನ ರಥಮಂ ಪಡುವ ಎಣ್ಗಾವುದುವರಂ ಸಿಡಿಲ್ವಿನಂ ಎಚ್ಚ (ಅರ್ಜುನನ ತೇರನ್ನು ಪಶ್ಚಿಮದ ಕಡೆ

ಎಂಟುಗಾವುದದವರೆಗೆ
ಸಿಡಿದು ಹೋಗುವಂತೆ
ಹೊಡೆದನು) ಅಚ್ಚುಡಿಯೆ
(ರಥದ ಅಚ್ಚು ಮುರುಯಲು)
ಭುಜಬಲದೆ ಹರಿಯ
ಉರದೆಡೆಯಂ ಬಿರಿಯೆ ಎಟ್ಟು
ಮೆರೆದನು ಅಳವಂ ಭೀಷ್ಮಂ
(ಬಾಹುಬಲದಿಂದ ಕೃಷ್ಣನ
ಹೃದಯಪ್ರದೇಶವನ್ನು
ಬಿರಿಯುವಂತೆ ಹೊಡೆದು

ಭೀಷ್ಮನು ತನ್ನ ಶಕ್ತಿಯನ್ನು ಪ್ರದರ್ಶಿಸಿದನು.)

ಪದ್ಯ-೨೦:ಅರ್ಥ: ಆಡಿದ ಮಾತನ್ನು ಪೂರ್ಣಗೊಳಿಸುವುದಕ್ಕೆ (ಮಾತ್ರ) ಅರ್ಜುನನ ತೇರನ್ನು ಪಶ್ಚಿಮದ ಕಡೆ ಎಂಟುಗಾವುದದವರೆಗೆ ಸಿಡಿದು ಹೋಗುವಂತೆ ಹೊಡೆದನು. ರಥದ ಅಚ್ಚು ಮುರಿಯಿತು.

ಬಾಹುಬಲದಿಂದ ಕೃಷ್ಣನ ಹೃದಯಪ್ರದೇಶವನ್ನು ಬಿರಿಯುವಂತೆ ಹೊಡೆದು ಭೀಷ್ಮನು ತನ್ನ ಶಕ್ತಿಯನ್ನು ಪ್ರದರ್ಶಿಸಿದನು.

ವ|| ಆಗಳ್-

ವಚನ:ಅರ್ಥ:ವ|| ಆಗ

ಕಂ||

ದೇವಾಸುರದೊಳಮಿಂದಿನ

ನೋವಂ

ನೊಂದಱಿಯೆನುಱಿದ

**ಕೆಯ್ದುವಿನೊಳಿವಂ|
ಸಾವನೆ ಸೆರಗಂ ಬಗೆದೊಡೆ
ಸಾವಾದಪುದೆಂದು ಚಕ್ರಿ
ಚಕ್ರದೊಳಿಟ್ಟಂ|| ೨೧ ||**

ಪದ್ಯ-೨೧:ಪದವಿಭಾಗ-ಅರ್ಥ:ದೇವಾಸುರದೊಳಂ ಇಂದಿನ ನೋವಂ ನೊಂದು ಅಱಿಯೆನು (ದೇವಾಸುರರ ಯುದ್ಧದಲ್ಲಿಯೂ ಈ ದಿನದ ನೋವನ್ನು ಅರಿಯೆನು- ಅನುಭವಿಸಿರಲಿಲ್ಲ) ಉಱಿದ

ಕೆಯ್ದುವಿನೊಳು ಇವಂ
ಸಾವನೆ (ಉಳಿದ
ಆಯುಧಗಳಿಂದ ಇವನು
ಸಾಯುತ್ತಾನೆಯೇ) ಸೆರಗಂ
ಬಗೆದೊಡೆ ಸಾವಾದಪುದು
ಎಂದು ಚಕ್ರಿ ಚಕ್ರದೊಳಿಟ್ಟಂ (
ಬೇರೆ ಸಹಾಯವನ್ನು
ಅಪೇಕ್ಷಿಸಿದರೆ
ಮರಣವುಂಟಾಗುತ್ತದೆ ಎಂದು
ಶ್ರೀಕೃಷ್ಣನು

ಚಕ್ರಾಯುಧದಿಂದಲೇ
ಹೊಡೆದನು.)

ಪದ್ಯ-೨೧:ಅರ್ಥ:
ದೇವಾಸುರರ
ಯುದ್ಧದಲ್ಲಿಯೂ ಈ ದಿನದ
ನೋವನ್ನು
ಅನುಭವಿಸಿರಲಿಲ್ಲ ; ಉಳಿದ
ಆಯುಧಗಳಿಂದ ಇವನು
ಸಾಯುತ್ತಾನೆಯೇ?
ಸಹಾಯವನ್ನು ಅಪೇಕ್ಷಿಸಿದರೆ
ಮರಣವುಂಟಾಗುತ್ತದೆ ಎಂದು

ಶ್ರೀಕೃಷ್ಣನು
ಚಕ್ರಾಯುಧದಿಂದಲೇ
ಹೊಡೆದನು.

**ಇಟ್ಟೊಡೆ ತನಗಸುರಾರಿಯ
ಕೊಟ್ಟ ಮಹಾ ವೈಷ್ಣವಾಸ್ತ್ರಮಂ
ಗಾಂಗೇಯಂ|
ತೊಟ್ಟಿಸುವುದುಮೆರಡುಂ ಕಿಡಿ
ಗುಟ್ಟಿ ಸಿಡಿಲ್ ಸಿಡಿಯೆ
ಪೋರ್ದುವಂಬರತಳದೊಳ್||
೨೨ ||**

ಪದ್ಯ-೨೨:ಪದವಿಭಾಗ-ಅರ್ಥ:ಇಟ್ಟೊಡೆ (ಹಾಗೆ ಹೊಡೆದರೆ) ತನಗೆ ಅಸುರಾರಿಯಕೊಟ್ಟ ಮಹಾ ವೈಷ್ಣವಾಸ್ತ್ರಮಂ ಗಾಂಗೇಯಂ(ಭೀಷ್ಮನು ವಿಷ್ಣುವು ಕೊಟ್ಟ ಮಹಾವೈಷ್ಣವಾಸ್ತ್ರವನ್ನು ಪ್ರಯೋಗಿಸಿದನು) ತೊಟ್ಟಿಸುವುದುಂ ಎರಡುಂ ಕಿಡಿಗುಟ್ಟಿ ಸಿಡಿಲ್ ಸಿಡಿಯೆ

ಪೋರ್ದುವು
(ಹೋರಾಡಿದುವು)
ಅಂಬರತಳದೊಳ್ (ಎರಡು
ಅಸ್ತ್ರಗಳೂ ಕಿಡಿಗಳನ್ನು ಚೆಲ್ಲಿ
ಸಿಡಿಲು ಸಿಡಿಯುವಂತೆ ಆಕಾಶ
ಪ್ರದೇಶದಲ್ಲಿ ಹೋರಾಡಿದುವು.
)
ಪದ್ಯ-೨೨:ಅರ್ಥ: ಕೃಷ್ಣನು
ಹಾಗೆ ಹೊಡೆದರೆ, ಭೀಷ್ಮನು
ವಿಷ್ಣುವು ಕೊಟ್ಟ
ಮಹಾವೈಷ್ಣವಾಸ್ತ್ರವನ್ನು

ಪ್ರಯೋಗಿಸಿದನು. ಎರಡು ಅಸ್ತ್ರಗಳೂ ಕಿಡಿಗಳನ್ನು ಚೆಲ್ಲಿ ಸಿಡಿಲು ಸಿಡಿಯುವಂತೆ ಆಕಾಶ ಪ್ರದೇಶದಲ್ಲಿ ಹೋರಾಡಿದುವು.

ಪೋರ್ವುದುಮಿಂ ಪೆಱತಂಬಿಂ
ತೀರ್ವುದೆ ಪಗೆಯೆಂದು
ಪಾಶುಪತಮಂ ಪಿಡಿಯಲ್|
ಪಾರ್ವುದುಮರ್ಜುನನಾಗಳ್
ಬೇರ್ವೆರಸು ಕಿೞಲ್ಕೆ ಬಗೆಯೆ
ಸುರರೆಡೆವೊಕ್ಕರ್|| ೨೩ ||

ಪದ್ಯ-೨೩:ಪದವಿಭಾಗ-ಅರ್ಥ:ಪೋರ್ವುದುಂ (ಹೋರಾಡುತ್ತಿರಲು) ಇಂ ಪೆಱತಂಬಿಂ ತೀರ್ವುದೆ ಪಗೆಯೆಂದು (ಶತ್ರುವು ಇನ್ನು ಬೇರೆಯ ಬಾಣದಿಂದ ನಾಶವಾಗುವುದೇ) ಪಾಶುಪತಮಂ ಪಿಡಿಯಲ್ ಪಾರ್ವುದುಂ ಅರ್ಜುನನು ಆಗಳ್ ಬೇರ್ವೆರಸು ಕಿೞಲ್ಕೆ ಬಗೆಯೆ (ಅರ್ಜುನನು

ಯೋಚಿಸಿ ಮೂಲೋತ್ಪಾಟನ ಮಾಡುವುದಕ್ಕೆ ಪಾಶುಪತಾಸ್ತ್ರವನ್ನೇ ಯೋಚಿಸಲು) ಸುರರೆ ಎಡೆವೊಕ್ಕರ್ (ಅದನ್ನು ತಡೆಯಲು ದೇವತೆಗಳು ಮಧ್ಯೆ ಪ್ರವೇಶ ಮಾಡಿದರು).

ಪದ್ಯ-೨೩:ಅರ್ಥ: ಹೀಗೆ ಹೋರಾಡುತ್ತಿರಲು, ಶತ್ರುವು ಇನ್ನು ಬೇರೆಯ ಬಾಣದಿಂದ ನಾಶವಾಗುವುದೇ, ಎಂದು

ಅರ್ಜುನನು ಯೋಚಿಸಿ ಮೂಲೋತ್ಪಾಟನ ಮಾಡುವುದಕ್ಕೆ ಪಾಶುಪತಾಸ್ತ್ರವನ್ನೇ ಯೋಚಿಸಲು ನೋಡುತ್ತಿರಲು (ಅವನನ್ನು ತಡೆಯುವುದಕ್ಕಾಗಿ) ದೇವತೆಗಳು ಮಧ್ಯೆ ಪ್ರವೇಶ ಮಾಡಿದರು.

ವ|| ಆ ಪ್ರಸ್ತಾವದೊಳ್-

ವಚನ:ಅರ್ಥ: ಆ

ಸಮಯದಲ್ಲಿ-

ಕಂ|| ಎನ್ನುಮನಸುರಾರಿಯ

ಪಿಡಿ

ವುನ್ನತ ಕರಚಕ್ರಮೆಂದು

ಭೀಷ್ಮಂ ತಱಿಗುಂ|

ಮುನ್ನಮಡಂಗುವೆನೆಂಬವೊ

ಲನ್ನೆಗಮಸ್ತಾಚಳಸ್ಥನಾದಂ

ದಿನಪಂ|| ೨೪ ||

ಪದ್ಯ-೨೪:ಪದವಿಭಾಗ-

ಅರ್ಥ: ಎನ್ನುಮನು

ಅಸುರಾರಿಯ ಪಿಡಿವ ಉನ್ನತ
ಕರಚಕ್ರಮೆಂದು ಭೀಷ್ಮಂ
ತಱಿಗುಂ (ನನ್ನನ್ನೂ ಕೃಷ್ಣನು
ಹಿಡಿಯುವ ಶ್ರೇಷ್ಠವಾದ
ಚಕ್ರವೆಂದೇ ಭೀಷ್ಮನು
ತರಿದುಹಾಕುತ್ತಾನೆ) ಮುನ್ನಮೆ
ಅಡಂಗುವೆನು ಎಂಬವೊಲ್
ಅನ್ನೆಗಂ ಅಸ್ತಾಚಳಸ್ಥನು
ಆದಂ ದಿನಪಂ (ಅಸ್ತಾಚಲ
ಅಸ್ಥನು ಅದಂ; ಮೊದಲೇ
ಮರೆಯಾಗುತ್ತೇನೆ ಎನ್ನುವ

ಹಾಗೆ ಸೂರ್ಯನು ಅಸ್ತಾಚಲದಲ್ಲಿ ಮರೆಯಾದನು.)

ಪದ್ಯ-೨೪:ಅರ್ಥ: ನನ್ನನ್ನೂ ಕೃಷ್ಣನು ಹಿಡಿಯುವ ಶ್ರೇಷ್ಠವಾದ ಚಕ್ರವೆಂದೇ ಭೀಷ್ಮನು ತರಿದುಹಾಕುತ್ತಾನೆ. ಮೊದಲೇ ಮರೆಯಾಗುತ್ತೇನೆ ಎನ್ನುವ ಹಾಗೆ ಸೂರ್ಯನು ಅಸ್ತಾಚಲದಲ್ಲಿ

ಮರೆಯಾದನು. (ಸೂರ್ಯನು ಅಸ್ತವಾದನು).

ವ|| ಆಗಳೆರಡುಂ ಪಡೆಗಳಪಹಾರತೂರ್ಯಂಗಳಂ ಬಾಜಿಸಿ ಮುನ್ನೊತ್ತಿದ ವೇಳೆಗಳ್ ಸಮುದ್ರಂಗಳಂ ಪುಗುವಂತೆ ತಂತಮ್ಮ ಬೀಡುಗಳಂ ಪೊಕ್ಕರಾಗಳ್-

ವಚನ:ಪದವಿಭಾಗ-

ಅರ್ಥ:ಆಗಳೆರಡುಂ ಪಡೆಗಳು ಅಪಹಾರತೂರ್ಯಂಗಳಂ

ಬಾಜಿಸಿ (ಆಗ ಎರಡು
ಸೈನ್ಯಗಳೂ ಯುದ್ಧ
ನಿಂತಿತೆಂದು ತಿಳಿಸುವ
ವಾದ್ಯಗಳನ್ನು ಬಾರಿಸಿ) ಮುನ್ನ
ಒತ್ತಿದ ವೇಳೆಗಳ್
ಸಮುದ್ರಂಗಳಂ ಪುಗುವಂತೆ
ತಂತಮ್ಮ ಬೀಡುಗಳಂ
ಪೊಕ್ಕರಾಗಳ್ (ಮೊದಲು
ಎದ್ದಿದ್ದ ಅಲೆಗಳು
ಸಮುದ್ರವನ್ನು
ಪ್ರವೇಶಿಸುವಂತೆ ಸೈನ್ಯಗಳು

ತಮ್ಮ ತಮ್ಮ ಶಿಬಿರಗಳನ್ನು ಪ್ರವೇಶಿಸಿದವು. ಆಗ)-

ವಚನ:ಅರ್ಥ:ಆಗ ಎರಡು ಸೈನ್ಯಗಳೂ ಯುದ್ಧ ನಿಂತಿತೆಂದು ತಿಳಿಸುವ ವಾದ್ಯಗಳನ್ನು ಬಾರಿಸಿ, ಮೊದಲು ಎದ್ದಿದ್ದ ಅಲೆಗಳು ಸಮುದ್ರವನ್ನು ಪ್ರವೇಶಿಸುವಂತೆ ಸೈನ್ಯಗಳು ತಮ್ಮ ತಮ್ಮ ಶಿಬಿರಗಳನ್ನು ಪ್ರವೇಶಿಸಿದವು. ಆಗ

ಕಂ|| ಬರಿಸಿ
ಮನೆಗನುಸುರವೈರಿಯ
ನರಸಂ ಭೀಷ್ಮಂಗೆ
ಚಕ್ರಮಿಂತೇಕೆ ಮೊಗಂ|
ದಿರಿದುದೊ ನಿಮ್ಮಂ ಪಿಡಿದೆನ
ಗರಿದೆನಲರಿದುಂಟೆ
ಧುರದೊಳೇನಸುರಾರೀ|| ೨೫
||

ಪದ್ಯ-೨೫:ಪದವಿಭಾಗ-
ಅರ್ಥ:ಬರಿಸಿ ಮನೆಗೆ
ಅನುಸುರವೈರಿಯನು ಅರಸಂ

(ಅರಸ ಧರ್ಮರಾಜನು
ಕೃಷ್ಣನನ್ನು ಮನೆಗೆ
ಬರಮಾಡಿಕೊಂಡು) ಭೀಷ್ಮಂಗೆ
ಚಕ್ರಂ ಇಂತೇಕೆ
ಮೊಗಂದಿರಿದುದೊ (ನಿಮ್ಮ
ಚಕ್ರವು ಭೀಷ್ಮನಿಗೇಕೆ
ವಿಮುಖವಾಯಿತೋ!)
ನಿಮ್ಮಂ ಪಿಡಿದ ಎನಗೆ
ಅರಿದೆನಲ್
(ಅಸಾಧ್ಯವೆಂಬುದು)
ಅರಿದುಂಟೆ (ಅರಿಯುವುದು

ಉಂಟೇ) ಧುರದೊಳ್ ಏನ್ ಅಸುರಾರೀ ()
ಪದ್ಯ-೨೫:ಅರ್ಥ: ಅರಸ ಧರ್ಮರಾಜನು ಕೃಷ್ಣನನ್ನು ಮನೆಗೆ ಬರಮಾಡಿಕೊಂಡು ನಿಮ್ಮ ಚಕ್ರವು ಭೀಷ್ಮನಿಗೇಕೆ ವಿಮುಖವಾಯಿತೋ! ಕೃಷ್ಣ! ನಿಮ್ಮನ್ನು ಆಶ್ರಯಿಸಿದ ನನಗೆ ಯುದ್ಧದಲ್ಲಿ ಅಸಾಧ್ಯವೆಂಬುದು ಇದೆಯೇ? ಇಲ್ಲ ಎಂದನು.

ಬೆಸಸೆನೆ ನುಡಿದಂ ಮುರನೆಂ

ಬಸುರನನೆನಗಾಗಿ ಕಾದಿ

ಭೀಷ್ಮಂ ಪಿಡಿದೊ|

ಪ್ಪಿಸಿದೊಡೆ ವೈಷ್ಣವ ಬಾಣಮ

ನೊಸೆದಿತ್ತೆನದಂ ಗೆಲಲ್ಕೆ

ಕೆಯ್ದುಗಳೊಳವೇ|| ೨೬ ||

ಪದ್ಯ-೨೬:ಪದವಿಭಾಗ-ಅರ್ಥ:ಬೆಸಸೆನೆ ನುಡಿದಂ ಮುರನೆಂಬ ಅಸುರನಂ ಎನಗಾಗಿ ಕಾದಿ ಭೀಷ್ಮಂ ಪಿಡಿದು ಒಪ್ಪಿಸಿದೊಡೆ ವೈಷ್ಣವ

ಬಾಣಮನು ಒಸೆದು ಇತ್ತೆನು (ಮುರನೆಂಬ ಅಸುರನೊಂದಿಗೆ ಹೋರಾಡಿ ಸೋಲಿಸಿ ಹಿಡಿದು ನನಗೆ ಒಪ್ಪಿಸಿದುದರಿಂದ ಮೆಚ್ಚಿ ಭೀಷ್ಮನಿಗೆ ನಾನು ವೈಷ್ಣವಾಸ್ತ್ರ ಕೊಟ್ಟಿದ್ದೆ) ಅದಂ ಗೆಲಲ್ಕೆ ಕೆಯ್ದುಗಳು ಒಳವೇ (ಅದನ್ನು ಗೆಲ್ಲಲು ಆಯುಧಗಳು ಇವೆಯೇ? ಇಲ್ಲ ಎಂದನು.)

ಪದ್ಯ-೨೬:ಅರ್ಥ: ೨೬. ಕೃಷ್ಣ ಹೇಳಿದನು : ಮುರನೆಂಬ ಅಸುರನೊಂದಿಗೆ ಹೋರಾಡಿ ಸೋಲಿಸಿ ನನಗೊಪ್ಪಿಸಿದುದರಿಂದ ಮೆಚ್ಚಿ ಭೀಷ್ಮನಿಗೆ ನಾನು ವೈಷ್ಣವಾಸ್ತ್ರ ಕೊಟ್ಟಿದ್ದೆ. ಅದನ್ನು ಗೆಲ್ಲಲು ಆಯುಧಗಳು ಇವೆಯೇ? ಇಲ್ಲ ಎಂದನು.

ಭೇದದೊಳಲ್ಲದೆ ಗೆಲಲರಿ

ದಾದಂ

ಸುರಸಿಂಧುಸುತನನಿಂದಿರುಳೊ

ಳ್ ನೀಂ|

ಭೇದಿಸೆನೆ ನೃಪತಿಯೊರ್ವನೆ

ಆದರದಿಂ ಬಂದು

ಸಿಂಧುಸುತನಂ ಕಂಡಂ|| ೨೭ ||

ಪದ್ಯ-00:ಪದವಿಭಾಗ-

ಅರ್ಥ:ಭೇದದೊಳು ಅಲ್ಲದೆ

ಗೆಲಲು ಅರಿದಾದಂ

(ಭೇದೋಪಾಯದಿಂದ ಅಲ್ಲದೆ

ಗೆಲ್ಲಲು ಅಸಾಧ್ಯವಾದವನು)

ಸುರಸಿಂಧುಸುತನನ
ಇಂದಿರುಳೊಳ್ ನೀಂ
ಭೇದಿಸೆನೆ (ಈ ರಾತ್ರಿ ನೀನು
ದೈನ್ಯವನ್ನು ತೋರಿ, ಅವನನ್ನು
ಭೇದಿಸು ಎನ್ನಲು,) ನೃಪತಿಯು
ಒರ್ವನೆ ಆದರರದಿಂ ಬಂದು
ಸಿಂಧುಸುತನಂ ಕಂಡಂ
(ರಾಜನೊಬ್ಬನೇ ಆದರದಿಂದ
ಬಂದು ಭೀಷ್ಮನನ್ನು ಕಂಡನು.
)

ಪದ್ಯ-00:ಅರ್ಥ:ಭೀಷ್ಮನನ್ನು ಭೇದೋಪಾಯದಿಂದ ಅಲ್ಲದೆ ಗೆಲ್ಲಲು ಅಸಾಧ್ಯವಾದವನು. ಈ ರಾತ್ರಿ ನೀನು ಅವನನ್ನು ದೈನ್ಯವನ್ನು ತೋರಿ, ಭೇದಿಸು ಎನ್ನಲು, ರಾಜನೊಬ್ಬನೇ ಆದರದಿಂದ ಬಂದು ಭೀಷ್ಮನನ್ನು ಕಂಡನು.

ಕಣ್ಣು ಪೊಡೆವಟ್ಟು ನಯಮೆರ್ದೆ

ಗೊಣ್ಡಿರೆ ಪತಿ ನುಡಿದನೆನಗೆ

ದೇವರ್ ಕಲುಷಂ|

ಗೊಣ್ಡಾಗಳ್ ಕಾವರ್ ಕಣೆ

ಗೊಣ್ಡವೊಲೆಂದೆಂಬ

ಮಾತಿನಂತಾಗಿರದೇ|| ೨೮ ||

ಪದ್ಯ-00:ಪದವಿಭಾಗ-

ಅರ್ಥ:ಕಣ್ಡು ಪೊಡೆವಟ್ಟು

ನಯಮೆರ್ದೆಗೊಣ್ಡಿರೆ ಪತಿ

ನುಡಿದನೆನಗೆ ದೇವರ್

ಕಲುಷಂ ಗೊಣ್ಡಾಗಳ್ ಕಾವರ್

ಕಣೆಗೊಣ್ಡವೊಲೆಂದೆಂಬ
ಮಾತಿನಂತಾಗಿರದೇ
ಪದ್ಯ-00:ಅರ್ಥ: ೨೮.
ನಮಸ್ಕಾರಮಾಡಿ
ಪೂರ್ವಕವಾಗಿ
ಧರ್ಮರಾಜನು ಹೇಳಿದನು.
ನನಗೆ ಸ್ವಾಮಿಯಾದ ತಾವು
ಕೋಪಮಾಡಿದರೆ
‘ರಕ್ಷಿಸಬೇಕಾದವರೇ
ಬಾಣವನ್ನು ಹೂಡಿದ ಹಾಗೆ’

ಎಂಬ ಗಾದೆಯ ;ಮಾತಿನಂತಾಗುವುದಿಲ್ಲವೆ?

ತೋಂಬಯ್ಯಾಸಿರ್ವರ್ ನಿಮ್ಮಂಬಿನ ಬಿಂಬಲೊಳೆ ಮಕುಟಬದ್ಧರ್ ಮಡಿದರ್| ನಂಬಿಂ ನಂಬಲಿಮಿಂದಿಂ ಗೊಂಬತ್ತು ದಿನಂ ದಲೆಮ್ಮ ಬೆನ್ನಲೆ ನಿಂದಿರ್|| ೨೯ ||

ಪದ್ಯ-00:ಪದವಿಭಾಗ-ಅರ್ಥ:ತೋಂಬಯ್ಯಾಸಿರ್ವರ್ ನಿಮ್ಮ ಅಂಬಿನ ಬಿಂಬಲೊಳೆ

ಮಕುಟಬದ್ಧರ್
ಮಡಿದರ್(ತೊಂಬತ್ತುಸಾವಿರ
ಕಿರೀಟಧಾರಿಗಳಾದ ರಾಜರು
ನಿಮ್ಮ ಬಾಣದ
ಸಮೂಹದಿಂದ ಸತ್ತರು)
ನಂಬಿಂ ನಂಬಲಿಂ ಇಂದಿಂಗೆ
ಒಂಬತ್ತು ದಿನಂ ದಲ್ ಎಮ್ಮ
ಬೆನ್ನಲೆ ನಿಂದಿರ್ (ನಂಬಿ,
ನಂಬದಿರಿ ಈ ಒಂಬತ್ತು
ದಿನವೂ ನೀವು ನಮ್ಮ

ಬೆನ್ನುಹತ್ತಿ ವಿರೋಧವಾಗಿ ನಿಂತಿರಿ.)

ಪದ್ಯ-00:ಅರ್ಥ:

ತೊಂಬತ್ತುಸಾವಿರ ಕಿರೀಟಧಾರಿಗಳಾದ ರಾಜರು ನಿಮ್ಮ ಬಾಣದ ಸಮೂಹದಿಂದ ಸತ್ತರು. ನಂಬಿ, ನಂಬದಿರಿ ಈ ಒಂಬತ್ತು ದಿನವೂ ನೀವು ನಮ್ಮ ಬೆನ್ನುಹತ್ತಿ ವಿರೋಧವಾಗಿ ನಿಂತಿರಿ.

ಚಕ್ರಿಯ ಚಕ್ರದೊಳಂ ತೊಡ

ರ್ದಾಕ್ರಮಿಸಿದುದೆಚ್ಚ ನಿಜ

ಪತತ್ರಿ ದಲೆನೆ ನಿ|

ಮ್ಮೀ ಕ್ರಮಕಮಲಕ್ಕೆಱಗದೆ

ವಕ್ರಿಸಿ ಭೂಚಕ್ರದೊಳಗೆ

ಬಾಳ್ವಿರುಮೊಳರೇ|| ೩೦ ||

ಪದ್ಯ-೩೦:ಪದವಿಭಾಗ-

ಅರ್ಥ:ಚಕ್ರಿಯ ಚಕ್ರದೊಳಂ

ತೊಡರ್ದು ಆಕ್ರಮಿಸಿದುದು

(ಶ್ರೀಕೃಷ್ಣನ ಚಕ್ರವನ್ನೂ

ಅಡ್ಡಗಟ್ಟಿ ಆಕ್ರಮಿಸಿತು) ಎಚ್ಚ

(ಹೊಡೆದ) ನಿಜ ಪತತ್ರಿ (ನೀವು
ಪ್ರಯೋಗಿಸಿದ ಬಾಣವು)
ದಲ್ (ನಿಜಕ್ಕೂ) ಎನೆ ನಿಮ್ಮ
ಈ ಕ್ರಮಕಮಲಕ್ಕೆ ಎಱಗದೆ
ವಕ್ರಿಸಿ (ನಿಮ್ಮ ಈ
ಪಾದಕಮಲಕ್ಕೆ
ನಮಸ್ಕಾರಮಾಡದೆ
ಎದರುಬಿದ್ದು ವಕ್ರವಾಗಿ
ನಿಂತು) ಭೂಚಕ್ರದೊಳಗೆ
ಬಾಟ್ವಿರುಂ ಒಳರೇ
(ಭೂಮಂಡಲದಲ್ಲಿ

ಬಾಳುವವರೂ ಇದ್ದಾರೆಯೇ?
)
ಪದ್ಯ-೩೦:ಅರ್ಥ: ನೀವು ಪ್ರಯೋಗಿಸಿದ ಬಾಣವು ಶ್ರೀಕೃಷ್ಣನ ಚಕ್ರವನ್ನೂ ಅಡ್ಡಗಟ್ಟಿ ಆಕ್ರಮಿಸಿತು ಎನ್ನುವಾಗ ನಿಮ್ಮ ಈ ಪಾದಕಮಲಕ್ಕೆ ನಮಸ್ಕಾರಮಾಡದೆ ಎದರುಬಿದ್ದು ವಕ್ರವಾಗಿ ನಿಂತು

ಈ ಭೂಮಂಡಲದಲ್ಲಿ
ಬಾಳುವವರೂ ಇದ್ದಾರೆಯೇ?

<u>ಭೀಷ್ಮನ ಶರಶೆಯ್ಯೆ</u>

ಸಾವೆ ನಿಮತಿಚ್ಛೆಯೆನೆ ಪೊಣ
ರ್ದಾವಂ ತಳ್ತಿಱಿದು
ಗೆಲ್ವನೆಮಗದಱಿಂದಂ|
ಸಾವು ದಿಟಂ ನಿಮ್ಮಡಿ ಕೊಲೆ
ಸಾವುದು ಲೇಸಲ್ತೆ
ಸುಗತಿವಡೆಯಲ್ಕಕ್ಕುಂ|| ೩೧ ||

ಪದ್ಯ-೩೧:ಪದವಿಭಾಗ-ಅರ್ಥ:ಸಾವೆ ನಿಮತು ಇಚ್ಚೆಯೆನೆ (ಸಾಯುವುದು ನಿಮ್ಮ ಇಚ್ಚೆಯಿಂದ ಮಾತ್ರಾ ಆಗಿದ್ದರೆ) ಪೊಣರ್ದು (ಯುದ್ಧಮಾಡಿ) ಆವಂ ತಳ್ತು ಇಱಿದು ಗೆಲ್ವನು (ನಿಮ್ಮನ್ನು ಪ್ರತಿಭಟಿಸಿ ಯಾವನು ಎದುರಿಸಿಯುದ್ಧಮಾಡಿ ಗೆಲ್ಲುತ್ತಾನೆ) ಎಮಗೆ ಅದಱಿಂದಂ ಸಾವು ದಿಟಂ

(ಆದುದರಿಂದ ನಮಗೆ ಸಾವೆಂಬುದು ನಿಶ್ಚಯ.) ನಿಮ್ಮಡಿ ಕೊಲೆ (ನಿಮ್ಮಪಾದವು ನಮ್ಮನ್ನು ಕೊಲ್ಲಲು) ಸಾವುದು ಲೇಸಲ್ತೆ (ಸಾಯುವುದೇ ಒಳ್ಳೆಯದಲ್ಲವೇ) ಸುಗತಿ ವಡೆಯಲ್ಕಕ್ಕುಂ (ಸದ್ಗತಿಯನ್ನು ಹೊಂದಬಹುದು.)_

ಪದ್ಯ-೩೧:ಅರ್ಥ: (ನೀವು) ಸಾಯುವುದು ನಿಮ್ಮ

ಇಚ್ಛೆಯಿಂದ ಮಾತ್ರಾ ಆಗಿದ್ದರೆ
ನಿಮ್ಮನ್ನು ಪ್ರತಿಭಟಿಸಿ
ಯಾವನು ಎದುರಿಸಿ
ಯುದ್ಧಮಾಡಿ ಗೆಲ್ಲುತ್ತಾನೆ.
ಆದುದರಿಂದ ನಮಗೆ
ಸಾವೆಂಬುದು ನಿಶ್ಚಯ.
ನಿಮ್ಮಪಾದವು ನಮ್ಮನ್ನು
ಕೊಲ್ಲಲು ಸಾಯುವುದೇ
ಒಳ್ಳೆಯದಲ್ಲವೇ, ಸದ್ಗತಿಯನ್ನು
ಹೊಂದಬಹುದು.

ವ|| ಎಂದೊಡದೆಲ್ಲಮನೆಯ್ದೆ ಕೇಳ್ದು ಕರುಣಾರಸ ಹೃದಯನಾಗಿ ಮಮ್ಮಗನ ಮೊಗಮಂ ಕೂರ್ಮೆಯಿಂ ನೋಡಿ ಕಣ್ಣ ನೀರಂ ನೆಗಪಿ-

ವಚನ:ಪದವಿಭಾಗ-

ಅರ್ಥ:ಎಂದೊಡೆ ಅದೆಲ್ಲಮನು ಎಯ್ದೆ ಕೇಳ್ದು ಕರುಣಾರಸ ಹೃದಯನಾಗಿ (ಅದನ್ನು ಪೂರ್ಣವಾಗಿ ಕೇಳಿ ಕರುಣಾರಸಹೃದಯನಾಗಿ)

ಮಮ್ಮಗನ ಮೊಗಮಂ ಕೂರ್ಮೆಯಿಂ ನೋಡಿ (ಮೊಮ್ಮಗನ ಮುಖವನ್ನು ಪ್ರೀತಿಯಿಂದ ನೋಡಿ) ಕಣ್ಣ ನೀರಂ ನೆಗಪಿ (ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು ಹೇಳಿದನು.)-

ವಚನ:ಅರ್ಥ:ವ|| ಅದನ್ನು ಪೂರ್ಣವಾಗಿ ಕೇಳಿ ಕರುಣಾರಸ ಹೃದಯನಾಗಿ ಭೀಷ್ಮನು ಮೊಮ್ಮಗನ

ಮುಖವನ್ನು ಪ್ರೀತಿಯಿಂದ
ನೋಡಿ ಕಣ್ಣಿನಲ್ಲಿ ನೀರನ್ನು
ತುಂಬಿಕೊಂಡು ಹೇಳಿದನು.

ಚಂ|| ಜಗದೊಳವಧ್ಯನಂ
ಗೆಲಲೆಬಾರದದಾಡೊಡಮೇಂ
ಶಿಖಂಡಿ ತೊ
ಟ್ಟಗೆ ಕೊಳೆ ಬಂದು ಮುಂದೆ
ನಿಲೆ ಸಾವೆನಗಪ್ಪುದು
ನಾಳಿನೊಂದು ಕಾ|
ಳೆಗದೊಳಿದಂ ನರಂಗಱಿಪದೀ
ತೆಱದಿಂ ನೆಗೞ್ದೆಯ್ದೆ ವೀರ ಲ

ಕ್ಷ್ಮಿಗೆ ನೆಲೆಯಾಗು ಪ್ಪೋಗೆನೆ ನೃಪಂ ಪೊಡೆವಟ್ಟು ಮನೋನುರಾಗದಿಂ|| ೩೨ ||

ಪದ್ಯ-೩೨:ಪದವಿಭಾಗ-ಅರ್ಥ:ಜಗದೊಳ್ ಅವಧ್ಯನಂ ಗೆಲಲೆ ಬಾರದು (ಲೋಕದಲ್ಲಿ ಕೊಲ್ಲಲಾಗದವನನ್ನು ಗೆಲ್ಲಲು ಸಾಧ್ಯವಿಲ್ಲ) ಅದು ಆಡೊಡಂ ಏಂ! (ಆದರೆ ತಾನೆ ಏನು?) ಶಿಖಂಡಿ ತೊಟ್ಟಗೆ ಕೊಳೆ ಬಂದು ಮುಂದೆ ನಿಲೆ

(ಶಿಖಂಡಿಯು ಬೇಗನೆ ಮುಂದೆ ಬಂದು ನಿಂತರೆ) ಸಾವು ಎನಗಪ್ಪುದು (ನನಗೆ ಮರಣವಾಗುತ್ತದೆ) ನಾಳಿನ ಒಂದು ಕಾಳೆಗದೊಳು (ನಾಳೆಯ ದಿನದ ಯುದ್ಧದಲ್ಲಿ) ಇದಂ ನರಂಗೆ ಅಱಿಪದೆ ಈ ತೆಱದಿಂ ನೆಗಬ್ದು ಎಯ್ದೆ (ಈ ವಿಷಯವನ್ನು ಅರ್ಜುನನಿಗೆ ತಿಳಿಸದೆ ಮಾಡಿ) ವೀರ ಲಕ್ಷ್ಮಿಗೆ ನೆಲೆಯಾಗು ಪೋಗು ಎನೆ

(ವೀರಲಕ್ಷ್ಮಿಗೆ ಪೂರ್ಣವಾಗಿ ನೆಲೆಯಾಗು ಹೋಗು’ ಎನ್ನಲು,) ನೃಪಂ ಪೊಡೆವಟ್ಟು (ಧರ್ಮರಾಜನು ನಮಸ್ಕಾರ ಮಾಡಿ) ಮನ ಅನುರಾಗದಿಂ (ಮನಸ್ಸಿನ ಸಂತೋಷದಿಂದ -- ಹಿಂತಿರುಗಿದನು)

ಪದ್ಯ-೩೨:ಅರ್ಥ:
ಲೋಕದಲ್ಲಿ ಕೊಲ್ಲಲಾಗದವನನ್ನು ಗೆಲ್ಲಲು ಸಾಧ್ಯವಿಲ್ಲ. ಆದರೆ ತಾನೆ

ಏನು? ನಾಳೆಯ ದಿನದ ಯುದ್ಧದಲ್ಲಿ ಶಿಖಂಡಿಯು ಬೇಗನೆ ಮುಂದೆ ಬಂದು ನಿಂತರೆ ನನಗೆ ಮರಣವಾಗುತ್ತದೆ. ಈ ವಿಷಯವನ್ನು ಅರ್ಜುನನಿಗೆ ತಿಳಿಸದೆ ಮಾಡಿ ವೀರಲಕ್ಷ್ಮಿಗೆ ಪೂರ್ಣವಾಗಿ ನೆಲೆಯಾಗು ಹೋಗು’ ಎಂದನು ಭೀಷ್ಮ. ಧರ್ಮರಾಜನು ಮನಸ್ಸಿನ

ಸಂತೋಷದಿಂದ ನಮಸ್ಕಾರ ಮಾಡಿ ಹಿಂತಿರುಗಿದನು.

ವ|| ಬಂದು ಮಂದರಧರಂಗೆ ತದ್ವೃತ್ತಾಂತಮನೆಲ್ಲಮನಱಪಿ ನಿಶ್ಚಿಂತಮನನಾಗಿ ಪವಡಿಸಿದಾಗಳ್-

ವಚನ:ಪದವಿಭಾಗ-

ಅರ್ಥ:ಬಂದು ಮಂದರಧರಂಗೆ (ಸಮುದ್ರ ಮಥನದಲ್ಲಿ ಮಂದರಗಿರಿಯನ್ನ ಎತ್ತಿಹಿಡಿದ,

ಶ್ರೀಕೃಷ್ಣನಿಗೆ)
ತದ್ವೃತ್ತಾಂತಮನೆಲ್ಲಮನು
ಅಱಿಪಿ (ಆ
ಸಮಾಚಾರವೆಲ್ಲವನ್ನೂ ತಿಳಿಸಿ)
ನಿಶ್ಚಿಂತಮನನಾಗಿ
ಪವಡಿಸಿದಾಗಳ್
(ಚಿಂತೆಯಿಲ್ಲದ ಮನಸ್ಸಿನಿಂದ
ಮಲಗಿದನು)-
ವಚನ:ಅರ್ಥ:ವ|| ಬಂದು
ಶ್ರೀಕೃಷ್ಣನಿಗೆ ಆ
ಸಮಾಚಾರವೆಲ್ಲವನ್ನೂ ತಿಳಿಸಿ

ಚಿಂತೆಯಿಲ್ಲದ ಮನಸ್ಸಿನಿಂದ ಮಲಗಿದನು-

ಚಂ|| ಚಲ ಚಲದಾಂತು ಕಾದುವ ಸುಯೋಧನ ಸಾಧನದೊಡ್ಡುಗಳ್ ಕಲಿ ಲ್ದಲಱಿ ತೆರಳ್ದು ತೂಳ್ದು ಬಿಱುತೋಡೆ ಗುಣಾರ್ಣವನಿಂದಮಾಜಿಯೊಳ್|

ಕೊಲಿಸಿ ಸಮಸ್ತ ಧಾತ್ರಿಯುಮನಾಳಿಪೆವೆಂದುಲಿ

ವಂತೆ ಪಕ್ಕಿಗಳ್ ಚಿಲಿಮಿಲಿಯೆಂಬ ಪೊೞ್ತಿಳೆ ಬಂದುಱದೊಡ್ಡಿದನಂತಕಾತ್ಮಜಂ|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಚಲ ಚಲದಾಂತು ಕಾದುವ ಸುಯೋಧನ ಸಾಧನದ ಒಡ್ಡುಗಳ್ (ಹೆಚ್ಚಿನ ಹಠದಿಂದ ಕಾದುತ್ತಿರುವ ದುರ್ಯೋಧನನ ಸೈನ್ಯದ ಗುಂಪುಗಳು) ಕಟಿಲ್ದು ಅಲಱ

ತೆರಳ್ದು ತೂಳ್ದು (ಕೃಶವಾಗಿ
ಚೆದರಿ ಹೋಗಿ ಒತ್ತರಿಸಲ್ಪಟ್ಟು)
ಬಿಙುತೋಡೆ (ಬೆದರಿ
ಓಡಿಹೋಗಲು)
ಗುಣಾರ್ಣವನಿಂದಂ
ಆಜಿಯೊಳ್ ಕೊಲಿಸಿ
(ಅರ್ಜುನನಿಂದ ಯುದ್ಧದಲ್ಲಿ
ಕೊಲ್ಲಿಸಿ) ಸಮಸ್ತ
ಧಾತ್ರಿಯುಮನು
ಆಳಿಪೆವೆಂದು ಉಲಿವಂತೆ
(ಸಮಸ್ತ ಭೂಮಂಡಲವನ್ನು

ಅವನಿಂದಲೇ ಆಳುವ ಹಾಗೆ
ಮಾಡುತ್ತೇವೆ’ ಎಂದು ಕೂಗುವ
ಹಾಗೆ) ಪಕ್ಕಿಗಳ್
ಚಿಲಿಮಿಲಿಯೆಂಬ ಪೊಟ್ತಿಳೆ
(ಹಕ್ಕಿಗಳು ಚಿಲಿಮಿಲಿಯೆಂದು
ಶಬ್ದಮಾಡುತ್ತಿರುವ
ಹೊತ್ತಿನಲ್ಲಿಯೇ) ಬಂದು
ಉಱದೆ ಒಡ್ಡಿದನು
ಅಂತಕಾತ್ಮಜಂ
(ಧರ್ಮರಾಯನು ಬಂದು

ಸಾವಕಾಶ ಮಾಡದೆ ಬೇಗ ಸೈನ್ಯವನ್ನು ಒಡ್ಡಿದನು.)

ಪದ್ಯ-೩೩:ಅರ್ಥ:ಹೆಚ್ಚಿನ ಹಠದಿಂದ ಕಾದುತ್ತಿರುವ ದುರ್ಯೋಧನನ ಸೈನ್ಯದ ಗುಂಪುಗಳು ಕೃಶವಾಗಿ ಚೆದರಿ ಹೋಗಿ ಒತ್ತರಿಸಲ್ಪಟ್ಟು ಬೆದರಿ ಓಡಿಹೋಗುವಂತೆ ಅರ್ಜುನನಿಂದ ಯುದ್ಧದಲ್ಲಿ ಕೊಲ್ಲಿಸಿ ಸಮಸ್ತ ಭೂಮಂಡಲವನ್ನು

ಅವನಿಂದಲೇ ಆಳುವ ಹಾಗೆ
ಮಾಡುತ್ತೇವೆ’ ಎಂದು ಕೂಗುವ
ಹಾಗೆ ಹಕ್ಕಿಗಳು
ಚಿಲಿಮಿಲಿಯೆಂದು
ಶಬ್ದಮಾಡುತ್ತಿರುವ
ಹೊತ್ತಿನಲ್ಲಿಯೇ
(ಅರುಣೋದಯದಲ್ಲಿಯೇ)
ಧರ್ಮರಾಯನು ಬಂದು
ಸಾವಕಾಶ ಮಾಡದೆ
ಸೈನ್ಯವನ್ನು ಒಡ್ಡಿದನು/
ಯುದ್ಧಕ್ಕೆ ನಿಲ್ಲಿಸಿದನು.

ವ|| ಆಗಳ್ ಕುರುಧ್ವಜಿನಿಯುಮನೇಕ ಶಂಖ ಕಾಹಳ ಭೇರೀ ಪಣಾವ ಝಲ್ಲರೀ ಮೃದಂಗ ತೂರ್ಯಂಗಳಂತಕಾಲಾಂತಕ ವಿಕಟಾಟ್ಟಹಾಸಂಗಳೆಂಬಂತೆ ಮೊಱಗೆ ಮಲೆದು ಬಂದೊಡ್ಡಿ ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಕುರುಧ್ವಜಿನಿಯುಂ (ಆಗ

ಕೌರವ ಸೈನ್ಯವೂ) ಅನೇಕ
ಶಂಖ ಕಾಹಳ ಭೇರೀ ಪಣವ
ಝುಲ್ಲರೀ ಮೃದಂಗ
ತೂರ್ಯಂಗಳ
ಅಂತಕಾಲಾಂತಕ
ವಿಕಟಾಟ್ಟಹಾಸಂಗಳು
ಎಂಬಂತೆ(ವಾದ್ಯಗಳ
ಪ್ರಳಯಕಾಲದ ಯಮನ
ವಿಕಾರವಾದ ನಗುವಿನಂತೆ)
ಮೊಳಗೆ ಮಲೆದು ಬಂದೊಡ್ಡಿ
ನಿಂದಾಗಳ್ (ಶಬ್ದಮಾಡಲು

ಮದಿಸಿ ಬಂದು ಒಡ್ಡಿ ನಿಂತಿತು)-

ವಚನ:ಅರ್ಥ:ಆಗ ಕೌರವ ಸೈನ್ಯವೂ ಅನೇಕ ಶಂಖ, ಕೊಂಬು, ನಗಾರಿ, ಪಣವ, ಜಲ್ಲರಿ, ಮೃದಂಗವೆಂಬ ವಾದ್ಯಗಳ ಪ್ರಳಯಕಾಲದ ಯಮನ ವಿಕಾರವಾದ ನಗುವಿನಂತೆ ಶಬ್ದಮಾಡಲು ಮದಿಸಿ ಬಂದು ಒಡ್ಡಿ ನಿಂತಿತು.

ಕಂ|| ಉಭಯ
ಬಲದರಸುಗಳ್ ರಣ
ರಭಸಂಗಳ್ವೆರಸು ಮುಳಿದು
ಕೆಯ್ವೀಸೆ ಲಯ|
ಕ್ಷುಭಿತ ಜಲನಿಧಿ ನಿನಾದಮ
ನಭಿನಯಿಸಿದುದೊಗೆದು ನೆಗೆದ
ಸಮರಾರಾವಂ|| ೩೪

ಪದ್ಯ-೩೪:ಪದವಿಭಾಗ-ಅರ್ಥ:ಉಭಯ ಬಲದ ಅರಸುಗಳ್ ರಣರಭಸಂಗಳ್ ವೆರಸು ಮುಳಿದು ಕೆಯ್ವೀಸೆ

(ಎರಡು ಸೈನ್ಯದ
ರಾಜರುಗಳೂ
ಯುದ್ಧವೇಗದಿಂದ ಕೂಡಿ
ಕೋಪದಿಂದ ಕೈಬೀಸಲಾಗಿ)
ಲಯಕ್ಷುಭಿತ (ಪ್ರಳಯಕಾಲದ
ಕಲಕಿದ) ಜಲನಿಧಿ
ನಿನಾದಮನು (
ಸಮುದ್ರಧ್ವನಿಯನ್ನು)
ಅಭಿನಯಿಸಿದುಂ
(ಅನುಕರಿಸಿತು.) ಒಗೆದು
ನೆಗೆದ ಸಮರಾರಾವಂ (ಸಮರ

ಆರವಂ-- ಹುಟ್ಟಿ ಚಿಮ್ಮಿದ ಯುದ್ಧದ ಮೊಳಗು)

ಪದ್ಯ-೩೪:ಅರ್ಥ:ಎರಡು ಸೈನ್ಯದ ರಾಜರುಗಳೂ ಯುದ್ಧವೇಗದಿಂದ ಕೂಡಿ ಕೋಪದಿಂದ ಕೈಬೀಸಲಾಗಿ ಆಗ ಹುಟ್ಟಿ ಚಿಮ್ಮಿದ ಯುದ್ಧದ ಮೊಳಗು ಪ್ರಳಯಕಾಲದ ಕಲಕಿದ ಸಮುದ್ರಧ್ವನಿಯನ್ನು ಅನುಕರಿಸಿತು.

ಇಸುವ ಧನುರ್ಧರರಿಂ ಪಾ

ಯಿಸುವ ದಟಿಂಗಳಿನಗುರ್ವು

ಪರ್ವುವಿನಂ ಚೋ|

ದಿಸುವ ರಥಂಗಳಿನೆಂಟುಂ

ದೆಸೆ

ಮಸುಳ್ವಿನಮಿಱಿದುವಾಗಳು

ಭಯಬಲಂಗಳ್|| ೩೫ ||

ಪದ್ಯ-೩೫:ಪದವಿಭಾಗ-ಅರ್ಥ:ಇಸುವ ಧನುರ್ಧರರಿಂ ಪಾಯಿಸುವ ದಟಿಂಗಳಿನ ಅಗುರ್ವು (ಬಾಣ ಪ್ರಯೋಗಮಾಡುವ

ಬಿಲ್ಗಾರರಿಂದಲೂ
ಮುನ್ನುಗ್ಗಿಸುವ
ಸೈನ್ಯಗಳಿಂದಲೂ
ಭಯಂಕರತೆಯು)
ಪರ್ವುವಿನಂ (ಹಬ್ಬುತ್ತಿರಲು)
ಚೋದಿಸುವ ರಥಂಗಳಿಂ
ಎಂಟುಂ ದೆಸೆ (ನಡೆಸುತ್ತಿರುವ
ತೇರುಗಳಿಂದ ಎಂಟು
ದಿಕ್ಕುಗಳೂ) ಮಸುಳ್ವಿನಂ
ಇಱಿದುವು ಆಗಳ್
ಉಭಯಬಲಂಗಳ್

(ಮಂಕಾಗುತ್ತಿರಲು ಎರಡು ಸೈನ್ಯಗಳೂ ಯುದ್ಧ ಮಾಡಿದುವು.)

ಪದ್ಯ-೩೫:ಅರ್ಥ:ಬಾಣ ಪ್ರಯೋಗಮಾಡುವ ಬಿಲ್ಗಾರರಿಂದಲೂ ಮುನ್ನುಗ್ಗಿಸುವ ಸೈನ್ಯಗಳಿಂದಲೂ ಭಯಂಕರತೆಯು ಹಬ್ಬುತ್ತಿರಲು ನಡೆಸುತ್ತಿರುವ ತೇರುಗಳಿಂದ ಎಂಟು

ದಿಕ್ಕುಗಳೂ ಮಂಕಾಗುತ್ತಿರಲು ಎರಡು ಸೈನ್ಯಗಳೂ ಯುದ್ಧ ಮಾಡಿದುವು.

ಅೞಿದೞ್ಗಿದ ಕರಿ ಘಟೆಗಳ ಬಳಗದಿನುಚ್ಚಳಿಸಿ ಮೊರೆವ ನೆತ್ತರ ತೆರೆಗಳ್| ಸುೞಿಸುೞಿದೊಡವರಿದವು ಕ ಲ್ವೞಿಯೊಳ್ ಭೋರ್ಗರೆದು ಪರಿವ ತೊಗಳ ತೆಱದಿಂ|| ೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಅೞಿದು ಅೞ್ಗಿದ ಕರಿ

ಘಟೆಗಳ ಬಳಗದಿಂ ಉಚ್ಚಳಿಸಿ
(ಸತ್ತು ನಾಶವಾದ ಆನೆಗಳ
ರಾಶಿಯಿಂದ ಮೇಲಕ್ಕೆ ಹಾರಿ)
ಮೊರೆವ ನೆತ್ತರ ತೆರೆಗಳ್
(ಶಬ್ದಮಾಡುತ್ತಿರುವ ರಕ್ತದ
ಅಲೆಗಳು) ಸುೞಿಸುೞಿದು
ಒಡವರಿದವು (ಸುಳಿಸುಳಿದು
ಒಡನೆ ಹರಿದುವು)
ಕಲ್ಪುೞಿಯೊಳ್ ಭೋರ್ಗರೆದು
ಪರಿವ ತೊಗಳ
ತೆಱದಿಂ(ಭೋರೆಂದು ಶಬ್ದ

ಮಾಡುತ್ತ ಹರಿಯುವ ನದಿಗಳ ರೀತಿಯಿಂದ)

ಪದ್ಯ-೩೬:ಅರ್ಥ: ಸತ್ತು ನಾಶವಾದ ಆನೆಗಳ ರಾಶಿಯಿಂದ ಮೇಲಕ್ಕೆ ಹಾರಿ ಶಬ್ದಮಾಡುತ್ತಿರುವ ರಕ್ತದ ಅಲೆಗಳು ಸುಳಿಸುಳಿದು ಕಲ್ಲುದಾರಿಯಲ್ಲಿ ಭೋರೆಂದು ಶಬ್ದ ಮಾಡುತ್ತ ಹರಿಯುವ ನದಿಗಳ ರೀತಿಯಿಂದ ಒಡನೆ ಹರಿದುವು.

ವ|| ಅಂತು
ಚಾತುರ್ದಂತಮೊಂದೊಂದ
ರೊಳೋರಂತೆ
ನಡುವಗಲ್ವರುಂ ಕಾದುವುದುಂ
ನಾವಿಂದಿನನುವರಮನನಿಬರು
ಮೊಂದಾಗಿ ಭೀಷ್ಮರೊಳ್
ಕಾದುವಮೆಂದು ಸಮಕಟ್ಟಿ
ಧರ್ಮಪುತ್ರಂ
ಕದನತ್ರಿಣೇತ್ರನಂ
ಮುಂದಿಟ್ಟುಂ
ಸಮಸ್ತಬಲಂಬೆರಸು ಕಾದುವ

ಸಮಕಟ್ಟಂ ದುಯೋ್ೕ‍ಧನನಱಿದು-

ವಚನ:ಪದವಿಭಾಗ-

ಅರ್ಥ:ಅಂತು ಚಾತುರ್ದಂತಂ ಒಂದೊಂದರೊಳು ಓರಂತೆ (ಚತುರಂಗಬಲವೂ ಒಂದೊಂದು ಒಂದೊಂದರಲ್ಲಿ ಕ್ರಮವಾಗಿ) ನಡುವಗಲ್ವರುಂ ಕಾದುವುದುಂ (ನಡುಹಗಲಿನವರೆಗೆ ಒಂದೇ ಸಮನಾಗಿ ಕಾದಿದುವು) ನಾವು

ಇಂದಿನ ಅನುವರಮನು
ಅನಿಬರುಂ ಒಂದಾಗಿ
ಭೀಷ್ಮರೊಳ್ ಕಾದುವಮೆಂದು
(ಧರ್ಮರಾಜನು ನಾವು
ಭೀಷ್ಮರೊಡನೆ ಇಂದಿನ
ಯುದ್ಧವನ್ನು ಎಲ್ಲರೂ ಒಟ್ಟಿಗೆ
ಸೇರಿ ಕಾದೋಣ ಎಂದು)
ಸಮಕಟ್ಟಿ ಧರ್ಮಪುತ್ರಂ
ಕದನತ್ರಿಣೇತ್ರನಂ
ಮುಂದಿಟ್ಟುಂ (ನಿಷ್ಕರ್ಷಿಸಿ
ಅರ್ಜುನನನ್ನು

ಮುಂದಿಟ್ಟುಕೊಂಡು)
ಸಮಸ್ತಬಲಂ ಬೆರಸು ಕಾದುವ
ಸಮಕಟ್ಟಂ ದುರ್ಯೋಧನನು
ಅಱಿದು (ಸಮಸ್ತಸೈನ್ಯವನ್ನೂ
ಕೂಡಿಸಿದನು.ಇದನ್ನು
ದುರ್ಯೋಧನನನ್ನೂ
ಅರಿತು.)-
ವಚನ:ಅರ್ಥ:ಚತುರಂಗಬಲ
ವೂ ಒಂದೊಂದು
ಒಂದೊಂದರಲ್ಲಿ ಕ್ರಮವಾಗಿ
ನಡುಹಗಲಿನವರೆಗೆ ಒಂದೇ

ಸಮನಾಗಿ ಕಾದಿದುವು.
ಧರ್ಮರಾಜನು ನಾವು
ಭೀಷ್ಮರೊಡನೆ ಇಂದಿನ
ಯುದ್ಧವನ್ನು ಎಲ್ಲರೂ ಒಟ್ಟಿಗೆ
ಸೇರಿ ಕಾದೋಣ ಎಂದು
ನಿಷ್ಕರ್ಷಿಸಿ ಅರ್ಜುನನನ್ನು
ಮುಂದಿಟ್ಟುಕೊಂಡು
ಸಮಸ್ತಸೈನ್ಯವನ್ನೂ
ಕೂಡಿಸಿದನು. ಇದನ್ನು
ದುರ್ಯೋಧನನನ್ನೂ ಅರಿತು-

ಚ|| ಕುರುಬಲಮೆಂಬುದೀ
ಸುರನದೀಜನ
ತೋಳ್ವಲಮೆಂಬ ವಜ್ರ ಪಂ
ಜರದೊಳಗಿರ್ದು ಬಜ್ದಿಪುದು
ಪಾಂಡವ ಸೈನ್ಯಮುಮಿಂದು
ಭೀಷ್ಮರೊ|
ರ್ವರೊಳಿರದಾಂತು
ಕಾದಲವರಂ ಪೆಱಗಿಕ್ಕಿ ಕಡಂಗಿ
ಕಾದಿ ನಿ
ತ್ತರಿಸುವೆನೆಂದು ಪಾಂಡವ
ಬಲಕ್ಕಿದಿರಂ ತಱಿಸಂದು

ತಾಗಿದಂ|| ೩೭ ||

ಪದ್ಯ-೩೭:ಪದವಿಭಾಗ-ಅರ್ಥ:ಕುರುಬಲಮೆಂಬುದು ಈ ಸುರನದೀಜನ ತೋಳ್ವಲಮೆಂಬ ವಜ್ರ ಪಂಜರದೊಳಗಿರ್ದು ಬಟ್ಟಿಪುದು (ಈ ಕೌರವ ಸೈನ್ಯವೆಂಬುದು ಭೀಷ್ಮನ ಬಾಹುಬಲವೆಂಬ ವಜ್ರಪಂಜರದಲ್ಲಿದ್ದು ಬಾಳುತ್ತಿದೆ) ಪಾಂಡವ

ಸೈನ್ಯಮುಂ ಇಂದು ಭೀಷ್ಮರ
ಒರ್ವರೊಳು ಇರದಾಂತು
ಕಾದಲು (ಪಾಂಡವಸೈನ್ಯವು
ಈ ದಿನ ಭೀಷ್ಮರೊಬ್ಬರನ್ನು
ಬಿಡದೆ ಪ್ರತಿಭಟಿಸಿ ಕಾದಲು
ಯೋಚಿಸಿದೆ) ಅವರಂ
ಪೆಱಗಿಕ್ಕಿ ಕಡಂಗಿ ಕಾದಿ
(ಅವರನ್ನು ಈ ದಿನ ನಾನು
ಹಿಂದಿಕ್ಕಿ (ರಕ್ಷಿಸಿ)
ಉತ್ಸಾಹದಿಂದ ಕಾದಿ/
ಹೋರಾಡಿ) ನಿತ್ತರಿಸುವೆನೆಂದು

(ನಿಭಾಯಿಸುತ್ತೇನೆ' ಎಂದು) ಪಾಂಡವ ಬಲಕ್ಕೆ ಇದಿರಂ ತಱಿಸಂದು ತಾಗಿದಂ (ಪಾಂಡವಸೈನ್ಯಕ್ಕೆ ಇದಿರಾಗಿ ಹತ್ತಿರಬಂದು ತಾಗಿದನು (ಪ್ರತಿಭಟಿಸಿದನು))

ಪದ್ಯ-೩೭:ಅರ್ಥ:'ಈ ಕೌರವ ಸೈನ್ಯವೆಂಬುದು ಭೀಷ್ಮನ ಬಾಹುಬಲವೆಂಬ ವಜ್ರಪಂಜರದಲ್ಲಿದ್ದು ಬಾಳುತ್ತಿದೆ. ಪಾಂಡವಸೈನ್ಯವು

ಈ ದಿನ ಭೀಷ್ಮರೊಬ್ಬರನ್ನು ಬಿಡದೆ ಪ್ರತಿಭಟಿಸಿ ಕಾದಲು ಯೋಚಿಸಿದೆ. ಆದುದರಿಂದ ಅವರನ್ನು ಈ ದಿನ ನಾನು ಹಿಂದಿಕ್ಕಿ (ರಕ್ಷಿಸಿ) ಉತ್ಸಾಹದಿಂದ ಕಾದಿ ನಿಭಾಯಿಸುತ್ತೇನೆ' ಎಂದು ದುರ್ಯೋಧನನು ನಿಶ್ಚಯಿಸಿ ಪಾಂಡವಸೈನ್ಯಕ್ಕೆ ಇದಿರಾಗಿ ಹತ್ತಿರಬಂದು ತಾಗಿದನು (ಪ್ರತಿಭಟಿಸಿದನು).

ವ|| ಅಂತು ತಾಗುವುದುಂ

ಸಾತ್ಯಕಿ ಕೃತವರ್ಮನೊಳ್

ಯುಷ್ಠಿರಂ ಶಲ್ಯನೊಳ್

ಸೌಭದ್ರನಶ್ವತ್ಥಾಮನೊಳ್

ಸಹದೇವಂ ಶಕುನಿಯೊಳ್

ನಕುಲಂ ಚಿತ್ರಸೇನನೊಳ್

ಚೇಕಿತಾನಂ ಸೈಂಧವನೊಳ್

ಘಟೋತ್ಕಚಂ ಕೃಪನೊಳ್

ಭೀಮಸೇನಂ ಕೌರವನೊಳ್

ಕಳಿಂಗರಾಜಂ

ಪಾಂಚಾಳರಾಜನೊಳ್

ಅತಿರಥಮಥನಂ ದ್ರೋಣಾಚಾರ್ಯರೊಳ್ ಅವರವರೊಳದಿರದಾಂತಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ತಾಗುವುದುಂ (ಹಾಗೆ ಎದುರುಬಿದ್ದಾಗ) ಸಾತ್ಯಕಿ ಕೃತವರ್ಮನೊಳ್, ಯುಷ್ಠಿರಂ ಶಲ್ಯನೊಳ್, ಸೌಭದ್ರನು ಅಶ್ವತ್ಥಾಮನೊಳ್, ಸಹದೇವಂ ಶಕುನಿಯೊಳ್,

ನಕುಲಂ ಚಿತ್ರಸೇನನೊಳ್,
ಚೇಕಿತಾನಂ ಸೈಂಧವನೊಳ್,
ಘಟೋತ್ಕಚಂ ಕೃಪನೊಳ್,
ಭೀಮಸೇನಂ ಕೌರವನೊಳ್,
ಕಳಿಂಗರಾಜಂ
ಪಾಂಚಾಳರಾಜನೊಳ್,
ಅತಿರಥಮಥನಂ
ದ್ರೋಣಾಚಾರ್ಯರೊಳ್
(ಅರ್ಜುನನು
ದ್ರೋಣಾಚಾರ್ಯರೊಡನೆ
ಯೂ ಪರಸ್ಪರ ಹೆದರದೆ

ಪ್ರತಿಭಟಿಸಿದರು.)ಅವರವರೊ ಳ್ ಅದಿರದೆ ಆಂತಾಗಳ್ (ಪರಸ್ಪರ ಹೆದರದೆ ಪ್ರತಿಭಟಿಸಿದರ. ಆಗ) -

ವಚನ:ಅರ್ಥ:ಹಾಗೆ ಎದುರುಬಿದ್ದಾಗ ಸಾತ್ಯಕಿಯು ಕೃತವರ್ಮನೊಡನೆಯೂ ಧರ್ಮರಾಜನು ಶಲ್ಯನೊಡನೆಯೂ ಅಭಿಮನ್ಯುವು ಅಶ್ವತ್ಥಾಮನೊಡನೆಯೂ

ಸಹದೇವನು

ಶಕುನಿಯೊಡನೆಯೂ

ನಕುಲನು

ಚಿತ್ರಸೇನನೊಡನೆಯೂ

ಚೇಕಿತಾನನು

ಸೈಂಧವನೊಡನೆಯೂ

ಘಟೋತ್ಕಚನು

ಕೃಪನೊಡನೆಯೂ

ಭೀಮಸೇನನು

ದುರ್ಯೋಧನನೊಡನೆಯೂ

ಕಳಿಂಗರಾಜನು

ದ್ರುಪದನೊಡನೆಯೂ ಅರ್ಜುನನು ದ್ರೋಣಾಚಾರ್ಯರೊಡನೆಯೂ ಪರಸ್ಪರ ಹೆದರದೆ ಪ್ರತಿಭಟಿಸಿದರು.

ಚಂ||

ನಡುವಿಡುವುರ್ಚುವಾರ್ದರಿವ
ನೇರ್ವ ಪಳಂಚುವ ಪೋರ್ವ ಬಾಣದಿಂ
ದುಡಿದು ಸಿಡಿಲ್ದು ಸೂಸಿಯೆ
ಕಟಿಲ್ದು ಬಟಿಲ್ದು ಸಡಿಲ್ದು

ಜೋಲ್ದು ನೇ|

ಲ್ದುಡಿದ ನೊಗಂ ಧ್ವಜಂ ಪಲಗೆ

ಕೀಲ್ ಕವರಚ್ಚು ತುರಂಗಮಂ

ರಥಂ

ಕಿಡೆ

ಕವರಿಂದಗುರ್ವನೊಳಕೊಂಡಿ

ರೆ ತಳ್ತಿರ್ದಿದರ್ ಮಹಾರಥರ್||

೩೮ ||

ಪದ್ಯ-೩೮:ಪದವಿಭಾಗ-

ಅರ್ಥ:ನಡುವ ಇಡುವ

ಉರ್ಚುವ ಆರ್ದು ಅರಿವ

(ಬಾಣಗಳನ್ನು ನಾಟುವ,
ಬೀಸಿ, ಎಸೆಯುವ, ಚುಚ್ಚುವ,
ಶಬ್ದಮಾಡಿ ಕತ್ತರಿಸುವ,)
ನೇರ್ವ ಪಳಂಚುವ ಪೋರ್ವ
(ತುಂಡುಮಾಡುವ, ಪ್ರತಿಭಟಿಸಿ
ತಗಲುವ ಹೋರಾಡುತ್ತಿರುವ)
ಬಾಣದಿಂದ ಉಡಿದು ಸಿಡಿಲ್ದು
ಸೂಸಿಯೆ ಕಟಿಲ್ದು ಬಟಿಲ್ದು
ಸಡಿಲ್ದು ಜೋಲ್ದು
(ಬಾಣಗಳಿಂದ ಮುರಿದು
ಸಿಡಿದು ಚೆಲ್ಲಿ ಶಿಥಿಲವಾಗಿ

ಜೋತು ಬಿದ್ದು ನೇತಾಡಿ)
ನೇಲ್ದುಡಿದ ನೊಗಂ ಧ್ವಜಂ
ಪಲಗೆ ಕೀಲ್ ಕವರಚ್ಚು
(ತುಂಡರಿಸಿದ ನೊಗ, ಬಾವುಟ,
ಹಲಗೆ, ಕೀಲು, ಕವಲುಮರ,
(ತೇರಿನ) ಅಚ್ಚು) ತುರಂಗಮಂ
ರಥಂಕಿಡೆ ((ತೇರಿನ) ಅಚ್ಚು,
ಕುದುರೆ, ತೇರು ಇವುಗಳು
ನಾಶವಾಗಲು) ಕವರಿಂದ
ಉಗುರ್ವಂ ಒಳಕೊಂಡಿರೆ
(ಕೊಳ್ಳೆಯಿಂದ ಭಯವನ್ನು

ಹೊಂದಿರಲು,) ತಳ್ತು
ಇಱಿದರ್ ಮಹಾರಥರ್
(ಮಹಾರಥರು ಒಟ್ಟುಗೂಡಿ
ಭಯಂಕರವಾಗಿ
ಯುದ್ಧಮಾಡಿದರು.)

ಪದ್ಯ-೩೮:ಅರ್ಥ:

(ಬಾಣಗಳನ್ನು) ನಾಟುವ,
ಬೀಸಿ, ಎಸೆಯುವ, ಚುಚ್ಚುವ,
ಶಬ್ದಮಾಡಿ ಕತ್ತರಿಸುವ,
ತುಂಡುಮಾಡುವ, ಪ್ರತಿಭಟಿಸಿ
ತಗಲುವ ಹೋರಾಡುತ್ತಿರುವ,

ಬಾಣಗಳಿಂದ ಮುರಿದು
ಸಿಡಿದು ಚೆಲ್ಲಿ ಶಿಥಿಲವಾಗಿ
ಜೋತು ಬಿದ್ದ ನೇತಾಡಿ
ತುಂಡರಿಸಿದ ನೊಗ, ಬಾವುಟ,
ಹಲಗೆ, ಕೀಲು, ಕವಲುಮರ,
(ತೇರಿನ) ಅಚ್ಚು, ಕುದುರೆ,
ತೇರು ಇವುಗಳು ನಾಶವಾಗಲು
ಮಹಾರಥರು ಒಟ್ಟುಗೂಡಿ
ಭಯಂಕರವಾಗಿ
ಯುದ್ಧಮಾಡಿದರು.

ವ|| ಅಂತು ಕಿಡಿಗುಟ್ಟಿದಂತೆ ತಳ್ತಿಱಿಯೆ ಜಗದೇಕಮಲ್ಲಂಗೆ ಮಾರ್ಮಲೆಯಲಾಱದೆ ಕುರುಬಲಮೆಲ್ಲಮೊಲ್ಲನುಲಿದೋಡಿ ಭೀಷ್ಮರ ಮಯಂ ಪೊಕ್ಕ್ಯಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಕಿಡಿಗುಟ್ಟಿದಂತೆ ತಳ್ತಿಱಿಯೆ (ಬೆಂಕಿಯ ಕಿಡಿಯು ಚೆಲ್ಲುವ ಹಾಗೆ ಜಗದೇಕಮಲ್ಲನಾದ

ಅರ್ಜುನನು ಸಮೀಪಿಸಿ
ಯುದ್ಧಮಾಡುತ್ತಿರಲು)
ಜಗದೇಕಮಲ್ಲಂಗೆ
ಮಾರ್ಮಲೆಯಲಾಱದೆ
(ಅವನನ್ನು
ಪ್ರತಿಭಟಿಸಲಾರದೆ)
ಕುರುಬಲಂ ಎಲ್ಲಂ ಒಲ್ಲನೆ
ಉಲಿದು ಓಡಿ
(ಕೌರವಸೈನ್ಯವೆಲ್ಲವೂ ಮೆಲ್ಲನೆ
ಕೂಗಿಕೊಂಡು ಓಡಿ) ಭೀಷ್ಮರ
ಮಯಂ ಪೊಕ್ಕಾಗಳ್ ()-

ವಚನ:ಅರ್ಥ:ಬೆಂಕಿಯ ಕಿಡಿಯು ಚೆಲ್ಲುವ ಹಾಗೆ ಜಗದೇಕಮಲ್ಲನಾದ ಅರ್ಜುನನು ಸಮೀಪಿಸಿ ಯುದ್ಧಮಾಡುತ್ತಿರಲು, ಅವನನ್ನು ಪ್ರತಿಭಟಿಸಲಾರದೆ ಕೌರವಸೈನ್ಯವೆಲ್ಲವೂ ಮೆಲ್ಲನೆ ಕೂಗಿಕೊಂಡು ಓಡಿ ಭೀಷ್ಮರ ಮರೆಯನು ಹೊಕ್ಕಾಗ-

ಕಂ|| ಧವಳ ಹಯಂ ಧವಳ ರಥಂ

ಧವಳೋಷ್ಣೀಷಂ ಶಶಾಂಕ

ಸಂಕಾಶ ಯಶೋ|

ಧವಳಿತ ಭುವನಂ ತಾಗಿದ

ನವಯವದಿಂ ಬಂದು

ಧರ್ಮತನಯನ

ಬಲದೋಳ್|| ೩೯ ||

ಪದ್ಯ-೩೯:ಪದವಿಭಾಗ-ಅರ್ಥ: ಧವಳ ಹಯಂ ಧವಳ ರಥಂ (ಬಿಳಿಯ ಕುದುರೆ, ಬಿಳಿಯ ರಥವುಳ್ಳವನು,) ಧವಳೋಷ್ಣೀಷಂ (ಧವಳ-

ಬಿಳಿಯ ಉಷ್ಣೀಷಂ- ಪೇಟ?:
ಬಿಳಿಯ
ತಲೆಯುಡಿಗೆಯುಳ್ಳವನು)
ಶಶಾಂಕ ಸಂಕಾಶ
ಯಶೋಧವಳಿತ ಭುವನಂ (
ಚಂದ್ರನ ಹೋಲಿಕೆಯ ಬಿಳಿ-
ಶುಭ್ರ ಯಶಸ್ಸಿನಿಂದ ಕೂಡಿದ
ಲೋಕದಂತಿರುವ ಭೀಷ್ಮನು)
ತಾಗಿದನು ಅವಯವದಿಂ
ಬಂದು ಧರ್ಮತನಯನ
ಬಲದೋಳ್ (ಧರ್ಮರಾಜನ

ಸೈನ್ಯದೊಡನೆ ಕಾದಲು ಬಂದನು.)

ಪದ್ಯ-೩೯:ಅರ್ಥ:ಬಿಳಿಯ ಕುದುರೆ, ಬಿಳಿಯ ರಥವುಳ್ಳವನು, ಬಿಳಿಯ ತಲೆಯುಡಿಗೆಯುಳ್ಳವನು, ಚಂದ್ರನ ಹೋಲಿಕೆಯ ಬಿಳಿ-ಶುಭ್ರ ಯಶಸ್ಸಿನಿಂದ ಕೂಡಿದ ಲೋಕದಂತಿರುವ ಭೀಷ್ಮನು ಧರ್ಮರಾಜನ ಸೈನ್ಯದೊಡನೆ ಕಾದಲು ಬಂದನು.

ವ|| ಅಂತು ತಾಗಿದ
ಸಿಂಧುನಂದನನ ಕೋಪಶಿಖಿ
ಶಿಖಾಕಳಾಪಂಗಳೊಳ್
ಪುಡುಪುಡನೞ್ಗಿ
ಸಾಯಲೆಂದು ಪಾಯ್ವ
ಪತಂಗಂಗಳಂತೆ ಸೋಮಕ
ಶ್ರೀಜಯ ಪ್ರಮುಖ
ನಾಯಕರೊಂದಕ್ಷೋಹಿಣೀ
ಬಲಂಬೆರಸು
ಭರಂಗೆಯ್ದಾಂತೊಡೆ-

ವಚನ:ಪದವಿಭಾಗ-ಅರ್ಥ:ಅಂತು ತಾಗಿದ ಸಿಂಧುನಂದನನ ಕೋಪಶಿಖಿ (ಭೀಷ್ಮನ ಕೋಪಾಗ್ನಿಜ್ವಾಲೆಯ) ಶಿಖಾಕಳಾಪಂಗಳೊಳ್ (ಸುಳಿಗಳ ಸಮೂಹದಲ್ಲಿ) ಪುಡುಪುಡನೆ ಅೞ್ಗಿ (ಬಿಸಿಬಿಸಿಯಾಗಿ ಬೆಂದು) ಸಾಯಲೆಂದು ಪಾಯ್ವ ಪತಂಗಂಗಳಂತೆ

(ಸಾಯಬೇಕೆಂದು ಹಾಯುವ
‘ದೀಪದ ಹುಳುಗಳ ಹಾಗೆ)
ಸೋಮಕ ಶ್ರೀಜಯ ಪ್ರಮುಖ
ನಾಯಕರ ಒಂದು
ಅಕ್ಷೋಹಿಣೀ ಬಲಂಬೆರಸು (
ಶ್ರೀಜಯನೇ ಮೊದಲಾದ
ನಾಯಕರು ಒಂದಕ್ಷೋಹಿಣೀ
ಸೈನ್ಯದಿಂದೊಡಗೂಡಿ)
ಭರಂಗೆಯ್ದು ಆಂತೊಡೆ
(ವೇಗವಾಗಿ ಬಂದು ಆಭರ್ಟಿಸಿ
ಮುತ್ತಿದಾಗ)-

ವಚನ:ಅರ್ಥ:ಭೀಷ್ಮನ ಕೋಪಾಗ್ನಿಜ್ವಾಲೆಯ ಸುಳಿಗಳ ಸಮೂಹದಲ್ಲಿ ಬಿಸಿಬಿಸಿಯಾಗಿ ಬೆಂದು ನಾಶವಾಗಿ ಸಾಯಬೇಕೆಂದು ಹಾಯುವ ‘ದೀಪದ ಹುಳುಗಳ ಹಾಗೆ ಸೋಮಕ ಶ್ರೀಜಯನೇ ಮೊದಲಾದ ನಾಯಕರು ಒಂದಕ್ಷೋಹಿಣೀ ಸೈನ್ಯದಿಂದೊಡಗೂಡಿ

ವೇಗವಾಗಿ ಬಂದು ಆಭರ್ಟಿಸಿ ಮುತ್ತಿದಾಗ.

ಮ|| ಶರಸಂಧಾನದ ಬೇಗಮಂಬುಗಳನಂಬೀಂಬಂತೆ ಮೇಣಾಂಬಿನಾ ಗರಮೆಂಬಂತೆನೆ ಪಾಯ್ವರಾತಿ ಶರ ಸಂಘಾತಂಗಳಂ ನುರ್ಗಿನೇ|| ದರ್ಗರಿದಟ್ಟುಂಬರಿಗೊಂಡು ಕೂಡೆ ಕಡಿದಂತಾ ಸೈನ್ಯಮಂ ಪರ್ವಿ ಗೋ

ಟ್ಮರಿಗೊಂಡುರ್ವಿದುವಾ ರಸಾತಳಮುಮಂ ಗಾಂಗೇಯನಸ್ತ್ರಾಳಿಗಳ್|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ಶರಸಂಧಾನದ ಬೇಗಂ ಅಂಬುಗಳನು ಅಂಬು ಈಂಬಂತೆ (ಭೀಷ್ಮನ ಬಾಣಪ್ರಯೋಗಮಾಡುವ ವೇಗವು ಬಾಣಗಳು ಬಾಣಗಳನ್ನು ಹೆರುತ್ತಿರುವ

ಹಾಗೆ) ಮೇಣಂಬಿನ
ಆಗರಮೆಂಬಂತೆ ಎನೆ
(ಬಾಣಗಳ ಅಕರದಂತಿರಲು)
ಪಾಯ್ವ ಅರಾತಿ ಶರ
ಸಂಘಾತಂಗಳಂ ನುರ್ಗಿ (ಆ
ಭೀಷ್ಮನ ಬಾಣಗಳು ಹಾರಿ
ಬರುತ್ತಿರುವ ಶತ್ರುಗಳ
ಬಾಣಸಮೂಹವನ್ನು
ಪುಡಿಮಾಡಿ) ನೇರ್ದು
(ಕತ್ತರಿಸಿ,) ಅರಿದು ಅಟ್ಟು
ಅಂಬರಿಗೊಂಡು (ನೇರವಾಗಿ

ಕತ್ತರಿಸಿ, ತುಂಡುಮಾಡಿ,
ಹಿಂಬಾಲಿಸಿ ಓಡಿಸಿ,) ಕೂಡೆ
ಕಡಿದಂತಾ ಸೈನ್ಯಮಂ ಪರ್ವಿ
(ಕೂಡಲೆ ಆ ಸೈನ್ಯವನ್ನು
ಆವರಿಸಿ) ಗೋಟ್ಮರಿಗೊಂಡು
ಉರ್ವಿದುವು (ಕತ್ತನ್ನು ಕತ್ತರಿಸಿ
-- ತುಂಬಿದುವು) ಆ
ರಸಾತಳಮುಮಂ
ಗಾಂಗೇಯನ ಅಸ್ತ್ರಾಳಿಗಳ್
(ಪಾತಾಳವನ್ನು ತುಂಬಿದುವು

ಭೀಷ್ಮನ ಬಾಣಗಳ ಸಾಲುಗಳು)

ಪದ್ಯ-೪೦:ಅರ್ಥ: ಭೀಷ್ಮನ ಬಾಣಪ್ರಯೋಗಮಾಡುವ ವೇಗವು ಬಾಣಗಳು ಬಾಣಗಳನ್ನು ಹೆರುತ್ತಿರುವ ಹಾಗೆ, ಮತ್ತು ಬಾಣಗಳ ಅಕರದಂತಿರಲು ಆ ಭೀಷ್ಮನ ಬಾಣಗಳು ಹಾರಿ ಬರುತ್ತಿರುವ ಶತ್ರುಗಳ ಬಾಣಸಮೂಹವನ್ನು ಪುಡಿಮಾಡಿ ನೇರವಾಗಿ

ಕತ್ತರಿಸಿ, ತುಂಡುಮಾಡಿ, ಹಿಂಬಾಲಿಸಿ, ಓಡಿಸಿ, ಆಗಲೇ ಕತ್ತರಿಸಿದಂತೆ, ಕೂಡಲೆ ಆ ಸೈನ್ಯವನ್ನು ಆವರಿಸಿ ಕತ್ತನ್ನು ಕತ್ತರಿಸಿ ಭೀಷ್ಮನ ಬಾಣಗಳ ಸಾಲುಗಳು ಪಾತಾಳವನ್ನು ತುಂಬಿದುವು

ವ|| ಅಂತು ಭೀಷ್ಮಂ ಗ್ರೀಷ್ಮಕಾಲದಾದಿತ್ಯನಂತೆ ಕಾಯ್ದಂತಕಾಲದಂತಕನಂತೆ ಕೆಳರ್ದು

ವಿಳಯಕಾಲಮೇಘದಂತೆ ಮೊೞಗಿ ಮಹಾಪ್ರಳಯಭೈರವನಂತೆ ಮಸಗಿ ಪಯಿಂಭಾಸಿರ್ವರ್ ಮಕುಟಬದ್ಧರಂ ಕೊಂದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಭೀಷ್ಮಂ ಗ್ರೀಷ್ಮಕಾಲದ ಆದಿತ್ಯನಂತೆ ಕಾಯ್ದು ಅಂತಕಾಲದ ಅಂತಕನಂತೆ ಕೆಳರ್ದು

(ಭೀಷ್ಮನು ಬೇಸಿಗೆಯ ಸೂರ್ಯನಂತೆ ಕೆರಳಿ, ಪ್ರಳಯಕಾಲದ ಯಮನಂತೆ ಸಿಟ್ಟಾಗಿ) ವಿಳಯಕಾಲಮೇಘದಂತೆ ಮೊಳಗಿ (ವಿಳಯಕಾಲದ ಮೋಡದಂತೆ ಶಬ್ದಮಾಡಿ) ಮಹಾಪ್ರಳಯಭೈರವನಂತೆ ಮಸಗಿ (ಮಹಾಪ್ರಳಯಭೈರವನಂತೆ ಕೆರಳಿ) ಪಯಿಂಛಾಸಿರ್ವರ್

ಮಕುಟಬದ್ಧರಂ ಕೊಂದಾಗಳ್
(ಹತ್ತು ಸಾವಿರ ರಾಜರನ್ನು
ಕೊಂದನು. ಆಗ)-
ವಚನ:ಅರ್ಥ:ಭೀಷ್ಮನು
ಬೇಸಿಗೆಯ ಸೂರ್ಯನಂತೆ
ಕೆರಳಿ, ಪ್ರಳಯಕಾಲದ
ಯಮನಂತೆ ಸಿಟ್ಟಾಗಿ,
ವಿಳಯಕಾಲದ ಮೋಡದಂತೆ
ಶಬ್ದಮಾಡಿ,
ಮಹಾಪ್ರಳಯಭೈರವನಂತೆ

ಕೆರಳಿ ಹತ್ತು ಸಾವಿರ ರಾಜರನ್ನು ಕೊಂದನು. ಆಗ-

ಚಂ||

ಮಣಿಮಕುಟಾಳಿಗಳ್ವೆರಸುರುಳ್ದ ನರೇಂದ್ರಶಿರಂಗಳೊಳ್ಬಣಾಮಣಿಗಳ ದೀಪ್ತಿಗಳ್ ಬೆಳಗೆ ಧಾತ್ರಿಯನೊಯ್ಯನೆ ಕಂಡಿಮಾಡಿ ಕಣ್|

ತಣಿವಿನಮಂದು ನಿಂದಿಱಿದ ಕೊಳ್ಗುಳನಂ ನಡೆನೋಟ್ಟಿಹೀಂದ್ರರೊಳ್

ಸೆಣಸಿದುವೆಂದೊಡೇವೊಗಳ್ವು ದೇರ್ವೆಸನಂ ಸುರಸಿಂಧುಪುತ್ರನಾ|| ೪೧||

ಪದ್ಯ-೪೧:ಪದವಿಭಾಗ-

ಅರ್ಥ:ಮಣಿಮಕುಟಾಳಿಗಳ್ವೆರಸು ಉರುಳ್ದ (ರತ್ನಖಚಿತವಾದ ಕಿರೀಟಗಳ ಸಮೂಹದೊಡನೆ ಉರುಳಿದ) ನರೇಂದ್ರಶಿರಂಗಳೊಳು (ಚಕ್ರವರ್ತಿಗಳ ತಲೆಗಳ ಬಳಿ) ಫಣಾಮಣಿಗಳ ದೀಪ್ತಿಗಳ್

ಬೆಳಗೆ (ಸರ್ಪಗಳ ಹೆಡೆಯ
ರತ್ನಗಳ ಕಾಂತಿಯು ಬೆಳಗಲು)
ಧಾತ್ರಿಯನು ಒಯ್ಯನೆ ಕಂಡಿ
ಮಾಡಿ ಕಣ್ ತಣಿವಿನಮುಂದು
(ಭೂಮಿಯನ್ನು ನಿಧಾನವಾಗಿ
ರಂಧ್ರಮಾಡಿಕೊಂಡು
ಪಾತಾಳಲೋಕದಿಂದ ಬಂದು
ಕಣ್ಣು ತೃಪ್ತಿಯಾಗುವಷ್ಟು)
ನಿಂದು ಇಱಿದ ಕೊಳ್ಗುಳನಂ
(ಆ ದಿನದ ಹೋರಾಡಿದದ
ಯುದ್ಧವನ್ನು) ನಡೆ ನೋಱ್ಪಿ

ಅಹೀಂದ್ರರೊಳ್
ಸೆಣಸಿದುವೆಂದೊಡೆ
(ನೋಡಬೇಕೆಂಬ
ಕುತೂಹಲದಿಂದ ನೋಡಲು
ಸ್ಪರ್ಧಿಸಿದವು ಎಂದರೆ)
ಏವೊಗಳ್ವುದು (ಏನೆಂದು
ಹೊಗಳುವುದು) ಏರ್ವೆಸನಂ
(ಯುದ್ಧಕಾರ್ಯವನ್ನು)
ಸುರಸಿಂಧುಪುತ್ರನಾ
(ಭೀಷ್ಮನ)

ಪದ್ಯ-೪೧:ಅರ್ಥ:ರತ್ನಖಚಿತ ವಾದ ಕಿರೀಟಗಳ ಸಮೂಹದೊಡನೆ ಉರುಳಿದ ಚಕ್ರವರ್ತಿಗಳ ತಲೆಗಳ ಬಳಿ ಆ ದಿನದ ಹೋರಾಡಿದದ ಯುದ್ಧವನ್ನು ನೋಡಬೇಕೆಂಬ ಕುತೂಹಲದಿಂದ ನೋಡಲು ಸ್ಪರ್ಧಿಸಿದವು ಎಂದರೆ ಭೂಮಿಯನ್ನು ನಿಧಾನವಾಗಿ ರಂಧ್ರಮಾಡಿಕೊಂಡು ಪಾತಾಳಲೋಕದಿಂದ ಬಂದು

ಕಣ್ಣು ತೃಪ್ತಿಯಾಗುವಷ್ಟು
ಇಣಿಕಿ ನೋಡುತ್ತಿರುವ
ಸರ್ಪಗಳ ಹೆಡೆಯ ರತ್ನಗಳ
ಕಾಂತಿಯನ್ನೂ ಸ್ಪರ್ಶಿಸುವಂತಿತ್ತು
ಎನ್ನುವಾಗ ಭೀಷ್ಮನ
ಯುದ್ಧಕಾರ್ಯವನ್ನು ಏನೆಂದು
ಹೊಗಳುವುದು!

ವ|| ಅಂತ
ಸೋಮಕಬಲಮೆಲ್ಲಮಂ
ಪೇಟಿ ಪೆಸರಿಲ್ಲದಂತು
ಕೊಂದು ಶ್ರೀ

ಜಯಬಲಕ್ಕಪಜಯಮಾಗೆ
ಕೊಂದುಮೋಡಿಸಿಯುಮಿಕ್ಕಿ
ಗೆಲ್ದ ಮಲ್ಲನಂತಿರ್ದಾಗಳ್
ಜಗದೇಕಮಲ್ಲಂ ಮೊದಲಾಗೆ
ವಿರಾಟ ವಿರಾಟಜ ದ್ರುಪದ
ದ್ರುಪದಜ ಚೇಕಿತಾನ
ಯುಧಾಮನ್ಯೂತ್ತಮೋಜಸ್ಸೌ
ಭದ್ರ ಘಟೋತ್ಕಚ ನಕುಲ
ಸಹದೇವ ಸಾತ್ಯಕಿ
ಪಂಚಪಾಂಡವ
ಪ್ರಮುಖನಾಯಕರೆಲ್ಲರುಂಬೆರ

ಸು ಧರ್ಮಪುತ್ರಂ ಶಿಖಂಡಿಯಂ ಮುಂದಿಟ್ಟುಕೊಂಡು ಬಂದು ಪೇಂಕುಳಿಗೊಂಡ ಸಿಂಹಮಂ ಮುತ್ತುವಂತೆ ಸುತ್ತಿ ಮುತ್ತಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಸೋಮಕಬಲಮೆಲ್ಲಮಂ ಪೇೞ್ ಪೆಸರಿಲ್ಲದಂತು ಕೊಂದು (ಹಾಗೆ ಸೋಮಕ ಸೈನ್ಯವೆಲ್ಲವನ್ನೂ ಹೇಳಲು

ಹೇಸರಿಲ್ಲದ ಹಾಗೆ ಕೊಂದು)
ಶ್ರೀ ಜಯಬಲಕ್ಕೆ
ಅಪಜಯಮಾಗೆ ಕೊಂದುಂ
ಓಡಿಸಿಯುಂ ಇಕ್ಕಿ
(ಶ್ರೀಜಯಬಲಕ್ಕೆ
ಸೋಲುಂಟಾಗುವ ಹಾಗೆ
ಸಂಹರಿಸಿಯೂ ಓಡಿಸಿಯೂ
ಹೊಡೆದೂ) ಗೆಲ್ದ
ಮಲ್ಲನಂತಿರ್ದಾಗಳ್ (ಗೆದ್ದ
ಜಟ್ಟಿಯ ಹಾಗೆ ಇದ್ದನು.ಆಗ-)
ಜಗದೇಕಮಲ್ಲಂ ಮೊದಲಾಗೆ

(ಜಗದೇಕಮಲ್ಲನಾದ
ಅರ್ಜುನನೇ ಮೊದಲಾದ)
ವಿರಾಟ ವಿರಾಟಜ ದ್ರುಪದ
ದ್ರುಪದಜ ಚೇಕಿತಾನ
ಯುಧಾಮನ್ಯು ಉತ್ತಮೋಜ
ಸೌಭದ್ರ ಘಟೋತ್ಕಚ ನಕುಲ
ಸಹದೇವ ಸಾತ್ಯಕಿ
ಪಂಚಪಾಂಡವ
ಪ್ರಮುಖನಾಯಕರೆಲ್ಲರುಂ
ಬೆರಸು (ಪಂಚಪಾಂಡವರೇ
ಮುಖ್ಯವಾಗಿರುವ

ನಾಯಕರೆಲ್ಲರೊಡಗೂಡಿ) ಧರ್ಮಪುತ್ರಂ ಶಿಖಂಡಿಯಂ ಮುಂದಿಟ್ಟುಕೊಂಡು ಬಂದು (ಧರ್ಮರಾಯನು ಶಿಖಂಡಿಯನ್ನು ಮುಂದುಮಾಡಿಕೊಂಡು ಬಂದು) ಪೇಂಕುಳಿಗೊಂಡ ಸಿಂಹಮಂ ಮುತ್ತುವಂತೆ ಸುತ್ತಿ ಮುತ್ತಿದಾಗಳ್ (ಹುಚ್ಚು ಹಿಡಿದ ಸಿಂಹವನ್ನು ಮುತ್ತುವ ಹಾಗೆ ಮುತ್ತಿದನು; ಆಗ)-

ವಚನ:ಅರ್ಥ:(ಭೀಷ್ಮನು) ಹಾಗೆ ಸೋಮಕ ಸೈನ್ಯವೆಲ್ಲವನ್ನೂ ಹೇಳಲು ಹೇಸರಿಲ್ಲದ ಹಾಗೆ ಕೊಂದು ಶ್ರೀಜಯಬಲಕ್ಕೆ ಸೋಲುಂಟಾಗುವ ಹಾಗೆ ಸಂಹರಿಸಿಯೂ ಓಡಿಸಿಯೂ ಹೊಡೆದೂ ಗೆದ್ದ ಜಟ್ಟಿಯ ಹಾಗೆ ಇದ್ದನು.ಆಗ- ಜಗದೇಕಮಲ್ಲನಾದ ಅರ್ಜುನನೇ ಮೊದಲಾದ

ವಿರಾಟ, ಉತ್ತರ, ದ್ರುಪದ,
ದ್ರೌಪದೇಯ, ಚೇಕಿತಾನ,
ಯುಧಾಮನ್ಯು, ಉತ್ತಮೋಜ,
ಅಭಿಮನ್ಯು, ಘಟೋತ್ಕಚ,
ಭೀಮಸೇನ, ನಕುಲ,
ಸಹದೇವ, ಸಾತ್ಯಕಿ,
ಪಂಚಪಾಂಡವರೇ
ಮುಖ್ಯವಾಗಿರುವ
ನಾಯಕರೆಲ್ಲರೊಡಗೂಡಿ
ಧರ್ಮರಾಯನು
ಶಿಖಂಡಿಯನ್ನು

ಮುಂದುಮಾಡಿಕೊಂಡು ಬಂದು, ಹುಚ್ಚು ಹಿಡಿದ ಸಿಂಹವನ್ನು ಮುತ್ತುವ ಹಾಗೆ ಮುತ್ತಿದನು; ಆಗ-

ಉ||

ಅಂಬರಮೆಲ್ಲಮಂಬಿನೊಳೆ ಪೂಟೆ ಮಹೀಭುಜರೆತ್ತಮೆಚ್ಚ
ಕಿ
ತ್ತಂಬುಗಳೆತ್ತಮವ್ವಳಿಸೆ ಮಾಣದವಂ ಕಡಿದಿಕ್ಕಿ ತನ್ನ ನ|

ಲ್ಲಂಬುಗಳಿಂದಮಾರ್ದಿರದಡು ರ್ತಿಸೆ ಭೂಭುಜರೆಲ್ಲಮಲ್ಲಿ ಬಿ ಲ್ಲುಂ ಬೆಱಗಾಗೆ ಬಂದು ಪೊಣರ್ದಂ ಸೆರಗಿಲ್ಲದೆ ವಿಕ್ರಮಾರ್ಜುನಂ|| ೪೨

ಪದ್ಯ-೪೨:ಪದವಿಭಾಗ-ಅರ್ಥ:ಅಂಬರಂ ಎಲ್ಲಂ ಅಂಬಿನೊಳೆ ಪೂೞೆ (ಪೂಳೆ- ಹೂಳೆ, ಹೂಳುವಂತೆ; ಆಕಾಶ ಪ್ರದೇಶವೆಲ್ಲವೂ ಬಾಣಸಮೂಹಗಳಲ್ಲಿಯೇ

ಹೂತುಹೋಗುವ ಹಾಗೆ)
ಮಹೀಭುಜರ್ ಎತ್ತಂ ಎಚ್ಚ
(ರಾಜರುಗಳು ಎಲ್ಲ
ಕಡೆಗಳಿಂದಲೂ
ಪ್ರಯೋಗಿಸಿದ) ಕಿತ್ತಂಬುಗಳು
(ಚಿಕ್ಕ ಬಾಣಗಳು) ಎತ್ತಂ
ಅಪ್ವಳಿಸೆ ಮಾಣದೆ ಅವಂ
ಕಡಿದಿಕ್ಕಿ (ಎಲ್ಲಾ ಕಡೆಗೂ
ನುಗ್ಗಲು ಅವಕಾಶಕೊಡದೆ
ತನ್ನ ಉತ್ತಮ ಬಾಣಗಳಿಂದ
ಅವನ್ನು ಕತ್ತರಿಸುತ್ತಿರಲು) ತನ್ನ

ನಲ್ಲಂಬುಗಳಿಂದಮು ಆರ್ದು ಇರದೆ ಅಡುರ್ತು ಇಸೆ (ತನ್ನ ಉತ್ತಮ ಬಾಣಗಳಿಂದ ಅವನ್ನು ಕತ್ತರಿಸುತ್ತಿರಲು,) ಭೂಭುಜರೆಲ್ಲಮಲ್ಲಿ ಬಿಲ್ಲುಂ ಬೆಱಗಾಗೆ (ಅಲ್ಲಿಯ ರಾಜರುಗಳೆಲ್ಲ ಸಂಭ್ರಾಂತರಾಗಲು,) ಬಂದು ಪೊಣರ್ದಂ ಸೆರಗಿಲ್ಲದೆ ವಿಕ್ರಮಾರ್ಜುನಂ (ಹಾಗೆ ಭಯವಿಲ್ಲದೆ ಮುಂದೆ ಬಂದು

ಹೋರಾಡಿದನು -
ಅರ್ಜುನನು.)
ಪದ್ಯ-೪೨:ಅರ್ಥ: ಭೀಷ್ಮನು
ಆಕಾಶ ಪ್ರದೇಶವೆಲ್ಲವೂ
ಬಾಣಸಮೂಹಗಳಲ್ಲಿಯೇ
ಹೂತುಹೋಗುವ ಹಾಗೆ
ರಾಜರುಗಳು ಎಲ್ಲ
ಕಡೆಗಳಿಂದಲೂ
ಪ್ರಯೋಗಿಸಿದ ಚಿಕ್ಕ
ಬಾಣಗಳು ಎಲ್ಲಾ ಕಡೆಗೂ
ನುಗ್ಗಲು ಅರ್ಜುನನು

ಅವಕಾಶಕೊಡದೆ ತನ್ನ
ಉತ್ತಮ ಬಾಣಗಳಿಂದ ಇರದೆ
ಆರ್ಭಟಿಸಿ ಸಮೀಪಸಿ
ಬಾಣಪ್ರಯೋಗಿಸಲು,
ಅಲ್ಲಿಯ ರಾಜರುಗಳೆಲ್ಲ
ಸಂಭ್ರಾಂತರಾಗಲು,
ಅರ್ಜುನನು ಹಾಗೆ
ಭಯವಿಲ್ಲದೆ ಮುಂದೆ ಬಂದು
ಹೋರಾಡಿದನು.

ವ|| ಅಂತು

ಪೊಣರ್ದಾಗಳೆಮ್ಮ

ಮಮ್ಮಂಗಮೆಮಗಮೀಗಳನು ವರಂ ದೊರೆಯಾಯ್ತೆಂದು ಪರಶುರಾಮನ ಕೊಟ್ಟ ದಿವ್ಯಾಸ್ತ್ರಂಗಳನೊಂದನೊಂದು ಸೂಚಿಯೊಳೆ ತೊಟ್ಟೆಚ್ಚಾಗಳ್ ()-

ವಚನ:ಪದವಿಭಾಗ-

ಅರ್ಥ:ಅಂತು ಪೊಣರ್ದಾಗಳು ಎಮ್ಮ ಮಮ್ಮಂಗಂ ಎಮಗಂ ಈಗಳು ಅನುವರಂ

ದೊರೆಯಾಯ್ತೆಂದು (ನಮ್ಮ
ಮೊಮ್ಮಗನಿಗೂ ನಮಗೂ
ಈಗ ಯುದ್ಧವು
ಸಮಾನವಾಯಿತು ಎಂದು)
ಪರಶುರಾಮನ ಕೊಟ್ಟ
ದಿವ್ಯಾಸ್ತ್ರಂಗಳನು
ಒಂದನೊಂದು ಸೂಟಿಯೊಳೆ
ತೊಟ್ಟೆಚ್ಚಾಗಳ್
(ಪರಶುರಾಮನು ಕೊಟ್ಟ
ದಿವ್ಯಾಸ್ತ್ರಗಳನ್ನು

ಒಂದೊಂದಾಗಿ ಕ್ರಮದಿಂದ ಪ್ರಯೋಗಿಸಿದಾಗ)-

ವಚನ:ಅರ್ಥ:ನಮ್ಮ ಮೊಮ್ಮಗನಿಗೂ ನಮಗೂ ಈಗ ಯುದ್ಧವು ಸಮಾನವಾಯಿತು ಎಂದು ಭೀಷ್ಮನು (ತಮ್ಮ ಆಚಾರ್ಯರಾದ) ಪರಶುರಾಮನು ಕೊಟ್ಟ ದಿವ್ಯಾಸ್ತ್ರಗಳನ್ನು

ಒಂದೊಂದಾಗಿ ಕ್ರಮದಿಂದ ಪ್ರಯೋಗಿಸಿದನು.

ಚಂ|| ಜ್ವಳನ ಪತತ್ರಿಯಂ
ಕಡಿದು ವಾರುಣ
ಪತತ್ರಿಯಿನೈಂದ್ರ ಬಾಣಮಂ
ಕಳೆದು
ಸಮೀರಣಾಸ್ತ್ರದಿನಿದಿರ್ಚಿದ
ಭೂಭುಜರೆಲ್ಲರಂ ಭಯಂ|
ಗೊಳಿಸಿ ನಿಶಾತ ವಜ್ರಿಶರದಿಂ
ಸುರರಂಬರದೊಳ್ ತಗುಳ್ದು ಬಿ

ಚ್ಚಳಿಸೆ ನದೀಜನುಚ್ಚಳಿಸೆ ಕಾದಿದನೇಂ ಕಲಿಯೋ ಗುಣಾರ್ಣವಂ|| ೪೩ ||

ಪದ್ಯ-೪೩:ಪದವಿಭಾಗ-ಅರ್ಥ:ಜ್ವಳನ ಪತತ್ರಿಯಂ ಕಡಿದು ವಾರುಣ ಪತತ್ರಿಯಿಂ (ಆಗ್ನೇಯಾಸ್ತ್ರವನ್ನು ವಾರಣಾಸ್ತ್ರದಿಂದ ಕತ್ತರಿಸಿ) ಇಂದ್ರ/ ಐಂದ್ರ ಬಾಣಮಂ ಕಳೆದು ಸಮೀರಣಾಸ್ತ್ರದಿಂ (ಐಂದ್ರಾಸ್ತ್ರವನ್ನು

ವಾಯ್ವಸ್ತ್ರದಿಂದ ಎದುರಿಸಿ)
ಇದಿರ್ಚಿದ ಭೂಭುಜರೆಲ್ಲರಂ
ಭಯಂಗೊಳಿಸಿ (ಎದುರಿಸಿ
ರಾಜರುಗಳನ್ನೆಲ್ಲ ಹೆದರುವ
ಹಾಗೆ ಮಾಡಿ) ನಿಶಾತ
ವಜ್ರಶರದಿಂ ಸುರರು
ಅಂಬರದೊಳ್ ತಗುಳ್ದು
ಬಿಚ್ಚಳಿಸೆ (ದೇವತೆಗಳೆಲ್ಲ
ಆಕಾಶದಲ್ಲಿ ಗುಂಪುಗುಂಪಾಗಿ
ಕೂಡಿ ಸ್ತೋತ್ರ ಮಾಡುತ್ತಿರಲು)
ನದೀಜನು ಉಚ್ಚಳಿಸೆ

ಕಾದಿದನು ಏಂ ಕಲಿಯೋ ಗುಣಾರ್ಣವಂ; (ಭೀಷ್ಮನು ಮೇಲಕ್ಕೆ ನೆಗೆಯುವ ಹಾಗೆ ಹೋರಾಡಿದನು. ಅರ್ಜುನನದು ಏನು ಶೌರ್ಯವೋ!)

ಪದ್ಯ-೪೩:ಅರ್ಥ: ೪೩. ಆಗ್ನೇಯಾಸ್ತ್ರವನ್ನು ವಾರಣಾಸ್ತ್ರದಿಂದ ಕತ್ತರಿಸಿ, ಐಂದ್ರಾಸ್ತ್ರವನ್ನು ವಾಯ್ವಸ್ತ್ರದಿಂದ ಎದುರಿಸಿ

ರಾಜರುಗಳನ್ನೆಲ್ಲ ಹೆದರುವ ಹಾಗೆ ಮಾಡಿ ದೇವತೆಗಳೆಲ್ಲ ಆಕಾಶದಲ್ಲಿ ಗುಂಪುಗುಂಪಾಗಿ ಕೂಡಿ ಸ್ತೋತ್ರ ಮಾಡುತ್ತಿರಲು, ಅರ್ಜುನನು ಇಂದ್ರಾಸ್ತ್ರದಿಂದ ಭೀಷ್ಮನು ಮೇಲಕ್ಕೆ ನೆಗೆಯುವ ಹಾಗೆ ಹೋರಾಡಿದನು. ಅರ್ಜುನನದು ಏನು ಶೌರ್ಯವೋ!

ವ|| ಅಂತಮೋಘಾಸ್ತ್ರ ಧನಂಜಯಂ

ತನ್ನಮೋಘಾಸ್ತ್ರಂಗಳಂ ಕಡಿದೊಡೆ ಸಾಮಾನ್ಯಾಸ್ತ್ರಂಗಳೊಳ್ ಧರ್ಮಪುತ್ರಂಗೆ ತನ್ನ ನುಡಿದ ನುಡಿವಳಿಯಂ ನೆನೆದಲ್ಲಳಿಗಾಳೆಗಂಗಾದೆ-

ವಚನ:ಪದವಿಭಾಗ-

ಅರ್ಥ:ಅಂತು ಅಮೋಘಾಸ್ತ್ರ ಧನಂಜಯಂ ತನ್ನ ಅಮೋಘಾಸ್ತ್ರಂಗಳಂ ಕಡಿದೊಡೆ (ಅತ್ಯುತ್ತಮವಾದ

ಅಸ್ತ್ರಗಳನ್ನುಳ್ಳ ಅರ್ಜುನನು
ತನ್ನ ಅಮೋಘಾಸ್ತ್ರಗಳನ್ನು
ಕತ್ತರಿಸಲು)
ಸಾಮಾನ್ಯಾಸ್ತ್ರಂಗಳೊಳ್
(ಸಾಮಾನ್ಯ ಅಸ್ತ್ರಗಳಿಳಿಂದ)
ಧರ್ಮಪುತ್ರಂಗೆ ತನ್ನ ನುಡಿದ
ನುಡಿವಳಿಯಂ ನೆನೆದು
(ಭೀಷ್ಮನು ಧರ್ಮರಾಜನಿಗೆ
ತಾನು ಕೊಟ್ಟ ಮಾತನ್ನು
ಜ್ಞಾಪಿಸಿಕೊಂಡು)
ಅಲ್ಲಳಿಗಾಳೆಗಂ (ಗಾ)ಕಾದೆ

(ವಿನೋದ ಕಾಳಗವನ್ನು ಕಾದಲು)-
ವಚನ:ಅರ್ಥ: ಹಾಗೆ ಅತ್ಯುತ್ತಮವಾದ ಅಸ್ತ್ರಗಳನ್ನುಳ್ಳ ಅರ್ಜುನನು ತನ್ನ ಅಮೋಘಾಸ್ತ್ರಗಳನ್ನು ಕತ್ತರಿಸಲು, ಭೀಷ್ಮನು ಧರ್ಮರಾಜನಿಗೆ ತಾನು ಕೊಟ್ಟ ಮಾತನ್ನು ಜ್ಞಾಪಿಸಿಕೊಂಡು ಸಾಮಾನ್ಯವಾದ ಬಾಣಗಳಿಂದ

ಮೇಳ ಗಾಳೆಗವನ್ನು
ಕಾದಿದನು.ಹಾಗೆ ಕಾದಲು-

ಚಂ|| ಕಡಿದನುದಗ್ರ ನಾಯಕರ
ಸಾಯಕಮೆಲ್ಲಮನಾ ಶಿಖಂಡಿ
ಪ್ರೊ
ಕ್ಕಡಿಗಿಡೆ ಬಂದು ಮುಂದೆ
ನಿಲೆಯುಂ ಮೊಗಮಂ ನಡೆ
ನೋಡಿಯಾತನಾ|
ರ್ದೊಡನೊಡನೆಚ್ಚೊಡೆಚ್ಚ
ಮೊನೆಯಂಬುಗಳಟ್ಟಿಡಿವೋ
ಗೆಯುಂ ಮನಂ

ಗಿಡನವನಾಂಕೆಗೊಳ್ಳನಗಿಯಂ ಸುಗಿಯಂ ಸುರಸಿಂಧುನಂದನಂ|| ೪೪ ||

ಪದ್ಯ-೪೪:ಪದವಿಭಾಗ-ಅರ್ಥ:ಕಡಿದನು ಉದಗ್ರ ನಾಯಕರ ಸಾಯಕಮೆಲ್ಲಮನು (ಶ್ರೇಷ್ಠರಾದ ನಾಯಕರ ಬಾಣಗಳೆಲ್ಲವನ್ನೂ ಭೀಷ್ಮನು ಕಡಿದು ಹಾಕಿದನು.) ಆ ಶಿಖಂಡಿ ಪೊಕ್ಕು ಅಡಿಗಿಡೆ

ಬಂದು ಮುಂದೆ ನಿಲೆಯುಂ
(ಆ ಶಿಖಂಡಿಯು ಹೆಜ್ಜೆ ತಪ್ಪಿ
ಮುಂದೆ ಬಂದು ನಿಂತರೂ)
ಮೊಗಮಂ ನಡೆ ನೋಡಿಯೂ
(ಮುಖವನ್ನು ನೇರವಾಗಿ
ನೋಡಿದರೂ) ಆತನು
ಆರ್ದೊಡನೆ ಒಡನೆ ಎಚ್ಚೊಡೆ
(ಆರ್ಭಟಮಾಡಿ ಕೂಡಲೆ
ಹೊಡೆದರೂ) ಎಚ್ಚ
ಮೊನೆಯಂಬುಗಳು
ಅಟ್ಟಿಡಿವೋಗೆಯುಂ

(ಹೊಡೆದ ಮೊನಚಾದ
ಬಾಣಗಳು ತನ್ನ ಶರೀರದಲ್ಲಿ
ನಾಟಿ ಕಿಕ್ಕಿರಿದರೂ)
ಮನಂಗಿಡಂ ಅವನು
ಆಂಕೆಗೊಳ್ಳನು (ಎದುರಿಸನು)
ಅಗಿಯಂ (ಹೆದರಲಿಲ್ಲ)-
(ಭೀಷ್ಮನು ತನ್ನ ಮನಸ್ಥೈ
ರ್ಯವನ್ನು ಕಳೆದುಕೊಳ್ಳಲಿಲ್ಲ,
ಪ್ರತಿಭಟಿಸಲಿಲ್ಲ, ಹೆದರಲಿಲ್ಲ,)
ಸುಗಿಯಂ
ಸುರಸಿಂಧುನಂದನಂ

(ಬೆದರಲಿಲ್ಲ, ಸ್ವರ್ಗನದಿಯ ಮಗ ಭೀಷ್ಮನು.)

ಪದ್ಯ-೪೪:ಅರ್ಥ:ಶ್ರೇಷ್ಠರಾದ ನಾಯಕರ ಬಾಣಗಳೆಲ್ಲವನ್ನೂ ಭೀಷ್ಮನು ಕಡಿದು ಹಾಕಿದನು. (ಆಗ) ಆ ಶಿಖಂಡಿಯು ಹೆಜ್ಜೆ ತಪ್ಪಿ ಮುಂದೆ ಬಂದು ನಿಂತರೂ, ಮುಖವನ್ನು ನೇರವಾಗಿ ನೋಡಿದರೂ, ಆರ್ಭಟಮಾಡಿ ಕೂಡಲೆ ಹೊಡೆದರೂ, ಹೊಡೆದ

ಮೊನಚಾದ ಬಾಣಗಳು ತನ್ನ ಶರೀರದಲ್ಲಿ ನಾಟಿ ಕಿಕ್ಕಿರಿದರೂ, ಭೀಷ್ಮನು ತನ್ನ ಮನಸ್ಥೈರ್ಯವನ್ನು ಕಳೆದುಕೊಳ್ಳಲಿಲ್ಲ, ಪ್ರತಿಭಟಿಸಲಿಲ್ಲ, ಹೆದರಲಿಲ್ಲ, ಬೆದರಲಿಲ್ಲ.

ಇದು ರಣಮೊನ್ನೊಳಾಂತಿಱಿವ ಮೆಯ್ಗಲಿಯುಂ ಸಮರೈಕಮೇರುವೆ

ನ್ನದಟುಮಳುರ್ಕೆಯುಂ
ಪಿರಿದು
ಪೇಡಿಗದೆಂತಿದಿರಾಂಪೆನೆಂದ
ಣಂ||
ಬೆದಱಿದೆ ನಟ್ಟ ಕೂರ್ಗಣೆಯ
ಬಿಣ್ಪೊರೆಯಿಂದೆ
ಬೞಲ್ದನುರ್ವಿ ಪೆ
ರ್ವಿದಿರ ಸಿಡಿಂಬಿನೊಳ್
ಪುದಿದದೊಂದು
ಕುಳಾಚಳದಂತೆ ಸಿಂಧುಜಂ||
೪೫ ||

ಪದ್ಯ-೪೫:ಪದವಿಭಾಗ-ಅರ್ಥ:ಇದು ರಣಂ (ಇದು ಯುದ್ಧ;) ಎನ್ನೊಳಾಂತಿಱಿವ ಮೆಯ್ಗಲಿಯುಂ (ನನ್ನನ್ನು ಪ್ರತಿಭಟಿಸುವ ಶೂರನಾದರೋ) ಸಮರೈಕಮೇರುವು (ನನ್ನನ್ನು ಪ್ರತಿಭಟಿಸುವ ಶೂರನಾದರೋ ಸಮರೈಕಮೇರುವೆಂಬ ಬಿರುದುಳ್ಳ ಅರ್ಜುನ) ಎನ್ನ

ಅದಟುಂ ಅಳುರ್ಕೆಯುಂ ಪಿರಿದು (ನನ್ನ ಪರಾಕ್ರಮವೂ ಅದರ ವ್ಯಾಪ್ತಿಯೂ ಹಿರಿದಾದುದು) ಪೇಡಿಗೆ ಅದೆಂತು ಇದಿರಾಂಪೆನು ಎಂದು (ಹೇಡಿಗೆ ಹೇಗೆ ಪ್ರತಿಭಟಿಸಲಿ? ಎಂದು) ಅಣಂ ಬೆದಱದೆ (ಸ್ವಲ್ಪವೂ ಹೆದರದೆ) ನಟ್ಟ ಕೂರ್ಗಣೆಯ ಬಿಣ್ ಪೊರೆಯಿಂದೆ (ತನ್ನ ಶರೀರದಲ್ಲಿ ನಾಟಿಕೊಂಡಿರುವ

ಹರಿತವಾದ ಬಾಣಗಳ
ವಿಶೇಷವಾದ ಭಾರದಿಂದ)
ಬಟಿಲ್ದನು (ಜೋತುಬಿದ್ದನು)
ಉರ್ವಿ ಪೆರ್ವಿದಿರ
ಸಿಡಿಂಬಿನೊಳ್ ಪುದಿದ
(ಉಬ್ಬಿ ಬೆಳೆದ ದೊಡ್ಡ ಬಿದಿರಿನ
ಮೆಳೆಯಿಂದ ತುಂಬಿದ)
ಅದೊಂದು ಕುಳಾಚಳದಂತೆ
ಸಿಂಧುಜಂ (ಒಂದು
ಕುಲಪರ್ವತದಂತೆ ಭೀಷ್ಮನು --
ಜೋತುಬಿದ್ದನು)

ಪದ್ಯ-೪೫:ಅರ್ಥ: ೪೫. ಇದು ಯುದ್ಧ; ನನ್ನನ್ನು ಪ್ರತಿಭಟಿಸುವ ಶೂರನಾದರೋ ಸಮರೈಕಮೇರುವೆಂಬ ಬಿರುದುಳ್ಳ ಅರ್ಜುನ; ನನ್ನ ಪರಾಕ್ರಮವೂ ಅದರ ವ್ಯಾಪ್ತಿಯೂ ಹಿರಿದಾದುದು. ಹೇಡಿಗೆ ಹೇಗೆ ಪ್ರತಿಭಟಿಸಲಿ? ಎಂದು ಸ್ವಲ್ಪವೂ ಹೆದರದೆ ತನ್ನ ಶರೀರದಲ್ಲಿ ನಾಟಿಕೊಂಡಿರುವ

ಹರಿತವಾದ ಬಾಣಗಳ
ವಿಶೇಷವಾದ ಭಾರದಿಂದ
ಉಬ್ಬಿ ಬೆಳೆದ ದೊಡ್ಡ ಬಿದಿರಿನ
ಮೆಳೆಯಿಂದ ತುಂಬಿದ ಒಂದು
ಕುಲಪರ್ವತದಂತೆ ಭೀಷ್ಮನು
ಆಯಾಸದಿಂದ
ಜೋತುಬಿದ್ದನು.

ಉ|| ತಿಂತಿಣಿಯಾಗೆ ನಟ್ಟ
ಕಣೆಯೊಳ್ ನೆಲ ಮುಟ್ಟದೆ
ಮೆಯ್ಯೊಳತ್ತಮಿ

ತ್ತಂ ತೆದಿರ್ದ

ಪುಣ್ಗಳೆಸೆವಕ್ಕರದಂತಿರೆ

ನೋಡಿ ಕಲ್ಲಿಮೆಂ|

ಬಂತೆವ್ರೊಲಿರ್ದನಟ್ಟವಣೆ

ಕೋಲ್ಗಳ ಮೇಲೆಸೆದಿರ್ದ ವೀರ

ಸಿ

ದ್ಧಾಂತದ ಶಾಸನಂ ಬರೆದ

ಪೊತ್ತಗೆಯಂತಮರಾಪಗಾತ್ಮ

ಜಂ|| ೪೬ ||

ಪದ್ಯ-೪೬:ಪದವಿಭಾಗ-

ಅರ್ಥ:ತಿಂತಿಣಿಯಾಗೆ ನಟ್ಟ

ಕಣೆಯೊಳ್ ನೆಲ ಮುಟ್ಟದೆ
(ಗುಂಪು ಗುಂಪಾಗಿ ಶರೀರದ
ನಾನಾಕಡೆಗಳಲ್ಲಿ ಎಲ್ಲೆಲ್ಲಿಯೂ
ನೆಲವನ್ನು ಮುಟ್ಟದೆ)
ಮೆಯ್ಯೊಳ್ ಅತ್ತಮಿತ್ತಂ
ತೆದಿರ್ದ ಪುಣ್ಗಳು
(ನಾಟಿಕೊಂಡಿರುವ
ಬಾಣಗಳಿಂದ
ಬಾಯಿಬಿಟ್ಟುಕೊಂಡಿರುವ
ಹುಣ್ಣುಗಳು) ಎಸೆವ
ಅಕ್ಕರದಂತಿರೆ- 'ನೋಡಿ

ಕಲ್ಲಿಮೆಂಬಂತೆವೊಲ್' ('ಇಲ್ಲಿ ನೋಡಿ ಕಲಿಯಿರಿ' ಎಂಬಂತೆ ಪ್ರಕಾಶಮಾನವಾದ ಅಕ್ಷರಗಳ ಹಾಗಿರಲು) ಇರ್ದನು ಅಟ್ಟವಣೆ ಕೋಲ್ಗಳ ಮೇಲೆ ಎಸೆದಿರ್ದ (ಮಣೆಯ ಬಾಣಗಳ ಮೇಲೆ ಇದ್ದ ಭೀಷ್ಮನು --- ಪುಸ್ತಕದ ಹಾಗೆ ಶೋಭಿಸುತ್ತ ಇದ್ದನು) ವೀರ ಸಿದ್ಧಾಂತದ ಶಾಸನಂ ಬರೆದ ಪೊತ್ತಗೆಯಂತೆ (ಪ್ರತಾಪತತ್ವದ

ವೀರಶಾಸನವನ್ನು ಬರೆದಿರುವ
ವಪುಸ್ತಕದ ಹಾಗೆ)
ಅಮರಾಪಗಾತ್ಮಜಂ
(ಅಮರಲೋಕದಿಂದ
ಇಳಿದವಳ ಮಗ ಭೀಷ್ಮನು)
ಪದ್ಯ-೪೬:ಅರ್ಥ: ಗುಂಪು
ಗುಂಪಾಗಿ ಶರೀರದ
ನಾನಾಕಡೆಗಳಲ್ಲಿ ಎಲ್ಲೆಲ್ಲಿಯೂ
ನೆಲವನ್ನು ಮುಟ್ಟದೆ
ನಾಟಿಕೊಂಡಿರುವ
ಬಾಣಗಳಿಂದ

ಬಾಯಿಬಿಟ್ಟುಕೊಂಡಿರುವ ಹುಣ್ಣುಗಳು ‘ಇಲ್ಲಿ ನೋಡಿ ಕಲಿಯಿರಿ’ ಎಂಬ ಪ್ರಕಾಶಮಾನವಾದ ಅಕ್ಷರಗಳ ಹಾಗಿರಲು ಭೀಷ್ಮನು ವ್ಯಾಸಪೀಠದ ಮೇಲಿರುವ ಪ್ರತಾಪತತ್ವದ ವೀರಶಾಸನವನ್ನು ಬರೆದಿರುವ ಪುಸ್ತಕದ ಹಾಗೆ ಶೋಭಿಸುತ್ತಿದ್ದನು.

ಚಂ|| ನಡೆದುದು ಬಾಳ
ಕಾಲದೊಳೆ ತೊಟ್ಟೆನಗಂಕದ
ಶೌಚವೀಗಳೋ
ಗಡಿಪುದೆ ಮುಟ್ಟಿ ನಾಂ
ನೆಲನನೇಕದು ಪೆಣ್ಗಡಿಮೆಂದು
ಮೆಯ್ಯೊಳ|
ಬ್ದಿಡಿದ ವಿಕರ್ಣ
ಕೋಟಿಯೊಳಣಂ ನೆಲ
ಮುಟ್ಟದೆ ನೋಡೆ ಬಿಬ್ದೊಡಂ
ಬಡಿಸಿದನಯ್ಯ ಶೌಚ
ಗುಣದುನ್ನತಿಯಂ

ಸುರಸಿಂಧುನಂದನಂ|| ೪೭ ||

ಪದ್ಯ-೪೭:ಪದವಿಭಾಗ-ಅರ್ಥ:ನಡೆದುದು ಬಾಳ ಕಾಲದೊಳೆ ತೊಟ್ಟು ಎನಗೆ ಅಂಕದ ಶೌಚವು (ಬಾಲ್ಯಕಾಲದಲ್ಲೇ ವ್ರತತೊಟ್ಟು ನನಗೆ ಪ್ರಸಿದ್ಧವಾದ ಬ್ರಹ್ಮಚರ್ಯವು ನಡೆದುಬಂದಿದೆ.) ಈಗಳು ಓಗಡಿಪುದೆ ಮುಟ್ಟಿ ನಾಂ ನೆಲನಂ (ಈಗ ನಾನು

-ಹೆಣ್ಣಾದ- ಭೂಮಿಯನ್ನು ಮುಟ್ಟಿ ನನ್ನ ಶೌಚಗುಣವನ್ನು ಹೋಗಲಾಡಿಸುವುದೇ?) ಏಕೆ ಅದು ಪೆಣ್ಗಿಡಿಂ (ಹೆಣ್ಣಲ್ಲವೇ) ಎಂದು, ಮೆಯ್ಯೊಳು ಅೞ್ದು ಇಡಿದ (ಎಂದು ಶರೀರದ ಒಳಗಿಳಿದು ನಾಟಿಕೊಂಡು ತುಂಬಿದ್ದ) ವಿಕರ್ಣ ಕೋಟಿಯೊಳು ಅಣಂ ನೆಲ ಮುಟ್ಟದೆ ನೋಡೆ ಬಿೞ್ದು (ಲೆಕ್ಕವಿಲ್ಲದ ಬಾಣಗಳಿಂದ

ಭೂದೇವಿಯನ್ನು ಸ್ವಲ್ಪವೂ ಮುಟ್ಟದೆ ಬಿದ್ದುದನ್ನು ನೋಡಲು,) ಒಡಂಬಡಿಸಿದನು ಅಯ್ಯ ಶೌಚ ಗುಣದುನ್ನತಿಯಂ ಸುರಸಿಂಧುನಂದನಂ (ಅಯ್ಯಾ! ಭೀಷ್ಮನು ತನ್ನ ಶೌಚಗುಣವನ್ನು ಅಂಗೀಕರಿಸಿದನು.)

ಪದ್ಯ-೪೭:ಅರ್ಥ:

ಬಾಲ್ಯಕಾಲದಲ್ಲೇ ವ್ರತತೊಟ್ಟು

ನನಗೆ ಪ್ರಸಿದ್ಧವಾದ
ಬ್ರಹ್ಮಚರ್ಯವು
ನಡೆದುಬಂದಿದೆ. ಈಗ ನಾನು
ಸ್ತ್ರೀಯಾದ ಅವಳನ್ನು ಮುಟ್ಟಿ
ನನ್ನ ಶೌಚಗುಣವನ್ನು
ಹೋಗಲಾಡಿಸುವುದೇ?
ಕೆಡಿಸುವುದೇ? ಎಂದು
ಶರೀರದ ಒಳಗಿಳಿದು
ನಾಟಿಕೊಂಡು ತುಂಬಿದ್ದ
ಲೆಕ್ಕವಿಲ್ಲದ ಬಾಣಗಳಿಂದ
ಭೂದೇವಿಯನ್ನು ಸ್ವಲ್ಪವೂ

ಮುಟ್ಟದೆ, ಅಯ್ಯಾ! ಭೀಷ್ಮನು ತನ್ನ ಶೌಚಗುಣವನ್ನು ಅಂಗೀಕರಿಸಿದನು.

ವ|| ಅಂತು ಶರಪಂಜರದೊಳೊಱಗಿಯು ಮೊಡಲಿಂ ಪತ್ತುವಿಟ್ಟು ಪೋಪ ಜೀವಮಂ ಪೋಗಲೀಯದೆ ಸ್ವಚ್ಛಂದಮಿೞ್ತು ವಪ್ಪುದಱಿಂದುತ್ತರಾಯಣಂ ಬರ್ಪನ್ನಮಿರಿಸಿದನಂತು ಮಾಗಳ್ ಕುರುಬಲಮೆಲ್ಲಂ

ಕುರುಕುಳವನಸಿಂಹಂ ಶರಪಂಜರದೊಳೊಱಗಿದನಿನ್ನೆಮ್ಮಂ ಕಾವರಾರೆಂದೊಲ್ಲನುಲಿದೋಡಿ ಬೀಡಂ ಪೊಕ್ಕಾಗಳ್ ಧರ್ಮಪುತ್ರಂ ನಿಜಾನುಜ ಸಹಿತಂ ಬಂದು ಬಲಗೊಂಡು ಕಾಲ ಮೇಲೆ ಕವಿದು ಪಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಶರಪಂಜರದೊಳ್

ಒಱಗಿಯುಂ (ಹೀಗೆ
ಶರಪಂಜರದಲ್ಲಿ ಒರಗಿದ್ದರೂ)
ಒಡಲಿಂ ಪತ್ತುವಿಟ್ಟು (ಪತ್ತು-
ಆಶ್ರಯ) ಪೋಪ ಜೀವಮಂ
ಪೋಗಲೀಯದೆ (ಶರೀರದಿಂದ
ನಂಟುಬಿಟ್ಟು ಹೋಗುವ
ಜೀವವನ್ನು ಹೋಗುವುದಕ್ಕೆ
ಹೋಗಲು ಬಿಡದೆ)
ಸ್ವಚ್ಛಂದಮಿೞ್ತು
ವಪ್ಪುದಱಿಂದ
(ಸ್ವೇಚ್ಛಾಮರಣಿಯಾದುದರಿಂ

ದ) ಉತ್ತರಾಯಣಂ
ಬರ್ಪನ್ನಂ ಇರಿಸಿದನು
(ಉತ್ತರಾಯಣವು
ಬರುವವರೆಗೆ
ಜೀವವನ್ನುಇರಿಸಿದನು)
ಅಂತುಮಾಗಳ್ ಕುರುಬಲಂ
ಎಲ್ಲಂ ಕುರುಕುಳವನಸಿಂಹಂ
(ಆಗ ಕೌರವಸೈನ್ಯವೆಲ್ಲವೂ
ಕುರುಬಲವೆಂಬ ಕಾಡಿಗೆ
ಸಿಂಹದೋಪಾದಿಯಲ್ಲಿದ್ದ)
ಶರಪಂಜರದೊಳು

ಒಱಗಿದನು ಇನ್ನೆಮ್ಮಂ
ಕಾವರಾರೆಂದು (ಭೀಷ್ಮನು
ಶರಪಂಜರದಲ್ಲೊರಗಿದನು,
ಇನ್ನು ನಮ್ಮನ್ನು
ರಕ್ಷಿಸುವವರಾರು ಎಂದು)
ಒಲ್ಲನುಲಿದೋಡಿ ಬೀಡಂ
ಪೊಕ್ಕಾಗಳ್ (ನಿಧಾನವಾಗಿ
ನುಡಿದು ಓಡಿ ಬೀಡನ್ನು
ಸೇರಿದಾಗ.) ಧರ್ಮಪುತ್ರಂ
ನಿಜ ಅನುಜ ಸಹಿತಂ ಬಂದು
(ಧರ್ಮರಾಜನು ತನ್ನ

ತಮ್ಮಂದಿರೊಡನೆ ಬಂದು)
ಬಲಗೊಂಡು ಕಾಲ ಮೇಲೆ
ಕವಿದು ಪಟ್ಟು (ಭೀಷ್ಮರ ಕಾಲ
ಮೇಲೆ ಕವಿದುಬಿದ್ದು ಅತ್ತನು)-
ವಚನ:ಅರ್ಥ:ಹೀಗೆ
ಶರಪಂಜರದಲ್ಲಿ ಒರಗಿದ್ದರೂ
ಶರೀರದಿಂದ ನಂಟುಬಿಟ್ಟು
ಹೋಗುವ ಜೀವವನ್ನು
ಹೋಗುವುದಕ್ಕೆ ಹೋಗಲು
ಬಿಡದೆ
ಸ್ವೇಚ್ಛಾಮರಣಿಯಾದುದರಿಂದ

ಉತ್ತರಾಯಣವು
ಬರುವವರೆಗೆ ಇರಿಸಿದನು. ಆಗ
ಕೌರವಸೈನ್ಯವೆಲ್ಲವೂ
ಕುರುಬಲವೆಂಬ ಕಾಡಿಗೆ
ಸಿಂಹದೋಪಾದಿಯಲ್ಲಿದ್ದ
ಭೀಷ್ಮನು
ಶರಪಂಜರದಲ್ಲೊರಗಿದನು,
ಇನ್ನು ನಮ್ಮನ್ನು
ರಕ್ಷಿಸುವವರಾರು ಎಂದು
ನಿಧಾನವಾಗಿ ನುಡಿದು ಓಡಿ
ಬೀಡನ್ನು ಸೇರಿದಾಗ.

ಧರ್ಮರಾಜನು ತನ್ನ ತಮ್ಮಂದಿರೊಡನೆ ಬಂದು ಪ್ರದಕ್ಷಿಣೆ ಮಾಡಿ ಭೀಷ್ಮರ ಕಾಲ ಮೇಲೆ ಕವಿದುಬಿದ್ದು ಅತ್ತನು.

ಕಂ|| ಕರುಣದಿನೆಮ್ಮಂ
ತಾಯ್ವೋಲ್
ತರುವಲಿಗಳನೆಯ್ದೆ
ನಡಪಿದಜ್ಜರ್ ನೀಮಿಂ|
ತಿರೆಯುಂ ನೋಡಿದೆವೇನೆಮ

ಗರಸಿಕೆಯೋ ಪೇೞಿಮೆಂದು ಶೋಕಂಗೆಯ್ದರ್|| ೪೮ ||

ಪದ್ಯ-೪೮:ಪದವಿಭಾಗ-ಅರ್ಥ:ಕರುಣದಿಂ ಎಮ್ಮಂ ತಾಯ್ವೋಲ್ ತರುವಲಿಗಳನು ಎಯ್ದೆ ನಡಪಿದ ಅಜ್ಜರ್ (ತಬ್ಬಲಿಗಳಾದ ನಮ್ಮನ್ನು ದಯೆಯಿಂದ ತಾಯಿಯ ಹಾಗೆ ಸಾಕಿದ ಅಜ್ಜರಾದ) ನೀಮು ಇಂತಿರೆಯುಂ ನೋಡಿದೆವು (ನೀವು ಈ

ಸ್ಥಿತಿಯಲ್ಲಿರುವುದನ್ನು ನೋಡಿದೆವು) ಏನು ಎಮಗೆ ಅರಸಿಕೆಯೋ ಪೇಟಿಮೆಂದು ಶೋಕಂಗೆಯ್ದರ್ (ನಮಗೆ ಎಂತಹ ಅರಸಿಕೆಯೋ ಹೇಳಿ ಎಂದು ದುಖಪಟ್ಟನು.)

ಪದ್ಯ-೪೮:ಅರ್ಥ:

ತಬ್ಬಲಿಗಳಾದ ನಮ್ಮನ್ನು ದಯೆಯಿಂದ ತಾಯಿಯ ಹಾಗೆ ಸಾಕಿದ ಅಜ್ಜರಾದ ನೀವು ಈ ಸ್ಥಿತಿಯಲ್ಲಿರುವುದನ್ನು

ನೋಡಿದೆವು. ನಮಗೆ ಎಂತಹ ಅರಸಿಕೆಯೋ ಹೇಳಿ ಎಂದು ದುಖಪಟ್ಟನು.

ವ|| ಅಂತು ಶೋಕಂಗೆಯ್ದೊಡೆ ನೀಮಂತೆನಲ್ವೇಡ ಕ್ಷತ್ರಿಯಧರ್ಮಮಿಂತದರ್ಕಱ ಲ್ವೇಡ ಬೀಡಿಂಗೆ ಪೋಗಿಮೆಂದೊಡೆ ಮಹಾಪ್ರಸಾದಮಂತೆ ಗೆಯ್ವೆಮೆಂದನಿಬರುಮೆಱಗಿ ಪೊಡೆವಟ್ಟು ಪೋದರಾಗಳ್

ದುರ್ಯೋಧನಂ ಬಂದು ಪೊಡೆವಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಶೋಕಂಗೆಯ್ದೊಡೆ (ಹಾಗೆ ಶೋಕ ಪಟ್ಟಾಗ) ನೀಮಂತು ಎನಲ್ವೇಡ (ನೀವು ಹಾಗೆ ಹೇಳಬೇಡಿ;) ಕ್ಷತ್ರಿಯಧರ್ಮಂ ಇಂತದರ್ಕೆ ಅೞಲ್ವೇಡ ಬೀಡಿಂಗೆ ಪೋಗಿಂ ಎಂದೊಡೆ (ಕ್ಷತ್ರಧರ್ಮವೇ ಹಾಗೆ;

ಹೀಗಿರುವುದರಿಂದ ಅಳಬೇಡಿ;
ಬೀಡಿಗೆ ಹೋಗಿ’ ಎನ್ನಲು)
ಮಹಾಪ್ರಸಾದಂ ಅಂತೆ
ಗೆಯ್ವೆಮೆಂದು ಅನಿಬರುಮ್
ಎಱಗಿ ಪೊಡೆವಟ್ಟು
ಪೋದರಾಗಳ್
(ಮಹಾಪ್ರಸಾದ ಹಾಗೆಯೇ
ಮಾಡುತ್ತೇವೆ’ ಎಂದು ಎಲ್ಲರೂ
ಎರಗಿ ನಮಸ್ಕಾರ ಮಾಡಿ
ಹೋದರು. ಆಗ)
ದುರ್ಯೋಧನಂ ಬಂದು

ಪೊಡೆವಟ್ಟು (ಆಗ ದುರ್ಯೋಧನನು ಬಂದು ನಮಸ್ಕಾರಮಾಡಿ- ಹೇಳಿದನು.)-

ವಚನ:ಅರ್ಥ: ಹಾಗೆ ಶೋಕ ಪಟ್ಟಾಗ ನೀವು ಹಾಗೆ ಹೇಳಬೇಡಿ; ಕ್ಷತ್ರಧರ್ಮವೇ ಹಾಗೆ; ಹೀಗಿರುವುದರಿಂದ ಅಳಬೇಡಿ; ಬೀಡಿಗೆ ಹೋಗಿ' ಎನ್ನಲು 'ಮಹಾಪ್ರಸಾದ ಹಾಗೆಯೇ ಮಾಡುತ್ತೇವೆ'

ಎಂದು ಎಲ್ಲರೂ ಎರಗಿ
ನಮಸ್ಕಾರ ಮಾಡಿ ಹೋದರು.
ಆಗ ದುರ್ಯೋಧನನು ಬಂದು
ನಮಸ್ಕಾರಮಾಡಿ- ಹೇಳಿದನು.

ಚಂ|| ಇಱಿವುದನಾಂತ
ಮಾರ್ವಲಮನಿನ್ನೆಗಮಚ್ಚರಿ
ಯಾಗೆ ತಾಗಿ ತ
ಳ್ತಿಱಿದಿರಿದೊಂದವಸ್ಥೆ
ನಿಮಗೆನ್ನಯ
ಕರ್ಮದಿನಾದುದೆಂದೊಡಿಂ|

ಮರಿವುದು ಕಂದ ಪಾಂಡವರ

ವೈರಮನೆನ್ನೊಡವೋಕೆ

ಕೋಪಮುಂ

ಕಱು

ಪುಮೊಡಂಬಡೇವುದದನಿನ್ನು

ಮೊಡಂಬಡು

ಸಂಧಿಮಾಡುವೆಂ|| ೪೯ ||

ಪದ್ಯ-೪೯:ಪದವಿಭಾಗ-

ಅರ್ಥ:ಇಱಿವುದನು ಆಂತ

ಮಾರ್ವಲಮನು ಇನ್ನೆಗಂ

ಅಚ್ಚರಿಯಾಗೆ ತಾಗಿ ತಳ್ತು

ಇರ್ಚಿದಿರಿ (ಪ್ರತಿಭಟಿಸಿದ
ಪರಪಕ್ಷವನ್ನು ಇಲ್ಲಿಯವರೆಗೆ
ಆಶ್ಚರ್ಯವಾಗುವ ಹಾಗೆ
ತಗುಲಿ ಕೂಡಿಕೊಂಡು
ಕತ್ತರಿಸಿದಿರಿ.) ಇದೊಂದವಸ್ಥೆ
ನಿಮಗೆ ಎನ್ನಯ ಕರ್ಮದಿಂ
ಆದುದು ಎಂದೊಡೆ (ಈಗ ಈ
ಶರಶಯನದಲ್ಲಿ ಮಲಗುವ
ದುರವಸ್ಥೆಯು ನನ್ನ
ಕರ್ಮದಿಂದಾಯಿತು ಎನ್ನಲು)
ಇಂ ಮರಿವುದು ಕಂದ

ಪಾಂಡವರ ವೈರಮನು
(ಭೀಷ್ಮನು 'ಇನ್ನು
ಮೇಲಾದರೂಮಗು,
ಪಾಂಡವರ ಮೇಲಿನ
ದ್ವೇಷವನ್ನು ಬಿಡು')
ಎನ್ನೊಡವ್ರೋಕೆ ಕೋಪಮುಂ
(ಕೋಪವೂ ದ್ವೇಷವೂ
ನನ್ನೊಡನೆ ಹೋಗಲಿ)
ಕಱುಪುಂ ಎಡಂಬಡು
ಏವುದು ಅದನು ಇನ್ನುಂ?
ಒಡಂಬಡು ಸಂಧಿಮಾಡುವೆಂ.

(ವೈರದಿಂದೇನು ಪ್ರಯೋಜನ? ನೀನು ಒಪ್ಪುವವನಾಗು ಸಂಯನ್ನು ಮಾಡುತ್ತೇನೆ, ಎಂದನು)

ಪದ್ಯ-೪೯:ಅರ್ಥ:‘ಪ್ರತಿಭಟಿಸಿದ ಪರಪಕ್ಷವನ್ನು ಇಲ್ಲಿಯವರೆಗೆ ಆಶ್ಚರ್ಯವಾಗುವ ಹಾಗೆ ತಗುಲಿ ಕೂಡಿಕೊಂಡು ಕತ್ತರಿಸಿದಿರಿ. ಈಗ ಈ ಶರಶಯನದಲ್ಲಿ ಮಲಗುವ

ದುರವಸ್ಥೆಯು ನನ್ನ
ಕರ್ಮದಿಂದಾಯಿತು ಎನ್ನಲು
ಭೀಷ್ಮನು ‘ಮಗು, ಪಾಂಡವರ
ಮೇಲಿನ ದ್ವೇಷವನ್ನು ಇನ್ನು
ಮೇಲಾದರೂ ಬಿಡು.
ಕೋಪವೂ ದ್ವೇಷವೂ
ನನ್ನೊಡನೆ ಹೋಗಲಿ;
ವೈರದಿಂದೇನು ಪ್ರಯೋಜನ?
ನೀನು ಒಪ್ಪುವವನಾಗು
ಸಂಯನ್ನು ಮಾಡುತ್ತೇನೆ,
ಎಂದನು

ವ|| ಎಂಬುದುಂ

ದುರ್ಯೋಧನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ದುರ್ಯೋಧನನಿಂತೆಂದಂ-

ವಚನ:ಅರ್ಥ:ಎನ್ನಲಾಗಿ

ದುರ್ಯೋಧನನು ಹೀಗೆ

ಹೇಳಿದನು.

ಚಂ|| ಅದಟಿನಳುರ್ಕೆಯಂ

ಬಲದಳುರ್ಕೆಯುಮಂ

ಗೆಡೆಗೊಂಡು ನೀಮಿದಾ

ವುದು ಪಡೆಮಾತನಿಂತು
ನುಡಿದಿರ್
ಪುದುವಾೞ್ಕೆಯೊಳೆನ್ನ
ಬಳ್ಕಿದ|
ಳ್ಕಿದ ಬಗೆಗಂಡಿರೇ ಮಗನೆ
ನೀಂ ಪಗೆಯಂ ತಱಿದೊಟ್ಟು
ನೆಟ್ಟನೆ
ನ್ನದೆ ಬಗೆಗೆಟ್ಟು
ದಾಯಿಗರೊಳಿಂ ಮಗುೞ್ದಂ
ಪುದುವಾೞ್ವುದೆಂಬಿರೇ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ಅದಟಿನ ಅಳುರ್ಕೆಯಂ (ಶೌರ್ಯದ ಅತಿಶಯವನ್ನೂ) ಬಲದ ಅಳುರ್ಕೆಯುಮಂ ಗೆಡೆಗೊಂಡು(ಸೈನ್ಯದ ಆಧಿಕ್ಯವನ್ನೂ ಹೊಂದಿ ಜೊತೆಯಾಗಿ ಒಟ್ಟಿಗೇ ಬಾಳಿ ಎಂಬ-) ನೀಂ ಇದಾವುದು ಪಡೆಮಾತನು ಇಂತು ನುಡಿದಿರ್ (ಈ

ಬೀಳುಮಾತನ್ನು ಈ ರೀತಿ
ನುಡಿದಿರಿ)
ಪುದುವಾಳ್ಕೆಯೊಳು ಎನ್ನ
ಬಳ್ಕಿದ ಅಳ್ಕಿದ (ಬಳುಕಿದ
ಬೆದರಿದ) ಬಗೆ (ಗ) ಕಂಡಿರೇ
(ಅಳುಕಿದ ಹೆದರಿದ
ಮನಸ್ಸನ್ನೇನಾದರೂ
ಕಂಡಿರೇನು?) ಮಗನೆ ನೀಂ
ಪಗೆಯಂ ತಱಿದೊಟ್ಟು ನೆಟ್ಟನೆ
ಎನ್ನದೆ (ಮಗನೆ ನೀನು
ನೇರವಾಗಿ ಶತ್ರುವನ್ನು ಕತ್ತರಿಸಿ

ರಾಶಿಮಾಡು ಎಂದು ಹೇಳದೆ)
ಬಗೆಗೆಟ್ಟು ದಾಯಿಗರೊಳಿಂ
ಮಗುಳ್ದಿಂ ಪುದುವಾಳ್ವುದು
ಎಂಬಿರೇ (ಬುದ್ಧಿಹೀರಾಗಿ
ಜ್ಞಾತಿಗಳಲ್ಲಿ ಇನ್ನೂ ಕೂಡಿ
ಹುದುವಾಗಿ / ಪ್ರೀತಿಯಿಂದ
ಬಾಳು ಎನ್ನುವುದೇ?)
ಪದ್ಯ-೫೦:ಅರ್ಥ:ಶೌರ್ಯದ
ಅತಿಶಯವನ್ನೂ ಸೈನ್ಯದ
ಆಧಿಕ್ಯವನ್ನೂ ಹೊಂದಿ
ಒಟ್ಟಿಗೇ ಬಾಳಿ ಎಂಬ ಈ

ಬೀಳುಮಾತನ್ನು ಈ ರೀತಿ ನುಡಿದಿರಿ. ಅಳುಕಿದ ಹೆದರಿದ ಮನಸ್ಸನ್ನೇನಾದರೂ ಕಂಡಿರೇನು? ಮಗನೆ ನೀನು ನೇರವಾಗಿ ಶತ್ರುವನ್ನು ಕತ್ತರಿಸಿ ರಾಶಿಮಾಡು ಎಂದು ಹೇಳದೆ, ಬುದ್ಧಿಹೀರಾಗಿ ಜ್ಞಾತಿಗಳಲ್ಲಿ ಇನ್ನೂ ಕೂಡಿ ಪ್ರೀತಿಯಿಂದ ಬಾಳು ಎನ್ನುವುದೇ?

ವ|| ಎಂಬುದುಮಿಲ್ಲಿಂದಂ ಮೇಲಾದ ಕಜ್ಜಮಂ ನೀನೆ ಬಲ್ಲೆ

ಬೀಡಿಂಗೆ ಬಿಜಯಂಗೆಯ್ಯೆಮೆನೆ ಪೊಡೆವಟ್ಟು ಸುಯೋಧನಂ ಪೋದನಾಗಳ್-

ವಚನ:ಪದವಿಭಾಗ-

ಅರ್ಥ:ಎಂಬುದುಂ ಇಲ್ಲಿಂದಂ ಮೇಲಾದ ಕಜ್ಜಮಂ ನೀನೆ ಬಲ್ಲೆ (ಎನ್ನಲು, ಭೀಷ್ಮರು, ‘ಇನ್ನು ಇದಕ್ಕಿಂತಲೂ ಉತ್ತಮವಾದ ಕಾರ್ಯವನ್ನು (ಇನ್ನು ಮೇಲಾಗಬೇಕಾದ

ಕಾರ್ಯವನ್ನು) ನೀನೇ ಬಲ್ಲೆ - ನಿನಗೆ ತಿಳಿದಂತೆ ಮಾಡು,) ಬೀಡಿಂಗೆ ಬಿಜಯಂಗೆಯ್ಯಿಂ ಎನೆ (ನಿನಗೆ ತಿಳಿದಂತೆ ಮಾಡು, ಬೀಡಾರಕ್ಕೆ ಹೋಗು' ಎನ್ನಲು) ಪೊಡೆವಟ್ಟು ಸುಯೋಧನಂ ಪೋದನಾಗಳ್-

ವಚನ:ಅರ್ಥ:ಎನ್ನಲು ಭೀಷ್ಮರು, 'ಇನ್ನು ಇದಕ್ಕಿಂತಲೂ ಉತ್ತಮವಾದ

ಕಾರ್ಯವನ್ನು ನೀನೇ ಬಲ್ಲೆ-
ನಿನಗೆ ತಿಳಿದಂತೆ ಮಾಡು,
ಬೀಡಾರಕ್ಕೆ ಹೋಗು’ ಎನ್ನಲು
ನಮಸ್ಕಾರಮಾಡಿ
ದುರ್ಯೋಧನನು ಹೋದನು.

<u>ದ್ರೋಣನಿಗೆ ಕೌರವನಿಂದ ಸೇನಾಧಿಪತಿ ಪಟ್ಟ</u>

ಚಂ|| ನೆರೆದ ವಿರೋಧಿನಾಯಕರನಾಹವದೊಳ್ ತಱಿದೊಟ್ಟಲೊಂದಿದೊ

ಡ್ದುರುಳ್ವಿನಮಾ
ಗುರ್ಣಾರ್ಣವನಡುರ್ತಿಱಿದಲ್ಲಿ
ಸಿಡಿಲ್ದ ನೆತ್ತರೊಳ್|
ಪೊರೆದು ನಿರಂತರಂ ಪೊಲಸು
ನಾಱುವ ಮೆಯ್ಯನೆ
ಕರ್ಚಲೆಂದು ಚೆ
ಚ್ಚರಮಪರಾಂಬುರಾಶಿಗಿೞಿ
ವಂತಿೞಿದಂ
ಕಮಳೈಕಬಾಂಧವಂ|| ೫೧ ||

ಪದ್ಯ-೫೧:ಪದವಿಭಾಗ-
ಅರ್ಥ:ನೆರೆದ ವಿರೋಧಿ

ನಾಯಕರನು ಆಹವದೊಳ್
ತಱಿದು ಒಟ್ಟಲು ಒಂದಿದ
ಒಡ್ಡು ಉರುಳ್ವಿನಮ್ ಆ
ಗುಣಾರ್ಣವನ ಅಡುರ್ತು
ಅಱಿದು (ಒಟ್ಟುಗೂಡಿದ
ಶತ್ರುನಾಯಕರನ್ನು ತರಿದು
ಯುದ್ಧದಲ್ಲಿ ರಾಶಿ ಮಾಡಲು
ಸೇರಿದ್ದ ಆ ಸೈನ್ಯದ ರಾಶಿಯು
ಉರುಳುವಂತೆ ಅರ್ಜುನನು
ಸಮೀಪಕ್ಕೆ ಬಂದು ಇರಿದಾಗ)
ಅಲ್ಲಿ ಸಿಡಿಲ್ದ ನೆತ್ತರೊಳ್

ಪೊರೆದು (ಸಿಡಿದ ರಕ್ತದಿಂದ ಲೇಪನಗೊಂಡು) ನಿರಂತರಂ ಪೊಲಸು ನಾಱುವ ಮೆಯ್ಯನೆ (ಯಾವಾಗಲೂ ದುರ್ನಾತ ಹೊಡೆಯುತ್ತಿದ್ದ ತನ್ನ ಶರೀರವನ್ನು) ಕರ್ಚಲೆಂದು ಚೆಚ್ಚರಂ ಅಪರಾಂಬುರಾಶಿಗೆ (ತೊಳೆಯಬೇಕೆಂದು ಬೇಗನೆ ಪಶ್ಚಿಮಸಮುದ್ರಕ್ಕೆ) ಇೞಿವಂತೆ ಇೞಿದಂ ಕಮಳೈಕಬಾಂಧವಂ

(ಇಳಿಯುವಂತೆ -ಇಳಿದನು- ಸೂರ್ಯನು ಮುಳುಗಿದನು.)

ಪದ್ಯ-೫೧:ಅರ್ಥ:ಸೂರ್ಯಾಸ್ತದ ವರ್ಣನೆ: ಒಟ್ಟುಗೂಡಿದ ಶತ್ರುನಾಯಕರನ್ನು ತರಿದು ಯುದ್ಧದಲ್ಲಿ ರಾಶಿ ಮಾಡಲು ಸೇರಿದ್ದ ಆ ಸೈನ್ಯದ ರಾಶಿಯು ಉರುಳುವಂತೆ ಅರ್ಜುನನು ಸಮೀಪಕ್ಕೆ ಬಂದು ಇರಿದಾಗ, ಸಿಡಿದ ರಕ್ತದಿಂದ ಲೇಪನಗೊಂಡು

ಯಾವಾಗಲೂ ದುರ್ನಾತ ಹೊಡೆಯುತ್ತಿದ್ದ ತನ್ನ ಶರೀರವನ್ನು ತೊಳೆಯಬೇಕೆಂದು ಸೂರ್ಯನು ಬೇಗನೆ ಪಶ್ಚಿಮಸಮುದ್ರಕ್ಕೆ ಇಳಿದನೋ ಎಂಬಂತೆ ಸೂರ್ಯನು ಮುಳುಗಿದನು.

ವ|| ಆಗಳ್ ದುರ್ಯೋಧನನಾತ್ಮೀಯ ಸೇನಾನಾಯಕನಪ್ಪ

ಗಾಂಗೇಯಂ ಬಿದಿರ ಸಿಡಿಂಬಿನ ಪೊದರೊಳಗೆ ಮರೆದೊಱಗಿದ ಮೃಗರಾಜನಂತೆ ಶರಶಯನದೊಳೊಱಗಿದಂ ಕದನತ್ರಿಣೇತ್ರನನೆಂತು ಗೆಲ್ವೆನೆಂದು ಚಿಂತಿಸಿ ಮಂತ್ರಶಾಲೆಯಂ ಪೊಕ್ಕು ಕರ್ಣ ದ್ರೋಣ ಕೃಪ ಕೃತವರ್ಮಾಶ್ವತ್ಥಾಮ ಶಲ್ಯ ಶಕುನಿ ಸೈಂಧವ ಭೂರಿಶ್ರವ

ಪ್ರಭೃತಿಗಳ್ಗೆಲ್ಲಂ ಬೞಿಯನಟ್ಟಿ ಬರಿಸಿ

ವಚನ:ಪದವಿಭಾಗ-

ಅರ್ಥ:ಆಗಳ್ ದುರ್ಯೋಧನನು ಆತ್ಮೀಯ ಸೇನಾನಾಯಕನಪ್ಪ ಗಾಂಗೇಯಂ (ಆಗ ದುರ್ಯೋಧನನು ತನ್ನ ಸೇನಾನಾಯಕನಾದ ಭೀಷ್ಮನು) ಬಿದಿರ ಸಿಡಿಂಬಿನ ಪೊದರೊಳಗೆ ಮರೆದು

ಒಱಗಿದ ಮೃಗರಾಜನಂತೆ
(ಬಿದಿರ ಮೆಳೆಯ ಪೊದರಿನಲ್ಲಿ
ಎಚ್ಚರತಪ್ಪಿ ಮಲಗಿದ
ಸಿಂಹದಂತೆ)
ಶರಶಯನದೊಳು ಒಱಗಿದಂ
(ಶರಶಯನದಲ್ಲಿ
ಮಲಗಿದನು)
ಕದನತ್ರಿಣೇತ್ರನನು ಎಂತು
ಗೆಲ್ವೆನೆಂದು ಚಿಂತಿಸಿ
(ಅರ್ಜುನನನ್ನು ಹೇಗೆ ಗೆಲ್ಲಲಿ
ಎಂದು ಯೋಚಿಸಿ)

ಮಂತ್ರಶಾಲೆಯಂ ಪೊಕ್ಕು (ಮಂತ್ರಶಾಲೆಯನ್ನು ಪ್ರವೇಶಮಾಡಿ) ಕರ್ಣ ದ್ರೋಣ ಕೃಪ ಕೃತವರ್ಮಾಶ್ವತ್ಥಾಮ ಶಲ್ಯ ಶಕುನಿ ಸೈಂಧವ ಭೂರಿಶ್ರವ ಪ್ರಭೃತಿಗಳ್ಗೆಲ್ಲಂ ಬಟಿಯನಟ್ಟಿ ಬರಿಸಿ (ಸಮರ್ಥರಿಗೆಲ್ಲ ದೂತರನ್ನು ಕಳುಹಿಸಿ ಬರಮಾಡಿದನು.)

ವಚನ:ಅರ್ಥ: ಆಗ ದುರ್ಯೋಧನನು ತನ್ನ

ಸೇನಾನಾಯಕನಾದ ಭೀಷ್ಮನು ಬಿದಿರ ಮೆಳೆಯ ಪೊದರಿನಲ್ಲಿ ಎಚ್ಚರತಪ್ಪಿ ಮಲಗಿದ ಸಿಂಹದಂತೆ ಶರಶಯನದಲ್ಲಿ ಮಲಗಿದನು. ಅರ್ಜುನನನ್ನು ಹೇಗೆ ಗೆಲ್ಲಲಿ ಎಂದು ಯೋಚಿಸಿ, ಮಂತ್ರಶಾಲೆಯನ್ನು ಪ್ರವೇಶಮಾಡಿ ಕರ್ಣ, ದ್ರೋಣ, ಕೃಪ, ಕೃತವರ್ಮ, ಅಶ್ವತ್ಥಾಮ, ಶಲ್ಯ, ಶಕುನಿ,

ಸೈಂಧವ, ಭೂರಿಶ್ರವನೇ ಮೊದಲಾದ ಸಮರ್ಥರಿಗೆಲ್ಲ ದೂತರನ್ನು ಕಳುಹಿಸಿ ಬರಮಾಡಿದನು.

ಶಾ|| ಆಯ್ತೇ ಸಾಸಿಕೊಂಡು ಪಾಂಡುಸುತರಂ ನಣ್ಪಿಂಗೆ ಬೆನ್ನಿತ್ತು ದಲ್
ಸಯ್ತಾಯ್ತಜ್ಜನ ಮಾತು ನಮ್ಮ ಪಡೆಯಂ ಕಾವನ್ನರಿನ್ನಾರೊ ಷು|

ಪ್ರೀತಂ ಕಾವೊಡೆ ಕರ್ಣನಕ್ಕುಮದಱಿಂ ನಾಮೆಲ್ಲಮಾತಂಗೆ ನಿ ರ್ದ್ವೈತಂ ಬೀರದ ಬೀರವಟ್ಟಮನಿದಂ ನಿರ್ವ್ಯಾಜದಿಂ ಕಟ್ಟುವಂ ||೫೨ ||

ಪದ್ಯ-೫೨:ಪದವಿಭಾಗ-ಅರ್ಥ:ಆಯ್ತೋ ಸಾಸಿಕೊಂಡು ಪಾಂಡುಸುತರಂ ನಣ್ಪಿಂಗೆ ಬೆನ್ನಿತ್ತು (ಪಾಂಡವರನ್ನು

ಗೆದ್ದುದಾಯಿತೇ? ಬಾಂಧವ್ಯಕ್ಕೆ
ಮನಸ್ಸು/ ಬೆನ್ನು ಕೊಟ್ಟು
-ಸೋತು) ದಲ್ ಸಯ್ತಾಯ್ತ
ಅಜ್ಜನ ಮಾತು (ನಿಜಕ್ಕೂ?
ಅಜ್ಜನಾಡಿದ ಮಾತು
ನೆಟ್ಟಗಾಯಿತಲ್ಲವೇ?) ನಮ್ಮ
ಪಡೆಯಂ ಕಾವನ್ನರು
ಇನ್ನಾರೊ (ಇನ್ನು ಮೇಲೆ ನಮ್ಮ
ಸೈನ್ಯವನ್ನು
ರಕ್ಷಿಸುವವರಾರಿದ್ದಾರೆ)
ಸುಪ್ರೀತಂ ಕಾವೊಡೆ

ಕರ್ಣನಕ್ಕುಂ ಅದಱಿಂ ನಾಂ
ಎಲ್ಲಮ್ ಆತಂಗೆ
(ರಕ್ಷಿಸುವುದಕ್ಕೆ
ಸಮರ್ಥನಾದವನು ಈ
ಕರ್ಣನೇ! ಆದುದರಿಂದ
ನಾವೆಲ್ಲ ಆತನಿಗೆ) ನಿರ್ದ್ವೈತಂ
ಬೀರದ ಬೀರವಟ್ಟಮನು
ಇದಂ ನಿರ್ವ್ಯಾಜದಿಂ ಕಟ್ಟುವಂ
(ನಿರ್ ದ್ವೈತ ಎರಡು ಇಲ್ಲ -
ಎರಡನೆಯ ಮಾತಿಲ್ಲದೆ
ಸರ್ವಾನುಮತದಿಂದ ಯಾವ

ನೆಪವೂ ಇಲ್ಲದೆ ಸೇನಾಪತ್ಯವನ್ನು ಅವನಿಗೆ ಕಟ್ಟೋಣ)

ಪದ್ಯ-೫೨:ಅರ್ಥ:

ಪಾಂಡವರನ್ನು ಗೆದ್ದುದಾಯಿತೇ? ಬಾಂಧವ್ಯಕ್ಕೆ ಆಶ್ರಯಕೊಟ್ಟ (ಸೋತು) ಅಜ್ಜನಾಡಿದ ಮತು ನೆಟ್ಟಗಾಯಿತಲ್ಲವೇ? ಇನ್ನು ಮೇಲೆ ನಮ್ಮ ಸೈನ್ಯವನ್ನು ರಕ್ಷಿಸುವವರಾರಿದ್ದಾರೆ.

ರಕ್ಷಿಸುವುದಕ್ಕೆ
ಸಮರ್ಥನಾದವನು ಈ
ಕರ್ಣನೇ! ಆದುದರಿಂದ
ನಾವೆಲ್ಲ ಆತನಿಗೆ ಎರಡನೆಯ
ಮಾತಿಲ್ಲದೆ
(ಸರ್ವಾನುಮತದಿಂದ)
ಯಾವ ನೆಪವೂ ಇಲ್ಲದೆ
ಸೇನಾಪತ್ಯವನ್ನು ಅವನಿಗೆ
ಕಟ್ಟೋಣ ಎಂದನು
ದುರ್ಯೋಧನ.

ವ|| ಎಂಬುದುಂ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಕರ್ಣನು ಇಂತು ಎಂದಂ

ವಚನ:ಅರ್ಥ:ವ|| ಎನ್ನಲು ಕರ್ಣನು ಹೀಗೆಂದನು-

ಮ|| ಸುರಸಿಂಧೂದ್ಭವನಿಂ ಬಳಿಕ್ಕೆ ಪೆಱರಾರ್ ಸೇನಾಧಿಪತ್ಯಕ್ಕೆ ತ

ಕ್ಕರೆ ಲೋಕೈಕ ಧನುರ್ಧರಂ
ಕಳಶಜಂ ತಕ್ಕಂ
ನದೀನಂದನಂ|
ಗೆ ರಣಕ್ಕಾಂ
ನೆರಮಾದೆನಪ್ಪೊಡಿನಿತೇಕಾದ
ಪ್ಪುದೀ ಪೊೞ್ತೆ ಪೊ
ೞ್ತಿರವೇಡೀವುದು
ಬೀರವಟ್ಟಮನದಂ
ದ್ರೋಣಂಗೆ ನೀಂ ಭೂಪತೀ||
೫೩ ||

ಪದ್ಯ-೫೩:ಪದವಿಭಾಗ-ಅರ್ಥ:ಸುರಸಿಂಧೂದ್ಭವನಿಂ ಬಳಿಕ್ಕೆ ಪೆಱರಾರ್ (ಭೀಷ್ಮನಾದ ಮೇಲೆ ಸೇನಾಪತ್ಯಕ್ಕೆ ಯೋಗ್ಯರಾದವರು ಬೇರೆ ಯಾರಿದ್ದಾರೆ?) ಸೇನಾಧಿಪತ್ಯಕ್ಕೆ ತಕ್ಕರೆ ಲೋಕೈಕ ಧನುರ್ಧರಂ ಕಳಶಜಂ ತಕ್ಕಂ (ಸೇನಾಧಿಪತ್ಯಕ್ಕೆ

ಯೋಗ್ಯರಾದವರಿರುವ
ಪಕ್ಷದಲ್ಲಿ ಪ್ರಪಂಚದ
ಬಿಲ್ಗಾರರಲ್ಲೆಲ್ಲ ಅಗ್ರೇಸರನಾದ
ದ್ರೋಣನೇ
ಯೋಗ್ಯನಾದವನು)
ನದೀನಂದನಂಗೆ ರಣಕ್ಕೆ ಆಂ
ನೆರಮಾದೆನಪ್ಪೊಡೆ ಇನಿತು
ಏಕಾದಪ್ಪುದು (ನಾನು
ಭೀಷ್ಮನಿಗೆ
ಸಹಾಯಮಾಡಿದ್ದಿದ್ದರೆ
ಹೀಗೇಕಾಗುತ್ತಿತ್ತು.) ಈ ಪೊಟ್ಟೆ

ಪೊಟ್ತಿ ಇರವೇಡ(ಈ ಹೊತ್ತೇ ಹೊತ್ತು (ಇದೇ ಸರಿಯಾದ ಕಾಲ) ಈವುದು (ಕೊಡುವುದು) ಬೀರವಟ್ಟಮನು ಅದಂ ದ್ರೋಣಂಗೆ ನೀಂ ಭೂಪತೀ (ದ್ರೋಣನಿಗೆ ನೀನು ವೀರಪಟ್ಟವನ್ನು ಕೊಡುವುದು ರಾಜನೇ.)

ಪದ್ಯ-೫೩:ಅರ್ಥ:
ಭೀಷ್ಮನಾದ ಮೇಲೆ

ಸೇನಾಪತ್ಯಕ್ಕೆ
ಯೋಗ್ಯರಾದವರು ಬೇರೆ
ಯಾರಿದ್ದಾರೆ? ಸೇನಾಧಿಪತ್ಯಕ್ಕೆ
ಯೋಗ್ಯರಾದವರಿರುವ
ಪಕ್ಷದಲ್ಲಿ ಪ್ರಪಂಚದ
ಬಿಲ್ಗಾರರಲ್ಲೆಲ್ಲ ಅಗ್ರೇಸರನಾದ
ದ್ರೋಣನೇ
ಯೋಗ್ಯನಾದವನು. ನಾನು
ಭೀಷ್ಮನಿಗೆ
ಸಹಾಯಮಾಡಿದ್ದಿದ್ದರೆ
ಹೀಗೇಕಾಗುತ್ತಿತ್ತು. ಈ ಹೊತ್ತೇ

ಹೊತ್ತು (ಇದೇ ಸರಿಯಾದ ಕಾಲ). ದ್ರೋಣನಿಗೆ ನೀನು ವೀರಪಟ್ಟವನ್ನು ಕೊಡುವುದು ರಾಜನೇ, ಎಂದನು ಕರ್ಣ.

ವ|| ಅಂತು ಭೀಷ್ಮಾದನಂತರಂ ದ್ರೋಣಯೆಂಬುದು ಪರಾಶರ ವಚನಮೆನೆ ಕರ್ಣನ ನುಡಿಗೊಡಂಬಟ್ಟು-

ವಚನ:ಪದವಿಭಾಗ-

ಅರ್ಥ:ಅಂತು ಭೀಷ್ಮಾದನಂತರಂ

ದ್ರೋಣಯೆಂಬುದು ಪರಾಶರ ವಚನಮೆನೆ ಕರ್ಣನ ನುಡಿಗೊಡಂಬಟ್ಟು-

ವಚನ:ಅರ್ಥ:ವ||

‘ಭೀಷ್ಮನಾದ ಮೇಲೆ ದ್ರೋಣ ಎಂಬುದು ವ್ಯಾಸಋಷಿಗಳ ಮಾತು’ ಎನ್ನಲು ಹಾಗೆಯೇ ಆಗಲಿ ಎಂದು ಕರ್ಣನ ಮಾತಿಗೆ ಒಪ್ಪಿದನು.

ಕಂ|| ವಿಸಸನ ರಂಗಕ್ಕಾನಿರೆ

ಬೆಸಗೊಳ್ಳ್ವುದೆ ಪೆಱರನೆಂದು ಜಯಪಟಹಂಗಳ್| ದೆಸೆದೆಸೆಗೆಸೆವಿನೆಗಂ ಕ ಟ್ಟಿಸಿಕೊಂಡಂ ಬೀರವಟ್ಟಮಂ ಕಳಶಭವಂ|| ೫೪ ||

ಪದ್ಯ-೫೪:ಪದವಿಭಾಗ-ಅರ್ಥ:ವಿಸಸನ ರಂಗಕ್ಕೆ ಆನು ಇರೆ ಬೆಸಗೊಳ್ಳ್ವುದೆ ಪೆಱರನು ಎಂದು (ಯುದ್ಧರಂಗಕ್ಕೆ ನಾನಿರುವಾಗ ಬೇರೆಯವರನ್ನು ವಿಚಾರಮಾಡುವುದೇ! ಎಂದು

ಹೇಳುತ್ತ) ಜಯಪಟಹಂಗಳ್।
ದೆಸೆದೆಸೆಗೆ ಎಸೆವಿನೆಗಂ
(ಜಯಭೇರಿಗಳು
ದಿಕ್ಕುದಿಕ್ಕುಗಳಲ್ಲಿಯೂ
ಭೋರ್ಗರೆಯುತ್ತಿರಲು)
ಕಟ್ಟಿಸಿಕೊಂಡಂ
ಬೀರವಟ್ಟಮಂ ಕಳಶಭವಂ
(ವೀರಪಟ್ಟವನ್ನು
ಕಟ್ಟಿಸಿಕೊಂಡನು, ದ್ರೋಣನು)
ಪದ್ಯ-೫೪:ಅರ್ಥ:
ಯುದ್ಧರಂಗಕ್ಕೆ ನಾನಿರುವಾಗ

ಬೇರೆಯವರನ್ನು
ವಿಚಾರಮಾಡುವುದೇ! ಎಂದು
ಹೇಳುತ್ತ ಜಯಭೇರಿಗಳು
ದಿಕ್ಕುದಿಕ್ಕುಗಳಲ್ಲಿಯೂ
ಭೋರ್ಗರೆಯುತ್ತಿರಲು
ದ್ರೋಣನು ವೀರಪಟ್ಟವನ್ನು
ಕಟ್ಟಿಸಿಕೊಂಡನು.

**ವ|| ಅಂತು
ಕುಂಭಸಂಭವನನೇಕ
ಶಾತಕುಂಭ ಕುಂಭಸಂಭೃತ
ಮಂಗಳಗಂಗಾ ಜಲಂಗಳಿಂ**

ಪವಿತ್ರೀಕೃತಗಾತ್ರನಾಗಿ ಕೌರವಬಳಾಗ್ರಗಣ್ಯನಾಗಿರ್ದನಿತ್ತ ತದ್ವೃತ್ತಾಂತಮನೆಲ್ಲಮನಜಾತಶತ್ರು ಕೇಳ್ದು ಜನಾರ್ದನನೊಡನೆ ರಿಪುಬಳಮರ್ದನೋಪಾಯಮಂ ಸಮಕಟ್ಟುತಿರ್ಪನ್ನೆಗಂ-

ವಚನ:ಪದವಿಭಾಗ-

ಅರ್ಥ:ಅಂತು ಕುಂಭಸಂಭವನ ಅನೇಕ ಶಾತಕುಂಭ (ಹಾಗೆ

ದ್ರೋಣಾಚಾರ್ಯನು ಅನೇಕ
ಚಿನ್ನದ ಕಲಶಗಳಲ್ಲಿ)
ಕುಂಭಸಂಭೃತ ಮಂಗಳಗಂಗಾ
ಜಲಂಗಳಿಂ (ಮಂಗಳ
ಗಂಗಾಜಲದಿಂದ)
ಪವಿತ್ರೀಕೃತಗಾತ್ರನಾಗಿ (ಶುದ್ಧಿ
ಮಾಡಲ್ಪಟ್ಟ
ಶರೀರವುಳ್ಳವನಾಗಿ)
ಕೌರವಬಳ
ಅಗ್ರಗಣ್ಯನಾಗಿರ್ದನು
(ಕೌರವಸೈನ್ಯದ

ಮುಖ್ಯಸ್ಥನಾಗಿದ್ದನು.) ಇತ್ತ ತದ್ವೃತ್ತಾಂತಮನು ಎಲ್ಲಮನು ಅಜಾತಶತ್ರು ಕೇಳ್ದು (ಈ ಕಡೆ ಈ ವೃತ್ತಾಂತವನ್ನೆಲ್ಲ ಧರ್ಮರಾಯನು ಕೇಳಿ) ಜನಾರ್ದನನೊಡನೆ ರಿಪುಬಳ ಮರ್ದನ ಉಪಾಯಮಂ ಸಮಕಟ್ಟುತಿರ್ಪ ಅನ್ನೆಗಂ (ಕೃಷ್ಣನೊಡನೆ ಶತ್ರುಸೈನ್ಯವನ್ನು ನಾಶಪಡಿಸುವ

ಉಪಾಯವನ್ನು ಏರ್ಪಡಿಸುತ್ತಿರುವಾಗ)- **ವಚನ:ಅರ್ಥ**:ಹಾಗೆ ದ್ರೋಣಾಚಾರ್ಯನು ಅನೇಕ ಚಿನ್ನದ ಕಲಶಗಳಲ್ಲಿ ತುಂಬಿಟ್ಟಿದ್ದ ಮಂಗಳ ಗಂಗಾಜಲದಿಂದ ಶುದ್ಧಿ ಮಾಡಲ್ಪಟ್ಟ ಶರೀರವುಳ್ಳವನಾಗಿ ಕೌರವಸೈನ್ಯದ ಮುಖ್ಯಸ್ಥನಾಗಿದ್ದನು. ಈ ಕಡೆ ಈ

ವೃತ್ತಾಂತವನ್ನೆಲ್ಲ

ಧರ್ಮರಾಯನು ಕೇಳಿ

ಕೃಷ್ಣನೊಡನೆ ಶತ್ರುಸೈನ್ಯವನ್ನು

ನಾಶಪಡಿಸುವ

ಉಪಾಯವನ್ನು

ಏರ್ಪಡಿಸುತ್ತಿರುವಾಗ-.

ಮ|| ಅದಟಂ

ಸಿಂಧುತನೂಭವಂ

ವಿಜಯನೊಳ್

ಮಾರ್ಕೊಂಡಣಂ ಕಾದಲಾ

ಱದೆ ಬೆಂಬಿೞ್ದೊಡೆ
ಕಾದಲೆಂದು ಬೆಸನಂ ಪೂಣ್ದಂ
ಗಡಂ ದ್ರೋಣನಂ||
ತದುವಂ ನೋಡುವೆನೆಂದು
ಕಣ್ ತಣಿವಿನಂ ನೋಡಲ್ಕೆ
ಬರ್ಪಂತೆ ಬಂ
ದುದಯಾದ್ರೀಂದ್ರಮನೇಱಿ
ಭಾನು
ಪೊಱಮಟ್ಟೊಡ್ಡಿತ್ತನೀಕಾರ್ಣ
ವಂ|| ೫೫ ||

ಪದ್ಯ-೫೫:ಪದವಿಭಾಗ-ಅರ್ಥ:ಅದಟಂ ಸಿಂಧುತನೂಭವಂ ವಿಜಯನೊಳ್ ಮಾರ್ಕೊಂಡು ಅಣಂ ಕಾದಲಾಱದೆ(ಪರಾಕ್ರಮಶಾಲಿಯಾದ ಭೀಷ್ಮನು ಅರ್ಜುನನನ್ನು ಪ್ರತಿಭಟಿಸಿ ವಿಶೇಷವಾಗಿ ಕಾದಲಾರದೆ) ಬೆಂಬಿಱ್ದೊಡೆ (ಬಾಣಗಳಿಗೆ ಬೆನ್ನುಕೊಟ್ಟು ಬಿದ್ದರೆ,)

ಕಾದಲೆಂದು ಬೆಸನಂ ಪೂಣ್ದಂ ಗಡಂ ದ್ರೋಣನು (ದ್ರೋಣನು ತಾನು ಕಾದುವೆನೆಂದು ಕಾರ್ಯವನ್ನು ಪ್ರತಿಜ್ಞೆ ಮಾಡಿದನಲ್ಲ!) ಅಂತದುವಂ ನೋಡುವೆನೆಂದು ಕಣ್ ತಣಿವಿನಂ ನೋಡಲ್ಕೆ ಬರ್ಪಂತೆ (ಅದನ್ನು ನೋಡುತ್ತೇನೆ ಎಂದು ಕಣ್ಣು ತೃಪ್ತಿಪಡುವವರೆಗೆ ನೋಡಲು ಬರುವ ಹಾಗೆ) ಬಂದು

ಉದಯಾದ್ರೀಂದ್ರಮನು ಏರಿ
(ಉದಯ ಪರ್ವತವನ್ನೇರಿ)
ಭಾನು ಪೊಱಮಟ್ಟು
(ಸೂರ್ಯನು ಹೊರಬಂದು
ಉದಯ ಪರ್ವತವನ್ನು
ಏರಲು) ಒಡ್ಡಿತ್ತು
ಅನೀಕಾರ್ಣವಂ ()
ಪದ್ಯ-೫೫:ಅರ್ಥ:
ಪರಾಕ್ರಮಶಾಲಿಯಾದ
ಭೀಷ್ಮನು ಅರ್ಜುನನನ್ನು
ಪ್ರತಿಭಟಿಸಿ ವಿಶೇಷವಾಗಿ

ಕಾದಲಾರದೆ ಬಾಣಗಳಿಗೆ ಬೆನ್ನುಕೊಟ್ಟು ಬಿದ್ದರೆ, ದ್ರೋಣನು ತಾನು ಕಾದುವೆನೆಂದು ಕಾರ್ಯವನ್ನು ಪ್ರತಿಜ್ಞೆ ಮಾಡಿದನಲ್ಲ! ಅದನ್ನು ನೋಡುತ್ತೇನೆ ಎಂದು ಕಣ್ಣು ತೃಪ್ತಿಪಡುವವರೆಗೆ ನೋಡಲು ಬರುವ ಹಾಗೆ ಸೂರ್ಯನು ಉದಯ ಪರ್ವತವನ್ನೇರಿ ಹೊರಬರಲು,

ಸೇನಾಸಮುದ್ರವು ಹೊರಟು ಯುದ್ಧಕ್ಕೆ ಸಿದ್ಧವಾಗಿತ್ತು.

ವ|| ಆಗಳ್ ಪಾಂಡವ ಬಲದ ಸೇನಾನಾಯಕಂ ಧೃಷ್ಟದ್ಯುಮ್ನನೊಡ್ಡಿದ ವಜ್ರವ್ಯೂಹಕ್ಕೆ ಪದ್ಮವ್ಯೂಹಮನೊಡ್ಡಿ ತದ್ವ್ಯೂಹದ ಮೊನೆಗೆ ವಂದು-

ವಚನ:ಪದವಿಭಾಗ-

ಅರ್ಥ:ಆಗಳ್ ಪಾಂಡವ ಬಲದ ಸೇನಾನಾಯಕಂ

ಧೃಷ್ಟದ್ಯುಮ್ನನು ಒಡ್ಡಿದ
ವಜ್ರವ್ಯೂಹಕ್ಕೆ
(ದೃಷ್ಟದ್ಯುಮ್ನನು ಒಡ್ಡಿದ್ದ
ವಜ್ರವ್ಯೂಹಕ್ಕೆ)
ಪದ್ಮವ್ಯೂಹಮನು ಒಡ್ಡಿ
()ತದ್ವ್ಯೂಹದ ಮೊನೆಗೆ
ವಂದು-

ವಚನ:ಅರ್ಥ:ವ|| ಆಗ
ಪಾಂಡವಸೈನ್ಯದ
ಸೇನಾನಾಯಕನಾದ
ದೃಷ್ಟದ್ಯುಮ್ನನು ಒಡ್ಡಿದ್ದ

ವಜ್ರವ್ಯೂಹಕ್ಕೆ ಪ್ರತಿಯಾಗಿ ಪದ್ಮವ್ಯೂಹವನ್ನು ಎದುರು ನಿಲ್ಲಿಸಿ ಆ ವ್ಯೂಹದ ಮುಂಭಾಗಕ್ಕೆ ಬಂದು-

ಮಂ|| ಕ್ರಾಂ||

ಶೋಣಾಶ್ವಂಗಳ್ ರಜತ

ವಥಮಂ ಪೂಡೆ ಕುಂಭಧ್ವಜಂ

ಗೀ

ರ್ವಾಣಾವಾಸಂಬರಮಡರೆ

ಮಾಳ್ಕೊಡ್ಡು ದಲ್ ಸಾಲದೆನ್ನೀ|

ಬಾಣಾವಾಸಕ್ಕೆನುತುಮಳವಂ ಬೀಱುತುಂ ಬಿಲ್ಗೆ ಜಾಣಂ ದ್ರೋಣಂ ನಿಂದಂ ಮಸಗಿ ತಿರುಪುತ್ತೊಂದು ಕೂರಂಬನಾಗಳ್|| ೫೭ ||

ಪದ್ಯ-00:ಪದವಿಭಾಗ-ಅರ್ಥ:ಶೋಣಾಶ್ವಂಗಳ್ ರಜತ ವಥಮಂ ಪೂಡೆ (ಬೆಳ್ಳಿಯ ರಥಕ್ಕೆ ಕೆಂಪುಕುದುರೆಗಳನ್ನು ಹೂಡಿರಲು) ಕುಂಭಧ್ವಜಂ

ಗೀರ್ವಾಣ ಆವಾಸ ಅಂಬರಂ
ಅಡರೆ (ಕಲಶದ ಚಿಹ್ನೆಯುಳ್ಳ
ಬಾವುಟವು
ದೇವಲೋಕದವರೆಗೆ
ಚಾಚಿರಲು) ಮಾಳೊಡ್ಡು ದಲ್
ಸಾಲದು ಎನ್ನ ಈ
ಬಾಣಾವಾಸಕ್ಕೆ ಎನುತುಂ
(ಎದುರುಬಿದ್ದ ಶತ್ರುಸೈನ್ಯವು
ಈ ನನ್ನ ಬತ್ತಳಿಕೆಗೆ
ಸಾಕಾಗುವುದಿಲ್ಲ) ಅಳವಂ
ಬೀಱುತುಂ (ತನ್ನ ಶಕ್ತಿಯನ್ನು

ಪ್ರದರ್ಶಿಸುತ್ತ) ಬಿಲ್ಗೆ ಜಾಣಂ ದ್ರೋಣಂ ನಿಂದಂ ಮಸಗಿ(ಕೆರಳಿ) (ಬಿಲ್ಲಿನಲ್ಲಿ ಜಾಣನಾದ ದ್ರೋಣನು ರೇಗಿ ಒಂದು ಹರಿತವಾದ ಬಾಣವನ್ನು ಬೀಸುತ್ತ ನಿಂತು ಕೊಂಡನು.) ತಿರುಪುತ್ತ ಒಂದು ಕೂರಂಬನು ಆಗಳ್ (ಒಂದು ಹರಿತವಾದ ಬಾಣವನ್ನು ಬೀಸುತ್ತ ನಿಂತು ಕೊಂಡನು)

ಪದ್ಯ-00:ಅರ್ಥ:ಬೆಳ್ಳಿಯ ರಥಕ್ಕೆ ಕೆಂಪುಕುದುರೆಗಳನ್ನು ಹೂಡಿರಲು ಕಲಶದ ಚಿಹ್ನೆಯುಳ್ಳ ಬಾವುಟವು ದೇವಲೋಕದವರೆಗೆ ಚಾಚಿರಲು, ಎದುರುಬಿದ್ದ ಶತ್ರುಸೈನ್ಯವು ಈ ನನ್ನ ಬತ್ತಳಿಕೆಗೆ ಸಾಕಾಗುವುದಿಲ್ಲ ಅಲ್ಲವೇ! ಎಂದು ಹೇಳಿ ತನ್ನ ಶಕ್ತಿಯನ್ನು ಪ್ರದರ್ಶಿಸುತ್ತ ಬಿಲ್ಲಿನಲ್ಲಿ ಜಾಣನಾದ

ದ್ರೋಣನು ಕೆರಳಿ, ಒಂದು ಹರಿತವಾದ ಬಾಣವನ್ನು ಬೀಸುತ್ತ ನಿಂತು ಕೊಂಡನು.

ಕಂ|| ಆ ಸಕಳ ಧರಾಧೀಶರ
ಬೀಸುವ ಕುಂಚಮನೆ ಪಾರ್ದು
ಬೀಸಲೊಡಂ ಕೆ|
ಯ್ವೀಸಲೊಡಮಱಿದು
ತಾಗಿದು
ವಾಸುಕರಂ ಬೆರಸು
ತಡೆಯದುಭಯ ಬಲಂಗಳ್||
೫೭ ||

ಪದ್ಯ-00:ಪದವಿಭಾಗ-ಅರ್ಥ:ಆ ಸಕಳ ಧರಾಧೀಶರ ಬೀಸುವ ಕುಂಚಮನೆ (ಆ ರಾಜರುಗಳ ಬೀಸುವ ಚವುರಿಗಳನ್ನೇ) ಪಾರ್ದು ಬೀಸಲು ಒಡಂ ಕೆಯ್ವೀಸಲೊಡಂ (ನೋಡಿಕೊಂಡು ಕೈಬೀಸಿದೊಡನೆಯೇ) ಅಱಿದು ತಾಗಿದುವು (ವೇಗದಿಂದ ಕೂಡಿ

ಯುದ್ಧದಲ್ಲಿ ತೊಡಗಿದುವು) ಆ ಸುಕರಂ ಬೆರಸು ತಡೆಯದೆ ಉಭಯ ಬಲಂಗಳ್ (ಎರಡುಸೈನ್ಯಗಳೂ ಅದನ್ನು ತಿಳಿದು ಸಾವಕಾಶಮಾಡದೆ)

ಪದ್ಯ-00:ಅರ್ಥ: ಆ ರಾಜರುಗಳ ಬೀಸುವ ಚವುರಿಗಳನ್ನೇ ನೋಡಿಕೊಂಡು ಕೈಬೀಸಿದೊಡನೆಯೇ ಎರಡುಸೈನ್ಯಗಳೂ ಅದನ್ನು

ತಿಳಿದು ಸಾವಕಾಶಮಾಡದೆ ವೇಗದಿಂದ ಕೂಡಿ ಯುದ್ಧದಲ್ಲಿ ತೊಡಗಿದುವು.

ವ|| ಅಂತು ಚಾತುರ್ದಂತಮೊದೊಂದರೊಳ್ ತಾಗಿ ತಳ್ತಿಱಿವಲ್ಲಿ ತಲೆಗಳ್ ಪಱಿಯೆ ಬರಿಗಳ್ ಮುಱಿಯೆ ತೊಡೆಗಳುಡಿಯೆ ಪುಣ್ಗಳ್ ಸುಲಿಯೆ-

ವಚನ:ಪದವಿಭಾಗ-

ಅರ್ಥ:ಅಂತು

ಚಾತುರ್ದಂತಮು
ಒಂದೊಂದರೊಳ್ ತಾಗಿ ತಳ್ತು
ಇಱಿವಲ್ಲಿ (ಚತುರಂಗಬಲವೂ
ಒಂದರೊಡನೊಂದು ತಾಗಿ
ಕೂಡಿಕೊಂಡು
ಯುದ್ಧಮಾಡುವಾಗ) ತಲೆಗಳ್
ಪಱಿಯೆ, ಬರಿಗಳ್
ಮುಱಿಯೆ, ತೊಡೆಗಳ
ಉಡಿಯೆ ಪುಣ್ಗಳ್ ಸುಲಿಯೆ
(ತಲೆಗಳು ಹರಿದುವು,
ಪಕ್ಕೆಗಳು ಮುರಿದುವು,

ತೊಡೆಗಳು ಒಡೆದುವು,
ಹುಬ್ಬುಗಳು ಬಿರಿದುವು)-
ವಚನ:ಅರ್ಥ:ಚತುರಂಗಬಲ
ವೂ ಒಂದರೊಡನೊಂದು
ತಾಗಿ ಕೂಡಿಕೊಂಡು
ಯುದ್ಧಮಾಡುವಾಗ ತಲೆಗಳು
ಹರಿದುವು, ಪಕ್ಕೆಗಳು
ಮುರಿದುವು, ತೊಡೆಗಳು
ಒಡೆದುವು, ಹುಬ್ಬುಗಳು
ಬಿರಿದುವು-

ಚಂ|| ಒಡನೆ ನಭಂಬರಂ
ಸಿಡಿಲ್ವ ಪಂದಲೆ ಸೂಸುವ
ಕಂಡದಿಂಡೆಗಳ್
ತೊಡರೆ ತೆರಳ್ದ ನೆತ್ತರ ಕಡಲ್
ನೆಣದೊಳ್ಗೆಸರೊಳ್ ಜಿಗಿಲ್ತಗು|
ರ್ವಡರೆ ನಿರಂತರಂ ಪೊಳೆವ
ಬಾಳುಡಿ ಸುಯ್ವ ನವ
ವ್ರಣಂಗಳೊಳ್
ಪೊಡರೆ ಪೊದಳ್ದುದದ್ಭುತ
ಭಯಾನಕಮಾಹವ
ರಂಗಭೂಮಿಯೊಳ್|| ೫೮ ||

ಪದ್ಯ-೫೮:ಪದವಿಭಾಗ-ಅರ್ಥ:ಒಡನೆ ನಭಂಬರಂ ಸಿಡಿಲ್ವ ಪಂದಲೆ (ಆ ಕೂಡಲೆ ಆಕಾಶದವರೆಗೂ ಸಿಡಿಯುವ ಹಸಿಯ ತಲೆಯೂ) ಸೂಸುವ ಕಂಡದಿಂಡೆಗಳ್ ತೊಡರೆ (ಚೆಲ್ಲುವ ಮಾಂಸಖಂಡದ ಮುದ್ದೆಗಳೂ ಸಿಕ್ಕಿಕೊಳ್ಳಲು) ತೆರಳ್ದ ನೆತ್ತರ ಕಡಲ್ ನೆಣದ ಒಳ್ (ಗೆ) ಕೆಸರೊಳ್ ಜಿಗಿಲ್ತು ಅಗುರ್ವು ಅಡರೆ

(ಸಾಂದ್ರವಾದ ರಕ್ತಸಮುದ್ರದ
ಕೊಬ್ಬಿನ ಹೆಚ್ಚಾದ ಕೆಸರಿನಲ್ಲಿ
ಅಂಟಿಕೊಂಡು ಭಯವನ್ನು
ಹೆಚ್ಚಿಸುತ್ತಿರಲು,) ನಿರಂತರಂ
ಪೊಳೆವ ಬಾಳ್ ಉಡಿ ಸುಯ್ವ
(ಒಂದೇ ಸಮನಾಗಿ
ಹೊಳೆಯುತ್ತಿರುವ ಕತ್ತಿಯ
ಚೂರುಗಳು
ಹೊರಸೂಸುಯುತ್ತಿರುವ)
ನವ ವ್ರಣಂಗಳು ಒಳ್ಪು ಒಡರೆ
(ಹೊಸಗಾಯಗಳಲ್ಲಿ ಬಹಳ

ಉಕ್ಕುತ್ತಿರಲು-
ಸ್ಫುರಿಸುತ್ತಿರಲು) ಪೊದಱ್ದುದು
ಅದ್ಭುತ ಭಯಾನಕಂ ಆಹವ
ರಂಗಭೂಮಿಯೊಳ್
(ಯುದ್ಧಭೂಮಿಯಲ್ಲಿ
ಆಶ್ಚರ್ಯವೂ ಭಯವೂ
ವ್ಯಾಪಿಸಿದುವು)
ಪದ್ಯ-೫೮:ಅರ್ಥ: ಆ ಕೂಡಲೆ
ಆಕಾಶದವರೆಗೂ ಸಿಡಿಯುವ
ಹಸಿಯ ತಲೆಯೂ ಚೆಲ್ಲುವ
ಮಾಂಸಖಂಡದ ಮುದ್ದೆಗಳೂ

ಸಿಕ್ಕಿಕೊಳ್ಳಲು, ಸಾಂದ್ರವಾದ
ರಕ್ತಸಮುದ್ರದ ಕೊಬ್ಬಿನ
ಹೆಚ್ಚಾದ ಕೆಸರಿನಲ್ಲಿ
ಅಂಟಿಕೊಂಡು ಭಯವನ್ನು
ಹೆಚ್ಚಿಸುತ್ತಿರಲು, ಒಂದೇ
ಸಮನಾಗಿ ಹೊಳೆಯುತ್ತಿರುವ
ಕತ್ತಿಯ ಚೂರುಗಳು
ಹೊರಸೂಸುಯುತ್ತಿರುವ
ಹೊಸಗಾಯಗಳಲ್ಲಿ ಬಹಳ
ಉಕ್ಕುತ್ತಿರಲು,
ಯುದ್ಧಭೂಮಿಯಲ್ಲಿ

ಆಶ್ಚರ್ಯವೂ ಭಯವೂ ವ್ಯಾಪಿಸಿದುವು.

ವ|| ಆಗಳೆರಡುಂ ಬಲದ ಸೇನಾನಾಯಕರೊಂದೊರ್ವರೊಳ್ ಕಾದುವಾಗಳ್ ಕುಂಭಸಂಭವಂ ಧರ್ಮಪುತ್ರನ ಮೊನೆಯೊಳ್ ಭರಂಗೆಯ್ದು ಕಾದುವಾಗಳ್-

ವಚನ:ಪದವಿಭಾಗ-

ಅರ್ಥ:ಆಗಳು ಎರಡುಂ ಬಲದ ಸೇನಾನಾಯಕರ್

ಒಂದೊರ್ವರೊಳ್
ಕಾದುವಾಗಳ್ (ಎರಡು
ಸೈನ್ಯದ ಸೇನಾ ನಾಯಕರೂ
ಪರಸ್ಪರ ಹೋರಾಡುವಾಗ)
ಕುಂಭಸಂಭವಂ
ಧರ್ಮಪುತ್ರನ ಮೊನೆಯೊಳ್
ಭರಂಗೆಯ್ದು ಕಾದುವಾಗಳ್
(ದ್ರೋಣನು
ಧರ್ಮರಾಜನೊಡನೆ
ಆರ್ಭಟಮಾಡಿ ಕಾದುವಾಗ-)-

ವಚನ:ಅರ್ಥ:ವ|| ಆಗ ಎರಡು ಸೈನ್ಯದ ಸೇನಾ ನಾಯಕರೂ ಪರಸ್ಪರ ಹೋರಾಡುವಾಗ ದ್ರೋಣನು ಧರ್ಮರಾಜನೊಡನೆ ಆರ್ಭಟಮಾಡಿ ಕಾದುವಾಗ-.

ವ|| ಧ್ವಜಮಂ ಖಂಡಿಸಿ ಪೂಣ್ದು ಬಾಣದೊಳೆ ಧೃಷ್ಟದ್ಯುಮ್ನನಂ ನೆಟ್ಟನೊ ಟ್ಟಜೆಯಿಂ ತೂಳ್ದಿ ಶಿಖಂಡಿಯಂ ದ್ರುಪದನಂ

ಕಾಯ್ಪಿಂದಮೇಸಾಡಿ ಮಿ|

ಕ್ಕು ಜವಂ ಕೊಲ್ವವೊಲಾತನಿಂ

ಕಿಱಿಯರಂ ಪನ್ನೊರ್ವರಂ

ಕೊಂದು ಮ

ತ್ಸ್ಯಜನಂ ಮಾಣದೆ

ಕೊಂದನೊಂದೆ ಶರದಿಂ

ನಿಶ್ಯಂಕನಂ ಶಂಕನಂ|| ೫೯ ||

ಪದ್ಯ-೫೯:ಪದವಿಭಾಗ-

ಅರ್ಥ:ಧ್ವಜಮಂ ಖಂಡಿಸಿ

ಪೂಣ್ದು ಬಾಣದೊಳೆ

ಧೃಷ್ಟದ್ಯುಮ್ನನಂ ನೆಟ್ಟನೆ

ಒಟ್ಟಜೆಯಿಂ ತೂಳ್ದಿ (ಧ್ವಜವನ್ನು ಕತ್ತರಿಸಿ ಧೃಷ್ಟದ್ಯುಮ್ನನನ್ನು ನೇರವಾಗಿ ಪೂರ್ತಿ ಬಾಣಗಳಲ್ಲಿ ಹೂಳಿ,) ಶಿಖಂಡಿಯಂ ದ್ರುಪದನಂ ಕಾಯ್ಪಿಂದಂ ಏಸಾಡಿ (ಶಿಖಂಡಿಯನ್ನೂ ದ್ರುಪದನನ್ನು ಕೋಪದಿಂದ ತಳ್ಳಿ ಹೊಡೆದು) ಮಿಕ್ಕು ಜವಂ ಕೊಲ್ವವೊಲ್ ಆತನಿಂ ಕಿಱಿಯರಂ ಪನ್ನೊರ್ವರಂ

ಕೊಂದು (ಮೀರಿ ಆತನ
ತಮ್ಮಂದಿರಾದ ಹನ್ನೊಂದು
ಜನರನ್ನೂ ಯಮನು
ಕೊಲ್ಲುವ ಹಾಗೆ ಕೊಂದು)
ಮತ್ಸ್ಯಜನಂ ಮಾಣದೆ
ಕೊಂದನು ಒಂದೆ ಶರದಿಂ
ನಿಶ್ಯಂಕನಂ ಶಂಕನಂ (
ವಿರಾಟನ ಮಗನಾದ
ಶಂಕಾರಹಿತನಾದ ಶಂಖನನ್ನು
ಒಂದೇ ಬಾಣದಿಂದ ಕೊಂದು
ಹಾಕಿದನು.)

ಪದ್ಯ-೫೯:ಅರ್ಥ: ಧ್ವಜವನ್ನು ಕತ್ತರಿಸಿ ಧೃಷ್ಟದ್ಯುಮ್ನನನ್ನು ನೇರವಾಗಿ ಪೂರ್ತಿ ಬಾಣಗಳಲ್ಲಿ ಹೂಳಿ, ಶಿಖಂಡಿಯನ್ನೂ ದ್ರುಪದನನ್ನು ಕೋಪದಿಂದ ತಳ್ಳಿ ಹೊಡೆದು ಮೀರಿ ಆತನ ತಮ್ಮಂದಿರಾದ ಹನ್ನೊಂದು ಜನರನ್ನೂ ಯಮನು ಕೊಲ್ಲುವ ಹಾಗೆ ಕೊಂದು ವಿರಾಟನ ಮಗನಾದ ಶಂಕಾರಹಿತನಾದ ಶಂಖನನ್ನು

ಒಂದೇ ಬಾಣದಿಂದ ಕೊಂದು ಹಾಕಿದನು.

ವ|| ಆಗಳ್ ಸಾಲ್ವಲ ದೇಶದರಸಂ ಚೇಕಿತ್ಸಂ ಪ್ರಳಯಕಾಲದ ಮೇಘಘಟೆಗಳೆನಿಸುವ ನೇಕಾನೇಕಪ ಘಟೆಗಳ್ವೆರಸರಸನಂ ಪೆಱಗಿಕ್ಕಿ ಬಂದು ತಾಗಿದಾಳ್-

ವಚನ:ಪದವಿಭಾಗ-ಅರ್ಥ:

ಆಗಳ್ ಸಾಲ್ವಲ ದೇಶದರಸಂ

ಚೇಕಿತ್ಸಂ (ಆಗ ಸಾಲ್ವಲದೇಶದ
ಅರಸನಾದ ಚೇಕಿತ್ಸನು)
ಪ್ರಳಯಕಾಲದ
ಮೇಘಘಟೆಗಳೆನು ಇಸುವ
ಅನೇಕ ಅನೇಕಪ
ಘಟೆಗಳ್ವೆರಸು
(ಪ್ರಳಯಕಾಲದ
ಮೋಡಗಳೆನಿಸುವ ಅನೇಕ
ಆನೆಯ ಗುಂಪುಗಳನ್ನು
ಕೂಡಿಕೊಂಡು) ಅರಸನಂ
ಪೆಱಗಿಕ್ಕಿ ಬಂದು ತಾಗಿದಾಳ್

(ರಾಜನನ್ನು ಹಿಂದಿಕ್ಕಿ ಬಂದು ಎದುರಿಸಿದನು.)-

ವಚನ:ಅರ್ಥ:ಆಗ ಸಾಲ್ವಲ ದೇಶದ ಅರಸನಾದ ಚೇಕಿತ್ಸನು ಪ್ರಳಯಕಾಲದ ಮೋಡಗಳೆನಿಸುವ ಅನೇಕ ಆನೆಯ ಗುಂಪುಗಳನ್ನು ಕೂಡಿಕೊಂಡು ಧರ್ಮರಾಜನನ್ನು ಹಿಂದಕ್ಕಿರಿಸಿ ಬಂದು ಎದುರಿಸಿದನು.

ಕಂ|| ಓರೊಂದೆ
ಪಾರೆಯಂಬಿನೊ
ಳೋರೊಂದೆ
ಗಜೇಂದ್ರಮುರುಳೆ
ತೆಗೆನೆರೆದೆಚ್ಚೆ|
ಚ್ಯೋರಣದೊಳ್ ಚೇಕಿತ್ಸನ
ನಾರುಮಗುರ್ವಿಸೆ
ಘಟೋದ್ಭವಂ
ತಱಿದಾರ್ದಂ|| ೬೦ ||

ಪದ್ಯ-೬೦:ಪದವಿಭಾಗ-
ಅರ್ಥ:ಓರೊಂದೆ

ಪಾರೆಯಂಬಿನೊಳ್
(ಒಂದೊಂದು ಹಾರೆಯಂಥ
ಅಂಬಿನಿಂದಲೇ) ಒರೊಂದೆ
ಗಜೇಂದ್ರಮು ಉರುಳೆ
(ಒಂದೊಂದು ಆನೆಯು
ಉರುಳಲು) ತೆಗೆನೆರೆದು
ಎಚ್ಚೆಚ್ಚು (ಕಿವಿಯಬರೆಗೆ
ಎಳೆದು ಹೊಡೆದು ಹೊಡೆದು)
ಓರಣದೊಳ್ ಚೇಕಿತ್ಸನನು
ಆರುಂ ಅಗುರ್ವಿಸೆ
ಘಟೋದ್ಭವಂ (ದ್ರೋಣನು)

ತಱಿದು ಆರ್ದಂ (ಕ್ರಮವಾಗಿ ಎಲ್ಲರೂ ಭಯಪಡುವ ಹಾಗೆ ಚೇಕಿತ್ಸನನ್ನು ದ್ರೋಣನು ಕತ್ತರಿಸಿ ಆರ್ಭಟಮಾಡಿದನು.)

ಪದ್ಯ-೬೦:ಅರ್ಥ:
ಒಂದೊಂದು ಹಾರೆಯಂಥ ಅಂಬಿನಿಂದಲೇ ಒಂದೊಂದು ಆನೆಯು ಉರುಳಲು ಹೆದೆಯನ್ನು ಕಿವಿಯವರೆಗೆ ಎಳೆದು ಹೊಡೆದು ಹೊಡೆದು.

ಕ್ರಮವಾಗಿ ಎಲ್ಲರೂ ಭಯಪಡುವ ಹಾಗೆ ಚೇಕಿತ್ಸನನ್ನು ದ್ರೋಣನು ಕತ್ತರಿಸಿ ಆರ್ಭಟಮಾಡಿದನು.

ವ|| ಅಂತು ಪಾಂಡವ ಬಲಮೆಲ್ಲಮನಲ್ಲಕಲ್ಲೋಲಂ ಮಾಡಿ ಕಳಶಕೇತನನಜಾತಶತ್ರುಮಂ ಪಿಡಿಯಲೆಯ್ತರ್ಪಾಗಳ್

ವಚನ:ಪದವಿಭಾಗ-

ಅರ್ಥ:ಅಂತು ಪಾಂಡವ

ಬಲಂ ಎಲ್ಲಮನು
(ಪಾಂಡವಸೈನ್ಯವನ್ನೆಲ್ಲ)
ಅಲ್ಲಕಲ್ಲೋಲಂ ಮಾಡಿ
ಕಳಶಕೇತನನು
ಅಜಾತಶತ್ರುವಮಂ
ಪಿಡಿಯಲೆಯ್ತರ್ಪಾಗಳ್
(ದ್ರೋಣನು ಧರ್ಮರಾಜನನ್ನು
ಹಿಡಿಯಲು ಬಂದಾಗ-.)

ವಚನ:ಅರ್ಥ:
ಪಾಂಡವಸೈನ್ಯವನ್ನೆಲ್ಲ
ಚೆಲ್ಲಾಪಿಲ್ಲಿಯಾಗಿ ಚೆದುರಿಸಿ

ದ್ರೋಣನು ಧರ್ಮರಾಜನನ್ನು ಹಿಡಿಯಲು ಬಂದಾಗ-.

ಸ್ರ|| ಕಾದಲ್ ಸಂಸಪ್ತಕರ್ಕಳ್ ಕರೆದೊಡವರ ಬೆನ್ನಂ ತಗುಳ್ದಾದ ಕಾಯ್ಪಿಂ ಕಾದುತ್ತಿರ್ಪಾರ್ತನಂತಾ ಕಳಕಳಮನದಂ ಕೇಳ್ದು ಭೋರೆಂದು ಬಂದೆ|

ಚ್ಚಾ ದಿವ್ಯಾಸ್ತ್ರಂಗಳಿಂ ತಮ್ಮೊವಜರುಗಿಯೆ ತಮ್ಮಣ್ಣನಂ ಶೌರ್ಯದಿಂದಂ

ಕಾದಂ ಮುಂ ಬಿಜ್ಜನಂ
ಕಾದರಿಗನುಟಿದರಂ
ಕಾವುದೇಂ ಚೋದ್ಯಮಾಯ್ತು||
೬೧ ||

ಪದ್ಯ-೬೧:ಪದವಿಭಾಗ-ಅರ್ಥ:ಕಾದಲ್ ಸಂಸಪ್ತಕರ್ಕಳ್ ಕರೆದೊಡೆ ಅವರ ಬೆನ್ನಂ ತಗುಳ್ದು ಆದ ಕಾಯ್ಪಿಂ (ಸಂಸಪ್ತಕರುಗಳು ತಮ್ಮೊಡನೆ ಕಾದಲು ಕರೆಯಲಾಗಿ ಅವರ

ಬೆನ್ನಟ್ಟಿಹೋಗಿ
ವಿಶೇಷಕೋಪದಿಂದ)
ಕಾದುತ್ತಿರ್ಪ ಆತನು ಅಂತು ಆ
ಕಳಕಳಮನದಂ ಕೇಳ್ದು
(ಕಾದುತ್ತಿದ್ದ ಅರ್ಜುನನು ಆ
ಕಳಕಳ ಶಬ್ದವನ್ನು ಕೇಳಿ)
ಭೋರೆಂದು ಬಂದು ಎಚ್ಚ ಆ
ದಿವ್ಯಾಸ್ತ್ರಂಗಳಿಂ (ವೇಗವಾಗಿ
ಬಂದು ಪ್ರಯೋಗಿಸಿದ
ಶ್ರೇಷ್ಠವಾದ ಬಾಣಗಳಿಂದ)
ತಮ್ಮ ಓವಜರ್ (ಗುರುಗಳು)

ಉಗಿಯೆ ತಮ್ಮಣ್ಣನಂ
(ದ್ರೋಣಾಚಾರ್ಯರು
ಎಳೆದುಕೆಡವಲು/
ಸೋಲಿಸಲು ಅರ್ಜುನನು
ತಮ್ಮಣ್ಣನಾದ
ಧರ್ಮರಾಜನನ್ನು)
ಶೌರ್ಯದಿಂದಂ ಕಾದಂ
(ಪರಾಕ್ರಮದಿಂದ ರಕ್ಷಿಸಿದನು.)
ಮುಂ ಬಿಜ್ಜನಂ ಕಾದ ಅರಿಗನು
ಉೞಿದರಂ ಕಾವುದೇಂ
ಚೋದ್ಯಮಾಯ್ತೆ (ಮೊದಲು

ವಿಜಯಾದಿತ್ಯನನ್ನು ರಕ್ಷಿಸಿದವ ಅರಿಗನಿಗೆ ಅರ್ಜುನನಿಗೆ ಉಳಿದವರನ್ನು ರಕ್ಷಿಸುವುದೇನು ಆಶ್ಚರ್ಯವೇ?) (ಅರಿಕೇಸರಿಯು ವಿಜಯಾದಿತ್ಯನನ್ನು ರಕ್ಷಿಸಿದ್ದನು)

ಪದ್ಯ-೬೧:ಅರ್ಥ:ಅರ್ಜುನನ್ನು, ಸಂಸಪ್ತಕರುಗಳು ತಮ್ಮೊಡನೆ ಕಾದಲು

ಕರೆಯಲಾಗಿ ಅವರ
ಬೆನ್ನಟ್ಟಿಹೋಗಿ
ವಿಶೇಷಕೋಪದಿಂದ
ಕಾದುತ್ತಿದ್ದ ಅರ್ಜುನನು ಆ
ಕಳಕಳಶಬ್ದವನ್ನು ಕೇಳಿ,
ವೇಗವಾಗಿ ಬಂದು
ಪ್ರಯೋಗಿಸಿದ ಶ್ರೇಷ್ಠವಾದ
ಬಾಣಗಳಿಂದ
ದ್ರೋಣಾಚಾರ್ಯರು
ಎಳೆದುಕೆಡವಲು/
ಸೋಲಿಸಲು ಅರ್ಜುನನು

ತಮ್ಮಣ್ಣನಾದ
ಧರ್ಮರಾಜನನ್ನು
ಪರಾಕ್ರಮದಿಂದ ರಕ್ಷಿಸಿದನು.
ಮೊದಲು ವಿಜಯಾದಿತ್ಯನನ್ನು
ರಕ್ಷಿಸಿದವ ಅರಿಗನಿಗೆ/
ಅರ್ಜುನನಿಗೆ ಉಳಿದವರನ್ನು
ರಕ್ಷಿಸುವುದೇನು
ಆಶ್ಚರ್ಯವೇ?

ವ|| ಆಗಳ್ ಮರ್ತಾಂಡಂ ಪ್ರಚಂಡಮಾರ್ತಾಂಡನ ಶರ ನಿಕರ ಸುರಿತ ಕಿರಣಾಂಗಳ್

ಕವಿಯೆ ತನ್ನ ಕಿರಣಂಗಳ್

ಮಸುಳ್ದಪರಜಳನಿಧಿಗಿೞಿದ

ನಾಗಳೆರಡುಂ

ಪಡೆಗಳಪಹಾರತೂರ್ಯಂಗ

ಳಂ ಬಾಜಿಸಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಮರ್ತಾಂಡಂ (ಸೂರ್ಯನು) ಪ್ರಚಂಡಮಾರ್ತಾಂಡನ ಶರ ನಿಕರ ಸುರಿತ ಕಿರಣಂಗಳ್ ಕವಿಯೆ

(ಪ್ರಚಂಡಮಾರ್ತಾಂಡನಾದ ಅರ್ಜುನನ ಬಾಣರಾಶಿಯ ಪ್ರಕಾಶಮಾನವಾದ ಕಿರಣಗಳು ಕವಿಯಲು) ತನ್ನ ಕಿರಣಂಗಳ್ ಮಸುಳ್ದು (ತನ್ನ ಕಿರಣಗಳು ನಿಸ್ತೇಜವಾಗಿ) ಅಪರಜಳನಿಧಿಗೆ ಇೞಿದನು (ತನ್ನ ಕಿರಣಗಳು ನಿಸ್ತೇಜವಾಗಿ ಪಶ್ಚಿಮಸಮುದ್ರಕ್ಕಿಳಿದನು.) ಆಗಳೆರಡುಂ ಪಡೆಗಳು ಅಪಹಾರತೂರ್ಯಂಗಳಂ

ಬಾಜಿಸಿದಾಗಳ್ (ಆಗ ಎರಡುಸೈನ್ಯಗಳೂಯುದ್ಧವನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಕೊಡುವ ವಾದ್ಯಗಳನ್ನು ಬಾರಿಸಿದುವು)-

ವಚನ:ಅರ್ಥ:ಆಗ ಸೂರ್ಯನು ಪ್ರಚಂಡಮಾರ್ತಾಂಡನಾದ ಅರ್ಜುನನ ಬಾಣರಾಶಿಯ ಪ್ರಕಾಶಮಾನವಾದ ಕಿರಣಗಳು ಕವಿಯಲು, ತನ್ನ

ಕಿರಣಗಳು ನಿಸ್ತೇಜವಾಗಿ ಪಶ್ಚಿಮಸಮುದ್ರಕ್ಕಿಳಿದನು. ಆಗ ಎರಡುಸೈನ್ಯಗಳೂಯುದ್ಧವನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಕೊಡುವ ವಾದ್ಯಗಳನ್ನು ಬಾರಿಸಿದುವು.

ಹರಿಣೀಪುತಂ|| ಪಡೆಗಳೆರಡುಂ ಬೀಡಿಂಗೆತ್ತಂ ತೆರಳ್ದು ನೆಗೞ್ತೆಯಂ

ಪಡೆದೞ್ದರಂ
ಮೆಚ್ಚುತ್ತುತ್ಸಾಹದಿಂ
ಪೊಗೞುತ್ತುಮೊ|
ಳ್ಪಡರೆ
ನುಡಿಯುತ್ತಂತಿರ್ದಾದಿತ್ಯನಂ
ದುದಯಾದ್ರಿಯ
ತ್ತಡರೆ ಪೊೞಮಟ್ಟಾಗಳ್
ಬಂದೊಡ್ಡಿ ನಿಂದುವು
ಕೋಪದಿಂ|| ೬೨ ||

ಪದ್ಯ-೬೨:ಪದವಿಭಾಗ-
ಅರ್ಥ: ಪಡೆಗಳೆರಡುಂ

ಬೀಡಿಂಗೆ ಎತ್ತಂ ತೆರಳ್ದು
(ಎರಡೂ ಸೈನ್ಯಗಳು ತಮ್ಮ
ಪಾಳೆಯಗಳ ಕಡೆಗೆ ಹೋಗಿ/
ಸೇರಿ) ನೆಗೞ್ತೆಯಂ ಪಡೆದು
ಅೞಿದರಂ ಮೆಚ್ಚುತ್ತ
ಉತ್ಸಾಹದಿಂ ಪೊಗೞುತ್ತಂ
(ಖ್ಯಾತಿಯನ್ನು ಪಡೆದು
ಸತ್ತವರನ್ನು ಉತ್ಸಾಹದಿಂದ
ಮೆಚ್ಚಿ ಹೊಗಳುತ್ತ) ಒಳ್ಪು
ಅಡರೆ ನುಡಿಯುತ್ತ ಅಂತಿರ್ದು
(ಒಳ್ಳೆಯತನವು/ ಸದ್ಗುಣವು

ಪ್ರಕಾಶವಾಗುವ ಹಾಗೆ
ಮಾತನಾಡುತ್ತ ಇದ್ದರು;)
ಆದಿತ್ಯನಂದು
ಉದಯಾದ್ರಿಯತ್ತ ಅಡರೆ
ಪೊಱಮಟ್ಟಾಗಳ್ ಬಂದೊಡ್ಡಿ
ನಿಂದುವು ಕೋಪದಿಂ (
ಸೂರ್ಯನು
ಉದಯಪರ್ವತವನ್ನೇರಲು
ಸೈನ್ಯವು ಹೊರಟು
ಕೋಪದಿಂದ ಬಂದೊಡ್ಡಿ
ನಿಂತವು.)

ಪದ್ಯ-೬೨:ಅರ್ಥ: ಎರಡೂ ಸೈನ್ಯಗಳು ತಮ್ಮ ಪಾಳೆಯಗಳ ಕಡೆಗೆ ಹೋಗಿ (ಸೇರಿ) ಖ್ಯಾತಿಯನ್ನು ಪಡೆದು ಸತ್ತವರನ್ನು ಉತ್ಸಾಹದಿಂದ ಮೆಚ್ಚಿ ಹೊಗಳುತ್ತ, ಒಳ್ಳೆಯತನವು/ ಸದ್ಗುಣವು ಪ್ರಕಾಶವಾಗುವ ಹಾಗೆ ಮಾತನಾಡುತ್ತ ಇದ್ದರು; ಸೂರ್ಯನು ಉದಯಪರ್ವತವನ್ನೇರಲು

ಸೈನ್ಯವು ಹೊರಟು
ಕೋಪದಿಂದ ಬಂದೊಡ್ಡಿ
ನಿಂತವು.

<u>ಭೀಮನ ಯುದ್ಧ</u>

ಕಂ|| ಅಂತೊಡ್ಡಿ ನಿಂದ ಚಾತು
ರ್ದಂತಂ ಕೆಯ್ವೀಸುವನ್ನೆಗಂ
ಸೈರಿಸದೋ|
ರಂತೆ ಪೆಣೆದಿಱಿದುವಂತೆ ದಿ
ಗಂತಾಂತಮನೆಯ್ದಿ ಪರಿಯೆ
ನೆತ್ತರ ತೊಗಳ್|| ೬೩ ||

ಪದ್ಯ-೬೩:ಪದವಿಭಾಗ-ಅರ್ಥ:ಅಂತೊಡ್ಡಿ ನಿಂದ ಚಾತುರ್ದಂತಂ ಕೆಯ್ವೀಸುವ ಅನ್ನೆಗಂ ಸೈರಿಸದೆ (ಹಾಗೆ ಬಂದು ಒಡ್ಡಿ ನಿಂತ ಚತುರಂಗಸೈನ್ಯವು ಯುದ್ಧಸೂಚಕವಾಗಿ ಕೈಬೀಸುವಷ್ಟರವರೆಗೂ ಸೈರಿಸದೆ) ಓರಂತೆ ಪೆಣೆದು ಇಱಿದುವಂತೆ (ಒಂದೇ ಸಮನಾಗಿ ಹೆಣೆದುಕೊಂಡು

ಯುದ್ಧಮಾಡಿದುವು) ದಿಗಂತ
ಆಂತಮನು ಎಯ್ದಿ ಪರಿಯೆ
ನೆತ್ತರ ತೊಗಳ್
(ರಕ್ತಪ್ರವಾಹವು ದಿಗಂತದ
ಕೊನೆಯನ್ನು ಸೇರಿ ಹರಿಯುವ
ಹಾಗೆ ಯುದ್ಧಮಾಡಿದುವು.)
ಪದ್ಯ-೬೩:ಅರ್ಥ: ಹಾಗೆ
ಬಂದು ಒಡ್ಡಿ ನಿಂತ
ಚತುರಂಗಸೈನ್ಯವು
ಯುದ್ಧಸೂಚಕವಾಗಿ
ಕೈಬೀಸುವಷ್ಟರವರೆಗೂ

ಸೈರಿಸದೆ ಒಂದೇ ಸಮನಾಗಿ
ಹೆಣೆದುಕೊಂಡು
ರಕ್ತಪ್ರವಾಹವು ದಿಗಂತದ
ಕೊನೆಯನ್ನು ಸೇರಿ ಹರಿಯುವ
ಹಾಗೆ ಯುದ್ಧಮಾಡಿದುವು.

ಅೞ್ಗಿದ ಬಿಲ್ವಡೆ ಮಾಣದೆ
ತೞ್ಗಿದ ರಥಮೆಯ್ದೆ ಬಗಿದ
ಪುಣ್ಗಳ ಪೊರೆಯಿಂ|
ಮೊೞ್ಗಿದ ಕರಿ ಘಟೆ ಜವನಡು
ವೞ್ಗೆಯನನುಕರಿಸೆ ವೀರ
ಭಟ ರಣರಂಗಂ|| ೬೪ ||

ಪದ್ಯ-೬೪:ಪದವಿಭಾಗ-ಅರ್ಥ:ಅಱ್ಗಿದ ಬಿಲ್ಪಡೆ ಮಾಣದೆ ತಱ್ಗಿದ ರಥಮೆಯ್ದೆ (ನಾಶವಾದ ಬಿಲ್ಗಾರರ ಸೈನ್ಯ, ತಪ್ಪದೆ ಮುರಿದ ರಥಗಳು,) ಬಗಿದ ಪುಣ್ಗಳ ಪೊರೆಯಿಂ(ತೋಡಿದ ಹುಣ್ಣುಗಳ ಭಾರದಿಂದಲೂ) ಮೊಱ್ಗಿದ ಕರಿ ಘಟೆ (ಕುಗ್ಗಿದ/ ಪೆಟ್ಟಾಗಿ ಮಲಗಿದ ಆನೆಗಳ ಸಮೂಹದಿಂದಲೂ,) ಜವನ

ಅಡುವ ಅಟ್ಗೆಯನು

ಅನುಕರಿಸೆ ವೀರ ಭಟ

ರಣರಂಗಂ (ಯಮನು

ಬೇಯಿಸುವ

ಅಡುಗೆಯಯನ್ನು

ಹೋಲುತ್ತಿತ್ತು. < ರಣರಂಗವು)

ಪದ್ಯ-೬೪:ಅರ್ಥ:

ರಣರಂಗವು, ನಾಶವಾದ

ಬಿಲ್ಗಾರರ ಸೈನ್ಯ, ತಪ್ಪದೆ

ಮುರಿದ ರಥಗಳು, ತೋಡಿದ

ಹುಣ್ಣುಗಳ ಭಾರದಿಂದಲೂ,

ಕುಗ್ಗಿದ/ಪೆಟ್ಟಾಗಿ ಮಲಗಿದ
ಆನೆಗಳ ಸಮೂಹದಿಂದಲೂ,
ಯಮನು ಬೇಯಿಸುವ
ಅಡುಗೆಯಯನ್ನು
ಹೋಲುತ್ತಿತ್ತು.

ವ|| ಆಗಳ್ ಧೃಷ್ಟಕೇತು ವೃಷಸೇನನೊಳ್ ಸಾತ್ಯಕಿ ಭಗದತ್ತನೊಳ್ ದ್ರುಪದ ಧೃಷ್ಟಧ್ಯುಮ್ನರಿರ್ವರುಂ ದ್ರೋಣಾಚಾರ್ಯನೊಳ್ ಪ್ರತಿವಿಂಧ್ಯಂ ಸೌಬಲನೊಳ್

ಘಟೋತ್ಕಚಂ ಕರ್ಣನೊಳ್ ಪೆಣೆದು ಕಾದೆ-

ವಚನ:ಪದವಿಭಾಗ-

ಅರ್ಥ:ಆಗಳ್ ಧೃಷ್ಟಕೇತು ವೃಷಸೇನನೊಳ್ ಸಾತ್ಯಕಿ ಭಗದತ್ತನೊಳ್ ದ್ರುಪದ ಧೃಷ್ಟಧ್ಯುಮ್ನರು ಇರ್ವರುಂ ದ್ರೋಣಾಚಾರ್ಯನೊಳ್ ಪ್ರತಿವಿಂಧ್ಯಂ ಸೌಬಲನೊಳ್ ಘಟೋತ್ಕಚಂ ಕರ್ಣನೊಳ್ ಪೆಣೆದು ಕಾದೆ

(ಹೆಣೆದುಕೊಂಡು ಕಾದಿದರು/ ಯುದ್ಧಮಾಡಿದರು)- **ವಚನ:ಅರ್ಥ:**ವ|| ಆಗ ಧೃಷ್ಟಕೇತುವು ವೃಷಸೇನನಲ್ಲಿಯೂ ಸಾತ್ಯಕಿಯು ಭಗದತ್ತನಲ್ಲಿಯೂ ದ್ರುಪದ ಧೃಷ್ಟದ್ಯುಮ್ನರು ಇಬ್ಬರೂ ದ್ರೋಣಾಚಾರ್ಯನಲ್ಲಿಯೂ ಪ್ರತಿವಿಂದ್ಯನು ಶಕುನಿಯಲ್ಲಿಯೂ

ಘಟೋತ್ಕಚನು
ಕರ್ಣನಲ್ಲಿಯೂ
ಹೆಣೆದುಕೊಂಡು ಕಾದಿದರು/
ಯುದ್ಧಮಾಡಿದರು.

**ಚಂ|| ಪೊಸಮಸೆಯಂಬುಗಳ್
ದೆಸೆಗಳಂ ಮಸುಳ್ವನ್ನೆಗಮೆಯ್ದೆ
ಪಾಯೆ ಪಾ
ಯಿಸುವ ರಥಂಗಳಾ ರಥದ
ಕೀಲ್ಮುಱಿದಾಗಳೆ ಕೆಯ್ಯನಲ್ಲಿ
ಕೋ|**

ದೆಸಗುವ ಸೂತರಂಬು ಕೊಳೆ

ಸೂತರುರುಳ್ದುಮಿಳಾತಳಕ್ಕೆ

ಪಾ

ಯ್ದಸಿಯೊಳೆ ತಾಗಿ ತಳ್ತಿಱಿವ

ನಿಚ್ಚಟರೊಪ್ಪಿದರಾಜಿರಂಗದೊ

ಳ್|| ೬೫ ||

ಪದ್ಯ-೬೫:ಪದವಿಭಾಗ-ಅರ್ಥ:ಪೊಸಮಸೆಯ ಅಂಬುಗಳ್ ದೆಸೆಗಳಂ ಮಸುಳ್ವನ್ನೆಗಂ ಎಯ್ದೆ ಪಾಯೆ(ಹೊಸ ಮಸೆದ

ಬಾಣಗಳು, ದಿಕ್ಕುಗಳನ್ನೆಲ್ಲ ಮುಚ್ಚುವ ರೀತಿಯಲ್ಲಿ ಬಂದು ನುಗ್ಗಲು) ಪಾಯಿಸುವ ರಥಂಗಳು ಆ ರಥದ ಕೀಲ್ಮುಱಿದಾಗಳೆ ಕೆಯ್ಯನು ಅಲ್ಲಿ ಕೋದು ಎಸಗುವ ಸೂತರು ಅಂಬು ಕೊಳೆ (ಓಡಿಸುತ್ತಿದ್ದ ರಥಗಳೂ, ಆ ರಥಗಳ ಕೀಲು ಮುರಿದೊಡನೆ ತಮ್ಮ ಕೈಗಳನ್ನೇ ಆ ಕೀಲಿನ ಸ್ಥಾನದಲ್ಲಿ ಪೋಣಿಸವ

ಸೂತರು ಬಾಣ ನಾಟಲು)
ಸೂತರು ಉರುಳ್ದುಂ
ಇಳಾತಳಕ್ಕೆ ಪಾಯ್ದು
ಅಸಿಯೊಳೆ ತಾಗಿ (ಸೂತರು
ನೆಲಕ್ಕೆ ಉರುಳಿದರೂ
ರಥದಿಂದ ನೆಲಕ್ಕೆ ನೆಗೆದು
ನೆಗೆದು ಕತ್ತಿಯಿಂದ ಘಟ್ಟಿಸಿ
ಎದುರಿಸಿ,) ತಳ್ತು ಇಱಿವ
ನಿಚ್ಚಟರು ಒಪ್ಪಿದರು
ಆಜಿರಂಗದೊಳ್
(ಶತ್ರುಸೈನ್ಯವನ್ನು ಪ್ರತಿಭಟಿಸಿ

ಸ್ಥೈರ್ಯದಿಂದ ಇರಿವ/ ಹೋರಾಡುವ ಯೋಧಾಗ್ರೇಸರರೂ ಯುದ್ಧರಂಗದಲ್ಲಿ ಶೋಭಿಸಿದರು.)

ಪದ್ಯ-೬೫:ಅರ್ಥ: ಹೊಸ ಮಸೆದ ಬಾಣಗಳು, ದಿಕ್ಕುಗಳನ್ನೆಲ್ಲ ಮುಚ್ಚುವ ರೀತಿಯಲ್ಲಿ ಬಂದು ನುಗ್ಗಲು, ಓಡಿಸುತ್ತಿದ್ದ ರಥಗಳೂ, ಆ ರಥಗಳ ಕೀಲು ಮುರಿದೊಡನೆ

ತಮ್ಮ ಕೈಗಳನ್ನೇ ಆ ಕೀಲಿನ
ಸ್ಥಾನದಲ್ಲಿ ಪೋಣಿಸುವ
ಸೂತರು ಬಾಣ ನಾಟಲು
ಸೂತರು ನೆಲಕ್ಕೆ
ಉರುಳಿದರೂ ರಥದಿಂದ
ನೆಲಕ್ಕೆ ನೆಗೆದು ನೆಗೆದು
ಕತ್ತಿಯಿಂದ ಎದುರಿಸಿ,
ಶತ್ರುಸೈನ್ಯವನ್ನು ಪ್ರತಿಭಟಿಸಿ
ಸ್ಥೈರ್ಯದಿಂದ ಹೋರಾಡುವ
ಯೋಧಾಗ್ರೇಸರರೂ

ಯುದ್ಧರಂಗದಲ್ಲಿ

ಶೋಭಿಸಿದರು.

ವ|| ಆಗಳ್ ಕಳಿಂಗರಾಜನ ಗಜಘಟೆಗಳನಿತುವೊಂದಾಗಿ ಭೀಮಸೇನನ ರಥಮಂ ವಿಳಯ ಕಾಳ ಜಳಧರಂಗಳೆಲ್ಲವೊಂದಾಗಿ ಕುಲಗಿರಿಯಂ ಮುತ್ತುವಂತೆ ಸುತ್ತಿ ಮುತ್ತಿದಾಗಳ್

ವಚನ:ಪದವಿಭಾಗ-

ಅರ್ಥ:ಆಗಳ್ ಕಳಿಂಗರಾಜನ

ಗಜಘಟೆಗಳು
ಅನಿತುವೊಂದಾಗಿ (ಆಗ
ಕಳಿಂಗರಾಜನ ಆನೆಯ
ಸಮೂಹವಷ್ಟೂ ಒಂದಾಗಿ)
ಭೀಮಸೇನನ ರಥಮಂ (
ಭೀಮಸೇನನ ತೇರನ್ನು)
ವಿಳಯ ಕಾಳ ಜಳಧರಂಗಳೆಲ್ಲ
ಒಂದಾಗಿ (ಪ್ರಳಯಕಾಲದ
ಮೋಡಗಳೆಲ್ಲ ಒಂದಾಗಿ)
ಕುಲಗಿರಿಯಂ ಮುತ್ತುವಂತೆ
ಸುತ್ತಿ ಮುತ್ತಿದಾಗಳ್

(ಕುಲಪರ್ವತವನ್ನು
ಮುತ್ತುವಂತೆ ಸುತ್ತಿ
ಮುತ್ತಿದುವು ಆಗ.)
ವಚನ:ಅರ್ಥ:ಆಗ
ಕಳಿಂಗರಾಜನ ಆನೆಯ
ಸಮೂಹವಷ್ಟೂ ಒಂದಾಗಿ
ಭೀಮಸೇನನ ತೇರನ್ನು
ಪ್ರಳಯಕಾಲದ ಮೋಡಗಳೆಲ್ಲ
ಒಂದಾಗಿ ಕುಲಪರ್ವತವನ್ನು
ಮುತ್ತುವಂತೆ ಸುತ್ತಿ
ಮುತ್ತಿದುವು, ಆಗ

ಮ|| ರಥದಿಂ ಧಾತ್ರಿಗೆ ಪಾಯ್ದು
ಕೊಂಡು ಗದೆಯಂ
ಕೆಯ್ಯಾರ್ದುದಸ್ಮನ್ಮನೋ
ರಥಮಿಂದೆಂದು ಕಡಂಗಿ
ಮಾಣದೆ ಸಿಡಿಲ್
ಪೊಯ್ವಂತೆವೋಲ್
ಪೊಯ್ವುದುಂ|
ರಥಯೂಥ ಧ್ವಜ ಶಸ್ತ್ರ
ಶಂಖಪುಟದೊಳ್
ಘಂಟಾಸಮೇತಂ ಮಹಾ

ರಥನಿಂದಂ ಕುಳಶೈಳದಂತೆ ಕರಿಗಳ್ ಬೀೞ್ತಿಂದುವುಗ್ರಾಜಿಯೊಳ್॥ ೬೬ ॥

ಪದ್ಯ-೬೬:ಪದವಿಭಾಗ-ಅರ್ಥ:ರಥದಿಂ ಧಾತ್ರಿಗೆ ಪಾಯ್ದು ಕೊಂಡು ಗದೆಯಂ (ಭೀಮಸೇನನು ರಥದಿಂದ ಭೂಮಿಗೆ ಹಾರಿ ಗದೆಯನ್ನೆತ್ತಿಕೊಂಡು) ಕೆಯ್ಸಾರ್ದುದು (ಕೈಗೂಡಿತು)

ಅಸ್ಮನ್ ಮನೋರಥಮ್
ಇಂದು ಎಂದು (‘ನನ್ನ
ಮನಸ್ಸಿನ ಇಷ್ಟಾರ್ಥ ಈ ದಿನ
ಕೈಗೂಡಿತು’ ಎಂದು) ಕಡಂಗಿ
ಮಾಣದೆ ಸಿಡಿಲ್
ಪೊಯ್ವಂತೆವೋಲ್
(ಉತ್ಸಾಹಿಸಿ ತಡಮಾಡದೆ
ಸಿಡಿಲು ಹೊಡೆಯುವ ಹಾಗೆ)
ಪೊಯ್ಯುದುಂ ರಥಯೂಥ
ಧ್ವಜ ಶಸ್ತ್ರ ಶಂಖಪುಟದೊಳ್/
ಸಂಘಟನದೊಳ್

(ಹೊಡೆಯಲು ರಥಗಳ
ಸಮೂಹ, ಬಾವುಟಗಳು,
ಆಯುಧಗಳು ಇವುಗಳ
ಪರಸ್ಪರ ತಾಕಲಾಟದಲ್ಲಿ)
ಘಂಟಾಸಮೇತಂ
ಮಹಾರಥನಿಂದಂ
(ಮಹಾರಥನಾದ
ಭೀಮಸೇನನಿಂದ ಕತ್ತಿನ
ಗಂಟೆಯೊಡನೆ ಆನೆಗಳು ಆ
ಘೋರಯುದ್ಧದಲ್ಲಿ
ಕುಲಪರ್ವತಗಳ ಹಾಗೆ ಕೆಳಕ್ಕೆ

ಬಿದ್ದವು) ಕುಳಶೈಳದಂತೆ
ಕರಿಗಳ್ ಬೀೞ್ತಿಂದುವು
(ಬೀಳ್ದು ಅಂದು ಅವು- ಅಂದು
ಅವು ಬಿದ್ದವು)
ಉಗ್ರಾಜಿಯೊಳ್
(ಕುಲಪರ್ವತಗಳ ಹಾಗೆ ಕೆಳಕ್ಕೆ
ಬಿದ್ದವು)
ಪದ್ಯ-೬೬:ಅರ್ಥ:
ಭೀಮಸೇನನು ರಥದಿಂದ
ಭೂಮಿಗೆ ಹಾರಿ
ಗದೆಯನ್ನೆತ್ತಿಕೊಂಡು ‘ನನ್ನ

ಮನಸ್ಸಿನ ಇಷ್ಟಾರ್ಥ ಈ ದಿನ
ಕೈಗೂಡಿತು’ ಎಂದು
ಉತ್ಸಾಹಿಸಿ ತಡಮಾಡದೆ
ಸಿಡಿಲು ಹೊಡೆಯುವ ಹಾಗೆ
ಹೊಡೆಯಲು ರಥಗಳ
ಸಮೂಹ, ಬಾವುಟಗಳು,
ಆಯುಧಗಳು ಇವುಗಳ
ಪರಸ್ಪರ ತಾಕಲಾಟದಲ್ಲಿ ಕತ್ತಿನ
ಗಂಟೆಯೊಡನೆ ಆನೆಗಳು ಆ
ಘೋರಯುದ್ಧದಲ್ಲಿ

ಕುಲಪರ್ವತಗಳ ಹಾಗೆ ಕೆಳಕ್ಕೆ ಬಿದ್ದವು.

ಮ|| ಮದವದ್ದಂತಿಗಳಂ ಕಱುತ್ತಸಗವೊಯ್ಯೊಲ್ಪ ಯ್ದಾಜಿಯೊಳ್ ಭೀಮನಾ ರ್ದೊದೆದೀಡಾಡಿದೊಡತ್ತಜಾಂಡ ತಟಮಂ ತಾಪನ್ನೆಗಂ ಪಾಱಿ ತಾ| ಱಿದ ಪೇರಾನೆಯೊಡಲ್ಗಳಭ್ರತಳದೊ

ಳ್ ಸಿಲ್ಕಿರ್ದುವರ್ಪೋರೊಂದು
ಮಾ
ಣದೆ ಬೀೞ್ತಿರ್ಪುವು ಬೆಟ್ಟು
ಬೀೞ್ವ ತೆಱದಿಂದಿನ್ನುಂ
ಕುರುಕ್ಷೇತ್ರದೊಳ್|| ೬೭ ||

ಪದ್ಯ-೬೭:ಪದವಿಭಾಗ-
ಅರ್ಥ:ಮದವದ್ದಂತಿಗಳಂ
ಕಱುತ್ತು (ಕೋಪಿಸಿ)
ಅಸಗವ್ರೊಯಿಲ್ ಪ್ರೊಯ್ದ್
ಆಜಿಯೊಳ್ (ಮದವೇರಿದ
ಆನೆಗಳನ್ನು ಗುರಿಯಿಟ್ಟು

ಅಗಸನು ಒಗೆಯುವ ಹಾಗೆ
ಒಗೆದು) ಭೀಮನು ಆರ್ದು
ಒದೆದು ಈಡಾಡಿದೊಡೆ
(ಆರ್ಭಟಮಾಡಿ ಭೀಮನು
ಯುದ್ಧದಲ್ಲಿ ಒದ್ದು
ಎಸೆದಾಡಿದರೆ,) ಅತ್ತ
ಅಜಾಂಡ ತಟಮಂ
ತಾಪನ್ನೆಗಂ ಪಾಱಿ ತಾಱಿದ
ಪೇರಾನೆಯೊಡಲ್ಗಳು (ಅತ್ತ
ಬ್ರಹ್ಮಾಂಡದ ಮೇರೆಯನ್ನು
ತಗಲುವಷ್ಟು ದೂರ ಹಾರಿ ಆ

ಒಣಗಿದ ಹಿರಿಯಾನೆಯ
ಶರೀರಗಳು) ಅಭ್ರತಳದೊಳ್
ಸಿಲ್ಕಿರ್ದು (ಮೋಡಗಳ
ಪದರದ ಮಧ್ಯೆ ಸಿಕ್ಕಿದ್ದು)
ಓರೊಂದು ಮಾಣದೆ
ಬೀೞ್ತಿರ್ಪುವು ಬೆಟ್ಟು ಬೀೞ್ವ
ತೆಱದಿಂದಿನ್ನುಂ
ಕುರುಕ್ಷೇತ್ರದೊಳ್ (ಅಲ್ಲಿ
ನಿಲ್ಲದೆ ಬೆಟ್ಟಗಳು ಬೀಳುವ
ಹಾಗೆ ಇನ್ನೂ ಕುರುಕ್ಷೇತ್ರದಲ್ಲಿ
ಬೀಳುತ್ತಿದ್ದವು.)

ಪದ್ಯ-೬೭:ಅರ್ಥ:

ಮದವೇರಿದ ಆನೆಗಳನ್ನು ಗುರಿಯಿಟ್ಟು ಅಗಸನು ಒಗೆಯುವ ಹಾಗೆ ಒಗೆದು ಆರ್ಭಟಮಾಡಿ ಭೀಮನು ಯುದ್ಧದಲ್ಲಿ ಒದ್ದು ಎಸೆದಾಡಿದರೆ, ಅತ್ತ ಬ್ರಹ್ಮಾಂಡದ ಮೇರೆಯನ್ನು ತಗಲುವಷ್ಟು ದೂರ ಹಾರಿ ಆ ಒಣಗಿದ ಹಿರಿಯಾನೆಯ ಶರೀರಗಳು ಮೋಡಗಳ

ಪದರದ ಮಧ್ಯೆ ಸಿಕ್ಕಿದ್ದು, ಅಲ್ಲಿ ನಿಲ್ಲದೆ ಬೆಟ್ಟಗಳು ಬೀಳುವ ಹಾಗೆ ಇನ್ನೂ ಕುರುಕ್ಷೇತ್ರದಲ್ಲಿ ಬೀಳುತ್ತಿದ್ದವು.

ಕಂ|| ತೊಡರೆ ತಡಂಗಾಲ್
ಪೊಯ್ದೊಡೆ
ಕೆಡೆದುಂ ತಿವಿದೊಡೆ ಸುರುಳ್ದು
ಮೋದಿದೊಡಿರದೆ|
ಲ್ಪಡಗಾಗಿ ಮಡಿದು ಬಿೞ್ದುವು
ಗಡಣದೆ ಕರಿಘಟೆಗಳೇಂ
ಬಲಸ್ಥನೊ ಭೀಮಂ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ತೊಡರೆ ತಡಂಗಾಲ್ ಪೊಯ್ದೊಡೆ ಕೆಡೆದುಂ (ಭೀಮನ ಅಡ್ಡಗಾಲಿಗೆ ಸಿಕ್ಕಿಸಿಕೊಂಡು ಒದೆದರೆ ಕೆಳಕ್ಕೆ ಬಿದ್ದು) ತಿವಿದೊಡೆ ಸುರುಳ್ದು (ತಿವಿದರೆ ಸುರುಟಿಕೊಂಡವು) ಮೋದಿದೊಡೆ ಇರದೆ ಎಲ್ವುಡಗಾಗಿ ಮಡಿದು ಬಿಳ್ದುವು ಗಡಣದೆ ಕರಿಘಟೆಗಳು (ಗುದ್ದಿದರೆ

ತಡವಿಲ್ಲದೆ ಎಲುಬು ಮಾಂಸಗಳಾಗಿ ಬಿದ್ದುಸತ್ತವು ಗುಂಪಾಗಿ) ಏಂ ಬಲಸ್ಥನೊ ಭೀಮಂ (ಭೀಮನು ಎಷ್ಟು ಬಲಶಾಲಿಯೋ)

ಪದ್ಯ-೬೮:ಅರ್ಥ: ಭೀಮನ ಅಡ್ಡಗಾಲಿಗೆ ಸಿಕ್ಕಿಸಿಕೊಂಡು ಒದೆದರೆ ಕೆಳಕ್ಕೆ ಬಿದ್ದು, ತಿವಿದರೆ ಸುರುಟಿಕೊಂಡವು; ಗುದ್ದಿದರೆ ತಡವಿಲ್ಲದೆ ಎಲುಬು ಮಾಂಸಗಳಾಗಿ ಬಿದ್ದುಸತ್ತವು;

ಆನೆಗಳ ಸಮೂಹವು ರಾಶಿಯಾಗಿ/ಗುಂಪಾಗಿ ಬಿದ್ದವು. ಭೀಮನು ಎಷ್ಟು ಬಲಶಾಲಿಯೋ!

ವ|| ಅಂತಲ್ಲಿ ಪದಿನಾಲ್ಸಾಸಿರ ಮದದಾನೆಯುಮಂ ಕಳಿಂಗನಾಯಕಂ ಭಾನುದತ್ತಂ ಮೊದಲಾಗೆ ನೂರ್ವರರಸುಮಕ್ಕಳುಮಂ ಕೊಂದೊಡೆ ಕೌರವಬಲಮೆಲ್ಲಮೊಲ್ಲನುಲಿ

ದೋಡಿ ಭಗದತ್ತನಾನೆಯ ಮರೆಯಂ ಪೊಕ್ಕ್ಯಾಗಳ್-

ವಚನ:ಪದವಿಭಾಗ-

ಅರ್ಥ:ಅಂತಲ್ಲಿ ಪದಿನಾಲ್ಸಾಸಿರ ಮದದಾನೆಯುಮಂ ಕಳಿಂಗನಾಯಕಂ ಭಾನುದತ್ತಂ ಮೊದಲಾಗೆ ನೂರ್ವರರರಸುಮಕ್ಕಳುಮಂ ಕೊಂದೊಡೆ (ಹದಿನಾಲ್ಕು ಸಾವಿರ ಮದ್ದಾನೆಗಳನ್ನೂ

ಕಳಿಂಗನಾಯಕನಾದ
ಭಾನುದತ್ತನೇ ಮೊದಲಾದ
ನೂರುಮಂದಿ
ರಾಜಕುಮಾರರನ್ನೂ
ಕೊಂದಾಗ,)
ಕೌರವಬಲಮೆಲ್ಲಂ ಒಲ್ಲನೆ
ಉಲಿದು ಓಡಿ
(ಕೌರವಸೈನ್ಯವೆಲ್ಲ ಮೆಲ್ಲಗೆ
ಕೂಗಿಕೊಂಡು ಓಡಿಹೋಗಿ)
ಭಗದತ್ತನಾನೆಯ ಮರೆಯಂ
ಪೊಕ್ಕಾಗಳ್ (ಭಗದತ್ತನ

ಆನೆಯ ಮರೆಯನ್ನು
ಹೊಕ್ಕಿತು)-
ವಚನ:ಅರ್ಥ:ವ|| ಹಾಗೆ ಅಲ್ಲಿ
ಹದಿನಾಲ್ಕು ಸಾವಿರ
ಮದ್ದಾನೆಗಳನ್ನೂ
ಕಳಿಂಗನಾಯಕನಾದ
ಭಾನುದತ್ತನೇ ಮೊದಲಾದ
ನೂರುಮಂದಿ
ರಾಜಕುಮಾರರನ್ನೂ
ಕೊಂದನು. ಕೌರವಸೈನ್ಯವೆಲ್ಲ
ಮೆಲ್ಲಗೆ ಕೂಗಿಕೊಂಡು

ಓಡಿಹೋಗಿ ಭಗದತ್ತನ ಆನೆಯ ಮರೆಯನ್ನು ಹೊಕ್ಕಿತು.

ಭಗದತ್ತ ಮತ್ತು ಸುಪ್ರತೀಕ ದಿಗ್ಗಜದ ವಧೆ

ಮ|| ಸ್ರ|| ನೆಗೞ್ದಿಂ ದೇವೇಂದ್ರನೈರಾವತದ ಕೆಳೆಯನೆನ್ನೇೞ್ದೀಯಾನೆ ಯುಂ ದಲ್

ದಿಗಿಭಂ ದುರ್ಯೋಧನಂ
ನಚ್ಚಿದನೆನಗಿದಿರಂ
ಭೀಮನೆಟ್ಟಿಂದನೀಗಳ್|
ಮುಗಿಲಂ ಮುಟ್ಟಿತ್ತು
ಸಂದೆನ್ನಳವುಮದಟುಮೆಂದಾ
ರ್ದು ದೋರ್ದರ್ಪಯುಕ್ತಂ
ಭಗದತ್ತಂ
ಸುಪ್ರತೀಕದ್ವಿಪಮನುಪಚಿತೋ
ತ್ಸಾಹದಿಂ ತೋಱಿಕೊಟ್ಟಂ||
೭೯

ಪದ್ಯ-೬೯:ಪದವಿಭಾಗ-ಅರ್ಥ:ನೆಗೞ್ದೆಂ ದೇವೇಂದ್ರನ ಐರಾವತದ ಕೆಳೆಯನು ಎನ್ನೇಱಿದ ಈ (ಯಾ) ಆನೆಯುಂ (ನಾನು ಹತ್ತಿರುವ ಈ ಆನೆಯೂ ಪ್ರಖ್ಯಾತನಾದ ದೇವೇಂದ್ರನ ಐರಾವತದ ಸ್ನೇಹಿತ) ದಲ್ ದಿಗಿಭಂ ದುರ್ಯೋಧನಂ ನಚ್ಚಿದಂ (ನನ್ನನ್ನು ದುರ್ಯೋಧನನು ನಂಬಿಕೊಂಡಿದ್ದಾನೆ) ಎನಗೆ

ಇದಿರಂ ಭೀಮನು ಎಟ್ತಿಂದಂ
(ಈಗ ನನಗೆ ಭೀಮನೇ
ಪ್ರತಿಭಟಿಸಿ ಬಂದಿದ್ದಾನೆ)
ಈಗಳ್ ಮುಗಿಲಂ ಮುಟ್ಟಿತ್ತು
ಸಂದು ಎನ್ನ ಅಳಳವುಂ
ಅದಟುಂ (ಈಗ ನನ್ನ
ಪೌರುಷವೂ ಪರಾಕ್ರಮವೂ
ಗಗನವನ್ನು ಮುಟ್ಟಿದೆ) ಎಂದು
ಆರ್ದು ದೋರ್ದರ್ಪಯುಕ್ತಂ
(ಎಂದು ಆರ್ಭಟಮಾಡಿ
ಬಾಹುಬಲದ

ಅಹಂಕಾರದಿಂದ ಕೂಡಿದ) ಭಗದತ್ತಂ ಸುಪ್ರತೀಕದ್ವಿಪಮಂ ಅಪಚಿತ ಉತ್ಸಾಹದಿಂ ತೋಱಿಕೊಟ್ಟಂ (ಭಗದತ್ತನು ಕೂಡಿಕೊಂಡಿರುವ ಉತ್ಸಾಹದಿಂದ ಸುಪ್ರತೀಕವೆಂಬ ಆನೆಯನ್ನು ಸೈನ್ಯದ ಮುಂದುಗಡೆ ತೋರಿಸಿ ಛೂಬಿಟ್ಟನು. -ನೂಕಿದನು.)

ಪದ್ಯ-೬೯:ಅರ್ಥ: ನಾನು ಹತ್ತಿರುವ ಈ ಆನೆಯೂ

ಪ್ರಖ್ಯಾತನಾದ ದೇವೇಂದ್ರನ ಐರಾವತದ ಸ್ನೇಹಿತ. ಹಾಗೆಯೇ ದಿಗ್ಗಜವೂ ಹೌದು. ನನ್ನನ್ನು ದುರ್ಯೋಧನನು ನಂಬಿಕೊಂಡಿದ್ದಾನೆ. ಈಗ ನನಗೆ ಭೀಮನೇ ಪ್ರತಿಭಟಿಸಿ ಬಂದಿದ್ದಾನೆ. ಈಗ ನನ್ನ ಪೌರುಷವೂ ಪರಾಕ್ರಮವೂ ಗಗನವನ್ನು ಮುಟ್ಟಿದೆ ಎಂದು ಆರ್ಭಟಮಾಡಿ ಬಾಹುಬಲದ ಅಹಂಕಾರದಿಂದ ಕೂಡಿದ

ಭಗದತ್ತನು ಕೂಡಿಕೊಂಡಿರುವ ಉತ್ಸಾಹದಿಂದ ಸುಪ್ರತೀಕವೆಂಬ ಆನೆಯನ್ನು ಸೈನ್ಯದ ಮುಂದುಗಡೆ ತೋರಿಸಿ ಛೂಬಿಟ್ಟನು.- ನೂಕಿದನು.

- **ಟಿಪ್ಪಣಿ**::ಭಗದತ್ತನು ಭೂದೇವಿಯ ಮಗನಾದ ನರಕಾಸುರನ ಮಗ. ಭೂಮಿಯನ್ನು ಸಮುದ್ರದ ಕೆಳಗೆ ಪಾತಾಳಕ್ಕೆ ಹೊತ್ತುಕೊಂಡು ಹೋಗಿದ್ದ

ಹಿರಣ್ಯಾಕ್ಷನನ್ನು ಸಂಹರಿಸಲು ವಿಷ್ಣುವು ವರಾಹ ಅವತಾರವೆತ್ತಿ ರಾಕ್ಷಸನೊಡನೆ ಹೋರಾಡಿ ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಪುನಃ ಸ್ಥಿರವಾಗಿಟ್ಟನು. ಆಗ ಆ ವರಾಹದ ಬೆವರು ಭೂಮಿಯಮೇಲೆ ಬಿದ್ದು ಅದರಿಂದ ನರಕಾಸುರನು ಹುಟ್ಟಿ ಲೋಕಕಂಟಕನಾದನು. ಅವನನ್ನು ಕೃಷ್ಣನು

ಭೂದೇವಿಯ ಅಂಶದವಳಾದ
ಸತ್ಯಭಾಮೆಯ
ಸಹಾಯದಿಂದ ಕೊಂದಿದ್ದನು.
ಆ ನರಕಾಸುರನ ಮಗನೇ
ಭಗದತ್ತ. ಅವನ ಬಳಿ
ಭೂಮಿಯನ್ನು ಹೊತ್ತ ಮಹಾ
ದಿಗ್ಗಜಗಳಲ್ಲಿ ಒಂದಾದ
ಸುಪ್ರತೀಕವು ಇತ್ತು. ಮತ್ತೂ
ಹಿರಣ್ಯಾಕ್ಷನೊಡನೆ ಹೋರಾಡಿ
ಭೂಮಿಯನ್ನು ಎತ್ತುವಾಗ
ವರಾಹದ ಒಂದು ಕೋರೆಹಲ್ಲು

ಮುರಿದಿದ್ದು ಅದು ವೈಷ್ಣಾವಸ್ತ್ರವಾಗಿ ಅದನ್ನು ಭೂಮಿಯು ಪಡೆದಿದ್ದಳು. ಅದನ್ನು ಅವಳು ನರಕಾಸುರನ ಮಗ, ತನ್ನ ಮೊಮ್ಮಗ ಭಗದತ್ತನಿಗೆ ಕೊಟ್ಟಿದ್ದಳು. ಈ ಯುದ್ಧದಲ್ಲಿ ಭಗದತ್ತ ಅದನ್ನು ಪ್ರಯೋಗಿಸಿದಾಗ, ಅದನ್ನು ಕೃಷ್ಣ ಹಿಂದಕ್ಕೆ ಪಡೆದನು.

ಕಂ|| ಮದಕರಿಯ ಪರಿವ ಭರದಿಂ

ದದಿರ್ದೊಡೆ ನೆಲನೊಡ್ಡಿ ನಿಂದ
ಚತುರಂಗಮಮೊ|
ಮೋದಲೆ ನಡುಗಿದುದು
ಕೂಡಿದ
ಚದುರಂಗದ
ಮಣೆಯನಲ್ಗಿದಂತಪ್ಪಿನೆಗಂ||
೭೦

ಪದ್ಯ-೭೦:ಪದವಿಭಾಗ-
ಅರ್ಥ:ಮದಕರಿಯ ಪರಿವ ಭರದಿಂದ ಅದಿರ್ದೊಡೆ ನೆಲಂ (ಆ ಮದ್ದಾನೆಯು ನಡೆಯುವ

ವೇಗದಿಂದ ಭೂಮಿಯು ಅಲುಗಾಡಿದರೆ,) ಒಡ್ಡಿ ನಿಂದ ಚತುರಂಗಮಂ ಒರ್ಮೊದಲೆ (ಒಂದೇಸಲ) ನಡುಗಿದುದು (ಅದರ ಮೇಲೆ ನಿಂತಿರುವ ಚತುರಂಗ ಸೈನ್ಯವೂ ಒಡನೆಯೇ ನಡುಗಿದವು) ಕೂಡಿದ ಚದುರಂಗದ ಮಣಿಯನು ಅಲ್ಗಿದಂ ತಪ್ಪಿನೆಗಂ (ಕಾಯಿಗಳಿಂದ ಕೂಡಿದ ಚದುರಂಗದ

ಮಣೆಯನ್ನು
ಅಲುಗಾಡಿಸಿದಂತೆ-<)
ಪದ್ಯ-00:ಅರ್ಥ:ಆ
ಮದ್ದಾನೆಯು ನಡೆಯುವ
ವೇಗದಿಂದ ಭೂಮಿಯು
ಅಲುಗಾಡಿದರೆ, ಅದರ ಮೇಲೆ
ನಿಂತಿರುವ ಚತುರಂಗ
ಸೈನ್ಯವೂ ಕಾಯಿಗಳಿಂದ
ಕೂಡಿದ ಚದುರಂಗದ
ಮಣೆಯನ್ನು
ಅಲುಗಾಡಿಸಿದಂತೆ ಇದ್ದಕ್ಕಿದ್ದ

ಹಾಗೆ ಒಡನೆಯೇ ನಡುಗಿದವು.

ವ|| ಆಗಳಸುರನುಯ್ದ ನೆಲನನಾದಿ ವರಾಹನಱಸಲೆಂದು ಸಕಳ ಜಳಚರಕಳಿತ ಜಳನಿಧಿಗಳಂ ಕಲಂಕುವಂತೆ ಪಾಂಡವ ಬಳ ಜಳನಿಧಿಯನಳಿಕುಳ ಝೇಂಕಾರ ಮುಖರಿತ ವಿಶಾಳ ಕರಟ ತಟಮಾ ದಿಶಾಗಜೇಂದ್ರಂ ಕಲಂಕೆ-

ವಚನ:ಪದವಿಭಾಗ-ಅರ್ಥ:ಆಗಳು ಅಸುರನು ಉಯ್ದ ನೆಲನನು ಆದಿ ವರಾಹನ ಅಱಸಲೆಂದು (ಆಗ ರಾಕ್ಷಸ ಹಿರಣ್ಯಾಕ್ಷನು ಎತ್ತಿಕೊಂಡುಹೋದ ಭೂದೇವಿಯನ್ನು ಆದಿವರಾಹನಾದ ವಿಷ್ಣುವು ಹುಡುಕಬೇಕೆಂದು) ಸಕಳ ಜಳಚರ ಕಳಿತ ಜಳನಿಧಿಗಳಂ ಕಲಂಕುವಂತೆ (ಸಮಸ್ತ

ಜಲಚರಗಳಿಂದ ತುಂಬಿದ ಸಮುದ್ರಗಳನ್ನು ಕಲಕಿದಂತೆ) ಪಾಂಡವ ಬಳ ಜಳನಿಧಿಯನು (ಪಾಂಡವ ಸೇನಾಸಮುದ್ರವನ್ನು) ಅಳಿಕುಳ ಝೇಂಕಾರ (ದುಂಬಿಗಳ ಝೇಂಕಾರ) ಮುಖರಿತ ವಿಶಾಳ ಕರಟ ತಟಮ್ (ವಿಶಾಲವಾದ ಕಪೋಲಪ್ರದೇಶವುಳ್ಳ) ಆ ದಿಶಾಗಜೇಂದ್ರಂ ಕಲಂಕೆ (ಆ

ದಿಗ್ಗಜವು ಕಲಕಿದಂತೆ-
ನೆಲವನ್ನು ಆ ಆನೆ
ಅಲುಗಾಡಿಸಿತು.)-
ವಚನ:ಅರ್ಥ: ಆಗ ರಾಕ್ಷಸ
ಹಿರಣ್ಯಾಕ್ಷನು
ಎತ್ತಿಕೊಂಡುಹೋದ
ಭೂದೇವಿಯನ್ನು
ಆದಿವರಾಹನಾದ ವಿಷ್ಣುವು
ಹುಡುಕಬೇಕೆಂದು ಸಮಸ್ತ
ಜಲಚರಗಳಿಂದ ತುಂಬಿದ
ಸಮುದ್ರಗಳನ್ನು ಕಲಕಿದಂತೆ

ಪಾಂಡವ

ಸೇನಾಸಮುದ್ರವನ್ನು

ದುಂಬಿಗಳ

ಝೇಂಕಾರಶಬ್ದದಿಂದ

ಧ್ವನಿಮಾಡಲ್ಪಟ್ಟ ವಿಶಾಲವಾದ

ಕಪೋಲಪ್ರದೇಶವುಳ್ಳ ಆ

ದಿಗ್ಗಜವು ಕಲಕಿದಂತೆ-

ಅಲುಗಾಡಿಸಿತು.

ಚಂ|| ತಳರ್ದುದು ಕರ್ಣತಾಳ

ಪವನಾಹತಿಯಂ ಜಳರಾಶಿ

ಕೆಯ್ಯ ಬ

ಳ್ವಳಿಕೆಗೆ ದಿಗ್ಗಜಂ ದೆಸೆಯಿನತ್ತ

ತೆರಳ್ದುವುಕಾಯ್ವಿನಿಂ ದಿಶಾ|

ವಳಿವೆರಸಂಬರಂ ಪೊಗೆದು

ಪೊತ್ತಿದುದಾದ ಮದಾಂಬುವಿಂ

ಜಗಂ

ಜಳಧಿವೊಲಾಯ್ತುದಂ ನೆರೆಯೆ

ಬಣ್ಣಿಪರಾರ್ ಗಳ

ಸುಪ್ರತೀಕಮಂ|| ೭೧ ||71

ಪದ್ಯ-೭೧:ಪದವಿಭಾಗ-

ಅರ್ಥ:ತಳರ್ದುದು ಕರ್ಣತಾಳ

ಪವನ ಆಹತಿಯಿಂ

ಜಳರಾಶಿ('ಅದು ಕಿವಿಯನ್ನು
ಬಿಸುವುದರಿಂದುಂಟಾದ
ಗಾಳಿಯ ಹೊಡೆತದಿಂದ
ಸಮುದ್ರವು-ತಳರ್ದುದು-
ಚಲಿಸಿತು) ಕೆಯ್ಯ ಬಳ್ವಳಿಕೆಗೆ
(ಸೊಂಡಿಲಿನ ಬಲವಾದ
ಬೀಸುವಿಕೆಗೆ) ದಿಗ್ಗಜಂ
ದೆಸೆಯಿನು ಅತ್ತ ತೆರಳ್ದುವು
ಕಾಯ್ಪಿನಿಂ (ದಿಗ್ಗಜಗಳು
ದಿಕ್ಕುಗಳಿಂದ ಆಚೆಗೆ
ಹೋದುವು) ದಿಶಾವಳಿವೆರಸು

ಅಂಬರಂ ಪೊಗೆದು
ಪೊತ್ತಿದುದು (ಅದರ
ಕೋಪದಿಂದ ದಿಕ್ಕುಗಳ
ಸಮೂಹದೊಡನೆ ಆಕಾಶವು
ಪೊಗೆದು- ಹೊಗೆಯಿಂದ
ಕೂಡಿ ಉರಿಯಿತು) ಆದ
ಮದಾಂಬುವಿಂ (ಸುರಿದ
ಮದೋದಕದಿಂದ) ಜಗಂ
ಜಳಧಿವೊಲಾಯ್ತು (ಸುರಿದ
ಮದೋದಕದಿಂದ
ಭೂಮಂಡಲವು ಸಮುದ್ರದ

ಹಾಗಾಯಿತು) ಅದಂ ನೆರೆಯೆ ಬಣ್ಣಿಪರಾರ್ ಗಳ(ಉದ್ದವಾಗಿ ವಿಸ್ತಾರವಾಗಿ?) ಸುಪ್ರತೀಕಮಂ (ಆ ಸುಪ್ರತೀಕವನ್ನು (ಗಳ) ಸಂಪೂರ್ಣವಾಗಿ ವರ್ಣಿಸುವವರು ಯಾರಿದ್ದಾರೆ?)

ಪದ್ಯ-೭೧/ 71:ಅರ್ಥ:ಅದು ಕಿವಿಯನ್ನು ಬಿಸುವುದರಿಂದುಂಟಾದ

ಗಾಳಿಯ ಹೊಡೆತದಿಂದ
ಸಮುದ್ರವು ಚಲಿಸಿತು.
ಸೊಂಡಿಲಿನ ಬಲವಾದ
ಬೀಸುವಿಕೆಗೆ ದಿಗ್ಗಜಗಳು
ದಿಕ್ಕುಗಳಿಂದ ಆಚೆಗೆ
ಹೋದುವು. ಅದರ
ಕೋಪದಿಂದ ದಿಕ್ಕುಗಳ
ಸಮೂಹದೊಡನೆ ಆಕಾಶವೂ
ಹೊಗೆಯಿಂದ ಕೂಡಿ
ಉರಿಯಿತು. ಸುರಿದ
ಮದೋದಕದಿಂದ

ಭೂಮಂಡಲವು ಸಮುದ್ರದ ಹಾಗಾಯಿತು. ಆ ಸುಪ್ರತೀಕವನ್ನು ಸಂಪೂರ್ಣವಾಗಿ ವರ್ಣಿಸುವವರಾರಿದ್ದಾರೆ?

ಚಂ|| ಕರ ನಖ ದಂತ ಘಾತದಿನುರುಳ್ವ ಚತುರ್ಬಲದಿಂ ತೆರಳ್ವ ನೆ ತ್ತರ ಕಡಲಾ ಕಡಲ್ವರೆಗಮೆಯ್ದೆ ಮಹಾಮಕರಂ ಸಮುದ್ರದೊಳ್|

ಪರಿವವ್ರೊಲಿಂತಗುರ್ವುರ್ವೆರಸಾ

ಭಗದತ್ತನ ಕಾಲೊಳಂತದೇಂ

ಪರಿದುದೊ ಸುಪ್ರತೀಕ

ಗಜಮಚ್ಚರಿಯಪ್ಪಿನಮಾಜಿರಂ

ಗದೊಳ್‌|| ೭೨ ||

ಪದ್ಯ-೭೨:ಪದವಿಭಾಗ-

ಅರ್ಥ:ಕರ ನಖ ದಂತ

ಘಾತದಿಂ ಉರುಳ್ವ

ಚತುರ್ಬಲದಿಂ (ಆನೆಯ

ಸೊಂಡಿಲು, ಉಗುರು,

ದಂತಗಳ ಹೊಡೆತದಿಂದ

ಉರುಳಿ ಬೀಳುವ ಚತುರಂಗ ಬಲದಿಂದ) ತೆರಳ್ವ ನೆತ್ತರ ಕಡಲು ಆ ಕಡಲ್ವರೆಗಂ ಎಯ್ದೆ (ಹೊರಡುವ ರಕ್ತಸಮುದ್ರವು ಆ ಸಮುದ್ರದವರೆಗೂ ಬರಲು/ ಹರಿಯಲು ಸಮುದ್ರ ಮಧ್ಯೆ ಓಡುವ) ಮಹಾಮಕರಂ ಸಮುದ್ರದೊಳ್ ಪರಿವವೊಲ್ (ಸಮುದ್ರ ಮಧ್ಯೆ ಓಡುವ ದೊಡ್ಡ ಮೊಸಳೆಯ ಹಾಗೆ)

ಅಗುರ್ವುವೆರಸು ಆ
ಭಗದತ್ತನ ಕಾಲೊಳು ಅಂತು
ಅದೇಂ ಪರಿದುದೊ ಸುಪ್ರತೀಕ
ಗಜಂ (ಭೀಕರತೆಯಿಂದ ಕೂಡಿ
ಆ ಭಗದತ್ತನು ನಡೆಸುತ್ತಿದ್ದ
ಸುಪ್ರತೀಕವೆಂಬ ಆನೆಯು
ಯುದ್ಧರಂಗದ ಮಧ್ಯೆ)
ಅಚ್ಚರಿಯಪ್ಪಿನಂ
ಆಜಿರಂಗದೊಳ್
(ಆಶ್ಚರ್ಯವಾಗುವ ಹಾಗೆ
ನಿರಾಯಾಸವಾಗಿ ಹರಿಯಿತು)

ಪದ್ಯ-೭೨:ಅರ್ಥ: ಸುಪ್ರತೀಕ ಆನೆಯ ಸೊಂಡಿಲು, ಉಗುರು, ದಂತಗಳ ಹೊಡೆತದಿಂದ ಉರುಳಿ ಬೀಳುವ ಚತುರಂಗ ಬಲದಿಂದ ಹೊರಡುವ ರಕ್ತಸಮುದ್ರವು ಆ ಸಮುದ್ರದವರೆಗೂ ಹರಿಯಲು ಸಮುದ್ರ ಮಧ್ಯೆ ಓಡುವ ದೊಡ್ಡ ಮೊಸಳೆಯ ಹಾಗೆ ಭೀಕರತೆಯಿಂದ ಕೂಡಿ ಆ ಭಗದತ್ತನು ನಡೆಸುತ್ತಿದ್ದ

ಸುಪ್ರತೀಕವೆಂಬ ಆನೆಯು
ಯುದ್ಧರಂಗದ ಮಧ್ಯೆ
ಆಶ್ಚರ್ಯವಾಗುವ ಹಾಗೆ
ನಿರಾಯಾಸವಾಗಿ ಹರಿಯಿತು!

**ವ|| ಅಂತು ಪರಿದ
ಬೀದಿಗಳೊಳೆಲ್ಲಂ ನೆತ್ತಂ
ತೊಗರೆಳ್ ಪರಿಯೆ ಕೆಂಡದ
ತೊರೆಯಂತೆ ಪರಿದ
ಸುಪ್ರತೀಕಂ ಕೆಯ್ಯ ಕಾಲ
ಕೋಡೇಱಿನೊಳ್
ಬಲಮನೆಲ್ಲಂ ಜವನೆ**

ಜೀವುಳಿದುೞಿವಂತೆ
ತೊೞ್ತುೞಿದುೞಿದು
ಪದಿನಾಲ್ಸಾಸಿರ ಮದಾಂಧ
ಗಂಧಸಿಂಧುರಂಗಳುಮನೊಂ
ದು ಲಕ್ಕ ರಥಮುಮನರೆದು
ಸಣ್ಣಿಸಿದಂತೆ ಮಾಡಿದಾಗಳ್
ಗಜಾಸುರನೊಳಾಸುರಂಬೆರ
ಸು ತಾಗುವಂಧಕಾರಾತಿಯಂತೆ
ಭೀಮಸೇನಂ ಬಂದು
ಪೊಣರೆ-

ವಚನ:ಪದವಿಭಾಗ-ಅರ್ಥ:
ಅಂತು ಪರಿದ (ಓಡಿದ) ಬೀದಿಗಳೊಳು ಎಲ್ಲಂ ನೆತ್ತಂ ತೊಗರೆಳ್ ಪರಿಯೆ (ರಕ್ತನದಿಗಳು ಹರಿಯಲು,) ಕೆಂಡದ ತೊರೆಯಂತೆ ಪರಿದ ಸುಪ್ರತೀಕಂ ಕೆಯ್ಯ ಕಾಲ ಕೋಡ ಏಱಿನೊಳ್ (ಕೆಂಡದ ಪ್ರವಾಹದಂತೆ ಹರಿಯುತ್ತಿರುವ ಸುಪ್ರತೀಕದ ಸೊಂಡಲಿನ, ಕಾಲಿನ, ಕೊಂಬಿನ ಪೆಟ್ಟಿನಿಂದ)

ಬಲಮನು ಎಲ್ಲಂ ಜವನೆ
ಜಿವುಳಿ (ದು)ತುೞಿವಂತೆ
ತೊೞ್ತುೞಿದುೞಿದು
(ಯಮನೇ ಚೂರ್ಣ
ಮಾಡಿದಂತೆ (ಚಿಗುಳಿಯನ್ನು
ತುಳಿದಂತೆ) ಸಂಪೂರ್ಣವಾಗಿ
ತುಳಿದು ತುಳಿದು)
ಪದಿನಾಲ್ಸಾಸಿರ ಮದಾಂಧ
ಗಂಧಸಿಂಧುರಂಗಳುಮನು
ಒಂದು ಲಕ್ಕ ರಥಮುಮನು
ಅರೆದು ಸಣ್ಣಿಸಿದಂತೆ

ಮಾಡಿದಾಗಳ್ (ಹದಿನಾಲ್ಕು
ಸಾವಿರ ಮದದಿಂದ
ಕುರುಡಾದ ಶ್ರೇಷ್ಠವಾದ
ಆನೆಗಳನ್ನೂ ಒಂದು ಲಕ್ಷ
ರಥವನ್ನೂ ಅರೆದು
ಪುಡಿಮಾಡಿ)
ಗಜಾಸುರನೊಳು ಆಸುರಂ
ಬೆರಸು ತಾಗುವ ಅಂಧಕ
ಆರಾತಿಯಂತೆ ಭೀಮಸೇನಂ
ಬಂದು ಪೊಣರೆ (ಅದನ್ನು
ನೋಡಿದ ಭೀಮನು

ಗಜಾಸುರನೆಂಬ ರಾಕ್ಷಸನೊಡನೆ ರಭಸದಿಂದ ಕೂಡಿ ತಗಲುವ ಈಶ್ವರನಂತೆ ಬಂದು ಹೋರಾಡಿದನು-)-

ವಚನ:ಅರ್ಥ:ಹಾಗೆ ಓಡಿದ ಬೀದಿಗಳಲ್ಲೆಲ್ಲ ರಕ್ತನದಿಗಳು ಹರಿಯಲು, ಕೆಂಡದ ಪ್ರವಾಹದಂತೆ ಹರಿಯುತ್ತಿರುವ ಸುಪ್ರತೀಕದ ಸೊಂಡಲಿನ, ಕಾಲಿನ, ಕೊಂಬಿನ ಪೆಟ್ಟಿನಿಂದ ಸೈನ್ಯವೆಲ್ಲವನ್ನು ಯಮನೇ

ಚೂರ್ಣ ಮಾಡಿದಂತೆ
(ಚಿಗುಳಿಯನ್ನು ತುಳಿದಂತೆ)
ಸಂಪೂರ್ಣವಾಗಿ ತುಳಿದು
ಹದಿನಾಲ್ಕು ಸಾವಿರ
ಮದದಿಂದ ಕುರುಡಾದ
ಶ್ರೇಷ್ಠವಾದ ಆನೆಗಳನ್ನೂ
ಒಂದು ಲಕ್ಷ ರಥವನ್ನೂ
ಅರೆದು ಪುಡಿಮಾಡಿತು.
ಅದನ್ನು ನೋಡಿದ ಭೀಮನು
ಗಜಾಸುರನೆಂಬ
ರಾಕ್ಷಸನೊಡನೆ ರಭಸದಿಂದ

ಕೂಡಿ ತಗಲುವ ಈಶ್ವರನಂತೆ

ಬಂದು ಹೋರಾಡಿದನು-

ಚಂ|| ತೊಲಗಿದು ಸುಪ್ರತೀಕ ಗಜಮಾಂ ಭಗದತ್ತನೆನಿಲ್ಲಿ ನಿನ್ನ ತೋ

ಳ್ವಲದ ಪೊಡರ್ಪು ಸಲ್ಲದೆಲೆ ಸಾಯದೆ ಪೋಗೆನೆ ಕೇಳ್ದು ಭೀಮನಾಂ|

ತೊಲೆಯದಿರುರ್ಕಿನೊಳ್ ನುಡಿವೆಯೀ ಕರಿ ಸೂಕರಿಯಲ್ತೆ ಪತ್ತಿ ಗಂ

ಟಲನೊಡೆಯೊತ್ತಿ ಕೊಂದಪೆನಿದಲ್ತಿದಱಿಮ್ಮನು ಮೆನ್ನನಾಂಪುದೇ|| ೭೩ ||

ಪದ್ಯ-೭೩:ಪದವಿಭಾಗ-

ಅರ್ಥ: ತೊಲಗು ಇದು ಸುಪ್ರತೀಕ ಗಜಮ್ ಆಂ ಭಗದತ್ತನು ಎನೆ ಇಲ್ಲಿ ನಿನ್ನ ತೋಳ್ವಲದ ಪೊಡರ್ಪು ಸಲ್ಲದು (ತೊಲಗು ಇದು ಸುಪ್ರತೀಕವೆಂಬ ಆನೆ. ನಾನೇ ಭಗದತ್ತ. ಇಲ್ಲಿ ನಿನ್ನ ತೋಳಿನ

ಶಕ್ತಿಯ ಹಿರಿಮೆಯು
ಸಲ್ಲುವುದಿಲ್ಲ.) ಎಲೆ ಸಾಯದೆ
ಪೋಗು ಎನೆ (ಎಲವೋ
ಸಾಯದೆ ಹೋಗು ಎನ್ನಲು,)
ಕೇಳ್ದು ಭೀಮನು ಆಂತು
ಒಲೆಯದಿರ್ ಉರ್ಕಿನೊಳ್
(ಅದನ್ನು ಕೇಳಿ ಭೀಮನು
(ಎಲವೋ) ನಾನು ಭೀಮ;
ಅಹಂಕಾರದಿಂದ
ತೂಗಾಡಬೇಡ) ನುಡಿವೆಯ
ಈ ಕರಿ ಸೂಕರಿಯಲ್ತೆ ಪತ್ತಿ

ಗಂಟಲನು ಒಡೆಯೊತ್ತಿ
ಕೊಂದಪೆನು (ಈ ಆನೆಯು
ನನಗೆ ಹಂದಿಗೆ ಸಮಾನ.
ಇದರ ಮೇಲೆ ಹತ್ತಿ ಇದರ
ಗಂಟಲನ್ನು ಅಮುಕಿ
ಕೊಲ್ಲುತ್ತೇನೆ.) ಇದಲ್ತು ಇದಱ
ಅಮ್ಮನುಮ್ ಎನ್ನನು
ಆಂಪುದೇ (ಇದಲ್ಲ
ಇದರಪ್ಪನೂ ನನ್ನನ್ನು
ಪ್ರತಿಭಟಿಸಬಲ್ಲುದೇ?)

ಪದ್ಯ-೭೩:ಅರ್ಥ:
(ಭಗದತ್ತನು ಭೀಮನನ್ನು ಕುರಿತು) ತೊಲಗು ಇದು ಸುಪ್ರತೀಕವೆಂಬ ಆನೆ. ನಾನೇ ಭಗದತ್ತ. ಇಲ್ಲಿ ನಿನ್ನ ತೋಳಿನ ಶಕ್ತಿಯ ಹಿರಿಮೆಯು ಸಲ್ಲುವುದಿಲ್ಲ. ಎಲವೋ ಸಾಯದೆ ಹೋಗು ಎನ್ನಲು, ಅದನ್ನು ಕೇಳಿ ಭೀಮನು (ಎಲವೋ) ನಾನು ಭೀಮ; ಅಹಂಕಾರದಿಂದ

ತೂಗಾಡಬೇಡ. ಗರ್ವದಿಂದ ಅಹಂಕಾರದಿಂದ ಮಾತನಾಡುತ್ತಿದ್ದೀಯೆ. ಈ ಆನೆಯು ನನಗೆ ಹಂದಿಗೆ ಸಮಾನ. ಇದರ ಮೇಲೆ ಹತ್ತಿ ಇದರ ಗಂಟಲನ್ನು ಅಮುಕಿ ಕೊಲ್ಲುತ್ತೇನೆ. ಇದಲ್ಲ ಇದರಪ್ಪನೂ ನನ್ನನ್ನು ಪ್ರತಿಭಟಿಸಬಲ್ಲುದೇ?

ವ|| ಎಂದು ನಾರಾಚಂಗಳಿಂ ತೋಡುಂ ಬೀಡುಂ

ಕಾಣಲಾಗದಂತು ಸುಪ್ರತೀಕ ಕರಿಯೆಂಬ ಗಿರಿಯ ಮೇಲೆ ಭೀಮನೆಂಬ ಕಾಲಮೇಘಂ ಸರಲ ಸರಿಯಂ ಸುರಿಯೆ-

ವಚನ:ಪದವಿಭಾಗ-

ಅರ್ಥ:ಎಂದು ನಾರಾಚಂಗಳಿಂ ತೋಡುಂ ಬೀಡುಂ ಕಾಣಲಾಗದಂತು (ಎಂದು ಬಾಣಗಳನ್ನು ತೊಡುವುದೂ ಬಿಡುವುದೂ ಕಾಣದಂತೆ) ಸುಪ್ರತೀಕ

ಕರಿಯೆಂಬ ಗಿರಿಯ ಮೇಲೆ ಭೀಮನೆಂಬ ಕಾಲಮೇಘಂ ಸರಲ ಸರಿಯಂ ಸುರಿಯೆ (ಸುಪ್ರತೀಕಗಜವೆಂಬ ಬೆಟ್ಟದ ಮೇಲೆ ಭೀಮನೆಂಬ ಪ್ರಳಯಕಾಲದ ಮೋಡವು ಬಾಣದ ಮಳೆಯನ್ನು ಸುರಿಸಯಲು-)-

ವಚನ:ಅರ್ಥ:ಎಂದು ಬಾಣಗಳನ್ನು ತೊಡುವುದೂ ಬಿಡುವುದೂ ಕಾಣದಂತೆ

ಸುಪ್ರತೀಕಗಜವೆಂಬ ಬೆಟ್ಟದ ಮೇಲೆ ಭೀಮನೆಂಬ ಪ್ರಳಯಕಾಲದ ಮೋಡವು ಬಾಣದ ಮಳೆಯನ್ನು ಸುರಿಸಿ-.

ಚಂ||

ಸಿಡಿಲೆಱಪಂದದಿಂದೆಱಗಿ ದಿಕ್ಕರಿ ತನ್ನ ವರೂಥಮಂ ಪಡ ಲ್ವಡಿಸೆ ಮರುತ್ಸುತಂ ಮುಳಿದು ಮಚ್ಚರದಿಂ ಗಜೆಗೊಂಡು ಸುತ್ತುಗೊಂ||

ಡಡಿಗಿಡೆ ನುರ್ಗಿ ಪೊಯ್ದು

ಪೆಱಪಿಂಗುವುದುಂ ಕರಿ

ನೊಂದು ಕೋಪದಿಂ

ಪಿಡಿದೆಱಗಿತ್ತು

ಭೀಮನನಗುರ್ವಿಸಿ ಪಾಂಡವ

ಸೈನ್ಯಮಳ್ಕುಱಲ್‌|| ೭೪ ||

ಪದ್ಯ-೭೪:ಪದವಿಭಾಗ-

ಅರ್ಥ:ಸಿಡಿಲು

ಎಱಪಂದದಿಂದೆ ಎಱಗಿ ದಿಕ್ಕರಿ

ತನ್ನ ವರೂಥಮಂ ಪಡಲ್ವಡಿಸೆ

(ದಿಗ್ಗಜವಾದ ಸುಪ್ರತೀಕವು

ಸಿಡಿಲೆರಗುವ ವೇಗದಿಂದ
ಎರಗಿ ತನ್ನ ತೇರಿನ್ನು
ತಲೆಕೆಳಗುಮಾಡಲು)
ಮರುತ್ಸುತಂ ಮುಳಿದು
ಮಚ್ಚರದಿಂ ಗಜೆಗೊಂಡು
(ಭೀಮನು ಕೋಪಿಸಿಕೊಂಡು
ಮತ್ಸರದಿಂದ ಗದೆಯನ್ನು
ತೆಗೆದುಕೊಂಡು)
ಸುತ್ತುಗೊಂಡು ಅಡಿಗಿಡೆ
(ಸುತ್ತಲೂ ಬಳಸಿ ಅದರ ಹೆಜ್ಜೆ
ಕೆಡಲು .) ನುರ್ಗಿ ಪೊಯ್ದು

ಪೆಱಪಿಂಗುವುದುಂ (ನುಗ್ಗಿ
ಹೊಡೆದು ಹಿಂದಕ್ಕೆ
ಹೋಗಲು,) ಕರಿ ನೊಂದು
ಕದಿಂಪಿಡಿದ ಎಱಗಿತ್ತು
ಭೀಮನನು ಅಗುರ್ವಿಸಿ
ಪಾಂಡವ ಸೈನ್ಯಮ್
ಅಳ್ಕುಱಲ್(ಆನೆಯು
ನೊಂದು ಕೋಪದಿಂದ
ಭೀಮನನ್ನು ಹೆದರಿಸಿ
ಪಾಂಡವಸೈನ್ಯವು

ಭಯಪಡುವ ಹಾಗೆ ಅವನ ಮೇಲೆ ಬಿದ್ದಿತು)

ಪದ್ಯ-೭೪:ಅರ್ಥ:
ದಿಗ್ಗಜವಾದ ಸುಪ್ರತೀಕವು ಸಿಡಿಲೆರಗುವ ವೇಗದಿಂದ ಎರಗಿ ತನ್ನ ತೇರಿನ್ನು ತಲೆಕೆಳಗುಮಾಡಲು ಭೀಮನು ಕೋಪಿಸಿಕೊಂಡು ಮತ್ಸರದಿಂದ ಗದೆಯನ್ನು ತೆಗೆದುಕೊಂಡು ಸುತ್ತಲೂ ಬಳಸಿ ಅದರ ಹೆಜ್ಜೆ ಕೆಡಲು

ನುಗ್ಗಿ ಹೊಡೆದು ಹಿಂದಕ್ಕೆ ಹೋಗಲು, ಆನೆಯು ನೊಂದು ಕೋಪದಿಂದ ಭೀಮನನ್ನು ಹೆದರಿಸಿ ಪಾಂಡವಸೈನ್ಯವು ಭಯಪಡುವ ಹಾಗೆ ಅವನ ಮೇಲೆ ಬಿದ್ದಿತು.

ವ|| ಅಂತೆಱಗಿದೊಡೆ ಕೋಡಕೆಯ್ಯ ಕಾಲೆಡೆಗಳೊಳ್ ಬಿಣ್ಪುಮಂ ಪೆಣೆವಂದದಿಂದೇರ್ದು ಡೊಕ್ಕರಂಗೊಂಡು

ಕುರುಕ್ಷೇತ್ರದಿಂದತ್ತ ಪನ್ನೆರಡು ಯೋಜನಂಬರಮೊತ್ತುವುದುಂ

-

ವಚನ:ಪದವಿಭಾಗ-

ಅರ್ಥ:ಅಂತು ಎಱಗಿದೊಡೆ ಕೋಡ ಕೆಯ್ಯ ಕಾಲೆಡೆಗಳೊಳ್ ಬಿಣ್ಪುಮಂ ಪೆಣೆವಂದದಿಂದ ಏರ್ದು (ಭೀಮನು ಆ ಆನೆಯ ಕೊಂಬು, ಸೊಂಡಿಲು ಕಾಲಿನ ಮಧ್ಯದಲ್ಲಿ ಭಾರವನ್ನು ಹೊರಳಿಸುವ ರೀತಿಯಿಂದ

ಹತ್ತಿ) ಡೊಕ್ಕರಂಗೊಂಡು ಕುರುಕ್ಷೇತ್ರದಿಂದ ಅತ್ತ ಪನ್ನೆರಡು ಯೋಜನಂಬರಮ್ ಒತ್ತುವುದುಂ (ಡೊಕ್ಕರವೆಂಬ ಪಟ್ಟಿನಿಂದ ಆನೆಯನ್ನು ಕುರುಕ್ಷೇತ್ರದಿಂದ ಆ ಕಡೆಗೆ ಹನ್ನೆರಡುಯೋಜನದವರೆಗೆ ನೂಕಿದನು.)-

ವಚನ:ಅರ್ಥ:ಭೀಮನು ಆ ಆನೆಯ ಕೊಂಬು, ಸೊಂಡಿಲು ಕಾಲಿನ ಮಧ್ಯದಲ್ಲಿ ಭಾರವನ್ನು

ಹೊರಳಿಸುವ ರೀತಿಯಿಂದ

ಹತ್ತಿ ಡೊಕ್ಕರವೆಂಬ ಪಟ್ಟಿನಿಂದ

ಆನೆಯನ್ನು ಕುರುಕ್ಷೇತ್ರದಿಂದ

ಆ ಕಡೆಗೆ

ಹನ್ನೆರಡುಯೋಜನದವರೆಗೆ

ನೂಕಿದನು.

ಕಂ|| ಕರಿಯುಂ

ಕುರುಭೂಮಿಯ ನಡು

ವರೆಗಂ ಪವನಜನನೊತ್ತೆ

ತೋಳ್ವಲಮಾಗಳ್|

ಸರಿ ಸರಿಯಾದುದು ತದ್ದಿ

ಕ್ಕರಿಗಂ ಬೀಮಂಗಮುಗ್ರ ಸಂಗರ ಧರೆಯೊಳ್|| ೭೫ ||

ಪದ್ಯ-೭೫:ಪದವಿಭಾಗ-ಅರ್ಥ:ಕರಿಯುಂ ಕುರುಭೂಮಿಯ ನಡುವರೆಗಂ ಪವನಜನನು ಒತ್ತೆ (ಸುಪ್ರತೀಕ ಆನೆಯು ಭೀಮನನ್ನು ಕುರುಭೂಮಿಯ ಮಧ್ಯದವರೆಗೆ ನೂಕಲು) ತೋಳ್ವಲಮಾಗಳ್ ಸರಿ ಸರಿಯಾದುದು ತದ್ ದಿಕ್

ಕರಿಗಂ ಬೀಮಂಗಮುಗ್ರ
ಸಂಗರ ಧರೆಯೊಳ್

ಪದ್ಯ-೭೫:ಅರ್ಥ: ಸುಪ್ರತೀಕ ಆನೆಯು ಭೀಮನನ್ನು ಕುರುಭೂಮಿಯ ಮಧ್ಯದವರೆಗೆ ನೂಕಲು, ಆಗ ಆ ಭಯಂಕರವಾದ ಯುದ್ಧರಂಗದಲ್ಲಿ ಬಾಹುಬಲ ಭೀಮನಿಗೂ ಆ ದಿಗ್ಗಜಕ್ಕೂ ಸರಿಸಮಾನವಾಯಿತು.

ವ|| ಅನ್ನೆಗಮಿತ್ತ ಸಂಸಪ್ತಕಬಲಮೆಲ್ಲಮನಳರೆ ಪೆಳರೆ ಕಿವುಱಿದುಱಿದು ಕೊಲ್ವ ವಿಕ್ರಾಂತತುಂಗಂ ಚಕ್ರಿಯನಿಂತೆಂದಂ-

ವಚನ:ಪದವಿಭಾಗ-ಅರ್ಥ:

ಅನ್ನೆಗಂ ಇತ್ತ ಸಂಸಪ್ತಕಬಲಮೆಲ್ಲಮನು (ಅಷ್ಟರಲ್ಲಿ ಸಂಸಪ್ತಕಂ ಸೈನ್ಯವನ್ನೆಲ್ಲವನ್ನೂ) ಅಳರೆ ಪೆಳರೆ ಕಿವುಱಿ ದುಱಿದು

ಕೊಲ್ವ (ಹೆದರಿ ಬೆದರುವಂತೆ ಅಜ್ಜುಗುಜ್ಜಿ ಯಾಗುವ ಹಾಗೆ ತುಳಿದು ಕೊಲ್ಲುವ) ವಿಕ್ರಾಂತತುಂಗಂ ಚಕ್ರಿಯನು ಇಂತೆಂದಂ (ಅರ್ಜುನನು ಕೃಷ್ಣನನ್ನು ಕುರಿತು ಹೀಗೆಂದನು.)-

ವಚನ:ಅರ್ಥ: ಅಷ್ಟರಲ್ಲಿ ಸಂಸಪ್ತಕಂ ಸೈನ್ಯವನ್ನೆಲ್ಲವನ್ನೂ ಹೆದರಿ ಬೆದರುವಂತೆ ಅಜ್ಜುಗುಜ್ಜಿ ಯಾಗುವ ಹಾಗೆ

ತುಳಿದು ಕೊಲ್ಲುವ
ಮಹಾಪರಾಕ್ರಮಿಯಾದ
ಅರ್ಜುನನು ಕೃಷ್ಣನನ್ನು
ಕುರಿತು ಹೀಗೆಂದನು.

ಚಂ|| ಪರಿದುದು ಸುಪ್ರತೀಕ
ಗಜಮೇಱಿದವಂ
ಭಗದತ್ತನಾಮದ
ದ್ವಿರದಮನಾಂಕೆಗೊಂಡು
ಪೆಣೆವಂ
ಪವನಾತ್ಮಜನೀಗಳಾಹವಂ|

ಪಿರಿದುದಲತ್ತ ಪೋಪಮೆನೆ

ತದ್ರಥಮಂ ಹರಿ

ವಾಯುವೇಗದಿಂ

ಪರಿಯಿಸೆ ತಾಗಿದಂ

ಹರಿಗನಂಕದ ಪೊಂಕದ

ಸುಪ್ರತೀಕಮಂ|| ೭೬ ||

ಪದ್ಯ-೭೬:ಪದವಿಭಾಗ-ಅರ್ಥ:ಪರಿದುದು ಸುಪ್ರತೀಕ ಗಜಂ ಏಱಿದವಂ ಭಗದತ್ತನ್ (ಸುಪ್ರತೀಕವೆಂಬ ಆನೆಯು ಓಡಿಬರುತ್ತಿದೆ. ಅದನ್ನು ಹತ್ತಿ

ಬರುತ್ತಿರುವವನು ಭಗದತ್ತ;)
ಆ ಮದದ್ವಿರದಮನು
ಆಂಕೆಗೊಂಡು ಪೆಣೆವಂ
ಪವನಾತ್ಮಜನು (ಆ
ಮದ್ದಾನೆಯನ್ನು ತಡೆದು
ಹೆಣೆದುಕೊಂಡಿರುವವನು
ಭೀಮ.) ಈಗಳು ಆಹವಂ
ಪಿರಿದು ದಲ್ ಅತ್ತ ಪೋಪಂ
ಎನೆ (ಈಗ ಆ ಕಡೆ ಯುದ್ಧವು
ಹಿರಿದಾಗಿದೆ. ಆ ಕಡೆ
ಹೋಗೋಣ' ಎಂದನು.) ತದ್

ರಥಮಂ ಹರಿ ವಾಯುವೇಗದಿಂ ಪರಿಯಿಸೆ (ಆ ರಥವನ್ನು ಕೃಷ್ಣನು ವಾಯುವೇಗದಿಂದ ಆ ಕಡೆಗೆ ಓಡಿಸಲು) ತಾಗಿದಂ ಹರಿಗಂ ಅಂಕದ ಪೊಂಕದ ಸುಪ್ರತೀಕಮಂ (ಅರ್ಜುನನು ಖ್ಯಾತವೂ ಸೊಕ್ಕಿದ ಸುಪ್ರತೀಕವೆಂಬ ಆನೆಯನ್ನು ಬಂದು ಎದುರಿಸಿದನು.)

ಪದ್ಯ-೭೬:ಅರ್ಥ:

ಸುಪ್ರತೀಕವೆಂಬ ಆನೆಯು ಓಡಿಬರುತ್ತಿದೆ. ಅದನ್ನು ಹತ್ತಿ ಬರುತ್ತಿರುವವನು ಭಗದತ್ತ; ಆ ಮದ್ದಾನೆಯನ್ನು ತಡೆದು ಹೆಣೆದುಕೊಂಡಿರುವವನು ಭೀಮ. ಈಗ ಆ ಕಡೆ ಯುದ್ಧವು ಹಿರಿದಾಗಿದೆ. ಆ ಕಡೆ ಹೋಗೋಣ’ ಎಂದನು. ಆ ರಥವನ್ನು ಕೃಷ್ಣನು ವಾಯುವೇಗದಿಂದ ಆ ಕಡೆಗೆ

ಓಡಿಸಲು, ಅರ್ಜುನನು ಖ್ಯಾತವೂ ಸೊಕ್ಕಿದ ಸುಪ್ರತೀಕವೆಂಬ ಆನೆಯನ್ನು ಬಂದು ಎದುರಿಸಿದನು.

ವ|| ಅಂತು ತಾಗಿ ಮೃಗರಾಜ ನಖರ ಮಾರ್ಗಣಂಗಳೊಳಂ ಕೂರ್ಮನಖಾಸ್ತ್ರಂಗಳೊಳ ಮಾನೆಯುಮಂ ಭಗದತ್ತನುಮಂ ಪೂೞ್ದೊಡೆ ಭಗದತ್ತಂ ಮುಳಿದು

ಭೂದತ್ತಮಪ್ಪ ದಿವ್ಯಾಂಕುಶಮಂ ಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ತಾಗಿ ಮೃಗರಾಜ ನಖರ ಮಾರ್ಗಣಂಗಳೊಳಂ (ಹಾಗೆ ಎದುರಿಸಿ ಸಿಂಹದ ಉಗುರಿನಂತಿರುವ ಬಾಣಗಳಲ್ಲಿಯೂ ಆಮೆಯ ಉಗುರಿನಂತಿರುವ ಬಾಣಗಳಿಂದ)

ಕೂರ್ಮನಖಾಸ್ತ್ರಂಗಳೊಳಂ
ಆನೆಯುಮಂ ಭಗದತ್ತನುಮಂ
ಪೂೞ್ದೊಡೆ (ಆಮೆಯ
ಉಗುರಿನಂತಿರುವ
ಅಸ್ತ್ರಗಳಿಂದ ಆನೆಯನ್ನೂ
ಭಗದತ್ತನನ್ನೂ ಹೂಳಿದಾಗ),
ಭಗದತ್ತಂ ಮುಳಿದು
ಭೂದತ್ತಮಪ್ಪ
ದಿವ್ಯಾಂಕುಶಮಂ ಕೊಂಡು
(ಭೂದೇವಿಯಿಂದ ಕೊಡಲ್ಪಟ್ಟ

ದಿವ್ಯಾಂಕುಶವನ್ನು
ತೆಗೆದುಕೊಂಡು)-
ವಚನ:ಅರ್ಥ:ಹಾಗೆ ಎದುರಿಸಿ
ಸಿಂಹದ ಉಗುರಿನಂತಿರುವ
ಬಾಣಗಳಿಂದ, ಆಮೆಯ
ಉಗುರಿನಂತಿರುವ
ಅಸ್ತ್ರಗಳಿಂದ ಆನೆಯನ್ನೂ
ಭಗದತ್ತನನ್ನೂ ಹೂಳಿದಾಗ,
ಭಗದತ್ತನು ಕೋಪಿಸಿಕೊಂಡು
ಭೂದೇವಿಯಿಂದ ಕೊಡಲ್ಪಟ್ಟ

ದಿವ್ಯಾಂಕುಶವನ್ನು ತೆಗೆದುಕೊಂಡು-

ಕಂ|| ಇಡುವುದುಮದು ವಿಲಯಾಗ್ನಿಯ ಕಿಡಿಗಳನುಗುಱುತ್ತುಮೆಯ್ದೆವ ರ್ಪುದುಮಿದಿರಂ| ನಡೆದಜರನುರದಿನಾಂತೊಡೆ ತುಡುಗೆವೊಲೆಸೆದಿರ್ದುದಂಕುಶಂ ಕಂಧರದೊಳ್|| ೭೭ ||

ಪದ್ಯ-00:ಪದವಿಭಾಗ-

ಅರ್ಥ: ಇಡುವುದುಂ, ಅದು

ವಿಲಯಾಗ್ನಿಯಕಿಡಿಗಳನು
ಉಗುೞುತ್ತುಂ
ಎಯ್ದೆವರ್ಪುದುಂ (ಎಸೆಯಲು
ಅದು ಪ್ರಳಯಾಗ್ನಿಯ
ಕಿಡಿಯನ್ನು ಉಗುಳುತ್ತ
ಸಮೀಪಕ್ಕೆ ಬರಲು) ಇದಿರಂ
ನಡೆದು ಅಜರಂ ಉರದಿಂ
ಆಂತೊಡೆ (ಕೃಷ್ಣನು ಎದುರಾಗಿ
ಹೋಗಿ ಎದೆಯಿಂದ ಅದನ್ನು
ಎದುರಿಸಿದಾಗ,)
ತುಡುಗೆವೊಲ್

(ಆಭರಣದಂತೆ) ಎಸೆದಿರ್ದುದು ಅಂಕುಶಂ ಕಂಧರದೊಳ್ (ಆ ಅಂಕುಶವು ಅವನ ಕತ್ತಿನಲ್ಲಿ ಆಭರಣದ ಹಾಗೆ ಶೋಭಿಸಿತು.)

ಪದ್ಯ-00:ಅರ್ಥ: ಆ ಅಂಕುಶವನ್ನು ಬೀಸಿ ಎಸೆಯಲು ಅದು ಪ್ರಳಯಾಗ್ನಿಯ ಕಿಡಿಯನ್ನು ಉಗುಳುತ್ತ ಸಮೀಪಕ್ಕೆ ಬರಲು, ಕೃಷ್ಣನು ಎದುರಾಗಿ

ಹೋಗಿ ಎದೆಯಿಂದ ಅದನ್ನು ಎದುರಿಸಿದಾಗ, ಆ ಅಂಕುಶವು ಅವನ ಕತ್ತಿನಲ್ಲಿ ಆಭರಣದ ಹಾಗೆ ಶೋಭಿಸಿತು.

ವ|| ಆಗಳ್ ವಿಕ್ರಾಂತತುಂಗಂ ಚೋದ್ಯಂಬಟ್ಟಿದೇನೆಂದು ಬೆಸಗೊಳೆ-

ವಚನ:ಪದವಿಭಾಗ-

ಅರ್ಥ:ಆಗಳ್ ವಿಕ್ರಾಂತತುಂಗಂ (ಅರ್ಜುನನು)

ಚೋದ್ಯಂಬಟ್ಟು ಇದೇನೆಂದು ಬೆಸಗೊಳೆ-

ವಚನ:ಅರ್ಥ:ವ|| ಆಗ ವಿಕ್ರಾಂತತುಂಗನಾದ ಅರ್ಜುನನು ಆಶ್ಚರ್ಯಪಟ್ಟು ಇದೇನೆಂದು ಕೇಳಿದಾಗ-

ಚಂ|| ಇದು ಪೆಱತಲ್ತು ಭೂತಲಮನಾಂ ತರಲಾದಿ ವರಾಹನಾದೆನಂ ದದಱ ವಿಷಾಣಮಂ ಬಱಿಯಮಾ

ವಸುಧಾಂಗನೆಗಿತ್ತೆನೀತನಾ|

ಸುದತಿಯ ಪೌತ್ರನಾಕೆ ಕುಡೆ

ಬಂದುದಿವಂಗೆನಗಲ್ಲದಾನಲಾ

ಗದುದಱಿನಾಂತೆನಿಂ

ತಱಿವುದೀ ಕರಿ ಕಂಧರಮಂ

ಗುಣಾರ್ಣವಾ|| ೭೮ ||

ಪದ್ಯ-೭೮:ಪದವಿಭಾಗ-ಅರ್ಥ:ಇದು ಪೆಱತಲ್ತು (ಇದು ಬೇರೆಯಲ್ಲ) ಭೂತಲಮನು ಆಂ ತರಲು ಆದಿ ವರಾಹನಾದೆನ್

(ಭೂಮಂಡಲವನ್ನು ತರಲು
ನಾನು
ಆದಿವರಾಹನಾದೆನು.)ಅಂದು
ಅದಱ ವಿಷಾಣಮಂ (ಅಂದು
ಅದರ ಕೋರೆಹಲ್ಲನ್ನು)
ಬಱಿಯಂ ಆ ವಸುಧಾಂಗನೆಗೆ
ಇತ್ತೆನು (ಬಳಿಕ ನಾನು
ಭೂದೇವಿಗೆ ಕೊಟ್ಟೆನು).
ಈತನು ಆ ಸುದತಿಯ
ಪೌತ್ರನು (ಈತನು ಆ
ಭೂದೇವಿಯ ಮೊಮ್ಮಗ) ಆಕೆ

ಕುಡೆ ಬಂದುದು ಇವಂಗೆ (ಅವಳು ಕೊಡಲು ಇವನಿಗೆ ಬಂದಿತು) ಎನಗಲ್ಲದೆ ಆನಲು ಆಗದು ಅದಱಿಂ ಆಂತೆನು (ನಾನಲ್ಲದೆ ಮತ್ತಾರೂ ಇದನ್ನು ಎದುರಿಸಲಾಗದುದರಿಂದ ನಾನು ಎದುರಿಸಿದೆನು) ಇಂ ತಱಿವುದೀ ಕರಿ ಕಂಧರಮಂ ಗುಣಾರ್ಣವಾ (ಇನ್ನು ಈ ಆನೆಯ ಕತ್ತನ್ನು ಕತ್ತರಿಸು ಎಂದನು.)

ಪದ್ಯ-೭೮:ಅರ್ಥ: ಇದು ಬೇರೆಯಲ್ಲ; ಭೂಮಂಡಲವನ್ನು ತರಲು ನಾನು ಆದಿವರಾಹನಾದೆನು. ಅಂದು ಅದರ ಕೋರೆಹಲ್ಲನ್ನು ಭೂದೇವಿಯನ್ನು ಕಾಪಾಡಿದ ಬಳಿಕ ನಾನು ಭೂದೇವಿಗೆ ಕೊಟ್ಟೆನು. ಈತನು ಆ ಭೂದೇವಿಯ ಮೊಮ್ಮಗ, ಅವಳು ಕೊಡಲು ಇವನಿಗೆ ಬಂದಿತು. ನಾನಲ್ಲದೆ

ಮತ್ತಾರೂ ಇದನ್ನು
ಎದುರಿಸಲಾಗದುದರಿಂದ
ನಾನು ಎದುರಿಸಿದೆನು.
ಅರ್ಜುನಾ, ಇನ್ನು ಈ ಆನೆಯ
ಕತ್ತನ್ನು ಕತ್ತರಿಸು ಎಂದನು.

ಉ|| ಎಂಬುದುಮೊಂದೆ ದಿವ್ಯಶರದಿಂ ಶಿರಮಂ ಪೞಿಯೆಚ್ಚೊಡಾತನೊ ತ್ತಂಬದಿನಾಂತೊಡಾಂ ಬೞಿದೆ ತಪ್ಪಿದೆನೆಂದು ಕಿರೀಟಿ ತನ್ನ ಬಿ|

ಲ್ಲಂ

ಬಿಸುಟಿರ್ದೊಡಚ್ಯುತನಿದೇತರಿ

ನಾಕುಲಮಿರ್ದೆ ನೋಡಿದೆಂ

ತೆಂಬುದುಮೆಚ್ಚನಂತೆರಡು

ಕೆಯ್ಗಳುಮಂ ಮುಳಿಸಿಂ

ಗುಣಾರ್ಣವಂ|| ೭೯ ||

ಪದ್ಯ-೭೯:ಪದವಿಭಾಗ-

ಅರ್ಥ:ಎಂಬುದುಂ ಒಂದೆ

ದಿವ್ಯಶರದಿಂ ಶಿರಮಂ

ಪಱಿಯೆಚ್ಚೊಡೆ (ಹೇಳಲು.

ಒಂದೆ ದಿವ್ಯಾಸ್ತ್ರದಿಂದ ಆನೆಯ

ತಲೆಯನ್ನು ಹರಿದುಹೋಗುವ ಹಾಗೆ ಹೊಡೆದಾಗ) ಆತನು ಒತ್ತಂಬದಿಂ ಆಂತೊಡೆ (ಆ ಭಗದತ್ತನು ಅದನ್ನು ಬಲಿಷ್ಠವಾಗಿ ಎದುರಿಸಿದಾಗ) ಆಂ ಬಱಿದೆ ತಪ್ಪಿದೆನೆಂದು (ಅರ್ಜುನನು ನಾನು ವ್ಯರ್ಥವಾಗಿ- ಹೊಡೆದು ತಪ್ಪುಮಾಡಿದೆ ಎಂದು) ಕಿರೀಟಿ ತನ್ನ ಬಿಲ್ಲಂ ಬಿಸುಟಿರ್ದೊಡೆ (ಎಂದು ಬಿಲ್ಲನ್ನು

ಬಿಸುಟಿರಲು) ಅಚ್ಯುತನು
ಇದೇತರಿಂ ಆಕುಲಮಿರ್ದೆ
(ಕೃಷ್ಣನು ಇದೇಕೆ
ವ್ಯಾಕುಲನಾಗಿದ್ದೀಯೆ?)
ನೋಡು ಇದು ಎಂತು
ಎಂಬುದುಂ ಎಚ್ಚನು ಅಂತೆ
ಎರಡು ಕೆಯ್ಗಳುಮಂ
ಮುಳಿಸಿಂ ಗುಣಾರ್ಣವಂ (
ಅರ್ಜುನನು ಅದೇರೀತಿ
ಕೋಪದಿಂದ ಭಗದತ್ತನ
ಎರಡು ಕೈಗಳನ್ನು ಹೊಡೆದನು)

ಪದ್ಯ-೭೯:ಅರ್ಥ:ಕೃಷ್ಣನು ಹಾಗೆ ಹೇಳಲು. ಒಂದೆ ದಿವ್ಯಾಸ್ತ್ರದಿಂದ ಆನೆಯ ತಲೆಯನ್ನು ಹರಿದುಹೋಗುವ ಹಾಗೆ ಹೊಡೆದನು. ಆ ಭಗದತ್ತನು ಅದನ್ನು ಬಲಿಷ್ಠವಾಗಿ ಎದುರಿಸಿದಾಗ, ಅರ್ಜುನನು ನಾನು ವ್ಯರ್ಥವಾಗಿ ಪ್ರಯೋಗಮಾಡಿದೆ (ಆನೆಯ ತಲೆಯನ್ನೂ ಭಗದತ್ತನ

ತಲೆಯನ್ನೂ ಒಟ್ಟಿಗೆ
ಹೊಡೆಯಬೇಕಾಗಿದ್ದಿತು)
ಎಂದು ಬಿಲ್ಲನ್ನು ಬಿಸುಟಿರಲು
ಕೃಷ್ಣನು ಇದೇಕೆ
ವ್ಯಾಕುಲನಾಗಿದ್ದೀಯೆ?
‘ನೋಡು ಇದು ಹೀಗೆ’ ಎಂದು
ಸನ್ನೆಮಾಡಿ ತೋರಿಸಿದನು.
ಅರ್ಜುನನು ಅದೇರೀತಿ
ಕೋಪದಿಂದ ಭಗದತ್ತನ
ಎರಡು ಕೈಗಳನ್ನು ಹೊಡೆದನು

ಕಂ|| ಎಚ್ಚವನ ತಲೆಯುಮಂ ಪಱಿ
ಯೆಚ್ಚೊಡೆ ದಿಕ್ಕರಿಯ ತಲೆಯುಮಾತನ ತಲೆಯುಂ|
ಪಚ್ಚಿಕ್ಕಿದಂತೆ ಕೆಯ್ಗಳು
ಮಚ್ಚರಿಯಪ್ಪಿನೆಗಮೊಡನುರುಳ್ದುವು ಧರೆಯೊಳ್|| ೮೦||

ಪದ್ಯ-೮೦:ಪದವಿಭಾಗ-ಅರ್ಥ:ಎಚ್ಚು, ಅವನ ತಲೆಯುಮಂ ಪಱಿಯೆ ಎಚ್ಚೊಡೆ (ಕೃಷ್ಣ ಹೇಳಿದಂತೆ

ಹೊಡೆದು- ಕೈಗಳನ್ನು ಕತ್ತರಿಸಿ, ಅವನ ತಲೆಯನ್ನು ಹರಿದುಹೋಗುವಂತೆ ಹೊಡೆಯಲು) ದಿಕ್ಕರಿಯ ತಲೆಯುಂ ಆತನ ತಲೆಯುಂ (ದಿಗ್ಗಜದ ತಲೆಯೂ ಆತನ ತಲೆಯೂ) ಪಚ್ಚೆಕ್ಕಿದಂತೆ ಕೆಯ್ಗಳುಂ (ಕೈಗಳೂ ಭಾಗಮಾಡಿದಂತೆ) ಅಚ್ಚರಿಯಪ್ಪಿನೆಗಂ ಒಡನೆ ಉರುಳ್ದುವು ಧರೆಯೊಳ್

(ಆಶ್ಚರ್ಯಯುತವಾಗಿ ಜೊತೆಯಾಗಿಯೇ ಭೂಮಿಯ ಮೇಲೆ ಉರುಳಿದುವು.)

ಪದ್ಯ-೮೦:ಅರ್ಥ: ಕೈಗಳನ್ನು ಕತ್ತರಿಸಿ, ಅವನ ತಲೆಯನ್ನು ಹರಿದುಹೋಗುವಂತೆ ಹೊಡೆಯಲು, ದಿಗ್ಗಜದ ತಲೆಯೂ ಆತನ ತಲೆಯೂ ಕೈಗಳೂ ಭಾಗಮಾಡಿದಂತೆ ಆಶ್ಚರ್ಯಯುತವಾಗಿ

ಜೊತೆಯಾಗಿಯೇ ಭೂಮಿಯ ಮೇಲೆ ಉರುಳಿದುವು.

ಉ|| ಇತ್ತರಿಗಂಗಮಿತ್ರ ಜಯಮಪ್ಪುದುಮತ್ತಮರರ್ಕ ಳಾರ್ದು ಸೂ ಸುತ್ತಿರೆ ಪುಷ್ಪವೃಷ್ಟಿಗಳನೋಗರವೂಗ ಳ ಬಂಡನೆಯ್ದೆ ಪೀ| ರುತ್ತೊಡವಂದುವಿಂದ್ರವನದಿಂ ಮಱಿದುಂಬಿಗಳಿಂದ್ರನೀಲ ಮಂ

ಮುತ್ತು ಮನೋಳಿಯೋಳಿಯೊಳೆ ಕೋದೆಲಿಲಿಕ್ಕಿದ ಮಾಲೆಯಂತೆವೋಲ್|| ೮೧ ||81||

ಪದ್ಯ-೮೧:ಪದವಿಭಾಗ-ಅರ್ಥ:ಇತ್ತ ಅರಿಗಂಗೆ ಅಮಿತ್ರ ಜಯಮಪ್ಪುದುಂ ಅತ್ತಂ ಅಮರರ್ಕಳು ಆರ್ದು (ಈ ಕಡೆ ಅರಿಗನಿಗೆ (ಅರ್ಜುನನಿಗೆ) ಶತ್ರುಜಯವಾಗಲು ಆ ಕಡೆ

ದೇವತೆಗಳು
ಜಯಘೋಷಮಾಡಿ)
ಸೂಸುತ್ತಿರೆ ಪುಷ್ಪವೃಷ್ಟಿಗಳನು
(ಹೂಮಳೆಯನ್ನು
ಸುರಿಸುತ್ತಿರಲು) ಓಗರವ್ರೂಗಳ
ಬಂಡನು ಎಯ್ದೆ ಪೀರುತ್ತ
ಒಡವಂದುವು ಇಂದ್ರವನದಿಂ (
ಆ ಮಿಶ್ರುಪುಷ್ಪಗಳ
ವಾಸನೆಯನ್ನು ಪೂರ್ಣವಾಗಿ
ಹೀರುತ್ತ ಇಂದ್ರನ ತೋಟವಾದ
ನಂದನವನದಿಂದ

ಮರಿದುಂಬಿಗಳು
ಜೊತೆಯಲ್ಲಿಯೇ ಬಂದುವು.)
ಮಱಿದುಂಬಿಗಳು
ಇಂದ್ರನೀಲಮಂ ಮುತ್ತುಮನು
ಓಳಿಯೋಳಿಯೊಳೆ ಕೋದು
ಎಱಲಿಕ್ಕಿದ (ಸುರುಗಿ/
ಪೋಣಿಸಿ ನೇತುಬಿಟ್ಟ)
ಮಾಲೆಯಂತೆವೋಲ್
(ಇಂದ್ರನೀಲಮಣಿರತ್ನವನ್ನೂ
ಮುತ್ತುಗಳನ್ನೂ
ದಂಡೆದಂಡೆಯಾಗಿ ಸಾಲಾಗಿ

ಪೋಣಿಸಿ ಜೋಲುಬಿಟ್ಟ ಹಾರದಂತೆ ಬಂದುವು).

ಪದ್ಯ-೮೧:ಅರ್ಥ: ಈ ಕಡೆ ಅರಿಗನಿಗೆ (ಅರ್ಜುನನಿಗೆ) ಶತ್ರುಜಯವಾಗಲು ಆ ಕಡೆ ದೇವತೆಗಳು ಜಯಘೋಷಮಾಡಿ ಹೂಮಳೆಯನ್ನು ಸುರಿಸುತ್ತಿರಲು, ಆ ಮಿಶ್ರುಪುಷ್ಪಗಳ ವಾಸನೆಯನ್ನು ಪೂರ್ಣವಾಗಿ

ಹೀರುತ್ತ ಇಂದ್ರನ ತೋಟವಾದ ನಂದನವನದಿಂದ ಮರಿದುಂಬಿಗಳು ಇಂದ್ರನೀಲಮಣಿರತ್ನವನ್ನೂ ಮುತ್ತುಗಳನ್ನೂ ದಂಡೆದಂಡೆಯಾಗಿ ಸಾಲಾಗಿ ಪೋಣಿಸಿ ಜೋಲುಬಿಟ್ಟ ಹಾರದಂತೆ ಜೊತೆಯಲ್ಲಿಯೇ ಬಂದುವು.

ಕಂ|| ಧರಣೀಸುತನೞಿದಂ ದಿ

ಕ್ಕರಿ ಕೆಡೆದುದು ನರಶರಂಗಳಿಂ ಭುವನಮುಮಿ| ನ್ನರಿಯದಿರದಾನಡಂಗುವೆ ನಿರದೆಂಬವೊಲರ್ಕನಪರಜಳ ನಿಗಿೞಿದಂ|| ೮೨ ||

ಪದ್ಯ-೮೨:ಪದವಿಭಾಗ-ಅರ್ಥ:ಧರಣೀಸುತನು ಅೞಿದಂ ದಿಕ್ಕರಿ ಕೆಡೆದುದು ನರಶರಂಗಳಿಂ (ಅರ್ಜುನನ ಬಾಣದಿಂದ ಭೂಪುತ್ರನಾದ ಭಗದತ್ತನು ನಾಶವಾದನು)

ಭುವನಮುಂ
ಇನ್ನುರಿಯದಿರದು ಆನು
ಅಡಂಗುವೆನು
ಎಂದೆಂಬವೊಲ್ ಅರ್ಕನು
ಅಪರಜಳನಿಗೆ
ಇೞಿದಂ(ದಿಗ್ಗಜವು
ಕೆಳಗುರುಳಿತು. ಪ್ರಪಂಚವು
ಇನ್ನು ಸುಟ್ಟು ಹೋಗದೇ
ಇರುವುದಿಲ್ಲ; ನಾನು ಇಲ್ಲಿರದೆ
ಮರೆಯಾಗುತ್ತೇನೆ ಎನ್ನುವ

ಹಾಗೆ ಸೂರ್ಯನು ಪಶ್ಚಿಮ ಸಮುದ್ರಕ್ಕಿಳಿದನು.)

ಪದ್ಯ-೮೨:ಅರ್ಥ:೮೨. ಅರ್ಜುನನ ಬಾಣದಿಂದ ಭೂಪುತ್ರನಾದ ಭಗದತ್ತನು ನಾಶವಾದನು. ದಿಗ್ಗಜವು ಕೆಳಗುರುಳಿತು. ಪ್ರಪಂಚವು ಇನ್ನು ಸುಟ್ಟು ಹೋಗದೇ ಇರುವುದಿಲ್ಲ; ನಾನು ಇಲ್ಲಿರದೆ ಮರೆಯಾಗುತ್ತೇನೆ ಎನ್ನುವ

ಹಾಗೆ ಸೂರ್ಯನು ಪಶ್ಚಿಮ ಸಮುದ್ರಕ್ಕಿಳಿದನು.

ವ|| ಆಗಳೆರಡುಂ ಪಡೆಗಳಪಹಾರತೂರ್ಯಂಗಳಂ ಬಾಜಿಸಿ ತಂತಮ್ಮ ಬೀಡುಗಳ್ಗೆ ಪೋಪುದುಂ ಸುಯೋಧನಂ ಭಗದತ್ತನ ಸಾವಿಂಗೞಲ್ದು ತೊಟ್ಟ ಸನ್ನಣಮನಪ್ಪೊಡಂ ಕಳೆಯದೆಯುಮರಮನೆಗೆ

ಪೋಗದೆ ಕುಂಭಸಂಭವನಲ್ಲಿಗೆ ವಂದು-

ವಚನ:ಪದವಿಭಾಗ-

ಅರ್ಥ:ಆಗಳ್ ಎರಡುಂ ಪಡೆಗಳ್ ಅಪಹಾರ ತೂರ್ಯಂಗಳಂ ಬಾಜಿಸಿ (ಆಗ ಎರಡು ಸೈನ್ಯಗಳೂ ಯುದ್ಧವನ್ನು ನಿಲ್ಲಿಸುವುದಕ್ಕಾಗಿ ಸೂಚಿಸುವ ವಾದ್ಯಗಳನ್ನು ಬಾರಿಸಿ,) ತಂತಮ್ಮ ಬೀಡುಗಳ್ಗೆ

ಪೊಪುದುಂ (ತಮ್ಮ ತಮ್ಮ
ಶಿಬಿರಕ್ಕೆ ಹೋದಾಗ-)
ಸುಯೋಧನಂ ಭಗದತ್ತನ
ಸಾವಿಂಗೆ ಅೞಿಲ್ದು ತೊಟ್ಟ
ಸನ್ನಣಮನಪ್ಪೊಡಂ
ಕಳೆಯದೆಯುಂ
(ದುರ್ಯೋಧನನು ಭಗದತ್ತನ
ಸಾವಿಗೆ ದುಖಪಟ್ಟು ಧರಿಸಿದ
ಯುದ್ಧಕವಚವನ್ನೂ
ತೆಗೆಯದೆ) ಅರಮನೆಗೆ
ಪೋಗದೆ ಕುಂಭಸಂಭವನಲ್ಲಿಗೆ

ವಂದು (ಅರಮನೆಗೆ ಹೋಗದೆ ದ್ರೋಣಾಚಾರ್ಯರ ಹತ್ತಿರಕ್ಕೆ (ಬಳಿಗೆ) ಬಂದನು)-

ವಚನ:ಅರ್ಥ:ಆಗ ಎರಡು ಸೈನ್ಯಗಳೂ ಯುದ್ಧವನ್ನು ನಿಲ್ಲಿಸುವುದಕ್ಕಾಗಿ ಸೂಚಿಸುವ ವಾದ್ಯಗಳನ್ನು ಬಾರಿಸಿ, ತಮ್ಮ ತಮ್ಮ ಶಿಬಿರಕ್ಕೆ ಹೋದುವು. ದುರ್ಯೋಧನನು ಭಗದತ್ತನ ಸಾವಿಗೆ ದುಖಪಟ್ಟು ಧರಿಸಿದ ಯುದ್ಧಕವಚವನ್ನೂ ತೆಗೆಯದೆ

ಅರಮನೆಗೆ ಹೋಗದೆ ದ್ರೋಣಾಚಾರ್ಯರ ಹತ್ತಿರಕ್ಕೆ ಬಂದನು-

ಮ|| ಮಸಕಂಗುಂದದ ಸುಪ್ರತೀಕ ಗಜಮಂ ಧಾತ್ರೀಸುತಂ ಕೀೞಿ ಚೋ
ದಿಸಿ ಭೀಮಂ ಗೆಲೆ ಮುಟ್ಟೆವಂದು ಹರಿಯುಂ ತಾನುಂ ಭರಂಗೆಯ್ದು ತ|
ನ್ನೆಸಕಂಗಾಯದಧರ್ಮಯುದ್ಧದೆ ನರಂ ಕೊಲ್ವಲ್ಲಿ

ಕಂಡಿಂತುಪೇ
ಕ್ಷಿಸಿ ನೀಮುಂ ನಡೆ
ನೋಡುತಿರ್ದಿರೆನೆ
ಮತ್ತಿನ್ನಾರನಾಂ ನಂಬುವೆಂ||
೮೩ ||

ಪದ್ಯ-00:ಪದವಿಭಾಗ-ಅರ್ಥ:ಮಸಕಂಗುಂದದ ಸುಪ್ರತೀಕ ಗಜಮಂ (ಮದವು ಅಡಗದ ಸುಪ್ರತೀಕಗಜವನ್ನು) ಧಾತ್ರೀಸುತಂ ಕೀೞ್ ಚೋದಿಸಿ ಭೀಮಂ ಗೆಲೆ (ಭಗದತ್ತನು

ಭಯಶಬ್ದಮಾಡುತ್ತ ರೇಗಿಸಿ ಮುಂದೆ ನುಗ್ಗಿಸಿ ಭೀಮನನ್ನು ಗೆಲ್ಲಲು) ಮುಟ್ಟೆವಂದು ಹರಿಯುಂ ತಾನುಂ ಭರಂಗೆಯ್ದು (ಕೃಷ್ಣನೂ ಅರ್ಜುನನೂ ಹತ್ತಿರಕ್ಕೆ ಭರದಿಂದ ಬಂದು) ತನ್ನ ಎಸಕಂಗಾಯದೆ (ತನ್ನ ಮಾತಿನಂತೆ ನಡೆದುಕೊಳ್ಳದೆ) ಅಧರ್ಮಯುದ್ಧದೆ ನರಂ ಕೊಲ್ವಲ್ಲಿ (

ಅಧರ್ಮಯುದ್ಧದಲ್ಲಿ
ಅರ್ಜುನನು (ಭಗದತ್ತನನ್ನು)
ಕೊಲ್ಲುತ್ತಿರುವುದನ್ನು ನೋಡಿ)
ಕಂಡು ಇಂತು ಉಪೇಕ್ಷಿಸಿ
ನೀಮುಂ ನಡೆ ನೋಡುತಿರ್ದಿರಿ
ಎನೆ(ಅಧರ್ಮಯುದ್ಧದಲ್ಲಿ
ಅರ್ಜುನನು (ಭಗದತ್ತನನ್ನು)
ಕೊಲ್ಲುತ್ತಿರುವುದನ್ನು ನೋಡಿ
ನೀವು ಹೀಗೆ ಉಪೇಕ್ಷಿಸಿ
ನೋಡುತ್ತೀರಿ ಎನ್ನುವಾಗ)
ಮತ್ತೆ ಇನ್ನಾರನು ಆಂ

ನಂಬುವೆಂ (ನಾನು ಮತ್ತಾರನ್ನು ನಂಬಲಿ) ಎಂದನು.

ಪದ್ಯ-00:ಅರ್ಥ:ಮದವು ಅಡಗದ ಸುಪ್ರತೀಕಗಜವನ್ನು ಭಗದತ್ತನು ಭಯಶಬ್ದಮಾಡುತ್ತ ರೇಗಿಸಿ ಮುಂದೆ ನುಗ್ಗಿಸಿ ಭೀಮನನ್ನು ಗೆಲ್ಲಲು ಕೃಷ್ಣನೂ ಅರ್ಜುನನೂ ಹತ್ತಿರಕ್ಕೆ ಬಂದು ವೇಗದಿಂದ ತನ್ನ ಮಾತಿನಂತೆ

ನಡೆದುಕೊಳ್ಳದೆ (ಯುದ್ಧ
ಮಾಡುವುದಿಲ್ಲವೆಂಬ ತನ್ನ
ಪ್ರತಿಜ್ಞೆಯನ್ನು, ಕಾರ್ಯವನ್ನು,
ಮಾತನ್ನು ಪರಿಪಾಲಿಸದೆ)
ಅಧರ್ಮಯುದ್ಧದಲ್ಲಿ
ಅರ್ಜುನನು (ಭಗದತ್ತನನ್ನು)
ಕೊಲ್ಲುತ್ತಿರುವುದನ್ನು ನೋಡಿ
ನೀವು ಹೀಗೆ ಉಪೇಕ್ಷಿಸಿ
ನೋಡುತ್ತೀರಿ ಎನ್ನುವಾಗ
ನಾನು ಮತ್ತಾರನ್ನು ನಂಬಲಿ,
ಎಂದನು ದುರ್ಯೋಧನ.

ವ|| ಎಂದು ನುಡಿದ ಪನ್ನಗಧ್ವಜನ ನುಡಿಗೆ ಕಾರ್ಮುಕಾಚಾರ್ಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಪನ್ನಗಧ್ವಜನ (ದುರ್ಯೋಧನನ) ನುಡಿಗೆ ಕಾರ್ಮುಕಾಚಾರ್ಯನು (ಬಿಲ್ಲಿನ ಗುರು- ದ್ರೋಣನು)ಇಂತೆಂದಂ-

ವಚನ:ಅರ್ಥ:ವ|| ಎಂದು ಹೇಳಿದ ದುರ್ಯೋಧನನ ಮಾತಿಗೆ ದ್ರೋಣನು ಹೀಗೆ ಹೇಳಿದನು-

ಮ||

ಎನಗಲ್ತಾರ್ಗಮಸಾಧ್ಯನಲ್ತೆ ವಿಜಯಂ ನೀನಾತನಂ ಗೆಲ್ವ ಮಾ

ತನಮೋಘಂ ಬಿಸುಡಿಂದೆ ನಾಳೆ ವಿಜಯಂ ಮಾರ್ಕೊಳ್ಳದಂದುರ್ಕಿ ಪೊ|

ಕ್ಕನನಾಂತೊರ್ವನನಿಕ್ಕುವೆಂ ಕದನದೊಳ್ ಮೇಣ್ ಕಟ್ಟುವೆಂ ಧರ್ಮ ನಂ ದನನಂ ನೀನಿದನಿಂತು ನಂಬು ಬಗೆಯಲ್ವೇಡನ್ನನಂ ಭೂಪತೀ|| ೮೪ ||

ಪದ್ಯ-೮೪:ಪದವಿಭಾಗ-ಅರ್ಥ:ಏನಗಲ್ತು ಆರ್ಗಮ್ ಅಸಾಧ್ಯನಲ್ತೆ ವಿಜಯಂ (ಅರ್ಜುನನು ನನಗೆ ಮಾತ್ರವಲ್ಲ, ಯಾರಿಗೂ

ಗೆಲ್ಲಲು ಅಸಾಧ್ಯನಾದವನು.)
ನೀನು ಆತನಂ ಗೆಲ್ವ ಮಾತಂ
ಅಮೋಘಂ (ನೀನು
ಅವನನ್ನು ಗೆಲ್ಲುವ ಮಾತು
ವ್ಯರ್ಥವು,) ಬಿಸುಡು ಇಂದೆ
(ಆ ಮಾತನ್ನು ಈ ದಿನವೇ
ಬಿಟ್ಟುಬಿಡು) ನಾಳೆ ವಿಜಯಂ
ಮಾರ್ಕೊಳ್ಳದಂದು (ನಾಳೆಯ
ದಿನ ಅರ್ಜುನನು (ತನ್ನೊಡನೆ)
ಪ್ರತಿಭಟಿಸದೆಇದ್ದರೆ) ಉರ್ಕಿ
ಪೊಕ್ಕನನು ಆಂತು ಒರ್ವನನು

ಇಕ್ಕುವೆಂ ಕದನದೊಳ್ (ಅಹಂಕಾರದಿಂದ ಹೊಕ್ಕಂಥ ಯಾವನನ್ನೇ ಆದರೂ ಎದುರಿಸಿ ಯುದ್ಧದಲ್ಲಿ ಕೊಲ್ಲುತ್ತೇನೆ.) ಮೇಣ್ ಕಟ್ಟುವೆಂ ಧರ್ಮ ನಂದನನಂ (ಅಲ್ಲದೆ ಧರ್ಮರಾಜನನ್ನು ಸೆರೆಹಿಡಿಯುತ್ತೇನೆ.) ನೀನಿದನು ಇಂತು ನಂಬು, ಬಗೆಯಲ್ವೇಡ ಅನ್ನನಂ ಭೂಪತೀ (ನೀನು ಇದನ್ನು

ನಂಬು ನನ್ನನ್ನು ಅಂಥವನೆಂದು - ಮೋಸಮಾಡುವವನೆಂದು - ಭಾವಿಸಬೇಡ.)

ಪದ್ಯ-೮೪:ಅರ್ಥ:ಮಹಾರಾಜನೇ ಅರ್ಜುನನು ನನಗೆ ಮಾತ್ರವಲ್ಲ, ಯಾರಿಗೂ ಅಸಾಧ್ಯನಾದವನು. ನೀನು ಅವನನ್ನು ಗೆಲ್ಲುವ ಮಾತು ವ್ಯರ್ಥವು ಅದನ್ನು ಈ ದಿನವೇ ಬಿಟ್ಟುಬಿಡು. ನಾಳೆಯ ದಿನ

ಅರ್ಜುನನು (ತನ್ನೊಡನೆ) ಪ್ರತಿಭಟಿಸದಿದ್ದರೆ, ಅಹಂಕಾರದಿಂದ ಹೊಕ್ಕಂಥ ಯಾವನನ್ನೇ ಆದರೂ ಎದುರಿಸಿ ಯುದ್ಧದಲ್ಲಿ ಕೊಲ್ಲುತ್ತೇನೆ. ಅಲ್ಲದೆ ಧರ್ಮರಾಜನನ್ನು ಸೆರೆಹಿಡಿಯುತ್ತೇನೆ. ನೀನು ಇದನ್ನು ನಂಬು ನನ್ನನ್ನು ಅಂಥವನೆಂದು ಗಣಿಸಬೇಡ.

<u>ಚಕ್ರವ್ಯೂಹ ರಚನೆ - ಅಭಿನ್ಯುವಿನ ವಧೆ</u>

ವ|| ಎಂಬುದಮಾನಿನಿತಂ ನಿಮ್ಮ ಪೂಣಿಸಲೆ ಬಂದೆನೆಂದು ಪೊಡೆಮಟ್ಟು ಬೀೞ್ಕೊಂಡು ಪೋಗಿ ಸಂಸಪ್ತಕರ್ಕಳ್ಗೆ ಬೞಿಯನಟ್ಟಿ ಬರಿಸಿ-

ವಚನ:ಪದವಿಭಾಗ-

ಅರ್ಥ:ಎಂಬುದಂ ಆನು ಇನಿತಂ ನಿಮ್ಮ ಪೂಣಿಸಲೆ (ಇಷ್ಟನ್ನು

ಕುಮಾರವ್ಯಾಸನ ಕಾವ್ಯದಲ್ಲಿ ಅಭಿಮನ್ಯುವಿನ ಅಂತ್ಯ:

(**ದ್ರೋಣ ಪರ್ವ - ೪ನೆಯ ಸಂಧಿ**)

ಹೊಗಲು ಬಲ್ಲನು ಹೊಕ್ಕವೊಲು ಹೆರ
ದೆಗೆಯಲರಿಯನು ವೀರ ಪಾರ್ಥನ
ಮಗನು ಮತ್ತಯ್ದನೆಯ ಸುಭಟರ ಕಾಣೆ ನಾನೆನುತ
ಆಗಿವ ಚಿಂತೆಯೊಳರಸ ಕದನದ
ದುಗುಡ ಭಾರದಲಿರಲು ಮುಂಗೈ
ನಿಗಳವನು ತಿರುಹುತ್ತ ನಸು ನಗುತೆದ್ದನಭಿಮನ್ಯು ||೩೪||

ಜನಪನಂಘ್ರಿಗೆ ಮಣಿದು ಕೈಮುಗಿ
ದೆನಗೆ ಬೆಸಸೈ ಬೊಪ್ಪ ತಾ ಬ
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹ ಭೇದನವ
ಅನುವರವ ಗೆಲುವೆನು ಕೃತಾಂತನ
ಮನೆಗೆ ಕಳುವೆನಹಿತರನು ನೀ
ನಿನಿತು ಚಿಂತಿಸಲೇಕೆ ಕಾಳೆಗಕೆನ್ನ ಕಳುಹೆಂದ ||೩೫||

ಹಸುಳೆಯದಟಿನ ನುಡಿಯ ಕೇಳಿದು
ನಸು ನಗುತ ಧರ್ಮಜನು ಘನ ಪೌ
ರುಷವು ನಿನಗಂಟೆಂದು ಕಂದನ ತೆಗೆದು ಬಿಗಿಯಪ್ಪಿ
ಶಿಶುವು ನೀನೆಲೆ ಮಗನೆ ಕಾದುವ
ರಸಮ ಬಲರು ಕಣಾ ಮಹಾ ರಥ
ರೆಸುಗೆಯನು ನೀನೆಂತು ಸೈರಿಸಲಾಪೆ ಹೇಳೆಂದ ||೩೬||

ಕೈದುಕಾರರ ಬಿಗುಹು ಘನ ನೀ
ಹೊಯ್ದು ಮೊದಲಲಿ ಬಿಡಿಸು ಬಳಿಕಾ

ವೈದಿ ನಿನ್ನನು ಕೂಡಿಕೊಂಬೆವು ಹೊಕ್ಕು ಬಳಿಸಲಿಸಿ
ಎಯ್ದೆ ಹಗೆಯಲಿ ಹೂಣಿ ಹೊಗದಿರು
ಮೈದೆಗೆದು ಕಾದುವುದು ಜಯಸಿರಿ
ಯೈದೆತನ ನಿನ್ನಿಂದ ಮೆರೆವುದು ಕಂದ ಕೇಳೆಂದ ||೪೪||

ಕೆತ್ತುಕೊಂಡಿರೆ ಬಿಡಿಸುವೆನು ರಥ
ವೆತ್ತಲುರುಬಿದರತ್ತ ಕಣನೊಳು
ಮತ್ತಗಜ ಮುರಿದಂತೆ ಕದಡುವೆನಹಿತ ಮೋಹರವ
ಹೊತ್ತಿ ಹೊಗೆವ ಪರಾಕ್ರಮಾಗ್ನಿಯ
ತುತ್ತು ಪದ್ಮವ್ಯೂಹ ದೇವರು
ಚಿತ್ತಯಿಸುವುದು ಹೊತ್ತುಗಳೆಯದೆ ಎನ್ನ ಕಳುಹೆಂದ ||೪೫||

ತುರಗ ತತಿಗಭಿನಮಿಸಿ ರಥವನು
ತಿರುಗಿ ಬಲವಂದೆರಗಿ ಚಾಪಕೆ
ಕರವ ನೊಸಲಲಿ ಚಾಚಿ ಭಾರಿಯ ಭುಜವನೊದರಿಸುತ
ಅರಸಗಭಿವಂದಿಸುತ ಭೀಮನ
ಹರಕೆಗಳ ಕೈಕೊಳುತ ನಕುಳಾ
ದ್ಯರಿಗೆ ಪೊಡವಟ್ಟಡರಿದನು ನವರತುನಮಯ ರಥವ ||೫೧||

ಮರುಳು ಸಾರಥಿ ನಮ್ಮ ನಾವ್ ಪತಿ
ಕರಿಸಿಕೊಳಲಾಗದು ಕಣಾ ನೀ
ನರಿಯೆ ನಮ್ಮಂತರವ ನಾವಿನ್ನಾಡಿ ಫಲವೇನು
ಗುರುತನುಜನೇ ಕೃಪನೆ ದ್ರೋಣನೆ
ತರಣಿತನಯನೆ ಸೈಂಧವನೆ ಹುಲು
ನರರು ಗಣ್ಯವೆ ಕೇಳು ಭಾಷೆಯನೆಂದನಭಿಮನ್ಯು ||೫೫||

ಬವರವಾದರೆ ಹರನ ವದನಕೆ
ಬೆವರ ತಹೆನವಗಡಿಸಿದರೆ ವಾ
ಸವನ ಸದೆವೆನು ಹೊಕ್ಕಡಹುದೆನಿಸುವೆನು ಭಾರ್ಗವನ
ಜವನ ಜಗವೆಡಿಸುವೆನು ಸಾಕಿ
ನ್ನಿವರವರಲೇನರ್ಜುನನು ಮಾ
ಧವನು ಮುನಿದಡೆ ಗೆಲುವೆನಂಜದೆ ರಥವ ಹರಿಸೆಂದ ||೫೬||

ರಥ ಮುರಿದು ಮನನೊಂದು ಸುಮಹಾ
ರಥರು ಹಿಮ್ಮೆಟ್ಟಿದರು ಬಳಿಕತಿ
ರಥಭಯಂಕರನೊಡೆದು ಹೊಕ್ಕನು ವೈರಿಮೋಹರವ
ಮಥನದಲಿ ಮುರಿಯೊಡೆದ ಶೈಲ
ವ್ಯಥಿತ ಸಾಗರದಂತೆ ಬಿರಿದವು
ಕರ ಕಾಲಾಳು ಕುದುರೆಗಳೊಂದು ನಿಮಿಷದಲಿ ||೬೧ ||

೦೫. ಐದನೆಯ ಸಂಧಿ

ಕದಳಿಯೊಳು ಮದದಾನೆ ಹೊಕ್ಕಂ
ದದಲಿ ಹೆಚ್ಚಿದ ಚಾತುರಂಗದ
ಮೆದೆಯನೊಟ್ಟಿದು ಹೂಣೆ ಹೊಕ್ಕನು ಥಟ್ಟನೊಡೆತುಳಿದು
ಇದಿರೊಳೆಚ್ಚನು ಕೆಲಬಲದೊಳಿಹ
ಕದನಗಲಿಗಳ ಸೀಳಿದನು ಕಾ
ದಿದನು ಕಾಲನ ಲೀಲೆಯಾದುದು ವಿಷಮ ಸಮರಂಗ ||೪||

ಹುರುಡ ಮರೆದೆನು ಮಗನೆ ಸಾಲದೆ
ಭರತಕುಲದಲಿ ನಿನ್ನ ಬೆಳವಿಗೆ
ಯೆರಡು ಕವಲನ್ವಯಕೆ ಕೊಡದೇ ಸುಗತಿ ಸಂಪದವ
ಕರುಳು ಬೀಳವೆ ತನ್ನ ಬಸುರಿಂ

ದುರುಳಿದವದಿರಲೇನು ಫಲ ಮ
ತ್ಸರವೆ ಪಾರ್ಥ ಕೃತಾರ್ಥನೆಂದನು ಕೌರವರ ರಾಯ ||೧೮||

ಗುರುಸುತನನೊಟ್ಟೈಸಿ ಶಲ್ಯನ
ಭರವಸವ ನಿಲಿಸಿದನು ಕೃಪನು
ಬ್ಬರದ ಗರ್ವವ ಮುರಿದು ಕೃತವರ್ಮಕನ ನೋಯಿಸಿದ
ಅರಸನನುಜರ ಸದೆದು ಬಾಹ್ಲಿಕ
ದುರುಳ ಸೌಬಲ ಸೋಮದತ್ತರ
ಹುರುಳುಗೆಡಿಸಿದನೊಬ್ಬ ಶಿಶು ಗೆಲಿದನು ಮಹಾರಥರ ||೨೬||

ಉರುಗನಿಕ್ಕಡಿಗಾರ ಹುಲ್ಲಿನ
ಸರವಿಗಂಜುವುದುಂಟೆ ಕರ್ಣಾ
ದ್ಯರನು ಕಡ್ಡಿಗೆ ಬಗೆಯನೀ ಹೂಹೆಗಳ ಗಣಿಸುವನೆ
ಎರಡು ಶರದಲಿ ಲಕ್ಷಣನ ಸಂ
ಹರಿಸಿದನು ಹದಿನೈದು ಬಾಣದ
ಲರಿದನುಳಿದ ಕುಮಾರಕರನಭಿಮನ್ಯು ನಿಮಿಷದಲಿ }}೭೮||

೦೬. ಆರನೆಯ ಸಂಧಿ

ಆರಯಿದು ಮಗನೆನಿಸುವೀ ಮಮ
ಕಾರವೆಮ್ಮೊಳು ಮೊಳೆತಡಾ ದಾ
ತಾರನುಳಿವೆನ್ನಿಂದ ತಪ್ಪುವುದೆನುತ ಮನದೊಳಗೆ
ಕೂರಲಗನಾ ಕರ್ಣ ಬರಸೆಳೆ
ದಾರಿ ಹಿಂದಣಿನೆಚ್ಚು ಪಾರ್ಥಕು
ಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ ||೩೨||

ಉರುವ ಜಯವಧುವೊಕ್ಕತನದಲಿ

ಮುರಿದ ಕಡ್ಡಿಯಿದೆನಲು ಕರದಿಂ
ಮುರಿದು ಬಿದ್ದುದು ಚಾಪವಿಂದ್ರಕುಮಾರ ನಂದನನ
ಬೆರಗಡರಿ ಮುಖದಿರುಹಿ ಹಿಂದಣಿ
ನಿರಿದ ಕರ್ಣನ ನೋಡಿ ಮುಖದಲಿ
ಕಿರುನಗೆಯ ಕೇವಣಿಸಿ ನುಡಿದನು ಬೆರಳನೊಲೆದೊಲೆದು ||೩೩||

ಆವ ಶರಸಂಧಾನ ಲಾಘವ
ದಾವ ಪರಿ ಮಝು ಪೂತು ಪಾಯಿಕು
ದೇವ ಬಿಲ್ಲಾಳೆಂತು ಕಡಿದ್ಯೆ ಕರ್ಣ ನೀ ಧನುವ
ಈ ವಿವೇಕವಿದಾರ ಸೇರುವೆ
ಯಾವಗಹುದಿದು ಹಿಂದೆ ಬಂದೆಸು
ವೀ ವಿಗಡತನ ನಿನಗೆ ಮೆರೆವುದು ಕರ್ಣ ಕೇಳೆಂದ ||೩೪||

ಸುರಿವ ರಕುತದ ಸರಿಯ ಸೆರಗಿನೊ
ಳೊರಸಿ ರಥದಚ್ಚುಗಳನೊದೆದನು
ತಿರುಹಿ ಗಾಲಿಯ ತೆಗೆದು ಮುಂಗೈಗೊಂಡು ನಡೆನಡೆದು
ಅರಿಬಲವನಿಡೆ ಮುಗ್ಗಿ ಕೆಡೆದುದು
ತುರಗವಜಿಗಿಜಿಯಾದುದಿಭ ತತಿ
ಯುರುಳಿದವು ಹೊರಳಿದವು ಹೂಣಿಗರಟ್ಟೆ ಸಮರದಲಿ ||೫೫||

ಹರಿಯ ಚಕ್ರದ ಸತ್ವವೀತನ
ಧುರದೊಳಾಯ್ತೆನೆ ರಥದ ಚಕ್ರದೊ
ಳರಿಬಲವನಿಡೆ ಮುಗ್ಗಿ ಕೆಡೆದುದು ಬಹಳ ತಳತಂತ್ರ
ಬಿರುದರಾನುವರಿಲ್ಲ ಷಡುರಥ
ರುರವಣಿಯು ಹಿಂದಾಯ್ತು ರಾಯರ
ಗುರುವ ಕಂಡವರಿಲ್ಲೆನುತ ಕುರುರಾಯ ಚಿಂತಿಸಿದ ||೫೬||

ಮನದ ಖತಿ ಹೊಗರೇರೆ ದುಶ್ಶಾ
ಸನನ ಮಗನಿದಿರಾಗಿ ಖಡುಗದ
ಮೊನೆಯ ಚೂರಿಸಿ ದಂಡವಲಗೆಯ ತೊಡೆಯೊಳೊದರಿಸುತ
ತನಗೆ ಮೃತ್ಯುವ ಕರೆವವೋಲ
ರ್ಜುನ ಕುಮಾರನ ಕರೆದು ಹಳಚಿದ
ನನಿಮಿಷಾವಳಿ ಪೂತು ಪಾಯ್ಕೆನೆ ಹೆಣಗಿದರು ಭಟರು ||೫೭||

ಗಾಲಿ ತೀರಿದವೆಂದು ಬಂದನೆ
ಕಾಳೆಗಕೆ ತಪ್ಪೇನೆನುತ ಕರ
ವಾಳಿನಾತನ ಬಗೆಯದೊಳಹೊಕ್ಕೆರಗಿದನು ಶಿರವ
ಮೇಲುವಲಗೆಯಲಣೆದು ಹಾಯ್ದನು
ಬಾಲಕನ ಘಾಯವನು ನಸು ನಗು
ತೇಳಿಸುತ ದಂಡೆಯಲಿ ಕಳೆದನು ತಿವಿದನವನುರವ ||೫೮||

ಕರಹತಿಗೆ ಧಡಧಡಿಸಿ ತಿರ‍್ರನೆ
ತಿರುಗಿ ಬೀಳುತ ಧೈರ್ಯದಲಿ ಹೊಡ
ಕರಿಸಿ ಹೊರಬಿನೊಳೆದ್ದು ಹೊಯ್ದನು ಪಾರ್ಥನಂದನನ
ಅರಿ ಕೃಪಾಣದ ಘಾಯವನು ತರ
ಹರಿಸಲರಿಯದೆ ಬೀಳುತಹಿತನ
ನೆರಗಿದನು ಬಳಿಕವನಿಗೊರಗಿದರಾ ಕುಮಾರಕರು ||೫೯||

ಕಾಳುಕಿಚ್ಚೆದ್ದಡವಿಯನು ಕುಡಿ
ನಾಲಗೆಯೊಳಳವಡಿಸಿ ದಳ್ಳುರಿ
ಜ್ವಾಲೆ ತಗ್ಗಿದವೋಲು ಗಗನದ ಮುಗಿಲ ಮೋಹರವ
ದಾಳಿಯಲಿಯರೆಯಟ್ಟೆ ಸುಂಟರು

ಗಾಳಿಯುರವಣೆ ನಿಂದವೊಲು ಸುರ
ಪಾಲ ತನಯನ ತನಯನಸ್ತಮಿಸಿದನು ರಣದೊಳಗೆ ||೬೦||

ತೋಳ ತಲೆಗಿಂಬಿನಲಿ ಕೈದುಗ
ಳೋಳಿಗಳ ಹಾಸಿನಲಿ ತನ್ನಯ
ಕಾಲ ದೆಸೆಯಲಿ ಕೆಡೆದ ಕೌರವ ಸುತರು ನೂರ್ವರಲಿ
ಬಾಲಕನು ಬಳಲಿದನು ಸಮರದ
ಲೀಲೆಯಲಿ ಕುಣಿಕುಣಿದು ಬಸವಳಿ
ದಾಳುಗಳ ದೇವನು ಮಹಾಹವದೊಳಗೆ ಪವಡಿಸಿದ ||೬೧||

ಗಿದ ಹುಬ್ಬಿನ ಬಿಟ್ಟ ಕಂಗಳ
ಹೊಗರು ಮೋರೆಯ ಹಿಣಿಲ ಮಂಡೆಯ
ಜಿಗಿಯ ರಕುತದ ಜೋರಿನೊಡಲಿನ ತುರುಗಿದಂಬುಗಳ
ಹೆಗಲ ಕೊಯ್ಲಿನ ತಗ್ಗಿನಲಿ ಸೈ
ನೆಗೆದ ರೋಮದ ವಿಕ್ರಮಾಗ್ನಿಯ
ತಗಹು ಬಿಡದಭಿಮನ್ಯು ಮೆರೆದನು ಶಸ್ತ್ರ ಶಯನದಲಿ ||೬೨||

ಸಾವ ಹರಯವೆ ಎನುತ ಗಗನದ
ದೇವತತಿ ಮರುಗಿತ್ತು ಶಕ್ರನ
ಸಾವಿರಾಲಿಯೊಳೊರತೆ ಮಸಗಿತು ಪೌತ್ರಶೋಕದಲಿ
ತಾವು ಷಡುರಥರೊಬ್ಬ ಹಸುಳೆಯ
ಹೇವವಿಲ್ಲದೆ ಕೊಂದರೋ ಸುಡ
ಲಾವ ವೀರರು ಕೌರವಾದಿಗಳೆಂದುದಮರಗಣ ||೬೩||

ಮಗುವು ವೇಷವ ಧರಿಸಿ ದೂರದ

ಲಗಲಿ ಹೋಗಲು ತನ್ನ ಚಿತ್ತಕೆ
ಢಗೆಯ ಡಾವರವಾಯ್ತು ತನಗೊಳಗಾಯ್ತು ಪರಿತಾಪ
ಮಗನ ಮರಣದಲೆಂತು ಜೀವವ
ಬಗೆವಳಕಟ ಸುಭದ್ರೆಯೆನುತವೆ
ದೃಗುಜಲವ ಬೆರಳಿಂದ ಮಿಡಿದರು ಗೌರಿ ದೇವಿಯರು ||೬೪||
-o-♦♦♦-o-

ಪ್ರತಿಜ್ಞೆಮಾಡಿಸಬೇಕೆಂದೇ) ಬಂದೆನು ಎಂದು ಪೊಡೆಮಟ್ಟು ಬೀಱ್ಕೊಂಡು ಪೋಗಿ (ಎಂದು ನಮಸ್ಕಾರಮಾಡಿ ಅವರನ್ನು ಬಿಟ್ಟುಹೋಗಿ) ಸಂಸಪ್ತಕರ್ಕಳ್ಗೆ ಬಱಿಯನಟ್ಟಿ ಬರಿಸಿ (ಸಂಸಪ್ತಕರುಗಳಿಗೆ

ದೂತರನ್ನು ಕಳುಹಿಸಿ ಬರಮಾಡಿಕೊಂಡು-)- **ವಚನ:ಅರ್ಥ:**ಎನ್ನಲು ನಾನು ನಿಮ್ಮಲ್ಲಿ ಇಷ್ಟನ್ನು ಪ್ರತಿಜ್ಞೆಮಾಡಿಸಬೇಕೆಂದೇ ಬಂದೆನು ಎಂದು ನಮಸ್ಕಾರಮಾಡಿ ಅವರನ್ನು ಬಿಟ್ಟುಹೋಗಿ ಸಂಸಪ್ತಕರುಗಳಿಗೆ ದೂತರನ್ನು ಕಳುಹಿಸಿ ಬರಮಾಡಿಕೊಂಡನು.

ಚಂ|| ಅರಿಗನನಾಂಪ

ಗಂಡುಮದಟುಂ

ನಿಮಗಾವಗಮಾದುದಾಹವಾ

ಜಿರದೊಳದರ್ಕೆ ನಾಳೆ ನರನಂ

ತೆಗೆದುಯ್ವುದು

ಧರ್ಮಪುತ್ರನಂ|

ಗುರು

ಪಿಡಿದಪ್ಪನೆಂದವರನಾಗಳೆ

ಪೂಣಿಸಿ ಪೋಗವೇೞ್ದು ಮ

ಚ್ಚರದೊಳೆ

ಮಾಣದೊಡ್ಡಿದನಸುಂಗೊಳೆ

ಕಕ್ಕರ ಸಂಜೆ ಸಂಜೆಯೊಳ್|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ:ಅರಿಗನನು ಆಂಪ ಗಂಡುಂ ಅದಟುಂ (ಯುದ್ಧರಂಗದಲ್ಲಿ ಅರ್ಜುನನನ್ನು ಪ್ರತಿಭಟಿಸುವ ಪೌರುಷವೂ ಶಕ್ತಿಯೂ) ನಿಮಗೆ ಆವಗಂ ಆದುದು ಆಹವ (ನಿಮಗೆ ಯಾವಾಗಲೂ ಇದೆ.

ಅದಕ್ಕಾಗಿ) ಆಜಿರದೊಳ್
(ಯುದ್ಧರಂಗದಲ್ಲಿ); ಅದರ್ಕೆ,
ನಾಳೆ ನರನಂ ತೆಗೆದು
ಉಯ್ವುದು (ಅದಕ್ಕಾಗಿ ನಾಳೆ
ಅರ್ಜುನನನ್ನು ದೂರಕ್ಕೆ
ಕರೆದುಕೊಂಡು
ಹೋಗುವುದು);
ಧರ್ಮಪುತ್ರನಂ ಗುರು
ಪಿಡಿದಪ್ಪನು ಎಂದು
ಅವರನಾಗಳೆ ಪೂಣಿಸಿ
ಪೋಗವೇಳ್ದು

(ದ್ರೋಣಾಚಾರ್ಯನು
ಧರ್ಮಪುತ್ರನನ್ನು ನಾಳೆ
ಸೆರೆಹಿಡಿಯುತ್ತಾನೆ ಎಂದು
ಅವರನ್ನು ಆಗಲೇ ಪ್ರತಿಜ್ಞೆ
ಮಾಡಿಸಿ ಹೋಗಲು ಹೇಳಿ-,)
ಮಚ್ಚರದೊಳೆ ಮಾಣದೆ
ಒಡ್ಡಿದನು ಅಸುಂಗೊಳೆ
(ಮಾತ್ಸರ್ಯದಿಂದ ತಡವಿಲ್ಲದೆ
ಸೈನ್ಯವನ್ನು ಒಡ್ಡಿದನು) ಕಕ್ಕರಸ
ಅಂಜೆ ಸಂಜೆಯೊಳ್ (ಬೆಳಗಿನ
ಜಾವದಲ್ಲಿಯೇ ಎಂತಹ

ಕಠಿಣರಾದವರೂ ಹೆದರುವ
ಹಾಗೆ-- ಸೈನ್ಯವನ್ನು ಒಡ್ಡಿದನು,
-ಸಿದ್ಧಪಡಿಸಿ ನಿಲ್ಲಿಸಿದನು)
ಪದ್ಯ-೮೫:ಅರ್ಥ:ಯುದ್ಧರಂ
ಗದಲ್ಲಿ ಅರ್ಜುನನನ್ನು
ಪ್ರತಿಭಟಿಸುವ ಪೌರುಷವೂ
ಶಕ್ತಿಯೂ ನಿಮಗೆ
ಯಾವಾಗಲೂ ಇದೆ. ಅದಕ್ಕಾಗಿ
ನಾಳೆ ಅರ್ಜುನನನ್ನು ದೂರಕ್ಕೆ
ಕರೆದುಕೊಂಡು
ಹೋಗುವುದು.

ದ್ರೋಣಾಚಾರ್ಯನು
ಧರ್ಮಪುತ್ರನನ್ನು ನಾಳೆ
ಸೆರೆಹಿಡಿಯುತ್ತಾನೆ ಎಂದು
ಅವರನ್ನು ಆಗಲೇ ಪ್ರತಿಜ್ಞೆ
ಮಾಡಿಸಿ ಹೋಗಹೇಳಿದನು.
ಮಾತ್ಸರ್ಯದಿಂದ ತಡವಿಲ್ಲದೆ
ಬೆಳಗಿನ ಜಾವದಲ್ಲಿಯೇ
ಎಂತಹ ಕಠಿಣರಾದವರೂ
ಹೆದರುವ ಹಾಗೆ ಶತ್ರುಗಳ
ಪ್ರಾಣಾಪಹಾರಕ್ಕಾಗಿ

ಭಯಂಕರವಾದ ಸೈನ್ಯವನ್ನು ಒಡ್ಡಿದನು-

ವ|| ಆಗಳ್ ಪಾಂಡವ ಪತಾಕಿನಿಯುಮಿರದೆ ಪೊಱಮಟ್ಟರ್ಧಚಂದ್ರ ವ್ಯೂಹಮನೊಡ್ಡಿ ನಿಲೆ ಸಂಸಪ್ತಕರ್ ತಮಗೆ ಮಿಱುಗರೆವಂತೆ ವಿಕ್ರಮಾರ್ಜುನನಂ ಕರೆದುಯ್ದರಿತ್ತ-

ವಚನ:ಪದವಿಭಾಗ-ಅರ್ಥ:ಆಗಳ್ ಪಾಂಡವ ಪತಾಕಿನಿಯುಂ ಇರದೆ (ಆಗ ಪಾಂಡವಸೈನ್ಯವೂ ಸುಮ್ಮನಿರದೆ) ಪೊಱಮಟ್ಟು ಅರ್ಧಚಂದ್ರ ವ್ಯೂಹಮನು ಒಡ್ಡಿ ನಿಲೆ (ಹೊರಟು ಅರ್ಧಚಂದ್ರಾಕಾರದ ಸೈನ್ಯರಚನೆಯನ್ನು ಚಾಚಿ ನಿಲ್ಲಲು,) ಸಂಸಪ್ತಕರ್ ತಮಗೆ ಮಿಱ್ತುಗರೆವಂತೆ

ವಿಕ್ರಮಾರ್ಜುನನಂ ಕರೆದುಯ್ದರು (ಸಂಸಪ್ತಕರು ತಮಗೆ ಮೃತ್ಯುವನ್ನು ಕರೆಯುವಂತೆ ಅರ್ಜುನನನ್ನು ಕರೆದುಕೊಂಡೆಯ್ದರು) ಇತ್ತ-

ವಚನ:ಅರ್ಥ:ಆಗ ಪಾಂಡವಸೈನ್ಯವೂ ಸುಮ್ಮನಿರದೆ ಹೊರಟು ಅರ್ಧಚಂದ್ರಾಕಾರದ ಸೈನ್ಯರಚನೆಯನ್ನು ಚಾಚಿ ನಿಲ್ಲಲು ಸಂಸಪ್ತಕರು ತಮಗೆ

ಮೃತ್ಯುವನ್ನು ಕರೆಯುವಂತೆ ಅರ್ಜುನನನ್ನು ಯುದ್ಧಮಾಡತ್ತಾ ದೂರ ಸೆಳೆದುಕೊಂಡು ಹೋದರು.

ಈ ಕಡೆ

ಅನವದ್ಯ|| ಅಱಿಪಿದಂ ಗುರು ಭಾರ್ಗವನಿಂತೀಯೊಡ್ಡನಿದಂ ಗೆಲಲಾವನುಂ ನೆರೆಯನುರ್ಕಿನಳುರ್ಕೆಯಿನೊರ್ವಂ ಪೊಕ್ಕೊಡೆ ಪೊಕ್ಕನೆ ಮತ್ತಣಂ|

ಪೊಱಮಡಂ

ತಱಿದೊಟ್ಟುವೆನಂತಾ

ಪಾಂಡವಸೈನ್ಯಮನೆಂದು ಬಿ

ಲ್ಲೆರೆಯನೊಡ್ಡಿದನಂಕದ

ಚಕ್ರವ್ಯೂಹಮನಾಹವರಂಗ

ದೊಳ್|| ೮೬ ||

ಪದ್ಯ-೮೬:ಪದವಿಭಾಗ-

ಅರ್ಥ:ಅಱಿಪಿದಂ ಗುರು

ಭಾರ್ಗವನು ಇಂತು

ಈಯೊಡ್ಡನು (ಈ

ಚಕ್ರವ್ಯೂಹದ ಹಿಗಿರುವ

ರಚನೆಯನ್ನು ಆಚಾರ್ಯನಾದ ಪರಶುರಾಮನು ನನಗೆ ಉಪದೇಶಮಾಡಿದ್ದಾನೆ) ಇದಂ ಗೆಲಲು ಆವನುಂ ನೆರೆಯನು (ಇದನ್ನು ಗೆಲ್ಲಲು ಯಾವನೂ ಸಮರ್ಥನಾಗುವುದಿಲ್ಲ.) ಉರ್ಕಿನ ಅಳುರ್ಕೆಯಿಂ ಒರ್ವಂ ಪೊಕ್ಕೊಡೆ ಪೊಕ್ಕನೆ ಮತ್ತಣಿಂ ಪೊಱಮಡಂ (ಸೊಕ್ಕಿನ ಉದ್ಧಟತನದಿಂದ ಯಾವನಾದರೊಬ್ಬ

ಪ್ರವೇಶಮಾಡಿದರೆ, ಹೊಕ್ಕ
ಅವನು ಪುನ ಹೇಗೂ
ಹೊರಟುಹೋಗಲಾರ;)
ತಱಿದು ಒಟ್ಟುವೆನು ಅಂತ ಆ
ಪಾಂಡವಸೈನ್ಯಮನು ಎಂದು
(ಆ ಪಾಂಡವ ಸೈನ್ಯವನ್ನು
ಇದರಿಂದ ಕತ್ತರಿಸಿ ಹಾಕುತ್ತೇನೆ
ಎಂದು) ಬಿಲ್ಲೆರೆಯನು
(ಬಿಲ್ಲುಗಾರ ದ್ರೋಣನು)
ಒಡ್ಡಿದನು ಅಂಕದ
ಚಕ್ರವ್ಯೂಹಮನು

ಆಹವರಂಗದೊಳ್
(ಪ್ರಸಿದ್ಧವಾದ
ಚಕ್ರವ್ಯೂಹವನ್ನು
ಯುದ್ಧರಂಗದಲ್ಲಿ ಹೂಡಿದನು)
ಪದ್ಯ-೮೬:ಅರ್ಥ: ಈ
ಚಕ್ರವ್ಯೂಹದ ಹಿಗಿರುವ
ರಚನೆಯನ್ನು ಆಚಾರ್ಯನಾದ
ಪರಶುರಾಮನು ನನಗೆ
ಉಪದೇಶಮಾಡಿದ್ದಾನೆ.
ಇದನ್ನು ಗೆಲ್ಲಲು ಯಾವನೂ
ಸಮರ್ಥನಾಗುವುದಿಲ್ಲ.

ಸೊಕ್ಕಿನ ಉದ್ಧಟತನದಿಂದ ಯಾವನಾದರೊಬ್ಬ ಪ್ರವೇಶಮಾಡಿದರೆ, ಹೊಕ್ಕ ಅವನು ಪುನ ಹೇಗೂ ಹೊರಟುಹೋಗಲಾರ; ಆ ಪಾಂಡವ ಸೈನ್ಯವನ್ನು ಇದರಿಂದ ಕತ್ತರಿಸಿ ಹಾಕುತ್ತೇನೆ ಎಂದು ಬಿಲ್ಲುಗಾರನಾದ ದ್ರೋಣನು ಪ್ರಸಿದ್ಧವಾದ ಚಕ್ರವ್ಯೂಹವನ್ನು ಯುದ್ಧರಂಗದಲ್ಲಿ ಹೂಡಿದನು-

ವ|| ಅಂತೊಡ್ಡಿದ ಚಕ್ರವ್ಯೂಹದ
ನಡುವೆಡೆಯಱಿದು
ಕಳಿಂಗರಾಜನ
ಕರಿಘಟೆಗಳುಮಂ ಕರ್ಣ ಶಲ್ಯ
ಶಕುನಿ ಕೃಪ ಕೃತವರ್ಮ
ಭೂರಿಶ್ರವೋಶ್ವತ್ಥಾಮ
ದುರ್ಯೋಧನ ವೃಷಸೇನ
ಲಕ್ಕಣಾದಿಗಳಪ್ರತಿರಥ
ಮಹಾರಥ
ಸಮರಥಾರ್ಧರಥರ್ಕಳನಿರಿಸಿ
ಮತ್ತಮವರ

ಬಳಸಿಯುಮನೇಕ
ಸಾಮಜಬಲಂಬೆರಸು
ಜಯತ್ಸೇನ ಸುದಕ್ಷಿಣ
ಕಾಂಭೋಜಾದಿ
ನಾಯಕರನಿರಿಸಿ ಮತ್ತಮವರ
ಕೆಲದೊಳೆಡೆಯಱಿದು
ಬಕಾಸುರ ಜಟಾಸುರರ
ಮಕ್ಕಳಪ್ಪಳಂಭೂಷಣ
ಹಳಾಯುಧ ಮುಸಳಾಯುಧ
ಕಾಳ ನೀಳ ರೂಕ್ಷ ರಾಕ್ಷಸ
ಬಲಮನಿರಿಸಿ ಮತ್ತಮವರ

ಕೆಲದೊಳಿವರ್ಗಿವರ್
ಷಾಸಟಿಯಾಗಿರ್ಪುದೆಂದು
ನಿಂದ ನೆಲೆಯೊಳ್ ತಳರದೆ
ನಿಲ್ವಂತಾಗಿರಿಸಿ ಗುಹೆಯ
ಬಾಗಿಲೊಳ್
ಸಿಂಹಮಿರ್ಪಂದದಿಂ
ಭಾರದ್ವಾಜಂ
ಸಿಂಧುರಾಜಂಬೆರಸು
ಚಕ್ರವ್ಯೂಹದ ಬಾಗಿಲೊಳ್
ನೆರೆದು ಮೆರೆದು ನಿಂದಾಗಳ್
ಧರ್ಮಪುತ್ರನೇಗೆಯ್ವ

ತೆಱನುಮನಱಿಯದಭಿಮನ್ಯುವಂ ಕರೆದಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಒಡ್ಡಿದ ಚಕ್ರವ್ಯ್ಯಾಹದ ನಡುವೆ ಎಡೆಯಱಿದು (ನಡುವೆ ಯೋಗ್ಯವಾದ ಸ್ಥಳಗಳಲ್ಲಿ) ಕಳಿಂಗರಾಜನ ಕರಿಘಟೆಗಳುಮಂ (ಆನೆಯ ಸಮೂಹವನ್ನೂ) ಕರ್ಣ ಶಲ್ಯ ಶಕುನಿ ಕೃಪ ಕೃತವರ್ಮ

ಭೂರಿಶ್ರವ ಅಶ್ವತ್ಥಾಮ
ದುರ್ಯೋರ್ಧನ ವೃಷಸೇನ
ಲಕ್ಕಣಾದಿಗಳಪ್ಪ ಅತಿರಥ
ಮಹಾರಥ ಸಮರಥ
ಅರ್ಧರಥರ್ಕಳನು ಇರಿಸಿ
(ಅತಿರಥ ಮಹಾರಥ ಸಮರಥ
ಅರ್ಧರಥರುಗಳನ್ನು ಇರಿಸಿ-)
ಮತ್ತಮ್ ಅವರ ಬಳಸಿಯುಂ
(ಸುತ್ತ) ಅನೇಕ ಸಾಮಜ
ಬಲಂಬೆರಸು (ಆನೆಯ
ಸೈನ್ಯದೊಡನೆ) ಜಯತ್ಸೇನ

ಸುದಕ್ಷಿಣ ಕಾಂಭೋಜಾದಿ
ನಾಯಕರನು ಇರಿಸಿ ಮತ್ತಂ
ಅವರ ಕೆಲದೊಳು
ಎಡೆಯಱಿದು(ಪಕ್ಕದಲ್ಲಿ ಸೂಕ್ತ
ಸ್ಥಳವನ್ನು ತಿಳಿದು) ಬಕಾಸುರ
ಜಟಾಸುರರ
ಮಕ್ಕಳಪ್ಪಳಂಭೂಷಣ
ಹಳಾಯುಧ ಮುಸಳಾಯುಧ
ಕಾಳ ನೀಳ ರೂಕ್ಷ ರಾಕ್ಷಸ
ಬಲಮನು ಇರಿಸಿ ಮತ್ತಂ
ಅವರ ಕೆಲದೊಳು

ಇವರ್ಗಿವರ್
ಷಾಸಟಿಯಾಗಿಪ್ರುದೆಂದು
(ಪಕ್ಕದಲ್ಲಿ ಇವರಿಗೆ ಇವರು
ಸಮನಾಗಿರುತ್ತದೆ) ನಿಂದ
ನೆಲೆಯೊಳ್ ತಳರದೆ
ನಿಲ್ವಂತಾಗಿರಿಸಿ (ನಿಂತ
ಸ್ಥಳದಲ್ಲಿಯೇ ಚಲಿಸದೆ
ನಿಲ್ಲುವ ಹಾಗೆ ಇರಿಸಿ)
ಗುಹೆಯ ಬಾಗಿಲೊಳ್
(ವ್ಯೂಹದ/ ಗುಹೆಯ
ಬಾಗಿಲಿಗೆ) ಸಿಂಹಂ ಇರ್ಪ

ಅಂದದಿಂ ಭಾರದ್ವಾಜಂ
ಸಿಂಧುರಾಜಂ ಬೆರಸು
(ಸಿಂಹವಿರುವ ಹಾಗೆ
ದ್ರೋಣಾಚಾರ್ಯನು
ಸೈಂಧವನೊಡಗೂಡಿ)
ಚಕ್ರವ್ಯೂಹದ ಬಾಗಿಲೊಳ್
ನೆರೆದು ಮೆರೆದು
(ಒಟ್ಟುಗೂಡಿಕೊಂಡು ಪೂರ್ಣ
ಸಮರ್ಥನಾಗಿ) ನಿಂದಾಗಳ್,
ಧರ್ಮಪುತ್ರನು ಏಗೆಯ್ವು
ತೆಱನುಮನು ಅಱಿಯದೆ

(ಏನು ಮಾಡಬೇಕೆಂಬ
ಕ್ರಮದನ್ನು ತಿಳಿಯದೆ)
ಅಭಿಮನ್ಯುವಂ ಕರೆದು
ಇಂತೆಂದಂ-

ವಚನ:ಅರ್ಥ:ಹಾಗೆ ಹೂಡಿದ
ಚಕ್ರವ್ಯೂಹದ ನಡುವೆ
ಯೋಗ್ಯವಾದ ಸ್ಥಳಗಳಲ್ಲಿ
ಕಳಿಂಗ ರಾಜನ ಆನೆಯ
ಸಮೂಹವನ್ನೂ ಕರ್ಣ, ಶಲ್ಯ,
ಶಕುನಿ, ಕೃತವರ್ಮ,
ಭೂರಿಶ್ರವ, ಅಶ್ವತ್ಥಾಮ,

ದುರ್ಯೋಧನ, ವೃಷಸೇನ, ಲಕ್ಷಣನೇ ಮೊದಲಾದ ಅತಿರಥ ಮಹಾರಥ ಸಮರಥ ಅರ್ಧರಥರುಗಳನ್ನು ಇರಿಸಿದನು. ಅದರ ಸುತ್ತಲೂ ಅನೇಕ ಆನೆಯ ಸೈನ್ಯದೊಡನೆ ಜಯತ್ಸೇನ, ಸುದಕ್ಷಿಣ, ಕಾಂಭೋಜರೇ ಮೊದಲಾದ ನಾಯಕರುಗಳನ್ನಿಟ್ಟನು. ಮತ್ತು ಅವರ ಪಕ್ಕದಲ್ಲಿ ಸೂಕ್ತ ಸ್ಥಳವನ್ನು ತಿಳಿದು ಬಕಾಸುರ

ಜಟಾಸುರರ ಮಕ್ಕಳಾದ ಅಳಂಭೂಷಣ, ಹಳಾಯುಧ, ಮುಸಳಾಯುಧ, ಕಾಳನೀಳರ ಭಯಂಕರವಾದ ರಾಕ್ಷಸ ಸೈನ್ಯವನ್ನಿರಿಸಿದನು. ಅವರ ಪಕ್ಕದಲ್ಲಿ ಇವರಿಗೆ ಇವರು ಸಮನಾಗಿರುತ್ತದೆ ಎಂದು ನಿಂತ ಸ್ಥಳದಲ್ಲಿಯೇ ಚಲಿಸದೆ ನಿಲ್ಲುವ ಹಾಗೆ ಇರಿಸಿ ವ್ಯೂಹದ/ ಗುಹೆಯ ಬಾಗಿಲಿಗೆ ಸಿಂಹವಿರುವ ಹಾಗೆ

ದ್ರೋಣಾಚಾರ್ಯನು ಸೈಂಧವನೊಡಗೂಡಿ ಚಕ್ರವ್ಯೂಹದ ಬಾಗಿಲಿನಲ್ಲಿ ಒಟ್ಟುಗೂಡಿಕೊಂಡು ಮೆರೆದು ನಿಂತನು. ಧರ್ಮರಾಜನು ಏನು ಮಾಡಬೇಕೆಂಬ ಕ್ರಮದನ್ನು ತಿಳಿಯದೆ ಅಭಿಮನ್ಯುವನ್ನು ಕರೆದು ಹೀಗೆ ಹೇಳಿದನು.-

ಮ|| ಸ್ರ|| ಇದು ಚಕ್ರವ್ಯೂಹಮೀ

ವ್ಯೂಹಮನೊಡೆವದಟಂ
ಪಾರ್ಥನಂತಾತನುಂ ಗೆಂ
ಟಿದನೆಮ್ಮೀ ನಾಲ್ವರುಂ
ಭೇದಿಸಲಱಿಯೆವಿದಂ ಕಂದ
ನೀಂ ಬಲ್ಲ ಪೇೞೆಂ|
ಬುದುಮಾನೆಮ್ಮಯ್ಯನಲ್
ಕೇಳ್ದಱಿವೆನಿದನಿದೇನಯ್ಯ
ಚಿಂತಾಂತರಂ ಪೊ
ಕ್ಕಿದನೀಗಳ್
ವನ್ಯಗಂಧದ್ವಿರದಮೆ ಕೊಳನಂ

ಪೊಕ್ಕಪೋಲ್ ಕಾದಿ ತೋರ್ಪೆ|| ೮೭ ||

ಪದ್ಯ-೮೭:ಪದವಿಭಾಗ-ಅರ್ಥ:ಇದು ಚಕ್ರವ್ಯೂಹಮಂ ಈ ವ್ಯೂಹಮನು ಒಡೆವ ಅದಟಂ ಪಾರ್ಥನು ಅಂತು ಆತನುಂ ಗೆಂಟಿದಂ (ಈ ಚಕ್ರವ್ಯೂಹವನ್ನು ಬೇಧಿಸುವ ವೀರ ಅರ್ಜುನ, ಅವನೂ ದೂರವಾದನು;) ಎಮ್ಮೀ ನಾಲ್ವರುಂ ಭೇದಿಸಲು

ಅಱಿಯೆವು ಇದಂ (ನಾವು ಉಳಿದ ನಾಲ್ಕು ಜನವೂ ಇದನ್ನು ಭೇದಿಸಲು ತಿಳಿಯೆವು.) ಕಂದ ನೀಂ ಬಲ್ಲ ಪೇೞ್ ಎಂಬುದಂ (ನೀನೇನಾದರೂ ತಿಳಿದಿದ್ದೀಯಾ ಹೇಳು ಎನ್ನಲು) ಎಂಬುದುಂ- ಆನು ಎಮ್ಮಯ್ಯನಲ್ ಕೇಳ್ದಱಿವೆನು ಇದನು ಇದೇನು ಅಯ್ಯ ಚಿಂತಾಂತರಂ (ಇದನ್ನು

ತಂದೆಯಲ್ಲಿ ಕೇಳಿ ತಿಳಿದಿದ್ದೇನೆ. ದೊಡ್ಡಪ್ಪಾ ಇದಕ್ಕೇಕೆ ವಿಶೇಷ ಚಿಂತೆ.) ಪೊಕ್ಕು ಇದನು ಈಗಳ್ ವನ್ಯಗಂಧದ್ವಿರದಮೆ (ವನ್ಯ ಗಂಧ ದ್ವಿರದಮೆ -ಕಾಡಿನ ಮದ್ದಾನೆಯು) ಕೊಳನಂ ಪೊಕ್ಕವೋಲ್ ಕಾದಿ ತೋರ್ಪೆ (ಕೊಳವನ್ನು ಪ್ರವೇಶಿಸುವ ಹಾಗೆ ಯುದ್ಧಮಾಡಿ ತೋರಿಸುತ್ತೇನೆ.)

ಪದ್ಯ-೮೭:ಅರ್ಥ:ಇದು ಚಕ್ರವ್ಯೂಹ, ಈ ಚಕ್ರವ್ಯೂಹವನ್ನು ಬೇಧಿಸುವ ವೀರ ಅರ್ಜುನ, ಅವನೂ ದೂರವಾದನು. ನಾವುನಾಲ್ಕು ಜನವೂ ಇದನ್ನು ಭೇದಿಸಲು ತಿಳಿಯೆವು. ಮಗು ನೀನೇನಾದರೂ ತಿಳಿದಿದ್ದೀಯಾ ಹೇಳು ಎನ್ನಲು ಇದನ್ನು ತಂದೆಯಲ್ಲಿ ಕೇಳಿ ತಿಳಿದಿದ್ದೇನೆ. ದೊಡ್ಡಪ್ಪಾ

ಇದಕ್ಕೇಕೆ ವಿಶೇಷ ಚಿಂತೆ.
ಇದನ್ನು ಈಗಲೇ ಪ್ರವೇಶಿಸಿ
ಕಾಡಿನ ಮದ್ದಾನೆಯು
ಕೊಳವನ್ನು ಪ್ರವೇಶಿಸುವ
ಹಾಗೆ ಯುದ್ಧಮಾಡಿ
ತೋರಿಸುತ್ತೇನೆ.

ಚಂ|| ಆನಲನ ಕೊಟ್ಟ
ಗಾಂಡಿವದ ತೇರ ಮುರಾರಿಯ
ಮೆಚ್ಚ ದೇವ ದೇ
ವನ ದಯೆಗೆಯ್ದ ಸಾಯಕದ
ಬೆಂಬಲದೊಳ್ ಕಲಿಯೆಂದು

ಕೆಮ್ಮನ|
ಮ್ಮನನದಟಟ್ಟುತಿರ್ಪಿರವಿದೇಂ
ಪೆಗೆಯೊಡ್ಡು
ಗೆಲಲ್ಕಳುಂಬಮೆಂ
ಬನಿತುವರಂ ಮನಕ್ಕೆ
ನಿಮಗತ್ತಳಗಂ ಬರೆ ಮತ್ತೆ
ಮಾಣ್ಬೆನೇ|| ೮೮ ||

ಪದ್ಯ-೮೮:ಪದವಿಭಾಗ-

ಅರ್ಥ: ಆನಲನ ಕೊಟ್ಟ ಗಾಂಡಿವದ ತೇರ (ಅಗ್ನಿಯು ದಾನಮಾಡಿದ

ಗಾಂಡೀವಾಸ್ತ್ರದ ದಿವ್ಯ ರಥದ,)
ಮುರಾರಿಯ ಮೆಚ್ಚ ದೇವ
ದೇವನ ದಯೆಗೆಯ್ದ
ಸಾಯಕದ ಬೆಂಬಲದೊಳ್
(ಸಾರಥಿಯಾಗಿರುವ ಕೃಷ್ಣನ
ಪ್ರಸಾದದ, ದೇವದೇವನಾದ
ಈಶ್ವರನು ಅನುಗ್ರಹಿಸಿದ
ಪಾಶುಪತಾಸ್ತ್ರದ
ಬೆಂಬಲದಿಂದ) ಕಲಿಯೆಂದು
ಕೆಮ್ಮನೆ ಅಮ್ಮನಂ ಅದಟ
ಅಟ್ಟಿಗೆತ್ತಿರ್ಪ (ಒಲಿದು

ಮೆಚ್ಚುತ್ತಿರುವ) ಇರವು ಇದೇಂ (ಶೂರನೆಂದು ಸುಮ್ಮನೆ ಕರೆಯಿಸಿಕೊಳ್ಳುವ ತಂದೆಯಾದ ಅರ್ಜುನನ ಪರಾಕ್ರಮವನ್ನು ಒಲಿದು ಮೆಚ್ಚುತ್ತಿರುವ ಈ ಸ್ಥಿತಿಯು ಇದೇನು?) ಪೆಗೆಯ ಒಡ್ಡು (ಶತ್ರುಸೈನ್ಯವು) ಗೆಲಲ್ಕೆ ಅಳುಂಬಂ ಎಂಬನಿತುವರಂ (ಗೆಲ್ಲುವುದಕ್ಕೆ ಅಸಾಧ್ಯವೆಂದು ಹೇಳುವವರೆಗೆ) ಮನಕ್ಕೆ

ನಿಮಗೆ ಅತ್ತಳಗಂ ಬರೆ (ಮನಸ್ಸಿಗೆ ಚಿಂತೆಯುಂಟಾದರೆ) ಮತ್ತೆ ಮಾಣ್ಬೆನೇ (ಮತ್ತೆ ಯುದ್ಧಕ್ಕೆ ಹೋಗದೆ ನಿಲ್ಲುತ್ತೇನೆಯೇ? ಇಗೋ ಹೊರಟೆನು!)

ಪದ್ಯ-೮೮:ಅರ್ಥ:ಅಗ್ನಿಯು ದಾನಮಾಡಿದ ಗಾಂಡೀವಾಸ್ತ್ರದ ದಿವ್ಯ ರಥದ, ಸಾರಥಿಯಾಗಿರುವ ಕೃಷ್ಣನ ಪ್ರಸಾದದ, ದೇವದೇವನಾದ

ಈಶ್ವರನು ಅನುಗ್ರಹಿಸಿದ
ಪಾಶುಪತಾಸ್ತ್ರದ
ಬೆಂಬಲದಿಂದ ಶೂರನೆಂದು
ಸುಮ್ಮನೆ ಕರೆಯಿಸಿಕೊಳ್ಳುವ
ತಂದೆಯಾದ ಅರ್ಜುನನ
ಪರಾಕ್ರಮವನ್ನು ಒಲಿದು
ಮೆಚ್ಚುತ್ತಿರುವ ಈ
ಸ್ಥಿತಿಯದೇನು? ಶತ್ರುಸೈನ್ಯವು
ಗೆಲ್ಲುವುದಕ್ಕೆ ಅಸಾಧ್ಯವೆಂದು
ಹೇಳುವವರೆಗೆ ಮನಸ್ಸಿಗೆ
ಚಿಂತೆಯುಂಟಾದರೆ, ಮತ್ತೆ

ಯುದ್ಧಕ್ಕೆ ಹೋಗದೆ ನಿಲ್ಲುತ್ತೇನೆಯೇ? (ಇಲ್ಲಿ ಈಗಲೇ ಯುದ್ಧಕ್ಕೆ ಹೊರಡುತ್ತೇನೆ)

ಚಂ|| ನೆರೆದು ಚತುರ್ವಲಂಬೆರಸು ಬಂದುಱದೊಡ್ಡಿದ ಗಂಡರಾರುಮೆ ನ್ನಱಿಯದ ಗಂಡರೇ ನೆಗೆದ ನೆತ್ತರ ಸುಟ್ಟುರೆಕಂಡದಿಂಡೆಗಳ್|

ಪಱಿದು ನಭಂಬರಂ ಪರೆದು ಪರ್ವಿ ಲಯಾಗ್ನಿ ಶಿಖಾಕಳಾಪಮಂ ಮರೆಯಿಸೆ ತಾಗಿ ತಳ್ತಿಱಿಯದನ್ನೆಗಮೆಂತು ನರಂಗೆ ವುಟ್ಟಿದೆಂ|| ೮೯ ||

ಪದ್ಯ-೮೯:ಪದವಿಭಾಗ-ಅರ್ಥ:ನೆರೆದು ಚತುರ್ವಲಂ ಬೆರಸು (ಚತುರಂಗ ಬಲದೊಡನೆ ಕೂಡಿಕೊಂಡು) ಬಂದು ಉಱದೆ ಒಡ್ಡಿದ

ಗಂಡರು (ವೇಗವಾಗಿ ಬಂದು
ಸೈನ್ಯವನ್ನು ಒಡ್ಡಿರುವ
ಶೂರರು) ಆರುಂ ಎನ್ನ
ಅಱಿಯದ ಗಂಡರೇ (ನನಗೆ
ತಿಳಿಯದ ಶೂರರೇ?) ನೆಗೆದ
ನೆತ್ತರ ಸುಟ್ಟುರೆ (ಪ್ರವಾಹವು)
ಕಂಡದಿಂಡೆಗಳ್ (ಮೇಲಕ್ಕೆ
ಚಿಮ್ಮಿದ ರಕ್ತಪ್ರವಾಹವು
ಮಾಂಸಖಂಡದ ರಾಶಿಗಳು)
ಪಱಿದು ನಭಂಬರಂ ಪರೆದು
ಪರ್ವಿ (ಕತ್ತರಿಸಿ ಮುಗಿಲವರೆಗೆ

ಹರಿದು ಚೆಲ್ಲಾಡುವಂತೆಯೂ)
ಲಯಾಗ್ನಿ ಶಿಖಾಕಳಾಪಮಂ
ಮರೆಯಿಸೆ ತಾಗಿ
(ಲಯಮಾಡುವ ಪ್ರಳಯಾಗ್ನಿ
ಜ್ವಾಲೆಗಳನ್ನು
ಮರೆಮಾಡುತ್ತಿರಲು ಎದುರಿಸಿ)
ತಳ್ತು ಇಱಿಯದನ್ನೆಗಂ
(ಯುದ್ಧ ಮಾಡದೆ
ಉರುವವರೆಗೆ) ಎಂತು ನರಂಗೆ
ವುಟ್ಟಿದೆಂ (ಎದುರಿಸಿ ಕೂಡಿ
ಯುದ್ಧ ಮಾಡದಿದ್ದರೆ ನಾನು

ಅರ್ಜುನನಿಗೆ ಹೇಗೆ ಹುಟ್ಟಿದವನಾಗುತ್ತೇನೆ?)
ಪದ್ಯ-೮೯:ಅರ್ಥ: ಚತುರಂಗ ಬಲದೊಡನೆ ಕೂಡಿಕೊಂಡು ವೇಗವಾಗಿ ಬಂದು ಸೈನ್ಯವನ್ನು ಒಡ್ಡಿರುವ ಶೂರರು ನನಗೆ ತಿಳಿಯದ ಶೂರರೇ? ಮೇಲಕ್ಕೆ ಚಿಮ್ಮಿದ ರಕ್ತಪ್ರವಾಹವು ಆಕಾಶಕ್ಕೆ ಚಿಮ್ಮುವಂತೆಯೂ ಮಾಂಸಖಂಡದ ರಾಶಿಗಳು ಕತ್ತರಿಸಿ ಮುಗಿಲವರೆಗೆ ಹರಿದು

ಚೆಲ್ಲಾಡುವಂತೆಯೂ
ಲಯಮಾಡುವ ಪ್ರಳಯಾಗ್ನಿ
ಜ್ವಾಲೆಗಳನ್ನು
ಮರೆಮಾಡುತ್ತಿರಲು ಎದುರಿಸಿ
ಕೂಡಿ ಯುದ್ಧ ಮಾಡದಿದ್ದರೆ
ನಾನು ಅರ್ಜುನನಿಗೆ ಹೇಗೆ
ಹುಟ್ಟಿದವನಾಗುತ್ತೇನೆ?

ವ|| ಎಂಬುದುಂ
ಯಮನಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಯಮನಂದನು ಇಂತೆಂದಂ-

ವಚನ:ಅರ್ಥ:ವ|| ಎನ್ನಲು

ಯಮನ ಪುತ್ರನಾದ

ಧರ್ಮರಾಯನು ಹೀಗೆಂದನು-

ಚಂ|| ಅನುವರದಲ್ಲಿ ತಳ್ತು

ಪಗೆಯಂ ತವೆ

ಕೊಂದೊಡಮಾಂತರಾತಿ ಸಾ

ಧನದೊಳಗೞ್ಗಿ

ತೞ್ಗಿದೊಡಮೆನ್ನಯ

ಸಂತತಿಗಾಗಿಸಿರ್ದ ನಿ|

ನ್ನನೆ ಮದದಂತಿ ದಂತ

ಮುಸಲಾಹತಿಗಂ ಕರವಾಳ

ಬಾಯ್ಗಮಂ

ಬಿನ ಮೊನೆಗಂ ಮಹಾರಥರ

ತಿಂತಿಣಿಗಂ ಪಿಡಿದೆಂತು

ನೂಂಕುವೆಂ|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ:ಅನುವರದಲ್ಲಿ ತಳ್ತು ಪಗೆಯಂ ತವೆ ಕೊಂದೊಡಂ (ಯುದ್ಧದಲ್ಲಿ ಸೇರಿ ಶತ್ರುವನ್ನು ಪೂರ್ಣವಾಗಿ ಕೊಲ್ಲಬಹುದು

ಅಥವಾ) ಆಂತ ಅರಾತಿ
ಸಾಧನದೊಳಗೆ (ಪ್ರತಿಭಟಿಸಿದ
ಶತ್ರುಸೈನ್ಯದಲ್ಲಿ) ಅೞ್ಗಿ
ತೞ್ಗಿದೊಡಂ ಎನ್ನಯ
ಸಂತತಿಗೆ ಆಗಿಸಿರ್ದ (ಅಳಿದು
ಸತ್ತರೂ, ಆದರೆ ನನ್ನ
ವಂಶೋದ್ಧಾರಕ್ಕಾಗಿಯೇ
ಹುಟ್ಟಿರುವ) ನಿನ್ನನೆ
ಮದದಂತಿ ದಂತ
ಮುಸಲಾಹತಿಗಂ ಕರವಾಳ
ಬಾಯ್ಗಂ (ನಿನ್ನನ್ನೇ

ಮದ್ದಾನೆಯ ದಂತವೆಂಬ ಒನಕೆಯ ಪೆಟ್ಟಿಗೂ ಕತ್ತಿಯ ಬಾಯಿಗೂ) ಅಂಬಿನ ಮೊನೆಗಂ ಮಹಾರಥರ ತಿಂತಿಣಿಗಂ (ಬಾಣದ ತುದಿಗೂ ಮಹಾರಥರ ಸಮೂಹಕ್ಕೂ) ಪಿಡಿದು ಎಂತು ನೂಂಕುವೆಂ (ಹಿಡಿದು ಹೇಗೆ ನೂಕಲಿ?)

ಪದ್ಯ-೯೦:ಅರ್ಥ:ಯುದ್ಧದಲ್ಲಿ ಸೇರಿ ಶತ್ರುವನ್ನು ಪೂರ್ಣವಾಗಿ ಕೊಲ್ಲಬಹುದು ಅಥವಾ

ಪ್ರತಿಭಟಿಸಿದ ಶತ್ರುಸೈನ್ಯದಲ್ಲಿ,
ಅಳಿದು ಸತ್ತರೂ, ಆದರೆ ನನ್ನ
ವಂಶೋದ್ಧಾರಕ್ಕಾಗಿಯೇ
ಹುಟ್ಟಿರುವ ನಿನ್ನನ್ನೇ
ಮದ್ದಾನೆಯ ದಂತವೆಂಬ
ಒನಕೆಯ ಪೆಟ್ಟಿಗೂ, ಕತ್ತಿಯ
ಬಾಯಿಗೂ, ಬಾಣದ ತುದಿಗೂ
ಮಹಾರಥರ ಸಮೂಹಕ್ಕೂ
ಹಿಡಿದು ಹೇಗೆ ನೂಕಲಿ?

ಕಂ|| ಮಗನೆ ಪದಿನಾಲ್ಕು ವರುಷದ

ಮಗನ್ಮೈ ನಿನ್ನನ್ನೊರ್ವನಂ ಪಗೆವಡೆಯೊ| ಡ್ಡುಗಳನೊಡೆಯಲ್ಕೆವೇೞ್ದೆರ್ದೆ ಧಗಮೆನೆ ಸೈರಿಸುವುಪಾಯಮಾವುದು ಕಱುವೇ|| ೯೧||91

ಪದ್ಯ-೯೧:ಪದವಿಭಾಗ-ಅರ್ಥ:ಮಗನೆ ಪದಿನಾಲ್ಕು ವರುಷದಮಗನ್ಮೈ (ಮಗನೇ ಇನ್ನೂ ಹದಿನಾಲ್ಕು ವರ್ಷದ ಮಗುವಪ್ಪಾ.) ನಿನ್ನನ್ನ

ಒರ್ವನಂ (ನಿನ್ನಂತಹ
ಒಬ್ಬನನ್ನು) ಪಗೆವಡೆಯ
ಒಡ್ಡುಗಳನು ಒಡೆಯಲ್ಕೆ
ವೇಱ್ದಿ ಎರ್ದೆ ಧಗಮ್ ಎನೆ
(ಶತ್ರುಸೈನ್ಯದ ಗುಂಪನ್ನು
ಭೇದಿಸಲು ಹೇಳಿ ಎದೆ
ಧಗ್ಗೆಂದು ಉರಿಯಲು)
ಸೈರಿಸುವ
ಉಪಾಯಮಾವುದು
(ತಡೆದುಕೊಳ್ಳುವ

ಉಪಾಯವಾವುದು) ಕಜುವೇ (ಕಂದನೇ?)
ಪದ್ಯ-೯೧:ಅರ್ಥ:ಮಗನೇ ನೀನು ಇನ್ನೂ ಹದಿನಾಲ್ಕು ವರ್ಷದ ಮಗುವಪ್ಪಾ. ನಿನ್ನಂತಹ ಒಬ್ಬನನ್ನು ಶತ್ರುಸೈನ್ಯದ ಗುಂಪನ್ನು ಭೇದಿಸಲು ಹೇಳಿ ಎದೆ ಧಗ್ಗೆಂದು ಉರಿಯಲು ತಡೆದುಕೊಳ್ಳುವ

ಉಪಾಯವಾವುದು

ಕಂದನೇ?

ವ|| ಎಂದೊಡಾ ಮಾತಂ

ಮಾರ್ಕೊಂಡಭಿಮನ್ಯುವಿಂತೆಂ

ದಂ-

ವಚನ:ಪದವಿಭಾಗ-

ಅರ್ಥ:ಎಂದೊಡೆ ಆ ಮಾತಂ

ಮಾರ್ಕೊಂಡು (ಪ್ರತಿಭಟಿಸಿ)

ಅಭಿಮನ್ಯುವು ಇಂತೆಂದಂ-

ವಚನ:ಅರ್ಥ: ವ|| ಎನ್ನಲು

ಆ ಮಾತನ್ನು ಪ್ರತಿಭಟಿಸಿ

ಅಭಿಮನ್ಯುವು ಹೀಗೆ ಹೇಳಿದನು.

ಮ|| ಕ್ರಮಮಂ
ಕೆಯ್ಕೊಳಲೆಂದು ಪುಟ್ಟಿ
ರಣದೊಳ್ ಸಾವನ್ನೆಗಂ
ಮಾಣ್ದೊಡ
ಕ್ರಮಮಕ್ಕುಂ ಕ್ರಮಮಕ್ಕುಮೇ
ಕ್ರಮಮನಾಗೇಗೆಯ್ದಪೆಂ
ವಿಕ್ರಮಂ|
ಕ್ರಮಮಾಂ ವಿಕ್ರಮದಾತನೆಂ
ಕ್ರಮದ ಮಾತಂತಿರ್ಕೆ

ಮಾಣ್ದಿರ್ದೊಡಾಂ|

ಕ್ರಮಕೆಂದಿರ್ದನೆ ಬಿಟ್ಟೊಡಂ

ಬಿಡದೊಡಂ ಬೀಱಿಕೊಂಡೆನಿಂ

ಮಾಣ್ಬನೇ|| ೯೨ ||

ಪದ್ಯ-೯೨:ಪದವಿಭಾಗ-

ಅರ್ಥ:ಕ್ರಮಮಂ

ಕೆಯ್ಕೊಳಲೆಂದು ಪುಟ್ಟಿ

(ಯುದ್ಧದಲ್ಲಿ ಕ್ರಮವಾಗಿ

ಅವಕಾಶ ಪ್ರಾಪ್ತವಾದುದನ್ನು

ಸ್ವೀಕರಿಸುವುದಕ್ಕಾಗಿಯೇ

ಹುಟ್ಟಿ) ರಣದೊಳ್

ಸಾವನ್ನೆಗಂ ಮಾಣ್ದೊಡೆ ಅಕ್ರಮಮಕ್ಕುಂ (ಯುದ್ಧದಲ್ಲಿ ಸಾಯುವವರಿಗೂ ಹೋರಾಡದೆ, ಯುದ್ಧಕ್ಕೆ ತಪ್ಪಿದರೆ (ಹೆದರಿದರೆ) ಅದು ಅಕ್ರಮವಾಗುತ್ತದೆ;) ಕ್ರಮಂ ಅಕ್ಕುಮೇ? ಕ್ರಮಂ ಆನು ಆಗ ಏಗೆಯ್ದಪೆಂ? (ನಾನು ಏನು ಮಾಡಿದರೆ ಕ್ರಮವಾದದ್ದು ಆಗುತ್ತದೆ, ಏನು ಮಾಡಲಿ?) ವಿಕ್ರಮಂ ಕ್ರಮಂ, (ಪರಾಕ್ರಮ

ತೋರುವುವೇ ಈಗ ಕ್ರಮ)
ಆಂ ವಿಕ್ರಮದಾತನೆಂ ಕ್ರಮದ
ಮಾತು ಅಂತಿರ್ಕೆ (ಕ್ರಮದ
ಮಾತು ಹಾಗಿರಲಿ) ಮಾಣ್ದು
ಇರ್ದೊಡೆ ಆಂ
ಕ್ರಮಕೆಂದಿರ್ದೆನೆ (ನೀವು
ಬೇಡವೆಂದು ಅಪ್ಪಣೆ
ಕೊಡಿದಿದ್ದರೂ ನಾನು
ಕ್ರಮಕ್ಕಾಗಿ ಇದ್ದೇನೆ.)
ಬಿಟ್ಟೊಡಂ ಬಿಡದೊಡಂ
ಬೀಟ್ಕೊಂಡೆನು ಇಂ

ಮಾಣ್ಬೆನೇ (ನೀವು ಬಿಡಲಿ ಬಿಡದಿರಲಿ ಹೊರಟಿದ್ದೇನೆ. ಅದನ್ನು ಇನ್ನು ನಿಲ್ಲುತ್ತೇನೆಯೇ?)

ಪದ್ಯ-೯೨:ಅರ್ಥ:

ಯುದ್ಧದಲ್ಲಿ ಕ್ರಮವಾಗಿ ಅವಕಾಶ ಪ್ರಾಪ್ತವಾದುದನ್ನು ಸ್ವೀಕರಿಸುವುದಕ್ಕಾಗಿಯೇ ಹುಟ್ಟಿ, ಯುದ್ಧದಲ್ಲಿ ಸಾಯುವವರಿಗೂ ಹೋರಾಡದೆ, ಯುದ್ಧಕ್ಕೆ

ತಪ್ಪಿದರೆ (ಹೆದರಿದರೆ) ಅದು
ಅಕ್ರಮವಾಗುತ್ತದೆ;
ಕ್ರಮವಾಗುತ್ತದೆಯೇ? ನಾನು
ಏನು ಮಾಡಿದರೆ
ಕ್ರಮವಾದದ್ದು ಆಗುತ್ತದೆ,
ಏನು ಮಾಡಲಿ?. ಕ್ರಮದ
ಮಾತು ಹಾಗಿರಲಿ; ಪರಾಕ್ರಮ
ತೋರುವುವೇ ಈಗ ಕ್ರಮ.
ನಾನು ಪರಾಕ್ರಮಶಾಲಿ.
ಕ್ರಮದ ಮಾತು ಹಾಗಿರಲಿ.
ನೀವು ಬೇಡವೆಂದು ಅಪ್ಪಣೆ

ಕೊಡಿದಿದ್ದರೂ ನಾನು ಕ್ರಮಕ್ಕಾಗಿ ಇದ್ದೇನೆ. ನೀವು ಬಿಡಲಿ ಬಿಡದಿರಲಿ ಹೊರಟಿದ್ದೇನೆ. ಅದನ್ನು ಇನ್ನು ನಿಲ್ಲುತ್ತೇನೆಯೇ?

ವ|| ಎಂದು ತನ್ನೇಱಿದ ಕನಕ ರಥಮಂ ತನ್ನ ಮನದನ್ನನಪ್ಪ ಜಯನೆಂಬ ಸಾರಥಿಯಂ ಚೋದಿಸೆಂದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಏಱಿದ

ಕನಕ ರಥಮಂ ತನ್ನ ಮನದನ್ನನಪ್ಪ ಜಯನೆಂಬ ಸಾರಥಿಯಂ ಚೋದಿಸೆಂದಾಗಳ್-

ವಚನ:ಅರ್ಥ:ವ|| ಎಂದು ತಾನು ಹತ್ತಿದ್ದ ಚಿನ್ನದ ತೇರನ್ನು ತನಗೆ ಪ್ರೀತಿಪಾತ್ರನಾದ ಜಯನೆಂಬ ಸಾರಥಿಯನ್ನು ರಥವನ್ನು ನೆಡಸೆಂದು ಹೇಳಿ- ಹೊರಟೇಬಿಟ್ಟನು.

ಚಂ|| ಎಱಗುವ

ಬಟ್ಟಿನಂಬುಗಳ ಬಲ್ಲರಿ

ಕುಂಭಜನಂ ಮರಳ್ಚೆ ಪಾ

ಯ್ದಱಿಕೆಯ ಪಾರೆಯಂಬುಗಳ

ತಂದಲಗುರ್ವಿಸಿ

ಸಿಂಧುರಾಜನಂ|

ಮಱುಗಿಸೆ ಬಾಗಿಲೊಳ್

ಮುಸುಱಿ ನಿಂದ

ಘಟಾವಳಿಯಂ ತೆರಳ್ಚಿ ತ

ತ್ತಱದಱಿದೊತ್ತಿ

ಪೊಕ್ಕನಭಿಮನ್ಯು

ವಿರೋಧಿಬಳಾಂಬುರಾಶಿಯಂ|
| **೯೩** ||

ಪದ್ಯ-00:ಪದವಿಭಾಗ-
ಅರ್ಥ:ಎಱಗುವ ಬಟ್ಟಿನ ಅಂಬುಗಳ ಬಲ್ಲರಿ (ಮೇಲೆ ಬೀಳುತ್ತಿರುವ ಭಾರವಾದ ಬಾಣಗಳ ದೊಡ್ಡ ಮಳೆಯು) ಕುಂಭಜನಂ ಮರಳ್ಚೆ (ದ್ರೋಣನನ್ನು ಹಿಂದಿರುಗಿಸಲು,) ಪಾಯ್ದಱಿಕೆಯ

ಪಾರೆಯಂಬುಗಳ (ಹಾದು
ಬರುವ ದೊಡ್ಡದಾದ
ಹಾರೆಯಂಥ ಅಂಬುಗಳ)
ತಂದಲ್ ಅಗುರ್ವಿಸಿ
ಸಿಂಧುರಾಜನಂ ಮಱುಗಿಸೆ
(ಹಾದು ಬರುವ ದೊಡ್ಡದಾದ
ಹಾರೆಯಂಥ ಅಂಬುಗಳ
ಜಿನುಗು ಮಳೆಯು
ಸೈಂಧವನನ್ನು ಹೆದರಿಸಿ
ವ್ಯಥೆಪಡಿಸಲು) ಬಾಗಿಲೊಳ್
ಮುಸುಱಿ ನಿಂದ

ಘಟಾವಳಿಯಂ
(ಚಕ್ರವ್ಯೂಹದ ಬಾಗಿಲಿನಲ್ಲಿ
ಮುತ್ತಿಕೊಂಡು ನಿಂತಿದ್ದ
ಆನೆಯ ಸೈನ್ಯವನ್ನು) ತೆರಳ್ಚಿ
(ತೆರಳಿಸಿ, ಓಡಿಸಿ)
ತತ್ತಱದಱಿದು ಒತ್ತಿ (
ಶತ್ರುಸೇನೆಯನ್ನು-
ಚೂರುಚೂರಾಗಿ ತರಿದು
ನುಗ್ಗಿ,) ಪೊಕ್ಕನು ಅಭಿಮನ್ಯು
ವಿರೋಧಿಬಳ
ಅಂಬುರಾಶಿಯಂ

(ಅಭಿಮನ್ಯುವು ನೂಕಿ ವಿರೋಧಿ ಬಲದ/ ಸೈನ್ಯದ ಸಮುದ್ರವನ್ನು ಹೊಕ್ಕನು.)

ಪದ್ಯ-00:ಅರ್ಥ: ಮೇಲೆ ಬೀಳುತ್ತಿರುವ ಭಾರವಾದ ಬಾಣಗಳ ದೊಡ್ಡ ಮಳೆಯು ದ್ರೋಣನನ್ನು ಹಿಂದಿರುಗಿಸಿತು. ಹಾದು ಬರುವ ದೊಡ್ಡದಾದ ಹಾರೆಯಂಥ ಅಂಬುಗಳ ಜಿನುಗು ಮಳೆಯು ಸೈಂಧವನನ್ನು ಹೆದರಿಸಿ

ವ್ಯಥೆಪಡಿಸಿತು. ಚಕ್ರವ್ಯೂಹದ ಬಾಗಿಲಿನಲ್ಲಿ ಮುತ್ತಿಕೊಂಡು ನಿಂತಿದ್ದ ಆನೆಯ ಸೈನ್ಯವನ್ನು ಓಡಿಸಿ, ಶತ್ರುಸೇನಾಸಮುದ್ರವನ್ನು ಚೂರುಚೂರಾಗಿ ತರಿದು ನುಗ್ಗಿ, ಅಭಿಮನ್ಯುವು ನೂಕಿ ವಿರೋಧಿ ಬಲದ/ ಸೈನ್ಯದ ಸಮುದ್ರವನ್ನು ಹೊಕ್ಕನು.

ವ|| ಅಂತು ಪೊಕ್ಕು ವಿರೋಧಿ ಸೈನ್ಯಮಂ ಮಾರಿ ಪೊಕ್ಕಂತೆ

ಪೆಣಮಯಂ ಮಾಡಿ ತೂಱಿಕೊಂಡ ಜೋೞದಂತಿರೆ ಪಡಲ್ವಡಿಸಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಪೊಕ್ಕು ವಿರೋಧಿ ಸೈನ್ಯಮಂ ಮಾರಿ ಪೊಕ್ಕಂತೆ ಪೆಣಮಯಂ ಮಾಡಿ (ಶತ್ರುಸೈನ್ಯವನ್ನು ಪ್ರವೇಶಮಾಡಿ ಮಾರಿ ಹೊಕ್ಕಂತೆ ಹೆಣಮಯವನ್ನಾಗಿ ಮಾಡಿ) ತೂಱಿಕೊಂಡ

ಜೋಳದಂತಿರೆ

ಪಡಲ್ವಡಿಸಿದಾಗಳ್

(ಗಾಳಿಯಲ್ಲಿ ತೂರಿದ

ಜೋಳದ ಹಾಗೆ ನೆಲಕ್ಕೆ

ಚೆಲ್ಲಾಪಿಲ್ಲಿಯಾಗಿ

ಬೀಳಿಸಿದಾಗ-)-

ವಚನ:ಅರ್ಥ:ವ|| ಹಾಗೆ

ಶತ್ರುಸೈನ್ಯವನ್ನು

ಪ್ರವೇಶಮಾಡಿ ಮಾರಿ

ಹೊಕ್ಕಂತೆ ಹೆಣಮಯವನ್ನಾಗಿ

ಮಾಡಿ ಗಾಳಿಯಲ್ಲಿ ತೂರಿದ

ಜೋಳದ ಹಾಗೆ ನೆಲಕ್ಕೆ
ಚೆಲ್ಲಾಪಿಲ್ಲಿಯಾಗಿ
ಬೀಳಿಸಿದನು. ಆಗ-

ಚಂ|| ಒಣಗಿದುದೊಂದು
ಪೆರ್ಬಿದಿರ ಪೆರ್ವೊದಱಂ
ಮೊರೆದುರ್ವುವಾಶುಶು
ಕ್ಷಣಿಯವೊಲಾಂತ ಖಟ್ಗ
ನಿವಹಕ್ಕೆ ರಥಕ್ಕೆ ದಟಿಕ್ಕೆ
ಮತ್ತವಾ|
ರಣ ನಿವಹಕ್ಕೆ
ತಕ್ಕಿನಭಿಮನ್ಯುವ ಕೂರ್ಗಣೆ

ಪಾಯ್ದು ನುಂಗಲುಂ ಟೊಣೆಯಲುಮುರ್ಚಿ ಮಕ್ಕಲುಮಿದೇಂ ನೆರೆ ಕಲ್ತುವೊ ಯುದ್ಧರಂಗದೊಳ್ ||೯೪ ||

ಪದ್ಯ-೪:ಪದವಿಭಾಗ-ಅರ್ಥ:ಒಣಗಿದುದೊಂದು ಪೆರ್ವಿದಿರ ಪೆರ್ವೊದಱಿಂ (ಒಣಗಿಸಿದ ಒಂದು ಹೆಬ್ಬಿದಿರಿನ ದೊಡ್ಡ ಬಿದಿರುಮೆಳೆಯಿಂದ) ಮೊರೆದು ಉರ್ವುವ

ಅಶುಶುಕ್ಷಣಿಯವೊಲ್
(ಶಬ್ದಮಾಡಿಕೊಂಡು
ಉರಿಯುವ ಅಗ್ನಿಯ ಹಾಗೆ
ಪ್ರತಿಭಟಿಸಿದ ಖಡ್ಗಧಾರಿಗಳ
ಗುಂಪಿಗೆ,) ತ ಖಟ್ಗಿ ನಿವಹಕ್ಕೆ
ರಥಕ್ಕೆ ದಟಿಕ್ಕೆ (ಪ್ರತಿಭಟಿಸಿದ
ಖಡ್ಗಧಾರಿಗಳ ಗುಂಪಿಗೆ,
ರಥಕ್ಕೆ, ಸೈನ್ಯಕ್ಕೆ,) ಮತ್ತವಾರಣ
ನಿವಹಕ್ಕೆ (ಮದ್ದಾನೆಗಳ
ಸಮೂಹಕ್ಕೆ,) ತಕ್ಕಿನ
ಅಭಿಮನ್ಯುವ ಕೂರ್ಗಣೆ

ಪಾಯ್ದು (ಸಮರ್ಥವಾದ
ಅಭಿಮನ್ಯುವಿನ ಹರಿತವಾದ
ಬಾಣಗಳು ಹಾದುಹೊಗಿ)
ನುಂಗಲುಂ ಟೊಣೆಯಲುಂ
ಉರ್ಚೆ ಮಕ್ಕಲುಂ,
(ನುಂಗುವುದಕ್ಕೂ
ಚಪ್ಪರಿಸುವುದಕ್ಕೂ
ಮುಕ್ಕುವುದಕ್ಕೂ) ಇದೇಂ ನೆರೆ
ಕಲ್ತುವೊ ಯುದ್ಧರಂಗದೊಳ್
(ರಣರಂಗದಲ್ಲಿ ಎಷ್ಟು ಚೆನ್ನಾಗಿ
ಕಲಿತುವೋ!)

ಪದ್ಯ-೯೪:ಅರ್ಥ:ಒಣಗಿದ ಒಂದು ಹೆಬ್ಬಿದಿರಿನ ದೊಡ್ಡ ಬಿದಿರುಮೆಳೆಯಿಂದ ಶಬ್ದಮಾಡಿಕೊಂಡು ಉಬ್ಬುವ ಅಗ್ನಿಯ ಹಾಗೆ ಪ್ರತಿಭಟಿಸಿದ ಖಡ್ಗಧಾರಿಗಳ ಗುಂಪಿಗೆ, ರಥಕ್ಕೆ, ಸೈನ್ಯಕ್ಕೆ, ಮದ್ದಾನೆಗಳ ಸಮೂಹಕ್ಕೆ, ಸಮರ್ಥವಾದ ಅಭಿಮನ್ಯುವಿನ ಹರಿತವಾದ ಬಾಣಗಳು ಹಾದುಹೊಗಿ, ನುಂಗುವುದಕ್ಕೂ

ಚಪ್ಪರಿಸುವುದಕ್ಕೂ
ಮುಕ್ಕುವುದಕ್ಕೂ
ರಣರಂಗದಲ್ಲಿ ಎಷ್ಟು ಚೆನ್ನಾಗಿ
ಕಲಿತುವೋ!

ವ|| ಅಂತಿದಿರಾಂತ ಮಾರ್ಪಡೆಯೆಲ್ಲಮಂ ಜವನ ಪಡೆಗೆ ಪಡಿಗಚ್ಚಿಕ್ಕುವಂತಿಕ್ಕಿನಿಂದ ನರನಂದನನಂ ಕಂಡು ವಿಕ್ರಮಕ್ಕಂ ಕ್ರಮಕ್ಕಂ ಪುರುಡಿಸುವ ಸುಯೋಧನನ ಮಕ್ಕಳ್ ಲಕ್ಕಣಾಂ ಮೊದಲಾಗೆ

ನೂರ್ವರುಮೊಂದಾಗೆ ಬಂದು ತಾಗಿದಾಗಳ್-

ವಚನ:ಪದವಿಭಾಗ-ಅರ್ಥ:

ಅಂತು ಇದಿರಾಂತ ಮಾರ್ಪಡೆಯೆಲ್ಲಮಂ ಜವನ ಪಡೆಗೆ ಪಡಿಗಚ್ಚೆ ಇಕ್ಕುವಂತೆ ಇಕ್ಕಿ ('ಹಾಗೆ ಎದುರಿಸಿದ ಸೈನ್ಯವೆಲ್ಲವನ್ನೂ ಯಮನ ಸೈನ್ಯಕ್ಕೆ ನಿಯಮಿತ (ನಿತ್ಯಾಹಾರವನ್ನು ಕೊಡುವ ಹಾಗೆ ಕೊಟ್ಟು) ನಿಂದ

ನರನಂದನನಂ ಕಂಡು
(ಅಭಿಮನ್ಯುವನ್ನು ಕಂಡು)
ವಿಕ್ರಮಕ್ಕಂ ಕ್ರಮಕ್ಕಂ
ಪುರುಡಿಸುವ ಸುಯೋಧನನ
ಮಕ್ಕಳ್ (ಪರಾಕ್ರಮಕ್ಕೂ
ಸಂಪ್ರದಾಯಕ್ಕೂ
ಸ್ಪರ್ಧೆಮಾಡುತ್ತಿದ್ದ
ದುರ್ಯೋಧನನ ಮಕ್ಕಳಾದ)
ಲಕ್ಕಣಂ ಮೊದಲಾಗೆ
ನೂರ್ವರುಂ ಒಂದಾಗೆ ಬಂದು
ತಾಗಿದಾಗಳ್ (ಲಕ್ಷಣನೇ

ಮೊದಲಾದ
ನೂರುಮಂದಿಯೂ ಒಟ್ಟಾಗಿ
ಬಂದು ಎದುರಿಸಿದಾಗ) -
ವಚನ:ಅರ್ಥ:ಹಾಗೆ
ಎದುರಿಸಿದ ಸೈನ್ಯವೆಲ್ಲವನ್ನೂ
ಯಮನ ಸೈನ್ಯಕ್ಕೆ ನಿಯಮಿತ
ನಿತ್ಯಾಹಾರವನ್ನು ಕೊಡುವ
ಹಾಗೆ ಕೊಟ್ಟ, ನಿಂತಿರುವ
ಅಭಿಮನ್ಯುವನ್ನು ಕಂಡು
ಪರಾಕ್ರಮಕ್ಕೂ
ಸಂಪ್ರದಾಯಕ್ಕೂ

ಸ್ಪರ್ಧೆಮಾಡುತ್ತಿದ್ದ ದುರ್ಯೋಧನನ ಮಕ್ಕಳಾದ ಲಕ್ಷಣನೇ ಮೊದಲಾದ ನೂರುಮಂದಿಯೂ ಒಟ್ಟಾಗಿ ಬಂದು ಎದುರಿಸಿದಾಗ-

ಸ್ರ|| ಸೂೞ್ಸೆಚ್ಚೆಚ್ಚು ಬಿಲ್ಲಂ ರಥದ ಕುದುರೆಯಂ ಸೂತನಂ ಖಂಡಿಸುತ್ತಾ ಳೇೞ್ಂಟೊಂಬತ್ತು ಪತ್ತೆಂಬಱಿಕೆಯ

ಸರಲಿಂದೂಱಿಕೊಂಡಾವ

ಮೆಯ್ಯುಂ|

ಪಾಱೆಂಬಂತಾಗೆ

ಪಾರ್ದರ್ದುಱಿದಿಸೆ ಮುಳಿಸಿಂ

ನೂರ್ವರುಂ ಪೊನ್ನ ತಾಟ್ಗಿಳ್

ಸೂಟ್ಯೊಳ್ ಬೀೞ್ವಂತೆ

ಬಿಟ್ದಿರ್

ಮಕುಟಮಣಿಗಣದ್ಯೋತಿಸಾ

ರರ್ ಕುಮಾರರ್|| ೯೫ ||

ಪದ್ಯ-೯೫:ಪದವಿಭಾಗ-

ಅರ್ಥ:ಸೂಟ್ಯೈಸಿ ಎಚ್ಚೆಚ್ಚು

(ಸರದಿಯ ಪ್ರಕಾರ
ಹೊಡೆಹೊಡೆದು) ಬಿಲ್ಲಂ
ರಥದ ಕುದುರೆಯಂ ಸೂತನಂ
(ಸರದಿಯ ಪ್ರಕಾರ ಬಿಲ್ಲನ್ನೂ
ರಥದ ಕುದುರೆಯನ್ನು
ಸಾರಥಿಯನ್ನೂ
ಹೊಡೆಹೊಡೆದು) ಖಂಡಿಸುತ್ತ
ಆಳೇೞ್ ಎಂಟೊಂಬತ್ತು
ಪತ್ತೆಂಬ ಅೞ್ಕೆಯ ಸರಲಿಂದ
(ಕತ್ತರಿಸುತ್ತ ಆರು, ಏಳು,
ಎಂಟು, ಒಂಬತ್ತು, ಹತ್ತು ಎಂಬ

ಸಂಖ್ಯೆಯ ಪ್ರಸಿದ್ಧವಾದ
ಬಾಣಗಳಿಂದ)
ಊಜಿಕೊಂಡು ಆವ
ಮೆಯ್ಯುಂ ಪಾಱಿ
ಎಂಬಂತಾಗೆ (ನಾಟಿಕೊಳ್ಳುವ
ಹಾಗೆ ಮಾಡಿ ಎಲ್ಲ
ಶರೀರಗಳೂ ಹಾಳು
(ಬಾಣವಿಲ್ಲದ್ದು- ಪೊಳ್ಳು)
ಎನ್ನುವಂತಾಗದ ಹಾಗೆ)
ಪಾರ್ದು ಆರ್ದು ಉಱದೆ ಇಸೆ
ಮುಳಿಸಿಂ (ಆರ್ಭಟ ಮಾಡಿ

ಸಿಟ್ಟಿನಿಂದ ಬಿಡದೆ ಹೊಡೆಯಲು) ನೂರ್ವರುಂ ಪೊನ್ನ ತಾಳ್ಗಿಳ್ ಉೞ್ಗೊಳ್ ಬೀೞ್ವಿಂತೆ (ನೂರು ಕುಮಾರರೂ ಹೊಂದಾಳೆಯ ಮರಗಳು ಉರುಳಿ ಬೀಳುವಹಾಗೆ) ಬಿೞ್ದರ್-> ಮಕುಟಮಣಿಗಣದ್ಯೋತಿಸಾರರ್ (ಕಿರೀಟದ ರತ್ನಸಮೂಹದ ಕಾಂತಿಯಿಂದ ಪ್ರಕಾಶರಾದ) ಕುಮಾರರ್

(ನೂರು ಕುಮಾರರೂ) ಬಿಳ್ದರ್
| ಬಿದ್ದರು)
ಪದ್ಯ-೯೫:ಅರ್ಥ: ಸರದಿಯ
ಪ್ರಕಾರ ಬಿಲ್ಲನ್ನೂ ರಥದ
ಕುದುರೆಯನ್ನು
ಸಾರಥಿಯನ್ನೂ
ಹೊಡೆಹೊಡೆದು ಕತ್ತರಿಸುತ್ತ
ಆರು, ಏಳು, ಎಂಟು,
ಒಂಬತ್ತು, ಹತ್ತು ಎಂಬ
ಸಂಖ್ಯೆಯ ಸಿದ್ಧವಾದ
ಬಾಣಗಳಿಂದ ನಾಟಿಕೊಳ್ಳುವ

ಹಾಗೆ ಮಾಡಿ ಎಲ್ಲ
ಶರೀರಗಳೂ ಹಾಳು
(ಬಾಣವಿಲ್ಲದ್ದು- ಪೊಳ್ಳು)
ಎನ್ನುವಂತಾಗದ ಹಾಗೆ)
ಆರ್ಭಟ ಮಾಡಿ ಹೊಡೆಯಲು
ಕಿರೀಟದ ರತ್ನಸಮೂಹದ
ಕಾಂತಿಯಿಂದ ಪ್ರಕಾಶರಾದ
ನೂರ್ವರು ಕುಮಾರರು
ಹೊಂದಾಳೆಯ ಮರಗಳು
ಉರುಳಿ ಬೀಳುವಹಾಗೆ
ಬಿದ್ದರು.

ವ|| ಆಗಳ್ ಸುಯೋಧನನ ಮಕ್ಕಳ ಸಾವಂ ಕಂಡು ತಮ್ಮಣ್ಣನ ಮೊಗಮನಾವ ಮೊಗದೊಳ್ ನೋೞ್ಪೆನೆಂದು ದುಶ್ಶ್ಯಾಸನಂ ಬಂದು ತಾಗಿದಾಗಳ್- ()

ವಚನ:ಪದವಿಭಾಗ-

ಅರ್ಥ:ಆಗಳ್ ಸುಯೋಧನನ ಮಕ್ಕಳ ಸಾವಂ ಕಂಡು ತಮ್ಮಣ್ಣನ ಮೊಗಮನು ಆವ ಮೊಗದೊಳ್ ನೋೞ್ಪೆನೆಂದು

ದುಶ್ಶ್ಯಾಸನಂ ಬಂದು ತಾಗಿದಾಗಳ್ (ನಮ್ಮಣ್ಣನ ಮುಖವನ್ನು ಯಾವ ಮುಖದಲ್ಲಿ ನೋಡಲಿ ಎಂದು ದುಶ್ಶ್ಯಾಸನನು ಬಂದು ಮೇಲೆ ಬಿದ್ದನು)-

ವಚನ:ಅರ್ಥ:ವ|| ಆಗ ದುರ್ಯೋಧನನ ಮಕ್ಕಳ ಸಾವನ್ನು ನೋಡಿ ನಮ್ಮಣ್ಣನ ಮುಖವನ್ನು ಯಾವ ಮುಖದಲ್ಲಿ ನೋಡಲಿ ಎಂದು

ದುಶ್ಯಾಸನನು ಬಂದು ಮೇಲೆ ಬಿದ್ದನು.

ಕಂ|| ಒಂದೆ ಸರಲಿಂದಮವನೆರ್ದೆ
ಯಂ ದೊಕ್ಕನೆ ತಿಣ್ಣಮೆಚ್ಚು ಕೊಲಲೊಲ್ಲನೆ ಸಂ|
ಕ್ರಂದನ ನಂದನ ತನಯಂ
ತಂದೆಯ ಪೂಣ್ಕೆಯನೆ ನೆನೆದು ದುಶ್ಯಾಸನನಂ|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ಒಂದೆ ಸರಲಿಂದಂ

ಅವನ ಎರ್ದೆಯಂ ದೊಕ್ಕನೆ
ತಿಣ್ಣಂ ಎಚ್ಚು (ಒಂದೇ
ಬಾಣದಿಂದ ದುಶ್ಯಾಸನನ
ಎದೆಯನ್ನು ದೊಕ್ಕೆಂದು
ತೀಕ್ಷ್ಣವಾಗಿ ಹೊಡೆದು)
ಕೊಲಲ್ ಒಲ್ಲನೆ (ಕೊಲ್ಲಲು
ಒಪ್ಪೆನು ಎಂದುಕೊಂಡನು),
ಸಂಕ್ರಂದನ ನಂದನ ತನಯಂ
(ಅಭಿಮನ್ಯುವು) ತಂದೆಯ
(ಭೀಮನ) ಪ್ರೊಣ್ಕೆಯನೆ
ನೆನೆದು ದುಶ್ಯಾಸನನಂ

(ತಂದೆಯಾದ ಭೀಮನ ಪ್ರತಿಜ್ಞೆಯನ್ನು ಜ್ಞಾಪಿಸಿಕೊಂಡು - ದುಶ್ಯಾಸನನನ್ನು ಕೊಲ್ಲಲು ಒಪ್ಪೆನು ಎಂದುಕೊಂಡನು)

ಪದ್ಯ-೯೬:ಅರ್ಥ:ಒಂದೇ ಬಾಣದಿಂದ ದುಶ್ಯಾಸನನ ಎದೆಯನ್ನು ದೊಕ್ಕೆಂದು ತೀಕ್ಷ್ಣವಾಗಿ ಹೊಡೆದು ತಂದೆಯಾದ ಭೀಮನ ಪ್ರತಿಜ್ಞೆಯನ್ನು ಜ್ಞಾಪಿಸಿಕೊಂಡು ಅಭಿಮನ್ಯುವು

ದುಶ್ಶ್ಯಾಸನನನ್ನು ಕೊಲ್ಲಲು
ಒಪ್ಪೆನು ಎಂದುಕೊಂಡನು.

ವ|| ಆಗಳ್ ಕಾನೀನಸೂನು ವೃಷಸೇನನೇನುಂ ಮಾಣದೆ ಕಾದುತ್ತಿರ್ದನನ್ನೆಗಮಿತ್ತ ನರನಂದನನ ಬಱಿವಱಿಯಂ ತಗುಳ್ದು ಗಱಿವಱಿಯ ಪಾವಿನಂತೆ ಚಕ್ರವ್ಯೂಹಮಂ ಪುಗಲೆಂದು ಬರ್ಪ ದ್ರುಪದ ವಿರಾಟ ಧೃಷ್ಟದ್ಯುಮ್ನ ಭೀಮಸೇನ ಸಹದೇವ ನಕುಲ

ಯುಧಿಷ್ಠಿರ
ಘಟೋತ್ಕಚಾದಿಗಳೊಡನೆ
ಮಲ್ಲಾಮಲ್ಲಿಯಾಗಿ ಕಾದುವ
ಕುಂಭಸಂಭವನಲ್ಲಿಗೆ
ದುರ್ಯೋಧನಂ ಬಂದು ನಮ್ಮ
ಬಲಮೆಲ್ಲಮಭಿಮನ್ಯುವಿನಂಬಿ
ನ ಮೊನೆಯೊಳ್ ತೂಳ್ದು
ತೆರಳ್ದೋಡಿದಪ್ಪುದು ನಿಮಗಲ್ಲಿ
ಕಾಳೆಗಮತಿಭರಮೇಗೆಯ್ವುಮೆ
ನೆ
ಸಿಂಧುರಾಜನಿಂದಿನನುವರಕೀ

ಯೆಡೆಯೊಳೆ ನಿತಾದೊಡಮೀಶ್ವರ ವರಪ್ರಸಾದದೊಳಾನೆ ಸಾಲ್ವೆನೆಂದಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳ್ ಕಾನೀನ ಸೂನು ವೃಷಸೇನನು ಏನುಂ ಮಾಣದೆ ಕಾದುತ್ತಿರ್ದನು (ಕರ್ಣನ ಮಗನಾದ ವೃಷಸೇನನು ಎನೂ ಬಿಡದೆ ಒಂದೇ ಸಮನಾಗಿ

ಕಾದುತ್ತಿದ್ದನು.) ಅನ್ನೆಗಂ ಇತ್ತ ನರನಂದನನ ಬೞಿವೞಿಯಂ ತಗುಳ್ದು (ಅನುಸರಿಸಿ) ಗೞೆವೞಿಯ ಪಾವಿನಂತೆ (ಅಷ್ಟರಲ್ಲಿ ಈ ಕಡೆ ಅಭಿಮನ್ಯುವು ಬಂದ ದಾರಿಯನ್ನೇ ಹಿಡಿದು ಬಿದುರುಗಣೆಯ ಮೇಲೆ ಬರುವ ಹಾವಿನಂತೆ) ಚಕ್ರವ್ಯೂಹಮಂ ಪುಗಲೆಂದು ಬರ್ಪ (ಚಕ್ರವ್ಯೂಹವನ್ನು

ಪ್ರವೇಶಿಸಬೇಕೆಂದು
ಬರುತ್ತಿರುವ) ದ್ರುಪದ ವಿರಾಟ
ಧೃಷ್ಟದ್ಯುಮ್ನ ಭೀಮಸೇನ
ಸಹದೇವ ನಕುಲ ಯುಧಿಷ್ಠಿರ
ಘಟೋತ್ಕಚಾದಿಗಳೊಡನೆ
ಮಲ್ಲಾಮಲ್ಲಿಯಾಗಿ ಕಾದುವ
ಕುಂಭಸಂಭವನಲ್ಲಿಗೆ
ದುರ್ಯೋಧನಂ ಬಂದು
(ಮೊದಲಾದವರೊಡನೆ
ದ್ವಂದ್ವಯುದ್ಧದಿಂದ
ಯುದ್ಧಮಾಡುತ್ತಿರುವ

ದ್ರೋಣನಲ್ಲಿಗೆ
ದುರ್ಯೋಧನನು ಬಂದು)
ನಮ್ಮ ಬಲಮೆಲ್ಲಂ
ಅಭಿಮನ್ಯುವಿನ ಅಂಬಿನ
ಮೊನೆಯೊಳ್ ತೂಳ್ದು ತೆರಳ್ದು
ಓಡಿದಪ್ಪುದು (ನಮ್ಮ
ಸೈನ್ಯವೆಲ್ಲ ಅಭಿಮನ್ಯುವಿನ
ಬಾಣದ ತುದಿಯಲ್ಲಿ
ನೂಕಲ್ಪಟ್ಟು ಚದುರಿ
ಓಡಿಹೋಗುತ್ತಿದೆ.) ನಿಮಗೆ
ಅಲ್ಲಿ ಕಾಳೆಗಂ ಅತಿಭರಮ್

(ನಿಮಗೆ ಅಲ್ಲಿ ಕಾಳಗವು
ಬಹಳ ತೀವ್ರ ಅಗತ್ಯವಾಗಿದೆ.)
ಏಗೆಯ್ವಂ ಎಮೆನೆ (ಏನು
ಮಾಡೋಣ ಎಂದು ಕೇಳಲು,)
ಸಿಂಧುರಾಜನು ಇಂದಿನ
ಅನುವರಕೆ ಈ ಯೆಡೆಯೊಳೆ
ಎನಿತಾದೊಡಂ ಈಶ್ವರ
ವರಪ್ರಸಾದದೊಳು ಆನೆ
ಸಾಲ್ವೆನೆಂದು ಇಂತು ಎಂದಂ
(ಸೈಂಧವನು ಈ ದಿನ
ಯುದ್ಧಕ್ಕೆ ಹೇಗಾದರೂ

ಈಶ್ವರನ ಪ್ರಸಾದದಿಂದ ಈ ಸಂದರ್ಭದಲ್ಲಿ ನಾನೇ ಸಮರ್ಥನಾಗುತ್ತೇನೆ ಎಂದು ಹೀಗೆ ಹೇಳಿದನು.)-

ವಚನ:ಅರ್ಥ:ವ|| ಆಗ ಕರ್ಣನ ಮಗನಾದ ವೃಷಸೇನನು ಎನೂ ಬಿಡದೆ ಒಂದೇ ಸಮನಾಗಿ ಕಾದುತ್ತಿದ್ದನು. ಅಷ್ಟರಲ್ಲಿ ಈ ಕಡೆ ಅಭಿಮನ್ಯುವು ಬಂದ ದಾರಿಯನ್ನೇ ಹಿಡಿದು

ಬಿದುರುಗಣೆಯ ಮೇಲಿರುವ
ಹಾವಿನಂತೆ ಚಕ್ರವ್ಯೂಹವನ್ನು
ಪ್ರವೇಶಿಸಬೇಕೆಂದು
ಬರುತ್ತಿರುವ ದ್ರುಪದ, ವಿರಾಟ,
ಧೃಷ್ಟದ್ಯುಮ್ನ, ಭೀಮಸೇನ,
ಸಹದೇವ, ನಕುಲ, ಯುಷ್ಠಿರ,
ಘಟೋತ್ಕಚನೇ
ಮೊದಲಾದವರೊಡನೆ
ದ್ವಂದ್ವಯುದ್ಧದಿಂದ
ಯುದ್ಧಮಾಡುತ್ತಿರುವ
ದ್ರೋಣನಲ್ಲಿಗೆ

ದುರ್ಯೋಧನನು ಬಂದು
ನಮ್ಮ ಸೈನ್ಯವೆಲ್ಲ
ಅಭಿಮನ್ಯುವಿನ ಬಾಣದ
ತುದಿಯಲ್ಲಿ ನೂಕಲ್ಪಟ್ಟು
ಚದುರಿ ಓಡಿಹೋಗುತ್ತಿದೆ.
ನಿಮಗೆ ಅಲ್ಲಿ ಕಾಳಗವು ಬಹಳ
ತೀವ್ರ ಅಗತ್ಯವಾಗಿದೆ. ಏನು
ಮಾಡೋಣ ಎಂದು ಕೇಳಲು,
ಸೈಂಧವನು ಈ ದಿನ ಯುದ್ಧಕ್ಕೆ
ಹೇಗಾದರೂ ಈಶ್ವರನ
ಪ್ರಸಾದದಿಂದ ಈ

ಸಂದರ್ಭದಲ್ಲಿ ನಾನೇ ಸಮರ್ಥನಾಗುತ್ತೇನೆ ಎಂದು ಹೀಗೆ ಹೇಳಿದನು.

ಚಂ|| ಉಱದಿದಿರಾಂತು ನಿಂದ ರಿಪುಸೈನ್ಯಮನಾಹವರಂಗದಲ್ಲಿ
ತ
ತ್ತಱದಱದಿಕ್ಕಲಾಂ
ನೆರೆವೆನಿನ್ನಿರವೇಡೊಡಗೊಂ
ಡು ಪೋಗು ನಿ|
ನ್ನಱಿಕೆಯ
ಕುಂಭಸಂಭವನನೆಂದೊಡೆ

**ಪಾಂಡವಸೈನ್ಯಮಂ ಕಱು
ತ್ತಿಱಿವನಿತೊಂದಳುರ್ಕೆ
ನಿನಗೇತರೊಳಾದುದೊ
ಪೇೞ್ ಜಯದ್ರಥಾ|| ೯೭ ||**

ಪದ್ಯ-೯೭:ಪದವಿಭಾಗ-ಅರ್ಥ:ಉಱದೆ ಇದಿರಾಂತು ನಿಂದ (ತೀವ್ರವಾಗಿ ಪ್ರತಿಭಟಿಸಿ ನಿಂತಿರುವ) ರಿಪುಸೈನ್ಯಮನು ಆಹವರಂಗದಲ್ಲಿ ತತ್ತಱದಱಿದು ಇಕ್ಕಲು (ಶತ್ರುಸೈನ್ಯವನ್ನು

ಯುದ್ಧರಂಗದಲ್ಲಿ ಚೂರು
ಚೂರಾಗಿ ಕತ್ತರಿಸಿ
ತರಿದಿಕ್ಕಲೂ) ಆಂ ನೆರೆವೆಂ
(ನಾನು ಸಮರ್ಥನಾಗಿದ್ದೇನೆ.)
ಇನ್ನಿರವೇಡ ಒಡಗೊಂಡು
ಪೋಗು (ಇನ್ನು ನೀನು
ಇಲ್ಲಿರಬೇಕಾಗಿಲ್ಲ. ಪ್ರಸಿದ್ಧನಾದ
ನಿನ್ನ ದ್ರೋಣನನ್ನೂ
ಜೊತೆಯಲ್ಲಿಯೇ
ಕರೆದುಕೊಂಡುಹೋಗು
ಎಂದನು ಜಯದ್ರಥ) ನಿನ್ನ

ಅಱಿಕೆಯ
ಕುಂಭಸಂಭವನನು ಎಂದೊಡೆ
(ನಿನ್ನ ಪ್ರಸಿದ್ಧನಾದ
ದ್ರೋಣನನ್ನೂ
ಜೊತೆಯಲ್ಲಿಯೇ
ಕರೆದುಕೊಂಡುಹೋಗು
ಎಂದಾಗ,)
ಪಾಂಡವಸೈನ್ಯಮಂ ಕಱುತ್ತು
(ಕೆರಳಿ) ಅಱಿವ ಅನಿತೊಂದು
ಅಳುರ್ಕೆ (‘ಎಲ್ಲೈ ಸೈಂಧವನೇ
ಪಾಂಡವ ಸೈನ್ಯವನ್ನು

ಕತ್ತರಿಸುವ ಅಷ್ಟೊಂದು
ಪರಾಕ್ರಮವು)
ನಿನಗೇತರೊಳು ಆದುದೊ
ಪೇಟ್ ಜಯದ್ರಥಾ (‘ಎಲೈ
ಸೈಂಧವನೇ ಪಾಂಡವ
ಸೈನ್ಯವನ್ನು ಕತ್ತರಿಸುವ
ಅಷ್ಟೊಂದು ಪರಾಕ್ರಮವು
ನಿನಗೆ ಹೇಗೆ ಬಂದಿತು’ ಎಂದು
ಕೇಳಿದನು .)
ಪದ್ಯ-೯೭:ಅರ್ಥ: ತೀವ್ರವಾಗಿ
ಪ್ರತಿಭಟಿಸಿ ನಿಂತಿರುವ

ಶತ್ರುಸೈನ್ಯವನ್ನು
ಯುದ್ಧರಂಗದಲ್ಲಿ ಚೂರು
ಚೂರಾಗಿ ಕತ್ತರಿಸಿ ತರಿದಿಕ್ಕಲೂ
ನಾನು ಸಮರ್ಥನಾಗಿದ್ದೇನೆ.
ಇನ್ನು ನೀನು ಇಲ್ಲಿರಬೇಕಾಗಿಲ್ಲ.
ನಿನ್ನ ಪ್ರಸಿದ್ಧನಾದ
ದ್ರೋಣನನ್ನೂ
ಜೊತೆಯಲ್ಲಿಯೇ
ಕರೆದುಕೊಂಡುಹೋಗು
ಎಂದನು ಜಯದ್ರಥ. ಅದಕ್ಕೆ
ದುರ್ಯೋಧನನು 'ಎಲೈ

ಸೈಂಧವನೇ ಪಾಂಡವ ಸೈನ್ಯವನ್ನು ಕತ್ತರಿಸುವ ಅಷ್ಟೊಂದು ಪರಾಕ್ರಮವು ನಿನಗೆ ಹೇಗೆ ಬಂದಿತು’ ಎಂದು ಕೇಳಿದನು.

ವ|| ಎನೆ ಜಯದ್ರಥನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ ಜಯದ್ರಥನು ಇಂತು ಎಂದಂ-

ವಚನ:ಅರ್ಥ:ವ|| ಎನ್ನಲು ಸೈಂಧವನು ಹೀಗೆಂದನು.

ಮ|| ನರನೊಳ್ ಮುನ್ನಗಪಟ್ಟುದೊಂದಟಿಲೊ ಳಾಂ ಕೈಳಾಸ ಶೈಳೇಶನಂ ಪಿರಿದುಂ ಭಕ್ತಿಯೊಳರ್ಚಿಸುತ್ತುಮಿರೆ ತದ್ದೇವಾಧಿಪಂ ಮೆಚ್ಚಿದೆಂ| ನರನೊರ್ವಂ ಪೊರಗಾಗಲೊಂದು ದಿವಸಂ ಕೌಂತೇಯರಂ ಕಾದಿ ಗೆಲ್

ನಿರುತಂ ನೀನೆನೆ ಪೆತ್ತೆನಾಂ ಬರಮನದ್ರೀಂದ್ರಾತ್ಮಜಾಧೀಶ ನೊಳ್|| ೯೮ ||

ಪದ್ಯ-೯೮:ಪದವಿಭಾಗ-ಅರ್ಥ:ನರನೊಳ್ ಮುಂ (ನ?) ಅಗಪಟ್ಟ ಅದೊಂದು ಅಟಿಲೊಳು (ಅರ್ಜುನನಿಂದ ಮೊದಲು ಸೆರೆಸಿಕ್ಕಿದ ಒಂದು ವ್ಯಥೆಯಿಂದ) ಆಂ ಕೈಳಾಸ ಶೈಳೇಶನಂ ಪಿರಿದುಂ ಭಕ್ತಿಯೊಳು ಅರ್ಚಿಸುತ್ತುಂ

ಇರೆ (ನಾನು
ಕೈಲಾಸಾಪತಿಯಾದ
ಈಶ್ವರನನ್ನು ಬಹಳ
ಭಕ್ತಿಯಿಂದ ಪೂಜೆ
ಮಾಡುತ್ತಿರಲು) ತದ್
ದೇವಾಧಿಪಂ ಮೆಚ್ಚಿದೆಂ (ಆ
ದೇವತೆಗಳ ಒಡೆಯನಾದ
ಈಶ್ವರನು ‘ಮೆಚ್ಚಿದ್ದೇನೆ’,)
ನರನೊರ್ವಂ ಪೊರಗಾಗಲ್
(ಅರ್ಜುನನೊಬ್ಬನನ್ನು ಬಿಟ್ಟು
ಉಳಿದ-- ಪಾಂಡವರೊಡನೆ)

ಒಂದು ದಿವಸಂ ಕೌಂತೇಯರಂ
ಕಾದಿ ಗೆಲ್ ನಿರುತಂ ನೀನು
ಎನೆ (ಪಾಂಡವರೊಡನೆ ನೀನು
ಕಾದಿ ಒಂದು ದಿವಸ
ನಿಶ್ಚಯವಾಗಿ ಗೆಲ್ಲು ಎನ್ನಲು)
ಪೆತ್ತೆ ನಾಂ ಬರಮನು
ಅದ್ರೀಂದ್ರ
ಆತ್ಮಜಾಧೀಶನೊಳ್
(ಅದ್ರಿ+ಇಂದ್ರ=ಬೆಟ್ಟದ ಇಂದ್ರ-
ಹಿಮವಂತ -ಆತ್ಮಜಾ
=ಮಗಳು, ಪಾರ್ವತಿಯ,

ಅಧೀಶ ಪತಿ= ಶಿವ; ಆ ವರವನ್ನು ಪಾರ್ವತೀ ಪತಿಯಿಂದ ಪಡೆದೆನು)

ಪದ್ಯ-೯೮:ಅರ್ಥ:

ಅರ್ಜುನನಿಂದ ಮೊದಲು ಸೆರೆಸಿಕ್ಕಿದ ಒಂದು ವ್ಯಥೆಯಿಂದ ನಾನು ಕೈಲಾಸಾಪತಿಯಾದ ಈಶ್ವರನನ್ನು ಬಹಳ ಭಕ್ತಿಯಿಂದ ಪೂಜೆ ಮಾಡುತ್ತಿರಲು ಆ ದೇವತೆಗಳ

ಒಡೆಯನಾದ ಈಶ್ವರನು
'ಮೆಚ್ಚಿದ್ದೇನೆ',
ಅರ್ಜುನನೊಬ್ಬನನ್ನು ಬಿಟ್ಟು
ಉಳಿದ ಪಾಂಡವರೊಡನೆ
ನೀನು ಕಾದಿ ಒಂದು ದಿವಸ
ನಿಶ್ಚಯವಾಗಿ ಗೆಲ್ಲು ಎನ್ನಲು ಆ
ವರವನ್ನು
ಪಾರ್ವತೀಪತಿಯಿಂದ
ಪಡೆದೆನು, ಎಂದನು
ಜಯದ್ರಥ.

- **ಟಿಪ್ಪಣಿ:** ಜಯದ್ರಥನು ದ್ರೌಪದಿಯನ್ನು ಅಪಹರಿಸಿಕೊಂಡು ಹೋದಾಗ ಅರ್ಜುನನು ಅವನನ್ನು ಸರೆ ಹಿಡಿದು, ತಂಗಿ ದುಶ್ಯಳೆಯ ಗಂಡನೆಂದು ಹೀಯಾಳಿಸಿ ಬಿಟ್ಟಿದ್ದನು.

ವ|| ಎಂದ ಸಿಂಧುರಾಜನ ನುಡಿಗೆ ರಾಜಾರಾಜನೆರಡು ಮುಯ್ಯುಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಎಂದ ಸಿಂಧುರಾಜನ ನುಡಿಗೆ ರಾಜಾರಾಜನು ಎರಡು ಮುಯ್ಯುವಮಂ ನೋಡಿ-

ವಚನ:ಅರ್ಥ:ಎಂದು ಹೇಳಿದ ಸೈಂಧವನ ಮಾತಿಗೆ ಚಕ್ರವರ್ತಿಯಾದ ದುರ್ಯೋಧನನು (ತನ್ನ) ಎರಡು ಹೆಗಲುಗಳನ್ನು ನೋಡಿಕೊಂಡು ಸಂತೋಷಪಟ್ಟನು.

ಉ|| ನಿನ್ನನೆ ನಚ್ಚಿ
ಪಾಂಡವರೊಳಾಂತಿಱಿಯಲ್
ತಱಿಸಂದು ಪೂಣ್ದೆನಾಂ
ನಿನ್ನ ಶರಾಳಿಗಳ್ಗಗಿದು
ನಿಂದುವು ಪಾಂಡವ
ಸೈನ್ಯಮೆಂದೊಡಿಂ|
ನಿನ್ನ
ಭುಜಪ್ರತಾಪದಳವಾರ್ಗಮ
ಸಾಧ್ಯಮಾಯ್ತದೇಂ
ನಿನ್ನಳವಿಂದಮಿನ್ನೆನಗೆ
ಸಾರ್ದುದರಾತಿ ಜಯಂ

ಜಯದ್ರಥಾ|| ೯೯ ||

ಪದ್ಯ-೯೯:ಪದವಿಭಾಗ-

ಅರ್ಥ:ನಿನ್ನನೆ ನಚ್ಚಿ ಪಾಂಡವರೊಳು ಆಂತಿಱಿಯಲ್ ತಱಿಸಂದು (ನಿಶ್ಚಯಿಸಿ) ಪೂಣ್ದೆನು ಆ (ನಿನ್ನನ್ನು ನಂಬಿಕೊಂಡೇ ಪಾಂಡವರನ್ನು ಪ್ರತಿಭಟಿಸಿ ಯುದ್ಧಮಾಡಲು ನಿಷ್ಕರ್ಷಿಸಿ ನಾನು ಪ್ರತಿಜ್ಞೆಮಾಡಿದೆನು.) ನಿನ್ನ ಶರಾಳಿಗಳ್ಗೆ ಅಗಿದು

ನಿಂದುವು ಪಾಂಡವ ಸೈನ್ಯಂ
ಎಂದೊಡೆ (ನಿನ್ನ ಬಾಣ
ಸಮೂಹಗಳಿಗೆ ಹೆದರಿ
ಪಾಂಡವಸೈನ್ಯವು ನಿಂತಿತು
ಎಂದಾಗ) ಇಂ ನಿನ್ನ
ಭುಜಪ್ರತಾಪದ ಅಳವು
ಆರ್ಗಂ ಅಸಾಧ್ಯಮಾಯ್ತು
(ನಿನ್ನ ತೋಳಿನ ಬಲದ
ಪ್ರಮಾಣ ಮತ್ತಾರಿಗೂ
ಅಸಾಧ್ಯವಾಯಿತು.) ಅದೇಂ
ನಿನ್ನ ಅಳವಿಂದಂ ಇನ್ನು ಎನಗೆ

ಸಾರ್ದುದು ಅರಾತಿ ಜಯಂ
ಜಯದ್ರಥಾ ()
ಪದ್ಯ-೯೯:ಅರ್ಥ:ದುಯೋ‍ರ್
ಧನ ಹೇಳಿದ, ನಿನ್ನನ್ನು
ನಂಬಿಕೊಂಡೇ ಪಾಂಡವರನ್ನು
ಪ್ರತಿಭಟಿಸಿ ಯುದ್ಧಮಾಡಲು
ನಿಷ್ಕರ್ಷಿಸಿ ನಾಬು
ಪ್ರತಿಜ್ಞೆಮಾಡಿದೆನು. ನಿನ್ನ
ಬಾಣ ಸಮೂಹಗಳಿಗೆ ಹೆದರಿ
ಪಾಂಡವಸೈನ್ಯವು ನಿಂತಿತು
ಎಂದಾಗ ನಿನ್ನ ತೋಳಿನ

ಬಲದ ಪ್ರಮಾಣ ಮತ್ತಾರಿಗೂ ಅಸಾಧ್ಯವಾಯಿತು.
ಸೈಂಧವನೇ ನಿನ್ನ ಪರಾಕ್ರಮದಿಂದ ನನಗೆ ಶತ್ರುಜಯವು ಉಂಟಾಯಿತು

ವ|| ಎಂದು ಪೊಗಳ್ದು ಸಿಂಧುರಾಜನನಿರಲ್ವೇಳ್ದು ಕುಂಭಸಂಭವನುಂ ತಾನುಮಭಿ ಮನ್ಯುವಿನ ಸಂಗ್ರಾಮರಂಗಮನಯ್ದೆ ವಂದು-

ವಚನ:ಪದವಿಭಾಗ-ಅರ್ಥ:ಎಂದು ಪೊಗಟ್ಟು ಸಿಂಧುರಾಜನನು ಇರಲ್ವೇಳ್ದು (ಹೊಗಳಿ ಸೈಂಧವನನ್ನು ಅಲ್ಲಿಯೇ ಇರುವಂತೆ ಹೇಳಿ) ಕುಂಭಸಂಭವನುಂ ತಾನುಂ ಅಭಿಮನ್ಯುವಿನ ಸಂಗ್ರಾಮರಂಗಮನು ಅಯ್ದೆ ವಂದು (ದ್ರೋಣನೂ ತಾನೂ ಅಭಿಮನ್ಯುವಿನ ಯುದ್ಧರಂಗವನ್ನು ಸೇರಿ)-

ವಚನ:ಅರ್ಥ: ಎಂದು ಹೀಗೆ ಹೊಗಳಿ ಸೈಂಧವನನ್ನು ಅಲ್ಲಿಯೇ ಇರುವಂತೆ ಹೇಳಿ ದ್ರೋಣನೂ ತಾನೂ ಅಭಿಮನ್ಯುವಿನ ಯುದ್ಧರಂಗವನ್ನು ಸೇರಿದರು.

ಚಂ|| ಉಡಿದ ರಥಂಗಳಿಟ್ಟೆಡೆಗಳೊಳ್ ಮಕುಟಂಗಳ ರತ್ನದೀಪ್ತಿಗಳ್ ಪೊಡರ್ವಿನಮಟ್ಟಿ ತಟ್ಟಿದ ನಿಜಾತ್ಮಜರಂ ನಡೆ ನೋಡಿ

ಕಣ್ಣ ನೀ|
ರೊಡನೊಡನುರ್ಚಿ ಪಾಯೆ
ಮುಳಿಸಿಂದದನೊಯ್ಯನೆ ತಾಳ್ದಿ
ಕಾಯ್ಪಿನೊಳ್
ಕಡಗಿ ಜಗಂಗಳಂ ನೊಣೆದು
ನುಂಗುಲುಮಾಟಿಸಿದಂ
ಸುಯೋಧನಂ|| ೧೦೦ ||

ಪದ್ಯ-೧೦೧:ಪದವಿಭಾಗ-
ಅರ್ಥ:ಉಡಿದ ರಥಂಗಳ ಇಟ್ಟೆಡೆಗಳೊಳ್ (ಮುರಿದ ರಥಗಳ ಸಂದಿಗಳಲ್ಲಿ)

ಮಕುಟಂಗಳ ರತ್ನದೀಪ್ತಿಗಳ್
ಪೊಡರ್ವಿನಂ (ಕಿರೀಟಗಳ
ರತ್ನಕಾಂತಿಗಳು
ಹೊಳೆಯುತ್ತಿರಲು) ಅೞ್ಗಿ
ತೞ್ಗಿದ ನಿಜಾತ್ಮಜರಂ ನಡೆ
ನೋಡಿ (ನಾಶವಾಗಿ
ಸತ್ತುಬಿದ್ದಿರುವ ತನ್ನ
ಮಕ್ಕಳುಗಳನ್ನು
ದುರ್ಯೋಧನನು ನಿಟ್ಟಿಸಿ
ನೋಡಿದಾಗ) ಕಣ್ಣ
ನೀರೊಡನೊಡನೆ ಉರ್ಚೆ

ಪಾಯೆ (ಕಣ್ಣೀರು ಒಡನೆಯೇ
ಚಿಮ್ಮಿ ಹರಿಯಲು,)
ಮುಳಿಸಿಂದ ಅದನು ಒಯ್ಯನೆ
ತಾಳ್ದಿ (ಅದನ್ನು ನಿಧಾನವಾಗಿ
ಸಹಿಸಿಕೊಂಡು ಕೋಪದಿಂದ)
ಕಾಯ್ಪಿನೊಳ್ ಕಡಗಿ
(ಕೋಪದಿಂದ ರೇಗಿ)
ಜಗಂಗಳಂ ನೊಣೆದು
ನುಂಗುಲುಂ ಆಟಿಸಿದಂ
ಸುಯೋಧನಂ
(ಸುಯೋಧನನು

ಲೋಕವನ್ನೆಲ್ಲ ಚಪ್ಪರಿಸಿ ನುಂಗಲು ಆಶಿಸಿದನು)

ಪದ್ಯ-೧೦೧:ಅರ್ಥ: ಮುರಿದ ರಥಗಳ ಸಂದಿಗಳಲ್ಲಿ ಕಿರೀಟಗಳ ರತ್ನಕಾಂತಿಗಳು ಹೊಳೆಯುತ್ತಿರಲು ನಾಶವಾಗಿ ಸತ್ತುಬಿದ್ದಿರುವ ತನ್ನ ಮಕ್ಕಳುಗಳನ್ನು ದುರ್ಯೋಧನನು ನಿಟ್ಟಿಸಿ ನೋಡಿದಾಗ ಕಣ್ಣಿರು ಒಡನೆಯೇ ಚಿಮ್ಮಿ ಹರಿಯಲು,

ಅದನ್ನು ನಿಧಾನವಾಗಿ
ಸಹಿಸಿಕೊಂಡು ಕೋಪದಿಂದ
ರೇಗಿ ಸುಯೋಧನನು
ಲೋಕವನ್ನೆಲ್ಲ ಚಪ್ಪರಿಸಿ
ನುಂಗಲು ಆಶಿಸಿದನು.

**ವ|| ಆಗಳ್ ದ್ರೋಣ
ದ್ರೋಣಪುತ ಕೃಪ ಕೃತವರ್ಮ
ಕರ್ಣ ಶಲ್ಯ ಶಕುನಿ ದುಶ್ಶಾಸನ
ವೃಷಸೇನಾದಿಗಳಾಳ್ದನ
ಮುಳಿದ ಮೊಗಮನಱಿದು
ಧರ್ಮಯುದ್ಧಮಂ ಬಿಸುಟು**

ನರನಂದನನ ರಥಮಂ ಸುತ್ತಿ ಮುತ್ತಿಕೊಂಡು-

ವಚನ:ಪದವಿಭಾಗ-

ಅರ್ಥ:ಆಗಳ್ ದ್ರೋಣ ದ್ರೋಣಪುತ ಕೃಪ ಕೃತವರ್ಮ ಕರ್ಣ ಶಲ್ಯ ಶಕುನಿ ದುಶ್ಶ್ಯಾಸನ ವೃಷಸೇನಾದಿಗಳಾಳ್ದನ ಮುಳಿದ ಮೊಗಮನು ಅಱಿದು ಧರ್ಮಯುದ್ಧಮಂ ಬಿಸುಟು ನರನಂದನನ ರಥಮಂ ಸುತ್ತಿ ಮುತ್ತಿಕೊಂಡು

(ದುರ್ಯೋಧನನ ಕೋಪದಿಂದ ಕೂಡಿದ ಮುಖವನ್ನು ನೋಡಿ ತಿಳಿದು ಧರ್ಮಯುದ್ಧವನ್ನು ಕೈಬಿಟ್ಟು ಅಭಿಮನ್ಯುವಿನ ರಥವನ್ನು ಸುತ್ತಿ ಮುತ್ತಿಕೊಂಡು-)

ವಚನ:ಅರ್ಥ:ವ|| ಆಗ ದ್ರೋಣ, ಅಶ್ವತ್ಥಾಮ, ಕೃಪ, ಕೃತವರ್ಮ, ಕರ್ಣ, ಶಲ್ಯ, ಶಕುನಿ, ದುಶ್ಶ್ಯಾಸನ, ವೃಷಸೇನನೇ

ಮೊದಲಾದವರು
ಒಡೆಯನಾದ
ದುರ್ಯೋಧನನ ಕೋಪದಿಂದ
ಕೂಡಿದ ಮುಖವನ್ನು ನೋಡಿ
ತಿಳಿದು ಧರ್ಮಯುದ್ಧವನ್ನು
ಕೈಬಿಟ್ಟು ಅಭಿಮನ್ಯುವಿನ
ರಥವನ್ನು ಸುತ್ತಿ
ಮುತ್ತಿಕೊಂಡರು.

ಕಂ|| ತೇರಂ
ಕುದುರೆಯನೆಸಗುವ

ಸಾರಥಿಯಂ ಬಿಲ್ಲನದಟ
ಗೊಣೆಯುಮನುಱಿದಾ|
ದೋರ್ವೀರ್ಯರೊರ್ವರೊಂದನೆಚ್ಚೊ
ಡೆ
ಬೀರಂ ಗದೆಗೊಂಡು ಬೀರರಂ
ಬೆಂಕೊಂಡಂ|| ೧೦೧ ||

ಪದ್ಯ-೧೦೧:ಪದವಿಭಾಗ-ಅರ್ಥ:ತೇರಂ ಕುದುರೆಯಂ ಎಸಗುವ ಸಾರಥಿಯಂ ಬಿಲ್ಲನು ಅದಟ ಗೊಣೆಯುಮನು (ರಥವನ್ನೂ

ಕುದುರೆಯನ್ನೂ ಅದನ್ನು
ನಡೆಸುವ ಸಾರಥಿಯನ್ನೂ
ಬಿಲ್ಲನ್ನೂ ಆದರ ಹೆದೆಯನ್ನೂ)
ಉಱದೆ ಆರ್ದು ಒರೊರ್ವರ್
ಒಂದನು ಎಚ್ಚೊಡೆ (
ಸಾವಕಾಶ ಮಾಡದೆ
ಒಬ್ಬೊಬ್ಬರೊಂದನ್ನು
ಹೊಡೆಯಲು) ಬೀರಂ
ಗದೆಗೊಂಡು ಬೀರರಂ
ಬೆಂಕೊಂಡಂ (ಅಭಿಮನ್ಯುವು

ಗದೆಯನ್ನು ತೆಗೆದುಕೊಂಡು ವೀರರನ್ನು ಬೆನ್ನಟ್ಟಿದನು)

ಪದ್ಯ-೧೦೧:ಅರ್ಥ:ರಥವನ್ನೂ ಕುದುರೆಯನ್ನೂ ಅದನ್ನು ನಡೆಸುವ ಸಾರಥಿಯನ್ನೂ ಬಿಲ್ಲನ್ನೂ ಆದರ ಹೆದೆಯನ್ನೂ ಸಾವಕಾಶ ಮಾಡದೆ ಒಬ್ಬೊಬ್ಬರೊಂದನ್ನು ಹೊಡೆಯಲು ವೀರನಾದ ಅಭಿಮನ್ಯುವು ಗದೆಯನ್ನು

ತೆಗೆದುಕೊಂಡು ವೀರರನ್ನು ಬೆನ್ನಟ್ಟಿದನು.

ಬೆಂಕೊಳೆ ಕಳಿಂಗ ರಾಜನ ನೂಂಕಿದ ಕರಿಘಟೆಯನುಡಿಯೆ ಬಡಿ ಬಡಿದೆತ್ತಂ|

ಕಿಂಕೊಟಿಮಾೞ್ದುದುಮುೞಿದೆ ಚ್ಚಂ ಕರ್ಣಂ ನಿಶಿತ ಶರದಿನೆರಡುಂ ಕರಮಂ|| ೧೦೨ ||

ಪದ್ಯ-೧೦೨:ಪದವಿಭಾಗ-ಅರ್ಥ:ಬೆಂಕೊಳೆ (ಬೆನ್ನಟ್ಟಲು) ಕಳಿಂಗ ರಾಜನ ನೂಂಕಿದ ಕರಿಘಟೆಯನು ಉಡಿಯೆ (ಕಳಿಂಗ ರಾಜನು ಮುಂದಕ್ಕೆ ತಳ್ಳಿದ ಆನೆಯ ಸಮೂಹವನ್ನು ಒಡೆಯುವ ಹಾಗೆ) ಬಡಿ ಬಡಿದು ಎತ್ತಂ ಕಿಂಕೋಟಿ ಮಾಳ್ಪುದುಂ (ಬಡಿಬಡಿದು ಎಲ್ಲೆಲ್ಲಿಯೂ ಸಂಕಟಪಡಿಸಲು) ಉಱದೆ

ಎಚ್ಚಂ ಕರ್ಣಂ ನಿಶಿತ ಶರದಿಂ ಎರಡುಂ ಕರಮುಂ (ಕರ್ಣನು ವೇಗವಾಗಿ ಬಂದು ಹರಿತವಾದ ಬಾಣದಿಂದ ಅಭಿಮನ್ಯುವಿನ ಎರಡುಕ್ಕೈಗಳನ್ನು ಹೊಡೆದನು-ಕತ್ತರಿಸಿದನು)

ಪದ್ಯ-೧೦೨:ಅರ್ಥ: ಕಳಿಂಗ ರಾಜನು ಮುಂದಕ್ಕೆ ತಳ್ಳಿದ ಆನೆಯ ಸಮೂಹವನ್ನು ಒಡೆಯುವ ಹಾಗೆ ಬಡಿಬಡಿದು ಎಲ್ಲೆಲ್ಲಿಯೂ ಸಂಕಟಪಡಿಸಲು

ಕರ್ಣನು ವೇಗವಾಗಿ ಬಂದು ಹರಿತವಾದ ಬಾಣದಿಂದ ಅಭಿಮನ್ಯುವಿನ ಎರಡುಕೈಗಳನ್ನು ಹೊಡೆದನು (ಕತ್ತರಿಸಿದನು).

ಕರಮೆರಡುಂ ಪಱಿವುದುಮಾ
ಕರದಿಂದಂ ತನ್ನ ಕುನ್ನಗೆಯ್ಯೊಳೆ ಕೊಂಡು
ದ್ಧರ ರಥಚಕ್ರದಿನಿಟ್ಟಂ
ತಿರಿಪಿ ನರಪ್ರಿಯ ತನೂಜನಕ್ಷೋಹಿಣಿಯಂ||

೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ಕರಮೆರಡುಂ ಪಱಿವುದುಂ ಆ ಕರದಿಂದಂ (ಕೈಗಳೆರಡೂ ಕತ್ತರಿಸಿಹೋಗಲು ಅಭಿಮನ್ಯುವು ಆ ತನ್ನ ಮೋಟುಗೈಗಳಿಂದಲೇ)ತನ್ನ ಕುನ್ನಗೆಯ್ಯ್ಯಳೆ ಕೊಂಡು (ತನ್ನ ಮೋಟುಗೈಗಳಿಂದಲೇ ಕಳಚಿ ಬಿದ್ದಿದ್ದ ಗಾಲಿಯೊಂದನ್ನು

ತೆಗೆದುಕೊಂಡು) ಉದ್ಧರ
(ಕಳಚಿ ಬಿದ್ದ) ರಥಚಕ್ರದಿಂ
(ಕಳಚಿ ಬಿದ್ದಿದ್ದ
ಗಾಲಿಯೊಂದನ್ನು
ತೆಗೆದುಕೊಂಡು) ಇಟ್ಟಂ ತಿರಿಪಿ
ನರಪ್ರಿಯ ತನೂಜನು
ಅಕ್ಷೋಹಿಣಿಯಂ (ಸುತ್ತಿ
ತಿರುಗಿ ಪ್ರಯೋಗಮಾಡಿ
ಒಂದಕ್ಷೋಹಿಣೀ ಸೈನ್ಯವನ್ನು
ಹೊಡೆದು ಹಾಕಿದನು.)

ಪದ್ಯ-೧೦೩:ಅರ್ಥ:

ಕೈಗಳೆರಡೂ ಕತ್ತರಿಸಿಹೋಗಲು ಅಭಿಮನ್ಯುವು ಆ ತನ್ನ ಮೋಟುಗೈಗಳಿಂದಲೇ ಕಳಚಿ ಬಿದ್ದಿದ್ದ ಗಾಲಿಯೊಂದನ್ನು ತೆಗೆದುಕೊಂಡು ಸುತ್ತಿ ತಿರುಗಿ ಪ್ರಯೋಗಮಾಡಿ ಒಂದಕ್ಷೋಹಿಣೀ ಸೈನ್ಯವನ್ನು ಹೊಡೆದು ಹಾಕಿದನು.

ವ|| ಆಗಳ್ ದುಶ್ಶ್ಯಾಸನನ ಮಗಂ ಗದಾಯುಧನಟ್ಟಿಯೆ

ನೊಂದ ಸಿಂಗದ ಮೇಲೆ ಬೆರಗಱಿಯದ ಬೆಳ್ಳಾಳ್ ಪಾಯ್ವಂತೆ ಕಿಚ್ಚಿ ಬಾಳ್ವೆರಸು ಪಾಯ್ದುದುಂ-

ವಚನ:ಪದವಿಭಾಗ-

ಅರ್ಥ:ಆಗಳ್ ದುಶ್ಶ್ಯಾಸನನ ಮಗಂ ಗದಾಯುಧನು ಅಱಿಯೆ ನೊಂದ (ದುಶ್ಶ್ಯಾಸನನ ಮಗನಾದ ಗದಾಯುಧನು ಸಾಯುವಷ್ಟು ಯಾತನೆಪಡುತ್ತಿರುವ) ಸಿಂಗದ

ಮೇಲೆ ಬೆರಗಱಿಯದ
ಬೆಳ್ಳಾಳ್ ಪಾಯ್ವಂತೆ (ಸಿಂಹದ
ಮೇಲೆ ಅವಿವೇಕಿಯಾದ
ದಡ್ಡನು ಹಾಯುವ ಹಾಗೆ)
ಕಿಟ್ಟಿ ಬಾಳ್ವೆರಸು ಪಾಯ್ವುದುಂ
(ರಿದ ಕತ್ತಿಯಯೊಡನೆ
ಅಭಿಮನ್ಯುವಿನ ಮೇಲೆ
ಧಾಳಿಮಾಡಿದನು.)-
ವಚನ:ಅರ್ಥ:ಆಗ
ದುಶ್ಯಾಸನನ ಮಗನಾದ
ಗದಾಯುಧನು ಸಾಯುವಷ್ಟು

ಯಾತನೆಪಡುತ್ತಿರುವ ಸಿಂಹದ ಮೇಲೆ ಅವಿವೇಕಿಯಾದ ದಡ್ಡನು ಹಾಯುವ ಹಾಗೆ, ಹಿರಿದ ಕತ್ತಿಯಯೊಡನೆ ಅಭಿಮನ್ಯುವಿನ ಮೇಲೆ ಧಾಳಿಮಾಡಿದನು.

ಚಂ|| ಸ್ಫುರಿತ ಕೃಪಾಣಪಾಣಿಗಿದಿರಂ ನಡೆದಳ್ಕುರಿ ತೊಟ್ಟು ವಾಯ್ದು ಡೊ

ಕ್ಕರದೊಳೆ ಮಿಕ್ಕ ದಿಕ್ಕರಿಯನು
ಇಕ್ಕುವವ್ರೋಲ್ ನೆಲಕಿಕ್ಕಿ ಪತ್ತಿ
ಕ|
ತ್ತರಿಗೊಳೆ ಕಾಯ್ದು
ಕಣ್ಣುಮುಳ್ದುಸಿರ್
ಕುಸಿದಂತಕನಂತಮೆಯ್ದಿ
ಮೆಯ್
ಪರವಶವಾಗೆ
ಜೋಲ್ದನಭಿಮನ್ಯು ಭಯಂಕರ
ರಂಗಭೂಮಿಯೊಳ್|| ೧೦೪

ಪದ್ಯ-೧೦೪:ಪದವಿಭಾಗ-ಅರ್ಥ:ಸ್ಫುರಿತ ಕೃಪಾಣಪಾಣಿಗೆ ಇದಿರಂ ನಡೆದು (ಹೊಳೆಯುವ ಕತ್ತಿಯನ್ನು ಹಿಡಿದಿರುವ ಗದಾಯುಧನಿಗೆ ಅಭಿಮನ್ಯುವು ಇದಿರಾಗಿ ನಡೆದು) ಉಳ್ಕುರಿತೊಟ್ಟು ವಾಯ್ದು (ಭಯಂಕರವಾದ ರೀತಿಯಲ್ಲಿ ಥಟ್ಟನೆ ಮೇಲೆ ಬಿದ್ದು) ಡೊಕ್ಕರದೊಳೆ ಮಿಕ್ಕ

ದಿಕ್ಕರಿಯನು ಇಕ್ಕುವವ್ರೋಲ್
(ಡೊಕ್ಕರವೆಂಬ ಪಟ್ಟಿನಿಂದ
ದಿಗ್ಗಜವನ್ನು
ಹೊಡೆಯುವಂತೆ,) ನೆಲಕಿಕ್ಕಿ
ಪತ್ತಿ ಕತ್ತರಿಗೊಳೆ ಕಾಯ್ದು
(ಅವನನ್ನು ನೆಲಕ್ಕೆ ಅಪ್ಪಳಿಸಿ,
ಅವನ ಮೇಲೆ ಹತ್ತಿ
ಕತ್ತರಿಯಂತೆ ಕಾಯ್ದು-
ಕೋಪದಿಂದ ಹಿಡಿಯಲು),
ಕಣ್ಣುಮ್ ಉಳ್ದು ಉಸಿರ್
ಕುಸಿದು ಅಂತಕಂ(ಸಾಯುವ

ಆ ಗದಾಯಧನ) ಅಂತಮ್
ಎಯ್ದೆ (ಸಾಯುವ ಆ
ಗದಾಯಧನ ಕಣ್ಣಿನ ಗುಳ್ಳೆ
ಹೊರಕ್ಕೆ ಬಂದು ಉಸಿರು ಕುಗ್ಗಿ
ಸಾಯಲು,) ಮೆಯ್
ಪರವಶವಾಗೆ ಜೋಲ್ದನು
ಅಭಿಮನ್ಯು ಭಯಂಕರ
ರಂಗಭೂಮಿಯೊಳ್
(ಅಭಿಮನ್ಯುವು
ಭಯಂಕರವಾದ
ಯುದ್ಧಭೂಮಿಯಲ್ಲಿ

ಮೂರ್ಛೆಹೋಗಿ
ಜೋತುಬಿದ್ದನು.)

ಪದ್ಯ-೧೦೪:ಅರ್ಥ:

ಹೊಳೆಯುವ ಕತ್ತಿಯನ್ನು ಹಿಡಿದಿರುವ ಗದಾಯುಧನಿಗೆ ಅಭಿಮನ್ಯುವು ಇದಿರಾಗಿ ನಡೆದು ಭಯಂಕರವಾದ ರೀತಿಯಲ್ಲಿ ಥಟ್ಟನೆ ಮೇಲೆ ಬಿದ್ದು, ಡೊಕ್ಕರವೆಂಬ ಪಟ್ಟಿನಿಂದ ದಿಗ್ಗಜವನ್ನು ಹೊಡೆಯುವಂತೆ, ಅವನನ್ನು

ನೆಲಕ್ಕೆ ಅಪ್ಪಳಿಸಿ, ಅವನ
ಮೇಲೆ ಹತ್ತಿ ಕತ್ತರಿಯಂತೆ
ಕೋಪದಿಂದ ಹಿಡಿಯಲು,
ಸಾಯುವ ಆ ಗದಾಯಧನ
ಕಣ್ಣಿನ ಗುಳ್ಳೆ ಹೊರಕ್ಕೆ ಬಂದು
ಉಸಿರು ಕುಗ್ಗಿ ಸಾಯಲು,
ಅಭಿಮನ್ಯುವು
ಭಯಂಕರವಾದ
ಯುದ್ಧಭೂಮಿಯಲ್ಲಿ
ಮೂರ್ಛೆಹೋಗಿ
ಜೋತುಬಿದ್ದನು.

ಕಂ|| ಅನಿತಣ್ಮೆ ಸತ್ತ ನರನಂ

ದನಂಗೆ ಕಣ್ ಸೋಲ್ತು

ಬಗೆಯದಮರೇಂದ್ರನನಿ|

ನ್ನೆನಗೆ ತನಗೆಂಬ ದೇವಾಂ

ಗನೆಯರ ಕಳಕಳಮೆ

ಪಿರಿದುಮಾಯ್ತಂಬರದೊಳ್||

೧೦೫ ||

ಪದ್ಯ-೧೦೫:ಪದವಿಭಾಗ-ಅರ್ಥ:ಅನಿತು ಅಣ್ಮೆ ಸತ್ತ ನರನಂದನಂಗೆ (ಅಷ್ಟೊಂದು ಪರಾಕ್ರಮವನ್ನು ಪ್ರದರ್ಶಿಸಿ

ಸತ್ತ ಅಭಿಮನ್ಯುವಿಗೆ) ಕಣ್
ಸೋಲ್ತು ಬಗೆಯದೆ (ಅಲಕ್ಷಿಸಿ)
ಅಮರೇಂದ್ರನನು,
(ಮೋಹಗೊಂಡು
ದೇವೇಂದ್ರನನ್ನೂ ಅಲಕ್ಷಿಸಿ,)
ಇನ್ನು ಎನಗೆ ತನಗೆಂಬ
ದೇವಾಂಗನೆಯರ ಕಳಕಳಮೆ
ಪಿರಿದುಮಾಯ್ತು
ಅಂಬರದೊಳ್(ಅಭಿಮನ್ಯು
ವು ನನಗೆ ಬೇಕು ತನಗೆ ಬೇಕು
ಎನ್ನುವ ಅಪ್ಸರಸ್ತ್ರೀಯರ

ಕಳಕಳ ಶಬ್ದವೇ
ಆಕಾಶಪ್ರದೇಶದಲ್ಲಿ
ವಿಶೇಷವಾಯಿತು.)

ಪದ್ಯ-೧೦೫:ಅರ್ಥ:
ಅಷ್ಟೊಂದು ಪರಾಕ್ರಮವನ್ನು
ಪ್ರದರ್ಶಿಸಿ ಸತ್ತ
ಅಭಿಮನ್ಯುವಿಗೆ
ಮೋಹಗೊಂಡು
ದೇವೇಂದ್ರನನ್ನೂ ಅಲಕ್ಷಿಸಿ,
ಅಭಿಮನ್ಯುವು ನನಗೆ ಬೇಕು
ತನಗೆ ಬೇಕು ಎನ್ನುವ

ಅಪ್ಸರಸ್ತ್ರೀಯರ ಕಳಕಳ
ಶಬ್ದವೇ ಆಕಾಶಪ್ರದೇಶದಲ್ಲಿ
ವಿಶೇಷವಾಯಿತು.

ಅಭಿಮನ್ಯು ಮರಣ ವಾರ್ತಾ
ಪ್ರಭೂತ ಶೋಕಾಗ್ನಿ
ಧರ್ಮತನಯನನಿರದಂ|
ದಭಿಭವಿಸಿ ತನ್ನನಳುರ್ದಂ
ತೆ ಭಾಸ್ಕರಂ
ಕೆಂಕಮಾದನಸ್ತಾಚಲದೊಳ್||
೧೦೬

ಪದ್ಯ-೧೦೬:ಪದವಿಭಾಗ-ಅರ್ಥ:ಅಭಿಮನ್ಯು ಮರಣ ವಾರ್ತಾ ಪ್ರಭೂತ ಶೋಕಾಗ್ನಿ (ಅಭಿಮನ್ಯುವಿನ ಮರಣವಾರ್ತೆಯಿಂದ ಉಂಟಾದ ಶೋಕಾಗ್ನಿಯು) ಧರ್ಮತನಯನಂ ಇರದೆ ಅಂದು ಅಭಿಭವಿಸಿ (ಧರ್ಮರಾಜನನ್ನು ಅಂದು ಬಿಡದೆ ಆಕ್ರಮಿಸಿ) ತನ್ನನು ಅಳುರ್ದಂತೆ(ತನ್ನನ್ನೂ

ವ್ಯಾಪಿಸಿದಂತೆ) ಭಾಸ್ಕರಂ ಕೆಂಕಮಾದನು ಅಸ್ತಾಚಲದೊಳ್ (ಅಸ್ತಪರ್ವತದಲ್ಲಿ ಸೂರ್ಯನು ಕೆಂಪಗಾದನು.)

ಪದ್ಯ-೧೦೬:ಅರ್ಥ: ಅಭಿಮನ್ಯುವಿನ ಮರಣವಾರ್ತೆಯಿಂದ ಉಂಟಾದ ಶೋಕಾಗ್ನಿಯು ಧರ್ಮರಾಜನನ್ನು ಅಂದು ಬಿಡದೆ ಆಕ್ರಮಿಸಿ ತನ್ನನ್ನೂ

ವ್ಯಾಪಿಸಿದಂತೆ
ಅಸ್ತಪರ್ವತದಲ್ಲಿ ಸೂರ್ಯನು
ಕೆಂಪಗಾದನು.

ವ|| ಅಂತು ನಿಜತನೂಜನ ಮರಣ ಶ್ರವಣಾಶನಿಘಾತದಿಂ ಕುಳಶೈಲಂ ಕೆಡೆವಂತೆ ಕೆಡೆದು ಮೂರ್ಛಾಗತನಾದ ಧರ್ಮಪುತ್ರನಂ ಭೀಮಸೇನ ನಕುಳ ಸಹದೇವ ಸಾತ್ಯಕಿ ದ್ರುಪದ ವಿರಾಟಾದಿಗಳಪಹತ ಕದನರ್

ಮುಂದಿಟ್ಟೊಡಗೊಂಡು ಬೀಡಿಂಗೆ ಪೋದರಾಗಳ್ ಧರ್ಮಪುತ್ರನ ಶೋಕಮನಾಱಿಸಲೆಂದು ಕೃಷ್ಣದ್ವೈಪಾಯನಂ ಬಂದು ಸಂಸಾರಸ್ಥಿತಿಯನಱಿಯದವರಂತೆ ನೀನಿಂತು ಶೋಕಾಕ್ರಾಂತನಾದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ನಿಜತನೂಜನ ಮರಣ ಶ್ರವಣ

ಅಶನಿಘಾತದಿಂ (ತನ್ನ ಮಗನು
ಮರಣದ ಸುದ್ದಿಯನ್ನು
ಕೇಳುವಿಕೆಯೆಂಬ
ವಜ್ರಾಯುಧದ ಪೆಟ್ಟಿನಿಂದ)
ಕುಳಶೈಲಂ ಕೆಡೆವಂತೆ ಕೆಡೆದು
ಮೂರ್ಛಾಗತನಾದ
ಧರ್ಮಪುತ್ರನಂ
(ಕುಲಪರ್ವತಗಳು
ಉರುಳುವಂತೆ ಉರುಳಿ
ಮೂರ್ಛೆ ಹೋದ
ಧರ್ಮಜನನ್ನು) ಭೀಮಸೇನ,

ನಕುಳ, ಸಹದೇವ, ಸಾತ್ಯಕಿ,
ದ್ರುಪದ ವಿರಾಟಾದಿಗಳಯ
ಅಪಹತ ಕದನರ್
(ಯುದ್ಧದಿಂದ
ಹಿಂತಿರುಗಿದವರಾಗಿ)ಮೂರ್
ಛಾಗತನಾದ ಧರ್ಮಪುತ್ರನಂ
ಮುಂದಿಟ್ಟೊಡಗೊಂಡು
ಬೀಡಿಂಗೆ ಪೋದರಾಗಳ್
(ಮೊದಲಾದವರು
ಯುದ್ಧದಿಂದ
ಹಿಂತಿರುಗಿದವರಾಗಿ

ಯುದ್ಧವನ್ನು ನಿಲ್ಲಿಸಿ
ಧರ್ಮಜನನ್ನು
ಮುಂದಿಟ್ಟೊಡಗೊಂಡು ತಮ್ಮ
ಬೀಡಿಗೆ ಹೋದಾಗ)
ಧರ್ಮಪುತ್ರನ ಶೋಕಮನು
ಆಱಿಸಲೆಂದು
ಕೃಷ್ಣದ್ವೈಪಾಯನಂ ಬಂದು
(ಧರ್ಮರಾಜನ ದುಖವನ್ನು
ಶಮನಮಾಡಬೇಕೆಂದು
ವೇದವ್ಯಾಸರೇ ಬಂದು)
ಸಂಸಾರಸ್ಥಿತಿಯನು

ಅಱಿಯದವರಂತೆ ನೀನಿಂತು ಶೋಕಾಕ್ರಾಂತನಾದೊಡೆ ((ಧರ್ಮರಾಜನನ್ನು ಕುರಿತು) ‘ಮಹಾರಾಜ, ಸಂಸಾರಸ್ಥಿತಿಯನ್ನು ತಿಳಿಯದವರಂತೆ ನೀನು ಹೀಗೆ ದುಖಿಸಿದರೆ.)-

ವಚನ:ಅರ್ಥ:ಹಾಗೆ ತನ್ನ ಮಗನು ಮರಣದ ಸುದ್ದಿಯನ್ನು ಕೇಳುವಿಕೆಯೆಂಬ ವಜ್ರಾಯುಧದ ಪೆಟ್ಟಿನಿಂದ

ಕುಲಪರ್ವತಗಳು
ಉರುಳುವಂತೆ ಉರುಳಿ
ಮೂರ್ಛೆ ಹೋದ
ಧೃಮಜನನ್ನು, ಭೀಮಸೇನ,
ನಕುಳ, ಸಹದೇವ, ಸಾತ್ಯಕಿ,
ದ್ರುಪದ, ವಿರಾಟನೇ
ಮೊದಲಾದವರು
ಯುದ್ಧದಿಂದ
ಹಿಂತಿರುಗಿದವರಾಗಿ
ಯುದ್ಧವನ್ನು ನಿಲ್ಲಿಸಿ
ಧರ್ಮಜನನ್ನು

ಮುಂದಿಟ್ಟೊಡಗೊಂಡು ತಮ್ಮ ಬೀಡಿಗೆ ಹೋದಾಗ ಧರ್ಮರಾಜನ ದುಖವನ್ನು ಶಮನಮಾಡಬೇಕೆಂದು ವೇದವ್ಯಾಸರೇ ಬಂದರು. (ಧರ್ಮರಾಜನನ್ನು ಕುರಿತು) ‘ಮಹಾರಾಜ, ಸಂಸಾರಸ್ಥಿತಿಯನ್ನು ತಿಳಿಯದವರಂತೆ ನೀನು ಹೀಗೆ ದುಖಿಸಿದರೆ- ತಿಳಿಯದವರಂತೆ

ನೀನು ಹೀಗೆ ದುಃಖಿಸಬಾರದು.

ಎಂದರು ವ್ಯಾಸರು.

ಚಂ||

ಎನಿತಿದಿರಾಂತರಾತಿಬಲಮಂತ

ನಿತಂ ತವೆ ಕೊಂದು ತತ್ಸುಯೋ

ಧನ ಸುತರೆನ್ನ ಬಾಣಗಣದಿಂ

ತವದಿರ್ದರೊ ಯುದ್ಧದಾಳ್ಗೆ

ರೋ|

ದನಮೆನಗಾವುದಯ್ಯನೆನಗೇಕೆ

ಯೊ ಶೋಕಿಪನೆಂದು

ಧರ್ಮನಂ

ದನ ನರನಂದನಂ ನಿನಗೆ ಸಗ್ಗದೊಳೇನಭಿಮನ್ಯು ನೋಯನೇ|| ೧೦೭

ಪದ್ಯ-೧೦೭:ಪದವಿಭಾಗ-ಅರ್ಥ:ಎನಿತು ಇದಿರಾಂತ ಅರಾತಿಬಲಮಂತು ಅನಿತಂ ತವೆ ಕೊಂದು (ಪ್ರತಿಭಟಿಸಿದ ಅಷ್ಟೂ ಶತ್ರುಸೈನ್ಯವನ್ನೆಲ್ಲ ಪೂರ್ಣವಾಗಿ ಕೊಂದು-ಹಾಕಿರುವೆನು!) ತತ್ ಸುಯೋಧನ ಸುತರು ಎನ್ನ

ಬಾಣಗಣದಿಂ ತವದೆ
ಇರ್ದರೊ (ದುರ್ಯೋಧನನ
ಮಕ್ಕಳೆಷ್ಟೋ ಜನವನ್ನು ತನ್ನ
ಬಾಣದ ಸಮೂಹದಿಂದ
ನಾಶವಾಗದೆ ಇದ್ದರೆಯೊ?)
ಯುದ್ಧದ ಆಳ್ಗೆ ರೋದನಂ
ಎನಗಾವುದು ಅಯ್ಯನೆ
(ಶೂರನಾದ ನನಗಾಗಿ
ಆಯ್ಯನೇ (ಧರ್ಮರಾಜನೇ)
ಏಕೆ ಅಳುತ್ತಿದ್ದಾನೆ) ಎನಗೆ
ಏಕೆಯೊ ಶೋಕಿಪನೆಂದು

ಧರ್ಮನಂದನ ನರನಂದನಂ
ನಿನಗೆ ಸಗ್ಗದೊಳು ಏನು
ಅಭಿಮನ್ಯು ನೋಯನೇ
(ಆಯ್ಯನಾದ ಧರ್ಮರಾಜನು
ಏಕೆ ಅಳುತ್ತಿದ್ದಾನೆ ಎಂದು
ಸ್ವರ್ಗದಲ್ಲಿರುವ
ಅಭಿಮನ್ಯುವು
ನೊಂದುಕೊಳ್ಳುವುದಿಲ್ಲವೆ?)

ಪದ್ಯ-೧೦೭:ಅರ್ಥ:

ಪ್ರತಿಭಟಿಸಿದ ಅಷ್ಟೂ
ಶತ್ರುಸೈನ್ಯವನ್ನೆಲ್ಲ

ಪೂರ್ಣವಾಗಿ ಕೊಂದು-
ಹಾಕಿರುವೆನು!
ದುರ್ಯೋಧನನ
ಮಕ್ಕಳೆಷ್ಟೋ ಜನವನ್ನು ತನ್ನ
ಬಾಣದ ಸಮೂಹದಿಂದ
ನಾಶವಾಗದೆ ಇದ್ದರೆಯೊ?
ಶೂರನಾದ ನನಗಾಗಿ
ಆಯ್ಯನಾದ ಧರ್ಮರಾಜನು
ಏಕೆ ಅಳುತ್ತಿದ್ದಾನೆ, ಎಂದು
ಸ್ವರ್ಗದಲ್ಲಿರುವ

ಅಭಿಮನ್ಯುವು

ನೊಂದುಕೊಳ್ಳುವುದಿಲ್ಲವೆ?

ಕಂ|| ಜ್ಞಾನಮಯನಾಗಿ ಸಂಸಾ

ರಾನಿತ್ಯತೆಯಂ

ಜಲಕ್ಕನಾಗಱಿದಿರ್ದ|

ಜ್ಞಾನಿಯವೋಲ್ ನೀನುಂ

ಶೋ

ಕಾನಲ ಸಂತಪ್ತ ಚಿತ್ತನಪ್ಪುದು

ದೊರೆಯೇ|| ೧೦೮ ||

ಪದ್ಯ-೧೦೮:ಪದವಿಭಾಗ-

ಅರ್ಥ:’ ಜ್ಞಾನಮಯನಾಗಿ

ಸಂಸಾರ ಅನಿತ್ಯತೆಯಂ
(ಜ್ಞಾನದಿಂದ ತುಂಬಿದವನಾಗಿ
ಈ ಸಂಸಾರದ
ಅಶಾಶ್ವತೆಯನ್ನು) ಜಲಕ್ಕನಾಗಿ
ಅಱಿದು ಇರ್ದು (ಚೆನ್ನಾಗಿ
ತಿಳಿದು ಇದ್ದೂ)
ಅಜ್ಞಾನಿಯವೋಲ್
(ಅಜ್ಞಾನಿಯ/ ಅವಿವೇಕಿಯ
ಹಾಗೆ) ನೀನುಂ ಶೋಕಾನಲ
ಸಂತಪ್ತ ಚಿತ್ತನಪ್ಪುದು
ದೊರೆಯೇ (ನೀನೂ ಶೋಕದ

ಬೆಂಕಿಯಿಂದ ಸುಡಲ್ಪಟ್ಟ ಮನಸ್ಸುಳ್ಳವನಾಗುವುದು ಯೋಗ್ಯವೇ?’)

ಪದ್ಯ-೧೦೮:ಅರ್ಥ:ವ್ಯಾಸ ಮುನಿಯು ಧರ್ಮಜನನ್ನು ಕುರಿತು, (ಲೋಕ) ಜ್ಞಾನದಿಂದ ತುಂಬಿದನಾಗಿ ಈ ಸಂಸಾರದ ಅಶಾಶ್ವತೆಯನ್ನು ಚೆನ್ನಾಗಿ ತಿಳಿದೂ ಅಜ್ಞಾನಿಯ/ ಅವಿವೇಕಿಯ ಹಾಗೆ ನೀನೂ ಶೋಕದ ಬೆಂಕಿಯಿಂದ

ಸುಡಲ್ಪಟ್ಟ
ಮನಸ್ಸುಳ್ಳವನಾಗುವುದು
ಯೋಗ್ಯವೇ?’

ವ|| ಎಂದು ಷೋಡಶರಾಜೋಪಾಖ್ಯಾನ ಮನಱಿಪಿ ಧರ್ಮಪುತ್ರನ ಶೋಕಮನಾರೆ ನುಡಿದು ಪಾರಾಶರ ಮುನೀಂದ್ರಂ ಪೋದನಿತ್ತಲ್

ವಚನ:ಪದವಿಭಾಗ-

ಅರ್ಥ:ಎಂದು

ಷೋಡಶರಾಜೋಪಾಖ್ಯಾನ
ಮನು ಅಱಿಪಿ
(ಹದಿನಾರುರಾಜರ ಕಥೆಯನ್ನು
ತಿಳಿಸಿ) ಧರ್ಮಪುತ್ರನ
ಶೋಕಮನು ಆರೆ ನುಡಿದು
(ಧರ್ಮರಾಜನ ಮನೋವ್ಯಥೆ
ಶಮನವಾಗುವಂತೆ ಹೇಳಿ
ತಿಳಿಸಿ) ಪಾರಾಶರ
ಮುನೀಂದ್ರಂ ಪೋದನು
ಇತ್ತಲ್ (ಹೇಳಿ

ವ್ಯಾಸಮಹರ್ಷಿಯು ಹೋದನು ಇತ್ತ-)

ವಚನ:ಅರ್ಥ:ಎಂದು ಹದಿನಾರುರಾಜರ ಕಥೆಯನ್ನು ತಿಳಿಸಿ ಧರ್ಮರಾಜನ ಮನೋವ್ಯಥೆ ಶಮನವಾಗುವಂತೆ ತಿಳಿಸಿ ಹೇಳಿ ವ್ಯಾಸಮಹರ್ಷಿಯು ಹೋದನು ಇತ್ತ-

ಅಳಿದುದು ಮತ್ತನೂಜಶತಮಾಜಿಯೊಳಿತ್ತ

ಭಿಮನ್ಯುವೊರ್ವನ
ತ್ತಳಿದನಿದಾವ ಗೆಲ್ಲಮೆನಗಂ
ಕಲಿಯಾದನೊ
ಪೊಣ್ದಿಗಂಡವಾ |
ತಳಿಯದೆ
ಗಂಡನಿಂತಳಿವುದೀಯಳಿವಿನ್ನೆ
ಗಾಜಿರಂಗದೊಳ್
ಗಳಿಯಿಸುಗೆಂಬಿದಂ
ನುಡಿಯುತುಂ
ಘಟಸಂಬವನೊಳ್
ಸುಯೋಧನಂ||೧೦೯||

ಪದ್ಯ-೧೦೯:ಪದವಿಭಾಗ-ಅರ್ಥ:ಅಳಿದುದು (ಸತ್ತುಹೋದರು) ಮತ್ ತನೂಜ ಶತಮ್ ಆಜಿಯೊಳ್ ಇತ್ತ,(ಇತ್ತ ನಮ್ಮ ಪಕ್ಷದಲ್ಲಿ ನನ್ನ ನೂರು ಮಕ್ಕಳೂ ಮರಣಹೊಂದಿದರು.) ಅತ್ತ ಅಭಿಮನ್ಯು ಒರ್ವನು ಅತ್ತ ಅಳಿದನು ಇದಾವ ಗೆಲ್ಲಂ ಎನಗಂ (ಆ ಪಕ್ಷದಲ್ಲಿ ಅಭಿಮನ್ಯು ಒಬ್ಬನು ಮಾತ್ರಾ

ಸತ್ತಿದ್ದಾನೆ. ನನಗೆ ಯಾವ ಜಯವಿದು?) ಕಲಿಯಾದನೊ (ಶೂರನಾದವನು) ಪೊಣ್ದ ಗಂಡವಾತು ಅಳಿಯದೆ (ಪ್ರತಿಜ್ಞೆಮಾಡಿದ ಧೀರವಾಕ್ಕು ನಾಶವಾಗದಂತೆ) ಗಂಡನು ಇಂತು ಅಳಿವುದು (ಪರಾಕ್ರಮಶಾಲಿಯಾಗಿ ಹೀಗೆ ಸಾಯಬೇಕು) ಈ ಅಳಿವು ಎನ್ನೆಗೆ ಆಜಿರಂಗದೊಳ್ ಅಳಿಯಿಸುಗೆ (ನನಗೆ

ಯುದ್ಧದಲ್ಲಿ ಇಂಥ ಸಾವು ಲಭಿಸಲಿ) ಎಂಬಿದಂ ನುಡಿಯುತುಂ ಘಟಸಂಬವನೊಳ್ ಸುಯೋಧನಂ (ಎಂಬ ಈ ಮಾತನ್ನು ಆಡುತ್ತಾ ದುರ್ಯೋಧನನು, ಆಚಾರ್ಯರೊಡನೆ-)

ಪದ್ಯ-೦೦೯:ಅರ್ಥ:ನಮ್ಮ ಪಕ್ಷದಲ್ಲಿ ನನ್ನ ನೂರು ಮಕ್ಕಳೂ

ಮರಣಹೊಂದಿದರು. ಆ ಪಕ್ಷದಲ್ಲಿ ಅಭಿಮನ್ಯು ಒಬ್ಬನು ಮಾತ್ರಾ ಸತ್ತಿದ್ದಾನೆ. ನನಗೆ ಯಾವ ಜಯವಿದು? ಶೂರನಾದವನು ಪ್ರತಿಜ್ಞೆಮಾಡಿದ ಧೀರವಾಕ್ಕು ನಾಶವಾಗದಂತೆ ಪರಾಕ್ರಮಶಾಲಿಯಾಗಿ ಹೀಗೆ ಸಾಯಬೇಕು. ನನಗೆ ಯುದ್ಧದಲ್ಲಿ ಇಂಥ ಸಾವು ಲಭಿಸಲಿ ಎಂಬ ಈ ಮಾತನ್ನು

ಆಡುತ್ತಾ ದುರ್ಯೋಧನನು ಆಚಾರ್ಯರೊಡನೆ -

ವ||ಅಂತು ಬೀಡಿಂಗೆ ಪೋದನನ್ನಗಮಿತ್ತ ಸಂಸಪ್ತಕಬಳಜಲನಿಧಿಯಂ ಬಡಬಾನಳನಳುರ್ವಂತಳುರ್ದು ನಿಜವಿಜಯಕಟಕಕ್ಕೆ ವಿಜಯಂ ಬರೆವರೆ-

ವಚನ:ಪದವಿಭಾಗ-

ಅರ್ಥ:ಅಂತು ಬೀಡಿಂಗೆ ಪೋದನು ಅನ್ನಗಮಿತ್ತ

(ಬೀಡಿಗೆ ಹೋದನು. ಅಷ್ಟರಲ್ಲಿ ಈ ಕಡೆ) ಸಂಸಪ್ತಕ ಬಳಜಲನಿಧಿಯಂ ಬಡಬಾನಳನು ಅಳುರ್ವಂತೆ ಅಳುರ್ದು (ಸಂಸಪ್ತಕ ಸೈನ್ಯಸಾಗರವನ್ನು ಬಡಬಾಗ್ನಿ ಸುಡುವಂತೆ ಸುಟ್ಟು) ನಿಜವಿಜಯಕಟಕಕ್ಕೆ ವಿಜಯಂ ಬರೆವರೆ (ತನ್ನ ಜಯಶಾಲಿಯಾದ ಸೈನ್ಯಕ್ಕೆ

ಅರ್ಜುನನು ಹಿಂತಿರುಗಿ ಬರುತ್ತಿರಲು)-

ವಚನ:ಅರ್ಥ:ಬೀಡಿಗೆ ಹೋದನು. ಅಷ್ಟರಲ್ಲಿ ಈ ಕಡೆ ಸಂಸಪ್ತಕ ಸೈನ್ಯಸಾಗರವನ್ನು ಬಡಬಾಗ್ನಿ ಸುಡುವಂತೆ ಸುಟ್ಟು ತನ್ನ ಜಯಶಾಲಿಯಾದ ಸೈನ್ಯಕ್ಕೆ ಅರ್ಜುನನು ಹಿಂತಿರುಗಿ ಬರುತ್ತಿರಲು -

ಚಂ||

ಹರಿನಿಜಯೋಗದಿಂದರಿದು

ತನ್ನಳಿಯಂ ಲಯಮಾದುದಂ
ಭಯಂ
ಕರ
ಕಪಿಕೇತನಂಗರಿಪಲೊಲ್ಲದೆಬಂ
ದು ಶಮಂತಪಂಚಕಂ |
ಬರಮಿಳಿಸಂಗರ
ಪರಿಶ್ರಮಮಂ ಕಳೆಯಲೆಂದು
ಮಯ್ದುನಂ
ಬೆರಸು ಜಳಾವಗಾಹ
ದೊಳಿರುತ್ತೆ ಮಹಾ ಕಪಟ
ಪ್ರಪಂಚದಿಂ||೧೧೦||

ಪದ್ಯ-೧೧೦:ಪದವಿಭಾಗ-ಅರ್ಥ:ಹರಿ ನಿಜಯೋಗದಿಂದ ಅರಿದು ತನ್ನಳಿಯಂ ಲಯಮಾದುದಂ (ಕೃಷ್ಣನು ತನ್ನ ಯೋಗದೃಷ್ಠಿಯಿಂದ ತನ್ನಳಿಯನಾದ ಅಭಿಮನ್ಯುವು ಸತ್ತುದನ್ನು ತಿಳಿದನು) ಭಯಂಕರ ಕಪಿಕೇತನಂಗೆ ಅರಿಪಲೊಲ್ಲದೆ (ಅದನ್ನು ಭಯಂಕರಾಕಾರನೂ ಕಪಿಧ್ವಜನೂ ಆದ

ಅರ್ಜುನನಿಗೆ ತಿಳಿಸಲಾರದೆ,)
ಬಂದು ಶಮಂತಪಂಚಕಂ
ಬರಮಿಳಿಸಂಗರ
ಪರಿಶ್ರಮಮಂ ಕಳೆಯಲೆಂದು
(ಶಮಂತ ಪಂಚಕವೆಂಬ
ಕೊಳದವರೆಗೂ ಬಂದನು.)
ಮಯ್ದುನಂ ಬೆರಸು
ಜಳಾವಗಾಹದೊಳ್ ಇರುತ್ತೆ
(ಮಯ್ದುನನಾದ
ಅರ್ಜುನನೊಡಗೂಡಿ ಅಂದು
ಸ್ನಾನ ಮಾಡುತ್ತಿರುವಾಗ)

ಮಹಾ ಕಪಟ ಪ್ರಪಂಚದಿಂ (ವಿಶೇಷವಾದ ಕೃತ್ರಿಮದ ರೀತಿಯಲ್ಲಿ) ಹೀಗೆಂದನು-

ಪದ್ಯ-೧೧೦:ಅರ್ಥ:ಕೃಷ್ಣನು ತನ್ನ ಯೋಗದೃಷ್ಟಿಯಿಂದ ತನ್ನಳಿಯನಾದ ಅಭಿಮನ್ಯುವು ಸತ್ತುದನ್ನು ತಿಳಿದನು. ಅದನ್ನು ಭಯಂಕರಾಕಾರನೂ ಕಪಿಧ್ವಜನೂ ಆದ ಅರ್ಜುನನಿಗೆ ತಿಳಿಸಲಾರದೆ ಶಮಂತ ಪಂಚಕವೆಂಬ

ಕೊಳದವರೆಗೂ ಬಂದನು.
ಅಲ್ಲಿ ಇಳಿದು
ಯುದ್ಧಾಯಾಸವನ್ನು
ಕಳೆಯೋಣ ಬಾ ಎಂದು,
ಮಯ್ದುನನಾದ
ಅರ್ಜುನನೊಡಗೂಡಿ ಅಂದು
ಸ್ನಾನ ಮಾಡುತ್ತಿರುವಾಗ
ವಿಶೇಷವಾದ ಕೃತ್ರಿಮದ
ರೀತಿಯಲ್ಲಿ --ಹೀಗೆಂದನು

ಕಂ|| ಜಳಮಂತ್ರಂ
ಮಂತ್ರಿತಾಶಯ

ಜಳದೊಳ್ ನರನಿನಿಸು

ಮುಳುಗೆ ನಿಜಸುತನ ಸುಹೃ|

ದ್ದಳ ಜಳನಿಧಿಯೊಳ್ ಫಲ್ಗುಣ

ಮುಳುಗಿದನಂಬಿದನೆ ನುಡಿದು

ಹರಿ ಮುಳುಗುವುದುಂ||೧೧೧||

ಪದ್ಯ-೧೧೧:ಪದವಿಭಾಗ-

ಅರ್ಥ:ಜಳಮಂತ್ರಂ ಮಂತ್ರಿತಾಶಯ ಜಳದೊಳ್ (ಜಲಸ್ತಂಬನ ಮಂತ್ರದಿಂದ ಮಂತ್ರಿಸಲ್ಪಟ್ಟ ಕೊಳದಲ್ಲಿ) ನರಂ ಇನಿಸು ಮುಳುಗೆ

(ಅರ್ಜುನನು ಸ್ವಲ್ಪ ಮುಳುಗಲು) ನಿಜಸುತಂ ಅಸುಹೃದ್ದಳ ಜಳನಿಧಿಯೊಳ್ ಫಲ್ಗುಣ ಮುಳುಗಿದನು (ಅರ್ಜುನಾ ನಿನ್ನ ಮಗನು ಶತ್ರುಸೇನಾ ಸಮುದ್ರದಲ್ಲಿ ಮುಳುಗಿದನು) ಎಂಬ ಇದನೆ ನುಡಿದು ಹರಿ ಮುಳುಗುವುದುಂ (ಎಂದು ಈ ಮಾತನ್ನು ಹೇಳಿ ತಾನೂ ಮುಳುಗಿದನು.)

ಪದ್ಯ-೧೧೧:ಅರ್ಥ:ಜಲಸ್ತಂಬನ ಮಂತ್ರದಿಂದ ಮಂತ್ರಿಸಲ್ಪಟ್ಟ ಕೊಳದಲ್ಲಿ ಅರ್ಜುನನು ಸ್ವಲ್ಪ ಮುಳುಗಲು ಕೃಷ್ನನು 'ಅರ್ಜುನಾ ನಿನ್ನ ಮಗನು ಶತ್ರುಸೇನಾ ಸಮುದ್ರದಲ್ಲಿ ಮುಳುಗಿದನು' ಎಂದು ಈ ಮಾತನ್ನು ಹೇಳಿ ತಾನೂ ಮುಳುಗಿದನು.

ಭೋಂಕನೆ ಕೇಳ್ದೆರ್ದೆ ಕದಡಿ ಕ

ಲಂಕಿದ ಬಗೆವೆರಸು ನೆಗೆದು ನಾಲ್ಕುಂ ದೆಸೆಯಂ |
ಶಂಕಾಕುಳಿತಂ ನೋಡಿ ಮ ನಂ ಕೊಳುಕೆನೆ ಮುಳಿಗಿ ನೆಗೆದ ಹರಿಯಂ ನುಡಿದಂ|| ೧೧೨||

ಪದ್ಯ-00:ಪದವಿಭಾಗ-ಅರ್ಥ:ಭೋಂಕನೆ ಕೇಳ್ದೆರ್ದೆ ಕದಡಿ ಕಲಂಕಿದ ಬಗೆವೆರಸು (ಥಟ್ಟನೆ ಈ ಮಾತನ್ನು ಕೇಳಿ ಎದೆ ಕದಡಿ ಕಲಕಿದ ಮನಸ್ಸಿನಿಂದೊಡಗೂಡಿ)

ನೆಗೆದು ನಾಲ್ಕುಂ ದೆಸೆಯಂ
ಶಂಕಾಕುಳಿತಂ ನೋಡಿ
(ನೀರಿನಿಂದ ಮೇಲೆದ್ದು
ಸಂದೇಹದಿಂದ ನಾಲ್ಕು
ದಿಕ್ಕುಗಳನ್ನೂ ನೋಡಿ,)
ಮನಂ ಕೊಳುಕೆನೆ ಮುಳಿಗಿ
ನೆಗೆದ ಹರಿಯಂ ನುಡಿದಂ
(ಮನಸ್ಸು ಕಳಕ್ಕೆನ್ನಲು,
ಮುಳುಗಿಮೇಲೆದ್ದ ಕೃಷ್ಣನ್ನು
ಕೇಳಿದನು.)

ಪದ್ಯ-00:ಅರ್ಥ:ಥಟ್ಟನೆ ಈ ಮಾತನ್ನು ಕೇಳಿ ಎದೆ ಕದಡಿ ಕಲಕಿದ ಮನಸ್ಸಿನಿಂದೊಡಗೂಡಿ ನೀರಿನಿಂದ ಮೇಲೆದ್ದು ಸಂದೇಹದಿಂದ ನಾಲ್ಕು ದಿಕ್ಕುಗಳನ್ನೂ ನೋಡಿ, ಮನಸ್ಸು ಕಳಕ್ಕೆನ್ನಲು, ಮುಳುಗಿಮೇಲೆದ್ದ ಕೃಷ್ಣನ್ನು ಕೇಳಿದನು.

ಆಕಾಶ ವಚನವಿದು ಸುತ

ಶೋಕಮನೆ

ನೆಗಳಿಪಿದಪ್ಪುದಸ್ಮತ್ತನಯಂ |

ಗೇಕೆಂದರಿಯೆ ಮರಣಮ

ದಾ

ಕುರುಪತಿಯಿಂದಮಾದುದಾಗ

ಲೆವೇಳ್ಕುಂ ||೧೧೩||

ಪದ್ಯ-೧೧೩:ಪದವಿಭಾಗ-

ಅರ್ಥ:ಆಕಾಶ ವಚನವಿದು

ಸುತಶೋಕಮನೆ

ನೆಗಳಿಪಿದಪ್ಪುದು (ಇದು

ಅಶರೀರವಾಣಿಯು;

ಸುತಶೋಕವನ್ನು ನನಗೆ ತಿಳಿಸುತ್ತಿದೆ) ಅಸ್ಮತ್ ತನಯಂಗೆ ಏಕೆಂದು ಅರಿಯೆ ಮರಣಮದು (ಏಕಾಯಿತೆಂದು ತಿಳಿಯದವನಾಗಿದ್ದೇನೆ. ನನ್ನ ಮಗನಿಗೆ ಸಾವು ಆಗಿರಬೇಕು) ಆ ಕುರುಪತಿಯಿಂದಂ ಆದುದು ಆಗಲೆವೇಳ್ಕುಂ (ಆ ದುರ್ಯೋಧನನಿಂದಲೇ ಆಗಿರಬೇಕು)

ಪದ್ಯ-೧೧೩:ಅರ್ಥ: ಇದು ಅಶರೀರವಾಣಿಯು; ಸುತಶೋಕವನ್ನು ನನಗೆ ತಿಳಿಸುತ್ತಿದೆ. ನನ್ನ ಮಗನಿಗೆ ಸಾವು ಆ ದುರ್ಯೋಧನನಿಂದಲೇ ಆಗಿರಬೇಕು. ಏಕಾಯಿತೆಂದು ತಿಳಿಯದವನಾಗಿದ್ದೇನೆ.

ಇಂದಿನ ಚಕ್ರವ್ಯೂಹಮ
ನಾಂ ದಲಣಾಂ
ಮೆಚ್ಚಲಾರೆನೆನುತುಂ ರಥಮಂ

|

ಬಂದೇರಿ ಮಗನ ಮನಕತ ಮೊಂದುತ್ತರಮೆರ್ದೆಯನಲೆ ಯೆ ನರನಿಂತೆಂದಂ||೧೧೪||

ಪದ್ಯ-೧೧೪:ಪದವಿಭಾಗ-ಅರ್ಥ:ಚಕ್ರವ್ಯೂಹಮನು ಆಂದಲ್ ಅಣಂ ಮೆಚ್ಚಲಾರೆನು ಎನುತುಂ (ಈ ದಿನದ ಚಕ್ರವ್ಯೂಹವನ್ನು ನಾನು ಸ್ವಲ್ಪವೂ ಮೆಚ್ಚಲಾರೆ ಎನ್ನುತ್ತಾ) ರಥಮಂ ಬಂದು

ಏರಿ (ರಥವನ್ನು ಏರಿ ಬೀಡಿನ ಕಡೆ ಬಂದನು.) ಮಗನ ಮನಕತ (ಬಗೆಗೆ ಮನೋವ್ಯಥೆ) ಒಂದುತ್ತರಂ ಎರ್ದೆಯನು ಅಲೆಯೆ (ಒಂದಿಷ್ಟು ಪೀಡಿಸುತ್ತಿರಲು) ನರನು ಇಂತೆಂದಂ (ಅರ್ಜುನನು ಹೀಗೆಂದನು)

ಪದ್ಯ-೧೧೪:ಅರ್ಥ: ಈ ದಿನದ ಚಕ್ರವ್ಯೂಹವನ್ನು ನಾನು ಸ್ವಲ್ಪವೂ ಮೆಚ್ಚಲಾರೆ

ಎನ್ನುತ್ತಾ ನೀರಿನಿಂದ ಎದ್ದು ರಥವನ್ನು ಏರಿ ಬೀಡಿನ ಕಡೆ ಬಂದನು. ಮಗನ ಬಗೆಗೆ ಮನೋವ್ಯಥೆ ಮನಸ್ಸನ್ನು ಒಂದಿಷ್ಟು ಪೀಡಿಸುತ್ತಿರಲು ಅರ್ಜುನನು ಹೀಗೆಂದನು.

ಕದನದಿನಾಂ ಬರೆ ನಿಚ್ಚಲು
ಮಿದಿರ್ವಂದು ಕೊರಲ್ಗೆ
ವಾಯ್ದು ಬಾಯ್ವಾಯೊಳಲಂ|
ಪಿದಿರ್ಗೊಳೆ ತಂಬುಲಮಂ ಕೊ

ಳ್ಳದೆ ಮಾರ್ಣ್ದೇ ಮಗನ ತಡವಿದೇನಸುರಾರೀ|| ೧೧೫ ||

ಪದ್ಯ-೧೧೫:ಪದವಿಭಾಗ-ಅರ್ಥ:ಕದನದಿ ನಾಂ ಬರೆ ನಿಚ್ಚಲುಂ ಇದಿರ್ವಂದು ಕೊರಲ್ಗೆ ವಾಯ್ದು (ನಾನು ಯುದ್ಧದಿಂದ ಬರಲು ಎದುರಾಗಿ ನಿತ್ಯವೂ ಬಂದು ಕೊರಳಿಗೆ ಹಾರಿ) ಬಾಯ್ವಾಯೊಳ ಅಲಂಪಿ ಇದಿರ್ಗೊಳೆ ತಂಬುಲಮಂ

ಕೊಳ್ಳದೆ ಮಾಣ್ದೇ (ಅಪ್ಪಿಕೊಂಡು ನನ್ನ ಬಾಯಿಂದ ತನ್ನ ಬಾಯಿಗೆ ಸುಖವಾಗಿರುವ ಹಾಗೆ ಎದುರುಗೊಂಡು ತಾಂಬೂಲವನ್ನು ಕೊಳ್ಳದೇ ಇರುವ) ಮಗನ ತಡವು ಇದೇನು ಅಸುರಾರೀ (ಮಗನ ಈ ಸಾವಕಾಶವಿದೇನು ಕೃಷ್ಣ?)

ಪದ್ಯ-೧೧೫:ಅರ್ಥ: ನಾನು ಯುದ್ಧದಿಂದ ಬರಲು

ಎದುರಾಗಿ ನಿತ್ಯವೂ ಬಂದು
ಕೊರಳಿಗೆ ಹಾರಿ ಅಪ್ಪಿಕೊಂಡು
ನನ್ನ ಬಾಯಿಂದ ತನ್ನ ಬಾಯಿಗೆ
ಸುಖವಾಗಿರುವ ಹಾಗೆ
ತಾಂಬೂಲವನ್ನು ಕೊಳ್ಳದೇ
ಇರುವ ಮಗನ ಈ
ಸಾವಕಾಶವಿದೇನು ಕೃಷ್ಣ?

ವ|| ಎನುತ್ತುಂ ಬೀಡನೆಯ್ದೆ ವಂದು ಶೋಕಸಾಗರದೊಳ್ ಮುಳುಗಾಡುವ ಪರಿಜನಮುಂ ತನ್ನ ಮೊಗಮಂ ನೋಡಲ್

ನಾಣ್ಚಿ ತಲೆಯಂ ಬಾಗಿ ನೆಲನಂ
ಬರೆಯುತ್ತುಮಿರ್ದ
ವೀರಭಟರುಮಂ ಕಂಡು
ಮಗನ ಸಾವಂ ನಿಶ್ಚೈಸಿ
ರಾಜಮಂದಿರಮಂ ಪೊಕ್ಕು
ರಥದಿಂದಮಿೞಿದು
ಧರ್ಮಪುತ್ರಂಗಂ
ವಾಯುಪುತ್ರಂಗಂ
ಪೊಡೆವಟ್ಟು
ಕುಳ್ಳಿರ್ಪುದುಮವರ್ ತಲೆಯಂ
ಬಾಗಿ ನೆಲನಂ

ಬರೆಯುತ್ತುಮಿರೆ ಕಿರೀಟಿ ಕಂಡಿದೇನೆಂದು ಬೆಸಗೊಳೆ ಧರ್ಮಪುತ್ರನಿಂತೆಂದ-

ವಚನ:ಪದವಿಭಾಗ-

ಅರ್ಥ:ಎನುತ್ತುಂ ಬೀಡನು ಎಯ್ದೆ ವಂದು ಶೋಕಸಾಗರದೊಳ್ ಮುೞುಗಾಡುವ ಪರಿಜನಮುಂ (ಬೀಡಾರವನ್ನು ಸೇರಿ, ದುಖಸಮುದ್ರದಲ್ಲಿ ಮುಳುಗಾಡುವ

ಸೇವಕರನ್ನೂ) ತನ್ನ ಮೊಗಮಂ
ನೋಡಲ್ ನಾಣ್ಚಿ ತಲೆಯಂ
ಬಾಗಿ ನೆಲನಂ
ಬರೆಯುತ್ತುಮಿರ್ದ
ವೀರಭಟರುಮಂ (ತನ್ನ
ಮುಖವನ್ನು ನೋಡಲು
ನಾಚಿಕೆಯಿಂದ ಕೂಡಿ
ತಲೆಯನ್ನು ಬಗ್ಗಿಸಿಕೊಂಡು
ನೆಲವನ್ನು ಬರೆಯುತ್ತಿದ್ದ
ವೀರಭಟರನ್ನೂ) ಕಂಡು
ಮಗನ ಸಾವಂ ನಿಶ್ಚೈಸಿ

ರಾಜಮಂದಿರಮಂ ಪೊಕ್ಕು (ನೋಡಿ ಮಗನ ಸಾವನ್ನು ನಿಶ್ಚಯಿಸಿ, ಅರಮನೆಯನ್ನು ಪ್ರವೇಶ ಮಾಡಿದನು.)

ರಥದಿಂದಂ ಇೞಿದು ಧರ್ಮಪುತ್ರಂಗಂ ವಾಯುಪುತ್ರಂಗಂ ಪೊಡೆವಟ್ಟು ಕುಳ್ಳಿರ್ಪುದುಂ (ರಥದಿಂದ ಇಳಿದು ಧರ್ಮರಾಜನಿಗೂ ಭೀಮಸೇನನನಿಗೂ ನಮಸ್ಕಾರ

ಮಾಡಿ ಕುಳಿತುಕೊಂಡನು)
ಅವರ್ ತಲೆಯಂ ಬಾಗಿ
ನೆಲನಂ ಬರೆಯುತ್ತುಂ ಇರೆ
ಕಿರೀಟಿ ಕಂಡು ಇದೇನೆಂದು
ಬೆಸಗೊಳೆ
ಧರ್ಮಪುತ್ರನಿಂತೆಂದ-
(ತಲೆಯನ್ನು ತಗ್ಗಿಸಿ ದುಖದಿಂದ
ನೆಲವನ್ನು ಬರೆಯುತ್ತಿರಲು
ಅರ್ಜುನನು ಇದೇನೆಂದು ಪ್ರಶ್ನೆ
ಮಾಡಿದನು. ಧರ್ಮರಾಜನು
ಹೀಗೆ ಹೇಳಿದನು)

ವಚನ:ಅರ್ಥ: ಎನ್ನುತ್ತ ಹತ್ತಿರಕ್ಕೆ ಬಂದು ಬೀಡಾರವನ್ನು ಸೇರಿ, ದುಖಸಮುದ್ರದಲ್ಲಿ ಮುಳುಗಾಡುವ ಸೇವಕರನ್ನೂ ತನ್ನ ಮುಖವನ್ನು ನೋಡಲು ನಾಚಿಕೆಯಿಂದ ಕೂಡಿ ತಲೆಯನ್ನು ಬಗ್ಗಿಸಿಕೊಂಡು ನೆಲವನ್ನು ಬರೆಯುತ್ತಿದ್ದ ವೀರಭಟರನ್ನೂ ನೋಡಿ ಮಗನ ಸಾವನ್ನು ನಿಶ್ಚಯಿಸಿ,

ಅರಮನೆಯನ್ನು ಪ್ರವೇಶ ಮಾಡಿದನು. ರಥದಿಂದ ಇಳಿದು ಧರ್ಮರಾಜನಿಗೂ ಭೀಮಸೇನನಿಗೂ ನಮಸ್ಕಾರ ಮಾಡಿ ಕುಳಿತುಕೊಂಡನು. ಅವರು ತಲೆಯನ್ನು ತಗ್ಗಿಸಿ (ದುಖದಿಂದ) ನೆಲವನ್ನು ಬರೆಯುತ್ತಿರಲು ಅರ್ಜುನನು ಇದೇನೆಂದು ಪ್ರಶ್ನೆ ಮಾಡಿದನು. ಧರ್ಮರಾಜನು ಹೀಗೆ ಹೇಳಿದನು.

ಮ||ಸ್ರ|| ಗುರು ಚಕ್ರವ್ಯೂಹಂ
ಪಣ್ಣಿದೊಡೆ ಪುಗಲಿದಂ
ಬಲ್ಲರಾರೆಂದೊಡಿಂ ನಾ
ನಿರೆ ಮತ್ತಾರ್
ಬಲ್ಲರೆಂದೊರ್ವನೆ
ರಿಪುಬಳವಾರಾಶಿಯಂ ಪೊಕ್ಕು
ಮಿಕ್ಕಾಂ|
ತರನಾಟಂದಿಕ್ಕಿ
ದುರ್ಯೋಧನನ ತನಯರಂ
ನೂರ್ವರಂ ಕೊಂದು ತತ್ಸಂ

ಗರದೊಳ್

ಕಾದೆಮ್ಮನಿಂತಾಂತಿಱಿದು

ನಿಜಸುತಂ ದೇವಲೋಕಕ್ಕೆ

ಸಂದಂ|| ೧೧೬ ||

ಪದ್ಯ-೧೧೬:ಪದವಿಭಾಗ-ಅರ್ಥ:ಗುರು ಚಕ್ರವ್ಯೂಹಂ ಪಣ್ಣಿದೊಡೆ ಪುಗಲಿದಂ ಬಲ್ಲರಾರೆಂದೊಡೆ (ಗುರು ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಲು ಇದನ್ನು ಪ್ರವೇಶಿಸಲು

ತಿಳಿದವರಾರು ಎಂದಾಗ) ಇಂ
ನಾನು ಇರೆ ಮತ್ತಾರ್
ಬಲ್ಲರೆಂದು ಒರ್ವನೆ
ರಿಪುಬಳವ ಆರಾಶಿಯಂ
ಪೊಕ್ಕು (ಮತ್ತಾರು ತಿಳಿದಿದ್ದಾರೆ
ಎಂದು
ಶತ್ರುಸೇನಾಸಮೂಹವನ್ನು
ಒಬ್ಬನೇ ಪ್ರವೇಶಿಸಿ) ಮಿಕ್ಕ
ಆಂತರನು ಆಟಂದಿಕ್ಕಿ (ಮೀರಿ
ಪ್ರತಿಭಟಿಸಿದವರನ್ನು ಕೊಂದು)
ದುರ್ಯೋಧನನ ತನಯರಂ

ನೂರ್ವರಂ ಕೊಂದು (ಮೀರಿ ಪ್ರತಿಭಟಿಸಿದವರನ್ನು ಕೊಂದು ದುರ್ಯೋಧನನ ನೂರು ಜನ ಮಕ್ಕಳನ್ನೂ ಸಂಹರಿಸಿ) ತತ್ಸಂಗರದೊಳ್ ಕಾದು ಎಮ್ಮನು (ಆ ಯುದ್ಧದಲ್ಲಿ ನಮ್ಮನ್ನು ರಕ್ಷಿಸಿ) ಇಂತು ಆಂತು ಇಱಿದು ನಿಜಸುತಂ ದೇವಲೋಕಕ್ಕೆ ಸಂದಂ (ಹೀಗೆ ಎದುರಾಗಿ ಯುದ್ಧಮಾಡಿ ನಿನ್ನ

ಮಗನಾದ ಅಭಿಮನ್ಯುವು ದೇವಲೋಕವನ್ನು ಸೇರಿದನು)

ಪದ್ಯ-೧೧೬:ಅರ್ಥ: ಗುರು ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಲು ಇದನ್ನು ಪ್ರವೇಶಿಸಲು ತಿಳಿದವರಾರು ಎಂದಾಗ, ಮತ್ತಾರು ತಿಳಿದಿದ್ದಾರೆ ಎಂದು ಶತ್ರುಸೇನಾಸಮೂಹವನ್ನು ಒಬ್ಬನೇ ಪ್ರವೇಶಿಸಿ, ಮೀರಿ ಪ್ರತಿಭಟಿಸಿದವರನ್ನು ಕೊಂದು

ದುರ್ಯೋಧನನ ನೂರು ಜನ ಮಕ್ಕಳನ್ನೂ ಸಂಹರಿಸಿ ಆ ಯುದ್ಧದಲ್ಲಿ ನಮ್ಮನ್ನು ರಕ್ಷಿಸಿ ಹೀಗೆ ಎದುರಾಗಿ ಯುದ್ಧಮಾಡಿ ನಿನ್ನ ಮಗನಾದ ಅಭಿಮನ್ಯುವು ದೇವಲೋಕವನ್ನು ಸೇರಿದನು.

ಮ|| ಬರಮಂ ಬಾಳ
ಶಶಾಂಕಮೌಳಿ ಕುಡೆ
ಪೆತ್ತೊಂದುರ್ಕಿನಿಂದೋವದಾಂ

ತು
ರಣೋತ್ಸಾಹದಿನೆಮ್ಮನೊರ್ವ
ನೆ ಭರಂಗೆಯ್ದತ್ತ
ದುರ್ಯೋಧನಂ|
ಬೆರಸಾ ದ್ರೋಣನನಟ್ಟಿ ಸಿಂಧು
ವಿಷಯಾಶಂ ಪೊದಱೊಂದು
ಮ
ಚ್ಚರದಿಂ ನಿನ್ನ ತನೂಜನಂ
ಕೊಲಿಸಿದಂ ಮತ್ತಾಂತವರ್
ಕೊಲ್ವರೇ|| ೧೧೭ ||

ಪದ್ಯ-೧೧೭:ಪದವಿಭಾಗ-ಅರ್ಥ:ಬರಮಂ (ವರವನ್ನು) ಬಾಳ ಶಶಾಂಕಮೌಳಿ ಕುಡೆ (ಹಣೆಯಲ್ಲಿ ಚಂದ್ರನಿರುವ ಈಶ್ವರನು ಕೊಡಲು) ಪೆತ್ತ ಒಂದು ಉರ್ಕಿ ನಿಂದು ಓವದೆ ಆಂತು (ಆ ಒಂದು ಸೊಕ್ಕಿನಿಂದ ರಕ್ಷಿಸದೆ ನಮ್ಮನ್ನು ಎದುರಿಸಿ) ರಣೋತ್ಸಾಹದಿಂ ನೆಮ್ಮನೊರ್ವನೆ ಭರಂಗೆಯ್ದುತ್ತ (ರಣೋತ್ಸಾಹದಿಂದ ಆರ್ಭಟ

ಮಾಡುತ್ತ, ನಮ್ಮನ್ನು ಒಬ್ಬನೆ
ತೀವ್ರತೆಯನ್ನು ತೋರಿಸಿ)
ದುರ್ಯೋಧನಂಬೆರಸು ಆ
ದ್ರೋಣನನು ಅಟ್ಟಿ ಸಿಂಧು
ವಿಷಯಾಶಂ
(ದುರ್ಯೋಧನನೊಡನೆ
ದ್ರೋಣನನ್ನು ಬೇರೆ ಕಡೆಗೆ
ಕಳುಹಿಸಿ) ಪೊದೞ್ದೊಂದು
ಮಚ್ಚರದಿಂ (ಹೊಂದಿದ,
ನೆಲೆಗೊಂಡಿದ್ದ ಮತ್ಸರದಿಂದ)
ನಿನ್ನ ತನೂಜನಂ ಕೊಲಿಸಿದಂ

(ನಿನ್ನ ಮಗನನ್ನು ಕೊಲ್ಲಿಸಿದನು.) ಮತ್ತೆ ಆಂತವರ್ ಕೊಲ್ವರೇ (ಬೇರೆಯವರು ಅಭಿಮನ್ಯುವನ್ನು ಕೊಲ್ಲಲು ಸಾಧ್ಯವೇ?)

ಪದ್ಯ-೧೧೭:ಅರ್ಥ:೧೧೭. ಸೈಂಧವನು ಈಶ್ವರನು ಹಿಂದೆ ವರವನ್ನು ಕೊಡಲು, ಆ ಒಂದು ಸೊಕ್ಕಿನಿಂದ ರಕ್ಷಿಸದೆ ನಮ್ಮನ್ನು ಎದುರಿಸಿ ರಣೋತ್ಸಾಹದಿಂದ

ಆರ್ಭಟ ಮಾಡುತ್ತ, ನಮ್ಮನ್ನು
ಒಬ್ಬನೆ ತೀವ್ರತೆಯನ್ನು
ತೋರಿಸಿ
ದುರ್ಯೋಧನನೊಡನೆ
ದ್ರೋಣನನ್ನು ಬೇರೆ ಕಡೆಗೆ
ಕಳುಹಿಸಿ ತನ್ನಲ್ಲಿ
ನೆಲೆಗೊಂಡಿದ್ದ ಮತ್ಸರದಿಂದ
ನಿನ್ನ ಮಗನನ್ನು ಕೊಲ್ಲಿಸಿದನು.
ಬೇರೆಯವರು
ಅಭಿಮನ್ಯುವನ್ನು ಕೊಲ್ಲಲು
ಸಾಧ್ಯವೇ?

ವ|| ಎಂಬುದುಂ ಪ್ರಚಂಡ
ಕೋಪ ಪಾವಕ ಪ್ರಶಮಿತ
ಶೋಕರಸನುಮುನ್ನತ ಲಲಾಟ
ತಟ ಘಟಿತ ಭೀಷಣ
ಭ್ರುಕುಟಿಯುಂ ಕಲ್ಪಾಂತ
ದಿನಕರ
ದುರ್ನಿರೀಕ್ಷನುಮುತ್ಪಾತ
ಮಾರುತನಂತೆ ಸಕಲ
ಭೂಭೃಕ್ಕಂಪಕಾರಿಯುಂ
ವಿಂಧ್ಯಾಚಳದಂತೆ
ವರ್ಧಮಾನೋತ್ಸೇಧನುಮಧ

ಕಾರಾತಿಯಂತೆ ಭೈರವಾಕಾರನುಮಾಗಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಪ್ರಚಂಡ ಕೋಪ ಪಾವಕ ಪ್ರಶಮಿತ ಶೋಕರಸನುಂ (ಎನ್ನಲು ಅತ್ಯಂತ ಘೋರವಾದ ಕೋಪಾಗ್ನಿಯಿಂದ ಶೋಕರಸವು ಆರಿಹೋಯಿತು, ಶೋಕ ಪ್ರಶಮಿತ - ಆರಿದವನಾಗಿ)

ಉನ್ನತ ಲಲಾಟ ತಟ ಘಟಿತ ಭೀಷಣ ಭ್ರುಕುಟಿಯುಂ (ಎತ್ತರವಾದ ಮುಖದಲ್ಲಿ ಹುಬ್ಬು ಭಯಂಕರವಾಗಿ ಗಂಟಿಕ್ಕಿತು.) ಕಲ್ಪಾಂತ ದಿನಕರ ದುರ್ನಿರೀಕ್ಷನುಂ (ಪ್ರಳಯಕಾಲದ ಸೂರ್ಯನಂತೆ (ಕಣ್ಣಿನಿಂದ) ನೋಡಲಾಗದವನೂ) ಉತ್ಪಾತ ಮಾರುತನಂತೆ ಸಕಲ ಭೂಭೃಕ್ಕಂಪಕಾರಿಯುಂ

(ವಿಪತ್ಕಾಲದ ಗಾಳಿಯಂತೆ
ಸಮಸ್ತ ಬೆಟ್ಟಗಳನ್ನೂ
ನಡುಗಿಸುವವನೂ)
ವಿಂಧ್ಯಾಚಳದಂತೆ
ವರ್ಧಮಾನೋತ್ಸೇಧನುಂ
(ವಿಂಧ್ಯಪರ್ವತದಂತೆ
ಎತ್ತರವಾಗಿ
ಬೆಳೆಯುತ್ತಿರುವವನೂ),
ಅಂಧಕಾರಾತಿಯಂತೆ
ಭೈರವಾಕಾರನುಮಾಗಿ
(ಈಶ್ವರನಂತೆ

ಭಯಂಕರಾಕಾರವುಳ್ಳವನೂ ಆಗಿ)-

ವಚನ:ಅರ್ಥ: ಎನ್ನಲು ಅತ್ಯಂತ ಘೋರವಾದ ಕೋಪಾಗ್ನಿಯಿಂದ ಶೋಕರಸವು ಆರಿಹೋಯಿತು. ಎತ್ತರವಾದ ಮುಖದಲ್ಲಿ ಹುಬ್ಬು ಭಯಂಕರವಾಗಿ ಗಂಟಿಕ್ಕಿತು. ಪ್ರಳಯಕಾಲದ ಸೂರ್ಯನಂತೆ (ಕಣ್ಣಿನಿಂದ)

ನೋಡಲಾಗದವನೂ,

ವಿಪತ್ಕಾಲದ ಗಾಳಿಯಂತೆ

ಸಮಸ್ತ ಬೆಟ್ಟಗಳನ್ನೂ

ನಡುಗಿಸುವವನೂ,

ವಿಂಧ್ಯಪರ್ವತದಂತೆ

ಎತ್ತರವಾಗಿ

ಬೆಳೆಯುತ್ತಿರುವವನೂ,

ಈಶ್ವರನಂತೆ

ಭಯಂಕರಾಕಾರವುಳ್ಳವನೂ

ಆಗಿ-

ಮ|| ರಸೆಯಿಂ ಭೂತಳದಿಂ
ಕುಳಾದ್ರಿ ದಿಗ್ದಂತಿಯಿಂ
ವಾರ್ಧಿಯಿಂ
ದೆಸೆಯಿಂದಾಗಸದಿಂದಜಾಂಡ
ತಟದಿಂದತ್ತೆಲ್ಲಿ
ಪೊಕ್ಕಿರ್ದುಮಿಂ|
ಮಿಸುಕಲ್ ತೀರ್ಗುಮೆ
ವೈರಿಗೆನ್ನ ಸುತನಂ
ಕೊಂದಿರ್ದುದಂ ಕೇಳ್ದು ಸೈ
ರಿಸಿ
ಮಾಣ್ದಿರ್ದಪೆನಿನ್ನುಮೆಂದೊಡಿ

ದನಾಂ ಪೇಟೋತಳ್

ನೀಗುವೆಂ|| ೧೧೮||

ಪದ್ಯ-೧೧೮:ಪದವಿಭಾಗ-ಅರ್ಥ:ರಸೆಯಿಂ ಭೂತಳದಿಂ (ಪಾತಾಳದಿಂದಲೂ ಭೂಮಂಡಲದಿಂದಲೂ) ಕುಳಾದ್ರಿ ದಿಗ್ದಂತಿಯಿಂ (ಕುಲಪರ್ವತಗಳ ಸಮೂಹದಿಂದಲೂ ದಿಗ್ಗಜಗಳಿಂದಲೂ) ವಾರ್ಧಿಯಿಂ ದೆಸೆಯಿಂದ

(ಸಮುದ್ರಗಳಿಂದಲೂ
ದಿಕ್ಕುಗಳಿಂದಲೂ),
ಆಗಸದಿಂದ ಅಜಾಂಡ
ತಟದಿಂದ (ಆಕಾಶದಿಂದ
ಬ್ರಹ್ಮಾಂಡದಿಂದಲೂ) ಅತ್ತ
ಎಲ್ಲಿ ಪೊಕ್ಕಿರ್ದುಮಿಂ
(ಆಚೆಯ ಕಡೆ ಎಲ್ಲಿ
ಹೊಕ್ಕಿದ್ದರೂ) ಮಿಸುಕಲ್
ತೀರ್ಗುಮೆ ವೈರಿಗೆ (ನನ್ನ
ಶತ್ರುವಿಗೆ (ಅಲ್ಲಿಂದ)
ಅಳ್ಳಾಡಲು ಸಾಧ್ಯವೇ?) ಎನ್ನ

ಸುತನಂ ಕೊಂದಿರ್ದುದಂ
ಕೇಳ್ದು ಸೈರಿಸಿ (ನನ್ನ ಮಗನನ್ನು
ಕೊಂದಿರುವುದನ್ನು ಕೇಳಿಯೂ
ಸೈರಿಸಿಕೊಂಡು) ಮಾಣ್ದು
ಇರ್ದಪೆನೆ ಇನ್ನುಂ ಎಂದೊಡೆ
(ಇನ್ನೂ ಸುಮ್ಮನಿದ್ದೇನೆ
ಎಂದರೆ) ಇದನು ಆಂ ಪೇಳ್
ಏತಳ್ ನೀಗುವೆಂ (ಈ
ದುಖವನ್ನು ನಾನು
ಮತ್ತಾವುದರಿಂದ ಪರಿಹಾರ
ಮಾಡಿಕೊಳ್ಳಲಿ ಹೇಳು!)

ಪದ್ಯ-೧೧೮:ಅರ್ಥ:ಪಾತಾಳ ದಿಂದಲೂ ಭೂಮಂಡಲದಿಂದಲೂ, ಕುಲಪರ್ವತಗಳ ಸಮೂಹದಿಂದಲೂ ದಿಗ್ಗಜಗಳಿಂದಲೂ, ಸಮುದ್ರಗಳಿಂದಲೂ ದಿಕ್ಕುಗಳಿಂದಲೂ ಆಕಾಶದಿಂದ ಬ್ರಹ್ಮಾಂಡದಿಂದಲೂ ಆಚೆಯ ಕಡೆ ಎಲ್ಲಿ ಹೊಕ್ಕಿದ್ದರೂ, ನನ್ನ ಶತ್ರುವಿಗೆ (ಅಲ್ಲಿಂದ)

ಅಳ್ಳಾಡಲು ಸಾಧ್ಯವೇ? ನನ್ನ ಮಗನನ್ನು ಕೊಂದಿರುವುದನ್ನು ಕೇಳಿಯೂ ಸೈರಿಸಿಕೊಂಡು ಇನ್ನೂ ಸುಮ್ಮನಿದ್ದೇನೆ ಎಂದರೆ ಈ ದುಖವನ್ನು ನಾನು ಮತ್ತಾವುದರಿಂದ ಪರಿಹಾರ ಮಾಡಿಕೊಳ್ಳಲಿ ಹೇಳು! (ಇದಕ್ಕೆ ತಕ್ಕ ಪ್ರತೀಕಾರ ಮಾಡುತ್ತೇನೆ)

ಅರ್ಜುನನ ಪ್ರತಿಜ್ಞೆ - ಸೈಂಧವ ವಧೆ

ಕಂ|| ಬಳೆದ
ಸುತಶೋಕದಿಂದೀ
ಗಳೆ ಸುರಿಗುಮೆ ಸುರಿಯವಾ
ಜಯದ್ರಥನ ಚಿತಾ|
ನಳನಿಂದಮೊಗೆದ ಪೊಗೆಗಳ್
ಕೊಳೆ ಸುರಿವೊಡೆ ಸುರಿವುವೆನ್ನ
ನಯನಜಲಂಗಳ್|| ೧೧೯ ||

ಪದ್ಯ-೧೧೯:ಪದವಿಭಾಗ-

ಅರ್ಥ:ಬಳೆದ

ಸುತಶೋಕದಿಂದ ಈಗಳೆ
ಸುರಿಗುಮೆ ಸುರಿಯವು
(ಹೆಚ್ಚುತ್ತಿರುವ
ಪುತ್ರಶೋಕದಿಂದ ಈಗ ನನ್ನ
ಕಣ್ಣೀರು ಸುರಿಯುವುದೇ?,
ಸುರಿಯುವುದಿಲ್ಲ) ಆ
ಜಯದ್ರಥನ ಚಿತಾನಳನಿಂದಂ
ಒಗೆದ (ಆ ಸೈಂಧವನ
ಚಿತಾಗ್ನಿಯಿಂದ ಹುಟ್ಟಿದ)
ಪೊಗೆಗಳ್ ಕೊಳೆ
(ಮುತ್ತಿಕೊಳ್ಳಲು) ಸುರಿವೊಡೆ

ಸುರಿವುವೆನ್ನ
ನಯನಜಲಂಗಳ್
(ಹೊಗೆಗಳು ಸುತ್ತಿ ಆವರಿಸಲು,
ಆಗ ಮಾತ್ರ ನನ್ನ ಕಣ್ಣೀರು
ಸುರಿಯುವುದು.)

ಪದ್ಯ-೧೧೯:ಅರ್ಥ:

ಹೆಚ್ಚುತ್ತಿರುವ
ಪುತ್ರಶೋಕದಿಂದ ಈಗ ನನ್ನ
ಕಣ್ಣೀರು ಸುರಿಯುವುದೇ?,
ಸುರಿಯುವುದಿಲ್ಲ; ಆ
ಸೈಂಧವನ ಚಿತಾಗ್ನಿಯಿಂದ

ಹುಟ್ಟಿದ ಹೊಗೆಗಳು ಸುತ್ತಿ ಆವರಿಸಲು, ಆಗ ಮಾತ್ರ ನನ್ನ ಕಣ್ಣೀರು ಸುರಿಯುವುದು.

ಬಿಸಜಭವನಕ್ಕೆ ಮೃಡನ
ಕ್ಕಸುರಾಂತಕನಕ್ಕೆ ಕಾವೊಡಂ
ನಾಳಿನೊಳ|
ರ್ವಿಸೆ ಕೊಂದು ಸಿಂಧುರಾಜನ
ಬಸಿಱಿಂ ಪೋೞ್ದೆನ್ನ
ಮಗನನಾಂ ತೆಗೆಯದಿರೆಂ||
೧೨೦ ||

ಪದ್ಯ-೧೨೦:ಪದವಿಭಾಗ-ಅರ್ಥ:ಬಿಸಜಭವನು ಅಕ್ಕೆ (ಬ್ರಹ್ಮನಾಗಲಿ) ಮೃಡನಕ್ಕೆ ಅಸುರಾಂತಕನಕ್ಕೆ (ರುದ್ರನಾಗಲಿ ವಿಷ್ಣುವಾಗಲಿ) ಕಾವೊಡಂ ನಾಳಿನೊಳ್ ಅರ್ವಿಸೆ ಕೊಂದು (ರಕ್ಷಿಸಿದರೂ ನಾಳೆ ಭಯಂಕರವಾದ ರೀತಿಯಲ್ಲಿ ಕೊಂದು) ಸಿಂಧುರಾಜನ ಬಸಿಱಿಂ ಪೋೞ್ದು (ಸೀಳಿ) ಎನ್ನ

ಮಗನನು ಆಂ ತೆಗೆಯದೆ
ಇರೆಂ (ಆ ಸೈಂಧವನ
ಹೊಟ್ಟೆಯನ್ನು ಸೀಳಿ ನನ್ನ
ಮಗನನ್ನು ತೆಗೆಯದೆ
ಇರುವುದಿಲ್ಲ)

ಪದ್ಯ-೧೨೦:ಅರ್ಥ:

ಬ್ರಹ್ಮನಾಗಲಿ ರುದ್ರನಾಗಲಿ
ವಿಷ್ಣುವಾಗಲಿ ರಕ್ಷಿಸಿದರೂ
ನಾಳೆ ಭಯಂಕರವಾದ
ರೀತಿಯಲ್ಲಿ ಕೊಂದು ಆ
ಸೈಂಧವನ ಹೊಟ್ಟೆಯನ್ನು

ಸೀಳಿ ನನ್ನ ಮಗನನ್ನು
ತೆಗೆಯದೆ ಇರುವುದಿಲ್ಲ.

**ಕೊಂದೆನ್ನ ಮಗನನಿಂ ಭಯ
ದಿಂದಂ ರಸೆವೊಕ್ಕುಮಜನ
ಗುಂಡಿಗೆವೊಕ್ಕುಂ|
ಮಂದರಧರನೀ ಪೊರ್ಕುೞಿ
ಪೊಂದಾವರೆವೊಕ್ಕು
ಮೇಣಾವಂ ಬರ್ದುಕುವನೇ||
೧೨೧ ||**

ಪದ್ಯ-೧೨೧:ಪದವಿಭಾಗ-

ಅರ್ಥ:ಕೊಂದು ಎನ್ನ

ಮಗನನು (ನನ್ನ ಮಗನನ್ನು
ಕೊಂದು) ಇಂ ಭಯದಿಂದಂ
ರಸೆವೊಕ್ಕುಂ (ಭಯದಿಂದ
ಇನ್ನು ಅವನು ರಸಾತಳವನ್ನು
ಪ್ರವೇಶಿಸಿದರೂ) ಅಜನ
ಗುಂಡಿಗೆವೊಕ್ಕುಂ (ಬ್ರಹ್ಮನ
ಕಮಂಡಲವನ್ನು
ಪ್ರವೇಶಿಸಿದರೂ)
ಮಂದರಧರನು ಈ
ಪೊರ್ಕುೞಿ
ಪೊಂದಾವರೆವೊಕ್ಕು

(ವಿಷ್ಣುವಿನ ಹೊಕ್ಕಳ ಕಮಲವನ್ನು ಸೇರಿದರೂ) ಮೇಣ್ ಅವಂ ಬರ್ದುಕುವನೇ (ಮತ್ತೆ ಅವನು -ಸೈಂಧವನು- ಬದುಕಬಲ್ಲನೇ?)

ಪದ್ಯ-೧೨೧:ಅರ್ಥ:ನನ್ನ ಮಗನನ್ನು ಕೊಂದು ಭಯದಿಂದ ಇನ್ನು ಅವನು ರಸಾತಳವನ್ನು ಪ್ರವೇಶಿಸಿದರೂ ಬ್ರಹ್ಮನ ಕಮಂಡಲವನ್ನು

ಪ್ರವೇಶಿಸಿದರೂ, ವಿಷ್ಣುವಿನ
ಹೊಕ್ಕಳ ಕಮಲವನ್ನು
ಸೇರಿದರೂ ಮತ್ತೆ ಅವನು
(ಸೈಂಧವನು) ಬದುಕಬಲ್ಲನೇ?

ಚಂ|| ಪಡೆ ಪಡೆಮೆಚ್ಚೆಗಂಡನೆನೆ ಸಂದರಿಕೇಸರಿಯೆಂಬಗುರ್ವು ನೇ
ರ್ಪಡೆ ನೆಗಱ್ದಾನಣಂ ಸೆಡೆದು ಮಾಣ್ಬೆನೆ ನಾಳೆ ದಿನೇಶನಸ್ತದ|
ತ್ತುಡುಗದ ಮುನ್ನ ಸೈಂಧವನಗುರ್ವಿಸೆ

ಕೊಲ್ಲದೊಡೇನೊ ಗಾಂಡಿವಂ ಬಿಡಿದೆನೆ ಚ ತೊವಲ್ವಿಡಿದೆನಲ್ಲೆನೆ ವೈರಿಗೆ ಯುದ್ಧರಂಗದೊಳ್|| ೧೨೨ ||

ಪದ್ಯ-೧೨೨:ಪದವಿಭಾಗ-ಅರ್ಥ:ಪಡೆ ಪಡೆಮೆಚ್ಚೆಗಂಡನು ಎನೆ, ಸಂದ ಅರಿಕೇಸರಿಯೆಂಬ ಅಗುರ್ವು ನೇರ್ಪಡೆ (ಪ್ರಸಿದ್ಧವಾದ ಅರಿಕೇಸರಿಯೆಂಬ ಭಯ

ಶತ್ರುಗಳಲ್ಲಿ ಸೇರಿರಲು,) ನೆಗಳ್ದಿ
ಆಂ ಅಣಂ ಸೆಡೆದು
(ಭಯದಿಂದ) ಮಾಣ್ಬೆನೆ
(ಪ್ರಸಿದ್ಧವಾಗಿರುವ ನಾನು
ಸ್ವಲ್ಪ ಹೆದರಿ ಭಯದಿಂದ ಕುಗ್ಗಿ
ಬಿಡುವೆನೇ?) ನಾಳೆ ದಿನೇಶನು
ಅಸ್ತದತ್ತ ಉಡುಗದ ಮುನ್ನ
ಸೈಂಧವನ ಅಗುರ್ವಿಸೆ
ಕೊಲ್ಲದೊಡೆ ಏನೊ (ನಾಳೆ
ಸೂರ್ಯನು ಮುಳುಗುವುದಕ್ಕೆ
ಮುಂಚೆಯೇ ಜಯದ್ರಥನು

ಹೆದರುವಂತೆ ಅವನನ್ನು
ಕೊಲ್ಲದಿದ್ದರೆ ಏನೋ!)
ಗಾಂಡಿವಂ ಪಿಡಿದೆನೆ?
(ಗಾಂಡೀವವನ್ನು
ಧರಿಸಿದವನೇ ಅಲ್ಲ) ಚಿ!
ತೊವಲ್ವಿಡಿದೆನು ಅಲ್ಲ ಎನೆ
ವೈರಿಗೆ ಯುದ್ಧರಂಗದೊಳ್
(ಯುದ್ಧರಂಗದಲ್ಲಿ ಹೆದರಿ
ವೈರಿಗೆ ಚಿಗುರು ಎಲೆಗಳನ್ನು
ಹಿಡಿದವನಾಗುವುದಿಲ್ಲವೇ?
(ಹೇಡಿಯಂತೆ))

ಪದ್ಯ-೧೨೨:ಅರ್ಥ: ಸೈನ್ಯವು ನನ್ನನ್ನು ‘ಪಡೆಮೆಚ್ಚೆಗಂಡ’ ಎನ್ನುತ್ತಿರುವಾಗ, ಪ್ರಸಿದ್ಧವಾದ ಅರಿಕೇಸರಿಯೆಂಬ ಭಯ ಶತ್ರುಗಳಲ್ಲಿ ಸೇರಿರಲು, ಪ್ರಸಿದ್ಧವಾಗಿರುವ ನಾನು ಸ್ವಲ್ಪ ಹೆದರಿ ಭಯದಿಂದ ಕುಗ್ಗಿಬಿಡುತ್ತೇನೆಯೇ? ನಾಳೆ ಸೂರ್ಯನು ಮುಳುಗುವುದಕ್ಕೆ ಮುಂಚೆಯೇ ಜಯದ್ರಥನು ಹೆದರುವಂತೆ ಅವನನ್ನು

ಕೊಲ್ಲದಿದ್ದರೆ ನಾನು ಗಾಂಡೀವವನ್ನು ಧರಿಸಿದವನೇ ಅಲ್ಲ. ಯುದ್ಧರಂಗದಲ್ಲಿ ಹೆದರಿ ವೈರಿಗೆ ಚಿಗುರು ಎಲೆಗಳನ್ನು ಹಿಡಿದವನಾಗುವುದಿಲ್ಲವೇ? (ಹೇಡಿಯಂತೆ)

ವ|| ಎಂದು ನೃಪ ಪರಮಾತ್ಮಂ ಕೃತಪ್ರತಿಜ್ಞನಾದುದಂ ಸೈಂಧವನ ಸಜ್ಜನಂ ದುರ್ಯೋಧನನ ತಂಗೆ ದುಶ್ಯಳೆ ಕೇಳ್ದು ಮಲಮಲ ಮಱುಗಿ

ತಮ್ಮಣ್ಣನಲ್ಲಿಗೆ ವಂದು ಕಾಲ ಮೇಲೆ ಕವಿದು ಪಟ್ಟು-

ವಚನ:ಪದವಿಭಾಗ-

ಅರ್ಥ:ಎಂದು ನೃಪ ಪರಮಾತ್ಮಂ ಕೃತಪ್ರತಿಜ್ಞನಾದುದಂ (ಹೀಗೆ ನೃಪಪರಮಾತ್ಮನಾದ ಅರ್ಜುನನು ಕೈಗೊಳ್ಳುವ ಪ್ರತಿಜ್ಞೆ ಮಾಡಿದುದನ್ನು) ಸೈಂಧವನ ಸಜ್ಜನಂ (ಸೈಂಧವನ ಕುಲವಂತೆ)

ದುಜ್ಜೋದನನ ತಂಗೆ ದುಶ್ಯಳೆ ಕೇಳ್ದು (ದುರ್ಯೋಧನನ ತಂಗಿಯೂ ಆದ ದುಶ್ಯಳೆಯು ಕೇಳಿ-) ಮಲಮಲ ಮಱುಗಿ (ಬಹಳ ಮುಗಿ- ದುಃಖಪಟ್ಟು) ತಮ್ಮಣ್ಣನಲ್ಲಿಗೆ ವಂದು ಕಾಲ ಮೇಲೆ ಕವಿದು ಪಟ್ಟು (ತಮ್ಮ ಅಣ್ಣನ ಹತ್ತಿರಕ್ಕೆ ಬಂದು ಕಾಲಿನ ಮೇಲೆ ಕವಿದು ಬಿದ್ದಳು) -

ವಚನ:ಅರ್ಥ:ಹೀಗೆ ನೃಪಪರಮಾತ್ಮನಾದ ಅರ್ಜುನನು ಕೈಗೊಳ್ಳುವ ಪ್ರತಿಜ್ಞೆ ಮಾಡಿದುದನ್ನು ಸೈಂಧವನ ಕುಲವಂತೆ ದುರ್ಯೋಧನನ ತಂಗಿಯೂ ಆದ ದುಶ್ಯಳೆಯು ಕೇಳಿ ಬಹಳ ದುಃಖಪಟ್ಟು ತಮ್ಮ ಅಣ್ಣನ ಹತ್ತಿರಕ್ಕೆ ಬಂದು ಕಾಲಿನ ಮೇಲೆ ಕವಿದು ಬಿದ್ದಳು.

ಕಂ|| ತನ್ನ ಸುತನಱಿಯಲಱಿಯಲ್ ನಿನ್ನಯ ಮಯ್ದುನನನರ್ಜುನಂ ಪೂಣ್ದನದ| ರ್ಕಾನ್ನಡುಗಿ ಬಂದೆನಿನ್ನೀ ನೆನ್ನೋಲೆಯ ಕಡಗದಱಿವನೇಂ ನೋಡಿದಪಾ|| ೧೨೩ ||

ಪದ್ಯ-೧೨೩:ಪದವಿಭಾಗ-ಅರ್ಥ:ತನ್ನ ಸುತನಱಿಯಲ್ ಅಱಿಯಲ್ ನಿನ್ನಯ

ಮಯ್ದುನನಂ ಅರ್ಜುನನಂ
ಪೂಣ್ದಾನು ಅದರ್ಕೆ ಆಂ ನಡುಗಿ
ಬಂದೆಂ (ಅದಕ್ಕಾಗಿ ನಾನು
ಹೆದರಿ ಬಂದೆನು.) ಇನ್ನು ನೀನೆ
ಎನ್ನ ಓಲೆಯ ಕಡಗದ
ಅೞಿವಂ ಏಂ ನೋಡಿದಪಾ
(ನೀನು ನನ್ನ ಓಲೆ ಮತ್ತು
ಕಡಗದ ನಾಶವನ್ನು
(ಸೌಮಂಗಲ್ಯದ ನಾಶವನ್ನು)
ನೋಡುತ್ತೀಯಾ?)

ಪದ್ಯ-೧೨೩೩:ಅರ್ಥ:೧೨೩. ಅರ್ಜುನನು ತನ್ನ ಮಗನು ಸಾಯಲು ನಿನ್ನ ಮಯ್ದುನನ ಸಾವಿಗೆ ಪ್ರತಿಜ್ಞೆ ಮಾಡಿದ್ದಾನೆ. ಅದಕ್ಕಾಗಿ ನಾನು ಹೆದರಿ ಬಂದೆನು. ನೀನು ನನ್ನ ಓಲೆ ಮತ್ತು ಕಡಗದ ನಾಶವನ್ನು ನೋಡುತ್ತೀಯಾ?

ವ|| ಎಂಬುದುಂ ಸುಯೋಧನಂ ಮುಗುಳ್ನಗೆ ನಕ್ಕಿಂತೆಂದಂ-

ವಚನ:ಪದವಿಭಾಗ-ಅರ್ಥ:ಎಂಬುದುಂ ಸುಯೋಧನಂ ಮುಗುಳ್ನಗೆ ನಕ್ಕು ಇಂತು ಎಂದಂ-

ವಚನ:ಅರ್ಥ: ಎನ್ನಲು ದುರ್ಯೋಧನನು ಹುಸಿನಗೆ ನಕ್ಕು ಹೀಗೆಂದನು.

ಕಂ|| ಮರುಳಕ್ಕ ಮಗನ ಶೋಕದಿ
ನುರುಳ್ದುಂ ಪೂಣ್ದವನ ಪೂಣ್ಕೆ ದುಶ್ಶ್ಯಾಸನನೊಳ್|

ಕರತನದಿಂದೆನ್ನೊಳಮಾ ಮರುತ್ಸುತಂ ಪೂಣ್ದ ಪೂಣ್ಕೆಯಂತೆವೊಲಕ್ಕುಂ|| ೧೨ಳ

ಪದ್ಯ-೧೨ಳ:ಪದವಿಭಾಗ-ಅರ್ಥ:ಮರುಳಕ್ಕ (ಹುಚ್ಚು ನಿನಗೆ ತಂಗೀ!) ಮಗನ ಶೋಕದಿಂ ಉರುಳ್ದುಂ ಪೂಣ್ದವನ ಪೂಣ್ಕೆ (ಮಗನ ದುಃಖದಿಂದ ಉರಿಹೊಂದಿ/ ಕೋಪಗೊಂಡು ಪ್ರತಿಜ್ಞೆ

ಮಾಡಿದವನು ಅಷ್ಟೆ!)
ದುಶ್ಯಾಸನನೊಳ್
ಕರತನದಿಂದ
(ಕಠಿಣತೆಯಿಂದ) ಎನ್ನೊಳಂ
ಆ ಮರುತ್ಸುತಂ
(ದುಶ್ಯಾಸನನಲ್ಲಿಯೂ
ನನ್ನಲ್ಲಿಯೂ ಬಹಳ
ಕಠಿಣತೆಯಿಂದ ಭೀಮನು)
ಪೂಣ್ದ ಪೂಣ್ಕೆಯಂತೆವೊಲ್
ಅಕ್ಕುಂ (ಮಾಡಿದ

ಪ್ರತಿಜ್ಞೆಯಂತೆಯೇ ಆಗುತ್ತದೆ - ನಿಷ್ಫಲವಾಗುತ್ತದೆ)

ಪದ್ಯ-೧೨೪:ಅರ್ಥ:

ಹುಚ್ಚುತಂಗೀ, ಅರ್ಜುನನು ಮಗನ ದುಃಖದಿಂದ ಉರಿಹೊಂದಿ/ಕೋಪಗೊಂಡು ಪ್ರತಿಜ್ಞೆ ಮಾಡಿದವನು ಅಷ್ಟೆ!; ಭೀಮನು ದುಶ್ಶಾಸನನಲ್ಲಿಯೂ ನನ್ನಲ್ಲಿಯೂ ಬಹಳ ಕಠಿಣತೆಯಿಂದ ಮಾಡಿದ

ಪ್ರತಿಜ್ಞೆಯಂತೆಯೇ ಆಗುತ್ತದೆ -
ನಿಷ್ಫಲವಾಗುತ್ತದೆ.

ಚಂ|| ಕೃತ ವಿವಿಧಾಸ್ತ್ರಶಸ್ತ್ರ
ಯಮಪುತ್ರ ಮರುತ್ಸುತ
ಯಜ್ಞಸೇನರು
ದ್ಧತ ಬಳರೆತ್ತಿ ಕಾದಿ
ಸುಗಿದೋಡಿದರಲ್ಲರೆ ಕಾವರೀ
ವಿವಿಂ|
ಶತಿ ಕೃಪ ಕರ್ಣ ಶಲ್ಯ
ಕಳಶೋದ್ಭವ ತತ್ಪ್ರಿಯ
ಪುತ್ರರೆಂದೊಡ

ಪ್ರತಿರಥನಂ ಜಯದ್ರಥನನಾಜಿಯೊಳೆಯ್ತರೆ ವರ್ಪ ಗಂಡರಾರ್|| ೧೨೫||

ಪದ್ಯ-೧೨೫:ಪದವಿಭಾಗ-ಅರ್ಥ:ಕೃತ ವಿವಿಧಾಸ್ತ್ರಶಸ್ತ್ರ (ವಿವಿಧ ಬಗೆಯ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ) ಯಮಪುತ್ರ ಮರುತ್ಸುತ ಯಜ್ಞಸೇನರು, ಉದ್ಧತ ಬಳರು ಎತ್ತಿ (ವಿಶೇಷ ಶಕ್ತಿಯುಳ್ಳವರು-ದಂಡೆತ್ತಿ ಬಂದು) ಕಾದಿ ಸುಗಿದ

ಓಡಿದರ್ ಅಲ್ಲರೆ (ಯುದ್ಧಮಾಡಿ ಹೆದರಿ ಓಡಿದವರಲ್ಲವೇ? ಕಾವರು ಈ ವಿವಿಂಶತಿ (ಈ ಇಪ್ಪತ್ತು ವೀರರೇ ಮೊದಲಾದವರು ಕಾಯುವರು ಎಂದರೆ) ಕೃಪ ಕರ್ಣ ಶಲ್ಯ ಕಳಶೋದ್ಭವ ತತ್ಪ್ರಿಯ ಪುತ್ರರು ಎಂದೊಡೆ ಅಪ್ರತಿರಥನಂ (ಸಮಾನವಾದ ರಥಿಕರೇ ಇಲ್ಲದ) ಜಯದ್ರಥನನು ಆಜಿಯೊಳ್

ಎಯ್ತರೆ ವರ್ಪ (ಬರುತ್ತಿದ್ದರೆ ಎದರು ಬರುವ) ಗಂಡರಾರ್ (ಜಯದ್ರಥನು ಯುದ್ಧದಲ್ಲಿ ಬರುತ್ತಿದ್ದರೆ ಅವನನ್ನು ಬಂದು ಎದುರಿಸುವ ಶೂರರಾರಿದ್ದಾರೆ?)

ಪದ್ಯ-೧೨೫:ಅರ್ಥ:ವಿವಿಧ ಬಗೆಯ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ ಧರ್ಮರಾಜ, ಭೀಮ, ಧೃಷ್ಟದ್ಯುಮ್ನರು ವಿಶೇಷ ಶಕ್ತಿಯುಳ್ಳವರು-

ದಂಡೆತ್ತಿ ಬಂದು ಯುದ್ಧಮಾಡಿ ಹೆದರಿ ಓಡಿದವರಲ್ಲವೇ? (ಜಯದ್ರಥನೊಡನೆ ಕಾದಲಾರದೆ ಹೆದರಿ ಓಡಿ ಹೋದರಲ್ಲವೇ?) ವಿವಿಶಂತಿ, ಕೃಪ, ಕರ್ಣ, ಶಲ್ಯ, ದ್ರೋಣ, ಅವನ ಪ್ರಿಯಪುತ್ರನಾದ ಅಶ್ವತ್ಥಾಮ ಈ ಇಪ್ಪತ್ತು ವೀರರೇ ಮೊದಲಾದವರು ಜಯದ್ರಥನನ್ನು ರಕ್ಷಿಸುವರು ಎನ್ನುವಾಗ ಸಮಾನವಾದ

ರಥಿಕರೇ ಇಲ್ಲದ ಜಯದ್ರಥನು ಯುದ್ಧದಲ್ಲಿ ಬರುತ್ತಿದ್ದರೆ ಅವನನ್ನು ಬಂದು ಎದುರಿಸುವ ಶೂರರಾರಿದ್ದಾರೆ?

ವ|| ಎಂದು ದುಶ್ಯಳೆಯನೊಡಗೊಂಡು ಕುಂಭಸಂಭವನಲ್ಲಿಗೆ ವಂದಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ದುಶ್ಯಳೆಯನು ಒಡಗೊಂಡು

ಕುಂಭಸಂಭವನಲ್ಲಿಗೆ ವಂದು (ದ್ರೋಣಾಚಾರ್ಯರಲ್ಲಿಗೆ ಬಂದು) ಇಂತೆಂದಂ-

ವಚನ:ಅರ್ಥ:ಎಂದು ದುರ್ಯೋಧನನು, ದುಶ್ಯಳೆಯನ್ನು ಜೊತೆಯಲ್ಲಿ ಕರೆದುಕೊಂಡು ದ್ರೋಣಾಚಾರ್ಯರಲ್ಲಿಗೆ ಬಂದು ಹೀಗೆಂದು ಹೇಳಿದನು-

ಮ||ಸ್ರ||

ಸುತಶೋಕೋದ್ರೇಕದಿಂ

ಸೈಂಧವನನಟೆವೆಂದರ್ಜುನಂ
ಪೂಣ್ದನಿಂತೀ
ಸತಿ ಬಂದಳ್
ಕಾವುದಾತ್ಮಾನುಜೆಯ
ಕಡಗಮಂ ನೀಮೆ
ಮಾರ್ಕೊಳ್ವೊಡಾರ್ ತಾ|
ವಿತರರ್ ಮುಟ್ಟಲ್
ಸಮರ್ಥರ್ ಕದನದೊಳೆನೆ
ಗೆಲ್ವಾಸೆಯಂತಿರ್ಕೆ ಸಿಂಧು
ಕ್ಷಿತಿಪಂ ತಾನೇನನಾದಂ
ರಣದೊಳದನೆ

ಪೋಗಾನುಮಪ್ಪೆಂ ನರೇಂದ್ರಾ|| ೧೨೬ ||

ಪದ್ಯ-೧೨೬:ಪದವಿಭಾಗ-ಅರ್ಥ:ಸುತಶೋಕ ಉದ್ರೇಕದಿಂ ಸೈಂಧವನನು ಅಱಿವೆಂದು ಅರ್ಜುನಂ ಪೂಣ್ದನು(ಪುತ್ರಶೋಕದಲ್ಲಿ ಉದ್ರೇಕದಿಂದ ಅರ್ಜುನನು ಸೈಂಧವನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು.) ಇಂತು ಈ ಸತಿ ಬಂದಳ್ (ಅದಕ್ಕಾಗಿ

ಈ ತಂಗಿ ಬಂದಿದ್ದಾಳೆ.)
ಕಾವುದು ಆತ್ಮಾನುಜೆಯ
ಕಡಗಮಂ (ನನ್ನ ತಂಗಿಯ
ಕಡಗವನ್ನು -
ಮತ್ತೈದೆತನವನ್ನು ನೀವೆ
ರಕ್ಷಿಸಬೇಕು.) ನೀಮೆ
ಮಾರ್ಕೊಳ್ವೊಡೆ ಆರ್ ತಾವ್
ಇತರರ್ ಮುಟ್ಟಲ್
ಸಮರ್ಥರ್ (ನೀವೆ
ಯುದ್ಧದಲ್ಲಿ ಪ್ರತಿಭಟಿಸಿದರೆ
ಅವನನ್ನು ಮುಟ್ಟಲು ಇತರರು

ಯಾರು ಸಮರ್ಥರು?)
ಕದನದೊಳೆನೆ ಗೆಲ್ವಾಸೆಯು
ಅಂತಿರ್ಕೆ (ಯುದ್ಧದಲ್ಲಿ
ಗೆಲ್ಲುವಾಸೆ ಹಾಗಿರಲಿ,)
ಸಿಂಧುಕ್ಷಿತಿಪಂ ತಾನೇನನು
ಆದಂ ರಣದೊಳು ಅದನೆ
ಪೋಗ್ ಆನುಮಪ್ಪೆಂ
ನರೇಂದ್ರಾ (ದುರ್ಯೋಧನಾ
ಯುದ್ಧದಲ್ಲಿ ಸೈಂಧವನು
ಏನಾಗುತ್ತಾನೆಯೋ ಅದನ್ನೇ

ನಾನೂ ಆಗುತ್ತೇನೆ ಹೋಗು.) ಎಂದನು ದ್ರೋಣ.

ಪದ್ಯ-೧೨೬:ಅರ್ಥ:ಪುತ್ರ ಶೋಕದಲ್ಲಿ ಉದ್ರೇಕದಿಂದ ಅರ್ಜುನನು ಸೈಂಧವನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು. ಅದಕ್ಕಾಗಿ ಈ ತಂಗಿ ಬಂದಿದ್ದಾಳೆ. ನನ್ನ ತಂಗಿಯ ಕಡಗವನ್ನು ನೀವೆ ರಕ್ಷಿಸಬೇಕು. ಯುದ್ಧದಲ್ಲಿ ನೀವೆ ಪ್ರತಿಭಟಿಸಿದರೆ

ಅವನನ್ನು ಮುಟ್ಟಲು ಯಾರು ಸಮರ್ಥರು? ಎಂದನು. ಯುದ್ಧದಲ್ಲಿ ಗೆಲ್ಲುವಾಸೆ ಹಾಗಿರಲಿ, ದುರ್ಯೋಧನಾ, ಯುದ್ಧದಲ್ಲಿ ಸೈಂಧವನು ಏನಾಗುತ್ತಾನೆಯೋ ಅದನ್ನೇ ನಾನೂ ಆಗುತ್ತೇನೆ ಹೋಗು ಎಂದನು ದ್ರೋಣ.

ಮ|| ಬಿಜಯಂಗೆಯ್ಯೆನೆ ಪೋಪುದುಂ ನೃಪನದಂ ಧರ್ಮಾತ್ಮಜಂ ಕೇಳ್ದು ಪೇ

ಬ್ದಿಜಿತಂಗಾ ಹರಿ
ಪೇೞ್ದುದೊಂದು ನಯದಿಂದಾ
ರಾತ್ರಿಯೊಳ್ ಪೋಗಿ ಕುಂ|
ಭಜನಂ ಕಂಡು ವಿನಮ್ರನಾಗಿ
ನುಡಿದಂ ನೀಮಿಂತು
ಕೆಯ್ಕೊಂಡು ಕಾ
ದೆ ಜಗತ್ಪೂಜಿತ
ಬೆಟ್ಟನಾದೊಡೆಮಗಿಂ
ಬಾೞುಸೆಯಾವಾಸೆಯೋ||
೧೨೭ ||

ಪದ್ಯ-೧೨೭:ಪದವಿಭಾಗ-ಅರ್ಥ:ಬಿಜಯಂಗೆಯ್ಯ್ ಎನೆ ಪೋಪುದುಂ ನೃಪನು (ನೀನು ಹೋಗು ಎನ್ನಲು ರಾಜನು ಹೊರಟು ಹೋದನು.) ಅದಂ ಧರ್ಮಾತ್ಮಜಂ ಕೇಳ್ದು (ಅದನ್ನು ಧರ್ಮರಾಯನು ಕೇಳಿ) ಪೇೞ್ದು ಅಜಿತಂಗೆ (ಕೃಷ್ಣನಿಗೆ ತಿಳಿಸಿಲು,) ಆ ಹರಿ ಪೇೞ್ದುದು ಒಂದು ನಯದಿಂದ (ಕೃಷ್ಣನು ಹೇಳಿದ ಒಂದು

ನೀತಿಯಿಂದ
(ಉಪಾಯದಿಂದ)) ಆ
ರಾತ್ರಿಯೊಳ್ ಪೋಗಿ
ಕುಂಭಜನಂ ಕಂಡು
(ಧರ್ಮರಾಯನು ರಾತ್ರಿಯಲ್ಲಿ
ಹೋಗಿ ದ್ರೋಣನನ್ನು ಕಂಡು,)
(ಧರ್ಮರಾಯನು ರಾತ್ರಿಯಲ್ಲಿ
ಹೋಗಿ ದ್ರೋಣನನ್ನು ಕಂಡು)
ವಿನಮ್ರನಾಗಿ ನುಡಿದಂ
(ಬಹಳ ನಮ್ರತೆಯಿಂದ
ಹೇಳಿದನು.) ನೀಮಿಂತು

ಕೆಯ್ಕೊಂಡು ಕಾದೆ ಜಗತ್ಪೂಜಿತ
ಬೆಟ್ಟನು ಆದೊಡೆ
(ಲೋಕಪೂಜ್ಯರಾದವರೇ,
ನೀವು ಹೀಗೆ ಅಂಗೀಕಾರ
ಮಾಡಿ (ದುರ್ಯೋಧನನ
ಪಕ್ಷವನ್ನು) ಗಟ್ಟಿಯಾಗಿ
ಕಾದಿದರೆ) ಎಮಗೆ ಇಂ
ಬಾಳುಸೆಯ ಆವಾಸೆಯೋ
(ನಮಗೆ ಇನ್ನು ಬಾಳುವ ಆಸೆ
ಯಾವುದು?)

ಪದ್ಯ-೧೨೭:ಅರ್ಥ:ನೀನು ಹೋಗು ಎನ್ನಲು ರಾಜನು ಹೊರಟು ಹೋದನು. ಅದನ್ನು ಧರ್ಮರಾಯನು ಕೇಳಿ ಕೃಷ್ಣನಿಗೆ ತಿಳಿಸಿದನು. ಕೃಷ್ಣನು ಹೇಳಿದ ಒಂದು ನೀತಿ (ಉಪಾಯ)ಯಿಂದ ಧರ್ಮರಾಯನು ರಾತ್ರಿಯಲ್ಲಿ ಹೋಗಿ ದ್ರೋಣನನ್ನು ಕಂಡು ಬಹಳ ನಮ್ರತೆಯಿಂದ ಹೇಳಿದನು,'ಲೋಕಪೂಜ್ಯರಾ

ದವರೇ ನೀವು ಹೀಗೆ
ಅಂಗೀಕಾರ ಮಾಡಿ
(ದುರ್ಯೋಧನನ ಪಕ್ಷವನ್ನು)
ಗಟ್ಟಿಯಾಗಿ ಕಾದಿದರೆ, ನಮಗೆ
ಇನ್ನು ಬಾಳುವಾಸೆ
ಯಾವುದು?

**ಕಂ|| ನಿಮ್ಮಳವನಱಿದು
ಮುನ್ನಮೆ
ನಿಮ್ಮಂ
ಪ್ರಾರ್ಥಿಸಿದೆಮೀಗಳದುವಂ
ಮದಿರ್|**

ನಿಮ್ಮಯ ಧರ್ಮದ ಮಕ್ಕಳೆ ವೆಮ್ಮಂ ಕಡೆಗಣಿಸಿ ನಿಮಗೆ ನೆಗಳ್ವುದು ದೊರೆಯೇ|| ೧೨೮ ||

ಪದ್ಯ-೧೨೮:ಪದವಿಭಾಗ-ಅರ್ಥ:ನಿಮ್ಮ ಅಳವನು ಅಱಿದು ಮುನ್ನಮೆ ನಿಮ್ಮಂ ಪ್ರಾರ್ಥಿಸಿದೆಂ (ನಿಮ್ಮ ಶಕ್ತಿಯನ್ನು ತಿಳಿದು ಮೊದಲೇ ನಿಮ್ಮನ್ನು ಪ್ರಾರ್ಥಿಸಿದೆನು. - ಯುದ್ಧದ ಆರಂಭದಲ್ಲಿ;)

ಈಗಳು ಅದುವಂ ಮದಿರ್
ನಿಮ್ಮಯ ಧರ್ಮದ
ಮಕ್ಕಳೆವು ಎಮ್ಮಂ ಕಡೆಗಣಿಸಿ
(ಈಗ ಅದನ್ನೂ ಮರೆತು
ನಿಮ್ಮ ಧರ್ಮದ ಮಕ್ಕಳಾದ
ನಮ್ಮನ್ನು ಕಡೆಗಣಿಸಿ) ನಿಮಗೆ
ನೆಗಟ್ಟುದು ದೊರೆಯೇ ()
ಪದ್ಯ-೧೨೮:ಅರ್ಥ:ನಿಮ್ಮ
ಶಕ್ತಿಯನ್ನು ತಿಳಿದು ಮೊದಲೇ
ನಿಮ್ಮನ್ನು ಪ್ರಾರ್ಥಿಸಿದೆನು.
ಈಗ ಅದನ್ನೂ ಮರೆತು ನಿಮ್ಮ

ಧರ್ಮದ ಮಕ್ಕಳಾದ ನಮ್ಮನ್ನು
ಕಡೆಗಣಿಸಿ ನೀವು
ನಡೆದುಕೊಳ್ಳುವುದು
ಸರಿಯೇ? ಎಂದನು ಧರ್ಮಜ.

ಎನೆ ಗುರು ಕರುಣಾರಸಮದು
ಮನದಿಂ ಪೊಱಪೊಣ್ಣೆ ನಿನಗೆ
ಜಯಮಕ್ಕುಮನಂ|
ತನ ಪೇೞ್ದಿತೆಱದೆ ನೆಗೞ್ನೆ
ವಿನಯದೆ ಬೀೞ್ಕೊಂಡು
ನೃಪತಿ ಬೀಡಂ ಪೊಕ್ಕಂ|| ೧೨೯
||

ಪದ್ಯ-೧೨೯:ಪದವಿಭಾಗ-ಅರ್ಥ:ಎನೆ ಗುರು ಕರುಣಾರಸಂ ಅದು ಮನದಿಂ ಪೊಱಪೊಣ್ಮೆ (ಗುರು ದ್ರೋಣನು ಕರುಣಾರಸವು ಮನಸ್ಸಿನಿಂದ ಹೊರಹೊಮ್ಮುತ್ತಿರಲು), ನಿನಗೆ ಜಯಮಕ್ಕುಂ ಅನಂತನ ಪೇೞ್ದ ತೆಱದೆ ನೆಗೞು ಎನೆ ('ಕೃಷ್ಣನು ಹೇಳಿದ ಹಾಗೆ ಮಾಡು, ನಿನಗೆ

ಜಯವಾಗುತ್ತದೆ’ ಎನ್ನಲು,)
ವಿನಯದೆ ಬೀೞ್ಕೊಂಡು
ನೃಪತಿ ಬೀಡಂ ಪೊಕ್ಕಂ
(ವಿನಯದಿಂದ ಅಪ್ಪಣೆಯನ್ನು
ಪಡೆದು ಹೊರಟು
ಧರ್ಮರಾಜನು ತನ್ನ
ಮನೆಯನ್ನು ಪ್ರವೇಶಿಸಿದನು.)
ಪದ್ಯ-೧೨೯:ಅರ್ಥ:
ಧರ್ಮಜನು ಹಾಗೆನ್ನಲು,
ಗುರು ದ್ರೋಣನು
ಕರುಣಾರಸವು ಮನಸ್ಸಿನಿಂದ

ಹೊರಹೊಮ್ಮುತ್ತಿರಲು
‘ಕೃಷ್ಣನು ಹೇಳಿದ ಹಾಗೆ
ಮಾಡು, ನಿನಗೆ
ಜಯವಾಗುತ್ತದೆ’ ಎನ್ನಲು,
ವಿನಯದಿಂದ ಅಪ್ಪಣೆಯನ್ನು
ಪಡೆದು ಹೊರಟು
ಧರ್ಮರಾಜನು ತನ್ನ
ಮನೆಯನ್ನು ಪ್ರವೇಶಿಸಿದನು.

ವ|| ಆಗಳಾರೂಢಸರ್ವಜ್ಞಂ ಪ್ರತಿಜ್ಞಾರೂಢನಾಗಿ ಗಂಗಾನದೀ

ತರಂಗೋಪಮಾನ

ದುಕೂಲಾಂಬರ

ಪರಿಧಾನನುಮಾಗಿ

ಧವಳಶಯ್ಯಾತಳದೊಳ್

ಮರೆದೊಱೆರಗಿದನಮೋಘಾ

ಸ್ತ್ರ ಧನಂಜಯನಂ

ಪುಂಡರೀಕಾಕ್ಷಂ ನೋಡಿ-

ವಚನ:ಪದವಿಭಾಗ-

ಅರ್ಥ:ಆಗಳು

ಆರೂಢಸರ್ವಜ್ಞಂ

ಪ್ರತಿಜ್ಞಾರೂಢನಾಗಿ (ಆಗ

ಆರೂಢಸರ್ವಜ್ಞನಾದ
ಅರ್ಜುನನು ಪ್ರತಿಜ್ಞೆಯನ್ನು
ಮಾಡಿದವನಾಗಿ) ಗಂಗಾನದೀ
ತರಂಗೋಪಮಾನ
(ಗಂಗಾನದಿಯ ಅಲೆಗಳಿಗೆ
ಸಮಾನವಾದ)
ದುಕೂಲಾಂಬರ
ಪರಿಧಾನನುಮಾಗಿ (ರೇಷ್ಮೆಯ
ಬಟ್ಟೆಯ
ಹೊದಿಕೆಯುಳ್ಳವನಾಗಿ)
ಧವಳಶಯ್ಯಾ ತಳದೊಳ್

(ಬಿಳಿಯ ಹಾಸಿಗೆಯ ಮೇಲೆ) ಮರೆದೊಱಗಿದನು ಅಮೋಘಾಸ್ತ್ರ ಧನಂಜಯನಂ ಪುಂಡರೀಕಾಕ್ಷಂ ನೋಡಿ (ನಿದ್ರಿಸುತ್ತ ಮಲಗಿದ್ದ ಅಮೋಘಾಸ್ತ್ರ ಧನಂಜಯನಾದ ಅರ್ಜುನನನ್ನು ಕೃಷ್ಣನು ನೋಡಿ)-

ವಚನ:ಅರ್ಥ: ಆಗ ಆರೂಢಸರ್ವಜ್ಞನಾದ

ಅರ್ಜುನನು ಪ್ರತಿಜ್ಞೆಯನ್ನು
ಮಾಡಿದವನಾಗಿ
ಗಂಗಾನದಿಯ ಅಲೆಗಳಿಗೆ
ಸಮಾನವಾದ ನಾಲ್ಕು
ಯೋಜನದ ಶಕಟವ್ಯೂಹದ
ಬಾಗಿಲೊಳ್ ಬಾಹ್ಲೀಕ
ರೇಷ್ಮೆಯ ಬಟ್ಟೆಯ
ಹೊದಿಕೆಯುಳ್ಳವನಾಗಿ
ಬಿಳಿಯ ಹಾಸಿಗೆಯ ಮೇಲೆ
ಮೈಮರೆತು/ನಿದ್ರಿಸುತ್ತ
ಮಲಗಿದ್ದ ಅಮೋಘಾಸ್ತ್ರ

ಧನಂಜಯನಾದ
ಅರ್ಜುನನನ್ನು ಕೃಷ್ಣನು
ನೋಡಿ-

ಚಂ|| ಅರಿದು ಕೊಲಲ್ಕೆ
ಸೈಂಧವನನಾಜಿಯೊಳೀತನ
ಪೂಣ್ದ ಪೂಣ್ಕೆಯುಂ
ಪಿರಿದವನುಗ್ರ ಪಾಶುಪತ
ಬಾಣದಿನಲ್ಲದೆ
ಸಾಯನಂತದಂ|
ಹರನೊಸೆದಿತ್ತುಮೇನದಱ
ಮುಷ್ಟಿಯನೀಯನೆ

ಬೇಡವೇಳ್ಪುದಾ ದರದದನೆಂದು ಚಕ್ರಿ ಶಿವನಲ್ಲಿಗೆ ಕೊಂಡೊಗೆದಂ ಕಿರೀಟಿಯಂ|| ೧೩೦ ||

ಪದ್ಯ-೧೩೦:ಪದವಿಭಾಗ-ಅರ್ಥ:ಅರಿದು(ಸಹಜ ಯುದ್ಧಮಾಡಿ) ಕೊಲಲ್ಕೆ ಸೈಂಧವನನು ಆಜಿಯೊಳ್ (ಸೈಂಧವನನ್ನು ಸಹಜ ಯುದ್ಧಮಾಡಿ ಕೊಲ್ಲುವುದು ಅಸಾಧ್ಯ.) ಈತನ ಪೂಣ್ದ

ಪೂಣ್ಕೆಯುಂ ಪಿರಿದು (ಇವನು (ಅರ್ಜುನನು) ಮಾಡಿದ ಪ್ರತಿಜ್ಞೆಯೂ ಗುರುತರವಾದುದು.) ಅವನ ಉಗ್ರ ಪಾಶುಪತ ಬಾಣದಿನಲ್ಲದೆ ಸಾಯನು (ಜಯದ್ರಥನು ಉಗ್ರವಾದ ಪಾಶುಪತದಿಂದಲ್ಲದೆ ಸಾಯುವುದಿಲ್ಲ.) ಅಂತೆ ಅದಂ ಹರನು ಒಸೆದು ಇತ್ತುಂ ಏನದಱ ಮುಷ್ಟಿಯನು

ಈಯನೆ (ಹಾಗೆ ಅದನ್ನು ಈಶ್ವರನು ಪ್ರೀತಿಯಿಂದ ಕೊಟ್ಟಿದ್ದರೆ ತಾನೆ ಏನು ಪ್ರಯೋಜನ? ಅದರ ಪ್ರಯೋಗ ಮಂತ್ರವನ್ನು ಕೊಟ್ಟಿಲ್ಲವಲ್ಲ, ಕೊಡದಿರುವನೇ?) ಬೇಡವೇಳ್ಪುದು ಆದರದ ಅದನು ಎಂದು (ಅದನ್ನು ಭಕ್ತಿಯಿಂದ ಬೇಡಬೇಕಾಗಿದೆ ಎಂದು) ಚಕ್ರಿ ಶಿವನಲ್ಲಿಗೆ

ಕೊಂಡೊಗೆದಂ ಕಿರೀಟಿಯಂ (ಕೃಷ್ಣನು ಅರ್ಜುನನನ್ನು ಶಿವನಲ್ಲಿಗೆ ಕರೆದುಕೊಂಡು ಹಾರಿ ಹೋದನು.)

ಪದ್ಯ-೧೩೦:ಅರ್ಥ: ಸೈಂಧವನನ್ನು ಸಹಜ ಯುದ್ಧಮಾಡಿ ಕೊಲ್ಲುವುದು ಅಸಾಧ್ಯ. ಇವನು (ಅರ್ಜುನನು) ಮಾಡಿದ ಪ್ರತಿಜ್ಞೆಯೂ ಗುರುತರವಾದುದು.

ಜಯದ್ರಥನು ಉಗ್ರವಾದ ಪಾಶುಪತದಿಂದಲ್ಲದೆ ಸಾಯುವುದಿಲ್ಲ. ಹಾಗೆ ಅದನ್ನು ಈಶ್ವರನು ಪ್ರೀತಿಯಿಂದ ಕೊಟ್ಟಿದ್ದರೆ ತಾನೆ ಏನು ಪ್ರಯೋಜನ? ಅದರ ಪ್ರಯೋಗ ಮಂತ್ರವನ್ನು ಕೊಟ್ಟಿಲ್ಲವಲ್ಲ ಕೊಡದಿರುವನೇ?; ಅದನ್ನು ಭಕ್ತಿಯಿಂದ ಬೇಡಬೇಕಾಗಿದೆ ಎಂದು ಕೃಷ್ಣನು ಅರ್ಜುನನನ್ನು

ಶಿವನಲ್ಲಿಗೆ ಕರೆದುಕೊಂಡು
ಹೋದನು.

ವ|| ಅಂತು ಮನಪವನವೇಗದಿಂ ಕೈಳಾಸ ಶೈಳಮನೆಯ್ದಿ ಕದನತ್ರಿಣೇತ್ರನಂ ತ್ರಿಣೇತ್ರನ ಮುಂದಿಟಿಪುವುದುಮಭವಂ ತನ್ನ ಪಾದಪದ್ಮಂಗಳ್ಗೆಱಗಿದತಿರಥ ಮಥನನುಮಂ ಮಧುಮಥನನು

ಮನಮೃತದೃಷ್ಟಿಯಿಂ ನೋಡಿ ಪಾಶುಪತದ ಮುಷ್ಟಿಯಂ ಬೇಡಲೆಂದು ಬಂದುದಂ ತನ್ನ ದಿವ್ಯಜ್ಞಾನದಿಂದಮಱಿದು-

ವಚನ:ಪದವಿಭಾಗ-

ಅರ್ಥ:ಅಂತು ಮನ ಪವನವೇಗದಿಂ (ಹಾಗೆ ಯೋಚಿಸಿ, ಮನೋವೇಗ ವಾಯುವೇಗದಿಂದ ಕೈಲಾಸ ಪರ್ವತವನ್ನು ಸೇರಿ,) ಕೈಳಾಸ ಶೈಳಮನು ಎಯ್ದಿ (ಕೈಲಾಸ

ಪರ್ವತವನ್ನು ಸೇರಿ,)
ಕದನತ್ರಿಣೇತ್ರನಂ ತ್ರಿಣೇತ್ರನ
ಮುಂದೆ ಇಱಿಪುವುದುಮ್
(ಅರ್ಜುನನನ್ನು ಈಶ್ವರನ
ಮುಂದೆ ಇಳಿಸಿದನು,
ಇಳಿಸಲು) ಅಭವಂ ತನ್ನ
ಪಾದಪದ್ಮಂಗಳ್ಗೆ ಎಱಗಿದ
ಅತಿರಥ ಮಥನನುಮಂ
ಮಧುಮಥನನುಮಂ
ಅಮೃತದೃಷ್ಟಿಯಿಂ ನೋಡಿ
(ಅರ್ಜುನನನ್ನೂ ಕೃಷ್ಣನನ್ನೂ

ಅಮೃತದೃಷ್ಟಿಯಿಂದ ನೋಡಿದನು) ಪಾಶುಪತದ ಮುಷ್ಟಿಯಂ ಬೇಡಲೆಂದು ಬಂದುದಂ ತನ್ನ ದಿವ್ಯಜ್ಞಾನದಿಂದಂ ಅಱಿದು (ಪಾಶುಪತದ ಮುಷ್ಟಿಯನ್ನು ಮಂತ್ರವನ್ನು ಬೇಡುವುದಕ್ಕಾಗಿ ಬಂದಿರುವುದನ್ನು ತನ್ನ ದಿವ್ಯಜ್ಞಾನದಿಂದ ತಿಳಿದನು.)-

ವಚನ:ಅರ್ಥ:ಹಾಗೆ ಯೋಚಿಸಿ, ಮನೋವೇಗ

ವಾಯುವೇಗದಿಂದ ಕೈಲಾಸ ಪರ್ವತವನ್ನು ಸೇರಿ, ಅರ್ಜುನನನ್ನು ಈಶ್ವರನ ಮುಂದೆ ಇಳಿಸಿದನು. ಶಿವನು ತನ್ನ ಪಾದಕಮಲಗಳಿಗೆರಗಿದ ಅರ್ಜುನನನ್ನೂ ಕೃಷ್ಣನನ್ನೂ ಅಮೃತದೃಷ್ಟಿಯಿಂದ ನೋಡಿದನು. ಪಾಶುಪತದ ಮುಷ್ಟಿಯನ್ನು ಮಂತ್ರವನ್ನು ಬೇಡುವುದಕ್ಕಾಗಿ

ಬಂದಿರುವುದನ್ನು ತನ್ನ ದಿವ್ಯಜ್ಞಾನದಿಂದ ತಿಳಿದನು.

ಕಂ|| ಅಪಗತ ಕಪಟದೆ
ನಟನದ
ನುಪದೇಶಂಗೆಯ್ದು ಪರಸಿ
ಪೋಗೆನೆ ಪೊಡೆಮ|
ಟ್ಟು ಪಸಾದಮೆಂದ ಹರಿಗನ
ನುಪೇಂದ್ರನಾ ದರ್ಭಶಯನ
ತಳಕಿಟಿೞಿಪುವುದುಂ|| ೧೩೧ ||

ಪದ್ಯ-೧೩೦:ಪದವಿಭಾಗ-ಅರ್ಥ:ಅಪಗತ ಕಪಟದೆ

(ಕಪಟ ಇಲ್ಲದೆ) ನಟನು ಅದನು ಉಪದೇಶಂಗೆಯ್ದು ಪರಸಿ ಪೋಗೆನೆ (ಕಪಟ ಇಲ್ಲದೆ ಆ ಮಂತ್ರೋಪದೇಶ ಮಾಡಿ ಹರಸಿದನು, ಹೋಗು ಎನ್ನಲು) ಪೊಡೆಮಟ್ಟು ಪಸಾದಮೆಂದ ಹರಿಗನನು (ನಮಸ್ಕರಿಸಿ ಅನುಗ್ರಹೀತನಾದೆನೆಂದು ಹೇಳಿದ ಅರ್ಜುನನನ್ನು) ಉಪೇಂದ್ರನು ಆ

ದರ್ಭಶಯನ ತಳಕೆ ಇಟ್ಟಿಪುವುದುಂ (ಕೃಷ್ಣನು ದರ್ಭೆಯಿಂದ ಮಾಡಿದ (ಹಿಂದಿನ) ಹಾಸಿಗೆಯ ಮೇಲಕ್ಕೆ ತಂದು ಇಳಿಸಿದನು.)

ಪದ್ಯ-೧೩೦:ಅರ್ಥ: ಕಪಟ ಇಲ್ಲದೆ ಆ ಮಂತ್ರೋಪದೇಶ ಮಾಡಿ ಹರಸಿದನು, ಹೋಗು ಎನ್ನಲು. ನಮಸ್ಕರಿಸಿ ಅನುಗ್ರಹೀತನಾದೆನೆಂದು ಹೇಳಿದ ಅರ್ಜುನನನ್ನು

ಕೃಷ್ಣನು ದರ್ಭೆಯಿಂದ ಮಾಡಿದ (ಹಿಂದಿನ) ಹಾಸಿಗೆಯ ಮೇಲಕ್ಕೆ ತಂದು ಇಳಿಸಿದನು.

ವ|| ಅಂತುದಾರ ಮಹೇಶ್ವರನೀಶ್ವರ ವರಪ್ರಸಾದಮೆಲ್ಲಂ ತನಗೆ ನನಸಾಗೆಯುಂ ಕನಸಿನಂದಮಾಗಿ ತೋರೆ ಮಂಗಳಪಾಠಕರವಂಗಳೊಳ್ ಭೋಂಕನೆಚ್ಚತ್ತನನ್ನೆಗಂ-

ವಚನ:ಪದವಿಭಾಗ-ಅರ್ಥ:ಅಂತು ಉದಾರ ಮಹೇಶ್ವರನು ಈಶ್ವರ ವರಪ್ರಸಾದಮೆಲ್ಲಂ ತನಗೆ ನನಸಾಗೆಯುಂ ಕನಸಿನಂದಮಾಗಿ ತೋರೆ(ಈಶ್ವರನ ವರಪ್ರಸಾದವೆಲ್ಲ ತನಗೆ ಪ್ರತ್ಯಕ್ಷನಾಗಿದ್ದರೂ ಕನಸಿನಂತೆ ತೋರುತ್ತಿರಲು) ಮಂಗಳಪಾಠಕ

ರವಂಗಳೊಳ್
ಭೋಂಕನೆೞ್ಚಿತ್ತನು ಅನ್ನೆಗಂ
(ಸ್ತುತಿಪಾಠಕರ
ಮಂಗಳಧ್ವನಿಯಿಂದ
ಭೋಂಕನೆ ಎಚ್ಚರಗೊಂಡನು;
ಅಷ್ಟರಲ್ಲಿ) -
ವಚನ:ಅರ್ಥ:ಉದಾರಮ
ಹೇಶ್ವರನಾದ ಅರ್ಜುನನು
ಈಶ್ವರನ ವರಪ್ರಸಾದವೆಲ್ಲ
ತನಗೆ ಪ್ರತ್ಯಕ್ಷನಾಗಿದ್ದರೂ
ಕನಸಿನಂತೆ ತೋರುತ್ತಿರಲು

ಸ್ತುತಿಪಾಠಕರ
ಮಂಗಳಧ್ವನಿಯಿಂದ
ಭೋಂಕನೆ ಎಚ್ಚರಗೊಂಡನು;
ಅಷ್ಟರಲ್ಲಿ -

ಕಂ|| ತನ್ನ
ಸುತನಟಿಲೊಳರ್ಜುನ
ನೆನ್ನುದಯಮನೆಯ್ದೆ ಪಾರ್ದು
ಪಗೆವರ ಬೇರೊಳ್|
ಬೆನ್ನೀರನರಿಯದಿರನದ
ನಾನ್ನೋಡುವೆನೆಂಬ
ತೆಱದಿನಿನನುದಯಿಸಿದಂ||

೧೩೨ ||

ಪದ್ಯ-೦೦:ಪದವಿಭಾಗ-

ಅರ್ಥ:ತನ್ನ ಸುತನಟಿಲೊಳ್ ಅರ್ಜುನನ ಎನ್ನ ಉದಯಮನು ಎಯ್ದೆ ಪಾರ್ದು (ತನ್ನ ಮಗನ ಸಾವಿನ ದುಃಖದಲ್ಲಿ ಅರ್ಜುನನು ನನ್ನ- ಸೂರ್ಯನ ಉದಯವನ್ನೇ ನಿರೀಕ್ಷಿಸುತ್ತಿದ್ದು) ಪಗೆವರ ಬೇರೊಳ್ ಬೆನ್ನೀರನು (ಶತ್ರುಗಳ ಬೇರಿನಲ್ಲಿ

ಬಿಸಿನೀರನ್ನು ಎರೆಯದೇ
ಇರುವುದಿಲ್ಲ) ಅರಿಯದಿರನು
ಅದನು ಆ ನ್ನೋಡುವೆನೆಂಬ
ತೆಱದಿಂ ಇನನು
ಉದಯಿಸಿದಂ (ಶತ್ರುಗಳ
ಬೇರಿನಲ್ಲಿ ಬಿಸಿನೀರನ್ನು
ಎರೆಯದೇ ಇರುವುದಿಲ್ಲ ;
ಅದನ್ನು ನಾನು ನೋಡುತ್ತೇನೆ
ಎಂಬ ರೀತಿಯಲ್ಲಿ
ಸೂರ್ಯನು
ಉದಯವಾದನು.)

ಪದ್ಯ-00:ಅರ್ಥ: ತನ್ನ ಮಗನ ಸಾವಿನ ದುಃಖದಲ್ಲಿ ಅರ್ಜುನನು ನನ್ನುದಯವನ್ನೇ ನಿರೀಕ್ಷಿಸುತ್ತಿದ್ದು ಶತ್ರುಗಳ ಬೇರಿನಲ್ಲಿ ಬಿಸಿನೀರನ್ನು ಎರೆಯದೇ ಇರುವುದಿಲ್ಲ ; ಅದನ್ನು ನಾನು ನೋಡುತ್ತೇನೆ ಎಂಬ ರೀತಿಯಲ್ಲಿ ಸೂರ್ಯನು ಉದಯವಾದನು.

ವ|| ಅಗಲ್ಳುಭಯ
ಸೈನ್ಯಾಂಬುರಾಶಿಗಳಂಬುರಾಶಿ
ಗಳ್ ನೆಲೆಯಿಂ ತಳರ್ವಂತೆ
ತಳರೆ
ಕಳಶಸಂಭವನಂದಿನನುವರ
ದೊಳ್ ತನ್ನಂ ಪರಿಚ್ಛೇದಿಸಿ
ಕನಕ ಕಳಶ ಸಂಭೃತ ಮಂಗಳ
ಜಳಂಗಳಂ ಮಿಂದು ಧವಳ
ವಸನ ದುಕೂಲಾಂಬರ
ಮಂಗಳ ವಿಭೂಷಣಾನುಂ
ನಿರ್ವರ್ತೀತ

ಸಂಧ್ಯೋಪಾಸನನುಂ
ಪರಿಸಮಾಪ್ತ ಜಪನುಮರ್ಚಿತ
ಶಿತಿಕಂಠನುಮಾಹುತಿ
ಹುತಾಗ್ನಿಹೋತ್ರನುಂ ಪೂಜಿತ
ಧರಾಮರನುಂ ನೀರಾಜಿತ
ರಥತುರಗನುಮಾಗಿ ರಜತ
ರಥಮನೇಱಿ ಸಂಗ್ರಾಮ
ಭೂಮಿಯನೆಯ್ದವಂದು
ಸಾಮಂತ
ಚೂಡಾಮಣಿಯನಿನಿಸು
ಮಾರ್ಕೊಂಡು ನಿಲ್ವೊಡಂ

ಸಿಂಧುರಾಜನಂ
ಕಾವೊಡಮನೇಕ
ವ್ಯೂಹರಚನೆಯೊಳಲ್ಲದೆ
ಗೆಲಲ್ ಬಾರದೆಂದು
ಚಕ್ರವ್ಯೂಹದೊಳಂಗರಾಜ
ಶಲ್ಯ ವೃಷಸೇನ ಕೃಪ
ಕೃತವರ್ಮಾಶ್ವತ್ಥಾಮರಂ
ದುರ್ಯೋಧನಂ ಬೆರಸಿರಿಸಿ
ಮತ್ತಿತ್ತ ನಾಲ್ಕು ಯೋಜನದ
ಶಕಟವ್ಯೂಹದ ಬಾಗಿಲೊಳ್
ಬಾಹ್ಲೀಕ

ಸೋಮದತ್ತವಿಂದಾನುವಿಂದ
ರೊಡನೆ ಸಂಸಪ್ತಕರನಿರಿಸಿ
ಶಕಟವ್ಯೂಹದ ಪೆಱಗೆ ನಾಲ್ಕು
ಯೋಜನದೊಳರ್ಧಚಂದ್ರವ್
ಯೂಹದೊಳಧಿಕ ಬಲರಪ್ಪ
ಸೌಬಲ ದುಶ್ಶ್ಯಾಸನಾದಿ
ಪ್ರಧಾನ ವೀರಭಟ ಕೋಟಿಯ
ನಡುವೆ ಸಿಂಧುರಾಜನನಿರಿಸಿ
ಮೊದಲ ಚಕ್ರವ್ಯೂಹದ
ಬಾಗಿಲೊಳ್
ಶರಾಸನಾಚಾರ್ಯಂ

ನಿಂದನಿತ್ತ
ಪಾಂಡವಬಲಮೆಲ್ಲಮುಂ
ವಿಕ್ರಮಾರ್ಜುನನುಂ
ವಜ್ರಪಂಜರದಂತಭೇದ್ಯ.ಮ
ಪ್ಪ ವಜ್ರವ್ಯೂಹಮನೊಡ್ಡಿ
ಧರ್ಮರಾಜನೊಡನೆ ಭೀಮ
ನಕುಳ ಸಹದೇವ ಸಾತ್ಯಕಿ
ಧೃಷ್ಟದ್ಯುಮ್ನ ಘಟೋತ್ಕಚ
ಪ್ರಮುಖ ನಾಯಕರಂ ಪೇೞ್ದು
ದ್ರುಪದ ವಿರಾಟ ಶಿಖಂಡಿ
ಯುಧಾಮನ್ಯೂತ್ತಮೌಜಕ್ಕೈಕ

ಯ ಪ್ರಧಾನ ನಾಯಕರಂ
ತನ್ನೊಡನೆ ಕೂಡಿಕೊಂಡು
ನಿಜಾಗ್ರಜನಂ ಬೀೞ್ಕೊಂಡು
ನಿಜರಥಮಂ ರಥಾಂಗಧರನಂ
ಮುನ್ನಮೇಱಲ್ವೇೞ್ದು ಮೂಱು
ಸೂೞ್ ಬಲವಂದು
ಪೊಡಮಟ್ಟು ರಥಮನೇಱಿ
ವಜ್ರಕವಚಮಂ ತೊಟ್ಟು
ತವದೊಣೆಗಳನಮರೆ ಬಿಗಿದು
ಗಾಂಡೀವಮನೇಱಿಸಿ ನೀವಿ
ಜೇವೊಡೆದಾಗಳ್-

ವಚನ:ಪದವಿಭಾಗ-ಅರ್ಥ:ಅಗಲು ಉಭಯ ಸೈನ್ಯಾಂಬುರಾಶಿಗಳಂಬುರಾಶಿಗಳ್ ನೆಲೆಯಿಂ ತಳರ್ವಂತೆ ತಳರೆ (ಆಗ ಎರಡು ಸೇನಾಸಮುದ್ರಗಳೂ ನೆಲೆಯಿಂದ ಹೊರಡುವಂತೆ ಹೊರಟು,) ಕಳಶಸಂಭವನ ಅಂದಿನ ಅನುವರದೊಳ್ ತನ್ನಂ ಪರಿಚ್ಛೇದಿಸಿ (ದ್ರೋಣಾಚಾರ್ಯನು ಆ

ದಿನದ ಯುದ್ಧದಲ್ಲಿ ತನ್ನನ್ನು
(ತನ್ನ ಸ್ಥಿತಿಯನ್ನು)
ನಿಶ್ಚಯಿಸಿಕೊಂಡು) ಕನಕ
ಕಳಶ ಸಂಭೃತ ಮಂಗಳ
ಜಳಂಗಳಂ ಮಿಂದು (ಚಿನ್ನದ
ಕಲಶಗಳಲ್ಲಿ ತುಂಬಿದ
ಮಂಗಳಜಲದಲ್ಲಿ
ಸ್ನಾನಮಾಡಿ) ಧವಳ ವಸನ
ದುಕೂಲಾಂಬರ ಮಂಗಳ
ವಿಭೂಷಣನುಂ ನಿರ್ವತೀತ
ಸಂಧ್ಯೋಪಾಸನನುಂ

(ಬಿಳಿಯ ರೇಷ್ಮೆಯ ಉಡುಪೇ
ಮೊದಲಾದ
ಮಂಗಳಾಭರಣಯುತನಾಗಿ
ಸಂಧ್ಯಾವಂದನವನ್ನೂ)
ಪರಿಸಮಾಪ್ತ ಜಪನುಮರ್ಚಿತ
ಶಿತಿಕಂಠನುಮ್ ಆಹುತಿ
ಹುತಾಗ್ನಿಹೋತ್ರನುಂ
(ಜಪವನ್ನೂ ಮುಗಿಸಿ
ಶಿವನನ್ನು ಆರಾಸಿ
ಅಗ್ನಿಗಾಹುತಿಯನ್ನಿತ್ತು)
ಪೂಜಿತ ಧರಾಮರನುಂ

(ಬ್ರಾಹ್ಮಣರನ್ನು
ವಂದಿಸಿದವನಾಗಿ) ನೀರಾಜಿತ
ರಥತುರಗನುಮಾಗಿ ರಜತ
ರಥಮನು ಏಱ (ರಥ
ಕುದುರೆಗಳಿಗೆ ಆರತಿ ಮಾಡಿ
ಬೆಳ್ಳಿಯ ತೇರನ್ನು ಹತ್ತಿ)
ಸಂಗ್ರಾಮ ಭೂಮಿಯನು
ಎಯ್ದೆವಂದು (ಯುದ್ಧರಂಗದ
ಸಮೀಪಕ್ಕೆ ಬಂದು- ಬಂದನು)
ಸಾಮಂತ
ಚೂಡಾಮಣಿಯನು ಇನಿಸು

ಮಾರ್ಕೊಂಡು ನಿಲ್ವೊಡಂ
(ಸಾಮಂತ
ಚೂಡಾಮಣಿಯಾದ
ಅರ್ಜುನನನ್ನು ಸ್ವಲ್ಪ ಎದುರಿಸಿ
ನಿಲ್ಲಬೇಕಾದರೂ)
ಸಿಂಧುರಾಜನಂ ಕಾವೊಡಮ್
ಅನೇಕ
ವ್ಯೂಹರಚನೆಯೊಳಲ್ಲದೆ
ಗೆಲಲ್ ಬಾರದೆಂದು
(ಸಾಮಂತ
ಚೂಡಾಮಣಿಯಾದ

ಅರ್ಜುನನನ್ನು ಸ್ವಲ್ಪ ಎದುರಿಸಿ
ನಿಲ್ಲಬೇಕಾದರೂ
ಸೈಂಧವನನ್ನು
ರಕ್ಷಿಸಬೇಕಾದರೂ ಅನೇಕ
ವ್ಯೂಹರಚನೆಯಿಂದಲ್ಲದೆ
ಗೆಲ್ಲಲು ಸಾಧ್ಯವಿಲ್ಲವೆಂದು)
ಚಕ್ರವ್ಯೂಹದೊಳು ಅಂಗರಾಜ
ಶಲ್ಯ ವೃಷಸೇನ ಕೃಪ
ಕೃತವರ್ಮಅಶ್ವತ್ಥಾಮರಂ
ದುರ್ಯೋಧನಂ ಬೆರಸಿ ಇರಿಸಿ
ಮತ್ತಿತ್ತ ನಾಲ್ಕು ಯೋಜನದ

ಶಕಟವ್ಯೂಹದ ಬಾಗಿಲೊಳ್
(ಮತ್ತೆ ಇತ್ತ ನಾಲ್ಕು
ಯೋಜನದ ಶಕಟವ್ಯೂಹದ
ಬಾಗಿಲಲ್ಲಿ ಇರಿಸಿದನು)
ಬಾಹ್ಲೀಕ ಸೋಮದತ್ತ ವಿಂದ
ಅನುವಿಂದರೊಡನೆ
ಸಂಸಪ್ತಕರನು ಇರಿಸಿ,
ಶಕಟವ್ಯೂಹದ ಪೆಱಗೆ ನಾಲ್ಕು
(ಶಕಟವ್ಯೂಹದ ಹಿಂದೆ ನಾಲ್ಕು
ಯೋಜನದಲ್ಲಿ)
ಯೋಜನದೊಳ್

ಅರ್ಧಚಂದ್ರವ್ಯೂಹದೊಳು ಅಧಿಕ ಬಲರಪ್ಪ ಸೌಬಲ ದುಶ್ಶ್ಯಾಸನಾದಿ ಪ್ರಧಾನ ವೀರಭಟ ಕೋಟಿಯ ನಡುವೆ ಸಿಂಧುರಾಜನನು ಇರಿಸಿ (ಪ್ರಧಾನ ನಾಯಕರ ಸಮೂಹದ ಮಧ್ಯದಲ್ಲಿ ಸಿಂಧುರಾಜನನ್ನು ಇರಿಸಿ- ಇರಿಸಿದನು.) ಮೊದಲ ಚಕ್ರವ್ಯೂಹದ ಬಾಗಿಲೊಳ್ ಶರಾಸನಾಚಾರ್ಯಂ ನಿಂದನು

(ಮೊದಲನೆಯ ಚಕ್ರವ್ಯೂಹದ
ಬಾಗಿಲಿನಲ್ಲಿ
ಚಾಪಾಚಾರ್ಯನಾದ
ದ್ರೋಣನೇ ನಿಂತುಕೊಂಡನು.)
ಇತ್ತ ಪಾಂಡವಬಲಮ್
ಎಲ್ಲಮುಂ
ವಿಕ್ರಮಾರ್ಜುನನುಂ
ವಜ್ರಪಂಜರದಂತೆ
ಅಭೇದ್ಯಮಪ್ಪ
ವಜ್ರವ್ಯೂಹಮನು ಒಡ್ಡಿ
(ಭೇದಿಸುವುದಕ್ಕಾಗದಿರುವ

ವಜ್ರವ್ಯೂಹವನ್ನು ಒಡ್ಡಿ) ಧರ್ಮರಾಜನೊಡನೆ ಭೀಮ ನಕುಳ ಸಹದೇವ ಸಾತ್ಯಕಿ ಧೃಷ್ಟದ್ಯುಮ್ನ ಘಟೋತ್ಕಚ ಪ್ರಮುಖ ನಾಯಕರಂ ಪೇಳ್ದು (ಮುಖ್ಯರಾದ ನಾಯಕರನ್ನು ಇರಹೇಳಿ) ದ್ರುಪದ ವಿರಾಟ ಶಿಖಂಡಿ ಯುಧಾಮನ್ಯು ಉತ್ತಮೌಜ ಕೈಕಯ ಪ್ರಧಾನ ನಾಯಕರಂ ತನ್ನೊಡನೆ ಕೂಡಿಕೊಂಡು ನಿಜಾಗ್ರಜನಂ

ಬೀೞ್ಕೊಂಡು (ತಮ್ಮಣ್ಣನ
ಅಪ್ಪಣೆಯನ್ನು ಪಡೆದು
ಹೋಗಿ- ಹೋದನು)
ನಿಜರಥಮಂ ರಥಾಂಗಧರನಂ
ಮುನ್ನಮೆ ಏಱಲ್ವೇೞ್ದು
(ಕೃಷ್ಣನನ್ನು ಮೊದಲು ತನ್ನ
ತೇರನ್ನು ಹತ್ತಲು ಹೇಳಿ)
ಮೂಱು ಸೂೞ್ ಬಲವಂದು
ಪೊಡಮಟ್ಟು ರಥಮನೇಱ್
(ಮೂರು ಸಲ ಪ್ರದಕ್ಷಿಣ
ನಮಸ್ಕಾರಮಾಡಿ ರಥವನ್ನು

ಹತ್ತಿ) ವಜ್ರಕವಚಮಂ ತೊಟ್ಟು ತವದೊಣೆಗಳನು ಅಮರೆ ಬಿಗಿದು (ಬತ್ತಳಿಕೆಯನ್ನು (ಅಕ್ಷಯತೂಣೀರ) ಬಿಗಿಯಾಗಿ ಬಿಗಿದುಕೊಂಡು) ಗಾಂಡೀವಮನು ಏಱಿಸಿ ನೀವಿ ಜೇವೊಡೆದಾಗಳ್ (ಗಾಂಡೀವಕ್ಕೆ ಹೆದೆಯೇರಿಸಿ ನೀವಿ ಶಬ್ದ ಮಾಡಿದನು. ಆಗ)-

ವಚನ:ಅರ್ಥ: ಆಗ ಎರಡು ಸೇನಾಸಮುದ್ರಗಳೂ

ನೆಲೆಯಿಂದ ಹೊರಡುವಂತೆ ಹೊರಟರು. ದ್ರೋಣಾಚಾರ್ಯನು ಆ ದಿನದ ಯುದ್ಧದಲ್ಲಿ ತನ್ನನ್ನು (ತನ್ನ ಸ್ಥಿತಿಯನ್ನು) ನಿಶ್ಚಯಿಸಿಕೊಂಡು ಚಿನ್ನದ ಕಲಶಗಳಲ್ಲಿ ತುಂಬಿದ ಮಂಗಳಜಲದಲ್ಲಿ ಸ್ನಾನಮಾಡಿ ಬಿಳಿಯ ರೇಷ್ಮೆಯ ಉಡುಪೇ ಮೊದಲಾದ ಮಂಗಳಾಭರಣಯುತನಾಗಿ

ಸಂಧ್ಯಾವಂದನವನ್ನೂ ಜಪವನ್ನೂ ಮುಗಿಸಿ ಶಿವನನ್ನು ಆರಾಸಿ ಅಗ್ನಿಗಾಹುತಿಯನ್ನಿತ್ತು ಬ್ರಾಹ್ಮಣರನ್ನು ವಂದಿಸಿ ರಥ ಕುದುರೆಗಳಿಗೆ ಆರತಿ ಮಾಡಿ ಬೆಳ್ಳಿಯ ತೇರನ್ನು ಹತ್ತಿ ಯುದ್ಧರಂಗದ ಸಮೀಪಕ್ಕೆ ಬಂದನು. ಸಾಮಂತ ಚೂಡಾಮಣಿಯಾದ ಅರ್ಜುನನನ್ನು ಸ್ವಲ್ಪ ಎದುರಿಸಿ ನಿಲ್ಲಬೇಕಾದರೂ

ಸೈಂಧವನನ್ನು
ರಕ್ಷಿಸಬೇಕಾದರೂ ಅನೇಕ
ವ್ಯೂಹರಚನೆಯಿಂದಲ್ಲದೆ
ಗೆಲ್ಲಲು ಸಾಧ್ಯವಿಲ್ಲವೆಂದು
ಚಕ್ರವ್ಯೂಹವನ್ನೇ
ಮುಂಭಾಗದಲ್ಲಿ ಒಡ್ಡಿ
ಸಾಮಂತರಾಜರ
ಸಮೂಹವನ್ನು ಅಲ್ಲಿ
ಇರಹೇಳಿದನು. ಅಲ್ಲಿಗೆ ನಾಲ್ಕು
ಯೋಜನದ ದೂರದಲ್ಲಿದ್ದ
ಪದ್ಮವ್ಯೂಹದಲ್ಲಿ ಕರ್ಣ, ಶಲ್ಯ,

ವೃಷಸೇನ, ಕೃಪ,
ಕೃತವರ್ಮಾಶ್ವತ್ಥಾಮರನ್ನು
ದುರ್ಯೋಧನನೊಡನೆ ಇರಿಸಿ
ಮತ್ತೆ ಇತ್ತ ನಾಲ್ಕು ಯೋಜನದ
ಶಕಟವ್ಯೂಹದ ಬಾಗಿಲಲ್ಲಿ
ಇರಿಸಿದನು.- ಮತ್ತೆ ಈ ಕಡೆ
ನಾಲ್ಕು ಯೋಜನದ
ಶಕಟವ್ಯೂಹದ ಬಾಗಿಲಿನಲ್ಲಿ
ಬಾಹ್ಲಿಕ ಸೋಮದತ್ತ
ವಿಂದಾನುವಿಂದರೊಡನೆ
ಸಂಸಪ್ತಕರನಿಟ್ಟನು.

ಶಕಟವ್ಯೂಹದ ಹಿಂದೆ ನಾಲ್ಕು
ಯೋಜನದಲ್ಲಿ
ಅರ್ಧಚಂದ್ರವ್ಯೂಹದಲ್ಲಿ
ಅಕಬಲರಾದ ಶಕುನಿ
ದುಶ್ಯಾಸನನೇ ಮೊದಲಾದ
ಪ್ರಧಾನ ನಾಯಕರ
ಸಮೂಹದ ಮಧ್ಯದಲ್ಲಿ
ಸಿಂಧುರಾಜನನ್ನು ಇರಿಸಿದನು.
ಮೊದಲನೆಯ ಚಕ್ರವ್ಯೂಹದ
ಬಾಗಿಲಿನಲ್ಲಿ
ಚಾಪಾಚಾರ್ಯನಾದ

ದ್ರೋಣನೇ ನಿಂತುಕೊಂಡನು.
ಈ ಕಡೆ ಅರ್ಜುನನೂ
ಪಾಂಡವಸೈನ್ಯವನ್ನೆಲ್ಲ
ವಜ್ರಪಂಜರದಂತೆ
ಭೇದಿಸುವುದಕ್ಕಾಗದಿರುವ
ವಜ್ರವ್ಯೂಹವನ್ನು ಒಡ್ಡಿ/
ಎದುರು ನಿಲ್ಲಿಸಿ,
ಧರ್ಮರಾಜನೊಡನೆ ಭೀಮ
ನಕುಳ ಸಹದೇವ ಸಾತ್ಯಕಿ
ಧೃಷ್ಟದ್ಯುಮ್ನ ಘಟೋತ್ಕಚರೇ
ಮುಖ್ಯರಾದ ನಾಯಕರನ್ನು

ಇರಹೇಳಿ ದ್ರುಪದ ವಿರಾಟ
ಶಿಖಂಡಿ
ಯುಧಾಮನ್ಯೂತ್ತಮೌಜಸ್
ಕೈಕಯರೇ ಮೊದಲಾದ
ನಾಯಕರನ್ನು ತನ್ನೊಡನೆ
ಸೇರಿಸಿಕೊಂಡು ತಮ್ಮಣ್ಣನ
ಅಪ್ಪಣೆಯನ್ನು ಪಡೆದು
ಹೋದನು. ಕೃಷ್ಣನನ್ನು
ಮೊದಲು ತನ್ನ ತೇರನ್ನು
ಹತ್ತಲು ಹೇಳಿ ಮೂರು ಸಲ
ಪ್ರದಕ್ಷಿಣ ನಮಸ್ಕಾರಮಾಡಿ

ರಥವನ್ನು ಹತ್ತಿ
ವಜ್ರಕವಚವನ್ನು ತೊಟ್ಟು
ಬರಿದಾಗದ ಬತ್ತಳಿಕೆಯನ್ನು
(ಅಕ್ಷಯತೂಣೀರ)
ಬಿಗಿಯಾಗಿ ಬಿಗಿದುಕೊಂಡು
ಗಾಂಡೀವಕ್ಕೆ ಹೆದೆಯೇರಿಸಿ
ನೀವಿ ಶಬ್ದ ಮಾಡಿದನು. ಆಗ-

ಪಥ್ವಿ || ಭವಂ ಭವನ ಗೋತ್ರದಿಂದಜನಜಾಂಡದಿಂ ಭಾನು ಭಾ

ನು ವೀಧಿಯಿನಿಳಾತಳಂ

ತಳದಿನೆಯ್ದೆ ಕಿೞ್ತೆೞ್ದು

(ಬರ್ಪಂತೆ) ತೂ|

ಳ್ದವಾರ್ಯ ಭುಜವೀರ್ಯಮಂ

ನೆರೆಯೆ ತೋರ್ಪಿನಂ ಕುಂಭ

ಸಂ

ಭವಂ ಮರಲೆ ತಾಗಿದಂ

ರಿಪುಕುರಂಗ ಕಂಠೀರವಂ||

೧೩೩ ||

ಪದ್ಯ-೧೩೩:ಪದವಿಭಾಗ-

ಅರ್ಥ:ಭವಂ ಭವನ

ಗೋತ್ರದಿಂದ (ಆ ಶಬ್ದದಿಂದ
ಈಶ್ವರನು
ಕೈಲಾಸಪರ್ವತದಿಂದಲೂ)
ಅಜಂ ಅಜಾಂಡದಿಂ (ಬ್ರಹ್ಮನು
ಬ್ರಹ್ಮಾಂಡದಿಂದಲೂ) ಭಾನು
ಭಾನು ವೀಧಿಯಿನು
(ಸೂರ್ಯನು
ಆಕಾಶಮಾರ್ಗದಿಂದಲೂ)
ಇಳಾತಳಂ ತಳದಿಂ ಎಯ್ದೆ
(ಭೂಮಂಡಲವು ತನ್ನ
ಮೂಲದಿಂದಲೂ

ಪೂರ್ಣವಾಗಿ) ಕಿೞ್ತು ಎೞ್ದು
ತೂಳ್ವ(ಕಿತ್ತು ಎದ್ದು ತಳ್ಳುವ
(ಬರುವ) ಹಾಗಾಯಿತು)
ಅವಾರ್ಯ
ಭುಜವೀರ್ಯಮಂ ನೆರೆಯೆ
ತೋರ್ಪಿನಂ
(ತಡೆಯಲಸಾಧ್ಯವಾದ ತನ್ನ
ಬಾಹುಬಲವನ್ನು
(ಅರ್ಜುನನು) ಪೂರ್ಣವಾಗಿ
ಪ್ರದರ್ಶಿಸಿ) ಕುಂಭ ಸಂಭವಂ
ಮರಲೆ (ದ್ರೋಣಾಚಾರ್ಯನು

ಸಂತೋಷಪಡುವಂತೆ) ತಾಗಿದಂ ರಿಪುಕುರಂಗ ಕಂಠೀರವಂ (ರಿಪುಕುರಂಗ ಕಂಠೀರವನಾದ ಅರ್ಜುನನು (ಪ್ರತಿಸೈನ್ಯವನ್ನು) ತಾಗಿದನು- ಎದುರಿಸಿದನು.)

ಪದ್ಯ-೧೩೩:ಅರ್ಥ: ಆ ಶಬ್ದದಿಂದ, ಈಶ್ವರನು ಕೈಲಾಸಪರ್ವತದಿಂದಲೂ, ಬ್ರಹ್ಮನು ಬ್ರಹ್ಮಾಂಡದಿಂದಲೂ, ಸೂರ್ಯನು

ಆಕಾಶಮಾರ್ಗದಿಂದಲೂ, ಭೂಮಂಡಲವು ತನ್ನ ಮೂಲದಿಂದಲೂ ಪೂರ್ಣವಾಗಿ ಕಿತ್ತು ಎದ್ದು ಬರುವ ಹಾಗಾಯಿತು. ತಡೆಯಲಸಾಧ್ಯವಾದ ತನ್ನ ಬಾಹುಬಲವನ್ನು (ಅರ್ಜುನನು) ಪೂರ್ಣವಾಗಿ ಪ್ರದರ್ಶಿಸಿ ದ್ರೋಣಾಚಾರ್ಯನು ಸಂತೋಷಪಡುವಂತೆ

ರಿಪುಕುರಂಗ ಕಂಠೀರವನಾದ ಅರ್ಜುನನು (ಪ್ರತಿಸೈನ್ಯವನ್ನು) ಎದುರಿಸಿದನು.

ವ|| ಅಂತು ತಾಗಿ ಚಕ್ರವ್ಯೂಹದ ಬಾಗಿಲೊಳ್ ತನ್ನಂ ಪುಗಲೀಯದಡ್ಡಮಾಗಿ ನಿಂದ ಕಾರ್ಮುಕಾಚಾರ್ಯನನು ಸೆರೆಗೆಯ್ಯದೆ ವಿನಯಾಸ್ತ್ರಮನೆಚ್ಚು ವಿನಯಮನೆ ಮುಂದಿಟ್ಟು

ಬಲವಂದು ಪೊಡೆಮಟ್ಟು ಪೋಗೆವೋಗೆ-

ವಚನ:ಪದವಿಭಾಗ-

ಅರ್ಥ:ಅಂತು ತಾಗಿ ಚಕ್ರವ್ಯೂಹದ ಬಾಗಿಲೊಳ್ ತನ್ನಂ ಪುಗಲೀಯದೆ ಅಡ್ಡಮಾಗಿ ನಿಂದ ಕಾರ್ಮುಕಾಚಾರ್ಯನನು (ಹಾಗಿ ಎದುರಿಸಿ ಚಕ್ರವ್ಯೂಹದ ಬಾಗಿಲಿನಲ್ಲಿ ತಾನು ಪ್ರವೇಶಿಸುವುದಕ್ಕೆ ನಿಂತಿದ್ದ

ಚಾಪಾಚಾರ್ಯನಾದ
ದ್ರೋಣಾಚಾರ್ಯನನ್ನು)
ಸೆರೆಗೆಯ್ಯದೆ
ವಿನಯಾಸ್ತ್ರಮನೆಚ್ಚು
ವಿನಯಮನೆ ಮುಂದಿಟ್ಟು
(ಕಠಿಣಯುದ್ಧ ಮಾಡದೆ
ವಿನಯಾಸ್ತ್ರವನ್ನೇ ಪ್ರಯೋಗಿಸಿ
ನಮ್ರತೆಯನ್ನೆ
ಮುಂದುಮಾಡಿಕೊಂಡು)
ಬಲವಂದು ಪೊಡೆಮಟ್ಟು
ಪೋಗೆವೋಗೆ (ಪ್ರದಕ್ಷಿಣ

ನಮಸ್ಕರಮಾಡಿ ಮುಂದೆ ಹೋದನು)-

ವಚನ:ಅರ್ಥ: ಹಾಗಿ ಎದುರಿಸಿ ಚಕ್ರವ್ಯೂಹದ ಬಾಗಿಲಿನಲ್ಲಿ ತಾನು ಪ್ರವೇಶಿಸುವುದಕ್ಕೆ ನಿಂತಿದ್ದ ಚಾಪಾಚಾರ್ಯನಾದ ದ್ರೋಣಾಚಾರ್ಯನನ್ನು ಕಠಿಣಯುದ್ಧ ಮಾಡದೆ ವಿನಯಾಸ್ತ್ರವನ್ನೇ ಪ್ರಯೋಗಿಸಿ ನಮ್ರತೆಯನ್ನೆ

ಮುಂದುಮಾಡಿಕೊಂಡು
ಪ್ರದಕ್ಷಿಣ ನಮಸ್ಕರಮಾಡಿ
ಮುಂದೆ ಹೋದನು.

**ಮ|| ಕಮನೀಯಂ ಬಲವಂದು
ಪೋಪನನೆಲೇ
ಪೋಪೋಗದಿರ್ ಪೋಗದಿರ್
ಸಮರಕ್ಕೆನ್ನೊಡನಂಜಿ
ಪೋದೆಯೆನಲಿಂತೆಂದಂ ನರಂ
ದ್ರೋಣರಂ|
ನಿಮಗಾನಂಜುವುದೆನ್ನ
ಬಾಲತನದಿಂದಂದಾದುದಿಂದಾ**

ದುದೇ
ನಿಮಗಾನಂಜದೊಡಂಜಿಸಲ್
ನೆರೆವೆನೇ ತ್ರೈಲೋಕ್ಯಮಂ
ಯುದ್ಧದೊಳ್|| ೧೩೪

ಪದ್ಯ-00:ಪದವಿಭಾಗ-ಅರ್ಥ:ಕಮನೀಯಂ ಬಲವಂದು ಪೋಪಂ (ಸೊಗಸಾದ ರೀತಿಯಲ್ಲಿ ಪ್ರದಕ್ಷಿಣೆ ಮಾಡಿ ಹೋಗುತ್ತಿರುವ ಅರ್ಜುನನನ್ನು ದ್ರೋಣಾಚಾರ್ಯನು) ಎಲೇ

ಪೋಪೋಗದಿರ್ ಪೋಗದಿರ್ ಸಮರಕ್ಕೆ ಎನ್ನೊಡನೆ ಅಂಜಿ ಪೋದೆಯೆನಲ್ ಇಂತೆಂದಂ ನರಂ (‘ಎಲವೋ ಹೋಗಬೇಡ, ಹೋಗಬೇಡ, ನನ್ನೊಡನೆ ಯುದ್ಧ ಮಾಡುವುದಕ್ಕೆ ಹೆದರಿ ಹೋಗುತ್ತಿದ್ದೀಯೆ’ ಎಂದರು. ಅರ್ಜುನನು ಆಚಾರ್ಯರನ್ನು ಕುರಿತು ಹೀಗೆಂದನು-) ದ್ರೋಣರಂ

ನಿಮಗಾನಂಜುವುದು ಎನ್ನ ಬಾಲತನದಿಂದ ಅಂದೆ ಆದುದು ಇಂದು ಆದುದೇ ನಿಮಗೆ ಆನು ಅಂಜದೊಡೆ (‘ನಿಮಗೆ ಹೆದರುವುದು ಬಾಲ್ಯದಿಂದಾದುದು, ಇಂದಾಯಿತೇ? ನಿಮಗೆ ನಾನು ಹೆದರದಿದ್ದರೆ) ಅಂಜಿಸಲ್ ನೆರೆವೆನೇ ತ್ರೈಲೋಕ್ಯಮಂ ಯುದ್ಧದೊಳ್ (ನಿಮಗೆ ನಾನು ಹೆದರದಿದ್ದರೆ ಯುದ್ಧದಲ್ಲಿ

ಮೂರುಲೋಕವನ್ನು
ಹೆದರಿಸಲು ಸಮರ್ಥ
ನಾಗುತ್ತೇನೆಯೇ?’)

ಪದ್ಯ-00:ಅರ್ಥ:
ಸೊಗಸಾದ ರೀತಿಯಲ್ಲಿ
ಪ್ರದಕ್ಷಿಣೆ ಮಾಡಿ
ಹೋಗುತ್ತಿರುವ ಅರ್ಜುನನನ್ನು
ದ್ರೋಣಾಚಾರ್ಯನು,
‘ಎಲವೋ ಹೋಗಬೇಡ,
ಹೋಗಬೇಡ, ನನ್ನೊಡನೆ
ಯುದ್ಧ ಮಾಡುವುದಕ್ಕೆ ಹೆದರಿ

ಹೋಗುತ್ತಿದ್ದೀಯೆ’ ಎಂದರು.
ಅರ್ಜುನನು ಆಚಾರ್ಯರನ್ನು
ಕುರಿತು ಹೀಗೆಂದನು- ‘ನಿಮಗೆ
ಹೆದರುವುದು
ಬಾಲ್ಯದಿಂದಾದುದು,
ಇಂದಾಯಿತೇ? ನಿಮಗೆ ನಾನು
ಹೆದರದಿದ್ದರೆ ಯುದ್ಧದಲ್ಲಿ
ಮೂರುಲೋಕವನ್ನು
ಹೆದರಿಸಲು ಸಮರ್ಥ
ನಾಗುತ್ತೇನೆಯೇ?’

ವ|| ಅಂತು ವಿನಯಮನೆ ನುಡಿದ ವಿಕ್ರಮಾರ್ಜುನನಂ ಗುರುವನೇಕಾಶೀರ್ವಚನಂಗ ಳಿಂ ಪರಸುವುದುಂ ಪದುಮನಾಭನ ಚೋದಿಸುವ ರಥವೇಗದಿಂ ಪದ್ಮವ್ಯೂಹಮನೆಯ್ದೆವಂದು ಸುಯೋಧನನ ಸಾಧನದೊಳ್ ತಾಗಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ವಿನಯಮನೆ

ನುಡಿದ ವಿಕ್ರಮಾರ್ಜುನನಂ
ಗುರುವು ಅನೇಕ
ಆಶೀರ್ವಚನಂಗಳಿಂ
ಪರಸುವುದುಂ (ಹಾಗೆ
ನಮ್ರತೆಯಿಂದಲೇ
ಮಾತನಾಡಿದ
ವಿಕ್ರಮಾರ್ಜುನನನ್ನು
ದ್ರೋಣಾಚಾರ್ಯರು ಅನೇಕ
ಆಶೀರ್ವಚನಗಳಿಂದ
ಹರಸಿದರು. ಹರಸಲು-)
ಪದುಮನಾಭನ ಚೋದಿಸುವ

ರಥವೇಗದಿಂ
ಪದ್ಮವ್ಯೂಹಮನು
ಎಯ್ದೆವಂದು (ಕೃಷ್ಣನು
ನಡೆಸಿದ ರಥದ ವೇಗದಿಂದ
ಪದ್ಮವ್ಯೂಹದ ಸಮೀಪಕ್ಕೆ
ಬಂದು) ಸುಯೋಧನನ
ಸಾಧನದೊಳ್ ತಾಗಿದಾಗಳ್ -
(ದುರ್ಯೋಧನನ ಸೈನ್ಯವನ್ನು
ತಾಗಿದಾಗ- ಎದುರಿಸಿದಾಗ)
ವಚನ:ಅರ್ಥ: ಹಾಗೆ
ನಮ್ರತೆಯಿಂದಲೇ

ಮಾತನಾಡಿದ
ವಿಕ್ರಮಾರ್ಜುನನನ್ನು
ದ್ರೋಣಾಚಾರ್ಯರು ಅನೇಕ
ಆಶೀರ್ವಚನಗಳಿಂದ
ಹರಸಿದರು. ಕೃಷ್ಣನು ನಡೆಸಿದ
ರಥದ ವೇಗದಿಂದ
ಪದ್ಮವ್ಯೂಹದ ಸಮೀಪಕ್ಕೆ
ಬಂದು ದುರ್ಯೋಧನನ
ಸೈನ್ಯವನ್ನು ತಾಗಿದಾಗ-
ಎದುರಿಸಿದಾಗ

ಚಂ|| ಪೊಸ ಮಸೆಯಂಬು
ಕಾರಮಿಟಿವೋಲ್
ಕರೆಯುತ್ತಿರೆ ನೇರ್ದು ಸೀಳ್ದು
ಖಂ
ಡಿಸಿ ಕಡಿದೊಟ್ಟಿ
ಸುಟ್ಟನಿತುಮಂ ನಿಜ
ಮಾರ್ಗಣ ಕೋಟಿಯಿಂದಗು|
ರ್ವಿಸೆ ತೆಗೆದೆಚ್ಚು ತನ್ನ
ಮೊನೆಯಂಬುಗಳಿಂ
ಚತುರಂಗಮೆಯ್ದೆ ಕೀ

ಲಿಸೆ ಪಡೆ ಚಿತ್ರದೊಂದೆ ಪಡೆಯಂತೆವೊಲಾಯ್ತಕಳಂಕ ರಾಮನಿಂ|| ೧೩೫||

ಪದ್ಯ-೧೩೫:ಪದವಿಭಾಗ-ಅರ್ಥ:ಪೊಸ ಮಸೆಯ ಅಂಬು ಕಾರಮಟಿವೋಲ್ ಕರೆಯುತ್ತಿರೆ (ಹೊಸದಾಗಿ ಮಸೆದಿರುವ ಬಾಣಗಳು ಕಾರ್ಗಾಲದ ಮಳೆಯ ಹಾಗೆ ಸುರಿಯುತ್ತಿರಲು) ನೇರ್ದು ಸೀಳ್ದು ಖಂಡಿಸಿ ಕಡಿದೊಟ್ಟಿ

ಸುಟ್ಟನು ಅತುಮಂ (ಅರ್ಜುನನು ಅಷ್ಟನ್ನೂ ತನ್ನ ಬಾಣಗಳ ತುದಿಯಿಂದ ಕತ್ತರಿಸಿ, ಸೀಳಿ, ಮುರಿದು, ತುಂಡಿಸಿ, ರಾಶಿಮಾಡಿ ಸುಟ್ಟುನು ಅನಿತುಂ ಎಲ್ಲವನ್ನೂ,) ನಿಜ ಮಾರ್ಗಣ ಕೋಟಿಯಿಂದ ಅಗುರ್ವಿಸೆ ತೆಗೆದು ಎಚ್ಚು ತನ್ನ ಮೊನೆಯಂಬುಗಳಿಂ (ತನ್ನ ಬಾಣಗಳ ಸಮೂಹದಿಂದ

ಚತುರಂಗ ಸೈನ್ಯವ್ರೂ ಹೆದರುವ ಹಾಗೆ) ಚತುರಂಗಮ್ ಎಯ್ದೆ ಕೀಲಿಸೆ (ಚತುರಂಗ ಸೈನ್ಯವ್ರೂ ಹೆದರುವ ಹಾಗೆ ಸೆಳೆದು ಹೊಡೆದು ಚೆನ್ನಾಗಿ ನಾಟಿಸಲು) ಪಡೆ ಚಿತ್ರದೊಂದೆ ಪಡೆಯಂತೆವೊಲ್ ಆಯ್ತು ಅಕಳಂಕರಾಮನಿಂ (ಸೈನ್ಯವು ಚಿತ್ರದಲ್ಲಿ ಬರೆದ ಸೈನ್ಯದಂತೆ ಆಯಿತು,

ಅಕಳಂಕರಾಮನಾದ ಅರ್ಜುನನಿಂದ).

ಪದ್ಯ-೧೩೫:ಅರ್ಥ:

ಪದ್ಮವ್ಯೂಹದಲ್ಲಿ ಪ್ರವೇಶಿಸಿದಾಗ, ಹೊಸದಾಗಿ ಮಸೆದಿರುವ ಬಾಣಗಳು ಕಾರ್ಗಾಲದ ಮಳೆಯ ಹಾಗೆ ಸುರಿಯುತ್ತಿರಲು ಅರ್ಜುನನು ಅಷ್ಟನ್ನೂ ತನ್ನ ಬಾಣಗಳ ತುದಿಯಿಂದ ಕತ್ತರಿಸಿ, ಸೀಳಿ, ಮುರಿದು, ತುಂಡಿಸಿ,

ರಾಶಿಮಾಡಿ ಸುಟ್ಟು ತನ್ನ
ಬಾಣಗಳ ಸಮೂಹದಿಂದ
ಚತುರಂಗ ಸೈನ್ಯವೂ ಹೆದರುವ
ಹಾಗೆ ಸೆಳೆದು ಹೊಡೆದು
ಚೆನ್ನಾಗಿ ನಾಟಿಸಲು ಸೈನ್ಯವು
ಚಿತ್ರದಲ್ಲಿ ಬರೆದ ಸೈನ್ಯದಂತೆ
ಆಯಿತು.

ಅಡಿ ತೊಡೆ ಪೊರ್ಕುೞುಂ
ತೆಗಲೆ ಕೈ ಕಣಕಾಲ್
ಕೊರಲೆಂಬಿವುಂ ಬೆರಲ್

ನಡುವುರ ಬೆನ್ ಬಸಿರ್

ತೊಳಕು ಕರ್ಚರೆ ಮುಯ್ಯು

ಮುಸುಂಬು ಮೂಗು ಪೆ

ರ್ದೊಡೆ ಕಟಿ ಮುಂಮಡಂ

ಪರಡು ಸಂದಿ ನೊಸಲ್ ಪಣೆ

ಕಣ್ ಕದಂಪಿವೆಂ

ಬೆಡೆಯನೆ ನಟ್ಟುವುರ್ಚಿದುವು

ನೇರ್ದುವು ಸೀಳ್ದುವು

ಪಾರ್ಥನಂಬುಗಳ್|| ೧೩೬||

ಪದ್ಯ-೧೩೬:ಪದವಿಭಾಗ-

ಅರ್ಥ:ಅಡಿ ತೊಡೆ

ಪೊರ್ಕುಳಿಂ (ಪಾದ, ತೊಡೆ, ಹೊಕ್ಕಳು) ತೆಗಲೆ ಕೈ ಕಣಕಾಲ್ ಕೊರಲ್ ಎಂಬಿವುಂ (ಹೆಗ್ಗತ್ತು, ಕೈ, ಕಾಲಿನ ಕೆಳಭಾಗ, ಕೊರಳು ಎಂಬುವುಗಳನ್ನೂ) ಬೆರಲ್ನಡುವುರ ಬೆನ್ ಬಸಿರ್ ತೊಳಕು ಕರ್ಚರೆ ಮುಯ್ಯು ಮುಸುಂಬು ಮೂಗು ಪೆರ್ದೊಡೆ ಕಟಿ (ಹೆಗಲು, ಮೂತಿ, ಹೆದ್ದೊಡೆ, ಸೊಂಟ) ಮುಂಮಡಂ ಪರಡು (ಕಾಲ

ಹರಡಿನ ಹಿಂಭಾಗ ಮತ್ತು
ಮುಂಭಾಗ, ಕಾಲಿನ ಹರಡು)
ಸಂದಿ ನೊಸಲ್ ಪಣೆ ಕಣ್
ಕದಂಪು ಎಂವೆಂಬೆಡೆಯನೆ
ನಟ್ಟು ವುರ್ಚಿದುವು (ಈ ಎಲ್ಲಾ
ಸ್ಥಳಗಳನ್ನೂ ಅರ್ಜುನನ
ಬಾಣಗಳು ನಾಟಿದುವು,
ಸೀಳಿದವು) ನೇರ್ದುವು
ಸೀಳ್ದುವು ಪಾರ್ಥನಂಬುಗಳ್
(ಅರ್ಜುನನ ಬಾಣಗಳು,

(ಸೀಳಿದವು ಮತ್ತು ಹೋಳು ಮಾಡಿದುವು.)

ಪದ್ಯ-೧೩೬:ಅರ್ಥ:ಅರ್ಜುನನ ಬಾಣಗಳು, ಪಾದ, ತೊಡೆ, ಹೊಕ್ಕಳು, ಹೆಗ್ಗತ್ತು, ಕೈ, ಕಾಲಿನ ಕೆಳಭಾಗ, ಕೊರಳು ಎಂಬುವುಗಳನ್ನೂ ಬೆರಳು, ನಡು, ಎದೆ, ಬೆನ್ನು, ಹೊಟ್ಟೆ, ತೊಳಕುಸ(?) ಕರ್ಚರೆ, ಹೆಗಲು, ಮೂತಿ, ಹೆದ್ದೊಡೆ, ಸೊಂಟ, ಕಾಲ ಹರಡಿನ

ಹಿಂಭಾಗ ಮತ್ತು ಮುಂಭಾಗ, ಕಾಲಿನ ಹರಡು, ಕೀಲು, ಹಣೆ, ಕಣ್ಣು, ಕೆನ್ನೆ -ಈ ಎಲ್ಲಾ ಸ್ಥಳಗಳನ್ನೂ ಅರ್ಜುನನ ಬಾಣಗಳು ನಾಟಿದುವು, ಸೀಳಿದವು ಮತ್ತು ಹೋಳು ಮಾಡಿದುವು.

ವ|| ಅಂತು ಮಾಱಾಂತ ಮಾರ್ಪಡೆಯೆಲ್ಲವಂ ಜವನೊಕ್ಕಲಿಕ್ಕಿ ತನ್ನೊಳ್ ಪೋಗದೆ ಪೆಣೆದ ಬಾಹ್ಲೀಕ

ಸೋಮದತ್ತ
ಭೂರಿಶ್ರವರನಾನೆ ಮೆಟ್ಟಿದ
ಕುಳುಂಪೆಯ ನೀರಂತೆ
ದೆಸೆದೆಸೆಗೆ
ಸೂಸುವನ್ನೆಗಮೆಟ್ಟಿಟ್ಟಿ
ಕಾಂಭೋಜ ಸುದಕ್ಷಿಣ
ಜಯತ್ಸೇನರೆಂಬರೆಯ್ತರೆ
ಮೂವರಕ್ಷೋಹಿಣೀ
ಪತಿಗಳ್ವೆರಸು ನಾಲ್ಸಾಸಿರ್ವರ್
ಮಕುಟವರ್ಧನರಂ ಕೊಂದು
ಶಲ್ಯನುರಮಂ ಬಿರಿಯೆಚ್ಚು

ಕೃಪರಂ ವಿರಥರ್ಮಾಡಿ

ನಡುವಗಲೀಟಿವಿನಂ ಕಾದಿ

ಬಱಿಲ್ದು ಕುದುರೆಗಳಂ

ನೀರೊಳಿಕ್ಕಲೆಂದು

ದೇವಖಾತಮೆಂಬ

ಮಡುವಿಂಗೆ ಬರ್ಪ್ಪುದುಮಿತ್ತ

ದುರ್ಯೋಧನಂ

ದ್ರೋಣರಲ್ಲಿಗೆ ವಂದು-

ವಚನ:ಪದವಿಭಾಗ-

ಅರ್ಥ:ಅಂತು ಮಾಱಾಂತ

ಮಾರ್ಪಡೆಯೆಲ್ಲವಂ ಜವನ

ಒಕ್ಕಲಿಕ್ಕಿ (ಹಾಗೆ ಎದುರಿಸಿದ ಪ್ರತಿ ಸೈನ್ಯವೆಲ್ಲವನ್ನೂ ಯಮನ ಒಕ್ಕಲವರನ್ನಾಗಿ/ ಲೋಕನಿವಾಸಿಗಳನ್ನಾಗಿ ಮಾಡಿದನು) ತನ್ನೊಳ್ ಪೋಗದೆ ಪೆಣೆದ ಬಾಹ್ಲೀಕ ಸೋಮದತ್ತ ಭೂರಿಶ್ರವರನು ಆನೆ ಮೆಟ್ಟಿದ ಕುಳುಂಪೆಯ ನೀರಂತೆ (ಆನೆಯು ತುಳಿದ ಕುಂಟೆಯ ನೀರಿನಂತೆ) ದೆಸೆದೆಸೆಗೆ ಸೂಸುವನ್ನೆಗಂ

ಎಚ್ಚಿಟ್ಟಿ (ಚೆಲ್ಲುವವರೆಗೆ ಎಬ್ಬಿಸಿ ಓಡಿಸಿದನು) ಕಾಂಭೋಜ ಸುದಕ್ಷಿಣ ಜಯತ್ಸೇನರೆಂಬರ್ ಎಯ್ತರೆ ಮೂವರ ಅಕ್ಷೋಹಿಣೀ ಪತಿಗಳ್ವೆರಸು ನಾಲ್ಸಾಸಿರ್ವರ್ ಮಕುಟವರ್ಧನರಂ ಕೊಂದು (ಮೂರು ಅಕ್ಷೋಹಿಣೀಪತಿಗಳನ್ನೂ ಕೂಡಿಕೊಂಡು ಬರಲು ನಾಲ್ಕು ಸಾವಿರ ರಾಜರನ್ನು ಕೊಂದು)

ಶಲ್ಯನ ಉರಮಂ ಬಿರಿಯೆಚ್ಚು (ಲ್ಯನ ಎದೆಯನ್ನು ಬಿರಿಯುವ ಹಾಗೆ ಹೊಡೆದು) ಕೃಪರಂ ವಿರಥರ್ಮಾಡಿ ನಡುವಗಲ ಇಱಿವಿನಂ ಕಾದಿ (ಕೃಪರನ್ನು ರಥವಿಲ್ಲದವರಂತೆ ಮಾಡಿ ನಡುಹಗಲು ಇಳಿಯುವವರೆಗೂ ಕಾದಿ) ಬೞಿಲ್ದು ಕುದುರೆಗಳಂ ನೀರೊಳ್ ಇಕ್ಕಲೆಂದು (ಕುದುರೆಯನ್ನು ನೀರಿಗೆ

ಬಿಡಬೇಕೆಂದು)
ದೇವಖಾತಮೆಂಬ
ಮಡುವಿಂಗೆ ಬರ್ಪುದುಂ
(ದೇವಖಾತವೆಂಬ ಮಡುವಿಗೆ
ಬಂದನು. ಹಾಗೆ ಬಂದಾಗ)
ಇತ್ತ ದುರ್ಯೋಧನಂ
ದ್ರೋಣರಲ್ಲಿಗೆ ವಂದು (ಆಗ
ದುರ್ಯೋಧನನು
ದ್ರೋಣನಲ್ಲಿಗೆ ಬಂದನು.)-
ವಚನ:ಅರ್ಥ:ಹಾಗೆ
ಎದುರಿಸಿದ ಪ್ರತಿ

ಸೈನ್ಯವೆಲ್ಲವನ್ನೂ ಯಮನ
ಒಕ್ಕಲವರನ್ನಾಗಿ/
ಲೋಕನಿವಾಸಿಗಳನ್ನಾಗಿ
ಮಾಡಿದನು. ಹೋಗದೆ
ತನ್ನಲ್ಲಿಯೆ ಹೆಣೆದುಕೊಂಡ
ಬಾಹ್ಲೀಕ ಸೋಮದತ್ತ
ಭೂರಿಶ್ರವರನ್ನು ಆನೆಯು
ತುಳಿದ ಕುಂಟೆಯ ನೀರಿನಂತೆ
ದಿಕ್ಕು ದಿಕ್ಕಿಗೂ ಚೆಲ್ಲುವವರೆಗೆ
ಎಬ್ಬಿಸಿ ಓಡಿಸಿದನು.
ಕಾಂಭೋಜ, ಸುದಕ್ಷಿಣ,

ಜಯತ್ಸೇನರೆಂಬುವರು
ಮೂರು
ಅಕ್ಷೋಹಿಣೀಪತಿಗಳನ್ನೂ
ಕೂಡಿಕೊಂಡು ಬರಲು ನಾಲ್ಕು
ಸಾವಿರ ರಾಜರನ್ನು ಕೊಂದು
ಶಲ್ಯನ ಎದೆಯನ್ನು ಬಿರಿಯುವ
ಹಾಗೆ ಹೊಡೆದು ಕೃಪರನ್ನು
ರಥವಿಲ್ಲದವರಂತೆ ಮಾಡಿ
ನಡುಹಗಲು
ಇಳಿಯುವವರೆಗೂ ಕಾದಿ/
ಯುದ್ಧಮಾಡಿ, ಬಳಲಿ

ಕುದುರೆಯನ್ನು ನೀರಿಗೆ ಬಿಡಬೇಕೆಂದು ದೇವಖಾತವೆಂಬ ಮಡುವಿಗೆ ಬಂದನು. ಆಗ ದುರ್ಯೋಧನನು ದ್ರೋಣನಲ್ಲಿಗೆ ಬಂದನು.

ಚಂ|| ಅಱಿದುದು ಚಾತುರಂಗ ಬಲಮಳ್ಕುಱಿದಾಂತ ಮಹಾರಥರ್ಕಳುಂ ಕಱಿಕುಱಿಮಾದುದೊಡ್ಡಣಾಮ ಣಂ ತಲೆದೋಱಲೆ ಗಂಡರಿಲ್ಲ

ತೊ|

ತ್ತಱಿದುಱಿದಪ್ಪನಿನ್ನಿನಿಸು

ಬೇಗದೆ ಸೈಂಧವನಂ

ನೆಗೞ್ತೆಯಂ

ಗಱಿಯಿಸಿಕೊಳ್ವೊಡಿನ್ನಿನಿಸು

ನಿಂದಿಱಿಯಿಂ ತಱಿಸಂದು

ಪಾರ್ಥನೊಳ್|| ೧೩೭ ||

ಪದ್ಯ-೧೩೭:ಪದವಿಭಾಗ-

ಅರ್ಥ:ಅಱಿದುದು

ಚಾತುರಂಗ ಬಲಮ್

ಅಳ್ಕುಱದೆ ಆಂತ

ಮಹಾರಥರ್ಕಳುಂ
ಕಟಿಕುಟಿಮಾದುದು
(ಚತುರಂಗಬಲವೂ
ನಾಶವಾಯಿತು. ಹೆದರದೆ
ಪ್ರತಿಭಟಿಸಿದ
ಮಹಾರಥರುಗಳೂ
ಚೆಲ್ಲಾಪಿಲ್ಲಿಯಾದರು.)
ಒಡ್ಡಣಮ್ ಅಣಂ
ತಲೆದೋಱಲೆ ಗಂಡರಿಲ್ಲ
(ಸೈನ್ಯವು ಸ್ವಲ್ಪವಾದರೂ
ಎದುರಿಸಲು

ಶೂರರಾದವರಾರೂ ಇಲ್ಲ.)
ತೊತ್ತೞಿದು (ತೊತ್ತುೞಿದು - ಚೆನ್ನಾಗಿ ತುಳಿದು)
ಉೞಿದಪ್ಪನು ಇನ್ನು
ಇನಿಸುಬೇಗದೆ (ಸ್ವಲ್ಪ ಕಾಲದಲ್ಲಿಯೇ) ಸೈಂಧವನಂ (ಸ್ವಲ್ಪ ಕಾಲದಲ್ಲಿಯೇ ಸೈಂಧವನನ್ನು ತುಳಿದುಹಾಕುತ್ತಾನೆ.)
ನೆಗೞ್ತೆಯಂ
ಗೞಿಯಿಸಿಕೊಳ್ವೊಡೆ

(ಕೀರ್ತಿಯನ್ನು ಪಡೆಯಲು)
ಇನ್ನೂ ಇನಿಸು ನಿಂದು
ಇಱಿಯಿಂ ತಱಿಸಂದು
(ಸ್ಥಿರವಾಗಿ ನಿಂತು)
ಪಾರ್ಥನೊಳ್ (ಕೀರ್ತಿಯನ್ನು
ಪಡೆಯಬೇಕಾದರೆ ಸ್ವಲ್ಪ
ಸ್ಥಿರವಾಗಿ ನಿಂತು
ಅರ್ಜುನನೊಡನೆ
ಯುದ್ಧಮಾಡಿ ಎಂದನು.)

ಪದ್ಯ-೧೩೭:ಅರ್ಥ:

ಚತುರಂಗಬಲವೂ

ಅಳಿಯಿತು/ ನಾಶವಾಯಿತು.
ಹೆದರದೆ ಪ್ರತಿಭಟಿಸಿದ
ಮಹಾರಥರುಗಳೂ
ಚೆಲ್ಲಾಪಿಲ್ಲಿಯಾದರು. ಸೈನ್ಯವು
ಸ್ವಲ್ಪವಾದರೂ ಎದುರಿಸಲು
ಶೂರರಾದವರಾರೂ ಇಲ್ಲ.
ಸ್ವಲ್ಪ ಕಾಲದಲ್ಲಿಯೇ
ಸೈಂಧವನನ್ನು
ತುಳಿದುಹಾಕುತ್ತಾನೆ.
ಕೀರ್ತಿಯನ್ನು
ಪಡೆಯಬೇಕಾದರೆ ಸ್ವಲ್ಪ

ಸ್ಥಿರವಾಗಿ ನಿಂತು ಅರ್ಜುನನೊಡನೆ ಯುದ್ಧಮಾಡಿ ಎಂದನು.

ವ|| ಎಂಬುದುಂ ದ್ರೋಣಾಚಾರ್ಯಂ ಮುಗುಳ್ನಗೆ ನಕ್ಕು ವಿಕ್ರಮಾರ್ಜುನನನಿಳಿಸಿ ನುಡಿವ ನಿನ್ನೆಣಗೋಣಂಗಳುಮೆಕ್ಕಸಕ್ಕತನಂಗಳು ಮೆತ್ತವೋದುವು-

ವಚನ:ಪದವಿಭಾಗ-ಅರ್ಥ:

ಎಂಬುದುಂ

ದ್ರೋಣಾಚಾರ್ಯಂ
ಮುಗುಳ್ನಗೆ ನಕ್ಕು
ವಿಕ್ರಮಾರ್ಜುನನಂ ಇಳಿಸಿ
ನುಡಿವ (ಅರ್ಜುನನನ್ನು
ಅಲ್ಪನೆಂದು ತಿರಸ್ಕರಿಸಿ
ಮಾತನಾಡುವ)ನಿನ್ನ
ಎಣಗೋಣಂಗಳುಂ
(ವಕ್ರವಾದ ಅಹಂಕಾರದ
ಮಾತುಗಳೂ)
ಎಕ್ಕಸಕ್ಕತನಂಗಳುಂ
ಎತ್ತವೋದುವು (ನಿಂದೆ ಮತ್ತು

ಪರಿಹಾಸದ ಮಾತುಗಳೂ ಈಗೆಲ್ಲಿಗೆ ಹೋದುವು? ಎಂದರು)-

ವಚನ:ಅರ್ಥ:ದ್ರೋಣಾಚಾರ್ಯನು ಮುಗುಳ್ನಗೆ ನಕ್ಕು ವಿಕ್ರಮಾರ್ಜುನನನ್ನು/ ಅರ್ಜುನನನ್ನು ಅಲ್ಪನೆಂದು ತಿರಸ್ಕರಿಸಿ ಮಾತನಾಡುವ ವಕ್ರವಾದ ಅಹಂಕಾರದ ಮಾತುಗಳೂ, ನಿಂದೆ ಮತ್ತು ಪರಿಹಾಸದ ಮಾತುಗಳೂ

ಈಗೆಲ್ಲಿಗೆ ಹೋದುವು

ಎಂದರು; -

ಚಂ|| ನಿನಗರಸಾಳ್ತನಂ ನುಡಿವ

ಬೀರರ ಬೀರದಳುರ್ಕೆ

ವಿಕ್ರಮಾ

ರ್ಜುನನೊಳದೇಕೆ

ಸಲ್ಲದೆನಗಾತನಸಾಧ್ಯನವಧ್ಯ

ನಾನುಮೀ|

ಮೊನೆಯೊಳೆ ನಿಂದು

ಕಾದಿದಪೆನನ್ನೆಗಮೆನ್ನ ವರೂಥ

ಸೂತ ಕೇ

ತನ ಕವಚಂಗಳಿಂ ನೆರೆದು ತಳ್ತಿಱಿ ನೀಂ ಜಗದೇಕಮಲ್ಲನೊಳ್|| ೧೩೮

ಪದ್ಯ-೧೩೮:ಪದವಿಭಾಗ-ಅರ್ಥ: ನಿನಗೆ ಅರಸ ಆಳ್ತನಂ ನುಡಿವ (ಅರಸನೇ ನಿನಗೆ ತಮ್ಮ ಪರಾಕ್ರಮವನ್ನು ಹೇಳಿಕೊಳ್ಳುವ) ಬೀರರ ಬೀರದ ಅಳುರ್ಕೆ (ವೀರರ ಶೌರ್ಯದ ಆಧಿಕ್ಯವು) ವಿಕ್ರಮಾರ್ಜುನನೊಳು

ಅದೇಕೆ ಸಲ್ಲದು. (ವಿಕ್ರಮಾರ್ಜುನನಲ್ಲಿ ಅದೇಕೆ ಸಲ್ಲುವುದಿಲ್ಲ.) ಎನಗೆ ಆತನು ಅಸಾಧ್ಯನು ಅವಧ್ಯನು. (ನನಗೆ ಅವನು ಗೆಲ್ಲುವುದಕ್ಕೆ ಅಸಾಧ್ಯನಾದವನು.) ಆನುಂ ಈ ಮೊನೆಯೊಳೆ ನಿಂದು ಕಾದಿದಪೆನು (ನಾನೂ ಈ ಯುದ್ಧಮುಖದಲ್ಲಿಯೇ ನಿಂತು ಕಾದುತ್ತೇನೆ.) ಅನ್ನಗಂ ಎನ್ನ ವರೂಥ ಸೂತ ಕೇತನ

ಕವಚಂಗಳಿಂ ನೆರೆದು (ಅಲ್ಲಿಯವರೆಗೆ ನೀನು ನನ್ನ ತೇರು, ಸಾರಥಿ, ಧ್ವಜ ಕವಚಗಳಿಂದ ಕೂಡಿಕೊಂಡು) ತಳ್ತಿಱಿ- ತಳ್ತು ಇರಿ ನೀಂ ಜಗದೇಕಮಲ್ಲನೊಳ್ (ನೀನು ಜಗದೇಕಮಲ್ಲನಲ್ಲಿ ಸೆಣಸಿ ಯುದ್ಧಮಾಡು. ಎಂದನು ದ್ರೋಣ)

ಪದ್ಯ-೧೩೮:ಅರ್ಥ:

ಅರಸನೇ ನಿನಗೆ ತಮ್ಮ

ಪರಾಕ್ರಮವನ್ನು ಹೇಳಿಕೊಳ್ಳುವ ವೀರರ ಶೌರ್ಯದ ಆಧಿಕ್ಯವು ವಿಕ್ರಮಾರ್ಜುನನಲ್ಲಿ ಅದೇಕೆ ಸಲ್ಲುವುದಿಲ್ಲ. ನನಗೆ ಅವನು ಗೆಲ್ಲುವುದಕ್ಕೆ ಅಸಾಧ್ಯನಾದವನು. ಕೊಲ್ಲಲಾಗದವನು. ನಾನೂ ಈ ಯುದ್ಧಮುಖದಲ್ಲಿಯೇ ನಿಂತು ಕಾದುತ್ತೇನೆ. ಅಲ್ಲಿಯವರೆಗೆ ನೀನು ನನ್ನ ತೇರು, ಸಾರಥಿ, ಧ್ವಜ

ಕವಚಗಳಿಂದ ಕೂಡಿಕೊಂಡು
ನೀನು ಜಗದೇಕಮಲ್ಲನಲ್ಲಿ
ಸೆಣಸಿ ಯುದ್ಧಮಾಡು,
ಎಂದನು ದ್ರೋಣ.

ವ|| ಎಂಬುದುಂ ಸುಯೋಧನನೇನಾದೊಡೇನಾದುದೆನ್ನ ಪಗೆಯ ನಾನೇ ಕೊಲ್ವೆನೆಂದಭೇದ್ಯ ಕವಚಮಂ ತೊಟ್ಟು ದಿವ್ಯಶರಾಸನ ಶರಂಗಳಂ ಕೊಂಡು ಕಳಶ ಕೇತನ ವರೂಥನಾಗಿ ಪೋಗಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಸುಯೋಧನನು ಏನಾದೊಡೇನು (ಎನ್ನಲು ದುರ್ಯೋಧನನು, ಏನಾದರೇನಾಯಿತು,) ಆದುದು ಎನ್ನ ಪಗೆಯ ನಾನೇ ಕೊಲ್ವೆನು ಎಂದು ಅಭೇದ್ಯ ಕವಚಮಂ ತೊಟ್ಟು (ನನ್ನ ಶತ್ರುವನ್ನು ನಾನೇ ಕೊಲ್ಲುತ್ತೇನೆ ಎಂದು ಒಡೆಯಲಾಗದ

ಕವಚವನ್ನು ತೊಟ್ಟು)
ದಿವ್ಯಶರಾಸನ ಶರಂಗಳಂ
ಕೊಂಡು (ಶ್ರೇಷ್ಠವಾದ
ಬಿಲ್ಲುಬಾಣಗಳನ್ನು
ತೆಗೆದುಕೊಂಡು) ಕಳಶ ಕೇತನ
ವರೂಥನಾಗಿ ಪೋಗಿ
(ಕಳಶಧ್ವಜವುಳ್ಳ ರಥದಿಂದ
ಕೂಡಿಕೊಂಡು ಹೋದನು.)-
ವಚನ:ಅರ್ಥ:ಎನ್ನಲು
ದುರ್ಯೋಧನನು,
ಏನಾದರೇನಾಯಿತು, ನನ್ನ

ಶತ್ರುವನ್ನು ನಾನೇ ಕೊಲ್ಲುತ್ತೇನೆ
ಎಂದು ಒಡೆಯಲಾಗದ
ಕವಚವನ್ನು ತೊಟ್ಟು
ಶ್ರೇಷ್ಠವಾದ ಬಿಲ್ಲುಬಾಣಗಳನ್ನು
ತೆಗೆದುಕೊಂಡು
ಕಳಶಧ್ವಜವುಳ್ಳ ರಥದಿಂದ
ಕೂಡಿಕೊಂಡು ಹೋದನು.

ಚಂ|| ತಡೆಯದೆ ರಾಜರಾಜನಿದಿರಂ ಬರೆ ಭೋರ್ಗರೆದೆಚ್ಚೊಡಂಬುಗಳ್

ನಡದೆ ಸಿಡಿಲ್ವುದುಂ ಕರತಳದ್ವಯಮಂ ಬಿರಿಯೆಚ್ಚು ಕೆಯ್ವುವಂ|

ಪಿಡಿವದಟೆಲ್ಲಮಂ ಕಿಡಿಸಿ ತಾಂ ಕೊಲಲೊಲ್ಲನೆ ಭೀಮನಾತನಂ ಮಡಿಪುವೆನೆಂದ ಪ್ರೂಣ್ಕೆ ಪುಸಿಯಾದಪುದೆಂದಮರೇಂದ್ರನಂದನಂ|| ೧೩೯ ||

ಪದ್ಯ-೧೩೯:ಪದವಿಭಾಗ-ಅರ್ಥ:ತಡೆಯದೆ ರಾಜರಾಜನು ಇದಿರಂ ಬರೆ

(ತಡಮಾಡದೆ
ದುರ್ಯೋಧನನು ಅರ್ಜುನನ
ಎದುರಾಗಿ ಬರಲು)
ಭೋರ್ಗರೆದು ಎಚ್ಚೊಡೆ
ಅಂಬುಗಳ್ ನಡದೆ
ಸಿಡಿಲ್ದುದುಂ (ಭೋರ್ಗರೆದು
ಅರ್ಜುನನು ಬಾಣಪ್ರಯೋಗ
ಮಾಡಲು ಬಾಣಗಳು
ನಾಟಿಕೊಳ್ಳದೆ ಸಿಡಿದುವು.)
ಕರತಳ ದ್ವಯಮಂ
ಬಿರಿಯೆಚ್ಚು ಕೆಯ್ದುವಂ ಪಿಡಿವ

ಅದಟೆಲ್ಲಮಂ ಕಿಡಿಸಿ (ಆಗ ಅರ್ಜುನನು ಅವನ ಎರಡು ಹಸ್ತಗಳನ್ನೂ ಬಿರಿದುಹೋಗುವ ಹಾಗೆ ಹೊಡೆದು ಆಯುಧವನ್ನು ಹಿಡಿಯುವ ಶಕ್ತಿಯನ್ನೂ ಕೆಡಿಸಿ-) ತಾಂ ಕೊಲಲು ಒಲ್ಲನೆ (ತಾನು ಆತನನ್ನು ಕೊಲ್ಲಲು ಒಪ್ಪೆನು ಎಂದು) ಭೀಮನು ಆತನಂ ಮಡಿಪುವೆಂ ಎಂದ ಪೂಣ್ಕೆ (ಭೀಮನು ಆತನನ್ನು

ಕೊಲ್ಲುವೆನೆಂದು ಮಾಡಿದ ಪ್ರತಿಜ್ಞೆಯು) ಪುಸಿಯಾದಪುದೆಂದು ಅಮರೇಂದ್ರನಂದನಂ (ಹುಸಿಯಾಗುವುದೆಂದು ಅರ್ಜುನನು ಯೋಚಿಸಿದನು.)

ಪದ್ಯ-೧೩೯:ಅರ್ಥ:ತಡಮಾಡದೆ ದುರ್ಯೋಧನನು ಅರ್ಜುನನ ಎದುರಾಗಿ ಬರಲು, ಭೋರ್ಗರೆದು ಅರ್ಜುನನು ಬಾಣಪ್ರಯೋಗ

ಮಾಡಲು ಬಾಣಗಳು
ನಾಟಿಕೊಳ್ಳದೆ ಸಿಡಿದುವು. ಆಗ
ಅರ್ಜುನನು ಅವನ ಎರಡು
ಹಸ್ತಗಳನ್ನೂ
ಬಿರಿದುಹೋಗುವ ಹಾಗೆ
ಹೊಡೆದು ಆಯುಧವನ್ನು
ಹಿಡಿಯುವ ಶಕ್ತಿಯನ್ನೂ
ಕೆಡಿಸಿದನು. ತಾನು ಆತನನ್ನು
ಕೊಲ್ಲಲು ಒಪ್ಪೆನು ಎಂದು,
ಭೀಮನು ಆತನನ್ನು
ಕೊಲ್ಲುವೆನೆಂದು ಮಾಡಿದ

ಪ್ರತಿಜ್ಞೆಯು
ಹುಸಿಯಾಗುವುದೆಂದು
ಅರ್ಜುನನು ಯೋಚಿಸಿದನು.

ವ|| ಅನ್ನೆಗಮಿತ್ತ ಧರ್ಮಪುತ್ರನಮೋಘಾಸ್ತ್ರ ಧನಂಜಯನಂ ಕೆಯ್ಕೊಳಲಟ್ಟಿದೊಡೆ ಕೌರವಬಳ ಜಳನಿಯ ನಡುವನುತ್ತರಿಸಿ ಬರ್ಪ ಸಾತ್ಯಕಿಯಂ ಭೂರಿಶ್ರವನೆಡೆಗೊಂಡಾಂತು-

ವಚನ:ಪದವಿಭಾಗ-ಅರ್ಥ:ಅನ್ನೆಗಂ ಇತ್ತ ಧರ್ಮಪುತ್ರನ ಅಮೋಘಾಸ್ತ್ರ ಧನಂಜಯನಂ ಕೆಯ್ಕೊಳಲ್ ಅಟ್ಟಿದೊಡೆ (ಈ ಕಡೆ ಧರ್ಮರಾಯನು ಅರ್ಜುನನ ರಕ್ಷಣೆಗಾಗಿ ಸಾತ್ಯಕಿಯನ್ನು ಕಳುಹಿಸಲು) ಕೌರವಬಳ ಜಳನಿಯ ನಡುವನು ಉತ್ತರಿಸಿ ಬರ್ಪ ಸಾತ್ಯಕಿಯಂ (ಕೌರವಸೇನಾಸಮುದ್ರದ

ಮಧ್ಯಭಾಗವನ್ನು ದಾಟಿ ಬರುತ್ತಿದ್ದ ಸಾತ್ಯಕಿಯನ್ನು) ಭೂರಿಶ್ರವನು ಎಡೆಗೊಂಡು ಆಂತು (ಭೂರಿಶ್ರವನು ಅಡ್ಡಗಟ್ಟಿ ಎದುರಿಸಿ) - **ವಚನ:ಅರ್ಥ**:ಅಷ್ಟರಲ್ಲಿ ಈ ಕಡೆ ಧರ್ಮರಾಯನು ಅರ್ಜುನನ ರಕ್ಷಣೆಗಾಗಿ ಸಾತ್ಯಕಿಯನ್ನು ಕಳುಹಿಸಲು ಕೌರವಸೇನಾಸಮುದ್ರದ ಮಧ್ಯಭಾಗವನ್ನು ದಾಟಿ

ಬರುತ್ತಿದ್ದ ಸಾತ್ಯಕಿಯನ್ನು ಭೂರಿಶ್ರವನು ಅಡ್ಡಗಟ್ಟಿ ಎದುರಿಸಿದನು. ಆಗ-

ಉ|| ಪೋಗದಿರೆಂದು ಮೂದಲಿಸೆ ಸಾತ್ಯಕಿ ತೀವ್ರ ಶರಾಳಿಯಿಂದಗು
ರ್ವಾಗೆ ವರೂಥಮಂ ಕಡಿದೊಡುರ್ಚಿದ ಬಾಳ್ವೆರಸಾತನೆಯ್ದೆವಂ|
ದಾಗಳಿದಿರ್ಚೆ ತಾನುಮಸಿಯಂ ಸೆರಗಿಲ್ಲದೆ ಕಿಱ್ತು ಪಾಯ್ದು ಭೂ

ಭಾಗ ನಭೋವಿಭಾಗವರಮಳ್ಕುರೆ ತಳ್ತಿಱಿದರ್ ವಿರೋಧಿಗಳ್॥ ೧೪೦

ಪದ್ಯ-೧೪೦:ಪದವಿಭಾಗ-ಅರ್ಥ:ಪೋಗದಿರೆಂದು ಮೂದಲಿಸೆ (ಹೋಗಬೇಡ ಎಂದು ಮೂದಲಿಸಲು) ಸಾತ್ಯಕಿ ತೀವ್ರ ಶರಾಳಿಯಿಂದ ಅಗುರ್ವ್ ಅಗೆ (ಸಾತ್ಯಕಿಯು ಹರಿತವಾದ ಬಾಣ

ಸಮೂಹದಿಂದ
ಭಯಂಕರವಾಗಿ)
ವರೂಥಮಂ ಕಡಿದೊಡೆ
ಉರ್ಚಿದ ಬಾಳ್ವೆರಸು ಆತನ
ಎಯ್ದೆವಂದು ಆಗಳ್
ಇದಿರ್ಚೆ(ಸಾತ್ಯಕಿಯು
ಹರಿತವಾದ ಬಾಣ
ಸಮೂಹದಿಂದ
ಭಯಂಕರವಾಗಿ ಅವನ
ತೇರನ್ನು ಕತ್ತರಿಸಲು ಹಿರಿದ
ಕತ್ತಿಯೊಡನೆ ಆತನು

ಸಮೀಪಕ್ಕೆ ಬಂದು ಎದುರಿಸಿ), ತಾನುಮ್ ಅಸಿಯಂ ಸೆರಗಿಲ್ಲದೆ ಕಿೞ್ತು ಪಾಯ್ದು (ಆಗ ತಾನೂ ಭಯವಿಲ್ಲದೆ ಕತ್ತಿಯನ್ನು ಹೊರಸೆಳೆದು ನುಗ್ಗಿ) ಭೂಭಾಗ ನಭೋವಿಭಾಗವರಂ, ಅಳ್ಕುರೆ ತಳ್ತಿಱಿದರ್ - ತಳ್ತು ಇರಿದರ್ ವಿರೋಧಿಗಳ್ (ಭಯಂವುಂಟಾಗುವಂತೆ

ವಿರೋಧಿಗಳು ಸಂಧಿಸಿ ಯುದ್ಧಮಾಡಿದನು.)
ಪದ್ಯ-೧೪೦:ಅರ್ಥ:ಭೂರಿಶ್ರವನು, ಹೋಗಬೇಡ ಎಂದು ಮೂದಲಿಸಲು ಸಾತ್ಯಕಿಯು ಹರಿತವಾದ ಬಾಣ ಸಮೂಹದಿಂದ ಭಯಂಕರವಾಗಿ ಅವನ ತೇರನ್ನು ಕತ್ತರಿಸಲು ಹಿರಿದ ಕತ್ತಿಯೊಡನೆ ಆತನು ಸಮೀಪಕ್ಕೆ ಬಂದು

ಎದುರಿಸಿದನು. ಆಗ ತಾನೂ ಭಯವಿಲ್ಲದೆ ಕತ್ತಿಯನ್ನು ಹೊರಸೆಳೆದು ನುಗ್ಗಿ ಭೂಮ್ಯಾಕಾಶಗಳವರೆಗೆ ಭಯಂವುಂಟಾಗುವಂತೆ ವಿರೋಧಿಗಳು ಸಂಧಿಸಿ ಯುದ್ಧಮಾಡಿದನು.

ವ||

ಅಂತಿರ್ವರುಮೋರೊರ್ವರೊ ಳ್ ಬೀರಮುಮಂ ಬಿಂಕಮುಮಂ ಮೆರೆದು

ದಾಸವಣದಂಡೆಯಂ
ತೋರದಿಂಡೆಯಾಡಿದಂತೆ ದೆಸೆ
ದೆಸೆಗೆ ಕೆದಱಿದ
ಕಂಡದಿಂಡೆಗಳುಂ ನಾರಂಗ
ಸಕಳವಟ್ಟೆಯ
ಪಱಿಯಿಗೆಗಳಂತೆ ನಭಕ್ಕೆ
ಮಿಳಿರ್ದು ಮಿಳ್ಳಿಸಿ ಪಾಱುವ
ನೆತ್ತರ ಸುಟ್ಟುರೆಗಳುಮತಿ
ಭಯಂಕರಾಕಾರಮಾಗೆ ಕಾದಿ
ಬಸವಳಿದ ಸಾತ್ಯಕಿಯಂ
ಭೂರಿಶ್ರವನಶ್ರಮದೊಳ್

ನೆಲಕಿಕ್ಕಿ ಗಂಟಲಂ ಮೆಚ್ಚಿ

ತಲೆಯನರಿವಾಗಳ್ ಸಾತ್ಯಕಿ

ಭೂಮಿಯುದ್ಧ

ಪ್ರವೀಣನಪ್ಪುದಱಿಂದಾತನ

ಬಾಳ ಬಾಯೊಳ್

ಚಕ್ರಾಕೃತಿಯೊಳ್ ತಲೆಯಂ

ತಿರುಪುತ್ತುಮಿರ್ದಾ ಗಳದಂ

ಮುರಾಂತಕಂ ಕಂಡು ವಿದ್ವಿಷ್ಟ

ವಿದ್ರಾವಣಂಗೆ ತೋಱಿದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಇರ್ವರುಂ

ಓರೊರ್ವರೊಳ್
ಬೀರಮುಮಂ ಬಿಂಕಮುಮಂ
ಮೆರೆದು (ಹಾಗೆ ಇಬ್ಬರೂ
ಒಬ್ಬೊಬ್ಬರಲ್ಲಿ ಶೌರ್ಯವನ್ನೂ
ಗರ್ವವನ್ನೂ ತೋರಿ,)
ದಾಸವಣದಂಡೆಯಂ
ತೋರದ ಇಂಡೆಯಾಡಿದಂತೆ
(ದಾಸವಾಳದ ಹೂವಿನ
ಹಾರವನ್ನು ದೊಡ್ಡದಾಗಿ
ರಾಶಿಮಾಡಿದಂತೆ) ದೆಸೆ ದೆಸೆಗೆ
ಕೆದಱಿದ ಕಂಡ ದಿಂಡೆಗಳುಂ

(ದಿಕ್ಕು ದಿಕ್ಕಿಗೆ ಚೆದುರಿ ಮಾಂಸದ ಉಂಡೆಗಳೂ), ನಾರಂಗ ಸಕಳವಟ್ಟೆಯ ಪಟಿಯಿಗೆಗಳಂತೆ (ಕಿತ್ತಳೆಯ ಮತ್ತು ಬಣ್ಣ ಬಣ್ಣದ ಬಟ್ಟೆಯ ಬಾವುಟಗಳಂತೆ,) ನಭಕ್ಕೆ ಮಿಳಿರ್ದು ಮಿಳ್ಳಿಸಿ ಪಾಱುವ ನೆತ್ತರ ಸುಟ್ಟುರೆಗಳುಂ (ಗಗನಕ್ಕೆ ಅತ್ತಿತ್ತ ಚಲಿಸುವ ಮತ್ತು ಚಿಮ್ಮಿ ಹಾರುವ ರಕ್ತದ ಸುಂಟುರುಗಾಳಿಗಳೂ) ಅತಿ

ಭಯಂಕರಾಕಾರಮಾಗೆ ಕಾದಿ ಬಸವಳಿದ ಸಾತ್ಯಕಿಯಂ (ಹಾಗೆ ಕಾದಾಡಿ ಶಕ್ತಿಗುಂದಿದ ಸಾತ್ಯಕಿಯನ್ನು) ಭೂರಿಶ್ರವನು ಅಶ್ರಮದೊಳ್ ನೆಲಕಿಕ್ಕಿ (ಭೂರಿಶ್ರವನು ಶ್ರಮವಿಲ್ಲದೆಯೇ ನೆಲಕ್ಕೆ ಬಡಿದು) ಗಂಟಲಂ ಮೆಚ್ಚಿ ತಲೆಯನು ಅರಿವಾಗಳ್ (ಗಂಟಲನ್ನು ಮೆಟ್ಟಿ ತಲೆಯನ್ನು ಕತ್ತರಿಸುವಾಗ) ಸಾತ್ಯಕಿ

ಭೂಮಿಯುದ್ಧ
ಪ್ರವೀಣನಪ್ಪುದಱಿಂದ ಆತನ
ಬಾಳ ಬಾಯೊಳ್
(ಸಾತ್ಯಕಿಯು
ಭೂಮಿಯುದ್ಧದಲ್ಲಿ
ಪ್ರವೀಣನಾಗಿದ್ದುದರಿಂದ
ಆತನ ಕತ್ತಿಯ ಬಾಯಲ್ಲಿ)
ಚಕ್ರಾಕೃತಿಯೊಳ್ ತಲೆಯಂ
ತಿರುಪುತ್ತುಮಿರ್ದು
(ಚಕ್ರಾಕೃತಿಯಿಂದ ತಲೆಯನ್ನು
ತಿರುಗಿಸುತ್ತಿದ್ದಾಗ) ಆಗಳು

ಅದಂ ಮುರಾಂತಕಂ ಕಂಡು ವಿದ್ವಿಷ್ಟ ವಿದ್ರಾವಣಂಗೆ ತೋಱಿದೊಡೆ (ಕೃಷ್ಣನು ನೋಡಿ ವಿದ್ವಿಷ್ಟ ವಿದ್ರಾವಣನಾದ ಅರ್ಜುನನಿಗೆ ತೋರಿಸಿದನು; ತೋರಿಸಿದಾಗ-)-

ವಚನ:ಅರ್ಥ:ಹಾಗೆ ಇಬ್ಬರೂ ಒಬ್ಬೊಬ್ಬರಲ್ಲಿ ಶೌರ್ಯವನ್ನೂ ಗರ್ವವನ್ನೂ ತೋರಿ, ದಾಸವಾಳದ ಹೂವಿನ

ಹಾರವನ್ನು ದೊಡ್ಡದಾಗಿ
ರಾಶಿಮಾಡಿದಂತೆ ದಿಕ್ಕು ದಿಕ್ಕಿಗೆ
ಚೆದುರಿ ಮಾಂಸದ
ಉಂಡೆಗಳೂ ಕಿತ್ತಳೆಯ ಮತ್ತು
ಬಣ್ಣ ಬಣ್ಣದ ಬಟ್ಟೆಯ
ಬಾವುಟಗಳಂತೆ ಗಗನಕ್ಕೆ
ಅತ್ತಿತ್ತ ಚಲಿಸುವ ಮತ್ತು ಚಿಮ್ಮಿ
ಹಾರುವ ರಕ್ತದ
ಸುಂಟುರುಗಾಳಿಗಳೂ ಅತಿ
ಭಯಂಕರಾಕಾರದುವು. ಹಾಗೆ
ಕಾದಾಡಿ ಶಕ್ತಿಗುಂದಿದ

ಸಾತ್ಯಕಿಯನ್ನು ಭೂರಿಶ್ರವನು
ಶ್ರಮವಿಲ್ಲದೆಯೇ ನೆಲಕ್ಕೆ
ಬಡಿದು ಗಂಟಲನ್ನು ಮೆಟ್ಟಿ
ತಲೆಯನ್ನು ಕತ್ತರಿಸುವಾಗ
ಸಾತ್ಯಕಿಯು
ಭೂಮಿಯುದ್ಧದಲ್ಲಿ
ಪ್ರವೀಣನಾಗಿದ್ದುದರಿಂದ
ಆತನ ಕತ್ತಿಯ ಬಾಯಲ್ಲಿ
ಚಕ್ರಾಕೃತಿಯಿಂದ ತಲೆಯನ್ನು
ತಿರುಗಿಸುತ್ತಿದ್ದಾಗ ಅದನ್ನು
ಕೃಷ್ಣನು ನೋಡಿ ವಿದ್ವಿಷ್ಟ

ವಿದ್ರಾವಣನಾದ ಅರ್ಜುನನಿಗೆ ತೋರಿಸಿದನು- ತೋರಿಸಿದಾಗ-

ಕಂ|| ನರನೆಚ್ಚೊಡೆ ಪೞಿದು ಕರಂ
ಕರವಾಳೊಡನಮರೆ ಕಾಸಿ ಬೆಚ್ಚಂತೆ ವಸುಂ|
ಧರೆಯೊಳ್ ಬಿೞ್ದಿರ್ದುದದೇಂ
ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ|| ೧೪೧ ||

ಪದ್ಯ-00:ಪದವಿಭಾಗ-

ಅರ್ಥ:ನರನು ಎಚ್ಚೊಡೆ

ಪಱಿದು (ಅರ್ಜುನನು
(ಭೂರಿಶ್ರವನನ್ನು)
ಹೊಡೆಯಲು ಅವನ ಕೈ
ಕತ್ತರಿಸಿ) ಕರಂ ಕರವಾಳೊಡನೆ
ಅಮರೆ ಕಾಸಿ ಬೆಚ್ಚಂತೆ
ವಸುಂಧರೆಯೊಳ್
ಬಿಱ್ದಿರ್ದುದು- ಬಿಳ್ದು
ಇರ್ದುದು(ಕತ್ತಿಯೊಡನೆ
ಕಾಯಿಸಿ ಬೆಸೆದ ಹಾಗೆ
ಅಂಟಿಕೊಂಡಿದ್ದು
ಭೂಮಿಯಲ್ಲಿ ಬಿದ್ದಿತ್ತು.)

ಅದೇಂ ತಿರವ್ರೋ ಪ್ರೂಣಿಸಿದ ಮುಷ್ಟಿ ಭೂರಿಶ್ರವನಾ (ಪ್ರತಿಜ್ಞೆಮಾಡಿ ಹಿಡಿದ ಭೂರಿಶ್ರವನ ಮುಷ್ಟಿಯ ಎಷ್ಟು ಸ್ಥಿರವಾದುದೊ!)

ಪದ್ಯ-00:ಅರ್ಥ: ೧೪೧. ಅರ್ಜುನನು (ಭೂರಿಶ್ರವನನ್ನು) ಹೊಡೆಯಲು ಅವನ ಕೈ ಕತ್ತರಿಸಿಹೋಗಿ ಕತ್ತಿಯೊಡನೆ ಕಾಯಿಸಿ ಬೆಸೆದ ಹಾಗೆ

ಅಂಟಿಕೊಂಡಿದ್ದು
ಭೂಮಿಯಲ್ಲಿ ಬಿದ್ದಿತು.
ಪ್ರತಿಜ್ಞೆಮಾಡಿ ಹಿಡಿದ
ಭೂರಿಶ್ರವನ ಮುಷ್ಟಿಯ ಎಷ್ಟು
ಸ್ಥಿರವಾದುದೊ!

ವ|| ಆಗಳ್ ಸಾತ್ಯಕಿ ಮುಳಿಸಿನೊಳ್ ಕಣ್ಗಾಣದೆ ಭೂರಿಶ್ರವನ ತಲೆಯನರಿದು ತನ್ನೇಱಿಂಗೆ ತಾನೆ ಸಿಗ್ಗಾಗಿ ಪೋದನನ್ನೆಗಂ ಯಮನಂದನನ ಬೆಸದೊಳ್

ಫಲ್ಗುಣನಂ ಕೆಯ್ಕೊಳಲ್ ಬರ್ಪ

ಮರುನ್ನಂದನಂಗಾ

ದ್ರೋಣರಡ್ಡಂ ಬಂದೊಡೆ

ಗುರುಗೆ ಗುರುದಕ್ಷಿಣೆ

ಗುಡುವಂತವರ ರಥಮಂ

ಶತಚೂರ್ಣಂ ಮಾಡಿ

ಕಳಿಂಗರಾಜ

ಗಜಘಟೆಗಳನೌಂಕಿ

ಸೊರ್ಕುತ್ತುಂ ಬರೆ

ದುಶ್ಶ್ಯಾಸನಾದಿಗಳದಿರದಿದಿರಂ

ಬಂದಾಂತೊಡೆ-

ವಚನ:ಪದವಿಭಾಗ-ಅರ್ಥ:ಆಗಳ್ ಸಾತ್ಯಕಿ ಮುಳಿಸಿನೊಳ್ ಕಣ್ಗಾಣದೆ ಭೂರಿಶ್ರವನ ತಲೆಯನು ಅರಿದು (ಆಗ ಸಾತ್ಯಕಿಯು ಕೋಪದಿಂದ ಕುರುಡನಾಗಿ ಭೂರಿಶ್ರವನ ತಲೆಯನ್ನು ಕತ್ತರಿಸಿ) ತನ್ನ ಏೞ್ಗೆ ತಾನೆ ಸಿಗ್ಗಾಗಿ ಪೋದನು (ತನ್ನ ಯುದ್ಧಕಾರ್ಯಕ್ಕೆ ತಾನೆ ನಾಚಿಕೊಂಡು ಹೋದನು.)

ಅನ್ನೆಗಂ ಯಮನಂದನನ
ಬೆಸದೊಳ್ (ಅಷ್ಟರಲ್ಲಿ
ಧರ್ಮರಾಜನ ಆಜ್ಞೆಯ
ಪ್ರಕಾರ) ಫಲ್ಗುಣನಂ
ಕೆಯ್ಕೊಳಲ್ (ಸಹಾಯಕನಾಗಿ)
ಬರ್ಪ ಮರುನ್ನಂದನಂಗೆ ಆ
ದ್ರೋಣರು ಅಡ್ಡಂ ಬಂದೊಡೆ
(ಅಷ್ಟರಲ್ಲಿ ಧರ್ಮರಾಜನ
ಆಜ್ಞೆಯ ಪ್ರಕಾರ ಅರ್ಜುನನಿಗೆ
ಸಹಾಯಕನಾಗಿ ಬರುತ್ತಿದ್ದ
ಭೀಮನಿಗೆ

ದ್ರೋಣಾಚಾರ್ಯರು

ಅಡ್ಡಲಾಗಿ ಬರಲು) ಗುರುಗೆ

ಗುರುದಕ್ಷಿಣೆ ಗುಡುವಂತೆ

ಅವರ ರಥಮಂ ಶತಚೂರ್ಣಂ

ಮಾಡಿ (ಭೀಮನು ಗುರುವಿಗೆ

ಗುರುದಕ್ಷಿಣೆಯನ್ನು

ಕೊಡುವಂತೆ ಅವರ ತೇರನ್ನು

ನೂರು ಚೂರುಗಳನ್ನಾಗಿ

ಮಾಡಿ) ಕಳಿಂಗರಾಜ

ಗಜಘಟೆಗಳನು ಔಂಕಿ

ಸೊರ್ಕುತ್ತುಂ ಬರೆ

(ಕಳಿಂಗರಾಜನ ಆನೆಯ ಸಮೂಹವನ್ನು ಒತ್ತಿ ಸೋಕುತ್ತ ಬರಲು) ದುಶ್ಯಾಸನಾದಿಗಳು ಅದಿರದೆ ಇದಿರಂ ಬಂದು ಆಂತೊಡೆ (ದುಶ್ಯಾಸನನೇ ಮೊದಲಾದವರು ಹೆದರದೆ ಎದುರಾಗಿ ಬಂದು ಪ್ರತಿಭಟಿಸಿದರು. ಪ್ರತಿಭಟಿಸಿದಾಗ)-

ವಚನ:ಅರ್ಥ:ಆಗ ಸಾತ್ಯಕಿಯು ಕೋಪದಿಂದ

ಕುರುಡನಾಗಿ ಭೂರಿಶ್ರವನ ತಲೆಯನ್ನು ಕತ್ತರಿಸಿ, ತನ್ನ ಯುದ್ಧಕಾರ್ಯಕ್ಕೆ ತಾನೆ ನಾಚಿಕೊಂಡು ಹೋದನು. ಅಷ್ಟರಲ್ಲಿ ಧರ್ಮರಾಜನ ಆಜ್ಞೆಯ ಪ್ರಕಾರ ಅರ್ಜುನನಿಗೆ ಸಹಾಯಕನಾಗಿ ಬರುತ್ತಿದ್ದ ಭೀಮನಿಗೆ ದ್ರೋಣಾಚಾರ್ಯರು ಅಡ್ಡಲಾಗಿ ಬರಲು ಭೀಮನು ಗುರುವಿಗೆ ಗುರುದಕ್ಷಿಣೆಯನ್ನು

ಕೊಡುವಂತೆ ಅವರ ತೇರನ್ನು
ನೂರು ಚೂರುಗಳನ್ನಾಗಿ
ಮಾಡಿ ಕಳಿಂಗರಾಜನ ಆನೆಯ
ಸಮೂಹವನ್ನು ಒತ್ತಿ ಸೋಕುತ್ತ
ಬರಲು ದುಶ್ಶ್ಯಾಸನನೇ
ಮೊದಲಾದವರು ಹೆದರದೆ
ಎದುರಾಗಿ ಬಂದು
ಪ್ರತಿಭಟಿಸಿದರು;
ಪ್ರತಿಭಟಿಸಿದಾಗ- .

ಚಂ|| ನಿಡುವಗೆ ಸೈಪಿನಿಂದೆ ದೊರೆಕೊಂಡುದಿವರ್

ಗಜೆಗೊಂಡೆನಪ್ಪೊಡೀ

ಗಡೆ ಪರೆದಪ್ಪರೆಚ್ಚು ತವೆ

ಕೊಲ್ವೆನಿವಂದಿರನೆಂದು ನಚ್ಚಿನ|

ಚ್ಚುಡಿವಿನಮೆಚ್ಚೊಡೆಯಿನೆಚ್ಚ

ರುಣಾಂಬು ಕಲಂಕಿ ಪಾಯೆ

ಮು

ನ್ನಡಿಯೊಳುರುಳ್ದರಂಧನೃಪ

ನಂದನರಂದು

ಮರುತ್ತನೂಜನಾ|| ೧೪೨||

ಪದ್ಯ-೧೪೨:ಪದವಿಭಾಗ-

ಅರ್ಥ:ನಿಡುವಗೆ ಸೈಪಿನಿಂದೆ

ದೊರೆಕೊಂಡುದು
(ದೀರ್ಘಕಾಲದ ಶತ್ರುಗಳು
ಅದೃಷ್ಟದಿಂದ
ದೊರೆಕೊಂಡಿದ್ದಾರೆ/
ದೊರೆತಿದ್ದಾರೆ.) ಇವರ್
ಗಜೆಗೊಂಡೆನು ಅಪ್ಪೊಡೆ
ಈಗಡೆ ಪರೆದಪ್ಪರು
(ಗದೆಯನ್ನು ತೆಗೆದುಕೊಂಡರೆ
ಇವರು ಈಗಲೇ ಚದುರಿ
ಓಡಿಹೋಗುತ್ತಾರೆ) ಎಚ್ಚು ತವೆ
ಕೊಲ್ವೆನು ಇವಂದಿರನು ಎಂದು

(ಇವರನ್ನು/
ದುಶ್ಯಾಸನಾದಿಗಳನ್ನು
ಬಿಲ್ಲಿನಿಂದಲೇ ಚೆನ್ನಾಗಿ
ಹೊಡೆದು
ಕೊಂದುಹಾಕುತ್ತೇನೆ.) ನಚ್ಚಿನ
ಅಚ್ಚು ಉಡಿವಿನಂ
ಎಚ್ಚೊಡೆಯಿಂ (ಎಂದು, ತನ್ನ
ಆತ್ಮವಿಶ್ವಾಸದ ಮುದ್ರೆಯಿಂದ
ಹೊಡೆಯಲು) ಎಚ್ಚ
ಅರುಣಾಂಬು ಕಲಂಕಿ ಪಾಯೆ
(ಆ ಹೊಡೆದ ಕಡೆಯ

ಗಾಯದಿಂದ ಹೊರಟ ರಕ್ತವು
ಕದಡಿ ಹಾಯಲು)
ಮುನ್ನಡಿಯೊಳು (ಮುನ್ನ
ಅಡಿ- ಪಾದದ ಮಂದೆ)
ಉರುಳ್ದರು ಅಂಧನೃಪ
ನಂದನರು, ಅಂದು
ಮರುತ್ತನೂಜನಾ-ಭೀಮನ
(ಅಂದು
ಕುರುಡುದೊರೆಯಾದ
ಧೃತರಾಷ್ಟ್ರನ ಮಕ್ಕಳು ಆ
ವಾಯುಪುತ್ರನಾದ ಭೀಮನ

ಕಾಲಿನ ಮುಂಭಾಗದಲ್ಲಿ ಉರುಳಿದರು.)

ಪದ್ಯ-೧೪೨:ಅರ್ಥ:

ದೀರ್ಘಕಾಲದ ಶತ್ರುಗಳು ಅದೃಷ್ಟದಿಂದ ದೊರೆತಿದ್ದಾರೆ. ಗದೆಯನ್ನು ತೆಗೆದುಕೊಂಡರೆ ಇವರು ಈಗಲೇ ಚದುರಿ ಓಡಿಹೋಗುತ್ತಾರೆ. ಇವರನ್ನು ಬಿಲ್ಲಿನಿಂದಲೇ ಪೂರ್ಣವಾಗಿ ಹೊಡೆದು ಕೊಂದುಹಾಕುತ್ತೇನೆ. ಎಂದು

ತನ್ನ ಆತ್ಮವಿಶ್ವಾಸದ
ಮುದ್ರೆಯಿಂದ ಹೊಡೆಯಲು,
ಆ ಹೊಡೆದ ಕಡೆಯ
ಗಾಯದಿಂದ ಹೊರಟ ರಕ್ತವು
ಕದಡಿ ಹಾಯಲು
ಕುರುಡುದೊರೆಯಾದ
ಧೃತರಾಷ್ಟ್ರನ ಮಕ್ಕಳು ಆ
ವಾಯುಪುತ್ರನಾದ ಭೀಮನ
ಕಾಲಿನ ಮುಂಭಾಗದಲ್ಲಿ
ಅಂದು ಉರುಳಿದರು.

ವ|| ಅಂತು ದುರ್ಮುಖ
ದುರ್ಮದ ದುರ್ಧರ್ಷಣರ್
ಮೊದಲಾಗೆ ಮೂವತ್ತು
ಮೂವರಂ ಕೊಂದು
ದುಶ್ಶ್ಯಾಸನನಂ ವಿರಥನಂ
ಮಾಡಿ
ದುರ್ಯೋಧನನನೊಂದೆ
ನಿಶಿತ ವಿಶಿಖ ಹತಿಯಿಂ
ಸುರುಳ್ದು ಉರುಳ್ವಿನಂ ಎಚ್ಚು
ಮೂರ್ಛಾಗತನಂ ಮಾಡಿ
ಸಿಂಹನಾದದಿನಾರ್ದು

ಮುಟ್ಟೆವರ್ಪಾಗಳ್ದಿನ ಸಾವಂ ನೋಡಲಾಱಿದೆ-

ವಚನ:ಪದವಿಭಾಗ-

ಅರ್ಥ:ಹಾಗೆ ದುರ್ಮುಖ ದುರ್ಮದ ದುರ್ಧರ್ಷಣರ್ ಮೊದಲಾಗೆ ಮೂವತ್ತು ಮೂವರಂ ಕೊಂದು ದುಶ್ಶ್ಯಾಸನನಂ ವಿರಥನಂ ಮಾಡಿ (ಮೂವತ್ತು ಮೂರು ಮಂದಿಯನ್ನೂ ಕೊಂದು ದುಶ್ಶ್ಯಾಸನನನ್ನು

ರಥವಿಲ್ಲದವನನ್ನಾಗಿ ಮಾಡಿ)
ದುರ್ಯೋಧನನನು ಒಂದೆ
ನಿಶಿತ ವಿಶಿಖ ಹತಿಯಿಂ
ಸುರುಳ್ದು ಉರುಳ್ವಿನಂ ಎಚ್ಚು
ಮೂರ್ಛಾಗತನಂ ಮಾಡಿ
(ದುರ್ಯೋಧನನನ್ನು ಒಂದೇ
ಹರಿತವಾದ ಬಾಣದ
ಪಟ್ಟಿನಿಂದ ಮುರಿದುಕೊಂಡು
ಉರುಳಿ ಬೀಳುವ ಹಾಗೆ
ಹೊಡೆದು ಮೂರ್ಛಿತನನ್ನಾಗಿ
ಮಾಡಿ) ಸಿಂಹನಾದದಿಂ

ಆರ್ದು (ಸಿಂಹಧ್ವನಿಯಿಂದ ಗರ್ಜಿಸಿ) ಮುಟ್ಟೆವರ್ಪಾಗಳ್ ಆಳ್ದನ ಸಾವಂ ನೋಡಲಾಱದೆ (ಹತ್ತಿರಕ್ಕೆ ಬಂದಾಗ ತನ್ನನ್ನಾಳಿದ ಯಜಮಾನನ ಸಾವನ್ನು ನೋಡಲಾರದೆ-)- **ವಚನ:ಅರ್ಥ:**ವ|| ಹಾಗೆ ದುರ್ಮುಖ, ದುರ್ಮದ, ದುರ್ಧರ್ಷಣರೇ ಮೊದಲಾದ ಮೂವತ್ತು ಮೂರು ಮಂದಿಯನ್ನೂ ಕೊಂದು

ದುಶ್ಶಾಸನನನ್ನು
ರಥವಿಲ್ಲದವನನ್ನಾಗಿ ಮಾಡಿ
(ತೇರಿನಿಂದ ಉರುಳಿಸಿ)
ದುರ್ಯೋಧನನನ್ನು ಒಂದೇ
ಹರಿತವಾದ ಬಾಣದ
ಪೆಟ್ಟಿನಿಂದ ಮುರಿದುಕೊಂಡು
ಉರುಳಿ ಬೀಳುವ ಹಾಗೆ
ಹೊಡೆದು ಮೂರ್ಛಿತನನ್ನಾಗಿ
ಮಾಡಿ ಸಿಂಹಧ್ವನಿಯಿಂದ
ಗರ್ಜಿಸಿ ಹತ್ತಿರಕ್ಕೆ ಬಂದಾಗ

ತನ್ನನ್ನಾಳಿದ ಯಜಮಾನನ ಸಾವನ್ನು ನೋಡಲಾರದೆ-

ಮ|| ಎಡೆಗೊಂಡಂಕದ ಕರ್ಣನೆಯ್ದೆವರೆ ದಿವ್ಯಾಸ್ತ್ರಂಗಳಿಂದಂ ಸಿಡಿಲ್ ಪೊಡೆವಂತಪ್ಪಿನಮೆಚ್ಚುದಗ್ರರಥಮಂ ಮುಯ್ಯೇಱು ಸೂಱು ಕೋಪದಿಂ|
ಕಡಿಯಲ್ ಸಾರ್ದೊಡಱಲ್ದು ಸೂತಸುತನೊಂದುಗ್ರೇಷುವಿಂ ತಿಣ್ಣಮೆ

ಚ್ಛೊಡನಾರ್ದಂ

ನಸುಮೂರ್ಛೆಹೋಗಿ

ರಥದೊಳ್ ಭೀಮಂ

ನರಲ್ವನ್ನೆಗಂ|| ೧೪೩ ||

ಪದ್ಯ-೧೪೩:ಪದವಿಭಾಗ-ಅರ್ಥ:ಎಡೆಗೊಂಡು ಅಂಕದ ಕರ್ಣನು ಎಯ್ದೆವರೆ (ಪ್ರಸಿದ್ಧನಾದ ಕರ್ಣನು ದುರ್ಯೋಧನ ಮತ್ತು ಭೀಮರ ಮಧ್ಯೆ ಪ್ರವೇಶಿಸಿ ಹತ್ತಿರ ಬರಲು)

ದಿವ್ಯಾಸ್ತ್ರಂಗಳಿಂದಂ
ಸಿಡಿಲ್ವೊಡೆವಂತೆ ಅಪ್ಪಿನಂ
ಎಚ್ಚು ((ಭೀಮನು ತನ್ನ
ಶ್ರೇಷ್ಠವಾದ ಬಾಣಗಳಿಂದ
ಸಿಡಿಲು ಹೊಡೆಯುವ ಹಾಗೆ
ಹೊಡೆದು) ಉದಗ್ರರಥಮಂ
ಮುಯ್ಯೇೞು ಸೂೞು
(ಕರ್ಣನ ಶ್ರೇಷ್ಠವಾದ
ರಥವನ್ನು ಇಪ್ಪತ್ತೊಂದು ಸಲ)
ಕೋಪದಿಂ ಕಡಿಯಲ್
(ಕೋಪದಿಂದ ಕಡಿದು

ಹಾಕಲು,) ಸಾರ್ದೋಡೆ

ಅಬಿಲ್ದು ಸೂತಸುತನು ಒಂದು

ಉಗ್ರೇಷುವಿಂ (ಕರ್ಣನು

ವ್ಯಥೆಪಟ್ಟು ತನ್ನ ಶ್ರೇಷ್ಠವಾದ

ಬಾಣದಿಂದ) ತಿಣ್ಣಂ

ಎಚ್ಚೊಡಂ(ತೀಕ್ಷ್ಣವಾಗಿ

ಹೊಡೆದಾಗ,) ಆರ್ದಂ

ನಸುಮೂರ್ಛೆಹೋಗಿ

ರಥದೊಳ್ ಭೀಮಂ

ನರಲ್ವನ್ನೆಗಂ(ರಥದಲ್ಲಿಯೇ

ಭೀಮನು ಸ್ವಲ್ಪ

ಮೂರ್ಛೆಹೋಗಿ ನರಳುವ ಹಾಗೆ ಹೊಡೆದು ಆರ್ಭಟ ಮಾಡಿದನು.)

ಪದ್ಯ-೧೪೩:ಅರ್ಥ:ಪ್ರಸಿದ್ಧನಾದ ಕರ್ಣನು ದುರ್ಯೋಧನ ಮತ್ತು ಭೀಮರ ಮಧ್ಯೆ ಪ್ರವೇಶಿಸಿ ಹತ್ತಿರ ಬರಲು (ಭೀಮನು ತನ್ನ) ಶ್ರೇಷ್ಠವಾದ ಬಾಣಗಳಿಂದ ಸಿಡಿಲು ಹೊಡೆಯುವ ಹಾಗೆ ಹೊಡೆದು, ಕರ್ಣನ ಶ್ರೇಷ್ಠವಾದ ರಥವನ್ನು

ಇಪ್ಪತ್ತೊಂದು ಸಲ
ಕೋಪದಿಂದ ಕಡಿದು ಹಾಕಲು,
ಕರ್ಣನು ವ್ಯಥೆಪಟ್ಟು ತನ್ನ
ಶ್ರೇಷ್ಠವಾದ ಬಾಣದಿಂದ
ತೀಕ್ಷ್ಣವಾಗಿ ಹೊಡೆದಾಗ,
ರಥದಲ್ಲಿಯೇ ಭೀಮನು ಸ್ವಲ್ಪ
ಮೂರ್ಛೆಹೋಗಿ ನರಳುವ
ಹಾಗೆ ಹೊಡೆದು ಆರ್ಭಟ
ಮಾಡಿದನು.

ವ|| ಅಂತು ಮೂರ್ಛಾಗತನಾದ ಭೀಮನ

ಕೊರಲೊಳ್ ಬಿಲ್ಲಂ ಕೋದು ಮೇಗಿಲ್ಲದೆ ತೆಗೆದು-

ವಚನ:ಪದವಿಭಾಗ-

ಅರ್ಥ:ಅಂತು ಮೂರ್ಛಾಗತನಾದ ಭೀಮನ ಕೊರಲೊಳ್ ಬಿಲ್ಲಂ ಕೋದು ಮೇಗಿಲ್ಲದೆ ತೆಗೆದು-

ವಚನ:ಅರ್ಥ:ವ|| ಹಾಗೆ ಮೂರ್ಛೆ ಹೋದ ಭೀಮನ ಕೊರಳಿಗೆ ಬಿಲ್ಲಿನ ಹಗ್ಗವನ್ನು

ಸಿಕ್ಕಿಸಿ ಅಸಮಾನವಾದ
ರೀತಿಯಲ್ಲಿ ಸೆಳೆದು-

ಕಂ|| ತಾಂ ಗಡಮೆನ್ನಾಳ್ದನ
ತೊಡೆ
ಯಂ ಗಡಮಿನ್ನುಡಿವನೆನ್ನೊಳಂ
ಕಾದುವನೆಂ|
ದಂಗಪತಿ ನುಡಿದು ಕೊಲ್ಲದೆ
ತಾಂಗಿದನಂಬಿಕೆಗೆ ನುಡಿದ
ನುಡಿ ನಿಲೆ ಮನದೊಳ್||
೧೪೪||

ಪದ್ಯ-೧೪೪:ಪದವಿಭಾಗ-ಅರ್ಥ:ತಾಂ ಗಡಂ ಎನ್ನ ಆಳ್ದನ ತೊಡೆಯಂ ಗಡ ಇನ್ನು ಉಡಿವನ್ (ಗಡ- ಓಹೋ! ತಾನು ಇವನೇ ಅಲ್ಲವೇ ನನ್ನ ಯಜಮಾನನ ತೊಡೆಯನ್ನು ಒಡೆಯುವವನು) ಎನ್ನೊಳಂ ಕಾದುವನು ಎಂದು ಅಂಗಪತಿ ನುಡಿದು (ಇನ್ನು ನನ್ನಲ್ಲಿಯೂ ಕಾದುವವನು ಎಂದು ಹೇಳಿ ಕರ್ಣನು) ಕೊಲ್ಲದೆ ತಾಂಗಿದಂ

(ಭೀಮನನ್ನು ಕೊಲ್ಲದೆ ತಾಳಿದನು.) ಅಂಬಿಕೆಗೆ ನುಡಿದ ನುಡಿ ನಿಲೆ ಮನದೊಳ್ (ತಾಯಿಗೆ ಕೊಟ್ಟ ಮಾತು ಮನಸ್ಸಿನಲ್ಲಿ ನಿಂತಿರಲಾಗಿ)

ಪದ್ಯ-೧೪೪:ಅರ್ಥ: ೧೪೪. ಗಡ- ಓಹೋ! ಇವನೇ ಅಲ್ಲವೇ ನನ್ನ ಯಜಮಾನ ದುರ್ಯೋಧನನ ತೊಡೆಯನ್ನು ಒಡೆಯುವವನು; ಇನ್ನು

ನನ್ನಲ್ಲಿಯೂ ಕಾದುವವನು ಎಂದು ಹೇಳಿ ಕರ್ಣನು ತಾಯಿಗೆ ಕೊಟ್ಟ ಮಾತು ಮನಸ್ಸಿನಲ್ಲಿ ನಿಂತಿರಲಾಗಿ ಭೀಮನನ್ನು ಕೊಲ್ಲದೆ ತಾಳಿದನು.

ವ|| ಅನ್ನೆಗಮಿತ್ತ ಚಾಣೂರಾರಿ ಜರಾಸಂಧಾರಿಯ ಮುನ್ನೆಗೆದು ಬಿಟ್ಟಿಕ್ಕಡಂಗಿದ ಸಿಂಹನಾದಕ್ಕೆ ಮನಕ್ಷತಂಬಟ್ಟು ಸಾತ್ಯಕಿಯ ನಾರಯಲಟ್ಟಿದೊಡಾತಂ

ಬಂದಚೇತನನಾಗಿ ಬಿೞ್ದ ವೃಕೋದರನಂ ತನ್ನ ರಥಮನೇಱಿಸಿಕೊಂಡು ಕೂಡೆ ವಂದನನ್ನೆಗಂ ದುರ್ಯೋಧನಂ ಕರ್ಣಂ ಬೆರಸು ಸೈಂಧವನ ಮೊನೆಯೊಳಾತನಂ ಪೆಱಗಿಕ್ಕಿ ಮುಂದೆ ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಇತ್ತ ಚಾಣೂರಾರಿ ಜರಾಸಂಧಾರಿಯ ಮುನ್ನೆಗೆದು

(ಅಷ್ಟರಲ್ಲಿ ಈ ಕಡೆ ಕೃಷ್ಣನು ಭೀಮನ ಮುಂದಕ್ಕೆ ಹಾರಿ) ಬೞಿಕ್ಕ ಅಡಂಗಿದ ಸಿಂಹನಾದಕ್ಕೆ (ಬಳಿಕ ಕುಗ್ಗಿದ ಸಿಂಹಧ್ವನಿಗೆ) ಮನಕ್ಷತಂಬಟ್ಟು ಸಾತ್ಯಕಿಯನು ಆರಯಲು ಅಟ್ಟಿದೊಡೆ (ಮನಸ್ಸಿನಲ್ಲಿಯೇ ವ್ಯಥೆಪಟ್ಟು ಸಾತ್ಯಕಿಯನ್ನು ನೋಡಿಕೊಂಡು ಬರಲು ಕಳುಹಿಸಲು-) ಆತಂ ಬಂದು ಅಚೇತನನಾಗಿ ಬಿೞ್ದಿರ್ದ

ವೃಕೋದರನಂ (ಆತನು ಬಂದು ಶಕ್ತಿಗುಂದಿ ಬಿದ್ದಿದ್ದ ಭೀಮನನ್ನು) ತನ್ನ ರಥಮನು ಏಱಿಸಿಕೊಂಡು ಕೂಡೆ ವಂದನು (ತನ್ನ ರಥದಲ್ಲಿ ಏರಿಸಿಕೊಂಡು ಜೊತೆಯಲ್ಲಿಯೇ ಬಂದನು.) ಅನ್ನೆಗಂ ದುರ್ಯೋಧನಂ ಕರ್ಣಂ ಬೆರಸು (ಅಷ್ಟರಲ್ಲಿ ದುರ್ಯೋಧನನು ಕರ್ಣನೊಡಗೂಡಿಕೊಂಡು)

ಸೈಂಧವನ ಮೊನೆಯೊಳು ಆತನಂ ಪೆಱಗಿಕ್ಕಿ ಮುಂದೆ ನಿಂದಾಗಳ್ (ಸೈಂಧವನ ಯುದ್ಧಭೂಮಿಗೆ ಬಂದು ಆತನನ್ನು ಹಿಂದೆ ಹಾಕಿ ತಾನು ನಿಂತನು.)-

ವಚನ:ಅರ್ಥ:ಅಷ್ಟರಲ್ಲಿ ಈ ಕಡೆ ಕೃಷ್ಣನು ಭೀಮನ ಮುಂದಕ್ಕೆ ಹಾರಿ ಬಳಿಕ ಕುಗ್ಗಿದ ಸಿಂಹಧ್ವನಿಗೆ ಮನಸ್ಸಿನಲ್ಲಿಯೇ ವ್ಯಥೆಪಟ್ಟು ಸಾತ್ಯಕಿಯನ್ನು

ನೋಡಿಕೊಂಡು ಬರಲು
ಕಳುಹಿಸಲು- ಆತನು ಬಂದು
ಶಕ್ತಿಗುಂದಿ ಬಿದ್ದಿದ್ದ ಭೀಮನನ್ನು
ತನ್ನ ರಥದಲ್ಲಿ ಏರಿಸಿಕೊಂಡು
ಜೊತೆಯಲ್ಲಿಯೇ ಬಂದನು.
ಅಷ್ಟರಲ್ಲಿ ದುರ್ಯೋಧನನು
ಕರ್ಣನೊಡಗೂಡಿಕೊಂಡು
ಸೈಂಧವನ ಯುದ್ಧಭೂಮಿಗೆ
ಬಂದು ಆತನನ್ನು ಹಿಂದೆ ಹಾಕಿ
ತಾನು ನಿಂತನು.

ಚಂ||
ದಿನಕರನಸ್ತಮಸ್ತಕಮನಾಸೆವ
ಡಲ್ ಬಗೆದಪ್ಪನೇಕೆ ಕೆ
ಮ್ಮನೆ ತಡೆವೈ
ಜಯದ್ರಥನನಿಕ್ಕುಟಿದಾರೊಳ
ಮಿಂ ತೊಡಂಕವೇ|
ಡೆನುತುಮಜಂ ಮರುಜ್ಜವದೆ
ಚೋದಿಸೆ ಪಾರ್ಥನ ದೇವದತ್ತ
ನಿ
ಸ್ವನದೊಳೆ ತೀವಿ
ಪೊಟ್ಟನೊಡೆವಂತೆವೊಲಾದು

ದಜಾಂಡಮಂಡಳಂ|| ೧೪೫ ||

ಪದ್ಯ-೧೪೫:ಪದವಿಭಾಗ-ಅರ್ಥ:ದಿನಕರನು ಅಸ್ತ ಮಸ್ತಕಮನ್ ಆಸೆವಡಲ್ ಬಗೆದಪ್ಪನು (ಸೂರ್ಯನು ಅಸ್ತಪರ್ವತದ ನೆತ್ತಿಯನ್ನು ಸೇರಲು (ಮುಳುಗಲು) ಯೋಚಿಸುತ್ತಿದ್ದಾನೆ.) ಏಕೆ ಕೆಮ್ಮನೆ ತಡೆವೈ ಜಯದ್ರಥನನು ಇಕ್ಕು (ಏಕೆ ಸುಮ್ಮನೆ ಸಾವಕಾಶ

ಮಾಡುತ್ತಿದ್ದೀಯೆ?
ಜಯದ್ರಥನನ್ನು ಹೊಡೆ;)
ಉೞಿದ ಆರೊಳಮ್ ಇಂ
ತೊಡಂಕವೇಡ ಎನುತುಂ
(ಮಿಕ್ಕವರಾರಲ್ಲಿಯೂ
ತೊಡಕಿಕೊಳ್ಳಬೇಡ ಎನ್ನುತ್ತ)
ಅಜಂ ಮರುಜ್ಜವದೆ ಚೋದಿಸೆ
(ಕೃಷ್ಣನು ವಾಯುವೇಗದಿಂದ
ರಥವನ್ನು ಓಡಿಸಲು,)
ಪಾರ್ಥನ ದೇವದತ್ತ
ನಿಸ್ವನದೊಳೆ ತೀವಿ

(ರಣರಂಗವು ಅರ್ಜುನನ
ದೇವದತ್ತವೆಂಬ ಶಂಖದ
ಧ್ವನಿಯಿಂದ ತುಂಬಿ) ಪೊಟ್ಟನೆ
ಒಡೆವಂತೆವೊಲ್ ಆದುದು
ಅಜಾಂಡಮಂಡಳಂ
(ಬ್ರಹ್ಮಾಂಡಮಂಡಲವು
ಪಟ್ಟೆಂದು
ಒಡೆಯುವಂತಾಯಿತು)

ಪದ್ಯ-೧೪೫:ಅರ್ಥ:

ಸೂರ್ಯನು ಅಸ್ತಪರ್ವತದ
ನೆತ್ತಿಯನ್ನು ಸೇರಲು

(ಮುಳುಗಲು)
ಯೋಚಿಸುತ್ತಿದ್ದಾನೆ. ಏಕೆ
ಸುಮ್ಮನೆ ಸಾವಕಾಶ
ಮಾಡುತ್ತಿದ್ದೀಯೆ?
ಜಯದ್ರಥನನ್ನು ಹೊಡೆ;
ಮಿಕ್ಕವರಾರಲ್ಲಿಯೂ
ತೊಡಕಿಕೊಳ್ಳಬೇಡ ಎನ್ನುತ್ತಾ,
ಕೃಷ್ಣನು ವಾಯುವೇಗದಿಂದ
ರಥವನ್ನು ಓಡಿಸಲು-
ರಣರಂಗವು ಅರ್ಜುನನ
ದೇವದತ್ತವೆಂಬ ಶಂಖದ

ಧ್ವನಿಯಿಂದ ತುಂಬಿ
ಬ್ರಹ್ಮಾಂಡಮಂಡಲವು
ಪೊಟ್ಟೆಂದು
ಒಡೆಯುವಂತಾಯಿತು.

ಚಂ|| ಚಟುಳಿತ ಚಕ್ರನೇಮಿ
ಪರಿವರ್ತನ ಘಟ್ಟನ ಘಾತ
ನಿರ್ಭರ
ಸುಟಿತ ಧರಾತಳಂ
ವಿಜಯನುಗ್ರರಥಂ ಪರಿದತ್ತು
ದಲ್ ಘಟಾ|

ಘಟಿತ ಹಟದ್ವಿರೋಧಿ
ರುರಪ್ಲವಲಂಪಟ
ಸಂಕಟೋತ್ಕಟಂ
ಕಟಕಟ ಘಾತ ನಾಕತಟ
ಸಂಕಟ ಸಂಗರ
ರಂಗಭೂಮಿಯೊಳ್|| ೧೪೬ ||

ಪದ್ಯ-೧೪೬:ಪದವಿಭಾಗ-ಅರ್ಥ:ಚಟುಳಿತ ಚಕ್ರನೇಮಿ (ವೇಗವಾಗಿ ಚಲಿಸುತ್ತಿರುವ ತೇರಿನ ಚಕ್ರದ ಬಳೆಯ) ಪರಿವರ್ತನ ಘಟ್ಟನ ಘಾತ

ನಿರ್ಭರ ಸ್ಫುಟಿತ ಧರಾತಳಂ
(ಸುತ್ತುವುದರ ಪೆಟ್ಟಿನ
ಹೊಡೆತದಿಂದ
ಭರಿಸಲಸಾಧ್ಯವಾಗಿ ಸೀಳಿದ
ಭೂಪ್ರದೇಶವು,) ವಿಜಯನ
ಉಗ್ರರಥಂ - ಪರಿದತ್ತು ದಲ್ -
ಘಟಾಘಟಿತ (ಆನೆಗಳ
ಗುಂಪಿನಿಂದ ಕೂಡಿದ) ಹಟದ್
ವಿರೋಧಿ ರುಧಿರ ಪ್ಲವಲಂಪಟ
(ಶತ್ರುಗಳ ಹೊಳೆಯುವ
ರಕ್ತಪ್ರವಾಹದಲ್ಲಿ

ಆಸಕ್ತಿಯುಳ್ಳ) ಸಂಕಟ (ಕಟ
ಶಬ್ದದೊಡನೆ) ಉತ್ಕಟಂ
ಕಟಕಟ ಘಾತ (ತಮ್ಮ
ಕಟಕಟವೆಂಬ ಹೊಡೆತದಿಂದ)
ನಾಕತಟ ಸಂಕಟ ಸಂಗರ
ರಂಗಭೂಮಿಯೊಳ್(ಸ್ವರ್ಗಕ್ಕೆ
ಹಿಂಸೆಯನ್ನುಂಟುಮಾಡುತ್ತ
ಯುದ್ಧಭೂಮಿಯಲ್ಲಿ),-
ಪರಿದತ್ತು ದಲ್ - (ರಥವು
ವೇಗವಾಗಿ ಓಡಿತ್ತು. ಆಬ್ಬಾ!)

ಪದ್ಯ-೧೪೬:ಅರ್ಥ:ವೇಗವಾಗಿ ಚಲಿಸುತ್ತಿರುವ ತೇರಿನ ಚಕ್ರದ ಬಳೆಯ ಸುತ್ತುವುದರ ಪೆಟ್ಟಿನ ಹೊಡೆತದಿಂದ ಭರಿಸಲಸಾಧ್ಯವಾಗಿ ಸೀಳಿದ ಭೂಪ್ರದೇಶವು, ಅರ್ಜುನನ ಭಯಂಕರವಾದ ರಥವು ಆನೆಗಳ ಗುಂಪಿನಿಂದ ಶತ್ರುಗಳ ಹೊಳೆಯುವ ರಕ್ತಪ್ರವಾಹದಲ್ಲಿ ಆಸಕ್ತಿಯುಳ್ಳ ತಮ್ಮ ಕಟಕಟವೆಂಬ

ಹೊಡೆತದಿಂದ ಸ್ವರ್ಗಕ್ಕೆ ಹಿಂಸೆಯನ್ನುಂಟುಮಾಡುತ್ತ ಯುದ್ಧಭೂಮಿಯಲ್ಲಿ ವೇಗವಾಗಿ ಓಡಿತ್ತು; ದಲ್.

ವ|| ಆಗಳ್ ಕುರುಧ್ವಜಿನಿಗೆ ಭಯಜ್ವರಮುಂ ಮಹೇಶ್ವರಜ್ವರಮುಂ ಬರೆ ಬರ್ಪುದಾರ ಮಹೇಶ್ವರನ ರಥದ ಬರವಂ ಕಂಡು ಕರ್ಣ ಶಲ್ಯ ಶಕುನಿ ಶಾರದ್ವತ ಕೃತವರ್ಮ ದುರ್ಯೋಧನ

ದುಶ್ಶ್ಯಾಸನರ್ ಮೊದಲಾದತಿರಥ ಸಮರಥ ಮಹಾರಥಾರ್ಧರಥರೊಂದೆ ವಿಂದೆಯಲ್ಲ ದೊಂದೊರ್ವರೊಳ್ ಸಂಧಿಸಿ ಗೊಂದಣಿಸಿ ನಿಂದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಕುರುಧ್ವಜಿನಿಗೆ ಭಯಜ್ವರಮುಂ (ಆಗ ಕೌರವಸ್ಯೆನ್ಯಕ್ಕೆ ಭಯವೆಂಬ ಜ್ವರವೂ) ಮಹೇಶ್ವರ

ಜ್ವರಮುಂ ಬರೆ (ಈಶ್ವರನ ಹಣೆಗಣ್ಣಿನ ಜ್ವರವೂ ಬರುವ ಹಾಗೆ) ಬರ್ಪ ಉದಾರಮಹೇಶ್ವರನ ರಥದ ಬರವಂ ಕಂಡು (ಬರುತ್ತಿರುವ ಉದಾರಮಹೇಶ್ವರನಾದ ಅರ್ಜುನನ ರಥದ ಬರುವಿಕೆಯನ್ನು ನೋಡಿ) ಕರ್ಣ ಶಲ್ಯ ಶಕುನಿ ಶಾರದ್ವತ ಕೃತವರ್ಮ ದುರ್ಯೋಧನ ದುಶ್ಶ್ಯಾಸನರ್ ಮೊದಲಾದ

ಅತಿರಥ ಸಮರಥ ಮಹಾರಥ
ಅರ್ಧರಥರ್
ಒಂದೆವಿಂದೆಯಲ್ಲದೆ
(ಗುಂಪಾಗಿರದೆ ಬೇರೆ
ಬೇರೆಯಾಗಿ)
ಒಂದೊರ್ವರೊಳ್ ಸಂಧಿಸಿ
ಗೊಂದಣಿಸಿ ನಿಂದಾಗಳ್-
(ಒಬ್ಬೊಬ್ಬರಲ್ಲಿ ಸೇರಿಕೊಂಡು
ಗುಂಪಾಗಿ ನಿಂತರು. ಆಗ-)
ವಚನ:ಅರ್ಥ:ಆಗ
ಕೌರವಸೈನ್ಯಕ್ಕೆ ಭಯವೆಂಬ

ಜ್ವರವೂ, ಈಶ್ವರನ ಹಣೆಗಣ್ಣಿನ
ಜ್ವರವೂ ಬರುವ ಹಾಗೆ
ಬರುತ್ತಿರುವ
ಉದಾರಮಹೇಶ್ವರನಾದ
ಅರ್ಜುನನ ರಥದ
ಬರುವಿಕೆಯನ್ನು ನೋಡಿ,
ಕರ್ಣ, ಶಲ್ಯ, ಶಕುನಿ, ಶಾರದ್ವತ,
ಕೃತವರ್ಮ, ದುರ್ಯೋಧನ,
ದುಶ್ಯಾಸನನೇ ಮೊದಲಾದ
ಅತಿರಥ, ಸಮರಥ,
ಮಹಾರಥ, ಅರ್ಧರಥರು

ಗುಂಪಾಗಿರದೆ ಬೇರೆ
ಬೇರೆಯಾಗಿ ಒಬ್ಬೊಬ್ಬರಲ್ಲಿ
ಸೇರಿಕೊಂಡು ಗುಂಪಾಗಿ
ನಿಂತರು. ಆಗ-

ಚಂ|| ಶರದೊಳಗುರ್ಚಿಪೋಪ
ಪೊಳಪಿಂಗೊಳಗಾಗಿ
ತಗುಳ್ದುದೊಂದು ಬೆ
ಳ್ಸರಿಗೆಣೆಯಾದುದೀಯೆಱಗು
ವಂಬಿನ ಬಳ್ಸರಿಯೆಂಬಿನಂ
ನಿರಂ|

ತರದೊಳೆ ಪಾಯ್ದು

ಕೂರ್ಗಣೆಗಳಂ ತೞಿದೊಟ್ಟಿ

ತೆರಳ್ಚಿ ತೂಳ್ದಿಕೊಂ

ಡರೆದು ಮುಗೞ್ಚಿ

ಸಣ್ಣಿಸಿದನಾಂತ

ಚತುರ್ವಲಮಂ

ಗುಣಾರ್ಣವಂ|| ೧೪೭||

ಪದ್ಯ-೧೪೭:ಪದವಿಭಾಗ-

ಅರ್ಥ:ಶರದೊಳಗೆ

(ಮಳೆಯೊಳಗೆ)

ಉರ್ಚಿಪೋಪ ಪೊಳಪಿಂಗೆ

ಒಳಗಾಗಿ (ಮಳೆಯ ನಡುವೆ
ನುಸುಳಿಕೊಂಡು ಹೋಗುವ
ಕಿರನಗಳ ಹೊಳಪಿಗೆ
ವಶವಾಗಿ) ತಗುಳ್ದುದು ಒಂದು
ಬೆಳ್ಸರಿಗೆ ಎಣೆಯಾದುದು
(ಬೀಳುವ ಬಿಳಿಯ ಬಣ್ಣದ
ಮಳೆಗೆ ಸಮಾನವಾಗಿ
ಇರುವಂತೆ,) ಈಯೆ ಎಱಗುವ
ಅಂಬಿನ ಬಲ್ಸರಿಯೆಂಬಿನಂ
(ಹಾದು ಮೇಲೆ ಬೀಳುತ್ತಿರುವ
ಬಾಣಗಳ ಮಳೆಯೋ

ಎನ್ನುವಹಾಗೆ)
ನಿರಂತರದೊಳೆ ಪಾಯ್ದ
ಕೂರ್ಗಣೆಗಳಂ ತಱಿದೊಟ್ಟಿ
(ಎಡಬಿಡದೆ ಹಾದು
ಬರುತ್ತಿರುವ ಬಾಣಗಳಿಂದ
ಪ್ರತಿಭಟಿಸಿದ
ಚತುರಂಗಸೈನ್ಯವನ್ನು
ಅರ್ಜುನನು ಕತ್ತರಿಸಿ) ತೆರಳ್ಚಿ
ತೂಳ್ದಿಕೊಂಡು ಅರೆದು
ಮುಗಟ್ಚಿ ಸಣ್ಣಿಸಿದನು (ಓಡಿಸಿ
ರಾಶಿಮಾಡಿಕೊಂಡು ಅರೆದು

ಪುಡಿಮಾಡಿ ಹಿಂದಿರುಗಿಸಿ ಇಲ್ಲದಂತೆ ಮಾಡಿದನು.) ಆಂತ (ಎದುರಿಸಿದ) ಚತುರ್ವಲಮಂ ಗುಣಾರ್ಣವಂ (ಅರ್ಜುನನು ತನ್ನನ್ನು ಎದುರಿಸಿ ಬಂದ ಚತುರಂಗ ಸೈನ್ಯವನ್ನು)

ಪದ್ಯ-೧೪೭:ಅರ್ಥ: ಮಳೆಯ ನಡುವೆ ನುಸುಳಿಕೊಂಡು ಹೋಗುವ ಕಿರನಗಳ ಹೊಳಪಿಗೆ ವಶವಾಗಿ ಬೀಳುವ ಬಿಳಿಯ ಬಣ್ಣದ ಮಳೆಗೆ

ಸಮಾನವಾಗಿ
ಇರುವಂತೆ,ಹಾದು ಮೇಲೆ
ಬೀಳುತ್ತಿರುವ ಬಾಣಗಳ
ಮಳೆಯೋ ಎನ್ನುವಹಾಗೆ
ಎಡಬಿಡದೆ ಹಾದು
ಬರುತ್ತಿರುವ ಬಾಣಗಳಿಂದ
ಪ್ರತಿಭಟಿಸಿದ
ಚತುರಂಗಸೈನ್ಯವನ್ನು
ಅರ್ಜುನನು ಕತ್ತರಿಸಿ ಓಡಿಸಿ
ರಾಶಿಮಾಡಿಕೊಂಡು ಅರೆದು
ಪುಡಿಮಾಡಿ ಹಿಂದಿರುಗಿಸಿ,

ಅರ್ಜುನನು ತನ್ನನ್ನು ಎದುರಿಸಿ ಬಂದ ಚತುರಂಗ ಸೈನ್ಯವನ್ನು ಇಲ್ಲದಂತೆ ಮಾಡಿದನು.

ಮ||ಸ್ರ|| ಕಲಿಗಂ
ಬಲ್ಲಾಳ್ಗಮಂಬೆತ್ತಿದೆನಿದುವೆ
ಪದಂ ಮಾರ್ಕೊಳಲ್
ಸಿಂಧುರಾಜಂ
ಗೆಲಲೆಂದಾಂ ಬಂದೆನಿಂ
ಕೊಂದಪನೆ ನೆರದು
ನಿಂದಾನಿಮೆಂದಾಂತರಂ ಮೂ|

ದಲಿಸುತ್ತೆಚ್ಚಂ ಪ್ರಚಂಡ ಪ್ರಳಯ ಘನ ಘಟಾರಾವದಿಂದಾರ್ದು ಬಾಣಾ ವಲಿಯಿಂದಂ ಪೂಟಿ ರೋದೋವಿವರಮನೊದವಿ ತ್ತೊಂದು ಘೋರಾಂಧಕಾರಂ॥ ೧೪೮ ॥

ಪದ್ಯ-೧೪೮:ಪದವಿಭಾಗ-ಅರ್ಥ:ಕಲಿಗಂ ಬಲ್ಲಾಳ್ಗಂ ಅಂಬೆತ್ತಿದೆಂ (‘ಶೂರರಿಗೂ

ಬಲಿಷ್ಠರಾದ ವೀರರಿಗೂ ಬಾಣವನ್ನು ಎತ್ತಿ ಸವಾಲು ಮಾಡುತ್ತಿದ್ದೇನೆ.) ಇದುವೆ ಪದಂ ಮಾರ್ಕೊಳಲ್ ಸಿಂಧುರಾಜಂ ಗೆಲಲೆಂದು ಆಂ ಬಂದೆನ್ (ಪ್ರತಿಭಟಿಸುವುದಕ್ಕೆ ಇದೇ ಹದವಾದ ಕಾಲ. ಸೈಂಧವನನ್ನು ಗೆಲ್ಲುವುದಕ್ಕಾಗಿ ನಾನು ಬಂದಿದ್ದೇನೆ. ಕೊಲ್ಲುತ್ತೇನೆ.) ಇಂ ಕೊಂದಪನೆ ನೆರದು ನಿಂದು ಆನಿಂ ಎಂದು

(ಇಂದು ಕೊಲ್ಲುತ್ತೇನೆ.
ಗುಂಪಾಗಿ ನಿಂತು ಎದುರಿಸಿ
ಎಂದು) ಆಂತರಂ
ಮೂದಲಿಸುತ್ತ ಎಚ್ಚಂ
(ಪ್ರತಿಭಟಿಸಿದವರನ್ನು
ಮೂದಲಿಸುತ್ತಾ /
ಅಣಕವಾಡಿ ಹೊಡೆದನು.
ಹೇಗೆಂದರೆ) ಪ್ರಚಂಡ ಪ್ರಳಯ
ಘನ ಘಟಾರಾವದಿಂದ
ಆರ್ದು (ಪ್ರಚಂಡವಾದ
ಪ್ರಳಯಕಾಲದ ಗುಡುಗಿನ

ಶಬ್ದದಿಂದ ಆರ್ಭಟಮಾಡಿ) ಬಾಣಾವಲಿಯಿಂದಂ ಪೂಟಿ - ರೋದೋವಿವರಮನು(ಬಾಣ ಗಳ ಸಮೂಹದಿಂದ ಆಕಾಶಪ್ರದೇಶವನ್ನು ಹೂಳಲು) ಒದವಿತ್ತು ಒಂದು ಘೋರಾಂಧಕಾರಂ (ಭಯಂಕರವಾದ ಕತ್ತಲೆಯು ಆವರಿಸಿತು)

ಪದ್ಯ-೧೪೮:ಅರ್ಥ:‘ಶೂರರಿ ಗೂ ಬಲಿಷ್ಠರಾದ ವೀರರಿಗೂ

ಸವಾಲು ಮಾಡುತ್ತಿದ್ದೇನೆ.
(ಬಾಣಗಳನ್ನು ಎತ್ತಿದ್ದೇನೆ).
ಪ್ರತಿಭಟಿಸುವುದಕ್ಕೆ ಇದೇ
ಹದವಾದ ಕಾಲ.
ಸೈಂಧವನನ್ನು ಗೆಲ್ಲುವುದಕ್ಕಾಗಿ
ನಾನು ಬಂದಿದ್ದೇನೆ. ಇಂದು
ಕೊಲ್ಲುತ್ತೇನೆ. ಗುಂಪಾಗಿ ನಿಂತು
ಎದುರಿಸಿ ಎಂದು,
ಪ್ರತಿಭಟಿಸಿದವರನ್ನು
ಮೂದಲಿಸುತ್ತಾ
(ಅಣಕವಾಡಿ) ಹೊಡೆದನು.

ಪ್ರಚಂಡವಾದ ಪ್ರಳಯಕಾಲದ ಗುಡುಗಿನ ಶಬ್ದದಿಂದ ಆರ್ಭಟಮಾಡಿ ಹೊಡೆದು ಬಾಣಗಳ ಸಮೂಹದಿಂದ ಆಕಾಶಪ್ರದೇಶವನ್ನು ಹೂಳಿದನು. ಅದರಿಂದ ಭಯಂಕರವಾದ ಕತ್ತಲೆಯು ಆವರಿಸಿತು.

ವ||

ಅಂತಮೋಘಾಸ್ತ್ರಧನಂಜಯ ನೆಚ್ಚ ಶರಸಂಘಾತದಿನೊಗೆದ

ರಣಗಟ್ತಿಲೆಯೆ ಮೊಲಗಟ್ತಿಲೆಯಂ ಮಾಡೆ ನೇಸರ್ ಪಟ್ಟತ್ತು ವಿಜಯಂ ಸೋಲ್ತನೆಂದು ಕೌರವಬಲಮಾರ್ದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ಅಮೋಘಾಸ್ತ್ರ ಧನಂಜಯನ ಎಚ್ಚ ಶರಸಂಘಾತದಿಂ ಒಗೆದ ರಣಗಟ್ತಿಲೆಯೆ (ಹಾಗೆ ಅಮೋಘಾಸ್ತ್ರ

ಧನಂಜಯನಾದ ಅರ್ಜುನನು
ಹೊಡೆದ ಬಾಣಗಳ
ಸಮೂಹದಿಂದ ಉಂಟಾದ
ಯುದ್ಧಗತ್ತಲೆಯೇ)
ಮೊಲಗೆಟ್ಟಿಲೆಯಂ ಮಾಡೆ
(ರಾತ್ರಿಯ ಭ್ರಮೆಯನ್ನು
ಮಾಡಲು), ನೇಸರ್ ಪಟ್ಟತ್ತು
("ಸೂರ್ಯನು ಮುಳುಗಿದನು)
ವಿಜಯಂ ಸೋಲ್ತನೆಂದು
ಕೌರವಬಲಂ ಆರ್ದೊಡೆ
(ಅರ್ಜುನನು ಸೋತನು"

ಎಂದು ಕೌರವ ಸೈನ್ಯವು ಕೂಗಿಕೊಂಡಿತು. ಹಾಗೆ ಕೂಗಿಕೊಂಡಾಗ-)-

ವಚನ:ಅರ್ಥ:ಹಾಗೆ ಅಮೋಘಾಸ್ತ್ರ ಧನಂಜಯನಾದ ಅರ್ಜುನನು ಹೊಡೆದ ಬಾಣಗಳ ಸಮೂಹದಿಂದ ಉಂಟಾದ ಯುದ್ಧಗತ್ತಲೆಯೇ- ರಾತ್ರಿಯ ಭ್ರಮೆಯನ್ನು ಉಂಟುಮಾಡಲು

“ಸೂರ್ಯನು ಮುಳುಗಿದನು-
ಅರ್ಜುನನು ಸೋತನು”
ಎಂದು ಕೌರವ ಸೈನ್ಯವು
ಕೂಗಿಕೊಂಡಿತು.ಹಾಗೆ
ಕೂಗಿಕೊಂಡಾಗ-

ಚಂ||
ಜ್ವಳದನಳಾಸ್ತ್ರದಿಂದಮಿಸೆ
ಕಟ್ಟಿಲೆ ತೂಳ್ದು ತೆರಳ್ದುದಾಗಳು
ಮ್ಮಳಿಸಿ ಮಹಾರಥರ್ ಪೆಳರೆ
ಸೈಂಧವನೆನ್ನಳವಿಂಗಮೆನ್ನ
ದೋ|

ರ್ವಳದಳವಿಂಗಮಿಂ

ಪೆಡೆದಿರಲ್

ದೊರೆಯಲ್ತೆನಗೆಂದು

ಬಂದಸುಂ

ಗೊಳೆ ಪೊಣರ್ದಂ ಸುರರ್

ಪೊಗೞೆ ತನ್ನಳವಂ

ಜಗದೇಕಮಲ್ಲನೊಳ್॥ ೧೪೯

॥

ಪದ್ಯ-೧೪೯:ಪದವಿಭಾಗ-ಅರ್ಥ:ಜ್ವಳದನಳಾಸ್ತ್ರದಿಂದಂ ಇಸೆ (ಜ್ವಲನ ಅನಲಾಸ್ತ್ರದಿಂದ

ಇಸೆ;- ಪ್ರಕಾಶಮಾನವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಲು) ಕಟ್ತಿಲೆ ತೂಳ್ದು ತೆರಳ್ದುದು (ಕತ್ತಲೆ ಹರಿದು ಓಡಿಹೋಯಿತು) ಆಗಳು ಉಮ್ಮಳಿಸಿ ಮಹಾರಥರ್ ಪೆಳರೆ (ಆಗ ಮಹಾರಥರು ವ್ಯಥೆಪಟ್ಟು ಹೆದರಿರಲು) ಸೈಂಧವನ ಎನ್ನಳವಿಂಗಂ ಎನ್ನ ದೋರ್ವಳದ ಅಳವಿಂಗಮಿಂ

ಸೆಡೆದಿರಲ್ (ಸೈಂಧವನು ತನ್ನ ಶಕ್ತಿಗೂ ತನ್ನ ಬಾಹುಬಲದ ಶಕ್ತಿಗೂ ಇನ್ನು ಭಯದಿಂದ ಕುಗ್ಗಿರುವುದು) ದೊರೆಯಲ್ ತನಗೆಂದು (ಯೋಗ್ಯವಲ್ಲ ತನಗೆ ಎಂದು) ಬಂದು ಅಸುಂಗೊಳೆ (ಬಂದು ಪ್ರಾಣ ತೆಗೆಯುವಂತೆ) ಪೊಣರ್ದಂ (ಹೋರಾಡಿದನು >>. ಅದಕ್ಕೆ-) ಸುರರ್ ಪೊಗೞ್ ತನ್ನ ಅಳವಂ ಜಗದೇಕಮಲ್ಲನೊಳ್

(ತನ್ನ ಪರಾಕ್ರಮವನ್ನು ದೇವತೆಗಳೂ ಹೊಗಳುತ್ತಿರಲು ಜಗದೇಕಮಲ್ಲನಾದ ಅರ್ಜುನನಲ್ಲಿ ಹೋರಾಡಿದನು.)

ಪದ್ಯ-೧೪೯:ಅರ್ಥ: ತಕ್ಷಣವೇ ಅರ್ಜುನನು ಪ್ರಕಾಶಮಾನವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಲು ಕತ್ತಲೆ ಹರಿದು ಓಡಿಹೋಯಿತು. ಆಗ

ಮಹಾರಥರು ವ್ಯಥೆಪಟ್ಟು ಹೆದರಿದರು. ಸೈಂಧವನು ತನ್ನ ಶಕ್ತಿಗೂ ತನ್ನ ಬಾಹುಬಲದ ಶಕ್ತಿಗೂ ಇನ್ನು ಭಯದಿಂದ ನಾನು ಕುಗ್ಗಿರುವುದು ಯೋಗ್ಯವಲ್ಲ ಎಂದು ಹೊರಗೆ ಬಂದು ಪ್ರಾಣ ತೆಗೆಯುವಂತೆ ತನ್ನ ಪರಾಕ್ರಮವನ್ನು ದೇವತೆಗಳೂ ಹೊಗಳುತ್ತಿರಲು ಜಗದೇಕಮಲ್ಲನಾದ

ಅರ್ಜುನನಲ್ಲಿ
ಹೋರಾಡಿದನು.

ವ|| ಅಂತತಿರಥ ಮಥನನ ರಥಕ್ಕಧಿರದಿದಿರಂ ತನ್ನ ರಥಮಂ ಪರಿಯಿಸಿ ಜಯದ್ರಥಂ ಮುಟ್ಟೆವಂದು-

ವಚನ:ಪದವಿಭಾಗ-

ಅರ್ಥ:ಅಂತು ಅತಿರಥ ಮಥನನ ರಥಕ್ಕೆ ಇದಿರದೆ ಇದಿರಂ (ಇದಿರಾಗಿ ಹೆದರದೆ) ತನ್ನ ರಥಮಂ ಪರಿಯಿಸಿ

ಜಯದ್ರಥಂ ಮುಟ್ಟೆವಂದು
(ರಥವನ್ನು ಹಾಯಿಸಿ
ಸೈಂಧವನು ಸಮೀಪಕ್ಕೆ
ಬಂದು)-

ವಚನ:ಅರ್ಥ:ವ|| ಅತಿರಥ
ಮಥನನಾದ ಅರ್ಜುನನ
ರಥಕ್ಕೆ ಇದಿರಾಗಿ ಹೆದರದೆ ತನ್ನ
ರಥವನ್ನು ಹಾಯಿಸಿ
ಸೈಂಧವನು ಸಮೀಪಕ್ಕೆ
ಬಂದು-

ಉ|| ನಿನ್ನೆ ಪೊರಳ್ಚಿ ನಿನ್ನ
ಮಗನಂ ಸೆರಗಿಲ್ಲದೆ
ಕೊಂದನಿಂದುಮಿಂ
ತಿನ್ನೆಗಮಿರ್ಪುದಂ
ಭಯದಿನಿರ್ದೆನೆ ನಿನ್ನನೆ
ಪಾರುತಿರ್ದೆನೆಂ|
ದುನ್ನತ ಶೌರ್ಯದಿಂದಜಿತನಂ
ನರನಂ ಮುನಿದೆಚ್ಚನೇಱುಮೆಂ
ಟುನ್ನಿಶಿತಾಸ್ತ್ರದಿಂದದಟದೇಂ
ದೊರೆವೆತ್ತುದೊ
ಸಿಂಧುರಾಜನಾ|. ೧೫೦ ||

ಪದ್ಯ-೧೫೦:ಪದವಿಭಾಗ-ಅರ್ಥ:ನಿನ್ನೆ ಪೊರಳ್ಚಿ ನಿನ್ನ ಮಗನಂ ಸೆರಗಿಲ್ಲದೆ (ಭಯವಿಲ್ಲದೆ) ಕೊಂದನು (ಕೊಂದೆನು)(“ನಿನ್ನೆಯ ದಿನ ಭಯವಿಲ್ಲದೆ ನಿನ್ನ ಮಗನಾದ ಅಭಿಮನ್ಯುವನ್ನು ಹೊರಳಿಸಿ ಕೊಂದೆನು.) ಇಂದುಂ ಇಂತು ಇನ್ನೆಗಂ ಇರ್ಪುದಂ ಭಯದಿಂ ಇರ್ದೆನೆ (ಇಂದು ಇಲ್ಲಿಯವರೆಗೆ ಭಯದಿಂದ

ಮರೆಯಾಗಿದ್ದೆನೆ?) ನಿನ್ನನೆ
ಪಾರುತಿರ್ದೆಂ ಎಂದು ಉನ್ನತ
ಶೌರ್ಯದಿಂದ ಅಜಿತನಂ
ನರನಂ ಮುನಿದು ಎಚ್ಚನು
(ನಿನ್ನನ್ನೇ ನಿರೀಕ್ಷಿಸುತ್ತಿದ್ದೆ"
ಎಂದು ಕೋಪದಿಂದಲೂ
ಅತಿಶಯವಾದ
ಪರಾಕ್ರಮದಿಂದಲೂ --
ಹೊಡೆದನು >>)
ಏೞುಮೆಂಟುಂ
ನಿಶಿತಾಸ್ತ್ರದಿಂದ (ಏಳೆಂಟು

ಬಾಣಗಳಿಂದ ಹೊಡೆದನು.)
ಅದಟು ಅದೇಂ
ದೊರೆವೆತ್ತುದೊ
ಸಿಂಧುರಾಜನಾ (ಸೈಂಧವನ
ಪರಾಕ್ರಮವು
ಹೆಚ್ಚಿನದಾಯಿತೊ!)
ಪದ್ಯ-೧೫೦:ಅರ್ಥ:“ನಿನ್ನೆಯ
ದಿನ ಭಯವಿಲ್ಲದೆ ನಿನ್ನ
ಮಗನಾದ ಅಭಿಮನ್ಯುವನ್ನು
ಹೊರಳಿಸಿ ಕೊಂದೆ. ಇಂದು
ಇಲ್ಲಿಯವರೆಗೆ ಭಯದಿಂದ

ಮರೆಯಾಗಿದ್ದೆನೆ? ನಿನ್ನನ್ನೇ ನಿರೀಕ್ಷಿಸುತ್ತಿದ್ದೆ” ಎಂದು ಕೋಪದಿಂದಲೂ ಅತಿಶಯವಾದ ಪರಾಕ್ರಮದಿಂದಲೂ ಕೃಷ್ಣನನ್ನೂ ಅರ್ಜುನನ್ನೂ ಬಹಳಹರಿತವಾದ ಏಳೆಂಟು ಬಾಣಗಳಿಂದ ಹೊಡೆದನು. ಸೈಂಧವನ ಪರಾಕ್ರಮವು ಹೆಚ್ಚಿನದಾಯಿತೊ!

ವ|| ಅಂತೆಚ್ಚು ಕಿಚ್ಚುಂ ಕಿಡಿಯುಮಾಗಿ ಪೆರ್ಚಿದುಮ್ಮಚ್ಚರದಿಂದಚ್ಚರಿಯಾಗಿ ಕಾದೆ

ವಚನ:ಪದವಿಭಾಗ-

ಅರ್ಥ:ಅಂತೆಚ್ಚು ಕಿಚ್ಚುಂ ಕಿಡಿಯುಮಾಗಿ ಪೆರ್ಚಿದ ಉಮ್ಮಚ್ಚರದಿಂದ ಅಚ್ಚರಿಯಾಗಿ ಕಾದೆ (ಹೆಚ್ಚಿದ ಮತ್ಸರದಿಂದ

ಆಶ್ಚರ್ಯವಾಗವ ಹಾಗೆ
ಕಾದಲು-)

ವಚನ:ಅರ್ಥ:ವ||
ಕೋಪಗೊಂಡು ಹೆಚ್ಚಿದ
ಮತ್ಸರದಿಂದ
ಆಶ್ಚರ್ಯವಾಗವ ಹಾಗೆ
ಕಾದಿದನು.ಕಾದಲು-

**ಸ್ರ|| ಎಂತಸ್ಮತ್ಪುತ್ರನಂ
ಸಂಗರದೊಳಟೆದಿಯಿನ್ನಂತೆ
ನಿಲ್ ಶಕ್ತಿ ಚಾತು**

ದುರ್ಂತಂಗಳ್ ನಿನ್ನನಾಂ
ಕೊಲ್ವೆಡೆಯೊಳೆಲವೊ ಪೇೞ್
ಕಾವುವೇ ಕಾಯವಣ್ಮಿಂ|
ದಂತಾಂತೆಚ್ಚೆಚ್ಚು ಸೂತ ಧ್ವಜ
ಹಯ ರಥ ಸಂಘಾತಮಂ
ನುರ್ಗೆ ಲೋಕ
ಕ್ಕಂತಂ ಮಾೞ್ಪಂತಕಂಬೋಲ್
ಗದೆವಿಡಿದುೞಿದೆಯ್ತರ್ಪನಂ
ಕಂಡನಂತಂ|| ೧೫೧ ||151||

ಪದ್ಯ-೧೫೧:ಪದವಿಭಾಗ-

ಅರ್ಥ:ಎಂತು ಅಸ್ಮತ್

ಪುತ್ರನಂ ಸಂಗರದೊಳು
ಅಱಿದೆಯ್ ಇನ್ನಂತೆ (ನನ್ನ
ಮಗನನ್ನು ಹೇಗೆ ಕೊಂದೆಯೋ
ಇದು ಹಾಗೆಯೇ) ನಿಲ್ ಶಕ್ತಿ
ಚಾತುರ್ದಂತಂಗಳ್ ನಿನ್ನನು
ಆಂ (ನಿಲ್ಲು, ಶಕ್ತಿಯುಕ್ತವಾದ
ಚತುರಂಗಸೈನ್ಯಗಳು ನಾನು)
ಕೊಲ್ವೆಡೆಯೊಳ್ ಎಲವೊ
ಪೇೞ್ ಕಾವುವೇ (ನಿನ್ನನ್ನು
ಕೊಲ್ಲುವ ಸಂದರ್ಭದಲ್ಲಿ
ರಕ್ಷಿಸುವುದೇ!) ಕಾಯವು

ಅಣ್ಮು ಎಂದು (ನಿನ್ನ ಪೌರಷ
ಕಾಯುವುದಿಲ್ಲ, -
ರಕ್ಷಿಸಲಾರವು ಎಂದು) ಅಂತು
ಆಂತು ಎಚ್ಚೆಚ್ಚು (ಮೇಲೆಬಿದ್ದು
ಎದುರಿಸಿ ಹೊಡೆದು
ಹೊಡೆದು), ಸೂತ ಧ್ವಜ ಹಯ
ರಥ ಸಂಘಾತಮಂ (ಸಾರಥಿ,
ಬಾವುಟ, ಕುದುರೆ ಮತ್ತು
ತೇರಿನ ಸಮೂಹಗಳನ್ನು)
ನುರ್ಗೆ (ನುಚ್ಚುನೂರಾಗಿ
ಪುಡಿಯಾಗುವಂತೆ) ಲೋಕಕ್ಕೆ

ಅಂತಂ ಮಾೞ್ಪ
ಅಂತಕಂಬೋಲ್ (ಪ್ರಪಂಚಕ್ಕೆ
ಅಂತ್ಯವನ್ನುಂಟುಮಾಡುವ
ಯಮನಂತೆ) ಗದೆವಿಡಿದು
ಉಱದೆ ಎಯ್ತರ್ಪನಂ ಕಂಡು
ಅನಂತಂ (ಗದೆಯನ್ನು ಹಿಡಿದು
ವೇಗವಾಗಿ ಬರುತ್ತಿದ್ದುದನ್ನು
ಕೃಷ್ಣನು ನೋಡಿ ಅರ್ಜುನನಿಗೆ-
ಹೇಳಿದನು-)

ಪದ್ಯ-೧೫೧:ಅರ್ಥ:"ನನ್ನ
ಮಗನನ್ನು ಹೇಗೆ ಕೊಂದೆಯೋ

ಇದು ಹಾಗೆಯೇ; ನಿಲ್ಲು, ಶಕ್ತಿಯುಕ್ತವಾದ ಚತುರಂಗಸೈನ್ಯಗಳು ನಾನು ನಿನ್ನನ್ನು ಕೊಲ್ಲುವ ಸಂದರ್ಭದಲ್ಲಿ ರಕ್ಷಿಸುವುದೇ! ರಕ್ಷಿಸಲಾರವು. ಸಾಯಿ” ಎಂದು ಪ್ರತಿಭಟಿಸಿ ಸಾರಥಿ, ಬಾವುಟ, ಕುದುರೆ ಮತ್ತು ತೇರಿನ ಸಮೂಹಗಳನ್ನು ನುಚ್ಚುನೂರಾಗಿ ಪುಡಿಯಾಗುವ ಹಾಗೆ

ಹೊಡೆದನು. ಸೈಂಧವನು ರೋಷಾವೇಶದಿಂದ ಪ್ರಪಂಚಕ್ಕೆ ಅಂತ್ಯವನ್ನುಂಟುಮಾಡುವ ಯಮನಂತೆ ಗದೆಯನ್ನು ಹಿಡಿದು ವೇಗವಾಗಿ ಬರುತ್ತಿದ್ದುದನ್ನು ಕೃಷ್ಣನು ನೋಡಿ ಅರ್ಜುನನಿಗೆ-ಹೇಳಿದನು-

ಕಂ|| ತುಡು ಪಾಶುಪತಮನೆನೆ ನರ

ನೆಡೆಮಡಗದೆ ತುಡೆ ದಿಶಾಳಿ ನಡುಗಿದುದು ಸುರು| ಳ್ದುಡುಗಿದುದು ವಿಯತ್ತಳಮೆಳೆ ಪಿಡುಗಿದುದು ಕಲಂಕಿ ಕದಡಿದುದು ಶಿವನ ಮನಂ|| ೧೫೨ ||

ಪದ್ಯ-೧೫೨:ಪದವಿಭಾಗ-ಅರ್ಥ:ತುಡು ಪಾಶುಪತಮನು ಎನೆ (ಕೃಷ್ಣನು 'ಪಾಶುಪತಾಸ್ತ್ರವನ್ನು ತೊಡು- ಪ್ರಯೋಗಿಸು' ಎಂದು

ಹೇಳಲು) ನರನು
ಎಡೆಮಡಗದೆ (ಎಡೆ ಮಡಗದೆ
ಅವಕಾಶಕೊಡದೆ ಕೂಡಲೆ)
ತುಡೆ ದಿಶಾಳಿ ನಡುಗಿದುದು
(ಅರ್ಜುನನು
ಸಾವಕಾಶಮಾಡದೆ ಅದನ್ನು
ತೊಡಲು- ಪ್ರಯೋಗಿಸಲು
ದಿಕ್ಕುಗಳ ಸಮೂಹವು
ನಡುಗಿತು) ಸುರುಳ್ದು
ಉಡುಗಿದುದು ವಿಯತ್ತಳಂ
(ಆಕಾಶಪ್ರದೇಶವು

ಸುರುಳಿಯಾಗಿ ಸುಕ್ಕಿಹೋಯಿತು) ಎಳೆ ಪಿಡುಗಿದುದು (ಭೂಮಿಯು ಒಡೆಯಿತು.) ಕಲಂಕಿ ಕದಡಿದುದು ಶಿವನ ಮನಂ () **ಪದ್ಯ-೧೫೨:ಅರ್ಥ**: ಕೃಷ್ಣನು ‘ಪಾಶುಪತಾಸ್ತ್ರವನ್ನು ಪ್ರಯೋಗಿಸು’ ಎಂದು ಹೇಳಲು, ಅರ್ಜುನನು ಸಾವಕಾಶಮಾಡದೆ ಅದನ್ನು ಪ್ರಯೋಗಿಸಲು ದಿಕ್ಕುಗಳ

ಸಮೂಹವು ನಡುಗಿತು.

ಆಕಾಶಪ್ರದೇಶವು

ಸುರುಳಿಯಾಗಿ

ಸುಕ್ಕಿಹೋಯಿತು.

ಭೂಮಿಯು ಒಡೆಯಿತು.

ಈಶ್ವರನ ಮನಸ್ಸು ಕದಡಿ

ಅಲ್ಲಾಡಿಹೋಯಿತು.

ಉ|| ಸುಟಿಯೊಳಗಿರ್ದು

ಬೆಟ್ಟು ಪೊಱಪೊಣ್ಮುವಿನಂ

ಲವಣಾಂಬುರಾಶಿ ಕು

ಕ್ಕುಱಿಗುದಿವಲ್ಲಿ ಕೂಱ್ಗಿದಿಯೆ
ಮೇಗೆ ಸಿಡಿಲ್ದಗುಳಂತೆ ಕೂಡೆ
ತ|
ತ್ತಱಿಗುದಿಯುತ್ತುಮಿರ್ಪ
ಕುದಿಯೊಳ್ ಸಿಡಿದಲ್ಲಿಯ
ಮುತ್ತುಗಳ್ ಛಟಿಲ್
ಛಟಿಲೆನೆ
ಕೊಂಡುವೊರ್ಮೋದಲೆ ರುದ್ರ
ಸುರೇಂದ್ರ
ವಿಮಾನಪಙ್ಕ್ತಿಯಂ|| ೧೫೩ ||

ಪದ್ಯ-೧೫೩:ಪದವಿಭಾಗ-ಅರ್ಥ:ಸುೞಿಯೊಳಗಿರ್ದು ಬೆಟ್ಟು (ಸಮುದ್ರದ ಸುಳಿಯಲ್ಲಿದ್ದ ಪರ್ವತಗಳು) ಪೊಱಪೊಣ್ಮುವಿನಂ (ಹೊರಹೊಮ್ಮುತ್ತಿರಲು) ಲವಣಾಂಬುರಾಶಿ ಕುಕ್ಕುೞಿಗುದಿವಲ್ಲಿ ಕೂೞ್ಗುದಿಯೆ(ಕುಕ್ಕುರ ಕುದಿವಲ್ಲಿ, ಕೂಳ್ ಕುದಿಯೆ, ಉಪ್ಪುನೀರಿನ ಸಮುದ್ರವು

ಅನ್ನವು ಕುದಿಯುವಂತೆ
ಕುದಿಯುವಾಗ) ಮೇಗೆ ಸಿಡಿಲ್ದ
ಅಗುಳಂತೆ (ಮೇಲಕ್ಕೆ ಸಿಡಿದ
ಅನ್ನದ ಅಗುಳಂತೆ) ಕೂಡೆ
ತತ್ತಳಿಗುದಿಯುತ್ತುಂ ಇರ್ಪ
ಕುದಿಯೊಳ್ (ಕೂಡಲೆ
ತಳತಳವೆಂದು
ಕುದಿಯುತ್ತಿರುವ ಕುದಿತದಲ್ಲಿ)
ಸಿಡಿದು ಅಲ್ಲಿಯ ಮುತ್ತುಗಳ್
ಛಟಿಲ್ಛಟಿಲ್ ಎನೆ (ಆ
ಸಮುದ್ರದ ಮುತ್ತುಗಳು

ಛಿಟಿಲ್ ಛಿಟಿಲ್ ಎಂದು)
ಕೊಂಡುವು ಒರ್ಮೊದಲೆ ರುದ್ರ
ಸುರೇಂದ್ರ ವಿಮಾನ
ಪಙ್ಕ್ತಿಯಂ (ಆಕಾಶಕ್ಕೆ ಹಾರಿ
ಶಿವನ ಮತ್ತು ದೇವೇಂದ್ರನ
ವಿಮಾನಗಳ ಸಾಲುಗಳನ್ನು
ಒಂದೇಸಲ ಆಕ್ರಮಿಸಿದುವು)
ಪದ್ಯ-೧೫೩:ಅರ್ಥ:ಸಮುದ್ರ
ದ ಸುಳಿಯಲ್ಲಿದ್ದ ಪರ್ವತಗಳು
ಹೊರಹೊಮ್ಮುತ್ತಿರಲು
ಉಪ್ಪುನೀರಿನ ಸಮುದ್ರವು

ಅನ್ನವು ಕುದಿಯುವಂತೆ
ಕುದಿಯುವಾಗ ಮೇಲಕ್ಕೆ
ಸಿಡಿದ ಅನ್ನದ ಅಗುಳಂತೆ
ಕೂಡಲೆ ತಳತಳವೆಂದು
ಕುದಿಯುತ್ತಿರುವ ಕುದಿತದಲ್ಲಿ
ಆ ಸಮುದ್ರದ ಮುತ್ತುಗಳು
ಛಿಟಿಲ್ ಛಿಟಿಲ್ ಎಂದು
ಆಕಾಶಕ್ಕೆ ಹಾರಿ ಶಿವನ ಮತ್ತು
ದೇವೇಂದ್ರನ ವಿಮಾನಗಳ
ಸಾಲುಗಳನ್ನು ಒಂದೇಸಲ
ಆಕ್ರಮಿಸಿದುವು.

ವ||ಅಂತು ಸಮುದ್ರಕ್ಷೋಭಮುಂ ತ್ರೈಲೋಕ್ಯಕ್ಷೋಭಮುಮೊಡನೊಡನಾಗೆ

ವಚನ:ಪದವಿಭಾಗ-ಅರ್ಥ: ಅಂತು ಸಮುದ್ರಕ್ಷೋಭಮುಂ ತ್ರೈಲೋಕ್ಯಕ್ಷೋಭಮುಂ (ಸಮುದ್ರದ ಕಲಕುವಿಕೆಯೂ, ಮೂರು ಲೋಕಗಳ ಭಯಕಂಪನಾದಿಗಳೂ) ಒಡನೊಡನೆ ಆಗೆ-

ವಚನ:ಅರ್ಥ:ವ|| ಹಾಗೆ ಸಮುದ್ರದ ಕಲಕುವಿಕೆಯೂ, ಮೂರು ಲೋಕಗಳ ಭಯಕಂಪನಾದಿಗಳೂ ಜೊತೆಜೊತೆಯಲ್ಲಿಯೇ ಉಂಟಾಗಲು-.

ಚಂ|| ತೆಗೆನೆರೆದೂಱಿಕೊಂಡಿಸೆ ಶಿರಂ ಪಱಿದತ್ತ ವಿಯತ್ತಳಂಬರಂ ನೆಗೆದೊಡೆ ರಾಹು ಬಾಯ್ದೆರೆದು ನುಂಗಲೆ ಬಂದಪುದೆಂಬ

ಶಂಕೆಯಿಂ|

ದಗಿದು ದಿನೇಶನಸ್ತಗಿರಿಯಂ

ಮರೆಗೊಂಡನಮೋಘಮೆಂಬ

ಮಾ

ತುಗಳ ನೆಗೞ್ತೆಯಂ

ಪಡೆದನಾಹವದೊಳ್

ಪರಸೈನ್ಯಭೈರವಂ|| ೧೫೪ ||

ಪದ್ಯ-೧೫೪:ಪದವಿಭಾಗ-

ಅರ್ಥ:ತೆಗೆನೆರೆದು

ಊಱಿಕೊಂಡು ಇಸೆ

(ಬಾಣವನ್ನು ಕಿವಿಯವರೆಗೂ

ಸೆಳೆದು ಬಲವಾಗಿ
ಅದುಮಿಕೊಂಡು
ಹೊಡೆಯಲು) ಶಿರಂ ಪರಿದು
(ಸೈಂಧವನ ತಲೆಯು ಕತ್ತರಿಸಿ)
ಅತ್ತ ವಿಯತ್ತಳಂಬರಂ
ನೆಗೆದೊಡೆ (ಆಕಾಶದ ಕಡೆ
ಹಾರಿದಾಗ) ರಾಹು
ಬಾಯ್ದೆರೆದು ನುಂಗಲೆ
ಬಂದಪುದೆಂಬ ಶಂಕೆಯಿಂದ
(ರಾಹುಗ್ರಹವು ಬಾಯಿ
ತೆರೆದುಕೊಂಡು ನುಂಗಲು

ಬಂದಿದೆಯೋ ಎನ್ನುವ ಭಯದಿಂದ) ಅಗಿದು ದಿನೇಶನು ಅಸ್ತಗಿರಿಯಂ ಮರೆಗೊಂಡನು (ಸೂರ್ಯನು ಹೆದರಿ ಅಸ್ತಪರ್ವತದಲ್ಲಿ ಅಡಗಿದನು.) ಅಮೋಘಮೆಂಬ ಮಾತುಗಳ ನೆಗೞ್ತೆಯಂ ಪಡೆದನು ಆಹವದೊಳ್ (ಆಹವದೊಳ್- ಯುದ್ಧದಲ್ಲಿ ಬೆಲೆಯಿಲ್ಲದ ಶಕ್ತಿಯುಳ್ಳವನು ಎಂಬ

ಕೀರ್ತಿಯನ್ನು ಪಡೆದನು)
ಪರಸೈನ್ಯಭೈರವಂ
(ಅರ್ಜುನನು)

ಪದ್ಯ-೧೫೪:ಅರ್ಥ:

ಅರ್ಜುನನು ಬಾಣವನ್ನು
ಕಿವಿಯವರೆಗೂ ಸೆಳೆದು
ಬಲವಾಗಿ ಅದುಮಿಕೊಂಡು
ಹೊಡೆಯಲು, ಸೈಂಧವನ
ತಲೆಯು ಕತ್ತರಿಸಿ ಆಕಾಶದ
ಕಡೆ ಹಾರಿದಾಗ ರಾಹುಗ್ರಹವು
ಬಾಯಿ ತೆರೆದುಕೊಂಡು

ನುಂಗಲು ಬಂದಿದೆಯೋ
ಎನ್ನುವ ಭಯದಿಂದ
ಸೂರ್ಯನು ಹೆದರಿ
ಅಸ್ತಪರ್ವತದಲ್ಲಿ ಅಡಗಿದನು/
ಮುಳುಗಿದನು.
ಪರಸೈನ್ಯಭರವನಾದ
ಅರ್ಜುನನು ಇದರಿಂದ
ಯುದ್ಧದಲ್ಲಿ ಬೆಲೆಯಿಲ್ಲದ
ಶಕ್ತಿಯುಳ್ಳವನು ಎಂಬ
ಕೀರ್ತಿಯನ್ನು ಪಡೆದನು.

ಚಂ|| ಬಿರಿದಲರೋಳಿ ಸಗ್ಗದ
ಮದಾಳಿಗಳಂ ಗೆಡಗೊಂಡು
ದೇವಸುಂ
ದರಿಯರ ಕೆಯ್ಗಳಿಂದಮುಗೆ
ತುಂಬುರು ನಾರದರೊಂದು
ಗೇಯದಿಂ|
ಚರಮೆರ್ದೆಯಂ ಪಳಂಚಲೆಯೆ
ವೀರಲತಾಂಗಿಯ ಸೋಂಕು
ಮೆಯ್ಯೊಳಂ
ಕುರಿಸೆ ನಿರಾಕುಳಂ ಕಳೆದನಾಜಿ
ಪರಿಶ್ರಮಮಂ ಗುಣಾರ್ಣವಂ||

೧೫೫

ಪದ್ಯ-೧೫೫:ಪದವಿಭಾಗ-ಅರ್ಥ:ಬಿರಿದ ಅಲರ ಓಳಿ (ಅರಳಿದ ಪುಷ್ಪಗಳ ಸಾಲು) ಸಗ್ಗದ ಮದಾಳಿಗಳಂ ಗೆಡಗೊಂಡು (ಸ್ವರ್ಗದ ಮದಾಳಿ- ಮದಿಸಿದ ದುಂಬಿಗಳಿಂದ ಜೊತೆಕೂಡಿ) ದೇವಸುಂದರಿಯರ ಕೆಯ್ಗಳಿಂದಂ ಉಗೆ (ದೇವಸುಂದರಿಯರ

ಕೈಗಳಿಂದ ಸುರಿಯುತ್ತಿರಲು)
ತುಂಬುರು ನಾರದರ ಒಂದು
ಗೇಯದ ಇಂಚರಂ
(ತುಂಬುರು ನಾರದರ ಗೀತದ
ಒಂದು ಇಂಪಾದ ಸ್ವರವು)
ಎರ್ದೆಯಂ ಪಳಂಚಿ ಅಲೆಯೆ
(ಎದೆಯನ್ನು ತಾಗಿ
ಅಲೆಯುತ್ತಿರಲು)
ವೀರಲತಾಂಗಿಯ ಸೋಂಕು
ಮೆಯ್ಯೊಳು ಅಂಕುರಿಸೆ
(ವಿಜಯಲಕ್ಷ್ಮಿಯ ಸ್ಪರ್ಶವು

ಶರೀರದಲ್ಲಿ ರೋಮಾಂಚನವಾಗುತ್ತಿರಲು) ನಿರಾಕುಳಂ (ಶ್ರಮವಿಲ್ಲದೆಯೇ) ಕಳೆದನು ಆಜಿ ಪರಿಶ್ರಮಮಂ ಗುಣಾರ್ಣವಂ (ಯುದ್ಧದ ಆಯಾಸವನ್ನು ಶ್ರಮವಿಲ್ಲದೆಯೇ ಕಳೆದನು- ಅರ್ಜುನನು)

ಪದ್ಯ-೧೫೫:ಅರ್ಥ: ಅರಳಿದ ಪುಷ್ಪಗಳ ಸಾಲು, ಸ್ವರ್ಗದ

ಮದಿಸಿದ ದುಂಬಿಗಳಿಂದ
ಜೊತೆಕೂಡಿ,
ದೇವಸುಂದರಿಯರ ಕೈಗಳಿಂದ
ಸುರಿಯುತ್ತಿರಲು ಅಂದರೆ
ಪುಷ್ಪವೃಷ್ಟಿಯಾಗುತ್ತಿರಲು,
ತುಂಬುರು ನಾರದರ ಗೀತದ
ಒಂದು ಇಂಪಾದ ಸ್ವರವು
ಎದೆಯನ್ನು ತಾಗಿ
ಅಲೆಯುತ್ತಿರಲು
ವಿಜಯಲಕ್ಷ್ಮಿಯ ಸ್ಪರ್ಶವು
ಶರೀರದಲ್ಲಿ

ರೋಮಾಂಚನವಾಗುತ್ತಿರಲು ಅರ್ಜುನನು ಯುದ್ಧದ ಆಯಾಸವನ್ನು ಶ್ರಮವಿಲ್ಲದೆಯೇ ಕಳೆದನು.

♦

|| ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವವಿರಚಿತ

ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ಏಕಾದಶಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ

ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಹನ್ನೊಂದನೆಯ ಆಶ್ವಾಸ||

♦♣♣♣♣♣♣♣♣♣♣♣♣ ♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	**11**	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ಏಕಾದಶಾಶ್ವಾಸಂ&

oldid=146684" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೩ ಜೂನ್ ೨೦೧೮, ೧೩:೪೯ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ದ್ವಾದಶಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ದ್ವಾದಶಾಶ್ವಾಸಂ

- (XIII.VI.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಕುರುಕ್ಷೇತ್ರದಲ್ಲಿ ಘಟೋತ್ಕಜನ ವಧೆ - ದ್ರೋಣನ ದೇಹತ್ಯಾಗ- ಕರ್ಣನಿಗೆ ಸೇನಾಧಿಪತಿ ಪಟ್ಟ

ಕಂ|| ಶ್ರೀ

ಶ್ರೀಕಾಂತಾಕಾಂತನಿಳಾ

ಲೋಕೈಕಲಲಾಮನಾ

ಮಹೋಗ್ರಾರಿ ನೃಪಾ|

ನೀಕಮನನೇಕಮಂ ಗೆ

ಲ್ದಾ ಕಲಹದೊಳರಿಗನುಱಿದೆ

ನಿಲ್ಬುದುಮಾಗಳ್|| ೧

ಪದ್ಯ-೧:ಪದವಿಭಾಗ-

ಅರ್ಥ:ಶ್ರೀ ಶ್ರೀಕಾಂತಾ ಕಾಂತಂ (ಜಯಲಕ್ಷ್ಮಿಯೆಂಬ ಸ್ತ್ರೀಗೆ ಒಡೆಯನಾದವನೂ)

ಇಳಾಲೋಕ್ಕೈಕ ಲಲಾಮನ್ (ಭೂಮಂಡಲದಲ್ಲೆಲ್ಲ ಏಕಮಾತ್ರ ಶ್ರೇಷ್ಠನಾದವನೂ) ಆ ಮಹೋಗ್ರ ಅರಿ ನೃಪಾನೀಕಮನು (ವಿಶೇಷಭಯಂಕರವಾದ ಅನೇಕ ಶತ್ರುರಾಜರುಗಳ) ಅನೇಕಮಂ ಗೆಲ್ದು (ಸಮೂಹವನ್ನು ಗೆದ್ದು) ಆ ಕಲಹದೊಳು ಅರಿಗನು ಉಱದೆ ನಿಲ್ವುದುಂ (ಆ

ಯುದ್ಧದಲ್ಲಿ ಅರ್ಜುನನು ಕೂಡಲೆ ಬಂದು ನಿಂತಿರಲು,) ಆಗಳ್

ಪದ್ಯ-೧:ಅರ್ಥ: ಶ್ರೀ ಎಂಬ ಜಯಲಕ್ಷ್ಮಿಯಾದ ಸ್ತ್ರೀಗೆ ಒಡೆಯನಾದವನೂ ಭೂಮಂಡಲದಲ್ಲೆಲ್ಲ ಏಕಮಾತ್ರ ಶ್ರೇಷ್ಠನಾದವನೂ ವಿಶೇಷಭಯಂಕರವಾದ ಅನೇಕ ಶತ್ರುರಾಜರುಗಳ ಸಮೂಹವನ್ನು ಗೆದ್ದು ಆ

ಯುದ್ಧದಲ್ಲಿ ಅರ್ಜುನನು
ಕೂಡಲೆ ಬಂದು ನಿಂತಿರಲು,
ಆಗ-.

**ನಂಬಿ ನೃಪನೆನಗೆ ಸೈಂಧವ
ನಂ ಬಂದಪ್ಪೈಸೆ
ಪೂರ್ಣ್ದೆನಾದುದನಾಗ|
ಲ್ಕಿಂಬಱಿದನುವರದೊಳವಂ
ಮುಂಬಯಣಂಬೋದನೆನಗೆ
ಮಾಣ್ಬುದು ದೊರೆಯೇ|| ೨**

ಪದ್ಯ-೨:ಪದವಿಭಾಗ-

ಅರ್ಥ:ನಂಬಿ ನೃಪನು ಎನಗೆ

ಸೈಂಧವನಂ ಬಂದು ಅಪ್ಪೈಸೆ
(ರಾಜ ದುರ್ಯೋರ್ಧನನು
ನನ್ನನ್ನು ನಂಬಿ ಸೈಂಧವನನ್ನು
ತಂದು ನನಗೆ ಒಪ್ಪಿಸಲು)
ಪೂಣ್ದೆನು ಆದುದನು ಆಗಲ್ಕೆ
(ಅವನಾದುದನ್ನು ನಾನು
ಅಗುತ್ತೇನೆ ಎಂದು ಪ್ರತಿಜ್ಞೆ
ಮಾಡಿದೆನು.) ಇಂಬಱಿದು
ಅನುವರದೊಳು ಅವಂ
ಮುಂಬಯಣಂ ಬೋದನು
(ಹದತಪ್ಪಿ ಯುದ್ಧದಲ್ಲಿ ಅವನು

ಯುದ್ಧದಲ್ಲಿ ಮೊದಲು ಪಯಣ ಮಾಡಿದನು- ಮಡಿದನು.) ಎನಗೆ ಮಾಣ್ಬುದು ದೊರೆಯೇ (ನಾನು ತಡೆದು ಅವನಮತೆ ಆಗದಿರುವುದು ಉಚಿತವೇ?)

ಪದ್ಯ-೨:ಅರ್ಥ: ರಾಜ ದುರ್ಯೋಧನನು ನನ್ನನ್ನು ನಂಬಿ ಸೈಂಧವನನ್ನು ತಂದು ನನಗೆ ಒಪ್ಪಿಸಲು, ಅವನಾದುದನ್ನು ನಾನು

ಆಗುತ್ತೇನೆ ಎಂದು ಪ್ರತಿಜ್ಞೆ ಮಾಡಿದೆನು. ಹದತಪ್ಪಿ ಯುದ್ಧದಲ್ಲಿ ಅವನು ಯುದ್ಧದಲ್ಲಿ ಮೊದಲು ಮಡಿದನು. ನಾನು ತಡೆದು ಅವನಮತೆ ಆಗದಿರುವುದು ಉಚಿತವೇ?-

ಬವರದಳೇಂ ಬಲ್ಲಂ ಕರ ಮೊವಜುಗೆಯಲ್ ಪೆಱರ್ಗೆ ಕಂಡು ತನಗಱಿಯನದೆಂ| ತುವೊ ನುಡಿ ತಪ್ಪದು ಕಮ್ಮಱಿ

ಯೊವಜಂ ಬಿಲ್ಲೊವಜನೆಂಬುದಂ ಮಾಡುವೆನೇ|| ೩

ಪದ್ಯ-೩:ಪದವಿಭಾಗ-ಅರ್ಥ:ಬವರದಳು ಏಂ ಬಲ್ಲಂ (ಯುದ್ಧದಲ್ಲಿ ಏನನ್ನು ಬಲ್ಲನು? ಏನೂ ಇಲ್ಲ) ಕರಂ ಒವಜುಗೆಯಲ್ ಪೆಱರ್ಗೆ (ಇತರರಿಗೆ ಉಪದೇಶ ಮಾಡುವುದಕ್ಕೆ ಬಲ್ಲನು, ವಿನಾ) ಕಂಡು ತನಗೆ

ಅಱಿಯನು, ಅದೆಂತುವ್ರೊ
(ನಿಜ ಯುದ್ಧದಲ್ಲಿ ಕಂಡು
ತಿಳಿಯನು, ಅದು ಏನೋ!)
ಎಂತಹುದೋ ಈ ಮಾತು)
ನುಡಿ ತಪ್ಪದು (ಮಾತಿಗೆ
ತಪ್ಪಿದೆನೆಂಬ ನುಡಿ ನನಗೆ
ತಪ್ಪುವುದಿಲ್ಲ.)
ಕಮ್ಮಱಿಯೊವಜಂ (ಕರ್ಮ
ಅವಜ್ಞೆಯ/ ತಪ್ಪಿದ ಒಜನು/
ಗುರುವು) ಬಿಲ್ಲ ಅವ್ರೊವಜಂ
(ಬಿಲ್ಲು ವಿದ್ಯೆಯ ಅಓವಜ-

ಆಚಾರ್ಯನಲ್ಲ;) ಎಂಬುದಂ ಮಾಡುವೆನೇ (ರಕ್ಷಣೆಯ ಮಾತಿಗೆ ತಪ್ಪಿದ ಗುರು - ಬಿಲ್ಲುವಿದ್ಯೆಯ ಉತ್ತಮ ಗುರು ಎಂಬುದನ್ನು ಮಾಡಿ ತೋರುವನೇ? ಇಲ್ಲ)

ಪದ್ಯ-೩:ಅರ್ಥ:ದ್ರೋಣನು- ಯುದ್ಧದಲ್ಲಿ ಏನನ್ನು ಬಲ್ಲನು? ಇತರರಿಗೆ ಉಪದೇಶ ಮಾಡುವುದಕ್ಕೆ ಬಲ್ಲನೇ ವಿನಾ ನಿಜ ಯುದ್ಧದಲ್ಲಿ ಕಂಡು

ತಿಳಿಯನು, ಅದು ಏನೋ!
ಮಾತಿಗೆ ತಪ್ಪಿದೆನೆಂಬ ನುಡಿ
ನನಗೆ ತಪ್ಪುವುದಿಲ್ಲ. ಕರ್ಮ
ಅವಜ್ಞೆಯ/ ತಪ್ಪಿದ ಒಜನು/
ಗುರುವು, ಬಿಲ್ಲು ವಿದ್ಯೆಯ
ಅಓವಜ ಆಚಾರ್ಯನೇ
ಅಲ್ಲ;ರಕ್ಷಣೆಯ ಮಾತಿಗೆ
ತಪ್ಪಿದ ಗುರು - ಬಿಲ್ಲುವಿದ್ಯೆಯ
ಉತ್ತಮ ಗುರು ಎಂಬುದನ್ನು
ಮಾಡಿ ತೋರುವನೇ? ಇಲ್ಲ.

ಒಪ್ಪೆ ಜಯದ್ರಥನಾದುದ

ನಪ್ಪೆಂ ಪೋಗೆಂದು ಮುನ್ನೆ ನುಡಿದುದನೀಗಳ್|
ತಪ್ಪುವೆನೆ ಧರೆಯೊಳೆಂತುಂ ತಪ್ಪದು ವಲಮೆನ್ನ ನುಡಿಯುಮೆನ್ನೆಚ್ಚಂಬುಂ|| ೪

ಪದ್ಯ-೪:ಪದವಿಭಾಗ-ಅರ್ಥ:ಒಪ್ಪೆ ಜಯದ್ರಥನಾದುದನು ಅಪ್ಪೆಂ ಪೋಗೆಂದು(ಎಲ್ಲರೂ ಒಪ್ಪವು ಹಾಗೆ, 'ಜಯದ್ರಥನಾದುದನ್ನು ನಾನು ಆಗುತ್ತೇನೆ ಹೋಗು'

ಎಂದು) ಮುನ್ನೆ
ನುಡಿದುದನೀಗಳ್ ತಪ್ಪುವೆನೆ
(ಮೊದಲು ಆಡಿದ ಮಾತನ್ನು
ಈಗ ತಪ್ಪುತ್ತೇನೆಯೇ?)
ಧರೆಯೊಳು ಎಂತುಂ ತಪ್ಪದು
ವಲಮ್ ಎನ್ನ ನುಡಿಯುಂ
ಎನ್ನ ಎಚ್ಚ ಅಂಬುಂ
(ಭೂಮಿಯಲ್ಲಿ ಎಂದೂ ನನ್ನ
ಮಾತೂ ನಾನು ಪ್ರಯೋಗಿಸಿದ
ಬಾಣವೂ ತಪ್ಪುವುದಿಲ್ಲ.
ವಲಂ- ಅಲ್ಲವೇ?)

ಪದ್ಯ-೪:ಅರ್ಥ:ಎಲ್ಲರೂ ಒಪ್ಪವು ಹಾಗೆ, 'ಜಯದ್ರಥನಾದುದನ್ನು ನಾನು ಆಗುತ್ತೇನೆ ಹೋಗು' ಎಂದು, ಮೊದಲು ಆಡಿದ ಮಾತನ್ನು ಈಗ ತಪ್ಪುತ್ತೇನೆಯೇ? ಭೂಮಿಯಲ್ಲಿ ಎಂದೂ ನನ್ನ ಮಾತೂ ನಾನು ಪ್ರಯೋಗಿಸಿದ ಬಾಣವೂ ತಪ್ಪುವುದಿಲ್ಲ. ವಲಂ- ಅಲ್ಲವೇ?

ವ|| ಎಂದು ಕುಂಭಸಂಭವಂ ಜಳನಿಯಂ ಕುಡಿದ ಕುಂಭಸಂಭವನಂತೆ ಪಾಂಡವ ಬಳ ಜಳನಿಯನಳುರಲ್ ಬಗೆದು ನೇಸಱ್ ಪಟ್ಟೊಡಂ ಪೋಗದೆ ಪಗಲಿನನುವರ ದೊಳಳ್ಳೆವಿಳ್ಳೆಯಾದ ಪಾಂಡವರನಿರುಳೊಳೆ ಗೆಲ್ವೆನೆಂದು ಚತುರ್ಬಲಂಗಳನೊಂದುಮಾಡಿ

ವಚನ:ಪದವಿಭಾಗ-ಅರ್ಥ:ಎಂದು ಕುಂಭಸಂಭವಂ ಜಳನಿಯಂ ಕುಡಿದ ಕುಂಭಸಂಭವನಂತೆ (ಎಂದು ದ್ರೋಣಾಚಾರ್ಯನು ಸಮುದ್ರಪಾನಮಾಡಿದ ಅಗಸ್ತ್ಯರಂತೆ) ಪಾಂಡವ ಬಳ ಜಳನಿಯನು (ಪಾಂಡವ ಸೇನಾಸಮುದ್ರವನ್ನು) ಉರಲ್ ಬಗೆದು (ಸುಟ್ಟು ಹಾಕಲು ಯೋಚಿಸಿ) ನೇಸಱ್

ಪಟ್ಟೊಡಂ ಪೋಗದೆ
(ಸೂರ್ಯಾಸ್ತಮಾನವಾದರೂ
ಪಾಳೆಯಕ್ಕೆ ಹೋಗದೆ)
ಪಗಲಿನ ಅನುವರದೊಳು
ಅಳ್ಳೆವಿಳ್ಳೆಯಾದ
ಪಾಂಡವರನು (ಹಗಲಿನ
ಯುದ್ಧದಲ್ಲಿ
ಆಯಾಸಹೊಂದಿದ)
ಇರುಳೊಳೆ ಗೆಲ್ವೆನೆಂದು
(ರಾತ್ರಿಯಲ್ಲಿ ಗೆಲ್ಲುತ್ತೇನೆ
ಎಂದು) ಚತುರ್ಬಲಂಗಳನು

ಒಂದುಮಾಡಿ (ಚತುರಂಗಸೈನ್ಯವನ್ನು ಒಟ್ಟುಗೂಡಿಸಿದನು.)

ವಚನ:ಅರ್ಥ:ಎಂದು ದ್ರೋಣಾಚಾರ್ಯನು ಸಮುದ್ರಪಾನಮಾಡಿದ ಅಗಸ್ತ್ಯರಂತೆ ಪಾಂಡವ ಸೇನಾಸಮುದ್ರವನ್ನು ಸುಟ್ಟು ಹಾಕಲು ಯೋಚಿಸಿ ಸೂರ್ಯಾಸ್ತಮಾನವಾದರೂ ಪಾಳೆಯಕ್ಕೆ ಹೋಗದೆ,

ಹಗಲಿನ ಯುದ್ಧದಲ್ಲಿ
ಆಯಾಸಹೊಂದಿದ
ಪಾಂಡವರನ್ನು ರಾತ್ರಿಯಲ್ಲಿ
ಗೆಲ್ಲುತ್ತೇನೆ ಎಂದು
ಚತುರಂಗಸೈನ್ಯವನ್ನು
ಒಟ್ಟುಗೂಡಿಸಿದನು.

ಉ|| ತಕ್ಕಿನ ವಿಕ್ರಮಾರ್ಜುನನ
ಕೋಪದ ದಳ್ಳುರಿಗಳ್
ವಿರೋಧಿಯಂ|
ಮುಕ್ಕಲೆ ಮುತ್ತಿದಂತೆ
ಕರಿಗೆಂಟು ರಥಕ್ಕನುವಾಗ

ನಾಲ್ಕು ವಾ|

ಹಕ್ಕೆರಡಲ್ಲಿ

ಪಾದಚರರರ್ಗೊಂದೆನೆ

ದೀವಿಗೆಗಳ್ ಜಲಕ್ಕನೆ

ಕೈಕ್ಕೆಯಿನಿಟ್ಟಳಂ

ಬೆಳಗುತಿರ್ದುವೆರಟ್ಟಿಸೆಯೊಡ್ಡ

ಣಂಗಳೊಳ್|| ೫

ಪದ್ಯ-೫:ಪದವಿಭಾಗ-

ಅರ್ಥ:ತಕ್ಕಿನ

ವಿಕ್ರಮಾರ್ಜುನನ ಕೋಪದ

ದಳ್ಳುರಿಗಳ್ (ತಕ್ಕ ಶೂರನಾದ

ವಿಕ್ರಮಾರ್ಜುನನ ಕೋಪದ ಮಹಾಜ್ವಾಲೆಗಳು) ವಿರೋಧಿಯಂ ಮುಕ್ಕಲೆ ಮುತ್ತಿದಂತೆ (ಶತ್ರುವನ್ನು ತಿಂದುಹಾಕಲಿಕ್ಕಾಗಿಯೇ ಮುತ್ತಿದೆಯೋ ಎನ್ನುವಂತೆ) ಕರಿಗೆ ಎಂಟು, ರಥಕ್ಕೆ ಅನುವಾಗ ನಾಲ್ಕು, ವಾಹಕ್ಕೆ ಎರಡು (ಒಂದು ಆನೆಗೆ ಎಂಟು, ರಥಕ್ಕೆ ನಾಲ್ಕು, ಕುದುರೆಗೆ ಎರಡು,) ಅಲ್ಲಿ

ಪಾದಚರರ್ಗೆ ಒಂದು ಎನೆ
ದೀವಿಗೆಗಳ್ (ಒಂದು ಆನೆಗೆ
ಎಂಟು, ರಥಕ್ಕೆ ನಾಲ್ಕು,
ಕುದುರೆಗೆ ಎರಡು,
ಪಾದಚರರಿಗೆ ಒಂದು ಎನ್ನುವ
ಕ್ರಮದಲ್ಲಿ ದೀವಿಟಿಗೆಗಳು)
ಜಲಕ್ಕನೆ ಎಕ್ಕೆಕ್ಕೆಯಿನು
ಇಟ್ಟಳಂ ಬೆಳಗುತಿರ್ದುವು
(ಜಲಕ್ಕನೆ- ಚೆನ್ನಾಗಿ
ಜ್ವಲಿಸುವಂತೆ
ಪಕ್ಕಪಕ್ಕದಲ್ಲಿಯೇ

ಮನೋಹರವಾಗಿ
ಬೆಳಗುತ್ತಿದ್ದುವು) ಎರಟ್ಟೆಸೆಯ
ಒಡ್ಡಣಂಗಳೊಳ್, (ಎರಡು
ದಿಕ್ಕಿನ ಸೈನ್ಯಗಳಲ್ಲಿಯೂ)
ಪದ್ಯ-೦೫ಅರ್ಥ: ತಕ್ಕ
ಶೂರನಾದ ವಿಕ್ರಮಾರ್ಜುನನ
ಕೋಪದ ಮಹಾಜ್ವಾಲೆಗಳು
ಶತ್ರುವನ್ನು
ತಿಂದುಹಾಕಲಿಕ್ಕಾಗಿಯೇ
ಮುತ್ತಿದೆಯೋ ಎನ್ನುವಂತೆ,
ಒಂದು ಆನೆಗೆ ಎಂಟು, ರಥಕ್ಕೆ

ನಾಲ್ಕು, ಕುದುರೆಗೆ ಎರಡು,
ಪಾದಚರರಿಗೆ ಒಂದು ಎನ್ನುವ
ಕ್ರಮದಲ್ಲಿ ದೀವಿಟಿಗೆಗಳು
ಜಲಕ್ಕನೆ- ಚೆನ್ನಾಗಿ
ಜ್ವಲಿಸುವಂತೆ
ಪಕ್ಕಪಕ್ಕದಲ್ಲಿಯೇ ಎರಡೂ
ದಿಕ್ಕಿನ ಸೈನ್ಯಗಳಲ್ಲಿಯೂ
ಮನೋಹರವಾಗಿ
ಬೆಳಗುತ್ತಿದ್ದುವು

ವ|| ಅಂತು ಪಗಲಿಱಿದು

ತಣಿಯದಿರುಳಂ ಪಗಲ್ಮಾಡಿ

ಕಾದುವೆರಟ್ಟಿಡೆಗಳೇರ್ವೆಸನಂ

ಕಣ್ಣಾರೆ ನೋಡಲೆಂದು

ವೈಮಾನಿಕ

ದೇವರಂಬರತಳದೊಳಿರ್ದು

ಕಿರ್ಚೆಟ್ಟಿ ಲಂಕೆಯಂ

ನೋಟ್ಟಂತೆ ನೋಡೆ

ಧರ್ಮಪುತ್ರನನಧೋಕ್ಷಜನಿಂ

ತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಪಗಲಿಱಿದು

ತಣಿಯದೆ ಇರುಳಂ ಪಗಲ್ಮಾಡಿ

(ಹಾಗೆ ಹಗಲು ಯುದ್ಧಮಾಡಿ ತೃಪ್ತಿಯಾಗದೆ ರಾತ್ರಿಯನ್ನೇ ಹಗಲುಮಾಡಿಕೊಂಡು) ಕಾದುವ ಎರಲ್ ಪಡೆಗಳ ಏರ್ವಸನಂ ಕಣ್ಣಾರೆ ನೋಡಲೆಂದು (ಕಾದುವ ಎರಡೂ ಸೈನ್ಯಗಳ ಯುದ್ಧಕಾರ್ಯವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು) ವೈಮಾನಿಕ ದೇವರ್ ಅಂಬರತಳದೊಳು

ಇರ್ದು (ವೈಮಾನದಲ್ಲಿ ಬಂದ
ದೇವತೆಗಳು ಆಕಾಶ
ಪ್ರದೇಶದಲ್ಲಿದ್ದುಕೊಂಡು)
ಕಿರ್ಚೆಟ್ಟಿ ಲಂಕೆಯಂ
ನೋಟ್ಟಿಂತೆ ನೋಡೆ
(ಉರಿಯುತ್ತಿದ್ದ
ಲಂಕಾಪಟ್ಟಣವನ್ನು
ನೋಡುವಂತೆ ನೋಡಲು)
ಧರ್ಮಪುತ್ರನಂ
ಅಧೋಕ್ಷಜನು ಇಂತೆಂದಂ-

ವಚನ:ಅರ್ಥ: ಹಾಗೆ ಹಗಲು ಯುದ್ಧಮಾಡಿ ತೃಪ್ತಿಯಾಗದೆ ರಾತ್ರಿಯನ್ನೇ ಹಗಲುಮಾಡಿಕೊಂಡು ಕಾದುವ ಎರಡೂ ಸೈನ್ಯಗಳ ಯುದ್ಧಕಾರ್ಯವನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು ವೈಮಾನದಲ್ಲಿ ಬಂದ ದೇವತೆಗಳು ಆಕಾಶ ಪ್ರದೇಶದಲ್ಲಿದ್ದುಕೊಂಡು ಉರಿಯುತ್ತಿದ್ದ

ಲಂಕಾಪಟ್ಟಣವನ್ನು ನೋಡುವಂತೆ ನೋಡಲು ಧರ್ಮರಾಯನು ಕೃಷ್ಣನನ್ನು ಕುರಿತು ಹೀಗೆಂದನು.

ಚಂ|| ಇರುಳೊಳುಮಿಂತು ಪೋಗದಿಱಿಯಲ್
ಘಟಸಂಭವನಿರ್ದನೆಂತು ನಿ
ತ್ತರಿಸುವಮೀ
ಮಹಾಹವಮನೆಂಬುದುಮಿನ್ನಿ
ರುಳೊಳ್ ಬಲಂ ನಿಶಾ|

ಚರ ಬಲಕುಂಟು ಮಾಣದೆ

ಘಟೋತ್ಕಚನಂ

ಬೆಸವೇೞ್ವುದೆಂದೊಡಾ

ದರದೊಳೆ ಭೀಮನಂದನನನಾ

ಪದದೊಳ್

ಯಮರಾಜನಂದನಂ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಇರುಳೊಳುಂ ಇಂತು ಪೋಗದೆ ಇಱಿಯಲ್ ಘಟಸಂಭವನು ಇರ್ದನು ಎಂತು ನಿತ್ತರಿಸುವಂ ಈ

ಮಹಾಹವಮನು ಎಂಬುದುಂ (ಈ ಮಹಾಯುದ್ಧವನ್ನು ನಾವು ಹೇಗೆ ನಿರ್ವಹಿಸೋಣ ಎನ್ನಲು) ಇನ್ನು ಇರುಳ್ಗೊಳ್ ಬಲಂ ನಿಶಾಚರ ಬಲಕುಂಟು ಮಾಣದೆ ಘಟೋತ್ಕಚನಂ ಬೆಸವೇಳ್ಪುದು (ರಾಕ್ಷಸರು ರಾತ್ರಿಯಲ್ಲಿ ಶಕ್ತಿಯುಕ್ತರು. ಸಾವಕಾಶ ಮಾಡದೆ ಘಟೋತ್ಕಚನಿಗೆ ಆಜ್ಞೆ ಮಾಡು ಎಂದನು ಕೃಷ್ಣ.) ಎಂದೊಡೆ

ಆದರದೊಳೆ
ಭೀಮನಂದನನನು ಆ
ಪದದೊಳ್
ಯಮರಾಜನಂದನಂ ()
ಪದ್ಯ-೬:ಅರ್ಥ: ದ್ರೋಣನು
ರಾತ್ರಿಯಲ್ಲಿ ಹೀಗೆ ಹಿಂತಿರುಗದೆ
ಯುದ್ಧಮಾಡಲಿದ್ದಾನೆ. ಈ
ಮಹಾಯುದ್ಧವನ್ನು ನಾವು
ಹೇಗೆ ನಿರ್ವಹಿಸೋಣ ಎನ್ನಲು
ರಾಕ್ಷಸರು ರಾತ್ರಿಯಲ್ಲಿ
ಶಕ್ತಿಯುಕ್ತರು. ಸಾವಕಾಶ

ಮಾಡದೆ ಘಟೋತ್ಕಚನಿಗೆ ಆಜ್ಞೆ ಮಾಡು ಎಂದು ಕೃಷ್ಣನು ಹೇಳಿದನು. ಎಂದಾಗ ಆದರದಿಂದ ಧರ್ಮರಾಯನು ಘಟೋತ್ಕಚನನ್ನು ಕರೆದು-,

ವ|| ಕರೆದು ಮಗನೆ ನೀನಿಂದಿರುಳಿನನುವರಮನೆನಗೆ ಗೆಲ್ದೀಯಲ್ವೇಱ್ಕುಮೆಂದೊಡಿದಾವುದರಿದುಂ ಪಿರಿದುಮಾಗಿ ಬೆಸಸಿದರಂತೆಗೆಯ್ವೆನೆನ್ನ ತೊೞ್ತುವೆಸನನೀ

ವಿಶಸನರಂಗದೊಳ್ ತೋರ್ಪೆನೆಂದು-

ವಚನ:ಪದವಿಭಾಗ-

ಅರ್ಥ:ಧರ್ಮರಾಯನು ಘಟೋದ್ಘಜನಿಗೆ, ಕರೆದು ಮಗನೆ ನೀನು ಇಂದು ಇರುಳಿನ ಅನುವರಮನು ಎನಗೆ ಗೆಲ್ದು ಈಯಲ್ವೇೞ್ಕುಂ (ನೀನು ಈ ದಿನ ರಾತ್ರಿಯುದ್ಧವನ್ನು ನನಗೆ ಗೆದ್ದುಕೊಡಬೇಕು ಎಂದನು),

ಎಂದೊಡೆ ಇದು ಆವುದು ಅರಿದುಂ ಪಿರಿದುಂ ಆಗಿ ಬೆಸಸಿದರಿ ಅಂತೆಗೆಯ್ವೆಂ (ಇದೇನು ಅಸಾಧ್ಯವೂ ಹಿರಿದೂ ಎನ್ನುವ ಹಾಗೆ ಅಪ್ಪಣೆಕೊಡುತ್ತೀರಿ; ಹಾಗೆಯೇ ಮಾಡುತ್ತೇನೆ) ಎನ್ನ ತೊಟ್ಟುವೆಸನನು ಈ ವಿಶಸನರಂಗದೊಳ್ (ಯುದ್ಧದಲ್ಲಿ) ತೋರ್ಪೆನೆಂದು (ನನ್ನ ಸೇವಕಾರ್ಯವನ್ನು

ಯುದ್ಧರಂಗದಲ್ಲಿ ತೋರಿಸುತ್ತೇನೆ ಎಂದು ಘಟೋತ್ಕಜ ಹೇಳಿದ;)-

ವಚನ:ಅರ್ಥ:ವ|| ಕರೆದು, ಮಗನೆ ನೀನು ಈ ದಿನ ರಾತ್ರಿಯುದ್ಧವನ್ನು ನನಗೆ ಗೆದ್ದುಕೊಡಬೇಕು ಎಂದನು; ಎಂದಾಗ ಅದಕ್ಕೆ ಘಟೋತ್ಕಚನು ಇದೇನು ಅಸಾಧ್ಯವೂ ಹಿರಿದೂ ಎನ್ನುವ ಹಾಗೆ ಅಪ್ಪಣೆಕೊಡುತ್ತೀರಿ;

ಹಾಗೆಯೇ ಮಾಡುತ್ತೇನೆ; ನನ್ನ ಸೇವಕಾರ್ಯವನ್ನು ಯುದ್ಧರಂಗದಲ್ಲಿ ತೋರಿಸುತ್ತೇನೆ ಎಂದನು.

ಘಟೋತ್ಕಚನ ಯುದ್ಧ ಮತ್ತು ಕರ್ಣನಿಂದ ಅವನ ವಧೆ

ಚಂ|| ಪರಿದುರಿಗೇಸಮವ್ವಳಿಪ ನಾಲಗೆ ಮಿಂಚುವ ದಾಡೆ ಬಿಟ್ಟ ಕಣ್

ತಿರುಪಿದ ಮೀಸೆ ಕೊಂಕಿದ

ಸಟಂ ಕಱಿದಪ್ಪ ಕದಂಪು

ನೀೞ್ದ ತಾ|

ೞ್ಮರದವೊಲಪ್ಪೊಡಲ್ ಕಹ

ಕಹ ಧ್ವನಿ ಕೌಳಿಕ

ನಾದಮಾದಮಾ

ಸುರತರಮಾಗೆ ಬಂದು

ಕವಿದತ್ತು ಘಟೋತ್ಕಚ ರೌದ್ರ

ಸಾಧನಂ|| ೭ ||

ಪದ್ಯ-೭:ಪದವಿಭಾಗ-

ಅರ್ಥ:ಘಟೋತ್ಕಜ ಮತ್ತು

ಅವನ ಸೈನಿಕರು: ಪರೆದ ಉರಿಗೇಸಮ್ ಅವ್ವಳಿಪ ನಾಲಗೆ ಮಿಂಚುವ ದಾಟೆ (ಉರಿಯಂತೆ ಕೆಂಪಗಿರುವ ಕೆದರಿದ ಕೂದಲು ಮುಂದಕ್ಕೆ ಚಾಚಿಕೊಂಡಿರುವ ನಾಲಿಗೆ, ಮಿಂಚುವ ಕೋರೆಹಲ್ಲು,) ಬಿಟ್ಟ ಕಣ್ ತಿರುಪಿದ ಮೀಸೆ ಕೊಂಕಿದ ಸಟಂ ಕಱಿದಪ್ಪ ಕದಂಪು (ತೆರೆದ ಕಣ್ಣು, ಹುರಿಮಾಡಿರುವ ಮೀಸೆ,

ವಕ್ರವಾದ ಕೇಸರಗಳು, ಕರ್ರ್ರಗಿರುವ ಕೆನ್ನೆ,) ನೀಟ್ದಿ ತಾಟ್ಮಿರದವೊಲ್ ಅಪ್ಪೊಡಲ್ , ಕಹ ಕಹ ಧ್ವನಿ ಕೌಳಿಕ ನಾದಮಾದಂ ಆಸುರ ತರಮಾಗೆ (ಉದ್ದವಾದ ತಾಳೆಯ ಮರದಂತಿರುವ ಶರೀರ, ಕಹಕಹವೆಂಬ ಧ್ವನಿ, ಭಯಂಕರವಾದ ಶಬ್ದ-ಇವೆಲ್ಲ ಅತ್ಯಂತ ಭೆಯಂಕರವಾಗಿರಲು) ಬಂದು

ಕವಿದತ್ತು ಘಟೋತ್ಕಚ ರೌದ್ರ ಸಾಧನಂ (ಘಟೋತ್ಕಚನ ಭಯಂಕರವಾದ ಸೈನ್ಯವು ಬಂದು ಮುತ್ತಿಕೊಂಡಿತು)

ಪದ್ಯ-೭:ಅರ್ಥ:ಘಟೋತ್ಕಜ ಮತ್ತು ಅವನ ಸೈನಿಕರು ಹೇಗಿದ್ದರೆಂದರೆ: ಉರಿಯಂತೆ ಕೆಂಪಗಿರುವ ಕೆದರಿದ ಕೂದಲು ಮುಂದಕ್ಕೆ ಚಾಚಿಕೊಂಡಿರುವ ನಾಲಿಗೆ, ಮಿಂಚುವ ಕೋರೆಹಲ್ಲು, ತೆರೆದ ಕಣ್ಣು,

ಹುರಿಮಾಡಿರುವ ಮೀಸೆ,
ವಕ್ರವಾದ ಕೇಸರಗಳು,
ಕರ್ರ್ರಗಿರುವ ಕೆನ್ನೆ, ಉದ್ದವಾದ
ತಾಳೆಯ ಮರದಂತಿರುವ
ಶರೀರ, ಕಹಕಹವೆಂಬ ಧ್ವನಿ,
ಭಯಂಕರವಾದ ಶಬ್ದ-ಇವೆಲ್ಲ
ಅತ್ಯಂತ ಭೆಯಂಕರವಾಗಿರಲು
ಘಟೋತ್ಕಚನ
ಭಯಂಕರವಾದ ಸೈನ್ಯವು
ಬಂದು ಮುತ್ತಿಕೊಂಡಿತು.

ವ|| ಅಂತು ನಿಶಾಚರ
ಬಲಮಱವಱಗಾದ
ಕಾಡನಳುರ್ವ ಬೇಗೆಯ
ದಳ್ಳುರಿಯಂತೆ ದಳ್ಳಿಸಿ
ಕೊಳ್ಳೆಂದರಾತಿ ಬಲಮನಳುರೆ
ಕರಡಿಯ ತೊವಲೊಳ್
ಪುದಿದ ಕರ್ಬೊನ್ನ
ರಥಮುಮಾ
ರಥದೊಳೆಡಂಬಡೆ ಪೂಡಿದ
ನಾಲ್ನೂಱು
ಗೊಂಕುಱುಗೞ್ತೆಯಮಂಬರ

ಸ್ಥಲಮನಡರ್ವ ಗೃಧ್ರಧ್ವಜ ಮುಮಂಜನ ಪುಂಜದಂತಾಗಿ ಬ್ರಹ್ಮಾಂಡಮಂ ತಾಗಿದ ವಿಕಟಾಂಗಮುಮೆಳವೆಳವೆರೆ ಯನಡಸಿದಂತಪ್ಪ ದಾಡೆಯುಮಗುರ್ವಾಗೆ ಬಂದು ತಾಗಿದಾಗಳ್

ವಚನ:ಪದವಿಭಾಗ-

ಅರ್ಥ:ಅಂತು ನಿಶಾಚರ ಬಲಂ ಅಱವಱಗಾದ (ಹಾಗೆ ರಾಕ್ಷಸ ಪಡೆಯು ಚೆನ್ನಾಗಿ

ಒಣಗಿರುವ) ಕಾಡನು
ಅಳುರ್ವ ಬೇಗೆಯ
ದಳ್ಳುರಿಯಂತೆ ದಳ್ಳಿಸಿ
(ಸುಡುವ ಬೇಸಿಗೆಯ
ಮಹಾಜ್ವಾಲೆಯಂತೆ ದಹಿಸಿ-
ಪ್ರಜ್ವಲಿಸಿ) ಕೊಳ್ಳೆಂದು ಆರಾತಿ
ಬಲಮನು ಉಳುರೆ
('ತೆಗೆದುಕೊ' ಎಂದು
ಶತ್ರುಸೈನ್ಯವನ್ನು ಸುಡುತ್ತಿರಲು)
ಕರಡಿಯ ತೊವಲೊಳ್
ಪುದಿದ ಕರ್ಬೊನ್ನ ರಥಮುಂ

(ಕರಡಿಯ ಚರ್ಮದಿಂದ ಆವರಿಸಲ್ಪಟ್ಟ ಕಬ್ಬಿಣದ ತೇರು,) ಆ ರಥದೊಳು ಎಡಂಬಡೆ ಪೂಡಿದ ನಾಲ್ನೂಱು ಗೊಂಕುಱುಗೆತ್ತೆಯಂ (ಆ ರಥಕ್ಕೆ ಒಪ್ಪುವ ಹಾಗೆ ಹೂಡಿದ್ದ ನಾಲ್ಕ ನೂರು ಹೇಸರಕತ್ತೆ) ಅಂಬರಸ್ಥಲಮನು ಅಡರ್ವ ಗೃಧ್ರಧ್ವಜ (ಆಕಾಶ ಪ್ರದೇಶವನ್ನು ಹತ್ತುವ ಹದ್ದಿನ

ಬಾವುಟಗಳು,) ಅಂಜನ
ಪುಂಜದಂತಾಗಿ (ಕಾಡಿಗೆಯ
ರಾಶಿಯಂತಾಗಿ)
ಬ್ರಹ್ಮಾಂಡಮಂ ತಾಗಿದ
ವಿಕಟಾಂಗಮುಂ
ಎಳವೆಳವೆರೆಯನು
ಅಡಸಿದಂತಪ್ಪ ದಾಡೆಯುಂ
(ಬಾಲಚಂದ್ರನನ್ನು
ಜೋಡಿಸಿದ ಹಾಗಿದ್ದ ದಾಡೆ)
ಅಗುರ್ವಾಗೆ ಬಂದು
ತಾಗಿದಾಗಳ್ ()

ವಚನ:ಅರ್ಥ: ಹಾಗೆ ರಾಕ್ಷಸ ಪಡೆಯು ಚೆನ್ನಾಗಿ ಒಣಗಿರುವ ಕಾಡನ್ನು ಸುಡುವ ಬೇಸಿಗೆಯ ಮಹಾಜ್ವಾಲೆಯಂತೆ ಪ್ರಜ್ವಲಿಸಿ 'ತೆಕೊ' ಎಂದು ಶತ್ರುಸೈನ್ಯವನ್ನು ಸುಡುತ್ತಿರಲು ಕರಡಿಯ ಚರ್ಮದಿಂದ ಆವರಿಸಲ್ಪಟ್ಟ ಕಬ್ಬಿಣದ ತೇರು, ಆ ರಥಕ್ಕೆ ಒಪ್ಪುವ ಹಾಗೆ ಹೂಡಿದ್ದ ನಾಲ್ಕು ನೂರು ಹೇಸರಕತ್ತೆ, ಆಕಾಶ

ಪ್ರದೇಶವನ್ನು ಹತ್ತುವ ಹದ್ದಿನ ಬಾವುಟಗಳು, ಕಾಡಿಗೆಯ ರಾಶಿಯಂತಾಗಿ ಬ್ರಹ್ಮಾಂಡವನ್ನೂ ತಾಗಿದ ವಿಕಾರವಾದ ದೇಹ, ಬಾಲಚಂದ್ರನನ್ನು ಜೋಡಿಸಿದ ಹಾಗಿದ್ದ ದಾಡೆ ಇವುಗಳಿಂದ ಭಯಂಕರವಾಗಿ ಬಂದು ತಾಗಿ ಯುದ್ಧಕ್ಕೆ ತೊಡಗಿತು, ಆಗ-

ಚಂ|| ಕುದುರೆಯ ಬಿಲ್ಲ ಬಲ್ಲಣಿಯ ಕೇಣಿಯನಲ್ಲಿ

ಕೆಲರ್ ನಿಶಾಟರು
ಣ್ಮಿದ ಬಿಸುನೆತ್ತರೊಳ್
ಮಿದಿದು ನುಣ್ಣನೆ
ನುಂಗಿದರೆಲ್ಲಿಯುಂ ಕೆಲರ್|
ಕುದುಗುಳಿ ರಕ್ಕಸರ್
ಬಿಸುಗೆಗಳ್ವೆರಸುಗ್ರ
ಮಹಾಗಜಂಗಳಂ
ಚದುರ್ಗಿಡೆ ನುಂಗಿ ಬಿಕ್ಕಿ
ಕುಡಿದರ್ ಬಿಸುನೆತ್ತರ
ಕಾಬ್ಬುರಂಗಳಂ|| ೮ ||

ಪದ್ಯ-೮:ಪದವಿಭಾಗ-ಅರ್ಥ:ಕುದುರೆಯ ಬಿಲ್ಲ ಬಲ್ಲಣಿಯ ಕೇಣಿಯನು (ಅಲ್ಲಿ ಕುದುರೆಗಳನ್ನು ಬಿಲ್ಗಾರರನ್ನು ಬಲಿಷ್ಠರಾದ ಕಾಲಾಳುಗಳ ಸಾಲುಗಳನ್ನು) ಅಲ್ಲಿ ಕೆಲರ್ ನಿಶಾಟರು ಉಣ್ಮಿದ (ಅಲ್ಲಿ ಕೆಲವು ರಾಕ್ಷಸರು ಚಿಮ್ಮಿದ) ಬಿಸುನೆತ್ತರೊಳ್ ಮಿದಿದು ನುಣ್ಣನೆ ನುಂಗಿದರು (ಮರ್ದನ ಮಾಡಿ (ಕುಟ್ಟಿ) ನಯವಾಗಿ

ನುಂಗಿದರು) ಎಲ್ಲಿಯುಂ
ಕೆಲರ್ ಕುದುಗುಳಿ ರಕ್ಕಸರ್
(ಮತ್ತೆ ಕೆಲವು ಬಹಳ
ಕೋಪದಿಂದ ಕುದಿಯುವ
ರಾಕ್ಷಸರು) ಬಿಸುಗೆಗಳ್ (ವೆ)
ಬೆರಸು (ಅಂಬಾರಿ
ಸಹಿತವಾಗಿ) ಉಗ್ರ
ಮಹಾಗಜಂಗಳಂ ಚದುರ್ಗಿಡೆ
ನುಂಗಿ (ಭಯಂಕರವಾದ
ಆನೆಗಳನ್ನು ವಿಕಾರವಾದ
ರೀತಿಯಲ್ಲಿ ನುಂಗಿ) ಬಿಕ್ಕಿ

ಕುಡಿದರ್ ಬಿಸುನೆತ್ತರ
ಕಾಟ್ಟುರಂಗಳಂ (ಉಸಿರೆಳೆದು
ಬಿಕ್ಕುತ್ತಾ ಕಾಡುಪ್ರಾಣಿಗಳ
ಬಿಸಿರಕ್ತದ ಪ್ರವಾಹವನ್ನು ಹೀರಿ
ಕುಡಿದರು.) (ಕಾಟ್ಟುರಂಗಳಂ-
ಕಾಢಿನ ಪ್ರವಾಹಗಳನ್ನು)
ಪದ್ಯ-೮:ಅರ್ಥ: ಅಲ್ಲಿ
ಕುದುರೆಗಳನ್ನು ಬಿಲ್ಗಾರರನ್ನು
ಬಲಿಷ್ಠರಾದ ಕಾಲಾಳುಗಳ
ಸಾಲುಗಳನ್ನು ಅಲ್ಲಿ ಕೆಲವು
ರಾಕ್ಷಸರು ಚಿಮ್ಮಿದ

ಬಿಸಿರಕ್ತದಲ್ಲಿ ಮರ್ದನ ಮಾಡಿ
(ಕುಟ್ಟಿ) ನಯವಾಗಿ
ನುಂಗಿದರು. ಮತ್ತೆ ಕೆಲವು
ಬಹಳ ಕೋಪದಿಂದ
ಕುದಿಯುವ ರಾಕ್ಷಸರು
ಅಂಬಾರಿ ಸಹಿತವಾಗಿ
ಭಯಂಕರವಾದ ಆನೆಗಳನ್ನು
ವಿಕಾರವಾದ ರೀತಿಯಲ್ಲಿ
ನುಂಗಿ ಉಸಿರೆಳೆದು ಬಿಕ್ಕುತ್ತಾ
ಕಾಡುಪ್ರಾಣಿಗಳ ಬಿಸಿರಕ್ತದ

ಪ್ರವಾಹಗಳನ್ನು ಹೀರಿ
ಕುಡಿದರು.

ವ|| ಅಂತು ರಕ್ಕಸವಡೆ ತನ್ನ ಪಡೆಯೆಲ್ಲಮಂ ತೆರಳ್ಚಿ ತೇರಯಿಸಿ ನುಂಗಿದೊಡೆ ಬೆಱಗಾದ ಸುಯೋಧನನಂ ಬಕಾಸುರ ಜಟಾಸುರರ ಮಕ್ಕಳಪ್ಪಳಂಭೂಪ ಹಲಾಯುಧ ಮುಸಲಾಯುಧ ಕಾಳ ನೀಳ ರೂಕ್ಷರಾಕ್ಷಸರ್ ಮುನ್ನೆ ತಮ್ಮಣ್ಣನ ತಂದೆಯ

ಪಗೆಯಂ ನೆಱಪಲೆಂದು ಬೆಸನಂ ಬೇಡಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ರಕ್ಕಸವಡೆ ತನ್ನ ಪಡೆಯೆಲ್ಲಮಂ ತೆರಳ್ಚಿ (ಉಂಡೆಮಾಡಿ?) ತೇರಯಿಸಿ ನುಂಗಿದೊಡೆ (ಹಾಗೆ ರಾಕ್ಷಸಸ್ಯೆನ್ಯವು ತನ್ನ ಸೈನ್ಯವನ್ನೆಲ್ಲ ಉಂಡೆಮಾಡಿ ಆತುರದಿಂದ ನುಂಗಲು) ಬೆಱಗಾದ ಸುಯೋಧನನಂ

(ಆಶ್ಚರ್ಯಪಡುತ್ತಿದ್ದ
ದುರ್ಯೋಧನನ್ನನ್ನು)
ಬಕಾಸುರ ಜಟಾಸುರರ
ಮಕ್ಕಳಪ್ಪ-(ಬಕಾಸುರ ಮತ್ತು
ಜಟಾಸುರರ ಮಕ್ಕಳಾದ)
ಅಳಂಭೂಪ ಹಲಾಯುಧ
ಮುಸಲಾಯುಧ ಕಾಳ ನೀಳ
ರೂಕ್ಷರಾಕ್ಷಸರ್ ಮುನ್ನೆ
ತಮ್ಮಣ್ಣನ ತಂದೆಯ ಪಗೆಯಂ
ನೆಱಪಲೆಂದು (ಮತ್ತು
ತಂದೆಯ ಹಿಂದಿನ ದ್ವೇಷವನ್ನು

ತೀರಿಸಿಕೊಳ್ಳಲು) ಬೆಸನಂ ಬೇಡಿದಾಗಳ್ (ಆಜ್ಞೆಯಾಗಬೇಕೆಂದು ಕೇಳಿಕೊಂಡರು)-

ವಚನ:ಅರ್ಥ: ಹಾಗೆ ರಾಕ್ಷಸಸೈನ್ಯವು ತನ್ನ ಸೈನ್ಯವನ್ನೆಲ್ಲ ಉಂಡೆಮಾಡಿ ಆತುರದಿಂದ ನುಂಗಲು ಆಶ್ಚರ್ಯಪಡುತ್ತಿದ್ದ ದುರ್ಯೋಧನನ್ನನ್ನು ಬಕಾಸುರ ಮತ್ತು ಜಟಾಸುರರ

ಮಕ್ಕಳಾದ ಅಳಂಭೂಷ, ಹಲಾಯುಧ, ಮುಸಲಾಯುಧ, ಕಾಳ ನೀಳರೆಂಬ ರೂಕ್ಷರಕ್ಷಸರು ತಮ್ಮಣ್ಣನ ಮತ್ತು ತಂದೆಯ ಹಿಂದಿನ ದ್ವೇಷವನ್ನು ತೀರಿಸಿಕೊಳ್ಳಲು, ತಮಗೆ ಆ ಕಾರ್ಯದಲ್ಲಿ ಭಾಗವಹಿಸಲು ಆಜ್ಞೆಯಾಗಬೇಕೆಂದು ಕೇಳಿಕೊಂಡರು.

ಚಂ|| ಪ್ರತಿ ವಿಷಮಗ್ನಿಗಗ್ನಿ
ವಿಷಕಂ ವಿಷಮೆಂಬವೊಲಾ
ನಿಶಾಚರಂ
ಗತಿ ಬಲರೀ
ನಿಶಾಟರಿವರಕ್ಕೆನುತುಂ
ಬೆಸವೇೞ್ದೆ ತಾಗಿದಾ|
ದಿತಿಸುತರಂ
ಘಟೋತ್ಕಚನಸುಂಗೊಳೆ
ಕಾದಿ ನಿಶಾಟಕೋಟಿ ಸಂ
ತತಿಗಳನಿಕ್ಕಿ
ಪಾಂಡವಬಲಕ್ಕನುರಾಗಮ

ನುಂಟುಮಾಡಿದಂ|| ೯ ||

ಪದ್ಯ-೯:ಪದವಿಭಾಗ-

ಅರ್ಥ:ಪ್ರತಿ ವಿಷಮ್ ಅಗ್ನಿಗೆ ಅಗ್ನಿ ವಿಷಕಂ ವಿಷಮೆಂಬವೊಲು (ವಿಷಕ್ಕೆ ಪ್ರತಿವಿಷವೂ, ಅಗ್ನಿಗೆ ಅಗ್ನಿಯೂ ಪ್ರತಿವಿಷವು/ ಪರಿಹಾರವು ಎನ್ನುವ ಹಾಗೆ) ಆ ನಿಶಾಚರಂಗೆ ಅತಿ ಬಲರು ಈ ನಿಶಾಟರ್ ಇವರ ಕೈನುತುಂ (ಆ ಘಟೋತ್ಕಚನೆಂಬ

ರಾಕ್ಷಸನಿಗೆ ಅತಿ ಬಲಿಷ್ಠರಾದ
ಈ ರಾಕ್ಷಸರು
ಪ್ರತಿಶಕ್ತಿಯಾಗಲಿ ಎನ್ನುತ್ತ)
ಬೆಸವೇೞ್ (ದುರ್ಯೋಧನನು
ಆಗಬಹುದೆಂದು ಅವರಿಗೆ
ಆಜ್ಞೆಮಾಡಿದನು.) ತಾಗಿದ ಆ
ದಿತಿಸುತರಂ ಘಟೋತ್ಕಚನ
ಅಸುಂಗೊಳೆ ಕಾದಿ (ಬಂದು
ಎದುರಿಸಿದ ಆ ರಾಕ್ಷಸರನ್ನು
ಘಟೋತ್ಕಚನು
ಪ್ರಾಣಾಪಹಾರ ಮಾಡುವ

ಹಾಗೆ ಹೊಡೆದು) ನಿಶಾಟಕೋಟಿ ಸಂತತಿಗಳನು ಇಕ್ಕಿ (ಆ ರಾಕ್ಷಸಸಮೂಹವನ್ನು ಸಂಹರಿಸಿ) ಪಾಂಡವಬಲಕ್ಕೆ ಅನುರಾಗಮನು ಉಂಟುಮಾಡಿದಂ ()

ಪದ್ಯ-೯:ಅರ್ಥ: ವಿಷಕ್ಕೆ ಪ್ರತಿವಿಷವ್ರೂ, ಅಗ್ನಿಗೆ ಅಗ್ನಿಯೂ ಪ್ರತಿವಿಷವು/ ಪರಿಹಾರವು ಎನ್ನುವ ಹಾಗೆ, ಆ

ಘಟೋತ್ಕಚನೆಂಬ ರಾಕ್ಷಸನಿಗೆ ಅತಿ ಬಲಿಷ್ಠರಾದ ಈ ರಾಕ್ಷಸರು ಪ್ರತಿಶಕ್ತಿಯಾಗಲಿ ಎನ್ನುತ್ತ ದುರ್ಯೋಧನನು ಆಗಬಹುದೆಂದು ಅವರಿಗೆ ಆಜ್ಞೆಮಾಡಿದನು. ಬಂದು ಎದುರಿಸಿದ ಆ ರಾಕ್ಷಸರನ್ನು ಘಟೋತ್ಕಚನು ಪ್ರಾಣಾಪಹಾರ ಮಾಡುವ ಹಾಗೆ ಹೊಡೆದು, ಆ ರಾಕ್ಷಸಸಮೂಹವನ್ನು

ಸಂಹರಿಸಿ ಪಾಂಡವಸ್ಯೆನ್ಯಕ್ಕೆ ಸಂತೋಷವನ್ನುಂಟುಮಾಡಿದನು.

ವ|| ಅಂತು ಕುರುಬಲಮೆಲ್ಲಮಂ ಜೀರಗೆಯೊಕ್ಕಲ್ಮಾಡಿ ತುೞಿದು ಕೊಲೆ ರಾಜರಾಜಂ ಬೆಸದೊಳಂರಾಜಂ ಬಂದು ತಾಗೆ-

ವಚನ:ಪದವಿಭಾಗ-

ಅರ್ಥ:ಅಂತು ಕುರುಬಲಂ

ಎಲ್ಲಮಂ ಜೀರಗೆಯ ಒಕ್ಕಲ್ಮ
ಮಾಡಿ (ಕೌರವಸೈನ್ಯವನ್ನೆಲ್ಲ
ಜೀರಿಗೆಯನ್ನು ಒಕ್ಕುವಂತೆ
ಮಾಡಿ) ತುೞಿದು ಕೊಲೆ
ರಾಜರಾಜಂ ಬೆಸದೊಳು
(ತುಳಿದು ಕೊಲ್ಲಲು
ದುರ್ಯೋಧನನ ಆಜ್ಞೆಯ
ಪ್ರಕಾರ) ಅಂಗ ರಾಜಂ ಬಂದು
ತಾಗೆ (ಕರ್ಣನು ಬಂದು
ಎದುರಿಸಿದನು. ಆಗ)-

ವಚನ:ಅರ್ಥ:ವ||

ಕೌರವಸೈನ್ಯವನ್ನೆಲ್ಲ

ಜೀರಿಗೆಯನ್ನು ಒಕ್ಕುವಂತೆ

ಮಾಡಿ ತುಳಿದು ಕೊಲ್ಲಲು

ದುರ್ಯೋಧನನ ಆಜ್ಞೆಯ

ಪ್ರಕಾರ ಕರ್ಣನು ಬಂದು

ಎದುರಿಸಿದನು, ಆಗ

ಮ|| ಸಮದೇಭೇಂದ್ರ

ಸಮೂಹದಿಂದಮಿಡುತುಂ

ಕಂಠೀರವಧ್ವಾನದಿಂ

ದಮಗುರ್ವಪ್ಪಿನಮಾರುತುಂ ಪೆಣಗಳಂ ನುಂಗುತ್ತುಮಾಕಾಶದಂ|
ತಮನೆಯ್ದುತ್ತುಮಿದಿರ್ಚಿ ಕಾದುವೆಡೆಯೊಳ್ ಕಾಣುತ್ತೆ ದೇವರ್ಕಳಿ
ನ್ನುಮೊಳಂ ರಾವಣನೆಂಬಿನಂ ನೆಗೞ್ದುದಾ ಹೈಡಿಂಬನಾಡಂಬರಂ|| ೧೦ ||

ಪದ್ಯ-೧೦:ಪದವಿಭಾಗ-ಅರ್ಥ:ಸಮದೇಭೇಂದ್ರ

ಸಮೂಹದಿಂದಂ ಇಡುತುಂ
(ಸಮತ್ ಇಭ ಇಂದ್ರ
ಸಮೂಹ ; ಮದಿಸಿದ ಆನೆಗಳ
ಸಮೂಹದಿಂದ
ಹೊಡೆಯುತ್ತಲೂ)
ಕಂಠೀರವಧ್ವಾನದಿಂದಂ
ಅಗುರ್ವಪ್ಪಿನಂ (ಸಿಂಹದ
ಧ್ವನಿಯಿಂದ
ಭಯವುಂಟಾಗುವ ಹಾಗೆ
ಆರ್ಭಟಿಸುತ್ತಲೂ) ಆ
ಮಾರುತುಂ ಪೆಣಗಳಂ

ನುಂಗುತ್ತುಂ (ಹೆಣಗಳನ್ನು
ನುಂಗುತ್ತಲೂ)
ಆಕಾಶದಂತಮನೆ
ಎಯ್ದುತ್ತುಮ್ ಇದಿರ್ಚಿ
(ಆಕಾಶದ ಕೊನೆಗೂ ಹೋಗಿ
ಎದುರಿಸಿ) ಕಾದುವ
ಎಡೆಯೊಳ್ ಕಾಣುತ್ತೆ
(ಕಾದುವ ಸನ್ನಿವೇಶವನ್ನು
ನೋಡಿ) ದೇವರ್ಕಳು
ಇನ್ನುಮೊಳಂ
ರಾವಣನೆಂಬಿನಂ

(ರಾವಣನೆಂಬುವನು ಇನ್ನೂ ಇದ್ದಾನೆ ಎನ್ನುವಷ್ಟು) ನೆಗೆಬ್ದಿದು ಆ ಹೈಡಿಂಬನ ಆಡಂಬರಂ (ಆ ಘಟೋತ್ಕಚನ ಆಡಂಬರವು ಪ್ರಸಿದ್ಧವಾಯಿತು)

ಪದ್ಯ-೧೦:ಅರ್ಥ: ೧೦. ಮದಿಸಿದ ಆನೆಗಳ ಸಮೂಹದಿಂದ ಹೊಡೆಯುತ್ತಲೂ ಸಿಂಹದ ಧ್ವನಿಯಿಂದ

ಭಯವುಂಟಾಗುವ ಹಾಗೆ ಆರ್ಭಟಿಸುತ್ತಲೂ ಹೆಣಗಳನ್ನು ನುಂಗುತ್ತಲೂ ಆಕಾಶದ ಕೊನೆಗೂ ಹೋಗಿ ಎದುರಿಸಿ ಕಾದುವ ಸನ್ನಿವೇಶವನ್ನು ನೋಡಿ ದೇವತೆಗಳು ರಾವಣನೆಂಬುವನು ಇನ್ನೂ ಇದ್ದಾನೆ ಎನ್ನುವಷ್ಟು ಆ ಘಟೋತ್ಕಚನ ಆಡಂಬರವು ಪ್ರಸಿದ್ಧವಾಯಿತು.

ಕಂ|| ಸರಿದಧಿಪತಿ
ಮೊಟಿಕಾಲ್ವರ
ಮುರಂಬರಂ ಮೇರು
ಮುಯ್ಯುವರೆಗಮಜಾಂಡಂ|
ಬರೆ ತಲೆಯ ನೆಲೆಗೆ ಲೋಕಾಂ
ತರಮೆಡೆಯಿಲ್ಲೆನಿಸೆ ಪೆರ್ಚಿದಂ
ದನುತನಯಂ|| ೧೧ ||

ಪದ್ಯ-೧೦:ಪದವಿಭಾಗ-ಅರ್ಥ: ಸರಿದಧಿಪತಿ (ಸರಿತ್ - ನದಿಗಳಿಗೆ ಅಧಿಪತಿ-ರಾಜ ಸಮುದ್ರವು) ಮೊಟಿಕಾಲ್ವರಂ

(ಮೊಣಕಾಲಿನವರೆಗೂ)
ಉರಂಬರಂ ಮೇರುಮುಂ
(ಮೇರುಪರ್ವತವು
ಎದೆಯವರೆಗೂ)
ಮಯ್ಯುವರೆಗಂ ಅಜಾಂಡಂ
ಬರೆ (ಬ್ರಹ್ಮಾಂಡವು
ಭುಜದವರೆಗೂ ಬರಲು)
ತಲೆಯ ನೆಲೆಗೆ ಲೋಕಾಂತರಂ
ಎಡೆಯಿಲ್ಲ ಎನಿಸೆ
(ತಲೆಯವರೆಗೆ
ಲೋಕಾಂತರದಲ್ಲಿಯೂ

ಸ್ಥಳವಿಲ್ಲ ಎನ್ನುವಂತೆ,)
ಪೆರ್ಚಿದಂ ದನುತನಯಂ
(ದೊಡ್ಡದಾಗಿ ದನು+ಜ
ತನಯ/ ರಾಕ್ಷಸಪುತ್ರನು
ಘಟೋತ್ಕಚನು ಬೆಳೆದನು)

ಪದ್ಯ-೧೦:ಅರ್ಥ:

ಸಮುದ್ರವು
ಮೊಣಕಾಲಿನವರೆಗೂ
ಮೇರುಪರ್ವತವು
ಎದೆಯವರೆಗೂ ಬ್ರಹ್ಮಾಂಡವು
ಭುಜದವರೆಗೂ ಬರಲು

ತಲೆಯವರೆಗೆ
ಲೋಕಾಂತರದಲ್ಲಿಯೂ
ಸ್ಥಳವಿಲ್ಲವೆನ್ನುವಷ್ಟು,
ದೊಡ್ಡದಾಗಿ ರಾಕ್ಷಸ ಪುತ್ರನಾದ
ಘಟೋತ್ಕಚನು ಬೆಳೆದನು.

**ಬೆಳ್ಳಾಳ್ಗೆ ಪೊಳೆಪುದೋಱುವು
ದೊಳ್ಳಾಳ್ಗೆ
ಪೊಡಪುರ್ದೋಪುರ್ದಿರದಣ್ಮ
ಣ್ಮೊಣ್ಮಂ|
ದೊಳ್ಳಲಗಿನ ಶರತತಿಯಿಂ**

ಕೊಳ್ಳ ಕೊಳೆಂದಂಗರಾಜನಸುರನನೆಚ್ಚಂ|| ೧೨ ||

ಪದ್ಯ-೧೨:ಪದವಿಭಾಗ-ಅರ್ಥ:ಬೆಳ್ಳ ಆಳ್ಗೆ (ಹೆದರುವ ಯೋಧನಿಗೆ) ಪೊಳೆಪುದೋಱುವುದು (ಆಯುಧದ ಹೊಳಪನ್ನು ತೋರಿಸುವುದು,ಅಷ್ಟೇ ಸಾಕು)ಒಳ್ಳಾಳ್ಗೆ ಪೊಡರ್ಪು ತೋರ್ಪುದು (ಒಳ್ಳೆಯ

ವೀರಭಟನಿಗೆ ಪರಾಕ್ರಮವನ್ನು
ತೋರಿಸತಕ್ಕದ್ದು;) ಇರದೆ
ಅಣ್ಮಣ್ಮ ಒಣ್ಮೆ ಎಂದು
(ಕೂಡಲೆ ನಿನ್ನ
ಪರಾಕ್ರಮವನ್ನು ತೋರು
ಎಂದು,) ಒಳ್ಳೆ ಅಲಗಿನ
ಶರತತಿಯಿಂ (ಒಳ್ಳೆಯ
ಅಲಗಿನಿಂದ ಕೂಡಿದ
ಬಾಣಗಳ ಸಮೂಹದಿಂದ)
ಕೊಳ್ಳ್ ಕೊಳ್ ಎಂದು
ಅಂಗರಾಜನು ಅಸುರನನು

ಎಚ್ಚಂ (ತೆಕೊ ತೆಕೊ ಎಂದು ಕರ್ಣನು ರಾಕ್ಷಸನನ್ನು ಹೊಡೆದನು.)

ಪದ್ಯ-೧೨:ಅರ್ಥ: ೧೨. ಅಂಜುಪುರಕನಿಗೆ ಆಯುಧದ ಹೊಳಪನ್ನು ತೋರಿಸತಕ್ಕದ್ದು, ಒಳ್ಳೆಯ ವೀರಭಟನಿಗೆ ಪರಾಕ್ರಮವನ್ನು ತೋರಿಸತಕ್ಕದ್ದು; ಆದುದರಿಂದ ಈಗ ನೀನು ನನಗೆ ಕೂಡಲೆ ನಿನ್ನ ಪರಾಕ್ರಮವನ್ನು ತೋರು

ಎಂದು, ತೆಕೊ ತೆಕೊ ಎಂದು ಕರ್ಣನು ಒಳ್ಳೆಯ ಅಲಗಿನಿಂದ ಕೂಡಿದ ಬಾಣಗಳ ಸಮೂಹದಿಂದ ರಾಕ್ಷಸನನ್ನು ಹೊಡೆದನು.

ಉತ್ಸಾಹ|| ಎಚ್ಚೊಡಸುರನಿಟ್ಟ ಬೆಟ್ಟನೊಂದು ವಜ್ರಶರದಿನಾ ರ್ದೆಚ್ಚು ದಿತಿಜನೆಚ್ಚ ಸಿಡಿಲ ಶರಮನುದಕಬಾಣದಿಂ| ದೆಚ್ಚು ದನುತನೂಜನೆಚ್ಚ ವಾರ್ಧಿಗನಲಬಾಣದಿಂ

ದೆಚ್ಚು ನಚ್ಚುಗಿಡಿಸೆ ಕೊಂಡು ಶೂಲಮಂ ಘಟೋತ್ಕಚಂ|| ೧೩ ||

ಪದ್ಯ-೧೩:ಪದವಿಭಾಗ-ಅರ್ಥ:ಎಚ್ಚೊಡೆ ಅಸುರನು ಇಟ್ಟ ಬೆಟ್ಟನು ಒಂದು ವಜ್ರಶರದಿಂ ಆರ್ದು ಎಚ್ಚು (ರಾಕ್ಷಸ ಘಟೋತ್ಕಚನು ಎಸೆದ ಒಂದು ಬೆಟ್ಟವನ್ನು ವಜ್ರಾಸ್ತ್ರದಿಂದ ಆರ್ಭಟಿಸಿ ಹೊಡೆದು) ದಿತಿಜನೆಚ್ಚ ಸಿಡಿಲ

ಶರಮನು (ರಾಕ್ಷಸನು ಹಾಕಿದ ಸಿಡಿಲ ಬಾಣವನ್ನು) ಉದಕಬಾಣದಿಂದ ಎಚ್ಚು (ರಾಕ್ಷಸನು ಹಾಕಿದ ಸಿಡಿಲ ಬಾಣವನ್ನು ಉದಕಾಸ್ತ್ರದಿಂದ ಹೊಡೆದು,) ದನುತನೂಜನ ಎಚ್ಚ ವಾರ್ಧಿಗೆ ಅನಲಬಾಣದಿಂದ ಎಚ್ಚು (ಅವನು ಇಟ್ಟ ಸಮುದ್ರಾಸ್ತ್ರವನ್ನು ಕರ್ಣನು ಆಗ್ನೇಯಾಸ್ತ್ರದಿಂದ ಹೊಡೆದು

ನಿವಾರಿಸಲು,) ನಚ್ಚುಗಿಡಿಸೆ
(ಅವನ ಆತ್ಮವಿಶ್ವಾಸವನ್ನು
ಹಾಳುಮಾಡಲಾಗಿ) ಕೊಂಡು
ಶೂಲಮಂ ಘಟೋತ್ಕಚಂ
(ಘಟೋತ್ಕಚನು
ಶೂಲಾಯಧವನ್ನು
ತೆಗೆದುಕೊಂಡು ಬಂದನು-)
ಪದ್ಯ-೧೩:ಅರ್ಥ:ಕರ್ಣನು
ಹಾಗೆ ಹೊಡೆದಾಗ, ರಾಕ್ಷಸ
ಘಟೋತ್ಕಚನು ಎಸೆದ ಒಂದು
ಬೆಟ್ಟವನ್ನು ವಜ್ರಾಸ್ತ್ರದಿಂದ

ಆರಭಟಿಸಿ ಹೊಡೆದು,
ರಾಕ್ಷಸನು ಹಾಕಿದ ಸಿಡಿಲ
ಬಾಣವನ್ನು ಉದಕಾಸ್ತ್ರದಿಂದ
ಹೊಡೆದು, ಅವನು ಇಟ್ಟ
ಸಮುದ್ರಾಸ್ತ್ರವನ್ನು ಕರ್ಣನು
ಆಗ್ನೇಯಾಸ್ತ್ರದಿಂದ ಹೊಡೆದು
ನಿವಾರಿಸಲು, ಅವನ
ಆತ್ಮವಿಶ್ವಾಸವನ್ನು
ಹಾಳುಮಾಡಲಾಗಿ,
ಘಟೋತ್ಕಚನು

ಶೂಲಾಯುಧವನ್ನು

ತೆಗೆದುಕೊಂಡು ಬಂದನು-

ಕಂ|| ನೆಲನದಿರ್ವಿನಮಿದಿರಂ

ಬರೆ

ಕುಲಿಶಾಯುಧನಿತ್ತ

ಶಕ್ತಿಯಿಂದಾತನುರ|

ಸ್ಥಲಮನಿಡೆ ವಜ್ರಹತಿಯಿಂ

ಕುಲಗಿರಿ ಕೆಡೆವಂತೆ ಕೆಡೆದನಾ

ದನುತನಯಂ| ೧೪ ||

ಪದ್ಯ-೧೪:ಪದವಿಭಾಗ-

ಅರ್ಥ:ನೆಲನ ಅದಿರ್ವಿನಂ

ಇದಿರಂ ಬರೆ (ನೆಲವು ನಡುಗುವಂತೆ ಎದುರಾಗಿ ಬರಲು) ಕುಲಿಶಾಯುಧನು ಇತ್ತ ಶಕ್ತಿಯಿಂದ ಆತನ ಉರಸ್ಥಲಮನು ಇಡೆ (ಕರ್ಣನು ಇಂದ್ರನು ಕೊಟ್ಟಿದ್ದ ಶಕ್ತ್ಯಾಯುಧದಿಂದ ಆತನ ಹೃದಯಸ್ಥಳವನ್ನು ಹೊಡೆಯಲು,) ವಜ್ರಹತಿಯಿಂ ಕುಲಗಿರಿ ಕೆಡೆವಂತೆ ಕೆಡೆದನು ಆ ದನುತನಯಂ

(ವಜ್ರಾಯುಧದ ಪೆಟ್ಟಿನಿಂದ ಕುಲಪರ್ವತಗಳುರುಳುವಂತೆ ಆ ರಾಕ್ಷಸಕುಮಾರನು ಕೆಳಗುರುಳಿದನು)

ಪದ್ಯ-೧೪:ಅರ್ಥ:

ಘಟೋತ್ಕಚನು ಶೂಲಾಯಧವನ್ನು ತೆಗೆದುಕೊಂಡು ಬಂದಾಗ- ನೆಲವು ನಡುಗುವಂತೆ ಎದುರಾಗಿ ಬರಲು ಕರ್ಣನು ಇಂದ್ರನು ಕೊಟ್ಟಿದ್ದ

ಶಕ್ತ್ಯಾಯುಧದಿಂದ ಆತನ
ಹೃದಯಸ್ಥಳವನ್ನು
ಹೊಡೆಯಲು, ವಜ್ರಾಯುಧದ
ಪೆಟ್ಟಿನಿಂದ
ಕುಲಪರ್ವತಗಳುರುಳುವಂತೆ
ಆ ರಾಕ್ಷಸಕುಮಾರನು
ಕೆಳಗುರುಳಿದನು.

ಒಂದಕ್ಷೋಹಿಣಿ ನುರ್ಗಿದು
ದಿಂದಿವನ ಕಬಂಧಘಾತದಿಂ
ಸತ್ತಿನಿತಂ|
ಕೊಂದನಿವನಿವನನಳ್ಕುರೆ

ಕೊಂದಳವಿನತನಯನಲ್ಲದಂ ಗೊಪ್ಪುಗುಮೇ|| ೧೫ ||

ಪದ್ಯ-೦೧೫ಪದವಿಭಾಗ-ಅರ್ಥ:ಒಂದು ಅಕ್ಷೋಹಿಣಿ ನುರ್ಗಿದುದು ಇಂದು ಇವನ ಕಬಂಧಘಾತದಿಂ (ಇವನ ದೊಡ್ಡ ಶರೀರವು (ಮುಂಡ?) ಕೆಳಗೆ ಬಿದ್ದುದರಿಂದ ಒಂದು ಅಕ್ಷೋಹಿಣೀ ಸೈನ್ಯವು ಪುಡಿಪುಡಿಯಾಯಿತು) ಸತ್ತ ಇನಿತಂ ಕೊಂದನು ಇವನು

(ತಾನು ಸತ್ತೂ ಕೂಡ- ಇವನು ಇಷ್ಟನ್ನು ಕೊಂದನು) ಇವನಂ ಅಳ್ಕುರೆ ಕೊಂದ ಅಳವು ಇನತನಯನು ಅಲ್ಲದಂಗೆ ಒಪ್ಪುಗುಮೇ (ಇವನನ್ನು ಭಯವುಂಟಾಗುವ ಹಾಗೆ ಕೊಂದ ಪರಾಕ್ರಮವು ಕರ್ಣನಲ್ಲದವನಿಗೆ ಒಪ್ಪುತ್ತದೆಯೇ?)

ಪದ್ಯ-೧೫:ಅರ್ಥ: ಇವನ ಶರೀರವು ಕೆಳಗೆ ಬಿದ್ದುದರಿಂದ

ಒಂದಕ್ಷೋಹಿಣೀ ಸೈನ್ಯವು
ಪುಡಿಪುಡಿಯಾಯಿತು. ತಾನು
ಸತ್ತೂ ಇವನು ಇಷ್ಟನ್ನು
ಕೊಂದನು. ಇವನನ್ನು
ಭಯವುಂಟಾಗುವ ಹಾಗೆ
ಕೊಂದ ಪರಾಕ್ರಮವು
ಕರ್ಣನಲ್ಲದವನಿಗೆ
ಒಪ್ಪುತ್ತದೆಯೇ?
ಬೇರೆಯವರಿಗೆ ಅಸಾಧ್ಯವು!

ವ|| ಎಂದೆರಡುಂ ಪಡೆಗಳುಂ ದೇವರ ಪಡೆಗಳುಂ ಕರ್ಣನನೆ

ಪೊಗಟೆ

ಕಾದಲ್ವೇಡೆಂಬಂತುಭಯಸೈನ್

ಯಂಗಳ್ಗಡ್ಡಮಾಗಿ ಕುಲಗಿರಿ

ಕೆಡೆಮಂತಯ್ಗಾವುದು

ನೆಲನೊಡಲಳವಿ ಯಾಗೆ

ಬಿಟ್ಟಿರ್ದ ಘಟೋತ್ಕಚನ

ಕರಮಟಿಲ್ದು ಕಣ್ಣ ನೀರಂ

ಸಿಡಿವಂತಕಾತ್ಮಜನನನಂತ

ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದೆರಡುಂ

ಪಡೆಗಳುಂ ದೇವರ ಪಡೆಗಳುಂ
ಕರ್ಣನನೆ ಪೊಗೞೆ (ಎಂದು
ಎರಡು ಸೈನ್ಯಗಳೂ
ದೇವಸಮೂಹವೂ
ಕರ್ಣನನ್ನೇ ಹೊಗಳಲು-)
ಕಾದಲ್ವೇಡ ಎಂಬಂತೆ
ಉಭಯಸೈನ್ಯಂಗಳ್ಗೆ
ಅಡ್ಡಮಾಗಿ ಕುಲಗಿರಿ
ಕೆಡೆಮಂತೆ -ಅಯ್ದು ಗಾವುದು
(ಇನ್ನು ಕಾದಬೇಡಿ ಎನ್ನುವ
ಹಾಗೆ ಎರಡು ಸೈನ್ಯಗಳಿಗೆ

ಅಡ್ಡಲಾಗಿ ಕುಲಗಿರಿ ಕೆಡೆದು
ಬಿದ್ದಂತೆ) ಅಯ್ದು
ಗಾವುದದಷ್ಟು ನೆಲನ ಒಡಲ
ಅಳವಿ ಯಾಗೆ
(ಅಯ್ದುಗಾವುದ
ಭೂಮಿಯನ್ನು ಆಕ್ರಮಿಸುವ
ಶರೀರದ
ಆಳತೆಯನ್ನುಳ್ಳವನಾಗಿ)
ಬಿಟ್ದಿರ್ದ ಘಟೋತ್ಕಚನ
ಕರಮ್ ಅಟಿಲ್ದು ಕಣ್ಣ ನೀರಂ
ಸಿಡಿವು ಅಂತಕಾತ್ಮಜನನ

(ಘಟೋತ್ಕಚನ ಸಾವಿಗೆ ವಿಶೇಷವಾಗಿ ಧರ್ಮರಾಯನು ದುಖಪಟ್ಟು ಕಣ್ಣೀರನ್ನು ಚಿಮ್ಮಿಸಿದನು) ಅನಂತ ನಿಂತೆಂದಂ (ಅವನನ್ನು ಕುರಿತು ಕೃಷ್ಣನು ಹೀಗೆ ಹೇಳಿದನು.)-
ವಚನ:ಅರ್ಥ: ಎಂದು ಎರಡು ಸೈನ್ಯಗಳೂ ದೇವಸಮೂಹವೂ ಕರ್ಣನನ್ನೇ ಹೊಗಳಲು, ಇನ್ನು ಕಾದಬೇಡಿ ಎನ್ನುವ ಹಾಗೆ

ಎರಡು ಸೈನ್ಯಗಳಿಗೆ ಅಡ್ಡಲಾಗಿ
ಕುಲಗಿರಿ ಕೆಡೆದು ಬಿದ್ದಂತೆ
ಅಯ್ದುಗಾವುದ
ಭೂಮಿಯನ್ನು ಆಕ್ರಮಿಸುವ
ಶರೀರದ
ಆಳತೆಯನ್ನುಳ್ಳವನಾಗಿ ಬಿದ್ದಿದ್ದ
ಘಟೋತ್ಕಚನ ಸಾವಿಗೆ
ವಿಶೇಷವಾಗಿ ಧರ್ಮರಾಯನು
ದುಖಪಟ್ಟು ಕಣ್ಣೀರನ್ನು
ಚಿಮ್ಮಿಸಿದನು. ಅವನನ್ನು
ಕುರಿತು ಕೃಷ್ಣನು ಹೀಗೆ

ಹೇಳಿದನು. (ನೋಡುವ ಹಾಗೆ ಉದಯಪರ್ವತವನ್ನೇರಿದನು. -ಸೂರ್ಯೋದಯವಾಯಿತು).

ಮ|| ದಿವಿಜಾಶನ ಕೊಟ್ಟ ಶಕ್ತಿಯನದಂ ಕರ್ಣಾಂ ನರಂಗೆಂದು ಬ ಯ್ತಿವನಿಂದಿಂದಱಿವೆಯ್ದು ವಂದೊಡದಱಿಂದಿಂದಾತನಂ ಕೊಂದನಿ|

ನಿವನಂ ಕೊಲ್ವುದು ಮೊಗ್ಗದರ್ಕಟಿಲವೇಡೆಂಬನ್ನ

ಮತ್ತೇಱಿದಂ
ರವಿ ಪೂರ್ವಾಚಲಮಂ
ನಿಜಾತ್ಮಜನ ಗೆಲ್ದುಗ್ರಾಜಿಯಂ
ನೋೞ್ಪವೋಲ್|| ೧೬ ||

ಪದ್ಯ-೧೬:ಪದವಿಭಾಗ-ಅರ್ಥ:ದಿವಿಜಾಶನ ಕೊಟ್ಟ ಶಕ್ತಿಯನು (“ಇಂದ್ರನು ವರವಾಗಿ ಕೊಟ್ಟ ಶಕ್ತ್ಯಾಯುಧವನ್ನು)ಅದಂ ಕರ್ಣಂ ನರಂಗೆ ಎಂದು ಬಯ್ತು(ಅರ್ಜುನಿಗೆ

ಕೊಡೆಯಲು ಎಂದು
ಮುಚ್ಚಿಟ್ಟಿದ್ದನು.) ಇವನಿಂದ
ಇಂದು ಅಱಿವೆಯ್ದು
ವಂದೊಡೆ (ಈ ದಿನ
ಇವನಿಂದ ತನಗೆ ಸಾವು
ಬಂದರಿಲು-
ಸಮೀಪಿಸಿದ್ದರಿಂದ)
ಅದಱಿಂದ ಇಂದು ಆತನಂ
ಕೊಂದನು (ಆ
ಜಶಕ್ತ್ಯಾಯುಧದಿಂದ
ಘಟೋತ್ಕಚನನ್ನು

ಕೊಂದನು.) ಇವನಂ ಕೊಲ್ವುದುಂ ಅಗ್ಗ (ಇನ್ನು ಈ ಕರ್ಣನನ್ನು ಗೆಲ್ಲುವುದು ಸುಲಭ ಸಾಧ್ಯ;) ಅದರ್ಕೆ ಅೞಲವೇಡ (ಅದಕ್ಕಾಗಿ ನೀನು ಅಳಬೇಡ- ದುಃಖಪಡಬೇಡ") ಎಂಬನ್ನಂ ಅತ್ತ ಏಱಿದಂ ರವಿ ಪೂರ್ವಾಚಲಮಂ (ಎನ್ನುವಷ್ಟರಲ್ಲಿ ಆ ಕಡೆ ಸೂರ್ಯನು

ಪೂರ್ವಾಚಲವನ್ನು ಏರಿದನು;
ಹೇಗೆ ಎಂದರೆ-) ನಿಜಾತ್ಮಜನ
ಗೆಲ್ದ ಉಗ್ರಾಜಿಯಂ
ನೋಟ್ಟಿವೋಲ್ (ಸೂರ್ಯನು
ತನ್ನ ಮಗನು ಗೆದ್ದ ಭಯಂಕರ
ಯುದ್ಧವನ್ನು ನೋಡಲು
ಬಂದಂತೆ)
ಪದ್ಯ-೧೬:ಅರ್ಥ:“ಇಂದ್ರನು
ವರವಾಗಿ ಕೊಟ್ಟ
ಶಕ್ತ್ಯಾಯುಧವನ್ನು ಕರ್ಣನು
ಅರ್ಜುನಿಗೆ ಕೊಡೆಯಲು

ಎಂದು ಮುಚ್ಚಿಟ್ಟಿದ್ದನು. ಈ ದಿನ ಇವನಿಂದ ತನಗೆ ಸಾವು ಸಮೀಪಿಸಿದ್ದರಿಂದ ಆ ಜಶಕ್ತ್ಯಾಯುಧದಿಂದ ಘಟೋತ್ಕಚನನ್ನು ಕೊಂದನು. ಇನ್ನು ಈ ಕರ್ಣನನ್ನು ಗೆಲ್ಲುವುದು ಸುಲಭ ಸಾಧ್ಯ; ಅದಕ್ಕಾಗಿ ನೀನು ದುಖಪಡಬೇಡ" ಎನ್ನುವಷ್ಟರಲ್ಲಿ ಆ ಕಡೆ ಸೂರ್ಯನು ತನ್ನ ಮಗನು

ಗೆದ್ದ ಭಯಂಕರ ಯುದ್ಧವನ್ನು ನೋಡಲು ಬಂದಂತೆ ಪೂರ್ವಾಚಲವನ್ನು ಏರಿದನು. -ಸೂರ್ಯೋದಯವಾಯಿತು.

ವ|| ಆಗಳ್ ಕುಂಭಸಂಭವಂ ಶೋಣಾಶ್ವಂಗಳೊಳ್ ಪೂಡಿದ ಕನಕ ಕಳಶಧ್ವಜ ವಿರಾಜಿತಮಪ್ಪ ತನ್ನ ರಥಮನೇಱ ಘಟೋತ್ಕಚನ ಕಳೇಬರ ಗಿರಿ ದುರ್ಗಮಲ್ಲದ ಸಮಭೂಮಿಯೊಳ್

ಚತುರ್ಬಲಂಗಳನೊಂದುಮಾಡಿ ಶೃಂಗಾಟಕವ್ಯೂಹಮನೊಡ್ಡಿ ನಿಂದಾಗಳ್ ಧೃಷ್ಟದ್ಯುಮ್ನನಂ ಪಾಂಡವ ಪತಾಕಿನಿಯುಮಂ ವಜ್ರವ್ಯೂಹಮನೊಡ್ಡಿ ನಿಲೆ ಧರ್ಮಪುತ್ರನುಂ ಸುಯೋಧನನುಮೊಡನೊಡನೆ ಕೆಯ್ವೀಸಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಕುಂಭಸಂಭವಂ

ಶೋಣಾಶ್ವಂಗಳೊಳ್ ಪೂಡಿದ
ಕನಕ ಕಳಶಧ್ವಜ
ವಿರಾಜಿತಮಪ್ಪ (ಆಗ
ದ್ರೋಣನು
ಕೆಂಪುಕುದುರೆಗಳನ್ನು ಹೂಡಿದ್ದ
ಚಿನ್ನದ ಕಳಶಧ್ವಜದಿಂದ
ವಿರಾಜಿತವಾಗಿರುವ) ತನ್ನ
ರಥಮನೇಱಿ ಘಟೋತ್ಕಚನ
ಕಳೇಬರ ಗಿರಿ ದುರ್ಗಮಲ್ಲದ
ಸಮಭೂಮಿಯೊಳ್
(ಘಟೋತ್ಕಚನ ಶರೀರವೆಂಬ

ಬೆಟ್ಟ ದುರ್ಗವಿಲ್ಲದ
ಸಮಭೂಮಿಯಲ್ಲಿ)
ಚತುರ್ಬಲಂಗಳನು
ಒಂದುಮಾಡಿ
(ಚತುರಂಗಸ್ಯೆನ್ಯವನ್ನು
ಒಟ್ಟುಗೂಡಿಸಿ)
ಶೃಂಗಾಟಕವ್ಯೂಹಮನು ಒಡ್ಡಿ
ನಿಂದಾಗಳ್ (ಶೃಂಗಾಟಕ
ವೆಂಬ ನಾಲ್ಕು ಬೀದಿಗಳು
ಕೂಡುವ ಸ್ಥಳದಂತಿರುವ
ವ್ಯೂಹವನ್ನು ಎಂದರೆ

ಸೇನಾರಚನೆಯನ್ನು ಒಡ್ಡಿ-
ಎದುರಿಸಿ ನಿಂತಾಗ)
ಧೃಷ್ಟದ್ಯುಮ್ನನಂ ಪಾಂಡವ
ಪತಾಕಿನಿಯುಮಂ
ವಜ್ರವ್ಯೂಹಮನು ಒಡ್ಡಿ ನಿಲೆ
(ಧೃಷ್ಟದ್ಯುಮ್ನನು
ಪಾಂಡವಸೈನ್ಯವನ್ನು
ವಜ್ರವ್ಯೂಹವನ್ನಾಗಿ ಒಡ್ಡಿ
ನಿಲ್ಲಲು,) ಧರ್ಮಪುತ್ರನುಂ
ಸುಯೋಧನನುಂ
ಒಡನೊಡನೆ ಕೆಯ್ವೀಸಿದಾಗಳ್

(ಧರ್ಮರಾಜನೂ
ದುರ್ಯೋಧನನೂ
ಒಟ್ಟೊಟ್ಟಿಗೆ -ಯುದ್ಧಪ್ರಾರಂಭ
ಸೂಚಕವಾಗಿ ಕೈ ಬೀಸಿದಾಗ)-
ವಚನ:ಅರ್ಥ: ಆಗ
ದ್ರೋಣನು
ಕೆಂಪುಕುದುರೆಗಳನ್ನು ಹೂಡಿದ್ದ
ಚಿನ್ನದ ಕಳಶಧ್ವಜದಿಂದ
ವಿರಾಜಿತವಾಗಿರುವ ತನ್ನ
ರಥವನ್ನು ಹತ್ತಿ ಘಟೋತ್ಕಚನ
ಶರೀರವೆಂಬ

ಬೆಟ್ಟದುರ್ಗವಿಲ್ಲದೆ
ಸಮಭೂಮಿಯಲ್ಲಿ
ಚತುರಂಗಸೈನ್ಯವನ್ನು
ಒಟ್ಟುಗೂಡಿಸಿ, ಶೃಂಗಾಟಕ
ವೆಂಬ ನಾಲ್ಕು ಬೀದಿಗಳು
ಕೂಡುವ ಸ್ಥಳದಂತಿರುವ
ವ್ಯೂಹವನ್ನು ಎಂದರೆ
ಸೇನಾರಚನೆಯನ್ನು ಒಡ್ಡಿ-
ಎದುರಿಸಿ ನಿಂತಾಗ,
ಧೃಷ್ಟದ್ಯುಮ್ನನು
ಪಾಂಡವಸೈನ್ಯವನ್ನು

ವಜ್ರವ್ಯೂಹವನ್ನಾಗಿ ಒಡ್ಡಿನಿಲ್ಲಲು, ಧರ್ಮರಾಜನೂ ದುರ್ಯೋಧನನೂ ಯುದ್ಧಪ್ರಾರಂಭ ಸೂಚಕವಾಗಿ ಕೈ ಬೀಸಿದಾಗ- ಪುನ ಯುದ್ಧ ಪ್ರಾರಂಭವಾಯಿತು.

ದ್ರೋಣನ ಯುದ್ಧ - ಅವನ ದೇಹತ್ಯಾಗ

ಮ|| ಸ್ರ|| ಎಳೆಯುಂ

ಬ್ರಹ್ಮಾಂಡಮುಂ

ತಾಗುವವೊಲುಭಯಸೈನ್ಯಾಬ್ಧಿ

ಗಳ್ ತಾಗಿ ಬಿಲ್ ಬಿ

ಲ್ಲೊಳುದಗ್ರಾಶ್ವಂಗಳೊಳಣಿ

ಯಣಿಯೊಳ್ ಸ್ಯಂದನಂ

ಸ್ಯಂದನೌಘಂ|

ಗಳೊಳುಗ್ರೇಭಂ

ಮದೇಭಂಗಳೊಳಿಱಿಯೆ

ತೆರಳ್ತರ್ಪ ಕೆನ್ನೆತ್ತರಿಂದೋ

ಕುಳಿಯಂ

ಖಂಡಂಗಳೊಂದಿಂಡೆಯೊಳೆ

ಜವನಡುರ್ತಾಡಿದಂತಾದುದಾ ಗಳ್|| ೧೭

ಪದ್ಯ-೧೭:ಪದವಿಭಾಗ-ಅರ್ಥ:ಎಳೆಯುಂ ಬ್ರಹ್ಮಾಂಡಮುಂ ತಾಗುವವೊಲು ಉಭಯ ಸೈನ್ಯಾಬ್ಧಿಗಳ್ ತಾಗಿ (ಭೂಮಿಯೂ ಬ್ರಹ್ಮಾಂಡವೂ ತಾಗುವ ಹಾಗೆ ಎರಡು ಸೇನಾಸಮುದ್ರಗಳೂ ತಾಗಿ-ಯುದ್ಧಮಾಡಿ,) ಬಿಲ್

ಬಿಲ್ಲೊಳ್, ಉದಗ್ರ
ಅಶ್ವಂಗಳೊಳ್,
ಅಣಿಯಣಿಯೊಳ್ ಸ್ಯಂದನಂ
ಸ್ಯಂದನ ಔಘಂಗಳೊಳ್
(ಬಿಲ್ಗಾರರು ಬಿಲ್ಗಾರರಲ್ಲಿಯೂ
ಅತ್ಯುತ್ತಮವಾದ
ಅಶ್ವಾರೋಹಕರು
ಅಶ್ವಾರೋಹಕರಲ್ಲಿಯೂ
ಕಾಲುಬಲದವರು
ಹಾಲುಬಲದವರಲ್ಲಿಯೂ
ರಥಿಕರು ರಥಿಕ

ಸಮೂಹದಲ್ಲಿಯೂ)
ಉಗ್ರೇಭಂ ಮದೇಭಂಗಳೊಳ್
ಇಱಿಯೆ (ಶ್ರೇಷ್ಠವಾದ
ಅನೆಗಳು
ಮದ್ದಾನೆಗಳಲ್ಲಿಯೂ
ಸೇರಿಕೊಂಡು
ಯುದ್ಧಮಾಡಲು,) ತೆರಳ್ತರ್ಪ
(ಹರಿದು ಬರುತ್ತಿರುವ)
ಕೆನ್ನೆತ್ತರಿಂದ -ಓಕುಳಿಯಂ>
ಖಂಡಂಗಳು ಒಂದಿಂಡೆಯೊಳೆ
(ರಕ್ತದಿಂದಲೂ

ಮಾಂಸಖಂಡಗಳ ರಾಶಿಯಲ್ಲೇ) ಜವಂ ಅಡುರ್ತುರ್ (-ಓಕುಳಿಯಂ) ಆಡಿದಂತಾದುದಾಗಳ್ (ಯಮನು ಮೇಲೆ ಬಿದ್ದು ಓಕುಳಿಯನ್ನು ಆಡಿದಂತಾಯಿತು)

ಪದ್ಯ-೧೭:ಅರ್ಥ: ಭೂಮಿಯೂ ಬ್ರಹ್ಮಾಂಡವೂ ತಾಗುವ ಹಾಗೆ (ಆಕಾಶ ಭೂಮಿ ಒಂದಾಗುವಹಾಗೆ)

ಎರಡು ಸೇನಾಸಮುದ್ರಗಳೂ
ತಾಗಿದುವು. ಬಿಲ್ಗಾರರು
ಬಿಲ್ಗಾರರಲ್ಲಿಯೂ,
ಅತ್ಯುತ್ತಮವಾದ
ಅಶ್ವಾರೋಹಕರು
ಅಶ್ವಾರೋಹಕರಲ್ಲಿಯೂ,
ಕಾಲುಬಲದವರು
ಹಾಲುಬಲದವರಲ್ಲಿಯೂ,
ರಥಿಕರು ರಥಿಕ
ಸಮೂಹದಲ್ಲಿಯೂ,
ಶ್ರೇಷ್ಠವಾದ ಅನೆಗಳು

ಮದ್ದಾನೆಗಳಲ್ಲಿಯೂ
ಸೇರಿಕೊಂಡು
ಯುದ್ಧಮಾಡಲು, ಅಲ್ಲಿ
ಹರಿದು ಬರುತ್ತಿರುವ
ರಕ್ತದಿಂದಲೂ
ಮಾಂಸಖಂಡಗಳ
ರಾಶಿಯಿಂದಲೂ ಯಮನು
ಮೇಲೆ ಬಿದ್ದು ಓಕುಳಿಯನ್ನು
ಆಡಿದಂತಾಯಿತು

ವ||ಅಂತು ವೀರರಸದ
ತೊರೆಯುಂ ತೊರೆಯುಂ ನೆತ್ತರ

ತೊಯುಮೊಡನೊಡನೆ
ಬೆಳ್ಳಂಗೆಡೆದು ಪರಿಯೆ
ಚತುರ್ಬಲಂಗಳ್ ಕಾದಿ
ಬಸವೞಿದು ಪೆಱಪಿಂಗಿ
ನಿಂದಾಗಳ್ ವಿರಾಟಂ ತನ್ನ
ಚತುರ್ಬಲಂಗಳನೊಂದುಮಾ
ಡಿಕೊಂಡು ಪಾಂಡವರ್ ತನ್ನ
ಮಾನಸಿಕೆಯಂ ನಚ್ಚಿ ತನ್ನ
ಪೊೞಲೊಳಜ್ಞಾತವಾಸಂ
ಮಾಡಿದುದುಮಂ
ದಕ್ಷಿಣೋತ್ತರ

ಗೋಗ್ರಹಣದೊಳ್ ತನಗಾಗಿ ಕಾದಿ ತುಱುವಂ ಮಗುೞ್ಚಿದುದುಮಂ ನೆನೆದು-

ವಚನ:ಪದವಿಭಾಗ-ಅರ್ಥ: ಅಂತು ವೀರರಸದ ತೊರಿಯುಂ (ತೊರೆ-ಪ್ರವಾಹ) ತೊರಿಯುಂ ನೆತ್ತರ ತೊಯುಂ ಒಡನೊಡನೆ ಬೆಳ್ಳಂಗೆಡೆದು ಪರಿಯೆ (ವೀರರಸದ ಪ್ರವಾಹವೂ ರಕ್ತಪ್ರವಾಹವೂ ಜೊತೆ ಜೊತೆಯಲ್ಲಿಯೇ

ಹುಚ್ಚುಹೊಳೆಯಾಗಿ
ಹರಿಯಲು) ಚತುರ್ಬಲಂಗಳ್
ಕಾದಿ ಬಸವೞಿದು ಪೆಱಪಿಂಗಿ
ನಿಂದಾಗಳ್
(ಚತುರಂಗಸೈನ್ಯವೂ
ಹೋರಾಡಿ ಶಕ್ತಿಗುಂದಿ ಹಿಂದಕ್ಕೆ
ಹೋಗಿ ನಿಂತಾಗ) ವಿರಾಟಂ
ತನ್ನ ಚತುರ್ಬಲಂಗಳನು
ಒಂದುಮಾಡಿಕೊಂಡು
(ವಿರಾಟನು ತನ್ನ ನಾಲ್ಕು
ತೆರನಾದ ಸೈನ್ಯವನ್ನೂ

ಒಟ್ಟುಗೂಡಿಸಿಕೊಂಡು)
ಪಾಂಡವರ್ ತನ್ನ
ಮಾನಸಿಕೆಯುಂ ನಚ್ಚಿ ತನ್ನ
ಪೊಲಿಲೊಳು ಅಜ್ಞಾತವಾಸಂ
ಮಾಡಿದುದುಮಂ
(ಪಾಂಡವರು ತನ್ನ
ಪೌರುಷವನ್ನು ನಂಬಿ ತನ್ನ
ನಗರದಲ್ಲಿ ಅಜ್ಞಾತವಾಸ
ಮಾಡಿದುದನ್ನೂ)
ದಕ್ಷಿಣೋತ್ತರ
ಗೋಗ್ರಹಣದೊಳ್ ತನಗಾಗಿ

ಕಾದಿ ತುಱುವಂ ಮಗುೞ್ಚಿದುದುಮಂ ನೆನೆದು (ತನಗಾಗಿ ಯುದ್ಧಮಾಡಿ ಗೋವುಗಳನ್ನು ಹಿಂತಿರುಗಿಸಿದುದನ್ನೂ ಜ್ಞಾಪಿಸಿಕೊಂಡು)- **ವಚನ:ಅರ್ಥ**:ವೀರರಸದ ಪ್ರವಾಹವೂ ರಕ್ತಪ್ರವಾಹವೂ ಜೊತೆ ಜೊತೆಯಲ್ಲಿಯೇ ಹುಚ್ಚುಹೊಳೆಯಾಗಿ ಹರಿಯಲು,

ಚತುರಂಗಸೈನ್ಯವೂ ಹೋರಾಡಿ ಶಕ್ತಿಗುಂದಿ ಹಿಂದಕ್ಕೆ ಹೋಗಿ ನಿಂತವು. ವಿರಾಟನು ತನ್ನ ನಾಲ್ಕು ತೆರನಾದ ಸೈನ್ಯವನ್ನೂ ಒಟ್ಟುಗೂಡಿಸಿಕೊಂಡು, ಪಾಂಡವರು ತನ್ನ ಪೌರುಷವನ್ನು ನಂಬಿ ತನ್ನ ನಗರದಲ್ಲಿ ಅಜ್ಞಾತವಾಸ ಮಾಡಿದುದನ್ನೂ, ತನಗಾಗಿ ಯುದ್ಧಮಾಡಿ ಗೋವುಗಳನ್ನು

ಹಿಂತಿರುಗಿಸಿದುದನ್ನೊ

ಜ್ಞಾಪಿಸಿಕೊಂಡು-

ಮ||ಸ್ರ|| ಮಗಳಂ ಪಾರ್ಥಾತ್ಮಜಂಗಂ ತಲೆ ಬೞಿವೆಱೆಯೆಂದಿತ್ತುದಂ ತನ್ನ ಮಕ್ಕಳ್ ನೆಗೞ್ದಾ ಸಂಗ್ರಾಮದೊಳ್ ಸತ್ತುದುಮನೆ ಮನದೊಳ್ ತಾಳ್ದಿ ತಾಪಾಗಳಾ ಜೆ| ಟ್ಟಿಗನಂ ಕುಂಭೋದ್ಭವಂ ಬಂದದಿರದಿದಿರನಾಂತೊಂದೆ

ಕೆಲ್ಲಂಬಿನಿಂ ಮೆ
ಲ್ಲಗೆ ಪಾರ್ದಾರ್ದೆಚ್ಚನೇಸಿಂ
ತಲೆಪಱಿದು ಸಿಡಿಲ್ದತ್ತ
ಬೀೞ್ವಿನ್ನಮಾಗಳ್|| ೧೮ ||

ಪದ್ಯ-೧೮:ಪದವಿಭಾಗ-
ಅರ್ಥ:ಮಗಳಂ ಪಾರ್ಥಾತ್ಮಜಂಗಂ ತಲೆ ಬಱಿವೆಱಿಯೆಂದು ಇತ್ತುದಂ (ತನ್ನ ಮಗಳು ಉತ್ತರೆಯನ್ನು ಅರ್ಜುನನ ಮಗ ಅಭಿಮಾನ್ಯುವಿಗೆ

ಬಳುವಳಿಯಾಗಿ
ಕೊಟ್ಟುದನ್ನೂ) ತನ್ನ ಮಕ್ಕಳ್
ನೆಗಟ್ದ ಆ ಸಂಗ್ರಾಮದೊಳ್
ಸತ್ತುದುಮನೆ ಮನದೊಳ್
ತಾಳ್ದಿ ತಾಪಾಗಳ್ (ಆ
ಪ್ರಸಿದ್ಧವಾದ ಯುದ್ಧದಲ್ಲಿ ತನ್ನ
ಮಕ್ಕಳು ಸತ್ತುದನ್ನೂ
ಮನಸ್ಸಿನಲ್ಲಿ ಜ್ಞಾಪಿಸಿಕೊಂಡು
ತಾಗಿ ಎದುರಿಸಿದಾಗ,) ಆ
ಜೆಟ್ಟಿಗನಂ ಕುಂಭೋದ್ಭವಂ
ಬಂದದಿರದಿದಿರನಾಂತೊಂದೆ

ಕೆಲ್ಲಂಬಿನಿಂ ಮೆಲ್ಲಗೆ
ಪಾರ್ದು(ದ್ರೋಣನು ಹೆದರದೆ
ಒಂದು ಪ್ರತಿಭಟಿಸಿ ಒಂದೆ
ಕೆಲ್ಲಂಬಿನಿಂದ ಮೆಲ್ಲಗೆ
ಗುರಿಯಿಟ್ಟು ನೋಡಿ) ಆರ್ದು
ಎಚ್ಚನ್ (ಆರ್ಭಟಮಾಡಿ
ಹೊಡೆದನು) ಏಸಿಂ
ತಲೆಪಱಿದು ಸಿಡಿಲ್ದು ಅತ್ತ
ಬೀೞ್ವಿನ್ನಂ ಆಗಳ್
(ಹೊಡೆತದಿಂದ ತಲೆಹರಿದು

ಸಿಡಿದು ಅತ್ತ ಕಡೆ ಬೀಳುವ
ಹಾಗೆ ಹೊಡೆದನು; ಆಗ.)|
ಪದ್ಯ-೧೮:ಅರ್ಥ: ತನ್ನ
ಮಗಳು ಉತ್ತರೆಯನ್ನು
ಅರ್ಜುನನ ಮಗ
ಅಭಿಮಾನ್ಯುವಿಗೆ
ಬಳುವಳಿಯಾಗಿ
ಕೊಟ್ಟುದನ್ನೂ ಆ ಪ್ರಸಿದ್ಧವಾದ
ಯುದ್ಧದಲ್ಲಿ ತನ್ನ ಮಕ್ಕಳು
ಸತ್ತುದನ್ನೂ ಮನಸ್ಸಿನಲ್ಲಿ
ಜ್ಞಾಪಿಸಿಕೊಂಡು

ಎದುರಿಸಿದಾಗ, ದ್ರೋಣನು ಹೆದರದೆ ಒಂದು ಪ್ರತಿಭಟಿಸಿ ಒಂದೆ ಕೆಲ್ಲಂಬಿನಿಂದ ಮೆಲ್ಲಗೆ ಗುರಿಯಿಟ್ಟು ಆರ್ಭಟಮಾಡಿ ಹೊಡೆದನು; ಹೊಡೆತದಿಂದ ತಲೆಹರಿದು ಸಿಡಿದು ಅತ್ತ ಕಡೆ ಬೀಳುವ ಹಾಗೆ ಹೊಡೆದನು; ಆಗ.

ವ|| ಅಂತು ವಿರಾಟವನಿಕ್ಕಿ ಮನದೊಳಳ್ಳಾಟಮಿಲ್ಲದರಿನ್ನ ಪಕೋಟಿಯನಾಟರಲೆಂದಾಸ್

ಪೋಟಸಿ ನಿಶಿತ ಶರಕೋಟಿಯೊಳ್ ತಳಿಗೋಂಟೆಯನಿಕ್ಕಿ ವೀರರಸನಿಕೇತನನಾಗಿರ್ದ ಕಳಶಕೇತನನಂ ನೋಡಿ ದ್ರುಪದಂ ಸೈರಿಸದೆ-

ವಚನ:ಪದವಿಭಾಗ-ಅರ್ಥ: ಅಂತು ವಿರಾಟವನ ಇಕ್ಕಿ ಮನದೊಳು ಅಳ್ಳಾಟಮಿಲ್ಲದೆ (ಹಾಗೆ ವಿರಾಟನನ್ನು ಹೊಡೆದುಕೊಂದು

ಮನಸ್ಸಿನಲ್ಲಿ ಸಂಶಯವೇ
ಇಲ್ಲದೆ)
ಅರಿನೃಪಕೋಟಿಯನು
ಆಟರಲೆಂದು
(ಶತ್ರುರಾಜಸಮೂಹದ ಮೇಲೆ
ಬೀಳಬೇಕೆಂದು) ಆ ಸ್ಫೋಟಿಸಿ
ನಿಶಿತ ಶರಕೋಟಿಯೊಳ್
ತಳಿಗೋಂಟೆಯನಿಕ್ಕಿ
(ತೋಳನ್ನು ತಟ್ಟಿ ಶಬ್ದಮಾಡಿ
ಹರಿತವಾದ ಬಾಣರಾಶಿಯಿಂದ
ಬೇಲಿಯನ್ನು ಹಾಕಿ)

ವೀರರಸನಿಕೇತನನಾಗಿರ್ದ ಕಳಶಕೇತನನಂ (ವೀರರಸಕ್ಕೆ ಆವಾಸಸ್ಥಾನನಾಗಿದ್ದ ದ್ರೋಣಾಚಾರ್ಯನನ್ನು) ನೋಡಿ ದ್ರುಪದಂ ಸೈರಿಸದೆ (ದ್ರುಪದನು ನೋಡಿ ಸೈರಿಸಲಾರದೆ)

ವಚನ:ಅರ್ಥ:ಹಾಗೆ ವಿರಾಟನನ್ನು ಹೊಡೆದುಕೊಂದು ಮನಸ್ಸಿನಲ್ಲಿ ಸಂಶಯವೇ

ಇಲ್ಲದೆ, ಶತ್ರುರಾಜಸಮೂಹದ
ಮೇಲೆ ಬೀಳಬೇಕೆಂದು
ತೋಳನ್ನು ತಟ್ಟಿ ಶಬ್ದಮಾಡಿ
ಹರಿತವಾದ ಬಾಣರಾಶಿಯಿಂದ
ಬೇಲಿಯನ್ನು ಹಾಕಿ ವೀರರಸಕ್ಕೆ
ಆವಾಸಸ್ಥಾನನಾಗಿದ್ದ
ದ್ರೋಣಾಚಾರ್ಯನನ್ನು
ದ್ರುಪದನು ನೋಡಿ
ಸೈರಿಸಲಾರದೆ - ಮುಂದೆ
ಬಂದು

ಹರಿಣೀಪ್ಲುತಂ||
ಗುರುಗಳೆನಗಂ
ಭಾರದ್ವಾಜಂಗಮೊರ್ವರೆ
ವಿದ್ದೆಯೊಳ್
ಪುರುಡ ಪಿರಿದುಂಟೆನ್ನಂ
ಬಿಲ್ಬಲ್ಮೆಯೊಳ್ ಮಿಗಲೆಯ್ದೆ
ಬೇ|
ರ್ವರಿದ ಪಗೆಯುಂ
ಬನ್ನಂಬಟ್ಟೆನ್ನ ಮುನ್ನಿನ
ಬನ್ನಮುಂ

ಪಿರಿದದೆ

ನೆವಂಗೊಂಡಾನಿಂದಿಲ್ಲಿ

ನೀಗದೆ ಮಾಣ್ಬೆನೇ|| ೧೯ ||

ಪದ್ಯ-೧೯:ಪದವಿಭಾಗ-

ಅರ್ಥ:ಗುರುಗಳೆನಗಂ

ಭಾರದ್ವಾಜಂಗಂ ಒರ್ವರೆ

ವಿದ್ದೆಯೊಳ್, (ನನಗೂ

ದ್ರೋಣನಿಗೂ

ವಿದ್ಯಾಭ್ಯಾಸದಲ್ಲಿ ಒಬ್ಬರೇ

ಗುರು.) ಪುರುಡ ಪಿರಿದುಂಟು

ಅನ್ನಂ ಬಿಲ್ಬಲ್ಮೆಯೊಳ್

(ನನ್ನನ್ನು ಧನುರ್ವಿದ್ಯೆಯಲ್ಲಿ
ಮೀರಿಸಬೇಕೆಂಬ ಸ್ಪರ್ಧೆಯೂ
ಅವನಲ್ಲಿ ಉಂಟು) ಮಿಗಲ್
ಎಯ್ದೆ ಬೇರ್ವರಿದ ಪಗೆಯುಂ
(ಮೇಲಾಗಿ ನನಗೆ
ರೂಢಮೂಲವಾದ
ಶತ್ರುತ್ವವೂ) ಬನ್ನಂಬಟ್ಟ ಎನ್ನ
ಮುನ್ನಿನ ಬನ್ನಮುಂ ಪಿರಿದು
ಅದೆ(ತಿರಸ್ಕೃತವಾದ
ಮೊದಲಿನ ಅವಮಾನವೂ
ಹಿರಿದಾಗಿಯೇ ಇ) ಅದೆ

ನೆವಂಗೊಂಡು ಆನಿಂದು ಇಲ್ಲಿ ನೀಗದೆ ಮಾಣ್ಬೆನೇ (ಅದನ್ನೇ ಕಾರಣವನ್ನಾಗಿ ಮಾಡಿಕೊಂಡು ಇಂದು ಇಲ್ಲಿ ಅವುಗಳನ್ನು ಪರಿಹರಿಸದೆ ಬಿಡುತ್ತೇನೆಯೇ?)

ಪದ್ಯ-೧೯:ಅರ್ಥ:ದ್ರುಪದನು ಯೋಚಿಸಿದ: ನನಗೂ ದ್ರೋಣನಿಗೂ ವಿದ್ಯಾಭ್ಯಾಸದಲ್ಲಿ ಒಬ್ಬರೇ ಗುರು. ನನ್ನನ್ನು

ಧನುರ್ವಿಧ್ಯೆಯಲ್ಲಿ
ಮೀರಿಸಬೇಕೆಂಬ ಸ್ಪರ್ಧೆಯೂ
ಅವನಲ್ಲಿ ಉಂಟು. ಮೇಲಾಗಿ
ನನಗೆ ರೂಢಮೂಲವಾದ
ಶತ್ರುತ್ವವೂ ತಿರಸ್ಕೃತವಾದ
ಮೊದಲಿನ ಅವಮಾನವೂ
ಹಿರಿದಾಗಿಯೇ ಇದೆ. ಅದನ್ನೇ
ಕಾರಣವನ್ನಾಗಿ ಮಾಡಿಕೊಂಡು
ಇಂದು ಇಲ್ಲಿ ಅವುಗಳನ್ನು
ಪರಿಹರಿಸದೆ ಬಿಡುತ್ತೇನೆಯೇ?

ವ|| ಎಂದೊಂದಕ್ಷೋಹಿಣೀ
ಬಲಂಬೆರಸು ಪ್ರಳಯದ
ಮಾರಿಯುಮಾಕಾಶದ
ಕವಿಯುಂ ನೆಲದ ಕಲ್ಲೆಯುಂ
ಮುನ್ನಮೆ
ಮೇರೆದಪ್ಪುವುದುಮಂ
ತನ್ನೊೀಳಳವಡಿಸಿಕೊಂಡು
ತಾಗಿದಾಗಳ್ ಶಲ್ಯನೊಳ್
ಸಾತ್ಯಕಿ ಶಾರದ್ವತನೊಳ್
ಕೃತಾಂತನಂದನಂ
ಕೃತವರ್ಮನೊಳ್ ನಕುಳಂ

ಶಕುನಿಯೊಳ್ ಸಹದೇವಂ ಕರ್ಣನೊಳ್ ಬೀಮಸೇನನಶ್ವತ್ಥಾಮನೊಳಕಳಂಕ ರಾಮಂ ದ್ವಂದ್ವಯುದ್ಧದೊಳ್ ತಾಗಿದಾಗಳ್-

ವಚನ:ಪದವಿಭಾಗ-ಅರ್ಥ: ಎಂದು ಒಂದು ಅಕ್ಷೋಹಿಣೀ ಬಲಂಬೆರಸು (ಎಂದು ಒಂದು ಅಕ್ಷೋಹಿಣಿ ಸೈನ್ಯದಿಂದ ಕೂಡಿ) ಪ್ರಳಯದ

ಮಾರಿಯುಂ ಆಕಾಶದ
ಕವಿಯುಂ (ಆಕಾಶದ
ಮುಚ್ಚಳವೂ, ನೆಲದ
ಮೇರೆಯಾದ ಸಮುದ್ರವೂ,)
ನೆಲದ ಕಲ್ಲೆಯುಂ ಮುನ್ನಮೆ
ಮೇರೆದಪ್ಪುವುದುಮಂ
(ಮೊದಲೇ ತಮ್ಮ ಎಲ್ಲೆಯನ್ನು
ಮೀರುವಂತೆ) ತನ್ನೋಳು
ಅಳವಡಿಸಿಕೊಂಡು
ತಾಗಿದಾಗಳ್ (ಮೊದಲೇ
ತಮ್ಮ ಎಲ್ಲೆಯನ್ನು

ಮೀರುವಂತೆ ತನ್ನಲ್ಲಿ
ತುಂಬಿಕೊಂಡು
ಎದುರಿಸಿದನು) ಶಲ್ಯನೊಳ್
ಸಾತ್ಯಕಿ ಶಾರದ್ವತನೊಳ್
ಕೃತಾಂತನಂದನಂ
ಕೃತವರ್ಮನೊಳ್ ನಕುಳಂ
ಶಕುನಿಯೊಳ್ ಸಹದೇವಂ
ಕರ್ಣನೊಳ್ ಬೀಮಸೇನನು
ಅಶ್ವತ್ಥಾಮನೊಳ್ ಅಕಳಂಕ
ರಾಮಂ ದ್ವಂದ್ವಯುದ್ಧದೊಳ್
ತಾಗಿದಾಗಳ್

(ಅಕಳಂಕರಾಮನಾದ ಅರ್ಜುನನೂ ದ್ವಂದ್ವ ಯುದ್ಧದಲ್ಲಿ ಜೊತೆಜೊತೆಯಾಗಿ ಯುದ್ಧಕ್ಕೆ ಸಂಧಿಸಿದರು)-

ವಚನ:ಅರ್ಥ:ಎಂದು ಒಂದು ಅಕ್ಷೋಹಿಣಿ ಸೈನ್ಯದಿಂದ ಕೂಡಿ ಪ್ರಳಯಕಾಲದ ಮಾರಿದೇವತೆಯೂ, ಆಕಾಶದ ಮುಚ್ಚಳವೂ, ನೆಲದ ಮೇರೆಯಾದ ಸಮುದ್ರವೂ,

ಮೊದಲೇ ತಮ್ಮ ಎಲ್ಲೆಯನ್ನು
ಮೀರುವಂತೆ ತನ್ನಲ್ಲಿ
ತುಂಬಿಕೊಂಡು
ಎದುರಿಸಿದನು. ಶಲ್ಯನೊಡನೆ
ಸಾತ್ಯಕಿಯೂ ಕೃಪನೊಡನೆ
ಧರ್ಮರಾಯನೂ
ಕೃತವರ್ಮನೊಡನೆ ನಕುಳನೂ
ಶಕುನಿಯೊಡನೆ ಸಹದೇವನೂ
ಕರ್ಣನೊಡನೆ ಭೀಮನೂ
ಅಶ್ವತ್ಥಾಮನೊಡನೆ
ಅಕಳಂಕರಾಮನಾದ

ಅರ್ಜುನನೂ ದ್ವಂದ್ವ
ಯುದ್ಧದಲ್ಲಿ
ಜೊತೆಜೊತೆಯಾಗಿ ಯುದ್ಧಕ್ಕೆ
ಸಂಧಿಸಿದರು.

**ಮ|| ಸ್ರ|| ದೆಸೆಯೆಲ್ಲಂ ತೀವ್ರ
ಬಾಣಾಳಿಯೊಳೆ
ಮೆಡಱಿದಂತಂಬರಂ
ಬಾಣದಿಂದಂ
ಮುಸುಕಿಟ್ಟಂತಾಗೆ ಬೇಗಂ
ತುಡುವ ಬಿಡುವ ಸೂಱ್ಗೆಯ್ಯ
ಬೇಗಂಗಳಂ ನಿ|**

ಟ್ಟಿಸಲಾರ್ಗಂ

ಬಾರದಂತಾಗಸದಳಮಿಸೆ

ತದ್ರಾಜಚಕ್ರಂ ಪೊದಟ್ಟಿ

ರ್ಬಿಸಿದತ್ತುದ್ದಾಮ ಮೌರ್ವೀ

ರವ ಮುಖರ ಮಹಾಚಾಪ

ಚಕ್ರಾಂಧಕಾರಂ|| ೨೦ ||

ಪದ್ಯ-೨೦:ಪದವಿಭಾಗ-

ಅರ್ಥ:ದೆಸೆಯೆಲ್ಲಂ ತೀವ್ರ

ಬಾಣ ಆಳಿಯೊಳೆ

ಮೆಡಱಿದಂತೆ

(ಬಾಣಸಮೂಹದಿಂದ ಹೆಣೆದ

ಹಾಗೆ) ಅಂಬರಂ
ಬಾಣದಿಂದಂ
ಮುಸುಕಿಟ್ಟಂತಾಗೆ
(ದಿಕ್ಕುಗಳೆಲ್ಲವೂ ತೀಕ್ಷ್ಣವಾದ
ಬಾಣಸಮೂಹದಿಂದ ಹೆಣೆದ
ಹಾಗಾಗಿ, ಆಕಾಶವು
ಬಾಣದಿಂದ
ಮುಸುಕಿಕ್ಕಿದಂತಾಯಿತು.)
ಬೇಗಂ ತುಡುವ ಬಿಡುವ
ಸೂಟ್ಗೆಯ್ಯ (ಸೂಳ್ ಕಯ್ಯ-
ಸರದಿಯ ಕೈಯ) ಬೇಗಂಗಳಂ

(ವೇಗಗಳನ್ನು)(ಬಾಣಗಳನ್ನು
ಬಿಲ್ಲಿಗೆ ಹೂಡುವ ಮತ್ತು
ಅದನ್ನು ಪ್ರಯೋಗಿಸುವ
ಸರದಿಯ ಕೈಗಳ ವೇಗವನ್ನು)
ನಿಟ್ಟಿಸಲು ಆರ್ಗಂ
ಬಾರದಂತಾಗೆ
(ನೋಡುವುದಕ್ಕೆ ಯಾರಿಗೂ
ಸಾಧ್ಯವಿಲ್ಲದ ಹಾಗಾದಲು,)
ಅಸದಳಂ ಇಸೆ (ಬಹಳವಾಗಿ
ಬಾಣ ಪ್ರಯೋಗ ಮಾಡಲು,)
ತದ್ ರಾಜಚಕ್ರಂ

(ರಾಜಸಮೂಹ ಬಹಳ
ಹೆದರಿಸುತ್ತಿತ್ತು.-. >) ಪೊದಱ್ದು
ಅರ್ಬಿಸಿದತ್ತು ಉದ್ದಾಮ
ಮೌರ್ವೀ ರವ (ಬಿಲ್ಲಿನ
ಠೇಂಕಾರ ಶಬ್ದ) ಮುಖರ
(ಶಬ್ದದಿಂದಕೂಡಿರುವ)
ಮಹಾಚಾಪ ಚಕ್ರಾಂಧಕಾರಂ
(ಹೆದೆಯ ಟಂಕಾರ ಶಬ್ದದಿಂದ
ಶಬ್ದಮಯವಾಗಿರುವ
ಬಿಲ್ಲುಗಳ ಸಮೂಹದ

ಕತ್ತಲೆಯು ವ್ಯಾಪಿಸಿ ಹೆದರಿಸಿತು)

ಪದ್ಯ-೨೦:ಅರ್ಥ:ದಿಕ್ಕುಗಳೆಲ್ಲವೂ ತೀಕ್ಷ್ಣವಾದ ಬಾಣಸಮೂಹದಿಂದ ಹೆಣೆದ ಹಾಗಾಗಿ, ಆಕಾಶವು ಬಾಣದಿಂದ ಮುಸುಕಿಕ್ಕಿದಂತಾಯಿತು. ಬಾಣಗಳನ್ನು ಬಿಲ್ಲಿಗೆ ಹೂಡುವ ಮತ್ತು ಅದನ್ನು ಪ್ರಯೋಗಿಸುವ ಸರದಿಯ

ಕೈಗಳ ವೇಗವನ್ನು
ನೋಡುವುದಕ್ಕೆ ಯಾರಿಗೂ
ಸಾಧ್ಯವಿಲ್ಲದ ಹಾಗಾಗಲು, ಆ
ರಾಜಸಮೂಹವು
ವಿಶೇಷವಾಗಿ ಬಾಣಪ್ರಯೋಗ
ಮಾಡುವುದಕ್ಕಾಗಿ (ಮೊದಲು)
ಮಾಡಿದ ಹೆದೆಯ ಟಂಕಾರ
ಶಬ್ದದಿಂದ
ಶಬ್ದಮಯವಾಗಿರುವ
ಬಿಲ್ಲುಗಳ ಸಮೂಹದ

ಕತ್ತಲೆಯು ವ್ಯಾಪಿಸಿ
ಹೆದರಿಸಿತು.

ವ|| ಅನ್ನೆಗಂ ಕಪ್ಪಂಗವಿಯಾಗಿ ಕವಿದ ದ್ರುಪದ ವಿಳಯಾನಳನಂ ದ್ರೋಣಂ ಮಹಾದ್ರೋಣ ಪುಷ್ಕಳಾವರ್ತಕಂಗಳೆಂಬ ವಿಳಯ ಕಾಳ ನೀಳ ಜಳಧರವರ್ಷಂಗಳಿಂ ನಂದಿಸೆಯುಂ ನಂದದೆ ಮುಟ್ಟಿವರೆ

ದುರ್ಯೋಧನನನೇಕಾಯುಧ ಶರಭರಿತಂಗಳಪ್ಪ ರಥಂಗಳಂ ದ್ರೋಣಾಚಾರ್ಯರ ಪೆಱಗೆ ನಿಱಿಸಿಯಾಯುಧಾಧ್ಯಕ್ಷರಂ ಪೇೞ್ದು ಚಕ್ರರಕ್ಷೆಗೆ ದುಶ್ಶ್ಯಾಸನಾದಿಗಳ್ವೆರಸು ತಾನೆ ಬಂದಿರ್ದಾಗಳ್-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಕಪ್ಪಂಗವಿಯಾಗಿ (ಅಷ್ಟರಲ್ಲಿ ಆನೆಯನ್ನು ಹಿಡಿಯುವ

ಗುಂಡಿಯ ಮುಚ್ಚಳದಂತೆ)
ಕವಿದ ದ್ರುಪದ
ವಿಳಯಾನಳನಂ
(ಸುತ್ತುವರಿದು ಮುತ್ತಿದ
ದ್ರುಪದನೆಂಬ
ಪ್ರಳಯಾಗ್ನಿಯನ್ನು) ದ್ರೋಣಂ
ಮಹಾದ್ರೋಣ ಪುಷ್ಕಳ
ಆವರ್ತಕಂಗಳೆಂಬ ವಿಳಯ
ಕಾಳ ನೀಳ (ದ್ರೋಣನು
ಮಹಾದ್ರೋಣ ಮತ್ತು ಪುಷ್ಕಳ
ಆವರ್ತಕಗಳೆಂಬ

ಪ್ರಳಯಕಾಲದ ಕರಿಯ)
ಜಳಧರವರ್ಷಂಗಳಿಂ
ನಂದಿಸೆಯುಂ ನಂದದೆ
ಮುಟ್ಟಿವರೆ (ಮೋಡಗಳ
ಮಳೆಯಿಂದ ಆವರಿಸಿದರೂ
ಮುಟ್ಟಲಾರದ ಹಾಗೆ)
ದುರ್ಯೋಧನನು ಅನೇಕ
ಆಯುಧ ಶರಭರಿತಂಗಳಪ್ಪ
ರಥಂಗಳಂ (ಮುಟ್ಟಲಾರದ
ಹಾಗೆ ಹತ್ತಿರಕ್ಕೆ ಬರಲು
ದುರ್ಯೋಧನನು ಅನೇಕ

ಆಯುಧ ಮತ್ತು ಬಾಣಗಳಿಂದ ತುಂಬಿರುವ ರಥಗಳನ್ನು) ದ್ರೋಣಾಚಾರ್ಯರ ಪೆಱಗೆ ನಿಱಿಸಿಯು (ದ್ರೋಣಾಚಾರ್ಯರ ಹಿಂದೆ ಸ್ಥಾಪಿಸಿ) ಆಯುಧಾಧ್ಯಕ್ಷರಂ ಪೇೞ್ದು ಚಕ್ರರಕ್ಷೆಗೆ ದುಶ್ಶ್ಯಾಸನಾದಿಗಳ್ ವೆರಸು ತಾನೆ ಬಂದಿರ್ದಾಗಳ್ (ಆಯುಧಾಧ್ಯಕ್ಷರನ್ನು ನೇಮಿಸಿ ಚಕ್ರವ್ಯೂಹದ ರಕ್ಷೆಗೆ

ದುಶ್ಶ್ಯಾಸನಾದಿಗಳೊಡನೆ ತಾನೆ ಬಂದು ನಿಂತನು; ಆಗ)-

ವಚನ:ಅರ್ಥ:ಅಷ್ಟರಲ್ಲಿ ಆನೆಯನ್ನು ಹಿಡಿಯುವ ಗುಂಡಿಯ ಮುಚ್ಚಳದಂತೆ ಸುತ್ತುವರಿದು ಮುತ್ತಿದ ದ್ರುಪದನೆಂಬ ಪ್ರಳಯಾಗ್ನಿಯನ್ನು ದ್ರೋಣನು ಮಹಾದ್ರೋಣ ಮತ್ತು ಪುಷ್ಕಳ ಆವರ್ತಕಗಳೆಂಬ ಪ್ರಳಯಕಾಲದ ಕರಿಯ

ಮೋಡಗಳ ಮಳೆಯಿಂದ ಆವರಿಸಿದರೂ ಮುಟ್ಟಲಾರದ ಹಾಗೆ ಹತ್ತಿರಕ್ಕೆ ಬರಲು ದುರ್ಯೋಧನನು ಅನೇಕ ಆಯುಧ ಮತ್ತು ಬಾಣಗಳಿಂದ ತುಂಬಿರುವ ರಥಗಳನ್ನು ದ್ರೋಣಾಚಾರ್ಯರ ಹಿಂದೆ ಸ್ಥಾಪಿಸಿ ಆಯುಧಾಧ್ಯಕ್ಷರನ್ನು ನೇಮಿಸಿ ಚಕ್ರವ್ಯೂಹದ ರಕ್ಷೆಗೆ ದುಶ್ಯಾಸನಾದಿಗಳೊಡನೆ ತಾನೆ ಬಂದು ನಿಂತನು.

ಚಂ|| ದ್ರುಪದ
ಬಳಾಂಬುರಾಶಿಯನಗುರ್ವಿಸೆ
ಪರ್ವಿಪ ಬಾಡಬಾಗ್ನಿಯಾ
ಯ್ತುಪಚಯಮಪ್ಪ
ಬಿಲ್ಲೊವಜನಂಬಿನ
ಬೆಳ್ಸರಿಯಾದಮಾ ರಥ|
ದ್ವಿಪಘಟೆಯೆಂಬಿವನಂಬಿನೊ
ಳೆ ಪೂಱ್ದು ಪಡಲ್ವಡೆ
ತಿಣ್ಣಮೆಚ್ಚನಾ
ತ್ರಿಪುರಮನೆಚ್ಚ ರುದ್ರನ
ನೆಗೞ್ತೆಯುಮಂ ಗೆಲೆ

ಕುಂಭಸಂಭವಂ|| ೨೧ ||21||

ಪದ್ಯ-೨೧:ಪದವಿಭಾಗ-

ಅರ್ಥ:ದ್ರುಪದ ಬಳಾಂಬುರಾಶಿಯನು (ದ್ರುಪದನ ಸೈನ್ಯಸಾಗರವನ್ನು - ಬಲ + ಅಂಬುರಾಶಿ: ಸೈನ್ಯ + ಸಾಗರ) ಅಗುರ್ವಿಸೆ ಪರ್ವಿಪ ಬಾಡಬಾಗ್ನಿಯಾಯ್ತು (ಹೆದರಿಸುವ ಮತ್ತು ಬೆದರಿಸುವ ಬಡಬಾಗ್ನಿಯಾಯಿತು.)

ಉಪಚಯಮಪ್ಪ
ಬಿಲ್ಲೊವಜನ ಅಂಬಿನ
ಬೆಳ್ಸರಿಯು ಆದಂ
(ಹೆಚ್ಚುತ್ತಿರುವ
ದ್ರೋಣಾಚಾರ್ಯರ ಬಾಣಗಳ
ಬಿಳಿಯ ಸೋನೆಯ ಮಳೆಯು
ಆಯಿತು) ಆ ರಥ ದ್ವಿಪಘಟೆ
ಎಂಬಿವನ ಅಂಬಿನೊಳೆ (ಆ
ರಥಗಳೂ ಆನೆಯ
ಸಮೂಹವೂ ಎಂಬವು ಇವನ
ಬಾಣಗಳಲ್ಲಿ) ಪೂಡ್ದು

ಪಡಲ್ವಡೆ (ಹೂತುಹೋಗಿ ಚೆದುರಿಹೋಗುತ್ತಿರಲು) ತಿಣ್ಣಂ ಎಚ್ಚನು (ಬಲವಾಗಿ ಹೊಡೆದನು. ಹೇಗೆಂದರೆ-) ಆ ತ್ರಿಪುರಮನ ಎಚ್ಚ ರುದ್ರನ ನೆಗೞ್ತೆಯುಮಂ ಗೆಲೆ ಕುಂಭಸಂಭವಂ (ಆ ತ್ರಿಪುರವನ್ನು ಹೊಡೆದ ಈಶ್ವರನ ಕೀರ್ತಿಯನ್ನೂ/ ಕಾರ್ಯವನ್ನೂ ಮೀರಿಸಿ ದ್ರೋಣನು - ಹೊಡೆದನು.)

ಪದ್ಯ-೨೧:ಅರ್ಥ:

ಹೆಚ್ಚುತ್ತಿರುವ ದ್ರೋಣಾಚಾರ್ಯರ ಬಾಣಗಳ ಬಿಳಿಯ ಸೋನೆಯ ಮಳೆಯು ದ್ರುಪದನ ಸೈನ್ಯಸಾಗರವನ್ನು ಹೆದರಿಸುವ ಮತ್ತು ಬೆದರಿಸುವ ಬಡಬಾಗ್ನಿಯಾಯಿತು. ಆ ರಥಗಳೂ ಆನೆಯ ಸಮೂಹವೂ ಎಂಬವು ಇವನ ಬಾಣಗಳಲ್ಲಿ ಹೂತುಹೋಗಿ ಚೆದುರಿಹೋಗುತ್ತಿರಲು

ದ್ರೋಣನು ಆ ತ್ರಿಪುರವನ್ನು ಹೊಡೆದ ಈಶ್ವರನ ಕೀರ್ತಿಯ ಕಾರ್ಯವನ್ನೂ ಮೀರಿಸಿ ಬಲವಾಗಿ ಹೊಡೆದನು.

ವ|| ಅಂತು ತನ್ನ ಬಲಮೆಲ್ಲಮಂ ಜವನಂತೊಕ್ಕಲಿಕ್ಕೆ ಕೊಲ್ವ ಕಳಶಕೇತನಂ ಯಜ್ಞಸೇನನೇನುಮಂ ಮಾಣದಾತನ ಮೇಲೆ ಬಟ್ಟಿನಂಬಿನ ಬೆಳ್ಸರಿಯುಮಂ

ಕೆಲ್ಲಂಬಿನ ತಂದಲುಮಂ
ಪಾರೆಯಂಬಿನ
ಸೋನೆಯುಮಂ ಸುರಿಯೆ
ಕಳಶಯೋನಿ ಮುಳಿದು-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ಬಲಮೆಲ್ಲಮಂ ಜವನಂತೆ ಒಕ್ಕಲಿಕ್ಕೆ ಕೊಲ್ವ ಕಳಶಕೇತನಂ(ಹಾಗೆ ತನ್ನ ಸೈನ್ಯವೆಲ್ಲವನ್ನೂ ಯಮನಂತೆ ಒಕ್ಕಣೆ ಮಾಡಿ ಕೊಲ್ಲುತ್ತಿರುವ

ದ್ರೋಣನನ್ನು) ಯಜ್ಞಸೇನನು
ಏನುಂ ಮಾಣದೆ (ದ್ರುಪದನು
ಹೇಗೂ ತಡೆಯಲಾರದೆ)
ಆತನ ಮೇಲೆ ಬಟ್ಟೆನಂಬಿನ
ಬೆಳ್ಸರಿಯುಮಂ(ಅವನ
ಮೇಲೆ ಬಲವಾದ/ ಗುಂಡಾದ
ಅಲಗುಳ್ಳ ಬಾಣಗಳ ಬಿಳಿ
ಸೋನೆಮಳೆಯನ್ನೂ),
ಕೆಲ್ಲಂಬಿನ ತಂದಲುಮಂ
(ಕೆಲ್ಲಂಬುಗಳೆಂಬ ಬಾಣಗಳ
ತುಂತುರು ಮಳೆಯನ್ನೂ),

ಪಾರೆಯಂಬಿನ ಸೋನೆಯುಮಂ ಸುರಿಯೆ (ಹಾರೆಯಾಕಾರದ ಬಾಣಗಳ ಜಡಿಮಳೆಯನ್ನೂ ಸುರಿಸಲು) ಕಳಶಯೋನಿ (ಜ)- ಕಳಶದಲ್ಲಿ ಹುಟ್ಟಿದವನು) ಮುಳಿದು (ದ್ರೋಣನು ಕೋಪಗೊಂಡು.)-

ವಚನ:ಅರ್ಥ:ಹಾಗೆ ತನ್ನ ಸೈನ್ಯವೆಲ್ಲವನ್ನೂ ಯಮನಂತೆ ಒಕ್ಕಣೆ ಮಾಡಿ ಕೊಲ್ಲುತ್ತಿರುವ

ದ್ರೋಣನನ್ನು ದ್ರುಪದನು
ಹೇಗೂ ತಡೆಯಲಾರದೆ ಅವನ
ಮೇಲೆ ಗುಂಡಾದ ಅಲಗುಳ್ಳ
ಬಾಣಗಳ ಬಲವಾದ
ಸೋನೆಮಳೆಯನ್ನೂ
ಕೆಲ್ಲಂಬುಗಳೆಂಬ ಬಾಣಗಳ
ತುಂತುರು ಮಳೆಯನ್ನೂ,
ಹಾರೆಯಾಕಾರದ ಬಾಣಗಳ
ಜಡಿಮಳೆಯನ್ನೂ ಸುರಿಸಲು,
ದ್ರೋಣನು ಕೋಪಗೊಂಡು-

ಮ||
ಪದಿನೆಂಟಂಬಿನೊಳೆಚ್ಚೊಡೆಚ್
ಚು ಪದಿನೆಂಟಸ್ತ್ರಂಗಳಿಂ ಸೀಳ್ದು
ಕೋ
ಪದಿನೆಂಬತ್ತು ಸರಂಗಳಿಂ ಗುರು
ಭರಂಗೆಯ್ದೆಚ್ಚೊಡೆಂಬತ್ತು ಬಾ|
ಣದಿನಾಗಳ್ ಕಡಿದುಗ್ರ ಸೂತ
ಹಯ ಸಂಘಾತಂಗಳಂ
ತಿಣ್ಣಮೆ
ಚ್ಚಿದಿರೊಳ್ ನಿಲ್ಲದಿರೋಡು
ಸತ್ತೆಯೆನುತುಂ

ಪಾಂಚಾಳರಾಜಾಪಂ|| ೨೨ ||

ಪದ್ಯ-೨೨:ಪದವಿಭಾಗ-ಅರ್ಥ:ಪದಿನೆಂಟಂಬಿನೊಳು ಎಚ್ಚೊಡೆ ಎಚ್ಚು ಪದಿನೆಂಟಸ್ತ್ರಂಗಳಿಂ ಸೀಳ್ದು (ಹದಿನೆಂಟು ಬಾಣಗಳಿಂದ ಹೊಡೆದರೆ ಹದಿನೆಂಟಸ್ತ್ರಗಳಿಂದ ಅವನ್ನು ಹೊಡೆದು ಸೀಳಿ) ಕೋಪದಿನೆಂಬತ್ತು ಸರಂಗಳಿಂ ಗುರು ಭರಂಗೆಯ್ದು ಎಚ್ಚೊಡೆ

(ದ್ರೋಣನು ಕೋಪದಿಂದ ಎಂಬತ್ತು ಬಾಣಗಳಿಂದ ಆರ್ಭಟ ಮಾಡಿ ಹೊಡೆದರೆ) ಒಣಬತ್ತು ಬಾಣದಿನಾಗಳ್ ಕಡಿದು ಉಗ್ರ ಸೂತ ಹಯ ಸಂಘಾತಂಗಳಂ (ದ್ರುಪದನು ಎಂಬತ್ತು ಬಾಣಗಳಿಂದ ಆಗಲೇ ಕತ್ತರಿಸಿ ಹಾಕಿದನು. ದ್ರೋಣನ ಸಾರಥಿ ಮತ್ತು ಭಯಂಕರವಾದ ಕುದುರೆಗಳ ಸಮೂಹಗಳನ್ನು) ತಿಣ್ಣಂ ಎಚ್ಚೆ

ಇದಿರೊಳ್ ನಿಲ್ಲದಿರ್ ಓಡು ಸತ್ತೆಯೆನುತುಂ (ಎದುರಿಗೆ ನಿಲ್ಲಬೇಡ ಓಡು ಸತ್ತೆ ಎನ್ನುತ್ತ) ಪಾಂಚಾಳರಾಜಾಪಂ (ಪಾಂಚಾಳರಾಜಾಶ್ವರನಾದ ದ್ರುಪದನು-)
ಪದ್ಯ-೨೨:ಅರ್ಥ:ಹದಿನೆಂಟು ಬಾಣಗಳಿಂದ ಹೊಡೆದರೆ ಹದಿನೆಂಟಸ್ತ್ರಗಳಿಂದ ಅವನ್ನು ಹೊಡೆದು ಸೀಳಿ, ದ್ರೋಣನು ಕೋಪದಿಂದ ಎಂಬತ್ತು

ಬಾಣಗಳಿಂದ ಆರ್ಭಟ ಮಾಡಿ ಹೊಡೆದರೆ ದ್ರುಪದನು ಎಂಬತ್ತು ಬಾಣಗಳಿಂದ ಆಗಲೇ ಕತ್ತರಿಸಿ ಹಾಕಿದನು. ದ್ರೋಣನ ಸಾರಥಿ ಮತ್ತು ಭಯಂಕರವಾದ ಕುದುರೆಗಳ ಸಮೂಹಗಳನ್ನು ತೀಕ್ಷ್ಣವಾಗಿ ಹೊಡೆದು ಎದುರಿಗೆ ನಿಲ್ಲಬೇಡ ಓಡು ಸತ್ತೆ ಎನ್ನುತ್ತ ಪಾಂಚಾಳರಾಜಾಶ್ವರನಾದ ದ್ರುಪದನು-

ವ|| ಮೆಯ್ವೆರ್ಚೆ ಪೆರ್ಚಿದುಮ್ಮಚ್ಚರದೊಳಚ್ಚರಿ ಯಾಗೆಚ್ಚೊಡೆ ಪೂಣ್ಗುರ್ತು-

ವಚನ:ಪದವಿಭಾಗ-

ಅರ್ಥ:ಮೆಯ್ವೆರ್ಚೆ(ಕೊಬ್ಬಿ) ಪೆರ್ಚಿದ ಉಮ್ಮಚ್ಚರದೊಳ್ (ಹೆಚ್ಚಿದ ಅತಿ ಮತ್ಸರದಲ್ಲಿ/ ಕೋಪದಲ್ಲಿ) ಅಚ್ಚರಿಯಾಗೆ ಎಚ್ಚೊಡೆ ಪೂಣ್ಗುರ್ತು (ಹೊಡೆಯಲು ದ್ರೋಣನು ಗಾಯಗೊಂಡು)-

ವಚನ:ಅರ್ಥ: ಕೊಬ್ಬಿ ಹೆಚ್ಚಿದ ಕೋಪದಲ್ಲಿ ಆಶ್ಚರ್ಯವಾಗುವಂತೆ ಹೊಡೆಯಲು ದ್ರೋಣನು ಗಾಯಗೊಂಡು

ಉ|| ಎನ್ನೊಳೆ ಮುನ್ನೆ ಮುಚ್ಚರಿಪನೇ ಒಡನೋದಿದೆನೆಂಬ ಮೇಳದಿಂ ದೆನ್ನನೆ ಮೆಚ್ಚನೆನ್ನೊಳಮಿವಂ ಸಮನೆಚ್ಚಪನಕ್ಕುಮಾದೊಡೇ|

ನಿನ್ನವನಂ
ಪಡಲ್ವಡಿಪೆನೆಂದಿರದಾಗಳೆ
ಭಾರ್ಗವಾಸ್ತ್ರದಿಂ
ದನ್ನೆರೆದೆಚ್ಚನಾ
ದ್ರುಪದರಾಜಶಿರೋಂಬುಜ
ಮಂ ಘಟೋದ್ಭವಂ|| ೨೩ ||

ಪದ್ಯ-೨೩:ಪದವಿಭಾಗ-ಅರ್ಥ:ಎನ್ನೊಳೆ ಮುನ್ನೆ ಮುಚ್ಚರಿಪನೇ (ಇವನು ಮೊದಲಿನಿಂದಲೂ ನನ್ನಲ್ಲಿ ಮತ್ಸರಿಸುವವನೇ;) ಒಡನೆ

ಓದಿದೆನೆಂಬ ಮೇಳದಿಂದ (ಜೊತೆಯಲ್ಲಿ ಓದಿದೆನು ಎಂಬ ಸಲಿಗೆಯಿಂದ) ಎನ್ನನೆ ಮೆಚ್ಚನು (ನನ್ನನ್ನು ಜೊತೆ ಓದಿದವನೆಂದು ಮೆಚ್ಚಲಾರ) ಎನ್ನೊಳಂ ಇವಂ ಸಮನೆ ಎಚ್ಚಪನು ಅಕ್ಕುಂ (ನನ್ನ ಸಮಾನನಾಗಿಯೇ ಯುದ್ಧಮಾಡುವ ಶಕ್ತಿಯುಳ್ಳವನೇನೋ ಹೌದು;) ಆದೊಡೇನು ಇನ್ನು ಇವನಂ

ಪಡಲ್ವಡಿಪೆನೆಂದು ಇರದೆ ಆಗಳೆ (ಇನ್ನಿವನನ್ನು ಕೆಳಗುರುಳಿಸುತ್ತೇನೆಂದು ಸಾವಕಾಶಮಾಡದೆ ಕೂಡಲೆ) ಭಾರ್ಗವಾಸ್ತ್ರದಿಂದಂ ನೆರೆದು ಎಚ್ಚನು (ಸರಿಯಾಗಿ ಹೊಡೆದನು) ಆ ದ್ರುಪದರಾಜ ಶಿರೋಂಬುಜಮಂ ಘಟೋದ್ಭವಂ (ಘಟೋದ್ಭವನಾದ ದ್ರೋಣನು ದ್ರುಪದ ರಾಜನ

ತಲೆಯೆಂಬ ಕಮಲವನ್ನು ಕತ್ತರಿಸಿದನು.)

ಪದ್ಯ-೨೩:ಅರ್ಥ: ಇವನು ಮೊದಲಿನಿಂದಲೂ ನನ್ನಲ್ಲಿ ಮತ್ಸರಿಸುವವನೇ; ಜೊತೆಯಲ್ಲಿ ಓದಿದೆನು ಎಂಬ ಸಲಿಗೆಯಿಂದ ನನ್ನನ್ನು ಜೊತೆ ಓದಿದವನೆಂದು ಮೆಚ್ಚಲಾರ; ನನ್ನ ಸಮಾನನಾಗಿಯೇ ಯುದ್ಧಮಾಡುವ ಶಕ್ತಿಯುಳ್ಳವನೇನೋ ಹೌದು;

ಆದರೇನು? ಇನ್ನಿವನನ್ನು ಕೆಳಗುರುಳಿಸುತ್ತೇನೆಂದು ಸಾವಕಾಶಮಾಡದೆ, ಕೂಡಲೆ ಭಾರ್ಗವಾಸ್ತ್ರದಿಂದ ಸರಿಯಾಗಿ ಹೊಡೆದನು; ದ್ರುಪದ ರಾಜನ ತಲೆಯೆಂಬ ಕಮಲವನ್ನು ದ್ರೋಣನು ಕತ್ತರಿಸಿದನು.

ವ|| ಅಂತು ದ್ರುಪದನೞಿವಂ ಕಂಡಾತನ ತಮ್ಮಂದಿರಪ್ಪ ಶತಾನೀಕ ಶತಚಂದ್ರರ್ ಮೊದಲಾಗೆ

ಪನ್ನೊರ್ವರುಮಯ್ವರ್ ಕೈಕಯರುಂ ಕುಂತಿಯ ಮಾವನಪ್ಪ ಕುಂತಿಭೋಜನುಂಬೆರಸು ಪದಿನಾಲ್ಸಾಸಿರ ರಥಂಬೆರಸು ಬಂದು ತಾಗಿದೊಡೆ-

ವಚನ:ಪದವಿಭಾಗ-

ಅರ್ಥ:ಅಂತು ದ್ರುಪದನ ಅೞಿವಂ ಕಂಡು (ದ್ರುಪದನ ಅಳಿವನ್ನು- ಸಾವನ್ನು ನೋಡಿ) ಅತನ ತಮ್ಮಂದಿರಪ್ಪ

ಶತಾನೀಕ ಶತಚಂದ್ರರ್
ಮೊದಲಾಗೆ ಪನ್ನೊರ್ವರುಂ
ಅಯ್ವರ್ ಕೈಕಯರುಂ
(ಹನ್ನೊಂದು ಜನವೂ ಅಯ್ದು
ಮಂದಿ ಕೈಕೆಯರೂ) ಕುಂತಿಯ
ಮಾವನಪ್ಪ ಕುಂತಿಭೋಜನುಂ
ಬೆರಸು (ಕುಂತಿಭೋಜನೂ
ಕೂಡಿ) ಪದಿನಾಲ್ಸಾಸಿರ
ರಥಂಬೆರಸು ಬಂದು
ತಾಗಿದೊಡೆ (ಹದಿನಾಲ್ಕು

ಸಾವಿರ ರಥದೊಡನೆ ಬಂದು ಎದುರಿಸಿದಾಗ)-

ವಚನ:ಅರ್ಥ:ಹಾಗೆ ದ್ರುಪದನ ಸಾವನ್ನು ನೋಡಿ ಆತನ ತಮ್ಮಂದಿರಾದ ಶತಾನೀಕ ಶತಚಂದ್ರರೇ ಮೊದಲಾದ ಹನ್ನೊಂದು ಜನವೂ ಅಯ್ದು ಮಂದಿ ಕೈಕೆಯರೂ ಕುಂತಿಯ ಮಾವನಾದ ಕುಂತಿಭೋಜನೂ ಕೂಡಿ ಹದಿನಾಲ್ಕು ಸಾವಿರ

ರಥದೊಡನೆ ಬಂದು
ಎದುರಿಸಿದರು. ಆಗ-

ಮ|| ಶಕಟಂಗಳ್ ಪದಿನೆಂಟು ಕೋಟಿವರೆಗಂ ತೀವಿರ್ದನೇಕೋಗ್ರ ಸಾ ಯಕದಿಂದಂ ಚತುರಂಗ ಸಾಧನದ ಮೆಯ್ಮೆಯ್ಯೊಳ್ ಜಿಗಿಲ್ತಾಂತ ನಾ| ಯಕರಂ ಸುಂಟಗೆಯಾಱಿದಂತೆ

ರಥದೊಳ್ ಜೋಲ್ವನ್ನೆಗಂ
ಕೋದು ಚಾ
ಪ ಕಳಾಕೌಶಳಮಂ ಜಗಕ್ಕೆ
ಮೆರೆದಂ ಮೆಯ್ವೆರ್ಚಿ
ಕುಂಭೋದ್ಭವಂ|| ೨೪ ||

ಪದ್ಯ-೨೪:ಪದವಿಭಾಗ-ಅರ್ಥ:ಶಕಟಂಗಳ್ ಪದಿನೆಂಟು ಕೋಟಿವರೆಗಂ ತೀವಿರ್ದ ಅನೇಕ ಉಗ್ರ ಸಾಯಕದಿಂದಂ (ಹದಿನೆಂಟು ಕೋಟಿಯವರೆಗೂ ತುಂಬಿದ

ಗಾಡಿಗಳ ಅತಿಭಯಂಕರವಾದ ಬಾಣಗಳಿಂದ) ಚತುರಂಗ ಸಾಧನದ ಮೆಯ್ಮೆಯ್ೊಳ್ ಜಿಗಿಲ್ತಾಂತ ನಾಯಕರಂ (ಚತುರಂಗ ಸೈನ್ಯದಲ್ಲಿ ಒಂದೊಂದು ಮೈಯ್ಯಲ್ಲಿಯೂ ಅಂಟಿಕೊಂಡ, ಪ್ರತಿಭಟಿಸಿದ ನಾಯಕರ) ಸುಂಟಗೆಯಾಱಿದಂತೆ (ಸುಟ್ಟ ಮಾಂಸವನ್ನು ಆರಲಿಟ್ಟಿರುವ ಹಾಗೆ) ರಥದೊಳ್

ಜೋಲ್ವನ್ನೆಗಂ ಕೋದು (ರಥದಲ್ಲಿ ಜೋತು ಬೀಳುತ್ತಿರುವಂತೆ ಪೋಣಿಸಿ) ಚಾಪ ಕಳಾಕೌಶಳಮಂ ಜಗಕ್ಕೆ ಮೆರೆದಂ ಮೆಯ್ವೆರ್ಚಿ ಕುಂಭೋದ್ಭವಂ (ದ್ರೋಣನು ಮಯ್ಯುಬ್ಬಿ ತನ್ನ ವಿದ್ಯಾಕೌಶಲವನ್ನು ಲೋಕಕ್ಕೆ ಪ್ರದರ್ಶಿಸಿದನು.)

ಪದ್ಯ-00:ಅರ್ಥ:ಹದಿನೆಂಟು ಕೋಟಿಯವರೆಗೂ ತುಂಬಿದ

ಗಾಡಿಗಳ ಅತಿಭಯಂಕರವಾದ ಬಾಣಗಳಿಂದ, ಚತುರಂಗ ಸೈನ್ಯದಲ್ಲಿ ಒಂದೊಂದು ಮೈಯ್ಯಲ್ಲಿಯೂ ಅಂಟಿಕೊಂಡ, ಪ್ರತಿಭಟಿಸಿದ ನಾಯಕರ, ಸೇನಾಪತಿಗಳ ಸುಟ್ಟ ಮಾಂಸವನ್ನು ಆರಲಿಟ್ಟಿರುವ ಹಾಗೆ ರಥದಲ್ಲಿ ಜೋತು ಬೀಳುತ್ತಿರುವಂತೆ ಪೋಣಿಸಿ (ನೇತುಹಾಕಿ-ಜೋಲುಬಿಟ್ಟು) ದ್ರೋಣನು

ಮಯ್ಯುಬ್ಬಿ ತನ್ನ
ವಿದ್ಯಾಕೌಶಲವನ್ನು ಲೋಕಕ್ಕೆ
ಪ್ರದರ್ಶಿಸಿದನು.

ವ|| ಅಂತು ದ್ರುಪದ ದ್ರುಪದಾನುಜ ವಿರಾಟ ವಿರಾಟಾನುಜ ಕೈಕಯ ಕುಂತಿ ಭೋಜಾದಿಗಳಪ್ಪ ನಾಯಕರೆಲ್ಲರುಮಂ ಪೇೞೆ ಪೆಸರಿಲ್ಲದಂತೆ ಕೊಂದು ಮುಂದಾಂಪರಾರುಮಿಲ್ಲದಿಕ್ಕಿ ಗೆಲ್ದ ಮಲ್ಲನಿರ್ದಂತಿರ್ದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ದ್ರುಪದ ದ್ರುಪದ-ಅನುಜ ವಿರಾಟ ವಿರಾಟ-ಅನುಜ ಕೈಕಯ ಕುಂತಿ ಭೋಜಾದಿಗಳಪ್ಪ ನಾಯಕರೆಲ್ಲರುಮಂ (ನಾಯಕರೆಲ್ಲರನ್ನೂ) ಪೇೞ ಪೆಸರಿಲ್ಲದಂತೆ ಕೊಂದು (ಹೇಳುವುದಕ್ಕೂ ಒಂದು ಹೆಸರಿಲ್ಲದಂತೆ ಕೊಂದು) ಮುಂದೆ ಆಂಪರು ಆರುಂ

ಇಲ್ಲದೆ ಇಕ್ಕಿ(ನಂತರ ಪ್ರತಿಭಟಿಸುವವರಾರೂ ಇಲ್ಲದಂತೆ ಹೊಡೆದು ಸಂಹರಿಸಿ) ಗೆಲ್ದ ಮಲ್ಲನಿರ್ದಂತೆ ಇರ್ದಾಗಳ್- (ಗೆದ್ದ ಜಟ್ಟಿಯಿದ್ದಂತೆ ಇದ್ದನು. ಆಗ)

ವಚನ:ಅರ್ಥ: ಹೀಗೆ ದ್ರುಪದ, ದ್ರುಪದನ ತಮ್ಮ, ವಿರಾಟ, ವಿರಾಟನ ತಮ್ಮ ಕೈಕೆಯ, ಕುಂತೀಭೋಜನೇ

ಮೊದಲಾದ
ನಾಯಕರೆಲ್ಲರನ್ನೂ
ಹೇಳುವುದಕ್ಕೂ ಒಂದು
ಹೆಸರಿಲ್ಲದಂತೆ ಕೊಂದು
ನಂತರ
ಪ್ರತಿಭಟಿಸುವವರಾರೂ
ಇಲ್ಲದಂತೆ ಹೊಡೆದು ಸಂಹರಿಸಿ
ಗೆದ್ದ ಜಟ್ಟಿಯಿದ್ದಂತೆ ಇದ್ದನು.
ಆಗ-

ಮ|| ಸಕಲಾರಾತಿ

ನರೇಂದ್ರಮೌಳಿಗಳುರುಳ್ದಾ

ದೀಪ್ತ ರತ್ನಾಂಶು ಮಾ
ಳಿಕೆಯಿಂದಾ ರಣರಂಗಮುಂ
ಬೆಳಗೆ ಕಾಟ್ಕಿರ್ಚೆಂದು
ಭೂತಾಂಗನಾ|
ನಿಕರಂ ಶೋಣಿತವಾರಿಯಂ
ಕುಡಿದಗುರ್ವಪ್ಪನ್ನೆಗಂ ಸೂಸೆ
ನೋ
ಡ ಕವಿಲ್ತಿರ್ದುದು ಕೂಡೆ
ಸಂಜೆಗವಿದಂತಾ ದ್ರೋಣನಿಂ
ಕೊಳ್ಗುಳಂ|| ೨೫ ||

ಪದ್ಯ-೨೫:ಪದವಿಭಾಗ-ಅರ್ಥ:ಸಕಲ ಆರಾತಿ ನರೇಂದ್ರಮೌಳಿಗಳ ಉರುಳ್ದ ಆ ದೀಪ್ತ ರತ್ನಾಂಶು ಮಾಳಿಕೆಯಿಂದ (ಎಲ್ಲಾ ಶತ್ರುರಾಜರ ಕಿರೀಟಗಳುರುಳಿ ಆ ರತ್ನಕಿರಣಗಳ ಮಾಲೆಯಿಂದ) ಆ ರಣರಂಗಮಂ ಬೆಳಗೆ (ಆ ರಣರಂಗವು ಕೆಂಪಗೆ ಬೆಳಗಲು-) ಕಾಟ್ಕೆರ್ಚೆಂದು

ಭೂತಾಂಗನಾ ನಿಕರಂ
(ಪಿಶಾಚಸ್ತ್ರೀಯರ
ಸಮೂಹವು)
ಶೋಣಿತವಾರಿಯಂ ಕುಡಿದು
ಅಗುರ್ವು ಅಪ್ಪನ್ನೆಗಂ ಸೂಸೆ
(ಬಂದು ರಕ್ತಜಲವನ್ನು
ಕುಡಿದು ಭಯವಾಗುವ ಹಾಗೆ
ಚೆಲ್ಲಾಡಿತು, ಚೆಲ್ಲಾಡಲು-,)
ನೋಡ ಕವಿಲ್ತಿರ್ದುದು ಕೂಡೆ
ಸಂಜೆಗವಿದಂತೆ ಆ
ದ್ರೋಣನಿಂ ಕೊಳ್ಗುಳಂ

(ಯುದ್ಧಭೋಮಿ) (ಆ ದ್ರೋಣನಿಂದ ಆ ಯುದ್ಧಭೂಮಿಯು ಸಂಜೆಕವಿದಂತೆ ಮಾಸಲು ಕೆಂಪು - ಕಪ್ಪು ಬಣ್ಣದಿಂದ ಕೂಡಿದ್ದಿತು)

ಪದ್ಯ-೨೫:ಅರ್ಥ: ಎಲ್ಲಾ ಶತ್ರುರಾಜರ ಕಿರೀಟಗಳುರುಳಿ ಆ ರತ್ನಕಿರಣಗಳ ಮಾಲೆಯಿಂದ, ಆ ರಣರಂಗವು ಕೆಂಪಗೆ

ಬೆಳಗಲು- ಅದು ಕಾಡ್ಗಿಚ್ಚೆಂದು

ಪಿಶಾಚಸ್ತ್ರೀಯರ ಸಮೂಹವು

ಬಂದು ರಕ್ತಜಲವನ್ನು ಕುಡಿದು

ಭಯವಾಗುವ ಹಾಗೆ

ಚೆಲ್ಲಾಡಲು, ಆ ದ್ರೋಣನಿಂದ

ಆ ಯುದ್ಧಭೂಮಿಯು

ಸಂಜೆಕವಿದಂತೆ ಮಾಸಲು

ಕೆಂಪು - ಕಪ್ಪು ಬಣ್ಣದಿಂದ

ಕೂಡಿದ್ದಿತು.

ವ|| ಆಗಳ್ ಯುಧಿಷ್ಠಿರಂ

ನಾರಾಯಣಂ ಪೇೞ್ದಿ

ಕಪಟೋಪದೇಶದಿಂ ದ್ರೋಣನಂ ಕೆಯ್ದೆ ಮಾಡಲೆಂದು ಪಾಂಡ್ಯ ಗಜಘಟೆಗಳನಿದಿರೊಳ್ ತಂದೊಡ್ಡಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಯುಧೀಷ್ಠಿರಂ ನಾರಾಯಣಂ ಪೇೞ್ದ ಕಪಟ ಉಪದೇಶದಿಂ (ಕಪಟ ಸಲಹೆಯಿಂದ) ದ್ರೋಣನಂ ಕೆಯ್ದೆ ಮಾಡಲೆಂದು

(ದ್ರೋಣನನ್ನು
ವಶಪಡಿಸಿಕೊಳ್ಳಬೇಕೆಂದು)
ಪಾಂಡ್ಯ ಗಜಘಟೆಗಳನು
ಇದಿರೊಳ್ ತಂದು
ಒಡ್ಡಿದಾಗಳ್ (ಪಾಂಡ್ಯರ
ಆನೆಗಳ ಸಮೂಹವನ್ನು
ಎದುರಾಗಿ ತಂದು ಒಡ್ಡಿದಾಗ,
ಎದರು ನಿಲ್ಲಿಸಿದಾಗ)-
ವಚನ:ಅರ್ಥ:ಆಗ
ಧರ್ಮರಾಜನು ಕೃಷ್ಣನು
ಹೇಳಿದ ಕಪಟ ಸಲಹೆಯಿಂದ

ದ್ರೋಣನನ್ನು
ವಶಪಡಿಸಿಕೊಳ್ಳಬೇಕೆಂದು
ಪಾಂಡ್ಯರ ಆನೆಗಳ
ಸಮೂಹವನ್ನು ಎದುರಾಗಿ
ತಂದು ಒಡ್ಡಿದಾಗ-

ಕಂ|| ನಿಶಿತ
ವಿಶಿಖಂಗಳಿಂದೊಂ
ದಶನಿಯೆ
ಗಿರಿಕುಲಮನಳಱುವಂತೆ
ಮದೇಭ|
ಪ್ರಸರ ಸಹಸ್ರಂ ಕೆಡೆದುವು

ವಿಸಸನದೊಳ್

ದ್ರೋಣನಿದಿರ್ಗೆ

ಮಾರ್ವಲಮೊಳವೇ|| ೨೬ ||

ಪದ್ಯ-೨೬:ಪದವಿಭಾಗ-

ಅರ್ಥ:ನಿಶಿತ ವಿಶಿಖಂಗಳಿಂದಂ ಒಂದು ಅಶನಿಯೆ (ವಜ್ರಾಯುಧ) ಗಿರಿಕುಲಮನು ಅಳಱುವಂತೆ (ಹರಿತವಾದ ಬಾಣಗಳಿಂದ ಒಂದು ವಜ್ರಾಯುಧವೇ ಪರ್ವತಗಳ ಸಮೂಹವನ್ನು

ನಾಶಮಾಡುವ ಹಾಗೆ)
ಮದೇಭ ಪ್ರಸರ ಸಹಸ್ರಂ
ಕೆಡೆದುವು ವಿಸಸನದೊಳ್
(ಸಾವಿರ ಮದ್ದಾನೆಯ ಗುಂಪು
ಯುದ್ಧರಂಗದಲ್ಲಿ
ಸತ್ತುಬಿದ್ದುವು.) ದ್ರೋಣನ
ಇದಿರ್ಗೆ ಮಾರ್ವಲಂ ಒಳವೇ
(ವಿಸನದೊಳ್
-ಯುದ್ಧರಂಗದಲ್ಲಿ ದ್ರೋಣನಿಗೆ
ಇದಿರಾಗುವ
ಪ್ರತಿಬಲವುಂಟೇ?)

ಪದ್ಯ-೨೬:ಅರ್ಥ:ಹರಿತವಾದ ಬಾಣಗಳಿಂದ ಒಂದು ವಜ್ರಾಯುಧವೇ ಪರ್ವತಗಳ ಸಮೂಹವನ್ನು ನಾಶಮಾಡುವ ಹಾಗೆ ಸಾವಿರ ಮದ್ದಾನೆಯ ಗುಂಪು ಯುದ್ಧರಂಗದಲ್ಲಿ ಸತ್ತುಬಿದ್ದುವು. ದ್ರೋಣನಿಗಿದಿರಾಗುವ ಪ್ರತಿಬಲವುಂಟೇ? ಇಲ್ಲ!

ವ|| ಅಂತು ತನಗೆ ಮಾಱಾಂತ ಮದಾಂಧಸಿಂಧುರಂಗಳಂ ಸಿಂಧುರಂಗಳಂ ಸಿಂಧುರಾರಾತಿಯೆ ಕೊಲ್ವಂತೆ ಕೊಲೆ-

ವಚನ:ಪದವಿಭಾಗ-

ಅರ್ಥ:ಅಂತು ತನಗೆ ಮಾಱಾಂತ ಮದಾಂಧ ಸಿಂಧುರಂಗಳಂ (ತನಗೆ ಪ್ರತಿಭಟಿಸಿದ ಮದ್ದಾನೆಗಳನ್ನು,)

ಸಿಂಧುರಂಗಳಂ
ಸಿಂಧುರಾರಾತಿಯೆ ಕೊಲ್ವಂತೆ
(ಮದ್ದಾನೆಗಳನ್ನು ಸಿಂಹವು
ಕೊಲ್ಲುವ ಹಾಗೆ) ಕೊಲೆ-

ವಚನ:ಅರ್ಥ: ವ|| ಹಾಗೆ
ತನಗೆ ಪ್ರತಿಭಟಿಸಿದ
ಮದ್ದಾನೆಗಳನ್ನು, ಸಿಂಹವು
ಮದ್ದಾನೆಗಳನ್ನು ಕೊಲ್ಲುವ
ಹಾಗೆ ಕೊಂದನು. ಹಾಗೆ
ಕೊಲ್ಲಲು-

ಕಂ|| ಸಾಮಜಮಶ್ವತ್ಥಾಮಂ

ನಾಮದಿ ನೊಂದಱಿದೊಡಲ್ಲಿ

ಕಂಡು ಹತೋಽಶ್ವ|

ತ್ಥಾಮಾ ಎನೆ ನೃಪನಶ್ವ

ತ್ಥಾಮನೆ

ಗೆತ್ತೊಣರ್ದನೊವಜನೊರ್ವೆಸ

ರಿಭಮಂ|| ೨೭ ||

ಪದ್ಯ-೨೭:ಪದವಿಭಾಗ-

ಅರ್ಥ:ಸಾಮಜಂ

ಅಶ್ವತ್ಥಾಮಂ ನಾಮದಿಂ

ಒಂದು ಅಱಿದೊಡೆ

(ಅಳಿದೊಡೆ- ಸತ್ತಾಗ) ಇಲ್ಲಿ

ಕಂಡು (ಅಶ್ವತ್ಥಾಮನೆಂಬ
ಹೆಸರಿನ ಆನೆಯೊಂದು
ಯುದ್ಧರಂಗದಲ್ಲಿ ಸಾಯಲು
ಅಲ್ಲಿ ಅದನ್ನು
ಧರ್ಮರಾಯನು ನೋಡಿ,)
'ಹತೋಶ್ವತ್ಥಾಮಾ, ಎನೆ
ನೃಪನು (ರಾಜನು, ಅಶ್ವತ್ಥಾಮ
ಹತನಾದನು ಎನ್ನಲು,)
ಅಶ್ವತ್ಥಾಮನೆಗೆತ್ತು (ಒಂದೇ
ಹೆಸರಿನ ಆನೆಯನ್ನು,
ಮಗನಾದ ಅಶ್ವತ್ಥಾಮನೆಂದೇ

ಭಾವಿಸಿ) ಒಣರ್ದನು
ಒವಜನು ಒರ್ವ ಎಸರ
ಇಭಮಂ(ಒವಜ- ಗುರುವಾದ
ದ್ರೋಣನು ಒಣರ್ದನು -
ಚಿಂತೆಗೊಂಡನು)
ಪದ್ಯ-೨೭:ಅರ್ಥ:೨೭.
ಅಶ್ವತ್ಥಾಮನೆಂಬ ಹೆಸರಿನ
ಆನೆಯೊಂದು
ಯುದ್ಧರಂಗದಲ್ಲಿ ಸಾಯಲು
ಧರ್ಮರಾಯನು ನೋಡಿ
'ಹತೋಶ್ವತ್ಥಾಮ' (ಅಶ್ವತ್ಥಾಮ

ಹತನಾದನು) ಎಂದು
ಘೋಷಿಸಿದಾಗ, ಗುರುವಾದ
ದ್ರೋಣನು ಒಂದೇ ಹೆಸರಿನ
ಆನೆಯನ್ನು ಮಗನಾದ
ಅಶ್ವತ್ಥಾಮನೆಂದೇ ಭಾವಿಸಿ
ಚಿಂತಿಸಿದನು.

ಒಗೆದ ಸುತಶೋಕದಿಂದಾ
ವಗೆಯಂತೊಳಗುರಿಯೆ
ಭೋಂಕನೆರ್ದೆ ತೆರೆಯಲ್ ಹಾ|
ಮಗನೇ ಎಂದಶ್ರುಜಲಾ

ದ್ರ್ಗಗಂಡನಾ ಗಂಡಿನೊಡನೆ ಬಿಸುಟಂ ಬಿಲ್ಲಂ ||೨೮ ||

ಪದ್ಯ-೨೮:ಪದವಿಭಾಗ-ಅರ್ಥ:ಒಗೆದ (ಆದ-ಉಂಟಾದ ದುಃಖವು)ಸುತಶೋಕದಿಂದ ಆವಗೆಯಂತೆ ಒಳಗುರಿಯೆ (ಪುತ್ರಶೋಕದಿಂದ ಉಂಟಾದ ದುಃಖವು ಕುಂಬಾರರ ಆವುಗೆಯ ಒಲೆಯಂತೆ ಮನಸ್ಸಿನಲ್ಲಿ ಉರಿಯಲು),

ಭೋಂಕನೆರ್ದೆ ತೆರೆಯಲ್ ಹಾ
ಮಗನೇ ಎಂದು
ಅಶ್ರುಜಲಾರ್ದ್ರಗಂಡನು
(ಕಣ್ಣೀರಿನಿಂದ ತೊಯ್ದ
ಕೆನ್ನೆಯುಳ್ಳವನಾಗಿ)ಆ
ಗಂಡಿನೊಡನೆ ಬಿಸುಟಂ ಬಿಲ್ಲಂ
(ತನ್ನ ಪೌರುಷದೊಡನೆ
ಬಿಲ್ಲನ್ನೂ ಬಿಸಾಡಿದನು)
ಪದ್ಯ-೨೮:ಅರ್ಥ:
ಪುತ್ರಶೋಕದಿಂದ ಉಂಟಾದ
ದುಃಖವು ಕುಂಬಾರರ

ಆವುಗೆಯ ಒಲೆಯಂತೆ
ಮನಸ್ಸಿನಲ್ಲಿ ಉರಿಯಲು,
ಇದ್ದಕ್ಕಿದ್ದ ಹಾಗೆ ಎದೆಯು
ಬಿರಿಯಲು ‘ಅಯ್ಯೋ ಮಗನೆ’
ಎಂದು ಕಣ್ಣೀರಿನಿಂದ ತೊಯ್ದ
ಕೆನ್ನೆಯುಳ್ಳವನಾಗಿ ತನ್ನ
ಪೌರುಷದೊಡನೆ ಬಿಲ್ಲನ್ನೂ
ಬಿಸಾಡಿದನು.

ವ|| ಅಂತು ಬಿಸುಟು ವಿಚ್ಛಿನ್ನ ವೀರರಸನುಮುತ್ಪನ್ನ ಶೋಕರಸನುಮಾಗಿ ನಿಜ

ವರೂಥಮಂ ಧರ್ಮಪುತ್ರನ ಸಮೀಪಕ್ಕುಯ್ದು ಮಗನ ಮಾತಂ-

ವಚನ:ಪದವಿಭಾಗ-

ಅರ್ಥ:ಅಂತು ಬಿಸುಟು, ವಿಚ್ಛಿನ್ನ ವೀರರಸನುಂ (ಹಾಗೆ ಬಿಲ್ಲನ್ನು ಎಸೆದು ವೀರರಸ ಕಡಿದವನಾಗಿ) ಉತ್ಪನ್ನ ಶೋಕರಸನುಮಾಗಿ (ದು:ಖರಸದಿಂದ ಕೂಡಿ)ನಿಜ ವರೂಥಮಂ ಧರ್ಮಪುತ್ರನ

ಸಮೀಪಕ್ಕೆ ಉಯ್ದು ಮಗನ ಮಾತಂ (ತನ್ನ ತೇರನ್ನು ಧರ್ಮರಾಯನ ಸಮೀಪಕ್ಕೆ ತೆಗೆದುಕೊಂಡುಹೋಗಿ ಮಗನ ಮಾತನ್ನು-)-

ವಚನ:ಅರ್ಥ:ಹಾಗೆ ಬಿಲ್ಲನ್ನು ಎಸೆದು ವೀರರಸ ಕಡಿದವನಾಗಿ ದು:ಖರಸದಿಂದ ಕೂಡಿ ತನ್ನ ತೇರನ್ನು ಧರ್ಮರಾಯನ ಸಮೀಪಕ್ಕೆ

ತೆಗೆದುಕೊಂಡುಹೋಗಿ ಮಗನ (ಮರಣದ) ಮಾತನ್ನು-

ಚಂ|| ಬೆಸಗೊಳೆ ಕುಂಜರಂ
ಮಡಿದುದೆಂದು
ಮಹೀಭುಜನುಳ್ಳ
ಮಾೞ್ಕೆಯಿಂ
ಪುಸಿಯದೆ ಪೇೞ್ದೊಡಂ
ಕಿೞಿದು ನಂಬದೆಯುಂ
ರಣದಲ್ಲಿ ಮುನ್ನೆ ಬಿ|
ಲ್ವಿಸುಟೆನಿದೆಂತು ಪೇೞ್
ಪಿಡಿವೆನಿನ್ನಿದನೆಂದಿರದಾತ್ಮ

ಯೋಗಿ ತ ನ್ನಸುವನುದಾತ್ತಯೋಗದೊಳೆ ಬಿಲ್ಲೊವಜಂ ಕಳೆದಂ ರಣಾಗ್ರದೊಳ್ ||೨೯

ಪದ್ಯ-00:ಪದವಿಭಾಗ-ಅರ್ಥ:ಬೆಸಗೊಳೆ (ಪ್ರಶ್ನೆಮಾಡಲು) ಕುಂಜರಂ ಮಡಿದುದೆಂದು ಮಹೀಭುಜನು ಉಳ್ಳ ಮಾಟ್ಕೆಯಿಂ ಪುಸಿಯದೆ ಪೇೞ್ದೊಡಂ (ಇರುವ

ಸ್ಥಿತಿಯಲ್ಲಿ ಹುಸಿಯದೆ
ಹೇಳಿದರೂ) ಕಿಱಿದು
ನಂಬದೆಯುಂ (ಸ್ವಲ್ಪವೂ
ನಂಬದೆ), ರಣದಲ್ಲಿ ಮುನ್ನೆ
ಬಿಲ್ವಿಸುಟೆನು ಇದು ಎಂತು
ಪೇೞ್ ಪಿಡಿವೆನು ಇನ್ನು
ಇದನೆಂದು ("ಯುದ್ಧದಲ್ಲಿ ಈ
ಮೊದಲು ಬಿಲ್ಲನ್ನು
ಬಿಸಾಡಿದ್ದೇನೆ. ಪುನ ಅದನ್ನು
ಹೇಗೆ ಹಿಡಿಯಲಿ ಹೇಳು")
ಇರದೆ ಆತ್ಮಯೋಗಿ ತನ್ನ

ಅಸುವನು
ಉದಾತ್ತಯೋಗದೊಳೆ
ಬಿಲ್ಲೊವಜಂ ಕಳೆದಂ
ರಣಾಗ್ರದೊಳ್
(ಆತ್ಮಯೋಗಿಯಾದ
ದ್ರೋಣನು ಸಾವಕಾಶ
ಮಾಡದೆ ಕೂಡಲೆ ತನ್ನ
ಪ್ರಾಣವನ್ನು ಉದಾತ್ತವಾದ
ಯೋಗಮಾರ್ಗದಲ್ಲಿ
ಯುದ್ಧಮುಖದಲ್ಲಿ
ನೀಗಿದನು.)

ಪದ್ಯ-00:ಅರ್ಥ: ಮಗನ ಮರಣದ,ಮಾತನ್ನು- ಸತ್ಯವೇನೆಂದು, ಪ್ರಶ್ನೆಮಾಡಲು ಆನೆಯು ಸತ್ತಿತೆಂದು ರಾಜನು ಸತ್ಯವಾಗಿ) ಇರುವ ಸ್ಥಿತಿಯಲ್ಲಿ ಹುಸಿಯದೆ ಹೇಳಿದರೂ, ಸ್ವಲ್ಪವೂ ನಂಬದೆ “ಯುದ್ಧದಲ್ಲಿ ಈ ಮೊದಲು ಬಿಲ್ಲನ್ನು ಬಿಸಾಡಿದ್ದೇನೆ. ಪುನ ಅದನ್ನು ಹೇಗೆ ಹಿಡಿಯಲಿ ಹೇಳು” ಎಂದು

ಆತ್ಮಯೋಗಿಯಾದ
ದ್ರೋಣನು ಕೂಡಲೆ ತನ್ನ
ಪ್ರಾಣವನ್ನು ಉದಾತ್ತವಾದ
ಯೋಗಮಾರ್ಗದಲ್ಲಿ
ಯುದ್ಧಮುಖದಲ್ಲಿ ನೀಗಿದನು.

ವ|| ಅಂತು ಭಾವಿತಾತ್ಮನಧ್ಯಾತ್ಮ ವಿಶಾರದನಾಗಿ ಪರಮಾತ್ಮನೊಳ್ ಕೂಡಿದನಾಗಳ್ ಪೆಣನನಿೞಿದು

ಪಗೆಗೊಂಡರೆಂಬ ನಾಣ್ಣುಡಿಯಂ ನನ್ನಿ ಮಾಡಿ ತಮ್ಮಯ್ಯಂ ಸತ್ತ ಮುಳಿಸಿನೊಳ್ ಕಣ್ಗಾಣದೆ ಧೃಷ್ಟದ್ಯುಮ್ನಂ ಧರ್ಮತನೂಜಂ ಬಾರಿಸೆ ವಾರಿಸೆ-

ವಚನ:ಪದವಿಭಾಗ-

ಅರ್ಥ:ಅಂತು ಭಾವಿತಾತ್ಮನು ಅಧ್ಯಾತ್ಮ ವಿಶಾರದನಾಗಿ ಪರಮಾತ್ಮನೊಳ್

ಕೂಡಿದನಾಗಳ್ (ಹಾಗೆ
ಆತ್ಮಧ್ಯಾನಪರನಾದ
ದ್ರೋಣನು
ಆಧ್ಯಾತ್ಮಪರಾಯಣನಾಗಿ
ಪರಮಾತ್ಮನಲ್ಲಿ ಕೂಡಿದಾಗ)
ಪೆಣನನಿೞಿದು
ಪಗೆಗೊಂಡರೆಂಬ
ನಾಣ್ಣುಡಿಯಂ ನನ್ನಿ ಮಾಡಿ
('ಹೆಣವನ್ನು ಇರಿದು
ಹಗೆಯನ್ನು ತೀರಿಸಿಕೊಂಡರು'
ಎಂಬ ಗಾದೆಯ ಮಾತನ್ನು

ಸತ್ಯವನ್ನಾಗಿ ಮಾಡಿ,)
ತಮ್ಮಯ್ಯಂ ಸತ್ತ
ಮುಳಿಸಿನೊಳ್ ಕಣ್ಗಾಣದೆ
(ತನ್ನ ತಂದೆ ದ್ರುಪದನು ಸತ್ತ
ಕೋಪದಿಂದ
ಬುದ್ಧಿಶೂನ್ಯನಾಗಿ)
ಧೃಷ್ಟದ್ಯುಮ್ನಂ
ಧರ್ಮತನೂಜಂ ಬಾರಿಸೆ
ವಾರಿಸೆ (ಧೃಷ್ಟದ್ಯುಮ್ನನು,
ಧರ್ಮರಾಜನು ಬೇಡವೆಂದು
ತಡೆದರೂ)-

ವಚನ:ಅರ್ಥ: ಹಾಗೆ ಆತ್ಮಧ್ಯಾನಪರನಾದ ದ್ರೋಣನು ಆಧ್ಯಾತ್ಮಪರಾಯಣನಾಗಿ ಪರಮಾತ್ಮನಲ್ಲಿ ಕೂಡಿದಾಗ, ‘ಹೆಣವನ್ನು ಇರಿದು ಹಗೆಯನ್ನು ತೀರಿಸಿಕೊಂಡರು’ ಎಂಬ ಗಾದೆಯ ಮಾತನ್ನು ಸತ್ಯವನ್ನಾಗಿ ಮಾಡಿ, ತನ್ನ ತಂದೆ ದ್ರುಪದನು ಸತ್ತ ಕೋಪದಿಂದ

ಬುದ್ಧಿಶೂನ್ಯನಾಗಿ,
ದೃಷ್ಟದ್ಯುಮ್ನನು,
ಧರ್ಮರಾಜನು ಬೇಡವೆಂದು
ತಡೆದರೂ-

ಕಂ|| ಕರವಾಳಂ ಘರಮಟ್ಟಿಸಿ
ಶಿರೋಜಮಂ ಪಿಡಿದು ತೆಗೆದು
ಗುರುವಂ ಪಚ್ಚಂ|
ತಿರೆ ಪಿರಿದು ಪೊಯ್ದನೆಂತ
ಪ್ಪರೊಳಂ
ಮುಳಿಸಱಿವನಾಗಲೇನಿತ್ತಪು
ದೇ|| ೩೦ ||

ಪದ್ಯ-೩೦:ಪದವಿಭಾಗ-ಅರ್ಥ:ಕರವಾಳಂ ಘರಮ(ವ)ಟ್ಟಿಸಿ ಶಿರೋಜಮಂ ಪಿಡಿದು ತೆಗೆದು (ಕತ್ತಿಯನ್ನು ಬೀಸಿ ಕೂದಲನ್ನು ಹಿಡಿದೆಳೆದು) ಗುರುವಂ ಪಚ್ಚಂತಿರೆ ಪಿರಿದು ಪೊಯ್ದನು (ಗುರುವನ್ನು ಹೆಚ್ಚುವಂತೆ-ಎರಡುಭಾಗ ಮಾಡಿದ ಹಾಗೆ ಘಟ್ಟಿಯಾಗಿ ಹೊಡೆದನು) ಅಂತಪ್ಪರೊಳಂ

(ಎಂತಹವರಲ್ಲಿಯೂ)
ಮುಳಿಸು ಅಱಿವಂ
ಆಗಲೇನು
ಇತ್ತಪುದೇ(ಕೋಪವು
ಎಂತಹವರಲ್ಲಿಯೂ
ವಿವೇಕವುಂಟಾಗಲು ಅವಕಾಶ
ಕೊಡುತ್ತದೆಯೇ ಏನು?)
ಪದ್ಯ-೩೦:ಅರ್ಥ:ಕತ್ತಿಯನ್ನು
ಬೀಸಿ ಕೂದಲನ್ನು ಹಿಡಿದೆಳೆದು
ಗುರುವನ್ನು ಎರಡುಭಾಗ
ಮಾಡಿದ ಹಾಗೆ ಘಟ್ಟಿಯಾಗಿ

ಹೊಡೆದನು. ಕೋಪವು ಎಂತಹವರಲ್ಲಿಯೂ ವಿವೇಕವುಂಟಾಗಲು ಅವಕಾಶ ಕೊಡುತ್ತದೆಯೇ ಏನು?

ವ|| ಅಂತು ದ್ರೋಣನೆಳೆಗೋಣ ಸಾವಂ ಸಾವುದುಂ ಭೋರ್ಗರೆದಾರ್ದ ಪಾಂಡವ ಪತಾಕಿನಿಯುಮನೊಂದು ತಲೆಯಾಗೊಡುವ ಕೌರವಧ್ವಜಿನಿಯುಮಂ

ಬೇರೊಂದು ಮೊನೆಯೊಳ್ ಕಾದುತಿರ್ದಶ್ವತ್ಥಾಮಂ ಕಂಡು ಮುಟ್ಟೆವರ್ಪನ್ನೆಗಂ ಶೋಣಾಶ್ವೋಪಲಕ್ಷಿತ ನಿಜಪಿತೃ ಸೂತ ಕೇತನ ಕಥಿತಮಾಗಿರ್ದ ರಥಮನುಪಲಕ್ಷಿಸಿ ನೋಡಿ ತಮ್ಮಯ್ಯನತೀತನಾದುದನಱಿದು-

ವಚನ:ಪದವಿಭಾಗ-

ಅರ್ಥ:ಅಂತು ದ್ರೋಣನು

ಎಳೆಗೊಣ ಸಾವಂ

ಸಾವುದುಂ (ಹಾಗೆ ದ್ರೋಣನು

ಎಳೆದು ತಂದು ಬಲಿಕೊಡುವ

ಕೋಣನ ಸಾವಿನ ಮಾದರಿಯ

ಸಾವನ್ನು ಅಥವಾ ಮಾರಿಯ

ಮುಂದೆ ಕೊಡುವ

ಎಳೆಯಕೋಣದ ಸಾವನ್ನು,)

ಭೋರ್ಗರೆದು ಆರ್ದ

ಪಾಂಡವ ಪತಾಕಿನಿಯುಮನು

(ಶಬ್ದಮಾಡಿ ಆರ್ಭಟ

ಮಾಡುವ

ಪಾಂಡವಸೈನ್ಯವನ್ನೂ) ಒಂದು ತಲೆಯಾಗೋಡುವ ಕೌರವಧ್ವಜಿನಿಯುಮಂ (ಒಂದೇ ದಿಕ್ಕಿಗೆ ತಲೆತಿರುಗಿಸಿಕೊಂಡು ಓಡುವ ಕೌರವ ಸೈನ್ಯವನ್ನೂ) ಬೇರೊಂದು ಮೊನೆಯೊಳ್ ಕಾದುತಿರ್ದ ಅಶ್ವತ್ಥಾಮಂ ಕಂಡು (ಯುದ್ಧಭೂಮಿಯ ಮತ್ತೊಂದೆಡೆಯಲ್ಲಿ ಕಾದುತ್ತಿದ್ದ ಅಶ್ವತ್ಥಾಮನು ನೋಡಿ)

ಮುಟ್ಟೆವರ್ಪನ್ನೆಗಂ
ಶೋಣಾಶ್ವೋಪಲಕ್ಷಿತ (ಹತ್ತಿರ
ಬರುವಷ್ಟರಲ್ಲಿ
ಕೆಂಪುಕುದುರೆಗಳಿಂದ
ಗುರುತಿಸಲ್ಪಟ್ಟ) ನಿಜಪಿತೃ
ಸೂತ ಕೇತನ ಕಥಿತಮಾಗಿರ್ದ
(ತನ್ನ ತಂದೆ, ಸಾರಥಿ,
ಧ್ವಜಗಳಿಂದ ಕೂಡಿದ್ದ)
ರಥಮನು ಉಪಲಕ್ಷಿಸಿ ನೋಡಿ
ತಮ್ಮಯ್ಯನು
ಅತೀತನಾದುದನು ಅಱಿದು

(ತಮ್ಮ ತಂದೆಯು ಸತ್ತು ಹೋಗಿದ್ದುದನ್ನು ತಿಳಿದು)- **ವಚನ:ಅರ್ಥ**: ಹಾಗೆ ದ್ರೋಣನು, ಎಳೆದು ತಂದು ಬಲಿಕೊಡುವ ಕೋಣನ ಸಾವಿನ ಮಾದರಿಯ ಸಾವನ್ನು (ಎಳಗೋಣಸಾವು) ಸಾಯಲಾಗಿ ಶಬ್ದಮಾಡಿ ಆರ್ಭಟ ಮಾಡುವ ಪಾಂಡವಸೈನ್ಯವನ್ನೂ ಒಂದೇ ದಿಕ್ಕಿಗೆ ತಲೆತಿರುಗಿಸಿಕೊಂಡು

ಓಡುವ ಕೌರವ ಸೈನ್ಯವನ್ನೂ, ಯುದ್ಧಭೂಮಿಯ ಮತ್ತೊಂದೆಡೆಯಲ್ಲಿ ಕಾದುತ್ತಿದ್ದ ಅಶ್ವತ್ಥಾಮನು ನೋಡಿ, ಹತ್ತಿರ ಬರುವಷ್ಟರಲ್ಲಿ ಕೆಂಪುಕುದುರೆಗಳಿಂದ ಗುರುತಿಸಲ್ಪಟ್ಟ ತನ್ನ ತಂದೆ, ಸಾರಥಿ, ಧ್ವಜಗಳಿಂದ ಕೂಡಿದ್ದ ತೇರನ್ನು ದೃಷ್ಟಿಸಿ ನೋಡಿ ತಮ್ಮ ತಂದೆಯು ಸತ್ತು ಹೋಗಿದ್ದುದನ್ನು ತಿಳಿದು-.

ಚಂ|| ಒರೆತುಗುತರ್ಪ
ಕಣ್ಬಾನಿಗಳಂ ಬರಲೀಯದೆ
ಕೋಪ ಪಾವಕಂ
ನಿಱಿಸೆ ಕನಲ್ದು
ರೋಷದಿನಪಾಂಡವಮಾಗಿರೆ
ಮಾಡದಂದು ಬಿ|
ಲ್ಲೆರೆಯನ ಪುತ್ರನಲ್ಲೆನೆನುತುಂ
ಗುರುಪುತ್ರನಿದಿರ್ಚೆ ಭೀತಿಯಿಂ
ಮಱುಗಿ ತೆರಳ್ದು ತೂಳ್ದಿ
ಸುೞಿಗೊಂಡುದು ಪಾಂಡವ
ಸೈನ್ಯಸಾಗರಂ|| ೩೧

ಪದ್ಯ-00:ಪದವಿಭಾಗ-ಅರ್ಥ:ಒರೆತುಗುತರ್ಪ ಕಣ್ಬಾನಿಗಳಂ ಬರಲೀಯದೆ (ಕಣ್ಣಿನಲ್ಲಿ ಜಿನುಗಿ ಸೋರುತ್ತಿದ್ದ ಕಣ್ಣೀರಿನ ಹನಿಗಳನ್ನು ತಡೆದುಕೊಂಡು) ಕೋಪ ಪಾವಕಂ ನಿಱಿಸೆ ಕನಲ್ದು (ಕೋಪಾಗ್ನಿಯು ಕಣ್ಣಲ್ಲಿ ತುಂಬಲು ರೇಗಿ) ರೋಷದಿಂ ಅಪಾಂಡವಮಾಗಿರೆ ಮಾಡದಂದು ('ಪ್ರಪಂಚವನ್ನು

ಪಾಂಡವರಿಲ್ಲದಂತೆ
ಮಾಡದಿರುವಾಗ)
ಬಿಲ್ಲೆರೆಯನ ಪುತ್ರನಲ್ಲೆನ್
ಎನುತುಂ (ನಾನು
ಚಾಪಾಚಾರ್ಯನ ಮಗನೇ
ಅಲ್ಲ' ಎನ್ನುತ್ತ) ಗುರುಪುತ್ರನು
ಇದಿರ್ಚೆ (ಅಶ್ವತ್ಥಾಮನು
ಎದುರಿಸಲು) ಭೀತಿಯಿಂ
ಮಱುಗಿ ತೆರಳ್ದು
(ಪಾಂಡವಸೇನಾಸಮುದ್ರವು
ಭಯದಿಂದ ದುಃಖಪಟ್ಟು)

ತೂಳ್ದಿ ಸುಟಿಗೊಂಡುದು
(ಚಲಿಸಿ ತಳ್ಳಲ್ಪಟ್ಟು
ಸುಳಿಸುಳಿಯಾಗಿ ತಿರುಗಿತು.)
< -ಪಾಂಡವ ಸೈನ್ಯಸಾಗರಂ
ಪದ್ಯ-00:ಅರ್ಥ:
ಅಶ್ವತ್ಥಾಮನು ತನ್ನ ಕಣ್ಣಿನಲ್ಲಿ
ಜಿನುಗಿ ಸೋರುತ್ತಿದ್ದ ಕಣ್ಣೀರಿನ
ಹನಿಗಳನ್ನು ತಡೆದುಕೊಂಡು,
ಕೋಪಾಗ್ನಿಯು ಕಣ್ಣಲ್ಲಿ
ತುಂಬಲು ರೇಗಿ ಕೋಪದಿಂದ
‘ಪ್ರಪಂಚವನ್ನು

ಪಾಂಡವರಿಲ್ಲದಂತೆ
ಮಾಡದಿರುವಾಗ ನಾನು
ಚಾಪಾಚಾರ್ಯನ ಮಗನೇ
ಅಲ್ಲ’ ಎನ್ನುತ್ತ ಅಶ್ವತ್ಥಾಮನು
ಎದುರಿಸಲು
ಪಾಂಡವಸೇನಾಸಮುದ್ರವು
ಭಯದಿಂದ ದುಃಖಪಟ್ಟು
ಚಲಿಸಿ ತಳ್ಳಲ್ಪಟ್ಟು
ಸುಳಿಸುಳಿಯಾಗಿ ತಿರುಗಿತು.

ವ||

ಆಗಳುರಿಯುರುಳಿಯಂತರ್ಪ್ಪ

ತನ್ನ ನೊಸಲ ಕಣ್ಣಿಂ ತೋಱಿ ತನ್ನ ಸಾಹಸಮಂ ತೋಱಲೆಂದು ನಾರಾಯಣಾಸ್ತ್ರಮಂ ತೊಟ್ಟೆಚ್ಚ್ಯಾಗಳ್-

ವಚನ:ಪದವಿಭಾಗ-

ಅರ್ಥ:ಆಗಳು ಉರಿಯ ಉರುಳಿಯಂತರ್ಪ್ಪ (ಆಗ ಉರಿಯ/ ಬೆಂಕಿಯ ಉಂಡೆಯ ಹಾಗಿದ್ದ) ತನ್ನ ನೊಸಲ ಕಣ್ಣಿಂ ತೋಱಿ (ತನ್ನ

ಹಣೆಗಣ್ಣನ್ನು ತೋರಿ) ತನ್ನ ಸಾಹಸಮಂ ತೋಱಲೆಂದು ನಾರಾಯಣಾಸ್ತ್ರಮಂ ತೊಟ್ಟೆಚ್ಚಾಗಳ್ (ತನ್ನ ಸಾಹಸವನ್ನು ಪ್ರದರ್ಶಿಸಬೇಕೆಂದು ನಾರಾಯಾಣಾಸ್ತ್ರವನ್ನು ಪ್ರಯೋಗಿಸಿದನು. ಆಗ)-

ವಚನ:ಅರ್ಥ:ಆಗ ಉರಿಯ ಉಂಡೆಯ ಹಾಗಿದ್ದ ತನ್ನ ಹಣೆಗಣ್ಣನ್ನು ತೋರಿ ತನ್ನ

ಸಾಹಸವನ್ನು

ಪ್ರದರ್ಶಿಸಬೇಕೆಂದು

ನಾರಾಯಾಣಾಸ್ತ್ರವನ್ನು

ಪ್ರಯೋಗಿಸಿದನು. ಆಗ-

ಚಂ|| ದೆಸೆ ಮಸುಳ್ದತ್ತು ವಾರ್ಧಿ ತಳರ್ದತ್ತು ನೆಲಂ ಪಿಡುಗಿತ್ತು ತೊಟ್ಟನಾ ಗಸಮೊಡೆದತ್ತಜಾಂಡಮಳಙೆ ತ್ತೆನುತಿರ್ದೆಡೆಯಲ್ಲಿ ಲೋಕಮಂ|

ಬಸಿರೊಳಗಿಟ್ಟು
ಕಾದಳವನಾರಳವೊಡ್ಡಿಸೆ
ಕಾದನಾಗಳ
ವಿಸೆ ತೆಗೆದೆಚ್ಚ
ವೈಷ್ಣವಮನೊಡ್ಡಿಸಿ
ವೈಷ್ಣವದಿಂ ಮುರಾಂತಕಂ||
೩೨ ||

ಪದ್ಯ-00:ಪದವಿಭಾಗ-
ಅರ್ಥ:ದೆಸೆ ಮಸುಳ್ದತ್ತು
ವಾರ್ಧಿ ತಳರ್ದತ್ತು (ದಿಕ್ಕುಗಳು
ಮಾಸಲಾದುವು,

ಸಮುದ್ರಗಳು ಸರಿದುವು)
ನೆಲಂ ಪಿಡುಗಿತ್ತು
(ಭೂಮಿಯು ಸಿಡಿಯಿತು,)
ತೊಟ್ಟನೆ ಆಗಸಂ ಒಡೆದತ್ತು
ಅಜಾಂಡಮ್ ಅಳಱಿತ್ತು
ಎನುತಿರ್ದ ಎಡೆಯಲ್ಲಿ
(ಇದ್ದಕ್ಕಿದ್ದ ಹಾಗೆ ಆಕಾಶವು
ಒಡೆದುಹೋಯಿತು,
ಬ್ರಹ್ಮಾಂಡವು ಅದುರಿತು,
ಎನ್ನುತ್ತಿದ್ದ ಸಮಯದಲ್ಲಿ)
ಲೋಕಮಂ ಬಸಿರೊಳಗಿಟ್ಟು

ಕಾದಳವಂ (ಕಾಪಾಡುವ) ಆರ
ಅಳವು (ಶಕ್ತಿ) ಒಡ್ಡಿಸೆ (ಇರುವ
ಸ್ಥಳದಲ್ಲಿಯೇ ಲೋಕವನ್ನು
ತನ್ನ ಹೊಟ್ಟೆಯೊಳಗಿಟ್ಟು
ಯಾವ ಶಕ್ತಿಯನ್ನಾದರೂ
ಪ್ರತಿಭಟಿಸಿ ರಕ್ಷಿಸುವ
ಶಕ್ತಿಯುಳ್ಳ) ಕಾದನು ಆಗಳ್
ಅರ್ವಿಸೆ (ಭಯಪಡಿಸೆ)
ತೆಗೆದು ಎಚ್ಚ ವೈಷ್ಣವಮನು
(ಭಯಂಕರವಾಗಿ ಸೆಳೆದು
ಪ್ರಯೋಗಿಸಿದ

ನಾರಾಯಣಾಸ್ತ್ರವನ್ನು)_
ಒಡ್ಡಿಸಿ ವೈಷ್ಣವದಿಂ
ಮುರಾಂತಂಕಂ (ಶ್ರೀಕೃಷ್ಣನು
ವೈಷ್ಣವಾಸ್ತ್ರದಿಂದ ಎದುರಿಸಿ)
ಲೋಕವನ್ನು ರಕ್ಷಿಸಿದನು
ಪದ್ಯ-00:ಅರ್ಥ:
ನಾರಾಯಣ ಅಸ್ತ್ರದಿಂದ-
ದಿಕ್ಕುಗಳು ಮಾಸಲಾದುವು,
ಸಮುದ್ರಗಳು ಸರಿದುವು,
ಭೂಮಿಯು ಸಿಡಿಯಿತು,
ಇದ್ದಕ್ಕಿದ್ದ ಹಾಗೆ ಆಕಾಶವು

ಒಡೆದುಹೋಯಿತು,
ಬ್ರಹ್ಮಾಂಡವು ಅದುರಿತು,
ಎನ್ನುತ್ತಿದ್ದ ಸಮಯದಲ್ಲಿ
ಇರುವ ಸ್ಥಳದಲ್ಲಿಯೇ
ಲೋಕವನ್ನು ತನ್ನ
ಹೊಟ್ಟೆಯೊಳಗಿಟ್ಟು ಯಾವ
ಶಕ್ತಿಯನ್ನಾದರೂ ಪ್ರತಿಭಟಿಸಿ
ರಕ್ಷಿಸುವ ಶಕ್ತಿಯುಳ್ಳ
ಶ್ರೀಕೃಷ್ಣನು, ಭಯಂಕರವಾಗಿ
ಸೆಳೆದು ಪ್ರಯೋಗಿಸಿದ
ನಾರಾಯಣಾಸ್ತ್ರವನ್ನು

ವೈಷ್ಣವಾಸ್ತ್ರದಿಂದ ಎದುರಿಸಿ ಲೋಕವನ್ನು ರಕ್ಷಿಸಿದನು-

ವ|| ಅಂತಶ್ವತ್ಥಾಮನೆಚ್ಚ ನಾರಾಯಣಾಸ್ತ್ರಮಂ ನಾರಾಯಣನುಪಾಯದೊಳೆ ಗೆಲ್ದನನ್ನೆಗಂ-

ವಚನ:ಪದವಿಭಾಗ-

ಅರ್ಥ:ಅಂತು ಅಶ್ವತ್ಥಾಮನು ಎಚ್ಚ ನಾರಾಯಣಾಸ್ತ್ರಮಂ (ಹಾಗೆ ಅಶ್ವತ್ಥಾಮನು ಪ್ರಯೋಗಿಸಿದ

ನಾರಾಯಣಾಸ್ತ್ರವನ್ನು)
ನಾರಾಯಣನು
ಉಪಾಯದೊಳೆ ಗೆಲ್ದನು
ಅನ್ನೆಗಂ- (ಕೃಷ್ಣನು
ಉಪಾಯದಿಂದಲೇ ಗೆದ್ದನು.)
ಅಷ್ಟರಲ್ಲಿ-
ವಚನ:ಅರ್ಥ:ಹಾಗೆ
ಅಶ್ವತ್ಥಾಮನು ಪ್ರಯೋಗಿಸಿದ
ನಾರಾಯಣಾಸ್ತ್ರವನ್ನು
ನಾರಾಯಣನಾದ ಕೃಷ್ಣನು

ಉಪಾಯದಿಂದಲೇ ಗೆದ್ದನು.

ಅಷ್ಟರಲ್ಲಿ-

ಚಂ|| ಕವಿದೆರಡುಂ

ಪತಾಕಿನಿಗಳಾಗಡುಮೆನ್ನಮೆ

ಸಕ್ಕಿ ಮಾಡಿ ಕಾ

ದುವುದಱಿನಿಲ್ಲಿ

ಸತ್ತರಸುಮಕ್ಕಳ

ಪಾಪಮಿದೆಲ್ಲಮೆನ್ನನೆ|

ಯ್ದುವುದುಪವಾಸದಿಂ

ಜಪದಿನಾನದನೋಡಿಸಿ

ಶುದ್ಧನಪ್ಪೆನೆಂ

ಬವ್ರೊಲಪರಾಂಬುರಾಶಿಗಿೞಿ
ದಂ
ನಳಿನೀವರಜೀವಿತೇಶ್ವರಂ||
೩೩ ||

ಪದ್ಯ-೦೦:ಪದವಿಭಾಗ-ಅರ್ಥ:ಕವಿದು ರಡುಂ ಪತಾಕಿನಿಗಳ್ ಆಗಡುಂ ಎನ್ನಮೆ ಸಕ್ಕಿ ಮಾಡಿ (ಮೇಲೆಬಿದ್ದು ಎರಡು ಸೈನ್ಯಗಳೂ ಯಾವಾಗಲೂ ನನ್ನನ್ನೇ ಸಾಕ್ಷಿಯನ್ನಾಗಿ

ಮಾಡಿ) ಕಾದುವುದಱಿಂ
(ಯುದ್ಧಮಾಡುವುದರಿಂದ)
ಇಲ್ಲಿ ಸತ್ತ ಅರಸುಮಕ್ಕಳ
ಪಾಪಂ ಇದೆಲ್ಲಂ ಎನ್ನನೆ
ಎಯ್ದುವುದು (ಇಲ್ಲಿ ಸತ್ತ
ರಾಜಕುಮಾರರ ಈ ಪಾಪವೆಲ್ಲ
ನನ್ನನ್ನೇ ಸೇರುವುದು.)
ಉಪವಾಸದಿಂ ಜಪದಿಂ
ನಾನದನು ಓಡಿಸಿ
ಶುದ್ಧನಪ್ಪೆನು ಎಂಬವೊಲ್ (ಆ
ಪಾಪವನ್ನು

ಉಪವಾಸದಿಂದಲೂ
ಜಪದಿಂದಲೂ ಓಡಿಸಿ
ಶುದ್ಧನಾಗುತ್ತೇನೆ ಎನ್ನುವಂತೆ,)
ಅಪರಾಂಬುರಾಶಿಗಿೞಿದಂ
ನಳಿನೀವರ ಜೀವಿತೇಶ್ವರಂ
(ನಳಿನೀವರ ಜೀವಿತೇಶ್ವರಂ-
ತಾವರೆಗಳ ಶ್ರೇಷ್ಠ
ಪ್ರಾಣವಲ್ಲಭನಾದ
ಸೂರ್ಯನು
ಪಶ್ಚಿಮಸಮುದ್ರಕ್ಕಿಳಿದನು.)

ಪದ್ಯ-00:ಅರ್ಥ:ಮೇಲೆಬಿದ್ದು, ಎರಡು ಸೈನ್ಯಗಳೂ ಯಾವಾಗಲೂ ನನ್ನನ್ನೇ ಸಾಕ್ಷಿಯನ್ನಾಗಿ ಮಾಡಿ ಯುದ್ಧಮಾಡುವುದರಿಂದ ಇಲ್ಲಿ ಸತ್ತ ರಾಜಕುಮಾರರ ಈ ಪಾಪವೆಲ್ಲ ನನ್ನನ್ನೇ ಸೇರುವುದು. ಆ ಪಾಪವನ್ನು ಉಪವಾಸದಿಂದಲೂ ಜಪದಿಂದಲೂ ಓಡಿಸಿ ಶುದ್ಧನಾಗುತ್ತೇನೆ ಎನ್ನುವಂತೆ,

ಸೂರ್ಯನು ಪಶ್ಚಿಮಸಮುದ್ರಕ್ಕಿಳಿದನು.

ವ|| ಅಂತೆರಡುಂ ಪಡೆಗಳೊಂದಿರುಳುಮೆರಡುಂ ಪಗಲುಮೋರಂತೆ ಕಾದಿ ಚಳಿತಪಹಾರ ತೂರ್ಯಂಗಳು ಬಾಜಿಸೆ ತಂತಮ್ಮ ಬೀಡುಗಳ್ಗೆ ಪೋದರಾಗಳ್-

ವಚನ:ಪದವಿಭಾಗ-

ಅರ್ಥ:ಅಂತೆ ಎರಡುಂ ಪಡೆಗಳು ಒಂದಿರುಳುಂ

ಎರಡುಂ ಪಗಲುಂ ಓರಂತೆ ಕಾದಿ (ಹಾಗೆ ಎರಡೂ ಪಡೆಗಳು ಒಂದು ರಾತ್ರಿ ಮತ್ತು ಎರಡು ಹಗಲು ಒಂದೇ ಸಮನಾಗಿ ಯುದ್ಧಮಾಡಿ,) ಚಳಿತು (ಬಲಗುಂದಿ) ಅಪಹಾರ ತೂರ್ಯಂಗಳು ಬಾಜಿಸೆ (ಯುದ್ಧವನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಕೊಡುವ ವಾದ್ಯಗಳನ್ನು ಬಾಜಿಸಲು)

ತಂತಮ್ಮ ಬೀಡುಗಳ್ಗೆ ಪೋದರಾಗಳ್ (ಎರಡು ಸೈನ್ಯಗಳೂ ತನ್ನ ತಮ್ಮ ನಿವಾಸಗಳಿಗೆ (ಬೀಡುಗಳಿಗೆ) ಹೋದುವು; ಆಗ-)-

ವಚನ:ಅರ್ಥ:ಹಾಗೆ ಎರಡೂ ಪಡೆಗಳು ಒಂದು ರಾತ್ರಿ ಮತ್ತು ಎರಡು ಹಗಲು ಒಂದೇ ಸಮನಾಗಿ ಯುದ್ಧಮಾಡಿ, ಬಲಗುಂದಿ, ಯುದ್ಧವನ್ನು ನಿಲ್ಲಿಸಬೇಕೆಂಬ

ಸೂಚನೆಯನ್ನು ಕೊಡುವ ವಾದ್ಯಗಳನ್ನು ಬಾಜಿಸಲು ಎರಡು ಸೈನ್ಯಗಳೂ ತನ್ನ ತಮ್ಮ ನಿವಾಸಗಳಿಗೆ (ಬೀಡುಗಳಿಗೆ) ಹೋದುವು; ಆಗ-

ಚಂ|| ಗುರುವಿನ ಶೋಕದಿಂದೆ ರಥಮಧ್ಯದೊಳೊಯ್ಯನೆ ಜೋಲ್ದು ಬಿಳ್ದಿನಂ ಗುರುಸುತನಂ ಕೃಪಂ ಕೃಪೆಯಿನಾತ್ಮವಿಲಾಸದೊಳಾ ಱಿಸುತ್ತುಮಂ|

ತಿರೆ ಗುರುಶೋಕಮಗ್ಗಳಿಸೆ
ತಾತವಿಯೋಗಮುಮಕ್ಕುಮಾ
ಗಡುಂ
ಗುರುವೆನೆ ಪೇೞಿಮಾ
ಗುರುವಿಯೋಗಭರಂ
ಗುರುವಾಗದಿರ್ಕುಮೇ|| ೩೪ ||

ಪದ್ಯ-00:ಪದವಿಭಾಗ-
ಅರ್ಥ:ಗುರುವಿನ
ಶೋಕದಿಂದೆ ರಥಮಧ್ಯದೊಳ
ಒಯ್ಯನೆ ಜೋಲ್ದು ಬಿಳ್ದಿನಂ
(ತಂದೆಯಾದ ದ್ರೋಣನು ಸತ್ತ

ದುಖದಿಂದ ರಥದ
ಮಧ್ಯಭಾಗದಲ್ಲಿಯೇ
ನಿಧಾನವಾಗಿ ಜೋತು ಬಿದ್ದಿದ್ದ)
ಗುರುಸುತನಂ ಕೃಪಂ ಕೃಪೆಯಿಂ
ಆತ್ಮವಿಲಾಸದೊಳ್
ಆಱೆಸುತ್ತುಂ ಅಂತಿರೆ
(ಅಶ್ವತ್ಥಾಮನನ್ನು ಕೃಪನು ತನ್ನ
ಮೃದುವಾದ ಮಾತುಗಳಿಂದ
ಸಮಾಧಾನದ ಪಡಿಸುತ್ತಿರಲು,)
ಗುರುಶೋಕಂ ಅಗ್ಗಳಿಸೆ
ತಾತವಿಯೋಗಮುಮಕ್ಕುಂ

ಆಗಡುಂ (ತಂದೆಯ
ಸಾವಿನಿಂದ ಅಗಲಿಕೆಯು
ಹೆಚ್ಚಿನ ದುಖಕ್ಕೆ ಯಾವಾಗಲೂ
ಕಾರಣವಾಗಿರುವಾಗ)
ಗುರುವೆನೆ ಪೇೞಿಂ (ಆ
ತಂದೆಯು ಗುರುವೂ ಆದಾಗ -
ಹೇಳಿ) ಆ
ಗುರುವಿಯೋಗಭರಂ
ಗುರುವಾಗದಿರ್ಕುಮೇ (ಆ
ತಂದೆಯು ಗುರುವೂ

ಆಗಿದ್ದಾಗ ಆ ಗುರುವಿಯೋಗ ದುಖವು ದೊಡ್ಡದಲ್ಲವೇ?)

ಪದ್ಯ-00:ಅರ್ಥ:
ತಂದೆಯಾದ ದ್ರೋಣನು ಸತ್ತ ದುಖದಿಂದ ರಥದ ಮಧ್ಯಭಾಗದಲ್ಲಿಯೇ ನಿಧಾನವಾಗಿ ಜೋತು ಬಿದ್ದಿದ್ದ ಅಶ್ವತ್ಥಾಮನನ್ನು ಕೃಪನು ತನ್ನ ಮೃದುವಾದ ಮಾತುಗಳಿಂದ ಸಮಾಧಾನದ ಪಡಿಸುತ್ತಿರಲು, ಬೀಡಿಗೆ ಕರೆದು ತಂದನು.

ತಂದೆಯ ಸಾವಿನಿಂದ
ಅಗಲಿಕೆಯು ಹೆಚ್ಚಿನ ದುಖಕ್ಕೆ
ಯಾವಾಗಲೂ
ಕಾರಣವಾಗಿರುವಾಗ, ಆ
ತಂದೆಯು ಗುರುವೂ
ಆಗಿದ್ದಾಗ ಆ ಗುರುವಿಯೋಗ
ದುಖವು ದೊಡ್ಡದಲ್ಲವೇ?

ವ|| ಅನ್ನೆಗಂ ಪನ್ನಗಕೇತನಂ ಶೋಕಮನಾಱಿಸಲೆಂದು ಕರ್ಣ ಶಲ್ಯ ಸೌಬಲ ಸಮೇತಂ ಬಂದಶ್ವತ್ಥಾಮನನಿಂತೆಂದಂ-

ವಚನ:ಪದವಿಭಾಗ-ಅರ್ಥ: ಅನ್ನೆಗಂ ಪನ್ನಗಕೇತನಂ (ಅಷ್ಟರಲ್ಲಿ ದುರ್ಯೋಧನನು)ಶೋಕಮನು ಆರ್ಜಿಸಲೆಂದು ಕರ್ಣ ಶಲ್ಯ ಸೌಬಲ ಸಮೇತಂ ಬಂದು ಅಶ್ವತ್ಥಾಮನನು ಇಂತೆಂದಂ (ಹೀಗೆ ಹೇಳಿದನು)-

ವಚನ:ಅರ್ಥ:ವಅಷ್ಟರಲ್ಲಿ ದುರ್ಯೋಧನನು ಅಶ್ವತ್ಥಾಮನ ದುಃಖವನ್ನು

ಆರಿಸಬೇಕೆಂದು ಕರ್ಣ, ಶಲ್ಯ, ಶಕುನಿಯರೊಡನೆ ಬಂದು ಅವನಿಗೆ ಹೀಗೆ ಹೇಳಿದನು.

ಮ||

ಪುದಿದೌರ್ವಾನಳನಬ್ಧಿಯಂ

ಸುಡುವವೋಲ್ ಶಸ್ತ್ರಾಗ್ನಿಯಿಂ

ತೀವ್ರ ಕೋ

ಪದಿನುದ್ವೃತ್ತ ಬಳಾಬ್ಧಿಯಂ

ಸುಡೆ ಕರಂ ಬೆಂಬಿಳ್ದು

ದುರ್ಯುಕ್ತಿಯಿಂ|

ದದಯಂ ಧರ್ಮಜನಿಕ್ಕಿದಂ ಗುರುವನಿನ್ನೀನಾತನಂ ಬೇಗಮಿ
ಕ್ಕದೆ ಕರ್ಣ್ಣೀರ್ಗಳನಿಕ್ಕೆ ಚಂದ್ರಧವಳಂ ನಿನ್ನನ್ವಯಂ ಮಾಸದೇ|| ೩೫

ಪದ್ಯ-00:ಪದವಿಭಾಗ-ಅರ್ಥ:ಪುದಿದ ಔರ್ವಾನಳಂ ಅಬ್ಧಿಯಂ ಸುಡುವವೋಲ್ (ಆವರಿಸಿಕೊಂಡಿರುವ ಬಡಬಾಗ್ನಿಯು ಕಡಲನ್ನು

ಸುಡುವಂತೆ) ಶಸ್ತ್ರಾಗ್ನಿಯಿಂ
ತೀವ್ರ ಕೋಪದಿಂ ಉದ್ವೃತ್ತ
ಬಳಾಬ್ಧಿಯಂ ಸುಡೆ
(ಶಸ್ತ್ರಾಗ್ನಿಯಿಂದಲೂ
ತೀಕ್ಷ್ಣವಾದ
ಕೋಪಾಗ್ನಿಯಿಂದಲೂ
ಕೊಬ್ಬಿದ ಶತ್ರು
ಸೈನ್ಯಸಾಗರವನ್ನು
ಸುಡುತ್ತಿರಲು) ಕರಂ ಬೆಂಬಿಡ್ದು
(ಬಹಳ ಬೆನ್ನುಹತ್ತಿ)
ದುರ್ಯುಕ್ತಿಯಿಂದೆ ಅದಯಂ

ಧರ್ಮಜನು ಇಕ್ಕಿದಂ
ಗುರುವನು (ಹೀನ
ಉಪಾಯಗಳಿಂದಲೂ ದಯೆ
ಇಲ್ಲದೆ ಧರ್ಮರಾಯನು
ಗುರುವನ್ನು ಕೊಂದನು) ಇನ್ನು
ನೀನು ಆತನಂ ಬೇಗಂ ಇಕ್ಕದೆ
(ಇನ್ನು ನೀನು ಅವನನ್ನು
ಬೇಗನೆ ಕೊಲ್ಲದೆ)
ಕಣ್ಣೀರ್ಗಳನು ಇಕ್ಕೆ
ಚಂದ್ರಧವಳಂ ನಿನ್ನ ಅನ್ವಯಂ
ಮಾಸದೇ (ಚಂದ್ರನಷ್ಟು

ಬೆಳ್ಳಗಿರುವ ನಿನ್ನ ವಂಶವು
ಮಲಿನವಾಗದೆ
ಇರುತ್ತದೆಯೇ?)

ಪದ್ಯ-00:ಅರ್ಥ:
ಆಚಾರ್ಯರು
ಆವರಿಸಿಕೊಂಡಿರುವ
ಬಡಬಾಗ್ನಿಯು ಕಡಲನ್ನು
ಸುಡುವಂತೆ
ಶಸ್ತ್ರಾಗ್ನಿಯಿಂದಲೂ
ತೀಕ್ಷ್ಣವಾದ
ಕೋಪಾಗ್ನಿಯಿಂದಲೂ

ಕೊಬ್ಬಿದ ಶತ್ರು
ಸೈನ್ಯಸಾಗರವನ್ನು
ಸುಡುತ್ತಿರಲು ಬಹಳ
ಬೆನ್ನುಹತ್ತಿ ಹೀನ
ಉಪಾಯಗಳಿಂದಲೂ ದಯೆ
ಇಲ್ಲದೆ ಧರ್ಮರಾಯನು
ಗುರುವನ್ನು ಕೊಂದನು. ಇನ್ನು
ನೀನು ಅವನನ್ನು ಬೇಗನೆ
ಕೊಲ್ಲದೆ ಕಣ್ಣೀರನ್ನು
ಸುರಿಸುತ್ತಿದ್ದರೆ, ಚಂದ್ರನಷ್ಟು
ಬೆಳ್ಳಗಿರುವ ನಿನ್ನ ವಂಶವು

ಮಲಿನವಾಗದೆ

ಇರುತ್ತದೆಯೇ?

ದ್ರುತವಿಲಂಬಿತಂ|| ಎನಗೆ

ಕೂರ್ಪುದನಾ ಘಟಸಂಭವಂ

ನಿನಗೆ ಕೂರನಱಿಲ್ ನಿನತಲ್ತು

ಕೇ||

ಳೆನತುಮಾಱದ

ಶೋಕಮನಿರ್ವರುಂ

ಮುನಿವರಂ ತವೆ

ಕೊಂದೊಡನೀಗುವಂ|| ೩೬ ||

ಪದ್ಯ-೩೬:ಪದವಿಭಾಗ-ಅರ್ಥ:ಎನಗೆ ಕೂರ್ಪುದನು ಆ ಘಟಸಂಭವಂ (ದ್ರೋಣನು ನನಗೆ ಪ್ರೀತಿಸುತ್ತಿದ್ದನು) ನಿನಗೆ ಕೂರಂ (ನಿನ್ನನ್ನು ಪ್ರೀತಿಸುತ್ತಿರಲಿಲ್ಲ) ಅೞಲ್ ನಿನತು ಅಲ್ತು (ಅಳಲು- ಈ ದು:ಖವು ನಿನ್ನದು ಮಾತ್ರವಲ್ಲ) ಕೇಳ್ ಎನತುಂ ಆಱದ ಶೋಕಮನು ಇರ್ವರುಮುಂ (ಕೇಳು, ನನ್ನದೂ ಅಹುದು.

ಕಡಿಮೆಯಾಗದ ಈ
ದುಃಖವನ್ನು, ನಾವಿಬ್ಬರೂ)
ಇವರಂ ತವೆ
ಕೊಂದೊಡನೀಗುವಂ-
ಕೊಂದು ಒಡನೀಗುವಂ
(ಇವರನ್ನು ಕೊಂದು,
ಜೊತೆಯಲ್ಲಿಯೇ ಪರಿಹಾರ
ಮಾಡಿಕೊಳ್ಳೋಣ)

ಪದ್ಯ-೩೬:ಅರ್ಥ:
ದ್ರೋಣಾಚಾರ್ಯನು ನನ್ನನ್ನು
ಪ್ರೀತಿಸುತ್ತಿದಷ್ಟು ನಿನ್ನನ್ನು

ಪ್ರೀತಿಸುತ್ತಿರಲಿಲ್ಲ. ಈ ದು:ಖವು ನಿನ್ನದು ಮಾತ್ರವಲ್ಲ; ಕೇಳು, ನನ್ನದೂ ಅಹುದು. ಕಡಿಮೆಯಾಗದ ಈ ದುಖವನ್ನು, ನಾವಿಬ್ಬರೂ ನಮಗೆ ಸಮಾನ ಶತ್ರುಗಳಾದ ಪಾಂಡವರನ್ನು - ಇವರನ್ನು ಕೊಂದು, ಜೊತೆಯಲ್ಲಿಯೇ ಪರಿಹಾರ ಮಾಡಿಕೊಳ್ಳೋಣ.

<u>ಅಶ್ವತ್ಥಾಮ ಕರ್ಣರ ಜಗಳ</u>

ವ||

ಎಂಬುದುಮಶ್ವತ್ಥಾಮನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಶ್ವತ್ಥಾಮನು ಇಂತೆಂದಂ-

ವಚನ:ಅರ್ಥ:ವ|| ಎನ್ನಲು ಅಶ್ವತ್ಥಾಮನು ಹೀಗೆ ಹೇಳಿದನು.

ತರಳಂ|| ಗುರು ಮದೀಯ
ವಿಮೋಹದಿಂ ಕೃಪೆಯಂ ಜವಂ
ಬಿಸುಟಂತೆ ಕೊ
ಕ್ಕರಿಸಿ ಬಿಲ್ವಿಸುಟಿರ್ದೊಡಾ
ಪದದೊಳ್ ಗಡಂ
ದ್ರುಪದಾತ್ಮಜಂ|
ಗುರುವ ಕೇಶಕಳಾಪಮಂ
ತೆಗೆದಂತೆ ಗಂಡನುಮಾದನೀ
ಪರಿಭವಕ್ಕನುರೂಪಮಿಂ
ಪೆಱತೊಂದುಮಿಲ್ಲಹಿಕೇತನಾ||
೩೭ ||

ಪದ್ಯ-೩೭:ಪದವಿಭಾಗ-ಅರ್ಥ:ಗುರು ಮದೀಯ ವಿಮೋಹದಿಂ (ಗುರುವಾದ ನನ್ನ ತಂದೆಯು ನನ್ನ ಮೇಲಿನ ಪ್ರೀತಿಯಿಂದ) ಕೃಪೆಯಂ ಜವಂ (ಯಮ) ಬಿಸುಟಂತೆ (ಯಮನು ಕರುಣವನ್ನು ಬಿಸಾಡುವ ಹಾಗೆ) ಕೊಕ್ಕರಿಸಿ ಬಿಲ್ವಿಸುಟಿರ್ದೊಡೆ (ಅಸಹ್ಯಪಟ್ಟು ಬಿಲ್ಲನ್ನು ಬಿಸುಟಿದ್ದ) ಆ ಪದದೊಳ್

ಗಡಂ ದ್ರುಪದಾತ್ಮಜಂ (ಆ ಸಮಯದಲ್ಲಿಯೇ ಅಲ್ಲವೇ ಧೃಷ್ಟದ್ಯುಮ್ನನು) ಗುರುವ ಕೇಶಕಳಾಪಮಂ ತೆಗೆದು ಅಂತೆ ಗಂಡನುಮಾದನು (ಗುರುವಿನ ಕೂದಲ ಗಂಟನ್ನು ಎಳೆದು ಮಹಾಶೂರನಾದನು!) ಈ ಪರಿಭವಕ್ಕಂ ಅನುರೂಪಂ ಇಂ ಪೆಱತು ಒಂದುಮಿಲ್ಲ ಅಹಿಕೇತನಾ (ದುರ್ಯೋಧನಾ!) (ಈ

ಅವಮಾನಕ್ಕೆ ಸಮಾನವಾದುದು ಇನ್ನೊಂದು ಇಲ್ಲ, ದುರ್ಯೋಧನಾ!)

ಪದ್ಯ-೩೭:ಅರ್ಥ:ಗುರುವಾದ ನನ್ನ ತಂದೆಯು ನನ್ನ ಮೇಲಿನ ಪ್ರೀತಿಯಿಂದ, ಯಮನು ಕರುಣವನ್ನು ಬಿಸಾಡುವ ಹಾಗೆ ಅಸಹ್ಯಪಟ್ಟು ಬಿಲ್ಲನ್ನು ಬಿಸುಟಿದ್ದ ಆ ಸಮಯದಲ್ಲಿಯೇ ಅಲ್ಲವೇ ಧೃಷ್ಟದ್ಯುಮ್ನನು ಗುರುವಿನ

ಕೂದಲ ಗಂಟನ್ನು ಎಳೆದು
ಮಹಾಶೂರನಾದನು! ಈ
ಅವಮಾನಕ್ಕೆ
ಸಮಾನವಾದುದು
ಬೇರೊಂದಿಲ್ಲ,
ದುರ್ಯೋಧನಾ!

ಶಾ|| ರಾಯೆಂಬೀ ಪೆಸರಿಲ್ಲದಂತು ಮುಱಿಸಿಂ ಮುಯ್ಯೇಱು ಸೂಱೆಂತು ಕ ಟ್ಟಾಯಂ ಪೊಂಪುಱಿವೋಗೆ ತಂದೆಯಱಿವಿಂಗಾ

ಭಾರ್ಗವಂ ಕೊಂದನಂ|
ತೀಯೆಮ್ಮ್ಯ್ಯನಿನಾದುದೊಂ
ದು ಪಗೆಯಿಂ
ಸೀಳ್ದುಗ್ರಪಾಂಚಾಳರಾ
ಜಾಯುಃಪಾರಮನನ್ಯಭೂಪ
ಬಲಮಂ ಪರ್ದಿಂಗೆ
ಬಿರ್ದಿಕ್ಕುವೆಂ|| ೩೮ ||

ಪದ್ಯ-೩೮:ಪದವಿಭಾಗ-
ಅರ್ಥ:ರಾಯ ಎಂಬ ಈ ಪೆಸರಿಲ್ಲದಂತು (ರಾಜ' ಎಂಬ ಹೆಸರೇ ಇಲ್ಲದಿರುವ ಹಾಗೆ)

ಮುಱಿಸಿಂ ಮುಯ್ವೋೞು ಸೂೞೆಂತು (ಸಿಟ್ಟಿನಿಂದ ಇಪ್ಪತ್ತೊಂದು ಸಲ) ಕಟ್ಟಾಯಂ ಪೊಂಪುೞಿವೋಗೆ (ತನ್ನ ಪೌರುಷವು ಅಧಿಕವಾಗಿರಲು) ತಂದೆಯಱಿವಿಂಗೆ ಆ ಭಾರ್ಗವಂ ಕೊಂದನು;(ತನ್ನ ತಂದೆಯ ಸಾವಿಗೆ ಹೇಗೆ ಕೊಂದನು;) ಅಂತೆ ಈಯೆಮ್ಮ ಅಯ್ಯನಿಂ ಆದುದೊಂದು

ಪಗೆಯಿಂ (ಹಾಗೆಯೇ ಈಗ
ನಮ್ಮ ತಂದೆಯ
ಕಾರಣದಿಂದಾದ ವೈರತ್ವದಿಂದ)
ಸೀಳ್ದು ಉಗ್ರಪಾಂಚಾಳರಾಜ
ಆಯುಃ ಪಾರಮನು
(ಭಯಂಕರವಾದ
ಪಾಂಚಾಲರಾಜರ ಆಯಸ್ಸಿನ
ದಡವನ್ನು ಸೀಳಿ) ಅನ್ಯ
ಭೂಪಬಲಮಂ ಪರ್ದಿಂಗೆ
ಬಿರ್ದಿಕ್ಕುವೆಂ (ಇತರ
ಶತ್ರುರಾಜರ ಸೈನ್ಯವನ್ನು

ಹದ್ದುಗಳಿಗೆ
ಔತಣಮಾಡಿಸುತ್ತೇನೆ.)

ಪದ್ಯ-೩೮:ಅರ್ಥ:
ಪರಶುರಾಮನು ತಂದೆಯ
ಸಾವಿಗಾಗಿ ಕೋಪದಿಂದ
‘ರಾಜ’ ಎಂಬ ಹೆಸರೇ
ಇಲ್ಲದಿರುವ ಹಾಗೆ ಸಿಟ್ಟಿನಿಂದ
ಇಪ್ಪತ್ತೊಂದು ಸಲ ತನ್ನ
ಪೌರುಷವು ಅಧಿಕವಾಗಿರಲು
(ರಾಜಕುಲವನ್ನೆ) ತನ್ನ
ತಂದೆಯ ಸಾವಿಗೆ ಹೇಗೆ

ಕೊಂದನು; ಹಾಗೆಯೇ ಈಗ
ನಮ್ಮ ತಂದೆಯ
ಕಾರಣದಿಂದಾದ ವೈರತ್ವದಿಂದ
ಭಯಂಕರವಾದ
ಪಾಂಚಾಲರಾಜರ ಆಯಸ್ಸಿನ
ದಡವನ್ನು ಸೀಳಿ, ಇತರ
ಶತ್ರುರಾಜರ ಸೈನ್ಯವನ್ನು
ಹದ್ದುಗಳಿಗೆ
ಔತಣಮಾಡಿಸುತ್ತೇನೆ.

ಕಂ|| ಪಗೆಯಂದಮುಮಾ
ರಾಮರ

ಪಗೆಯೊಳ್ ಸಮಮವರ
ಪಿಡಿವ ಬಿಲ್ ಬಿಲ್ಲೆಮ್ಮಂ।
ಬುಗಳುಮವರಿತ್ತ ನಲ್ಲಂ
ಬುಗಳೆನೆ ಬಱಿಗಾಯದಂತು
ಚಲಮನೆ ಕಾವೆಂ॥ ೩೯॥

ಪದ್ಯ-೩೯:ಪದವಿಭಾಗ-ಅರ್ಥ:ಪಗೆಯಂದಮುಂ ಆ ರಾಮರ ಪಗೆಯೊಳ್ ಸಮಂ (ನಮ್ಮ ಶತ್ರುತ್ವದ ರೀತಿಯೂ ರಾಮರ ಶತ್ರುತ್ವಕ್ಕೆ ಸಮಾನವಾದುದು.) ಅವರ

ಪಿಡಿವ ಬಿಲ್ ಬಿಲ್ಲ್ ಎಮ್ಮಂ
ಬುಗಳುಂ ಅವರಿತ್ತ
ನಲ್ಲಂಬುಗಳು ಎನೆ (ಅವರು
ಹಿಡಿಯುತ್ತಿದ್ದ ಬಿಲ್ಲೇ ನನ್ನ
ಬಿಲ್ಲು ನಮ್ಮಬಾಣಗಳೂ
ಅವರು ಕೊಟ್ಟ ಒಳ್ಳೆಯ
ಬಾಣಗಳೇ ಆಗಿರಲು) ಬಟಿ
(ವಂಶ) ಕಾಯದೆ ಅಂತು
ಚಲಮನೆ ಕಾವೆಂ (ಅವರ
ಕ್ಷತ್ರಿಯ ವಂಶವನ್ನು ರಕ್ಷಿಸದೆ

(ಹಾಗೆಯೇ) ಹಟವನ್ನೇ ಸಾಸುತ್ತೇನೆ’)

ಪದ್ಯ-೩೯:ಅರ್ಥ:‘ನಮ್ಮ ಶತ್ರುತ್ವದ ರೀತಿಯೂ ರಾಮರ ಶತ್ರುತ್ವಕ್ಕೆ ಸಮಾನವಾದುದು. ಅವರು ಹಿಡಿಯುತ್ತಿದ್ದ ಬಿಲ್ಲೇ ನನ್ನ ಬಿಲ್ಲು ನಮ್ಮ ಬಾಣಗಳೂ ಅವರು ಕೊಟ್ಟ ಒಳ್ಳೆಯ ಬಾಣಗಳೇ ಆಗಿರಲು, ಅವರ ಕ್ಷತ್ರಿಯ ವಂಶವನ್ನು ರಕ್ಷಿಸದೆ

(ಹಾಗೆಯೇ) ಹಟವನ್ನೇ ಸಾಸುತ್ತೇನೆ’

ವ|| ಎಂಬುದುಂ ತನ್ನಳಿಯನ ನುಡಿಗೆ ಶಾರದ್ವತಂ ಸಂತೋಷಂಬಟ್ಟು ಕೌರವೇಶ್ವರನ ನಿಂತೆಂದಂ ನೀನೀತಂಗೆ ವೀರವಟ್ಟಮಂ ಕಟ್ಟಿ ರಿಪುನೃಪಬಲಕ್ಕೆ ತೋಱಿ ಬಿಡುವುದೆನೆ ಕಳಶಜನಿಂ ಬಱಿಕ್ಕೆ ಕರ್ಣಂಗೆಂದು ನುಡಿದ ಬೀರಮಟ್ಟಮನೆಂತು

ಕಟ್ಟುವೆನೆಂದೊಡಶ್ವರತ್ಥಾಮ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ತನ್ನ ಅಳಿಯನ ನುಡಿಗೆ ಶಾರದ್ವತಂ (ಕೃಪನು) ಸಂತೋಷಂಬಟ್ಟು ಕೌರವೇಶ್ವರನನು ಇಂತೆಂದಂ (ಕೃಪನು ಸಂತೋಷಪಟ್ಟು ದುರ್ಯೋಧನನಿಗೆ ಹೀಗೆ ಹೇಳಿದನು) ನೀನು ಈತಂಗೆ ವೀರವಟ್ಟಮಂ ಕಟ್ಟಿ

ರಿಪುನೃಪಬಲಕ್ಕೆ ತೋಱಿ ಬಿಡುವುದು ಎನೆ (‘ನೀನು ಇವನಿಗೆ ವೀರಪಟ್ಟವನ್ನು ಕಟ್ಟಿ ಶತ್ರುಸೈನ್ಯದ ಕಡೆಗೆ ತೋರಿಸಿ ಬಿಡತಕ್ಕದ್ದು’ ಎನ್ನಲು) ಕಳಶಜನಿಂ ಬೞಿಕ್ಕೆ ಕರ್ಣಂಗೆ ಎಂದು ನುಡಿದ (ದ್ರೋಣನ ಬಳಿಕ ಕರ್ಣನಿಗೆ’ ಎಂದು ಹೇಳಿದ) ಬೀರಮಟ್ಟಮನು ಎಂತು ಕಟ್ಟುವೆನು ಎಂದೊಡೆ (ವೀರಪಟ್ಟವನ್ನು ಈಗ

ಇವನಿಗೆ ಹೇಗೆ ಕಟ್ಟಲಿ ಎನ್ನಲು) ಅಶ್ವರತ್ಥಾಮ ನಿಂತೆಂದಂ (ಅಶ್ವತ್ಥಾಮನು ಹೀಗೆ ಹೇಳಿದನು)-

ವಚನ:ಅರ್ಥ: ಎಂದ ತನ್ನಳಿಯನ ಮಾತಿಗೆ ಕೃಪನು ಸಂತೋಷಪಟ್ಟು ದುರ್ಯೋಧನನಿಗೆ ಹೀಗೆ ಹೇಳಿದನು- ‘ನೀನು ಇವನಿಗೆ ವೀರಪಟ್ಟವನ್ನು ಕಟ್ಟಿ ಶತ್ರುಸೈನ್ಯದ ಕಡೆಗೆ ತೋರಿಸಿ

ಬಿಡತಕ್ಕದ್ದು’ ಎನ್ನಲು,
‘ದ್ರೋಣನ ಬಳಿಕ ಕರ್ಣನಿಗೆ’
ಎಂದು ಹೇಳಿದ
ವೀರಪಟ್ಟವನ್ನು ಈಗ ಇವನಿಗೆ
ಹೇಗೆ ಕಟ್ಟಲಿ ಎನ್ನಲು
ಅಶ್ವತ್ಥಾಮನು ಹೀಗೆ
ಹೇಳಿದನು. ಕರ್ಣನಿಗೆ’ ಎಂದು
ಹೇಳಿದ ವೀರಪಟ್ಟವನ್ನು ಈಗ
ಇವನಿಗೆ ಹೇಗೆ ಕಟ್ಟಲಿ ಎನ್ನಲು
ಅಶ್ವತ್ಥಾಮನು ಹೀಗೆ
ಹೇಳಿದನು.

ಚಂ|| ನಿಜದೊಳೆ
ಭೂಪರೆಂಬರವಿವೇಕಿಗಳಪ್ಪರ
ದಕ್ಕೆ ನೀಂ ಫಣಿ
ಧ್ವಜ ಕಡುಕೆಯ್ದು ಕರ್ಣನನೆ
ನಚ್ಚುವೆಯಪ್ಪೊಡೆ
ಯುದ್ಧದೊಳ್ ವೃಷ|
ಧ್ವಜನುಮನಿಕ್ಕಿ ಗೆಲ್ದರಿಗನೊಳ್
ತಲೆವಟ್ಟೆದಿರಾಗಿ ನಿಂದು ಸೂ
ತಜನಿೞಿವಂ ಗಡಂ
ಪಗೆಯನೇಂ ಗಳ ಪಟ್ಟಮೆ
ಪಾೞಿ ತಿಂಬದೇ || ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ನಿಜದೊಳೆ ಭೂಪರೆಂಬರ್ ಅವಿವೇಕಿಗಳಪ್ಪರು (ರಾಜರೆನ್ನುವವರು ಸಹಜವಾಗಿ ಬುದ್ಧಿಯಿಲ್ಲದವರಾಗಿರುತ್ತಾರೆ.) ಅದಕ್ಕೆ ನೀಂ ಫಣಿಧ್ವಜ ಕಡುಕೆಯ್ದು ಕರ್ಣನನೆ ನಚ್ಚುವೆಯಪ್ಪೊಡೆ (ಅದು ಹಾಗಿರಲು, ಎಲ್ಲೈ

ದುರ್ಯೋಧನನೇ,
ಬಹಳತೀವ್ರವಾಗಿ ಕರ್ಣನನ್ನೇ
ನಂಬುವೆಯಾದರೆ)
ಯುದ್ಧದೊಳ್
ವೃಷಧ್ವಜನುಮನು ಇಕ್ಕಿ ಗೆಲ್ದ
ಅರಿಗನೊಳ್ (ಯುದ್ಧದಲ್ಲಿ
ಈಶ್ವರನನ್ನೇ ಇಕ್ಕಿ- ಹೊಡೆದು
ಗೆದ್ದ ಅರ್ಜುನನಿಗೆ)
ತಲೆವಟ್ಟೆದಿರಾಗಿ ನಿಂದು
(ತಲೆಕೊಟ್ಟು ಎದುರು ನಿಂತು)
ಸೂತಜನು ಇರ್ಪಿವಂ ಗಡಂ!

(ಕರ್ಣನು
ಯುದ್ಧಮಾಡುವನೋ ಗಡ!
ಓಹೋ!) ಪಗೆಯಂ ಏಂಗಳ
ಪಟ್ಟಮೆ ಪಾಱೆ (ಹಾರಿ)
ತಿಂಬದೇ (ಕಟ್ಟಿದ
ವೀರಪಟ್ಟವೇ ಹಾರಿ ಮೇಲೆ
ಬಿದ್ದು ಶತ್ರುವನ್ನು ತಿನ್ನವುದೇ
ಏನು?)

ಪದ್ಯ-೪೦:ಅರ್ಥ:

ರಾಜರೆನ್ನುವವರು ಸಹಜವಾಗಿ
ಬುದ್ಧಿಯಿಲ್ಲದವರಾಗಿರುತ್ತಾರೆ.

ಅದಕ್ಕಾಗಿಯೇ, -ಅದು
ಹಾಗಿರಲು, ಎಲೈ
ದುರ್ಯೋಧನನೇ, ಬಹಳ
ತೀವ್ರವಾಗಿ ಕರ್ಣನನ್ನೇ
ನಂಬುವೆಯಾದರೆ ಯುದ್ಧದಲ್ಲಿ
ಈಶ್ವರನನ್ನೇ ಇಕ್ಕಿ ಗೆದ್ದ
ಅರ್ಜುನನಿಗೆ ತಲೆಕೊಟ್ಟು
ಎದುರು ನಿಂತು ಕರ್ಣನು
ಯುದ್ಧಮಾಡುವನೋ ಗಡ!
ಕಟ್ಟಿದ ವೀರಪಟ್ಟವೇ ಹಾರಿ

ಮೇಲೆ ಬಿದ್ದು ಶತ್ರುವನ್ನು ತಿನ್ನುವುದೇ ಏನು?

ವ|| ಎಂಬುದುಮಂಗರಾಜಂ ಗುರುತನೂಜನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂಗರಾಜಂ ಗುರುತನೂಜನನು ಇಂತೆಂದಂ-

ವಚನ:ಅರ್ಥ:ಎನ್ನಲು ಕರ್ಣನು ಅಶ್ವತ್ಥಾಮನನ್ನು

ಕುರಿತು ಹೀಗೆ ಹೇಳಿದನು-

ಚಂ|| ಎನಿತಳವುಳ್ಳೊಡಂ ದ್ವಿಜನ
ಗಂಡಗುಣಕ್ಕಗಿವನ್ನರಾರೊ ನೆ ಟ್ಟನೆ
ವಿಷಮೊಳ್ಳೆಗುಳ್ಳೊಡಮದೊಳ್ಳೆ ಯೆ ಕಾಳಿಯ ನಾಗನಾಗದ|
ಣ್ಮಿನ ಪಡೆಮಾತದೊಂದೆ ನೆವಮಾಗಿರೆ ಕೆಯ್ದುವನಿಕ್ಕಿ ಸತ್ತ ಸಾ

ವಿನ ಪಡಿಚಂದಮಾಗಿಯುಮಿದೇಂ ನಿಮಗೞ್ತಿಯೊ ಗಂಡುವಾತುಗಳ್ || ೪೧ ||41||

ಪದ್ಯ-೪೧:ಪದವಿಭಾಗ-ಅರ್ಥ: ಎನಿತು ಅಳವುಳ್ಳೊಡಂ (ಎಷ್ಟು ಪರಾಕ್ರಮವಿದ್ದರೂ) ದ್ವಿಜನ ಗಂಡಗುಣಕ್ಕೆ ಅಗಿವನ್ನರ್ ಆರೊ (ಬ್ರಾಹ್ಮಣನ ಪೌರುಷಕ್ಕೆ ಹೆದರುವವರು

ಯಾರಿದ್ದಾರೋ?) ನೆಟ್ಟನೆ
ವಿಷಮ್ ಒಳ್ಳೆಗೆ ಉಳ್ಳೊಡೆ
ಅದು ಒಳ್ಳೆಯೆ (ಕೇರೆ ಹಾವಿಗೆ
ಸರಿಯಾಗಿ ವಿಷವಿದ್ದರೂ
ಅದು ಒಳ್ಳೆಯೇ- ಕೇರೆಹಾವೇ)
ಕಾಳಿಯ ನಾಗನು ಆಗದು,
ಅಣ್ಮಿನ ಪಡೆಮಾತು
(ಕಾಳೀಂಗ
ಸರ್ಪವಾಗಲಾರದು.
ಪೌರುಷದ ಬೀಳುಮಾತು!
ಸುದ್ದಿಯು) ಅದೊಂದೆ

ನೆವಮಾಗಿರೆ ಕೆಯ್ದುವನು ಇಕ್ಕಿ
(ಬೀಳುಮಾತು- ಸುದ್ದಿಯು
ಯಾವುದೋ ಒಂದು
ನೆಪದಿಂದ ಆಯುಧವನ್ನು
ಬಿಸಾಡಿ) ಸತ್ತ ಸಾವಿನ
ಪಡಿಚಂದಮಾಗಿಯುಂ (ಸತ್ತ
ಸಾವಿನ ಪ್ರತಿಬಿಂಬ
ಕಣ್ಣಮುಂದಿದ್ದರೂ) ಇದೇಂ
ನಿಮಗೆ ಅೞ್ತಿಯೊ
ಗಂಡುವಾತುಗಳ್ (ನಿಮಗೆ

ಪೌರುಷದ ಮಾತುಗಳಲ್ಲಿ ಇನ್ನೂ ಪ್ರೀತಿಯಿದೆಯೇ?)

ಪದ್ಯ-೪೧:ಅರ್ಥ:'ಎಷ್ಟು ಪರಾಕ್ರಮವಿದ್ದರೂ ಬ್ರಾಹ್ಮಣನ ಪೌರುಷಕ್ಕೆ ಹೆದರುವವರು ಯಾರಿದ್ದಾರೋ? ಕೇರೆ ಹಾವಿಗೆ ಸರಿಯಾಗಿ ವಿಷವಿದ್ದರೂ ಅದು ಒಳ್ಳೆಯೇ, (ಕೇರೆಯ ಹಾವೇ); ಕಾಳಿಂಗ ಸರ್ಪವಾಗಲಾರದು.

ಪೌರುಷದ ಬೀಳುಮಾತು!

ಬೀಳುಮಾತು- ಸುದ್ದಿಯು

ಯಾವುದೋ ಒಂದು

ನೆಪದಿಂದ ಆಯುಧವನ್ನು

ಬಿಸಾಡಿ ಸತ್ತ ಸಾವಿನ

ಪ್ರತಿಬಿಂಬ ಕಣ್ಣಮುಂದಿದ್ದರೂ

ನಿಮಗೆ ಪೌರುಷದ

ಮಾತುಗಳಲ್ಲಿ ಇನ್ನೂ

ಪ್ರೀತಿಯಿದೆಯೇ?’ (ಎಷ್ಟು

ಪ್ರೀತಿಯೋ)

ವ|| ಎಂಬುದುಂ ತ್ರೈಲೋಕ್ಯ ಧನುರ್ಧರನಪ್ಪೆಮ್ಮಯ್ಯನ ಗಂಡವಾತನೀ ಮೀಂಗುಗಲಿಗಂ ಮೆಚ್ಚನಿವನಂ ಮುಂ ಕೊಂದು ಬೞಿಯಂ ಪಾಂಡವರಂ ಕೊಲ್ವೆನೆಂದು ಬಾಳಂ ಕಿೞ್ತು ಕರ್ಣನ ಮೇಲೆವಾಯ್ವುದುಂ ಕೃಪನೆಡೆವೊಕ್ಕಿದಾಗದೆಂದು ಬಾರಿಸಿ-

ವಚನ:ಪದವಿಭಾಗ-ಅರ್ಥ:ಎಂಬುದುಂ (ಕರ್ಣನು ಹೀಗೆ- ಎನ್ನಲು) ತ್ರೈಲೋಕ್ಯ ಧನುರ್ಧರನಪ್ಪ ಎಮ್ಮಯ್ಯನ ಗಂಡವಾತನು (‘ಮೂರುಲೋಕಗಳಲ್ಲಿಯೂ ಬಿಲ್ವಿದ್ಯೆಯಲ್ಲಿ ಪ್ರಸಿದ್ಧನಾದ ನನ್ನ ತಂದೆಯನ್ನು) ಈ ಮೀಂಗುಗಲಿಗಂ ಮೆಚ್ಚನು (ಈ ಮೀನುಹಿಡಿಯುವ ಬೆಸ್ತರವನು ಮೆಚ್ಚುವುದಿಲ್ಲ.)

ಇವನಂ ಮುಂ ಕೊಂದು
ಬೞಿಯಂ ಪಾಂಡವರಂ
ಕೊಲ್ವೆನು ಎಂದು (ಇವನನ್ನು
ಮೊದಲು ಕೊಂದು ಬಳಿಕ
ಪಾಂಡವರನ್ನು ಕೊಲ್ಲುತ್ತೇನೆ'
ಎಂದು) ಬಾಳಂ ಕಿೞ್ತು ಕರ್ಣನ
ಮೇಲೆವಾಯ್ವುದುಂ
(ಕತ್ತಿಯನ್ನು ಒರೆಯಿಂದ
ತೆಗೆದು ಕರ್ಣನ ಮೇಲೆ
ಧಾಳಿಮಾಡಿದಾಗ.) ಕೃಪನು
ಎಡೆವೊಕ್ಕು, ಇದು ಆಗದು,

ಎಂದು ಬಾರಿಸಿ (ಕೃಪನು ಮಧ್ಯೆ ಪ್ರವೇಶಿಸಿ ಹೀಗೆ ಮಾಡಬಾರದು ಎಂದು ತಡೆದನು)-

ವಚನ:ಅರ್ಥ:ಕರ್ಣನು ಹೀಗೆ- ಎನ್ನಲು ‘ಮೂರುಲೋಕಗಳಲ್ಲಿಯೂ ಬಿಲ್ವಿದ್ಯೆಯಲ್ಲಿ ಪ್ರಸಿದ್ಧನಾದ ನನ್ನ ತಂದೆಯನ್ನು ಈ ಮೀನುಹಿಡಿಯುವ ಬೆಸ್ತರವನು ಮೆಚ್ಚುವುದಿಲ್ಲ.

ಇವನನ್ನು ಮೊದಲು ಕೊಂದು ಬಳಿಕ ಪಾಂಡವರನ್ನು ಕೊಲ್ಲುತ್ತೇನೆ’ ಎಂದು ಕತ್ತಿಯನ್ನು ಒರೆಯಿಂದ ತೆಗೆದು ಕರ್ಣನ ಮೇಲೆ ಧಾಳಿಮಾಡಿದಾಗ. ಕೃಪನು ಮಧ್ಯೆ ಪ್ರವೇಶಿಸಿ ಹೀಗೆ ಮಾಡಬಾರದು ಎಂದು ತಡೆದನು-

ಕಂ|| ಅಸದಳಮಾಗಿಯುಮೀನ

ಮ್ಮ ಸೈನ್ಯಮಿಂತೊರ್ವರೊರ್ವರೊ ಳ್ ಸೆಣಸಿ ಖಳ| ವ್ಯಸನದೊಳೆ ಕೆಟ್ಟುದಲ್ಲದೊ ಡೆ ಸುಯೋಧನ ನಿನಗೆ ಮಲೆವ ಮಾರ್ವಲಮೊಳವೇ|| ೪೨ ||

ಪದ್ಯ-೪೨:ಪದವಿಭಾಗ-ಅರ್ಥ:ಅಸದಳಮಾಗಿಯುಂ ಈ ನಮ್ಮ ಸೈನ್ಯಂ ಇಂತು ಒರ್ವರೊರ್ವರೊಳ್ ಸೆಣಸಿ (ಈ ನಮ್ಮ ಸೈನ್ಯವು

ಅಸದೃಶವಾಗಿದ್ದರೂ ಹೀಗೆ
ಒಬ್ಬೊಬ್ಬರಲ್ಲಿಯೂ
ಜಗಳವಾಡಿ) ಖಳ (ಬಳ?)
ವ್ಯಸನದೊಳೆ ಕೆಟ್ಟುದು (ಒಳ/
ಕೆಟ್ಟ ಜಗಳದಿಂದಲೇ
ಕೆಟ್ಟುಹೋಯಿತು.)
ಅಲ್ಲದೊಡೆ ಸುಯೋಧನ
ನಿನಗೆ ಮಲೆವ ಮಾರ್ವಲಂ
ಒಳವೇ (ಹಾಗಲ್ಲದಿದ್ದರೆ ನಿನಗೆ
ಪ್ರತಿಭಟಿಸಲು ಶತ್ರುಸೈನ್ಯಕ್ಕೆ

ಸಾಧ್ಯರುತ್ತಿದ್ದಿತೆ?’) ಎಂದನು ಕೃಪ.

ಪದ್ಯ-೪೨:ಅರ್ಥ:‘ದುರ್ಯೋಧನಾ, ಈ ನಮ್ಮ ಸೈನ್ಯವು ಅಸದೃಶವಾಗಿದ್ದರೂ ಹೀಗೆ ಒಬ್ಬೊಬ್ಬರಲ್ಲಿಯೂ ಜಗಳವಾಡಿ (ಮತ್ಸರಿಸಿ) ಒಳ/ ಕೆಟ್ಟ ಜಗಳದಿಂದಲೇ ಕೆಟ್ಟುಹೋಯಿತು. ಹಾಗಲ್ಲದಿದ್ದರೆ ನಿನಗೆ ಪ್ರತಿಭಟಿಸಲು ಶತ್ರುಸೈನ್ಯಕ್ಕೆ

ಸಾಧ್ಯರುತ್ತಿದ್ದಿತೆ?’ ಎಂದನು ಕೃಪ.

ವ|| ಎಂಬುದುಮಶ್ವತ್ಥಾಮಂ ಕರ್ಣನೊಳಾದ ಮುಳಿಸನವಧಾರಿಸಲಾಱದೆ ಸುಯೋಧನನ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಶ್ವತ್ಥಾಮಂ ಕರ್ಣನೊಳಾದ ಮುಳಿಸನು ಅವಧಾರಿಸಲಾಱದೆ(

ತಡೆಯಲಾರದೆ)
ಸುಯೋಧನನ ನಿಂತೆಂದಂ-

ವಚನ:ಅರ್ಥ:ಎನ್ನಲು ಅಶ್ವತ್ಥಾಮನು ಕರ್ಣನಲ್ಲುಂಟಾದ ಕೋಪವನ್ನು ತಡೆಯಲಾರದೆ ದುರ್ಯೋಧನನಿಗೆ ಹೀಗೆ ಹೇಳಿದನು-

ಖಚರಪ್ಲುತಂ||
ಬೀರವಟ್ಟಮನಾನಿರೆ ನೀನೀ ಸೂತಸುತಂಗೆಡೆಗೊಂಡು ಕೈ

ವಾರದಿಂದೊಸೆದಿತ್ತೊಡಮೇ
ನಾಯ್ತೀ ಖಳನಿಲ್ಲಿ ಧನಂಜಯ|
ಕ್ರೂರಬಾಣಗಣಾವಳಿಯಿಂದ
ಬ್ಬ್ಯಾಡಿದೊಡಲ್ಲದೆ ವೈರಿ ಸಂ
ಹಾರ ಕಾರಣ ಚಾಪಮನಾನೀ
ಸಂಗರದೊಳ್ ಪಿಡಿಯೆಂ
ಗಡಾ|| ೪೩ ||

ಪದ್ಯ-೪೩:ಪದವಿಭಾಗ-

ಅರ್ಥ:ಬೀರವಟ್ಟಮನು
ಆನಿರೆ ನೀನು ಈ
ಸೂತಸುತಂಗೆ ಎಡೆಗೊಂಡು

ಕೈವಾರದಿಂದ ಒಸೆದಿತ್ತೊಡಂ
ಏನಾಯ್ತು (ನಾನಿರುವಾಗ
ನೀನು ಸ್ನೇಹದಿಂದ
ವೀರಪಟ್ಟವನ್ನು ಈ ಸೂತನ
ಮಗನಿಗೆ ಮೋಸದಿಂದ
ಕೊಟ್ಟರೆ ತಾನೇ ಏನಾಯ್ತು?)
ಈ ಖಳನು ಇಲ್ಲಿ ಧನಂಜಯ
ಕ್ರೂರ ಬಾಣಗಣಾವಳಿಯಿಂದ
ಅಬ್ಬಾಡಿದೊಡೆ ಅಲ್ಲದೆ (ಈ
ದುಷ್ಟನು ಅರ್ಜುನನ
ಕ್ರೂರವಾದ ಬಾಣಗಳ

ಸಮೂಹದಿಂದ ನಾಶವಾಗದ ಹೊರತು) ವೈರಿ ಸಂಹಾರ ಕಾರಣ ಚಾಪಮನಾನ ಈ ಸಂಗರದೊಳ್ ಪಿಡಿಯೆಂ ಗಡಾ (ನಾನು ಶತ್ರುನಾಶಕ್ಕೆ ಕಾರಣವಾದ ಈ ಬಿಲ್ಲನ್ನು ಯುದ್ಧರಂಗದಲ್ಲಿ ಹಿಡಿಯುವುದೇ ಇಲ್ಲ.')

ಪದ್ಯ-೪೩:ಅರ್ಥ:'ನಾನಿರುವಾಗ ನೀನು ಸ್ನೇಹದಿಂದ ವೀರಪಟ್ಟವನ್ನು ಈ ಸೂತನ

ಮಗನಿಗೆ ಮೋಸದಿಂದ
ಕೊಟ್ಟರೆ ತಾನೇ ಏನಾಯ್ತು?
ಈ ದುಷ್ಟನು ಅರ್ಜುನನ
ಕ್ರೂರವಾದ ಬಾಣಗಳ
ಸಮೂಹದಿಂದ ನಾಶವಾಗದ
ಹೊರತು ನಾನು ಶತ್ರುನಾಶಕ್ಕೆ
ಕಾರಣವಾದ ಈ ಬಿಲ್ಲನ್ನು
ಯುದ್ಧರಂಗದಲ್ಲಿ
ಹಿಡಿಯುವುದೇ ಇಲ್ಲ.'

ವ|| ಎಂಬುದುಂ

ಮುಳಿಸುವೆರಸಿದ

ಮುಗುಳ್ನಗೆಯಿಂ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಮುಳಿಸುವೆರಸಿದ ಮುಗುಳ್ನಗೆಯಿಂ ಕರ್ಣನು ಇಂತೆಂದಂ-

ವಚನ:ಅರ್ಥ:ವ|| ಎನ್ನಲು ಕರ್ಣನು ಕೋಪಮಿಶ್ರಿತವಾದ ಹುಸಿನಗೆಯಿಂದ ಹೀಗೆ ಹೇಳಿದನು-

ಮ|| ಭುವನಂಗಳ್
ಪದಿನಾಲ್ಕುಮಂ ನಡುಗಿಸಲ್
ಸಾಮರ್ಥ್ಯಮುಳ್ಳೆನ್ನ ಕೆ
ಯ್ದುವಿನೊಳ್ ತೀರದುದಾವ
ಕೆಯ್ದುವಿನೊಳಂ ತೀರ್ದಪುದೇ
ನಿನ್ನ ಕೆ|
ಯ್ದುವನೆಂತುಂ ಬಿಸುಟಿರ್ದ
ಲೆಕ್ಕಮೆ ವಲಂ ನಿಷ್ಕಾರಣಂ
ಕೆಯ್ದುವಿ
ಕ್ಕುವ
ಕಣ್ಣೀರ್ಗಳನಿಕ್ಕುವೀಯೆರಡು

ಮಂ ನಿಮ್ಮಯ್ಯನೊಳ್ ಕಲ್ತಿರೇ|| ೪೪

ಪದ್ಯ-೪೪:ಪದವಿಭಾಗ-ಅರ್ಥ:ಭುವನಂಗಳ್ ಪದಿನಾಲ್ಕುಮಂ ನಡುಗಿಸಲ್ ಸಾಮರ್ಥ್ಯಮುಳ್ಳ ಎನ್ನ ಕೆಯ್ದುವಿನೊಳ್ (‘ಹದಿನಾಲ್ಕು ಲೋಕಗಳನ್ನೂ ನಡುಗಿಸುವ ಸಾಮರ್ಥ್ಯವುಳ್ಳ ನನ್ನ ಆಯುಧಗಳಿಂದ) ತೀರದುದು ಆವ ಕೆಯ್ದುವಿನೊಳಂ

ತೀರ್ದಪುದೇ (‘ಹದಿನಾಲ್ಕು ಲೋಕಗಳನ್ನೂ ನಡುಗಿಸುವ ಸಾಮರ್ಥ್ಯವುಳ್ಳ ನನ್ನ ಆಯುಧಗಳಿಂದ ಸಾಧ್ಯವಾಗದೇ ಇರುವುದು ಮತ್ತಾವ ಆಯುಧದಿಂದಾಗಲಿ ಸಾಧ್ಯವಾಗುತ್ತದೆಯೇ?) ನಿನ್ನ ಕೆಯ್ದುವನೆಂತುಂ ಬಿಸುಟಿರ್ದ ಲೆಕ್ಕಮೆ ವಲಂ (ನಿನ್ನ ಆಯುಧಗಳು ಯಾವಾಗಲೂ ಬಿಸಾಡಿರುವ ಲೆಕ್ಕವೇ, ವಲಂ!

(ಅಪ್ರಯೋಜಕವೇ).)
ನಿಷ್ಕಾರಣಂ ಕೆಯ್ದುವಿಕ್ಕುವ
(ಕಾರಣವಿಲ್ಲದೇ ಬಿಲ್ಲನ್ನು
ಬಿಸಾಡುವ) ಕಣ್ಣೀರ್ಗಳನು
ಇಕ್ಕುವ ಈಯೆರಡುಮಂ
ನಿಮ್ಮಯ್ಯನೊಳ್ ಕಲ್ತಿರೇ
(ಕಾರಣವಿಲ್ಲದೇ ಬಿಲ್ಲನ್ನು
ಬಿಸಾಡುವ ಮತ್ತು ಕಣ್ಣೀರನ್ನು
ಸುರಿಸುವ ಈ ಎರಡನ್ನೂ
ನಿಮ್ಮಯ್ಯನಿಂದ
ಕಲಿತಿದ್ದೀರಾ?’)

ಪದ್ಯ-೪೪:ಅರ್ಥ:‘ಹದಿನಾಲ್ಕು ಲೋಕಗಳನ್ನೂ ನಡುಗಿಸುವ ಸಾಮರ್ಥ್ಯವುಳ್ಳ ನನ್ನ ಆಯುಧಗಳಿಂದ ಸಾಧ್ಯವಾಗದೇ ಇರುವುದು ಮತ್ತಾವ ಆಯುಧದಿಂದಾಗಲಿ ಸಾಧ್ಯವಾಗುತ್ತದೆಯೇ? ನಿನ್ನ ಆಯುಧಗಳು ಯಾವಾಗಲೂ ಬಿಸಾಡಿರುವ ಲೆಕ್ಕವೇ (ಅಪ್ರಯೋಜಕವೇ). ಕಾರಣವಿಲ್ಲದೇ ಬಿಲ್ಲನ್ನು

ಬಿಸಾಡುವ ಮತ್ತು ಕಣ್ಣೀರನ್ನು ಸುರಿಸುವ ಈ ಎರಡನ್ನೂ ನಿಮ್ಮಯ್ಯನಿಂದ ಕಲಿತಿದ್ದೀರಾ?’

ವ|| ಎಂಬುದುಮಶ್ವತ್ಥಾಮಂ ಕರ್ಣನ ನುಡಿಗೆ ಸಿಗ್ಗಾಗಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಶ್ವತ್ಥಾಮಂ ಕರ್ಣನ ನುಡಿಗೆ ಸಿಗ್ಗಾಗಿ-

ವಚನ:ಅರ್ಥ:ಎನ್ನಲು

ಅಶ್ವತ್ಥಾಮನು ಕರ್ಣನ

ಮಾತಿಗೆ ಲಜ್ಜಿತನಾಗಿ

ಮ|| ಸ್ರ|| ಮುನಿಸಂ

ಮುಂದಿಟ್ಟು ಬಿಲ್ಲಂ ಬಿಸುಡಲೆ

ಬಗೆದೆಂ ಮುನ್ನಮಿನ್ನುರ್ಕಿನಿಂ

ನಿ

ನ್ನನೆ ಪೀನಂ ನಚ್ಚಿ ನಿನ್ನಾಳ್ದನೆ

ನುಡಿಯಿಸೆ ನೀನಾಡಿದ್ದೈ

ಮಾತನಾಡ|

ಲ್ಕೆನಗೀ ಸೂೞಿಲ್ಲು ಸೇನಾಪ ಪದವಿಯೊಳಿಂ ನೀನೆ ನಿಲ್ ನಾಳೆ ದುರ್ಯೋ ಧನನಂ ಸಕ್ಕಿಟ್ಟು ಮಾಱಾಂತದಟರೊಳಳವಂ ತೋಱುವಂ ನೀನುಮಾನುಂ|| ೪೫ ||

ಪದ್ಯ-೪೫:ಪದವಿಭಾಗ-ಅರ್ಥ: ಮುನಿಸಂ ಮುಂದಿಟ್ಟು ಬಿಲ್ಲಂ ಬಿಸುಡಲೆ ಬಗೆದೆಂ ಮುನ್ನಂ ಇನ್ನು ಉರ್ಕ್ಕಿನಿಂ

(ಅಶ್ವತ್ಥಾಮ ಹೇಳಿದ- ನಾನು
ಮೊದಲು ಕೋಪವನ್ನು
ಮುಂದಿಟ್ಟು ಬಿಲ್ಲನ್ನು
ಬಿಸುಡಲು ಯೋಚಿಸಿದೆನು)
ಇನ್ನು ಉರ್ಕ್ಕಿನಿಂ ನಿನ್ನನೆ
ಪೀನಂ(ಬಹಳ) ನಚ್ಚಿ ನಿನ್ನ
ಆಳ್ದನೆ ನುಡಿಯಿಸೆ ನೀನು
ಆಡಿದ್ದೈ (ಇನ್ನು ನಿನ್ನನ್ನು ನಿನ್ನ
ಯಜಮಾನ
ದುರ್ಯೋಧನನು
ಪೂರ್ಣವಾಗಿ ನಂಬಿ

ಮಾತನಾಡಿಸಲು, ನೀನು ಗರ್ವದಿಂದ ಮಾತನಾಡಿದೆ.) ಮಾತನಾಡಲ್ಕೆ ಎನಗೆ ಈ ಸೂಟಿಲ್ತು (ನಾನು ಮಾತನಾಡಲು ಇದು ನನಗೆ ಸಮಯವಲ್ಲ). ಸೇನಾಪ ಪದವಿಯೊಳಿಂ ನೀನೆ ನಿಲ್ (ಸೇನಾಪತಿಯ ಸ್ಥಾನದಲ್ಲಿ ನೀನೇ ನಿಲ್ಲು) ನಾಳೆ ದುರ್ಯೋಧನನಂ ಸಕ್ಕಿಟ್ಟು (ನಾಳೆ ದುರ್ಯೋಧನನನ್ನೇ

ಸಾಕ್ಷಿಯಾಗಿಟ್ಟುಕೊಂಡು) ಮಾಱಾಂತ ಅದಟರೊಳ್ ಅಳವಂ (ಪರಾಕ್ರಮವನ್ನು) ತೋಱುವಂ ನೀನುಮ್ ಆನುಂ (ಪ್ರತಿಭಟಿಸಿದ ಶೂರರಲ್ಲಿ ನೀನೂ ನಾನೂ ನಮ್ಮ ಪರಾಕ್ರಮವನ್ನು ತೋರಿಸೋಣ)

ಪದ್ಯ-೪೫:ಅರ್ಥ: ಅಶ್ವತ್ಥಾಮ ಹೇಳಿದ- ನಾನು ಮೊದಲು ಕೋಪವನ್ನು ಮುಂದಿಟ್ಟು

ಬಿಲ್ಲನ್ನು ಬಿಸುಡಲು ಯೋಚಿಸಿದೆನು. ಇನ್ನು ನಿನ್ನನ್ನು ನಿನ್ನ ಯಜಮಾನನು ಪೂರ್ಣವಾಗಿ ನಂಬಿ ಮಾತನಾಡಿಸಲು ನೀನು ಗರ್ವದಿಂದ ಮಾತನಾಡಿದೆ. ನಾನು ಮಾತನಾಡಲು ಇದು ನನಗೆ ಸಮಯವಲ್ಲ. ಸೇನಾಪತಿಯ ಸ್ಥಾನದಲ್ಲಿ ನೀನೇ ನಿಲ್ಲು; ನಾಳೆ ದುರ್ಯೋಧನನನ್ನೇ

ಸಾಕ್ಷಿಯಾಗಿಟ್ಟುಕೊಂಡು
ಪ್ರತಿಭಟಿಸಿದ ಶೂರರಲ್ಲಿ
ನೀನೂ ನಾನೂ ನಮ್ಮ
ಪರಾಕ್ರಮವನ್ನು
ತೋರಿಸೋಣ.

ಕಂ|| ಸಾರಂಗಳ್ ನಿನ್ನ ಶರಾ
ಸಾರಂಗಳಸಾರಮುೞಿದ
ಕೆಯ್ದುಗಳೆಂತುಂ|
ಸಾರಾಸಾರತೆಯಂ ನಾ
ಮಾರಯ್ವಮಿದಿರ್ಚಿದರಿನೃಪಧ್ವ
ಜಿನಿಗಳೊಳ್|| ೪೬ ||

ಪದ್ಯ-೪೬:ಪದವಿಭಾಗ-ಅರ್ಥ:ಸಾರಂಗಳ್ ನಿನ್ನ ಶರಾಸಾರಂಗಳ್ (ನಿನ್ನ ಬಾಣದ ಮಳೆಯು ಶಕ್ತಿಯುಕ್ತವಾದುದು) ಅಸಾರಂ ಉೞಿದ ಕೆಯ್ದುಗಳು (ಉಳಿದ ನಿನ್ನದಲ್ಲದ ಆಯುಧಗಳು ಹೇಗೂ ಅಸಾರವಾದುವು) ಎಂತುಂ ಸಾರಾಸಾರತೆಯಂ ನಾಮ್ ಆರಯ್ವುಂ (ವಿಚಾರ

ಮಾಡೋಣ) ಈ ಸಾರಾಸಾರತೆಯನ್ನು- ವಿಚಾರ ಮಾಡೋಣ,) ಇದಿರ್ಚಿದ ಅರಿನೃಪ ಧ್ವಜಿನಿಗಳೊಳ್ (ನಮ್ಮನ್ನು ಎದುರಿಸಿದ ಶತ್ರುರಾಜರ ಸೈನ್ಯದಲ್ಲಿ)

ಪದ್ಯ-೪೬:ಅರ್ಥ: ನಿನ್ನ ಬಾಣದ ಮಳೆಯು ಶಕ್ತಿಯುಕ್ತವಾದುದು ಉಳಿದ ನಿನ್ನದಲ್ಲದ ಆಯುಧಗಳು ಹೇಗೂ ಅಸಾರವಾದುವು.

(ಶಕ್ತಿಯಿಲ್ಲದುವು) ಈ ಸಾರಾಸಾರತೆಯನ್ನು ನಮ್ಮನ್ನು ಎದುರಿಸಿದ ಶತ್ರುರಾಜರ ಸೈನ್ಯದಲ್ಲಿ ವಿಚಾರ ಮಾಡೋಣ'.

ವ|| ಎಂಬುದುಂ ದುರ್ಯೋಧನ ಕರ್ಣನುಮನಶ್ವತ್ಥಾಮನುಮಂ ನಿಮ್ಮೊಳಗೆ ನೀಂ ಮುಳಿಯಲ್ವೇಡ ನಿಮ್ಮ ಪುರುಷಕಾರಮನೆ ಬಗೆದು

ನೆಗೞ್ವುದಾನುಮೆನ್ನೆತ್ತಿ ಕೊಂಡ ಕಜ್ಮಮಂ
ನೆಗೞ್ದಿಲ್ಲದಿರೆನೆಂದಾಯೆಡೆಯಿ
ನೆೞ್ದು ನಾಯಕರಂ ಬೀಡಿಂಗೆ
ಪೋಗಲ್ವೇೞ್ದಿಂಮನೆಯಂ
ಪೊಕ್ಕು ಮಜ್ಜನ ಭೋಜನ
ತಾಂಬೂಲಾನುಲೇಪನಂಗಳಿಂ
ಸಂಗರ ಪರಿಶ್ರಮಮನಾಱಿಸಿ
ಮಂತ್ರಶಾಲೆಗೆವಂದು ಶಲ್ಯ
ಶಾರದ್ವತ ಕೃತವರ್ಮ
ದುಶ್ಶ್ಯಾಸನಾದಿಗಳು ಬರಿಸಿ

ಯಥೋಚಿತ ಪ್ರತಿಪತ್ತಿಗಳಿಂದಿರಿಸಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ದುರ್ಯೋಧನ ಕರ್ಣನುಮನು ಅಶ್ವತ್ಥಾಮನುಮಂ (ಎನ್ನಲು ದುರ್ಯೋಧನನು ಕರ್ಣನನ್ನೂ ಅಶ್ವತ್ಥಾಮನನ್ನೂ ಕುರಿತು) ನಿಮ್ಮೊಳಗೆ ನೀಂ ಮುಳಿಯಲ್ವೇಡ (ನೀವು ನಿಮ್ಮನಿಮ್ಮಲ್ಲಿ

ಕೋಪಿಸಬೇಡಿ;) ನಿಮ್ಮ ಪುರುಷಕಾರಮನೆ ಬಗೆದು ನೆಗೞ್ವುದು (ನಿಮ್ಮ ಪೌರುಷವನ್ನು ಯೋಚಿಸಿ ಕೆಲಸಮಾಡುವುದು) ಆನುಂ ಎನ್ನೆತ್ತಿ ಕೊಂಡ ಕಜ್ಜಮಂ ನೆಗೞ್ದಲ್ಲದೆ ಇರೆನು (ನಾನೂ ಅಂಗೀಕಾರಮಾಡಿದ ಕೆಲಸವನ್ನು ಮಾಡದೇ ಇರುವುದಿಲ್ಲ') ಎಂದು ಆಯೆಡೆಯಿಂ ಎೞ್ದು

ನಾಯಕರಂ (ಎಂದು ಆ ಸ್ಥಳದಿಂದ ಎದ್ದು) ಬೀಡಿಂಗೆ ಪೋಗಲ್ವೇಟ್ಟಿಂ (ನಾಯಕರನ್ನು ಬೀಡಿಗೆ ಹೋಗಲು ಹೇಳಿದನು.) ಮನೆಯಂ ಪೊಕ್ಕು ಮಜ್ಜನ ಭೋಜನ ತಾಂಬೂಲ ಅನುಲೇಪನಂಗಳಿಂ (ತಾನು ಅರಮನೆಯನ್ನು ಪ್ರವೇಶಿಸಿ ಸಾನ್ನ ಭೋಜನ ತಾಂಬೂಲ ಅನುಲೇಪನಗಳಿಂದ) ಸಂಗರ

ಪರಿಶ್ರಮಮನು ಆಱಿಸಿ (ಯುದ್ಧಾಯಾಸವನ್ನು ಹೋಗಲಾಡಿಸಿಕೊಂಡು) ಮಂತ್ರಶಾಲೆಗೆವಂದು ಶಲ್ಯ ಶಾರದ್ವತ ಕೃತವರ್ಮ ದುಶ್ಶ್ಯಾಸನಾದಿಗಳು ಬರಿಸಿ ಯಥೋಚಿತ ಪ್ರತಿಪತ್ತಿಗಳಿಂದ ಇರಿಸಿ (ಮಂತ್ರಶಾಲೆಗೆ ಬಂದು ಶಲ್ಯ, ಶಕುನಿ, ಶಾರದ್ವತ, ಕೃತವರ್ಮ, ದುಶ್ಶ್ಯಾಸನನೇ ಮೊದಲಾದವರನ್ನು

ಬರಮಾಡಿ ಯೋಗ್ಯವಾದ ಸತ್ಕಾರಗಳಿಂದ ಕುಳ್ಳಿರಿಸಿ)-

ಕರ್ಣನಿಗೆ ಸೇನಾದಿಪತಿ ಪಟ್ಟ

ವಚನ:ಅರ್ಥ:

ಅಶ್ವತ್ಥಾಮನುನಮ್ಮನ್ನು ಎದುರಿಸಿದ ಶತ್ರುರಾಜರ ಸೈನ್ಯದಲ್ಲಿ ವಿಚಾರ ಮಾಡೋಣ', ಎನ್ನಲು ದುರ್ಯೋಧನನು ಕರ್ಣನನ್ನೂ ಅಶ್ವತ್ಥಾಮನನ್ನೂ

ಕುರಿತು ‘ನೀವು ನಿಮ್ಮನಿಮ್ಮಲ್ಲಿ ಕೋಪಿಸಬೇಡಿ; ನಿಮ್ಮ ಪೌರುಷವನ್ನು ಯೋಚಿಸಿ ಕೆಲಸಮಾಡುವುದು. ನಾನೂ ಅಂಗೀಕಾರಮಾಡಿದ ಕೆಲಸವನ್ನು ಮಾಡದೇ ಇರುವುದಿಲ್ಲ’ ಎಂದು ಆ ಸ್ಥಳದಿಂದ ಎದ್ದು ನಾಯಕರನ್ನು ಬೀಡಿಗೆ ಹೋಗಲು ಹೇಳಿದನು. ತಾನು ಅರಮನೆಯನ್ನು ಪ್ರವೇಶಿಸಿ

ಸ್ನಾನ ಭೋಜನ ತಾಂಬೂಲ
ಅನುಲೇಪನಗಳಿಂದ
ಯುದ್ಧಾಯಾಸವನ್ನು
ಹೋಗಲಾಡಿಸಿಕೊಂಡು
ಮಂತ್ರಶಾಲೆಗೆ ಬಂದು ಶಲ್ಯ,
ಶಕುನಿ, ಶಾರದ್ವತ, ಕೃತವರ್ಮ,
ದುಶ್ಶ್ಯಾಸನನೇ
ಮೊದಲಾದವರನ್ನು
ಬರಮಾಡಿ ಯೋಗ್ಯವಾದ
ಸತ್ಕಾರಗಳಿಂದ ಕುಳ್ಳಿರಿಸಿ-

ಶಾ|| ಅಂತರ್ಭೇದದೊಳಂತು
ಛಿದ್ರಿಸಿದರಾ ಗಾಂಗೇಯರಂ
ಕೊಂದರಿಂ
ದಿಂತೀಗಳ್ ಪುಸಿದೀ
ಘಟೋದ್ಭವನನಾ
ಕೌಂತೇಯರಾಯಕ್ಕೆ ಗೆಂ|
ಟೆಂತೆಂತಕ್ಕುಮದುಂ
ಮದುದ್ಯಮಮೆ ಪೇೞ್ಗಾ
ವೈರಿಗಳ್ಗೊಲ್ವೆನಾ
ನೆಂತೊಳ್ಪಂ ತಳೆವಂತು
ತೇಜಮೆನಗಿನ್ನೆಂತಕ್ಕುಮಿಂ

ಪೇಟಿರೇ|| ೪೭ ||

ಪದ್ಯ-೪೭:ಪದವಿಭಾಗ-ಅರ್ಥ:ಅಂತರ್ ಭೇದದೊಳು ಅಂತು ಛಿದ್ರಿಸಿದರು ಆ ಗಾಂಗೇಯರಂ (ಪಾಂಡವರು ರಹಸ್ಯವಾದ ಭೇದೋಪಾಯದಿಂದ ಹಾಗೆ ಆ ಭೀಷ್ಮರನ್ನು ಒಡೆದು ಹಾಕಿದರು) ಕೊಂದರು ಇಂದಿ ಇಂತು ಈಗಳ್ ಪುಸಿದು ಈ ಘಟೋದ್ಭವನನ (ಈ ದಿನ

ಹೀಗೆ ಸುಳ್ಳು ಹೇಳಿ
ದ್ರೋಣಾಚಾರ್ಯರನ್ನು
ಕೊಂದರು.) ಆ ಕೌಂತೇಯರ
ಆಯಕ್ಕೆ(ಲಾಭಕ್ಕೆ- ಜಯಕ್ಕೆ)
ಗೆಂಟು (ದೂರ, ತೊಂದರೆ)
ಎಂತೆಂತಕ್ಕುಂ ಅದುಂ (ಈಗ ಆ
ಪಾಂಡವರಿಗೆ ಜಯಕ್ಕೆ ಅಡ್ಡಿ
ಹೇಗೆ, ರೀತಿ ಯಾವುದು
ಎಂಬುದನ್ನು ತಿಳಿಸಿ.)
ಮದುದ್ಯಮಮೆ - ಮತ್
ಉದ್ಯಮಮೆ ಪೇೞ್ಗೆ (ನನ್ನ

ಉದ್ಯಮ ಅಥವಾ ಕಾರ್ಯ ಏನು ಹೇಳಿ) ಆ ವೈರಿಗಳ್ಗೆ ಒಲ್ವೆನು ಆನು ಎಂತು ಒಳ್ಪಂ ತಳೆವಂತು (ಆ ಶತ್ರುಗಳಲ್ಲಿ ನಾನು ಹೇಗೆ ಒಲಿಯಲಿ? ನನಗೆ ಹೇಗೆ ಸ್ನೇಹವುಂಟಾದೀತು. ಪಾಂಡವರ ವಿಷಯದಲ್ಲಿ ಒಳ್ಳೆಯ ಭಾವವು ಬರುವುದು ಹೇಗೆ ಸಾಧ್ಯ?) ತೇಜಮ್ ಎನಗೆ ಇನ್ನೆಂತಕ್ಕುಮ್ ಇಂ

ಪೇಟಿರೇ (ಆ ಶತ್ರುಗಳಲ್ಲಿ ನನಗೆ ಹೇಗೆ ತೇಜಸ್ಸು (ಜಯ) ಬರುವುದು ಹೇಗೆ? ನೀವೇ ಹೇಳಿರಿ.)

ಪದ್ಯ-೪೭:ಅರ್ಥ:

ಪಾಂಡವರು ರಹಸ್ಯವಾದ ಭೇದೋಪಾಯದಿಂದ ಹಾಗೆ ಆ ಭೀಷ್ಮರನ್ನು ಒಡೆದು ಹಾಕಿದರು. ಈ ದಿನ ಹೀಗೆ ಸುಳ್ಳು ಹೇಳಿ ದ್ರೋಣಾಚಾರ್ಯರನ್ನು

ಕೊಂದರು. ಈಗ ಆ ಪಾಂಡವರಿಗೆ ಜಯಕ್ಕೆ ಅಡ್ಡಿ ಹೇಗೆ, ರೀತಿ ಯಾವುದು ಎಂಬುದನ್ನು ತಿಳಿಸಿ. ನನ್ನ ಉದ್ಯಮ ಅಥವಾ ಕಾರ್ಯ ಏನು ಹೇಳಿ, ಆ ಶತ್ರುಗಳಲ್ಲಿ ನನಗೆ ಹೇಗೆ ತೇಜಸ್ಸು (ಜಯ) ಬರುವುದು ಹೇಗೆ? ನೀವೇ ಹೇಳಿರಿ, ಎಂದನು ದುರ್ಯೋಧನ.

ವ|| ಎನೆ ಶಾರದ್ವತನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನೆ ಶಾರದ್ವತನು ಇಂತೆಂದಂ-

ವಚನ:ಅರ್ಥ:ವ|| ಎನ್ನಲು ಕೃಪನು ಹೀಗೆಂದನು-

ಚಂ|| ಚಲಮನೆ ಪೇೞ್ವೊಡಯ್ವರುಮನಯ್ದೆ ಯೊರೊಳೆ ಬಾೞಿಸೆಂದು ಮುಂ ಬಲಿಬಲಸೂದನಂ ನುಡಿಯೆಯುಂ ಕುಡದಿರ್ದುದೆ

ಪೇೞ್ಗಿಮೆಯ್ದೆ ಮೆ|
ಯ್ಗಲಿತನಮಂ ಸರಿತ್ಸುತ
ಘಟೋದ್ಭವರಂ ಪೊಣರ್ದಿಕ್ಕಿ
ಗೆಲ್ದರೊಳ್
ಕಲಹಮೆ ಪೇೞ್ಗುಮಿಂ ಪೆಱತು
ಪೇೞ್ವೆಡೆಯಾವುದೊ
ಕೌರವೇಶ್ವರಾ|| ೪೮ ||

ಪದ್ಯ-೪೮:ಪದವಿಭಾಗ-

ಅರ್ಥ:ಚಲಮನೆ ಪೇೞ್ವೊಡೆ
ಅಯ್ವರುಮಂ ಅಯ್ದು
ಅಱಿಯೂರೊಳೆ

ಬಾಧಿಸೆಂದು (ಬಲವನ್ನು
ಹೇಳುವುದಾದರೆ ಮೊದಲು
ಕೃಷ್ಣನು ಬಂದು ಪಾಂಡವರು
ಐವರನ್ನು ಅಯ್ದು
ಕುಗ್ರಾಮಗಳಲ್ಲಿ ಬಾಳುವಹಾಗೆ
ಮಾಡು) ಮುಂ
ಬಲಿಬಲಸೂದನಂ
ನುಡಿಯೆಯುಂ (ಕೃಷ್ಣನು
ಮೊದಲು ಬಂದು ಹೇಳಿದರೂ)
ಕುಡದಿರ್ದುದೆ ಪೇೞ್ಗುಮ್
(ಕೊಡದಿರುವುದೇ

ಹೇಳುತ್ತದೆ.) ಎಯ್ದೆ
ಮೆಯ್ಗಲಿತನಮಂ ಸರಿತ್ಸುತ
ಘಟೋದ್ಭವರಂ ಪೊಣರ್ದು
ಇಕ್ಕಿ (ಭೀಷ್ಮದ್ರೋಣರನ್ನು
ಪ್ರತಿಬಟಿಸಿ,ಯುದ್ಧದಲ್ಲಿ
ಸಂಹರಿಸಿ) ಗೆಲ್ದರೊಳ್
ಕಲಹಮೆ ಪೇೞ್ಗುಮ್
(ಅವರನ್ನು ಗೆದ್ದ ಪಾಂಡವರಲ್ಲಿ
ಯುದ್ಧಕ್ಕೆ ತೊಡಗಿರುವುದೇ
ನಿನ್ನ ಪರಾಕ್ರಮವನ್ನು
ಹೇಳುತ್ತದೆ) ಇಂ ಪೆಱತು

ಪೇಟ್ವೆಡೆ ಯಾವುದೊ
ಕೌರವೇಶ್ವರಾ ()
ಪದ್ಯ-೪೮:ಅರ್ಥ: ಬಲವನ್ನು
ಹೇಳುವುದಾದರೆ ಮೊದಲು
ಕೃಷ್ಣನು ಬಂದು
ಪಾಂಡವರೈವರನ್ನು ಅಯ್ದು
ಕುಗ್ರಾಮಗಳಲ್ಲಿ ಬಾಳುವಹಾಗೆ
ಮಾಡು ಎಂದು ಹೇಳಿದರೂ
ಕೊಡದಿರುವುದೇ ಹೇಳುತ್ತದೆ.
ಭೀಷ್ಮದ್ರೋಣರನ್ನು
ಪ್ರತಿಬಟಿಸಿ,ಯುದ್ಧದಲ್ಲಿ

ಸಂಹರಿಸಿ ಅವರನ್ನು ಗೆದ್ದ ಪಾಂಡವರಲ್ಲಿ ಯುದ್ಧಕ್ಕೆ ತೊಡಗಿರುವುದೇ ನಿನ್ನ ಪರಾಕ್ರಮವನ್ನು ಹೇಳುತ್ತದೆ. ದುರ್ಯೋಧನಾ ಹೇಳುವುದು ಬೇರೆಯದು ಯಾವುದೋ? ಮತ್ತೇನಿದೆ?

ವ||ಅದಱಿಂದಮಿಂ ಪೆಱತು ಮಂತಣಕ್ಕೆಡೆಯಿಲ್ಲ ಮುನ್ನೆ ಚಕ್ಷುಷ್ಮನೆಂಬ ಮನುವಾದ ಕಾಲದೊಳ್

ಧರಾತಳಮನೋಲ್ಲಣಿಗೆಯಿಂ
ಪಿಱಿವಂತೆ ತಳಮೆಯ್ದೆ
ಸುರುಳ್ವಿನಂ ಮುಯ್ಯೇಱ್
ಸೋಱ್ ಪಿಱಿದ
ಸಾಹಸಮುಮನಿಂದ್ರಂಗೆ ತನ್ನ
ಸಹಜ ಕವಚಮಂ
ತಿದಿಯುಗಿದು ಕೊಟ್ಟ ಚಾಗದ
ಪೆಂಪುಮಂ ದಿಗ್ವಿಜಯಂಗೆಯ್ದು
ಮಿಡಿದನಿತು ಬೇಗದಿಂ
ಜರಾಸಂಧನಂ ನೆಲಕ್ಕಿಕ್ಕಿ
ಪುಡಿಯೊಳ್ ಪೊರಳ್ಚಿ

ಮಲ್ಲಯುದ್ಧದೊಳ್
ಪಿಡಿದಡಿಗೊತ್ತಿದ
ಭುಜಬಲಭೀಮನಂ ಗೆಲ್ದ
ಸಹಾಸಮುಮಂ ನಮ್ಮ
ಪಡೆಯೆಲ್ಲಮಂ
ತೊತ್ತಳಿದುಳಿದು ಕೊಲ್ವ
ಘಟೋತ್ಕಚನೆಂಬ ರೂಕ್ಷ
ರಾಕ್ಷಸನಂ ಕೊಂದ
ಬೀರಮುಮನಾಲೋಕಾಂತ
ರಂ ನೆಗಳೆ-

ವಚನ:ಪದವಿಭಾಗ-ಅರ್ಥ:ಅದಱಿಂದಂ ಇಂ ಪೆಱತು ಮಂತಣಕ್ಕೆ ಎಡೆಯಿಲ್ಲ (ಆದುದರಿಂದ ಇನ್ನು ಬೇರೆ ಮಂತ್ರಾಲೋಚನೆಗೆ ಅವಕಾಶವೇ ಇಲ್ಲ.) ಮುನ್ನೆ ಚಕ್ಷುಷ್ಮನೆಂಬ ಮನುವಾದ ಕಾಲದೊಳ್ (ಹಿಂದೆ ಚಕ್ಷುಷ್ಮನೆಂಬ ಮನುವಾದಕಾಲದಲ್ಲಿ) ಧರಾತಳಮನು ಒಲ್ಲಣಿಗೆಯಿಂ

ಪಿಟಿವಂತೆ
(ಭೂಮಂಡಲವನ್ನು
ಒದ್ದೆಬಟ್ಟೆಯನ್ನು
ಹಿಂಡುವಂತೆ) ತಳಮೆಯ್ದೆ
ಸುರುಳ್ಚಿನಂ (ಅಂಗೈಯಲ್ಲಿ
ಸುರುಳಿಸುತ್ತಿಕೊಂಡು)
ಮುಯ್ಯೇಟ್ ಸೂಟ್ ಪಿಟಿದ
ಸಾಹಸಮುಮನು
(ಇಪ್ಪತ್ತೊಂದು ಸಲ ಹಿಂಡಿದ
ಸಾಹಸವೂ) ಇಂದ್ರಂಗೆ ತನ್ನ
ಸಹಜ ಕವಚಮಂ

ತಿದಿಯುಗಿದು ಕೊಟ್ಟ ಚಾಗದ
ಪೆಂಪುಮಂ (ಇಂದ್ರನಿಗೆ ತನ್ನ
ಸಹಜ ಕವಚವನ್ನು ತಿದಿಯ
ಚರ್ಮವನ್ನು ಸುಲಿಯುವ
ಹಾಗೆ ಅನಾಯಾಸವಾಗಿ
ಸುಲಿದು ಕೊಟ್ಟ ತ್ಯಾಗದ
ಆಧಿಕ್ಯವೂ,)
ದಿಗ್ವಿಜಯಂಗೆಯ್ದು ಮಿಡಿದ
ಅನಿತು ಬೇಗದಿಂ
ಜರಾಸಂಧನಂ
(ದಿಗ್ವಿಜಯವನ್ನು ಮಾಡಿ

ಚಿಟಿಕೆ ಹಾಕುವಷ್ಟು
ಅಲ್ಪಕಾಲದಲ್ಲಿ
ಜರಾಸಂದನನ್ನು) ನೆಲಕ್ಕೆಇಕ್ಕಿ
ಪುಡಿಯೊಳ್ ಪೊರಳ್ಚಿ (ನೆಲಕ್ಕೆ
ಅಪ್ಪಳಿಸಿ ಹುಡಿಯಲ್ಲಿ
ಹೊರಳಿಸಿ)
ಮಲ್ಲಯುದ್ಧದೊಳ್ ಪಿಡಿದು
ಅಡಿಗೊತ್ತಿದ
(ಮಲ್ಲಯುದ್ಧದಲ್ಲಿ ಹಿಡಿದು
ಕಾಲಿನ ಕೆಳಕ್ಕೆ ಅಮುಕಿದ)
ಭುಜಬಲಭೀಮನಂ ಗೆಲ್ದ

ಸಹಾಸಮುಮಂ
(ಬಾಹುಬಲವುಳ್ಳ ಭೀಮನನ್ನು
ಗೆದ್ದ ಸಾಹಸವೂ) ನಮ್ಮ
ಪಡೆಯೆಲ್ಲಮಂ
ತೊತ್ತಳಿದುಳಿದು ಕೊಲ್ವ
ಘಟೋತ್ಕಚನೆಂಬ ರೂಕ್ಷ
ರಾಕ್ಷಸನಂ ಕೊಂದ (ನಮ್ಮ
ಸೈನ್ಯವೆಲ್ಲವನ್ನೂ
ಸೊಪ್ಪಿನಮತೆ ತುಳಿದ
ಘಟೋತ್ಕಚನೆಂಬ ಕ್ರೂರ
ರಾಕ್ಷಸನನ್ನು ಕೊಂದ)

ಬೀರಮುಮನು
ಆಲೋಕಾಂತರಂ ನೆಗಟ್ಟೆ (
ಕರ್ಣನ ಶೌರ್ಯವೂ ಲೋಕದ
ಒಳಗೂ ಹೊರಗೂ
ಪ್ರಸಿದ್ಧವಾಗಿದೆ.)-
ವಚನ:ಅರ್ಥ: ಆದುದರಿಂದ
ಬೇರೆ ಮಂತ್ರಾಲೋಚನೆಗೆ
ಅವಕಾಶವೇ ಇಲ್ಲ. ಹಿಂದೆ
ಚಕ್ಷುಷ್ಮನೆಂಬ
ಮನುವಾದಕಾಲದಲ್ಲಿ
ಭೂಮಂಡಲವನ್ನು

ಒದ್ದೆಬಟ್ಟೆಯನ್ನು ಹಿಂಡುವಂತೆ
ಅಂಗೈಯಲ್ಲಿ ಸುರುಟಿಕೊಂಡು
ಇಪ್ಪತ್ತೊಂದು ಸಲ ಹಿಂಡಿದ
ಸಾಹಸವೂ, ಇಂದ್ರನಿಗೆ ತನ್ನ
ಸಹಜ ಕವಚವನ್ನು ತಿದಿಯ
ಚರ್ಮವನ್ನು ಸುಲಿಯುವ
ಹಾಗೆ ಅನಾಯಾಸವಾಗಿ
ಸುಲಿದು ಕೊಟ್ಟ ತ್ಯಾಗದ
ಆಧಿಕ್ಯವೂ, ದಿಗ್ವಿಜಯವನ್ನು
ಮಾಡಿ ಚಿಟಿಕೆ ಹಾಕುವಷ್ಟು
ಅಲ್ಪಕಾಲದಲ್ಲಿ

ಜರಾಸಂದನನ್ನು ನೆಲಕ್ಕೆ
ಅಪ್ಪಳಿಸಿ ಹುಡಿಯಲ್ಲಿ
ಹೊರಳಿಸಿ, ಮಲ್ಲಯುದ್ಧದಲ್ಲಿ
ಹಿಡಿದು ಕಾಲಿನ ಕೆಳಕ್ಕೆ
ಅಮುಕಿದ ಬಾಹುಬಲವುಳ್ಳ
ಭೀಮನನ್ನು ಗೆದ್ದ ಸಾಹಸವೂ,
ನಮ್ಮ ಸೈನ್ಯವೆಲ್ಲವನ್ನೂ
ಸೊಪ್ಪಿನಮತೆ ತುಳಿದ
ಘಟೋತ್ಕಚನೆಂಬ ಕ್ರೂರ
ರಾಕ್ಷಸನನ್ನು ಕೊಂದ ಕರ್ಣನ
ಶೌರ್ಯವೂ ಲೋಕದ

ಒಳಗೂ ಹೊರಗೂ ಪ್ರಸಿದ್ಧವಾಗಿದೆ.

ಕಂ|| ನೆಗಳ್ದಕ ಲಿತನದ ಚಾಗದ
ಬಗೆ ತನ್ನೊಳ್ ನೆಗಳ್ದೆವೆತ್ತು
ನೆಗಳ್ದಿರೆ ಸಂದಂ|
ಗಗಣಿತ ಗುಣಂಗೆ ಕರ್ಣಂ
ಗೊಗಸುಗುಮೇ ಕಟ್ಟು
ಬೀರಪಟ್ಟಮನರಸಾ|| ೪೯||

ಪದ್ಯ-೪೯:ಪದವಿಭಾಗ-ಅರ್ಥ: ನೆಗಳ್ದ ಕಲಿತನದ ಚಾಗದ ಬಗೆ ತನ್ನೊಳ್

ನೆಗಳ್ದೆವೆತ್ತು ನೆಗಳ್ದಿರೆ (
ಪ್ರಸಿದ್ಧವಾದ ಶೌರ್ಯದ
ತ್ಯಾಗದ ರೀತಿಗಳೆರಡೂ
ಅವನಲ್ಲಿ ಖ್ಯಾತಿಗೊಂಡಿರಲು,)
ಸಂದಂಗೆ ಅಗಣಿತ ಗುಣಂಗೆ
(ಹೀಗೆ ಪಡೆದ
ಅಸಂಖ್ಯಾತಗುಣಗಳಿಂದ
ಕೂಡಿದವನಿಗೆ,) ಕರ್ಣಂಗೆ
ಒಗಸುಗುಮೇ (ಕರ್ಣನಿಗೆ
ಇದು ಅತಿಶಯವೇ!) ಕಟ್ಟು
ಬೀರಪಟ್ಟಮನು ಅರಸಾ

(ರಾಜನೇ ಅವನಿಗೆ ವೀರ ಪಟ್ಟವನ್ನು ಕಟ್ಟು, ಎಂದನು ಕೃಪ).

ಪದ್ಯ-೪೯:ಅರ್ಥ:

ಪ್ರಸಿದ್ಧವಾದ ಶೌರ್ಯದ ತ್ಯಾಗದ ರೀತಿಗಳೆರಡೂ ಅವನಲ್ಲಿ ಖ್ಯಾತಿಗೊಂಡಿರಲು, ಹೀಗೆ ಅಸಂಖ್ಯಾತಗುಣಗಳಿಂದ ಕೂಡಿದವನಿಗೆ, ಕರ್ಣನಿಗೆ ಇದು ಅತಿಶಯವೇ! ರಾಜನೇ

ಅವನಿಗೆ ವೀರ ಪಟ್ಟವನ್ನು ಕಟ್ಟು, ಎಂದನು ಕೃಪ

ಕಂ||ರಥಯಾನ ಪಾತ್ರದಿಂ ಪರ
ರಥಿನೀ ಜಳನಿಧಿಯ
ಪಾರಮಂಸಲ್ವ ಜಗ|
ತ್ಪ್ರಥಿತ ಭುಜದರ್ಪದಿಂದತಿ
ರಥಮಥನಂ
ಕರ್ಣಧಾರನಲ್ಲನೇ ಕರ್ಣಂ ||
೫೦||

ಪದ್ಯ-೫೦:ಪದವಿಭಾಗ-

ಅರ್ಥ:ರಥಯಾನ ಪಾತ್ರದಿಂ

(ರಥವೆಂಬ ನಾವೆಯಿಂದ)
ಪರರಥಿನೀ ಜಳನಿಧಿಯ
(ಶತ್ರುಸೇನಾ ಸಮುದ್ರದ)
ಪಾರಮಂ ಸಲ್ವ (ಆಚೆಯ
ದಡವನ್ನು ಸೇರುವ)
ಜಗತ್ಪ್ರಥಿತ (ಜಗತ್
ಪ್ರಸಿದ್ಧವಾದ)
ಭುಜದರ್ಪದಿಂದ
ಅತಿರಥಮಥನಂ (ಬಾಹುಬಲ
ಗರ್ವದವನಾದ ಅತಿರಥರನ್ನು
ಧ್ವಂಸಮಾಡಿದವನಾದ

ಶೂರನಾದ)
ಕರ್ಣಧಾರನಲ್ಲನೇ ಕರ್ಣಂ
(ನಾವೆಯನ್ನು ನೆಡೆಯಿಸುವ
ಕರ್ಣನಲ್ಲವೇ! ಕರ್ಣ! ನಿಜಕ್ಕೂ
ಹೌದು!)
ಪದ್ಯ-೫೦:ಅರ್ಥ:ರಥವೆಂಬ
ನಾವೆಯಿಂದ ಶತ್ರುಸೇನಾ
ಸಮುದ್ರದ ಆಚೆಯ ದಡವನ್ನು
ತನ್ನ ಭುಜದಾಟಿಸಬಲ್ಲ ಜಗತ್
ಪ್ರಸಿದ್ಧವಾದ ಬಾಹುಬಲ
ಗರ್ವದವನಾದ ಅತಿರಥರನ್ನು

ಧ್ವಂಸಮಾಡಿದವನಾದವನೂ ನಾವೆಯನ್ನು ನೆಡೆಯಿಸುವ ಕರ್ಣನಲ್ಲವೇ! ಕರ್ಣ! ನಿಜಕ್ಕೂ ಹೌದು!

ವ||ಎಂದು ನುಡಿದ ಕೃಪನ ಮಾತಂ ಮನದೆಗೊಂಡು ಕರ್ಣನ ಮೊಗಮಂ ನೋಡಿ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಕೃಪನ ಮಾತಂ ಮನದೆಗೊಂಡು ಕರ್ಣನ ಮೊಗಮಂ ನೋಡಿ-

ವಚನ:ಅರ್ಥ:ಎಂದು ಹೇಳಿದ ಕೃಪನ ಮಾತನ್ನು ಮನಸಾರೆ ಒಪ್ಪಿ ಕರ್ಣನ ಮುಖವನ್ನು ನೋಡಿ -

ಚಂ||ನಡುಗುವುದುಂತೆ
ಪಾಂಡವಬಲಂ
ನಿನಗರ್ಜುನನೆಂಬನೆಂದುಮು
ರ್ಕುಡುಗಿ ಸುರುಳ್ವನೀಯೆಡೆಗೆ
ಪೇಳ್ ಪೆರರಾರ್ ದೊರೆ
ವೀರವಟ್ಟವಂ|

ತಡೆಯದೆ ಕಟ್ಟಿ ವೈರಿಗಳ ಪಟ್ಟನೆ ಪಾರಿಸಿ ಕಾವುದೆನ್ನ ಬೆ ಳ್ಗೊಡೆಯುಮುನೆನ್ನ ಪಟ್ಟಮುಮನೆನ್ನುಮನಂಗಮ ಹೀತಳಾಧಿಪಾ॥೫೧॥51॥

ಪದ್ಯ-೫೧:ಪದವಿಭಾಗ-

ಅರ್ಥ:ನಡುಗುವುದು ಉಂತೆ ಪಾಂಡವಬಲಂ (ಪಾಂಡವಸೈನ್ಯವು ನಿನಗೆ ಸುಮ್ಮನೆ ನಡುಗುತ್ತದೆ) ನಿನಗೆ ಅರ್ಜುನನೆಂಬನು ಎಂದುಂ

ಉರ್ಕುಡುಗಿ ಸುರುಳ್ವನು (ಅರ್ಜುನನೆಂಬುವನು ಯಾವಾಗಲೂ ಉತ್ಸಾಹಶೂನ್ಯನಾಗಿ ಮುದುಡಿಕೊಳ್ಳುತ್ತಾನೆ.) ಈ ಯೆಡೆಗೆ ಪೇಳ್ ಪೆರರು ಆರ್ ದೊರೆ (ಈ ಸ್ಥಾನಕ್ಕೆ ಮತ್ತಾರು ಅರ್ಹರು! ಹೇಳು.) ವೀರವಟ್ಟವಂ ತಡೆಯದೆ ಕಟ್ಟಿ ವೈರಿಗಳ ಪಟ್ಟನೆ ಪಾರಿಸಿ (ವೀರಪಟ್ಟವನ್ನು ತಡಮಾಡದೆ

ಕಟ್ಟಿಕೊಂಡು ವೈರಿಗಳನ್ನು
ಪಟ್ಟನೆ ಹಾರಿಹೋಗುವಂತೆ
ಮಾಡಿ) ಕಾವುದು ಎನ್ನ
ಬೆಳ್ಗೊಡೆಯುಮುಂ ಎನ್ನ
ಪಟ್ಟಮುಂ ಎನ್ನುಮಂ ()ನನ್ನ
ಶ್ವೇತಚ್ಛತ್ರವನ್ನೂ ನನ್ನ ರಾಜ
ಪಟ್ಟವನ್ನೂ, ನನ್ನನ್ನೂ
ಕಾಪಾಡಬೇಕು
ಅಂಗಮಹೀತಳಾಧಿಪಾ (<-
ಕರ್ಣನೇ)

ಪದ್ಯ-೫೧:ಅರ್ಥ: ಕರ್ಣಾ ಪಾಂಡವಸೈನ್ಯವು ನಿನಗೆ ಸುಮ್ಮನೆ ನಡುಗುತ್ತದೆ. ಅರ್ಜುನನೆಂಬುವನು ಯಾವಾಗಲೂ ಉತ್ಸಾಹಶೂನ್ಯನಾಗಿ ಮುದುಡಿಕೊಳ್ಳುತ್ತಾನೆ. ಈ ಸ್ಥಾನಕ್ಕೆ ಮತ್ತಾರು ಅರ್ಹರು! ಹೇಳು. ವೀರಪಟ್ಟವನ್ನು ತಡಮಾಡದೆ ಕಟ್ಟಿಕೊಂಡು ವೈರಿಗಳನ್ನು ಪಟ್ಟನೆ

ಹಾರಿಹೋಗುವಂತೆ ಮಾಡಿ,
ನನ್ನ ಶ್ವೇತಚ್ಛತ್ರವನ್ನೂ ನನ್ನ
ರಾಜಪಟ್ಟವನ್ನೂ, ನನ್ನನ್ನೂ
ಕಾಪಾಡಬೇಕು, ಎಂದನು
ದುರ್ಯೋಧನ.

ವ||ಎಂಬುದುಂ
ಅಂಗಾಧಿರಾಜಂ
ನಿನ್ನಾಳ್ಗಳೊಳಾನಾರ
ದೊರೆಯನಗೆ
ಕಾರುಣ್ಯಂಗೆಯ್ವೆಯಾಗಿ
ಬೆಸಸಿದ ನಿನ್ನ

ದಯೆಗೆಯ್ದುವೀರವಟ್ಟಮೆಂಬು

ದೆನಗೆಣ್ಬಲರ ಪಟ್ಟಮೆಂಬುದಂ

ಬದ್ದವಣಂ ಬಾಜಿಸಿಕರ್ಣನಂ

ಕನಕಪೀಠದೊಳ್ ಕುಳ್ಳಿರಿಸಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂಗಾಧಿರಾಜಂ (ಎನ್ನಲು ಕರ್ಣನು) ನಿನ್ನಾಳ್ಗಳ್ಗೊಳು ಆನು ಆರ ದೊರೆ ಯನಗೆ (ನಿನ್ನ ಸೇವಕರಲ್ಲಿ ನನಗೆ ಯಾರು ಸಮಾನ?) ಕಾರುಣ್ಯಂ

ಗೆಯ್ಸೆಯಾಗಿ ಬೆಸಿಸಿದ ನಿನ್ನ ದಯೆಗೆಯ್ದು ವೀರವಟ್ಟಮೆಂಬುದು(ನೀನು ಕರುಣೆಯಿಂದ ದಯಮಾಡಿ ಆಜ್ಞೆಮಾಡಿಕೊಟ್ಟ ಈ ಪಟ್ಟವೆಂಬುದು) ಎನಗೆ ಎಣ್ಬಲರ ಪಟ್ಟಮೆಂಬುದಂ(ನನ್ನ ಎಂಟು ಬೆರಳಿನ ಅಗಲವಿರುವ ನನ್ನ ಹಣೆಗೆ ಕಟ್ಟುವ ಪಟ್ಟ ಎಂದನು.) ಬದ್ದವಣಂ ಬಾಜಿಸಿ

ಕರ್ಣನಂ ಕನಕಪೀಠದೊಳ್ ಕುಳ್ಳಿರಿಸಿ (ಮಂಗಳವಾದ್ಯನ್ನು ಬಾರಿಸಿ ಕರ್ಣನನ್ನು ಚಿನ್ನದ ಪೀಠದಲ್ಲಿ ಕುಳ್ಳಿರಿಸಿ)-

ವಚನ:ಅರ್ಥ: ಎನ್ನಲು ಕರ್ಣನು ದುರ್ಯೋಧನಾ ನಿನ್ನ ಸೇವಕರಲ್ಲಿ ನನಗೆ ಯಾರು ಸಮಾನ? ಯಾರೂ ಇಲ್ಲ! ನೀನು ಕರುಣೆಯಿಂದ ದಯಮಾಡಿ ಆಜ್ಞೆಮಾಡಿಕೊಟ್ಟ ಈ

ಪಟ್ಟವೆಂಬುದು ನನ್ನ ಎಂಟು ಬೆರಳಿನ ಅಗಲವಿರುವ ನನ್ನಹಣೆಗೆ ಕಟ್ಟುವ ಪಟ್ಟ ಎಂದನು. ಮಂಗಳವಾದ್ಯನ್ನು ಬಾರಿಸಿ ಕರ್ಣನನ್ನು ಚಿನ್ನದ ಪೀಠದಲ್ಲಿ ಕುಳ್ಳಿರಿಸಿ -

ಮೊರೆಯೆ ಪರೆಗಳ್
ಭೋರೆಂದೋರಂತೆ
ಮಂಗಳಗೀತಿಗಳ್
ನೆರೆಯೆ ಗಣಿಕಾನೀಕಂ
ಬಂದಾಡೆ ಪುಣ್ಯ ಜಲಂಗಳಿಂ|

ತರಿಸಿ ಮಿಸುತ್ತಾಗಳ್ ತಾಂ ತನ್ನ ಕೈಯೊಳೆ ಕಟ್ಟಿದಂ ಕುರುಪರಿವೃಢಂ ಕರ್ಣಂಗಾ ವೀರ ಪಟ್ಟದ ಪಟ್ಟಮಂ ||೫೨||

ಪದ್ಯ-೫೨:ಪದವಿಭಾಗ-ಅರ್ಥ:ಮೊರೆಯೆ ಪರೆಗಳ್ ಭೋರೆಂದು ಓರಂತೆ ಮಂಗಳಗೀತಿಗಳ್ ನೆರೆಯೆ (ತಮ್ಮಟೆಗಳು ಒಂದೇಸಮನೆ ಭೋರೆಂದು ಸದ್ದುಮಾಡುತ್ತಿರಲು,ಮಂಗಳ

ಗೀತೆಗಳು ಅದರ ಜೊತೆ ಸೇರಲು,) ಗಣಿಕಾನೀಕಂ ಬಂದು ಆಡೆ, ಪುಣ್ಯ ಜಲಂಗಳಿಂ ತರಿಸಿ ಮಿಸುತ್ತಾಗಳ್ (ಮೀಸು - ಸ್ನಾನ ಮಾಡಿಸು) (ವೇಶ್ಯೆರ ಸಮೂಹವು ಬಂದು ನೃತ್ಯಮಾಡುತ್ತಿರಲು, ಪುಣ್ಯತೀರ್ಥಗಳನ್ನು ತರಿಸಿ ಕರ್ಣನಿಗೆ ಸ್ನಾನಮಾಡಿಸಿ,) ತಾಂ ತನ್ನ ಕೈಯೊಳೆ ಕಟ್ಟಿದಂ

ಕುರುಪರಿವೃಢಂ (ಕೌರವಶ್ರೇಷ್ಟದುರ್ಯೋಧನನು) ಕರ್ಣಂಗೆ ಆ ವೀರ ಪಟ್ಟದ ಪಟ್ಟಮಂ.(ಆಗ ತನ್ನ ಕೈಯಿಂದಲೇ ವೀರಪಟ್ಟವನ್ನು ಅವನ ಹಣೆಗೆ ಕಟ್ಟಿದನು)

ಪದ್ಯ-೫೨:ಅರ್ಥ:

ತಮ್ಮಟೆಗಳು ಒಂದೇಸಮನೆ ಭೋರೆಂದು ಸದ್ದುಮಾಡುತ್ತಿರಲು,ಮಂಗಳ ಗೀತೆಗಳು ಅದರ ಜೊತೆ

ಸೇರಲು, ವೇಶ್ಯೆರ ಸಮೂಹವು ಬಂದು ನೃತ್ಯಮಾಡುತ್ತಿರಲು, ಕೌರವಶ್ರೇಷ್ಟದುರ್ಯೋಧನನು ಪುಣ್ಯತೀರ್ಥಗಳನ್ನು ತರಿಸಿ ಕರ್ಣನಿಗೆ ಸ್ನಾನಮಾಡಿಸಿ ಆಗ ತನ್ನ ಕೈಯಿಂದಲೇ ವೀರಪಟ್ಟವನ್ನು ಅವನ ಹಣೆಗೆ ಕಟ್ಟಿದನು.

ವ|| ಅಂತು ವೀರಪಟ್ಟಮಾವಿರನ ನೊಸಲೊಳಸದಳಮೆಸೆದುಪಾ

ಶ್ರಿಯಂಬಡೆಯೆ ಕಟ್ಟಿ
ನಿಜಾಂತಃಪುರ ಪರಿವಾರಂ
ಬೆರಸು ಸೇಸೆಯಿಕ್ಕಿ ತನ್ನ
ತುಡುವ ತುಡಿಗೆಗಳೆಲ್ಲಮಂ
ನೆರೆಯೆ ತುಡಿಸಿ ದೇವಸಬಳದ
ಹದಿನೆಂಟುಕೋಟಿ
ಪೊನ್ನುಮುಂ ತರಿಸಿ ಕೊಟ್ಟು,
ಮಣಿಮಯಮಂಡನಾಯೋಗ
ದೊಳ್ ನೆರೆಯೆ ಪಣ್ಣಿದ
ಮದಾಂಧಸಿಂಧುರಮನೇರಲ್
ತರಿಸಿಕೊಟ್ಟು ಬೀಡಿಂಗೆ

ಪೋಗೆನೆ , ಪೋಗೆ, ಹಸ್ತಿಯ
ಬೆಂಗೆ ವಂದುಸುತ್ತಿಳಿದು
ಪಗಲಂ ತಡವಿಕ್ಕಿದಂತೆ
ಬೆಳಗುವ ಕೈದೀವಿಗೆಗಳ ಬೆಳಗೆ
ಬೆಳಗಾಗೆ ತಲೆಯೊಳ್
ನಾಲಗೆಯುಳ್ಳ
ಬೂತುಗಳ್ಗೆಲ್ಲಮಿಲ್ಲೆನ್ನದೀಯು
ತ್ತಂ ನಿಜ ನಿವಾಸಕ್ಕೆ ವಂದು,
ನಿತ್ಯದಾನಕ್ಕೆಂದು
ನಿಯೋಗಿಗಳ್ ತಂದು
ಪುಂಜಿಸಿದ ಪಂಚರತ್ನದ

ಪೊನ್ನರಾಶಿಗಳನರ್ಥಿ ಜನಕ್ಕೆ
ಗೋಸನೆಯಿಟ್ಟು, ಕುಡುವೇಳ್ದು
ನಾಯಕರ್ಗೆಲ್ಲಮುಡಲುಂತುಡ
ಲುಂ ಕೊಟ್ಟು ನೇಸರ್
ಮೂಡುವಾಗಳ್ ತಮ್ಮ
ಪಡೆಯನೀ
ಮಾಲ್ಕೆಯೊಳೊಡ್ಡಿಮೆಂದು
ಪಡೆವಳರ್ಗೆ ಬೆಸಸಿ
ನಿಜವಿಜಯತುರಗರಥಂಗಳನ
ರ್ಚಿಸಿ, ಪೊಡವಟ್ಟು

ದರ್ಭಾಸ್ತರಣದೊಳಾಯಿರು ಳಂಕಳೆದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ವೀರಪಟ್ಟಮು ಆ ವಿರನ ನೊಸಲೊಳು (ಹಾಗೆ ಆ ವೀರಪಟ್ಟವು ಆ ವೀರನ ಹಣೆಯಲ್ಲಿ) ಅಸದಳಮೆಸೆದು ಉಪಾಶ್ರಯಂಬಡೆಯೆ ಕಟ್ಟಿ (ಅತಿಶಯವಾಗಿ ಪ್ರಕಾಶಿಸಿ ವಿಶೇಷಾಶ್ರಯವನ್ನು

ಪಡೆಯುವಂತೆ ಕಟ್ಟಿ)
ನಿಜಾಂತಃಪುರ ಪರಿವಾರಂ
ಬೆರಸು ಸೇಸೆಯಿಕ್ಕಿ (ತನ್ನ
ಅಂತ್ಃಪುರ
ಪರಿವಾರದೊಡನೆ ಕೂಡಿ
ಅಕ್ಷತೆಯಿಂದ ಹರಸಿ) ತನ್ನ
ತುಡುವ ತುಡಿಗೆಗಳೆಲ್ಲಮಂ
ನೆರೆಯೆ ತುಡಿಸಿ (ತಾನು
ತೊಡುವ
ಆಭರಣಗಳೆಲ್ಲವನ್ನೂ
ಅವನಿಗೆ ತುಂಬ ತೊಡಿಸಿ,)

ದೇವಸಬಳದ

ಹದಿನೆಂಟುಕೋಟಿ

ಪೊನ್ನುಮುಂ ತರಿಸಿ ಕೊಟ್ಟು,

(ದೇವತೆಗಳ ಅಳತೆಯಲ್ಲಿ

ಹದಿನೆಂಟು ಕೋಟಿ

ಸುವರ್ಣವನ್ನು ತರಿಸಿ ಕೊಟ್ಟ,)

ಮಣಿಮಯ

ಮಂಡನಾಯೋಗದೊಳ್

ನೆರೆಯೆ (ರತ್ನಖಚಿತವಾದ

ಅಲಂಕಾರಗಳಿಂದ

ಪೂರ್ಣವಾಗಿ ಸಿದ್ಧಪಡಿಸಿದ)

ಪಣ್ಣಿದ
ಮದಾಂಧಸಿಂಧುರಮನು
ಏರಲ್ ತರಿಸಿಕೊಟ್ಟು
(ಪೂರ್ಣವಾಗಿ ಸಿದ್ಧಪಡಿಸಿದ
ಮದ್ದಾನೆಯನ್ನು ಏರುವುದಕ್ಕೆ
ತರಿಸಿಕೊಟ್ಟು) ಬೀಡಿಂಗೆ
ಪೋಗೆನೆ , ಪೋಗೆ, (ಬೀಡಿಗೆ/
ವಸತಿಗೆ ಹೋಗು ಎಂದು
ಕಳುಹಿಸಿಕೊಟ್ಟನು.
ಹೋಗಲು,) ಹಸ್ತಿಯ
ಬೆಂಗೆವಂದು ಸುತ್ತಿಳಿದು

(ಕರ್ಣನು ಆನೆಯ ಬೆನ್ನಿಗೆ ಸುತ್ತಲೂ ವ್ಯಾಪಿಸಿ) ಪಗಲಂ ತಡವಿಕ್ಕಿದಂತೆ ಬೆಳಗುವ ಕೈದೀವಿಗೆಗಳ ಬೆಳಗೆ ಬೆಳಗಾಗೆ (ಹಗಲನ್ನು ಇನ್ನೂ ದೊಡ್ಡದು ಮಾಡಿದ ಹಾಗೆ ಬೆಳಗುತ್ತಿರುವ ಕೈದೀವಟಿಗೆಗಳ ಬೆಳಕೇ ಬೆಳಕಾಗಿರಲು) ತಲೆಯೊಳ್ ನಾಲಗೆಯುಳ್ಳ ಬೂತುಗಳ್ಗೆಲ್ಲಂ (ಮಿ) ಇಲ್ಲೆನ್ನದೆ ಈಯುತ್ತಂ (ತಲೆಯಲ್ಲಿ ನಾಲಗೆ ಇರುವ

ಎಲ್ಲಾ ಪ್ರಾಣಿಗಳಿಗೂ ಇಲ್ಲ ಎನ್ನದೆ ದಾನ ಮಾಡುತ್ತಾ) ನಿಜ ನಿವಾಸಕ್ಕೆ ವಂದು, (ತನ್ನ ಮನೆಗೆ ಬಂದನು. ಬಂದು-) ನಿತ್ಯದಾನಕ್ಕೆಂದು ನಿಯೋಗಿಗಳ್ ತಂದು ಪುಂಜಿಸಿದ ಪಂಚರತ್ನದ ಪೊನ್ನರಾಶಿಗಳನು ಅರ್ಥಿ ಜನಕ್ಕೆ (ನಿಯೋಗಿಗಳು ತಂದು ರಾಶಿ ಹಾಕಿಸಿದ ಪಂಚರತ್ನದ ಮತ್ತು ಚಿನ್ನದ ರಾಸಿಗಳನ್ನು

ಬೇಡುವವರಿಗೆ)
ಗೋಸನೆಯಿಟ್ಟು, (ಸಾರಿಸಿ,
ಘೋಷಣೆ- ಕೂಗಿ ಕರೆದು)
ಕುಡುವೇಳ್ದು (ದಾನ ಮಾಡಲು
ಹೇಳಿ) ನಾಯಕರ್ಗೆಲ್ಲಮು
ಉಡಲುಂ ತುಡಲುಂ ಕೊಟ್ಟು
(ನಾಯಕರುಗಳಿಗೆಲ್ಲಾ
ಉಡಲು ತೊಡಲು ಕೊಟ್ಟು)
ನೇಸರ್ ಮೂಡುವಾಗಳ್
ತಮ್ಮ ಪಡೆಯನೀ
ಮಾಲ್ಕೆಯೊಳು ಒಡ್ಡಿಮೆಂದು

(ಸೂರ್ಯೋದಯವಾದಾಗ
ನಮ್ಮ ಸೈನ್ಯವನ್ನು ಈ
ಕ್ರಮದಲ್ಲಿ ರಚಿಸಿ ಎಂದು)
ಪಡೆವಳರ್ಗೆ ಬೆಸಸಿ
(ನಾಯಕರಿಗೆ ಆಜ್ಞೆಮಾಡಿ)
ನಿಜ ವಿಜಯತುರಗ
ರಥಂಗಳನು ಅರ್ಚಿಸಿ,
ಪೊಡವಟ್ಟು (ತನ್ನ
ವಿಜಯಶಾಲಿಯಾದ ಕುದುರೆ
ಮತ್ತು ರಥಗಳನ್ನು ಪೂಜಿಸಿ
ನಮಿಸಿ) ದರ್ಭಾಸ್ತರಣದೊಳು

ಆ ಯಿರುಳಂ ಕಳೆದಾಗಳ್ (ದರ್ಭಾಸನದಲ್ಲಿ ರಾತ್ರಿಯನ್ನು ಕಳೆದನು. ಆಗ)-

ವಚನ:ಅರ್ಥ: ಹಾಗೆ ಆ ವೀರಪಟ್ಟವು ಆ ವೀರನ ಹಣೆಯಲ್ಲಿ ಅತಿಶಯವಾಗಿ ಪ್ರಕಾಶಿಸಿ ವಿಶೇಷಾಶ್ರಯವನ್ನು ಪಡೆಯುವಂತೆ ಕಟ್ಟಿ ತನ್ನ ಅಂತ್ಃಪುರ ಪರಿವಾರದೊಡನೆ ಕೂಡಿ ಅಕ್ಷತೆಯಿಂದ ಹರಸಿ ತಾನು

ತೊಡುವ
ಆಭರಣಗಳೆಲ್ಲವನ್ನೂ
ಅವನಿಗೆ ತುಂಬ ತೊಡಿಸಿದನು.
ದೇವತೆಗಳ ಅಳತೆಯಲ್ಲಿ
ಹದಿನೆಂಟು ಕೋಟಿ
ಸುವರ್ಣವನ್ನು ತರಿಸಿ
ಕೊಟ್ಟನು. ರತ್ನಖಚಿತವಾದ
ಅಲಂಕಾರಗಳಿಂದ
ಪೂರ್ಣವಾಗಿ ಸಿದ್ಧಪಡಿಸಿದ
ಮದ್ದಾನೆಯನ್ನು ಏರುವುದಕ್ಕೆ
ತರಿಸಿಕೊಟ್ಟು, ಬೀಡಿಗೆ/

ವಸತಿಗೆ ಹೋಗು ಎಂದು ಕಳುಹಿಸಿಕೊಟ್ಟನು. ಕರ್ಣನು ಆನೆಯ ಬೆನ್ನಿಗೆ ಸುತ್ತಲೂ ವ್ಯಾಪಿಸಿ ಹಗಲನ್ನು ಇನ್ನೂ ದೊಡ್ಡದು ಮಾಡಿದ ಹಾಗೆ ಬೆಳಗುತ್ತಿರುವ ಕೈದೀವಟಿಗೆಗಳ ಬೆಳಕೇ ಬೆಳಕಾಗಿರಲು, ತಲೆಯಲ್ಲಿ ನಾಲಗೆ ಇರುವ ಎಲ್ಲಾ ಪ್ರಾಣಿಗಳಿಗೂ ಇಲ್ಲ ಎನ್ನದೆ ದಾನ ಮಾಡುತ್ತಾ ತನ್ನ ಮನೆಗೆ ಬಂದನು.

ನಿಯೋಗಿಗಳು ತಂದು ರಾಶಿ
ಹಾಕಿಸಿದ ಪಂಚರತ್ನದ ಮತ್ತು
ಚಿನ್ನದ ರಾಸಿಗಳನ್ನು
ಬೇಡುವವರಿಗೆ ಕೂಗಿ ಕರೆದು
ದಾನ ಮಾಡಲು ಹೇಳಿ
ನಾಯಕರುಗಳಿಗೆಲ್ಲಾ ಉಡಲು
ತೊಡಲು ಕೊಟ್ಟು
ಸೂರ್ಯೋದಯವಾದಾಗ
ನಮ್ಮ ಸೈನ್ಯವನ್ನು ಈ
ಕ್ರಮದಲ್ಲಿ ರಚಿಸಿ ಎಂದು
ನಾಯಕರಿಗೆ ಆಜ್ಞೆಮಾಡಿ ತನ್ನ

ವಿಜಯಶಾಲಿಯಾದ ಕುದುರೆ ಮತ್ತು ರಥಗಳನ್ನು ಪೂಜಿಸಿ ನಮಿಸಿ ದರ್ಭಾಸನದಲ್ಲಿ ರಾತ್ರಿಯನ್ನು ಕಳೆದನು. ಆಗ-

ಯುದ್ಧಕ್ಕೆ ಹೊರಡುವ ಮೊದಲು, ಕರ್ಣನು ಭೀಷ್ಮರನ್ನು ಭೇಟಿಮಾಡಿ ಕ್ಷಮೆಯಾಚಿಸುವುದು

ಕಂ||ಉದಯಗಿರಿ

ತಟದೊಳುದಯಿಸು

ವದಿತಿಪ್ರಿಯಪುತ್ರನಲ್ಲದಿತ್ತೋ
ರ್ವಂ ಭಾ|
ನು ದಲೊಗೆದನೆನಿಪ ತೇಜದ
ಪೊದಳ್ಕಿಯಿಂ ಜನದ
ಮನಮನಜೆದಂ ಕರ್ಣಂ||೫೩
||

ಪದ್ಯ-೫೩:ಪದವಿಭಾಗ-ಅರ್ಥ:ಉದಯಗಿರಿ ತಟದೊಳು ಉದಯಿಸುವ ಅದಿತಿಪ್ರಿಯ ಪುತ್ರನಲ್ಲದೆ (ಉದಯಪರ್ತದ ದಡದಲ್ಲಿ

ಹುಟ್ಟುವ ಅದಿತಿದೇವಿಯ ಪ್ರಿಯಪುತ್ರನಾದ ಸೂರ್ಯನು ಅಲ್ಲದೆ) ಮತ್ತೋರ್ವಂ ಭಾನು ದಲ್ ಒಗೆದನು ಎನಿಪ ತೇಜದ (ಈ ಕಡೆ ಬೇರೊಬ್ಬ ಸೂರ್ಯನು ಹುಟ್ಟಿದ್ದಾನೆ ದಿಟ, ಎನ್ನವಂತಿರುವ ತೇಜಸ್ಸಿನ) ಪೊದಳ್ಕಿಯಿಂ ಜನದ ಮನಮಂ ಅಲೆದಂ ಕರ್ಣಂ (ತೇಜಸ್ಸಿನ ವ್ಯಾಪ್ತಿಯಿಂದ

ಜನರ ಮನಸ್ಸನ್ನು ಕರ್ಣನು ತುಂಬಿದನು.)

ಪದ್ಯ-೫೩:ಅರ್ಥ:ಪೂರ್ವದ ಬೆಟ್ಟದ ದಡದಲ್ಲಿ ಹುಟ್ಟುವ ಅದಿತಿದೇವಿಯ ಪ್ರಿಯಪುತ್ರನಾದ ಸೂರ್ಯನು ಅಲ್ಲದೆ, ಈ ಕಡೆ ಬೇರೊಬ್ಬ ಸೂರ್ಯನು ಹುಟ್ಟಿದ್ದಾನೆ, ದಿಟ, ಎನ್ನವಂತಿರುವ ತೇಜಸ್ಸಿನ ವ್ಯಾಪ್ತಿಯಿಂದ

ಜನರ ಮನಸ್ಸನ್ನು ಕರ್ಣನು ತುಂಬಿದನು.

ವ||ಆಗಳಾ ಚತುರ್ವೇದ ಪಾರಗರಪ್ಪ ಧರಾಮರ್ಗೆ ನಿತ್ಯದಾನಮಂ ಕೊಟ್ಟು ಸಿಡಿಲ ಬಳಗಮನೊಳಕೊಂಡಂತೆ ತಳತಳಿಸಿ ಪೊಳೆವ ಕೆಯ್ದುಗಳ್ ತೀವಿದ ವಾರುವದ ಬೋರಗುದುರೆಗಳೊಳ್ ಪೂಡಿದ ಪಸುರ್ವಣ್ಣ ರಥಮನೇರಿ ಮುನ್ನೊರ್ವನೆ

ಶರಶಯನದೊಳಿರ್ದ ಗಾಂಗೇಯನಲ್ಲಿಗೆ ಬಂದು ರಥದಿಂದಮಿಳಿದು ಮೂರು ಬಲವಂದು ತದೀಯ ಪಾದಪದ್ಮಗಳಿಂ ತಲೆಯಲಿಟ್ಟುಕೊಂಡು-

ವಚನ:ಪದವಿಭಾಗ-

ಅರ್ಥ:ಆಗಳಾ ಚತುರ್ವೇದ ಪಾರಗರಪ್ಪ ಧರಾಮರ್ಗೆ- ಧರೆಯ ಅಮರರಿಗೆ (ನಾಲ್ಕು ವೇದಗಳಲ್ಲಿ ಪಂಡಿತರಾಗಿರುವ

ಬ್ರಾಹ್ಮಣರಿಗೆ) ನಿತ್ಯದಾನಮಂ ಕೊಟ್ಟು (ನಿತ್ಯದಾನವನ್ನು ಕೊಟ್ಟು) ಸಿಡಿಲ ಬಳಗಮನು ಒಳಕೊಂಡಂತೆ (ಸಿಡಿಲರಾಶಿಯನ್ನು ಒಳಗೊಂಡಿರುವ ಹಾಗೆ) ತಳತಳಿಸಿ ಪೊಳೆವ ಕೆಯ್ದುಗಳ್ ತೀವಿದ (ಥಳಥಳಿಸಿ ಹೊಳೆಯುವ ಆಯುಧಗಳು ತುಂಬಿದ) ವಾರುವದ ಬೋರಗುದುರೆಗಳೊಳ್

ಪೂಡಿದ ಪಸುರ್ವಣ್ನ
ರಥಮನೇರಿ (ವಾರುವದ
ಬೋರ ಜಾತಿಯ
ಕುದುರೆಗಳನ್ನು ಹೂಡಿರುವ
ಹಸಿರು ಚಿನ್ನದ ರಥವನ್ನು ಏರಿ)
ಮುನ್ನಂ ಒರ್ವನೆ
ಶರಶಯನದೊಳಿರ್ದ
ಗಾಂಗೇಯನಲ್ಲಿಗೆ ಬಂದು
(ಮೊದಲು ಒಬ್ಬನೇ
ಏಕಾಂಗಿಯಾಗಿ ಬಾಣದ
ಹಾಸಿಗೆಯಲ್ಲಿ ಮಲಗಿದ್ದ

ಭೀಷ್ಮರ ಹತ್ತಿರಕ್ಕೆ ಬಂದು,) ರಥದಿಂದಂ ಇಳಿದು ಮೂರು ಬಲವಂದು (ರಥದಿಂದ ಇಳಿದು ಮೂರು ಸಲ ಪ್ರದಕ್ಷಿಣೆಮಾಡಿ) ತದೀಯ ಪಾದಪದ್ಮಗಳಿಂ ತಲೆಯಲಿಟ್ಟುಕೊಂಡು (ಅವನ ಪಾದಕಮಲಗಳನ್ನು ತಲೆಯಲ್ಲಿಟ್ಟುಕೊಂಡು ಹೇಳಿದನು)-

ವಚನ:ಅರ್ಥ:ಆಗ ನಾಲ್ಕು ವೇದಗಳಲ್ಲಿ ಪಂಡಿತರಾಗಿರುವ ಬ್ರಾಹ್ಮಣರಿಗೆ ನಿತ್ಯದಾನವನ್ನು ಕೊಟ್ಟು, ಸಿಡಿಲರಾಶಿಯನ್ನು ಒಳಗೊಂಡಿರುವ ಹಾಗೆ ಥಳಥಳಿಸಿ ಹೊಳೆಯುವ ಆಯುಧಗಳು ತುಂಬಿರುವ , ವಾರುವದ ಬೋರಜಾತಿಯ ಕುದುರೆಗಳನ್ನು ಹೂಡಿರುವ ಹಸಿರು ಚಿನ್ನದ ರಥವನ್ನು ಏರಿ, ಮೊದಲು ಒಬ್ಬನೇ

ಏಕಾಂಗಿಯಾಗಿ ಬಾಣದ ಹಾಸಿಗೆಯಲ್ಲಿ ಮಲಗಿದ್ದ ಭೀಷ್ಮರ ಹತ್ತಿರಕ್ಕೆ ಬಂದು, ರಥದಿಂದ ಇಳಿದು ಮೂರು ಸಲ ಪ್ರದಕ್ಷಿಣೆಮಾಡಿ, ಅವನ ಪಾದಕಮಲಗಳನ್ನು ತಲೆಯಲ್ಲಿಟ್ಟುಕೊಂಡು ಹೇಳಿದನು.-

ಕಂ||ಆಮ್ನಾತರಿಯದೆ ಮುಳಿದುಂ

ನಿಮ್ಮಡಿಯಂ ನೋಯೆ

ನುಡಿದೆನುರದೇಳಿಸಲೇ|

ನೆಮ್ಮಳವೆ ಮರಿವುದಾ ಮನ

ದುಮ್ಮಚ್ಚರಮಜ್ಜ

ನಿಮ್ಮನೆರೆಯಲೆ ಬಂದೆಂ||೫೪||

ಪದ್ಯ-೫೪:ಪದವಿಭಾಗ-

ಅರ್ಥ:ಆಂ ಮಾತು ಅರಿಯದೆ ಮುಳಿದುಂ ನಿಮ್ಮಡಿಯಂ ನೋಯೆ ನುಡಿದೆನು (ನಾನು ಮಾತನಾಡುವ ರೀತಿಯನ್ನು ತಿಳಿಯದೆ ಕೋಪಿಸಿಕೊಂಡು

ನಿಮ್ಮ ಮನಸ್ಸು
ನೋಯುವಹಾಗೆ
ಮಾತನಾಡಿದೆನು.) ಉರದೆ
ಏಳಿಸಲೇನು ಎಮ್ಮ ಅಳವೆ
(ಸುಮ್ಮನೆ ನಿಮ್ಮನ್ನ ತಿರಸ್ಕಾರ
ಮಾಡಲು ನನಗೆ
ಸಾಧ್ಯವೇನು?) ಮರಿವುದು ಆ
ಮನದ ಉಮ್ಮಚ್ಚರಂ ಅಜ್ಜ
(ಅಜ್ಜಾ! ಮನಸ್ಸಿನ ಆ ಹೆಚ್ಚಾದ
ಕೋಪವನ್ನು
ಮರೆತುಬಿಡುವುದು) ನಿಮ್ಮಂ

ಎರೆಯಲೆ ಬಂದೆಂ (ನಿಮ್ಮನ್ನು ಪ್ರಾರ್ಥಿಸುವುದಕ್ಕಾಗಿಯೇ ಬಂದಿದ್ದೇನೆ)

ಪದ್ಯ-೫೪:ಅರ್ಥ: ನಾನು ಮಾತನಾಡುವ ರೀತಿಯನ್ನು ತಿಳಿಯದೆ ಕೋಪಿಸಿಕೊಂಡು ನಿಮ್ಮ ಮನಸ್ಸು ನೋಯುವಹಾಗೆ ಮಾತನಾಡಿದೆನು. ಸುಮ್ಮನೆ ನಿಮ್ಮನ್ನ ತಿರಸ್ಕಾರ ಮಾಡಲು ನಮಗೆ ಸಾಧ್ಯವೇನು? ಅಜ್ಜ

ಮನಸ್ಸಿನ ಆ ಹೆಚ್ಚಾದ ಕೋಪವನ್ನು ಮರೆತುಬಿಡುವುದು.ನಿಮ್ಮನ್ನು ಪ್ರಾರ್ಥಿಸುವುದಕ್ಕಾಗಿಯೇ ಬಂದಿದ್ದೇನೆ.

ಧುರದೊಳ್ ನಿಮ್ಮಡಿಯಂಗೆಲ ಲರಿಯವು ಮಾಪಾಂಡುಸುತರನೆಮ್ಮಂಗದಿ ರ |
ಚ್ಚರಿಯಲ್ತೆ ಗೆಲ್ವರೆಂಬುದು

ಹರಿಗನೊಳಿರಿದೆಂತುಮೆನ್ನ ಚಲಮನೆ ಮೆರೆವೆಂ||೫೫||

ಪದ್ಯ-೫೫:ಪದವಿಭಾಗ-ಅರ್ಥ:ಧುರದೊಳ್ ನಿಮ್ಮಡಿಯಂ ಗೆಲಲು ಅರಿಯವು ಮಾಪಾಂಡುಸುತರನು (ಯುದ್ಧದಲ್ಲಿ ನಿಮ್ಮ ಪಾದಗಳೂ (ಗೌರವಕ್ಕಾಗಿ ಹೇಳುವುದು- ನೀವೂ) ಗೆಲ್ಲುವುದಕ್ಕೆ ಅಸಾಧ್ಯವಾದ ಆ

ಪಾಂಡವರನ್ನು) ಎಮ್ಮಂಗದಿರ್
ಅಚ್ಚರಿಯಲ್ತೆ ಗೆಲ್ವರೆಂಬುದು
(ನಮ್ಮಂತಹವರು
ಗೆಲ್ಲುವರೆಂಬುವುದು
ಆಶ್ಚರ್ಯವಲ್ಲವೇ?)
ಹರಿಗನೊಳು ಇರಿದು
ಎಂತುಮ್ ಎನ್ನ ಚಲಮನೆ
ಮೆರೆವೆಂ (ಅರ್ಜುನನೊಡನೆ
ಯುದ್ಧಮಾಡಿ ನನ್ನ ಛಲವನ್ನು
ಪ್ರಕಾಶಪಡಿಸುತ್ತೇನೆ.)

ಪದ್ಯ-೫೫:ಅರ್ಥ:

ಯುದ್ಧದಲ್ಲಿ ನಿಮ್ಮ ಪಾದಗಳೂ (ನೀವೂ) ಗೆಲ್ಲುವುದಕ್ಕೆ ಅಸಾಧ್ಯವಾದ ಆ ಪಾಂಡವರನ್ನು ನಮ್ಮಂತಹವರು ಗೆಲ್ಲುವರೆಂಬುವುದು ಆಶ್ಚರ್ಯವಲ್ಲವೇ? ಆದರೂ ಅರ್ಜುನನೊಡನೆ ಯುದ್ಧಮಾಡಿ ನನ್ನ ಛಲವನ್ನು ಪ್ರಕಾಶಪಡಿಸುತ್ತೇನೆ.

ವ||ಎಂಬುದುಂ ಕುರುಪಿತಾಮಹನಹರ್ಪತಿಸುತನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಕುರುಪಿತಾಮಹನು ಅಹರ್ಪತಿ ಸುತನಂ ಇಂತೆಂದಂ-

ವಚನ:ಅರ್ಥ:ಎನ್ನಲು ಕುರು ಪಿತಾಮಹನಾದ ಭೀಷ್ಮನು ಸೂರ್ಯಪುತ್ರನಾದ ಕರ್ಣನಿಗೆ ಹೀಗೆಂದನು-

ಅನವದ್ಯಂ||ನುಡಿವುದಂ
ಪತಿಭಕ್ತಿಯ ಪೆಂಪಿಂ ನೀಂ
ನುಡಿದ್ಯೆ ಪೆರತಂದದಿಂ
ನಡಿದೆಯಲ್ತೆ
ಮದಾಯಮಮೋಘಂ
ಪೂಳ್ವಡೆಯಲ್ಕೆನಗಕ್ಕುಮಿ|
ನ್ನೆಡೆಯೊಳೆಂದೆಮದದೆಂದು
ದೇಂ ತಪ್ಪಾದುದೆ
ನಮ್ಮ್ಯೋಜವರ್ಜಸಂ
ಬಡೆದ ಭಾರ್ಗವರ ಪ್ಪುದರಿಂದ
ನಂಟರುಮಂಗಮಹೀಪತೀ ||

೫೬||

ಪದ್ಯ-೫೬:ಪದವಿಭಾಗ-ಅರ್ಥ:ನುಡಿವುದಂ ಪತಿಭಕ್ತಿಯ ಪೆಂಪಿಂ ನೀಂ ನುಡಿದೈ (ಹೇಳುವುದನ್ನೆಲ್ಲಾ ನೀನು ಸ್ವಾಮಿಭಕ್ತಿಯ ಹೆಚ್ಚಳದಿಂದ ಹೇಳಿದ್ದೀಯೆ) ಪೆರತಂದದಿಂ ನಡಿದೆಯಲ್ತೆ (ಬೇರೆ ರೀತಿಯಿಂದ ನುಡಿಯಲಿಲ್ಲ.) ಮದಾಯಂ ಅಮೋಘಂ ('ನನ್ನ ಶಕ್ತಿಯು

ಮಿತಿಯಿಲ್ಲದ್ದು.) ಸೂಳ್
ವೆಡೆಯಲ್ಕೆ ಎನಗೆ ಅಕ್ಕುಂ ಇಂ
ಎಡೆಯೊಳ್ ಎಂದೆಂ
(ಯುದ್ಧದ ಸರದಿಯನ್ನು
ಪಡೆಯುವುದಕ್ಕೆ ಈ
ಸನ್ನಿವೇಶದಲ್ಲಿ ನನಗೂ
ಅವಕಾಶವುಂಟು) ಅದು
ಎಂದುದು ಏಂ ತಪ್ಪಾದುದೆ
(ಎಂದು ಹೇಳುವುದು
ತಪ್ಪಾದುದೇನು?) ನಮ್ಮ
ಓಜವರ್ (ನಮ್ಮಿಬ್ಬರ

ಗುರುಗಳಾಗಿದ್ದವರು)
ಜಸಂಬಡೆದ ಭಾರ್ಗವರ
ಪ್ಪುದರಿಂದ
(ಯಶಶ್ಯಾಲಿಗಳಾದ
ಪರಶುರಾಮರಾದುದರಿಂದ)
ನಂಟರುಂ ಅಂಗಮಹೀಪತೀ
(ಕರ್ಣಾ ನಾವು ನೆಂಟರೂ
ಆಗಿದ್ದೇವೆ). (ಸೋದರರು,
ಗುರು ತಂದೆಯ ಸಮಾನ)
ಪದ್ಯ-೫೬:ಅರ್ಥ:
ಹೇಳುವುದನ್ನೆಲ್ಲಾ ನೀನು

ಸ್ವಾಮಿಭಕ್ತಿಯ ಹೆಚ್ಚಳದಿಂದ ಹೇಳಿದ್ದೀಯೆ. ಬೇರೆ ರೀತಿಯಿಂದ ನುಡಿಯಲಿಲ್ಲ. 'ನನ್ನ ಶಕ್ತಿಯು ಮಿತಿಯಿಲ್ಲದ್ದು. ಸರದಿಯನ್ನು ಪಡೆಯುವುದಕ್ಕೆ ಈ ಸನ್ನಿವೇಶದಲ್ಲಿ ನನಗೂ ಅವಕಾಶವುಂಟು ಎಂದು ಹೇಳುವುದು ತಪ್ಪಾದುದೇನು? ನಮ್ಮಿಬ್ಬರ ಗುರುಗಳಾಗಿದ್ದವರು ಯಶಶ್ಶಾಲಿಗಳಾದ

ಪರಶುರಾಮರಾದುದರಿಂದ ಕರ್ಣಾ ನಾವು ನೆಂಟರೂ ಆಗಿದ್ದೇವೆ. (ಸೋದರರು, ಗುರು ತಂದೆಯ ಸಮಾನ)

ವ|| ಅದಲ್ಲದೆಯುಂ ನೀನೆಮಗೆ ಕುಂತಿಯ ಗಾಂಧಾರಿಯ ಮಕ್ಕಳ ಲೆಕ್ಕದ ಮೊಮ್ಮನೈ-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ ನೀನು ಎಮಗೆ ಕುಂತಿಯ ಗಾಂಧಾರಿಯ ಮಕ್ಕಳ ಲೆಕ್ಕದ

ಮೊಮ್ಮನ್ನೈ
(ಮೊಮ್ಮಗನ್ನೈಯ್ಯಾ)-
ವಚನ:ಅರ್ಥ:ಅಷ್ಟೇ ಅಲ್ಲದೆ
ನೀನು ನಮಗೆ ಕುಂತಿ ಮತ್ತು
ಗಾಂಧಾರಿಯರ ಮಕ್ಕಳಾದ
ಪಾಂದವ ಕೌರವರ ಹಾಗೆಯೇ
ಮೊಮ್ಮಗನ್ನೈಯ್ಯಾ!

ಉ||ನಿನ್ನನೆ ನಚ್ಚಿದಂ
ಕುರುಮಹೀಪತಿ ನಿನ್ನ
ಶರಾವಳಿಗಳ್ಗೆ ಮುಂ

ನ್ನನ್ನಡುಗುತ್ತುಮಿರ್ಪುದರಿಸಾಧ
ನ ಸಂಪದಮಂತೆ ಶಸ್ತ್ರಸಂ |
ಪನ್ನನೆ ಆಗಿ ಶಲ್ಯನನೆ
ಸಾರಥಿಯಾಗಿರೆ ಮಾಡಿ ಕಾದು
ನೀಂ
ನಿನ್ನಯ ಬಲ್ಲ
ಮಾಳ್ಕೆಯೊಳಿದಂ ನುಡಿದೆಂ
ನಿನಗಂಗವಲ್ಲಭಾ|| ೫೭||

ಪದ್ಯ-೫೬:ಪದವಿಭಾಗ-

ಅರ್ಥ:ನಿನ್ನನೆ ನಚ್ಚಿದಂ
ಕುರುಮಹೀಪತಿ (ಕೌರವ

ಮಹಾರಾಜನು ನಿನ್ನನೇ
ನಂಬಿದ್ದಾನೆ) ನಿನ್ನ
ಶರಾವಳಿಗಳ್ಗೆ ಮುಂನ್ನಂ
ನಡುಗುತ್ತುಮಿರ್ಪುದು
ಅರಿಸಾಧನ ಸಂಪದಮ್ (ನಿನ್ನ
ಬಾಣಗಳ ಸಮೂಹಕ್ಕೆ ಶತ್ರು
ಸಾಧನ ಸಂಪತ್ತೆಲ್ಲಾ ಮೊದಲೇ
ನಡುಗುತ್ತಿದೆ.) ಅಂತೆ ಶಸ್ತ್ರಸಂ
ಪನ್ನನೆ ಆಗಿ ಶಲ್ಯನನೆ
ಸಾರಥಿಯಾಗಿರೆ ಮಾಡಿ
(ಹಾಗೆಯೇ ಆಯುಧ

ಸಂಪತ್ತುಳ್ಳವನಾಗಿ ಶಲ್ಯನನ್ನೇ ಸಾರಥಿಯಾಗಿ ಮಾಡಿಕೊಂಡು) ಕಾದು ನೀಂ ನಿನ್ನಯ ಬಲ್ಲ ಮಾಳ್ಕೆಯೊಳಿದಂ ನುಡಿದೆಂ ನಿನಗೆ ಅಂಗವಲ್ಲಭಾ (ನಿನಗೆ ತಿಳಿದ ರೀತಿಯಲ್ಲಿ ಯುದ್ಧಮಾಡು ಕರ್ಣಾ; ಇದು ನನ್ನ ಸಲಹೆ ಅಷ್ಟೇ.)(

ಪದ್ಯ-೫೬:ಅರ್ಥ:ಕೌರವ ಮಹಾರಾಜನು ನಿನ್ನನೇ

ನಂಬಿದ್ದಾನೆ. ನಿನ್ನ ಬಾಣಗಳ ಸಮೂಹಕ್ಕೆ ಶತ್ರುಗಳ ಸಾಧನ ಸಂಪತ್ತೆಲ್ಲಾ ಮೊದಲೇ ನಡುಗುತ್ತಿದೆ. ಹಾಗೆಯೇ ಆಯುಧ ಸಂಪತ್ತುಳ್ಳವನಾಗಿ ಶಲ್ಯನನ್ನೇ ಸಾರಥಿಯಾಗಿ ಮಾಡಿಕೊಂಡು ನಿನಗೆ ತಿಳಿದ ರೀತಿಯಲ್ಲಿ ಯುದ್ಧಮಾಡು ಕರ್ಣಾ; ಇದು ನನ್ನ ಸಲಹೆ ಅಷ್ಟೇ.

ಕಂ|| ಎನೆ ನೆಗಳ್ದ ಕುಲದ

ಚಲದೊ

ಳ್ಪಿನ ಭೂಪನನೆನಗೆ

ತೇರನೆಸಗೊಂಡೊಡೆ ಸ |

ದ್ವಿನಯಮುಳಿದುರ್ಕಿ ಕುಲಹೀ

ನನೆಂಬ

ಪರಿವಾದಮೀಗಳೆನಗಾಗದಿರ

ದೇ||೫೮ ||

ಪದ್ಯ-೫೮:ಪದವಿಭಾಗ-

ಅರ್ಥ:ಎನೆ ನೆಗಳ್ದ ಕುಲದ

ಚಲದ ಒಳ್ಪಿನ ಭೂಪನಂ

ಎನಗೆ ತೇರನು
ಎಸಗೊಂಡೊಡೆ (ಭೀಷ್ಮನು
ಎನ್ನಲು, ಒಳ್ಳೆ ಕುಲವನ್ನೂ
ಛಲವನ್ನೂ ಉಳ್ಳ ರಾಜನಾದ
ಶಲ್ಯನನ್ನು ನನಗೆ
ಸಾರಥಿಯಾಗಿರು ಎಂದು
ಹೇಳಿದರೆ) ಸದ್ವಿನಯಮು
ಉಳಿದು (ಉಚಿತವಾದ
ವಿನಯವನ್ನು ಬಿಟ್ಟು) ಉರ್ಕಿ
ಕುಲಹೀನನೆಂಬ ಪರಿವಾದಂ
ಈಗಳೆ ಎನಗಾಗದೆ ಇರದೇ

(ಕುಲಹೀನನು ಗರ್ವಿಸಿ ನುಡಿದನೆಂಬ ಅಪವಾದವು ನನಗೆ ತಟ್ಟುವುದಿಲ್ಲವೇ?)

ಪದ್ಯ-೫೮:ಅರ್ಥ:ಭೀಷ್ಮನು ಎನ್ನಲು, ಒಳ್ಳೆ ಕುಲವನ್ನೂ ಛಲವನ್ನೂ ಉಳ್ಳ ರಾಜನಾದ ಶಲ್ಯನನ್ನು ನನಗೆ ಸಾರಥಿಯಾಗಿರು ಎಂದು ಹೇಳಿದರೆ ಉಚಿತವಾದ ವಿನಯವನ್ನು ಬಿಟ್ಟು ಕುಲಹೀನನು ಗರ್ವಿಸಿ

ನುಡಿದನೆಂಬ ಅಪವಾದವು
ನನಗೆ ತಟ್ಟುವುದಿಲ್ಲವೇ?

ಆಯದ ಕಟ್ಟಾಳ್ ನೀಂ ಮೊದ
ಲೀ ಯುಗದೊಳ್
ಪೆರರುಮೊಳರೆ ಸಾವಕ್ಕೆ ಜಯ
|
ಶ್ರೀಯಕ್ಕೆ ಧಾತ್ರನಿಂ ಕ
ಟ್ಟಾಯದ ಬಳಿಸಂದು
ನಿಮ್ಮನಾಂ ಮೆಚ್ಚಿಸುವೆಂ||
೫೯||

ಪದ್ಯ-೫೯:ಪದವಿಭಾಗ-ಅರ್ಥ:ಆಯದ ಕಟ್ಟಾಳ್ ನೀಂ ಮೊದಲೀ ಯುಗದೊಳ್ (ಈ ಯುಗದ ಶಕ್ತಿವಂತರಲ್ಲಿ ನೀವು ಮೊದಲಿಗರು.) ಪೆರರುಂ ಒಳರೆ (ಬೇರೆಯವರು ಇದ್ದಾರಯೇ?) ಸಾವಕ್ಕೆ ಜಯ ಶ್ರೀಯಕ್ಕೆ ಧಾತ್ರನಿಂ (ವಿಧಿವಶದಿಂದ ಸಾವಾಗಲಿ ಜಯಸಂಪದವಾಗಲಿ) ಕಟ್ಟಾಯದ ಬಳಿಸಂದು

(ಶೌರ್ಯದ ದಾರಿಯನ್ನೇ ಹಿಡಿದು) ನಿಮ್ಮನಾಂ ಮೆಚ್ಚಿಸುವೆಂ (ನಿಮ್ಮನ್ನು ಮೆಚ್ಚಿಸುತ್ತೇನೆ.)

ಪದ್ಯ-೫೯:ಅರ್ಥ:ಕರ್ಣ ಹೇಳಿದ, ಈ ಯುಗದ ಶಕ್ತಿವಂತರಲ್ಲಿ ನೀವು ಮೊದಲಿಗರು. ಬೇರೆಯವರು ಇದ್ದಾರಯೇ? ವಿಧಿವಶದಿಂದ ಸಾವಾಗಲಿ ಜಯಸಂಪದವಾಗಲಿ ಹೆಚ್ಚಿನ

ಶೌರ್ಯದ ದಾರಿಯನ್ನೇ
ಹಿಡಿದು ನಿಮ್ಮನ್ನು
ಮೆಚ್ಚಿಸುತ್ತೇನೆ.

ವ||ಎಂಬುದುಂ ಸಿಂಧೂತನೂಜನಂಗಾಧಿರಾಜನ ನಯದ ವಿನಯದ ಪಾಳಿಯ ಪಸುಗೆಯ ನುಡಿಗಳ್ಗೆ ಮನೆದೆಗೊಂಡೀತಂ ಕುಲಹೀನನಲ್ಲನುಭಯಕುಲ ಶುದ್ಧನಾಗಲೆ ವೇಳ್ಕುಮೆಂದು ನಿಶ್ಚೈಸಿ ನೀನೆಮಗಿಂಬು

ಕೆಯ್ಕೊಳ್ಳಡಂ ಸುಯೋಧನನ
ರಾಜ್ಯಮನೊಲ್ಲಡಂ ಶಲ್ಯನನೆ
ಸಾರಥಿ ಮಾಡಿ
ಕಾದುವುದೆಂದು ಪರಸಿ
ಪೋಗೆಂಬುದಂ ಮಹಾ
ಪ್ರಸಾದಮೆಂದು ಪೊಡಮಟ್ಟು
ಸಂಗ್ರಾಮಭೂಮಿಗೆ ವಂದು
ಹಸ್ತ್ಯಶ್ವರಥ
ಪದಾತಿಬಲಗಳನೊಂದು
ಮಾಡಿ
ಮಕರವ್ಯೂಹಮನೊಡ್ಡಿದಂ

ಪಾಂಡವ ಪತಾಕಿನಿಯುಮರ್ಧಚಂದ್ರವ್ಯೂಹಮನೊಡ್ಡಿ ನಿಂದುದಿತ್ತ ಪರಸೈನ್ಯಭೈರವಂ ಪುರುಷೋತ್ತಮನನಿಂತೆಂದಂ.

-

ವಚನ:ಪದವಿಭಾಗ-

ಅರ್ಥ:ಎಂಬುದುಂ ಸಿಂಧೂತನೂಜನು ಅಂಗಾಧಿರಾಜನ ನಯದ ವಿನಯದ ಪಾಳಿಯ

ಪಸುಗೆಯ ನುಡಿಗಳ್ಗೆ
ಮನೆದೆಗೊಂಡು (ಎನ್ನಲು
ಭೀಷ್ಮನು ಕರ್ಣನ
ನೀತಿಯಿಂದಲೂ
ನಮ್ರತೆಯಿಂದಲೂ ಕೂಡಿದ
ವಿವೇಕದ ಮಾತುಗಳಿಗೆ
ಮನಸ್ಸಿನಲ್ಲಿ ಸಂತೋಷಿಸಿ -
ಒಪ್ಪಿ) ಈತಂ
ಕುಲಹೀನನಲ್ಲನು
ಉಭಯಕುಲ ಶುದ್ಧನಾಗಲೆ
ವೇಳ್ಕುಮೆಂದು ನಿಶ್ಚೈಸಿ (

ಇವನು ಹೀನಕುಲದವನಲ್ಲ
ತಾಯಿ ತಂದೆ ಈ ಎರಡು
ವಂಶಗಳಿಂದಲೂ ಶುದ್ಧನೇ
ಆಗಿರಬೇಕು ಎಂದು ನಿಶ್ಚೈಸಿ,)
ನೀನು ಎಮಗೆ ಎ/ಇಂಬು
ಕೆಯ್ಕೊಡಂ(ನೀನು ನನಗೆ
ಇಂಬು/ ಬೆಲೆಕೊಡುವುದಾರೆ,
ಹೇಳಿದ್ದನ್ನು
ಮಾಡುವುದಾದರೆ)
ಸುಯೋಧನನ ರಾಜ್ಯಮನು
ಒಲ್ಲಡಂ (ದುರ್ಯೋಧನನ

ರಾಜ್ಯವನ್ನು
ಪ್ರೀತಿಸುವುದಾದರೆ) ಶಲ್ಯನನೆ
ಸಾರಥಿ ಮಾಡಿ
ಕಾದುವುದೆಂದು ಪರಸಿ
ಪೋಗು ಎಂಬುದಂ
(ಶಲ್ಯನನ್ನೇ ಸಾರಥಿಯಾಗಿ
ಮಾಡಿ ಕಾದುವುದು ಎಂದು
ಹರಸಿ ಬೀಳ್ಕೊಡಲು-) ಮಹಾ
ಪ್ರಸಾದಮೆಂದು ಪೊಡಮಟ್ಟು
ಸಂಗ್ರಾಮಭೂಮಿಗೆ ವಂದು
(ಕರ್ಣನು ಇದು

ಪರಮಾನುಗ್ರಹ ಎಂದು ನಮಸ್ಕಾರ ಮಾಡಿ ರಣರಂಗಕ್ಕೆ ಬಂದು) ಹಸ್ತ್ಯಶ್ವರಥ ಪದಾತಿಬಲಗಳನೊಂದು ಮಾಡಿ (ಆನೆ, ಕುದುರೆ,ರಥ ಮತ್ತು ಕಾಲಾಳು ಸೈನ್ಯವನ್ನು ಒಟ್ಟಿಗೆ ಸೇರಿಸಿ) ಮಕರವ್ಯೂಹಮನು ಒಡ್ಡಿದಂ (ಮೊಸಳೆಯ ಆಕಾರದ ಸೇನಾ ರಚನೆಯನ್ನು ಮಾಡಿ ಎದುರಿಸಿನಿಂತನು) ಪಾಂಡವ

ಪತಾಕಿನಿಯುಂ
ಅರ್ಧಚಂದ್ರವ್ಯೂಹಮನು
ಒಡ್ಡಿ ನಿಂದುದು ಇತ್ತ
(ಪಾಂಡವ ಸೈನ್ಯವೂ
ಅರ್ಧಚಂದ್ರಾಕಾರದ
ಸಸೇನಾರಚನೆಯನ್ನು ರಚಿಸಿ
ಎದುರಿಸಿ ನಿಂತಿತು. ಈ ಕಡೆ)
ಪರಸೈನ್ಯಭೈರವಂ
ಪುರುಷೋತ್ತಮನನು
ಇಂತೆಂದಂ (ಈ ಕಡೆ ಪರಸೈನ್ಯ
ಭೈರವನಾದ ಅರ್ಜುನನು

ಪುರುಷೋತ್ತಮನಾದ
ಕೃಷ್ಣನನ್ನು ಕುರಿತು
ಹೀಗೆಂದನು-).-
ವಚನ:ಅರ್ಥ:ಎನ್ನಲು
ಭೀಷ್ಮನು ಕರ್ಣನ
ನೀತಿಯಿಂದಲೂ
ನಮ್ರತೆಯಿಂದಲೂ ಕೂಡಿದ
ವಿವೇಕದ ಮಾತುಗಳಿಗೆ
ಮನಸ್ಸಿನಲ್ಲಿ ಸಂತೋಷಿಸಿ -
ಒಪ್ಪಿ , ಇವನು
ಹೀನಕುಲದವನಲ್ಲ ತಾಯಿ

ತಂದೆ ಈ ಎರಡು ವಂಶಗಳಿಂದಲೂ ಶುದ್ಧನೇ ಆಗಿರಬೇಕು ಎಂದು ನಿಶ್ಚೈಸಿ, ನೀನು ನನಗೆ ಬೆಲೆಕೊಟ್ಟು, ಹೇಳಿದ್ದನ್ನು ಮಾಡುವುದಾದರೆ, ದುರ್ಯೋರ್ಧನನ ರಾಜ್ಯವನ್ನು ಪ್ರೀತಿಸುವುದಾದರೆ, ಶಲ್ಯನನ್ನೇ ಸಾರಥಿಯಾಗಿ ಮಾಡಿ ಕಾದುವುದು ಎಂದು ಹರಸಿಬೀಳ್ಕೊಟ್ಟನು. ಕರ್ಣನು ಇದು ಪರಮಾನುಗ್ರಹ ಎಂದು

ನಮಸ್ಕಾರ ಮಾಡಿ ರಣರಂಗಕ್ಕೆ ಬಂದು ಆನೆ, ಕುದುರೆ,ರಥ ಮತ್ತು ಕಾಲಾಳು ಸೈನ್ಯವನ್ನು ಒಟ್ಟಿಗೆ ಸೇರಿಸಿ, ಮೊಸಳೆಯ ಆಕಾರದ ಸೇನಾ ರಚನೆಯನ್ನು ಮಾಡಿ ಎದುರಿಸಿನಿಂತನು. ಪಾಂಡವ ಸೈನ್ಯವೂ ಅರ್ಧಚಂದ್ರಾಕಾರದ ಸಸೇನಾರಚನೆಯನ್ನು ರಚಿಸಿ ಎದುರಿಸಿ ನಿಂತಿತು. ಈ ಕಡೆ ಪರಸೈನ್ಯ ಭೈರವನಾದ

ಅರ್ಜುನನು
ಪುರುಷೋತ್ತಮನಾದ
ಕೃಷ್ಣನನ್ನು ಕುರಿತು
ಹೀಗೆಂದನು-

<u>ಯುದ್ಧರಂಗಕ್ಕೆ ಕರ್ಣನ ಪ್ರವೇಶ</u>

ಮ||ಸ್ರ||
ಪಿರುದುಂಕಾಯ್ಪಿಂದಮೆನ್ಪೊ
ಳ್ ನರೆದಿರಿಯಲೆ ಪೊಣ್ದತ್ತ
ಸಂಸಪ್ತಕರ್ಕಳ್

ಕರಿವರ್ ಮತ್ತಿತ್ತ ಕರ್ಣಂ ಚಲ
ಚಲದಿಂದಿರಿಯಲ್
ನಿಂದನೇಗೆಯ್ವುದೆಂದಾಂ|
ನರನಂ ಮುನ್ನಂ ತ್ರಿಗರ್ತಾಧಿಪ
ಬಲಮನದಂ ನುರ್ಗು
ನೀನೆಂದು ತೇರಂ
ಹರಿ
ಕೊಂಡತ್ತುಯ್ದುನಿತ್ತೊರ್ಮೊದ
ಲುಭಯಬಲಂ ತಾಗಿ ಕಾದಿತ್ತು
ಬೇಗಂ||೬೦ ||

ಪದ್ಯ-೬೦:ಪದವಿಭಾಗ-ಅರ್ಥ:ಪಿರುದುಂಕಾಯ್ಪಿಂದಂ ಎನ್ನೊಳ್ ನರೆದು ಇರಿಯಲೆ ಪೊಣ್ದತ್ತ ಸಂಸಪ್ತರ್ಕರ್ಳ್ ಕರೆವರ್ (ಸಂಸಪ್ತಕರುಗಳು ವಿಶೇಷಕೋಪದಿಂದ ಕೂಡಿ ನನ್ನಲ್ಲಿ ಯುದ್ಧಮಾಡಲು ಪ್ರತಿಜ್ನೆ ಮಾಡಿ ಆಕಡೆಗೆ ಕರೆಯುತ್ತಿದ್ದಾರೆ.) ಮತ್ತೆ ಇತ್ತ ಕರ್ಣಂ ಚಲ ಚಲದಿಂದ ಇರಿಯಲ್ ನಿಂದನು (ಮತ್ತು

ಈ ಕಡೆ ಕರ್ಣನು ವಿಶೇಷ
ಛಲದಿಂದ ಯುದ್ಧಮಾಡಲು
ನಿಂತಿದ್ದಾನೆ.) ಏಗೆಯ್ಯುದೆಂದ
ಆನರನಂ ಮುನ್ನಂ
ತ್ರಿಗರ್ತಾಧಿಪ ಬಲಮನು
ಅದಂ ನುರ್ಗು ನೀನೆಂದು
(ಮೊದಲು ತ್ರಿಗರ್ತ ದೇಶದ
ರಾಜನ ಸೈನ್ಯವನ್ನು
ಪುಡಿಮಾಡು ನೀನು ಎಂದು)
ತೇರಂ ಹರಿ ಕೊಂಡು ಅತ್ತ
ಉಯ್ದುನು ಇತ್ತ ಒರ್ಮೊದಲ್

ಉಭಯಬಲಂ ತಾಗಿ ಕಾದಿತ್ತು ಬೇಗಂ (ರಥವನ್ನು ಕೃಷ್ಣನು ಆ ಕಡೆಗೆ ನೆಡಸಿಕೊಂಡು ಹೋದನು. ಈ ಕಡೆ ತಕ್ಷಣವೇ ಎರಡೂ ಸೈನ್ಯಗಳೂ ಸಂಘಟ್ಟಿಸಿ ಬೇಗ ಯುದ್ಧಮಾಡಿದವು.)

ಪದ್ಯ-೬೦:ಅರ್ಥ: ಸಂಸಪ್ತಕರುಗಳು ವಿಶೇಷಕೋಪದಿಂದ ಕೂಡಿ ನನ್ನಲ್ಲಿ ಯುದ್ಧಮಾಡಲು

ಪ್ರತಿಜ್ಞೆ ಮಾಡಿ ಆ ಕಡೆಗೆ ಕರೆಯುತ್ತಿದ್ದಾರೆ. ಮತ್ತು ಈ ಕಡೆ ಕರ್ಣನು ವಿಶೇಷ ಛಲದಿಂದ ಯುದ್ಧಮಾಡಲು ನಿಂತಿದ್ದಾನೆ. ಏನು ಮಾಡುವುದು ಎಂದು ಕೇಳಿದನು. ಮೊದಲು ತ್ರಿಗರ್ತ ದೇಶದ ರಾಜನ ಸೈನ್ಯವನ್ನು ಪುಡಿಮಾಡು ನೀನು ಎಂದು, ಎಂದು ಹೇಳಿ ರಥವನ್ನು ಕೃಷ್ಣನು ಆ ಕಡೆಗೆ

ನೆಡಸಿಕೊಂಡು ಹೋದನು. ಈ ಕಡೆ ತಕ್ಷಣವೇ ಎರಡೂ ಸೈನ್ಯಗಳೂ ಸಂಘಟ್ಟಿಸಿ ಬೇಗ ಯುದ್ಧಮಾಡಿದವು.

ವ||

ಅಂತುಚತುರ್ಬಲಂಗಳೊಂದೊಂದರೊಳ್ ಕಾಗೆ ನಟ್ಟ ಸರಳ್ವಿಡಿದು ಕರಗದ ಧಾರೆಯಂತೆ ಸುರಿವ ನೆತ್ತರ ಧಾರೆಗಳಂಬಿರಿವಿಡುವಿನಮತ್ತ ಮಿತ್ತಮುರ್ಚಿವೋಪ

ಕಿತ್ತಂಬುಗಳಂ ಸುರುಳ್ದುರುಳ್ದ
ಧನುರ್ಧರರುಮುಂ
ಧನುರ್ಧರರೆಚ್ಚ
ಶರನಿಕರಂಗಳಿಂ ನೆಯ್
ಪೇರುವಂತಂಬನೆ ಪೇರಿ
ಪರಗೆದೆದ ತುರುಷ್ಕ
ತುರಂಗಗಳಮಂ ಕೆದರಿ ಬೆದರಿ
ಬೆಂಕೊಂಡು ತೊತ್ತಳಿದುಳಿವ
ಮದೇಭಗಳುಮಂ
ಮಧೇಭಂಗಳನಾರ್ದು
ಬಿಟ್ಟಿಕ್ಕುವ ನಿಷಾದಿಗಳಳಿಯೆ

ಪೊರಜೆವಿಡಿದು ಕೊರಲ
ಬಳಿಗಳೊಳೆ ಕಾಲ್ಗೋದು
ಪರಿಯಿಸುವ
ರಸತ್ತಾರುಗರುಮಂ ಆ
ರಸತ್ತಾರು ಗರುಡುವಿಟ್ಟಿಯ
ಪಿರಿಕುತ್ತಿನ ಕಕ್ಕಡೆಯ ಕೋಳ್ಗೆ
ಮರಪಟಲಂ ಪಾಯ್ದು
ಕೆಡೆದನಾರೂಢದಿಂ ಪೇಸೇಳಿ
ತುಳಿದು ಕೊಲ್ವ ಕರಿಗಳ ಕರ
ವದನ ಗಾತ್ರ ಲಾಗೂಲ
ಘಾತದಿಂದ ಮಡಿದು ಕೆಡೆದ

ರಥಂಗಳಂ
ರಥಂಗಳಿಟ್ಟಡೆಯೊಳ್
ಕಿಂಕೊಳಿಯಾಗಿ ಪೆತ್ತ
ಕೆನ್ನೆತ್ತರೊಳ್ ಮೆತ್ತಿ
ರೂಪರಿಯಲಾಗದಂತಿರ್ದ
ವೀರಭಟರಗುರ್ವಂ ಪಡೆಯೆ
ಕರ್ಣನನೇಕವಿಕರ್ಣಕೋಟಿಗ
ಳಿಂ
ಪಾಂಡವಬಲಮನಸುಂಗೊಳೆ
ಕಾದುವಲ್ಲಿ ಪಾಂಡವ
ಬಲದೊಳ್ಪೆಸರರಕೆಯ

ನಾಯಕಂ ಕೃತವರ್ಮಂ ಕೌರವಬಲದ ಚಿತ್ರಸೇನನನಗುರ್ವಾಗೆ ತಾಗಿ-

ವಚನ:ಪದವಿಭಾಗ-

ಅರ್ಥ:ಅಂತುಚತುರ್ಬಲಂಗಳು ಒಂದೊಂದರೊಳ್ ಕಾದೆ (ಹಾಗೆ ನಾಲ್ಕುಬಗೆಯ ಸೈನ್ಯಗಳೂ ಒಂದರೊಡನೊಂದು ಸೇರಿ ಯುದ್ಧ ಮಾಡಲು) ನಟ್ಟ ಸರಳ್ ವಿಡಿದು ಕರಗದ

ಧಾರೆಯಂತೆ ಸುರಿವ ನೆತ್ತರ
ಧಾರೆಗಳ್ (ನಾಟಿದ
ಬಾಣವನ್ನೇ ಅನುಸರಿಸಿ
ಗಿಂಡಿಯಿಂದ ಸುರಿಯುವ
ಧಾರೆಯಂತೆ ಸುರಿಯುತ್ತಿರುವ
ರಕ್ತಧಾರೆಗಳು)
ಅಂಬಿರಿವಿಡುವಿನಂ
(ಪ್ರವಾಹವಾಗಿ - ಹರಿದವು)
ಅತ್ತಮಿತ್ತಂ ಉರ್ಚಿ ವೋಪ
ಕಿತ್ತಂಬುಗಳಂ (ಆ ಕಡೆ ಈ ಕಡೆ
ಭೇದಿಸಿ ಹೋಗುವಸಣ್ಣ

ಬಾಣಗಳಿಂದ) ಸುರುಳ್ದು
ಉರುಳ್ದ ಧನುರ್ಧರರುಮುಂ
(ಸುರುಳೀಗೊಂಡು
ಉರುಳಿಬಿದ್ದಿರುವ
ಬಿಲ್ಗಾರರಿಂದಲೂ)
ಧನುರ್ಧರರು ಎಚ್ಚ ಶರ
ನಿಕರಂಗಳಿಂ (ಬಿಲ್ಗಾರರು
ಹೊಡೆದ ಬಾಣಗಳ
ಸಮೂಹದಿಂದ) ನೆ/ ಎಯ್
ಪೇರುವಂತೆ ಅಂಬನೆ ಪೇರಿ
(ಮುಳ್ಳು ಹಂದಿಗಳನ್ನು

ಹೇರುವವಂತೆ ಬಾಣಗಳನ್ನು ಹೇರಿ) ಪರಗೆದೆದ ತುರುಷ್ಕ ತುರಂಗಗಗಳಮಂ (ಹಿಂದೆಬಿದ್ದ ತುರುಕದೇಶದ ಕುದುರೆಗಳಿಂದಲೂ) ಕೆದರಿ ಬೆದರಿ ಬೆಂಕೊಂಡು ತೊತ್ತಳಿದುಳಿವ ಮದೇಭಗಳುಮಂ (ಚೆಲ್ಲಾಪಿಲ್ಲೆಯಾಗಿ ಬಿದ್ದ ಹೆದರಿ ಹಿಂಬಾಲಿಸಿ ಅಜ್ಜುಗುಜ್ಜಾಗಿ ತುಳಿದುಹಾಕುವ

ಮದ್ದಾನೆಗಳಿಂದಲೂ,)
ಮಧೇಭಂಗಳನು ಆರ್ದು
ಬಿಟ್ಟಿಕ್ಕುವ ನಿಷಾದಿಗಳ
(ಮದ್ದಾನೆಗಳನ್ನು
ಕೂಡಿಕೊಂಡು ಛೂಬಿಡುವ
ಮಾವಟಿಗರೂ) ಅಳಿಯೆ
ಪೊರಜೆವಿಡಿದು ಕೊರಲ
ಬಳಿಗಳೊಳೆ ಕಾಲ್ಗೋದು
ಪರಿಯಿಸುವ (ನಾಶವಾಗಲು
ಹಗ್ಗವನ್ನೇ
ಹಿಡಿದುಕೊಂಡು,ಕತ್ತಿನ

ಪಕ್ಕದಲ್ಲಿಯೇ ತಮ್ಮ ಕಾಲನ್ನು ಪ್ರೋಣಿಸಿ, ಹರಿಯಿಸುವ - ಓಡಿಸುವ-) ರಸತ್ತಾರುಗರುಮಂ (ಆನೆಯ ಮೇಲೆ ಕುಳಿತು ಯುದ್ಧಮಾಡುವವರನ್ನೂ - ಮಾವಟಿಗರಿಂದಲೂ,) ಆ ರಸತ್ತಾರುಗರ ಇಡುವಿಟ್ಟಿಯ (ಆನೆಯಭಟರು ಎಸೆಯುತ್ತಿರುವ ಈಟಿಯ ಹೊಡೆತಕ್ಕೆ) ಪಿರಿಕುತ್ತಿನ

ಕಕ್ಕಡೆಯ ಕೋಳ್ಗೆ (ಪಿರಿಕುತ್ತಿ, ಕಕ್ಕಡೆ ಎಂಬ ಆಯುಧದ ಹೊಡೆತಕ್ಕೆ) ಮರಪಟಲಂ ಪಾಯ್ದು ಕೆಡೆದನ್ ಆರೂಢದಿಂ (ಮರಪಟಲದಿಂದ ಚಿಮ್ಮುವ ಕಾಯಂತೆ ಹಾರಿ ಕಳಿವನು ಕೆಡೆದ - ಕೆಳಗೆಬಿದ್ದವರನ್ನು.) ಪೇಸೇಳ್ವಿ ತುಳಿದು ಕೊಲ್ವ (ಹೇಸುವಂತೆ ತುಳಿದು ಕೊಲ್ಲುವ) ಕರಿಗಳ ಕರ ವದನ

ಗಾತ್ರ ಲಾಗೂಲ ಘಾತದಿಂದ
ಮಡಿದು ಕೆಡೆದ ರಥಂಗಳಂ
(ಆನೆಗಳ ಸೊಂಡಿಲು, ಮುಖ,
ಶರೀರ ಮತ್ತು ಬಾಲಗಳ
ಪೆಟ್ಟಿನಿಂದ ಒಡೆದು ಕೆಳಗೆ ಬಿದ್ದ
ತೇರುಗಳಿಂದಲೂ) ರಥಂಗಳ
ಇಟ್ಟಡೆಯೊಳ್
ಕಿಂಕೊಳಿಯಾಗಿ ಪೆತ್ತ
ಕೆನ್ನೆತ್ತರೊಳ್ ಮೆತ್ತಿ (ತೇರಿನ
ಇಕ್ಕಟ್ಟುಗಳಲ್ಲಿ ಕೆಸರಿನ
ಹಳ್ಳವಾಗಿ ಹೆತ್ತು

ಹೆಪ್ಪುಗೊಂಡಿರುವ ಕೆಂಪು ರಕ್ತದಲ್ಲಿ ಅಂಟಿಕೊಂಡು,) ರೂಪು ಅರಿಯಲಾಗದಂತೆ ಇರ್ದ ವೀರಭಟರ ಅಗುರ್ವಂ ಪಡೆಯೆ (ಆಕಾರವನ್ನು ತಿಳಿಯಲು ಆಗದಂತೆ,ವಿರೂಪವಾಗಿದ್ದರಿಂದಲೂ, ಭಯವನ್ನು ಉಂಟು ಮಾಡುವಂತೆ) ಕರ್ಣನು ಅನೇಕ ವಿಕರ್ಣಕೋಟಿಗಳಿಂ ಪಾಂಡವಬಲಮನು

ಅಸುಂಗೊಳೆ ಕಾದುವಲ್ಲಿ
(ಕರ್ಣನು ಅನೇಕ
ಬಾಣಸಮೂಹಗಳಿಂದ
ಪಾಂಡವ ಸೈನ್ಯದೊಡನೆ
ಪ್ರಾಣಾಪಹಾರ ಮಾಡುವ
ರೀತಿಯಲ್ಲಿ
ಯುದ್ಧಮಾಡುತ್ತಿರಲು)
ಪಾಂಡವ ಬಲದೊಳ್ ವೆಸರ
ಅರೆಕೆಯ ನಾಯಕಂ
ಕೃತವರ್ಮಂ (??)
ಕೌರವಬಲದ

ಚಿತ್ರಸೇನನಗುರ್ವಾಗೆ ತಾಗಿ (ಪಾಂಡವ ಸೈನ್ಯದ ಪ್ರಖ್ಯಾತನಅದ ಕೃತವರ್ಮನೂ, ಕೌರವಬಲ ನಾಯಕನಾದ ಚಿತ್ರಸೇನನೂ ಭಯಂಕರವಾದ ರೀತಿಯಲ್ಲಿ ಕಾದಲು ತೊಡಗಿದರು)-

ವಚನ:ಅರ್ಥ:ಹಾಗೆ ನಾಲ್ಕುಬಗೆಯ ಸೈನ್ಯಗಳೂ ಒಂದರೊಡನೊಂದು ಸೇರಿ ಯುದ್ಧ ಮಾಡಲು ನಾಟಿದ

ಬಾಣವನ್ನೇ ಅನುಸರಿಸಿ
ಗಿಂಡಿಯಿಂದ ಸುರಿಯುವ
ಧಾರೆಯಂತೆ ಸುರಿಯುತ್ತಿರುವ
ರಕ್ತಧಾರೆಗಳು ಪ್ರವಾಹವಾಗಿ
ಹರಿದವು. ಆ ಕಡೆ ಈ ಕಡೆ
ಭೇದಿಸಿ ಹೋಗುವಸಣ್ಣ
ಬಾಣಗಳಿಂದ
ಸುರುಳೀಗೊಂಡು
ಉರುಳಿಬಿದ್ದಿರುವ
ಬಿಲ್ಗಾರರಿಂದಲೂ ಬಿಲ್ಗಾರರು
ಹೊಡೆದ ಬಾಣಗಳ

ಸಮೂಹದಿಂದ ಮುಳ್ಳು
ಹಂದಿಗಳನ್ನು ಹೇರುವವಂತೆ
ಬಾಣಗಳನ್ನು ಹೇರಿ ಹಿಂದೆಬಿದ್ದ
ತುರುಕದೇಶದ
ಕುದುರೆಗಳಿಂದಲೂ
ಚೆಲ್ಲಾಪಿಲ್ಲೆಯಾಗಿ ಬಿದ್ದ ಹೆದರಿ
ಹಿಂಬಾಲಿಸಿ ಅಜ್ಜುಗುಜ್ಜಾಗಿ
ತುಳಿದುಹಾಕುವ
ಮದ್ದಾನೆಗಳಿಂದಲೂ,
ಮದ್ದಾನೆಗಳನ್ನು
ಕೂಡಿಕೊಂಡು ಘೂಬಿಡುವ

ಮಾವಟಿಗರೂ, ನಾಶವಾಗಲು
ಹಗ್ಗವನ್ನೇ
ಹಿಡಿದುಕೊಂಡು,ಕತ್ತಿನ
ಪಕ್ಕದಲ್ಲಿಯೇ ತಮ್ಮ ಕಾಲನ್ನು
ಪೋಣಿಸಿ, ಹರಿಯಿಸುವ
ಮಾವಟಿಗರಿಂದಲೂ, ಆನೆಯ
ಮೇಲೆ ಕುಳಿತು
ಯುದ್ಧಮಾಡುವವರಿಂದಲೂ,
ಆ ಮಾವಟಿಗರು
ಆನೆಯಭಟರು
ಎಸೆಯುತ್ತಿರುವ ಈಟಿಯ

ಹೊಡೆತಕ್ಕೆ, ಪಿರಿಕುತ್ತಿ, ಕಕ್ಕಡೆ ಎಂಬ ಆಯುಧದ ಹೊಡೆತಕ್ಕೆ, ಮರಪಟಲದಿಂದ ಚಿಮ್ಮುವ ಕಾಯಂತೆ ಹಾರಿ ಕಳಿವನು ಕೆಳಗೆ ಬಿದ್ದವರನ್ನು ಹೇಸುವಂತೆ ತುಳಿದು ಕೊಲ್ಲುವ ಆನೆಗಳಿಂದಲೂ, ಆನೆಗಳ ಸೊಂಡಿಲು, ಮುಖ, ಶರೀರ ಮತ್ತು ಬಾಲಗಳ ಪೆಟ್ಟಿನಿಂದ ಒಡೆದು ಕೆಳಗೆ ಬಿದ್ದ ತೇರುಗಳಿಂದಲೂ, ತೇರಿನ

ಇಕ್ಕಟ್ಟುಗಳಲ್ಲಿ ಕೆಸರಿನ
ಹಳ್ಳವಾಗಿ ಹೆತ್ತು
ಹೆಪ್ಪುಗೊಂಡಿರುವ ಕೆಂಪು
ರಕ್ತದಲ್ಲಿ ಅಂಟಿಕೊಂಡು,
ಆಕಾರವನ್ನು ತಿಳಿಯಲು
ಆಗದಂತೆ,ವಿರೂಪವಾಗಿದ್ದರಿಂ
ದಲೂ, ಭಯವನ್ನು ಉಂಟು
ಮಾಡುವಂತೆ, ಕರ್ಣನು
ಅನೇಕ
ಬಾಣಸಮೂಹಗಳಿಂದ
ಪಾಂಡವ ಸೈನ್ಯದೊಡನೆ

ಪ್ರಾಣಾಪಹಾರ ಮಾಡುವ

ರೀತಿಯಲ್ಲಿ

ಯುದ್ಧಮಾಡುತ್ತಿರಲು

ಪಾಂಡವ ಸೈನ್ಯದ

ಪ್ರಖ್ಯಾತನಾದ ಕೃತವರ್ಮನೂ,

ಕೌರವಬಲ ನಾಯಕನಾದ

ಚಿತ್ರಸೇನನೂ

ಭಯಂಕರವಾದ ರಿತಿಯಲ್ಲಿ

ಕಾದಲು ತೊಡಗಿದರು.

ಕಂ||ಚಿತ್ರ ಪತತ್ರಿಯಳೆರಪ ಪ

ತತ್ರಿಗಳಂ ಕಡಿದು

ಚಿತ್ರಸೇನನಾಗಳ್ |

ಚಿತ್ರವಧಮಾಗೆ ಕೊಂದೊಡೆ

ಧಾತ್ರಿಗೆ ತಾಂ ಚಿತ್ರಮಾಯ್ತು

ಭುಜಬಲಮವನಾ||೬೧||

ಪದ್ಯ-೬೧:ಪದವಿಭಾಗ-ಅರ್ಥ:ಚಿತ್ರ ಪತತ್ರಿಯಳ್ ಎರಪ (ವಿವಿಧ ಬಗೆಯ ಮೇಲೆ ಬೀಳುವ ಬಾಣಗಳನ್ನ) ಪತತ್ರಿಗಳಂ ಕಡಿದು (ಅಂತಹ ಬಾಣಗಳಿಂದಲೇ ಕತ್ತರಿಸಿ)

ಚಿತ್ರಸೇನನಂ ಆಗಳ್ (ಚಿತ್ರಸೇನನ್ನು ಆಗ) ಚಿತ್ರವಧಂ ಆಗೆ ಕೊಂದೊಡೆ (ವಿಚಿತ್ರವಾದ ರೀತಿಯಲ್ಲಿ ಕೊಂದರೆ) ಧಾತ್ರಿಗೆ ತಾಂ ಚಿತ್ರಮಾಯ್ತು ಭುಜಬಲಂ ಅವನಾ (ಅವನ/ ಕೃತವರ್ಮನ ಭುಜಬಲವು ಭೂಮಿಗೇ ವಿಚಿತ್ರವಾಯಿತು.)

- ಅನ್ವಯ: ಎರಪ ಪತತ್ರಿಗಳಂ(ಮೇಲೆ ಬೀಳುವ

ಬಾಣಗಳನ್ನು) ಚಿತ್ರ
ಪತತ್ರಿಯಳ್ ಕಡಿದು (ಅದೇ
ಬಗೆಯ ವಿಚಿತ್ರ
ಬಾಣಗಳಿಂದಲೇ ಕತ್ತರಿಸಿ)
ಆಗಳ್ ಚಿತ್ರಸೇನನಂ (ಆಗ
ಚಿತ್ರಸೇನನ್ನು) ಚಿತ್ರವಧಂ ಆಗೆ
ಕೊಂದೊಡೆ (ವಿಚಿತ್ರವಾದ
ರೀತಿಯಲ್ಲಿ ಕೊಂದರೆ)
ಭುಜಬಲಂ ಅವನಾ (ಅವನ/
ಕೃತವರ್ಮನ ಭುಜಬಲವು)

ಧಾತ್ರಿಗೆ ತಾಂ ಚಿತ್ರಮಾಯ್ತು(ಭೂಮಿಗೇ ವಿಚಿತ್ರವಾಯಿತು.)

ಪದ್ಯ-೬೧:ಅರ್ಥ:ವಿವಿಧ ಬಗೆಯ ಮೇಲೆ ಬೀಳುವ ಬಾಣಗಳನ್ನು ಅಂತಹ ಬಾಣಗಳಿಂದಲೇ ಕತ್ತರಿಸಿ, ಚಿತ್ರಸೇನನ್ನು ಆಗ ವಿಚಿತ್ರವಾದ ರೀತಿಯಲ್ಲಿ ಕೊಂದಾಗ ಕೃತವರ್ಮನ ಪರಾಕ್ರಮವು ಭೂಮಿಗೇ ವಿಚಿತ್ರವಾಯಿತು.

ವ||ಅಂತು ಕೌರವಬಲ ಪ್ರಧಾನ ನಾಯಕನಪ್ಪ ಚಿತ್ರಸೇನಂ ಕೃತವರ್ಮನ ಕಯ್ಯೊಳತೀತನಾದುದರ್ಕೇವೈಸಿ-

ವಚನ:ಪದವಿಭಾಗ-

ಅರ್ಥ:ಅಂತು ಕೌರವಬಲ ಪ್ರಧಾನ ನಾಯಕನಪ್ಪ (ಹಾಗೆ ಕೌರವಸೈನ್ಯದ ಮುಖ್ಯ ಸೇನಾಧಿಪತಿಯಾದ) ಚಿತ್ರಸೇನಂ ಕೃತವರ್ಮನ

ಕಯ್ಯೊಳ್ ಅತೀತನಾದುದರ್ಕೆ
ಏವೈಸಿ (ಚಿತ್ರಸೇನನು
ಕೃತವರ್ಮನ ಕೈಯಲ್ಲಿ
ಸತ್ತುದಕ್ಕೆ ದುಃಖಪಟ್ಟು)-
ವಚನ:ಅರ್ಥ: ಹಾಗೆ
ಕೌರವಸೈನ್ಯದ ಪ್ರಮುಖ
ಸೇನಾಧಿಪತಿಯಾದ
ಚಿತ್ರಸೇನನು ಕೃತವರ್ಮನ
ಕೈಯಲ್ಲಿ ಸತ್ತುದಕ್ಕೆ
ದುಃಖಪಟ್ಟು-

ಕಂ||ಅತಿ ಚಿತ್ರಂ ಚಿತ್ರನವಿ

ಶ್ರುತ ಶೌರ್ಯಮಿದೆನಿಸಿ ತಾಪ
ಚಿತ್ರನನಂತಾ|
ಪ್ರತಿವಿಂದ್ಯಂ ವಿಂಧ್ಯಾಚಲ
ಪತಿಯವೊಲವಿಚಳಿತನಾತ
ನಂ ಬಂದಾಂತಂ||೬೨ ||

ಪದ್ಯ-೬೨:ಪದವಿಭಾಗ-ಅರ್ಥ:ಅತಿ ಚಿತ್ರಂ,- ಚಿತ್ರನ (ಚಿತ್ರನೆಂಬುವವನ) ವಿಶ್ರುತ ಶೌರ್ಯಂ (ಪ್ರಸಿದ್ಧ ಶೌರ್ಯವು) ಇದು ಎನಿಸಿ (ಅತಿ ಚಿತ್ರಂ- ಬಹಳ

ಆಸ್ಚರ್ಯಕರವಾದುದು ಇದು ಎನ್ನಿಸಿಕೊಂಡು) ತಾಪ ಚಿತ್ರನಂ (ಮೇಲೆ ಬೀಳುವ ಚಿತ್ರನನ್ನು) ಅಂತು ಆ ಪ್ರತಿವಿಂದ್ಯಂ (ಹಾಗೆ ಆ ಪ್ರತಿವಿಂದ್ಯನೆಂಬುವವನು) ವಿಂಧ್ಯಾಚಲ ಪತಿಯವೊಲ್ (ಶ್ರೇಷ್ಠವಾದ ವಿಂಧ್ಯಪರ್ವತದಂತೆ) ಅವಿಚಳಿತಂ (ಸ್ಥಿರವಾಗಿರುವವನು) ಆತನಂ

(ಆ ಚಿತ್ರನನ್ನು) ಬಂದು ಆಂತಂ (ಬಂದು ಎದುರಿಸಿದನು.)

ಪದ್ಯ-೬೨:ಅರ್ಥ: ಈ ಹಿಂದೆಂದೂ ಕೇಳದೆ ಇದ್ದ ಈ ಚಿತ್ರನ ಪ್ರಸಿದ್ಧ ಶೌರ್ಯವು ಬಹಳ ಆಸ್ಚರ್ಯಕರವಾದುದು ಇದು ಎನ್ನಿಸಿಕೊಂಡು ಮೇಲೆ ಬೀಳುವ ಶ್ರೇಷ್ಠವಾದ ವಿಂಧ್ಯಪರ್ವತದಂತೆ ಸ್ಥಿರವಾಗಿರುವ ಚಿತ್ರನನ್ನು

ಪ್ರತಿವಿಂಧ್ಯನು ಬಂದು ಎದುರಿಸಿದನು.

ಆಂತನ ಮೇಗೆ ಶಿತ ಶರ
ಸಂತತಿಯಂ ಸುರಿಯೆನೋಡಿ
ಶರಪರಿಣತಿಯಂ|
ತಾಂ ತೋರ್ಪನೆನಗೆನುತ್ತಿರ
ದಂತನಿತುಮನೊಡನೆ
ಕಡಿದನೆಡೆಯೊಳೆಚಿತ್ರಂ ||೬೩||

ಪದ್ಯ-೬೩:ಪದವಿಭಾಗ-ಅರ್ಥ:ಆಂತನ ಮೇಗೆ (ಎದುರಿಸಿದವನ ಮೇಲೆ) ಶಿತ

ಶರ ಸಂತತಿಯಂ (ಹರಿತವಾದ
ಬಾಣಗಳ ಸಮೂಹವನ್ನು)
ಸುರಿಯೆ ನೋಡಿ (ಸುರಿಸಲು
ನೋಡಿ) ಶರಪರಿಣತಿಯಂ
ತಾಂ (ತಾನು ತನ್ನ
ಬಿಲ್ಲುವಿದ್ಯೆಯ ಪಾಂಡಿತ್ಯವನ್ನು
) ತೋರ್ಪನು ಎನಗೆ ಎನುತ್ತ
(ನನಗೆ
ತೋರಿಸುತ್ತಾನೆಯಲ್ಲವೇ?
ಎನ್ನುತ್ತಾ) ಇರದೆ ಅಂತು
(ಸಾವಕಾಶಮಾಡಗೆ ಹಾಗೆ)

ಅನಿತುಮನು ಒಡನೆ ಕಡಿದನು ಎಡೆಯೊಳೆ (ನಡುವೆಯೇ) ಚಿತ್ರಂ (ಆ ಅಷ್ಟನ್ನೂ ತಕ್ಷಣವೇ ಚಿತ್ರನು ಮಧ್ಯದಲ್ಲಿಯೇ ಕತ್ತರಿಸಿ ಹಾಕಿದನು.)

ಪದ್ಯ-೬೩:ಅರ್ಥ:

ಎದುರಿಸಿದ ಪ್ರತಿವಿಂಧ್ಯನ ಮೇಲೆ ಹರಿತವಾದ ಬಾಣಗಳ ಸಮೂಹವನ್ನು ಸುರಿಯಲು , ನೋಡಿ ತಾನು ತನ್ನ ಬಿಲ್ಲುವಿದ್ಯೆಯ ಪಾಂಡಿತ್ಯವನ್ನು

ನನಗೆ
ತೋರಿಸುತ್ತಾನೆಯಲ್ಲವೇ?
ಎನ್ನುತ್ತಾ ಸಾವಕಾಶಮಾಡಗೆ
ಹಾಗೆ ಆ ಅಷ್ಟನ್ನೂ ತಕ್ಷಣವೇ
ಚಿತ್ರನು ಮಧ್ಯದಲ್ಲಿಯೇ
ಕತ್ತರಿಸಿ ಹಾಕಿದನು.

ಕಡಿದೊಡೆ ಕಡುಪಿಂದಂ ಕಿಡಿ ಕಿಡಿಯಾಗಿ ಶಿತಾಸ್ತ್ರ ನಿಕರಮಂ ಪ್ರತಿವಿಂಧ್ಯಂ |
ಕಡಿದವನ ರಥಮನೊರ್ಮೆಯೆ

ಕಡಿದಂ ತಲೆಯಮನೊಂದೊಂದುದಾರುಣ ಶರದಿಂ ||೬೪||

ಪದ್ಯ-೬೪:ಪದವಿಭಾಗ-ಅರ್ಥ:ಕಡಿದೊಡೆ (ಹಾಗೆ ಬಾಣಗಳನ್ನು ಚಿತ್ರನು ಕತ್ತರಿಸಿದರೆ) ಕಡುಪಿಂದಂ ಕಿಡಿಕಿಡಿಯಾಗಿ (ತೀವ್ರತೆಯಿಂದ ಪ್ರತಿವಿಂಧ್ಯನು ಸಿಟ್ಟಿನಿಂದ ಕಿಡಿಕಿಡಿಯಾಗಿ) ಶಿತಾಸ್ತ್ರ ನಿಕರಮಂ < -

ಪ್ರತಿವಿಂಧ್ಯಂ (ಬರುತ್ತಿರುವ ಹರಿತವಾದ ಬಾಣಗಳ ಜಾಲವನ್ನು) ಕಡಿದು (ಕತ್ತರಿಸಿ) ಅವನ ರಥಮನು ಒರ್ಮೆಯೆ ಕಡಿದಂ(ಕತ್ತರಿಸಿ ಹಾಕಿದನು.) ತಲೆಯುಮಂ ಅದೊಂದು ದಾರುಣ ಶರದಿಂ (ಅವನ ತೇರನ್ನೂ ತಲೆಯನ್ನೂ ಒಂದು ಕ್ರೂರವಾದ ಬಾಣದಿಂದ ಒಂದೇ ಸಲ ಕತ್ತರಿಸಿ ಹಾಕಿದನು.)

ಪದ್ಯ-೬೪:ಅರ್ಥ: ಹಾಗೆ ಬಾಣಗಳನ್ನು ಚಿತ್ರನು ಕತ್ತರಿಸಿದರೆ, ತೀವ್ರತೆಯಿಂದ ಪ್ರತಿವಿಂಧ್ಯನು ಸಿಟ್ಟಿನಿಂದ ಕಿಡಿಕಿಡಿಯಾಗಿ ಬರುತ್ತಿರುವ ಹರಿತವಾದ ಬಾಣಗಳ ಜಾಲವನ್ನು ಕತ್ತರಿಸಿ ಅವನ ತೇರನ್ನೂ ತಲೆಯನ್ನೂ ಒಂದು ಕ್ರೂರವಾದ ಬಾಣದಿಂದ ಒಂದೇ ಸಲ ಕತ್ತರಿಸಿ ಹಾಕಿದನು.

ವ||ಅಂತು ಚಿತ್ರನಂ ಕೊಂದು ಕುರುಕ್ಷೇತ್ರದೊಳ್ ತನ್ನ ಮಾತೇ ಮಾತಾಗೆ ಕೌರವಬಲಮೆಲ್ಲಮುಂಪ್ರತಿವಿಂಧ್ಯನವಂದ್ಯ ಕೋಪೋದ್ರೇಕದಿಂದಾಸ್ಫೋಟಿಸಿ ಕೊಲ್ವಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಚಿತ್ರನಂ ಕೊಂದು ಕುರುಕ್ಷೇತ್ರದೊಳ್ (ಹಾಗೆ ಚಿತ್ರನನ್ನು ಕೊಂದು

ಕುರುಕ್ಷೇತ್ರದಲ್ಲಿ) ತನ್ನ ಮಾತೇ
ಮಾತಾಗೆ (ತನ್ನ ಶೌರ್ಯದ
ಮಾತೇ ಮಾತು ಆಡುತ್ತಿರಲು,)
ಕೌರವಬಲಮೆಲ್ಲಮುಂ
ಪ್ರತಿವಿಂಧ್ಯನವಂಧ್ಯ
ಕೋಪೋದ್ರೇಕದಿಂದ
ಆಸ್ಫೋಟಿಸಿ ಕೊಲ್ವಾಗಳ್
(ಪ್ರತಿವಿಂಧ್ಯನು
ಕೌರವಸೈನ್ಯವನ್ನೆಲ್ಲ
ವ್ಯರ್ಥವಾಗದ
ಕೋಪೋದ್ರೇಕದಿಂದ

ಶಬ್ದಮಾಡಿ- ತೋಳನ್ನು ತಟ್ಟಿ ಕೊಲ್ಲುವಾಗ)-
ವಚನ:ಅರ್ಥ:ಹಾಗೆ ಚಿತ್ರನನ್ನು ಕೊಂದು ಕುರುಕ್ಷೇತ್ರದಲ್ಲಿ ತನ್ನ ಶೌರ್ಯದ ಮಾತೇ ಮಾತು ಆಡುತ್ತಿರಲು, ಪ್ರತಿವಿಂಧ್ಯನು ಕೌರವಸೈನ್ಯವನ್ನೆಲ್ಲ ವ್ಯರ್ಥವಾಗದ ಕೋಪೋದ್ರೇಕದಿಂದ

ಶಬ್ದಮಾಡಿ- ತೋಳನ್ನು ತಟ್ಟಿ
ಕೊಲ್ಲುವಾಗ-

**ಮ||ಸ್ರ|| ಕುರುಸೈನ್ಯಾಂಭೋಧಿ
ತೊಳ್ದೆಯ್ದುಗಿದಪುದಿದನಾರಿಲ್ಲಿ
ಕೆಯ್ಕೊಳ್ವರೀ ಸಂ
ಗರದೊಳ್
ನಿಲ್ವನ್ನರಾರೆಂಬೆಡೆಯೊಳಿದಿರೊ
ಳಾನಲ್ತೆ ಬಂದಿರ್ದೆನೆಂದೆ|
ಲ್ಲರುಮಂ ಸಂತೈಸಿ ಕಣ್ಬಿಲ್ ಕರೆ
ಪೆರೆ ನೊಸಲೊಳ್
ಚಂಡದೋರ್ದಂಡದೊಳ್ ಕಂ**

ಧರದೊಳ್

ತನನುತ್ತಮಾಂಗಾಂತರದೊಳೆ

ಸೆಯೆ ನಿಂದಾಂತ

ನಾಚಾರ್ಯಪುತ್ರಂ||೬೫||

ಪದ್ಯ-00:ಪದವಿಭಾಗ-

ಅರ್ಥ:ಕುರುಸೈನ್ಯಾಂಭೋಧಿ (ಕುರುಸೈನ್ಯ ಅಂಭೋಧಿ-, ಕೌರವಸೇನಾ ಸಮುದ್ರವು) ತೊಳ್ಳು ಎಯ್ದು ಉಗಿದಪುದು ಇದನು ಆರು ಇಲ್ಲಿ ಕೆಯ್ಕೊಳ್ವರು (ನೂಕಲ್ಪಟ್ಟು

ವಿಶೇಷವಾಗಿ (ಹಿಂದಕ್ಕೆ)
ಎಳೆಯಲ್ಪಡುತ್ತಿದೆ. ಇದನ್ನು
ಇಲ್ಲಿ ಯಾರು ಬಂದು
ಕಾಯುವರು?) ಈ
ಸಂಗರದೊಳ್ ನಿಲ್ವನ್ನರು ಆರ
ಎಂಬೆಡೆಯೊಳ್ (ಈ
ಯುದ್ಧದಲ್ಲಿ
ನಿಲ್ಲುವಂತಹವರು ಯಾರು,
ಎನ್ನುವ ಸಮಯಕ್ಕೆ
ಸರಿಯಾಗಿ) ಇದಿರೊಳ್
ಆನಲ್ತೆ ಬಂದಿರ್ದೆನು

ಎಂದೆಲ್ಲರುಮಂ ಸಂತೈಸಿ
(ಆಚಾರ್ಯ ಪುತ್ರನಾದ
ಅಶ್ವತ್ಥಾಮನು- ಆ ಕಾರ್ಯಕ್ಕೆ
ಇದೋ ನಾನಲ್ಲವೇ ಎದುರಿಗೆ
ಬಂದಿದ್ದೇನೆ, ಎಂದು
ಎಲ್ಲರನ್ನೂ ಸಮಾಧಾನ
ಮಾಡಿ) ಕಣ್ಬಿಲ್, ಕರೆ, ಪೆರೆ,
ನೊಸಲೊಳ್ ಚಂಡ
ದೋರ್ದಂಡದೊಳ್
ಕಂಧರದೊಳ್ (ಮುಖದಲ್ಲಿ
ಮೂರು/ಕಣ್ಣು- ಹಣೆಯಲ್ಲಿ

ಬಿಲ್ಲು (ಮುಚ್ಚದ ಕಣ್ಣು),
ಪ್ರಚಂಡವಾದ
ದೋರ್ದಂಡದಲ್ಲಿ-
ಬಾಹುವಿನಲ್ಲಿ ಬಿಲ್ಲು, ಕಂಧರ-
ಕತ್ತಿನಲ್ಲಿ ಕರೆಯ
ವಿಷದಗುರುತು,) ತನ್ನ
ಉತ್ತಮಾಂಗ ಅಂತರದೊಳು
ಎಸೆಯೆ (ತನ್ನ ತಲೆಯಲ್ಲಿ ಪೆರೆ-
ಅರ್ಧಚಂದ್ರನೂ
ಪ್ರಕಾಶಿಸುತ್ತಿರಲು) ನಿಂದಾಂತ

ನಾಚಾರ್ಯಪುತ್ರಂ (ನಿಂತು ಆಶ್ವತ್ಥಾನು ಎದುರಿಸಿದನು)
ಪದ್ಯ-00:ಅರ್ಥ:ಕೌರವಸೇನಾ ಸಮುದ್ರವು ನೂಕಲ್ಪಟ್ಟು ವಿಶೇಷವಾಗಿ (ಹಿಂದಕ್ಕೆ) ಎಳೆಯಲ್ಪಡುತ್ತಿದೆ. ಇದನ್ನು ಇಲ್ಲಿ ಯಾರು ಬಂದು ಕಾಯುವರು? ಈ ಯುದ್ಧದಲ್ಲಿ ನಿಲ್ಲುವಂತಹವರು ಯಾರು, ಎನ್ನವ ಸಮಯಕ್ಕೆ ಸರಿಯಾಗಿ ಆಚಾರ್ಯ ಪುತ್ರನಾದ

ಅಶ್ವತ್ಥಾಮನು ಆ ಕಾರ್ಯಕ್ಕೆ ಇದೋ ನಾನು ಬಂದಿದ್ದೇನೆ, ಎಂದು ಎಲ್ಲರನ್ನೂ ಸಮಾಧಾನ ಮಾಡಿ ಬಂದು ಮುಖದಲ್ಲಿ ಮೂರು/ಕಣ್ಣು-ಹಣೆಯಲ್ಲಿ ಬಿಲ್ಲು (ಮುಚ್ಚದ ಕಣ್ಣು), ಪ್ರಚಂಡವಾದ ದೋರ್ದಂಡದಲ್ಲಿ-ಬಾಹುವಿನಲ್ಲಿ ಬಿಲ್ಲು, ಕಂಧರ-ಕತ್ತಿನಲ್ಲಿ ಕರೆಯ ವಿಷದಗುರುತು, ತನ್ನ

ತಲೆಯಲ್ಲಿ ಪೆರೆ-
ಅರ್ಧಚಂದ್ರನೂ
ಪ್ರಕಾಶಿಸುತ್ತಿರಲು ನಿಂತು
ಆಶ್ವತ್ಥಾನು ಎದುರಿಸಿದನು.

<u>ಯುದ್ಧಕ್ಕೆ ಭೀಮನ ಪ್ರವೇಶ</u>

ವ||ಆಗಳ್ ಪ್ರತಿವಿಂಧ್ಯನಂ ವಿಂಧ್ಯಾಚಲಮನ್ನೆಡಗಲಿಸಿದಗ ಸ್ಯನಂತೆ ಭೀಮಸೇನಂ ತಡೆಯದೆಡಗಲಿಸಿ

ರುದ್ರಾವತಾರನ ರಥಕ್ಕದಿರದೆ ತನ್ನ ರಥಮಂ ಪರಿಯಿಸಿ-

ವಚನ:ಪದವಿಭಾಗ-

ಅರ್ಥ:ಆಗಳ್ ಪ್ರತಿವಿಂಧ್ಯನಂ ವಿಂಧ್ಯಾಚಲಮನು ಎಡಗಲಿಸಿದ (ಎಡೆ-ಪಾದ ಕಲಿಸಿದ/ವಿಂಧ್ಯನು ಪಾದಕ್ಕೆ ನಮಿಸಿದಾಗ ಅಗಸ್ತ್ಯ ದಾಟಿದನು) ಅಗಸ್ತ್ಯನಂತೆ ಭೀಮಸೇನಂ ತಡೆಯದೆ ಎಡಗಲಿಸಿ (ಆಗ ವಿಂಧ್ಯ

ಪರ್ವತವನ್ನು ಕಾಲಿಗೆ
ಬೀಳಿಸಿದ ಅಗಸ್ತ್ಯ ಋಷಿಯ
ಹಾಗೆ ಭೀಮನು ಸಾವಕಾಶ
ಮಾಡದೆ ದಾಟಿ (ಅವರಿಬ್ಬರ
ಮಧ್ಯೆ ಹಾರಿಬಂದು))
ರುದ್ರಾವತಾರನ ರಥಕ್ಕೆ
ಅದಿರದೆ ತನ್ನ ರಥಮಂ
ಪರಿಯಿಸಿ (ಅಶ್ವತ್ಥಾಮನ
ತೇರಿಗೆ (ಎದುರಾಗಿ) ಹೆದರದೆ
ತನ್ನ ರಥವನ್ನು ಹರಿಯಿಸಿ,)-

ವಚನ:ಅರ್ಥ: ಆಗ ವಿಂಧ್ಯ ಪರ್ವತವನ್ನು ಕಾಲಿಗೆ ಬೀಳಿಸಿದ ಅಗಸ್ತ್ಯ ಋಷಿಯ ಹಾಗೆ ಭೀಮನು ಸಾವಕಾಶ ಮಾಡದೆ ದಾಟಿ ಅಶ್ವತ್ಥಾಮನ ತೇರಿಗೆ (ಎದುರಾಗಿ) ಹೆದರದೆ ತನ್ನ ರಥವನ್ನು ಹರಿಯಿಸಿದನು.

ಚಂ||

ನಿನಗುರದೇನುಮಲ್ಲದಳಿಗಂಡ

ರಿದಿರ್ಚುವರಲ್ಲರೆನ್ನನಾಂ

ಪನಿತಳವುಳ್ಳೊಡಿತ್ತ ಮುಗುಳಿಂದು ಶರಾವಳಿಯಿಂದೆ ಪೂಳ್ದೊಡಂ| ಬಿನ ಸರಿಸೋನೆ ತಂದಲಿದು ದಲ್ ಪೊಸಾತಾಯ್ತೆನೆ ಕಂಡರೆಲ್ಲಮಂ ಬಿನ ಮಳೆಗಾಲವಾಯ್ತು ಕುರುಭೂಮಿಗೆ ಭೀಮನದೇಂ ಪ್ರತಾಪಿಯೋ ||೬೬||

ಪದ್ಯ-00:ಪದವಿಭಾಗ-ಅರ್ಥ:ನಿನಗೆ ಉರದೆ

(ಸುಮ್ಮನೆ ಇರದೆ)
ಏನುಮಲ್ಲದ ಅಳಿಗಂಡರ್
(ಶಕ್ತಿ ಇಲ್ಲದ ಸಾಮಾನ್ಯ
ಶಕ್ತಿಹೀನರು ನಿನಗೆ)
ಇದಿರ್ಚುವರಲ್ಲರ್
(ಎದುರಿಸುವವರಲ್ಲ.) ಎನ್ನನು
ಆಂಪನಿತು ಅಳವು ಉಳ್ಳೊಡೆ
ಇತ್ತ ಮುಗುಳ್ (ನನ್ನನ್ನು
ಪ್ರತಿಭಟಿಸುವಷ್ಟು ನಿನಗೆ
ಸಾಮರ್ಥ್ಯವಿದ್ದರೆ ಈ ಕಡೆ
ತಿರುಗು) ಎ/ಇಂದು

ಶರಾವಳಿಯಿಂದೆ ಪೂಳ್ದೊಡೆ
(ಎಂದು ಭೀಮನು ಬಾಣಗಳ
ಸಮೂಹದಿಂದ ಅವನನ್ನು
ಹೂಳಲು,) ಅಂಬಿನ
ಸರಿಸೋನೆ ತಂದಲು (ಬಾಣದ
ಮಳೆ, ಜಡಿಮಳೆ, ತುಂತುರು
ಮಳೆಗಳು - ಸುರಿಯಲು,)
ಇದು ದಲ್ ಪೊಸಾತಾಯ್ತು
ಎನೆ (ಇದು ನಿಜಕ್ಕೂ
ಹೊಸದಾಯಿತು ಎಂದು)
ಕಂಡರೆಲ್ಲಂ ಅಂಬಿನ

ಮಳೆಗಾಲವಾಯ್ತು
ಕುರುಭೂಮಿಗೆ
(ಕುರುಭೂಮಿಗೆ ಬಾಣದ
ಹೊಸಮಳೆಗಾಲವನ್ನು
ಭೀಮನು
ಉಂಟುಮಾಡಿದನು.)
ಭೀಮನು ಅದೇಂ
ಪ್ರತಾಪಿಯೋ (ಭೀಮನು
ಅದೆಂತಹ
ಪ್ರತಾಪಶಾಲಿಯೋ! ಮಹಾ
ಪ್ರತಾಪಿ.)

ಪದ್ಯ-00:ಅರ್ಥ: ಶಕ್ತಿ ಇಲ್ಲದ ಸಾಮಾನ್ಯ ಶಕ್ತಿಹೀನರು ನಿನಗೆ ಎದುರಿಸುವವರಲ್ಲ. ನನ್ನನ್ನು ಪ್ರತಿಭಟಸುವಷ್ಟು ನಿನಗೆ ಸಾಮರ್ಥ್ಯವಿದ್ದರೆ ಈ ಕಡೆ ತಿರುಗು ಎಂದು ಭೀಮನು ಬಾಣಗಳ ಸಮೂಹದಿಂದ ಅವನನ್ನು ಹೂಳಲು, ಬಾಣದ ಮಳೆ, ಜಡಿಮಳೆ, ತುಂತುರು ಮಳೆಗಳು ಸುರಿಯಲು, ಇದು ನಿಜಕ್ಕೂ ಹೊಸದಾಯಿತು

ಎಂದು ಕಂಡವರೆಲ್ಲರೂ ಹೇಳವಹಾಗೆ ಕುರುಭೂಮಿಗೆ ಬಾಣದ ಹೊಸಮಳೆಗಾಲವನ್ನು ಭೀಮನು ಉಂಟುಮಾಡಿದನು. ಭೀಮನು ಅದೆಂತಹ ಪ್ರತಾಪಶಾಲಿಯೋ! ಮಹಾ ಪ್ರತಾಪಿ.

ಚಂ||ಗದೆಯೊಳೆ ಜಟ್ಟಿಗಂ ಪವನನಂದನನೆಂಬರ ಮಾತು

ಮಾತದ
ಲ್ಲದು ಸುರಸಿಂಧುಪುತ್ರ ಗುರು
ಕರ್ಣ ಕೃಪ ಪ್ರಮುಕರ್ಗಳಿಂತು
ನೇ|
ರಿದರೆ
ಶರಾಸನಾಗಮದೊಳೆಂಬಿನಂ
ಬರದೊಳ್ ಸುರಕರ್ಗಳೇಂ
ಪುದಿದನೊ ಬಾಣಜಾಲದೆ
ಗುರುಪ್ರಿಯ ನಂದನನಂ
ಮರುತ್ಸುತಂ||೬೭ ||

ಪದ್ಯ-೬೭:ಪದವಿಭಾಗ-ಅರ್ಥ:ಗದೆಯೊಳೆ ಜಟ್ಟಿಗಂ ಪವನನಂದನು ಎಂಬರ ಮಾತು ಮಾತು ಅದಲ್ಲದು (ಭೀಮನು ಗದಾಪ್ರಯೋಗದಲ್ಲಿ ಮಾತ್ರಾ ಗಟ್ಟಿಗ ಎನ್ನುವವರ ಮಾತು ಮಾತಲ್ಲ/ ಸರಿಯಲ್ಲ.) ಸುರಸಿಂಧುಪುತ್ರ ಗುರು ಕರ್ಣ ಕೃಪ ಪ್ರಮುರ್ಕಳು ಇಂತು ನೇರಿದರೆ

ಶರಾಸನಾಗಮದೊಳು (ಕೃಪನೇ ಮೊದಲಾದ ಪ್ರಮುಖರು ಹೀಗೆ ಬಿಲ್ವಿದ್ಯೆಯಲ್ಲಿ ಪಂಡಿತರೇ?/ ಇರಲಾರರು) ಎಂಬಿನ ಅಂಬರದೊಳ್ ಸುರರ್ಕಳು, ಏಂ ಪುದಿದನೊ>> (ಎನ್ನುವಂತೆ ದೇವತೆಗಳು ಆಕಾಶದಲ್ಲಿ ಹೊಗಳುವ ಹಾಗೆ;) ಬಾಣಜಾಲದೆ ಗುರುಪ್ರಿಯ ನಂದನನಂ

ಮರುತ್ಸುತಂ -<< ಏಂ
ಪುದಿದನೊ(ಭೀಮನು
ಅಶ್ವತ್ಥಾಮನನ್ನು ಬಾಣಗಳ
ಸಮೂಹದಿಂದ ಏನು
ಸಂಪೂರ್ಣವಾಗಿ
ಮುಚ್ಚಿಬಿಟ್ಟನೋ!.)
ಪದ್ಯ-೬೭:ಅರ್ಥ: ಭೀಮನು
ಗದಾಪ್ರಯೋಗದಲ್ಲಿ ಮಾತ್ರಾ
ಗಟ್ಟಿಗ ಎನ್ನುವವರ ಮಾತು
ಮಾತಲ್ಲ; ಭೀಷ್ಮ ,ದ್ರೋಣ,
ಕರ್ಣ ಕೃಪನೇ ಮೊದಲಾದ

ಪ್ರಮುಖರು ಹೀಗೆ
ಬಿಲ್ವಿದ್ಯೆಯಲ್ಲಿ ಪಂಡಿತರೇ?/
ಇರಲಾರರು ಎನ್ನುವಂತೆ
ದೇವತೆಗಳು ಆಕಾಶದಲ್ಲಿ
ಹೊಗಳುವ ಹಾಗೆ ಭೀಮನು
ಅಶ್ವತ್ಥಾಮನನ್ನು ಬಾಣಗಳ
ಸಮೂಹದಿಂದ
ಸಂಪೂರ್ಣವಾಗಿ
ಮುಚ್ಚಿಬಿಟ್ಟನು.

ವ||ಆಗಳಶ್ವತ್ಥಾಮಂ ಭೀಮೋದ್ದಾಮ ಶ್ಯಾಮ

ಜಳಧರ ವಿಮುಕ್ತ ಶರಾವಳಿಯ ಬಳಸಂ ಕಂಡು ಮುಗುಳ್ನಗೆ ನಕ್ಕುಮೀತನುಮೆಮ್ಮಂ ಬಳಸಿದಪ್ಪನೆಂದು-

ವಚನ:ಪದವಿಭಾಗ-

ಅರ್ಥ:ಆಗಳ್ ಅಶ್ವತ್ಥಾಮಂ ಭೀಮೋದ್ದಾಮ ಶ್ಯಾಮ ಜಳಧರ (ಭೀಮನೆಂಬ ವಿಸ್ತಾರವಾದ ನೀಲಮೇಘದಿಂದ, ಶ್ಯಾಮ- ನೀಲ,ಜಲಧರ- ಮೇಘ)

ವಿಮುಕ್ತ ಶರಾವಳಿಯ ಬಳಸಂ ಕಂಡು (ಬಿಡಲ್ಪಟ್ಟ ಬಾಣಸಮೂಹದ ವಿಸ್ತಾರವನ್ನು ಕಂಡು) ಮುಗುಳ್ನಗೆ ನಕ್ಕುಂ ಈತನುಂ ಎಮ್ಮಂ ಬಳಸಿದಪ್ಪನು ಎಂದು (ಬಳಸು- ಮುಚ್ಚು; ಇವನೂ ನಮ್ಮನ್ನು ಬಾಣದಿಂದ ಮುಚ್ಚುತ್ತಾನಲ್ಲವೇ ಎಂದು-)- **ವಚನ:ಅರ್ಥ**:ಆಗ ಅಶ್ವತ್ಥಾಮನು ಭೀಮನೆಂಬ

ವಿಸ್ತಾರವಾದ

ನೀಲಮೇಘದಿಂದ ಬಿಡಲ್ಪಟ್ಟ

ಬಾಣಸಮೂಹದ

ವಿಸ್ತಾರವನ್ನು ಕಂಡು ಹುಸಿನಗೆ

ನಕ್ಕು, ಇವನೂ ನಮ್ಮನ್ನು

ಬಾಣದಿಂದ

ಮುಚ್ಚುತ್ತಾನಲ್ಲವೇ ಎಂದು-

ಚಂ||ಅನಲಶಿಖಾಕಳಾಪವನೆ

ಭೋರ್ಗರೆದಾರ್ದು

ಗುಳ್ಚಿನ್ನಮಪ್ಪಗು

ರ್ವಿನ

ಶರಸಂಕಲಗಳಂಗಳೊಳೆ

ಘೋರ್ಗರೆದಾರ್ದಿಸೆ

ಭೀಮನೆಚ್ಚ ನ|

ಚ್ಚಿನ ಘನ ಭಾಣಜಾಳಮದು

ಘೋಂಕನೆ

ನೋಡುವೊಡಾಳಜಾಳವಾ

ಯ್ತೆನೆ ಕಡಿದೊಟ್ಟಿ ಸುಟ್ಟವು

ಪ್ರತತಿಗಳಂ

ಗುರುಪುತ್ರನಂಬುಗಳ್||೬೮||

ಪದ್ಯ-೬೮:ಪದವಿಭಾಗ-ಅರ್ಥ:ಅನಲಶಿಖಾಕಳಾಪವನೆ (ಅಗ್ನಿಜ್ವಾಲೆಗಳ ಸಮೂಹವನ್ನೇ) ಭೋರ್ಗರೆದು ಆರ್ದು (ಭೋರೆಂದು ಶಬ್ದಮಾಡಿ,-ಘರ್ಜಿಸಿ >-) ಉಗುಳ್ಚಿನ್ನಂ ಅಪ್ಪ ಅಗುರ್ವಿನ (ಉಗುಳುವಂತಹ ಭಯಂಕರ) ಶರ ಸಂಕುಲಗಳಂಗಳೊಳೆ (ಬಾಣ

ಸಮೂಹಗಳಿಂದಲೇ)
ಭೋರ್ಗರೆದಾರ್ದಿಸೆ ಭೀಮನು
ಎಚ್ಚ (ಭೋರ್ಗರೆದು
ಶಬ್ದಮಾಡಿ ಆರ್ಭಟಿಸಿ
ಅಶ್ವತ್ಥಾಮನನ್ನು ಎಚ್ಚ-
ಹೊಡದ) ನಚ್ಚಿನ ಘನ
ಭಾಣಜಾಳಂ ಅದು (ಆ ನಚ್ಚಿನ
- ನಂಬಿಗೆಗೆ ಅರ್ಹವಾದ
ಬೀಮನು ಹೊಡೆದ ಸತ್ವದ ಆ
ಬಾಣಸಮೂಹವು)
ಭೋಂಕನೆ ನೋಡುವೊಡೆ

ಆಳಜಾಳವಾಯ್ತು ಎನೆ
(ತಟ್ಟನೆ ನೋಡುತ್ತಿರುವ
ಹಾಗೆಯೇ ಜಾಳವಾದ
ಹಂದರವಾಯಿತು ಎನ್ನುವ
ಹಾಗೆ) ಕಡಿದು ಒಟ್ಟಿ ಸುಟ್ಟವು
ಪ್ರತತಿಗಳಂ (ಭೀಮನ
ಬಾಣಗಳನ್ನು) ಗುರುಪುತ್ರನ
ಅಂಬುಗಳ್ (ಅಶ್ವತ್ಥಾಮನ
ಬಾಣಗಳು ಭೀಮನ
ಬಾಣಗಳನ್ನು ಕಡಿದು

ರಾಶಿಮಾಡಿ ಸುಟ್ಟು ಹಾಕಿದವು.)

ಪದ್ಯ-೬೮:ಅರ್ಥ: ಅಗ್ನಿಜ್ವಾಲೆಗಳ ಸಮೂಹವನ್ನೇ ಭೋರೆಂದು ಶಬ್ದಮಾಡಿ ಉಗುಳುವಂತಹ ಭಯಂಕರ ಬಾಣ ಸಮೂಹಗಳಿಂದಲೇ, ಭೋರ್ಗರೆದು ಶಬ್ದಮಾಡಿ ಆರ್ಭಟಿಸಿ ಅಶ್ವತ್ಥಾಮನನ್ನು ಹೊಡದನು. ಆ ನಚ್ಚಿನ - ನಂಬಿಗೆಗೆ ಅರ್ಹವಾದ

ಬೀಮನು ಹೊಡೆದ ಸತ್ವದ ಆ ಬಾಣಸಮೂಹವು ತಟ್ಟನೆ ನೋಡುತ್ತಿರುವ ಹಾಗೆಯೇ ಜಾಳವಾದ ಹಂದರವಾಯಿತು ಎನ್ನುವ ಹಾಗೆ ಅಶ್ವತ್ಥಾಮನ ಬಾಣಗಳು ಭೀಮನ ಬಾಣಗಳನ್ನು ಕಡಿದು ರಾಶಿಮಾಡಿ ಸುಟ್ಟು ಹಾಕಿದವು.

ವ|| ಅಂತು ಗುರುನಂದನಂ ಮರುನ್ನಂದನ ವಿರಚಿತ ನಿಶಾತ ವಿಶಿಖ ಪಂಜರಮನಳಿದು

ಕಳಕುಳಂಮಾಡಿಯನಿತರೊಳ್ ಮಾಣದೆ-

ವಚನ:ಪದವಿಭಾಗ-

ಅರ್ಥ:ಅಂತು ಗುರುನಂದನಂ ಮರುನ್ನಂದನ ವಿರಚಿತ ನಿಶಾತ ವಿಶಿಖ ಪಂಜರಮನು ಅಳಿದು (ಅಶ್ವತ್ಥಾಮನು ಭೀಮನಿಂದ ರಚಿತವಾದ ಹರಿತವಾದ ಬಾಣಜಾಲವನ್ನು ನಾಶಪಡಿಸಿ) ಕಳಕುಳಂಮಾಡಿಯುಂ

ಅನಿತರೊಳ್ ಮಾಣದೆ (ಚದುರಿಸಿ, ಅಷ್ಟಕ್ಕೇ ಬಿಡದೆ)-

ವಚನ:ಅರ್ಥ:ಹಾಗೆ ಅಶ್ವತ್ಥಾಮನು ಭೀಮನಿಂದ ರಚಿತವಾದ ಹರಿತವಾದ ಬಾಣಜಾಲವನ್ನು ನಾಶಪಡಿಸಿ, ಚದುರಿಸಿ, ಅಷ್ಟಕ್ಕೇ ಬಿಡದೆ-

ಕಂ||ತೇರಂ ಕುದುರೆಯನೆಸಗುವ ಸಾರಥಿಯ ಪೊಡರ್ಪನಯ್ದು
ಬಾಣದೊಳುಪಸಂ | ಹಾರಿಸಿ ತಳತಳ ತೊಳಗುವ ನಾರಾಚದಿನೆಚ್ಚನೂರಿ
ಭೀಮನ ನೊಸಲಂ||೬೯||

ಪದ್ಯ-೬೯:ಪದವಿಭಾಗ-ಅರ್ಥ:ತೇರಂ ಕುದುರೆಯಂ

ಎಸಗುವ ಸಾರಥಿಯ (ಅವನ
ರಥವನ್ನೂ ಕುದುರೆಯನ್ನೂ
ಅದನ್ನು ನೆಡೆಸುವ
ಸಾರಥಿಯನ್ನೂ) ಪೊಡರ್ಪನು
ಅಯ್ದು ಬಾಣದೊಳು
ಉಪಸಂಹಾರಿಸಿ (ಶಕ್ತಿಯನ್ನೂ
ಅಯ್ದು ಬಾಣಗಳಿಂದ
ನಾಶಮಾಡಿ) ತಳತಳ
ತೊಳಗುವ ನಾರಾಚದಿಂ
ಎಚ್ಚನು ಊರಿ ಭೀಮನ
ನೊಸಲಂ (ತಳತಳನೆ

ಹೊಳೆಯುವ ಬಾಣದಿಂದ ಭೀಮನ ಹಣೆಗೆ ನಾಟುವಹಾಗೆ ಹೊಡದನು.).

ಪದ್ಯ-೬೯:ಅರ್ಥ: ಅವನ ರಥವನ್ನೂ ಕುದುರೆಯನ್ನೂ ಅದನ್ನು ನೆಡೆಸುವ ಸಾರಥಿ ಶಕ್ತಿಯನ್ನೂ ಅಯ್ದು ಬಾಣಗಳಿಂದ ನಾಶಮಾಡಿ ತಳತಳನೆ ಹೊಳೆಯುವ ಬಾಣದಿಂದ ಭೀಮನ ಹಣೆಗೆ ನಾಟುವಹಾಗೆ ಹೊಡದನು.

ಮಿಸುಗುವ ನೊಸಲಂ ನಟ್ಟ ರ್ವಿಸುವಿನೆಗಂ ತೂಗಿ ತೊನೆವ ನಾರಾಚಮದೇ |
ನೆಸದುದೋ ತದ್ವದನಾಂಭೋಜ ಸೌರಭಾಕೃಷ್ಟ ಮಧುಪ ಮಾಲಾಕೃತಿಯಿಂ ||೭೦ ||

ಪದ್ಯ-00:ಪದವಿಭಾಗ-ಅರ್ಥ:ಮಿಸುಗುವ ನೊಸಲಂ ನಟ್ಟು ಅರ್ವಿಸುವಿನೆಗಂ (ನೋವು- ವ್ಯಾಪಿಸುತ್ತಿರಲು) ತೂಗಿ ತೊನೆವ ನಾರಾಚಂ (

ಆಕಡೆಗೂ ಈ ಕಡೆಗೂ ತೂಗಾಡುತ್ತಿರುವ ಆ ಬಾಣವು) ಅದು ಏನ್ ಎಸದುದೋ (ಏನು ವಿಶೇಷ ಸೊಗಸಾಗಿದ್ದಿತೋ.) ತದ್ವದನಾಂಭೋಜ ಸೌರಭಾಕೃಷ್ಟ ಮಧುಪ ಮಾಲಾಕೃತಿಯಿಂ- ತತ್ ವದನ ಅಂಭೋಜ ಸೌರಭ ಆಕೃಷ್ಟ ಮಧುಪ ಮಾಲಾಕೃತಿಯಿಂ (ಆ ಬಾಣವು ಭೀಮನ

ಮುಖಕಮಲದ
ವಾಸನೆಯಿಂದ
ಆಕರ್ಷಿತವಾದ ದುಂಬಿಗಳ
ಸಮೂಹದ ಆಕಾರದಿಂದ-
ಏನು ವಿಶೇಷ
ಸೊಗಸಾಗಿದ್ದಿತೋ.)
ಪದ್ಯ-00:ಅರ್ಥ:
ಹೊಳೆಯುವ ಹಣೆಯಲ್ಲಿ
ನಾಟಿಕೊಂಡು ನೋವು
ವ್ಯಾಪಿಸುತ್ತಿರಲು, ಆಕಡೆಗೂ
ಈ ಕಡೆಗೂ ತೂಗಾಡುತ್ತಿರುವ

ಆ ಬಾಣವು ಭೀಮನ ಮುಖಕಮಲದ ವಾಸನೆಯಿಂದ ಆಕರ್ಷಿತವಾದ ದುಂಬಿಗಳ ಸಮೂಹದ ಆಕಾರದಿಂದ ಏನು ವಿಶೇಷ ಸೊಗಸಾಗಿದ್ದಿತೋ.

ನಡೆ ನಾರಾಚದ ನೋವಿನ ನಡುಕಂ ಪಿರಿದಾಯ್ತು ಸರ್ಪ ಯೋನಿಯಂ |

ಬಿಡಿಸಿದವೊಲೆಚ್ಚು ಪಾಯ್ದ

ತ್ತೊಡನೊಡನೆ ಕದುಷ್ಣ ಕೃಷ್ಣ ರುಧಿರ ಜಲೌಘಂ ||೭೧||

ಪದ್ಯ-೭೧:ಪದವಿಭಾಗ-ಅರ್ಥ:ನಡೆ ನಾರಾಚದ ನೋವಿನ ನಡುಕಂ ಪಿರಿದಾಯ್ತು (ಬಾಣದ ನೋವಿನ ಕಂಪನವು ಹೆಚ್ಚಾಯಿತು.) ಸರ್ಪಯೋನಿಯಂ ಬಿಡಿಸಿದವೊಲ್ (ವಿಸರ್ಪಿಣಿ ಎಂಬ ರೋಗವುಳ್ಳವನ

ರಕ್ತನಾಳವನ್ನು ಕತ್ತರಿಸಿದಂತೆ,) ಎಚ್ಚು ಪಾಯ್ದತ್ತು ಒಡನೊಡನೆ (ಒಡನೆ ಒಡನೆಯೇ ಸೂಸಿ ಹರಿಯಿತು.) ಕದುಷ್ಣ ಕೃಷ್ಣ ರುಧಿರ ಜಲೌಘಂ (ರುಧಿರ ಜಲ- ಔಘ- ಪ್ರವಾಹ) (ಸ್ವಲ್ಪ ಬೆಚ್ಚಗಿರುವ ಕಪ್ಪಾದ ರಕ್ತ ಧಾರೆಗಳು)

ಪದ್ಯ-೭೧:ಅರ್ಥ:ಬಾಣದ ನೋವಿನ ಕಂಪನವು ಹೆಚ್ಚಾಯಿತು. ವಿಸರ್ಪಿಣಿ

ಎಂಬ ರೋಗವುಳ್ಳವನ ರಕ್ತನಾಳವನ್ನು ಕತ್ತರಿಸಿದಂತೆ, ಸ್ವಲ್ಪ ಬೆಚ್ಚಗಿರುವ ಕಪ್ಪಾದ ರಕ್ತ ಧಾರೆಗಳು ಒಡನೆಯೇ ಸೂಸಿ ಹರಿಯಿತು.

ನಡುಗಲ್ಕೆರ್ದೆ ಬೆಮರಲ್ ತನು
ತೊಡರಲ್ ನಾಲಗೆ ತಗುಳ್ದುದಾ
ಮಾರ್ಗಣದಿಂ|
ಗಡ ಮತ್ತುಳಿದರನೆಂತುಂ
ಮುಡಿಪದೆ ಗುರುತನಯನೆಚ್ಚ
ಶಿತ ನಾರಾಚಂ ||೭೨||

ಪದ್ಯ-00:ಪದವಿಭಾಗ-ಅರ್ಥ:ನಡುಗಲ್ಕೆ ಎರ್ದೆ ಬೆಮರಲ್ ತನು ತೊಡರಲ್ ನಾಲಗೆ ತಗುಳ್ದುದು(ಭೀಮನ ಎದೆ ನಡುಗುವುದಕ್ಕೂ ಮೈ ಬೆವರುವುದಕ್ಕೂ ನಾಲಿಗೆ ತೊದಲುವುದಕ್ಕೂ ಪ್ರಾರಂಭವಾಯಿತು) ಆ ಮಾರ್ಗಣದಿಂ ಗಡ ಮತ್ತೆ ಉಳಿದರನು ಎಂತುಂ ಮುಡಿಪದೆ (ಇನ್ನುಳಿದವರನ್ನು

ಕೊಲ್ಲದೆ ಇರುತ್ತದೆಯೇ? ಗಡ-ಓಹೋ!) ಗುರುತನಯನು ಎಚ್ಚ ಶಿತ ನಾರಾಚಂ (ಅಶ್ವತ್ಥಾಮನು ಪ್ರಯೋಗಿಸಿದ ಹರಿತವಾದ ಬಾಣವು)

ಪದ್ಯ-00:ಅರ್ಥ: ಆ ಬಾಣದಿಂದ ಭೀಮನ ಎದೆ ನಡುಗುವುದಕ್ಕೂ ಮೈ ಬೆವರುವುದಕ್ಕೂ ನಾಲಿಗೆ ತೊದಲುವುದಕ್ಕೂ ಪ್ರಾರಂಭವಾಯಿತು.

ಹೀಗಿರಲು, ಅಶ್ವತ್ಥಾಮನು
ಪ್ರಯೋಗಿಸಿದ ಹರಿತವಾದ
ಬಾಣವು ಇನ್ನುಳಿದವರನ್ನು
ಕೊಲ್ಲದೆ ಇರುತ್ತದೆಯೇ?

**ವ|| ಅಂತು ಭೀಮಸೇನಂ
ನಾರಾಚಾಘಾತದಿಂ
ಪುಣ್ಗೊರ್ತು
ಬಸವಳಿದುಸಿರಲಪ್ಪುಡ
ಮಾಣದೆ ಬಿಲ್ಲ ಕೊಪ್ಪಂ
ಪಿಡಿದೆರಗಿ ಕಿರಿದಾನುಂ
ಬೇಗಮಿರ್ದು ನೊಸಲೊಳ್**

ನೆಟ್ಟ ನಾರಾಚಮನೆಂತಾನುಂ ಕಿಳ್ತು ತನ್ನಿಂ ತಾನೆ ಚೇತರಿಸಿ ಸಿಂಹನಾದದಿಂದಾರ್ದು-

ವಚನ:ಪದವಿಭಾಗ-

ಅರ್ಥ:ಅಂತು ಭೀಮಸೇನಂ ನಾರಾಚ ಆಘಾತದಿಂ ಪುಣ್ಣೂರ್ತು ಬಸವಳಿದು ಉಸಿರಲಪ್ಪಡ ಮಾಣದೆ (ಹೀಗೆ ಭೀಮಸೇನನು ಬಾಣದ ಪೆಟ್ಟಿನಿಂದ ಗಾಯಗೊಂಡು ಶಕ್ತಿಗುಂದಿ

ಉಸಿರಾಡುವುದಕ್ಕೂ ಆಗದೆ) ಬಿಲ್ಲ ಕೊಪ್ಪಂ ಪಿಡಿದು ಎರಗಿ ಕಿರಿದಾನುಂ ಬೇಗಂ ಇರ್ದು (ಬಿಲ್ಲಿನ ತುದಿಯನ್ನು ಹಿಡಿದು ಒರಗಿಕೊಂಡು ಸ್ವಲ್ಪ ಕಾಲವಿದ್ದು) ನೊಸಲೊಳ್ ನೆಟ್ಟ ನಾರಾಚಮನು ಎಂತಾನುಂ ಕಿಳ್ತು (ಹಣೆಯಲ್ಲಿ ನಾಟಿದ್ದ ಬಾಣವನ್ನು ಹೇಗೋ ಕಿತ್ತು,) ತನ್ನಿಂ ತಾನೆ ಚೇತರಿಸಿ ಸಿಂಹನಾದದಿಂದ ಆರ್ದು

(ತನ್ನಷ್ಟಕ್ಕೆ ತಾನೇ ಚೇತರಿಸಿಕೊಂಡು, ಸಿಂಹಧ್ವನಿಯಿಂದ ಆರ್ಭಟಿಸಿ.)-

ವಚನ:ಅರ್ಥ:ಹೀಗೆ ಭೀಮಸೇನನು ಬಾಣದ ಪೆಟ್ಟಿನಿಂದ ಗಾಯಗೊಂಡು ಶಕ್ತಿಗುಂದಿ ಉಸಿರಾಡುವುದಕ್ಕೂ ಆಗದೆ ಬಿಲ್ಲಿನ ತುದಿಯನ್ನು ಹಿಡಿದು ಒರಗಿಕೊಂಡು ಸ್ವಲ್ಪ

ಕಾಲವಿದ್ದು, ಹಣೆಯಲ್ಲಿ ನಾಟಿದ್ದ ಬಾಣವನ್ನು ಹೇಗೋ ಕಿತ್ತು, ತನ್ನಷ್ಟಕ್ಕೆ ತಾನೇ ಚೇತರಿಸಿಕೊಂಡು, ಸಿಂಹಧ್ವನಿಯಿಂದ ಆರ್ಭಟಿಸಿದನು.

ಚಂ|| ಖರಕರಬಿಂಬದಿಂ ಕಿರಣ ಸಂತತಿಗಳ್ ಪೊರಪೊಣ್ಮೆದಪುವೆಂ ಬರನುಡಿ ಪೋಲ್ವೆವೆತ್ತದೆನೆ ಬಾಣಧಿಯಿಂದಿರದುರ್ಚಿಕೊಂ

**ಡು ವಿ **
ಸ್ಫುರಿತ ಶರಗಳೆಂಟನು
ಅವರೊಳ್ ಪೊಳೆವಯ್ದ
ಶರಂಗಳಿಂಸುರು
ಳ್ದುರುಳ್ವಿನಮೆಚ್ಚನಾ ದ್ವಿಜನ
ಸೂತವರೂಥ
ತುರಂಗಮಂಗಳಂ ||೭೩ ||

ಪದ್ಯ-೭೩:ಪದವಿಭಾಗ-
ಅರ್ಥ:ಖರಕರಬಿಂಬದಿಂ
ಕಿರಣ ಸಂತತಿಗಳ್
(ಸೂರ್ಯಬಿಂಬದಿಂದ

ಕಿರಣಗಳು)
ಪೊರಪೊಣ್ಮಿದಪುವು
ಎಂಬರನುಡಿ ಪೋಲ್ವೆವೆತ್ತದೆ
ಎನೆ (ಹೊರಕ್ಕೆ ಹೊರಟು
ಬರುತ್ತವೆ ಎನ್ನುವವರ ಮಾತು
ಹೋಲುವುದು ಎನ್ನುವಂತೆ)
ಬಾಣಧಿಯಿಂದೆ ಇರದೆ
ಉರ್ಚಿಕೊಂಡು
(ಬತ್ತಳಿಕೆಯಿಂದ <./
ಪ್ರಕಾಶಮಾನವಾದ ಎಂಟು
ಬಾಣಗಳನ್ನು/.>

ಸೆಳೆದುಕೊಂಡು) ವಿಸ್ಫರಿತ
ಶರಗಳ್ ಎಂಟನು
(ಪ್ರಕಾಶಮಾಣವಾದ ಎಂಟು
ಬಾಣಗಳನ್ನು) ಅವರೊಳ್
ಪೊಳೆವ ಅಯ್ದು ಶರಂಗಳಿಂ (
ಅದರಲ್ಲಿ ಹೊಳೆಯುತ್ತಿರುವ
ಅಯ್ದು ಬಾಣಗಳಿಂದ)
ಸುರುಳ್ದು ಉರುಳ್ವಿನಂ ಎಚ್ಚನು
ಆ ದ್ವಿಜನ ಸೂತ ವರೂಥ
ತುರಂಗಮಂಗಳಂ (ಆ
ಬ್ರಾಹ್ಮಣನಾದ ಅಶ್ವತ್ಥಾಮನ

ಸಾರಥಿ, ರಥ ಮತ್ತು ಕುದುರೆಗಳು ಸುರುಳಿಕೊಂಡು ಉರುಳಿಬೀಳುವಹಾಗೆ ಹೊಡೆದನು.)

ಪದ್ಯ-೭೩:ಅರ್ಥ: ಸೂರ್ಯಬಿಂಬದಿಂದ ಕಿರಣಗಳು ಹೊರಕ್ಕೆ ಹೊರಟು ಬರುತ್ತವೆ ಎನ್ನುವವರ ಮಾತು ಹೋಲುವುದು ಎನ್ನುವಂತೆ, ಬತ್ತಳಿಕೆಯಿಂದ ಪ್ರಕಾಶಮಾಣವಾದ ಎಂಟು

ಬಾಣಗಳನ್ನು ಸೆಳೆದುಕೊಂಡು,
ಅದರಲ್ಲಿ ಹೊಳೆಯುತ್ತಿರುವ
ಅಯ್ದು ಬಾಣಗಳಿಂದ ಆ
ಬ್ರಾಹ್ಮಣನಾದ ಅಶ್ವತ್ಥಾಮನ
ಸಾರಥಿ, ರಥ ಮತ್ತು
ಕುದುರೆಗಳು ಸುರುಳಿಕೊಂಡು
ಉರುಳಿಬೀಳುವಹಾಗೆ
ಹೊಡೆದನು.

ವ||ಆಗಳ್ ಅಶ್ವತ್ಥಾಮಂ
ಹೇಮಪುಂಖಾಂಕಿತ
ಭೀಮಸಾಯಕನಿರ್ಘಾತದಿಂದ

ಳಿಯೆ ನೊಂದು ಭೋರೆಂದು

ಕವಿದ ಬಿಸುನೆತ್ತರ್ ಕಣ್ಣಂ

ಕವಿಯೆ ಸೀಂಟಿಕಳೆದು

ನಡುಕೋಲ್ವರಂ ನಟ್ಟ

ಕೂರ್ಗಣೆಗಳಂ ಗರಿವೆರಸು

ತೊರೆದುಕಳೆದು-

ವಚನ:ಪದವಿಭಾಗ-

ಅರ್ಥ:ಆಗಳ್ ಅಶ್ವತ್ಥಾಮಂ

ಹೇಮಪುಂಖಾಂಕಿತ

ಭೀಮಸಾಯಕನಿರ್ಘಾತದಿಂದ

ಳಿಯೆ ನೊಂದು ಭೋರೆಂದು

ಕವಿದ ಬಿಸುನೆತ್ತರ್ ಕಣ್ಣಂ
ಕವಿಯೆ ಸೀಂಟಿಕಳೆದು
ನಡುಕೋಲ್ವರಂ ನಟ್ಟ
ಕೂರ್ಗಣೆಗಳಂ ಗರಿವೆರಸು
ತೊರೆದುಕಳೆದು-
ವಚನ:ಅರ್ಥ:ವ|| ಆಗ
ಅಶ್ವತ್ಥಾಮನು ಚಿನ್ನದ
ಗರಿಗಳಿಂದ
ಗುರುತುಮಾಡಲ್ಪಟ್ಟ
ಹಿಂಭಾಗವನ್ನುಳ್ಳ ಭೀಮನ
ಬಾಣಗಳ ಪೆಟ್ಟಿನಿಂದ

ಸಾಯುವಷ್ಟು ವ್ಯಥೆಪಟ್ಟು ಭೋರೆಂದು ಸುರಿಯುತ್ತಿರುವ ಬಿಸಿರಕ್ತವು ಕಣ್ಣನ್ನು ಆವರಿಸಲು ಅದನ್ನು (ಬೆರಳಿನಿಂದ) ಸೀಂಟಿ ಕಳೆದು ಬಾಣದ ಮಧ್ಯದವರೆಗೂ ನಾಟಿಕೊಂಡಿದ್ದ ಹರಿತವಾದ ಬಾಣಗಳನ್ನು ಗರಿಗಳೊಡನೆ ಕಿತ್ತು ಬಿಸಾಡಿದನು.

ಕಂ|| ಪೆರವುಳಿದ ಮೂರು

ಮಿರುಮಿರು

ಮಿರುಪ ಶಿತಾಸ್ತ್ರಂಗಳಿಂ ದ್ವಿಜನ್ಮನ ನೊಸಲಂ | (ನ್ಕೈ)ನೆರಗೊಳ್ವಿನಮೆಚ್ಚೊಡೆ ಕಣ್ದೆರೆದವೊಲಾಯ್ತದಟುಮಳವುಮಾ ಮಾರುತಿಯಾ||೭೪||

ಪದ್ಯ-೭೪:ಪದವಿಭಾಗ-ಅರ್ಥ:ಪೆರವು ಉಳಿದ ಮೂರು ಮಿರುಮಿರುಮಿರುಪ ಶಿತಾಸ್ತ್ರಂಗಳಿಂ (ಇನ್ನು ಹೆಚ್ಚಿಗೆ ಉಳಿದ ಮೂರು ಮಿರುಮಿರುಗುವ ಹರಿತವಾದ

ಬಾಣಗಳಿಂದ) ದ್ವಿಜನ್ಮನ
ನೊಸಲಂ ನೆರಗೊಳ್ವಿನಂ
ಎಚ್ಚೊಡೆ (ಬ್ರಾಹ್ಮಣನ ಹಣೆಗೆ
ಮರ್ಮವನ್ನು ಭೇದಿಸುವಂತೆ
ಹೊಡೆಯಲು)
ಕಣ್ದೆರೆದವೊಲಾಯ್ತು ಅದಟುಂ
ಅಳವುಂ ಆ ಮಾರುತಿಯಾ
(ಆ ಭೀಮಸೇನನ
ಪರಾಕ್ರಮವೂ ಶಕ್ತಿಯೂ
ಕಣ್ಣು ತರೆದವಲ್ ಅಯ್ತು -
ಕಣ್ಣು ಬಿಟ್ಟಂತಾಯಿತು.)

ಪದ್ಯ-೭೪:ಅರ್ಥ:೭೪. ಇನ್ನು ಹೆಚ್ಚಿಗೆ ಉಳಿದ ಮೂರು ಮಿರುಮಿರುಗುವ ಹರಿತವಾದ ಬಾಣಗಳಿಂದ ಬ್ರಾಹ್ಮಣನ ಹಣೆಗೆ ಮರ್ಮವನ್ನು ಭೇದಿಸುವಂತೆ ಹೊಡೆಯಲು, ಆ ಭೀಮಸೇನನ ಪರಾಕ್ರಮವೂ ಶಕ್ತಿಯೂ ಕಣ್ಣು ಬಿಟ್ಟಂತಾಯಿತು.

ಕಂ||ಅಳವೆನಿತು ಚಾಪವಿದ್ಯಾ

ಬಳಮೆನಿತುಂಟನಿತುಂ

ಮೆಯ್ದೆವಂದಿಲ್ಲಿ ಪುದುಂ|

ಗೊಳಿದುದೆನೆ ಕಲ್ಪಾನಲ

ವಿಳಯಾಂತಕರೂಪನಾದನಶ್ವ

ತ್ಥಾಮಂ || ೭೫ ||

ಪದ್ಯ-೭೫:ಪದವಿಭಾಗ-ಅರ್ಥ:ಅಳವು ಎನಿತು ಚಾಪವಿದ್ಯಾ ಬಳಂ ಎನಿತುಂಟು ಅನಿತುಂ (ತನ್ನ ಶಕ್ತಿಯೆಷ್ಟಿದೆ, ಬಿಲ್ವಿದ್ಯೆಯ ಬಲವೆಷ್ಟಿದೆ ಅಷ್ಟನ್ನೂ ಇಲ್ಲಿ

ಸಂಪೂರ್ಣವಾಗಿ)
ಎಯ್ದೆವಂದು ಇಲ್ಲಿ
ಪುದುಂಗೊಳಿದುದೆ ಎನೆ
(ಬಂದು ಸೇರಿ ಹದಗೊಳಿಸಿದೆ
ಎನ್ನುವ ಹಾಗೆ) ಕಲ್ಪಾನಲ
ವಿಳಯಾಂತಕರೂಪನು
ಆದನು ಅಶ್ವತ್ಥಾಮಂ
(ಅಶ್ವತ್ಥಾಮನು
ಪ್ರಳಯಾಗ್ನಿಯ ಮತ್ತು
ಪ್ರಳಯಕಾಲದ ಯಮನ
ರೂಪವುಳ್ಳವನಾದನು.)

ಪದ್ಯ-೭೫:ಅರ್ಥ: ತನ್ನ ಶಕ್ತಿಯೆಷ್ಟಿದೆ, ಬಿಲ್ವಿದ್ಯೆಯ ಬಲವೆಷ್ಟಿದೆ ಅಷ್ಟನ್ನೂ ಇಲ್ಲಿ ಸಂಪೂರ್ಣವಾಗಿ ಬಂದು ಸೇರಿ ಹದಗೊಳಿಸಿದೆ ಎನ್ನುವ ಹಾಗೆ ಅಶ್ವತ್ಥಾಮನು ಪ್ರಳಯಾಗ್ನಿಯ ಮತ್ತು ಪ್ರಳಯಕಾಲದ ಯಮನ ರೂಪವುಳ್ಳವನಾದನು.

ವ|| ಆಗಳ್ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತಂಗಳೆಂಬ

ರಥಕಲ್ಪ ವಿಶೇಷ ವಿನ್ಯಾಸಂಗಳ ನಱಿದು ಸಾರಥಿಗಳ್ ಚೋದಿಸುವಾಗಳಿರ್ವರ ರಥಂಗಳುಂ ಸುಟ್ಟುರೆಯೊಳಗಣ ತಱಗೆಲೆಯಂತೆ ತಿಱ್ರನೆ ತಿರಿಯೆ-

ವಚನ:ಪದವಿಭಾಗ-

ಅರ್ಥ:ಆಗಳ್ ಸವ್ಯ ಅಪಸವ್ಯ (ಎಡದಿಂದ ಬಲಕ್ಕೆ ಸುತ್ತುವ, ಬಲದಿಂದ ಎಡಕ್ಕೆ ಸುತ್ತುವ)

ಭ್ರಾಂತ ಉದ್ಭ್ರಾಂತಂಗಳೆಂಬ
(ತಿರುಗುವ ಮೇಲೆ
ಗಿರಕಿಹೊಡೆಯುವ) ರಥಕಲ್ಪ
ವಿಶೇಷ ವಿನ್ಯಾಸಂಗಳನು
ಅಱಿದು (ರಥವಿದ್ಯೆಯ
ನಾನಾರೀತಿಗಳನ್ನು ಅರಿದು-
ತಿಳಿದು) ಸಾರಥಿಗಳ್
ಚೋದಿಸುವಾಗಳ್ ಇರ್ವರ
ರಥಂಗಳುಂ (ಸಾರಥಿಗಳು
ನಡೆಸುತ್ತಿರಲು ಇಬ್ಬರ
ತೇರುಗಳೂ)

ಸುಟ್ಟುರೆಯೊಳಗಣ ತಱಗೆಲೆಯಂತೆ (ಸುಂಟರುಗಾಳಿಯ ಮಧ್ಯದಲ್ಲಿರುವ ತರಗೆಲೆಯ ಹಾಗೆ) ತಿಱ್ರನೆ ತಿರಿಯೆ (ತಿರ್‍ರನೆ ಸುತ್ತಲು)-

ವಚನ:ಅರ್ಥ: ಆಗ ಸವ್ಯ, ಅಪಸವ್ಯ, ಭ್ರಾಂತ ಮತ್ತು ಉದ್ಭ್ರಾಂತಗಳೆಂಬ ರಥವಿದ್ಯೆಯ ನಾನಾರೀತಿಗಳನ್ನು ತಿಳಿದು

ಸಾರಥಿಗಳು ನಡೆಸುತ್ತಿರಲು
ಇಬ್ಬರ ತೇರುಗಳೂ
ಸುಂಟರುಗಾಳಿಯ
ಮಧ್ಯದಲ್ಲಿರುವ ತರಗೆಲೆಯ
ಹಾಗೆ ತಿರ್‍ರನೆ ಸುತ್ತಿದವು.

ಚಂ|| ಮುಳಿಸಲ್ಕುರ್ದೆಯ್ದೆ
ಕಣ್ಗಳೊಳೆ
ಪೀರ್ವವೊಲುಗ್ರಶರಾನಲಾರ್
ಚಿಯಿಂ
ದಗುರ್ವವೊಲೆಯ್ದೆ ಚೋದಿಸಿ
ವರೂಥಮನಿಂ

ಬಿರ್ದುಕಾಡೆಯೆಂದಸುಂ|
ಗೊಳೆ ಮೊನೆಯಂಬುಗಳ್
ತನುವನಳ್ದಳಿವ್ರೋಪಿನಮೆಚ್ಚು
ನೆತ್ತರು
ಚ್ಚಳಿಸಿ ರಥಂಗಳೊಳ್
ಕೊಳಗೊಳುತ್ತಿರೆ
ಕಾದಿದರೊರ್ವರೊರ್ವರೊಳ್|
| ೭೬

ಪದ್ಯ-೭೬:ಪದವಿಭಾಗ-
ಅರ್ಥ: ಮುಳಿಸು ಉಳುರ್ದು
ಎಯ್ದೆ (ಕೋಪವು ಹರಡಿ-

ಚೆನ್ನಾಗಿ) ಕಣ್ಗಳೊಳೆ

ಪೀರ್ವವೊಲ್ ಉಗ್ರಶರ

ಅನಲ ಆರ್ಚಿಯಿಂದೆ

(ಕಣ್ಣುಗಳಿಂದಲೇ ಕುಡಿಯುವ

ಹಾಗೆ ಭಯಂಕರವಾದ

ಬಾಣಾಗ್ನಿಯ ಜ್ವಾಲೆಯಿಂದ)

ಅಗುರ್ವವೊಲ್ ಎಯ್ದೆ

(ಸುಡುವ/ ಭಯಪಡುವಹಾಗೆ

ಹಾಗೆ ಬರಲು) ಚೋದಿಸಿ

ವರೂಥಮನು (ರಥವನ್ನು

ಹತ್ತಿರಕ್ಕೆ ನಡೆಸಿ) ಇಂ

ಬಿರ್ದುಕಾಡೆಯೆಂದು
ಅಸುಂಗೊಳೆ (‘ಇನ್ನು ನೀನು
ಬದುಕಲಾರೆ’ ಎಂದು
ಮೊನಚಾದ ಬಾಣಗಳು
ಪ್ರಾಣಾಪಹಾರ ಮಾಡುವಂತೆ)
< - ಮೊನೆಯಂಬುಗಳ್,
ತನುವಂ ಅಳ್ದು
ಅಳಿವೋಪಿನಂ ಎಚ್ಚು
(ಶರೀರವನ್ನು ನಾಟಿ
ನಾಶವಾಗುವಂತೆ ಬಾಣ
ಪ್ರಯೋಗಮಾಡಿ) ನೆತ್ತರು

ಉಚ್ಚಳಿಸಿ ರಥಂಗಳೊಳ್
ಕೊಳಗೊಳುತ್ತಿರೆ (ಕ್ತವು ಚಿಮ್ಮಿ
ರಥದಲ್ಲಿಯೇ
ಕೊಳವಾಗುತ್ತಿರಲು) ಕಾದಿದರ್
ಒರ್ವರ್ ಒರ್ವರೊಳ್
(ಒಬ್ಬರೊಡನೊಬ್ಬರು
ಕಾದಿದರು/
ಯುದ್ಧಮಾಡಿದರು.)
ಪದ್ಯ-೭೬:ಅರ್ಥ: ಕೋಪವು
ಚೆನ್ನಾಗಿ ಹರಡಿ,
ಕಣ್ಣುಗಳಿಂದಲೇ ಕುಡಿಯುವ

ಹಾಗೆ ಭಯಂಕರವಾದ
ಬಾಣಾಗ್ನಿಯ ಜ್ವಾಲೆಯಿಂದ
ಸುಡುವ/ ಭಯಪಡುವಹಾಗೆ
ಹಾಗೆ ಬರಲು, ರಥವನ್ನು
ಹತ್ತಿರಕ್ಕೆ ನಡೆಸಿ ‘ಇನ್ನು ನೀನು
ಬದುಕಲಾರೆ’ ಎಂದು
ಮೊನಚಾದ ಬಾಣಗಳು
ಪ್ರಾಣಾಪಹಾರಮಾಡುವಂತೆ
ಶರೀರವನ್ನು ನಾಟಿ
ನಾಶವಾಗುವಂತೆ ಬಾಣ
ಪ್ರಯೋಗಮಾಡಿ, ರಕ್ತವು

ಚಿಮ್ಮಿ ರಥದಲ್ಲಿಯೇ
ಕೊಳವಾಗುತ್ತಿರಲು
ಒಬ್ಬರೊಡನೊಬ್ಬರು
ಯುದ್ಧಮಾಡಿದರು.

ವ|| ಅಂತು ಮುಳಿಸಿನ ಮೋಪಿನ ಗಂಡಮಚ್ಚರದ ಮೆಚ್ಚುವಣಿಗೆಯಂಕಕಾಱರೆಕ್ಕ ತುಳ ಕ್ಕೆಕ್ಕೆಯಿಂ ಸೂಱೆಱೆಱೆವಂತೊರ್ವ ರೊರ್ವರೋಳ್ ಕಾದೆ-

ವಚನ:ಪದವಿಭಾಗ-ಅರ್ಥ:ಅಂತು ಮುಳಿಸಿನ ಮೋಪಿನ (ಹಾಗೆ ಕೋಪದ, ಹೋರಾಡಲು ಆಸಕ್ತಿಯ) ಗಂಡಮಚ್ಚರದ (ಪೌರುಷದ ಮಾತ್ಸರ್ಯದ,) ಮೆಚ್ಚುವಣಿಗೆಯ (ಪರಸ್ಪರ ಮೆಚ್ಚಿಗೆಯುಳ್ಳ) ಅಂಕಕಾಱರ್ ಎಕ್ಕತುಳ ಕ್ಕೆಕ್ಕೆಯಿಂ (ಜಟ್ಟಿಗಳು ಮಲ್ಲಯುದ್ಧಕ್ಕೆ ಅಂಕಕಾರರು ಮೇಲಿಂದ

ಮೇಲಕ್ಕೆ) ಸೂಟೀಟ್
ಇಟಿವಂತೆ (ಸರದಿಯ ಪ್ರಕಾರ
ಇರಿಯುವಂತೆ/
ಹೊಡೆಯುವಂತೆ)
ಒರ್ವರೊರ್ವರೋಳ್ ಕಾದೆ
(ಒಬ್ಬರೊಡನೊಬ್ಬರು
ಕಾದಿದರು)-
ವಚನ:ಅರ್ಥ: ಹಾಗೆ
ಕೋಪದ, ಹೋರಾಡುವ
ಆಸಕ್ತಿಯ, ಪೌರುಷದ,
ಮಾತ್ಸರ್ಯದ, ಪರಸ್ಪರ

ಮೆಚ್ಚಿಗೆಯುಳ್ಳ ಜಟ್ಟಿಗಳು
ಮಲ್ಲಯುದ್ಧಕ್ಕೆ ಅಂಕಕಾರರು
ಮೇಲಿಂದ ಮೇಲಕ್ಕೆ ಸರದಿಯ
ಪ್ರಕಾರ ಹೊಡೆದು
ಯುದ್ಧಮಾಡುವ ಹಾಗೆ
ಒಬ್ಬರೊಡನೊಬ್ಬರು
ಕಾದಿದರು

ಉ|| ಸೂತರುರುಳ್ವಿನಂ ರಥ ತುರಂಗಮರಾಜಿ ಸುರುಳ್ವಿನಂ ಚಳ

ತ್ಕೇತುಗಳೆತ್ತಮವ್ವಳಿಸಿ
ಬೀೞ್ವಿನಮಳ್ಕುರೆ ಕಾದಿ ಬಾಣ
ಸಂ|
ಘಾತದ ಕೋಳೊಳುಚ್ಚಳಿಪ
ನೆತ್ತರೊಳಿೞ್ಚಿಯೆ ಕೆಟ್ಟೋಡಾತನ
ತ್ತೀತನುಮಿತ್ತ ಜೋಲ್ದ
ರಣಮಂ ಪೊಗೞುತ್ತಿರೆ
ದೇವಕೋಟಿಗಳ್|| ೭೭ ||

ಪದ್ಯ-೭೭:ಪದವಿಭಾಗ-
ಅರ್ಥ:ಸೂತರು ಉರುಳ್ವಿನಂ
(ಸಾರಥಿಗಳು ಉರುಳಿ

ಬೀಳುವ ಹಾಗೆ) ರಥ
ತುರಂಗಮ ರಾಜಿ
ಸುರುಳ್ವಿನಂ(ರಥ ಕುದುರೆಗಳ
ಗುಂಪು ಸುರುಳಿಕೊಳ್ಳುವ
ಹಾಗೆ) ಚಳತ್ ಕೇತುಗಳು
ಎತ್ತಮ್ ಅವ್ವಳಿಸಿ ಬೀಳ್ವಿನಂ
(ಚಲಿಸುತ್ತಿರುವ ಧ್ವಜಗಳು
ಎಲ್ಲ ಕಡೆಗೂ ಹಾರಿ
ಬೀಳುತ್ತಿರುವಂತೆ,) ಅಳ್ಕುರೆ
ಕಾದಿ (ಭಯವಾಗುವಂತೆ
ಹೋರಾಡಿ,) ಬಾಣ

ಸಂಘಾತದ ಕೋಳೊಳ್
ಉಚ್ಚಳಿಪ ನೆತ್ತರೊಳ್
(ಬಾಣಸಮೂಹದ
ತಿವಿತದಿಂದ ಚಿಮ್ಮಿದ ರಕ್ತದಲ್ಲಿ)
ಇಚ್ಚೆಯೆ ಕೆಟ್ಟೊಡೆ
(ಇಚ್ಚಾಶಕ್ತಿಯೇ ನಷ್ಟವಾದರೆ)
ಆತನು ಅತ್ತ ಈತನುಂ ಇತ್ತ
ಜೋಲ್ದ ರಣಮಂ (ಆ
ಭೀಮನು ಆ ಕಡೆ, ಈ
ಅಶ್ವತ್ಥಾಮನು ಈ ಕಡೆ
ಜೋತುಬಿದ್ದ ಯುದ್ಧವನ್ನು)

ಪೊಗೞುತ್ತಿರೆ
ದೇವಕೋಟಿಗಳ್ (ದೇವತೆಗಳ
ಸಮೂಹವು
ಹೊಗಳುತ್ತಿರಲು-,
ಹೊಗಳುತ್ತಿದ್ದಿತು)
ಪದ್ಯ-೭೭:ಅರ್ಥ:
ಸಾರಥಿಗಳು ಉರುಳಿ ಬೀಳುವ
ಹಾಗೆ, ರಥ ಕುದುರೆಗಳ
ಗುಂಪು ಸುರುಳಿಕೊಳ್ಳುವ
ಹಾಗೆ, ಚಲಿಸುತ್ತಿರುವ
ಧ್ವಜಗಳು ಎಲ್ಲ ಕಡೆಗೂ ಹಾರಿ

ಬೀಳುತ್ತಿರುವಂತೆಯೂ
ಭಯವಾಗುವಂತೆ ಹೋರಾಡಿ,
ಬಾಣಸಮೂಹದ ತಿವಿತದಿಂದ
ಚಿಮ್ಮಿದ ರಕ್ತದಲ್ಲಿ
ಇಚ್ಛಾಶಕ್ತಿಯೇ ನಷ್ಟವಾದರೆ ಆ
ಭೀಮನು ಆ ಕಡೆ, ಈ
ಅಶ್ವತ್ಥಾಮನು ಈ ಕಡೆ
ಜೋತುಬಿದ್ದ ಯುದ್ಧವನ್ನು
ದೇವತೆಗಳ ಸಮೂಹವು
ಹೊಗಳುತ್ತಿದ್ದಿತು.

ವ|| ಆಗಳ್
ಧರ್ಮರಾಜನುಮಿತ್ತ
ರಾಜರಾಜನುಮೊಂದೊರ್ವ
ರಂ ಕೆಯ್ಕೊಂಡು ತಂತಮ್ಮ
ರಥಂಗಳನೇಱಿಸಿಕೊಂಡುಯ್ದ
ರಿತ್ತ ಕರ್ಣನುಂ ಪಾಂಡವಬಳ
ಜಳನಿಧಿಯಂ
ಬಡಬಾನಳನಳುರ್ವಂತಳುರ್
ದು ತನ್ನೊಳ್ ಪೋಗದೆ ಪೆಣೆದ
ಪ್ರಭದ್ರಕ ಬಲಮೆಲ್ಲಮಂ
ಕೊಂದನನ್ನೆಗಮಿತ್ತ

ಭೀಮಾಶ್ವತ್ಥಾಮರಿರ್ವರುಂ
ಚೇತರಿಸಿ ಸೂತ ಪತಾಕಾ
ತುರಂಗಮೋಪೇತ
ರಥಂಗಳನೇಱಿಕೊಂಡು
ಮತ್ತಮೊರ್ವರೊರ್ವರನಱಿಸು
ತ್ತುಂ
ಸಂಗ್ರಾಮಭೂಮಿಯೊಳಗನೆ
ಬರೆ ಜರಾಸಂಧನ ಮಗಂ
ಕ್ಷೇಮಧೂರ್ತಿ ತಮ್ಮಯ್ಯನಂ
ಕೊಂದ ಪಗೆಯಂ ನೆನೆದು
ತನ್ನೇಱಿದ ಮತ್ತಹಸ್ತಿಯಂ

ಭೀಮಸೇನಂಗೆ ತೋಱಿ ಕೊಟ್ಟಾಗಳ್-

ವಚನ:ಪದವಿಭಾಗ-ಅರ್ಥ:ಆಗಳ್ ಧರ್ಮರಾಜನುಂ ಇತ್ತ ರಾಜರಾಜನುಂ ಒಂದೊರ್ವರಂ (ಒಬ್ಬೊಬ್ಬರನನ್ನು) ಕೆಯ್ಕೊಂಡು (ಆ ಕಡೆ ಧರ್ಮರಾಜನೂ ಈ ಕಡೆ ಕೌರವನೂ ಒಬ್ಬೊಬ್ಬರನ್ನೂ

ಕರೆದುಕೊಂಡು) ತಂತಮ್ಮ ರಥಂಗಳನು ಏಱಿಸಿ ಕೊಂಡು ಉಯ್ದರು (ತಮ್ಮ ರಥವನ್ನು ಹತ್ತಿಸಿಕೊಂಡು ಹೋದರು.) ಇತ್ತ ಕರ್ಣನುಂ ಪಾಂಡವ ಬಳ ಜಳನಿಧಿಯಂ (ಇತ್ತ ಕರ್ಣನು ಪಾಂಡವರ ಸೇನಾ ಸಮುದ್ರವನ್ನು) ಬಡಬಾನಳನು ಉಳುರ್ವಂತೆ ಅಳುರ್ದು (ಬಡಬಾಗ್ನಿಯು ಸುಡುವಂತೆ ಸುಟ್ಟು) ತನ್ನೊಳ್

ಪೋಗದೆ ಪೆಣೆದ ಪ್ರಭದ್ರಕ
ಬಲ ಎಲ್ಲಮಂ ಕೊಂದು
(ತನ್ನನ್ನು ಬಿಟ್ಟುಹೋಗದೆ
ತನ್ನಲ್ಲಿಯೇ ಹೆಣೆದುಕೊಂಡಿದ್ದ
ಪ್ರಭದ್ರಕಬಲವೆಲ್ಲವನ್ನೂ
ಕೊಂದನು) ಅನ್ನೆಗಮಿತ್ತ
ಭೀಮ ಅಶ್ವತ್ಥಾಮರು
ಇರ್ವರುಂ ಚೇತರಿಸಿ
(ಅಷ್ಟರಲ್ಲಿ ಈ ಕಡೆ
ಭೀಮಾಶ್ವತ್ಥಾಮರು
ಚೇತರಿಸಿಕೊಂಡು) ಸೂತ

ಪತಾಕಾ ತುರಂಗಮ ಉಪೇತ ರಥಂಗಳನು ಏಱಿಕೊಂಡು (ಸಾರಥಿ ಧ್ವಜ ಮತ್ತು ಕುದುರೆಗಳಿಂದ ಕೂಡಿದ ರಥಗಳನ್ನು ಹತ್ತಿಕೊಂಡು) ಮತ್ತಂ ಒರ್ವರೊರ್ವರನು ಅಱಸುತ್ತುಂ (ಪುನ ಒಬ್ಬರು ಮತ್ತೊಬ್ಬರನ್ನು ಹುಡುಕುತ್ತ) ಸಂಗ್ರಾಮಭೂಮಿಯೊಳಗನೆ ಬರೆ (ಯುದ್ಧಭೂಮಿಯಲ್ಲಿ ಬರುತ್ತಿರಲು) ಜರಾಸಂಧನ

ಮಗಂ ಕ್ಷೇಮಧೂರ್ತಿ ತಮ್ಮ
ಅಯ್ಯನಂ ಕೊಂದ ಪಗೆಯಂ
ನೆನೆದು (ಜರಾಸಂಧನ
ಮಗನಾದ ಕ್ಷೇಮಧೂರ್ತಿಯು
ತಮ್ಮ ತಂದೆಯನ್ನು ಕೊಂದ
ಶತ್ರುತ್ವವನ್ನು
ನೆನಪಿಸಿಕೊಂಡು) ತನ್ನ
ಏಱಿದ ಮತ್ತಹಸ್ತಿಯಂ
(ತಾನು ಹತ್ತಿದ್ದ
ಮದ್ದಾನೆಯನ್ನು)
ಭೀಮಸೇನಂಗೆ ತೋಱಿ

ಕೊಟ್ಟಾಗಳ್ (ಮದ್ದಾನೆಯನ್ನು ಭೀಮನ ಕಡೆ ಛೂ ಬಿಟ್ಟಾಗ,)- **ವಚನ:ಅರ್ಥ:**ವ|| ಆ ಕಡೆ ಧರ್ಮರಾಜನೂ ಈ ಕಡೆ ಕೌರವನೂ ಒಬ್ಬೊಬ್ಬರನ್ನೂ ಕರೆದುಕೊಂಡು ತಮ್ಮ ರಥವನ್ನು ಹತ್ತಿಸಿಕೊಂಡು ಹೋದರು. ಇತ್ತ ಕರ್ಣನು ಪಾಂಡವರ ಸೇನಾ ಸಮುದ್ರವನ್ನು ಬಡಬಾಗ್ನಿಯು ಸುಡುವಂತೆ ಸುಟ್ಟು ತನ್ನನ್ನು

ಬಿಟ್ಟುಹೋಗದೆ ತನ್ನಲ್ಲಿಯೇ ಹೆಣೆದುಕೊಂಡಿದ್ದ ಪ್ರಭದ್ರಕಬಲವೆಲ್ಲವನ್ನೂ ಕೊಂದನು. ಅಷ್ಟರಲ್ಲಿ ಈ ಕಡೆ ಭೀಮಾಶ್ವತ್ಥಾಮರು ಚೇತರಿಸಿಕೊಂಡು ಸಾರಥಿ ಧ್ವಜ ಮತ್ತು ಕುದುರೆಗಳಿಂದ ಕೂಡಿದ ರಥಗಳನ್ನು ಹತ್ತಿಕೊಂಡು ಪುನ ಒಬ್ಬರು ಮತ್ತೊಬ್ಬರನ್ನು ಹುಡುಕುತ್ತ ಯುದ್ಧಭೂಮಿಯಲ್ಲಿ

ಬರುತ್ತಿರಲು ಜರಾಸಂಧನ ಮಗನಾದ ಕ್ಷೇಮಧೂರ್ತಿಯು ತಮ್ಮ ತಂದೆಯನ್ನು ಕೊಂದ ಶತ್ರುತ್ವವನ್ನು ಜ್ಞಾಪಿಸಿಕೊಂಡು ತಾನು ಹತ್ತಿದ್ದ ಮದ್ದಾನೆಯನ್ನು ಭೀಮನ ಕಡೆ ಛೂಬಿಟ್ಟನು, ಛೂಬಿಟ್ಟಾಗ.

ಕಂ|| ಬಡಿಗೊಂಡು ಮಸಗಿ
ಬೈತ್ರಮ
ನೊಡೆವ ಮಹಾ ಮಕರದಂತೆ
ಕರಿಘಟೆಗಳನಾ|

ದುರ್ಡಿಯೆ ಬಡಿದಾನೆವೆರಸಾ

ಗಡೆ ಕೊಂದಂ

ಕ್ಷೇಮಧೂರ್ತಿಯಂ

ಪವನಸುತಂ| ೭೮ ||

ಪದ್ಯ-೭೮:ಪದವಿಭಾಗ-

ಅರ್ಥ:ಬಡಿಗೊಂಡು ಮಸಗಿ (ಬಡಿತವನ್ನು ತಿಂದು, ಪೆಟ್ಟುತಿಂದು ರೇಗಿ) ಬೈತ್ರಮಂ ಒಡೆವ ಮಹಾ ಮಕರದಂತೆ (ಹಡಗನ್ನು ಮುರಿಯುವ ದೊಡ್ಡ ಮೊಸಳೆಯ ಹಾಗೆ)

ಕರಿಘಟೆಗಳಂ ಆರ್ದು
ಉಡಿಯೆ ಬಡಿದು
(ಭೀಮಸೇನನು ಆನೆಯ
ಸಮೂಹವನ್ನು ಆರ್ಭಟಿಸಿ
ನಾಶಮಾಡುವಂತೆ ಹೊಡೆದು)
ಆನೆವೆರಸು ಆಗಡೆ ಕೊಂದಂ
(ಆನೆಯ ಸಮೇತ ಆಗಲೇ
ಕೊಂದನು.)
ಕ್ಷೇಮಧೂರ್ತಿಯಂ
ಪವನಸುತಂ

(ಕ್ಷೇಮಧೂರ್ತಿಯನ್ನು ಭೀಮನು)

ಪದ್ಯ-೭೮:ಅರ್ಥ:
ಪೆಟ್ಟುತಿಂದು ರೇಗಿ ಹಡಗನ್ನು ಮುರಿಯುವ ದೊಡ್ಡ ಮೊಸಳೆಯ ಹಾಗೆ ಭೀಮಸೇನನು ಆನೆಯ ಸಮೂಹವನ್ನು ಆರ್ಭಟಿಸಿ ನಾಶಮಾಡುವಂತೆ ಹೊಡೆದು, ಆರ್ಭಟಮಾಡಿ, ಆನೆಯ

ಸಮೇತ ಕ್ಷೇಮಧೂರ್ತಿಯನ್ನು ಆಗಲೇ ಕೊಂದನು.

ವ|| ಅಂತು ಕ್ಷೇಮಧೂರ್ತಿಯಂ ಕ್ಷೇಮದಿಂ ಕೊಂದನನ್ನೆಗಮತ್ತ ಮರುನ್ನಂದನನಱಸುತ್ತುಂ ಬರ್ಪಶ್ವತ್ಥಾಮನಂ ಪಾಂಡ್ಯನೆಡೆಗೊಂಡು ಬಂದು ಮಾರ್ಕೊಂಡು-

ವಚನ:ಪದವಿಭಾಗ-

ಅರ್ಥ:ಅಂತು ಕ್ಷೇಮಧೂರ್ತಿಯಂ ಕ್ಷೇಮದಿಂ

ಕೊಂದನು; ಅನ್ನೆಗಂ ಅತ್ತ ಮರುನ್ನಂದನನ ಅಱಸುತ್ತುಂ ಬರ್ಪ ಅಶ್ವತ್ಥಾಮನಂ (ಆ ಕಡೆ ಭೀಮನನ್ನು ಹುಡುಕುತ್ತಾ ಬರುತ್ತಿದ್ದ ಅಶ್ವತ್ಥಾಮನನ್ನು) ಪಾಂಡ್ಯನು ಎಡೆಗೊಂಡು ಬಂದು (ಪಾಂಡ್ಯನು ಮಧ್ಯೆ ಬಂದು) ಮಾರ್ಕೊಂಡು (ಎದುರಿಸಿ)--

ವಚನ:ಅರ್ಥ:ಹಾಗೆ ಭೀಮನು

ಕ್ಷೇಮಧೂರ್ತಿಯನ್ನು ಸುಲಭವಾಗಿ ಕೊಂದನು. ಅಷ್ಟರಲ್ಲಿ ಆ ಕಡೆ ಭೀಮನನ್ನು ಹುಡುಕುತ್ತಾ ಬರುತ್ತಿದ್ದ ಅಶ್ವತ್ಥಾಮನನ್ನು ಪಾಂಡ್ಯನು ಮಧ್ಯೆ ಬಂದು ಎದುರಿಸಿ-

ಕಂ|| ನೀನಲ್ಲದೆನ್ನ ಶರಸಂ
ಧನಮನಾನಲ್ಕೆ ನೆಱೆವರಿಲ್ಲೀ
ಪಡೆಯೊಳ್|
ನೀನಿಸನಾಂಪುದೆಂಬುದು

ಮಾನಲ್ಲದೆ ನಿನ್ನನಾಂಪ ಗಂಡರುಮೊಳರೇ|| ೭೯ ||

ಪದ್ಯ-೭೯:ಪದವಿಭಾಗ-ಅರ್ಥ:ನೀನಲ್ಲದೆ ಎನ್ನ ಶರಸಂಧನಮನ ಆನಲ್ಕೆ (ನನ್ನ ಬಾಣಪ್ರಯೋಗವನ್ನು ತಾಳುವುದಕ್ಕೆ) ನೆಱೆವರು ಇಲ್ಲಿ ಈ ಪಡೆಯೊಳ್ ನೀಂ ಇನಿಸಂ ಆಂಪುದೆಂಬುದುಂ (ಈ ಸೈನ್ಯದಲ್ಲಿ ಇನಿಸನ್ನು-ಸ್ವಲ್ಪಮಟ್ಟಿಗೆ ನಿನ್ನನ್ನು ಬಿಟ್ಟು

ಸಮರ್ಥರಾದವರು) ಆನು ಅಲ್ಲದೆ ನಿನ್ನನು ಆಂಪ ಗಂಡರುಮೊಳರೇ (ನಾನಲ್ಲದೇ ನಿನ್ನನ್ನು ಪ್ರತಿಭಟಿ ತಕ್ಕ ಶೂರರೂ ಇದ್ದಾರೆಯೇ?)

ಪದ್ಯ-೭೯:ಅರ್ಥ: ನನ್ನ ಬಾಣಪ್ರಯೋಗವನ್ನು ತಾಳುವುದಕ್ಕೆ ಈ ಸೈನ್ಯದಲ್ಲಿ ಇನಿಸನ್ನು- ಸ್ವಲ್ಪಮಟ್ಟಿಗೆ ನಿನ್ನನ್ನು ಬಿಟ್ಟು ಸಮರ್ಥರಾದವರು

ನಾನಲ್ಲದೇ ನಿನ್ನನ್ನು ಪ್ರತಿಭಟಿ ತಕ್ಕ ಶೂರರೂ ಇದ್ದಾರೆಯೇ? ಬೇರೆ ಯಾರೂ ಇಲ್ಲ.

ಎನೆ ಬೆಳ್ಮಸೆಯಂಬಿನ ಸರಿ
ಮೊನೆಯಂಬಿನ ಸೋನೆ
ಪಾರೆಯಂಬಿನ ತಂದಲ್|
ಘನಮಾದುದಲ್ಲಿ ಕಿತ್ತಂ
ಬಿನ ಬಡಪಮಿದೆನಿಸಿ
ಪಾಂಡ್ಯನಂಬಂ ಕರೆದಂ|| ೮೦ ||

ಪದ್ಯ-೦೦:ಪದವಿಭಾಗ-ಅರ್ಥ:ಎನೆ ಬೆಳ್ಮಸೆಯ

ಅಂಬಿನ, ಸರಿಮೊನೆಯಂಬಿನ ಸೋನೆ, (ಎನ್ನಲು ಬೆಳ್ಳಗೆ ಮಸೆದಿರುವ ಬಾಣದ ಮಳೆ, ಮೊನಚಾದ ಬಾಣಗಳ ತುಂತುರುಮಳೆ) ಪಾರೆಯಂಬಿನ ತಂದಲ್ (ಹಾರೆಯಾಕಾರದ ಅಂಬಿನ ತುಂತುರು) ಘನಮಾದುದು ಅಲ್ಲಿ (ಅಲ್ಲಿ ಅತಿಶಯವಾದವು.) ಕಿತ್ತ ಅಂಬಿನ ಬಡಪಂ ಇದೆನಿಸಿ

(ಕಿರಿಯಬಾಣಗಳ ನಿರಂತರವಾದ ಮಳೆ ಇದು ಎನಿಸವಂತೆ) ಪಾಂಡ್ಯನು ಅಂಬಂ ಕರೆದಂ (ಪಾಂಡ್ಯನು ಬಾಣಗಳನ್ನು ಸುರಿಸಿದನು.)

ಪದ್ಯ-00:ಅರ್ಥ: ಎನ್ನಲು ಬೆಳ್ಳಗೆ ಮಸೆದ ಬಾಣದ ಮಳೆ, ಮೊನಚಾದ ಬಾಣಗಳ ತುಂತುರುಮಳೆ, ಹಾರೆಯಾಕಾರದ ಅಂಬಿನ ತುಂತುರು, ಅಲ್ಲಿ

ಅತಿಶಯವಾದವು. ಅಲ್ಲಿಯ ಕಿರಿಯಬಾಣಗಳ ನಿರಂತರವಾದ ಮಳೆ ಇದು ಎನಿಸವಂತೆ ಪಾಂಡ್ಯನು ಬಾಣಗಳನ್ನು ಸುರಿಸಿದನು.

ಕೃರೆದೊಡವನಿತುಮನಂತಂ
ತುಱಿದೆಚ್ಚು ಕಡಂಗಿ ತಱಿದು
ಶರವರ್ಷದಿನಂ|
ದಱಿಯೆ ಕಡಿಕೆಯ್ದು ಬಿಡದೆಡೆ
ಮಱನಂ ಮಾಡಿದುವು
ಗುರುತನೂಜನ ಕಣೆಗಳ್||

೮೧||

ಪದ್ಯ-೮೧:ಪದವಿಭಾಗ-ಅರ್ಥ:ಕರೆದೊಡೆ (ಸುರಿಸಿದರೆ)ಅವು ಅನಿತುಮನು ಅಂತಂತೆ ಉಱದೆ ಎಚ್ಚು (ಅವಷ್ಟನ್ನೂ ಹಾಗೆ ಹಾಗೆಯೇ ಸುಮ್ಮನಿರದೆ ಜಾಗ್ರತೆಯಾಗಿ ಹೊಡೆದು) ಕಡಂಗಿ ತಱಿದು (ಉತ್ಸಾಹದಿಂದ ಕತ್ತರಿಸಿ) ಶರವರ್ಷದಿಂ ಅಂದು

ಅಱಿಯೆ (ಕಾಣುವಂತೆ)
ಕಡಿಕೆಯ್ದು (ಬಾಣದ
ಮಳೆಯಿಂದ ಕಾಣುವಂತೆ
ಸಂಪೂರ್ಣವಾಗಿ ತುಂಡರಿಸಿ,)
ಬಿಡದೆ ಎಡೆಮಱಿನಂ
ಮಾಡಿದುವು (ನಿಲ್ಲದೆ
ಅವರಿಬ್ಬರ ನಡುವೆ
ಬರಿದಾಗುವಂತೆ
ಮಾಡಿದುವು.)
ಗುರುತನೂಜನ ಕಣೆಗಳ್
(ಅಶ್ವತ್ಥಾಮನ ಬಾಣಗಳು)

ಪದ್ಯ-೮೧:ಅರ್ಥ: ಬಾಣಗಳ ಮಳೆಯನ್ನು ಸುರಿಸಿದರೆ ಅವಷ್ಟನ್ನೂ ಹಾಗೆ ಹಾಗೆಯೇ ಸುಮ್ಮನಿರದೆ ಹೊಡೆದು, ಉತ್ಸಾಹದಿಂದ ಕತ್ತರಿಸಿ, ಬಾಣದ ಮಳೆಯಿಂದ ಕಾಣುವಂತೆ ಸಂಪೂರ್ಣವಾಗಿ ತುಂಡರಿಸಿ, ನಿಲ್ಲದೆ ಅಶ್ವತ್ಥಾಮನ ಬಾಣಗಳು ಅವರಿಬ್ಬರ ನಡುವೆ ಬರಿದಾಗುವಂತೆ ಮಾಡಿದುವು.

ಎಡೆವಱಿದೊಳೆಱಗಿ ಬಱಸಿಡಿ
ಲಿಡುಮುಡುಕನೆ
ಪೊಡೆದುದೆನಿಸಿ ಪಾಂಡ್ಯನ
ರಥದ|
ಚ್ಚುಡಿದಱ್ಗೆ ತಱ್ಗೆ ಕೊಂಡುವು
ಕಡುಗೂರಿದುವೆನಿಪ
ಗುರುತನೂಜನ ಕಣೆಗಳ್|| ೮೨
||

ಪದ್ಯ-೮೨:ಪದವಿಭಾಗ-
ಅರ್ಥ:ಎಡೆವಱಿದೊಳು
ಎಱಗಿ ಬಱಸಿಡಿಲು

(ಬರಿದುಪ್ರದೇಶದಲ್ಲಿ
ಬರಸಿಡಿಲು ಹೊಡೆದು)
ಇಡುಮುಡುಕನೆ ಪೊಡೆದುದು
ಎನಿಸಿ (ಛಟಿಲುಛಟಿಲೆಂದು
ಹೊಡೆಯಿತು ಎಂಬಂತೆ)
ಪಾಂಡ್ಯನ ರಥದ ಅಚ್ಚುಡಿದು
ಅಟ್ಟೆ ತಟ್ಟೆ (ಪಾಂಡ್ಯನ ರಥದ
ಅಚ್ಚು ಮುರಿದು ಕುಗ್ಗಿ
ಕುಸಿಯುವಂತೆ) ಕೊಂಡುವು
(ಆಕ್ರಮಿಸಿದವು.)
ಕಡುಗೂರಿದುವು ಎನಿಪ

ಗುರುತನೂಜನ ಕಣೆಗಳ್ (ಬಹಳ ಹರಿತವಾದವು ಎನ್ನಿಸುವ ಅಶ್ವತ್ಥಾಮನ ಬಾಣಗಳು)

ಪದ್ಯ-೮೨:ಅರ್ಥ:ನಡುವಿನ ಬರಿದು ಪ್ರದೇಶದಲ್ಲಿ ಬರಸಿಡಿಲು ಹೊಡೆದು ಛಟಿಲುಛಟಿಲೆಂದು ಹೊಡೆಯಿತು ಎಂಬಂತೆ ಅಶ್ವತ್ಥಾಮನ ಬಹಳ ಹರಿತವಾದ ಬಾಣಗಳು

ಪಾಂಡ್ಯನ ರಥದ ಅಚ್ಚು
ಮುರಿದು ಕುಗ್ಗಿ ಕುಸಿಯುವಂತೆ
ಮಾಡಿ, ಬಹಳ ಹರಿತವಾದವು
ಎನ್ನಿಸುವ ಅಶ್ವತ್ಥಾಮನ
ಬಾಣಗಳು ಆಕ್ರಮಿಸಿದವು.

ವಿರಥಂ ಪಾಂಡ್ಯಂ ಕೋಪ
ಸ್ಫುರಿತಾಧರನುಡಿದು ಕೆಡೆಯೆ
ಪೞಯಿಗೆಯುಂ ಬಿ|
ಬ್ಬರ ಬಿರಿಯೆ ಗುರುತನೂಭವ
ನುರಮಂ ಬಿರಿಯೆಚ್ಚು
ಬೆಂಗೆವಂದಂಗಜದಾ|| ೮೩ ||

ಪದ್ಯ-೮೩:ಪದವಿಭಾಗ-ಅರ್ಥ:ವಿರಥಂ ಪಾಂಡ್ಯಂ ಕೋಪ ಸ್ಫುರಿತಾಧರಂ ಉಡಿದು ಕೆಡೆಯೆ (ಕೋಪದಿಂದ ನಡುಗುತ್ತಿರುವ ತುಟಿಯುಳ್ಳ ರಥವಿಲ್ಲದ ಪಾಂಡ್ಯನು ಮುರಿದು ಬೀಳಲು) ಪಟಿಯಿಗೆಯುಂ ಬಿಬ್ಬರ ಬಿರಿಯೆ (ಬಾವುಟವೂ ಪೂರ್ಣವಾಗಿ ಬಿರಿಯಲು) ಗುರುತನೂಭವನ ಉರಮಂ

ಬಿರಿಯೆ ಎಚ್ಚು (ಅಶ್ವತ್ಥಾಮನ ಎದೆಯನ್ನೂ ಬಿರಿದುಹೋಗುವಂತೆ ಹೊಡೆದು) ಬೆಂಗೆವಂದಂ ಗಜದಾ (ಗಜದ- ಆನೆಯ ಬೆನ್ನಿಗೆ ಬಂದನು)

ಪದ್ಯ-೮೨:ಅರ್ಥ:

ಕೋಪದಿಂದ ನಡುಗುತ್ತಿರುವ ತುಟಿಯಳ್ಳ, ರಥವಿಲ್ಲದ ಪಾಂಡ್ಯನು ಮುರಿದು ಬೀಳಲು, ಬಾವುಟವೂ

ಪೂರ್ಣವಾಗಿ ಬಿರಿಯಲು (ಪಾಂಡ್ಯನು) ಅಶ್ವತ್ಥಾಮನ ಎದೆಯನ್ನೂ ಬಿರಿದುಹೋಗುವಂತೆ ಹೊಡೆದು ಆನೆಯ ಬೆನ್ನಿಗೆ ಬಂದನು.

ವ|| ಅಂತು ತನ್ನ ನಚ್ಚುವ ಕೆಯ್ದುಗಳನಿತು ಪೊಳೆಯೆ ಮಸೆದೊಟ್ಟಿ ಮತ್ತಹಸ್ತಿಯನಣೆದು ತೋಱಿಕೊಟ್ಟಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ತನ್ನ ನಚ್ಚುವ ಕೆಯ್ದುಗಳು ಅನಿತು ಪೊಳೆಯೆ ಮಸೆದು ಒಟ್ಟಿ (ತಾನು ನಂಬಿದ್ದ ತನ್ನ ಆಯುಧಗಳೆಲ್ಲ ಹೊಸತಾಗಿ ಮಸೆಯಲ್ಪಟ್ಟು ರಾಶಿಯಾಗಿ ಪೊಳೆಯೆ-ಹೊಳೆಯುತ್ತಿರಲು) ಮತ್ತಹಸ್ತಿಯಂ ಅಣೆದು ತೋಱಿ ಕೊಟ್ಟಾಗಳ್ (ಮದ್ದಾನೆಯನ್ನು

ಅಂಕುಶದಿಂದ ತಿವಿದು
ಪಾಂಡ್ಯನು ಅಶ್ವತ್ಥಾಮನ
ಮೇಲೆ ಛೂಬಿಟ್ಟಾಗ-)-
ವಚನ:ಅರ್ಥ:ತಾನು ನಂಬಿದ್ದ
ಆಯುಧಗಳೆಲ್ಲ ಹೊಸತಾಗಿ
ಮಸೆಯಲ್ಪಟ್ಟು ರಾಶಿಯಾಗಿ
ಹೊಳೆಯುತ್ತಿರಲು
ಮದ್ದಾನೆಯನ್ನು
ಅಂಕುಶದಿಂದ ತಿವಿದು
ಪಾಂಡ್ಯನು ಅಶ್ವತ್ಥಾಮನ
ಮೇಲೆ ಛೂಬಿಟ್ಟಾಗ-

ಉ|| ಈ
ಮದದಂತಿಯೆಚ್ಚಿರವುಮೀತನ
ಶೌರ್ಯಮುಮೀ ಮಹೋಗ್ರ
ಸಂ
ಗ್ರಾಮದೊಳೆನ್ನುಮಂ
ಚಳಿಯಿಸಲ್ ಬಗೆದಪ್ಪುದು
ಪಾಂಡ್ಯನನ್ನನಿ|
ನ್ನೀ ಮಹಿಯೊಳ್ ಪೆಱಂ
ಕಲಿಯೆ ನೆಟ್ಟನಿದಿರ್ಚುವ
ನಿಚ್ಚಟಿಕ್ಕೆಯೊಳ್

ಭೀಮನುಮಿನ್ನನಲ್ಲನೆನೆ ಪೊೞ್ದೈಗಿವಂಗೆಣೆ ಗಂಡರೆಂಬರಾರ್|| ೮೪ ||

ಪದ್ಯ-೮೪:ಪದವಿಭಾಗ-ಅರ್ಥ:ಈ ಮದದಂತಿಯ ಎೞ್ತಿರವುಂ (ಈ ಮದ್ದಾನೆಯ ಬರುವಿಕೆಯೂ) ಈತನ ಶೌರ್ಯಮುಂ (ಈತನ ಪರಾಕ್ರಮವೂ) ಮಹೋಗ್ರ ಸಂಗ್ರಾಮದೊಳ್ ಎನ್ನುಮಂ ಚಳಿಯಿಸಲ್ ಬಗೆದಪ್ಪುದು

(ಈ ಘೋರಯುದ್ಧದಲ್ಲಿ ನನ್ನನ್ನು ಶಕ್ತಿಹೀನನನ್ನಾಗಿ ಮಾಡಲು ಯೋಚಿಸುತ್ತಿದೆ.) ಪಾಂಡ್ಯನನ್ನಂ ಇಂ ಈ ಮಹಿಯೊಳ್ ಪೆಱಂ ಕಲಿಯೆ (ಪಾಂಡ್ಯನಂತಹವನೂ ಇನ್ನು ಈ ಭೂಮಿಯಲ್ಲಿ ಇನ್ನೊಬ್ಬ ಶೂರನಿರುವನೇ?) ನೆಟ್ಟನೆ ಇದಿರ್ಚುವ ನಿಚ್ಚಟಿಕ್ಕೆಯೊಳ್ ಭೀಮನುಂ ಇನ್ನನು ಅಲ್ಲನು ಎನೆ (ನೇರವಾಗಿ ವೈರಿಯನ್ನು

ಎದುರಿಸುವ ಸ್ಥೈರ್ಯದಲ್ಲಿ ಭೀಮನು ಕೂಡ ಇಂತಹವನು ಅಲ್ಲ, ಎನ್ನವಾಗ) ಪೋಲ್ವೆಗೆ ಇವಂಗೆ ಎಣೆ ಗಂಡರೆಂಬರಾರ್ (ಹೋಲಿಕೆಮಾಡಲು ಇವನಿಗೆ ಸಮಾನರಾದವರು ಶೂರರು ಯಾರು ಇದ್ದಾರೆ?)

ಪದ್ಯ-೮೪:ಅರ್ಥ:ಅಶ್ವತ್ಥಾಮನು ಯೋಚಿಸಿದ, ಈ ಮದ್ದಾನೆಯ ಬರುವಿಕೆಯೂ ಈತನ ಪರಾಕ್ರಮವೂ ಈ

ಘೋರಯುದ್ಧದಲ್ಲಿ ನನ್ನನ್ನು ಶಕ್ತಿಹೀನನನ್ನಾಗಿ ಮಾಡಲು ಯೋಚಿಸುತ್ತಿದೆ. ಪಾಂಡ್ಯನಂತಹವನೂ ಇನ್ನು ಈ ಭೂಮಿಯಲ್ಲಿ ಇನ್ನೊಬ್ಬ ಶೂರನಿರುವನೇ? ನೇರವಾಗಿ ವೈರಿಯನ್ನು ಎದುರಿಸುವ ಸ್ಥೈರ್ಯದಲ್ಲಿ ಭೀಮನು ಕೂಡ ಇಂತಹವನು ಅಲ್ಲ, ಎನ್ನುವಾಗ ಹೋಲಿಕೆಮಾಡಲು ಇವನಿಗೆ

ಸಮಾನರಾದವರು ಶೂರರು ಯಾರು ಇದ್ದಾರೆ?

ವ|| ಎಂಬಿನ್ನೆಗಂ ಪಾಂಡ್ಯನಶ್ವತ್ಥಾಮನ ರಥಮಂ ಮುಟ್ಟೆವಂದು-

ವಚನ:ಪದವಿಭಾಗ-

ಅರ್ಥ:ಎಂಬ ಇನ್ನೆಗಂ ಪಾಂಡ್ಯನು ಅಶ್ವತ್ಥಾಮನ ರಥಮಂ ಮುಟ್ಟೆವಂದು (ಹತ್ತಿರ ಬಂದು)-

ವಚನ:ಅರ್ಥ:ವ||

ಎನ್ನುವಷ್ಟರಲ್ಲಿ ಪಾಂಡ್ಯನು ಅಶ್ವತ್ಥಾಮನ ತೇರಿನ ಸಹತ್ತಿರ ಬಂದು-

ಕಂ|| ವಿಳಯಾನಳ ವಿಳಸನ ವಿ

ಸುಳಿಂಗ ಸಂಘಾತದಿಂ

ತಗುಳ್ದಡರ್ವನಿತೊಂ|

ದಳವಿಯ ತೋಮರದಿಂದಿಡೆ

ಪೊಳೆವಸ್ತ್ರದೆ

ಗುರುತನೂಜನೆಡೆಯೊಳೆ

ಕಡಿದಂ|| ೮೫ ||

ಪದ್ಯ-೮೫:ಪದವಿಭಾಗ-ಅರ್ಥ: ವಿಳಯಾನಳ ವಿಳಸನ ವಿಸುಳಿಂಗ ಸಂಘಾತದಿಂ (ಪ್ರಳಯಾಗ್ನಿಯ ಪ್ರಕಾಶದ ಕಿಡಿಗಳ ಸಮೂಹದಿಂದ) ತಗುಳ್ದು ಅಡರ್ವ ಅನಿತೊಂದು ಅಳವಿಯ (ಹಿಂಬಾಲಿಸಿ ಮೇಲೇರುವಷ್ಟು ಶಕ್ತಿಯುಳ್ಳ) ತೋಮರದಿಂದ ಇಡೆ (ಹೊಡೆಯಲು) ಪೊಳೆವ ಅಸ್ತ್ರದೆ (ತೋಮರವೆಂಬ

ಹೊಳೆಯುವ ಆಯುಧ
(ದೊಡ್ಡಗದೆ) ಹೊಡೆಯಲು)
ಗುರುತನೂಜನು ಎಡೆಯೊಳೆ
ಕಡಿದಂ (ಅಶ್ವತ್ಥಾಮನು
ಮಧ್ಯಮಾರ್ಗದಲ್ಲಿಯೇ
ಅದನ್ನು ಕತ್ತರಿಸಿದನು.)

ಪದ್ಯ-೮೫:ಅರ್ಥ:

ಪ್ರಳಯಾಗ್ನಿಯ ಪ್ರಕಾಶದ
ಕಿಡಿಗಳ ಸಮೂಹದಿಂದ
ಹಿಂಬಾಲಿಸಿ ಮೇಲೇರುವಷ್ಟು
ಶಕ್ತಿಯುಳ್ಳ ತೋಮರವೆಂಬ

ಹೊಳೆಯುವ ಆಯುಧ (ದೊಡ್ಡಗದೆ) ಹೊಡೆಯಲು ಅಶ್ವತ್ಥಾಮನು ಮಧ್ಯಮಾರ್ಗದಲ್ಲಿಯೇ ಅದನ್ನು ಕತ್ತರಿಸಿದನು.

ವ|| ಅಂತದಂ ಕಡಿದು ಕೂರಿದುವುಂ ನೇರಿದುವುದಮಪ್ಪಯ್ದಮೋಘಾಸ್ತ್ರಂಗಳಂ ಬಾಣಯಿಂದುರ್ಚಿಕೊಂಡು

ತನ್ನ ಮನದೊಳೆ ಸಮಕಟ್ಟಿಕೊಂಡೆಚ್ಚ್ಯಾಗಳ್-

ವಚನ:ಪದವಿಭಾಗ-

ಅರ್ಥ:ಅಂತದಂ ಕಡಿದು (ಹಾಗೆ ಅದನ್ನು ಕತ್ತರಿಸಿ) ಕೂರಿದುವುಂ ನೇರಿದುವುದಂ ಅಪ್ಪ ಅಯ್ದು ಅಮೋಘಾಸ್ತ್ರಂಗಳಂ (ಹರಿತವೂ ನೇರವೂ ಆದ ಬೆಲೆಯೇ ಇಲ್ಲದ ಅಯ್ದು ಬಾಣಗಳನ್ನು) ಬಾಣಯಿಂದ

ಉರ್ಚಿಕೊಂಡು (
ಬತ್ತಳಿಕೆಯಿಂದ
ಸೆಳೆದುಕೊಂಡು) ತನ್ನ
ಮನದೊಳೆ
ಸಮಕಟ್ಟಿಕೊಂಡೆಚ್ಚಾಗಳ್
(ತನ್ನ ಮನಸ್ಸಿನಲ್ಲಿಯೇ ಹೇಗೆ
ಪ್ರಯೋಗಮಾಡಬೇಕೆಂದು
ಯೋಚಿಸಿ ಹೊಡೆದಾಗ.)-
ವಚನ:ಅರ್ಥ: ಹಾಗೆ ಅದನ್ನು
ಕತ್ತರಿಸಿ ಹರಿತವೂ ನೇರವೂ
ಆದ ಬೆಲೆಯೇ ಇಲ್ಲದ ಅಯ್ದು

ಬಾಣಗಳನ್ನು ಬತ್ತಳಿಕೆಯಿಂದ ಸೆಳೆದುಕೊಂಡು ತನ್ನ ಮನಸ್ಸಿನಲ್ಲಿಯೇ ಹೇಗೆ ಪ್ರಯೋಗಮಾಡಬೇಕೆಂದು ಯೋಚಿಸಿ ಹೊಡೆದಾಗ.

ಕಂ|| ಕರಿಕರಮುಂ ಮಾವಂತನ
ಕರಮುಂ
ತತ್ಪಾಂಡ್ಯಶಿರಮುಮೊಡನುರು
ಳೆ ಭಯಂ|
ಕರಮುಮನುರ್ವಿಗಗುರ್ವಮ

ನೆರಡುಂ ಪಡೆಗಳ್ಗೆ ತೋಱಿದಂ ಗುರುತನಯಂ|| ೮೬ ||

ಪದ್ಯ-೮೬:ಪದವಿಭಾಗ-ಅರ್ಥ:ಕರಿಕರಮುಂ (ಆನೆಯ ಕೈ: ಆನೆಯ ಸೊಂಡಿಲೂ) ಮಾವಂತನಕರಮುಂ (ಮಾವಟಿಗನ ಕೈಯೂ) ತತ್ ಪಾಂಡ್ಯ ಶಿರಮುಂ ಒಡನೆ ಉರುಳೆ (ಆ ಪಾಂಡ್ಯನ ತಲೆಯೂ ಜೊತೆಯಾಗಿಯೇ ಉರುಳಲು) ಭಯಂಕರಮುಂ

ಅನುರ್ವಿಗೆ ಅಗುರ್ವುಮಂ
ಎರಡುಂ ಪಡೆಗಳ್ಗೆ
(ಭಯಾನಕವನ್ನೂ
ಅದ್ಭುತವನ್ನೂ
ಜೊತೆಯಲ್ಲಿಯೇ
ತೋರಿದನು.) ತೋಱಿದಂ
ಗುರುತನಯಂ (ಅಶ್ವತ್ಥಾಮನು
ತೋರಿದನು.)
ಪದ್ಯ-೮೬:ಅರ್ಥ: ಆನೆಯ
ಸೊಂಡಿಲೂ ಮಾವಟಿಗನ
ಕೈಯೂ ಆ ಪಾಂಡ್ಯನ

ತಲೆಯೂ ಜೊತೆಯಾಗಿಯೇ ಉರುಳಲು ಅಶ್ವತ್ಥಾಮನು ಲೋಕಕ್ಕೆ ಭಯಾನಕವನ್ನೂ ಅದ್ಭುತವನ್ನೂ ಜೊತೆಯಲ್ಲಿಯೇ ತೋರಿದನು.

ವ|| ಅನ್ನೆಗಂ ಸಂಸಪ್ತಕನಿಕಾಯಮನತಿ ನಿಶಿತ ಸಾಯಕನಿಕಾಯದಿಂ ನಿಶ್ಶೇಷಮಾಗೆ ಮಾಣ್ಬಿ ಸಾಮಂತಚೂಡಾಮಣಿ ಕೌರವಬಲದ ಕಳಕಳಮಂ

ಕೇಳ್ದು ಮನಪವನವೇಗದಿಂ

ಜವನೆ ಬರ್ಪಂತೆ ಬಂದು

ತಾಗಿದಾಗಳಕ್ಷೋಹಿಣೀ

ನಾಯಕಂ ದಂಡಧಾರಂ

ಗಂಡಗುಣಕ್ಕಾಧಾರಮಾಗಿ

ಮದಗಳಿತ ಗಂಡ ಪ್ರಚಂಡ

ಮದವೇತಂಡಮನಣೆದು

ಬಿಟ್ಟಿಕ್ಕಿದಾಗಳ್-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಸಂಸಪ್ತಕ

ನಿಕಾಯಮನು (ಅಷ್ಟರಲ್ಲಿ

ಸಂಸಪ್ತಕಸಮೂಹವನ್ನು) ಅತಿ ನಿಶಿತ ಸಾಯಕ ನಿಕಾಯದಿಂ (ಬಹಳ ಹರಿತವಾದ ಬಾಣಗಳ ಸಮೂಹದಿಂದ) ನಿಶ್ಶೇಷಮಾಗೆ ಮಾಳ್ಪಿ (ಸ್ವಲ್ಪವೂ ಉಳಿಯದ ಹಾಗೆ ಮಾಳ್ಪ- ಮಾಡುವ) ಸಾಮಂತಚೂಡಾಮಣಿ ಕೌರವಬಲದ ಕಳಕಳಮಂ ಕೇಳ್ದು (ಸಾಮಂತ ಚೂಡಾಮಣಿಯಾದ

ಅರ್ಜುನನು, ಕೌರವಸೈನ್ಯದ
ಕೋಲಾಹಲ ಶಬ್ದವನ್ನು ಕೇಳಿ)
ಮನಪವನ ವೇಗದಿಂ ಜವನೆ
ಬರ್ಪಂತೆ ಬಂದು
(ಮನೋವೇಗ
ವಾಯುವೇಗದಿಂದ ಯಮನೇ
ಬರುವ ಹಾಗೆ ಬಂದು)
ತಾಗಿದಾಗಳ್
(ಎದುರಿಸಿದಾಗ,)
ಅಕ್ಷೋಹಿಣೀ ನಾಯಕಂ
ದಂಡಧಾರಂ ಗಂಡ

ಗುಣಕ್ಕಾಧಾರಮಾಗಿ
(ಅಕ್ಷೋಹಿಣೀ ಸೈನ್ಯದ
ಒಡೆಯನಾದ ದಂಡಧಾರನು
ಪೌರುಷಗುಣಕ್ಕೆ
ಆಶ್ರಯವಾಗಿ) ಮದಗಳಿತ
ಗಂಡ ಪ್ರಚಂಡ ಮದವೇ
ತಂಡಮನು ಅಣೆದು
ಬಿಟ್ಟೆಕ್ಕಿದಾಗಳ್
(ಮದೋದಕವು
ಸುರಿಯುತ್ತಿರುವ
ಕಪೋಲವುಳ್ಳ

ಮದ್ದಾನೆಯನ್ನು ತಿವಿದು ಛೂಬಿಟ್ಟಾಗ-)-

ವಚನ:ಅರ್ಥ:ಅಷ್ಟರಲ್ಲಿ ಸಂಸಪ್ತಕಸಮೂಹವನ್ನು ಬಹಳ ಹರಿತವಾದ ಬಾಣಗಳ ಸಮೂಹದಿಂದ ಸ್ವಲ್ಪವೂ ಉಳಿಯದ ಹಾಗೆ ಮಾಡುವ ಸಾಮಂತ ಚೂಡಾಮಣಿಯಾದ ಅರ್ಜುನನು, ಕೌರವಸೈನ್ಯದ ಕೋಲಾಹಲ ಶಬ್ದವನ್ನು ಕೇಳಿ

ಮನೋವೇಗ
ವಾಯುವೇಗದಿಂದ ಯಮನೇ
ಬರುವ ಹಾಗೆ ಬಂದು
ಎದುರಿಸಿದಾಗ, ಅವನ ಮೇಲೆ,
ಅಕ್ಷೋಹಿಣೀ ಸೈನ್ಯದ
ಒಡೆಯನಾದ ದಂಡಧಾರನು
ಪೌರುಷಗುಣಕ್ಕೆ ಆಶ್ರಯವಾಗಿ
ಮದೋದಕವು
ಸುರಿಯುತ್ತಿರುವ
ಕಪೋಲವುಳ್ಳ

ಮದ್ದಾನೆಯನ್ನು ತಿವಿದು ಘೂಬಿಟ್ಟಾಗ-

ಉ|| ಕಾದಲಿದಿರ್ಚಿ ಬಂದ ಪಗೆ ಸಂಪಗೆಯಂತೆ ಶಿಳೀಮುಖಕ್ಕೆ ಗೆಂ ಟಾದುದಿದೊಂದೆ ಸಿಂಧುರದೊಳಿಂತಿವನೊರ್ವನೆ ತಳ್ತನಾದೊಡೇ| ನಾದುದೋ ಬಲ್ಲೆನೆಂದು ಮುಳಿದೆಚ್ಚೊಡೆ ಪೌಳನೆ ಸೀಳ್ದು ಪಚ್ಚವೋ

ಲಾದುದು ದಂಡಧಾರ ಗಜಮಾತನೊಡಲ್ವೆರಸಂದು ಪಾರ್ಥನಿಂ|| ೮೭ ||

ಪದ್ಯ-೮೭:ಪದವಿಭಾಗ-ಅರ್ಥ:ಕಾದಲು ಇದಿರ್ಚಿ ಬಂದ ಪಗೆ (ಅರ್ಜುನನೊಡನೆ-ಯುದ್ಧಕ್ಕೆ ಎದುರಸಿ ಬಂದ ಶತ್ರುವು) ಸಂಪಗೆಯಂತೆ ಶಿಳೀಮುಖಕ್ಕೆ ಗೆಂಟಾದುದು (ದುಂಬಿಗೆ ಶೀಳೀಮುಖ ಬಾಣಗಳಿಗೆ ಎದುರಾದ

ಸಂಪಗೆಯ ಹೂವಿನಂತೆ (??)
ದೂರವಾಯಿತು) ಇದೊಂದೆ
ಸಿಂಧುರದೊಳು ಇಂತು
ಇವನು ಒರ್ವನೆ ತಳ್ತನಾದೊಡೆ
ಏನಾದುದೋ ಬಲ್ಲೆನೆಂದು
(ಇದೊಂದೇ ಆನೆಯೊಡನೆ
ಇವನೊಬ್ಬನೆ
ಪ್ರತಿಭಟಿಸಿದರೇನಾಯಿತು,
ಇದಕ್ಕೆ ಪರಿಹಾರವನ್ನು ನಾನು
ತಿಳಿದಿದ್ದೇನೆ. ಎಂದು)
ಮುಳಿದು ಎಚ್ಚೊಡೆ ಸೌಳನೆ

ಸೀಳ್ದು ಪಚ್ಚವ್ರೋಲಾದುದು ದಂಡಧಾರ ಗಜಮಾತನೊಡಲ್ವೆರಸಂದು ಪಾರ್ಥನಿಂ (ಕೋಪಿಸಿ ಹೊಡೆಯಲು ಅರ್ಜುನನಿಂದ ದಂಡಧಾರನ ಶರೀರದೊಡನೆ ಆ ಆನೆಯು ಸೌಳೆಂದು ಸೀಳಿ ವಿಭಾಗಿಸಿದ ಹಾಗಾಯಿತು.)

ಪದ್ಯ-೮೭:ಅರ್ಥ: ಅರ್ಜುನನೊಡನೆ ಯುದ್ಧಕ್ಕೆ ಎದುರಸಿ ಬಂದ ಶತ್ರುವು

ದುಂಬಿಗೆ ಎದುರಾದ ಸಂಪಗೆಯ ಹೂವಿನಂತೆ ದೂರವಾಯಿತು. ಇದೊಂದೇ ಆನೆಯೊಡನೆ ಇವನೊಬ್ಬನೆ ಪ್ರತಿಭಟಿಸಿದರೇನಾಯಿತು, ಇದಕ್ಕೆ ಪರಿಹಾರವನ್ನು ನಾನು ತಿಳಿದಿದ್ದೇನೆ. ಎಂದು ಕೋಪಿಸಿ ಹೊಡೆಯಲು ಅರ್ಜುನನಿಂದ ದಂಡಧಾರನ ಶರೀರದೊಡನೆ ಆ ಆನೆಯು ಸೌಳೆಂದು ಸೀಳಿ ವಿಭಾಗಿಸಿದ ಹಾಗಾಯಿತು.

ವ||ಅಂತಾತಂ ಕೃತಾಂತನಿವಾಸಮನೆಯ್ದುವುದುಂ-

ವಚನ:ಪದವಿಭಾಗ-

ಅರ್ಥ:ಅಂತು ಆತಂ ಕೃತಾಂತ ನಿವಾಸಮನು ಎಯ್ದುವುದುಂ (ಅವನು ಯಮನ ಮನೆಯನ್ನು ಸೇರಲಾಗಿ)-

ವಚನ:ಅರ್ಥ: ವ|| ಹಾಗೆ ಅವನು ಯಮನ ಮನೆಯನ್ನು ಸೇರಲಾಗಿ

ಕಂ||

ಇನ್ನಿನಿಸನಿರ್ದೇಡಾಜಿಯೊ

ಳೆನ್ನ ತನೂಜನುಮನಟ್ಟಿಷಂ

ನರನದನಿ|

ನ್ನಾನ್ನೋಡಲಾರೆನೆಂಬವೊ

ಲನ್ನೆಗಮಸ್ತಾಚಳಸ್ಥನಾದಂ

ದಿನಪಂ|| ೮೮ ||

ಪದ್ಯ-೮೮:ಪದವಿಭಾಗ-

ಅರ್ಥ:ಇನ್ನು ಇನಿಸನು

ಇರ್ದೇಡೆ ಆಜಿಯೊಳ್ ಎನ್ನ

ತನೂಜನುಂ ಅಟ್ಟಿಷಂ

ನರನು(ಇನ್ನೂ ಸ್ವಲ್ಪ ಕಾಲ ಇದ್ದರೆ ಯುದ್ಧದಲ್ಲಿ ಅರ್ಜುನನು ನನ್ನ ಮಗನಾದ ಕರ್ಣನನ್ನೂ ಸಾಯಿಸುತ್ತಾನೆ) ಅದಂ ಇಂ ನಾಂ/ಆಂ ನೋಡಲಾರೆಂನೆಂಬವೊಲ್ (ಇದನ್ನು ನಾನು ನೋಡಲಾರೆ ಎನ್ನುವ ಹಾಗೆ) ಅನ್ನೆಗಂ ಅಸ್ತಾಚಳಸ್ಥನು ಆದಂ ದಿನಪಂ (ಅಷ್ಟರಲ್ಲಿ ಸೂರ್ಯನು ಮುಳುಗಿದನು.)

ಪದ್ಯ-೮೮:ಅರ್ಥ:ಇನ್ನೂ ಸ್ವಲ್ಪ ಕಾಲ ಇದ್ದರೆ ಯುದ್ಧದಲ್ಲಿ ಅರ್ಜುನನು ನನ್ನ ಮಗನಾದ ಕರ್ಣನನ್ನೂ ಸಾಯಿಸುತ್ತಾನೆ. ಇದನ್ನು ನಾನು ನೋಡಲಾರೆ ಎನ್ನುವ ಹಾಗೆ ಅಷ್ಟರಲ್ಲಿ ಸೂರ್ಯನು ಮುಳುಗಿದನು.

<u>ದುರ್ಯೋಧನನು ಶಲ್ಯನನ್ನು ಕರ್ಣನ ಸಾರಥಿಯಾಗಲು ಒಪ್ಪಿಸುವುದು</u>

ವ|| ಅಂತು ಪತಂಗಮಂಡಲಮಪರಗಿರಿತಟಮನೆಯ್ದುವುದುಮೆರಡುಂ ಪಡೆಗಳಪಹಾರ ತೂರ್ಯಂಗಳಂ ಬಾಜಿಸಿ ತಂತಮ್ಮ ಬೀಡುಗಳ್ಗೆ ಪೋದುವಾಗಳ್ ರಾಜರಾಜನಲ್ಲಿಗಂಗರಾಜಂ

ಬಂದು
ಹಯೋಪಾಯಕುಶಲರಪ್ಪ
ಗಾಂಗೇಯರಱಿಪಿದ
ಮಾತನೇಕಾಂತ
ದೊಳಱಿಪುವುದುಂ
ತ್ರಿಣೇತ್ರನೊಳ್
ಕಲ್ತಶ್ವಹೃದಯದೊಳಂ
ರಥಕಲ್ಪದೊಳಂ ಶಲ್ಯಂ
ಮುಂರಾಂತಕಂಗಂ
ಪ್ರವೀಣನಪ್ಪುದಱಿಂದಾತನ
ನೆಂತಾನುಮೊಡಂಬಡೆ

ನುಡಿದು ನಿನಗೆ ಸಾರಥಿ
ಮಾಡುವೆನೆಂದು
ದಿನಕರತನೂಜನಂ ಬೀಡಿಂಗೆ
ಪೋಗಲ್ವೇೞ್ದು ಪೊನ್ನ
ಪಣ್ಣುಗೆಯ ಪಿಡಿಯನೇಱಿ
ದಿನಕರನ ಬೞಿದಪ್ಪಿದ
ಕಿರಣಂಗಳ್ ಕತ್ತಲೆಯಂ
ಕಂಡಳ್ಕಿ ತನ್ನ ಮರೆಯಂ
ಪೊಕ್ಕಂತೆ ಕೆಯ್ದೀವಿಗೆಗಳ್
ಬೆಳಗೆ ಕಿಱಿದಾನುಂ
ಮಾನಸರ್ವೆರಸು ರಾಜರಾಜಂ

ಮದ್ರರಾಜನ ಮನೆಗೆ ಬರ್ಪುದುಮಾತನತ್ಯಂತ ಸಂಭ್ರಮಾಕ್ರಾಂತಹೃದಯನಾಗಿ ಬೇಗಮಿದಿರೇೞ್-

ವಚನ:ಪದವಿಭಾಗ-

ಅರ್ಥ:ಅಂತು ಪತಂಗಮಂಡಲಂ ಅಪರಗಿರಿತಟಮನು ಎಯ್ದುವುದುಂ (ನಂತರ ಸೂರ್ಯಬಿಂಬವು ಪಶ್ಚಿಮಗಿರಿಯ ಬುಡವನ್ನು

ತಲುಪಲು) ಎರಡುಂ ಪಡೆಗಳ್
ಅಪಹಾರ ತೂರ್ಯಂಗಳಂ
ಬಾಜಿಸಿ (ಎರಡು ಸೈನ್ಯಗಳೂ
ಯುದ್ಧವನ್ನು ನಿಲ್ಲಿಸಲು
ಸೂಚನೆಕೊಡುವ ವಾದ್ಯವನ್ನು
ಬಾರಿಸಿ) ತಂತಮ್ಮ ಬೀಡುಗಳ್ಗೆ
ಪೋದುವು ಆಗಳ್ (ಆಗ,
ತಮ್ಮ ತಮ್ಮ ಬೀಡುಗಳಿಗೆ
ತೆರಳಿದುವು.)
ರಾಜರಾಜನಲ್ಲಿಗೆ ಅಂಗರಾಜಂ
ಬಂದು ಹಯ

ಉಪಾಯಕುಶಲರಪ್ಪ
ಗಾಂಗೇಯರು ಅಱಿಪಿದ
ಮಾತನು ಏಕಾಂತದೊಳ್
ಅಱಿಪುವುದುಂ (ಆಗ ರಾಜ
ದುರ್ಯೋಧನನಲ್ಲಿಗೆ ಕರ್ಣನು
ಬಂದು ಅಶ್ವಶಾಸ್ತ್ರವನ್ನು
ಚೆನ್ನಾಗಿ ತಿಳಿದ ಭೀಷ್ಮರು
ತಿಳಿಸಿದ ಮಾತನ್ನು
ರಹಸ್ಯವಾಗಿ ತಿಳಿಸಿದನು.
ಆಗ-) ತ್ರಿಣೇತ್ರನೊಳ್ ಕಲ್ತ
ಅಶ್ವಹೃದಯದೊಳಂ

ರಥಕಲ್ಪದೊಳಂ ಶಲ್ಯಂ
ಮುಂರಾಂತಕಂಗಂ
ಪ್ರವೀಣನಪ್ಪುದಱಿಂದ
(ಮುಕ್ಕಣ್ಣನಾದ ಈಶ್ವರನಲ್ಲಿ
ಕಲಿತ ಅಶ್ವಹೃದಯದಲ್ಲಿಯೂ
ರಥಕಲ್ಪದಲ್ಲಿಯೂ ಶಲ್ಯನು
ಶ್ರೀಕೃಷ್ಣನಿಗಿಂತಲೂ ಹೆಚ್ಚು
ತಿಳಿದವನಾದುದರಿಂದ)
ಆತನನು ಎಂತಾನುಂ
ಒಡಂಬಡೆ ನುಡಿದು ನಿನಗೆ
ಸಾರಥಿ ಮಾಡುವೆನೆಂದು

(ವನನ್ನು ಹೇಗಾದರೂ ಮಾಡಿ
ಒಪ್ಪುವ ಹಾಗೆ ಮಾಡಿ ನಿನಗೆ
ಸಾರಥಿಯನ್ನಾಗಿ ಮಾಡುತ್ತೇನೆ
ಎಂದು) ದಿನಕರತನೂಜನಂ
ಬೀಡಿಂಗೆ ಪೋಗಲ್ ವೇೞ್ದು
(ಎಂದು ಕರ್ಣನನ್ನು ಬೀಡಿಗೆ
ಹೋಗಹೇಳಿ), ಪೊನ್ನ
ಪಣ್ಣುಗೆಯ (ಅಲಂಕಾರಿಸಿದ)
ಪಿಡಿಯನು ಏಱಿ (ಚಿನ್ನದಿಂದ
ಅಲಂಕಾರಮಾಡಿದ
ಹೆಣ್ಣಾನೆಯನ್ನು ಹತ್ತಿಕೊಂಡು)

ದಿನಕರನ ಬಱಿದಪ್ಪಿದ
ಕಿರಣಂಗಳ್ (ಸೂರ್ಯನ
ದಾರಿತಪ್ಪಿದ ಕಿರಣಗಳು)
ಕಟ್ತಿಲೆಯಂ ಕಂಡಳ್ಕಿ ತನ್ನ
ಮರೆಯಂ ಪೊಕ್ಕಂತೆ (ತನ್ನ
ಆಶ್ರಯವನ್ನು ಪ್ರವೇಶಿಸಿದ
ಹಾಗೆ) ಕೆಯ್ದೀವಿಗೆಗಳ್ ಬೆಳಗೆ
(ಕೈದೀವಟಿಗೆಗಳು
ಪ್ರಕಾಶಿಸಲು) ಕಿಱಿದಾನುಂ
ಮಾನಸರ್ ವೆರಸು
ರಾಜರಾಜಂ ಮದ್ರರಾಜನ

ಮನೆಗೆ ಬರ್ಪುದುಂ (ಕೆಲವೇ ಪರಿಜನರೊಡನೆ ದುರ್ಯೋಧನನು ಮದ್ರರಾಜನಾದ ಶಲ್ಯನ ಮನೆಗೆ ಬರಲು,) ಆತನು ಅತ್ಯಂತ ಸಂಭ್ರಮಾಕ್ರಾಂತ ಹೃದಯನಾಗಿ (ಅವನು ಅತ್ಯಂತ ಸಂಭ್ರಮದಿಂದ ಕೂಡಿದ ಮನಸ್ಸುಳ್ಳವನಾಗಿ) ಬೇಗಂ ಇದಿರೇಟ್ (ಬೇಗನೆ ಇದಿರುಗೊಂಡನು. ಆಗ-)

ವಚನ:ಅರ್ಥ:ನಂತರ ಸೂರ್ಯಬಿಂಬವು ಪಶ್ಚಿಮಗಿರಿಯ ಬುಡವನ್ನು ತಲುಪಲು, ಎರಡು ಸೈನ್ಯಗಳೂ ಯುದ್ಧವನ್ನು ನಿಲ್ಲಿಸಲು ಸೂಚನೆಕೊಡುವ ವಾದ್ಯವನ್ನು ಬಾರಿಸಿ ತಮ್ಮ ತಮ್ಮ ಬೀಡುಗಳಿಗೆ ತೆರಳಿದುವು. ಆಗ ರಾಜ ದುರ್ಯೋಧನನಲ್ಲಿಗೆ ಕರ್ಣನು ಬಂದು ಅಶ್ವಶಾಸ್ತ್ರವನ್ನು

ಚೆನ್ನಾಗಿ ತಿಳಿದ ಭೀಷ್ಮರು
ತಿಳಿಸಿದ ಮಾತನ್ನು
ರಹಸ್ಯವಾಗಿ ತಿಳಿಸಿದನು.
ಮುಕ್ಕಣ್ಣನಾದ ಈಶ್ವರನಲ್ಲಿ
ಕಲಿತ ಅಶ್ವಹೃದಯದಲ್ಲಿಯೂ
ರಥಕಲ್ಪದಲ್ಲಿಯೂ ಶಲ್ಯನು
ಶ್ರೀಕೃಷ್ಣನಿಗಿಂತಲೂ ಹೆಚ್ಚು
ತಿಳಿದವನಾದುದರಿಂದ
ಅವನನ್ನು ಹೇಗಾದರೂ ಮಾಡಿ
ಒಪ್ಪುವ ಹಾಗೆ ಮಾಡಿ ನಿನಗೆ
ಸಾರಥಿಯನ್ನಾಗಿ ಮಾಡುತ್ತೇನೆ

ಎಂದು ಕರ್ಣನನ್ನು ಬೀಡಿಗೆ ಹೋಗಹೇಳಿದನು. ಚಿನ್ನದಿಂದ ಅಲಂಕಾರಮಾಡಿದ ಹೆಣ್ಣಾನೆಯನ್ನು ಹತ್ತಿಕೊಂಡು ಸೂರ್ಯನ ದಾರಿತಪ್ಪಿದ ಕಿರಣಗಳು ಕತ್ತಲೆಯನ್ನು ಕಂಡು ಹೆದರಿ ತನ್ನ ಆಶ್ರಯವನ್ನು ಪ್ರವೇಶಿಸಿದ ಹಾಗೆ ಕೈದೀವಟಿಗೆಗಳು ಪ್ರಕಾಶಿಸಲು ಕೆಲವೇ ಪರಿಜನರೊಡನೆ

ದುರ್ಯೋಧನನು
ಮದ್ರರಾಜನಾದ ಶಲ್ಯನ
ಮನೆಗೆ ಬಂದನು. ಹಾಗೆ
ಬರಲು ಶಲ್ಯನು / ಅವನು
ಅತ್ಯಂತ ಸಂಭ್ರಮದಿಂದ
ಕೂಡಿದ ಮನಸ್ಸುಳ್ಳವನಾಗಿ
ವೇಗದಿಂದ ಇದಿರಾಗಿ ಎದ್ದು
ಬಂದನು-

ಮಲ್ಲಿಕಾಮಾಲೆ|| ಅಂತೆ
ಕುಳ್ಳಿರಿರಪ್ಪೊಡಿಂ
ನಿಮಗಾಣೆಯೆಂದಿರವೇಱ್ದಿಳಾ

ಕಾಂತನುಂ ತೊಡೆಸೋಂಕಿ ಕುಳ್ಳಿರೆ ಬಾೞ್ತೆಯುಳ್ಳೊಡೆ ನೀನೆ ಬ ರ್ಪಂತುಟಾದುದೆ ಪೇೞಿ ನೀಂ ಬಿೞಿಯಟ್ಟಲಾಗದೆ ಕೆಮ್ಮನಿ ನ್ನೆಂತುಮೇಂ ಮನೆವಾೞ್ತೆಯಂ ಬೆಸಸಲ್ಕೆ ಬಂದೆಯಿಳಾಧಿಪಾ.. || ೮೯ ||

ಪದ್ಯ-೮೯:ಪದವಿಭಾಗ-

ಅರ್ಥ:ಅಂತೆ ಕುಳ್ಳಿರಿರಪ್ಪೊಡಿಂ (ಕುಳ್ಳಿರಿ

ಇರಪ್ಪೊಡೆ ಇಂ-ಇನ್ನು-
ಹಾಗೆಯೇ ಕುಳಿತುಕೊಳ್ಳಿ;
ಇರದಿದ್ದರೆ)
ನಿಮಗಾಣೆಯೆಂದು ಇರವೇಳ್ದಿ
ಇಳಾಕಾಂತನುಂ (ನಿಮ್ಮ
ಮೇಲಾಣೆಯೆಂದು
ಕುಳಿತುಕೊಂಡೇ ಇರಬೇಕೆಂದು
ಹೇಳಿ ರಾಜ
ದುರ್ಯೋಧನನೂ)
ತೊಡೆಸೋಂಕಿ ಕುಳ್ಳಿರೆ
(ತೊಡೆಸೋಂಕಿನಷ್ಟು ಹತ್ತಿರ

ಕುಳಿತುಕೊಂಡಿರಲು)
ಬಾೞ್ತೆಯುಳ್ಳೊಡೆ ನೀನೆ
ಬರ್ಪಂತುಟೆ ಆದುದೆ ಪೇೞ
("ಕಾರ್ಯವಿದ್ದರೆ ನೀನೇ
ಬರುವ ಹಾಗಾಯಿತೇ?
ಹೇಳಪ್ಪಾ) ನೀಂ
ಬಿೞಿಯಟ್ಟಲಾಗದೆ (ನೀನು
ದೂತರ ಮೂಲಕ ಹೇಳಿ
ಕಳುಹಿಸ ಬಾರದಾಗಿತ್ತೇ?)
ಕೆಮ್ಮನೆ ಇನ್ನೆಂತುಮೇಂ
(ಸುಮ್ಮನೆ ಇನ್ನು ನೀನೇ

ಬಂದಮೇಲೆ ಹೇಗೆ?) ಮನೆವಾೞ್ತೆಯಂ ಬೆಸಸಲ್ಕೆ ಬಂದೆ (ಯಿ) ಇಳಾಧಿಪಾ (ಇಳೆಯ ಅಧಿಪ-ರಾಜ; ರಾಜನೇ, ಯಾವ ಗೃಹಕೃತ್ಯದ ಮಾತನ್ನು ತಿಳಿಸುವುದಕ್ಕೆ, ಆಜ್ಞೆ ಮಾಡುವುದಕ್ಕೆ ಬಂದಿರುವೆ”)

ಪದ್ಯ-೮೯:ಅರ್ಥ: ಹಾಗೆಯೇ ಕುಳಿತುಕೊಳ್ಳಿ; ಇರದಿದ್ದರೆ ನಿಮ್ಮ ಮೇಲಾಣೆಯೆಂದು ಕುಳಿತುಕೊಂಡೇ ಇರಬೇಕೆಂದು

ಹೇಳಿ ದುರ್ಯೋಧನನೂ
ತೊಡೆಸೋಂಕಿನಷ್ಟು ಹತ್ತಿರ
ಕುಳಿತುಕೊಂಡನು.
“ಕಾರ್ಯವಿದ್ದರೆ ನೀನೇ
ಬರುವ ಹಾಗಾಯಿತೇ ಹೇಳು,
ನೀನು ದೂತರ ಮೂಲಕ
ಹೇಳಿ ಕಳುಹಿಸ
ಬಾರದಾಗಿತ್ತೇ? ಸುಮ್ಮನೆ ಇನ್ನು
ನೀನೇ ಬಂದಮೇಲೆ ಹೇಗೆ?
ರಾಜನೇ, ಯಾವ ಗೃಹಕೃತ್ಯದ

ಮಾತನ್ನು ತಿಳಿಸುವುದಕ್ಕೆ, ಆಜ್ಞೆ ಮಾಡುವುದಕ್ಕೆ ಬಂದಿರುವೆ”

ಕಂ|| ಬೆಸಸೆನೆಯುಂ
ನುಡಿಯಲ್ ಶಂ
ಕಿಸಿದಪೆ ನಾನೆಂದೊಡೇಕೆ
ಶಂಕಿಸುವೈ ನೀಂ|
ಬೆಸವೇಟ್ಟೆನೆ ಜಯವಧು ಕೂ
ರ್ತೊಸೆದಿರ್ಕುಂ ಮಾವ ನಿಮ್ಮ
ದಯೆಯಿಂದೆಮ್ಮಂ|| ೯೦ ||

ಪದ್ಯ-೯೦:ಪದವಿಭಾಗ-ಅರ್ಥ:ಬೆಸಸೆನೆಯುಂ

ನುಡಿಯಲ್ ಶಂಕಿಸಿದಪೆ
ನಾನು ಎಂದೊಡೆ (ಹೇಳು,
ಎಂದರೂ ‘ನುಡಿಯುವುದಕ್ಕೆ
ನಾನು ಸಂದೇಹಪಡುತ್ತೇನೆ’
ಎನ್ನಲು) ಏಕೆ ಶಂಕಿಸುವ್ವೆ ನೀಂ
ಬೆಸವೇಳು ಎನೆ (‘ಏಕೆ
ಸಂಕಿಸುತ್ತೀಯೆ. ಆಜ್ಞೆ ಮಾಡು’
ಎನ್ನಲು,) ಜಯವಧು ಕೂರ್ತು
(ಪ್ರೀತಿಸಿ) ಒಸೆದು ಇರ್ಕುಂ
(ಅನುರಾಗದಿಂದ ಇರುತ್ತಾಳೆ)
ಮಾವ ನಿಮ್ಮ ದಯೆಯಿಂದ

ಎಮ್ಮಂ (ಮಾವ, ಜಯಲಕ್ಷ್ಮಿಯ ನಿಮ್ಮ ದೆಯೆಯಿಂದ ನಮ್ಮನ್ನು ಪ್ರೀತಿಸಿ ಅನುರಾಗದಿಂದಿರುತ್ತಾಳೆ’)

ಪದ್ಯ-೯೦:ಅರ್ಥ:ಹೇಳು, ಎಂದರೂ ‘ನುಡಿಯುವುದಕ್ಕೆ ನಾನು ಸಂದೇಹಪಡುತ್ತೇನೆ’ ಎನ್ನಲು ‘ಏಕೆ ಸಂಕಿಸುತ್ತೀಯೆ. ಆಜ್ಞೆ ಮಾಡು’ ಎನ್ನಲು, ‘ಮಾವ, ಜಯಲಕ್ಷ್ಮಿಯ ನಿಮ್ಮ

ದೆಯಿಂದ ನಮ್ಮನ್ನು
ಪ್ರೀತಿಸಿ ಅನುರಾಗದಿಂದ
ಇರುತ್ತಾಳೆ’ ಎಂದನು

ಕಂ|| ಪುಸಿಯೆನೆ ರಥಮಂ ಹರಿ
ಚೋ
ದಿಸುವಂತೆವೊಲಿರ್ದದೆಂತು
ನರನಂ ಗೆಲಿಪಂ|
ವಿಸಸನದೊಳಂತೆ ನೀಮುಂ
ಪೆಸರಂ ಕರ್ಣಂಗೆ ಮಾಡಿ
ಗೆಲ್ಲಂಗೊಳ್ಳಿಂ|| ೯೧ ||

ಪದ್ಯ-೯೧:ಪದವಿಭಾಗ-ಅರ್ಥ:ಪುಸಿಯೆನೆ (ಸುಳ್ಳು ನಟನೆಯಿಂದ) ರಥಮಂ ಹರಿ ಚೋದಿಸುವಂತೆವೊಲ್ ಇರ್ದು (ಚೋದಿಸು- ರಥನೆಡೆಸು: ಕೃಷ್ಣನು ಅರ್ಜುನನ ರಥವನ್ನು ನಡೆಸುವವನಂತೆ ನಟಿಸಿಕೊಂಡಿದ್ದು) ಅದೆಂತು ನರನಂ ಗೆಲಿಪಂ ವಿಸಸನದೊಳು (ಅರ್ಜುನನು

ಯುದ್ಧದಲ್ಲಿ ಗೆಲ್ಲುವಂತೆ ಹೇಗೆಮಾಡುವನೋ) ಅಂತೆ ನೀಮುಂ ಪೆಸರಂ ಕರ್ಣಂಗೆ ಮಾಡಿ ಗೆಲ್ಲಂಗೊಳ್ಳಿಂ (ಹಾಗೆಯೇ ಯುದ್ಧರಂಗದಲ್ಲಿ ನೀವ್ಲೂ ಕೂಡ ಕರ್ಣನಿಗೆ ಕೀರ್ತಿಬರುವಂತೆ ಮಾಡಿ ಗೆಲುವನ್ನು ಸಂಪಾದಿಸಿ ಕೊಡಬೇಕು')

ಪದ್ಯ-೯೧:ಅರ್ಥ:ಕೃಷ್ಣನು ಅರ್ಜುನನ ರಥವನ್ನು

ನಡೆಸುವವನಂತೆ
ನಟಿಸಿಕೊಂಡಿದ್ದು, ಅರ್ಜುನನು
ಯುದ್ಧದಲ್ಲಿ ಗೆಲ್ಲುವಂತೆ
ಹೇಗೆಮಾಡುವನೋ
ಹಾಗೆಯೇ ಯುದ್ಧರಂಗದಲ್ಲಿ
ನೀವೂ ಕೂಡ ಕರ್ಣನಿಗೆ
ಕೀರ್ತಿಬರುವಂತೆ ಮಾಡಿ
ಗೆಲುವನ್ನು ಸಂಪಾದಿಸಿ
ಕೊಡಬೇಕು’ ಎಂದನು
ದುರ್ಯೋದನ.

ವ|| ಎಂಬುದುಂ ಮದ್ರರಾಜನುಮ್ಮಚ್ಚರದೊಳು ಮ್ಮನೆ ಬೆಮರ್ತು ಕಿನಿಸಿ ಕಿಂಕಿಱಿವೋಗಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಮದ್ರರಾಜನು ಉಮ್ಮಚ್ಚರದೊಳು (ಶಲ್ಯನು ಕೋಪದಿಂದ) ಉಮ್ಮನೆ ಬೆಮರ್ತು (ಬಿಸಿಬಿಸಿಯಾಗಿ

ಬೆವರಿ) ಕಿನಿಸಿ ಕಿಂಕಿಣಿವ್ರೋಗಿ

(ಕೆರಳಿ ಕಿಡಿ ಕಿಡಿಯಾಗಿ)-

ವಚನ:ಅರ್ಥ: ವ|| ಎನ್ನಲು

ಶಲ್ಯನು ಕೋಪದಿಂದ

ಬಿಸಿಬಿಸಿಯಾಗಿ ಬೆವರಿ ಕೆರಳಿ

ಕಿಡಿ ಕಿಡಿಯಾಗಿ-

ಚಂ|| ಕಲಿಯನೆ ಪಂದೆ ಮಾೞ್ಪ

ಕಡುವಂದೆಯನೊಳ್ಗಲಿ ಮಾೞ್ಪ

ತಕ್ಕನಂ

ಪೊಲೆಯನೆ ಮಾೞ್ಪ ಮುಂ

ಪೊಲೆಯನಂ ನೆರೆ ತಕ್ಕನೆ

ಮಾಱ್ಪ ತಮ್ಮೊಳ|

ಗ್ಗಲಿಸಿ ಪೊದೞ್ದ

ಪರ್ವಿದವಿವೇಕತೆಯಿಂ

ನೃಪಚಿತ್ತವೃತ್ತಿ ಸಂ

ಚಲಮದಱಿಂದಮೋಲಗಿಸಿ

ಬಾೞ್ವುದೆ

ಕಷ್ಟಮಿಳಾನಾಥರಂ|| ೯೨ ||

ಪದ್ಯ-೯೨:ಪದವಿಭಾಗ-

ಅರ್ಥ:ಕಲಿಯನೆ ಪಂದೆ

ಮಾಱ್ಪ (ಶೂರನನ್ನು

ಹೇಡಿಯಾಗಿ ಮಾಡುವ)

ಕಡುವಂದೆಯನು ಒಳ್ (ಗ)
ಕಲಿ ಮಾಟ್ಟಿ (ಯೋಗ್ಯನನ್ನು
ಹೊಲೆಯನನ್ನಾಗಿ ಮಾಡುವ)
ತಕ್ಕನಂ ಪೊಲೆಯನೆ ಮಾಟ್ಟಿ
(ಯೋಗ್ಯನನ್ನು
ಹೊಲೆಯನನ್ನಾಗಿ ಮಾಡುವ,)
ಮುಂ ಪೊಲೆಯನಂ ನೆರೆ
ತಕ್ಕನೆ ಮಾಟ್ಟಿ (ಮೊದಲು
ಹೊಲೆಯನಾಗಿದ್ದವನನ್ನು
ಪೂರ್ಣ ಯೋಗ್ಯನನ್ನಾಗಿ
ಮಾಡುವ,) ತಮ್ಮೊಳು

ಅಗ್ಗಲಿಸಿ ಪೊದಱ್ದು ಪರ್ವಿದ

ಅವಿವೇಕತೆಯಿಂ (ತಮ್ಮಲ್ಲಿ

ಅಧಿಕವಾಗಿ ತುಂಬಿರುವ

ಅವಿವೇಕತೆಯಿಂದ)

ನೃಪಚಿತ್ತವೃತ್ತಿ ಸಂಚಲಂ

(ರಾಜರ ಮನಸ್ಸಿನ ಸ್ಥಿತಿ ಬಹಳ

ಚಂಚಲವಾದುದು)

ಅದಱಿಂದಂ ಓಲಗಿಸಿ

ಬಾಱ್ವುದೆ ಕಷ್ಟಂ

ಇಳಾನಾಥರಂ - ರಾಜರನ್ನು

(ಆದುದರಿಂದ ರಾಜರನ್ನು

ಸೇವೆ ಮಾಡಿ ಬದುಕುವುದೇ ಕಷ್ಟ)

ಪದ್ಯ-೬೨:ಅರ್ಥ:ಶೂರನನ್ನು ಹೇಡಿಯಾಗಿ ಮಾಡುವ, ಪೂರ್ಣಹೇಡಿಯನ್ನು ಉತ್ತಮಶೂರನನ್ನಾಗಿ ಮಾಡುವ, ಯೋಗ್ಯನನ್ನು ಹೊಲೆಯನನ್ನಾಗಿ ಮಾಡುವ, ಮೊದಲು ಹೊಲೆಯನಾಗಿದ್ದವನನ್ನು ಪೂರ್ಣಯೋಗ್ಯನನ್ನಾಗಿ

ಮಾಡುವ, ತಮ್ಮಲ್ಲಿ
ಅತ್ಯಕವಾಗಿ ಹಬ್ಬಿರುವ
ಅವಿವೇಕತೆಯಿಂದ ರಾಜರ
ಮನಸ್ಸಿನ ಸ್ಥಿತಿ ಬಹಳ
ಚಂಚಲವಾದುದು.
ಆದುದರಿಂದ ರಾಜರನ್ನು ಸೇವೆ
ಮಾಡಿ ಬದುಕುವುದೇ ಕಷ್ಟ,
ಎಂದನು ಶಲ್ಯ. ಶಲ್ಯ
ಮಾದ್ರದೇಶದ ರಾಜ ಅವನು
ಸೂತಪುತ್ರನೇಂದು ಹೆಸರಾದ
ಕರ್ಣನಿಗೆ ಸಾರಥ್ಯ

ಮಾಡುವುದು ಸಾಯುವಷ್ಟು
ಅವಮಾನವಾದುದು ಎಂದು
ಶಲ್ಯ ಭಾವಿಸುತ್ತಾನೆ.

**ಅನುಪಮ
ವಿಕ್ರಕ್ರಮಮುದಾರಗುಣಂ
ಋತವಾಕ್ಯಮೆಂಬ ಪೆಂ
ಪೆನಲಿವು ಮೂರೆ ನಾಲ್ಕೆ
ಗುಣಮತ್ತ
ಮದಾನ್ವಿತರಾಜಬೀಜಸಂ|
ಜನಿತಗುಣಂ ಮದಂ
ಮದಮನಾಳ್ದವಿವೇಕತೆಯಿಂದ**

ಮಲ್ತೆ ತೊ
ಟ್ಟಿನ ಮೊಲೆವಾಲನುಂಡ
ಗುಣಮಿಂತಿವನಾರ್ ಕಿಡಿಪರ್
ನರೇಂದ್ರರೊಳ್|| ೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಅನುಪಮ ವಿಕ್ರಕ್ರಮಂ ಉದಾರಗುಣಂ ಋತವಾಕ್ಯಮೆಂಬ ಪೆಂಪು ಎನಲು(ಅನುಪಮ ಪರಾಕ್ರಮ, ಔದಾರ್ಯಗುಣ, ನೇರವಾದ ಸತ್ಯವಾಕ್ಕು ಎನ್ನುವ

ಹಿರಿಮೆ) ಇವು ಮೂರೆ ನಾಲ್ಕೆ ಗುಣಂ (ಇವು ಮೂರೇ ನಾಲ್ಕೇ ಗುಣಗಳು.) ಅತ್ತ- ಮದಾನ್ವಿತ ರಾಜಬೀಜಸಂಜನಿತಗುಣಂ (ಇನ್ನೊಂದು ಕಡೆ ರಾಜವಂಶದಲ್ಲಿ ಹುಟ್ಟಿದ ಗುಣ) ಮದಂ ಮದಮನಾಳ್ದ ಅವಿವೇಕತೆಯಿಂದಂ ಅಲ್ತೆ ((ವಂಶಮದ) ಅಹಂಕಾರ, ಅಹಂಕಾರದಿಂದ ಕೂಡಿದ ಅವಿವೇಕತೆ,) ತೊೞ್ತಿನ

ಮೊಲೆವಾಲನು ಉಂಡ ಗುಣಂ ಇಂತು ಇವನು ಆರ್ ಕಿಡಿಪರ್ ನರೇಂದ್ರರೊಳ್ (ಕೂಡಿದ ದಾದಿಯ ಮೊಲೆ ಹಾಲನ್ನು ಕುಡಿದ ಗುಣ ಇವುಗಳನ್ನು ಯಾರು ಕಿಡಿಪರ- ಯಾರು ಹೋಗಲಾಡಿಸುವರ?)

ಪದ್ಯ-೯೩:ಅರ್ಥ: ಅನುಪಮ ಪರಾಕ್ರಮ, ಔದಾರ್ಯಗುಣ, ನೇರವಾದ ಸತ್ಯವಾಕ್ಕು, ಎನ್ನವ ಹಿರಿಮೆ, ಇವು ಮೂರೇ ನಾಲ್ಕೇ

ಗುಣಗಳು. ಇದು ಒಂದು ಕಡೆಯಾದರೆ ಇನ್ನೊಂದು ಕಡೆ ರಾಜವಂಶದಲ್ಲಿ ಹುಟ್ಟಿದ ಗುಣ (ವಂಶಮದ) ಅಹಂಕಾರ, ಅಹಂಕಾರದಿಂದ ಕೂಡಿದ ಅವಿವೇಕತೆ, ಇದರೊಡನೆ ಕೂಡಿದ ದಾದಿಯ ಮೊಲೆ ಹಾಲನ್ನು ಕುಡಿದ ಗುಣ ಇವುಗಳನ್ನು ಯಾರು ಕಿಡಿಪರ್- ಯಾರು ಹೋಗಲಾಡಿಸುವರ?

ಉ|| ಪಿಂದೆ ಕಡಂಗಿ
ತೇರನೆಸಗೆಂಬವನಂಬಿಗನಾಜಿ
ರಂಗದೊಳ್
ಮುಂದೆ ಸಮಾನನಾಗಿ
ಬೆಸದಿರ್ಪವನುಂ
ತುಱುಕಾಱನಾಗೆ ಮ|
ತ್ಸ್ಯಂದನಚೋದನಕ್ರಮಮ
ದುಂ
ಪೊಲೆಯಂಗಮರ್ದಿರ್ಕುಮಂ
ತುಟಂ

ನೀಂ ದಯೆಗೆಯ್ದು ಪೇೞ್ದಿಯಿದನಾರ್ ಪಡೆವರ್ ಫಣಿರಾಜಕೇತನಾ| ೯೪ ||

ಪದ್ಯ-೯೪:ಪದವಿಭಾಗ-ಅರ್ಥ:ಪಿಂದೆ ಕಡಂಗಿ ತೇರನು ಎಸಗು ಎಂಬವನ್ ಅಂಬಿಗನ್ (ಹಿಂದುಗಡೆ-ರಥಿಕ- ಆವೇಶದಿಂದ ತೇರನ್ನು ನಡೆಸು ಎನ್ನುವವನು ಅಂಬಿಗ,) ಆಜಿ ರಂಗದೊಳ್ ಮುಂದೆ ಸಮಾನನಾಗಿ ಬೆಸದಿರ್ಪ

ಅವನುಂ ತುಱುಕಾಱನು ಆಗೆ
(ಯುದ್ಧರಂಗದಲ್ಲಿ ನನಗೆ
ಮುಂಭಾಗದಲ್ಲಿ ಸಮಾನನಾಗಿ
-ಸಾರಥಿಯಾಗಿ
ಕೆಲಸದಲ್ಲಿರುವವನು
ದನಕಾಯುವವನು
(ಗೋವಳಿಗ, ಕೃಷ್ಣ).)
ಮತ್ಸ್ಯಂದನ ಚೋದನ
ಕ್ರಮಮ್ ಅದುಂ
ಪೊಲೆಯಂಗೆ ಅಮರ್ದಿರ್ಕುಂ
ಅಂತುಟಂ (ರಥವನ್ನು

ನಡೆಸುವ ನನ್ನ ರೀತಿಯದು ಹೊಲೆಯನಿಗೆ ಸರಿಯಾದುದಾಗಿ ಒಪ್ಪಿರಲು ಅಷ್ಟನ್ನು) ನೀಂ ದಯೆಗೆಯ್ದು ಪೇೞ್ದೆ (ಪೇಳ್ದೆ- ಹೇಳಿದೆ)ಯಿದನಾರ್ ಪಡೆವರ್ ಫಣಿರಾಜಕೇತನಾ (ನೀನು ದಯಮಾಡಿ ಹೇಳಿದೆಯಲ್ಲ ದುರ್ಯೋಧನಾ ಇಂತಹ ಸೌಭಾಗ್ಯವನ್ನು ಯಾರು ತಾನೆ ಪಡೆಯುತ್ತಾರೆ?)

ಪದ್ಯ-೯೪:ಅರ್ಥ: ಹಿಂದುಗಡೆ ಆವೇಶದಿಂದ ತೇರನ್ನು ನಡೆಸು ಎನ್ನುವವನು ಅಂಬಿಗ, ಯುದ್ಧರಂಗದಲ್ಲಿ ನನಗೆ ಮುಂಭಾಗದಲ್ಲಿ ಸಮಾನನಾಗಿ -ಸಾರಥಿಯಾಗಿ ಕೆಲಸದಲ್ಲಿರುವವನು ದನಕಾಯವವನು (ಗೋವಳಿಗ, ಕೃಷ್ಣ). ರಥವನ್ನು ನಡೆಸುವ ನನ್ನ ರೀತಿಯದು ಹೊಲೆಯನಿಗೆ

ಸರಿಯಾದುದಾಗಿ ಒಪ್ಪಿರಲು
ಅಷ್ಟನ್ನು ನೀನು ದಯಮಾಡಿ
ಹೇಳಿದೆಯಲ್ಲ ದುರ್ಯೋಧನ
ಇಂತಹ ಅದೃಷ್ಟವನ್ನು ಯಾರು
ತಾನೆ ಪಡೆಯುತ್ತಾರೆ?

ಕಂ|| ಎನಿತೊಲ್ಲದಿರ್ದೊಡಂ ಸ
ಜ್ಜನರುಂ
ಪತಿಹಿತರುಮಱಿಯಮೇೞ್ಕುಂ
ನೀನಿ|
ನ್ನೆನಿತಂ ಕೂರದೊಡಂ ನಿ

ನ್ನ

ನುಡಿಯನಾನಾಜಿರಂಗದೊಳ್

ಮೀಱುವೆನೇ|| ೯೫ ||

ಪದ್ಯ-೯೫:ಪದವಿಭಾಗ-

ಅರ್ಥ: ಎನಿತು ಒಲ್ಲದೆ ಇರ್ದೊಡಂ (ಮನಸ್ಸಿಗೆ ಎಷ್ಟುಮಟ್ಟಿಗೆ ಒಪ್ಪದಿದ್ದರೂ) ಸಜ್ಜನರುಂ ಪತಿಹಿತರುಂ ಅಱಿಯಮೇೞ್ಕುಂ (ಸತ್ಪುರುಷರು ಸ್ವಾಮಿಗೆ ಹಿತರಾದವರೂ ಒಪ್ಪಬೇಕು

ತಾನೇ?) ನೀನು ಇನ್ನು ಎನಿತಂ ಕೂರದೊಡಂ (ನೀನು ಎಷ್ಟೊ ಪ್ರೀತಿಸದಿದ್ದರೂ) ನಿನ್ನ ನುಡಿಯನು ಆನು ಆಜಿರಂಗದೊಳ್ ಮೀಱುವೆನೇ (ನಿನ್ನ ಮಾತನ್ನು ನಾನು ಯುದ್ಧರಂಗದಲ್ಲಿ ಮೀರುತ್ತೇನೆಯೇ?)

ಪದ್ಯ-೯೫:ಅರ್ಥ: ಮನಸ್ಸಿಗೆ ಎಷ್ಟುಮಟ್ಟಿಗೆ ಒಪ್ಪದಿದ್ದರೂ, ಸತ್ಪುರುಷರು ಸ್ವಾಮಿಗೆ

ಹಿತರಾದವರೂ ಒಪ್ಪಬೇಕು ತಾನೇ? ನೀನು ಎಷ್ಟು ಪ್ರೀತಿಸದಿದ್ದರೂ ನಿನ್ನ ಮಾತನ್ನು ನಾನು ಯುದ್ಧರಂಗದಲ್ಲಿ ಮೀರುತ್ತೇನೆಯೇ?

ವ|| ಎಂದು ನೊಂದು ನುಡಿದ ಮದ್ರರಾಜನ ನುಡಿಗೆ ಫಣಿರಾಜಕೇತನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನೊಂದು

ನುಡಿದ ಮದ್ರರಾಜನ ನುಡಿಗೆ ಫಣಿರಾಜಕೇತನನು ಇಂತೆಂದಂ (ದುರ್ಯೋಧನನು ಹೀಗೆಂದನು)-

ವಚನ:ಅರ್ಥ:ಎಂದು ವ್ಯಥೆಯಿಂದ ಆಡಿದ ಶಲ್ಯನ ಮಾತಿಗೆ ದುರ್ಯೋಧನನು ಹೀಗೆಂದನು.

ಕಂ|| ನೀಮೆನಗಿನಿತಂ ಕೆಮ್ಮನೆ
ಮಾಮ ಮನಂ ನೊಂದು
ಬೆಸಸಿದಿರ್ ಬಿನ್ನಪಮಂ|

ನೀಮವಧಾರಿಸಿಮೆಂತೆನೆ ಸಾಮಾನ್ಯದ ಮನುಜನಲ್ಲನಂಗಮಹೀಶಂ|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ನೀಂ ಎನಗೆ ಇನಿತಂ ಕೆಮ್ಮನೆ ಮಾಮ ಮನಂ ನೊಂದು ಬೆಸಸಿದಿರ್ (ಮಾವ ನೀವು ನನಗೆ ಇಷ್ಟನ್ನು ಸುಮ್ಮನೆ ಮನಸ್ಸಿನಲ್ಲಿ ನೊಂದುಕೊಂಡು ಹೇಳಿದಿರಿ.)

ಬಿನ್ನಪಮಂ ನೀಂ ಅವಧಾರಿಸಿಂ ಎಂತೆನೆ ಸಾಮಾನ್ಯದ ಮನುಜನಲ್ಲನು ಅಂಗಮಹೀಶಂ (ನನ್ನ ವಿಜ್ಞಾಪನೆಯನ್ನು ನೀವು ಕೇಳಿ. ಹೇಗೆಂದರೆ ಕರ್ಣನು ಸಾಮಾನ್ಯ ಮನುಷ್ಯನಲ್ಲ.)

ಪದ್ಯ-೯೬:ಅರ್ಥ:ಮಾವ ನೀವು ನನಗೆ ಇಷ್ಟನ್ನು ಸುಮ್ಮನೆ ಮನಸ್ಸಿನಲ್ಲಿ ನೊಂದುಕೊಂಡು ಹೇಳಿದಿರಿ.

ನನ್ನ ವಿಜ್ಞಾಪನೆಯನ್ನು ನೀವು ಕೇಳಿ. ಹೇಗೆಂದರೆ ಕರ್ಣನು ಸಾಮಾನ್ಯ ಮನುಷ್ಯನಲ್ಲ.

ಕುಲಹೀನನನೆ ಅಪ್ಪೊಡೆ ಕೇ
ವಲಬೋಧಂ
ಪರಶುರಾಮನೇನೀಗುಮೆ ನಿ|
ರ್ಮಲಿಕುಲಂಗಲ್ಲದೆ ಪಿಡಿ
ಯಲ್ಲಲ್ಲದಂತಪ್ಪ
ದಿವ್ಯಬಾಣಾವಳಿಯಂ|| ೯೭ ||

ಪದ್ಯ-೯೭:ಪದವಿಭಾಗ-

ಅರ್ಥ:ಕುಲಹೀನನನೆ ಅಪ್ಪೊಡೆ

ಕೇವಲಬೋಧಂ
ಪರಶುರಾಮನು ಏಂ ಈಗುಮೆ
(ಕುಲಹೀನನೇ ಆಗಿದ್ದರೆ
ಸರ್ವಜ್ಞಾನಿಯಾದ
ಪರಶುರಾಮನು ---ಏನು
ಕೊಡುವನೇ?) ನಿರ್ಮಲಿ
ಕುಲಂಗಲ್ಲದೆ ಪಿಡಿಯಲ್
ಅಲ್ಲದಂತಪ್ಪ ದಿವ್ಯಬಾಣ
ಆವಳಿಯಂ (ಪರಿಶುದ್ಧವಾದ
ಕುಲದವರಲ್ಲದೆ ಬೇರೆಯವರು
ಹಿಡಿಯಲಾಗದ

ದಿವ್ಯಾಸ್ತ್ರಸಮೂಹವನ್ನು
ಅವನಿಗೆ ಏನು ಕೊಡುವನೇ)

ಪದ್ಯ-*೭:ಅರ್ಥ:

ಕುಲಹೀನನೇ ಆಗಿದ್ದರೆ
ಸರ್ವಜ್ಞಾನಿಯಾದ
ಪರಶುರಾಮನು
ಪರಿಶುದ್ಧವಾದ
ಕುಲದವರಲ್ಲದೆ ಬೇರೆಯವರು
ಹಿಡಿಯಲಾಗದ
ದಿವ್ಯಾಸ್ತ್ರಸಮೂಹವನ್ನು

ಅವನಿಗೆ ಏನು ಕೊಡುವನೇ

ಕೊಡುತ್ತಿದ್ದನೇ?

ಮಣಿಕುಂಡಲಮುಂ ಕವಚಂ

ಮಣಿಯದ

ಚಾರಿತ್ರಮುಗ್ರತೇಜಮುಮೀ

ಯೊ|

ಳ್ಗುಣಮುಂ

ಕಲಿತನಮುಮವೇಂ

ಪ್ರಣತಾರೀ

ಸೂತಸುತನೊಳೊಡವುಟ್ಟುಗು

ಮೇ ೯೮ ||

ಪದ್ಯ-೯೮:ಪದವಿಭಾಗ-ಅರ್ಥ:ಮಣಿಕುಂಡಲಮುಂ ಕವಚಂ ಮಣಿಯದ ಚಾರಿತ್ರಂ (ಮಣಿಕುಂಡಲವೂ ಕವಚವೂ ಬಗ್ಗದ ನಡತೆಯೂ) ಉಗ್ರತೇಜಮುಂ ಈ (ಯ) ಒಳ್ಗುಣಮುಂ ಕಲಿತನಮುಂ (ಉಗ್ರವಾದ ತೇಜಸ್ಸೂ- ಈ ಒಳ್ಳೆಯ ಗುಣ, ಶೌರ್ಯ,) ಅವೇಂ ಪ್ರಣತಾರೀ ಸೂತಸುತನೊಳು

ಒಡವುಟ್ಟುಗುಮೇ (ಸೂತಪುತ್ರನಲ್ಲಿ ಜೊತೆಯಾಗಿ ಹುಟ್ಟುತ್ತವೆಯೇ? ಸಾಧ್ಯವಿಲ್ಲ!)

ಪದ್ಯ-೯೮:ಅರ್ಥ:ವಿಧೇಯರಾದ ಶತ್ರುಗಳನ್ನುಳ್ಳ ಎಲೈ ಶಲ್ಯನೇ, ಮಣಿಕುಂಡಲವೂ ಕವಚವೂ ಬಗ್ಗದ ನಡತೆಯೂ, ಉಗ್ರವಾದ ತೇಜಸ್ಸೂ- ಈ ಒಳ್ಳೆಯ ಗುಣ ಮತ್ತು ತೇಜಸ್ಸು ಇವು ಸೂತಪುತ್ರನಲ್ಲಿ

ಜೊತೆಯಾಗಿ

ಹುಟ್ಟುತ್ತವೆಯೇ? ಸಾಧ್ಯವಿಲ್ಲ!

ಕಲಿತನದ ನೆಗಟ್ದಿ ಕಸವರ

ಗಲಿತನದ ಪೊದಟ್ದಿ

ಪರಮಕೋಟಿಗೆ ಪೆಱರಾರ್|

ಸಲೆ ಕರ್ಣನಲ್ಲದೆನಿಸುವ

ಕಲಿತನಮಂ ಹರಿಗೆ

ಕವಚಮಿತ್ತುದೆ ಪೇೞ್ಗಂ|| ೯೯

||

ಪದ್ಯ-೯೯:ಪದವಿಭಾಗ-

ಅರ್ಥ:ಕಲಿತನದ ನೆಗಟ್ದಿ

ಕಸವರಗಲಿತನದ (ಶೌರ್ಯದ
ಮತ್ತು ಪ್ರಸಿದ್ಧವಾದ
ದಾನಶೂರತೆಯ) ಪೊದಳ್ದಿ
ಪರಮಕೋಟಿಗೆ (ಹೆಚ್ಚಿನ
ಪರಾಕಾಷ್ಠತೆಗೆ ಸಲ್ಲಲು)
ಪೆಱರಾರ್ ಸಲೆ ಕರ್ಣನಲ್ಲದೆ
ಎನಿಸುವ (ಕರ್ಣನಲ್ಲದೆ
ಮತ್ತಾರಿದ್ದಾರೆ ಎನ್ನಿಸುವ)
ಕಲಿತನಮಂ ಹರಿಗೆ
ಕವಚಮಿತ್ತುದೆ ಪೇೞ್ಗುಂ
(ಶೌರ್ಯವನ್ನು ಇಂದ್ರನಿಗೆ

ಕವಚವನ್ನು ಕೊಟ್ಟಿದ್ದೇ ಹೇಳುತ್ತದೆ.)

ಪದ್ಯ-೯೯:ಅರ್ಥ:೯೯. ಶೌರ್ಯದ ಮತ್ತು ಪ್ರಸಿದ್ಧವಾದ ದಾನಶೂರತೆಯ ಹೆಚ್ಚಿನ ಪರಾಕಾಷ್ಠತೆಗೆ ಸಲ್ಲಲು ಕರ್ಣನಲ್ಲದೆ ಮತ್ತಾರಿದ್ದಾರೆ ಎನ್ನಿಸುವ ಶೌರ್ಯವನ್ನು ಇಂದ್ರನಿಗೆ ಕವಚವನ್ನು ಕೊಟ್ಟಿದ್ದೇ ಹೇಳುತ್ತದೆ.

ವ|| ಎಂದು

ಕುರುಕುಲಚೂಡಾಮಣಿ

ಶಲ್ಯನ ಹೃಚ್ಛಲ್ಯಮೆಲ್ಲಮುಂ

ಕಟಿಲೆ ನುಡಿದೊಡಾತ

ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು

ಕುರುಕುಲಚೂಡಾಮಣಿ

(ದುರ್ಯೋಧನನು) ಶಲ್ಯನ

ಹೃಚ್ಛಲ್ಯಮ್ ಎಲ್ಲಮುಂ ಕಟಿಲೆ

(ಶಲ್ಯನ ಹೃದಯದ

ನೋವೆಲ್ಲವೂ ಸಡಿಲವಾಗುವಂತೆ) ನುಡಿದೊಡೆ ಆತ ನಿಂತೆಂದಂ (ಹೇಳಲು ಅವನು ಹೀಗೆಂದನು.)-

ವಚನ:ಅರ್ಥ:ವ|| ಎಂದು ಕುರುಕುಲಚೂಡಾಮಣಿಯಾದ ದುರ್ಯೋಧನನು ಶಲ್ಯನ ಹೃದಯದ ನೋವೆಲ್ಲವೂ ಸಡಿಲವಾಗುವಂತೆ ಹೇಳಲು ಶಲ್ಯನು ಹೀಗೆಂದನು.

ಚಂ|| ಅಱಿಯದೆಯುಂ
ವಿಚಾರಸದೆಯುಂ ನೃಪ ನೀಂ
ನೆಗೞ್ವಿನ್ನೆಯಲ್ಲೆಯಾ
ನಱಿವೆನದಂತೆ ಕರ್ಣನೆಣೆಗಂ
ತೊಣೆಗಂ ನೃಪರಾರುಮಿಲ್ಲ ಬೆ|
ಳ್ಕುರೆ ರಿಪುಸೇನೆ
ತೇರನೊಸೆದಾನೆಸಗುತ್ತಿರೆ
ಕರ್ಣನಂ ಗೆಲಲ್
ನೆರೆವರೆ ನಾಳೆ
ಫಲ್ಗುಣನುಮಚ್ಯುತನುಂ

ರಣರಂಗಭೂಮಿಯೊಳ್|| ೧೦೦ ||100||

ಪದ್ಯ-೧೦೦:ಪದವಿಭಾಗ-ಅರ್ಥ:ಅಱಿಯದೆಯುಂ ವಿಚಾರಸದೆಯುಂ ನೃಪ ನೀಂ (ರಾಜನೇ ನೀನು ತಿಳಿಯದೆಯೂ ವಿಚಾರಮಾಡದೆಯೂ) ನೆಗೞ್ವಿನ್ನಂ ಅಲ್ಲ,(ಕಾರ್ಯ ಮಾಡುವಂಥವನಲ್ಲ) ಆನು ಅಱಿವೆಂ (ಅದನ್ನು ನಾನು

ಬಲ್ಲೆ.) ಅದು ಅಂತೆ ಕರ್ಣನ
ಎಣೆಗಂ ತೊಣೆಗಂ ನೃಪರ್
ಆರುಮ್ ಇಲ್ಲ (ಕರ್ಣನಿಗೆ
ಸಮಾನರಾದ ರಾಜರಾರೂ
ಇಲ್ಲ.) ಬೆಳ್ಕುರೆ ರಿಪುಸೇನೆ
ತೇರನು ಒಸೆದು ಆನು
ಎಸಗುತ್ತಿರೆ (ಶತ್ರುಸೈನ್ಯಕ್ಕೆ
ಭಯವಾಗುವ ರೀತಿಯಲ್ಲಿ
ನಾನು ಪ್ರೀತಿಯಿಂದ ತೇರನ್ನು
ನಡೆಸುತ್ತಿದ್ದರೆ), ಕರ್ಣನಂ
ಗೆಲಲ್ ನೆರೆವರೆ (ಕರ್ಣನನ್ನು

ಗೆಲ್ಲಲು
ಸಮರ್ಥರಾಗುತ್ತಾರೆಯೇ?)
ನಾಳೆ ಫಲ್ಗುಣನುಂ
ಅಚ್ಯುತನುಂ
ರಣರಂಗಭೂಮಿಯೊಳ್
(ಕೃಷ್ಣನೂ ಅರ್ಜುನನೂ
ಯುದ್ಧಭೂಮಿಯಲ್ಲಿ
ಕರ್ಣನನ್ನು ಗೆಲ್ಲಲು
ಸಮರ್ಥರಾಗುತ್ತಾರೆಯೇ?)
ಪದ್ಯ-೧೦೦:ಅರ್ಥ:ರಾಜನೇ
ನೀನು ತಿಳಿಯದೆಯೂ

ವಿಚಾರಮಾಡದೆಯೂ
ಕಾರ್ಯ ಮಾಡುವಂಥವನಲ್ಲ.
ಅದನ್ನು ನಾನು ಬಲ್ಲೆ.
ಕರ್ಣನಿಗೆ ಸಮಾನರಾದ
ರಾಜರಾರೂ ಇಲ್ಲ.
ಶತ್ರುಸೈನ್ಯಕ್ಕೆ ಭಯವಾಗುವ
ರೀತಿಯಲ್ಲಿ ನಾನು
ಪ್ರೀತಿಯಿಂದ
(ಮನಪೂರ್ವಕವಾಗಿ)
ತೇರನ್ನು ನಡೆಸುತ್ತಿದ್ದರೆ ನಾಳೆ
ಕೃಷ್ಣನೂ ಅರ್ಜುನನೂ

ಯುದ್ಧಭೂಮಿಯಲ್ಲಿ
ಕರ್ಣನನ್ನು ಗೆಲ್ಲಲು
ಸಮರ್ಥರಾಗುತ್ತಾರೆಯೇ?

ಕಂ|| ಒಂದೆ ಗಡ ಹರಿಯ
ಪೇೞ್ದೊಂ (ಳ್ದೊಂ)
ದಂದದೆ ನರನೆಸಗುವಂತೆ
ಕರ್ಣನುಮೆನ್ನಂ|
ದೊಂದೋಜೆಯೊಳೆಸಗದೊ
ಡಾಂ
ಸ್ಯಂದನದಿಂದಿೞಿದು
ಪೋಪೆನೆಸಗೆಂ ತೇರಂ|| ೧೦೧

||101||

ಪದ್ಯ-೧೦೧:ಪದವಿಭಾಗ-ಅರ್ಥ:ಒಂದೆ ಗಡ (ಆದರೆ ಒಂದು ವಿಷಯ) ಹರಿಯ ಪೇೞ್ ಒಂದಂದೆ (ಕೃಷ್ಣನು ಹೇಳಿದ ರೀತಿಯಲ್ಲೇ) ನರನು ಎಸಗುವಂತೆ (ಅರ್ಜುನನು ಮಾಡುವಂತೆ) ಕರ್ಣನುಂ ಎನ್ನೊಂದ ಒಂದ ಓಜೆಯೊಳ್ (ಕರ್ಣನೂ ನಾನು ಹೇಳಿದ ಕ್ರಮದಲ್ಲಿ) ಎಸಗದೊಡೆ

(ಮಾಡದೇ ಹೋದರೆ) ಆಂ ಸ್ಯಂದನದಿಂದ ಇೞಿದು ಪೋಪೆನು (ತೇರನ್ನು ಇಳಿದು ಹೋಗುತ್ತೇನೆ.) ಎಸಗೆಂ ತೇರಂ (ತೇರನ್ನು ನಡೆಸುವುದಿಲ್ಲ.) **ಪದ್ಯ-೧೦೧:ಅರ್ಥ**:ಆದರೆ ಒಂದು ವಿಷಯ, ಕೃಷ್ಣನು ಹೇಳಿದ ರೀತಿಯಲ್ಲಿ ಅರ್ಜುನನು ಮಾಡುವಂತೆ ಕರ್ಣನೂ ನಾನು ಹೇಳಿದ ಕ್ರಮದಲ್ಲಿ ಮಾಡದೇ

ಹೋದರೆ ತೇರನ್ನು ಇಳಿದು ಹೋಗುತ್ತೇನೆ. ತೇರನ್ನು ನಡೆಸುವುದಿಲ್ಲ, ಎಂದನು ಶಲ್ಯ.

ಎಂಬುದುಮಂಗಮಹೀಪತಿ
ಯಂ ಬರಿಸಿ ಮಹಾಜಿಯಲ್ಲಿ
ಮಾವಂ ತಾನೇ|
ನೆಂಬನದನಂತೆ ಮೀಱದೊ
ಡಂಬಡು ನೀನೆಂದು
ಭೂಭುಜಂ ಪ್ರಾರ್ಥಿಸಿದಂ||
೧೦೨ ||

ಪದ್ಯ-೧೦೨:ಪದವಿಭಾಗ-ಅರ್ಥ:ಎಂಬುದುಮಂ ಅಂಗಮಹೀಪತಿಯಂ ಬರಿಸಿ (ಎನ್ನಲು ಕರ್ಣನನ್ನು ಬರಮಾಡಿಕೊಂಡು,) ಮಹಾಜಿಯಲ್ಲಿ ಮಾವಂ ತಾನೇನು ಎಂಬನೊ (ಈ ಮಹಾಯುದ್ಧದಲ್ಲಿ ಮಾವನು ತಾನೇನು ಹೇಳುತ್ತಾನೆಯೋ) ಅದನು ಅಂತೆ ಮೀಱದೆ ಒಡಂಬಡು ನೀನು ಎಂದು

ಭೂಭುಜಂ ಪ್ರಾರ್ಥಿಸಿದಂ (ನೀನು ಅದನ್ನು ಹಾಗೆಯೇ ಮೀರದೆ ಒಪ್ಪಿಕೊ ಎಂದು ಮಹಾರಾಜನು ಪ್ರಾರ್ಥಿಸಿದನು.)

ಪದ್ಯ-೧೦೨:ಅರ್ಥ:ಎನ್ನಲು ದುರ್ಯೋಧನನು ಕರ್ಣನನ್ನು ಬರಮಾಡಿಕೊಂಡು, ಈ ಮಹಾಯುದ್ಧದಲ್ಲಿ ಮಾವನು ತಾನೇನು ಹೇಳುತ್ತಾನೆಯೋ ನೀನು ಅದನ್ನು ಹಾಗೆಯೇ

ಮೀರದೆ ಒಪ್ಪಿಕೊ ಎಂದು ಮಹಾರಾಜನು ಪ್ರಾರ್ಥಿಸಿದನು.

ವ||

ಅಂತಿರ್ವರುಮನೊರ್ವರೊರ್ವರೊಳೊಡಂಬಡಿಸಿ ತನ್ನೊಡನೆೞ್ದು ನಿಂದಿರ್ದ ಮದ್ರರಾಜನನಿರಲ್ವೇೞ್ದು ಕರ್ಣನುಂ ತಾನುಂ ನಿಜನಿವಾಸಂಗಳ್ಗೆ ಪೋದರಾಗಳಾ

ಪಡೆಮಾತನಜಾತಶತ್ರು ಕೇಳ್ದು ಮುರಾಂತಕಂಗೆ ಬೀಱಿಯನಟ್ಟಿ ಬರಿಸಿ-

ವಚನ:ಪದವಿಭಾಗ-

ಅರ್ಥ:ಅಂತು ಇರ್ವರುಮನು ಒರ್ವರೊರ್ವರೊಳ್ ಒಡಂಬಡಿಸಿ (ಹಾಗೆ ಇಬ್ಬರನ್ನೂ ಒಬ್ಬರನ್ನೊಬ್ಬರು ಒಪ್ಪುದ ಹಾಗೆ ಮಾಡಿ) ತನ್ನೊಡನೆ ಎೞ್ದು ನಿಂದಿರ್ದ ಮದ್ರರಾಜನನು ಇರಲ್

ವೇೞ್ದು ಕರ್ಣನುಂ ತಾನುಂ (ತನ್ನೊಡನೆ ಎದ್ದು ನಿಂತಿದ್ದ ಶಲ್ಯನನ್ನು ಅಲ್ಲಿಯೇ ಇರಲು ಹೇಳಿ) ನಿಜನಿವಾಸಂಗಳ್ಗೆ ಪೋದರ್ (ಕರ್ಣನೂ ತಾನೂ/ ದುರ್ಯೋಧನನೂ ತಮ್ಮ ಮನೆಗಳಿಗೆ ಹೋದರು.) ಆಗಳಾ ಪಡೆಮಾತಂ ಅಜಾತಶತ್ರು ಕೇಳ್ದು ಮುರಾಂತಕಂಗೆ ಬಿಟಿಯನಟ್ಟಿ ಬರಿಸಿ (ಈ ಸಮಾಚಾರವನ್ನು

ಧರ್ಮರಾಯನು ಕೇಳಿ ಕೃಷ್ಣನಲ್ಲಿಗೆ ದೂತರನ್ನು ಕಳುಹಿಸಿ ಬರಮಾಡಿಕೊಂಡು-)-

ವಚನ:ಅರ್ಥ:ಹಾಗೆ ಇಬ್ಬರನ್ನೂ ಒಬ್ಬರನ್ನೊಬ್ಬರು ಒಪ್ಪುದ ಹಾಗೆ ಮಾಡಿ, ತನ್ನೊಡನೆ ಎದ್ದು ನಿಂತಿದ್ದ ಶಲ್ಯನನ್ನು ಅಲ್ಲಿಯೇ ಇರಲು ಹೇಳಿ ಕರ್ಣನೂ ತಾನೂ/ ದುರ್ಯೋಧನನೂ ತಮ್ಮ

ಮನೆಗಳಿಗೆ ಹೋದರು. ಈ ಸಮಾಚಾರವನ್ನು ಧರ್ಮರಾಯನು ಕೇಳಿ ಕೃಷ್ಣನಲ್ಲಿಗೆ ದೂತರನ್ನು ಕಳುಹಿಸಿ ಬರಮಾಡಿಕೊಂಡು-

<u>ಧರ್ಮರಾಯನ ಚಿಂತೆ</u>

ಚಂ|| ಗೆಲಲರಿದುಂತೆ ಸೂತಸುತನಂ ರಣರಂಗದೊಳೆಂಬುದೊಂದು ಪಂ

ಬಲೆ ಪಿರಿದಂತವಂಗೊಸೆದು ತೇರಿಸಪಂ ಗಡ ನಾಳೆ ಶಲ್ಯನೀ| ಕಲಹಮಿದೆಂತು ದಲ್ ಬಿದಿರ ಗಂಟುಗಳಂ ಕಳೆವಂತೆ ಮನ್ಮನಃ ಸ್ಖಲನೆಯನುಂಟುಮಾಡಿದಪು ದಿಲ್ಲಿಗೆ ಕಜ್ಜಮದಾವುದಚ್ಯುತಾ|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ಗೆಲಲು ಅರಿದು ಉಂತೆ

ಸೂತಸುತನಂ
(ಯುದ್ಧರಂಗದಲ್ಲಿ ಕರ್ಣನನ್ನು
ಸುಮ್ಮನೆ) ರಣರಂಗದೊಳೆ
ಎಂಬುದೊಂದು ಪಂಬಲೆ
ಪಿರಿದು ಅಂತು
(ಯುದ್ಧರಂಗದಲ್ಲಿ ಗೆಲ್ಲಲು
ಸಾಧ್ಯವಿಲ್ಲವೆಂಬ ಚಿಂತೆಯೇ
ಹಿರಿದಾಗಿದೆ.) ಅವಂಗೆ ಒಸೆದು
ತೇರೆಸಪಂ ಗಡ ನಾಳೆ ಶಲ್ಯನು
(ಅಂತಹ ಅವನಿಗೆ ನಾಳೆ
ಪ್ರೀತಿಯಿಂದ ಶಲ್ಯನು ತೇರನ್ನು

ನಡೆಸುತ್ತಾನಂತೆ.) ಈ ಕಲಹಂ ಇದೆಂತು (ಈ ಯುದ್ಧದಲ್ಲಿ ನಾವು ಹೇಗೆ ಗೆಲ್ಲುವುದು?) ದಲ್ ಬಿದಿರ ಗಂಟುಗಳಂ ಕಳೆವಂತೆ (ಬಿದಿರಿನ ಗಿಣ್ಣುಗಳನ್ನು ಒಡೆಯುವಂತೆ) ಮನ್ ಮನಃ ಸ್ಖಲನೆಯನು ಉಂಟುಮಾಡಿದಪುದು (ನನ್ನ ಮನಸ್ಥೈರ್ಯವನ್ನು ಕದಲಿಸುತ್ತಿದೆ.) ಇಲ್ಲಿಗೆ ಕಜ್ಜಮದು ಆವುದು ಅಚ್ಯುತಾ

(ಈ ಸಮಯದಲ್ಲಿ ಮಾಡಬೇಕಾದ ಕಾರ್ಯವಾವುದು?)

ಪದ್ಯ-೧೦೩:ಅರ್ಥ:ಯುದ್ಧ ರಂಗದಲ್ಲಿ ಕರ್ಣನನ್ನು ಸುಮ್ಮನೆ (ಯಾರ ಸಹಾಯವಿಲ್ಲದೆ ಏಕಾಕಿಯಾಗಿರುವಾಗಲೇ)ಗೆಲ್ಲಲು ಸಾಧ್ಯವಿಲ್ಲವೆಂಬ ಚಿಂತೆಯೇ ಹಿರಿದಾಗಿದೆ. ಅಂತಹ ಅವನಿಗೆ ನಾಳೆ

ಪ್ರೀತಿಯಿಂದ ಶಲ್ಯನು ತೇರನ್ನು ನಡೆಸುತ್ತಾನಂತೆ. ಈ ಯುದ್ಧದಲ್ಲಿ ನಾವು ಹೇಗೆ ಗೆಲ್ಲುವುದು? ಬಿದಿರಿನ ಗಿಣ್ಣುಗಳನ್ನು ಒಡೆಯುವಂತೆ ನನ್ನ ಮನಸ್ಥೈರ್ಯವನ್ನು ಕದಲಿಸುತ್ತಿದೆ. ಕೃಷ್ಣ, ಈ ಸಮಯದಲ್ಲಿ ಮಾಡಬೇಕಾದ ಕಾರ್ಯವಾವುದು?

ವ|| ಎಂಬುದುಂ ನೀನೆಂದಂತೆ ರಥಕಲ್ಪಮೆಂಬುದು

ಶಲ್ಯಂಗೊಡವುಟ್ಟಿದುದಾದೊಡ

ಮವರಿರ್ವರ್ಗರ್ವೊರ್ವರೊರ್ವರೊಳ್ ಮೂಗುದುಱಿಸಲಾಗದ ಕಡ್ಡಮವರ್ಗೆಂತುಮೊಡಂಬಡಾಗದ ದಲ್ಲದೆಯುಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ನೀನು ಎಂದಂತೆ ರಥಕಲ್ಪಮೆಂಬುದು (ಎನ್ನಲು, ನೀನು ಹೇಳಿದಂತೆ ರಥವಿದ್ಯೆಯೆಂಬುದು) ಶಲ್ಯಂಗೆ

ಒಡವುಟ್ಟಿದುದಾದೊಡಂ
(ಶಲ್ಯನ ಜೊತೆಯಲ್ಲಿ
ಹುಟ್ಟಿದುದಾದರೂ/ ಶಲ್ಯನು
ಬಹಳ ಪರಿಣತನಾದರೂ)
ಅವರಿರ್ವರ್ಗಂ
ಒರ್ವರೊರ್ವರೊಳ್
ಮೂಗು(ದು)ತುಱಿಸಲು
ಆಗದ ಕಡ್ಡಂ (ಅವರಿಬ್ಬರಿಗೂ
ಒಬ್ಬೊಬ್ಬರಲ್ಲಿ ಮೂಗುತುರಿಸಿ
ಕೊಳ್ಳುವುದಕ್ಕಾಗದ
ದ್ವೇಷಾಸೂಯೆಗಳಿವೆ)

ಅವರ್ಗೆ ಎಂತುಂ
ಒಡಂಬಡಾಗದ ಅದು
ದಲ್ಲದೆಯುಂ (ಅವರಿಗೆ
ಯಾವತ್ತೂ ಒಪ್ಪಿಗೆ
ಯೆಂಬುವುದಾಗುವುದಿಲ್ಲ.
ಅದು ಅಲ್ಲದೆಯೂ)-
ವಚನ:ಅರ್ಥ:ಎನ್ನಲು, ನೀನು
ಹೇಳಿದಂತೆ
ರಥವಿದ್ಯೆಯೆಂಬುದು ಶಲ್ಯನ
ಜೊತೆಯಲ್ಲಿ
ಹುಟ್ಟಿದುದಾದರೂ

ಅವರಿಬ್ಬರಿಗೂ ಒಬ್ಬೊಬ್ಬರಲ್ಲಿ ಮೂಗುತುರಿಸಿ ಕೊಳ್ಳುವುದಕ್ಕಾಗದ ದ್ವೇಷಾಸೂಯೆಗಳಿವೆ. ಅವರಿಗೆ ಯಾವತ್ತೂ ಒಪ್ಪಿಗೆ ಯೆಂಬುವುದಾಗುವುದಿಲ್ಲ. ಅದು ಅಲ್ಲದೆಯೂ-

ಸ್ರ|| ಕರ್ಣಂಗಂಡಲ್ತೆ ಕಲ್ತರ್ ನುಡಿವ ಪಸುಗೆಯಂ ಗಂಡರಾ ಗಂಡವಾತುಂ

ಕರ್ಣಂ ಮುಂ ಪುಟ್ಟೆ
ಪುಟ್ಟಿತ್ತಳವಮದೋರ್ಡವುಟ್ಟಿ
ತ್ತು ಪೂಣ್ದೀವ ಚಾಗಂ|
ಕರ್ಣಂಗೊಡ್ಡಿತ್ತು ದಲ್
ಭಾರತಮೆನೆ ಜಗದೊಳ್
ಸಂದನೇಂ ಸಂದೊಡಾಂತಾ
ಕರ್ಣಾಂತಾಕೃಷ್ಟ
ಬಾಣಾವಳಿಯೊಳೆ ಹರಿಗಂ
ಕರ್ಣನಂ ನಾಳೆ ಕೊಲ್ಗುಂ|
೧೦೪ ||

ಪದ್ಯ-೧೦೪:ಪದವಿಭಾಗ-ಅರ್ಥ:ಕರ್ಣಂ ಗಂಡಲ್ತೆ ಕಲ್ತರ್ ನುಡಿವ ಪಸುಗೆಯಂ (ವಿವೇಕ) ಗಂಡರು (ಶೂರರಾದವರು ಕರ್ಣನನ್ನು ನೋಡಿಯಲ್ಲವೇ ಮಾತನಾಡುವ ವಿವೇಕವನ್ನು ಕಲಿತರು) ಆ ಗಂಡವಾತುಂ ಕರ್ಣಂ ಮುಂ ಪುಟ್ಟೆ (ಆ ಪೌರುಷಯುಕ್ತವಾದ ಮಾತುಗಳು ಕರ್ಣನು ಹುಟ್ಟಿದ ಮೇಲೆಯೇ ಹುಟ್ಟಲು,)

ಪುಟ್ಟಿತ್ತು ಅಳವು ಅಮರ್ದು
(ಸಹಿತ) ಒಡವುಟ್ಟಿತ್ತು
(ಪ್ರತಾಪ ಸಹಿತವಾದ
ತ್ಯಾಗವೂ ಅವನೊಡನೆಯೇ
ಸೇರಿಕೊಂಡು ಹುಟ್ಟಿದುವು.)
ಪೂಣ್ದೀವ ಚಾಗಂ ಕರ್ಣಂಗೆ
ಒಡ್ಡಿತ್ತು (ಪ್ರತಿಜ್ಞೆ ಮಾಡಿ
ಕೊಡುವ ತ್ಯಾಗವೂ
ಜೊತೆಯಲ್ಲಿ ಹುಟ್ಟಿತು.) ದಲ್
ಭಾರತಮಂ ಎನೆ (ನಿಜಕ್ಕೂ
ಭಾರತಯುದ್ಧವೂ

ಕರ್ಣನಿಗಾಗಿಯೇ ಒಡ್ಡಿದೆ,
ಎನ್ನುವಾಗ) ಜಗದೊಳ್
ಸಂದನು (ಎಂಬ
ಜಗತ್ಪ್ರಸಿದ್ಧಿಯನ್ನು
ಪಡೆದಿದ್ದಾನೆ.) ಏಂ ಸಂದೊಡೆ
ಆಂತ (ಯುದ್ಧಕ್ಕೆ ಬಂದ) ಆ
ಕರ್ಣಾಂತಾಕೃಷ್ಟ
ಬಾಣಾವಳಿಯೊಳೆ
(ಕಿವಿಯವರೆಗೆ ಸೆಳೆದ ತನ್ನ ಆ
ಬಾಣಸಮೂಹದಿಂದಲೇ)
ಹರಿಗಂ ಕರ್ಣನಂ ನಾಳೆ

ಕೊಲ್ಲುಗಂ (ಹರಿಗನಾದ ಅರ್ಜುನನು ನಾಳೆ ಕರ್ಣನನ್ನು ಕೊಲ್ಲುವನು.)

ಪದ್ಯ-೧೦೪:ಅರ್ಥ:ಶೂರರಾದವರು ಕರ್ಣನನ್ನು ನೋಡಿಯಲ್ಲವೇ ಮಾತನಾಡುವ ವಿವೇಕವನ್ನು ಕಲಿತರು. ಆ ಪೌರುಷಯುಕ್ತವಾದ ಮಾತುಗಳು ಕರ್ಣನು ಹುಟ್ಟಿದ ಮೇಲೆಯೇ ಹುಟ್ಟಿರಲು,

ಪ್ರತಾಪಹಿತವಾದ ತ್ಯಾಗವೂ ಅವನೊಡನೆಯೇ ಸೇರಿಕೊಂಡು ಹುಟ್ಟಿದುವು. ಪ್ರತಿಜ್ಞೆ ಮಾಡಿ ಕೊಡುವ ತ್ಯಾಗವೂ ಜೊತೆಯಲ್ಲಿ ಹುಟ್ಟಿತು. ಭಾರತಯುದ್ಧವೂ ಕರ್ಣನಿಗಾಗಿಯೇ ಒಡ್ಡಿದೆ ಎಂಬ ಜಗತ್ಪ್ರಸಿದ್ಧಿಯನ್ನು ಪಡೆದಿದ್ದಾನೆ. ಏನು ಪಡೆದಿದ್ದರೇನು? ಹರಿಗನಾದ ಅರ್ಜುನನು ನಾಳೆ

ಕಿವಿಯವರೆಗೆ ಸೆಳೆದ ತನ್ನ ಬಾಣಸಮೂಹದಿಂದಲೇ ಕರ್ಣನನ್ನು ಕೊಲ್ಲುವನು.

ಕಂ|| ಎಂಬಿನೆಗಮಾಗಳಾ ವಿಕ
ಚಾಂಬುಜಸೌರಭಮನೊಸೆದು
ಸೇವಿಸುವಾ ಷೆ
ಣ್ದುಂಬಿಗಳ ಸರಮನೆತ್ತಿ ತ
ಱುಂಬುತ್ತುಂ ಬಂದುದಾ
ಪ್ರಭಾತಸಮೀರಂ|| ೧೦೫ ||

ಪದ್ಯ-೧೦೫:ಪದವಿಭಾಗ-

ಅರ್ಥ:ಎಂಬಿನೆಗಂ ಆಗಳ್ ಆ

ವಿಕಚಾಂಬುಜ ಸೌರಭಮಂ ಒಸೆದು (ಅರಳಿದ ಕಮಲದ ಸುವಾಸನೆಯನ್ನು ಸಂತೋಷದಿಂದ) ಸೇವಿಸುವ ಆ ಪೆಣ್ದುಂಬಿಗಳ (ಸೇವಿಸುವ ಹೆಣ್ಣು ದುಂಬಿಗಳ) ಸರಮನು ಎತ್ತಿ ತಱುಂಬುತ್ತುಂ ಬಂದುದು ಆ ಪ್ರಭಾತ ಸಮೀರಂ (ಸ್ವರವನ್ನು ಎಬ್ಬಿಸಿ ಅಟ್ಟುತ್ತಾ ಪ್ರಾತಕಾಲದ ಮಾರುತವು ಬೀಸಿತು. .)

ಪದ್ಯ-೧೦೫:ಅರ್ಥ:

ಎನ್ನುವಷ್ಟರಲ್ಲಿ, ಆಗ ಅರಳಿದ ಕಮಲದ ಸುವಾಸನೆಯನ್ನು ಸಂತೋಷದಿಂದ ಆಘ್ರಾಣಿಸುವ ಹೆಣ್ಣು ದುಂಬಿಗಳ ಸ್ವರವನ್ನು ಎಬ್ಬಿಸಿ ಅಟ್ಟುತ್ತಾ ಪ್ರಾತಕಾಲದ ಮಾರುತವು ಬೀಸಿತು. .

ಸೂತ ನಟ ವಂದಿ ಮಾಗಧ ವೈತಾಳಿಕ ಕಥಕ ಪುಣ್ಯಪಾಠಕ ವಿಪ್ರೋ।

ದ್ಭೂತರವಮೆಸೆಯೆ ಜಯ ಜಯ ಗೀತಿಗಳೊರ್ಮೊದಲೆ ತಡೆಯದೆರಡುಂ ಪಡೆಯೊಳ್|| ೧೦೬ ||

ಪದ್ಯ-೧೦೬:ಪದವಿಭಾಗ-ಅರ್ಥ:ಸೂತ, ನಟ, ವಂದಿಮಾಗಧ, ವೈತಾಳಿಕ, ಕಥಕ, ಪುಣ್ಯಪಾಠಕ, ವಿಪ್ರೋದ್ಭೂತ - > ರವಮ್ ಎಸೆಯೆ - ಗೀತೆಗಳ ಸದ್ದು

(ಪೌರಾಣಿಕರು, ನಟುವರು,
ಹೊಗಳುಭಟರು,
ಸ್ತುತಿಪಾಠಕರು, ಹಾಡುವವರು,
ಕತೆಹೇಳುವವರು,
ಮಂಗಳಪಾಠಕರು,
ಬ್ರಾಹ್ಮಣರು) ಜಯ
ಜಯಗೀತಿಗಳ್ ಒರ್ಮೊದಲೆ
ತಡೆಯದೆ ಎರಡುಂ
ಪಡೆಯೊಳ್
(ಮೊದಲಾದವರಿಂದ ಎದ್ದ
ಜಯಜಯಮಿಶ್ರವಾದ

ಗೀತೆಗಳ ಸದ್ದು ಎರಡು ಸೈನ್ಯದಲ್ಲಿಯೂ ಸಾವಕಾಶಮಾಡದೆ ಒಟ್ಟಿಗೆ ಶೋಭಿಸಿದುವು)

ಪದ್ಯ-೧೦೬:ಅರ್ಥ:ಪೌರಾಣಿಕರು, ನಟುವರು, ಹೊಗಳುಭಟರು, ಸ್ತುತಿಪಾಠಕರು, ಹಾಡುವವರು, ಕತೆಹೇಳುವವರು, ಮಂಗಳಪಾಠಕರು, ಬ್ರಾಹ್ಮಣರು

ಮೊದಲಾದವರಿಂದ ಎದ್ದ
ಜಯಜಯಮಿಶ್ರವಾದ
ಗೀತೆಗಳ ಸದ್ದು ಎರಡೂ
ಸೈನ್ಯಗಳಲ್ಲಿಯೂ
ಸಾವಕಾಶಮಾಡದೆ ಒಟ್ಟಿಗೆ
ಶೋಭಿಸಿದುವು

ಎರಡುಂಪಕ್ಕಮನೆಱಗಿದ
ಕರಿಗಳ್ ಪಾರ್ದೆಯ್ದೆ ವೇೞ್ದ
ಕೊರಲ ಸರಂಬೆ|
ತ್ತಿರೆ ಮುರಿವಿಟ್ಟೀಹೇಷಾ

ಸ್ವರಮಂ ತೋಱಿದಪುವಲ್ಲಿ ನೃಪ ತುರಗಂಗಳ್|| ೧೦೭ ||

ಪದ್ಯ-೧೦೭:ಪದವಿಭಾಗ-ಅರ್ಥ:ಎರಡುಂ ಪಕ್ಕಮನೆ ಎಱಗಿದ ಕರಿಗಳ್ (ಎರಡು ಪಕ್ಷದಲ್ಲಿಯೂ ಧಾಳಿಮಾಡಿದ ಆನೆಗಳು) ಪಾರ್ದು ಎಯ್ದೆ ವೇೞ್ದ (ನಿಟ್ಟಿಸಿ ಹೋಗುವಂತೆ ಹೇಳಿದ) ಕೊರಲ ಸರಂ ಬೆತ್ತಿರೆ (ಕೂಗುವಸ್ವರದಿಂದ ಕೂಡಿರಲು) ಮುರಿವಿಟ್ಟೇ

(ಆಹಾರ ತಿನ್ನದೆ ಕೂಗುವ ಅಪಶಕುನ?) ಹೇಷಾಸ್ವರಮಂ ತೋಱಿದಪುವು ಅಲ್ಲಿ ನೃಪ ತುರಗಂಗಳ್ (ಮುರ, ಮುರು- ಪಶುವಿಗೆ ಹುಲ್ಲು ಮತ್ತು ಬೇಯಿಸಿದ ಧಾನ್ಯ ಸೇರಿಸಿ ತಯಾರಿಸಿದ ಆಹಾರ, ಈ ಪದ ಈಗಲೂ ಹಳ್ಳಿಗಳಲ್ಲಿ ರೂಢಿಯಲ್ಲಿದೆ. ಮುರುವ+ ವಿಟ್ಟ ಬಿಟ್ಟ,-ಪ್ರಾಣಿಗಳ ಆಹಾರ ಬಿಟ್ಟ, ದುರ್ಯೋಧನನ

ಸೈನ್ಯದಲ್ಲಿ ಕುದುರೆಗಳು ಆಹಾರ ತಿನ್ನದೆ ಕೂಗುವ ಅಪಶಕುನ?)

ಪದ್ಯ-೧೦೭:ಅರ್ಥ: ಎರಡು ಪಕ್ಷದಲ್ಲಿಯೂ ಧಾಳಿಮಾಡಿದ ಆನೆಗಳು ನಿಟ್ಟಿಸಿ ಹೋಗುವಂತೆ ಹೇಳಿದ ಕೂಗುವ ಸ್ವರದಿಂದ ಕೂಡಿರಲು, ಅಲ್ಲಿ ದುರ್ಯೋಧನನ ರಾಜಾಶ್ವಗಳು ಆಹಾರವನ್ನು

ಬಿಟ್ಟು ಕೆನೆಯುತ್ತಿರುವುವು. (ಇವು ಅಪಶಕುನದ ಸೂಚನೆಗಳು).

ಇಂದೆನ್ನ ಮಗನನರ್ಜುನ ನೊಂದುಂ ತಳ್ವಿಲ್ಲದಱಿವನವನಂ ನೀಂ ಕಾ||
ಯೆಂದು ಸುರಪತಿಯ ಕಾಲ್ವಿಡಿ ವಂದಮನಿಱಿಸಿದುವು
ಪಸರಿಪಿನಕಿರಣಂಗಳ್|| ೧೦೮

ಪದ್ಯ-೧೦೮:ಪದವಿಭಾಗ-ಅರ್ಥ:ಇಂದು ಎನ್ನ ಮಗನನು ಅರ್ಜುನನನು ಒಂದುಂ ತಳ್ವಿಲ್ಲದೆ ಅಱಿವನು(ಈ ದಿನ ನನ್ನ ಮಗನಾದ ಕರ್ಣನನ್ನು ಅರ್ಜುನನನು ಒಂದುಸ್ವಲ್ಪವೂ

ತಡಮಾಡದೆ ಕೊಲ್ಲುವನು)
ಅವನಂ ನೀಂ ಕಾಯೆಂದು
(ಅವನನ್ನು ನೀನು ಕಾಪಾಡು
ಎಂದು) ಸುರಪತಿಯ
ಕಾಲ್ವಿಡಿವ ಅಂದಮುಂ
(ಇಂದ್ರನ ಕಾಲನ್ನು ಹಿಡಿಯುವ
ರೀತಿಯನ್ನು) ಇೞಿಸಿದುವು
(ಇಳಿಸಿದವು) ಪಸರಿಪ ಇನ
ಕಿರಣಂಗಳ್ (ಪ್ರಸರಿಸುತ್ತಿರುವ
ಸೂರ್ಯನ ಕಿರಣಗಳು

ತಮ್ಮನು ಕೆಳಗೆ ಭೂಮಿಗೆ ಇಳಿಸಿದವು.)

ಪದ್ಯ-೧೦೮:ಅರ್ಥ:ಈ ದಿನ ನನ್ನ ಮಗನಾದ ಕರ್ಣನನ್ನು ಅರ್ಜುನನು ಒಂದುಸ್ವಲ್ಪವೂ ತಡಮಾಡದೆ ಕೊಲ್ಲುವನು. ಅವನನ್ನು ನೀನು ಕಾಪಾಡು ಎಂದು ಇಂದ್ರನ ಕಾಲನ್ನು ಹಿಡಿಯುವ ರೀತಿಯನ್ನು ಪ್ರಸರಿಸುತ್ತಿರುವ ಸೂರ್ಯನ

ಕಿರಣಗಳು ತಮ್ಮನು ಕೆಳಗೆ ಭೂಮಿಗೆ ಇಳಿಸಿದವು.

<u>ಕರ್ಣನ ಕೊನೆಯ ದಿನದ ಯುದ್ಧಕ್ಕೆ ಪ್ರವೇಶ</u>

ವ|| ಆಗಳಂಗರಾಜಂ ತನ್ನಂ ಪರಿಚ್ಛೇದಿಸಿ ನೇಸಱ್ ಮೂಡೆಯಾಜ್ಯಾವೇಕ್ಷಣಂಗೆಯ್ದು ಸವತ್ಸ ಸುರಭಿಯನಭಿವಂದಿಸಿ ನಿಜ ರಥ ತುರಗ

ದಿವಾಸ್ತ್ರಂಗಳುಱಿಯೆ
ಪಸುರ್ಮಣಿಯನಪ್ಪೊಡ
ಮುಱಿಯದಂತು
ಚಾಗಂಗೆಯ್ದು ಚಾಗ ಬೀರದ
ಪಟಿಯಿಗೆಯನೆತ್ತಿಸಿ ಪಂಚರತ್ನ
ಗರ್ಭಂಗಳಪ್ಪ
ಮಂಗಳಜಳಂಗಳಂ ಮಿಂದು
ಮೆಯ್ಯನಾಱಿಸಿ
ದುಕೂಲಾಂಬರಮನುಟ್ಟು
ಪೊಸವಾವುಗೆಯಂ ಮೆಟ್ಟಿ
ಕನಕಸಂವ್ಯಾನಸೂತ್ರನಾಚಮಿ

ಸಿ ಕನಕಕಮಳಂಗಳಿಂ
ಕಮಳಾಕರಬಾಂಧವಂಗರ್ಘ್ಯ
ಮೆತ್ತಿ ಪಾಲ್ಗಡಲ ತೆರೆಯ
ನೊರೆಯ ದೊರೆಯ
ದುಕೂಲಾಂಬರದೊಳಿಂಬಾಗಿ
ಚಲ್ಲಣಮನುಟ್ಟು
ಪುಡಿಗತ್ತುರಿಯಂ ತಲೆಯೊಳ್
ತೀವೆ ಪೊಯ್ದು ಪಸಿಯ
ನೇತ್ರದಸಿಯ ಪಾಳೆಯೊಳ್
ತಲೆನವಿರಂ ಪಚ್ಚುಗಂಟಕ್ಕಿ
ಮಣಿಮಯಮಕುಟಮಂ

ಕವಿದು ತೋರ ನೆಲ್ಲಿಯ ಕಾಯಿಂ ಪಿರಿಯವಪ್ಪ ಮುತ್ತಿನ ಬ್ರಹ್ಮಸೂತ್ರಮನೆಲಿಲಿಕ್ಕಿ ಪಸದನಮನೆನಗಿಂದಿನಿತೆ ಎಂಬಂತೆ ನೆರೆಯೆ ಕೆಯ್ಗೆಯ್ದು ಬಂದು ಮದ್ರರಾಜಂಗೆ ಪೊಡೆವಟ್ಟು ಸನ್ನಣಂಗಳನೆಲ್ಲಮನಾತಂಗೆ ನೆರೆಯೆ ತುಡಿಸಿ-

ವಚನ:ಪದವಿಭಾಗ-

ಅರ್ಥ:ಆಗಳ್ ಅಂಗರಾಜಂ

ತನ್ನಂ ಪರಿಚ್ಛೇದಿಸಿ ನೇಸಱ್
ಮೂಡೆ (ಆಗ ಕರ್ಣನು ತಾನು
ನಿಶ್ಚೈಸಿಕೊಂಡು
ಸೂರ್ಯೋದಯವಾಗಲು)
(ಯ)ಆಜ್ಯಾವೇಕ್ಷಣಂಗೆಯ್ದು
(ತುಪ್ಪದಲ್ಲಿ ತನ್ನ
ಮುಖಬಿಂಬವನ್ನು ನೋಡಿ)
ಸವತ್ಸ ಸುರಭಿಯನು
ಅಭಿವಂದಿಸಿ (ಕರುವಿನಿಂದ
ಕೂಡಿದ ಗೋವನ್ನು ನಮಿಸಿ)
ನಿಜ ರಥ ತುರಗ

ದಿವ್ಯಾಸ್ತ್ರಂಗಳು ಉಱಿಯೆ
(ತನ್ನ ತೇರು, ಕುದುರೆ,
ದಿವ್ಯಾಸ್ತ್ರಗಳನ್ನು ಬಿಟ್ಟು)
ಪಸುರ್ಮಣಿಯನು ಅಪ್ಪೊಡ
ಮುಱಿಯದಂತು
ಚಾಗಂಗೆಯ್ದು (ಒಂದು ಹಸಿರು
ಮಣಿಯೂ ಉಳಿಯದಂತೆ
ದಾನಮ್ಮಾಡಿ) ಚಾಗ ಬೀರದ
ಪಟಿಯಿಗೆಯನೆತ್ತಿಸಿ
(ತ್ಯಾಗವೀರದ ಧ್ವಜವನ್ನು
ಎತ್ತಿಕಟ್ಟಿ) ಪಂಚರತ್ನ

ಗರ್ಭಂಗಳಪ್ಪ
ಮಂಗಳಜಳಂಗಳಂ ಮಿಂದು
ಮೆಯ್ಯನಾಱಿಸಿ
ದುಕೂಲಾಂಬರಮನುಟ್ಟು (
ಪಂಚರತ್ನಗಳಿಂದ ಕೂಡಿದ
ಮಂಗಳತೀರ್ಥಗಳಲ್ಲಿ
ಸ್ನಾನಮಾಡಿ ಶರೀರವನ್ನು
ಒಣಗಿಸಿಕೊಂಡು
ರೇಷ್ಮೆಯಂಥ
ಬಟ್ಟೆಯನ್ನುಟ್ಟು)
ಪೊಸವಾವುಗೆಯಂ ಮೆಟ್ಟಿ

(ಹೊಸಪಾದುಕೆಗಳನ್ನು ಮೆಟ್ಟಿ
)
ಕನಕಸಂವ್ಯಾನಸೂತ್ರನಾಚಮಿ
ಸಿ (ಚಿನ್ನದ ಉತ್ತರೀಯವನ್ನೂ
ಕಟಿಸೂತ್ರವನ್ನೂ ಧರಿಸಿದನು.)
ಕನಕ ಕಮಳಂಗಳಿಂ
ಕಮಳಾಕರಬಾಂಧವಂಗೆ
ಅರ್ಘ್ಯಮೆತ್ತಿ
(ಆಚಮನಮಾಡಿ ಚಿನ್ನದ
ಕಮಲಗಳಿಂದ ಸೂರ್ಯನಿಗೆ
ಅರ್ಘ್ಯನ್ನು ಕೊಟ್ಟು,)

ಪಾಲ್ಗಡಲ ತೆರೆಯ ನೊರೆಯ
ದೊರೆಯ
ದುಕೂಲಾಂಬರದೊಳು
ಇಂಬಾಗಿ ಚಲ್ಲಣಮನುಟ್ಟು (
ಕ್ಷೀರಸಮುದ್ರದ ಅಲೆಯ
ನೊರೆಗೆ ಸಮಾನವಾದ
ರೇಷ್ಮೆಯ ಬಟ್ಟೆಯಲ್ಲಿ
ಮನೋಹರವಾಗಿ
ಕಚ್ಚೆಯನ್ನುಟ್ಟನು.)
ಪುಡಿಗತ್ತುರಿಯಂ ತಲೆಯೊಳ್
ತೀವೆ ಪೊಯ್ದು (ಕಸ್ತುರಿಯ

ಹುಡಿ ತಲೆಯ ಮೇಲೆ ತುಂಬ ಚೆಲ್ಲಿಕೊಂಡು) ಪಸಿಯ ನೇತ್ರದಸಿಯ ಪಾಳೆಯೊಳ್ ತಲೆನವಿರಂ ಪಚ್ಚುಗಂಟಿಕ್ಕಿ (ಹಸಿರು ಬಣ್ಣದ ನವುರಾದ ಪಟ್ಟಿಯಲ್ಲಿ ತಲೆಗೂದಲನ್ನು ಭಾಗಮಾಡಿ ಗಂಟಿಕ್ಕಿಕೊಂಡನು.) ಮಣಿಮಯ ಮಕುಟಮಂ ಕವಿದು (ರತ್ನಮಯಕಿರೀಟವನ್ನು

ತಲೆಗೆ ಧರಿಸಿ) ತೋರನೆಲ್ಲಿಯ ಕಾಯಿಂ ಪಿರಿಯವಪ್ಪ ಮುತ್ತಿನ ಬ್ರಹ್ಮಸೂತ್ರಮನು ಎಱಲಿಕ್ಕಿ (ದಪ್ಪವಾದ ನೆಲ್ಲಿಯ ಕಾಯಿಗಿಂತಲೂ ದಪ್ಪವಾದ ಮುತ್ತಿನ ಯಜ್ಞೋಪವೀತವನ್ನು ಜೋಲುಬಿಟ್ಟು) ಪಸದನಂ ಎನೆ ಎನಗೆ ಇಂದಿನಿತೆ ಎಂಬಂತೆ (ಈ- ಅಲಂಕಾರ ಈ ದಿನಕ್ಕೆ ಮಾತ್ರ ಎನ್ನುವ ಹಾಗೆ)

ನೆರೆಯೆ ಕೆಯ್ಗೆಯ್ದು
(ಸಂಪೂರ್ಣವಾಗಿ ಅಲಂಕಾರ
ಮಾಡಿಕೊಂಡು) ಬಂದು
ಮದ್ರರಾಜಂಗೆ ಪೊಡೆವಟ್ಟು
(ಶಲ್ಯನಿಗೆ ನಮಸ್ಕಾರಮಾಡಿ)
ಸನ್ನಣಂಗಳಂ ಎಲ್ಲಮನು
ಆತಂಗೆ ನೆರೆಯೆ ತುಡಿಸಿ
(ಕವಚನಗಳನ್ನೆಲ್ಲ ಆತನಿಗೆ
ಪೂರ್ಣವಾಗಿ ತೊಡಿಸಿ)-
ವಚನ:ಅರ್ಥ:ಆಗ ಕರ್ಣನು
ತಾನು ನಿಶ್ಚೈಸಿಕೊಂಡು

ಸೂರ್ಯೋದಯವಾಗಲು ತುಪ್ಪದಲ್ಲಿ ತನ್ನ ಮುಖಬಿಂಬವನ್ನು ನೋಡಿ, ಕರುವಿನಿಂದ ಕೂಡಿದ ಗೋವನ್ನು ನಮಿಸಿದನು. ತನ್ನ ತೇರು, ಕುದುರೆ, ದಿವ್ಯಾಸ್ತ್ರಗಳನ್ನು ಬಿಟ್ಟು ಒಂದು ಹಸಿರು ಮಣಿಯೂ ಉಳಿಯದಂತೆ ದಾನಮಾಡಿ, ತ್ಯಾಗವೀರದ ಧ್ವಜವನ್ನು ಎತ್ತಿಕಟ್ಟಿದನು.

ಪಂಚರತ್ನಗಳಿಂದ ಕೂಡಿದ
ಮಂಗಳತೀರ್ಥಗಳಲ್ಲಿ
ಸ್ನಾನಮಾಡಿ ಶರೀರವನ್ನು
ಒಣಗಿಸಿಕೊಂಡು
ರೇಷ್ಮೆಯಂಥ ಬಟ್ಟೆಯನ್ನುಟ್ಟು
ಹೊಸಪಾದುಕೆಗಳನ್ನು ಮೆಟ್ಟಿ
ಚಿನ್ನದ ಉತ್ತರೀಯವನ್ನೂ
ಕಟಿಸೂತ್ರವನ್ನೂ ಧರಿಸಿದನು.
ಆಚಮನಮಾಡಿ ಚಿನ್ನದ
ಕಮಲಗಳಿಂದ ಸೂರ್ಯನಿಗೆ
ಅರ್ಘ್ಯವನ್ನೆತ್ತಿ,

ಕ್ಷೀರಸಮುದ್ರದ ಅಲೆಯ ನೊರೆಗೆ ಸಮಾನವಾದ ರೇಷ್ಮೆಯ ಬಟ್ಟೆಯಲ್ಲಿ ಮನೋಹರವಾಗಿ ಕಚ್ಚೆಯನ್ನುಟ್ಟನು. ಕಸ್ತುರಿಯ ಹುಡಿ ತಲೆಯ ಮೇಲೆ ತುಂಬ ಚೆಲ್ಲಿಕೊಂಡು, ಹಸಿರು ಬಣ್ಣದ ನವುರಾದ ಪಟ್ಟಿಯಲ್ಲಿ ತಲೆಗೂದಲನ್ನು ಭಾಗಮಾಡಿ ಗಂಟಿಕ್ಕಿಕೊಂಡನು. ರತ್ನಮಯಕಿರೀಟವನ್ನು ತಲೆಗೆ

ಧರಿಸಿಕೊಂಡನು. ದಪ್ಪವಾದ ನೆಲ್ಲಿಯ ಕಾಯಿಗಿಂತಲೂ ದಪ್ಪವಾದ ಮುತ್ತಿನ ಯಜ್ಞೋಪವೀತವನ್ನು ಜೋಲುಬಿಟ್ಟು, ಈ ಅಲಂಕಾರ ಈ ದಿನಕ್ಕೆ ಮಾತ್ರ ಎನ್ನುವ ಹಾಗೆ ಸಂಪೂರ್ಣವಾಗಿ ಅಲಂಕಾರ ಮಾಡಿಕೊಂಡು, ಶಲ್ಯನಿಗೆ ನಮಸ್ಕಾರಮಾಡಿ ಕವಚನಗಳನ್ನೆಲ್ಲ ಆತನಿಗೆ

ಪೂರ್ಣವಾಗಿ ತೊಡಿಸಿದನು.

ತೊಡಿಸಿ-

ಕಂ|| ತಿದಿಯುಗಿದು
ಕೊಟ್ಟೆನೊಡವು
ಟ್ಟಿದ ಕವಚಮನಮರಪತಿಗೆ
ಮುನ್ನಿನ್ನೆನಗೊ|
ಪ್ಪದು ಮರೆಯನಾಸೆವಡಲೆಂ
ದದಟನಣಂ ತುಡನೆ
ಕವಚಮಂ ರಾಧೇಯಂ|| ೧೦೯
||

ಪದ್ಯ-00:ಪದವಿಭಾಗ-ಅರ್ಥ:ತಿದಿಯುಗಿದು ಕೊಟ್ಟೆನು (ಚರ್ಮವನ್ನು ಸುಲಿಯುವ ಹಾಗೆ ಸುಲಿದು ಕೊಟ್ಟೆನು.) ಒಡವುಟ್ಟಿದ ಕವಚಮಂ ಅಮರಪತಿಗೆ (ಜೊತೆಯಲ್ಲಿ ಹುಟ್ಟಿದ ಕವಚವನ್ನು ಇಂದ್ರನಿಗೆ) ಮುನ್ನ ಇನ್ನೆ ನಗೆ ಒಪ್ಪದು ಮರೆಯನು ಆಸೆವಡಲೆಂದು (ಇನ್ನು ನನಗೆ ದೇಹಕ್ಕೆ ಮರೆಯಾದ

ಕವಚಾದಿಗಳನ್ನು
ಅಪೇಕ್ಷೆಪಡುವುದು
ಒಪ್ಪುವುದಿಲ್ಲ.) ಅದಟನು
ಅಣಂ ತುಡನೆ ಕವಚಮಂ
ರಾಧೇಯಂ (ಅದಟನು
ರಾಧೇಯಂ ಕವಚಮಂ ಅಣಂ
ತುಡನೆ-
ಪರಾಕ್ರಮಶಾಲಿಯಾದ
ಕರ್ಣನು ಕವಚವನ್ನು ಸ್ವಲ್ಪವೂ
ತೊಡಲಿಲ್ಲವೇ!)

ಪದ್ಯ-00:ಅರ್ಥ:

ಜೊತೆಯಲ್ಲಿ ಹುಟ್ಟಿದ ಕವಚವನ್ನು ಚರ್ಮವನ್ನು ಸುಲಿಯುವ ಹಾಗೆ ಮೊದಲು ಇಂದ್ರನಿಗೆ ಸುಲಿದು ಕೊಟ್ಟೆನು. ಇನ್ನು ನನಗೆ ದೇಹಕ್ಕೆ ಮರೆಯಾದ ಕವಚಾದಿಗಳನ್ನು ಅಪೇಕ್ಷೆಪಡುವುದು ಒಪ್ಪುವುದಿಲ್ಲ ಎಂದು ಪರಾಕ್ರಮಶಾಲಿಯಾದ

ಕರ್ಣನು ಕವಚವನ್ನು ಸ್ವಲ್ಪವೂ ತೊಡಲಿಲ್ಲವೇ!

ವ|| ಆಗಳ್ ಮದಗಜ ಕಕ್ಷಧ್ವಜ ವಿರಾಜಿತಮಪ್ಪ ತನ್ನ ಪೊನ್ನ ರಥಮಂ ಮದ್ರರಾಜನ ನೇಱಲ್ವೇೞ್ದು ಮೂಱು ಸೂೞ್ ಬಲವಂದು ಪೊಡೆವಟ್ಟು ತನ್ನ ಸಗ್ಗಮನೇಱುವುದನನು ಕರಿಸುವಂತೇಱಿ ನೆಲನಂಬರದೆಡೆಗೆ ಬರ್ಪಂತೆ ರಣರಂಗಭೂಮಿಗೆ ವಂದು

ಕುರುರಾಜಧ್ವಜಿನಿಯಂ ಪದ್ಮವ್ಯೂಹಮನೊಡ್ಡಿದೆಡೆ-

ವಚನ:ಪದವಿಭಾಗ-

ಅರ್ಥ:ಆಗಳ್ ಮದಗಜ ಕಕ್ಷಧ್ವಜ ವಿರಾಜಿತಮಪ್ಪ (ಆಗ ಮದ್ದಾನೆಯ ಪಕ್ಕದಲ್ಲಿ ನಿಂತಿರುವ) ತನ್ನ ಪೊನ್ನ ರಥಮಂ (ತನ್ನ ಸುವರ್ಣರಥವನ್ನು) ಮದ್ರರಾಜನನು ಏಱಲ್ ವೇೞ್ದು (ಶಲ್ಯನನ್ನು ಏರಲು-

ಹತ್ತಲು ಹೇಳಿ) ಮೂಱು
ಸೂಟ್ ಬಲವಂದು
ಪೊಡೆವಟ್ಟು (ಮೂರು ಸಲ
ಪ್ರದಕ್ಷಿಣೆ ಮಾಡಿ ನಮಸ್ಕರಿಸಿ)
ತನ್ನ ಸಗ್ಗಮನು ಏಱುವುದನು
ಅನುಕರಿಸುವಂತೆ ಏಱಿ
(ತಾನು ಸ್ವರ್ಗಕ್ಕೆ ಹತ್ತುವುದನ್ನು
ಅನುಕರಿಸುವಂತೆ ಹತ್ತಿ-)
ನೆಲನು ಅಂಬರದೆಡೆಗೆ
ಬರ್ಪಂತೆ (ಭೂಮಿಯು
ಆಕಾಶದೆಡೆಗೆ ಬರುವ ಹಾಗೆ)

ರಣರಂಗಭೂಮಿಗೆ ವಂದು ಕುರುರಾಜಧ್ವಜಿನಿಯಂ ಪದ್ಮವ್ಯೂಹಮನು ಒಡ್ಡಿದೆಡೆ (ಯುದ್ಧಭೂಮಿಗೆ ಬಂದು ಕೌರವಸೈನ್ಯವನ್ನು ಪದ್ಮವ್ಯೂಹದಾಕಾರದಲ್ಲಿ ರಚಿಸಿ ಮುಂದಕ್ಕೆ ಚಾಚಿದನು)-

ವಚನ:ಅರ್ಥ:ಆಗ ಮದ್ದಾನೆಯ ಪಕ್ಕದಲ್ಲಿ ನಿಂತಿರುವ ತನ್ನ ಸುವರ್ಣರಥವನ್ನು ಶಲ್ಯನನ್ನು

ಹತ್ತಲು ಹೇಳಿ ಮೂರು ಸಲ
ಪ್ರದಕ್ಷಿಣೆ ಮಾಡಿ ನಮಸ್ಕರಿಸಿ
ತಾನು ಸ್ವರ್ಗಕ್ಕೆ ಹತ್ತುವುದನ್ನು
ಅನುಕರಿಸುವಂತೆ ಹತ್ತಿದನು.
ಭೂಮಿಯು ಆಕಾಶದೆಡೆಗೆ
ಬರುವ ಹಾಗೆ
ಯುದ್ಧಭೂಮಿಗೆ ಬಂದು
ಕೌರವಸೈನ್ಯವನ್ನು
ಪದ್ಮವ್ಯೂಹದಾಕಾರದಲ್ಲಿ
ರಚಿಸಿ ಮುಂದಕ್ಕೆ ಚಾಚಿದನು.

ಕಂ|| ಕಂಸಾರಿಸಖಂ ಪರಿವಿ

ಧ್ವಂಸಿತ

ರಿಪುನೃಪಸಮೂಹನೊಡ್ಡಿದನಾ

ಗಳ್|

ಹಂಸವ್ಯೂಹಮನುತ್ತುಂ

ಗಾಂಸಂ ತಾಂ

ವಿಬುಧವನಜವನಕಳಹಂಸಂ||

೧೧೦ ||

ಪದ್ಯ-೧೧೦:ಪದವಿಭಾಗ-ಅರ್ಥ:ಕಂಸಾರಿಸಖಂ (ಕಂಸನನ್ನು ಕೊಂದ ಕೃಷ್ಣನ ಗೆಳೆಯನೂ) ಪರಿವಿಧ್ವಂಸಿತ

ರಿಪು ನೃಪಸಮೂಹನು
(ಶತ್ರುರಾಜರ ಸಮೂಹವನ್ನು
ಪೂರ್ಣವಾಗಿ
ಧ್ವಂಸಮಾಡಿದವನೂ)
ಒಡ್ಡಿದನಾಗಳ್
ಹಂಸವ್ಯೂಹಮನು
(ಹಂಸವ್ಯೂಹವನ್ನು
ಒಡ್ಡಿದನು) ಉತ್ತುಂಗಾಂಸಂ
(ಎತ್ತರವಾದ
ಹೆಗಲನ್ನುಳ್ಳವನೂ) ತಾಂ
ವಿಬುಧವನಜವನ ಕಳಹಂಸಂ

(ವಿದ್ವಾಂಸರೆಂಬ ಸರೋವರಕ್ಕೆ ರಾಜಹಂಸದಂತೆ ಇರುವವನೂ ಆದ- ಅರ್ಜುನನು ಹಂಸವ್ಯೂಹವನ್ನು ಒಡ್ಡಿದನು.)

ಪದ್ಯ-00:ಅರ್ಥ: ಕೃಷ್ಣನ ಸ್ನೇಹಿತನೂ ಶತ್ರುರಾಜರ ಸಮೂಹವನ್ನು ಪೂರ್ಣವಾಗಿ ಧ್ವಂಸಮಾಡಿದವನೂ ಎತ್ತರವಾದ ಹೆಗಲನ್ನುಳ್ಳವನೂ ವಿದ್ವಾಂಸರೆಂಬ ಸರೋವರಕ್ಕೆ

ರಾಜಹಂಸದಂತೆ

ಇರುವವನೂ ಆದ

ಅರ್ಜುನನು

ಹಂಸವ್ಯೂಹವನ್ನು ಒಡ್ಡಿದನು.

ವ|| ಅಂತೊಡ್ಡಿದೊಡ್ಡನೆರಡುಂ ಬಲದ ನಾಯಕರುಂ ತಮ್ಮ ಕೋಪಾಗ್ನಿಗಳನೆ ಬೀಸುವಂತೆ ಕೆಯ್ವೀಸಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಒಡ್ಡಿದ ಒಡ್ಡನು ಎರಡುಂ ಬಲದ ನಾಯಕರುಂ

(ಹಾಗೆ ಒಡ್ಡಿರುವ ಸೈನ್ಯಗಳ ಎರಡು ಪಕ್ಷದ ನಾಯಕರೂ) ತಮ್ಮ ಕೋಪಾಗ್ನಿಗಳನೆ ಬೀಸುವಂತೆ ಕೆಯ್ವೀಸಿದಾಗಳ್ (ತಮ್ಮ ಕೋಪಾಗ್ನಿಗಳನ್ನೇ ಬೀಸುವಂತೆ (ಯುದ್ಧ ಪ್ರಾರಂಭಸೂಚಕವಾಗಿ) ಕೈಗಳನ್ನು ಬೀಸಿದಾಗ-)-

ವಚನ:ಅರ್ಥ:ವ|| ಹಾಗೆ ಒಡ್ಡಿರುವ ಸೈನ್ಯಗಳ ಎರಡು ಪಕ್ಷದ ನಾಯಕರೂ ತಮ್ಮ

ತಮ್ಮ ಕೋಪಾಗ್ನಿಗಳನ್ನೇ ಬೀಸುವಂತೆ (ಯುದ್ಧ ಪ್ರಾರಂಭಸೂಚಕವಾಗಿ) ಕೈಗಳನ್ನು ಬೀಸಿದರು, ಆಗ-

ಚಂ|| ಕರದಸಿಗಳ್ ಪಳಂಚೆ
ಕಿಡಿವಿಟ್ಟೊಗೆದೊಳ್ಗಿಡಿ
ತಾರಕಾಳಿಯಂ
ತಿರೆ ರಜಮೊಡ್ಡಿನಿಂದ
ಮುಗಿಲಂತಿರೆ ಬಾಳುಡಿ
ಪಾಱುವುಳ್ಕದಂ|

ತಿರೆ ತಡಮಾದುದಂಬರದೊಳಂಬರಮೆಂಬಿನೆಗಂ ಜಗತ್ರಯಂ ಬರಮೆಸೆವಂತು ತಳ್ತಿಱಿದುವಂದೆರಡುಂ ಬಲಮುಗ್ರಕೋಪದಿಂ|| ೧೧೧||

ಪದ್ಯ-೧೧೧:ಪದವಿಭಾಗ-ಅರ್ಥ:ಕರದ ಅಸಿಗಳ್ ಪಳಂಚೆ ಕಿಡಿವಿಟ್ಟು ಒಗೆದ ಒಳ್ಗಿಡಿ (ಕಯ್ಯಲ್ಲಿರುವ ಕತ್ತಿಗಳು ಒಂದಕ್ಕೊಂದು

ತಗಲಲು ಕಿಡಿಗಳನ್ನು ಹಾರಿಸಿ
ಹುಟ್ಟಿದ ಒಳ್ಳೆಯ ಕಿಡಿಗಳು)
ತಾರಕಾಳಿಯಂತಿರೆ
(ನಕ್ಷತ್ರಸಮೂಹದಂತೆ
ಕಾಣಿಸಲು,) ರಜಮ್
ಒಡ್ಡಿನಿಂದ ಮುಗಿಲಂತಿರೆ
(ಧೂಳು ತುಂಬಿಕೊಂಡು
ಮೋಡದಂತಿರಲು,) ಬಾಳುಡಿ
ಪಾಱುವ ಉಳ್ಕದಂತಿರೆ
(ಕತ್ತಿಯ ಚೂರುಗಳು ಹಾರುವ
ಉಲ್ಕೆದ ಹಾಗಿರಲು,)

ತಡಮಾದುದು
ಅಂಬರದೊಳಂಬರಂ
ಎಂಬಿನೆಗಂ (ಆಕಾಶದಲ್ಲಿ
ಮತ್ತೊಂದು ಆಕಾಶಕ್ಕೆ
ಸಮವಾಯಿತು- ತಡಂ- ತರಂ/
ತೆರಂ) ಜಗತ್ರಯಂಬರಂ
ಎಸೆವಂತು
(ಮೂರುಲೋಕದವರೆಗೆ
ಪ್ರಕಾಶಮಾನವಾಗುವ ಹಾಗೆ)
ತಳ್ತು ಇೞಿದುವು ಅಂದು
ಎರಡುಂ ಬಲಂ

ಉಗ್ರಕೋಪದಿಂ (ಎರಡು ಸೈನ್ಯಗಳು ಉಗ್ರವಾದ ಕೋಪದಿಂದ ತಾಗಿ ಯುದ್ಧಮಾಡಿದುವು.)

ಪದ್ಯ-೧೧೧:ಅರ್ಥ:

ಕಯ್ಯಲ್ಲಿರುವ ಕತ್ತಿಗಳು ಒಂದಕ್ಕೊಂದು ತಗಲಲು ಕಿಡಿಗಳನ್ನು ಹಾರಿಸಿ ಹುಟ್ಟಿದ ಒಳ್ಳೆಯ ಕಿಡಿಗಳು ನಕ್ಷತ್ರಸಮೂಹದಂತೆ ಕಾಣಿಸಿದುವು. ಧೂಳು

ತುಂಬಿಕೊಂಡು ಮೋಡದಂತಿದ್ದುವು. ಕತ್ತಿಯ ಚೂರುಗಳು ಹಾರುವ ಉಲ್ಕೆದ ಹಾಗಿತ್ತು. ಆಕಾಶದಲ್ಲಿ ಮತ್ತೊಂದು ಆಕಾಶಕ್ಕೆ ಸಮವಾಯಿತು ಎನ್ನುವ ಹಾಗೆ ಮೂರುಲೋಕದವರೆಗೆ ಪ್ರಕಾಶಮಾನವಾಗುವ ಹಾಗೆ ಎರಡು ಸೈನ್ಯಗಳು ಉಗ್ರವಾದ ಕೋಪದಿಂದ ತಾಗಿ ಯುದ್ಧಮಾಡಿದುವು.

ವ|| ಅನ್ನೆಗಂ ದುರ್ಯೋಧನಂಗಾಪ್ತರಪ್ಪ ಸಂಸಪ್ತಕರತಿರಥಮಥನನ ರಥಮಂ ತಮ್ಮೆತ್ತ ತೆಗೆಯಲೊಡಮವರ ರಥಕ್ಕೆ ಮದಾಂಧ ಗಂಧಸಿಂಧುರದಂತಮ್ಮನ ಗಂಧವಾರಣಂ ಪರಿದು-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ದುರ್ಯೋಧನಂಗೆ ಆಪ್ತರಪ್ಪ

ಸಂಸಪ್ತಕರು (ಅಷ್ಟರಲ್ಲಿ
ದುರ್ಯೋಧನನಿಗಾಪ್ತರಾದ
ಸಂಸಪ್ತಕರು)
ಅತಿರಥಮಥನನ ರಥಮಂ
ತಮ್ಮತ್ತ ತೆಗೆಯಲೊಡಂ
(ಅತಿರಥಮಥನನಾದ
ಅರ್ಜುನನ ತೇರನ್ನು ತಮ್ಮಕಡೆ
ತೆಗೆಯಿಸಿಕೊಂಡು ಹೋಗಲು)
ಅವರ ರಥಕ್ಕೆ ಮದಾಂಧ
ಗಂಧಸಿಂಧುರದಂತ ಅಮ್ಮನ
ಗಂಧವಾರಣಂ ಪರಿದು

(ಅಮ್ಮು- ಸಾಮರ್ಥ್ಯ; ಅಮ್ಮನ/ ಸಮರ್ಥ ಗಂಧವಾರಣನಾದ ಅರ್ಜುನನು ಅವರ ರಥಕ್ಕೆ ಅಭಿಮುಖವಾಗಿ ಮದದಿಂದ ಕುರುಡಾದ ಶ್ರೇಷ್ಠವಾದ ಆನೆಯಂತೆ ನುಗ್ಗಿದನು)-

ವಚನ:ಅರ್ಥ:ಅಷ್ಟರಲ್ಲಿ ದುರ್ಯೋಧನನಿಗಾಪ್ತರಾದ ಸಂಸಪ್ತಕರು ಅತಿರಥಮಥನನಾದ

ಅರ್ಜುನನ ತೇರನ್ನು ತಮ್ಮಕಡೆ ತೆಗೆಯಿಸಿಕೊಂಡು ಹೋಗಲು ಅಮ್ಮನ ಗಂಧವಾರಣನಾದ ಅರ್ಜುನನು ಅವರ ರಥಕ್ಕೆ ಅಭಿಮುಖವಾಗಿ ಮದದಿಂದ ಕುರುಡಾದ ಶ್ರೇಷ್ಠವಾದ ಆನೆಯಂತೆ ನುಗ್ಗಿದನು.

ಚಂ|| ಪಱಿಪಡದಾಯ್ತು ಭಾರತಮಿವಂದಿರ ಕಾರಣದಿಂದಿವಂದಿರಂ

ಪಱಿಪಡೆ ಕೊಂದು
ಕರ್ಣನೊಳೆ
ಕಾದಲೆಮೇಲ್ಕುಮಮೋಘ
ಮೆಂದು ಕೆಂ|
ಗಱಿಗಳ
ಪಾರೆಯಂಬುಗಳೊಳೂಱಿ
ಕಱುತ್ತಿಸೆ ಬಿಟ್ಟರೆಯ್ದೆ ಪ
ರ್ದೆಱಗೆ ಸುರುಳ್ದು ಬೀೞ್ವ
ಕಿಱುವಕ್ಕಿವೊಲುಗ್ರ
ವಿರೋಧಿನಾಯಕರ್| ೧೧೨ ||

ಪದ್ಯ-೧೧೨+:ಪದವಿಭಾಗ-ಅರ್ಥ:ಪಱಿಪಡದಾಯ್ತು ಭಾರತಂ ಇವಂದಿರ ಕಾರಣದಿಂದ (ಸಂಸಪ್ತಕರಿಂದ ಈ ಭಾರತಯುದ್ದವು ನಿಷ್ಕರ್ಷಯಾಗದೆ (ಮುಗಿಯದೇ) ಇದೆ) ಇವಂದಿರಂ ಪಱಿಪಡೆ ಕೊಂದು ಕರ್ಣನೊಳೆ ಕಾದಲೆಮೇೞ್ಕುಂ (ಇವರನ್ನು ಕತ್ತರಿಸಿ ಬೀಳುವಂತೆ ಕೊಂದು

ಆಮೇಲೆ ಬೆಲೆಯೇ ಇಲ್ಲದ
ರೀತಿಯಲ್ಲಿ (ಅದ್ಭುತವಾಗಿ)
ಕರ್ಣನಲ್ಲಿ ಕಾದಲೇಬೇಕು
ಎಂದು) ಮಮೋಘಮೆಂದು
ಕೆಂಗಱಿಗಳ
ಪಾರೆಯಂಬುಗಳೊಳೂಱಿ
ಕಱುತ್ತಿಸೆ (ಕೆಂಪಾದ
ಗರಿಗಳನ್ನುಳ್ಳ
ಹಾರೆಯಂತಿರುವ
ಬಾಣಗಳನ್ನು ನಾಟಿ
ಗುರಿಯಿಟ್ಟು ಹೊಡೆಯಲು)

ಬಿಟ್ಟಿರು ಎಯ್ದೆ
ಪರ್ದೆಱಿಗೆ(ಹದ್ದು ಎರಗಿದಾಗ)
ಸುರುಳ್ದು ಬೀಟ್ಟಿ
(ಶತ್ರುನಾಯಕರು
ಸುರುಳಿಕೊಂಡು ಬೀಳುವ
ಹಾಗೆ ಬಿದ್ದರು.)
ಕಿಱುವಕ್ಕಿವೊಲ್ ಉಗ್ರ
ವಿರೋಧಿನಾಯಕರ್ (ಹದ್ದು
ಎರಗಿದಾಗ ಸಣ್ಣ ಹಕ್ಕಿಗಳು
ಸುರುಳಿಕೊಂಡು ಬೀಳುವ

ಹಾಗೆ ವಿರೋಧಿನಾಯಕರು ಬಿದ್ದರು.)

ಪದ್ಯ-೧೧೨:ಅರ್ಥ:ಸಂಸಪ್ತಕರಿಂದ ಈ ಭಾರತಯುದ್ಧವು ನಿಷ್ಕರ್ಷೆಯಾಗದೆ (ಮುಗಿಯದೇ) ಇದೆ. ಇವರನ್ನು ಕತ್ತರಿಸಿ ಬೀಳುವಂತೆ ಕೊಂದು ಆಮೇಲೆ ಬೆಲೆಯೇ ಇಲ್ಲದ ರೀತಿಯಲ್ಲಿ (ಅದ್ಭುತವಾಗಿ) ಕರ್ಣನಲ್ಲಿ ಕಾದಲೇಬೇಕು ಎಂದು

ಕೆಂಪಾದ ಗರಿಗಳನ್ನುಳ್ಳ
ಹಾರೆಯಂತಿರುವ
ಬಾಣಗಳನ್ನು ನಾಟಿ
ಗುರಿಯಿಟ್ಟು ಹೊಡೆಯಲು
ಶತ್ರುನಾಯಕರು ರಭಸದಿಂದ
ಹದ್ದು ಎರಗಿದಾಗ ಸಣ್ಣ
ಹಕ್ಕಿಗಳು ಸುರುಳಿಕೊಂಡು
ಬೀಳುವ ಹಾಗೆ
ವಿರೋಧಿನಾಯಕರು ಬಿದ್ದರು.

ಕಂ|| ಕಟಕುಟಮಾದ

ರಥಂಗಳಿ

ನಱಿದರಿಭಟರಿಂ ಸುರುಳ್ದ ಮದಗಜಘಟೆಯಿಂ|
ಸುಱಿಸುಱಿದೊಡವರಿದುದು
ಕ
ಲ್ವುಱಿಯೊಳ್ ಭೋರ್ಗರೆವ ತೊಯವ್ರೋಲ್ ರುಧಿರಜಳಂ||
೧೧೩ ||

ಪದ್ಯ-೧೧೩:ಪದವಿಭಾಗ-ಅರ್ಥ:ಕಟಿಕುಟಿಮಾದ ರಥಂಗಳಿನು ಅಱಿದ ಅರಿಭಟರಿಂ ಸುರುಳ್ದ

ಮದಗಜಘಟೆಯಿಂ
(ಅಸ್ತವ್ಯಸ್ತವಾದ
ರಥಗಳಿಂದಲೂ ಸತ್ತ
ಶತ್ರುವೀರರಿಂದಲೂ
ಸುರುಳಿಗೊಂಡು ಬಿದ್ದ
ಮದ್ದಾನೆಗಳಿಂದಲೂ)
ಸುೞಿಸುೞಿದು
ಒಡವರಿದುದು ಕಲ್ವುೞಿಯೊಳ್
(ಸುಳಿಸುಳಿಯಾಗಿ
ಜೊತೆಯಲ್ಲಿಯೇ ಹರಿಯಿತು.)
ಭೋರ್ಗರೆವ ತೊಯವ್ರೋಲ್

ರುಧಿರಜಳಂ (ಭೋರೆಂದು ಶಬ್ದ ಮಾಡುತ್ತ ಕಲ್ಲುಗಳಿಂದ ಕೂಡಿರುವ ಪಾತ್ರದಲ್ಲಿ ಹರಿಯುವ ನದಿಯಂತೆ ರಕ್ತಪ್ರವಾಹವು- ಹರಿಯಿತು)

ಪದ್ಯ-೧೧೩:ಅರ್ಥ:

ಅಸ್ತವ್ಯಸ್ತವಾದ ರಥಗಳಿಂದಲೂ ಸತ್ತ ಶತ್ರುವೀರರಿಂದಲೂ ಸುರುಳಿಗೊಂಡು ಬಿದ್ದ ಮದ್ದಾನೆಗಳಿಂದಲೂ

ರಕ್ತಪ್ರವಾಹವು ಭೋರೆಂದು
ಶಬ್ದ ಮಾಡುತ್ತ ಕಲ್ಲುಗಳಿಂದ
ಕೂಡಿರುವ ಪಾತ್ರದಲ್ಲಿ
ಹರಿಯುವ ನದಿಯಂತೆ
ಸುಳಿಸುಳಿಯಾಗಿ
ಜೊತೆಯಲ್ಲಿಯೇ ಹರಿಯಿತು.

ಪಿರಿದು ಪೊಗೞಿಸಿದ ಪಾಡಿಸಿ
ದರಿಯರನಾನಲ್ಕೆ ಪಿರಿಯರಂ
ಪೂಣಿಗರಂ|
ಬಿರುದರನದಟಿನೊಳುಬ್ಬರ

ಮುರಿವರನಾಯ್ದಱಿಸಿ ಕೊಂಡುವರಿಗನ ಕಣೆಗಳ್|| ೧೧೪ ||

ಪದ್ಯ-೧೧೪:ಪದವಿಭಾಗ-ಅರ್ಥ:ಪಿರಿದು ಪೊಗೞಿಸಿದ ಪಾಡಿಸಿದ ಅರಿಯರನು ಆನಲ್ಕೆ ಪಿರಿಯರಂ(ಹಿರಿದಾಗಿ ಹೊಗಳಿಸಿಕೊಂಡವರು ಹಾಡಿಸಿಕೊಂಡವರು ಎದುರಿಸಲು ಅಸಾಧ್ಯರಾದ ಬಲಿಷ್ಠರು) ಪೂಣಿಗರಂ

ಬಿರುದರನು ಅದಟಿನೊಳ್
ಉಬ್ಬರಂ ಉರಿವರಂ
(ಪ್ರತಿಜ್ಞೆಮಾಡಿದವರು
ಬಿರುದುಳ್ಳವರು
ಪರಾಕ್ರಮದಿಂದ ವಿಶೇಷವಾಗಿ
ಉರಿಯುತ್ತಿರುವವರು)
ಆಯ್ದಱಿಸಿ ಕೊಂಡುವು
ಅರಿಗನ ಕಣೆಗಳ್
(ಮೊದಲಾದವರನ್ನೆಲ್ಲ
ಅರ್ಜುನನ ಬಾಣಗಳು
ಬಲಿತೆಗೆದುಕೊಂಡವು.)

ಪದ್ಯ-೧೧೪:ಅರ್ಥ:

ಹಿರಿದಾಗಿ

ಹೊಗಳಿಸಿಕೊಂಡವರು

ಹಾಡಿಸಿಕೊಂಡವರು

ಎದುರಿಸಲು

ಅಸಾಧ್ಯರಾದವರು

ಪ್ರತಿಜ್ಞೆಮಾಡಿದವರು

ಬಿರುದುಳ್ಳವರು

ಪರಾಕ್ರಮದಿಂದ ವಿಶೇಷವಾಗಿ

ಉರಿಯುತ್ತಿರುವವರು

ಮೊದಲಾದವರನ್ನೆಲ್ಲ

ಅರ್ಜುನನ ಬಾಣಗಳು

ಬಲಿತ್ತೆಗೆದುಕೊಂಡವು.

ಕಣೆ ಕೊಳೆ ಪಱಿದರಿ ನರಪರ

ಕಣೆಕಾಲ್ಗಳ್ ಬೆರಲ

ರತ್ನಮುದ್ರಿಕೆಗಳ ಸಂ|

ದಣಿಯ ಬೆಳಗುಗಳಿನೆಸೆದುವು

ರಣರಂಗದೊಳಯ್ದುಪೆಡೆಯ

ನಾಗಂಗಳವೋಲ್|| ೧೧೫ ||

ಪದ್ಯ-೧೧೫:ಪದವಿಭಾಗ-

ಅರ್ಥ:ಕಣೆ ಕೊಳೆ (ಹೀಗೆ

ಅರ್ಜುನನ ಬಾಣಗಳು

ತಾಗಿಕೊಳ್ಳಲು) ಪಱಿದ
ಅರಿನರಪರ ಕಣೆಕಾಲ್ಗಳ್
ಬೆರಲ ರತ್ನಮುದ್ರಿಕೆಗಳ
ಸಂದಣಿಯ (ಕತ್ತರಿಸಿಬಿದ್ದಿದ್ದ
ಶತ್ರುರಾಜರ ಅಡಿಯ
ಕಾಲುಗಳ ಬೆರಳಿನ
ರತ್ನಗದುಂಗುರಗಳ ಬೆಳಗಿನ
ಸಮೂಹದಿಂದ) ಬೆಳಗುಗಳಿಂ
ಎಸೆದುವು (ಬೆಳಗಿನಂತೆ
ಕಾಂತಿಯಿಂದ ಪ್ರಕಾಶಿಸಿದವು;
ಹೇಗೆಂದರೆ) ರಣರಂಗದೊಳ್

ಅಯ್ದುಪೆಡೆಯ ನಾಗಂಗಳವೊಲ್ (ಯುದ್ಧರಂಗದಲ್ಲಿ ಅಯ್ದು ಹೆಡೆಯ ಹಾವುಗಳ ಹಾಗೆ ಪ್ರಕಾಶಿಸಿದುವು. - ಹೆಡೆಯಲ್ಲಿ ರತ್ನವನ್ನು ಹೊಂದಿದ ನಾಗಗಳಂತೆ)

ಪದ್ಯ-೧೧೫:ಅರ್ಥ: ಹೀಗೆ ಅರ್ಜುನನ ಬಾಣಗಳು ತಾಗಿಕೊಳ್ಳಲು ಕತ್ತರಿಸಿಬಿದ್ದಿದ್ದ ಶತ್ರುರಾಜರ ಅಡಿಯ

ಕಾಲುಗಳ ಬೆರಳಿನ
ರತ್ನಗದುಂಗುರಗಳಿಂದ
ಬೆಳಗಿನಂತೆ ಕಾಂತಿಯಿಂದ
ಪ್ರಕಾಶಿಸಿದವು; ಹೇಗೆಂದರೆ
ಸಮೂಹದಿಂದ
ಯುದ್ಧರಂಗದಲ್ಲಿ ಅಯ್ದು
ಹೆಡೆಯ ಹಾವುಗಳ ಹಾಗೆ
ಪ್ರಕಾಶಿಸಿದುವು. ಹೆಡೆಯಲ್ಲಿ
ರತ್ನವನ್ನು ಹೊಂದಿದ
ನಾಗಗಳಂತೆ

ಆಗಳ್ ವಿಜಯನ ವೀರ

ಶ್ರೀಗೆ ಕರಂ ಕಿನಿಸಿ ಕಲಿ

ಸುಶರ್ಮಂ ಮೆಯ್ಯೊಳ್|

ತಾಗೆ ಪಗೆ ನೀಗೆ ತಲೆಯಂ

ಪೋಗೆಚ್ಚನದೊಂದು ಪರಸು

ದಾರುಣಶರದಿಂ|| ೧೧೬ ||

ಪದ್ಯ-೧೧೬:ಪದವಿಭಾಗ-ಅರ್ಥ:ಆಗಳ್ ವಿಜಯನ ವೀರಶ್ರೀಗೆ ಕರಂ ಕಿನಿಸಿ ಕಲಿ ಸುಶರ್ಮಂ ಮೆಯ್ಯೊಳ್ (ಸ್ವತಃ, ತಾನೇ) ತಾಗೆ (ಆಗ ಅರ್ಜುನನ ಶೌರ್ಯದ

ಮಹತ್ವಕ್ಕೆ (ವಿಜಯಲಕ್ಷ್ಮಿಗೆ)
ವಿಶೇಷವಾಗಿ
ಕೋಪಿಸಿಕೊಂಡು ಶೂರನಾದ
ಸುಶರ್ಮನು ತಾನೇ
ಎದುರಿಸಲು,) ಪಗೆ ನೀಗೆ
ತಲೆಯಂ ಪೋಗೆ ಎಚ್ಚನು
ಅದೊಂದು ಪರಸು
ದಾರುಣಶರದಿಂ (ದ್ವೇಷವು
ತೀರುವಂತೆ ಒಂದು
ಕೊಡಲಿಯಂತಿರುವ
ಕ್ರೂರವಾದ ಬಾಣದಿಂದ

ತಲೆಯು ಕತ್ತರಿಸಿ ಹೋಗುವ ಹಾಗೆ ಹೊಡೆದನು.)

ಪದ್ಯ-೧೧೬:ಅರ್ಥ: ಆಗ ಅರ್ಜುನನ ಶೌರ್ಯದ ಮಹತ್ವಕ್ಕೆ (ವಿಜಯಲಕ್ಷ್ಮಿಗೆ) ವಿಶೇಷವಾಗಿ ಕೋಪಿಸಿಕೊಂಡು ಶೂರನಾದ ಸುಶರ್ಮನು ತಾನೇ ಎದುರಿಸಲು (ಮೇಲೆ ಬೀಳಲು) (ಅರ್ಜುನನು) ದ್ವೇಷವು ತೀರುವಂತೆ ಒಂದು

ಕೊಡಲಿಯಂತಿರುವ
ಕ್ರೂರವಾದ ಬಾಣದಿಂದ
ತಲೆಯು ಕತ್ತರಿಸಿ ಹೋಗುವ
ಹಾಗೆ ಹೊಡೆದನು.

ವ|| ಅಂತು ಸಂಸಪ್ತಕಬಲಕ್ಕಾಳ್ದನಾಗಿರ್ದ ಸುಶರ್ಮನಂ ರಾವಣನಂ ರಾಘವಂ ಕೊಲ್ವಂತೆ ವಿದ್ವಿಷ್ಟವಿದ್ರಾವಣಂ ಕೊಂದೊಡುೞಿದ ನಾಯಕರೆಲ್ಲರ್ ತಮ್ಮಾಳ್ದನ

ಸಾವಂ ಕಂಡು ರಿಪುಕುರಂಗ
ರಾವಣಾನನ್ನು ಕಂಠೀರವನಂ
ಮಾರ್ಕೊಂಡು
ಕಾದುತ್ತಿರ್ದರನ್ನೆಗಮಿತ್ತ
ಕರ್ಣನುಮುದೀರ್ಣವೀರ
ರಸಾಸ್ವಾದನಲಂಪಟನಾಗಿ
ನೀಮೆಲ್ಲಮಿಂದೆನ್ನ ಕಾಳೆಗಮಂ
ಸುರಿಗೆಗಾಳೆಗಮಂ ನೋೞ್ಪಂತೆ
ನೋೞ್ಪುದೆಂದು ಕೌರವಬಲದ
ನಾಯಕರೆಲ್ಲರುಮನೊಡ್ಡಿ
ಪಾಂಡವಬಲಕ್ಕೆ ಮಿೞ್ತು

ಬರ್ಪಂತೆ ಬಂದು ತಾಗಿದಾಗಳ್
ತನಗಿದಿರೊಳದಿರದಾಂತ
ಸೋಮಕ ಶ್ರೀಜಯ ಪ್ರಮುಖ
ಕೋಸಲಾಶ
ಸೈನ್ಯಂಗಳನಲ್ಲಕಲ್ಲೋಲಂ
ಮಾಡಿ ಪೆಸರಱಿಕೆಯ
ನಾಯಕರನಱುವತ್ತು
ಸಾಸಿರ್ವರನೊರ್ವನಂ
ಕೊಲ್ವಂತೆ ಕೊಂದು
ನಿಟ್ಟಾಲಿಗೊಂಡು ಯುಷ್ಠಿರನಂ
ಮುಟ್ಟೆವಂದಾಗಳ್-

ವಚನ:ಪದವಿಭಾಗ-ಅರ್ಥ:ಅಂತು ಸಂಸಪ್ತಕಬಲಕ್ಕಾಳ್ದನಾಗಿರ್ದ ಸುಶರ್ಮನಂ ರಾವಣನಂ ರಾಘವಂ ಕೊಲ್ವಂತೆ ವಿದ್ವಿಷ್ಟವಿದ್ರಾವಣಂ ಕೊಂದೊಡೆ (ಹಾಗೆ ಸಂಸಪ್ತಕರ ಸೈನ್ಯಕ್ಕೆ ಯಜಮಾನನಾಗಿದ್ದ (ಒಡೆಯನಾಗಿದ್ದ) ಸುಶರ್ಮನನ್ನು, ರಾಮನು

ಕೊಂದಹಾಗೆ
ವಿದ್ವಿಷ್ಟವಿದ್ರಾವಣನಾದ
ಅರ್ಜುನನು ಕೊಲ್ಲಲು)
ಉೞಿದ ನಾಯಕರೆಲ್ಲರ್
ತಮ್ಮಾಳ್ದನ ಸಾವಂ ಕಂಡು
(ಉಳಿದ ನಾಯಕರೆಲ್ಲ ತಮ್ಮ
ಯಜಮಾನನ ಸಾವನ್ನು
ನೋಡಿ) ರಿಪುಕುರಂಗ
ರಾವಣನನ್ನು?? ಕಂಠೀರವನಂ
ಮಾರ್ಕೊಂಡು ಕಾದುತ್ತಿರ್ದರು
(ಶತ್ರುಗಳೆಂಬ ಜಿಂಕೆಗಳಿಗೆ

ಸಿಂಹದ ಹಾಗಿರುವ
ಅರ್ಜುನನನ್ನು ಎದುರಿಸಿ
ಯುದ್ಧಮಾಡುತ್ತಿದ್ದರು.)
ಅನ್ನೆಗಮಿತ್ತ ಕರ್ಣನುಂ
ಉದೀರ್ಣವೀರ ರಸಾಸ್ವಾದನ
ಲಂಪಟನಾಗಿ ನೀಮೆಲ್ಲಂ
ಇಂದೆಲು ಎನ್ನ ಕಾಳೆಗಮಂ
(ಅಷ್ಟರಲ್ಲಿ ಈ ಕಡೆ ಕರ್ಣನು
ಹೆಚ್ಚುತ್ತಿರುವ ವೀರರಸವನ್ನು
ರುಚಿನೋಡುವುದರಲ್ಲಿ
ಆಸಕ್ತನರಾಗಿ ನೀವೆಲ್ಲರೂ ಈ

ದಿವಸ ನನ್ನ ಯುದ್ಧವನ್ನು)
ಸುರಿಗೆಗಾಳೆಗಮಂ ನೋೞ್ಪಂತೆ
(ಸಣ್ಣ ಕತ್ತಿಯ
ದ್ವಂದ್ವಯುದ್ಧವನ್ನು ನೋಡುವ
ಹಾಗೆ) ನೋೞ್ಪುದೆಂದು
(ನೀವೆಲ್ಲರೂ ಈ ದಿವಸ ನನ್ನ
ಯುದ್ಧವನ್ನು ಸಣ್ಣ ಕತ್ತಿಯ
ದ್ವಂದ್ವಯುದ್ಧವನ್ನು ನೋಡುವ
ಹಾಗೆ ನೋಡುವುದು)
ಕೌರವಬಲದ
ನಾಯಕರೆಲ್ಲರುಮನು ಒಡ್ಡಿ

(ಕೌರವಸೈನ್ಯದ
ನಾಯಕರೆಲ್ಲರನ್ನೂ
ಒಟ್ಟುಗೂಡಿಸಿ ಎದುರಿಸಿ,)
ಪಾಂಡವಬಲಕ್ಕೆ ಮಿೞ್ತು
ಬರ್ಪಂತೆ ಬಂದು ತಾಗಿದಾಗಳ್
(ಪಾಂಡವ ಸೈನ್ಯದ ಮೃತ್ಯು
ಬರುವ ಹಾಗೆ ಬಂದು
ಮೇಲೆಬಿದ್ದಾಗ-) ತನಗೆ
ಇದಿರೊಳ್ ಇದಿರದಾಂತ
ಸೋಮಕ ಶ್ರೀಜಯ ಪ್ರಮುಖ
ಕೋಸಲಾಶ ಸೈನ್ಯಂಗಳನು

ಅಲ್ಲಕಲ್ಲೋಲಂ ಮಾಡಿ (ತನ್ನ ಎದುರಿಗೆ ಭಯಪಡದೆ ಪ್ರತಿಭಟಿಸಿದ ಸೋಮಕ ಶ್ರೀಜಯರೇ ಮುಖ್ಯರಾದ ಕೋಸಲದೇಶದ ರಾಜರುಗಳ ಸೈನ್ಯವನ್ನೆಲ್ಲ ಚದುರಿಸಿದನು) ಪೆಸರಱಿಕೆಯ ನಾಯಕರನು ಅಱುವತ್ತು ಸಾಸಿರ್ವರನು ಒರ್ವನಂ ಕೊಲ್ವಂತೆ ಕೊಂದು (ಹೆಸರಿನಿಂದಲೇ ಪ್ರಸಿದ್ಧರಾದ ಅರವತ್ತುಸಾವಿರ

ನಾಯಕರನ್ನು ಒಬ್ಬನನ್ನು ಕೊಲ್ಲುವ ಹಾಗೆ ಸುಲಭವಾಗಿ ಕೊಂದು) ನಿಟ್ಟಾಲಿಗೊಂಡು ಯುಧಿಷ್ಠಿರನಂ ಮುಟ್ಟೆವಂದಾಗಳ್ (ದೀರ್ಘವಾಗಿ ದಿಟ್ಟಿಸಿನೋಡಿ ಧರ್ಮರಾಯನನ್ನು ಮುಟ್ಟುವಷ್ಟು ಸಮೀಪಕ್ಕೆ ಬಂದಾಗ-.)-

ವಚನ:ಅರ್ಥ: ಹಾಗೆ ಸಂಸಪ್ತಕರ ಸೈನ್ಯಕ್ಕೆ

ಯಜಮಾನನಾಗಿದ್ದ
(ಒಡೆಯನಾಗಿದ್ದ)
ಸುಶರ್ಮನನ್ನು, ರಾಮನು
ಕೊಂದಹಾಗೆ
ವಿದ್ವಿಷ್ಟವಿದ್ರಾವಣನಾದ
ಅರ್ಜುನನು ಕೊಲ್ಲಲು ಉಳಿದ
ನಾಯಕರೆಲ್ಲ ತಮ್ಮ
ಯಜಮಾನನ ಸಾವನ್ನು
ನೋಡಿ ಶತ್ರುಗಳೆಂಬ
ಜಿಂಕೆಗಳಿಗೆ ಸಿಂಹದ
ಹಾಗಿರುವ ಅರ್ಜುನನನ್ನು

ಎದುರಿಸಿ
ಯುದ್ಧಮಾಡುತ್ತಿದ್ದರು.
ಅಷ್ಟರಲ್ಲಿ ಈ ಕಡೆ ಕರ್ಣನು
ಹೆಚ್ಚುತ್ತಿರುವ ವೀರರಸವನ್ನು
ರುಚಿನೋಡುವುದರಲ್ಲಿ
ಆಸಕ್ತರಾಗಿ, ನೀವೆಲ್ಲರೂ ಈ
ದಿವಸ ನನ್ನ ಯುದ್ಧವನ್ನು ಸಣ್ಣ
ಕತ್ತಿಯ ದ್ವಂದ್ವಯುದ್ಧವನ್ನು
ನೋಡುವ ಹಾಗೆ
ನೋಡುವುದು ಎಂದು
ಕೌರವಸೈನ್ಯದ

ನಾಯಕರೆಲ್ಲರನ್ನೂ
ಒಟ್ಟುಗೂಡಿಸಿ ಪಾಂಡವ
ಸೈನ್ಯದ ಮೃತ್ಯು ಬರುವ ಹಾಗೆ
ಬಂದು ತಾಗಿದನು. ತನ್ನ
ಎದುರಿಗೆ ಭಯಪಡದೆ
ಪ್ರತಿಭಟಿಸಿದ ಸೋಮಕ
ಶ್ರೀಜಯರೇ ಮುಖ್ಯರಾದ
ಕೋಸಲದೇಶದ ರಾಜರುಗಳ
ಸೈನ್ಯವನ್ನೆಲ್ಲ ಚದುರಿಸಿದನು.
ಹೆಸರಿನಿಂದಲೇ ಪ್ರಸಿದ್ಧರಾದ
ಅರವತ್ತುಸಾವಿರ

ನಾಯಕರನ್ನು ಒಬ್ಬನನ್ನು ಕೊಲ್ಲುವ ಹಾಗೆ ಸುಲಭವಾಗಿ ಕೊಂದು, ದೀರ್ಘವಾಗಿ ದಿಟ್ಟೈಸಿನೋಡಿ ಧರ್ಮರಾಯನನ್ನು ಮುಟ್ಟುವಷ್ಟು ಸಮೀಪಕ್ಕೆ ಬಂದಾಗ-.

ಧರ್ಮರಾಯನಿಗೆ ಕರ್ಣನ ಬಾಣದಿಂದ ಮೂರ್ಛೆ

ಚಂ|| ಯಮಸುತನಣ್ಮಿ
ಸತ್ತೆಯೆನುತುಂ
ನಿಶಿತಾಸ್ತ್ರಮನುರ್ಚಿಕೊಂಡು ವ
ಕ್ಷಮನಿರದೆಚ್ಚಡೆಚ್ಚ ಶರಮಂ
ಕಲಿ ಚಕ್ಕನೆ ಕಿೞ್ತುರಪ್ರದೇ||
ಶಮನಿಸೆ ನೆತ್ತರೊಕ್ಕು ಪತಿ
ಮುಚ್ಚೆಯೊಳಿಚ್ಚೆಯೆಗೆಟ್ಟು
ಜೋಲ್ದೊಡಾ

ದಮೆ ನಸುನೊಂದು ನಂದಿಸದೆ ತನ್ನನೆ ನಿಂದಿಸಿದಂ ದಿನೇಶಜಂ|| ೧೧೭ ||

ಪದ್ಯ-೧೧೭:ಪದವಿಭಾಗ-ಅರ್ಥ:ಯಮಸುತನು ಅಣ್ಮಿ (ಧರ್ಮರಾಜನು ಪೌರರುಷದಿಂದ) ಸತ್ತೆಯೆನುತುಂ ನಿಶಿತಾಸ್ತ್ರಮನು ಉರ್ಚಿಕೊಂಡು (ನೀನು ಸತ್ತೆ ಎನ್ನುತ್ತ ಹರಿತವಾದ

ಬಾಣವನ್ನು ಸೆಳೆದುಕೊಂಡು) ವಕ್ಷಮನು (ವಕ್ಷ- ಎದೆ) ಇರದೆ ಎಚ್ಚಡೆ (ನೀನು ಸತ್ತೆ ಎನ್ನುತ್ತ ಹರಿತವಾದ ಬಾಣವನ್ನು ಸೆಳೆದುಕೊಂಡು ತಡೆಯದೆ ಎದೆಗೆ ಹೊಡೆದನು.) ಎಚ್ಚ ಶರಮಂ ಕಲಿ ಚಕ್ಕನೆ ಕಿಱ್ತು ಉರಪ್ರದೇಶಮನು ಇಸೆ (ಹೊಡೆದ ಆ ಬಾಣವನ್ನು ಶೂರನಾದ ಕರ್ಣನು ಚಕ್ಕನೆ ಕಿತ್ತು, ಧರ್ಮರಾಜನ ಹೃದಯ

ಪ್ರವೇಶವನ್ನು ಹೊಡೆಯಲಾಗಿ)
ನೆತ್ತರು ಉಕ್ಕು ಪತಿ (ರಕ್ತವು
ಸುರಿದು ಧರ್ಮರಾಜನು)
ಮುಚ್ಚೆಯೊಳು ಇಚ್ಚೆಯೆಗೆಟ್ಟು
(ಮೂರ್ಛೆಯಲ್ಲಿ- ಮೈಮರೆತು
ಎಚ್ಚರತಪ್ಪಿ) ಜೋಲ್ದೊಡೆ
(ಜೋತುಬೀಳಲು) ಆದಮೆ
(ಅದರಿಂದ?) ನಸುನೊಂದು
ನಂದಿಸದೆ (ಕೊಲ್ಲದೆ) ತನ್ನನೆ
ನಿಂದಿಸಿದಂ ದಿನೇಶಜಂ-
ಕರ್ಣನು, (ಕರ್ಣನು ಸ್ವಲ್ಪ

ವ್ಯಥೆಪಟ್ಟು ಪೂರ್ಣವಾಗಿ ಕೊಲ್ಲದೆ ತನ್ನನ್ನೇ ತಾನು ನಿಂದಿಸಿಕೊಂಡನು)

ಪದ್ಯ-೧೧೭:ಅರ್ಥ:

ಕರ್ಣನನ್ನು ಕುರಿತು, ಧರ್ಮರಾಜನು ಪೌರರುಷದಿಂದ ನೀನು ಸತ್ತೆ ಎನ್ನುತ್ತ ಹರಿತವಾದ ಬಾಣವನ್ನು ಸೆಳೆದುಕೊಂಡು ತಡೆಯದೆ ಎದೆಗೆ ಹೊಡೆದನು. ಹೊಡೆದ ಆ ಬಾಣವನ್ನು

ಶೂರನಾದ ಕರ್ಣನು ಚಕ್ಕನೆ
ಕಿತ್ತು ಧರ್ಮರಾಜನ ಹೃದಯ
ಪ್ರವೇಶವನ್ನು ಹೊಡೆಯಲಾಗಿ
ರಕ್ತವು ಸುರಿದು
ಧರ್ಮರಾಜನು
ಮೂರ್ಛೆಯಲ್ಲಿ ಮರೆತು
ಎಚ್ಚರತಪ್ಪಿ ಜೋತುಬೀಳಲು,
ಕರ್ಣನು ಸ್ವಲ್ಪ ವ್ಯಥೆಪಟ್ಟು
ಪೂರ್ಣವಾಗಿ ಕೊಲ್ಲದೆ ತನ್ನನ್ನೇ
ತಾನು ನಿಂದಿಸಿಕೊಂಡನು-

ವ|| ಅಂತು ಕೊಂತಿಗೆ
ನಾಲ್ವರೊಳಾರುಮಂ
ಕೊಲ್ಲೆನೆಂದು ನುಡಿದ ತನ್ನ
ತನ್ನಿಗೆ ಬನ್ನಂ ಬಂದಪುದೆಂದು
ಕರ್ಣಂ
ಚಿಂತಿಸುತ್ತಿರ್ದನಿತ್ತಲರಸನಂ
ಪೆಱಗಿಕ್ಕಿ
ನಕುಳಸಹದೇವರಿರ್ವರುಂ
ಬಂದಾಂತೊಡಿವರನೇಗೆಯ್ವು
ದೆಂದು ಕರುಣಿಸಿ ಶಲ್ಯನ
ಮನಮಂ ನೋಡಲೆಂದು

ಬೆಸಗೊಂಡೊಡೆ ತನ್ನಳಿಯಂದಿರ ಸಾವಿಂಗಾಱದೆ ಶಲ್ಯನಿಂತೆಂದಂ-

ವಚನ:ಪದವಿಭಾಗ-ಅರ್ಥ: ಅಂತು ಕೊಂತಿಗೆ ನಾಲ್ವರೊಳು ಆರುಮಂ ಕೊಲ್ಲೆನೆಂದು ನುಡಿದ (ಕುಂತೀದೇವಿಗೆ ನಾಲ್ಕು ಜನರಲ್ಲಿ ಯಾರನ್ನೂ ಕೊಲ್ಲುವುದಿಲ್ಲವೆಂದು ಮಾತು ಕೊಟ್ಟಿದ್ದ) ತನ್ನ ತನ್ನಿಗೆ ಬನ್ನಂ

ಬಂದಪುದೆಂದು (ತನ್ನ
ಸತ್ಯವಾಕ್ಕಿಗೆ
ಭಂಗವುಂಟಾಗುತ್ತೆಂದು)
ಕರ್ಣಂ ಚಿಂತಿಸುತ್ತಿರ್ದನು
ಇತ್ತಲು ಅರಸನಂ ಪೆಱಗಿಕ್ಕಿ
ನಕುಳಸಹದೇವರು ಇರ್ವರುಂ
ಬಂದು ಆಂತೊಡೆ (ಈ ಕಡೆ
ಧರ್ಮರಾಜನನ್ನು ಹಿಂದಕ್ಕೆ
ಹಾಕಿ
ನಕುಲಸಹದೇವರಿಬ್ಬರೂ
ಬಂದು ಎದುರಿಸಲು)

ಇವರನು ಏಗೆಯ್ವುದೆಂದು
ಕರುಣಿಸಿ (ಇವರನ್ನು
ಏನುಮಾಡುವುದು ಎಂದು
ದಯೆತೋರಿ) ಶಲ್ಯನ
ಮನಮಂ ನೋಡಲೆಂದು
(ಶಲ್ಯನ ಮನಸ್ಸನ್ನು
ಪರೀಕ್ಷಿಸೋಣವೆಂದು
ಅವನನ್ನು ಪ್ರಶ್ನೆಮಾಡಲು)
ಬೆಸಗೊಂಡೊಡೆ
(ಏನುಮಾಡುವುದು ಎಂದು
ಶಲ್ಯನನ್ನು ಪ್ರಶ್ನೆಮಾಡಲು)

ತನ್ನಳಿಯಂದಿರ ಸಾವಿಂಗೆ ಆಱದೆ ಶಲ್ಯನು ಇಂತೆಂದಂ (ಶಲ್ಯನು ತನ್ನ ಅಳಿಯಂದಿರಾದ ನಕುಲ ಸಹದೇವರ ಸಾವಿಗೆ ಸೈರಿಸಲಾರದೆ, ಹೀಗೆಂದನು)-(ನಕುಲ ಸಹದೇವರು ಶಲ್ಯನ ತಂಗಿ ಮಾದ್ರಿಯ ಮಕ್ಕಳು.)
ವಚನ:ಅರ್ಥ:ಕುಂತೀದೇವಿಗೆ ನಾಲ್ಕು ಜನರಲ್ಲಿ ಯಾರನ್ನೂ ಕೊಲ್ಲುವುದಿಲ್ಲವೆಂದು ಮಾತು

ಕೊಟ್ಟಿದ್ದ ತನ್ನ ಸತ್ಯವಾಕ್ಕಿಗೆ ಭಂಗವುಂಟಾಗುತ್ತೆಂದು ಕರ್ಣನು ಯೋಚಿಸುತ್ತಿದ್ದನು. ಈ ಕಡೆ ಧರ್ಮರಾಜನನ್ನು ಹಿಂದಕ್ಕೆ ಹಾಕಿ ನಕುಲಸಹದೇವರಿಬ್ಬರೂ ಬಂದು ಎದುರಿಸಲು ಇವರನ್ನು ಏನುಮಾಡುವುದು (ತನಗೆ ಮಾನರಲ್ಲದ ಇವರೊಡನೆ ಏನು ಯುದ್ಧಮಾಡುವುದು) ಎಂದು ದಯೆತೋರಿ ಶಲ್ಯನ

ಮನಸ್ಸನ್ನು
ಪರೀಕ್ಷಿಸೋಣವೆಂದು
ಪ್ರಶ್ನೆಮಾಡಲು, ಶಲ್ಯನು
ತನ್ನಳಿಯಂದಿರಾದ
ನಕುಲಸಹದೇವರ ಸಾವಿಗೆ
ಸೈರಿಸಲಾರದೆ ಹೀಗೆಂದನು-

ಚಂ|| ಎರೆದನ
ಪೆಂಪುಮಾಂತಧಿಕನಪ್ಪನ
ಪೆಂಪುಮನೀವ ಕಾವ ನಿ
ನ್ನೆರಡುಗುಣಂಗಳುಂ
ಬಯಸುತಿರ್ಪುವು

ನಿನ್ನೊಳಿವಂದಿರೇತರೊಳೊ|
ದೊರೆ ದೊರೆವೆತ್ತ ಕಾಳೆಗದ
ಗೆಲ್ಲದ ಸೋಲದ ಮಾತು
ನಿನ್ನೊಳಂ
ನರನೊಳಮಿರ್ದುದುಯ್ಗೆ
ಸಿಸುಗಳ್ ಸಿಬಿರಕ್ಕೆ ಬೞಿಲ್ದ
ಭೂಪನಂ|| ೧೧೮ ||

ಪದ್ಯ-೧೧೮:ಪದವಿಭಾಗ-ಅರ್ಥ:ಎರೆದನ ಪೆಂಪುಂ (ಎರೆ -ಕೊಡು;ದಾನಮಾಡುವ ಹಿರಿಮೆ)ಆಂತ ಅಧಿಕನ

ಅಪ್ಪನ ಪೆಂಪುಮಂ (ಎದುರಿಸಿದವನನ್ನು ಮೀರುವ ಕೀರ್ತಿ,) ಈವ ಕಾವ ನಿನ್ನ ಎರಡುಗುಣಂಗಳುಂ ಬಯಸುತಿರ್ಪುವು (ಕೊಡುವ, ರಕ್ಷಿಸುವ ಈ ಎರಡು ಗುಣಗಳು ಹಾಗೆಯೇ ಇರಲು ಬಯಸುತ್ತಿವೆ). ನಿನ್ನೊಳು ಇವಂದಿರು ಏತರೊಳೊ ದೊರೆ (ನಿನ್ನಲ್ಲಿ ಈ ನಕುಲಸಹದೇವರು

ಯಾವಗುಣಗಳಲ್ಲಿ ಸಮಾನರು?) ದೊರೆವೆತ್ತ ಕಾಳೆಗದ ಗೆಲ್ಲದ ಸೋಲದ ಮಾತು (ಯುದ್ಧದ ಜಯಾಪಜಯಗಳ ಮಾತು ಅಥವಾ ಹಿರಿಮೆ,) ನಿನ್ನೊಳಂ ನರನೊಳಂ ಇರ್ದುದು (ಸಮಾನತೆ ನಿನ್ನಲ್ಲಿ ಮತ್ತು ಅರ್ಜುನನಲ್ಲಿ ಇದೆ.) ಉಯ್ಗೆ ಸಿಸುಗಳ್ ಸಿಬಿರಕ್ಕೆ ಬಟಿಲ್ದ ಭೂಪನಂ (ಈ ಶಿಶುಗಳು

ಬಳಲಿರುವ ಧರ್ಮರಾಯನನ್ನು ಬೀಡಿಗೆ ಕರೆದುಕೊಂಡು ಹೋಗಲಿ.)

ಪದ್ಯ-೧೧೮:ಅರ್ಥ: ನಿನ್ನ ದಾನಮಾಡುವ ಹಿರಿಮೆ, ಎದುರಿಸಿದವನನ್ನು ಮೀರುವ ಕೀರ್ತಿ, ಕೊಡುವ, ರಕ್ಷಿಸುವ ಈ ಎರಡು ಗುಣಗಳು ಹಾಗೆಯೇ ಇರಲು ಬಯಸುತ್ತಿವೆ. ನಿನ್ನಲ್ಲಿ ಈ ನಕುಲಸಹದೇವರು ಯಾವಗುಣಗಳಲ್ಲಿ

ಸಮಾನರು. ಯುದ್ಧದ ಜಯಾಪಜಯಗಳ ಮಾತು ಅಥವಾ ಹಿರಿಮೆ, ಸಮಾನತೆ ನಿನ್ನಲ್ಲಿ ಮತ್ತು ಅರ್ಜುನನಲ್ಲಿ ಇದೆ. ಈ ಶಿಶುಗಳು ಬಳಲಿರುವ ಧರ್ಮರಾಯನನ್ನು ಬೀಡಿಗೆ ಕರೆದುಕೊಂಡು ಹೋಗಲಿ.

ವ|| ಅದಲ್ಲದೆಯುಮತ್ತ ದುರ್ಯೋಧನಂಗಂ ಭೀಮಂಗಮನುವರಂ

ಪೊಣರ್ದಿರ್ದುರ್ದದರಸನಂ

ಬೇಗಂ ಪೋಗಿ

ಕೊಯ್ಕೊಳ್ವಮೆಂದು ಬರೆವರೆ

ಯುಧಿಷ್ಠಿರಮಟಿಿಯೆನೊಂದ

ನೋವಂ ಕಂಡು

ಪಾಂಡವಬಲದ

ನಾಯಕರುತ್ತಾಯಕರಾಗಿ

ತಂತಮ್ಮ

ಚತುರ್ವಲಂಗಳನೊಂದು

ಮಾಡಿಕೊಂಡು ಕಾಲಾಗ್ನಿಯಂ

ಕಿಡಿ ಸುತ್ತುವಂತೆ ಕರ್ಣನಂ

ಸುತ್ತಿ ಮುತ್ತಿಕೊಂಡು ಕಣಯ ಕಂಪಣ ಮುಸಲ ಮುಸುಂಡಿ ಭಿಂಡಿವಾಳ ತೋಮರ ಮುದ್ಗರ ಮಹಾ ವಿವಿಧಾಯುಧಂ ಗಳೊಳಿಟ್ಟುಮೆಚ್ಚುಮಿಱಿದು ಮಗುರ್ವುಮದ್ಭುತಮುಮಾಗೆ ಕಾದುವಾಗಳ್-

ವಚನ:ಪದವಿಭಾಗ-ಅರ್ಥ:

ಅದಲ್ಲದೆಯುಂ ಅತ್ತ ದುರ್ಯೋಧನಂಗಂ

ಭೀಮಂಗಂ ಅನುವರಂ
ಪೊಣರ್ದುದು ಇರ್ದುದು
(ಅದಲ್ಲದೆಯೂ ಆ ಕಡೆ
ದುರ್ಯೋಧನನಿಗೂ
ಭೀಮನಿಗೂ ಯುದ್ಧರು
ಹೆಣೆದುಕೊಂಡಿದೆ.) ಅರಸನಂ
ಬೇಗಂ ಪೋಗಿ
ಕೊಯ್ಕೊಳ್ವಮ್ ಎಂದು
(ಬೇಗಹೋಗಿ ರಾಜನನ್ನು
ರಕ್ಷಿಸೋಣ ಎಂದು) ಬರೆವರೆ
ಯುಧಿಷ್ಠಿರಮ್

ಅಱಿಯೆನೊಂದ ನೋವಂ
ಕಂಡು (ಧರ್ಮರಾಜನು
ಸಾಯುವಷ್ಟು ಬಲವಾಗಿ
ನೊಂದನೋವನ್ನು ನೋಡಿ,)
ಪಾಂಡವಬಲದ ನಾಯಕರು
ಉತ್ತಾಯಕರಾಗಿ
(ಪಾಂಡವಬಲದ ನಾಯಕರು
ನೋಡಿ ಪ್ರತಿಭಟಿಸಿದವರಾಗಿ)
ತಂತಮ್ಮ ಚತುರ್ವಲಂಗಳನು
ಒಂದು ಮಾಡಿಕೊಂಡು
(ತಮ್ಮತಮ್ಮ ಚತುರಂಗ

ಬಲವನ್ನು ಒಟ್ಟಾಗಿ
ಸೇರಿಸಿಕೊಂಡು)
ಕಾಲಾಗ್ನಿಯಂ ಕಿಡಿ ಸುತ್ತುವಂತೆ
(ಕಾಲಾಗ್ನಿಯನ್ನು ಬೆಂಕಿಯ
ಕಿಡಿಗಳು ಬಳಸಿ ಕೊಳ್ಳುವ
ಹಾಗೆ) ಕರ್ಣನಂ ಸುತ್ತಿ
ಮುತ್ತಿಕೊಂಡು (ಕರ್ಣನನ್ನು
ಮುತ್ತಿ ಆವರಿಸಿಕೊಂಡರು.)
ಕಣಯ ಕಂಪಣ ಮುಸಲ
ಮುಸುಂಡಿ ಭಿಂಡಿವಾಳ
ತೋಮರ ಮುದ್ಗರ ಮಹಾ

ವಿವಿಧ ಆಯುಧಂಗಳೊಳ್ (ಎಂಬ ದೊಡ್ಡದಾದ ಬೇರೆಬೇರೆಯ ನಾನಾವಿಧವಾದ ಆಯುಧ ವಿಶೇಷಗಳಿಂದ) ಇಟ್ಟುಂ ಎಚ್ಚುಂ ಇಱಿದುಂ (ಎಸೆದೂ ಹೊಡೆದೂ ಕತ್ತರಿಸಿಯೂ) ಅಗುರ್ವುಂ ಅದ್ಭುತಮುಂ ಆಗೆ ಕಾದುವಾಗಳ್ (ಭಯಂಕರವೂ

ಆಶ್ಚರ್ಯಕರವೂ ಆಗುವ ಹಾಗೆ ಯುದ್ಧಮಾಡುವಾಗ-)- **ವಚನ:ಅರ್ಥ**:ಅದಲ್ಲದೆಯೂ ಆ ಕಡೆ ದುರ್ಯೋಧನನಿಗೂ ಭೀಮನಿಗೂ ಯುದ್ಧರು ಹೆಣೆದುಕೊಂಡಿದೆ. ಬೇಗಹೋಗಿ ರಾಜನನ್ನು ರಕ್ಷಿಸೋಣ ಎಂದು ತೇರನ್ನು ಬೇರೆಕಡೆಗೆ ತಿರುಗಿಸಿದನು. ಧರ್ಮರಾಜನು ಸಾಯುವಷ್ಟು ಬಲವಾಗಿ ನೊಂದನೋವನ್ನು

ನೋಡಿ, ಪಾಂಡವಬಲದ
ನಾಯಕರು ನೋಡಿ
ಪ್ರತಿಭಟಿಸಿದವರಾಗಿ
ತಮ್ಮತಮ್ಮ ಚತುರಂಗ
ಬಲವನ್ನು ಒಟ್ಟಾಗಿ
ಸೇರಿಸಿಕೊಂಡು,
ಕಾಲಾಗ್ನಿಯನ್ನು ಬೆಂಕಿಯ
ಕಿಡಿಗಳು ಬಳಸಿ ಕೊಳ್ಳುವ
ಹಾಗೆ ಕರ್ಣನನ್ನು ಮುತ್ತಿ
ಆವರಿಸಿಕೊಂಡರು. ಕಣಯ,
ಕಂಪಣ, ಮುಸಲ, ಮುಸುಂಡಿ,

ಭಿಂಡಿವಾಳ, ತೋಮರ, ಮುದ್ಗರ ಎಂಬ ದೊಡ್ಡದಾದ ಬೇರೆಬೇರೆಯ ನಾನಾವಿಧವಾದ ಆಯುಧ ವಿಶೇಷಗಳಿಂದ ಎಸೆದೂ ಹೊಡೆದೂ ಕತ್ತರಿಸಿಯೂ ಭಯಂಕರವೂ ಆಶ್ಚರ್ಯಕರವೂ ಆಗುವ ಹಾಗೆ ಯುದ್ಧಮಾಡಿದರು, ಆಗ-

ಚಂ|| ಎನಗಮರಾತಿ
ಸಾಧನಮಿದಿರ್ಚುಗುಮಳ್ಕದಿದಿ
ರ್ಚಿ ಬಾಱಿಗಿಮಿ
ನ್ನೆನೆ ಪೆಱತುಂಟೆ
ದೋಷಮೆನಗಂತದೆ
ದೋಷಮದಾಗಲಾಗದೆಂ|
ದಿನ ತನಯಂ ತಗುಳ್ದಿಸೆ ನಿಶಾತ
ಶರಾಳಿಗಳೆಯ್ದೆ ಚಕ್ಕು ಚ
ಕ್ಕನೆ ಕೊಳೆ ಮೊಕ್ಕುಮೊಕ್ಕೆನೆ
ಶಿರಂಗಳುರುಳ್ದುವು
ವೈರಿಭೂಪರಾ| ೧೧೯ ||

ಪದ್ಯ-00:ಪದವಿಭಾಗ-ಅರ್ಥ:ಎನಗಂ ಅರಾತಿ ಸಾಧನಂ ಇದಿರ್ಚುಗುಂ (ನನ್ನನ್ನು ಶತ್ರುಸೈನ್ಯವು ಎದುರಿಸುತ್ತದೆ’) (ಮತ್ತು) ಅಳ್ಕದೆ ಇದಿರ್ಚಿ ಬಾೞ್ಗಂ ಇನ್ನು ಎನೆ (ಹೆದರದೆ ಪ್ರತಿಭಟಿಸಿ ಇನ್ನೂ ಬದುಕಿದೆ ಎಂದರೆ) ಪೆಱತುಂಟೆ ದೋಷಮು ಎನಗೆ (ನನಗೆ ಇದಕ್ಕಿಂತ ಬೇರೆ

ಕಳಂಕವುಂಟೇ?) ಅಂತು ಅದೆ
ದೋಷಮ್ ಅದಾಗಲಾಗದು
ಎಂದು ಇನ ತನಯಂ (ತನಗೆ
ಆ ದೋಷವು ಆಗಬಾರದು'
ಎಂದು ಸೂರ್ಯಪುತ್ರನಾದ
ಕರ್ಣನು) ತಗುಳ್ದು ಇಸೆ ನಿಶಾತ
ಶರಾಳಿಗಳು ಎಯ್ದೆ
(ರಭಸದಿಂದ ಹೊಡೆಯಲು
ಹರಿತವಾದ ಬಾಣಗಳು
ಪೂರ್ಣವಾಗಿ) ಚಕ್ಕು ಚಕ್ಕನೆ
ಕೊಳೆ (ಚಕ್ ಚಕ್ ಎಂದು

ಕತ್ತರಿಸಲು- ತಲೆಯನ್ನು ಕೊಳ್ಳಲು) ಮೊಕ್ಕುಮೊಕ್ಕನೆ ಶಿರಂಗಳು ಉರುಳ್ದುವು ವೈರಿಭೂಪರಾ (ಶತ್ರುರಾಜರ ತಲೆಗಳು ಮೊಕ್‌ಮೊಕ್ ಎಂದು ಉರುಳಿದುವು.)

ಪದ್ಯ-00:ಅರ್ಥ:(ಕರ್ಣನು ಭಾವಿಸಿದನು,)‘ನನ್ನನ್ನು ಶತ್ರುಸೈನ್ಯವು ಎದುರಿಸುತ್ತದೆ’ (ಮತ್ತು) ಹೆದರದೆ ಪ್ರತಿಭಟಿಸಿ ಇನ್ನೂ ಬದುಕಿದೆ ಎಂದರೆ

ನನಗೆ ಇದಕ್ಕಿಂತ ಬೇರೆ ಕಳಂಕವುಂಟೇ? ತನಗೆ ಆ ದೋಷವು ಆಗಬಾರದು' ಎಂದು ಸೂರ್ಯಪುತ್ರನಾದ ಕರ್ಣನು ರಭಸದಿಂದ ಹೊಡೆಯಲು ಹರಿತವಾದ ಬಾಣಗಳು ಪೂರ್ಣವಾಗಿ ಚಕ್ ಚಕ್ ಎಂದು ಕತ್ತರಿಸಲು ಶತ್ರುರಾಜರ ತಲೆಗಳು ಮೊಕ್‌ಮೊಕ್ ಎಂದು ಉರುಳಿದುವು.

ವ|| ಆ ಪ್ರಸ್ತಾವದೊಳ್-

ವಚನ:ಅರ್ಥ:ವ|| ಆ
ಸಮಯದಲ್ಲಿ-

ಉ|| ಮಂತ್ರ ಪದಪ್ರವೀಣ
ಬಹು ಸಾಧನ ಹೂಂಕರಣಾದಿ
ಮಂತ್ರಮಾ
ಮಂತ್ರಿತ ಡಾಕಿನೀ ದಶನ
ಘಟ್ಟನ ಜಾತ ವಿಭೀಷಣಾಂ
ಮದೇ|
ಭ್ರಾಂತ್ರ ನಿಯಂತ್ರಿತಾಶ್ವ ಶವ
ಮಾಂಸ ರಸಾಸವ

ಮತ್ತಯೋಗಿನೀ ತಂತ್ರಮಿದೇನಗುರ್ವರ್ನೊಳ ಕೊಂಡುದೊ ಕರ್ಣನ ಗೆಲ್ದ ಕೊಳ್ಗುಳಂ|| ೧೨೦ ||

ಪದ್ಯ-೦೦:ಪದವಿಭಾಗ-ಅರ್ಥ:ಮಂತ್ರ ಪದ ಪ್ರವೀಣ ಬಹು ಸಾಧನ ಹೂಂ ಕರಣ ಆದಿ ಮಂತ್ರಂ (ರಣಮಂತ್ರ ಪಠನದಲ್ಲಿ ಪ್ರವೀಣರಾದ ಅನೇಕ ಸೈನಿಕರ ಹುಂಕಾರವೇ ಮೊದಲಾದ

ಮಂತ್ರವನ್ನುಳ್ಳುದೂ)
ಆಮಂತ್ರಿತ ಡಾಕಿನೀ ದಶನ
ಘಟ್ಟನ ಜಾತ
ವಿಭೀಷಣಂ(ಆಹ್ವಾನಿತರಾದ
ಪಿಶಾಚಿಗಳ
ಹಲ್ಲುಕಡಿಯುವುದರಿಂದ
ಹುಟ್ಟಿ ಭಯಂಕಾರಕವೂ ಆದ
ಶಬ್ದವನ್ನುಳ್ಳುದೂ) ಮದೇಭ
ಅಂತ್ರ ನಿಯಂತ್ರಿತತ ಅಶ್ವ
(ಮದ್ದಾನೆಯ ಕರುಳುಗಳಿಂದ
ಕಟ್ಟಲ್ಪಟ್ಟ ಕುದುರೆಯ) ಶವ

ಮಾಂಸ ರಸಾಸವ
ಮತ್ತಯೋಗಿನೀ ತಂತ್ರಂ
ಇದೇನು ಅಗುರ್ವನು
ಒಳಕೊಂಡುದೊ (ಹೆಣದ
ಮಾಂಸದಲ್ಲಿ ಆಸಕ್ತವಾದ
ಮದಿಸಿರುವ ಮರುಳುಗಳ
ಸಮೂಹವನ್ನುಳ್ಳದ್ದೂ ಆಗಿ,)
ಕರ್ಣನ ಗೆಲ್ದ ಕೊಳ್ಗುಳಂ
(ಕರ್ಣನು ಗೆದ್ದ ಯುದ್ಧರಂಗವು
ಏನು ಅಗುರ್ವನು

ಒಳಕೊಂಡುದೊ - ಏನು ಭಯಂಕರವಾಗಿತ್ತೊ!)

ಪದ್ಯ-00:ಅರ್ಥ:ರಣಮಂತ್ರ ಪಠನದಲ್ಲಿ ಪ್ರವೀಣರಾದ ಅನೇಕ ಸೈನಿಕರ ಹುಂಕಾರವೇ ಮೊದಲಾದ ಮಂತ್ರವನ್ನುಳ್ಳುದೂ ಆಹ್ವಾನಿತರಾದ ಪಿಶಾಚಿಗಳ ಹಲ್ಲುಕಡಿಯುವುದರಿಂದ ಹುಟ್ಟಿ ವಿಕಾರವೂ ಭಯಂಕರವೂ ಆದ

ಶಬ್ದವನ್ನುಳ್ಳುದೂ
ಮದ್ದಾನೆಯ ಕರುಳುಗಳಿಂದ
ಕಟ್ಟಲ್ಪಟ್ಟ ಕುದುರೆಯ ಹೆಣದ
ಮಾಂಸದಲ್ಲಿ ಆಸಕ್ತವಾದ
ಮದಿಸಿರುವ ಮರುಳುಗಳ
ಸಮೂಹವನ್ನುಳ್ಳದ್ದೂ ಆಗಿ
ಕರ್ಣನು ಗೆದ್ದ ಯುದ್ಧರಂಗವು
ಏನು ಭಯಂಕರವಾಗಿತ್ತೊ!

ವ|| ಅನ್ನೆಗಮಿತ್ತ ಸಂಸಪ್ತಕ ನಿಕುರುಂಬದೊಳಗೊರ್ವರು ಮಂ ಕಿಱುವೀಱಿಲೀಯದೆ

ರಸಮಂ ಕೊಲ್ವಂತೆಂತಾನುಂ
ಕೊಂದು ಕರ್ಣನೊಳ್
ಪೊಣರಲ್ ಬರ್ಪ ವಿಕ್ರಾಂತ
ತುಂಗಂ ನಿಜ ಪತಾಕಿನಿಯ
ನಡುವೆ ಮೆರೆವ ಪತಾಕಾ
ವಿರಾಜಮಾನುಮಪ್ಪ
ತಮ್ಮಣ್ಣನ ರಥಮಂ ಕಾಣದೆ
ಕೌರವಬಳಜಳನಿಧಿಯೊಳ್
ಬಳ್ವಳ ಬಳೊದೊಗೆದ
ಕೇಸುರಿಯಂತೆ ತಱತಱಿಸಿ
ಮಿಳಿರ್ವ ಪವನತನೂಜನ

ಕೇಸರಿಕೇತನಮಪ್ಪ
ಪೞಯಿಗೆಯಂ ಕಂಡು ಮುಟ್ಟೆ
ವರ್ಪನ್ನೆಗಮರಸನಂ ಬೀಡಿಂಗೆ
ಕಳಿಪಿ ಮಗುೞ್ದು ಬಂದ ನಕುಳ
ಸಹದೇವರಿಂದರವಿಂದಬಾಂಧ
ವತನೂಜನ ಮಹಾ
ಪ್ರಹರಣಹತಿಯೊಳ್
ಯಮನಂದನನ
ನೋವುಮನಾತ್ಮೀಯಬಲದ
ನಾಯಕರ ಸಾವುಮನಱಿದು-

ವಚನ:ಪದವಿಭಾಗ-ಅರ್ಥ:ಅನ್ನೆಗಮಿತ್ತ ಸಂಸಪ್ತಕ ನಿಕುರುಂಬದೊಳಗೆ ಒರ್ವರುಮಂ ಕಿಱುವೀೞಲೀಯದೆ (ಅಷ್ಟರಲ್ಲಿ ಈ ಕಡೆ ಸಂಸಪ್ತಕರ ಸಮೂಹದಲ್ಲಿ ಒಬ್ಬರೂ ತಪ್ಪಿಸಿಕೊಳ್ಳಲು ಅವಕಾಶ ಕೊಡದಂತೆ) ರಸಮಂ ಕೊಲ್ವಂತೆಂ ತಾನುಂ ಕೊಂದು (ಪಾದರಸವನ್ನು ಮರ್ದಿಸುವ

ಹಾಗೆ ಹೇಗೋ ಕೊಂದು)
ಕರ್ಣನೊಳ್ ಪೊಣರಲ್
ಬರ್ಪ ವಿಕ್ರಾಂತ ತುಂಗಂ
(ಕರ್ಣನಲ್ಲಿ ಯುದ್ಧಮಾಡಲು
ಬರುತ್ತಿರುವ ಉತ್ತಮ
ಪೌರುಷಶಾಲಿಯಾದ
ಅರ್ಜುನನು) ನಿಜ
ಪತಾಕಿನಿಯ ನಡುವೆ ಮೆರೆವ
ಪತಾಕಾ ವಿರಾಜಮಾನುಮಪ್ಪ
(ತನ್ನ ಸೈನ್ಯಮಧ್ಯದಲ್ಲಿ
ಧ್ವಜದಿಂದ

ವಿರಾಜಮಾನವಾಗಿ
ಮೆರೆಯುವ) ತಮ್ಮಣ್ಣನ
ರಥಮಂ ಕಾಣದೆ (ತಮ್ಮಣ್ಣನ
ರಥವನ್ನು ಕಾಣದೆ)
ಕೌರವಬಳಜಳನಿಧಿಯೊಳ್
ಬಳ್ವಳ ಬಳೊದು ಒಗೆದ
(ಕೌರವಸೇನಾಸಮುದ್ರದಲ್ಲಿ
ವಿಶೇಷವಾಗಿ ಬೆಳೆದು
ಶೋಭಿಸುವ) ಕೇಸುರಿಯಂತೆ
ತಱತಱಿಸಿ ಮಿಳಿರ್ವ
ಪವನತನೂಜನ ಕೇಸರಿ

ಕೇತನಮಪ್ಪ ಪಟಿಯಿಗೆಯಂ
ಕಂಡು (ಕೆಂಪುಬಣ್ಣದ
ಉರಿಯಂತೆ ತಳತಳಿಸಿ
ಅಲುಗಾಡುವ ಸಿಂಹದ
ಗುರುತಿನ ಬಾವುಟವನ್ನು
ನೋಡಿ) ಮುಟ್ಟೆ ವರ್ಪನ್ನೆಗಂ
ಅರಸನಂ ಬೀಡಿಂಗೆ ಕಳಿಪಿ
ಮಗುಟ್ದು ಬಂದ ನಕುಳ
ಸಹದೇವರಿಂದ (ಹತ್ತಿರಕ್ಕೆ
ಬರುವಷ್ಟರಲ್ಲಿ
ಧರ್ಮರಾಯನನ್ನು ಬೀಡಿಗೆ

ಕಳುಹಿಸಿ ಹಿಂತಿರುಗಿ ಬಂದ
ನಕುಳಸಹದೇವರಿಂದ)
ಅರವಿಂದಬಾಂಧವತನೂಜನ
ಮಹಾ ಪ್ರಹರಣ ಹತಿಯೊಳ್
(ಕರ್ಣನ ಬಲವಾದ
ಪೆಟ್ಟಿನಿಂದ) ಯಮನಂದನನ
ನೋವುಮಂ ಆತ್ಮೀಯಬಲದ
ನಾಯಕರ ಸಾವುಮನು
ಅಱಿದು- ತಿಳಿದು-
(ಧರ್ಮರಾಯನ ವ್ಯಥೆಯನ್ನು

ತಮ್ಮ ಸೈನ್ಯದ ನಾಯಕರ
ಸಾವನ್ನೂ ತಿಳಿದು-)
ವಚನ:ಅರ್ಥ:ಅಷ್ಟರಲ್ಲಿ ಈ
ಕಡೆ ಸಂಸಪ್ತಕರ
ಸಮೂಹದಲ್ಲಿ ಒಬ್ಬರೂ
ತಪ್ಪಿಸಿಕೊಳ್ಳಲು ಅವಕಾಶ
ಕೊಡದಂತೆ ಪಾದರಸವನ್ನು
ಮರ್ದಿಸುವ ಹಾಗೆ ಹೇಗೋ
ಕೊಂದು ಕರ್ಣನಲ್ಲಿ
ಯುದ್ಧಮಾಡಲು ಬರುತ್ತಿರುವ
ಉತ್ತಮ ಪೌರುಷಶಾಲಿಯಾದ

ಅರ್ಜುನನು ತನ್ನ
ಸೈನ್ಯಮಧ್ಯದಲ್ಲಿ ಧ್ವಜದಿಂದ
ವಿರಾಜಮಾನವಾಗಿ
ಮೆರೆಯುವ ತಮ್ಮಣ್ಣನ
ರಥವನ್ನು ಕಾಣದೆ
ಕೌರವಸೇನಾಸಮುದ್ರದಲ್ಲಿ
ವಿಶೇಷವಾಗಿ ಬೆಳೆದು
ಶೋಭಿಸುವ ಹಚ್ಚಿದ
ಕೆಂಪುಬಣ್ಣದ ಉರಿಯಂತೆ
ತಳತಳಿಸಿ ಅಲುಗಾಡುವ
ಸಿಂಹದ ಗುರುತಿನ

ಬಾವುಟವನ್ನು ನೋಡಿ
ಹತ್ತಿರಕ್ಕೆ ಬರುವಷ್ಟರಲ್ಲಿ
ಧರ್ಮರಾಯನನ್ನು ಬೀಡಿಗೆ
ಕಳುಹಿಸಿ ಹಿಂತಿರುಗಿ ಬಂದ
ನಕುಳಸಹದೇವರಿಂದ ಕರ್ಣನ
ಬಲವಾದ ಪೆಟ್ಟಿನಿಂದು
ಧರ್ಮರಾಯನ ವ್ಯಥೆಯನ್ನು
ತಮ್ಮ ಸೈನ್ಯದ ನಾಯಕರ
ಸಾವನ್ನೂ ತಿಳಿದನು. ತಿಳಿದು-

ಚಂ|| ಪವನಸುತಂಗೆ
ಪಾಸಟಿಗಳೊರ್ವರುಮಿಲ್ಲದ

ಙಿಂದಮಾಂತ ಕೌ
ರವಬಲದುರ್ಕರ್ಣನೊಂದಿನಿಸು
ಮಾಣಿಸಿ
ಪೋಪಮಿಳೇಶನಲ್ಲಿಗೆಂ|
ದವನತ ವೈರಿ ವೈರಿಬಲ
ವಾರಿಧಿಯಂ
ವಿಶಿಖೌರ್ವವಹ್ನಿಯಿಂ
ತವಿಸಿ ಮರುತ್ತನೂಭವನಲ್ಲಿಗೆ
ಪೇೞ್ದಿರದೆಯ್ದಿ ಭೂಪನಂ||
೧೨೧ /121||

ಪದ್ಯ-00:ಪದವಿಭಾಗ-ಅರ್ಥ:ಪವನಸುತಂಗೆ ಪಾಸಟಿಗಳು ಒರ್ವರುಮಿಲ್ಲ(ಭೀಮನಿಗೆ ಸರಿಸಮಾನರಾದ ಬಲಶಾಲಿಗಳಾರೂ ಇಲ್ಲ) ಅದಱಿಂದಂ ಆಂತ ಕೌರವಬಲದ ಉರ್ಕನು ಒಂದಿನಿಸು ಮಾಣಿಸಿ (ಆದುದರಿಂದ ಎದುರಿಸಿದ ಕೌರವಸೈನ್ಯದ

ಅಹಂಕಾರವನ್ನು ಸ್ವಲ್ಪ
ಕಡಿಮೆಮಾಡಿ) ಪೋಪಂ
ಇಳೇಶನಲ್ಲಿಗೆಂದು
(ರಾಜನಲ್ಲಿಗೆ ಹೋಗೋಣ
ಎಂದು) ಅವನತ (ಬಗ್ಗಿಸಿದ)
ವೈರಿ ವೈರಿಬಲ ವಾರಿಧಿಯಂ
ವಿಶಿಖ ಉರ್ವ ವಹ್ನಿಯಿಂ
(ಬಾಣಗಳೆಂಬ
ಬಡಬಾನಲನಿಂದ) ತವಿಸಿ
(ಶತ್ರುಸೈನ್ಯವನ್ನು
ಬಗ್ಗಿಸಿದವನಾದ ಅರ್ಜುನನು

ಶತ್ರುಸೈನ್ಯಸಾಗರವನ್ನು
ಬಾಣಗಳೆಂಬ
ಬಡಬಾನಲನಿಂದ
ನಾಶಮಾಡಿ)
ಮರುತ್ತನೂಭವನ ಅಲ್ಲಿಗೆ
ಪೇಳ್ದು ಇರದೆ ಎಯ್ದಿ
ಭೂಪನಂ(ಅಲ್ಲಿಯ ಯುದ್ಧಕ್ಕೆ
ಭೀಮನನ್ನು ಇರಹೇಳಿ
ಸಾವಕಾಶಮಾಡದೆ
ಧರ್ಮರಾಜನನ್ನು ಸೇರಿದನು)

ಪದ್ಯ-00:ಅರ್ಥ:ಭೀಮನಿಗೆ ಸರಿಸಮಾನರಾದ ಬಲಶಾಲಿಗಳಾರೂ ಇಲ್ಲ; ಆದುದರಿಂದ ಎದುರಿಸಿದ ಕೌರವಸೈನ್ಯದ ಅಹಂಕಾರವನ್ನು ಸ್ವಲ್ಪ ಕಡಿಮೆಮಾಡಿ ರಾಜನಲ್ಲಿಗೆ ಹೋಗೋಣ ಎಂದು ಶತ್ರುಸೈನ್ಯವನ್ನು ಬಗ್ಗಿಸಿದವನಾದ ಅರ್ಜುನನು ಶತ್ರುಸೈನ್ಯಸಾಗರವನ್ನು

ಬಾಣಗಳೆಂಬ ಬಡಬಾನಲನಿಂದ ನಾಶಮಾಡಿ ಅಲ್ಲಿಯ ಯುದ್ಧಕ್ಕೆ ಭೀಮನನ್ನು ಇರಹೇಳಿ ಸಾವಕಾಶಮಾಡದೆ ಧರ್ಮರಾಜನನ್ನು ಸೇರಿದನು.

ಕಂ|| ತಾನುಂ ಹರಿಯುಂ ಭೂಪತಿ
ಗಾನತರಾಗಲೊಡಮೊಸೆದು ಪತಿ ಪರಸಿ ಯಮ|
ಸ್ಥಾನಮನೆಂತೆಯ್ದಿಸಿದಿರೊ

ಕಾನೀನನ ದೊರೆಯ ಕಲಿಯನುಗ್ರಾಹವದೊಳ್|| ೧೨೨ ||

ಪದ್ಯ-೧೨೨:ಪದವಿಭಾಗ-ಅರ್ಥ: ತಾನುಂ ಹರಿಯುಂ ಭೂಪತಿಗೆ ಆನತರಾಗಲು ಒಡಂ ಒಸೆದು ಪತಿ (ಪ್ರಭುವು) ಪರಸಿ (ತಾನೂ ಕೃಷ್ಣನೂ ಧರ್ಮರಾಯನಿಗೆ ನಮಸ್ಕಾರಮಾಡಲು ಧರ್ಮರಾಯನು ಕೂಡಲೆ

ಹರಸಿ) ಯಮಸ್ಥಾನಮಂ ಎಂತು ಎಯ್ದಿಸಿದಿರೊ (ಯಮಪಟ್ಟಣಕ್ಕೆ ಹೇಗೆ ಸೇರಿಸಿದಿರೋ?) ಕಾನೀನನ ದೊರೆಯ ಕಲಿಯನು ಉಗ್ರ ಆಹವದೊಳ್ (ಈ ಭಯಂಕರವಾದ ಯುದ್ಧದಲ್ಲಿ ಕರ್ಣನಂತಹ ಸಾಮರ್ಥ್ಯವುಳ್ಳ ಶೂರನನ್ನು)

ಪದ್ಯ-೦೨೨:ಅರ್ಥ:ತಾನೂ ಕೃಷ್ಣನೂ ಧರ್ಮರಾಯನಿಗೆ

ನಮಸ್ಕಾರಮಾಡಲು ಧರ್ಮರಾಯನು ಹರಸಿ, ಈ ಭಯಂಕರವಾದ ಯುದ್ಧದಲ್ಲಿ ಕರ್ಣನಂತಹ ಸಾಮರ್ಥ್ಯವುಳ್ಳ ಶೂರನನ್ನು ಯಮಪಟ್ಟಣಕ್ಕೆ ಹೇಗೆ ಸೇರಿಸಿದಿರೋ?

- ಟಿಪ್ಪಣಿ::ಕಾನೀನ ಎಂದರೆ ಮದುವೆಗೆ ಮೊದಲು ಹುಟ್ಟಿದವನು. ಢರ್ಮರಾಯನಿಗೆ ಕರ್ಣನು ಕಾನೀನನೆಂದು ಇನ್ನೂ

ತಿಳಿದಿಲ್ಲ. ಅವನು ಸತ್ತನಂತರ ತಿಳಿಯುವುದು. ಆದರೆ ಇಲ್ಲಿ ಧರ್ಮಜ ಹೀಗೆ ಪ್ರಯೋಗಿಸಿದ್ದು ಅನುಚಿತವಾಗಿ ಕಾಣುವುದು.

ನರ ನಾರಾಯಣರೆಂಬಿ
ರ್ವರುಮೊಡಗೂಡಿದೊಡೆ
ಗೆಲ್ವರಾರುರ್ವರೆಯೊಳ್|
ನಿರುತಮೆನೆ ನೆಗಟ್ದಿ ನಿಮ್ಮ
ರ್ವರ ದೊರೆಗಂ
ಬಗೆವೊಡಗ್ಗಳಂ ನರರೊಳರೇ||

೧೨೩ ||

ಪದ್ಯ-೧೨೩:ಪದವಿಭಾಗ-ಅರ್ಥ:ನರ ನಾರಾಯಣರೆಂಬ ಇರ್ವರುಂ ಒಡಗೂಡಿದೊಡೆ ಗೆಲ್ವರಾರುಂ ಒರ್ವರೆಯೊಳ್ (ಲೋಕದಲ್ಲಿ) ನಿರುತಂ (ನಿಶ್ಚಯವಾಗಿ) (ನರನಾರಾಯಣರೆಂಬ ಇಬ್ಬರೂ ಒಟ್ಟುಗೂಡಿದರೆ ಈ ಭೂಮಿಯಲ್ಲಿ ನಿಮ್ಮನ್ನು ನಿಶ್ಚಯವಾಗಿ ಗೆಲ್ಲುವರಾರು

ಯಾರು?) ಎನೆ ನೆಗಟ್ದಿ
ನಿಮ್ಮಿರ್ವರ ದೊರೆಗಂ
ಬಗೆವೊಡೆ ಅಗ್ಗಳಂ
ನರರೊಳರೇ (ಎನ್ನುವಾಗ
ಪ್ರಸಿದ್ಧರಾದ ನಿಮ್ಮಿಬ್ಬರನ್ನು
ಮೀರಿದ ಮನುಷ್ಯರು
ಇದ್ದಾರೆಯೇ? ಇಲ್ಲ.)
ಪದ್ಯ-೧೨೩:ಅರ್ಥ:ನರನಾ
ರಾಯಣರೆಂಬ ಇಬ್ಬರೂ
ಒಟ್ಟುಗೂಡಿದರೆ ಈ
ಭೂಮಿಯಲ್ಲಿ ನಿಮ್ಮನ್ನು

ನಿಶ್ಚಯವಾಗಿ ಗೆಲ್ಲುವರಾರು ಯಾರು? ಇಲ್ಲ. ಎನ್ನುವಾಗ ಪ್ರಸಿದ್ಧರಾದ ನಿಮ್ಮಿಬ್ಬರನ್ನು ಮೀರಿದ ಮನುಷ್ಯರು ಇದ್ದಾರೆಯೇ? ಇಲ್ಲವೇ ಇಲ್ಲ.

ಎಂತೆನೆ ಮುಯ್ಯೇೞ್
ಸೋೞಿಳೆ
ಯಂ ತಳದೊಳೆ
ಪಿೞಿದನಾತನೆಂಬುದನಾಂ
ಮು|
ನ್ನೆಂತುಂ ನಂಬೆನ ನಂಬಿದೆ

ನಿಂತಿಂದಿನ ಗಂಡವಾತಿನೊಳ್ ಸೂತಜನಂ|| ೧೨೪ ||

ಪದ್ಯ-೧೨೪:ಪದವಿಭಾಗ-ಅರ್ಥ:ಎಂತೆನೆ ಮುಯ್ಯೇೞ್ ಸೂೞೆಳೆಯಂ ತಳದೊಳೆ ಪಿಡಿದನು (ಮೂರು ಏಳುಸಲ (ಇಪ್ಪತ್ತೊಂದು ಸಲ) ಭೂಮಿಯನ್ನು ಅಂಗೈಯಲ್ಲಿಯೇ ಹಿಂಡಿದವನು) ಆತನು ಎಂಬುದನು ಆಂ ಮುನ್ನೆಂತುಂ

ನಂಬೆನ (ಎಂಬುದನ್ನು ನಾನು ಮೊದಲು ಹೇಗೂ ನಂಬಿರಲಿಲ್ಲ.) ನಂಬಿದೆನು ಇಂತು ಇಂದಿನ ಗಂಡವಾತಿನೊಳ್ ಸೂತಜನಂ (ಹೀಗೆ ಇಂದಿನ ಕರ್ಣನ ಪೌರುಷದ ಸುದ್ದಿಯಲ್ಲಿ ನಂಬಿದೆನು.)

ಪದ್ಯ-೧೨೪:ಅರ್ಥ: ಹಿಂದೆ ಕರ್ಣನು ಮೂರು ಏಳುಸಲ (ಇಪ್ಪತ್ತೊಂದು ಸಲ)

ಭೂಮಿಯನ್ನು
ಅಂಗೈಯಲ್ಲಿಯೇ
ಹಿಂಡಿದವನು ಎಂಬುದನ್ನು
ನಾನು ಮೊದಲು ಹೇಗೂ
ನಂಬಿರಲಿಲ್ಲ. ಹೀಗೆ ಇಂದಿನ
ಕರ್ಣನ ಪೌರುಷದ
ಸುದ್ದಿಯಲ್ಲಿ ನಂಬಿದೆನು.

ಪೆತ್ತಳ್ ಕೊಂತಿಯೆ ಮಕ್ಕ
ಳೈತ್ತರೊಳೆಂಬವರೆ ಕೊಂತಿ
ಮಾದೇವಿಗಮೊಂ|
ದುತ್ತರಮಾದಳ್ ಕರ್ಣಂ

ಬೆತ್ತಕ್ಕನೆ ಎಂದು ಪೊಗೞ್ದುವೆರಡುಂ ಪಡೆಗಳ್|| ೧೨೫ ||

ಪದ್ಯ-೧೨೫:ಪದವಿಭಾಗ-ಅರ್ಥ:ಪೆತ್ತಳ್ ಕೊಂತಿಯೆ ಮಕ್ಕಳ್ (ವೆ) ಹೆತ್ತರೊಳ್ ಎಂಬವರೆ,(ಮಕ್ಕಳನ್ನು ಹೆತ್ತವರಲ್ಲಿ ಪಾಂಡವರನ್ನು ಹೆತ್ತ ಕುಂತೀದೇವಿಯೇ ಮಕ್ಕಳನ್ನು ಹೆತ್ತವಳು (ಉತ್ತಮಳಾದವಳು) ಎಂದು)

ಕೊಂತಿ ಮಾದೇವಿಗಂ ಒಂದು ಉತ್ತರಮಾದಳ್ ಕರ್ಣಂ ಬೆತ್ತಕ್ಕನೆ ಎಂದು (ಎಂದು ಹೇಳುತ್ತಿದ್ದ ಎರಡು ಸೈನ್ಯಗಳೂ ಇಂದು ಕರ್ಣನನ್ನು ಹೆತ್ತವಳು ಕುಂತೀದೇವಿಗಿಂತ ಉತ್ತಮಳಾದವಳು ಎಂದು) ಪೊಗೞ್ದುವೆರಡುಂ ಪಡೆಗಳ್ (ರಡು ಸೈನ್ಯಗಳೂ ಹೊಗಳಿದುವು.)

ಪದ್ಯ-೧೨೫:ಅರ್ಥ:
ಮಕ್ಕಳನ್ನು ಹೆತ್ತವರಲ್ಲಿ ಪಾಂಡವರನ್ನು ಹೆತ್ತ ಕುಂತೀದೇವಿಯೇ ಮಕ್ಕಳನ್ನು ಹೆತ್ತವಳು (ಉತ್ತಮಳಾದವಳು) ಎಂದು ಹೇಳುತ್ತಿದ್ದ ಎರಡು ಸೈನ್ಯಗಳೂ ಇಂದು ಕರ್ಣನನ್ನು ಹೆತ್ತವಳು ಕುಂತೀದೇವಿಗಿಂತ ಉತ್ತಮಳಾದವಳು ಎಂದು ಹೊಗಳಿದುವು.

ಕಂ|| ಇನ್ನುಂ ಕರ್ಣನ ರೂಪೆ ದ
ಲೆನ್ನೆರ್ದೆಯೊಳಮೆನ್ನ
ಕಣ್ಣೊಳಂ ಸುೞಿದಪುದಾಂ|
ತೆನ್ನೆಚ್ಚ ಶರಮುಮಂ ಗೆ
ಲ್ದೆನ್ನುಮನಂಜಿಸಿದನೆಂದೊಡಿ
ನ್ನೇನೆಂಬೆಂ|| ೧೨೬ ||

ಪದ್ಯ-೧೨೬:ಪದವಿಭಾಗ-ಅರ್ಥ:ಇನ್ನುಂ ಕರ್ಣನ ರೂಪೆ ದಲ್ ಎನ್ನೆರ್ದೆಯೊಳಂ ಎನ್ನ ಕಣ್ಣೊಳಂ ಸುೞಿದಪುದು (ಇನ್ನೂ ನನ್ನ ಎದೆಯಲ್ಲಿಯೂ

ಕಣ್ಣಿನಲ್ಲಿಯೂ ಕರ್ಣನ ಆಕಾರವೇ ಸುಳಿದಾಡುತ್ತಿದೆ.) ಆಂತು ಎನ್ನ ಎಚ್ಚ ಶರಮುಮಂ ಗೆಲ್ದು (ಎದುರಿಸಿ ನಾನು ಪ್ರಯೋಗಿಸಿದ ಬಾಣಗಳನ್ನು ಗೆದ್ದು) ಎನ್ನುಮನುಂ ಅಂಜಿಸಿದನೆಂದೊಡೆ ಇನ್ನೇನು ಎಂಬೆಂ (ನನ್ನನ್ನೂ ಭಯಪಡಿಸದನೆಂದಾಗ ಇನ್ನೇನನ್ನು ಹೇಳಲಿ.)|

ಪದ್ಯ-೧೨೬:ಅರ್ಥ:ಇನ್ನೂ ನನ್ನ ಎದೆಯಲ್ಲಿಯೂ ಕಣ್ಣಿನಲ್ಲಿಯೂ ಕರ್ಣನ ಆಕಾರವೇ ಸುಳಿದಾಡುತ್ತಿದೆಯಲ್ಲ; ಎದುರಿಸಿ ನಾನು ಪ್ರಯೋಗಿಸಿದ ಬಾಣಗಳನ್ನು ಗೆದ್ದು ನನ್ನನ್ನೂ ಭಯಪಡಿಸದನೆಂದಾಗ ಇನ್ನೇನನ್ನು ಹೇಳಲಿ.

ಅಂತಪ್ಪದಟನನಾಜಿಯೊ

ಳೆಂತೆಂತಿದಿರಾಂತು ಗೆಲ್ದಿರೆನೆ
ನೃಪನಂ ಕಂ|
ಸಾಂತಕನೆಂದಂ ಕರ್ಣನು
ಮಾಂತಿರೆ ನೀಮಿಂದು
ನೊಂದುದಂ ಕೇಳ್ದೀಗಳ್||
೧೨೭ |

ಪದ್ಯ-೧೨೭:ಪದವಿಭಾಗ-ಅರ್ಥ:ಅಂತಪ್ಪ ಅದಟನನು ಆಜಿಯೊಳ್ ಎಂತೆಂತು ಇದಿರಾಂತು ಗೆಲ್ದಿರಿ ಎನೆ (ಅಂತಹ

ಪರಾಕ್ರಮಶಾಲಿಯನ್ನು
ಯುದ್ಧದಲ್ಲಿ ಹೇಗೆ ಎದುರಿಸಿ
ಗೆದ್ದಿರಿ’ ಎನ್ನಲು) ನೃಪನಂ
ಕಂಸಾಂತಕನು ಎಂದಂ
ಕರ್ಣನುಂ ಆಂತಿರೆ ನೀಮಿಂದು
ನೊಂದುದಂ ಕೇಳ್ದೀu ಈಗಳ್
()
ಪದ್ಯ-೧೨೭:ಅರ್ಥ:‘ಅಂತಹ
ಪರಾಕ್ರಮಶಾಲಿಯನ್ನು
ಯುದ್ಧದಲ್ಲಿ ಹೇಗೆ ಎದುರಿಸಿ
ಗೆದ್ದಿರಿ’ ಎನ್ನಲು

ಧರ್ಮರಾಯನನ್ನು ಕುರಿತು ಕೃಷ್ಣನು ಹೇಳಿದನು. ನೀವು ಇಂದು ಕರ್ಣನನ್ನು ಎದುರಿಸಿ ನೋವುಪಟ್ಟುದನ್ನು ಕೇಳಿ ಈಗ-

ಆರಯ್ಯಲೆಂದು ಬಂದೆವ
ಪಾರ
ಗುಣಾಕೊಂದೆವಿಲ್ಲವಿನ್ನುಂ
ಬಳವ|
ತ್ಕ್ರೂರಾರಾತಿಯನುಪಸಂ

ಹಾರಿಪೆವೇವಿರಿಯನಾದನೆಂ ಬುದುಮಾಗಳ್|| ೧೨೮ ||

ಪದ್ಯ-೧೨೮:ಪದವಿಭಾಗ-ಅರ್ಥ:ನೋವುಪಟ್ಟುದನ್ನು ಕೇಳಿ ಈಗ ಆರಯ್ಯಲೆಂದು ಬಂದೆವು (ವಿಚಾರಿಸಿ ಸಮಾಧಾನಮಾಡಲು ಬಂದೆವು) ಅಪಾರ ಗುಣಾ ಕೊಂದೆವಿಲ್ಲಂ ಇನ್ನುಂ (ಇನ್ನೂ ಕೊಂದಿಲ್ಲ;) ಬಳವತ್ಕ್ರೂರ ಆರಾತಿಯನು (ಬಲಿಷ್ಠನೂ

ಕ್ರೂರನೂ ಆದ ಶತ್ರುವನ್ನು)
ಉಪಸಂಹಾರಿಪೆವು ಏಂ (ವಿ)
ಪಿರಿಯನಾದನೆ? ಎಂಬುದುಂ
ಆಗಳ್ (ನಾಶಪಡಿಸುತ್ತೇವೆ.
ಅವನೇನು ಮಹಾದೊಡ್ಡವನು
ಎನ್ನಲು ಆಗ)
ಪದ್ಯ-೧೨೮:ಅರ್ಥ:ಧರ್ಮ
ರಾಯನನ್ನು ಕುರಿತು ಕೃಷ್ಣನು
ಹೇಳಿದನು., ವಿಚಾರಿಸುವುದಕ್ಕೆ
ಬಂದೆವು; ಎಲ್ಲೆಯಿಲ್ಲದ
ಗುಣಶಾಲಿಯಾದ

ಧರ್ಮರಾಯನೇ ಬಲಿಷ್ಠನೂ ಕ್ರೂರನೂ ಆದ ಶತ್ರುವನ್ನು ನಾವು ಇನ್ನೂ ಕೊಂದಿಲ್ಲ; ನಾಶಪಡಿಸುತ್ತೇವೆ. ಅವನೇನು ಮಹಾದೊಡ್ಡವನು ಎನ್ನಲು ಆಗ-

ನರಕಾಂತಕನಂ ನುಡಿದಂ
ನರೇಂದ್ರನಾನರಸುಗೆಯ್ವ
ಪಟುವಗೆಯನದಂ|
ಪರಿಹರಿಸಿದೆನಾತನನೀ

ಕಿರೀಟಿ ಗೆಲ್ದೆನಗೆ ಪಟ್ಟವಂ ಮಾಡುವನೇ|| ೧೨೯ ||

ಪದ್ಯ-೧೨೯:ಪದವಿಭಾಗ-ಅರ್ಥ:ನರಕಾಂತಕನಂ ನುಡಿದಂ ನರೇಂದ್ರಂ ಆಂ ಅರಸುಗೆಯ್ವ ಪೞುವಗೆಯನು ಅದಂ (ಆ ಆಸೆಯನ್ನು) (ಕೃಷ್ಣನನ್ನು ಕುರಿತು ಧರ್ಮರಾಜನು ಹೇಳಿದನು- ಇನ್ನು ಮೇಲೆ ನಾನು ರಾಜ್ಯವಾಳುವ ವ್ಯರ್ಥವಾದ

ಆಸೆಯನ್ನು) ಪರಿಹರಿಸಿದೆನು (ಬಿಟ್ಟಿದ್ದೇನೆ.) ಆತನನು ಈ ಕಿರೀಟಿ ಗೆಲ್ದೆನಗೆ ಪಟ್ಟವಂ ಮಾಡುವನೇ (ಅವನನ್ನು ಗೆದ್ದು ನಿಜವಾಗಿಯೂ ಅರ್ಜುನನು ನನಗೆ ಪಟ್ಟವನ್ನು ಕಟ್ಟುತ್ತಾನೆಯೇ?)

ಪದ್ಯ-೧೨೯:ಅರ್ಥ:

ಕೃಷ್ಣನನ್ನು ಕುರಿತು ಧರ್ಮರಾಜನು ಹೇಳಿದನು- ಇನ್ನು ಮೇಲೆ ನಾನು

ರಾಜ್ಯವಾಳುವ ವ್ಯರ್ಥವಾದ ಆಸೆಯನ್ನು ಬಿಟ್ಟಿದ್ದೇನೆ. ಅವನನ್ನು ಗೆದ್ದು ನಿಜವಾಗಿಯೂ ಅರ್ಜುನನು ನನಗೆ ಪಟ್ಟವನ್ನು ಕಟ್ಟುತ್ತಾನೆಯೇ?

ಏಮ್ಮೊಗ್ಗೆ ಕರ್ಣನಿಂತೀ ನಿಮ್ಮಂದಿಗರಿಱಿಯೆ ಸಾವನೇ ಸುಖಮಿರಿಮಿ| ನ್ನಮ್ಮ ಸುಯೋಧನನೊಳ್ ಪಗೆ

ಯಮ್ಮರೆದಾನುಂ ತಪೋನಿಯೋಗದೊಳಿರ್ಪೆಂ|| ೧೩೦ ||

ಪದ್ಯ-೧೩೦:ಪದವಿಭಾಗ-ಅರ್ಥ:ಏಮ್ಮೊಗ್ಗೆ- ಏಂ ಮೊಗ್ಗೆ (ಏನು ಸಾಧ್ಯವೇ?) ಕರ್ಣಂ ಇಂತು ಈ ನಿಮ್ಮಂದಿಗರ ಇಱಿಯೆ ಸಾವನೇ (ಕರ್ಣನು ಹೀಗೆ ನಿಮ್ಮಂತಹವರು ಯುದ್ಧಮಾಡಿದರೆ ಸಾಯುತ್ತಾನೆಯೇ?)

ಸುಖಮಿರಿಂ ಇನ್ನು ಅಮ್ಮ
ಸುಯೋಧನನೊಳ್ ಪಗೆಯಂ
ಮರೆದು (ಅಪ್ಪಗಳಿರಾ ಇನ್ನು
ದುಯೋಧನನಲ್ಲಿ
ಹಗೆತನವನ್ನು ಮರೆತು
ಸುಖವಾಗಿರಿ.) ಆನುಂ
ತಪೋನಿಯೋಗದೊಳ
ಇರ್ಪೆಂ (ತಾನು ವಾನಪ್ರಸ್ತಕ್ಕೆ
ಹೋಗುವೆನು ಎಂದು ಹೇಳಿದ
ಧರ್ಮರಾಯ)

ಪದ್ಯ-೧೩೦:ಅರ್ಥ:

ಕರ್ಣನನ್ನು ಗೆಲ್ಲುವುದು ಸಾಧ್ಯವೇ? ಕರ್ಣನು ಹೀಗೆ ನಿಮ್ಮಂತಹವರು ಯುದ್ಧಮಾಡಿದರೆ ಸಾಯುತ್ತಾನೆಯೇ? ಅಪ್ಪಗಳಿರಾ ಇನ್ನು ದುಯೋಧನನಲ್ಲಿ ಹಗೆತನವನ್ನು ಮರೆತು ಸುಖವಾಗಿರಿ. ನಾನೂ ತಪಸ್ಸಿನ ನಿಯಮದಲ್ಲಿ ಇರುತ್ತೇನೆ.

ಎಂದರೆ, ತಾನು ವಾನಪ್ರಸ್ತಕ್ಕೆ ಹೋಗುವೆನು ಎಂದು ಹೇಳಿದ ಧರ್ಮರಾಯ.

ವ|| ಎಂದು ತನ್ನ ನೋಯೆ ನುಡಿದ ನಿಜಾಗ್ರಜನ ನುಡಿಗೆ ಮನದೊಳೇವೈಸಿಯುಮೇವೈಸದೆ ವಿನಯಮನೆ ಮುಂದಿಟ್ಟು ವಿನಯವಿಭೂಷಣನಿಂತೆಂದಂ -

ವಚನ:ಪದವಿಭಾಗ-

ಅರ್ಥ:ಎಂದು ತನ್ನ ನೋಯೆ

ನುಡಿದ ನಿಜ ಅಗ್ರಜನ ನುಡಿಗೆ
(ತನಗೆ ನೋವಾಗುವ ಹಾಗೆ
ನುಡಿದ ತನ್ನ ಅಣ್ಣನ ಮಾತಿಗೆ)
ಮನದೊಳು ಏವೈಸಿಯುಂ
(ಮನಸ್ಸಿನಲ್ಲಿ
ಕೋಪಬಂದರೂ) ಏವೈಸದೆ
ವಿನಯಮನೆ ಮುಂದಿಟ್ಟು
(ಕೋಪಿಸಿಕೊಳ್ಳದೆ
ನಮ್ರತೆಯನ್ನೇ ಪ್ರದರ್ಶಿಸಿ)
ವಿನಯ ವಿಭೂಷಣನು

ಇಂತೆಂದಂ (ಅರ್ಜುನನು ಹೀಗೆಂದನು.)-

ವಚನ:ಅರ್ಥ:ಎಂದುದಕ್ಕೆ ಅರ್ಜುನನು, ತನಗೆ ನೋವಾಗುವ ಹಾಗೆ ನುಡಿದ ತನ್ನ ಅಣ್ಣನ ಮಾತಿಗೆ ಮನಸ್ಸಿನಲ್ಲಿ ಕೋಪಬಂದರೂ (ಹೊರಗೆ) ಕೋಪಿಸಿಕೊಳ್ಳದೆ ನಮ್ರತೆಯನ್ನೇ ಪ್ರದರ್ಶಿಸಿ ವಿನಯಭೂಷಣನಾದ ಅರ್ಜುನನು ಹೀಗೆಂದನು.

ಕಂ|| ಮುಳಿದಿಂತು ಬೆಸಸೆ

ನಿಮ್ಮಡಿ

ಯೊಳೆ ಮಾರ್ಕೊಂಡೆಂತು

ನುಡಿಮೆನುಸಿರೆಂ ನಿಮ್ಮಂ|

ಮುಳಿಯಿಸಿದ ಸುರಾಸುರುಮ

ನೊಳರೆನಿಸೆಂ

ಕರ್ಣನೆಂಬನೆನಗೇವಿರಿಯಂ||

೧೩೧

ಪದ್ಯ-೧೩೧:ಪದವಿಭಾಗ-

ಅರ್ಥ:ಮುಳಿದು ಇಂತು

ಬೆಸಸೆ ನಿಮ್ಮಡಿಯೊಳೆ

ಮಾರ್ಕೊಂಡು ಎಂತು
ನುಡಿಮೆನು
(ಕೋಪಿಸಿಕೊಂಡು ಹೀಗೆ
ಹೇಳಿದ ನಿಮ್ಮಪಾದದಲ್ಲಿ
ಪ್ರತಿಭಟಿಸಿ ಹೇಗೆ
ನುಡಿಯಲಿ?) ಉಸಿರೆಂ
(ಮಾತಾನಾಡುವುದಿಲ್ಲ;)
ನಿಮ್ಮಂ ಮುಳಿಯಿಸಿದ
ಸುರಾಸುರುಮನು (ನಿಮಗೆ
ಕೋಪವನ್ನುಂಟುಮಾಡಿದ
ದೇವದಾನವರಿನ್ನೂ) ಒಳರ್

ಎನಿಸೆಂ (ಜೀವದಿಂದಿದ್ದಾರೆ -ಎಂದು ನಾನು- ಎನ್ನಿಸುವುದಿಲ್ಲ) ಕರ್ಣನೆಂಬನು ಎನಗೆ ಏವಿರಿಯಂ (ಕರ್ಣನೆಂಬುವನು ನನಗೆ ಏನು ದೊಡ್ಡವನು? ಅವನೇನು ಮಹಾ?)

ಪದ್ಯ-೧೩೧:ಅರ್ಥ:ಅರ್ಜುನ ಹೇಳಿದ, ಕೋಪಿಸಿಕೊಂಡು ಹೀಗೆ ಹೇಳಿದ ನಿಮ್ಮಪಾದದಲ್ಲಿ

ಪ್ರತಿಭಟಿಸಿ ಹೇಗೆ ನುಡಿಯಲಿ?
ಮಾತಾನಾಡುವುದಿಲ್ಲ; ನಿಮಗೆ
ಕೋಪವನ್ನುಂಟುಮಾಡಿದ
ದೇವದಾನವರಿನ್ನೂ
ಜೀವದಿಂದಿದ್ದಾರೆ
ಎನ್ನಿಸುವುದಿಲ್ಲ
(ಹಾಕಿರುವಾಗ)
ಕರ್ಣನೆಂಬುವನು ನನಗೆಷ್ಟು
ದೊಡ್ಡವನು?

ನರಸಿಂಗಂಗಂ ಜಾಕ

ಬ್ಬರಸಿಗಮಳವೊದವೆ ಪುಟ್ಟಿ ಪುಟ್ಟಿಯುಮರಿಕೇ|
ಸರಿಯೆನೆ ನೆಗೞ್ದಮರಾತಿಯ ಸರಿದೊರೆಗಂ
ಬಂದೆನಪ್ಪೊಡಾಗಳ್ ನಗಿರೇ||
೧೩೨

ಪದ್ಯ-೧೩೨:ಪದವಿಭಾಗ-ಅರ್ಥ:ನರಸಿಂಗಂಗಂ (ನರಸಿಂಹನೆಂಬ ರಾಜನಿಗೂ) ಜಾಕಬ್ಬೆ ಅರಸಿಗಂ ಅಳವುಂ ಒದವೆ (ಜಾಕಬ್ಬೆಯೆಂಬ

ರಾಣಿಗೂ ಪರಾಕ್ರಮವೇ
ಉಂಟಾಗಲು/
ಹುಟ್ಟಿದೆಯೆಂಬ ರೀತಿಯಲ್ಲಿ)
ಪುಟ್ಟಿ, ಪುಟ್ಟಿಯುಂ
ಅರಿಕೇಸರಿಯೆನೆ ನೆಗಳ್ದಂ
(ಹುಟ್ಟಿ, ಹುಟ್ಟಿಯೂ ಕೂಡ
ಅರಿಕೇಸರಿಯೆಂದು
ಪ್ರಸಿದ್ಧನಾಗಿಯೂ) ಅರಾತಿಯ
ಸರಿ ದೊರೆಗಂ (ಶತ್ರುವಿನ
ಸರಿಸಮಾನತೆಗೆ)
ಬಂದೆನಪ್ಪೊಡೆ ಆಗಳ್ ನಗಿರೇ

(ಬಂದೆನಾದರೆ ನೀವೇ ತಿರಸ್ಕಾರದಿಂದ ಪರಿಹಾಸಮಾಡುವುದಿಲ್ಲವೇ?)

ಪದ್ಯ-೧೩೨:ಅರ್ಥ:ನರಸಿಂಹ ನೆಂಬ ರಾಜನಿಗೂ ಜಾಕಬ್ಬೆಯೆಂಬ ರಾಣಿಗೂ ಪರಾಕ್ರಮವೇ ಹುಟ್ಟಿದೆಯೆಂಬ ರೀತಿಯಲ್ಲಿ ಹುಟ್ಟಿ, ಹುಟ್ಟಿಯೂ ಕೂಡ ಅರಿಕೇಸರಿಯೆಂದು ಪ್ರಸಿದ್ಧನಾಗಿಯೂ ಶತ್ರುವಿನ ಸರಿಸಮಾನತೆಗೆ ಬಂದೆನಾದರೆ

ನೀವೇ ತಿರಸ್ಕಾರದಿಂದ ಪರಿಹಾಸಮಾಡುವುದಿಲ್ಲವೇ?

ಪುಟ್ಟೆ ಮುಳಿಸೊಸಗೆಗಳೆ ಕಡು ಗಟ್ಟಂ ಮುಳಿಸೊಸಗೆಯೆಂಬ ನೃಪತನಯನವಂ| ಮುಟ್ಟುಗಿಡೆ ಪಾರದರದೊಳ್ ಪುಟ್ಟಿದನರಸಂಗಮರಸಿಗಂ ಪುಟ್ಟಿದನೇ|| ೧೩೩

ಪದ್ಯ-೧೩೩:ಪದವಿಭಾಗ-ಅರ್ಥ:ಪುಟ್ಟೆ ಮುಳಿಸು ಒಸಗೆಗಳೆ ಕಡುಗಟ್ಟಂ (ಕೋಪ

ಸಂತೋಷಗಳು ಹುಟ್ಟಲು
ಅದು ನಿಜವಾಗಿಯೂ
ಕಷ್ಟವೇ!) ಮುಳಿಸು
ಒಸಗೆಯೆಂಬ ನೃಪ ತನಯನು
ಅವಂ ಮುಟ್ಟುಗಿಡೆ (ಆದರೆ ಆ
ಕೋಪ ಪ್ರಸಾದಗಳು ಎಂಬ
ರಾಜಕುಮಾರನು
ವಿಫಲನಾದರೆ,)
ಪಾರದರರದೊಳ್ ಪಟ್ಟಿದನು
ಅರಸಂಗ ಅರಸಿಗಂ
ಪುಟ್ಟಿದನೇ (ರಾಜ

ರಾಣಿಯರಿಗೆ ಹುಟ್ಟಿದವನೇ? ಹಾದರಕ್ಕೆ ಹುಟ್ಟಿದವನು.)

ಪದ್ಯ-೧೩೩:ಅರ್ಥ: ಕೋಪ ಸಂತೋಷಗಳು ಹುಟ್ಟಲು ಅದು ನಿಜವಾಗಿಯೂ ಕಷ್ಟವೇ! ಆದರೆ ಆ ಕೋಪ ಪ್ರಸಾದಗಳು ಎಂಬ ರಾಜಕುಮಾರನು ವಿಫಲನಾದರೆ, ರಾಜ ರಾಣಿಯರಿಗೆ ಹುಟ್ಟಿದವನೇ? ಹಾದರಕ್ಕೆ ಹುಟ್ಟಿದವನು.

- ಟಿಪ್ಪಣಿ:: ಇಲ್ಲಿ ಕವಿಯು, ನರಸಿಂಹ ಜಾಕಬ್ಬೆಯ ಮಗ ಅರಿಕೇಸರಿಗೆ ಅರ್ಜುನನ್ನು ಹೋಲಿಸುತ್ತಾ, ಅನುಚಿತ, ಅತಿರೇಕಕ್ಕೆ ಹೋಗಿ ಪದ ಬಳಸಿದ್ದಾನೆಂದು ವಿದ್ವಾಂಸರಾದ ಡಿ.ಎಲ್.ಎನ್. ಅಭಿಪ್ರಾಯಪಡುತ್ತಾರೆ. (ಪಂಪಭಾರತ ದೀಪಿಕೆ)

ಎಂದರಸ ನೇಸಱಿಂದೊಳ

ಗಾಂ ದಿನಕರಸುತನನಿಕ್ಕಿ ಬಂದಲ್ಲದೆ ಕಾ|
ಣೆಂ ದಲ್ ಭವತ್ಪದಾಜ್ಞಮ ನೆಂದೆೞ್ದಿನುದಶ್ರುಜಳಲವಾರ್ದ್ರ ಕಪೋಳಂ|| ೧೩೪ ||

ಪದ್ಯ-೧೩೪:ಪದವಿಭಾಗ-ಅರ್ಥ:ಎಂದು, (ಎಂಬುದಾಗಿ ಹೇಳಿ) ಅರಸ, ನೇಸಱಿಂ ದೊಳಗೆ (ರಾಜನೇ ಸೂರ್ಯನು ಮುಳುಗುವದರೊಳಗೆ) //

ನೇಸರಂ -ಸೂರ್ಯನು
ಅಂದೊಳಗೆ (ಸೂರ್ಯನು
ಕಂದುವುದರೊಳಗೆ??) ಆಂ
ದಿನಕರಸುತನನು ಇಕ್ಕಿ
ಬಂದಲ್ಲದೆ (ನಾನು ಕರ್ಣನನ್ನು
ಸಂಹರಿಸಿ ಬಂದಲ್ಲದೆ) ಕಾಣೆಂ
(ನಿಮ್ಮನ್ನು ನೋಡೆನು,) ದಲ್
(ನಿಜಕ್ಕೂ) ಭವತ್
ಪದಾಜ್ಜಮನು (ನಿಮ್ಮ ಪಾದ
ಕಮಲವನ್ನು) ಎಂದು ಎಜ್ದಿನು
(ಎಂದು ಎದ್ದನು)

ಉದಶ್ರುಜಳಲವ ಆರ್ದ್ರ ಕಪೋಳಂ (ಕಣ್ಣೀರಿನ ಕಣಗಳಿಂದ ಒದ್ದೆಯಾದ ಕೆನ್ನೆಯನ್ನುಳ್ಳ ಅರ್ಜುನನು)

ಪದ್ಯ-೧೩೪:ಅರ್ಥ: ೧೩೪. ಎಂಬುದಾಗಿ ಹೇಳಿ ರಾಜನೇ ಸೂರ್ಯನು ಮುಳುಗುವದರೊಳಗೆ ನಾನು ಕರ್ಣನನ್ನು ಸಂಹರಿಸಿ ಬಂದಲ್ಲದೆ ನಿಮ್ಮ ಪಾದ ಕಮಲವನ್ನು ನೋಡೆನು,

ಎಂದು ಚಿಮ್ಮುತ್ತಿರುವ
ಕಣ್ಣೀರಿನ ಕಣಗಳಿಂದ
ಒದ್ದೆಯಾದ ಕೆನ್ನೆಯನ್ನುಳ್ಳ
ಅರ್ಜುನನು ಎದ್ದನು.

<u>ಕರ್ಣನೊಡನೆ ಯುದ್ಧಕ್ಕೆ ಅರ್ಜುನನ ಪ್ರವೇಶ</u>

ವ|| ಅಂತು ಭೂನಾಥಂ ತನ್ನಳವನಱಿದುಮಱಿಯದೆ ಕೆಡೆನುಡಿದು ತಪೋವನದೊಳಲ್ಲದೆ

ನೀಗೆನೆಂದೆಬ್ದು
ನಿಂದಿರ್ದನನುಸುರಾಂತಕನುಂ
ತಾನುಮೆಂತಾನುಂ
ಪ್ರಾರ್ಥಿಸಿದೊಡೊಡಂಬಟ್ಟಜಾ
ತ ಶತ್ರುಗೆ ಪೊಡೆವಟ್ಟು
ರಥಮನೇಱಿ ಕೌರವಧ್ವಜಿನಿಗೆ
ಭಯಜ್ವರಂ ಬರ್ಪಂತೆ ಬಂದು
ಪವನ
ತನಯಂಗಂತಕತನಯನಸ
ಮಾವಸ್ಥೆಯಂ
ಪೇೞ್ದಿಂದಿನನುವರಮೆಲ್ಲಮಂ

ನಿರ್ಮೊರ್ವರ ಮೇಲಿಕ್ಕಿ

ಪಿರಿದುಂ ಪೊಱ್ತು

ತಡೆದಿರ್ಪೆವೆನೆ

ಹಿಡಿಂಬಾಂತಕನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಭೂನಾಥಂ ತನ್ನಳವನು ಅಱಿದುಂ ಅಱಿಯದೆ ಕೆಡೆನುಡಿದು (ಹೀಗೆ ರಾಜನಾದ ಧರ್ಮರಾಯನು ತನ್ನ ಪರಾಕ್ರಮವನ್ನು ಅರಿತೂ

ಅರಿಯದಂತೆ
ಕೆಟ್ಟಮಾತುಗಳನ್ನಾಡಿ)
ತಪೋವನದೊಲು ಅಲ್ಲದೆ
ನೀಗೆನು ಎಂದು ಎಜ್ದು
ನಿಂದಿರ್ದನನು
(ತಪೋವನದಲ್ಲಲ್ಲದೆ (ತನ್ನ
ಜೀವನವನ್ನು) ಬೇರೆ
ಕಡೆಯಲ್ಲಿ
ಕಳೆಯುವುದಿಲ್ಲವೆಂದು ಎದ್ದು
ನಿಂತಿದ್ದವನನ್ನು)
ಅಸುರಾಂತಕನುಂ ತಾನುಂ

ಎಂತಾನುಂ ಪ್ರಾರ್ಥಿಸಿದೊಡೆ
(ಕೃಷ್ಣನೂ ಅರ್ಜುನನೂ
ಹೇಗೋ ಬೇಡಿಕೊಳ್ಳಲಾಗಿ)
ಒಡಂಬಟ್ಟ ಅಜಾತ ಶತ್ರುಗೆ
ಪೊಡೆವಟ್ಟು ರಥಮನೇಱಿ
(ಒಪ್ಪಿಕೊಂಡ ಧರ್ಮರಾಜನಿಗೆ
ನಮಸ್ಕಾರಮಾಡಿ ತೇರನ್ನು
ಹತ್ತಿಕೊಂಡು) ಕೌರವಧ್ವಜಿನಿಗೆ
ಭಯಜ್ವರಂ ಬರ್ಪಂತೆ ಬಂದು
(ಕೌರವಸೈನ್ಯಕ್ಕೆ ಭಯಜ್ವರ
ಬರುವ ಹಾಗೆ ಬಂದು) ಪವನ

ತನಯಂಗೆ ಅಂತಕತನಯನ
ಸಮಾವಸ್ಥೆಯಂ (ಭೀಮನಿಗೆ
ಧರ್ಮರಾಯನ
ಸಮಸ್ಥಿತಿಯನ್ನು ಹೇಳಿ)
ಪೇೞ್ದಿಂದಿನ
ಅನುವರಮೆಲ್ಲಮಂ
ನಿರ್ಮ್ಮೊರ್ವರ ಮೇಲಿಕ್ಕಿ (ಈ
ದಿನದ
ಯುದ್ಧಭಾರವೆಲ್ಲವನ್ನೂ
ನಿರ್ಮ್ಮೊಬ್ಬರ ಮೇಲೆಯೇ
ಹೇರಿ) ಪಿರಿದುಂ ಪೊೞ್ತು

ತಡೆದಿರ್ಪೆವೆನೆ
ಹಿಡಿಂಬಾಂತಕನು ಇಂತೆಂದಂ
(ಬಹಳ ಹೊತ್ತು ತಡೆದಿದ್ದೆವು
ಎನ್ನಲು ಭೀಮನು
ಹೀಗೆಂದನು)-
ವಚನ:ಅರ್ಥ:ಹೀಗೆ
ರಾಜನಾದ ಧರ್ಮರಾಯನು
ತನ್ನ ಪರಾಕ್ರಮವನ್ನು ಅರಿತೂ
ಅರಿಯದಂತೆ
ಕೆಟ್ಟಮಾತುಗಳನ್ನಾಡಿ,
ತಪೋವನದಲ್ಲಿ ಅಲ್ಲದೆ (ತನ್ನ

ಜೀವನವನ್ನು) ಬೇರೆ
ಕಡೆಯಲ್ಲಿ
ಕಳೆಯುವುದಿಲ್ಲವೆಂದು ಎದ್ದು
ನಿಂತಿದ್ದವನನ್ನು, ಕೃಷ್ಣನೂ
ಅರ್ಜುನನೂ ಹೇಗೋ
ಬೇಡಿಕೊಳ್ಳಲಾಗಿ ಒಪ್ಪಿಕೊಂಡ
ಧರ್ಮರಾಜನಿಗೆ
ನಮಸ್ಕಾರಮಾಡಿ ತೇರನ್ನು
ಹತ್ತಿಕೊಂಡು ಕೌರವಸೈನ್ಯಕ್ಕೆ
ಭಯಜ್ವರ ಬರುವ ಹಾಗೆ
ಬಂದು ಭೀಮನಿಗೆ

ಧರ್ಮರಾಯನ
ಸಮಸ್ಥಿತಿಯನ್ನು ಹೇಳಿ ಈ
ದಿನದ
ಯುದ್ಧಭಾರವೆಲ್ಲವನ್ನೂ
ನಿಮ್ಮೊಬ್ಬರ ಮೇಲೆಯೇ ಹೇರಿ
ಬಹಳ ಹೊತ್ತು ತಡೆದಿದ್ದೆವು
ಎನ್ನಲು ಭೀಮನು
ಹೀಗೆಂದನು-

ಮ|| ನರ ಮಾತಂಗ ತುರಂಗ
ಸೈನ್ಯಮಿದಿರಾಂತೀರೆಂಟು
ಲಕ್ಕಂಬರಂ

ಕರಗಿತ್ತೆನ್ನ ನಿಶಾತ ಹೇತಿ

ಹತಿಯಿಂ ಮತ್ತಂತುಮೀ

ತೋಳ ತೀನ್|

ಕರಗಲ್ಕಾರ್ತಪುದಿಲ್ಲದಕ್ಕರಿಗ

ಪೇೞ್ ನೀಂ ಬೇೞ್ಪುದೇ

ಸಂಗರಾ

ಜಿರದೊಳ್ ಕೌರವರೆಂಬ

ಕಾಕಕುಳಕೆನ್ನೀಯೊಂದೆ ಬಿಲ್

ಸಾಲದೇ|| ೧೩೫ ||

ಪದ್ಯ-೧೩೫:ಪದವಿಭಾಗ-

ಅರ್ಥ:ನರ ಮಾತಂಗ ತುರಂಗ

ಸೈನ್ಯಮ್ ಇದಿರಾಂತು ಈರೆಂಟು ಲಕ್ಕಂಬರಂ ಕರಗಿತ್ತು (ನನ್ನನ್ನು ಎದುರಿಸಿದ ಸುಮಾರು ಹದಿನಾರುಲಕ್ಷದವರೆಗಿನ ಆನೆ ಕುದುರೆ ಪದಾತಿಗಳು ನನ್ನ ಹೊಡೆತಕ್ಕೆ ಸಿಕ್ಕಿ - > ಕರಗಿದುವು.); ಎನ್ನ ನಿಶಾತ ಹೇತಿ ಹತಿಯಿಂ (ನನ್ನ ಹರಿತ ಆಯುಧಗಳ ಹೊಡೆತಕ್ಕೆ ಸಿಕ್ಕಿ ಕರಗಿದುವು) ಮತ್ತು ಅಂತುಂ

ಈ ತೋಳ ತೀನ್,
(ಅಷ್ಟಾದರೂ ಈ ನನ್ನ
ತೋಳಿನ ನವೆಯು) ಕರಗಲ್ಕೆ
ಆರ್ತಪುದು (ಕರಗುವುದಕ್ಕೆ
ಸಮರ್ಥವಾಗಿಲ್ಲ.) ಇಲ್ಲದ
ಅಕ್ಕರಿಗ ಪೇಟ್ ನೀಂ
ಬೇಟ್ಟುದೇ
ಸಂಗರಾಜಿರದೊಳ್
ಕೌರವರೆಂಬ
ಕಾಕಕುಳಕೆನ್ನೀಯೊಂದೆ ಬಿಲ್
ಸಾಲದೇ

ಪದ್ಯ-೧೩೫:ಅರ್ಥ: ನನ್ನನ್ನು ಎದುರಿಸಿದ ಸುಮಾರು ಹದಿನಾರುಲಕ್ಷದವರೆಗಿನ ಆನೆ ಕುದುರೆ ಪದಾತಿಗಳು ನನ್ನ ಹರಿತ ಆಯುಧಗಳ ಹೊಡೆತಕ್ಕೆ ಸಿಕ್ಕಿ ಕರಗಿದುವು. ಅಷ್ಟಾದರೂ ಈ ನನ್ನ ತೋಳಿನ ನವೆಯು ಮಾತ್ರ ಕರಗುವುದಕ್ಕೆ ಸಮರ್ಥವಾಗಿಲ್ಲ. (ಆ ಸೈನ್ಯಕ್ಕೆ ನೀನು ಹೇಳಬೇಕೇ-

ನಾನೊಬ್ಬನೇ ಸಾಕು)
ಅರ್ಜುನ, ಅದಕ್ಕೆ ನೀನೂ
ಬರಬೇಕೆ? ಯುದ್ಧದಲ್ಲಿ
ಕೌರವರೆಂಬ ಕಾಗೆಯ
ಗುಂಪಿಗೆ ನನ್ನ ಈ ಒಂದೇ
ಬಿಲ್ಲು ಸಾಲದೇ? ಎಂದನು
ಭೀಮ.

ವ|| ಎಂದ ಭೀಮನನಕಲಂಕರಾಮಂ ನಿಮ್ಮ ಭುಜಬಲಕ್ಕದೇವಿರಿದೆಂದು

ನೀಮೆನ್ನ ಕಾಳೆಗಮಂ

ಸುರಿಗೆಗಾಳೆಗಮಂ ನೋೞ್ಪಂತೆ

ತೊಡೆಯಂ ಪೊಯ್ದಾರ್ದು

ನೋಡುತ್ತುಮಿರಿಮೆಂದು

ಪವನಜನನೊಡಗೊಂಡು

ಪವನಜವದಿಂ ಕರ್ಣನ

ರಥಮೆಲ್ಲಿತ್ತೆತ್ತ

ಪೋದುದೆನುತುಂ ಬರ್ಪತಿರಥ

ಮಥನನ ರಥದ ಬರವಂ

ಕಂಡು

ಕೌರವಬಲಮೆಲ್ಲಮೊಲ್ಲನುಲಿ

ದೋಡಿ ವೈಕರ್ತನನ ಮರೆಯಂ
ಪುಗುವುದುಂ ಮದೀಯ
ಮನೋರಥಮಿಂದು
ದೊರೆಕೊಂಡುದೆಂದು
ದಿನಕರತನೂಜನೆರಡು
ಮುಯ್ಯುಮಂ ನೋಡಿ
ಸಮರಾನಂದಂಬೆರಸು
ಶಲ್ಯನಂ ರಥಮನೆಸಗಲ್ವೇಳ್ದು
ದಿವ್ಯಾಸ್ತ್ರಂಗಳ
ದೊಣೆಗಳನೆರಡುಂ
ದೆಸೆಯೊಳಂ ಬಿಗಿದು

ತಾಳವಟ್ಟದ ಬಿಲ್ಲಂ ಕೆಂದಳಳದೊಳಮರೆ ನೀವಿ ಜೇವೊಡೆದಾಗಳ್-

ವಚನ:ಪದವಿಭಾಗ-

ಅರ್ಥ:ಎಂದ ಭೀಮನನು ಅಕಲಂಕರಾಮಂ (ಎಂದು ಹೇಳಿದ ಭೀಮನನ್ನು ಕುರಿತು ಅರ್ಜುನನು) ನಿಮ್ಮ ಭುಜಬಲಕ್ಕೇ ಆದೇವಿರಿದೂ ಏಂದು (ನಿಮ್ಮ ತೋಳಬಲಕ್ಕೆ ಅದೇನು ದೊಡ್ಡದು ಎಂದು

ಹೇಳಿ,) ನೀಂ ಎನ್ನ ಕಾಳೆಗಮಂ ಸುರಿಗೆಗಾಳೆಗಮಂ (ಸುರಿಗೆ ಕಾಳಗವನ್ನು) ನೋೞ್ಪಂತೆ ತೊಡೆಯಂ ಪೊಯ್ದು ಆರ್ದು (ನೀವು ನನ್ನ ಸುರಿಗೆ ಕಾಳಗವನ್ನು ನೋಡುವಂತೆ ತೊಡೆಯನ್ನು ತಟ್ಟಿ ಆರ್ಭಟಮಾಡಿ) ನೋಡುತ್ತುಂ ಇರಿಂ ಎಂದು (ನೋಡುತ್ತಾ ಇರಿ ಎಂದು-) ಪವನಜನನು ಒಡಗೊಂಡು ಪವನಜವದಿಂ

(ಭೀಮನೊಡಗೂಡಿಕೊಂಡು ವಾಯುವೇಗದಿಂದ) ಕರ್ಣನ ರಥಂ ಎಲ್ಲಿತ್ತೊ ಎ/ಅತ್ತ ಪೋದುದು ಎನುತುಂ ಬರ್ಪ ಅತಿರಥ ಮಥನನ ರಥದ ಬರವಂ ಕಂಡು (ಕರ್ಣನ ತೇರೆಲ್ಲಿದೆ ಯಾವಕಡೆ ಹೋಯಿತು ಎನ್ನುವ ಬರುತ್ತಿರುವ ಅತಿರಥಮಥನನಾದ ಅರ್ಜುನನ ಬರವನ್ನು ಕಂಡು)

ಕೌರವಬಲಂ ಎಲ್ಲಮು ಒಲ್ಲನು ಉಲಿದೋಡಿ (ಕೌರವಸೈನ್ಯವೆಲ್ಲ ಮೆಲ್ಲಗೆ ಕೂಗಿಕೊಂಡು ಓಡಿಹೋಗಿ) ವೈಕರ್ತನನ ಮರೆಯಂ ಪುಗುವುದುಂ (ಕರ್ಣನ ಮರೆಯನ್ನು ಪ್ರವೇಶಿಸಲು,) ಮದೀಯ ಮನೋರಥಮಿಂದು ದೊರೆಕೊಂಡುದೆಂದು (ನನ್ನ ಇಷ್ಟಾರ್ಥವು ಈ ದಿನ

ಪೂರ್ಣವಾಯಿತು ಎಂದು)
ದಿನಕರತನೂಜನು ಎರಡು
ಮುಯ್ಯುಮಂ ನೋಡಿ (
ಕರ್ಣನು ತನ್ನ ಎರಡು
ಭುಜಗಳನ್ನೂ ನೋಡಿ)
ಸಮರಾನಂದಂ ಬೆರಸು
ಶಲ್ಯನಂ ರಥಮನು ಎಸಗಲ್
ವೇೞ್ದು (ಯುದ್ಧಾನಂದದಿಂದ
ಕೂಡಿ ಶಲ್ಯನನ್ನು ತೇರನ್ನು
ನಡೆಸುವಂತೆ ಹೇಳಿ)
ದಿವ್ಯಾಸ್ತ್ರಂಗಳ

ದೋಣಿಗಳನೆರಡುಂ
ದೆಸೆಯೊಳಂ ಬಿಗಿದು
(ದಿವ್ಯಾಸ್ತ್ರಗಳ ಬತ್ತಳಿಕೆಯನ್ನು
ಎರಡು ಪಕ್ಕದಲ್ಲಿಯೂ
ಬಿಗಿದುಕೊಂಡು) ತಾಳವಟ್ಟದ
ಬಿಲ್ಲಂ ಕೆಂದಳದೊಳ್
(ಕೆಂಪಗಿರುವ ತನ್ನ
ಅಂಗೈಯನ್ನು) ಅಮರೆ ನೀವಿ
ಜೇವೊಡೆದಾಗಳ್
(ತಾಳವಟ್ಟವೆಂಬ ಬಿಲ್ಲು
ಕೆಂಪಗಿರುವ ತನ್ನ

ಅಂಗೈಯನ್ನು
ಸೇರಿಕೊಂಡಿರಲು ಬಿಲ್ಲಿನ
ಹದೆಯನ್ನು ಎಳೆದು ಮೀಟಿ
ಠೇಂಕಾರ
ಮಾಡಿ(ಜೇವೊಡೆ)ದನು.)-
ವಚನ:ಅರ್ಥ:ಎಂದು ಹೇಳಿದ
ಭೀಮನನ್ನು ಕುರಿತು
ಅರ್ಜುನನು ನಿಮ್ಮ
ತೋಳಬಲಕ್ಕೆ ಅದೇನು
ದೊಡ್ಡದು ಎಂದು ಹೇಳಿ ನೀವು
ನನ್ನ ಸುರಿಗೆ ಕಾಳಗವನ್ನು

ನೋಡುವಂತೆ ತೊಡೆಯನ್ನು
ತಟ್ಟಿ ಆರ್ಭಟಮಾಡಿ
ನೋಡುತ್ತಾ ಇರಿ ಎಂದನು.
ಭೀಮನೊಡಗೂಡಿಕೊಂಡು
ವಾಯುವೇಗದಿಂದ ಕರ್ಣನ
ತೇರೆಲ್ಲಿದೆ ಯಾವಕಡೆ
ಹೋಯಿತು ಎನ್ನುವ
ಬರುತ್ತಿರುವ
ಅತಿರಥಮಥನನಾದ
ಅರ್ಜುನನ ಬರವನ್ನು ಕಂಡು
ಕೌರವಸೈನ್ಯವೆಲ್ಲ ಮೆಲ್ಲಗೆ

ಕೂಗಿಕೊಂಡು ಓಡಿಹೋಗಿ ಕರ್ಣನ ಮರೆಯನ್ನು ಪ್ರವೇಶಿಸಿದುವು. ನನ್ನ ಇಷ್ಟಾರ್ಥವು ಈ ದಿನ ಪೂರ್ಣವಾಯಿತು ಎಂದು ಕರ್ಣನು ತನ್ನ ಎರಡು ಭುಜಗಳನ್ನೂ ನೋಡಿ ಯುದ್ಧಾನಂದದಿಂದ ಕೂಡಿ ಶಲ್ಯನನ್ನು ತೇರನ್ನು ನಡೆಸುವಂತೆ ಹೇಳಿ ದಿವ್ಯಾಸ್ತ್ರಗಳ ಬತ್ತಳಿಕೆಯನ್ನು

ಎರಡು ಪಕ್ಕದಲ್ಲಿಯೂ
ಬಿಗಿದುಕೊಂಡು
ತಾಳವಟ್ಟವೆಂಬ ಬಿಲ್ಲು
ಕೆಂಪಗಿರುವ ತನ್ನ
ಅಂಗೈಯನ್ನು
ಸೇರಿಕೊಂಡಿರಲು ಬಿಲ್ಲಿನ
ಹದೆಯನ್ನು ಎಳೆದು ಮೀಟಿ
ಠೇಂಕಾರ
ಮಾಡಿ(ಜೇವೊಡೆ)ದನು.

ಪೃಥ್ವಿ|| ಮಹಾ ಪ್ರಳಯ ಭೈರವ
ಕ್ಷುಭಿತ ಪುಷ್ಕಳಾವರ್ತಮಾ

ಮಹೋಗ್ರ ರಿಪು ಭೂಭುಜ ಶ್ರವಣ ಭೈರವಾಡಂಬರಂ| ಗುಹಾ ಗಹನ ಗಹ್ವರೋದರ ವಿಶೀರ್ಣಮಾದಂದದೇಂ ಮುಹು ಪ್ರಕಟಮಾದುದಾ ರವಿತನೂಭವ ಜ್ಯಾರವಂ|| ೧೩೬ ||

ಪದ್ಯ-೧೩೬:ಪದವಿಭಾಗ-ಅರ್ಥ:ಮಹಾ ಪ್ರಳಯ ಭೈರವ ಕ್ಷುಭಿತ (ಪ್ರಳಯಕಾಲದ

ಕಾಲಭೈರವನಿಂದ ಕಲಕಲ್ಪಟ್ಟ/
ರೇಗಿಸಲ್ಪಟ್ಟ) ಪುಷ್ಕಳಾವರ್ತಂ
ಆ ಮಹೋಗ್ರ ರಿಪು ಭೂಭುಜ
ಶ್ರವಣ (ಪುಷ್ಟಲಾವರ್ತ
ಮೋಡದಂತೆ ಆ
ಅತಿಭಯಂಕರವಾದ
ಶತ್ರುರಾಜರ ಕಿವಿಗೆ)
ಭೈರವಾಡಂಬರಂ ಗುಹಾ
ಗಹನ ಗಹ್ವರೋದರ
ವಿಶೀರ್ಣಮಾದು ಅಂದು
ಅದೇಂ (ಭೈರವಾಡಂಬರವಾಗಿ

ಗುಹೆಗಳ ಆಳವಾದ ಕಣಿವೆಗಳ ಒಳಭಾಗವನ್ನು ಭೇದಿಸಿದ ಕರ್ಣನ ಬಿಲ್ಲಿನ ಹೆದೆಯ ಶಬ್ದವು ಆ ದಿನ ಪುನ ಪುನ ಪ್ರಕಟವಾಯಿತು.)ಮುಹು ಪ್ರಕಟಮಾದುದು ರವಿತನೂಭವ ಜ್ಯಾ ರವಂ (ಕರ್ಣನ ಬಿಲ್ಲಿನ ಹೆದೆಯ ಶಬ್ದವು)

ಪದ್ಯ-೧೩೬:ಅರ್ಥ: ೧೩೬. ಪ್ರಳಯಕಾಲದ

ಕಾಲಭೈರವನಿಂದ ಕಲಕಲ್ಪಟ್ಟ/
ರೇಗಿಸಲ್ಪಟ್ಟ ಪುಷ್ಕಲಾವರ್ತ
ಮೋಡದಂತೆ ಆ
ಅತಿಭಯಂಕರವಾದ
ಶತ್ರುರಾಜರ ಕಿವಿಗೆ
ಭೈರವಾಡಂಬರವಾಗಿ
ಗುಹೆಗಳ ಆಳವಾದ ಕಣಿವೆಗಳ
ಒಳಭಾಗವನ್ನು ಭೇದಿಸಿದ
ಕರ್ಣನ ಬಿಲ್ಲಿನ ಹೆದೆಯ
ಶಬ್ದವು ಆ ದಿನ ಪುನ ಪುನ
ಪ್ರಕಟವಾಯಿತು.

ವ|| ಅಂತು ಯುಗಾಂತ
ವಾತಾಹತ ಕುಲಗಿರಿಯೆ
ನೆಲೆಯಿಂ ತಳರ್ವಂತೆ ತಳರ್ದು
ಧ್ವಾಂಕ್ಷಧ್ವಜಮಂಬರತಳದೊ
ಳ್ ಮಿಳಿರೆ ತನಗಿದಿರಂ ಬರ್ಪ
ಕರ್ಣನ ರಥಕ್ಕೆ ತನ್ನ
ರಥಮನಾಸನ್ನಮಾಗೆ
ಪರಿಯಿಸಿ ವಿಂಧ್ಯ ಮಳಯ
ಮಹೀಧರಂಗಳೊಂದೊಂದ
ರೊಳ್ ತಾಗುವಂತೆ ತಾಗಿ
ದೇವದತ್ತ ಶಂಖಮಂ ಪೂರೈಸಿ

ಗಾಂಡೀವಮನೇಱಿಸಿ ನೀವಿ ಜೇವೊಡೆದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಯುಗಾಂತ ವಾತಾಹತ ಕುಲಗಿರಿಯೆ ನೆಲೆಯಿಂ (ಹಾಗೆ ಪ್ರಳಯಕಾಲದ ಗಾಳಿಯಿಂದ ಹೊಡೆಯಲ್ಪಟ್ಟ ಕುಲಪರ್ವತಗಳು (ತಾವಿರುವ) ನೆಲೆಯಿಂದ) ತಳರ್ವಂತೆ ತಳರ್ದು (ಚಲಿಸುವಂತೆ

ಕರ್ಣನು ಚಲಿಸಿ,) ಧ್ವಾಂಕ್ಷಧ್ವಜ ಅಂಬರತಳದೊಳ್ ಮಿಳಿರೆ (ಕಾಗೆಯ ಬಾವುಟವು ಆಕಾಶಪ್ರದೇಶದಲ್ಲಿ ಅಲುಗಾಡುತ್ತಿರಲು) ತನಗೆ ಇದಿರಂ ಬರ್ಪ ಕರ್ಣನ ರಥಕ್ಕೆ (ತನಗೆ ಎದುರಾಗಿ ಬರುತ್ತಿರುವ ಕರ್ಣನ ರಥಕ್ಕೆ,) ತನ್ನ ರಥಮನು ಆಸನ್ನಮಾಗೆ ಪರಿಯಿಸಿ (ಸಮೀಪವಾಗುವ ಹಾಗೆ ಹರಿಯಿಸಿ) ವಿಂಧ್ಯ

ಮಳಯ ಮಹೀಧರಂಗಳು
ಒಂದೊಂದರೊಳ್
ತಾಗುವಂತೆ (ವಿಂಧ್ಯ
ಮಲಯಪರ್ವತಗಳು
ಒಂದರೊಡನೊಂದು
ತಾಗುವಂತೆ) ತಾಗಿ ದೇವದತ್ತ
ಶಂಖಮಂ ಪೂರೈಸಿ
(ಅರ್ಜುನನು
ದೇವದತ್ತಶಂಖವನ್ನು ಊದಿ,)
ಗಾಂಡೀವಮನು ಏಱಿಸಿ
ನೀವಿ ಜೇವೊಡೆದಾಗಳ್ (

ಗಾಂಡೀವಕ್ಕೆ ಹೆದೆಯನ್ನೇರಿಸಿ ನಾಣನ್ನು ಚೆನ್ನಾಗಿ ಸೆಳೆದು ಶಬ್ದಮಾಡಿದಾಗ,-)-

ವಚನ:ಅರ್ಥ:ಹಾಗೆ ಪ್ರಳಯಕಾಲದ ಗಾಳಿಯಿಂದ ಹೊಡೆಯಲ್ಪಟ್ಟ ಕುಲಪರ್ವತಗಳು (ತಾವಿರುವ) ನೆಲೆಯಿಂದ ಚಲಿಸುವಂತೆ ಕರ್ಣನು ಚಲಿಸಿದನು. ಕಾಗೆಯ ಬಾವುಟವು ಆಕಾಶಪ್ರದೇಶದಲ್ಲಿ

ಅಲುಗಾಡುತ್ತಿರಲು ತನಗೆ
ಎದುರಾಗಿ ಬರುತ್ತಿರುವ
ಕರ್ಣನ ರಥಕ್ಕೆ, ತನ್ನ ರಥವನ್ನು
ಸಮೀಪವಾಗುವ ಹಾಗೆ
ಹರಿಯಿಸಿ ವಿಂಧ್ಯ
ಮಲಯಪರ್ವತಗಳು
ಒಂದರೊಡನೊಂದು
ತಾಗುವಂತೆ ಎದುರಿಸಿ,
ಅರ್ಜುನನು
ದೇವದತ್ತಶಂಖವನ್ನು ಊದಿ,
ಗಾಂಡೀವಕ್ಕೆ ಹೆದೆಯನ್ನೇರಿಸಿ

ನಾಣನ್ನು ಚೆನ್ನಾಗಿ ಸೆಳೆದು
ಶಬ್ದಮಾಡಿದನು. ಆಗ-

ವ|| ಸ್ರ|| ಎನಿತಾ
ಬ್ರಹ್ಮಾಂಡದಿಂದಿತ್ತುದಧಿ ಕುಲ
ನಗ ದ್ವೀಪ ಸಂಘಾತಮಂತಂ
ತನಿತುಂ ಬತ್ತಿತ್ತು
ತೂಳ್ದತ್ತುಡುಗಿದುದೆನೆ
ದಿಕ್ಪಾಲರಾ ದೇವದತ್ತ|
ಧ್ವನಿ ಸಂಮಿಶ್ರಂ
ಸಮುದ್ಯದ್ರಜತಗಿರಿತಟ ಸ್ಪಷ್ಟ
ಸಂಶ್ಲಿಷ್ಟ ಮೌರ್ವೀ

ನಿನದಂ ಪರ್ವಿತ್ತಕಾಂಡ ಪ್ರಳಯ ಘನ ಘಟಾಟೋಪ ಗಂಭೀರನಾದಂ|| ೧೩೭ ||

ಪದ್ಯ-೧೩೭:ಪದವಿಭಾಗ-ಅರ್ಥ:ಎನಿತು (ಎಷ್ಟು) ಆ ಬ್ರಹ್ಮಾಂಡದಿಂದ ಇತ್ತ ಉದಧಿ ಕುಲ ನಗ ದ್ವೀಪ ಸಂಘಾತಂ (ಬ್ರಹ್ಮಾಂಡದಿಂದ ಈ ಕಡೆ ಎಷ್ಟು ಸಮುದ್ರ, ಕುಲಪರ್ವತದ್ವೀಪ ಸಮೂಹವಿದ್ದಿತೋ ಅವಷ್ಟೂ

ಕ್ರಮವಾಗಿ ಬತ್ತಿತು,) ಆ ಅಂತು
ಅಂತನಿತುಂ ಬತ್ತಿತ್ತು ತೂಳ್ದತ್ತು
ಉಡುಗಿದುದು ಎನೆ
ದಿಕ್ಪಾಲರು (ತಳ್ಳಲ್ಪಟ್ಟಿತು
ಮತ್ತು ಸುಕ್ಕಿಹೋಯಿತು
ಎಂದು ದಿಕ್ಪಾಲಕರು
ಹೇಳುತ್ತಿರಲು) ದೇವದತ್ತ ಧ್ವನಿ
ಸಂಮಿಶ್ರಂ (ದೇವದತ್ತವೆಂಬ
ಶಂಖಧ್ವನಿಯಿಂದ
ಕೂಡಿಕೊಂಡಿರುವುದೂ)
ಸಮುದ್ಯತ್ ರಜತಗಿರಿ ತಟ

(ಎತ್ತರವಾದ
ಕೈಲಾಸಪರ್ವತದ
ದಡದಲ್ಲಿಯೂ ಸ್ಪಷ್ಟವಾಗಿ
ಸೇರಿಕೊಂಡು
ಪ್ರಕಟವಾಯಿತು.) ಸ್ಪಷ್ಟ
ಸಂಶ್ಲಿಷ್ಟ ಮೌರ್ವೀ ನಿನದಂ
(ಪ್ರಳಯಕಾಲದ ಮೋಡಗಳ
ಸಮೂಹದ
ಆಡಂಬರವುಳ್ಳದೂ ಆದ ಆ
ಹೆದೆಯ ಟಂಕಾರ ಶಬ್ದವು)
ಪರ್ವಿತ್ತು ಅಕಾಂಡ ಪ್ರಳಯ

ಘನ ಘಟಾಟೋಪ
ಗಂಭೀರನಾದಂ (ಅಕಾಲದಲ್ಲಿ
ಉಂಟಾದ ಪ್ರಳಯ ಮೇಘ
ಸಮೂಹಗಳ
ಆಡಂಬರವನ್ನುಳ್ಳ ಗಂಭೀರ
ಶಬ್ದವನ್ನುಳ್ಳ ಅತಿ ಎತ್ತರವಾದ
ರಜತಗಿರಿ ಪ್ರದೇಶದಲ್ಲಿ
ಸ್ಪಷ್ಟವಾಗಿ ಸೇರಿಕೊಂಡು -
ಬಿಲ್ಲಿನ ಠೇಂಕಾರ ಶಬ್ದವು-
ಹಬ್ಬಿತ್ತು.)

ಪದ್ಯ-೧೩೭:ಅರ್ಥ:
ಬ್ರಹ್ಮಾಂಡದಿಂದ ಈ ಕಡೆ
ಎಷ್ಟು ಸಮುದ್ರ,
ಕುಲಪರ್ವತದ್ವೀಪ
ಸಮೂಹವಿದ್ದಿತೋ ಅವಷ್ಟೂ
ಕ್ರಮವಾಗಿ ಬತ್ತಿತು,
ತಳ್ಳಲ್ಪಟ್ಟಿತು ಮತ್ತು
ಸುಕ್ಕಿಹೋಯಿತು ಎಂದು
ದಿಕ್ಪಾಲಕರು ಹೇಳುತ್ತಿರಲು
ದೇವದತ್ತವೆಂಬ
ಶಂಖಧ್ವನಿಯಿಂದ

ಕೂಡಿಕೊಂಡಿರುವುದೂ

ಪ್ರಳಯಕಾಲದ ಮೋಡಗಳ

ಸಮೂಹದ

ಆಡಂಬರವುಳ್ಳದೂ ಆದ ಆ

ಹೆದೆಯ ಟಂಕಾರಶಬ್ದವು

ಎತ್ತರವಾದ ಕೈಲಾಸಪರ್ವತದ

ದಡದಲ್ಲಿಯೂ ಸ್ಪಷ್ಟವಾಗಿ

ಸೇರಿಕೊಂಡು

ಪ್ರಕಟವಾಯಿತು.

ವ|| ಆಗಳಾ ಧ್ವನಿಯಂ ಕೇಳ್ದು ದೇವೇಂದ್ರನಿಂದ್ರಲೋಕದೋ

ಳ್
ಮಿಟ್ಟೆಂದುಮಿಡುಕಲಪ್ಪೊಡಂ
ದೇವರಿಲ್ಲದಂತು
ದೇವನಿಕಾಯಂಬೆರಸು ತನ್ನ
ಮಗನ ಕಾಳೆಗಮಂ
ನೋಡಲೆಂದು ಚಿತ್ರಪಟಮಂ
ಕೆದಱಿ
ಗಗನತಳಮನಳಂಕರಿಸಿದಂತೆ
ಷೋಡಶ ರಾಜರ್ವೆರಸು
ಬಂದಿರ್ದನಾಗಳ್-

ವಚನ:ಪದವಿಭಾಗ-ಅರ್ಥ:ಆಗಳಾ ಧ್ವನಿಯಂ ಕೇಳ್ದು ದೇವೇಂದ್ರನು ಇಂದ್ರಲೋಕದೊಳ್ ಮಿಟ್ಟೆಂದು ಮಿಡುಕಲಪ್ಪೊಡಂ (ಆಗ ಆ ಧ್ವನಿಯನ್ನು ಕೇಳಿ ದೇವೇಂದ್ರನ ಇಂದ್ರಲೋಕದಲ್ಲಿ ಮಿಟ್ಟೆಂದು ಅಲುಗಾಡುವುದಕ್ಕೂ-ಕುಮುಟಿಬಿದ್ದರು) ದೇವರಿಲ್ಲದಂತು

ದೇವನಿಕಾಯಂ ಬೆರಸು (ದೇವಲೋಕದಲ್ಲಿ ದೇವತೆಯಿಲ್ಲದ ಹಾಗೆ ಎಲ್ಲ ದೇವತೆಗಳ ಸಮೂಹದೊಡನೆ ಕೂಡಿ) ತನ್ನ ಮಗನ ಕಾಳೆಗಮಂ ನೋಡಲೆಂದು ಚಿತ್ರಪಟಮಂ ಕೆದಱಿ (ತನ್ನ ಮಗನ ಕಾಳಗವನ್ನು ನೋಡಬೇಕೆಂದು ಚಿತ್ರಪಟವನ್ನು ಹರಡಿ) ಗಗನತಳಮನು

ಅಳಂಕರಿಸಿದಂತೆ ಷೋಡಶ ರಾಜರ್ವೆರಸು ಬಂದಿರ್ದನಾಗಳ್ (ಆಕಾಶಪ್ರದೇಶವನ್ನು ಅಲಂಕರಿಸುವ ಹಾಗೆ ಹದಿನಾರುರಾಜರುಗಳೊಡನೆ ಬಂದಿದ್ದನು.) -

ವಚನ:ಅರ್ಥ: ಆಗ ಆ ಧ್ವನಿಯನ್ನು ಕೇಳಿ ದೇವೇಂದ್ರನ ಇಂದ್ರಲೋಕದಲ್ಲಿ ಮಿಟ್ಟೆಂದು

ಅಲುಗಾಡುವುದಕ್ಕೂ
ದೇವಲೋಕದಲ್ಲಿ
ದೇವತೆಯಿಲ್ಲದ ಹಾಗೆ ಎಲ್ಲ
ದೇವತೆಗಳ ಸಮೂಹದೊಡನೆ
ಕೂಡಿ ತನ್ನ ಮಗನ
ಕಾಳಗವನ್ನು ನೋಡಬೇಕೆಂದು
ಚಿತ್ರಪಟವನ್ನು ಹರಡಿ
ಆಕಾಶಪ್ರದೇಶವನ್ನು
ಅಲಂಕರಿಸುವ ಹಾಗೆ
ಹದಿನಾರುರಾಜರುಗಳೊಡನೆ
ಬಂದಿದ್ದನು.

**ಕಂ|| ದೇವ ಬ್ರಹ್ಮ ಮುನೀಂದ್ರಾ
ಸೇವಿತನುತ್ತಪ್ತ ಕನಕವರ್ಣಂ
ಹಂಸ|
ಗ್ರೀವ ನಿಹಿತೈಕಪಾದನಿ
ಳಾವಂದ್ಯನನಿಂದ್ಯನಬ್ಜಗರ್ಭಂ
ಬಂದಂ|| ೧೩೮ ||**

ಪದ್ಯ-೧೩೮:ಪದವಿಭಾಗ-ಅರ್ಥ:ದೇವ ಬ್ರಹ್ಮ ಮುನೀಂದ್ರಾಸೇವಿತಂ (ಆಗ ದೇವತೆಗಳು, ಬ್ರಹ್ಮ ಮತ್ತು ಋಷಿಶ್ರೇಷ್ಠರುಗಳಿಂದ

ಸೇವಿಸಲ್ಪಟ್ಟವನೂ) ಉತ್ತಪ್ತ
ಕನಕವರ್ಣಂ (ಚೆನ್ನಾಗಿ ಕಾಸಿದ
ಚಿನ್ನದ ಬಣ್ಣವುಳ್ಳವನೂ)
ಹಂಸಗ್ರೀವ ನಿಹಿತ
ಏಕಪಾದನು (ಹಂಸದ ಕತ್ತಿನ
ಮೇಲೆ ಇಡಲ್ಪಟ್ಟ ಒಂದು
ಪಾದವುಳ್ಳವನೂ)
ಇಳಾವಂದ್ಯನು ಅನಿಂದ್ಯನು
(ಲೋಕಪೂಜ್ಯನೂ
ಯಾರಿಂದಲೂ
ನಿಂದಿಸಲ್ಪಡದವನೂ)

ಅಬ್ಜಗರ್ಭಂ ಬಂದಂ (ಅಬ್ಜ- ತಾವರೆ; ತಾವರೆಯಲ್ಲ ಹುಟ್ಟಿದವನೂ ಆದ ಬ್ರಹ್ಮನು ಬಂದನು.)

ಪದ್ಯ-೧೩೮:ಅರ್ಥ:ಆಗ ದೇವತೆಗಳು, ಬ್ರಹ್ಮ ಮತ್ತು ಋಷಿಶ್ರೇಷ್ಠರುಗಳಿಂದ ಸೇವಿಸಲ್ಪಟ್ಟವನೂ, ಚೆನ್ನಾಗಿ ಕಾಸಿದ ಚಿನ್ನದ ಬಣ್ಣವುಳ್ಳವನೂ ಹಂಸದ ಕತ್ತಿನ ಮೇಲೆ ಇಡಲ್ಪಟ್ಟ ಒಂದು

ಪಾದವುಳ್ಳವನೂ

ಲೋಕಪೂಜ್ಯನೂ

ಯಾರಿಂದಲೂ

ನಿಂದಿಸಲ್ಪಡದವನೂ

ತಾವರೆಯಲ್ಲಿ ಹುಟ್ಟಿದವನೂ

ಆದ ಬ್ರಹ್ಮನು ಬಂದನು.

ವ|| ಆಗಳ್-

ವಚನ:ಅರ್ಥ: ಆಗ-

ಕಂ|| ಏಱಿಯೆ ನಂದಿಯನಾ

ಪೆಱ

ಗೇಱಿದ ಗಿರಿಸುತೆಯ

ಮೊಲೆಗಳಳ್ಳೇಱಿಂ ನೀ|

ರೇಱಿಸುತಿರೆ ಕರ್ಣಾರ್ಜುನ

ರೇಱಿಂ ನೋಡಲ್ಕೆ

ಭೂತನಾಥಂ ಬಂದಂ|| ೧೩೯ ||

ಪದ್ಯ-೧೩೯:ಪದವಿಭಾಗ-ಅರ್ಥ:ಏಱಿಯೆ ನಂದಿಯನು ಆ (ಆ ನಂದಿಯನ್ನು ಏರಿಕೊಂಡು) ಪೆಱಗೇಱಿದ (ಪೆರೆಗೆ ಏರಿದ- ಹಿಂದೆ ಹತ್ತಿ ಕುಳಿತಿರುವ) ಗಿರಿಸುತೆಯ

ಮೊಲೆಗಳ್ ಅಳ್ಳೇಱಿಂ
(ಪಾರ್ವತಿಯ ಮೊಲೆಗಳ
ನಯವಾದ ತಿವಿತದಿಂದ)
ನೀರ್ ಏಱಿಸುತಿರೆ (ರಸವನ್ನು
ಉಕ್ಕಿಸುತ್ತಿರಲು)
ಕರ್ಣಾರ್ಜುನರ ಏಱಂ
ನೋಡಲ್ಕೆ (ಕರ್ಣಾರ್ಜುನರ
ಕಾಳಗವನ್ನು ನೋಡಲು)
ಭೂತನಾಥಂ ಬಂದಂ
(ಶಿವನೂ ಬಂದನು.)

ಪದ್ಯ-೧೩೯:ಅರ್ಥ: ಆ ನಂದಿಯನ್ನು ಏರಿಕೊಂಡು ಹಿಂದೆ ಹತ್ತಿಕುಳಿತಿರುವ ಪಾರ್ವತಿಯ ಮೊಲೆಗಳ ನಯವಾದ ತಿವಿತದಿಂದ ರಸವನ್ನು ಉಕ್ಕಿಸುತ್ತಿರಲು, ಕರ್ಣಾರ್ಜುನರ ಕಾಳಗವನ್ನು ನೋಡಲು ಶಿವನೂ ಬಂದನು.

ಕಂ||

ಆರನುವರದೊಳಮೆನಗಣ

ಮಾರದ

ಕಣ್ಮಲರ್ಗಳ್ಗಾರ್ಗುಮರಿಗನಿನಿ

ನುತುಂ|

ನೀರದಪಥದೊಳ್ ಮುತ್ತಿನ

ಹಾರದ ಬೆಳಗೆಸೆಯೆ ನಾರದಂ

ಬಂದಿರ್ದಂ|| ೧೪೦ ||

ಪದ್ಯ-೧೪೦:ಪದವಿಭಾಗ-ಅರ್ಥ:ಆರ ನುವರದೊಳಂ ಎನಗೆ ಅಣಂ ಆರದ (ಯಾರ ಯುದ್ಧದಲ್ಲಿಯೂನನಗೆ ಸ್ವಲ್ಪವೂ ತೃಪ್ತಿಯಾಗದ) ಕಣ್

ಅಲರ್ಗಳ್ (ನೇತ್ರಪುಷ್ಪಗಳು ಹೂ/ ಕಮಲದಂತಿರುಬವ ಕಣ್ಣುಗಳು) ಆರ್ಗುಂ ಅರಿಗನಿಂ ಎನುತುಂ (ಅರ್ಜುನನಿಂದ ತೃಪ್ತಿಹೊಂದುತ್ತವೆ) ನೀರದ ಪಥದೊಳ್ (ಮೋಡದ ಮಾರ್ಗದಲ್ಲಿ) ಮುತ್ತಿನಹಾರದ ಬೆಳಗೆಸೆಯೆ ನಾರದಂ ಬಂದಿರ್ದಂ (ಮುತ್ತಿನ ಹಾರದ ಕಾಂತಿಯು ಪ್ರಕಾಶಿಸುತ್ತಿರಲು ನಾರದನು ಬಂದಿದ್ದನು)

ಪದ್ಯ-೧೪೦:ಅರ್ಥ:ಯಾರ ಯುದ್ಧದಲ್ಲಿಯೂ ನನಗೆ ಸ್ವಲ್ಪವೂ ತೃಪ್ತಿಯಾಗದ ನನ್ನ ನೇತ್ರಪುಷ್ಪಗಳು, ಅರ್ಜುನನಿಂದ ತೃಪ್ತಿಹೊಂದುತ್ತವೆ ಎಂದು ಹೇಳುತ್ತಾ ಆಕಾಶಮಾರ್ಗದಲ್ಲಿ ಮುತ್ತಿನ ಹಾರದ ಕಾಂತಿಯು ಪ್ರಕಾಶಿಸುತ್ತಿರಲು ನಾರದನು ಬಂದಿದ್ದನು.

ಕಂ||ರಸೆಯಿಂದಮೊಗೆದು

ಪೆಡೆಗಳ

ಪೊಸ

ಮಾಣಿಕದೆಳವಿಸಿಲ್ಗಳೊಳ್

ಪೊಸದಳಿರೊಳ್|

ಮುಸುಕಿದ ತೆಱದಿಂದೆಸೆದಿರೆ

ಪೊಸತೆನೆ ನಡೆ

ನೋಡಲುರಗರಾಜಂ ಬಂದಂ||

೧೪೧ ||

ಪದ್ಯ-೧೪೧:ಪದವಿಭಾಗ-

ಅರ್ಥ:ರಸೆಯಿಂದಂ ಒಗೆದು

ಪೆಡೆಗಳ ಪೊಸ ಮಾಣಿಕದೆ
(ಪಾತಾಳಲೋಕದಿಂದ ಹುಟ್ಟಿ
ಹೆಡೆಗಳ ಹೊಸಮಾಣಿಕ್ಯಗಳು)
ಎಳವಿಸಿಲ್ಗಳೊಳ್ ಪೊಸ (ದ)
ತಳಿರೊಳ್ ಮುಸುಕಿದ
(ಎಳೆಬಿಸಿಲಿನಲ್ಲಿ ಹೊಸ
ಚಿಗುರುಗಳಿಂದ
ಮುಚ್ಚಿಕೊಂಡಿರುವ)
ತೆಱದಿಂದೆ ಎಸೆದಿರೆ ಪೊಸತೆನೆ
ನಡೆ ನೋಡಲು ಉರಗರಾಜಂ
ಬಂದಂ (ರೀತಿಯಿಂದ

ಪ್ರಕಾಶಿಸುತ್ತಿರಲು
ಸರ್ಪರಾಜನಾದ
ವಾಸುಕಿಯೂ ಬಂದನು)

ಪದ್ಯ-೧೪೧:ಅರ್ಥ:

ಪಾತಾಳಲೋಕದಿಂದ ಹುಟ್ಟಿ
ಹೆಡೆಗಳ ಹೊಸಮಾಣಿಕ್ಯಗಳು
ಎಳೆಬಿಸಿಲಿನಲ್ಲಿ ಹೊಸ
ಚಿಗುರುಗಳಿಂದ
ಮುಚ್ಚಿಕೊಂಡಿರುವ
ರೀತಿಯಿಂದ ಪ್ರಕಾಶಿಸುತ್ತಿರಲು

ಸರ್ಪರಾಜನಾದ

ವಾಸುಕಿಯೂ ಬಂದನು.

ದಿನಕರನುಮಿಂದ್ರನುಂ ನಿಜ

ತನಯರ ದೆಸೆಗೆಱಗಿದೆಱಕದಿಂ

ಗೆಲವಿನ ಮಾ|

ತನೆ ನುಡಿಯೆ ನುಡಿದ

ಜಗಳವ

ದಿನಿಸಾನುಂ ತ್ರಿಪುರಹರನ

ಕಿವಿಗೆಯ್ದುವುದುಂ|| ೧೪೨

ಪದ್ಯ-೧೪೨:ಪದವಿಭಾಗ-

ಅರ್ಥ:ದಿನಕರನುಂ

ಇಂದ್ರನುಂ ನಿಜ ತನಯರ
ದೆಸೆಗೆ ಎಱಗಿದ ಎಱಕದಿಂ
(ಸೂರ್ಯನೂ ಇಂದ್ರನೂ
ತಮ್ಮ ಮಕ್ಕಳ ಕಡೆಗೆ
ಉಂಟಾದ ಪಕ್ಷಪಾತದಿಂದ)
ಗೆಲವಿನ ಮಾತನೆ ನುಡಿಯೆ
(ಜಯದ ಮಾತನ್ನೇ
ಆಡುತ್ತಿರಲು) ನುಡಿದ
ಜಗಳಮದು ಇನಿಸಾನುಂ
ತ್ರಿಪುರಹರನ ಕಿವಿಗೆ
ಎಯ್ದುವುದುಂ (ಆಡಿದ

ಜಗಳವು ಒಂದಿಷ್ಟು ಈಶ್ವರನ ಕಿವಿಗಳಿಗೂ ಮುಟ್ಟಿತು, ಮುಟ್ಟಲು-)

ಪದ್ಯ-೧೪೨:ಅರ್ಥ:ಸೂರ್ಯನೂ ಇಂದ್ರನೂ ತಮ್ಮ ಮಕ್ಕಳ ಕಡೆಗೆ ಉಂಟಾದ ಪಕ್ಷಪಾತದಿಂದ (ತಮ್ಮ ತಮ್ಮ ಮಕ್ಕಳ) ಜಯದ ಮಾತನ್ನೇ ಆಡುತ್ತಿರಲು ಆಡಿದ ಜಗಳವು ಒಂದಿಷ್ಟು ಈಶ್ವರನ ಕಿವಿಗಳಿಗೂ ಮುಟ್ಟಿತು.

ವ|| ಆಗಳ್ ದೇವೇಂದ್ರಂಗಂ ದಿವಸೇಂದ್ರಂಗಂ ಬಟಿಯನಟ್ಟಿ ಬರಿಸಿ-

ವಚನ:ಪದವಿಭಾಗ-

ಅರ್ಥ:ಆಗಳ್ ದೇವೇಂದ್ರಂಗಂ ದಿವಸೇಂದ್ರಂಗಂ ಬಟಿಯನು ಅಟ್ಟಿ (ದೂತರನ್ನು ಕಳುಹಿಸಿ) ಬರಿಸಿ (ಬರಮಾಡಿಕೊಂಡು)-

ವಚನ:ಅರ್ಥ:ವ|| ಆಗ ಇಂದ್ರನಿಗೂ ಸೂರ್ಯನಿಗೂ

ದೂತರನ್ನು ಕಳುಹಿಸಿ

ಬರಮಾಡಿಕೊಂಡು-

ಕಂ|| ಜಗಳಮಿದೇಂ ದಿನಕರ

ಪೊಣ

ರ್ದು ಗೆಲ್ವನೇ ನಿಜತನೂಭವಂ

ಹರಿಗನೊಳೇಂ|

ಬಗೆಗೆಟ್ಟೆಯೊ ಧುರದೊಳವಂ

ಮಿಗಿಲೆನಗೆನೆ ನಿನಗೆ

ಪಗಲೊಳೇಂ ಕಬ್ತಲೆಯೇ||

೧೪೩ ||

ಪದ್ಯ-೧೪೩:ಪದವಿಭಾಗ-ಅರ್ಥ:ಜಗಳಂ ಇದೇಂ ದಿನಕರ (ಸೂರ್ಯನೇ ಇದೇನು ಜಗಳ,) ಪೊಣರ್ದು ಗೆಲ್ವನೇ ನಿಜ ತನೂಭವಂ ಹರಿಗನೊಳು ಏಂ, (ನಿನ್ನ ಮಗನಾದ ಕರ್ಣನು ಹರಿಗನಲ್ಲಿ ಹೆಣಗಾಡಿ ಗೆಲ್ಲುತ್ತಾನೆಯೇ,) ಬಗೆಗೆಟ್ಟೆಯೊ (ಬುದ್ಧಿ ಕೆಟ್ಟಿದ್ದೀಯೇನು?)

ಧುರದೊಳವಂ ಮಿಗಿಲು ಎನಗೆ ಎನೆ, ನಿನಗೆ ಪಗಲೊಳೇಂ ಕೞ್ತಲೆಯೇ (ನಿನಗೆ ಹಗಲಿನಲ್ಲಿಯೇ ಕತ್ತಲೆಯೇ?)

ಪದ್ಯ-೧೪೩:ಅರ್ಥ:
ಸೂರ್ಯನೇ ಇದೇನು ಜಗಳ, ನಿನ್ನ ಮಗನಾದ ಕರ್ಣನು ಹರಿಗನಲ್ಲಿ ಹೆಣಗಾಡಿ ಗೆಲ್ಲುತ್ತಾನೆಯೇ, ಬುದ್ಧಿ ಕೆಟ್ಟಿದ್ದೀಯೇನು? ಯುದ್ಧದಲ್ಲಿ

ಅವನು ನನಗಿಂತಲೂ ಮೇಲಾದವನು ಎನ್ನುವಾಗ (ಧುರದೊಳವಂ ಮಿಗಿಲು ಎನಗೆ ಎನೆ,) ನಿನಗೆ ಹಗಲಿನಲ್ಲಿಯೇ ಕತ್ತಲೆಯೇ? (ವ್ಯಾಸಭಾರತದಲ್ಲಿಯೂ ಈ ಜಗಳದ ವಿಷಯ ಇದೆ!)

ವ|| ಎಂದು ದಿನಕರನ ಪುರಂದರನ ಜಗಳಮಂ ಪತ್ತುವಿಡೆ ನುಡಿದು-

ವಚನ:ಪದವಿಭಾಗ-ಅರ್ಥ:ಎಂದು ದಿನಕರನ ಪುರಂದರರನ (ಸೂರ್ಯನ ಇಂದ್ರನ) ಜಗಳಮಂ ಪತ್ತುವಿಡೆ ನುಡಿದು (ಕೊನೆಗಾಣುವಂತೆ ಹೇಳಿ)- **ವಚನ:ಅರ್ಥ:**ವ|| ಸೂರ್ಯ ಮತ್ತು ಇಂದ್ರರ ಜಗಳವನ್ನು ಕೊನೆಗಾಣುವಂತೆ ಹೇಳಿ-

ಕಂ|| ಅಳವಿನೊಳೆನ್ನುಮನಿನಿಸ

ಗ್ಗಳಿಸಿದ ಹರಿಗನೊಳಿದಿರ್ಚಿ

ಕರ್ಣಂ ಗೆಲಲು|

ಮ್ಮಳಿಪಂ ಗಡಮೆಂದೋಪಳ

ತಳಮಂ ಪೊಯ್ದೀಶ್ವರಂ

ಮುಗುಳ್ನಗೆ ನಕ್ಕಂ|| ೧೪೪ ||

ಪದ್ಯ-00:ಪದವಿಭಾಗ-

ಅರ್ಥ:ಅಳವಿನೊಳು

ಎನ್ನುಮಂ ಇನಿಸು ಅಗ್ಗಳಿಸಿದ

ಹರಿಗನೊಳು ಇದಿರ್ಚಿ

(ಪರಾಕ್ರಮದಲ್ಲಿ ನನ್ನನ್ನೂ

ಒಂದಿಷ್ಟು ಮೀರಿರುವ

ಹರಿಗನನ್ನು ಎದುರಿಸಿ) ಕರ್ಣಂ ಗೆಲಲು ಉಮ್ಮಳಿಪಂ ಗಡಂ (ಗೆಲ್ಲುವುದಕ್ಕೆ ಕರ್ಣನು ಕಾತರನಾಗಿದ್ದಾನೆಯಲ್ಲವೇ, ಗಡ!ಓಹೋ!) ಎಂದು ಓಪಳ ತಳಮಂ (ಎಂದು ಈಶ್ವರನು ತನ್ನ ಪ್ರಿಯೆಯಾದ ಪಾರ್ವತಿಯ ಅಂಗೈಯನ್ನು) ಪೊಯ್ದು ಈಶ್ವರಂ ಮುಗುಳ್ನಗೆ ನಕ್ಕಂ (ತಟ್ಟಿ ಹುಸಿನಗೆಯನ್ನು ನಕ್ಕನು.)

ಪದ್ಯ-00:ಅರ್ಥ:

ಪರಾಕ್ರಮದಲ್ಲಿ ನನ್ನನ್ನೂ ಒಂದಿಷ್ಟು ಮೀರಿರುವ ಹರಿಗನನ್ನು ಎದುರಿಸಿ ಗೆಲ್ಲುವುದಕ್ಕೆ ಕರ್ಣನು ಕಾತರನಾಗಿದ್ದಾನೆಯಲ್ಲವೇ ಎಂದು ಈಶ್ವರನು ತನ್ನ ಪ್ರಿಯೆಯಾದ ಪಾರ್ವತಿಯ ಅಂಗೈಯನ್ನು ತಟ್ಟಿ ಹುಸಿನಗೆಯನ್ನು ನಕ್ಕನು.

ವ|| ಅಂತು ಮುಗಿಲೂಱಿದ
ಮೂಱುಲೋಕಮುಂ
ಕರ್ಣಾರ್ಜುನರ ಯುದ್ಧಮಂ
ನೋಡಲ್ ನೆರೆದಲ್ಲಿ
ನೆರವಿವಡೆದೆನ್ನ ಪ್ರತಿಜ್ಞೆಯಂ
ನೆಱಪಲಿಂದವಸಂಬಡೆದೆನೆಂ
ದು ಕೌರವ
ಕುಲಹಿಮಕರಾನಿಲಪ್ರಚಯವ
ರ್ಷವಾರಿದನಪ್ಪ
ಪವನತನಯಂ
ಬದ್ಧವಪುವಾಗಿ

ದುರ್ಯೋಧನಾನುಜರಂ ಪೆಸರ್ವೆಸರೊಳೆ ಕರೆದು ಮೂದಲಿಸಿದೊಡೆ ಮುನ್ನೆ ತಮ್ಮೊಡವುಟ್ಟಿದರ್ ಸತ್ತೞಲೊಳ ನಿಬರುಮೊಂದಾಗಿ ಬಂದು ತಾಗಿದಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಮುಗಿಲು ಊಡಿದ (ಹಾಗೆ ಆಕಾಶದಲ್ಲಿ ನೆರೆದಿರುವ)

ಮೂಱುಲೋಕಮುಂ
(ಮೂರುಲೋಕವೂ)
ಕರ್ಣಾರ್ಜುನರ ಯುದ್ಧಮಂ
ನೋಡಲ್ ನೆರೆದಲ್ಲಿ
(ಕರ್ಣಾರ್ಜುನರ ಯುದ್ಧವನ್ನು
ನೋಡಲು ನೆರೆದಿರುವಾಗಲೇ)
ನೆರವಿವಡೆದು ಎನ್ನ
ಪ್ರತಿಜ್ಞೆಯಂ ನೆಱಪಲಿಂದು
ಅವಸಂಬಡೆದೆನೆಂದು (ನಾನೂ
ನನ್ನ ಪ್ರತಿಜ್ಞೆಯನ್ನು
ಪೂರ್ಣಮಾಡಲು

ಅವಕಾಶಪಡೆದೆನೆಂದು)
ಕೌರವ ಕುಲ ಹಿಮಕರ
ಆನಿಲಪ್ರಚಯ (ಚಂದ್ರನ
ಕೊಳೆಯ ರಾಶಿಗೆ) ವರ್ಷ
ವಾರಿದನಪ್ಪ ಪವನತನಯಂ
(ಮಳೆಗಾಲದ
ಮೋಡವಾಗಿರುವ
ಭೀಮಸೇನನು)
ಬದ್ಧವಪುವಾಗಿ (ಗಟ್ಟಿ
ಶರೀರದವನಾಗಿ)
ದುರ್ಯೋಧನ ಅನುಜರಂ

ಪೆಸರ್ವೆಸರೊಳೆ ಕರೆದು
(ದುರ್ಯೋಧನನ
ತಮ್ಮಂದಿರು ಒಬ್ಬರೊಬ್ಬರನ್ನೂ
ಅವರ ಹೆಸರನ್ನು ಹಿಡಿದು
ಕರೆದು) ಮೂದಲಿಸಿದೊಡೆ
(ಮೂದಲಿಸಿದಾಗ) ಮುನ್ನೆ
ತಮ್ಮ ಒಡವುಟ್ಟಿದರ್
ಸತ್ತಬಿಲೊಳು (ಈಗಾಗಲೇ
ತಮ್ಮ ಸಹೋದರರು ಸತ್ತ
ದುಖದಿಂದ) ಅನಿಬರುಂ
ಒಂದಾಗಿ ಬಂದು ತಾಗಿದಾಗಳ್

(ಆ ಅಷ್ಟು ಜನವೂ ಒಂದಾಗಿ ಸೇರಿ ಎದುರಿಸಿದರು, ಆಗ)-

ವಚನ:ಅರ್ಥ:ಹಾಗೆ ಆಕಾಶದಲ್ಲಿ ನೆರೆದಿರುವ ಮೂರುಲೋಕವೂ ಕರ್ಣಾರ್ಜುನರ ಯುದ್ಧವನ್ನು ನೋಡಲು ನೆರೆದಿರುವಾಗಲೇ ನಾನೂ ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಲು ಅವಕಾಶಪಡೆದೆನೆಂದು ಕೌರವವಂಶವೆಂಬ ಚಂದ್ರನ

ಕೊಳೆಯ ರಾಶಿಗೆ ಮಳೆಗಾಲದ ಮೋಡವಾಗಿರುವ ಭೀಮಸೇನನು ಗಟ್ಟಿ ಶರೀರದವನಾಗಿ (ಉಬ್ಬಿ), ದುರ್ಯೋಧನನ ತಮ್ಮಂದಿರು ಒಬ್ಬರೊಬ್ಬರನ್ನೂ ಅವರ ಹೆಸರನ್ನು ಹಿಡಿದು ಕರೆದು ಮೂದಲಿಸಿದಾಗ, ಈಗಾಗಲೇ ತಮ್ಮ ಸಹೋದರರು ಸತ್ತ ದುಖದಿಂದ ದುಖಿತರಾದ ಆ

ಅಷ್ಟು ಜನವೂ ಒಂದಾಗಿ ಸೇರಿ ಎದುರಿಸಿದರು. ಆಗ

ಮ|| ಮಸಕಂಗುಂದದೆ
ಪಾಯ್ವರಾತಿ
ಶರಸಂಘಾತಂಗಳಂ ಕೂಡೆ
ಖಂ
ಡಿಸಿ ಬಿಲ್ಲಂ
ಮುಱಿಯೆಚ್ಚೊಡಂತನಿಬರುಂ
ಬಾಳ್ಗಿೞ್ತು ಮೇಲ್ವಾಯ್ದೊಡ|
ರ್ಬಿಸೆ ತಿಣ್ಣಂ
ತೆಗೆದರ್ಧಚಂದ್ರಶರದಿಂ

ಸೂಟ್ ಸೂಟಿಯೊಳೆಚ್ಚಾಗಳ ಚಿಸಿದಂತಿರ್ದುದುರುಳ್ದ ಕೌರವಶಿರಪದ್ಮಂಗಳಿಂ ಕೊಳ್ಗುಳಂ|| ೧೪೫ ||

ಪದ್ಯ-00:ಪದವಿಭಾಗ-ಅರ್ಥ: ಮಸಕಂ-ಗುಂದದೆ ಪಾಯ್ವ ಅರಾತಿ ಶರ ಸಂಘಾತಂಗಳಂ (ಕಡಿಮೆಯಾಗದ ವೇಗದಿಂದ ಹಾದುಬರುತ್ತಿರುವ ಬಾಣಸಮೂಹಗಳನ್ನು) ಕೂಡೆ

ಖಂಡಿಸಿ ಬಿಲ್ಲಂ ಮುಱಿಯೆಚ್ಚೊಡೆ (ತಕ್ಷಣವೇ ಕತ್ತರಿಸಿ ಬಿಲ್ಲನ್ನೂ ಮುರಿದುಹೋಗುವ ಹಾಗೆ ಹೊಡೆಯಲು,) ಅಂತು ಅನಿಬರುಂ ಬಾಳ್ಗಿಱ್ತು (ಬಾಳ್ ಕಿಳ್ತು- ಕತ್ತಿಯನ್ನು ಒರೆಯಿಂದ ಹೊರತೆಗೆದು) ಮೇಲ್ವಾಯ್ದೊಡೆ ಅರ್ಬಿಸೆ ತಿಣ್ಣಂ (ಸೆಳೆದು ಮೇಲೆ ನುಗ್ಗಿ ಬರಲು, ಅತಿಕ್ರಮಿಸಲು, ತೀವ್ರವಾಗಿ)

ತೆಗೆದು ಅರ್ಧಚಂದ್ರಶರದಿಂ (
ಭೀಮನು ರಭಸದಿಂದ
ಅರ್ಧಚಂದ್ರಾಕಾರದ
ಬಾಣವನ್ನು ತೆಗೆದು) ಸೂಟ್
ಸೂಟೊಳೆಚ್ಚಾಗಳ್
(ಬಾರಿಬಾರಿಗೂ, / ಪದೇ ಪದೇ
ಹೊಡೆದಾಗ) ಅರ್ಚಿಸಿದಂತೆ
ಇರ್ದುದು ಉರುಳ್ದ ಕೌರವಶಿರ
ಪದ್ಮಂಗಳಿಂ ಕೊಳ್ಗುಳಂ
(ಕೊಳ್ಗುಳಂ-
ಯುದ್ಧಭೂಮಿಯು

ಉರುಳಿರುವ ಕೌರವರ ತಲೆಯೆಂಬ ಕಮಲಗಳಿಂದ ಪೂಜಿಸಲ್ಪಟ್ಟಂತೆ ಇದ್ದಿತು.)

ಪದ್ಯ-00:ಅರ್ಥ: ಕಡಿಮೆಯಾಗದ ವೇಗದಿಂದ ಹಾದುಬರುತ್ತಿರುವ ಬಾಣಸಮೂಹಗಳನ್ನು ತಕ್ಷಣವೇ ಕತ್ತರಿಸಿ ಬಿಲ್ಲನ್ನೂ ಮುರಿದುಹೋಗುವ ಹಾಗೆ ಹೊಡೆದನು. ಅಷ್ಟು ಜನವೂ ಕತ್ತಿಯನ್ನು ಒರೆಯಿಂದ

ಹೊರತೆಗೆದು- ಸೆಳೆದು ಮೇಲೆ
ನುಗ್ಗಿ ಬರಲು, ಭೀಮನು
ರಭಸದಿಂದ
ಅರ್ಧಚಂದ್ರಾಕಾರದ
ಬಾಣವನ್ನು ತೆಗೆದು
ಬಾರಿಬಾರಿಗೂ, / ಪದೇ ಪದೇ
ಹೊಡೆದಾಗ
ಯುದ್ಧಭೂಮಿಯು
ಉರುಳಿರುವ ಕೌರವರ
ತಲೆಯೆಂಬ ಕಮಲಗಳಿಂದ
ಪೂಜಿಸಲ್ಪಟ್ಟಂತೆ ಇದ್ದಿತು.

<u>ದುಶ್ಶ್ಯಾಸನನ ವಧೆ</u>

ವ|| ಅಂತು ದುರ್ಯೋಧನ ದುಶ್ಶ್ಯಾಸನರಿರ್ವರುಮುೞಿಯುೞಿದ ಕೌರವರೆಲ್ಲರುಮಂ ಜೀರಗೆಯೊಕ್ಕಲ್ಮಾಡಿ ಕೆಡೆದ ಪೆಣಂಗಳನೆಡಗಲಿಸಿ ನಿಂದು-

ವಚನ:ಪದವಿಭಾಗ-

ಅರ್ಥ:ಅಂತು ದುರ್ಯೋಧನ ದುಶ್ಶ್ಯಾಸನರ್ ಇರ್ವರುಂ ಉೞಿಯೆ (ಹಾಗೆ ದುರ್ಯೋಧನ

ದುಶ್ಯಾಸನರಿಬ್ಬರನ್ನು ಬಿಟ್ಟು ಉಳಿಯಲು) ಉೞಿದ ಕೌರವರೆಲ್ಲರುಮಂ (ಉಳಿದ ಕೌರವರೆಲ್ಲರನ್ನೂ) ಜೀರಗೆಯೊಕ್ಕಲ್ಮಾಡಿ ಕೆಡೆದ ಪೆಣಂಗಳನು ಎಡಗಲಿಸಿ ನಿಂದು (ಜೀರಿಗೆಯನ್ನು ಒಕ್ಕುವಂತೆ ಒಕ್ಕಲುಮಾಡಿ/ ಪುಡಿಮಾಡಿ ಸತ್ತವರ ಹೆಣಗಳನ್ನು ದಾಟಿ ನಿಂತನು.)

ವಚನ:ಅರ್ಥ:ಹಾಗೆ ದುರ್ಯೋಧನ ದುಶ್ಯಾಸನರಿಬ್ಬರನ್ನು ಬಿಟ್ಟು ಉಳಿಯಲು, ಉಳಿದ ಕೌರವರೆಲ್ಲರನ್ನೂ ಜೀರಿಗೆಯನ್ನು ಒಕ್ಕುವಂತೆ ಒಕ್ಕಲುಮಾಡಿ/ ಪುಡಿಮಾಡಿ ಸತ್ತವರ ಹೆಣಗಳನ್ನು ದಾಟಿ ನಿಂತನು.

ಮ|| ಚಲದಿಂ ಕೃಷ್ಣೆಯ ಕೇಶಮಂ ಪಿಡಿದ

ನಿನ್ನಿಂದಾದಟಿಲ್ ನಿನ್ನುರ
ಸ್ಥಲಮಂ ಪೊೀಟಿದೆ
ಪೊೀಪುದಲ್ತೆನಗದೇಕಳ್ಕಿರ್ದಪ್ಪೆ
ಬಾಟ್ವಿ ಪಂ|
ಬಲದೇನಿಂ ನಿನಗುಂಟೆ
ನಿನ್ನನುಜರಂ
ಕಂಡೆಂತುಮೇನೆನ್ನ ತೋ
ಳ್ವಲೆಯೊಳ್ ಸಿಲ್ಕಿದೆಯೆಂದು
ಮೂದಲಿಪುದುಂ ದುಶ್ಶ್ಯಾಸನಂ
ತಾಗಿದಂ|| ೧೪೬ ||

ಪದ್ಯ-೧೪೬:ಪದವಿಭಾಗ-ಅರ್ಥ:ಚಲದಿಂ ಕೃಷ್ಣೆಯ ಕೇಶಮಂ ಪಿಡಿದ ನಿನ್ನಿಂದಾದ ಅೞಲ್ (ಛಲದಿಂದ ದ್ರೌಪದಿಯ ಕೂದಲನ್ನು ಹಿಡಿದೆಳೆದ ನಿನ್ನಿಂದಾಗಿರುವ ದುಃಖವು) ನಿನ್ನ ಉರಸ್ಥಲಮಂ ಪೋೞದೆ (ನಿನ್ನ ಹೃದಯಪ್ರದೇಶವನ್ನು ಸೀಳದೇ / ಹೋಳು ಮಾಡದೆ,) ಪೋಪುದಲ್ತು ಎನಗೆ ಅದೇಕೆ

ಅಳ್ಕಿರ್ದಪ್ಪೈ (ಹೋಗುವುದಿಲ್ಲ.
ನನಗೆ ಏತಕ್ಕಾಗಿ
ಹೆದರಿದ್ದೀಯೆ?) ಬಾಳ್ವಿ
ಪಂಬಲ ಅದೇನ್ ಇಂ
ನಿನಗುಂಟೆ ನಿನ್ನ ಅನುಜರಂ
ಕಂಡು (ನಿನ್ನ -ಸತ್ತ-
ತಮ್ಮಂದಿರನ್ನು ನೋಡಿಯೂ
ಬದುಕಬೇಕೆಂಬ ಹಂಬಲ
ನಿನಗೆ ಇನ್ನೂ ಇದೆಯೇ?)
ಎಂತುಂ ಏನೆನ್ನ
ತೋಳ್ವಲೆಯೊಳ್

ಸಿಲ್ಕಿದೆಯೆಂದು (ಹೇಗಾದರೇನು? ನನ್ನ ತೋಳಿನ ಬಲೆಯಲ್ಲಿ ಸಿಕ್ಕಿದ್ದೀಯೇ’ ಎಂದು) ಮೂದಲಿಪುದುಂ ದುಶ್ಶ್ಯಾಸನಂ ತಾಗಿದಂ (ಎಂದು ಮೂದಲಿಸಲು ದುಶ್ಶ್ಯಾಸನನು ತಾಗಿ ಯುದ್ಧಕ್ಕೆ ಬಂದನು.)

ಪದ್ಯ-೧೪೬:ಅರ್ಥ:‘ಛಲದಿಂದ ದ್ರೌಪದಿಯ ಕೂದಲನ್ನು ಹಿಡಿದೆಳೆದ ನಿನ್ನಿಂದಾಗಿರುವ

ದುಃಖವು ನಿನ್ನ
ಹೃದಯಪ್ರದೇಶವನ್ನು
ಸೀಳದೇ ಹೋಗುವುದಿಲ್ಲ.
ನನಗೆ ಏತಕ್ಕಾಗಿ
ಹೆದರಿದ್ದೀಯೆ? ನಿನ್ನ -ಸತ್ತ-
ತಮ್ಮಂದಿರನ್ನು ನೋಡಿಯೂ
ಬದುಕಬೇಕೆಂಬ ಹಂಬಲ
ನಿನಗೆ ಇನ್ನೂ ಇದೆಯೇ?
ಹೇಗಾದರೇನು? ನನ್ನ
ತೋಳಿನ ಬಲೆಯಲ್ಲಿ
ಸಿಕ್ಕಿದ್ದೀಯೇ’ ಎಂದು

ಮೊದಲಿಸಲು ದುಶ್ಶ್ಯಾಸನನು ತಾಗಿ ಯುದ್ಧಕ್ಕೆ ಬಂದನು.

ವ|| ಅಂತು ತಾಗಿದಾಗಳ್-

ವಚನ:ಅರ್ಥ:ವ|| ಹಾಗೆ ಎದರಿಸಿದಾಗ-

ಕಂ|| ಕಱುಪೆೞ್ದ ಪಗೆಯ ಬೇರ್ವರಿ
ದುಱುಮಿಕೆಯ ಪೊದೞ್ದ ಗಂಡಮಚ್ಚರದೊದವಿಂ|
ನೆಱನನೆ ಮೂದಲಿಸುತ್ತುಂ

ನೆಱನನೆ ತೆಗೆದೆಚ್ಚರೊರ್ವರೊರ್ವರನಾಗಳ್|| ೧೪೭ ||

ಪದ್ಯ-೧೪೭:ಪದವಿಭಾಗ-ಅರ್ಥ: ಕಱುಪಿ ಎಟ್ಟಿ ಪಗೆಯ (ಕೆರಳಿರುವ ಹೆಚ್ಚಿದ ಹಗೆತನದಿಂದಲೂ,) ಬೇರ್ವರಿದ ಉಱುಮಿಕೆಯ (ಬೇರುಬಿಟ್ಟಿರುವ ಸಿಟ್ಟಿನಂದಲೂ) ಪೊದಟ್ಟಿ ಗಂಡಮಚ್ಚರದ (ತುಂಬಿದ

ಪೌರುಷ ಮತ್ತು ಮತ್ಸರದ)
ಒದವಿಂ ನೆಱನನೆ
(ಮರ್ಮವನ್ನೇ ಒದವಿ-
ಕುರಿತು) ಮೂದಲಿಸುತ್ತುಂ
ನೆಱನನೆ (ನೆರೆ- ಬಹಳ, ಹೆಚ್ಚು-
ನೆರವು-ಬಲ, ಬಹಳವಾಗಿ
ಶಕ್ತಿಯನ್ನು
ಮರ್ಮಸ್ಥಾನವನ್ನು,
ಬಹಳವಾಗಿ ಮೂದಲಿಸುತ್ತ)
ತೆಗೆದು ಎಚ್ಚರು
ಒರ್ವರೊರ್ವರನು ಆಗಳ್

(ಒಬ್ಬೊಬ್ಬರೂ ಮರ್ಮಸ್ಥಾನವನ್ನು ಗುರಿಮಾಡಿ ಹೊಡೆದರು.)

ಪದ್ಯ-೧೪೭:ಅರ್ಥ:

ಕೆರಳಿರುವ ಹೆಚ್ಚಿದ ಹಗೆತನದಿಂದಲೂ, ಬೇರುಬಿಟ್ಟಿರುವ ಸಿಟ್ಟಿನಂದಲೂ, ತುಂಬಿದ ಪೌರುಷ ಮತ್ತು ಮತ್ಸರದ ಸೇರುವಿಕೆಯಿಂದಲೂ ಮರ್ಮವನ್ನೇ ಒದವಿ-ಕುರಿತು

ಶಕ್ತಿಯನ್ನು ಬಹಳವಾಗಿ ಮೂದಲಿಸುತ್ತ ಒಬ್ಬೊಬ್ಬರೂ ಮರ್ಮಸ್ಥಾನವನ್ನು ಗುರಿಮಾಡಿ ಹೊಡೆದರು.

ಸುರಿಗಿಱಿವ ತೆಱದಿನೋರೊ
ರ್ವರನಿಸೆ ನಡೆ ನಟ್ಟ ಕೋಲ
ಬೞಿವಿಡಿದೆತ್ತಂ।
ಸುರಿದುವವಂದಿರ ಮುಳಿಸಿನ
ತೆರಳ್ದ ದಳ್ಳುರಿಯನಿೞಿಸಿ
ನವರುರಂಗಳ್॥ ೧೪೮॥

ಪದ್ಯ-೧೪೮:ಪದವಿಭಾಗ-ಅರ್ಥ:ಸುರಿಗಿ ಇಱಿವ ತೆಱದಿ ಓರೊರ್ವರನು ಇಸೆ (ಕತ್ತಿಯಿಂದ ಹೊಡೆಯುವಂತೆ ಒಬ್ಬನು ಮತ್ತೊಬ್ಬನನ್ನು ಬಾಣದಿಂದ ಹೊಡೆಯಲು), ನಡೆ ನಟ್ಟ ಕೋಲ ಬಟ್ಟೆವಿಡಿದು (ಚೆನ್ನಾಗಿ ನಾಟಿಕೊಂಡ ಬಾಣದ ದಾರಿಯನ್ನೇ ಅನುಸರಿಸಿ) ಎತ್ತಂ ಸುರಿದುವು ಅವಂದಿರ

ಮುಳಿಸಿನ ತೆರಳ್ದ ದಳ್ಳುರಿಯನು ಇಬಿೞಸಿ ನವ ರುಧಿರಂಗಳ್ (ಉಧಿರ- ರಕ್ತ) (ಹೊಸರಕ್ತವು ಅವರುಗಳ ಕೋಪದ ಒಟ್ಟುಗೂಡಿಸಿದ ದಳ್ಳುರಿಯನ್ನೂ ತಿರಸ್ಕರಿಸುತ್ತ ಎಲ್ಲಕಡೆಯಲ್ಲಿಯೂ ಸುರಿಯಿತು.)

ಪದ್ಯ-೧೪೮:ಅರ್ಥ: ಕತ್ತಿಯಿಂದ ಹೊಡೆಯುವಂತೆ ಒಬ್ಬನು ಮತ್ತೊಬ್ಬನನ್ನು

ಬಾಣದಿಂದ ಹೊಡೆಯಲು,
ಚೆನ್ನಾಗಿ ನಾಟಿಕೊಂಡ ಬಾಣದ
ದಾರಿಯನ್ನೇ ಅನುಸರಿಸಿ
ಹೊಸರಕ್ತವು ಅವರುಗಳ
ಕೋಪದ ಒಟ್ಟುಗೂಡಿಸಿದ
ದಳ್ಳುರಿಯನ್ನೂ ತಿರಸ್ಕರಿಸುತ್ತ
ಎಲ್ಲಕಡೆಯಲ್ಲಿಯೂ
ಸುರಿಯಿತು.

ವ|| ಅಂತು ನಿಜನಿಶಿತಮಾರ್ಗಣಂಗಳಿಂದ ಮಂಬು ತಪ್ಪ ಜಟ್ಟಿಗ

ಬಿಲ್ಲಾಳಂತೆಚ್ಚು

ಪಾಯ್ವರಾತಿಯ ಮೆಯ್ಯ

ನೆತ್ತರಂ ಕಂಡು

ಸೂಟೀಸಿನೊಳಿವನ

ನೆತ್ತರೊಕ್ಕೊಡಂ ತನಗೆ

ಬಸಿಱೂರೆ ಕುಡಿಯಲುಂ

ದ್ರೌಪದಿಯ ಕೇಶಪಾಶಮಂ

ತೊಯ್ದು ಮುಡಿಯಲುಂ

ನೆರೆಯದೆಂದು-

ವಚನ:ಪದವಿಭಾಗ-

ಅರ್ಥ:ಅಂತು ನಿಜ ನಿಶಿತ

ಮಾರ್ಗಣಂಗಳಿಂದಂ ಅಂಬು ತಪ್ಪ (ಭೀಮನು ಹರಿತವಾದ ಬಾಣಗಳಿಂದ -ಹೊಡೆದು-, ಆ ಬಾಣಗಳು ಮುಗಿದುಹೋಗಲು,) ಜಟ್ಟಿಗ ಬಿಲ್ಲಾಳಂತೆ ಎಚ್ಚು (ಶೂರನಾದ ಭೀಮನು ಬಿಲ್ಲಾಳಿನಂತೆ ಹೊಡೆದು) ಪಾಯ್ವ ಸರಾತಿಯ ಮೆಯ್ಯ ನೆತ್ತರಂ ಕಂಡು (ದುಶ್ಶ್ಯಾಸನನ ಮೆಯ್ಯಿಂದ ಹರಿದುಬರುತ್ತಿರುವ ರಕ್ತವನ್ನು

ನೋಡಿ) ಸೂೞ್ ಏಸಿನೊಳ್
ಇವನ ನೆತ್ತರು ಒಕ್ಕೊಡಂ
(ಬಾರೀಬಾರಿಯ
ಪೆಟ್ಟಿನಿಂದಲೇ ಇವನ ರಕ್ತವು
ಒಕ್ಕೊಡಂ-ಸುರಿದರೆ) ತನಗೆ
ಬಸಿಱೂರೆ ಕುಡಿಯಲುಂ
(ತನಗೆ ಹೊಟ್ಟೆಯು ತುಂಬುವ
ಹಾಗೆ ಕುಡಿಯುವುದಕ್ಕೂ)
ದ್ರೌಪದಿಯ ಕೇಶಪಾಶಮಂ
ತೊಯ್ದು ಮುಡಿಯಲುಂ
(ದ್ರೌಪದಿಯ

ಕೂದಲಿನರಾಶಿಯನ್ನು ಒದ್ದೆಮಾಡಿ ಮುಡಿಸುವುದಕ್ಕೂ) ನೆರೆಯದೆಂದು (ಸಾಲದೇ ಇರಬಹುದು ಎಂದು)-

ವಚನ:ಅರ್ಥ: ಭೀಮನು ಹರಿತವಾದ ಬಾಣಗಳಿಂದ -ಹೊಡೆದು-, ಆ ಬಾಣಗಳು ಮುಗಿದು ಹೋಗಲು, ಶೂರನಾದ ಭೀಮನು ಬಿಲ್ಲಾಳಿನಂತೆ ಹೊಡೆದು

ದುಶ್ಯಾಸನನ ಮೆಯ್ಯಿಂದ
ಹರಿದುಬರುತ್ತಿರುವ ರಕ್ತವನ್ನು
ನೋಡಿ ಬಾರೀಬಾರಿಯ
ಪೆಟ್ಟಿನಿಂದಲೇ ಇವನ ರಕ್ತವು
ಒಕ್ಕೊಡಂ-ಸುರಿದರೆ, ತನಗೆ
ಹೊಟ್ಟೆಯು ತುಂಬುವ ಹಾಗೆ
ಕುಡಿಯುವುದಕ್ಕೂ,
ದ್ರೌಪದಿಯ
ಕೂದಲಿನರಾಶಿಯನ್ನು
ಒದ್ದೆಮಾಡಿ

ಮುಡಿಸುವುದಕ್ಕೂ ಸಾಲದೇ ಇರಬಹುದು ಎಂದು

ಕಂ|| ಅವನಂ ಬಂಚಿಸಿ
ಗದೆಗೊಂ
ಡವನ ವರೂಥಮನೆ
ತಿಣ್ಣಮಿಟ್ಟೊಡೆ ಗದೆಗೊಂ|
ಡವನೆಯ್ತರೆ ರಥದಿಂದಿೞಿ
ದವನಿಯೊಳವನುಮನುರುಳ್ಚಿ
ದಂ ಪವನಸುತಂ|| ೧೪೯ ||

ಪದ್ಯ-೧೪೯:ಪದವಿಭಾಗ-

ಅರ್ಥ:ಅವನಂ ಬಂಚಿಸಿ

(ಅವನನ್ನು ವಂಚಿಸಿ)
ಗದೆಗೊಂಡು ಅವನ
ವರೂಥಮನೆ ತಿಣ್ಣಂ ಇಟ್ಟೊಡೆ
(ಗದೆಯನ್ನು ತೆಗೆದುಕೊಂಡು
ಅವನ ತೇರನ್ನು ತೀಕ್ಷ್ಣವಾಗಿ
ಹೊಡೆದಾಗ,) ಗದೆಗೊಂಡು
ಅವಂ ಎಯ್ತರೆ (ಅವನು
ಗದೆಯನ್ನು ತೆಗೆದುಕೊಂಡು
ಬರಲು) ರಥದಿಂದಿೞಿದು
ಅವನಿಯೊಳು ಅವನುಮನು
ಉರುಳ್ಚಿದಂ ಪವನಸುತಂ

(ಭೀಮನು ರಥದಿಂದಿಳಿದು ಅವನನ್ನು ಭೂಮಿಯಲ್ಲಿ ಉರುಳಿಸಿದನು)

ಪದ್ಯ-೧೪೯:ಅರ್ಥ:ಅವನನ್ನು ವಂಚಿಸಿ ಗದೆಯನ್ನು ತೆಗೆದುಕೊಂಡು ಅವನ ತೇರನ್ನು ತೀಕ್ಷ್ಣವಾಗಿ ಹೊಡೆದಾಗ, ಅವನು ಗದೆಯನ್ನು ತೆಗೆದುಕೊಂಡು ಬರಲು ಭೀಮನು

ರಥದಿಂದಿಳಿದು ಅವನನ್ನು
ಭೂಮಿಯಲ್ಲಿ ಉರುಳಿಸಿದನು

ಮ|| ಬಳೆ ನಗುಁತ್ತಿರೆ ಮೆಟ್ಟಿ
ಗಂಟಲನಿವಂ ದುಶ್ಯಾಸನಂ
ಭೀಮನಿಂ
ಬಳ ಸಂಪನ್ನನವುಂಕಿ
ಕೊಂದಪನಿದಂ ಮಾರ್ಕೊಳ್ವ
ಬಲ್ಲಾಳ್ಗಸುಂ|
ಗೊಳೆ ಬಾಳೆತ್ತಿದೆನೇಕೆ ಕಣ್ಣ
ಮಿಡುಕ್ಕೈ ಪಿಂಗಾಕ್ಷ ನೀನೇಕೆ ಮಿ

ಳ್ತಿಳ

ನೋಡುತ್ತುಳನಿರ್ದೆಯೆಂದದ

ಟರಂ ಭೀಮಂ

ಪಳಂಚಲ್ವಿದಂ|| ೧೫೦ ||

ಪದ್ಯ-೧೫೦:ಪದವಿಭಾಗ-ಅರ್ಥ:ಬಳೆ ನರ್ಗುತ್ತಿರೆ ಮೆಟ್ಟಿ ಗಂಟಲನು (ಗಂಟಲಿನಬಳೆಗಳು ಜಜ್ಜಿಹೋಗುವ ಹಾಗೆ ಕಾಲಿನಿಂದ ಮೆಟ್ಟಿ) ಇವಂ ದುಶ್ಶ್ಯಾಸನಂ ಭೀಮನಿಂ ಬಳ

ಸಂಪನ್ನನು (ಇವನು
ದುಶ್ಶ್ಯಾಸನ, ಭೀಮನಿಗಿಂತ
ಬಲಶಾಲಿಯಾದವನು,)
ಅವ್ರುಂಕಿ ಕೊಂದಪ(ಪೆ)ನ್
(ಇವನನ್ನು ಅಮುಕಿ ಕೊಂದು
ಹಾಕುತ್ತೇನೆ,) ಇದಂ
ಮಾರ್ಕೊಳ್ವ ಬಲ್ಲಾಳ್ಗೆ
ಅಸುಂಗೊಳೆ ಬಾಳ ಎತ್ತಿದೆನು
(ಇದನ್ನು ಪ್ರತಿಭಟಿಸುವ
ಶೂರರ
ಪ್ರಾಣಾಪಹಾರಮಾಡಲು

ಕತ್ತಿಯನ್ನೆತ್ತಿದ್ದೇನೆ,) ಏಕೆ ಕಣ್ಣ
ಮಿಡುಕ್ಕೈ (ದುರ್ಯೋಧನನೇ!
ಯಾತಕ್ಕೋಸ್ಕರ ನೀನು
ಕಣ್ಣನ್ನು ಮಿಟುಕಿಸುವುದಿಲ್ಲ?)
ಪಿಂಗಾಕ್ಷ ನೀನೇಕೆ ಮಿಳ್ಮಿಳ
ನೋಡುತ್ತ
ಉಳನಿರ್ದೆಯೆಂದು (ಏತಕ್ಕೆ
ಮಿಳಮಿಳನೆ ನೋಡುತ್ತ
-ಸೈನ್ಯದ- ಒಳಗೇ ಇದ್ದೀಯೆ
ಎಂದು) ಅದಟರಂ ಭೀಮಂ
ಪಳಂಚಿ ಅಲ್ವಿದಂ (ಭೀಮನು

ಶೂರರನ್ನು ಪ್ರತಿಭಟಿಸಿ ಗರ್ಜಿಸಿದನು.)

ಪದ್ಯ-೧೫೦:ಅರ್ಥ: ಗಂಟಲಿನಬಳೆಗಳು ಜಜ್ಜಿಹೋಗುವ ಹಾಗೆ ಕಾಲಿನಿಂದ ಮೆಟ್ಟಿ, ಇವನು ದುಶ್ಶ್ಯಾಸನ, ಭೀಮನಿಗಿಂತ ಬಲಶಾಲಿಯಾದವನು, ಇವನನ್ನು ಅಮುಕಿ ಕೊಂದು ಹಾಕುತ್ತೇನೆ, ಇದನ್ನು ಪ್ರತಿಭಟಿಸುವ ಶೂರರ

ಪ್ರಾಣಾಪಹಾರಮಾಡಲು ಕತ್ತಿಯನ್ನೆತ್ತಿದ್ದೇನೆ, ದುರ್ಯೋಧನನೇ! ಯಾತಕ್ಕೋಸ್ಕರ ನೀನು ಕಣ್ಣನ್ನು ಮಿಟುಕಿಸುವುದಿಲ್ಲ? ಏತಕ್ಕೆ ಮಿಳಮಿಳನೆ ನೋಡುತ್ತ (ಸೈನ್ಯದ) ಒಳಗೇ ಇದ್ದೀಯೆ ಎಂದು ಭೀಮನು ಶೂರರನ್ನು ಪ್ರತಿಭಟಿಸಿ ಗರ್ಜಿಸಿದನು.

ವ|| ಅಂತು ಮುಳಿದ ಪವನಜನ

ಕೋಪಾಟೋಪಮಂ ಕಂಡು ಕೌರವಬಲದ ನಾಯಕರೊಳೊರ್ವರಪ್ಪೊಡಂ ಮಿಟ್ಟೆಂದು ಮಿಡುಕಲಣ್ಮದಿರೆ ಪವನಾತ್ಮಜಂ ದ್ರುಪದಾತ್ಮಜೆಗೆ ಬೞಿಯನಟ್ಟುವುದುಮಾ ವನಿತೆ ಜಯವನಿತೆ ಬರ್ಪಂತೆ ಬಂದು-

ವಚನ:ಪದವಿಭಾಗ-

ಅರ್ಥ:ಅಂತು ಮುಳಿದ ಪವನಜನ

ಕೋಪಾಟೋಪಮಂ ಕಂಡು
ಕೌರವಬಲದ ನಾಯಕರೊಳು
(ಹಾಗೆ ಕೋಪಿಸಿಕೊಂಡ
ಭೀಮನ
ಕೋಪಾಟೋಪವನ್ನು ಕಂಡು
ಕೌರವಸೈನ್ಯದ ನಾಯಕರಲ್ಲಿ)
ಒರ್ವರಪ್ಪೊಡಂ ಮಿಟ್ಟೆಂದು
ಮಿಡುಕಲಣ್ಮದಿರೆ
(ಒಬ್ಬರಾದರೂ ಮಿಟ್ಟೆಂದು
ಮಿಡುಕಲಾರದವರಾಗಿರಲು)
ಪವನಾತ್ಮಜಂ ದ್ರುಪದಾತ್ಮಜೆಗೆ

ಬೞಿಯನಟ್ಟುವುದುಂ (ಭೀಮನು ದ್ರೌಪದಿಗೆ ದೂತರ ಮೂಲಕ ಹೇಳಿಕಳುಹಿಸಲು) ಆ ವನಿತೆ ಜಯವನಿತೆ ಬರ್ಪಂತೆ ಬಂದು(ಆ ಹೆಣ್ಣು ಜಯಲಕ್ಷ್ಮಿಯು ಬರುವಂತೆ ಬಂದು) -

ವಚನ:ಅರ್ಥ:ಹಾಗೆ ಕೋಪಿಸಿಕೊಂಡ ಭೀಮನ ಕೋಪಾಟೋಪವನ್ನು ಕಂಡು ಕೌರವಸೈನ್ಯದ ನಾಯಕರಲ್ಲಿ

ಒಬ್ಬರಾದರೂ ಮಿಟ್ಟೆಂದು ಮಿಡುಕಲಾರದವರಾಗಿರಲು ಭೀಮನು ದ್ರೌಪದಿಗೆ ದೂತರ ಮೂಲಕ ಹೇಳಿಕಳುಹಿಸಲು, ಆ ಹೆಣ್ಣು ಜಯಲಕ್ಷ್ಮಿಯು ಬರುವಂತೆ ಬಂದು-

ಮ|| ಉಸಿರೊತ್ತಿಂ

ತಿದಿಯಂತಿರೊತ್ತಿದ ಬಸಿಱ್

ಪೊೀತಂದ ಕಣ್ ಬಿಟ್ಟ

ಬಾಯ್

ಮಸಕಂಗುಂದಿದ ಮೆಯ್

ವಲಂ ಬಡಿವ ಕಾಲ್

ಭೂಭಾಗದೊಳ್ ತಂದು ತಾ|

ಟಿಸುತುಂ ಕೋಟಲೆಗೊಳ್ವ

ರತ್ನಮಕುಟದ್ಯೋತೋತ್ತ

ಮಾಂಗಂ ವಿರಾ

ಜಿಸುವನ್ನಂ ಪುಡಿಯೊಳ್

ಪೊರಳ್ವ ಪಗೆಯಂ

ಕಣ್ಣಾರ್ವಿನಂ ನೋಡಿದಳ್ ||

೧೫೧ ||

ಪದ್ಯ-೧೫೧:ಪದವಿಭಾಗ-ಅರ್ಥ:ಉಸಿರೊತ್ತಿಂ ತಿದಿಯಂತಿರೆ (ಉಸಿರಿನ ಒತ್ತಡದಿಂದ ತಿದಿಯ ಹಾಗೆ ಆಗಿತ್ತು,) ಒತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್ (ಅಮುಕಿದ ಹೊಟ್ಟೆ, ಹೊರಕ್ಕೆ ಹೊರಟಿರುವ ಕಣ್ಣು, ಬಿಟ್ಟಿರುವ ಬಾಯಿ) ಮಸಕಂಗುಂದಿದ ಮೆಯ್ (ಶಕ್ತಿಕುಂದಿದ ದೇಹ,) ವಲಂ

ಬಡಿವ ಕಾಲ್
ಭೂಭಾಗದೊಳ್ ತಂದು
ತಾಟಿಸುತುಂ (ನೆಲದಮೇಲೆ
ಬಡಿಯುತ್ತ ಹಿಂಸೆ
ಪಡುತ್ತಿರುವ ಚೆನ್ನಾಗಿ
ಬಡಿಯುತ್ತಿರುವ ಕಾಲು,)
ಕೋಟಲೆಗೊಳ್ವ
ರತ್ನಮಕುಟದ್ಯೋತ
ಉತ್ತಮಾಂಗಂ
(ರತ್ನಖಚಿತವಾದ ಕಿರೀಟದಿಂದ
ಪ್ರಕಾಶಮಾನವಾಗಿರುವ ತಲೆ)

ವಿರಾಜಿಸುವನ್ನಂ (ಇವೆಲ್ಲವೂ ವಿರಾಜಿಸುತ್ತಿರಲು) ಪುಡಿಯೊಳ್ ಪೊರಳ್ವ ಪಗೆಯಂ (ಧೂಳಿನಲ್ಲಿ ಹೊರಳಾಡುತ್ತಿರುವ ಹಗೆಯನ್ನು) ಕಣ್ಣಾರ್ವಿನಂ ನೋಡಿದಳ್ (ಕಣ್ಣುತೃಪ್ತಿ ಪಡುವವರೆಗೂ ದ್ರೌಪದಿಯು ನೋಡಿದಳು.)

ಪದ್ಯ-೧೫೧:ಅರ್ಥ: ಉಸಿರಿನ ಒತ್ತಡದಿಂದ ತಿದಿಯ

ಹಾಗೆ ಆಗಿತ್ತು, ಅಮುಕಿದ
ಹೊಟ್ಟೆ, ಹೊರಕ್ಕೆ
ಹೊರಟಿರುವ ಕಣ್ಣು,
ಬಿಟ್ಟಿರುವ ಬಾಯಿ,
ಶಕ್ತಿಕುಂದಿದ ದೇಹ,
ನೆಲದಮೇಲೆ ಬಡಿಯುತ್ತ
ಹಿಂಸೆ ಪಡುತ್ತಿರುವ ಚೆನ್ನಾಗಿ
ಬಡಿಯುತ್ತಿರುವ ಕಾಲು,
ರತ್ನಖಚಿತವಾದ ಕಿರೀಟದಿಂದ
ಪ್ರಕಾಶಮಾನವಾಗಿರುವ ತಲೆ
ಇವೆಲ್ಲವೂ ವಿರಾಜಿಸುತ್ತಿರಲು,

ಧೂಳಿನಲ್ಲಿ
ಹೊರಳಾಡುತ್ತಿರುವ
ಹಗೆಯನ್ನು ಕಣ್ಣುತೃಪ್ತಿ
ಪಡುವವರೆಗೂ ದ್ರೌಪದಿಯು
ನೋಡಿದಳು.

ಕಂ|| ಆಸತ್ತು ತಿರಿದರಣ್ಯಾ
ವಾಸದ ಪರಿಭವದ
ಕುದಿಪಮಂ ನೀಗಿ ಸುಖಾ|
ವಾಸಮನೆಯ್ದಿಸಿದುದು ದು
ಶ್ಯಾಸನನಿರ್ದಿರವು
ಮನದೊಳಾ ದ್ರೌಪದಿಯಾ||

೧೫೨ ||

ಪದ್ಯ-೧೫೨:ಪದವಿಭಾಗ-ಅರ್ಥ:ಆಸತ್ತು ತಿರಿದ (ಬಳಲಿ ಅಲೆದಾಡಿದ,) ಅರಣ್ಯಾವಾಸದ ಪರಿಭವದ ಕುದಿಪಮಂ ನೀಗಿ (ವನವಾಸದ ಅವಮಾನವನ್ನೂ ಸಂಕಟವನ್ನೂ ಹೋಗಲಾಡಿಸಿ) ಸುಖ ಆವಾಸಮನ ಎಯ್ದಿಸಿದುದು (ಅವಳಿಗೆ

ಸುಖದ
ನೆಲೆಯನ್ನುಂಟುಮಾಡಿತು.)
ದುಶ್ಯಾಸನನು ಇರ್ದ ಇರವು
ಮನದೊಳು ಆ ದ್ರೌಪದಿಯಾ
(ದುಶ್ಯಾಸನನು ಇದ್ದ ಸ್ಥಿತಿಯು
ದ್ರೌಪದಿಯ ಮನಸ್ಸಿನಲ್ಲಿ
ಸುಖದ
ನೆಲೆಯನ್ನುಂಟುಮಾಡಿತು.)

ಪದ್ಯ-೧೫೨:ಅರ್ಥ:
ದುಶ್ಯಾಸನನು ಇದ್ದ ಸ್ಥಿತಿಯು
ಅವಳು ಕಾಡಿನಲ್ಲಿ ಬಳಲಿ

ಅಲೆದಾಡಿದ, ವನವಾಸದ ಅವಮಾನವನ್ನೂ ಸಂಕಟವನ್ನೂ ಹೋಗಲಾಡಿಸಿ ದ್ರೌಪದಿಯ ಮನಸ್ಸಿನಲ್ಲಿ ಸುಖದ ನೆಲೆಯನ್ನುಂಟುಮಾಡಿತು.

ವ|| ಆಗಳ್ ವೃಕೋದರಂ ತನ್ನ ತಳೋದರಿಯ ಮುಖಮಂ ನೋಡಿ ನಿನ್ನೆನ್ನ ಪ್ರತಿಜ್ಞೆಯಂ ನೆಱಪುವಂ ಬಾಯೆಂದು ಕೆಲದೊಳ್ ಕುಳ್ಳಿರಿಸಿ ದೃಢ

ಕಠಿನಹೃದಯನಪ್ಪ ಹಿರಣ್ಯಾಕ್ಷನುರಮಂ ಪೋೞ್ವ ನಾರಸಿಂಗನಂತೆ-

ವಚನ:ಪದವಿಭಾಗ-

ಅರ್ಥ:ಆಗಳ್ ವೃಕೋದರಂ ತನ್ನ ತಳೋದರಿಯ ಮುಖಮಂ ನೋಡಿ (ಆಗ ಭೀಮನು ತನ್ನ ಸಣ್ಣಸೊಂಟದ ವನಿತೆಯ ಮುಖವನ್ನು ನೋಡಿ) ನಿನ್ನ ಎನ್ನ ಪ್ರತಿಜ್ಞೆಯಂ ನೆಱಪುವಂ

ಬಾಯೆಂದು (ನ್ನ ಮತ್ತು ನನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡೋಣ ಬಾ ಎಂದು) ಕೆಲದೊಳ್ ಕುಳ್ಳಿರಿಸಿ (ಪಕ್ಕದಲ್ಲಿ ಕುಳ್ಳಿರಿಸಿಕೊಂಡು) ದೃಢ ಕಠಿನಹೃದಯನಪ್ಪ ಹಿರಣ್ಯಾಕ್ಷನುರಮಂ ಪೋಳ್ದ್ವಿ ನಾರಸಿಂಗನಂತೆ (ದೃಢವೂ ಕಠಿಣವೂ ಆದ ಹಿರಣ್ಯಾಕ್ಷನ ಎದೆಯನ್ನು ಸೀಳುವ ನರಸಿಂಹನಂತೆ)-

ವಚನ:ಅರ್ಥ:ಆಗ ಭೀಮನು ತನ್ನ ಸಣ್ಣಸೊಂಟದ ವನಿತೆಯ ಮುಖವನ್ನು ನೋಡಿ ನಿನ್ನ ಮತ್ತು ನನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡೋಣ ಬಾ ಎಂದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ದೃಢವೂ ಕಠಿಣವೂ ಆದ ಹಿರಣ್ಯಾಕ್ಷನ ಎದೆಯನ್ನು ಸೀಳುವ ನರಸಿಂಹನಂತೆ-

- **ಟಿಪ್ಪಣಿ**::(ಇಲ್ಲಿ ಹಿರಣ್ಯಕಶಿಪು ಎಂದಿರಬೇಕಿತ್ತು, ಹಿರಣ್ಯಾಕ್ಷನನ್ನು ಕೊಂದಿದ್ದು ವರಾಹ- ಕವಿ ಮರೆತನೇ? ಮತ್ತೆ ಭೀಮನಿಗೆ ತನ್ನ ತಳೋದರಿಯ ಎಂದು ಪತ್ನಿಯಂತೆ ಹೇಳಿರುವುದು ದ್ರೌಪದಿಯನ್ನು ಅರ್ಜುನನೊಬ್ಬನೇ ವಿವಾಹವಾದುದನ್ನು ಮರೆತಂತೆ ಕಾಣುವುದು.

ವ್ಯಾಸ ಭಾರತದ ಪ್ರಭಾವ
ಪ್ರತಿಭೆಯ ಕವಿಗೂ
ಮರೆವೆಯನ್ನು
ತಂದಿರಬಹುದು)

ಕಂ|| ಡೊಕ್ಕನೆ
ಸುರಿಗೆಯೊಳುರಮಂ
ಬಿಕ್ಕನೆ ಬಿರಿಯಿಱಿದು
ಬರಿಯನಗಲೊತ್ತಿ ಮನಂ|
ಕೊಕ್ಕರಿಸದೆ ಬಗಸಿರೆಯಿನ
ಘುರ್ಕ್ಕೆಯೆ ಮೊಗೆಮೊಗೆದು
ನೆತ್ತರಂ ಪವನಸುತಂ|| ೧೫೩ ||

ಪದ್ಯ-೧೫೩:ಪದವಿಭಾಗ-ಅರ್ಥ:ಡೊಕ್ಕನೆ ಸುರಿಗೆಯೊಳು ಉರಮಂ ಬಿಕ್ಕನೆ ಬಿರಿಯಿಱಿದು (ಕೈಗತ್ತಿಯಿಂದ ಎದೆಯನ್ನು ಡೊಕ್ಕೆಂದು ಬಿರುಬಿರನೆ ಬಿರಿಯುವಂತೆ ಇರಿದು- ತಿವಿದು) ಬರಿಯಂ ಅಗಲೊತ್ತಿ (ಪಕ್ಕವನ್ನು ಅಗಲವಾಗಿ ತಳ್ಳಿ- ಹಿಗ್ಗಿಸಿ) ಮನಂ ಕೊಕ್ಕರಿಸದೆ (ಮನಸ್ಸಿನಲ್ಲಿ

ಅಹಸ್ಯಪಟ್ಟುಕೊಳ್ಳದೆ)
ಬಗಸಿರೆಯಿನ ಅಳುರ್ಕ್ಕೆಯಿ
(ಬೊಗೆಸೆಯಿಂದ ಹೆಚ್ಚಾಗಿ)
ಮೊಗೆಮೊಗೆದು ನೆತ್ತರಂ
ಪವನಸುತಂ (ಭೀಮನು
ರಕ್ತವನ್ನು ಮೊಗೆಮೊಗೆದು)-

ಪದ್ಯ-೧೫೩:ಅರ್ಥ:
ಕೈಗತ್ತಿಯಿಂದ ಎದೆಯನ್ನು
ಡೊಕ್ಕೆಂದು ಬಿರುಬಿರನೆ
ಬಿರಿಯುವಂತೆ ತಿವಿದು
ಪಕ್ಕವನ್ನು ಅಗಲವಾಗಿ ತಳ್ಳಿ

ಮನಸ್ಸಿನಲ್ಲಿ
ಅಹಸ್ಯಪಟ್ಟುಕೊಳ್ಳದೆ
ಬೊಗೆಸೆಯಿಂದ ಭೀಮನು
ರಕ್ತವನ್ನು ಮೊಗೆಮೊಗೆದು-

ಕಂ|| ನೆತ್ತಿಯೊಳೆರೆದೆರೆದಿನಿಸರೆ
ಯೊತ್ತಿ ಬಿಟಿಕ್ಕಿಟಿಯೆ
ಪೊಸೆದು ಜಡೆಗೊಂಡಿರ್ದು|
ದ್ವೃತ್ತ ಕುಚಯುಗೆಯ ಕೇಶಮ
ನೆತ್ತಂ ಪಸರಿಸಿದನೆಯ್ದೆ
ಪಸರಿಸಿದದಟಿಂ|| ೧೫೪ ||

ಪದ್ಯ-೧೫೪:ಪದವಿಭಾಗ-ಅರ್ಥ:ನೆತ್ತಿಯೊಳ್ ಎರೆದು ಎರೆದು ಇನಿಸ ಅರೆಯೊತ್ತಿ (ತಲೆಯಮೇಲೆ ಹೊಯಿದು ಹೊಯಿದು,ಒಂದಿಷ್ಟು ತಲೆಗಿಳಿಯುವಂತೆ ತಟ್ಟಿ) ಬೞಿಕ್ಕೆ ಇೞಿಯೆ ಪೊಸೆದು (ಬಳಿಕ ಕೆಳಕ್ಕೆ ಇಳಿಯಲು ಹೊಸೆದು) ಜಡೆಗೊಂಡಿರ್ದ + ಉದ್ವೃತ್ತ (ಜಡಕಾಗಿದ್ದ-) ಉದ್ವೃತ್ತ ಕುಚಯುಗೆಯ

ಕೇಶಮನು ಎತ್ತಂ -
ಎಲ್ಲಾಕಡೆಯೂ(->)
(ಎದ್ದುನಿಂತಿದ್ದ ಎರಡು
ಮೊಲೆಯ ಮೇಲಿದ್ದ
ದ್ರೌಪದಿಯ ಕೂದಲನ್ನು)
ಪಸರಿಸಿದನು ಎಯ್ದೆ
ಪಸರಿಸಿದ ಅದಟಿಂ
(ಭೀಮನು ರಕ್ತದಿಂದ ನೆನೆಸಿ
ತನ್ನ ಪರಾಕ್ರಮತೋರಿ
ಬಿಡಿಸಿದನು)

ಪದ್ಯ-೧೫೪:ಅರ್ಥ:
ದ್ರೌಪದಿಯ ತಲೆಯಮೇಲೆ ಹೊಯಿದು ಹೊಯಿದು, ಒಂದಿಷ್ಟು ತಲೆಗಿಳಿಯುವಂತೆ ತಟ್ಟಿ, ಬಳಿಕ ಕೆಳಕ್ಕೆ ಇಳಿಯಲು ಹೊಸೆದು ಜಡಕಾಗಿದ್ದ- ಎದ್ದುನಿಂತಿದ್ದ ಎರಡು ಮೊಲೆಯ ಮೇಲಿದ್ದ ದ್ರೌಪದಿಯ ಕೂದಲನ್ನು ಭೀಮನು ರಕ್ತದಿಂದ ನೆನೆಸಿ

ತನ್ನ ಪರಾಕ್ರಮತೋರಿ ಎಲ್ಲಾಕಡೆಯೂ ಬಿಡಿಸಿದನು.

ಪಸರಿಸಿ ಪಂದಲೆಯಂ ಮೆ
ಟ್ಟಿಸಿ ವೈರಿಯ ಪಲ್ಲ
ಪಣಿಗೆಯಿಂ ಬಾರ್ಚಿ ಪೊದ|
ಬಿಪ್ಪೊಸಗೆಯಿನವನ ಕರುಳ್ಗಳೆ
ಪೊಸವಾಸಿಗಮಾಗೆ ಕೃಷ್ಣೆಯಂ
ಮುಡಿಯಿಸಿದಂ|| ೧೫೫ ||

ಪದ್ಯ-೧೫೫:ಪದವಿಭಾಗ-ಅರ್ಥ:ಪಸರಿಸಿ- ಬಿಡಿಸಿ, ಪಂದಲೆಯಂ (ತಲೆಯ

ಸಿಕ್ಕನ್ನು ಬಿಡಿಸಿ) ಮೆಟ್ಟಿಸಿ
(ಅವಳ ಕಾಲಿನಿಂದ ಅವನನ್ನು
ತುಳಿಯಿಸಿ) ವೈರಿಯ ಪಲ್ಲ
ಪಣಿಗೆಯಿಂ ಬಾರ್ಚಿ (ವೈರಿಯ
ಹಲ್ಲೆಂಬ ಬಾಚಣಿಗೆಯಿಂದ
ಬಾಚಿ) ಪೊದಟ್ಟಿ
ಹೊಸಗೆಯಿಂ ಅವನ ಕರುಳ್ಗಳೆ
ಪೊಸವಾಸಿಗಮಾಗೆ - ಹೊಸ
ಬಾಸಿಗ (ಹೆಚ್ಚಿನ
ಸಂತೋಷದಿಂದ ಅವನ
ಹೊಸಕರುಳುಗಳೇ ಹೊಸ

ಹೂವಿನ ದಂಡೆಯಾಗಲು)
ಕೃಷ್ಣೆಯಂ ಮುಡಿಯಿಸಿದಂ
(ದ್ರೌಪದಿಗೆ ತಾನೆ
ಮುಡಿಸಿದನು.)

ಪದ್ಯ-೧೫೫:ಅರ್ಥ:
ದುಶ್ಶ್ಯಾಸನನ ರಕ್ತದಿಂದ
ಜಿಗಟಾದ ಅವಳ ತಲೆಯ
ಸಿಕ್ಕನ್ನು ಬಿಡಿಸಿ, ಅವಳ
ಕಾಲಿನಿಂದ ಅವನನ್ನು
ತುಳಿಯಿಸಿ, ವೈರಿಯ ಹಲ್ಲೆಂಬ
ಬಾಚಣಿಗೆಯಿಂದ ಬಾಚಿ,

ಹೆಚ್ಚಿನ ಸಂತೋಷದಿಂದ
ಅವನ ಹೊಸಕರುಳುಗಳೇ
ಹೊಸ ಹೂವಿನ
ದಂಡೆಯಾಗಲು ದ್ರೌಪದಿಗೆ
ತಾನೆ ಮುಡಿಸಿದನು.

**ವ|| ಅಂತು ತನ್ನಪಗೆಯುಂ
ಬಗೆಯುಮೊಡನೊಡನೆ
ಮುಡಿಯೆ ರಿಪು ವಿಪುಳರುಧಿರ
ಜಲಂಗಳೊಳಂ ರುಚಿರ
ತದೀಯಾಂತ್ರಮಾಲೆಯನೆ
ಮಾಲೆಮಾಡಿ ಮುಡಿಯಿಸಿ**

ಕೃಷ್ಣೆಯ ಮೊಗಮಂ ನೋಡಿ ಮುಗುಳ್ನಗೆ ನಕ್ಕು ಕೌರವಕುಳವಿಳಯಕೇತುವಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ತನ್ನಪಗೆಯುಂ ಬಗೆಯುಂ ಒಡನೆ ಒಡನೆ ಮುಡಿಯೆ (ಹಾಗೆ ತನ್ನ ಶತ್ರುವೂ ಇಷ್ಟಾರ್ಥವೂ ಜೊತೆಯಾಗಿ (ಒಟ್ಟಿಗೆ) ತೀರಲು) ರಿಪು ವಿಪುಳರುಧಿರ

ಜಲಂಗಳೊಳಂ (ವೈರಿಯ
ವಿಶೇಷವಾದ ರಕ್ತದಿಂದಲೂ)
ರುಚಿರ ತದೀಯ
ಆಂತ್ರಮಾಲೆಯನೆ
ಮಾಲೆಮಾಡಿ ಮುಡಿಯಿಸಿ
(ಅವನ ಮನೋಹರವಾದ
ಕರುಳ ದಂಡೆಯಿಂದಲೂ
ದಂಡೇಯನ್ನೇ ಮಾಡಿ
ದ್ರೌಪದಿಗೆ ಮುಡಿಯಿಸಿ)
ಕೃಷ್ಣೆಯ ಮೊಗಮಂ ನೋಡಿ
ಮುಗುಳ್ನಗೆ ನಕ್ಕು (ಅವಳ

ಮುಖವನ್ನು ನೋಡಿ ಮುಗುಳ್ನಗೆ ನಕ್ಕು) ಕೌರವಕುಳ ವಿಳಯಕೇತುವು ಇಂತೆಂದಂ (ಕೌರವಕುಲ ನಾಶಕೇತುವಾದ ಭೀಮನು ಹೀಗೆಂದನು.)-

ವಚನ:ಅರ್ಥ:ಹಾಗೆ ತನ್ನ ಶತ್ರುವೂ ಇಷ್ಟಾರ್ಥವೂ ಜೊತೆಯಾಗಿ (ಒಟ್ಟಿಗೆ) ತೀರಲು ವೈರಿಯ ವಿಶೇಷವಾದ ರಕ್ತದಿಂದಲೂ ಅವನ ಮನೋಹರವಾದ

ಕರುಳ ದಂಡೆಯಿಂದಲೂ ದಂಡೇಯನ್ನೇ ಮಾಡಿ, ದ್ರೌಪದಿಗೆ ಮುಡಿಯಿಸಿ, ಅವಳ ಮುಖವನ್ನು ನೋಡಿ ಮುಗುಳ್ನಗೆ ನಕ್ಕು, ಕೌರವಕುಲ ನಾಶಕೇತುವಾದ ಭೀಮನು ಹೀಗೆಂದನು.

ವ|| ಸ್ರ|| ಇದರೊಳೊ ಶ್ವೇತಾತಪತ್ರಸ್ಥಗಿತ ದಶ ದಿಶಾಮಂಡಲಂ ರಾಜಚಕ್ರಂ

ಪುದಿದಟ್ಕ್ಕಾಡಿತ್ತಡಿಂಗಿತ್ತಿದರೊ
ಳೆ ಕುರುರಾಜಾನ್ವಯಂ
ಮತ್ಪ್ರತಾಪ|
ಕ್ಕಿದಱಿಂದಂ
ನೋಡಗುರ್ವುವಿದುದಿದುವೆ
ಮಹಾಭಾರತಕ್ಕಾದಿಯಾಯ್ತ
ಬ್ಜದಳಾಕ್ಷೀ ಪೇೞ
ಸಾಮಾನ್ಯಮೆ ಬಗೆಯೆ
ಭವತ್ಕೇಶಪಾಶಪ್ರಪಂಚಂ||
೧೫೬||

ಪದ್ಯ-೧೫೬:ಪದವಿಭಾಗ-ಅರ್ಥ:ಇದರೊಳೊ ಶ್ವೇತ ಆತಪತ್ರ ಸ್ಥಗಿತ ದಶ ದಿಶಾಮಂಡಲಂ (ಈ ಮುಡಿಯಲ್ಲಿ ಹತ್ತು ದಿಕ್ಕುಗಳಲ್ಲಿಯೂ ಬೆಳುಗೊಡೆಗಳನ್ನೆತ್ತಿಸಿದ) ರಾಜಚಕ್ರಂ ಪುದಿದ ಅಬ್ಬಾಕಿತ್ತು (ರಾಜಸಮೂಹವು ಪ್ರವೇಶಮಾಡಿ

ನಾಶವಾಯಿತು,) ಅಡಿಂಗಿತ್ತು
ಇದರೊಳೆ ಕುರುರಾಜಾನ್ವಯಂ
(ಕುರುರಾಜವಂಶವು ಇದರಲ್ಲಿ
ಅಡಗಿಹೋಯಿತು,) ಮತ್
ಪ್ರತಾಪಕ್ಕೆ ಇದಱಿಂದಂ
ನೋಡೆ ಅಗುರ್ವು್ಂ ಇದುದು
(ನನ್ನ ಶೌರ್ಯಕ್ಕೆ ಇದರಿಂದ
ಗೌರವವು (ಭಯವು)
ಹೆಚ್ಚಾಯಿತು.) ಇದುವೆ
ಮಹಾಭಾರತಕ್ಕೆ
ಆದಿಯಾಯ್ತು ಅಬ್ಜದಳಾಕ್ಷೀ

(ಇದೇ ಮಹಾಭಾರತಕ್ಕೆ ಆದಿಯಾಯ್ತು. ಕಮಲದಳದಂತೆ ವಿಸ್ತಾರವಾದ ಕಣ್ಣುಳ್ಳ ದ್ರೌಪದಿಯೇ) ಪೇಟಿ ಸಾಮಾನ್ಯಮೆ ಬಗೆಯೆ ಭವತ್ ಕೇಶಪಾಶ ಪ್ರಪಂಚಂ (ವಿಚಾರಮಾಡಿದರೆ ನಿನ್ನ ತಲೆಯ ಕುರುಳ ರಾಶಿಯು ಸಾಮಾನ್ಯವಾದುದೇ ಹೇಳು.) ಎಂದನು ಭೀಮ.

ಪದ್ಯ-೧೫೬:ಅರ್ಥ:“ಈ ಮುಡಿಯಲ್ಲಿ ಹತ್ತು ದಿಕ್ಕುಗಳಲ್ಲಿಯೂ ಬೆಳುಗೊಡೆಗಳನ್ನೆತ್ತಿಸಿದ ರಾಜಸಮೂಹವು ಪ್ರವೇಶಮಾಡಿ ನಾಶವಾಯಿತು, ಕುರುರಾಜವಂಶವು ಇದರಲ್ಲಿ ಅಡಗಿಹೋಯಿತು, ನನ್ನ ಶೌರ್ಯಕ್ಕೆ ಇದರಿಂದ ಗೌರವವು (ಭಯವು)

ಹೆಚ್ಚಾಯಿತು. ಇದೇ ಮಹಾಭಾರತಕ್ಕೆ ಆದಿಯಾಯ್ತು. ಕಮಲದಳದಂತೆ ವಿಸ್ತಾರವಾದ ಕಣ್ಣುಳ್ಳ ದ್ರೌಪದಿಯೇ! ವಿಚಾರಮಾಡಿದರೆ ನಿನ್ನ ತಲೆಯ ಕುರುಳ ರಾಶಿಯು ಸಾಮಾನ್ಯವಾದುದೇ ಹೇಳು." ಎಂದನು ಭೀಮ.

ವ|| ಎಂದು ನುಡಿದು ನೀನುಂ ನಿನ್ನ ಪ್ರತಿಜ್ಞೆಯಂ

ನೆರೆಪಿದೆಯಾನುಮೆನ್ನ ಪ್ರತಿಜ್ಞೆಯಂ ನೆಱಪುವೆನೆಂದು ದ್ರೌಪದಿಯಂ ಪಿಡಿಯನೇಱಿಸಿ ಬೀಡಿಂಗೆ ಕಳಿಪಿ ರಾಕ್ಷಸಕ್ರೀಡೆಯನಾಡಲ್ ಬಗೆದು ಹಿಡಿಂಬೆಯಂ ನೆನೆದು ಬರಿಸಿ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದು ನೀನುಂ ನಿನ್ನ ಪ್ರತಿಜ್ಞೆಯಂ ನೆರೆಪಿದೆಯ, ಆನುಂ ಎನ್ನ

ಪ್ರತಿಜ್ಞೆಯಂ ನೆಱಪುವೆನು
ಎಂದು (ನೀನು ನನ್ನ
ಪ್ರತಿಜ್ಞೆಯನ್ನು
ಪೂರ್ಣಮಾಡಿದೆ. ನಾನೂ
ನನ್ನ ಪ್ರತಿಜ್ಞೆಯನ್ನು
ಪೂರ್ಣಮಾಡುತ್ತೇನೆ ಎಂದು)
ದ್ರೌಪದಿಯಂ ಪಿಡಿಯನೇಱಿಸಿ
ಬೀಡಿಂಗೆ ಕಳಿಪಿ
(ದ್ರೌಪದಿಯನ್ನು ಹೆಣ್ಣಾನೆಯ
ಮೇಲೆ ಕುಳ್ಳಿರಿಸಿ ಮನೆಗೆ
ಕಳುಹಿಸಿ) ರಾಕ್ಷಸಕ್ರೀಡೆಯನು

ಆಡಲ್ ಬಗೆದು ಹಿಡಿಂಬೆಯಂ ನೆನೆದು ಬರಿಸಿ (ರಾಕ್ಷಸಕ್ರೀಡೆಯನ್ನು ಆಡಲು ಯೋಚಿಸಿ ಹಿಡಿಂಬೆಯನ್ನು ಜ್ಞಾಪಿಸಿಕೊಂಡು ಬರಮಾಡಿ)- **ವಚನ:ಅರ್ಥ**:ವ|| ಎಂದು ಹೇಳಿ ನೀನು ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿದೆ. ನಾನೂ ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡುತ್ತೇನೆ ಎಂದು

ದ್ರೌಪದಿಯನ್ನು ಹೆಣ್ಣಾನೆಯ
ಮೇಲೆ ಕುಳ್ಳಿರಿಸಿ ಮನೆಗೆ
ಕಳುಹಿಸಿ, ರಾಕ್ಷಸಕ್ರೀಡೆಯನ್ನು
ಆಡಲು ಯೋಚಿಸಿ
ಹಿಡಿಂಬೆಯನ್ನು
ಜ್ಞಾಪಿಸಿಕೊಂಡು ಬರಮಾಡಿ-

**ಕಂ|| ಒಸರ್ವ ಬಿಸುನೆತ್ತರಂ ರ
ಕ್ಕಸನಂದದೆ ಕುಡಿದು ಕುಡಿದು
ಕಂಡಂಗಳನ|
ರ್ವಿಸೆ ಮೇಲ್ದು ಮೆಲ್ದು ಕರ್ಬಿನ**

ರಸಕ್ಕಮಿನಿಸಂಪುಗಾಣೆನೆಂದ ನಿಲಸುತಂ|| ೧೫೭ ||

ಪದ್ಯ-೧೫೭:ಪದವಿಭಾಗ-ಅರ್ಥ:ಒಸರ್ವ ಬಿಸು ನೆತ್ತರಂ ರಕ್ಕಸನಂದದೆ ಕುಡಿದು ಕುಡಿದು (ಸ್ರವಿಸುತ್ತಿರುವ ಬಿಸಿರಕ್ತವನ್ನು ರಾಕ್ಷಸನ ಹಾಗೆ ಕುಡಿದು ಕುಡಿದು) ಕಂಡಂಗಳನು ಅರ್ವಿಸೆ ಮೇಲ್ದು ಮೆಲ್ದು (ಮಾಂಸಖಂಡಗಳನ್ನು

ವಿಶೇಷವಾಗಿ ಆಗಿದು ಅಗಿದು)
ಕರ್ಬಿನರಸಕ್ಕಂ ಇನಿಸು
ಇಂಪುಗಾಣೆಂ ಎಂದು
ಅನಿಲಸುತಂ (ಕಬ್ಬಿನ
ರಸದಲ್ಲಿಯೂ ಇಷ್ಟು
ರುಚಿಯನ್ನು ಕಾಣೆನೆ ಎಂದು
ಭೀಮನು)

ಪದ್ಯ-೧೫೭:ಅರ್ಥ:
ಸ್ರವಿಸುತ್ತಿರುವ ಬಿಸಿರಕ್ತವನ್ನು
ರಾಕ್ಷಸನ ಹಾಗೆ ಕುಡಿದು
ಕುಡಿದು, ಮಾಂಸಖಂಡಗಳನ್ನು

ವಿಶೇಷವಾಗಿ ಆಗಿದು ಅಗಿದು
ಕಬ್ಬಿನ ರಸದಲ್ಲಿಯೂ ಇಷ್ಟು
ರುಚಿಯನ್ನು ಕಾಣೆನೆ ಎಂದು
ಭೀಮನು

ಸವಿ ಸವಿದು ಬಿಕ್ಕ ಬಿಕ್ಕನೆ
ಸವಿನೋಡೆನ್ನಾಣೆಯೆಂದು
ರಕ್ಕಸಿಗಮದಂ||
ಸವಿದೋಱ ನೆತ್ತರೆಲ್ಲಂ
ತವೆ ಮುಳಿಸಿಂದವನ ಕರುಳ
ಪಿಣಿಲಂ ನೊಣೆದಂ|| ೧೫೮ ||

ಪದ್ಯ-೧೫೮:ಪದವಿಭಾಗ-ಅರ್ಥ:ಸವಿ ಸವಿದು ಬಿಕ್ಕ ಬಿಕ್ಕನೆ ಸವಿನೋಡು ಎನ್ನಾಣೆಯೆಂದು (ರುಚಿ ನೋಡಿ ನೋಡಿ ಬಿಕ್ಕಬಿಕ್ಕನೆ ರುಚಿನೋಡು ಎನ್ನಾಣೆ ಎಂದು) ರಕ್ಕಸಿಗಂ ಅದಂ ಸವಿದೋಱೆ (ರಾಕ್ಷಸಿಗೂ ಅದರ ರುಚಿಯನ್ನು ತೋರಿಸಿ) ನೆತ್ತರೆಲ್ಲಂ ತವೆ (ರಕ್ತವೆಲ್ಲವೂ ಮುಗಿದು ಹೋಗಲು)

ಮುಳಿಸಿಂದ ಅವನ ಕರುಳ ಪಿಣಿಲಂ ನೊಣೆದಂ (ಅವನ ಕರುಳುಗಳ ಕುಚ್ಚನ್ನು ಕೋಪದಿಂದ ಚಪ್ಪರಿಸಿದನು.)

ಪದ್ಯ-೧೫೮:ಅರ್ಥ: ರುಚಿ ನೋಡಿ ನೋಡಿ ಬಿಕ್ಕಬಿಕ್ಕನೆ ರುಚಿನೋಡು ಎನ್ನಾಣೆ ಎಂದು ರಾಕ್ಷಸಿಗೂ ಅದರ ರುಚಿಯನ್ನು ತೋರಿಸಿ ರಕ್ತವೆಲ್ಲವೂ ಮುಗಿದು ಹೋಗಲು ಅವನ

ಕರುಳುಗಳ ಕುಚ್ಚನ್ನು
ಕೋಪದಿಂದ ಚಪ್ಪರಿಸಿದನು.

ವ|| ಅಂತು ಕುಡಿದು ನಿಜವಿರೋಧಿ ರುಧಿರಾಸವದೊಳಳವಿಗಳಿಯೆ ಸೊಕ್ಕಿ ತಾನುಂ ಹಿಡಿಂಬೆಯುಮವನ ಬರಿಯ ನರವಿನಡುಗಿನಿಡುವಿನೆಡೆಯ ಕೆನ್ನೆತ್ತರೊಳೊರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ

ಕೂಕಿಱಿದುಂ ತೇಗಿಯುಂ ಪಸಿಗೆವರಿದುಂ ಬವಳಿವರಿದುಂ ಬಾಸಂಗುಱಿಗೆವಱಿದುಂ ಸೂೞ್ವರಿದುಮಾಡುವಾಗಳುಭಯಬಲಂಗಳ್ ಬೆಕ್ಕಸಂಬಟ್ಟು ನೋಡೆ-

ವಚನ:ಪದವಿಭಾಗ-

ಅರ್ಥ:ಅಂತು ಕುಡಿದು ನಿಜವಿರೋಧಿ ರುಧಿರಾಸವದೊಳ್ (ಆ ರೀತಿಯಲ್ಲಿ ಕುಡಿದು ತನ್ನ

ಶತ್ರುವಿನ ರಕ್ತವೆಂಬ
ಹೆಂಡದಲ್ಲಿ) ಅಳವಿಗಳಿಯೆ
ಸೊಕ್ಕಿ ತಾನುಂ ಹಿಡಿಂಬೆಯುಂ
(ಅಳತೆಮೀರಿ ಸೊಕ್ಕಿ ಹೋಗಿ
ತಾನೂ ಹಿಡಿಂಬೆಯೂ) ಅವನ
ಬರಿಯ (ಅವನ ಪಕ್ಕೆಗಳ)
ನರವಿನ ಅಡುಗಿನ ಇಡುವಿನ
ಎಡೆಯ (ನರಗಳ ಮಾಂಸಗಳ
ಸಂದಿಗಳಲ್ಲಿದ್ದ) ಕೆನ್ನೆತ್ತರೊಳು
ಒರ್ವರೊರ್ವರಂ (ಕೆಂಪಾದ
ರಕ್ತವನ್ನು ಇಬ್ಬರೂ)

ತಳ್ಕಿಱಿದುಂ (ಮೈಗೆ
ಬಳಿದುಕೊಂಡು)
ಬೊಬ್ಬಿಱಿದುಂ
ತ್ರಿಪುಂಡ್ರಮಿಟ್ಟುಂ
(ಬೊಬ್ಬಿರಿದು ಹಣೆಯಲ್ಲಿ
ಮೂರು ಎಳೆಗಳನ್ನು ಧರಿಸಿ)
ಕೂಕಿಱಿದುಂ ತೇಗಿಯುಂ
(ಘಟ್ಟಿಯಾಗಿ ಕೂಗಿ ತೇಗಿ)
ಪಸಿಗೆವರಿದುಂ
ಬವಳಿವರಿದುಂ (ನೇರವಾಗಿ
ಓಡಿ ಸುತ್ತಲೂ ತಿರುಗಿ)

ಬಾಸಂಗುೞಿಗೆ ವೞಿದುಂ
(ನಕ್ಷತ್ರಮಂಡಲಕ್ಕೆ ನೆಗೆದು)
ಸೂೞ್ವಿರಿದುಂ ಸೂೞ್ +
ವರಿದು, ಪರಿದು,ಹರಿದು, ಓಡಿ
ಆಡುವಾಗಳು (ಸರದಿಯ
ಮೇಲೆ ಓಡಿ ಆಡುವಾಗ)
ಉಭಯ ಬಲಂಗಳ್
ಬೆಕ್ಕಸಂಬಟ್ಟು ನೋಡಿ(ಎರಡು
ಸೈನ್ಯಗಳೂ ಆಶ್ಚರ್ಯಪಟ್ಟು
ನೋಡಿದವು. ನೋಡಿ-)-

ವಚನ:ಅರ್ಥ: ಆ ರೀತಿಯಲ್ಲಿ ಕುಡಿದು ತನ್ನ ಶತ್ರುವಿನ ರಕ್ತವೆಂಬ ಹೆಂಡದಲ್ಲಿ ಅಳತೆಮೀರಿ ಸೊಕ್ಕಿ ಹೋಗಿ ತಾನೂ ಹಿಡಿಂಬೆಯೂ ಅವನ ಪಕ್ಕೆಗಳ ನರಗಳ ಮಾಂಸಗಳ ಸಂದಿಗಳಲ್ಲಿದ್ದ ಕೆಂಪಾದ ರಕ್ತವನ್ನು ಇಬ್ಬರೂ ಮೈಗೆ ಬಳಿದುಕೊಂಡು ಬೊಬ್ಬಿರಿದು ಹಣೆಯಲ್ಲಿ ಮೂರು ಎಳೆಗಳನ್ನು ಧರಿಸಿ

ಘಟ್ಟಿಯಾಗಿ ಕೂಗಿ ತೇಗಿ, ನೇರವಾಗಿ ಓಡಿ ಸುತ್ತಲೂ ತಿರುಗಿ ನಕ್ಷತ್ರಮಂಡಲಕ್ಕೆ ನೆಗೆದು ಸರದಿಯ ಮೇಲೆ ಓಡಿ ಆಡುವಾಗ ಎರಡು ಸೈನ್ಯಗಳೂ ಆಶ್ಚರ್ಯಪಟ್ಟು ನೋಡಿದವು.

ಕಂ|| ಆದ ಮುಳಿಸಿಂದಮೆಲ್ಲಂ
ತೇದುಂ ಕುಡಿಯಲ್ಕೆ ತಕ್ಕ
ಪಗೆವನ ರುಧಿರಾ|

ಚ್ಛೋದಮನೆ ಕುಡಿದು ಮಾಣ್ದ
ವೃ
ಕೋದರನೇನಾವ ತೆಱದೊಳಂ
ದೋಷಿಗನೇ|| ೧೫೯ ||

ಪದ್ಯ-೧೫೯:ಪದವಿಭಾಗ-ಅರ್ಥ:ಆದ ಮುಳಿಸಿಂದಂ ಎಲ್ವಂ ತೇದುಂ ಕುಡಿಯಲ್ಕೆ ತಕ್ಕ ಪಗೆವನ (ಇವನಿಗೆ ಉಂಟಾದ ಕೋಪದಿಂದ ಎಲುಬನ್ನೂ ತೇದು ಕುಡಿಯಲು ತಕ್ಕ ಶತ್ರುವಿನ)

ರುಧಿರ ಆಚ್ಛೋದಮನೆ
ಕುಡಿದು (ರಕ್ತವೆಂಬ
ತಿಳಿನೀರನ್ನೇ ಕುಡಿದು) ಮಾಣ್ದ
(ಬಿಟ್ಟ, ಕುಡಿದುಬಿಟ್ಟ?)
ವೃಕೋದರರನು ಏನಾವ
ತೆಱದೊಳಂ ದೋಷಿಗನೇ
(ಭೀಮನು ಏನು
ಯಾವರೀತಿಯಿಂದಲಾದರೂ
ದೋಷಿಯೇ?
ದೋಷಿಯಲ್ಲ!.)

ಪದ್ಯ-೧೫೯:ಅರ್ಥ:

ಭೀಮನಿಗೆ- / ಇವನಿಗೆ ಉಂಟಾದ ಕೋಪದಿಂದ ಎಲುಬನ್ನೂ ತೇದು ಕುಡಿಯಲು ತಕ್ಕ ಶತ್ರುವಿನ ರಕ್ತವೆಂಬ ತಿಳಿನೀರನ್ನೇ ಕುಡಿದುಬಿಟ್ಟ, ಭೀಮನು ಏನು ಯಾವರೀತಿಯಿಂದಲಾದರೂ ದೋಷಿಯೇ? ದೋಷಿಯಲ್ಲ!.

ಮ|| ಮುನಿಸಂ

ಮಾಡಿದರಾತಿನಾಥರಡಗಂ

ಸುಪ್ಪಲ್ಗೆ ಕೆನ್ನೆತ್ತರಂ
ಕೆನೆಗೊಂಡಾಱಿದ ಪಾಲ್ಗೆ
ದೊಂಡೆಗರುಳಂ ಕರ್ಬಿಂಗೆ
ಲೆಕ್ಕಕ್ಕೆ ತಂ।
ದಿನಿಸುಂ ಮಾಣದೆ ಪೀರ್ದು
ಪೀರ್ದು ನೊಣೆದಂತೀ
ಮಾೞ್ಕೆಯಿಂ ಭೀಮಸೇ
ನನವೋಲ್ ಪೂಣ್ದುದನೆಯ್ದೆ
ಪೂಣ್ದ ಪಗೆಯಂ
ಕೊಂಡಾಡದಂ ಗಂಡನೇ॥
೧೬೦ ॥

ಪದ್ಯ-೧೬೦:ಪದವಿಭಾಗ-ಅರ್ಥ:ಮುನಿಸಂ ಮಾಡಿದ ಅರಾತಿನಾಥರ ಅಡಗಂ ಸುಪ್ಪಲ್ಗೆ (ಕೋಪವನ್ನುಂಟುಮಾಡಿದ ಶತ್ರುರಾಜರ ಮಾಂಸವನ್ನು ಉಪ್ಪುಹಾಕಿದ ಪಲ್ಯ-ಭಕ್ಷ್ಯವಿಶೇಷಕ್ಕೂ) ಕೆನ್ನೆತ್ತರಂ ಕೆನೆಗೊಂಡು ಆಱಿದ ಪಾಲ್ಗೆ (ಕೆಂಪುರಕ್ತವನ್ನು ಕೆನೆಗಟ್ಟಿ ಆರಿದ ಹಾಲಿಗೂ)

ದೊಂಡೆಗರುಳಂ ಕರ್ಬಿಂಗೆ (ದೊಂಡೆ ಕರುಳನ್ನು ಕಬ್ಬಿಗೂ) ಲೆಕ್ಕಕ್ಕೆ ತಂದು ಇನಿಸುಂ ಮಾಣದೆ (ಸಮನಾಗಿ ಭಾವಿಸಿ ಸ್ವಲ್ಪವನ್ನೂ ಬಿಡದೆ) ಪೀರ್ದು ಪೀರ್ದು ನೊಣೆದಂತ ಈ ಮಾೞ್ಕೆಯಿಂ (ಕುಡಿದು ಚಪ್ಪರಿಸಿದ ಈ ಕ್ರಿಯೆಯಿಂದ) ಭೀಮಸೇನನವೋಲ್ ಪೂಣ್ದುದನು ಎಯ್ದೆ ಪೂಣ್ದ (ಭೀಮಸೇನನ ಹಾಗೆ ಪ್ರತಿಜ್ಞೆ

ಮಾಡಿದುದನ್ನು
ಪೂರ್ಣಮಾಡಿದ) ಪಗೆಯಂ
(ಹಗೆತನವನ್ನು) ಕೊಂಡಾಡದಂ
ಗಂಡನೇ (ಹೊಗಳದವನು
ಶೂರನೇ!)

ಪದ್ಯ-೧೬೦:ಅರ್ಥ:
ಕೋಪವನ್ನುಂಟುಮಾಡಿದ
ಶತ್ರುರಾಜರ ಮಾಂಸವನ್ನು
ಉಪ್ಪುಹಾಕಿದ ಪಲ್ಯ-
ಭಕ್ಷ್ಯವಿಶೇಷಕ್ಕೂ,
ಕೆಂಪುರಕ್ತವನ್ನು ಕೆನೆಗಟ್ಟಿ

ಆರಿದ ಹಾಲಿಗೂ, ದೊಂಡೆ
ಕರುಳನ್ನು ಕಬ್ಬಿಗೂ ಸಮನಾಗಿ
ಭಾವಿಸಿ ಸ್ವಲ್ಪವನ್ನೂ ಬಿಡದೆ,
ಕುಡಿದು ಚಪ್ಪರಿಸಿದ ಈ
ಕ್ರಿಯೆಯಿಂದ ಭೀಮಸೇನನ
ಹಾಗೆ ಪ್ರತಿಜ್ಞೆ ಮಾಡಿದುದನ್ನು
ಪೂರ್ಣಮಾಡಿದ
ಹಗೆತನವನ್ನು ಹೊಗಳದವನು
ಶೂರನೇ!

ವ|| ಎಂದು ಜರಾಸಂಧಾರಿಯ ಗಂಡವಾತಂ ಕೊಂಡಾಡುತ್ತಿರೆ

ಭೀಮಸೇನನಾ ನೆರೆದ ನೆರವಿಗಿಂತೆಂದಂ-

ವಚನ:ಪದವಿಭಾಗ-ಅರ್ಥ:ಎಂದು ಜರಾಸಂಧಾರಿಯ ಗಂಡವಾತಂ ಕೊಂಡಾಡುತ್ತಿರೆ (ಎಂದು ಜರಾಸಂಧನನ್ನು ಕೊಂದ ಭೀಮನ ಪೌರುಷದ ಮಾತನ್ನು ಕೊಂಡಾಡುತ್ತಿರಲು) ಭೀಮಸೇನನು ಆ ನೆರೆದ ನೆರವಿಗೆ ಇಂತೆಂದಂ

(ಭೀಮಸೇನನು ಅಲ್ಲಿ ನೆರೆದಿದ್ದ ಗುಂಪಿಗೆ ಹೀಗೆಂದನು)-

ವಚನ:ಅರ್ಥ:ಎಂದು ಜರಾಸಂಧನನ್ನು ಕೊಂದ ಭೀಮನ ಪೌರುಷದ ಮಾತನ್ನು ಕೊಂಡಾಡುತ್ತಿರಲು ಭೀಮಸೇನನು ಅಲ್ಲಿ ನೆರೆದಿದ್ದ ಗುಂಪಿಗೆ ಹೀಗೆಂದನು-

ಉ|| ಪೊಲ್ಲದು ಪೂಣ್ದು ಪುಚ್ಚಟಿಯದುರ್ಕಿದ ಕೌರವರಂ ಪೊರಳ್ಚಿ ಕೊಂ

ದಿಲ್ಲಿಯೆ ವೈರಿ

ಶೋಣಿತಮನೀಂಟಿ ತದಂತ್ರದೆ

ಕೃಷ್ಣೆಗಿಂದು ಧ|

ಮ್ಮಿಲ್ಲವನಿನಿಂಬಿನಿಂ ಮುಡಿಸಿ

ಕೌರವ

ನಾಯಕನೂರುಭಂಗಮೊಂ

ದಲ್ಲದುದೆಲ್ಲಮಂ ನೆಱಪಿದೆಂ

ಗಡಮೋಳಿಯೆ

ಕೇಳಿಮೆಲ್ಲರುಂ|| ೧೬೧ ||

ಪದ್ಯ-೧೬೧:ಪದವಿಭಾಗ-

ಅರ್ಥ:ಪೊಲ್ಲದು ಪೂಣ್ದು

ಪುಚ್ಚಟಿಯದೆ ಉರ್ಕಿದ
ಕೌರವರಂ (ಕೆಟ್ಟ ಪ್ರತಿಜ್ಞೆಯನ್ನು
ಮಾಡಿ ಅದು
ವ್ಯರ್ಥವಾಗದಂತೆ
ಗರ್ವಿಷ್ಠರಾದ ಕೌರವರನ್ನು)
ಪೊರಳ್ಚಿ ಕೊಂದು ಇಲ್ಲಿಯೆ
ವೈರಿ ಶೋಣಿತಮನು ಈಂಟಿ
(ಹೊರಳಿಸಿ ಕೊಂದು ಇಲ್ಲಿಯ
ವೈರಿಯ ರಕ್ತವನ್ನು ಕುಡಿದು)
ತದಂತ್ರದೆ (ಅವನ
ಕರುಳಿನಿಂದ) ಕೃಷ್ಣೆಗೆ ಇಂದು

ಧಮ್ಮಿಲ್ಲವನಂ ಇಂಬಿನಿಂ
ಮುಡಿಸಿ (ದ್ರೌಪದಿಗೆ
ತುರುಬನ್ನು
ಮನೋಹರವಾಗಿರುವಂತೆ
ಮುಡಿಸಿ) ಕೌರವ ನಾಯಕನ
ಊರುಭಂಗಮೊಂದು ಅಲ್ಲದೆ
ಅದು ಎಲ್ಲಮಂ ನೆಱಪಿದೆಂ
ಗಡ ಓಳಿಯೆ-
ಕ್ರಮವಾಗಿ(ಕೌರವನಾಯಕನಾ
ದ ದುರ್ಯೋಧನನ
ತೊಡೆಯನ್ನು

ಮುರಿಯುವುದೊಂದನ್ನು ಬಿಟ್ಟು ಮತ್ತೆಲ್ಲವನ್ನೂ ಕ್ರಮವಾಗಿ ಪೂರ್ಣಮಾಡಿದೆನು) ಕೇಳಿಂ ಎಲ್ಲರುಂ (ಎಲ್ಲರೂ ಕೇಳಿ!)

ಪದ್ಯ-೧೬೧:ಅರ್ಥ: ಕೆಟ್ಟ ಪ್ರತಿಜ್ಞೆಯನ್ನು ಮಾಡಿ ಅದು ವ್ಯರ್ಥವಾಗದಂತೆ ಗರ್ವಿಷ್ಠರಾದ ಕೌರವರನ್ನು ಹೊರಳಿಸಿ ಕೊಂದು ಇಲ್ಲಿಯ ವೈರಿಯ ರಕ್ತವನ್ನು ಕುಡಿದು

ಅವನ ಕರುಳಿನಿಂದ ದ್ರೌಪದಿಗೆ ತುರುಬನ್ನು ಮನೋಹರವಾಗಿರುವಂತೆ ಮುಡಿಸಿ, ಕೌರವನಾಯಕನಾದ ದುರ್ಯೋಧನನ ತೊಡೆಯನ್ನು ಮುರಿಯುವುದೊಂದನ್ನುಳಿದು ಮತ್ತೆಲ್ಲವನ್ನೂ ಕ್ರಮವಾಗಿ ಪೂರ್ಣಮಾಡಿದೆನು. ಎಲ್ಲರೂ ಕೇಳಿ!

ವ|| ಎಂದು ನುಡಿದು ಗಜೞ್ ಗರ್ಜಿಸಿ ಕಾಲದಂಡಮಂ ಪೋಲ್ವ ತನ್ನ ಗದಾದಂಡಮಂ ಕೊಂಡು ತಿರಿಪಿ ಬೀಸುತ್ತುಂ ಬರ್ಪ ಭೀಮಸೇನನಂ ಕರ್ಣನ ಮಗಂ ವೃಷಸೇನಂ ಕಂಡು-

ವಚನ:ಪದವಿಭಾಗ-ಅರ್ಥ:

ಎಂದು ನುಡಿದು ಗಜೞ್ ಗರ್ಜಿಸಿ ಕಾಲದಂಡಮಂ ಪೋಲ್ವ (ಆರ್ಭಟಮಾಡಿ ಯಮನ ದಂಡವನ್ನು

ಹೋಲುವ) ತನ್ನ
ಗದಾದಂಡಮಂ ಕೊಂಡು
ತಿರಿಪಿ ಬೀಸುತ್ತುಂ ಬರ್ಪ
ಭೀಮಸೇನನಂ (ತನ್ನ
ಗದಾದಂಡವನ್ನು
ತೆಗೆದುಕೊಂಡು ತಿರುಗಿಸುತ್ತ
ಬರುತ್ತಿರುವ
ಭೀಮಸೇನನನ್ನು) ಕರ್ಣನ
ಮಗಂ ವೃಷಸೇನಂ ಕಂಡು
(ಕರ್ಣನ ಮಗನಾದ

ವೃಷಸೇನನು
ನೋಡಿದನು.ನೋಡಿ-)-
ವಚನ:ಅರ್ಥ:ಎಂದು ಹೇಳಿ
ಆರ್ಭಟಮಾಡಿ ಯಮನ
ದಂಡವನ್ನು ಹೋಲುವ ತನ್ನ
ಗದಾದಂಡವನ್ನು
ತೆಗೆದುಕೊಂಡು ತಿರುಗಿಸುತ್ತ
ಬರುತ್ತಿರುವ ಭೀಮಸೇನನನ್ನು
ಕರ್ಣನ ಮಗನಾದ
ವೃಷಸೇನನು
ನೋಡಿದನು.ನೋಡಿ-

ಚಂ|| ದಡಿಗನ ಮಿೞ್ತುವಂ
ಮಿದಿದೊಡಲ್ಲದೆ
ಮಾಣೆನಮೋಘಮೆಂದು ಕೂ
ರ್ಪುಡುಗದೆ ಬಂದು ತಾಗೆ
ಯಮಳರ್ ತಡೆಗೊಂಡೊಡೆ
ತಾವುಮೆಮ್ಮೊಳಂ
ತೊಡರ್ದಪರೆಂದವಂದಿರ
ರಥಂಗಳನಚ್ಚುಡಿಯೆಚ್ಚು
ಭೀಮನಂ
ತಡೆಯದೆ ಮುಟ್ಟಿ ಪೆರ್ಚೆ
ನುಡಿದಂ ಕಪಿಕೇತನನಂ

ಮುರಾಂತಕಂ|| ೧೬೨ ||

ಪದ್ಯ-೧೬೨:ಪದವಿಭಾಗ-ಅರ್ಥ:ದಡಿಗನ ಮಿೞ್ತುವಂ ಮಿದಿದೊಡೆ ಅಲ್ಲದೆ ಮಾಣೆನು ಅಮೋಘಂ ಎಂದು (ದಾಂಡಿಗನಾದ ಭೀಮನೆಂಬ ಈ ಮೃತ್ಯುವನ್ನು ತುಳಿದುದಲ್ಲದೆ ಬಿಡುವುದಿಲ್ಲ, ಇವನದು ಅತಿಯಾಯಿತು' ಎಂದು) ಕೂರ್ಪು ಉಡುಗದೆ ಬಂದು ತಾಗೆ (ತನ್ನ

ತೀಕ್ಷಣತೆಯನ್ನು
ಕಡಮೆಮಾಡದೆ ಬಂದು
ಎದುರಿಸಿದಾಗ,) ಯಮಳರ್
ತಡೆಗೊಂಡೊಡೆ
(ನಕುಲಸಹದೇವರು ಬಂದು
ಅವನನ್ನು ಅಡ್ಡಗಟ್ಟಿದರು.
ಆಗ,) ತಾವು ಎಮ್ಮೊಳಂ
ತೊಡರ್ದಪರೆಂದು ಅವಂದಿರ
ರಥಂಗಳ ನಚ್ಚುಡಿಯೆಚ್ಚು
(ತಾವೂ/ ಇವರೂ ನಮ್ಮಲ್ಲಿ
ಯುದ್ಧಮಾಡುತ್ತಾರೆಯೇ

ಎಂದು ಅವರ ರಥಗಳನ್ನು ಅಚ್ಚು ಮುರಿದುಹೋಗುವ ಹಾಗೆ ಹೊಡೆದು) ಭೀಮನಂ ತಡೆಯದೆ ಮುಟ್ಟಿ ಪೆರ್ಚೆ (ಭೀಮನ ಹತ್ತಿರಕ್ಕೆ ಬಂದು ಹೆಚ್ಚಿದನು/ ವಿಜೃಂಭಿಸಿದನು. ಆಗ) ನುಡಿದಂ ಕಪಿಕೇತನನಂ ಮುರಾಂತಕಂ (ಆಗ ಕೃಷ್ಣನು ಅರ್ಜುನನಿಗೆ ಹೇಳಿದನು.)

ಪದ್ಯ-೧೬೨:ಅರ್ಥ:

ಬಲಶಾಲಿಯಾದ/

‘ದಾಂಡಿಗನಾದ ಭೀಮನೆಂಬ ಈ ಮೃತ್ಯುವನ್ನು ತುಳಿದುದಲ್ಲದೆ ಬಿಡುವುದಿಲ್ಲ, ಇವನದು ಅತಿಯಾಯಿತು’ ಎಂದು ವೃಷಸೇನನು ತನ್ನ ತೀಕ್ಷಣತೆಯನ್ನು ಕಡಮೆಮಾಡದೆ ಬಂದು ಎದುರಿಸಿದಾಗ, ನಕುಲಸಹದೇವರು ಬಂದು ಅವನನ್ನು ಅಡ್ಡಗಟ್ಟಿದರು. ಇವರೂ ನಮ್ಮಲ್ಲಿ

ಯುದ್ಧಮಾಡುತ್ತಾರೆಯೇ ಎಂದು ಅವರ ತೇರುಗಳನ್ನು ಅಚ್ಚು ಮುರಿದುಹೋಗುವ ಹಾಗೆ ಹೊಡೆದು ತಡಮಾಡದೆ ಭೀಮನ ಹತ್ತಿರಕ್ಕೆ ಬಂದು ವಿಜೃಂಭಿಸಿದನು. ಆಗ ಕೃಷ್ಣನು ಅರ್ಜುನನಿಗೆ ಹೇಳಿದನು.

ಕಂ|| ಇವನ ಶರಕಲ್ಪಮಿವನದ
ಟಿವನಳವಿವನಣ್ಮು
ನಿನಗಮುಗ್ಗಳಮಿವನಂ|
ಪವನಸುತಂ ಗೆಲ್ಲಂ ನೀ

ನಿವನೊಳ್ ಪೊಣರೆಂದೊಡವನೊಳರಿಗಂ ಪೊಣರ್ದಂ|| ೧೬೩ ||

ಪದ್ಯ-೧೬೩:ಪದವಿಭಾಗ-ಅರ್ಥ:ಇವನ ಶರಕಲ್ಪಂ ಇವನ ಅದಟು ಇವನ ಅಳವಿವನ ಅಣ್ಮು (ಇವನ ಬಾಣವಿದ್ಯೆ, ಇವನ ಪರಾಕ್ರಮ, ಇವನ ಪೌರುಷ, ಇವನ ಶಕ್ತಿ ಇವು) ನಿನಗಂ ಅಗ್ಗಳಂ ಇವನಂ ಪವನಸುತಂ ಗೆಲ್ಲಂ

(ನಿನಗಿಂತಲೂ ಹೆಚ್ಚಿನವು.
ಇವನನ್ನು ಭೀಮನು
ಗೆಲ್ಲಲಾರ.) ನೀಂ ಇವನೊಳ್
ಪೊಣರ್ ಎಂದೊಡೆ
ಅವನೊಳ್ ಅರಿಗಂ
ಪೊಣರ್ದಂ (ನೀನು ಇವನಲ್ಲಿ
ಯುದ್ಧಮಾಡು ಎನ್ನಲು
ಅರಿಗನು ಅವನಲ್ಲಿ
ಕಾದಿದನು)

ಪದ್ಯ-೧೬೩:ಅರ್ಥ: ಇವನ
ಬಾಣವಿದ್ಯೆ, ಇವನ ಪರಾಕ್ರಮ,

ಇವನ ಪೌರುಷ, ಇವನ ಶಕ್ತಿ
ಇವು ನಿನಗಿಂತಲೂ ಹೆಚ್ಚಿನವು.
ಇವನನ್ನು ಭೀಮನು
ಗೆಲ್ಲಲಾರ. ನೀನು ಇವನಲ್ಲಿ
ಯುದ್ಧಮಾಡು ಎನ್ನಲು
ಅರಿಗನು ಅವನಲ್ಲಿ ಕಾದಿದನು

<u>ಕರ್ಣನ ಮಗ ವೃಷಸೇನನ ವಧೆ</u>

ಪೊಣರ್ದೊಡಮನುವರಮಿವನೊಳ್

ತೊಣೆವೆತ್ತಪುದೆನಗೆ

ನರನೊಳೆಂದಱಿಕೆಯ ಕೂ|

ರ್ಗಣೆಗಳೊಳೆ ಪೂೞ್ದು ತನ್ನಳ

ವಣಿಯರಮೆನೆ ನಾಲ್ಕು ಶರದೆ

ಪಾರ್ಥನನೆಚ್ಚಂ|| ೧೬೪ ||

ಪದ್ಯ-೧೬೪:ಪದವಿಭಾಗ-

ಅರ್ಥ:ಪೊಣರ್ದೊಡಂ

ಅನುವರಂ ಇವನೊಳ್

ತೊಣೆವೆತ್ತಪುದು ಎನಗೆ

(ಇವನೊಡನೆ ಕಾದಿದರೆ ನನಗೆ

ಯುದ್ಧವು

ಅನುರೂಪವಾಗುತ್ತದೆ
(ಸರಿಸಮಾನವಾಗುತ್ತದೆ))
ನರನೊಳ್
(ಅರ್ಜುನನೊಡನೆ) ಎಂದು
ಅಱಿಕೆಯ (ಪ್ರಸಿದ್ಧ)
ಕೂರ್ಗಣೆಗಳೊಳೆ ಪೂೞ್ದು
(ಪ್ರಸಿದ್ಧವೂ ಹರಿತವೂ ಆದ
ಬಾಣಗಳಿಂದ ಪೂೞ್ದು- ಹೂಳಿ)
ತನ್ನಳವು ಅಣಿಯರಂ
(ಅತಿಶಯ) ಎನೆ ನಾಲ್ಕು ಶರದೆ
ಪಾರ್ಥನನು ಎಚ್ಚಂ (ತನ್ನ

ಶಕ್ತಿಯು ಅತಿಶಯವಾದುದು ಎನ್ನುವ ಹಾಗೆ ನಾಲ್ಕುಬಾಣಗಳಿಂದ ಅರ್ಜುನನನ್ನು ಹೊಡೆದನು.)

ಪದ್ಯ-೧೬೪:ಅರ್ಥ:ಕರ್ಣನ ಮಗ ವೃಷಸೇನನು, ಇವನೊಡನೆ ಕಾದಿದರೆ ನನಗೆ ಯುದ್ಧವು ಸರಿಸಮಾನವಾಗುತ್ತದೆ ಎಂದು ಹೇಳಿ ಪ್ರಸಿದ್ಧವೂ ಹರಿತವೂ ಆದ ಬಾಣಗಳಿಂದಲೇ ಹೂಳಿ

ತನ್ನ ಶಕ್ತಿಯು
ಅತಿಶಯವಾದುದು ಎನ್ನುವ
ಹಾಗೆ ನಾಲ್ಕುಬಾಣಗಳಿಂದ
ಅರ್ಜುನನನ್ನು ಹೊಡೆದನು.

ಇಸೆ ಮುತ್ತಿ ಮುಸುಱಿ ಪರಿ ಬಂ
ಧಿಸಿದುವು
ನರರಥತುರಂಗಮಂಗಳನಂ
ತಾ|
ರ್ದೆಸಗಲ್ ಪೊಣರಲ್
ಮಿಡುಕಲ್

ಮಿಸುಕಲ್ಕಣಮೀಯದಾದುವ ವನ ಸರಲ್ಗಳ್|| ೧೬೫ ||

ಪದ್ಯ-೧೬೫:ಪದವಿಭಾಗ-ಅರ್ಥ:ಇಸೆ ಮುತ್ತಿ ಮುಸುಱಿ ಪರಿ ಬಂಧಿಸಿದುವು (ಆ ಬಾಣಗಳು ಅರ್ಜುನನ ತೇರು ಕುದುರೆಗಳನ್ನು ಮುತ್ತಿ ಆವರಿಸಿಕೊಂಡು ಕಟ್ಟಿ ಹಾಕಿದುವು.) ನರ ರಥ ತುರಂಗಮಂಗಳನು ಅಂತು ಆರ್ದು ಎಸಗಲ್ (ಹಾಗೆ

ಆರ್ಭಟಿಸಿ ಹೊಡೆಯುಲು)
ಪೊಣರಲ್ ಮಿಡುಕಲ್
ಮಿಸುಕಲ್ಕೆ ಅಣಂ
ಈಯದಾದುವು ಅವನ
ಸರಲ್ಗಳ್
(ಹೋರಾಡುವುದಕ್ಕೂ
ಅಲುಗಾಡುವುದಕ್ಕೂ
(ಚಲಿಸುವುದಕ್ಕೂ) ಸ್ವಲ್ಪವೂ
ಅವಕಾಶ ಕೊಡದಂತೆ
ಆದುವು.) (ಅಂತು ಎಸಗಲ್-

ಹಾಗೆ ಮಾಡಲು, ರಥ ಚಲಿಸುವುದಕ್ಕೂ?)

ಪದ್ಯ-೧೬೫:ಅರ್ಥ: ಹಾಗೆ ಹೊಡೆಯಲು, ಆ ಬಾಣಗಳು ಅರ್ಜುನನ ತೇರು ಕುದುರೆಗಳನ್ನು ಮುತ್ತಿ ಆವರಿಸಿಕೊಂಡು ಕಟ್ಟಿ ಹಾಕಿದುವು. ಹಾಗೆ ಆರ್ಭಟಿಸಿ ಹೊಡೆಯುಲು ಆ ಬಾಣಗಳು ಹೋರಾಡುವುದಕ್ಕೂ ಅಲುಗಾಡುವುದಕ್ಕೂ

ಸ್ವಲ್ಪವೂ ಅವಕಾಶ

ಕೊಡದಂತೆ ಆದುವು.

ವ|| ಆಗಳದಂ ಕಂಡು

ಪರಸೈನ್ಯಭೈರವಂ

ಮುಕುಂದನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಆಗಳು ಅದಂ ಕಂಡು

ಪರಸೈನ್ಯಭೈರವಂ

ಮುಕುಂದನನು ಇಂತು

ಎಂದಂ (ಆರ್ಜುನನು ಕೃಷ್ಣನಿಗೆ

ಹೀಗೆ ಹೇಳಿದನು)-

ವಚನ:ಅರ್ಥ:ಅದನ್ನು ನೋಡಿ ಪರಸೈನ್ಯಭೈರವನಾದ ಆರ್ಜುನನು ಕೃಷ್ಣನಿಗೆ ಹೀಗೆ ಹೇಳಿದನು

ಕಂ||

ಸ್ಯಂದನಬಂಧನಮೆಂಬುದ

ನಿಂದೀ

ವೃಷಸೇನನಿಂದಮಱಿದೆನಿದಂ

ಮು|

ನ್ನೆಂದುಂ ಕಂಡಱಿಯೆನಿದ

ಕರ್ಾಂ ದಲ್ ಬೆಱಗಾದೆನೆನಗೆ ಬೆಸಸು ಮುಕುಂದಾ|| ೧೬೬ ||

ಪದ್ಯ-೧೬೬:ಪದವಿಭಾಗ-ಅರ್ಥ:ಸ್ಯಂದನಬಂಧನಂ ಎಂಬುದನು ಇಂದು ಈ ವೃಷಸೇನನಿಂದಂ ಅಱಿದೆಂ (ರಥವನ್ನು ಕಟ್ಟಿಹಾಕುವುದೆಂಬುದನ್ನು ಈ ದಿನ ವೃಷಸೇನನಿಂದ ತಿಳಿದೆನು.) ಇದಂ ಮುನ್ನೊಂದುಂ ಕಂಡಱಿಯೆನು (ಇದಕ್ಕೆ

ಮೊದಲು ಎಂದೂ
ತಿಳಿದಿರಲಿಲ್ಲ.) ಇದರ್ಕೆ ಆಂ
ದಲ್ ಬೆಱಗಾದೆನು (ಇದಕ್ಕೆ
ನಾನು ಬೆರಗಾಗಿದ್ದೇನೆ.) ಎನಗೆ
ಬೆಸಸು ಮುಕುಂದಾ
(ಮುಂದೇನು
ಮಾಡಬೇಕೆಂಬುದನ್ನು ತಿಳಿಸು
ಕೃಷ್ಣಾ.)
ಪದ್ಯ-೧೬೬:ಅರ್ಥ:ರಥವನ್ನು
ಕಟ್ಟಿಹಾಕುವುದೆಂಬುದನ್ನು ಈ
ದಿನ ವೃಷಸೇನನಿಂದ

ತಿಳಿದೆನು. ಇದಕ್ಕೆ ಮೊದಲು ಎಂದೂ ತಿಳಿದಿರಲಿಲ್ಲ. ಇದಕ್ಕೆ ನಾನು ಬೆರಗಾಗಿದ್ದೇನೆ. ಮುಂದೇನು ಮಾಡಬೇಕೆಂಬುದನ್ನು ತಿಳಿಸು ಕೃಷ್ಣಾ, ಎಂದನು ಅರ್ಜುನ.

ಎನೆ ಪರಶುರಾಮನಿಂ ಕ
ರ್ಣನೆ ಬಲ್ಲಂ ಚಾಪವಿದ್ಯೆಯಂ
ಕರ್ಣನಿನೀ|
ತನೆ ಬಲ್ಲನಿವನ ಸರಲೆನಿ

ತನಿತುಮನೆಡೆವಿಡದೆ ತಱಿದು ತಲೆಯಂ ತಱಿಯಾ|| ೧೬೭ ||

ಪದ್ಯ-೧೬೭:ಪದವಿಭಾಗ-ಅರ್ಥ:ಎನೆ ಪರಶುರಾಮನಿಂ ಕರ್ಣನೆ ಬಲ್ಲಂ ಚಾಪವಿದ್ಯೆಯಂ (ಎನ್ನಲು ಬಿಲ್ಲು ವಿದ್ಯೆಯಲ್ಲಿ ಕರ್ಣನು ಪರಶುರಾಮನಿಗಿಂತ ಸಮರ್ಥನಾದವನು.) ಕರ್ಣನಿಂ ಈತನೆ ಬಲ್ಲನು (ಇವನು ಕರ್ಣನಿಗಿಂತ

ಸಮರ್ಥನು.) ಇವನ ಸರಲ್ ಎನಿತು ಅನಿತುಮಂ ಡೆವಿಡದೆ ತಱಿದು (ಇವನ ಬಾಣಗಳಷ್ಟನ್ನೂ ಒಂದೇ ಸಮನಾಗಿ ಕತ್ತರಿಸಿ) ತಲೆಯಂ ತಱಿಯಾ (ತಲೆಯನ್ನು ಕತ್ತರಿಸಯ್ಯಾ.)

ಪದ್ಯ-೧೬೭:ಅರ್ಥ: ಎನ್ನಲು ಬಿಲ್ಲು ವಿದ್ಯೆಯಲ್ಲಿ ಕರ್ಣನು ಪರಶುರಾಮನಿಗಿಂತ ಸಮರ್ಥನಾದವನು. ಇವನು

ಕರ್ಣನಿಗಿಂತ ಸಮರ್ಥನು.
ಇವನ ಬಾಣಗಳಷ್ಟನ್ನೂ
ಒಂದೇ ಸಮನಾಗಿ ಕತ್ತರಿಸಿ
ತಲೆಯನ್ನು ಕತ್ತರಿಸಯ್ಯಾ.

ವ|| ಎಂಬುದುಮಳವಿಗಱಿಯೆ ಬಳೆದು ಪುದುಂಗೊಳಿಸಿದ ಬಿದಿರ ಸಿಡುಂಬನೆಡೆಗೊಳೆ ಕಡಿವ ಪೊಡುಂಗಾಱನಂತೆ ಪರಶು ಚಕ್ರಾಸಿಧೇನುಗಳಿಂದಂ ತನ್ನ ತೋಡುಂ ಬೀಡಿಂಗಂ ರಥಮನೆಸಗುವ

ಮುಂರಾಂತಕನ ಕೆಯ್ಗಮೆಡೆಮಾಡಿ-

ವಚನ:ಪದವಿಭಾಗ-ಅರ್ಥ:

ಎಂಬುದುಂ ಅಳವಿಗಱಿಯೆ ಬಳೆದು ಪುದುಂಗೊಳಿಸಿದ ಬಿದಿರ ಸಿಡುಂಬನು (ಎನ್ನಲು ಅಳತೆಮೀರಿ ದಟ್ಟವಾಗಿ ಬೆಳೆದಿರುವ ಬಿದುರಿನ ಮೆಳೆಯನ್ನು) ಎಡೆಗೊಳೆ ಕಡಿವ ಪೊಡುಂಗಾಱನಂತೆ (ದಾರಿಗಾಗಿ ಬಿಡಿಸಲು ಕಾಡನ್ನು

ಕತ್ತರಿಸುವ ಹಾಗೆ) ಪರಶು ಚಕ್ರ ಅಸಿಧೇನುಗಳಿಂದಂ: ಅಸಿಧೇನು- ಕತ್ತಿ (ಕೊಡಲಿ ಚಕ್ರ ಕತ್ತಿಗಳಿಂದ) ತನ್ನ ತೋಡುಂ ಬೀಡಿಂಗಂ ರಥಮನು ಎಸಗುವ (ತನ್ನ ಬಾಣಸಂಧಾನ ಮತ್ತು ಮೋಚನಗಳಿಗೆ ಹೊಂದಿಕೊಳ್ಳುವುದಕ್ಕೂ ರಥವನ್ನು ನಡೆಸುವ) ಮುಂರಾಂತಕನ ಕೆಯ್ಗಂ ಎಡೆಮಾಡಿ (ಕೃಷ್ಣನ

ಕೈಗಳನ್ನಾಡಿಸುವುದಕ್ಕೂ ಅವಕಾಶಮಾಡಿಕೊಂಡು)-**ವಚನ:ಅರ್ಥ**:ಎನ್ನಲು ಅಳತೆಮೀರಿ ದಟ್ಟವಾಗಿ ಬೆಳೆದಿರುವ ಬಿದುರಿನ ಮೆಳೆಯನ್ನು ದಾರಿಗಾಗಿ ಬಿಡಿಸಲು ಕಾಡನ್ನು ಕತ್ತರಿಸುವ ಹಾಗೆ ಕೊಡಲಿ ಚಕ್ರ ಕತ್ತಿಗಳಿಂದ ತನ್ನ ಬಾಣಸಂಧಾನ ಮತ್ತು ಮೋಚನಗಳಿಗೆ

ಹೊಂದಿಕೊಳ್ಳುವುದಕ್ಕೂ
ರಥವನ್ನು ನಡೆಸುವ ಕೃಷ್ಣನ
ಕೈಗಳನ್ನಾಡಿಸುವುದಕ್ಕೂ
ಅವಕಾಶಮಾಡಿಕೊಂಡು-

ಚಂ|| ತನಗೆ ವಿನಾಯಕಂ
ದಯೆಯಿನಿತ್ತ
ಜಯಾಸ್ತ್ರಮನುರ್ಚಿಕೊಂಡು
ಭೋಂ
ಕೆನೆ ದೊಣೆಯಿಂದ
ಶರಾಸನದೊಳಂತದನಾಗಡೆ
ಪೂಡಿ ಧಾತ್ರಿ ತಿ|

ಱ್ರನೆ ತಿರಿವನ್ನೆಗಂ ತೆಗೆದು

ಕಂಧರಸಂಧಿಯನೆಯ್ದೆ ನೋಡಿ

ತೊ

ಟ್ಟನೆ ನರನೆಚ್ಚೊಡುಚ್ಚಳಿಸಿ

ಬಿಱ್ದುದು

ವೈರಿಶಿರಸ್ಸರೋರುಹಂ|| ೧೬೮

ಪದ್ಯ-೧೬೮:ಪದವಿಭಾಗ-

ಅರ್ಥ:ತನಗೆ ವಿನಾಯಕಂ

ದಯೆಯಿಂ ಇತ್ತ

ಜಯಾಸ್ತ್ರಮನು

ಉರ್ಚಿಕೊಂಡು ಭೋಂಕನೆ

ದೊಣೆಯಿಂದ (ವಿನಾಯಕನು
ತನಗೆ ಕೃಪೆಯಿಂದ ಕೊಟ್ಟ
ಜಯಾಸ್ತ್ರವನ್ನು ರಭಸದಿಂದ
ಬತ್ತಳಿಕೆಯಿಂದ
ಸೆಳೆದುಕೊಂಡು)
ಶರಾಸನದೊಳ್ (ಬಿಲ್ಲಿನಲ್ಲಿ)
ಅಂತು ಅದನು ಆಗಡೆ ಪೂಡಿ
(ಅದನ್ನು ಆಗಲೇ ಬಿಲ್ಲಿನಲ್ಲಿ
ಹೂಡಿ) ಧಾತ್ರಿ ತಿಱ್ರನೆ
ತಿರಿವನ್ನೆಗಂ (ಭೂಮಿಯು
ತಿರ್ರೆಂದು ತಿರುಗುತ್ತಿರಲು,)

ತೆಗೆದು ಕಂಧರ ಸಂಧಿಯನು ಎಯ್ದೆ ನೋಡಿ (ಕತ್ತಿನ ಸಂಧಿಭಾಗವನ್ನೇ ಚೆನ್ನಾಗಿ ನೋಡಿ) ತೊಟ್ಟನೆ ನರನು ಎಚ್ಚೊಡೆ (ಬೇಗನೆ ಅರ್ಜುನನು ಹೊಡೆಯಲಾಗಿ) ಉಚ್ಚಳಿಸಿ ಬಿಝ್ದುದು ವೈರಿ ಶಿರಸ್ಸರೋರುಹಂ; ಶಿರಸ್+ ಸರೋರುಹ- ಕಮಲ (ವೈರಿಯಾದ ವೃಷಸೇನನ

ತಲೆಯೆಂಬ ಕಮಲವು ಮೇಲಕ್ಕೆ ಹಾರಿ ಬಿದ್ದಿತು)

ಪದ್ಯ-೧೬೮:ಅರ್ಥ:ವಿನಾಯಕನು ತನಗೆ ಕೃಪೆಯಿಂದ ಕೊಟ್ಟ ಜಯಾಸ್ತ್ರವನ್ನು ರಭಸದಿಂದ ಬತ್ತಳಿಕೆಯಿಂದ ಸೆಳೆದುಕೊಂಡು ಅದನ್ನು ಆಗಲೇ ಬಿಲ್ಲಿನಲ್ಲಿ ಹೂಡಿ ಭೂಮಿಯು ತಿರ್ರೆಂದು ತಿರುಗುವ ಹಾಗೆ ಹೆದೆಯನ್ನು ಸೆಳೆದು ಕತ್ತಿನ

ಸಂಧಿಭಾಗವನ್ನೇ ಚೆನ್ನಾಗಿ
ನೋಡಿ ಗುರಿಯಿಟ್ಟು ಬೇಗನೆ
ಅರ್ಜುನನು ಹೊಡೆಯಲಾಗಿ
ವೈರಿಯಾದ ವೃಷಸೇನನ
ತಲೆಯೆಂಬ ಕಮಲವು
ಮೇಲಕ್ಕೆ ಹಾರಿ ಬಿದ್ದಿತು.

ಕರ್ಣಾರ್ಜುನರ ಯುದ್ಧ

ಕಂ|| ಅಂತತ್ತ ಪರಿದ ತಲೆಯನ
ದಂ ತಂದಟ್ಟೈಯೊಳಮರ್ಚಿ
ಸುರ ಗಣಿಕೆಯರ|

ಭ್ರಾಂತರದೊಳೆ ತಮ್ಮ ವಿಮಾ ನಾಂತರದೊಳಗಿಟ್ಟು ಕರ್ಣತನಯನನುಯ್ದರ್|| ೧೬೯ ||

ಪದ್ಯ-00:ಪದವಿಭಾಗ-ಅರ್ಥ:ಅಂತು ಅತ್ತ ಪರಿದ ತಲೆಯನು ಅದಂ ತಂದು ಅಟ್ಟೆಯೊಳಂ ಅರ್ಚಿ (ಆ ಕಡೆ ಹಾರಿದ ತಲೆಯನ್ನು ತಂದು ಶರೀರದೊಡನೆ ಕೂಡಿಸಿ) ಸುರ ಗಣಿಕೆಯರ ಭ್ರಾಂತರದೊಳೆ

ತಮ್ಮ
ವಿಮಾನಾಂತರದೊಳಗಿಟ್ಟು
ಕರ್ಣತನಯನನು ಉಯ್ದರ್
(ಅಪ್ಸರೆಯರು ಮೋಡಗಳ
ಮಧ್ಯದಲ್ಲಿ ತಮ್ಮ
ವಿಮಾನದೊಳಗಡೆ ಇಟ್ಟು
ಕರ್ಣನ ಮಗನನ್ನು
ತೆಗೆದುಕೊಂಡು ಹೋದರು)
ಪದ್ಯ-00:ಅರ್ಥ: ಆ ಕಡೆ
ಹಾರಿದ ತಲೆಯನ್ನು ತಂದು
ಶರೀರದೊಡನೆ ಕೂಡಿಸಿ

ಅಪ್ಸರೆಯರು ಮೋಡಗಳ ಮಧ್ಯದಲ್ಲಿ ತಮ್ಮ ವಿಮಾನದೊಳಗಡೆ ಇಟ್ಟು ಕರ್ಣನ ಮಗನನ್ನು ತೆಗೆದುಕೊಂಡು ಹೋದರು.

ವ|| ಅಂತು ನೋಡಿ ನೋಡಿ ತನ್ನ ಪಿರಿಯ ಮಗನಪ್ಪ ವೃಷಸೇನನನಂತಕನಣಲೊಳ ಡಸಿ ತನ್ನುಮನಣಲೊಳಡಸಲೆಂದಿ

ರ್ದ ವಿಕ್ರಮಾರ್ಜುನನಂ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು ನೋಡಿ ನೋಡಿ ತನ್ನ ಪಿರಿಯ ಮಗನಪ್ಪ ವೃಷಸೇನನಂ ಅಂತಕನ ಅಣಲೊಳ್ ಅಡಸಿ (ತನ್ನ ಹಿರಿಯಮಗನಾದ ವೃಷಸೇನನ್ನು ಯಮನ ಗಂಟಲಿನಲ್ಲಿ ತುರುಕಿ) ತನ್ನುಮನು ಅಣಲೊಳ

ಅಡಸಲೆಂದಿರ್ದ
ವಿಕ್ರಮಾರ್ಜುನನಂ ನೋಡಿ
(ತನ್ನನ್ನೂ -ಯಮನ-
ಗಂಟಲಿನಲ್ಲಿ
ತುರುಕಬೇಕೆಂದಿದ್ದ
ವಿಕ್ರಮಾರ್ಜುನನ್ನು ನೋಡಿ)-
ವಚನ:ಅರ್ಥ: ವ|| ಹಾಗೆ
ನೋಡಿ ನೋಡಿ ತನ್ನ
ಹಿರಿಯಮಗನಾದ
ವೃಷಸೇನನ್ನು ಯಮನ
ಗಂಟಲಿನಲ್ಲಿ ತುರುಕಿ ತನ್ನನ್ನೂ

ಗಂಟಲಿನಲ್ಲಿ
ತುರುಕಬೇಕೆಂದಿದ್ದ
ವಿಕ್ರಮಾರ್ಜುನನ್ನು ನೋಡಿ

ಚಂ|| ಮಗನಟಿಲೊಂದು
ಭೂಪತಿಯ
ತಮ್ಮನೊಳಾದಟಿಲೊಂದು
ನೊಂದು ಬಿ
ನ್ನಗೆ ಮೊಗದಿಂದೆ ಕುಂದಿ
ಫಣೀಕೇತನನಿರ್ದಟಿಲೊಂದು
ತನ್ನನಾ|

ವಗೆಯುರಿಯಟ್ಟಿವೋಲಳುರೆ ತನ್ನ ನೆಗೞ್ತೆಗೆ ಮುಯ್ವನಾಂತು ಮುಂ
ಪೊಗೞಿಸಿ ಬೞ್ದಿದಂ ನೆನೆದು ಕರ್ಣನಸುಂಗೊಳೆ ಬಂದು ತಾಗಿದಂ|| ೧೭೦ ||

ಪದ್ಯ-೧೭೦:ಪದವಿಭಾಗ-ಅರ್ಥ: ಮಗನ ಅೞಲೊಂದು (ಮಗನ ದುಖವೊಂದು) ಭೂಪತಿಯ ತಮ್ಮನೊಳು ಆದ ಅೞಲೊಂದು (ರಾಜನ

ತಮ್ಮನಾದ ದುಶ್ಯಾಸನನ
-ವಧೆಯ- ದುಖವೊಂದು)
ನೊಂದು ಬಿನ್ನಗೆ ಮೊಗದಿಂದೆ
ಕುಂದಿ (ಚಿಂತಾಸಕ್ತನಾಗಿ
ದೀನಮುಖದಿಂದ
ಕುಂದಿಹೋಗಿರುವ)
ಫಣೀಕೇತನನ
ಇರ್ದಚಿಲೊಂದು
(ದುರ್ಯೋಧನನಿರುವ
ಸ್ಥಿತಿಯೊಂದು) ತನ್ನನು
ಆವಗೆಯ ಉರಿಯು

ಅಬ್ಬಿವ್ರೋಲ್ ಅಳುರೆ-
ವ್ಯಾಪಿಸಲು (ಈ ಮೂರೂ
ತನ್ನನ್ನು ಕುಂಬಾರರ ಆವಗೆಯ
ಬೆಂಕಿಯ ಹಾಗೆ ಸುಡುತ್ತ
ವ್ಯಾಪಿಸಿರಲು) ತನ್ನ ನೆಗೞ್ತೆಗೆ
ಮುಯ್ವನಾಂತು
ಮುಂಪೊಗೞಿಸಿ ಬೞ್ದುದಂ
ನೆನೆದು (ತನ್ನ ಕೀರ್ತಿಗೆ
ಹಗಲನ್ನುಕೊಟ್ಟು/
ಆಶ್ರಯವಿತ್ತು ಮೊದಲು
ಹೊಗಳಿಸಿಕೊಂಡು ತಾನು

ಬಾಳಿದುದನ್ನು
ಜ್ಞಾಪಿಸಿಕೊಂಡ) ಕರ್ಣನು
ಅಸುಂಗೊಳೆ ಬಂದು ತಾಗಿದಂ
(ಅರ್ಜುನನ ಪ್ರಾಣವನ್ನು
ಸೆಳೆಯುವಂತೆ ಬಂದು
ಎದುರಿಸಿದನು/ ತಾಗಿದನು.)
ಪದ್ಯ-೧೭೦:ಅರ್ಥ: ಮಗನ
ಸಾವಿನ ದುಖವೊಂದು,
ರಾಜನ ತಮ್ಮನಾದ
ದುಶ್ಯಾಸನನ -ವಧೆಯ-
ದುಖವೊಂದು,

ಚಿಂತಾಸಕ್ತನಾಗಿ
ದೀನಮುಖದಿಂದ
ಕುಂದಿಹೋಗಿರುವ
ದುರ್ಯೋಧನನಿರುವ
ಸ್ಥಿತಿಯೊಂದು ಈ ಮೂರೂ
ತನ್ನನ್ನು ಕುಂಬಾರರ ಆವಗೆಯ
ಬೆಂಕಿಯ ಹಾಗೆ ಸುಡುತ್ತ
ವ್ಯಾಪಿಸಿರಲು, ತನ್ನ ಕೀರ್ತಿಗೆ
ಹಗಲನ್ನುಕೊಟ್ಟು/
ಆಶ್ರಯವಿತ್ತು ಮೊದಲು
ಹೊಗಳಿಸಿಕೊಂಡು ತಾನು

ಬಾಳಿದುದನ್ನು ಜ್ಞಾಪಿಸಿಕೊಂಡ ಕರ್ಣನು ಅರ್ಜುನನ ಪ್ರಾಣವನ್ನು ಸೆಳೆಯುವಂತೆ ಬಂದು ಎದುರಿಸಿದನು/ ತಾಗಿದನು.

ವ|| ಅಂತು ಬಂದು ತಾಗಿದಾಗಳುಭಯಸೈನ್ಯಸಾಗರಂಗಳೊಳ್-

ವಚನ:ಪದವಿಭಾಗ-

ಅರ್ಥ:ಅಂತು ಬಂದು

ತಾಗಿದಾಗಳ್ ಉಭಯ

ಸೈನ್ಯಸಾಗರಂಗಳೊಳ್-

ವಚನ:ಅರ್ಥ:ವ|| ಹಾಗೆ

ಬಂದು ತಾಗಿದಾಗ ಎರಡು

ಸೇನಾಸಮುದ್ರದಲ್ಲಿಯೂ .

ಕಂ|| ಬಧರಿತ ಸಮಸ್ತದಿಕ್ತಟ

ಮಧರಿತ ಸರ್ವೇಭ್ಯಗರ್ವಿತಂ

ಕ್ಷುಭಿತಾಂಭೋ|

ನಿಧಿ ಸಲಿಲಂ ಪರೆದುದು ಧುರ

ವಿಧಾನ ಪಟು ಪಟಹ ಕಹಳ

ಭೇರೀ ರಭಸಂ|| ೧೭೧ ||

ಪದ್ಯ-೧೭೧:ಪದವಿಭಾಗ-ಅರ್ಥ:ಬಧಿರಿತ (ಕಿವುಡಾದ) ಸಮಸ್ತ ದಿಕ್ತಟಂ (ಎಲ್ಲ ದಿಕ್ಕಿನ ಪ್ರದೇಶಗಳೂ ಕಿವುಡಾಗುವಂತೆ) ಅಧರಿತ (ಕಡಿಮ ಎನಿಸುವಂತೆ) ಸರ್ವೇಭ್ಯ (ಸರ್ವ +ಇಭ +ಯ) ಗರ್ವಿತಂ (ಆನೆಗಳ ಘೀಂಕಾರವನ್ನೂ ತಿರಸ್ಕರಿಸುವಂತೆ) ಕ್ಷುಭಿತ ಅಂಭೋನಿಧಿ

ಸಲಿಲಂ(ಕಲಕಿದ ಸಮುದ್ರದ ನೀರಿನಂತೆ,) ಪರೆದುದು (ವ್ಯಾಪಿಸಿತು, ಹರಡಿತು) ಧುರವಿಧಾನ ಪಟು ಪಟಹ ಕಹಳ ಭೇರೀ ರಭಸಂ (ಯುದ್ಧಕಾರ್ಯದಲ್ಲಿ ಸಮರ್ಥವಾದ ತಮಟೆ, ಕೊಂಬು ಮತ್ತು ನಗಾರಿಯ ಶಬ್ದಗಳ ರಭಸವು ಹರಡಿತು.)

ಪದ್ಯ-೧೭೧:ಅರ್ಥ: ಎಲ್ಲ ದಿಕ್ಕಿನ ಪ್ರದೇಶಗಳೂ

ಕಿವುಡಾಗುವಂತೆ, ಆನೆಗಳ
ಘೀಂಕಾರವನ್ನೂ
ತಿರಸ್ಕರಿಸುವಂತೆ, ಕಲಕಿದ
ಸಮುದ್ರದ ನೀರಿನಂತೆ,
ಯುದ್ಧಕಾರ್ಯದಲ್ಲಿ
ಸಮರ್ಥವಾದ ತಮಟೆ,
ಕೊಂಬು ಮತ್ತು ನಗಾರಿಯ
ಶಬ್ದಗಳ ರಭಸವು ಹರಡಿತು.

ಆದಿತ್ಯನ ಸಾರಥಿ ಬೆಱ
ಗಾದಂ ಮಾತಾಳಿ
ಮಾತುಗೆಟ್ಟಂ ಧುರದೊಳ್|

ಚೋದಿಸೆ ಹರಿಯುಂ ಶಲ್ಯನು ಮಾದರದಿಂ ನರನ ದಿನಪತನಯನ ರಥಮಂ|| ೧೭೨ ||

ಪದ್ಯ-೧೭೨:ಪದವಿಭಾಗ-ಅರ್ಥ:ಆದಿತ್ಯನ ಸಾರಥಿ ಬೆಱಗಾದಂ (ಸೂರ್ಯನ ಸಾರಥಿಯಾದ ಅರುಣನು ಆಶ್ಚರ್ಯಚಕಿತನಾದನು;) ಮಾತಾಳಿ ಮಾತುಗೆಟ್ಟಂ (ಇಂದ್ರನ ಸಾರಥಿ

ಮಾತಲಿಯೂ
ಮೂಕನಾದನು) ಧುರದೊಳ್
ಚೋದಿಸೆ ಹರಿಯುಂ
ಶಲ್ಯನುಂ ಆದರರದಿಂ ನರನ
ದಿನಪತನಯನ ರಥಮಂ
(ಯುದ್ಧದಲ್ಲಿ ಕೃಷ್ಣನೂ
ಶಲ್ಯನೂ ಅರ್ಜುನ ಮತ್ತು
ಕರ್ಣನ ರಥಗಳನ್ನು
ಆದರದಿಂದ ನಡೆಸುತ್ತಿರಲು
<-)

ಪದ್ಯ-೧೭೨:ಅರ್ಥ:

ಯುದ್ಧದಲ್ಲಿ ಕೃಷ್ಣನೂ ಶಲ್ಯನೂ ಅರ್ಜುನ ಮತ್ತು ಕರ್ಣನ ರಥಗಳನ್ನು ಆದರದಿಂದ ನಡೆಸುತ್ತಿರಲು ಸೂರ್ಯನ ಸಾರಥಿಯಾದ ಅರುಣನು ಆಶ್ಚರ್ಯಚಕಿತನಾದನು. ಇಂದ್ರನ ಸಾರಥಿ ಮಾತಲಿಯೂ ಮೂಕನಾದನು

ವ||

ಅಂತಿರ್ವರುಮೊರ್ವರೊರ್ವ

ರಂ ಮುಟ್ಟೆವಂದಲ್ಲಿ ವಿಕ್ರಾಂತತುಂಗನಂಗಾರಾಜನ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ಇರ್ವರುಂ ಒರ್ವರೊರ್ವರಂ ಮುಟ್ಟೆವಂದಲ್ಲಿ (ಇಬ್ಬರೂ ಒಬ್ಬೊಬ್ಬರನ್ನು ಮುಟ್ಟುವಷ್ಟು ಸಮೀಪಕ್ಕೆ ಬಂದಾಗ) ವಿಕ್ರಾಂತತುಂಗನು ಅಂಗಾರಾಜನ ನು ಇಂತೆಂದಂ

(ವಿಕ್ರಾಂತತುಂಗನಾದ ಅರ್ಜುನನು ಕರ್ಣನಿಗೆ ಹೀಗೆ ಹೇಳಿದನು)-

ವಚನ:ಅರ್ಥ:ಹಾಗೆ ಇಬ್ಬರೂ ಒಬ್ಬೊಬ್ಬರನ್ನು ಮುಟ್ಟುವಷ್ಟು ಸಮೀಪಕ್ಕೆ ಬಂದಾಗ ವಿಕ್ರಾಂತತುಂಗನಾದ ಅರ್ಜುನನು ಕರ್ಣನಿಗೆ ಹೀಗೆ ಹೇಳಿದನು.

ಹರಿಣೀಪ್ಲುತಂ|| ಪಿರಿದು ನಿನ್ನಂ ದುರ್ಯೋಧನಂ

ನಿನಗೆನ್ನೊಳಂ

ಪಿರಿದು ಕಲುಷಂ

ಕರ್ಣಂಗೊಡ್ಡಿತ್ತು ಭಾರತವೇಂ

ಬೆಸಂ|

ಪಿರಿದು ನಿನಗಂ ರಾಗಂ

ಮಿಕ್ಕಿರ್ದಗುರ್ವಿನ ಸೂನು ನಿ

ರ್ನೆರಮಱಿಯೆಯುಂ

ನೋಡುತ್ತಿಂತಿರ್ದೆಯಿರ್ಪುದು

ಪಾಱಿಯೇ|| ೧೭೩ ||

ಪದ್ಯ-೧೭೩:ಪದವಿಭಾಗ-

ಅರ್ಥ:ಪಿರಿದು ನಿನ್ನಂ

ದುರ್ಯೋಧನಂ (ನಿನ್ನನ್ನು
ದುರ್ಯೋಧನನು ವಿಶೇಷ
ಗೌರವದಿಂದ ಸಾಕಿದನು)
ನಿನಗೆ ಎನ್ನೊಳಂ ಪಿರಿದು
ಕಲುಷಂ (ನಿನಗೆ ನನ್ನಲ್ಲಿಯೂ
ವಿಶೇಷವಾದ ದ್ವೇಷ,) ಕರ್ಣಂ
ಗೊಡ್ಡಿತ್ತು ಭಾರತವು
(ಕರ್ಣನಿಂದಾಗಿಯೇ
ಭಾರತಯುದ್ಧವು ಒಡ್ಡಿತ್ತು,
ಪ್ರಾಪ್ತವಾದುದು.) ಏಂ ಬೆಸಂ
ಪಿರಿದು (ಯುದ್ಧಕಾರ್ಯವು

ನಿನಗೇನು ದೊಡ್ಡದು?)
ನಿನ್ನಗಂ ರಾಗಂ ಮಿಕ್ಕಿರ್ದ
ಅಗುರ್ವಿನ ಸೂನು (ನಿನಗೆ
ವಿಶೇಷ ಪ್ರೀತಿಪಾತ್ರನೂ
ಪ್ರಚಂಡನೂ ಆದ ಮಗನು)
ನಿರ್ನೆರಂ ಅೞಿಯೆಯುಂ
(ನಿಷ್ಕಾರಣವಾಗಿ
ಅಳಿದರೂ,ಸತ್ತರೂ)
ನೋಡುತ್ತ
ಇಂತಿರ್ದೆಯಿರ್ಪುದು
ಪಾೞಿಯೇ (ನೋಡುತ್ತ ಹೀಗೆ

ಇದ್ದೀಯೇ? ಇರುವುದು ಧರ್ಮವೇ)

ಪದ್ಯ-೧೭೩:ಅರ್ಥ:೧೭೩. ನಿನ್ನನ್ನು ದುರ್ಯೋಧನನು ವಿಶೇಷ ಗೌರವದಿಂದ ಸಾಕಿದನು. ನಿನಗೆ ನನ್ನಲ್ಲಿಯೂ ವಿಶೇಷವಾದ ದ್ವೇಷ, ಕರ್ಣನಿಂದಾಗಿಯೇ ಭಾರತಯುದ್ಧವು ಪ್ರಾಪ್ತವಾದುದು. ಯುದ್ಧಕಾರ್ಯವು ನಿನಗೇನು

ದೊಡ್ಡದು? ನಿನಗೆ ವಿಶೇಷ ಪ್ರೀತಿಪಾತ್ರನೂ ಪ್ರಚಂಡನೂ ಆದ ಮಗನು ನಿಷ್ಕಾರಣವಾಗಿ ಸತ್ತರೂ ನೋಡುತ್ತ ಹೀಗೆ ಇದ್ದೀಯೇ? ಇರುವುದು ಧರ್ಮವೇ?

ಕಂ|| ಎನ್ನ ಪೆಸರ್ಗೇಳ್ದು ಸೈರಿಸ
ದನ್ನಯದಿಂತೀಗಳೆನ್ನ ರೂಪಂ
ಕಂಡುಂ|
ನಿನ್ನರಸನಣುಗದಮ್ಮನ

ನಿನ್ನ ತನೂಭವನ ಸಾವುಗಂಡುಂ ಮಾಣ್ಬಾ॥ ೧೭೪ ||

ಪದ್ಯ-೧೭೪:ಪದವಿಭಾಗ-ಅರ್ಥ:ಎನ್ನ ಪೆಸರ್ ಕೇಳ್ದು ಸೈರಿಸದಂ (ನನ್ನ ಹೆಸರನ್ನೂ ಕೇಳಿ ಸೈರಿಸದವನು) ನಯಿದಿ ಇಂತು ಈಗಳ್ ಎನ್ನ ರೂಪಂ ಕಂಡುಂ (ಈಗ ನನ್ನ ರೂಪವನ್ನು ಕಂಡೂ) ನಿನ್ನ ಅರಸನ ಅಣುಗದಮ್ಮನ

(ನಿನ್ನ ರಾಜರ ಪ್ರೀತಿಯ ತಮ್ಮನ,) ನಿನ್ನ ತನೂಭವನ ಸಾವುಗಂಡುಂ (ನಿನ್ನ ಮಗನ ಸಾವನ್ನು ನೋಡಿಯೂ) ಮಾಣ್ಬಾ (ಮಾಡದೆ ಇದ್ದೀಯಾ?)
ಪದ್ಯ-೧೭೪:ಅರ್ಥ: ನನ್ನ ಹೆಸರನ್ನೂ ಕೇಳಿ ಸೈರಿಸದವನು ನೀನು, ನಯದಿಂದ/ ಈಗ ನನ್ನ ರೂಪವನ್ನು ಕಂಡೂ ನಿನ್ನ ರಾಜರ ಪ್ರೀತಿಯ ತಮ್ಮನ,

ನಿನ್ನ ಮಗನ ಸಾವನ್ನು ನೋಡಿಯೂ ಏನೂ ಮಾಡದೆ ಇದ್ದೀಯಾ?

ಮ||

ಭಯಮೇಕಕ್ಕುಮದೆಂತುಟೆಂದ

ದಟುಮಂ ಪೆರ್ಮಾತುಮಂ

ಭೂತ ಧಾ

ತ್ರಿಯೊಳೋರಂತೆ ನೆಗೞ್ಚಿ

ಮುನ್ನೆ ಬೞಿಯಂ ಕಾನೀನ

ನೀನೀ ಮಹಾ|

ಜಿಯೊಳಿಂತೇನೆನಗಂಜಿ

ಮಾಣ್ದೆ ಪೆಱತೇಂ ಪೋ

ಮಾತು ಲೇಸಣ್ಣಾ ಸೆ

ಟ್ಟಿಯ ಬಳ್ಳಂ

ಕಿಱಿದೆಂಬುದೊಂದು

ನುಡಿಯಂ ನೀಂ ನಿಕ್ಕುವಂ

ಮಾಡಿದೈ|| ೧೭೫ ||

ಪದ್ಯ-೧೭೫:ಪದವಿಭಾಗ-ಅರ್ಥ:ಭಯಂ ಏಕೆ ಅಕ್ಕುಂ ಅದೆಂತುಟು ಎಂದು (ಭಯವೇಕಾಗುತ್ತದೆ, ಅದು

ಹೇಗಿದೆ? ಎಂದು)
ಅದಟುಮಮಂ ಪೆರ್ಮೆಯುಮಂ
ಭೂತ ಧಾತ್ರಿಯೊಳ್ ಓರಂತೆ
ನೆಗೞ್ಚಿ ಮುನ್ನೆ
(ಪರಾಕ್ರಮವನ್ನೂ ದೊಡ್ಡ
ಮಾತುಗಳನ್ನೂ ಮೊದಲು
ಲೋಕದಲ್ಲೆಲ್ಲ ಆಡಿದೆ)
ಬೞಿಯಂ ಕಾನೀನ ನೀನೀ
ಮಹಾಜಿಯೊಳ್ (ಕರ್ಣನೇ
ನಂತರ ಈ ಮಹತ್
ಯುದ್ಧದಲ್ಲಿ) ಇಂತೇನ್ ಎನಗೆ

ಅಂಜಿ ಮಾಣ್ದೆ (ಹೀಗೆ ನನಗೆ ಹೆದರಿ ತಡಮಾಡುತ್ತಿದ್ದೀಯೆ.) ಪೆಱತೇಂ ಪೋ (ಮತ್ತೇನು ಹೋಗಯ್ಯ) ಮಾತು ಲೇಸಣ್ಣ ಸೆಟ್ಟಿಯ ಬಳ್ಳಂ ಕಿಱಿದೆಂಬುದು ಒಂದು ನುಡಿಯಂ (ಮಾತನಾಡುವುದು ಸುಲಭ! 'ಸೆಟ್ಟಿಯ ಬಳ್ಳ ಕಿರಿದು' ಎಂಬ ಗಾದೆಯ ಮಾತನ್ನು) ನೀಂ

ನಿಕ್ಕುವಂ ಮಾಡಿದ್ಯೆ (ನೀನು ನಿಜವೆನಿಸಿಬಿಟ್ಟೆ!)

- **ಟಿಪ್ಪಣಿ**::ಅರ್ಜುನನಿಗೆ ಇಲ್ಲಿ ಕರ್ಣ ಕಾನೀನ ಎಂದು ಗೊತ್ತಿಲ್ಲ, ಆದರೂ ಪ್ರಯೋಗವಾಗಿದೆ. ಕಾನೀನ ಎಂದರೆ ಮದುವೆಗೆ ಮೊದಲು ಜನಿಸಿದವನು.

ಪದ್ಯ-೧೭೫:ಅರ್ಥ:ಭಯವೇ ಕಾಗುತ್ತದೆ, ಅದು ಹೇಗಿದೆ? ಎಂದು ಪರಾಕ್ರಮವನ್ನೂ

ದೊಡ್ಡ ಮಾತುಗಳನ್ನೂ
ಮೊದಲು ಲೋಕದಲ್ಲೆಲ್ಲ
ಆಡಿದೆ, ಕರ್ಣನೇ ನಂತರ ಈ
ಮಹತ್ ಯುದ್ಧದಲ್ಲಿ ಹೀಗೆ
ನನಗೆ ಹೆದರಿ
ತಡಮಾಡುತ್ತಿದ್ದೀಯೆ.
ಮತ್ತೇನು ಹೋಗಯ್ಯ
ಮಾತನಾಡುವುದು ಸುಲಭ!
'ಸೆಟ್ಟಿಯ ಬಳ್ಳ ಕಿರಿದು' ಎಂಬ
ಗಾದೆಯ ಮಾತನ್ನು ನೀನು
ನಿಜವೆನಿಸಿಬಿಟ್ಟೆ!

ಕಂ|| ಪೆಸರೆಸೆಯೆ ಬೀರಮಂ

ಪಾ

ಡಿಸಿಯುಂ

ಪೊಗೞಿಸಿಯುಮುರ್ಕಿ

ಬಿೞ್ದಾಹವದೊಳ್|

ಕುಸಿದು ಪೆಱಪಿಂಗಿ ಪೇೞ್

ಮಾ

ನಸರೇನಿನ್ನೂಱು ವರ್ಷಮಂ

ಬೞ್ದಪರೇ|| ೧೭೬ ||

ಪದ್ಯ-೧೭೬:ಪದವಿಭಾಗ-

ಅರ್ಥ:ಪೆಸರ್ ಎಸೆಯೆ

(ಹೆಸರು ಪ್ರಸಿದ್ಧವಾಗಲು)
ಬೀರಮಂ ಪಾಡಿಸಿಯುಂ
ಪೊಗೞಿಸಿಯುಂ ಉರ್ಕಿ
(ಶೌರ್ಯವನ್ನು ಹಾಡಿಸಿಯೂ
ಹೊಗಳಿಸಿಯೂ ಉಬ್ಬಿ) ಬಿೞ್ದು
ಆಹವದೊಳ್ ಕುಸಿದು
ಪೆಱಪಿಂಗಿ (ಯುದ್ಧದಲ್ಲಿ
ಸೋತು ಕುಸಿದು
ಹಿಂಜರಿಯುವುದಕ್ಕೆ) ಪೇೞ್
ಮಾನಸರೇನ್ ಇನ್ನೂಱು
ವರ್ಷಮಂ ಬೞ್ದಪರೇ

(ಮನುಷ್ಯರು ಏನು ಇನ್ನೂರು ವರ್ಷ ಬದುಕುತ್ತಾರೆಯೇ?)

ಪದ್ಯ-೧೭೬:ಅರ್ಥ: ಹೆಸರು ಪ್ರಸಿದ್ಧವಾಗಲು ಶೌರ್ಯವನ್ನು ಹಾಡಿಸಿಯೂ ಹೊಗಳಿಸಿಯೂ ಉಬ್ಬಿ ಯುದ್ಧದಲ್ಲಿ ಸೋತು ಕುಸಿದು ಹಿಂಜರಿಯುವುದಕ್ಕೆ ಮನುಷ್ಯರು ಏನು ಇನ್ನೂರು ವರ್ಷ ಬದುಕುತ್ತಾರೆಯೇ?

ವ|| ಎಂದು ನೃಪ ಪರಮಾತ್ಮನ ಪಾಟಿಯ ಪಸುಗೆಯ ನುಡಿಗೆ

ಪರಮಾರ್ತನಾಗಿ

ತನ್ನನುದ್ಘಾಟಿಸಿ

ನುಡಿದೊಡುಮ್ಮಚ್ಚದೊಳ್

ಮೆಚ್ಚದೆ

ದರಹಸಿತವದನಾರವಿಂದನಾಗಿ

ದಶಶತಕರ

ತನೂಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನೃಪ

ಪರಮಾತ್ಮನ ಪಾಟಿಯ

ಪಸುಗೆಯ ನುಡಿಗೆ

(ಎಂಬುದಾಗಿ ಹೇಳಿದ
ನೃಪಪರಮಾತ್ಮನಾದ
ಅರ್ಜುನನ ವಿವೇಕದ
ಮಾತಿಗೆ) ಪರಮಾರ್ತನಾಗಿ
(ಬಹಳ ದುಖಪಟ್ಟು) ತನ್ನನು
ಉದ್ಘಾಟಿಸಿ ನುಡಿದೊಡೆ
ಉಮ್ಮಚ್ಚದೊಳ್ ಮೆಚ್ಚದೆ
(ತನ್ನನ್ನು ಕುರಿತು
ಮರ್ಮಭೇದಕವಾದ
ರೀತಿಯಲ್ಲಿ ನುಡಿದರೂ
ಕೋಪಿಸಿಕೊಳ್ಳಲು

ಇಷ್ಟಪಡದೆ) ದರಹಸಿತ ವದನಾರವಿಂದನಾಗಿ (ದರಹಸಿತ-ಅರ್ಧನಗುವಿನ, ವದನ ಅರವಿಂದ-ಮುಖಕಮಲ) ದಶಶತಕರ (ಸೂರ್ಯ) ತನೂಜನು (ಮಗ) ಇಂತೆಂದಂ (ಮುಗುಳ್ನಗೆಯಿಂದ ಕೂಡಿದ ಮುಖಕಮಲವುಳ್ಳವನಾಗಿ ಕರ್ಣನು ಹೀಗೆಂದನು)-

ವಚನ:ಅರ್ಥ:ಎಂಬುದಾಗಿ ಹೇಳಿದ ಅರ್ಜುನನ ವಿವೇಕದ ಮಾತಿಗೆ ಬಹಳ ದುಃಖಪಟ್ಟು ತನ್ನನ್ನು ಕುರಿತು ಮರ್ಮಭೇದಕವಾದ ರೀತಿಯಲ್ಲಿ ನುಡಿದರೂ ಕೋಪಿಸಿಕೊಳ್ಳಲು ಇಷ್ಟಪಡದೆ ಮುಗುಳ್ನಗೆಯಿಂದ ಕೂಡಿದ ಮುಖಕಮಲವುಳ್ಳವನಾಗಿ ಕರ್ಣನು ಹೀಗೆಂದನು-

ಕಂ|| ಎಳೆಯಂ ಕೋಳ್ಪಟ್ಟುಂ

ಮುಂ

ಬಳೆದೊಟ್ಟುಂ

ಮುಟ್ಟುಗೆಟ್ಟುಮಿದೀ೯ಗಳ್ ಬ|

ಳ್ವಳನೆ ನುಡಿದಪುದೆ ನುಡಿವಂ

ತಳವುಂ

ಪೆರ್ಮಾ೯ತುಮಾಯಮುಂ

ನಿನಗಾಯ್ತೇ|| ೧೭೭ ||

ಪದ್ಯ-೧೭೭:ಪದವಿಭಾಗ-

ಅರ್ಥ:ಎಳೆಯಂ

(ನೆಲವನ್ನು,ರಾಜ್ಯವನ್ನು)

ಕೋಳ್ಪಟ್ಟುಂ
(ಪರಾಧೀನಮಾಡಿಯೂ)
ಮುಂಬಳೆದೊಟ್ಟುಂ
(ಮುಂಗೈಗೆ ಬಳೆ ತೊಟ್ಟೂ)
ಮುಟ್ಟುಗೆಟ್ಟುಂ ಇರ್ದು
(ಆಯುಧ ಹಿಡಿಯದಂತಿದ್ದೂ)
ಈಗಳ್ ಬಳ್ವಳನೆ ನುಡಿದಪುದೆ
(ಈಗ ಬಡಬಡನೆ
ಮಾತನಾಡುವುದೇ?)
ನುಡಿವಂತೆ ಅಳವುಂ
ಪೆರ್ಮಾತುಂ ಆಯಮುಂ

ನಿನಗಾಯ್ತೇ (ಹಾಗೆ ಮಾತನಾಡುವ ನಿನಗೆ ಶಕ್ತಿಯೂ ಪ್ರೌಢಿಮೆಯೂ ಪರಾಕ್ರಮವೂ ಉಂಟೇ?).

ಪದ್ಯ-೧೭೭:ಅರ್ಥ: ರಾಜ್ಯವನ್ನು ಮೊದಲು ಪರಾಧೀನಮಾಡಿಯೂ, ಮುಂಗೈಗೆ ಬಳೆ ತೊಟ್ಟೂ, ಆಯುಧ ಹಿಡಿಯದಂತಿದ್ದೂ ಈಗ ಬಡಬಡನೆ ಮಾತನಾಡುವುದೇ? ಹಾಗೆ

ಮಾತನಾಡುವ ನಿನಗೆ

ಶಕ್ತಿಯೂ ಪ್ರೌಢಿಮೆಯೂ

ಪರಾಕ್ರಮವೂ ಉಂಟೇ?

ಕಂ|| ಏೞ್ಕಟ್ಟನೆೞೆದು ನಿಮ್ಮಂ

ನಾೞ್ಕಡಿಗಳಿದೊಡೆ ಮದೀಯ

ನಾಥಂ ಬೇರಂ|

ಬೀೞ್ಕೆಯನೆ ತಿಂದ ದೆವಸದೊ

ಳೞ್ಕಾಡಿದ ಬೀರಮೀಗಳೇಂ

ಪೊಸತಾಯ್ತೇ|| ೧೭೮ ||

ಪದ್ಯ-೧೭೮:ಪದವಿಭಾಗ-

ಅರ್ಥ:ಏೞ್ಕಟ್ಟಿಂ ಎೞೆದು

(ವರ್ಷಗಳ ಅವಧಿಯ-
ಕಟ್ಟುಪಾಡಿನಿಂದ ಎಳೆದು)
ನಿಮ್ಮಂ ನಾಟ್ಕಿಡಿ ಗಳಿದೊಡೆ-
ನಾಳ್ಕು ಗಡಿ ಕಳಿದೊಡೆ
(ನಿಮ್ಮನ್ನು ನಾಡಗಡಿಯಿಂದ
ಕಳಿಸಿದಾಗ,
ಹೊರದೂಡಿದಾಗ) ಮದೀಯ
ನಾಥಂ (ನನ್ನ ರಾಜ
ದುರ್ಯೋಧನನು) ಬೇರಂ
ಬಿಟ್ಕೆಯನೆ ತಿಂದ
ದೆವಸದೊಳ್ (ಬೇರನ್ನೂ

ಬಿಕ್ಕೆಯನ್ನೂ ತಿಂದ ದಿವಸಗಳಲ್ಲಿ) ಅಟ್ಟ್ಯಾಡಿದ (ನಾಶವಾದ) ಬೀರಂ ಈಗಳ್ ಏಂ ಪೊಸತಾಯ್ತೇ (ಪೌರುಷವು ಈಗ ಹೊಸದಾಯಿತೇನು?)

ಪದ್ಯ-೧೭೮:ಅರ್ಥ:ನನ್ನ ರಾಜ ದುರ್ಯೋಧನನು ವರ್ಷಗಳ ಅವಧಿಯ ಕಟ್ಟುಪಾಡಿನಿಂದ ಎಳೆದು, ನಿಮ್ಮನ್ನು ನಾಡಗಡಿಯಿಂದ

ಹೊರದೂಡಿದಾಗ ಬೇರನ್ನೂ

ಬಿಕ್ಕೆಯನ್ನೂ ತಿಂದ

ದಿವಸಗಳಲ್ಲಿ ನಾಶವಾದ

ಪೌರುಷವು ಈಗ

ಹೊಸದಾಯಿತೇನು?

ಮತ್ತನಯನರಸನನುಜನ

ಸತ್ತಟಿಲಂ

ನಿನ್ನೊಳಱಸಲೆಂದಿರ್ದೆಂ ಬೆ|

ಳ್ಕುತ್ತಿರ್ದೆನಪ್ಪೊಡೇತೊದ

ಳಿತ್ತಣ ದಿನನಾಥನಿತ್ತ

ಮೂಡುಗುಮಲ್ತೇ|| ೧೭೯ ||

ಪದ್ಯ-೧೭೯:ಪದವಿಭಾಗ-ಅರ್ಥ:ಮತ್ ತನಯನ ಅರಸನ ಅನುಜನ ಸತ್ತ ಅೞಲಂ -ಅಳಲಂ (ನನ್ನ ಮಗನೂ ರಾಜನ ತಮ್ಮನಾದ ದುಶ್ಶ್ಯಾಸನನೂ ಸತ್ತ ದುಖವನ್ನು) ನಿನ್ನೊಳು ಅಱಸಲೆಂದು ಇರ್ದೆಂ (ನಿನ್ನಲ್ಲಿ ಹುಡುಕಬೇಕೆಂದಿದ್ದೆ.) ಬೆಳ್ಕುತ್ತಿ ಇರ್ದೆನಪ್ಪೊಡೆ (ಹೆದರಿ ಇದ್ದವನಾಗಿದ್ದರೆ) ಏ ತೊದಳು

(ಏನು ಸುಳ್ಳು), ಇತ್ತಣ
ದಿನನಾಥನು ಇತ್ತ
ಮೂಡುಗುಂ ಅಲ್ತೇ (ಈ/ ಆ
ಕಡೆಯ ಸೂರ್ಯ ಈ ಕಡೆಯೇ
ಹುಟ್ಟುತ್ತಾನಲ್ಲವೇ?
(ಪೂರ್ವಕ್ಕೂ ಪಶ್ಚಿಮಕ್ಕೂ ಕೈ
ತೋರಿದಾಗ ಈ ಕಡೆಯ
ಸೂರ್ಯ ಈ ಕಡೆ
ಹುಟ್ಟುತ್ತಾನಲ್ಲವೇ?
ಎಂದಾಗುತ್ತದೆ.)

ಪದ್ಯ-೧೭೯:ಅರ್ಥ:ನನ್ನ ಮಗನೂ ರಾಜನ ತಮ್ಮನಾದ ದುಶ್ಶ್ಯಾಸನನೂ ಸತ್ತ ದುಖವನ್ನು ನಿನ್ನಲ್ಲಿ ಹುಡುಕಬೇಕೆಂದಿದ್ದೆ. ಹೆದರಿ ಇದ್ದವನಾಗಿದ್ದರೆ ಎಂದರೆ ಅದೆಂತಹ ಸುಳ್ಳು ಮಾತು! ಈ/ ಆ ಕಡೆಯ ಸೂರ್ಯ ಈ ಕಡೆ ಹುಟ್ಟುತ್ತಾನಲ್ಲವೇ?

ಕಸವರದ ಸವಿಯುಮಂ ಭಯ

ರಸಕದ
ಸವಿಯುಮನೆದೆಂತುಮಾನಱಿ
ಯದುದಂ|
ವಸುಮತಿಯಱಿವುದು ನೀಂ
ಪುರು
ಡಿಸಿ ನುಡಿದೊಡೆ ನಿನ್ನ ನುಡಿದ
ಮಾತೇಱುಗುಮೇ|| ೧೮೦ ||

ಪದ್ಯ-೧೮೦:ಪದವಿಭಾಗ-ಅರ್ಥ:ಕಸವರದ (ಚಿನ್ನದ) ಸವಿಯುಮಂ (ಚಿನ್ನದ ರುಚಿಯನ್ನೂ) ಭಯರಸಕದ

ಸವಿಯುಮಂ (ಭಯರಸದ
ರುಚಿಯನ್ನೂ) ಅದೆಂತುಂ
ಆನು ಅಱಿಯದುದಂ
ವಸುಮತಿಯು ಅಱಿವುದು
(ನಾನು ಎಂದೂ
ಅರಿಯದುದನ್ನು ಈ
ಭೂಮಂಡಲವೇ ತಿಳಿದಿದೆ.)
ನೀಂ ಪುರುಡಿಸಿ ನುಡಿದೊಡೆ
(ನೀನು ಹೊಟ್ಟೆಕಿಚ್ಚಿನಿಂದ
ನುಡಿದರೆ) ನಿನ್ನ ನುಡಿದ
ಮಾತು ಏಱುಗುಮೇ (ನೀನು

ಆಡಿದ ಮಾತು ಪುಷ್ಟಿಯಾಗುತ್ತದೆಯೇ?)

ಪದ್ಯ-೧೮೦:ಅರ್ಥ: ಚಿನ್ನದ ರುಚಿಯನ್ನೂ, ಭಯರಸದ ರುಚಿಯನ್ನೂ ನಾನು ಎಂದೂ ಅರಿಯದುದನ್ನು ಈ ಭೂಮಂಡಲವೇ ತಿಳಿದಿದೆ. ನೀನು ಹೊಟ್ಟೆಕಿಚ್ಚಿನಿಂದ ನುಡಿದರೆ ನೀನು ಆಡಿದ ಮಾತು

ಬೆಲೆಯುಳ್ಳದ್ದಾಗುವುದೇ?/ ಪುಷ್ಟಿಯಾಗುತ್ತದೆಯೇ?

ಒಡಲುಂ ಪ್ರಾಣಮುಮೆಂಬಿವು ಕಿಡಲಾದುವು ಜಸಮದೊಂದೆ ಕಿಡದದನಾಂ ಬ| ಲ್ವಿಡಿವಿಡಿದು ನೆಗೞ್ದೆನುೞಿದಱ ವಡೆಮಾತಂ ಮಾಡಿ ನೀನೆ ಕೆಮ್ಮನೆ ನುಡಿವೈ|| ೧೮೧ ||

ಪದ್ಯ-೧೮೧:ಪದವಿಭಾಗ-

ಅರ್ಥ:ಒಡಲುಂ ಪ್ರಾಣಮುಂ

ಎಂಬಿವು ಕಿಡಲ್ ಆದುವು
(ಶರೀರವೂ ಪ್ರಾಣವೂ ಎಂಬ
ಇವು ನಾಶವಾಗಲು ಆದವು.)
ಜಸಂ ಅದೊಂದೆ ಕಿಡದು ಅದ
ನಾಂ ಬಲ್ವಿಡಿವಿಡಿದು
(ಯಶಸ್ಸೊಂದೆ ಕೆಡದೆ
ಇರತಕ್ಕದ್ದು; ಅದನ್ನು ನಾನು
ಬಿಗಿಯಾಗಿ ಆಶ್ರಯಿಸಿ)
ನೆಗೞ್ದೆನು ಉೞಿದ ಅೞಿವ
ಅಡೆಮಾತಂ ಆಡಿ(ಉಳಿದ
ನಿಲ್ಲದ ಹೀನವಾದ

ಮಾತನ್ನಾಡಿ) ನೀನೆ ಕೆಮ್ಮನೆ ನುಡಿವೈ (ನೀನು ಸುಮ್ಮನೆ/ ನಿಷ್ಪ್ರಯೋಜಕವಾಗಿ ನುಡಿಯುತ್ತಿದ್ದೀಯೆ.)

ಪದ್ಯ-೧೮೧:ಅರ್ಥ:

ಶರೀರವೂ ಪ್ರಾಣವೂ ಎಂಬ ಇವು ನಾಶವಾಗಲು ಆದವು. ಯಶಸ್ಸೊಂದೆ ಕೆಡದೆ ಇರತಕ್ಕದ್ದು; ಅದನ್ನು ನಾನು ಬಿಗಿಯಾಗಿ ಆಶ್ರಯಿಸಿ ಪ್ರಸಿದ್ಧನಾಗಿದ್ದೇನೆ. ಉಳಿದ

ಹೀನವಾದ ಮಾತನ್ನಾಡಿ,
ನೀನು ಸುಮ್ಮನೆ
ನುಡಿಯುತ್ತಿದ್ದೀಯೆ.

ಚಂ|| ಬಿದಿ ವಸದಿಂದೆ ಪುಟ್ಟುವುದು ಪುಟ್ಟಿಸುವಂ ಬಿದಿ ಪುಟ್ಟಿದಂದಿವಂ ಗಿದು ಬಿಯಮೊಳ್ಪಿವಂಗಿದು ವಿನೋದಮಿವಂಗಿದು ಸಾವ ಪಾಂಗಿವಂ| ಗಿದು ಪಡೆಮಾತಿವಂಗಿದು ಪರಾಕ್ರಮಮೆಂಬುದನೆಲ್ಲ

ಮಾೞ್ಕೆಯಿಂ
ಬಿದಿ ಸಮಕಟ್ಟಿ
ಕೊಟ್ಟೊಡೆಡೆಯೊಳ್ ಕಿಡಿಸಲ್
ಕುಡಿಸಲ್ ಸಮರ್ಥರಾರ್||
೧೮೨ ||

ಪದ್ಯ-೧೮೨:ಪದವಿಭಾಗ-ಅರ್ಥ:ಬಿದಿ ವಸದಿಂದೆ ಪುಟ್ಟುವುದು (ಹುಟ್ಟುವುದು ದೈವವಶದಿಂದ) ಪುಟ್ಟಿಸುವಂ ಬಿದಿ (ಹುಟ್ಟಿಸುವವನೂ ವಿಧಿಯೇ) ಪುಟ್ಟಿದಂದು

ಇವಂಗೆ ಇದು ಬಿಯಮ್ (ಹುಟ್ಟಿದಾಗ ಇವನಿಗಿದು ಸಂಪತ್ತು) ಒಳ್ಪು ಇವಂಗೆ ಇದು ವಿನೋದಂ (ಇವನಿಗೆ ಒಳ್ಳೆಯದಿದು, ಇವನಿಗೆ ಇದು ವಿನೋದ,) ಇವಂಗೆ ಇದು ಸಾವ ಪಾಂಗು (ಇವನಿಗೆ ಇದು ಸಾಯುವ ರೀತಿ,) ಇವಂಗಿದು ಪಡೆಮಾತು ಇವಂಗಿದು ಪರಾಕ್ರಮಂ ಎಂಬುದನೆಲ್ಲ (ಇವನಿಗೆ ಇದು ಬರಿಮಾತು,

ಇವನಿಗಿದು ಪರಾಕ್ರಮ ಎಂಬುದನ್ನು) ಮಾಱ್ಕೆಯಿಂ ಬಿದಿ ಸಮಕಟ್ಟಿ ಕೊಟ್ಟೊಡೆ (ಎಲ್ಲ ರೀತಿಯಲ್ಲಿಯೂ ವಿಧಿ ಸಮಕಟ್ಟುಮಾಡಿ ಕೊಟ್ಟಿರುವಾಗ) ಎಡೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್ (ಮಧ್ಯದಲ್ಲಿ ಅದನ್ನು ಕೆಡಿಸುವುದಕ್ಕಾಗಲಿ ಕೊಡಿಸುವುದಕ್ಕಾಗಲಿ ಯಾರು ಸಮರ್ಥರು?)

ಪದ್ಯ-೧೮೨:ಅರ್ಥ:ಮಾನವ
ನು ಹುಟ್ಟುವುದು
ದೈವವಶದಿಂದ;
ಹುಟ್ಟಿಸುವವನೂ ವಿಧಿಯೇ;
ಹುಟ್ಟಿದಾಗ ಇವನಿಗಿದು
ಸಂಪತ್ತು, ಇವನಿಗೆ
ಒಳ್ಳೆಯದಿದು, ಇವನಿಗೆ ಇದು
ವಿನೋದ, ಇವನಿಗೆ ಇದು
ಸಾಯುವ ರೀತಿ, ಇವನಿಗೆ
ಇದು ಬರಿಮಾತು, ಇವನಿಗಿದು
ಪರಾಕ್ರಮ ಎಂಬುದನ್ನು ಎಲ್ಲ

ರೀತಿಯಲ್ಲಿಯೂ ವಿಧಿ ಸಮಕಟ್ಟುಮಾಡಿ ಕೊಟ್ಟಿರುವಾಗ, ಮಧ್ಯದಲ್ಲಿ ಅದನ್ನು ಕೆಡಿಸುವುದಕ್ಕಾಗಲಿ ಕೊಡಿಸುವುದಕ್ಕಾಗಲಿ ಯಾರು ಸಮರ್ಥರು?

ಕಂ|| ಎಂದೀ
ಬಾಯ್ಪಾತಿನೊಳೇ
ವಂದಪುದಮ್ಮಣ್ಮಿ
ಕಾದುಕೊಳ್ಳೆನುತುಂ ಭೋಂ|
ರೆಂದಿಸೆ ಪೊಸ ಮಸೆಯಂಬಿನ

ತಂದಲ ಬೆಳ್ಸರಿಗಳಿರದೆ ಕವಿದುವು ನರನಂ|| ೧೮೩ ||

ಪದ್ಯ-೧೮೩:ಪದವಿಭಾಗ-ಅರ್ಥ:ಎಂದು ಈ ಬಾಯ್ಮಾತಿನೊಳು ಏವಂದಪುದು ಅಮ್ಮ (ಅಪ್ಪಾ ಈ ಬಾಯಿ ಮಾತಿನಲ್ಲಿ ಏನು ಪ್ರಯೋಜನವಾಗುತ್ತದೆ?) ಅಣ್ಮಿ ಕಾದುಕೊಳ್ಳ್ ಎನುತುಂ (ಪೌರುಷಪ್ರದರ್ಶನಮಾಡಿ ನಿನ್ನನ್ನು ನೀನು ರಕ್ಷಿಸಿಕೊ

ಎನ್ನುತ್ತ) ಭೋಂರೆಂದು ಇಸೆ
(ಭೋಂ ಎಂದು ಸದ್ದುಮಾಡಿ
ರಭಸದಿಂದ ಹೊಡೆದಾಗ,)
ಪೊಸ ಮಸೆಯ ಅಂಬಿನ
ತಂದಲ (ಆಗ ಹೊಸದಾಗಿ
ಮಸೆದ ಬಾಣಗಳ ತುಂತುರು
ಮಳೆಯೂ) ಬೆಳ್ಸರಿಗಳು
ಇರದೆ ಕವಿದುವು ನರನಂ
(ಬಿಳಿಜಡಿಮಳೆಯೂ ಬಿಡದ
ಅರ್ಜುನನನ್ನು ಮುಚ್ಚಿದುವು.)

ಪದ್ಯ-೧೮೩:ಅರ್ಥ: ಅಪ್ಪಾ ಈ ಬಾಯಿ ಮಾತಿನಲ್ಲಿ ಏನು ಪ್ರಯೋಜನವಾಗುತ್ತದೆ? ಪೌರುಷಪ್ರದರ್ಶನಮಾಡಿ ನಿನ್ನನ್ನು ನೀನು ರಕ್ಷಿಸಿಕೊ ಎನ್ನುತ್ತ ಭೋಂ ಎಂದು ಸದ್ದುಮಾಡಿ ರಭಸದಿಂದ ಹೊಡೆದನು. ಆಗ ಹೊಸದಾಗಿ ಮಸೆದ ಬಾಣಗಳ ತುಂತುರು ಮಳೆಯಧಾರೆಯೂ, ಬಿಳಿಯ-

ಜಡಿಮಳೆಯೂ ಬಿಡದ ಅರ್ಜುನನನ್ನು ಮುಚ್ಚಿದುವು.

ದೊಣೆಗಳಿನುರ್ಚುವ ತಿರುವಾ ಯ್ದೊಣರ್ಚೆ ತೆಗೆನೆರೆವ ಬೇಗಮಂ ಕಾಣದೆ ಕೂ| ರ್ಗಣೆಗಳ ಪಂದರನೆ ನಭೋಂ ಗಣದೊಳ್ ಕಂಡುತ್ತು ದೇವಗಣಮಿನಸುತನಾ|| ೧೮೪ ||

ಪದ್ಯ-೧೮೪:ಪದವಿಭಾಗ-ಅರ್ಥ:ದೊಣೆಗಳಿಂ

ಉರ್ಚುವ (ಬತ್ತಳಿಕೆಯಿಂದ
ಬಾಣಗಳನ್ನು
ಸೆಳೆದುಕೊಳ್ಳುವ)
ತಿರುವಾಯ್ ಒಣರ್ಚೆ
ತೆಗೆನೆರೆವ ಬೇಗಮಂ ಕಾಣದೆ
(ಬಿಲ್ಲಿನ ಬಾಯಿಗೆ ಸೇರಿಸಿ
ಕಿವಿಯವರೆಗೂ ಸೆಳೆಯುವ
ವೇಗವನ್ನು ಕಾಣದೆ)
ಕೂರ್ಗಣೆಗಳ ಪಂದರನೆ
ನಭೋಂಗಣದೊಳ್ ಕಂಡುತ್ತು
ದೇವಗಣಂ ಇನಸುತನಾ-

ಕರ್ಣನಾ (ಕರ್ಣನ ಹರಿತವಾದ ಬಾಣಗಳ ಚಪ್ಪರವನ್ನೇ ಆಕಾಶಪ್ರದೇಶದಲ್ಲಿ ದೇವತೆಗಳ ಸಮೂಹವು ನೋಡಿತು.)

ಪದ್ಯ-೧೮೪:ಅರ್ಥ:
ಬತ್ತಳಿಕೆಯಿಂದ ಬಾಣಗಳನ್ನು ಸೆಳೆದುಕೊಳ್ಳುವ, ಬಿಲ್ಲಿನ ಬಾಯಿಗೆ ಸೇರಿಸಿ ಕಿವಿಯವರೆಗೂ ಸೆಳೆಯುವ ವೇಗವನ್ನು ಕಾಣದೆ ಕರ್ಣನ

ಹರಿತವಾದ ಬಾಣಗಳ
ಚಪ್ಪರವನ್ನೇ
ಆಕಾಶಪ್ರದೇಶದಲ್ಲಿ
ದೇವತೆಗಳ ಸಮೂಹವು
ನೋಡಿತು.

ಪಾತಂ ಲಕ್ಷ್ಮಂ ಶೀಘ್ರಂ
ಘಾತಂ
ಬಹುವೇಗಮೆಂಬಿವಯ್ದೇಸಿ
ನೊಳಂ|
ತೀತನ ದೊರೆಯಿಲ್ಲೆನಿಸಿದು

ದಾತನ ಬಿಲ್ಬಲ್ಮೆ ಸುರರಿನಂಬರತಲದೊಳ್|| ೧೮೫

ಪದ್ಯ-೧೮೫:ಪದವಿಭಾಗ-ಅರ್ಥ:ಪಾತಂ ಲಕ್ಷ್ಮಂ ಶೀಘ್ರಂ ಘಾತಂ ಬಹುವೇಗಮೆಂಬ ಇವು ಅಯ್ದು ಏಸಿನೊಳು (ಈ ಅಯ್ದು ರೀತಿಯ ಬಾಣಪ್ರಯೋಗಗಳಲ್ಲಿಯೂ) ಅಂತು ಈತನ ದೊರೆಯಿಲ್ಲ ಎನಿಸಿದುದು (ಈತನಿಗೆ

ಸಮಾನರಿಲ್ಲ ಎನ್ನಿಸಿತು) ಆತನ ಬಿಲ್ ಬಲ್ಮೆ (ಆತನ ಬಿಲ್ವಿದ್ಯೆಯ ಶ್ರೇಷ್ಠತೆಯಲ್ಲಿಯೂ) ಸುರರಿಂ ಅಂಬರತಲದೊಳ್ (ಆಕಾಶದಲ್ಲಿರುವ ದೇವತೆಗಳಿಂದ-)

ಪದ್ಯ-೧೮೫:ಅರ್ಥ: ಪಾತ (ಬೀಳಿಸುವುದು) ಲಕ್ಷ್ಯ (ಗುರಿಯಿಡುವುದು) ಶೀಘ್ರ (ವೇಗದಿಂದ

ಹೊಡೆಯುವುದು) ಘಾತ (ಘಟ್ಟಿಸುವುದು) ಬಹುವೇಗ (ಅತ್ಯಂತವೇಗ) ಎಂಬ ಈ ಅಯ್ದು ರೀತಿಯ ಬಾಣಪ್ರಯೋಗಗಳಲ್ಲಿಯೂ ಆತನ ಬಿಲ್ವಿದ್ಯೆಯ ಶ್ರೇಷ್ಠತೆಯಲ್ಲಿಯೂ, ಆಕಾಶದಲ್ಲಿರುವ ದೇವತೆಗಳಿಂದ ಈತನಿಗೆ ಸಮಾನರಿಲ್ಲ ಎನ್ನಿಸಿತು.

ವ|| ಆಗಳ್ ಪರಸೈನ್ಯಬೈರವಂ ಪ್ರಳಯಭೈರವಾಕಾರಮಂ ಕೆಯ್ಕೊಂಡು ಕಾದೆ-

ವಚನ:ಪದವಿಭಾಗ-

ಅರ್ಥ:ಆಗಳ್ ಪರಸೈನ್ಯಬೈರವಂ (ಅರ್ಜುನನು) ಪ್ರಳಯಭೈರವಾಕಾರಮಂ ಕೆಯ್ಕೊಂಡು ಕಾದೆ (ಪ್ರಳಯಕಾಲದ ಭೈರವನ

ಸ್ವರೂಪಪಡೆದು
ಯುದ್ಧಮಾಡಲು,) -
ವಚನ:ಅರ್ಥ:ವ|| ಆಗ
ಪರಸೈನ್ಯಭೈರವನಾದ
ಅರ್ಜುನನು ಪ್ರಳಯಕಾಲದ
ಭೈರವನ ಸ್ವರೂಪಪಡೆದು
ಯುದ್ಧಮಾಡಲು,-

**ಕಂ|| ಶರಸಂಧಾನಾಕರ್ಷಣ
ಹರಣಾದಿ ವಿಶೇಷ ವಿವಿಧ
ಸಂಕಲ್ಪ ಕಳಾ|
ಪರಿಣತಿಯಂ ಮೆರೆದುದು ತರ**

ತರದೊಳೆ ಮುಳಿದರಿಗನಿಸುವ ಶರನಿಕರಂಗಳ್|| ೧೮೬ ||

ಪದ್ಯ-೧೮೬:ಪದವಿಭಾಗ-ಅರ್ಥ:ಶರಸಂಧಾನ ಆಕರ್ಷಣ ಹರಣ ಆದಿ (ಹೊಡೆಯುವ ಬಾಣದ ಶರಸಂಧಾನ (ಬಾಣವನ್ನು ಹೂಡುವುದು) ಆಕರ್ಷಣ (ಎಳೆಯುವುದು) ಹರಣ- ಬಿಲ್ಲಿನಿಂದ ತೆಗೆಯುವುದು; ಬಿಡುವುದು, ಇವೇ

ಮೊದಲಾದ) ವಿಶೇಷ ವಿವಿಧ
ಸಂಕಲ್ಪ ಕಳಾಪರಿಣತಿಯಂ
(ಇವೇ ಮೊದಲಾದ ನಾನಾ
ರೀತಿಯ
ಕಲಾಪ್ರೌಢಿಮೆಯನ್ನು)
ಮೆರೆದುದು ತರತರದೊಳೆ
ಮುಳಿದ ಅರಿಗನು ಇಸುವ
ಶರನಿಕರಂಗಳ್ (ಅರ್ಜುನನು
ಕೋಪದಿಂದ ಹೊಡೆಯುವ
ಬಾಣದ ಸಮೂಹಗಳು,
ನಾನಾರೀತಿಯ

ಕಲಾಪ್ರೌಢಿಮೆಯನ್ನು ಮೆರೆದುವು)

ಪದ್ಯ-೧೮೬:ಅರ್ಥ:

ಅರ್ಜುನನು ಕೋಪದಿಂದ ಹೊಡೆಯುವ ಬಾಣದ ಸಮೂಹಗಳು, ಶರಸಂಧಾನ (ಬಾಣವನ್ನು ಹೂಡುವುದು) ಆಕರ್ಷಣ (ಎಳೆಯುವುದು) ಹರಣ (ಬಿಲ್ಲಿನಿಂದ ತೆಗೆಯುವುದು; ಬಿಡುವುದು) ಇವೇ ಮೊದಲಾದ ನಾನಾ

ನಾನಾರೀತಿಯ
ಕಲಾಪ್ರೌಢಿಮೆಯನ್ನು
ಮೆರೆದುವು.

ಮುನಿದಿಸುವಿನಜನ ಪರಲಂ
ಮೊನೆಯಿಂ ಗಱಿವರೆಗಮೆಯ್ದೆ
ಸೀಳ್ದುವು ಕಣೆಗಳ್|
ಘನ ಪಥಮನಳುರ್ದು
ಸುಟ್ಟುವು
ವೆನೆ ನೆಗೆದುವು ಕೋಲ
ಹೊಗೆಯುಮಂಬಿನ
ಕಿಡಿಯುಂ|| ೧೮೭ ||

ಪದ್ಯ-೧೮೭:ಪದವಿಭಾಗ-ಅರ್ಥ:ಮುನಿದು ಇಸುವ ಇನಜನ ಸರಲಂ ಮೊನೆಯಿಂ (ಕೋಪಿಸಿಕೊಂಡು ಕರ್ಣನು ಪ್ರಯೋಗಿಸುವ ಬಾಣವನ್ನು) ಗಱಿವರೆಗಂ ಎಯ್ದೆ ಸೀಳ್ದುವು ಕಣೆಗಳ್ (ಅರ್ಜುನನ ಬಾಣಗಳು ತುದಿಯಿಂದ ಗರಿಯವರೆಗೆ ಸೀಳಿದುವು.) ಘನ ಪಥಮನು ಅಳುರ್ದು ಸುಟ್ಟಪುವು ಎನೆ

(ಆಕಾಶಮಾರ್ಗವನ್ನೂ ವ್ಯಾಪಿಸಿ ಸುಡುತ್ತವೆ ಎನ್ನುವಂತೆ) ನೆಗೆದುವು ಕೋಲ ಹೊಗೆಯುಂ ಅಂಬಿನ ಕಿಡಿಯುಂ (ಬಾಣಗಳ ಹೊಗೆಯೂ ಕಿಡಿಯೂ ಮೇಲಕ್ಕೆ ನೆಗೆದುವು.)

ಪದ್ಯ-೧೮೭:ಅರ್ಥ:
ಕೋಪಿಸಿಕೊಂಡು ಕರ್ಣನು ಪ್ರಯೋಗಿಸುವ ಬಾಣವನ್ನು ಅರ್ಜುನನ ಬಾಣಗಳು

ತುದಿಯಿಂದ ಗರಿಯವರೆಗೆ ಸೀಳಿದುವು. ಆಕಾಶಮಾರ್ಗವನ್ನೂ ವ್ಯಾಪಿಸಿ ಸುಡುತ್ತವೆ ಎನ್ನುವ ಹಾಗೆ, ಬಾಣಗಳ ಹೊಗೆಯೂ ಕಿಡಿಯೂ ಮೇಲಕ್ಕೆ ನೆಗೆದುವು.

ಕೂಡೆ ಕಡಿವಂಬನಂಬೆಡೆ
ಮಾಡದೆ ಬಿಡದೊರಸೆ
ಪುಟ್ಟಿದುರಿಗಳಗುರ್ವಂ|
ಮಾಡೆ ಕವಿದಳುರ್ವ
ಬೆಂಕೆಯೊ

ಘಾಡಿಸಿದರ್ ಮೊಗಮನಮರಸುಂದರಿಯ ಕರ್ಣಳ್|| ೧೮೮ ||

ಪದ್ಯ-೧೮೮:ಪದವಿಭಾಗ-ಅರ್ಥ:ಕೂಡೆ ಕಡಿವಂಬನು ಅಂಬು ಎಡೆ ಮಾಡದೆ ಬಿಡದೆ ಒರಸೆ (ಕೂಡಲೆ ಕತ್ತರಿಸುವ ಬಾಣಗಳನ್ನು ಬಾಣಗಳು ಅವಕಾಶಕೊಡದೆ ತಪ್ಪದೆ ಉಜ್ಜಲು) ಪುಟ್ಟಿದ ಉರಿಗಳು ಅಗುರ್ವಂ ಮಾಡೆ (ಹುಟ್ಟಿದ

ಉರಿಯ ಜ್ವಾಲೆಗಳು
ಭಯವನ್ನುಂಟುಮಾಡಲು)
ಕವಿದು ಅಳುರ್ವ
ಬೆಂಕೆಯೊಳು (ಆವರಿಸಿ
ಸುಡುವ ಉರಿಯಲ್ಲಿ)
ಆಡಿಸಿದರ್ಮೋಗಮನು
ಅಮರಸುಂದರಿಯರ್ಕಳ್ (
ದೇವಸುಂದರಿಯರು ತಮ್ಮ
ಮುಖವನ್ನು ಅತ್ತ ಇತ್ತ
ಅಲುಗಾಡಿಸಿದರು.)

ಪದ್ಯ-೧೮೮:ಅರ್ಥ:ಕೂಡಲೆ ಕತ್ತರಿಸುವ ಬಾಣಗಳನ್ನು ಬಾಣಗಳು ಅವಕಾಶಕೊಡದೆ ತಪ್ಪದೆ ಉಜ್ಜಲು ಹುಟ್ಟಿದ ಉರಿಯ ಜ್ವಾಲೆಗಳು ಭಯವನ್ನುಂಟುಮಾಡಲು ಆವರಿಸಿ ಸುಡುವ ಉರಿಯಲ್ಲಿ ದೇವಸುಂದರಿಯರು ತಮ್ಮ ಮುಖವನ್ನು ಅತ್ತ ಇತ್ತ ಅಲುಗಾಡಿಸಿದರು.

ಮೊನೆಯಂಬಿನ ತಂದಲೊಳ

ರ್ಜುನನಂ ಕರ್ಣನುಮನಿನಿಸು
ಕಾಣದಣಂ ಮೆ|
ಲ್ಲನೆ ಬಗಿದು ನೋಡಿ
ಕುಡುಮಿಂ
ಚಿನಂತೆ ಮೇಗೊಗೆದು
ನಾರದಂ ನರ್ತಿಸಿದಂ|| ೧೮೯ ||

ಪದ್ಯ-೧೮೯:ಪದವಿಭಾಗ-

ಅರ್ಥ:ಮೊನೆಯಂಬಿನ (ಮೊನಚಾದ ಬಾಣದ) ತಂದಲೊಳು ಅರ್ಜುನನಂ ಕರ್ಣನುಮನು ಇನಿಸು

ಕಾಣದೆ ಅಣಂ
(ತುಂತುರುಮಳೆಯಲ್ಲಿ
ಅರ್ಜುನನೂ ಕರ್ಣನೂ
ಸ್ವಲ್ಪವೂ ಕಾಣದಿರಲು)
ಮೆಲ್ಲನೆ ಬಗಿದು ನೋಡಿ
(ನಾರದನು ಸ್ವಲ್ಪವೂ ಸದ್ದಿಲ್ಲದೆ
(ನಿಧಾನವಾಗಿ) ಭಾಗಮಾಡಿ
ನೋಡಿ) ಕುಡುಮಿಂಚಿನಂತೆ
ಮೇಗೆ ಒಗೆದು ನಾರದಂ
ನರ್ತಿಸಿದಂ

(ಕುಡುಮಿಂಚಿನಂತೆ ಮೇಲಕ್ಕೆ ಹಾರಿ ಕುಣಿದಾಡಿದನು.)

ಪದ್ಯ-೧೮೯:ಅರ್ಥ:

ಮೊನಚಾದ ಬಾಣದ ತುಂತುರುಮಳೆಯಲ್ಲಿ ಅರ್ಜುನನೂ ಕರ್ಣನೂ ಸ್ವಲ್ಪವೂ ಕಾಣದಿರಲು ನಾರದನು ಸ್ವಲ್ಪವೂ ಸದ್ದಿಲ್ಲದೆ (ನಿಧಾನವಾಗಿ) ಭಾಗಮಾಡಿ ನೋಡಿ ಕುಡುಮಿಂಚಿನಂತೆ

ಮೇಲಕ್ಕೆ ಹಾರಿ
ಕುಣಿದಾಡಿದನು.

ಚಂ|| ಕವಿವ ಶರಾಳಿಯಂ ನಿಜ ಶರಾಳಿಗಳಟಿ ತೆರಳ್ದಿ ತೂಳ್ದಿ ಮಾ ರ್ಕವಿದು ಪಳಂಚಿ ಪಾಯ್ದೊರಸೆ ಪುಟ್ಟಿದ ಕಿರ್ಚಳುರ್ದೆಟ್ದಿಜಾಂಡದಂ| ತುವರಮಗುರ್ವು ಪರ್ವಿ ಕರಮುರ್ವಿಸೆ ದಳ್ಳುರಿ ಪೆರ್ಚಿ ಕಂಡು ಖಾಂ

ಡವವನದಾಹಮಂ ನೆನೆಯಿಸಿತ್ತು ಗುಣಾರ್ಣವನಸ್ತ್ರಕೌಶಲಂ|| ೧೯೦ ||

ಪದ್ಯ-೧೯೦:ಪದವಿಭಾಗ-ಅರ್ಥ:ಕವಿವ ಶರಾಳಿಯಂ ನಿಜ ಶರಾಳಿಗಳಟಿ ತೆರಳ್ದಿ ತೂಳ್ದಿ (ಮುತ್ತಿರುವ ಬಾಣ ಸಮೂಹವನ್ನು ತನ್ನ ಬಾಣಸಮೂಹಗಳು ಆಕ್ರಮಿಸಿ ಓಡಿಸಿ ತಳ್ಳಿ) ಮಾರ್

ಕವಿದು ಪಳಂಚಿ ಪಾಯ್ದು
ಒರಸೆ (ಪ್ರತಿಯಾಗಿ ಮುಚ್ಚಿ
ತಗುಲಿ ನುಗ್ಗಿ ಉಜ್ಜಲು)
ಪುಟ್ಟಿದ ಕಿರ್ಚ ಅಳುರ್ದು
ಎಟ್ದಿ ಅಜಾಂಡದ
ಅಂತುವರಂ ಅಗುರ್ವು
ಪರ್ವಿ(ಅಲ್ಲಿ ಹುಟ್ಟಿದ
ಬೆಂಕಿಯು ಎದ್ದು ಮೇಲಕ್ಕೆ
ನೆಗೆದು ಬ್ರಹ್ಮಾಂಡದ
ಕೊನೆಯವರೆಗೆ ಭಯವು
ಹಬ್ಬುತ್ತಿರಲು) ಕರಂ ಅರ್ವಿಸೆ

ದಳ್ಳುರಿ ಪೆರ್ಚೆ ಕಂಡು (ಹಾಗೆ ವಿಶೇಷವಾಗಿ ವ್ಯಾಪಿಸಿ ಹೆಚ್ಚಾಗಿ ಸುಡಲು ಆ ದಳ್ಳುರಿಯನ್ನು ನೋಡಿ) ಖಾಂಡವವನ ದಾಹಮಂ ನೆನೆಯಿಸಿತ್ತು ಗುಣಾರ್ಣವನ ಅಸ್ತ್ರಕೌಶಲಂ (ಅರ್ಜುನನ ಅಸ್ತ್ರಕೌಶಲವು ಖಾಂಡವವನವನ್ನು ಸುಟ್ಟುದನ್ನು ಜ್ಞಾಪಕಮಾಡಿತು.)

ಪದ್ಯ-೧೯೦:ಅರ್ಥ:

ಮುತ್ತಿರುವ ಬಾಣ ಸಮೂಹವನ್ನು ತನ್ನ ಬಾಣಸಮೂಹಗಳು ಆಕ್ರಮಿಸಿ ಓಡಿಸಿ ತಳ್ಳಿ, ಪ್ರತಿಯಾಗಿ ಮುಚ್ಚಿ ತಗುಲಿ ನುಗ್ಗಿ ಉಜ್ಜಲು ಅಲ್ಲಿ ಹುಟ್ಟಿದ ಬೆಂಕಿಯು ಎದ್ದು ಮೇಲಕ್ಕೆ ನೆಗೆದು ಬ್ರಹ್ಮಾಂಡದ ಕೊನೆಯವರೆಗೆ ಭಯವು ಹಬ್ಬುತ್ತಿರಲು, ಹಾಗೆ

ವಿಶೇಷವಾಗಿ ವ್ಯಾಪಿಸಿ ಹೆಚ್ಚಾಗಿ ಸುಡಲು ಆ ದಳ್ಳುರಿಯನ್ನು ನೋಡಿ ಅರ್ಜುನನ ಅಸ್ತ್ರಕೌಶಲವು ಖಾಂಡವವನವನ್ನು ಸುಟ್ಟುದನ್ನು ಜ್ಞಾಪಕಮಾಡಿತು.

ವ|| ಆಗಳ್ ಮದ್ರರಾಜನಂಗಾರಾಜನನಿಂ ತೆಂದನೀಯಂಬುಗಳೊಳೇಂ ತೀರ್ದಪುದು ದಿವ್ಯಾಸ್ತ್ರಂಗಳಿಂದೆಚ್ಚು

ಪಗೆಯಂ ಸಾಧ್ಯಂ ಮಾಡೆಂಬುದುಂ ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಮದ್ರರಾಜನು ಅಂಗಾರಾಜನನು ಇಂತೆಂದನು ಈಯಂಬುಗಳೊಳು ಏಂ ತೀರ್ದಪುದು (ಆಗ ಶಲ್ಯನು

ಕರ್ಣನಿಗೆ ಹೀಗೆಂದನು- ಈ ಬಾಣಗಳಿಂದ ಏನು ಮುಗಿಯುತ್ತದೆ?) ದಿವ್ಯಾಸ್ತ್ರಂಗಳಿಂದ ಎಚ್ಚು ಪಗೆಯಂ ಸಾಧ್ಯಂ ಮಾಡು ಎಂಬುದುಂ(ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಹಗೆಯನ್ನು ಹೊಡೆ, ಗೆಲುವು ಸಾಧ್ಯವಾಗುವಂತೆ ಮಾಡು ಎನ್ನಲು) ಕೊಂತಿಗೆ ತನ್ನ ನುಡಿದ ನುಡಿವ ಅಳಿಯಂ

ನೆನೆದು (ಕುಂತೀದೇವಿಗೆ ತಾನು ಕೊಟ್ಟ ವಾಗ್ದಾನವನ್ನು ನೆನೆದು) ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ (ದಿವ್ಯಾಸ್ತ್ರಗಳ ಬತ್ತಳಿಕೆಗೆ ಕೈಯನ್ನು ಚಾಚದೆ) ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್ (ರೌದ್ರಬಾಣಗಳ ಬತ್ತಳಿಕೆಗೆ ಕೈಯನ್ನು ಹಾಕಿದಾಗ.)-

ವಚನ:ಅರ್ಥ: ಆಗ ಶಲ್ಯನು ಕರ್ಣನಿಗೆ ಹೀಗೆಂದನು- ಈ

ಬಾಣಗಳಿಂದ ಏನು
ಮುಗಿಯುತ್ತದೆ?
ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ
ಹಗೆಯನ್ನು ಹೊಡೆ, ಎನ್ನಲು
ಕುಂತೀದೇವಿಗೆ ತಾನು ಕೊಟ್ಟ
ವಾಗ್ದಾನವನ್ನು ನೆನೆದು
ದಿವ್ಯಾಸ್ತ್ರಗಳ ಬತ್ತಳಿಕೆಗೆ
ಕೈಯನ್ನು ಚಾಚದೆ,
ರೌದ್ರಬಾಣಗಳ ಬತ್ತಳಿಕೆಗೆ
ಕೈಯನ್ನು ಹಾಕಿದಾಗ.

ಕಂ|| ಮುಳಿಸಂ ನೆಱಪಲ್ಕಧ್ರ್ಗಾ

ವಳೀಕ
ಶರರೂಪದಿಂದಸುಂಗೊಳೆ
ದೊಣೆಯಿಂ|
ಪೊಳೆದು ಬರೆ ಕೆಯ್ಗೆ ತಾಂ ವಿ
ಸ್ಫುಳಿಂಗ ಪಿಂಗಳಿತ ಭುವನ
ಭವನಾಭೋಗಂ|| ೧೯೧ ||

ಪದ್ಯ-೧೯೧:ಪದವಿಭಾಗ-
ಅರ್ಥ:ಮುಳಿಸಂ ನೆಱಿಪಲ್ಕೆ ಅರ್ಧಾವಳೀಕ ಶರರೂಪದಿಂದ (ಹಿಂದಿನ ಕೋಪವನ್ನು

ತೀರಿಸಿಕೊಳ್ಳುವುದಕ್ಕಾಗಿ,
ಅರ್ಧಚಂದ್ರಾಕೃತಿಯ
ಬಾಣರೂಪಲ್ಲಿ) ಅಸುಂಗೊಳೆ
ದೊಣೆಯಿಂ ಪೊಳೆದು ಬರೆ
(ಪ್ರಾಣಾಪಹಾರಮಾಡಲು
ಬತ್ತಳಿಕೆಯಿಂದ ಹೊಳೆಯುತ್ತ
ಬರಲು) ಕೆಯ್ಗೆ ತಾಂ
ವಿಸ್ಫುಳಿಂಗ ಪಿಂಗಳಿತ ಭುವನ
ಭವನಾಭೋಗಂ (ಕಿಡಿಗಳಿಂದ
ಪಿಂಗಳ ಬಣ್ಣದ ಕಾಂತಿಯಿಂದ

ಕೂಡಿ, - ಬತ್ತಳಿಕೆಯಿಂದ
ಹೊಳೆಯುತ್ತ ಬರಲು)
ಪದ್ಯ-೧೯೧:ಅರ್ಥ: ಹಿಂದಿನ
ಕೋಪವನ್ನು
ತೀರಿಸಿಕೊಳ್ಳುವುದಕ್ಕಾಗಿ
ಕಿಡಿಗಳಿಂದ ಹಳದಿ ಕೆಂಪು
ಮತ್ತು ಕಪ್ಪು ಮಿಶ್ರವಾದ
ಪಿಂಗಳ ಬಣ್ಣದ
ಕಾಂತಿಯಿಂದಲೂ ಕೂಡಿದ
ಪ್ರಪಂಚವೆಂಬ ಮನೆಯಷ್ಟು
ವಿಸ್ತಾರವಾದ

ಅರ್ಧಾವಲೀಕವೆಂಬ ಅರ್ಧ ಉಳಿದಿದ್ದ ಸರ್ಪವು ಬಾಣದ ಆಕಾರದಲ್ಲಿ ಬತ್ತಳಿಕೆಯಿಂದ ಹೊಳೆಯುತ್ತ ಪ್ರಾಣಾಪಹಾರಮಾಡಲು ಕೈಗೆ ಬಂದಿತು. ಹಾಗೆ ಬರಲು-

ತಿರಿಪಿದೊಡದನೆಳೆ ತಿಱ್ರನೆ
ತಿರಿದುದು ತಿರುವಾಯೊಳಿಡೆ
ಸುರರ್ ಮೊರೆಯಿಟ್ಟರ್|
ಭರದೆ ತೆಗೆನೆರೆಯೆ ಮೆಯ್ದೆಗೆ

ದರವಿಂದೋದ್ಭವನಿನೊಗೆದು ದಾ ಬ್ರಹ್ಮಾಂಡಂ|| ೧೯೨ ||

ಪದ್ಯ-೧೯೨:ಪದವಿಭಾಗ-ಅರ್ಥ:ತಿರಿಪಿದೊಡೆ ಅದನು ಎಳೆ (ಇಳೆ) ತಿಱ್ರನೆ ತಿರಿದುದು (ಅದನ್ನು ತಿರುಗಿಸಲು ಭೂಮಿಯು ತಿರ್ರೆಂದು ತಿರುಗಿತು) ತಿರುವಾಯೊಳು ಇಡೆ (ಬಿಲ್ಲಿನ ಹೆದೆಗೇರಿಸಿ ಇಡಲು) ಸುರರ್ ಮೊರೆಯಿಟ್ಟರ್ (ದೇವತೆಗಳು

ಗಟ್ಟಿಯಾಗಿ ಕೂಗಿಕೊಂಡರು)
ಭರದೆ ತೆಗೆ ನೆರೆಯೆ
(ವೇಗದಿಂದ ಹೆದೆಯನ್ನು
ಕಿವಿಯವರೆಗೆ ಸೆಳೆಯಲು)
ಮೆಯ್ದೆಗೆದ
(ಗರ್ಭಸ್ರಾವವಾದ)
ಅರವಿಂದೋದ್ಭವನಿಂ
ಒಗೆದುದು ಆ ಬ್ರಹ್ಮಾಂಡಂ
(ಬ್ರಹ್ಮನಿಂದ ಬ್ರಹ್ಮಾಂಡವು
ಹುಟ್ಟಿತು)

ಪದ್ಯ-೧೯೨:ಅರ್ಥ:ಅದನ್ನು (ಆ ಸರ್ಪದ ಬಾಣವನ್ನು)ತಿರುಗಿಸಲು ಭೂಮಿಯು ತಿರ್ರೆಂದು ತಿರುಗಿತು. ಬಿಲ್ಲಿನ ಹೆದೆಗೇರಿಸಿ ಇಡಲು ದೇವತೆಗಳು ಗಟ್ಟಿಯಾಗಿ ಕೂಗಿಕೊಂಡರು. ವೇಗದಿಂದ ಹೆದೆಯನ್ನು ಕಿವಿಯವರೆಗೆ ಸೆಳೆಯಲು ಮೈಯಿಳಿದ (ಗರ್ಭಾಸ್ರಾವವಾದ)

ಬ್ರಹ್ಮನಿಂದ ಬ್ರಹ್ಮಾಂಡವು ಹುಟ್ಟಿತು. ಜಗತ್ತನ್ನು ಹೊಟ್ಟೆಯಲ್ಲಿ ಹೊಂದಿದ ಬ್ರಹ್ಮನಿಗೇ ಗರ್ಭಸ್ರಾವವಾಗುವಷ್ಟು ಭಯಾನಕವಾಗಿತ್ತು ಎಂದು ಭಾವ.

ಕಂ|| ತುಡೆ ಕರ್ಣನದಂ
ನಡನಡ
ನಡುಗಿ ಸುಯೋಧನನ ಸಕಲ
ರಾಜ್ಯಶ್ರೀಯುಂ|

ಸಡಿಲಿಸಿದ ತೋಳನಾಗಳ್ ಸಡಿಲಿಸಲಣ್ಮಳೆ ದಲದಱಗುರ್ವೇಂ ಪಿರಿದೋ|| ೧೯೩ ||

ಪದ್ಯ-೧೯೩:ಪದವಿಭಾಗ-ಅರ್ಥ:ತುಡೆ ಕರ್ಣನು ಅದಂ ನಡನಡನಡುಗಿ ಸುಯೋಧನನ ಸಕಲ ರಾಜ್ಯಶ್ರೀಯುಂ (ಅದನ್ನು ಕರ್ಣನು ಪ್ರಯೋಗಮಾಡಲು ದುರ್ಯೋಧನನ ಸಮಸ್ತ

ರಾಜ್ಯಶ್ರೀಯು ಗಡಗಡನೆ
ನಡುಗಿ) ಸಡಿಲಿಸಿದ
ತೋಳನು ಅಗಳ್ (ಅಗಲ)
ಸಡಿಲಿಸಲು(ಸಡಿಲಿಸಿದ್ದ ತನ್ನ
ತೋಳನ್ನು ಸಡಿಲಿಸಲು ಆಗ
ಪೂರಾ ಸಡಿಸಲು) ಅಣ್ಮಳೆ
ದಲ್ ಅದಱ ಅಗುರ್ವೇಂ
ಪಿರಿದೋ (ಪ್ರಯತ್ನ
ಮಾಡುವುದಿಲ್ಲವೇ? ಅದರ
ಭಯಂಕರತೆ
ಅತ್ಯದ್ಭುತವಾಗಿತ್ತು.)

ಪದ್ಯ-೧೯೩:ಅರ್ಥ: ಅದನ್ನು ಕರ್ಣನು ಪ್ರಯೋಗಮಾಡಲು ದುರ್ಯೋಧನನ ಸಮಸ್ತ ರಾಜ್ಯಶ್ರೀಯು ಗಡಗಡನೆ ನಡುಗಿ ಸಡಿಲಿಸಿದ್ದ ತನ್ನ ತೋಳನ್ನು ಸಡಿಲಿಸಲು ಆಗ ಪೂರಾ ಸಡಿಸಲು ಪ್ರಯತ್ನ ಮಾಡುವುದಿಲ್ಲವೇ? ಅದರ ಭಯಂಕರತೆ ಅತ್ಯದ್ಭುತವಾಗಿತ್ತು.

ಆಕರ್ಣಾಂತಂ ತೆಗೆನೆರೆ

ದಾ ಕರ್ಣನಿಸಲ್ಕೆ

ಬಗೆದೊಡುಡುಗುಡುಗಿಸಲೀ||

ಭೀಕರ ಬಾಣಮನಾದವಿ

ವೇಕದಿನುರದೆಡೆಗೆ ತುಡದೆ

ತಲೆಗೆಯೆ ತುಡುವಾ|| ೧೯೪ ||

ಪದ್ಯ-೧೯೪:ಪದವಿಭಾಗ-

ಅರ್ಥ:ಆಕರ್ಣಾಂತಂ

ತೆಗೆನೆರೆದು ಆ ಕರ್ಣನು ಇಸಲ್ಕೆ

ಬಗೆದೊಡೆ (ಕಿವಿಯವರೆಗೂ

ಪೂರ್ಣವಾಗಿ ಸೆಳೆದು ಕರ್ಣನು

ಹೊಡೆಯಲು ಮನಸ್ಸು

ಮಾಡುತ್ತಿದ್ದ ಹಾಗೆಯೇ)
ಉಡುಗು ಉಡುಗು (ತಡೆಹಿಡಿ
ತಡೆಹಿಡಿ) ಇಸಲು
(ಹೊಡೆಯಲು) ಈ ಭೀಕರ
ಬಾಣಮನು ಆದ ವಿವೇಕದಿಂ
ಉರದೆಡೆಗೆ ತುಡದೆ (ಈ
ಭಯಂಕರವಾದ ಬಾಣವನ್ನು
ವಿವೇಕದಿಂದ ಎದೆಯ
ಪ್ರದೇಶಕ್ಕೆ ಗುರಿಯಿಡದೆ)
ತಲೆಗೆಯೆ ತುಡುವಾ (ತಲೆಗೆ
ಗುರಿಯಿಡುತ್ತೀಯಾ?)

ಪದ್ಯ-೧೯೪:ಅರ್ಥ:

(ಬಾಣವನ್ನು)ಕಿವಿಯವರೆಗೂ ಪೂರ್ಣವಾಗಿ ಸೆಳೆದು ಕರ್ಣನು ಹೊಡೆಯಲು ಮನಸ್ಸು ಮಾಡುತ್ತಿದ್ದ ಹಾಗೆಯೇ ಹಿಂದಕ್ಕೆ ತೆಗೆ, ಹಿಂದಕ್ಕೆ ತೆಗೆ; ಹೊಡೆಯಲು; ಈ ಭಯಂಕರವಾದ ಬಾಣವನ್ನು ವಿವೇಕದಿಂದ ಎದೆಯ ಪ್ರದೇಶಕ್ಕೆ ಗುರಿಯಿಡದೆ ತಲೆಗೆ

ಗುರಿಯಿಡುತ್ತೀಯಾ? ಎಂದನು ಶಲ್ಯ.

ಉರದೆಡೆಗೆ ತುಡೆ ಜಯಶ್ರೀ
ಗಿರಲೆಡೆ ನಿನಗಪ್ಪುದಾ
ಸುಯೋಧನನೊಳ್ ಶ್ರೀ
ಗಿರಲೆಡೆಯಪ್ಪುದು ಮೇಣ್ ದಿನ
ಕರಸುತ ತೊದಳುಂಟೆ ಬಗೆಯೆ
ಸಂದೆಯಮುಂಟೇ|| ೧೯೫ ||

ಪದ್ಯ-00:ಪದವಿಭಾಗ-ಅರ್ಥ:ಉರದ ಎಡೆಗೆ ತುಡೆ (ಎದೆಯ ಪ್ರದೇಶಕ್ಕೆ ಗುರಿಯಿಟ್ಟು ತೊಟ್ಟರೆ) ಜಯಶ್ರೀಗೆ ಇರಲ್ ಎಡೆ ನಿನಗೆ ಅಪ್ಪುದು (ಜಯಲಕ್ಷ್ಮಿಯು ನಿನ್ನಲ್ಲಿರಲು ಅವಕಾಶವಾಗುತ್ತದೆ.) ಆ ಸುಯೋಧನನೊಳ್ ಶ್ರೀಗೆ ಇರಲು ಎಡೆಯಪ್ಪುದು (ಆ ದುರ್ಯೋಧನನಲ್ಲಿಯೂ ಜಯಲಕ್ಷ್ಮಿಯಿರುವಳು.) ಮೇಣ್ ದಿನಕರಸುತ ತೊದಳುಂಟೆ ಬಗೆಯೆ

ಸಂದೆಯಮುಂಟೇ (ಕರ್ಣಾ ಈ ಮಾತು ಸುಳ್ಳಾಗುವುದೇ? ಅದರಲ್ಲಿ-ಸಂಶಯವಿದೆಯೇ?.) **ಪದ್ಯ-00:ಅರ್ಥ:** ಎದೆಯ ಪ್ರದೇಶಕ್ಕೆ ಗುರಿಯಿಟ್ಟು ತೊಟ್ಟರೆ ಜಯಲಕ್ಷ್ಮಿಯು ನಿನ್ನಲ್ಲಿರಲು ಅವಕಾಶವಾಗುತ್ತದೆ. ಆ ದುರ್ಯೋಧನನಲ್ಲಿಯೂ ಜಯಲಕ್ಷ್ಮಿಯಿರುವಳು. ಕರ್ಣಾ ಈ ಮಾತು ಸುಳ್ಳಾಗುವುದೇ? ಅದರಲ್ಲಿ-ಸಂಶಯವಿದೆಯೇ?.

ವ|| ಎಂಬುದುಂ ಶಲ್ಯನ ನುಡಿದ ನುಡಿಯನವಧಾರಿಸಿ ತನ್ನ ಮನದೊಳೆ ಕರ್ಣನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ (ಎನ್ನಲು) ಶಲ್ಯನ ನುಡಿದ ನುಡಿಯನು ಅವಧಾರಿಸಿ (ಕೇಳಿ) ತನ್ನ

ಮನದೊಳೆ ಕರ್ಣನು ಇಂತೆಂದಂ-

ವಚನ:ಅರ್ಥ:ಎನ್ನಲು, ಶಲ್ಯನು ನುಡಿದ ಮಾತನ್ನು ಕೇಳಿ ತನ್ನ ಮನಸ್ಸಿನಲ್ಲಿಯೇ ಕರ್ಣನು ಹೀಗೆಂದುಕೊಂಡನು.

ಮ|| ಎನಿತುಂ ಶಲ್ಯನ ಪೇೞ್ದ
ಪಾಂಗೆ ತೊದಳಿಲ್ಲಿಂತಾದೊಡಾ
ಶಕ್ರಪು
ತ್ರನನಾಂ ಕೊಂದೊಡೆ
ಧರ್ಮಪುತ್ರನಱಿಗುಂ

ತಾಯೆಂದೆ ಮುಂ ಕೊಂತಿ ಬಂ|
ದಿನಿಸಂ ಪ್ರಾರ್ಥಿಸಿ
ಪೋದಳೆನ್ನನದನಾಂ
ಮಾಣ್ದಿರ್ದೆನಿರ್ದಾಗಳೊ
ಳ್ಪಿನ ಪೆರ್ಮಾತಿನ ನನ್ನಿ
ಬನ್ನದೊಳೊಡಂಬಟ್ಟಿರ್ಪುದಂ
ಮಾಟ್ಪೆನೇ|| ೧೯೬ ||

ಪದ್ಯ-೧೯೬:ಪದವಿಭಾಗ-

ಅರ್ಥ:ಎನಿತುಂ ಶಲ್ಯನ ಪೇಳ್ದಿ ಪಾಂಗೆ (ಎಷ್ಟೆಂದರೂ ಶಲ್ಯನು ಹೇಳಿದ ಹಾಗೆಯೇ ಸರಿ)

ತೊದಳಿಲ್ಲ ಅಂತು ಆದೊಡೆ (ಸುಳ್ಳಿಲ್ಲ. ಅವನು ಹೇಳಿದಂತೆಮಾಡಿದರೆ) ಆಂ ಶಕ್ರಪುತ್ರನನು ಆಂ ಕೊಂದೊಡೆ (ಆ ಇಂದ್ರಪುತ್ರನಾದ ಅರ್ಜುನನನ್ನು ನಾನು ಕೊಂದರೆ) ಧರ್ಮಪುತ್ರನು ಅಱಿಗುಂ (ಧರ್ಮರಾಜನು ಸಾಯುತ್ತಾನೆ.) ತಾಯ್ ಎಂದೆ ಮುಂ ಕೊಂತಿ ಬಂದು (ನನ್ನ

ತಾಯಿಯೆಂದೇ ಕುಂತಿ

ಬಂದು) ಇನಿಸಂ ಪ್ರಾರ್ಥಿಸಿ

ಪೋದಳು ಎನ್ನನು (ನನ್ನಲ್ಲಿ

ಇದನ್ನೇ ಬೇಡಿಹೋದಳು)

ಅದನು ಆಂ(ಅದನ್ನು ನಾನು)

ಮಾಣ್ದಿರ್ದೆಂ (ತಪ್ಪಿ ನಡೆದರೆ

ಅಥವಾ ಅದನ್ನು ಎಂದರೆ ಶಲ್ಯ

ಹೇಳಿದ ಮಾತನ್ನು

ಮಾಣ್ದಿರ್ದೆಂ -ಬಿಟ್ಟಿದ್ದೇನೆ)

ಇರ್ದಾಗಳ್ ಒಳ್ಪಿನ

ಪೆರ್ಮಾತಿನ ನನ್ನಿ (ಇದ್ದಾಗ

ಎಂದರೆ ಬದುಕಿದ್ದಾಗ ಆ ಒಳ್ಳೆಯ ದೊಡ್ಡಮಾತಿನ/ ಕೊಟ್ಟಮಾತಿನ ಸತ್ಯ) ಬನ್ನದೊಳು ಒಡಂಬಟ್ಟು ಇರ್ಪುದಂ ಮಾೞ್ಪೆನೇ (ಕೊಟ್ಟಮಾತಿನ ಸತ್ಯ ಭಂಗವಾದುದನ್ನು ನಾನು ಮಾಡುವೆನೇ? ಇಲ್ಲ.)

ಪದ್ಯ-೧೯೬:ಅರ್ಥ:

ಎಷ್ಟೆಂದರೂ ಶಲ್ಯನು ಹೇಳಿದ ಹಾಗೆಯೇ (ಸರಿ) ಸುಳ್ಳಿಲ್ಲ.

ಅವನು ಹೇಳಿದಂತೆಮಾಡಿದರೆ
ಆ ಇಂದ್ರಪುತ್ರನಾದ
ಅರ್ಜುನನನ್ನು ನಾನು
ಕೊಂದರೆ ಧರ್ಮರಾಜನು
ಸಾಯುತ್ತಾನೆ. ನನ್ನ
ತಾಯಿಯೆಂದೇ ಕುಂತಿ ಬಂದು
ನನ್ನಲ್ಲಿ ಇದನ್ನೇ
ಬೇಡಿಹೋದಳು. ಅದನ್ನು
ನಾನು ತಪ್ಪಿ ನಡೆದರೆ,ಅಥವಾ
(ಅದನ್ನು ಎಂದರೆ ಶಲ್ಯ
ಹೇಳಿದ ಮಾತನ್ನು

ಬಿಟ್ಟಿದ್ದೇನೆ.) ಇದ್ದಾಗ ಎಂದರೆ ಬದುಕಿದ್ದಾಗ ಆ ಒಳ್ಳೆಯ ದೊಡ್ಡಮಾತಿನ/ ಕೊಟ್ಟಮಾತಿನ ಸತ್ಯ ಭಂಗವಾದುದನ್ನು ನಾನು ಮಾಡುವೆನೇ? (ಮಾಡಲಾರೆ.)

ಚಂ|| ತನಗುಱುವಂತುಟಾಗೆ
ಕಡು ನನ್ನಿಯ
ಪೆಂಪುಮನಾಂತು
ಭೂಭುಜರ್

ತನಗಿನಿತೂನಮಾಗೆ ಮೆರೆದಾ
ಭುಜವೀರ್ಯಮನಾಂತು
ಮಾಣ್ಬುದೇಂ|
ತನಗುಱುವೊಂದು ನನ್ನಿಯನೆ
ಪೂಣ್ಡು ಕರಂ ಪಿರಿದುಂ
ಬಲಸ್ಥನ
ಪ್ಪನನೆ ಕಱುತ್ತು ಕಾದಿ
ನೆಗೞ್ದಾತನೆ ನನ್ನಿಯ
ಬೀರದಾಗರಂ|| ೧೯೭

ಪದ್ಯ-೧೯೭:ಪದವಿಭಾಗ-

ಅರ್ಥ: ತನಗೆ

ಉಱುವಂತುಟು ಆಗೆ (ತನಗೆ,
ಇರುವಷ್ಟು ಆಗಲು- ಕಾಲ)
ಕಡು ನನ್ನಿಯ ಪೆಂಪುಮನು
ಆಂತು (ಕಠಿಣ ಸತ್ಯವನ್ನೂ
ಪರಾಕ್ರಮವನ್ನೂ ಹೊಂದಿ)
ಭೂಭುಜರ್ ತನಗೆ ಇನಿತುಂ
ಊನಮಾಗೆ (ಪೂರ್ಣವಾದ
ಭುಜಶಕ್ತಿಯನ್ನು ಪಡೆದಿದ್ದೂ
ಅದರಲ್ಲಿ ಸ್ವಲ್ಪ
ಕಡಿಮೆಯಾದರೆ, ತಪ್ಪಿದರೆ)
ಮೆರೆದ ಆ

ಭುಜವೀರ್ಯಮನು ಆಂತು (ಮೆರೆದ ಆ ತೋಳಬಲವನ್ನು ಹೊಂದಿ) ಮಾಣ್ಬುದೇಂ (ಮಾಡುವುದೇನು? ಪ್ರಯೋಜನವಿಲ್ಲ!) ತನಗುಱುವ ಒಂದು ನನ್ನಿಯನೆ ಪೂಣ್ದು ಕರಂ ಪಿರಿದುಂ (ತನಗೆ ಸಾಧ್ಯವಾದಷ್ಟು ಸತ್ಯಪ್ರತಿಜ್ಞೆಮಾಡಿ, ವಿಶೇಷ-ದೊಡ್ಡ) ಬಲಸ್ಥನಪ್ಪನನೆ

ಕಱುತ್ತು ಕಾದಿ
(ಸೈನ್ಯವಿದ್ದವನನ್ನೆ ಗುರಿಯಿಟ್ಟು
ಕಾದಿ) ನೆಗೞ್ದ ಆತನೆ ನನ್ನಿಯ
ಬೀರದ ಆಗರಂ (ಸತ್ಯ ಮತ್ತು
ಪರಾಕ್ರಮದ
ಆವಾಸಸ್ಥಾನನಾಗುವನು.)
ಪದ್ಯ-೧೯೭:ಅರ್ಥ:ಸಾಮಾ
ನ್ಯ ರಾಜರಾದವರು ತಮಗೆ
ಸಾಧ್ಯವಾದಷ್ಟು ಕಠಿಣ
ಸತ್ಯವನ್ನೂ ಪರಾಕ್ರಮವನ್ನೂ
ಹೊಂದಿ, ಪೂರ್ಣವಾದ

ಭುಜಶಕ್ತಿಯನ್ನು ಪಡೆದಿದ್ದೂ ಅದರಲ್ಲಿ ಸ್ವಲ್ಪ ತಪ್ಪಿದರೆ ಮೆರೆದ ಆ ತೋಳಬಲವನ್ನು ಹೊಂದಿ ಮಾಡುವುದೇನು? ತನಗೆ ಸಾಧ್ಯವಾದಷ್ಟು ಸತ್ಯಪ್ರತಿಜ್ಞೆಮಾಡಿ, ದೊಡ್ಡ ಸೈನ್ಯವಿದ್ದವನನ್ನೆ ಗುರಿಯಿಟ್ಟು ಕಾದಿ ಪ್ರಸಿದ್ಧಿಪಡೆದವನೇ ಸತ್ಯ ಮತ್ತು ಪರಾಕ್ರಮದ ಆವಾಸಸ್ಥಾನನಾಗುವನು.

ಮ|| ಅಱಿಯರ್

ಪಾಂಡವರೆನ್ನನಿನ್ನುಮಱಿಪ

ಲ್ ನೀಮೆಂದದಂ ಚಕ್ರಿಗಾ

ನಱಿಪಿರ್ದೆಂ ಪೃಥೆಯುಂ

ಮದೀಯ ಸುತರೊಳ್

ವೈಕರ್ತನಂ ನನ್ನಿಯಂ|

ನಿಱಿಸಲ್ಕಾರ್ಕುಮಮೋಘ

ಮೆಂದು ಮನದೊಳ್

ನಂಬಿರ್ದಳಿನ್ನಿಲ್ಲಿ ಪೆಂ

ಪೆಱಕಂಬೆತ್ತಿರೆ ಕಾವೆನೆನ್ನ

ನುಡಿಯಂ ಕೆಯ್ಕೊಂಡ

ಕಟ್ಟಾಯಮಂ|| ೧೯೮ ||

ಪದ್ಯ-೧೯೮:ಪದವಿಭಾಗ-ಅರ್ಥ:ಅಱಿಯರ್ ಪಾಂಡವರು ಎನ್ನಂ ಇನ್ನುಂ (ಪಾಂಡವರು ನನ್ನನ್ನು ಇನ್ನೂ -ಯಾರೆಂದು- ತಿಳಿಯರು) ಅಱಿಪಲ್ (ವೇಡ,ವೇಡಿಂ) ನೀಂ ಎಂದು ಅದಂ ಚಕ್ರಿಗೆ ಆನ್ ಅಱಿಪಿರ್ದೆಂ (ನೀವು ತಿಳಿಸಬೇಡಿ ಎಂದು ನಾನು ಕೃಷ್ಣನನ್ನು ಹೇಳಿದ್ದೆ.)

ಪೃಥೆಯುಂ ಮದೀಯ
ಸುತರೊಳ್ (ಕುಂತಿಯೂ
ನನ್ನ ಮಕ್ಕಳಲ್ಲಿ) ವೈಕರ್ತನಂ
(ಸೂರ್ಯನ ಮಗ ಕರ್ಣ)
ನನ್ನಿಯಂ ನಿಜಿಸಲ್ಕ್ ಆರ್ಕುಂ
ಅಮೋಘಮೆಂದು (ಸತ್ಯವನ್ನು
ಸ್ಥಾಪಿಸುವುದಕ್ಕೆ
ಸಮರ್ಥನೆಂದು,ಅಮೋಘಂ
ಅರ್ಕು- ತಪಪ್ಪದವನು ಅಕ್ಕು
ಎಂದ) ಮನದೊಳ್
ನಂಬಿರ್ದಳ್ (ಮನಸ್ಸಿನಲ್ಲಿ

ನಂಬಿದ್ದಾಳೆ). ಇನ್ನಿಲ್ಲಿ ಪೆಂಪು ಎಱಿಕಂಬೆತ್ತಿರೆ (ಇಂತಹ ಹಿರಿಮೆಯು ನನ್ನಲ್ಲಿ ಎರಕ ಹೊಯ್ದಿರಲು/ ತುಂಬಿರಲು) ಕಾವೆನು ಎನ್ನ ನುಡಿಯಂ ಕೆಯ್ಕೊಂಡ ಕಟ್ಟಾಯಮಂ (ನನ್ನ ಭಾಷೆಯನ್ನೂ ನಾನು ಅಂಗೀಕರಿಸಿರುವ ನನ್ನ ತೀವ್ರವಾದ ಶೌರ್ಯವನ್ನೂ ರಕ್ಷಿಸುತ್ತೇನೆ)

ಪದ್ಯ-೧೯೮:ಅರ್ಥ:ಪಾಂಡವರು ನನ್ನನ್ನು ಇನ್ನೂ (ಯಾರೆಂದು) ತಿಳಿಯರು. ನೀವು ತಿಳಿಸಬೇಡಿ ಎಂದು ನಾನು ಕೃಷ್ಣನನ್ನು ಹೇಳಿದ್ದೆ. ಕುಂತಿಯೂ ನನ್ನ ಮಕ್ಕಳಲ್ಲಿ ಕರ್ಣನು ಸತ್ಯವನ್ನು ಸ್ಥಾಪಿಸುವುದಕ್ಕೆ ಪೂರ್ಣವಾಗಿ ಸಮರ್ಥನೆಂದು ಮನಸ್ಸಿನಲ್ಲಿ ನಂಬಿದ್ದಾಳೆ. ಇಂತಹ ಹಿರಿಮೆಯು ನನ್ನಲ್ಲಿ ಎರಕ

ಹೊಯ್ದಿರಲು ನನ್ನ ಭಾಷೆಯನ್ನೂ ನಾನು ಅಂಗೀಕರಿಸಿರುವ ನನ್ನ ತೀವ್ರವಾದ ಶೌರ್ಯವನ್ನೂ ರಕ್ಷಿಸುತ್ತೇನೆ. ಎಂದು ಕರ್ಣನು ನಿಶ್ಚಯಿಸಿದಮು.

ಕಂ|| ಎಂಬುದನೆ ಬಗೆದು

ಪೆಱತನ

ಣಂ ಬಗೆಯದೆ

ಮದ್ರಪತಿಯನೆಂದಂ ಮುಂ

ತೊ|

ಟ್ಟಂಬನದನುಗಿದು ಕುಂದಿಸಿ ದಂ ಭಯದಿಂ ಕರ್ಣನೆಂದು ಲೋಕಂ ನಗದೇ|| ೧೯೯ ||

ಪದ್ಯ-೧೯೯:ಪದವಿಭಾಗ-ಅರ್ಥ:ಎಂಬುದನೆ ಬಗೆದು ಪೆಱತನು ಅಣಂ ಬಗೆಯದೆ (ಎಂಬುದಾಗಿಯೇ ಯೋಚಿಸಿ ಬೇರೆರೀತಿಯನ್ನೂ ಸ್ವಲ್ಪವೂ ಯೋಚಿಸದೆ) ಮದ್ರಪತಿಯನು ಎಂದಂ (ಶಲ್ಯನಿಗೆ ಹೇಳಿದನು,) ಮುಂ ತೊಟ್ಟ ಅಂಬನು

ಅದನು ಉಗಿದು ಕುಂದಿಸಿದಂ
ಭಯದಿಂ ಕರ್ಣನೆಂದು
ಲೋಕಂ ನಗದೇ ('ಕರ್ಣನು
ಮೊದಲು ಪ್ರಯೋಗಿಸಿದ
ಬಾಣವನ್ನು ಭಯದಿಂದ
ಹಿಂದಕ್ಕೆ ಸೆಳೆದು ಕುಗ್ಗಿಸಿದನು'
ಎಂದು ಮುಂದೆ ಲೋಕವು
ನಗುವುದಿಲ್ಲವೇ?)
ಪದ್ಯ-೧೯೯:ಅರ್ಥ:ಎಂಬು
ದಾಗಿಯೇ ಯೋಚಿಸಿ
ಬೇರೆರೀತಿಯನ್ನೂ ಸ್ವಲ್ಪವೂ

ಯೋಚಿಸದೆ ಶಲ್ಯನಿಗೆ ಹೇಳಿದನು, ‘ಕರ್ಣನು ಮೊದಲು ಪ್ರಯೋಗಿಸಿದ ಬಾಣವನ್ನು ಭಯದಿಂದ ಹಿಂದಕ್ಕೆ ಸೆಳೆದು ಕುಗ್ಗಿಸಿದನು’ ಎಂದು ಮುಂದೆ ಲೋಕವು ನಗುವುದಿಲ್ಲವೇ?

ಕಂ||

ಉಡುಗುಡುಗುಡುಗೆಂದಿಸೆ

ಬಱ

ಸಿಡಿಲೆಱಪಂತೆಱಪ ಸರಲ ಬರವಂ ಕಂಡಾ|
ಗಡೆ ಚಕ್ರಿ ನೆಲನೊಳೆಣ್ಬೆರ ಲಡಂಗೆ ನರರಥಮನೊತ್ತಿದಂ ನಿಪುಣತೆಯಿಂ|| ೨೦೦ ||

ಪದ್ಯ-೨೦೦:ಪದವಿಭಾಗ-ಅರ್ಥ:ಉಡುಗು ಉಡುಗು ಉಡುಗೆಂದು ಇಸೆ (ತಗ್ಗಿಸು, ತಗ್ಗಿಸು, ತಗ್ಗಿಸು ಎನ್ನುತ್ತಿದ್ದರೂ, ಹೊಡೆಯಲು,) ಬಱಸಿಡಿಲು ಎಱಪಂತೆ ಎಱಪ ಸರಲ

ಬರವಂ ಕಂಡು (ಬರಸಿಡಿಲು ಎರಗುವಂತೆ ಎರಗುವ ಬಾಣದ ಬರುವಿಕೆಯನ್ನು ಕಂಡು) ಆಗಡೆ ಚಕ್ರಿ ನೆಲನೊಳ್ ಎಣ್ಬೆರಲ್ ಅಡಂಗೆ (ಆಗಲೆ ಕೃಷ್ಣನು ಅರ್ಜುನನ ತೇರನ್ನು ಭೂಮಿಯಲ್ಲಿ ಎಂಟುಬೆರಳು ಆಳಕ್ಕೆ ಅಡಗುವ ಹಾಗೆ) ನರರಥಮನು ಒತ್ತಿದಂ ನಿಪುಣತೆಯಿಂ (ಅರ್ಜುನನ

ರಥವನ್ನು ಭೂಮಿಯಲ್ಲಿ ಎಂಟುಬೆರಳು ಆಳಕ್ಕೆ ಅಡಗುವ ಹಾಗೆ ಕೌಶಲದಿಂದ ಒತ್ತಿದನು.)

ಪದ್ಯ-೨೦೦:ಅರ್ಥ:ಶಲ್ಯನು ಗುರಿಯನ್ನು ತಗ್ಗಿಸು, ತಗ್ಗಿಸು, ತಗ್ಗಿಸು ಎನ್ನುತ್ತಿದ್ದರೂ, ಹೊಡೆಯಲು ಬರಸಿಡಿಲು ಎರಗುವಂತೆ ಎರಗುವ ಬಾಣದ ಬರುವಿಕೆಯನ್ನು ಕಂಡು ಆಗಲೆ ಕೃಷ್ಣನು,

ಅರ್ಜುನನ ರಥವನ್ನು
ಭೂಮಿಯಲ್ಲಿ ಎಂಟುಬೆರಳು
ಆಳಕ್ಕೆ ಅಡಗುವ ಹಾಗೆ
ಕೌಶಲದಿಂದ ಒತ್ತಿದನು.

ಒತ್ತುವುದುಂ ಶರಮಿರದೆ
ಯುದ್ದತ್ತೆ ಕಿರೀಟಿಯ ಕಿರೀಟಮಂ
ಕೊರೆದೊಡೆ ಪ|
ರ್ವಿತ್ತು ಭಯಮಿಂದ್ರನಂ ಮು
ತ್ತಿತ್ತಬಿಲೀಶ್ವರನನಾಗಳಾ
ಸಂಕಟದೊಳ್|| ೨೦೧ ||

ಪದ್ಯ-೨೦೧:ಪದವಿಭಾಗ-ಅರ್ಥ:ಒತ್ತುವುದುಂ ಶರಮ್ ಇರದೆ ಎಯ್ದುತ್ತೆ (ರಥವನ್ನು ಒತ್ತಲಾಗಿ, ಬಾಣವು ಸುಮ್ಮನಿರದೆ ಹತ್ತಿರಬರುತ್ತಾ) ಕಿರೀಟಿಯ ಕಿರೀಟಮಂ ಕೊರೆದೊಡೆ (ಅರ್ಜುನನ ಕಿರೀಟವನ್ನು ಕತ್ತರಿಸಲು) ಪರ್ವಿತ್ತು ಭಯಂ ಇಂದ್ರನಂ (ಆಗ ಇಂದ್ರನನ್ನು ಭಯವಾವರಿಸಿತು.) ಮುತ್ತಿತ್ತು

ಅಱಿಲ್ ಈಶ್ವರನನು ಆಗಳ್ ಆ ಸಂಕಟದೊಳ್ (ಆ ಸಂಕಟದಲ್ಲಿ ದುಃಖವು ಈಶ್ವರನನ್ನು ಆವರಿಸಿಕೊಂಡಿತು)

ಪದ್ಯ-೨೦೧:ಅರ್ಥ:ರಥವನ್ನು ಒತ್ತಲಾಗಿ, ಬಾಣವು ಸುಮ್ಮನಿರದೆ ಹತ್ತಿರಬರುತ್ತಾ ಅರ್ಜುನನ ಕಿರೀಟವನ್ನು ಕತ್ತರಿಸಲು ಆಗ ಇಂದ್ರನನ್ನು ಭಯವಾವರಿಸಿತು. ಆ

ಸಂಕಟದಲ್ಲಿ ದುಖವು
ಈಶ್ವರನನ್ನು
ಆವರಿಸಿಕೊಂಡಿತು.

ಒಳಗಱಿಯದೆ ಕೌರವಬಳ
ಜಳನಿಧಿ ಬೊಬ್ಬಿಱಿದು
ಮೇಲುದಂ ಬೀಸಿದೊಡು|
ಚ್ಚಳಿಸಿದ ಮಕುಟದ ಮಣಿಗಳ
ಪೊಳೆಪುಗಳಿಂದುಳ್ಕಮೆಝ್ದವೆಂ
ಟುಂ ದೆಸೆಯೊಳ್|| ೨೦೨ ||

ಪದ್ಯ-೨೦೨:ಪದವಿಭಾಗ-
ಅರ್ಥ:ಒಳಗ ಅಱಿಯದೆ

ಕೌರವಬಳಜಳನಿಧಿ (ಇದರ
ರಹಸ್ಯವನ್ನರಿಯದೆ
ಕೌರವಸೇನಾಸಮುದ್ರವು)ಬೊ
ಬ್ಬಿಱಿದು ಮೇಲುದಂ
ಬೀಸಿದೊಡೆ (ಆರ್ಭಟಮಾಡಿ
(ಸಂತೋಷದಿಂದ)
ಉತ್ತರೀಯವನ್ನು ಬೀಸಲು)
ಉಚ್ಚಳಿಸಿದ ಮಕುಟದ
ಮಣಿಗಳ ಪೊಳೆಪುಗಳಿಂದ
ಉಳ್ಕಮೆೞ್ದುವು ಎಂಟುಂ
ದೆಸೆಯೊಳ್ (ಚಿಮ್ಮಿದ

ಕಿರೀಟದ ರತ್ನಗಳ ಹೊಳಪಿನಿಂದ ಎಂಟುದಿಕ್ಕುಗಳಲ್ಲಿಯೂ ಉಲ್ಕಾಪಾತಗಳು ಎದ್ದುವು.)

ಪದ್ಯ-೨೦೨:ಅರ್ಥ:ಇದರ ರಹಸ್ಯವನ್ನರಿಯದೆ ಕೌರವಸೇನಾಸಮುದ್ರವು ಆರ್ಭಟಮಾಡಿ (ಸಂತೋಷದಿಂದ) ಉತ್ತರೀಯವನ್ನು ಬೀಸಲು ಚಿಮ್ಮಿದ ಕಿರೀಟದ ರತ್ನಗಳ

ಹೊಳಪಿನಿಂದ
ಎಂಟುದಿಕ್ಕುಗಳಲ್ಲಿಯೂ
ಉಲ್ಕಾಪಾತಗಳು ಎದ್ದುವು.

ವ|| ಅಂತು
ರುಂದ್ರನೀಳಾದ್ರೀಂದ್ರ
ರತ್ನಕೂಟಾಗ್ರಮುದಗ್ರ
ವಜ್ರಘಾತದಿಂದುರುಳ್ವಂತೆ
ರತ್ನಮಕುಟಮರಾತಿಶಾತಶರದಿ
ನುರುಳ್ವುದು
ಮಳಿನೀಳೋಜ್ವಳ
ಸಹಸ್ರಕುಂತಳಂಗಳ್

ಪರಕಲಿಸಿ ಬಂದು ಪೊಱಮಯ್ವನಳ್ಳಿಱಿಯೆ ಪಚ್ಚುಗಂಟಿಕ್ಕಿ ಗಾಂಡೀವಧನ್ವಂ ಸನ್ನದ್ಧನಾಗಿರ್ಪನ್ನೆಗಂ-

ವಚನ:ಪದವಿಭಾಗ-

ಅರ್ಥ:ಅಂತು ರುಂದ್ರ (ಹಾಗೆ ವಿಸ್ತಾರವೂ) ನೀಳಾದ್ರಿ ಇಂದ್ರ ರತ್ನಕೂಟ ಅಗ್ರಮುದ ಅಗ್ರ (ರತ್ನಮಯವೂ ಆದ ನೀಲಪರ್ವತದ ಶಿಖರಗಳ ತುದಿಯ ಭಾಗವು)

ವಜ್ರಘಾತದಿಂದ ಉರುಳ್ವಂತೆ
(ಬಲವಾದ ವಜ್ರಾಯುಧದ
ಪೆಟ್ಟಿನಿಂದ ಉರುಳುವ ಹಾಗೆ)
ರತ್ನಮಕುಟಂ ಆರಾತಿ ಶಾತ
ಶರದಿಂ ಉರುಳ್ವುದುಂ
(ರತ್ನಕಿರೀಟವು ಶತ್ರುವಿನ
ಹರಿತವಾದ ಬಾಣದಿಂದ
ಉರುಳಲು)
ಅಳಿನೀಳೋಜ್ವಳ
ಸಹಸ್ರಕುಂತಳಂಗಳ್
(ದುಂಬಿಗಳ ಕಪ್ಪುಬಣ್ಣದಂತೆ

ಪ್ರಕಾಶಮಾನವಾಗಿರುವ
ಸಹಸ್ರ ಗುಂಗುರು
ಕೂದಲುಗಳು) ಪರಕಲಿಸಿ
ಬಂದು ಪೊಱಮಯ್ವನ್
ಅಳ್ಕಿಱಿಯೆ (ಕೆದರಿ ಬಂದು
ಹೆಗಲಿನ ಹೊರಭಾಗವನ್ನು
ಮುಟ್ಟಲು) ಪಚ್ಚುಗಂಟಿಕ್ಕಿ
ಗಾಂಡೀವಧನ್ವಂ
ಸನ್ನದ್ಧನಾಗಿರ್ಪ ಅನ್ನೆಗಂ
(ಅದನ್ನು ಎರಡು ಭಾಗವಾಗಿ

ಗಂಟಿಕ್ಕಿ ಅರ್ಜುನನು ಸಿದ್ಧವಾಗುವಷ್ಟರಲ್ಲಿ)- **ವಚನ:ಅರ್ಥ**:ಕಿರೀಟವು ಬೀಳಲು, ಹಾಗೆ ವಿಸ್ತಾರವೂ ರತ್ನಮಯವೂ ಆದ ನೀಲಪರ್ವತದ ಶಿಖರಗಳ ತುದಿಯ ಭಾಗವು ಬಲವಾದ ವಜ್ರಾಯುಧದ ಪೆಟ್ಟಿನಿಂದ ಉರುಳುವ ಹಾಗೆ ರತ್ನಕಿರೀಟವು ಶತ್ರುವಿನ ಹರಿತವಾದ ಬಾಣದಿಂದ

ಉರುಳಲು ದುಂಬಿಗಳ
ಕಪ್ಪುಬಣ್ಣದಂತೆ
ಪ್ರಕಾಶಮಾನವಾಗಿರುವ
ಸಹಸ್ರ ಗುಂಗುರು
ಕೂದಲುಗಳು ಕೆದರಿ ಬಂದು
ಹೆಗಲಿನ ಹೊರಭಾಗವನ್ನು
ಮುಟ್ಟಲು ಅದನ್ನು ಎರಡು
ಭಾಗವಾಗಿ ಗಂಟಿಕ್ಕಿ
ಅರ್ಜುನನು
ಸಿದ್ಧವಾಗುವಷ್ಟರಲ್ಲಿ-.

ಚಂ|| ಪುರಿಗಣೆಯಪ್ಪ
ಕಾರಣದಿನಂತದು
ತಪ್ಪಿದೆನೆಂದು ನೊಂದು ಪ
ಲ್ಮೊರೆದಹಿ ರೂಪದಿಂ
ಮಗುಳ್ದು
ಬಂದಿನನಂದನನಲ್ಲಿಗೆನ್ನನಂ|
ತರಿಸದೆ ತೊಟ್ಟು ಬೇಗಮಿಸು
ವೈರಿಯನೀಗಳೆ ಕೊಂದಪೆಂ
ರಸಾಂ
ಬರ
ಧರಣೀವಿಭಾಗದೊಳಗಾವೆಡೆ

ವೊಕ್ಕೊಡಮಂಗನಾಯಕಾ||
೨೦೩ ||

ಪದ್ಯ-೨೦೩:ಪದವಿಭಾಗ-ಅರ್ಥ:ಪುರಿಗಣೆಯಪ್ಪ ಕಾರಣದಿಂ ಅಂತುಅದು ತಪ್ಪಿದೆನು ಎಂದು ನೊಂದು(ವೇಗದ ಅಸ್ತ್ರವಾದ (ಹುರಿಗಣೆಯಾದ) ಕಾರಣದಿಂದ ಹಾಗೆ ತಪ್ಪುಮಾಡಿದೆನು ಎಂದು ವ್ಯಥೆಪಟ್ಟು) ಪಲ್ಮೊರೆದಹಿ

ರೂಪದಿಂ ಮಗುಳ್ದು ಬಂದು ಇನನಂದನನಲ್ಲಿಗೆ (ಹಲ್ಲುಕಡಿದು ಶಬ್ದಮಾಡಿ ಹಾವಿನ ರೂಪದಿಂದ ಪುನ ಕರ್ಣನ ಹತ್ತಿರಕ್ಕೆ ಬಂದು) ಎನ್ನನಂ ತರಿಸದೆ ತೊಟ್ಟು ಬೇಗಂ ಇಸು ('ಕರ್ಣಾ, ನನ್ನನ್ನು ಸಾವಕಾಶಮಾಡದೆ ಬಿಲ್ಲಿನಲ್ಲಿ ತೊಡಿಸಿ ಬೇಗ ಹೂಡು;) ವೈರಿಯನು ಈಗಳೆ ಕೊಂದಪೆಂ ರಸ ಅಂಬರ

ಧರಣೀವಿಭಾಗದೊಳಗೆ (ಸ್ವರ್ಗಮರ್ತ್ಯಪಾತಾಳವಿಭಾಗ ದಲ್ಲಿ) ಆವೆಡೆ ವೊಕ್ಕೊಡಂ ಅಂಗನಾಯಕಾ (ಯಾವಸ್ಥಳದಲ್ಲಿ ಪ್ರವೇಶಮಾಡಿದ್ದರೂ ಶತ್ರುವನ್ನು ಈಗಲೇ ಕೊಲ್ಲುತ್ತೇನೆ ಕರ್ಣಾ’ ಎಂದಿತು.)

ಪದ್ಯ-೨೦೩:ಅರ್ಥ:

ಸರ್ಪವು, ವೇಗದ ಅಸ್ತ್ರವಾದ

(ಹುರಿಗಣೆಯಾದ)
ಕಾರಣದಿಂದ ಹಾಗೆ
ತಪ್ಪುಮಾಡಿದೆನು ಎಂದು
ವ್ಯಥೆಪಟ್ಟು, ಹಲ್ಲುಕಡಿದು
ಶಬ್ದಮಾಡಿ ಹಾವಿನ
ರೂಪದಿಂದ ಪುನ ಕರ್ಣನ
ಹತ್ತಿರಕ್ಕೆ ಬಂದು ‘ಕರ್ಣಾ,
ನನ್ನನ್ನು ಸಾವಕಾಶಮಾಡದೆ
ಬಿಲ್ಲಿನಲ್ಲಿ ತೊಡಿಸಿ ಬೇಗ
ಹೂಡು;
ಸ್ವರ್ಗಮರ್ತ್ಯಪಾತಾಳವಿಭಾಗ

ದಲ್ಲಿ ಯಾವಸ್ಥಳದಲ್ಲಿ
ಪ್ರವೇಶಮಾಡಿದ್ದರೂ
ಶತ್ರುವನ್ನು ಈಗಲೇ
ಕೊಲ್ಲುತ್ತೇನೆ’ ಎಂದಿತು.

ವ|| ಎಂಬುದುಂ ನೀನಾರ್ಗೇನೆಂಬೆಯದಾವುದು ಕಾರಣದಿಂದಮೆನ್ನ ದೊಣೆಯಂ ಪೊಕ್ಕಿರ್ದೆಯೆಂದೊಡಾನಶ್ವಸೇನನೆಂಬ ಪನ್ನಗನೆನೆಂದು ತನ್ನ ವೈರ ಕಾರಣಾನಱಿಯೆ

ಪೇಟ್ಟೊಡೆ ದರಹಸಿತವದನಾರವಿಂದನಾಗಿ -

ವಚನ:ಪದವಿಭಾಗ-ಅರ್ಥ: ಎಂಬುದುಂ ನೀನು ಆರ್ಗೆ? ಏನೆಂಬೆ? (‘ಸರ್ಪ ಹಾಗೆನ್ನಲು, ನೀನು ಯಾರು? ಏನು ಹೇಳುತ್ತಿರುವೆ?’)ಅದು ಆವುದು ಕಾರಣದಿಂದಂ ಎನ್ನ ದೊಣೆಯಂ ಪೊಕ್ಕಿರ್ದೆ ಯೆಂದೊಡೆ (ಯಾವ

ಕಾರಣದಿಂದ ನನ್ನ ಬತ್ತಳಿಕೆಯನ್ನು ಹೊಕ್ಕಿದ್ದೆ' ಎನ್ನಲು) ಅನಶ್ವಸೇನನೆಂಬ ಪನ್ನಗನು ಎನೆ ('ನಾವು ಅಶ್ವಸೇನನೆಂಬ ಹಾವು' ಎಂದು ತಿಳಿಸಿ) ಎಂದು ತನ್ನ ವೈರ ಕಾರಣನು ಅಱಿಯೆ ಪೇೞ್ದೊಡೆ (ತನ್ನ ವೈರಕ್ಕೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಲು) ದರಹಸಿತವದನ ಅರವಿಂದನಾಗಿ

(ಮುಗುಳುನಗೆಯಿಂದ ಕೂಡಿದ ಮುಖವುಳ್ಳವನಾಗಿ)- **ವಚನ:ಅರ್ಥ:**‘ಸರ್ಪ ಹಾಗೆನ್ನಲು, ನೀನು ಯಾರು, ಯಾರ ಕಡೆಯವನು? ಏನು ಹೇಳುತ್ತಿರುವೆ?’ ಯಾವ ಕಾರಣದಿಂದ ನನ್ನ ಬತ್ತಳಿಕೆಯನ್ನು ಹೊಕ್ಕಿದ್ದೆ’ ಎನ್ನಲು ‘ನಾವು ಅಶ್ವಸೇನನೆಂಬ ಹಾವು’ ಎಂದು ತಿಳಿಸಿ ತನ್ನ ವೈರಕ್ಕೆ

ಕಾರಣವನ್ನು ಸ್ಪಷ್ಟವಾಗಿ
ತಿಳಿಸಲು
ಮುಗುಳುನಗೆಯಿಂದ ಕೂಡಿದ
ಮುಖವುಳ್ಳವನಾಗಿ

ಕಂ|| ಶರರೂಪದೊಳಿರೆ ನಿನ್ನಂ
ಶರಮೆಂದಾಂ ತೊಟ್ಟೆನಱಿದು
ತುಡುವೆನೆ ನಿನ್ನಂ|
ನೆರದೊಳ್ ಕೊಲ್ವಂತೆನಗೇ
ನರಿಯನೆ
ಗಾಂಡೀವಧನ್ವನೆಂಬುದುಮಾ
ಗಳ್|| ೨೦೪ ||

ಪದ್ಯ-೨೦೪:ಪದವಿಭಾಗ-ಅರ್ಥ:ಶರರೂಪದೊಳು ಇರೆ ನಿನ್ನಂ ಶರಮೆಂದು ಆಂ ತೊಟ್ಟೆನು ('ಬಾಣಾಕಾರದಿಂದಿರಲು ನಿನ್ನನ್ನು ಬಾಣವೆಂದು ಬಿಲ್ಲಿಗೆ ಹೂಡಿದೆನು.) ಅಱಿದು ತುಡುವೆನೆ ನಿನ್ನಂ (ತಿಳಿದೂ ನಿನ್ನನ್ನು ತೊಡುವೆನೆ?) ನೆರದೊಳ್ ಕೊಲ್ವಂತೆ ಎನಗೇನು ಅರಿಯನೆ (ನಿನ್ನ

ಸಹಾಯದಿಂದ ಕೊಲ್ಲುವಷ್ಟು ಅರ್ಜುನನು ನನಗೆ ಅಸಾಧ್ಯನೆ?’) ಗಾಂಡೀವಧನ್ವನು ಎಂಬುದುಂ ಆಗಳ್ (ಅರ್ಜುನನು ಎನ್ನಲು- ಆಗ-)

ಪದ್ಯ-೨೦೪:ಅರ್ಥ: ‘ಬಾಣಾಕಾರದಿಂದಿರಲು ನಿನ್ನನ್ನು ಬಾಣವೆಂದು ಬಿಲ್ಲಿಗೆ ಹೂಡಿದೆನು. (ನೀನು ಯಾರೆಂದು) ತಿಳಿದೂ ನಿನ್ನನ್ನು

ತೊಡುವೆನೆ? ನಿನ್ನ ಸಹಾಯದಿಂದ ಕೊಲ್ಲುವಷ್ಟು ಅರ್ಜುನನು ನನಗೆ ಅಸಾಧ್ಯನೆ?’ ಎಂದನು- ಎನ್ನಲು- ಆಗ-

ನೀಂ ನಿನ್ನ ಪಗೆಯನಾರ್ಪೊಡ
ದಂ ನೆಱಪೆನೆ ನೆಗೆದು ಬರ್ಪ
ವಿಪಪನ್ನಗನಂ|
ಪನ್ನತನೆಡೆಯೊಳರಿಗಂ
ತನ್ನಯ ಗರುಡಾಸ್ತ್ರದಿಂದೆ
ಕುಱಿದಱಿದಱಿದಂ|| ೨೦೫ ||

ಪದ್ಯ-೨೦೫:ಪದವಿಭಾಗ-ಅರ್ಥ:ನೀಂ ನಿನ್ನ ಪಗೆಯನು ಆಪೊರ್ಡೆ ಅದಂ ನೆಱಪು ಎನೆ (ಸರ್ಪವು 'ಹಾಗಾದರೆ ಶತ್ರುತ್ವವನ್ನು ಸಮರ್ಥನಾದರೆ ನೀನು ಪೂರ್ಣಮಾಡು' ಎಂದು ಹೇಳಿ) ನೆಗೆದು ಬರ್ಪ ವಿಷಪನ್ನಗನಂ (ಅರ್ಜುನನ ಕಡೆಗೆ ಹಾರಿ ಬರುತ್ತಿದ್ದ ವಿಷಸರ್ಪವನ್ನು) ಪನ್ನತನು ಎಡೆಯೊಳ್ ಅರಿಗಂ ತನ್ನಯ

ಗರುಡಾಸ್ತ್ರದಿಂದೆ (ಶೂರನಾದ ಅರಿಗನು ಮಧ್ಯಮಾರ್ಗದಲ್ಲಿಯೇ ಗರುಡಬಾಣದಿಂದ) ಕುಱಿದಱಿದ -ಕುರಿದರಿದಂತೆ- ಅಱಿದಂ ಅರಿದಂ (ಕುರಿಯನ್ನು ಕತ್ತರಿಸುವಂತೆ ಕತ್ತರಿಸಿದನು.)

ಪದ್ಯ-೨೦೫:ಅರ್ಥ:ಸರ್ಪವು 'ಹಾಗಾದರೆ ಶತ್ರುತ್ವವನ್ನು ಸಮರ್ಥನಾದರೆ ನೀನು

ಪೂರ್ಣಮಾಡು’ ಎಂದು ಹೇಳಿ, ಅರ್ಜುನನ ಕಡೆಗೆ ಹಾರಿ ಬರುತ್ತಿದ್ದ ವಿಷಸರ್ಪವನ್ನೂ ಶೂರನಾದ ಅರ್ಜುನನು ಮಧ್ಯಮಾರ್ಗದಲ್ಲಿಯೇ ಗರುಡಬಾಣದಿಂದ ಕುರಿಯನ್ನು ಕತ್ತರಿಸುವಂತೆ ಕತ್ತರಿಸಿದನು.

<u>ಕರ್ಣನ ವಧೆ</u>

ವ|| ಆಗಳಂಗರಾಜಂಗೆ ಶಲ್ಯಂ ಕಿನಿಸಿ ಮುಳಿಸಿನೊಳೆ ಕಣ್ಗಾಣದಿಂತಪ್ಪೇಕಗ್ರಾಹಿಗ ಮೊರಂಟಂಗಂ ರಥಮನೆಸಗೆನೆಂದು ವರೂಥದಿಂದಿೞಿದು ಪೋಗೆ-

- **ವಚನ:ಪದವಿಭಾಗ-**
- **ಅರ್ಥ:**ಆಗಳ್ ಅಂಗರಾಜಂಗೆ ಶಲ್ಯಂ ಕಿನಿಸಿ (ಆಗ ಕರ್ಣನ ಬಗೆಗೆ ಶಲ್ಯನು

ಕೋಪಿಸಿಕೊಂಡು)
ಮುಳಿಸಿನೊಳೆ ಕಣ್ಣಾಗಣದ
ಇಂತಪ್ಪ ಏಕಗ್ರಾಹಿಗಂ
ಒರಂಟಂಗಂ (ಕೋಪದಿಂದ
ಕಣ್ಣಾಗಣದ ಇಂತಹ
ಹಟಮಾರಿಗೂ ಒರಟನಿಗೂ)
ರಥಮನು ಎಸಗೆನೆಂದು
ವರೂಥದಿಂದ ಇೞಿದು
ಪೋಗೆ (ತಾನು ತೇರನ್ನು
ನಡೆಸುವುದಿಲ್ಲವೆಂದು

ರಥದಿಂದ ಇಳಿದು ಹೋಗಲು)-

ವಚನ:ಅರ್ಥ:ಆಗ ಕರ್ಣನ ಬಗೆಗೆ ಶಲ್ಯನು ಕೋಪಿಸಿಕೊಂಡು, ಕೋಪದಿಂದ ಕಣ್ಗಾಣದ ಇಂತಹ ಹಟಮಾರಿಗೂ ಒರಟನಿಗೂ, ತಾನು ತೇರನ್ನು ನಡೆಸುವುದಿಲ್ಲವೆಂದು ರಥದಿಂದ ಇಳಿದು ಹೋದನು. ಆಗ-

ಚಂ|| ಅರಿಗನ ಬಟ್ಟಿನಂಬುಗಳ
ಬಲ್ಸರಿ
ಸೋಂಕುಗುಮೇೞಿಮೆನ್ನ
ತೋ
ಳ್ಪೆರಮೆನಗೆನ್ನ ಬಿಲ್ಲೆ
ನೆರಮೆಂದು
ವರೂಥತುರಂಗಮಂಗಳಂ||
ತುರಿಪದೆ ತಾನೆ
ಚೋದಿಸುತುಮಾರ್ದಿಸುತುಂ
ಕಡಿಕೆಯ್ದು ಕಾದೆ ಭೀ

ಕರ ರಥಚಕ್ರಮಂ ಪಿಡಿದು ನುಂಗಿದಳೊರ್ಮೆಯೆ ಧಾತ್ರಿ ಕೋಪದಿಂ|| ೨೦೬ ||

ಪದ್ಯ-೨೦೬:ಪದವಿಭಾಗ-ಅರ್ಥ:ಅರಿಗನ ಬಟ್ಟಿನಂಬುಗಳ ಬಲ್ಸರಿ ಸೋಂಕುಗುಂ (ಅರ್ಜುನನ ಗಟ್ಟಿ ಬಾಣಗಳ ದೊಡ್ಡ ಮಳೆಯು ತಗುಲುತ್ತಿದೆ) ಏಟಿಂ ಎನ್ನ ತೋಳ್ ನೆರಂ ಎನಗೆ (ನನ್ನ ತೋಳುಗಳು

ನನಗೆ ಸಹಾಯ,ನೆರವು,) ಎನ್ನ ಬಿಲ್ಲೆ ನೆರಂ ಎಂದು (ನನ್ನ ಬಿಲ್ಲೇ ಸಹಾಯ' ಎಂದು) ವರೂಥ ತುರಂಗಮಂಗಳಂ ತುರಿಪದೆ (ರಥದ ಕುದುರೆಗಳನ್ನು ವೇಗವಾಗಿ) ತಾನೆ ಚೋದಿಸುತುಂ ಆರ್ದಿಸುತುಂ ಕಡಿಕೆಯ್ದು ಕಾದೆ (ತಾನೇ ನಡೆಸುತ್ತ ಆರ್ಭಟಮಾಡಿ ತೀವ್ರವಾಗಿ ಯುದ್ಧಮಾಡಲು) ಭೀಕರ

ರಥಚಕ್ರಮಂ ಪಿಡಿದು
ನುಂಗಿದಳು ಒರ್ಮೆಯೆ ಧಾತ್ರಿ
ಕೋಪದಿಂ (ಭೀಕರವಾಗಿ
ತೇರಿನ ಚಕ್ರವನ್ನು ಹಿಡಿದು
ಇದಕ್ಕಿದ್ದ ಹಾಗೆ ಭೂಮಿಯು
ನುಂಗಿದಳು)
ಪದ್ಯ-೨೦೬:ಅರ್ಥ:'ಅರ್ಜುನ
ನ ಗಟ್ಟಿ ಬಾಣಗಳ ದೊಡ್ಡ
ಮಳೆಯು ತಗುಲುತ್ತಿದೆ ಏಳಿ,
ನನ್ನ ತೋಳುಗಳು ನನಗೆ
ಸಹಾಯ, ನನ್ನ ಬಿಲ್ಲೇ

ಸಹಾಯ’ ಎಂದು ರಥದ ಕುದುರೆಗಳನ್ನು ವೇಗವಾಗಿ ತಾನೇ ನಡೆಸುತ್ತ ಆರ್ಭಟಮಾಡಿ ತೀವ್ರವಾಗಿ ಯುದ್ಧಮಾಡಲು, ಭೀಕರವಾಗಿ ತೇರಿನ ಚಕ್ರವನ್ನು ಹಿಡಿದು ಇದಕ್ಕಿದ್ದ ಹಾಗೆ ಭೂಮಿಯು ನುಂಗಿದಳು (ಕರ್ಣನ ತೇರಿನ ಗಾಲಿಗಳು ಇದಕ್ಕಿದ್ದ ಹಾಗೆ ಭೂಮಿಯಲ್ಲಿ ಹೂತುಹೋದುವು)

ವ|| ಅಂತು ತನ್ನಂ ಮುನ್ನೆ
ಮುಯ್ಯೇಱ್
ಸೂೞ್ವಿರವೊಲ್ಲಣಿಗೆಯಂ
ಪಿಱಿವಂತೆ ಪಿಂಡಿ ಪಿಱಿದ
ಪಗೆಗೆ ರಥಚಕ್ರಮಂ
ನುಂಗುವುದುಂ
ರಥದಿಂದಿೞಿದು
ಗಾಲಿಯನೆತ್ತುವಾಗಳಿವನನೀ
ಪದದೊಳ್
ಕಡಿದೊಟ್ಟದಾಗಳ್
ಗೆಲಲಾರೆಯೆಂದು ನುಡಿದ

ಮುಕುಂದನ ನುಡಿಗೆ ಕೊಕ್ಕರಿಸಿ ಜಗದೇಕಮಲ್ಲನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅಂತು ತನ್ನಂ ಮುನ್ನೆ ಮುಯ್ಯೇೞ್ ಸೂೞ್ವರಂ (ಹಿಂದೆ 'ಹಾಗೆ ತನ್ನನ್ನು ಇಪ್ಪತ್ತೊಂದು ಸಲ) ಒಲ್ಲಣಿಗೆಯಂ ಪಿೞಿವಂತೆ ಪಿಂಡಿ ಪಿೞಿದ ಪಗೆಗೆ (ಒದ್ದೆಯ ಬಟ್ಟೆಯನ್ನು ಹಿಂಡುವಂತೆ ಹಿಂಡಿದ

ದ್ವೇಷಕ್ಕೆ) ರಥಚಕ್ರಮಂ
ನುಂಗುವುದುಂ (ರಥಚಕ್ರವನ್ನು
ಭೂಮಿಯು ನುಂಗಲು)
ರಥದಿಂದ ಇೞಿದು
ಗಾಲಿಯನು ಎತ್ತುವಾಗಳ್
(ರಥದಿಂದಿಳಿದು ಕರ್ಣನು
ಗಾಲಿಯನ್ನು ಎತ್ತುತ್ತಿದ್ದನು,
ಆಗ-) ಇವನನು ಈ
ಪದದೊಳ್ ಕಡಿದು
ಒಟ್ಟದಾಗಳ್
ಗೆಲಲಾರೆಯೆಂದು (ಇವನನ್ನು

ಈ ಸ್ಥಿತಿಯಲ್ಲಿ (ಸನ್ನಿವೇಶದಲ್ಲಿ) ಕತ್ತರಿಸಿ ರಾಶಿಮಾಡದಿದ್ದರೆ ಗೆಲ್ಲಲಾರೆ ಎಂದು) ನುಡಿದ ಮುಕುಂದನ ನುಡಿಗೆ ಕೊಕ್ಕರಿಸಿ (ಹೇಳಿದ ಕೃಷ್ಣನ ಮಾತಿಗೆ ಅಸಹ್ಯಪಟ್ಟು), ಜಗದೇಕಮಲ್ಲನು ಇಂತೆಂದಂ (ಅರ್ಜುನನು ಹೀಗೆ ಹೇಳಿದನು)-

'*ವಚನ:ಅರ್ಥ:* ಹಿಂದೆ 'ಹಾಗೆ ತನ್ನನ್ನು ಇಪ್ಪತ್ತೊಂದು ಸಲ

ಒದ್ದೆಯ ಬಟ್ಟೆಯನ್ನು ಹಿಂಡುವಂತೆ ಹಿಂಡಿದ ದ್ವೇಷಕ್ಕೆ ರಥಚಕ್ರವನ್ನು ಭೂಮಿಯು ನುಂಗಲು, ರಥದಿಂದಿಳಿದು ಕರ್ಣನು ಗಾಲಿಯನ್ನು ಎತ್ತುತ್ತಿದ್ದನು. ಆಗ, ಇವನನ್ನು ಈ ಸ್ಥಿತಿಯಲ್ಲಿ (ಸನ್ನಿವೇಶದಲ್ಲಿ) ಕತ್ತರಿಸಿ ರಾಶಿಮಾಡದಿದ್ದರೆ ಗೆಲ್ಲಲಾರೆ ಎಂದು ಹೇಳಿದ ಕೃಷ್ಣನ ಮಾತಿಗೆ ಅಸಹ್ಯಪಟ್ಟು ಅರ್ಜುನನು ಹೀಗೆ ಹೇಳಿದನು.

ಮ|| ಬಱುವಂ ಸಾರಥಿಯಿಲ್ಲ
ಮೆಯ್ಗೆ ಮರೆಯುಂ
ತಾನಿಲ್ಲದೆಂತೀಗಳಾ
ನಿಱವೆಂ ನೋಡಿರೆ
ಮತ್ತಮೊಂದನಿಸಲುಂ
ಕೆಯ್ಯೇಱದೇಕೆಂದುಮಾ|
ನಱಿಯೆಂ ಕೂರ್ಮೆಯೆ ಮಿಕ್ಕು
ಬಂದಪುದಿದರ್ಕೇಗೆಯ್ವೆನೇನೆಂ
ಬೆನಾಂ|
ಮಱೆದೆಂ ಮುನ್ನಿನದೊಂದು
ವೈರಮನಿದಿಂತೇಕಾರಣಂ

ಭೂಧರಾ|| ೨೦೭ ||

ಪದ್ಯ-೨೦೭:ಪದವಿಭಾಗ-

ಅರ್ಥ: ಬಱುವಂ ಸಾರಥಿಯಿಲ್ಲ ಮೆಯ್ಗೆ ಮರೆಯುಂ ತಾನಿಲ್ಲದೆಂತೆ (ಬರಿದಾದವನು (ನಿಸ್ಸಹಾಯಕನು), ಸಾರಥಿಯೂ ಇಲ್ಲ; ಶರೀರಕ್ಕೆ ಮರೆಯಾದ ಕವಚವೂ ಇಲ್ಲ;) ಈಗಳು ಆನಿಱುವೆಂ (ಆನಿಸುವೆಂ, ಆನು ಇಸುವೆಂ)

ನೋಡಿರೆ ಮತ್ತಂ ಒಂದನು
ಇಸಲುಂ ಕೆಯ್ಯೇಟಿದು
(ನೋಡಿರಿ, ಮತ್ತೆ- ಮತ್ತೊಂದು
ವಿಚಾರ, ಒಂದು ಬಾಣವನ್ನು
ಹೊಡೆಯುವುದಕ್ಕೂ ಕೈಗಳು
ಏಳುವುದಿಲ್ಲ.) ಏಕೆಂದುಂ
ಆನಱಿಯೆಂ ಕೂರ್ಮೆಯೆ
ಮಿಕ್ಕು ಬಂದಪುದು
(ಏತಕ್ಕೆಂದು ನಾನು
ತಿಳಿಯಲಾರೆ; ಪ್ರೀತಿಯೆ ಉಕ್ಕಿ
ಬರುತ್ತಿದೆ.) ಇದರ್ಕೆ

ಏಗೆಯ್ವೆನು (ಇದಕ್ಕೆ ಏನು ಮಾಡಲಿ,) ಏನೆಂಬೆ ನಾಂ ಮರೆದೆಂ ಮುನ್ನಿನದೊಂದು ವೈರಮನು (ಏನೆಂದು ಹೇಳಲಿ; ನಾನು ಹಿಂದಿನ ದ್ವೇಷವನ್ನು ಮರೆತೆನು;) ಇದಿಂತು ಏಕಾರಣಂ ಭೂಧರಾ (ಕೃಷ್ಣಾ ಇದಕ್ಕೇನು ಕಾರಣ?)

ಪದ್ಯ-೨೧೭:ಅರ್ಥ:ಅರ್ಜುನ ಹೇಳಿದ, ಕರ್ಣನು ಈಗ-ಬರಿದಾದವನು

(ನಿಸ್ಸಹಾಯಕನು),
ಸಾರಥಿಯೂ ಇಲ್ಲ; ಶರೀರಕ್ಕೆ
ಮರೆಯಾದ ಕವಚವೂ ಇಲ್ಲ;
ನೋಡಿರಿ ನಾನು ಈಗ ನಾನು
ಹೊಡೆಯಲೇ?; ಮತ್ತೊಂದು
ವಿಚಾರ, ಒಂದು ಬಾಣವನ್ನು
ಹೊಡೆಯುವುದಕ್ಕೂ ಕೈಗಳು
ಏಳುವುದಿಲ್ಲ. ಏತಕ್ಕೆಂದು
ನಾನು ತಿಳಿಯಲಾರೆ; ಪ್ರೀತಿಯೆ
ಉಕ್ಕಿ ಬರುತ್ತಿದೆ. ಇದಕ್ಕೆ ಏನು
ಮಾಡಲಿ, ಏನೆಂದು ಹೇಳಲಿ;

ನಾನು ಹಿಂದಿನ ದ್ವೇಷವನ್ನು ಮರೆತೆನು; ಕೃಷ್ಣಾ ಇದಕ್ಕೇನು ಕಾರಣ?

- **ಟಿಪ್ಪಣಿ**:: ಮೂಲ ಭಾರತದಲ್ಲಿ ಅರ್ಜುನನು ಕರ್ಣನ್ನು ಹೊಡೆಯುವಾಗ ಅವನ ಬಗೆಗೆ ಕರುಣೆ ಪ್ರೀತಿ ತೋರಿದ ವಿಷಯ ಇಲ್ಲ. ಇದು ಪಂಪನ ಕವಿಸಮಯವೋ ಅಥವಾ ಬೇರೆಕಾವ್ಯದಲ್ಲಿ ಇದ್ದುದೋ ಅರಿಯುವುದಿಲ್ಲ. ಇದೇ ಭಾಗ

ಕುಮಾರವ್ಯಾಸನ ಭಾರತದಲ್ಲಿ
ಇನ್ನೂ ಹೆಚ್ಚು
ಭಾವುಕತೆಯಿಂದ ಬಂದಿದೆ.
ವ್ಯಾಸಭಾರತದಲ್ಲಿ ರಥದ
ಗಾಲಿಹುಗಿದಾಗ ಕರ್ಣ ಸ್ವಲ್ಪ
ತದೆಯಲು ಹೇಳಿ,
ನಿರಾಯುಧನಾದ ತನನ್ನನ್ನು
ಹೊಡೆಯುವುದು
ಧರ್ಮವಲ್ಲವೆಂದು
ಹೇಳುತ್ತಾನೆ ಅದಕ್ಕೆ ಕೃಷ್ಣ
ಆಭಿಮನ್ಯುವನ್ನು ಕೊಲ್ಲುವಾಗ

ದ್ರೌಪದಿಯನ್ನು ಸಭೆಗೆ ಎಳೆದಾಗ ನಿನ್ನಧರ್ಮ ಎಲ್ಲಿ ಹೋಗಿತ್ತು ಎನ್ನುತ್ತಾನೆ.ಅದಕ್ಕೆ ಕರ್ಣ ನಾಚಿಕೊಳ್ಳುತ್ತಾನೆ. ಗಾಲಿಯನ್ನು ಎತ್ತಿ ನಂತರ ಯುದ್ಧಕ್ಕೆ ನಿಲ್ಲುವನು. (ಡಿ.ಎಲ್.ಎನ್.)

ವ||

ಎಂಬುದುಮೆನಿತಱಿಯದಿರ್ ದೊಡಂ ಸೋದರಿಕೆಯೆ ಮಿಕ್ಕು ಬರ್ಕುಮಾಗದೆಯೆಂದು

ತನ್ನಂತರ್ಗತದೊಳ್ ಬಗೆದಸುರಾಂತಕನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅನಿತು ಅಱಿಯದಿರ್ದೊಡಂ (ಎನ್ನಲು ಅದು- ವಾಸ್ತವಾಂಶವು ತಿಳಿಯದಿದ್ದರೂ) ಸೋದರಿಕೆಯೆ ಮಿಕ್ಕು ಬರ್ಕುಮಾಗದೆ (ಭ್ರಾತೃಭಾವವೇ ಉಕ್ಕಿ ಬರುತ್ತದೆಯಲ್ಲವೇ) ಎಂದು

ತನ್ನ ಅಂತರ್ಗತದೊಳ್ ಬಗೆದ ಅಸುರಾಂತಕನು ಇಂತೆಂದಂ (ಎಂದು ತನ್ನ ಮನಸ್ಸಿನಲ್ಲಿ ತಿಳಿದು ಕೃಷ್ಣನು ಹೀಗೆ ಹೇಳಿದನು)-

ವಚನ:ಅರ್ಥ: ಎನ್ನಲು ಅದು- ವಾಸ್ತವಾಂಶವು ತಿಳಿಯದಿದ್ದರೂ, ಭ್ರಾತೃಭಾವವೇ ಉಕ್ಕಿ ಬರುತ್ತದೆಯಲ್ಲವೇ ಎಂದು

ತನ್ನ ಮನಸ್ಸಿನಲ್ಲಿ ತಿಳಿದು
ಕೃಷ್ಣನು ಹೀಗೆ ಹೇಳಿದನು-

ಚಂ|| ನೆಗೞ್ದಭಿಮನ್ಯುವಂ ಚಲದಿನಂದಿಱಿದಿಂದು ನಿಜಾಗ್ರಜಾತನಂ ಸುಗಿವಿನಮೆಚ್ಚು ಬೀರದೊಳೆ ಬೀಗುವ ಸೂತಸುತಂಗೆ ನೀನುಮಾ||
ಜಿಗೆ ಸೆಡೆದಿರ್ದೆಯಪ್ಪೊಡಿರು ಚಕ್ರನಿಘಾತದಿನಿಕ್ಕಿ ಬೀರಮು

ರ್ವಿಗೆ ಪಡಿಚಂದಮಾಗೆ ತೞಿದೊಟ್ಟಿ ಜಯಾಂಗನೆಗಾಣ್ಮನಾದಪೆಂ|| ೨೦೮ ||

ಪದ್ಯ-೨೦೮:ಪದವಿಭಾಗ-ಅರ್ಥ: ನೆಗೞ್ದ ಅಭಿಮನ್ಯುವಂ ಚಲದಿನಂದು ಅಱಿದು (ಅಂದು ಶ್ರೇಷ್ಠನಾದ ಅಭಿಮನ್ಯುವನ್ನು ಹಟದಿಂದ ಕತ್ತರಿಸಿ) ಇಂದು ನಿಜಾಗ್ರಜಾತನಂ ಸುಗಿವಿನಮ್

ಎಚ್ಚು (ಇಂದು ನಿಮ್ಮಣ್ಣನಾದ
ಧರ್ಮರಾಯನನು
ಹೆದರುವಂತೆ ಹೊಡೆದು)
ಬೀರದೊಳೆ ಬೀಗುವ
ಸೂತಸುತಂಗೆ (ಶೌರ್ಯದಿಂದ
ಅಹಂಕಾರಪಡುವ ಸೂತನ
ಮಗನಿಗೆ) ನೀನುಂ ಆಜಿಗೆ
ಸೆಡೆದಿರ್ದೆಯಪ್ಪೊಡೆ ಇರು
(ನೀನು ಯುದ್ಧಕ್ಕೆ
ಸೆಟೆದುನಿಲ್ಲದಿದ್ದರೆ ಇರು)
ಚಕ್ರನಿಘಾತದಿಂ ಇಕ್ಕಿ

ಬೀರಮ್ ಉರ್ವಿಗೆ
ಪಡಿಚಂದಮಾಗೆ ತಱಿದು
ಒಟ್ಟಿ (ನಾನೇ ಚಕ್ರಾಯುಧದ
ಪೆಟ್ಟಿನಿಂದ ಹೊಡೆದು
ಪರಾಶ್ರಮವು ಲೋಕಕ್ಕೆ
ಮಾದರಿಯಾಗುವ ಹಾಗೆ
ಕತ್ತರಿಸಿ ರಾಶಿ ಮಾಡಿ)
ಜಯಾಂಗನೆಗೆ ಆಣ್ಮನಾದಪೆಂ
(ಜಯಲಕ್ಷ್ಮಿಗೆ
ಒಡೆಯನಾಗುತ್ತೇನೆ.)

ಪದ್ಯ-೨೦೮:ಅರ್ಥ: ಅಂದು ಶ್ರೇಷ್ಠನಾದ ಅಭಿಮನ್ಯುವನ್ನು ಹಟದಿಂದ ಕತ್ತರಿಸಿ, ಇಂದು ನಿಮ್ಮಣ್ಣನಾದ ಧರ್ಮರಾಯನನು ಹೆದರುವಂತೆ ಹೊಡೆದು, ಶೌರ್ಯದಿಂದ ಅಹಂಕಾರಪಡುವ ಸೂತನ ಮಗನಿಗೆ ನೀನು ಯುದ್ಧಕ್ಕೆ ಸೆಟೆದುನಿಲ್ಲದಿದ್ದರೆ ಇರು, ನಾನೇ ಚಕ್ರಾಯುಧದ

ಪೆಟ್ಟಿನಿಂದ ಹೊಡೆದು
ಪರಾಶ್ರಮವು ಲೋಕಕ್ಕೆ
ಮಾದರಿಯಾಗುವ ಹಾಗೆ
ಕತ್ತರಿಸಿ ರಾಶಿ ಮಾಡಿ
ಜಯಲಕ್ಷ್ಮಿಗೆ
ಒಡೆಯನಾಗುತ್ತೇನೆ.

**ವ|| ಎಂಬನ್ನೆಗಂ
ಧರಾತಳಮಳರೆ ರಥದ
ಗಾಲಿಯಂ ಕಿೞ್ತು ಮತ್ತಂ
ರಥಮನಪ್ರತಿರಥ ನೇಱೆ
ನಿಟ್ಟಾಲಿಯಾಗೆ ಮುಟ್ಟೆವಂದು**

ಕಿಡಿಗುಟ್ಟೆ
ಮರ್ಮೋದ್ಘಾಟನಂಗೆಯ್ದು
ಕಾದುವಾಗಳ್ ಕಪಿಧ್ವಜಂ
ವನದಂತಿಯಂತೆ
ಧ್ವಾಂಕ್ಷಧ್ವಜಮನುಡಿದು
ಕೆಡೆವಿನಮೆಚ್ಚಾಗಳ್-

ವಚನ:ಪದವಿಭಾಗ-

ಅರ್ಥ:ಎಂಬನ್ನೆಗಂ ಧರಾತಳಂ ಅಳರೆ ರಥದ ಗಾಲಿಯಂ ಕಿೞ್ತು (ಭೂಮಿಯು ನಡುಗುವ ಹಾಗೆ ತೇರಿನ ಚಕ್ರವನ್ನು ಕಿತ್ತು)

ಮತ್ತಂ ರಥಮನು
ಅಪ್ರತಿರಥನು ಏಱಿ (ಪುನಃ
ಪ್ರತಿರಥನಿಲ್ಲದ ಕರ್ಣನು
ರಥವನ್ನು ಹತ್ತಿ)
ನಿಟ್ಟಾಲಿಯಾಗೆ ಮುಟ್ಟೆವಂದು
ಕಿಡಿಗುಟ್ಟೆ (ದಿಟ್ಟಿಸುವ
ದೃಷ್ಟಿಯಿಂದ ಸಮೀಪಕ್ಕೆ
ಬಂದು ಕಿಡಿಗಳನ್ನು ಸುರಿಸಿ)
ಮರ್ಮೋದ್ಘಾಟನಂ ಗೆಯ್ಯು
ಕಾದುವಾಗಳ್
(ಮರ್ಮಭೇದಕವಾದ

ಮಾತುಗಳನ್ನಾಡಿ
ಯುದ್ಧಮಾಡುವಾಗ)
ಕಪಿಧ್ವಜಂ ವನದಂತಿಯಂತೆ
ಧ್ವಾಂಕ್ಷ-ಧ್ವಜಮನು ಉಡಿದು
ಕೆಡೆವಿನಂ ಎಚ್ಚಾಗಳ್
(ಕಪಿಧ್ವಜನಾದ ಅರ್ಜುನನು
ಕಾಡಾನೆಯಂತೆ ಕಾಗೆಯ
ಬಾವುಟವನ್ನು ಕತ್ತರಿಸಿ
ಕೆಡೆಯುವ ಹಾಗೆ
ಹೊಡೆದನು.)-

ವಚನ:ಅರ್ಥ:ಎನ್ನುವಷ್ಟರಲ್ಲಿ ಭೂಮಿಯು ನಡುಗುವ ಹಾಗೆ ತೇರಿನ ಚಕ್ರವನ್ನು ಕಿತ್ತು ಪುನಃ ಪ್ರತಿರಥನಿಲ್ಲದ ಕರ್ಣನು ರಥವನ್ನು ಹತ್ತಿ, ದಿಟ್ಟಿಸುವ ದೃಷ್ಟಿಯಿಂದ ಸಮೀಪಕ್ಕೆ ಬಂದು ಕಿಡಿಗಳನ್ನು ಸುರಿಸಿ ಮರ್ಮಭೇದಕವಾದ ಮಾತುಗಳನ್ನಾಡಿ ಯುದ್ಧಮಾಡುವಾಗ, ಕಪಿಧ್ವಜನಾದ ಅರ್ಜುನನು

ಕಾಡಾನೆಯಂತೆ ಕಾಗೆಯ
ಬಾವುಟವನ್ನು ಕತ್ತರಿಸಿ
ಕೆಡೆಯುವ ಹಾಗೆ ಹೊಡೆದನು.

ಕಂ|| ಪೞಯಿಗೆ ಬೀೞ್ವೊಡೆ
ಬೀರದ
ಪೞವಿಗೆಯಂ ನಿಱಿಸಲೆಂದೆ
ಹರಿ ವಕ್ಷಮನ
ಲ್ಲೞ್ವೋಗೆಯೆಚ್ಚು
ಮುಳಿಸವ
ಗಱಿಯಿಸುತಿರೆ ನರನ ಬಿಲ್ಲ
ಗೊಣೆಯುಮನೆಚ್ಚಂ|| ೨೦೯ ||

ಪದ್ಯ-೨೦೯:ಪದವಿಭಾಗ-ಅರ್ಥ:ಪಟಿಯಿಗೆ ಬಿಟ್ಠೊಡೆ ಬೀರದ ಪಟಿವಿಗೆಯಂ ನಿಟಿಸಲೆಂದೆ (ಬಾವುಟವು ಬೀಳಲು ಶೌರ್ಯದ ಧ್ವಜವನ್ನು ನಿಲ್ಲಿಸಬೇಕೆಂದೇ) ಹರಿ ವಕ್ಷಮನು ಅಲ್ಲಟಿವ್ಪೋಗೆ ಎಚ್ಚು (ಕೃಷ್ಣನ ಎದೆಯನ್ನು ಸೀಳಿಹೋಗುವ ಹಾಗೆ ಹೊಡೆದು) ಮುಳಿಸು ಅವಗಟಿಯಿಸುತಿರೆ ನರನ

ಬಿಲ್ಲ ಗೊಣೆಯುಮನು ಎಚ್ಚಂ

()

ಪದ್ಯ-೨೦೯:ಅರ್ಥ:

ಬಾವುಟವು ಬೀಳಲು ಶೌರ್ಯದ ಧ್ವಜವನ್ನು ನಿಲ್ಲಿಸಬೇಕೆಂದೇ ಕೃಷ್ಣನ ಎದೆಯನ್ನು ಸೀಳಿಹೋಗುವ ಹಾಗೆ ಹೊಡೆದು, ಕೋಪವು ಅಧಿಕವಾಗುತ್ತಿರಲು ಅರ್ಜುನನ ಬಿಲ್ಲಿನ

ಹೆದೆಯನ್ನು ಕತ್ತರಿಸಿದನು ಕರ್ಣ.

ಬೆಳಗುವ ಸೊಡರ್ಗಳ ಬೆಳಗ ಗ್ಗಳಿಸುವವೋಲ್ ಪೋಪ ಪೊೞ್ತಿಳೊಳ್ ತೇಜಂ ಪ| ಜ್ಜಳಿಸೆ ತಱಿತಱಿಸೆ ತೊಳ ತೊಳ ತೊಳಗಿದನಸ್ತಮಯ ಸಮಯದೊಳ್ ದಿನಪಸುತಂ|| ೨೧೦ ||

ಪದ್ಯ-೨೧೦:ಪದವಿಭಾಗ-ಅರ್ಥ:ಬೆಳಗುವ ಸೊಡರ್ಗಳ ಬೆಳಗು ಅಗ್ಗಳಿಸುವವೋಲ್ (ಉರಿಯುವ ದೀಪಗಳ ಕಾಂತಿಯು ಆರಿಹೋಗುವ ಕಾಲದಲ್ಲಿ ಹೆಚ್ಚಾಗಿ ಜ್ವಲಿಸುವ ಹಾಗೆ) ಪೋಪ ಪೊತ್ತಿಳೊಳ್ ತೇಜಂ ಪಜ್ಜಳಿಸೆ (ಸೂರ್ಯಪುತ್ರನಾದ ಕರ್ಣನು- * ಮುಳುಗುವ (ಸಾಯುವ) ಕಾಲದಲ್ಲಿ

ತೇಜಸ್ಸು ಪ್ರಜ್ವಲಿಸಲು)
ತಟಿತಟಿಸೆ ತೊಳ
ತೊಳತೊಳಗಿದನು
ಅಸ್ತಮಯ ಸಮಯದೊಳ್
ದಿನಪಸುತಂ-* (ಮುಳುಗುವ
(ಸಾಯುವ) ಕಾಲದಲ್ಲಿ
ತೇಜಸ್ಸು ಪ್ರಜ್ವಲಿಸಲು
ತಳತಳನೆ ಪ್ರಕಾಶಿಸಿದನು.)
ಪದ್ಯ-೨೧೦:ಅರ್ಥ:ಉರಿ
ಯುವ ದೀಪಗಳ ಕಾಂತಿಯು
ಆರಿಹೋಗುವ ಕಾಲದಲ್ಲಿ

ಹೆಚ್ಚಾಗಿ ಜ್ವಲಿಸುವ ಹಾಗೆ ಸೂರ್ಯಪುತ್ರನಾದ ಕರ್ಣನು ಮುಳುಗುವ (ಸಾಯುವ) ಕಾಲದಲ್ಲಿ ತೇಜಸ್ಸು ಪ್ರಜ್ವಲಿಸಲು ತಳತಳನೆ ಪ್ರಕಾಶಿಸಿದನು.

ವ|| ಅಂತು ಕರ್ಣ ನಿಶಿತ ವಿಕರ್ಣಹತಿಯಿಂದಮಸುರಾಂತಕಂ ಕಟಿಯೆ ನೊಂದು-

ವಚನ:ಪದವಿಭಾಗ-

ಅರ್ಥ:ಅಂತು ಕರ್ಣ ನಿಶಿತ

ವಿಕರ್ಣಹತಿಯಿಂದಂ (ಹರಿತವಾದ ಬಾಣದ ಪೆಟ್ಟಿನಿಂದ) ಅಸುರಾಂತಕಂ ಕಟಿಿಯೆ (ಸಾಯುವಷ್ಟು) ನೊಂದು-

ವಚನ:ಅರ್ಥ: ವ|| ಹಾಗೆ ಕರ್ಣನ ಹರಿತವಾದ ಬಾಣದ ಪೆಟ್ಟಿನಿಂದ ಕೃಷ್ಣನು ಸಾಯುವಷ್ಟು ನೊಂದು-

ಕಂ|| ಕಸೆಯಂ ಬಿಟ್ಟುಱದಭಿಮಂ

ತ್ರಿಸಿ
ಚಕ್ರಮನಸುರವೈರಿಯಿಡುವಾ
ಗಳ್ ಬಾ|
ರಿಸಿ ಪೆಱತು ಗೊಣೆಯದಿಂದೇ
ಱಿಸಿ ಬಿಲ್ಲಂ
ತ್ರಿಭುವನಂಗಳಳ್ಳಾಡುವಿನಂ||
೨೧೧ ||

ಪದ್ಯ-೨೧೧:ಪದವಿಭಾಗ-
ಅರ್ಥ: ಕಸೆಯಂ ಬಿಟ್ಟು ಉಱದೆ ಅಭಿಮಂತ್ರಿಸಿ ಚಕ್ರಮನು

ಅಸುರವೈರಿಯಿಡುವಾಗಳ್
(ಚಾವುಟಿಯನ್ನು ಎಸೆದು
ಚಕ್ರಾಯುಧವನ್ನು ಬೇಗ
ಅಭಿಮಂತ್ರಿಸಿ ಕೃಷ್ಣನು
ಎಸೆಯುವಾಗ) ಬಾರಿಸಿ
(ಅರ್ಜುನನು ಅದನ್ನು-
ತಡೆದು) ಪೆಱತು
ಗೊಣೆಯದಿಂದೆ ಏಱಿಸಿ
ಬಿಲ್ಲಂ (ಬೇರೊಂದು
ಹೆದೆಯಿಂದ ಬಿಲ್ಲನ್ನು ಕಟ್ಟಿ)
ತ್ರಿಭುವನಂಗಳು

ಅಳ್ಳಾಡುವಿನಂ (ಮೂರುಲೋಕಗಳು ನಡುಗುವ ಹಾಗೆ)

ಪದ್ಯ-೨೧೧:ಅರ್ಥ: ಚಾವುಟಿಯನ್ನು ಎಸೆದು ಚಕ್ರಾಯುಧವನ್ನು ಬೇಗ ಅಭಿಮಂತ್ರಿಸಿ ಕೃಷ್ಣನು ಎಸೆಯುವಾಗ ಅರ್ಜುನನು ಅದನ್ನು ತಡೆದು ಬೇರೊಂದು ಹೆದೆಯಿಂದ ಬಿಲ್ಲನ್ನು ಕಟ್ಟಿ

ಮೂರುಲೋಕಗಳು

ನಡುಗುವ ಹಾಗೆ-

ವ||

ಮುನ್ನಮುಂದ್ರಕೀಲನಗೇಂದ್ರ

ದೊಳ್

ಪಶುಪತಿಯನಾರಾಧಿಸಿ

ಪಾಶುಪತಾಸ್ತ್ರಂ ಬಡೆದಂದು

ತೆಲ್ಲಟಿಯೆಂದು-

ವಚನ:ಪದವಿಭಾಗ-ಅರ್ಥ:

ಮುನ್ನಂ ಇಂದ್ರಕೀಲ

ನಗೇಂದ್ರದೊಳ್ (ಹಿಂದೆ

ಇಂದ್ರಕೀಲ ಪರ್ವತದಲ್ಲಿ)
ಪಶುಪತಿಯನು ಆರಾಧಿಸಿ
ಪಾಶುಪತಾಸ್ತ್ರಂ ಬಡೆದಂದು
(ಈಶ್ವರನನ್ನು ಪೂಜಿಸಿ
ಪಾಶುಪತಾಸ್ತ್ರವನ್ನು ಪಡೆದ
ದಿನ) ತೆಲ್ಲಟಿಯೆಂದು
(ಬಳುವಳಿಯೆಂದು, ಕೊಡಿಗೆ
ಎಂದು)-
ವಚನ:ಅರ್ಥ:ಹಿಂದೆ
ಇಂದ್ರಕೀಲ ಪರ್ವತದಲ್ಲಿ
ಈಶ್ವರನನ್ನು ಪೂಜಿಸಿ

ಪಾಶುಪತಾಸ್ತ್ರವನ್ನು ಪಡೆದ

ದಿನ ಬಳುವಳಿಯೆಂದು-

ಚಂ|| ಗಿರಿಜೆಯ ಮೆಚ್ಚಿ ಕೊಟ್ಟ

ನಿಶಿತಾಸ್ತ್ರಮನಂಜಲಿಕಾಸ್ತ್ರ

ಮಂ ಭಯಂ

ಕರತರಮಾಗೆ ಕೊಂಡು

ವಿಧಿಯಿಂದಭಿಮಂತ್ರಿಸಿ ಪೂಡೆ

ಬಿಲ್ಲೊಳು|

ವ್ವರೆ

ನಡುಗಿತ್ತಜಾಂಡಮೊಡೆದತ್ತು

ನೆಲಂ ಪಿಡುಗಿತ್ತು ಸಪ್ತಸಾ|

ಗರಮುಡುಗಿತ್ತು

ಸಾಹಸಮದೇಂ ಪಿರಿದೋ

ಕದನತ್ರಿಣೇತ್ರನಾ|| ೨೧೨

ಪದ್ಯ-೨೧೨:ಪದವಿಭಾಗ-ಅರ್ಥ:ಗಿರಿಜೆಯ ಮೆಚ್ಚಿ ಕೊಟ್ಟ ನಿಶಿತಾಸ್ತ್ರಮಂ ಅಂಜಲಿಕಾಸ್ತ್ರಮಂ (ಪಾರ್ವತಿಯು ಪ್ರೀತಿಯಿಂದ ಕೊಟ್ಟ ಹರಿತವಾದ ಅಂಜಿಲಿಕಾಸ್ತ್ರವನ್ನು) ಭಯಂಕರತರಮ್ ಆಗೆ

(ಭೀಕರವಾಗುವ ಹಾಗೆ)
ಕೊಂಡು ವಿಧಿಯಿಂದ
ಅಭಿಮಂತ್ರಿಸಿ ಪೂಡೆ
ಬಿಲ್ಲೊಳು (ಕೈಗೆ
ತೆಗೆದುಕೊಂಡು
ಶಾಸ್ತ್ರರೀತಿಯಿಂದ
ಅಭಿಮಂತ್ರಣ ಮಾಡಿ
-ಮಂತ್ರಾ ದೇವತೆಯನ್ನು
ಆಹ್ವಾನಿಸಿ, ಬಿಲ್ಲಿನಲ್ಲಿ
ಹೂಡಲು) ಉರ್ವರೆ
ನಡುಗಿತ್ತು ಅಜಾಂಡಂ

ಒಡೆದತ್ತು ನೆಲಂ ಪಿಡುಗಿತ್ತು
(ಭೂಮಿಯು ಕಂಪಿಸಿತು.
ಬ್ರಹ್ಮಾಂಡವು ಒಡೆಯಿತು,
ನೆಲವು ಸಿಡಿಯಿತು)
ಸಪ್ತಸಾಗರಂ ಉಡುಗಿತ್ತು
(ಏಳು ಸಮುದ್ರಗಳು
ಕುಗ್ಗಿದುವು) ಸಾಹಸಂ ಅದೇಂ
ಪಿರಿದೋ ಕದನತ್ರಿಣೇತ್ರನಾ
(ಕದನತ್ರಿಣೇತ್ರನಾದ
ಅರ್ಜುನನ ಸಾಹಸವು ಏನು

ಹಿರಿದಾದುದೊ;
ಅತಿಮಹತ್ತರವಾದುದು.)

ಪದ್ಯ-೨೧೨:ಅರ್ಥ:
ಪಾರ್ವತಿಯು ಪ್ರೀತಿಯಿಂದ ಕೊಟ್ಟ ಹರಿತವಾದ ಅಂಜಿಲಿಕಾಸ್ತ್ರವನ್ನು ಭೀಕರವಾಗುವ ಹಾಗೆ ಕೈಗೆ ತೆಗೆದುಕೊಂಡು ಶಾಸ್ತ್ರರೀತಿಯಿಂದ ಅಭಿಮಂತ್ರಣ ಮಾಡಿ (ಮಂತ್ರಾ ದೇವತೆಯನ್ನು

ಆಹ್ವಾನಿಸಿ) ಬಿಲ್ಲಿನಲ್ಲಿ
ಹೂಡಲು ಭೂಮಿಯು
ಕಂಪಿಸಿತು. ಬ್ರಹ್ಮಾಂಡವು
ಒಡೆಯಿತು, ನೆಲವು
ಸಿಡಿಯಿತು, ಏಳು
ಸಮುದ್ರಗಳು ಕುಗ್ಗಿದುವು.
ಕದನತ್ರಿಣೇತ್ರನಾದ
ಅರ್ಜುನನ ಸಾಹಸವು ಏನು
ಹಿರಿದಾದುದೊ;
ಅತಿಮಹತ್ತರವಾದುದು.

ವ||

ಆಗಳಖಿಳಭುವನಭವನಸಂ

ಹಾರಕಮಪ್ಪಂಲಿಕಾಸ್ತ್ರಮನ

ಮೋಘಾಸ್ತ್ರ ಧನಂಜಯನಾ

ಕರ್ಣಾಂತಂಬರಂ

ತೆಗೆದಾಕರ್ಣಾಂತಂ ಮಾಡಲ್

ಬಗೆದು ಕಂಧರಸಂಧಿಯಂ

ನಿಟ್ಟಿಸಿ-

ವಚನ:ಪದವಿಭಾಗ-

ಅರ್ಥ:ಆಗಳ್ ಅಖಿಳ

ಭುವನಭವನ

ಸಂಹಾರಕಮಪ್ಪ
ಅಂಜಲಿಕಾಸ್ತ್ರಮಂ (ಆಗ
ಸಮಸ್ತಲೋಕವೆಂಬ
ಆಶ್ರಯವನ್ನು ನಾಶಮಾಡುವ
ಅಂಜಲಿಕಾಸ್ತ್ರವನ್ನು)
ಅಮೋಘಾಸ್ತ್ರ ಧನಂಜಯನು
ಕರ್ಣಾಂತಂಬರಂ ತೆಗೆದು
(ಅಮೋಘಾಸ್ತ್ರ
ಧನಂಜಯನಾದ ಅರ್ಜುನನು
ಕರ್ಣನನ್ನು ಕೊಲ್ಲಲು
ಯೋಚಿಸಿ ಕಿವಿಯವರೆಗೂ

ಸೆಳೆದು) ಆ ಕರ್ಣ ಅಂತಂ
ಮಾಡಲ್ ಬಗೆದು (ಆ
ಕರ್ಣನನ್ನು ಕೊಲ್ಲಲು
ಯೋಚಿಸಿ) ಕಂಧರ
ಸಂಧಿಯಂ ನಿಟ್ಟಿಸಿ (ಕತ್ತಿನ
ಸಂದಿಯನ್ನು ನಿರೀಕ್ಷಿಸಿ-)-
ವಚನ:ಅರ್ಥ: ಆಗ
ಸಮಸ್ತಲೋಕವೆಂಬ
ಆಶ್ರಯವನ್ನು ನಾಶಮಾಡುವ
ಅಂಜಲಿಕಾಸ್ತ್ರವನ್ನು
ಅಮೋಘಾಸ್ತ್ರ

ಧನಂಜಯನಾದ ಅರ್ಜುನನು ಆ ಕರ್ಣನನ್ನು ಕೊಲ್ಲಲು ಯೋಚಿಸಿ ಕಿವಿಯವರೆಗೂ ಸೆಳೆದು ಕರ್ಣನನ್ನು ಕೊಲ್ಲಲು ಯೋಚಿಸಿ, ಕತ್ತಿನ ಸಂದಿಯನ್ನು ನಿರೀಕ್ಷಿಸಿ-

ಮ||ಸ್ರ|| ಮುಳಿದೆಚ್ಚಾಗಳ್ ಮಹೋಗ್ರಪ್ರಳಯಶಿಖಿ ಶಿಖಾನೀಕಮಂ ವಿಸ್ಫುಲಿಂಗಂ ಗಳುಮಂ ಬೀಱುತ್ತುಮೌರ್ವಜ್ವಳನರುಚಿ

ಯುಮಂ ತಾನೆ

ತೋಱುತ್ತುಮಾಟಂ|

ದಳುರುತ್ತುಂ ಬಂದು

ಕೊಂಡಾಗಳೆ ಗಗನತಳಂ

ಪಾಯ್ದ ಕೆನ್ನತ್ತರಿಂದು

ಚ್ಚಳಿಸುತ್ತಿರ್ಪನ್ನೆಗಂ ಬಿೞ್ದುದು

ಭರದೆ ಸಿಡಿಲ್ದತ್ತ

ಕರ್ಣೋತ್ತಮಾಂಗಂ|| ೨೧೩

ಪದ್ಯ-೨೧೩:ಪದವಿಭಾಗ-

ಅರ್ಥ:ಮುಳಿದು ಎಚ್ಚಾಗಳ್ (ಕೋಪದಿಂದ ಹೊಡೆದಾಗ,)

ಮಹಾ ಉಗ್ರ ಪ್ರಳಯಶಿಖಿ
ಶಿಖಾನೀಕಮಂ
(ಮಹಾಭಯಂಕರವಾದ
ಪ್ರಳಯಕಾಲದ ಅಗ್ನಿಯ
ಜ್ವಾಲಾಸಮೂಹವನ್ನೂ)
ವಿಸ್ಫುಲಿಂಗಂಗಳುಮಂ
(ಕಿಡಿಗಳನ್ನೂ) ಬೀಱುತ್ತುಂ
ಔರ್ವಜ್ವಳನ ಉ-
ರುಚಿಯುಮಂ (ಕೆದರುತ್ತ
ಬಡಬಾಗ್ನಿಯು ಕಾಂತಿಯನ್ನು)
ತಾನೆ ತೋಱುತ್ತುಂ ಆಟಂದು

ಉಳುರುತ್ತುಂ ಬಂದು
ಕೊಂಡಾಗಳೆ (ತಾನೇ
ಪ್ರದರ್ಶಿಸುತ್ತ ಮೇಲೆಬಿದ್ದು
ಉರುಳುತ್ತ/ ಹರಡುತ್ತ ಬಂದು
ತಗಲಿದಾಗ) ಗಗನತಳಂ
ಪಾಯ್ದ ಕೆನ್ನತ್ತರಿಂದ
ಉಚ್ಚಳಿಸುತ್ತಿರ್ಪ ಅನ್ನೆಗಂ
(ಚಿಮ್ಮಿದ ಕೆಂಪುರಕ್ತವು
ಆಕಾಶಪ್ರದೇಶವನ್ನೂ ದಾಟಿ
ಮೇಲಕ್ಕೆ ಹಾರುತ್ತಿರಲು,
ಆನಂತರ) ಬಿಬ್ದುದು ಭರದೆ

ಸಿಡಿಲ್ದು ಅತ್ತ
ಕರ್ಣೋತ್ತಮಾಂಗಂ (ಕರ್ಣನ
ತಲೆಯು ರಭಸದಿಂದ ಸಿಡಿದು
ಆ ಕಡೆ ಬಿದ್ದಿತು.)

ಪದ್ಯ-೨೧೩:ಅರ್ಥ:
ಕೋಪದಿಂದ ಹೊಡೆದಾಗ,
ಮಹಾಭಯಂಕರವಾದ
ಪ್ರಳಯಕಾಲದ ಅಗ್ನಿಯ
ಜ್ವಾಲಾಸಮೂಹವನ್ನೂ
ಕಿಡಿಗಳನ್ನೂ ಕೆದರುತ್ತ
ಬಡಬಾಗ್ನಿಯು ಕಾಂತಿಯನ್ನು

ತಾನೇ ಪ್ರದರ್ಶಿಸುತ್ತ
ಮೇಲೆಬಿದ್ದು ಉರುಳುತ್ತ/
ಹರಡುತ್ತ ಬಂದು ತಗಲಿದಾಗ
ಚಿಮ್ಮಿದ ಕೆಂಪುರಕ್ತವು
ಆಕಾಶಪ್ರದೇಶವನ್ನೂ ದಾಟಿ
ಮೇಲಕ್ಕೆ ಹಾರುತ್ತಿರಲು
ಕರ್ಣನ ತಲೆಯು ರಭಸದಿಂದ
ಸಿಡಿದು ಆ ಕಡೆ ಬಿದ್ದಿತು.

ವ|| ಅಂತು ತಲೆ ನೆಲೆದೊಳುರುಳ್ದೊಡೆ ಲೋಕಕ್ಕೆಲ್ಲಮಗುಂದಲೆಯಾದ

ಬೀರಮೆಸೆಯೆ
ಪ್ರಾಣಮೊಡಲಿಂದಂ
ತೊಲಗೆಯುಂ ತೊಲಗದ
ನನ್ನಿಯನುದಾಹರಿಸುವಂತೆ
ಪತ್ತೆಂಟು ಕೋಲ
ನೆಚ್ಚಟ್ಟೆಯುಂ
ನೆಲದೊಳಾಚಂದ್ರಸ್ಥಾಯಿಯಾ
ಗೆ ಚತುರ್ದಶಭುವನಂಗಳಂ
ಪಸರಿಸಿ ನಿಂದೊಡೆಸೆ
ದುದಾಹರಣಮೊಳ್ಪಿನುದಾಹರ
ಣಮುಮಾಗೆ ಗುಣಾರ್ಣವನ

ಶರಪರಿಣತಿಯಿಂದೆ ಕುಲಶೈಲಂ ಬೀೞ್ವಂತೆ ನೆಲನದಿರೆ ಬೀೞಗಳ್-

ವಚನ:ಪದವಿಭಾಗ-

ಅರ್ಥ:ಅಂತು ತಲೆ ನೆಲೆದೊಳು ಉರುಳ್ದೊಡೆ ಲೋಕಕ್ಕೆಲ್ಲಂ ಗುಂದಲೆಯಾದ ಬೀರಮ್ ಎಸೆಯೆ (ಹಾಗೆ ತಲೆಯು ಭೂಮಿಯಲ್ಲಿ ಉರುಳಲು ಲೋಕಕ್ಕೆಲ್ಲ ಅತಿಶಯವಾದ ವೀರತ್ವವು

ಪ್ರಕಾಶಿಸಲು) ಪ್ರಾಣಂ
ಒಡಲಿಂದಂ ತೊಲಗೆಯುಂ
(ಪ್ರಾಣವು ಶರೀರದಿಂದ
ಹೋದರೂ) ತೊಲಗದ
ನನ್ನಿಯನು
ಉದಾಹರಿಸುವಂತೆ (ಸತ್ಯವು
ಮಾತ್ರ ಹೋಗದಿರುವುದನ್ನು
ಉದಾಹರಿಸುವಂತೆ) ಪತ್ತೆಂಟು
ಕೋಲನು ಎಚ್ಚು ಅಟ್ಟೆಯುಂ
(ಹತ್ತೆಂಟು ಬಾಣಗಳನ್ನು
ಹೊಡೆದು ಅವನ ಮುಂಡವು)

ನೆಲದೊಳು ಆಚಂದ್ರಸ್ಥಾಯಿಂ
ಆಗೆ (ಚಂದ್ರನಿರುವವರೆಗೂ
ನಿಲ್ಲುವಂತೆ)
ಚತುರ್ದಶಭುವನಂಗಳಂ
ಪಸರಿಸಿ (ಹದಿನಾಲ್ಕು
ಲೋಕಗಳನ್ನೂ ಆವರಿಸಿ)
ನಿಂದೊಡೆ (ಅಟ್ಟೆಯುಂ -
ಅವನ ಮುಂಡವು ದೃಢವಾಗಿ
ನಿಂತಿತು.ನಿಂತು) ಎಸೆದುದು ಆ
ಹರಣಂ ಒಳ್ಪಿನ
ಉದಾಹರಣಮುಂ ಆಗೆ

(ಜೀವ ಅಪಹರಣವಾದುದು
ಒಳ್ಳೆಯತನದ
ಮಾರ್ಗದರ್ಶನವಾಗಲು
ಶೋಭಿಸಿತು) ಗುಣಾರ್ಣವನ
ಶರಪರಿಣತಿಯಿಂದೆ
(ಅರ್ಜುನನ
ಬಾಣಕೌಶಲ್ಯದಿಂದ)
ಕುಲಶೈಲಂ ಬೀೞ್ವಂತೆ ನೆಲನು
ಅದಿರೆ ಬಿೞ್ದಾಗಳ್
(ಮುಂಡವೂ ಕುಲಪರ್ವತವು

ಬೀಳುವ ಹಾಗೆಭೂಮಿಯು ಕಂಪಿಸುವ ಹಾಗೆ ಬಿದ್ದಿತು.)- **ವಚನ:ಅರ್ಥ**: ಹಾಗೆ ತಲೆಯು ಭೂಮಿಯಲ್ಲಿ ಉರುಳಲು ಲೋಕಕ್ಕೆಲ್ಲ ಅತಿಶಯವಾದ ವೀರತ್ವವು ಪ್ರಕಾಶಿಸಲು, ಪ್ರಾಣವು ಶರೀರದಿಂದ ಹೋದರೂ, ಸತ್ಯವು ಮಾತ್ರ ಹೋಗದಿರುವುದನ್ನು ಉದಾಹರಿಸುವಂತೆ ಅವನ

ಕೀರ್ತಿಯು ಹದಿನಾಲ್ಕು
ಲೋಕಗಳನ್ನೂ ಆವರಿಸಿ
ಚಂದ್ರನಿರುವವರೆಗೂ
ನಿಲ್ಲುವಂತೆ ಅವನ ಮುಂಡವು
ಹತ್ತೆಂಟು ಬಾಣಗಳನ್ನು
ಹೊಡೆದು ದೃಢವಾಗಿ ನಿಂತಿತು.
ಹಾಗೆ ದೇಹವು ನಿಂತು, ಜೀವ
ಅಪಹರಣವಾದುದು
ಒಳ್ಳೆಯತನದ
ಮಾರ್ಗದರ್ಶನವಾಗಲು
ಶೋಭಿಸಿತು. ಅರ್ಜುನನ

ಬಾಣಕೌಶಲ್ಯದಿಂದ
ಮುಂಡವ್ರೂ ಕುಲಪರ್ವತವು
ಬೀಳುವ ಹಾಗೆಭೂಮಿಯು
ಕಂಪಿಸುವ ಹಾಗೆ ಬಿದ್ದಿತು.

ಕಂ|| ಚಾಗದ ನನ್ನಿಯ ಕಲಿತನ
ದಾಗರಮೆನೆ ನೆಗಱ್ದ
ಕರ್ಣನೊಡಲಿಂದೆಂತುಂ|
ಪೋಗಲ್ಕಱಿಯದೆ ಸಿರಿ ಕರ
ಮಾಗಳ್ ಕರಿಕರ್ಣತಾಳ
ಸಂಚಳೆಯಾದಳ್|| ೨೧೪ ||

ಪದ್ಯ-00:ಪದವಿಭಾಗ-ಅರ್ಥ:ಚಾಗದ ನನ್ನಿಯ ಕಲಿತನದಾಗರಂ ಎನೆ (ತ್ಯಾಗ ಸತ್ಯ ಪರಾಕ್ರಮಗಳಿಗೆ ಆವಾಸಸ್ಥಾನವೆನ್ನುವಂತೆ) ನೆಗೞ್ದ ಕರ್ಣನ ಒಡಲಿಂದ (ಪ್ರಸಿದ್ಧನಾದ ಕರ್ಣನ ಶರೀರದಿಂದ) ಎಂತುಂ ಪೋಗಲ್ಕೆ ಅಱಿಯದೆ ಸಿರಿ (ಹೇಗೂ ಬಿಟ್ಟು ಹೋಗುವುದಕ್ಕೆ ತಿಳಿಯದೆ

ಲಕ್ಷ್ಮಿಯು) ಕರಂ ಆಗಳ್
ಕರಿಕರ್ಣತಾಳ (ವಿಶೇಷವಾಗಿ
ಆಗ ಆನೆಯ ಚಲಿಸುತ್ತಿರುವ
ಕಿವಿಗಳಂತೆ)
ಸಂಚಳೆಯಾದಳ್
(ಚಂಚಲೆಯಾದಳು)
ಪದ್ಯ-00:ಅರ್ಥ:ತ್ಯಾಗ ಸತ್ಯ
ಪರಾಕ್ರಮಗಳಿಗೆ
ಆವಾಸಸ್ಥಾನವೆನ್ನುವಂತೆ
ಪ್ರಸಿದ್ಧನಾದ ಕರ್ಣನ
ಶರೀರದಿಂದ ಹೇಗೂ ಬಿಟ್ಟು

ಹೋಗುವುದಕ್ಕೆ ತಿಳಿಯದೆ ಲಕ್ಷ್ಮಿಯು ಆಗ ಆನೆಯ ಚಲಿಸುತ್ತಿರುವ ಕಿವಿಗಳಂತೆ ಚಂಚಲೆಯಾದಳು.

ಕಂ||ಕುಡುಮಿಂಚಿನ

ಸಿಡಿಲುರುಳಿಯೊ

ಳೊಡಂಬಡಂ ಪಡೆಯೆ

ಕರ್ಣನೊಡಲಿಂದಾಗಳ್|

ನಡೆ ನೋಡೆ ನೋಡೆ

ದಿನಪನೊ

ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ|| ೨೧೫ ||

ಪದ್ಯ-೨೧೫:ಪದವಿಭಾಗ-ಅರ್ಥ:ಕುಡುಮಿಂಚಿನ ಸಿಡಿಲ ಉರುಳಿಯೊಳು ಒಡಂಬಡಂ ಪಡೆಯೆ (ವಕ್ರಮಿಂಚಿನಿಂದ ಕೂಡಿದ ಸಿಡಿಲಿನ ಉಂಡೆಯ ತೇಜಸ್ಸಿಗೆ ಒಪ್ಪುವ ರೂಪು ಪಡೆದು) ಕರ್ಣನೊಡಲಿಂದಾಗಳ್ ನಡೆ

ನೋಡೆ ನೋಡೆ (ಆಕಾರವೊಂದು ನೋಡುತ್ತಿರುವ ಹಾಗೆಯೇ ಕರ್ಣನ ಶರೀರದಿಂದ ಹೊರಟು) ದಿನಪನೊಳು ಒಡಗೂಡಿದುದು ಒಂದು ಮೂರ್ತಿ ತೇಜೋರೂಪಂ (ಸೂರ್ಯನಲ್ಲಿ ಐಕ್ಯವಾಯಿತು.)

ಪದ್ಯ-೨೧೫:ಅರ್ಥ:

ವಕ್ರಮಿಂಚಿನಿಂದ ಕೂಡಿದ

ಸಿಡಿಲಿನ ಉಂಡೆಯ ತೇಜಸ್ಸಿನ ರೂಪವನ್ನು ಪಡೆದು, ಆಕಾರವೊಂದು ನೋಡುತ್ತಿರುವ ಹಾಗೆಯೇ ಕರ್ಣನ ಶರೀರದಿಂದ (ಹೊರಟು) ಸೂರ್ಯನಲ್ಲಿ ಐಕ್ಯವಾಯಿತು.

ಪಿಡಿದನೆ ಪುರಿಗಣೆಯನೆರ
ಬ್ಬುಡಿದನೆ ಬಳ್ಕಿದನೆ ತಾನೆ
ತನ್ನನೆ ಚಲಮಂ|
ಪಿಡಿದಟಿದನೆಂದು ದೇವರ

ಪಡೆ ಗಡಣದೆ

ಪೊಗಟ್ಟುದಿನತನೂಜನ

ಗಂಡಂ|| ೨೧೬ ||

ಪದ್ಯ-೨೧೬:ಪದವಿಭಾಗ-

ಅರ್ಥ:ಪಿಡಿದನೆ

ಪುರಿಗಣೆಯನು

(‘ದಿವ್ಯಾಸ್ತ್ರವನ್ನು ಹಿಡಿದನೆ?’)

ಎರಟ್ನುಡಿದನೆ ಬಳ್ಕಿದನೆ

(ಎರಡು ಮಾತನ್ನಾಡಿದನೇ? /

ಸುಳ್ಳು ಮಾತನ್ನಾಡಿದನೆ?)

ತಾನೆ ತನ್ನನೆ ಚಲಮಂ ಪಿಡಿದು

ಅೞಿದನೆಂದು - ಅಳಿದನು ಎಂದು(ತಾನೆ ತನ್ನ ಹಟವನ್ನು ಬಿಗಿಯಾಗಿ ಹಿಡಿದು ಸತ್ತನು’ ಎಂದು) ದೇವರಪಡೆ ಗಡಣದೆ ಪೊಗೞ್ದುದು (ದೇವತೆಗಳ ಸಮೂಹವು ಕರ್ಣನ ಪೌರಷವನ್ನು ಹೊಗಳಿತು.) ಇನತನೂಜನ ಗಂಡಂ (ಕರ್ಣನ ಪೌರಷವನ್ನು)

ಪದ್ಯ-೨೧೬:ಅರ್ಥ: ಕರ್ಣನು, ‘ದಿವ್ಯಾಸ್ತ್ರವನ್ನು ಹಿಡಿದನೆ?’

ಎರಡು ಮಾತನ್ನಾಡಿದನೇ?
ಭಯಪಟ್ಟನೆ? ತಾನೆ ತನ್ನ
ಹಟವನ್ನು ಬಿಗಿಯಾಗಿ ಹಿಡಿದು
ಸತ್ತನು’ ಎಂದು ದೇವತೆಗಳ
ಸಮೂಹವು ಕರ್ಣನ
ಪೌರಷವನ್ನು ಹೊಗಳಿತು.

ಚಂ|| ನೆನೆಯದಿರಣ್ಣ
ಭಾರತದೊಳಿಂ
ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ
ಕರ್ಣನೊಳಾರ್ ದೊರೆ

ಕರ್ಣನೇಱು ಕ|

ರ್ಣನ ಕಡು ನನ್ನಿ

ಕರ್ಣನಳವಂಕದ ಕರ್ಣನ

ಚಾಗಮೆಂದು ಕ

ರ್ಣನ ಪಡೆಮಾತಿನೊಳ್

ಪುದಿದು ಕರ್ಣರಸಾಯನಮಲ್ತೆ

ಭಾರತಂ|| ೨೧೭ ||

ಪದ್ಯ-೨೧೭:ಪದವಿಭಾಗ-

ಅರ್ಥ:ನೆನೆಯದಿರಣ್ಣಾ

ಭಾರತದೊಳಿಂ ಪೆಱರ್

ಆರುಮನು (ಅಣ್ಣಾ,

ಭಾರತದಲ್ಲಿ ಬೇರೆ ಯಾರನ್ನೂ ನೆನೆಯಬೇಡ;) ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ (ಒಂದೇ ಮನಸ್ಸಿನಿಂದ/ ಮನಃಪೂರ್ವಕವಾಗಿ ನೆನೆಯುವುದಾದರೆ ಕರ್ಣನನ್ನು ಜ್ಞಾಪಿಸಿಕೊಳ್ಳಪ್ಪ;) ಕರ್ಣನೊಳು ಆರ್ ದೊರೆ (ಕರ್ಣನಿಗೆ ಯಾರು ಸಮಾನ?) ಕರ್ಣನ ಏಱು (ಕರ್ಣನ ಪರಾಕ್ರಮ, (ಯುದ್ಧ)) ಕರ್ಣನ

ಕಡು ನನ್ನಿ (ಕರ್ಣನ
ಕಠಿಣವಾದ ಸತ್ಯ,) ಕರ್ಣನ
ಅಳವು (ಕರ್ಣನ ಶಕ್ತಿ,)
ಅಂಕದ ಕರ್ಣನ ಚಾಗಮ್
ಎಂದು ಕರ್ಣನ
ಪಡೆಮಾತಿನೊಳ್ ಪುದಿದು
(ಪ್ರಸಿದ್ಧವಾದ ಕರ್ಣನ ತ್ಯಾಗ
ಎಂದು ಕರ್ಣನ
ಆಡುಮಾತಿನಿಂದಲೇ
-ದಾನಶೂರ ಕರ್ಣ- ಎಂದು
ತುಂಬಿ) ಕರ್ಣರಸಾಯನಂ

ಅಲ್ತೆ ಭಾರತಂ (ಭಾರತವು ಕರ್ಣ ರಸಾಯನವಾಗಿದೆಯಲ್ಲವೇ?) (ಕರ್ಣನ ಪಾತ್ರದ ರಸಾಯನ, ಸೊಗಸು; ಕರ್ಣಕ್ಕೆ- ಕಿವಿಗೆ ರಸಾಯನದಂತೆ ಇಂಪು, ಹಿತ.)

ಪದ್ಯ-೨೧೭:ಅರ್ಥ: ಅಣ್ಣಾ, ಭಾರತದಲ್ಲಿ ಬೇರೆ ಯಾರನ್ನೂ ನೆನೆಯಬೇಡ; ಒಂದೇ ಮನಸ್ಸಿನಿಂದ/

ಮನಃಪೂರ್ವಕವಾಗಿ
ನೆನೆಯುವುದಾದರೆ
ಕರ್ಣನನ್ನು ಜ್ಞಾಪಿಸಿಕೊಳ್ಳಪ್ಪ;
ಕರ್ಣನಿಗೆ ಯಾರು ಸಮಾನ?
ಕರ್ಣನ ಪರಾಕ್ರಮ, (ಯುದ್ಧ),
ಕರ್ಣನ ಕಠಿಣವಾದ ಸತ್ಯ,
ಕರ್ಣನ ಶಕ್ತಿ, ಪ್ರಸಿದ್ಧವಾದ
ಕರ್ಣನ ತ್ಯಾಗ ಎಂದು ಕರ್ಣನ
ಆಡುಮಾತಿನಿಂದಲೇ ತುಂಬಿ
ಭಾರತವು

ಕರ್ಣರಸಾಯನವಾಗಿದೆಯಲ್ಲವೇ?

- **ಟಿಪ್ಪಣಿ. ೧**:: ಪಂಪನು ಕರ್ಣನಿಗೆ ಕೊಟ್ಟ ಪ್ರಾಮುಖ್ಯತೆಯನ್ನು ಕೆಲವರು ಒಪ್ಪದಿರಬಹುದು. ಆದರೆ ಪಂಪನ ಕಾವ್ಯದ ಕರ್ಣಪಾತ್ರದ ಸೃಷ್ಟಿಯಲ್ಲಿ ಅವನಲ್ಲಿ ಹೆಚ್ಚು ದೋಷವಿಲ್ಲ. ಕರ್ಣನೇ ಹೇಳುವಂತೆ ವ್ಯಕ್ತಿ ದೈವದ ಆಟದ ವಸ್ತು.

ಅವನದು ದುರ್ದೈವ. ಅದನ್ನು
ಅವನು ಒಪ್ಪಿಕೊಂಡಿದ್ದಾನೆ.
ಹಾಗಾಗಿ ಕೃಷ್ಣನೊಡನೆ ತನ್ನ
ಹುಟ್ಟಿನ ವಿಷಯವನ್ನು
ಪಾಂಡವರಿಗೆ
ತಿಳಿಸಬಾರದೆಂದು
ಹೇಳಿರುತ್ತಾನೆ. ಪಂಪನು ತನ್ನ
ದೊರೆಗೆ ಹೋಲಿಸಿದ
ಅರ್ಜುನನ್ನೂ ಬಿಟ್ಟು
ದುರಂತನಾಯಕ ಕರ್ಣನಬಗ್ಗೆ
ಹೆಚ್ಚು ಅನುಕಂಪ

ಹೊಂದಿರುವಂತೆ ತೋರುವುದು.

- **ಟಿಪ್ಪಣಿ -೨**::ಇಂಗ್ಲಿಷ್ ಕಾವ್ಯಗಳಲ್ಲಿ ಪ್ರೀತಿ ಪಾತ್ರರು ಮರಣಹೊಂದಿದಾಗ ಅವರ ಬಗೆಗೆ 'ಎಲಿಜಿ' ಎಂಬ 'ಮೃತರ ಬಗೆಗೆ ಶೋಕಗೀತೆ' - 'ಚರಮಗೀತೆ'ಯ ನ್ನು ರಚಿಸುವ ಬಗೆ ಇದೆ. ಆ ವಿಭಾಗಕ್ಕೆ ಸೇರಬಹುದಾದ **ಉತ್ತಮ ಚರಮಗೀತೆಯನ್ನು**

(ಎಲಿಜಿಯನ್ನು) ಪಂಪ ಕರ್ಣನ ಬಗ್ಗೆ ರಚಿಸಿದ್ದಾನೆ ಎನ್ನಬಹುದು.

ವ|| ಅಂತು ರಿಪುಕುರಂಗಕಂಠೀರವನ ಕೆಯ್ಯ್ವೊಳ್ ವೈಕರ್ತನಂ ಸಾಯಲೊಡಂ ಮೇಲುದಂ ಬೀಸಿ ಬೊಬ್ಬಿಱಿದಾರ್ವ ಪಾಂಡವಪತಾಕಿನಿಯೊಳ್-

ವಚನ:ಪದವಿಭಾಗ-

ಅರ್ಥ:ಅಂತು ರಿಪುಕುರಂಗ

ಕಂಠೀರವನ ಕೆಯ್ಯೊಳ್ (ಹಾಗೆ
ಶತ್ರುಗಳೆಂಬ ಹುಲ್ಲೆಗಳಿಗೆ
ಸಿಂಹನಾಗಿರುವ ಅರ್ಜುನನ
ಕೈಯಲ್ಲಿ) ವೈಕರ್ತನಂ
ಸಾಯಲು (ಕರ್ಣನು
ಸಾಯಲು) ಒಡಂ ಮೇಲುದಂ
ಬೀಸಿ ಬೊಬ್ಬಿಱಿದು ಆರ್ವ
ಪಾಂಡವ ಪತಾಕಿನಿಯೊಳ್
(ಕೂಡಲೆ ಉತ್ತರೀಯವನ್ನು
ಬೀಸಿ
(ಸಂತೋಷಸೂಚಕವಾಗಿ)

ಬೊಬ್ಬಿರಿದು ಗರ್ಜಿಸುವ ಪಾಂಡವಸೈನ್ಯವು ಜಯಶಬ್ದಮಾಡಿತು.)-

ವಚನ:ಅರ್ಥ:ಹಾಗೆ ರಿಪುಕುರಂಗಕಂಠೀರವನಾದ ಅರ್ಜುನನ ಕಯ್ಯ್ಯಲ್ಲಿ ಕರ್ಣನು ಸಾಯಲು ಕೂಡಲೆ ಉತ್ತರೀಯವನ್ನು ಬೀಸಿ (ಸಂತೋಷಸೂಚಕವಾಗಿ) ಬೊಬ್ಬಿರಿದು ಗರ್ಜಿಸುವ

ಪಾಂಡವಸೈನ್ಯವು ಜಯಶಬ್ದಮಾಡಿತು.

ಕಂ|| ಬದ್ದವಣಾದ ಪರೆಗಳ್ ಕಿವಿ ಸದ್ದಂಗಿಡೆ ಮೊೞಗೆ ದೇವದುಂದುಭಿರವದೊಂ| ದುದ್ದಾನಿ ನೆಗೞೆ ಮುಗುಳಲ ರೊದ್ದೆ ಕರಂ ಸಿದ್ಧಮಾದುದಂಬರತಲದೊಳ್ ||೨೧೮ ||

ಪದ್ಯ-೨೧೮:ಪದವಿಭಾಗ-ಅರ್ಥ:ಬದ್ದವಣಾದ ಪರೆಗಳ್

ಕಿವಿ ಸದ್ದಂಗಿಡೆ ಮೊೞಗೆ
(ಮಂಗಳವಾದ್ಯಗಳು
ಭೋರ್ಗರೆದುವು.
ಕಿವಿಕಿವುಡಾಗುವಂತೆ
ಜಯಭೇರಿಗಳು
ಮೊಳಗಿದುವು.) ದೇವ
ದುಂದುಭಿ ರವದ ಒಂದು
ಉದ್ದಾನಿ ನೆಗೞ್ದೆ
(ದೇವದುಂದುಭಿಯ ಒಂದು
ಅತಿಶಯ ಉಂಟಾಯಿತು.)
ಮುಗುಳ ಅಲರ್ ಒದ್ದೆ ಕರಂ

ಸಿದ್ಧಮಾದುದು
ಅಂಬರತಲದೊಳ್
(ಆಕಾಶದಲ್ಲಿ ಪುಷ್ಪವೃಷ್ಟಿಗೆ
ಹೂವಿನ ಮೊಗ್ಗುಗಳು
ಸಿದ್ಧವಾದವು.)
ಪದ್ಯ-೨೧೮:ಅರ್ಥ:
ಮಂಗಳವಾದ್ಯಗಳು
ಭೋರ್ಗರೆದುವು.
ಕಿವಿಕಿವುಡಾಗುವಂತೆ
ಜಯಭೇರಿಗಳು
ಮೊಳಗಿದುವು.

ದೇವದುಂದುಭಿಯ ಒಂದು ಅತಿಶಯ ಉಂಟಾಯಿತು. ಆಕಾಶದಲ್ಲಿ ಪುಷ್ಪವೃಷ್ಟಿಗೆ ಹೂವಿನ ಮೊಗ್ಗುಗಳು ಸಿದ್ಧವಾದವು.

ಚಂ|| ಒದವಿದಲಂಪು ಕಣ್ಣೆವೆ ಕರುಳ್
ತನಗೆಂಬುದನುಂಟುಮಾಡೆ
ನೋ
ಡಿದುದರೆ
ಕಣ್ಗಳಟ್ಟಿಮೆವಡುತ್ತಿರೆ ಪೋ

ಪಸವ್ರೋಡಿತೆಂದು ನೀ

ರದಪಥದೊಳ್ ತಗುಳ್ದರಿಗನಂ

ಪೊಗೞ್ದಾಡಿದನಂದು ದಂಡಕಾ

ಷ್ಠದ ತುದಿಯೊಳ್

ಪಳಂಚಲೆಯೆ ಕೋವಣವಂ

ಗುಡಿಗಟ್ಟಿ ನಾರದಂ|| ೨೧೯

ಪದ್ಯ-೨೧೯:ಪದವಿಭಾಗ-

ಅರ್ಥ:ಒದವಿದ ಅಲಂಪು

(ಸಮೃದ್ಧಿಯಾದ ಸಂತಸವು,)

ಕಣ್ಣೆವೆ ಕರುಳ್

ತನಗೆಂಬುದನುಂಟುಮಾಡೆ

(ತನಗೆ ಕಣ್ಣೂ ಕರುಳೂ ಇದೆ
ಎಂಬ ಭಾವವನ್ನುಂಟುಮಾಡಿ
) ನೋಡಿದುದರೆ (ಬಹಳ
ಕಾಲದಿಂದ ನೋಡಿದ್ದಲ್ಲಿಯೇ)
ಕಣ್ಗಳು ಅಟ್ಕಿಮೆವಡುತ್ತಿರೆ
(ಕಣ್ಣುಗಳು ಅಜೀರ್ಣವನ್ನು
ಹೊಂದಿರಲು, ನೋಡಿ
ತೃಪ್ತಿಪಟ್ಟು, ಹೆಚ್ಚಾಗಿರಲು,)
ಪೋ ಪಸವು ಓಡಿತು ಎಂದು
(ಹೋಗು, ಸಾಕಿನ್ನು ಪಸವು/
ಬರವು ಹೋಯಿತು ಎಂದು)

ನೀರದಪಥದೊಳ್ ತಗುಳ್ದು
(ಅರ್ಜುನನ್ನು ಅನುಸರಿಸಿ/
ಕುರಿತು) ಅರಿಗನಂ ಪೊಗಳ್ದು
(ಹೊಗಳಿ) ಆಡಿದನು ಅಂದು
(ಆಕಾಶದಲ್ಲಿ ಅರ್ಜುನನನ್ನು
ಕುರಿತು ಹೊಗಳುತ್ತ ಅಂದು
ಹೊಗಳಿ ಕುಣಿದಾಡಿದನು.
ಯಾರೆಂದರೆ-) ದಂಡಕಾಷ್ಠದ
ತುದಿಯೊಳ್ ಪಳಂಚಿ
(ಸೇರಿಸಿಕೊಂಡು) ಅಲೆಯೆ
(ಅಲುಗಿಸುತ್ತ) ಕೋವಣಾವಂ

(ಕೌಪೀನವನ್ನು) ಗುಡಿಗಟ್ಟಿ ನಾರದಂ (ತನ್ನ ದಂಡದಂತಿರುವ ಕೋಲಿನ ತುದಿಗೆ ಕೋಪೀನವನ್ನು ಸೇರಿಸಿಕೊಂಡು ಬಾವುಟದಂತೆ ಅಲುಗಿಸುತ್ತ ನಾರದನು ಹೊಗಳಿ ಕುಣಿದಾಡಿದನು.)

ಪದ್ಯ-೨೧೯:ಅರ್ಥ:

ಕರ್ಣಾರ್ಜುನರ ಕಾಳಗವನ್ನು ನೋಡಿ, ಸಮೃದ್ಧಿಯಾದ ಸಂತಸವು, ತನಗೆ ಕಣ್ಣೂ

ಕರುಳೂ ಇದೆ ಎಂಬ
ಭಾವವನ್ನುಂಟುಮಾಡಿ ಬಹಳ
ಕಾಲದಿಂದ ನೋಡಿದ್ದಲ್ಲಿಯೇ
ನನ್ನ ಕಣ್ಣುಗಳು
ಅಜೀರ್ಣವನ್ನು ಹೊಂದಿರಲು,
ನೋಡಿ ತೃಪ್ತಿಪಟ್ಟು ಹೆಚ್ಚಾಗಿ,
ಹೋಗು, ಸಾಕಿನ್ನು ಪಸವು/
ಬರವು ಹೋಯಿತು ಎಂದು
ಆಕಾಶದಲ್ಲಿ ಅರ್ಜುನನನ್ನು
ಕುರಿತು ಹೊಗಳುತ್ತ ತನ್ನ
ದಂಡದಂತಿರುವ ಕೋಲಿನ

ತುದಿಗೆ ಕೌಪೀನವನ್ನು

ಸೇರಿಸಿಕೊಂಡು ಬಾವುಟದಂತೆ

ಅಲುಗಿಸುತ್ತ ನಾರದನು

ಹೊಗಳಿ ಕುಣಿದಾಡಿದನು.

ವ|| ಆಗಳ್-

ವಚನ:ಅರ್ಥ:ವ|| ಆಗ

ಕಂ|| ಪಱಯಿಗೆಯನುಡುಗಿ

ರಥಮಂ

ಪೆಱವನನೆಸಗಲ್ಕೆವೇೞ್ದು

ಸುತಶೋಕದ ಪೊಂ|

ಪುೞಿಯೊಳ್
ಮೆಯ್ಯ್ಯೞಿಯದೆ ನೀ
ರಿೞಿವಂತೆವೊಲಿೞಿದನಪರಜ
ಳಗೆ ದಿನಪಂ|| ೨೨೦ ||

ಪದ್ಯ-೨೨೦:ಪದವಿಭಾಗ-ಅರ್ಥ:ಪಟಿಯಿಗೆಯನು ಉಡುಗಿ ರಥಮಂ ಪೆಟಿವನಂ ಎಸಗಲ್ಕೆ ವೇೞ್ದು (ಬಾವುಟವನ್ನು ಇಳಿಸಿ ಹೆಳವನಾದ ಅರುಣನನ್ನು ತೇರನ್ನು ನಡೆಸುವಂತೆ ಹೇಳಿ)

ಸುತಶೋಕದ

ಪೊಂಪುೞಿಯೊಳ್

(ಪುತ್ರಶೋಕದ ಆಧಿಕ್ಯದಲ್ಲಿ)

ಮೆಯ್ಯ ಅಱಿಯದೆ ನೀರ್

ಇೞಿವಂತೆವೊಲ್

(ಪುತ್ರಶೋಕದ ಆಧಿಕ್ಯದಲ್ಲಿ

ಸೂರ್ಯನು ಮಯ್ಯ

ಅರಿಯದ-ದೇಹದ ಪರಿವೆ

ಇಲ್ಲದೆ -ಜ್ಞಾನಶೂನ್ಯನಾಗಿ

(ಸತ್ತವರಿಗೆ) ನೀರಿಗೆ ಇಳಿದು

ಸ್ನಾನಮಾಡುವ ಹಾಗೆ)

ಇೞಿದನು ಅಪರಜಳಗೆ
ದಿನಪಂ (ಸೂರ್ಯನು
ಪಶ್ಚಿಮಸಮುದ್ರಕ್ಕೆ ಇಳಿದನು.)
(ಅರುಣ -ಸೂರ್ಯನ ಸಾರಥಿ
- ಕಾಲಿಲ್ಲ.)

ಪದ್ಯ-00:ಅರ್ಥ:
ಬಾವುಟವನ್ನು ಇಳಿಸಿ
ಹೆಳವನಾದ ಅರುಣನನ್ನು
ತೇರನ್ನು ನಡೆಸುವಂತೆ ಹೇಳಿ
ಪುತ್ರಶೋಕದ ಆಧಿಕ್ಯದಲ್ಲಿ
ಸೂರ್ಯನು ಜ್ಞಾನಶೂನ್ಯನಾಗಿ

(ಸತ್ತವರಿಗೆ) ನೀರಿಗೆ ಇಳಿದು ಸ್ನಾನಮಾಡುವ ಹಾಗೆ ಸೂರ್ಯನು ಪಶ್ಚಿಮಸಮುದ್ರಕ್ಕೆ ಇಳಿದನು. (ಅಸ್ತಮಯವಾದನು)

ವ|| ಆಗಳ್ ಕರ್ಣನ ಬೞಿವೞಿಯನೆ ತನ್ನ ಪೋಪುದನಭಿನಯಿಸುವಂತೆ ಶೋಕೋದ್ರೇಕದೊಳ್ ಮೆಯ್ಯಱಿಯದೆ ಕನಕರಥದೊಳ್

ಮೆಯ್ಯನೀಡಾಡಿ
ನಾಡಾಡಿಯಲ್ಲದೆ
ಮೂರ್ಛೆವೋದ
ದುರ್ಯೋಧನನನಶ್ವತ್ಥಾಮ
ಕೃಪ ಕೃತವರ್ಮ ಶಕುನಿಯರ್
ನಿಜ ನಿವಾಸಕ್ಕೊಡಗೊಂಡು
ಪೋದರಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ಕರ್ಣನ ಬೞಿವೞಿಯನೆ (ಬಳಿವಳಿಸು- ಸ್ವಲ್ಪ ದೂರ

ಜೊತೆಯಲ್ಲಿಹೋಗಿ
ಕಳಿಸುವುದು) ತನ್ನ
ಪೋಪುದನು
ಅಭಿನಯಿಸುವಂತೆ (ಆಗ
ಕರ್ಣನ ದಾರಿಯಲ್ಲಿಯೇ
ತಾನೂ ಹೋಗುವುದನ್ನು
ಅಭಿನಯಿಸುವಂತೆ)
ಶೋಕೋದ್ರೇಕದೊಳ್
ಮೆಯ್ಯಱಿಯದೆ (ದುಃಖದ
ಉದ್ರೇಕದಿಂದ
ಜ್ಞಾನಶೂನ್ಯನಾಗಿ)

ಕನಕರಥದೊಳ್ ಮೆಯ್ಯನು
ಈಡಾಡಿ ನಾಡಾಡಿಯಲ್ಲದೆ
ಮೂರ್ಛೆವೋದ (ಚಿನ್ನದ
ತೇರಿನಲ್ಲಿಯೇ ಶರೀರವನ್ನು
ಚಾಚಿ ಅಸಾಧಾರಣ
ರೀತಿಯಲ್ಲಿ ಮೂರ್ಛೆ
ಹೋಗಿದ್ದ)
ದುರ್ಯೋಧನನನು
ಅಶ್ವತ್ಥಾಮ ಕೃಪ ಕೃತವರ್ಮ
ಶಕುನಿಯರ್ ನಿಜ
ನಿವಾಸಕ್ಕೊಡಗೊಂಡು

ಪ್ರೋದರಾಗಳ್
(ದುರ್ಯೋಧನನನ್ನು
ಅಶ್ವತ್ಥಾಮ, ಕೃಪ, ಕೃತವರ್ಮ,
ಶಕುನಿಯರು ತಮ್ಮ
ವಾಸಸ್ಥಳಕ್ಕೆ ಜೊತೆಯಲ್ಲಿ
ಕರೆದುಕೊಂಡು ಹೋದರು.
ಆಗ)-
ವಚನ:ಅರ್ಥ:ಆಗ ಕರ್ಣನ
ದಾರಿಯಲ್ಲಿಯೇ ತಾನೂ
ಹೋಗುವುದನ್ನು
ಅಭಿನಯಿಸುವಂತೆ ದುಃಖದ

ಉದ್ರೇಕದಿಂದ
ಜ್ಞಾನಶೂನ್ಯನಾಗಿ ಚಿನ್ನದ
ತೇರಿನಲ್ಲಿಯೇ ಶರೀರವನ್ನು
ಚಾಚಿ ಅಸಾಧಾರಣ
ರೀತಿಯಲ್ಲಿ ಮೂರ್ಛೆ
ಹೋಗಿದ್ದ ದುರ್ಯೋಧನನನ್ನು
ಅಶ್ವತ್ಥಾಮ, ಕೃಪ, ಕೃತವರ್ಮ,
ಶಕುನಿಯರು ತಮ್ಮ
ವಾಸಸ್ಥಳಕ್ಕೆ ಜೊತೆಯಲ್ಲಿ
ಕರೆದುಕೊಂಡು ಹೋದರು.
ಆಗ

ಚಂ||

ಸುರಿವಜರಪ್ರಸೂನರಜದಿಂ

ಕವಿಲಾದ ಶಿರೋರುಹಂ ರಜಂ

ಬೊರೆದಳಿಮಾಲೆ ಮಾಲೆಯನೆ

ಪೋಲೆ ಪಯೋಜಜ

ಪಾರ್ವತೀಶರೊ|

ಳ್ವರಕೆಯನಾಂತು

ಕರ್ಣಹತಿಯೊಳ್

ತನಗಟ್ಟಿಱನೀಯೆ ಬಂದನಂ

ದರಮನೆಗಚ್ಯುತಂಬೆರಸಳುರ್ಕೆ

ಯಿನಮ್ಮನ ಗಂಧವಾರಣಂ||

೨೨೧

ಪದ್ಯ-೨೨೧:ಪದವಿಭಾಗ-ಅರ್ಥ: ಸುರಿವ ಅಜರ ಪ್ರಸೂನ(ಹೂವಿನ) ರಜದಿಂ (ದೇವತೆಗಳು ಸುರಿಯುತ್ತಿರುವ ಹೂವುಗಳ ಪರಾಗದಿಂದ) ಕವಿಲಾದ ಶಿರೋರುಹಂ (ಕಪಿಲಬಣ್ಣವಾದ ಕೂದಲು,) ರಜಂ ಬೊರೆದ ಅಳಿಮಾಲೆ ಮಾಲೆಯನೆ ಪೋಲೆ (ಪರಾಗದಿಂದ ಮುಚ್ಚಲ್ಪಟ್ಟ

ಅಳಿ/ ದುಂಬಿಗಳ
ಸಮೂಹದಿಂದ ಕೂಡಿದ
ಹೂವಿನ ಮಾಲೆಯನ್ನೇ
ಹೋಲುತ್ತಿರಲು,) ಪಯೋಜಜ
(ಬ್ರಹ್ಮ) ಪಾರ್ವತೀಶರ (ಶಿವರ)
ಒಳ್ವರಕೆಯನು ಆಂತು
(ಒಳ್ಳೆಯ ಆಶೀರ್ವಾದವನ್ನು
ಪಡೆದು) ಕರ್ಣ ಹತಿಯೊಳ್
ತನಗೆ ಅಟ್ಕಿಱನೀಯೆ (ಕರ್ಣನ
ವಧೆಯಿಂದ ತನಗೆ/
ಧರ್ಮಜನಿಗೆ

ಆನಂದವನ್ನುಂಟುಮಾಡುತ್ತಿರಲು) ಬಂದನು ಅಂದು ಅರಮನೆಗೆ ಅಚ್ಯುತಂ ಬೆರಸು ಅಳುರ್ಕೆಯಿಂ ಅಮ್ಮನ ಗಂಧವಾರಣಂ- ಅರ್ಜುನನು (ಅಮ್ಮನ ಗಂಧವಾರಣನಾದ ಅರ್ಜುನನು ಕೃಷ್ಣನೊಡಗೂಡಿ ಆ ದಿನ ಅತಿಶಯದಿಂದ ಅರಮನೆಗೆ ಬಂದನು.)

ಪದ್ಯ-೨೨೧:ಅರ್ಥ: ದೇವತೆಗಳು ಸುರಿಯುತ್ತಿರುವ

ಹೂವುಗಳ ಪರಾಗದಿಂದ
ಕಪಿಲಬಣ್ಣವಾದ ಕೂದಲು,
ಪರಾಗದಿಂದ ಮುಚ್ಚಲ್ಪಟ್ಟ
ದುಂಬಿಗಳ ಸಮೂಹದಿಂದ
ಕೂಡಿದ ಹೂವಿನ
ಮಾಲೆಯನ್ನೇ ಹೋಲುತ್ತಿರಲು,
ಬ್ರಹ್ಮ ಮತ್ತು ರುದ್ರರ ಒಳ್ಳೆಯ
ಆಶೀರ್ವಾದವನ್ನು ಪಡೆದು
ಕರ್ಣನ ವಧೆಯಿಂದ ತನಗೆ/
ಧರ್ಮಜನಿಗೆ
ಆನಂದವನ್ನುಂಟುಮಾಡುತ್ತಿರ

ಲು ಅಮ್ಮನ
ಗಂಧವಾರಣನಾದ
ಅರ್ಜುನನು ಕೃಷ್ಣನೊಡಗೂಡಿ
ಆ ದಿನ ಅತಿಶಯದಿಂದ
ಅರಮನೆಗೆ ಬಂದನು.

♦

|| ಇದು ವಿವಿಧ
ವಿಬುಧಜನವಿನುತ
ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ

ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ದ್ವಾದಶಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ

ಚಾತುರ್ಯವನ್ನುಳ್ಳ ಕವಿತಾಗುಣಾರ್ಣವನಿಂದ ರಚಿತವಾದುದೂ ಆದ ವಿಕ್ರಮಾರ್ಜುನವಿಜಯದಲ್ಲಿ ಹನ್ನೆರಡನೆಯ ಆಶ್ವಾಸ||

♦♣♣♣♣♣♣♣♣♣♣♣♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	11	**12**	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ

"https://kn.wikisource.org/w/index.php?title=ಪಂಪಭಾರತ_ದ್ವಾದಶಾಶ್ವಾಸಂ&oldid=149964" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೩ ಜುಲೈ ೨೦೧೮, ೧೧:೫೯ ರಂದು ಕೊನೆಯಾಗಿ

ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ

ಹೊರತು ಪಠ್ಯ "CC BY-SA 4.0 "

ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ತ್ರಯೋದಶಾಶ್ವಾಸಂ

<ಪಂಪಭಾರತ

- (XXIII.VII.XIIX)-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು

ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಪಂಪಭಾರತ ತ್ರಯೋದಶಾಶ್ವಾಸಂ

ಕುರುಕ್ಷೇತ್ರ ಯುದ್ಧದಲ್ಲಿ ಶಲ್ಯನಿಗೆ ವೀರ ಪಟ್ಟ

ಕಂ|| ಶ್ರೀ ದಯಿತನ ಹರಿಗನ ಸಂ

ಪಾದಿತಭೂಜವೀರ್ಯಮಟ್ಕಿ

ಱಿಂ ತನಗೆರ್ದೆಯೊಳ್|

ಚೋದಿಸೆ ಪರಸಿದನಾಶೀ

ರ್ವಾದಪರಂಪರೆಯಿನಾಗಳಂ

ತಕತನಯಂ|| ೧ ||

ಪದ್ಯ-೧:ಪದವಿಭಾಗ-

ಅರ್ಥ:ಶ್ರೀ ದಯಿತನ

(ಜಯಲಕ್ಷ್ಮೀಪತಿಯಾದ)

ಹರಿಗನ ಸಂಪಾದಿತ

ಭೂಜವೀರ್ಯಂ

(ಅರ್ಜುನನು ಗಳಿಸಿದ

ಭುಜಪರಾಕ್ರಮವು) ಅಣ್ಕಿಱಿಂ (ಪ್ರೀತಿಯನ್ನು) ತನಗೆ ಎರ್ದೆಯೊಳ್ ಚೋದಿಸೆ (ತನ್ನ ಹೃದಯದಲ್ಲಿ ಸಂತೋಷವನ್ನು ಹೆಚ್ಚಿಸುತ್ತಿರಲು) ಪರಸಿದನು ಆಶೀರ್ವಾದ ಪರಂಪರೆಯಿಂ ಆಗಳ್ ಅಂತಕತನಯಂ (ಯಮನ ಮಗ) (ಆಗ ಅವನನ್ನು ಹರಕೆಯ ಪರಂಪರೆಯಿಂದ

ಧರ್ಮರಾಯನು ಆಶೀರ್ವದಿಸಿದನು.)

ಪದ್ಯ-೧:ಅರ್ಥ:ಜಯಲಕ್ಷ್ಮೀಪತಿಯಾದ ಅರ್ಜುನನು ಗಳಿಸಿದ ಭುಜಪರಾಕ್ರಮವು ತನ್ನ ಹೃದಯದಲ್ಲಿ ಸಂತೋಷವನ್ನು ಹೆಚ್ಚಿಸುತ್ತಿರಲು ಆಗ ಅವನನ್ನು ಹರಕೆಯ ಪರಂಪರೆಯಿಂದ ಧರ್ಮರಾಯನು ಆಶೀರ್ವದಿಸಿದನು.

ಪರಸಿ ಸಕಳಾವನೀತಳ

ಭರಮಿನಸುತನಱಿಯೆ ಹರಿಗನಿಂದೆನಗೀಗಳ್| ದೊರೆಕೊಂಡುದೆಂದೊಡೇ ಬಿತ್ತರಿಸಿದನೋ ರಿಪುಕುರಂಗಕಂಠೀರವನಂ|| ೨ ||

ಪದ್ಯ-೨:ಪದವಿಭಾಗ-ಅರ್ಥ:ಪರಸಿ (ಹರಸಿ) ಸಕಳ ಅವನೀತಳಭರಂ (ಸಮಸ್ತ ಭೂಮಂಡಲದ ಭಾರವು) ಇನಸುತನು ಅಱಿಯೆ

(ಕರ್ಣನು ಸಾಯಲು)
ಹರಿಗನಿಂದ ಎನಗೆ ಈಗಳ್
ದೊರೆಕೊಂಡುದು (ತನಗೆ ಈಗ
ಅರ್ಜುನನಿಂದ ಲಭಿಸಿತೆಂದು)
ಎಂದೊಡೆ ಏ ಬಿತ್ತರಿಸಿದನೋ
ರಿಪುಕುರಂಗಕಂಠೀರವನಂ
(ಅರ್ಜುನನ್ನು) (ಹೇಳಿ
ಧರ್ಮರಾಯನು
ಅರ್ಜುನನನ್ನು
ಎಷ್ಟುಹೊಗಳಿದನೊ!
ವಿಶೇಷವಾಗಿ ಹೊಗಳಿದನು)

ಪದ್ಯ-೨:ಅರ್ಥ: ೨. ಕರ್ಣನು ಸಾಯಲು ಸಮಸ್ತ ಭೂಮಂಡಲದ ಭಾರವು ತನಗೆ ಈಗ ಅರ್ಜುನನಿಂದ ಲಭಿಸಿತೆಂದು ಹೇಳಿ ಧರ್ಮರಾಯನು ಅರ್ಜುನನನ್ನು ವಿಶೇಷವಾಗಿ ಹೊಗಳಿದನು!

ವ|| ಅನ್ನೆಗಮತ್ತ ದುರ್ಯೋಧನನತಿ ಸಂಭ್ರಮಾಕುಳಿತ ಪರೀತ

ಪರಿವಾರಜನೋಪನೀತ

ಚಂದನಕರ್ಪೂರುಮಿಶ್ರಿತ

ಹಿಮಶಿಶಿರಧಾರಾಪರಿಷೇಕದಿಂ

ದೆಂತಾನುಂ

ಮೂರ್ಛೆಯಿಂದೆೞ್ಚೆತ್ತು

ಕರ್ಣನಂ ನೆನೆದು

ಸ್ಮರಣಮಾತ್ರದೊಳೆ

ಶೋಕಸಾಗರಂ ಕರೆಗಣ್ಮೆ

ಸೈರಿಸಲಾಱದೆ-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಇತ್ತ

ದುರ್ಯೋಧನನು (ಅಷ್ಟರಲ್ಲಿ
ಆ ಕಡೆ ದುರ್ಯೋಧನನು) ಅತಿ
ಸಂಭ್ರಮಾಕುಳಿತ ಪರೀತ
(ತನ್ನನ್ನು ಸುತ್ತುವರಿದಿದ್ದ
ಅತ್ಯಂತ ಸಂಭ್ರಮದಿಂದ
ವ್ಯಾಕುಳಿತರಾದ/ ದುಃಖದಿಂದ
ಕೂಡಿದ) ಪರಿವಾರಜನ
ಉಪನೀತ (ಸೇವಕಜನರಿಂದ
ತರಲ್ಪಟ್ಟ)
ಚಂದನಕರ್ಪೂರುಮಿಶ್ರಿತ
ಹಿಮಶಿಶಿರಧಾರಾ

ಪರಿಷೇಕದಿಂದೆ ಎಂತಾನುಂ
(ಶ್ರೀಗಂಧ ಮತ್ತು
ಪಚ್ಚಕರ್ಪೂರ ಮಿಶ್ರಿತವಾದ
ಮಂಜಿನಷ್ಟು ತಣ್ಣಗಿರುವ
ನೀರಿನಿಂದ ಸಿಂಪಿಸಲ್ಪಟ್ಟು
ಹೇಗೋ) ಮೂರ್ಛೆಯಿಂದ
ಎಚ್ಚಿತ್ತು ಕರ್ಣನಂ ನೆನೆದು
(ಮೂರ್ಛೆಯಿಂದ ಎಚ್ಚೆತ್ತು,
ಕರ್ಣನನ್ನು ಜ್ಞಾಪಿಸಿಕೊಂಡು)
ಸ್ಮರಣಮಾತ್ರದೊಳೆ
ಶೋಕಸಾಗರಂ ಕರೆಗೆ ಅಣ್ಮೆ

(ನೆನೆಸಿದ ಮಾತ್ರಕ್ಕೆ
ದುಖಸಮುದ್ರವು ದಡವನ್ನು
ಮೀರಿ ಉಕ್ಕಲು)
ಸೈರಿಸಲಾಜಿದೆ
(ಸೈರಿಸಲಾರದೆ)-
ವಚನ:ಅರ್ಥ:ಅಷ್ಟರಲ್ಲಿ ಆ
ಕಡೆ ದುರ್ಯೋಧನನು ತನ್ನನ್ನು
ಸುತ್ತುವರಿದಿದ್ದು ಅತ್ಯಂತ
ಸಂಭ್ರಮದಿಂದ
ವ್ಯಾಕುಳಿತರಾದ
ಸೇವಕಜನರಿಂದ ತರಲ್ಪಟ್ಟ

ಶ್ರೀಗಂಧ ಮತ್ತು ಪಚ್ಚಕರ್ಪೂರ
ಮಿಶ್ರಿತವಾದ ಮಂಜಿನಷ್ಟು
ತಣ್ಣಗಿರುವ ನೀರಿನಿಂದ
ಸಿಂಪಿಸಲ್ಪಟ್ಟು ಹೇಗೋ
ಮೂರ್ಛೆಯಿಂದ ಎಚ್ಚೆತ್ತನು.
ಕರ್ಣನನ್ನು ಜ್ಞಾಪಿಸಿಕೊಂಡು
ನೆನೆಸಿದ ಮಾತ್ರಕ್ಕೆ
ದುಖಸಮುದ್ರವು ದಡವನ್ನು
ಮೀರಿ ಉಕ್ಕಲು
ಸೈರಿಸಲಾರದೆ- ದುಃಖಿಸಿದನು;

ದುರ್ಯೋಧನನ ವಿಲಾಪ

ಉ|| ನೀನುಮಗಲ್ದೆಯಿನ್ನೆನಗೆ ಪೇೞ್ ಪೆಱರಾರೆನಗಾಸೆ ನಿನ್ನನಿ
ನ್ನಾನುಮಗಲ್ವೆನೇ ಕೆಳೆಯ ಬೆನ್ನನೆ ಬಂದಪೆನಾಂತರಂ ಯಮ|
ಸ್ಥಾನಮನೆಯ್ದಿಸುತ್ತಿದುವೆ ದಂದುಗಮೆಂತೆರ್ದೆಮುಟ್ಟಿ ಕೂರ್ತು ಪೇೞು

ಮಾನಸವಾಟಿನಂಗವಿಷಯಾ
ಧಿಪ ನೀಂ ಪೊಱಗಾಗೆ
ಬಾೞ್ವೆನೇ|| ೩ ||

ಪದ್ಯ-೩:ಪದವಿಭಾಗ-
ಅರ್ಥ:ನೀನುಂ ಅಗಲ್ದೆ ಯಿನ್ನೆನಗೆ ಪೇೞ್ ಪೆಱರ್ ಆರೆf ಎನಗೆ ಆಸೆ (ನೀನು ಕೂಡ ನನ್ನನ್ನು ಅಗಲಿ ಹೋದೆ. ನನಗೆ ಆಸೆಯಾಗಿರುವವರು ಬೇರೆ ಯಾರು?) ನಿನ್ನನು ಇನ್ನಾನುಂ ಅಗಲ್ವೆನೇ (ನಿನ್ನನ್ನು

ಬಿಟ್ಟು - ಅಗಲಿ ನಾನು ಇರಬಲ್ಲೆನೆ?) ಕೆಳೆಯ ಬೆನ್ನನೆ ಬಂದಪೆನು ಆಂತರಂ (ಎದುರಿಸಿದವರನ್ನು) ಯಮಸ್ಥಾನಮಂ ಎಯ್ದಿಸುತ್ತ (ಸ್ನೇಹಿತನೇ ಪ್ರತಿಭಟಿಸಿದವರನ್ನು ಯಮನ ಮನೆಗೆ ಸೇರಿಸುತ್ತ ನಿನ್ನ ಬೆನ್ನಿನ ಹಿಂದೆಯೇ ಬರುತ್ತೇನೆ,) ಇದುವೆ ದಂದುಗಂ (ದುಃಖ, ಕರ್ತವ್ಯ) ಅಂತೆ ಎರ್ದೆಮುಟ್ಟೆ

ಕೂರ್ತು (ಇದೇ ನನಗಿರುವ
ಕರ್ತವ್ಯ.
ಹೃದಯದಂತರಾಳದಿಂದ
ಪ್ರೀತಿಸಿದ) ಪೇೞ- ಹೇಳು,
ಮಾನಸವಾೞಂ (ಮನುಷ್ಯ
ಬಾಳನ್ನು) ಅಂಗವಿಷಯಾಧಿಪ
ನೀಂ ಪೊಱಗಾಗೆ (ನೀನು
ಹೊರಗಾಗೆ- ಅಗಲಿದ ಮೇಲೆ)
ಬಾೞ್ವೆನೇ
(ಹೃದಯದಂತರಾಳದಿಂದ
ಪ್ರೀತಿಸಿದ ನೀನು ಅಗಲಿದ

ಮೇಲೆ ಕರ್ಣ, ನಾನು ಮನುಷ್ಯ ಬಾಳನ್ನು ಬಾಳಬಲ್ಲೆನೆ?)

ಪದ್ಯ-೩:ಅರ್ಥ:ನೀನು ಕೂಡ ನನ್ನನ್ನು ಅಗಲಿ ಹೋದೆ. ನನಗೆ ಆಸೆಯಾಗಿರುವವರು ಬೇರೆ ಯಾರು? ನಿನ್ನನ್ನು ಬಿಟ್ಟು ನಾನು ಇರಬಲ್ಲೆನೆ? ಸ್ನೇಹಿತನೇ ಪ್ರತಿಭಟಿಸಿದವರನ್ನು ಯಮನ ಮನೆಗೆ ಸೇರಿಸುತ್ತ ನಿನ್ನ ಬೆನ್ನಿನ ಹಿಂದೆಯೇ ಬರುತ್ತೇನೆ, ಇದೇ ನನಗಿರುವ ಕರ್ತವ್ಯ.

ಹೃದಯದಂತರಾಳದಿಂದ
ಪ್ರೀತಿಸಿದ ನೀನು ಅಗಲಿದ
ಮೇಲೆ ಕರ್ಣ, ನಾನು ಮನುಷ್ಯ
ಬಾಳನ್ನು ಬಾಳಬಲ್ಲೆನೆ?

ಚಂ|| ಒಡಲೆರಡೊಂದೆ
ಜೀವಮಿವರ್ಗೆಂಬುದನೆಂಬು
ದು ಲೋಕಮೀಗಳಾ
ನುಡಿ ಪುಸಿಯಾಯ್ತು ನಿನ್ನಸು
ಕಿರೀಟಿಯ ಶಾತಶರಂಗಳಿಂದೆ
ಪೋ|

ಪೊಡಮೆನಗಿನ್ನು ಮೀಯೊಡಲೊಳಿರ್ದುದು ನಾಣಿಲಿ ಜೀವಮೆಂದೊಡಾ ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮಳ್ಕುಱು ಮಂಗವಲ್ಲಭಾ|| ೪ ||

ಪದ್ಯ-೪:ಪದವಿಭಾಗ-

ಅರ್ಥ:ಒಡಲು ಎರಡು ಒಂದೆ ಜೀವಂ ಇವರ್ಗೆ ಎಂಬುದನೆ ಎಂಬುದು ಲೋಕಂ (ಶರೀರ ಎರಡು- ಒಂದು ಪ್ರಾಣ ಎಂದು

ಲೋಕವು ಹೇಳುತ್ತಿದ್ದಿತು.)
ಈಗಳ್ ಆ ನುಡಿ
ಪುಸಿಯಾಯ್ತು (ಈಗ ಆ
ಮಾತು ಸುಳ್ಳಾಯಿತು.)
ನಿನ್ನಸು ಕಿರೀಟಿಯ
ಶಾತಶರಂಗಳಿಂದೆ ಪೋಪೊಡಂ
ಎನಗಿನ್ನುಂ ಈ ಒಡಲೊಳು
ಇರ್ದುದು ನಾಣಿಲಿ ಜೀವಂ
(ನಿನ್ನ ಪ್ರಾಣವು ಅರ್ಜುನನ
ಹರಿತವಾದ ಬಾಣಗಳಿಂದ
ಹೋದರೂ ನನ್ನ

ನಾಚಿಕೆಯಿಲ್ಲದ ಜೀವವು
ಇನ್ನೂ ಶರೀರದಲ್ಲಿದೆ ಇದು
ನಾಚಿಕೆ.) ಎಂದೊಡೆ
ಆವೆಡೆಯೊಳೆ ನಿನ್ನೊಳು ಎನ್ನ
ಕಡುಗೂರ್ಮೆಯುಂ (ಕಡು
ಕೂರ್ಮೆ - ಪ್ರೀತಿ) ಅಲ್ಕಿಯುಂ
ಅಂಗವಲ್ಲಭಾ (ನಿನ್ನ ನನ್ನ
ಅತಿಶಯವಾದ ಪ್ರೀತಿಯೂ
ಸ್ನೇಹವೂ ಆವೆಡೆಯಲ್ಲಿದೆ?
ಕರ್ಣಾ)

ಪದ್ಯ-೪:ಅರ್ಥ:

ದುರ್ಯೋಧನ ಕರ್ಣರಲ್ಲಿ ಶರೀರ ಎರಡು- ಒಂದು ಪ್ರಾಣ ಎಂದು ಲೋಕವು ಹೇಳುತ್ತಿದ್ದಿತು. ಈಗ ಆ ಮಾತು ಸುಳ್ಳಾಯಿತು. ನಿನ್ನ ಪ್ರಾಣವು ಅರ್ಜುನನ ಹರಿತವಾದ ಬಾಣಗಳಿಂದ ಹೋದರೂ ನನ್ನ ನಾಚಿಕೆಯಿಲ್ಲದ ಜೀವವು ಇನ್ನೂ ಶರೀರದಲ್ಲಿದೆ ಎಂದರೆ

ಇದು ನಾಚಿಕೆ. ನಿನ್ನ ನನ್ನ ಅತಿಶಯವಾದ ಪ್ರೀತಿಯೂ ಸ್ನೇಹವೂ ಆವೆಡೆಯಲ್ಲಿದೆ? ಕರ್ಣಾ!

ಮ|| ಅಱಿಯಂ ಸೋದರನೆಂದು ಧರ್ಮತನಯಂ ನಿರ್ವ್ಯಾಜದಿಂ ನಿನ್ನನಾ ನಱಿವೆಂ ಮುನ್ನಱಿದಿರ್ದುಮೆನ್ನರಸನಾ ನೇಕಿತ್ತೆನಿಲ್ಲೇಕೆ ಪೇ

ಅಱಿಪಲ್ಕೊಲ್ದೆನುಮಿಲ್ಲ
ಕಾರ್ಯವಶದಿಂ
ಕೂರ್ಪಂತವೊೞ್ ನಿನ್ನನಾಂ
ನೆರೆ ಕೊಂದೆಂ
ಮುಳಿಸಿಂದಮಂಗನೃಪತೀ
ಕೌಂತೇಯರೇಂ ಕೊಂದರೇ|| ೫
||

ಪದ್ಯ-೫:ಪದವಿಭಾಗ-

ಅರ್ಥ:ಅಱಿಯಂ
ಸೋದರನೆಂದು
ಧರ್ಮತನಯಂ

(ಧರ್ಮರಾಯನು ನೀನು
ಅವನ ಜೊತೆಯಲ್ಲಿ
ಹುಟ್ಟಿದವನೆಂಬುದನ್ನು
ತಿಳಿಯನು) ನಿರ್ವ್ಯಾಜದಿಂ
ನಿನ್ನನು ಆನು ಅಱಿವೆಂ
(ಸಹಜವಾಗಿಯೇ ನೀನು
ಯಾರೆಂಬುದನ್ನು ನಾನು
ಬಲ್ಲೆ;) ಮುನ್ನಱಿದಿರ್ದುಂ ಎನ್ನ
ಅರಸಂ ಆನು ಏಕೆ ಇತ್ತೆನಿಲ್ಲ
(ಮೊದಲು ತಿಳಿದಿದ್ದರೂ ನನ್ನ
ದೊರೆತನವನ್ನು ನಾನು

ನಿನಗೇಕೆ ಕೊಡಲಿಲ್ಲ?) ಏಕೆ ಪೇಟ್ ಅಱಿಪಲ್ಕೆ ಒಲ್ದೆನುಮಿಲ್ಲ (ನಿನಗೆ ತಿಳಿಯಪಡಿಸುವುದಕ್ಕೂ ಇಷ್ಟಪಡಲಿಲ್ಲ? ಏಕೆ? ಏಕೆಂದರೆ-) ಕಾರ್ಯವಶದಿಂ ಕೂರ್ಪಂತವೋಲ್ ನಿನ್ನನು ಆಂ ನೆರೆ ಕೊಂದೆಂ (ಸ್ವಕಾರ್ಯಸಾಧನೆಗಾಗಿ ಪ್ರೀತಿಸುವ ಹಾಗೆ ನಟಿಸಿ ನಿನ್ನನ್ನು ನಾನೇ ಕೊಂದೆನು.)

ಮುಳಿಸಿಂದಂ (ಪಾಂಡವರ ಮೇಲಿನ ಕೋಪದಿಂದ ನ್ನನ್ನು ನಾನೇ ಕೊಂದೆನು.) ಅಂಗನೃಪತೀ ಕೌಂತೇಯರೇಂ ಕೊಂದರೇ (ಪಾಂಡವರು ನಿನ್ನನ್ನು ಕೊಂದರೇ? ಇಲ್ಲ!)

ಪದ್ಯ-೫:ಅರ್ಥ:

ಧರ್ಮರಾಯನು ನೀನು ಅವನ ಜೊತೆಯಲ್ಲಿ ಹುಟ್ಟಿದವನೆಂಬುದನ್ನು ತಿಳಿಯನು. ಸಹಜವಾಗಿಯೇ

ನೀನು ಯಾರೆಂಬುದನ್ನು
ನಾನು ಬಲ್ಲೆ; ಮೊದಲು
ತಿಳಿದಿದ್ದರೂ ನನ್ನ
ದೊರೆತನವನ್ನು ನಾನು
ನಿನಗೇಕೆ ಕೊಡಲಿಲ್ಲ? ನಿನಗೆ
ತಿಳಿಯಪಡಿಸುವುದಕ್ಕೂ
ಇಷ್ಟಪಡಲಿಲ್ಲ? ಏಕೆ ಎಂದರೆ,
ಸ್ವಕಾರ್ಯಸಾಧನೆಗಾಗಿ
ಪ್ರೀತಿಸುವ ಹಾಗೆ (ನಟಿಸಿ)
ಪಾಂಡವರ ಮೇಲಿನ
ಕೋಪದಿಂದ ನಿನ್ನನ್ನು ನಾನೇ

ಕೊಂದೆನು. ಪಾಂಡವರು ನಿನ್ನನ್ನು ಕೊಂದರೇ? ಇಲ್ಲ!

ಚಂ||

ಉದಧಿತರಂಗತಾಟಿತಧರಾತ

ಳಮಂ ನಿನಗಿತ್ತು ನಿನ್ನ ಕೊ

ಟ್ಟುದನೆ ಪಸಾದಮೆಂದು

ಪೊಡೆವಟ್ಟು

ಮನೋಮುದದಿಂದೆ ಕೊಂಡು

ಬಾ|

ೞ್ದುವೆ ಬಯಕ್ಕೆ ಮುಂ

ನಿನಗದಂ ಕಿಡಿಪಂದೆಲೆ ಕರ್ಣ

ಕೇತುವಾ
ದುದು ನಿನಗಾ ವೃಕೋದರನ
ಕಾಯ್ಪನೆ ಪೊತ್ತಿಸಿದೆನ್ನ
ಕಾಳೆಗಂ|| ೬ ||

ಪದ್ಯ-೬:ಪದವಿಭಾಗ-ಅರ್ಥ:ಉದಧಿತರಂಗತಾಟಿತ ಧರಾತಳಮಂ (ಉದಧಿ + ತಾಟಿತ + ಧರಾತಲ: ಸಮುದ್ರದ ಅಲೆಗಳ ಹೊಡೆತವುಳ್ಳ ಈ ಭೂಮಂಡಲವನ್ನು) ನಿನಗಿತ್ತು

ನಿನ್ನ ಕೊಟ್ಟುದನೆ ಪಸಾದಮೆಂದು (ನಿನಗೆ ಕೊಟ್ಟು ನೀನು ಕೊಟ್ಟುದನ್ನೇ ಪ್ರಸಾದವೆಂದು) ಪೊಡೆವಟ್ಟು ಮನೋಮುದದಿಂದೆ ಕೊಂಡು (ನಮಸ್ಕರಿಸಿ ಮನಸ್ಸಂತೋಷದಿಂದ ಸ್ವೀಕರಿಸಿ) ಬಾೞ್ವ ಅದುವೆ ಬಯಕ್ಕೆ ಮುಂ- ಮೊದಲಿನ (ಬಾಳಬೇಕೆಂಬುದೇ ನನ್ನ ಮೊದಲಿನ ಆಸೆ.) ನಿನಗೆ

ಅದಂ ಕಿಡಿಪಂದು ಎಲೆ ಕರ್ಣ ಕೇತುವಾದುದು (ನನಗೆ ಅದನ್ನು ಕೆಡಿಸುವಾಗ, ಅದನ್ನು ಬಿಟ್ಟಾಗ) ನಿನಗೆ ಆ ವೃಕೋದರರನ ಕಾಯ್ಪನೆ ಪೊತ್ತಿಸಿದ ಎನ್ನ ಕಾಳೆಗಂ (ಆ ಭೀಮನ ಬಗೆಗೆ ಕೋಪವನ್ನು ಹೊತ್ತಿಸಿದ ನನ್ನ ಯುದ್ಧವು ನಿನಗೆ ಧೂಮಕೇತುವಾಯಿತು- ಕೆಡುಕು ತಂದಿತು.)

ಪದ್ಯ-೬:ಅರ್ಥ: ಎಲೆ ಕರ್ಣ, ಸಮುದ್ರದ ಅಲೆಗಳ ಹೊಡೆತವುಳ್ಳ ಈ ಭೂಮಂಡಲವನ್ನು ನಿನಗೆ ಕೊಟ್ಟು ನೀನು ಕೊಟ್ಟುದನ್ನೇ ಪ್ರಸಾದವೆಂದು ನಮಸ್ಕರಿಸಿ ಮನಸ್ಸಂತೋಷದಿಂದ ಸ್ವೀಕರಿಸಿ ಬಾಳಬೇಕೆಂಬುದೇ ನನ್ನ ಮೊದಲಿನ ಆಸೆಯಾಗಿತ್ತು. ನನಗೆ ಅದನ್ನು ಕೆಡಿಸುವಾಗ, ಅದನ್ನು

ಬಿಡವಾಗ, ಆ ಭೀಮನ ಬಗೆಗೆ ಕೋಪವನ್ನು ಹೊತ್ತಿಸಿದ ನನ್ನ ಯುದ್ಧವು ನಿನಗೆ ಧೂಮಕೇತುವಾಯಿತು- ಕೆಡುಕು ತಂದಿತು.

ವ|| ಎಂದು ಕರ್ಣನೊಳಾದ ಶೋಕಾನಲನೊಳ್ ಬಾಯಱಿದು ಮೆಯ್ಮಱಿದು ಪಳಯಿಸುವ ನಿಜತನೂಜನ ಶೋಕಮನಾಱಿಸಲೆಂದು ಧೃತರಾಷ್ಟ್ರನುಂ

ಗಾಂಧಾರಿಯುಂ ಬರೆವರೆ ಬರವಂ ಗೆಂಟಱೊಳ್ ಕಂಡು ದುಶ್ಶ್ಯಾಸನನ ಸಾವಂ ನೆನೆದು ತಾಯ್ತಂದೆಯ ಮೊಗಮಂ ನೋಡಲ್ ನಾಣ್ಚಿ-

ವಚನ:ಪದವಿಭಾಗ-

ಅರ್ಥ:ಎಂದು ಕರ್ಣನೊಳು ಆದ ಶೋಕ ಅನಲನೊಳ್ ಬಾಯಱಿದು ಮೆಯ್ಮಱಿದು (ಹೀಗೆ ಕರ್ಣನ ಸಾವಿನಿಂದ ಆದ ದುಃಖದ ಬೆಂಕಿಯಲ್ಲಿ

ಅತ್ತು ಆಯಾಸಪಟ್ಟು
ಮೂರ್ಛೆಹೋಗಿ)
ಪಳಯಿಸುವ ನಿಜತನೂಜನ
ಶೋಕಮನು ಆಱಿಸಲೆಂದು
ಧೃತರಾಷ್ಟ್ರನುಂ
ಗಾಂಧಾರಿಯುಂ ಬರೆವರೆ
(ಎಚ್ಚರಾದಾಗ ಹಳಹಳಿಸುವ
ಮಗನ ದುಖವನ್ನು
ಸಮಾಧಾನಪಡಿಸಬೇಕೆಂಬದು
ಧೃತರಾಷ್ಟ್ರನೂ
ಗಾಂಧಾರಿಯೂ ಬರುವಾಗ,)

ಬರವಂ ಗೆಂಟಳ್ಜೊಳ್ ಕಂಡು (ಬರುತ್ತಿರುವುದನ್ನು ದೂರದಿಂದಲೇ ನೋಡಿ) ದುಶ್ಶ್ಯಾಸನನ ಸಾವಂ ನೆನೆದು ತಾಯ್ತಂದೆಯ ಮೊಗಮಂ ನೋಡಲ್ ನಾಣ್ಚಿ (ದುಶ್ಶ್ಯಾಸನನ ಸಾವನ್ನು ನೆನೆದು ತಾಯಿತಂದೆಗಳ ಬರವನ್ನು ನೋಡಲು ನಾಚಿಕೆಪಟ್ಟು,)-

ವಚನ:ಅರ್ಥ:ಹೀಗೆ ಕರ್ಣನ ಸಾವಿನಿಂದ ಆದ ದುಃಖದ ಬೆಂಕಿಯಲ್ಲಿ ಅತ್ತು ಆಯಾಸಪಟ್ಟು ಮೂರ್ಛೆಹೋಗಿ ಎಚ್ಚರಾದಾಗ ಹಳಹಳಿಸುವ ಮಗನ ದುಖವನ್ನು ಸಮಾಧಾನಪಡಿಸಬೇಕೆಂಬದು ಧೃತರಾಷ್ಟ್ರನೂ ಗಾಂಧಾರಿಯೂ ಬರುತ್ತಿರುವುದನ್ನು

ದೂರದಿಂದಲೇ ನೋಡಿ,
ದುಶ್ಶ್ಯಾಸನನ ಸಾವನ್ನು ನೆನೆದು
ತಾಯಿತಂದೆಗಳ ಬರವನ್ನು
ನೋಡಲು ನಾಚಿಕೆಪಟ್ಟು,

ಕಂ|| ಆನುಂ ದುಶ್ಶ್ಯಾಸನನುಂ
ಕಾನೀನನುಮೊಡನೆ ಪೋಗಿ
ಬೀಱ್ಕೊಂಡು ರಣ|
ಸ್ಥಾನಕ್ಕೆ ಪೋದೆವಿಮ್ಮಗು
ೞ್ದೇ ನೆಂದಾಂ ನಾಣ್ಚದಿವರ
ಮೊಗಮಂ ನೋೞ್ಪೆಂ || ೭ ||

ಪದ್ಯ-೭:ಪದವಿಭಾಗ-ಅರ್ಥ:ಆನುಂ ದುಶ್ಶ್ಯಾಸನನುಂ ಕಾನೀನನುಂ ಒಡನೆ ಪೋಗಿ (ನಾನೂ ದುಶ್ಶ್ಯಾಸನನೂ ಕರ್ಣನೂ ಜೊತೆಯಲ್ಲಿ ಹೋಗಿ) ಬೀೞ್ಕೊಂಡು ರಣಸ್ಥಾನಕ್ಕೆ ಪೋದೆವು (ಅಪ್ಪಣೆ ಪಡೆದು ಯುದ್ಧರಂಗಕ್ಕೆ ಹೋದೆವು.) ಇಂ ಮುಗುೞ್ದು (ಹಿಂದಕ್ಕೆ ಬಂದು) ಏನೆಂದು ಆಂ

ನಾಣ್ಚದೆ ಇವರ ಮೊಗಮಂ ನೋೞ್ಪೆಂ (ಏನೆಂದು ಹೇಳಿ ನಾಚದೆ ಇವರ ಮುಖವನ್ನು ನೋಡಲಿ?)

ಪದ್ಯ-೭:ಅರ್ಥ:ನಾನೂ ದುಶ್ಯಾಸನನೂ ಕರ್ಣನೂ ಜೊತೆಯಲ್ಲಿ ಹೋಗಿ ಅಪ್ಪಣೆ ಪಡೆದು ಯುದ್ಧರಂಗಕ್ಕೆ ಹೋದೆವು. ಇನ್ನು ಹಿಂದಕ್ಕೆ ಬಂದು ನಾನು ಏನೆಂದು ಹೇಳಿ

ನಾಚದೆ ಇವರ ಮುಖವನ್ನು
ನೋಡಲಿ?

ಚಂ|| ಪವನಜನಂತು ಪೂಣ್ದು
ಯುವರಾಜನ ನೆತ್ತರನಾರ್ದು
ಪೀರ್ದನಿಂ
ತವಗಡದಿಂ
ದಿನೇಶಜನನಂಕದ ಗಾಂಡಿವಿ
ಕೊಂದನೆಂತು ಪಾಂ|
ಡವರನಿದಿರ್ಚಿ ಸಾಧಿಸುವೆ
ಸಂಧಿಯನೊಲ್ವುದೆ
ಕಜ್ಜಮೀಗಳೆಂ

ಬವರ್ಗಳ

ಮಾತುಗೇಳ್ವನಿತನಿನ್ನೆನಗಂ

ಬಿದಿ ಮಾಡಿತಾಗದೇ|| ೮ ||

ಪದ್ಯ-೮:ಪದವಿಭಾಗ-

ಅರ್ಥ:ಪವನಜನು ಅಂತು ಪೂಣ್ದು (ಭೀಮನು ಹಾಗೆ ಪ್ರತಿಜ್ಞೆ ಮಾಡಿ) ಯುವರಾಜನ ನೆತ್ತರನಾರ್ದು ಪೀರ್ದನು (ಯುವರಾಜನು ರಕ್ತವನ್ನು ಆರ್ಭಟಮಾಡಿ ಕುಡಿದನು.) ಇಂತು ಅವಗಡದಿಂ

ದಿನೇಶಜನನು ಅಂಕದ
ಗಾಂಡಿವಿ ಕೊಂದನು (ಇಲ್ಲಿ
'ಅವಗಡಕ್ಕೆ -ಸಾಹಸ,:
ಡಿಎಲ್‌ಎನ್.) (ಹೀಗೆ
ಸಾಹಸದಿಂದ ಕರ್ಣನನ್ನು
ಶೂರನಾದ ಅರ್ಜುನನು
ಕೊಂದನು.) ಎಂತು
ಪಾಂಡವರನು ಇದಿರ್ಚಿ
ಸಾಧಿಸುವೆ (ಪಾಂಡವರನ್ನು
ಹೇಗೆ ಎದುರಿಸಿ
ಗೆಲ್ಲುತ್ತೀಯೇ?) ಸಂಧಿಯನು

ಒಲ್ವುದೆ ಕಜ್ಜಂ ಈಗಳೆಂಬ ಅವರ್ಗಳ ಮಾತುಗೇಳ್ವನಿತಂ (ಈಗ ಸಂಧಿಗೆ ಒಪ್ಪುವುದೇ (ಸರಿಯಾದ) ಕಾರ್ಯವೆಂದು ಹೇಳುವವರ ಮಾತನ್ನು ಕೇಳುವಷ್ಟನ್ನು) ಇನ್ನು ಎನಗಂ ಬಿದಿ ಮಾಡಿತಾಗದೇ (ಇನ್ನು/ ಈಗ ನನಗೆ ವಿಧಿ ಮಾಡಿದೆಯಲ್ಲವೇ?)

ಪದ್ಯ-೮:ಅರ್ಥ: ಭೀಮನು ಹಾಗೆ ಪ್ರತಿಜ್ಞೆ ಮಾಡಿ

ಯುವರಾಜನು ರಕ್ತವನ್ನು
ಆರ್ಭಟಮಾಡಿ ಕುಡಿದನು.
ಹೀಗೆ ಸಾಹಸದಿಂದ
ಕರ್ಣನನ್ನು ಶೂರನಾದ
ಅರ್ಜುನನು ಕೊಂದನು.
ಪಾಂಡವರನ್ನು ಹೇಗೆ ಎದುರಿಸಿ
ಗೆಲ್ಲುತ್ತೀಯೇ? ಈಗ ಸಂಧಿಗೆ
ಒಪ್ಪುವುದೇ (ಸರಿಯಾದ)
ಕಾರ್ಯವೆಂದು ಹೇಳುವವರ
ಮಾತನ್ನು ಕೇಳುವಷ್ಟನ್ನು ಇನ್ನು

ನನಗೆ ವಿಧಿ

ಮಾಡಿದೆಯಲ್ಲವೇ?

ವ|| ಎಂಬೆನ್ನಗಮೆಯ್ದೆ ವಂದ ಪಿತೃದ್ವಂದ್ವ ಚರಣಕ್ಕೆ ವಿನಯವಿನಮಿತೋತ್ತಮಾಂಗ ನಾದನನಿರ್ವರುಂ ಪರಸಿ ತಡವರಿಸಿಯುಂ ತೆಬ್ಬರಿಸಿಯುಮಪ್ಪಿಕೊಂ ಡಮೃತವರ್ಷಿ ಕರ ಪರಿಷೇಕದಿಂದೆ ಪುತ್ರಸ್ಪರ್ಶನಮಾಪ್ಯಾಯನ

ಕೋಟಯಾಗೆ ಪುಳಕಿತಗಾತ್ರರುಮಾನಂದ ಬಾಷ್ಪವಾರಿ ಧಾರಾಪರಿಕಲಿತನೇತ್ರರುಮಾಗಿ ಕಿಱಿದಾನುಂ ಬೇಗಮಿರ್ದಲ್ಲಿ ಕಾರ್ಯವ್ಯಗ್ರ ಪಾಪಿಪಾಶಾಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬೆನ್ನಗಂ ಎಯ್ದೆ

ವಂದ ಪಿತೃದ್ವಂದ್ವ ಚರಣಕ್ಕೆ
(ಎನ್ನುವಷ್ಟರಲ್ಲಿ ಸಮೀಪಕ್ಕೆ
ಬಂದ ತಾಯಿ ತಂದೆಗಳ
ಪಾದಕ್ಕೆ) ವಿನಯ ವಿನಮಿತ
ಉತ್ತಮಾಂಗನಾದನಂ
(ವಿನಯದಿಂದ ತಲೆಬಗ್ಗಿಸಿ
ನಮಸ್ಕಾರಮಾಡಿದವನನ್ನು)
ಇರ್ವರುಂ ಪರಸಿ
ತಡವರಿಸಿಯುಂ ತೆಬ್ಬರಿಸಿಯು
ಅಟ್ಟಿಕೆಳ್ ಅಪ್ಪಿಕೊಂಡು
(ಇಬ್ಬರೂ ಹರಿಸಿದರು.

ಮೈಯನ್ನು
ಮುಟ್ಟಿನೋಡಿಯೂ
ಸಮಾಧಾನಮಾಡಿಯೂ
ಪ್ರೀತಿಯಿಂದ ಅಪ್ಪಿಕೊಂಡು)
ಅಮೃತವರ್ಷಿ ಕರ
ಪರಿಷೇಕದಿಂದೆ ಪುತ್ರಸ್ಪರ್ಶನಂ
ಆಪ್ಯಾಯನಕೋಟಯಾಗೆ
(ಅಮೃತವನ್ನು ಸುರಿಸುವ
ಅಭಿಷೇಕಕ್ಕಿಂತ ಮಗನ
ಸ್ಪರ್ಶವು ಹೆಚ್ಚಿನ
ಸಂತೋಷವನ್ನುಂಟುಮಾಡಿ

ತು. ಹಾಗೆ ಆಗಲು) ಪುಳಕಿತ
ಗಾತ್ರರುಂ ಆನಂದ ಬಾಷ್ಪವಾರಿ
ಧಾರಾ ಪರಿಕಲಿತ
ನೇತ್ರರುಮಾಗಿ (
ರೋಮಾಂಚಿತವಾದ
ಶರೀರವುಳ್ಳವರೂ
ಸಂತೋಷದ ಕಣ್ಣೀರಿನ
ಪ್ರವಾಹದಿಂದ ತುಂಬಿದ
ಕಣ್ಣುಳ್ಳವರೂ ಆದರೂ)
ಕಿಱಿದಾನುಂ ಬೇಗಮಿರ್ದು
ಅಲ್ಲಿ (ಅಲ್ಲಿ ಸ್ವಲ್ಪ ಕಾಲವಿದ್ದು)

ಕಾರ್ಯವ್ಯಗ್ರ ಪಾಪಿ ಪಾಶಾಶ್ರಿತರೆಲ್ಲರುಂ ಕೇಳಲೆಂದು (ಮುಂದಿನ ಕಾರ್ಯದಲ್ಲಿ ಆಸಕ್ತನಾದ ಪಾಪಿ ದುರ್ಯೋಧನನ ಪಾಶಕ್ಕೆ ಒಳಗಾದವರೆಲ್ಲರೂ ಕೇಳಲೆಂದು) ಮಹೀಭುಜನು ಇಂತೆಂದಂ (ಧೃತರಾಷ್ಟ್ರನು ಹೀಗೆಂದನು)-

ವಚನ:ಅರ್ಥ:ಎನ್ನುವಷ್ಟರಲ್ಲಿ ಸಮೀಪಕ್ಕೆ ಬಂದ ತಾಯಿ

ತಂದೆಗಳ ಪಾದಕ್ಕೆ
ವಿನಯದಿಂದ ತಲೆಬಗ್ಗಿಸಿ
ನಮಸ್ಕಾರಮಾಡಿದವನನ್ನು
ಇಬ್ಬರೂ ಹರಿಸಿದರು.
ಮೈಯನ್ನು
ಮುಟ್ಟಿನೋಡಿಯೂ
ಸಮಾಧಾನಮಾಡಿಯೂ
ಪ್ರೀತಿಯಿಂದ ಅಪ್ಪಿಕೊಂಡು,
ಅಮೃತವನ್ನು ಸುರಿಸುವ
ಅಭಿಷೇಕಕ್ಕಿಂತ ಮಗನ
ಸ್ಪರ್ಶವು ಹೆಚ್ಚಿನ

ಸಂತೋಷವನ್ನುಂಟುಮಾಡಿ
ತು.ಆಗ ರೋಮಾಂಚಿತವಾದ
ಶರೀರವುಳ್ಳವರೂ
ಸಂತೋಷದ ಕಣ್ಣೀರಿನ
ಪ್ರವಾಹದಿಂದ ತುಂಬಿದ
ಕಣ್ಣುಳ್ಳವರೂ ಆದರೂ ಅಲ್ಲಿ
ಸ್ವಲ್ಪ ಕಾಲವಿದ್ದು ಮುಂದಿನ
ಕಾರ್ಯದಲ್ಲಿ ಆಸಕ್ತನಾದ
ಪಾಪಿ ದುರ್ಯೋಧನನ
ಪಾಶಕ್ಕೆ ಒಳಗಾದವರೆಲ್ಲರೂ

ಕೇಳಲೆಂದು ದೃತರಾಷ್ಟ್ರನು ಹೀಗೆಂದನು.

<u>ದುರ್ಯೋಧನನಿಗೆ ಸಂಧಿಗಾಗಿ ದೃತರಾಷ್ಟ್ರನ ಹಿತವಚನ- ಅದಕ್ಕೆ ದುರ್ಯೋಧನನ ಸಮಾಧಾನ</u>

ಮ|| ಎನಗಂ ಪಾಂಡುಗಮಿಲ್ಲ ಭೇದಮೆಳೆಯಂ ಪಚ್ಚಾಳ್ವಮಾ ಪಾಂಡುನಂ
ದನರುಂ ಸೈದರೆ ನಿನ್ನೊಳೀ ಕಲಹಮುಂ

ನಿನ್ನಿಂದಮಾಯ್ತೆಂದೊಡಿಂ|

ಮುನಿವೈ ಗಂಗೆಯ

ಪೆರ್ಮಗಂಗೆ

ಘಟಸಂಭೂತಂಗೆ

ಕರ್ಣಂಗಸಾ

ಧ್ಯನೊಳಾ ಗಾಂಡಿವಿಯೊಳ್

ಕಱುತ್ತಿಱಿವರಾರಿಂ

ಮಾಡುವಂ ಸಂಧಿಯಂ|| ೯ ||

ಪದ್ಯ-೯:ಪದವಿಭಾಗ-

ಅರ್ಥ:ಎನಗಂ ಪಾಂಡುಗಂ

ಇಲ್ಲ ಭೇದಂ (ನನಗೂ

ಪಾಂಡುವಿಗೂ ಭೇದವಿಲ್ಲ;)
ಎಳೆಯಂ ಪಚ್ಚಿ ಆಳ್ವಂ
(ರಾಜ್ಯವನ್ನು
ಭಾಗಮಾಡಿಕೊಂಡು
ಆಳೋಣ.) ಆ
ಪಾಂಡುನಂದನರುಂ ಸೈದರೆ
ನಿನ್ನೊಳು (ಆ
ಪಾಂಡುಪುತ್ರರೂ ನಿನ್ನಲ್ಲಿ
ಸರಿಯಾಗಿ
ನಡೆದುಕೊಳ್ಳುವವರೇ
ಆಗಿದ್ದಾರೆ.) ಈ ಕಲಹಮುಂ

ನಿನ್ನಿಂದಂ ಆಯ್ತೆಂದೊಡಿಂ
ಮುನಿವೈ (ಈ ಜಗಳವು
ನಿನ್ನಿಂದ ಆಯಿತು ಎಂದರೆ
ಇನ್ನು ನೀನು
ಕೋಪಿಸಿಕೊಳ್ಳುತ್ತೀಯೆ.)
ಗಂಗೆಯ ಪೆರ್ಮಗಂಗೆ
(ಗಂಗೆಯ ಹಿರಿಮೆಯ ಮಗ;
ಭೀಷ್ಮನಿಗೆ,)
ಘಟಸಂಭೂತಂಗೆ (ಘಟದಲ್ಲಿ
ಹುಟ್ಟಿದವ; ದ್ರೋಣನಿಗೆ)
ಕರ್ಣಂಗೆ ಅಸಾಧ್ಯನೊಳು

(ಭೀಷ್ಮನಿಗೆ, ದ್ರೋಣನಿಗೆ, ಕರ್ಣರಿಗೆ ಅಸಾಧ್ಯವಾದ) ಆ ಗಾಂಡಿವಿಯೊಳ್ ಕಱುತ್ತು ಇಱಿವರು ಆರು (ಆ ಅರ್ಜುನನನ್ನು ಕೋಪದಿಂದ ಎದುರಿಸಿ ಯುದ್ಧ ಮಾಡುವವರು ಯಾರಿದ್ದಾರೆ?) ಇಂ ಮಾಡುವಂ ಸಂಧಿಯಂ (ಇನ್ನು ಸಂಧಿಯನ್ನು ಅವರೊಂದಿಗೆ ಮಾಡಿಕೊಳ್ಳೋಣ.)

ಪದ್ಯ-೯:ಅರ್ಥ: ನನಗೂ ಪಾಂಡುವಿಗೂ ಭೇದವಿಲ್ಲ; ರಾಜ್ಯವನ್ನು ಭಾಗಮಾಡಿಕೊಂಡು ಆಳೋಣ. ಆ ಪಾಂಡುಪುತ್ರರೂ ನಿನ್ನಲ್ಲಿ ಸರಿಯಾಗಿ ನಡೆದುಕೊಳ್ಳುವವರೇ ಆಗಿದ್ದಾರೆ. ಈ ಜಗಳವು ನಿನ್ನಿಂದ ಆಯಿತು ಎಂದರೆ ಇನ್ನು ನೀನು

ಕೋಪಿಸಿಕೊಳ್ಳುತ್ತೀಯೆ. ಭೀಷ್ಮನಿಗೆ, ದ್ರೋಣನಿಗೆ, ಕರ್ಣರಿಗೆ ಅಸಾಧ್ಯವಾದ ಆ ಅರ್ಜುನನನ್ನು ಕೋಪದಿಂದ ಎದುರಿಸಿ ಯುದ್ಧ ಮಾಡುವವರು ಯಾರಿದ್ದಾರೆ? ಇನ್ನು ಸಂಧಿಯನ್ನು ಅವರೊಂದಿಗೆ ಮಾಡಿಕೊಳ್ಳೋಣ. ಎಂದನು ದೃತರಾಷ್ಟ್ರ.

ಹರಿಣಿ|| ಪಗೆಗೆ
ಕಣಿಯೊಂದುಂಟೇ
ನಣ್ಪಿಂಗಮಾಗರಮುಂಟೆ ನೀಂ
ಬಗೆಯ ಪಗೆಯುಂ ನಣ್ಪುಂ
ಕೆಯ್ಕೊಂಡ ಕಜ್ಜದಿನಲ್ತೆ ಪು|
ಟ್ಟುಗುಮರಸುಗಳ್ಗೆಂದೀ
ಸಂದರ್ಥಶಾಸ್ತ್ರದೊಳೇಕೆ
ಪೇೞ್
ಮಗನೆ ನೆಗಳ್ತೆವೃ ಕಾರ್ಯಂ
ಮಿತ್ರಾದಿ(ರಿ)
ಕಾರಕಮೆಂಬುದಂ|| ೧೦ ||

ಪದ್ಯ-೧೦:ಪದವಿಭಾಗ-ಅರ್ಥ:ಪಗೆಗೆ ಕಣಿಯೊಂದುಂಟೇ ನಣ್ಪಿಂಗಂ ಆಗರಮುಂಟೆ (ಹಗೆತನಕ್ಕೆ ಒಂದು ಗಣಿಯಿದೆಯೇನು? ನಂಟಿಗೆ ಒಂದು ಮನೆಯಿದೆಯೇನು?) ನೀಂ ಬಗೆಯ, ಪಗೆಯುಂ ನಣ್ಪುಂ ಕೆಯ್ಕೊಂಡ ಕಜ್ಜದಿಂ ಅಲ್ತೆ, (ನೀನು ಯೋಚಿಸಪ್ಪ; ದ್ವೇಷ, ನೆಂಟನೆಂಬುದು ಎರಡೂ

ಅವರು ಮಾಡಿದ
ಕಾರ್ಯದಿಂದಲ್ಲವೇ
ಹುಟ್ಟುವುದು?) ಪುಟ್ಟುಗುಂ
ಅರಸುಗಳ್ಗೆ ಎಂದು ಈ ಸಂದ
ಅರ್ಥಶಾಸ್ತ್ರದೊಳು(ರಾಜರಿಗೆ
ಪ್ರಸಿದ್ಧವಾದ ಅರ್ಥಶಾಸ್ತ್ರದಲ್ಲಿ
ಹೇಳಿರುವ ‘ಕಾರ್ಯವೇ ಸ್ನೇಹ
ಶತ್ರುಗಳಿಗೆ ಕಾರಣವಾದುದು)
ಏಕೆ ಪೇಟ್ಮಿಗನೆ ನೆಗಳ್ವೈ
ಕಾರ್ಯಂ ಮಿತ್ರಾದಿ
ಕಾರಕಮೆಂಬುದಂ (ಕಾರ್ಯಂ

ಮಿತ್ರಾರಿ ಕಾರಕಂ; ಮಿತ್ರ ಅರಿಗೆ ಕಾರಣ; ಎಂಬ ಈ ನೀತಿವಾಕ್ಯದಂತೆ ತಿಳಿದು ಏಕೆ ಮಾಡುವುದಿಲ್ಲ ಹೇಳು ಮಗನೇ?)

ಪದ್ಯ-೧೦:ಅರ್ಥ: ಹಗೆತನಕ್ಕೆ ಒಂದು ಗಣಿಯಿದೆಯೇನು? ನಂಟಿಗೆ ಒಂದು ಮನೆಯಿದೆಯೇನು? ನೀನು ಯೋಚಿಸಪ್ಪ; ದ್ವೇಷ, ನೆಂಟನೆಂಬುದು ಎರಡೂ

ಅವರು ಮಾಡಿದ ಕಾರ್ಯ
ದಿಂದಲ್ಲವೇ ಹುಟ್ಟುವುದು?
ರಾಜರಿಗೆ, ಪ್ರಸಿದ್ಧವಾದ
ಅರ್ಥಶಾಸ್ತ್ರದಲ್ಲಿ ಹೇಳಿರುವ
‘ಕಾರ್ಯವೇ ಸ್ನೇಹ ಶತ್ರುಗಳಿಗೆ
ಕಾರಣವಾದುದು’ (ಕಾರ್ಯಂ
ಮಿತ್ರಾರಿ ಕಾರಕಂ; ಮಿತ್ರ ಅರಿ)
ಎಂಬ ಈ ನೀತಿವಾಕ್ಯದಂತೆ
ತಿಳಿದು ಏಕೆ ಮಾಡುವುದಿಲ್ಲ
ಹೇಳು ಮಗನೇ?

ಕಂ||

ನೀನುಳ್ಳೊಡೆಲ್ಲರೊಳರೆಮ

ಗೇನುಮಱಿಲ್

ಮನದೊಳಿಲ್ಲದೆಂತೆನೆ ಮಗನೇ|

ಭಾನುವೆ ಸಾಲದೆ ಪಗಲೆನಿ

ತಾನುಂ

ದೀವಿಗೆಗಳುರಿದೊಡೇಂ

ನಂದಿದೊಡೇಂ|| ೧೧ ||

ಪದ್ಯ-೧೧:ಪದವಿಭಾಗ-

ಅರ್ಥ:ನೀನು ಉಳ್ಳೊಡೆ ಎಲ್ಲರು ಒಳರ್ ಎಮಗೆ

(ಮಗನೆ ನಮಗೆ ನೀನಿದ್ದರೆ ಎಲ್ಲರೂ ಇದ್ದಂತೆಯೇ) ಏನುಮ್ ಅಬಿಲ್ ಮನದೊಳು ಇಲ್ಲ (ಮಗನೆ ನಮಗೆ ಮನಸ್ಸಿನಲ್ಲಿ ಯಾವ ದುಃಖವೂ ಇಲ್ಲ.- ನಿನ್ನ ನಡತೆಯ ಬಗ್ಗೆ) ಅದೆಂತೆನೆ ಮಗನೇ ಭಾನುವೆ ಸಾಲದೆ (ಅದು ಹೇಗೆಂದರೆ ಸೂರ್ಯನಿದ್ದರೆ ಸಾಲುವುದಿಲ್ಲವೇ?) ಪಗಲ್

ಎನಿತಾನುಂ ದೀವಿಗೆಗಳು ಉರಿದೊಡೇಂ ನಂದಿದೊಡೇಂ (ಹೇಗೆಂದರೆ ಹಗಲಿನಲ್ಲಿ ಒಬ್ಬ ಸೂರ್ಯನಿದ್ದರೆ ಸಾಲದೇ? ಎಷ್ಟೋ ದೀವಿಗೆಗಳು ಉರಿದರೇನು, ಆರಿಹೋದರೇನು?) ತಮ್ಮ ಜೀವನದ ಬೆಳಕಿಗೆ ಅವನು ಸೂರ್ಯ, ಹಗಲು ಇದ್ದಂತೆ.

ಪದ್ಯ-೧೧:ಅರ್ಥ: ಮಗನೆ ನಮಗೆ ನೀನಿದ್ದರೆ ಎಲ್ಲರೂ

ಇದ್ದಂತೆಯೇ. ಮಗನೆ ನಮಗೆ ಮನಸ್ಸಿನಲ್ಲಿ ಯಾವ ದುಃಖವೂ ಇಲ್ಲ (ನಿನ್ನ ನಡತೆಯ ಬಗ್ಗೆ); ಹೇಗೆಂದರೆ ಹಗಲಿನಲ್ಲಿ ಒಬ್ಬ ಸೂರ್ಯನಿದ್ದರೆ ಸಾಲದೇ? ಎಷ್ಟೋ ದೀವಿಗೆಗಳು ಉರಿದರೇನು, ಆರಿಹೋದರೇನು? ತಮ್ಮ ಜೀವನದ ಬೆಳಕಿಗೆ ಅವನು ಸೂರ್ಯ, ಹಗಲು ಇದ್ದಂತೆ.

ವ|| ಅದಲ್ಲದೆಯುಂ
ಪಾಂಡವರಪ್ಪೊಡೆನಗೆ
ಪಾಂಡುರಾಜಂಗೆ
ಬೆಸಕೆಯ್ಯುದುದನೆ
ಬೆಸಕೆಯ್ವರೆಂದುದಂಮೀಱುವ
ರಲ್ಲರವರ
ನಾನೆಂತುಮೊಡಂಬಡಿಹಸಿ
ನೀನೆಂದುದನೆನಿಸುವೆನಿದರ್ಕೆ
ಮಾರ್ಕೊಳ್ಳದೊಡಂಬಡು
ನಿನ್ನಂ ಕೆಯ್ಯನೊಡ್ಡಿ
ಬೇಡಿದಪ್ಪೆನೆಂದ ಧೃತರಾಷ್ಟ್ರನ

ನುಡಿಗನುಬಲಮಾಗಿ ಗಾಂಧಾರಿಯಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ ಪಾಂಡವರು ಅಪ್ಪೊಡೆ (ಹಾಗಲ್ಲದೆಯೂ ಪಾಂಡವರಾದರೆ) ಎನಗೆ ಪಾಂಡುರಾಜಂಗೆ ಬೆಸಕೆಯ್ಯುದುದನೆ ಬೆಸಕೆಯ್ವರು (ಪಾಂಡುರಾಜನಿಗೆ

ವಿಧೇಯರಾಗಿದ್ದಂತೆಯೇ
ನನ್ನಲ್ಲಿಯೂ
ವಿಧೇಯರಾಗಿದ್ದಾರೆ. ನಾನು
ಹೇಳಿದುದನ್ನು ಮಾಡುವರು.)
ಎಂದುದಂ ಮೀಱುವರಲ್ಲರು
ಅವರ ನಾನು ಎಂತುಂ
ಒಡಂಬಡಿಹಸಿ (ಅವರನ್ನು
ನಾನು ಹೇಗಾದರೂ ಒಪ್ಪಿಸಿ)
ನೀನೆಂದುದನು ಎನಿಸುವೆನು
(ನೀನು ಹೇಳುದುದಕ್ಕೆ
ಒಪ್ಪಿಕೊಳ್ಳುವ ಹಾಗೆ

ಮಾಡುತ್ತೇನೆ.) ಅದರ್ಕೆ
ಮಾರ್ಕೊಳ್ಳದೆ ಒಡಂಬಡು
(ಇದಕ್ಕೆ ನೀನು ಪ್ರತಿಯಾಡದೆ
ಒಪ್ಪಿಕೊ) ನಿನ್ನಂ ಕೆಯ್ಯನೊಡ್ಡಿ
ಬೇಡಿದಪ್ಪೆನು (ನಿನ್ನನ್ನು
ಕೈಯೊಡ್ಡಿ ಬೇಡಿಕೊಳ್ಳುತ್ತೇನೆ)
ಎಂದ ಧೃತರಾಷ್ಟ್ರನ ನುಡಿಗೆ
ಅನುಬಲಮಾಗಿ
ಗಾಂಧಾರಿಯಿಂತೆಂದಳ್
(ಎಂದು ಹೇಳಿದ ಧೃತರಾಷ್ಟ್ರನ
ಮಾತಿಗೆ ಸಹಾಯಕವಾಗಿ

(ಬೆಂಬಲವಾಗಿ) ಗಾಂಧಾರಿ ಹೀಗೆಂದಳು.)-

ವಚನ:ಅರ್ಥ:ಹಾಗಲ್ಲದೆ ಯೂ ಪಾಂಡವರಾದರೆ ಪಾಂಡುರಾಜನಿಗೆ ವಿಧೇಯರಾಗಿದ್ದಂತೆಯೇ ನನ್ನಲ್ಲಿಯೂ ವಿಧೇಯರಾಗಿದ್ದಾರೆ. ನಾನು ಹೇಳಿದುದನ್ನು ಮಾಡುವರು. ಅವರನ್ನು ನಾನು ಹೇಗಾದರೂ ಒಪ್ಪಿಸಿ ನೀನು ಹೇಳುದುದಕ್ಕೆ

ಒಪ್ಪಿಕೊಳ್ಳುವ ಹಾಗೆ ಮಾಡುತ್ತೇನೆ. ಇದಕ್ಕೆ ನೀನು ಪ್ರತಿಯಾಡದೆ ಒಪ್ಪಿಕೊ; ನಿನ್ನನ್ನು ಕೈಯೊಡ್ಡಿ ಬೇಡಿಕೊಳ್ಳುತ್ತೇನೆ, ಎಂದು ಹೇಳಿದ ಧೃತರಾಷ್ಟ್ರನ ಮಾತಿಗೆ ಸಹಾಯಕವಾಗಿ (ಬೆಂಬಲವಾಗಿ) ಗಾಂಧಾರಿ ಹೀಗೆಂದಳು-

ಚಂ|| ಕುರುಕುಳನಂದನಂ ಪವನನಂದನನೆಂಬ

ಮದಾಂಧಗಂಧಸಿಂ
ಧುರೆಮೆ ಕಱುತ್ತು ಪಾಯೆ
ಪಡಲಿಟ್ಟವೊಲಾದುದು
ಪುಣ್ಯದೊಂದು ಪೆ|
ರ್ವರನುೞಿವಂತೆ
ನೀನುೞಿದೆಯೆನ್ನಿರಿವನ್ನರುಮಿ
ಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ
ನುಡಿಗೇಳ್ ಮಗನೇ ಬಗೆ
ತಂದೆಗಿಂಬುಕೆಯ್|| ೧೨

ಪದ್ಯ-೧೨:ಪದವಿಭಾಗ-ಅರ್ಥ:ಕುರುಕುಳ ನಂದನಂ ಪವನನಂದನನೆಂಬ ಮದಾಂಧಗಂಧಸಿಂಧುರೆಮೆ ಕಱುತ್ತು(ಕೋಪಿಸಿ) ಪಾಯೆ (ಹಾಯಲು)-(ಕುರುಕುಲವೆಂಬ ನಂದನವನವು ಭೀಮನೆಂಬ ಮದ್ದಾನೆಯು ಕೋಪದಿಂದ ನುಗ್ಗಲು) ಪಡಲಿಟ್ಟವೊಲಾದುದು

(ಪುಡಿಯಾದಂತೆ ಧ್ವಂಸ ಆಯಿತು) ಪುಣ್ಯದೆ ಒಂದು ಪೆರ್ವರನು ಉೞಿವಂತೆ (ನಮ್ಮಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವ ಹಾಗೆ) ನೀನು ಉೞಿದೆಯೆನ್ ಇರಿವನ್ನರುಂ ಇಲ್ಲ (ನೀನು ಉಳಿದಿದ್ದೀಯೆ. ಇನ್ನು ಯುದ್ಧಮಾಡುವವರಾರೂ ಇಲ್ಲ.) ಮುತ್ತರುಂ ಕುರುಡರು ಎನ್ನದೆ ಎಮ್ಮ ನುಡಿಗೇಳ್

ಮಗನೇ (ಮುದುಕರು ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೇ;) ಬಗೆ ತಂದೆಗೆ ಇಂಬುಕೆಯ್ (ಯೋಚಿಸು; ತಂದೆಯು ಮಾತಿಗೆ ಅವಕಾಸಕೊಡು, ಒಪ್ಪು.)

ಪದ್ಯ-೧೨:ಅರ್ಥ: ಕುರುಕುಲವೆಂಬ ನಂದನವನವು ಭೀಮನೆಂಬ ಮದ್ದಾನೆಯು ಕೋಪದಿಂದ

ನುಗ್ಗಲು ಪುಡಿಯಾದಂತೆ ಧ್ವಂಸ ಆಯಿತು. ನಮ್ಮಪುಣ್ಯಾದಿಂದ ಒಂದು ದೊಡ್ಡ ಮರವು ಉಳಿಯುವ ಹಾಗೆ ನೀನು ಉಳಿದಿದ್ದೀಯೆ. ಇನ್ನು ಯುದ್ಧಮಾಡುವವರಾರೂ ಇಲ್ಲ. ಮುದುಕರು ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೇ; ಯೋಚಿಸು;

ತಂದೆಯು ಮಾತಿಗೆ ಅವಕಾಸಕೊಡು,ಒಪ್ಪು.

ಕಂ||

ಪೋಕಿನಿತರೊಳಸವಸದಿಂ

ದೀ ಕಲಹಂ ಧರ್ಮಸುತನನಾಂ

ನಿನಗೆ ನಿರಾ|

ಪೇಕಮೊಡಂಬಡಿಸುವೆನಿಂ

ತೀ ಕಜ್ಜಂ ಕೂರ್ಪೇಡೆನಗೆ

ಕೆಯ್ಕೊಳ್ ಮಗನೆ|| ೧೩ ||

ಪದ್ಯ-೧೩:ಪದವಿಭಾಗ-ಅರ್ಥ:ಪೋಕೆ (ಹೋಗಲಿ)

ಇನಿತರೊಳೆ ಅಸವಸದಿಂದ ಈ ಕಲಹಂ (ಈ ಜಗಳವು ಇಷ್ಟಕ್ಕೇ ಬೇಗ ಹೋಗಲಿ,-ನಿಲ್ಲಲಿ) ಧರ್ಮಸುತನನು ಆಂ ನಿನಗೆ ನಿರಾಪೇಕಂ ಒಡಂಬಡಿಸುವೆನು (ಧರ್ಮರಾಜನನ್ನು ಆಕ್ಷೇಪಣೆಯೇ ಇಲ್ಲದೆ ಒಡಂಬಡುವೆನು. ಒಪ್ಪುವಹಾಗೆ ಮಾಡುತ್ತೇನೆ.) ಇಂತು ಈ ಕಜ್ಜಂ (ಈ

ಕಾರ್ಯವನ್ನು) ಕೂರ್ಪೇಡೆ (ಪ್ರೀತಿಸುವುದಾದರೆ) ಎನಗೆ ಕೆಯ್ಕೊಳ್ ಮಗನೆ (ಹೀಗೆ, ನೀನು ನನಗೆ ಪ್ರೀತಿಸುವುದಾದರೆ ಈ ಕಾರ್ಯವನ್ನು ನೀನು ಅಂಗೀಕಾರಮಾಡು)

ಪದ್ಯ-೧೩:ಅರ್ಥ: ಈ ಜಗಳವು ಇಷ್ಟಕ್ಕೇ ಬೇಗ ಹೋಗಲಿ,-ನಿಲ್ಲಲಿ. ಧರ್ಮರಾಜನನ್ನು

ಆಕ್ಷೇಪಣೆಯೇ ಇಲ್ಲದೆ ಒಡಂಬಡುವೆನು. ನೀನು ನನಗೆ ಪ್ರೀತಿಸುವುದಾದರೆ ಈ ಕಾರ್ಯವನ್ನು ನೀನು ಅಂಗೀಕಾರಮಾಡು. ಎಂದಳು ತಾಯಿ ಗಾಂಧಾರಿ.

ವ|| ಎಂದನುಬಂಧಿಸಿದ ಮೋಹಪಾಶದೊಳ್ ತಾಯ್ತಂದೆಯ ನುಡಿದ ನುಡಿಯಂ ಕೇಳ್ದಭಿಮಾನಧನಂ ಸುಯೋಧನನಿಂತೆಂದಂ-

ವಚನ:ಪದವಿಭಾಗ-ಅರ್ಥ:ಎಂದು ಅನುಬಂಧಿಸಿದ ಮೋಹಪಾಶದೊಳ್ ತಾಯ್ತಂದೆಯ ನುಡಿದ (ಎಂದು ಮೋಹಪಾಶದಿಂದ ಬಂಧಿತರಾದ ತಾಯಿತಂದೆಯರು ಹೇಳಿದ) ನುಡಿಯಂ ಕೇಳ್ದ ಅಭಿಮಾನಧನಂ ಸುಯೋಧನನು ಇಂತೆಂದಂ

(ನುಡಿಯನ್ನು ಕೇಳಿ ಅಭಿಮಾನಧನನಾದ ದುರ್ಯೋಧನನು ಹೀಗೆಂದನು)-

ವಚನ:ಅರ್ಥ: ಎಂದು ಮೋಹಪಾಶದಿಂದ ಬಂಧಿತರಾದ ತಾಯಿತಂದೆಯರು ನುಡಿದ ನುಡಿಯನ್ನು ಕೇಳಿ ಅಭಿಮಾನಧನನಾದ

ದುರ್ಯೋಧನನು
ಹೀಗೆಂದನು-

ಉ|| ದೋಷಮೆ ನಿಮ್ಮ
ಪೇೞ್ದುದೆನಗೆಂತುಮೊಡಂಬಡ
ಲಪ್ಪುದೊಂದೆ ದು
ಶ್ಶ್ಯಾಸನ ರಕ್ತಪಾನದೊಳೆ
ಸೊರ್ಕಿದ ಪಾತಕನಂ ಪೊರಳ್ಚಿ
ಕೊಂ|
ದೀ ಸಮರಾವನೀತಳದೊಳಿಂ
ಬಲಿಗೆಯ್ಜಿನಮೊಲ್ಲೆನಲ್ತೆ ನಿ

ದೋಷಿಗಳೊಳ್ ಪೃಥಾಸುತರೊಳಿಂ ಮಗುಳ್ದುಂ ಪುದುವಾಳ್ವೆನೆಂಬೆನೇ|| ೧೪ ||

ಪದ್ಯ-೧೪:ಪದವಿಭಾಗ-ಅರ್ಥ:ದೋಷಮೆ ನಿಮ್ಮ ಪೇಳ್ದುದು ಎನಗೆ ಎಂತುಂ ಒಡಂಬಡಲಪ್ಪುದು (ನೀವು ಹೇಳಿದುದು ನನಗೆ ದೋಷವೇನಲ್ಲ ಹೇಗೂ ಒಪ್ಪತಕ್ಕುದೇ) ಒಂದೆ

ದುಶ್ಯಾಸನ ರಕ್ತಪಾನದೊಳ್
ಸೊರ್ಕಿದ ಪಾತಕನಂ (ಆದರೆ
ಒಂದು ವಿಚಾರ, ದುಶ್ಯಾಸನ
ರಕ್ತಪಾನದಿಂದ ಸೊಕ್ಕಿರುವ
ಪಾಪಿಯಾದ ಭೀಮನನ್ನು)
ಪೊರಳ್ಚಿ ಕೊಂದು ಈ ಸಮರ
ಅವನೀತಳದೊಳಿಂ
(ಹೊರಳಿಸಿ ಕೊಂದು ಈ
ಯುದ್ಧರಂಗದಲ್ಲಿ)
ಬಲಿಗೆಯ್ದಿನಂ ಒಲ್ಲೆನಲ್ತೆ
(ಬಲಿಯಿಕ್ಕುವವರೆಗೆ

ಒಪ್ಪುಲಾರೆ.)
ನಿರ್ದೋಷಿಗಳೊಳ್
ಪೃಥಾಸುತರೊಳ್ ಇಂ
ಮಗುಱ್ದಿಂ ಪುದುವಾೞ್ವೆನ್
ಎಂಬೆನೇ (ನಿರ್ದೋಷಿಗಳಾದ
ಪೃಥೆಯ ಮಕ್ಕಳಲ್ಲಿ ಇನ್ನು
ಕೂಡಿ
ಬದುಕುವುದಿಲ್ಲವೆನ್ನುತ್ತೇನೆ
ಯೇ)
ಪದ್ಯ-೧೪:ಅರ್ಥ:ನೀವು
ಹೇಳಿದುದು ನನಗೆ

ದೋಷವೇನಲ್ಲ ಹೇಗೂ
ಒಪ್ಪತಕ್ಕುದೇ; ಆದರೆ ಒಂದು
ವಿಚಾರ, **ದುಶ್ಯಾಸನ
ರಕ್ತಪಾನದಿಂದ ಸೊಕ್ಕಿರುವ
ಪಾಪಿಯಾದ ಪಾತಕಿ
ಭೀಮನನ್ನು ಹೊರಳಿಸಿ
ಕೊಂದು ಈ
ಯುದ್ಧರಂಗದಲ್ಲಿ
ಬಲಿಯಿಕ್ಕುವವರೆಗೆ
ಒಪ್ಪುಲಾರೆ.**
ನಿರ್ದೋಷಿಗಳಾದ ಪೃಥೆಯ

ಮಕ್ಕಳಲ್ಲಿ ಇನ್ನು ಕೂಡಿ ಬದುಕುವುದಿಲ್ಲವೆನ್ನುತ್ತೇನೆಯೇ?

ವ||

ಎಂಬುದುಮಂಧಮಹೀಪತಿ ನೀನಿದಾವುದು ಮಾತಾಗಿ ನುಡಿವೈ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂಧಮಹೀಪತಿ (ಕುರುಡುರಾಜನಾದ

ದೃತರಾಷ್ಟ್ರನು)ನೀನು
ಇದಾವುದು ಮಾತಾಗಿ ನುಡಿವೈ
(ಇದು ಯಾವ ಮಾತೆಂದು
ನುಡಿಯುತ್ತಿದ್ದೀಯೆ?
ಎಂದನು.)-
ವಚನ:ಅರ್ಥ:ಎನ್ನಲು
ಕುರುಡುರಾಜನಾದ
ದೃತರಾಷ್ಟ್ರನು
(ದುರ್ಯೋಧನನನ್ನು ಕುರಿತು)
ಇದು ಯಾವ ಮಾತೆಂದು

ನುಡಿಯುತ್ತಿದ್ದೀಯೆ? ಎಂದನು.

ಕಂ|| ಅನುಜರ್ ನಾಲ್ವರುಮಂ ಧ ರ್ಮನಂದನಂ ವೇಳೆಗೊಂಡು ಕಾವಂ ಪೊಣರ್ದಾ| ವನುವರದೊಳಮೆನೆ ಪೇೞ್ ಪವ ನನಂದನಂಗಱಿವು ಪೊಣರೆ ತಾಂ ಬಲ್ದಿಪನೇ|| ೧೫ ||

ಪದ್ಯ-೧೫:ಪದವಿಭಾಗ-ಅರ್ಥ:ಅನುಜರ್ ನಾಲ್ವರುಮಂ ಧರ್ಮನಂದನಂ (ಧರ್ಮರಾಜನು ತನ್ನ ನಾಲ್ಕು ಜನ ತಮ್ಮಂದಿರಲ್ಲಿ) ವೇಳೆಗೊಂಡು (ಯಾರೊಬ್ಬರು ಸತ್ತರೂ ತಾನೂ

ಸಾಯುತ್ತೇನೆಂದು)ಕಾವಂ
ಪೊಣರ್ದು
ಅವನುವರದೊಳಂ
(ಪ್ರತಿಜ್ಞೆಮಾಡಿ ತಮ್ಮಂದಿರನ್ನು
ರಕ್ಷಿಸುತ್ತಿರುವಾಗ) ಎನೆ ಪೇೞ್
ಪವನನಂದನಂಗೆ ಅೞಿವು
ಪೊಣರೆ (ಸಾವುಬಂದರೆ)ತಾಂ
ಬಟ್ದಿಪನೇ (ಭೀಮನಿಗೆ
ಸಾವುಬಂದರೆ ತಾನು
ಬದುಕುತ್ತಾನೆಯೇ ಹೇಳು?)

ಪದ್ಯ-೧೫:ಅರ್ಥ:

ಧರ್ಮರಾಜನು ತನ್ನ ನಾಲ್ಕು ಜನ ತಮ್ಮಂದಿರಲ್ಲಿ ಯಾವ ಯುದ್ಧದಲ್ಲಾದರೂ ಯಾರೊಬ್ಬರು ಸತ್ತರೂ ತಾನೂ ಸಾಯುತ್ತೇನೆಂದು ಪ್ರತಿಜ್ಞೆಮಾಡಿ ರಕ್ಷಿಸುತ್ತಿರುವಾಗ ಭೀಮನಿಗೆ ಸಾವು ಬಂದರೆ ತಾನು ಬದುಕುತ್ತಾನೆಯೇ ಹೇಳು?

ಎನೆ ನೃಪನೆಂದಂ ಧರ್ಮಜ

ನನುಜರ್ಕಳೊಳೊರ್ವನಱಿ

ದೊಡೊಡನಱಿವ ಸುಯೋ।

ಧನನಲ್ಲಿ ನೂರ್ವರುಂ ತ

ನ್ನನುಜರ್ಕಳ್ ಸಾಯೆ

ಬಾಳ್ವುದಂ ನಂಬಿದಿರೇ॥ ೧೬ ॥

ಪದ್ಯ-00:ಪದವಿಭಾಗ-ಅರ್ಥ:ಏನೆ ನೃಪನೆಂದಂ (ಎನ್ನಲು, ದುರ್ಯೋಧನನು ಹೇಳಿದನು) ಧರ್ಮಜನು ಅನುಜರ್ಕಳೊಳ್ ಒರ್ವನು ಅಱಿದೊಡೆ ಒಡನೆ ಅಱಿವ

(ಧರ್ಮರಾಯನು ತಮ್ಮಂದಿರು
ಒಬ್ಬನು ಸತ್ತರೂ
ಜೊತೆಯಲ್ಲಿಯೇ
ಸಾಯುತ್ತಾನೆ.)
ಸುಯೋಧನನಲ್ಲಿ ನೂರ್ವರುಂ
ತನ್ನ ಅನುಜರ್ಕಳ್ ಸಾಯೆ
ಬಾಳ್ವುದಂ ನಂಬಿದಿರೇ
(ದುಯೋಧನನು ಮಾತ್ರ ತನ್ನ
ತಮ್ಮಂದಿರು ನೂರುಜನವೂ
ಸತ್ತಿರುವಾಗ ಅವನು

ಬದುಕುತ್ತಾನೆಂದು ನಂಬಿದಿರೇನು?)

ಪದ್ಯ-00:ಅರ್ಥ: ಎನ್ನಲು, ದುರ್ಯೋಧನನು ಹೇಳಿದನು. ಧರ್ಮರಾಯನು ತಮ್ಮಂದಿರು ಒಬ್ಬನು ಸತ್ತರೂ ಜೊತೆಯಲ್ಲಿಯೇ ಸಾಯುತ್ತಾನೆ. ದುರ್ಯೋಧನನು ಮಾತ್ರ ತನ್ನ ತಮ್ಮಂದಿರು ನೂರುಜನವೂ ಸತ್ತಿರುವಾಗ ಅವನು

ಬದುಕುತ್ತಾನೆಂದು ನಂಬಿದಿರೇನು?

- **ಟಿಪ್ಪಣಿ:**: ಇಲ್ಲತೊಂಭತ್ತೊಂಭತ್ತು ಎಂದಿರ ಬೇಕಿತ್ತು ಪ್ರಾಸಕ್ಕೆ ಹೊಂದಿಸಲು ನೂರು ಎಂದಿರಬೇಕು.

ವ|| ಎಂದು ಮತ್ರಂ ಸಂಯೋಧನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ಮತ್ತಂ

ಸಂಯೋಧನನಿಂತೆಂದಂ-

ವಚನ:ಅರ್ಥ:ವ|| ಎಂದು ಪುನ ದುರ್ಯೋಧನನು ಹೀಗೆಂದನು -

ಮ|| ತಲೆದೋಱಲ್ಕಣಮಳ್ಕಿ ವೈರಿ ನೆಲನಂ ಪೋ ಪೊಕ್ಕನೆಂಬನ್ನೆಗಂ ಚಲದಿಂದೆಯ್ದುವ ಕರ್ಣನುಗ್ರರಥಮಂ ಮುಂ ನುಂಗಿದೀ ದ್ರೋಹಿಯೊಳ್|

ನೆಲದೊಳ್ ಪಂಬಲೆ

ಮತ್ತಮೆನ್ನ ಮುಳಿಸಿಂಗಾಂ

ಕಾದುವೆಂ ಪೇಸಿದೆಂ

ನೆಲೆಗಂಡಂತೆ ನೆಲಕ್ಕೆ

ಗೆಲ್ದೊಡಮದಂ ಚಿ

ಮತ್ತಮಾನಾಳ್ವೆನೇ|| ೧೭ ||

ಪದ್ಯ-೧೭:ಪದವಿಭಾಗ-

ಅರ್ಥ:ತಲೆದೋಱಲ್ಕೆ ಅಣಂ

ಅಳ್ಕಿ ವೈರಿ ನೆಲನಂ ಪೋ

ಪೊಕ್ಕನು (ವೈರಿಯು

ಕಾಣಿಸಿಕೊಂಡು

ಎದುರಾಗುವುದಕ್ಕೆ ಅಲ್ಪ ಹೆದರಿ ತನ್ನ ನೆಲವನ್ನು, ಛೀ ಹೋಗಿ ಹೊಕ್ಕನು) ಎಂಬನ್ನೆಗಂ (ಎನ್ನುತ್ತಿರಲು) ಚಲದಿಂದ ಎಯ್ದುವ ಕರ್ಣನ ಉಗ್ರರಥಮಂ ಮುಂ ನುಂಗಿದೀ ದ್ರೋಹಿಯೊಳ್ (ಛಲದಿಂದ ಬರುತ್ತಿದ್ದ ಕರ್ಣನ ಭಯಂಕರವಾದ **ತೇರನ್ನು ಮೊದಲೇ ನುಂಗಿದ ಈ ದ್ರೋಹಿಯಾದ**

ಭೂಮಿಯಲ್ಲಿ/ ಭೂಮಿಗಾಗಿ) ನೆಲದೊಳ್ ಪಂಬಲೆ (ಭೂಮಿಗಾಗಿ ಪುನ ಹಂಬಲಿಸಲೇ, ಆಸೆಪಡಲೇ?) ಮತ್ತಂ ಎನ್ನ ಮುಳಿಸಿಂಗೆ ಆಂ ಕಾದುವೆಂ (ನನ್ನ ರೋಷಕ್ಕಾಗಿ ನಾನು ಕಾದುತ್ತೇನೆ.) ಪೇಸಿದೆಂ ನೆಲೆಗಂಡು ಅಂತೆ ನೆಲಕ್ಕೆ (ಹೇಸಿದ್ದೇನೆ ಭೂಮಿಯ ನೆಲೆ ಕಂಡು- ಸ್ಥಿರತೆಯನ್ನು (ಅಸ್ಥಿರತೆಯನ್ನು ತಿಳಿದು)

ಗೆಲ್ದೊಡಂ ಅದಂ ಚಿ ಮತ್ತಂ ಆನು ಆಳ್ವೆನೇ (ಗೆದ್ದರೂ ಛಿಃ ಪುನ ನಾನು ಅದನ್ನು ಆಳುತ್ತೇನೆಯೇ?)

ಪದ್ಯ-೧೭:ಅರ್ಥ: ವೈರಿಯು ಕಾಣಿಸಿಕೊಂಡು ಎದುರಾಗುವುದಕ್ಕೆ ಸ್ವಲ್ಪ ಹೆದರಿ ತನ್ನ ನೆಲವನ್ನು, ಛೀ ಹೋಗಿ ಹೊಕ್ಕನು ಎಂದು ಹೇಳುವಷ್ಟರಲ್ಲಿಯೇ ಛಲದಿಂದ ಬರುತ್ತಿದ್ದ ಕರ್ಣನ

ಭಯಂಕರವಾದ ತೇರನ್ನು ಮೊದಲೇ ನುಂಗಿದ ಈ ದ್ರೋಹಿಯಾದ ಭೂಮಿಯಲ್ಲಿ / ಭೂಮಿಗಾಗಿ ಪುನ ಹಂಬಲಿಸಲೇ, ಆಸೆಪಡಲೇ? **ನನ್ನ ರೋಷಕ್ಕಾಗಿ ನಾನು ಕಾದುತ್ತೇನೆ**. (ಭೂಮಿ ಅಶಾಶ್ವತ ಎಂಬ) ವಾಸ್ತವಾಂಶವನ್ನು ತಿಳಿದು **ಈ ನೆಲಕ್ಕೆ ಹೇಸಿದ್ದೇನೆ**. ಗೆದ್ದರೂ

ಛಿಃ ಪುನ ನಾನು ಅದನ್ನು ಆಳುತ್ತೇನೆಯೇ?

ವ|| ಅಂತುಮಲ್ಲದೆಯುಂ

ವಚನ:ಪದವಿಭಾಗ-ಅರ್ಥ: ಅಂತುಂ ಅಲ್ಲದೆಯುಂ

ವಚನ:ಅರ್ಥ:ವ|| ಹಾಗಲ್ಲದೆಯೂ)

ಚಂ|| ತೊಡರದೆ ನೀಮುಮಾ ನೆಗೞ್ದ ಪಾಂಡುವುಮೊಂದಿಯೆ ಬೞ್ದಿರೊಂದೊಡಂ

ಬಡು ನಿಮಗಿಲ್ಲ ಜೂದೆ

ನೆವಮಾಗಿರೆ

ಮೂಲಿಗನಾದೆನಾನೆ ಪೂ|

ಣ್ದಿಡುವಗೆಗೆನ್ನೊಳಾದ

ಕಿಸುರೆನ್ನೊಡವೋಪುದಿದೊಳ್ಳಿ

ತೆನ್ನ ಪಿಂ

ಬಡಿನೊಳೆ ನಣ್ಪಿನಯ್ಯ

ನಿಮಗಂ ಮಗನಲ್ಲನೆ

ಧರ್ಮನಂದನಂ|| ೧೮

ಪದ್ಯ-೧೮:ಪದವಿಭಾಗ-

ಅರ್ಥ:ತೊಡರದೆ ನೀಮುಂ ಆ

ನೆಗಟ್ಟಿ ಪಾಂಡುವುಂ ಒಂದಿಯೆ
ಬಟ್ಟಿರಿ (ನೀವೂ ಆ
ಪಾಂಡವರೂ ಯಾವ
ವೈಮನಸ್ಯವೂ ಇಲ್ಲದೆ
ಹೊಂದಿಕೊಂಡೆ ಬಾಳಿದಿರಿ.)
ಒಂದು ಒಡಂಬಡು ನಿಮಗಿಲ್ಲ
(ನಿಮಗೆ
ಹೊಂದಿಕೊಳ್ಳುವುದರಲ್ಲಿ -
ಒಂದು ಅಸಮಾಧಾನವೂ
ಇಲ್ಲ.) ಜೂದೆ ನೆವಮಾಗಿರೆ
ಮೂಲಿಗನಾದೆನು ಆನೆ ಪೂಣ್ದ

ಇಡುವಗೆಗೆ (ಜೂಜೇ
ನೆವವಾಗಿರಲು ಈ
ಪ್ರತಿಜ್ಞೆಮಾಡಿದ ಬದ್ಧದ್ವೇಷಕ್ಕೆ
ನಾನೇ ಮೂಲನು-
ಕಾರಣನಾದೆ) ಎನ್ನೊಳಾದ
ಕಿಸುರು ಎನ್ನೊಡಂ ಓಪುದಿದು
ಒಳ್ಳಿತು (ನನ್ನಿಂದಾದ
ಅಸಮಾಧಾನ/ ಜಗಳವು ನನ್ನ
ಜೊತೆಯಲ್ಲಿಯೇ
ಹೋಗುವುದು ಒಳ್ಳೆಯದು)
ಎನ್ನ ಪಿಂಬಡಿನೊಳೆ ನಣ್ಪಿನ

ಅಯ್ಯ ನಿಮಗಂ ಮಗನಲ್ಲನೆ ಧರ್ಮನಂದನಂ (ಪ್ರೀತಿಯ ಅಪ್ಪಾ ಧರ್ಮರಾಯನೂ ನಿಮಗೆ ಮಗನಲ್ಲವೇ?)

ಪದ್ಯ-೧೮:ಅರ್ಥ: ನೀವೂ ಆ ಪಾಂಡವರೂ ಯಾವ ವೈಮನಸ್ಯವೂ ಇಲ್ಲದೆ ಹೊಂದಿಕೊಂಡೆ ಬಾಳಿದಿರಿ. ನಿಮಗೆ ಒಂದು ಅಸಮಾಧಾನವೂ ಇಲ್ಲ. ಜೂಜೇ ನೆವವಾಗಿರಲು ಈ

ಪ್ರತಿಜ್ಞೆಮಾಡಿದ ಬದ್ದದ್ವೇಷಕ್ಕೆ ನಾನೇ ಮೂಲನಾದೆ, ಕಾರಣನಾದೆ. ನನ್ನಿಂದಾದ ಜಗಳವು ನನ್ನ ಜೊತೆಯಲ್ಲಿಯೇ ಹೋಗುವುದು ಒಳ್ಳೆಯದು. ನನ್ನ ನಂತರ (ನನಗಿಂತ ಹಿಂದೆಯೇ ಹುಟ್ಟದವನಲ್ಲವೇ?) (ನಾನು ಸತ್ತ ಬಳಿಕ) ಪ್ರೀತಿಯ ಅಪ್ಪಾ ಧರ್ಮರಾಯನೂ ನಿಮಗೆ

ಮಗನಲ್ಲವೇ? (ನೀವು ಅವನೊಡನೆ ಸುಖವಾಗಿ ಬಾಳಬಹುದು.)

- **ಟಿಪ್ಪಣಿ:**:ಪಂಪನ ಪ್ರಕಾರ ಧುರ್ಯೋಧನ ತನಗೆ ವಿಧಿ ವಿರುದ್ಧವಾಗಿದ್ದುದು ತಿಳಿದು, ಯುದ್ಧಮಾಡಿ ಸಾಯಲು ನಿರ್ಧರಿಸಿದ್ದಾನೆ.

ಉ|| ತಪ್ಪದು ಕರ್ಣನಿಂ ಬೞಿಕೆ ಸಂಧಿಯ ಮಾತೆನಗಾತನಿಲ್ಲದೆಂ

ತಪ್ಪುದೊ ರಾಜ್ಯಮೀ
ಗದೆಯುಮೀ
ಭುಜದಂಡಮುಮುಳ್ಳಿನಂ
ಕೊನ|
ರ್ತಪ್ಪುದೆ ಪೇೞಿಮೆನ್ನ ಪಗೆ
ನೋವೞಿದಂಜುವುದೇಕೆ
ನಿಂದರೇಂ
ತಪ್ಪುದೊ ಪೇೞಿಮಯ್ಯ
ನೊಸಲೊಳ್ ಬರೆದಕ್ಕರಮಾ
ವಿಧಾತ್ರನಾ|| ೧೯ ||

ಪದ್ಯ-೧೯:ಪದವಿಭಾಗ-ಅರ್ಥ:ತಪ್ಪು ಅದು ಕರ್ಣನಿಂ ಬಳಿಕೆ ಸಂಧಿಯ ಮಾತು (ಕರ್ಣನು ಹೋದಮೇಲೆ ಸಂಧಿಯ ಮಾತು ತಪ್ಪು) ಎನಗೆ ಆತನಿಲ್ಲದೆ ಎಂತಪ್ಪುದೊ ರಾಜ್ಯಮ್ (ಅವನಿಲ್ಲದೆ ನನಗೆ ರಾಜ್ಯವು ತನಗೆ ಹೇಗಿರುವುದೋ? ಹೇಗಾಗುತ್ತದೆ?) ಈ ಗದೆಯುಂ ಈ ಭುಜದಂಡಮುಂ

ಉಳ್ಳಿನಂ ಕೊನರ್ತಪ್ಪುದೆ
ಪೇೞಿಂ ಎನ್ನ ಪಗೆ,(ಗದೆಯೂ,
ಬಾಹುದಂಡವೂ.
ಇರುವವರೆಗೆ ನನ್ನ ಶತ್ರುವು
ಚಿಗುರಿಕೊಳ್ಳುತ್ತಾನೇಯೇ,)
ನೋವ ಅಱಿದು
ಅಂಜುವುದೇಕೆ, (ದುಃಖವನ್ನು
ಅರಿತು-, ಅನುಭವಿಸಿಯಾವ
ಮೇಲೆಯೂ ಹೆದರುವುದೇಕೆ?)
ನಿಂದರೆ ಎಂ ತಪ್ಪುದೊ(ನಾನು
ಯುದ್ಧವನ್ನು ನಿಲ್ಲಿಸಿದರೂ

ಯುದ್ಧ ತಪ್ಪದೋ ಏನೋ!
ಏಕೆಂದರೆ) ಪೇಟಿಂ ಅಯ್ಯ
ನೊಸಲೊಳ್ ಬರೆದ ಅಕ್ಕರಂ
ಆ ವಿಧಾತ್ರನು ಆ (ಅಪ್ಪಾ
ಯುದ್ಧವನ್ನು ನಾನು
ನಿಲ್ಲಿಸಿದರೂ ಆ ಬ್ರಹ್ಮನು
ಹಣೆಯಲ್ಲಿ ಬರೆದ ಅಕ್ಷರ
ತಪ್ಪುತ್ತದೆಯೇ ಏನು?)
ಪದ್ಯ-೧೯:ಅರ್ಥ: ಕರ್ಣನು
ಹೋದಮೇಲೆ ಸಂಧಿಯ
ಮಾತು ತಪ್ಪು (ನನಗೆ

ದೋಷಯುಕ್ತವಾದುದು);
ಅವನಿಲ್ಲದೆ ನನಗೆ ರಾಜ್ಯವು
ತನಗೆ ಹೇಗಿರುವುದೋ?? ಈ
ಗದೆಯೂ, ಬಾಹುದಂಡವೂ.
ಇರುವವರೆಗೆ ನನ್ನ ಶತ್ರುವು
ಚಿಗುರಿಕೊಳ್ಳುತ್ತಾನೇಯೇ,
ದುಃಖವನ್ನು
ಅನುಭವಿಸಿಯಾವ
ಮೇಲೆಯೂ ಹೆದರುವುದೇಕೆ?
(ನಾನು ಯುದ್ಧವನ್ನು
ನಿಲ್ಲಿಸಿದರೂ ಯುದ್ಧ

ತಪ್ಪದೋ ಏನೋ! ಏಕೆಂದರೆ)
ಅಪ್ಪಾ ಯುದ್ಧವನ್ನು ನಾನು
ನಿಲ್ಲಿಸಿದರೂ ಬ್ರಹ್ಮನು
ಹಣೆಯಲ್ಲಿ ಬರೆದ ಅಕ್ಷರ
ತಪ್ಪುತ್ತದೆಯೇ?

ಮ|| ಸ್ರ|| ನರನಂ ಮುಂ
ಕೊಲ್ವೆನಾಂ
ಕರ್ಣನನಱಿದುದಱಿಂ
ಕೊಲ್ವೆನಾ ಭೀಮನಂ ಸಂ
ಗರದೊಳ್ ಸೀಳ್ದೊಟ್ಟಿ
ದುಶ್ಶಾಸನನಟಿಲನದಂ

ನೀಗುವೆಂ ಪೋಕುಮಂತಿ|

ರ್ವರುಮಂ ಕೊಂದಂದು

ಮೇಣಾನವರಿದಿರಿರೊಳ್

ಕಾದಿ ಸತ್ತಂದು ಮೇಣ್ ವಿ

ಸ್ಫುರಿತಂ ಮತ್ಕೋಪಮುಂ

ನಿಮ್ಮಡಿಯುಮನಿದೆ

ಬೀೞ್ಕೊಂಡೆನಿಂ ಪೋಗಿ

ಮೇೞಿಂ|| ೨೦ ||

ಪದ್ಯ-00:ಪದವಿಭಾಗ-

ಅರ್ಥ:ನರನಂ

(ಆರ್ಜುನನನ್ನು) ಮುಂ

(ಮೊದಲು) ಕೊಲ್ವೆನ್ ಆಂ,
ಕರ್ಣನನು ಇಱಿದುದಱಿಂ -
ಇರಿದುದರಿಂ,(ಕರ್ಣನನ್ನು
ಸಾಯಿಸಿದುದರಿಂದ
ಅರ್ಜುನನನ್ನು ಮೊದಲು
ಕೊಲ್ಲುತ್ತೇನೆ.) ಕೊಲ್ವೆಂ ಆ
ಭೀಮನಂ ಸಂಗರದೊಳ್ (ಆ
ಭೀಮನನ್ನು ಯುದ್ಧದ್ಲಲಿ
ಕೊಲ್ಲುತ್ತೇನೆ,) ಸೀಳ್ದೊಟ್ಟೆ
ದುಶ್ಶಾಸನನ ಅಱಲನು ಅದಂ
ನೀಗುವೆಂ (ಅವನನ್ನು ಸೀಳಿ

ಒಟ್ಟೈ,ರಾಶಿಮಾಡಿ,
ದುಶ್ಶ್ಯಾಸನನ ಆ ದು:ಖವನ್ನು
ಪರಿಹಾರಮಾಡಿಕೊಳ್ಳುತ್ತೇನೆ.)
ಪೋೀಕುಂ> ಅಂತಿರ್ವರುಮಂ
ಕೊಂದಂದು (ಹಾಗೆ
ಅವರಿಬ್ಬರನ್ನು ಕೊಂದ ದಿನ)
ಮೇಣ್ ಅವರಿದಿರಿರೊಳ್
ಕಾದಿ ಸತ್ತಂದು (ಅಥವಾ
ನಾನು ಅವರೆದುರಿಗೆ ಕಾದಿ
ಸತ್ತ ದಿನ) ಮೇಣ್ ವಿಸ್ಫುರಿತಂ
ಮತ್ಕ್ರೋೀಪಮುಂ - ಪೋೀಕುಂ-

(ನನ್ನ ಉರಿಯುತ್ತಿರುವ
ಕೋಪವು ಶಮನವಾಗುತ್ತದೆ.)
ನಿಮ್ಮಡಿಯುಮಂ ಇದೆ
ಬೀೞ್ಕೊಂಡೆನು ಇಂ ಪೋಗಿಂ,
ಏೞಿಂ (ನಿಮ್ಮ ಪಾದಗಳನ್ನು
ಬೀಳ್ಕೊಂಡೆನು (ದಯಮಾಡಿ)
ಇನ್ನು ನೀವು ಹೋಗಿ, ಏಳಿ.)
ಪದ್ಯ-00:ಅರ್ಥ:ದುರ್ಯೋ
ಧನ ಹೇಳಿದ, ಕರ್ಣನನ್ನು
ಸಾಯಿಸಿದುದರಿಂದ
ಆರ್ಜುನನನ್ನು ಮೊದಲು

ಕೊಲ್ಲುತ್ತೇನೆ. ಆ ಭೀಮನನ್ನು ಯುದ್ಧದ್ಲಲಿ ಸೀಳಿ ರಾಶಿ ಹಾಕಿ ದುಶ್ಯಾಸನನ ದು:ಖವನ್ನು ಪರಿಹಾರಮಾಡಿಕೊಳ್ಳುತ್ತೇನೆ. ಹಾಗೆ ಅವರಿಬ್ಬರನ್ನು ಕೊಂದ ದಿನ; ಅಥವಾ ನಾನು ಅವರೆದುರಿಗೆ ಕಾದಿ ಸತ್ತ ದಿನ, ನನ್ನ ಉರಿಯುತ್ತಿರುವ ಕೋಪವು ಶಮನವಾಗುತ್ತದೆ. ನಿಮ್ಮ ಪಾದಗಳನ್ನು ಬೀಳ್ಕೊಂಡೆನು (ದಯಮಾಡಿ)

ಇನ್ನು ನೀವು ಹೋಗಿ, ಏಳಿ.
(ಎಂದು ಅವರನ್ನು ಕಳಿಸಿದ)

ವ|| ಎಂದು ತಾಯ್ಗಂ ತಂದೆಗಮೆಱಗಿ ಪೊಡೆವಟ್ಟು ಪೋಗಲ್ವೇೞ್ದು ಸಂಸಾರಾಸಾರಸತೆಯ ನಱಿದನುಂ ಮಹಾಸತ್ತ್ವನುಮಪ್ಪುದಱಿಂ ತನ್ನಂ ತಾನೆ ಸಂತೈಸಿಯುಂ ಚೇತರಿಸಿಯುಂ ಮಜ್ಜನ ಭೋಜನಾನುಲೇಪನ

ತಾಂಬೂಲಾದಿಗಳೊಳ್
ಮಹಾಹವ ಖೇದಮುಮಂ
ಮನಖೇದಮುಮ ನಾಱಿಸಿ
ಮಂತ್ರಶಾಲಾಂತಸ್ಥಿತ
ಕನಕವಿಷ್ಟರಾರೂಢನಾಗಿ ಶಲ್ಯ
ಶಕುನಿ ಕೃಪ
ಕೃತವರ್ಮಾಶ್ವತ್ಥಾಮ ಪ್ರಧಾನ
ವೀರಪುರುಷರಂ ಬರಿಸಿ
ಯಥೋಚಿತಪ್ರತಿಪತ್ತಿಗಳೊಳಿ
ರಿಸಿ ಪೇೞಿಮಿನ್ನೆಮ್ಮಗೆಯ್ವ

ನಿಯೋಗಮೇನೆನೆ ಶಾರದ್ವತನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ತಾಯ್ಗಂ ತಂದೆಗಂ ಎಱಗಿ ಪೊಡೆವಟ್ಟು ಪೋಗಲ್ವೇೞ್ದು (ಎಂದು ತಾಯಿಗೂ ತಂದೆಗೂ ನಮಸ್ಕಾರ ಮಾಡಿ ಹೋಗಹೇಳಿ) ಸಂಸಾರ ಅಸಾರಸತೆಯನು ಅಱಿದನುಂ ಮಹಾಸತ್ತ್ವನುಂ

ಅಪ್ಪುದಱಿಂ ತನ್ನಂ ತಾನೆ ಸಂತೈಸಿಯುಂ (ಸಂಸಾರದ ಅಸಾರತೆಯನ್ನು ತಿಳಿದವನೂ ಮಹಾಸತ್ವನೂ ಆದುದರಿಂದ ತಾನೇ ತನ್ನನ್ನು ಸಮಾಧಾನಮಾಡಿಕೊಂಡೂ ಚೇತರಿಸಿಕೊಂಡು,) ಚೇತರಿಸಿಯುಂ (ಚೇತರಿಸಿಕೊಂಡು,) ಮಜ್ಜನ ಭೋಜನ ಅನುಲೇಪನ ತಾಂಬೂಲಾದಿಗಳೊಳ್ ಮಹ

ಆಹವ ಖೇದಮುಮಂ (ಮಹಾಯುದ್ಧದ ಆಯಾಸವನ್ನೂ) ಮನಖೇದಮುಮನು ಆಱಿಸಿ, (ಮನಸ್ಸಿನ ದುಖವನ್ನೂ ಹೋಗಲಾಡಿಸಿ,) ಮಂತ್ರಶಾಲಾ ಅಂತಸ್ಥಿತ ಕನಕವಿಷ್ಟರ ಆರೂಢನಾಗಿ (ಮಂತ್ರಶಾಲೆಯ ಒಳಗಿರುವ ಚಿನ್ನದ ಪೀಠದ ಮೇಲೆ ಕುಳಿತು) ಶಲ್ಯ ಶಕುನಿ ಕೃಪ

ಕೃತವರ್ಮ ಅಶ್ವತ್ಥಾಮ
ಪ್ರಧಾನ ವೀರಪುರುಷರಂ
ಬರಿಸಿ (ಮುಖ್ಯ
ವೀರಪುರುಷರನ್ನು
ಬರಮಾಡಿಕೊಂಡು,)
ಯಥೋಚಿತ
ಪ್ರತಿಪತ್ತಿಗಳೊಳು ಇರಿಸಿ (
ಯಥೋಚಿತವಾದ
ಸತ್ಕಾರಗಳನ್ನು ಮಾಡಿ)
ಪೇಟಿಮ್ ಇನ್ನೆಲು
ಎಮ್ಮಗೆಯ್ವ ನಿಯೋಗಂ

ಏನೆನೆ ಶಾರದ್ವತನಿಂತೆಂದಂ-
(‘ನಾವು ಇನ್ನು ಮಾಡಬೇಕಾದ
ಕಾರ್ಯವೇನೆಂದು ಹೇಳಿ’
ಎನ್ನಲು ಕೃಪನು ಹೀಗೆಂದು
ಹೇಳಿದನು)

ದುರ್ಯೋಧನನ ಮಂತ್ರಾಲೋಚನೆ

ವಚನ:ಅರ್ಥ:ಎಂದು -
ದುರ್ಯೋಧನನು, ತಾಯಿಗೂ
ತಂದೆಗೂ ನಮಸ್ಕಾರ ಮಾಡಿ

ಹೋಗಹೇಳಿ ಸಂಸಾರದ
ಅಸಾರತೆಯನ್ನು ತಿಳಿದವನೂ
ಮಹಾಸತ್ವನೂ ಆದುದರಿಂದ
ತಾನೇ ತನ್ನನ್ನು
ಸಮಾಧಾನಮಾಡಿಕೊಂಡೂ
ಚೇತರಿಸಿಕೊಂಡು, ಸ್ನಾನ,
ಊಟ, ಗಂಧ, ತಾಂಬೂಲ
ಮೊದಲಾದವುಗಳಿಂದ
ಮಹಾಯುದ್ಧದ
ಆಯಾಸವನ್ನೂ ಮನಸ್ಸಿನ
ದುಖವನ್ನೂ

ಹೋಗಲಾಡಿಸಿಕೊಂಡನು. ಮಂತ್ರಶಾಲೆಯ ಒಳಗಿರುವ ಚಿನ್ನದ ಪೀಠದ ಮೇಲೆ ಕುಳಿತು ಶಲ್ಯ, ಶಕುನಿ, ಕೃಪ, ಕೃತವರ್ಮ, ಅಶ್ವತ್ಥಾಮರೇ ಮೊದಲಾದ ಮುಖ್ಯ ವೀರಪುರುಷರನ್ನು ಬರಮಾಡಿ ಯಥೋಚಿತವಾದ ಸತ್ಕಾರಗಳನ್ನು ಮಾಡಿ 'ನಾವು ಇನ್ನು ಮಾಡಬೇಕಾದ ಕಾರ್ಯವೇನೆಂದು ಹೇಳಿ'

ಎನ್ನಲು ಕೃಪನು ಹೀಗೆಂದು ಹೇಳಿದನು.

ಉ|| ಸಂಗತ ನೀತಿಶಾಸ್ತ್ರವಿದರಪ್ಪರವಂದಿರ ತಮ್ಮ ತಮ್ಮ ಕ ಜ್ವಂಗಳ ಮೆಯ್ಗಳೊಳ್ ಪುಸಿದದಂ ಕಡುನನ್ನಿಯೆ ಮಾಡಿ ತೋರ್ಪರು| ತ್ತುಂಗ ಸುಸೂಕ್ಷ್ಮಪಾರ್ಶ್ವಕೃಶ ಕೋಮಳ ನಿಮ್ನ ಘನೋನ್ನತ ಪ್ರದೇ

ಶಂಗಳನಾ

ಸಮಾನತಳದಲ್ಲಿಯೆ

ಚಿತ್ರಕನೆಯ್ದೆ

ತೋರ್ಪವೋಲ್|| ೨೧ ||

ಪದ್ಯ-00:ಪದವಿಭಾಗ-

ಅರ್ಥ:ಸಂಗತ

ನೀತಿಶಾಸ್ತ್ರವಿದರಪ್ಪರು

(ಚೆನ್ನಾಗಿ ನೀತಿ

ಶಾಸ್ತ್ರಬಲ್ಲವರು) ಅವಂದಿರ

ತಮ್ಮ ತಮ್ಮ ಕಜ್ಜಂಗಳ

ಮೆಯ್ಗಳೊಳ್ (ಅವರು

ಅವರವರ ಕಾರ್ಯಗಳ ವಿಷಯದಲ್ಲಿ,) ಪುಸಿದ ಅದಂ ಕಡುನನ್ನಿಯೆ(ನನ್ನಿ- ಸತ್ಯ) ಮಾಡಿ ತೋರ್ಪರು (ಸುಳ್ಳಾಗಿರುವ ಅದನ್ನೇ ಅತ್ಯಂತ ಸತ್ಯವನ್ನಾಗಿ ಮಾಡಿ ತೋರಿಸುವರು, ಅದು ಹೇಗೆಂದರೆ), ಉತ್ತುಂಗ ಸುಸೂಕ್ಷ್ಮ ಪಾರ್ಶ್ವಕೃಶ ಕೋಮಳ ನಿಮ್ನ ಘನೋನ್ನತ ಪ್ರದೇಶಂಗಳನು ಆ ಸಮಾನ

ತಳದಲ್ಲಿಯೆ ಚಿತ್ರಕನು ಎಯ್ದೆ ತೋರ್ಪವ್ರೋಲ್ (ಚಿತ್ರವನ್ನು ಬರೆಯುವವನು ಅತಿ ಎತ್ತರವಾದ, ಅತಿಸೂಕ್ಷ್ಮವಾದ, ಪಕ್ಕದಲ್ಲಿರುವ ತೆಳ್ಳಗಿರುವ, ಕೋಮಲವಾಗಿರುವ, ತಗ್ಗಾಗಿರುವ, ದಪ್ಪವಾಗಿರುವ, ಉನ್ನತವಾಗಿರುವ ಪ್ರದೇಶಗಳನ್ನು (ತಾವು ಬರೆಯುವ) ಪಟದ (ಚಿತ್ರದ)

ಸಮ ಪ್ರದೇಶದಲ್ಲಿಯೇ ತೋರಿಸುವ ಹಾಗೆ-)

ಪದ್ಯ-00:ಅರ್ಥ: (ಚೆನ್ನಾಗಿ ನೀತಿ ಶಾಸ್ತ್ರಬಲ್ಲವರು ಅವರು ಅವರವರ ಕಾರ್ಯಗಳ ವಿಷಯದಲ್ಲಿ,) ಚಿತ್ರವನ್ನು ಬರೆಯುವವನು ಅತಿ ಎತ್ತರವಾದ, ಅತಿಸೂಕ್ಷ್ಮವಾದ, ಪಕ್ಕದಲ್ಲಿರುವ ತೆಳ್ಳಗಿರುವ, ಕೋಮಲವಾಗಿರುವ, ತಗ್ಗಾಗಿರುವ, ದಪ್ಪವಾಗಿರುವ,

ಉನ್ನತವಾಗಿರುವ
ಪ್ರದೇಶಗಳನ್ನು (ತಾವು
ಬರೆಯುವ) ಪಟದ (ಚಿತ್ರದ)
ಸಮ ಪ್ರದೇಶದಲ್ಲಿಯೇ
ತೋರಿಸುವ ಹಾಗೆ ಚೆನ್ನಾಗಿ
(ರಾಜ)ನೀತಿಶಾಸ್ತ್ರವನ್ನು
ತಿಳಿದವರು ತಮ್ಮ ತಮ್ಮ
ಕಾರ್ಯಗಳ ವಿಷಯದಲ್ಲಿ
ಸುಳ್ಳಾದುದನ್ನೂ ಪೂರ್ಣ
ಸತ್ಯವನ್ನಾಗಿಯೇ ಮಾಡಿ
ತೋರಿಸುವರು.

ವ|| ಅದಱಿನೆಂತಪ್ಪ
ಬುದ್ಧಿಯೊಡೆಯರ
ಪೇೞ್ವಿಸಾಮಾನ್ಯಮಪ್ಪುಪಾ
ಯಂಗಳುಂ ನಿನಗೆ ದೈವಂ
ವಿಮುಖಮಪ್ಪುವಱಿಂದಪಾ
ಯಂ ಬಹುಳವಾಗಿ
ಬಂದುದಾಱುಂ ಗುಣಂಗಳನೆ
ತಂದುವು ಮೌಲ ಭೃತ್ಯ
ಸುಹೃತ್ ಶ್ರೇಣಿ
ಮಿತ್ರಾಟವಿಕತಂತ್ರಂಗಳ್
ಪಣ್ಣಿದ ಜಂತ್ರಂಗಳಂತೆ

ಕಟಿಕುಟಿ ಮಾದುವಾರ್ಗಮಭೇದ್ಯರುಮ ಸಾಧ್ಯರುಮಪ್ಪಯೋನಿಸಂಭ ವರೆ ಹೇಳಸಾಧ್ಯರಾದವರು ಕಾರಣದಿಂ-

ವಚನ:ಪದವಿಭಾಗ-

ಅರ್ಥ:ಅದಱಿನಿಂ ಅಂತಪ್ಪ (ಆದುದರಿಂದ ಹಾಗಿರುವ) ಬುದ್ಧಿಯೊಡೆಯರ ಪೇೞ್ವ ಸಾಮಾನ್ಯಮಪ್ಪ ಉಪಾಯಂಗಳುಂ (ಎಂತಹ

ಬುದ್ಧಿವಂತರಾದವರೂ
ಹೇಳುವ ಸಾಮಾನ್ಯವಾದ
ಸಾಮ, ದಾನ, ಬೇಧ, ದಂಡ,
ಉಪಾಯಗಳೂ,) ನಿನಗೆ
ದೈವಂ ವಿಮುಖಂ
ಅಪ್ಪುವಱಿಂದ (ನಿನಗೆ ದೈವ
ವಿರೋಧವಾಗಿರುವುದರಿಂದ)
ಅಪಾಯಂ ಬಹುಳವಾಗಿ
ಬಂದುದು (ಅಪಾಯಗಳು
ಬಹಳವಾಗಿ ಬಂದವು);
ಆಱುಂ ಗುಣಂಗಳನೆ

ತಂದುವು (ವಿಶೇಷ
ಅಪಾಯಕಾರಿಯಾದ ರಾಜ
ಸಂಧಿ ವಿಗ್ರಹಯಾನ, ಆಸನ,
ಸಂಶಯ/ ಸಂಶ್ರಯ, ದ್ವೈ
ಭಾವ ಎಂಬ ಆರು
ಗುಣಗಳನ್ನೇ
ಉಂಟುಮಾಡಿದವು.) ಮೌಲ
ಭೃತ್ಯ ಸುಹೃತ್ ಶ್ರೇಣಿ
ಮಿತ್ರಾಟವಿಕ ತಂತ್ರಂಗಳ್
ಪಣ್ಣಿದ ಜಂತ್ರಂಗಳಂತೆ
ಕಟಿಕುಟಿಂ ಅದುವು, (ಆರು

ವಿಧದ ಬಲ/ ಸೈನ್ಯವೆಂದು ಹೇಳುವ, ಮೌಲ, ಭೃತ್ಯ, ಸಹೃತ್, ಶ್ರೇಣಿ, ಮಿತ್ರ, ಆಟವಿಕ ತಂತ್ರಗಳು ಸಿದ್ಧಪಡಿಸಿದ ಕೃತಕಯಂತ್ರಗಳಂತೆ ಚೆಲ್ಲಾಪಿಲ್ಲಿಯಾದವು), ಆರ್ಗಂ ಅಭೇದ್ಯರುಂ ಅಸಾಧ್ಯರುಂ ಅಪ್ಪ ಅಯೋನಿಸಂಭವರೆ ಹೇಳ ಸಾಧ್ಯರಾದವರು (ಯಾರಿಗೂ ಭೇದಿಸುವುದಕ್ಕಾಗದವರೂ,

ಅಸಾಧ್ಯರೂ ಅಯೋನಿಜರೂ ಆದ ದ್ರೋಣಾಚಾರ್ಯರೇ, ಹೇಳಯ್ಯಾ ಜಯಿಸಲ್ಪಟ್ಟರು. ಆ ಕಾರಣದಿಂದ-)

ಕಾರಣದಿಂ- ಆ ಕಾರಣದಿಂದ-

ವಚನ:ಅರ್ಥ:ಆದುದರಿಂದ ಎಂತಹ ಬುದ್ಧಿವಂತರಾದವರೂ ಹೇಳುವ ಸಾಮಾನ್ಯವಾದ ಉಪಾಯಗಳೂ ನಿನಗೆ ದೈವ ವಿರೋಧವಾಗಿರುವುದರಿಂದ,

ಸಾಮಾನ್ಯವಾದ ಸಾಮ, ದಾನ,
ಬೇಧ, ದಂಡ,
ಉಪಾಯಗಳೂ,
ಅಪಾಯಗಳಾಗಿ ಬಹಳವಾಗಿ
ಬಂದವು. ಅವು ವಿಶೇಷ
ಅಪಾಯಕಾರಿಯಾದ ರಾಜ
ಸಂಧಿ ವಿಗ್ರಹಯಾನ, ಆಸನ,
ಸಂಶಯ, ದ್ವೈ ಭಾವ ಎಂಬ
ಆರು ಗುಣಗಳನ್ನೇ
ಉಂಟುಮಾಡಿದವು. ಆರು
ವಿಧದ ಬಲ/ ಸೈನ್ಯವೆಂದು

ಹೇಳುವ, ಮೌಲ, ಭೃತ್ಯ,
ಸಹೃತ್, ಶ್ರೇಣಿ, ಮಿತ್ರ, ಆಟವಿಕ
ತಂತ್ರಗಳು ಸಿದ್ಧಪಡಿಸಿದ
ಕೃತಕಯಂತ್ರಗಳಂತೆ
ಚೆಲ್ಲಾಪಿಲ್ಲಿಯಾದವು.
ಯಾರಿಗೂ
ಭೇದಿಸುವುದಕ್ಕಾಗದವರೂ,
ಅಸಾಧ್ಯರೂ ಅಯೋನಿಜರೂ
ಆದ ದ್ರೋಣಾಚಾರ್ಯರೇ,
ಹೇಳಯ್ಯಾ ಜಯಿಸಲ್ಪಟ್ಟರು.
ಆ ಕಾರಣದಿಂದ-

ಹರಿಣಿ||ಅಱಿದರಧಿಕರ್
ಭೀಷ್ಮದ್ರೋಣಾಂಗನಾಯಕ
ರೀಗಳಿ
ನ್ನಱಿದರವರಿಂ
ಮೇಲೆಂಬನ್ನರ್
ಮಹಾರಥರಲ್ತೆ ಮುಂ|
ಕಱಿದುದರೊಳೇಂ ನಷ್ಟಂ
ನಷ್ಟಂ ಮೃತಂ ಮೃತಮೆಂಬುದಿ
ನ್ನಟಿಲದಿರಿದೇಕಿಲ್ಲಿಂ
ಮೇಲಪ್ಪುದಂ ಬಗೆ ಭೂಪತೀ||
೨೨ ||

ಪದ್ಯ-೨೨:ಪದವಿಭಾಗ-ಅರ್ಥ:ಅೞಿದರ್ (ಅಳಿದರು)ಅಧಿಕರ್ ಭೀಷ್ಮದ್ರೋಣ ಅಂಗನಾಯಕರ್ - (ಅಧಿಕರಾದ/ ಬಲಾಢ್ಯ ಸೇನಾಧಪತಿಗಳಾದ ಭೀಷ್ಮ ದ್ರೋಣ ಕರ್ಣರು ಸತ್ತರು.) ಈಗಳು ಇನ್ನುೞಿದರ್ ಅವರಿಂ ಮೇಲೆಂಬನ್ನರ್ ಮಹಾರಥರಲ್ತೆ

(ಇನ್ನುಳಿದವರು ಅವರಿಗಿಂತ
ಮೇಲೆನ್ನುವ ಮಹಾರಥರು
ಅಲ್ಲವೇ?) ಮುಂ
ಕಟಿದುದರೊಳೇಂ (ಮೊದಲು
ಕಳೆದುದರಲ್ಲಿ ಏನು?
ಮೊದಲು
ಕಳೆದುಹೋದುದನ್ನು
ಚಿಂತಿಸುವುದರಲ್ಲಿ ಏನು
ಪ್ರಯೋಜನ?) ನಷ್ಟಂ ನಷ್ಟಂ
(ಹೋದದ್ದು ಹೋಯಿತು)
ಮೃತಂ ಮೃತಂ ಎಂಬುದು,

(ಸತ್ತದ್ದು ಸತ್ತಿತು
ಎಂದುಕೊಳ್ಳುವುದು.)
ಇನ್ನಟಿಲದಿರ್ ಇದು ಏಕೆ
(ಇನ್ನು ಇದು ಏಕೆ ಎಂದು
ದುಖಿಸಬೇಡ,) ಇಲ್ಲಿಂ
ಮೇಲಪ್ಪುದಂ ಬಗೆ ಭೂಪತೀ
(ಮಹಾರಾಜನೇ ಇಲ್ಲಿಂದ
ಮುಂದಾಗಬೇಕಾದುದನ್ನು
ಯೋಚಿಸು.)

ಪದ್ಯ-೨೨:ಅರ್ಥ:
ಅಧಿಕರಾದ/ ಬಲಾಢ್ಯ

ಸೇನಾಧಿಪತಿಗಳಾದ ಭೀಷ್ಮ ದ್ರೋಣ ಕರ್ಣರು ಸತ್ತರು. ಇನ್ನುಳಿದವರು ಅವರಿಗಿಂತ ಮೇಲೆನ್ನುವ ಮಹಾರಥರು ಅಲ್ಲವೇ? ಮೊದಲು ಕಳೆದುಹೋದುದನ್ನು ಚಿಂತಿಸುವುದರಲ್ಲಿ ಏನು ಪ್ರಯೋಜನ? ನಷ್ಟವಾದುದು ನಷ್ಟವಾಯಿತು, ಸತ್ತದ್ದು ಸತ್ತಿತು ಎಂದುಕೊಳ್ಳುವುದು. ಇನ್ನು ಇದು ಏಕೆ ಎಂದು

ದುಖಿಸಬೇಡ, ಮಹಾರಾಜನೇ
ಇಲ್ಲಿಂದ
ಮುಂದಾಗಬೇಕಾದುದನ್ನು
ಯೋಚಿಸು

ಕಂ|| ನೆಱೆವೊಡೆ
ನೆರವೊಳೆಮಿನಿಬರು
ಮಿಱೆ ಕಲಹಮಪಾಯ
ಬಹುಳಮಿನ್ನುಂ ನಯದ|
ತ್ತೆಱಗುವೊಡೆ ಸಂಧಿ ಹರಿಗನೊ
ಳುಱುಗುಂ ನಿನಗಿಂತಿವೆರಡೆ
ಕಜ್ಜಂ ನೃಪತೀ|| ೨೩ ||

ಪದ್ಯ-೨೩:ಪದವಿಭಾಗ-ಅರ್ಥ:ನೆಱೆವೊಡೆ/ ಇರಿವೊಡೆ ನೆರಂ ಒಳೆಮ್ (ನೆರಂ ಒಳೆಮ್- ನೆರವಿಗೆ ಇದ್ದೇವೆ) ಇನಿಬರುಂ, ಇಱೆ (ಯುದ್ಧಮಾಡುವುದಾದರೆ ನಾವಿಷ್ಟು ಜನವೂ ಸಹಾಯಕ್ಕೆ ಇದ್ದೇವೆ. ಇರಿ- ಯುದ್ಧಮಾಡು.) ಕಲಹಂ ಅಪಾಯ ಬಹುಳಂ (ಯುದ್ಧವು ಹೆಚ್ಚಿನ

ಅಪಾಯವುಳ್ಳದ್ದು) ಇನ್ನುಂ ನಯದತ್ತ ಎಱಗುವೊಡೆ (ಎಂದು ಸಂಯ ಕಡೆ ಒಲಿಯುವ ಪಕ್ಷದಲ್ಲಿ) ಸಂಧಿ ಹರಿಗನೊಳು ಉಱುಗುಂ (ಆರ್ಜುನನಲ್ಲಿ ಇರುವುದು,- ಸಂಧಿಯಾಗುತ್ತದೆ.) ನಿನಗೆ ಇಂತು ಇವು ಎರಡೆ ಕಜ್ಜಂ ನೃಪತೀ (ರಾಜನೇ ನಿನಗೆ ಇವು ಎರಡೇ (ಮಾಡಬೇಕಾದ) ಕಾರ್ಯಗಳು.)

ಪದ್ಯ-೨೩:ಅರ್ಥ:

ಯುದ್ಧಮಾಡುವುದಾದರೆ ನಾವಿಷ್ಟು ಜನವೂ ಸಹಾಯಕ್ಕೆ ಇದ್ದೇವೆ. ಯುದ್ಧಮಾಡು. ಯುದ್ಧವು ಹೆಚ್ಚಿನ ಅಪಾಯವುಳ್ಳದ್ದು; ಇನ್ನು ಸಂಧಿಯ ಕಡೆ ಒಲಿಯುವ ಪಕ್ಷದಲ್ಲಿ ಆರ್ಜುನನಲ್ಲಿ ಸಂಧಿಯಾಗುತ್ತದೆ. ರಾಜನೇ ನಿನಗೆ ಇವು ಎರಡೇ

(ಮಾಡಬೇಕಾದ) ಕಾರ್ಯಗಳು.

ವ|| ಎಂಬುದುಂ ಬೞಿಕ್ಕಿನ ನುಡಿಗೆ ಸೈರಿಸಲಾಱದೆ ಫಣಿಕೇತನನಿಂತೆಂದಂ-

ವಚನ:ಪದವಿಭಾಗ-ಅರ್ಥ: ಎಂಬುದುಂ ಬೞಿಕ್ಕಿನ ನುಡಿಗೆ (ಆಮೇಲಿನ- ಎರಡನೆಯ ಕಾರ್ಯದ ಮಾತಿಗೆ) ಸೈರಿಸಲಾಱದೆ ಫಣಿಕೇತನನು ಇಂತು ಎಂದಂ (ಒಪ್ಪದೆ

ದುರ್ಯೋಧನನು ಹೀಗೆಂದನು)-

ವಚನ:ಅರ್ಥ:ವ|| ಎನ್ನಲು ಆಮೇಲಿನ- ಎರಡನೆಯ ಕಾರ್ಯದ ಮಾತಿಗೆ ಸೈರಿಸಲಾರದೆ ದುರ್ಯೋಧನನು ಹೀಗೆಂದನು.

ಮ|| ಪಟಿವಾಡಯ್ದನೆ ಬೇಡೆಯುಂ ಕುಡದ ನಾನೇನೆಂದು ಸಂಧಾನಮಂ

ಗಟಿಯಿಪ್ಪೆಂ
ಗಟಿಯಿಪ್ಪನಂಗನೃಪನಂ
ನೀನೆತ್ತಿ ತಂದೆನ್ನ ಮುಂ|
ದಿಟಿಪಲ್ಕ್ಯಾರ್ಪೊಡಮಾವುದಾ
ಗಿ ಕೃಪ ನೀಂ ಪೇೞ್ದಿಪ್ಪೆಯಾ
ಮಾತನಿ
ನ್ನುಟಿ ದುರ್ಯೋಧನನಲ್ಲನೇ
ಕಳದೊಳಂ ಕಾಣ್ದಂತು
ಕೌಂತೇಯರಂ|| ೨೪ ||

ಪದ್ಯ-೨೪:ಪದವಿಭಾಗ-

ಅರ್ಥ:ಪಟಿವಾಡು ಅಯ್ದನೆ

ಬೇಡೆಯುಂ ಕುಡದ ನಾನು
(ಹಳೆಯ ವಾಡ- ಹಳೆಯ
ಗ್ರಾಮಗಳು ಐದನ್ನು
ಬೇಡಿದರೂ ಕೊಡದ ನಾನು)
ಏನೆಂದು ಸಂಧಾನಮಂ
ಗಟಿಯಿಪ್ಪೆಂ (ಏನೆಂಬುದಾಗಿ
ಸಂಧಿಯನ್ನು ಮಾಡಲಿ)
ಗಟಿಯಿಪ್ಪೆಂ (ಪ್ಪೆಂ)
ಅಂಗನೃಪನಂ ನೀನು ಎತ್ತಿ
ತಂದು ಎನ್ನ ಮುಂದೆ
ಇಟಿಪಲ್ಕೆ ಆರ್ಪೊಡಂ

(ಕರ್ಣನನ್ನು ನನ್ನ ಮುಂದೆ ತಂದು ಇಳಿಸುವುದಕ್ಕೆ ಸಮರ್ಥನಾದರೆ (ಆಗ ಸಂಧಿಯನ್ನು) ಗಳಿಯುಸುತ್ತೇನೆ.) ಆವುದಾಗಿ ಕೃಪ ನೀಂ ಪೇೞ್ದಪ್ಪೆಯಾ (ಕೃಪನೇ ನೀನು ಈ ಮಾತನ್ನು ಯಾವುದೆಂದು ಹೇಳುತ್ತೀಯೆ. ಆ ಮಾತಿಗೆ ಅರ್ಥವಿದೆಯೇ ಎಂದು ಭಾವ.) ಮಾತನು ಇನ್ನು ಉೞಿ (ಇನ್ನು ಮಾತನ್ನು

ಬಿಡು.) ದುರ್ಯೋಧನನಲ್ಲನೇ
ಕಳದೊಳಂ ಕಾಣ್ದಂತು
ಕೌಂತೇಯರಂ (ಪಾಂಡವರನ್ನು
ಯುದ್ಧಭೂಮಿಯಲ್ಲಿ ಮಾತ್ರಾ
ಕಾನುವವನು
ದುರ್ಯೋಧನನು ಎಂ
ಹೆಸರುಳ್ಳವನಲ್ಲವೇ ನಾನು?)
ಪದ್ಯ-೨೪:ಅರ್ಥ: ಹಳೆಯ
ಗ್ರಾಮಗಳು ಐದನ್ನು
ಬೇಡಿದರೂ ಕೊಡದ ನಾನು
ಏನೆಂಬುದಾಗಿ ಸಂಧಿಯನ್ನು

ಮಾಡಲಿ? ಕರ್ಣನನ್ನು ನನ್ನ ಮುಂದೆ ತಂದು ಇಳಿಸುವುದಕ್ಕೆ ಸಮರ್ಥನಾದರೆ (ಆಗ ಸಂಧಿಯನ್ನು) ಗಳಿಯುಸುತ್ತೇನೆ. ಕೃಪನೇ ನೀನು ಈ ಮಾತನ್ನು ಯಾವುದೆಂದು ಹೇಳುತ್ತೀಯೆ. ಇನ್ನು ಮಾತನ್ನು ಬಿಡು. ಪಾಂಡವರನ್ನು ಯುದ್ಧಭೂಮಿಯಲ್ಲಿ ಮಾತ್ರಾ ಕಾನುವವನು

ದುರ್ಯೋಧನನು ಎಂ
ಹೆಸರುಳ್ಳವನಲ್ಲವೇ ನಾನು?

ವ|| ಎಂಬುದು ಜಳಧರಧ್ವನಿಯಿನಶ್ವತ್ಥಾಮ ನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದು ಜಳಧರ(ಮೋಡ) ಧ್ವನಿಯಿಂ ಅಶ್ವತ್ಥಾಮನು ಇಂತೆಂದಂ (ಎನ್ನಲು ಗುಡುಗಿನ

ಧ್ವನಿಯಿಂದ ಅಶ್ವತ್ಥಾಮನು ಹೀಗೆಂದನು)-

ವಚನ:ಅರ್ಥ: ಎನ್ನಲು ಗುಡುಗಿನ ಧ್ವನಿಯಿಂದ ಅಶ್ವತ್ಥಾಮನು ಹೀಗೆಂದನು-

ಚಂ||

ಕುಳಬಳಶೌರ್ಯಧೈರ್ಯಯು

ತರೆಲ್ಲರುಮಂ ಪೆಱಗಿಕ್ಕಿ

ಕರ್ಣನಂ

ಪಳಯಿಸುತಿರ್ಪೆಯೇನೊ ಗಳ

ನಿನ್ನಯ ತಮ್ಮನ ನೆತ್ತರಂ

ಭಯಂ|
ಗೊಳೆ ಪವಮಾನಸೂನು ತವೆ
ಪೀರ್ದೆಡೆಯೊಳ್ ಕಲಿ
ಕರ್ಣನೇಕೆ ಪೇೞು
ಮಿಳ ಮಿಳ
ನೋಡುತಿರ್ದನವನುರ್ಕನಿಳಾ
ಧಿಪರುಂಟೆ ನಿನ್ನವೋಲ್|| ೨೫
||

ಪದ್ಯ-೨೫:ಪದವಿಭಾಗ-

ಅರ್ಥ:ಕುಳ ಬಳ ಶೌರ್ಯ ಧೈರ್ಯಯುತರು ಎಲ್ಲರುಮಂ

ಪೆಱಗಿಕ್ಕಿ (ಕುಲ, ಬಲ, ಶೌರ್ಯ
ಧೈರ್ಯದಿಂದ
ಕೂಡಿದವರೆಲ್ಲರನ್ನೂ ಬಿಟ್ಟು -
ಹೊರಗಿಟ್ಟು) ಕರ್ಣನಂ
ಪಳಯಿಸುತ್ತಿರ್ಪೆಯೇನೊ ಗಳ
(ಕರ್ಣನನ್ನು ಕುರಿತು ಹೊಗಳಿ
ಪ್ರಲಾಪಮಾಡುತ್ತೀಯನೋ
ಗಡ-ದಿಟಕ್ಕೂ!) ನಿನ್ನಯ
ತಮ್ಮನ ನೆತ್ತರಂ ಭಯಂಗೊಳೆ
ಪವಮಾನಸೂನು(ಭೀಮನು)
ತವೆ ಪೀರ್ದ ಎಡೆಯೊಳ್

(ನಿನ್ನ ತಮ್ಮನಾದ
ದುಶ್ಯಾಸನನ ರಕ್ತವನ್ನು
ಭಯವನ್ನುಟುಮಾಡುವ
ಹಾಗೆ ಭೀಮನು ಪೂರ್ಣ
ಕುಡಿದ ಸಂದರ್ಭದಲ್ಲಿ) ಕಲಿ
ಕರ್ಣನು ಏಕೆ ಪೇಲು ಮಿಳ
ಮಿಳ ನೋಡುತಿರ್ದನು
ಅವನು ಉರ್ಕಂ
ಇಳಾಧಿಪರುಂಟೆ ನಿನ್ನವೋಲ್
(ಶೂರನಾದ ಕರ್ಣನು ಏಕೆ
ಮಿಟಮಿಟನೆ ನೋಡುತ್ತಿದ್ದ?

ಹೇಳು; ನಿನ್ನ ಹಾಗಿರುವ ರಾಜರೂ ಉಂಟೇ?)

ಪದ್ಯ-೨೬:ಅರ್ಥ: ಕುಲ, ಬಲ, ಶೌರ್ಯ ಧೈರ್ಯದಿಂದ ಕೂಡಿದವರೆಲ್ಲರನ್ನೂ ಬಿಟ್ಟು ಕರ್ಣನನ್ನು ಕುರಿತು ಹೊಗಳಿ ಪ್ರಲಾಪಮಾಡುತ್ತೀಯನೋ ಗಡ ದಿಟಕ್ಕೂ!. ನಿನ್ನ ತಮ್ಮನಾದ ದುಶ್ಯಾಸನನ ರಕ್ತವನ್ನು ಭಯವನ್ನುಟುಮಾಡುವ

ಹಾಗೆ ಭೀಮನು ಪೂರ್ಣವಾಗಿ ಕುಡಿದ ಸಂದರ್ಭದಲ್ಲಿ ಶೂರನಾದ ಕರ್ಣನು ಏಕೆ ಮಿಟಮಿಟನೆ ನೋಡುತ್ತಿದ್ದ ಹೇಳು? ನಿನ್ನ ಹಾಗಿರುವ ರಾಜರೂ ಉಂಟೇ?

ಕಂ|| ಅಂಬಿಗನೊಳಾದುದಿದು ಋಣ ಸಂಬಂಧಂ ನಿನಗಮೋಘಮಿದನುೞಿದವರಾ|

ಗಱಂ ಬಿಸುಡಲ್ಕೇಂ ಬರ್ಕುಮೆ

ನೀಂ ಬೆಸಸುವುದೆನ್ನನಾಂತರಂ

ತವೆ ಕೊಲ್ವೆಂ|| ೨೬ ||

ಪದ್ಯ-೨೬:ಪದವಿಭಾಗ-

ಅರ್ಥ:ಅಂಬಿಗನೊಳು

ಆದುದು ಇದು

ಋಣಸಂಬಂಧಂ (ನಿನಗೆ

ಅಂಬಿಗರವನಲ್ಲಿ ವಿಶೇಷ

ಋಣಸಂಬಂಧವಾಯಿತು.)

ನಿನಗೆ ಅಮೋಘಂ (ನಿನಗೆ

ಮಾತ್ರಾ, ಇದು ಶ್ರೇಷ್ಠ) ಇದನು

ಉಱಿದವರ್ ಆರ್ಗಂ
ಬಿಸುಡಲ್ಕೇಂ ಬರ್ಕುಮೆ
(ಇದನ್ನು ಬಿಡಿಸಲು
ಉಳಿದವರಿಗೆ ಸಾಧ್ಯವೇ?
ಬರುವುದೇ?) ನೀಂ
ಬೆಸಸುವುದು (ನೀನು ನನಗೆ
ಅಪ್ಪಣೆ ಕೊಡು; ನನ್ನನು
ಕುರಿತು-,) ಆಂತರಂ ತವೆ
ಕೊಲ್ವೆಂ (ಎದುರಿಸಿದವರನ್ನು
ಪೂರ್ಣವಾಗಿ/ ಇಲ್ಲದಂತೆ
ಕೊಲ್ಲುತ್ತೇನೆ.)

ಪದ್ಯ-೨೬:ಅರ್ಥ: ನಿನಗೆ ಅಂಬಿಗರವನಲ್ಲಿ ವಿಶೇಷ ಋಣಸಂಬಂಧವಾಯಿತು. ನಿನಗೆ ಮಾತ್ರಾ ಇದು ಶ್ರೇಷ್ಠ. ಇದನ್ನು ಬಿಡಿಸಲು ಉಳಿದವರಿಗೆ ಸಾಧ್ಯವೇ? ನೀನು ನನಗೆ ಅಪ್ಪಣೆ ಕೊಡು; ಎದುರಿಸಿದವರನ್ನು ಉಳಿಸದೆ ಕೊಲ್ಲುತ್ತೇನೆ.

ವ|| ಎಂದಶ್ವತ್ಥಾಮಂ ಕರ್ಣನಂ ಪೞಿದು ನುಡಿದೊಡಾ ನುಡಿಗೆ

ಮುನಿದು ಕೊಲ್ವನಿತುವರಂ ಬಗೆದು ದುರ್ಯೋಧನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದ ಅಶ್ವತ್ಥಾಮಂ ಕರ್ಣನಂ ಪೞಿದು ನುಡಿದೊಡೆ (ಎಂದು ಅಶ್ವತ್ಥಾಮನು ಕರ್ಣನನ್ನು ನಿಂದಿಸಿ ಮಾತನಾಡಲು) ಆ ನುಡಿಗೆ ಮುನಿದು (ಆ ಮಾತಿಗೆ ಕೋಪಿಸಿಕೊಂಡು) ಕೊಲ್ವ

ಅನಿತುವರಂ ಬಗೆದು (ಅವನನ್ನು ಕೊಂದು ಹಾಕುವವರೆಗೂ ಯೋಚಿಸಿ) ದುರ್ಯೋಧನನು ಇಂತೆಂದಂ (ದುರ್ಯೋಧನನು ಹೀಗೆಂದನು)-

ವಚನ:ಅರ್ಥ:ಎಂದು ಅಶ್ವತ್ಥಾಮನು ಕರ್ಣನನ್ನು ನಿಂದಿಸಿ ಮಾತನಾಡಲು, ಆ ಮಾತಿಗೆ ಕೋಪಿಸಿಕೊಂಡು ಅವನನ್ನು ಕೊಂದು

ಹಾಕುವವರೆಗೂ ಯೋಚಿಸಿ ದುರ್ಯೋಧನನು ಹೀಗೆಂದನು.

ಕಂ|| ನಿನ್ನಿಂದಂ ತ್ರಿಭುವನ ರಾ
ಜ್ಯೋನ್ನತಿ ಬಂದೆನಗೆ
ಸಾರ್ಗುಮಪ್ಪೊಡಮೊಲ್ಲೆಂ|
ನೀನ್ನುಡಿದು ಬರ್ದುಕಿದ್ದೆ ಪೆಱ
ರೆನ್ನಿದಿರೊಳ್ ನುಡಿದು
ಕರ್ಣನಂ ಬರ್ದುಕುವರೇ|| ೨೭
||

ಪದ್ಯ-೨೭:ಪದವಿಭಾಗ-ಅರ್ಥ:ನಿನ್ನಿಂದಂ ತ್ರಿಭುವನ ರಾಜ್ಯೋನ್ನತಿ ಬಂದು ಎನಗೆ ಸಾರ್ಗುಂ ಅಪ್ಪೊಡಂ ಒಲ್ಲೆಂ (ನಿನ್ನಿಂದ ಮೂರುಲೋಕದ ರಾಜ್ಯಾಪತ್ಯದ ವೈಭವವು ಬಂದು ನನಗೆ ಸೇರುವುದಾದರೂ ನನಗೆಬೇಡ) ನೀನ್ ನುಡಿದು ಬರ್ದುಕಿದ್ಪೈ (ನೀನಾಗುವ ಹೊತ್ತಿಗೆ ಬದುಕಿದ್ದೀಯೆ.)

ಪೆಱರ್ ಎನ್ನಿದಿರೊಳ್
ನುಡಿದು ಕರ್ಣನಂ
ಬರ್ದುಕುವರೇ (ನನ್ನ
ಎದುರಿನಲ್ಲಿ ಕರ್ಣನನ್ನು
ನಿಂದಿಸಿ ಬದುಕುತ್ತಿದ್ದರೆ?)
ಪದ್ಯ-೨೭:ಅರ್ಥ: ನಿನ್ನಿಂದ
ಮೂರುಲೋಕದ
ರಾಜ್ಯಾಪತ್ಯದ ವೈಭವವು
ಬಂದು ನನಗೆ
ಸೇರುವುದಾದರೂ
ನನಗೆಬೇಡ; ಕರ್ಣನ

ವಿಷಯವಾಗಿ (ಕೆಟ್ಟುದನ್ನು)
ಆಡಿ ನೀನಾಗುವ ಹೊತ್ತಿಗೆ
ಬದುಕಿದ್ದೀಯೆ. ನನ್ನ
ಎದುರಿನಲ್ಲಿ ಕರ್ಣನನ್ನು
ನಿಂದಿಸಿ ಬದುಕುತ್ತಿದ್ದರೆ?-
ಎಂದನು ಕೋಪದಿಂದ
ದುರ್ಯೋಧನ.

ಚಂ|| ನುಡಿ ನಿನಗಂ ದಿನೇಶತನಯಂಗಮದೆನ್ನಯ ಪಕ್ಕದಾದೊಡಂ

ಮಿಡುಕದೆ ಕೇಳ್ವೆನಲ್ಲಿ

ಸಮನಿರ್ವರುಮಾತನತೀತನಾ

ದ ಪಿಂ|

ಬಡಿನೊಳದೆಂತು ಪೇೞ

ಪೞಿಯೆ ಕೇಳ್ವೆನೊ ಕೇಳ್ದೊಡೆ

ಚಿಃ ಪೆಱಂ ಪೆಱಂ

ನುಡಿದೊಡೆ ಕೇಳ್ದನೆಂದೆನಗೆ

ನೋಯನೆ

ಸಗ್ಗದೊಳಿರ್ದಿನಾತ್ಮಜಂ|| ೨೮||

ಪದ್ಯ-೨೮:ಪದವಿಭಾಗ-

ಅರ್ಥ:ನುಡಿ ನಿನಗಂ

ದಿನೇಶತನಯಂಗಂ ಅದು ಎನ್ನಯ ಪಕ್ಕದೆ ಆದೊಡಂ ಮಿಡುಕದೆ ಕೇಳ್ವೆಂ, (ನಿನಗೂ ಕರ್ಣನಿಗೂ ನನ್ನ ಸಮಕ್ಷಮದಲ್ಲಿ ವಾಗ್ವಾದವಾದರೆ ಸುಮ್ಮನಿದ್ದು ಕೇಳುತ್ತೇನೆ.). ಅಲ್ಲಿ ಸಮಂ ಇರ್ವರುಂ (ಅಲ್ಲಿ ನೀವು ಇಬ್ಬರೂ ನನಗೆ ಸಮ). ಆತನು ಅತೀತನಾದ ಪಿಂಬಡಿನೊಳು ಅದೆಂತು ಪೇೞು ಪೞಿಯೆ

ಕೇಳ್ವೆನೊ (ಅವನು ಸತ್ತುಹೋದ ಬಳಿಕ ಅದು ಹೇಗೆ ಅವನ ವಿಷಯವಾದ ನಿಂದೆಯನ್ನು ಕೇಳುವೆನು ಹೇಳು.) ಕೇಳ್ದೊಡೆ ಚೀಃ ಪೆಱಂ ಪೆಱಂ ನುಡಿದೊಡೆ ಕೇಳ್ದನು ಎಂದು (ಹಾಗೆ ಕೇಳಿದರೆ ಸ್ವರ್ಗದಲ್ಲಿರುವ ಕರ್ಣನು ಚೀಃ, ಇದನ್ನು- ನಿಂದೆಯನ್ನು ಕೇಳಿದನು ಎಂದು) ಎನಗೆ ನೋಯನೆ ಸಗ್ಗದೊಳಿರ್ದ

ಇನಾತ್ಮಜಂ (ನನ್ನ ವಿಷಯದಲ್ಲಿ ನೊಂದುಕೊಳ್ಳುವುದಿಲ್ಲವೇ ಸ್ವರ್ಗದಲ್ಲಿರುವ ಕರ್ಣನು?)

ಪದ್ಯ-೨೮:ಅರ್ಥ: ನಿನಗೂ ಕರ್ಣನಿಗೂ ನನ್ನ ಸಮಕ್ಷಮದಲ್ಲಿ ವಾಗ್ವಾದವಾದರೆ ಸುಮ್ಮನಿದ್ದು ಕೇಳುತ್ತೇನೆ. ಅಲ್ಲಿ ನೀವು ಇಬ್ಬರೂ ನನಗೆ ಸಮ. ಅವನು ಸತ್ತುಹೋದ ಬಳಿಕ ಅದು

ಹೇಗೆ ಅವನ ವಿಷಯವಾದ ನಿಂದೆಯನ್ನು ಕೇಳುವೆನು ಹೇಳು. ಹಾಗೆ ಕೇಳಿದರೆ ಸ್ವರ್ಗದಲ್ಲಿರುವ ಕರ್ಣನು ಚಿಃ, ಇತರರು ನನ್ನನ್ನು ಬಯ್ದರೆ (ದುರ್ಯೋಧನನು) ಇದನ್ನು ಕೇಳಿದನು ಎಂದು ನನ್ನ ವಿಷಯದಲ್ಲಿ ನೊಂದುಕೊಳ್ಳುವುದಿಲ್ಲವೇ?

ವ|| ಎಂಬುದುಮೀ ನುಡಿಯೆ ನುಡಿಯೆ ನಿನ್ನ ಕೂರ್ಮೆಗಂ

ತಕ್ಕೂರ್ಮೆಗಂ

ದೊರೆಯಪ್ಪುದಾದೊಡಮರಾ

ತಿಸೈನ್ಯಮಂ ತವೆ ಕೊಂದಲ್ಲದೆ

ನಿನ್ನ ಮೊಗಮಂ

ನೋಡೆನೆಂದಶ್ವತ್ಥಾಮನಾಸ್ಥಾನ

ದಿಂದೆಟ್ಟಿ ಪೋದನಾಗಳ್

ಭೂನಾಥಂ

ಮದ್ರರಾಜನನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಈ

ನುಡಿಯೆ ನಿನ್ನ ಕೂರ್ಮೆಗಂ

ತಕ್ಕು ಊರ್ಮಿಗಂ
ದೊರೆಯಪ್ಪುದು (ಎನ್ನಲು ಈ
ಮಾತು ನಿನ್ನ ಸ್ನೇಹಕ್ಕೂ
ಯೋಗ್ಯವಾದ ನಡತೆಗೂ
ಸಮಾನವಾಗಿದೆ
(ಯೋಗ್ಯವಾಗಿದೆ)) ಆದೊಡಂ
ಆರಾತಿಸೈನ್ಯಮಂ ತವೆ
ಕೊಂದಲ್ಲದೆ ನಿನ್ನ ಮೊಗಮಂ
ನೋಡೆನು ಎಂದು (ಆದರೂ
ಶತ್ರುಸೈನ್ಯವನ್ನು ಪೂರ್ಣವಾಗಿ
ಕೊಂದಲ್ಲದೆ ನಿನ್ನ ಮುಖವನ್ನು

ನೋಡುವುದಿಲ್ಲ ಎಂದು)
ಅಶ್ವತ್ಥಾಮನು ಆಸ್ಥಾನದಿಂದ
ಎದ್ದು ಪೋದನು ಆಗಳ್
(ಅಶ್ವತ್ಥಾಮನು ಅಲ್ಲಿಂದ
ಎದ್ದುಹೋದನು. ಆಗ)
ಭೂನಾಥಂ
ಮದ್ರರಾಜನನಿಂತೆಂದಂ (ಆಗ
ರಾಜನಾದ ದುರ್ಯೋಧನನು
ಶಲ್ಯನನ್ನು ಕುರಿತು
ಹೀಗೆಂದನು)-

ಶಲ್ಯನಿಗೆ ವೀರಪಟ್ಟ / ಸೇನಾದಿಪತಿ ಪಟ್ಟ

ವಚನ:ಅರ್ಥ:ಎನ್ನಲು ಈ ಮಾತು ನಿನ್ನ ಸ್ನೇಹಕ್ಕೂ ಯೋಗ್ಯವಾದ ನಡತೆಗೂ ಸಮಾನವಾಗಿದೆ (ಯೋಗ್ಯವಾಗಿದೆ). ಆದರೂ ಶತ್ರುಸೈನ್ಯವನ್ನು ಪೂರ್ಣವಾಗಿ ಕೊಂದಲ್ಲದೆ ನಿನ್ನ ಮುಖವನ್ನು ನೋಡುವುದಿಲ್ಲ ಎಂದು ಅಶ್ವತ್ಥಾಮನು ಅಲ್ಲಿಂದ

ಎದ್ದುಹೋದನು. ಆಗ ರಾಜನಾದ ದುರ್ಯೋಧನನು ಶಲ್ಯನನ್ನು ಕುರಿತು ಹೀಗೆಂದನು -

ಚಂ|| ಇನತನಯಂಗೆ ಸಾವುಮೆನಗಿಂತಿನಿತೊಂದಱ ಲುಂ ದಿನೇಶ ಪು ತ್ರನೆ ನಿಮಗಿಂಬುಕೆಯ್ಯುದುದಱಿಂ ದೊರೆಕೊಂಡುದು ವೀರ ಲಕ್ಷ್ಮಿನಿ|

ಮ್ಮನುಬಲದಿಂದಮಲ್ಲದೆನಗಾಗದು ದಲ್ ಸಲೆ ಪಟ್ಟಮಂ ಸಮಂ
ತೆನಗೆಯೆ ಮಾೞ್ಪೊಡೇ ತೊದಳೊ ನೀಮೆ ದಲಾಂಪುದು ಬೀರವಟ್ಟಮಂ|| ೨೯ ||

ಪದ್ಯ-೨೯:ಪದವಿಭಾಗ-ಅರ್ಥ:ಇನತನಯಂಗೆ ಸಾವುಂ ಎನಗೆ ಇಂತು ಇನಿತೊಂದು ಅೞಲುಂ

(ಕರ್ಣನಿಗೆ ಸಾವೂ, ನನಗೆ
ಹೀಗೆ ಇಷ್ಟೊಂದು ದುಃಖವೂ)
ದಿನೇಶ ಪುತ್ರನೆ ನಿಮಗೆ
ಇಂಬುಕೆಯ್ಯದುದಱಿಂ
ದೊರೆಕೊಂಡುದು (ಕರ್ಣನು
ನೀವು ಹೇಳಿದ ಹಾಗೆ
ಕೇಳದುದರಿಂದ
ಉಂಟಾಯಿತು.) ವೀರಲಕ್ಷ್ಮಿ
ನಿಮ್ಮ ಅನುಬಲದಿಂದಂ
ಅಲ್ಲದೆ ಎನಗಾಗದು ದಲ್!
(ವೀರಲಕ್ಷ್ಮಿಯು ನಿಮ್ಮ

ಸಹಾಯವಿಲ್ಲದೆ ನನಗೆ ಆಗುವುದಿಲ್ಲ, ದಲ್ ನಿಜಕ್ಕೂ!) ಸಲೆ ಪಟ್ಟಮಂ ಸಮಂತು ಎನಗೆಯೆ ಮಾೞ್ಪೊಡೆ ಏ ತೊದಳೊ (ಮತ್ತೆ ಏನೆಂದರೆ ನನಗೇ ರಾಜ್ಯಾಭಿಷೇಕಮಾಡಬೇಕಾದರೆ- ನಾನು ಗೆಲ್ಲಬೇಕಾದರೆ, ಏನು ತೊದಲು ಮಾತೋ? - ಏನೂ ಅನುಮಾನವಿಲ್ಲ) ನೀಮೆ ದಲಾಂಪುದು

ಬೀರವಟ್ಟಮಂ (ನೀವೇ ವೀರಪಟ್ಟವನ್ನು ಸ್ವೀಕರಿಸಬೇಕು.)

ಪದ್ಯ-೨೯:ಅರ್ಥ: ಕರ್ಣನಿಗೆ ಸಾವೂ, ನನಗೆ ಇಷ್ಟೊಂದು ದುಃಖವೂ, ಕರ್ಣನು ನೀವು ಹೇಳಿದ ಹಾಗೆ ಕೇಳದುದರಿಂದ ಉಂಟಾಯಿತು. ವೀರಲಕ್ಷ್ಮಿಯು ನಿಮ್ಮ ಸಹಾಯವಿಲ್ಲದೆ ನನಗೆ ಆಗುವುದಿಲ್ಲ ಅಲ್ಲವೇ? ಮತ್ತೆ

ಏನೆಂದರೆ ನನಗೆ ರಾಜ್ಯಾಭಿಷೇಕಮಾಡಬೇಕಾದರೆ (ನಾನು ಗೆಲ್ಲಬೇಕಾದರೆ) ನೀವೇ ವೀರಪಟ್ಟವನ್ನು ಸ್ವೀಕರಿಸಬೇಕು. ಏನೂ ಅನುಮಾನವಿಲ್ಲ.

ವ|| ಎಂಬುದುಂ ಶಲ್ಯನಿಂತಿರ್ದನಿಬರೊಳಮಾನಾವಾಳ ದೊರೆಯೆಂ ಬೆಸನಂ ನೀಮೆನಗೆ ದಯೆಗೆಯ್ವಿರೆಂಬುದೆಲ್ಲಮೆನಗೆ

ಸೈಪುಂ ಸ್ವಾಮಿ ಸಂಪತ್ತುಮಂತೆಗೆಯ್ವೆನೆಂದು ಷೋಡಶ ರಾಜಭರಮಂ ತಾಳ್ದುವಂತೆ ಸೇನಾಪತ್ಯಭಾರಮಂ ಮದ್ರರಾಜಂ ತಾಳ್ದಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಶಲ್ಯನಿ ಇಂತಿರ್ದ ಅನಿಬರೊಳಂ ಆನು ಆವ ಆಳ ದೊರೆಯೆಂ ("ಇಲ್ಲಿರುವ ಇಷ್ಟು ಜನರಲ್ಲಿ

ನಾನು ಯಾವ
ವೀರಪುರುಷನಿಗೆ
ಸಮಾನಾಗುತ್ತೇನೆ?") ಬೆಸನಂ
ನೀಂ ಎನಗೆ
ದಯೆಗೆಯ್ವಿರೆಂಬುದು ಎಲ್ಲಂ
ಎನಗೆ ಸೈಪುಂ (ನೀವು ನನಗೆ
ಕಾರ್ಯವನ್ನು ವಹಿಸಿ
ದಯೆಗೈದಿರುವದೆಲ್ಲ ನನ್ನ
ಪುಣ್ಯವು.) ಸ್ವಾಮಿ ಸಂಪತ್ತುಂ
(ಸ್ವಾಮಿಸಂಪತ್ತೂ ಆಗಿರುತ್ತದೆ)
ಅಂತೆಗೆಯ್ವೆನು ಎಂದು

ಷೋಡಶ ರಾಜಭರಮಂ
ತಾಳ್ದುವಂತೆ
ಸೇನಾಪತ್ಯಭಾರಮಂ
ಮದ್ರರಾಜಂ ತಾಳ್ದಿ (ನೀವು
ಹೇಳಿದ ಹಾಗೆಯೇ
ಮಾಡುತ್ತೇನೆ' ಎಂದು
ಹದಿನಾರು ರಾಜರ
ಭಾರವನ್ನೂ ತಾಳುವಂತೆ
ಶಲ್ಯನು ಸೇನಾಧಿಪತ್ಯ
ಭಾರವನ್ನು ಧರಿಸಿದನು)-

ವಚನ:ಅರ್ಥ:ಎನ್ನಲಾಗಿ ಶಲ್ಯನು ಹೇಳಿದ,"ಇಲ್ಲಿರುವ ಇಷ್ಟು ಜನರಲ್ಲಿ ನಾನು ಯಾವ ವೀರಪುರುಷನಿಗೆ ಸಮಾನಾಗುತ್ತೇನೆ?. ನೀವು ನನಗೆ ಕಾರ್ಯವನ್ನು ವಹಿಸಿ ದಯೆಗೈದಿರುವದೆಲ್ಲ ನನ್ನ ಪುಣ್ಯವು; ಸ್ವಾಮಿಸಂಪತ್ತೂ ಆಗಿರುತ್ತದೆ. ನೀವು ಹೇಳಿದ ಹಾಗೆಯೇ ಮಾಡುತ್ತೇನೆ' ಎಂದು ಹದಿನಾರು ರಾಜರ

ಭಾರವನ್ನೂ ತಾಳುವಂತೆ
ಶಲ್ಯನು ಸೇನಾಧಿಪತ್ಯ
ಭಾರವನ್ನು ಧರಿಸಿದನು.

ಕಂ|| ಮುಟ್ಟುಗಿಡೆ ತಾನೆ ತನ್ನಂ
ಕಟ್ಟಿಸಿಕೊಳ್ವಂತೆ
ಬೀರವಟ್ಟಮನಾಗಳ್|
ಕಟ್ಟಿಸಿಕೊಂಡಂ ಶಲ್ಯಂ
ಕಟ್ಟುದುದಂ
ಕಳೆಯಲಾರ್ಗಮೇಂ
ತೀರ್ದಪುದೇ|| ೩೦

ಪದ್ಯ-೩೦:ಪದವಿಭಾಗ-ಅರ್ಥ:ಮುಟ್ಟುಗಿಡೆ (ಮುಟ್ಟು- ಸಲಕರಣೆ; ಕಿಡೆ- ನಾಶ)ತಾನೆ ತನ್ನಂ ಕಟ್ಟಿಸಿಕೊಳ್ವಂತೆ (ಇತರ ಸಲಕರಣಗಳೆಲ್ಲ ನಾಶವಾಗಿರಲು ತನಗೆ ತಾನೇ ಕಟ್ಟಿಸಿಕೊಳ್ಳುವ ಹಾಗೆ) ಬೀರವಟ್ಟಮನಾಗಳ್ ಕಟ್ಟಿಸಿಕೊಂಡಂ (ಶಲ್ಯನು ವೀರಪಟ್ಟವನ್ನು ಕಟ್ಟಿಸಿಕೊಂಡನು.) ಶಲ್ಯಂ

ಕಟ್ಟುದುದಂ ಕಳೆಯಲು ಆರ್ಗಂ ಏಂ ತೀರ್ದಪುದೇ (ಶಲ್ಯನಿಗೆ ವಿಧಿಯ ವೀರಪಟ್ಟವನ್ನು ಕಟ್ಟಿದ ನಿಯಮವನ್ನು ಕಳೆಯಲು ಯಾರಿಗಾದರೂ ಸಾಧ್ಯವಾಗುತ್ತದೆ)

ಪದ್ಯ-೩೦:ಅರ್ಥ: ಇತರ ಸಲಕರಣಗಳೆಲ್ಲ ನಾಶವಾಗಿರಲು ತನಗೆ ತಾನೇ ಕಟ್ಟಿಸಿಕೊಳ್ಳುವ ಹಾಗೆ ಶಲ್ಯನು

ವೀರಪಟ್ಟವನ್ನು
ಕಟ್ಟಿಸಿಕೊಂಡನು. ಶಲ್ಯನಿಗೆ
ವಿಧಿಯ ವೀರಪಟ್ಟವನ್ನು
ಕಟ್ಟಿದ ನಿಯಮವನ್ನು
ಕಳೆಯಲು ಯಾರಿಗಾದರೂ
ಸಾಧ್ಯವಾಗುತ್ತದೆ

**ವ|| ಅನ್ನೆಗಮಿತ್ತ
ತದವೃತ್ತಾಂತಮಂ ಸಂಚಳಿತ
ಚಾರ ಚಕ್ಷುಗಳಿಂದಂ
ಧರ್ಮಪುತ್ರನಱಿದು
ನರಕಾಂತಕಂಗೆ ಬೞಿಯನಟ್ಟಿ**

ಬರಿಸಿ ಪೇಳ್ದೊಱಡೆೞೞಽಲಡೆ

ನಿಶಾಟ ರಾಜ ಕಿರೀಟ ಕೋಟಿ

ತಾಟಿತ ಭುಜಂ

ಚತುರ್ಭುಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಅನ್ನೆಗಂ ಇತ್ತ ತದವೃತ್ತಾಂತಮುಂ ಸಂಚಳಿತ ಚಾರ ಚಕ್ಷುಗಳಿಂದಂ ಧರ್ಮಪುತ್ರನು ಅಱಿದು (ಅಷ್ಟರಲ್ಲಿ ಆ ಸಮಾಚಾರವನ್ನು

ಸಂಚಾರಮಾಡುತ್ತಿರುವ
ಗೂಢಚಾರರಿಂದ
ಧರ್ಮರಾಯನು ತಿಳಿದು)
ನರಕಾಂತಕಂಗೆ ಬಟಿಯನಟ್ಟಿ
ಬರಿಸಿ ಪೇಳ್ದೊಡೆ (ಕೃಷ್ಣನಿಗೆ
ದೂತರನ್ನು ಕಳುಹಿಸಿ
ಬರಮಾಡಿಕೊಂಡು ಹೇಳಲು,)
ನಿಶಾಟ ರಾಜ ಕಿರೀಟ ಕೋಟಿ
ತಾಟಿತ ಭುಜಂ
ಚತುರ್ಭಜನಿಂತೆಂದಂ
(ರಾಕ್ಷಸರಾಜರ ಅನೇಕ

ಕಿರೀಟಗ್ರಾದಿಂದ ಹೊಡೆಯಲ್ಪಟ್ಟ ತೋಳನ್ನುಳ್ಳ ಚತುರ್ಭುಜನಾದ ಕೃಷ್ಣನು ಹೀಗೆಂದನು.)-

ವಚನ:ಅರ್ಥ:ಅಷ್ಟರಲ್ಲಿ ಆ ಸಮಾಚಾರವನ್ನು ಸಂಚಾರಮಾಡುತ್ತಿರುವ ಗೂಢಚಾರರಿಂದ ಧರ್ಮರಾಯನು ತಿಳಿದು ಕೃಷ್ಣನಿಗೆ ದೂತರನ್ನು ಕಳುಹಿಸಿ ಬರಮಾಡಿಕೊಂಡು ಹೇಳಲು,

ರಾಕ್ಷಸರಾಜರ ಅನೇಕ ಕಿರೀಟಗ್ರಾದಿಂದ ಹೊಡೆಯಲ್ಪಟ್ಟ ತೋಳನ್ನುಳ್ಳ ಚತುರ್ಭುಜನಾದ ಕೃಷ್ಣನು ಹೀಗೆಂದನು.

ಮ|| ಅದಟುಂ
ಕಾರ್ಮುಕವಿದ್ಯೆಯುಂ
ಭುಜಬಳಾವಷ್ಟಂಭಮುಂ
ಸಂದು ನಿಂ
ದುದು ಶಲ್ಯಂಗವನೊರ್ವನಲ್ತೆ
ನಮಗಂ ಹೃಚ್ಛಲ್ಯನಾತಂಗೆ ಕ|

ಟ್ಟಿದಿರೊಳ್ ನಿಲ್ವೊಡೆ ನೀನೆ ನಿಲ್ವೆಯದಱಿಂ ನಿಶ್ಶಲ್ಯಮಪ್ಪಂತು ನಿ ನ್ನೊದವಿಂ ಮಾೞ್ಪುದಗಾಧಸಾಗರಪರೀತಾಶೇಷ ಭೂಭಾಗಮಂ|| ೩೧ ||

ಪದ್ಯ-೩೧:ಪದವಿಭಾಗ-ಅರ್ಥ:ಅದಟುಂ ಕಾರ್ಮುಕವಿದ್ಯೆಯುಂ ಭುಜಬಳಾವಷ್ಟಂಭಮುಂ

(ಪರಾಕ್ರಮವೂ
ಚಾಪವಿದ್ಯೆಯೂ
ಬಾಹುಬಲದ ಅಹಂಕಾರವೂ)
ಸಂದು ನಿಂದುದು ಶಲ್ಯಂಗೆ
(ಶಲ್ಯನಲ್ಲಿ ಸೇರಿ ನಿಂತಿವೆ.)
ಅವನು ಒರ್ವನು ಅಲ್ತೆ
ನಮಗಂ ಹೃಚ್ಛಲ್ಯನು
(ನಮಗೂ ಅವನೊಬ್ಬನೇ
ಎದೆಗೆ ನಾಟದ
ಈಟಿಯಂತಿರುವವಲ್ಲವೇ?)
ಆತಂಗೆ ಕಟ್ಟಿದಿರೊಳ್

ನಿಲ್ವೊಡೆ ನೀನೆ ನಿಲ್ವೆಯ
ಅದಱಿಂ ನಿಶ್ಶಲ್ಯಮಪ್ಪಂತು
-ನಿನ್ನ ಒದವಿಂ ಮಾೞ್ಪುದು- >
(ಅವನಿಗೆ ಸರಿಸಮನಾಗಿ
ಎದುರು ನಿಲ್ಲುವುದಾದರೆ,
ನಿಶ್ಶಲ್ಯನನ್ನು ಮಾಡಲು
ಸರಿಯಾದ ಒದವಿಂದ /
ಸಿದ್ಧತೆಯಿಂದ ನೀನೊಬ್ಬನೇ
ನಿಲ್ಲುವುದು.) ಅಗಾಧ
ಸಾಗರಪರೀತಾಶೇಷ
ಭೂಭಾಗಮಂ - ನಿನ್ನ ಒದವಿಂ

ಮಾಟ್ಟುದು (ಆದುದರಿಂದ
ನೀನು ಅಗಾಧವಾದ
ಸಾಗರಗಳಿಂದ
ಸುತ್ತುವರಿಯಲ್ಪಟ್ಟ
ಭೂಭಾಗವನ್ನು ನಿನ್ನು
ಸಿದ್ದತೆಯಿಂದ ವಶ
ಮಾಡಿಕೊಳ್ಳುವುದು)

ಪದ್ಯ-೩೧:ಅರ್ಥ:
ಪರಾಕ್ರಮವೂ
ಚಾಪವಿದ್ಯೆಯೂ
ಬಾಹುಬಲದ ಅಹಂಕಾರವೂ

ಶಲ್ಯನಲ್ಲಿ ಸೇರಿ ನಿಂತಿವೆ.
ನಮಗೂ ಅವನೊಬ್ಬನೇ
ಎದೆಗೆ ನಾಟದ
ಈಟಿಯಂತಿರುವವಲ್ಲವೇ?
ಅವನಿಗೆ ಸರಿಸಮನಾಗಿ
ನಿಲ್ಲುವುದಾದರೆ ಸರಿಯಾದ
ಒದವಿಂದ / ಸಿದ್ದತೆಯಿಂದ
ನೀನೊಬ್ಬನೇ ನಿಲ್ಲುವೆ.
ಆದುದರಿಂದ ನೀನು
ಅಗಾಧವಾದ ಸಾಗರಗಳಿಂದ
ಸುತ್ತುವರಿಯಲ್ಪಟ್ಟ

ಭೂಭಾಗವನ್ನು ನಿನ್ನು ಸಿದ್ದತೆಯಿಂದ ವಶ ಮಾಡಿಕೊಳ್ಳುವುದು.

ವ|| ಅದಲ್ಲದೆಯುಂ ಸಿದ್ಧಿತ್ರಯಂಗಳ್ ನಿನಗಾತ್ಮೀಯಾಯತ್ತ ಸಿದ್ಧಿಯಾಗಿ ನಿಂದುದಱಿಂ ನೀನೆ ಬೀರವಟ್ಟಮಂ ತಾಳ್ದಿ ನಿಲ್ವುವೆನೆ-

ವಚನ:ಪದವಿಭಾಗ-

ಅರ್ಥ:ಅದು ಅಲ್ಲದೆಯುಂ

ಸಿದ್ಧಿತ್ರಯಂಗಳ್ (ಅಷ್ಟೇ
ಅಲ್ಲದೆ ಸಿದ್ಧಿತ್ರಯಗಳಾದ
ಪ್ರಭುಸಿದ್ಧಿ ಮಂತ್ರಸಿದ್ಧಿ ಮತ್ತು
ಉತ್ಸಾಹ ಸಿದ್ಧಿಗಳು) ನಿನಗೆ
ಆತ್ಮೀಯಾಯತ್ತ ಸಿದ್ಧಿಯಾಗಿ
ನಿಂದುದಱಿಂ (ನಿನಗೆ ಸ್ವತಃ
ತಾನಾಗಿ ಬಂದ ಸಿದ್ಧಿಯಾಗಿ
ನಿಂತಿರುವುದರಿಂದ) ನೀನೆ
ಬೀರವಟ್ಟಮಂ ತಾಳ್ದಿ
ನಿಲ್ಬುವೆನೆ (ನೀನೇ
ಸೇನಾಧಿಪತಿ ಅಥವಾ

ವೀರಪಟ್ಟವನ್ನು ಧರಿಸಿ ನಿಲ್ಲುವುದು ಎನ್ನಲು)-

ವಚನ:ಅರ್ಥ: ಅಷ್ಟೇ ಅಲ್ಲದೆ ಸಿದ್ಧಿತ್ರಯಗಳಾದ ಪ್ರಭುಸಿದ್ಧಿ ಮಂತ್ರಸಿದ್ಧಿ ಮತ್ತು ಉತ್ಸಾಹ ಸಿದ್ಧಿಗಳು ನಿನಗೆ ಸ್ವತಃ ತಾನಾಗಿ ಬಂದ ಸಿದ್ಧಿಯಾಗಿ ನಿಂತಿರುವುದರಿಂದ ನೀನೇ ಸೇನಾಧಿಪತಿ ಅಥವಾ ವೀರಪಟ್ಟವನ್ನು ಧರಿಸಿ ನಿಲ್ಲುವುದು ಎನ್ನಲು-

ಉ|| ಆಂ ದಿಟಮಾಗಿ
ಶಲ್ಯನಳವಂ ನೆರೆ
ಮುನ್ನರಿದಿರ್ದುಮೆನ್ನ ತ
ಮ್ಮಂದಿರನೇಕೆ ಕಾದಿಸುವೆನಾನೆ
ಮಹಾಜಿಯೊಳಾಂಪೆನಂತೆಗೆ|
ಯ್ಯೊಂದು ಮುಕುಂದ ಕಟ್ಟೆನಗೆ
ಪಟ್ಟಮನೆಂದು
ಮುಕುಂದವೃಂದಮೊಂ
ದೊಂದಱೊಳೊಂದಿ
ಮಿಕ್ಕೆಸೆಯೆ ತಾಳ್ದಿದನಾ ವಿಭು
ಬೀರಮಟ್ಟಮಂ|| ೩೨ ||

ಪದ್ಯ-೩೨:ಪದವಿಭಾಗ-ಅರ್ಥ:ಆಂ ದಿಟಮಾಗಿ ಶಲ್ಯನ ಅಳವಂ ನೆರೆ ಮುನ್ನೆ ಅರಿದಿರ್ದುಂ (ನಾನು ನಿಶ್ಚಯವಾಗಿಯೂ ಶಲ್ಯನ ಪರಾಕ್ರಮವನ್ನು ಸಂಪೂರ್ಣವಾಗಿ ಮೊದಲೇ ತಿಳಿದಿದ್ದೂ) ಎನ್ನ ತಮ್ಮಂದಿರನ ಏಕೆ ಕಾದಿಸುವೆನು (ನನ್ನ ತಮ್ಮಂದಿರನ್ನೇಕೆ ಕಾದುವಂತೆಮಾಡಲಿ;) ಆನೆ

ಮಹಾಜಿಯೊಳು ಆಂಪೆನು (ಮಹಾಯುದ್ಧದಲ್ಲಿ ನಾನೆ ಎದುರಿಸುತ್ತೇನೆ.) ಅಂತೆಗೆಯ್ಯ್ ಎಂದು ಮುಕುಂದ ಕಟ್ಟು ಎನಗೆ ಪಟ್ಟಮನೆಂದು (ಕೃಷ್ಣನೇ ಹಾಗೆ ಮಾಡೆಂದು ನನಗೆ ಪಟ್ಟವನ್ನು ಕಟ್ಟು ಎಂದು) ಮುಕುಂದವೃಂದಂ ಒಂದೊಂದಱೊಳು ಒಂದಿ (ಮುಕುಂದವೃಂದಂ ಎಂ ಭೇರಿಗಳು/ ಮಂಗಳವಾದ್ಯ

ಸಮೂಹವು ಒಂದರಲ್ಲೊಂದು
ಸಮನ್ವಯವಾಗಿ
ಕೂಡಿಕೊಂಡು) ಮಿಕ್ಕು
ಎಸೆಯೆ (ವಿಶೇಷವಾಗಿ
ಶಬ್ದಮಾಡಿ ಶೋಭಿಸಲು)
ತಾಳ್ದಿದನು ಆ ವಿಭು
ಬೀರಮಟ್ಟಮಂ (ಆ
ದೊರೆಯು ವೀರಪಟ್ಟವನ್ನು
ತಾಳಿದನು/
ವಹಿಸಿಕೊಂಡನು.)

ಪದ್ಯ-೩೨:ಅರ್ಥ: ನಾನು ನಿಶ್ಚಯವಾಗಿಯೂ ಶಲ್ಯನ ಪರಾಕ್ರಮವನ್ನು ಸಂಪೂರ್ಣವಾಗಿ ಮೊದಲೇ ತಿಳಿದಿದ್ದೂ ನನ್ನ ತಮ್ಮಂದಿರನ್ನೇಕೆ ಕಾದುವಂತೆಮಾಡಲಿ; ಮಹಾಯುದ್ಧದಲ್ಲಿ ನಾನೆ ಎದುರಿಸುತ್ತೇನೆ. ಕೃಷ್ಣನೇ ಹಾಗೆ ಮಾಡೆಂದು ನನಗೆ ಪಟ್ಟವನ್ನು ಕಟ್ಟು ಎಂದು ಮುಕುಂದವೆಂಬ

ಮಂಗಳವಾದ್ಯ ಸಮೂಹವು
ಒಂದರಲ್ಲೊಂದು
ಸಮನ್ವಯವಾಗಿ
ಕೂಡಿಕೊಂಡು ವಿಶೇಷವಾಗಿ
ಶಬ್ದಮಾಡಿ ಶೋಭಿಸಲು ಆ
ದೊರೆಯು ವೀರಪಟ್ಟವನ್ನು
ತಾಳಿದನು/ ವಹಿಸಿಕೊಂಡನು.

ವ|| ಅಂತು ಯುಧಿಷ್ಠಿರಂ ನಿಷ್ಠಿತಾಹವವ್ಯಾಪಾರನಾಗಿ ಮಧುಕೈಟಭಾರಾತಿಯಂ ಬೀಡಿಂಗೆ ಪೋಂಗಲ್ವೇಳ್ದಿಗ್ನಿ

ಹೋತ್ರಶಾಲೆಗೆ ವಂದು ದರ್ಭಶಯನತಳದೊಳೊಱಗಿ ಬೆಳಗಪ್ಪ ಜಾವದೊಳ್-

ವಚನ:ಪದವಿಭಾಗ-ಅರ್ಥ:

ಅಂತು ಯುಧಿಷ್ಠಿರಂ ನಿಷ್ಠಿತ ಆಹವ ವ್ಯಾಪಾರನಾಗಿ (ಹಾಗೆ ಧರ್ಮರಾಯನು ನಿಶ್ಚಿತವಾದ ಯುದ್ಧ ವ್ಯಾಪಾರೋದ್ಯೋಗವುಳ್ಳವನಾಗಿ) ಮಧುಕೈಟಭಾರಾತಿಯಂ

(ಕೃಷ್ಣನನ್ನು) ಬೀಡಿಂಗೆ
ಪೋಗಲ್ವೆಟ್ಟಿಗ್ನಿ - ಪೋಗಲ್
ವೇಳ್ದು ಅಗ್ನಿ ಹೋತ್ರಶಾಲೆಗೆ
ವಂದು (ಕೃಷ್ಣನನ್ನು ಬೀಡಿಗೆ
ಹೋಗ ಹೇಳಿ ತಾನು
ಯಾಗಶಾಲೆಗೆ ಬಂದು)
ದರ್ಭಶಯನ ತಳದೊಳ
ಒಱಗಿ ಬೆಳಗಪ್ಪ ಜಾವದೊಳ್
(ದರ್ಭೆಯಿಂದ ಮಾಡಲ್ಪಟ್ಟ
ಹಾಸಿಗೆಯಲ್ಲಿ ಮಲಗಿ
ಬೆಳಗಾಗುವ ಜಾವದಲ್ಲಿ)-

ವಚನ:ಅರ್ಥ:ಹಾಗೆ ಧರ್ಮರಾಯನು ನಿಶ್ಚಿತವಾದ ಯುದ್ಧ ವ್ಯಾಪಾರೋದ್ಯೋಗವುಳ್ಳವನಾಗಿ ಕೃಷ್ಣನನ್ನು ಬೀಡಿಗೆ ಹೋಗ ಹೇಳಿ ತಾನು ಯಾಗಶಾಲೆಗೆ ಬಂದು ದರ್ಭೆಯಿಂದ ಮಾಡಲ್ಪಟ್ಟ ಹಾಸಿಗೆಯಲ್ಲಿ ಮಲಗಿ ಬೆಳಗಾಗುವ ಜಾವದಲ್ಲಿ

ಚಂ|| ಕಡಲುರಿಯಂತಕಾಲ
ಘನ ಗರ್ಜನೆಯಂತೆ ಸಮಸ್ತ
ದಿಕ್ತಟಂ
ಪಿಡುಗುವಿನಂ
ರಣಾನಕರವಂಗಳಸುಂಗೊಳೆ
ಪರ್ವಿ ಬೇಗದಿಂ|
ಪಡಗರದೇಟ್ಗೆಯುಂ
ಕಳಕಳಧ್ವನಿಯುಂಬೆರಸಾಡು
ವಂತೆರ
ಟ್ಟೆಡೆಯೊಳಮಾಗಳೊರ್ಮೊದ
ಲೆ

ಪಲ್ಲಣಮಿಕ್ಕಿಪುದಲ್ಲಕಲ್ಲೊಳಂ|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಕಡಲು ಉರಿಯಂತೆ ಅಕಾಲ ಘನ ಗರ್ಜನೆಯಂತೆ (ಬಡಬಾನಲದಂತೆ ಅಕಾಲದ ಗುಡುಗಿನಂತೆ) ಸಮಸ್ತ ದಿಕ್ತಟಂ ಪಿಡುಗುವಿನಂ (ಸಮಸ್ತ ದಿಕ್ಕುಗಳ ದಡಗಳೂ ಸಿಡಿಯುವಂತೆ) ರಣಾನಕ-ರವಂಗಳು ಅಸುಂಗೊಳೆ

ಪರ್ವಿ (ಯುದ್ಧವಾದ್ಯಗಳು
ಸದ್ದು ಬೇಗನೆ ಹಬ್ಬಿ
ಭೋರ್ಗರೆಯುತ್ತಿರಲು)
ಬೇಗದಿಂ ಸಡಗರದಿ
ಏಱ್ಗೆಯುಂ
ಕಳಕಳಧ್ವನಿಯುಂ ಬೆರಸಿ
(ಬೇಗನೆ ಸಂಭ್ರಮದ
ಅತಿಶಯವೂ
ಕಳಕಳಧ್ವನಿಯೂ ಬೆರಸಿ)
ಆಡುವಂತೆ ಎರಟ್ಬಿಡೆಯೊಳಂ
(ಆಡುವಂತೆ ಎರಡು

ಸೈನ್ಯಗಳಲ್ಲಿಯೂ) ಆಗಳ್ ಒರ್ಮೊದಲೆ ಪಲ್ಲಣಂ (ಜೀನು) ಇಕ್ಕಿಪುದು ಅಲ್ಲಕಲ್ಲೊಳಂ (ಒಟ್ಟಿಗೆ ಅಲ್ಲೋಲಕಲ್ಲೋಲವಾಗುತ್ತಿರಲು ಕುದುರೆಗಳಿಗೆ ಜೀನನ್ನು ಹಾಕಿದರು.)

ಪದ್ಯ-೩೩:ಅರ್ಥ:
ಬಡಬಾನಲದಂತೆ ಅಕಾಲದ ಗುಡುಗಿನಂತೆ ಸಮಸ್ತ ದಿಕ್ಕುಗಳ ದಡಗಳೂ

ಸಿಡಿಯುವಂತೆ
ಯುದ್ಧವಾದ್ಯಗಳು ಸದ್ದು
ಬೇಗನೆ ಹಬ್ಬಿ
ಭೋರ್ಗರೆಯುತ್ತಿರಲು ಬೇಗನೆ
ಸಂಭ್ರಮದ ಅತಿಶಯವೂ
ಕಳಕಳಧ್ವನಿಯೂ ಬೆರಸಿ
ಆಡುವಂತೆ ಎರಡು
ಸೈನ್ಯಗಳಲ್ಲಿಯೂ ಒಟ್ಟಿಗೆ
ಅಲ್ಲೋಲಕಲ್ಲೋಲವಾಗಲು
ಕುದುರೆಗಳಿಗೆ ಜೀನನ್ನು
ಹಾಕಿದರು.

ವ|| ಆಗಳಂತಕತನಯನುಂ
ಧೃತರಾಷ್ಟ್ರತನಯನುಮಾರೂ
ಢಮದಗಜರುಮುಪಾರೂಢ
ವಿಶೇಷಕರುಮಾಗಿ ತಂತಮ್ಮ
ಶಿಬಿರಂಗಳಿಂ
ಚತುರ್ಬಲಂಗಳ್
ಪೊಱಮಟ್ಟು
ಸಂಗ್ರಾಮರಂಗಕ್ಕವತರಿಸೆ
ಕುರುಬಲಮಂ
ಮದ್ರರಾಜನಭಿನವವ್ಯೂಹಮ
ನೊಡ್ಡುವುದುಂ

ವಿಬುಧವನಜವನಕಳಹಂಸ

ನುಂ ಹಂಸವ್ಯೂಹನೊಡ್ಡಿ

ಮಾರ್ವಲಕ್ಕೆ ಯಮಪಾಶಮಂ

ಬೀಸುವಂತೆ ಕೆಸಿದಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್

ಅಂತಕತನಯನುಂ

ಧೃತರಾಷ್ಟ್ರತನಯನು

ಆರೂಢ- ಮದಗಜರುಂ

ಉಪಾರೂಢ

ವಿಶೇಷಕರುಮಾಗಿ (ಆಗ

ಧರ್ಮರಾಯನೂ
ದುರ್ಯೋಧನನೂ
ಮದ್ದಾನೆಗಳನ್ನು ಹತ್ತಿ
ವಿಶೇಷವಾಗಿ,) ತಂತಮ್ಮ
ಶಿಬಿರಂಗಳಿಂ
ಚತುರ್ಬಲಂಗಳ್
ಪೊಱಮಟ್ಟು
ಸಂಗ್ರಾಮರಂಗಕ್ಕೆ ಅವತರಿಸೆ (
ಪಾಳೆಯಗಳಿಂದ ಹೊರಟು
ಚತುರಂಗಸೇನಾಸಮೇತರಾಗಿ
ಯುದ್ಧರಂಗದಲ್ಲಿ

ಬಂದಿಳಿಯಲು)
ಕುರುಬಲಮಂ ಮದ್ರರಾಜನು
ಅಭಿನವವ್ಯೂಹಮನೊಡ್ಡುವು
ದುಂ (ಶಲ್ಯನು
ಕೌರವಸೈನ್ಯವನ್ನು ಹೊಸದಾದ
ರಚನಾವಿಧಾನದಿಂದ
ಮುಂದೊಡ್ಡಲು) ವಿಬುಧ-
ವನಜವನ-ಕಳಹಂಸನುಂ
(ವಿದ್ವಾಂಸರೆಂಬ ಕಮಲದ
ತೋಟಕ್ಕೆ
ರಾಜಹಂಸದಂತಿರುವ

ಧರ್ಮರಾಯನು)
ಹಂಸವ್ಯೂಹನು ಒಡ್ಡಿ
ಮಾರ್ವಲಕ್ಕೆ ಯಮಪಾಶಮಂ
ಬೀಸುವಂತೆ ಕೆಯ್ವೀಸಿದಾಗಳ್
(ಹಂಸವ್ಯೂಹವನ್ನು ಚಾಚಿ
ಪ್ರತಿ ಸೈನ್ಯಕ್ಕೆ
ಯಮಪಾಶವನ್ನು ಬೀಸುವಂತೆ
ಕೈಬೀಸಿದನು.) -
ವಚನ:ಅರ್ಥ:ಆಗ
ಧರ್ಮರಾಯನೂ
ದುರ್ಯೋಧನನೂ

ಮದ್ದಾನೆಗಳನ್ನು ಹತ್ತಿ
ವಿಶೇಷವಾಗಿ,
ಪಾಳೆಯಗಳಿಂದ ಹೊರಟು
ಚತುರಂಗಸೇನಾಸಮೇತರಾಗಿ
ಯುದ್ಧರಂಗದಲ್ಲಿ
ಬಂದಿಳಿಯಲು,. ಶಲ್ಯನು
ಕೌರವಸೈನ್ಯವನ್ನು ಹೊಸದಾದ
ರಚನಾವಿಧಾನದಿಂದ
ಮುಂದೊಡ್ಡಲು
ವಿದ್ವಾಂಸರೆಂಬ ಕಮಲದ
ತೋಟಕ್ಕೆ

ರಾಜಹಂಸದಂತಿರುವ ಧರ್ಮರಾಯನು, ಹಂಸವ್ಯೂಹವನ್ನು ಚಾಚಿ ಪ್ರತಿ ಸೈನ್ಯಕ್ಕೆ ಯಮಪಾಶವನ್ನು ಬೀಸುವಂತೆ ಕೈಬೀಸಿದನು.

ಕಂ|| ಚಯ್ ಚಯ್ಯೆಂಬಾಗಳ್
ಮೆಯ್
ಮೆಯ್ ಚಲದಿಂ ಮುಟ್ಟ
ಪೊಣರ್ದು ತಳ್ತಿಱಿವುರ್ಕಿಂ|
ಕೆಯ್ ಚೆಚ್ಚರಿಕೆಯ ಚಲದಿಂ

ಕೆಯ್ ಚಳಿವಿನಮಿರಿದರೆರಡು ಬಲದೊಳಮದಟರ್|| ೩೪ ||

ಪದ್ಯ-೩೪:ಪದವಿಭಾಗ-

ಅರ್ಥ:ಚಯ್ ಚಯ್ಯೆಂಬಾಗಳ್ ಮೆಯ್ಮೆಯ್ ಚಲದಿಂ ಮುಟ್ಟ ಪೊಣರ್ದು (ದೇಹ ದೇಹಗಳು ಚಯ್‌ಚಯ್ ಎಂದು ಚಲದಿಂದ ಘರ್ಷಣೆಮಾಡುತ್ತ ಹತ್ತಿರಕ್ಕೆ ಬಂದು ಹೋರಾಡಿ) ತಳ್ತು ಇಱಿವ ಉರ್ಕಿಂ

(ಎದುರಿಸಿ ಇರಿಯುವ
ಕೊಬ್ಬಿನಿಂದ) ಕೆಯ್
ಚೆಚ್ಚರಿಕೆಯ ಚಲದಿಂ ಕೆಯ್
ಚಳಿವಿನಂ ಇರಿದರು
(ಕೈಚಟುವಟಿಕೆಯ
ರಭಸದಿಂದ ಕೈಗೆ
ಆಯಾಸವಾಗುವಂತೆ
ಹೋರಾಡಿದರು) ಎರಡು
ಬಲದೊಳಂ ಅದಟರ್
(ಉಭಯ ಸೈನ್ಯದಲ್ಲಿ ಶೂರರು
-ಪರಸ್ಪರ ಹೋರಾಡಿದರು-)

ಪದ್ಯ-೩೪:ಅರ್ಥ:ಯೋಧರ
ದೇಹ ದೇಹಗಳು
ಚಯ್‌ಚಯ್ ಎಂದು
ಚಲದಿಂದ ಘರ್ಷಣೆಮಾಡುತ್ತ
ಹತ್ತಿರಕ್ಕೆ ಬಂದು
ಜೊತೆಜೊತೆಯಾಗಿ ಹೋರಾಡಿ
ಎದುರಿಸಿ ಇರಿಯುವ
ಕೊಬ್ಬಿನಿಂದ ಕೈಚಟುವಟಿಕೆಯ
ರಭಸದಿಂದ ಕೈಗೆ
ಆಯಾಸವಾಗುವಂತೆ

ಉಭಯ ಸೈನ್ಯದಲ್ಲಿ ಶೂರರು ಪರಸ್ಪರ ಹೋರಾಡಿದರು.

ಕರಿ ಮಕರಾಹತಹತಿಯಿಂ ಬಿರಿದಳಱುವ ಭೈತ್ರದಂತೆ ವಿವಿಧಾಯುಧ ದಂ| ತುರಿತಂಗಳಬೆದುವಾ ಸಂ ಗರ ಜಳನಿಧಿಯೊಳ್ ವರೂಥಕರಿನಿಕರಂಗಳ್|| ೩೫ ||

ಪದ್ಯ-೩೫:ಪದವಿಭಾಗ-ಅರ್ಥ:ಕರಿ ಮಕರ

ಆಹತಹತಿಯಿಂ (ಆಹತ- ಹತಿ: ಹೊಡೆತ;;ನೀರಾನೆ ಮತ್ತು ಮೊಸಳೆಗಳ ಹೊಡೆತಗಳಿಂದದ) ಬಿರಿದಳಱುವ ಭೈತ್ರದಂತೆ (ಬಿರಿದು ನಾಶವಾಗುವ ದೋಣಿಯಂತೆ) ವಿವಿಧಾಯುಧದ ಅಂತು ಉರಿತಂಗಳು ಅೞ್ದುವು (ನಾನಾ ಆಯುಧಗಳು ವಿಶೇಷವಾಗಿ

ನಾಟಕೊಂಡಿರುವ ರಥ ಮತ್ತು ಆನೆಗಳ ಸಮೂಹಗಳು ಯುದ್ಧಸಮುದ್ರದಲ್ಲಿ ನಾಶವಾದವು) ಆ ಸಂಗರ ಜಳನಿಧಿಯೊಳ್ ವರೂಥ ಕರಿನಿಕರಂಗಳ್ (- ರಥ ಮತ್ತು ಆನೆಗಳ ಸಮೂಹಗಳು ಯುದ್ಧಸಮುದ್ರದಲ್ಲಿ)

ಪದ್ಯ-೩೫:ಅರ್ಥ: ನೀರಾನೆ ಮತ್ತು ಮೊಸಳೆಗಳ ಹೊಡೆತಗಳಿಂದದ ಬಿರಿದು

ನಾಶವಾಗುವ ದೋಣಿಯಂತೆ

ನಾನಾ ಆಯುಧಗಳು

ವಿಶೇಷವಾಗಿ

ನಾಟಕೊಂಡಿರುವ ರಥ ಮತ್ತು

ಆನೆಗಳ ಸಮೂಹಗಳು

ಯುದ್ಧಸಮುದ್ರದಲ್ಲಿ

ನಾಶವಾದವು

ಒಂದಕ್ಷೋಹಿಣಿಬಲಮೆರ

ಡುಂ

ದೆಸೆಯೊಳಮುೞಿದುವನಿತೆ

ಭಾರತಮೆಮ|

ಗಿನ್ನಿಂದುಜ್ಜವಣೆ ದಲೆಂದದ ಟೊಂದುತ್ತರಮಾಗೆ ಕಾದಿದರ್ ಕಟ್ಟಾಳ್ಗಳ್|| ೩೬ ||

ಪದ್ಯ-00:ಪದವಿಭಾಗ-ಅರ್ಥ:ಒಂದಕ್ಷೋಹಿಣಿಬಲಂ ಎರಡುಂ ದೆಸೆಯೊಳಂ ಉಳಿದುವು (ಎರಡು ಪಕ್ಷದಲ್ಲಿಯೂ ಒಂದೊಂದು ಕ್ಷೋಹಿಣೀ ಸೈನ್ಯವಷ್ಟೆ ಉಳಿಯಿತು.) ಅನಿತೆ ಭಾರತಂ ಎಮಗೆ ಇನ್ ಇಂದು

ಉಜ್ಜವಣೆ ದಲ್ ಎಂದು (ಈ ದಿನ ನಮಗೆ ಉದ್ಯಾಪನೆ / ಮುಗಿಯುವುದು ನಿಜಕ್ಕೂ ಎಂದು ಹೇಳುತ್ತ) ಅದಟು ಒಂದು ಉತ್ತರಮಾಗೆ ಕಾದಿದರ್ ಕಟ್ಟಾಳ್ಗಳ್ ()

ಪದ್ಯ-00:ಅರ್ಥ: ಎರಡು ಪಕ್ಷದಲ್ಲಿಯೂ ಒಂದೊಂದು ಕ್ಷೋಹಿಣೀ ಸೈನ್ಯವಷ್ಟೆ ಉಳಿಯಿತು. ಭಾರತಯುದ್ಧವು ಇದಿಷ್ಟೇ ಸಂಖ್ಯೆಯುಳ್ಳದು. ಈ

ದಿನ ನಮಗೆ ಮುಗಿಯುವುದು
ನಿಜಕ್ಕೂ, ಎಂದು ಹೇಳುತ್ತ
ಅಪಾರ ಪರಾಕ್ರಮದಿಂದ
ವೀರಪುರುಷರು
ಕಾದಾಡಿದರು.

ಸ್ಫುರಿತಶರನಿಕರಪಾತಿತ
ನರೋತ್ತಮಾಂಗಂ ಕಬಂಧ
ನಾಟಕರಂಗಂ|
ಸುರಿತನವರುರರಂಗ
ತ್ತರಂಗಮೊಪ್ಪಿದುದು
ವೀರಭಟರಣರಂಗಂ|| ೩೭ ||

ಪದ್ಯ-00:ಪದವಿಭಾಗ-ಅರ್ಥ:ಸ್ಫುರಿತ ಶರನಿಕರ ಪಾತಿತ ನರೋತ್ತಮಾಂಗಂ (ಹೊಳೆಯುವ ಬಾಣಗಳ ಸಮೂಹಕ್ಕೆ ತಲೆಗಳನ್ನು ಬೀಳಿಸಲ್ಪಟ್ಟ) ಕಬಂಧ ನಾಟಕರಂಗಂ (ಮುಂಡಗಳು ಕುಣಿದಾಡುವ ರಂಗಸ್ಥಳವೂ) ಸುರಿತ ನವ ರುಧಿರ ರಂಗತ್ತರಂಗಂ (ಹೊಸ ರಕ್ತದ ಚಂಚಲವಾದ

ಅಲೆಗಳನ್ನುಳ್ಳುದೂ)
ಒಪ್ಪಿದುದು ವೀರಭಟ
ರಣರಂಗಂ (ಆದ ವೀರಭಟರ
ರಣರಂಗವು ಶೋಭಿಸಿತು.)

ಪದ್ಯ-00:ಅರ್ಥ:

ಹೊಳೆಯುವ ಬಾಣಗಳ
ಸಮೂಹಕ್ಕೆ ಮನುಷ್ಯರ
ತಲೆಗಳನ್ನು ಬೀಳಿಸಲ್ಪಟ್ಟ
ಮುಂಡಗಳು ಕುಣಿದಾಡುವ
ರಂಗಸ್ಥಳವೂ ಹೊಸ ರಕ್ತದ
ಚಂಚಲವಾದ

ಅಲೆಗಳನ್ನುಳ್ಳುದೂ ಆದ
ವೀರಭಟರ ರಣರಂಗವು
ಶೋಭಿಸಿತು.

ವ|| ಅಂತು ಮುಂಬಗಲ್ವರಂ ತುಮುೞ್ ಕಾದುವ ಸಮರಭರಂ ಮನೋರಾಗಮಂ ಮಾಡೆಯುಂ ಮುಮ್ಮೞಿಸಿ ಪಾಂಡವ ಕೌರವ ಬಲದ ಕಲಿಕೆಯ ಪ್ರಧಾನನಾಯಕರ್ಕಳ್-

ವಚನ:ಪದವಿಭಾಗ-ಅರ್ಥ:ಅಂತು ಮುಂಬಗಲ್ವರಂ (ಹಾಗೆ ಹಗಲಿನ ಮುಂಭಾಗದವರೆಗೆ (ಮದ್ಯಾಹ್ನದವರೆಗೆ)) ತುಮುಱ್ ಕಾದುವ ಸಮರಭರಂ (ತುಮುಲಯುದ್ಧವನ್ನು ಮಾಡುವ ಯುದ್ಧಕಾರ್ಯವು) ಮನೋರಾಗಮಂ ಮಾಡೆಯುಂ ಮುಮ್ಮೞಿಸಿ

(ಮನಸ್ಸಿಗೆ ಸಂತೋಷವನ್ನುಂಟುಮಾಡು ತ್ತಿರಲು ಮುಂದೆ ನುಗ್ಗಿ) ಪಾಂಡವ ಕೌರವ ಬಲದ ಕಲಿಕೆಯ ಪ್ರಧಾನ ನಾಯಕರ್ಕಳ್- (ಪಾಂಡವ ಕೌರವಬಲಗಳ ಸೈನ್ಯದ ಮುಖ್ಯ ನಾಯಕರುಗಳು- -ಕಾದಿದರು.)

ವಚನ:ಅರ್ಥ:ವ|| ಹಾಗೆ ಹಗಲಿನ ಮದ್ಯಾಹ್ನದವರೆಗೆ

ತುಮುಲಯುದ್ಧವನ್ನು ಮಾಡುವ ಯುದ್ಧಕಾರ್ಯವು ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿರಲು ಮುಂದೆ ನುಗ್ಗಿ ಪಾಂಡವ ಕೌರವಬಲಗಳ ಸೈನ್ಯದ ಮುಖ್ಯ ನಾಯಕರುಗಳು- (ಕಾದಿದರು.)

ಮ|| ಸ|| ಕಡಿಕೆಯ್ದೊಂದೊರ್ವರೊಳ್ ತಳ್ತಿಱಿವ ಬಯಕೆಯಿಂ ದಿವ್ಯ ಬಾಣಾದಿಗಳ್ಗಂ ಪೊಡೆವಟ್ಟುಂ ಸೂತರಂ ಚೋದಿಸಿಮೆನುತುಮಗುರ್ವುರ್ವೆ ಕೆಯ್ಮಿಕ್ಕು ಕಾದಲ್| ನಡೆತರ್ಪಾವೇಗದೊಳ್ ಮುಮ್ಮೞಿಸಿದ ಪಲವುಂ ರಾಜಚಿಹ್ನಂಗಳಂ ಬೆ ಳ್ಗೊಡೆಗಳ್ ತಳ್ಪೊಯ್ದದೇಂ ಕಣ್ಗೊಳಿಸಿದುದೊ ವಿನಕ್ಷತ್ರಕಚ್ಛತ್ರಪಿಂಡಂ|| ೩೮ ||

ಪದ್ಯ-00:ಪದವಿಭಾಗ-ಅರ್ಥ:ಕಡಿಕೆಯ್ದು ಒಂದೊರ್ವರೊಳ್ ತಳ್ತು ಇಱಿವ ಬಯಕೆಯಿಂ (ತೀವ್ರತೆಯಿಂದ ಪರಸ್ಪರ ತಗುಲಿಕೊಂಡು ಯುದ್ಧಮಾಡುವ ಅಪೇಕ್ಷೆಯಿಂದ) ದಿವ್ಯ ಬಾಣಾದಿಗಳ್ಗಂ ಪೊಡೆವಟ್ಟುಂ (ದಿವ್ಯಾಸ್ತ್ರಗಳಿಗೆ ನಮಸ್ಕಾರಮಾಡಿ) ಸೂತರಂ

ಚೋದಿಸಿಂ ಎನುತುಂ
ಅಗುರ್ವು ಉರ್ವೆ
(ಸಾರಥಿಗಳಿಗೆ ರಥವನ್ನು
ನಡೆಸಿ ಎಂದು ಹೇಳಿ ಭಯವು
ಹೆಚ್ಚುತ್ತಿರಲು) ಕೆಯ್ಮಿಕ್ಕು
ಕಾದಲ್ ನಡೆತರ್ಪ
ಆವೇಗದೊಳ್ (ಶಕ್ತಿಮೀರಿ
ಯುದ್ಧಮಾಡಲು ಬರುತ್ತಿರುವ
ವೇಗದಲ್ಲಿ) ಮುಮ್ಮೞಿಸಿದ
ಪಲವುಂ
ರಾಜಚಿಹ್ನಂಗಳಂ(ಮುಂದಕ್ಕೆ

ಚಾಚಿದ ಹಲವು
ರಾಜಚಿಹ್ನೆಗಳನ್ನು)
ಬೆಳ್ಗೊಡೆಗಳ್ ತಳ್ತೊಯ್ದು
ಅದೇಂ ಕಣ್ಗೊಳಿಸಿದುದೊ
(ಶ್ವೇತಚ್ಛತ್ರಗಳು ತಾಗಿ ನಕ್ಷತ್ರ
ಚಿನ್ಹೆಗಳುಳ್ಳ ಛತ್ರಿಗಳ
ಸಮೂಹ ಅದೆಷ್ಟು
ಆಕರ್ಷಣೆಯಾಯಿತೊ;)
ವಿನಕ್ಷತ್ರಕ ಚ್ಛತ್ರಪಿಂಡಂ (- < -
ನಕ್ಷತ್ರ ಚಿನ್ಹೆಗಳುಳ್ಳ ಛತ್ರಿಗಳ
ಸಮೂಹ)

ಪದ್ಯ-00:ಅರ್ಥ:

ತೀವ್ರತೆಯಿಂದ ಪರಸ್ಪರ ತಗುಲಿಕೊಂಡು ಯುದ್ಧಮಾಡುವ ಅಪೇಕ್ಷೆಯಿಂದ ದಿವ್ಯಾಸ್ತ್ರಗಳಿಗೆ ನಮಸ್ಕಾರಮಾಡಿ ಸಾರಥಿಗಳಿಗೆ ರಥವನ್ನು ನಡೆಸಿ ಎಂದು ಹೇಳಿ ಭಯವು ಹೆಚ್ಚುತ್ತಿರಲು ಶಕ್ತಿಮೀರಿ ಯುದ್ಧಮಾಡಲು ಬರುತ್ತಿರುವ ವೇಗದಲ್ಲಿ ಮುಂದಕ್ಕೆ ಚಾಚಿದ

ಹಲವು ರಾಜಚಿಹ್ನೆಗಳನ್ನು
ಶ್ವೇತಚ್ಛತ್ರಗಳು ತಾಗಿ
ಅಲುಗುತ್ತಿರುವ ನಕ್ಷತ್ರ
ಚಿನ್ಹೆಗಳುಳ್ಳ ಛತ್ರಿಗಳ
ಸಮೂಹ ಅದೆಷ್ಟು
ಆಕರ್ಷಣೆಯಾಯಿತೊ;
ವಿಶೇಷ
ಆಕರ್ಷಣೀಯವಾಗಿದ್ದುವು.

ವ|| ಅಂತು ಮುಟ್ಟೆವಂದೋರೊರ್ವರೆ ರಥದ ಕುದುರೆಯ

ಪಱಿವಿಗೆಯ
ಕುಱುಪುಗಳಿನಿವರವರೆಂದಱಿ
ದು ಸಾತ್ಯಕಿ ಕೃತವರ್ಮನೊಳ್
ನಕುಳಂ ಶತಬಿಂದುವಿನ
ಮಕ್ಕಳಯ್ವರೊಳ್ ಸಹದೇವಂ
ಶಕುನಿಯೊಳ್
ಯುಧಾಮನ್ಯೂತ್ತಮೌಜಸರ್
ಕೃಪನೊಳ್ ಭೀಮಸೇನಂ
ಪರ್ವತರಾಜರೊಳ್
ವಿಕ್ರಮಾರ್ಜುನನಶ್ವತ್ಥಾಮನೊ
ಳ್ ಪೆಣೆದು ಮಂಡಳ

ಭ್ರಾಂತೋದ್ಭ್ರಾಂತಸ್ಥಿತಚಕ್ರಮೆಂ

ಬ ರಥಯುದ್ಧದೊಳಮಾಲೀಢ

ಪ್ರತ್ಯಾಲೀಢ ಸಮಪಾದಂ

ಗಳೆಂಬಾಸನಂಗಳೊಳಂ

ಪೆಱವುಂ

ಶರಾಸನವಿದ್ಯೆಗಳೊಳತಿ

ಪ್ರವೀಣರುಂ ಜಾಣರುಮಾಗಿ-

ವಚನ:ಪದವಿಭಾಗ-

ಅರ್ಥ:ಅಂತು ಮುಟ್ಟೆವಂದು

ಓರ್ಬೊರ್ವರೆ ರಥದ

ಕುದುರೆಯ ಪಱವಿಗೆಯ

ಕುಱುಪುಗಳಿಂ ಇವರು ಅವರೆಂದು ಅಱಿದು (ಹಾಗೆ ಮುಟ್ಟುವಂತೆ ಸಮೀಪಕ್ಕೆ ಬಂದು ಒಬ್ಬೊಬ್ಬರ ರಥದ ಕುದುರೆಯ ಬಾವುಟದ ಗುರುತುಗಳಿಂದ ಇವರು ಅವರು ಎಂದು ತಿಳಿದು, ಗುರುತಿಸಿ) ಸಾತ್ಯಕಿ ಕೃತವರ್ಮನೊಳ್ (ಸಾತ್ಯಕಿ ಕೃತವರ್ಮನಲ್ಲಿಯೂ) ನಕುಳಂ ಶತಬಿಂದುವಿನ

ಮಕ್ಕಳು ಅಯ್ವರೊಳ್
(ನಕುಳನು ಶತಬಿಂದುವಿನ
ಅಯ್ದು ಮಕ್ಕಳಲ್ಲಿಯೂ)
ಸಹದೇವಂ ಶಕುನಿಯೊಳ್,
ಯುದ್ಧಾಮನ್ಯು
ಉತ್ತಮೌಜಸರ್ ಕೃಪನೊಳ್
(ಸಹದೇವನು
ಶಕುನಿಯಲ್ಲಿಯೂ,
ಯುಧಾಮನ್ಯು ಉತ್ತಮೌಜಸ
ಕೃಪನೊಡನೆಯೂ)
ಭೀಮಸೇನಂ

ಪರ್ವತರಾಜರೊಳ್
ವಿಕ್ರಮಾರ್ಜುನನು
ಅಶ್ವತ್ಥಾಮನೊಳ್
(ಭೀಮಸೇನನು
ಪರ್ವತರಾಜರಲ್ಲಿಯೂ
ಅರ್ಜುನನು
ಆಶ್ವತ್ಥಾಮನಲ್ಲಿಯೂ)
ಪೆಣೆದು ಮಂಡಳ ಭ್ರಾಂತ
ಉದ್ಭ್ರಾಂತ ಸ್ಥಿತಚಕ್ರಮೆಂಬ
ರಥಯುದ್ಧದೊಳಂ
(ಹೆಣೆದುಕೊಂಡು ಭ್ರಾಂತ,

ಉದ್ಭ್ರಾಂತ, ಸ್ಥಿತ, ಚಕ್ರ ಎಂಬ
ರಥಯುದ್ಧದಲ್ಲಿಯೂ)
ಆಲೀಢ ಪ್ರತ್ಯಾಲೀಢ
ಸಮಪಾದಂ ಗಳೆಂಬ
ಆಸನಂಗಳೊಳಂ (ಆಲೀಢ,
ಪ್ರತ್ಯಾಲೀಢ, ಸಮಪಾದ
ಎಂಬ ಆಸನಗಳಲ್ಲಿಯೂ-
ಯುದ್ಧಮಾಡುವಾಗ
ಕುಳಿತುಕೊಳ್ಳುವ ಭಂಗಿ)
ಪೆಱವುಂ
ಶರಾಸನವಿದ್ಯೆಗಳೊಳತಿ

ಪ್ರವೀಣರುಂ ಜಾಣರುಂ ಆಗಿ (ಇತರ ಅನೇಕ ಬಿಲ್ವಿದ್ಯೆಗಳಲ್ಲಿಯೂ ಅತಿ ಪ್ರವೀಣರೂ ಜಾಣರೂ ಆಗಿ- ಹೋರಾಡಿದರು)-

ವಚನ:ಅರ್ಥ: ಹಾಗೆ ಮುಟ್ಟುವಂತೆ ಸಮೀಪಕ್ಕೆ ಬಂದು ಒಬ್ಬೊಬ್ಬರ ರಥದ ಕುದುರೆಯ ಬಾವುಟದ ಗುರುತುಗಳಿಂದ ಇವರು ಅವರು ಎಂದು ಗುರುತಿಸಿ

ಸಾತ್ಯಕಿ ಕೃತವರ್ಮನಲ್ಲಿಯೂ
ನಕುಳನು ಶತಬಿಂದುವಿನ
ಅಯ್ದು ಮಕ್ಕಳಲ್ಲಿಯೂ,
ಸಹದೇವನು
ಶಕುನಿಯಲ್ಲಿಯೂ,
ಯುಧಾಮನ್ಯು ಉತ್ತಮೌಜಸ
ಕೃಪನಲ್ಲಿಯೂ, ಭೀಮಸೇನನು
ಪರ್ವತರಾಜರಲ್ಲಿಯೂ
ಅರ್ಜುನನು
ಆಶ್ವತ್ಥಾಮನಲ್ಲಿಯೂ
ಹೆಣೆದುಕೊಂಡು ಭ್ರಾಂತ,

ಉದ್ಭ್ರಾಂತ, ಸ್ಥಿತ, ಚಕ್ರ ಎಂಬ
ರಥಯುದ್ಧದಲ್ಲಿಯೂ
ಆಲೀಢ, ಪ್ರತ್ಯಾಲೀಢ,
ಸಮಪಾದ ಎಂಬ
ಆಸನಗಳಲ್ಲಿಯೂ ಇತರ
ಅನೇಕ ಬಿಲ್ವಿದ್ಯೆಗಳಲ್ಲಿಯೂ
ಅತಿ ಪ್ರವೀಣರೂ ಜಾಣರೂ
ಆಗಿ- ಹೋರಾಡಿದರು.

ಅಕ್ಕರ|| ನೆಱೆದು ನಿರ್ವಾಯಂ
ನರುವಾಯಂ ಮುಂ ಮೊನೆ

ನೆರಕೆ ನಾರಾಚಂ
ತಗರ್ತಲೆಯಂ
ನೆಱನರಿವ ಕಣೆ ಗೆಲೆಯಂಬು
ಕಕ್ಕಂಬು ಕೆಲ್ಲಂಬು
ಮೊನೆಯಂಬು ತೀವೆ ಕಣ್ಣಂ|
ಪೆಱೆಯ ಮುಗಂ ಕಣಕೆನೆ
ವೊಪಂಬು
ಕವಲಂಬುರೆಂಬಂಕದಂಬೆತ್ತ
ಲುಂ
ತುಱುಗಿ ನಡುವಿನಂ ಸಾರ್ದು
ಸಾರ್ದೆಚ್ಚೆಚ್ಚು

ಕಾದಿದರತಿರಥರೊಂದುಜಾವಂ || ೩೯

ಪದ್ಯ-00:ಪದವಿಭಾಗ-ಅರ್ಥ:ನೆಱೆದು ನಿರ್ವಾಯಂ ನರುವಾಯಂ ಮುಂಮೊನೆ ನೆರಕೆ ನಾರಾಚಂ (ಹೆಚ್ಚಿನ ಸಾಮರ್ಥ್ಯದವರಾಗಿ, ನಿರ್ವಾಯ, ನರುವಾಯ, ಮುಮ್ಮೊನೆ, ನೆರಕೆ, ನಾರಾಚಗಳನ್ನೂ/ ಬಾಣಗಳನ್ನೂ)_

ತಗರ್ತಲೆಯಂ (ಈ ಬಗೆಯ
ಬಾಣಗಳನ್ನೂ) ನೆಱನರಿವ
ಕಣೆ ಗೆಲೆಯಂಬು ಕಕ್ಕಂಬು
ಕೆಲ್ಲಂಬು ಮೊನೆಯಂಬು ತೀವೆ
ಕಣ್ಣಂ ಪೆಱೆಯ ಮುಗಂ
ಕಣಕೆನೆ ವೊಪಂಬು
ಕವಲಂಬುರೆಂಬ ಅಂಕದಂಬು
ಎತ್ತಲುಂ (ಈ ಬಗೆಯ ನಾನಾ
ಬಾಣಗಳು ಎಲ್ಲಾಕಡೆಯೂ)
ತುಱುಗಿ ನಡುವಿನಂ ಸಾರ್ದು
ಸಾರ್ದ ಎಚ್ಚೆ ಎಚ್ಚು (ಹೋಗಿ

ನಾಟಿಕೊಳ್ಳುವ ಹಾಗೆ ನೋಡಿನೋಡಿ ಹೊಡೆದು ಹೊಡೆದು,) ಕಾದಿದರು ಅತಿರಥರು ಒಂದು ಜಾವಂ (ಅತಿರಥರು ಒಂದು ಜಾವದ ಕಾಲ ಕಾದಿದರು/ ಯುದ್ಧಮಾಡಿದರು.)

ಪದ್ಯ-00:ಅರ್ಥ: ಹೆಚ್ಚಿನ ಸಾಮರ್ಥ್ಯದವರಾಗಿ, ನಿರ್ವಾಯ, ನರುವಾಯ, ಮುಮ್ಮೊನೆ, ನೆರಕೆ, ನಾರಾಚ,

ತಗರ್ತಲೆ, ಮರ್ಮಸ್ಥಾವನ್ನು
ಭೇದಿಸುವ ಕಣೆಗೆಲೆಯಂಬು,
ಕಕ್ಕಂಬು, ಕೆಲ್ಲಂಬು,
ಮೊನೆಯಂಬು, ಇವುಗಳು,
ಕಣ್ಣನ್ನು ತುಂಬಿಕೊಳ್ಳಲು,
ಪೆಯಮುಱಿಗಂ, ಕಣಕೆನೆ,
ಪೋಪಂಬು, ಕವಲಂಬು
ಎಂಬ ಈ ಬಗೆಯ ನಾನಾ
ಪ್ರಸಿದ್ಧವಾದ ಬಾಣಗಳು
ಎಲ್ಲಕಡೆಯಲ್ಲಿಯೂ ನುಗ್ಗಿ
ಹೋಗಿ ನಾಟಿಕೊಳ್ಳುವ ಹಾಗೆ

ನೋಡಿನೋಡಿ ಹೊಡೆದು
ಹೊಡೆದು ಅತಿರಥರು ಒಂದು
ಜಾವದ ಕಾಲ
ಯುದ್ಧಮಾಡಿದರು.

ಮ|| ಅಂತು
ಕಾದುವಾಗಳೇಕಾದಶರುದ್ರರೊ
ಳಗೆ ತುತ್ತತುದಿಯ ರುದ್ರನುಂ
ರೌದ್ರನು
ಮಪ್ಪಶ್ವತ್ಥಾಮನೇವದೊಳ್
ಕಣ್ಗಾಣದೆ ಮಾರ್ಕೊಂಡು
ವಿಕ್ರಮಾರ್ಜುನನಂ

ದಿವ್ಯಾಸ್ತ್ರಂಗಳಿಂದ ಮೆಚ್ಚು ಕಾದಿ ಗೆಲಲಾಱಿದೆ-

ವಚನ:ಪದವಿಭಾಗ-

ಅರ್ಥ:ಅಂತು ಕಾದುವಾಗಳ್ ಏಕಾದಶ ರುದ್ರರೊಳಗೆ ತುತ್ತತುದಿಯ ರುದ್ರನುಂ (ಹಾಗೆ ಯುದ್ಧ ಮಾಡುವಾಗ ಹನ್ನೊಂದು ಜನ ರುದ್ರರೊಳಗೆ ಕಟ್ಟಕಡೆಯರುದ್ರನೂ,) ರೌದ್ರನು (ಭಯಂಕರನೂ) ಅಪ್ಪ ಅಶ್ವತ್ಥಾಮನು

ಏವದೊಳ್ ಕಣ್ಗಾಣದೆ (ಆದ ಅಶ್ವತ್ಥಾಮನು ಕೋಪದಿಂದ ಕುರುಡನಾಗಿ) ಮಾರ್ಕೊಂಡು ವಿಕ್ರಮಾರ್ಜುನನಂ ದಿವ್ಯಾಸ್ತ್ರಂಗಳಿಂದಂ ಎಚ್ಚು ಕಾದಿ ಗೆಲಲಾಱದೆ (ಪ್ರತಿಭಟಿಸಿ ಅರ್ಜುನನನ್ನು ದಿವ್ಯಾಸ್ತ್ರಗಳಿಂದ ಹೊಡೆದು ಕಾದಿ ಗೆಲ್ಲಲಾರದೆ)-

ವಚನ:ಅರ್ಥ:ಹಾಗೆ ಯುದ್ಧ ಮಾಡುವಾಗ ಹನ್ನೊಂದು ಜನ

ರುದ್ರರೊಳಗೆ

ಕಟ್ಟಕಡೆಯರುದ್ರನೂ,

ಭಯಂಕರನೂ ಆದ

ಅಶ್ವತ್ಥಾಮನು ಕೋಪದಿಂದ

ಕುರುಡನಾಗಿ ಪ್ರತಿಭಟಿಸಿ

ಅರ್ಜುನನನ್ನು

ದಿವ್ಯಾಸ್ತ್ರಗಳಿಂದ ಹೊಡೆದು

ಕಾದಿ ಗೆಲ್ಲಲಾರದೆ -

ಕಂ|| ತನ್ನ ದೊಣೆಯಂಬುಗಳ್

ತವು

ವನ್ನೆಗಮೆಚ್ಚಂಬು ತಪ್ಪೊಡಭಿವಾದಯೆನ| ಲ್ಕಿನ್ನೆನಗೆ ಪದನಿದೆಂದು ಕರಂ ನಗೆ ಸುರರರಿಗನಿದಿರ್ಗೆ ತೊಲಗಿದನಾಗಳ್|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ತನ್ನ ದೊಣೆಯಂಬುಗಳ್ ತವುವನ್ನೆಗಂ ಎಚ್ಚು (ತನ್ನ ಬತ್ತಳಿಕೆಯ ಬಾಣಗಳು ಮುಗಿಯುವವರೆಗೂ

ಹೊಡೆದು) ಅಂಬು ತಪ್ಪೊಡೆ (ಹೊಡೆದು ಬಾಣಗಳು ತೀರಿಹೋಗಲು,) ಅಭಿವಾದಯೆನಲ್ಕೆ ಇನ್ನು ಎನಗೆ ಪದಂ ಇದೆಂದು (ಇನ್ನು -ಜೀವನಕ್ಕೆ- ನಮಸ್ಕಾರ ಎನ್ನಲು ಇದು ಸಮಯವೆಂದು) ಕರಂ ನಗೆ ಸುರರು (ದೇವತೆಗಳೆಲ್ಲ ಬಹಳ ನಗುತ್ತಿರಲು) ಅರಿಗನ ಇದಿರ್ಗೆ ತೊಲಗಿದನಾಗಳ್

(ಆರ್ಜುನನೆದುರಿಗೆ ಆಗ ಹೊರಟು ಹೋದನು.)

ಪದ್ಯ-೪೦:ಅರ್ಥ: ತನ್ನ ಬತ್ತಳಿಕೆಯ ಬಾಣಗಳು ಮುಗಿಯುವವರೆಗೂ ಹೊಡೆದು ಬಾಣಗಳು ತೀರಿಹೋಗಲು, ಇನ್ನು ನಮಸ್ಕಾರ ಎನ್ನಲು ಇದು ಸಮಯವೆಂದು -ದೇವತೆಗಳೆಲ್ಲ ಬಹಳವಾಗಿ ನಗುತ್ತಿರಲು,

ಅರ್ಜುನನೆದುರಿಗೆ ಆಗ

ಹೊರಟು ಹೋದನು.

ದಾವಶಿಖಿ ಶಿಖೆಯನಿೞಿಪುದಿ

ದಾವ ಸರಲ್ ಪೇೞಿಮೆನಿಪ

ಸರಲಿಂ ತಱಿದಂ|

ದೇವರ ಪಡೆ ರಾಗಿಸೆ ಮನ

ದೇವದಿನವಯ ಶಕುನಿಯಂ

ಸಹದೇವಂ|| ೪೧ ||

ಪದ್ಯ-00:ಪದವಿಭಾಗ-

ಅರ್ಥ:ದಾವಶಿಖಿ ಶಿಖೆಯನು

ಇೞಿಪುದು ಇದಾವ ಸರಲ್

(ದಾವಾಗ್ನಿಯನ್ನೂ
ಕೀಳುಮಾಡುತ್ತಿರುವ ಈ
ಬಾಣವು ಯಾವುದು) ಪೇೞಿಂ
ಎನಿಪ ಸರಲಿಂ ತಱಿದಂ
(ಹೇಳಿ ಎನ್ನುವ ಬಾಣದಿಂದ
ಕತ್ತರಿಸಿದನು) ದೇವರ ಪಡೆ
ರಾಗಿಸೆ (ದೇವರ ಸಮೂಹವು
ಸಂತೋಷಪಡುತ್ತಿರಲು),
ಮನದ ಏವದಿಂ ಅವಯದೆ
ಶಕುನಿಯಂ ಸಹದೇವಂ
(ಮನಸ್ಸಿನಲ್ಲಿ ಕೋಪಹೊಂದಿ

ಶ್ರಮವಿಲ್ಲದೆ ಸಹದೇವನು ಶಕುನಿಯನ್ನು ಕೊಂದನು.)

ಪದ್ಯ-00:ಅರ್ಥ:

ದಾವಾಗ್ನಿಯನ್ನೂ ಕೀಳುಮಾಡುತ್ತಿರುವ ಈ ಬಾಣವು ಯಾವುದು ಹೇಳಿ ಎನ್ನುವ ಬಾಣದಿಂದ ದೇವರ ಸಮೂಹವು ಸಂತೋಷಪಡುತ್ತಿರಲು, ಮನಸ್ಸಿನಲ್ಲಿ ಕೋಪಹೊಂದಿ ಸಹದೇವನು ಶ್ರಮವಿಲ್ಲದೆ

ಶಕುನಿಯನ್ನು ತರಿದನು/ ಕೊಂದನು.

ವ|| ಅಂತು ಶಕುನಿಯಂ ತಱಿವುದುಮಿತ್ರತಿರಭುಕ್ತಿ ವಿಷಯಾಧೀಶರಪ್ಪ ಶತಬಿಂದುವಿನ ಮಕ್ಕಳಪ್ಪಯ್ವರಂ ಗಾಳಿಗೊಡ್ಡಿದ ಪುಲ್ಲ ಬಿಂದುಗಳಂತೆ ನಕುಲಂ ನೆಲಕ್ಕೆ ಸೋವತಂ ಮಾಡಿದನಿತ್ತ ವಿಂಧ್ಯ ಮಳಯ

ಹಿಮವನ್ನಿವಾಸಿಗಳಪ್ಪ
ಪರ್ವತರಾಜರುಮಂ
ಭೀಮಸೇನನಂತಕಾನನನೆಯ್ದಿ
ಸಿದಂ
ಯುಧಾಮನ್ಯೂತ್ತಮೌಜಸರ್
ಗೆಲೆ ಕಾದಿ
ಕೃಪನನುಪಗತಪರಿಶ್ರಮನಂ
ಮಾಡಿದರಾಗಳ್ ಮೆಯ್ವಿರ್ಚಿ
ಬಂದು ಪೆಣೆದ ಭೀಮ ನಕುಳ
ಸಹದೇವರುಮಂ ಶಲ್ಯಂ
ವಿರಥರ್ಮಾಡಿ ಪಿಡಿದು

ಕೊಂಡುಪುಲ್ಲ
ಸೂಡನೀಡಾಡುವಂತೆ
ತನ್ನಳಿಯಂದಿರಿರ್ವರುಮನೀ
ಡಾಡಿ ಭೀಮನಂ ಪೊಣರ್ದು
ನೆಲಿಕ್ಕಿಕ್ಕಿ ಬೆನ್ನಂ ಮೆಟ್ಟಿ
ದಾಂಟುವ ಮದಗಜದಂತೆ
ಕೊಲಲೊಲ್ಲದೆ ದಾಂಟದಾಗಳ್
ದುರ್ಯೋಧನನಟ್ಟಿಲ್ದು
ಕರ್ಣಾಗ್ಗಣದೆಯ್ದೆವಂದಶ್ವತ್ಥಾಮ
ನು ಮದ್ರರಾಜ
ಕೃಪಕೃತವರ್ಮರನಿಂತೆಂದಂ-

ವಚನ:ಪದವಿಭಾಗ-ಅರ್ಥ:ಅಂತು ಶಕುನಿಯಂ ತಱಿವುದುಂ ಇತ್ತ ಅತಿರಭುಕ್ತಿ ವಿಷಯಾಧೀಶರಪ್ಪ (ಹಾಗೆ ಶಕುನಿಯನ್ನು ತರಿದ ನಂತರ, ಈ ಕಡೆ ಅತಿರಭುಕ್ತಿಯೆಂಬ ದೇಶದ ರಾಜರಾದ) ಶತಬಿಂದುವಿನ ಮಕ್ಕಳಪ್ಪ ಅಯ್ವರಂ ಗಾಳಿಗೊಡ್ಡಿದ ಪುಲ್ಲ ಬಿಂದುಗಳಂತೆ ನಕುಲಂ ನೆಲಕ್ಕೆ ಸೋವತಂ ಮಾಡಿದನು

(ಶತಬಿಂದುವಿನ ಅಯ್ದು ಮಕ್ಕಳನ್ನೂ ನಕುಲನು ಗಾಳಿಗೆ ಒಡ್ಡಿದ ಹುಲ್ಲಿನ ಮೇಲಿನ ಜಲಬಿಂದುಗಳಂತೆ ಭೂಮಿಗೆ ಬಲಿಕೊಟ್ಟನು.) ಇತ್ತ ವಿಂಧ್ಯ ಮಳಯ ಹಿಮವನ್ನಿವಾಸಿಗಳಪ್ಪ ಪರ್ವತರಾಜರುಮಂ (ಈ ಕಡೆ ವಿಂಧ್ಯ, ಮಲಯ, ಹಿಮವತ್ಪರ್ವತನಿವಾಸಿಗಳಾದ ಪರ್ವತರಾಜರುಗಳನ್ನು)

ಭೀಮಸೇನನು ಅಂತಕ
ಆನನನು ಎಯ್ದಿಸಿದಂ (ಈ
ಕಡೆ ವಿಂಧ್ಯ, ಮಲಯ,
ಹಿಮವತ್ಪರ್ವತನಿವಾಸಿಗಳಾದ
ಪರ್ವತರಾಜರುಗಳನ್ನು
ಭೀಮನು ಯಮನ
ಬಾಯನ್ನು ಸೇರಿಸಿದನು.)
ಯುಧಾಮನ್ಯು
ಉತ್ತಮೌಜಸರ್ ಗೆಲೆ ಕಾದಿ
ಕೃಪನನು ಉಪಗತ
ಪರಿಶ್ರಮನಂ ಮಾಡಿದರು

(ಯುಧಾಮನ್ಯು ಉತ್ತಮೌಜಸರು ಗೆಲ್ಲುವ ಹಾಗೆ ಯುದ್ಧಮಾಡಿ ಕೃಪನನ್ನು ಆಯಾಸ ಪಡಿಸಿದರರು.) ಆಗಳ್ ಮೆಯ್ವಿರ್ಚಿ ಬಂದು ಪೆಣೆದ ಭೀಮ ನಕುಳ ಸಹದೇವರುಮಂ (ಆಗ ಮೆಯ್ಯುಬ್ಬಿ ಹೆಣೆದುಕೊಂಡು ಒಟ್ಟಾಗಿ ಬಂದ ಭೀಮ ನಕುಲ ಸಹದೇವರನ್ನು) ಶಲ್ಯಂ ವಿರಥರ್ ಮಾಡಿ ಪಿಡಿದು

ಕೊಂಡುಪುಲ್ಲ ಸೂಡನು ಈಡಾಡುವಂತೆ (ಶಲ್ಯನು ರಥವಿಲ್ಲದವರನ್ನಾಗಿ ಮಾಡಿ ಹಿಡಿದುಕೊಂಡು ಹುಲ್ಲಿನ ಕಂತೆಯನ್ನು ಎಸೆಯುವಂತೆ ತನ್ನಳಿಯಂದಿರನ್ನು ಎಸೆದು) ತನ್ನ ಅಳಿಯಂದಿರು ಇರ್ವರುಮನು ಈಡಾಡಿ (ಇಬ್ಬರು ಅಳಿಯಂದಿರನ್ನು ಎಸೆದಾಡಿ,) ಭೀಮನಂ ಪೊಣರ್ದು ನೆಲಿಕ್ಕೆ ಇಕ್ಕಿ ಬೆನ್ನಂ

ಮೆಟ್ಟಿ ದಾಂಟುವ
ಮದಗಜದಂತೆ
(ಭೀಮನೊಡನೆ ಹೆಣಗಿ
ಅವನನ್ನು ನೆಲಕ್ಕಿಕ್ಕಿ ಬೆನ್ನನ್ನು
ತುಳಿದು ದಾಟುವ
ಮದ್ದಾನೆಯಂತೆ)
ಕೊಲಲೊಲ್ಲದೆ
ದಾಂಟದಾಗಳ್ (ಕೊಲ್ಲಲು
ಇಷ್ಟಪಡದೆ ದಾಟಿದನು.)
ದುರ್ಯೋಧನನು ಅೞಿಲ್ದು
ಕಣ್ಗಾಣದೆ (ಆಗ

ದುರ್ಯೋಧನನು ದುಖಪಟ್ಟು ದಿಕ್ಕುತ್ತೋರದೆ) ಎಯ್ದೆವಂದ ಅಶ್ವತ್ಥಾಮನು ಮದ್ರರಾಜ ಕೃಪ ಕೃತವರ್ಮರನು ಇಂತೆಂದಂ (ಸಮೀಪಕ್ಕೆ ಬಂದ ಅಶ್ವತ್ಥಾಮ ಕೃಪ ಕೃತವರ್ಮರನ್ನು ಕುರಿತು ಹೀಗೆಂದನು.)-

ವಚನ:ಅರ್ಥ:ಹಾಗೆ ಶಕುನಿಯನ್ನು ತರಿದ ನಂತರ, ಈ ಕಡೆ ಅತಿರಭುಕ್ತಿಯೆಂಬ

ದೇಶದ ರಾಜರಾದ
ಶತಬಿಂದುವಿನ
ಅಯ್ಯುಮಕ್ಕಳನ್ನೂ ನಕುಲನು
ಗಾಳಿಗೆ ಒಡ್ಡಿದ ಹುಲ್ಲಿನ
ಮೇಲಿನ ಜಲಬಿಂದುಗಳಂತೆ
ಭೂಮಿಗೆ ಬಲಿಕೊಟ್ಟನು. ಈ
ಕಡೆ ವಿಂಧ್ಯ, ಮಲಯ,
ಹಿಮವತ್ಪರ್ವತನಿವಾಸಿಗಳಾದ
ಪರ್ವತರಾಜರುಗಳನ್ನು
ಭೀಮನು ಯಮನ
ಬಾಯನ್ನು ಸೇರಿಸಿದನು.

ಯುಧಾಮನ್ಯು ಉತ್ತಮೌಜಸರು ಗೆಲ್ಲುವ ಹಾಗೆ ಯುದ್ಧಮಾಡಿ ಕೃಪನನ್ನು ಆಯಾಸ ಪಡಿಸಿದರರು. ಆಗ ಮೆಯ್ಯುಬ್ಬಿ ಹೆಣೆದುಕೊಂಡು ಒಟ್ಟಾಗಿ ಬಂದ ಭೀಮ ನಕುಲ ಸಹದೇವರನ್ನು ಶಲ್ಯನು ರಥವಿಲ್ಲದವರನ್ನಾಗಿ ಮಾಡಿ ಹಿಡಿದುಕೊಂಡು ಹುಲ್ಲಿನ ಕಂತೆಯನ್ನು ಎಸೆಯುವಂತೆ ತನ್ನಳಿಯಂದಿರನ್ನು ಎಸೆದು,

ಇಬ್ಬರು ಅಳಿಯಂದಿರನ್ನು ಎಸೆದಾಡಿ, ಭೀಮನೊಡನೆ ಹೆಣಗಿ ಅವನನ್ನು ನೆಲಕ್ಕಿಕ್ಕಿ ಬೆನ್ನನ್ನು ತುಳಿದು ದಾಟುವ ಮದ್ದಾನೆಯಂತೆ ಕೊಲ್ಲಲು ಇಷ್ಟಪಡದೆ ದಾಟಿದನು. ಆಗ ದುರ್ಯೋಧನನು ದುಖಪಟ್ಟು ದಿಕ್ಕುತೋರದೆ ಸಮೀಪಕ್ಕೆ ಬಂದ ಅಶ್ವತ್ಥಾಮ ಕೃಪ ಕೃತವರ್ಮರನ್ನು ಕುರಿತು ಹೀಗೆಂದನು.

ತರಳ||
ನಿಜಕುಲೋಚಿತವೃತ್ತಿಯಂ
ಬಗೆಯಿಂ ಮಹಾರಥರಿರ್
ಮಹೀ
ಭುಜರ ಮಕ್ಕಳಿರೆಂದು
ನಂಬಿದೆನಿಂತು ನಣ್ಪನೆ ವೈರಿ
ಭೂ|
ಭುಜರೊಳುಂಟೊಡತಾಗಿ
ಮಾಱ್ಪುದನೀಗಳಾನಱಿದೆಂ
ಫಣಿ

ಧ್ವಜನೆನಪ್ಪೆನೆ ನಿಮ್ಮನಿನ್ನೆನಗೆಂದೊಡೀ ರಣರಂಗದೊಳ್|| ೪೨

ಪದ್ಯ-೪೨:ಪದವಿಭಾಗ-ಅರ್ಥ:ನಿಜ ಕುಲೋಚಿತ ವೃತ್ತಿಯಂ ಬಗೆಯಿಂ ಮಹಾರಥರಿರ್ (ಮಹಾರಥಿಕರೇ, ನಿಮ್ಮ ಕುಲಕ್ಕೆ ಯೋಗ್ಯವಾದ ವರ್ತನೆಯನ್ನು ಯೋಚಿಸಿ) ಮಹೀಭುಜರ ಮಕ್ಕಳಿರೆಂದು

ನಂಬಿದೆನು (ರಾಜರ ಮಕ್ಕಳಾಗಿದ್ದೀರಿ ಎಂದು ನಿಮ್ಮನ್ನು ನಂಬಿದೆನು) ಇಂತು ನಣ್ಪನೆ ವೈರಿ ಭೂಭುಜರೊಳ್ ಉಂಟೊಡತಾಗಿ ಮಾಳ್ಪುದಂ (ಹೀಗೆ ಶತ್ರುರಾಜರುಗಳಲ್ಲಿ ಸ್ನೇಹವುಳ್ಳವರಾಗಿ ನಡೆದುಕೊಳ್ಳುವುದನ್ನು) ಈಗಳು ಆನು ಅಱಿದೆಂ (ಈಗ ನಾನು ತಿಳಿದೆನು.) ಫಣಿಧ್ವಜನೆಂ ಅಪ್ಪೆನೆ ನಿಮ್ಮನು

ಇನ್ನು ಎನಗೆ ಎಂದೊಡೆ ಈ ರಣರಂಗದೊಳ್ (ಇನ್ನು ಮೇಲೆ ಯುದ್ದರಂಗದಲ್ಲಿ ನಿಮ್ಮನ್ನು ನನ್ನವರೆಂದು ಭಾವಿಸಿದರೆ ಫಣಿಧ್ವಜನೇ? ಸರ್ಪಧ್ವಜನಾದ ದುರ್ಯೋಧನನೇ? ಅಲ್ಲ.)

ಪದ್ಯ-೪೨:ಅರ್ಥ:ಮಹಾರಥಿ ಕರೇ, ನಿಮ್ಮ ಕುಲಕ್ಕೆ ಯೋಗ್ಯವಾದ ವರ್ತನೆಯನ್ನು ಯೋಚಿಸಿ; ರಾಜರ

ಮಕ್ಕಳಾಗಿದ್ದೀರಿ ಎಂದು ನಿಮ್ಮನ್ನು ನಂಬಿದೆನು. ಹೀಗೆ ಶತ್ರುರಾಜರುಗಳಲ್ಲಿ ಸ್ನೇಹವುಳ್ಳವರಾಗಿ ನಡೆದುಕೊಳ್ಳುವುದನ್ನು ಈಗ ನಾನು ತಿಳಿದೆನು. ಇನ್ನು ಮೇಲೆ ಯುದ್ಧರಂಗದಲ್ಲಿ ನಿಮ್ಮನ್ನು ನನ್ನವರೆಂದು ಭಾವಿಸಿದರೆ ದುರ್ಯೋಧನನೇ? ಅಲ್ಲ. (ದುಯೋಧನನೆನಿಸಿಕೊಳ್ಳುತ್ತೆನೆಯೇ?)

ಉ|| ಕಾದುವ
ಮಾಱ್ಕೆಯಲ್ಲಱಿದು ಕೆಮ್ಮನೆ
ನಣ್ಣನೆ ಮೇಳಗಾಳೆಗಂ
ಗಾದುವ ಮಾಱ್ಕೆ ಸಿಂಧು ಘಟ
ಸೂತ ಸುತರ್ಕಳಿನಾಗದೊಂದು
ರಾ|
ಜ್ಯೋದಯವಮ್ಮ ನಿಮ್ಮ
ಬಲದಿಂದೆನಗಪ್ಪುದೆ
ಮದ್ವಿರೋಧಿಯಂ
ಭೇದಿಸಲಾನೆ
ಸಾಲ್ವೆನಿರಿಮನ್ನೆಗಮೀ

ರಣರಂಗಭೂಮಿಯೊಳ್|| ೪೩

ಪದ್ಯ-೪೩:ಪದವಿಭಾಗ-

ಅರ್ಥ:ಕಾದುವ

ಮಾಟ್ಕೆಯಲ್ಲ

(ಯುದ್ಧಮಾಡುವ ರೀತಿಯಲ್ಲ)

ಅಱಿದು ಕೆಮ್ಮನೆ ನಣ್ಣನೆ

ಮೇಳಗಾಳೆಗಂ ಕಾದುವ

ಮಾಟ್ಕೆ (ಇದು ಸುಮ್ಮನೆ

ಸ್ನೇಹದಿಂದ

ಪ್ರೇಮಕಲಹವಾಡುವ ರೀತಿ)

ಸಿಂಧು ಘಟ ಸೂತ

ಸುತರ್ಕಳಿಂ ಆಗದೊಂದು
ರಾಜ್ಯೋದಯಂ ಅಮ್ಮ!
ನಿಮ್ಮ ಬಲದಿಂದ ಎನಗೆ
ಅಪ್ಪುದೆ (ಭೀಷ್ಮ ದ್ರೋಣ
ಕರ್ಣರಿಂದ ಆಗದ ಒಂದು
ರಾಜ್ಯಲಾಭ ಅಪ್ಪಗಳಿರಾ!
ನಿಮ್ಮ ಬಲದಿಂದ
ನನಗಾಗುತ್ತದೆಯೇ.)
ಮದ್ವಿರೋಧಿಯಂ ಭೇದಿಸಲು
ಆನೆ ಸಾಲ್ವೆನು (ನನ್ನ
ವಿರೋಧಿಯನ್ನು ಮುರಿಯಲು

ನಾನೇ ಶಕ್ತನಾಗಿದ್ದೇನೆ.) ಇರಿಂ ಅನ್ನೆಗಂ ಈ ರಣರಂಗಭೂಮಿಯೊಳ್

ಪದ್ಯ-೪೩:ಅರ್ಥ:

ದುರ್ಯೋಧನ ಹೇಳಿದ, ಇದು ಯುದ್ಧಮಾಡುವ ರೀತಿಯಲ್ಲ ; ಇದು ಸುಮ್ಮನೆ ಸ್ನೇಹದಿಂದ ಪ್ರೇಮಕಲಹವಾಡುವ ರೀತಿ. ಭೀಷ್ಮ ದ್ರೋಣ ಕರ್ಣರಿಂದ ಆಗದ ಒಂದು ರಾಜ್ಯಲಾಭ ಅಪ್ಪಗಳಿರಾ! ನಿಮ್ಮ ಬಲದಿಂದ

ನನಗಾಗುತ್ತದೆಯೇ. ನನ್ನ ವಿರೋಧಿಯನ್ನು ಮುರಿಯಲು ನಾನೇ ಶಕ್ತನಾಗಿದ್ದೇನೆ. ಅಲ್ಲಿಯವರೆಗೆ ಈ ಯುದ್ಧಭೂಮಿಯಲ್ಲಿ ಇರಿ.

ವ||ಎಂದು ದುರ್ಯೋಧನನವರ ಕಾಳೆಗಮಂ ಮಾತಿನೊಳ್ ಕಳೆದು ವರೂಥದಿಂಬೀಡಿಂಗೆ ಪೋದನಾಗಳ್ ಶಲ್ಯಂ ರಾಜ ರಾಜಂ ತನ್ನಂ ಮೂದಲಿಸಿ

ನುಡಿದುದರ್ಕೆ ಮನದೊಳೇವಯಿಸಿ-

ವಚನ:ಪದವಿಭಾಗ-ಅರ್ಥ:ಎಂದು ದುರ್ಯೋರ್ಧನನು ಅವರ ಕಾಳೆಗಮಂ ಮಾತಿನೊಳ್ ಕಳೆದು (ಎಂದು ದುರ್ಯೋಧನನು ಅವರ ಕಾಳಗವನ್ನು ಮಾತಿನಿಂದಲೇ ಜರಿದು) ವರೂಥದಿಂ ಬೀಡಿಂಗೆ ಪೋದನು (ಎಂದು

ದುಯೋ‍ೀಧನನು ಅವರ ಕಾಳಗವನ್ನು ಮಾತಿನಿಂದಲೇ ಜರಿದು ರಥದಲ್ಲಿ ಬೀಡಿಗೆ ಹೋದನು.) ಆಗಳ್ ಶಲ್ಯಂ ರಾಜ ರಾಜಂ ತನ್ನಂ ಮೂದಲಿಸಿ ನುಡಿದುದರ್ಕೆ ಮನದೊಳು ಏವಯಿಸಿ (ಆಗ ಶಲ್ಯನು ಚಕ್ರವರ್ತಿಯಾದ ದುಯೋ‍ೀಧನನು ತನ್ನನ್ನು ಮೂದಲಿಸಿ ನುಡಿದುದಕ್ಕೆ ಮನಸ್ಸಿನಲ್ಲಿ ದುಖಪಟ್ಟು)-

ವಚನ:ಅರ್ಥ: ಎಂದು ದುರ್ಯೋಧನನು ಅವರ ಕಾಳಗವನ್ನು ಮಾತಿನಿಂದಲೇ ಜರಿದು ರಥದಲ್ಲಿ ಬೀಡಿಗೆ ಹೋದನು. ಆಗ ಶಲ್ಯನು ಚಕ್ರವರ್ತಿಯಾದ ದುರ್ಯೋಧನನು ತನ್ನನ್ನು ಮೂದಲಿಸಿ ನುಡಿದುದಕ್ಕೆ ಮನಸ್ಸಿನಲ್ಲಿ ದುಃಖಪಟ್ಟು-

ಚಂ||ಇನಿತುವರಂ ಪರಾಭವಮನಿಳೇಶನಿನಿನ್ನೆಗಾ

ದುದಿಂ ಸಿಡಿ
ಲ್ವೆನೆ ರಿಪು ಸೇನೆಯಂ ತುಳಿದು
ತೊಳ್ತುಳಿಮಾಡುವೆನೆಂದಗುರ್
ವಿನು
ರ್ವಿನ ಶರಸಂಕುಲಗಳೊಳೆ
ಪೂಳ್ದೊಡೆ
ಪಾಂಡವಸೈನ್ಯಮಾತನಂ
ಬಿನ ಮೊನೆಯೊಳ್
ಪುಳ್ದುರುಳಿಗೊಂಡಿದು
ಶಲ್ಯನಿದೇಂ ಪ್ರತಾಪಿಯೋ. ||
೪೪||

ಪದ್ಯ-೪೪:ಪದವಿಭಾಗ-ಅರ್ಥ:ಇನಿತುವರಂ ಪರಾಭವಮನು ಇಳೇಶನಿಂ ಇಂ ಎನಗೆ ಆದುದು (ರಾಜನಾದ ದುರ್ಯೋಧನನಿಂದ ಇಷ್ಟರ ಮಟ್ಟಿಗೆ ಅವಮಾನವು ನನಗಾಯಿತು.) ಇಂ ಸಿಡಿಲ್ವೆನೆ (ಇನ್ನು ಸಿಡಿದುಹೋಗುತ್ತೇನೆಯೇ?) ರಿಪು ಸೇನೆಯಂ ತುಳಿದು

ತೊಳ್ಳುಳಿಮಾಡುವೆನು ಎಂದು
ಅಗುರ್ವಿನ ಉರ್ವಿನ
(ಶತ್ರುಸೈನ್ಯವನ್ನು ತುಳಿದು
ಅಜ್ಜಿಗುಜ್ಜಿಮಾಡುತ್ತೇನೆ ಎಂದು
ಅತ್ಯಂತ ಭಯಂಕರವಾದ
ವಿಶೇಷವಾದ)
ಶರಸಂಕುಲಗಳೊಳೆ
ಪೂಳ್ದೊಡೆ (
ಬಾಣಸಮೂಹದಿಂದಲೇ
ಅವರನ್ನು ಹೂಳಲು)
ಪಾಂಡವಸೈನ್ಯಂ ಆತನ

ಅಂಬಿನ ಮೊನೆಯೊಳ್ (ಪಾಂಡವಸ್ಯೈನ್ಯವು ಆತನ ಬಾಣಗಳ ತುದಿಯಲ್ಲಿ) ಸುಳ್ದುರುಳಿಗೊಂಡಿದು ಶಲ್ಯನಿದೇಂ ಪ್ರತಾಪಿಯೋ (ಸುರುಟಿಕೊಂಡು ರಾಶಿಯಾಗಿ ಹೋಯಿತು. ಶಲ್ಯನು ಇನ್ನೆಷ್ಟು ಪ್ರತಾಪಶಾಲಿಯೋ!).

ಪದ್ಯ-೪೪:ಅರ್ಥ: ರಾಜನಾದ ದುರ್ಯೋಧನನಿಂದ ಇಷ್ಟರ ಮಟ್ಟಿಗೆ ಅವಮಾನವು

ನನಗಾಯಿತು. ಇನ್ನು ಸಿಡಿದುಹೋಗುತ್ತೇನೆಯೇ?, ಶತ್ರುಸೈನ್ಯವನ್ನು ತುಳಿದು ಅಜ್ಜಿಗುಜ್ಜಿಮಾಡುತ್ತೇನೆ ಎಂದು ಅತ್ಯಂತ ಭಯಂಕರವಾದ ಬಾಣಸಮೂಹದಿಂದಲೇ ಅವರನ್ನು ಹೂಳಲು ಪಾಂಡವಸೈನ್ಯವು ಆತನ ಬಾಣಗಳ ತುದಿಯಲ್ಲಿ ಸುರುಟಿಕೊಂಡು ರಾಶಿಯಾಗಿ

ಹೋಯಿತು. ಶಲ್ಯನು ಇನ್ನೆಷ್ಟು ಪ್ರತಾಪಶಾಲಿಯೋ!

<u>ಯುದ್ಧದಲ್ಲಿ ಶಲ್ಯನು ಧರ್ಮರಾಯನ ಕೋಪದ ಉಗ್ರ ದೃಷ್ಟಿಯ ಜ್ವಾಲೆಯಿಂದ ಬೂದಿಯಾದನು</u>

ಮಲ್ಲಿಕಾಮಾಲೆ||

ಬೀರವಟ್ಟಮನಾಂತ

ಬೀರರುಮಿರ್ವರುಂ ಸುರ

ರಾಜಿ ಕೈ

ವಾರದಿಂ ಬಿಟ್ಟಿವಿಟ್ಟು ನಮ್ಮನೆ

ನೋಡ ನೋಡುವರೀಗಳೀ|

ಭಾರತಂ ಸಮೆದಪ್ಪುದಳ್ಕದೆ

ನಿಂದು ಕಾದೆನುತುಂ ಶರಾ

ಸಾರಮಂ

ಸುರಿದಂತಕಾತ್ಮಜನಂತಸುಂ

ಗೊಳೆ ಕಾದಿದಂ|| ೪೫ ||

ಪದ್ಯ-೪೫:ಪದವಿಭಾಗ-

ಅರ್ಥ:ಬೀರವಟ್ಟಮನಾಂತ

ಬೀರರುಂ ಇರ್ವರುಂ

(ನಾವಿಬ್ಬರೂ

ಸೇನಾಧಿಪತ್ಯವನ್ನು
ವಹಿಸಿರುವ ವೀರರು
ಆಗಿದ್ದೇವೆ) ಸುರ ರಾಜಿ
ಕೈವಾರದಿಂ ಬಱಿವಿಟ್ಟು
(ದೇವತೆಗಳ ಸಮೂಹವು
ಹೊಗಳುತ್ತಾ
ದಾರಿಮಾಡಿಕೊಂಡು) ನಮ್ಮನೆ
ನೋಡ ನೋಡುವರು
(ನಮ್ಮನ್ನೇ ದಿಟ್ಟಿಸಿ
ನೋಡುತ್ತಿದ್ದಾರೆ.) ಈಗಳೀ
ಭಾರತಂ ಸಮೆದಪ್ಪುದು,

ಅಳ್ಕದೆ ನಿಂದು ಕಾದು
ಎನುತ್ತುಂ (ನೋಡು ಈಗ ಈ
ಭಾರತಯುದ್ಧವು
ಮುಕ್ತಾಯವಾಗುತ್ತಿದೆ.
ಹೆದರದೆ ನಿಂತು
ಯುದ್ಧಮಾಡು ಎನ್ನುತ್ತ)
ಶರಾಸಾರಮಂ ಸುರಿದು (
ಧರ್ಮರಾಜನು ಬಾಣದ
ಮಳೆಯನ್ನು ಸುರಿದು)
ಅಂತಕಾತ್ಮಜನು ಅಂತು
ಅಸುಂಗೊಳೆ ಕಾದಿದಂ

(ಧರ್ಮರಾಯನು ಪ್ರಾಣವನ್ನು ಸೆಳೆದುಕೊಳ್ಳುವಂತೆ ಕಾದಿದನು.)

ಪದ್ಯ-೪೫:ಅರ್ಥ: ನಾವಿಬ್ಬರೂ ಸೇನಾಧಿಪತ್ಯವನ್ನು ವಹಿಸಿರುವ ವೀರರು ಆಗಿದ್ದೇವೆ. ದೇವತೆಗಳ ಸಮೂಹವು ಹೊಗಳುತ್ತಾ ದಾರಿಮಾಡಿಕೊಂಡು ನಮ್ಮನ್ನೇ ದಿಟ್ಟಿಸಿ ನೋಡುತ್ತಿದ್ದಾರೆ.

ನೋಡು ಈಗ ಈ
ಭಾರತಯುದ್ಧವು
ಮುಕ್ತಾಯವಾಗುತ್ತಿದೆ.
ಹೆದರದೆ ನಿಂತು
ಯುದ್ಧಮಾಡು ಎನ್ನುತ್ತ
ಧರ್ಮರಾಜನು ಬಾಣದ
ಮಳೆಯನ್ನು ಸುರಿದು
ಧರ್ಮರಾಯನು ಪ್ರಾಣವನ್ನು
ಸೆಳೆದುಕೊಳ್ಳುವಂತೆ
ಕಾದಿದನು.

ಕಂ|| ಕಾದೆ ರಥ ತುರಗ ಕೇತನ

ಕೋದಂಡಂಗಳುಮನುಱಿದೆ ಖಂಡಿಸಿ ವಿಳಯಾಂ| ಭೋದನಿನಾದದೆ ಮದ್ರ ಮಹೀದಯಿತಂ ತೊಟ್ಟನಾರ್ವುದುಂ ಧರ್ಮಸುತಂ|| ೪೬ ||

ಪದ್ಯ-೪೬:ಪದವಿಭಾಗ-ಅರ್ಥ:ಕಾದೆ ರಥ ತುರಗ ಕೇತನ ಕೋದಂಡಂಗಳುಂ ಉಱಿದೆ ಖಂಡಿಸಿ (ತೇರು, ಕುದುರೆ, ಬಾವುಟ,

ಬಿಲ್ಲುಗಳನ್ನು ಬಿಡದೆ ಕತ್ತರಿಸಿ) ವಿಳಯಾಂ ಭೋದ ನಿನಾದದೆ (ಪ್ರಳಯಕಾಲದ ಗುಡುಗಿನ ಶಬ್ದದಿಂದ) ಮದ್ರ ಮಹೀದಯಿತಂ ತೊಟ್ಟನೆ ಆರ್ವುದುಂ ಧರ್ಮಸುತಂ (ಶಲ್ಯಮಹಾರಾಜನು ಕೂಡಲೆ ಗರ್ಜಿಸಿದನು. ಆಗ ಧರ್ಮರಾಯನು-)

ಪದ್ಯ-೪೬:ಅರ್ಥ:ತೇರು, ಕುದುರೆ, ಬಾವುಟ,

ಬಿಲ್ಲುಗಳನ್ನು ಬಿಡದೆ ಕತ್ತರಿಸಿ ಪ್ರಳಯಕಾಲದ ಗುಡುಗಿನ ಶಬ್ದದಿಂದ ಶಲ್ಯಮಹಾರಾಜನು ಕೂಡಲೆ ಗರ್ಜಿಸಿದನು. ಆಗ ಧರ್ಮರಾಯನು

ಮುಳಿದು ತಳಮಳಿಸಿ ತಳರದೆ
ತೊಳಗುವ ಕರವಾಳನುರ್ಚಿ
ಮೆಯ್ಯ್ವೆರ್ಚಿ ಪೊದ|
ಱ್ದೆಳವಮರೆ ಪಿಡಿದು ರಥದಿಂ
ದಿಳೆಗಿೞಿದವನವನಿಪತಿಯನ
ಱುಗಿೞಿವೊಯ್ದಂ|| ೪೭ ||

ಪದ್ಯ-೪೭:ಪದವಿಭಾಗ-ಅರ್ಥ:ಮುಳಿದು ತಳಮಳಿಸಿ ತಳರದೆ ತೊಳಗುವ (ಕೋಪದಿಂದ ತಲ್ಲಣಗೊಂಡು ಚಲಿಸದೆ ಹೊಳೆಯುವ) ಕರವಾಳನು ಉರ್ಚಿ ಮೆಯ್ವೆರ್ಚಿ (ಕತ್ತಿಯನ್ನು ಒರೆಯಿಂದ ಸೆಳೆದು ಮೈ ಉಬ್ಬಿ) ಪೊದಟ್ಟಿ ಅಳವು ಅಮರೆ (ಆವರಿಸಿದ ಶಕ್ತಿಯು ತುಂಬಲು) ಪಿಡಿದು ರಥದಿಂದ

ಇಳೆಗೆ ಇೞಿದು ? -
+ಹೊಡೆಯಲು(ರಥದಿಂದ
ಭೂಮಿಗೆ ಇಳಿದು -
+ಹೊಡೆಯಲು+-) ಅವನು
ಅವನಿಪತಿಯನು ಅಣುಗಿೞ್
ವೊಯ್ದಂ (ಅವನು ಶಲ್ಯನು
(ಸಮೀಪಕ್ಕೆ ಬಂದ
ಧರ್ಮರಾಜನನ್ನು) ಸಮೀಪಿಸಿ
ಹೊಡೆದನು.) (-
+ಹೊಡೆಯಲು+- ಅಧ್ಯಾಹಾರ,
ಸೇರಿಸಿದೆ)

ಪದ್ಯ-೪೭:ಅರ್ಥ:
ಕೋಪದಿಂದ ತಲ್ಲಣಗೊಂಡು ಚಲಿಸದೆ ಹೊಳೆಯುವ ಕತ್ತಿಯನ್ನು ಒರೆಯಿಂದ ಸೆಳೆದು ಮೈ ಉಬ್ಬಿ ಉಬ್ಬಿ ಆವರಿಸಿದ ಶಕ್ತಿಯು ತುಂಬಲು, ರಥದಿಂದ ಭೂಮಿಗೆ ಇಳಿದು ಹೊಡೆಯಲು, ಅವನು ಶಲ್ಯನು (ಸಮೀಪಕ್ಕೆ ಬಂದ ಧರ್ಮರಾಜನನ್ನು) ಸಮೀಪಿಸಿ ಹೊಡೆದನು.

ವ|| ಪೊಯ್ದೊಡೆ ಮದಾಂಧಗಂಧಸಿಂಧುರಂ ಪೊಯ್ದ ಪೆರ್ಮರದಂತೆ ನೆಲನದಿರೆ ಕೆಡೆದ ತನ್ನಳಿಯನಂ ಮದ್ರರಾಜಂ ಕಂಡು ಕರುಣಿಸಿ-

ವಚನ:ಪದವಿಭಾಗ-

ಅರ್ಥ:ಪೊಯ್ದೊಡೆ ಮದಾಂಧಗಂಧಸಿಂಧುರಂ (ಹೊಡೆದಾಗ ಮದ್ದಾನೆಯು) ಪೊಯ್ದ ಪೆರ್ಮರದಂತೆ ನೆಲನು ಅದಿರೆ ಕೆಡೆದ

(ಅಪ್ಪಳಿಸಿದ ದೊಡ್ಡ ಮರದಂತೆ ನೆಲವು ಅಲ್ಲಾಡುವ ಹಾಗೆ ಕೆಳಗೆ ಬಿದ್ದ) ತನ್ನ ಅಳಿಯನಂ ಮದ್ರರಾಜಂ ಕಂಡು ಕರುಣಿಸಿ ()-

ವಚನ:ಅರ್ಥ:ಹೊಡೆದಾಗ ಮದ್ದಾನೆಯು ಅಪ್ಪಳಿಸಿದ ದೊಡ್ಡ ಮರದಂತೆ ನೆಲವು ಅಲ್ಲಾಡುವ ಹಾಗೆ ಕೆಳಗೆ ಬಿದ್ದ ತನ್ನ ಸೋದರ ಅಳಿಯನಾದ ಧರ್ಮರಾಜನನ್ನು ಶಲ್ಯನು

ನೋಡಿ ಕರುಣಿಸಿ - (ಶಲ್ಯ ಮಾದ್ರಿಯ ಅಣ್ಣ)

ಚಂ|| ಮುಳಿಯಿಸದನ್ನಮೀ ನೃಪನಿನಾಗದು ಸಾವೆನಗೆಂತುಮೀತನಂ ಮುಳಿಯಿಪಿನೆಂದುರಸ್ಥಳಮ ನಂತೊದೆದಾಗಡೆ ಕಂತುಗೀಶ್ವರಂ| ಮುಳಿದವೊಲಾ ನೃಪಂ ಮುಳಿದು ನೋಡೆ ವಿಲೋಚನಪಾವಕಂ ತಗು

ಳ್ದಳುರ್ದೋಡೆ ಬೂದಿಯಾದುದೊಡಲಾಗಳೆ ಮದ್ರ ಮಹಾಮಹೀಶನಾ|| ೪೮ ||

ಪದ್ಯ-೪೮:ಪದವಿಭಾಗ-ಅರ್ಥ:ಮುಳಿಯಿಸದನ್ನಂ ಈ ನೃಪನಿಂ ಆಗದು ಸಾವೆನಗೆ (ಕೋಪವನ್ನುಂಟು ಮಾಡುವವರೆಗೂ ಧರ್ಮಜನಿಗಂದ ಸಾವು ನನಗೆ ಆಗುವುದಿಲ್ಲ.) ಎಂತುಂ

ಈತನಂ ಮುಳಿಯಿಪೆಂ (ಪಿ/ಪೆ) ಎಂದು ಉರಸ್ಥಳಮನು (ಹೇಗೂ ಈತನನ್ನು ರೇಗಿಸುತ್ತೇನೆ ಎಂದು) ಅಂತು ಒದೆದ ಆಗಡೆ (ಎದೆಯನ್ನು ಹಾಗೆ ಒದೆದಾಗ ತಕ್ಷಣ,) ಕಂತುಗೆ ಈಶ್ವರಂ ಮುಳಿದವೊಲ್ ಆ ನೃಪಂ ಮುಳಿದು (ಮನ್ಮಥನಿಗೆ ಈಶ್ವರನು ಕೋಪಿಸಿಕೊಂಡ ಹಾಗೆ) ನೋಡೆ ವಿಲೋಚನ

ಪಾವಕಂ ತಗುಳ್ದು
ಅಳುರ್ದೊಡೆ (ನೋಡಲು
ಕಣ್ಣಿನ ಬೆಂಕಿಯು ಬೆನ್ನಟ್ಟಿ
ತಾಗಿ ವ್ಯಾಪಿದಾಗ)
ಬೂದಿಯಾದುದು ಒಡಲು
ಆಗಳೆ ಮದ್ರ
ಮಹಾಮಹೀಶನಾ (ಆ
ಮದ್ರರಾಜನ ದೇಹವು ಆಗಲೇ
ಬೂದಿಯಾಯಿತು)

- **ಟಿಪ್ಪಣಿ**::ಮೂಲ ಭಾರತದಲ್ಲಿ
ಕೊನೆಗೆ ವಿರಥನಾದ

ಧರ್ಮರಾಯನು ಎಸೆದ ಈಟಿಯಿಂ ಶಲ್ಯನು ಸಾಯುವನು. ಇದು ಕೋಪವನ್ನೇ ಮಾಡದ ಧರ್ಜನಿಗೆ ಕೋಪ ಬರಿಸಿ ಅವನ ಉಗ್ರದೃಷ್ಟಿಯ ಬೋಕಿಯಿಂದ ಸಾಯುವ ಸನ್ನಿವೇಶ ಪಂಪನ ಕವಿಸಮಯ.

ಪದ್ಯ-೪೮:ಅರ್ಥ:

ಕೋಪವನ್ನುಂಟು

ಮಾಡುವವರೆಗೂ
ಧರ್ಮಜನಿಗಂದ ಸಾವು ನನಗೆ
ಆಗುವುದಿಲ್ಲ. ಹೇಗೂ
ಈತನನ್ನು ರೇಗಿಸುತ್ತೇನೆ
ಎಂದು ಎದೆಯನ್ನು ಹಾಗೆ
ಒದೆದ , ತಕ್ಷಣವೇ ಮನ್ಮಥನಿಗೆ
ಈಶ್ವರನು ಕೋಪಿಸಿಕೊಂಡು
ನೋಡಲು ಕಣ್ಣಿನ ಬೆಂಕಿಯು
ತಾಗಿ ವ್ಯಾಪಿದಾಗ ಆ
ಮದ್ರರಾಜ ಶಲ್ಯನ ದೇಹವು
ಆಗಲೇ ಬೂದಿಯಾಯಿತು)

ವ|| ಅಂತಜಾತಶತ್ರು
ನೇತ್ರೋದ್ಭಾತಾನಳಂ
ತ್ರಿಣೇತ್ರಲಲಾಟನಳನಂತಳವ
ಲ್ಲದಳುರೆ ಮದ್ರನಾಥಂ
ಭಸ್ಮೀಭೂತನಾದ
ಮಾತನಹಿಕೇತನಂ ಕೇಳ್ದು-

ವಚನ:ಪದವಿಭಾಗ-

ಅರ್ಥ:ಅಂತು ಅಜಾತಶತ್ರು ನೇತ್ರ ಉದ್ಭಾತ ಅನಳಂ (ಹಾಗೆ ಧರ್ಮರಾಯನ ಕಣ್ಣಿನಲ್ಲಿ ಹುಟ್ಟಿದ ಬೆಂಕಿಯು

ಮುಕ್ಕಣ್ಣನ ಹಣೆಗಣ್ಣಿನ
ಬೆಂಕಿಯು) ತ್ರಿಣೇತ್ರ ಲಲಾಟ
ಅನಳನಂತೆ ಅಳವಲ್ಲದೆ
ಅಳುರೆ - ಸುಡಲು(ಶಿವನ
ಹಣೆಗಣ್ಣ ಅಗ್ನಿಯಂತೆ
ಅಳತೆಯಿಲ್ಲದಷ್ಟು ಮೀರಿ
ಸುಡಲು) ಮದ್ರನಾಥಂ
ಭಸ್ಮೀಭೂತನಾದಂ ಆತನು
ಅಹಿಕೇತನಂ ಕೇಳ್ದು (ಶಲ್ಯನು
ಬೂದಿಯಾದ ಮಾತನ್ನು

ದುರ್ಯೋಧನನು ಕೇಳಿದನು.
ಕೇಳಿ)-
ವಚನ:ಅರ್ಥ:ಹಾಗೆ
ಧರ್ಮರಾಯನ ಕಣ್ಣಿನಲ್ಲಿ
ಹುಟ್ಟಿದ ಬೆಂಕಿಯು
ಮುಕ್ಕಣ್ಣನ ಹಣೆಗಣ್ಣಿನ
ಬೆಂಕಿಯು ಶಿವನ ಹಣೆಗಣ್ಣ
ಅಗ್ನಿಯಂತೆ ಅಳತೆಯಿಲ್ಲದಷ್ಟು
ಸುಡಲು, ಶಲ್ಯನು
ಬೂದಿಯಾದ ಮಾತನ್ನು
ದುರ್ಯೋಧನನು ಕೇಳಿದಾಗ-

ಏಕಾಂಗಿಯಾದ ದುರ್ಯೋಧನನು ಸಂಜಯನ ಸಲಹೆಯಂತೆ ಭೀಷ್ಮರನ್ನು ಕಂಡು ಸಲಹೆ ಕೇಳಲು ಹೋಗುವುದು

ಉ|| ಆ ದೊರೆಯರ್ ನದೀಜ ಘಟಸಂಭವ ಸೂರ್ಯತನೂಜ ಮದ್ರ ರಾ ಜಾದಿ ಮಹೀಭುಜರ್ ಧುರದೊಳೆನ್ನಯ ದೂಸಱಿನಳ್ಗಿ ಮಳ್ಗಿದಂ|

ತಾದರಿದೊಂದೆ

ಮೆಯ್ಯುೞಿದುದಿನ್ನೆನಗಾವು

ದೊ ಮೆಳ್ವಡೆಯ್ದೆ ಮುಂ

ದಾದ ವಿರೋಧಿಸಾಧನಮನೆನ್ನ

ಗದಾಶನಿಯಿಂದುರುಳ್ಚುವೆಂ||

೪೯ ||

ಪದ್ಯ-೪೯:ಪದವಿಭಾಗ-

ಅರ್ಥ:ಆ ದೊರೆಯರ್

(ಅಂತಹ ಅಸಮಾನ

ಯೋಗ್ಯತೆಯವರಾದ)

ನದೀಜ ಘಟಸಂಭವ

ಸೂರ್ಯತನೂಜ ಮದ್ರ
ರಾಜಾದಿ ಮಹೀಭುಜರ್ (
ಭೀಷ್ಮ, ದ್ರೋಣ, ಕರ್ಣ,
ಶಲ್ಯನೇ ಮೊದಲಾದ
ರಾಜರುಗಳು) ಧುರದೊಳು
ಎನ್ನಯ ದೂಸಱಿಂ ಅೞ್ಗಿ
ಮೞ್ಗಿದಂತಾದರು
(ಯುದ್ಧದಲ್ಲಿ ನನ್ನ
ಕಾರಣದಿಂದ ಸತ್ತು
ನಿರ್ನಾಮವಾದರು.)
ಇದೊಂದೆ ಮೆಯ್ಯ

ಉಟಿದುದು (ಈ ನನ್ನದೊಂದೆ ಶರೀರ ಉಳಿದಿದೆ.) ಇನ್ನು ಎನಗೆ ಆವುದೊ ಮೆಳ್ಪಡೆ/ ಮಾಳ್ಪೊಡೆ (ಇನ್ನು ನನಗೆ ಮಾಡುವ ಕಾರ್ಯವಾವುದು?) ಎಯ್ದೆ ಮುಂದಾದ ವಿರೋಧಿಸಾಧನಮನು (ಚೆನ್ನಾಗಿ/ ಸಮರ್ಥವಾಗಿ ನನ್ನನ್ನು ಎದುರಿಸುವ ಶತ್ರುಸೈನ್ಯವನ್ನು) ಎನ್ನ ಗದಾ

ಅಶನಿಯಿಂದ ಉರುಳ್ಚುವೆಂ
(ನನ್ನ ಗದೆಯೆಂಬ ಸಿಡಿಲಿನಿಂದ
ಉರುಳಿಸುವೆನು)
ಪದ್ಯ-೪೯:ಅರ್ಥ:ಅಂತಹ
ಅಸಮಾನ
ಯೋಗ್ಯತೆಯವರಾದ ಭೀಷ್ಮ,
ದ್ರೋಣ, ಕರ್ಣ, ಶಲ್ಯನೇ
ಮೊದಲಾದ ರಾಜರುಗಳು
ಯುದ್ಧದಲ್ಲಿ ನನ್ನ ಕಾರಣದಿಂದ
ಸತ್ತು ನಿರ್ನಾಮವಾದರು. ಈ
ನನ್ನದೊಂದೆ ಶರೀರ

ಉಳಿದಿದೆ. ಇನ್ನು ನನಗೆ ಮಾಡುವ ಕಾರ್ಯವಾವುದು? ಚೆನ್ನಾಗಿ/ ಸಮರ್ಥವಾಗಿ ನನ್ನನ್ನು ಎದುರಿಸುವ ಶತ್ರುಸೈನ್ಯವನ್ನು ನನ್ನ ಗದೆಯೆಂಬ ಸಿಡಿಲಿನಿಂದ ಉರುಳಿಸುವೆನು, ಎಂದು ದುರ್ಯೋಧನನು ಯೋಚಿಸಿ ನಿಶ್ಚಯಿಸಿದನು.

ವ|| ಎಂದು ನಿಜಭುಜ ವಿಕ್ರಮೈಕಸಾಹಯನಾಗಿ

ಗದೆಯಂ ಕೊಂಡು ಸಂಗ್ರಾಮ ರಂಗಕ್ಕೆ ನಡೆಯಲೆಂದಿರ್ದ ಕುರುಕುಳಚೂಡಾಮಣಿಯ ದಕ್ಷಿಣಕರಾಗ್ರಮಂ ಪಿಡಿದು ಸಂಜಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನಿಜಭುಜ ವಿಕ್ರಮ ಏಕಸಾಹಯನಾಗಿ ಗದೆಯಂ ಕೊಂಡು (ಎಂದು ತನ್ನ ಬಾಹುಬಲ ಶೌರ್ಯವೊಂದನ್ನೇ

ಸಹಾಯವನ್ನಾಗಿ ಹೊಂದಿ ಗದೆಯನ್ನು ತೆಗೆದುಕೊಂಡು) ಸಂಗ್ರಾಮ ರಂಗಕ್ಕೆ ನಡೆಯಲೆಂದು ಇರ್ದ ಕುರುಕುಳಚೂಡಾಮಣಿಯ (ಯುದ್ಧರಂಗಕ್ಕೆ ಹೋಗಬೇಕೆಂದಿದ್ದ ಕುರುಕುಲಚೂಡಾಮಣಿಯಾದ ದುರ್ಯೋಧನನ) ದಕ್ಷಿಣಕರಾಗ್ರಮಂ ಪಿಡಿದು ಸಂಜಯನು ಇಂತು ಎಂದಂ

(ಬಲಗೈಯ್ಯ ತುದಿಯನ್ನು ಹಿಡಿದುಕೊಂಡು ಸಂಜಯನು ಹೀಗೆಂದನು)-

ವಚನ:ಅರ್ಥ:ಎಂದು ತನ್ನ ಬಾಹುಬಲ ಶೌರ್ಯವೊಂದನ್ನೇ ಸಹಾಯವನ್ನಾಗಿ ಹೊಂದಿ ಗದೆಯನ್ನು ತೆಗೆದುಕೊಂಡು ಯುದ್ಧರಂಗಕ್ಕೆ ಹೋಗಬೇಕೆಂದಿದ್ದ ಕುರುಕುಲಚೂಡಾಮಣಿಯಾ

ದ ದುಯೋಧನನ ಬಲಗೈಯ್ಯ
ತುದಿಯನ್ನು ಹಿಡಿದುಕೊಂಡು
ಸಂಜಯನು ಹೀಗೆಂದನು. -

ಮ||
ಬೆವಸಾಯಂಗೆಯಲಿನ್ನುಮುಂ
ಟೆಡೆ ಕೃಪಾಶ್ವತ್ಥಾಮರುಳ್ಳಂತೆ
ಪಾಂ
ಡವರಂ ಗೆಲ್ವುದಸಾಧ್ಯಮಾಯ್ತೆ
ನಿಜ ದೋರ್ದಂಡಂಬರಂ
ಗಂಡರಾ|

ಹವರಂಗಕ್ಕೊಳರೇ ಸಮಂತು ಪಗೆಯಂ ಕೊಲ್ವಂತು ಗೆಲ್ವಂತು ಕಾ

ದುವುದೇಕಾಕಿಯೆ ಆಗಿ ದೇವರಿಪುಭೂಪಾಳರ್ಕಳೊಳ್ ಕಾದುವೈ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ಬೆವಸಾಯಂಗೆಯಲ್ ಇನ್ನುಂ ಉಂಟೆಡೆ (ಮುಂದಿನಕಾರ್ಯ ಮಾಡುವುದಕ್ಕೆ ಇನ್ನೂ

ಅವಕಾಶವಿರುವಾಗ) ಕೃಪ
ಅಶ್ವತ್ಥಾಮರು ಉಳ್ಳಂತೆ (ಕೃಪ
ಅಶ್ವತ್ಥಾಮರು ಇರಲು)
ಪಾಂಡವರಂ ಗೆಲ್ವುದು
ಅಸಾಧ್ಯಮಾಯ್ತೆ
(ಪಾಂಡವರನ್ನು ಗೆಲ್ಲುವುದು
ಅಸಾಧ್ಯವಾಯಿತೇ?); ನಿಜ
ದೋರ್ದಂಡ ಅಂಬರಂ
ಗಂಡರು ಆಹವರಂಗಕ್ಕೆ
ಒಳರೇ (ನಿನ್ನ
ಬಾಹುದಂಡದವರೆವಿಗೂ –

ಅದಕ್ಕೆ ಸಮಾನರಾದ
ಪೌರುಷಶಾಲಿಗಳು
ಯುದ್ಧರಂಗದಲ್ಲಿ
ಇದ್ದಾರೆಯೇ?) ಸಮಂತು
(ಚೆನ್ನಾಗಿ) ಪಗೆಯಂ
ಕೊಲ್ವಂತು ಗೆಲ್ವಂತು
ಕಾದುವುದು (ಶತ್ರುವನ್ನು
ಕೊಲ್ಲುವ ಹಾಗೂ ಗೆಲ್ಲುವ
ಹಾಗೆ ಕಾದಬೇಕು) ಏಕಾಕಿಯೆ
ಆಗಿ ದೇವ (ಸ್ವಾಮಿ)
ರಿಪುಭೂಪಾಳರ್ಕಳೊಳ್

ಕಾದುವೈ! (ಸ್ವಾಮಿ; ಶತ್ರುರಾಜರುಗಳಲ್ಲಿ ಒಬ್ಬಂಟಿಗನೇ ಆಗಿ ಕಾದುತ್ತೀಯಾ?)

ಪದ್ಯ-೫೦:ಅರ್ಥ:ಮುಂದಿನ ಕಾರ್ಯ ಮಾಡುವುದಕ್ಕೆ ಇನ್ನೂ ಅವಕಾಶವಿರುವಾಗ ಕೃಪ ಅಶ್ವತ್ಥಾಮರು ಇರಲು ಪಾಂಡವರನ್ನು ಗೆಲ್ಲುವುದು ಅಸಾಧ್ಯವಾಯಿತೇ? ನಿನ್ನ ಬಾಹುದಂಡದವರೆವಿಗೂ –

ಅದಕ್ಕೆ ಸಮಾನರಾದ

ಪೌರುಷಶಾಲಿಗಳು

ಯುದ್ಧರಂಗದಲ್ಲಿದ್ದಾರೆಯೇ?

ಶತ್ರುವನ್ನು ಕೊಲ್ಲುವ ಹಾಗೂ

ಗೆಲ್ಲುವ ಹಾಗೆ ಕಾದಬೇಕು.

ಸ್ವಾಮಿ; ಶತ್ರುರಾಜರುಗಳಲ್ಲಿ

ಒಬ್ಬಂಟಿಗನೇ ಆಗಿ

ಕಾದುತ್ತೀಯಾ?

ವ||

ಎಂಬುದುಮೆನ್ನುಮನೇಕಾಕಿ

ಯೆಂದೇಳಿಸಿ ನುಡಿದೆಯೆಂದು

ಸಂಜಯನ ಮೊಗಮಂ ಮುನಿದು ನೋಡಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಎನ್ನುಮಂ ಏಕಾಕಿಯೆಂದು ಏಳಿಸಿ ನುಡಿದೆಯೆಂದು (ಎನ್ನಲು ನನ್ನನ್ನು ಏಕಾಕಿಯೆಂದು ಅಪಹಾಸ್ಯಮಾಡಿ ನುಡಿದೆಯಾ) ಸಂಜಯನ ಮೊಗಮಂ ಮುನಿದು ನೋಡಿ (ಎಂದು ಸಂಜಯನ

ಮುಖವನ್ನು ಕೋಪಿಸಿಕೊಂಡು ನೋಡಿ)-

ವಚನ:ಅರ್ಥ:ಎನ್ನಲು ನನ್ನನ್ನು ಏಕಾಕಿಯೆಂದು ಅಪಹಾಸ್ಯಮಾಡಿ ನುಡಿದೆಯಾ ಎಂದು ಸಂಜಯನ ಮುಖವನ್ನು ಕೋಪಿಸಿಕೊಂಡು ನೋಡಿ-

ಚಂ|| ವನ ಕರಿ ಕುಂಭ ಪಾಟನ ಪಟಿಷ್ಠ ಕಠೋರ ನಖ ಪ್ರಹಾರ ಭೇ|

ದನ ಗಳಿತಾಸ್ತ್ರ ರಕ್ತ ನವ
ಮೌಕ್ತಿಕ ಪಙ್ತ್ತಿವಿಳಾಸ
ಭಾಸುರಾ|
ನನನೆನೆ ಸಂದುದಗ್ರ
ಮೃಗರಾಜನುಮಂ
ಮದವದ್ವಿರೋಧಿ ಭೇ
ದನಕರನಪ್ಪ
ಶೌರ್ಯಮದದೆನ್ನುಮನೊಂ
ದೊಡಲೆಂಬ ಸಂಜಯಾ|| ೫೧
||

ಪದ್ಯ-೫೧:ಪದವಿಭಾಗ-ಅರ್ಥ: ವನ ಕರಿ ಕುಂಭ ಪಾಟನ (ಕಾಡಾನೆಯ ಕುಂಭಸ್ಥಳವನ್ನು ಭೇದಿಸುವುದರಲ್ಲಿ) ಪಟಿಷ್ಠ ಕಠೋರ ನಖ ಪ್ರಹಾರ ಭೇದನ (ಸಮರ್ಥವೂ ಕಠಿಣವೂ ಆದ ಉಗುರುಗಳ ಪೆಟ್ಟಿನಿಂದ ಬಿರಿಯುವಿಕೆಯಿಂದ) ಗಳಿತ (ಸೋರಿದ) ಅಸ್ತ್ರ (ರಕ್ತದಿಂದ) ರಕ್ತ (ಕೆಂಪಾದ) ನವ ಮೌಕ್ತಿಕ

ಪಙ್ತಿವಿಳಾಸ
(ಹೊಸಮುತ್ತುಗಳ ಸಾಲುಗಳ
ಶೋಭೆಯಿಂದ)
ಭಾಸುರಾನನನು ಎನೆ
(ಪ್ರಕಾಶಮಾನವಾದ
ಮುಖವುಳ್ಳದ್ದು ಎನ್ನುವಂತೆ)
ಸಂದ ಉದುಗ್ರ
ಮೃಗರಾಜನುಮಂ (ಪ್ರಸಿದ್ಧ
ಮೃಗರಾಜನಾದ ಸಿಂಹವನ್ನು)
ಮದವದ್ ವಿರೋಧಿ
ಭೇದನಕರನಪ್ಪ (ಮದಿಸಿರುವ

ಶತ್ರುಗಳನ್ನು ಸೀಳುವ)
ಶೌರ್ಯ ಮದದ (ಪ್ರತಾಪದ
ಸೊಕ್ಕಿನಿಂದ ಕೂಡಿದ)
ಎನ್ನುಮಂ ಒಂದು ಒಡಲು
ಎಂಬ/ ಎಂಬೆ ಸಂಜಯಾ
(ನನ್ನನ್ನು ಸಂಜಯಾ,
ಒಂದೊಡಲ್- ಏಕಾಕಿ
ಎನ್ನುವೆಯಾ?)
ಪದ್ಯ-೫೧:ಅರ್ಥ:ದುರ್ಯೋ
ಧನ ಹೇಳಿದ, ಕಾಡಾನೆಯ
ಕುಂಭಸ್ಥಳವನ್ನು

ಭೇದಿಸುವುದರಲ್ಲಿ,
ಸಮರ್ಥವೂ ಕಠಿಣವೂ ಆದ
ಉಗುರುಗಳ ಪೆಟ್ಟಿನಿಂದ
ಬಿರಿಯುವಿಕೆಯಿಂದ, ಅಲ್ಲಿಂದ
ಸುರಿಯುತ್ತಿರುವ ಕೆಂಪಾದ
ಹೊಸಮುತ್ತುಗಳ ಸಾಲುಗಳ
ಶೋಭೆಯಿಂದ
ಪ್ರಕಾಶಮಾನವಾದ
ಮುಖವುಳ್ಳದ್ದು ಎನ್ನುವಂತೆ
ಪ್ರಸಿದ್ಧ ಮೃಗರಾಜನಾದ
ಸಿಂಹವನ್ನು ಮದಿಸಿರುವ

ಶತ್ರುಗಳನ್ನು ಸೀಳುವ
ಪ್ರತಾಪದ ಸೊಕ್ಕಿನಿಂದ
ಕೂಡಿದ ನನ್ನನ್ನು ಸಂಜಯಾ,
ಏಕಾಕಿ ಎನ್ನುವೆಯಾ?

<u>ದಾರಿಯಲ್ಲಿ ರಣರಂಗದಲ್ಲಿ ಬಿದ್ದ ದುರ್ಯೋಧನನ ಆಪ್ತರ ವರ್ಣನೆ</u>

ವ|| ಎಂಬುದುಂ ದೇವರ ಬಾಹುಬಳಮಜೇಯಮುಮಸ ಹಾಯಮುಮಪ್ಪುದಾದ ದೊಡಂ ದೇಶ ಕಾಲ

ವಿಭಾಗಮುಮನಾಪತ್ಪ್ರತೀಕಾ
ರಮುಮನಱಿಯದ
ವಿವೇಕಿಗಳಂತೆ ದೇವರ್
ನೆಗೞಲಾಗದೇನಂ
ನೆಗೞ್ದೊಡಂ
ಕುರುಪಿತಾಮಹನೊಳಾಳೋ
ಚಿಸಿ ನೆಗೞ್ವುದೆಂದು
ಮುಱಿಸಾರೆ ನುಡಿದು
ಕಾಲವಂಚನೆಗೆಯ್ಯಲ್ ಬಗೆದು
ಸಂಗ್ರಾಮರಂಗದೊಳಗನೆ
ಮುಂದಿಟ್ಟೊಡಗೊಂಡನೇಕ

ನೃಪಶಿರ
ಕಪಾಳಶಕಳಜರ್ಜರಿತಮುಂ
ಪರಸ್ಪರ ಸಮರರಭಸ
ಸಮುತ್ಸಾರಿತಮುಂ ಸಕಲ
ಸಾಮಂತಮಕುಟಬದ್ಧಮೌಳಿ
ಮಾಳಾವಿಗಳಿತಮಕುಟಕೋ
ಟಿ ಸಂಘಟ್ಟನೋಚ್ಚಳಿತ
ಮಣಿಶಲಾಕಾ ಸಂಕುಳಮುಂ
ಸಮರಭರ ನಿರ್ಭರ
ಭೀಮಸೇನ
ಘನಗದಾಪ್ರಹರಣನಿಸ್ಸಹಮ

ದವದನೇಕ ಮತ್ತ ಮಾತಂಗ

ಪದನಖಖರ್ವಿತೋರ್ವೀತಳ

ಮುಂ

ಪ್ರಚಂಡಮಾರ್ತಂಡಮರೀಚಿ

ತೀವ್ರಜ್ವಳನಾಸಾರ

ಕರಾಳಕರವಾಳಭಾಮಂಡಳ

ಪರೀತೋದ್ಯತದೋರ್ದಂಡ

ಚಂಡಪ್ರಚಂಡಸುಭಟಾರೂಢ

ತುರಂಗಮ

ವೇಗಬಲಪತಿತಖರಖುರಟಂಕ

ಪರಿಸ್ಖಲನಕಳಿತ

ವಿಷಮಸಮರಭೇರೀ
ನಿಸ್ವನಮುಮಾಕರ್ಣಕೃಷ್ಣ
ವಿಕ್ರಮಾರ್ಜುನಕಾರ್ಮುಕವಿ
ಮುಕ್ತ
ನಿಶಿತಸಾಯಕಸಂಕುಳಶಲ್ಯನಿ
ಪತಿತಾನೇಕ
ಕಳಕಳಾಕಳಿತಮುಂ
ಪ್ರಕುಪಿಸೂತಹೂಂಕಾರ
ಕಾತರಿತತರಳತರತುರಂಗದ್ರುತ
ವೇಗಾಕೃಷ್ಣ
ಧನಂಜಯರಥಚಟುಳ

ಚಕ್ರನೇಮಿಧಾರಾಪರಿವೃತಸಂ
ಘಟ್ಟನಸಮುಚ್ಚಳಿತ ಪಾಂಸು
ಪಟಳಾಂಧಕಾರದುರ್ಲಕ್ಷಾಂತ
ರಿಕ್ಷ ಕ್ಷಿತಿ
ದಿಗಂತರಾಳಾಂತರಮುಮನವ
ರತ
ನಿಹತನರಕರಿತುರಗನಿಕುರುಂ
ಬಕೀಲಾಲಕಲ್ಲೋಲಪ್ರವರ್ತ
ನಾನೇಕ ನದನದೀಪ್ರವಾಹ
ಬಾಹುಳ್ಯದುಸ್ತರಾವತರಣಮಾ
ರ್ಗಮುಂನಿಶಿತಾಸಿಪತ್ರಪತಿತಪ್ರ

ಚಂಡ

ಸುಭಟಮಸ್ತಕೋಚ್ಛಳಿತಚಟಾ

ಚ್ಚಾಟನದುರ್ನಿರೀಕ್ಷ್ಯನರ್ತಿ

ತಾನೇಕ

ಕಬಂಧಬಂಧುರಮುಮಪ್ಪ

ವಿಷಮ ಪ್ರದೇಶಂಗಳೊಳ್

ತೊಲಗಿ ತೊಲಗಿ ಪೋಗೆ

ಸಂಜಯಂ ದುರ್ಯೋಧನನ

ಮೊಗಮಂನೋಡಿ-

ವಚನ:ಪದವಿಭಾಗ-

ಅರ್ಥ:ಎಂಬುದುಂ ದೇವರ

ಬಾಹುಬಳಂ
ಅಜೇಯಮುಮಂ
ಅಸಹಾಯಮಮಂ ಅಪ್ಪುದು. (
ಸ್ವಾಮಿಯವರ ತೋಳಿನ
ಬಲವು ಜಯಿಸುವುದಕ್ಕೆ
ಆಗದುದೂ
ಸಹಾಯವನ್ನಪೇಕ್ಷಿಸದುದೂ
ಆಗಿದೆ). ಆದೊಡಂ ದೇಶ ಕಾಲ
ವಿಭಾಗಮುಮನು
ಆಪತ್ಪ್ರತೀಕಾರಮುಮನು
ಅಱಿಯದ (ಆದರೂ

ದೇಶಕಾಲವಿಭಾಗವನ್ನು
ಆಪತ್ತಿಗೆ ಪ್ರತೀಕಾರವನ್ನು
ತಿಳಿಯದಿರುವ)
ವಿವೇಕಿಗಳಂತೆ ದೇವರ್
ನೆಗೞಲಾಗದು
(ವಿವೇಕಶೂನ್ಯರಾದವರ ಹಾಗೆ
ಸ್ವಾಮಿಯವರು
ಮಾಡಕೂಡದು). ಏನಂ
ನೆಗೞ್ದೊಡಂ (ಏನು
ಮಾಡಬೇಕಾದರೂ)
ಕುರುಪಿತಾಮಹನೊಳು

ಆಳೋಚಿಸಿ ನೆಗಳ್ವುದೆಂದು
ಮುೞಿಸಾರೆ ನುಡಿದು (ಎಂದು
ದುಯೋ಼ಧನನನ್ನು
ಮನಸಾರೆ ಒಪ್ಪುವಂತೆ ಹೇಳಿ)
(ಕುರುಪಿತಾಮಹನಾದ
ಭೀಷ್ಮರಲ್ಲಿ ಆಲೋಚಿಸಿ
ಮಾಡತಕ್ಕದ್ದು ಎಂದು)
ಕಾಲವಂಚನೆಗೆಯ್ಯಲ್ ಬಗೆದು
(ಕಾಲವಂಚನೆಮಾಡಲು/
ಸಮಯ ಕಳೆಯಲು
ಯೋಚಿಸಿ) ಸಂಗ್ರಾಮರಂಗದ

ಒಳಗನೆ ಮುಂದಿಟ್ಟು
ಒಡಗೊಂಡು
(ಯುದ್ಧರಂಗದಲ್ಲಿ
ಒಳಭಾಗದಲ್ಲಿಯೇ
ದುರ್ಯೋಧನನನ್ನು
ಮುಂದಿಟ್ಟು ಕೊಂಡು
ಜೊತೆಗೂಡಿ,) ಅನೇಕ ನೃಪಶಿರ
ಕಪಾಳಶಕಳಜರ್ಜರಿತಮುಂ
(ಅವನೊಡನೆ ಅನೇಕರಾಜರ
ತಲೆ ಮತ್ತು ಕಪಾಲಗಳ
ತಲೆಯೋಡುಗಳಿಂದ

ಕಿಕ್ಕಿರಿದಿದ್ದು) ಪರಸ್ಪರ ಸಮರ ರಭಸ ಸಮುತ್ಸಾರಿತಮುಂ (ಪರಸ್ಪರ ಯುದ್ಧದ ರಭಸದಲ್ಲಿ ಹೊರಹಾಕಿದ) ಸಕಲ ಸಾಮಂತ ಮಕುಟ ಬದ್ಧಮೌಳಿ ಮಾಳಾವಿಗಳಿತ ಮಕುಟಕೋಟಿ ಸಂಘಟ್ಟನ ಉಚ್ಚಳಿತ (ಸಕಲ ಸಾಮಂತರಾಜರ ತಲೆಗಳ ಸಾಲುಗಳಿಂದ ಜಾರಿದ ಕಿರೀಟಗಳ ತುದಿಯ

ತಗುಲುವಿಕೆಯಿಂದ)
ಮಣಿಶಲಾಕಾ ಸಂಕುಳಮುಂ
(ಮೇಲೆದ್ದ ರತ್ನಸಲಾಕಿಗಳ
ಸಮೂಹವನ್ನೂ) ಸಮರಭರ
ನಿರ್ಭರ ಭೀಮಸೇನ
ಘನಗದಾ ಪ್ರಹರಣ
ನಿಸ್ಸಹಮದವದ
(ಯುದ್ಧಭಾರವನ್ನು
ವಹಿಸಿರುವ ಭೀಮಸೇನನ
ದೊಡ್ಡದಾದ ಗದೆಯ ಪೆಟ್ಟನ್ನು
ಸಹಿಸಲಾಗದ ಮದ್ದಾನೆಗಳ

ಕಾಲಿನುಗುರಿನಿಂದ ತೋಡಿದ)
ಅನೇಕ ಮತ್ತ ಮಾತಂಗ
ಪದನಖ ಖರ್ವಿತ ಓರ್ವೀ
ತಳಮುಂ (ಮದ್ದಾನೆಗಳ
ಕಾಲಿನುಗುರಿನಿಂದ ತೋಡಿದ
ಭೂಭಾಗವನ್ನುಳ್ಳದೂ)
ಪ್ರಚಂಡಮಾರ್ತಂಡ ಮರೀಚಿ
ತೀವ್ರಜ್ವಳನಾಸಾರ (ಬಹಳ
ಕಾಂತಿಯಿಂದ ಕೂಡಿದ
ಸೂರ್ಯನ ತೀವ್ರವಾದ
ಕಿರಣಗಳಂತೆಯೂ

ತೀವ್ರಾಗ್ನಿಯಂತೆಯೂ
ಹೊಳೆಯುವ) ಕರಾಳ
ಕರವಾಳ
ಭಾಮಂಡಳಪರೀತೋದ್ಯತದ
(ಭಯಂಕರವಾದ ಕತ್ತಿಗಳ
ಕಾಂತಿಯ ಪರಿವೇಷದಿಂದ
ಸುತ್ತುವರಿಯಲ್ಪಟ್ಟ) ಓರ್ದಂಡ
ಚಂಡಪ್ರಚಂಡ ಸುಭಟಾರೂಢ
ತುರಂಗಮ ವೇಗ (ಎತ್ತರವಾದ
ಬಾಹುಗಳಿಂದ ಪ್ರಚಂಡವಾದ
ಸುಭಟರು ಹತ್ತಿರುವ

ಕುದುರೆಗಳ ಸೈನ್ಯದ
ವೇಗದಿಂದ) ಬಲಪತಿತ
ಖರಖುರಟಂಕ ಪರಿಸ್ಖಲನ
(ಬೀಳಿಸಲ್ಪಟ್ಟ ಹೇಸರಗತ್ತೆಗಳ
ತೀಕ್ಷ್ಣವಾದ ಗೊರಸಿನ
ಲಾಳಗಳ ಜಾರುವಿಕೆಯಿಂದ
ಉಂಟಾದ ಶಬ್ದವುಳ್ಳದ್ದೂ)
ಕಳಿತ ವಿಷಮ ಸಮರ ಭೇರೀ
ನಿಸ್ವನಮುಂ (ವಿಷಮ ಸಮರ
ಭೇರಿಯ ಶದ್ದಿಂದ ಕೂಡಿದ್ದೂ)
ಆಕರ್ಣಕೃಷ್ಣ ವಿಕ್ರಮಾರ್ಜುನ

ಕಾರ್ಮುಕ ವಿಮುಕ್ತ
ನಿಶಿತಸಾಯಕಸಂಕುಳ
(ಕಿವಿಯವರೆಗೂ ಸೆಳೆಯಲ್ಪಟ್ಟ
ಅರ್ಜುನನ ಬಾಣದಿಂದ
ಬಿಡಲ್ಪಟ್ಟ ಹರಿತವಾದ
ಬಾಣಗಳ ಶಲ್ಯದಿಂದ
(ಚೂರು)), ಶಲ್ಯನಿಪತಿತ
ಅನೇಕ ಕಳಕಳಾಕಳಿತಮುಂ
(ಬೀಳಿಸಲ್ಪಟ್ಟ ಅನೇಕ
ಕಳಕಳಶಬಲ್ದಗಳಿಂದ
ಕೂಡಿದುದೂ/ ತುಂಬಿದುದೂ)

ಪ್ರಕುಪಿ (ತ) ಸೂತಹೂಂಕಾರ
ಕಾತರಿತ ತರಳತರ
ತುರಂಗದ್ರುತ ವೇಗಾಕೃಷ್ಣ
(ಕೋಪಗೊಂಡ ಸಾರಥಿಗಳ
ಗರ್ಜನೆಗಳಿಂದ
ಸಂಭ್ರಮಗೊಂಡ
ಚಂಚಲವಾದ ಕುದುರೆಯ
ಓಟದ ವೇಗದಿಂದ
ಸೆಳೆಯಲ್ಪಟ್ಟ) ಧನಂಜಯ
ರಥಚಟುಳ ಚಕ್ರನೇಮಿಧಾರಾ
ಪರಿವೃತ ಸಂಘಟ್ಟನ

ಸಮುಚ್ಚಳಿತ ಪಾಂಸು
(ಅರ್ಜುನನ ಬಲಿಷ್ಠವಾದ
ಚಕ್ರಗಳ ಸುತ್ತಲಿರುವ ಕಬ್ಬಿಣದ
ಪಟ್ಟಿಗಳು ಹೊರಳಿದ
ಹೊಡೆತದಿಂದ ಮೇಲಕ್ಕೆದ್ದ
ಧೂಳುಗಳ) ಪಟಳಾಂಧಕಾರ
ದುರ್ಲಕ್ಷಾಂತರಿಕ್ಷ ಕ್ಷಿತಿ ದಿಗಂತರ
ಆಳಾಂತರಮುಂ (ಪದರದಿಂದ
ಕಾಣಲಾಗದ ಭೂಮ್ಯಾಕಾಶ
ದಿಗ್ಭಾಗಗಳ
ಒಳಭಾಗವನ್ನುಳ್ಳುದೂ)

ಅನವರತ ನಿಹತ ನರ ಕರಿ
ತುರಗನಿಕುರುಂಬ
ಕೀಲಾಲಕಲ್ಲೋಲ
ಪ್ರವರ್ತನಾನೇಕ ನದ
ನದೀಪ್ರವಾಹ ಬಾಹುಳ್ಯ
ದುಸ್ತರಾವತರಣ
ಮಾರ್ಗಮುಂ (ಯಾವಾಗಲೂ
ಹೊಡೆಯಲ್ಪಟ್ಟ ಮನುಷ್ಯ,
ಆನೆ, ಕುದುರೆಗಳ ಸಮೂಹದ
ರಕ್ತಗಳ ಅಲೆಗಳ
ಹೊರಳುವಿಕೆಯಿಂದ ಆದ

ಅನೇಕ
ನದನದೀಪ್ರವಾಹಗಳನ್ನು
ದಾರಿಗಳನ್ನುಳ್ಳುದೂ,) ನಿಶಿತ
ಅಸಿಪತ್ರ ಪತಿತಪ್ರಚಂಡ
ಸುಭಟ ಮಸ್ತಕೋಚ್ಚಳಿತ
ಚಟಾಚ್ಛಾಟನ ದುರ್ನಿರೀಕ್ಷ್ಯ
ನರ್ತಿತ ಅನೇಕ
ಕಬಂಧಬಂಧುರಮುಂ (
ಹರಿತವಾದ ಕತ್ತಿಯಿಂದ
ಬೀಳಿಸಲ್ಪಟ್ಟ ಭಯಂಕರವಾದ
ಸುಭಟರ ತಲೆಯಿಂದ

ಮೇಲಕ್ಕೆದ್ದ ಜುಟ್ಟುಗಳ
ಚಲನೆಯಿಂದ
ಮರೆಯಾಗಿರುವ ಅನೇಕ
ಅಟ್ಟೆಗಳ ನೃತ್ಯದಿಂದ
ಮನೋಹರವಾಗಿರುವುದೂ
ಆಗಿರುವ) ಅಪ್ಪ ವಿಷಮ
ಪ್ರದೇಶಂಗಳೊಳ್ ತೊಲಗಿ
ತೊಲಗಿ (ಹಳ್ಳಕೊಳ್ಳಗಳ
ಪ್ರದೇಶದಲ್ಲಿ ನಡೆದು) ಪೋಗೆ
ಸಂಜಯಂ ದುರ್ಯೋಧನನ
ಮೊಗಮಂ ನೋಡಿ

(ಹೋಗುತ್ತಿರುವ ದುರ್ಯೋಧನನ ಮುಖವನ್ನು ಸಂಜಯನು ನೋಡಿ)-

ವಚನ:ಅರ್ಥ:ಸ್ವಾಮಿಯವರ ತೋಳಿನ ಬಲವು ಜಯಿಸುವುದಕ್ಕೆ ಆಗದುದೂ ಸಹಾಯವನ್ನಪೇಕ್ಷಿಸದುದೂ ಆಗಿದೆ. ಆದರೂ ದೇಶಕಾಲವಿಭಾಗವನ್ನು ಆಪತ್ತಿಗೆ ಪ್ರತೀಕಾರವನ್ನು ತಿಳಿಯದಿರುವ

ವಿವೇಕಶೂನ್ಯರಾದವರ ಹಾಗೆ
ಸ್ವಾಮಿಯವರು
ಮಾಡಕೂಡದು. ಏನು
ಮಾಡಬೇಕಾದರೂ
ಕುರುಪಿತಾಮಹನಾದ
ಭೀಷ್ಮರಲ್ಲಿ ಆಲೋಚಿಸಿ
ಮಾಡತಕ್ಕದ್ದು ಎಂದು
ದುರ್ಯೋಧನನನ್ನು
ಮನಸಾರೆ ಒಪ್ಪುವಂತೆ ಹೇಳಿ,
ಕೋಪವು ಕಡಿಮೆಯಾಗುವ
ಹಾಗೆ ಮಾತನಾಡಿ

ಸಮಾಧಾನಪಡಿಸಿದನು.
ಕಾಲವಂಚನೆಮಾಡಲು
ಯೋಚಿಸಿ ಯುದ್ಧರಂಗದಲ್ಲಿ
ಒಳಭಾಗದಲ್ಲಿಯೇ
ದುರ್ಯೋಧನನನ್ನು
ಮುಂದಿಟ್ಟು ಕೊಂಡು
ಜೊತೆಗೂಡಿ, ಅವನೊಡನೆ
ಯುದ್ಧದಲ್ಲಿ ಸಕಲ
ಅನೇಕರಾಜರ ತಲೆ ಮತ್ತು
ಕಪಾಲಗಳ
ತಲೆಯೋಡುಗಳಿಂದ

ಕಿಕ್ಕಿರಿದಿದ್ದು ಪರಸ್ಪರ ಯುದ್ಧದ
ರಭಸದಲ್ಲಿ ಹೊರಹಾಕಿದ,
ಸಕಲ ಸಾಮಂತರಾಜರ
ತಲೆಗಳ ಸಾಲುಗಳಿಂದ ಜಾರಿದ
ಕಿರೀಟಗಳ ತುದಿಯ
ತಗುಲುವಿಕೆಯಿಂದ ಮೇಲೆದ್ದ
ರತ್ನಸಲಾಕಿಗಳ
ಸಮೂಹವನ್ನೂ
ಯುದ್ಧಭಾರವನ್ನು ವಹಿಸಿರುವ
ಭೀಮಸೇನನ ದೊಡ್ಡದಾದ
ಗದೆಯ ಪೆಟ್ಟನ್ನು

ಸಹಿಸಲಾಗದ ಮದ್ದಾನೆಗಳ
ಕಾಲಿನುಗುರಿನಿಂದ ತೋಡಿದ
ಭೂಭಾಗವನ್ನುಳ್ಳದೂ ಬಹಳ
ಕಾಂತಿಯಿಂದ ಕೂಡಿದ
ಸೂರ್ಯನ ತೀವ್ರವಾದ
ಕಿರಣಗಳಂತೆಯೂ
ತೀವ್ರಾಗ್ನಿಯಂತೆಯೂ
ಹೊಳೆಯುವ
ಭಯಂಕರವಾದ ಕತ್ತಿಗಳ
ಕಾಂತಿಯ ಪರಿವೇಷದಿಂದ
ಸುತ್ತುವರಿಯಲ್ಪಟ್ಟು

ಎತ್ತರವಾದ ಬಾಹುಗಳಿಂದ
ಪ್ರಚಂಡವಾದ ಸುಭಟರು
ಹತ್ತಿರುವ ಕುದುರೆಗಳ ಸೈನ್ಯದ
ವೇಗದಿಂದ ಬೀಳಿಸಲ್ಪಟ್ಟ
ಹೇಸರಗತ್ತೆಗಳ ತೀಕ್ಷ್ಣವಾದ
ಗೊರಸಿನ ಲಾಳಗಳ
ಜಾರುವಿಕೆಯಿಂದ ಉಂಟಾದ
ಶಬ್ದವುಳ್ಳದ್ದೂ ಕಿವಿಯವರೆಗೂ
ಸೆಳೆಯಲ್ಪಟ್ಟ ಅರ್ಜುನನ
ಬಾಣದಿಂದ ಬಿಡಲ್ಪಟ್ಟ
ಹರಿತವಾದ ಬಾಣಗಳ

ಶಲ್ಯದಿಂದ (ಚೂರು)
ಬೀಳಿಸಲ್ಪಟ್ಟ ಅನೇಕ
ಕಳಕಳಶಬಲ್ದಗಳಿಂದ
(ಕೂಡಿದುದೂ) ತುಂಬಿದುದೂ
ಕೋಪಗೊಂಡ ಸಾರಥಿಗಳ
ಗರ್ಜನೆಗಳಿಂದ
ಸಂಭ್ರಮಗೊಂಡ
ಚಂಚಲವಾದ ಕುದುರೆಯ
ಓಟದ ವೇಗದಿಂದ
ಸೆಳೆಯಲ್ಪಟ್ಟ ಅರ್ಜುನನ
ಬಲಿಷ್ಠವಾದ ಚಕ್ರಗಳ

ಸುತ್ತಲಿರುವ ಕಬ್ಬಿಣದ
ಪಟ್ಟಿಗಳು ಹೊರಳಿದ
ಹೊಡೆತದಿಂದ ಮೇಲಕ್ಕೆದ್ದ
ಧೂಳುಗಳ ಪದರದಿಂದ
ಕಾಣಲಾಗದ ಭೂಮ್ಯಾಕಾಶ
ದಿಗ್ಭಾಗಗಳ
ಒಳಭಾಗವನ್ನುಳ್ಳುದೂ
ಯಾವಾಗಲೂ
ಹೊಡೆಯಲ್ಪಟ್ಟ ಮನುಷ್ಯ,
ಆನೆ, ಕುದುರೆಗಳ ಸಮೂಹದ
ರಕ್ತಗಳ ಅಲೆಗಳ

ಹೊರಳುವಿಕೆಯಿಂದ ಆದ
ಅನೇಕ
ನದನದೀಪ್ರವಾಹಗಳನ್ನು
ದಾಟಲಸಾಧ್ಯವಾದ
ದಾರಿಗಳನ್ನುಳ್ಳುದೂ,
ಹರಿತವಾದ ಕತ್ತಿಯಿಂದ
ಬೀಳಿಸಲ್ಪಟ್ಟ ಭಯಂಕರವಾದ
ಸುಭಟರ ತಲೆಯಿಂದ
ಮೇಲಕ್ಕೆದ್ದ ಜುಟ್ಟುಗಳ
ಚಲನೆಯಿಂದ
ಮರೆಯಾಗಿರುವ ಅನೇಕ

ಅಟ್ಟೆಗಳ ನೃತ್ಯದಿಂದ
ಮನೋಹರವಾಗಿರುವುದೂ
ಆಗಿರುವ ಹಳ್ಳಕೊಳ್ಳಗಳ
ಪ್ರದೇಶದಲ್ಲಿ ನಡೆದು
ಹೋಗುತ್ತಿರುವ
ದುರ್ಯೋಧನನ ಮುಖವನ್ನು
ಸಂಜಯನು ನೋಡಿ-

ಚಂ|| ಎಱಗುವನೇಕ ವಂಶ
ನರಪಾಲಕರತ್ನಕಿರೀಟಕೋಟಿ
ಯೊಳ್

ಮಿಱುಗುವ ಪದ್ಮರಾಗದ
ಬಿಸಿಲ್ಗಗಿವೀ ನಿಜ
ಪಾದಪದ್ಮಮೀ|
ಯಿಱಿದು ಸಿಡಿಲ್ದ ಬಾಳ
ಮೊನೆಯಂಬಿನ
ತಿಂತಿಣಿಯೊಳ್ ತಗುಳ್ದು ಕಿ
ಕ್ಕಿಱಿಗಿಱಿದಿರ್ದ
ಕೊಳ್ಗುಳದೊಳಂ ನಡೆವೀ
ನಡೆಗೆಂತು ನೋಂತೆಯೋ||
೫೨

ಪದ್ಯ-೫೨:ಪದವಿಭಾಗ-ಅರ್ಥ:ಎಱಗುವ ಅನೇಕ ವಂಶ ನರಪಾಲಕ ರತ್ನಕಿರೀಟಕೋಟಿಯೊಳ್(ನಮಸ್ಕಾರಮಾಡುವ ಅನೇಕ ಮನೆತನಗಳ ರಾಜರ ಕಿರೀಟಗಳ ತುದಿಯಲ್ಲಿ) ಮಿಱುಗುವ ಪದ್ಮರಾಗದ ಬಿಸಿಲ್ಗೆ ಅಗಿವ ಈ ನಿಜ ಪಾದಪದ್ಮಂ (ಹೊಳೆಯುವ ಪದ್ಮರಾಗದ ಕಾಂತಿಗೆ

ಅಂಜುತ್ತಿದ್ದ ಈ ನಿನ್ನ ಪಾದಕಮಲಗಳು) ಈ ಯಿಱಿದು ಸಿಡಿಲ್ದ ಬಾಳ ಮೊನೆಯಂಬಿನ (ಈಗ ತಾನೇ ಕತ್ತರಿಸಲ್ಪಟ್ಟು ಸಿಡಿದು ಬಿದ್ದಿರುವ ಮೊನಚಾದ ಬಾಣಗಳ) ತಿಂತಿಣಿಯೊಳ್ ತಗುಳ್ದು (ಸಮೂಹದಲ್ಲಿ ಸೇರಿಕೊಂಡು) ಕಿಕ್ಕಿಱಿಗಿಱಿದಿರ್ದ (ಒತ್ತಾಗಿ ಸೇರಿಕೊಂಡಿರುವ)

ಕೊಳ್ಗುಳದೊಳಂ ನಡೆವ (ಯುದ್ಧರಂಗದಲ್ಲಿಯೂ ನಡೆಯುವ) ಈ ನಡೆಗೆಂತು ನೋಂತೆಯೋ (ಈ ನಡೆಗೆ ಹೇಗೆ/ಯಾಕಾಗಿ ವ್ರತಮಾಡಿದ್ದೆಯೋ?-)

ಪದ್ಯ-೫೨:ಅರ್ಥ:

ನಮಸ್ಕಾರಮಾಡುವ ಅನೇಕ ಮನೆತನಗಳ ರಾಜರ ಕಿರೀಟಗಳ ತುದಿಯಲ್ಲಿ ಹೊಳೆಯುವ ಪದ್ಮರಾಗದ

ಕಾಂತಿಗೆ ಅಂಜುತ್ತಿದ್ದ ಈ ನಿನ್ನ
ಪಾದಕಮಲಗಳು ಈಗ ತಾನೇ
ಕತ್ತರಿಸಲ್ಪಟ್ಟು ಸಿಡಿದು
ಬಿದ್ದಿರುವ ಮೊನಚಾದ
ಬಾಣಗಳ ಸಮೂಹದಲ್ಲಿ
ಸೇರಿಕೊಂಡು ಒತ್ತಾಗಿ
ಸೇರಿಕೊಂಡಿರುವ
ಯುದ್ಧರಂಗದಲ್ಲಿಯೂ
ನಡೆಯುವ ಈ ನಡೆಗೆ ಹೇಗೆ/
ಯಾಕಾಗಿ
ವ್ರತಮಾಡಿದ್ದೆಯೋ?-

ವ|| ಎನುತುಂ ಕಿಱಿದಂತರಮಂ ಬಂದು-

ವಚನ:ಪದವಿಭಾಗ-

ಅರ್ಥ:ಎನುತುಂ ಕಿಱಿದು ಅಂತರಮಂ ಬಂದು-

ವಚನ:ಅರ್ಥ:ಎನ್ನುತ್ತ ಸ್ವಲ್ಪ ದೂರ ಬಂದು-

ಚಂ|| ಇವು ಪವನಾತ್ಮಜಂ ಗದೆಯಿನೆಲ್ವಡಗಾಗಿರೆ ಮೋದೆ ಮೊಟ್ಟಿ ಬಿ

ಱ್ದುವು ಮದವಾರಣಂಗಳಿವು
ನೋಡ
ಗುಣಾರ್ಣವನಂಬಿನಿಂದುರು|
ಳ್ಳುವು ಮನುಜೇಂದ್ರ ರುಂದ್ರ
ಮಕುಟಾಳಿಗಳೋಳಿಗಳಿಂತಿವ
ಲ್ತೆ ಗಾಂ
ಡಿವಿಯ ವರೂಥಘಾತದೊಳೆ
ನುರ್ಗಿದ
ತುಂಗತುರಂಗಕೋಟಿಗಳ್||
೫೩ ||

ಪದ್ಯ-೫೩:ಪದವಿಭಾಗ-ಅರ್ಥ:ಇವು ಪವನಾತ್ಮಜಂ ಗದೆಯಿಂ ಎಲ್ವಡಗಾಗಿರೆ ಮೋದೆ (ಇವು ಭೀಮನು ಗದೆಯಿಂದ ಮೂಳೆ ಮಾಂಸಗಳಾಗುವಂತೆ ಹೊಡೆಯಲು) ಮೋಟ್ಗಿ ಬಿಟ್ಟಿವು ಮದ ವಾರಣಂಗಳಿವು ನೋಡ (ಕುಸಿದು ಬಿದ್ದ ಮದ್ದಾನೆಗಳು, ಇವು ನೋಡಪ್ಪ).

ಗುಣಾರ್ಣವನಂಬಿನಿಂದ
ಉರುಳ್ಳುವು ಮನುಜೇಂದ್ರ
ರುಂದ್ರ ಮಕುಟ ಆಳಿಗಳ
ಓಳಿಗಳು ಇಂತು ಇವು ಅಲ್ತೆ
(ಅರ್ಜುನನ ಬಾಣದಿಂದ
ಉರುಳಿಬಿದ್ದ ರಾಜರ
ರಾಶಿಯಾದ ಕಿರೀಟಗಳ
ಸಮೂಹಗಳು, ಇವೇ
ಅಲ್ಲವೇ!) ಗಾಂಡಿವಿಯ
ವರೂಥ ಘಾತದೊಳೆ ನುರ್ಗಿದ
ತುಂಗ ತುರಂಗಕೋಟಿಗಳ್

(ಇವು ಅರ್ಜುನನ ತೇರಿನ ಪೆಟ್ಟಿನಿಂದ ಜಜ್ಜಿಹೋದ ಎತ್ತರವಾದ ಕೋಟಿ ಕುದುರೆಗಳು)

ಪದ್ಯ-೫೩:ಅರ್ಥ:ಇವು ಭೀಮನು ಗದೆಯಿಂದ ಮೂಳೆ ಮಾಂಸಗಳಾಗುವಂತೆ ಹೊಡೆಯಲು ಕುಸಿದು ಬಿದ್ದ ಮದ್ದಾನೆಗಳ, ಇವು ನೋಡಪ್ಪ. ಅರ್ಜುನನ ಬಾಣದಿಂದ ಉರುಳಿಬಿದ್ದ ರಾಜರ

ರಾಶಿಯಾದ ಕಿರೀಟಗಳ ಸಮೂಹಗಳು. ಇವು ಅರ್ಜುನನ ತೇರಿನ ಪೆಟ್ಟಿನಿಂದ ಜಜ್ಜಿಹೋದ ಎತ್ತರವಾದ ಕೋಟಿ ಕುದುರೆಗಳು.

ವ|| ಎಂದು ನೆಣದ ಪಳ್ಳಂಗಳಂ ಪಾಯ್ದುಂ ನೆತ್ತರ ತೊರೆಗಳಂ ಬಂಜಿಸಿಯುಮಡಗಿನಿಡುವುಗ ಳಂ ದಾಂಟಿಯುಂ ಪೆಣದ ತಿಂತಿಣಿಯಂ ನೂಂಕಿಯುಂ ರಥದ ಘಟ್ಟಣೆಗಳನೇಱಿ

ಪಾಯ್ದುಂ ತೇರ ಪಲಗೆಯಂ ಮೆಟ್ಟಿಯುಂ ಪೋಗಿವೋಗಿ ಭೂತ ಪ್ರೇತ ಪಿಶಾಚ ನಿಶಾಚರನಿಚಯನಿಚಿತಭೂಭಾಗಮನೆಯ್ದೆ ವಂದಾಗಳ್-

ವಚನ:ಪದವಿಭಾಗ-

ಅರ್ಥ:ಎಂದು ನೆಣದ ಪಳ್ಳಂಗಳಂ ಪಾಯ್ದುಂ (ಎಂಬುದಾಗಿ ಹೇಳುತ್ತಾ, ಕೊಬ್ಬುಗಳ ಹಳ್ಳವನ್ನು ಹಾಯ್ದೂ) ನೆತ್ತರ ತೊರೆಗಳಂ

ಬಂಜಿಸಿಯುಂ
(ರಕ್ತಪ್ರವಾಹಗಳನ್ನು
ತಪ್ಪಿಸಿಯೂ) ಅಡಗಿನ
ಇಡುವುಗಳಂ ದಾಂಟಿಯುಂ
(ಮಾಂಸದ ರಾಶಿಗಳನ್ನು
ದಾಟಿಯೂ) ಪೆಣದ
ತಿಂತಿಣಿಯಂ ನೂಂಕಿಯುಂ
(ಹೆಣಗಳ ಸಮೂಹವನ್ನು
ತಳ್ಳಿಯೂ), ರಥದ
ಘಟ್ಟಣೆಗಳನು ಏಱಿ
ಪಾಯ್ದುಂ (ರಥದ

ಸಂಘಟ್ಟಣೆಗಳಿಂದಾದ
ದಿಣ್ಣೆಹಳ್ಳಗಳನ್ನು ಹತ್ತಿ
ಇಳಿದೂ) ತೇರ ಪಲಗೆಯಂ
ಮೆಟ್ಟಿಯುಂ (ತೇರಿನ
ಹಲಗೆಗಳನ್ನು ತುಳಿದೂ)
ಪೋಗಿ ವೋಗಿ ಭೂತ ಪ್ರೇತ
ಪಿಶಾಚ (ನಡೆದು ಹೋಗಿ
ಭೂತಪ್ರೇತಪಿಶಾಚ) ನಿಶಾಚರ
ನಿಚಯನಿಚಿತ ಭೂಭಾಗಮನ
ಎಯ್ದೆ ವಂದಾಗಳ್
(ರಾಕ್ಷಸಸಮೂಹದಿಂದ

ತುಂಬಿದ ಪ್ರದೇಶವನ್ನು ಸೇರಿದರು.)-

ವಚನ:ಅರ್ಥ:ಎಂಬುದಾಗಿ ಹೇಳುತ್ತಾ, ಕೊಬ್ಬುಗಳ ಹಳ್ಳವನ್ನು ಹಾಯ್ದೂ ರಕ್ತಪ್ರವಾಹಗಳನ್ನು ತಪ್ಪಿಸಿಯೂ ಮಾಂಸದ ರಾಶಿಗಳನ್ನು ದಾಟಿಯೂ ಹೆಣಗಳ ಸಮೂಹವನ್ನು ತಳ್ಳಿಯೂ, ರಥದ ಸಂಘಟ್ಟಣೆಗಳಿಂದಾದ

ದಿಣ್ಣೆಹಳ್ಳಗಳನ್ನು ಹತ್ತಿ ಇಳಿದೂ, ತೇರಿನ ಹಲಗೆಗಳನ್ನು ತುಳಿದೂ, ನಡೆದು ಹೋಗಿ ಭೂತ, ಪ್ರೇತ, ಪಿಶಾಚ, ರಾಕ್ಷಸಸಮೂಹದಿಂದ ತುಂಬಿದ ಪ್ರದೇಶವನ್ನು ಸೇರಿದರು.

ಉ|| ಬೇಡ ವಿರೋಧಮೆಂತುಮರಿಕೇಸರಿ ಯೊಳ್ ಸಮಸಂದು ಸಂಧಿಯಂ

ಮಾಡೆನೆ ಮಾಡಲೊಲ್ಲದೆ ಸುಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ|
ಮಾಡಿದ ಜಾತಿಬೆಳ್ ನಿನಗದೇವಿರಿದೀಯೆಡೆಯೊಂದು ಮುಂದೆ ಬಂ ದೇಡಿಸುವಂತಿರಾಡಿದುದದೊಂದು ಮರುಳ್ ಫಣಿರಾಜಕೇತುವಂ|| ೫೪ ||

ಪದ್ಯ-೫೪:ಪದವಿಭಾಗ-

ಅರ್ಥ:ಬೇಡ ವಿರೋಧಂ

ಎಂತುಂ ಅರಿಕೇಸರಿಯೊಳ್
ಸಮಸಂದು
(ಅರಿಕೇಸರಿಯಲ್ಲಿ
ಯಾವುದೇರೀತಿ ವಿರೋಧವು
ಬೇಡ,) ಸಂಧಿಯಂ ಮಾಡು
ಎನೆ ಮಾಡಲು ಒಲ್ಲದೆ
(ಸಂಧಿಯನ್ನು ಮಾಡಿಕೋ
ಎಂದರೂ ಒಪ್ಪದೆ) ಸುಹೃತ್
ಬಲಮೆಲ್ಲಮಂ ಇಕ್ಕಿ
(ಮಿತ್ರರಸೈನ್ಯವನ್ನೆಲ್ಲಾ
ನಾಶಮಾಡಿ) ಯುದ್ಧಮಂ

ಮಾಡಿದ ಜಾತಿಬೆಳ್
(ಯುದ್ಧವನ್ನು ಮಾಡಿದ
ಜಾತಿದಡ್ಡನಾದ) ನಿನಗೆ ಅದು
ಏವಿರಿದು ಈ ಎಡೆಜೊಂದು
ಮುಂದೆ ಬಂದು
ಏಡಿಸುವಂತಿರೆ (ನಿನಗೆ ಈ
ಕಷ್ಟಗಳು ಏನು ದೊಡ್ಡದು
ಎಂದು ಮುಂದೆ ಬಂದು
ದುರ್ಯೋಧನನನ್ನು
ಅಪಹಾಸ್ಯಮಾಡುವಂತೆ)
ಆಡಿದುದದು ಒಂದು ಮರುಳ್

ಫಣಿರಾಜಕೇತುವಂ (ಒಂದು ಪಿಶಾಚಿ ಮಾತನಾಡಿತು.)

ಪದ್ಯ-೫೪:ಅರ್ಥ:

ಅರಿಕೇಸರಿಯಲ್ಲಿ ಯಾವುದೇರೀತಿ ವಿರೋಧವು ಬೇಡ, ಸಂಧಿಯನ್ನು ಮಾಡಿಕೋ ಎಂದರೂ ಒಪ್ಪದೆ ಮಿತ್ರರಸೈನ್ಯವನ್ನೆಲ್ಲಾ ನಾಶಮಾಡಿ ಯುದ್ಧವನ್ನು ಮಾಡಿದ ಜಾತಿದಡ್ಡನಾದ ನಿನಗೆ ಈ ಕಷ್ಟಗಳು ಏನು ದೊಡ್ಡದು

ಎಂದು ಮುಂದೆ ಬಂದು ದುರ್ಯೋಧನನನ್ನು ಅಪಹಾಸ್ಯ ಮಾಡುವಂತೆ ಒಂದು ಪಿಶಾಚಿ ಮಾತನಾಡಿತು.

ಚಂ|| ಮರುಳೆನೆ ಲೋಕದೊಳ್ ನೆಗಱ್ದ ಕೊಳ್ಗುಳದೊಳ್ ಮರುಳಾಟವಾಡುವಾಂ ಮರುಳೆನೊ ವಿಕ್ರಮಾರ್ಜುನನೊಳೊಲ್ಲದೆ

ಸಂಧಿಯನುರ್ಕಿ ಕೆಟ್ಟ ನೀಂ|

ಮರುಳಯೊ ಪೇೞ

ಪೇೞದೊಡೆ

ಪೋಗದಿರೀಶ್ವರನಾಣೆಯೆಂದು

ಪು

ಲ್ಮರುಳ್ನಿಸಾನುಮಂ ತೆಗೆದು

ಕಾಡಿದುದಲ್ಲಿ

ಫಣೀಂದ್ರಕೇತುವಂ|| ೫೫ ||

ಪದ್ಯ-೫೫:ಪದವಿಭಾಗ-

ಅರ್ಥ:(ಯುದ್ಧಭೂಮಿಯ

ಮರುಳುಗಳು- ಪಿಶಾಚಿಗಳು,

ಮರುಳ- ದಡ್ಡ) ಮರುಳೆನೆ
ಲೋಕದೊಳ್ ನೆಗೞ್ದ
ಕೊಳ್ಗುಳದೊಳ್
ಮರುಳಾಟವಾಡುವ ಆಂ
ಮರುಳೆನೊ (ಲೋಕದಲ್ಲಿ
ಮರುಳುಗಳು ಎನ್ನಿಸಿಕೊಂಡು
ಪ್ರಸಿದ್ಧರಾಗಿ ಯುದ್ಧರಂಗದಲ್ಲಿ
ಮರುಳುಗಳ ಆಟವನ್ನಾಡುವ
ನಾವುಗಳು ಮರುಳುಗಳೋ
(ಬುದ್ಧಿಗೇಡಿಗಳೋ))
ವಿಕ್ರಮಾರ್ಜುನನೊಳ್ ಒಲ್ಲದೆ

ಸಂಧಿಯನು ಉರ್ಕಿ ಕೆಟ್ಟ ನೀಂ
ಮರುಳಯೊ ಪೇೞ
(ವಿಕ್ರಮಾರ್ಜುನನಲ್ಲಿ
ಸಂಯನ್ನೊಲ್ಲದೆ ಉಬ್ಬಿ ಕೆಟ್ಟ
ನೀನುದಡ್ಡನೋ ಹೇಳು.)
ಪೇೞದೊಡೆ ಪೋಗದಿರ್
ಈಶ್ವರನಾಣೆಯೆಂದು
ಪುಲ್ಮರುಳ್ (ಹೇಳಿದಿದ್ದರೆ
ಹೋಗಬೇಡ; ಈಶ್ವರನಾಣೆ
ಎಂದು ಹುಲ್ಲಿನಂತೆ ಬಹು
ಲಘುವಾದ ಒಂದು ಮರುಳು)

ಇನಿಸಾನುಮಂ ತೆಗೆದು ಕಾಡಿದುದು ಅಲ್ಲಿ (ತೆಗೆ- ನಿಲ್ಲಿಸು, ಸ್ತಂಭನೇ) ಫಣೀಂದ್ರಕೇತುವಂ (ಒಂದಿಷ್ಟು ತಡೆದು ದುರ್ಯೋಧನನ್ನು ಹಿಂಸೆ ಮಾಡಿತು.)

ಪದ್ಯ-೫೫:ಅರ್ಥ:
ಲೋಕದಲ್ಲಿ ಮರುಳುಗಳು ಎನ್ನಿಸಿಕೊಂಡು ಪ್ರಸಿದ್ಧರಾಗಿ ಯುದ್ಧರಂಗದಲ್ಲಿ ಮರುಳುಗಳ ಆಟವನ್ನಾಡುವ ನಾವುಗಳು

ಮರುಳುಗಳೋ
(ಬುದ್ಧಿಗೇಡಿಗಳೋ)
ವಿಕ್ರಮಾರ್ಜುನನಲ್ಲಿ
ಸಂಯಮನ್ನೊಲ್ಲದೆ ಉಬ್ಬಿ ಕೆಟ್ಟ
ನೀನುದಡ್ಡನೋ ಹೇಳು.
ಹೇಳಿದಿದ್ದರೆ ಹೋಗಬೇಡ;
ಈಶ್ವರನಾಣೆ ಎಂದು
ಹುಲ್ಲಿನಂತೆ ಬಹು ಲಘುವಾದ
ಒಂದು ಮರುಳು ಒಂದಿಷ್ಟು
ತಡೆದು ದುರ್ಯೋಧನನ್ನು
ಹಿಂಸೆ ಮಾಡಿತು.

ವ|| ಆಗಳಾ ಮರುಳ ಕೆಯ್ತಕ್ಕೆ
ದುರ್ಯೋಧನಂ ಮುಗುಳ್ನಗೆ
ನಕ್ಕೆನ್ನಂ ವಿಧಾತ್ರಂ
ಮರುಳ್ಮಾಡಿದ ಕಾರಣದಿಂದೀ
ಮರುಳ ಕಣ್ಗಂ ಮರುಳಾಗಿ
ತೋಱಿದೆನೆಂದಲ್ಲಿಂ ತಳರ್ದು
ಕಿಱಿದಂತರಮಂ
ನಡೆದೊಂದೆಡೆಯೊಳನೇಕ ಕರಿ
ತುರಗ ನರ ಕಳೇವರ
ಸಂಕೀರ್ಣಮುಮುಭಯ
ಪಕ್ಷಸ್ಥಿತೋಭಯಕುಲಶುದ್ಧನೃ

ಪತಿಮಣಿಮಕುಟಮರೀಚಿಮೇ ಚಕಿತಮುಮಪ್ಪ ಸಂಗ್ರಾಮಭೂಮಿಯ ನಡುವೆ ಧೃಷ್ಟದ್ಯುಮ್ನಕಚಗ್ರಹವಿಲುಳಿತ ಮೌಳಿಯುಂ ತದೀಯ ಕೌಕ್ಷೇಯಕಧಾರಾವಿದಾರಿತ ಶರೀರನುಮಾಗಿ ಬಿೞ್ದಿರ್ದ ಶರಾಚಾರ್ಯರಂ ಕಂಡು-

ವಚನ:ಪದವಿಭಾಗ-

ಅರ್ಥ:ಆಗಳಾ ಮರುಳ ಕೆಯ್ತಕ್ಕೆ ದುರ್ಯೋಧನಂ

ಮುಗುಳ್ನಗೆ ನಕ್ಕು (ಆಗ ಆ
ಪಿಶಾಚಿಯ ಕೆಲಸಕ್ಕೆ
ದುರ್ಯೋಧನನು ಮುಗುಳ್ನಗೆ
ನಕ್ಕು) ಎನ್ನಂ ವಿಧಾತ್ರಂ
ಮರುಳ್ಮಾಡಿದ ಕಾರಣದಿಂದ
ಈ ಮರುಳ ಕಣ್ಗಂ
ಮರುಳಾಗಿ ತೋಱಿದೆನು
ಎಂದು ಅಲ್ಲಿಂ ತಳರ್ದು (ಆಗ
ಆ ಪಿಶಾಚಿಯ ಕೆಲಸಕ್ಕೆ
ದುರ್ಯೋಧನನು ಮುಗುಳ್ನಗೆ
ನಕ್ಕು ನನ್ನನ್ನು ಬ್ರಹ್ಮನು

ಮರುಳುಮಾಡಿದ
ಕಾರಣದಿಂದ ಈ ಪಿಶಾಚದ
ಕಣ್ಣಿಗೆ ನಾನು ಹುಚ್ಚನಾಗಿ
ತೋರಿದೆನು,) ಕಿಱಿದು
ಅಂತರಮಂ ನಡೆದು
ಒಂದೆಡೆಯೊಳು ಅನೇಕ ಕರಿ
ತುರಗ ನರ ಕಳೇವರ
ಸಂಕೀರ್ಣಮುಂ (ಅಲ್ಲಿಂದ
ಹೊರಟು ಸ್ವಲ್ಪ ದೂರ ನಡೆದು
ಒಂದು ಕಡೆಯಲ್ಲಿ ಅನೇಕ
ಆನೆ, ಕುದುರೆ ಮನುಷ್ಯರ

ದೇಹಗಳಿಂದ ತುಂಬಿದ ಪ್ರದೇಶವನ್ನು) ಉಭಯ ಪಕ್ಷ ಸ್ಥಿತ ಉಭಯ ಕುಲಶುದ್ಧ ನೃಪತಿಮಣಿಮಕುಟ ಮರೀಚಿಮೇಚಕಿತಮುಂ ಅಪ್ಪ (ಎರಡು ವಂಶದ ಪಕ್ಷಗಳಲ್ಲಿಯೂ (ತಂದೆತಾಯಿಗಳ ಎರಡು ಕುಲದಲ್ಲಿಯೂ) ಶುದ್ಧರಾದವರ ರತ್ನಕಿರೀಟಗಳ ಕಾಂತಿಯಿಂದ

ಕೂಡಿಕೊಂಡಿರುವ)
ಸಂಗ್ರಾಮಭೂಮಿಯ ನಡುವೆ
ಧೃಷ್ಟದ್ಯುಮ್ನ
ಕಚಗ್ರಹವಿಲುಳಿತ
ಮೌಳಿಯುಂ (ಆ
ಯುದ್ಧಭೂಮಿಯ
ಮಧ್ಯಭಾಗದಲ್ಲಿ
ಧೃಷ್ಟದ್ಯುಮ್ನನು ಜುಟ್ಟನ್ನು
ಹಿಡಿದುದರಿಂದ
ತಿರುಗಿಕೊಂಡಿರುವ
ತಲೆಯುಳ್ಳವನೂ) ತದೀಯ-

ಅವನ ಕೌಕ್ಷೇಯಕ-ಕತ್ತಿಯ
ಧಾರಾವಿದಾರಿತ- ಅಲುಗಿನಿಂದ
ಸೀಳಿದ (ಅವನ ಕತ್ತಿಯ
ಅಲಗುಗಳಿಂದ ಸೀಳಲ್ಪಟ್ಟ)
ಶರೀರನುಮಾಗಿ ಬಿೞ್ದಿರ್ದ
ಶರಾಚಾರ್ಯರಂ ಕಂಡು
(ಶರೀರವುಳ್ಳವನೂ ಆಗಿ
ಬಿದ್ದಿದ್ದ
ದ್ರೋಣಾಚಾರ್ಯನನ್ನು
ನೋಡಿದನು.)-

ವಚನ:ಅರ್ಥ:ಆಗ ಆ ಪಿಶಾಚಿಯ ಕೆಲಸಕ್ಕೆ ದುರ್ಯೋಧನನು ಮುಗುಳ್ನಗೆ ನಕ್ಕು ನನ್ನನ್ನು ಬ್ರಹ್ಮನು ಮರುಳುಮಾಡಿದ ಕಾರಣದಿಂದ ಈ ಪಿಶಾಚದ ಕಣ್ಣಿಗೆ ನಾನು ಹುಚ್ಚನಾಗಿ ತೋರಿದೆನು ಎಂದು ಅಲ್ಲಿಂದ ಹೊರಟು ಸ್ವಲ್ಪ ದೂರ ನಡೆದು ಒಂದು ಕಡೆಯಲ್ಲಿ ಅನೇಕ ಆನೆ, ಕುದುರೆ ಮನುಷ್ಯರ

ದೇಹಗಳಿಂದ ತುಂಬಿದ
ಪ್ರದೇಶವನ್ನು, ಎರಡು ವಂಶದ
ಪಕ್ಷಗಳಲ್ಲಿಯೂ
(ತಂದೆತಾಯಿಗಳ ಎರಡು
ಕುಲದಲ್ಲಿಯೂ)
ಶುದ್ಧರಾದವರ ರತ್ನಕಿರೀಟಗಳ
ಕಾಂತಿಯಿಂದ
ಕೂಡಿಕೊಂಡಿರುವ ಆ
ಯುದ್ಧಭೂಮಿಯ
ಮಧ್ಯಭಾಗದಲ್ಲಿ
ಧೃಷ್ಟದ್ಯುಮ್ನನು ಜುಟ್ಟನ್ನು

ಹಿಡಿದುದರಿಂದ

ತಿರುಗಿಕೊಂಡಿರುವ

ತಲೆಯುಳ್ಳವನೂ ಅವನ

ಕತ್ತಿಯ ಅಲಗುಗಳಿಂದ

ಸೀಳಲ್ಪಟ್ಟ ಶರೀರವುಳ್ಳವನೂ

ಆಗಿ ಬಿದ್ದಿದ್ದ

ದ್ರೋಣಾಚಾರ್ಯನನ್ನು

ನೋಡಿದನು.

ಚಂ|| ನೆಗಳ್ದುದು ಬಿಲ್ಲ

ಬಿನ್ನಣಮಿಳಾವಳಯಕ್ಕೆ

ಸಮಸ್ತ ಧಾತ್ರಿ ಕೆ

ಯ್ಮುಗಿವುದು ನಿಮ್ಮದೊಂದೆ ಪೆಸರ್ಗೇಳ್ವೊಡೆ ನಿಮ್ಮ ಸರಲ್ಗೆ ದೇವರುಂ|

ಸುಗಿವರಯೋನಿಸಂಭವರಿರೆ ನ್ನಯ ದೂಸಱಿನೆನ್ನ ಕರ್ಮದಿಂ

ಪಗೆವರಿನಕ್ಕಟಾ ನಿಮಗವಮೀಯಿರವಾದುದೆ ಕುಂಭಸಂಭವಾ|| ೫೬ ||

ಪದ್ಯ-೫೬:ಪದವಿಭಾಗ-

ಅರ್ಥ: ನೆಗಬ್ದಿದು ಬಿಲ್ಲ

ಬಿನ್ನಣಂ ಇಳಾವಳಯಕ್ಕೆ
(ನಿಮ್ಮ ಚಾಪವಿದ್ಯಾಕೌಶಲವು
ಭೂಮಂಡಲದಲ್ಲೆಲ್ಲ
ನೆಗೞ್ದುದು -ಪ್ರಸಿದ್ಧವಾದುದು.)
ಸಮಸ್ತ ಧಾತ್ರಿ ಕೆಯ್ಮುಗಿವುದು
ನಿಮ್ಮದು ಒಂದೆ ಪೆಸರ್
ಕೇಳ್ವೊಡೆ (ನಿಮ್ಮಒಂದು
ಹೆಸರನ್ನು ಕೇಳಿದರೆ ಸಮಸ್ತ
ಲೋಕವೂ
ಕೈಮುಗಿಯುವುದು.) ನಿಮ್ಮ
ಸರಲ್ಗೆ ದೇವರುಂ (ನಿಮ್ಮ

ಬಾಣಗಳಿಗೆ ದೇವತೆಗಳೂ)
ಸುಗಿವರ್
ಅಯೋನಿಸಂಭವರಿರೆ
ಎನ್ನಯ ದೂಸಱಿಂ ಎನ್ನ
ಕರ್ಮದಿಂ (ನೀವು
ಅಯೋನಿಜರಾಗಿದ್ದೀರಿ; ನನ್ನ
ಕಾರಣದಿಂದ ನನ್ನ
ದುಷ್ಕರ್ಮದಿಂದ) ಪಗೆವರಿಂ
ಅಕ್ಕಟಾ ನಿಮಗಂ ಈ ಯಿ/
ಇರವಾದುದೆ ಕುಂಭಸಂಭವಾ
(ಅಯ್ಯೋ

ದ್ರೋಣಾಚಾರ್ಯರೇ ಶತ್ರುಗಳಿಂದ ನಿಮಗೂ ಈ ದುಸ್ಥಿತಿಯುಂಟಾಯಿತೇ?)

ಪದ್ಯ-೬:ಅರ್ಥ: ನಿಮ್ಮ ಚಾಪವಿದ್ಯಾಕೌಶಲವು ಭೂಮಂಡಲದಲ್ಲೆಲ್ಲ ಪ್ರಸಿದ್ಧವಾದುದು. ನಿಮ್ಮಒಂದು ಹೆಸರನ್ನು ಕೇಳಿದರೆ ಸಮಸ್ತ ಲೋಕವೂ ಕೈಮುಗಿಯುವುದು. ನಿಮ್ಮ ಬಾಣಗಳಿಗೆ ದೇವತೆಗಳೂ

ಭಯಪಡುವರು. ನೀವು ಅಯೋನಿಜರಾಗಿದ್ದೀರಿ; ನನ್ನ ಕಾರಣದಿಂದ ನನ್ನ ದುಷ್ಕರ್ಮದಿಂದ ಅಯ್ಯೋ ದ್ರೋಣಾಚಾರ್ಯರೇ ಶತ್ರುಗಳಿಂದ ನಿಮಗೂ ಈ ದುಸ್ಥಿತಿಯುಂಟಾಯಿತೇ?

ವ|| ಎಂದು ಗುರುವಿನ ಪಾದಕಮಲಂಗಳಂ ತಲೆಯ ಮೇಲಿಟ್ಟು ಪೊಡೆವಟ್ಟಂತೆ ನಡೆತಂದು ವೃಕೋದರನಿಂ

ನಿಶ್ಶೇಷ ಪೀತರುಧಿರನಪ್ಪ
ದುಶ್ಶ್ಯಾಸನನಂ ಕಂಡಾತನಂ
ಮುತ್ತಿ ಸುತ್ತಿಱಿದ
ಮುದುವರ್ದುಗಳುಮನಗಲೆ
ಮೆಟ್ಟಿ ಪೋೞ್ದು ಭೀಮಸೇನಂ
ಮುನ್ನಂ ಕುಡಿದುದಱಿಂ
ನೆತ್ತರಂ ಪಡೆಯದಾಕಾಶಕ್ಕೆ
ಬಾಯಂ ತೆರೆದೊಳ್ವ
ಬಳ್ಳುಗಳುಮಂ ನರವುಮಂ
ಬರಿಯುಮಂ ಪತ್ತಿ ತೆಗೆದು
ಪೆಡಸಾರ್ವ ನರಿಗಳುಮಂ

ತಾನೆ ಸೋದು

ಸೋದರನಟಿಲೊಳ್ ಕಣ್ಣ

ನೀರ್ಗಳಂ ಸುರಿದು-

ವಚನ:ಪದವಿಭಾಗ-

ಅರ್ಥ:ಎಂದು ಗುರುವಿನ ಪಾದಕಮಲಂಗಳಂ ತಲೆಯ ಮೇಲಿಟ್ಟು ಪೊಡೆವಟ್ಟಂತೆ ನಡೆತಂದು (ಎಂದು ಗುರುವಿನ ಪಾದಕಮಲಗಳನ್ನು ತಲೆಯ ಮೇಲಿಟ್ಟು ನಮಸ್ಕಾರಮಾಡಿ ಹಾಗೆಯೇ ಮುಂದೆ ನಡೆದು

ಬಂದು) ವೃಕೋದರನಿಂ
ನಿಶ್ಶೇಷ ಪೀತರುಧಿರನಪ್ಪ
ದುಶ್ಶ್ಯಾಸನನಂ ಕಂಡು
(ಭೀಮಸೇನನಿಂದ ಸ್ವಲ್ಪವೂ
ಉಳಿಯದಂತೆ ಕುಡಿಯಲ್ಪಟ್ಟ
ರಕ್ತವನ್ನುಳ್ಳ ದುಶ್ಶ್ಯಾಸನನನ್ನು
ನೋಡಿ) ಆತನಂ ಮುತ್ತಿ
ಸುತ್ತಿಱಿದ
ಮುದುವರ್ದುಗಳುಮನು
(ಆತನನನ್ನು ಮುತ್ತಿ
ಸುತ್ತುವರಿದಿದ್ದ

ಮುದಿಹದ್ದುಗಳನ್ನು ಬಿಟ್ಟು)
ಅಗಲೆ ಮೆಟ್ಟಿ ಪೋೞ್ದು
(ಅವನನ್ನು ಬಿಟ್ಟು
ದೂರಹೋಗುವಂತೆ
ಕಾಲಿನಿಂದ ಶಬ್ದಮಾಡಿ ಸೀಳಿ)
ಭೀಮಸೇನಂ ಮುನ್ನಂ
ಕುಡಿದುದಱಿಂ ನೆತ್ತರಂ
ಪಡೆಯದೆ ಆಕಾಶಕ್ಕೆ, ಬಾಯಂ
ತೆರೆದ ಊಳ್ವ (ಭೀಮನು
ಮೊದಲೇ
ಕುಡಿದುಬಿಟ್ಟಿದ್ದುದರಿಂದ

ರಕ್ತವನ್ನು ಪಡೆಯದೆ ಆಕಾಶದ ಕಡೆ ಬಾಯಿಬಿಟ್ಟು ಕೂಗುತ್ತಿರುವ) ಬಳ್ಳುಗಳುಮಂ ನರವುಮಂ ಬಱಿಯುಮಂ ಪತ್ತಿ ತೆಗೆದು (ಗುಳ್ಳೆನರಿಗಳನ್ನೂ ನರಗಳನ್ನೂ ಪಕ್ಕೆಗಳನ್ನೂ ಕಿತ್ತೆಳೆದು) ಪೆಡಸಾರ್ವ ನರಿಗಳುಮಂ ತಾನೆ ಸೋದು (ಹಿಂದಕ್ಕೆ ಹೋಗುವ ನರಿಗಳನ್ನೂ ತಾನೇ ಅಟ್ಟಿ) ಸೋದರನ ಅಱಿಲೊಳ್ ಕಣ್ಣ

ನೀರ್ಗಳಂ ಸುರಿದು (ತಮ್ಮನ ಸಾವಿನ- ದುಃಖದಿಂದ ಕಣ್ಣೀರನ್ನು ಸುರಿಸಿದನು.)- **ವಚನ:ಅರ್ಥ**:ಎಂದು ಗುರುವಿನ ಪಾದಕಮಲಗಳನ್ನು ತಲೆಯ ಮೇಲಿಟ್ಟು ನಮಸ್ಕಾರಮಾಡಿ ಹಾಗೆಯೇ ಮುಂದೆ ನಡೆದು ಬಂದು, ಭೀಮಸೇನನಿಂದ ಸ್ವಲ್ಪವೂ ಉಳಿಯದಂತೆ ಕುಡಿಯಲ್ಪಟ್ಟ ರಕ್ತವನ್ನುಳ್ಳ ದುಶ್ಯಾಸನನನ್ನು

ನೋಡಿ ಆತನನನ್ನು ಮುತ್ತಿ
ಸುತ್ತುವರಿದಿದ್ದ
ಮುದಿಹದ್ದುಗಳನ್ನು ಅವನನ್ನು
ಬಿಟ್ಟು ದೂರಹೋಗುವಂತೆ
ಕಾಲಿನಿಂದ ಶಬ್ದಮಾಡಿ ಸೀಳಿ
ಭೀಮನು ಮೊದಲೇ
ಕುಡಿದುಬಿಟ್ಟಿದ್ದುದರಿಂದ
ರಕ್ತವನ್ನು ಪಡೆಯದೆ ಆಕಾಶದ
ಕಡೆ ಬಾಯಿಬಿಟ್ಟು
ಕೂಗುತ್ತಿರುವ
ಗುಳ್ಳೆನರಿಗಳನ್ನೂ ನರಗಳನ್ನೂ

ಪಕ್ಕೆಗಳನ್ನೂ ಕಿತ್ತೆಳೆದು,

ಹಿಂದಕ್ಕೆ ಹೋಗುವ

ನರಿಗಳನ್ನೂ ತಾನೇ ಅಟ್ಟಿ,

ತಮ್ಮನ ಸಾವಿನದುಃಖದಿಂದ

ಕಣ್ಣೀರನ್ನು ಸುರಿಸಿದನು.

ಕಂ|| ನಿನ್ನಂ ಕೊಂದನ

ಬಸಿಱಿಂ

ನಿನ್ನಂ ತೆಗೆಯದೆಯುಮವನ

ಕರುಳಂ ಪರ್ದಿಂ|

ಮುನ್ನುಂಗಿಸಿ ನೋಡದೆಯುಂ

ಮುನ್ನಮೆ ಯುವರಾಜ ನಿನ್ನನಾಂ ನೋಡಿದೆನೇ|| ೫೭ ||

ಪದ್ಯ-೫೭:ಪದವಿಭಾಗ-ಅರ್ಥ:ನಿನ್ನಂ ಕೊಂದನ ಬಸಿಱಿಂ ನಿನ್ನಂ ತೆಗೆಯದೆಯುಂ (ನಿನ್ನನ್ನು ಕೊಂದವನ ಹೊಟ್ಟೆಯಿಂದ ನಿನ್ನನ್ನು ತೆಗೆಯದೆಯೂ) ಅವನ ಕರುಳಂ ಪರ್ದಿಂ ಮುಂ ನುಂಗಿಸಿ ನೋಡದೆಯುಂ (ಅವನ ಕರುಳನ್ನು ಹದ್ದಿಗೆ

ಮೊದಲು ನುಂಗಿಸಿ

ನೋಡದೆಯೂ) ಮುನ್ನಮೆ

ಯುವರಾಜ ನಿನ್ನನಾಂ

ನೋಡಿದೆನೇ (ಅದಕ್ಕೆ

ಮುಂಚೆಯೇ

ಯುವರಾಜನಾದ

ದುಶ್ಯಾಸನನೇ ನಿನ್ನನ್ನು ನಾನು

ನೋಡಿದೆನೇ?

ನೋಡಿದೆನಲ್ಲಾ!)

ಪದ್ಯ-೫೭:ಅರ್ಥ:೫೭.

ನಿನ್ನನ್ನು ಕೊಂದವನ

ಹೊಟ್ಟೆಯಿಂದ ನಿನ್ನನ್ನು ತೆಗೆಯದೆಯೂ ಅವನ ಕರುಳನ್ನು ಹದ್ದಿಗೆ ಮೊದಲು ನುಂಗಿಸಿ ನೋಡದೆಯೂ, ಅದಕ್ಕೆ ಮುಂಚೆಯೇ ಯುವರಾಜನಾದ ದುಶ್ಶ್ಯಾಸನನೇ ನಿನ್ನನ್ನು ನಾನು ನೋಡಿದೆನೇ? ನೋಡಿದೆನಲ್ಲಾ! ಎಂದು ದುರ್ಯೋಧನನು ದುಃಖಿಸಿದನು.

ವ|| ಎಂಬುದುಂ
ಸಂಜಯನಿಂತಪ್ಪ
ವಿಪ್ರಳಾಪಂಗಳ್
ಶೌರ್ಯಶಾಲಿಗಳ್ಗನುಚಿತ
ಮತ್ತಮೆಟ್ಟಿರ್ಪುದೆಂದು
ತಳರ್ದು ಬಂದಮೋಘಾಸ್ತ್ರ
ಧನಂಜಯ
ಕರಪರಿಚ್ಯುತವಿಕರ್ಣ
ವಿಶೀರ್ಣನಾಗಿರ್ದ
ಕರ್ಣಸೂನುವಂ
ವೃಷಸೇನನಂ ಕಂಡು ಕರ್ಣನಂ

ನೆನೆದೆರ್ದೆದೆರೆದು ದುರ್ಯೋಧನನ ಕೆಳೆಯನಪ್ಪ ನಿಮ್ಮಮ್ಮಂ ಕರ್ಣನೆಲ್ಲಿದನೆಂದು ತೆಕ್ಕನೆ ತೀವಿದ ಕಣ್ಣ ನೀರೊಳ್ ದೆಸೆಗಾಣದೆ ನಿಂದಿರ್ದ ಸುಯೋಧನನಂ ಸಂಜಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಸಂಜಯಂ ಇಂತಪ್ಪ ವಿಪ್ರಳಾಪಂಗಳ್

ಶೌರ್ಯಶಾಲಿಗಳ್ಗೆ ಅನುಚಿತಂ (ಸಂಜಯನು ಹೇಳಿದ- ಇಂತಹ ವಿಶೇಷ ಪ್ರಲಾಪವು ಶೌರ್ಯಶಾಲಿಗಳಿಗೆ ಯೋಗ್ಯವಲ್ಲ.) ಅತ್ತಮೆ ಎಟ್ಟಿರ್ಪುದು ಎಂದು ತಳರ್ದು (ಆ ಕಡೆ ಬರಬೇಕು ಎಂದು ಹೇಳಲು ಅಲ್ಲಿಂದ ಹೊರಟು ಬಂದು,) ಅಮೋಘಾಸ್ತ್ರ ಧನಂಜಯ ಕರಪರಿಚ್ಯುತ (ಅಮೋಘಾಸ್ತ್ರಧನಂಜಯನಾ

ದ ಅರ್ಜುನನ ಕಯ್ಯಿಂದ
ಬಿಡಲ್ಪಟ್ಟ) ವಿಕರ್ಣ
ವಿಶೀರ್ಣನಾಗಿರ್ದ
ಕರ್ಣಸೂನುವಂ
ವೃಷಸೇನನಂ ಕಂಡು
(ಬಾಣದಿಂದ ಸೀಳಲ್ಪಟ್ಟಿದ
ಕರ್ಣನ ಮಗನಾದ
ವೃಷಸೇನನನ್ನು ನೋಡಿ)
ಕರ್ಣನಂ ನೆನೆದು
ಎರ್ದೆದೆರೆದು (ಎದೆ
ತೆರೆದು,ಎದೆಬಿರಿದು)

ದುರ್ಯೋಧನನ ಕೆಳೆಯನಪ್ಪ
ನಿಮ್ಮಮ್ಮಂ
ಕರ್ಣನೆಲ್ಲಿದನೆಂದು(‘ದುರ್
ಯೋಧನನ ಸ್ನೇಹಿತನಾದ
ನಿಮ್ಮ ಅಮ್ಮ/ಅಪ್ಪ- ತಂದೆ
ಕರ್ಣನೆಲ್ಲಿದ್ದಾನೆ ಎಂದು)
ತೆಕ್ಕನೆ ತೀವಿದ ಕಣ್ಣ ನೀರೊಳ್
ದೆಸೆಗಾಣದೆ ನಿಂದಿರ್ದ (
ಥಟ್ಟಕ್ಕನೆ ತುಂಬಿದ
ಕಣ್ಣೀರಿನಿಂದ ದಿಕ್ಕು ಕಾಣದೆ
ನಿಂತಿದ್ದ) ಸುಯೋಧನನಂ

ಸಂಜಯನು ಇಂತೆಂದಂ (ದುರ್ಯೋಧನನನ್ನು ಕುರಿತು ಸಂಜಯನು ಹೀಗೆಂದನು)-

ವಚನ:ಅರ್ಥ: ಸಂಜಯನು ಹೇಳಿದ- ಇಂತಹ ವಿಶೇಷ ಪ್ರಲಾಪವು ಶೌರ್ಯಶಾಲಿಗಳಿಗೆ ಯೋಗ್ಯವಲ್ಲ. ಆ ಕಡೆ ಬರಬೇಕು ಎಂದು ಹೇಳಲು ಅಲ್ಲಿಂದ ಹೊರಟುಬಂದು ಅಮೋಘಾಸ್ತ್ರಧನಂಜಯನಾ

ದ ಅರ್ಜುನನ ಕಯ್ಯಿಂದ
ಬಿಡಲ್ಪಟ್ಟ ಬಾಣದಿಂದ
ಸೀಳಲ್ಪಟ್ಟಿದ ಕರ್ಣನ
ಮಗನಾದ ವೃಷಸೇನನನ್ನು
ನೋಡಿ ಕರ್ಣನನ್ನು
ಜ್ಞಾಪಿಸಿಕೊಂಡು ಎದೆಬಿರಿದು
‘ದುರ್ಯೋಧನನ
ಸ್ನೇಹಿತನಾದ ನಿಮ್ಮ ತಂದೆ
ಕರ್ಣನೆಲ್ಲಿದ್ದಾನೆ ಎಂದು
ಥಟ್ಟಕ್ಕನೆ ತುಂಬಿದ
ಕಣ್ಣೀರಿನಿಂದ ದಿಕ್ಕು ಕಾಣದೆ

ನಿಂತಿದ್ದ ದುರ್ಯೋಧನನನ್ನು ಕುರಿತು ಸಂಜಯನು ಹೀಗೆಂದನು-

ಚಂ|| ನರಶರಘಾತದಿಂ ಪಱಿದು ಪತ್ತಿಸಿದಂತೆವೊಲಿರ್ದ ಮೆಯ್ ಭಯಂ
ಕರತರಮಾಗೆ ಮುಯ್ವುವರೆಗಂ ತೆಗೆದಂಬಿನ ಮುಷ್ಟಿ ಬಿನ್ನಣಂ|
ಬೆರಸಿರೆ ಪೋದ ಪಂದಲೆಯೊಳಾದ ಮುಗುಳ್ನಗೆ

ಭೀತರಾದರೆ

ಲ್ಲರುಮನಳುರ್ಕೆಯಿಂ

ನಗುವವೋಲ್

ರವಿನಂದನನಿತ್ತಲಿರ್ದಪಂ||

೫೮ ||

ಪದ್ಯ-೫೮:ಪದವಿಭಾಗ-ಅರ್ಥ:ನರ ಶರಘಾತದಿಂ ಪಱಿದು/ಹರಿದು ಪತ್ತಿಸಿದಂತೆವೋಲ್ ಇರ್ದ ಮೆಯ್ (ಅರ್ಜುನನ ಬಾಣದ ಪೆಟ್ಟಿನಿಂದ ಹರಿದು

ಹಂಚಿದಂತಿರುವ ಶರೀರ,)
ಭಯಂಕರತರಮಾಗೆ
(ಅತ್ಯಂತ
ಭಯಂಕರವಾಗರಲು)
ಮುಯ್ವುವರೆಗಂ ತೆಗೆದ
ಅಂಬಿನ ಮುಷ್ಟಿ (ಹೆಗಲ
ತುದಿಯವರೆಗೂ ಸೆಳೆದ ಬಾಣ
ಹಿಡಿದ ಮುಷ್ಟಿ,) ಬಿನ್ನಣಂ
ಬೆರಸಿರೆ (ಬಿನ್ನಾಣದಿಂದ/
ಶೋಭೆಯಿಂದ ಕೂಡಿರಲು)
ಪೋದ ಪಂದಲೆಯೊಳಾದ

ಮುಗುಳ್ನಗೆ (ಕತ್ತರಿಸಿಹೋದ
ಹಸಿಯ ತಲೆಯಲ್ಲಿ
ಕಾಣಿಸುತ್ತಿರುವ ಮುಗುಳ್ನಗೆ,)
ಭೀತರಾದರೆಲ್ಲರುಮಂ
ಅಳುರ್ಕೆಯಿಂ ನಗುವವೊಲ್
(ಇವುಗಳಿಂದ ಕೂಡಿ ಹೆದರಿ
ಕೊಂಡಿರುವವರನ್ನೆಲ್ಲ
ಅತಿಶಯವಾದ ರೀತಿಯಲ್ಲಿ
ನಗುತ್ತಿರುವ ಹಾಗೆ)
ರವಿನಂದನನು ಇತ್ತಲು
ಇರ್ದಪಂ

(ಸೂರ್ಯಪುತ್ರನಾದ ಕರ್ಣನು ಈ ಕಡೆ ಇದ್ದಾನೆ.)|

ಪದ್ಯ-೫೮:ಅರ್ಥ:

ಅರ್ಜುನನ ಬಾಣದ ಪೆಟ್ಟಿನಿಂದ ಹರಿದು ಹಂಚಿದಂತಿರುವ ಶರೀರ, ಅತ್ಯಂತ ಭಯಂಕರವಾಗರಲು ಹೆಗಲ ತುದಿಯವರೆಗೂ ಸೆಳೆದ ಬಾಣ ಹಿಡಿದ ಮುಷ್ಟಿ, ಕೌಶಲದಿಂದ ಕೂಡಿರಲು ಕತ್ತರಿಸಿಹೋದ ಹಸಿಯ

ತಲೆಯಲ್ಲಿ ಕಾಣಿಸುತ್ತಿರುವ ಮುಗುಳ್ನಗೆ, ಇವುಗಳಿಂದ ಕೂಡಿ ಹೆದರಿ ಕೊಂಡಿರುವವರನ್ನೆಲ್ಲ ಅತಿಶಯವಾದ ರೀತಿಯಲ್ಲಿ ನಗುತ್ತಿರುವ ಹಾಗೆ ಸೂರ್ಯಪುತ್ರನಾದ ಕರ್ಣನು ಈ ಕಡೆ ಇದ್ದಾನೆ, ಎಂದ ಸಂಜಯ.

ಕರ್ಣನ ಕಳೇಬರವನ್ನು ನೋಡಿ ಮೂರ್ಛಿತನಾದ ದುರ್ಯೋಧನ

ವ|| ಎಂಬುದುಮಾಗಳ್ ತೆಪ್ಪತ್ತುಮೆಲ್ಲಿದನೆತ್ತಣಾನೆಂದು ಕರ್ಣನ ಕಳೇವರಮಂ ನೋಡಿ ನೋಡಲಾಱದೆ ಕಣ್ಗಳಂ ಮುಟ್ಟಿ ಮೂರ್ಛೆವೋಗಲ್ ಬಗೆದನಂ ಸಂಜಯ ತೞ್ಕೈಸಿಕೊಂಡಾಗಳ್

ಚೇತರಿಸಿ ಕೂರ್ಮೆ ಕೆಯ್ಮ್ಕ್ಕು ಬರೆ ಸೈರಿಸಲಾಱದೆ-

ವಚನ:ಪದವಿಭಾಗ-ಅರ್ಥ:ಎಂಬುದುಂ ಆಗಳ್ ತೆಪ್ಪತ್ತುಮ್ (ಎನ್ನಲು ಆಗಲೆ ಚೇತರಿಸಿಕೊಂಡು) ಎಲ್ಲಿದನು ಎತ್ತಣನೆಂದು (ಎಲ್ಲಿದ್ದಾನೆ ಯಾವ ಕಡೆ ಎಂದು)(ಕರ್ಣನ ಕಳೇವರಮಂ ನೋಡಿ ನೋಡಲಾಱದೆ (ರ್ಣನ ಶರೀರವನ್ನು ನೋಡಿ

ನೋಡಲಾರದೆ) ಕಣ್ಗಳಂ
ಮುಟ್ಟಿ ಮೂರ್ಛೆವೋಗಲ್
ಬಗೆದನಂ (ಕಣ್ಣುಗಳನ್ನು
ಮುಚ್ಚಿಕೊಂಡು
ಮೂರ್ಛಿತನಾದವನನ್ನು)
ಸಂಜಯ
ತೆಟ್ಕೈಸಿಕೊಂಡಾಗಳ್
(ಸಂಜಯನು ತಬ್ಬಿಕೊಳ್ಳಲು)
ಚೇತರಿಸಿ ಕೂರ್ಮೆ ಕೆಯ್ಮಿಕ್ಕು
ಬರೆ ಸೈರಿಸಲಾಱದೆ
(ಪ್ರೀತಿಯು (ಸ್ನೇಹವು)

ಕೈಮೀರಿ ಬರುತ್ತಿರಲು ಅದನ್ನು ಸೈರಿಸಲಾರದೆ)-

ವಚನ:ಅರ್ಥ:ಎನ್ನಲು ಆಗಲೆ ಚೇತರಿಸಿಕೊಂಡು ಎಲ್ಲಿದ್ದಾನೆ ಯಾವ ಕಡೆ ಎಂದು ಕರ್ಣನ ಶರೀರವನ್ನು ನೋಡಿ ನೋಡಲಾರದೆ ಕಣ್ಣುಗಳನ್ನು ಮುಚ್ಚಿಕೊಂಡು ಮೂರ್ಛಿತನಾದವನನ್ನು ಸಂಜಯನು ತಬ್ಬಿಕೊಳ್ಳಲು ಚೇತರಿಸಿಕೊಂಡು ಪ್ರೀತಿಯು

(ಸ್ನೇಹವು) ಕೈಮೀರಿ
ಬರುತ್ತಿರಲು ಅದನ್ನು
ಸೈರಿಸಲಾರದೆ-

ಚಂ|| ಬೆಸನೆಡೆಗಳ್ಗೆ
ತೊಟ್ಟುಬೆಸನಂಗಳವುಂಕಿದೊ
ಡಾಗದೆಂದು ಬ
ಗ್ಗಿಸುವೆಡೆಗಾಳ್ದನಿಂತು
ನೆಗೞ್ಚೆಂಬೆಡೆಯೊಳ್ ಗುರು
ಪೆರ್ಚಿದೊಂದು ಬೇ|
ವಸದೆಡೆಗಾಶ್ರಯಂ
ಮನಮನೊಪ್ಪಿಸುವೀಯೆಡೆ

ಯೊಳ್ ಮನಂ ವಿಚಾ ರಿಸುವೊಡೆ ಕರ್ಣನಲ್ಲದೆನಗಾವೆಡೆಗಂ ಪೆಱನೊರ್ವನಾವನೋ|| ೫೯

ಪದ್ಯ-೫೯:ಪದವಿಭಾಗ-ಅರ್ಥ:ಬೆಸನೆಡೆಗಳ್ಗೆ (ಬೆಸನ- ಕಾರ್ಯದ, ಎಡೆಗಳ್ಗೆ- ಸಂದರ್ಭದಲ್ಲಿ) ತೊೞ್ತು ಬೆಸನಂಗಳು ಅವುಂಕಿದೊಡೆ (ಸೇವಕನಂತೆಯೂ ಸಪ್ತ ವ್ಯಸನಗಳು ಮೇಲೆ ಮೇಲೆ

ಒತ್ತಿ ಬರುತ್ತಿರಲು) ಆಗದೆಂದು
ಬಗ್ಗಿಸುವೆಡೆಗೆ ಆಳ್ದನು ಇಂತು
(ಇದಾಗುವುದಿಲ್ಲ ಎಂದು
ಯಜಮಾನನಂತೆಯೂ
(ಸ್ವಾಮಿ-ಒಡೆಯ) ಹೀಗೆ)
ನೆಗೞ್ೆಂಬ ಎಡೆಯೊಳ್ ಗುರು
ಪೆರ್ಚಿದೊಂದು ಬೇವಸದೆಡೆಗೆ
ಆಶ್ರಯಂ (ಮಾಡು ಎನ್ನುವ
ಸಮಯದಲ್ಲಿ
ಗುರುವಿನಂತೆಯೂ;)
ಮನಮನೊಪ್ಪಿಸುವ ಈ

ಯೆಡೆಯೊಳ್ ಮನಂ
ವಿಚಾರಿಸುವೊಡೆ
(ಮನಸ್ಸನ್ನೊಪ್ಪಿಸುವ
ಸಂದರ್ಭದಲ್ಲಿ ಮನಸ್ಸೇ
ಆಗಿಯೂ ಇದ್ದಂಥ)
ಕರ್ಣನಲ್ಲದೆ ಎನಗಾವ
ಡಡೆಗಂ ಪೆಱನೊರ್ವನು
ಆವನೋ (ಕರ್ಣನನ್ನು ಬಿಟ್ಟು
ನನಗೆ ಎಲ್ಲ ಸಮಯಕ್ಕೂ
ಸಹಾಯಕನಾಗುವ
ಮತ್ತೊಬ್ಬನಾವನಿದ್ದಾನೆ?)

ಪದ್ಯ-೫೯:ಅರ್ಥ: ೫೯.
ಕಾರ್ಯಮಾಡುವ
ಸಂದರ್ಭದಲ್ಲಿ
ಸೇವಕನಂತೆಯೂ ಸಪ್ತ
ವ್ಯಸನಗಳು ಮೇಲೆ ಮೇಲೆ
ಒತ್ತಿ ಬರುತ್ತಿರಲು
ಇದಾಗುವುದಿಲ್ಲ ಎಂದು
ಬೆದರಿಸುವ ಸಮಯದಲ್ಲಿ
ಯಜಮಾನನಂತೆಯೂ
(ಸ್ವಾಮಿ-ಒಡೆಯ) ಹೀಗೆ
ಮಾಡು ಎನ್ನುವ ಸಮಯದಲ್ಲಿ

ಗುರುವಿನಂತೆಯೂ;
ಅಧಿಕವಾದ
ವ್ಯಥೆಯುಂಟಾದಾಗ
ಅವಲಂಬನದಂತೆಯೂ
ಮನಸ್ಸನ್ನೊಪ್ಪಿಸುವ
ಸಂದರ್ಭದಲ್ಲಿ ಮನಸ್ಸೇ
ಆಗಿಯೂ ಇದ್ದಂಥ ಕರ್ಣನನ್ನು
ಬಿಟ್ಟು ನನಗೆ ಎಲ್ಲ
ಸಮಯಕ್ಕೂ
ಸಹಾಯಕನಾಗುವ
ಮತ್ತೊಬ್ಬನಾವನಿದ್ದಾನೆ?

- **ಟಿಪ್ಪಣಿ:**:ಅನೇಕ ಅಧ್ಯಾಹಾರಗಳಿಂದ ಅನ್ವಯ ಸ್ವಲ್ಪ ಗೊಂದಲವಾಗಿದೆ.

ಮ|| ನೆಲನಂ ಕೊಟ್ಟನಿನಾತ್ಮಜಾತನೆನಗಾಂ ತರ್ಕ್ಕೂರ್ಮೆಯಿಂದಂ ಜಳಾಂ ಜಲಿಯಂ ಕೊಟ್ಟೆನುಮಿಲ್ಲ ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷ| ದ್ಬಲಮಂ ಸುಟ್ಟನುದಾತ್ತಪುಣ್ಯಾನವನಂ

ಚೈತಾಗ್ನಿಯಿಂ ಸುಟ್ಟೆನಿ ಲ್ಲೊಲವಿಂದಿಂತೆರ್ದೆಮುಟ್ಟಿ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ|| ೬೦

ಪದ್ಯ-೬೦:ಪದವಿಭಾಗ-ಅರ್ಥ:ನೆಲನಂ ಕೊಟ್ಟನು ಇನಾತ್ಮಜಾತನು ಎನಗೆ (ಕರ್ಣನು ನನಗೆ ಭೂಮಿಯನ್ನು (ಅನೇಕ ರಾಜ್ಯಗಳನ್ನು ಸಂಪಾದಿಸಿ ಕೊಟ್ಟನು.) ಆಂ ತಕ್ಕ

ಊರ್ಮೆಯಿಂದಂ
ಜಳಾಂಜಲಿಯಂ
ಕೊಟ್ಟೆನುಮಿಲ್ಲ (ನಾನು
ಅದಕ್ಕನುಗುಣವಾಗಿ
ಪ್ರೀತಿಯಿಂದ ಅವನಿಗೆ
ತರ್ಪಣವನ್ನು ಕೊಟ್ಟಿಲ್ಲ.)
ಸೂರ್ಯತನಯಂ
ತೇಜೋಗ್ನಿಯಿಂದಂ
ದ್ವಿಷದ್ಬಲಮಂ ಸುಟ್ಟನು
(ಸೂರ್ಯನ ಮಗನಾದ
ಕರ್ಣನು ತನ್ನ ತೇಜಸ್ಸೆಂಬ

ಅಗ್ನಿಯಿಂದ ವೈರಿಸೈನ್ಯವನ್ನು
ಸುಟ್ಟನು.)
ಉದಾತ್ತಪುಣ್ಯನವನಂ
ಚೈತಾಗ್ನಿಯಿಂ ಸುಟ್ಟನಿಲ್ಲ
(ಬಹಳ ಪುಣ್ಯಶಾಲಿಯಾದ
ಅವನನ್ನು ಚಿತೆಯ
ಬೆಂಕಿಯಿಂದ ಸುಟ್ಟಿಲ್ಲ;)
ಒಲವಿಂದ ಇಂತು
ಎರ್ದೆಮುಟ್ಟಿ ಕೂರ್ತನು
ಒಳನೇ ಕರ್ಣಂಗೆ
ದುರ್ಯೋಧನಂ (ಹೀಗೆ

ಕರ್ಣನಲ್ಲಿ ಎದೆಸೋಂಕಿ ಪ್ರೀತಿಯಿಂದ ಇರುವ ದುರ್ಯೋಧನನು ಒಳನೇ ಇರುವನೇ?)

ಪದ್ಯ-೬೦:ಅರ್ಥ: ಕರ್ಣನು ನನಗೆ ಭೂಮಿಯನ್ನು (ಅನೇಕ ರಾಜ್ಯಗಳನ್ನು ಸಂಪಾದಿಸಿ ಕೊಟ್ಟನು. ನಾನು ಅದಕ್ಕನುಗುಣವಾಗಿ ಪ್ರೀತಿಯಿಂದ ಅವನಿಗೆ ತರ್ಪಣವನ್ನು ಕೊಟ್ಟಿಲ್ಲ.

ಸೂರ್ಯನ ಮಗನಾದ ಕರ್ಣನು ತನ್ನ ತೇಜಸ್ಸೆಂಬ ಅಗ್ನಿಯಿಂದ ವೈರಿಸೈನ್ಯವನ್ನು ಸುಟ್ಟನು. ಬಹಳ ಪುಣ್ಯಶಾಲಿಯಾದ ಅವನನ್ನು ಚಿತೆಯ ಬೆಂಕಿಯಿಂದ ಸುಟ್ಟಿಲ್ಲ; ಹೀಗೆ ಕರ್ಣನಲ್ಲಿ ಎದೆಸೋಂಕಿ ಪ್ರೀತಿಯಿಂದ ಇರುವ ದುರ್ಯೋಧನನು ಒಳನೇ ಇರುವನೇ? (ತಾನು ಕರ್ಣನ ಪ್ರೀತಿಗೆ ಸರಿಯಾದ ರೀತಿ

ನೆಡೆದುಕೊಳ್ಳಲು ಆಗಲಿಲ್ಲ ಎಂಬ ಭಾವ)

ವ|| ಎಂದು ನೊಂದು ನುಡಿದ ದುರ್ಯೋಧನನಂ ಸಂಜಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನೊಂದು ನುಡಿದ ದುರ್ಯೋಧನನಂ ಸಂಜಯನು ಇಂತೆಂದಂ-

ವಚನ:ಅರ್ಥ: ಎಂದು ದುಖಿಸಿ ಆಡಿದ

ದುರ್ಯೋಧನನಿಗೆ

ಸಂಜಯನು ಹೀಗೆ ಹೇಳಿದನು

–

ಶಾ||

ಕೊಟ್ಟೈಕಿರ್ಚನುದಗ್ರಶೋಕಶಿ

ಖಿಯಿಂ ಕಣ್ಣೀರ್ಗಳಿಂದೆಯ್ದೆ ನೀ

ರ್ಗೊಟ್ಟೈ ಸೂರ್ಯಸುತಂಗೆ

ಲೌಕಿಕಮನೇನಿಂ ದಾಂಟಿದ್ಪೆ

ಪೋೞ್ದು ಸೀ|

ಳ್ದೊಟ್ಟಿಂ ವೈರಿಯನೊಡ್ಡಿ

ತತ್ಪಿಶಿತದಿಂದಾತಂಗೆ ನೀಂ

ಕೂರ್ಪೋಡೇ

ಗೆಟ್ಟತ್ತಿನ್ನಡೆ ಮಾಡು ತದ್ದಿ

ಜಗಣಕ್ಕ್ಯಾಹಾರಮಂ

ಭೂಪತೀ|| ೬೧

ಪದ್ಯ-೬೧:ಪದವಿಭಾಗ-

ಅರ್ಥ:ಕೊಟ್ಟ್ಟೈ ಕಿರ್ಚನು (ಚಿತಾಗ್ನಿಯನ್ನು ಕೊಟ್ಟಿದ್ದೀಯೆ) ಉದಗ್ರಶೋಕಶಿಖಿಯಿಂ (ತೀವ್ರವಾದ ಶೋಕಾಗ್ನಿಯಿಂದ ಚಿತಾಗ್ನಿಯನ್ನು ಕೊಟ್ಟಿದ್ದೀಯೆ) ಕಣ್ಣೀರ್ಗಳಿಂದ ಎಯ್ದೆ

ನೀರ್ಗೊಟ್ಟೈ
ಸೂರ್ಯಸುತಂಗೆ
(ಕಣ್ಣೀರುಗಳಿಂದ ಚೆನ್ನಾಗಿ
ತರ್ಪಣವನ್ನು ಕೊಟ್ಟಿದ್ದೀಯೆ.)
ಲೌಕಿಕಮನೇನ್ ಇಂ
ದಾಂಟಿದ್ದೈ
(ಲೋಕವ್ಯವಹಾರವನ್ನು ಇನ್ನು
ದಾಟಿದ್ದೀಯೆ?) ಪೋೞ್ದು
ಸೀಳ್ದೊಟ್ಟಿಂ ವೈರಿಯನು ಒಡ್ಡಿ
(ಶತ್ರುವನ್ನು ಹೋಳುಮಾಡಿ
ಸೀಳಿ ರಾಶಿಹಾಕಿ) ತತ್ತಿ

ಪಶಿತದಿಂದೆ (ಆ
ಮಾಂಸದಿಂದ) ತಂಗೆ ನೀಂ
ಕೂರ್ಪೊಡೆ (ಕರ್ಣನನ್ನು
ನೀನು ಪ್ರೀತಿಸುವುದಾದರೆ ಆ
ಪಕ್ಷಿಸಮೂಹಕ್ಕೆ (ಹದ್ದುಗಳಿಗೆ)
ಆಹಾರವನ್ನು ಮಾಡು.)
ಏಗೆಟ್ಟತ್ತು ಇಂ ನಡೆ,
(ನಷ್ಟವಾದುದೇನು? ಇನ್ನು
ಮುಂದೆ ನಡೆ.) ಮಾಡು ತದ್ದಿ
ಜಗಣಕ್ಕಾಹಾರಮಂ ಭೂಪತೀ
(ರಾಜನೇ ಆ ಪಕ್ಷಿಸಮೂಹಕ್ಕೆ

(ಹದ್ದುಗಳಿಗೆ) ಆಹಾರವನ್ನು ಮಾಡು.)

ಪದ್ಯ-೬೧:ಅರ್ಥ: ತೀವ್ರವಾದ ಶೋಕಾಗ್ನಿಯಿಂದ ಚಿತಾಗ್ನಿಯನ್ನು ಕೊಟ್ಟಿದ್ದೀಯೆ. ಕಣ್ಣೀರುಗಳಿಂದ ಚೆನ್ನಾಗಿ ತರ್ಪಣವನ್ನು ಕೊಟ್ಟಿದ್ದೀಯೆ. ಲೋಕವ್ಯವಹಾರವನ್ನೆಲ್ಲಾ ಇನ್ನು ದಾಟಿದ್ದೀಯೆ? ಶತ್ರುವನ್ನು ಹೋಳುಮಾಡಿ ಸೀಳಿ ರಾಶಿಹಾಕಿ ಆ

ಮಾಂಸದಿಂದ- ಕರ್ಣನನ್ನು ನೀನು ಪ್ರೀತಿಸುವುದಾದರೆ ರಾಜನೇ ಆ ಪಕ್ಷಿಸಮೂಹಕ್ಕೆ (ಹದ್ದುಗಳಿಗೆ) ಆಹಾರವನ್ನು ಮಾಡು. ನಷ್ಟವಾದುದೇನು? ಇನ್ನು ಮುಂದೆ ನಡೆ, ಎಂದನು ಸಂಜಯ

ವ|| ಎಂದು ಪೇೞ್ದ ಶೋಕರಸಮಂ ಕೋಪರಸದ ಮೇಲಿಕ್ಕಿ ಭೀಷ್ಮಂ ಶರಶಯನ ತಳವಿಗತನಾಗಿರ್ದಲ್ಲಿವರಮೆಂ

ತಾನುಮೊಡಗೊಂಡು ಬಂದಾಗಳ್-

ವಚನ:ಪದವಿಭಾಗ-ಅರ್ಥ:ಎಂದು ಪೆರ್ಚಿದ ಶೋಕರಸಮಂ (ಎಂದು ಹೇಳಿ ಹೆಚ್ಚಾದ ಶೇಕರಸವನ್ನೂ ಮೀರಿ) ಕೋಪರಸದ ಮೇಲಿಕ್ಕಿ (ಕೋಪರಸವು ಹೆಚ್ಚುತ್ತಿರಲು) ಭೀಷ್ಮಂ ಶರಶಯನ ತಳ ವಿಗತನಾಗಿರ್ದ ಅಲ್ಲಿವರಂ (ಭೀಷ್ಮನು ಬಾಣದ

ಹಾಸಿಗೆಯಲ್ಲಿ ಮಲಗಿದ್ದ ಸ್ಥಳದವರೆಗೆ) ಎಂತಾನುಂ ಒಡಗೊಂಡು ಬಂದಾಗಳ್ (ಹೇಗೋ ಜೊತೆಯಲ್ಲಿ ಕರೆದುಕೊಂಡು ಹೋದನು.)-

ವಚನ:ಅರ್ಥ:ಎಂದು ಹೇಳಿ ಹೆಚ್ಚಾದ ಶೋಕರಸವನ್ನೂ ಮೀರಿ ಕೋಪರಸವು ಹೆಚ್ಚುತ್ತಿರಲು ಭೀಷ್ಮನು ಬಾಣದ ಹಾಸಿಗೆಯಲ್ಲಿ ಮಲಗಿದ್ದ ಸ್ಥಳದವರೆಗೆ

ಹೇಗೋ ಜೊತೆಯಲ್ಲಿ ಕರೆದುಕೊಂಡು ಹೋದನು.

<u>ದುರ್ಯೋಧನನಿಗೆ ಭೀಷ್ಮರ ಸಲಹೆ</u>

ಚಂ|| ಇಡಿದಿರೆ ರೋಮ
ಕೂಪದೊಳಗುರ್ಚಿದ ಸಾಲ
ಸರಲ್ಗಳುಂ ತೆಱಂ
ಬಿಡಿದರೆ
ಬೆಟ್ಟುವೋಗುರ್ಡಿಸಿದಂತೆ
ನೆಱಲ್ದಿರೆ ಸುಯ್ವ ಪುಣ್ಗಳಿಂ|

ಬಡನಡುವಂ ಶರಾಳಿಭಯದಿಂ

ನಡುಪಂತಿರೆ ಚಿತ್ತದೊಳ್

ಮೃಡಂ

ತೊಡರ್ದಿರೆ

ಬಿಟ್ಟಿದೇನೆಸೆದನೋ

ಶರಶಯ್ಯೊಯೊಳಂದು

ಸಿಂಧುಜಂ|| ೬೨ ||

ಪದ್ಯ-೬೨:ಪದವಿಭಾಗ-

ಅರ್ಥ:ಇಡಿದಿರೆ ರೋಮ

ಕೂಪದೊಳಗೆ ಉರ್ಚಿದ ಸಾಲ

ಸರಲ್ಗಳುಂ (ಕೂದಲಿನ

ಒಂದೊಂದು ಹಳ್ಳ
(ಕುಳಿ)ಗಳಲ್ಲಿಯೂ
ಸಾಲವೃಕ್ಷದಿಂದ ಮಾಡಿದ
ಬಾಣಗಳು ನಾಟಿಕೊಂಡು
ದಟ್ಟವಾಗಿ ತುಂಬಿರಲು) ತೆಱಿಂ
ಬಿಡಿದರೆ ಬೆಟ್ಟುವು
ಓರ್ಗುಡಿಸಿದಂತೆ ನೆಱಿಲ್ದಿರೆ
(ನಾನಾ ರೀತಿಯಲ್ಲಿ
ಪರ್ವತಗಳುರುಳಿದಂತೆ ಬಿದ್ದು
ನಿಶ್ಚೇಷ್ಟನಾಗಿರಲು,) ಸುಯ್ವು
ಪುಣ್ಗಳಿಂ ಬಡನಡುವಂ

ಶರಾಳಿ ಭಯದಿಂ ನಡುಪಂತಿರೆ
(ಸುಯ್ಯುವ/
ನಿಟ್ಟುಸಿರುಬಿಡುವ
ನೋವುಕೊಡುತ್ತಿರುವ
ಹುಣ್ಣುಗಳಿಂದಲೂ ಬಾಣಗಳ
ಭಯದಿಂದಲೂ
ಬಡವಾಗಿರುವ ಸೊಂಟವನ್ನು
ನಡುಗಿಸುತ್ತ) ಚಿತ್ತದೊಳ್
ಮೃಡಂ ತೊಡರ್ದಿರೆ
(ಮನಸ್ಸಿನಲ್ಲಿ ಶಿವನು ತೊಡಗಿ/
ಸೇರಿರಲು,) ಬಿಟ್ಟು ಅದೇನು

ಎಸೆದನೋ
ಶರಶಯ್ಯೊಯೊಳು ಅಂದು
ಸಿಂಧುಜಂ (ಭೀಷ್ಮನು ಬಾಣದ
ಹಾಸಿಗೆಯಲ್ಲಿ ಬಿದ್ದು/ಮಲಗಿ
ಅದೇನು ಎಸೆದನೋ-
ಅತ್ಯಂತ
ಶೋಭಾಯಮಾನನಾಗಿದ್ದನು.
)
ಪದ್ಯ-೬೨:ಅರ್ಥ: ಕೂದಲಿನ
ಒಂದೊಂದು ಹಳ್ಳ
(ಕುಳಿ)ಗಳಲ್ಲಿಯೂ

ಸಾಲವೃಕ್ಷದಿಂದ ಮಾಡಿದ ಬಾಣಗಳು ನಾಟಿಕೊಂಡು ದಟ್ಟವಾಗಿ ತುಂಬಿರಲು ನಾನಾ ರೀತಿಯಲ್ಲಿ ಪರ್ವತಗಳುರುಳಿದಂತೆ ಬಿದ್ದು ನಿಶ್ಚೇಷ್ಟನಾಗಿರಲು, ಸುಯ್ಯುವ/ ನಿಟ್ಟುಸಿರುಬಿಡುವ ನೋವುಕೊಡುತ್ತಿರುವ ಹುಣ್ಣುಗಳಿಂದಲೂ ಬಾಣಗಳ ಭಯದಿಂದಲೂ

ಬಡವಾಗಿರುವ ಸೊಂಟವನ್ನು
ನಡುಗಿಸುತ್ತ ಮನಸ್ಸಿನಲ್ಲಿ
ಶಿವನು ತೊಡಗಿ/ಸೇರಿರಲು,
ಭೀಷ್ಮನು ಬಾಣದ
ಹಾಸಿಗೆಯಲ್ಲಿ ಬಿದ್ದು/ಮಲಗಿ
ಅದೇನು ಎಸೆದನೋ-
ಅತ್ಯಂತ
ಶೋಭಾಯಮಾನನಾಗಿದ್ದನು.

ಹರನೊಳೆ ಪತ್ತಿ ತೆತ್ತಿಸಿದ
ಚಿತ್ತಮನಿರ್ಬಗಿಯಾಗೆ
ಮೋಹಮೊ

ತ್ತರಿಸೆ ಸುಯೋಧನಂಗೆ

ರಣಭೂಮಿಯೊಳೆಂತುಟವಸ್ಥೆ

ಯೋ ಕನ|

ಲ್ದುರಿದಪುದೆನ್ನ

ಮೆಯ್ಯೆನುತುಮತ್ತಣ ಪಂಬಲ

ಬಂಬಲೊಳ್ ತೆಱಂ

ದಿರಿದುದು ಚಿತ್ತಮಾ ದೊರೆಯ

ಯೋಗಿಗಮಿಂತುಂಟೆ

ಮೋಹಮಾಗದೇ|| ೬೩ ||

ಪದ್ಯ-೬೩:ಪದವಿಭಾಗ-

ಅರ್ಥ:ಹರನೊಳೆ ಪತ್ತಿ

ತೆತ್ತಿಸಿದ ಚಿತ್ತಮನು
(ಈಶ್ವರನಲ್ಲಿ
ಸೇರಿಕೊಂಡಂತಿದ್ದ ಮನಸ್ಸನ್ನು)
ಇರ್ಬಗಿಯಾಗೆ ಮೋಹಂ
ಒತ್ತರಿಸೆ (ಎರಡು ಭಾಗವಾಗಿ
ಮಾಡಲು ಮಮಕಾರವು
ಒತ್ತರಿಸಿಬರಲು,)
ಸುಯೋಧನಂಗೆ
ರಣಭೂಮಿಯೊಳ್
ಎಂತುಟವಸ್ಥೆಯೋ
(ದುರ್ಯೋಧನನಿಗೆ ಯುದ್ಧ

ರಂಗದಲ್ಲಿ ಇಂತಹ ಅವಸ್ಥೆಯಾಯಿತೇ!) ಕನಲ್ದು ಉರಿದಪ್ಪುದು ಎನ್ನ ಮೆಯ್ಯ್ ಎನುತುಂ (ನನ್ನ ಶರೀರವು ಕೆಂಡದಂತೆ ಹೊಳೆದು ಉರಿಯುತ್ತಿದೆಯಲ್ಲಾ ಎಂದು ಹೇಳುತ್ತಾ) ಅತ್ತಣ ಪಂಬಲ ಬಂಬಲೊಳ್ ತೆಱಂದಿರಿದುದು- ತೆರಂದೆ ಇರಿದುದು (ಆ ಕಡೆಯ ಹಂಬಲದ ಸರಣಿಯಲ್ಲಿ

ಮನಸ್ಸು ನಾನಾ ರೀತಿಯಾಗಿ ಅಲೆದಾಡಿತು.) ಚಿತ್ತಮು ಆ ದೊರೆಯ ಯೋಗಿಗಂ ಇಂತುಂಟೆ ಮೋಹಂ ಆಗದೇ (ಅಂತಹ ಯೋಗ್ಯತೆಯನ್ನುಳ್ಳ ಯೋಗಿಗೂ ಹೀಗೆಯೇ ಮಮತೆ ಉಂಟಾಗದೇ? ಮಮತೆ ಉಂಟಾಯಿತು)

ಪದ್ಯ-೬೩:ಅರ್ಥ:ಈಶ್ವರನಲ್ಲಿ ಸೇರಿಕೊಂಡಂತಿದ್ದ ಮನಸ್ಸನ್ನು ಮೋಹವು ಎರಡು ಭಾಗವಾಗಿ

ಮಾಡಲು ಮಮಕಾರವು
ಒತ್ತರಿಸಿಬರಲು,
ದುರ್ಯೋಧನನಿಗೆ ಯುದ್ಧ
ರಂಗದಲ್ಲಿ ಇಂತಹ
ಅವಸ್ಥೆಯಾಯಿತೇ! ನನ್ನ
ಶರೀರವು ಕೆಂಡದಂತೆ
ಹೊಳೆದು
ಉರಿಯುತ್ತಿದೆಯಲ್ಲಾ ಎಂದು
ಹೇಳುತ್ತಾ, ಆ ಕಡೆಯ
ಹಂಬಲದ ಸರಣಿಯಲ್ಲಿ
ಮನಸ್ಸು ನಾನಾ ರೀತಿಯಾಗಿ

ಅಲೆದಾಡಿತು. ಅಂತಹ
ಯೋಗ್ಯತೆಯನ್ನುಳ್ಳ
ಯೋಗಿಗೂ ಹೀಗೆಯೇ
ಮಮತೆ ಉಂಟಾಗದೇ?
ಮಮತೆ ಉಂಟಾಯಿತು

ವ|| ಎಂಬನ್ನೆಗಮವರಿರ್ವರ
ಕಾಲ ಸೊಪ್ಪುಳನಾಲಿಸಿ
ಸುರನದೀನಂದನಂ
ಪೇೞಿಮೀ
ಬಂದರಾರೆಂದನೇಕ
ವ್ರಣವೇದನಾಪರವಶಶರೀರಂ

ಬೆಸಗೊಳ್ವುದುಂ ಸಂಜಯಂ
ಕುರುಪಿತಾ ಮಹನ
ಕರ್ಣೋಪಾಂತಮಂ ಸಾರ್ದು
ಕುರುಕುಳಗಗನಮೃಗಧರಂ
ಬಂದನೆಂದು
ಬಿನ್ನಪಂಗೆಯ್ವುದುಂ
ಯೋಗಾಭ್ಯಾಸದೊಳರೆಮುಗು
ಳ್ದ ರಕ್ತಾಂಭೋಜದಳ
ವಿಳಾಸೋಪಹಾಸಿಗಳಪ್ಪ
ಕಣ್ಗಳನೊತ್ತಂಬದಿಂ ತೆರೆದು-

ವಚನ:ಪದವಿಭಾಗ-ಅರ್ಥ:ಎಂಬನ್ನೆಗಂ ಅವರಿರ್ವರ ಕಾಲ ಸೊಪ್ಪುಳನು ಆಲಿಸಿ (ಎನ್ನುವಷ್ಟರಲ್ಲಿ ಇಬ್ಬರ ಹೆಜ್ಜೆಯ ಶಬ್ದವನ್ನು ಕೇಳಿ) ಸುರನದೀನಂದನಂ ಪೇೞಿಂ ಈ ಬಂದರು ಆರೆಂದು ('ಈಗ ಬಂದವರು ಯಾರು ಹೇಳಿ') ಅನೇಕ ವ್ರಣವೇದನಾ ಪರವಶ ಶರೀರಂ (ಅನೇಕ ಗಾಯಗಳ

ನೋವಿನಿಂದ ಪರವಶವಾಗಿದ್ದ ಶರೀರವನ್ನುಳ್ಳ ಭೀಷ್ಮನು) ಬೆಸಗೊಳ್ಳುದುಂ (ಎಂದು ಕೇಳಿದಾಗ,) ಸಂಜಯಂ ಕುರುಪಿತಾ ಮಹನ ಕರ್ಣ ಉಪಾಂತಮಂ ಸಾರ್ದು (ಸಂಜಯನು ಕುರುಪಿತಾಮಹನಾದ ಭೀಷ್ಮನ ಕಿವಿಯ ಹತ್ತಿರಕ್ಕೆ ಹೋಗಿ) ಕುರುಕುಳ ಗಗನಮೃಗಧರಂ ಬಂದನೆಂದು

ಬಿನ್ನಪಂ ಗೆಯ್ವುದುಂ
(‘ಕುರುವಂಶವೆಂಬ ಆಕಾಶದ
ಚಂದ್ರನಾದ ದುರ್ಯೋಧನನು
ಬಂದಿದ್ದಾನೆ’ ಎಂದು ವಿಜ್ಞಾಪನೆ
ಮಾಡಿದನು.)
ಯೋಗಾಭ್ಯಾಸದೊಳು
(ಯೋಗಾಭ್ಯಾಸದಲ್ಲಿ)
ಅರೆಮುಗುಳ್ದ
(ಅರ್ಧಮುಚ್ಚಿದ)
ರಕ್ತಾಂಭೋಜದಳ
(ಕಮಲದಳ)

ವಿಳಾಸೋಪಹಾಸಿಗಳಪ್ಪ (ಕಾಂತಿಯನ್ನು ಹಾಸ್ಯಮಾಡುವ ಹಾಗಿದ್ದ) ಕಣ್ಗಳನು ಒತ್ತಂಬದಿಂ ತೆರೆದು (ತನ್ನ ಕಣ್ಣುಗಳನ್ನು ಬಲವಂತದಿಂದ ತೆಗೆದು)-

ವಚನ:ಅರ್ಥ:ಎನ್ನುವಷ್ಟರಲ್ಲಿ ಇಬ್ಬರ ಹೆಜ್ಜೆಯ ಶಬ್ದವನ್ನು ಕೇಳಿ ಅನೇಕ ಗಾಯಗಳ ನೋವಿನಿಂದ ಪರವಶವಾಗಿದ್ದ ಶರೀರವನ್ನುಳ್ಳ ಭೀಷ್ಮನು ‘ಈಗ

ಬಂದವರು ಯಾರು ಹೇಳಿ’

ಎಂದು ಕೇಳಿದಾಗ,

ಸಂಜಯನು

ಕುರುಪಿತಾಮಹನಾದ

ಭೀಷ್ಮನ ಕಿವಿಯ ಹತ್ತಿರಕ್ಕೆ

ಹೋಗಿ ‘ಕುರುವಂಶವೆಂಬ

ಆಕಾಶದ ಚಂದ್ರನಾದ

ದುರ್ಯೋಧನನು

ಬಂದಿದ್ದಾನೆ’ ಎಂದು ವಿಜ್ಞಾಪನೆ

ಮಾಡಿದನು. ಭೀಷ್ಮನು

ಯೋಗಾಭ್ಯಾಸದಲ್ಲಿ

ಅರ್ಧಮುಚ್ಚಿಕೊಂಡಿದ್ದ ಕನ್ನೆ ದಿಲೆಯ ದಳದ ಕಾಂತಿಯನ್ನು ಹಾಸ್ಯಮಾಡುವ ಹಾಗಿದ್ದ ತನ್ನ ಕಣ್ಣುಗಳನ್ನು ಬಲವಂತದಿಂದ ತೆಗೆದು-

ಚಂ|| ಎಱಗಿದ ಕೌರವೇಶ್ವರನೊಳಾದಮಿದಿರ್ ಚಿದಲಂಪೆಲರ್ಚಿದ ಬ್ಕಿಱನೊಳಕೊಳ್ವಿನಂ ಪರಸಿ ಮೆಯ್ಯೊಳೆ ಬಂದ ತೆಱಕ್ಕೆ ಮೆಯ್ ಕರಂ|

ಮಱುಗಿಪುದಿಂತು ಪೇೞ
ಮಗನೆ ಬೆಳ್ಗೊಡೆಯೆಲ್ಲಿದುದೆತ್ತ
ಪೋಯ್ತು ಸು
ತ್ತಿಱಿದ ಚತುರ್ಬಲಂ
ನಿನಗಮೀಯಿರವಾದುದೆ
ವೈರಿಭೂಪರಿಂ|| ೬೪ ||

ಪದ್ಯ-೬೪:ಪದವಿಭಾಗ-ಅರ್ಥ:ಎಱಗಿದ ಕೌರವೇಶ್ವರನೊಳು ಆದಂ ಇದಿರ್ಚಿದ (ತನಗೆ ನಮಸ್ಕಾರ ಮಾಡಿದ ಕೌರಮೇಶ್ವರನನ್ನು

ಎದುರಿನಲ್ಲಿ ಕಂಡ) ಅಲಂಪು
ಎಲರ್ಚಿದ ಅಟ್ಟಿಱಿಂ
ಒಳಕೊಳ್ವಿನಂ (ಸಂತೋಷವು
ಪ್ರೀತಿಯನ್ನು
ಅದಿಕಗೊಳಿಸಲು) ಪರಸಿ
ಮೆಯ್ಯೊಳೆ ಬಂದ ತೆಱಕ್ಕೆ
ಮೆಯ್ ಕರಂ ಮಱುಗಿಪುದು
(ನೀನು ಏಕಾಕಿಯಾಗಿ ಬಂದ
ಸ್ಥಿತಿಯನ್ನು ನೋಡಿ ನನ್ನ
ಮನಸ್ಸು ವಿಶೇಷ
ದುಃಖಪಡುತ್ತಿದೆ.) ಇಂತು

ಪೇೞು ಮಗನೆ ಬೆಳ್ಗೊಡೆ
ಯೆಲ್ಲಿದುದು (ಶ್ವೇತಚ್ಛತ್ರಿ
ಎಲ್ಲಿ?), ಎತ್ತ ಪೋಯ್ತು
ಸುತ್ತಿೞಿದ ಚತುರ್ಬಲಂ
(ಸುತ್ತಲೂ ಬಳಸಿ ಬರುತ್ತಿದ್ದ
ಚತುರಂಗಸೈನ್ಯವೆಲ್ಲಿ
ಹೋಯಿತು?) ನಿನಗಂ ಈ
ಯಿರವಾದುದೆ ವೈರಿಭೂಪರಿಂ
(ಶತ್ರುರಾಜರಿಂದ ನಿನಗೂ ಈ
ಸ್ಥಿತಿಯುಂಟಾಯಿತೆ?)

ಪದ್ಯ-೬೪:ಅರ್ಥ:ತನಗೆ ನಮಸ್ಕಾರ ಮಾಡಿದ ಕೌರಮೇಶ್ವರನನ್ನು ಎದುರಿನಲ್ಲಿ ಕಂಡ ಸಂತೋಷವು ಪ್ರೀತಿಯನ್ನು ಅದಿಕಗೊಳಿಸಲು ಆಶೀರ್ವಾದಮಾಡಿ, ನೀನು ಏಕಾಕಿಯಾಗಿ ಬಂದ ಸ್ಥಿತಿಯನ್ನು ನೋಡಿ ನನ್ನ ಮನಸ್ಸು ವಿಶೇಷ ದುಃಖಪಡುತ್ತಿದೆ. ಮಗು,

ಶ್ವೇತಚ್ಛತ್ರಿ ಎಲ್ಲಿ? ಸುತ್ತಲೂ
ಬಳಸಿ ಬರುತ್ತಿದ್ದ
ಚತುರಂಗಸೈನ್ಯವೆಲ್ಲಿ
ಹೋಯಿತು? ಯಾವ ಕಡೆಗೆ
ಹೋಯಿತು. ಶತ್ರುರಾಜರಿಂದ
ನಿನಗೂ ಈ
ಸ್ಥಿತಿಯುಂಟಾಯಿತೆ?

ವ|| ಎಂದು ಕಣ್ಣ ನೀರಂ ನೆಗಪಿ ನಿನ್ನ ಬಂದ ಬರವೇ ಸಮರವೃತ್ತಾಂತಮನಱಿಪಿ ದಪ್ಪುದಿಂ ನಿನ್ನ ಗೆಯ್ವ

ನಿಯೋಗಮಾವುದೇಗೆಯ್ಯಲ್ ಬಗೆದಪೆಯೆನೆ-

ವಚನ:ಪದವಿಭಾಗ-

ಅರ್ಥ:ಎಂದು ಕಣ್ಣ ನೀರಂ ನೆಗಪಿ (ಎಂದು ಕಣ್ಣೀರನ್ನು ತುಂಬಿಕೊಂಡು) ನಿನ್ನ ಬಂದ ಬರವೇ ಸಮರವೃತ್ತಾಂತಮನು ಅಱಿಪಿದಪ್ಪುದು ಇಂ (ನೀನು ಬಂದಿರುವ ಬರುವಿಕೆಯ ರೀತಿಯೇ ಯುದ್ಧ ಸಮಾಚಾರವನ್ನು

ತಿಳಿಸುತ್ತದೆ.) ನಿನ್ನ ಗೆಯ್ವ ನಿಯೋಗಂ ಆವುದು(ಇನ್ನು ಮುಂದೆ ಮಾಡುವ ಕಾರ್ಯ ಯಾವುದು? ಮಾಡುತ್ತೀಯೆ?) ಏಗೆಯ್ಯಲ್ ಬಗೆದಪೆ ಯೆನೆ (ಏನು ಮಾಡಲು ಯೋಚಿಸಿದ್ದೀಯೆ ಎನ್ನಲು)-

ವಚನ:ಅರ್ಥ:ಎಂದು ಕಣ್ಣೀರನ್ನು ತುಂಬಿಕೊಂಡು, ನೀನು ಬಂದಿರುವ ಬರುವಿಕೆಯ ರೀತಿಯೇ

ಯುದ್ಧ ಸಮಾಚಾರವನ್ನು ತಿಳಿಸುತ್ತದೆ. ಇನ್ನು ಮುಂದೇನು ಮಾಡುತ್ತೀಯೆ? ಏನು ಮಾಡಲು ಯೋಚಿಸಿದ್ದೀಯೆ ಎನ್ನಲು-.

ಚಂ|| ಬಗೆ ಪೆಱತುಂಟೆ ವೈರಿನೃಪರಂ ತಱಿದೊಟ್ಟುವುದಲ್ಲದೆಂತುಮಿ||

ಲ್ಲಿಗೆ ಬರವಂ ಭವತ್ಪದಸರೋಜವನಾಂ

ಬಲಗೊಂಡು ಮತ್ತಮಾ||

ಜಿಗೆ ನಡೆಯಲ್ಕೆ ಬಂದೆನೆನೆ

ದೇವನದೀಸುತನಾತ್ಮಚಿತ್ತದೊ

ಳ್|

ಬಗೆದನಿದೇನಖಂಡಿತಮೊ

ಶೌರ್ಯಗುಣೋನ್ನತಿ

ರಾಜರಾಜನಾ|| ೬೫ ||

ಪದ್ಯ-೬೫:ಪದವಿಭಾಗ-

ಅರ್ಥ:ಬಗೆ (ಯೋಚನೆ)

ಪೆಱತುಂಟೆ (ಬೇರೆ ಯೋಚನೆ

ತನಗೆ ಉಂಟೇ? ಇಲ್ಲ!)

ವೈರಿನೃಪರಂ ತಱಿದು ಒಟ್ಟುವುದು ಅಲ್ಲದೆ (ಶತ್ರುರಾಜರನ್ನು ಕತ್ತರಿಸಿ ರಾಶಿಹಾಕುವುದಲ್ಲದೆ ಬೇರೆ ಯೋಚನೆ ತನಗೆ ಉಂಟೇ? ಇಲ್ಲ!) ಎಂತುಂ ಇಲ್ಲಿಗೆ ಬರವಂ ಭವತ್ಪದಸರೋಜವನು ಆಂ ಬಲಗೊಂಡು (ನಿಮ್ಮ ಪಾದಕಮಲಗಳನ್ನು ಪ್ರದಕ್ಷಿಣೆಮಾಡಿ ಪುನ ಯುದ್ಧಕ್ಕೆ ಹೋಗೋಣವೆಂದು

-ಬಂದೆ ಎಂದನು) ಮತ್ತಂ
ಆಜಿಗೆ ನಡೆಯಲ್ಕೆ ಬಂದೆನು
ಎನೆ (ಪುನಃ ಯುದ್ಧಕ್ಕೆ
ಹೋಗೋಣವೆಂದು ಬಂದೆ
ಎನ್ನಲು,) ದೇವನದೀಸುತನು
ಆತ್ಮಚಿತ್ತದೊಳ್-ಬಗೆದನು
ಇದೇನ್ ಅಖಂಡಿತಮೊ
ಶೌರ್ಯಗುಣೋನ್ನತಿ
ರಾಜರಾಜನಾ (ಭೀಷ್ಮನು
ಚಕ್ರವರ್ತಿಯಾದ
ದುರ್ಯೋಧನನ

ಶೌರ್ಯಗುಣದ ಔನ್ನತ್ಯವು ಏನು ಅಖಂಡಿತವ್ರೋ ಎಂದು ತನ್ನ ಮನಸ್ಸಿನಲ್ಲಿ ಸಂತೋಷಿಸಿದನು.)

ಪದ್ಯ-೬೫:ಅರ್ಥ:

ದುರ್ಯೋಧನನು ಮತ್ತೇನಜ್ಜ; ಶತ್ರುರಾಜರನ್ನು ಕತ್ತರಿಸಿ ರಾಶಿಹಾಕುವುದಲ್ಲದೆ ಬೇರೆ ಯೋಚನೆ ತನಗೆ ಉಂಟೇ? ಇಲ್ಲ! ನಿಮ್ಮ ಪಾದಕಮಲಗಳನ್ನು

ಪ್ರದಕ್ಷಿಣೆಮಾಡಿ ಪುನಃ
ಯುದ್ಧಕ್ಕೆ ಹೋಗೋಣವೆಂದು
ಬಂದೆ ಎನ್ನಲು, ಭೀಷ್ಮನು
ಚಕ್ರವರ್ತಿಯಾದ
ದುಯೋಧನನ
ಶೌರ್ಯಗುಣದ ಔನ್ನತ್ಯವು
ಏನು ಅಖಂಡಿತವ್ರೋ ಎಂದು
ತನ್ನ ಮನಸ್ಸಿನಲ್ಲಿ
ಸಂತೋಷಿಸಿದನು.

ವ|| ಎಂದಾದಿ
ಮಧ್ಯಾವಸಾನದೊಳೆಲ್ಲಿಯು

ಮೆಱಲದ ಕಲಿತನದಳವಿಂಗೆ
ಮನಂಗೊಂಡು ಮಗನೆ
ನಿನಗಪ್ಪೊಡೆ ದೆಯ್ವಂ
ಪ್ರತಿಕೂಲಮೆಂತುಂ ಕಾದಿ
ಗೆಲಲಾರ್ಪೆಯಲ್ಲೆ ಸೂಜಿಯ
ಕೂರ್ಪು
ಕುಂಬಳದೊಳಡಂಗುವಂತೆ
ನಿನ್ನೊಂದೆ ಮೆಯ್ಯೊಳಾದ
ಕೂರ್ಪು ಪಗೆವರ
ದರ್ಪಮನದಿರ್ಪದಲ್ತೆ ನಿನಗಂ
ಮೈತ್ರೇಯರ್

ಕೊಟ್ಟೂರುಭಂಗಶಾಪಮನಿ ವಾರಿತಮೆನ್ನೀ ಪ್ರಾಣಮುಳ್ಳಂತೆ ಸಂಧಿಯಂ ಮಾಡಿ ವಸುಂಧರೆಯಂ ಕೊಂಡು ಕಾಲಮಂ ಕಜ್ಜಮುಮನಱಿದು ಬೞಿಯಂ ನಿನ್ನ ನೆಗೞ್ವುದಂ ನೆಗೞ್ವುದೆಂದು-

ವಚನ:ಪದವಿಭಾಗ-

ಅರ್ಥ:ಎಂದು ಆದಿ ಮಧ್ಯಾವಸಾನದೊಳ್ (ಮೊದಲಿಂದ ಕೊನೆಯವರೆಗೆ)

ಎಲ್ಲಿಯುಮ್ ಅಱಿಲದ
ಕಲಿತನದ ಅಳವಿಂಗೆ
(ಎಲ್ಲಿಯೂ ಸಡಿಲವಾಗದ
ಅವನ ಶೌರ್ಯದ
ಪ್ರಮಾಣಕ್ಕೆ) ಮನಂಗೊಂಡು
(ಸಂತೋಷಪಟ್ಟು ,) ಮಗನೆ
ನಿನಗೆ ಅಪ್ಪೊಡೆ ದೆಯ್ವಂ
ಪ್ರತಿಕೂಲಮ್ ಎಂತುಂ ಕಾದಿ
ಗೆಲಲ ಆರ್ಪೆಯಲ್ಲೆ (‘ಮಗು
ನಿನಗಾದರೆ ದೈವವು
ಪ್ರತಿಕೂಲವಾಗಿದೆ. ಕಾದಿ

ಗೆಲ್ಲಲಾರೆ;) ಸೂಜಿಯ ಕೂರ್ಪು
ಕುಂಬಳದೊಳ್
ಅಡಂಗುವಂತೆ ನಿನ್ನೊಂದೆ
ಮೆಯ್ಯೊಳು ಆದ ಕೂರ್ಪು
(ಸೂಜಿಯ ಹರಿತವಾದ
ತುದಿಯು ಕುಂಬಳಕಾಯಲ್ಲಿ
ಅಡಗಿಹೋಗುವ ಹಾಗೆ ನಿನ್ನ
ಒಂದೇ ಶರೀರದಲ್ಲಿರುವ
ಹರಿತವಾದ ಶಕ್ತಿ) ಪಗೆವರ
ದರ್ಪಮನು ಅದಿರ್ಪದಲ್ತೆ
(ಶತ್ರುಗಳ ದರ್ಪವನ್ನು

ನಡುಗಿಸುವಂತ್ತಲ್ಲವೇ?)
ನಿನಗಂ ಮೈತ್ರೇಯರ್ ಕೊಟ್ಟ
ಊರುಭಂಗ ಶಾಪಮಂ
ಅನಿವಾರಿತಮ್ (ನಿನಗೆ
ಮೈತ್ರೇಯರು ಕೊಟ್ಟಿರುವ
ಊರುಭಂಗ ಶಾಪವು
ತಪ್ಪಿಸುವುದಕ್ಕಾಗದು.) ಎನ್ನ
ಈ ಪ್ರಾಣಮುಳ್ಳಂತೆ
ಸಂಧಿಯಂ ಮಾಡಿ
ವಸುಂಧರೆಯಂ ಕೊಂಡು
(ನನ್ನ ಪ್ರಾಣವು ಇರುವಾಗಲೇ

ಸಂಧಿಯನ್ನು ಮಾಡಿಕೊಂಡು ಭೂಮಿಯನ್ನು ಸ್ವೀಕರಿಸಿ) ಕಾಲಮಂ ಕಜ್ಜಮುಮನು ಅಱಿದು (ಮುಂದಿನ ಕಾಲವನ್ನೂ ಕಾರ್ಯವನ್ನೂ ತಿಳಿದು) ಬೞಿಯಂ ನಿನ್ನ ನೆಗಱ್ಚುದಂ ನೆಗಱ್ಚುದೆಂದು (ಬಳಿಕ ನಿನ್ನ ಏಳಿಗೆಗೆ ಮಾಡಬೇಕಾದ್ದನ್ನು ಮಾಡು ಎಂದರು.)-

ವಚನ:ಅರ್ಥ:ಮೊದಲಿಂದ ಕೊನೆಯವರೆಗೆ ಎಲ್ಲಿಯೂ ಸಡಿಲವಾಗದ ಅವನ ಶೌರ್ಯದ ಪ್ರಮಾಣಕ್ಕೆ ಸಂತೋಷಪಟ್ಟು (ದುರ್ಯೋಧನನನ್ನು ಕುರಿತು) 'ಮಗು ನಿನಗಾದರೆ ದೈವವು ಪ್ರತಿಕೂಲವಾಗಿದೆ. ಕಾದಿ ಗೆಲ್ಲಲಾರೆ; ಸೂಜಿಯ ಹರಿತವಾದ ತುದಿಯು ಕುಂಬಳಕಾಯಲ್ಲಿ

ಅಡಗಿಹೋಗುವ ಹಾಗೆ ನಿನ್ನ
ಒಂದೇ ಶರೀರದಲ್ಲಿರುವ
ಹರಿತವಾದ ಶಕ್ತಿ ಶತ್ರುಗಳ
ದರ್ಪವನ್ನು
ನಡುಗಿಸುವಂತ್ದ್ದ ಲವೇ? ನಿನಗೆ
ಮೈತ್ರೇಯರು ಕೊಟ್ಟಿರುವ
ಊರುಭಂಗ ಶಾಪವು
ತಪ್ಪಿಸುವುದಕ್ಕಾಗದು. ನನ್ನ
ಪ್ರಾಣವು ಇರುವಾಗಲೇ
ಸಂಧಿಯನ್ನು ಮಾಡಿಕೊಂಡು
ಭೂಮಿಯನ್ನು ಸ್ವೀಕರಿಸಿ

ಮುಂದಿನ ಕಾಲವನ್ನೂ ಕಾರ್ಯವನ್ನೂ ತಿಳಿದು ಬಳಿಕ ನಿನ್ನ ಏಳಿಗೆಗೆ ಮಾಡಬೇಕಾದ್ದನ್ನು ಮಾಡು ಎಂದರು.

ಚಂ||

ಪರಿಕಿಪುದೊಂದಱಿಂದೆರಡ
ನೋತೊಳಕೊಳ್ವುದು
ಮೂಱಱಿಂದೆ ನಾ
ಲ್ಕರಿದಱಿದಯ್ದಱಿಂದೆ ನೆರೆ
ಕಲ್ವುದು

ನಿರ್ಣಯಮಾಗಿರಾಜಿರೊಳ್|

ಪರಿಣತನಪ್ಪುದೇಟಿರೊಳ

ಮೊಂದದೆ ನಿಲ್ವುದು

ದುರ್ವಿಮಂತ್ರಮಂ

ಪರಿಪ ಟಮಾಳಮಂ

ಪಿರಿದನೋದಿದೊಡಪ್ಪ

ಪದಾರ್ಥಮಾವುದೋ|| ೬೬ ||

ಪದ್ಯ-೬೬:ಪದವಿಭಾಗ-

ಅರ್ಥ:ಪರಿಕಿಪುದು(ಪರೀಕ್ಷಿಸ

ಬೇಕು.) ಒಂದಜಿಂದೆ

ಎರಡನು (ಒಂದರಿಂದ

ಎಂದರೆ ಬುದ್ಧಿಯಿಂದ ಎರಡು ಕಾರ್ಯಾ ಅಕಾರ್ಯಗಳನ್ನು ಮಾಡಬೇಕಾದ್ದು ಮಾಡಬಾರದ್ದು,ಅಥವಾ ಪುಣ್ಯಾಪಾಪಗಳನ್ನು ಪರೀಕ್ಷಿಸಬೇಕು.) ಓತೊಳಕೊಳ್ಳುವುದು ಮೂಱಱಿಂದೆ (ಶತ್ರು ಮಿತ್ರ ಬಾಂಧವ ರೆಂಬ ಮೂವರನ್ನು ಒಲಿಸಿಕೊಳ್ಳಬೇಕು.) ನಾಲ್ಕು ಅರಿದು ಅಱಿದಯ್ದಱಿಂದೆ

ನೆರೆ ಕಲ್ವುದು (ಕಷ್ಟವಾದ
ಸಾಮ ದಾನ ಭೇದ
ದಂಡಗಳೆಂಬ
ಉಪಾಯಚತುಷ್ಟಯಗಳನ್ನು
ಒಳಪಡಿಸಿಕೊಳ್ಳಬೇಕು.
ಅಯ್ದು ಜ್ಞಾನೇಂದ್ರಿಯಗಳಿಂದ
ಪೂರ್ಣವಾಗಿ ವಿವೇಕವನ್ನು
ಕಲಿತುಕೊಳ್ಳಬೇಕು.)
ನಿರ್ಣಯಮಾಗಿರು
ಆಱಿರೊಳ್ ಪರಿಣತನಪ್ಪುದು
(ರಾಜಯೋಗ್ಯವಾದ ಸಂಧಿ,

ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀ ಭಾವ ಎಂಬ ಆರು ಗುಣಗಳಲ್ಲಿ ಪಂಡಿತನಾಗಬೇಕು.) ಏೞಿರೊಳಂ ಒಂದದೆ ನಿಲ್ವುದು (ದ್ಯೂತ ಸ್ತ್ರೀ ಪಾನಾದಿ ಸಪ್ತವ್ಯಸನಗಳಲ್ಲಿ ಸೇರಿಕೊಳ್ಳದಿರಬೇಕು.) ದುರ್ವಿಮಂತ್ರಮಂ ಪರಿಪ ಟಮಾಳಮಂ (ದುಷ್ಟ ಮಂತ್ರಾಲೋಚನೆಯಿಂದ

ಕೂಡಿದ ಮೋಸದ ಮಾತುಗಳನ್ನು ವಿಶೇಷವಾಗಿ ಕೇಳುವುದರಿಂದ ಆಗುವ ಪ್ರಯೋಜನವೇನು?) ಪಿರಿದನು ಒದಿದೊಡೆ ಅಪ್ಪ ಪದಾರ್ಥಮಾವುದೋ (ಹಿರಿದಾದ ಈ ವಿಚಾರಗಳನ್ನು ಹೇಳಿದರೆ ಅಪ್ಪಾ ಆಗುವ ಪರಮಾರ್ಥವೇನೋ!)

ಪದ್ಯ-೬೬:ಅರ್ಥ:

ಒಂದರಿಂದ ಎಂದರೆ

ಬುದ್ಧಿಯಿಂದ ಎರಡು
ಕಾರ್ಯಾ ಅಕಾರ್ಯಗಳನ್ನು
ಮಾಡಬೇಕಾದ್ದು
ಮಾಡಬಾರದ್ದು,ಅಥವಾ
ಪುಣ್ಯಾಪಾಪಗಳನ್ನು
ಪರೀಕ್ಷಿಸಬೇಕು. ಶತ್ರು ಮಿತ್ರ
ಬಾಂಧವ ರೆಂಬ ಮೂವರನ್ನು
ಒಲಿಸಿಕೊಳ್ಳಬೇಕು. ಕಷ್ಟವಾದ
ಸಾಮ ದಾನ ಭೇದ
ದಂಡಗಳೆಂಬ
ಉಪಾಯಚತುಷ್ಟಯಗಳನ್ನು

ಒಳಪಡಿಸಿಕೊಳ್ಳಬೇಕು. ಅಯ್ದು ಜ್ಞಾನೇಂದ್ರಿಯಗಳಿಂದ ಪೂರ್ಣವಾಗಿ ವಿವೇಕವನ್ನು ಕಲಿತುಕೊಳ್ಳಬೇಕು. ರಾಜಯೋಗ್ಯವಾದ ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀ ಭಾವ ಎಂಬ ಆರು ಗುಣಗಳಲ್ಲಿ ಪಂಡಿತನಾಗಬೇಕು. ದ್ಯೂತ ಸ್ತ್ರೀ ಪಾನಾದಿ ಸಪ್ತವ್ಯಸನಗಳಲ್ಲಿ

ಸೇರಿಕೊಳ್ಳದಿರಬೇಕು. ದುಷ್ಟ ಮಂತ್ರಾಲೋಚನೆಯಿಂದ ಕೂಡಿದ ಮೋಸದ ಮಾತುಗಳನ್ನು ವಿಶೇಷವಾಗಿ ಕೇಳುವುದರಿಂದ ಆಗುವ ಪ್ರಯೋಜನವೇನು? ಹಿರಿದಾದ ಈ ವಿಚಾರಗಳನ್ನು ಹೇಳಿದರೆ ಅಪ್ಪಾ ಆಗುವ ಪರಮಾರ್ಥವೇನೋ! (ಈಗ ಹೇಳಿಯೂ ಪ್ರಯೋಜನವಿಲ್ಲ ಎಂದಿರಬಹುದು)

ಕಂ|| ಪೆರ್ಚುಗೆ ಭರತಕುಲಂ
ನೆಲೆ
ವೆರ್ಚುಗೆ ನಿಮ್ಮೆರಡು
ತಂಡಮೊದವಿದ ನಣ್ಪಿಂ|
ಕರ್ಚುಗೆ ಕಲುಷಂ ನೀಂ ತಲೆ
ಯುರ್ಚದಿರೆನ್ನೆಂದ ನುಡಿಗೆ
ಕುರುಕುಳತಿಳಕಾ|| ೬೭||

ಪದ್ಯ-೬೭:ಪದವಿಭಾಗ-

ಅರ್ಥ:ಪೆರ್ಚುಗೆ ಭರತಕುಲಂ (ಭರತಕುಲ (ವಂಶ)ಹೆಚ್ಚಲಿ ಅಭಿವೃದ್ಧಿಯಾಗಲಿ;)

ನೆಲೆವೆರ್ಚುಗೆ ನಿಮ್ಮ ಎರಡು ತಂಡಂ (ನಿಮ್ಮ ಎರಡು ಗುಂಪಿನ ನೆಲೆ ಸ್ಥಿತಿ ಈಗಿರುವುದಕ್ಕಿಂತ ಉತ್ಕೃಷ್ಟವಾಗಲಿ,) ಒದವಿದ ನಣ್ಪಿಂ ಕರ್ಚುಗೆ ಕಲುಷಂ (ಈಗ ಉಂಟಾಗಿರುವ ನಿಮ್ಮ ದ್ವೇಷವು ತೊಳೆದುಹೋಗಲಿ;) ನೀಂ ತಲೆಯುರ್ಚದಿರ್ (ತಲೆ ಎರಚದಿರು) ಎನ್ನ ಎಂದ ನುಡಿಗೆ ಕುರುಕುಳತಿಳಕಾ

(ಕುರುಕುಲಶ್ರೇಷ್ಠನಾದ ದುರ್ಯೋಧನನೇ ನೀನು ನಾನು ಹೇಳಿದ ಮಾತಿಗೆ ವಿರೋದವಾಗಿ ತಲೆಯಾಡಿಸಬೇಡ.)

ಪದ್ಯ-೬೭:ಅರ್ಥ: ಭರತಕುಲ (ವಂಶ) ಅಭಿವೃದ್ಧಿಯಾಗಲಿ; ನಿಮ್ಮ ಎರಡು ಗುಂಪಿನ ನೆಲೆ ಸ್ಥಿತಿ ಈಗಿರುವುದಕ್ಕಿಂತ ಉತ್ಕೃಷ್ಟವಾಗಲಿ, ಈಗ ಉಂಟಾಗಿರುವ ನಿಮ್ಮ

ದ್ವೇಷವು ತೊಳೆದುಹೋಗಲಿ;
ಕುರುಕುಲಶ್ರೇಷ್ಠನಾದ
ದುರ್ಯೋಧನನೇ ನೀನು
ನಾನು ಹೇಳಿದ ಮಾತಿಗೆ
ವಿರೋದವಾಗಿ
ತಲೆಯಾಡಿಸಬೇಡ.

ಉ|| ದೋಷಮುಮೇವಮುಂ ಶಕುನಿಯಿಂ ಯುವರಾಜನಿನಾಯ್ತು ಪೋಯ್ತು ನಿ

ದೋರ್ಷಿಗಳಪ್ಪ ನಿಮ್ಮೆರಡು ತಂಡಮುಮಿಂ ಪುದುವಾಳ್ವುದಂತದೇಂ| ದೋಷಮೊ ಮೇಣ್ ವೃಕೋದರನಿನಾ ರಣರಂಗದೊಳಾದ ದುಷ್ಟ ದು ಶ್ಶ್ಯಾಸನರಕ್ತಮೋಕ್ಷದೊಳೆ ದೋಷವಿಮೋಕ್ಷಮದೇಕೆ ಕೊಂಡಪೈ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ದೋಷಮುಂ

ಏವಮುಂ ಶಕುನಿಯಿಂ
ಯುವರಾಜನಿಂ ಆಯ್ತು
(ನಿಮ್ಮ ತಪ್ಪೂ ಕೋಪವೂ
ಶಕುನಿಯಿಂದಲೂ
ದುಶ್ಯಾಸನನಿಂದಲೂ
ಆಯಿತು,) ಪೋಯ್ತು
(ಹೋಯಿತು;)
ನಿರ್ದೋಷಿಗಳಪ್ಪ ನಿಮ್ಮೆರಡು
ತಂಡಮುಮಿಂ
(ನಿರ್ದೋಷಿಗಳಾದ ನಿಮ್ಮ
ಎರಡು ಗುಂಪೂ ಇನ್ನು ಕೂಡಿ

ಬಾಳಿರಿ;) ಪುದುವಾಳ್ವುದು ಅಂತು ಅದೇಂ ದೋಷಮೊ (ಹಾಗೆ ಹೊಂದಿಬಾಳುವುದು ಮಾಡುವುದು ದೋಷವೇ? ಅಲ್ಲ.) ಮೇಣ್ ವೃಕೋದರನಿಂ ಆ ರಣರಂಗದೊಳ್ ಆದ ದುಷ್ಟ ದುಶ್ಯಾಸನರಕ್ತ ಮೋಕ್ಷದೊಳೆ ದೋಷ ವಿಮೋಕ್ಷಂ ಅದೇಕೆ ಕೊಂಡಪ್ಪೈ(ಭೀಮನು ರಣರಂಗದಲ್ಲಿ

ಬಿಡುಗಡೆಮಾಡಿದ ದುಷ್ಟ ದುಶ್ಯಾಸನನ ರಕ್ತದಿಂದಲೇ ದೋಷವಿಮೋಚನೆಯೂ ಆಯಿತು. ನೀನು ಅದನ್ನೇ ಪುನ ಏಕೆ ಹಿಡಿದುಕೊಳ್ಳುವೆ? ಅದನ್ನು ಬಿಡು!)

ಪದ್ಯ-೬೮:ಅರ್ಥ: ನಿಮ್ಮ ತಪ್ಪೂ ಕೋಪವೂ ಶಕುನಿಯಿಂದಲೂ ದುಶ್ಯಾಸನನಿಂದಲೂ ಆಯಿತು, ಹೋಯಿತು;

ನಿರ್ದೋಷಿಗಳಾದ ನಿಮ್ಮ ಎರಡು ಗುಂಪೂ ಇನ್ನು ಕೂಡಿ ಬಾಳಿರಿ; ಹಾಗೆ ಹೊಂದಿಬಾಳುವುದು ಮಾಡುವುದು ದೋಷವೇನಲ್ಲ. ಭೀಮನು ರಣರಂಗದಲ್ಲಿ ಬಿಡುಗಡೆಮಾಡಿದ ದುಷ್ಟ ದುಶ್ಯಾಸನನ ರಕ್ತದಿಂದಲೇ ದೋಷವಿಮೋಚನೆಯೂ ಆಯಿತು. ನೀನು ಅದನ್ನೇ

ಪುನ ಏಕೆ ಹಿಡಿದುಕೊಳ್ಳುವೆ?
ಅದನ್ನು ಬಿಡು!

ವ|| ಎಂದು ನುಡಿದ ಪಿತಾಮಹನ ನುಡಿಗಳ್ಗೆ ಕುರುರಾಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ ಪಿತಾಮಹನ ನುಡಿಗಳ್ಗೆ (ಮಾತುಗಳಿಗೆ) ಕುರುರಾಜನು ಇಂತೆಂದಂ-

ವಚನ:ಅರ್ಥ:ಎಂದು ಹೇಳಿದ ಭೀಷ್ಮನ ಮಾತುಗಳಿಗೆ ದುರ್ಯೋಧನನು ಹೀಗೆಂದನು-

ಚಂ|| ಬಗೆ ಪೆಱತುಂಟೆ
ವೈರಿನೃಪರಂ
ತಱಿದೊಟ್ಟುವುದಲ್ಲದೆಂತುಮಿ|
|
ಲ್ಲಿಗೆ ಬರವಂ
ಭವತ್ಪದಸರೋಜವನಾಂ
ಬಲಗೊಂಡು ಮತ್ತಮಾ||

ಜಿಗೆ ನಡೆಯಲ್ಕೆ ಬಂದೆನೆನೆ ದೇವನದೀಸುತನಾತ್ಮಚಿತ್ತದೊಳ್|
ಬಗೆದನಿದೇನಖಂಡಿತಮೊ ಶೌರ್ಯಗುಣೋನ್ನತಿ ರಾಜರಾಜನಾ|| ೬೫ ||

ಪದ್ಯ-೬೫:ಪದವಿಭಾಗ-ಅರ್ಥ:ಬಗೆ (ಯೋಚನೆ) ಪೆಱತುಂಟೆ (ಬೇರೆ ಯೋಚನೆ ತನಗೆ ಉಂಟೇ? ಇಲ್ಲ!) ವೈರಿನೃಪರಂ ತಱಿದು

ಒಟ್ಟುವುದು ಅಲ್ಲದೆ
(ಶತ್ರುರಾಜರನ್ನು ಕತ್ತರಿಸಿ
ರಾಶಿಹಾಕುವುದಲ್ಲದೆ ಬೇರೆ
ಯೋಚನೆ ತನಗೆ ಉಂಟೇ?
ಇಲ್ಲ!) ಎಂತುಂ ಇಲ್ಲಿಗೆ ಬರವಂ
ಭವತ್ಪದಸರೋಜವನು ಆಂ
ಬಲಗೊಂಡು (ನಿಮ್ಮ
ಪಾದಕಮಲಗಳನ್ನು
ಪ್ರದಕ್ಷಿಣೆಮಾಡಿ ಪುನ
ಯುದ್ಧಕ್ಕೆ ಹೋಗೋಣವೆಂದು
-ಬಂದೆ ಎಂದನು) ಮತ್ತಂ

ಆಜಿಗೆ ನಡೆಯಲ್ಕೆ ಬಂದೆನು
ಎನೆ (ಪುನಃ ಯುದ್ಧಕ್ಕೆ
ಹೋಗೋಣವೆಂದು ಬಂದೆ
ಎನ್ನಲು,) ದೇವನದೀಸುತನು
ಆತ್ಮಚಿತ್ತದೊಳ್-ಬಗೆದನು
ಇದೇನ್ ಅಖಂಡಿತಮೊ
ಶೌರ್ಯಗುಣೋನ್ನತಿ
ರಾಜರಾಜನಾ (ಭೀಷ್ಮನು
ಚಕ್ರವರ್ತಿಯಾದ
ದುರ್ಯೋಧನನ
ಶೌರ್ಯಗುಣದ ಔನ್ನತ್ಯವು

ಏನು ಅಖಂಡಿತವ್ರೋ ಎಂದು ತನ್ನ ಮನಸ್ಸಿನಲ್ಲಿ ಸಂತೋಷಿಸಿದನು.)

ಪದ್ಯ-೬೫:ಅರ್ಥ:

ದುರ್ಯೋಧನನು ಮತ್ತೇನಜ್ಜ; ಶತ್ರುರಾಜರನ್ನು ಕತ್ತರಿಸಿ ರಾಶಿಹಾಕುವುದಲ್ಲದೆ ಬೇರೆ ಯೋಚನೆ ತನಗೆ ಉಂಟೇ? ಇಲ್ಲ! ನಿಮ್ಮ ಪಾದಕಮಲಗಳನ್ನು ಪ್ರದಕ್ಷಿಣೆಮಾಡಿ ಪುನಃ

ಯುದ್ಧಕ್ಕೆ ಹೋಗೋಣವೆಂದು ಬಂದೆ ಎನ್ನಲು, ಭೀಷ್ಮನು ಚಕ್ರವರ್ತಿಯಾದ ದುರ್ಯೋಧನನ ಶೌರ್ಯಗುಣದ ಔನ್ನತ್ಯವು ಏನು ಅಖಂಡಿತವ್ರೋ ಎಂದು ತನ್ನ ಮನಸ್ಸಿನಲ್ಲಿ ಸಂತೋಷಿಸಿದನು.

ವ|| ಎಂದಾದಿ ಮಧ್ಯಾವಸಾನದೊಳೆಲ್ಲಿಯು ಮೆಱಲದ ಕಲಿತನದಳವಿಂಗೆ

ಮನಂಗೊಂಡು ಮಗನೆ
ನಿನಗಪ್ಪೊಡೆ ದೆಯ್ವಂ
ಪ್ರತಿಕೂಲಮೆಂತುಂ ಕಾದಿ
ಗೆಲಲಾರ್ಪೆಯಲ್ಲೆ ಸೂಜಿಯ
ಕೂರ್ಪು
ಕುಂಬಳದೊಳಡಂಗುವಂತೆ
ನಿನ್ನೊಂದೆ ಮೆಯ್ಯೊಳಾದ
ಕೂರ್ಪು ಪಗೆವರ
ದರ್ಪಮನದಿರ್ಪದಲ್ತೆ ನಿನಗಂ
ಮೈತ್ರೇಯರ್
ಕೊಟ್ಟೂರುಭಂಗಶಾಪಮನಿ

ವಾರಿತಮೆನ್ನೀ ಪ್ರಾಣಮುಳ್ಳಂತೆ ಸಂಧಿಯಂ ಮಾಡಿ ವಸುಂಧರೆಯಂ ಕೊಂಡು ಕಾಲಮಂ ಕಜ್ಜಮುಮನಱಿದು ಬಱಿಯಂ ನಿನ್ನ ನೆಗೞ್ವುದಂ ನೆಗೞ್ವುದೆಂದು-

ವಚನ:ಪದವಿಭಾಗ-

ಅರ್ಥ:ಎಂದು ಆದಿ ಮಧ್ಯಾವಸಾನದೊಳ್ (ಮೊದಲಿಂದ ಕೊನೆಯವರೆಗೆ) ಎಲ್ಲಿಯುಮ್ ಅಱಿಲದ

ಕಲಿತನದ ಅಳವಿಂಗೆ (ಎಲ್ಲಿಯೂ ಸಡಿಲವಾಗದ ಅವನ ಶೌರ್ಯದ ಪ್ರಮಾಣಕ್ಕೆ) ಮನಂಗೊಂಡು (ಸಂತೋಷಪಟ್ಟು ,) ಮಗನೆ ನಿನಗೆ ಅಪ್ಪೊಡೆ ದೆಯ್ವಂ ಪ್ರತಿಕೂಲಮ್ ಎಂತುಂ ಕಾದಿ ಗೆಲಲ ಆರ್ಪೆಯಲ್ಲೆ (‘ಮಗು ನಿನಗಾದರೆ ದೈವವು ಪ್ರತಿಕೂಲವಾಗಿದೆ. ಕಾದಿ ಗೆಲ್ಲಲಾರೆ;) ಸೂಜಿಯ ಕೂರ್ಪು

ಕುಂಬಳದೊಳ್
ಅಡಂಗುವಂತೆ ನಿನ್ನೊಂದೆ
ಮೆಯ್ಯೊಳು ಆದ ಕೂರ್ಪು
(ಸೂಜಿಯ ಹರಿತವಾದ
ತುದಿಯು ಕುಂಬಳಕಾಯಲ್ಲಿ
ಅಡಗಿಹೋಗುವ ಹಾಗೆ ನಿನ್ನ
ಒಂದೇ ಶರೀರದಲ್ಲಿರುವ
ಹರಿತವಾದ ಶಕ್ತಿ) ಪಗೆವರ
ದರ್ಪಮನು ಅದಿರ್ಪದಲ್ತೆ
(ಶತ್ರುಗಳ ದರ್ಪವನ್ನು
ನಡುಗಿಸುವಂತ್ದ್ದಲವೇ?)

ನಿನಗಂ ಮೈತ್ರೇಯರ್ ಕೊಟ್ಟ ಊರುಭಂಗ ಶಾಪಮಂ ಅನಿವಾರಿತಮ್ (ನಿನಗೆ ಮೈತ್ರೇಯರು ಕೊಟ್ಟಿರುವ ಊರುಭಂಗ ಶಾಪವು ತಪ್ಪಿಸುವುದಕ್ಕಾಗದು.) ಎನ್ನ ಈ ಪ್ರಾಣಮುಳ್ಳಂತೆ ಸಂಧಿಯಂ ಮಾಡಿ ವಸುಂಧರೆಯಂ ಕೊಂಡು (ನನ್ನ ಪ್ರಾಣವು ಇರುವಾಗಲೇ ಸಂಧಿಯನ್ನು ಮಾಡಿಕೊಂಡು

ಭೂಮಿಯನ್ನು ಸ್ವೀಕರಿಸಿ) ಕಾಲಮಂ ಕಜ್ಜಮುಮನು ಅಱಿದು (ಮುಂದಿನ ಕಾಲವನ್ನೂ ಕಾರ್ಯವನ್ನೂ ತಿಳಿದು) ಬೞಿಯಂ ನಿನ್ನ ನೆಗೞ್ವುದಂ ನೆಗೞ್ವುದೆಂದು (ಬಳಿಕ ನಿನ್ನ ಏಳಿಗೆಗೆ ಮಾಡಬೇಕಾದ್ದನ್ನು ಮಾಡು ಎಂದರು.)-

ವಚನ:ಅರ್ಥ:ಮೊದಲಿಂದ ಕೊನೆಯವರೆಗೆ ಎಲ್ಲಿಯೂ

ಸಡಿಲವಾಗದ ಅವನ ಶೌರ್ಯದ ಪ್ರಮಾಣಕ್ಕೆ ಸಂತೋಷಪಟ್ಟು (ದುರ್ಯೋಧನನನ್ನು ಕುರಿತು) ‘ಮಗು ನಿನಗಾದರೆ ದೈವವು ಪ್ರತಿಕೂಲವಾಗಿದೆ. ಕಾದಿ ಗೆಲ್ಲಲಾರೆ; ಸೂಜಿಯ ಹರಿತವಾದ ತುದಿಯು ಕುಂಬಳಕಾಯಲ್ಲಿ ಅಡಗಿಹೋಗುವ ಹಾಗೆ ನಿನ್ನ ಒಂದೇ ಶರೀರದಲ್ಲಿರುವ

ಹರಿತವಾದ ಶಕ್ತಿ ಶತ್ರುಗಳ ದರ್ಪವನ್ನು ನಡುಗಿಸುವಂತ್ದ್ದಲವೇ? ನಿನಗೆ ಮೈತ್ರೇಯರು ಕೊಟ್ಟಿರುವ ಊರುಭಂಗ ಶಾಪವು ತಪ್ಪಿಸುವುದಕ್ಕಾಗದು. ನನ್ನ ಪ್ರಾಣವು ಇರುವಾಗಲೇ ಸಂಧಿಯನ್ನು ಮಾಡಿಕೊಂಡು ಭೂಮಿಯನ್ನು ಸ್ವೀಕರಿಸಿ ಮುಂದಿನ ಕಾಲವನ್ನೂ ಕಾರ್ಯವನ್ನೂ ತಿಳಿದು ಬಳಿಕ

ನಿನ್ನ ಏಳಿಗೆಗೆ
ಮಾಡಬೇಕಾದ್ದನ್ನು ಮಾಡು
ಎಂದರು.

ಚಂ||
ಪರಿಕಿಪುದೊಂದಱಿಂದೆರಡ
ನೋತೊಳಕೊಳ್ವುದು
ಮೂಱಱಿಂದೆ ನಾ
ಲ್ಕರಿದಱಿದಯ್ದಱಿಂದೆ ನೆರೆ
ಕಲ್ವುದು
ನಿರ್ಣಯಮಾಗಿರಾಱಿರೊಳ್|

ಪರಿಣತನಪ್ಪುದೇಱಿರೊಳ

ಮೊಂದದೆ ನಿಲ್ವುದು

ದುರ್ವಿಮಂತ್ರಮಂ

ಪರೆಪ ಟಮಾಳಮಂ

ಪಿರಿದನೋದಿದೊಡಪ್ಪ

ಪದಾರ್ಥಮಾವುದೋ|| ೬೬ ||

ಪದ್ಯ-೬೬:ಪದವಿಭಾಗ-ಅರ್ಥ:ಪರಿಕಿಪುದು(ಪರೀಕ್ಷಿಸಬೇಕು.) ಒಂದಱಿಂದೆ ಎರಡನು (ಒಂದರಿಂದ ಎಂದರೆ ಬುದ್ಧಿಯಿಂದ ಎರಡು

ಕಾರ್ಯಾ ಅಕಾರ್ಯಗಳನ್ನು
ಮಾಡಬೇಕಾದ್ದು
ಮಾಡಬಾರದ್ದು,ಅಥವಾ
ಪುಣ್ಯಪಾಪಗಳನ್ನು
ಪರೀಕ್ಷಿಸಬೇಕು.)
ಓತೊಳಕೊಳ್ವುದು
ಮೂಱಱಿಂದೆ (ಶತ್ರು ಮಿತ್ರ
ಬಾಂಧವ ರೆಂಬ ಮೂವರನ್ನು
ಒಲಿಸಿಕೊಳ್ಳಬೇಕು.) ನಾಲ್ಕು
ಅರಿದು ಅಱಿದಯ್ದಱಿಂದೆ
ನೆರೆ ಕಲ್ವುದು (ಕಷ್ಟವಾದ

ಸಾಮ ದಾನ ಭೇದ
ದಂಡಗಳೆಂಬ
ಉಪಾಯಚತುಷ್ಟಯಗಳನ್ನು
ಒಳಪಡಿಸಿಕೊಳ್ಳಬೇಕು.
ಅಯ್ದು ಜ್ಞಾನೇಂದ್ರಿಯಗಳಿಂದ
ಪೂರ್ಣವಾಗಿ ವಿವೇಕವನ್ನು
ಕಲಿತುಕೊಳ್ಳಬೇಕು.)
ನಿರ್ಣಯಮಾಗಿರು
ಆಱಿರೊಳ್ ಪರಿಣತನಪ್ಪುದು
(ರಾಜಯೋಗ್ಯವಾದ ಸಂಧಿ,
ವಿಗ್ರಹ, ಯಾನ, ಆಸನ,

ಸಂಶ್ರಯ, ದ್ವೈಧೀ ಭಾವ ಎಂಬ
ಆರು ಗುಣಗಳಲ್ಲಿ
ಪಂಡಿತನಾಗಬೇಕು.)
ಏೞಿರೊಳಂ ಒಂದದೆ ನಿಲ್ವುದು
(ದ್ಯೂತ ಸ್ತ್ರೀ ಪಾನಾದಿ
ಸಪ್ತವ್ಯಸನಗಳಲ್ಲಿ
ಸೇರಿಕೊಳ್ಳದಿರಬೇಕು.)
ದುರ್ವಿಮಂತ್ರಮಂ ಪರೆಪ
ಟಮಾಳಮಂ (ದುಷ್ಟ
ಮಂತ್ರಾಲೋಚನೆಯಿಂದ
ಕೂಡಿದ ಮೋಸದ

ಮಾತುಗಳನ್ನು ವಿಶೇಷವಾಗಿ ಕೇಳುವುದರಿಂದ ಆಗುವ ಪ್ರಯೋಜನವೇನು?) ಪಿರಿದನು ಒದಿದೊಡೆ ಅಪ್ಪ ಪದಾರ್ಥಮಾವುದೋ (ಹಿರಿದಾದ ಈ ವಿಚಾರಗಳನ್ನು ಹೇಳಿದರೆ ಅಪ್ಪಾ ಆಗುವ ಪರಮಾರ್ಥವೇನೋ!)

ಪದ್ಯ-೬೬:ಅರ್ಥ:

ಒಂದರಿಂದ ಎಂದರೆ ಬುದ್ಧಿಯಿಂದ ಎರಡು

ಕಾರ್ಯಾ ಅಕಾರ್ಯಗಳನ್ನು
ಮಾಡಬೇಕಾದ್ದು
ಮಾಡಬಾರದ್ದು,ಅಥವಾ
ಪುಣ್ಯಪಾಪಗಳನ್ನು
ಪರೀಕ್ಷಿಸಬೇಕು. ಶತ್ರು ಮಿತ್ರ
ಬಾಂಧವ ರೆಂಬ ಮೂವರನ್ನು
ಒಲಿಸಿಕೊಳ್ಳಬೇಕು. ಕಷ್ಟವಾದ
ಸಾಮ ದಾನ ಭೇದ
ದಂಡಗಳೆಂಬ
ಉಪಾಯಚತುಷ್ಟಯಗಳನ್ನು
ಒಳಪಡಿಸಿಕೊಳ್ಳಬೇಕು.

ಅಯ್ದು ಜ್ಞಾನೇಂದ್ರಿಯಗಳಿಂದ
ಪೂರ್ಣವಾಗಿ ವಿವೇಕವನ್ನು
ಕಲಿತುಕೊಳ್ಳಬೇಕು.
ರಾಜಯೋಗ್ಯವಾದ ಸಂಧಿ,
ವಿಗ್ರಹ, ಯಾನ, ಆಸನ,
ಸಂಶ್ರಯ, ದ್ವೈಧೀ ಭಾವ ಎಂಬ
ಆರು ಗುಣಗಳಲ್ಲಿ
ಪಂಡಿತನಾಗಬೇಕು. ದ್ಯೂತ
ಸ್ತ್ರೀ ಪಾನಾದಿ
ಸಪ್ತವ್ಯಸನಗಳಲ್ಲಿ
ಸೇರಿಕೊಳ್ಳದಿರಬೇಕು. ದುಷ್ಟ

ಮಂತ್ರಾಲೋಚನೆಯಿಂದ
ಕೂಡಿದ ಮೋಸದ
ಮಾತುಗಳನ್ನು ವಿಶೇಷವಾಗಿ
ಕೇಳುವುದರಿಂದ ಆಗುವ
ಪ್ರಯೋಜನವೇನು?
ಹಿರಿದಾದ ಈ ವಿಚಾರಗಳನ್ನು
ಹೇಳಿದರೆ ಅಪ್ಪಾ ಆಗುವ
ಪರಮಾರ್ಥವೇನೋ! (ಈಗ
ಹೇಳಿಯೂ ಪ್ರಯೋಜನವಿಲ್ಲ
ಎಂದಿರಬಹುದು)

ಕಂ|| ಪೆರ್ಚುಗೆ ಭರತಕುಲಂ

ನೆಲೆ

ವೆರ್ಚುಗೆ ನಿಮ್ಮೆರಡು

ತಂಡಮೊದವಿದ ನಣ್ಪಿಂ|

ಕರ್ಚುಗೆ ಕಲುಷಂ ನೀಂ ತಲೆ

ಯುರ್ಚದಿರೆನ್ನೆಂದ ನುಡಿಗೆ

ಕುರುಕುಳತಿಳಕಾ|| ೬೭||

ಪದ್ಯ-೬೭:ಪದವಿಭಾಗ-

ಅರ್ಥ:ಪೆರ್ಚುಗೆ ಭರತಕುಲಂ (ಭರತಕುಲ (ವಂಶ)ಹೆಚ್ಚಲಿ ಅಭಿವೃದ್ಧಿಯಾಗಲಿ;)

ನೆಲೆವೆರ್ಚುಗೆ ನಿಮ್ಮ ಎರಡು
ತಂಡಂ (ನಿಮ್ಮ ಎರಡು
ಗುಂಪಿನ ನೆಲೆ ಸ್ಥಿತಿ
ಈಗಿರುವುದಕ್ಕಿಂತ
ಉತ್ಕೃಷ್ಟವಾಗಲಿ,) ಒದವಿದ
ನಣ್ಪಿಂ ಕರ್ಚುಗೆ ಕಲುಷಂ
(ಈಗ ಉಂಟಾಗಿರುವ ನಿಮ್ಮ
ದ್ವೇಷವು ತೊಳೆದುಹೋಗಲಿ;)
ನೀಂ ತಲೆಯುರ್ಚದಿರ್ (ತಲೆ
ಎರಚದಿರು) ಎನ್ನ ಎಂದ
ನುಡಿಗೆ ಕುರುಕುಳತಿಳಕಾ

(ಕುರುಕುಲಶ್ರೇಷ್ಠನಾದ ದುರ್ಯೋಧನನೇ ನೀನು ನಾನು ಹೇಳಿದ ಮಾತಿಗೆ ವಿರೋದವಾಗಿ ತಲೆಯಾಡಿಸಬೇಡ.)

ಪದ್ಯ-೬೭:ಅರ್ಥ: ಭರತಕುಲ (ವಂಶ) ಅಭಿವೃದ್ಧಿಯಾಗಲಿ; ನಿಮ್ಮ ಎರಡು ಗುಂಪಿನ ನೆಲೆ ಸ್ಥಿತಿ ಈಗಿರುವುದಕ್ಕಿಂತ ಉತ್ಕೃಷ್ಟವಾಗಲಿ, ಈಗ ಉಂಟಾಗಿರುವ ನಿಮ್ಮ

ದ್ವೇಷವು ತೊಳೆದುಹೋಗಲಿ; ಕುರುಕುಲಶ್ರೇಷ್ಠನಾದ ದುರ್ಯೋಧನನೇ ನೀನು ನಾನು ಹೇಳಿದ ಮಾತಿಗೆ ವಿರೋದವಾಗಿ ತಲೆಯಾಡಿಸಬೇಡ.

ಉ|| ದೋಷಮುಮೇವಮುಂ ಶಕುನಿಯಿಂ ಯುವರಾಜನಿನಾಯ್ತು ಪೋಯ್ತು ನಿ

ದೋರ್ಷಿಗಳಪ್ಪ ನಿಮ್ಮೆರಡು ತಂಡಮುಮಿಂ ಪುದುವಾಳ್ವುದಂತದೇಂ| ದೋಷಮೊ ಮೇಣ್ ವೃಕೋದರನಿನಾ ರಣರಂಗದೊಳಾದ ದುಷ್ಟ ದುಶ್ಶ್ಯಾಸನರಕ್ತಮೋಕ್ಷದೊಳೆ ದೋಷವಿಮೋಕ್ಷಮದೇಕೆ ಕೊಂಡಪೈ|| ೬೮ ||

ಪದ್ಯ-೬೮:ಪದವಿಭಾಗ-

ಅರ್ಥ:ದೋಷಮುಂ

ಏವಮುಂ ಶಕುನಿಯಿಂ
ಯುವರಾಜನಿಂ ಆಯ್ತು
(ನಿಮ್ಮ ತಪ್ಪೂ ಕೋಪವೂ
ಶಕುನಿಯಿಂದಲೂ
ದುಶ್ಯಾಸನನಿಂದಲೂ
ಆಯಿತು,) ಪೋಯ್ತು
(ಹೋಯಿತು;)
ನಿರ್ದೋಷಿಗಳಪ್ಪ ನಿಮ್ಮೆರಡು
ತಂಡಮುಮಿಂ
(ನಿರ್ದೋಷಿಗಳಾದ ನಿಮ್ಮ
ಎರಡು ಗುಂಪೂ ಇನ್ನು ಕೂಡಿ

ಬಾಳಿರಿ;) ಪುದುವಾಳ್ವುದು ಅಂತು ಅದೇಂ ದೋಷಮೊ (ಹಾಗೆ ಹೊಂದಿಬಾಳುವುದು ಮಾಡುವುದು ದೋಷವೇ? ಅಲ್ಲ.) ಮೇಣ್ ವೃಕೋದರನಿಂ ಆ ರಣರಂಗದೊಳ್ ಆದ ದುಷ್ಟ ದುಶ್ಶ್ಯಾಸನರಕ್ತ ಮೋಕ್ಷದೊಳೆ ದೋಷ ವಿಮೋಕ್ಷಂ ಅದೇಕೆ ಕೊಂಡಪ್ಪೆ(ಭೀಮನು ರಣರಂಗದಲ್ಲಿ

ಬಿಡುಗಡೆಮಾಡಿದ ದುಷ್ಟ ದುಶ್ಶ್ಯಾಸನನ ರಕ್ತದಿಂದಲೇ ದೋಷವಿಮೋಚನೆಯೂ ಆಯಿತು. ನೀನು ಅದನ್ನೇ ಪುನ ಏಕೆ ಹಿಡಿದುಕೊಳ್ಳುವೆ? ಅದನ್ನು ಬಿಡು!)

ಪದ್ಯ-೬೮:ಅರ್ಥ: ನಿಮ್ಮ ತಪ್ಪೂ ಕೋಪವೂ ಶಕುನಿಯಿಂದಲೂ ದುಶ್ಶ್ಯಾಸನನಿಂದಲೂ ಆಯಿತು, ಹೋಯಿತು;

ನಿರ್ದೋಷಿಗಳಾದ ನಿಮ್ಮ ಎರಡು ಗುಂಪೂ ಇನ್ನು ಕೂಡಿ ಬಾಳಿರಿ; ಹಾಗೆ ಹೊಂದಿಬಾಳುವುದು ಮಾಡುವುದು ದೋಷವೇನಲ್ಲ. ಭೀಮನು ರಣರಂಗದಲ್ಲಿ ಬಿಡುಗಡೆಮಾಡಿದ ದುಷ್ಟ ದುಶ್ಯಾಸನನ ರಕ್ತದಿಂದಲೇ ದೋಷವಿಮೋಚನೆಯೂ ಆಯಿತು. ನೀನು ಅದನ್ನೇ

ಪುನ ಏಕೆ ಹಿಡಿದುಕೊಳ್ಳುವೆ?
ಅದನ್ನು ಬಿಡು!

<u>ದುರ್ಯೋಧನನು ತನ್ನವರೆಲ್ಲಾ ಸತ್ತಮೇಲೆ ಭೂಮಿ ಬೇಡ- ಯುದ್ಧವನ್ನೇ ಮಾಡುವೆನೆಂದು ಭೀಷ್ಮರಿಗೆ ಹೇಳಿದುದು</u>

ವ|| ಎಂದು ನುಡಿದ ಪಿತಾಮಹನ ನುಡಿಗಳ್ಗೆ ಕುರುರಾಜನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದ

ಪಿತಾಮಹನ ನುಡಿಗಳ್ಗೆ (

ಮಾತುಗಳಿಗೆ) ಕುರುರಾಜನು

ಇಂತೆಂದಂ-

ವಚನ:ಅರ್ಥ:ಎಂದು ಹೇಳಿದ

ಭೀಷ್ಮನ ಮಾತುಗಳಿಗೆ

ದುಯೋಧನನು ಹೀಗೆಂದನು-

ಮ|| ಶರಶಯ್ಯಾಗ್ರದೊಳಿಂತು

ನೀಮಿರೆ

ಘಟಪ್ರೋದ್ಭೂತನಂತಾಗೆ ವಾ

ಸರನಾಥಾತ್ಮಜನಂತು ಸಾಯೆ

ರಣದೊಳ್ ದುಶ್ಶ್ಯಾಸನಂ ತದ್ವ

ಕೋ|

ದರನಿಂದಂತಱಿದಱ್ಗೆ

ಸೈರಿಸಿಯುಮಾಂ

ಸಂಧಾನಮಂ ವೈರಿ ಭೂಪ

ರೊಳಿಂ ಸಂಧಿಸಿ

ಪೇಱಿಮಾರ್ಗೆ ಮೆರೆವೆಂ

ಸಂಪತ್ತುಮಂ ಶ್ರೀಯುಮಂ||

೬೯ ||

ಪದ್ಯ-೬೯:ಪದವಿಭಾಗ-

ಅರ್ಥ:ಶರಶಯ್ಯಾಗ್ರದೊಳು

ಇಂತು ನೀಂ ಇರೆ,

ಘಟಪ್ರೋದ್ಭೂತನು ಅಂತಾಗೆ
(ಬಾಣದ ಹಾಸಿಗೆಯ
ತುದಿಯಲ್ಲಿ ನೀವು
ಹೀಗಿರುವಾಗ,
ದ್ರೋಣಾಚಾರ್ಯರು ಹಾಗೆ
ಆಗಿರುವಾಗ,)
ವಾಸರನಾಥಾತ್ಮಜನು ಅಂತು
ಸಾಯೆ (ಕರ್ಣನು ಹಾಗೆ
ಸತ್ತಿರಲು) ರಣದೊಳ್
ದುಶ್ಶ್ಯಾಸನಂ ತದ್ವ
ಕೋದರನಿಂದ ಅಂತು

ಅಱಿದು ಅಱ್ಗೆ (ಯುದ್ಧದಲ್ಲಿ
ದುಶ್ಶ್ಯಾಸನನು ಭೀಮನಿಂದ
ಹಾಗೆ ಸತ್ತು ನಾಶವಾಗಿರುವಾಗ
-ಇವೆಲ್ಲವನ್ನೂ)) ಸೈರಿಸಿಯುಂ
ಆಂ ಸಂಧಾನಮಂ ವೈರಿ
ಭೂಪರೊಳಿಂ ಸಂಧಿಸಿ (ನಾನು
ಸಹಿಸಿಕೊಂಡು ಶತ್ರುರಾಜರಲ್ಲಿ
ಸಂಧಿಯನ್ನು ವೈರಿಗಳಲ್ಲಿ
ಸಂಧಿಮಾಡಿಕೊಂಡು) ಪೇಱಿಂ
ಆರ್ಗೆ ಮೆರೆವೆಂ ಸಂಪತ್ತುಮಂ
ಶ್ರೀಯುಮಂ (ಯಾರಿಗೆ ನನ್ನ

ಐಶ್ವರ್ಯವನ್ನೂ ವೈಭವವನ್ನೂ ಪ್ರದರ್ಶಿಸಬೇಕು, ಹೇಳಿ.)

ಪದ್ಯ-೬೯:ಅರ್ಥ: ಬಾಣದ ಹಾಸಿಗೆಯ ತುದಿಯಲ್ಲಿ ನೀವು ಹೀಗಿರುವಾಗ, ದ್ರೋಣಾಚಾರ್ಯರು ಹಾಗೆ ಆಗಿರುವಾಗ, ಕರ್ಣನು ಹಾಗೆ ಸತ್ತಿರಲು, ಯುದ್ಧದಲ್ಲಿ ದುಶ್ಯಾಸನನು ಭೀಮನಿಂದ ಹಾಗೆ ಸತ್ತು ನಾಶವಾಗಿರುವಾಗ

(ಇವೆಲ್ಲವನ್ನೂ) ನಾನು ಸಹಿಸಿಕೊಂಡು ಶತ್ರುರಾಜರಲ್ಲಿ ಸಂಧಿಯನ್ನು ವೈರಿಗಳಲ್ಲಿ ಸಂಧಿಮಾಡಿಕೊಂಡು ಯಾರಿಗೆ ನನ್ನ ಐಶ್ವರ್ಯವನ್ನೂ ವೈಭವವನ್ನೂ ಪ್ರದರ್ಶಿಸಬೇಕು.

ಕಂ|| ಬಿಡಿಮೆನ್ನ ನುಡಿಗೆ ಬೀಱೊಳ್ಕೆ
ನುಡಿಯದಿರಿಂ ಪೆಱತನಜ್ಜ
ಮುಂ ನುಡಿದೆರಡಂ|

ನುಡಿವೆನೆ ಚಲಮಂ ಬಲ್ವಿಡಿ ವಿಡಿದೆಂ ತನ್ನಪ್ಪುದಕ್ಕೆ ಸಂಗರ ಧರೆಯೊಳ್|| ೭೦ ||

ಪದ್ಯ-೦೦:ಪದವಿಭಾಗ-ಅರ್ಥ:ಬಿಡಿಂ ಎನ್ನ ನುಡಿಗೆ ಬೀಟ್ಪೊಳೆ ನುಡಿಯದಿರಿಂ ಪೆಱತನು ಅಜ್ಜ (ನನ್ನ ಮಾತಿಗೆ ನನ್ನನ್ನು ಬಿಡಿ. ಅಜ್ಜ, ತಮ್ಮನ್ನು ಬೀಳ್ಕೊಡಲು (ಅಪ್ಪಣೆಯನ್ನು ಪಡೆದು ಹೋಗುವುದಕ್ಕಾಗಿ) ಬಂದ ನನಗೆ ಬೇರೆ

ಯಾವುದನ್ನೂ ಹೇಳಬೇಡಿ.)
ಮುಂ ನುಡಿದು ಎರಡಂ
ನುಡಿವೆನೆ (ಮೋದಲು ಒಂದು
ರೀತಿ ಪುನ ಬೇರೆ ರೀತಿಯಲ್ಲಿ
ಹೇಳುತ್ತೇನೆಯೇ?) ಚಲಮಂ
ಬಲ್ವಿಡಿವಿಡಿದೆಂ (ಛಲವನ್ನು
ಬಿಗಿಯಾಗಿ ಹಿಡಿದಿದ್ದೇನೆ.)
ತನ್ನಪ್ಪುದಕ್ಕೆ ಸಂಗರ
ಧರೆಯೊಳ್ (ಯುದ್ಧದಲ್ಲಿ
ತಾನಾದಂತಾಗಲಿ’ ಎಂದನು.)

ಪದ್ಯ-00:ಅರ್ಥ: ನನ್ನ ಮಾತಿಗೆ ನನ್ನನ್ನು ಬಿಡಿ. ಅಜ್ಜ, ತಮ್ಮನ್ನು ಬೀಳ್ಕೊಡಲು (ಅಪ್ಪಣೆಯನ್ನು ಪಡೆದು ಹೋಗುವುದಕ್ಕಾಗಿ) ಬಂದ ನನಗೆ ಬೇರೆ ಯಾವುದನ್ನೂ ಹೇಳಬೇಡಿ. ಮೋದಲು ಒಂದು ರೀತಿ ಪುನ ಬೇರೆ ರೀತಿಯಲ್ಲಿ ಹೇಳುತ್ತೇನೆಯೇ? ಛಲವನ್ನು ಬಿಗಿಯಾಗಿ

ಹಿಡಿದಿದ್ದೇನೆ. ಯುದ್ಧದಲ್ಲಿ ತಾನಾದುದಾಗಲಿ’ ಎಂದನು.

ವ|| ಎಂಬುದುಂ ನೀನುಮೆಂತುಂ ಕಾದಿಯಲ್ಲದಿರೆಯಪ್ಪೊಡಿಂದಿನೊಂದಿವಸಮನೆನ್ನ ಪೇೞ್ವ ಜಳಮಂತ್ರೋಪದೇಶಮಂ ಕೆಯ್ಕೊಂಡು ಕುರುಕ್ಷೇತ್ರದುತ್ತರದಿಗ್ಭಾಗದ ವೈಶಂಪಾಯನ ಸರೋವರದೊಳ್ ಮುೞುಗಿ

ಕಾಲಾಗ್ನಿರುದ್ರಂ
ರಸಾತಳದೊಳಡಂಗಿರ್ಪಂತಿರ್
ದು ನಿನ್ನವಸರಕ್ಕೆ ಬಂದು
ಕೂಡುವ ಬಲದೇವನುಮಂ
ನಿನ್ನಿರ್ದೆಡೆಯನಱಿಯದಱಸು
ವಶ್ವತ್ಥಾಮ ಕೃಪ
ಕೃತವರ್ಮರುಮಂ
ಕೂಡಿಕೊಂಡು ಪಗೆವರಂ ನಾಳೆ
ಕಾದಿ ಗೆಲ್ವುದೆಂದು
ಹಿತೋಪದೇಶಂಬೆರಸು
ಜಳಮಂತ್ರೋಪದೇಶಮಂ

ಕಿವಿಯೊಳ್ ಪರ್ಚೆ ಪೇೞ್ದು
ಕುರುಪಿತಾಮಹಂ
ಸಂಜಯನಂ ಧೃತರಾಷ್ಟ್ರನಲ್ಲಿಗೆ
ಸಂಧಾನವಾರ್ತೆಯಂ
ಸಮಕೊಳಿಸುವಂತಾನಾಗತ
ಬಾಧಾಪ್ರತಿಷೇಧಂ
ಮಾಡುವಂತಟ್ಟಿ ಸಕಳ
ಕುರುಕುಳಾವಲಂಬನಕಲ್ಪವೃಕ್ಷ
ಮಂ ಪರಸಿ ಪೋಗಲ್ವೇೞ್
ದೇವನದೀಪ್ರಿಯಪುತ್ರನಂ
ಧೃತರಾಷ್ಟ್ರಪುತ್ರಂ

ಬೀಱಿೞ್ಕೊಂಡು ಕನಕಪತ್ರಲತಾಲಾಂಛಿತಗದಾ ದಂಡಮಂ ಕೊಂಡೊರ್ವನೆ ವೈಶಂಪಾಯನಸರೋವರದ ಬಟ್ಟೆಯಂ ನಡೆಗೊಂಡು-

ವಚನ:ಪದವಿಭಾಗ-

ಅರ್ಥ:ಎಂಬುದುಂ ನೀನುಂ ಎಂತುಂ ಕಾದಿಯಲ್ಲದೆ ಇರೆಯಪ್ಪೊಡೆ ಇಂದಿನ ಒಂದಿವಸಮಂ (ನೀನು ಹೇಗೂ ಯುದ್ಧಮಾಡದೇ

ಇರುವುದಿಲ್ಲವಾದರೆ ಈ
ಒಂದು ದಿವಸವನ್ನು) ಎನ್ನ
ಪೇಳ್ವಿ
ಜಳಮಂತ್ರೋಪದೇಶಮಂ
ಕೆಯ್ಕೊಂಡು (ನಾನು ಹೇಳುವ
ಜಲಮಂತ್ರೋಪದೇಶವನ್ನು
ಅಂಗೀಕರಿಸಿ) ಕುರುಕ್ಷೇತ್ರದ
ಉತ್ತರ ದಿಗ್ಭಾಗದ
ವೈಶಂಪಾಯನ
ಸರೋವರದೊಳ್
(ಕುರುಕ್ಷೇತ್ರದ ಉತ್ತರ

ದಿಗ್ಭಾಗದಲ್ಲಿರುವ
ವೈಶಂಪಾಯನಸರೋವರದ
ಲ್ಲಿ) ಮುಳುಗಿ ಕಾಲಾಗ್ನಿರುದ್ರಂ
ರಸಾತಳದೊಳಡಂಗಿರ್ಪಂತೆ
ಇರ್ದು (ಮುಳುಗಿದ್ದ
ಕಾಲಾಗ್ನಿರುದ್ರನು
ಪಾತಾಳಲೋಕದಲ್ಲಡಗಿರುವ
ಹಾಗೆ ಇದ್ದು) ನಿನ್ನ ಅವಸರಕ್ಕೆ
ಬಂದು ಕೂಡುವ
ಬಲದೇವನುಮಂ (ನಿನ್ನ
ಸಹಾಯಕ್ಕೆ ಬಂದು ಸೇರುವ

ಬಲರಾಮನನ್ನೂ) ನಿನ್ನ
ಎರ್ದೆಡೆಯನು ಅಱಿಯದ
ಱಿಸುವಶ್ವತ್ಥಾಮ ಕೃಪ
ಕೃತವರ್ಮರುಮಂ (ನೀನು
ಇರುವ ಸ್ಥಳವನ್ನು ತಿಳಿಯದೇ
ಹುಡುಕುತ್ತಿರುವ ಅಶ್ವತ್ಥಾಮ
ಕೃಪ ಕೃತವರ್ಮರನ್ನೂ)
ಕೂಡಿಕೊಂಡು ಪಗೆವರಂ
ನಾಳೆ ಕಾದಿ ಗೆಲ್ವುದೆಂದು
(ಶತ್ರುಗಳನ್ನು ನಾಳೆ
ಯುದ್ಧಮಾಡಿ ಜಯಿಸು”

ಎಂದು) ಹಿತೋಪದೇಶಂ
ಬೆರಸು
ಜಳಮಂತ್ರೋಪದೇಶಮಂ
ಕಿವಿಯೊಳ್ ಪರ್ಚಿ ಪೇೞ್ದು
(ಈ ಹಿತೋಪದೇಶದಿಂದ
ಕೂಡಿದ
ಜಳಮಂತ್ರೋದೇಶವನ್ನು
ದುಯೋಧನನ ಕಿವಿಯಲ್ಲಿ
ರಹಸ್ಯವಾಗಿ
ಉಪದೇಶಿಸಿದನು. ಹೇಳಿ-)
ಕುರುಪಿತಾಮಹಂ

ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತೆ ಆನಾಗತಬಾಧಾ ಪ್ರತಿಷೇಧಂ ಮಾಡುವಂತೆ ಅಟ್ಟಿ (ಸಂಜಯನನ್ನು ಧೃತರಾಷ್ಟ್ರನ ಬಳಿಗೆ ಸಂಧಾನದ ಮಾತನ್ನು ಸಿದ್ಧಗೊಳಿಸುವುದಕ್ಕಾಗಿ ಕಳುಹಿಸಿದನು.) ಸಕಳ ಕುರುಕುಳಾವಲಂಬನ ಕಲ್ಪವೃಕ್ಷಮಂ ಪರಸಿ ಪೋಗಲ್

ವೇಟಿ (ಮುಂದೆ ಬರುವ
ತೊಂದರೆಗೆ ಪ್ರತೀಕಾರವನ್ನು
ಮಾಡುವಂತೆ ಹೇಳಿ ಸಕಲ
ಕುರುವಂಶದ ಆಶ್ರಯಕ್ಕೆ
ಕಲ್ಪವೃಕ್ಷದ ಹಾಗಿರುವ
ದುರ್ಯೋರ್ಧನನ್ನು
ಆಶೀರ್ವದಿಸಿ ಬೀಳ್ಕೊಟ್ಟನು.)
ದೇವನದೀಪ್ರಿಯಪುತ್ರನಂ
ಧೃತರಾಷ್ಟ್ರಪುತ್ರಂ
ಬೀಳ್ಕೊಂಡು
(ದುರ್ಯೋಧನನು ಭೀಷ್ಮನ

ಅಪ್ಪಣೆಯನ್ನು ಪಡೆದು
ಬೀಳ್ಕೊಟ್ಟು-)
ಕನಕಪತ್ರಲತಾಲಾಂಛಿತಗದಾ
ದಂಡಮಂ ಕೊಂಡು ಒರ್ವನೆ
(ದುರ್ಯೋಧನನು ಭೀಷ್ಮನ
ಅಪ್ಪಣೆಯನ್ನು ಪಡೆದು
ಹೊರಟು
ಕನಕಪತ್ರಲತೆಯಿಂದ
ಗುರುತುಮಾಡಲ್ಪಟ್ಟ
ಗದಾದಂಡವನ್ನು
ತೆಗೆದುಕೊಂಡು ಏಕಾಕಿಯಾಗಿ)

ವೈಶಂಪಾಯನಸರೋವರದ
ಬಟ್ಟೆಯಂ ನಡೆಗೊಂಡು
(ಏಕಾಕಿಯಾಗಿ
ವೈಶಂಪಾಯನಸರೋವರದ
ದಾರಯನ್ನು ನಡೆದು-
-ಹೋದನು.)-
ವಚನ:ಅರ್ಥ:“ನೀನು
ಹೇಗೂ ಯುದ್ಧಮಾಡದೇ
ಇರುವುದಿಲ್ಲವಾದರೆ ಈ
ಒಂದು ದಿವಸವನ್ನು ನಾನು
ಹೇಳುವ

ಜಲಮಂತ್ರೋಪದೇಶವನ್ನು
ಅಂಗೀಕರಿಸಿ ಕುರುಕ್ಷೇತ್ರದ
ಉತ್ತರ ದಿಗ್ಭಾಗದಲ್ಲಿರುವ
ವೈಶಂಪಾಯನಸರೋವರದ
ಲ್ಲಿ ಮುಳುಗಿದ್ದು
ಕಾಲಾಗ್ನಿರುದ್ರನು
ಪಾತಾಳಲೋಕದಲ್ಲಡಗಿರುವ
ಹಾಗೆ ಇರು. ನಿನ್ನ ಸಹಾಯಕ್ಕೆ
ಬಂದು ಸೇರುವ
ಬಲರಾಮನನ್ನು, ನೀನು
ಇರುವ ಸ್ಥಳವನ್ನು ತಿಳಿಯದೇ

ಹುಡುಕುತ್ತಿರುವ ಅಶ್ವತ್ಥಾಮ
ಕೃಪ ಕೃತವರ್ಮರನ್ನೂ
ಕೂಡಿಕೊಂಡು ಶತ್ರುಗಳನ್ನು
ನಾಳೆ ಯುದ್ಧಮಾಡಿ
ಜಯಿಸು", ಎಂದು ಭೀಷ್ಮನು
ಈ ಹಿತೋಪದೇಶದಿಂದ
ಕೂಡಿದ
ಜಳಮಂತ್ರೋದೇಶವನ್ನು
ದುರ್ಯೋಧನನ ಕಿವಿಯಲ್ಲಿ
ರಹಸ್ಯವಾಗಿ
ಉಪದೇಶಿಸಿದನು.

ಸಂಜಯನನ್ನು ಧೃತರಾಷ್ಟ್ರನ ಬಳಿಗೆ ಸಂಧಾನದ ಮಾತನ್ನು ಸಿದ್ಧಗೊಳಿಸುವುದಕ್ಕಾಗಿ ಕಳುಹಿಸಿದನು. ಮುಂದೆ ಬರುವ ತೊಂದರೆಗೆ ಪ್ರತೀಕಾರವನ್ನು ಮಾಡುವಂತೆ ಹೇಳಿ ಸಕಲ ಕುರುವಂಶದ ಆಶ್ರಯಕ್ಕೆ ಕಲ್ಪವೃಕ್ಷದ ಹಾಗಿರುವ ದುರ್ಯೋಧನನ್ನು ಆಶೀರ್ವದಿಸಿ ಬೀಳ್ಕೊಟ್ಟನು.

ದುರ್ಯೋಧನನು ಭೀಷ್ಮನ
ಅಪ್ಪಣೆಯನ್ನು ಪಡೆದು
ಹೊರಟು
ಕನಕಪತ್ರಲತೆಯಿಂದ
ಗುರುತುಮಾಡಲ್ಪಟ್ಟ
ಗದಾದಂಡವನ್ನು
ತೆಗೆದುಕೊಂಡು ಏಕಾಕಿಯಾಗಿ
ವೈಶಂಪಾಯನಸರೋವರದ
ದಾರಯನ್ನು
ನಡೆದುಹೋದನು.

ಶಾ||
ಕ್ರಂದತ್ಸ್ಯಂದನಜಾತನಿರ್ಗತಶಿ
ಖಿಜ್ವಾಳಾಸಹಸ್ರಂಗಳಾ
ಟಂದೆತ್ತಂ ಕವಿದಱ್ವೆ ಬೇವ
ಶವಸಂಘಾತಂಗಳಂ ಚಕ್ಕಮೊ|
ಕ್ಕೆಂದಾಗಳ್
ಕಡಿದುಗ್ರಭೂತನಿಕರಂ ಕೆಯ್
ಬೇಯೆ ಬಾಯ್ ಬೇಯೆ ತಿಂ
ಬಂದಂ ತನ್ನ
ಮನಕ್ಕಗುರ್ವಿಸುವಿನಂ

ದುರ್ಯೋಧನಂ ನೋಡಿದಂ|| ೭೧| 71||

ಪದ್ಯ-00:ಪದವಿಭಾಗ-ಅರ್ಥ:ಕ್ರಂದತ್ ಸ್ಯಂದನಜಾತ ನಿರ್ಗತ ಶಿಖಿಜ್ವಾಳಾ ಸಹಸ್ರಂಗಳು (ಶಬ್ದಮಾಡುತ್ತಿರುವ- ರಥದಿಂದ ಹುಟ್ಟಿ- ಹೊರಹೊರಟ- ಸಾವಿರಾರು ಅಗ್ನಿಜ್ವಾಲೆಗಳು,) ಆಟಂದು ಅತ್ತಂ ಕವಿದು ಅೞ್ವೆ (ಮೇಲೆ

ಹಾಯ್ದು ಎಲ್ಲಕಡೆಯೂ
ಸುಡುವ) ಬೇವ
ಶವಸಂಘಾತಂಗಳಂ
(ಬೇಯುತ್ತಿರುವ ಹೆಣಗಳ
ರಾಶಿಗಳನ್ನು)
ಚಕ್ಕಮೊಕ್ಕೆಂದಾಗಳ್ ಕಡಿದು
ಉಗ್ರಭೂತ ನಿಕರಂ (ಆಗ
ಭಯಂಕರವಾದ ಪಿಶಾಚಿಗಳ
ಸಮೂಹಗಳು) ಕೆಯ್ ಬೇಯೆ
ಬಾಯ್ ಬೇಯೆ ತಿಂಬ
ಅಂದಂ (ಕೈ ಸುಡುತ್ತಿರಲು

ಬಾಯ್ಗಳು ಬೇಯುತ್ತಿರಲು,
ತಿನ್ನುವ ರೀತಿಯನ್ನು) ತನ್ನ
ಮನಕ್ಕೆ ಅಗುರ್ವಿಸುವಿನಂ
ದುರ್ಯೋಧನಂ ನೋಡಿದಂ.
(ತನ್ನ ಮನಸ್ಸಿಗೆ ವಿಶೇಷ
ಭಯವುಂಟಾಗುತ್ತಿರಲು
ದುರ್ಯೋಧನನು
ನೋಡಿದನು.)

ಪದ್ಯ-00:ಅರ್ಥ:
ಶಬ್ದಮಾಡುತ್ತಿರುವ- ರಥದಿಂದ
ಹುಟ್ಟಿ- ಹೊರಹೊರಟ-

ಸಾವಿರಾರು ಅಗ್ನಿಜ್ವಾಲೆಗಳು,
ಮೇಲೆ ಹಾಯ್ದು ಎಲ್ಲಕಡೆಯೂ
ಸುಡುತ್ತಿರಲು ಬೇಯುತ್ತಿರುವ
ಹೆಣಗಳ ರಾಶಿಗಳನ್ನು ಆಗ
ಭಯಂಕರವಾದ ಪಿಶಾಚಿಗಳ
ಸಮೂಹಗಳು
ಚಕ್ಕುಮೊಕ್ಕೆಂದು ಕತ್ತರಿಸಿ, ಕೈ
ಸುಡುತ್ತಿರಲು ಬಾಯ್ಗಳು
ಬೇಯುತ್ತಿರಲು, ತಿನ್ನುವ
ರೀತಿಯನ್ನು ತನ್ನ ಮನಸ್ಸಿಗೆ
ವಿಶೇಷ

ಭಯವುಂಟಾಗುತ್ತಿರಲು ದುರ್ಯೋಧನನು ನೋಡಿದನು.

ವ|| ನೋಡಿ ಕನಲ್ವ ಕೆಂಡದ ಮೇಲೆ ಪೞೆಯ ಬೇವಿನೆಣ್ಣೆಯೊಳ್ ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ ಬಳ್ಳುವಿನ ಬಾಯೊಳಳುರ್ವ ಕೆಂಡಂಗಳೊಳ್ ಸುೞಿದು ಬೇವ ಪೆಣಂಗಳ ಕಂಪು

ನಾಱುವುದರ್ಕೆ ಸ್ವೈರಿಸಲಾಱದೆ
ಕೋೞ್ದಾಂಟಿನೊಳ್
ಕೊಳುಗುಳವಂ
ಕಱಿದುಪೋಗಿ ವಿಳಯಕಾಳ
ವಿಘಟ್ಟಿತಾಷ್ಟದಿಗ್ಭಾಗಸಂಬಂಧ
ನಗಗನತಳಮೆ ಧರಾತಳಕ್ಕೆ
ಪಱಿದು
ಬಿೞ್ದಂತಾನುಮಾದಿವರಾಹಂ
ಸಮುದ್ರಮುದ್ರಿತಧರಾಮಂಡ
ಳಮಂ ರಸಾತಳದಿಂದೆತ್ತಿ
ಬಂದಂದು

ನಭೋಮಂಡಳಸ್ಥಾನಮೆ ಸಲಿಲಪರಿಪೂರಿತಮಾದಂತಾನುಮಾಗಿ-

ವಚನ:ಪದವಿಭಾಗ-

ಅರ್ಥ:ನೋಡಿ ಕನಲ್ವ ಕೆಂಡದ ಮೇಲೆ ಪಟಿೆಯ ಬೇವಿನೆಣ್ಣೆಯೊಳ್ (ಹೊಳೆಯುತ್ತಿರುವ ಕೆಂಡದ ಮೇಲೆ ಹಳೆಯ ಬೇವಿನೆಣ್ಣೆಯಲ್ಲಿ) ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ

ಬಳ್ಳುವಿನ ಬಾಯೊಳಳು
ಉರ್ವ ಕೆಂಡಂಗಳೊಳ್ (
ನೆನೆಯಿಕ್ಕಿದ ಬೆಳ್ಳುಳ್ಳಿಯ
ವಾಸನೆಯ ಹಾಗೆ
ಗುಳ್ಳೆನರಿಯ ಬಾಯಲ್ಲಿ
ಸುಡುತ್ತ/ಉರಿಯುವ
ಕೆಂಡಗಳಲ್ಲಿ) ಸುಟಿದು ಬೇವ
ಪೆಣಂಗಳ ಕಂಪು
ನಾಱುವುದರ್ಕೆ ಸೈರಿಸಲಾಱದೆ
(ಕಾಣಿಸಿಕೊಂಡು
ಬೇಯುತ್ತಿರುವ ಹೆಣಗಳ

ದುರ್ವಾಸನೆಯನ್ನು
ಸಹಿಸಲಾರದೆ)
ಕೋಳ್ದಾಂಟಿನೊಳ್
ಕೊಳುಗುಳವಂ ಕಟೆದು
ಪೋಗಿ (ಕೋಲು ದಾಟು ಹೆಜ್ಜೆ;
ದೂರ ದೂರ ಹೆಜ್ಜೆ ಇಟ್ಟು
ದಾಟುತ್ತಾ
ಯುದ್ಧಭೂಮಿಯನ್ನು ಕಳೆದು/
ಬಿಟ್ಟುಮುಂದೆ ಹೋದನು.)
ವಿಳಯಕಾಳ ವಿಘಟ್ಟಿತ
ಅಷ್ಟದಿಗ್ಭಾಗ ಸಂಬಂಧನ

ಗಗನತಳಮೆ ಧರಾತಳಕ್ಕೆ
ಪಱಿದು ಬಿಬ್ದಿಂತಾನುಂ
(ಪ್ರಳಯಕಾಲದಲ್ಲಿ
ಅಪ್ಪಳಿಸಲ್ಪಟ್ಟ ಪೆಟ್ಟಿನಿಂದ
ಎಂಟು ದಿಗ್ದೇಶಗಳ
ಕೀಲುಗಳೂ ಕಳಚಿ ಹೋಗಲು
ಆಕಾಶವೇ ನೆಲಕ್ಕೆ
ಬಿದ್ದಹೋಗಿದೆಯೊ
ಎಂಬಂತೆಯೂ,)
ಆದಿವರಾಹಂ ಸಮುದ್ರ
ಮುದ್ರಿತ ಧರಾಮಂಡಳಮಂ

(ಆದಿವರಾಹನಾದ ವಿಷ್ಣುವು
ಸಮುದ್ರದಿಂದ
ಸುತ್ತುವರಿಯಲ್ಪಟ್ಟ
ಭೂಮಂಡಲವನ್ನು)
ರಸಾತಳದಿಂದೆ ಎತ್ತಿ
ಬಂದಂದು ನಭೋಮಂಡಳ
ಸ್ಥಾನಮೆ ಸಲಿಲ ಪರಿಪೂರಿತಂ
ಅದಂತಾನುಂ ಆಗಿ (ಪಾತಾಳ
ಲೋಕದಿಂದ
ಎತ್ತಿಕೊಂಡುಬಂದ ದಿನ
ಆಕಾಶ ಪ್ರದೇಶವೇ ನೀರಿನಿಂದ

ತುಂಬಿಹೋಯಿತೋ
ಎಂಬಂತೆ ಆಗಿರುವ,
-ಸರೋವರವನ್ನು ಕಂಡನು.)-
ವಚನ:ಅರ್ಥ:ನೋಡಿ-
ಹೊಳೆಯುತ್ತಿರುವ ಕೆಂಡದ
ಮೇಲೆ ಹಳೆಯ
ಬೇವಿನೆಣ್ಣೆಯಲ್ಲಿ ನೆನೆಯಿಕ್ಕಿದ
ಬೆಳ್ಳುಳ್ಳಿಯ ವಾಸನೆಯ ಹಾಗೆ
ಗುಳ್ಳೆನರಿಯ ಬಾಯಲ್ಲಿ
ಸುಡುತ್ತ/ಉರಿಯುವ
ಕೆಂಡಗಳಲ್ಲಿ ಕಾಣಿಸಿ

ಕೊಂಡುಬೇಯುತ್ತಿರುವ ಹೆಣಗಳ ದುರ್ವಾಸನೆಯನ್ನು ಸಹಿಸಲಾರದೆ ದೂರ ದೂರ ಹೆಜ್ಜೆ ಇಟ್ಟು ದಾಟುತ್ತಾ ಯುದ್ಧಭೂಮಿಯನ್ನು ಕಳೆದು ಹೋದನು. ಪ್ರಳಯಕಾಲದಲ್ಲಿ ಅಪ್ಪಳಿಸಲ್ಪಟ್ಟ ಪೆಟ್ಟಿನಿಂದ ಎಂಟು ದಿಗ್ದೇಶಗಳ ಕೀಲುಗಳೂ ಕಳಚಿ ಹೋಗಲು ಆಕಾಶವೇ ನೆಲಕ್ಕೆ ಬಿದ್ದಹೋಗಿದೆಯೊ

ಎಂಬಂತೆಯೂ,
ಆದಿವರಾಹನಾದ ವಿಷ್ಣುವು
ಸಮುದ್ರದಿಂದ
ಸುತ್ತುವರಿಯಲ್ಪಟ್ಟ
ಭೂಮಂಡಲವನ್ನು ಪಾತಾಳ
ಲೋಕದಿಂದ
ಎತ್ತಿಕೊಂಡುಬಂದ ದಿನ
ಆಕಾಶ ಪ್ರದೇಶವೇ ನೀರಿನಿಂದ
ತುಂಬಿಹೋಯಿತೋ
ಎಂಬಂತೆ ಆಗಿರುವ,
-ಸರೋವರವನ್ನು ಕಂಡನು.

ದುರ್ಯೋಧನನಿಂದ ವೈಶಂಪಾಯನ ಸರೋವರ ಪ್ರವೇಶ

ಮ|| ಇದು ಪಾತಾಳಬಿಲಕ್ಕೆ

ಬಾಗಿಲಿದು ದಲ್

ಘೋರಾಂಧಕಾರಕ್ಕೆ ಮಾ

ಡಿದ ಕೂಪಂ

ಪೆಱತಲ್ತಿದುಗ್ರಲಯಕಾಳಾಂ

ಭೋಧರಚ್ಛಾಯೆ ತಾ|

ನೆ ದಲೆಂಬಂತಿರೆ ಕಾಚ

ಮೇಚಕಚಯಚ್ಛಾಯಾಂಬು

ವಿಂ ಗುಣ್ಪಿನಿಂ ಪುದಿದಿರ್ದತ್ತು ಸರೋವರಂ ಬಕ ಬಳಾಕಾನೀಕ ರಾವಾಕುಳಂ| ೭೨ ||

ಪದ್ಯ-೭೨:ಪದವಿಭಾಗ-ಅರ್ಥ: ಇದು ಪಾತಾಳಬಿಲಕ್ಕೆ ಬಾಗಿಲು ಇದು ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ (ಇದು ಪಾತಾಳವೆಂಬ ಬಿಲದ ಬಾಗಿಲು, ಇದು ನಿಜವಾಗಿಯೂ

ಭಯಂಕರವಾದ ಕತ್ತಲೆಯಿಂದ ತುಂಬಿದ ಬಾವಿ,) ಪೆಱತು ಅಲ್ತಿದು ಉಗ್ರಲಯಕಾಳಾಂಭೋಧರ ಚ್ಛಾಯೆ ತಾನೆ ದಲ್ ಎಂಬಂತಿರೆ (ಬೇರೆಯಲ್ಲ; ಇದು ಉಗ್ರವಾದ ಪ್ರಳಯಕಾಲದ ಮೋಡದ ನೆರಳೇ ಸರಿ ಎನ್ನುವಹಾಗೆ ಇರಲು,) ಕಾಚ ಮೇಚಕಕಚಯಚ್ಛಾಯ ಅಂಬುವಿಂ (ಕಾಚದಂತೆ

ಕಪ್ಪುನೀಲಿ ಬಣ್ಣ ಮಿಶ್ರಿತವಾದ
ಬಣ್ಣದ ನೀರಿನಿಂದ) ಗುಣ್ಪಿನಿಂ
ಪುದಿದಿರ್ದು ಇತ್ತು
ಸರೋವರಂ (ತುಂಬಿ
ಆಳವಾಗಿ - ಬಕಬಲಾಕ
ಪಕ್ಷಿಗಳ ಶಬ್ದದಿಂದ
ಮೊರೆಯುತ್ತಿರುವ-
ವೈಶಂಪಾಯನ ಸರೋವರವು
ಆಳದಿಂದಲೂ
-ಗಾಂಭೀರ್ಯದಿಂದಲೂ?-
ಕೂಡಿದ್ದಿತು.) ಬಕ

ಬಳಾಕಾನೀಕ ರಾವಾಕುಳಂ (
ಬಕಬಲಾಕ ಪಕ್ಷಿಗಳ ಶಬ್ದದಿಂದ
ಮೊರೆಯುತ್ತಿರುವ)
ಪದ್ಯ-೭೨:ಅರ್ಥ: ಇದು
ಪಾತಾಳವೆಂಬ ಬಿಲದ
ಬಾಗಿಲು, ಇದು
ನಿಜವಾಗಿಯೂ
ಭಯಂಕರವಾದ ಕತ್ತಲೆಯಿಂದ
ತುಂಬಿದ ಬಾವಿ, ಬೇರೆಯಲ್ಲ;
ಇದು ಉಗ್ರವಾದ
ಪ್ರಳಯಕಾಲದ ಮೋಡದ

ನೆರಳೇ ಸರಿ ಎನ್ನುವಹಾಗೆ ಇರಲು, ಕಾಚದಂತೆ ಕಪ್ಪುನೀಲಿ ಬಣ್ಣ ಮಿಶ್ರಿತವಾದ ಬಣ್ಣದ ನೀರಿನಿಂದ ತುಂಬಿ ಆಳವಾಗಿ ಬಕಬಲಾಕ ಪಕ್ಷಿಗಳ ಶಬ್ದದಿಂದ ಮೊರೆಯುತ್ತಿರುವ ವೈಶಂಪಾಯನ ಸರೋವರವು ಆಳದಿಂದಲೂ (ಗಾಂಭೀರ್ಯದಿಂದಲೂ) ಕೂಡಿದ್ದಿತು.

ಚಂ|| ಅದಟಿನ
ವಿಕ್ರಮಾರ್ಜುನನ ಸಾಹಸ
ಭೀಮನ ಕೋಪ ಪಾವಕಂ
ಪುದಿದಳುರ್ದಟ್ಟಿ
ಕೊಳ್ಳದಿರದಿಲ್ಲಿಯುಮೆಮ್ಮುಮ
ನಿಲ್ಲಿ ಬಾಳ್ವಿರಂ|
ಕದಡದಿರಿತ್ತ ಬಾರದಿರು
ಸಾರದಿರೆಂಬವೊಲಾದುದೆತ್ತ
ಮು
ನ್ಮದಕಳಹಂಸಕೋಕನಿಕರದ್ವ
ನಿರುಂದ್ರಫಣೀಂದ್ರಕೇತುವಂ||

೭೩ ||

ಪದ್ಯ-೨೩:ಪದವಿಭಾಗ-ಅರ್ಥ:ಅದಟಿನ ವಿಕ್ರಮಾರ್ಜುನನ ಸಾಹಸ ಭೀಮನ ಕೋಪ ಪಾವಕಂ (ಪರಾಕ್ರಮಶಾಲಿಯಾದ ಅರ್ಜುನನ ಮತ್ತು ಸಾಹಸ ಭೀಮನ ಕೋಪದ ಅಗ್ನಿಯು) ಪುದಿದು ಅಳುರ್ದು (ತುಂಬಿ ವ್ಯಾಪಿಸಿ) ಅಟ್ಟಿಕೊಳ್ಳದಿರದು (ಸುಡದೆ ಬಿಡುವುದಿಲ್ಲ;)

ಇಲ್ಲಿಯುಂ
ಎಮ್ಮುಮನು(ಇಲ್ಲಿಯೂ
ಕೂಡಾ ನಮ್ಮನ್ನು) ಇಲ್ಲಿ
ಬಾಳ್ವಿರಂ ಕದಡದಿರು ಇತ್ತ
ಬಾರದಿರು (ಇಲ್ಲಿ
ಬಾಳುತ್ತಿರುವ ನಮ್ಮನ್ನು
ಕದಡಬೇಡ. ಈ ಕಡೆ
ಬರಬೇಡ.) ಸಾರದಿರು
ಎಂಬವೊಲ್ ಆದುದು
ಎತ್ತಮು ಉನ್ಮದಕಳಹಂಸ
ಕೋಕನಿಕರಧ್ವನಿ (ಮದಿಸಿದ

ರಾಜ ಹಂಸ ಕೋಕ
ಸಮೂಹಗಳ ಧ್ವನಿಯು)
ರುಂದ್ರಫಣೀಂದ್ರಕೇತುವಂ
(ಎಲ್ಲಾ ಕಡೆಗೂ ವಿಸ್ತಾರವಾಗಿ
ಹರಡಿರುವ ಹಾವಿನ
ಹರವಿಗೆಯುಳ್ಳ
ದುರ್ಯೋಧನನ್ನು --
ಧ್ವನಿಯು ಸಾರುವಂತಿದ್ದವು)

ಪದ್ಯ-೨೩:ಅರ್ಥ:
ಪರಾಕ್ರಮಶಾಲಿಯಾದ
ಅರ್ಜುನನ ಮತ್ತು ಸಾಹಸ

ಭೀಮನ ಕೋಪಾಗ್ನಿಯು
ಇಲ್ಲಿಯೂ ಕೂಡಾ ನಮ್ಮನ್ನು
ತುಂಬಿ ವ್ಯಾಪಿಸಿ, ಸುಟ್ಟು
ನಾಶಮಾಡಿ ಸುಡದೆ
ಬಿಡುವುದಿಲ್ಲ; ಇಲ್ಲಿ
ಬಾಳುತ್ತಿರುವ ನಮ್ಮನ್ನು
ಕದಡಬೇಡ. ಈ ಕಡೆ
ಬರಬೇಡ. ಹತ್ತಿರ ಬರಬೇಡ
ಎನ್ನುವ ಹಾಗೆ ಎಲ್ಲಾ ಕಡೆಗೂ
ವಿಸ್ತಾರವಾಗಿ ಹರಡಿರುವ
ಹಾವಿನ ಹರವಿಗೆಯುಳ್ಳ

ದುರ್ಯೋಧನನ್ನು ಮದಿಸಿದ
ರಾಜ ಹಂಸ ಕೋಕ
ಸಮೂಹಗಳ ಧ್ವನಿಯು
ಸಾರುವಂತಿದ್ದವು.

ವ|| ಅಂತೆಸೆವ ಪುಂಡರೀಕಷಂಡೋಪಾಂತ ಮನೆಯ್ದೆವಂದನೇಕವ್ರಣಗಳಿತ ನವರುರ ಮಾಗಿರ್ದ ತನ್ನ ಮೆಯ್ಯನೊರಸಿ ಕರ್ಚಿ ಮುಕ್ಕುಳಿಸಿಯುಗುಳ್ದಾಚಮಿಸಿ ಜಳದೇವತೆಗಳ್ಗೆ ಪೊಡೆವಟ್ಟು

ಜಳಮಂತ್ರಾಕ್ಷರಂಗಳಿಂ ಸರೋವರಮನಭಿಮಂತ್ರಿಸಿ-

ವಚನ:ಪದವಿಭಾಗ-

ಅರ್ಥ:ಅಂತು ಎಸೆವ (ಹಾಗೆ ಶೋಭಿಸುವ)ಪುಂಡರೀಕಷಂಡ (ಸರೋವರದ) ಊಪಾಂತಮನು ಎಯ್ದೆ ವಂದು (ಸಮೀಪಕ್ಕೆ ಒಳ್ಳೇರೀತಿಯಲ್ಲಿ ಬಂದು) ಅನೇಕ ವ್ರಣಗಳಿತ ನವ ರುಧೀರ ಮಾಗಿರ್ದ(ಅನೇಕ

ಗಾಯಗಳಿಂದ ಕೂಡಿದ್ದ) ತನ್ನ ಮೆಯ್ಯನು ಒರಸಿ ಕರ್ಚಿ (ತನ್ನ ಸರೀರವನ್ನು ಉಜ್ಜಿ ತೊಳೆದು) ಮುಕ್ಕುಳಿಸಿಯು ಉಗುಳ್ದು ಆಚಮಿಸಿ (ಮುಕ್ಕಳಿಸಿ, ಉಗುಳಿ ಆಚಮನ ಮಾಡಿ) ಜಳದೇವತೆಗಳ್ಗೆ ಪೊಡೆವಟ್ಟು (ಜಲದೇವತೆಗಳಿಗೆ ನಮಸ್ಕರಿಸಿ,) ಜಳಮಂತ್ರಾಕ್ಷರಂಗಳಿಂ ಸರೋವರಮನು

ಅಭಿಮಂತ್ರಿಸಿ (ಜಲಮಂತ್ರಾಕ್ಷರಗಳಿಂದ ಸರೋವರವನ್ನು ಮುಟ್ಟಿ ಅಭಿಮಂತ್ರಿಸಿದನು.)-

ವಚನ:ಅರ್ಥ:ಹಾಗೆ ಶೋಭಿಸುವ ಸರೋವರ ಸಮೀಪಕ್ಕೆ ಒಳ್ಳೇರೀತಿಯಲ್ಲಿ ಬಂದು ಅನೇಕ ಗಾಯಗಳಿಂದ ಕೂಡಿದ್ದ ತನ್ನ ಸರೀರವನ್ನು ಉಜ್ಜಿ ತೊಳೆದು ಮುಕ್ಕಳಿಸಿ, ಉಗುಳಿ ಆಚಮನ ಮಾಡಿ

ಜಲದೇವತೆಗಳಿಗೆ ನಮಸ್ಕರಿಸಿ, ಜಲಮಂತ್ರಾಕ್ಷರಗಳಿಂದ ಸರೋವರವನ್ನು ಮುಟ್ಟಿ ಅಭಿಮಂತ್ರಿಸಿದನು.

ಚಂ|| ಬೆಳಗಿ ಸಮಸ್ತಭೂವಳಯಮಂ ನಿಜ ತೇಜದಿನಾಂತ ದೈತ್ಯರಂ ತಳವೆಳಗಾಗೆ ಕಾದಿ ಚಳಿತೆಯ್ದಿ ಬಱಲ್ದಪರಾಂಬುರಾಶಿಯೊಳ್| ಮುಱುಗುವ ತೀವ್ರದೀಧಿತಿವೊಲಾ

ಕೊಳದೊಳ್

ಫಣಿರಾಜಕೇತನಂ

ಮುೞುಗಿದನಾರ್ಗಮೇಂ

ಬಿದಿಯ ಕಟ್ಟಿದುದಂ ಕಳೆಯಲ್ಕೆ

ತೀರ್ಗುಮೇ ||೭೪ ||

ಪದ್ಯ-೭೪:ಪದವಿಭಾಗ-

ಅರ್ಥ:ಬೆಳಗಿ ಸಮಸ್ತ

ಭೂವಳಯಮಂ ನಿಜ

ತೇಜದಿಂ ಆಂತ ದೈತ್ಯರಂ

ತಳವೆಳಗಾಗೆ ಕಾದಿ (ಸಮಸ್ತ

ಭೂಮಂಡಲವನ್ನೂ ತನ್ನ

ತೇಜಸ್ಸಿನಿಂದ ಪ್ರಕಾಶಗೊಳಿಸಿ ತನಗೆ ಪ್ರತಿಭಟಿಸಿದ ರಾಕ್ಷಸರನ್ನು ತಬ್ಬಿಬ್ಬಾಗುವಂತೆ ಹೋರಾಡಿ ಕೊನೆಗೆ) ಚಳಿತು ಎಯ್ದಿ/(ಚೆನ್ನಾಗಿ) ಬಱಿಲ್ದು (ಪ್ರಭಾವಹೀನನಅಗಿ ಬಹಳ ಬಳಲಿ) ಅಪರಾಂಬುರಾಶಿಯೊಳ್ ಮುೞುಗುವ ತೀವ್ರದೀಧಿತಿವೊಲ್(ಪಶ್ಚಿಮದಲ್ಲಿ ಮುಳುಗುವ ಸೂರ್ಯನ

ಹಾಗೆ) ಕೊಳದೊಳ್
ಫಣಿರಾಜಕೇತನಂ
ಮುಳುಗಿದನು (
ದುರ್ಯೋಧನನು ಆ
ಸರೋವರದಲ್ಲಿ
ಮುಳುಗಿದನು.) ಆರ್ಗಂ ಏಂ
ಬಿದಿಯ ಕಟ್ಟಿದುದಂ
ಕಳೆಯಲ್ಕೆ ತೀರ್ಗುಮೇ
(ಎಂದಮೇಲೆ ಯಾರಿಗಾದರೂ
ಏನು ಸಾಧ್ಯವೇ? ವಿಧಿಯು
ಕಟ್ಟಿರುವುದನ್ನು

ಕಳೆಯುವುದಕ್ಕೆ ತೀರುತ್ತದೆಯೇ? ಸಾದ್ಯವೇ?)
ಪದ್ಯ-೭೪:ಅರ್ಥ: ಸಮಸ್ತ ಭೂಮಂಡಲವನ್ನೂ ತನ್ನ ತೇಜಸ್ಸಿನಿಂದ ಪ್ರಕಾಶಗೊಳಿಸಿ ತನಗೆ ಪ್ರತಿಭಟಿಸಿದ ರಾಕ್ಷಸರನ್ನು ತಬ್ಬಿಬ್ಬಾಗುವಂತೆ ಹೋರಾಡಿ ಕೊನೆಗೆ ತಾನು ಪ್ರಭಾವಹೀನನಾಗಿ ಬಹಳ ಬಳಲಿ, ಪಶ್ಚಿಮದಲ್ಲಿ ಮುಳುಗುವ ಸೂರ್ಯನ

ಹಾಗೆ, ದುರ್ಯೋಧನನು ಆ ಸರೋವರದಲ್ಲಿ ಮುಳುಗಿದನು. ಎಂದಮೇಲೆ ಯಾರಿಗಾದರೂ ಏನು ಸಾಧ್ಯವೇ? ವಿಧಿಯುಕ ಟ್ಟಿರುವುದನ್ನು ಕಳೆಯುವುದಕ್ಕೆ ತೀರುತ್ತದೆಯೇ?/ -ಸಾಧ್ಯವೇ?

ವ|| ಅಂತು ವಜ್ರಿಯ ವಜ್ರಹತಿಗಳ್ಕಿ ಕುಲಗಿರಿ ಜಳಧಿಯಂ ಪುಗುಂವಂತೆ ದುಯೋಧನಂ ಕೊಳನಂ

ಪೊಕ್ಕಿರ್ದನನ್ನೆಗಮಿತ್ತ
ಧರ್ಮಪುತ್ರಂ ಶಲ್ಯವಧೆಯಿಂ
ಬಱಿಯಂ ರಾಜರಾಜನಂ
ಕೊಳುಗುಳದೊಳಱಿಸಿಯುಂ
ಕಾಣದೆ ನಮ್ಮ ಮಾಡುವ
ಕರ್ತವ್ಯಮಾವುದೇಗೆಯ್ವಂ
ಪೇಱಿಮೆಂದು
ನಾರಾಯಣನಂ ಬೆಸಗೊಳೆ
ಮಧುವನಿತಾವದನಕಮಳಹಿ
ಮಕರನಿಂತೆಂದಂ-

ವಚನ:ಪದವಿಭಾಗ-ಅರ್ಥ:ಅಂತು ವಜ್ರಿಯ ವಜ್ರಹತಿಗಳ್ಕಿ ಕುಲಗಿರಿ ಜಳಧಿಯಂ ಪುಗುಂವಂತೆ (ಹಾಗೆ ಇಂದ್ರನ ವಜ್ರಾಯುಧಕ್ಕೆ ಹೆದರಿ ಕುಲಪರ್ವತಗಳು ಸಮುದ್ರವನ್ನು ಪ್ರವೇಶಿಸುವ ಹಾಗೆ) ದುರ್ಯೋಧನಂ ಕೊಳನಂ ಪೊಕ್ಕಿರ್ದನು (ದುರ್ಯೋಧನನು

ಕೊಳವನ್ನು ಪ್ರವೇಶಿಸಿದ್ದನು.)
ಅನ್ನೆಗಮಿತ್ತ ಧರ್ಮಪುತ್ರಂ
ಶಲ್ಯವಧೆಯಿಂ ಬೞಿಯಂ
ರಾಜರಾಜನಂ
ಕೊಳುಗುಳದೊಳು
ಅಱಸಿಯುಂ ಕಾಣದೆ
(ಅಷ್ಟರಲ್ಲಿ ಈಕಡೆ
ಧರ್ಮರಾಯನು
ಶಲ್ಯವಧೆಯಾದಮೇಲೆ
ಚಕ್ರವರ್ತಿಯಾದ
ದುರ್ಯೋಧನನನ್ನು

ಯುದ್ಧಭೂಮಿಯಲ್ಲಿ
ಹುಡುಕಿಯೂ ಕಾಣದೆ) ನಮ್ಮ
ಮಾಡುವ ಕರ್ತವ್ಯಮಾವುದು
ಏಗೆಯ್ವಂ ಪೇೞಿಂ ಎಂದು
(ನಾವು ಮಾಡಬೇಕಾದ
ಕರ್ತವ್ಯವಾವುದು? ಏನು
ಮಾಡೋಣ ಹೇಳಿ ಎಂದು)
ನಾರಾಯಣನಂ ಬೆಸಗೊಳೆ
(ಕೃಷ್ಣನನ್ನು ಕೇಳಲು)
ಮಧುವನಿತಾ ವದನಕಮಳ
ಹಿಮಕರನು (ಮಧುವನಿತೆಯ

ಮುಖ ಕಮಲದ ಹಾಗಿರುವ ಚಂದ್ರನಂತಿರುವ-ಕೃಷ್ಣನು)ಇಂತೆಂದಂ (ಹೀಗೆಂದನು.)-

ವಚನ:ಅರ್ಥ:ಹಾಗೆ ಇಂದ್ರನ ವಜ್ರಾಯುಧಕ್ಕೆ ಹೆದರಿ ಕುಲಪರ್ವತಗಳು ಸಮುದ್ರವನ್ನು ಪ್ರವೇಶಿಸುವ ಹಾಗೆ ದುರ್ಯೋಧನನು ಕೊಳವನ್ನು ಪ್ರವೇಶಿಸಿದ್ದನು. ಅಷ್ಟರಲ್ಲಿ ಈ ಕಡೆ

ಧರ್ಮರಾಯನು
ಶಲ್ಯವಧೆಯಾದಮೇಲೆ
ಚಕ್ರವರ್ತಿಯಾದ
ದುರ್ಯೋಧನನನ್ನು
ಯುದ್ಧಭೂಮಿಯಲ್ಲಿ
ಹುಡುಕಿಯೂ ಕಾಣದೆ, ನಾವು
ಮಾಡಬೇಕಾದ
ಕರ್ತವ್ಯವಾವುದು? ಏನು
ಮಾಡೋಣ ಹೇಳಿ ಎಂದು
ಕೃಷ್ಣನನ್ನು ಕೇಳಲು ಅವನು
ಹೀಗೆಂದನು.

ಇಂದಿನ
ನೇಸರಿಂದೊಳಗರಾತಿಯನಿಕ್ಕ
ದೆ ಮಾಣ್ದ್ದೆಮೊಪ್ಪಡಿ
ನ್ನೆಂದುಮಸಾಧ್ಯನಿಂದೆ
ಹಳಿಯುಂ ಗಡ
ಕೂಡುವನಾತನಂ ಗೆಲಲ್
ಬಂದಪುದೇ ಬಳಿಕ್ಕದುವೆ
ಕಾರಣಮಾಗುಳಿದಿರ್ದನಂಧ
ರಾ
ಣ್ಣಾಂದನನಲ್ಲದಂತು
ತಲೆಯರ್ಚುಗುಮೇ

ರಣರಂಗಭೂಮಿಯೊಳ್ ||
೭೫||

ಪದ್ಯ-00:ಪದವಿಭಾಗ-ಅರ್ಥ:ಇಂದಿನ ನೇಸರಿಂದೊಳಗೆ ಆರಾತಿಯನು ಇಕ್ಕದೆ ಮಾಣ್ದೆಮೊಪ್ಪಡೆ (ಈ ದಿನ ಸಾಯಂಕಾಲದೊಳಗೆ ಶತ್ರುವನ್ನು ಕೊಲ್ಲದೆ ತಪ್ಪಿದೆವಾದರೆ) ಇನ್ನೆಂದುಂ ಅಸಾಧ್ಯನು (ಇನ್ನಾವಾಗಲೂ

ಅವನು ಅಸಾಧ್ಯನಾಗುತ್ತಾನೆ.)
ಇಂದೆ ಹಳಿಯುಂ (ನೇಗಿಲ
ಕುಳ/ಹಳಿ ಹಿಡಿದವ) ಗಡ
ಕೂಡುವನು ಆತನಂ (ಈ
ದಿನವೇ ಬಲರಾಮನೂ
ಅವನನ್ನು ಕೂಡಿಕೊಳ್ಳತ್ತಾನೆ.)
ಗೆಲಲ್ ಬಂದಪುದೇ ಬಳಿಕ್ಕ
(ಬಳಿಕ ಆತನನ್ನು
ಕೊಲ್ಲುವುದಕ್ಕೆ
ಸಾಧ್ಯವಾಗುವುದೇ? ಇಲ್ಲ.)
ಅದುವೆ ಕಾರಣಂ ಆಗಿ

ಉಳಿದಿರ್ದನು
ಅಂಧರಾಣ್ಣಂದನನು (ಆ
ಕಾರಣದಿಂದಲೇ ಧೃತರಾಷ್ಟ್ರನ
ಮಗ ದುರ್ಯೋಧನನು
ಮರೆಯಾಗಿ ಉಳಿದಿದ್ದಾನೆ.)
ಅಲ್ಲದೆ ಅಂತು
ತಲೆಯಬುರ್ಚುಗುಮೇ
ರಣರಂಗಭೂಮಿಯೊಳ್
(ಅಲ್ಲದಿದ್ದರೆ ರಣರಂಗಲ್ಲಿ
ತಲೆಯನ್ನು
ಮರೆಸಿಕೊಳ್ಳುತ್ತಿದ್ದನೇ?)

ಪದ್ಯ-00:ಅರ್ಥ: ಈ ದಿನ ಸಾಯಂಕಾಲದೊಳಗೆ ಶತ್ರುವನ್ನು ಕೊಲ್ಲದೆ ತಪ್ಪಿದೆವಾದರೆ ಇನ್ನಾವಾಗಲೂ ಅವನು ಅಸಾಧ್ಯನಾಗುತ್ತಾನೆ. ಈ ದಿನವೇ ಬಲರಾಮನೂ ಅವನನ್ನು ಕೂಡಿಕೊಳ್ಳುತ್ತಾನೆ. ಬಳಿಕ ಆತನನ್ನು ಕೊಲ್ಲುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದಲೇ ಧೃತರಾಷ್ಟ್ರನ

ಮಗ ದುರ್ಯೋಧನನು

ಮರೆಯಾಗಿ ಉಳಿದಿದ್ದಾನೆ.

ಅಲ್ಲದಿದ್ದರೆ ರಣರಂಗಲ್ಲಿ

ತಲೆಯನ್ನು

ಮರೆಸಿಕೊಳ್ಳುತ್ತಿದ್ದನೇ?

ವ||

ಎಂಬುದುಂಜಳಧರಸಮಯನಿ

ಶಾಸಂಚಲಿತ

ವಿದ್ಯುತ್ಪಿಂಗಳಾಕ್ಷಪಾತಂಗಳಿಂ

ದೆಸೆಗಳಂ ನುಂಗುವಂತೆ

ಮುಳಿದು ನೋಡಿ

ಜರಾಸಂಧಿಸಂಬಂಧವಿಘಟನಿ ತೆಂದಂ.

ವಚನ:ಪದವಿಭಾಗ-ಅರ್ಥ:ಎಂಬುದುಂ ಜಳಧರಸಮಯನಿಶಾಸಂಚಲಿತ (ಎನ್ನಲು ವರ್ಷಕಾಲದ ರಾತ್ರಿಯಲ್ಲಿ ನಡುಗಿಸುತ್ತಿರುವ) ವಿದ್ಯುತ್ಪಿಂಗಳಾಕ್ಷಪಾತಂಗಳಿಂ (ಮಿಂಚಿನಂತೆ ಹೊಂಬಣ್ಣದಂತಿರುವ ತನ್ನ ಕಣ್ಣಗಳ ನೋಟದಿಂದ)

ದೆಸೆಗಳಂ ನುಂಗುವಂತೆ

ಮುಳಿದು ನೋಡಿ

ಜರಾಸಂಧಿಸಂಬಂಧ

ವಿಘಟನು

ಇಂತೆಂದಂ(ದಿಕ್ಕುಗಳನ್ನೆಲ್ಲಾ

ನುಂಗುವಂತೆ

ಕೋಪಿಸಿಕೊಂಡು

ಸರಾಸಂಧನ

ಕೀಲುಕಟ್ಟುಗಳನ್ನು

ಸಡಲಿಸಿದವನಾದಭೀಮಸೇನ

ನು ಹೀಗೆಂದನು-)

ವಚನ:ಅರ್ಥ:ಎನ್ನಲು ವರ್ಷಕಾಲದ ರಾತ್ರಿಯಲ್ಲಿ ನಡುಗಿಸುತ್ತಿರುವ ಮಿಂಚಿನಂತೆ ಹೊಂಬಣ್ಣದಂತಿರುವ ತನ್ನ ಕಣ್ಣುಗಳ ನೋಟದಿಂದ ದಿಕ್ಕುಗಳನ್ನೆಲ್ಲಾ ನುಂಗುವಂತೆ ಕೋಪಿಸಿಕೊಂಡು ಜರಾಸಂಧನ ಕೀಲುಕಟ್ಟುಗಳನ್ನು ಸಡಲಿಸಿದವನಾದಭೀಮಸೇನನು ಹೀಗೆಂದನು.-

ಮ||ಕಡಲಂ ಪೊಕ್ಕೊಡೆ
ಪೀರ್ದಪೆಂ ಕಡಲನಾ
ಪಾತಾಳಮಂ ಪೊಕ್ಕನ
ಪ್ಪಡೆಶೇಶಾಹಿಯ ಪಲ್ಗಳಂ
ಮುರಿದಪೆಂ ಬ್ರಹ್ಮಾಂಡಮಂ
ಪೊಕ್ಕನ
ಪ್ಪೊಡಮಾ ಬ್ರಹ್ಮನ ಗಂಟಲಂ
ಮುರಿದಪೆಂ
ದುರ್ಯೋಧನಂಗಿಂ ಪುಗ
ಲ್ಕಡೆ ತ್ರೈಭೂಭುವನಂಗಳಿಂ
ಪೊರಗೆ ಮತ್ತೆಲ್ಲಿತ್ತೊ

ಬಾಣಾಂತಕಾ||೭೬||

ಪದ್ಯ-00:ಪದವಿಭಾಗ-ಅರ್ಥ:ಕಡಲಂ ಪೊಕ್ಕೊಡೆ ಪೀರ್ದಪೆಂ ಕಡಲನು (ಸಮುದ್ರವನ್ನು ಪ್ರವೇಶ ಮಾಡಿದರೆ ಆಸಮುದ್ರವನ್ನೇ ಕುಡಿದು ಹಾಕುತ್ತೇನೆ.) ಆ ಪಾತಾಳಮಂ ಪೊಕ್ಕನಪ್ಪಡೆ ಶೇಶಾಹಿಯ ಪಲ್ಗಳಂ ಮುರಿದಪೆಂ (ಆ ಪಾತಾಳವನ್ನು ಹೊಕ್ಕನಾದರೆ

ಆದಿಶೇಷನ ಹಲ್ಲನ್ಉು
ಮುರಿಯುತ್ತೇನೆ.)
ಬ್ರಹ್ಮಾಂಡಮಂ ಪೊಕ್ಕನ
ಪ್ಪೊಡಮ್ ಆ ಬ್ರಹ್ಮನ
ಗಂಟಲಂ ಮುರಿದಪೆಂ
(ಬ್ರಹ್ಮಾಂಡವನ್ನು
ಹೊಕ್ಕನಾದರೆ ಆ ಬ್ರಹ್ಮನ
ಗಂಟಲನ್ನು ಮುರಿಯುತ್ತೇನೆ.)
ದುರ್ಯೋಧನಂಗೆ ಇಂ ಪುಗಲ್ಕೆ
ಎಡೆ ತ್ರೈಭೂಭುವನಂಗಳಿಂ
ಪೊರಗೆ ಮತ್ತೆಲ್ಲಿತ್ತೊ

ಬಾಣಾಂತಕಾ (ಕೃಷ್ಣಾ ದುರ್ಯೋಧನನಿಗೆ ಇನ್ನು ಪ್ರವೇಶ ಮಾಡುವುದಕ್ಕೆ ಮೂರು ಲೋಕಗಳಿಂದ ಹೊರಗೆ ಸ್ಥಳವೆಲ್ಲಿದೆ.)

ಪದ್ಯ-00:ಅರ್ಥ:
ದುರ್ಯೋಧನನು ಸಮುದ್ರವನ್ನು ಪ್ರವೇಶ ಮಾಡಿದರೆ ಆಸಮುದ್ರವನ್ನೇ ಕುಡಿದು ಹಾಕುತ್ತೇನೆ. ಆ ಪಾತಾಳವನ್ನು ಹೊಕ್ಕನಾದರೆ

ಆದಿಶೇಷನ ಹಲ್ಲನ್ನು ಮುರಿಯುತ್ತೇನೆ. ಬ್ರಹ್ಮಾಂಡವನ್ನು ಹೊಕ್ಕನಾದರೆ ಆ ಬ್ರಹ್ಮನ ಗಂಟಲನ್ನು ಮುರಿಯುತ್ತೇನೆ. ಕೃಷ್ಣಾ ದುರ್ಯೋಧನನಿಗೆ ಇನ್ನು ಪ್ರವೇಶ ಮಾಡುವುದಕ್ಕೆ ಮೂರು ಲೋಕಗಳಿಂದ ಹೊರಗೆ ಸ್ಥಳವೆಲ್ಲಿದೆ.

ವ||ಎಂಬನ್ನಗಂ ವೃಕೋದರನಟ್ಟಿದ ಕಿರಾತಂ

ವಿಂಧ್ಯಕನೆಂಭಂ
ದುರ್ಯೋಧನನೆಲ್ಲಿಯುಮರಸಿ
ಕಾಣದೆ ವೈಶಂಪಾಯನ
ಸರೋವರಕ್ಕೆ
ನೀರ್ಗುಟಿಯಲೆಂದು ಪೋಗಿ,
ಕೊಳದ ತಡಿಯೊಳ್
ಹಳಕುಳಿಶಶಂಖಚಕ್ರಲಾಂಛಿತ
ಮಪ್ಪಡಿವೆಜ್ಜೆಯಂ
ಕಂಡುಬಂದನೆಂದು,
ಪೇಳ್ವುದುಮಂಭುಜನಾಭನವ
ನ ಮಾತಿನೊಳ್

ಯುಕ್ತಿಯುಂಟೆಂತೆಂದೊಡಮ
ರನದೀನಂದನೋಪದೇಶದಿಂ
ದಾತಂ, ಕೊಳನಂ
ಪೊಕ್ಕುಕಾಲವಂಚನೆಗೈಯಲಿ
ರ್ದನಕ್ಕುಮೆಂದಾ ಕೊಳನಂ
ಮುಟ್ಟೆವಂದದರರ
ತಡಿಯೊಳ್
ಶಂಖಚಕ್ರಹಳಕುಳಿಶಲಾಂಛಿತ
ಮಾಗಿರ್ದಡಿವೆಜ್ಜೆಯಂ ನೋಡಿ
ದುರ್ಯೋಧನನುಂಪಜ್ಜೆಯಪ್
ಪುದೇನುಂ ತಪ್ಪಿಲ್ಲೆಂದು

ಕಳಕಳನಿನಾದಂಗಳಿಂದಾರ್ದು
ಶಂಖಗಳಿಂ ಪೂರಿಸಿಯುಂ
ಭೇರಿಯಂತಾಡಿಸಿಯುಮೇಗೆ
ಯ್ದುಂ
ಪೊರಮಡದಿರೆ,ಭೀಮಸೇನನೆ
ನ್ನ ಪರಂಗೇಳ್ದಲ್ಲದೀ ಬೂತು
ಪೊರಮಡುವನಲ್ಲನೀತಂಗಾನೆ
ಬಲ್ಲೆನುಸಿರದಿರುಮೆಂದುಸಕಲ
ದಿಕ್ಪಳಯ ಭರಿತ
ಮಹಾಸಿಂಹನಾದಿಂದಲ್ಲಿಯ

ಜಲಚರಗಳೆರ್ದೆ ಪೌನೆ ಪಾರುವನ್ನೆಗಮಾರ್ದು-

ವಚನ:ಪದವಿಭಾಗ-ಅರ್ಥ:ಎಂಬ ಅನ್ನಗಂ ವೃಕೋದರನು ಅಟ್ಟಿದ ಕಿರಾತಂ ವಿಂಧ್ಯಕನೆಂಭಂ (ನ್ನುವಷ್ಟರಲ್ಲಿ ಭೀಮನು ಕಳುಹಿಸಿದ ಬೇಡನಾದ ವಿಂಧ್ಯಕನೆಂಬುವವನು ಬಂದು) ದುರ್ಯೋಧನನೆಲ್ಲಿಯುಂ

ಅರಸಿ ಕಾಣದೆ ವೈಶಂಪಾಯನ
ಸರೋವರಕ್ಕೆ
ನೀರ್ಗುಟಿಯಲೆಂದು ಪೋಗಿ,
(ವೈಶಂಪಾಯನ ಸರೋವರಕ್ಕೆ
ನೀರು ಕುಡಿಯಬೇಕೆಂದು
ಹೋಗಿ- ನೋಡಲು-) ಕೊಳದ
ತಡಿಯೊಳ್ ಹಳಕುಳಿಶ ಶಂಖ
ಚಕ್ರ ಲಾಂಛಿತಮಪ್ಪ
ಅಡಿವೆಜ್ಜೆಯಂ
ಕಂಡುಬಂದನೆಂದು (ಕೊಳದ
ದಡದಲ್ಲಿ

ನೇಗಿಲು,ವಜ್ರ,ಶಂಖ,ಚಕ್ರ
ಇವುಗಳ ಗುರುತುಳ್ಳ
ಹೆಜ್ಜೆಯನ್ನು
ಕಂಡುಬಂದೆನೆಂದು-
-ಹೇಳಿದನು.), ಪೇಳ್ವುದುಂ
ಅಂಭುಜನಾಭನು ಅವನ
ಮಾತಿನೊಳ್ ಯುಕ್ತಿಯುಂಟು
(ಹೇಳಿದಾಗ, ಕೃಷ್ಣನು ಅವನ
ಮಾತಿನಲ್ಲಿ ಯುಕ್ತಿಯುಂಟು,)
ಎಂತೆಂದೊಡ
ಅಮರನದೀನಂದನ (ಭೀಷ್ಮ)

ಉಪದೇಶದಿಂದ ಆತಂ,
ಕೊಳನಂ ಪೊಕ್ಕು
ಕಾಲವಂಚನೆ
ಗೈಯಲಿರ್ದನಕ್ಕುಂ
(ಹೇಗೆಂದರೆ ಭೀಷ್ಮನ
ಉಪದೇಶದಿಂದ ಅವನು
ಸರೋವರವನ್ನು ಪ್ರವೇಶಿಸಿ
ಕಾಲವಂಚನೆ
ಮಾಡಬೇಕೆಂದಿರುವನು
ಎಂದನು.) ಎಂದು ಆ
ಕೊಳನಂ ಮುಟ್ಟೆವಂದದರರ

ತಡಿಯೊಳ್
ಶಂಖಚಕ್ರಹಳಕುಳಿಶಲಾಂಛಿತ
ಮಾಗಿರ್ದಡಿವೆಜ್ಜೆಯಂ ನೋಡಿ
(ಕೊಳದ ಸಮೀಪಕ್ಕೆ ಬಂದು
ಅದರ ದಡದಲ್ಲಿ ಶಂಖ,ಚಕ್ರ
ನೇಗಿಲು ಇವುಗಳ ಗುರುತುಳ್ಳ
ಹೆಜ್ಜೆಯನ್ನು ನೋಡಿ)
ದುರ್ಯೋಧನನುಂ
ಪಜ್ಜೆಯಪ್ಪುದೇನುಂ ತಪ್ಪಿಲ್ಲ
ಎಂದು (ದುರ್ಯೋಧನನ
ಹೆಜ್ಜೆಯೇ

ಆಗಿದೆ,ಅದರಲ್ಲೇನೂ ತಪ್ಪಿಲ್ಲ ಎಂದು)
ಕಳಕಳನಿನಾದಂಗಳಿಂದ ಆರ್ದು ಶಂಖಗಳಿಂ ಪೂರಿಸಿಯುಂ ಭೇರಿಯಂ ತಾಡಿಸಿಯುಂ (ಕಳಕಳಶಬ್ದದಿಂದ ಆರ್ಭಟ ಮಾಡಿದರು. ಶಂಖಗಳನ್ನು ಊದಿಸಿದರು, ನಗಾರಿಗಳನ್ನು ಹೊಡೆಯಿಸಿದರು,) ಏಗೆಯ್ದುಂ ಪೊರಮಡದಿರೆ,ಭೀಮಸೇನ

ನು ಎನ್ನ ಸರಂಗೇಳ್ದಲ್ಲದೆ ಈ ಬೂತು ಪೊರಮಡುವನಲ್ಲನು (ಭೀಮಸೇನನು ಈ ಭೂತವು ನನ್ನ ಧ್ವನಿ ಕೇಳಿದಲ್ಲದೆ ಹೊರಟುಬರುವವನಲ್ಲ;) ಈತಂಗೆ ಆನೆ ಬಲ್ಲೆನು ಉಸಿರದಿರುಂ ಎಂದು (ಇವನಿಗೇನು ಮಾಡಬೇಕೆಂಬುದನ್ನು ನಅನು ಬಲ್ಲೆ ನೀವು ಮಾತನಾಡಬೇಡಿ ಎಂದು) ಸಕಲ ದಿಕ್ಪಳಯ

ಭರಿತ ಮಹಾಸಿಂಹನಾದಿಂದ ಅಲ್ಲಿಯ ಜಲಚರಗಳ ಎರ್ದೆ ಪೌನೆ ಪಾರುವನ್ನೆಗಂ ಆರ್ದು (ಸಕಲ ದಿಕ್ಕುಗಳ ಸಮೂಹದಲ್ಲಿ ವ್ಯಾಪಿಸುವ ಮಹಾ ಸಿಂಹನಾದದಿಂದ ಅಲ್ಲಿಯ ಜಲಚರಗಳ ಎದೆಯು ಪವ್ವನೆ ಹಾರಿಹೋಗುವ ಹಾಗೆ ಆರ್ಭಟಮಾಡಿದನು.)-

ವಚನ:ಅರ್ಥ:ಎನ್ನುವಷ್ಟರಲ್ಲಿ ಭೀಮನು ಕಳುಹಿಸಿದ ಬೇಡನಾದ ವಿಂಧ್ಯಕನೆಂಬುವವನು ಬಂದು ದುರ್ಯೋಧನನ್ನು ಎಲ್ಲಿ ಹುಡುಕಿದರೂ ಕಾಣದೆ ವೈಶಂಪಾಯನ ಸರೋವರಕ್ಕೆ ನೀರು ಕುಡಿಯಬೇಕೆಂದು ಹೋದೆವು, ಕೊಳದ ದಡದಲ್ಲಿ ನೇಗಿಲು,ವಜ್ರ,ಶಂಖ,ಚಕ್ರ ಇವುಗಳ ಗುರುತುಳ್ಳ

ಹೆಜ್ಜೆಯನ್ನು ಕಂಡುಬಂದೆನೆಂದು ಹೇಳಿದನು. ಹೇಳಿದಾಗ, ಕೃಷ್ಣನು ಅವನ ಮಾತಿನಲ್ಲಿ ಯುಕ್ತಿಯುಂಟು, ಹೇಗೆಂದರೆ ಭೀಷ್ಮನ ಉಪದೇಶದಿಂದ ಅವನು ಸರೋವರವನ್ನು ಪ್ರವೇಶಿಸಿ ಕಾಲವಂಚನೆ ಮಾಡಬೇಕೆಂದಿರುವನು ಎಂದನು. ಕೊಳದ ಸಮೀಪಕ್ಕೆ ಬಂದು ಅದರ ದಡದಲ್ಲಿ

ಶಂಖ,ಚಕ್ರ ನೇಗಿಲು ಇವುಗಳ ಗುರುತುಳ್ಳ ಹೆಜ್ಜೆಯನ್ನು ನೋಡಿ ದುರ್ಯೋಧನನ ಹೆಜ್ಜೆಯೇ ಆಗಿದೆ, ಅದರಲ್ಲೇನೂ ತಪ್ಪಿಲ್ಲ ಎಂದು ಕಳಕಳಶಬ್ದದಿಂದ ಆರ್ಭಟ ಮಾಡಿದರು. ಶಂಖಗಳನ್ನು ಊದಿಸಿದರು, ನಗಾರಿಗಳನ್ನು ಹೊಡೆಯಿಸಿದರು, ಏನು ಮಾಡಿದರೂ ಹೊರಗೆ ಹೊರಡದಿರಲು

ಭೀಮಸೇನನು ಈ ಭೂತವು
ನನ್ನ ಧ್ವನಿ ಕೇಳಿದಲ್ಲದೆ
ಹೊರಟು ಬರುವವನಲ್ಲ;
ಇವನಿಗೇನು
ಮಾಡಬೇಕೆಂಬುದನ್ನು ನಾನು
ಬಲ್ಲೆ ನೀವು ಮಾತನಾಡಬೇಡಿ
ಎಂದು ಸಕಲ ದಿಕ್ಕುಗಳ
ಸಮೂಹದಲ್ಲಿ ವ್ಯಾಪಿಸುವ
ಮಹಾ ಸಿಂಹನಾದದಿಂದ
ಅಲ್ಲಿಯ ಜಲಚರಗಳ
ಎದೆಯು ಪವ್ವನೆ

ಹಾರಿಹೋಗುವ ಹಾಗೆ ಆರ್ಭಟಮಾಡಿದನು.

<u>ಭೀಮನ ಮೂದಲಿಕೆಗೆ ಕೊಳದಿಂದ ಹೊರಬಂದ ದುರ್ಯೋಧನ</u>

ಮ||ಸ್ರ||ಕಿರಿಯಂದಿಂದಿತ್ತ ದುರ್ಯೋಧನನೆನಿಸಿದವಿಕ್ರಾಂತಮೇನಾದುದೆಳ್ತಿಂ ದಿರಿವುರ್ಕೆಲ್ಲಿತ್ತೊ ಪಾಂಚಾಳಿಯನನೆಳೆವದಟೇನಾದುದೋ ಗಂಡಪೇಳ್ ಪೊ |

ಚ್ಚರಿನಂತಾಮಾತುಮಿಂತೀಯಿ
ರವೆನೆ ನೆಗೆಯಂ ಮಾಡಿದ್ಯೆ
ಬಂದನೀತಂ
ಪೆರನಲ್ಲ ದುರ್ಜಯಂ
ಕೌರವಕುಳನಳಿನೀಕುಂಜರಂ
ಭೀಮಸೇನಂ||೭೭ ||

ಪದ್ಯ-00:ಪದವಿಭಾಗ-ಅರ್ಥ:ಕಿರಿಯಂದಿಂದ ಇತ್ತ (ಚಿಕ್ಕಂದಿನಿಂದ ಇತ್ತಲೂ) ದುರ್ಯೋಧನನು ಎನಿಸಿದ ವಿಕ್ರಾಂತಂ (ದುರ್ಯೋದನ

ಎನಿಸಿಕೊಂಡ ನಿನ್ನ
ಪೌರುಷವೇನಾಯಿತು?)
ಏನಾದುದು ಎಳ್ತಿಂದು
ಉರಿವುರ್ಕು ಎಲ್ಲಿತ್ತೊ
(ಮೇಲೆಬಿದ್ದು
ಯುದ್ಧಮಾಡುವ ಗರ್ವವು
ಎಲ್ಲಿ ಇತ್ತೋ- ಹೋಯಿತು?)
ಪಾಂಚಾಳಿಯನು (ಅನ)
ಎಳೆವ ಅದಟೇನಾದುದೋ
(ದ್ರೌಪದಿಯನ್ನು ಎಳೆದ
ಪೌರುಷ ಏನಾಯಿತು?)

ಗಂಡಪೇಳ್
(ಪೌರುಷಶಾಲಿಯೇ ಹೇಳು.)
ಪೊಚ್ಚರಿನ ಅಂತು ಆ ಮಾತುಂ
ಮಿಂತು ಈ ಯಿರವೆನೆ (ಆಗ ಆ
ಗರ್ವದ ಮಾತನ್ನಾಡಿ ಈಗ
ದುಸ್ಥಿತಿಯಲ್ಲಿ ಇರುವುದು)
ನೆಗೆಯಂ ಮಾಡಿದ್ಯೆ
(ನಗುವನ್ನುಂಟು
ಮಾಡಿದೆಯಲ್ಲಾ.) ಬಂದನು
ಈತಂ ಪೆರನಲ್ಲ ದುರ್ಜಯಂ
(ಈಗ ಬಂದಿರುವವನು

ಬೇರೆಯಾರೂ ಅಲ್ಲ, ಜಯಿಸುವುದಕ್ಕೆ ಅಸಾಧ್ಯವಾದವ,) ಕೌರವಕುಳ ನಳಿನೀ ಕುಂಜರಂ ಭೀಮಸೇನಂ (ಕೌರವಕುಲವೆಂಬ ಕಮಲಕ್ಕೆ ಆನೆಯಂತಿರುವ ಭೀಮಸೇನ.)

ಪದ್ಯ-00:ಅರ್ಥ:ಚಿಕ್ಕಂದಿನಿಂದ ಇತ್ತಲೂ ದುರ್ಯೋದನ ಎನಿಸಿಕೊಂಡ ನಿನ್ನ

ಪೌರುಷವೇನಾಯಿತು?
ಮೇಲೆಬಿದ್ದು ಯುದ್ಧಮಾಡುವ
ಗರ್ವವು ಎಲ್ಲಿ ಹೋಯಿತು?
ದ್ರೌಪದಿಯನ್ನು ಎಳೆದ
ಪೌರುಷ ಏನಾಯಿತು?
ಪೌರುಷಶಾಲಿಯೇ ಹೇಳು.
ಆಗ ಆ ಗರ್ವದ ಮಾತನ್ನಾಡಿ
ಈಗ ದುಸ್ಥಿತಿಯಲ್ಲಿ ಇರುವುದು
ನಗುವನ್ನುಂಟು
ಮಾಡಿದೆಯಲ್ಲಾ. ಈಗ
ಬಂದಿರುವವನು

ಬೇರೆಯಾರೂ ಅಲ್ಲ,

ಜಯಿಸುವುದಕ್ಕೆ

ಅಸಾಧ್ಯವಾದವ,

ಕೌರವಕುಲವೆಂಬ ಕಮಲಕ್ಕೆ

ಆನೆಯಂತಿರುವ

ಜಯಿಸುವುದಕ್ಕೆ

ಅಸಾಧ್ಯವಾದವ, ಭೀಮಸೇನ.

ಕುಡಿದೆಂ

ದುಶ್ಶ್ಯಾಸ(ನ)ನೋರಸ್ಥಲ

ವಿಗಳದಸೃಗ್ವಾರಿಯಂ

ಕಂಡದಂ ಮು

ನ್ನಡೆ ನೋಡುತ್ತಳ್ಕಿ ಮಾಣ್ದ್ಬ್ರ

ನಿನಗಿರಿವದಟಂ

ಕೊಟ್ಟರಾರಿಂದು ಮಾನ|

ಲ್ಕೆಡೆಯುಂಟೇ ಸಿಲ್ಕಿದ್ಯೆ ಪ್ರೋ

ಪ್ರೊರಮಡು ಕೊಳದಿಂ

ಸತ್ತೊಡಂ ಪುಟ್ಟ ನೀನೀ

ಗಡೆ ದಲ್ ಕೊಂದಪ್ಪನೆನ್ನಂ

ಮುಳುಯಿಸಿ ನಿನಗಿಂ ದ್ರೋಹ

ಬಾಳ್ವಾಸೆಯುಂಟೇ||೭೮||

ಪದ್ಯ-00:ಪದವಿಭಾಗ-

ಅರ್ಥ:ಕುಡಿದೆಂ

ದುಶ್ಯಾಸ(ನ)ನ ಓರಸ್ಥಲ
ವಿಗಳದ ಸೃಗ್ವಾರಿಯಂ
(ದುಶ್ಯಾಸನನ ಎದೆಯಿಂದ
ಹರಿಯುತ್ತಿದ್ದ ರಕ್ತವನ್ನು
ಕುಡಿದೆನು.) ಕಂಡದಂ
ಮುನ್ನಡೆ ನೋಡುತ್ತ ಅಳ್ಕಿ
ಮಾಣ್ದೈ (ಅದನ್ನು ಮೊದಲು
ನೋಡಿ ಹೆದರಿ ನಿಂತೆಯಾ?)
ನಿನಗೆ ಇರಿವ ಅದಟಂ
ಕೊಟ್ಟರು ಆರು ಇಂದು (ನಿನಗೆ
ಯುದ್ಧಮಾಡುವ

ಪರಾಕ್ರಮವನ್ನು ಕೊಟ್ಟವರು ಯಾರು?) ಮಾನಲ್ಕೆ ಎಡೆಯುಂಟೇ ಸಿಲ್ಕಿದ್ಯೆ (ಈ ದಿನ ಇದನ್ನು ತಪ್ಪಸಿಕೊಳ್ಳುವುದಕ್ಕೆ ಅವಕಾಸವುಂಟೇ? ಸಿಕ್ಕಿದೆ.) ಪೋ ಪೊರಮಡು ಕೊಳದಿಂ (ಹೋಗೋ! ಕೊಳದಿಂದ ಹೊರಗೆಬಾ.) ಸತ್ತೊಡಂ ಪುಟ್ಟ- ಹುಟ್ಟದಾ (ಸತ್ತರೆ ಹುಟ್ಟದೇ ಹೋಗುತ್ತೀಯಾ?)

ನೀನ್ ಈಗಡೆ ದಲ್ ಕೊಂದಪ್ಪನು (ಈಗ ಕೊಂದು ಹಾಕುತ್ತೇನಲ್ಲವೇ?) ಎನ್ನಂ ಮುಳುಯಿಸಿ ನಿನಗಿಂ ದ್ರೋಹಿ ಬಾಳ್ವಾಸೆಯುಂಟೇ? (ನನ್ನನ್ನು ರೇಗಿಸಿಯೂ ದ್ರೋಹಿ! ಬಾಳುವಾಸೆಯುಂಟೇ?)

ಪದ್ಯ-00:ಅರ್ಥ: ದುಶ್ಯಾಸನನ ಎದೆಯಿಂದ ಹರಿಯುತ್ತಿದ್ದ ರಕ್ತವನ್ನು ಕುಡಿದೆನು. ಅದನ್ನು ಮೊದಲು

ನೋಡಿ ಹೆದರಿ ನಿಂತೆಯಾ? ನಿನಗೆ ಯುದ್ಧಮಾಡುವ ಪರಾಕ್ರಮವನ್ನು ಕೊಟ್ಟವರು ಯಾರು? ಈ ದಿನ ಇದನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಸವುಂಟೇ? ಸಿಕ್ಕಿದೆ. ಚಿಃ ಹೋಗೋ! ಕೊಳದಿಂದ ಹೊರಗೆ ಬಾ. ಸತ್ತರೆ ಹುಟ್ಟದೇ ಹೋಗುತ್ತೀಯಾ? ಈಗ ಕೊಂದು ಹಾಕುತ್ತೇನಲ್ಲವೇ?

ನನ್ನನ್ನು ರೇಗಿಸಿಯೂ ದ್ರೋಹಿ!
ಬಾಳುವಾಸೆಯುಂಟೇ?

ಕಂ||ಮಾನಸಿಕೆಯ ದೊರೆಗಿಡೆ
ನೀಂ
ಮಾನಸನೆನೆ ನೀರೊಳೆಲವೊ
ನೀಂ ಮೀನನೆಂ|
ಬೀ ನೆವದಿಂದಿರ್ದ ಯಿದೇನಭಿ
ಮಾನದ ಕಲಿತನದ
ಪರಮಪದವನ್ನೈದಿದೆಯೋ. ||
೭೯ ||

ಪದ್ಯ-೦೦:ಪದವಿಭಾಗ-ಅರ್ಥ:ಮಾನಸಿಕೆಯ ದೊರೆಗಿಡೆ (ದೊರೆ ಕಿಡೆ; ಮನುಷ್ಯತ್ವದ ಯೋಗ್ಯತೆಯನ್ನು ಕಳೆದುಕೊಂಡಮೇಲೆ) ನೀಂ ಮಾನಸನೆನೆ (ನೀನು ಮನುಷ್ಯನೇ?) ನೀರೊಳೆಲವೊ ನೀಂ ಮೀನನು ಎಂಬ ಈ ನೆವದಿಂದ ಇರ್ದೆ (ನೀನು ಮೀನಿನ

ನೆವದಿಂದ ನೀರಿನಲ್ಲಿದ್ದೀಯೆ.)
ಯಿದೇನು ಅಭಿಮಾನದ
ಕಲಿತನದ ಪರಮಪದವನು
ಎಯ್ದಿದೆಯೋ. (ಆಹಾ
ಎಂತಹ ಆತ್ಮಗೌರವದ
ಪರಾಕ್ರಮದ
ಪರಮೋಚ್ಚಸ್ಥಾನವನ್ನು
ಏರಿದ್ದೀಯೆ?)

ಪದ್ಯ-00:ಅರ್ಥ:
ಮನುಷ್ಯತ್ವದ
ಯೋಗ್ಯತೆಯನ್ನು

ಕಳೆದುಕೊಂಡಮೇಲೆ ನೀನು
ಮನುಷ್ಯನೇ? ನೀನು ಮೀನಿನ
ನೆವದಿಂದ ನೀರಿನಲ್ಲಿದ್ದೀಯೆ.
ಆಹಾ ಎಂತಹ ಆತ್ಮಗೌರವದ
ಪರಾಕ್ರಮದ
ಪರಮೋಚ್ಛಸ್ಥಾನವನ್ನು
ಏರಿದ್ದೀಯೆ?

ಅದಟಿನಳುರ್ಕೆಯುಂ ನಿರಿಸಿ
ನಿನ್ನ ನಿಸೇಕದ ಪೊಳ್ತು ತಪ್ಪಲೀ
ಯದೆ ಪೊರಮಟ್ಟುಬಾ
ತಡೆಯದೀಗಳೆ

ನೀನಿಸಿರ್ದೆಯಪ್ಪೊಡೇ
ತೊದಳೋ
ಸರೋವರದಾಂಬುವನಿತಂ
ತವೆ ತುಳ್ಕಿ ರಸಾತಳಂಬರಂ
ಬೆದಕಿಯುಮೆಂತುಮಪ್ಪಳಿಸಿ
ಕೊಂದಪನೇಳ್ದುದಿದೇಂ
ಸುಯೋಧನಾ||೮೦||

ಪದ್ಯ-೦೦:ಪದವಿಭಾಗ-ಅರ್ಥ:ಅದಟಿನ ಅಳುರ್ಕೆಯುಂ ನಿರಿಸಿ (ನಿನ್ನ ಪರಾಕ್ರಮದ ಅತಿಶವನ್ನು

ಸ್ಥಾಪಿಸಿ) ನಿನ್ನ ನಿಸೇಕದ
ಪೊಳ್ತು ತಪ್ಪಲೀಯದೆ (ನಿನ್ನ
ಶಾಸ್ತ್ರೀಯ ಹೊತ್ತು
ತಪ್ಪಿಹೋಗುವುದಕ್ಕೆ ಬಿಡದೆ)
ಪೊರಮಟ್ಟು ಬಾ ತಡೆಯದೆ
ಈಗಳೆ (ಸಾವಕಾಶ ಮಾಡದೆ
ಈಗಲೇ ಹೊರಟು ಬಾ.) ನೀಂ
ಇನಿಸು ಇರ್ದೆಯಪ್ಪೊಡೆ
(ನೀನು ಸ್ವಲ್ಪ ತಡಮಾಡಿದರೆ)
ಏತೊದಳೋ (ಏನು ಸುಳ್ಳೋ-
ಸುಳ್ಳಲ್ಲ!)

ಸರೋವರದಾಂಬುವನಿತಂ
ತವೆ ತುಳ್ಕಿ ರಸಾತಳಂಬರಂ
ಬೆದಕಿಯುಂ
ಎಂತುಂ(ಸರೂವರದ
ನೀರನ್ನೆಲ್ಲಾ ತುಳುಕಿ
ಪಾತಾಳದವರೆಗೂ ಹುಡುಕಿ
ಹೇಗೂ) ಎಂತುಂ ಅಪ್ಪಳಿಸಿ
ಕೊಂದಪನು ಏಳ್ದುದು ಇದೇಂ
ಸುಯೋಧನಾ (ಹೇಗೂ
ಅಪ್ಪಳಿಸಿ ಕೊಂದು

ಹಾಕುತ್ತೇನೆ. ಏಳು ಸುಯೋಧನಾ ಇದೇನಿದು?)

ಪದ್ಯ-00:ಅರ್ಥ: ನಿನ್ನ ಪರಾಕ್ರಮದ ಅತಿಶವನ್ನು ಸ್ಥಾಪಿಸಿ ನಿನ್ನ ಶಾಸ್ತ್ರೀಯ ಹೊತ್ತು ತಪ್ಪಿಹೋಗುವುದಕ್ಕೆ ಬಿಡದೆ ಸಾವಕಾಶ ಮಾಡದೆ ಈಗಲೇ ಹೊರಟು ಬಾ. ನೀನು ಸ್ವಲ್ಪ ತಡಮಾಡಿದರೆ ಏನು ಸುಳ್ಳೋ- ಸುಳ್ಳಲ್ಲ! ಸರೂವರದ ನೀರನ್ನೆಲ್ಲಾ

ತುಳುಕಿ ಪಾತಾಳದವರೆಗೂ
ಹುಡುಕಿ ಹೇಗೂ ಅಪ್ಪಳಿಸಿ
ಕೊಂದು ಹಾಕುತ್ತೇನೆ. ಏಳು
ಸುಯೋಧನಾ ಇದೇನಿದು?

ವ||ಎಂದು ವಿಳಯಕಾಳಜಲಧರನಿನಾದ ದಿಂ ಗಜರಿ ಗರ್ಜಿಸಿದ ಜಟಾಸುರಾರಾತಿಯ ಗಳಗರ್ಜನೆಗೆ ಕರಿಕಳಭಗರ್ಜನೆಗೇಳ್ವ ಮೃಗರಾಜನಂತೆ ರಾಜ ರಾಜಂ

- **ಕೌರವನ ಕೋಪ ರನ್ನನ ವರ್ಣನೆ**

ಕಂ||**ಆ ರವಮಂನಿರ್ಜಿತಕಂ**
ಠೀರವರವಮಂ ನಿರಸ್ತಘನ ರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ||೨೨||

- **ಪದವಿಭಾಗ:**

ಭೀಮನ ಗರ್ಜನೆ; ನಿರ್ಜಿತ ಕಂಠೀರವ ರವಮಂ= ಸಿಂಹಗರ್ಜನೆಯನ್ನು ಮೀರಿಸಿದ,
ನಿರಸ್ತಘನ ರವಮಂ= ಮೇಘಗರ್ಜನೆಯನ್ನು ಸೋಲಿಸಿದ,
ಆ ರವಮಂ= ಆ ಗರ್ಜನೆಯನ್ನು,
ಕೋಪಾರುಣನೇತ್ರಂ= ಕೋಪದಿಂದ ಕೆಂಪಾದ ಕಣ್ಣುಗಳುಳ್ಳ,
ಉರಗಪತಾಕಂ= ಸರ್ಪಧ್ವಜನು(ದುರ್ಯೋಧನನು)
ನೀರೊಳಗ ಇರ್ದುಂ= ನೀರಿನಲ್ಲಿದ್ದರೂ, ಬೆಮರ್ತಂ= ಬೆವರಿದನು.
ಅರ್ಥ::ಭೀಮನ ಗರ್ಜನೆ ಸಿಂಹಗರ್ಜನೆಯನ್ನೂ ಮೀರಿಸಿತ್ತು;
ದಟ್ಟ ಮೋಡದ ಗುಡುಗನ್ನೂ ಸೋಲಿಸಿತ್ತು;
ದುರ್ಯೋಧನನು ಆ ಸಿಂಹನಾದವನ್ನು ಕೇಳಿ ಕೆರಳಿ
ಅವನ ಕಣ್ಣುಗಳು ಕೋಪೋದ್ರೇಕದಿಂದ ಕೆಂಪಾದವು;
ನೀರಿನಲ್ಲಿ ಮುಳುಗಿದ್ದರೂ ಸಿಟ್ಟಿನ ಕಾವಿನಿಂದ 'ಸರ್ಪಧ್ವಜ'ನು ಬೆವರಿದನು.
“ನೀರೊಳಗಿರ್ದುಂ ಬೆಮರ್ತನುರಗಪತಾಕಂ “ ಎಂಬ ಸಾಲು
ರನ್ನನ ನುಡಿಮುತ್ತಾಗಿ ಉಳಿದಿದೆ- 'ಉರಗಪತಾಕ' ಜೋಡಣೆ
ಹೆಚ್ಚಿನ ಮೆರುಗು ಕೊಡುವುದು.

- **ಕೌರವ ಕೊಳದಿಂದ ಹೊರಟ ಬಗೆ:**

ನಿಜಮಕುಟಸ್ಫುರನ್ಮಣಿಗಣಚ್ಛವಿಯಿಂ ಸುರಚಾಪಲೀಲೆ ಪಂ
ಕಜವನದೊಳ್ ಮನಂಗೊಳಿಸೆ ತನ್ನಯ ಮೇಗೊಗೆದಿರ್ದ ನೀಲನೀ

ರಜವನದಿಂ ಕಱಂಗಿ ಕಮಲಾಕರದಿಂ ಪೊಱಮಟ್ಟನಾಗಳಾ
ಭುಜಯುಗತೋರಣಾಯಿತಗದಾಪರಿಘಂ ಫಣಿರಾಜಕೇತನಂ||೨೭||

- **ಪದವಿಭಾಗ:**

ನಿಜಮಕುಟ= ತನ್ನ ಕಿರೀಟದ, ಸ್ಫುರತ್=ಪ್ರಕಾಶಿಸುವ,
ಮಣಿಗಣಚ್ಛವಿಯಂ=ನವರತ್ನಗಳ ಕಾಂತಿಯಿಂದ,
ಪಂಕಜವನದೊಳ್= ತಾವರೆಗಳ ಸಮೂಹದಲ್ಲಿ,
ಸುರಚಾಪಲೀಲೆ= ಕಾಮನಬಿಲ್ಲಿನ ಸೊಗಸು,
ಮನಂಗೊಳಿಸೆ= ಮನೋಹರವಾಗಿ ತೋರುತ್ತಿರಲು,
ತನ್ನಯ ಮೇಗೆ ಒಗೆದಿರ್ದ= ತನ್ನ ಮೇಲ್ಭಾಗದಲ್ಲಿದ್ದ,
ನೀಲನೀರಜ ವನದಿಂ= ಕನ್ನೈದಿಲೆಗಳ ಸಮೂಹದಿಂದ,
ಕಱಂಗಿ=ಕಪ್ಪಾಗಿ,
ಆ ಭುಜಯುಗ ತೋರಣಾಯಿತ ಗದಾಪರಿಘಂ=
ಪರಿಘದಂತಿರುವ ತನ್ನ ಗದೆಯನ್ನು ತೋರಣದಂತೆ
ಆ ಎರಡು ಬಾಹುಗಳಿಂದ ಮೇಲೆ ಎತ್ತಿ ಹಿಡಿದು,
ಫಣಿರಾಜಕೇತನಂ= ದುರ್ಯೋಧನನು,
ಕಮಲಾಕರದಿಂ= ಸರೋವರದಿಂದ,
ಆಗಳ್ ಪೊರಮಟ್ಟಂ= ಆಗ ಹೊರಬಂದನು.
“ಫಣಿರಾಜಕೇತನಂ “ ಸರ್ಪಧ್ವಜನು-
ಅಂತರಾರ್ಥ::ಸರ್ಪಮತ್ಸರವುಳ್ಳ ದುರ್ಯೋಧನ!
ರನ್ನ.

ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭಮಂತ್ರಮೆಲ್ಲಂ

ಮಾಯಾಮಂತ್ರಮಾಗೆ-ಪದ್ಯ-00:ಪದವಿಭಾಗ-ಅರ್ಥ:ಎಂದು ವಿಳಯಕಾಳ ಜಲಧರ ನಿನಾದದಿಂ ಗಜರಿ ಗರ್ಜಿಸಿದ (ಎಂದು ಪ್ರಳಯಕಾಲದ ಗುಡುಗಿನ ಶಬ್ದದಿಂದ ಕೂಗಿ ಗರ್ಜನೆ ಮಾಡಿದ) ಜಟಾಸುರ ಆರಾತಿಯ (ಭೀಮನ) ಗಳಗರ್ಜನೆಗೆ (ಕಂಠದ ಆರ್ಭಟಕ್ಕೆ), ಕರಿ ಕಳಭ

ಗರ್ಜನೆಗೆ ಏಳ್ವ
ಮೃಗರಾಜನಂತೆ (ಆನೆಯ
ಮರಿಯ ಗರ್ಜನೆಯನ್ನು
ಕೇಳಿದ ಸಿಂಹದ ಹಾಗೆ) ರಾಜ
ರಾಜಂ ಸ್ಥೈರಿಸದೆ
ಚಿತ್ತಸ್ಖಲನೆಯಾಗೆ
(ಚಕ್ರವರ್ತಿಯಾದ
ದುರ್ಯೋಧನನಿಗೆ
ಮನದಸ್ಥಿರತೆಯು ಜಾರಿತು.)
ಜಳಸ್ತಂಭಮಂತ್ರಮೆಲ್ಲಂ
ಮಾಯಾಮಂತ್ರಮಾಗೆ

(ಜಲಸ್ಥಂಬಮಂತ್ರವೆಲ್ಲಾ ಮಾಯಾ ಮಂತ್ರವಾಗಲು)- **ಪದ್ಯ-00:ಅರ್ಥ**: ಎಂದು ಪ್ರಳಯಕಾಲದ ಗುಡುಗಿನ ಶಬ್ದದಿಂದ ಕೂಗಿ ಗರ್ಜನೆ ಮಾಡಿದ ಭೀಮನ ಕಂಠದ ಆರ್ಭಟಕ್ಕೆ, ಆನೆಯ ಮರಿಯ ಗರ್ಜನೆಯನ್ನು ಕೇಳಿದ ಸಿಂಹದ ಹಾಗೆ ಚಕ್ರವರ್ತಿಯಾದ ದುರ್ಯೋಧನನಿಗೆ

ಮನಸ್ಥೈರ್ಯವು ಜಾರಿತು.
ಜಲಸ್ಥಂಬಮಂತ್ರವೆಲ್ಲಾ
ಮಾಯಾಮಂತ್ರವಾಯಿತು,
ಹಾಗೆ ಮಂತ್ರ ತಪ್ಪಿಹೋಗಲು.-

ಮ||ಪಗೆವಂಬಂದುರದಿಂತು
ಮೂದಲಿಸೆಯುಂ ಮಾತಂ
ಕಿವುಳ್ಗೀಳ್ದು ಕೆ
ಮ್ಮಗೆ ನೀರೊಳ್
ಮುಳುಗಿರ್ದೊಡಳ್ದು
ಕಿಡುಗುಂಮಚ್ಚೌರ್ಯಮೆಂದು
ದ್ಧತಂ |

ನೆಗೆದಾಗಳ್ ವಿಲಸತ್ ಕಿರೀಟ ತಟರತ್ನಾಂಶುಪ್ರಭಾರಾಜಿ ತೊಟ್ಟಗೆ ಕೆಯ್ಗಣ್ಮೆ ಸುರೇಂದ್ರ ಚಾಪರುಚಿಯಂ ಕೈಗೊಂಡುದಾ ಪೂಗೊಳಂ|| ೮೧ ||

ಪದ್ಯ-೮೧:ಪದವಿಭಾಗ-ಅರ್ಥ:ಪಗೆವಂ ಬಂದು ಉರದೆ ಇಂತು ಮೂದಲಿಸೆಯುಂ (ಶತ್ರುವು ಹೀಗೆ ಬಂದು ಸುಮ್ಮನಿರದೆ/

ಅತಿಯಾಗಿ
ಹೀಯಾಳಿಸಿದರೂ) ಮಾತಂ
ಕಿವುಳ್ಗೀಲ್ದು ಕೆಮ್ಮಗೆ ನೀರೊಳ್
ಮುಳುಗಿರ್ದೊಡೆ (ಆ
ಮಾತನ್ನು ಕಿವುಡರಂತೆ ಕಿವಿಗೆ
ಹಾಕಿಕೊಳ್ಳದೆ ಸುಮ್ಮನೆ
ನೀರಿನಲ್ಲಿ ಮುಳಗಿದ್ದರೆ) ಅಲ್ದು
ಕಿಡುಗುಂ ಮಚ್ಚೌರ್ಯಂ
ಎಂದು (ನನ್ನ ಶೌರ್ಯವು
ಮುಳುಗಿ ಹಾಳಾಗುತ್ತದೆ
ಎಂದು) ಉದ್ಧತಂ ನೆಗೆದಾಗಳ್

(ಆತ್ಮಾಭಿಮಾನಿಯಾದ ದುರ್ಯೋಧನನು,ನೀರಿನಿಂದ ಮೇಲಕ್ಕೆ ಜಿಗಿಯಲು) ವಿಲಸತ್ ಕಿರೀಟ ತಟರತ್ನಾಂಶುಪ್ರಭಾರಾಜಿ (ಪ್ರಕಾಶಮಾನವಾದ ಕಿರೀಟ ಪ್ರದೇಶದಲ್ಲಿರುವ ರತ್ನಗಳ ಕಾಂತಿ ಸಮೂಹವು) ತೊಟ್ಟಗೆ ಕೆಯ್ಗಣ್ಮೆ (ಅಧಿಕವಾಗಲು) ಸುರೇಂದ್ರ ಚಾಪರುಚಿಯಂ ಕೈಗೊಂಡುದಾ

ಪೂಗೊಳಂ(ತಕ್ಷಣ ಹಾಗೆ ಅಧಿಕವಾಗಲು ಆ ಸರೋವರವು ಕಾಮನ ಬಿಲ್ಲಿನ ಕಾಂತಿಯನ್ನು ಹೊಂದಿತು.)

ಪದ್ಯ-೮೧:ಅರ್ಥ: ಶತ್ರುವು ಹೀಗೆ ಬಂದು ಸುಮ್ಮನಿರದೆ ಹೀಯಾಳಿಸಿದರೂ ಆ ಮಾತನ್ನು ಕಿವುಡರಂತೆ ಕಿವಿಗೆ ಹಾಕಿಕೊಳ್ಳದೆ ಸುಮ್ಮನೆ ನೀರಿನಲ್ಲಿ ಮುಳಗಿದ್ದರೆ, 'ನನ್ನ ಶೌರ್ಯವು ಮುಳುಗಿ

ಹಾಳಾಗುತ್ತದೆ' ಎಂದು ಆತ್ಮಾಭಿಮಾನಿಯಾದ ದುರ್ಯೋಧನನು,ನೀರಿನಿಂದ ಮೇಲಕ್ಕೆ ಜಿಗಿಯಲು, ಪ್ರಕಾಶಮಾನವಾದ ಕಿರೀಟ ಪ್ರದೇಶದಲ್ಲಿರುವ ರತ್ನಗಳ ಕಾಂತಿ ಸಮೂಹವು ತಕ್ಷಣ ಹಾಗೆ ಅಧಿಕವಾಗಲು ಆ ಸರೋವರವು ಕಾಮನ ಬಿಲ್ಲಿನ ಕಾಂತಿಯನ್ನು ಹೊಂದಿತು.

ಚಂ|| ನೆಗೆಯ ಪೊದಳ್ದ
ಬೊಬ್ಬುಳಿಕೆಗಳ್
ನೆಗೆದಂತೆರಡುಂ ಕೆಲಕ್ಕೆ ನೀ
ರುಗಿಯೆ
ಗದಾಭಿಘಾತಪರಿಪೂರಿತ
ತೋಯಜ ಷಂಡಮಲ್ಲಿಗ |
ಲ್ಲಿಗೆ ಕದಡೇಳೆ
ಭೀಮಭುಜಮಂದರ
ಘಟ್ಟನೆಯಿಂದಮಲ್ಲಿ ತೊ
ಟ್ಟಗೆ ಕೊಳೆ ಕಾಳಕೂಟ
ಮೊಗೆವಂತೊಗೆದಂ

ಫಣಿರಾಜಕೇತನಂ||೮೨ ||

ಪದ್ಯ-೮೨:ಪದವಿಭಾಗ-ಅರ್ಥ:ನೆಗೆಯ ಪೊದಳ್ದ ಬೊಬ್ಬುಳಿಕೆಗಳ್ ನೆಗೆದಂತೆ ಎರಡುಂ ಕೆಲಕ್ಕೆ ನೀರುಗಿಯೆ (ವ್ಯಾಪಿಸಿದ ನೀರುಗುಳ್ಳೆಗಳು ಮೇಲಕ್ಕೇಳಲು, ಅವು ಬಂದಹಾಗೆ ಎರಡು ಪಕ್ಕಗಳಿಗೂ ನೀರು ವಿಭಾಗವಾಯಯಿತು) ಗದಾಭಿಘಾತ ಪರಿಪೂರಿತ

ತೋಯಜಷಂಡಂ (ಗದೆಯ
ಹೊಡೆತದಿಂದ ತುಳುಕಿದ
ಸರೋವರವು) ಅಲ್ಲಿಗಲ್ಲಿಗೆ
ಕದಡಿ ಏಳೆ
ಭೀಮಭುಜಮಂದರ
ಘಟ್ಟನೆಯಿಂದಂ (ಅಲ್ಲಲ್ಲಿ
ಬಗ್ಗಡವಾಗಲು ಭೀಮನ
ಮಂದರ ಪರ್ವತದಂತಿರುವ
ಬಾಹುಗಳ ಹೊಡೆತದಿಂದ)
ಅಲ್ಲಿ ತೊಟ್ಟಗೆ ಕೊಳೆ
ಕಾಳಕೂಟ ಮೊಗೆವಂತೆ

ಒಗೆದಂ ಫಣಿರಾಜಕೇತನಂ (ಅಲ್ಲಿ ಬೇಗನೆ ಆಕ್ರಮಿಸಲು/ ತೋರಲು, ಕಾಳಕೂಟ ವಿಷವು ಹುಟ್ಟುವಂತೆ ದುರ್ಯೋಧನನು ಹುಟ್ಟಿದನು.)

ಪದ್ಯ-೮೨:ಅರ್ಥ: ವ್ಯಾಪಿಸಿದ ನೀರುಗುಳ್ಳೆಗಳು ಮೇಲಕ್ಕೆದ್ದವು ಅವು ಬಂದಹಾಗೆ ಎರಡುಪಕ್ಕಗಳಿಗೂ ನೀರು

ವಿಭಾಗವಾಯಯಿತು,.
ಗದೆಯ ಹೊಡೆತದಿಂದ
ತುಳುಕಿದ ಸರೋವರವು
ಅಲ್ಲಲ್ಲಿ ಬಗ್ಗಡವಾಗಲು
ಭೀಮನ ಮಂದರ
ಪರ್ವತದಂತಿರುವ ಬಾಹುಗಳ
ಹೊಡೆತದಿಂದ ಬೇಗನೆ
ಆಕ್ರಮಿಸಲು ಕಾಳಕೂಟ
ವಿಷವು ಹುಟ್ಟುವಂತೆ
ದುರ್ಯೋಧನನು ಹುಟ್ಟಿದನು.

ವ||ಅಂತೊಗೆದು ದಿಕ್ಕರಿಕರಾನುಕಾರಿ ಕರಪರಿಘೋತ್ತರಿಂಸಿತ ತೋರಣೀಕೃತ ರೌದ್ರಗದಾದಂಡನುಂ ಪ್ರಚಂಡನುಮಾಗಿ ಸೆರಗಿಲ್ಲದೆ ಕೊಳದಿಂ ಪೊರಮಟ್ಟು ಬರ್಩ ದುರ್ಯೋಧನನಂ ಧರ್ಮಪುತ್ರಂ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು ಒಗೆದು ದಿಕ್ಕರಿ

ಕರಾನುಕಾರಿ ಕರ
ಪರಿಘೋತ್ತರಿಂ ಸಿತ (ಹಾಗೆ
ಹುಟ್ಟಿದ ದಿಗ್ಗಜದ
ಸೊಂಡಿಲನ್ನು ಹೋಲುವ
ಪರಿಘದಂತಿರುವ ಕೈಗೆ)
ತೋರಣೀಕೃತ ರೌದ್ರ
ಗದಾದಂಡನುಂ (ಆಭರಣ
ಪ್ರಾಯವಾಗಿ ತೋರಣವಾಗಿ
ಮಾಡಲ್ಪಟ್ಟ ಭಯಂಕರವಾದ
ಗಧಾದಂಡವುಳ್ಳವನೂ)
ಪ್ರಚಂಡನುಮಾಗಿ ಸೆರಗಿಲ್ಲದೆ

ಕೊಳದಿಂ ಪೊರಮಟ್ಟು ಬರ್ಪ (ಬಹಳ ಕಾಂತಿಯುಕ್ತನೂ ಆಗಿಭಯವಿಲ್ಲದೆ ಕೊಳದಿಂದ ಹೊರಗೆಹೊರಟು ಬರುತ್ತಿರುವ) ದುರ್ಯೋಧನನಂ ಧರ್ಮಪುತ್ರಂ ನೋಡಿ (ನೋಡಿ - ಧರ್ಮಪುತ್ರನು ಹೀಗೆಂದನು.)-

ವಚನ:ಅರ್ಥ:ಹಾಗೆ ಹುಟ್ಟಿದ ದಿಗ್ಗಜದ ಸೊಂಡಿಲನ್ನು

ಹೋಲುವ ಪರಿಘದಂತಿರುವ ಕೈಗೆ ಆಭರಣ ಪ್ರಾಯವಾಗಿ ತೋರಣವಾಗಿ ಮಾಡಲ್ಪಟ್ಟ ಭಯಂಕರವಾದ ಗಧಾದಂಡವುಳ್ಳವನೂ ಬಹಳ ಕಾಂತಿಯುಕ್ತನೂ ಆಗಿಭಯವಿಲ್ಲದೆ ಕೊಳದಿಂದ ಹೊರಗೆಹೊರಟು ಬರುತ್ತಿರುವ ದುರ್ಯೋಧನನ್ನು ನೋಡಿ- ಧರ್ಮರಾಯನು ಹೀಗೆಂದನು.

ಚಂ||ನಡಪಿದ ನೆಂಟರೆಯ್ದೆ
ಪೊರೆದಾಳ್
ರಣರಂಗದೊಳುಳ್ಳರೆಲ್ಲರುಂ
ಮಡಿದೊಡಮುರ್ಕುಗುಂದದು
ಗುರಂತೆರಡುಂ ಕಡೆ ತಪ್ಪ
ಕೂರ್ಪನೋ |
ಗುಡಿಸದೆ ತಾಳ್ದಿ ಮೆಯ್ಯೊಳೆ
ವೃಕೋದರನೊಂದೆ ಸರಕ್ಕೆ
ಕಾಯ್ವುಡಂ
ಬಡೆ ಸಿಡಿಲೇಳ್ಗೆಯಿಂ ಮಸಗಿ
ಬಂದನಿದೇಂ ಕಲಿಯೋ

ಸುಯೋಧನಂ || ೮೩ ||

ಪದ್ಯ-೮೩:ಪದವಿಭಾಗ-ಅರ್ಥ:ನಡಪಿದ ನೆಂಟರ್ ಎಯ್ದೆ ಪೊರೆದ ಆಳ್ (ತನ್ನನ್ನು ಸಾಕಿ ಸಲಹಿದ ಬಂಧುಗಳೂ ತನ್ನನ್ನು ಚೆನ್ನಾಗಿ ಸಾಕಿದ ಆಳುಗಳೂ,) ರಣರಂಗದೊಳು ಉಳ್ಳರೆಲ್ಲರುಂ ಮಡಿದೊಡಂ (ಉಳಿದವರೆಲ್ಲರೂ ರಣರಂಗದಲ್ಲಿ ಸತ್ತರೂ,) ಉರ್ಕುಗುಂದದ ಉಗುರಂತೆ

ಎರಡುಂ ಕಡೆ (ಉತ್ಸಾಹ
ಶೂನ್ಯನಾಗದೆ ಉಗುರಿನ
ಹಾಗೆ ಎರಡೂಕಡೆ) ತಪ್ಪ
ಕೂರ್ಪನೋ ಗುಡಿಸದೆ ತಾಳ್ದಿ
ಮೆಯ್ಯೊಳೆ (ನಾಶ ಮಾಡುವ
ತೀಕ್ಷ್ಣತೆಯನ್ನು ಕಳೆದುಕೊಳ್ಳದೆ
ತನ್ನ ಮಯ್ಯಲ್ಲಿ ಧರಿಸಿ)
ವೃಕೋದರರನ ಒಂದೆ ಸರಕ್ಕೆ
(ಸ್ವರಕ್ಕೆ)ಕಾಯ್ಪುಡಂ ಬಡೆ
(ಭೀಮನ ಒಂದೇ ಗರ್ಜನೆಗೆ
ಕೋಪವುಂಟಾಗಲು)

ಸಿಡಿಲೇಳ್ಗೆಯಿಂ ಮಸಗಿ ಬಂದನಿದೇಂ ಕಲಿಯೋ ಸುಯೋಧನಂ (ಸಿಡಿಲಿನಂತೆ ರೇಗಿ ಬಂದಿದ್ದಾನೆ. ದುರ್ಯೋಧನನು ಎಂತಹ ಶೂರನೋ!)

ಪದ್ಯ-೮೩:ಅರ್ಥ: ತನ್ನನ್ನು ಸಾಕಿ ಸಲಹಿದ ಬಂಧುಗಳೂ ತನ್ನನ್ನು ಚೆನ್ನಾಗಿ ಸಾಕಿದ ಆಳುಗಳೂ, ಉಳಿದವರೆಲ್ಲರೂ ರಣರಂಗದಲ್ಲಿ ಸತ್ತರೂ,

ಉತ್ಸಾಹ ಶೂನ್ಯನಾಗದೆ
ಉಗುರಿನ ಹಾಗೆ ಎರಡೂಕಡೆ
ನಾಶ ಮಾಡುವ
ತೀಕ್ಷ್ಣತೆಯನ್ನು ಕಳೆದುಕೊಳ್ಳದೆ
ತನ್ನ ಮಯ್ಯ್ಯಲ್ಲಿ ಧರಿಸಿ
ಭೀಮನ ಒಂದೇ ಗರ್ಜನೆಗೆ
ಕೋಪವುಂಟಾಗಲು
ಸಿಡಿಲಿನಂತೆ ರೇಗಿ ಬಂದಿದ್ದಾನೆ.
ದುರ್ಯೋಧನನು ಎಂತಹ
ಶೂರನೋ!

ವ|| ಎಂಬನ್ನೆಗಮಯ್ದೆವಂದು ದುರ್ಯೋಧನಂ ಪಾಂಡುತನೂಜನರನಿತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬ ಅನ್ನೆಗಂ ಎಯ್ದೆವಂದು ದುರ್ಯೋಧನಂ ಪಾಂಡುತನೂಜನರನು ಇಂತೆಂದಂ (ಸಮೀಪಕ್ಕೆ ಬಂದು ಪಾಂಡವರಿಗೆ ಹೀಗೆಂದನು)-

ವಚನ:ಅರ್ಥ:ಎನ್ನುವಷ್ಟರಲ್ಲಿ
ದುರ್ಯೋಧನನು ಸಮೀಪಕ್ಕೆ
ಬಂದು ಪಾಂಡವರಿಗೆ
ಹೀಗೆಂದನು-

**ಮ||ಎಳೆ ಮುಂ ದೈತ್ಯನ ಕೆಯ್ಗೆ
ಪೋಗೆ ತರಲೆಂದೀಚಕ್ರಿ
ಮುನ್ನಂರಸಾ
ತಲಳಮಂ ಪೊಕ್ಕುದಮೀ
ಮಹೋಗ್ರ ರಣದೊಳ್
ನಿಮ್ಮೊಂದು ಕಯ್ವೆಳ್ದಿ ಭೂ**

ತಳಮಂ ಮತ್ತೆ ತರಲ್ ವಿಶುದ್ಧ ನಿಯಮ ಪ್ರಾರಂಭದಿಂದಾನುಮೀ ಕೊಳನಂ ಪೊಕ್ಕುದುಮಾವ ದೋಷಮೆನಗಿಂ ಮಾರಾಂಪರಾರ್ ತೋರಿರೇ|| ೮೪ ||

ಪದ್ಯ-೮೪:ಪದವಿಭಾಗ-ಅರ್ಥ:ಎಳೆ ಮುಂ ದೈತ್ಯನ ಕೆಯ್ಗೆ ಪೋಗೆ ತರಲೆಂದು (ಹಿಂದೆ ಭೂಮಿಯ

ರಾಕ್ಷಸನಾದ ಹಿರಣ್ಯಾಕ್ಷನ ಕೈಸೇರಲು ಅದನ್ನು ತರಲೆಂದು ಹೋಗೆಲು- ಹೋಗಲಿಲ್ಲವೇ-) ಈ ಚಕ್ರಿ ಮುನ್ನಂ ರಸಾತಲಳಮಂ ಪೊಕ್ಕುದಂ (ಈ ಕೃಷ್ಣನೇ ಮೊದಲು ಪಾತಾಳ ಲೋಕವನ್ನು ಪ್ರವೇಶ ಮಾಡಿದನು,) ಈ ಮಹೋಗ್ರ ರಣದೊಳ್ ನಿಮ್ಮೊಂದು ಕಯ್ಪಿಳ್ದಿ ಭೂತಳಮಂ ಮತ್ತೆ ತರಲ್ (ಈ ಮಹಾ

ಭಯಂಕರವಾದ ಯುದ್ಧದಲ್ಲಿ
ನಿಮ್ಮ ಕೈಗೆ ಬಿದ್ದ
ಭೂಮಂಡಲವನ್ನು) ವಿಶುದ್ಧ
ನಿಯಮ ಪ್ರಾರಂಭದಿಂದಂ
(ಪುನಃ ತರಲು
ಶಾಸ್ತ್ರೋಕ್ತವಾದ
ಆಚರಣೆಯಿಂದ) ಆನುಂ ಈ
ಕೊಳನಂ ಪೊಕ್ಕುದುಂ (ನಾನು
ಈ ಕೊಳವನ್ನು
ಪ್ರವೇಶಿಸುವುದು) ಆವ
ದೋಷಂ (ಯಾವ ಯಪ್ಪು?)

ಎನಗಿಎ ಇಂ ಮಾರಾಂಪರು ಆರ್ ತೋರಿರೇ (ನನಗೆ ಇನ್ನು ಎದುರಿಸುವವರು ಯಾರು ತೋರಿಸಿರಿ,)

ಪದ್ಯ-೮೪:ಅರ್ಥ: ಹಿಂದೆ ಭೂಮಿಯ ರಾಕ್ಷಸನಾದ ಹಿರಣ್ಯಾಕ್ಷನ ಕೈಸೇರಲು ಅದನ್ನು ತರಲೆಂದು ಈ ಕೃಷ್ಣನೇ ಮೊದಲು ಪಾತಾಳ ಲೋಕವನ್ನು ಪ್ರವೇಶ ಮಾಡಿದನು, ಈ ಮಹಾ

ಭಯಂಕರವಾದ ಯುದ್ಧದಲ್ಲಿ ನಿಮ್ಮ ಕೈಗೆ ಬಿದ್ದ ಭೂಮಂಡಲವನ್ನು ಪುನಃ ತರಲು ಶಾಸ್ತ್ರೋಕ್ತವಾದ ಆಚರಣೆಯಿಂದ ನಾನು ಈ ಕೊಳವನ್ನು ಪ್ರವೇಶಿಸುವುದು, ಯಾವ ಯಪ್ಪು? ನನಗೆ ಇನ್ನು ಎದುರಿಸುವವರು ಯಾರು ತೋರಿಸಿರಿ, ಎಂದನು ದುರ್ಯೋಧನ.

ವ|| ಎಂಬುದುಂ

ಧರ್ಮಪುತ್ರನಿಂತೆಂದಂ

ವಚನ:ಪದವಿಭಾಗ-ಅರ್ಥ:
ಎಂಬುದುಂ ಧರ್ಮಪುತ್ರನು
ಇಂತು ಎಂದಂ (ಹೀಗೆಂದನು)-
ವಚನ:ಅರ್ಥ:ಧರ್ಮರಾಯ
ನು ಹೀಗೆಂದನು-

ಮ||

ಬಿಸುಡಿನ್ನಪ್ಪೊಡಮೇವಮಂ

ಧರಣಿಯಂ

ಪೆಚ್ಚಾಳ್ವಮೇನಪ್ಪುದೀ

ಕಿಸುರೊಳ್ ಕೆಮ್ಮನೆ
ಪಾಪಕರ್ಮ ಚಲಮಂ
ಕೊಂಡಾಡದೆಮ್ಮಯ್ವರುಂ |
ಬೆಸಕೈಯುತ್ತಿರೆ ನೀನೆ
ಮೇಣರಸುಗೈ
ಸೋದರ್ಯದಿಂದೊಳ್ಪಿತೇ
ವಸುಧಾಮಂಡಳಮಿಂಬುಕೆ
ಯ್ವುದಿದನಾಂ ಕೆಯ್ಯೊಡ್ಡಿದೆಂ
ಬೇಡಿದೆಂ ||೮೫||

ಪದ್ಯ-೮೫:ಪದವಿಭಾಗ-

ಅರ್ಥ:ಬಿಸುಡು ಇನ್ನಪ್ಪೊಡಂ

ಏವಮಂ (ದುರ್ಯೋದನ
ಇನ್ನು ಮೇಲಾದರೂ
ಕೋಪವನ್ನು ತೆಗೆದುಹಾಕು;)
ಧರಣಿಯಂ ಪೆಚ್ಚಿ ಆಳ್ವಂ
ಏನಪ್ಪುದು ಈಕಿಸುರೊಳ್
(ಭೂಮಿಯನ್ನು ಭಾಗ ಮಾಡಿ
ಆಳೋಣ . ಈ ದ್ವೇಷದಿಂದ
ಏನು ಪ್ರಯೋಜನ?) ಕೆಮ್ಮನೆ
ಪಾಪಕರ್ಮ ಚಲಮಂ
ಕೊಂಡಾಡದೆ
(ನಿಷ್ಪ್ರಯೋಜಕವಾಗಿ

ಪಾಪಕರ್ಮವಾದ ಹಟವನ್ನು ಹಿಡಿಯದೆ) ಎಮ್ಮ ಅಯ್ವರುಂ ಬೆಸಕೈಯುತ್ತಿರೆ ನೀನೆ ಮೇಣ್ ಅರಸುಗೈ (ನಾವು ಅಯ್ದು ಜನರೂ ನಿನಗೆ ಸೇವೆ ಮಾಡುವ ಹಾಗೆ ನೀನೇ ರಾಜ್ಯಭಾರ ಮಾಡು.) ಸೋದರ್ಯದಿಂದ ಒಳ್ಳಿತೇ ವಸುಧಾಮಂಡಳಂ (ಸೋದರ ಭಾವಕ್ಕಿಂತ ಈ ಭೂಮಂಡಲ ಮೇಲಾದುದೇ?)

ಇಂಬುಕೆಯ್ವುದು ಇದನು ಆಂ ಕೆಯ್ಕೊಡ್ಡಿದೆಂ ಬೇಡಿದೆಂ (ಇದನ್ನು ಅಂಗೀಕರಿಸು ಕಯ್ಕೊಡ್ಡಿ ಬೇಡಿದ್ದೇನೆ, ಎಂದನು ಧರ್ಮರಾಯ.)

ಪದ್ಯ-೮೫:ಅರ್ಥ:

ದುರ್ಯೋಧನ ಇನ್ನು ಮೇಲಾದರೂ ಕೋಪವನ್ನು ತೆಗೆದುಹಾಕು; ಭೂಮಿಯನ್ನು ಭಾಗ ಮಾಡಿ ಆಳೋಣ . ಈ ದ್ವೇಷದಿಂದ ಏನು

ಪ್ರಯೋಜನ?
ನಿಷ್ಪ್ರಯೋಜಕವಾಗಿ
ಪಾಪಕರ್ಮವಾದ ಹಟವನ್ನು
ಹಿಡಿಯದೆ, ನಾವು ಅಯ್ದು
ಜನರೂ ನಿನಗೆ ಸೇವೆ
ಮಾಡುವ ಹಾಗೆ ನೀನೇ
ರಾಜ್ಯಭಾರ ಮಾಡು. ಸೋದರ
ಭಾವಕ್ಕಿಂತ ಈ ಭೂಮಂಡಲ
ಮೇಲಾದುದೇ? ಇದನ್ನು
ಅಂಗೀಕರಿಸು ಕಯ್ಯೊಡ್ಡಿ

ಬೇಡಿದ್ದೇನೆ, ಎಂದನು ಧರ್ಮರಾಯ.

ವ|| ಎಂಬುದುಂ ಅಂಬುಜೋದರನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ ಅಂಬುಜೋದರನು ಇಂತೆಂದಂ (ಕಮಲನಾಭ ಕೃಷ್ಣನು ಹೀಗೆಂದನು-) -

ವಚನ:ಅರ್ಥ: ಹಾಗೆನ್ನಲು ಕಮಲನಾಭ ಕೃಷ್ಣನು

ಹೀಗೆಂದನು-

ಅನವದ್ಯ||

ಅಯ್ದಳಿವಾಡದೊಳಯ್ವರು

ಮಂ ನೀಂ

ಕೂರ್ತಿರಿಸೆದೊಡಮೆಂತುಮೇ

ಗೆಯ್ದುಮೊದಲ್ಲದ

ಕಾರಣದಿಂದಂ

ನೋಡಿನಿತಾದುದು

ನಿನ್ನೊಳೇಂ |

ಪಯ್ದವನಲ್ಲನೆ

ಧರ್ಮತನೂಜಂ

ಪೇಳ್ದುದೆನಿನ್ನೆಮಗಿಂಬುಕೆಯ್ ಸಯ್ದುನೆ ಆಗುಳಿದಾರೊಳಮೇವಂಗೊ ಳ್ಳದಿರಿಂ ಫಣಿಕೇತನಾ ||೮೬ ||

ಪದ್ಯ-೮೬:ಪದವಿಭಾಗ-ಅರ್ಥ:ಅಯ್ದು ಅಳಿವಾಡದೊಳ್ ಅಯ್ವರುಮಂ (ಅಯ್ದು ಸಾಮಾನ್ಯವಾದ ಗ್ರಾಮಗಳಲ್ಲಿ ಅಯ್ದುಜನರನ್ನು) ನೀಂ ಕೂರ್ತು ಇರಿಸು ಎಂದೊಡಂ

(ನೀನು ಪ್ರೀತಿಯಿಂದ ಇರಿಸು
ಎಂದು ಹೇಳಿದರೂ)
ಎಂತುಮ್ ಏಗೆಯ್ದುಂ ಅದು
ಒಲ್ಲದ ಕಾರಣದಿಂದಂ
ನೋಡು ಇನಿತಾದುದು
(ಹೇಗೋ ಏನು ಮಾಡಿಯೂ
ಅದಕ್ಕೆ ಒಪ್ಪದ ಕಾರಣದಿಂದ
ಇಷ್ಟಾಯಿತು ನೋಡು.)
ನಿನ್ನೊಳೇಂ ಸಯ್ದವನಲ್ಲನೆ
ಧರ್ಮತನೂಜಂ (ನಿನ್ನಲ್ಲಿ
ಧರ್ಮರಾಜನು ನೇರವಾಗಿ

ಸ್ನೇಹದಿಂದ
ನೆಡೆದುಕೊಂಡಿಲ್ಲವೇ.)
ಪೇಳ್ದುದಂ ಇನ್ನು ಎಮಗೆ
ಇಂಬುಕೆಯ್
(ಧರ್ಮರಾಯನು-
ಹೇಳಿದುದನ್ನು ನಮಗಾಗಿ
ಅಂಗೀಕಾರ ಮಾಡು.)
ಸಯ್ಪನೆ ಆಗು (ನೇರವಾದವ-
ಸತ್ಯವಂತ/ಸ್ನೇಹಿತ ಆಗು)
ಉಳಿದ ಆರೊಳಂ
ಏವಂಗೊಳ್ಳದೆ ಇರಿಂ

ಫಣಿಕೇತನಾ (ದುರ್ಯೋಧನಾ ಉಳಿದ ಯಾರಲ್ಲಿಯೂ ಕೋಪಿಸಿಕೊಳ್ಳಬೇಡ.)

ಪದ್ಯ-೮೬:ಅರ್ಥ:ಅಯ್ದು ಸಾಮಾನ್ಯವಾದ ಗ್ರಾಮಗಳಲ್ಲಿ ಅಯ್ದುಜನರನ್ನು ನೀನು ಪ್ರೀತಿಯಿಂದ ಇರಿಸು ಎಂದು ಹೇಳಿದರೂ ಹೇಗೋ ಏನು ಮಾಡಿಯೂ ಅದಕ್ಕೆ ಒಪ್ಪದ ಕಾರಣದಿಂದ ಇಷ್ಟಾಯಿತು ನೋಡು. ನಿನ್ನಲ್ಲಿ

ಧರ್ಮರಾಜನು ನೇರವಾಗಿ
ಸ್ನೇಹದಿಂದ
ನೆಡೆದುಕೊಂಡಿಲ್ಲವೇ.
ಧರ್ಮರಾಯನು
ಹೇಳಿದುದನ್ನು ನಮಗಾಗಿ
ಅಂಗೀಕಾರ ಮಾಡು.
ಸತ್ಯವಂತನಾಗಿ/
ಸ್ನೇಹಿತನಾಗಿಯೇ ಉಳಿ.
ದುರ್ಯೋಧನಾ ಉಳಿದ
ಯಾರಲ್ಲಿಯೂ
ಕೋಪಿಸಿಕೊಳ್ಳಬೇಡ.

ವ||ಎಂಬುದುಮಾ ಮಾತಂ ಕೆಳಗಿವಿಗೆಯ್ದು ತನ್ನ ಗದಾ ದಂಡಮಂ ಭುಜಾದಂಡದೊಳಳವಡಿಸಿ ನೋಡಿ ದುರ್ಯೋಧನನಿಂತೆಂದಂ -

- **ವಚನ:ಪದವಿಭಾಗ-**
- **ಅರ್ಥ:**ಎಂಬುದುಂ ಆ ಮಾತಂ ಕೆಳಗಿವಿಗೆಯ್ದು (ಎನ್ನಲು ಆಮಾತನ್ನು ಕಿವಿಗೆ ಹಾಕಿಕೊಳ್ಳದೆ) ತನ್ನ ಗದಾ

ದಂಡಮಂ
ಭುಜಾದಂಡದೊಳ್
ಅಳವಡಿಸಿ ನೋಡಿ
ದುರ್ಯೋಧನನಿಂತೆಂದಂ
(ತನ್ನ ಗದೆಯನ್ನು ಭಜದಮೇಲೆ
ಇರಿಸಿಕೊಂಡು ನೋಡಿ,
ದುರ್ಯೋಧನನು ಹೀಗೆ
ಹೇಳಿದನು.) -
ವಚನ:ಅರ್ಥ: ಎನ್ನಲು
ಆಮಾತನ್ನು ಕಿವಿಗೆ
ಹಾಕಿಕೊಳ್ಳದೆ, ತನ್ನ ಗದೆಯನ್ನು

ಭಜದಮೇಲೆ ಇರಿಸಿಕೊಂಡು
ನೋಡಿ, ದುರ್ಯೋಧನನು
ಹೀಗೆ ಹೇಳಿದನು.

**ಕಂ|| ಮುನ್ನಿಮ್ಮ ಪೇಳ್ದು
ಗೆಯ್ಯದ
ನಿನ್ನೀ ಪದದಲ್ಲಿ ಪೇಳ್ದು
ಗೆಯ್ದುಂತುಂತೇಂ |
ಪನ್ನಗ ಪತಾಕನಲ್ಲನೇ
ಬಿನ್ನವಣೆ ಮಾತೆನೆನ್ನೊಳಿಂ
ನುಡಿಯದಿರಿಂ|| ೮೭ ||**

ಪದ್ಯ-೮೭:ಪದವಿಭಾಗ-ಅರ್ಥ:ಮುಂ ನಿಮ್ಮ ಪೇಳ್ದು ಗೆಯ್ಯದ (ಮೊದಲು ನೀವು ಹೇಳಿದ್ದನ್ನು ಮಾಡದವನು) ಇನ್ ಈ ಪದದಲ್ಲಿ ಪೇಳ್ದು ಗೆಯ್ದುಂತು ಉಂತೆ (ಇನ್ನು ಸುಮ್ಮನೆ ಈ ಸಂದರ್ಭದಲ್ಲಿ ನೀವು ಹೇಳಿದುದನ್ನು ಮಾಡುವುದಕ್ಕೆ) ಏಂ ಪನ್ನಗಪತಾಕನು ಅಲ್ಲನೇ (ಅಭಿಮಾನ ಧನನಾದ

ದುರ್ಯೋಧನನಲ್ಲವೇ?)
ಬಿನ್ನವಣೆ ಮಾತು ಎನೆನ್ನೊಳು
ಇಂ ನುಡಿಯದಿರಿಂ (ವೃಥಾ
ಬಿನ್ನಾಣದ ಲೋಕೋಕ್ತಿಯನ್ನು
ನನ್ನಲ್ಲಿ ಆಡಬೇಡಿ.)
ಪದ್ಯ-೮೭:ಅರ್ಥ: ಮೊದಲು
ನೀವು ಹೇಳಿದ್ದನ್ನು
ಮಾಡದವನು ಇನ್ನು ಸುಮ್ಮನೆ
ಈ ಸಂದರ್ಭದಲ್ಲಿ ನೀವು
ಹೇಳಿದುದನ್ನು ಮಾಡುವುದಕ್ಕೆ
ಅಭಿಮಾನ ಧನನಾದ

ದುರ್ಯೋಧನನಲ್ಲವೇ? ವೃಥಾ ಬಿನ್ನಾಣದ ಲೋಕೋಕ್ತಿಯನ್ನು ನನ್ನಲ್ಲಿ ಆಡಬೇಡಿ.

ಶಾ||ಆ ದುಶ್ಶ್ಯಾಸನನಂ ಪೊರಳ್ಚಿ ರಣದೊಳ್ ಕೊದೀ ಮರುತ್ಪುತ್ರನಿಂ
ತಾದಂ ದಳ್ಳಿಸೆನೋಡಿ ನೋಡಿ ಪುದುವಾಳೆಂತಕ್ಕುಮಿಂತೀಗ ಳಾ |
ನಾದೆಂ ಮೇಣಿವನಾದನೇಕೆ ತಡೆವಿರ್ ಕೆಯ್ಯೊಯ್ದವಿನ್ನೀಂ

ಕರಂ
ಸೋದರ್ಯಕ್ಕೆ
ಕನಲ್ದೊಡಿಂತಿನಿಬರುಂ ಕಾದಿಂ
ಭರಂಗೆಯ್ದಪೆಂ ||೮೮ ||

ಪದ್ಯ-೮೮:ಪದವಿಭಾಗ-ಅರ್ಥ:ಆ ದುಶ್ಶ್ಯಾಸನನಂ ಪೊರಳ್ಚಿ ರಣದೊಳ್ ಕೊಂದ (ದುಶ್ಶ್ಯಾಸನನ್ನು ಯುದ್ಧದಲ್ಲಿ ಹೊರಳಿಸಿ ಕೊಂದ) ಈ ಮರುತ್ಪುತ್ರನಿಂ ತಾದಂ ದಳ್ಳಿಸೆ ನೋಡಿ ನೋಡಿ (ಈ

ಭೀಮನೂ ಹೀಗೆ ವಿಶೇಷವಾಗಿ ಉರಿಯುತ್ತಿರುವುದನ್ನು ನೋಡಿ ನೋಡಿಯೂ) ಪುದುವಾಳ್ ಎಂತು ಅಕ್ಕುಂ (ಜೊತೆಯಲ್ಲಿ ಕೂಡಿ ಹುದುವಾದ ಬಾಳು ಹೇಗೆ ಸಾಧ್ಯವಾಗುತ್ತದೆ?) ಇಂತು ಈಗಳು ಆನಾದೆಂ ಮೇಣ್ ಇವನಾದನು ಏಕೆ ತಡೆವಿರ್ (ಈಗ ನಾನಾದೆನು ಮತ್ತು ಇವನಾದನು. ಏಕೆ

ತಡೆಯುತ್ತಿದ್ದೀರಿ?)
ಕೆಯ್ವೊಯ್ದೆವು (ಕೈ ತಟ್ಟಿದ್ದೇವೆ.
ಯುದ್ಧಕ್ಕೆ ಸಿದ್ಧವಾಗಿ ಸೂಚನೆ.
ಕೈತಟ್ಟು, ತೊಡೆತಟ್ಟು-) ಇನ್ನು
ಇಂ ಕರಂ ಸೋದರ್ಯಕ್ಕೆ
ಕನಲ್ದೊಡೆ ಇಂತು ಇನಿಬರುಂ
ಕಾದಿಂ ಭರಂ ಗೆಯ್ದಪೆಂ.
(ಇನ್ನು ನೀವು ಬಹಳ
ಸೋದರತನಕ್ಕೆ
ಕೋಪಿಸಿಕೊಳ್ಳುವುದಾದರೆ
ನೀವಿಷ್ಟು ಜನವೂ

ಯುದ್ಧಮಾಡಿ. ನಾನು ಎದುರಿಸುತ್ತೇನೆ.)

ಪದ್ಯ-೮೮:ಅರ್ಥ: ದುಶ್ಯಾಸನನ್ನು ಯುದ್ಧದಲ್ಲಿ ಹೊರಳಿಸಿ ಕೊಂದ ಈ ಭೀಮನೂ ಹೀಗೆ ವಿಶೇಷವಾಗಿ ಉರಿಯುತ್ತಿರುವುದನ್ನು ನೋಡಿ ನೋಡಿಯೂ ಜೊತೆಯಲ್ಲಿ ಕೂಡಿ ಹುದುವಾದ ಬಾಳು ಹೇಗೆ ಸಾಧ್ಯವಾಗುತ್ತದೆ? ಈಗ

ನಾನಾದೆನು ಮತ್ತು ಇವನಾದನು. ಏಕೆ ತಡೆಯುತ್ತಿದ್ದೀರಿ? ಕೈ ತಟ್ಟಿದ್ದೇವೆ. ಇನ್ನು ನೀವು ಬಹಳ ಸೋದರತನಕ್ಕೆ (ಒಟ್ಟಾಗಿ) ಕೋಪಿಸಿಕೊಳ್ಳುವುದಾದರೆ ನೀವಿಷ್ಟು ಜನವೂ ಯುದ್ಧಮಾಡಿ. ನಾನು ಎದುರಿಸುತ್ತೇನೆ.

ವ||ಎಂಬನ್ನೆಗಂ

ತೀರ್ಥಯಾತ್ರೆಯೊಳ್

ತೊಡರ್ದು ತಡೆದ ಬಲದೇವಂ

ದುರ್ಯೋಧನಂಗಾಯು

ಬರ್ಪಂತೆ ಪೆಗಲೊಳ್

ಹಲಾಯುಧವನಿಕ್ಕಿಕೊಂಡು

ಜಂಗಮ ಪರ್ವತಮೆ ಬರ್ಪಂತೆ

ಬಂದು ತನಗೆ ಪೊಡಮಟ್ಟ

ದುರ್ಯೋಧನನಂ ಪರಸಿ

ಪಿರಿದುಮಳ್ಕರಿಂದಪ್ಪಿಕೊಂಡಾ

ತಂಗಾದವಸ್ಥೆಯಂ ಕಂಡು

ಮನ್ಯುಗದ್ಗದಕಂಠನಾಗಿ

ತನಗೆರಗಿದ

ಮುರಾಂತಕನುಮಂ

ಪಾಂಡುವರುಮಂ

ಪರಸಲೊಲ್ಲದಿದೇನಂ

ಮಾಡಿದಿರೆಂದೊಡೆ

ಮಧುಮಥನನಣ್ಣನ ಮುನಿದ

ಮೊಗಮನರಿದಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬನ್ನೆಗಂ

ತೀರ್ಥಯಾತ್ರೆಯೊಳ್

ತೊಡರ್ದು ತಡೆದ (ಎನ್ನುವಷ್ಟರಲ್ಲಿ ತೀರ್ಥಯಾಯಾತ್ರೆಯಲ್ಲಿ ನಿರತನಾಗಿದ್ದ ಅಲ್ಲಿಗೆ ಬರಲು ತಡವಾಗಿದ್ದ) ಬಲದೇವಂ ದುರ್ಯೋಧನಂಗಾಯು ಬರ್ಪಂತೆ ಪೆಗಲೊಳ್ ಹಲಾಯುಧವನಿಕ್ಕಿಕೊಂಡು ಜಂಗಮ ಪರ್ವತಮೆ ಬರ್ಪಂತೆ ಬಂದು (ಬಲರಾಮನು ದುರ್ಯೋಧನನಿಗೆ ಆಯಸ್ಸು

ಬರುವಂತೆ ಹೆಗಲಮೇಲೆ ನೇಗಿಲನ್ನು ಇಟ್ಟುಕೊಂಡು ಚಲಿಸುವ ಬೆಟ್ಟವೇ ಬಂದಂತೆ ಬಂದು,) ತನಗೆ ಪೊಡಮಟ್ಟ ದುರ್ಯೋಧನನಂ ಪರಸಿ ಪಿರಿದುಂ ಅಳ್ಕರಿಂದ ಅಪ್ಪಿಕೊಂಡು ಆತಂಗಾದ ಅವಸ್ಥೆಯಂ ಕಂಡು ಮನ್ಯುಗದ್ಗದಕಂಠನಾಗಿ (ತನಗೆ ನಮಿಸಿದ ದುರ್ಯೋಧನನ್ನು ಹರಸಿ, ಬಹಳ ಪ್ರೀತಿಯಿಂದ

ಅಪ್ಪಿಕೊಂಡು ಆತನಿಗಾದ ಅವಸ್ಥೆಯನ್ನು ಕಂಡು ದುಃಖದಿಂದ ಗದ್ಗದಿತ ದನಿಯಿಂದ) ತನಗೆರಗಿದ ಮುರಾಂತಕನುಮಂ ಪಾಂಡುವರುಮಂ ಪರಸಲು ಒಲ್ಲದೆ ಇದೇನಂ ಮಾಡಿದಿರಿ ಎಂದೊಡೆ (ತನಗೆ ನಮಸ್ಕಾರ ಮಾಡಿದ ಕೃಷ್ಣನಿಗೂ ಪಾಂಡವರಿಗೂ ಹರಸಲು ಇಷ್ಟ ಪಡದೆ ಇದೇನು ಮಾಡಿದಿರಿ

ಎಂದನು. ಎಂದಾಗ)
ಮಧುಮಥನನು ಅಣ್ಣನ
ಮುನಿದ ಮೊಗಮನು ಅರಿದು
ಇಂತೆಂದಂ ()-
ವಚನ:ಅರ್ಥ:ಎನ್ನುವಷ್ಟರಲ್ಲಿ
ತೀರರ್ಥಯಾಯಾತ್ರೆಯಲ್ಲಿ
ನಿರತನಾಗಿದ್ದ ಅಲ್ಲಿಗೆ ಬರಲು
ತಡವಾಗಿದ್ದ ಬಲರಾಮನು
ದುರ್ಯೋಧನನಿಗೆ ಆಯಸ್ಸು
ಬರುವಂತೆ ಹೆಗಲಮೇಲೆ
ನೇಗಿಲನ್ನು ಇಟ್ಟುಕೊಂಡು

ಚಲಿಸುವ ಬೆಟ್ಟವೇ ಬಂದಂತೆ ಬಂದು, ತನಗೆ ನಮಿಸಿದ ದುರ್ಯೋಧನನ್ನು ಹರಸಿ, ಬಹಳ ಪ್ರೀತಿಯಿಂದ ಅಪ್ಪಿಕೊಂಡು ಆತನಿಗಾದ ಅವಸ್ಥೆಯನ್ನು ಕಂಡು ದುಃಖದಿಂದ ಗದ್ಗದಿತ ದನಿಯಿಂದ ತನಗೆ ನಮಸ್ಕಾರ ಮಾಡಿದ ಕೃಷ್ಣನಿಗೂ ಪಾಂಡವರಿಗೂ ಹರಸಲು ಇಷ್ಟ ಪಡದೆ ಇದೇನು ಮಾಡಿದಿರಿ

ಎಂದನು. ಎಂದಾಗ, ಕೃಷ್ಣನು ಅಣ್ಣನ ಕೋಪವನ್ನು ಅರ್ಥ ಮಾಡಿಕೊಂಡು ಹೀಗೆಂದನು.

ಚಂ||ಮುಳಿವೊಡಮೆಯ್ದೆ
ಕೇಳ್ದು ಮಳಿ ಪಾಂಡ ತನೂಜರ
ಮುನ್ನಿನಾಳ್ದ ಭೂ
ತಳಮನದೆಂತು ಮೀಯದೆ
ಸುಯೋಧನನುದ್ಧತ ವೃತ್ತಿಯಿಂ
ಸುಹೃ
ದ್ಬಳಮಳಿದಳ್ಗಿ ಕಾದಿ
ಪುದುವಾಳ್ಕೆಗೊಡಂಬಡಲೊಲ್ಲ

ದಿನ್ನುಮ ವ್ವಳಿಸುವನೀಗಳಾತನನೆ ನೀಂ ಬೆಸಗಳ್ ಪುಸಿಯಂ ಸುಯೋಧನಂ || ೮೯ ||

ಪದ್ಯ-೮೯:ಪದವಿಭಾಗ-ಅರ್ಥ:ಮುಳಿವೊಡಂ ಎಯ್ದೆ ಕೇಳ್ದು ಮಳಿ (ಕೋಪಿಸಿಕೊಳ್ಳುವುದಾದರೆ ಚೆನ್ನಾಗಿ ವಿಚಾರ ಮಾಡಿ ಕೋಪಿಸಿಕೊ.) ಪಾಂಡತನೂಜರ ಮುನ್ನಿನ

ಆಳ್ದ ಭೂ ತಳಮನು ಅದು
ಎಂತುಂ ಈಯದೆ
(ಪಾಂಡವರು ಮೊದಲು
ಆಳಿದ ಭೂಮಿಯನ್ನು
ಏನುಮಾಡಿದರೂ ಕೊಡದೆ)
ಸುಯೋಧನನು ಉದ್ಧತ
ವೃತ್ತಿಯಿಂ ಸುಹೃದ್ಬಳಂ ಅಳಿದು
ಅಳ್ಗಿ ಕಾದಿ (ದುರ್ಯೋಧನನು
ಗರ್ವದಿಂದ
ಮಿತ್ರಸೈನ್ಯಗಳೆಲ್ಲಾಸತ್ತು
ನಾಶವಾಗುವ ಹಾಗೆ

ಯುದ್ಧಮಾಡಿ,) ಪುದುವಾಳ್ಕೆಗೆ ಒಡಂಬಡಲೊಲ್ಲದೆ ಇನ್ನುಂ ಅವ್ವಳಿಸುವಂ ಈಗಳು ಆತನನೆ ನೀಂ ಬೆಸಗಳ್ (ಕೂಡಿಬಾಳುವುದಕ್ಕೆ ಒಪ್ಪಿಕೊಳ್ಳದೆ ಇನ್ನೂ ಮೇಲೆ ಬೀಳುತ್ತಿದ್ದಾನೆ. ಈಗ ಅವನನ್ನೇ ನೀನು ಕೇಳು.) ಪುಸಿಯಂ ಸುಯೋಧನಂ (ದುರ್ಯೋಧನನು ಹುಸಿಯಾಡುವುದಿಲ್ಲ.)

ಪದ್ಯ-೮೯:ಅರ್ಥ: ಕೃಷ್ಣ ಹೇಳಿದ, ನೀನು ಕೋಪಿಸಿಕೊಳ್ಳುವುದಾದರೆ ಚೆನ್ನಾಗಿ ವಿಚಾರ ಮಾಡಿ ಕೋಪಿಸಿಕೊ. ಪಾಂಡವರು ಮೊದಲು ಆಳಿದ ಭೂಮಿಯನ್ನು ಏನುಮಾಡಿದರೂ ಕೊಡದೆ ದುರ್ಯೋಧನನು ಗರ್ವದಿಂದ ಮಿತ್ರಸೈನ್ಯಗಳೆಲ್ಲಾಸತ್ತು ನಾಶವಾಗುವ ಹಾಗೆ

ಯುದ್ಧಮಾಡಿ,
ಕೂಡಿಬಾಳುವುದಕ್ಕೆ
ಒಪ್ಪಿಕೊಳ್ಳದೆ ಇನ್ನೂ ಮೇಲೆ
ಬೀಳುತ್ತಿದ್ದಾನೆ. ಈಗ
ಅವನನ್ನೇ ನೀನು ಕೇಳು.
ದುರ್ಯೋಧನನು
ಹುಸಿಯಾಡುವುದಿಲ್ಲ.

ವ||ಎನೆ ನೀಂ ಮರುಳ್ತನಮನೇಕೆ ಮಾಡಿದೆಯೆಂದು ತನ್ನ ಮೊಗಮಂ ನೋಡಿದ

ಹಲಾಯುಧಂಗೆ ದುರ್ಯೋಧನನಿಂತೆಂದಂ -

ವಚನ:ಪದವಿಭಾಗ-ಅರ್ಥ:ಎನೆ, ನೀಂ ಮರುಳ್ತನಮನು ಏಕೆ ಮಾಡಿದೆಯೆಂದು (ನೀನು ದಡ್ಡತನವನ್ನೇಕೆ ಮಾಡಿದೆ ಎಂದು) ತನ್ನ ಮೊಗಮಂ ನೋಡಿದ ಹಲಾಯುಧಂಗೆ ದುರ್ಯೋಧನನು ಇಂತೆಂದಂ (ತನ್ನ ಮುಖವನ್ನು ನೋಡಿದ

ಬಲರಾಮನಿಗೆ

ದುತಯೋ್ಧನನು

ಹೀಗೆಂದನು-) -

ವಚನ:ಅರ್ಥ:ಎನ್ನಲು, ನೀನು

ದಡ್ಡತನವನ್ನೇಕೆ ಮಾಡಿದೆ

ಎಂದು ತನ್ನ ಮುಖವನ್ನು

ನೋಡಿದ ಬಲರಾಮನಿಗೆ

ದುತಯೋ್ಧನನು

ಹೀಗೆಂದನು-

ಮ||ಹರಿಯೆಂದಂದಮವಂತೆ

ಪಾಂಡುತನಯರ್

ನಿರ್ದೋಷಿಗಳ್ ತಥ್ಯಮಿಂ
ತು
ರಣಸ್ಥಾನದೊಳಿನ್ನೆರಳ್ದುಡಿವೆ
ನೇ ಮದ್ಬಂಧು ಶೋಕಾಗ್ನಿಯಿಂ
|
ದುರಿದಪ್ಪೆಂ ತೊಡರ್ದೆನ್ನಿಂ
ಬಿಡು ವಿರೋಧಿಕ್ಷ್ಮಾಪರೆನ್ನೀ
ಗದಾ
ಪರಿಘಾತದಿಂದಳ್ಗಿ ತಳ್ಗಿ
ಮಡಿದಿನ್ನಳ್ಕಾಡದೇಂ
ಪೋಪರೇ || ೯೦||

ಪದ್ಯ-೯೦:ಪದವಿಭಾಗ-ಅರ್ಥ:ಹರಿಯೆಂದ ಅಂದಂ ಅವು ಅಂತೆ (ಕೃಷ್ಣ ಹೇಳಿದುದು ಅದು ಹಾಗೆಯೇಸರಿ.) ಪಾಂಡುತನಯರ್ ನಿರ್ದೋಷಿಗಳ್ ತಥ್ಯಂ (ಪಾಂಡುಪುತ್ರರು ನಿರ್ದೋಷಿಗಳು. ಅದು ನಿಜ.) ಇಂತು ರಣಸ್ಥಾನದೊಳ್ ಇನ್ನು ಎರಳ್ನುಡಿವೆನೇ (ಯುದ್ಧರಂಗದಲ್ಲಿ ಇನ್ನು ಮೇಲೆ

ಎರಡು
ಮಾತನ್ನಾಡುತ್ತೇನೆಯೇ?)
ಮದ್ಬಂಧು- ಮತ್ ಬಂಧು
ಶೋಕಾಗ್ನಿಯಿಂದ ಉರಿದಪ್ಪೆಂ
(ನನ್ನ ಬಾಂದವರ
ಮರಣದಿಂದುಂಟಾದ ದಃಖದ
ಬೆಂಕಿಯಿಂದ
ಉರಿಯುತ್ತಿದ್ದೇನೆ.) ತೊಡರ್ದ
ಎನ್ನ ಇಂ ಬಿಡು (ಯುದ್ಧದಲ್ಲಿ
ತೊಡಗಿರುವ ನನ್ನನ್ನು ನೀನು
ಬಿಟ್ಟುಬಿಡು.)

ವಿರೋಧಿಕ್ಷ್ಮಾಪರ್ ಎನ್ನ ಈ
ಗದಾ ಪರಿಘಾತದಿಂದ ಅಳ್ಗಿ
ತಳ್ಗಿ (ವೈರಿರಾಜರು ಈ
ಪರಿಘದಂತಿರುವ ಈ ಗದೆಯ
ಪೆಟ್ಟಿನಿಂದ ನಾಶವಾಗಿ ಬಿದ್ದು)
ಮಡಿದು ಇನ್ನು ಅಳ್ಕಾಡದೆ ಏಂ
ಪೋಪರೇ (ಏನು ಹಾಳಾಗದೇ
ಹೋಗುತ್ತಾರೆಯೇ?
ಎಂದನು.)
ಪದ್ಯ-೯೦:ಅರ್ಥ: ಕೃಷ್ಣ
ಹೇಳಿದುದು ಅದು

ಹಾಗೆಯೇಸರಿ.
ಪಾಂಡುಪುತ್ರರು
ನಿರ್ದೋಷಿಗಳು. ಅದು ನಿಜ.
ಯುದ್ಧರಂಗದಲ್ಲಿ ಇನ್ನು ಮೇಲೆ
ಎರಡು
ಮಾತನ್ನಾಡುತ್ತೇನೆಯೇ? ನನ್ನ
ಬಾಂದವರ
ಮರಣದಿಂದುಂಟಾದ ದಃಖದ
ಬೆಂಕಿಯಿಂದ
ಉರಿಯುತ್ತಿದ್ದೇನೆ. ಯುದ್ಧದಲ್ಲಿ
ತೊಡಗಿರುವ ನನ್ನನ್ನು ನೀನು

ಬಿಟ್ಟುಬಿಡು. ವೈರಿರಾಜರು ಈ ಪರಿಘದಂತಿರುವ ಈ ಗದೆಯ ಪೆಟ್ಟಿನಿಂದ ನಾಶವಾಗಿ ಬಿದ್ದು ಹಾಳಾಗದೇ ಇರುತ್ತಾರೆಯೇ? ಎಂದನು.

ವ|| ಎಂಬುದುಂ ಸಂಕರ್ಷಣನಾತನ ಮನದುತ್ಕರ್ಷೆಯನರಿದು ಪೆರತನಿನ್ನೆನಗೆ ನುಡಿಯಲೆಡೆಯಿಲ್ಲ, ಧರ್ಮಯುದ್ಧಮಂ

ನೋಡಲ್ವೇಳ್ಕುಮೆಂದು
ಧರ್ಮಪುತ್ರನನಿಂತೆಂದಂ.
ನಿಮ್ಮಯ್ವರೊಳೊರ್ವಂಈತ
ನೊಳ್ ಕಾದುವುದು ಕಾದಿ
ಸೋಲ್ತಿಂ ಬಳಿಯಂ
ದುರ್ಯೋಧನಂ
ನಲನಾಳ್ವನುಳಿದ
ನಾಲ್ವರುಮಾತಂಗೆ
ಬೆಸಕೈವದಾರ್ ಕಾದಿದಪರೆನೆ
ಭೀಮಸೇನನಿಂತೆಂದಂ-

ವಚನ:ಪದವಿಭಾಗ-ಅರ್ಥ:ಎಂಬುದುಂ ಸಂಕರ್ಷಣನು ಆತನ ಮನದ ಉತ್ಕರ್ಷೆಯನು ಅರಿದು (ಬಲರಾಮನು ಆತನ ಮನಸ್ಸಿನ ಉದಾತ್ತತೆಯನ್ನು ತಿಳಿದು) ಪೆರತಂ ಇನ್ನೆನಗೆ ನುಡಿಯಲು ಎಡೆಯಿಲ್ಲ,(ಇನ್ನು ಬೇರೆಯದನ್ನು ನುಡಿಯಲು ಅವಕಾಶವಿಲ್ಲ) ಧರ್ಮಯುದ್ಧಮಂ

ನೋಡಲ್ವೇಳ್ಕುಂ ಎಂದು ಧರ್ಮಪುತ್ರನನು ಇಂತೆಂದಂ (ಧರ್ಮಯುದ್ಧವನ್ನು ನೋಡಬೇಕೆಂದು ಧರ್ಮಪುತ್ರರನ್ನು ಕುರಿತು ಹೀಗೆಂದನು,). ನಿಮ್ಮ ಅಯ್ವರೊಳ್ ಒರ್ವಂ ಈತನೊಳ್ ಕಾದುವುದು (ನಿಮ್ಮ ಅಯ್ದು ಜನರಲ್ಲಿ ಒಬ್ಬನು ಈತನೊಡನೆ ಕಾದುವುದು.) ಕಾದಿ ಸೋಲ್ತಿಂ

ಬಳಿಯಂ ದುರ್ಯೋಧನಂ
ನಲನ ಆಳ್ವನು (ಕಾದಿ ಸೋತ
ಬಳಿಕ ದುರ್ಯೋಧನನು
ಭೂಮಿಯನ್ನು ಆಳುವನು.)
ಉಳಿದ ನಾಲ್ವರುಂ ಆತಂಗೆ
ಬೆಸಕ್ಕೈವದು (ಉಳಿದ ನಾಲ್ಕು
ಜನರೂ ಅವನ ಸೇವೆ
ಮಾಡತಕ್ಕದ್ದು.) ಆರ್
ಕಾದಿದಪರು ಎನೆ
ಭೀಮಸೇನನು ಇಂತೆಂದಂ
(ಯಾರು ಕಾದುತ್ತೀರಿ ಎನ್ನಲು,

ಭೀಮಸೇನನು ಹೀಗೆ ಹೇಳಿದನು.-)-

ವಚನ:ಅರ್ಥ:ಬಲರಾಮನು ಆತನ ಮನಸ್ಸಿನ ಉದಾತ್ತತೆಯನ್ನು ತಿಳಿದು ಇನ್ನು ಬೇರೆಯದನ್ನು ನುಡಿಯಲು ಅವಕಾಶವಿಲ್ಲ ಧರ್ಮಯುದ್ಧವನ್ನು ನೋಡಬೇಕೆಂದು ಧರ್ಮಪುತ್ರರನ್ನು ಕುರಿತು ಹೀಗೆಂದನು, ನಿಮ್ಮ ಅಯ್ದು

ಜನರಲ್ಲಿ ಒಬ್ಬನು ಈತನೊಡನೆ ಕಾದುವುದು. ಕಾದಿ ಸೋತ ಬಳಿಕ ದುರ್ಯೋಧನನು ಭೂಮಿಯನ್ನು ಆಳುವನು. ಉಳಿದ ನಾಲ್ಕು ಜನರೂ ಅವನ ಸೇವೆ ಮಾಡತಕ್ಕದ್ದು. ಯಾರು ಕಾದುತ್ತೀರಿ ಎನ್ನಲು, ಭೀಮಸೇನನು ಹೀಗೆ ಹೇಳಿದನು.-

ತೊಡರ್ದು ಬಿಡಿಂ ಸುಯೋಧನನೆನ್ನುಮಾನಿರೆ

ಕೌರವಾಧಿಪಂ
ಗಿಡುವಗೆ ಪೇಳಿಮಿಂ
ಪೆರರೊಳಂ ಮುಳಿಸುಂಟೆ
ಮಹಾ ಪ್ರತಿಜ್ಞೆಯೊಳ್ |
ತೊಡರ್ದುಮನಾನೆ
ಭೂತಮಳನದಿರ್ಕೆಡೆಗೆಯ್
ಗೆಲಲಾರ್ತರಾಗ್ರರ
ಳ್ನುಡಿಯದಿರೆಂದೊಡಂಬಡಿಸಿ
ದಂ ಹಳಿಯಂ ನಯದಿಂ
ವೃಕೋದರಂ ||೯೧ ||

ಪದ್ಯ-೯೧:ಪದವಿಭಾಗ-ಅರ್ಥ:ತೊಡರ್ದುರ್ ಬಿಡಿಂ ಸುಯೋಧನನು ಎನ್ನುಂ (ನನ್ನನ್ನೂ ದುರ್ಯೋಧನನ್ನೂ ಒಟ್ಟುಗೂಡಿಸಿ ಬಿಡಿ, ಯುದ್ಧಕ್ಕೆ-) ಆನು ಇರೆ ಕೌರವಾಧಿಪಂಗೆ ಇಡುವಗೆ (ಇಡುವ ಹಗೆ) ಪೇಳಿಮಿಂ ಪೆರರೊಳಂ ಮುಳಿಸುಂಟೆ (ಕೌರವೇಶ್ವರನಿಗೆ ಬದ್ಧ ದ್ವೇಷಿಯಾಗಿ ನಾನಿರುವಾಗ

ಇತರರಲ್ಲಿ ಕೋಪವುಂಟೇ?)
ಮಹಾ ಪ್ರತಿಜ್ಞೆಯೊಳ್
ತೊಡರ್ದುಮನು ಆನೆ (ಮಹಾ
ಪ್ರತಿಜ್ಞಾರೂಢನಾಗಿರುವವನೂ
ನಾನೇ!) ಭೂತಮಳನು
ಅದಿರ್ಕೆ(ಭೂಮಿಯ ವಿಷಯ
ಅದು ಹಾಗಿರಲಿ) ಎಡೆಗೆಯ್
(ಕಾಳೆಗ ಮಾಡುವುದಕ್ಕೆ
ದ್ಥಳವನ್ನು ಸಿದ್ಧಪಡಿಸು)
ಗೆಲಲ್ ಆರ್ತರು ಆರ್ಗೆ
(ಗೆಲ್ಲಲು ಸಮರ್ಥರಾದವರು

ಯಾರು?) ಎರಳ್ ನುಡಿಯದಿರು (ಎರಡು ಮಾತನ್ನಾಡಬೇಡ) ಎಂದು ಒಡಂಬಡಿಸಿದಂ ಹಳಿಯಂ (ನೇಗಿಲ ಹಳಿಯನ್ನು ಹೊತ್ತ ಬಲರಾಮನನ್ನು) ನಯದಿಂ ವೃಕೋದರಂ (ಎಂದು ಭೀಮನು ಬಲರಾಮನನ್ನು ನಯವಾಗಿ ಒಪ್ಪಿಸಿದನು.)

ಪದ್ಯ-೯೧:ಅರ್ಥ: ನನ್ನನ್ನೂ ದುರ್ಯೋಧನನ್ನೂ

ಒಟ್ಟುಗೂಡಿಸಿ ಬಿಡಿ,
ಕೌರವೇಶ್ವರನಿಗೆ ಬದ್ಧ
ದ್ವೇಷಿಯಾಗಿ ನಾನಿರುವಾಗ
ಇತರರರಲ್ಲಿ ಕೋಪವುಂಟೇ?
ಮಹಾ
ಪ್ರತಿಜ್ಞಾರೂಢನಾಗಿರುವವನೂ
ನಾನೇ! ಭೂಮಿಯ ವಿಷಯ
ಅದು ಹಾಗಿರಲಿ ಕಾಳೆಗ
ಮಾಡುವುದಕ್ಕೆ ದ್ಥಳವನ್ನು
ಸಿದ್ಧಪಡಿಸು, ಗೆಲ್ಲಲು
ಸಮರ್ಥರಾದವರು ಯಾರು?

ಎರಡು ಮಾತನ್ನಾಡಬೇಡ ಎಂದು ಭೀಮನು ಬಲರಾಮನನ್ನು ನಯವಾಗಿ ಒಪ್ಪಿಸಿದನು.

ಭೀಮ ದುರ್ಯೋಧನರ ಯುದ್ಧ

ವ||ಅಂತೊಡಂಬಡಿಸಿ ಸಂಗ್ರಾಮರಂಗಕ್ಕನಿಬರುಮ ನೊಡಗೊಂಡು ಬಂದು -

- **ಕೌರವ- ಭೀಮರ ಯುದ್ಧ- ರನ್ನನ ವರ್ಣನೆ**

- **ಕೌರವನ ನಿಂದೆಯ ಹೊಡೆತ:-**

ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ ಮತ್ಸಹೋ
ದರರಂ ಕೋಪದೆ ತಿಂದುದರ್ಕೆರಡುಗೊಳ್ ದುಶ್ಶ್ಯಾಸನೋರುಸ್ಸ್ಥಳ
ಕ್ಷರದಸ್ರಾಂಬುವನಾರ್ದು ಪೀರ್ದ ಮುಳಿಸಿಂಗಂ ಮೂಱುಗೊಳ್ಳೆಂದು ಮ
ಚ್ಚರದಿಂದೋವದೆ ಪೊಯ್ದನೆತ್ತಿಗದೆಯಂ ದುರ್ಯೋಧನಂ ಭೀಮನಂ ||
೧೮||

ಅರ್ಥ:-

ದುರ್ಯೋದನ::ಕಳಿಂಗರಾಜನ ಆನೆಗಳ ಹಿಂಡನ್ನೆಲ್ಲ ಸಂಹರಿಸಿ
ಕಳಿಂಗರಾಜನನ್ನು ಕೊಂದ ಅಪರಾಧಕ್ಕೆ ಇದೋ ಒಂದು ಏಟು!
ನನ್ನ ತಮ್ಮಂದಿರನ್ನು (ಕೊಂದುದಕ್ಕೆ) ತಿಂದುದಕ್ಕೆ ಇದೋ ಎರಡನೆಯ
ಏಟು!
ನನ್ನ ಪ್ರೀತಿಯ ತಮ್ಮನಾದ ದುಶ್ಶ್ಯಾಸನನ ಎದೆಯಿಂದ ಪುಟಿಯುತ್ತಿರುವ
ಕೆನ್ನೆತ್ತರನ್ನು ಆರ್ಭಟಿಸುತ್ತಾ ಹೀರಿದ ಕೋಪಕ್ಕೆ ಇದೋ ಮೂರನೇ ಏಟು!
ಹೀಗೆನ್ನುತ್ತಾ ದುರ್ಯೋಧನನು ಕೋಪೋದ್ರೇಕದಿಂದ
ಗದೆಯನ್ನೆತ್ತಿ ಭೀಮನನ್ನು ಹೊಡೆದನು.

- **ಭೀಮನ ಉತ್ತರ:-**

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡ ಜೂದಿಂ
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ
ವದೆ ಪೊಯ್ದಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಕೋ
ಪದೊಳಯ್ದಂ ದುರ್ನಯಕ್ಕಯ್ದೆಡೆಯನುರು ಗದಾದಂಡದಿಂ ಭೀಮಸೇನಂ
||೧೯||

ಅರ್ಥ:-

ಇದು- ಈ ಏಟು ಅರಗಿನ ಮನೆಗೆ ಬೆಂಕಿ ಹಚ್ಚಿದ್ದಕ್ಕೆ!

ಇದು- ವಿಷಾನ್ನವನ್ನು ಇಕ್ಕಿದ್ದಕ್ಕೆ! ಈ ಏಟು ಮೋಸದ ಜೂಜಾಟಕ್ಕೆ!
ಇದು- ಈ ಏಟು ದ್ರೌಪದಿಯನ್ನು ಪರಾಭವಗೊಳಿಸಿದ್ದಕ್ಕೆ!
ಇದು- ಈ ಏಟು ಮೋಸದಿಂದ ನಮ್ಮನ್ನು ಸಭೆಗೆ ಬರಮಾಡಿದ್ದಕ್ಕೆ!
ಹೀಗೆ ಹೇಳುತ್ತಾ ಭೀಮನು ಕುಪಿತನಾಗಿ ನಿರ್ದಾಕ್ಷಿಣ್ಯದಿಂದ
ದುರ್ಯೋಧನನ ಕಾಲುಗಳು, ತೋಳುಗಳು, ಅಗಲ ಎದೆ, ಕೆನ್ನೆ,
ಮತ್ತು ನೆತ್ತಿ,ಇವುಗಳನ್ನು ಭೀಮನು ಗದೆಯಿಂದ ಅಪ್ಪಳಿಸಿದನು.
ದುರ್ಯೋಧನನ ಐದು ಅನ್ಯಾಯಗಳಿಗೆ ಐದು ಏಟುಗಳನ್ನು ಹೊಡೆದನು.

- **ರನ್ನ**

ವಚನ:ಪದವಿಭಾಗ-

ಅರ್ಥ:ಅಂತು ಒಡಂಬಡಿಸಿ (ಹಾಗೆ ಒಪ್ಪಿಸಿ,) ಸಂಗ್ರಾಮರಂಗಕ್ಕೆ ಅನಿಬರುಮನು ಒಡಗೊಂಡು ಬಂದು -

ವಚನ:ಅರ್ಥ:ಹಾಗೆ ಒಪ್ಪಿಸಿ, ಯುದ್ಧಭೂಮಿಗೆ ಎಲ್ಲರನ್ನೂ ಕೂಡಿಕೊಂಡು ಬಂದು-.

ಕಂ||ಕರಿ ತುರಂಗ ನರ ಕಳೇವರ
ಪರಿಚಿತ ರಣದಲ್ಲಿ ಮಹೀತಳಂ ಕಾದಲ್ಕಿಂ |
ತರಿದಪ್ಪುದೆಂತಿದೆಂದಣ
ಮಿರದೆ
ಮರುತ್ಸೂನುಸಮರಿದಂ
ಕೊಳಗುಳಮಂ||೯೨ ||

ಪದ್ಯ-೯೨:ಪದವಿಭಾಗ-ಅರ್ಥ:ಕರಿ ತುರಂಗ ನರ ಕಳೇವರ ಪರಿಚಿತ ರಣದಲ್ಲಿ (ಆನೆ ಕುದುರೆ ಕಾಲಾಳಿನ ಶರೀರಗಳಿಂದ ಕಿಕ್ಕಿರಿದ ಯುದ್ಧಭೂಮಿಯಲ್ಲಿ)ಮಹೀತಳಂ ಕಾದಲ್ಕೆ ಇಂತು ಅರಿದಪ್ಪುದು ಎಂತು ಇದೆಂದು (ನೆಲವು ಕಾದುವುದಕ್ಕೆ ಕಷ್ಟವಾಗುತ್ತದೆ ಎಂದು ಹಗೋೀ ಇರವ ನೆಲ ಎಂದು) ಅಣಂ

ಇರದೆ ಮರುತ್ಸೂನು ಸಮರಿದಂ ಕೊಳಗುಳಮಂ (ಸ್ವಲ್ಪವೂ ಸಾವಕಾಶ ಮಾಡದೆ ಭೀಮನು ಯುದ್ಧಭೂಮಿಯನ್ನು ಹಸನು ಮಾಡಿದನು.)

ಪದ್ಯ-೯೨:ಅರ್ಥ: ಆನೆ ಕುದುರೆ ಕಾಲಾಳಿನ ಶರೀರಗಳಿಂದ ಕಿಕ್ಕಿರಿದ ಯುದ್ಧಭೂಮಿಯಲ್ಲಿ ನೆಲವು ಕಾದುವುದಕ್ಕೆ ಕಷ್ಟವಾಗುತ್ತದೆ

ಎಂದು ಹಗ್ಗೋ ಇರವ ನೆಲ
ಎಂದು ಸ್ವಲ್ಪವೂ ಸಾವಕಾಶ
ಮಾಡದೆ ಭೀಮನು
ಯುದ್ಧಭೂಮಿಯನ್ನು ಹಸನು
ಮಾಡಿದನು.

**ವ||ಅಂತು ಸಮರಿದ
ಸಂಗ್ರಾಮ ರಂಗದೊಳ್
ಪರಸ್ಪರ ಕ್ರೋಧವಿಕ್ಷೇಪ
ಹರ್ಷಿತ ಮಾರ್ಗ ಪ್ರಹಸ್ತ
ಪ್ರಸಾಧಿತ ಘೋರ
ಸಂಗ್ರಾಮತ್ಯುಗ್ರ ಗದಾ ಪರಿಘ**

ಬಾಸುರ ಭುಜಪರಿಘರುಮಪ್ಪ ಭೀಮದುರ್ಯೋಧನರೀರ್ವರು ಮೋರ್ವರುಮೋರ್ವರಂ ಮೊದಲಿಸಿ ಸವ್ಯಾಪಸವ್ಯ ಭ್ರಾಂತೋದ್ಭ್ರಾಂತ ಕರ್ಷಣಮಂಡಲವರ್ತನಾದಿಗಳಪ್ಪ ಮೂವತ್ತೆರಡು ಗದಾವಿಕ್ಷೇಪದೊಳಮತಿಪರಿಚಿತರಾಗಿ ಕಾದುವಾಗಳ್-

ವಚನ:ಪದವಿಭಾಗ-

ಅರ್ಥ:ಅಂತು ಸಮರಿದ

ಸಂಗ್ರಾಮ ರಂಗದೊಳ್
ಪರಸ್ಪರ ಕ್ರೋಧವಿಕ್ಷೇಪ
ಹರ್ಷಿತ ಮಾರ್ಗ ಪ್ರಹಸ್ತ
ಪ್ರಸಾಧಿತ ಘೋರ ಸಂಗ್ರಾಮ
ಅತ್ಯುಗ್ರ ಗದಾ ಪರಿಘ
ಬಾಸುರ ಭುಜಪರಿಘರುಮಪ್ಪ
ಭೀಮದುರ್ಯೋಧನರು
ಈರ್ವರುಂ (ಗದಾಯುದ್ಧದ
ಪರಿಕರಗಳಿಂದ ಕೂಡಿದ
ಭಯಂಕರ ಯುದ್ಧವುಳ್ಳವರೂ
ಆದ ಭೀಮದುರ್ಯೋಧನರು

ಇಬ್ಬರೂ)
ಒರ್ವರುಮೋರ್ವರಂ
ಮೂದಲಿಸಿ ಸವ್ಯ ಅಪಸವ್ಯ
ಭ್ರಾಂತ ಉದ್ಭ್ರಾಂತ (ಸವ್ಯ
ಅಪಸ್ವ್ಯ, ಭ್ರಾಂತ ಉದ್ಭ್ರಾಂತ,)
ಕರ್ಷಣ
ಮಂಡಲವರ್ತನಾದಿಗಳಪ್ಪ
ಮೂವತ್ತೆರಡು
ಗದಾವಿಕ್ಷೇಪದೊಳಂ
(ಮೂವತ್ತೆರಡು ಗದಾ
ಪ್ರಯೋಗದಲ್ಲಿಯೂ)

ಅತಿಪರಿಚಿತರಾಗಿ ಕಾದುವಾಗಳ್ (ವಿಶೇಷ ಪರಿಣಿತರಾಗಿ ಯುದ್ಧಮಾಡುವಾಗ-)-

ವಚನ:ಅರ್ಥ:ಹಾಗೆ ಗುಡಿಸಿದ ಯುದ್ಧರಂಗದಲ್ಲಿ ಒಬ್ಬರಿಗೊಬ್ಬರು ವಿರೋಧ ಕ್ರೋಧ ವಿಕ್ಷೇಪ ಹರ್ಷಿತ ಮಾರ್ಗ ಪ್ರಹಸ್ತ ಪ್ರಸಾದಿತಗಳೆಂಬ ಗದಾಯುದ್ಧದ ಪರಿಕರಗಳಿಂದ

ಕೂಡಿದ ಭಯಂಕರ
ಯುದ್ಧವುಳ್ಳವರೂ ಆದ
ಇಬ್ಬರೂ
ಭೀಮದುರ್ಯೋಧನರು
ಇಬ್ಬರೂ ಒಬ್ಬರನ್ನೊಬ್ಬರು
ಹೀಯಾಳಿಸಿ ಸವ್ಯ ಅಪಸ್ವ್ಯ,
ಭ್ರಾಂತ ಉದ್ಭ್ರಾಂತ, ಕರ್ಷಣ
ಮಂಡಳಾವರ್ತನ ಇವೇ
ಮೊದಲಾದ ಮೂವತ್ತೆರಡು
ಗದಾ ಪ್ರಯೋಗದಲ್ಲಿಯೂ

ವಿಶೇಷ ಪರಿಣಿತರಾಗಿ

ಯುದ್ಧಮಾಡುವಾಗ-

ಮ||ಮೊದಲಿಂ ಕಿಳ್ತು

ಕುಳಾಚಳಪ್ರತತಿಗಳ್

ಪ್ರೋದ್ಯದ್ಗದಾ ಘಾತವಾ

ತದಿನಾಕಾಶಮನೈದೆ ತೂಳ್ದಿ

ಕವಿತಂದಂಬೋಧಿಯೋಳ್

ಸೂಳ್ ಸೂ|

ಳಿದೆ ಬೀಳ್ದಿಂದುವು

ಬತ್ತಲಾಟಿಸಿದುವಾ

ವಾರಾಸಿಗಳ್ ಸುರ್ಕಿ ಬಿ|

ಕ್ಕಿದ ಬಾಯಂತೆ ಸುಳ್ದುದಂಬರಮಿದೇಂ ಪೆಂಪ್ರೋ ಗದಾ ಯುದ್ಧದಾ || ೯೩ ||

ಪದ್ಯ-೯೩:ಪದವಿಭಾಗ-ಅರ್ಥ:ಮೊದಲಿಂ ಕಿಳ್ತು ಕುಳಾಚಳ ಪ್ರತತಿಗಳ್ (ಮೇಲೆತ್ತಿದ ಗದೆಯ ಪೆಟ್ಟಿನಿಂದ ಹುಟ್ಟಿದ ಗಾಳಿಯಿಂದ ಕುಲಪರ್ವತ ಸಮೂಹಗಳು) ಪ್ರೋದ್ಯತ್

ಗದಾಘಾತವಾ ತದಿಂ
ಆಕಾಶಮನು ಅಯ್ದೆ ತೂಳ್ದಿ
(ಮೇಲೆತ್ತಿದ ಗದಾ ಘಾತದಿಂದ
ಮೂಲದಿಂದ
ಕಿತ್ತುಆಕಾಶವನ್ನು ಪೂರ್ಣ
ತಳ್ಳಿ) ಕವಿತಂದು
ಅಂಬೋಧಿಯೋೞ್ ಸೂೞ್
ಸೂಳಿದೆ ಬೀೞ್ದಿಂದುವು
(ಮುಚ್ಚಿ ಬಂದು ಕ್ರಮವಾಗಿ
ಸಮುದ್ರದಲ್ಲಿ
ಬೀಳಲಾರಂಭಿಸಿದವು.)

ಬತ್ತಲು ಆಟಿಸಿದುವು ಆ
ವಾರಾಸಿಗಳ್ (ಆ
ಸಮುದ್ರವೂ ಒಣಗಿ
ಹೋಗಲು ಆಶೀಸಿದವು.)
ಸುರ್ಕಿ ಬಿಕ್ಕಿದ ಬಾಯಂತೆ
ಸುಳ್ದುದಂಬರಂ ಇದೇಂ
ಪೆಂಪೋ ಗದಾ ಯುದ್ಧದಾ
(ಆಕಾಶವು ಸುಕ್ಕಿಬಿಕ್ಕಿದ
ಬಾಯಿಯಂತೆ
ಸುರುಳಿಯಾಯಿತು.
ಗದಾಯುದ್ಧದ ವೈಭವವು

ಏನು ಅದ್ಭುತವೊ!
ಅದ್ಭುತವಾಗಿತ್ತು.)
ಪದ್ಯ-೯೩:ಅರ್ಥ: ಮೇಲೆತ್ತಿದ ಗದೆಯ ಪೆಟ್ಟಿನಿಂದ ಹುಟ್ಟಿದ ಗಾಳಿಯಿಂದ ಕುಲಪರ್ವತ ಸಮೂಹಗಳು ಮೇಲೆತ್ತಿದ ಗದಾ ಘಾತದಿಂದ ಮೂಲದಿಂದ ಕಿತ್ತು ತಳ್ಳಿ ಆಕಾಶವನ್ನು ಪೂರ್ಣ ವಾಗಿ ಮುಚ್ಚಿ ಬಂದು ಕ್ರಮವಾಗಿ ಸಮುದ್ರದಲ್ಲಿ

ಬೀಳಲಾರಂಭಿಸಿದವು. ಆ ಸಮುದ್ರವೂ ಒಣಗಿ ಹೋಗಲು ಆಶಿಸಿದವು. ಆಕಾಶವು ಸುಕ್ಕಿಬಿಕ್ಕಿದ ಬಾಯಿಯಂತೆ ಸುರುಳಿಯಾಯಿತು. ಗದಾಯುದ್ಧದ ವೈಭವವು ಅದ್ಭುತವಾಗಿತ್ತು.

ಗದೆಯೋಳ್ ಗಟ್ಟಸೆ ಪುಟ್ಟಿದಳ್ಕತತಿ ನೀಳ್ದಾಕಾಶಮಂ ತಾಪಿನಂ

ಪುದಿದಾ ದೇವರ ಕಣ್ಣೊಳುಳ್ಕಿ ವಿಳಯೋಳ್ಕಾಶಂಕೆಯುಂ ಮಾಡೆ ಮೆ |
ಟ್ಟಿದ ಸೂಳ್ಮೆಟ್ಟುಗಳಿಂದೆ ಬೆಟ್ಟು ಕಳಲಲ್ಲಾಡೆ ಭೂಭಾಗಮಾ ದುದು ದುರ್ಯೋಧನನ ಭೀಮಸೇನರ ಗದಾ ಯುದ್ಧಂ ಮಹಾಭ್ಯೆರವಂ ||೯೪ ||

ಪದ್ಯ-೯೪:ಪದವಿಭಾಗ-ಅರ್ಥ:ಗದೆಯೋಳ್ ಗಟ್ಟಸೆ ಪುಟ್ಟಿದ ಉಳ್ಕತತಿ (ಇಬ್ಬರೂ

ಗದೆಗಳಲ್ಲಿ ಪರಸ್ಪರ ಘಟ್ಟಿಸಲು ಹುಟ್ಟಿದ ಉಲ್ಕೆಗಳ ಸಮೂಹವು) ನೀಳ್ದಾಕಾಶಮಂ ತಾಪಿನಂ ಪುದಿದು (ವಿಸ್ತರಿಸಿ ಆಕಾಶವನ್ನು ವ್ಯಾಪಿಸಿ ತಾಗುತ್ತಿರಲು) ಆ ದೇವರ ಕಣ್ಣೊಳ್ ಉಳ್ಕಿ (ದೇವತೆಗಳ ಕಣ್ಣಲ್ಲಿ ತುಂಬಿ ತುಳಕಲು) ವಿಳಯೋಳ್ಕಾಶಂಕೆಯುಂ ಮಾಡೆ (ಅವು ಪ್ರಳಯಕಾಲದ ಉಲ್ಕಾಪಾತದ

ಸಂದೇಹವನ್ನುಂಟು
ಮಾಡಿದವು. ಮಾಡಲು-)
ಮೆಟ್ಟಿದ ಸೂಳ್
ಮೆಟ್ಟುಗಳಿಂದೆ ಬೆಟ್ಟು
ಕಳಲಲ್ ಅಳ್ಳಾಡೆ ಭೂಭಾಗಂ
(ಒಬ್ಬರನಂತರ ಒಬ್ಬರು
ತುಳಿದ ಮೆಟ್ಟುಗಳಿಂದ
ಭೂತಳವು ಅಲುಗಾಡಲು)
ಆದುದು ದುರ್ಯೋಧನನ
ಭೀಮಸೇನರ ಗದಾ ಯುದ್ಧಂ
ಮಹಾಭೈರವಂ

(ದುರ್ಯೋಧನನ ಭೀಮಸೇನರ ಗದಾ ಯುದ್ಧವು ಮಹಾಭೀಕರವಾಯಿತು.)

ಪದ್ಯ-೯೪:ಅರ್ಥ: ಇಬ್ಬರೂ ಗದೆಗಳಲ್ಲಿ ಪರಸ್ಪರ ಘಟ್ಟಿಸಲು ಹುಟ್ಟಿದ ಉಲ್ಕೆಗಳ ಸಮೂಹವು ವಿಸ್ತರಿಸಿ ಆಕಾಶವನ್ನು ವ್ಯಾಪಿಸಿತಾಗುತ್ತಿರಲು ದೇವತೆಗಳ ಕಣ್ಣಲ್ಲಿ ತುಂಬಿ ತುಳಕಲು ಅವರಿಗೆ ಅವು

ಪ್ರಳಯಕಾಲದ
ಉಲ್ಕಾಪಾತದ
ಸಂದೇಹವನ್ನುಂಟು
ಮಾಡಿದವು. ಒಬ್ಬರನಂತರ
ಒಬ್ಬರು ತುಳಿದ ಮೆಟ್ಟುಗಳಿಂದ
ಭೂತಳವು ಅಲುಗಾಡಲು,
ದುರ್ಯೋಧನನ
ಭೀಮಸೇನರ ಗದಾ ಯುದ್ಧವು
ಮಹಾಭೀಕರವಾಯಿತು.

ವ||

ಅಂತಿರ್ವರುಮೊರ್ವರೊರ್ವ

ರೊಳ್ ಬೀರಮಂ ಬಿನ್ನಣಮಂ ಮರೆದು ಕಾದೆ ದುರ್ಯೋಧನಂ ವಿದ್ಯಾಧರ ರಣದೊಳತಿಪರಿಚಿತನಪ್ಪುದ ರಿಂದಾಕಾಶಕ್ಕೆ ನೆಗೆದು-

ವಚನ:ಪದವಿಭಾಗ-

ಅರ್ಥ:ಅಂತು ಈರ್ವರುಂ ಒರ್ವರೊರ್ವರೊಳ್ ಬೀರಮಂ ಬಿನ್ನಣಮಂ ಮರೆದು ಕಾದೆ (ಹಾಗೆ ಇಬ್ಬರೂ ಒಬ್ಬೊಬ್ಬರೂ ಶೌರ್ಯವನ್ನು

ಕೌಶಲವನ್ನೂ ತೋರಿಸಿ ಹೋರಾಡಲು) ದುರ್ಯೋಧನಂ ವಿದ್ಯಾಧರ ರಣದೊಳು ಅತಿಪರಿಚಿತನಪ್ಪುದರಿಂದ ಆಕಾಶಕ್ಕೆ ನೆಗೆದು (ದುರ್ಯೋಧನನು ವಿದ್ಯಾಧರಕರಣದಲ್ಲಿ ಬಹಳ ಅರಿತವನಾದುದರಿಂದ ಆಕಾಶಕ್ಕೆ ನೆಗೆದು)-

ವಚನ:ಅರ್ಥ:ಹಾಗೆ ಇಬ್ಬರೂ ಒಬ್ಬೊಬ್ಬರೂ ಶೌರ್ಯವನ್ನು ಕೌಶಲವನ್ನೂ ತೋರಿಸಿ ಹೋರಾಡಲು ದುರ್ಯೋಧನನು ವಿದ್ಯಾಧರಕರಣದಲ್ಲಿ ಬಹಳ ಅರಿತವನಾದುದರಿಂದ ಆಕಾಶಕ್ಕೆ ನೆಗೆದು-

ಕಂ||ಸಿಡಿಲೆರುಗುವಂತೆ ಭೋರೆಂ

ದೊಡನೆರಗಿ ಮಹೋಗ್ರ ಘನ ಗದಾಪರಿಗದಿನಾ |
ರ್ದೆಡೆಗಿಡೆ ಪೊಯ್ದೊಡೆ ಭೀಮಂ ಕೆಡೆದಂ ಧರೆ ನಡುಗೆ ನೀಳ ಕುತ್ಕೀಳಂಬೊಲ್ ||೯೫||

ಪದ್ಯ-೯೫:ಪದವಿಭಾಗ-ಅರ್ಥ:ಸಿಡಿಲು ಎರುಗುವಂತೆ ಭೋರೆಂದು ಒಡನೆ ಎರಗಿ (ಸಿಡಿಲು ಬೀಳುವಂತೆ ಭೋರೆಂದು ತಕ್ಷಣವೇ ಮೇಲೆಬಿದ್ದು) ಮಹೋಗ್ರ ಘನ

ಗದಾಪರಿಗದಿಂ ಆರ್ದು
ಎಡೆಗಿಡೆ ಪೊಯ್ದೊಡೆ (ಮಹಾ
ಭಯಂಕರವಾದ ದಪ್ಪನಾದ
ಪರಿಘದಂತಿರುವ ಗದೆಯಿಂದ
ಘರ್ಜನೆಮಾಡಿ ಇದ್ದ
ಸ್ಥಳದಿಂದ ಕದಲುವಂತೆ
ಹೊಡೆಯಲು) ಭೀಮಂ
ಕೆಡೆದಂ ಧರೆ ನಡುಗೆ ನೀಳ
ಕುತ್ಕೀಳಂಬೊಲ್ (ಭೂಮಿ
ನಡುಗಿತು. ಭೀಮನು ನೀಲ
ಪರ್ವತದಂತೆ ಕೆಳಗೆ ಬಿದ್ದನು)

ಪದ್ಯ-೯೫:ಅರ್ಥ: ಸಿಡಿಲು ಬೀಳುವಂತೆ ಭೋರೆಂದು ತಕ್ಷಣವೇ ಮೇಲೆಬಿದ್ದು ಮಹಾ ಭಯಂಕರವಾದ ದಪ್ಪನಾದ ಪರಿಘದಂತಿರುವ ಗದೆಯಿಂದ ಘರ್ಜನೆಮಾಡಿ ಇದ್ದ ಸ್ಥಳದಿಂದ ಕದಲುವಂತೆ ಹೊಡೆಯಲು ಭೂಮಿ ನಡುಗಿತು. ಭೀಮನು ನೀಲ ಪರ್ವತದಂತೆ ಕೆಳಗೆ ಬಿದ್ದನು.

ದುರ್ಯೋಧನನ ಊರುಭಂಗ

ವ||ಅಂತು ದುರ್ಯೋಧನ ಗದಾಪ್ರಹರಣದಿಂದಚೇತನ ನಾಗಿರ್ದೊಡೆ ಬಿಳ್ದನನಿರಿಯೆನೆಂದು ಪವಮಾನ ಮಾರ್ಗೋದೊಳ್ ಗದೆಯಂಬೀಸುವಾಗಳ್ ಸುಯೋಧನನ ಗದೆಯ ಗಾಳಿಯೊಳ್ ಮೂರ್ಛೆಯಿಂದೆಚ್ಚತ್ತು ಧರಾತಳದೊಳ್ ಸೂಸಿದ ತನ್ನ

ಗದಾದಂಡಮಂ
ಭುಜದಂಡದೊಳಳವಡಿಸಿ
ಕೊಂಡ
ವೃಕೋದದನನಂಬುಜೋದ
ರಂ ಬಿಚ್ಚಳಿಸುವ
ನೆವದೊಳೆಮ್ಮಮ್ಮಂಗಕ್ಕುಮೆಂ
ದು ತೊಡೆಯಂ
ಪೊಯ್ದಾರ್ವುದುಂ
ದುಯೋ೯ದನನನೆರದೆಂದರಿ
ದು-

ವಚನ:ಪದವಿಭಾಗ-ಅರ್ಥ:ಅಂತು ದುರ್ಯೋಧನ ಗದಾಪ್ರಹರಣದಿಂದ ಅಚೇತನನಾಗಿರ್ದೋಡೆ (ಹಾಗೆ ದುರ್ಯೋಧನನ ಗದೆಯ ಹೊಡೆತದಿಂದ ಮೂರ್ಛಿತನಾಗಿರಲು) ಬಿಳ್ದನನು ಇರಿಯೆನೆಂದು ಪವಮಾನ ಮಾರ್ಗೋದೊಳ್ ಗದೆಯಂ ಬೀಸುವಾಗಳ್ (‘ಬಿದ್ದವನನ್ನು

ಹೊಡೆಯುವುದಿಲ್ಲ' ಎಂದು
ವಾಯುಮಾರ್ಗದಲ್ಲಿ
ಸ್ವಲ್ಪದೂರದಲ್ಲಿಯೇ
ಗದೆಯನ್ನು ಬೀಸಿದಾಗ,)
ಸುಯೋಧನನ ಗದೆಯ
ಗಾಳಿಯೊಳ್ ಮೂರ್ಛೆಯಿಂದ
ಎಚ್ಚತ್ತು (ಭೀಮನು ಆ
ಗದೆಯ ಗಾಳಿಯಿಂದ
ಮೂರ್ಛೆಯಿಂದ ಎಚ್ಚರಾಗಿ,)
ಧರಾತಳದೊಳ್ ಸೂಸಿದ ತನ್ನ
ಗದಾದಂಡಮಂ

ಭುಜದಂಡದೊಳ್
ಅಳವಡಿಸಿಕೊಂಡ
ವೃಕೋದದನನು
(ಭೂಮಿಯಮೇಲೆ ಬಿದ್ದಿದ್ದ
ತನ್ನ ಗದೆಯನ್ನು
ಭೂಜಾದಂಡದಲ್ಲಿ
ಅಳವಡಿಸಿಕೊಂಡ
ಭೀಮನನ್ನು)
ಅಂಬುಜೋದರಂ
ಬಿಚ್ಚಳಿಸುವ ನೆವದೊಳು
(ಕೃಷ್ಣನು ಹೊಗಳುವ

ನೆಪದಿಂದ) ಎಮ್ಮ ಅಮ್ಮಂಗೆ ಅಕ್ಕುಂ ಎಂದು (ನಮ್ಮಪ್ಪನಿಗೆ ಜಯವಾಗುತ್ತದೆ ಎಂದು) ತೊಡೆಯಂ ಪೊಯ್ದು ಆರ್ವುದುಂ (ತೊಡೆಯನ್ನು ತಟ್ಟಿ ಆರ್ಭಟಿಸಲು,) ದುರ್ಯೋದನನನ ಎರದೆಂದು ಅರಿದು (ಭೀಮನು ಅದೇ (ಆ ತೊಡೆಯೇ) ದುರ್ಯೋಧನನ ಮರ್ಮಸ್ಥಳವೆಂದು ತಿಳಿದನು. ತಿಳಿದು)-

ವಚನ:ಅರ್ಥ:ಹಾಗೆ
ದುರ್ಯೋಧನನ ಗದೆಯ
ಹೊಡೆತದಿಂದ
ಮೂರ್ಛಿತನಾಗಿರಲು
ದುರ್ಯೋಧನನು
‘ಬಿದ್ದವನನ್ನು
ಹೊಡೆಯುವುದಿಲ್ಲ’ ಎಂದು
ವಾಯುಮಾರ್ಗದಲ್ಲಿ
ಸ್ವಲ್ಪದೂರದಲ್ಲಿಯೇ
ಗದೆಯನ್ನು ಬೀಸಿದಾಗ,
ಭೀಮನು ಆ ಗದೆಯ

ಗಾಳಿಯಿಂದ ಮೂರ್ಛೆಯಿಂದ ಎಚ್ಚರಾಗಿ, ಭೂಮಿಯಮೇಲೆ ಬಿದ್ದಿದ್ದ ತನ್ನ ಗದೆಯನ್ನು ಭೂಜಾದಂಡದಲ್ಲಿ ಅಳವಡಿಸಿಕೊಂಡ ಭೀಮನನ್ನು, ಕೃಷ್ಣನು ಹೊಗಳುವ ನೆಪದಿಂದ ನಮ್ಮಪ್ಪನಿಗೆ ಜಯವಾಗುತ್ತದೆ ಎಂದು ತೊಡೆಯನ್ನು ತಟ್ಟಿ ಆರ್ಭಟಿಸಲು, ಭೀಮನು ಅದೇ (ಆ ತೊಡೆಯೇ)

ದುರ್ಯೋಧನನ ಮರ್ಮಸ್ಥಳವೆಂದು ತಿಳಿದನು. ಹಾಗೆ ತಿಳಿದು-

ಮ॥ ಸ್ರ॥ ನೆಱನೀ ತಂಗೂ ರುಯು ಗ್ಮಂ ನೆಱನ	• **ಕೌರವನ ಊರುಭಂಗ- ರನ್ನನ ವರ್ಣನೆ** ಇಡೆ ತೊಡೆಯನುಡಿದು ನೆಟ್ಟನೆ ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ ಬಿಡೆನೆಂಬ ತೆಱದೆ ಕುಲಗಿರಿ ಕೆಡೆವಂದದೆ ಕೌರವೇಂದ್ರನಾಗಳ್ ಕೆಡೆದಂ ॥೮-೩೭॥ • **ಅರ್ಥ :-** ಭೀಮನು, ಇಡೆ- ಹೊಡೆದಾಗ, ತೊಡೆಗಳು ಮುರಿದು, ನೇರವಾಗಿ ಬೀಳುತ್ತಾ,- "ನೆಲನಂ ಆಂ ಇದಂ ಎಂತುಂ ಬಿಡೆಂ ಎಂಬ ತೆಱದೆ," ಈ ಭೂಮಿಯನ್ನು ನಾನು ಎಷ್ಟು ಮಾತ್ರಕ್ಕೂ ಪಾಂಡವರಿಗೆ ಬಿಟ್ಟುಕೊಡಲಾರೆನು ಎಂಬ ಹಾಗೆ, ಭೂಮಿಯನ್ನು ಕಚ್ಚಿ ಹಿಡಿದು, ಕುಲಪರ್ವತವು ಕುಸಿದು ಬೀಳುವಂತೆ, ಆಗ ಕೌರವೇಂದ್ರನು ಬಿದ್ದನು. • **ರನ್ನ.**

ನಱಿಯದಾನಿನ್ನೆಗಂ

ಮಾಣ್ದನಿಂ ಪೋ

ತೆಱಪಂ

ಪಾರ್ದಿರ್ಪನೆಂದೊಯ್ಯನೆ

ಗದೆಯನಣಂ

ಪಾಡುಗೆಯ್ದಿರ್ದು ಭೋರೆಂ।

ದೆಱಪುಗ್ರಾರಾತಿಯೂರುದ್ವಯ

ಮನಿಡೆ

ಗದಾಘಾತದಿಂದೂರುಯುಗ್ಮಂ

ಮುಱಿದೆತ್ತಂ

ನುಚ್ಚುನೂಱಾಗಿರೆ

ಕೆಡೆದನಿಳಾಭಾಗದೊಳ್ ಧಾರ್ತರಾಷ್ಟ್ರಂ|| ೯೬ ||

ಪದ್ಯ-೯೬:ಪದವಿಭಾಗ-ಅರ್ಥ:ನೆಱನು (ಮರ್ಮಸ್ಥಾನ) ಈತಂಗೆ ಊರುಯುಗ್ಮಂ (ಈತನಿಗೆ ಈ ಎರಡು ತೊಡೆಗಳು ಮರ್ಮಸ್ಥಾನ.) ನೆಱನನು ಅಱಿಯದೆ ಆನು ಇನ್ನೆಗಂ ಮಾಣ್ದೆನು (ಮರ್ಮವನ್ನು ತಿಳಿಯದೆ ನಾನು

ಇಲ್ಲಿಯವರೆಗೆ ತಪ್ಪಿದೆನು.) ಇಂ
ಪ್ರೋ ತೆಱಪಂ ಪಾರ್ದಿರ್ಪೆಂ
(ಇನ್ನು ಬಿಡು, ಅವಕಾಶವನ್ನು
ನಿರೀಕ್ಷಿಸುತ್ತಿದ್ದೇನೆ-) ಎಂದು
ಒಯ್ಯನೆ ಗದೆಯನ್ನು ಅಣಿಂ
ಪಾಡುಗೆಯ್ದು ಇರ್ದು (ಎಂದು
ನಿಧಾನವಾಗಿ ಗದೆಯನ್ನು
ಅಣಿಯಾಗಿ
ಸಿದ್ಧಮಾಡಿಕೊಂಡು)
ಭೋರೆಂದು ಎಱಪ ಉಗ್ರ
ಆರಾತಿಯ

ಊರುದ್ವಯಮನು ಇಡೆ
(ಭೋರೆಂದು ಮೇಲೆ ಎರಗುವ
ಶತ್ರುವಿನ ಎರಡು
ತೊಡೆಗಳನ್ನು ಹೊಡೆಯಲು)
ಗದಾಘಾತದಿಂದ
ಊರುಯುಗ್ಮಂ ಮುಱಿದು
ಎತ್ತಂ ನುಚ್ಚುನೂಱಾಗಿರೆ
(ಗದೆಯ ಪೆಟ್ಟಿನಿಂದ ಆ
ಎರಡು ತೊಡೆಗಳೂ ಮುರಿದು
ಎಲ್ಲ ಕಡೆಯಲ್ಲಿಯೂ
ಪುಡಿಪುಡಿಯಾಗಿರಲು)

ಕೆಡೆದನು ಇಳಾಭಾಗದೊಳ್
ಧಾರ್ತರಾಷ್ಟ್ರಂ
(ದುರ್ಯೋಧನನು ನೆಲದ
ಮೇಲೆ ಬಿದ್ದನು.)
ಪದ್ಯ-೯೬:ಅರ್ಥ:ಭೀಮನು
ಯೋಚಿಸಿದ, ಈತನಿಗೆ ಈ
ಎರಡು ತೊಡೆಗಳು
ಮರ್ಮಸ್ಥಾನ. ಮರ್ಮವನ್ನು
ತಿಳಿಯದೆ ನಾನು
ಇಲ್ಲಿಯವರೆಗೆ ತಪ್ಪಿದೆನು.
ಇನ್ನು ಬಿಡು, ಅವಕಾಶವನ್ನು

ನಿರೀಕ್ಷಿಸುತ್ತಿದ್ದೇನೆ- ಎಂದು
ನಿಧಾನವಾಗಿ ಗದೆಯನ್ನು
ಅಣಿಯಾಗಿ
ಸಿದ್ದಮಾಡಿಕೊಂಡು
ಭೋರೆಂದು ಮೇಲೆ ಎರಗುವ
**ಶತ್ರುವಿನ ಎರಡು
ತೊಡೆಗಳನ್ನು ಹೊಡೆಯಲು,
ಗದೆಯ ಪೆಟ್ಟಿನಿಂದ ಆ
ಎರಡು ತೊಡೆಗಳೂ
ಮುರಿದು ಎಲ್ಲ
ಕಡೆಯಲ್ಲಿಯೂ**

ಪುಡಿಪುಡಿಯಾಗಿರಲು ದುರ್ಯೋಧನನು ನೆಲದ ಮೇಲೆ ಬಿದ್ದನು.

- ಚಂ|| ನುಡಿದುದನೆಯ್ದೆ ತುತ್ತ ತುದಿಯೆಯ್ದುವಿನಂ ನುಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪುಣ್ದ ಪೂಣ್ಕೆ ಪೂಣ್ಕೆ ನೇ|

ರ್ಪಡೆ ನಡೆವನ್ನೆಗಂ

ನಡೆದನಳ್ಕದೆ ಬಳ್ಕದೆ

ತನ್ನೊಡಲ್ ಪಡೆ

ಲ್ವಡುವಿನಮಣ್ಮುಗುಂದನೆ

ದಲೇನಭಿಮಾನಧನಂ

ಸುಯೋಧನಂ|| ೯೭

ಪದ್ಯ-೯೭:ಪದವಿಭಾಗ-

ಅರ್ಥ: ನುಡಿದುದನು ಎಯ್ದೆ

ತುತ್ತ ತುದಿಯೆ ಎಯ್ದುವಿನಂ

ನುಡಿದಂ (ಆಡಿದ ಮಾತನ್ನು

ತುತ್ತತುದಿ ಮುಟ್ಟುವವರೆಗೂ

ಆಡಿದಂತಾದನು.) ವಲಂ
ಚಲಂ ಬಿಡಿದುದನು ಎಯ್ದೆ
ಮುಂ ಪಿಡಿದುದಂ ಪಿಡಿದಂ
(ಅಬ್ಬಾ! ಮೊದಲು ಹಿಡಿದ
ಹಟವನ್ನು ಕೊನೆಯವರೆಗೂ
ಹಿಡಿದೇ ಇದ್ದನು,
ಸಾಧಿಸಿದನು.) ಸಲೆ ಪುಣ್ದೆ
ಪೂಣ್ಕೆ ಪೂಣ್ಕೆ ನೇರ್ಪಡೆ
ನಡೆವ ಅನ್ನೆಗಂ ನಡೆದನು,
(ಮಾಡಿದ ಪ್ರತಿಜ್ಞೆಯ
ನೇರವಾಗಿ ನಡೆಯುವವರೆಗೂ

ನಡೆದನು.) ಅಳ್ಕದೆ ಬಳ್ಕದೆ ತನ್ನೊಡಲ್ ಪಡೆಲ್ವಡುವಿನಂ ಅಣ್ಮುಗುಂದನೆ (ಹೆದರದೆ ಅಳ್ಳಾಡದೆ ತನ್ನ ಶರೀರವು ಪುಡಿಯಾಗಿ ಒಡೆದು ಬೀಳುವವರೆಗೂ ತನ್ನ ಪೌರುಷವು ಕುಗ್ಗದೆ ಇದ್ದನಲ್ಲಾ) ದಲ್ ಏನು ಅಭಿಮಾನಧನಂ ಸುಯೋಧನಂ (ದಲ್ -ಅಬ್ಬಾ! ದುರ್ಯೋಧನನು ಎಷ್ಟು

ಆತ್ಮಗೌರವವೇ ಸಂಪತ್ತಾಗಿ ಉಳ್ಳವನು)

ಪದ್ಯ-೯೭:ಅರ್ಥ: ಆಡಿದ ಮಾತನ್ನು ತುತ್ತತುದಿ ಮುಟ್ಟುವವರೆಗೂ ಆಡಿದನು. ವಲಂ- ಅಬ್ಬಾ! ಮೊದಲು ಹಿಡಿದ ಹಟವನ್ನು ಕೊನೆಯವರೆಗೂ ಸಾಧಿಸಿದನು. ಮಾಡಿದ ಪ್ರತಿಜ್ಞೆಯ ನೇರವಾಗಿ ನಡೆಯುವವರೆಗೂ ನಡೆದನು.

ಹೆದರದೆ ಅಳ್ಳಾಡದೆ ತನ್ನ
ಶರೀರವು ಪುಡಿಯಾಗಿ ಒಡೆದು
ಬೀಳುವವರೆಗೂ ತನ್ನ
ಪೌರುಷವು ಕುಗ್ಗದೆ ಇದ್ದನಲ್ಲಾ!
ದಲ್ -ಅಬ್ಬಾ!
ದುರ್ಯೋಧನನು ಎಷ್ಟು
ಆತ್ಮಗೌರವವೇ ಸಂಪತ್ತಾಗಿ
ಉಳ್ಳವನು!

ವ|| ಅಂತು ಸತ್ತುಂ ನೆಲನಂ ಪತ್ತುವಿಡೆನೆಂಬಂತೆ (ಹಾಗೆ ಸತ್ತೂ ನೆಲವನ್ನು-

ಹತ್ತಿಕೊಂಡಿರುವುದನ್ನು-
ಅಂಟಿಕೊಂಡಿರುವುದನ್ನು,
ಬಿಡುವುದಿಲ್ಲ ಎನ್ನುವ ಹಾಗೆ)
ನೆಲನಂ ಪತ್ತಿ
ಮೂರ್ಛಾಗತನಾಗಿರ್ದ
ಕುರುಕುಳಚೂಡಾಮಣಿಯ
ನೇನುಂ ಮಾಣದೆ ಕಿವಿರವೈರಿ
ಮುಟ್ಟೆವಂದಾಗಳೇಕಾದಶಾ
ಕ್ಷೋಹಿಣೀಪತಿಯಪ್ಪ
ರಾಜಾರಾಜನಂ

ಪರಾಭವಂಬಡಿಸದಿರೆಂದು ಬಲದೇವಂ ಬಾರಿಸೆವಾರಿಸೆ-

ವಚನ:ಪದವಿಭಾಗ-

ಅರ್ಥ:ಅಂತು ಸತ್ತುಂ ನೆಲನಂ ಪತ್ತುವಿಡೆನು ಎಂಬಂತೆ (ಹಾಗೆ ಸತ್ತೂ ನೆಲವನ್ನು(ಹತ್ತಿಕೊಂಡಿರುವುದನ್ನು- ಅಂಟಿಕೊಂಡಿರುವುದನ್ನು) ಬಿಡುವುದಿಲ್ಲ ಎನ್ನುವ ಹಾಗೆ) ನೆಲನಂ ಪತ್ತಿ

ಮೂರ್ಛಾಗತನಾಗಿರ್ದ
ಕುರುಕುಳಚೂಡಾಮಣಿಯನು
ಏನುಂ ಮಾಣದೆ (ನೆಲವನ್ನು
ತಬ್ಬಿಕೊಂಡು ಎಚ್ಚರತಪ್ಪಿದ್ದ
ಕುರುಕುಲಚೂಡಾಮಣಿಯಾ
ದ ದುರ್ಯೋಧನನನ್ನು
ಭೀಮನು ಸ್ವಲ್ಪವೂ
ಬೇಡವೆಂದರೂ ಬಿಡದೆ)
ಕಿಮ್ಮೀರ ವೈರಿ
ಮುಟ್ಟೆವಂದಾಗಳ್
(ಸಮೀಪಿಸಿ ಬಂದಾಗ)

ಏಕಾದಶಾ
ಕ್ಷೋಹಿಣೀಪತಿಯಪ್ಪ
ರಾಜಾರಾಜನಂ ಪರಾಭವಂ
ಬಡಿಸದಿರು ಎಂದು
(ಹನ್ನೊಂದು ಅಕ್ಷೋಹಿಣೀ
ಪತಿಯಾದ ಚಕ್ರವರ್ತಿಯನ್ನು
ಅವಮಾನ ಪಡಿಸಬೇಡ
ಎಂದು) ಬಲದೇವಂ ಬಾರಿಸೆ
ವಾರಿಸೆ (ತಡೆದು
ನಿವಾರಿಸುತ್ತಿರಲು.)-

ವಚನ:ಅರ್ಥ:ಹಾಗೆ ಸತ್ತೂ ನೆಲವನ್ನು(ಹತ್ತಿಕೊಂಡಿರುವುದನ್ನು-ಅಂಟಿಕೊಂಡಿರುವುದನ್ನು) ಬಿಡುವುದಿಲ್ಲ ಎನ್ನುವ ಹಾಗೆ ನೆಲವನ್ನು ತಬ್ಬಿಕೊಂಡು ಎಚ್ಚರತಪ್ಪಿದ್ದ ಕುರುಕುಲಚೂಡಾಮಣಿಯಾದ ದುರ್ಯೋಧನನನ್ನು ಭೀಮನು ಸ್ವಲ್ಪವೂ ಬೇಡವೆಂದರೂ ಬಿಡದೆ,

ಸಮೀಪಕ್ಕೆ ಬಂದಾಗ ಬಲರಾಮನು, ಹನ್ನೊಂದು ಅಕ್ಷೋಹಿಣೀ ಪತಿಯಾದ ಚಕ್ರವರ್ತಿಯನ್ನು ಅವಮಾನ ಪಡಿಸಬೇಡ ಎಂದು ತಡೆದು ನಿವಾರಿಸುತ್ತಿರಲು.

ಮ|| ಸ್ರ|| ಇದರೊಳೊ
ಮೂರ್ಧಾಭಿಷೇಕಂ ತನಗೆ ಗಡ
ಸಮಂತಾಯ್ತು ಪಿಂಛಾತಪತ್ರಂ
ಪುದಿದೆತ್ತಂ
ತಣ್ಣೆಲಲ್ಮಾಡುವುದು

ಗಡಮಿದೆಂತೆಂದುಮಾರ್ಗಪ್ರೊಟ್ಟ

ಡಂ ಪ|

ರ್ವಿದ ಗರ್ವೋದ್ರೋಕದಿಂ

ಬಾಗದು ಗಡಮೆನುತುಂ

ಮಾಣಿಕಂ ಸೂಸೆ ಬಲ್ಪಿಂ

ದೊದೆದಂ ಸಾರ್ತಂದು

ದುರ್ಯೋಧನನ ಮಕುಟಮಂ

ಕೋಪದಿಂ ಭೀಮಸೇನಂ|| ೯೮

ಪದ್ಯ-೯೮:ಪದವಿಭಾಗ-

ಅರ್ಥ:ಇದರೊಳೊ

ಮೂರ್ಧಾಭಿಷೇಕಂ ತನಗೆ ಗಡ

ಸಮಂತಾಯ್ತು (ಇದರಿಂದಲ್ಲವೇ ಇವನಿಗೆ ಪಟ್ಟಾಭಿಷೇಕವು ಚೆನ್ನಾಗಿ ಆಯಿತು.) ಪಿಂಛಾತಪತ್ರಂ ಪುದಿದು ಎತ್ತಂ ತಣ್ಣೆಲಿಲ್ಮಾಡುವುದು ಗಡಂ (ನವಿಲುಗರಿಯ ಕೊಡೆಯು ಎಲ್ಲ ಕಡೆಯೂ ಪ್ರಸರಿಸಿ ಇದಕ್ಕಲ್ಲವೇ ತಂಪಾದ ನೆರಳನ್ನುಂಟು ಮಾಡುವುದು) ಇದು ಎಂತು ಎಂದುಮ್

ಆರ್ಗಪ್ಪೊಡಂ ಪರ್ವಿದ
ಗರ್ವೋರ್ದ್ರೋಕದಿಂ ಬಾಗದು
ಗಡಂ (ಇದು ಎಂದೂ
ಯಾರಿಗೂ ಹೆಚ್ಚಾದ
ಗರ್ವದಿಂದ
ಬಾಗುವುದಿಲ್ಲವಲ್ಲವೇ'
)ಎನುತುಂ ಮಾಣಿಕಂ ಸೂಸೆ
ಬಲ್ಪಿಂದ ಒದೆದಂ ಸಾರ್ತಂದು
ದುರ್ಯೋರ್ಧನನ ಮಕುಟಮಂ
() ಕೋಪದಿಂ ಭೀಮಸೇನಂ
(ಎನ್ನುತ್ತ ಮಾಣಿಕ್ಯರತ್ನಗಳು

ಚೆಲ್ಲುತ್ತಿರಲು ಭೀಮಸೇನನು ಸಾರ್ತಂದು- ಹತ್ತಿರಬಂದು ಕೋಪದಿಂದ ದುರ್ಯೋಧನನ ಕಿರೀಟವನ್ನು ಬಲವಾಗಿ ಒದೆದನು.)

ಪದ್ಯ-೯೮:ಅರ್ಥ:

‘ಇದರಿಂದಲ್ಲವೇ ಇವನಿಗೆ ಪಟ್ಟಾಭಿಷೇಕವು ಚೆನ್ನಾಗಿ ಆಯಿತು. (ಆಗುವುದು, ಇನ್ನೂ ಆಗಿಲ್ಲ). ನವಿಲುಗರಿಯ ಕೊಡೆಯು ಎಲ್ಲ ಕಡೆಯೂ

ಪ್ರಸರಿಸಿ ಇದಕ್ಕಲ್ಲವೇ
ತಂಪಾದ ನೆರಳನ್ನುಂಟು
ಮಾಡುವುದು. ಇದು ಎಂದೂ
ಯಾರಿಗೂ ಹೆಚ್ಚಾದ
ಗರ್ವದಿಂದ
ಬಾಗುವುದಿಲ್ಲವಲ್ಲವೇ’ ಎನ್ನುತ್ತ
ಮಾಣಿಕ್ಯರತ್ನಗಳು
ಚೆಲ್ಲುತ್ತಿರಲು ಭೀಮಸೇನನು
ಹತ್ತಿರಬಂದು ಕೋಪದಿಂದ
ದುರ್ಯೋಧನನ ಕಿರೀಟವನ್ನು
ಬಲವಾಗಿ ಒದೆದನು.

ವ|| ಒದೆವುದುಂ
ದುರ್ಯೋಧನಂಗಾದವಸ್ಥೆ
ಯಂ ನೋಡಲಾಱದೆಯುಂ
ತನ್ನ ತಮ್ಮನ ಮನಮಂ
ನೋಡಿಸಲಾಱದೆಯುಂ
ಬಲದೇವಂ
ಭಗ್ನಮನೋರಥನಾಗಿ
ದ್ವಾರಾವತಿಗೆ ಪೋದನನ್ನೆಗಂ
ವೇಣೀಸಂಹಾರೋರುಭಂಗ
ಮಕುಟಭಂಗಂಗಳೆಂಬ ತನ್ನ
ಮಹಾ ಪ್ರತಿಜ್ಞೆಯಂ ನೆಱಪಿದ

ಭೀಮಸೇನನಳವನಳವಲ್ಲದೆ
ಪೊಗೞ್ದ ಚಕ್ರಿ ಕಾಲ
ಕುಶಲನಪ್ಪುದಱಿನಶ್ವತ್ಥಾಮನಿ
ನಪ್ಪನಾಗತ
ಬಾಧಾವಿಘಾತಮಂ
ಮಾಡಲೆಂದಯ್ವರುಮಂ
ನೀಲಗಿರಿಗೊಡಗೊಂಡು
ಪೋಗುತ್ತುಮಲ್ಲಿರ್ದ
ಬೀಡುಮನಾ ಬೀಡಿಂಗೆ
ಕಾಪಾಗಿ ಧೃಷ್ಟದ್ಯುಮ್ನ ಶಿಖಂಡಿ
ಚೇಕಿತಾನ

ಯುಧಾಮನ್ಯುತ್ತಮೌಜಸರು
ಮಂ ಶ್ರುತ ಸೋಮಕ
ಪ್ರಮುಖರಪ್ಪ ಪಂಚ
ಪಾಂಡವರುಮಂ ಪೇೞ್ದು
ಹಸ್ತಿನಪುರಕ್ಕೆ
ಕಳಿಪಿದನ್ನೆಗಮಿತ್ತ ಕೃಪ
ಕೃತವರ್ಮ
ಸಮೇತನಶ್ವತ್ಥಾಮಂ
ದುರ್ಯೋಧನನಿರ್ದೆಡೆಯಱಿ
ಯದೆ
ಗಾಂಗೇಯರಿಂದಮಿರ್ದೆಡೆಯ

ನಱಿದು

ಕೊಳಕ್ಕೆವಂದಲ್ಲಿಯುಂ ಕಾಣದೆ

ಕೊಳುಗುಳದೊಳಱಸುತ್ತುಂ

ಬರ್ಪಂ ತೊಟ್ಟನೆ

ಕಟ್ಟಿದಿರೊಳ್-

ವಚನ:ಪದವಿಭಾಗ-

ಅರ್ಥ:ಒದೆವುದುಂ

ದುರ್ಯೋಧನಂಗೆ ಆದ

ಅವಸ್ಥೆಯಂ

ನೋಡಲಾಱದೆಯುಂ

(ಬಲರಾಮನು

ದುರ್ಯೋಧನನಿಗಾದ
ಅವಸ್ಥೆಯನ್ನು
ನೋಡಲಾರದೆಯೂ) ತನ್ನ
ತಮ್ಮನ ಮನಮಂ
ನೋಯಿಸಲಾಱದೆಯುಂ
ಬಲದೇವಂ
ಭಗ್ನಮನೋರಥನಾಗಿ
ದ್ವಾರಾವತಿಗೆ ಪೋದನು
(ಭಗ್ನಮನೋರಥನಾಗಿ
ದ್ವಾರಾವತಿಗೆ ಹೋದನು.)
ಅನ್ನೆಗಂ ವೇಣೀಸಂಹಾರ ,

ಊರುಭಂಗ
ಮಕುಟಭಂಗಂಗಳು ಎಂಬ
ತನ್ನ ಮಹಾ ಪ್ರತಿಜ್ಞೆಯಂ
ನೆಱಪಿದ ಭೀಮಸೇನನು
(ಅಷ್ಟರಲ್ಲಿ ವೇಣೀಸಂಹಾರ
(ಮುಡಿಯನ್ನು ಕಟ್ಟುವುದು)
ಊರುಭಂಗ (ತೊಡೆಯನ್ನು
ಮುರಿಯುವುದು)
ಮಕುಟಭಂಗ (ಕಿರೀಟವನ್ನು
ಒಡೆಯುವುದು) ಎಂಬ ತನ್ನ
ಮಹಾಪ್ರತಿಜ್ಞೆಗಳನ್ನು

ಪೂರ್ಣಮಾಡಿದ
ಭೀಮಸೇನನ) ಅಳವನು
ಅಳವಲ್ಲದೆ ಪೊಗೞ್ದ ಚಕ್ರಿ
(ಶಕ್ತಿಯನ್ನು ಅಳತೆಮೀರಿ
ಕೃಷ್ಣನು ಹೊಗಳಿದನು.
ಹೊಗಳಿ-) ಕಾಲ
ಕುಶಲನಪ್ಪುದಱಿಂ
ಅಶ್ವತ್ಥಾಮನಿಂ ಅಪ್ಪ ಅನಾಗತ
ಬಾಧಾ ವಿಘಾತಮಂ
ಮಾಡಲೆಂದು ಅಯ್ವರುಮಂ
(ಕಾಲಕುಶಲನು- ಕಾಲ

ಸಂದರ್ಭವನ್ನರಿತು
ಮಾಡಬೇಕಾದ ಕಾರ್ಯವನ್ನು
ಮಾಡುವದರಲ್ಲಿ ಜಾಣನು-
ಆದುದರಿಂದ
ಅಶ್ವತ್ಥಾಮನಿಂದ ಮುಂದೆ
ಬರುವ ವಿಪತ್ತಿಗೆ ಪರಿಹಾ
ರಮಾಡುವುದಕ್ಕೆಂದು ಅಯ್ದು
ಜನ ಪಾಂಡವರನ್ನು)
ನೀಲಗಿರಿಗೆ ಒಡಗೊಂಡು
ಪೋಗುತ್ತುಂ ಅಲ್ಲಿರ್ದ
ಬೀಡುಮನು (ನೀಲಗಿರಿಗೆ ತನ್ನ

ಜೊತೆಯಲ್ಲಿ ಕರೆದುಕೊಂಡು ಹೋದನು.) ಆ ಬೀಡಿಂಗೆ ಕಾಪಾಗಿ ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸರುಮಂ (ಆ ಬೀಡಿಗೆ ರಕ್ಷಕರಾಗಿ ಧೃಷ್ಟದ್ಯುಮ್ನ, ಶಿಖಂಡಿ, ಚೇಕಿತಾನ, ಯುಧಾಮನ್ಯೂತ್ತಮೌಜಸರ ನ್ನೂ ಶ್ರುತಸೋಮಕರೇ ಮುಖ್ಯರಾದ

ಪಂಚಪಾಂಡವರನ್ನೂ ಗೊತ್ತು
ಮಾಡಿ (ಇರಹೇಳಿ)) ಶ್ರುತ
ಸೋಮಕ ಪ್ರಮುಖರಪ್ಪ
ಪಂಚ ಪಾಂಡವರುಮಂ
ಪೇಳ್ದು ಹಸ್ತಿನಪುರಕ್ಕೆ
ಕಳಿಪಿದನು,
(ಶ್ರುತಸೋಮಕರೇ
ಮುಖ್ಯರಾದ
ಪಂಚಪಾಂಡವರನ್ನೂ ಗೊತ್ತು
ಮಾಡಿ (ಇರಹೇಳಿ)
ಪಾಂಡವರನ್ನು

ಹಸ್ತಿನಾಪಟ್ಟಣಕ್ಕೆ
ಕಳುಹಿಸಿದನು.) ಅಗಮಿತ್ತ
ಕೃಪ ಕೃತವರ್ಮ ಸಮೇತಂ
ಅಶ್ವತ್ಥಾಮಂ
ದುರ್ಯೋಧನನು ಇರ್ದೆಡೆಯ
ಅಱಿಯದೆ (ಅಷ್ಟರಲ್ಲಿ ಈ ಕಡೆ
ಕೃಪ ಕೃತವರ್ಮರೊಡಗೂಡಿದ
ಅಶ್ವತ್ಥಾಮನು
ದುರ್ಯೋಧನನಿದ್ದ ಸ್ಥಳವನ್ನು
ತಿಳಿಯದೆ) ಗಾಂಗೇಯರಿಂದಂ
ಇರ್ದೆಡೆಯನು ಅಱಿದು

ಕೊಳಕ್ಕೆವಂದು ಅಲ್ಲಿಯುಂ
ಕಾಣದೆ (ಭೀಷ್ಮರಿಂದ
ದುರ್ಯೋಧನನಿದ್ದ ಸ್ಥಳವನ್ನು
ತಿಳಿದು ಕೊಳಕ್ಕೆ ಬಂದು
ಅಲ್ಲಿಯೂ ಕಾಣದೆ)
ಕೊಳುಗುಳದೊಳು
ಅಱಸುತ್ತುಂ ಬರ್ಪಂ ತೊಟ್ಟನೆ
ಕಟ್ಟಿದಿರೊಳ್
(ಯುದ್ಧಭೂಮಿಯಲ್ಲಿ
ಹುಡುಕುತ್ತ ಬರುತ್ತಿದ್ದವನು
ಥಟಕ್ಕನೆ ಎದುರುಗಡೆಯಲ್ಲಿ)-

ವಚನ:ಅರ್ಥ:ಬಲರಾಮನು ದುರ್ಯೋಧನನಿಗಾದ ಅವಸ್ಥೆಯನ್ನು ನೋಡಲಾರದೆಯೂ ತನ್ನ ತಮ್ಮನಾದ ಕೃಷ್ಣನ ಮನಸ್ಸನ್ನು ನೋಯಿಸಲಾರದೆಯೂ ಭಗ್ನಮನೋರಥನಾಗಿ ದ್ವಾರಾವತಿಗೆ ಹೋದನು. ಅಷ್ಟರಲ್ಲಿ ವೇಣೀಸಂಹಾರ (ಮುಡಿಯನ್ನು ಕಟ್ಟುವುದು) ಊರುಭಂಗ (ತೊಡೆಯನ್ನು

ಮುರಿಯುವುದು)
ಮಕುಟಭಂಗ (ಕಿರೀಟವನ್ನು
ಒಡೆಯುವುದು) ಎಂಬ ತನ್ನ
ಮಹಾಪ್ರತಿಜ್ಞೆಗಳನ್ನು
ಪೂರ್ಣಮಾಡಿದ
ಭೀಮಸೇನನ ಶಕ್ತಿಯನ್ನು
ಅಳತೆಮೀರಿ ಕೃಷ್ಣನು
ಹೊಗಳಿದನು. ಕಾಲಕುಶಲನು
ಆದುದರಿಂದ
ಅಶ್ವತ್ಥಾಮನಿಂದ ಮುಂದೆ
ಬರುವ ವಿಪತ್ತಿಗೆ ಪರಿಹಾ

ರಮಾಡುವುದಕ್ಕೆಂದು ಅಯ್ದು
ಜನ ಪಾಂಡವರನ್ನು
ನೀಲಗಿರಿಗೆ ತನ್ನ ಜೊತೆಯಲ್ಲಿ
ಕರೆದುಕೊಂಡು ಹೋದನು. ಆ
ಬೀಡಿಗೆ ರಕ್ಷಕರಾಗಿ
ಧೃಷ್ಟದ್ಯುಮ್ನ, ಶಿಖಂಡಿ,
ಚೇಕಿತಾನ,
ಯುಧಾಮನ್ಯೂತ್ತಮೌಜಸರ
ನ್ನೂ ಶ್ರುತಸೋಮಕರೇ
ಮುಖ್ಯರಾದ
ಪಂಚಪಾಂಡವರನ್ನೂ ಗೊತ್ತು

ಮಾಡಿ (ಇರಹೇಳಿ)
ಪಾಂಡವರನ್ನು
ಹಸ್ತಿನಾಪಟ್ಟಣಕ್ಕೆ
ಕಳುಹಿಸಿದನು. ಅಷ್ಟರಲ್ಲಿ ಈ
ಕಡೆ
ಕೃಪಕೃತವರ್ಮರೊಡಗೂಡಿದ
ಅಶ್ವತ್ಥಾಮನು
ದುರ್ಯೋಧನನಿದ್ದ ಸ್ಥಳವನ್ನು
ತಿಳಿಯದೆ ಭೀಷ್ಮರಿಂದ
ದುರ್ಯೋಧನನಿದ್ದ ಸ್ಥಳವನ್ನು
ತಿಳಿದು ಕೊಳಕ್ಕೆ ಬಂದು

ಅಲ್ಲಿಯೂ ಕಾಣದೆ
ಯುದ್ಧಭೂಮಿಯಲ್ಲಿ
ಹುಡುಕುತ್ತ ಬರುತ್ತಿದ್ದವನು
ಥಟಕ್ಕನೆ ಎದುರುಗಡೆಯಲ್ಲಿ

**ಚಂ|| ಪಿಡಿದೆಡಗೆಯ್ಯ
ಚಾಮರದ ದಕ್ಷಿಣಹಸ್ತದ
ಪದ್ಮದೊಳ್ಪೊಡಂ
ಬಡೆ ನಸು ಮಾಸಿ ಪಾಡಳಿದ
ರೂಪಿನೊಳುಣ್ಮುವ ಗಾಡಿ ನಾಡೆ
ಕ|**

ಣ್ಗೆಡರೆ ತೊಡಂಕಿ ಪೀಱಿದ ಕುರುಳ್ಗಳೆ ಚಿತ್ತದೊಳಾದ ಬೇಸಱಿಂ ನುಡಿವವೊಲಾಗೆ ಬರ್ಪ ಕಮಳಾಯತನೇತ್ರೆಯನಿಂದು ವಕ್ತ್ರೆಯಂ|| ೯೯ ||

ಪದ್ಯ-೯೯:ಪದವಿಭಾಗ-ಅರ್ಥ:ಪಿಡಿದೆಡಗೆಯ್ಯ ಚಾಮರದ (ಎಡಗೈಯಲ್ಲಿ ಚಾಮರವೂ) ದಕ್ಷಿಣಹಸ್ತದ ಪದ್ಮದ ಒಳ್ಪು (ಬಲಗೈಯಲ್ಲಿ

ಕಮಲದ ಹೂವೂ
ಮನೋಹರವಾಗಿರಲು)
ಒಡಂಬಡೆ ನಸು ಮಾಸಿ
ಪಾಡಳಿದ ರೂಪಿನೊಳು
ಉಣ್ಮವ ಗಾಡಿ ನಾಡೆ (ಸ್ವಲ್ಪ
ತೇಜೋಹೀನವಾಗಿ
ಸ್ವಭಾವಸ್ಥಿತಿ ಕೆಟ್ಟು
ಆಕಾರವನ್ನು
ಹೊರಹೊಮ್ಮುತ್ತಿರುವ
ಸೌಂದರ್ಯವು) ಕಣ್ಗೆ ಅಡರೆ
ತೊಡಂಕಿ ಪೀರಿದ ಕುರುಳ್ಗಳೆ

ಚಿತ್ತದೊಳು ಆದ ಬೇಸಱಿಂ
ನುಡಿವವೊಲಾಗೆ
(ವಿಷೇಷವಾಗಿ ಕಣ್ಣನ್ನು
ಆಕರ್ಷಿಸಲು ಸಿಕ್ಕಾಗಿ
ಕೆದರಿರುವ ಕುರುಳುಗಳು
ಮನಸ್ಸಿನ ಬೇಸರನ್ನು
ನುಡಿಯುವ ಹಾಗಿರಲು
(ಎದುರಿಗೆ) ಬರ್ಪ
ಕಮಳಾಯತನೇತ್ರೆಯನಿಲು
ಇಂದು ವಕ್ತ್ರೆಯಂ (ಬರುತ್ತಿದ್ದ
ಕಮಳದಂತೆ ವಿಸ್ತಾರವಾದ

ಕಣ್ಣುಳ್ಳ ಚಂದ್ರಮುಖಿಯನ್ನು ನೋಡಿ-)

ಪದ್ಯ-೯೯:ಅರ್ಥ:

ಎಡಗೈಯಲ್ಲಿ ಚಾಮರವೂ ಬಲಗೈಯಲ್ಲಿ ಕಮಲದ ಹೂವೂ ಮನೋಹರವಾಗಿರಲು ಸ್ವಲ್ಪ ತೇಜೋಹೀನವಾಗಿ ಸ್ವಭಾವಸ್ಥಿತಿ ಕೆಟ್ಟು ಆಕಾರವನ್ನು ಹೊರಹೊಮ್ಮುತ್ತಿರುವ

ಸೌಂದರ್ಯವು ವಿಶೇಷವಾಗಿ
ಕಣ್ಣನ್ನು ಆಕರ್ಷಿಸಲು ಸಿಕ್ಕಾಗಿ
ಕೆದರಿರುವ ಕುರುಳುಗಳು
ಮನಸ್ಸಿನ ಬೇಸರನ್ನು
ನುಡಿಯುವ ಹಾಗಿರಲು
(ಎದುರಿಗೆ) ಬರುತ್ತಿದ್ದ
ಕಮಳದಂತೆ ವಿಸ್ತಾರವಾದ
ಕಣ್ಣುಳ್ಳ ಚಂದ್ರಮುಖಿಯನ್ನು
ನೋಡಿದನು.

ವ|| ಕಂಡು

ನೀನಾಗೇನೆಂಬೆಯೆಲ್ಲಿಗೆ

ಪೋದಪೆಯೆನೆ-

ವಚನ:ಪದವಿಭಾಗ-

ಅರ್ಥ:ಕಂಡು ನೀನಾರ್ಗೆ ಏನೆಂಬೆ ಯೆಲ್ಲಿಗೆ ಪೋದಪೆ ಎನೆ-

ವಚನ:ಅರ್ಥ:ವ|| ನೀನಾರು? ನಿನ್ನ ಹೆಸರೇನು? ಎಲ್ಲಿಗೆ ಹೋಗುತ್ತಿದ್ದೀಯೆ ಎನ್ನಲು-

ಮ|| ಪೆಸರೊಳ್

ಲಕ್ಷ್ಮಿಯೆನಿನ್ನೆಗಂ ನೆಲಸಿ ತಾಂ

ದುರ್ಯೋಧನೋರಸ್ಥಳಾ

ವಸಥಂ ದ್ರೋಣ ನದೀಜ
ಕರ್ಣ
ಭುಜವೀರ್ಯಾವೇಷ್ಟಿತಂ
ಮಾಡೆ ಸಂ|
ತಸದಿರ್ದೆಂ ಬಿಸುಟಾ
ಧರಾಧಿಪತಿಯಂ
ನಾರಾಯಣಾದೇಶಮೊ
ಡ್ಡಿಸೆ
ಪಾಂಡುಪ್ರಿಯಪುತ್ರರೊಳ್
ನೆರೆಯಲೆಂದಿಂತೀಗಳಾಂ
ಪೋದಪೆಂ|| ೧೦೦ ||

ಪದ್ಯ-೧೦೦:ಪದವಿಭಾಗ-ಅರ್ಥ:ಪೆಸರೊಳ್ ಲಕ್ಷ್ಮಿಯೆಂ ಇನ್ನೆಗಂ ನೆಲಸಿ ತಾಂ (ನನ್ನ ಹೆಸರು ಲಕ್ಷ್ಮಿಯೆಂದು. ಇಲ್ಲಿಯವರೆಗೆ ಅಲ್ಲಿ ಯಾನು ಸಂತೋಷದಿಂದ ಇದ್ದೆನು.) ದುರ್ಯೋಧನನ ಓರಸ್ಥಳ ಆವಸಥಂ (ದುರ್ಯೋಧನನ ಎದೆಯು ಮನೆಯಾಗಿರಲು)ದ್ರೋಣ ನದೀಜ ಕರ್ಣ ಭುಜವೀರ್ಯಾವೇಷ್ಟಿತಂ

ಮಾಡೆ ಸಂತಸದಿಂ ಇರ್ದೆಂ

(ದ್ರೋಣ ಭೀಷ್ಮ ಕರ್ಣರ

ಬಾಹುಬಲದಿಂದ ರಕ್ಷಿತನಾದ

ಅಲ್ಲಿ ನಾನು ಸಂತೋಷದಿಂದ

ಇದ್ದೆನು) ಬಿಸುಟಾ

ಧರಾಧಿಪತಿಯಂ (ಆ

ರಾಜನನ್ನು ಬಿಸುಟು- ಬಿಟ್ಟು)

ನಾರಾಯಣ ಆದೇಶಮೊಡ್ಡಿಸೆ

ಪಾಂಡುಪ್ರಿಯ ಪುತ್ರರೊಳ್

ನೆರೆಯಲು ಎಂದು

ಇಂತೀಗಳಾಂ ಪೋದಪೆಂ

(ಕೃಷ್ಣನು ಅಪ್ಪಣೆಯ ಪ್ರಕಾರ ಪಾಂಡುಪ್ರಿಯಪುತ್ರರಲಿ ಸೇರಬೇಕೆಂದು ಈಗ ನಾನು ಹೋಗುತ್ತಿದ್ದೇನೆ.)

ಪದ್ಯ-೧೦೦:ಅರ್ಥ: ನನ್ನ ಹೆಸರು ಲಕ್ಷ್ಮಿಯೆಂದು. ದ್ರೋಣ ಭೀಷ್ಮ ಕರ್ಣರ ಬಾಹುಬಲದಿಂದ ರಕ್ಷಿತನಾದ ದುರ್ಯೋಧನನ ಎದೆಯು ಮನೆಯಾಗಿರಲು ಇಲ್ಲಿಯವರೆಗೆ ಅಲ್ಲಿ ನಾನು

ಸಂತೋಷದಿಂದ ಇದ್ದೆನು.
ಕೃಷ್ಣನು ಅಪ್ಪಣೆಯ ಪ್ರಕಾರ ಆ
ರಾಜನನ್ನು ಬಿಟ್ಟು,
ಪಾಂಡುಪ್ರಿಯಪುತ್ರರಲಿ
ಸೇರಬೇಕೆಂದು ಈಗ ನಾನು
ಹೋಗುತ್ತಿದ್ದೇನೆ. ಎಂದಳು.

ವ||

ಎಂಬುದುಮಶ್ವತ್ಥಾಮನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಅಶ್ವತ್ಥಾಮನು ಇಂತೆಂದಂ-

ವಚನ:ಅರ್ಥ: ವ|| ಎನ್ನಲು ಅಶ್ವತ್ಥಾಮನು ಹೀಗೆ ಹೇಳಿದನು.

<u>ಅಶ್ವತ್ಥಾಮನು ಕೊನೆಯದಿನ ರಾತ್ರಿ ಮಲಗಿದ್ದ ಪಾಂಡವ ಯೋಧರನ್ನೂ ಪಾಂಡವರ ಐದು ಮಕ್ಕಳನ್ನೂ ವಧೆಮಾಡಿದುದು</u>

ಪೊಸತಲರ್ದಂಬುಜಂಗಳೆಸ

ಳೊಳ್ ನೆಡಪಾಡುವಳೇಂ

ಪಯೋಧಿಯಂ
ಪೊಸೆದೊಡೆ ಪುಟ್ಟಿದೈ
ಮುರವಿರೋಧಿಯ ಪತ್ನಿಯೆ
ಮಿಂಚುತಿರ್ಪ ಕೂ|
ರಸಿಗಳ ಮೇಲೆ ಸಂಚರಿಪೆ
ವೈರಿನರಾಧಿಪಸೈನ್ಯವಾರ್ಧಿ
ಯಂ
ಪೊಸೆದೊಡೆ ಪುಟ್ಟಿದೀ ನಿನಗೆ
ವಕ್ರಿಸಲೆನ್ನನದೆಂತು
ತೀರ್ಗುಮೋ ||೧೦೧ ||

ಪದ್ಯ-೧೦೧:ಪದವಿಭಾಗ-ಅರ್ಥ:ಪೊಸತು ಅಲರ್ದ ಅಂಬುಜಂಗಳ ಎಸಳೊಳ್ ನೆಡಪಾಡುವಳೇಂ (ಹೊಸದಾಗಿ ಅರಳಿರುವ ಕಮಲದಳಗಳ ಮೇಲೆ ಓಡಾಡುವವಳೇನು!) ಪಯೋಧಿಯಂ ಪೊಸೆದೊಡೆ ಪುಟ್ಟಿದ್ಯೆ (ಸಮುದ್ರವನ್ನು ಕಡೆಯಲು ಹುಟ್ಟಿದೆಯಾ!) ಮುರವಿರೋಧಿಯ ಪತ್ನಿಯೆ

ಮಿಂಚುತಿರ್ಪ ಕೂರಸಿಗಳ

ಮೇಲೆ ಸಂಚರಿಪೆ (ವಿಷ್ಣುವಿನ

ಹೆಂಡತಿಯೇ?,

ಮಿಂಚಿನಂತಿರುವ ಹರಿತವಾದ

ಕತ್ತಿಗಳ ಮೇಲೆ

ಸಂಚರಿಸುತ್ತೀಯೆ;)

ವೈರಿನರಾಧಿಪ

ಸೈನ್ಯವಾರ್ಧಿಯಂ

ಪೊಸೆದೊಡೆ ಪುಟ್ಟಿದೀ ನಿನಗೆ

(ಶತ್ರುರಾಜ ಸೇನಾ

ಸಮುದ್ರವನ್ನು ಕಡೆದಾಗ

ಹುಟ್ಟಿದ ಈ ನಿನಗೆ)
ವಕ್ರಿಸಲೆನ್ನನದೆಂತು
ತೀರ್ಗುಮೋ (ನನ್ನನ್ನು
ಪ್ರತಿಭಟಿಸಲು ಸಾಧ್ಯವೇ?)
ಪದ್ಯ-೧೦೧:ಅರ್ಥ:ಹೊಸದಾಗಿ ಅರಳಿರುವ ಕಮಲದಳಗಳ ಮೇಲೆ ಓಡಾಡುವವಳೇನು! ಸಮುದ್ರವನ್ನು ಕಡೆಯಲು ಹುಟ್ಟಿದೆಯಾ!, ವಿಷ್ಣುವಿನ ಹೆಂಡತಿಯೇ?, ಮಿಂಚಿನಂತಿರುವ ಹರಿತವಾದ

ಕತ್ತಿಗಳ ಮೇಲೆ
ಸಂಚರಿಸುತ್ತೀಯೆ; ಶತ್ರುರಾಜ
ಸೇನಾ ಸಮುದ್ರವನ್ನು
ಕಡೆದಾಗ ಹುಟ್ಟಿದ ಈ ನಿನಗೆ
ನನ್ನನ್ನು ಪ್ರತಿಭಟಿಸಲು
ಸಾಧ್ಯವೇ,

ಮ||

ಕುರುವಂಶಾಂಬರಭಾನುವಂ

ಬಿಸುಡಿಸಲ್ಕಾನುಳ್ಳಿನಂ

ತೀರದಾ

ನಿರೆ ನಾರಾಯಣನೆಂಬನುಂ ಪ್ರಭುವೆ ಪೇೞ್ ನೀನೀ ಮರುಳ್ಮಾತನಂ| ಬುರುಹಾಕ್ಷ್ಮೀ ಬಿಸುಡಂಜದಿರ್ ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆಂ ದರವಿಂದಾಲಯೆಯಂ ಮಗುೞ್ಚಿದನದೇನಾ ದ್ರೌಣಿ ಶೌರ್ಯಾರ್ಥಿಯೋ|| ೧೦೨ ||

ಪದ್ಯ-೧೦೨:ಪದವಿಭಾಗ-ಅರ್ಥ:ಕುರುವಂಶಾಂಬರಭಾ

ನುವಂ (ಕುರುವಂಶವೆಂಬ
ಆಕಾಶಕ್ಕೆ ಸೂರ್ಯನಾದ
ದುಯೋ೯ಧ೯ನನನ್ನು)
ಬಿಸುಡಿಸಲ್ಕೆ ಆನು ಉಳ್ಳಿನಂ
ತೀರದು (ನಾನಿರುವಾಗ ನೀನು
ಬಿಸಾಡಲು ಸಾಧ್ಯವಿಲ್ಲ;)
ಆನಿರೆ ನಾರಾಯಣನೆಂಬನುಂ
ಪ್ರಭುವೆ ಪೇೞ್
(ನಾನಿರುವಾಗ
ನಾರಾಯಣನೆಂಬುವನು
ನಿನಗೆ ಯಜಮಾನನೇ

ಹೇಳು,) ನೀನು ಈ ಮರುಳ್
ಮಾತಂ ಅಂಬುರುಹಾಕ್ಷಿ೯
ಬಿಸುಡು (ಹೇ ಕಮಲಮುಖಿ
ಈ ಹುಚ್ಚುಮಾತನ್ನು
ಬಿಸಾಡು;) ಅಂಜದಿರ್ ನಡೆ
ಕುರುಕ್ಷ್ಮಾಪಾಳನಿರ್ದಲ್ಲಿಗೆ
ಎಂದು ಅರವಿಂದಾಲಯೆಯಂ
ಮಗುಳ್ಚಿದಂ (ಹೆದರಬೇಡ;
ನಡೆ,
ಕೌರವಚಕ್ರವರ್ತಿಯಿರುವ
ಸ್ಥಳಕ್ಕೆ ಎಂದು ಲಕ್ಷ್ಮಿಯನ್ನು

ಹಿಂತಿರುಗಿಸಿದನು.) ಅದೇನು ಆ ದ್ರೌಣಿ ಶೌರ್ಯಾರ್ಥಿಯೋ (ಅದೇನು ಅಶ್ವತ್ಥಾಮನು ಪ್ರತಾಪಿಯೋ?)

ಪದ್ಯ-೧೦೨:ಅರ್ಥ: ಕುರುವಂಶವೆಂಬ ಆಕಾಶಕ್ಕೆ ಸೂರ್ಯನಾದ ದುರ್ಯೋಧನನನ್ನು ನಾನಿರುವಾಗ ನೀನು ಬಿಸಾಡಲು ಸಾಧ್ಯವಿಲ್ಲ; ನಾನಿರುವಾಗ

ನಾರಾಯಣನೆಂಬುವನು ನಿನಗೆ ಯಜಮಾನನೇ ಹೇಳು, ಹೇ ಕಮಲಮುಖಿ ಈ ಹುಚ್ಚುಮಾತನ್ನು ಬಿಸಾಡು; ಹೆದರಬೇಡ; ನಡೆ, ಕೌರವಚಕ್ರವರ್ತಿಯಿರುವ ಸ್ಥಳಕ್ಕೆ ಎಂದು ಲಕ್ಷ್ಮಿಯನ್ನು ಹಿಂತಿರುಗಿಸಿದನು. ಅದೇನು ಅಶ್ವತ್ಥಾಮನು ಪ್ರತಾಪಿಯೋ?

ವ|| ಅಂತು ವಿಕಸಿತಕಮಳದಳನಯನೆ

ಯಂ ಕಮಳೆಯನಶ್ವತ್ಥಾಮಂ
ಮುಂದಿಟ್ಟು
ಕುರುಕುಟುಂಬಘಟಚೇಟಿಕೆ
ಯಂ ತರ್ಪಂತೆ ತಂದು
ವೃಕೋದರ
ಗದಾಸಂಚೂರ್ಣಿತೋರು
ಯುಗಳನುಂ
ಭೀಮಸೇನಚರಣಪ್ರಹರಣಾಗ
ಳಿತಶೋಣಿತಾರ್ದ್ರಮೌಳಿಯು
ಮಾಗಿ ಕೋಟಲೆಗೊಳ್ವ
ಕೌರವೇಶ್ವರನನೆಯ್ದೆ ಪೋಗಿ

ಹಸ್ತಪ್ರಹಸ್ತಮಂಡಲಾಗ್ರನುಂ ಶೋಕವ್ಯಗ್ರನುಮಾಗಿ-

ವಚನ:ಪದವಿಭಾಗ-

ಅರ್ಥ:ಅಂತು ವಿಕಸಿತ ಕಮಳದಳ ನಯನೆಯಂ ಕಮಳೆಯನು (ಅರಳಿದ ಕಮಲದಳದಂತೆ ಕಣ್ಣುಳ್ಳ ಲಕ್ಷ್ಮಿಯನ್ನು) ಅಶ್ವತ್ಥಾಮಂ ಮುಂದಿಟ್ಟು ಕುರುಕುಟುಂಬ ಘಟಚೇಟಿಕೆಯಂ ತರ್ಪಂತೆ ತಂದು (ಮುಂದಿಟ್ಟುಕೊಂಡು

ಕೌರವಕುಟುಂಬ
ಘಟಚೇಟಿಕೆಯನ್ನು
ಕರೆದುತರುವಂತೆ ತಂದು)
ವೃಕೋದರ ಗದಾ
ಸಂಚೂರ್ಣಿತೋರು
ಯುಗಳನುಂ (ಭೀಮನ
ಗದೆಯಿಂದ ಪುಡಿಮಾಡಲ್ಪಟ್ಟ
ಎರಡು ತೊಡೆಯುಳ್ಳವನೂ)
ಭೀಮಸೇನ ಚರಣ
ಪ್ರಹರಣಗಳಿತ ಶೋಣಿತ
ಆರ್ದ್ರ ಮೌಳಿಯುಮಾಗಿ

(ಭೀಮಸೇನನ ಪಾದಗಳ
ಒದೆತದಿಂದ ಸುರಿದ ರಕ್ತದಿಂದ
ಒದ್ದೆಯಾಗಿರುವ
ತಲೆಯುಳ್ಳವನೂ ಆಗಿ)
ಕೋಟಲೆಗೊಳ್ಳ
ಕೌರವೇಶ್ವರನನು ಎಯ್ದೆ
ಪೋಗಿ ಹಸ್ತಪ್ರಹಸ್ತ
ಮಂಡಲಾಗ್ರನುಂ(ಕತ್ತಿ ಹಿಡಿದ
ಕೈ) ಶೋಕ ವ್ಯಗ್ರನುಮಾಗಿ
(ವ್ಯಥೆಪಡುತ್ತಿರುವ
ದುರ್ಯೋಧನನ ಹತ್ತಿರಕ್ಕೆ

ಬಂದು, ಹಿಡಿದ ಕತ್ತಿಯು ಕೈಯ, ದುರ್ಯೋಧನನ್ನು ದುಃಖದಿಂದ ವಿಶೇಷ ಖಿನ್ನನಾಗಿ- ನೋಡಿದನು.)-

ವಚನ:ಅರ್ಥ:ಅರಳಿದ ಕಮಲದಳದಂತೆ ಕಣ್ಣುಳ್ಳ ಲಕ್ಷ್ಮಿಯನ್ನು ಅಶ್ವತ್ಥಾಮನು ಮುಂದಿಟ್ಟುಕೊಂಡು ಕೌರವಕುಟುಂಬ ಘಟಚೇಟಿಕೆಯನ್ನು ಕರೆದುತರುವಂತೆ ತಂದನು.

ಭೀಮನ ಗದೆಯಿಂದ
ಪುಡಿಮಾಡಲ್ಪಟ್ಟ ಎರಡು
ತೊಡೆಯುಳ್ಳವನೂ
ಭೀಮಸೇನನ ಪಾದಗಳ
ಒದೆತದಿಂದ ಸುರಿದ ರಕ್ತದಿಂದ
ಒದ್ದೆಯಾಗಿರುವ
ತಲೆಯುಳ್ಳವನೂ ಆಗಿ
ವ್ಯಥೆಪಡುತ್ತಿರುವ
ದುರ್ಯೋಧನನ ಹತ್ತಿರಕ್ಕೆ
ಬಂದು ಹಿಡಿದ ಕತ್ತಿಯು ಕೈಯ,
ದುರ್ಯೋಧನನ್ನು

ದುಃಖದಿಂದ ವಿಶೇಷ

ಖಿನ್ನನಾಗಿ- ನೋಡಿದನು.)-

ಚಂ|| ನೆಗೞ್ದ

ನೆಗೞ್ತೆಗಾವೆಡೆಯೊಳಂ ಪೞಿ

ಯಿಲ್ಲದೆ ಪೂಣ್ದು ಸಂದ ವೈ

ರಿಗಳನೆ ಕೊಂದು

ವಾರಿಪರೀತಮಹೀತಳಮಂ

ನಿಮಿರ್ಚಿ ಜೆ|

ಟ್ಟಿಗರನಯೋನಿಸಂಭವರನಾ

ಳ್ದರಿವರ್ಗದೊಳಾಂತು

ಕಾದೆಯುಂ

ಬಗೆ ದೊರೆಕೊಂಡುದಿಲ್ಲಿದು ವಿಧಾತ್ರನ ದೋಷಮೊ ನಿನ್ನ ದೋಷಮೋ|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ನೆಗಟ್ದಿ ನೆಗಟ್ತೆಗೆ ಆವೆಡೆಯೊಳಂ ಪಟು ಯಿಲ್ಲದೆ ಪೂಣ್ದು (ದುರ್ಯೋಧನನು ಮಾಡಿದ ಕಾರ್ಯಕ್ಕೆ ಅಥವಾ ಪ್ರಸಿದ್ಧ ಕಾರ್ಯಕ್ಕೆ ಎಲ್ಲಿಯೂ ನಿಂದೆಯಿಲ್ಲದೆ ನಿರ್ವಹಿಸಿ,) ಸಂದ ವೈರಿಗಳನೆ ಕೊಂದು

(ಪ್ರಸಿದ್ಧರಾದ ಶತ್ರುಗಳನ್ನು ಕೊಂದು,) ವಾರಿಪರೀತ ಮಹೀತಳಮಂ ನಿಮಿರ್ಚಿ (ಸಮುದ್ರದಿಂದ ಸುತ್ತುವರಿಯಲ್ಪಟ್ಟು ಭೂಮಿಯನ್ನು ವಿಸ್ತರಿಸಿ,) ಜೆಟ್ಟಿಗರನು ಅಯೋನಿಸಂಭವರನು ಆಳ್ದು (ಸಮುದ್ರದಿಂದ ಸುತ್ತುವರಿಯಲ್ಪಟ್ಟು ಭೂಮಿಯನ್ನು ವಿಸ್ತರಿಸಿ,

ಶೂರರನ್ನೂ -ಕರ್ಣ
ಅಯೋನಿಜರನ್ನೂ- ದ್ರೋಣ
ಕೃಪ- ಆಳಿ
(ಒಡೆಯ)ಯಾಗಿದ್ದು,)
ಅರಿವರ್ಗದೊಳು ಆಂತು
(ಶತ್ರುವರ್ಗವನ್ನು ಎದುರಿಸಿ)
ಕಾದೆಯುಂ
(ಯುದ್ಧಮಾಡಿದರೂ) ಬಗೆ
(ನಿನಗೆ ಇಷ್ಟಾರ್ಥವು)
ದೊರೆಕೊಂಡುದಿಲ್ಲ
(ಲಭಿಸಲಿಲ್ಲವಲ್ಲಾ), ಇದು

ವಿಧಾತ್ರನ ದೋಷವೊ ನಿನ್ನ ದೋಷವೋ (ಇದು ವಿಧಿಯ ದೋಷವ್ರೋ, ನಿನ್ನ ದೋಷವ್ರೋ?)

ಪದ್ಯ-೧೦೩:ಅರ್ಥ: ದುರ್ಯೋಧನನು ಮಾಡಿದ ಕಾರ್ಯಕ್ಕೆ ಅಥವಾ ಪ್ರಸಿದ್ಧ ಕಾರ್ಯಕ್ಕೆ ಎಲ್ಲಿಯೂ ನಿಂದೆಯಿಲ್ಲದೆ ನಿರ್ವಹಿಸಿ, ಪ್ರಸಿದ್ಧರಾದ ಶತ್ರುಗಳನ್ನು ಕೊಂದು, ಸಮುದ್ರದಿಂದ

ಸುತ್ತುವರಿಯಲ್ಪಟ್ಟ
ಭೂಮಿಯನ್ನು ವಿಸ್ತರಿಸಿ,
ಶೂರರನ್ನೂ
ಅಯೋನಿಜರನ್ನೂ ಆಳಿ
(ಒಡೆಯ)ಯಾಗಿದ್ದು,
ಶತ್ರುವರ್ಗವನ್ನು ಎದುರಿಸಿ,
ಯುದ್ಧಮಾಡಿದರೂ ನಿನಗೆ
ಇಷ್ಟಾರ್ಥವು
ಲಭಿಸಲಿಲ್ಲವಲ್ಲಾ. ಇದು
ವಿಧಿಯೋ, ನಿನ್ನ ದೋಷವೋ!

ಕಂ|| ಆದೊಡಮೆನ್ನಂ ಬಂಚಿಸಿ

ಪೋದುದರೊಳ್ ನಿನಗೆ ಪಗವರಿಂದಿನಿತೆಡಱಾ| ಯ್ತಾದಿತ್ಯತೇಜ ಬೆಸಸಿದಿ ರಾದ ಪೃಥಾಸುತರನುೞಿಯಲೀಯದೆ ಕೊಲ್ವೆಂ|| ೧೦೪ ||

ಪದ್ಯ-೧೦೪:ಪದವಿಭಾಗ-ಅರ್ಥ:ಆದೊಡಂ ಎನ್ನಂ ಬಂಚಿಸಿ ಪೋದುದರೊಳ್ (ಆದರೂ ನನ್ನನ್ನು ವಂಚಿಸಿ ಹೋದುದರಿಂದ) ನಿನಗೆ

ಪಗವರಿಂದ ಇನಿತು
ಎಡಱಾಯ್ತು (ನಿನಗೆ
ಶತ್ರುಗಳಿಂದ ಇಷ್ಟು
ಕೇಡಾಯಿತು.) ಆದಿತ್ಯತೇಜ
ಬೆಸಸು ಇದಿರಾದ
ಪೃಥಾಸುತರನು
ಉಱಿಯಲೀಯದೆ
(ಉಳಿಯಲು ಈಯದೆ)
ಕೊಲ್ವೆಂ (ಸೂರ್ಯತೇಜಸ್ಸುಳ್ಳ
ದುರ್ಯೋಧನನೇ
ಆಜ್ಞೆಮಾಡು, ಪ್ರತಿಭಟಿಸಿದ

ಪಾಂಡವರನ್ನು ಉಳಿಯುವುದಕ್ಕೆ ಅವಕಾಶವಿಲ್ಲದಂತೆ ಕೊಲುತ್ತೇನೆ; - ಎಂದನು.)

ಪದ್ಯ-೧೦೪:ಅರ್ಥ:ಆದರೂ ನನ್ನನ್ನು ವಂಚಿಸಿ/ ತಿರಸ್ಕರಿಸಿ ಹೋದುದರಿಂದ ನಿನಗೆ ಶತ್ರುಗಳಿಂದ ಇಷ್ಟು ಕೇಡಾಯಿತು. ಸೂರ್ಯತೇಜಸ್ಸುಳ್ಳ ದುರ್ಯೋಧನನೇ

ಆಜ್ಞೆಮಾಡು, ಪ್ರತಿಭಟಿಸಿದ ಪಾಂಡವರನ್ನು ಉಳಿಯುವುದಕ್ಕೆ ಅವಕಾಶವಿಲ್ಲದಂತೆ ಕೊಲುತ್ತೇನೆ ಎಂದನು.

ವ|| ಎಂಬುದುಂ ಫಣಿಕೇತನಂ ನೆತ್ತಿಯಿಂದೊರೆದುಗುವ ನೆತ್ತರ ಧಾರೆಯಿಂ ಮೆತ್ತಿದ ಕಣ್ಗಳನೊತ್ತಂಬದಿಂ ತೆರೆದಶ್ವತ್ಥಾಮನ ಮೊಗಮಂ ನೋಡಿ-

ವಚನ:ಪದವಿಭಾಗ-ಅರ್ಥ:ಎಂಬುದುಂ ಫಣಿಕೇತನಂ ನೆತ್ತಿಯಿಂದ ಒರೆದು ಉಗುವ (ಸರ್ಪಧ್ವಜನಾದ ದುರ್ಯೋಧನನು ತಲೆಯಿಂದ ಜಿನುಗಿ ಹರಿಯುತ್ತಿರುವ) ನೆತ್ತರ ಧಾರೆಯಿಂ ಮೆತ್ತಿದ ಕಣ್ಗಳನು (ರಕ್ತಪ್ರವಾಹದಿಂದ ಅಂಟಿಕೊಂಡಿದ್ದ ಕಣ್ಣುಗಳನ್ನು) ಒತ್ತಂಬದಿಂ ತೆರೆದು

ಅಶ್ವತ್ಥಾಮನ ಮೊಗಮಂ ನೋಡಿ (ಬಲಾತ್ಕಾರದಿಂದ ತೆರೆದು ಅಶ್ವತ್ಥಾಮನ ಮುಖವನ್ನು ನೋಡಿ - ಹೇಳಿದನು)-

ವಚನ:ಅರ್ಥ:ಸರ್ಪಧ್ವಜನಾದ ದುರ್ಯೋಧನನು ತಲೆಯಿಂದ ಜಿನುಗಿ ಹರಿಯುತ್ತಿರುವ ರಕ್ತಪ್ರವಾಹದಿಂದ ಅಂಟಿಕೊಂಡಿದ್ದ ಕಣ್ಣುಗಳನ್ನು

ಬಲಾತ್ಕಾರದಿಂದ ತೆರೆದು ಅಶ್ವತ್ಥಾಮನ ಮುಖವನ್ನು ನೋಡಿ -ಹೇಳಿದನು.

ಚಂ|| ಎನಗಿನಿತೊಂದವಸ್ಥೆ
ವಿಧಿಯೋಗದಿನಾದುದಿದರ್ಕೆ
ನೀನಟಿ
ಲ್ದಿನಿತು
ಮನಕ್ಷತಂಬಡದಿರಾಗದು
ಪಾಂಡವರಂ ಗೆಲಲ್ ಪುರಾ|
ತನಪುರುಷಂ ಮುರಾರಿ
ಕೆಲದೊಳ್ ನಿಲೆ ನೀಂ

ಕೊಲಲಾರ್ಪೊಡಾಗದೆಂ

ಬೆನೆ ತಱಿದೊಟ್ಟಿ

ವೈರಿಗಳನೆನ್ನಸುವುಳ್ಳಿನಮೆಯ್ದೆ

ವಾ ಗಡಾ|| ೧೦೫ ||

ಪದ್ಯ-೧೦೫:ಪದವಿಭಾಗ-ಅರ್ಥ:ಎನಗೆ ಇನಿತೊಂದು ಅವಸ್ಥೆ ವಿಧಿಯೋಗದಿಂ ಆದುದು ಇದರ್ಕೆ (ನನಗೆ ಇಷ್ಟೊಂದು ಕಷ್ಟದ ಸ್ಥಿತಿ ವಿಧಿಯ ಕಟ್ಟಳೆಯಿಂದ ಆಯಿತು. ಇದಕ್ಕೆ) ನೀನು

ಅಱಿಲ್ದು ಇನಿತು ಮನಕ್ಷತಂ ಬಡದಿರಾಗದು (ಇದಕ್ಕೆ ನೀನು ದುಖಪಟ್ಟು ಮನಸ್ಸಿನಲ್ಲಿ ನೋಯಬೇಡ.) ಪಾಂಡವರಂ ಗೆಲಲ್ ಪುರಾತನಪುರುಷಂ ಮುರಾರಿ ಕೆಲದೊಳ್ ನಿಲೆ (ಆದಿಪುರುಷನಾದ ಕೃಷ್ಣನು ಅವರ ಪಕ್ಕದಲ್ಲಿರುವಾಗ) ನೀಂ ಕೊಲಲ್ ಆರ್ಪೊಡೆ ಆಗದು ಎಂಬೆನೆ (ಆದಿಪುರುಷನಾದ ಕೃಷ್ಣನು

ಅವರ ಪಕ್ಕದಲ್ಲಿರುವಾಗ
ನೀನು ಪಾಂಡವರನ್ನು
ಕೊಲ್ಲಲು (ಆಗದು)
ಆಗುವುದಾದರೆ ಬೇಡ
ಎನ್ನುತ್ತೇನೆಯೇ?) ತಱಿದು
ಒಟ್ಟಿ ವೈರಿಗಳನು ಎನ್ನ
ಅಸುವುಳ್ಳಿನಂ ಎಯ್ದೆವಾ ಗಡಾ
(ಶತ್ರುಗಳನ್ನು ಕತ್ತರಿಸಿಹಾಕಿ
ನನ್ನ ಪ್ರಾಣವಿರುವಂತೆಯೇ ನ್ನ
ಹತ್ತಿರ ಬಾ ಗಡಾ!)

ಪದ್ಯ-೧೦೫:ಅರ್ಥ: ನನಗೆ ಇಷ್ಟೊಂದು ಕಷ್ಟದ ಸ್ಥಿತಿ ವಿಧಿಯ ಕಟ್ಟಳೆಯಿಂದ ಆಯಿತು. ಇದಕ್ಕೆ ನೀನು ದುಖಪಟ್ಟು ಮನಸ್ಸಿನಲ್ಲಿ ನೋಯಬೇಡ. ಆದಿಪುರುಷನಾದ ಕೃಷ್ಣನು ಅವರ ಪಕ್ಕದಲ್ಲಿರುವಾಗ ನೀನು ಪಾಂಡವರನ್ನು ಕೊಲ್ಲಲು (ಆಗದು) ಆಗುವುದಾದರೆ ಬೇಡ

ಎನ್ನುತ್ತೇನೆಯೇ? ಹಾಗಿದ್ದರೆ, ಶತ್ರುಗಳನ್ನು ಕತ್ತರಿಸಿಹಾಕಿ ನನ್ನ ಪ್ರಾಣವಿರುವಂತೆಯೇ ನ್ನ ಹತ್ತಿರ ಬಾ ಗಡಾ! ಎಂದ ದುರ್ಯೋಧನ.

ವ|| ಎಂಬುದುಂ ಪಾಂಡವರನಿಕ್ಕಿದೊಸಗೆವಾತ ನೀಂಗಳೆ ಕೇಳಿಸುವೆನೆಂದು ಸರೋಜ ನಿಳಯೆಯನೆನ್ನ ಬರ್ಪನ್ನಮರಸನನಗಲದೆ ವಿಕಸಿತಶತಪತ್ರಾತಪತ್ರದ

ತಣ್ಣೆಲುಮಂ

ಕುಂದಲೀಯದಿರೆಂದು

ನಿಯಮಿಸಿ ರುದ್ರಾವತಾರಂ

ಕೃಪ ಕೃತವರ್ಮ

ಸಮೇತನರಸನಂ

ಬೀೞ್ಕೊಂಡು

ಪೋದನಾಗಳ್-

ವಚನ:ಪದವಿಭಾಗ-

ಅರ್ಥ:ಎಂಬುದುಂ

ಪಾಂಡವರನು ಇಕ್ಕಿದ

ಒಸಗೆವಾತನು ಈಗಳೆ

ಕೇಳಿಸುವೆನು ಎಂದು (ಎನ್ನಲು
'ಪಾಂಡವರನ್ನು ಇಕ್ಕಿ ಕೊಂದ
ಶುಭವಾರ್ತೆಯನ್ನು ಈಗಲೇ
ಕೇಳಿಸುತ್ತೇನೆ' ಎಂದು)
ಸರೋಜ ನಿಳಯೆಯನೆ ಎನ್ನ
ಬರ್ಪನ್ನಂ ಅರಸನನು
ಅಗಲದೆ (ಕಮಲಾಸನೆಯಾದ
ಲಕ್ಷ್ಮಿಯನ್ನು ನಾನು
ಬರುವವರೆಗೂ ರಾಜನನ್ನು
ಅಗಲದೆ) ವಿಕಸಿತ ಶತಪತ್ರ
ಆತಪತ್ರದ ತಣ್ಣೆಳಿಲುಮಂ

ಕುಂದಲು ಈಯದಿರೆಂದು
ನಿಯಮಿಸಿ
(ಕಮಲಾಸನೆಯಾದ
ಲಕ್ಷ್ಮಿಯನ್ನು ನಾನು
ಬರುವವರೆಗೂ ರಾಜನನ್ನು
ಅಗಲದೆ ಅರಳಿದ ಕಮಲದ
ಕೊಡೆಯ ತಂಪಾದ ನೆರಳನ್ನು
ಕಡಿಮೆಮಾಡಬೇಡವೆಂದು
ಕಟ್ಟಳೆಯಿಟ್ಟು)
ರುದ್ರಾವತಾರಂ ಕೃಪ
ಕೃತವರ್ಮ ಸಮೇತಂ

ಅರಸನಂ ಬೀಱ್ಕೊಂಡು ಪೋದನಾಗಳ್ (ರುದ್ರಾವತಾರನಾದ ಅಶ್ವತ್ಥಾಮನು ಕೃಪಕೃತವರ್ಮರೊಡನೆ ರಾಜನನ್ನು ಬೀಳ್ಕೊಂಡು ಹೋದನು- ಆಗ)-

ವಚನ:ಅರ್ಥ:ಎನ್ನಲು ‘ಪಾಂಡವರನ್ನು ಇಕ್ಕಿ ಕೊಂದ ಶುಭವಾರ್ತೆಯನ್ನು ಈಗಲೇ ಕೇಳಿಸುತ್ತೇನೆ’ ಎಂದು

ಕಮಲಾಸನೆಯಾದ

ಲಕ್ಷ್ಮಿಯನ್ನು ನಾನು

ಬರುವವರೆಗೂ ರಾಜನನ್ನು

ಅಗಲದೆ ಅರಳಿದ ಕಮಲದ

ಕೊಡೆಯ ತಂಪಾದ ನೆರಳನ್ನು

ಕಡಿಮೆಮಾಡಬೇಡವೆಂದು

ಕಟ್ಟಳೆಯಿಟ್ಟು

ರುದ್ರಾವತಾರನಾದ

ಅಶ್ವತ್ಥಾಮನು

ಕೃಪಕೃತವರ್ಮರೊಡನೆ

ರಾಜನನ್ನು ಬೀಳ್ಕೊಂಡು
ಹೋದನು- ಆಗ

ಚಂ|| ಮಗನಱಿಲೊಳ್ ಕರಂ
ಮಱುಗುತಿರ್ಪಿನಮೆನ್ನ
ತನೂಜನಾಳ್ವ ಸಾ
ಮಿಗಮಱಿವಾಗೆ
ಶೋಕರಸಮಿರ್ಮಡಿಸಿತ್ತು
ಜಳಪ್ರವೇಶಮಿ|
ಲ್ಲಿಗೆ ಪದನೆಂದು ನಿಶ್ಚಯಿಸಿ
ವಾರಿಜನಾಥನನಾಥನಾಗಿ ತೊ

ಟ್ಟಗೆ ಮುಱುಪಂತೆವೊೇಲ್ ಮುಱುಗಿದಂ ಕಡುಕೆಯ್ದಪರಾಂಬುರಾಶಿಯೊಳ್ || ೧೦೬

ಪದ್ಯ-೧೦೬:ಪದವಿಭಾಗ-ಅರ್ಥ:ಮಗನ ಅೞಿಲೊಳ್ ಕರಂ ಮಱುಗುತಿರ್ಪಿನಂ (ನಾನು ನನ್ನ ಮಗನ ಮರಣದುಖದಿಂದಲೇ ವಿಶೇಷ ದುಖಪಡುತ್ತಿರಲು) ಎನ್ನ ತನೂಜನು ಆಳ್ವ ಸಾಮಿಗಂ

ಅಱಿವಾಗೆ ಶೋಕರಸಂ
ಇರ್ಮ್ಡಿಸಿತ್ತು (ನನ್ನ
ಮಗನನ್ನು ಆಳುವ
ಸ್ವಾಮಿಯೂ ನಾಶವಾಗಲು
ಶೋಕರಸವು
ಇಮ್ಮಡಿಯಾಗಿದೆ.)
ಜಳಪ್ರವೇಶಂ ಇಲ್ಲಿಗೆ
ಪದನೆಂದು ನಿಶ್ಚಯಿಸಿ
(ನೀರಿನಲ್ಲಿ
ಮುಳುಗಿಕೊಳ್ಳುವುದೇ ಇಲ್ಲಿಗೆ
ಯೋಗ್ಯವಾದುದು ಎಂದು

ನಿಶ್ಚಯಿಸಿ) ವಾರಿಜನಾಥನು
ಅನಾಥನಾಗಿ ತೊಟ್ಟಗೆ
ಮುೞುಪಂತೆವೊೞ್(ಸೂರ್
ಯನು ಅನಾಥನಾಗಿ
-ದಿಕ್ಕಿಲ್ಲದವನಾಗಿ- ಕೂಡಲೆ
ಮುಳುಗುವ ಹಾಗೆ)
ಮುೞುಗಿದಂ ಕಡುಕೆಯ್ದು
ಅಪರಾಂಬು ರಾಶಿಯೊಳ್
(ಪಶ್ಚಿಮ ಸಮುದ್ರದಲ್ಲಿ
ಶೀಘ್ರವಾಗಿ ಮುಳುಗಿದನು.)

ಪದ್ಯ-೧೦೬:ಅರ್ಥ:

ಸೂರ್ಯನು ಮುಳುಗಿದನು:- ನಾನು ನನ್ನ ಮಗನ ಮರಣದುಖದಿಂದಲೇ ವಿಶೇಷ ದುಖಪಡುತ್ತಿರಲು ನನ್ನ ಮಗನನ್ನು ಆಳುವ ಸ್ವಾಮಿಯೂ ನಾಶವಾಗಲು ಶೋಕರಸವು ಇಮ್ಮಡಿಯಾಗಿದೆ. ನೀರಿನಲ್ಲಿ ಮುಳುಗಿಕೊಳ್ಳುವುದೇ ಇಲ್ಲಿಗೆ ಯೋಗ್ಯವಾದುದು ಎಂದು

ನಿಶ್ಚಯಿಸಿ ಸೂರ್ಯನು ಅನಾಥನಾಗಿ (ದಿಕ್ಕಿಲ್ಲದವನಾಗಿ) ತೊಟ್ಟನೆ ಮುಳುಗುವ ಹಾಗೆ ಪಶ್ಚಿಮ ಸಮುದ್ರದಲ್ಲಿ ಶೀಘ್ರವಾಗಿ ಮುಳುಗಿದನು.

ವ|| ಆ ಪ್ರಸ್ತಾವದೊಳಶ್ವತ್ಥಾಮಂ ಕೃಪ ಕೃತವರ್ಮರುಂಬೆರಸು ಹಸ್ತಿನಪುರದೊಳ್ ಪಾಂಡವರಿರ್ದರೆಗೆತ್ತುಮಲ್ಲಿಗೆ

ನಿಟ್ಟಾಲಿಯಾಗಿ
ದಾಟಿಯನಿಟ್ಟು ಮುಟ್ಟೆವಂದು
ಬಾಯ್ಮಾಡಿ ಧೃಷ್ಟದ್ಯುಮ್ನ
ಶಿಖಂಡಿ ಚೇಕಿತಾನ
ಯುಧಾಮನ್ಯೂತ್ತಮೌಜಸರಂ
ಕೊಂದು ಶ್ರುತ ಸೋಮಕ
ಪ್ರಮುಖರಪ್ಪ ಪಂಚ
ಪಾಂಡವರಂ ಪಾಂಡವರೆಗೆತ್ತು
ಕೊಂದು ತದುತ್ತಮಾಂಗಂಗಳಂ
ಕೊಂಡು ತಟತಟನೆ
ನೇಸಱ್ಮೂಡುವಾಗಳೆಯ್ದೆ

ವಂದು ದುರ್ಯೋಧನನಂ ಕಂಡು ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳನೆಂದು ಮುಂದಿಕ್ಕಿದಾಗಳ್ ದುರ್ಯೋಧನಂ ನೋಡಿ-

ವಚನ:ಪದವಿಭಾಗ-

ಅರ್ಥ:ಆ ಪ್ರಸ್ತಾವದೊಳು ಅಶ್ವತ್ಥಾಮಂ ಕೃಪ ಕೃತವರ್ಮರುಂ ಬೆರಸು (ಆ ಸಮಯದಲ್ಲಿ ಅಶ್ವತ್ಥಾಮನು ಕೃಪಕೃತವರ್ಮರ ಒಡಗೂಡಿ)

ಹಸ್ತಿನಪುರದೊಳ್
ಪಾಂಡವರ್ ಇರ್ದರೆಗೆತ್ತುಂ
ಅಲ್ಲಿಗೆ ನಿಟ್ಟಾಲಿಯಾಗಿ
ದಾಟಿಯನಿಟ್ಟು
(ಹಸ್ತಿನಾಪಟ್ಟಣದಲ್ಲಿ
ಪಾಂಡವರಿರುವರೆಂದು
ಭ್ರಾಂತಿಸಿ ಅಲ್ಲಿಗೆ ದುರುಗುಟ್ಟಿ
ನೋಡಿ /ಎಚ್ಚರದಿಂದ
ದಾಳಿಯಿಟ್ಟು) ಮುಟ್ಟೆವಂದು
ಬಾಯ್ಮಾಡಿ ಧೃಷ್ಟದ್ಯುಮ್ನ
ಶಿಖಂಡಿ ಚೇಕಿತಾನ

ಯುಧಾಮನ್ಯು
ಉತ್ತಮೌಜಸರಂ ಕೊಂದು
(ಸಮೀಪಕ್ಕೆ ಬಂದು ಕೂಗಿ
ದೃಷ್ಟದ್ಯುಮ್ನ ಶಿಖಂಡಿ
ಚೇಕಿತಾನ ಯುಧಾಮನ್ಯು
ಉತ್ತಮೌಜಸರನ್ನು ಕೊಂದು)
ಶ್ರುತ ಸೋಮಕ ಪ್ರಮುಖರಪ್ಪ
ಪಂಚ ಪಾಂಡವರಂ
ಪಾಂಡವರೆಗೆತ್ತು ಕೊಂದು
(ಶ್ರುತಸೋಮಕರೇ
ಮೊದಲಾದ

ಉಪಪಾಂಡವರನ್ನು
ಪಾಂಡವರೆಂದು
ಭ್ರಮಿಸಿಕೊಂಡು ಕೊಂದು,)
ತತ್ ಉತ್ತಮಾಂಗಂಗಳಂ
ಕೊಂಡು ತಱಿತಱಿನೆ
ನೇಸಱ್ಮೂಡುವಾಗಳು ಎಯ್ದೆ
ವಂದು (ಅವರ ತಲೆಗಳನ್ನು
ತೆಗೆದುಕೊಂಡು
ಪ್ರಕಾಶಮಾನವಾಗಿ
ಸೂರ್ಯನು ಹುಟ್ಟುವ
ಹೊತ್ತಿಗೆ ಸರಿಯಾಗಿ

ಸಮೀಪಕ್ಕೆ ಬಂದು,)
ದುರ್ಯೋಧನನಂ ಕಂಡು
ಕೊಳ್ ನಿನ್ನ ನಚ್ಚಿನ
ಪಾಂಡವರ ತಲೆಗಳನೆಂದು
(ದುರ್ಯೋಧನನನ್ನು ಕುರಿತು
ತೆಗೆದುಕೊ ನಿನಗೆ ಪ್ರಿಯರಾದ
ಪಾಂಡವರ ತಲೆಗಳನ್ನು
ಎಂದು) ಮುಂದಿಕ್ಕಿದಾಗಳ್
ದುರ್ಯೋಧನಂ ನೋಡಿ
(ಮುಂದಿಟ್ಟಾಗ, ಅದನ್ನು
ದುರ್ಯೋಧನನು ನೋಡಿ)-

ವಚನ:ಅರ್ಥ:ಆ ಸಮಯದಲ್ಲಿ ಅಶ್ವತ್ಥಾಮನು ಕೃಪಕೃತವರ್ಮರ ಒಡಗೂಡಿ ಹಸ್ತಿನಾಪಟ್ಟಣದಲ್ಲಿ ಪಾಂಡವರಿರುವರೆಂದು ಭ್ರಾಂತಿಸಿ ಅಲ್ಲಿಗೆ ದುರುಗುಟ್ಟಿ ನೋಡಿ ಎಚ್ಚರದಿಂದ ದಾಳಿಯಿಟ್ಟು (ಮುತ್ತಿಗೆ ಹಾಕಿ) ಸಮೀಪಕ್ಕೆ ಬಂದು ಕೂಗಿ ದೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯು

ಉತ್ತಮೌಜಸರನ್ನು ಕೊಂದು
ಶ್ರುತಸೋಮಕರೇ
ಮೊದಲಾದ
ಉಪಪಾಂಡವರನ್ನು
ಪಾಂಡವರೆಂದು
ಭ್ರಮಿಸಿಕೊಂಡು ಕೊಂದು,
ಅವರ ತಲೆಗಳನ್ನು
ತೆಗೆದುಕೊಂಡು
ಪ್ರಕಾಶಮಾನವಾಗಿ
ಸೂರ್ಯನು ಹುಟ್ಟುವ
ಹೊತ್ತಿಗೆ ಸರಿಯಾಗಿ

ಸಮೀಪಕ್ಕೆ ಬಂದು,
ದುರ್ಯೋಧನನನ್ನು ಕುರಿತು
ತೆಗೆದುಕೊ ನಿನಗೆ ಪ್ರಿಯರಾದ
ಪಾಂಡವರ ತಲೆಗಳನ್ನು
ಎಂದು ಮುಂದಿಟ್ಟಾಗ, ಅದನ್ನು
ದುರ್ಯೋಧನನು ನೋಡಿ

ಕಂ|| ಬಾಲಕಮಳಂಗಳಂ ಕಮ
ಳಾಲಯದಿಂ ತಿಱಿದು
ತರ್ಪ್ಪವೋಲ್ ತಂದೈ ನೀಂ|
ಬಾಲಕರ ತಲೆಗಳಕ್ಕಟ

ಬಾಲಕವಧದೋಷಮೆಂತು ನೀಂ ನೀಗಿದಪಯ್|| ೧೦೭ ||

ಪದ್ಯ-೧೦೭:ಪದವಿಭಾಗ-ಅರ್ಥ:ಬಾಲ ಕಮಳಂಗಳಂ ಕಮಳಾಲಯದಿಂ ತಿಱಿದು ತರ್ಪ್ಪವೋಲ್ (ಸರೋವರದಿಂದ ಎಳೆಯ ಕಮಲಗಳನ್ನು ಕಿತ್ತು ತರುವ ಹಾಗೆ) ತಂದೈ ನೀಂ ಬಾಲಕರ ತಲೆಗಳ ಅಕ್ಕಟ (ಅಯ್ಯೋ! ನೀನು ಬಾಲಕರ ತಲೆಗಳನ್ನು

ತಂದಿರುವೆ,) ಬಾಲಕವಧ ದೋಷಮೆಂತು ನೀಂ ನೀಗಿದಪಯ್ (ಬಾಲವಧೆಯ ದೋಷವನ್ನು ನೀನು ಹೇಗೆ ಕಳೆದುಕೊಳ್ಳುತ್ತೀಯೇ? ಎಂದನು.)

ಪದ್ಯ-೧೦೭:ಅರ್ಥ:
ಸರೋವರದಿಂದ ಎಳೆಯ ಕಮಲಗಳನ್ನು ಕಿತ್ತು ತರುವ ಹಾಗೆ ಅಯ್ಯೋ! ನೀನು ಬಾಲಕರ ತಲೆಗಳನ್ನು

ತಂದಿರುವೆ, ಬಾಲವಧೆಯ ದೋಷವನ್ನು ನೀನು ಹೇಗೆ ಕಳೆದುಕೊಳ್ಳುತ್ತೀಯೇ? ಎಂದನು.

ವ||

ಎಂಬುದುಮಶ್ವತ್ಥಾಮನಂತೆಂಬುದೇನೆನೆ ದುರ್ಯೋಧನನೆಂದಂ ಪಾಂಡವರ ತಲೆಗಳಲ್ಲಮಿವು ಪಾಂಡವರ ಸೂನುಗಳಪ್ಪ ಪಂಚಪಾಂಡವರ

ತಲೆಗಳೆಂಬುದುಮಿದರ್ಕೆ
ಕರ್ತವ್ಯಮಾವುದೆಂದೊಡೆ
ಹಿಮವತ್ಪರ್ವತದೊಳ್
ತಪಶ್ಚರಣಪರಾಯಣರಾಗಿ
ಮೆನಗಮಂತ್ಯಕಾಲಮೆಂದು
ದುರ್ಯೋರ್ಧನಂ
ಪ್ರಾಣಪರಿತ್ಯಾಗಂಗೆಯ್ದನಾಗಳ
ಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ
ಹಿಮವತ್ಪರ್ವತಕ್ಕೆ
ನಡೆಗೊಂಡರಿತ್ತ

ಕೃತವರ್ಮನುಂ ದ್ವಾರಾವತಿಗೆ ಪೋದನಾಗಳ್-

ವಚನ:ಪದವಿಭಾಗ-ಅರ್ಥ:

ಎಂಬುದುಂ ಅಶ್ವತ್ಥಾಮನಂ ಅಂತೆಂಬುದು ಏನೆನೆ (ಅಶ್ವತ್ಥಾಮನು ಹಾಗೆಂದರೇನು? ಎನ್ನಲು) ದುರ್ಯೋಧನನೆಂದಂ ಪಾಂಡವರ ತಲೆಗಳು ಅಲ್ಲಂ ಇವು (ದುರ್ಯೋಧನನು ಹೀಗೆ ಹೇಳಿದನು. 'ಇವು

ಪಾಂಡವರ ತಲೆಗಳಲ್ಲ).
ಪಾಂಡವರ ಸೂನುಗಳಪ್ಪ
ಪಂಚಪಾಂಡವರ
ತಲೆಗಳೆಂಬುದುಂ (ಪಾಂಡವರ
ಮಕ್ಕಳಾದ ಪಂಚಪಾಂಡವರ
ತಲೆಗಳು ಎನ್ನಲು) ಇದರ್ಕೆ
ಕರ್ತವ್ಯಮಾವುದು ಎಂದೊಡೆ
(ಇದರ ಪರಿಹಾರಕ್ಕೆ
ಮಾಡಬೇಕಾದ ಕರ್ತವ್ಯವೇನು
ಎಂದನು ಅಶ್ವತ್ಥಾಮ);
ಹಿಮವತ್ಪರ್ವತದೊಳ್

ತಪಶ್ಚರಣ ಪರಾಯಣರಾಗಿಂ
(ಹಿಮವತ್ಪರ್ವತದಲ್ಲಿ
ತಪಸ್ಸುಮಾಡುವುದರಲ್ಲಿ
ಆಸಕ್ತರಾಗಿ’);
ಎನಗಮಂತ್ಯಕಾಲಂ ಎಂದು
ದುರ್ಯೋಧನಂ
ಪ್ರಾಣಪರಿತ್ಯಾಗಂ ಗೆಯ್ದನು
(ನನಗೂ ಅಂತ್ಯಕಾಲವು
ಬಂದಿದೆ’ ಎಂದು
ದುರ್ಯೋಧನನು ಪ್ರಾಣವನ್ನು
ನೀಗಿದನು.) ಆಗಳು

ಅಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ ಹಿಮವತ್ಪರ್ವತಕ್ಕೆ ನಡೆಗೊಂಡರು ಇತ್ತ ಕೃತವರ್ಮನುಂ ದ್ವಾರಾವತಿಗೆ ಪೋದನು ಆಗಳ್ (ಆಗ ಅಶ್ವತ್ಥಾಮನೂ ಕೃಪನೂ ಅವಮಾನಿತರಾಗಿ ಹಿಮವತ್ಪರ್ವತಕ್ಕೆ ನಡೆದರು. ಈ ಕಡೆ ಕೃತವರ್ಮನೂ ದ್ವಾರಾವತಿಗೆ ಹೋದನು.)-

ವಚನ:ಅರ್ಥ: ಅಶ್ವತ್ಥಾಮನು ಹಾಗೆಂದರೇನು? ಎನ್ನಲು ದುರ್ಯೋಧನನು ಹೀಗೆ ಹೇಳಿದನು. ‘ಇವು ಪಾಂಡವರ ತಲೆಗಳಲ್ಲ. ಪಾಂಡವರ ಮಕ್ಕಳಾದ ಪಂಚಪಾಂಡವರ ತಲೆಗಳು ಎನ್ನಲು; ಇದರ ಪರಿಹಾರಕ್ಕೆ ಮಾಡಬೇಕಾದ ಕರ್ತವ್ಯವೇನು ಎಂದನು ಅಶ್ವತ್ಥಾಮ; ಹಿಮವತ್ಪರ್ವತದಲ್ಲಿ

ತಪಸ್ಸುಮಾಡುವುದರಲ್ಲಿ ಆಸಕ್ತರಾಗಿ', ನನಗೂ ಅಂತ್ಯಕಾಲವು ಬಂದಿದೆ' ಎಂದು ದುರ್ಯೋಧನನು ಪ್ರಾಣವನ್ನು ನೀಗಿದನು. ಆಗ ಅಶ್ವತ್ಥಾಮನೂ ಕೃಪನೂ ಅವಮಾನಿತರಾಗಿ ಹಿಮವತ್ಪರ್ವತಕ್ಕೆ ನಡೆದರು. ಈ ಕಡೆ ಕೃತವರ್ಮನೂ ದ್ವಾರಾವತಿಗೆ ಹೋದನು. ಆಗ-

ಪಿರಿಯಕ್ಕರ|| ಬಿಳಿಯ
ತಾವರೆಯೆಸಟೀೊಳ್ ಮಾಡಿದ
ಬೆಳ್ಗೊಡೆ ರಯ್ಯ್ಯಮಾಗೆಡದ
ಕೆಯ್ಯೊಳ್
ಪೊಳೆವ ಚೆಂಬೊನ್ನ ಕಾವಿನ
ಚಾಮರಮಮರ್ದಿರೆ ಭೇರಿ
ಸಿಂಹಾಸನಮುಂ
ಬಟೀಯೊಳ್ ಜವಂ ಮಿಳಿರೆ
ರಾಜ್ಯಚಿಹ್ನಂಗಳ್ವೆರಸಿಂತು
ನಡೆತಂದು ರಾಜ್ಯಲಕ್ಷ್ಮಿ

ಬಳೆದ ಸಂತೋಷದಂತಮನೆಯ್ದೆ ಪತ್ತಿದಳ್ ಸಹಜಮನೋಜನಂ ನಾಡೋಜನಂ|| ೧೦೮ ||

ಪದ್ಯ-೧೦೮:ಪದವಿಭಾಗ-ಅರ್ಥ:ಬಿಳಿಯ ತಾವರೆಯೆಸಟಿಯೊಳ್ ಮಾಡಿದ ಬೆಳ್ಗೊಡೆ ರಯ್ಯಮಾಗೆ (ಬಿಳಿಯ ತಾವರೆಯ ದಳದಲ್ಲಿ ಮಾಡಿದ ಬಿಳಿಯ ಕೊಡೆಯು ಬಲದ ಕಯ್ಯಲ್ಲಿ

ರಮ್ಯವಾಗಿರಲು) ಎಡದ
ಕೆಯ್ಯ್ಯೊಳ್ ಪೊಳೆವ ಚೆಂಬೊನ್ನ
ಕಾವಿನ ಚಾಮರಂ ಅಮರ್ದಿ್ರರೆ
(ಹೊಳೆದ ಹೊಂಬಣ್ಣದ ಚಿನ್ನದ
ಕಾವುಳ್ಳ ಚಾಮರವು
ಎಡಗಯ್ಯ್ಯಲ್ಲಿ
ಸೇರಿಕೊಂಡಿರಲು,) ಭೇರಿ
ಸಿಂಹಾಸನಮುಂ
ಬಟಿಯೊಳ್ ಜವಂ ಮಿಳಿರೆ
(ಭೇರಿ ಸಿಂಹಾಸನಾದಿಗಳು
ಪಕ್ಕದಲ್ಲಿ ವೇಗವಾಗಿ

ಅಲುಗಾಡುತ್ತಿರಲು)
ರಾಜ್ಯಚಿಹ್ನಂಗಳ್ವೆರಸಿಂತು
ನಡೆತಂದು
(ರಾಜ್ಯಚಿಹ್ನೆಗಳೊಡಗೂಡಿ
ಬಂದು,) ರಾಜ್ಯಲಕ್ಷ್ಮಿ ಬಳೆದ
ಸಂತೋಷದಂತಮನು ಎಯ್ದೆ
(ಅಬಿವೃದ್ಧಿಯಾಗುತ್ತಿದ್ದ
ಸಂತೋಷವು
ಸಂಪೂರ್ಣವಾಗಲು)
ಪತ್ತಿದಳ್ ಸಹಜ
ಮನೋಜನಂ ನಾಡೋಜನಂ

(ರಾಜ್ಯಲಕ್ಷ್ಮಿಯು ಸಹಜಮನೋಜನೂ ನಾಡೋಜನೂ ಆದ ಅರ್ಜುನನನ್ನು ಸೇರಿದಳು.)

ಪದ್ಯ-೧೦೮:ಅರ್ಥ:ಬಿಳಿಯ ತಾವರೆಯ ದಳದಲ್ಲಿ ಮಾಡಿದ ಬಿಳಿಯ ಕೊಡೆಯು ಬಲದ ಕಯ್ಯಲ್ಲಿ ರಮ್ಯವಾಗಿರಲು, ಹೊಳೆದ ಹೊಂಬಣ್ಣದ ಚಿನ್ನದ ಕಾವುಳ್ಳ ಚಾಮರವು ಎಡಗಯ್ಯಲ್ಲಿ

ಸೇರಿಕೊಂಡಿರಲು, ಭೇರಿ ಸಿಂಹಾಸನಾದಿಗಳು ಪಕ್ಕದಲ್ಲಿ ವೇಗವಾಗಿ ಅಲುಗಾಡುತ್ತಿರಲು, ರಾಜ್ಯಚಿಹ್ನೆಗಳೊಡಗೂಡಿ ಬಂದು, ಅಬಿವೃದ್ಧಿಯಾಗುತ್ತಿದ್ದ ಸಂತೋಷವು ಸಂಪೂರ್ಣವಾಗಲು ರಾಜ್ಯಲಕ್ಷ್ಮಿಯು ಸಹಜಮನೋಜನೂ ನಾಡೋಜನೂ ಆದ ಅರ್ಜುನನನ್ನು ಸೇರಿದಳು.

|| ಇದು ವಿವಿಧ
ವಿಬುಧಜನವಿನುತ
ಜಿನಪದಾಂಭೋಜ
ವರಪ್ರಸಾದೋತ್ಪನ್ನ ಪ್ರಸನ್ನ
ಗಂಭೀರ ವಚನ ರಚನ ಚತುರ
ಕವಿತಾಗುಣಾರ್ಣವವಿರಚಿತ
ಮಪ್ಪ
ವಿಕ್ರಮಾರ್ಜುನವಿಜಯದೊ
ಳ್ ತ್ರಯೋದಶಾಶ್ವಾಸಂ||

||ಇದು ಅನೇಕ ದೇವತೆಗಳಿಂದ
ಸ್ತುತಿಸಲ್ಪಟ್ಟ
ಜಿನಪಾದಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯಾದುದೂ
ಗಂಭೀರವಾದುದೂ ಆದ
ಮಾತುಗಳ ರಚನೆಯಲ್ಲಿ
ಚಾತುರ್ಯವನ್ನುಳ್ಳ
ಕವಿತಾಗುಣಾರ್ಣವನಿಂದ
ರಚಿತವಾದುದೂ ಆದ

ವಿಕ್ರಮಾರ್ಜುನವಿಜಯದಲ್ಲಿ ಹದಿಮೂರನೆಯ ಆಶ್ವಾಸ.||

♦♣♣♣♣♣♣♣♣♣♣♣♣ ♣♣♣♣♣♣♣♦

ॐ

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	11	12	**13**	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ತ್ರಯೋದಶಾಶ್ವಾ

ಸಂ&oldid=188849" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೨೦ ಅಕ್ಟೋಬರ್ ೨೦೧೯, ೨೨:೩೪ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಪಂಪಭಾರತ ಚತುರ್ಥಾಶ್ವಾಸಂ

<ಪಂಪಭಾರತ

ಪಂಪಭಾರತ -ಪದವಿಭಾಗ ಮತ್ತು ಅರ್ಥ::ಚತುರ್ಥಾಶ್ವಾಸಂ

- (XXV.II.IIX-ಪದ್ಯದ ಮೊದಲ ಅಕ್ಷರ ವೃತ್ತದ ಹೆಸರು ಸೂಚಿಸುವುದು; ಇದು ಚಂಪೂ ಕಾವ್ಯವಾಗಿದ್ದು ಗದ್ಯವೂ ಇದೆ. **(ಗಮನಿಸಿ:ಱ = ರ; ೞ=ಳ)**)

ಪಯುಧಷ್ಠಿರನಿಗೆ ಪಟ್ಟಾಭಿಷೇಕ -ಇಂದ್ರಪ್ರಸ್ಥದಲ್ಲಿ ಪಾಂಡವರು

**ಕಂ|| ಶ್ರೀರಮಣಿಯಂ
ದ್ವಿಷದ್ಬಲ
ಪಾರಾವಾರದೊಳುದಗ್ರ ಭುಜ
ವಿಜಯ ಮಹಾ|
ಮೇರುವಿನ ಕಡೆದು ಪಡೆದಳ
ವಾರುಮನಿೞಿಸಿದುದುದಾತ್ತ
ನಾರಾಯಣನಾ ||೧||**

ಪದ್ಯ-00:ಪದವಿಭಾಗ-ಅರ್ಥ:ಶ್ರೀರಮಣಿಯಂ ದ್ವಿಷದ್ಬಲ ಪಾರಾವಾರದೊಳ್ (ಶತ್ರುಗಳ ಸೈನ್ಯವೆಂಬ ಸಾಗರದಲ್ಲಿ) ಉದಗ್ರ ಭುಜ ವಿಜಯ ಮಹಾಮೇರುವಿನ (ತನ್ನ ಅತಿಶಯವೂ ವಿಜಯಪ್ರದವೂ ಆದ ತೋಳೆಂಬ ಮಹಾ ಮೇರುಪರ್ವತದಿಂದ) ಕಡೆದು ಪಡೆದ ಹೊಂದಿದ ಅಳವು

ಆರುಮಂ ಇಱಿಸಿದುದು ಉದಾತ್ತನಾರಾಯಣನಾ(ಉದಾತ್ತನಾರಾಯಣನಾದ ಅರ್ಜುನನ ಅಳವು-ಪರಾಕ್ರಮವು ಆರುಮಂ ಇಱಿಸಿದುದು ಯಾರನ್ನೂ/ ಎಲ್ಲರನ್ನೂ ತಿರಸ್ಕರಿಸಿತು -ಎಲ್ಲರನ್ನೂ ಮೀರಿದ್ದು)

ಪದ್ಯ-00:ಅರ್ಥ:
ಲಕ್ಷ್ಮಿದೇವಿಯನ್ನು ಶತ್ರುಸೈನ್ಯವೆಂಬ ಸಮುದ್ರದಲ್ಲಿ

ತನ್ನ ಅತಿಶಯವೂ
ವಿಜಯಪ್ರದವೂ ಆದ
ತೋಳೆಂಬ ಮಹಾ
ಮೇರುಪರ್ವತದಿಂದ ಕಡೆದು
ಪಡೆದ ಅರ್ಜುನನ
ಪರಾಕ್ರಮವು ಯಾರನ್ನೂ/
ಎಲ್ಲರನ್ನೂ ತಿರಸ್ಕರಿಸಿತು
-ಎಲ್ಲರನ್ನೂ ಮೀರಿದ್ದು,

**ವ|| ಅಂತು ದ್ರುಪದನ
ಪೊಟಿಲೊಳ್ ಪಾಂಡವರ್
ಚಾಗಕ್ಕೆ ಬೂತುಂ ಭೋಗಕೆ**

ಪೊೞ್ತುಂ ನೆರೆಯದೆನಿಸಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ಪನ್ನೆಗಮಿತ್ತಲ್-

ವಚನ:ಪದವಿಭಾಗ-

ಅರ್ಥ:ಅಂತು ದ್ರುಪದನ ಪೊಲಿಲೊಳ್ (ಪಟ್ಟಣದಲ್ಲಿ)ಪಾಂಡವರ್ ಚಾಗಕ್ಕೆ (ದಾನ ಪಡೆಯುವುದಕ್ಕೆ) ಬೂತುಂ (ಯಾವ ಭೂತವೂ

ಉಳಿಯಲಿಲ್ಲ?) ಭೋಗಕೆ
ಪೊೞ್ತುಂ ನೆಯದೆನಿಸಿ
(ಸುಖಪಡುವುದಕ್ಕೆ
ಸಮಯವೇ
ಸಾಲದೆಂಬಂತೆಯೂ)
ಸುಖಸಂಕಥಾವಿನೋದದಿಂ
ರಾಜ್ಯಂಗೆಯ್ಯುತ್ತಿರ್ಪನ್ನೆಗಮಿತ್ತ
ಲ್
ವಚನ:ಅರ್ಥ:ಹಾಗೆ
ದ್ರುಪದನ ಪಟ್ಟಣದಲ್ಲಿ
ಪಾಂಡವರು (ತಾವು

ಮಾಡುವ) ದಾನಕ್ಕೆ

ಪಾತ್ರರಾದವರು ಒಬ್ಬರೂ

ಉಳಿಯಲಿಲ್ಲವೆಂಬಂತೆಯೂ

ಸುಖಪಡುವುದಕ್ಕೆ

ಸಮಯವೇ

ಸಾಲದೆಂಬಂತೆಯೂ

ಸೌಖ್ಯದಿಂದ

ರಾಜ್ಯವಾಳುತ್ತಿದ್ದರು ಆಗ ಇತ್ತ

-

ಮ|| ಚರರಾಗೆಯ್ದಿದರೆಯ್ದಿ

ಹಸ್ತಿನಪುರಕ್ಕಾ ಪಾಂಡವರ್

ತಮ್ಮುತ
ಯ್ವುರುಮಿರ್ದರ್
ದ್ರುಪದಾರಾಜ ಪುರದೊಳ್
ಕೆಯ್ಕೊಂಡು ಪಾಂಚಾಳಿಯಂ|
ಧುರದೊಳ್ ಕರ್ಣನನಾಂತು
ಗೆಲ್ದವನವಂ ಸಂದರ್ಜುನಂ
ತಳ್ತು ಸಂ
ಗರದೊಳ್ ಶಲ್ಯನನಿಕ್ಕಿ
ಗೆಲ್ದದಟನಾ ಭೀಮಂ ಗಡಂ
ಕಾಣಿರೇ|| ೨||

ಪದ್ಯ-00:ಪದವಿಭಾಗ-ಅರ್ಥ:ಚರರ್ ಆಗ ಎಯ್ದಿದರ್ ಎಯ್ದಿ ಹಸ್ತಿನಪುರಕ್ಕೆ (ಗೂಢಚಾರರು ಹೊರಟು, ಹಸ್ತಿನಾಪಟ್ಟಣಕ್ಕೆ ಬಂದು) ಆ ಪಾಂಡವರ್ ತಮ್ಮುಂತ ಅಯ್ವರುಂ ಇರ್ದರ್, ದ್ರುಪದಾರಾಜ ಪುರದೊಳ್(ಆ ಪಾಂಡವರು ಐದು ಮಂದಿಯೂ ದ್ರುಪದರಾಜನ ಪಟ್ಟಣದಲ್ಲಿ ಇದ್ದಾರೆ)

ಕೆಯ್ಕೊಂಡು ಪಾಂಚಾಳಿಯಂ
(ದ್ರೌಪದಿಯನ್ನು ಪಡೆದು)
ಧುರದೊಳ್ ಕರ್ಣನನಾಂತು
ಗೆಲ್ದವನವಂ ಸಂದ ಅರ್ಜುನಂ
(ಯುದ್ಧದಲ್ಲಿ ಕರ್ಣನನ್ನು
ಗೆದ್ದವನು ಪ್ರಸಿದ್ಧನಾದ
ಅರ್ಜುನ); ತಳ್ತು (ಹಿಡಿದು,
ಸೇರಿ)ಸಂಗರದೊಳ್
(ಯುದ್ಧದಲ್ಲಿ) ಶಲ್ಯನನು ಇಕ್ಕಿ
ಗೆಲ್ದ ಅದಟನು ಆ ಭೀಮಂ
ಗಡಂ ಕಾಣಿರೇ(ಹಿಡಿದು

ಯುದ್ಧದಲ್ಲಿ ಶಲ್ಯನನ್ನೂ ಹೊಡೆದು ಸೋಲಿಸಿದ ಪರಾಕ್ರಮಿಯೇ ಭೀಮ ತಿಳಿಯಿರಿ!)

ಪದ್ಯ-00:ಅರ್ಥ:
ಗೂಢಚಾರರು ಹೊರಟು, ಹಸ್ತಿನಾಪಟ್ಟಣಕ್ಕೆ ಬಂದು ಆ ಪಾಂಡವರು ಐದು ಮಂದಿಯೂ ದ್ರುಪದರಾಜನ ಪಟ್ಟಣದಲ್ಲಿ ಇದ್ದಾರೆ. ದ್ರೌಪದಿಯನ್ನು ಪಡೆದು

ಯುದ್ಧದಲ್ಲಿ ಕರ್ಣನನ್ನು ಗೆದ್ದವನು ಪ್ರಸಿದ್ಧನಾದ ಅರ್ಜುನ, ಹಿಡಿದು ಯುದ್ಧದಲ್ಲಿ ಶಲ್ಯನನ್ನೂ ಹೊಡೆದು ಗೆದ್ದ ಪರಾಕ್ರಮಿಯು ಭೀಮನೇ, ತಿಳಿಯಿರಿ!

ವ|| ಎಂಬ ಮಾತಂ ಧೃತರಾಷ್ಟ್ರ ದುರ್ಯೋಧನಾದಿಗಳ್ ಕೇಳ್ದು ಬಿಲ್ಲುಂಬೆಱಗುಮಾಗಿ

ವಚನ:ಪದವಿಭಾಗ-

ಅರ್ಥ:ಎಂಬ ಮಾತಂ

ಧೃತರಾಷ್ಟ್ರ
ದುರ್ಯೋಧನಾದಿಗಳ್ ಕೇಳ್ದು
ಬಿಲ್ಲುಂಬೆಱಗುಮಾಗಿ (ಕೇಳಿ
ಆಶ್ಚರ್ಯ ಭಯಗಳಿಂದ
ಸ್ತಂಭೀಭೂತರಾಗಿ-)
ವಚನ:ಅರ್ಥ:ಎಂಬ
ಮಾತನ್ನು ಧೃತರಾಷ್ಟ್ರ
ದುರ್ಯೋಧನನೇ
ಮೊದಲಾದವರು ಕೇಳಿ
ಆಶ್ಚರ್ಯ ಭಯಗಳಿಂದ
ಸ್ತಂಭೀಭೂತರಾಗಿ-

ಕಂ|| ಕಾಯ್ವಟಿಲುೞ್
ಜತುಗೃಹದೊಳ
ಗಯ್ವರುಮಂ ಮಂತ್ರಬಲದೆ
ಸುಟ್ಟೊಡಮವರಂ|
ದೆಯ್ವಬಲಮೊಂದೆ ಕಾದುದು
ದೆಯ್ವಮನಾರಯ್ಯ ಮೀೞ್
ಬಾಟಿಲ್ ನೆರೆವರ್|| ೩

ಪದ್ಯ-00:ಪದವಿಭಾಗ-

ಅರ್ಥ:ಕಾಯ್ವ ಅಟಿಲ್ ಉೞ್ ಜತುಗೃಹದೊಳಗೆ ಅಯ್ವರುಮಂ (ಸುಡುವ

ನೋವು ಉಂಟಾಗಲು;
ಅರಗಿನಮನೆಯಲ್ಲಿ
ಅಯ್ದುಜನರನ್ನೂ)
ಮಂತ್ರಬಲದೆ ಸುಟ್ಟೊಡಂ
ಅವರಂ (ಮಂತ್ರಶಕ್ತಿಯಿಂದ
ಸುಟ್ಟರೂ ಅವರನ್ನು)
ದೆಯ್ವಬಲಮೊಂದೆ ಕಾದುದು
(ದೈವಬಲವೊಂದೇ ರಕ್ಷಿಸಿತು)
ದೆಯ್ವಮನು ಆರಯ್ಯ ಮೀಱಿ
ಬಾಟಿಲ್
ನೆರೆವರ್(ದೈವಬಲವನ್ನು

ಮೀರಿ ಯಾರಯ್ಯಾ ತಾನೆ ಬದುಕುಲು ಸಮರ್ಥರು?)

ಪದ್ಯ-00:ಅರ್ಥ:ಕೌರವರು ತಮ್ಮನ್ನು ಸುಡುವ ದುಖವು ಹೆಚ್ಚಾಗುತ್ತಿರಲು (?); ತಮ್ಮ ಮಂತ್ರಶಕ್ತಿಯಿಂದ ಸುಟ್ಟರೂ ಅವರನ್ನು ದೈವಬಲವೊಂದೇ ರಕ್ಷಿಸಿತು. ದೈವಬಲವನ್ನು ಮೀರಿ ಯಾರಯ್ಯಾ ತಾನೆ ಬದುಕುಲು ಸಮರ್ಥರು? ಯಾರೂ ಇಲ್ಲ.

ವ|| ಎಂಬುದುಂ ಭೀಷ್ಮ
ದ್ರೋಣಾದಿಗಳ್
ನಿಶ್ಚಿತಮಂತ್ರರಾಗಿ ವಿದುರನಂ
ಕರೆದಾಳೋಚಿಸಿ
ಪೃಥಾತನೂಜರಂ ನಿನ್ನ ಬಲ್ಲ
ಮಾಱ್ಕೆಯಿಂ
ನುಡಿದೊಡಂಗೊಂಡು
ಬರ್ಪುದೆಂದು
ಪೇೞ್ದಟ್ಟುವುದುಮಾತನಂತೆ
ಗೆಯ್ವೆನೆಂದು ರಥಾರೂಢನಾಗಿ

ಪಾಂಚಾಳರಾಜಪುರಕ್ಕೆ ವಂದು ಪಾಂಡುಪುತ್ರರಂ ಕಂಡು-

ವಚನ:ಪದವಿಭಾಗ-

ಅರ್ಥ:ಎಂಬುದುಂ (ಪಾಂಡವರು ಬದುಕಿರುವರೆಂದು ತಿಳಿಯಲಾಗಿ) ಭೀಷ್ಮ ದ್ರೋಣಾದಿಗಳ್ ನಿಶ್ಚಿತಮಂತ್ರರಾಗಿ (ನಿಶ್ಚಯ ತೀರ್ಮಾನ ಉಳ್ಳವರಾಗಿ) ವಿದುರನಂ ಕರೆದು

ಆಳೋಚಿಸಿ (ಆಲೋಚನೆ ಮಾಡಿ) ಪೃಥಾ ತನೂಜರಂ (ಪೃಥೆಯ-ಕುಂತಿಯ ಮಕ್ಕಳನ್ನು) ನಿನ್ನ ಬಲ್ಲ ಮಾೞ್ಕೆಯಿಂ ನುಡಿದೊಡಂಗೊಂಡು ಬರ್ಪುದು ಎಂದು (ನಿನಗೆ ತಿಳಿದ ರೀತಿಯಲ್ಲಿ ಬುದ್ಧಿ ಹೇಳಿ ಒಪ್ಪಿಸಿ ಕರೆದುಕೊಂಡು ಬರುವುದು ಎಂದು,) ಪೇೞ್ದು ಅಟ್ಟುವುದುಂ (ಹೇಳಿ

ಕಳುಹಿಸಲು) ಆತನು ಅಂತೆ ಗೆಯ್ವೆನೆಂದು (ಹಾಗೆಯೇ ಮಾಡುತ್ತೇನೆಂದು)ರಥಾರೂಢ ನಾಗಿ ಪಾಂಚಾಳರಾಜಪುರಕ್ಕೆ ವಂದು (ಬಂದು) ಪಾಂಡುಪುತ್ರರಂ ಕಂಡು-

ವಚನ:ಅರ್ಥ:ಭೀಷ್ಮ ದ್ರೋಣ ಮೊದಲಾದವರು ನಿಷ್ಕೃಷ್ಟವಾದ ಮಂತ್ರಾಲೋಚನೆಯುಳ್ಳವರಾಗಿ ವಿದುರನ್ನು ಕರೆದು

ಅವನೊಡನೆ ವಿಚಾರಮಾಡಿ ಪಾಂಡವರನ್ನು ನಿನಗೆ ತಿಳಿದ ರೀತಿಯಲ್ಲಿ ಬುದ್ಧಿ ಹೇಳಿ ಒಪ್ಪಿಸಿ ಕರೆದುಕೊಂಡು ಬರುವುದು ಎಂದು ಹೇಳಿ ಕಳುಹಿಸಿದರು. ಅವನು ಹಾಗೆಯೇ ಮಾಡುತ್ತೇನೆಂದು ತೇರನ್ನು ಹತ್ತಿ ದ್ರುಪದನ ಪಟ್ಟಣಕ್ಕೆ ಬಂದು ಪಾಂಡುಪುತ್ರರನ್ನು ನೋಡಿ

ಚಂ|| ಅದು ಪಿರಿದುಂ
ಪ್ರಮಾದಮದುವುಂ
ಕುರುರಾಜನಿನಾಯ್ತು
ಪೋಯ್ತು ಸಂ
ದುದು ಮರೆಯಲ್ಕೆ
ವೇಳ್ಪುದದನಾಳ್ಪುದು ತಪ್ಪದೆ
ಪಾಂಡುರಾಜನಾ||
ಳ್ದುದನೆಳೆಯಂ ಮನಂ ಬಸದೆ
ಬರ್ಪುದು ನೀಮೆನೆ ಪೋಪ
ಕಜ್ಜಮಂ

ವಿದುರನೊಳಯ್ವರುಂ ಸಮೆದು ಪೇೞ್ವುದುಮಾ ದ್ರುಪದಂಗೆ ರಾಜದಿಂ|| ೪||

ಪದ್ಯ-00:ಪದವಿಭಾಗ-ಅರ್ಥ:ಅದು ಪಿರಿದುಂ ಪ್ರಮಾದಂ ಅ(ಆ)ದುವುಂ ಕುರುರಾಜನಿಂ ಆಯ್ತು (ಅದು-ಆಗಿದ್ದು ದೊಡ್ಡ ತಪ್ಪು ಕುರುರಾಜನಿಂದ ಆಗಿಹೋಯಿತು,) ಪೋಯ್ತು (ಹೋಗಲಿ ಬಿಡಿ) ಸಂದುದು

ಮರೆಯಲ್ಕೆ ವೇೞ್ಪುದು
(ಕಳೆದುಹೋದುದನ್ನು ಮರೆತು
ಬಿಡಬೇಕು) ಅದನು ಆೞ್ವುದು
ತಪ್ಪದೆ ಪಾಂಡುರಾಜನು
ಆೞ್ದುದನ್ ಎ(ಇ)ಳೆಯಂ
-ಭೂಮಿಯನ್ನು
(ಪಾಂಡುರಾಜನು ಆಳಿದ
ಭೂಮಿಯನ್ನು ಬಿಡದೆ
ಅದನ್ನು ನೀವು ಆಳಬೇಕು)
ಮನಂ ಬಸದೆ ಬರ್ಪುದು ನೀಂ
ಎನೆ (ನಿಂ-ನೀವು ಮನಸ್ಸನ್ನು

ಬೇಸರಕ್ಕೆ ಒಳಪಡಿಸದೆ ಬರುವುದು, ಎನ್ನಲು) ಪ್ರೋಪ ಕಜ್ಜಮಂ (ಹೊರಡುವ ಕಾರ್ಯವನ್ನು)ವಿದುರನೊಳು ಅಯ್ವರುಂ ಸಮೆದು(ಏರ್ಪಡಿಸಿ) ಪೇಳ್ವುದುಂ ಆ ದ್ರುಪದಂಗೆ ರಾಜದಿಂ (ರಾಗದಿಂ- ಸಂತೋಷದಿಂದ)(ಹೊರಡುವ ವಿಷಯವನ್ನು ದ್ರುಪದನಿಗೆ ಸಂತೋಷದಿಂದ ತಿಳಿಸಿದರು)

ಪದ್ಯ-00:ಅರ್ಥ:ಕುರುರಾಜ ನಿಂದ ದೊಡ್ಡ ತಪ್ಪು ಆಗಿದೆ. ಆಗಿದ್ದು ಆಗಿ ಹೋಯಿತು- ಹೋಗಲಿ, ಕಳೆದುಹೋದುದನ್ನು ಮರೆತು ಬಿಡಬೇಕು. ಪಾಂಡುರಾಜನು ಆಳಿದ ಭೂಮಿಯನ್ನು ಬಿಡದೆ ನೀವು ಆಳಬೇಕು. ನೀವು ದೃಢಚಿತ್ತದಿಂದ ಬರಬೇಕು ಎಂದು ವಿದುರನು ಹೇಳಲು, ಪ್ರಯಾಣಮಾಡುವ

ಕಾರ್ಯವನ್ನು ವಿದುರನೊಡನೆ ಅಯ್ವರೂ ಕೂಡಿ ಆಲೋಚಿಸಿ ಹೊರಡುವ ವಿಷಯವನ್ನು ದ್ರುಪದನಿಗೆ ಸಂತೋಷದಿಂದ ತಿಳಿಸಿದರು.

ವ|| ಆತನ ಬೞಿವೞಿಗೊಟ್ಟ ಮದಕರಿ ಕರೇಣು ಜಾತ್ಯಶ್ವ ಶಶಿತಾರ ಹಾರ ವಸ್ತುಗಳಂ ಕೆಯ್ಕೊಂಡು ದ್ರುಪದಜೆಯನೊಡಗೊಂಡು ದ್ರುಪದನನಿರವೇೞ್ದು

ಕತಿಪಯ ಪ್ರಯಾಣಂಗಳಿಂ ಮದಗಜಪುರಮನೆಯ್ದೆ ವಂದಾಗಳ್-

ವಚನ:ಪದವಿಭಾಗ-

ಅರ್ಥ:ಆತನ ಬೞಿವೞಿಗೊಟ್ಟ ಮದಕರಿ ಕರೇಣು ಜಾತ್ಯಶ್ವ ಶಶಿತಾರ ಹಾರ ವಸ್ತುಗಳಂ ಕೆಯ್ಕೊಂಡು (ಅವನು/ ದ್ರುಪದನು ಬಳುವಳಿಯಾಗಿ ಕೊಟ್ಟ ಮದ್ದಾನೆ, ಹೆಣ್ಣಾನೆ, ಜಾತಿಯ

ಕುದುರೆಗಳು ಚಂದ್ರನಂತೆ
ಹೊಳೆಯುತ್ತಿರುವ ಮುತ್ತಿನ
ಹಾರ ಮೊದಲಾದ
ವಸ್ತುಗಳನ್ನು ಸ್ವೀಕರಿಸಿ)
ದ್ರುಪದಜೆಯನು ಒಡಗೊಂಡು
(ದ್ರೌಪದಿಯನ್ನು
ಒಡಗೂಡಿಕೊಂಡು)
ದ್ರುಪದನನು ಇರವೇಳ್ದು
(ಕಳುಹಿಸಲು ಸ್ವಲ್ಪ
ದೂರಬಂದ, ದ್ರುಪದನನ್ನು
ಅಲ್ಲಿಯೇ ಇರಹೇಳಿ)

ಕತಿಪಯ (ಕೆಲವು) ಪ್ರಯಾಣಂಗಳಿಂ ಮದಗಜಪುರಮನು ಎಯ್ದೆ ವಂದಾಗಳ್ (ಹಸ್ತಿನಾಪುರದ ಹತ್ತಿರ ಬಂದಾಗ)-

ವಚನ:ಅರ್ಥ:ಅವನು/ ದ್ರುಪದನು ಬಳುವಳಿಯಾಗಿ ಕೊಟ್ಟ ಮದ್ದಾನೆ, ಹೆಣ್ಣಾನೆ, ಜಾತಿಯ ಕುದುರೆಗಳು ಚಂದ್ರನಂತೆ ಹೊಳೆಯುತ್ತಿರುವ ಮುತ್ತಿನ ಹಾರ ಮೊದಲಾದ

ವಸ್ತುಗಳನ್ನು ಸ್ವೀಕರಿಸಿ ದ್ರೌಪದಿಯನ್ನು ಒಡಗೂಡಿಕೊಂಡು, ಕಳುಹಿಸಲು ಸ್ವಲ್ಪ ದೂರಬಂದ, ದ್ರುಪದನನ್ನು ಅಲ್ಲಿಯೇ ಇರಹೇಳಿ, ಕೆಲವು ದಿನದ ಪ್ರಯಾಣಗಳಿಂದ ಹಸ್ತಿನಾಪುರದ ಹತ್ತಿರ ಬಂದಾಗ-.

ಚಂ|| ಘನಪಥಮಂ ಪಳಂಚಲೆವ

ಸೌಧಚಯಂಗಳಿನಾಡುತಿರ್ಪ
ಕೇ
ತನತತಿಯಿಂ ಕರೀಂದ್ರ
ಗಳಗರ್ಜನೆಯಿಂ
ಪಟಹಪ್ರಣಾದಮಂ|
ಘನರವಮೆಂದೆ ನರ್ತಿಸುವ
ಕೇಕಿಗಳಿಂ ಕಡುರಯ್ಯಮಪ್ಪ ಹ
ಸ್ತಿನಪುರಮಂ
ಜಿತೇಂದ್ರಪುರಮಂ
ಪರಮೇಶ್ವರರಾಗಳೆಯ್ದಿದರ್||
೫||

ಪದ್ಯ-00:ಪದವಿಭಾಗ-ಅರ್ಥ: ಘನಪಥಮಂ ಪಳಂಚಿ ಅಲೆವ ಸೌಧಚಯಂಗಳಿಂ (ಆಕಾಶವನ್ನು ತಾಗುವ ಉಪ್ಪರಿಗೆಮನೆಗಳ ಸಮೂಹದಿಂದಲೂ) ಆಡುತಿರ್ಪ ಕೇತನತತಿಯಿಂ (ಚಲಿಸುತ್ತಿರುವ ಧ್ವಜಗಳಿಂದಲೂ) ಕರೀಂದ್ರಗಳ ಗರ್ಜನೆಯಿಂ

(ಶ್ರೇಷ್ಠವಾದ ಆನೆಗಳಕೊರಳಿನ ಘೀಳಿಡುವದರಿಂದಲೂ) ಪಟಹ ಪ್ರಣಾದಮಂ ಘನರವಮೆಂದೆ (ತಮಟೆಯ (ವಾದ್ಯದ) ದೊಡ್ಡ ಮೋಡದ ಗುಡುಗಿನ ಶಬ್ದವೆಂದೇ ಭಾವಿಸುವಂತೆ) ನರ್ತಿಸುವ ಕೇಕಿಗಳಿಂ (ನವಿಲುಗಳಿಂದಲೂ) ಕಡುರಯ್ಯಮಪ್ಪ (ಬಹು ರಮ್ಯವಾದ) ಹಸ್ತಿನಪುರಮಂ

ಜಿತೇಂದ್ರಪುರಮಂ
(ಇಂದ್ರನಗರಿಯನ್ನು)
ಪರಮೇಶ್ವರರರ್ ಆಗಳ್
ಎಯ್ದಿದರ್
ಪದ್ಯ-00:ಅರ್ಥ: .
ಆಕಾಶವನ್ನು ತಾಗುವ
ಉಪ್ಪರಿಗೆಮನೆಗಳ
ಸಮೂಹದಿಂದಲೂ
ಚಲಿಸುತ್ತಿರುವ
ಧ್ವಜಗಳಿಂದಲೂ ಶ್ರೇಷ್ಠವಾದ
ಆನೆಗಳ ಕೊರಳಿನ

ಘೀಳಿಡುವದರಿಂದಲೂ
ತಮಟೆಯ (ವಾದ್ಯದ) ದೊಡ್ಡ
ಶಬ್ದವನ್ನು ಮೋಡದ
ಗುಡುಗೆಂದೇ ತಿಳಿದು
ಕುಣಿದಾಡುತ್ತಿರುವ
ನವಿಲುಗಳಿಂದಲೂ ಬಹು
ರಮ್ಯವಾದ
ಇಂದ್ರನಗರಿಯನ್ನೂ
ಸೋಲಿಸಿದ ಹಸ್ತಿನಾಪುರವನ್ನು
ರಾಜಶ್ರೇಷ್ಠರಾದ ಪಾಂಡವರು
ಆಗ ಸೇರಿದರು

ವ|| ಆಗಳಾ ಪೊೞಲ
ಬೀದಿಗಳೊಳೆಲ್ಲಂ
ಗಂಧೋದಕ
ಪಂಚಗವ್ಯಂಗಳಂ ತಳಿಯಿಸಿ
ಗುಡಿಯಂ
ತೋರಣಂಗಳುಮಂ
ತುಱುಗಲುಂ ಬಂಬಲುಮಾಗೆ
ಕಟ್ಟಿಸಿ ಧೃತರಾಷ್ಟ್ರರ
ದುರ್ಯೋಧನ ಕರ್ಣ ಶಲ್ಯ
ಶಕುನಿ ನದೀತನೂಜ
ಭಾರದ್ವಾಜ

ಕೃಪಾದಿಗಳ್ವೆರಸಿದಿರ್ವಂದು
ಯಥೋಚಿತ
ಪ್ರತಿಪತ್ತಿಗಳಿಂದಯ್ವರುಮಂ
ನಿಬಿಡಾಲಿಂಗನಂಗೆಯ್ದು
ಮುಂದಿಟ್ಟೊಡಗೊಂಡು
ವಂದು ಪೊಱಲಂಪುಗಿಸಿ
ಮುನ್ನಮೆ ಸಮೆದ
ಬೀಡುಗಳೊಳ್ ಬೀಡಂ
ಬಿಡಿಸಿ ಸೂೞ್ಸೂಳೊಳೆ
ಬಿರ್ದನಿಕ್ಕಿ ವಿವಿಧ
ವಿನೋದಂಗಳಂ ತೋಱಿ

ಕೆಲವು ದಿವಸಮಿರ್ದು ದ್ರೋಣ
ಭೀಷ್ಮ ಕೃಪ ವಿದುರರ್ಕಳ್
ತಮ್ಮೊಳಾಲೋಚಿಸಿಯೆನ್ನ
ನಡಪಿದುದರ್ಕಂ
ಕೂರ್ತುದರ್ಕಂ
ಪಾಂಡುಪುತ್ರರ್ಗೆ ನೆಲನಂ
ಪಚ್ಚುಕೊಟ್ಟು ಪಟ್ಟಮಂ
ಕಟ್ಟುವೆನೆನೆ
ದುರ್ಯೋಧನನೇಗೆಯ್ದುಮೊ
ಡಂಬಡದಿರೆ ಭೀಷ್ಮರ್
ಮುನಿದು

ವಚನ:ಪದವಿಭಾಗ-ಅರ್ಥ:ಆಗಳಾ ಪೊೞಲ (ನಗರದ) ಬೀದಿಗಳೊಳು ಎಲ್ಲಂ ಗಂಧೋದಕ ಪಂಚಗವ್ಯಂಗಳಂ ತಳಿಯಿಸಿ (ಚಿಮುಕಿಸಿ) ಗುಡಿಯಂ (ಧ್ವಜಗಳನ್ನೂ) ತೋರಣಂಗಳುಮಂ ತುಱುಗಲುಂ ಬಂಬಲುಮಾಗೆ (ಗುಂಪುಗುಂಪಾಗಿ) ಕಟ್ಟಿಸಿ ಧೃತರಾಷ್ಟ್ರರ ದುರ್ಯೋಧನ

ಕರ್ಣ ಶಲ್ಯ ಶಕುನಿ
ನದೀತನೂಜ ಭಾರದ್ವಾಜ
ಕೃಪಾದಿಗಳ್ ವೆರಸಿ
ಇದಿರ್ವಂದು
(ಮೊದಲಾದವರನ್ನು
ಒಳಗೊಂಡು ಎದುರುಗೊಂಡು
ಸ್ವಾಗತಿಸಿ) ಯಥೋಚಿತ
ಪ್ರತಿಪತ್ತಿಗಳಿಂದ
ಅಯ್ವರುಮಂ (ಮರ್ಯಾದೆ-
ಸತ್ಕಾರಗಳಿಂದ ಅಯ್ದು
ಜನರನ್ನೂ) ನಿಬಿಡ

ಆಲಿಂಗನಂ ಗೆಯ್ದು
(ಗಟ್ಟಿಯಾಗಿ ಆಲಿಂಗನ
ಮಾಡಿಕೊಂಡು) ಮುಂದಿಟ್ಟು
ಒಡಗೊಂಡು ವಂದು (ಬಂದು)
ಪೊಱಲಂಪುಗಿಸಿ (
ಪಟ್ಟಣವನ್ನು ಪ್ರವೇಶಮಾಡಿ)
ಮುನ್ನಮೆ ಸಮೆದ
ಬೀಡುಗಳೊಳ್ ಬೀಡಂ ಬಿಡಿಸಿ
(ಮೊದಲೇ ಸಿದ್ಧಮಾಡಿದ್ದ
ಮನೆಗಳಲ್ಲಿ ತಂಗುವ ಹಾಗೆ
ಮಾಡಿ) ಸೂೞ್ಸೆಳೆ

(ಬಾರಿಬಾರಿಗೂ) ಬಿರ್ದನು
ಇಕ್ಕಿ (ಆತಿಥ್ಯವನ್ನು ಮಾಡಿ)
ವಿವಿಧ ವಿನೋದಂಗಳಂ
ತೋಱಿ ಕೆಲವು ದಿವಸಂ
ಇರ್ದು (ಇದ್ದು) ದ್ರೋಣ
ಭೀಷ್ಮ ಕೃಪ ವಿದುರರ್ಕಳ್
ತಮ್ಮೊಳು ಆಲೋಚಿಸಿ ಯೆನ್ನ
ನಡಪಿದುದರ್ಕಂ
ಕೂರ್ತುದರ್ಕಂ
(ಸಾಕಿದುದಕ್ಕೂ
ಪ್ರೀತಿಸಿದುದಕ್ಕೂ)

ಪಾಂಡುಪುತ್ರರ್ಗೆ ನೆಲನಂ (ರಾಜ್ಯವನ್ನು) ಪಚ್ಚುಕೊಟ್ಟು (ಹಂಚಿಕೊಟ್ಟು) ಪಟ್ಟಮಂ ಕಟ್ಟುವೆನು ಎನೆ (ಎನ್ನಲು) ದುರ್ಯೋಧನನು ಏಗೆಯ್ದುಂ ಒಡಂಬಡದಿರೆ (ಏನು ಮಾಡಿದರೂ ಒಪ್ಪದಿರಲು) ಭೀಷ್ಮರ್ ಮುನಿದು (ಸಿಟ್ಟಾಗಿ)-

ವಚನ:ಅರ್ಥ:|| ಆಗ ಪಟ್ಟಣದ ಬೀದಿಗಳಲ್ಲೆಲ್ಲ ಶ್ರೀಗಂಧದ ನೀರನ್ನೂ

ಪಂಚಗವ್ಯವನ್ನೂ (ಹಸುವಿಗೆ ಸಂಬಂಧಪಟ್ಟ ಹಾಲು ಮೊಸರು, ತುಪ್ಪ, ಗಂಜಲ, ಸಗಣಿ ಇವುಗಳನ್ನು ಮಿಶ್ರಮಾಡಿ ಶುದ್ಧಿಗಾಗಿ ಉಪಯೋಗಿಸುವ ಪದಾರ್ಥ) ಚಿಮುಕಿಸಿ ಧ್ವಜಗಳನ್ನೂ ತೋರಣಗಳನ್ನೂ ಗುಂಪುಗುಂಪಾಗಿ ಕಟ್ಟಿಸಿ ಧೃತರಾಷ್ಟ್ರನು ದುರ್ಯೋಧನ, ಕರ್ಣ, ಶಲ್ಯ, ಶಕುನಿ, ಭೀಷ್ಮ

ದ್ರೋಣ, ಕೃಪ
ಮೊದಲಾದವರನ್ನು
ಒಳಗೊಂಡು ಎದುರುಗೊಂಡು
ಸ್ವಾಗತಿಸಿ, ಬಂದು
ಯಥೋಚಿತವಾದ
ಮರ್ಯಾದೆ- ಸತ್ಕಾರಗಳಿಂದ
ಅಯ್ದು ಜನರನ್ನೂ ಗಟ್ಟಿಯಾಗಿ
ಆಲಿಂಗನ ಮಾಡಿಕೊಂಡು
ಮುಂದಿಟ್ಟುಕೊಂಡು
ಕರೆದುತಂದು ಪಟ್ಟಣವನ್ನು
ಪ್ರವೇಶಮಾಡಿದನು.

ಮೊದಲೇ ಸಿದ್ಧಮಾಡಿದ್ದ
ಮನೆಗಳಲ್ಲಿ ತಂಗುವ ಹಾಗೆ
ಮಾಡಿ ಬಾರಿಬಾರಿಗೂ
ಆತಿಥ್ಯವನ್ನು ಮಾಡಿ
ನಾನಾರೀತಿಯ
ವಿನೋದಗಳನ್ನು ತೋರಿಸಿ
ಸಂತೋಷಪಡಿಸಿದನು. ಕೆಲವು
ದಿವಸಗಳಾದ ಮೇಲೆ ದ್ರೋಣ
ಭೀಷ್ಮ ಕೃಪರುಗಳು ತಮ್ಮಲ್ಲಿ
ಆಲೋಚನೆ ಮಾಡಿ ನಾವು
ಸಾಕಿದುದಕ್ಕೂ

ಪ್ರೀತಿಸಿದುದಕ್ಕೂ (ಅನುಗುಣವಾಗಿ) ಪಾಂಡವರಿಗೆ ರಾಜ್ಯವನ್ನು ಭಾಗಮಾಡಿಕೊಟ್ಟು ಪಟ್ಟವನ್ನು ಕಟ್ಟೋಣವೆಂದು ಹೇಳಲು, ದುರ್ಯೋಧನನು ಏನು ಮಾಡಿದರೂ ಒಪ್ಪಲಿಲ್ಲ. ಭೀಷ್ಮರು ಸಿಟ್ಟಾಗಿ-

ಚಂ|| ಒಡೆಯರದೇವರೆಂದು ನಿನಗಿತ್ತೊಡೆ ಪಟ್ಟಮನುರ್ಕಿದಪ್ಪೆ ಪೇೞ್

ಪೊಡವಿಗಧೀಶರಂತವರ್ಗಳ
ಯ್ವರುಮಂ ಕ್ರಮದಿಂದೆ
ಪಟ್ಟಮಂ|
ತಡೆಯದೆ ಕಟ್ಟಿ
ಭೂತಳಮನಾಳಿಸದಿರ್ದೊಡ
ದರ್ಕೆ ಸೊರ್ಕಿ ನೀಂ
ನುಡಿಯದಿರಣ್ಣ ನಿನ್ನ
ನುಡಿಗಾಂ ತಡೆದಿರ್ಪೆನೆ ಪೇೞ್
ಸುಯೋಧನಾ|| ೬||

ಪದ್ಯ-00:ಪದವಿಭಾಗ-

ಅರ್ಥ:ರಾಜ್ಯವನ್ನು,

ಒಡೆಯರ್ ಅದು ಏವರು
(ಅಧಿಕಾರಿಗಳಾದ ಪಾಂಡವರು
ಏನಾದರೋ) ಎಂದು ನಿನಗೆ
ಇತ್ತೊಡೆ ಪಟ್ಟಮನು (ಕೊಟ್ಟರೆ
ಪಟ್ಟವನ್ನು) ಉರ್ಕಿದಪ್ಪೆ
(ಉಬ್ಬಿಹೋಗಿದ್ದೀಯೆ); ಪೇಟ್
ಪೊಡವಿಗಧೀಶರು ಅಂತ
ಅವರ್ಗಳು ಐಯ್ವರುಮಂ
ಕ್ರಮದಿಂದೆ ಪಟ್ಟಮಂ
ತಡೆಯದೆ ಕಟ್ಟಿ (ಹೇಳು
ಭೂಮಿಗೆ ಒಡೆಯರಾದ ಆ

ಆಯ್ದುಜನರಿಗೂ
ಸಾವಕಾಶಮಾಡದೆ ಕ್ರಮವಾಗಿ
ಪಟ್ಟವನ್ನು ಕಟ್ಟಿ)
ಭೂತಳಮನು
ಆಳಿಸದಿರ್ದೊಡೆ ಅದರ್ಕೆ
ಸೊರ್ಕಿ (ರಾಜ್ಯವನ್ನೂ
ಆಳಿಸದೆ ಇದ್ದುದ್ದರಿಂದ, ಅದಕ್ಕೆ
ಸೊಕ್ಕಿ) ನೀಂ ನುಡಿಯದಿರಣ್ಣ
(ನೀನು
ಮಾತನಾಡಬೇಡವೋ) ನಿನ್ನ
ನುಡಿಗೆ ಆಂ ತಡೆದಿರ್ಪೆನೆ

ಪೇಟ್ (ನಿನ್ನ ಮಾತು ಕೇಳಿ ನಾನು ತಡೆಯುವೆನೇ ಹೇಳು) ಸುಯೋಧನಾ, ಎಂದನು ಭೀಷ್ಮ.

'*ಪದ್ಯ-00:ಅರ್ಥ:*

‘ಒಡೆಯರಾದ ಪಾಂಡವರು ಏನಾದರೋ ಎಂದು ನಿನಗೆ ಪಟ್ಟವನ್ನು ಕೊಟ್ಟರೆ ಕೊಬ್ಬಿಹೋಗಿದ್ದೀಯೆ. ಹೇಳು ಭೂಮಿಗೆ ಒಡೆಯರಾದ ಆ ಆಯ್ದುಜನರಿಗೂ

ಸಾವಕಾಶಮಾಡದೆ ಕ್ರಮವಾಗಿ ಪಟ್ಟವನ್ನು ಕಟ್ಟಿ ರಾಜ್ಯವನ್ನೂ ಆಳಿಸದೆ ಇದ್ದುದ್ದರಿಂದ, ಅದಕ್ಕೆ ಸೊಕ್ಕಿ ನೀನು ಮಾತನಾಡಬೇಡವ್ರೋ, ನಿನ್ನ ಮಾತು ಕೇಳಿ ನಾನು ತಡೆಯುವೆನೇ ಹೇಳು ಸುಯೋಧನಾ,' ಎಂದನು ಭೀಷ್ಮ.

ಕ್ರಮಮಱಿದೆನ್ನ ಕೊಟ್ಟುದನೆ ಕೊಂಡು ಮನೋಮುದದಿಂದೆ

ಬಾಬ್ದುದಂ
ತವರಿವರೆಲ್ಲರುಂ ಪಮನದಲ್ಲದೆ
ಮಾರ್ಮಲೆದುರ್ಕಿ
ಭೀಮನೊಳ್|
ಪಮರದೆ ಗರ್ವದಿಂ
ಪೊಣರಲಾರ್ಪಿರೆ
ಗಾವಿಲರಿನ್ನುಮೆಲ್ಲರಂ
ಯಮಸುತನುಂ
ಸುರೇಂದ್ರಸುತನುಂ
ಪೊಸದೀಗಳೆ ಮುಕ್ಕಿ
ತೋಱಿರೇ|| ೭||

ಪದ್ಯ-00:ಪದವಿಭಾಗ-ಅರ್ಥ:ಕ್ರಮಮಱಿದು ಎನ್ನ ಕೊಟ್ಟುದನೆ ಕೊಂಡು ('ಕ್ರಮವರಿತು ಯಾವುದು ಸರಿ ಎಂಬುದುನ್ನು ತಿಳಿದುಕೊಂಡು) ಮನೋಮುದದಿಂದೆ (ಮನಸ್ಸಂತೋಷದಿಂದ) ಬಾೞ್ವುದು ಅಂತು, ಅವರಿವರೆಲ್ಲರುಂ (ನಾನು ಕೊಟ್ಟುದುದನ್ನು ಪಡೆದು ಬಾಳುವುದು); ಸಮನ

ಅದಲ್ಲದೆ (ಸಮನ -ಇಬ್ಬರೂ ಸಮಾನ); ಅದಲ್ಲದೆ ಮಾರ್ಮಲೆದು ಉರ್ಕಿ (ವಿರೋಧಿಸಿ ಉಕ್ಕಿ- ಮಿತಿಮೀರಿ) ಭೀಮನೊಳ್ ಸಮರದೆ ಗರ್ವದಿಂ ಪೊಣರಲ್ ಆರ್ಪಿರೆ (ಯುದ್ಧದಲ್ಲಿ ಗರ್ವದಿಂದ ಹೊರಾಡಲು ಸಮರ್ಥರೇ) ಗಾವಿಲರು ಇನ್ನುಂ (ನೀವು ದಡ್ಡರು! ಇನ್ನು

ಹೋರಾಡಿದರೆ,) ಎಲ್ಲರಂ (ಎಲ್ಲರನ್ನೂ) ಯಮಸುತನುಂ ಸುರೇಂದ್ರಸುತನುಂ ಪೊಸದು ಈಗಳೆ ಮುಕ್ಕಿ ತೋಱಿರೇ (ಧರ್ಮರಾಜನೂ ಅರ್ಜುನನೂ ಈಗಲೇ ನಿಮ್ಮನ್ನು ಹೊಸೆದು ತಿಂದು ತೋರಿಸಲಾರರೇ?).

ಪದ್ಯ-00:ಅರ್ಥ:

ನಾನು(ಬೀಷ್ಮ) ‘ಕ್ರಮವರಿತು ಯಾವುದು ಸರಿ ಎಂಬುದುನ್ನು

ತಿಳಿದುಕೊಂಡು ನಾನು ಕೊಟ್ಟುದುದನ್ನು ಪಡೆದು ಮನಸ್ಸಂತೋಷದಿಂದ ಬಾಳುವುದು; ಹಾಗೆ ಅವರು ಇವರು (ಪಾಂಡವರು ಕೌರವರು) ಇಬ್ಬರೂ ಸಮಾನ, ಅದನ್ನು ತಿಳಿಯದೆ ವಿರೋಧಿಸಿ ಮಿತಿಮೀರಿ, ಭೀಮನನ್ನು ಯುದ್ಧದಲ್ಲಿ ಅಹಂಕಾರದಿಂದ ಕಾದಬಲ್ಲಿರಾ? ನೀವು ದಡ್ಡರು! ಇನ್ನು ಹೋರಾಡಿದರೆ,

ಎಲ್ಲರನ್ನೂ ಧರ್ಮರಾಜನೂ ಅರ್ಜುನನೂ ಈಗಲೇ ನಿಮ್ಮನ್ನು ಹೊಸೆದು ತಿಂದು ತೋರಿಸಲಾರರೇ? ಎಂದನು ಭೀಷ್ಮ.

ವ|| ಅದಲ್ಲದೆಯುಂ ಪಾಂಡುಪುತ್ರರಪ್ಪೊಡೆ ಪಾಂಡುರಾಜಂಗೆ ಬೆಸಕೆಯ್ಯದುದನೆನಗೆ ಬೆಸಕೆಯ್ವರೆನ್ನೆಂದುದಂ ವಿಱುವರಲ್ಲರಾನವರ್ಗೆ

ಪಟ್ಟಮಂ ಕಟ್ಟಿ ನೆಲನಂ

ಪಚ್ಚುಕೊಡುವಾಗಳಡ್ಡಂ ಬರ್ಪ

ಗಂಡರಂ ನೋೞ್ಪೆನೆಂದು

ಬೀಷ್ಮರ್ ಬಗ್ಗಿಸಿದೊಡೆ

ದುರ್ಯೋಧನನತಿ

ಸಂಭ್ರಮಾಕುಳಿತನಾಗಿ

ನೀಮೆಂದುದನೆಂದು

ಬಾೞ್ವೆನೆಂದೊಡಪ್ಪುದೆಂದು-

ವಚನ:ಪದವಿಭಾಗ-

ಅರ್ಥ:ಅದಲ್ಲದೆಯುಂ

ಪಾಂಡುಪುತ್ರರು ಅಪ್ಪೊಡೆ

ಪಾಂಡುರಾಜಂಗೆ
ಬೆಸಕೆಯ್ಯದುದನು ಎನಗೆ
ಬೆಸಕೆಯ್ವರು
(ಪಾಂಡವರಾದರೋ ತಮ್ಮ
ತಂದೆಯಾದ
ಪಾಂಡುರಾಜನಿಗೆ
ವಿಧೇಯರಾಗಿ
ಮಾಡದಿದ್ದುದನ್ನು ನನಗೆ
ಮಾಡುತ್ತಾರೆ) ಎನ್ನೆಂದುದಂ
ವಿಱುವರಲ್ಲರ್ (ನಾನು
ಹೇಳಿದುದನ್ನು

ಮೀರುವವರಲ್ಲ) ಆನು
ಅವರ್ಗೆ ಪಟ್ಟಮಂ ಕಟ್ಟಿ
ನೆಲನಂ (ರಾಜ್ಯವನ್ನು)
ಪಚ್ಚುಕೊಡುವಾಗಳು
(ಹಂಚಿಕೊಡುವಾಗ) ಅಡ್ಡಂ
ಬರ್ಪ ಗಂಡರಂ ನೋೞ್ಪೆನು
(ಅಡ್ಡ ಬರುವ ಶೂರರನ್ನು
ನೋಡಿಯೆ ಬಿಡುತ್ತೇನೆ),
ಎಂದು ಬೀಷ್ಮರ್ ಬಗ್ಗಿಸಿದೊಡೆ
(ಎಂದು ಭೀಷ್ಮರು ಗದರಿಸಲು)
ದುರ್ಯೋಧನನು ಅತಿ

ಸಂಭ್ರಮಾಕುಳಿತನಾಗಿ (ಬಹಳ ವ್ಯಥೆಯಿಂದ ಗಾಬರಿಗೊಂಡು) ನೀಮೆಂದುದನು ಎಂದು ಬಾಳ್ವೆನೆಂದೊಡೆ ಅಪ್ಪುದು ಎಂದು(ನೀವು ಹೇಳಿದುದನ್ನೇ ಒಪ್ಪಿ ಬಾಳುತ್ತೇನೆ ಎಂದು ಒಪ್ಪಿಕೊಂಡನು)-

ವಚನ:ಅರ್ಥ:ಅದಲ್ಲದೆ ಪಾಂಡವರಾದರೋ (ತಮ್ಮ ತಂದೆಯಾದ) ಪಾಂಡುರಾಜನಿಗೆ

ವಿಧೇಯರಾಗಿ
ಮಾಡದಿದ್ದುದನ್ನು ನನಗೆ
ಮಾಡುತ್ತಾರೆ. ನಾನು
ಹೇಳಿದುದನ್ನು
ಮೀರುವವರಲ್ಲ. ನಾನು
ಅವರಿಗೆ ಪಟ್ಟವನ್ನೂ ಕಟ್ಟಿ
ರಾಜ್ಯವನ್ನು ಹಂಚಿಕೊಡುವಾಗ
ಅಡ್ಡ ಬರುವ ಶೂರರನ್ನು
ನೋಡಿಯೆ ಬಿಡುತ್ತೇನೆ ಎಂದು
ಭೀಷ್ಮರು ಗದರಿಸಲು,
ದುರ್ಯೋಧನನು ಬಹಳ

ವ್ಯಥೆಯಿಂದ ಗಾಬರಿಗೊಂಡು ನೀವು ಹೇಳಿದುದನ್ನೇ ಒಪ್ಪಿ ಬಾಳುತ್ತೇನೆ ಎಂದು ಒಪ್ಪಿಕೊಂಡನು.

ಮ|| ಧರಣೀನಾರಿಗೆ ಪಾಂಡುವಿಂ ಬೞಿಯಮಿಲ್ಲಾರುಂ ಪೆಱರ್ ಗಂಡರಂ ತಿರಲೇವಂ ಬಡೆದಿರ್ದೊಡಱ್ದು ಕಿಡುಗುಂ ಸಪ್ತಾಂಗವಮೀರಾಜಕ|

ಕ್ಕರಸಂ ಧರ್ಮಜನಕ್ಕುಮೆಂದು ನಯದಿಂ ನಿಶ್ಚೈಸಿ ಕಲ್ಯಾಣ ಕಾರ್ಯರತರ್ ಕಟ್ಟಿದರಾ ಯುಷ್ಠಿರನೃಪಂಗುತ್ಸಾಹದಿಂ ಪಟ್ಟಮಂ|| ೮||

ಪದ್ಯ-00:ಪದವಿಭಾಗ-ಅರ್ಥ:ಧರಣೀನಾರಿಗೆ ಪಾಂಡುವಿಂ ಬೞಿಯಂ ಇಲ್ಲ ಆರುಂ ಪೆಱರ್ ಗಂಡರ್ (ಭೂದೇವಿಗೆ ಪಾಂಡುರಾಜನಾದ ಮೇಲೆ

ಬೇರೆ ಯಾರೂ ಒಡೆಯರು/
ರಾಜರು ಇಲ್ಲ.) ಅಂತಿರಲ್
ಏವಂಬಡೆದೆ ಇರ್ದೊಡೆ
(ಹೊಂದಾಣಿಕೆ ಇಲ್ಲದೆ
ಮಾತ್ಸರ್ಯಪಟ್ಟರೆ) ಅೞ್ದು
ಕಿಡುಗುಂ ಸಪ್ತಾಂಗಂ (ರಾಜ್ಯದ
ಸಪ್ತಾಂಗಗಳೂ
ನಾಶವಾಗುತ್ತವೆ.) ಈ ರಾಜಕಕ್ಕೆ
ಅರಸಂ ಧರ್ಮಜನು ಅಕ್ಕುಂ
ಎಂದು ನಯದಿಂ (ಈ ರಾಜ್ಯಕ್ಕೆ
ಧರ್ಮರಾಯನು ರಾಜನಾಗಲಿ

ಎಂದು ನಯದಿಂ-ರಾಜನೀತಿಗೆ
ಅನುಗುಣವಾಗಿ) ನಿಶ್ಚೈಸಿ
ಕಲ್ಯಾಣ ಕಾರ್ಯರತರ್
(ರಾಜ್ಯದ ಕಲ್ಯಾಣಚಿಂತಕರು)
ಕಟ್ಟಿದರು ಆ ಯುಷ್ಠಿರನೃಪಂಗೆ
ಉತ್ಸಾಹದಿಂ ಪಟ್ಟಮಂ|
ಪದ್ಯ-00:ಅರ್ಥ: ಈ
ಭೂದೇವಿಗೆ
ಪಾಂಡುರಾಜನಾದ ಬಳಿಕ
ಬೇರೆ ಯಾರೂ ಒಡೆಯರು/
ರಾಜರು ಇಲ್ಲ. ಹಾಗಿರುವಾಗ

ನಿಮ್ಮಲ್ಲಿ ಹೊಂದಾಣಿಕೆ ಇಲ್ಲದೆ ಮಾತ್ಸರ್ಯಪಟ್ಟರೆ ರಾಜ್ಯದ ಸಪ್ತಾಂಗಗಳೂ ನಾಶವಾಗುತ್ತವೆ. ಈ ರಾಜ್ಯಕ್ಕೆ ಧರ್ಮರಾಯನು ರಾಜನಾಗಲಿ ಎಂದು ರಾಜನೀತಿಗನುಗುಣವಾಗಿ ರಾಜ್ಯದ ಕಲ್ಯಾಣಚಿಂತಕರಾದ ಭೀಷ್ಮಾದಿಗಳು ಆ ಧರ್ಮರಾಜನಿಗೆ

ಉತ್ಸಾಹದಿಂದ ಪಟ್ಟವನ್ನು ಕಟ್ಟಿದರು.

ವ|| ಕಟ್ಟಿ ಸೇತುಬಂಧಮಂ ತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀಮಾಳ್ವುದು, ಮೂಡಣ ಬಡಗಣ ನೆಲನಂ ದುರ್ಯೋಧನನಾಳ್ವುದೆಂದು ಧೃತರಾಷ್ಟ್ರಂ ಪೂರ್ವಸ್ಥಿತಿಳ್ ಪಚ್ಚುಕೊಟ್ಟು ದುರ್ಯೋಧನನಪ್ಪೊಡೆ

ಪೊಲ್ಲಮಾನಸಂ ನೀಮುಂ
ತಾಮುಮೊಂದೆಡೆಯೊಳಿರೆ
ಕಿಸುರುಂ ಕಲಹಮುಮೆಂದುಂ
ಕುಂದದದು
ಕಾರಣದಿಂದಿಲ್ಲಿಗಱುವತ್ತು
ಯೋಜನದೊಳಿಂದ್ರಪ್ರಸ್ಥಮೆಂ
ಬುದು ಪೊೞಲಲ್ಲಿಗೆ ಪೋಗಿ
ಸುಖದಿಂ ರಾಜ್ಯಂಗೆಯ್ಯುತ್ತಿರಿ
ಮೆಂಬುದುಮಂತೆಗೆಯ್ವೆಮೆಂ
ದು ಸಮಸ್ತ ಪರಿವಾರ
ಪರಿವೃತರಾಗಿ-

ವಚನ:ಪದವಿಭಾಗ-ಅರ್ಥ:ಕಟ್ಟಿ ಸೇತುಬಂಧಮಂತಾಗೆ ಗಂಗಾನದಿಯ ತೆಂಕಣ ಪಡುವಣ ನೆಲನಂ ನೀಂ ಆಳ್ವುದು (ಪಟ್ಟಕಟ್ಟಿದ ನಂತರ, ದಕ್ಷಿಣ ಪಶ್ಚಿಮಭಾಗದ ಭೂಮಿಯನ್ನು ನೀವು-ಪಾಂಡವರು ಆಳುವುದು)) ಮೂಡಣ ಬಡಗಣ ನೆಲನಂ ದುರ್ಯೋಧನನು ಆಳ್ವುದೆಂದು

(ಪೂರ್ವೋತ್ತರಭಾಗದ
ನೆಲವನ್ನು
ದುರ್ಯೋಧನನಾಳತಕ್ಕದ್ದು
ಎಂದು) ಧೃತರಾಷ್ಟ್ರಂ
ಪೂರ್ವಸ್ಥಿತಿಳ್ ಪಚ್ಚುಕೊಟ್ಟು
(ತರಾಷ್ಟ್ರನು ಮೊದಲಿನ
ರೀತಿಯಲ್ಲಿಯೇ
ಭಾಗಮಾಡಿಕೊಟ್ಟು)
ದುರ್ಯೋಧನನು ಅಪ್ಪೊಡೆ
ಪೊಲ್ಲಮಾನಸಂ
(ದುರ್ಯೋಧನನಾದರೆ

ದುರ್ಬುದ್ಧಿಯವನು.)
ನೀಮುಂ ತಾಮುಂ
ಒಂದೆಡೆಯೊಳು ಇರೆ ಕಿಸುರುಂ
ಕಲಹಮುಂ (ಅಸೂಯೆ
ಕಲಹವು) ಎಂದುದುಂ
ಕುಂದದದು (ತಪ್ಪುವುದಿಲ್ಲ)
ಕಾರಣದಿಂದ ಇಲ್ಲಿಗೆ
ಅಱುವತ್ತು (೬೦)
ಯೋಜನದೊಳು
ಇಂದ್ರಪ್ರಸ್ಥಮೆಂಬುದು
ಪೊೞಲ್ (ನಗರ) ಅಲ್ಲಿಗೆ

ಪೋಗಿ ಸುಖದಿಂ ರಾಜ್ಯಂಗೆಯ್ಯುತ್ತಿರಿ (ರಾಜ್ಯವಾಳುತ್ತಿರಿ) ಮೆಂಬುದುಂ ಅಂತೆ ಗೆಯ್ವೆಮೆಂದು (ಹಾಗೆಯೇ ಮಾಡುತ್ತೇವೆ ಎಂದು) ಸಮಸ್ತ ಪರಿವಾರ ಪರಿವೃತರಾಗಿ-

ವಚನ:ಅರ್ಥ:ಪಟ್ಟಕಟ್ಟಿದ ನಂತರ,ರಾಮಸೇತುವಿನಿಂದ ಹಿಡಿದು ಗಂಗಾನದಿಯ ದಕ್ಷಿಣ ಪಶ್ಚಿಮಭಾಗದ ಭೂಮಿಯನ್ನು

ನೀವು-ಪಾಂಡವರು ಆಳುವುದು. ಪೂರ್ವೋತ್ತರಭಾಗದ ನೆಲವನ್ನು ದುರ್ಯೋಧನನಾಳತಕ್ಕದ್ದು ಎಂದು ಧೃತರಾಷ್ಟ್ರನು ಮೊದಲಿನ ರೀತಿಯಲ್ಲಿಯೇ ಭಾಗಮಾಡಿಕೊಟ್ಟು; ದುರ್ಯೋಧನನಾದರೆ ದುರ್ಬುದ್ಧಿಯವನು. ನೀವೂ ಅವರೂ ಒಂದೇ ಕಡೆ ಇದ್ದರೆ

ಅಸೂಯೆ ಕಲಹವು ಎಂದೂ ತಪ್ಪುವುದಿಲ್ಲ. ಆದ ಕಾರಣದಿಂದ ಇಲ್ಲಿಗೆ ಅರವತ್ತುಯೋಜನ ದೂರದಲ್ಲಿ ಇಂದ್ರಪ್ರಸ್ಥವೆಂಬ ಪಟ್ಟಣವಿದೆ. ಅಲ್ಲಿಗೆ ಹೋಗಿ ಸುಖವಾಗಿ ರಾಜ್ಯವಾಳುತ್ತಿರಿ ಎಂದನು. ಹಾಗೆಯೇ ಮಾಡುತ್ತೇವೆ ಎಂದು ಪಾಂಡವರು ಸಮಸ್ತ ಪರಿವಾರ ಸಹಿತರಾಗಿ-

ಮ|| ಒಡವಪ್ರ್ರುಗ್ರ ಮದೇಭ
ವಾಜಿ ಗಣಿಕಾನರ್ಘ್ಯಾದಿ
ರತ್ನಂಗಳೊಳ್
ತೊಡರ್ದೊಪ್ಪುತ್ತಿರೆ ಲಕ್ಷ್ಮಿ ದಂತಿ
ತುರಗಂ ಶ್ರೀ
ದಿವ್ಯಕಾಂತಾಜನಂ|
ತೊಡೆವೆಂಬೊಂದುಮನಾ
ಸುರಾಸುರರಿನಾ
ಗೋವಿಂದನಿಂ ಮುನ್ನೆ ಕೋ
ಳ್ಪಡೆದಂಭೋನಿಧಿಯಂತೆ
ಬಂದು ನೆಗೞ್ದಿಂದ್ರಪ್ರಸ್ಥಮಂ

ಧರ್ಮಜಂ|| ೯||

ಪದ್ಯ-00:ಪದವಿಭಾಗ-ಅರ್ಥ:(ಪಾಂಡವರ) ಒಡವರ್ಪುದು (ಜೊತೆಯಲ್ಲಿಯೇ ಬರುತ್ತಿದ್ದ) ಉಗ್ರ ಮದೇಭ ವಾಜಿ ಗಣಿಕಾ ಅನರ್ಘ್ಯ ಆದಿ ರತ್ನಂಗಳೊಳ್ ತೊಡರ್ದು (ಇವೆಲ್ಲವೂ ಜೊತೆಯಲ್ಲಿ ಸೇರಿ) ಒಪ್ಪುತ್ತಿರೆ (ಶೋಭಿಸುತ್ತಿರಲು) ಲಕ್ಷ್ಮಿ ದಂತಿ ತುರಗಂ ಶ್ರೀ

ದಿವ್ಯಕಾಂತಾಜನಂ (ಲಕ್ಷ್ಮಿ,
ಐರಾವತ, ಉಚ್ಚೈ ಶ್ರವಸ್ಸು,
ದೇವದಾನವರಿಂದಲೂ)
ತೊಡೆವು
(ಆಭರಣಗಳಿಂದಲೂ) ಎಂಬ
ಒಂದುಮನು (ಎನ್ನುವ
ಎಲ್ಲವನ್ನೂ) ಆ ಸುರ
ಅಸುರರಿನ ಆ ಗೋವಿಂದನಿಂ
ಮುನ್ನೆ ಕೋಳ್ಪಡೆದ
(ದೇವದಾನವರಿಂದಲೂ
ವಿಷ್ಣುವಿನಿಂದಲೂ ಸಮುದ್ರ

ಮಥನದಲ್ಲಿ
ಸೂರೆಯಾಗುವುದಕ್ಕೂ
ಮೊದಲಿದ್ದ)
ಅಂಭೋನಿಧಿಯಂತೆ
(ಸಮುದ್ರದಂತೆ) ಬಂದು
ನೆಗಟ್ದಿ ಇಂದ್ರಪ್ರಸ್ಥಮಂ
(ಪ್ರಸಿದ್ಧವಾದ
ಇಂದ್ರಪ್ರಸ್ಥಪುರವನ್ನು)
ಧರ್ಮಜಂ(ಧರ್ಮರಾಯನು,-
ಸೇರಿದನು)

ಪದ್ಯ-00:ಅರ್ಥ:
ಪಾಂಡವರ ಜೊತೆಯಲ್ಲಿಯೇ ಬರುತ್ತಿದ್ದ ಭಯಂಕರವಾದ ಆನೆ, ಕುದುರೆ, ವೇಶ್ಯೆಯರು, ವಿಶೇಷ ಬೆಲೆಯುಳ್ಳ ರತ್ನ ಇವೆಲ್ಲವೂ ಜೊತೆಯಲ್ಲಿ ಶೋಭಿಸುತ್ತಿರಲು ಆ ಪಾಂಡವರು ದೇವದಾನವರಿಂದಲೂ ಲಕ್ಷ್ಮಿ, ಐರಾವತ, ಉಚ್ಚೈ ಶ್ರವಸ್ಸು, ಅಪ್ಸರಸ್ತ್ರೀಯರು, ಚಿಂತಾಮಣಿ

ಮೊದಲಾದವುಗಳು ಸಮುದ್ರ ಮಥನದಲ್ಲಿ ಸೂರೆಯಾಗುವುದಕ್ಕೆ ಮೊದಲಿದ್ದ ಸಮುದ್ರದ ಹಾಗೆ ಸಂಪೂರ್ಣವಾದ ಐಶ್ವರ್ಯದಿಂದ ಬಂದು ಧರ್ಮರಾಯನು ಪ್ರಸಿದ್ಧವಾದ ಇಂದ್ರಪ್ರಸ್ಥಪುರವನ್ನು ಸೇರಿದನು.

ಮಟ್ಟರಗಳೆ|| ಎಯ್ದುವುದುಂ ತತ್ಪುರದುಪವನಂಗಳವಿರಳ

ಮಳಯಾನಿಳಕಂಪಿತಂಗ|

ಎಯ್ದುವುದುಂ (ನಗರಕ್ಕೆ-ಸೇರುತ್ತಲೂ) ತತ್ಪುರದ (ತತ್-ಆ ಪುರದ) ಉಪವನಂಗಳ ಅವಿರಳ (ದಟ್ಟವಾದ); ಮಳಯಾನಿಳ (ಮಲಯಮಾರುತದ)

ಳ ವಿರಳ ಕುಸುಮಾವಳಿ

ಕಂಪುವೇರೆ ಸೊಗಯಿಪ ಕಿಱು

ಮಿಡಿಗಳೊಳೊಪ್ಪಿ ತೋರೆ|

ಕಂಪಿತಂಗಳ ವಿರಳ ಕುಸುಮ

ಆವಳಿ ಕಂಪುವೇರೆ (ರಾಶಿ

ಹೂವುಗಳ ಪರಿಮಳವನ್ನು

ಹೊರಲು) ಸೊಗಯಿಪ

(ಸುಂದರ) ಕಿಱು

ಮಿಡಿಗಳೊಳು(ಸಣ್ಣಹಿಚುಗಳ

ಲ್ಲಿ) ಒಪ್ಪಿ ತೋರೆ (ಚನ್ನಾಗಿ

ಕಾಣಲು)

ಲವಣಾಬ್ಧಿಯೆ

ಬಳಸಿದುದೆನಿಸುವಗಱ

ಬಳಸೆಸೆದಿರೆ ಕೋಂಟೆಯ ಚೆಲ್ವು ಪೊಗಱ|

ಲವಣಾಬ್ಧಿಯೆ ಬಳಸಿದುದು ಎನಿಸುವ ಅಗಱ (ಅಗಳ) ಬಳಸೆಇ ಎಸೆದಿರೆ (ಉಪ್ಪಿನ ಸಮುದ್ರವೇ ಸುತ್ತುವರಿದಿದೆಯೋ ಎಂಬಂತಿದ್ದ ಕಂದಕಗಳು ಸುತ್ತಿ ಶೋಬಿಸುತ್ತಿರಲು) ಕೋಂಟೆಯ ಚೆಲ್ವು ಪೊಗಱ|

ಲರಿದೆನಿಸಿರೆ ನೆಗೆದುದು ನಭಮನೆಯ್ದೆ ಮಿಳಿರ್ವ ಪತಾಕಾವಳಿ ದಿವಮನೆಯ್ದೆ

ಪೊಗೞಲು ಅರಿದು ಎನಿಸಿರೆ (ಕೋಟೆಯ ಸೌಂದರ್ಯವು ಹೊಗಳಲು ಅಸಾಧ್ಯವೆನಿಸಿರಲು)
ನೆಗೆದುದು ನಭಮನು ಎಯ್ದೆ (ಆಕಾಶಕ್ಕೆ ಮೇಲಕ್ಕೆದ್ದು)
ಮಿಳಿರ್ವ (ಅಲುಗುವ) ಪತಾಕಾವಳಿ ದಿವಮನು

ಐಯ್ದೆ (ಅಲುಗಾಡುತ್ತಿರುವ ಬಾವುಟಗಳ ಸಾಲು ಸ್ವರ್ಗದವರೆಗೂ ಹೋಗಿದ್ದುವು.)

ಬಳಸಿದ ಕೆಂಬೊನ್ನ ಮದಿಲ್ಗಳೊಳಗೆ ಮಣಿಮಯ ಭವನಾವಳಿ ತೊಳಗಿ ಬೆಳಗೆ

ಬಳಸಿದ ಕೆಂಬೊನ್ನ ಮದಿಲ್ಗಳೊಳಗೆ(ಸುತ್ತುವರಿದ ಕೆಂಪು ಚಿನ್ನದಿಂದ ಮಾಡಿದ ಕೋಟೆಯ ಗೋಡೆಗಳೊಳಗೆ)

ಮಣಿಮಯ ಭವನಾವಳಿ
ತೊಳಗಿ ಬೆಳಗೆ
(ರತ್ನಖಚಿತವಾದ
ಅರಮನೆಗಳ ಸಮೂಹಗಳು
ತೊಳಗಿ ಬೆಳಗುತ್ತಿದ್ದುವು)

ರಸ ರಸದ ಬಾವಿ ಮನೆ ಮನೆಗೆ
ಬೇರೆ ಕಿಸುಗಲ್ಲಗಳ ರಜದ
ಕಣಿವೆರಸು ತೋರೆ

ರಸ ರಸದ ಬಾವಿ ಮನೆ
ಮನೆಗೆ ಬೇರೆ (ಬೇರೆ ಬೇರೆ
ರಸಯುಕ್ತ ಬಾವಿಗಳು

ಪ್ರತಿಮನೆಯಲ್ಲೂ) ಕಿಸುಗಲ್ಲಗಳ
ರಜದ ಕಣಿವೆರಸು
(ಕೆಂಪುರತ್ನಗಗಳ ಧೂಳಿನ
ಗಣಿಯಿಂದ ಕೂಡಿ)

ತೋರೆ ಸುರುಕುಜದ
ನೆೞಲೊಳಂಗಣದೊಳೇನುಮ
ಲಪಿಲ್ಲದೆ ಕಟ್ಟಿರೆ ಕಾಮಧೇನು

ತೋರೆ ಸುರುಕುಜದ
ನೆೞಲೊಳು (ಕಲ್ಪವೃಕ್ಷದ
ನೆರಳಿನಲ್ಲಿ ಕಾಮಧೇನುವು
ತೋರುತ್ತಿತ್ತು) ಆಂಗಣದೊಳು

ಏನುಂ ಅಲಪಿಲ್ಲದೆ

(ಅಲೆದಾಟವಿಲ್ಲದೆ) ಕಟ್ಟಿರೆ

(ಹಸುವನ್ನು ಕಟ್ಟಿರಲು)

ಪರದರ ಪಾರ್ವರ ಸೂಳೆಯರ

ಮನೆಗಳವು ಧನದನ

ಮನೆಯುಮನೇಱಿಪ

ಮನೆಗಳವು

ಪರದರ ಪಾರ್ವರ ಸೂಳೆಯರ

ಮನೆಗಳವು ಧನದನ

(ಕುಬೇರನ) ಮನೆಯುಮನು

ಏಱಿಪ (ಹೆಚ್ಚಿನ)

ಮನೆಗಳವು(ವ್ಯಾಪಾರಿಗಳ,
ಬ್ರಾಹ್ಮಣರ, ವೇಶ್ಯಾಜನರ
ಮನೆಗಳು ಕುಬೇರನ ಮನೆಗೂ
ಹೆಚ್ಚಿನವು)

ಪೊಱಲ ಬೆಡಂಗಂ ಮೆಚ್ಚಿ
ಮೆಚ್ಚಿ ನೋಡಿ ದಿವಿಜೇಂದ್ರ
ವಿಳಾಸದೊಳಿಂತು ಕೂಡಿ

ಪೊಱಲ ಬೆಡಂಗಂ ಮೆಚ್ಚಿ
ಮೆಚ್ಚಿ ನೋಡಿ ದಿವಿಜೇಂದ್ರ
ವಿಳಾಸದೊಳು ಇಂತು
ಕೂಡಿ(ಆ ಪಟ್ಟಣದ ಬೆಡಗನ್ನು

ವಿಶೇಷವಾಗಿ ಮೆಚ್ಚಿ
ದೇವೇಂದ್ರನ ವೈಭವದಿಂದ
ಹೀಗೆ ಕೂಡಿ ಪಾಂಡವರು)

ಪರಿತಂದಾಗಳ್

ಪಿರಿದೊಸಗೆವೆರಸಿ

ಪುರಕಾಂತೆಯರಾದರದಿಂದೆ

ಪರಸಿ

ಪರಿತಂದಾಗಳ್
(ನಡೆದುಬಂದಾಗ)
ಪಿರಿದು(ಹಿರಿದು) ಒಸಗೆವೆರಸಿ
(ಉತ್ಸವದೊಡನೆ)

ಪುರಕಾಂತೆಯರು ಆದರದಿಂದೆ

ಪರಸಿ(ಪಟ್ಟಣದ ಸ್ತ್ರೀಜನರು

ವಿಶೇಷ ಸಂತೋಷದಿಂದ

ಕೂಡಿ ಆದರದಿಂದ

ಹರಸಿದರು.)

ಸೂಸುವ ಶೇಷಾಕ್ಷತಮಂ

ಸಮಂತು ಪಿರಿದುಂ ಮನ

ಸಂತಸದಿಂದಮಾಂತು

ಸೂಸುವ ಶೇಷಾಕ್ಷತಮಂ

ಸಮಂತು ಪಿರಿದುಂ ಮನ

ಸಂತಸದಿಂದಂ ಆಂತು

(ಅವರು ಚೆಲ್ಲುವ ಮಂತ್ರಾಕ್ಷತೆಯನ್ನೂ ಬಹಳ ಮನಸ್ಸಂತೋಷದಿಂದ ಸ್ವೀಕರಿಸಿ)

ಕರುಮಾಡಮನಾದರದಿಂದ ಮೇಱ ಕೆಲದೊಳ್ಮಾಡಂಗಳನಱದು ತೋಱ

ಕರುಮಾಡಮನು (ಉಪ್ಪರಿಗೆಯನ್ನು)ಆದರದಿಂದಂ ಏಱ (ಹತ್ತಿ) ಕೆಲದೊಳ್

ಮಾಡಂಗಳನು ಅಱಿದು

ತೋಱಿ(ಪಕ್ಕದಲ್ಲಿದ್ದ

ಮಾಡಗಳನ್ನು ತೋರಿಸಿದಾಗ

ಪರಿಚಯಮಾಡಿಕೊಂಡರು)

ಮಣಿ ಕನಕ ರಜತ ವಸ್ತುಗಳನಿತ್ತು ಬೇಡಿದ ನಾಡುಗಳನವಯವದಿಂದಮಿತ್ತು

ಮಣಿ ಕನಕ ರಜತ

ವಸ್ತುಗಳನಿತ್ತು ಬೇಡಿದ

ನಾಡುಗಳನು

ಅವಯವದಿಂದಂ ಇತ್ತು (ಆರ್ಥಿಗಳು ಬೇಡಿದ ಚಿನ್ನ, ಬೆಳ್ಳಿ, ರತ್ನಖಚಿತವಾದ ವಸ್ತುಗಳನ್ನೂ ಭೂಮಿಗಳನ್ನೂ ಶ್ರಮವಿಲ್ಲದೆ ದಾನಮಾಡಿ-.

ಕರಿ ತುರಗ ಬಲಂಗಳ್ ಪೆರ್ಚುವಂತು ಮಲೆಯುಂ ಮಂಡಲಮುಂ ಬೆರ್ಚುವಂತು

ಕರಿ ತುರಗ ಬಲಂಗಳ್ ಪೆರ್ಚುವಂತು (ಹೆಚ್ಚುವಂತೆ) ಮಲೆಯುಂ ಮಂಡಲಮುಂ

ಬೆರ್ಚುವಂತು (ಆನೆ, ಕುದುರೆ, ಕಾಲಾಳಿನ ಬಲಗಳನ್ನೂ ಹೆಚ್ಚಿಸಿಕೊಂಡು, ಶತ್ರುಗಳೂ ಸಾಮಂತಮಂಡಲವೂ ಹೆದರುವಂತೆ)

ಕೊಂಡಾಡುವ ನಾಲ್ವರುಂ ಅನುಜರೊಳಗೆ ನೆಗಳ್ದಿ ಅರಿಗನ ತೇಜಮೆ ತೊಳಗಿ ಬೆಳಗೆ

ಕೊಂಡಾಡುವ (ಹೊಗಳಲ್ಪಟ್ಟರು. ಅವರಲ್ಲಿ)

ನಾಲ್ವರುಂ ಅನುಜರೊಳಗೆ
ನೆಗೞ್ದ (ಪ್ರಸಿದ್ಧ)
ಅರಿಗನ(ಅರ್ಜುನ) ತೇಜಮೆ
ತೊಳಗಿ ಬೆಳಗೆ,(ನಾಲ್ಕು
ಜನರಲ್ಲಿ ಅರ್ಜುನನ ತೇಜಸ್ಸೇ
ತೊಳಗಿ ಬೆಳಗುತ್ತಿರಲು)

ನೆಲನಂ ಪ್ರತಿಪಾಲಿಸಿ
ಧರ್ಮಸೂನು ಸೂೞಮಿರ್ದಂ
ರಿಪುಬಳ ತಿಮಿರಭಾನು||೧೦||

ನೆಲನಂ (ರಾಜ್ಯವನ್ನು)
ಪ್ರತಿಪಾಲಿಸಿ ಧರ್ಮಸೂನು

ಸೂಖಮಿರ್ದಂ (ಸುಖವಾಗಿದ್ದನು) ರಿಪುಬಳ ತಿಮಿರಭಾನು (ಶತ್ರುಸೈನ್ಯವೆಂಬ ಕತ್ತಲಿಗೆ ಸೂರ್ಯನಂತಿದ್ದ)

ಪದ್ಯ-00:ಪದವಿಭಾಗ-ಅರ್ಥ:ಮೇಲಿನಂತೆ-

ಪದ್ಯ-00:ಅರ್ಥ: . ಆ ಪಟ್ಟಣದ ತೋಟಗಳು ದಟ್ಟವಾದ ಮಲಯಮಾರುತದಿಂದ

ಅಲುಗಾಡಿಸಲ್ಪಟ್ಟು
ಸಾಂದ್ರವಾದ ಪುಷ್ಪರಾಶಿಯು
ಸುಗಂಧವನ್ನು ಬೀರುತ್ತಿತ್ತು.
ಸೊಗಸಾಗಿ ಕಾಣುವ ಸಣ್ಣ
ಹೀಚುಗಳು ಒಪ್ಪಿ
ತೋರುತ್ತಿದ್ದುವು, ಉಪ್ಪಿನ
ಸಮುದ್ರವೇ
ಸುತ್ತುವರಿದಿದೆಯೋ
ಎಂಬಂತಿದ್ದ ಕಂದಕಗಳು ಸುತ್ತಿ
ಶೋಬಿಸುತ್ತಿರಲು ಕೋಟೆಯ
ಸೌಂದರ್ಯವು ಹೊಗಳಲು

ಅಸಾಧ್ಯವೆನಿಸಿತ್ತು, ಆಕಾಶಕ್ಕೆ ಮೇಲಕ್ಕೆದ್ದು ಅಲುಗಾಡುತ್ತಿರುವ ಬಾವುಟಗಳ ಸಾಲು ಸ್ವರ್ಗದವರೆಗೂ ಹೋಗಿದ್ದುವು. ಸುತ್ತುವರಿದ ಕೆಂಪು ಚಿನ್ನದಿಂದ ಮಾಡಿದ ಕೋಟೆಯ ಗೋಡೆಗಳೊಳಗೆ, ರತ್ನಖಚಿತವಾದ ಅರಮನೆಗಳ ಸಮೂಹಗಳು ತೊಳಗಿ ಬೆಳಗುತ್ತಿದ್ದುವು,

ಪ್ರತಿಮನೆಯಲ್ಲೂ ಬೇರೆ ಬೇರೆ ರಸಯುಕ್ತ ಬಾವಿಗಳು ಕೆಂಪುರತ್ನಗಳ ಧೂಳಿನ ಗಣಿಯಿಂದ ಕೂಡಿ ತೋರುತ್ತಿದ್ದುವು. ಕಲ್ಪವೃಕ್ಷದ ನೆರಳಿನಲ್ಲಿ ಕಾಮಧೇನುವು ಯಾವ ಅಲೆತವೂ ಇಲ್ಲದೆ ಸುಖವಾಗಿದ್ದಿತು. ವ್ಯಾಪಾರಿಗಳ, ಬ್ರಾಹ್ಮಣರ, ವೇಶ್ಯಾಜನರ ಮನೆಗಳು ಕುಬೇರನ ಮನೆಗೂ

ಹೆಚ್ಚಿನವು. ಆ ಪಟ್ಟಣದ
ಬೆಡಗನ್ನು ವಿಶೇಷವಾಗಿ ಮೆಚ್ಚಿ
ದೇವೇಂದ್ರನ ವೈಭವದಿಂದ
ಕೂಡಿ ಪಾಂಡವರು
ನಡೆದುಬಂದಾಗ ಪಟ್ಟಣದ
ಸ್ತ್ರೀಜನರು ವಿಶೇಷ
ಸಂತೋಷದಿಂದ ಕೂಡಿ
ಆದರದಿಂದ ಹರಸಿದರು.
ಅವರು ಚೆಲ್ಲುವ
ಮಂತ್ರಾಕ್ಷತೆಯನ್ನೂ ಬಹಳ
ಮನಸ್ಸಂತೋಷದಿಂದ

ಸ್ವೀಕರಿಸಿ ಉಪ್ಪರಿಗೆಯನ್ನು ಆದರದಿಂದ ಹತ್ತಿ ಸುಖವಾಗಿನೆಲಸಿದರು. ಪಕ್ಕದಲ್ಲಿದ್ದ ಮಾಡಗಳನ್ನು ಪರಿಚಯಮಾಡಿಕೊಂಡರು. ಆರ್ಥಿಗಳು ಬೇಡಿದ ಚಿನ್ನ, ಬೆಳ್ಳಿ, ರತ್ನಖಚಿತವಾದ ವಸ್ತುಗಳನ್ನೂ ಭೂಮಿಗಳನ್ನೂ ಶ್ರಮವಿಲ್ಲದೆ ದಾನಮಾಡಿ- ಆನೆ, ಕುದುರೆ, ಕಾಲಾಳಿನ ಬಲಗಳನ್ನೂ

ಹೆಚ್ಚಿಸಿಕೊಂಡರು.ಶತ್ರುಗಳೂ
ಸಾಮಂತಮಂಡಲವೂ
ಹೆದರುವಂತೆ ಹೊಗಳಲ್ಪಟ್ಟರು.
ನಾಲ್ಕು ಜನರಲ್ಲಿ ಅರ್ಜುನನ
ತೇಜಸ್ಸೇ ತೊಳಗಿ
ಬೆಳಗುತ್ತಿರಲು
ಶತ್ರುಸೈನ್ಯವೆಂಬ ಕತ್ತಲಿಗೆ
ಸೂರ್ಯನಂತಿದ್ದ
ಧರ್ಮರಾಯನು ರಾಜ್ಯವನ್ನು
ಸುಖವಾಗಿ
ಪರಿಪಾಲಿಸುತ್ತಿದ್ದನು.

ಅರ್ಜುನನ ಜೈತ್ರಯಾತ್ರೆ-ನಾಗಕನ್ಯೆ ಮದನಲತೆಯೊಡನೆ ವಿವಾಹ

ವ|| ಅಂತಜಾತಶತ್ರು ಶತ್ರುಪಕ್ಷ ಕ್ಷಯಕರ ಕರವಾಳ ದಂಷ್ಟ್ರಾಭೀಳ ಭುಜಂಗಮೂರ್ತಿ ವಿಶ್ವ ವಿಶ್ವಂಭರಾಧಾರಮಪ್ಪರಿಕೇಸ ರಿಯ ತೋಳ್ವಲದೊಳ್ ರಾಜ್ಯಂಗೆಯ್ಯುತಿರ್ಪನ್ನೆಗಂ ವಿಕ್ರಾಂತತುಂಗ

ನೊಂದೆಡೆಯೊಳಿರ್ಪಿರವಿಂಗು ಮ್ಮಳಿಸಿ ದಿಗಂಗನಾ ಮುಖಾವಲೋಕನಂಗೆಯ್ಯಲ್ ಬಗೆದು-

ವಚನ:ಪದವಿಭಾಗ-

ಅರ್ಥ:ಅಂತು ಅಜಾತಶತ್ರು (ಅ ಜಾತ(ಹುಟ್ಟಿರದ) ಶತ್ರು- ಧರ್ಮರಾಯನು) ಶತ್ರುಪಕ್ಷ ಕ್ಷಯಕರ (ನಾಶಮಾಡುವ) ಕರವಾಳ ದಂಷ್ಟ್ರಾ (ಕೋರೆಹಲ್ಲಿನ) ಅಭೀಳ

(ಭಯಂಕರವಾದ)
ಭುಜಂಗಮೂರ್ತಿ
(ಸರ್ಪಾಕಾರ ವುಳ್ಳವನು) ವಿಶ್ವ
ವಿಶ್ವಂಭರಾಧಾರಂ ಅಪ್ಪ
(ಸಮಸ್ತಭೂಮಿಗೂ
ಆಧಾರವಾಗಿರುವ)
ಅರಿಕೇಸರಿಯ (ಅರ್ಜುನನ)
ತೋಳ್ವಲದೊಳ್
(ಬಾಹುಬಲದ ಆಶ್ರಯದಲ್ಲಿ)
ರಾಜ್ಯಂಗೆಯ್ಯುತಿರ್ಪ ಅನ್ನೆಗಂ
(ರಾಜ್ಯಭಾರಮಾಡುತ್ತಿರವ ಆ

ಸಮಯದಲ್ಲಿ)
ವಿಕ್ರಾಂತತುಂಗನು
(ಅರ್ಜುನನು)
ಒಂದೆಡೆಯೊಳು ಇರ್ಪ
ಇರವಿಂಗೆ ಉಮ್ಮಳಿಸಿ (ಒಂದೇ
ಸ್ಥಳದಲ್ಲಿರುವ ಸ್ಥಿತಿಗೆ
ವ್ಯಥೆಪಟ್ಟು/ ಜುಗುಪ್ಸೆಪಟ್ಟು)
ದಿಗಂಗನಾ
ಮುಖಾವಲೋಕನಂಗೆಯ್ಯಲ್
(ದಿಕ್ ಅಂಗನಾ ಮುಖ
ಅವಲೋಕನಂ ಗಯ್ಯಲ್

ದಿಕ್ಕುಗಳೆಂಬ ಅಂಗನೆಯರ ಮುಖವನ್ನು ನೋಡಲು- ಎಲ್ಲಾ ದಿಕ್ಕುಗಳಲ್ಲಿ ಸಂಚಾರ ಮಾಡಲು) ಬಗೆದು (ಯೋಚಿಸಿ)-

ವಚನ:ಅರ್ಥ:ಶತ್ರುಗಳೇ ಹುಟ್ಟಿರದ ಧರ್ಮರಾಯನು, ಶತ್ರುಸೈನ್ಯವನ್ನು ನಾಶಮಾಡುವ ಕತ್ತಿಯೆಂಬ ಹಲ್ಲಿನಿಂದ ಭಯಂಕರವಾದ ಸರ್ಪದಂತಿರುವ,

ಸಮಸ್ತಭೂಮಿಗೂ
ಆಧಾರವಾಗಿರುವ
ಅರಿಕೇಸರಿಯ ಬಾಹುಬಲದ
ಆಶ್ರಯದಲ್ಲಿ
ರಾಜ್ಯಭಾರಮಾಡುತ್ತಿರವ ಆ
ಸಮಯದಲ್ಲಿ
ವಿಕ್ರಾಂತತುಂಗನಾದ
ಅರ್ಜುನನು ಒಂದೇ
ಸ್ಥಳದಲ್ಲಿರುವ ಸ್ಥಿತಿಗೆ
ಜುಗುಪ್ಸೆಪಟ್ಟು

ಜೈತ್ರಯಾತ್ರೆಯನ್ನು ಮಾಡಲು ಯೋಚಿಸಿದನು.

ಮ|| ಸ್ರ|| ಸೆಣಸುಳ್ಳುದ್ವ ತ್ತರಂ ತಳ್ತಿಱಿಯದೆ ಚತುರಂಭೋಧಿ ಪರ್ಯಂತಮಂ ಧಾ ರಿಣಿಯಂ ತಾಂ ಪೋಗಿ ಬಾಯ್ಕೇಳಿಸದೆ ಮುನಿಜನಕ್ಕಿಷ್ಟಿ ವಿಘ್ನಂಗಳಂ ದಾ|

ರುಣ ದೈತ್ಯರ್ ಮಾಡೆ ನೀಡಿಲ್ಲದೆ ಚಲದಾಟಂದು ಕೊಂದಿಕ್ಕದೊರ್ವಂ

ಗುಣಮುಟೆಂದುಂಡು

ಪಟ್ಟಪರ್ಣನನಣಮೆ

ನಿರುದ್ಯೋಗಿಯಂ

ಭೂಪನೆಂಬರ್|| ೧೧ ||

ಪದ್ಯ-೧೧:ಪದವಿಭಾಗ-ಅರ್ಥ:ಸೆಣಸುಳ್ಳ ಉದ್ವ ತ್ತರಂ ತಳ್ತು ಇಱಿಯದೆ (ಅಸೂಯೆಯುಳ್ಳ ದಾರಿತಪ್ಪಿ ನಡೆಯುವ ದುಷ್ಟರನ್ನು ಸಂಹರಿಸಿ) ಚತುರ್ ಅಂಭೋಧಿ ಪರ್ಯಂತಮಂ

ಧಾರಿಣಿಯಂ (ನಾಲ್ಕು
ಸಮುದ್ರದಿಂದ
ಸುತ್ತುವರಿಯಲ್ಪಟ್ಟ
ಭೂಮಂಡಲವನ್ನು) ತಾಂ
ಪೋಗಿ (ತಾನು ಹೋಗಿ)
ಬಾಯ್ಕೇಳಿಸದೆ
(ವಿಧೇಯರನ್ನಾಗಿ ಮಾಡದೆ)
ಮುನಿಜನಕ್ಕೆ ಇಷ್ಟಿ
ವಿಘ್ನಂಗಳಂ (ಯಜ್ಞಕ್ಕೆ
ವಿಘ್ನವನ್ನು) ದಾರುಣ ದೈತ್ಯರ್
ಮಾಡೆ (ದುಷ್ಟ ರಾಕ್ಷಸರು

ಮಾಡಲು) ನೀಡಿಲ್ಲದೆ
(ವಿಳಂಬವಿಲ್ಲದೆ) ಚಲದೆ
ಆಟಂದು (ಹಠಹಿಡಿದು
ಅಟಕಾಯಿಸಿ/ಮೇಲೆಬಿದ್ದು)
ಕೊಂದಿಕ್ಕದೆ (ಕೊಲ್ಲದೆ) ಒರ್ವಂ
ಗುಣಂ ಉಂಟೆಂದು ಉಂಡು
ಪಟ್ಟುರ್ಪನನ್ (ಒಬ್ಬನು ತನ್ನಲ್ಲಿ
ಗುಣವುಂಟೆಂದು ಹೇಳುತ್ತ
ಊಟಮಾಡಿ ಮಲಗಿರುವ)
ಅಣಮೆ (ವಿಶೇಷವಾಗಿ)
ನಿರುದ್ಯೋಗಿಯಂ

ಭೂಪನೆಂಬರ್
(ನಿರುದ್ಯೋಗಿಯನ್ನು
ರಾಜನೆನ್ನುತ್ತಾರೆಯೇ?)
ಪದ್ಯ-೧೧:ಅರ್ಥ: .
ಅಸೂಯೆಯುಳ್ಳ ದಾರಿತಪ್ಪಿ
ನಡೆಯುವ ದುಷ್ಟರನ್ನು
ಕತ್ತರಿಸದೆ (ಸಂಹರಿಸದೆ),
ನಾಲ್ಕು ಸಮುದ್ರದಿಂದ
ಸುತ್ತುವರಿಯಲ್ಪಟ್ಟ
ಭೂಮಂಡಲವನ್ನು ತನ್ನ
ವಿಧೇಯರನ್ನಾಗಿ ಮಾಡದೆ,

ಋಷಿಗಳ ಯಜ್ಞಕ್ಕೆ
ವಿಘ್ನಮಾಡುತ್ತಿರುವ ದುಷ್ಟ
ರಾಕ್ಷಸರನ್ನು ವಿಳಂಬವಿಲ್ಲದೆ
ಪ್ರತಿಭಟಿಸಿ ಕೊಲ್ಲದೆ, ತನ್ನಲ್ಲಿ
ಗುಣವುಂಟೆಂದು ಹೇಳುತ್ತ
ಊಟಮಾಡಿ ಮಲಗಿರುವವ
ನಿರುದ್ಯೋಗಿಯನ್ನು
ರಾಜನೆನ್ನುತ್ತಾರೆಯೇ?

ವ|| ಎಂದು ವಿಜಿಗೀಷುವೃತ್ತ್ಯೋದ್ಯುಕ್ತನಾಗಲ್ ಬಗೆದು-

ವಚನ:ಪದವಿಭಾಗ-

ಅರ್ಥ:ಎಂದು ವಿಜಿಗೀಷುವೃತ್ತ (ಜಯಿಸಲು ಇಚ್ಛಸುವ) ಉದ್ಯುಕ್ತನಾಗಲ್ ಬಗೆದು (ಕ್ರಿಯಾಶೀಲನಾಗಲು ಯೋಚಿಸಿ)-

ವಚನ:ಅರ್ಥ: ಎಂದು ಜಯಿಸಲು ಇಚ್ಛಸಿ, ಕ್ರಿಯಾಶೀಲನಾಗಲು ಯೋಚಿಸಿ ಜೈತ್ರಯಾತ್ರೆಗೆ-

ಹೊರಡಲು

ನಿಶ್ಚಯಿಸಿದವನಾಗಿ-

ಚಂ|| ಅಱಿಪಿದೊಡೆನ್ನ

ಪೋಗನಿನಿಯಳ್ಗೆ ಮನಂ

ಮಱುಕಕ್ಕೆ ನೀಳ್ದ ಕ

ಣ್ಣೊಱಿದುಗುವಶ್ರುವಾರಿಗೆ

ತೊದಳ್ನುಡಿ ಲಲ್ಲೆಗೆ

ಪಕ್ಕುಗೊಟ್ಟು ಕಾ|

ಲ್ಗೆಱಗಿರೆ ಪೋಗು ಕೆಟ್ಟಪುದು

ಮೋಹಮಯಂ ನಿಗಳಂ

ಕಳತ್ರಮೆಂ

ದಱಿಪದೆ ನಟ್ಟಿರುಳ್ ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ|| ೧೨||

ಪದ್ಯ-೧೨:ಪದವಿಭಾಗ-ಅರ್ಥ:ಅಱಿಪಿದೊಡೆ (ಹೇಳಿದರೆ) ಎನ್ನ ಪೋಗಂ ಇನಿಯಳ್ಗೆ(ತನ್ನ ಜೈತ್ರಯಾತ್ರೆಯ ವಿಷಯವನ್ನು ಪ್ರಿಯಳಾದ ದ್ರೌಪದಿಗೆ ತಿಳಿಸಿದರೆ) ಮನಂ ಮಱುಕಕ್ಕೆ (ಅವಳ ಮನಸ್ಸಿನ ದುಃಖಕ್ಕೆ)

ನೀಳ್ದ ಕಣ್ಣು ಒಱಿದುಗುವ
ಅಶ್ರುವಾರಿಗೆ (ಕಣ್ಣಲ್ಲಿ ಒಸರಿ
ಉಕ್ಕುವ ಕಣ್ಣೀರಿಗೆ ಮತ್ತು)
ತೊದಳ್ನುಡಿ ಲಲ್ಲೆಗೆ
(ತೊದಲುಮಾತು-
ಪ್ರೀತಿಯಲಲ್ಲೆ ಮಾತಿಗೆ)
ಪಕ್ಕುಗೊಟ್ಟು ಕಾಲ್ಗೆಱಗಿರೆ
(ಪಕ್ಕಾಗಿ ಕಾಲಿಗೆಬಿದ್ದ ಕೇಳಲು)
ಪೋಗು ಕೆಟ್ಟಪುದು
(ಪ್ರಯಾಣವು ಕೆಟ್ಟು
ಹೊಗುತ್ತದೆ.) ಮೋಹಮಯಂ

ನಿಗಳಂ (ಸಂಕೋಲೆ) ಕಳತ್ರಂ (ಹೆಂಡತಿ) ಎಂದು (ಹೆಂಡತಿಯು ಮೊಹದಿಂದಾದ ಸಂಕೊಲೆ ಎಂದು) ಅಱಿಪದೆ ನಟ್ಟಿರುಳ್ (ಹೇಳದೆ ನಡುರಾತ್ರಿ)ಮರೆದು ಸಾರ್ಚಿದ (ಮೈಮರೆತು ಮಲಗಿ ನಿದ್ರಿಸುತ್ತಿದ್ದ) ನಲ್ಲಳ ತಳ್ತ ತೋಳ್ಗಳಂ (ತನ್ನ ಬಳಿ, ನೀಡಿದ್ದ ಅವಳ ತೋಳುಗಳನ್ನು)|

ಪದ್ಯ-೧೨:ಅರ್ಥ:ತನ್ನ ಜೈತ್ರಯಾತ್ರಾಪ್ರಯಾಣ ವಿಷಯವನ್ನು ಪ್ರಿಯಳಾದ ದ್ರೌಪದಿಗೆ ತಿಳಿಸಿದರೆ ಆ ಕಾರ್ಯಕ್ಕೆ ಅಡ್ಡಿಯಾಗುತ್ತದೆ. ಅವಳ ಮನಸ್ಸಿನ ದುಖದಿಂದ ಕೂಡಿದ ಕಣ್ಣೀರಿಗೂ ತೊದಲ್ನುಡಿಯ ಪ್ರಿಯವಾರ್ತೆಗೂ ಮನಸೋತು, ಅವಳು ನನ್ನ ಕಾಲಿಗೆರಗಿದರೆ ನನ್ನ

ಪ್ರಯಾಣಕ್ಕೆ
ವಿಘ್ನವುಂಟಾಗುತ್ತದೆ.
ಹೆಂಡತಿಯು ಮೊಹದಿಂದಾದ
ಸಂಕೊಲೆ ಎಂದು, ಅವಳಿಗೆ
ತಿಳಿಸದೆಯೇ ನಡುರಾತ್ರಿಯಲ್ಲಿ
ಮೈಮರೆತು ಮಲಗಿ ತನ್ನ ಬಳಿ
ನೀಡಿದ್ದ ಅವಳ
ತೋಳುಗಳನ್ನು-

**ವ|| ಮೆಲ್ಲಮೆಲ್ಲನೆ ಪತ್ತುವಿಡಿಸಿ
ತನ್ನ ತೊಟ್ಟ
ದಿವ್ಯಾಭರಣಂಗಳೆಲ್ಲಮಂ**

ಕಳೆದು ದಿವ್ಯಶರಗಳಂ
ಬಿಗಿದುಕೊಂಡು
ದಿವ್ಯಚಾಪಮಂ ಪಿಡಿದು
ಪ್ರಥಮ ಚಳಿತ ದಕ್ಷಿಣ
ಚರಣನಾಗಿನಿಜನಿವಾಸದಿಂ
ಪೊಱಮಟ್ಟು
ಖಾಂಡವಪ್ರಸ್ಥದಿಂದುತ್ತರಾಭಿ
ಮುಖನಾಗಿ
ಕಾಮ್ಯಕವನದೊಳಗನೆ
ನೀಲಪರ್ವತದ ಮೇಗನೆ
ಪೋಗಿ-

ವಚನ:ಪದವಿಭಾಗ-ಅರ್ಥ:ಮೆಲ್ಲಮೆಲ್ಲನೆ ಪತ್ತುವಿಡಿಸಿ (ಮೆಲ್ಲಗೆ ಬಿಡಿಸಿಕೊಂಡು) ತನ್ನ ತೊಟ್ಟ ದಿವ್ಯಾಭರಣಂಗಳು ಎಲ್ಲಮಂ ಕಳೆದು (ಕಳಚಿಟ್ಟು) ದಿವ್ಯಶರಗಳಂ ಬಿಗಿದುಕೊಂಡು ದಿವ್ಯಚಾಪಮಂ (ಉತ್ತಮವಾದ ಬಿಲ್ಲನ್ನು) ಪಿಡಿದು ಪ್ರಥಮ ಚಳಿತ ದಕ್ಷಿಣ ಚರಣನಾಗಿ (ಬಲಗಾಲನ್ನು

ಮುಂದಿಟ್ಟು) ನಿಜನಿವಾಸದಿಂ
ಪೊಱಮಟ್ಟು (ತನ್ನ
ಮನೆಯಿಂದ ಹೊರಟು)
ಖಾಂಡವಪ್ರಸ್ಥದಿಂದ
ಉತ್ತರಾಭಿಮುಖನಾಗಿ
ಕಾಮ್ಯಕವನದ ಒಳಗನೆ
(ಒಳಗಡೆಯೇ/
ಒಳಗಿನಿಂದಲೇ)
ನೀಲಪರ್ವತದ ಮೇಗನೆ
ಪೋಗಿ-

ವಚನ:ಅರ್ಥ:ಮೆಲ್ಲಗೆ ಅವಳ ಕೈಯನ್ನು ಬಿಡಿಸಿಕೊಂಡು ತಾನು ಧರಿಸಿದ್ದ ಉತ್ತಮ ಒಡವೆಗಳನ್ನೆಲ್ಲ ಕಳಚಿಟ್ಟು, ಶ್ರೇಷ್ಠವಾದ ಬತ್ತಳಿಕೆಯನ್ನು ಬಿಗಿದುಕೊಂಡು ಉತ್ತಮವಾದ ಬಿಲ್ಲನ್ನು ಹಿಡಿದು ಬಲಗಾಲನ್ನು ಮುಂದಿಟ್ಟು ತನ್ನ ಮನೆಯಿಂದ ಹೊರಟು ಖಾಂಡವಪ್ರಸ್ಥದಿಂದ ಉತ್ತರದ ಕಡೆಗೆ ಹೊರಟು

ಕಾಮ್ಯಕವನದ
ಒಳಗಿನಿಂದಲೇ
ನೀಲಪರ್ವತದ ಮೇಲಕ್ಕೆ
ಹೋಗಿ-(ಅಲ್ಲಿ ನಿಂತನು).

ಚಂ|| ಸಗರರ ಮೇಲೆ ಗಂಗೆಯನನಾಕುಲದಿಂ ತರಲಾ ಭಗೀರಥಂ ನೆಗೞ್ತಪೋನಿಯೋಗದೊಳ ವಂಗಮರಾಪಗೆ ಮೆಚ್ಚಿ ಪಾಯ್ವುದುಂ|

ಗಗನದಿನಂಧಕ ದ್ವಿಷ ಜಟಾಟವಿಯೊಳ್ ಬಟೆಿಕಾದ ಶೈಲದೊಳ್ ಸೊಗಯಿಸೆ ಪಾಯ್ದುದಿಂತಿದುವೆ ಬಂಧುರ ಕೂಟ ಕುಳಂ ಹಿಮಾಚಳಂ||೧೩||

ಪದ್ಯ-೧೩:ಪದವಿಭಾಗ-ಅರ್ಥ:ಸಗರರ (ತನ್ನ ಅಜ್ಜಂದಿರಾದ ಸಗರನ ಸುಟ್ಟ ಪುತ್ರರ ಭಸ್ಮರಾಶಿಯ ಮೇಲೆ)

ಗಂಗೆಯನು ಆನಾಕುಲದಿಂ
(ಅನಾಯಾಸದಿಂದ) ತರಲು
ಆ ಭಗೀರಥಂ ನೆಗಱೆ
(ತೊಡಗಲು)
ತಪೋನಿಯೋಗದೊಳ್
(ತಪಸ್ಸಿನಕಾರ್ಯದಲ್ಲಿ)
ಅವಂಗೆ ಅಮರಾಪಗೆ
(ಅಮರ ಅಪಗೆ ಸ್ವರ್ಗದಿಂದ
ಇಳಿದವಳು-ಗಂಗೆ) ಮೆಚ್ಚಿ
ಪಾಯ್ವುದುಂ ಗಗನದಿಂ
(ಆಕಾಶದಿಂದ ಹರಿದುಬರಲು)

ಅಂಧಕ ದ್ವಿಷ
ಜಟಾಟವಿಯೊಳ್ (ಜಟೆಯ
ಅಟವಿ) (ಅಂಧಕಾಸುರನ
ಶತ್ರುವಾದ ಶಿವನ ಜಟೆಯೆಂಬ
ಅಡವಿಯಲ್ಲಿ) ಬಟಿಕ ಆದ
ಶೈಲದೊಳ್ಸೊಗಯಿಸೆ
ಪಾಯ್ದುದು (ಬಳಿಕ ಅಡ್ಡವಾದ
ಪರ್ವತದಲ್ಲಿಯೂ
ಸೊಗಸಿನಿಂದ ಹರಿದಳು)
ಅಂತು ಇದುವೆ ಬಂಧುರ
ಕೂಟ ಕುಳಂ

ಹಿಮಾಚಳಂ(ಹೀಗೆ ಇದು ಅನೇಕ ಶಿಖರಗಳ ಸಮೂಹದಿಂದ ಮನೋಹರವಾಗಿರುವ ಆ ಹಿಮಾಚಲ ಪರ್ವತ.)

ಪದ್ಯ-೧೩:ಅರ್ಥ: ತನ್ನ ಅಜ್ಜಂದಿರಾದ, ಸಗರನ ಸುಟ್ಟ ಪುತ್ರರ ಭಸ್ಮರಾಶಿಯ ಮೇಲೆ ಗಂಗೆಯನ್ನು ತರಲು ಆ ಭಗೀರಥನು ತಪಸ್ಸಿನಲ್ಲಿ ನಿರತನಾಗಲು ಅವನ ತಪಸ್ಸಿಗೆ

ಮೆಚ್ಚಿ ದೇವನದಿಯಾದ
ಗಂಗೆಯು ಮೊದಲು
ಅಂಧಕಾಸುರನ ಶತ್ರುವಾದ
ಶಿವನ ಜಟೆಯೆಂಬ
ಕಾಡಿನಲ್ಲಿಯೂ ಬಳಿಕ
ಅಡ್ಡವಾದ ಪರ್ವತದಲ್ಲಿಯೂ
ಸೊಗಸಿನಿಂದ ಹರಿದಳು. ಹೀಗೆ
ಇದು ಅನೇಕ ಶಿಖರಗಳ
ಸಮೂಹದಿಂದ
ಮನೋಹರವಾಗಿರುವ ಆ
ಹಿಮಾಚಲಪರ್ವತ.

ಮ|| ಸ್ರ|| ವಿಲಸತ್ಕಲ್ಲೋಲ

ನಾದಂ ನೆಗೞ್ದಿರೆ ನಿಜ

ಕೂಟಾಗ್ರದೊಳ್ ಪಾಯ್ವ

ಗಂಗಾ

ಜಲದಿಂ

ಮೂರ್ಧಾಭಿಷೇಕೋನ್ನತಿ ನಿಲೆ

ಚಮರೀ ಲೋಲ

ಲಾಂಗೂಲಮಾಲಾ|

ವಲಿ ವಿಕ್ಷೇಪಂಗಳಿಂ

ತಚ್ಚಮರರುಹ ಮಹಾಶೋಭೆ

ಕೈಗಣ್ಮೆ ವಿಶ್ವಾ

ಚಲ ಚಕ್ರೇಶತ್ವಮುಂ
ತಾಳ್ದಿದುದಖಿಳ
ಧರಾರಮ್ಯಹೈಮಾಚಳೇಂದ್ರಂ||
೧೪||

ಪದ್ಯ-೧೪:ಪದವಿಭಾಗ-ಅರ್ಥ:ವಿಲಸತ್ ಕಲ್ಲೋಲ ನಾದಂ (ಪ್ರಕಾಶಮಾನವಾದ ಅಲೆಗಳ ಧ್ವನಿಯು) ನೆಗೞ್ದಿರೆ (ಉಂಟಾಗುತ್ತಿರಲು) ನಿಜ ಕೂಟಾಗ್ರದೊಳ್ ಪಾಯ್ವ (ತನ್ನ ಶಿಖರಗಳ ತುದಿಯಲ್ಲಿ

ಹರಿಯುವ) ಗಂಗಾಜಲದಿಂ
ಮೂರ್ಧಾಭಿಷೇಕೋನ್ನತಿ
(ತಲೆಯ ಮೇಲೆ ಆಗುವ
ಅಭಿಷೇಕದ
ಮಾನ್ಯತೆಯುಂಟಾಗಲು) ನಿಲೆ
(ನೆಲೆಯಾಗಲು) ಚಮರೀ
ಲೋಲ
ಲಾಂಗೂಲಮಾಲಾವಲಿ
ವಿಕ್ಷೇಪಂಗಳಿಂ
(ಚಮರೀಮೃಗಗಳ
ಮನೋಹರವಾದ ಬಾಲದ

ತುದಿಯ ಕೂದಲುಗಳ
ಸಮೂಹದ
ಬೀಸುವಿಕೆಯಿಂದ)
ತಚ್ಚಮರರುಹ ಮಹಾಶೋಭೆ
(ಚಾಮರಗಳಿಂದ ಬೀಸುವ
ವೈಭವವು) ಕೈಗಣ್ಮೆ
(ಅಧಿಕವಾಗುತ್ತಿರಲು)
ವಿಶ್ವಾಚಲ ಚಕ್ರೇಶತ್ವಮುಂ
(ಪ್ರಪಂಚದಲ್ಲಿರುವ ಎಲ್ಲ
ಬೆಟ್ಟಗಳ ಚಕ್ರವರ್ತಿ
ಪದವಿಯನ್ನು) ತಾಳ್ದಿದುದ

ಅಖಿಳ
ಧರಾರಮ್ಯಹೈಮಾಚಳೇಂದ್ರಂ(
ಶ್ರೇಷ್ಠವಾದ ಈ ಹಿಮಾಚಲ
ಪರ್ವತವು ಧರಿಸಿತು)
ಪದ್ಯ-೧೪:ಅರ್ಥ:
ಪ್ರಕಾಶಮಾನವಾದ ಅಲೆಗಳ
ಧ್ವನಿಯು ಉಂಟಾಗುತ್ತಿರಲು
ತನ್ನ ಶಿಖರಗಳ ತುದಿಯಲ್ಲಿ
ಹರಿಯುವ ಗಂಗಾಜಲದಿಂದ
ತಲೆಯ ಮೇಲೆ ಆಗುವ
ಭಿಷೇಕದ

ಮಾನ್ಯತೆಯುಂಟಾಗಲು
ಚಮರೀಮೃಗಗಳ
ಮನೋಹರವಾದ ಬಾಲದ
ತುದಿಯ ಕೂದಲುಗಳ
ಸಮೂಹದ ಬೀಸುವಿಕೆಯಿಂದ
ಚಾಮರಗಳಿಂದ ಬೀಸುವ
ವೈಭವವು
ಅಧಿಕವಾಗುತ್ತಿರಲು,
ಪ್ರಪಂಚದಲ್ಲಿರುವ ಎಲ್ಲ
ಬೆಟ್ಟಗಳ ಚಕ್ರವರ್ತಿ
ಪದವಿಯನ್ನು ಶ್ರೇಷ್ಠವಾದ ಈ

ಹಿಮಾಚಲ ಪರ್ವತವು ಧರಿಸಿತು.

ವ|| ಎಂದು ಮೆಚ್ಚಿ-

ವಚನ:ಅರ್ಥ:ಎಂದು ಮೆಚ್ಚಿ-

ಕಂ|| ಚಾರು ವಿವಿಧಾಗ್ನಿಕಾರ್ಯ
ಪ್ರಾರಂಭ ಮಹಾದ್ವಿಜನ್ಮ
ಘೋಷದಿನಂಹೋ|
ದೂರಮುಮವನಿತವಾಳಂ
ಕಾರಂ ಸಂಸಾರ ಸಾರ
ಗಂಗಾದ್ವಾರಂ|| ೧೫||

ಪದ್ಯ-೧೫:ಪದವಿಭಾಗ-ಅರ್ಥ:ಚಾರು (ಮನೋಹರ)ವಿವಿಧ ಅಗ್ನಿಕಾರ್ಯ ಪ್ರಾರಂಭ ಮಹಾದ್ವಿಜನ್ಮ ಘೋಷದಿಂ ಅಂಹೋದೂರಮುಂ (ಪಾಪದಿಂದ ದೂರವಾದದ್ದು) ಅವನಿತವಾಳಂಕಾರಂ (ಭೂಮಿಗೆಅಲಂಕಾರವಾದುದು)ಸಂಸಾರ ಸಾರ

ಗಂಗಾದ್ವಾರಂ(ಗಂಗಾದ್ವಾರವು ಸಂಸಾರಸಾರವೂ ಆಯಿತು)

ಪದ್ಯ-೧೫:ಅರ್ಥ:

ಗಂಗಾದ್ವಾರವೆಂಬ ಪುಣ್ಯಕ್ಷೇತ್ರವು ಮನೋಹರವೂ ನಾನಾ ವಿಧವೂ ಆದ ಮಹಾಬ್ರಾಹ್ಮಣರ ವೇದಘೋಷದಿಂದ ಪಾಪದೂರವೂ, ಭೂಮಂಡಲಕ್ಕೆ ಅಲಂಕಾರ

ಪ್ರಾಯವೂ ಸಂಸಾರಸಾರವೂ ಆಯಿತು.

ವ|| ಎನೆ ಸೊಗಯಿಸುವ ಗಂಗಾದ್ವಾರದೊಳ್ ಮುನಿಜನಂಗಳ ಬೇಳ್ವೆಗಳ್ಗುಪದ್ರವಂಗೆಯ್ವ ನಿಶಾಟಕೋಟಿಯಂ ನಿಶಿತ ಶರಕೋಟಿಯಿಂದಮುಚ್ಚಾಟಿಸಿ ಕೆಲವು ದಿವಸಮಿರ್ದಲ್ಲಿ ಪಡೆಮೆಚ್ಚೆ ಗಂಡನ ಗಂಡಗಾಡಿಯಂ ಕಂಡು

ಫಣೀಂದ್ರನ ಕನ್ನೆ ಮದನಲತೆಯೆಂಬ ನಾಗಕನ್ನೆ ಕಣ್ಬೇಟಂಗೊಂಡು ತನ್ನ ಲೋಕಕ್ಕೊಡಗೊಂಡು ಪೋಗಲ್-

ವಚನ:ಪದವಿಭಾಗ-

ಅರ್ಥ:ಎನೆ ಸೊಗಯಿಸುವ ಗಂಗಾದ್ವಾರದೊಳ್ ಮುನಿಜನಂಗಳ ಬೇಳ್ವೆಗಳ್ಗೆ ಉಪದ್ರವಂಗೆಯ್ವ (ಯಜ್ಞಕಾರ್ಯಕ್ಕೆ

ಹಿಂಸೆಯನ್ನು ಮಾಡುವ)
ನಿಶಾಟಕೋಟಿಯಂ ನಿಶಿತ
(ಹರಿತವಾದ)
ಶರಕೋಟಿಯಿಂದಂ
ಉಚ್ಚಾಟಿಸಿ (ರಾಕ್ಷಸ
ಸಮೂಹವನ್ನು ಹರಿತವಾದ
ಬಾಣಗಳ ರಾಶಿಯಿಂದ
ಹೊಡೆದೋಡಿಸುತ್ತ) ಕೆಲವು
ದಿವಸಂ ಇರ್ದಲ್ಲಿ (ಅಲ್ಲಿ
ಕೆಲವು ದಿವಸವಿದ್ದನು.)
ಪಡೆಮೆಚ್ಚೆ ಗಂಡನ

(ಅರಿಕೇಸರಿಯಬಿರುದು-ಇಲ್ಲಿ ಅರ್ಜುನನ) ಗಂಡಗಾಡಿಯಂ (ವೀರ ಸೌಂದರ್ಯವನ್ನು) ಕಂಡು ಫಣೀಂದ್ರನ ಕನ್ನೆ (ನಾಗೇಂದ್ರನ ಮಗಳು) ಮದನಲತೆಯೆಂಬ ನಾಗಕನ್ನೆ ಕಣ್ಬೇಟಂಗೊಂಡು(ನೋಡಿದ ತಕ್ಷಣ ಮೋಹಗೊಂಡು) ತನ್ನ ಲೋಕಕ್ಕೆ ಒಡಗೊಂಡು ಪೋಗಲ್-(ತನ್ನ

ನಾಗಲೋಕಕ್ಕೆ
ಕೊಂಡುಹೋದಳು)
ವಚನ:ಅರ್ಥ:ಇಂತಹ
ಸೊಗಸಾಗಿರುವ
ಗಂಗಾದ್ವಾರದಲ್ಲಿ ತಪಸ್ವಿಗಳ
ಯಜ್ಞಕಾರ್ಯಕ್ಕೆ ಹಿಂಸೆಯನ್ನು
ಮಾಡುವ ರಾಕ್ಷಸ
ಸಮೂಹವನ್ನು ಹರಿತವಾದ
ಬಾಣಗಳ ರಾಶಿಯಿಂದ
ಹೊಡೆದೋಡಿಸುತ್ತ ಅಲ್ಲಿ
ಕೆಲವು ದಿವಸವಿದ್ದನು.

ಅಲ್ಲಿಯೇ
ಪಡೆಮೆಚ್ಚೆಗಂಡನಾದ
ಅರ್ಜುನನ
ವೀರಸೌಂದರ್ಯವನ್ನು
ನಾಗಕನ್ಯೆಯಾದ
ಮದನಲತೆಯೆಂಬುವಳು
ನೋಡಿದ ತಕ್ಷಣ
ಮೋಹಗೊಂಡು, ಅವನನ್ನು
ತನ್ನ ನಾಗಲೋಕಕ್ಕೆ
ಕರೆದುಕೊಂಡು ಹೋದಳು

<u>ನಾಗಲೋಕದಲ್ಲಿ ಅರ್ಜುನನಿಗೆ ನಾಗಕನ್ನಿಕೆಯಿಂದ ಮಗ ಇಳಾವಂತನ ಜನನ</u>

ಉ|| ಆಗಳುಮಿಂದು

ಸೂರ್ಯಕಿರಣಮಿಲ್ಲದೆ

ಕತ್ತಲೆಯೆಂಬುದಿಲ್ಲ ತ

ದ್ಭೋಗಿ ಫಣಾಮಣಿ ದ್ಯುತಿಯೆ

ಕತ್ತಲೆಯಂ

ತಲೆದೋಱಲೀಯದಾ||

ನಾಗರ ನಾಗಕನ್ನೆಯರ

ರೂಪುಗಳಿಟ್ಟಳಮಾಗೆ

ಬೋಗಿಗಳ್

ಬೋಗಿಗಳೆಂಬ ಭೋಗಿಗಳೆ

ಭೋಗಿಗಳಲ್ಲಿಯು

ಭೋಗನಾಯಕರ್|| ೧೬||

ಪದ್ಯ-೧೬:ಪದವಿಭಾಗ-

ಅರ್ಥ:ಆಗಳುಂ

ಇಂದು(ಚಂದ್ರ) ಸೂರ್ಯರ್

ಅಣಂ ಇಲ್ಲದೆ

ಕತ್ತಲೆಯೆಂಬುದಿಲ್ಲ (ಅಲ್ಲಿ

ಚಂದ್ರಸೂರ್ಯರು

ಇಲ್ಲದಿದ್ದರೂ

ಕತ್ತಲೆಯೆಂಬುದು ಇಲ್ಲ.) ತದ್ ಭೋಗಿ ಫಣಾಮಣಿ ದ್ಯುತಿಯೆ (ಆ ಹಾವುಗಳ ಹೆಡೆಗಳಲ್ಲಿರುವ ರತ್ನಕಾಂತಿಯೇ) ಕಬ್ತಿಲೆಯಂ ತಲೆದೋಱಲೀಯದು (ಕತ್ತಲೆಯು ತಲೆಹಾಕುವುದಕ್ಕೆ ಅವಕಾಶಕೊಡುವುದಿಲ್ಲ.) ಆ ನಾಗರ ನಾಗಕನ್ನೆಯರ ರೂಪುಗಳ್ ಇಟ್ಟಳಮಾಗೆ (ಆ ನಾಗರ ಮತ್ತು

ನಾಗಕನ್ನಿಕೆಯರ ರೂಪಗಳು
ಮನೋಹರವಾಗಿವೆ.)
ಬೋಗಿಗಳ್ (ನಾಗರುಗಳು)
ಭೋಗಿಗಳ್
(ಸುಖಪಡುವವರು) ಎಂಬ
(ಎನ್ನುವ) ಭೋಗಿಗಳೆ
(ಸರ್ಪಗಳೆ) ಭೋಗಿಗಳು
ಅಲ್ಲಿಯು ಭೋಗನಾಯಕರ್
(ಅಲ್ಲಿಯ- ಸರ್ಪಲೋಕದ
ಭೋಗನಾಯಕರು-
ಪ್ರದೇಶಪಾಲಕರು

ಮಂಡಲಪಾಲಕರು
ಭೋಗಿಗಳು- ಎಂದರೆ
ಸುಖಪಡುವವರ.)
ಪದ್ಯ-೧೬:ಅರ್ಥ:ಅಲ್ಲಿ
ಚಂದ್ರಸೂರ್ಯರು
ಇಲ್ಲದಿದ್ದರೂ
ಕತ್ತಲೆಯೆಂಬುದು ಇಲ್ಲ. ಆ
ಹಾವುಗಳ ಹೆಡೆಗಳಲ್ಲಿರುವ
ರತ್ನಕಾಂತಿಯೇ ಕತ್ತಲೆಯು
ತಲೆಹಾಕುವುದಕ್ಕೆ
ಅವಕಾಶಕೊಡುವುದಿಲ್ಲ. ಆ

ನಾಗರ ಮತ್ತು

ನಾಗಕನ್ನಿಕೆಯರ ರೂಪಗಳು

ಮನೋಹರವಾಗಿವೆ.

ಆದುದರಿಂದಲೇ ಸರ್ಪಗಳು

ಭೋಗಿಗಳು ಎನ್ನಿಸಿಕೊಂಡಿವೆ.

ಭೋಗಿಗಳೆಂದರೆ

ಭೋಗಪಾಲಕರೇ

ವ|| ಎಂದು ನಾಗಕನ್ನೆ

ನಾಗಲೋಕದ ವಿಳಾಸಂಗಳಂ

ತೋಱುತ್ತುಂ ತನ್ನ ಕೆಱಗಣ

ನಾಗವಿಮಾನಕ್ಕೆ ವಂದು

ನಾಗಕನ್ನೆಯರುಂ ತಾನುಂ ಮನಂಬುಗಿಸುವಂತೆ ಮಜ್ಜನಂಬುಗಿಸಿ ರಸರಸಾಯನಂಗಳನೂಡು ವಂತೆ ದಿವ್ಯಾಹಾರಂಗಳನೂಡಿ-

ವಚನ:ಪದವಿಭಾಗ-

ಅರ್ಥ:ಎಂದು ನಾಗಕನ್ನೆ ನಾಗಲೋಕದ ವಿಳಾಸಂಗಳಂ (ವೈಭವಗಳನ್ನು) ತೋಱುತ್ತುಂ (ತೋರಿಸುತ್ತಾ) ತನ್ನ ಕೆೞಗಣ (ಕೆಳಗಣ) ನಾಗವಿಮಾನಕ್ಕೆ

ವಂದು (ಕೆಳಭಾಗದಲ್ಲಿದ್ದ ತನ್ನ ಅಂತಪುರಕ್ಕೆ ಬಂದು) ನಾಗಕನ್ನೆಯರುಂ ತಾನುಂ ಮನಂಬುಗಿಸುವಂತೆ ಮಜ್ಜನಂಬುಗಿಸಿ (ಮನಸ್ಸಿಗೆ ತೃಪ್ತಿಯಾಗುವಂತೆ ಅವನಿಗೆ ಮಜ್ಜನ- ಸ್ನಾನಮಾಡಿಸಿ) ರಸರಸಾಯನಂಗಳನು ಊಡುವಂತೆ (ತಿನ್ನಿಸುವಂತೆ) ದಿವ್ಯಾಹಾರಂಗಳನು ಊಡಿ (ತಿನ್ನಿಸಿ)-

ವಚನ:ಅರ್ಥ:ಎಂದು ಆ ನಾಗಕನ್ನಿಕೆಯು ನಾಗಲೋಕದ ವೈಭವಗಳನ್ನು ತೋರಿಸುತ್ತ ಕೆಳಭಾಗದಲ್ಲಿದ್ದ ತನ್ನ ಅಂತಪುರಕ್ಕೆ ಬಂದು ತಾನೂ ಆ ನಾಗಕನ್ನಿಕೆಯರೂ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಅವನಿಗೆ ಸ್ನಾನಮಾಡಿಸಿ ರಸಯುಕ್ತವಾದ ರಸಾಯನಗಳನ್ನು ತಿನ್ನಿಸುವಂತೆ

ದಿವ್ಯಾಹಾರಗಳನ್ನು ತಿನ್ನಿಸಿ-
(ತಿನ್ನಿಸಿದರು)

ಉ|| ನಾಗವಿಭೂಷಣಪ್ರತತಿ
ನಾಗರಖಂಡಮಪೂರ್ವಮಪ್ಪ
ಪು
ನ್ನಾಗದ ಬಾಸಿಗಂ ಬಗೆದ
ಬಣ್ಣದ ಪುಟ್ಟಿಗೆ
ನಾಗಜಾಲಮೆಂ|
ದಾಗಡೆ ನಾಗಲೋಕ
ವಿಭವಂಗಳೊಳಾಟಿಸಿ
ನಾಗಶಯ್ಯೆಯೊಳ್

ನಾಗಿಣಿ ನಾಗಬಂಧದೊಳ್ ತಳ್ತು ಗುಣಾರ್ಣವನಂ ಮರುಳ್ಚಿದಳ್|| ೧೭||

ಪದ್ಯ-೧೭:ಪದವಿಭಾಗ-ಅರ್ಥ:ನಾಗವಿಭೂಷಣಪ್ರತತಿ (ನಾಗರು ಧರಿಸುವ ಆಭರಣಗಳ ರಾಶಿ) ನಾಗರಖಂಡಂ, ಅಪೂರ್ವಮಪ್ಪ ಪುನ್ನಾಗದ ಬಾಸಿಗಂ, ಬಗೆದ ಬಣ್ಣದ ಪುಟ್ಟಿಗೆ (ವಸ್ತ್ರ), ನಾಗಜಾಲಂ

(ವೀಳಯದ ಎಲೆ), ಎಂದು
ಆಗಡೆ (ಆಗಲೇ)ನಾಗಲೋಕ
ವಿಭವಂಗಳೊಳು ಆಟಿಸಿ
(ವೈಭವಗಳಲ್ಲಿ ಮುಳುಗಿಸಿ)
ನಾಗಶಯ್ಯೆಯೊಳ್ ನಾಗಿಣಿ
ನಾಗಬಂಧದೊಳ್ ತಳ್ತು
(ರತಿಬಂಧದಲ್ಲಿ ಸೇರಿಕೊಂಡು)
ಗುಣಾರ್ಣವನಂ
ಮರುಳ್ಚಿದಳ್ (ಅರ್ಜುನನ್ನು
ಮರುಳು ಮಾಡಿದಳು)

ಪದ್ಯ-೧೭:ಅರ್ಥ:.ಅರ್ಜುನ ನನ್ನು ಆ ನಾಗಕನ್ನಿಕೆಯು ನಾಗರ ಒಡವೆಗಳ ರಾಶಿಯಲ್ಲಿ ತುಂಬಿ; ನಾಗರ ಖಂಡವೆಂಬ ಪ್ರದೇಶ, ಅಪೂರ್ವವಾದ ಪುನ್ನಾಗ ಪುಷ್ಪಗಳ ಹಾರ, ಬಗೆಬಗೆಯ ವಸ್ತ್ರಗಳು, ನಾಗದವಲ್ಲಿ (ತಾಂಬೂಲ) ಮೊದಲಾದ ನಾಗಲೋಕದ ವೈಭವಗಳಲ್ಲಿ ಮುಳುಗಿಸಿ ನಾಗಶಯ್ಯೆಯಲ್ಲಿ

ನಾಗಬಂಧವೆಂಬ

ರತಿಬಂಧದಲ್ಲಿ ಸೇರಿಕೊಂಡು

ಮರುಳು ಮಾಡಿದಳು

ವ|| ಅಂತಾಕೆಯ

ಮುದ್ದುವೆರಸಿದ

ತೊದಳ್ನುಡಿಗಂ

ಪೂಮಾಲೆವೆರಸಿದ

ಬಱಿಲ್ಮುಡಿಗಮಲಂಪುವೆರಸಿದ

ನೋಟಕ್ಕಮಿಂಬುವೆರಸಿದ

ಕೂಟಕ್ಕಂ ಪುರುಡುವೆರಸಿದ

ಕೊಂಕಿಂಗಂ ಕದ್ದವಣಿ(?)

ವೆರಸಿದ ಸೋಂಕಿಂಗಂ

ಗಾಡಿವೆರಸಿದ ಹಾವಕ್ಕಂ

ನಾಣ್ವೆರಸಿದ ಭಾವಕ್ಕಮೊಲ್ದು

ಮೋಱಿಲ್ದುಮಿರೆಯಿರೆ

ದೇವೇಂದ್ರಂಗಮಿಂದ್ರಾಣಿಗಂ

ಜಯಂನೆಂತಂತೆ-

ವಚನ:ಪದವಿಭಾಗ-

ಅರ್ಥ:ಅಂತು ಆಕೆಯ

ಮುದ್ದುವೆರಸಿದ

ತೊದಳ್ನುಡಿಗಂ (ಹಾಗೆ

ಮುದ್ದಿನಿಂದ ಕೂಡಿದ

ಲಲ್ಲೆಮಾತಿಗೂ)
ಪೂಮಾಲೆವೆರಸಿದ
ಬಱಿಲ್ಮುಡಿಗಂ
(ಹೂಮಾಲೆಯಿಂದ ಕೂಡಿ
ಜೋಲಾಡುತ್ತಿರುವ
ತುರುಬಿಗೂ)
ಅಲಂಪುವೆರಸಿದ ನೋಟಕ್ಕಂ
(ಪ್ರೀತಿಯಿಂದ ಕೂಡಿದ
ನೋಟಕ್ಕೂ) ಇಂಬುವೆರಸಿದ
ಕೂಟಕ್ಕಂ (ಸುಖಮಯವಾದ
ಕೂಡುವಿಕೆಗೂ)

ಪುರುಡುವೆರಸಿದ ಕೊಂಕಿಂಗಂ
(ಸ್ಪರ್ಧೆಯಿಂದ ಕೂಡಿದ
ವಕ್ರತೆಗೂ) ಕದ್ದವಣಿ(?)
ವೆರಸಿದ ಸೋಂಕಿಂಗಂ (
ಬಿಗಿದಪ್ಪಿದ ಆಲಿಂಗನಕ್ಕೂ)
ಗಾಡಿವೆರಸಿದ ಹಾವಕ್ಕಂ
(ಸೌಂದರ್ಯದಿಂದ ಕೂಡಿದ
ಶೃಂಗಾರ ಚೇಷ್ಟೆಗೂ)
ನಾಣ್ವೆರಸಿದ ಭಾವಕ್ಕಂ
(ನಾಯಿಕೆಯಿಂದ ಕೂಡಿದ
ಭಾವಗಳಿಗೂ) ಒಲ್ದು

ಮೊಱಲ್ದುಮಿರೆಯಿರೆ
ದೇವೇಂದ್ರಂಗಮಿಂದ್ರಾಣಿಗಂ
ಜಯಂನೆಂತಂತೆ- (ಒಲಿದು
ಪ್ರೀತಿಸಿರಲು ದೇವೇಂದ್ರನಿಗೂ
ಶಚಿದೇವಿಗೂ ಜಯಂತನು
ಹುಟ್ಟುವ ಹಾಗೆ)
ವಚನ:ಅರ್ಥ: ಹಾಗೆ
ನಾಗಕನ್ನಿಕೆಯ (ಆಕೆಯ)
ಮುದ್ದಿನಿಂದ ಕೂಡಿದ
ಲಲ್ಲೆಮಾತಿಗೂ (ತೊದಳ್ನುಡಿ)
ಹೂಮಾಲೆಯಿಂದ ಕೂಡಿ

ಜೋಲಾಡುತ್ತಿರುವ
ತುರುಬಿಗೂ ಪ್ರೀತಿಯಿಂದ
ಕೂಡಿದ ನೋಟಕ್ಕೂ
ಸುಖಮಯವಾದ
ಕೂಡುವಿಕೆಗೂ ಸ್ಪರ್ಧೆಯಿಂದ
ಕೂಡಿದ ವಕ್ರತೆಗೂ ಬಿಗಿದಪ್ಪಿದ
ಆಲಿಂಗನಕ್ಕೂ
ಸೌಂದರ್ಯದಿಂದ ಕೂಡಿದ
ಶೃಂಗಾರ ಚೇಷ್ಟೆಗೂ
ನಾಯಿಕೆಯಿಂದ ಕೂಡಿದ
ಭಾವಗಳಿಗೂ ಒಲಿದು

ಪ್ರೀತಿಸಿರಲು ದೇವೇಂದ್ರನಿಗೂ ಶಚಿದೇವಿಗೂ ಜಯಂತನು ಹುಟ್ಟುವ ಹಾಗೆ-

ಕಂ|| ಅಂತಾ
ಫಣಿಕಾಂತೆಗಮರಿ
ಕಾಂತಾಳಿಕ ಫಳಕ ತಿಳಕ
ಹರನೆನಿಪರಿಗಂ||
ಗಂ ತನಯನಧಿಕ ತೇಜೋ
ವಂತನಿಳಾವಂತನಿಂದುಮಂಡ
ಳಕಾಂತಂ|| ೧೮||

ಪದ್ಯ-೧೮:ಪದವಿಭಾಗ-ಅರ್ಥ:ಅಂತು ಆ ಫಣಿಕಾಂತೆಗಂ(ಆ ನಾಗಕನ್ನಿಕೆಗೂ) ಅರಿಕಾಂತಾಳಿಕ ಫಳಕ ತಿಳಕ ಹರನು ಎನಿಪ ಅರಿಗಂಗಂ (ಶತ್ರುಸ್ತ್ರೀಯರ ಮುಖವೆಂಬ ಹಲಗೆಯಲ್ಲಿರುವ ತಿಲಕವನ್ನು ನಾಶಪಡಿಸುವವನೆಂಬ ಅರಿಕೇಸರಿಗೂ/ ಅರ್ಜುನನಿಗೂ) ತನಯಂ

(ಇಳಾವಂತನು ಎಂಬ ಮಗನು ಹುಟ್ಟಿದನು) ಅಧಿಕ ತೇಜೋವಂತನು ಇಳಾವಂತನು ಇಂದುಮಂಡಳಕಾಂತಂ (ಚಂದ್ರಮಂಡಳದ ಕಾಂತಿಯುಳ್ಳ)

ಪದ್ಯ-೧೮:ಅರ್ಥ: . ಆ ನಾಗಕನ್ನಿಕೆಗೂ, ಶತ್ರುಸ್ತ್ರೀಯರ ಮುಖವೆಂಬ ಹಲಗೆಯಲ್ಲಿರುವ ತಿಲಕವನ್ನು

ನಾಶಪಡಿಸುವವನೆಂಬ (ಕೀರ್ತಿಯನ್ನುಳ್ಳ) ಅರ್ಜುನನಿಗೂ ಅಕ ತೇಜಸ್ಸಿನಿಂದ ಕೂಡಿದವನೂ ಚಂದ್ರಮಂಡಳದ ಕಾಂತಿಯುಳ್ಳ ಇಳಾವಂತನೆಂಬ ಮಗನು ಹುಟ್ಟಿದನು.

ವ|| ಅಂತು ಪುಟ್ಟುವುದುಮಾತನ ಬಾಲಕ್ರೀಡೆಯುಮಾಕೆಯ ಸುರತಕ್ರೀಡೆಯುಂ ತನ್ನ

ನೋಟಕ್ಕಂ ಕೂಟಕ್ಕಂ
ಸೊಗೆಯಿಸೆ ಕೆಲವು
ದಿವಸಮಿರ್ದಲ್ಲಿಂ
ಪೊಱಮಟ್ಟು ಬಂದು
ಹಿಮವದ್ಗಿರೀಂದ್ರ ತಟ
ನಿಕಟವರ್ತಿಗಳಪ್ಪಗಸ್ತ್ಯವಟ
ಮುಂ ವಸಿಷ್ಠಪರ್ವತಂಗಳೆಂಬ
ತೀರ್ಥಂಂಗಳೊಳೋಲಾಡುತ್ತು
ಮಾ ದಿಶಾಭಾಗಮನಾತ್ಮೀಯ
ಶಾಸನಾಯತ್ತಂ ಮಾಡುತ್ತುಂ
ಬಂದಿಂದುಬಿಂಬವಿಗಳದಮೃತ

ಬಿಂದು ದುರ್ದಿನಾರ್ದ್ರ
ಚಂದನಾನ್ವಿತಮುಮಶಿಶಿರ ಕರ
ರಥ ತುರಗ ಖುರ ಶಿಖರ
ನಿಖಂಡಿತ ಲವಂಗ
ಪಲ್ಲವಮುಮ್ಮೈರಾವತ
ಕರಲೂನ ಸಲ್ಲಕೀ ಶಬಳ
ಮುಮಪ್ಪುದಯಗಿರಿಯಿಂ
ಸೊಗಯಿಸುವ ಮೂಡಣ
ದೆಸೆಗೆ ವಂದು ನಂದೆಯ
ಪರನಂದೆಯಶ್ವಿನಿ
ಮಹಾನಂದೆಯೆಂಬ

ತೀರ್ಥಜಲಂಗಳೊಳೋಲಾಡು
ತ್ತುಮುದ್ವೃತ್ತ
ರಿಪುನೃಪತಿಗಳನೇಸಾಡುತ್ತುಮ
ಲ್ಲಿಂ ತಳರ್ದು ಚಪಳ ಕಪಿಬಳ
ವಿಲುಪ್ತ ವಿಗಳಿತ ಲತಾಭವನ
ಮುಮಕ ಬಳ ನಳ
ಕರತಳಗಳಿತ ಕುಳಶೈಳ ಸಹಸ್ರ
ಸಂತಾಸ ಕಳಿತ
ಸೇತುಬಂಧುರಮುಮಪ್ಪ
ದಕ್ಷಿಣ ಸಮುದ್ರದ ತಡಿವಿಡಿದು

ಬಂದು ರಾಮಚಂದ್ರಂ ವಿಹರಿಸಿದೆಡೆಗಳಂ ನೋಡಿ-

ವಚನ:ಪದವಿಭಾಗ-

ಅರ್ಥ:ಅಂತು ಪುಟ್ಟುವುದು ಆತನ ಬಾಲಕ್ರೀಡೆಯುಂ ಆಕೆಯ ಸುರತಕ್ರೀಡೆಯುಂ ತನ್ನ ನೋಟಕ್ಕಂ ಕೂಟಕ್ಕಂ ಸೊಗೆಯಿಸೆ (ರತಿಕ್ರೀಡೆಯು ತನ್ನ ಕೂಟಕ್ಕೂ ಸೊಗಯಿಸುತ್ತಿರಲು) ಕೆಲವು ದಿವಸಂ ಇರ್ದು, ಅಲ್ಲಿಂ

ಪೊಱಮಟ್ಟು (ಕೆಲವು
ದಿವಸವಿದ್ದು ಅಲ್ಲಿಂದ
ಹೊರಟು) ಬಂದು
ಹಿಮವದ್ಗಿರೀಂದ್ರ ತಟ
ನಿಕಟವರ್ತಿಗಳಪ್ಪ
(ಶ್ರೇಷ್ಠವಾದ ಹಿಮಾಲಯ
ಪರ್ವತದ ತಪ್ಪಲಿನ
ಸಮೀಪದಲ್ಲಿರುವ)
ಅಗಸ್ತ್ಯವಟಮುಂ
ವಸಿಷ್ಠಪರ್ವತಂಗಳೆಂಬ
ತೀರ್ಥಂಗಳೊಳ್

ಓಲಾಡುತ್ತುಂ (ವಿಹರಿಸಿ)ಆ
ದಿಶಾಭಾಗಮನು ಆತ್ಮೀಯ
ಶಾಸನಾಯತ್ತಂ ಮಾಡುತ್ತುಂ
(ಆ ದಿಗ್ಭಾಗ ಪ್ರದೇಶಗಳನ್ನೆಲ್ಲ
ತನ್ನ ಆಜ್ಞಾನುವರ್ತಿಗಳನ್ನಾಗಿ
ಮಾಡಿ) ಬಂದು ಇಂದುಬಿಂಬ
ವಿಗಳತ್ ಅಮೃತಬಿಂದು
ದುರ್ದಿನ
ಆರ್ದ್ರ(ಚಂದ್ರಬಿಂಬದಿಂದ
ಸ್ರವಿಸುತ್ತಿರುವ ಅಮೃತದ
ಹನಿಗಳೆಂಬ ದುರ್ದಿನದಿಂದ/

ತೇವ? ಒದ್ದೆಯಾದ) ಚಂದನ
ಆನ್ವಿತಂ (ಶ್ರೀಗಂಧದಿಂದ
ಕೂಡಿದ) ಉಮಶಿಶಿರ ಕರ ರಥ
ತುರಗ ಖುರ ಶಿಖರ ನಿಖಂಡಿತ
ಲವಂಗ
ಪಲ್ಲವಮುಂ(ಸೂರ್ಯನ
ಕುದುರೆಯ ಗೊರಸಿನ
ತುದಿಯಿಂದ ಕತ್ತರಿಸಲ್ಪಟ್ಟ
ಲವಂಗದ ಬಳ್ಳಿಯ
ಚಿಗುರನ್ನುಳ್ಳ) ಐರಾವತ
ಕರಲೂನ (ಸೊಂಡಿಲಿನಿಂದ

ಕತ್ತರಿಸಲ್ಪಟ್ಟ) ಸಲ್ಲಕೀ ಶಬಳಮುಂ (ಆನೆಬೇಲದ ಮರದ ವಿವಿಧ ಬಣ್ಣಗಳಿಂದ - ಕೂಡಿದ) ಅಪ್ಪ ಉದಯಗಿರಿಯಿಂ ಸೊಗಯಿಸುವ (ಸುಂದರ) ಮೂಡಣ ದೆಸೆಗೆ ವಂದು (ಪೂರ್ವದಿಕ್ಕಿಗೆ ಬಂದು), ನಂದೆಯ ಅಪರನಂದೆ ಅಶ್ವಿನಿ ಮಹಾನಂದೆಯೆಂಬ ತೀರ್ಥಜಲಂಗಳೊಳ್

ಓಲಾಡುತ್ತುಂ (ವಿಹರಿಸತ್ತಾ)
ಉದ್ವೃತ್ತ ರಿಪುನೃಪತಿಗಳನು
ಏಸಾಡುತ್ತುಂ (ಪ್ರತಿಭಟಿಸಿದ
ರಾಜರುಗಳನ್ನು ಹೊಡೆದು
ಸೋಲಿಸುತ್ತಾ), ಅಲ್ಲಿಂ
ತಳರ್ದು (ಅಲ್ಲಿಂದ ಹೊರಟು)
ಚಪಳ ಕಪಿಬಳ (ಕಪಿಗಳ
ಸೈನ್ಯದಿಂದ) ವಿಲುಪ್ತ
(ಹಾಳುಮಾಡಿದ) ವಿಗಳಿತ
(ಶಿಥಿಲವಾದ)
ಲತಾಭವನಮುಂ, ಅಧಿಕ ಬಳ

(ವಾನರ ಶಿಲ್ಪಿ) ನಳ

ಕರತಳಗಳಿತ (ಕೈತಲದಿಂದ

ಸರಿಸಿ) ಕುಳಶೈಳ ಸಹಸ್ರ

ಸಂತಾಸ ಕಳಿತ

ಸೇತುಬಂಧುರಮುಂ ಅಪ್ಪ

(ಅಕ ಬಲವಂತನಾದ ವಾನರ

ಶಿಲ್ಪಿ ನಳನು ಸಾವಿರಾರು

ಕುಲಪರ್ವತಗಳನ್ನು ಕೈಯಿಂದ

ಸರಿಸಿ ಸೇರಿಸಿ ನಿರ್ಮಿಸಿದ

ಸೇತುವೆಯಿಂದ

ರಮಣೀಯವಾದ) ದಕ್ಷಿಣ

ಸಮುದ್ರದ ತಡಿವಿಡಿದು (ದಡವನ್ನುಅನುಸರಿಸಿ) ಬಂದು ರಾಮಚಂದ್ರಂ ವಿಹರಿಸಿದ ಎಡೆಗಳಂ (ಸ್ಥಳಗಳನ್ನು) ನೋಡಿ-

ವಚನ:ಅರ್ಥ:(ಅರ್ಜುನ ತನ್ನ ಮಗನ) ಇಳಾವಂತ ಬಾಲಕನ ಬಾಲಕ್ರೀಡೆಯು ತನ್ನ ನೋಟಕ್ಕೂ ಅವಳ ರತಿಕ್ರೀಡೆಯು ತನ್ನ ಕೂಟಕ್ಕೂ ಸೊಗಯಿಸುತ್ತಿರಲು ಕೆಲವು

ದಿವಸವಿದ್ದು ಅಲ್ಲಿಂದ
ಹೊರಟು, ಶ್ರೇಷ್ಠವಾದ
ಹಿಮಾಲಯ ಪರ್ವತದ
ತಪ್ಪಲಿನ ಸಮೀಪದಲ್ಲಿರುವ
ಅಗಸ್ತ್ಯವಟ ಮತ್ತು
ವಸಿಷ್ಠಪರ್ವತವೆಂಬ
ಪವಿತ್ರಕ್ಷೇತ್ರಗಳಲ್ಲಿ ವಿಹರಿಸಿ ಆ
ದಿಗ್ಭಾಗ ಪ್ರದೇಶಗಳನ್ನೆಲ್ಲ ತನ್ನ
ಆಜ್ಞಾನುವರ್ತಿಗಳನ್ನಾಗಿ
ಮಾಡಿಕೊಂಡನು.
ಚಂದ್ರಬಿಂಬದಿಂದ

ಸ್ರವಿಸುತ್ತಿರುವ ಅಮೃತದ
ಹನಿಗಳೆಂಬ ದುರ್ದಿನದಿಂದ
ಒದ್ದೆಯಾದ ಶ್ರೀಗಂಧದಿಂದ
ಕೂಡಿದ ಸೂರ್ಯನ
ಕುದುರೆಯ ಗೊರಸಿನ
ತುದಿಯಿಂದ ಕತ್ತರಿಸಲ್ಪಟ್ಟ
ಲವಂಗದ ಬಳ್ಳಿಯ
ಚಿಗುರನ್ನುಳ್ಳದ್ದೂ
ಐರಾವತವೆಂಬ ಇಂದ್ರನ
ಆನೆಯ ಸೊಂಡಲಿನಿಂದ
ಮುರಿಯಲ್ಪಟ್ಟ ಆನೆಬೇಲದ

ಮರದ ವಿವಿಧ ಬಣ್ಣಗಳಿಂದ
ಕೂಡಿದ ಪೂರ್ವದಿಕ್ಕಿಗೆ
ಬಂದನು. ನಂದೆ, ಅಪರನಂದೆ,
ಅಶ್ವಿನಿ, ಮಹಾನಂದೆಯೆಂಬ
ತೀರ್ಥೋದಕಗಳಲ್ಲಿ
ವಿಹರಿಸುತ್ತಾ ಪ್ರತಿಭಟಿಸಿದ
ರಾಜರುಗಳನ್ನು ಹೊಡದು
ಸೋಲಿಸುತ್ತ, ಅಲ್ಲಿಂದ
ಹೊರಟು ಚಪಳವಾದ
ಕಪಿಗಳ ಸಮೂಹದಿಂದ
ನಾಶಮಾಡಲ್ಪಟ್ಟ

ಬಳ್ಳಿವನೆಗಳಿಂದಲೂ ಅಕ
ಬಳವಂತನಾದ ನಳನು
ಸಾವಿರಾರು
ಕುಲಪರ್ವತಗಳನ್ನು ಸೇರಿಸಿ
ನಿರ್ಮಿಸಿದ
ಸೇತುವೆಯಿಂದಲೂ ಅತಿ
ರಮಣೀಯವಾದ
ದಕ್ಷಿಣಸಮುದ್ರದ
ತೀರಪ್ರದೇಶವನ್ನು ಅನುಸರಿಸಿ
ಬಂದು (ಹಿಂದೆ)

ರಾಮಚಂದ್ರನು ವಿಹರಿಸಿದ ಸ್ಥಳಗಳನ್ನು ನೋಡಿ-

<u>ಅರ್ಜುನನ ದಕ್ಷಿಣ ವಿಜಯಯಾತ್ರೆ</u>

ಉ|| ಅಂದಿದು ಸೀತೆಯೊಳ್

ನೆರೆದು ನಿಂದೆಡೆ

ತತ್ಖರದೂಷಣರ್ಕಳಂ

ಕೊಂದೆಡೆ ಪೋಗಿ

ಪೊಮ್ಮರೆಯನೆಚ್ಚೆಡೆ

ತಪ್ಪದಿದಪ್ಪುದೆಂದು ಕಾ|

ಯ್ಪಿಂ ದಶಕಂಠನಂ ತ್ರಿದಶ ಕಂಟಕನಂ ಕೊಲಲೆಂದು ರಾಮನಾ ದಂದಿನ ಸಾಹಸಂ ಮನದೊಳಾವರಿಸಿತ್ತಕಳಂಕರಾಮನಾ|| ೧೯||

ಪದ್ಯ-೧೯:ಪದವಿಭಾಗ-ಅರ್ಥ:ಅಂದಿದು ಸೀತೆಯೊಳ್ ನೆರೆದು (ಸೇರಿ) ನಿಂದ ಎಡೆ (ಸ್ಥಳ) ತತ್ ಖರದೂಷಣರ್ಕಳಂ ಕೊಂದ

ಎಡೆ ಪೋಗಿ ಪೊಮ್
ಅರೆಯನು ಎಚ್ಚೆಡೆ ತಪ್ಪದ
ಇದು ಅಪ್ಪುದೆಂದು (ಚಿನ್ನದ
ಜಿಂಕೆಯನ್ನು ಹೊಡೆದ
ಸ್ಥಳವಿದು,) ಕಾಯ್ಪಿಂ
ದಶಕಂಠನಂ ತ್ರಿದಶ ಕಂಟಕನಂ
ಕೊಲಲೆಂದು
(ವಿಶೇಷಕೋಪದಿಂದ
ದೇವತೆಗಳಿಗೆ ಕಂಟಕನಾಗಿದ್ದ
ಆ ಹತ್ತುತಲೆಯ ರಾವಣನನ್ನು
ಕೊಲ್ಲಲು) ರಾಮನಾದ

ಅಂದಿನ ಸಾಹಸಂ
ಮನದೊಳು ಅವರಿಸಿತ್ತು
ಅಕಳಂಕರಾಮನಾ(ಅವತರಿಸಿ
ದ ರಾಮನ ಅಂದಿನ
ಸಾಹಸವು
ಅಕಳಂಕರಾಮನಾದ
ಅರ್ಜುನನ ಮನಸ್ಸಿನಲ್ಲಿ ಪುನ
ಅಂಕುರಿಸಿತು)
ಪದ್ಯ-೧೯:ಅರ್ಥ: ಹಿಂದೆ
ತ್ರೇತಾಯುಗದಲ್ಲಿ
ಸೀತೆಯೊಡನೆ ಸೇರಿ ನಿಂತ

ಸ್ಥಳವಿದು, ಆ
ಖರದೂಷಣರನ್ನು ಕೊಂದ
ಸ್ಥಳವಿದು, ಹೋಗಿ ಚಿನ್ನದ
ಜಿಂಕೆಯನ್ನು ಹೊಡೆದ
ಸ್ಥಳವಿದು, ಆಗಿರಬೇಕು ಎಂದು
ವಿಶೇಷಕೋಪದಿಂದ
ದೇವತೆಗಳಿಗೆ ಕಂಟಕನಾಗಿದ್ದ
ಆ ಹತ್ತುತಲೆಯ ರಾವಣನನ್ನು
ಕೊಲ್ಲಲು ಅವತರಿಸಿದ
ರಾಮನ ಅಂದಿನ ಸಾಹಸವು
ಅಕಳಂಕರಾಮನಾದ

ಅರ್ಜುನನ ಮನಸ್ಸಿನಲ್ಲಿ ಪುನ ಅಂಕುರಿಸಿತು (ಇಲ್ಲಿ ಕವಿ ಅರ್ಜುನನು ಹಿಂದೆ ರಾಮನಾಗಿ ಅವತರಿಸಿದ್ದನೆಂದೂ ಅದನ್ನು ನೆನಪಿಸಿಕೊಳ್ಳುತ್ತಿದ್ದನೆಂದೂ ಹೇಳಿದ್ದಾನೆ.)

ವ|| ಅಂತು ರಾಮ ಜನ್ಮೋತ್ಪತ್ತಿಯೊಳಾದ ತನ್ನಯ ಮುನ್ನಿನ ಸಾಹಸಂಗಳಂ

ನೆನೆಯುತ್ತುಂ ಬಂದಗಸ್ತ್ಯತೀರ್ಥಮಂ ಕಂಡು-

ವಚನ:ಪದವಿಭಾಗ-

ಅರ್ಥ:ಅಂತು ರಾಮ ಜನ್ಮ ಉತ್ತತ್ತಿಯೊಳು ಆದ ತನ್ನಯ ಮುನ್ನಿನ ಸಾಹಸಂಗಳಂ ನೆನೆಯುತ್ತುಂ ಬಂದು ಅಗಸ್ತ್ಯತೀರ್ಥಮಂ ಕಂಡು-

ವಚನ:ಅರ್ಥ:ರಾಮಾವತಾರ ದಲ್ಲಾದ ಅಂದಿನ (ತನ್ನ ಹಿಂದಿನ) ಸಾಹಸಗಳನ್ನು

ನೆನೆಯುತ್ತ ಬಂದು
ಅಗಸ್ತ್ಯತೀರ್ಥವನ್ನು ಕಂಡನು.

<u>ಮಲಯಪರ್ವತದಲ್ಲಿ ಅರ್ಜುನ</u>

ಅಗಸ್ತ್ಯ ಮಹರ್ಷಿ (ಕಾಲ್ಪನಿಕ)

ಮ|| ಬಳೆಯಲ್ಕಣ್ಮಿದುದಿಲ್ಲ
ವಿಂಧ್ಯಗಿರಿಯುಂ
ತನ್ನಾಜ್ಞೆಯಿಂದೊರ್ಮೆ ಮು
ಕ್ಕುಳಿಸಲ್ಕಂಬು ಸಾಲ್ದುದಿಲ್ಲ
ಜಗಮಂ ತಿಂದಿರ್ದ ವಾತಾಪಿ
ಪೊ|
ಕ್ಕಳುರ್ವಾತ್ಮೋದರ ವಹ್ನಿಯಿಂ
ಪೊಱಮಡಲ್
ತಾನಾರ್ತನಿಲ್ಲೞ್ದುದಿ
ಲ್ಲೆಳೆ ತೇಂಕಿರ್ದುದು ಭಾರದಿಂ
ಬಡಗೆನಲ್

ಪೆಂಪಾರ್ಗಗಸ್ತ್ಯಂಬರಂ|| ೨೦||

ಪದ್ಯ-೨೦:ಪದವಿಭಾಗ-

ಅರ್ಥ:ಬಳೆಯಲ್ಕೆ ಅಣ್ಮಿದುದಿಲ್ಲ (ಪ್ರಯತ್ನಿಸಲಿಲ್ಲ) ವಿಂಧ್ಯಗಿರಿಯುಂ ತನ್ನಾಜ್ಞೆಯಿಂದ (ವಿಂಧ್ಯಪರ್ವತವು ತನ್ನ ಆಜ್ಞೆಯನ್ನು ಮೀರಿ ಬಳೆಯಲು ಪ್ರಯತ್ನಿಸಲಿಲ್ಲ.) ಒರ್ಮೆ ಮುಕ್ಕುಳಿಸಲ್ಕಂಬು (ಒಮ್ಮೆ

ಬಾಯ್ಮುಕ್ಕಳಿಸಲೂ)
ಸಾಲ್ದುದಿಲ್ಲ (ಸಾಕಾಗಲಿಲ್ಲ);
ಜಗಮಂ ತಿಂದಿರ್ದ ವಾತಾಪಿ
ಪೊಕ್ಕು (ತನ್ನ ಬಳಿ
ಬಂದವರನ್ನೆಲ್ಲಾ ತಿಂದ)
ವಾತಾಪಿಯೆಂಬ ರಾಕ್ಷಸನು
ಅಗಸ್ತ್ಯನ ಹೊಟ್ಟೆಯನನ್ನು
ಪ್ರವೇಶಮಾಡಿ,) ಅಳುರ್ವ
ಆತ್ಮೋದರ ವಹ್ನಿಯಿಂ
ಪೊಱಮಡಲ್ ತಾನು
ಆರ್ತನು ಇಲ್ಲ(ಉರಿಯುತ್ತಿದ್ದ

ಅವನ ಜಠರಾಗ್ನಿಯಿಂದ
ಹೊರಟುಬರಲು
ಸಮರ್ಥನಾಗಲಿಲ್ಲ.) ;
ಅಬ್ಧಿದಿಲ್ಲ (ಈ ಋಷಿಯ
ಮಹಿಮೆಯಿಂದ ಭೂಮಿ-
ಮುಳುಗಲಿಲ್ಲ) ಎಳೆ (ಇಳೆ-
ಭೂಮಿ) ತೇಂಕಿರ್ದುದು
(ತೇಲಿಹೋಯಿತು) ಭಾರದಿಂ
ಬಡಗು (ಉತ್ತರಕ್ಕೆ) ಎನಲ್
(ಎಂದು ಹೇಳಲು), ಪೆಂಪು
ಆರ್ಗೆ ಅಗಸ್ತ್ಯಂಬರಂ(ಆ

ಮಹಿಮೆ ಅಗಸ್ತ್ಯ ಋಷಿಗಳಿಗಲ್ಲದೆ ಮತ್ತಾರಿಗುಂಟು)

ಪದ್ಯ-೨೦:ಅರ್ಥ: ಅಗಸ್ತ್ಯ ಋಷಿಯ ಮಹಿಮೆಯ ವರ್ಣನೆ: ವಿಂಧ್ಯಪರ್ವತವು ತನ್ನ (ಅಗಸ್ತ್ಯನ) ಆಜ್ಞೆಯನ್ನು ಮೀರಿ ಬೆಳೆಯಲು ಪ್ರಯತ್ನಿಸಲಿಲ್ಲ. ಸಮುದ್ರವು ತನಗೆ ಒಮ್ಮೆ ಬಾಯ್ಮುಕ್ಕಳಿಸಲೂ

ಸಾಕಾಗಲಿಲ್ಲ. ಜಗತ್ತನ್ನು ನುಂಗಿದ -(ತನ್ನ ಬಳಿ ಬಂದವರನ್ನೆಲ್ಲಾ ತಿಂದ) ವಾತಾಪಿಯೆಂಬ ರಾಕ್ಷಸನು ಅಗಸ್ತ್ಯನ ಹೊಟ್ಟೆಯನನ್ನು ಪ್ರವೇಶಮಾಡಿ, ಉರಿಯುತ್ತಿದ್ದ ಅವನ ಜಠರಾಗ್ನಿಯಿಂದ ಹೊರಟುಬರಲು ಸಮರ್ಥನಾಗಲಿಲ್ಲ. ಭೂಮಿಯು ತನ್ನ ಭಾರಕ್ಕೆ ಮುಳುಗದೆ ಉತ್ತರಕ್ಕೆ

ಸರಿಯಿತು ಎಂಬ (ಮಹಿಮೆ)
ಮಹಿಮೆ
ಅಗಸ್ತ್ಯಋಷಿಗಳಿಗಲ್ಲದೆ
ಮತ್ತಾರಿಗುಂಟು!

ಅಗಸ್ತ್ಯರ ಪೂರ್ವ ಕಥೆ:

- ಅಗಸ್ತ್ಯ ಸಪ್ತರ್ಷಿಗಳಲ್ಲಿ ಒಬ್ಬನು. ಪ್ರಜಾಪತಿ ಬ್ರಹ್ಮನ ಪುತ್ರ ಮರೀಚಿ. ಈ ಮರೀಚಿಯ ಮಗ ಕಶ್ಯಪ. ಈ ಕಶ್ಯಪರಿಗೆ ಅದಿತಿಯಲ್ಲಿ ಮಿತ್ರಾವರುಣರೆಂಬ ಎರಡು ಅವಳಿ ಮಕ್ಕಳು. ಅವರು ಒಮ್ಮೆ ಯಜ್ಞ ಸಮಯದಲ್ಲಿ ಅಪ್ಸರೆ ಊರ್ವಶಿಯನ್ನು ನೋಡಿ ವೀರ್ಯಸ್ಖಲನವಾಯಿತು. ಅದನ್ನು ಮಡಿಕೆಯಲ್ಲಟ್ಟಾಗ ಎರಡು ಶಿಶುಗಳು ಹುಟ್ಟಿಬಂದವು. ಹಾಗೆ ಹುಟ್ಟಿದ ಮೊದಲ ಶಿಶುವೇ ಅಗಸ್ತ್ಯ. ಆದ್ದರಿಂದ ಇವರು ಕುಂಭಸಂಭವ.
- ವಿಂಧ್ಯ ಹಿಮವಂತ ಸ್ಪರ್ಧೆಯಿಂದ ಬೆಳೆಯುತ್ತಿದ್ದರು. ಅದಕ್ಕೆ ಅಗಸ್ತ್ಯರು ದಕ್ಷಿಣಕ್ಕೆ ಹೋಗುವಾಗ ಪರ್ವತ ವಿಂಧ್ಯನು ನಮಿಸಿ ಎತ್ತರ ತಗ್ಗಿಸಿದನು. ವೀಂಧ್ಯನು ಬೆಳೆದು ಸೂರ್ಯ ಚಂದ್ರರಿಗೂ ಅಡ್ಡ ಬರುತ್ತಿದ್ದುದರಿಂದ, ಅವರು ಸೂರ್ಯ, ಚಂದ್ರ ಮತ್ತು ಜೀವಿಗಳು ವಿಂಧ್ಯ ಪರ್ವತವನ್ನು ಸುಲಭವಾಗಿ ಹಾದು ಹೋಗಲು ಅನುಕೂಲ ಮಾಡಲು, ತಾವು ಹಿಂತಿರುಗಿ ಉತ್ತರಕ್ಕೆ ಬರುವವರೆಗೂ ವಿಂಧ್ಯನಿಗೆ ತಲೆ ಎತ್ತದೆ, ಬೆಳೆಯದೆ ಹಾಗೆಯೇ ಇರಲು ಹೇಳಿದರು. ಆದರೆ ಅವರು ಉತ್ತರಕ್ಕೆ ಬರಲೇ ಇಲ್ಲ. ನಂತರ ವಿಂಧ್ಯ ಎತ್ತರ ಬೆಳೆಯಲಿಲ್ಲ.
- ನರಭಕ್ಷಕ ವಾತಾಪಿ ಅಥಿತಿಗಳನ್ನು ಕರೆದು ಅವರ ಊಟಕ್ಕೆ ತಾನೇ ಕುರಿಯಾಗತ್ತಿದ್ದ. ಅವನ ತಮ್ಮ ಇಲ್ವಲ ಅವನನ್ನು ಅಡಿಗೆಮಾಡಿ ಅವರಿಗೆ ಬಡಿಸುತ್ತಿದ್ದ. ನಂತರ, 'ವಾತಾಪೀ ಹೊರಗೆ ಬಾ,' ಎಂದು ಕರೆಯುತ್ತಿದ್ದ. ಅವನು ಅಥಿತಿಯ ಹೊಟ್ಟೆಯನ್ನು ಒಡೆದುಕೊಂಡು ಬರುತ್ತಿದ್ದ ನಂತರ ಇಬ್ಬರೂ ಅಥಿತಿಯನ್ನು ತಿನ್ನುತ್ತಿದ್ದರು. ಓಮ್ಮೆ ಅಗಸ್ತ್ಯ ಮಹರ್ಷಿಯನ್ನು ಕರದ. ಅವರು ಇವನ ತಂತ್ರ ತಿಳಿದು ಊಟ ಮಾಡಿದವರೇ, "ವಾತಾಪಿ ಜೀರ್ಣೋಭವ" ಎಂದು ಅವನನ್ನು ಜೀರ್ಣಿಸಿಕೊಂಡು ಬಿಟ್ಟರು.ಇಲ್ವಲನು ಕರೆದರೆ ವಾತಾಪಿ ಬರಲಿಲ್ಲ. ಅವರ ಮೇಲೆ

ಆಕ್ರಮಣ ಮಾಡಿದ. ಅಗಸ್ತ್ಯರು ಕಣ್ಣಿನ ದೃಷ್ಟಿಯಿಂದಲೇ ಅವನನ್ನು ಸುಟ್ಟುಬಿಟ್ಟರು.

- ಇಂದ್ರ ಮತ್ತು ವೃತ್ರರ ನಡುವಿನ ಯುದ್ಧದಲ್ಲಿ, ಎಲ್ಲಾ ರಾಕ್ಷಸರು ಸಮುದ್ರದಲ್ಲಿ ಅಡಗಿದಾಗ, ದೇವೇಂದ್ರ ಅಗಸ್ತ್ಯರ ಸಹಾಯ ಕೇಳಿದ, ಆಗ ಅವರು ಸಾಗರವನ್ನೇ ಒಂದೇ ಆಪೋಶನಕ್ಕೆ ಸಮುದ್ರವನ್ನು (ಹಸ್ತದಲ್ಲಿ ನೀರು ಕುಡಿದ ಹಾಗೆ) ಕುಡಿದುಬಿಡುತ್ತಾರೆ, ಹಾಗೆ ಎಲ್ಲಾ ರಾಕ್ಷಸರನ್ನು ಬಹಿರಂಗಪಡಿಸುತ್ತಾರೆ (ವನಪರ್ವ ಮಹಾಭಾರತ ಮತ್ತು ರಾಮಾಯಣ ಕಾಂಡ ೬)
- ಅಗಸ್ತ್ಯನು ಭೂಮಿಯನ್ನು ಮುಳುಗದಂತೆ ತಡೆದ ಕಥೆಯನ್ನು ಯಾವ ಪುರಾಣದಿಂದ ತೆಗೆದುಕೊಂಡಿದ್ದಾನೆಂದು ತಿಳಿಯುವುದಿಲ್ಲ.

ವ|| ಎಂದಗಸ್ತ್ಯತೀರ್ಥ ಸೌಭದ್ರ ಪೌಳೋಮ ಕಾಂಭೋಜ ಭಾರದ್ವಾಜಮೆಂಬಯ್ದು ತೀರ್ಥಂಗಳೊಳ್ ವರ್ಧಮಾನನೆಂಬ ಋಷಿಯ ಶಾಪದೊಳುಗ್ರಗ್ರಾಹ

ಸ್ವರೂಪದೊಳಿರ್ದಚ್ಚರಸೆ ಯರುಮಂ ವಿಶಾಪೆಯರ್ಮಾಡಿ ಮಳಯಪರ್ವತಮನೆಯ್ದಿವಂ ದು-

ವಚನ:ಪದವಿಭಾಗ-

ಅರ್ಥ:ಎಂದು ಅಗಸ್ತ್ಯತೀರ್ಥ ಸೌಭದ್ರ ಪೌಲೋಮ ಕಾಂಭೋಜ ಭಾರದ್ವಾಜಮೆಂಬ ಅಯ್ದು (ಐದು) ತೀರ್ಥಂಗಳೊಳ್

(ತೀರ್ಥಂಗಳಲ್ಲಿ)
ವರ್ಧಮಾನನೆಂಬ ಋಷಿಯ
ಶಾಪದೊಳ್ ಉಗ್ರಗ್ರಾಹ
ಸ್ವರೂಪದೊಳ್
ಇರ್ದ(ಭಯಂಕರ ಮೊಸಳೆಯ
ರೂಪದಲ್ಲಿದ್ದ)
ಅಚ್ಚರಸೆಯರುಮಂ
ವಿಶಾಪೆಯರ್ಮಾಡಿ
(ಅಪ್ಸರಸ್ತ್ರೀಯರನ್ನು ಶಾಪ
ವಿಮೋಚಿತರನ್ನಾಗಿ ಮಾಡಿ)

ಮಳಯಪರ್ವತಮನು ಐಯ್ದಿವಂದು (ಬಂದು ತಲುಪಿ) **ವಚನ:ಅರ್ಥ:**ಎಂದು ಆಲೋಚಿಸುತ್ತಾ, ಅರ್ಜುನನು, ಅಗಸ್ತ್ಯತೀರ್ಥ, ಸೌಭದ್ರ, ಪೌಳೋಮ, ಕಾಂಭೋಜ, ಭಾರದ್ವಾಜವೆಂಬ ಅಯ್ದು ತೀರ್ಥಗಳಲ್ಲಿ ಸಂಚರಿಸಿ ವರ್ಧಮಾನನೆಂಬ ಋಷಿಯ ಶಾಪದಿಂದ ಭಯಂಕರವಾದ ಮೊಸಳೆಯ ಆಕಾರದಲ್ಲಿದ್ದ

ಅಪ್ಸರಸ್ತ್ರೀಯರನ್ನು ಶಾಪ ವಿಮೋಚಿತರನ್ನಾಗಿ ಮಾಡಿ ಮಲಯಪರ್ವತಕ್ಕೆ ಬಂದು ತಲುಪಿದನು.

ಚಂ|| ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆ ತ್ತುದು ಸಿರಿಕಂಡಮುಂ ಪದೆದು ತೀಡುವ ಗಾಳಿಯುಮಿಲ್ಲಿ ಪುಟ್ಟಿ ಪೋ|

ಗದು ಪೊಸ ಸುಗ್ಗಿ

ಮೂಗುವಡದಿಲ್ಲಿಯ ಕೋಗಿಲೆ

ಬಂದಮಾವು ಬೀ

ಯದು ಕುಸುಮಾಸ್ತ್ರನಾಜ್ಞೆ

ತವದೆಲ್ಲಿಯುಮಿಲ್ಲಿಯ

ನಂದನಂಗಳೊಳ್‌॥ ೨೧॥

ಪದ್ಯ-೨೧:ಪದವಿಭಾಗ-

ಅರ್ಥ:ಇದು ಮಳಯಾಚಳಂ

ಮಳಯಜಂ

ಮಳಯಾನಿಳನೆಂದು

ಪೆಂಪುವೆತ್ತುದು

(ಪ್ರಸಿದ್ಧಿಪಡೆದಿದೆ)
ಸಿರಿಕಂಡಮುಂ (ಶ್ರೀಗಂಧದ
ಪರಿಮಳವನ್ನು) ಪದೆದು
ತೀಡುವ ಗಾಳಿಯುಮಿಲ್ಲಿ
ಪುಟ್ಟಿ ಪೋಗದು ಪೊಸ ಸುಗ್ಗಿ
(ವಸಂತ ಮಾಸ)
ಮೂಗುವಡದಿಲ್ಲಿಯ ಕೋಗಿಲೆ
ಬಂದಮಾವು ಬೀಯದು
ಕುಸುಮಾಸ್ತ್ರನಾಜ್ಞೆ
ತವದೆಲ್ಲಿಯುಮಿಲ್ಲಿಯ
ನಂದನಂಗಳೊಳ್|

ಪದ್ಯ-೨೧:ಅರ್ಥ: ಇದು ಮಲಯಪರ್ವತ, ಶ್ರೀಗಂಧಕ್ಕೆ ಮಲಯಜನೆಂದು ತಂಪಾದ ಗಾಳಿಗೆ ಮಲಯಾನಿಲ ಎಂದೂ ಹೆಸರು ಬಂದುದು ಇಲ್ಲಿ ಹುಟ್ಟಿದುದರಿಂದಲೇ, ಶ್ರೀಗಂಧದ ಪರಿಮಳವನ್ನು ಪಡೆದು ಬೀಸುವ ಗಾಳಿಯುಮಿಲ್ಲಿ ವಸಂತಋತುವೂ ಇಲ್ಲಿ ಹುಟ್ಟಿ ಮತ್ತೆಲ್ಲಿಗೂ ಹೋಗುವುದಿಲ್ಲ.

ಇಲ್ಲಿಯ ಕೋಗಿಲೆಯ
ಮೂಕತೆಯನ್ನು
ಪಡೆಯುವುದಿಲ್ಲ, ಫಲ ಬಿಟ್ಟ
ಮಾವು ಎಂದೂ
ಮುನಿದುಹೋಗುವುದಿಲ್ಲ.
ಇಲ್ಲಿಯ ನಂದನವನಗಳಲ್ಲಿ
ಮನ್ಮಥನ ಆಜ್ಞೆ ಎಂದೂ
ತಪ್ಪುವುದಿಲ್ಲ.

ಮ|| ಇದಱಭ್ರಂಕಷ ಕೂಟ ಕೋಟಿಗಳೊಳಿರ್ದಂಭೋಜ ಷಂಡಂಗಳಂ

ಪುದಿದುಷ್ಣಾಂಶುವಿನೂರ್ಧ್ವ
ಗಾಂಶುನಿವಹಂ
ಮೆಯ್ಯೆಟ್ಟಲರ್ಚುತ್ತುಮಿ|
ರ್ಪುದು ಮಾದ್ಯದ್ಗಜ ಗಂಡ
ಭಿತ್ತಿ ಕರ್ಷಣಪ್ರೋದ್ಭೇದದಿಂ
ಸಾರ್ದು ಬಂ
ದಿದಿರೊಳ್ ಕೂಡುವುದಿಲ್ಲಿ
ಚಂದನ ರಸಂ ಕೆಂಬೊನ್ನ
ಟಂಕಂಗಳೊಳ್|| ೨೨||

ಪದ್ಯ-೨೨:ಪದವಿಭಾಗ-

ಅರ್ಥ:ಇದಱ ಅಭ್ರಂಕಷ

ಕೂಟ ಕೋಟಿಗಳೊಳ್
ಇರ್ದ(ಇದರ ಅನೇಕ
ಆಕಾಶಗಾಮಿಯಾದ
ಶಿಖರಗಳ ಮೇಲಿರುವ)
ಅಂಭೋಜ ಷಂಡಂಗಳಂ
(ತಾವರೆಗಳ ಸಮೂಹವನ್ನು)
ಪುದಿದು (ವ್ಯಾಪಿಸಿ)
ಉಷ್ಣಾಂಶುವಿನ
ಊರ್ಧ್ವಗಾಂಶು ನಿವಹಂ
(ಸೂರ್ಯನ
ಊರ್ಧ್ವಗಾಮಿಯಾದ ಉಷ್ಣ

ಕಿರಣಗಳು) ಮೆಯ್ಯಿಟ್ಟು
(ಮೈಯನ್ನು ಇಟ್ಟು)
ಅಲರ್ಚುತ್ತುಂ ಇರ್ಪುದು
(ಅರಳಿಸುತ್ತ ಇರುವುದು);
ಮಾದ್ಯತ್ (ಮದಿಸಿದ) ಗಜ
ಗಂಡ ಭಿತ್ತಿ (ಗಜದ
ಗಂಡಸ್ಥಳವೆಂಬ ಗೋಡೆಗಳ)
ಕರ್ಷಣ (ಉಜ್ಜುವಿಕೆಯಿಂದ)
ಪ್ರೋದ್ಭೇದದಿಂ (ಪ್ರೋತ್
ಬೇಧದಿಂ -ಮುರಿದು
ಸ್ರವಿಸುತ್ತಿರುವ)

ಸಾರ್ದುಬಂದು (ಸಮೀಪಿಸಿ ಬಂದು) ಇದಿರೊಳ್ ಕೂಡುವುದು ಇಲ್ಲಿ (ಇಲ್ಲಿ ಸೇರುವುದು.) ಚಂದನ ರಸಂ ಕೆಂಬೊನ್ನ ಟಂಕಂಗಳೊಳ್ (ಶ್ರೀಗಂಧದ ರಸವು ಹರಿದುಬಂದು ಇಲ್ಲಿಯ ಅಪರಂಜಿಯ/ಕೆಂಪು ಬಣ್ಣದ ಪರ್ವತದ ತಪ್ಪಲುಗಳನ್ನು ಸೇರುತ್ತದೆ.)

ಪದ್ಯ-೨೨:ಅರ್ಥ: ಇದರ ಅನೇಕ ಆಕಾಶಗಾಮಿಯಾದ ಶಿಖರಗಳ ಮೇಲಿರುವ ತಾವರೆಗಳ ಸಮೂಹವನ್ನು ಸೂರ್ಯನ ಊರ್ಧ್ವಗಾಮಿಯಾದ ಉಷ್ಣ ಕಿರಣಗಳು ಪ್ರವೇಶಿಸಿ ಅರಳಿಸುತ್ತವೆ. ಮದ್ದಾನೆಗಳ ಗಂಡಸ್ಥಳವೆಂಬ ಗೋಡೆಗಳ ಉಜ್ಜುವಿಕೆಯಿಂದ ಮುರಿದು ಸ್ರವಿಸುತ್ತಿರುವ ಶ್ರೀಗಂಧದ

ರಸವು ಹರಿದುಬಂದು ಇಲ್ಲಿಯ
ಅಪರಂಜಿಯ ಬಣ್ಣದ
ಪರ್ವತದ ತಪ್ಪಲುಗಳನ್ನು
ಸೇರುತ್ತದೆ.

**ಮ||ಸ್ರ|| ನೆಗಳ್ದೀ ಕರ್ಪೂರ
ಕಾಳಾಗರು ಮಳಯ
ಮಹೀಜಂಗಳೇಳಾ ಲತಾಳೀ|
ಸ್ಥಗಿತಂಗಳ್
ಕಣ್ಗೆವಂದಿರ್ದುವನಿವನೆ ವಲಂ
ಕೊಂಬುಗೊಂಡಂಗಜಂ ಮೆ|**

ಲ್ಲಗೆ ಪಾರ್ದಾರ್ದಾಗಳುಂ ಕಿನ್ನರ ಯುವತಿ ಮೃಗೀವ್ರಾತಮಂ ತನ್ನ ನಲ್ಲಂ ಬುಗಳಿಂದೆಚ್ಚೆಚ್ಚು ಮೆಚ್ಚಂ ಸಲಿಸುವನದಱಿಂ ರಮ್ಯಮಿಂತೀ ನಗೇಂದ್ರಂ|| ೨೩||

ಪದ್ಯ-೨೩:ಪದವಿಭಾಗ-ಅರ್ಥ:ನೆಗಳ್ದೀ (ನೆಗಳ್ದ ಈ- ಈ ಪ್ರಸಿದ್ಧವಾದ) ಕರ್ಪೂರ, ಕಾಳಾಗರು, ಮಳಯ

ಮಹೀಜಂಗಳು (ಮಲಯ
ಪರ್ವತದ ಗಂಧದ ಮರಗಳು)
ಏಳಾ ಲತಾಳೀ ಸ್ಥಗಿತಂಗಳ್
(ಏಲಕ್ಕಿ ಬಳ್ಳಿಗಳಿಂದ
ವ್ಯಾಪ್ತವಾಗಿ ತುಂಬಿದ) ಕಣ್ಗೆ
ವಂದಿರ್ದುವಂ (ಕಣ್ಣಿಗೆ
ಸೊಗಸಾಗಿರುವುದನ್ನು) ಇವನೆ
ವಲಂ (ಇವನ್ನೇ ಅಲ್ಲವೇ)
ಕೊಂಬುಗೊಂಡು ಅಂಗಜಂ
(ಮನ್ಮಥನು ತನ್ನ
ಸಂಕೇತಸ್ಥಳವನ್ನಾಗಿ

ಮಾಡಿಕೊಂಡು) ಮೆಲ್ಲಗೆ
ಪಾರ್ದು ಆರ್ದು ಆಗಳುಂ
(ಮೆಲ್ಲಗೆ ನೋಡಿ ಆರ್ಭಟಿಸಿ
ಆಗ,) ಕಿನ್ನರ ಯುವತಿ
ಮೃಗೀವ್ರಾತಮಂ
(ಕಿನ್ನರಯುವತಿಯೆಂಬ
ಜಿಂಕೆಯ ಸಮೂಹವನ್ನು)
ತನ್ನ ನಲ್ಲಂಬುಗಳಿಂದ (ತನ್ನ
ಉತ್ತಮ ಬಾಣಗಳಿಂದ)
ಎಚ್ಚೆಚ್ಚು ಮೆಚ್ಚಂ ಸಲಿಸುವನು
(ಹೊಡೆದು ಅವರ

ಇಷ್ಟಾರ್ಥವನ್ನು ಸಲ್ಲಿಸುತ್ತಾನೆ.) ಅದಱಿಂ ರಮ್ಯಂ ಇಂತು ಈ ನಗೇಂದ್ರಂ (ಆದುದರಿಂದ ಈ ಪರ್ವತಶ್ರೇಷ್ಠವು ರಮಣೀಯವಾಗಿದೆ)

ಪದ್ಯ-೨೩:ಅರ್ಥ: ಏಲಕ್ಕಿ ಬಳ್ಳಿಗಳಿಂದ ವ್ಯಾಪ್ತವಾಗಿ ಪ್ರಸಿದ್ಧವಾಗಿರುವ ಇಲ್ಲಿಯ ಕರ್ಪೂರ, ಕರಿ ಅಗಿಲು, ಗಂಧದ ಮರಗಳು ಬಹು ರಮಣೀಯವಾಗಿವೆ. ಇದನ್ನೇ

ಅಲ್ಲವೇ ಮನ್ಮಥನು ತನ್ನ
ಸಂಕೇತಸ್ಥಳವನ್ನಾಗಿ
ಮಾಡಿಕೊಂಡು ಮೆಲ್ಲಗೆ
ನೋಡಿ ಆರ್ಭಟಿಸಿ
ಕಿನ್ನರಯುವತಿಯೆಂಬ
ಜಿಂಕೆಯ ಸಮೂಹವನ್ನು
ಯಾವಾಗಲೂ ತನ್ನ ಉತ್ತಮ
ಬಾಣಗಳಿಂದ ಹೊಡೆದು
ಅವರ ಇಷ್ಟಾರ್ಥವನ್ನು
ಸಲ್ಲಿಸುತ್ತಾನೆ. ಆದುದರಿಂದ

ಈ ಪರ್ವತಶ್ರೇಷ್ಠವು
ರಮಣೀಯವಾಗಿದೆ

ಮ|| ಇದಿರೊಳ್ ನಿಂದೊಡೆ ವಜ್ರಿ ಸೈರಿಸನಿರಲ್ವೇಡೆಮ್ಮೊಳೊಳ್ವೊಕ್ಕು ನಿ ಲ್ವುದು ನೀನೆಂದು ಕಡಂಗಿ ಕಾಲ್ವಿಡಿವವೋಲ್ ತನ್ನೂರ್ಮಿಗಳ್ ಬಂದುವಂ| ದಿದಱಿಂ ಪೋದ ತಪೋಪಳಂ (?) ಗಗನಮಂ

ಮಾರ್ಪೊರ್ಯೆ ಕಣ್ಗೊಪ್ಪಿ ತೋ ರ್ಪುದಿದುತ್ತೈಂಖದಸಂಖ್ಯ ಶಂಖ ಧವಳಂ ಗಂಭೀರ ನೀರಾಕರಂ|| ೨೪ ||

ಪದ್ಯ-೨೪:ಪದವಿಭಾಗ-ಅರ್ಥ:ಇದಿರೊಳ್ ನಿಂದೊಡೆ ವಜ್ರಿ (ಇಂದ್ರನು) ಸೈರಿಸಂ ಇರಲ್ವೇಡ (ಇಂದ್ರನು ಸೈರಿಸುವುದಿಲ್ಲ. ಇಲ್ಲಿರಬೇಡ;) ಎಮ್ಮೊಳ್ ಒಳ್ಪೊಕ್ಕು ನಿಲ್ವುದು (ನಮ್ಮೊಳಗೆ-ಸಮುದ್ರದೊಳಗೆ

ಪ್ರವೇಶ ಮಾಡಿ ನಿಲ್ಲುವುದು)
ನೀನು ಎಂದು ಕಡಂಗಿ
(ಹುರಿದುಂಬಿಸಿ)
ಕಾಲ್ವಿಡಿವವೋಲ್ (ಕಾಲನ್ನು
ಹಿಡಿಯುವ ಹಾಗೆ) ತನ್ನ
ಊರ್ಮಿಗಳ್ (ಅಲೆಗಳು)
ಬಂದುವು ಅಂದು ಇದಱಿಂ
(ಸಮುದ್ರದಿಂದ ಅಲೆಗಳು
ಬಂದವು); ಪೋದ ತಪೋ
ಪಳಂ (ತಪೋ-ಬಿಸಿ, ಪಳಂ-
ತಾಗು) (?) ಗಗನಮಂ (ಹಿಂದೆ

ಹೋದ ಅಲೆಗಳು ಬಿಸಿಯಾಗಿ ಆಕಾಶವನ್ನು ತಾಗಿ) ಮಾರ್ಪೊಯ್ಯೆ (ಪ್ರತಿಭಟಿಸಲು) ಕಣ್ಗೆ ಒಪ್ಪಿ ತೋರ್ಪುದು (ಕಣ್ಣಿಗೆ ಚಂದವಾಗಿ ತೋರುವುದು) ಇದು ಉತ್ಪ್ರೇಂಖದ (ದಡದಹತ್ತಿರ-ಮೇಲೆ ತೇಲಾಡುವ) ಅಸಂಖ್ಯ ಶಂಖ ಧವಳಂ (ಬಿಳಿಶಂಖಗಳು)

ಗಂಭೀರ ನೀರಾಕರಂ (ಗಂಭೀರ ಸಮುದ್ರವು)|

ಪದ್ಯ-೨೪:ಅರ್ಥ:ಸಮುದ್ರ ವರ್ಣನೆ: ನೀನು ಎದುರಿನಲ್ಲಿ ನಿಂತರೆ ಇಂದ್ರನು ಸೈರಿಸುವುದಿಲ್ಲ. ಇಲ್ಲಿರಬೇಡ; ನಮ್ಮೊಳಗೆ ಪ್ರವೇಶ ಮಾಡಿ ನಿಲ್ಲತಕ್ಕದ್ದು ಎಂದು ಹುರಿದುಂಬಿಸಿ ಕಾಲನ್ನು ಹಿಡಿಯುವ ಹಾಗೆ ಸಮುದ್ರದ ಅಲೆಗಳು ಪಕ್ಕದಲ್ಲಿರುವ

ಪರ್ವತಗಳ ಬುಡವನ್ನು ಆಶ್ರಯಿಸಿವೆ. ಇಲ್ಲಿಂದ ಹಿಂದೆ ಹೋದ ಅಲೆಗಳು ಬಿಸಿಯಾಗಿ ಆಕಾಶವನ್ನು ತಾಗಿ ಅಲೆಗಳು ಪರಸ್ಪರ ಪ್ರತಿಭಟಿಸಲು, ದಡದಹತ್ತಿರ-ಮೇಲೆ ತೇಲಾಡುವ ಅಸಂಖ್ಯಾತವಾದ ಬೆಳ್ಳಗಿರುವ ಶಂಖಗಳಿಂದ ಕೂಡಿದ ಗಂಭೀರವಾದ ಸಮುದ್ರವು ಕಣ್ಣಿಗೆ ಚಂದವಾಗಿ ತೋರಿತು.

ಚಂ|| ಚಳದನಿಳಾಹತ ಕ್ಷುಭಿತ
ಭಂಗುರ ತುಂಗ
ತರಂಗಮಾಳಿಕಾ
ವಳನ ಸಮುಚ್ಚಳನ್ಮಣಿಗಣಾತ್ತ
ಮರೀಚಿ ಲತಾ ಪ್ರತಾನ ಸಂ|
ವಳಯಿತ ವಿದ್ರುಮ ದ್ರುಮ
ವಿಳಾಸ ವಿಶೇಷಿತ
ಬಾಡವಾನಳಾ
ವಿಳ ಜಳಮಂ ಮನಂ ಬಯಸಿ
ನೋಡಿದನರ್ಣವಮಂ
ಗುಣಾರ್ಣವಂ|| ೨೫ ||

ಪದ್ಯ-೨೫:ಪದವಿಭಾಗ-ಅರ್ಥ:ಚಳದ (ಚಲಿಸುತ್ತಿರುವ) ಅನಿಳ ಆಹತ (ಗಾಳಿಯ ಹೊಡೆತದಿಂದ) ಕ್ಷುಭಿತ (ಕದಡಿದ) ಭಂಗುರ ತುಂಗ ತರಂಗ (ಅಸ್ಥಿರವೂ ಎತ್ತರವೂ ಆದ ಅಲೆಗಳ) ಮಾಳಿಕಾ ಆವಳನ(ಅಲೆಗಳ ಹೊರಳುವಿಕೆಯಿಂದ) ಸಮುಚ್ಚಳತ್ (ಮೇಲಕ್ಕೆ

ಚಿಮ್ಮಿದ) ಮಣಿಗಣ ಆತ್ತ
(ಮಣಿಗಳ ರತ್ನಕಾಂತಿಗಳನ್ನ
ಪಡೆದ) ಮರೀಚಿ ಲತಾ
ಪ್ರತಾನ
ಸಂವಳಯಿತ(ಮರೀಚಿ-
ಕಿರಣಗಳ ಬಳ್ಳಿಗಳ
ಗುಂಪಿನಿಂದ ಆವರಿಸಿದ)
ವಿದ್ರುಮ ದ್ರುಮ ವಿಳಾಸ
ವಿಶೇಷಿತ (ಹವಳದ ಗಿಡಗಳ
ಸೊಗಸಿನಿಂದ ವಿಶಿಷ್ಟವಾಗಿ)
ಬಾಡವಾನಳ

(ಬಡಬಾನಲವೆಂಬ
ಸಮುದ್ರದ ಬೆಂಕಿಯಿಂದ)
ಆವಿಳ ಜಳಮಂ (ಬಗ್ಗಡವಾದ
ನೀರಿನ್ನು) ಮನಂ ಬಯಸಿ
ನೋಡಿದನು ಅರ್ಣವಮಂ
(ಇಷ್ಟಪಟ್ಟು ಸಮುದ್ರವನ್ನು
ಅರ್ಜುನನು ನೋಡಿದನು)
ಗುಣಾರ್ಣವಂ

ಪದ್ಯ-೨೫:ಅರ್ಥ:

ಚಲಿಸುತ್ತಿರುವ ಗಾಳಿಯ
ಹೊಡೆತದಿಂದ ಕದಡಿದುದೂ

ಅಸ್ಥಿರವೂ ಎತ್ತರವೂ ಆದ
ಅಲೆಗಳ ಹೊರಳುವಿಕೆಯಿಂದ
ಚಂಚಲವಾದುದು. ಮೇಲಕ್ಕೆ
ಚಿಮ್ಮಿದ ಮಣಿಗಳ
ರತ್ನಕಾಂತಿಗಳಿಂದ
ಕೂಡಿದುದೂ ಹವಳದ
ಗಿಡಗಳ ಸೊಗಸಿನಿಂದ
ವಿಶಿಷ್ಟವಾಗಿ ಮಾಡಲ್ಪಟ್ಟುದೂ
ಬಡಬಾಗ್ನಿಯ ಬೆಂಕಿಯಿಂದ
ಬಗ್ಗಡವಾದ ನೀರುಳ್ಳ
ಸಮುದ್ರವನ್ನು

ಗುಣಾರ್ಣವನಾದ
ಅರ್ಜುನನು ಇಷ್ಟಪಟ್ಟು
ನೋಡಿದನು.

ವ|| ಅಂತು ನೋಡುತ್ತುಂ ಬಂದು ಮುಂದೊಂದೆಡೆಯೊಳದಭ್ರಾಭ್ರವಿಭ್ರಮ ಭ್ರಾಜಿತೋತ್ತುಂಗಶೈಲಮಂ ಕಂಡು-

ವಚನ:ಪದವಿಭಾಗ-

ಅರ್ಥ:ಅಂತು ನೋಡುತ್ತುಂ

ಬಂದು ಮುಂದೆ
ಒಂದೆಡೆಯೊಳ್ ಅದಭ್ರ
(ಅತಿಶಯವಾದ) ಆಭ್ರ
ವಿಭ್ರಮ (ಮೋಡಗಳ
ವಿಲಾಸದಿಂದ) ಭ್ರಾಜಿತ
(ಪ್ರಕಾಶಮಾನವಾದ)
ಉತ್ತುಂಗಶೈಲಮಂ
(ಎತ್ತರವಾದ ಪರ್ವತವನ್ನು)
ಕಂಡು-

ವಚನ:ಅರ್ಥ:ಹಾಗೆ
ನೋಡುತ್ತ ಬಂದು

ಮುಂಭಾಗದಲ್ಲಿ
ಅತಿಶಯವಾದ ಮೋಡಗಳ
ವಿಲಾಸದಿಂದ
ಪ್ರಕಾಶಮಾನವಾದ
ಎತ್ತರವಾದ ಪರ್ವತವನ್ನು
ನೋಡಿ-

ಮ|| ವಿನತಾಪುತ್ರನ
ವಜ್ರತುಂಡಹತಿಗಂ
ಮೆಯ್ಯ್ಯಾಂತು ಕಂಡಂಗಳು
ಳ್ಳಿನಮಂಗಂಗಳನೊಡ್ಡಿಯೊಡ್ಡಿ
ತನುವಂ ಕೊಟ್ಟಂತು

ಜೀಮೂತವಾ|
ಹನನೆಂಬಂಕದ ಚಾಗಿ
ನಿಚ್ಚಟಿಕೆಯಿಂದೀ ಶೈಳದೊಳ್
ಶಂಖಚೂ
ಡನನಾನಂದದೆ ಕಾದ
ಪೆಂಪೆಸೆಯೆ ನಾಗಾನಂದಮಂ
ಮಾಡಿದಂ|| ೨೬ ||

ಪದ್ಯ-೨೬:ಪದವಿಭಾಗ-
ಅರ್ಥ:ವಿನತಾಪುತ್ರನ (ಗರುಡನ) ವಜ್ರತುಂಡ ಹತಿಗಂ (ವಜ್ರದಷ್ಟು

ಕಠಿಣವಾದ ಪೆಟ್ಟಿಗೆ)
ಮೆಯ್ಯ್ಯಾಂತು
(ಶರೀರವನ್ನೊಡ್ಡಿ)
ಕಂಡಂಗಳುಳ್ಳಿನಂ
(ಮಾಂಸಖಂಡಗಳಿರುವವರೆ
ಗೂ) ಅಂಗಂಗಳನು
ಒಡ್ಡಿಯೊಡ್ಡಿ
(ಅವಯವಗಳನ್ನು ಚಾಚಿ)
ತನುವಂ ಕೊಟ್ಟಂತು (ಶರೀರ
ದಾನಮಾಡಿದ)
ಜೀಮೂತವಾಹನನೆಂಬ

ಅಂಕದ ಚಾಗಿ (ಪ್ರಸಿದ್ಧ ತ್ಯಾಗಿಯು) ನಿಚ್ಚಟಿಕೆಯಿಂದ (ಮನಸ್ಸಿನ ನಿಶ್ಚಲತ್ವದಿಂದ) ಈ ಶೈಳದೊಳ್ ಶಂಖಚೂಡನನು ಆನಂದದೆ ಕಾದ ಪೆಂಪೆಸೆಯೆ (ಹಿರಿಮೆಯನ್ನು ಪ್ರಕಾಶಿಸಿ) ನಾಗಾನಂದಮಂ (ನಾಗರಿಗೆ ಆನಂದವನ್ನು) ಮಾಡಿದಂ

ಪದ್ಯ-೨೬:ಅರ್ಥ: ವಿನತೆಯ ಮಗನಾದ ಗರುಡನ ವಜ್ರದಷ್ಟು ಕಠಿಣವಾದ ಪೆಟ್ಟಿಗೆ

ಶರೀರವನ್ನೊಡ್ಡಿ
ಮಾಂಸಖಂಡಗಳಿರುವವರೆ
ಗೂ ಅವಯವಗಳನ್ನು ಚಾಚಿ
ಶರೀರ ದಾನಮಾಡಿದ,
ಪ್ರಸಿದ್ಧನಾದ
ಜೀಮೂತವಾಹನನೆಂಬ
ಪ್ರಸಿದ್ಧ ತ್ಯಾಗಿಯು ಮನಸ್ಸಿನ
ನಿಶ್ಚಲತ್ವದಿಂದ ಶಂಖಚೂಡ
ನೆಂಬುವವನನ್ನು ರಕ್ಷಿಸಿದ
ಹಿರಿಮೆಯನ್ನು ಪ್ರಕಾಶಿಸಿ
ನಾಗರಿಗೆ ಆನಂದವನ್ನು

ಉಂಟುಮಾಡಿದನು. ಅದು ಈ ಬೆಟ್ಟದಲ್ಲಿಯೇ.

ವ|| ಎಂದಭಿನವ ಜೀಮೂತವಾಹನಂ ಜೀಮೂತವಾಹನನ ಪರೋಪಕಾರದ ಬೀರದ ಪೆಂಪಂ ಮೆಚ್ಚುತ್ತುಂ ಬಂದು ಗೋಕರ್ಣನಾಥನಂ ಗೌರೀನಾಥನನವನಿ ಪವನ ಗಗನ ದಹನ ತರಣಿ ಸಲಿಲ ತುಹಿನಕರ ಯಜಮಾನ

ಮೂರ್ತಿಯಂ ತ್ರಿಳೋಕೈಕ ಸಂಗೀತ ಕೀರ್ತಿಯಂ ಕಂಡು ಕೆಯ್ಗಳಂ ಮುಗಿದು-

ವಚನ:ಪದವಿಭಾಗ-

ಅರ್ಥ:ಎಂದು ಅಭಿನವ ಜೀಮೂತವಾಹನಂ (ಅರ್ಜುನನು) ಜೀಮೂತವಾಹನನ ಪರೋಪಕಾರದ ಬೀರದ ಪೆಂಪಂ (ಶೌರ್ಯದ ಹಿರಿಮೆಯನ್ನು) ಮೆಚ್ಚುತ್ತುಂ

ಬಂದು ಗೋಕರ್ಣನಾಥನಂ
ಗೌರೀನಾಥನನವನಿ ಪವನ
ಗಗನ ದಹನ ತರಣಿ ಸಲಿಲ
ತುಹಿನಕರ ಯಜಮಾನ
ಮೂರ್ತಿಯಂ ತ್ರಿಳೋಕ್ಯೈಕ
ಸಂಗೀತ ಕೀರ್ತಿಯಂ ಕಂಡು
ಕೆಯ್ಗಳಂ ಮುಗಿದು-
ವಚನ:ಅರ್ಥ:ಎಂದು
ಅಭಿನವ
ಜೀಮೂತವಾಹನನಾದ
(ಅರ್ಜುನನು) ಅರಿಕೇಸರಿಯು

ಜೀಮೂತವಾಹನನ
ಪರೋಪಕಾರದ, ಶೌರ್ಯದ
ಹಿರಿಮೆಯನ್ನು ಮೆಚ್ಚುತ್ತ
ಬಂದು ಗೌರೀಶನೂ ಭೂಮಿ,
ವಾಯು, ಆಕಾಶ, ಅಗ್ನಿ,
ಸೂರ್ಯ, ಅಪ್, ಚಂದ್ರ,
ಯಜಮಾನ ಎಂಬು
ಅಷ್ಟಮೂರ್ತಿಯತನೂ
ಮೂರು ಲೋಕಗಳಿಂದ
ಸ್ತೋತ್ರಮಾಡಲ್ಪಡುವ
ಕೀರ್ತಿಯುಳ್ಳವನೂ ಆದ

ಗೋಕರ್ಣನಾಥನನ್ನು ಕಂಡು ಕೈಗಳನ್ನು ಮುಗಿದು-.

ಪೃಥ್ವಿ|| ಪ್ರಚಂಡ ಲಯ
ತಾಂಡವ ಕ್ಷುಭಿತಯಾಶು
ಯಸ್ಯಾನಯಾ
ಸದಿಗ್ವಳಯಯಾ ಭುವಾ ಸ
ಗಿರಿ ಸಾಗರ ದ್ವೀಪಯಾ|
ಕುಲಾಲ ಕರ ನಿರ್ಭರ ಭ್ರಮಿತ
ಚಕ್ರಲೀಲಾಯಿತಂ
ಸ ಸರ್ವ ಜಗತಾಂ
ಗುರುರ್ಗಿರಿಸುತಾಪತಿ ಪಾತು

ನಃ|| ೨೭||

ಪದ್ಯ-೨೭:ಪದವಿಭಾಗ-ಅರ್ಥ:ಪ್ರಚಂಡ ಲಯ ತಾಂಡವ (ನೃತ್ಯದಿಂದ) ಕ್ಷುಭಿತಯಾಶು (ಅಲುಗಾಡಲ್ಪಟ್ಟಳೋ) ಯಸ್ಯಾನಯಾ ಸದಿಗ್ವಳಯಯಾ (ಯಾವ ದಿಙ್ಮಂಡಲಗಳಿಂದಲೂ) ಭುವಾ (ಭೂಮಿ) ಸ ಗಿರಿ ಸಾಗರ ದ್ವೀಪಯಾ (ಪರ್ವತ,

ಸಮುದ್ರ, ದ್ವೀಪಗಳಿಂದ)
ಕುಲಾಲ ಕರ ನಿರ್ಭರ ಭ್ರಮಿತ
(ಕುಂಬಾರನ ಕೈಯಿಂದ
ವೇಗವಾಗಿ)
ಚಕ್ರಲೀಲಾಯಿತಂಸ
(ಲೀಲೆಯಂದ ತಿರುಗಿಸಲ್ಪಟ್ಟು)
ಸರ್ವ ಜಗತಾಂ (ಸರ್ವ
ಜಗತಾಂ ಪತಿಃ -
ಸಮಸ್ತಜಗತ್ತಿಗೂ
ಒಡೆಯನಾದ)
ಗುರುರ್ಗಿರಿಸುತಾಪತಿ

(ಗುರುರ್ಗಿರಿಸುತಾಪತಿಃ-ಗುರುವೂ ಪಾರ್ತಿಯ ಪತಿ ಶಿವನು) ಪಾತು ನಃ(ನಮ್ಮನ್ನು ಕಾಪಾಡಲಿ)

ಪದ್ಯ-೨೭:ಅರ್ಥ: ಯಾರ ಬಹಳವೇಗವಾದ ಲಯ ತಾಳಗತಿಯನ್ನುಳ್ಳ ತಾಂಡವ ನೃತ್ಯದಿಂದ ದಿಙ್ಮಂಡಲಗಳು, ಪರ್ವತಗಳು ಸಮುದ್ರಗಳು, ದ್ವೀಪಗಳಿಂದಲೂ ಕೂಡಿದ ಭೂಮಿಯು ಕುಂಬಾರನ ಕೈ

ಚಕ್ರದಂತೆ ವೇಗವಾಗಿ ಸುತ್ತುವ
ಲೀಲೆಗೆ ಒಳಗಾಯಿತೋ ಆ
ಸರ್ವಜಗತ್ಪತಿಯೂ ಪಾರ್ವತಿ
ರಮಣನೂ ಆದ ಶಿವನು
ನಮ್ಮನ್ನು ಕಾಪಾಡಲಿ-

ವ|| ಎಂದು
ಬಾಳೇಂದುಮೌಳಿಯಂ
ಸ್ತುತಿಸಿ-

ವಚನ:ಪದವಿಭಾಗ-

ಅರ್ಥ:ಎಂದು
ಬಾಳೇಂದುಮೌಳಿಯಂ

(ಬಾಲ-ಬಾಲ, ಇಂದು- ಚಂದ್ರ, -ಮೌಳಿ- ತಲೆಯಲ್ಲಿ ಧರಿಸಿರುವವನು) ಸ್ತುತಿಸಿ-

ವಚನ:ಅರ್ಥ:ಎಂದು ಬಾಲಚಂದ್ರನನ್ನು ತಲೆಯಲ್ಲಿ ಧರಿಸಿದ ಶಿವನನ್ನು ಸ್ತೋತ್ರಮಾಡಿ- (ಬನವಾಸಿ ಪ್ರದೇಶವನ್ನು ನೋಡಿದನು)

ಅರ್ಜುನನು ಕಂಡ ಬನವಾಸಿಯ ಸೊಬಗು

ಚಂ|| ಸೊಗಯಿಸಿ ಬಂದ
ಮಾಮರನೆ ತಳ್ತೆಲೆವಳ್ಳಿಯೆ
ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ
ಪಾಡುವ ತುಂಬಿಯೆ
ನಲ್ಲರೊಳ್ಮೊಗಂ|
ನಗೆಮೊಗದೊಳ್
ಪಳಂಚಲೆಯೆ ಕೂಡುವ ನಲ್ಲರೆ
ನೋಟ್ಪೊಡಾವ ಬೆ

ಟ್ಟುಗಳೊಳಮಾವ

ನಂದನವನಂಗಳೊಳಂ

ಬನವಾಸಿ ದೇಶದೊಳ್|| ೨೮||

ಪದ್ಯ-೨೮:ಪದವಿಭಾಗ-

ಅರ್ಥ:(ಪದವಿಭಾಗ):

ಸೊಗಯಿಸಿ ಬಂದ ಮಾಮರನೆ

ತಳ್ತ ಎಲೆವಳ್ಳಿಯೆ ಪೂತಜಾತಿ

ಸಂಪಗೆಯೆ ಕುಕಿಲ್ವ

ಕೋಗಿಲೆಯೆ ಪಾಂಡುವ

ತುಂಬಿಯೆ ನಲ್ಲರೊಳ್

ಮೊಗಂ ನಗೆಮೊಗದೊಳ್

ಪಳಂಚಲೆಯೆ

ಪಳಂಚು:ತಾಗು, ಬಡಿ,

ಅಲೆಯ -ಪೀಡಿಸುವ ನಲ್ಲ

ನಲ್ಲೆಯರು.) ಕೂಡುವ

ನಲ್ಲರೆ.ಕೂಡುವ ನಲ್ಲರೆ

ನೋಳ್ಪೊಡೆ ಆವ

ಬೆಟ್ಟುಗಳೊಳ ಮಾವ

ನಂದನಂಗಳು ಒಳಂ

ಬನವಾಸಿ ದೇಶದೊಳ್

ಪದ್ಯ-೨೮:ಅರ್ಥ: ಆ

ಬನವಾಸಿ ದೇಶದ ಯಾವುದೇ

ಬೆಟ್ಟಗಳಲ್ಲಿ ಮತ್ತು
ಉದ್ಯಾನವನಗಳಲ್ಲಿ
ನೋಡುವುದಾದರೆ ಸೊಗಸಾಗಿ
ಫಲ ಬಿಟ್ಟಿರುವ ಮಾವಿನ
ಮರಗಳೇ; ದಟ್ಟವಾಗಿ
ಸೇರಿಕೊಂಡಿರುವ
ವಿಳ್ಳೆಯದೆಲೆಯ ಬಳ್ಳಿಗಳೇ,
ಹೂವನ್ನು ಬಿಟ್ಟಿರುವ ಜಾಜಿ
ಮತ್ತು ಸಂಪಗೆ ಗಿಡಗಳೇ;
ಸುಸ್ವರವಾಗಿ ಧ್ವನಿಮಾಡುವ
ಕೋಗಿಲೆ, ಝೇಂಕರಿಸುವ

ದುಂಬಿಗಳೇ, ಪ್ರೇಯಸಿಯರ
ಒಳ್ಳೆಯ ಮುಖಗಳೇ,
ನಗುಮುಖದಲ್ಲಿ ಪೀಡಿಸಿ
ಕೂಡುವ ನಲ್ಲರೇ.

ಉ|| ಚಾಗದ ಭೋಗದಕ್ಕರದ
ಗೇಯದ
ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ
ಮಾನಸರಂತವರಾಗಿ
ಪುಟ್ಟಲೇ|

ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್|| ೨೯||

ಪದ್ಯ-೨೯:ಪದವಿಭಾಗ-ಅರ್ಥ:ಚಾಗದ (ತ್ಯಾಗದ) ಭೋಗದ (ಸುಖದ) ಅಕ್ಕರದ (ವಿದ್ಯೆಯ) ಗೇಯದ (ಸಂಗಿತದ) ಗೊಟ್ಟಿಯ

ಅಲಂಪಿನ ಇಂಪುಗಳ್ಗೆ
(ಗೋಷ್ಠಿಗಳ ಸಂತೋಷದ
ಸುಖಕ್ಕೆ) ಆಗರವಾದ
ಮಾನಸರೆ ಮಾನಸರ್
(ಆಗರವಾಗಿರುವ ಮನುಷ್ಯರೇ
ಮನುಷ್ಯರು) ಅಂತವರಾಗಿ
ಪುಟ್ಟಲ್ ಏನಾಗಿಯುಮೇನೊ
ತೀರ್ದಪುದೆ (ಹುಟ್ಟಲು
ಏನಾದರೂ ತಾನೇ
ತೀರುವುದೇ-
ಸಾಧ್ಯವಾಗುತ್ತದೆಯೇ?)

ತೀರದೊಡಂ ಮಱಿದುಂಬಿಯಾಗಿ (ಮರಿಜೇನಾಗಿ) ಮೇಣ್ ಕೋಗಿಲೆಯಾಗಿ ಪುಟ್ಟುವುದು (ಕೋಗಿಲೆಯಾಗಿಯೋ ಹುಟ್ಟಬೇಕು) ನಂದನದೊಳ್ ವನವಾಸಿ ದೇಶದೊಳ್.

ಪದ್ಯ-೨೯:ಅರ್ಥ: ಆ ಬನವಾಸಿ ದೇಶದಲ್ಲಿ ತ್ಯಾಗ, ಸುಖ, ವಿದ್ಯೆ, ಸಂಗೀತ-ಗೋಷ್ಠಿಗಳ ಸಂತೋಷದ

ಸುಖಕ್ಕೆ ಆಗರವಾಗಿರುವ
ಮನುಷ್ಯರೇ ಮನುಷ್ಯರು.
ಅಂತಹ ಅದೃಷ್ಟಶಾಲಿಗಳಾದ
ಮನುಷ್ಯರಾಗಿ ಹುಟ್ಟಲು
ಏನಾದರೂ ತಾನೇ
ಸಾಧ್ಯವಾಗುತ್ತದೆಯೇ?? ಹಾಗೆ
ಸಾಧ್ಯವಾಗದಿದ್ದರೂ ಆ
ಬನವಾಸಿ ದೇಶದ
ನಂದನವನಗಳಲ್ಲಿ
ಮರಿದುಂಬಿಯಾಗಿಯೋ

ಅಥವಾ ಕೋಗಿಲೆಯಾಗಿಯೋ
ಹುಟ್ಟಬೇಕು.

**ತೆಂಕಣ ಗಾಳಿ
ಸೋಂಕಿದೊಡಮೊಳ್ನುಡಿಗೇ
ಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ
ಮಲ್ಲಿಗೆಗಂಡೊಡಮಾದ
ಕೆಂದಲಂ|
ಪಂಗೆಡೆಗೊಂಡೊಡಂ
ಮಧುಮಹೋತ್ಸವಮಾದೊಡ
ಮೇನನೆಂಬೆನಾ**

ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ|| ೩೦||

ಪದ್ಯ-೩೦:ಪದವಿಭಾಗ-ಅರ್ಥ:ತೆಂಕಣ ಗಾಳಿ ಸೋಂಕಿದೊಡಂ ಒಳ್ನುಡಿ ಕೇಳ್ದೊಡಂ ಇಂಪನಾಳ್ದ ಗೇಯಂ ಕಿವಿವೊಕ್ಕೊಡಂ (ದಕ್ಷಿಣ ದಿಕ್ಕಿನ ತಂಪಾದ ಗಾಳಿಯ ತಾಗಿದರೂ, ಒಳ್ಳೆಯ ಮಾತನ್ನು ಕೇಳಿದರೂ,

ಇಂಪಾದ ಗಾನವು ಕಿವಿಗೆ
ಕೇಳಿಸಿದರೂ) ಬಿರಿದ
ಮಲ್ಲಿಗೆಗಂಡೊಡಂ (ಮಲ್ಲಿಗೆ
ಕಂಡೊಡಂ) ಆದ ಕೆಂದ (ಆದ
ತನಿ ನಿದ್ದೆಯ) ಅಲಂಪಂಗೆ
ಎಡೆಗೊಂಡೊಡಂ (ಸುಖಕ್ಕೆ
ಎಡೆಗೊಂಡರೂ
ಅವಕಾಶವಾದರೂ,)
ಮಧುಮಹೋತ್ಸವಮಾದೊ
ಡಂ (ವಸಂತ
ಮಹೋತ್ಸವವಾದರೂ)

ಏನನೆಂಬೆನು ಆರಂಕುಸಂ
ಇಟ್ಟೊಡಂ (ಏನು ಹೇಳಲಿ
ಯಾರು ಅಂಕುಶದಿಂದ
ತಿವಿದರೂ ಅಥವಾ ತಡೆದರೂ
ನೆನೆವುದು
(ನೆನಪುಮಾಡಿಕೊಳ್ಳುವುದು)
ಎನ್ನ ಮನಂ (ಮನಸ್ಸು)
ವನವಾಸಿ ದೇಶಮಂ.

ಪದ್ಯ-೩೦:ಅರ್ಥ: .
(ಅತಿಸುಖಹೇತುಗಳಾದ)
ದಕ್ಷಿಣ ದಿಕ್ಕಿನ ತಂಪಾದ

ಗಾಳಿಯ ತಾಗಿದರೂ, ಒಳ್ಳೆಯ
ಮಾತನ್ನು ಕೇಳಿದರೂ,
ಇಂಪಾದ ಗಾನವು ಕಿವಿಗೆ
ಕೇಳಿಸಿದರೂ, ಅರಳಿದ
ಮಲ್ಲಿಗೆಯ ಹೂವನ್ನು
ಕಂಡಡೊಡನೆಯೂ ಕಂಡ
ತಕ್ಷಣ, ಆದ ತನಿ ನಿದ್ದೆಯ
ಸುಖಕ್ಕೆ ಎಡೆಗೊಂಡರೂ
ಅವಕಾಶವಾದರೂ, ವಸಂತ
ಮಹೋತ್ಸವವಾದರೂ, ಏನು
ಹೇಳಲಿ ಯಾರು

ಅಂಕುಶದಿಂದ ತಿವಿದರೂ ಅಥವಾ ತಡೆದರೂ ನನ್ನ ಮನಸ್ಸು ಬನವಾಸಿ ದೇಶವನ್ನು ನೆನಪುಮಾಡಿಕೊಳ್ಳುವುದು.

ಮ|| ಅಮರ್ದಂ

ಮುಕ್ಕುಳಿಪಂತುಟಪ್ಪ

ಸುಸಿಲೊಂದಿಂಪುಂ

ತಗುಳ್ದೊಂದು ಗೇ

ಯಮುಮಾದಕ್ಕರಗೊಟ್ಟಿ

ಯುಂ ಚದುರರೊಳ್ವಾತುಂ

ಕುಳಿರ್ ಕೋೞ್ಪ ಜೊಂ|

ಪಮುಮೇವೇಱ್ವುದನುಳ್ಳ
ಮೆಯ್ಸುಕಮುಮಿಂತೆನ್ನಂ ಕರಂ
ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ
ಮರೆಯಲ್ಕಿನ್ನೇಂ ಮನಂ
ಬರ್ಕುಮೇ|| ೩೧||

ಪದ್ಯ-೩೧:ಪದವಿಭಾಗ-
ಅರ್ಥ:ಅಮರ್ದಂ
ಮುಕ್ಕುಳಿಪಂತುಟಪ್ಪ
(ಮುಕ್ಕಳಿಸು-ಉಗುಳು;
ಅಮೃತವನ್ನೂ

ಮೀರಿಸುವಷ್ಟು) ಸುಸಿಲ
ಒಂದಿಂಪುಂ (ರತಿಕ್ರೀಡೆಯ
ಮಾಧುರ್ಯ ಹೊಂದಿದ)
ತಗುಳ್ದೊಂದು ಗೇಯಮುಂ
(ಅದರೊಡನೆ ಬರುತ್ತಿರುವ
ಗಾನವೂ), ಆದ
ಅಕ್ಕರಗೊಟ್ಟಿಯುಂ (ಸೇರಿದ
ವಿದ್ವಾಂಸರ ಸಭೆಯೂ,)
ಚದುರರ ಒಳ್ವಾತುಂ (ಜಾಣರ
ಒಳ್ಳೆಯ ಮಾತುಗಳು) ಕುಳಿರ್
ಕೋಟ್ಪಿ ಜೊಂಪಮುಂ

(ತಂಪಿನಿಂದ ತಣ್ಣಗಿರುವ
ಹೂಗೊಂಚಲುಗಳೂ)
ಏವೇೞ್ಪುದನುಳ್ಳ (ಏನು
ಬೇಳ್ಪುದೂ- ಬಯಸುವುದೋ
ಅದನುಳ್ಳ) ಮೆಯ್ಸುಕಮುಂ
ಇಂತು ಎನ್ನಂ ಕರಂ ನೋಡಿ
ನಾಡೆ (ಮಯ್ ಸುಖ- ದೇಹ
ಸೌಖ್ಯವೂ ಹೀಗೆ ನನ್ನನ್ನು
ಬಹಳ ಚೆನ್ನಾಗಿ)
ಮನಂಗೊಂಡಿರೆ
(ಆಕ್ರಮಿಸಿರಲು) ತೆಂಕನಾಡ

(ದಕ್ಷಿಣ ದೇಶವನ್ನು)
ಮರೆಯಲ್ಕಿನ್ನೇಂ ಮನಂ
ಬರ್ಕುಮೇ (ಮರೆಯಲು
ಇನ್ನೇನು ಮನಸ್ಸು
ಬರುವುದೇ? ಇಲ್ಲ!.)

ಪದ್ಯ-೩೧:ಅರ್ಥ:

ಅಮೃತವನ್ನೂ ಮೀರಿಸುವಷ್ಟು
ಹಿತಕರವಾದ ರತಿಕ್ರೀಡೆಯ
ಮಾಧುರ್ಯ ಹೊಂದಿದ,
ಅದರೊಡನೆ ಬರುತ್ತಿರುವ
ಗಾನವೂ, ಸೇರಿದ ವಿದ್ವಾಂಸರ

ಸಭೆಯೂ, ಜಾಣರ ಒಳ್ಳೆಯ
ಮಾತುಗಳು, ತಣ್ಣಗಿರುವ
ಹೂಗೊಂಚಲುಗಳೂ ಯಾವ
ಸುಖವನ್ನು ಬಯಸುವುದೋ
ಆ ದೇಹ ಸುಖಗಳೂ ನನ್ನ
ಮನಸ್ಸನ್ನು ಬಹಳ ಚೆನ್ನಾಗಿ
ಆಕ್ರಮಿಸಿರಲು, ದಕ್ಷಿಣ
ದೇಶವನ್ನು ಮರೆಯಲು
ಇನ್ನೇನು ಮನಸ್ಸು
ಬರುವುದೇ? ಇಲ್ಲ!.

ವ|| ಎಂದರಿಕೇಸರಿ ತೆಂಕನಾಡಂ ನಾಡಾಡಿಯಲ್ಲದೆ ಮೆಚ್ಚುತ್ತುಮಾ ನಾಡನೊಂದೆ ಬಿಲ್ಲೊಳುಂಡಿಗೆ ಸಾಧ್ಯಂ ಮಾಡಿ ಪಶ್ಚಿಮ ದಿಗ್ವಿಭಾಗಾಭಿಮುಖನಾಗಿ ಬಂದು-

ವಚನ:ಪದವಿಭಾಗ-

ಅರ್ಥ:ಎಂದು ಅರಿಕೇಸರಿ ತೆಂಕನಾಡಂ (ದಕ್ಷಿಣ ದೇಶವನ್ನು)

ನಾಡಾಡಿಯಲ್ಲದೆ(ನಾಡಾಡಿ- ಸಾಮಾನ್ಯ, ಬಹಳವಾಗಿ) ಮೆಚ್ಚುತ್ತುಮಾ ನಾಡನು ಒಂದೆ ಬಿಲ್ಲೊಳು (ಸುಲಭವಾಗಿ) ಉಂಡಿಗೆ ಸಾಧ್ಯಂ ಮಾಡಿ (ತನ್ನ ಮುದ್ರೆ ಚಲಾವಣೆಮಾಡಿ - ಗೆದ್ದು) ಪಶ್ಚಿಮ ದಿಗ್ವಿಭಾಗ ಆಭಿಮುಖನಾಗಿ ಬಂದು-

ವಚನ:ಅರ್ಥ:ಎಂದು ಅರಿಕೇಸರಿಯು ದಕ್ಷಿಣ ದೇಶವನ್ನು ಬಹಳವಾಗಿ

ಮೆಚ್ಚುತ್ತ ಆ ನಾಡನ್ನು
ಸುಲಭವಾಗಿ ಜಯಿಸಿ
ವಶಪಡಿಸಿಕೊಂಡು ಪಶ್ಚಿಮ
ದಿಕ್ಕಿಗೆ ಎದುರಾಗಿ ಬಂದು-

<u>ದ್ವಾರವತಿಯಲ್ಲಿ ಅರ್ಜುನ</u>

ಖಚರಪ್ಲುತ|| ಸಾರ ವಸ್ತುಗಳಿಂ
ನೆರೆದಂಭೋರಾಶಿಯೆ ಕಾದಿಗೆ
ಕಾವನುಂ
ಸೀರಪಾಣಿ ವಿಳಾಸದಿನಾಳ್ದಂ
ಚಕ್ರಧರಂ ಬಗೆವಂಗೆ ಸಂ|

ಸಾರಸಾರಮಿದೆಂಬುದನೆಂದೆ ಯ್ತಂದನಸಂಚಳ ಕಾಂಚನ ದ್ವಾರ ಬಂಧುರ ಬಂಧ ಗೃಹೋದ್ಯದ್ದ್ವಾರವತೀಪುರ ಮಂ ನರಂ|| ೩೨||

ಪದ್ಯ-೩೨:ಪದವಿಭಾಗ-ಅರ್ಥ:ಸಾರ ವಸ್ತುಗಳಿಂ ನೆರೆದ (ತುಂಬಿದ) ಅಂಭೋರಾಶಿಯೆ (ಸಮುದ್ರವೇ) ಕಾದಿಗೆ (ಕಂದಕ) ಕಾವನುಂ

ಸೀರಪಾಣಿ (ಅದರ ರಕ್ಷಕ ನೇಗಿಲು ಹಿಡಿದ ಬಲರಾಮ) ವಿಳಾಸದಿನ್ ಆಳ್ದಂ ಚಕ್ರಧರಂ (ಅದನ್ನು ಆಳುವವನು ಚಕ್ರಧರ ಶ್ರೀಕೃಷ್ಣ,) ಬಗೆವಂಗೆ (ಯೋಚಿಸಿ) ಸಂಸಾರ ಸಾರಮಿದು ಎಂಬುದಂ ನು ಎಂದ ಎಯ್ತಂದನು (ಬಂದು ಸೇರಿದನು-> /ಕೊನೆಯ ಪದ/) ಅಸಂಚಳ (ಅಚಲ-ಅಲುಗಾಡದಿರುವ)

ಕಾಂಚನದ್ವಾರ ಬಂಧುರ
(ಚಿನ್ನದ ಬಾಗಿಲುಗಳಿಂದ
ಕೂಡಿದ) ಬಂಧ(ಕಟ್ಟನ್ನುಳ್ಳ)
ಗೃಹ ಉದ್ಯತ್ (ಎತ್ತರವಾದ
ಮನೆಗಳ)
ದ್ವಾರವತೀಪುರಮಂ ನರಂ
(ಅರ್ಜುನನು)

ಪದ್ಯ-೩೨:ಅರ್ಥ:
ಉತ್ತಮವಸ್ತುಗಳಿಂದ ತಂಬಿದ
ಸಮುದ್ರವೇ ಕಂದಕ; ಅದರ
ರಕ್ಷಕ ನೇಗಿಲು ಹಿಡಿದ

ಬಲರಾಮ; ವೈಭವದಿಂದ
ಅದನ್ನು ಆಳುವವನು ಚಕ್ರಧರ
ಶ್ರೀಕೃಷ್ಣ, ವಿಚಾರ
ಮಾಡುವವನಿಗೆ ಇದೇ
ಸಂಸಾರಸಾರ
ಎಂದೆನಿಸಿಕೊಳ್ಳುವ
ಅಲುಗಾಡದಿರುವ ಚಿನ್ನದ
ಬಾಗಿಲುಗಳಿಂದ ಕೂಡಿದ
ಎತ್ತರವಾದ ಮನೆಗಳುಳ್ಳ
ದ್ವಾರಾವತೀ ಪಟ್ಟಣವನ್ನು

ಅರ್ಜುನನು ಬಂದು ಸೇರಿದನು.

ವ|| ಅನ್ನೆಗಂ ತನ್ನ ಮಯ್ದನನಪ್ಪಮೋಘಾಸ್ತ್ರ ಧನಂಜಯನ ಬರವಿನ ಸಂತಸದೊಸಗೆಪಡೆಮಾತಂ ಮುಂದುವರಿದಱಿಪುವಂತೆ-

ವಚನ:ಪದವಿಭಾಗ-

ಅರ್ಥ:ಅನ್ನೆಗಂ (ಅಷ್ಟರಲ್ಲಿ) ತನ್ನ ಮಯ್ದನನು ಅಪ್ಪ ಅಮೋಘಾಸ್ತ್ರ ಧನಂಜಯನ

ಬರವಿನ ಸಂತಸದ ಒಸಗೆ ಪಡೆಮಾತಂ (ಸಂತೋಷ ಸುದ್ದಿಯನ್ನು) ಮುಂದುವರಿದ ಅಱಿಪುವಂತೆ (ಅರಿಪು- ತಿಳಿಸು; ಮೊದಲೇ ತಿಳಿಸುವಂತೆ)-
ವಚನ:ಅರ್ಥ:ಅಷ್ಟರಲ್ಲಿ ತನ್ನ ಮಯ್ದುನನಾದ ಅಮೋಘಾಸ್ತ್ರಗಳನ್ನುಳ್ಳ ಧನಂಜಯನ ಬರುವಿಕೆಯ

ಸಂತೋಷ ಸುದ್ದಿಯನ್ನು ತನಗೆ ಮೊದಲೇ ತಿಳಿಸುವಂತೆ-

ಮ|| ಪಲವುಂ ಜನ್ಮದೊಳಾದ ನಿನ್ನ ಕೆಳೆಯಂ ಬಂದಪ್ಪನಾತಂಗೆ ಬೆಂ ಬಲಮಿನ್ನೀಂ ನಿನಗಾತನಾತನನಿಳಾವಿಖ್ಯಾತ ನಂ ಕೂರ್ತು ನೋ| ಡಲುಮಕ್ಕುರ್ತಮರ್ದಪ್ಪಲುಂ ಪಡೆವೆಯಿಂದೆಂಬಂತೆ ಕೆತ್ತಿತ್ತು ದಲ್

ಬಲಗಣ್ಣುಂ ಬಲದೋೞುಮಾ ಬಲಿ ಬಲಪ್ರಧ್ವಂಸಿಗಂದಿಟ್ಟಳಂ|| ೩೩ ||

ಪದ್ಯ-೩೩:ಪದವಿಭಾಗ-ಅರ್ಥ:ಪಲವುಂ ಜನ್ಮದೊಳು ಆದ ನಿನ್ನ ಕೆಳೆಯಂ ಬಂದಪ್ಪನು (ಗೆಳೆಯನು ಬರುತ್ತಾನೆ.) ಆತಂಗೆ ಬೆಂಬಲಂ ಇಂ ನೀಂ - ನಿನಗೆ ಆತನು ಆತನು (ಆತನಿಗೆ

ನೀನು ಬಲ, ನಿನಗೆ ಆತನು)
ಇನಿಳಾವಿಖ್ಯಾತನಂ
(ಲೋಕಪ್ರಸಿದ್ಧನಾದ
ಅವನನ್ನು) ಕೂರ್ತು (ಪ್ರೀತಿಸಿ)
ನೋಡಲುಂ ಅೞ್ಕರ್ತ್ತಂ
(ಅಳ್ಕರ್ತ್ತು- ಒಲಿದು)
ಅಮರ್ದು ಅಪ್ಪಲುಂ
(ಅವನನ್ನು ಕಣ್ತುಂಬ
ನೋಡಲು, ಪ್ರೀತಿಯಿಂದ
ಅಪ್ಪಿಕೊಳ್ಳಲು
ಸುಯೋಗವನ್ನು) ಪಡೆವೆ

ಇಂದು ಎಂಬಂತೆ ಕೆತ್ತಿತ್ತು ದಲ್ (ಹೋ ನಿಶ್ಚಯವಾಗಿ) ಬಲಗಣ್ಣುಂ ಬಲದೋಳುಂ (ಕೃಷ್ಣನಿಗೆ ಬಲಗಣ್ಣೂ, ಬಲ ತೋಳು ಏಕಪ್ರಕಾರವಾಗಿ) ಆ ಬಲಿ ಬಲಪ್ರಧ್ವಂಸಿಗಂ ಅಂದು ಇಟ್ಟಳಂ (ಬಲಿಯ ಬಲವನ್ನು ನಾಶಪಡಿಸಿದ ಕೃಷ್ಣನಿಗೆ)

ಪದ್ಯ-೩೩:ಅರ್ಥ: ನಿನ್ನ ಹಿಂದಿನ ಅನೇಕ ಜನ್ಮಗಳ ಗೆಳೆಯನು ಬರುತ್ತಾನೆ.

ಆತನಿಗೆ ನೀನು ಬಲ, ನಿನಗೆ ಆತನು (ಸಹಾಯಕ); ಲೋಕಪ್ರಸಿದ್ಧನಾದ ಅವನನ್ನು ಕಣ್ತುಂಬ ನೋಡಲು, ಪ್ರೀತಿಯಿಂದ ಅಪ್ಪಿಕೊಳ್ಳಲು ಸುಯೋಗವನ್ನು ಪಡೆಯುವೆ ಎಂದು ಸೂಚಿಸುವುದೋ ಎನ್ನುವ ಹಾಗೆ, ಬಲಿ ಚಕ್ರವರ್ತಿಯ ಬಲವನ್ನು ನಾಶಪಡಿಸಿದ) ಕೃಷ್ಣನಿಗೆ ಬಲದ ಕಣ್ಣೂ ಬಲ ತೋಳೂ

ಏಕಪ್ರಕಾರವಾಗಿ
ಅದುರಿದುವು.

ವ|| ಅಂತು ದಕ್ಷಿಣಾಕ್ಷಿ ಸ್ಪಂದನದೊಳಂ ಸೂಚಿಸುವ ಶುಭಸೂಚನೆಯೊಳಂ ನಾರಾಯಣನುದಾತ್ತನಾರಾಯಣನ ಬರವನಱಿದು ಬಲದೇವ ಸಾತ್ಯಕಿ ಕೃತವರ್ಮಾದಿಗಳಪ್ಪ ತನ್ನೊಡವುಟ್ಟಿದರುಂ ವೃಷ್ಣಿಕಾಂಭೋಜಕುಳತಿಳಕರಪ್ಪ ಯಾದವರುಂಬೆರಸು

ಮದಕರಿ ಕರೇಣು ತುರಗಾದಿ
ನಾನಾವಿಧವಾಹನಂಗಳನೇ
ಱೆ ಮಯ್ದುನಂಗಿದಿರ್ವಂದು
ತಮ್ಮಲಂಪಿನಟ್ಟಿಱಿನ ರೂಪನೆ
ಕಾಣ್ಬಂತೆ ಕಂಡು
ದಿಕ್ಕರಿಕರಾನುಕಾರಿಗಳಪ್ಪ
ಬಾಹುಗಳಿಂದಮೋರೊರ್ವ
ರಂ ತೆಗೆದಪ್ಪಿ ನಿಬಿಡಾಲಿಂಗ
ನಂಗೆಯ್ದಾನಂದಜಳಪರಿಪೂ
ರ್ಣವಿಸ್ತೀರ್ಣವಿಲೋಚನಂಗ
ಳಿಂದಂ ಮುಹುರ್ಮುಹು

ರಾಲೋಕನಂ
ಗೆಯ್ಯುತ್ತುಮುತ್ತುಂಗ
ಮತ್ತವಾರಣಂಗಳನೇಱಿ
ಪೊೞಲಂ ಪುಗೆ-

ವಚನ:ಪದವಿಭಾಗ-

ಅರ್ಥ:ಅಂತು ದಕ್ಷಿಣಾಕ್ಷಿ ಸ್ಪಂದನದೊಳಂ ಸೂಚಿಸುವ ಶುಭಸೂಚನೆಯೊಳಂ ನಾರಾಯಣನು ದಾತ್ತನಾರಾಯಣನ ಬರವನಱಿದು ಬಲದೇವ

ಸಾತ್ಯಕಿ ಕೃತವರ್ಮಾದಿಗಳಪ್ಪ ತನ್ನೊಡವುಟ್ಟಿದರುಂ ವೃಷ್ಣಿ ಕಾಂಭೋಜ ಕುಳತಿಳಕರಪ್ಪ (ಕುಲತಿಲಕರಾದ) ಯಾದವರುಂ ಬೆರಸು (ಕೂಡಿಕೊಂಡು) ಮದಕರಿ ಕರೇಣು ತುರಗಾದಿ (ಮದ್ದಾನೆ, ಹೆಣ್ಣಾನೆ, ಕುದುರೆ) ನಾನಾವಿಧ ವಾಹನಂಗಳನು ಏಱೆ (ಏರಿ-ಹತ್ತಿ) ಮಯ್ದುನಂಗೆ ಇದಿರ್ವಂದು

(ಎದಿರುಗೊಳ್ಳುವುದು- ಸ್ವಾಗತ
ಬಯಸುವುದು) ತಮ್ಮ
ಅಲಂಪಿನ ಅೞ್ಕಱಿನ
(ಸಂತೋಷ ಮತ್ತು ಪ್ರೀತಿಯ)
ರೂಪನೆ ಕಾಣ್ಬಂತೆ ಕಂಡು,
ದಿಕ್ಕರಿ ಕರಾನುಕಾರಿಗಳು ಅಪ್ಪ
(ದಿಗ್ಗಜಗಳ ಸೊಂಡಲಿನಂತಿದ್ದ
ತೋಳುಗಳಿಂದ)
ಬಾಹುಗಳಿಂದಂ ಓರೊರ್ವರಂ
(ಒಬ್ಬೊಬ್ಬರನ್ನೂ) ತೆಗೆದಪ್ಪಿ
(ಅಪ್ಪಿಕೊಂಡು)

ನಿಬಿಡಾಲಿಂಗನಂಗೆಯ್ದು (ಬಲವಾಗಿ ಅಪ್ಪಿಕೊಂಡರು) ಆನಂದಜಳಪರಿಪೂರ್ಣ (ಸಂತೋಷದ ಕಣ್ಣೀರು ತುಂಬಿದ) ವಿಸ್ತೀರ್ಣವಿಲೋಚನಂಗಳಿಂದಂ (ಅರಳಿದ ಕಣ್ಣುಗಳಿಂದ) ಮುಹುರ್ಮುಹುರ್ (ಪುನಃ ಪುನಃ) ಆಲೋಕನಂಗೆಯ್ಯುತ್ತುಮು ಉತ್ತುಂಗ

ಮತ್ತವಾರಣಂಗಳನು ಏಱ
ಪೊಐಲಂ ಪುಗೆ -
ವಚನ:ಅರ್ಥ:ಹಾಗೆ
ಬಲಗಣ್ಣಿನ ಅದುರುವಿಕೆ
(ಸ್ಪಂದನ) ಯಿಂದಲೂ
ಸೂಚಿತವಾದ
ಶುಭಶಕುನಗಳಿಂದಲೂ
ನಾರಾಯಣನಾದ ಕೃಷ್ಣನು
ಉದಾತ್ತ
ನಾರಾಯಣನಾದ(ಅರಿಕೇಸರಿ
ಯ ಬಿರುದು) ಅರ್ಜುನನ

ಬರುವಿಕೆಯನ್ನು ತಿಳಿದು
ಬಲರಾಮ, ಸಾತ್ಯಕಿ,
ಕೃತವರ್ಮ ಮೊದಲಾದ
ಒಡಹುಟ್ಟಿದವರನ್ನು ವೃಷ್ಣಿ
ಮತ್ತು ಕಾಂಭೋಜ
ಕುಲಶ್ರೇಷ್ಠರಾದ
ಯಾದವರನ್ನೂ
ಕೂಡಿಕೊಂಡು ಮದ್ದಾನೆ,
ಹೆಣ್ಣಾನೆ, ಕುದುರೆ ಮೊದಲಾದ
ಅನೇಕ ವಾಹನಗಳನ್ನು ಹತ್ತಿ
ಮೈದುನನಿಗೆ ಸ್ವಾಗತಕೋರಲು

ಬಂದು ತಮ್ಮ ಸಂತೋಷ
ಮತ್ತು ಪ್ರೀತಿಯ ಆಕಾರವನ್ನೇ
ಕಾಣುವ ಹಾಗೆ ಕಂಡು,
ದಿಗ್ಗಜಗಳ ಸೊಂಡಲಿನಂತಿದ್ದ
ತೋಳುಗಳಿಂದ
ಒಬ್ಬೊಬ್ಬರನ್ನೂ ಬಿಗಿದು
ಆಲಿಂಗನ ಮಾಡಿಕೊಂಡರು.
ಸಂತೋಷದ ಕಣ್ಣೀರು
ತುಂಬಿದ, ಅರಳಿದ
ಕಣ್ಣುಗಳಿಂದ ಪುನಃ ಪುನಃ
ಪರಸ್ಪರ ನೋಡುತ್ತಾ

ಎತ್ತರವಾದ ಮದ್ದಾನೆಯನ್ನು ಹತ್ತಿ ನಗರವನ್ನು ಪ್ರವೇಶ ಮಾಡಲು.

**ಚಂ|| ಸುರ ನರ ಕಿನ್ನರೋರಗ ನಭಶ್ಚರ ಕಾಂತೆಯರೇವರೆಂದು ಮಾಂ
ಕರಿಸುವ ಕೆಯ್ತದಂದದ ಮುರಾರಿಯ
ತಂಗೆಯನಪ್ಪುಕೆಯ್ದು ಚ|
ಚ್ಚರಮೊಳಪೊಯ್ದು ನೀಂ ನಿನಗೆ**

ಮಾಡುವುದೇಂದಮರೇಂದ್ರ ಪುತ್ರನಂ ಕರೆವವೊಲಾದುವಾ ಪುರದ ವಾತ ವಿಧೂತವಿನೂತ ಕೇತುಗಳ್|| ೩೪||

ಪದ್ಯ-೩೪:ಪದವಿಭಾಗ-ಅರ್ಥ:ಸುರ ನರ ಕಿನ್ನರ ಉರಗ (ನಾಗ) ನಭಶ್ಚರ (ಆಕಾಶಗಮನ ಉಳ್ಳವರು ಖೇಚರರು - ಅಪ್ಸರೆಯರು) ಕಾಂತೆಯರು ಏವರೆಂದು

(ಅವರು ಯಾರು ಎಂತಹವರು ಎಂದು) ಮಾಂಕರಿಸುವ (ಅಲಕ್ಷಮಾಡುವ) ಕೆಯ್ತದ ಅಂದದ ಮುರಾರಿಯ ತಂಗೆಯನು ಅಪ್ಪುಕೆಯ್ದು (ಮಾಟವುಳ್ಳ ಸುಂದರಿ, ಶ್ರೀಕೃಷ್ಣನ ತಂಗಿಯಾದ ಆ ಸುಭದ್ರೆಯನ್ನು ಒಪ್ಪಿ) ಚಚ್ಚರಮೊಳ ಪೊಯ್ದು ನೀಂ ನಿನಗೆ ಮಾಡುವುದು (ಬೇಗ ಒಲಿಸಿಕೊಂಡು

ನಿನ್ನವಳನ್ನಾಗಿಮಾಡಿಕೊ) ಎಂದು ಅಮರೇಂದ್ರಪುತ್ರನಂ (ಅರ್ಜುನನ್ನು) ಕರೆವವೊಲ್ ಆದುವು ಆ ಪುರದ ವಾತ ವಿಧೂತ (ಗಾಳಿಯಿಂದ ತೂಗುವ) ವಿನೂತ ಕೇತುಗಳ್(ಬಾವುಟ,ಧ್ವಜ)

ಪದ್ಯ-೩೪:ಅರ್ಥ: . ದೇವ, ಮಾನವ, ಕಿನ್ನರ, ಉರಗ, ಖೇಚರ ಸ್ತ್ರೀಯರು (ಇವಳ ಮುಂದೆ) ಅವರು ಯಾರು

ಎಂತಹವರು ಎಂದು
ಅಲಕ್ಷ್ಯಮಾಡುವ ಮಾಟವುಳ್ಳ
ಸುಂದರಿ, ಶ್ರೀಕೃಷ್ಣನ
ತಂಗಿಯಾದ ಆ
ಸುಭದ್ರೆಯನ್ನು ಒಪ್ಪಿ, ಬೇಗ
ಒಲಿಸಿಕೊಂಡು ಬೇಗ
ನಿನ್ನವಳನ್ನಾಗಿಮಾಡಿಕೊ
ಎಂದು ಇಂದ್ರಪುತ್ರನಾದ
ಅರ್ಜುನನನ್ನು ಕರೆಯುವ
ಹಾಗೆ ಆ ನಗರದ ಗಾಳಿಯಿಂದ
ಅಲುಗುವ

ಹೊಗಳಬಹುದಾದ ಧ್ವಜಗಳು ಕಂಡವು.

ವ|| ಆಗಳ್ ಮೊಱಗುವ ಬದ್ಧವಣದ ಪರೆಗಳುಂ ಪಿಡಿದ ಕೆಂಬೊನ್ನ ತಳಿಗೆಯೊಳ್ ತೆಕ್ಕನೆ ತೀವಿದ ಬಿಡುಮುತ್ತಿನ ಸೇಸೆಯುಂ ಬೆರಸು-

ವಚನ:ಪದವಿಭಾಗ-

ಅರ್ಥ:ಆಗಳ್ ಮೊಱಗುವ ಬದ್ಧವಣದ (ಮೊಳಗುವ ಮಂಗಳವಾದ್ಯಗಳ)

ಪರೆಗಳುಂ (?ದೀಪಗಳನ್ನು ಹಿಡಿದ) ಪಿಡಿದ ಕೆಂಬೊನ್ನ ತಳಿಗೆಯೊಳ್ (ಚಿನ್ನದ ತಟ್ಟೆಯಲ್ಲಿ) ತೆಕ್ಕನೆ ತೀವಿದ ಬಿಡುಮುತ್ತಿನ ಸೇಸೆಯುಂ ಬೆರಸು (ಬಿಡಿಮುತ್ತಿನ ಅಕ್ಷತೆಯನ್ನು/ ಸೇಸೆಯ/ ಸುಳಿಯುವ ಮುತ್ತಿನುಂಡೆ? ತುಂಬಿಕೊಂಡು)-

ವಚನ:ಅರ್ಥ:|| ಆಗ ಮಂಗಳವಾದ್ಯಗಳು

ಮೊಳಗಲು, (ಆ ನಗರದ ಸ್ತ್ರೀಯರು) ದೀಪಗಳನ್ನು ಹಿಡಿದು ಚಿನ್ನದ ತಟ್ಟೆಯನ್ನು ಬಿಡಿಮುತ್ತಿನ ಅಕ್ಷತೆಯನ್ನು ತುಂಬಿಕೊಂಡು-

ಚಂ|| ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂ
ಕಿದ ನಿಱಿ ಗಂಡರಳ್ಳೆರ್ದೆಗಳಂ ತುೞಿವೋಜೆಯನುಂಟುಮಾ ಡುವಂ|

ದದೆ ನಿಡುಗಣ್ಗಳೊಳ್ಸಡೆ

ಮನೋಭವನೊಡ್ಡಣದಂತೆ

ತಂಡ ತಂ

ಡದೆ ಪರಿತಂದು ಸೂಸಿದುದು

ಸೇಸೆಯನಂದು

ಪುರಾಂಗನಾಜನಂ|| ೩೫||

ಪದ್ಯ-೩೫:ಪದವಿಭಾಗ-ಅರ್ಥ:ಒದವಿದ ನೂಲ ತೊಂಗಲುಲಿ (ನಡುಪಟ್ಟಿಯ ನೂಲಿನ ಕುಚ್ಚುಗಳಿಂದ ಒದವಿದ- ಕೂಡಿದ)

ದೇಸೆಯನಾಂತು
(ಸೌಂದರ್ಯದಿಂದ ಕೂಡಿ)
ವಿಳಾಸದಿಂದ ಇೞುಂಕಿದ
(ಸೊಗಸಿನಿಂದ
ಸಿಕ್ಕಿಸಿಕೊಂಡಿರುವ) ನಿಱಿ
ಗಂಡರ ಅಳ್ಕ ಎರ್ದೆಗಳಂ
(ಗಂಡಸರ ದುರ್ಬಲ
ಹೃದಯಗಳನ್ನು) ತುೞಿವ
ಓಜೆಯನುಂಟುಮಾಡುವ
ಅಂದದೆ (ತುಳಿಯುವ/
ನೋಯಿಸುವ ರೀತಿಯನ್ನು

ಉಂಟುಮಾಡುವಂತೆ)
ನಿಡುಗಣ್ಗಳೊೞ್ ನೆಡೆ
(ಉದ್ದಕಣ್ಣಿನಲ್ಲಿ ನಾಟಲು,)
ಮನೋಭವನ ಒಡ್ಡಣದಂತೆ
(ಮನ್ಮಥನ ಸೈನ್ಯದಂತೆ) ತಂಡ
ತಂಡದೆ ಪರಿತಂದು (ತಂಢ
ತಂಡವಾಗಿ ಬಂದು)
ಸೂಸಿದುದು ಸೇಸೆಯನು (
ಚೆಲ್ಲಿದರು ಅಕ್ಷತೆಯನ್ನು)
ಅಂದು ಪುರ ಅಂಗನಾ ಜನಂ

(ಅಂದು ನಗರದ ಹೆಂಗಸರ
ಗುಂಪು)

ಪದ್ಯ-೩೫:ಅರ್ಥ:

ನಡುಪಟ್ಟಿಯ ಕುಚ್ಚುಗಳಿಂದ
ಒದವಿದ- ಕೂಡಿದ
ಸೌಂದರ್ಯದಿಂದ ಕೂಡಿ
ಸೊಗಸಿನಿಂದ ತೊಡೆಗಳ
ಮಧ್ಯೆ ಸಿಕ್ಕಿಸಿಕೊಂಡಿರುವ
ಸೀರೆಗಳ ನೆರಿಗೆಗಳು ಗಂಡಸರ
ದುರ್ಬಲ ಹೃದಯಗಳನ್ನು
ತುಳಿದು ನೋಯಿಸುವ ಹಾಗೆ,

ಅವರ ಉದ್ದ ಕಣ್ಣುಗಳಲ್ಲಿ
(ದೃಷ್ಟಿ)ನಾಟಲು, ಮನ್ಮಥನ
ಸೈನ್ಯದ ಹಾಗೆ
ಗುಂಪುಗುಂಪಾಗಿ ಓಡಿ ಬಂದು
ನಗರದ ಹೆಂಗಸರು ಅಂದು
ಅರ್ಜುನನಿಗೆ ಅಕ್ಷತೆಯನ್ನು
ಚೆಲ್ಲಿದರು
(ಆಶೀರ್ವದಿಸಿದರು).

ಮಿಳಿರ್ವ ಕುರುಳ್ಗಳೊಳ್
ಪೊಳೆವ ಕಣ್ಗಳ ಬೆಳ್ಪು ಪಳಂಚಿ
ಚಿನ್ನ ಪೂ

ಗಣೆಗೆಣೆಯಾಗೆ
ಪುರ್ಪುಮೆಮೆಗಳ್
ಬಿಡದಳ್ಳಿಱಿದಿಕ್ಷುಚಾಪದೊಳ್
|
ಖಳ ಕುಸುಮಾಸ್ತ್ರನಿಟ್ಟ
ಗೋಣೆಯಕ್ಕೆಣೆಯಾಗಿರೆ ನಿಳ್ಕಿ
ನಿಳ್ಕಿ ಕೋ
ಮಳೆ ನಡೆ ನೋಡಿದಳ್
ಕರಿಯನೇಱಿದನಂ
ಪಡೆಮೆಚ್ಚೆಗಂಡನಂ|| ೩೬

ಪದ್ಯ-೩೬:ಪದವಿಭಾಗ-ಅರ್ಥ:ಮಿಳಿರ್ವ ಕುರುಳ್ಗಳೊಳ್ (ಅಲುಗುತ್ತಿರುವ ಮುಂಗುರುಳುಗಳಲ್ಲಿ) ಪೊಳೆವ ಕಣ್ಗಳ ಬೆಳ್ಪು (ಬೆಳಕಿನ ಪ್ರಕಾಶ) ಪಳಂಚಿ (ಸೇರಿ) ಚೆನ್ನ ಪೂಗಣೆಗೆ ಎಣೆಯಾಗೆ (ಚೆನ್ನದ ಪುಷ್ಪಬಾಣಕ್ಕೆ ಸಮಾನವಾಗಿರಲು) ಪುರ್ವಂ

ಎಮೆಗಳ್ (ಹುಬ್ಬುಗಳೂ
ಕಣ್ಣಿನ ರೆಪ್ಪೆಗಳೂ) ಬಿಡದೆ
ಅಳ್ಳಿಱಿದು
ಇಕ್ಷುಚಾಪದೊಳ್(ನಿಲ್ಲದೆ
ಕಂಪಿಸಿ/ಹೊಡೆದು) ಖಳ
ಕುಸುಮಾಸ್ತ್ರನಿಟ್ಟ (ದುಷ್ಟನಾದ
ಮನ್ಮಥನು ಕಬ್ಬಿನ ಬಿಲ್ಲಿನಲ್ಲಿ
ಹೂಡಿದ) ಗೊಣೆಯಕ್ಕೆ
(ಬಿಲ್ಲಿನ ಹೆದೆಗೆ) ಎಣೆಯಾಗಿರೆ
(ಸಮಾನವಾಗಿರಲು) ನಿಳ್ಕಿ
ನಿಳ್ಕಿ ಕೋಮಳೆ ನಡೆ

ನೋಡಿದಳ್ (ಹಿಮ್ಮಡಿಎತ್ತಿ
ನೀಕಿ ನೀಕಿ ಒಬ್ಬ ಕೋಮಲೆ
ಆನೆಯಮೇಲೇರಿ ಬರುತ್ತಿದ್ದ
ಅರ್ಜುನನ್ನು ನೋಡಿದಳು)
ಕರಿಯನು ಏಱಿದನಂ
(ಆನೆಯನ್ನು ಏರಿ ಕುಳಿತ
ಪಡೆಮೆಚ್ಚೆಗಂಡನಂ-
ಅರ್ಜುನನ್ನು)
(ಪಡೆಮೆಚ್ಚೆಗಂಡನಂ -
ಅರಿಕೇಸರಿ ರಾಜನ ಬಿರುದು)

ಪದ್ಯ-೩೬:ಅರ್ಥ:

ಅಲುಗುತ್ತಿರುವ
ಮುಂಗುರುಳುಗಳಲ್ಲಿ
ಹೊಳೆಯುವ ಕಣ್ಣುಗಳ
ಬೆಳಕಿನ ಪ್ರಕಾಶ ಸೇರಿಕೊಂಡು
ಚಿನ್ನದ ಪುಷ್ಪಬಾಣಕ್ಕೆ
ಸಮಾನವಾಗಿರಲು
ಹುಬ್ಬುಗಳೂ ಕಣ್ಣಿನ
ರೆಪ್ಪೆಗಳೂ ಒಂದೇ ಸಮನಾಗಿ
ಕುಣಿಯುತ್ತ ದುಷ್ಟನಾದ
ಮನ್ಮಥನು ಕಬ್ಬಿನ ಬಿಲ್ಲಿನಲ್ಲಿ

ಹೂಡಿದ ಬಿಲ್ಲಿನ ಹೆದೆಗೆ
ಸಮಾನವಾಗಿರಲು
ಹಿಮ್ಮಡಿಎತ್ತಿ ನೀಕಿ ನೀಕಿ ಒಬ್ಬ
ಕೋಮಲೆ ಆನೆಯಮೇಲೇರಿ
ಬರುತ್ತಿದ್ದ ಅರ್ಜುನನ್ನು
ಅತಿಶಯವಾಗಿ ನೋಡಿದಳು.

ವ|| ಮತ್ತೊರ್ವಳತಿ ಸಂಭ್ರಮ ತ್ವರಿತದಿಂ ಮೇಖಳಾಕಳಿತ ರುಚಿರ ಲುಳಿತಾಧರ ಪಲ್ಲವೆ ನೋೞ್ಪ ದಂಡುಗಳೊಳಂಡುಗೊಂಡು

ಸೊರ್ಕಿದಾನೆ ಬರ್ಪಂತೆ ಬಂದು-

ವಚನ:ಪದವಿಭಾಗ-

ಅರ್ಥ:ಮತ್ತೊರ್ವಳು ಅತಿ ಸಂಭ್ರಮ ತ್ವರಿತದಿಂ (ಅವಸರದಲ್ಲಿ ಬೇಗ) ಮೇಖಳಾಕಳಿತ (ಒಡ್ಯಾಣದ ನಡುಪಟ್ಟಿಯಿಂದ ಕೂಡಿದ) ರುಚಿರ ಲುಳಿತಾಧರ ಪಲ್ಲವೆ (ಮನೋಹರವಾಗಿ ಬಾಗಿರುವ ಚಿಗುರಿನಂತಿರುವ

ತುಟಿಯುಳ್ಳ) ನೋೞ್ಪಿ
ದಂಡುಗಳೊಳ್ (ನೋಡುವ
ಗುಂಪಿನಲ್ಲಿ) ಅಂಡುಗೊಂಡು
(ಹತ್ತಿರ ಬಂದು) ಸೊರ್ಕಿದಾನೆ
ಬರ್ಪಂತೆ ಬಂದು-
ವಚನ:ಅರ್ಥ:ಒಡ್ಯಾಣದ
ನಡುಪಟ್ಟಿಯಿಂದ ಕೂಡಿದ
ಮನೋಹರವಾಗಿ ಬಾಗಿರುವ
ಚಿಗುರಿನಂತಿರುವ ತುಟಿಯುಳ್ಳ
ಮತ್ತೊಬ್ಬಳು ಓಡಿಬಂದು
ನೋಡುವ ಗುಂಪಿನಲ್ಲಿ

ಸೊಕ್ಕಿದ ಆನೆ ಬರುವ ಹಾಗೆ
ಅರ್ಜುನನ ಹತ್ತಿರಕ್ಕೆ ಬಂದು-

ಉ|| ಕಾಯದೆ ಕಾಮನಾರ್ದಿಸೆ
ತೊವಲ್ವಿಡಿವಂತೆಡಗಯ್ಯೊಳೊ
ಪ್ಪೆ ತೋ
ರ್ಪಾಯೆಲೆ ನೋಟ ಬೇಟದ
ಕೊನರ್
ತಲೆದೋರ್ಪವೊಲಾಗೆ
ಬಾಯೊಳಿ
ರ್ದಾಯೆಲೆ ಕಣ್ಗೆವಂದೆಸೆಯೆ
ಕಯ್ಯೆಲೆ ಕಯ್ಯೊಳೆ ಬಾಯ

ತಂಬುಲಂ

ಬಾಯೊಳೆ ತೋಱೆ

ಮೆಯ್ಮರೆದು ನೋಡಿದಳ್

ಸಮರೈಕಮೇರುವಂ|| ೩೭||

ಪದ್ಯ-೩೭:ಪದವಿಭಾಗ-

ಅರ್ಥ:ಕಾಯದೆ ಕಾಮನು

ಆರ್ದು ಇಸೆ (ರಕ್ಷಣೆ ಮಾಡದೆ

ಕಾಮನು ಗರ್ಜಿಸಿ

ಬಾಣಹೊಡೆಯಲು,)

ತೊವಲ್ವಿಡಿವಂತೆ (ತೊವಲ್

ಹಿಡಿವಂತೆ- ಚಿಗುರನ್ನು

ಹಿಡಿಯುವಹಾಗೆ)
ಎಡಗಯ್ಯೊಳು ಒಪ್ಪೆ
ತೋರ್ಪಾ ಯೆಲೆ
(ಎಡಗಯ್ಯಲ್ಲಿ
ವೀಳೆಯದೆಲೆಯು ಒಪ್ಪಿರಲು)
ನೋಟ ಬೇಟದ ಕೊನರ್
ತಲೆದೋರ್ಪವೊಲ್ ಆಗೆ
(ಕಣ್ಣುಬೇಟದ ಪ್ರೇಮದ
ಚಿಗುರು ಕಾಣಿಸಿಕೊಂಡ ಹಾಗೆ)
ಬಾಯೊಳು ಇರ್ದ ಆ ಯೆಲೆ
(ಬಾಯಲ್ಲಿ ಇದ್ದ ಎಲೆ-

ತಾಂಬೂಲ) ಕಣ್ಗೆವಂದು
ಎಸೆಯೆ (ಕಣ್ಣಿಗೆ ಅರ್ಜುನನ
ರೂಪದ ಶೋಭೆ ತೋರಲು)
ಕಯ್ಯೆಲೆ ಕಯ್ಯೊಳೆ (ಕೈಯಲ್ಲಿದ್ದ
ಎಲೆ ಕೈಯಲ್ಲಿ)ಬಾಯ
ತಂಬುಲಂ ಬಾಯೊಳೆ ತೋಱೆ
(ಬಾಯಲ್ಲಿದ್ದ ತಾಂಬೂಲ
ಬಾಯಲ್ಲಿಯೇ ಉಳಿದು)
ಮೆಯ್ಮರೆದು ನೋಡಿದಳ್
(ಕೈಯಲ್ಲಿದ್ದ ವೀಳಯದ
ಎಲೆಯನ್ನು ಮೈಮರೆತು

ಬಾಯಿಗೆ ಹಾಕಿಕೊಳ್ಳದೆ ಅರ್ಜುನನ್ನು ನೋಡಿದಳು) ಸಮರೈಕಮೇರುವಂ (ಅರ್ಜುನನ್ನು)

ಪದ್ಯ-೩೭:ಅರ್ಥ: ಕಾಮನು ಕರುಣೆಯಿಲ್ಲದೆ ಬಾಣಪ್ರಯೋಗ ಮಾಡಲು ಹೆದರಿ ಚಿಗುರನ್ನು ಹಿಡಿಯುವ ಹಾಗೆ ಎಡಗಯ್ಯಲ್ಲಿ ವೀಳೆಯದೆಲೆಯು ಒಪ್ಪಿರಲು ಕಣ್ಣುಬೇಟದ ಪ್ರೇಮದ

ಚಿಗುರು ಕಾಣಿಸಿಕೊಂಡ ಹಾಗೆ
ಬಾಯಲ್ಲಿ ಎಲೆ-ತಾಂಬೂಲ
ಇದ್ದಾಗ, ಕಣ್ಣಿಗೆ ಅರ್ಜುನನ
ರೂಪದ ಶೋಭೆ ಕಾಣಲು,
ಕೈಯಲ್ಲಿದ್ದ ಎಲೆ ಕೈಯಲ್ಲಿ -
ಬಾಯಲ್ಲಿದ್ದ ತಾಂಬೂಲ
ಬಾಯಲ್ಲಿಯೇ ಉಳಿದು,
ಕೈಯಲ್ಲಿದ್ದ ವೀಳಯದ
ಎಲೆಯನ್ನು ಬಾಯಿಗೆ
ಹಾಕಿಕೊಳ್ಳದೆ ಕೈಯಲ್ಲಿಯೇ

ಉಳಿದು, ಮೈಮರೆತು ಅರ್ಜುನನನ್ನು ನೋಡಿದಳು.

ವ|| ಮತ್ತೊರ್ವರ್ಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು-

ವಚನ:ಪದವಿಭಾಗ-ಅರ್ಥ: ಮತ್ತೊರ್ವರ್ಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ (ಮನ್ಮಥನ ಕಬ್ಬಿನ ಬಿಲ್ಲಿನ ಹೆದೆಯಿಂದ ಜೀವಂತ ಬರುವ)

ಬರ್ಪಲರಂಬು ಬರ್ಪಂತೆ

(ಅಲರ್ -ಹೂವು, ಅಂಬು

ಬಾಣದಂತೆ)ಬಂದು-

ವಚನ:ಅರ್ಥ:ಮತ್ತೊಬ್ಬಳು

ಕಬ್ಬಿನ ಬಿಲ್ಲಿನ ಹೆದೆಯಿಂದ

ಜೀವಂತ ಬರುವ ಹೂ

ಬಾಣವು ಬರುವ ಹಾಗೆ

ಬಂದು - (ಅವಳು ಮನ್ಮಥನ

ಜೀವಂತ ಬಾಣ)

ಮ|| ಸ್ಮರನಂ

ರೂಪಿನೊಳಿಂದ್ರನಂ

ವಿಭವದೊಳ್ ಪ್ರೋ ಮೆಚ್ಚಿ
(ಮೆಚ್ಚೆ) ನಾನಾವ ಗಂ
ಡರುಮಂ ಕಚ್ಚೆಯೊಳಿಟ್ಟು
ಕಟ್ಟುವೆನೆನುತ್ತಿರ್ಪಾಕೆ ಗಂಧೇಭ
ಕಂ|
ಧರ ಬಂಧ
ಪ್ರವಿಭಾಸಿಯಪ್ಪರಿಗನಂ
ಕಾಣುತ್ತೆ ಕಣ್ಸೋಲ್ತು ಕಾ
ಮರಸಂ ಭೋಂಕನೆ ಸೂಸೆ
ತಾಳ್ದಲರಿದೆಂದಿರ್ಕಚ್ಚೆಯಂ
ಕಟ್ಟಿದಳ್ || ೩೮ ||

ಪದ್ಯ-೩೮:ಪದವಿಭಾಗ-ಅರ್ಥ:ಸ್ಮರನಂ ರೂಪಿನೊಳ್ ಇಂದ್ರನಂ ವಿಭವದೊಳ್ (ರೂಪದಲ್ಲಿ ಮನ್ಮಥನನ್ನೂ ವೈಭವದಲ್ಲಿ ಇಂದ್ರನನ್ನೂ) ಪೋ (ಹೋಗು) ಮೆಚ್ಚಿ? (ಮೆಚ್ಚೆ- ಮೆಚ್ಚೆನು) ನಾನು ಆವ ಗಂಡರುಮಂ ಕಚ್ಚೆಯೊಳಿಟ್ಟು ಕಟ್ಟುವೆನು ಎನುತ್ತಿರ್ಪಾಕೆ (ಎಂತಹ ಶೂರನನ್ನಾದರೂ ನನ್ನ

ಕಚ್ಚೆಯಲ್ಲಿಟ್ಟು ಕಟ್ಟಿಬಿಡುತ್ತೇನೆ ಎನ್ನುತ್ತಿದ್ದ ಆಕೆ,) ಗಂಧೇಭ ಕಂಧರ ಬಂಧ (ಮದ್ದಾನೆಯ ಕುಂಭಸ್ಥಳದಲ್ಲಿ) ಪ್ರವಿಭಾಸಿಯಪ್ಪ ಅರಿಗನಂ ಕಾಣುತ್ತೆ (ಪ್ರಕಾಶಮಾನವಾಗಿದ್ದ ಅರಿಗನನ್ನು ಕಂಡ ತಕ್ಷಣವೆ) ಕಣ್ಸೋಲ್ತು (ಅವನಿಗೆ ಕಣ್ಣಿನ ನೋಟದಲ್ಲೇ ಮರುಳಾಗಿ) ಕಾಮರಸಂ ಭೋಂಕನೆ ಸೂಸೆ

(ಸುರತರಸವನ್ನು ತಕ್ಷಣ ಸುರಿಸುತ್ತಿರಲು) ತಾಳ್ದಲರಿದೆಂದು ಇರ್ಕಚ್ಚೆಯಂ ಕಟ್ಟಿದಳ್ (ಇರ್ ಕಚ್ಚೆ-ಎರಡು ಕಚ್ಚೆ; ಸಹಿಸಲು ಸಾಧ್ಯವಿಲ್ಲವೆಂದು ಎರಡು ಕಚ್ಚೆಯನ್ನು ಬಿಗಿಯಾಗಿ ಕಟ್ಟಿದಳು)|

ಪದ್ಯ-೩೮:ಅರ್ಥ: ರೂಪದಲ್ಲಿ ಮನ್ಮಥನನ್ನೂ ವೈಭವದಲ್ಲಿ ಇಂದ್ರನನ್ನೂ ನಾನು

ಮೆಚ್ಚುವುದಿಲ್ಲ, ಬಿಡು ಎಂತಹ
ಶೂರನನ್ನಾದರೂ ನನ್ನ
ಕಚ್ಚೆಯಲ್ಲಿಟ್ಟು ಕಟ್ಟಿಬಿಡುತ್ತೇನೆ
ಎನ್ನುತ್ತಿದ್ದ ಆಕೆ, ಮದ್ದಾನೆಯ
ಕುಂಭಸ್ಥಳದಲ್ಲಿ
ಪ್ರಕಾಶಮಾನವಾಗಿದ್ದ
ಅರಿಗನನ್ನು ಕಂಡ ತಕ್ಷಣವೆ
ಅವನಿಗೆ ಕಣ್ಣಿನ ನೋಟದಲ್ಲೇ
ಮರುಳಾಗಿ, ಸುರತರಸವನ್ನು
ತಕ್ಷಣ ಸುರಿಸುತ್ತಿರಲು,
ಸಹಿಸಲು ಸಾಧ್ಯವಿಲ್ಲವೆಂದು

ಎರಡು ಕಚ್ಚೆಯನ್ನು
ಬಿಗಿಯಾಗಿ ಕಟ್ಟಿದಳು

ವ|| ಅಂತು ನೋಡಿದ ಪೆಂಡಿರೆಲ್ಲಂ ಕಾಮದೇವನೆಂಬ ಬೇಂಟೆಕಾಱಂಗೊಡ್ಡಿದ ಪುಲ್ಲೆಗಳಂತರಲಂಬಿನ ಮೊನೆಗೆ ಪೂಣೆ ಪೊಕ್ಕು ಪಕ್ಕಾಗಿರೆ ಪೊಱಲೊಳಗಣಿಂ ಬಂದು ದಿವಿಜೇಂದ್ರ ವಿಳಾಸೋಪಹಾಸಿತಮಪ್ಪ ನಿಜಮಂದಿರಮಂ ಪುಗೆ-

ವಚನ:ಪದವಿಭಾಗ-ಅರ್ಥ:ಅಂತು ನೋಡಿದ ಪೆಂಡಿರೆಲ್ಲಂ (ಹೆಂಗಸರೆಲ್ಲರೂ) ಕಾಮದೇವನೆಂಬ ಬೇಂಟೆಕಾಱಂಗೆ ಒಡ್ಡಿದ ಪುಲ್ಲೆಗಳಂತೆ ಅರಲಂಬಿನ (ಹೂಬಾಣದ) ಮೊನೆಗೆ ಪೂಣೆ ಪೊಕ್ಕು (ಪುಷ್ಪಬಾಣದ ಮೊನಚಿಗೆ ಪ್ರತಿಜ್ಞೆ/ಗಟ್ಟಿಯಾಗಿ ಮಾಡಿ ಹೊಕ್ಕು) ಪಕ್ಕಾಗಿರೆ ಪೊಱಲೊಳಗಣಿಂ

(ನಗರದೊಳಗಿನಿಂದ) ಬಂದು ದಿವಿಜೇಂದ್ರ ವಿಳಾಸ ಉಪಹಾಸಿತಮಪ್ಪ (ದೇವೇಂದ್ರನ ವೈಭವವನ್ನೂ ಉಪಹಾಸಮಾಡುವಂತಿದ್ದ) ನಿಜ ಮಂದಿರಮಂ ಪುಗೆ (ತನ್ನ ಅರಮನೆಯನ್ನು ಹೊಗಲು- ಪ್ರವೇಶಿಸಲು)-

ವಚನ:ಅರ್ಥ:ಹಾಗೆ ನೋಡಿದ ಹೆಂಗಸರೆಲ್ಲರೂ ಕಾಮದೇವನೆಂಬ

ಬೇಟೆಗಾರನಿಗೆ ಒಡ್ಡಿದ
ಹುಲ್ಲೆಗಳ ಹಾಗೆ ಪುಷ್ಪಬಾಣದ
ಮೊನಚಿಗೆ ಪ್ರತಿಜ್ಞೆ/ಗಟ್ಟಿಯಾಗಿ
ಮಾಡಿ ಹೊಕ್ಕು
ಅದಕ್ಕನವಾಗಿರಲು
ಅರ್ಜುನನು ನಗರದ
ಒಳಭಾಗದಿಂದ ಬಂದು
ದೇವೇಂದ್ರನ ವೈಭವವನ್ನೂ
ಉಪಹಾಸಮಾಡುವಂತಿದ್ದ
ತನ್ನ ಅರಮನೆಯನ್ನು
ಪ್ರವೇಶಿಸಲು.

ಮ|| ಲತೆಗಳ್

ಜಂಗಮರೂಪದಿಂ

ನೆರೆದುವೋ

ದಿವ್ಯಾಪ್ಸರೋವೃಂದವಿ

ಕ್ಷಿತಿಗೇನಿಂದ್ರನ

ಶಾಪದಿಂದಿೞಿದುವೋ

ಪೇೞೆಂಬ ಶಂಕಾಂತರಂ|

ಮತಿಗಂ ಪುಟ್ಟುವಿನಂ ಕರಂ

ಪರಕೆಗಳ್ ತಳ್ತೊಯ್ಯೆ

ಪೇಸಿಕ್ಕಿತಿಂ

ದ್ರತನೂಜಂಗಿದಿರ್ವಂದು ಷೋಡಶ ಸಹಸ್ರಾಂತಪುರಂ ಕೃಷ್ಣನಾ|| ೩೯||

ಪದ್ಯ-೩೯:ಪದವಿಭಾಗ-

ಅರ್ಥ:ಲತೆಗಳ್ ಜಂಗಮರೂಪದಿಂ ನೆರೆದುವೋ (ಬಳ್ಳಿಗಳು ತಿರುಗಾಡವ ರೂಪದಿಂದ ಒಟ್ಟುಸೇರಿವೆಯೋ) ದಿವ್ಯ ಅಪ್ಸರೋವೃಂದ (ಸ್ವರ್ಗದ ಅಪ್ಸರಸ್ತ್ರೀಯರ ಸಮೂಹ)

ವಿಕ್ಷಿತಿಗೆ ಏನು ಇಂದ್ರನ ಶಾಪದಿಂದ ಇೞಿದುವೋ (ಭೂಮಿಗೆ ಇಂದ್ರನ ಶಾಪದಿಂದ ಇಳಿದಿದ್ದಾರೆಯೋ) ಪೇೞೆಂಬ (ಪೇೞೆಂಬ -ಪೇಳು ಎಂಬ) ಶಂಕಾಂತರಂಮತಿಗಂ (ಶಂಕ ಅಂತರಂ ಮತಿಗಂ -) ಪುಟ್ಟುವಿನಂ (ಉಂಟುಮಾಡುತ್ತಿದ್ದ) ಕರಂ ಪರಕೆಗಳ್ ತಳ್ಪೊಯ್ಯೆ ಸೇಸಿಕ್ಕಿತು (ವಿಶೇಷವಾಗಿ

ಆಶೀರ್ವಾದವನ್ನು ತಳ್ಳಾಡುತ್ತಾ ಅಕ್ಷತೆಯನ್ನು ಹಾಕಿತು) ಇಂದ್ರತನೂಜಂಗಿದಿರ್ವಂದು (ಇಂದ್ರತನೂಜಂಗೆ ಇದಿರ್ವಂದು - ಅರ್ಜುನನಿಗೆ ಎದುರುಗೊಂಡು/ ಸ್ವಾಗತಿಸಿ) ಷೋಡಶ ಸಹಸ್ರಾಂತಪುರಂ ಕೃಷ್ಣನಾ (ಕೃಷ್ಣನ ಅಂತಪುರದ ಹದಿನಾರು ಸಾವಿರ ಸ್ತ್ರೀಯರು)

ಪದ್ಯ-೩೯:ಅರ್ಥ: ಬಳ್ಳಿಗಳು ತಿರುಗಾಡವ ರೂಪದಿಂದ

ಒಟ್ಟುಸೇರಿವೆಯೋ, ಸ್ವರ್ಗದ
ಅಪ್ಸರಸ್ತ್ರೀಯರ ಸಮೂಹ
ಇಂದ್ರನ ಶಾಪದಿಂದ ಭೂಮಿಗೆ
ಇಳಿದಿದ್ದಾರೆಯೋ ಎಂಬ
ಸಂದೇಹವನ್ನು ಮನಸ್ಸಿಗೆ
ಉಂಟುಮಾಡುತ್ತಿದ್ದ ಕೃಷ್ಣನ
ಅಂತಪುರದ ಹದಿನಾರು
ಸಾವಿರ ಸ್ತ್ರೀಯರು
ಅರ್ಜುನನಿಗೆ
ಎದುರುಗೊಂಡು/ ಸ್ವಾಗತಿಸಿ,
ವಿಶೇಷವಾಗಿ ತಳ್ಳಾಡುತ್ತಾ

ಆಶೀರ್ವಾದದ ಅಕ್ಷತೆಯನ್ನು ಹಾಕಿತು.

ವ|| ಆಗಳ್ ನಾರಾಯಣನ ತಂಗೆ ಸುಭದ್ರೆಯೆಂಬ ಕನ್ನೆ ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ ತನ್ನ ಚೆಂಬೊನ್ನ ಕನ್ನೆಮಾಡದ ಮೇಗಣ ನೆಲೆಯ

ಚೌಪಳಿಗೆಯ ಬಾಗಿಲೊಳ್ ನಿಂದು-

ವಚನ:ಪದವಿಭಾಗ-

ಅರ್ಥ:ಆಗಳ್ ನಾರಾಯಣನ ತಂಗೆ (ತಂಗಿ) ಸುಭದ್ರೆಯೆಂಬ ಕನ್ನೆ (ಕನ್ಯೆಯು) ಕೆಮ್ಮುಗಿಲ ತೆರೆಯ ಪೊರೆಯೊಳ್ (ಕೆಂಪಾದ ಮೋಡವೆಂಬ ತೆರೆಯ ಮಧ್ಯಭಾಗದಿಂದ) ನೆಗೆದು (ದಾಟಿ) ಪೊಱಮಡುವ

ವಿದ್ಯಾಧರಿಯಂತೆ (ಹೊರಬರುವ ವಿದ್ಯಾಧರಸ್ತ್ರೀಯ ಹಾಗೆ) ತನ್ನ ಚೆಂಬೊನ್ನ (ಚೆಂಪು-ಕೆಂಪು, ಹೊನ್ನ -ಚಿನ್ನದ) ಕನ್ನೆಮಾಡದ (ತನ್ನ ಸುವರ್ಣಖಚಿತವಾದ ಕನ್ಯಾಮಾಡದ) ಮೇಗಣ ನೆಲೆಯ ಚೌಪಳಿಗೆಯ ಬಾಗಿಲೊಳ್ ನಿಂದು (ಮೇಲಂತಸ್ತಿನ ತೊಟ್ಟಿಯ ಬಾಗಿಲಲ್ಲಿ ನಿಂತುಕೊಂಡು)-

ವಚನ:ಅರ್ಥ:|| ಆಗ ಕೃಷ್ಣನ ತಂಗಿಯಾದ ಸುಭದ್ರೆಯೆಂಬ ಕನ್ಯೆಯು ಕೆಂಪಾದ ಮೋಡವೆಂಬ ತೆರೆಯ ಮಧ್ಯಭಾಗದಿಂದ ದಾಟಿ ಹೊರಬರುವ ವಿದ್ಯಾಧರ ಸ್ತ್ರೀಯ ಹಾಗೆ ತನ್ನ ಸುವರ್ಣಖಚಿತವಾದ ಕನ್ಯಾಮಾಡದ ಮೇಲಂತಸ್ತಿನ ತೊಟ್ಟಿಯ ಬಾಗಿಲಲ್ಲಿ ನಿಂತುಕೊಂಡು-

ಚಂ|| ಬಳಸಿದ ಗುಜ್ಜುಗಳ್
ನೆರೆದ ಮೇಳದ
ಕನ್ನೆಯರೆತ್ತಮಿಕ್ಕೆ ಸಂ
ಚಳಿಸುವ ಚಾಮರಂ ಕನಕ
ಪದ್ಮದ ಸೀಗುರಿ ತೊಟ್ಟ
ಮಾಣಿಕಂ|
ಗಳ ಬೆಳಗಿಟ್ಟಳಂ
ತನಗೊಡಂಬಡೆ ದೇಸೆ
ವಿಳಾಸಮಂ ಪುದುಂ
ಗೊಳಿಸೆ ಮರಲ್ದು ಕನ್ನೆ ನಡೆ
ನೋಡಿ

ಗುಣಾರ್ಣವನೆಂಬನೀತನೇ|| ೪೦ ||

ಪದ್ಯ-೪೦:ಪದವಿಭಾಗ-ಅರ್ಥ:ಬಳಸಿದ ಗುಜ್ಜುಗಳ್ (ಸುತ್ತುವರಿದ ಸೇವಕ ಕುಬ್ಜರು) ನೆರೆದ ಮೇಳದ (ಒಡನಾಡಿ) ಕನ್ನೆಯರು ಎತ್ತಮಿಕ್ಕೆ (ಎಲ್ಲ ಕಡೆಯಿಂದಲೂ) ಸಂಚಳಿಸುವ (ಬೀಸುವ) ಚಾಮರಂ ಕನಕ ಪದ್ಮದ ಸೀಗುರಿ (ಚಿನ್ನದ ತಾವರೆಯ ಕೊಡೆ) ತೊಟ್ಟ

ಮಾಣಿಕಂಗಳ ಬೆಳಗಿಟ್ಟಳಂ (ಕಾಂತಿ) ತನಗೆ ಒಡಂಬಡೆ ದೇಸೆ ವಿಳಾಸಮಂ (ಸೊಗಸು ಸೌಂದರ್ಯಗಳೂ) ಪುದುಂಗೊಳಿಸೆ (ಹದಗೊಳಿಸಿ ಒಪ್ಪುವಂತೆ ಮಾಡಿರಲು) ಮರಲ್ದು (ಮರುಳಾಗಿ/ ಸೋತು) ಕನ್ನೆ ನಡೆ ನೋಡಿ (ದಿಟ್ಟಿಸಿ ನೋಡಿ) ಗುಣಾರ್ಣವನೆಂಬನು

(ಅರ್ಜುನನೆಂಬುವವನು) ಈತನೇ!

ಪದ್ಯ-೪೦:ಅರ್ಥ: ತನ್ನ ಸುತ್ತಲೂ ಸುತ್ತುವರಿದ ಸೇವಕ ಕುಬ್ಜರು, ಅಲ್ಲಿ ಸೇರಿದ ಒಡನಾಡಿ ಕನ್ಯೆಯರು, ಎಲ್ಲ ಕಡೆಯಿಂದಲೂ ಬೀಸಲು ಚಲಿಸುತ್ತಿರುವ ಚಾಮರವೂ ಚಿನ್ನದ ತಾವರೆಯ ಕೊಡೆ, ಧರಿಸಿದ್ದ ಮಾಣಿಕ್ಯರತ್ನದ ಕಾಂತಿ, ಇವು ಚೆಲುವಾಗಿ ತನಗೆ

ಒಪ್ಪಿರಲು ಸೊಗಸು
ಸೌಂದರ್ಯಗಳು ಹದಗೊಳಿಸಿ
ಒಪ್ಪುವಂತೆ
ಮಾಡಿರಲು,ಮರುಳಾಗಿ,
ಕನ್ಯೆಯಾದ ಸುಭದ್ರೆಯು
ದಿಟ್ಟಿಸಿ ನೋಡಿ
ಅರ್ಜುನನೆಂಬುವವನು
ಇವನೇಯೇ! ಎಂದು
ಕೇಳಿದಳು.

ವ|| ಎಂದು ತನ್ನ ಮೇಳದಾಕೆಗಳಂ

ಬೆಸಗೊಂಡೊಡಾಕೆಗಳಾಕೆಯ
ಪತ್ತಿದ ಕಣ್ಣುಮನುೞ್ಗಿದ
ಮನಮುಮಂ ಜೋಲ್ದ
ನಾಣುಮಂ ನೇಲ್ದ
ಸರಮುಮನಱಿದು
ಸಹಜಮನೋಜನ ಕುಲದ
ಚಲದ ಚಾಗದ ಬೀರದ
ಭಾಗ್ಯದ
ಸೌಭಾಗ್ಯದಗುಂತಿಗಳನಂತು
ಮಳವಲ್ಲದೆ ಪೊಗೞ್ದೆ-

ವಚನ:ಪದವಿಭಾಗ-ಅರ್ಥ:

(ಇವನೇಯೇ!) ಎಂದು ತನ್ನ ಮೇಳದಾಕೆಗಳಂ ಬೆಸಗೊಂಡೊಡೆ ಆಕೆಗಳು(ಎಂದು ತನ್ನ ಒಡನಾಡಿಗಳನ್ನು ಕೇಳಿದಾಗ) ಆಕೆಯ ಪತ್ತಿದ ಕಣ್ಣುಮಂ ಉೞ್ಗಿದ ಮನಮುಮಂ (ಅವರು ಅವಳ ನಟ್ಟದೃಷ್ಟಿಯನ್ನೂ ಪ್ರೀತಿಯಿಂದ ಕೂಡಿದ

ಮನಸ್ಸನ್ನೂ), ಜೋಲ್ದ
ನಾಣುಮಂ ನೇಲ್ದ
ಸರಮುಮನು ಅಱಿದು
(ಸಡಿಲವಾದ ಲಜ್ಜೆಯನ್ನೂ
ಮೆಲ್ಲಗಾದ ಧ್ವನಿಯನ್ನೂ
ತಿಳಿದು) ಸಹಜಮನೋಜನ
ಕುಲದ ಚಲದ ಚಾಗದ ಬೀರದ
ಭಾಗ್ಯದ ಸೌಭಾಗ್ಯದ
ಅಗುಂತಿಗಳನು ಅಂತುಂ
ಅಳವಲ್ಲದೆ ಪೊಗೞೆ

(ಅತಿಶಯಗಳನ್ನು ಅಳತೆಯಿಲ್ಲದೆ ಹೊಗಳಲು)-

ವಚನ:ಅರ್ಥ:

(ಅರ್ಜುನನೆಂಬುವವನು ಇವನೇಯೇ!) ಎಂದು ತನ್ನ ಒಡನಾಡಿಗಳನ್ನು ಕೇಳಿದಾಗ, ಅವರು ಅವಳ ನಟ್ಟದೃಷ್ಟಿಯನ್ನೂ ಪ್ರೀತಿಯಿಂದ ಕೂಡಿದ ಮನಸ್ಸನ್ನೂ ಸಡಿಲವಾದ ಲಜ್ಜೆಯನ್ನೂ ಮೆಲ್ಲಗಾದ

ಧ್ವನಿಯನ್ನೂ ತಿಳಿದು
ಸಹಜಮನ್ಮಥನಾದ
ಅರ್ಜುನನ ಕುಲದ, ಛಲದ,
ತ್ಯಾಗದ, ವೀರದ, ಭಾಗ್ಯದ,
ಸೌಭಾಗ್ಯದ ಅತಿಶಯಗಳನ್ನು
ಅಳತೆಯಿಲ್ಲದೆ ಹೊಗಳಲು-

ಚಂ|| ಒದವಿದ ತನ್ನ ಜವ್ವನದ
ರೂಪಿನ ಮೆಯ್ಯೊಳೆ
ತಪ್ಪುದಪ್ಪು ನೋ
ಟದೊಳೆ ಪೊಡರ್ಪು ತಪ್ಪು
ಬಗೆ ತಪ್ಪು ಮನೋಜನ

ಪೂವಿನಂಬು ತೀ|
ವಿದ ದೊಣೆ ತೀವಿ ತನ್ನನಿಸೆ
ಜಾಣನೆ ತಪ್ಪದೆ ತಪ್ಪಿದಪ್ಪ
ನೋ
ಡಿದುದದಱಿಂ
ಗುಣಾರ್ಣವನನಾ ಸತಿ ತಪ್ಪದೆ
ತಪ್ಪ ನೋಟದೊಳ್|| ೪೧ ||

ಪದ್ಯ-೪೧:ಪದವಿಭಾಗ-ಅರ್ಥ:ಒದವಿದ (ಉಂಟಾದ) ತನ್ನ ಜವ್ವನದ ರೂಪಿನ (ಯೌವನದ ಸೌಂದರ್ಯವು)

ಮೆಯ್ಯೊಳೆ ತಪ್ಪುದಪ್ಪು
(ದೇಹದಲ್ಲಿ ಏರುಪೇರು),
ನೋಟದೊಳೆ ಪೊಡರ್ಪು
ತಪ್ಪು (ನೋಟದಲ್ಲಿಯೂ
ಅತಿಶಯ ಚಂಚಲತೆ,) ಬಗೆ
ತಪ್ಪು (ಬಗೆ-ಮನಸ್ಸಿನ
ಹತೋಟಿ ತಪ್ಪಿತು,
)ಮನೋಜನ ಪೂವಿನಂಬು
ತೀವಿದ ದೊಣೆ ತೀವಿ
(ಮನ್ಮಥನ ತುಂಬಿದ
ಬತ್ತಳಿಕೆಯ ಹೂವಿನಬಾಣ)

ತನ್ನನು ಇಸೆ (ತನ್ನನ್ನು
ಹೊಡೆಯಲು) ಜಾಣನೆ ತಪ್ಪದೆ
ತಪ್ಪುದು ಅಪ್ಪ
ನೋಡಿದುದದಱಿಂ
(ನೋಡಿದ್ದರಿಂದ ಜಾಣ್ಮೆ
ತಿಳುವಳಿಕೆ ತಪ್ಪಿಯೇ
ತಪ್ಪವುದು) ಗುಣಾರ್ಣವನನಾ
ಸತಿ ತಪ್ಪದೆ ತಪ್ಪು
ನೋಟದೊಳ್ (ಅರ್ಜುನನ್ನು
ಸುಭದ್ರೆ ತಪ್ಪದೆ -ಬಿಡದೆ - ತಪ್ಪು
ನೋಟದಲ್ಲಿ ನೋಡಿದಳು,

ನಾಚಿಕೆ ಬಿಟ್ಟು ದಿಟ್ಟಿಸಿನೋಡಿದಳು.)

ಪದ್ಯ-೪೧:ಅರ್ಥ: . ಆಗ ಅವಳಿಗೆ ಯವ್ವನಪ್ರಾಪ್ತವಾದ ದೇಹದಲ್ಲಿ ಏರುಪೇರುಂಟಾಯಿತು. ನೋಟದಲ್ಲಿಯೂ ಅತಿಶಯ ಚಂಚಲತೆಯಾಯಿತು. ಮನಸ್ಸಿನ ಹತೋಟಿ ತಪ್ಪಿತು. ಮನ್ಮಥನ ತುಂಬಿದ ಬತ್ತಳಿಕೆಯ ಹೂವಿನಬಾಣ

ತನ್ನನ್ನು ಹೊಡೆಯಲು ತನ್ನ
ಜಾಣ್ಮೆಯೇ ವ್ಯತ್ಯಸ್ತವಾಗಿ ಆ
ಸತಿಯು ನೋಡಿದ್ದರಿಂದ
ಜಾಣ್ಮೆ/ ತಿಳುವಳಿಕೆ ತಪ್ಪಿಯೇ
ತಪ್ಪಿ ಅರ್ಜುನನ್ನು ಸುಭದ್ರೆ
ತಪ್ಪದೆ -ಬಿಡದೆ - ತಪ್ಪು
ನೋಟದಲ್ಲಿ ಅಂದರೆ ನಾಚಿಕೆ
ಬಿಟ್ಟು ದಿಟ್ಟಿಸಿನೋಡಿದಳು.

ವ|| ಅಂತು ತಳತಳ ತೊಳಗುವ ದುಕೂಲದ ಸಕಳವಟ್ಟೆಯೊಳ್ ನಿರ್ಮಿದಂತಾನು ಮರಲ್ದ

ತಾವರೆಯೆಸಟ್ಗಿಳೊಳ್
ಪುದಿದು
ಪುದುಂಗೊಳಿಸಿದಂತಾನುಮ
ನಂಗಾಮೃತವರ್ಷಮನೊದವಿ
ಸಿದಂತಾನುಮೆರ್ದೆಯೊಳೆಡೆವ
ಱಿಯದ ಪೊಳಪಿನೊಳ್
ತಳ್ಪೊಯ್ದು ಕಡೆಗಣ್ಣ
ಬೆಳ್ಪುಗಳ್ ಸೊಗಯಿಸುವ
ಕುವಳಯದಳನಯನೆಯ
ನೋಟಂ ತನ್ನ

ಮನದೊಳಳ್ಳಾಟಮಂ ಪಡೆಯೆ-

ವಚನ:ಪದವಿಭಾಗ-

ಅರ್ಥ:ಅಂತು ತಳತಳ ತೊಳಗುವ ದುಕೂಲದ ಸಕಳವಟ್ಟೆಯೊಳ್ (ರೇಷ್ಮೆಯ ವಿವಿಧ ಬಣ್ಣಗಳ ಬಟ್ಟೆಯಲ್ಲಿ) ನಿಮಿರ್ಚಿದಂತಾನುಮ್ (ಹರಡಿದ/ನಟ್ಟಗೆ ನಿಂತ) ಅರಲ್ದ ತಾವರೆಯೆಸಟ್ಗಳೊಳ್ (ಅರಳಿದ ತಾವರೆಯ

ದಳದಲ್ಲಿ) ಪುದಿದು
ಪುದುಂಗೊಳಿಸಿದಂತಾನುಮ್
(ಮುಚ್ಚಿ
ಹುದುಗೊಳಿಸಿದಂತಿರುವ)
ಅನಂಗ ಅಮೃತವರ್ಷಮನು
(ಕಾಮದ ಅಮೃತ
ಮಳೆಯನ್ನು)
ಒದವಿಸಿದಂತಾನುಮ್
(ಉಂಟುಮಾಡಿದ ಹಾಗೆ)
ಎರ್ದೆಯೊಳು ಎಡೆವಱಿಯದ
(ಎದೆಯಲ್ಲಿ ವಿರಂತರವಾಗಿ)

ಪೊಳಪಿನೊಳ್ ತಳ್ಪೊಯ್ದು
(ಹೊಳೆಯುತ್ತಾ ಗಟ್ಟಿಯಾಗಿ->)
ಕಡೆಗಣ್ಣ ಬೆಳ್ಪುಗಳ್
ಸೊಗಯಿಸುವ
ಕುವಳಯದಳನಯನೆಯ
ನೋಟಂ (ಕಡೆಗಣ್ಣಿನ ಬಿಳಿಯ
ಬಣ್ಣಗಳು ಸೊಗಯಿಸುತ್ತಿರುವ
ಕನ್ನೈದಿಲೆಯ ಎಸಳಿನಂತೆ
ಕಣ್ಣುಳ್ಳ ಆ ಸುಭದ್ರೆಯ
ನೋಟವು) ತನ್ನ ಮನದೊಳು
ಅಳ್ಳಾಟಮಂ ಪಡೆಯೆ-

ವಚನ:ಅರ್ಥ:ಹಾಗೆ ತಳತಳನೆ ಹೊಳೆಯುವ ರೇಷ್ಮೆಯ ವಿವಿಧ ಬಣ್ಣಗಳ ಬಟ್ಟೆಯಲ್ಲಿ ಹರಡಿದಂತೆಯೂ ಅರಳಿದ ತಾವರೆಯ ದಳದಲ್ಲಿ ಮುಚ್ಚಿ ಹುದುಗೊಳಿಸಿದಂತಿರುವ ಕಾಮದ ಅಮೃತ ಮಳೆಯನ್ನು ಉಂಟುಮಾಡಿದ ಹಾಗೆ ಎದೆಯಲ್ಲಿ ವಿರಂತರವಾಗಿ ಹೊಳೆಯುತ್ತಾ (ಗಟ್ಟಿಯಾಗಿ

ನಿಂತು->), ಕಡೆಗಣ್ಣಿನ ಬಿಳಿಯ ಬಣ್ಣಗಳು ಸೊಗಯಿಸುತ್ತಿರುವ ಕನ್ನೆ ದಿಲೆಯ ಎಸಳಿನಂತೆ ಕಣ್ಣುಳ್ಳ ಆ ಸುಭದ್ರೆಯ ನೋಟವು (ಅರ್ಜುನನ ಮೇಲೆ)ಗಟ್ಟಿಯಾಗಿ ನಿಂತು, ತನ್ನ/ಅವಳ ಮನಸ್ಸಿನಲ್ಲಿ ತಳಮಳವನ್ನುಂಟುಮಾಡಲು-

ಮ|| ನನೆಯಂಬಂಬನೆ ಕರ್ಚಿ ಪಾಱಿದಪುದೋ ಶೃಂಗಾರ ವಾರಾಶಿ ಭೋಂ

ಕನೆ ಬೆಳ್ಳಂಗೆಡೆದತ್ತೊ ಕಾಮಂ
ನೆರೆ ಮೆಯ್ವೆರ್ಚಿತ್ತೊ
ಪೇಳೀಕೆಗೆಂ|
ಬಿನೆಗಂ
ಸೋಲಮನುಂಟುಮಾಡೆ
ಹರಿಗಂ ಕರ್ಣಾಂತ ವಿಶ್ರಾಂತ
ಲೋ
ಚನನಾಲೋಚನಗೋಚರಂಬ
ರೆಗಮೊಲ್ದಾ ಕನ್ನೆಯಂ
ನೋಡಿದಂ|| ೪೨||

ಪದ್ಯ-೪೨:ಪದವಿಭಾಗ-ಅರ್ಥ:ನನೆಯ ಅಂಬು ಅಂಬನೆ ಕರ್ಚಿ (ಮನ್ಮಥನ ಹೂವಿನ ಬಾಣವು ಹೂವನ್ನೇ ಕಚ್ಚಿಕೋಡು) ಪಾಱಿದಪುದೋ (ಹಾರಿಬರುವುದೊ) ಶೃಂಗಾರ ವಾರಾಶಿ (ಸಮುದ್ರ)ಭೋಂಕನೆ ಬೆಳ್ಳಂಗೆಡೆದತ್ತೊ (ಶೃಂಗಾರ ಸಮುದ್ರವು ತಟ್ಟನೆ ಪ್ರವಾಹವಾಗಿ ಹರಿದಿದೆಯೋ)

ಕಾಮಂ ನೆರೆ ಮೆಯ್ವೆರ್ಚಿತ್ತೊ (ಕಾಮವು ಮೈಯಲ್ಲಿ ಅಧಿಕವಾಯಿತೊ,) ಪೇಳ್ ಈಕೆಗೆ ಎಂಬಿನೆಗಂ (ಇವಳಿಗೆ ಎನ್ನುವಂತೆ) ಸೋಲಮನುಂಟುಮಾಡೆ (ಮೋಹವನ್ನುಂಟುಮಾಡುವಂತೆ) ಹರಿಗಂ ಕರ್ಣಾಂತ ವಿಶ್ರಾಂತ ಲೋಚನನು ಆಲೋಚನ ಗೋಚರಂ ಬರೆಗಂ ಒಲ್ದು ಆ ಕನ್ನೆಯಂ

(ಕಣ್ಣಿಗೆ ನಿಲುಕುವವರೆಗೂ ಆ ಕನ್ಯೆಯನ್ನು ಪ್ರೀತಿಯಿಂದ) ನೋಡಿದಂ

ಪದ್ಯ-೪೨:ಅರ್ಥ: . ಈ ಸುಭದ್ರೆಗಾಗಿ ಪುಷ್ಪಬಾಣವೇ ಪುಷ್ಪಬಾಣ ಕಚ್ಚಿಕೊಂಡು ಹಾರಿಬರುತ್ತಿದೆಯೋ ಶೃಂಗಾರ ಸಮುದ್ರವು ತಟ್ಟನೆ ಪ್ರವಾಹವಾಗಿ ಹರಿದಿದೆಯೋ, ಕಾಮವು ಮೈಯಲ್ಲಿ ಅಧಿಕವಾಯಿತೊ, ಹೇಳು

ಎನ್ನುವ ಹಾಗೆ ತನಗೆ ಮೋಹವನ್ನುಂಟು ಮಾಡುವಂತೆ, ಕಿವಿಯವರೆಗೂ ಉದ್ದಕಣ್ಣುಳ್ಳವನಾದ ಅರ್ಜುನನು ಕಣ್ಣಿಗೆ ನಿಲುಕುವವರೆಗೂ ಆ ಕನ್ಯೆಯನ್ನು ಪ್ರೀತಿಯಿಂದ ನೋಡಿದನು.

ವ|| ಅಂತು ಸುರತಮಕರಧ್ವಜನ (ಮನ್ಮಥ- ಅರ್ಜುನನ) ಕಡೆಗಣ್ಣ

ನೋಟಂ ಕಾಮನ ಕಿಸುಗಣ್ಚಿದ ನೋಟದಂತೊರ್ಮೊದಲೆ ತನ್ನ ಮನದೊಳಳ್ಳಾಟಮಂ ಪಡೆಯೆ-

ವಚನ:ಪದವಿಭಾಗ-

ಅರ್ಥ:ಅಂತು ಸುರತಮಕರಧ್ವಜನ ಕಡೆಗಣ್ಣ ನೋಟಂ ಕಾಮನ ಕಿಸುಗಣ್ಚಿದ (ಕೆಂಪೇರಿದ) ನೋಟದಂತೆ ಒರ್ಮೊದಲೆ (ಕೂಡಲೆ) ತನ್ನ ಮನದೊಳು ಆಳ್ಳಾಟಮಂ

ಪಡೆಯೆ
(ಚಂಚಲತೆಯನ್ನುಂಟುಮಾಡ
ಲು)-
ವಚನ:ಅರ್ಥ:ಮನ್ಮಥನಂತಿ
ರುವ ಅರ್ಜುನನ ಕಡೆಗಣ್ಣಿನ
ನೋಟವು ಕಾಮನ ಕೆಂಪೇರಿದ
ನೋಟದಂತೆ ಕೂಡಲೆ ತನ್ನ
ಮನಸ್ಸಿನಲ್ಲಿ
ಚಂಚಲತೆಯನ್ನುಂಟುಮಾಡ
ಲು-

ಉ|| ಸೋಲದೊಳೆಯ್ದೆ ಪೀರ್ದ
ತೆಱದಿಂದೆಮೆಯಿಕ್ಕದೆ ನೋಟ್ಟಿ
ಕಣ್ಗೆ ಕಣ್
ಪೀಲಿವೊಲಾಗೆ ಬಂದು
ಪೆಱತೊಂದು ಮನಂಬುಗೆ ಪತ್ತಿ
ಚಿತ್ತದೊಳ್|
ಕೀಲಸೆ ಕಾವನಂಬವಱ
ಬಿಣ್ಪಿನೊಳೊಯ್ಯನೆ
ಜೋಲ್ದವೋಲೆ ತಾಂ
ಬೂಲಕರಂಕವಾಹಿನಿಯ
ಮೇಲೆ ನೆಱಲ್ದಿರೆ ಬಾಲೆ

ಲೀಲೆಯಿಂ|| ೪೩

ಪದ್ಯ-೪೩:ಪದವಿಭಾಗ-ಅರ್ಥ:ಸೋಲದೊಳ್ ಎಯ್ದೆ (ಚೆನ್ನಾಗಿ) ಪೀರ್ದ ತೆಱದಿಂದೆ ಎಮೆಯಿಕ್ಕದೆ ನೋೞ್ಪ ಕಣ್ಗೆ (ಪ್ರೇಮದಿಂದ ಚೆನ್ನಾಗಿ ಹೀರುವ ರೀತಿಯಲ್ಲಿ ರೆಪ್ಪೆ ಹೊಡೆಯದೇ ನೋಡುವ ಕಣ್ಣಿಗೆ) ಕಣ್ ಪೀಲಿವೊಲಾಗೆ (ನವಿಲುಗರಿಯ ಕಣ್ಣಿನ ಹಾಗಾಗಿ) ಬಂದು

ಪೆಱತೊಂದು ಮನಂಬುಗೆ
(ಮನಸ್ಸನ್ನು ಪ್ರವೇಶಿಸಲು)
ಪತ್ತಿ ಚಿತ್ತದೊಳ್ (ಮನಸ್ಸನಲ್ಲಿ
ಅಂಟಿ) ಕೀಲಸೆ ಕಾವನಂಬ
ಅವಱ ಬಿಣ್ಪಿನೊಳು
(ಕಾಮಬಾಣವು ಮನಸ್ಸಿನಲ್ಲಿ
ನಾಟಿರಲು ಅದರ ಭಾರದಲ್ಲಿ)
ಒಯ್ಯನೆ (ಮೆಲ್ಲನೆ)
ಜೋಲ್ದವೋಲೆ (ಜೋತುಬಿದ್ದ
ಹಾಗೆ)
ತಾಂಬೂಲಕರಂಕವಾಹಿನಿಯ

ಮೇಲೆ (ತಾಂಬೂಲ ಹಿಡಿದಿರುವ ದಾಸಿಯ ಮೇಲೆ) ನೆಱಿಲ್ದಿರೆ ಬಾಲೆ ಲೀಲೆಯಿಂ(ಒರಗಿಕೊಂಡು ಸುಭದ್ರೆ ಚಂದವಾಗಿ ನಿಂತಳು)

ಪದ್ಯ-೪೩:ಅರ್ಥ:

ಪ್ರೇಮದಿಂದ ಚೆನ್ನಾಗಿ ಹೀರುವ ರೀತಿಯಲ್ಲಿ ರೆಪ್ಪೆ ಹೊಡೆಯದೇ ನೋಡುವ ಕಣ್ಣಿಗೆ, ಬೇರೊಂದು ಕಣ್ಣು (ಅಂದರೆ ಅರ್ಜುನನ ಕಣ್ಣು)

ನವಿಲುಗರಿಯ ಕಣ್ಣಿನ
ಹಾಗಾಗಿ ಮನಸ್ಸನಲ್ಲಿ ಅಂಟಿ,
ಕಾಮಬಾಣವು ಮನಸ್ಸಿನಲ್ಲಿ
ನಾಟಿರಲು ಆ ಬಾಣಗಳ
ಭಾರದಿಂದ ಮೆಲ್ಲಗೆ
ಜೋತುಬಿದ್ದ ಹಾಗೆ
ಸುಭದ್ರೆಯು ತನ್ನ ತಾಂಬೂಲ
ಹಿಡಿದಿರುವ ದಾಸಿಯ ಮೇಲೆ
ಚಂದವಾಗಿ ಒರಗಿಕೊಂಡು
ನಿಂತಳು.

ವ|| ಆಗಳಾ
ನಾರಾಯಣನುಮುದಾತ್ತನಾ
ರಾಯಣನುಮಾನೆಯಿಂದಮಿ
ೞಿದು ನವ ಕಿಸಲಯ
ವಂದನಮಾಳಾಳಂಕೃತಮಪ್ಪ
ಸಪ್ತ ತಾಳೋತ್ತುಂಗ ರಮ್ಯ
ಹರ್ಮ್ಯದೆರಡನೆಯ
ಮೊಗಸಾಲೆಯೊಳಿಟ್ಟ ಪೊನ್ನ
ಪಡಿಗಂಗಳೊಳಮಿಕ್ಕಿದ
ಪಟ್ಟಿಯ
ಸುಖಾಸನಂಗಳೊಳಂ ಕಟ್ಟಿದ

ಚಿನ್ನದ
ಬೊಂದರಿಗೆಯೊಳಮೆಸೆದಿರ್ದ
ಮಣಿಮಯಪೀಠದೊಳೊಡ
ನೇಱಿ ಕಿಱಿದು ಪೊೞ್ತು
ಕುಳ್ಳಿರ್ದು ಮಜ್ಜನ ಭೋಜನ
ತಾಂಬೂಲಾನುಲೇಪನ
ವಿಭೂಷಣ ಸುರಭಿ ಕುಸುಮ
ದಾಮಾದಿಗಳಿಂ
ಸಂತಸಂಬಡಿಸಿ
ದಾಮೋದರನುದರದೊಳಿಟ್ಟು

ಕೊಳ್ವನಿತಱ್ಕಿಱೊಳಪಗತ ಪಥ ಪರಿಶ್ರಮನಂ ಮಾಡಿ-

ವಚನ:ಪದವಿಭಾಗ-

ಅರ್ಥ:ಆಗಳು ಆ ನಾರಾಯಣನುಂ (ಕೃಷ್ಣನು)ಉದಾತ್ತನಾರಾಯಣನುಂ (ವೀರಕೇಸರಿಯ ಬಿರುದು- ಅರ್ಜುನನು) ಆನೆಯಿಂದಂ ಇೞಿದು (ಇಳಿದು) ನವ ಕಿಸಲಯ ವಂದನಮಾಳ

ಅಳಂಕೃತಮಪ್ಪ (ಹೊಸ
ಚಿಗುರು ಎಲೆಗಳ
ತೋರಣಮಾಲೆಯಿಂದ
ಅಲಂಕೃತವಾದ) ಸಪ್ತ
ತಾಳೋತ್ತುಂಗ ರಮ್ಯ
ಹರ್ಮ್ಯದ ಎರಡನೆಯ
ಮೊಗಸಾಲೆಯೊಳ್ ಇಟ್ಟ
(ಎತ್ತರವಾದ ಏಳುತಾಳೆಯ
ಮರಗಳಷ್ಟು ಎತ್ತರವೂ
ರಮಣೀಯವೂ ಆದ
ಉಪ್ಪರಿಗೆಯ ಎರಡನೆಯ

ಮುಖಮಂಟಪವನ್ನೇರಿ ಅಲ್ಲಿ
ಇಟ್ಟಿದ್ದ) ಪೊನ್ನ
ಪಡಿಗಂಗಳೊಳಂ ಇಕ್ಕಿದ
ಪೞಿಯ (ಚಿನ್ನದ
ಪೀಕದಾನಿಗಳಲ್ಲಿಯೂ
ಬಟ್ಟೆಗಳಿಂದ- ಮುಚ್ಚಿದ್ದ)
ಸುಖಾಸನಂಗಳೊಳಂ ಕಟ್ಟಿದ
ಚಿನ್ನದ ಬೊಂದರಿಗೆಯೊಳಂ
(ದಿಂಬು)
ಎಸೆದಿರ್ದ(ಶೋಭಿಸುತ್ತಿದ್ದ)
ಮಣಿಮಯಪೀಠದೊಳು

(ಸುಖಾಸನಗಳಲ್ಲಿ
ಸಿದ್ಧಪಡಿಸಿದ್ದ ಚಿನ್ನದ
ದಿಂಬುಗಳಲ್ಲಿ ಚೆಲುವಾಗಿದ್ದ
ರತ್ನಮಯಪೀಠಗಳಲ್ಲಿ) ಒಡನೆ
ಏಱೆ ಕಿಱಿದು ಪೊೞ್ತು
ಕುಳ್ಳಿರ್ದು (ಕೂಡಲೆ ಕುಳಿತು
ಕೆಲವುಕಾಲ ವಿಶ್ರಮಿಸಿ)
ಮಜ್ಜನ (ಸ್ನಾನ) ಭೋಜನ
ತಾಂಬೂಲ ಅನುಲೇಪನ
ವಿಭೂಷಣ ಸುರಭಿ ಕುಸುಮ
ದಾಮಾದಿಗಳಿಂ

ಸಂತಸಂಬಡಿಸಿ (ಭೋಜನ,
ತಾಂಬೂಲ, ಗಂಧದ
ಅನುಲೇಪನ, ಅಲಂಕಾರ
ಸುರಭಿ ಕುಸುಮ
ದಾಮಾದಿಗಳಿಂದ/
ಹೂವಿನಹಾರಗಳಿಂದ
ಸಂತಸಪಡಿಸಿ)
ದಾಮೋದರನು
ಉದರದೊಳಿಟ್ಟುಕೊಳ್ವ
(ಅಂತರಂಗದ ಪ್ರೀತಿಯ
ನಿಜನೆಂಟನ ಹಾಗೆ)ಅನಿತ

ಅಟ್ಕಿಐಔೞ್ ಉಪಗತ ಪಥ ಪರಿಶ್ರಮನಂ (ಎಲ್ಲಾ ಅಲ್ಲಿಯವರೆಗಿನ ಪ್ರಯಾಣದ ಆಯಾಸವನ್ನು ಪರಿಹರಿಸುವಂತೆ ಮಾಡಿ)ಮಾಡಿ-

ವಚನ:ಅರ್ಥ:ಆಗ ಕೃಷ್ಣನೂ ಅರ್ಜುನನೂ ಆನೆಯಿಂದ ಇಳಿದು ಹೊಸ ಚಿಗುರು ಎಲೆಗಳ ತೋರಣಮಾಲೆಯಿಂದ

ಅಲಂಕೃತವಾದ, ಎತ್ತರವಾದ
ಏಳುತಾಳೆಯ ಮರಗಳಷ್ಟು
ಎತ್ತರವೂ ರಮಣೀಯವೂ
ಆದ ಉಪ್ಪರಿಗೆಯ
ಎರಡನೆಯ
ಮುಖಮಂಟಪವನ್ನೇರಿ ಅಲ್ಲಿ
ಇಟ್ಟಿದ್ದ ಚಿನ್ನದ
ಪೀಕದಾನಿಗಳಲ್ಲಿಯೂ
ಬಟ್ಟೆಗಳಿಂದ ಮುಚ್ಚಿದ್ದ
ಸುಖಾಸನಗಳಲ್ಲಿಯೂ
ಸಿದ್ಧಪಡಿಸಿದ್ದ ಚಿನ್ನದ

ದಿಂಬುಗಳಲ್ಲಿಯೂ
ಚೆಲುವಾಗಿದ್ದ
ರತ್ನಮಯಪೀಠಗಳಲ್ಲಿಯೂ
ಕೂಡಲೆ ಕುಳಿತು ಕೆಲವುಕಾಲ
ವಿಶ್ರಮಿಸಿ ಸ್ನಾನ, ಭೋಜನ-
ತಾಂಬೂಲ, ಗಂಧಾನುಲೇಪನ,
ಆಭರಣ,
ಸುಗಂಧಪುಷ್ಪಮಾಲೆಯೇ
ಮೊದಲಾದವುಗಳಿಂದ
ಸಂತೋಷಪಡಿಸಿ, ಕೃಷ್ಣನು
ತನ್ನ ಹೊಟ್ಟೆಯಲ್ಲಿಯೇ

ಅರ್ಜುನನನ್ನು
ಮಡಗಿಕೊಳ್ಳುವಷ್ಟು
ಪ್ರೀತಿಯಿಂದ ಆಯಾಸ
ಪರಿಹಾರವನ್ನು ಮಾಡಿದನು.

ಕಂ|| ಈತನ ಬಿರ್ದಿನನೀತಂ
ಭೂತಳಪತಿಯೆನಿಸಿದರಿಗನೊ
ಡೆಯಂ ಹರಿ ತಾ|
ನೀತನೆ ಬಿರ್ದಿನನೆನೆ ವಿ
ಖ್ಯಾತಂಗೆ ನರಂಗೆ
ಸೆಱಪುಗೆಯ್ದನನಂತಂ|| ೪೪ ||

ಪದ್ಯ-೪೪:ಪದವಿಭಾಗ-ಅರ್ಥ:ಈತನ ಬಿರ್ದಿನನ್ (ಅಥಿತಿ) ಈತಂ ಭೂತಳಪತಿಯೆನಿಸಿದ ಅರಿಗನು (ಅರ್ಜುನ), ಒಡೆಯಂ ಹರಿ ತಾನು (ಇಬ್ಬರೂ ಒಂದೇ) ಈತನೆ ಬಿರ್ದಿನನ್ ಎನೆ ವಿಖ್ಯಾತಂಗೆ ನರಂಗೆ ಸೆಱಪುಗೆಯ್ದನು ಅನಂತಂ (ಸುಪ್ರಸಿದ್ಧನಾದ ಅರ್ಜುನನಿಗೆ ಕೃಷ್ಣನು

ನೆರಪುಗೆಯ್ದನು/-ಅತಿಥ್ಯವನ್ನು ಮಾಡಿದನು)

ಪದ್ಯ-೪೪:ಅರ್ಥ: ಇವನು ಅತಿಥಿ; ಇವನೇ ಭೂಮಿಯ ಒಡೆಯನಾದ ಅರಿಕೇಸರಿ (ಅರ್ಜುನ); ಒಡೆಯನಾದ ಕೃಷ್ಣನು ತಾನೂ ಈತನೇ- ಇಬ್ಬರೂ ಒಂದೇ. ಆದರೂ ಇವನೇ ನೆಂಟ, ಎನ್ನುವ ಹಾಗೆ ಸುಪ್ರಸಿದ್ಧನಾದ ಅರ್ಜುನನಿಗೆ

ಕೃಷ್ಣನು ಅತಿಥ್ಯವನ್ನು ಮಾಡಿದನು.

ವ||

ಅಂತೆನಿತಾನುಮಂದದೊಳ್ ಸೆಱಪುಗೆಯ್ದು ವಿವಿಧ ವಿನೋದಂಗಳಂ ತೋಱ ಮುನ್ನೆ ಬದರಿಕಾಶ್ರಮದೊಳ್-

ವಚನ:ಪದವಿಭಾಗ-ಅರ್ಥ:

ಅಂತು ಎನಿತಾನುಂ ಅಂದದೊಳ್ ಸೆಱಪುಗೆಯ್ದು (ನಾನಾ ರೀತಿಯಲ್ಲಿ

ಸತ್ಕಾರಮಾಡಿ), ವಿವಿಧ
ವಿನೋದಂಗಳಂ ತೋಱಿ
(ತೋರಿಸಿ) ಮುನ್ನೆ (ಹಿಂದೆ)
ಬದರಿಕಾಶ್ರಮದೊಳ್-
ವಚನ:ಅರ್ಥ:ಹಾಗೆ
ನಾನಾರೀತಿಯಲ್ಲಿ
ಸತ್ಕಾರಮಾಡಿ ನಾನಾರೀತಿಯ
ಆಟಪಾಟಗಳನ್ನು ತೋರಿ,
(ಕೃಷ್ಣನು ಅರ್ಜುನನಿಗೆ
ಹೀಗೆಂದನು- ಅರ್ಜುನ!)
ಹಿಂದೆ ಬದರೀಕಾಶ್ರಮದಲ್ಲಿ-

ಕಂ|| ಆಯತಿಯಿಂದಂ ನರ ನಾ

ರಾಯಣರೆನೆ ನೆಗೞ್ದವರಿಗ

ನಾವಿರ್ವರುಮಿಂ|

ತೀ ಯುಗದೊಳೀಗಳಾಂ ನಾ

ರಾಯಣನೆಂ

ನೀನುದಾತ್ತನಾರಾಯಣನೈ|

೪೫ ||

ಪದ್ಯ-೪೫:ಪದವಿಭಾಗ-

ಅರ್ಥ:ಆಯತಿಯಿಂದಂ

(ಅವಲಂಬನದಿಂದ) ನರ

ನಾರಾಯಣರೆನೆ ನೆಗೞ್ದವರಿಗ

(ಸುಪ್ರಸಿದ್ಧರಾದ) ನಾವು ಈರ್ವರುಂ; ಇಂತು ಈ ಯುಗದೊಳು ಈಗಳು ಆಂ ನಾರಾಯಣನೆಂ ನೀನು ಉದಾತ್ತನಾರಾಯಣನೈ|

ಪದ್ಯ-೪೫:ಅರ್ಥ: ಹಿಂದೆ ನಾವು ಒಬ್ಬರಿಗೊಬ್ಬರು ಅವಲಂಬನದಿಂದ ಸುಪ್ರಸಿದ್ಧರಾದ ನರನಾರಾಯಣರಾಗಿದ್ದೆವು. ಈಗ ಈ ಯುಗದಲ್ಲಿಯೂ

ನಾವಿಬ್ಬರೂ, ಹಾಗೆಯೇ,
ನಾನು ನಾರಾಯಣ (ಶ್ರೀಕೃಷ್ಣ),
ನೀನು
ಉದಾತ್ತನಾರಾಯಣನಾದ
ಅರಿಕೇಸರಿ (ಅರ್ಜುನ).

ವ||ಅದಱಿಂ
ನಿನಗಮೆನಗಮೇತಱೊಳಂ
ವಿಕಲ್ಪಮುಂ
ವಿಚ್ಛಿನ್ನಮುಮಿಲ್ಲೆಂದು
ನುಡಿಯುತಿರ್ಪನ್ನೆಗಮಿತ್ತಲ್-

ವಚನ:ಪದವಿಭಾಗ-ಅರ್ಥ:ಅದಱಿಂ (ಅದರಿಂದ) ನಿನಗಂ ಎನಗಂ ಏತಱೊಳಂ (ಯಾವುದರಲ್ಲಿಯೂ) ವಿಕಲ್ಪಮುಂ ವಿಚ್ಛಿನ್ನಮುಂ (ಭೇದವೂ ಅಗಲುವಿಕೆಯೂ) ಇಲ್ಲೆಂದು ನುಡಿಯುತಿರ್ಪ ಅನ್ನೆಗಂ (ಆ ಸಮಯಕ್ಕೆ)ಇತ್ತಲ್-

ವಚನ:ಅರ್ಥ:ಆದುದರಿಂದ ನಿನಗೂ ನನಗೂ ಯಾವ

ವಿಧದಲ್ಲಿಯೂ ಭೇದವೂ ಅಗಲುವಿಕೆಯೂ ಇಲ್ಲವೆಂದು ಹೇಳುತ್ತಿರುವಲ್ಲಿ ಸಾಯಂಕಾಲವಾಯಿತು. ಇತ್ತ-

ಚಂ|| ನವ ನಳಿನೀ ವನಂಗಳ
ಪರಾಗರಜಂಗಳನುಂಡು
ಮುನ್ನಮಂ
ತವನೆ ವಿಯತ್ತಳ ಭ್ರಮಣ
ವಿಹ್ವಲನಾಗಿ ಬಱಿಲ್ದು
ಕಾಱುವಂ|

ತೆವೊಲಿರೆ ಕೆಂಪು ತತ್ಕಮಳ

ಕಾನನ ಕಂಟಕ ಲಗ್ನಪಾದನಾ

ದವೊಲುಡುಗುತ್ತುಮಾತ್ಮ

ಕರಮಂ ರವಿ

ಪೊರ್ದಿದನಸ್ತಶೈಲಮಂ|| ೪೬||

ಪದ್ಯ-೪೬:ಪದವಿಭಾಗ-

ಅರ್ಥ:ನವ ನಳಿನೀ ವನಂಗಳ ಪರಾಗರಜಂಗಳನು ಉಂಡು (ಹೊಸ ಅರಳಿದ ತಾವರೆಯ ತೋಟದ (ಪರಾಗದ ಧೂಳನ್ನು ತಿಂದು) ಮುನ್ನಂ

(ಮೊದಲು), ಅಂತವನೆ
ವಿಯತ್ತಳ ಭ್ರಮಣ
ವಿಹ್ವಲನಾಗಿ ಬಱಿಲ್ದು (ಅಂತು
ಅವನೆ ಆಕಾಶದಲ್ಲಿ ಸುತ್ತಿದ
ಶ್ರಮದಿಂದ ಬಳಲಿ)
ಕಾಱುವಂತೆವೊಲ್ ಇರೆ ಕೆಂಪು
(ಆ ತಿಂದ ಧೂಳನ್ನೇ ಕಾರುವ-
ವಾಂತಿ ಮಾಡುತ್ತಿರುವ ಹಾಗೆ
ಸಂಜೆಗೆಂಪು ಇರಲು) ಕೆಂಪು;
ತತ್ ಕಮಳ ಕಾನನ (ಕಮಲದ
ಕಾಡು) ಕಂಟಕ (ಮುಳ್ಳು)

ಲಗ್ನಪಾದನು ಆದವ್ರೊಲು
(ಲಗ್ನ-ಸಿಕ್ಕಿಕೊಂಡ ಪಾದ)
ಉಡುಗುತ್ತುಂ ಅತ್ಮ ಕರಮಂ
(ಉಡುಗಿಸಿಕೊಂಡು ತನ್ನ
ಕಿರಣಗಳನ್ನು) ರವಿ
ಪೊರ್ದಿದನು ಅಸ್ತಶೈಲಮಂ
(ಅಸ್ತಾಚಲವನ್ನು ಸೇರಿದನು)
ಪದ್ಯ-೪೬:ಅರ್ಥ:
ಸೂರ್ಯನು ಮೊದಲು ಹೊಸ
ಅರಳಿದ ತಾವರೆಯ ತೋಟದ
ಪರಾಗವ ಧೂಳನ್ನು ತಿಂದು,

ಆಕಾಶದಲ್ಲಿ ಸುತ್ತಿದ
ಶ್ರಮದಿಂದ ಬಳಲಿ ಆ ತಿಂದ
ಧೂಳನ್ನೇವಾಂತಿ
ಮಾಡುತ್ತಿರುವ ಹಾಗೆ
ಸಂಜೆಗೆಂಪು ಕಾಣುತ್ತಿರಲು, ಆ
ತಾವರೆಯ ಕಾಡಿನ
ಮುಳ್ಳುಗಳಲ್ಲಿ ಕಾಲು
ಸಿಕ್ಕಿಕೊಂಡ
ಕಿರಣವುಳ್ಳವನಾಗಿ ತನ್ನ
ಕಿರಣಗಳನ್ನು
ಉಡುಗಿಸಿಕೊಂಡು

ಅಸ್ತಾಚಲವನ್ನು ಸೇರಿದನು - ಸೂರ್ಯನು ಮುಳುಗಿದನು.

ವ|| ಆ ಪ್ರಸ್ತಾವದೊಳ್-

ವಚನ:ಅರ್ಥ:ಆ ಸಮಯದಲ್ಲಿ-

ಉ|| ಆ ಸರಸೀಜ ಬಾಂಧವನ ಪಿಂಬಡಿನೊಳ್
ಕಡುವಿನ್ನನಾದುವಿಂ
ತೀ ಸರಸೀರುಹಂಗಳವನೀ ಪದದೊಳ್ ಬಿಸುಟೆಂತು ಪೋಪೆವೆಂ|

ಬೀ ಸಮಕಟ್ಟಿನೊಳ್

ನೆಲಸಿದಂತೆಱಗಿರ್ದುವು

ಷಟ್ಪದಂಗಳು

ತ್ಕೇಸರ ಕೋಟಿ ಸಂಕಟ

ಕುಶೇಶಯಕೋಶ

ಕುಟೀರಕಂಗಳೊಳ್|| ೪೭||

ಪದ್ಯ-೪೭:ಪದವಿಭಾಗ-

ಅರ್ಥ:ಆ ಸರಸೀಜ

ಬಾಂಧವನ (ಸೂರ್ಯನ)

ಪಿಂಬಡಿನೊಳ್ (ಹಿಂಬದಿ-

ಅನಂತರ) ಕಡುವಿನ್ನನಾದುವು

(ಬಹಳ ಖಿನ್ನವಾದವು) ಇಂತು ಈ ಸರಸೀರುಹಂಗಳು (ಕಮಲಗಳು); ಅವನು ಈ ಪದದೊಳ್ ಬಿಸುಟೆಂತು (ಅವನ್ನು ಈ ಸಮಯದಲ್ಲಿ ಬಿಟ್ಟು) ಪೋಪೆವೆಂಬ (ಹೇಗೆ ಹೋಗುವೆವು) ಈ ಸಮಕಟ್ಟಿನೊಳ್ ನೆಲಸಿದಂತೆ (ಸಂಧಿಗ್ಧ್ದದಲ್ಲಿ ಸಿಲುಕಿದಂತೆ) ಎಱಗಿರ್ದುವು (ಸಿಕ್ಕಿ ಬಿದ್ದಿದ್ದವು) ಷಟ್ಪದಂಗಳ

ಉತ್ಕೇಸರ (ಷಟ್ ಪದಂಗಳು -ದುಂಬಿಗಳು, ಉತ್ ಕೇಸರ ಕೋಟಿ -ಕೋಟಿ ಕಮಲದ ಕೇಸರದಲ್ಲಿ) ಸಂಕಟ ಕುಶೇಶಯಕೋಶ (ಸಮಕಟ- ಇಕ್ಕಟ್ಟಿನ ಕಮಲದ ಮೊಗ್ಗಿನ ಕೋಶದ ಗುಡಿಸಲುಗಳಲ್ಲಿ->) ಕುಟೀರಕಂಗಳೊಳ್.

ಪದ್ಯ-೪೭:ಅರ್ಥ:
ಕಮಲಬಂಧುವಾದ ಸೂರ್ಯನ ಅಸ್ತದ ನಂತರ ಈ

ತಾವರೆಗಳೂ ಬಹಳ ಖಿನ್ನವಾಗಿ ಬಾಡಿದವು. ಈ ಸಮಯದಲ್ಲಿ ಇವುಗಳನ್ನು ಬಿಟ್ಟು ನಾವು ಹೇಗೆ ಹೋಗುವೆವು ಎಂದು ಸಂಧಿಗ್ಧ್ದದಲ್ಲಿ ಸಿಲುಕಿದಂತೆ ದುಂಬಿಗಳು ಅನೇಕ ಕೇಸರಗಳ ಇಕ್ಕಟ್ಟಿನ ಸಂಕಟಕ್ಕೊಳಗಾಗಿ ತಾವರೆಯ ಮೊಗ್ಗೆಂಬ ಗುಡಿಸಲಿನ ಒಳಗೆ ಸಿಕ್ಕಿಬಿದ್ದಿದ್ದವು.

ಉ||
ಚಂಡಮರೀಚಿಗಸ್ತಮಯಮಿಲ್ಲ
ದುದೊಂದೆಡೆ ನಿಮ್ಮ
ಕೇಳ್ದುದುಂ
ಕಂಡುದುಮುಳ್ಳೊಡಿನ್
ಬೆಸಸಿಮಾಮಿರದಲ್ಲಿಗೆ
ಪೋಪೆವೆಂದು ಮ|
ಯ್ಗೊಂಡೊಲವಿಂದಗಲ್ಕೆಗಣ
ಮಾಱದೆ ಪಕ್ಕಿಗಳೆಲ್ಲಮಂ
ಮರು

ಳ್ಗೊಂಡವೊಲೂಳ್ದು ಕೂಡೆ ಬೆಸಗೊಂಡು ಬಿಟಿಲ್ದುವು ಜಕ್ಕವಕ್ಕಿಗಳ್|| ೪೮||

ಪದ್ಯ-೪೮:ಪದವಿಭಾಗ-ಅರ್ಥ:ಚಂಡಮರೀಚಿಗೆ ಅಸ್ತಮಯಮಿಲ್ಲದುದು ಒಂದೆಡೆ (ಸೂರ್ಯನಿಗೆ ಅಸ್ತವು ಇಲ್ಲದ ಸ್ಥಳವೊಂದು ಇದ್ದರೆ) ನಿಮ್ಮ ಕೇಳ್ದುದುಂ ಕಂಡುದುಂ ಉಳ್ಳೊಡಿಂ (ಕಂಡು ಕೇಳಿದ್ದರೆ) ಇಂಬೆಸಸಿಂ

(ಹೇಳಿರಿ) ಆಂ ಇರದೆ ಅಲ್ಲಿಗೆ
ಪೋಪೆವೆಂದು (ನಾವು
ಕೂಡಲೆ ಅಲ್ಲಿಗೆ ಹೋಗುವೆವು
ಎಂದು) ಮೆಯ್ಗೊಂಡು
ಒಲವಿಂದ ಅಗಲ್ಕೆಗೆ
ಅಣಮಾಱದೆ (ಸೂರ್ಯನನ್ನು
ಅಗಲಲು ಸಾದ್ಯವಾಗದೆ)
ಪಕ್ಕಿಗಳೆಲ್ಲಮಂ
ಮರುಳ್ಗೊಂಡವೊಲ್
(ಹುಚ್ಚುಹಿಡಿದಂತೆ) ಉಳ್ದು
(ಕೂಗಿ) ಕೂಡೆ ಬೆಸಗೊಂಡು

ಬಿಟಿಲ್ದುವು ಜಕ್ಕವಕ್ಕಿಗಳ್ (ಕೂಡಲೆ ಕೇಳಿ ಚಕ್ರವಾಕಗಳು ಬಳಲಿದವು)

ಪದ್ಯ-೪೮:ಅರ್ಥ: .
ಸೂರ್ಯನಿಗೆ ಅಸ್ತವು ಇಲ್ಲದ ಸ್ಥಳವೊಂದನ್ನು ನೀವು ಕೇಳಿದ್ದರೆ ಅಥವಾ ಕಂಡಿದ್ದರೆ ಹೇಳಿ; ನಾವು ಕೂಡಲೆ ಅಲ್ಲಿಗೆ ಹೋಗುವೆವು ಎಂದು, ಹುಚ್ಚರಂತೆ ಎಲ್ಲ ಪಕ್ಷಿಗಳಿಗೂ ಕೂಗಿ ಹೇಳಿ ಮತ್ತು

ಚಕ್ರವಾಕಪಕ್ಷಿಗಳು
ವಿಶೇಷವಾಗಿ ಬಳಲಿದುವು.

ವ|| ಅಂತು ಕಮಳವನಂಗಳಾದಿತ್ಯಂಗೆ ಕೆಯ್ಯಂ ಮುಗಿವಂತೆ ಮುಗಿಯೆ ಜಕ್ಕವಕ್ಕಿಗಳ್ ಸುರತಮಕರಧ್ವಜನ ಸುಭದ್ರೆಯ ವಿರಹಪರಿತಾಪಮಂ ಪಚ್ಚುಕೊಂಡಸುಂಗೊಂಡಗಲೆ ಸಂಧ್ಯಾರಾಗಮವರ

ಮನದನುರಾಗಮನನುಕರಿಸು
ವಂತುಟಾಗೆ ಬಟೆಯಿಂ
ಕ್ರಮಕ್ರಮದೊಳ್-

ವಚನ:ಪದವಿಭಾಗ-

ಅರ್ಥ:ಅಂತು ಕಮಳವನಂಗಳ ಆದಿತ್ಯಂಗೆ ಕೆಯ್ಯಂ ಮುಗಿವಂತೆ (ಕೈಮುಗಿಯುವಂತೆ) ಮುಗಿಯೆ ಜಕ್ಕವಕ್ಕಿಗಳ್ ಸುರತಮಕರಧ್ವಜನ (ಅರ್ಜುನನ) ಸುಭದ್ರೆಯ

ವಿರಹ ಪರಿತಾಪಮಂ
ಪಚ್ಚುಕೊಂಡು
ಅಸುಂಗೊಂಡು ಅಗಲೆ
(ಭಾಗಿಗಳಾಗಿ ತಕ್ಷಣ
ಅಗಲಲು) ಸಂಧ್ಯಾರಾಗಂ
(ಸಂಜೆಯ ಕೆಂಪುಬಣ್ಣವು)
ಅವರ ಮನದ
ಅನುರಾಗಮನು
(ಪ್ರಿತಿಯನ್ನು)
ಅನುಕರಿಸುವಂತುಟೆ ಆಗೆ-
ಬಟೆಿಯಂ ಕ್ರಮಕ್ರಮದೊಳ್-

ವಚನ:ಅರ್ಥ:ವ|| ಹಾಗೆ ಕಮಲಗಳ ತೋಟಗಳು ಸೂರ್ಯನಿಗೆ ಕೈಮುಗಿಯುವಂತೆ ಮೊಗ್ಗಾಗಿ ಮುಚ್ಚಿಕೊಳ್ಳಲು, ಚಕ್ರವಾಕಪಕ್ಷಿಗಳು ಅರ್ಜುನ ಸುಭದ್ರೆಯರ ವಿರಹತಾಪದಲ್ಲಿ ತಾವೂ ಭಾಗಿಗಳಾಗಿ (ದುಖಪಟ್ಟು?) ತಕ್ಷಣ ಅಗಲಲು ಸಂಜೆಯ ಕೆಂಪುಬಣ್ಣವು ಅವರ

ಮನಸ್ಸಿನ ಪ್ರೀತಿಯನ್ನು
ಅನುಕರಿಸುವಂತೆ
ಸಂಧ್ಯಾರಾಗವು ಕಾಣಿಸಿತು.
ಬಳಿಕ ಕ್ರಮವಾಗಿ-

ಮ|| ಮಸಿಯಿಂದಂ
ಜಗಮೆಲ್ಲಮಂ ದಿತಿಸುತಂ
ಮುಂ ಪೂಸಿದ್ದನೋ ಕಾಲಮೇ
ಘಸಮೂಹಂ ದೆಸೆಯೆಲ್ಲಮಂ
ಕವಿದುದೋ ಗಂಧೇಭ
ಚರ್ಮಂಗಳಂ|

ಪಸರಂಗೆಯ್ದನೊ ಶಂಭುವೆಂಬ ಬಗೆಯಿಂ ತಳ್ಪೊಯ್ದು ಕೞ್ತ್ತೇಱೆ ಸೂ ಚಿಸಲಾರ್ಗಂ ವಶಮಾಗದಂತು ಕವಿದತ್ತುದ್ದಾಮ ಭೀಮಂ ತಮಂ|| ೪೯

ಪದ್ಯ-೪೯:ಪದವಿಭಾಗ-ಅರ್ಥ:ಮಸಿಯಿಂದಂ (ಕಪ್ಪುಬಣ್ಣದಿಂದ) ಜಗಮೆಲ್ಲಮಂ ದಿತಿಸುತಂ ಮುಂ ಪೂಸಿದನೋ

(ದಿತಿಯಮಗ ರಾಕ್ಷಸನು
ಮೊದಲೇ ಜಗತ್ತೆಲ್ಲವನ್ನೂ
ಹೂಳಿದನೋ!)
ಕಾಲಮೇಘಸಮೂಹಂ
ದೆಸೆಯೆಲ್ಲಮಂ ಕವಿದುದೋ
(ಕಪ್ಪು ಮೋಡಗಳು
ದಿಕ್ಕುಗಳನ್ನು ಮುಚ್ಚಿತೋ,)
ಗಂಧೇಭ ಚರ್ಮಂಗಳಂ
(ಆನೆಯ ಚರ್ಮಗಳನ್ನು)
ಪಸರಂಗೆಯ್ದನೊ
ಶಂಭುವೆಂಬ (ಶಂಭು-ಶಿವನು

ಹರಡಿದನೊ) ಬಗೆಯಿಂ
ತಳ್ಪೊಯ್ದು ಕೞ್ವೇಱ
(ಚಿಂತೆಯನ್ನು ಉಂಟುಮಾಡಿ)
ಸೂಚಿಸಲು ಆರ್ಗಂ
ವಶಮಾಗದಂತು (ಇದು ಹೀಗೆ
ಎಂದು ಸೂಚಿಸುವುದಕ್ಕೆ
ಆಗದಂತೆ) ಕವಿದತ್ತು (ಕತ್ತಲೆ
ಮುಸುಗಿತು) ಉದ್ದಾಮ
ಭೀಮಂ ತಮಂ
(ಭಯಂಕರವಾದ ಕತ್ತಲೆಯು)

ಪದ್ಯ-೪೯:ಅರ್ಥ: ನಂತರ ರಾಕ್ಷಸನು ಸಮಸ್ತ ಜಗತ್ತನ್ನು ಕಾಡಿಗೆಯಿಂದ ಹೂಳಿಬಿಟ್ಟಿದ್ದಾನೆಯೋ, ಪ್ರಳಯಕಾಲದ ಮೋಡಗಳು ದಿಕ್ಕುಗಳನ್ನೆಲ್ಲ ಮುಚ್ಚಿತೋ, ಶಿವನು ಮದ್ದಾನೆಯ ಚರ್ಮವನ್ನು ಹರಡಿದನೋ ಎಂಬ ಚಿಂತೆಯನ್ನು ಉಂಟುಮಾಡಿ ಕಪ್ಪುಬಣ್ಣವು ವೃದ್ಧಿಯಾಗಿ ಇದು ಹೀಗೆ

ಎಂದು ಸೂಚಿಸುವುದಕ್ಕೆ ಯಾರಿಗೂ ಶಕ್ಯವಿಲ್ಲದ ರೀತಿಯಲ್ಲಿ ಬಹಳ ಭಯಂಕರವಾದ ಕತ್ತಲೆಯು ಕವಿದುಕೊಂಡಿತು.

ವ|| ಆಗಳಾ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆನಿತು ಬೆಳಗಿಯುಂ ಕಿಟ್ಟಲೆಯನಲೆಯಲಾಱವಾದು ವು ಕನಕ ಪ್ರಾಸಾದ ಪಂಙ್ಕ್ತೆ

ಗಳ್ ಪೞಿಪೞಿನೆ ಬೆಳಗುವ
ಸೊಡರ್ಗಳನಾದಿತ್ಯನ
ನಂಟರೆಂದು ತಮೋರಾಜಕಂ
ಮುಳಿದು ಸೆರೆಗೆಯ್ದ ಬೆಳಗಿನ
ಸೆರೆಯ ಮನೆಗಳನ್ನವಾದುವು
ಮದಗಜ
ಗಂಡಸ್ಥಳಂಗಳೊಳೆಱಗಿ
ಮೊರೆವ ತುಂಬಿಯ ಬಂಬಲ್ಗಳೆ
ವಿಮುಖಿಭೂತಂಗಳಾದುವು
ತಂಡತಂಡದೋಲಗಕ್ಕೆ
ಪುಗುವ ಪೊಱಮಡುವ

ವಾರವಿಳಾಸಿನಿಯರ
ನೂಪುರಂಗಳ ರವಂಗಳೊಳ್
ನೃಪಭವನೋಪವನ
ದೀರ್ಘಿಕಾಹಂಸಕುಳಂಗಳ್
ತಳವೆಳಗಾದುವು
ರಾಜಹಂಸಪಾರಾವತಮಿಥು
ನಂಗಳುತ್ತುಂಗಪ್ರಾಸಾದಶಿಖರ
ಮಣಿಗವಾಕ್ಷಾಂತರಾಳ ವಿವಿಧ
ಗೃಹಾಂತರಗತಂಗಳಾದುವು
ಉದಯಗಿರಿ ಕಟಕ ಕುಹರ
ಪರಿಕರ ನಿಶಾಕರಂ ಪರಿದಳಿತ

ನಿಜ ಹರಿಣ ರುಧಿರ ನಿಚಯ ನಿಚಿತಮಾದಂತೆ ಲೋಹಿತಾಂಗನಾಗೆ-

ವಚನ:ಪದವಿಭಾಗ-

ಅರ್ಥ:ಆಗಳು ಆ ತಾರಾಗಣಂಗಳ್ ದಿಶಾವನಿತೆಯರ ಮಕುಟಮಾಣಿಕಂಗಳಂತೆ (ಆಗ ಸಮೂಹವು ದಿಕ್ಕಿನ ವನಿತೆಯರ ಕಿರೀಟದಂತೆ,) ಎನಿತು ಬೆಳಗಿಯುಂ

ಕಟ್ತಿಲೆಯನು
ಅಲೆಯಲಾಱವಾದುವು
(ಕತ್ತಲೆಯನ್ನು
ಹೋಗಲಾಡಿಸಲು
ಶಕ್ತವಾಗಲಿಲ್ಲ) ಕನಕ ಪ್ರಾಸಾದ
ಪಂಙ್ಕ್ತಿಗಳ್ (ಚಿನ್ನದ
ಉಪ್ಪರಿಗೆಯ ಸಾಲುಗಳು)
ಪೞಪೞನೆ (ಪಳಪಳನೆ)
ಬೆಳಗುವ ಸೊಡರ್ಗಳನು
(ದೀಪಗಳನ್ನು) ಆದಿತ್ಯನ
ನಂಟರೆಂದು ತಮೋರಾಜಕಂ

ಮುಳಿದು (ಕತ್ತಲೆಯೆಂಬ
ರಾಜನು ಕೋಪಗೊಂಡು)
ಸೆರೆಗೆಯ್ದ (ಸೆರೆ ಹಿಡಿದು)
ಬೆಳಗಿನ ಸೆರೆಯ
ಮನೆಗಳನ್ನವಾದುವು (ಬೆಳಕಿನ
ಸೆರೆಮನೆಗಳಂತೆ ಆದವು);
ಮದಗಜ ಗಂಡಸ್ಥಳಂಗಳೊಳು
ಎಱಗಿ (ಎರಗಿ) ಮೊರೆವ
ತುಂಬಿಯ ಬಂಬಲ್ಗಳೆ
(ಗುಂಪುಗಳು)
ವಿಮುಖಿಭೂತಂಗಳಾದುವು

(ಮುಖತಿರುಗಿಸಿದವು)
ತಂಡತಂಡದ ಓಲಗಕ್ಕೆ
ಪುಗುವ ಪೊಱಮಡುವ
(ಬರುವ ಹೊಗುವ)
ವಾರವಿಳಾಸಿನಿಯರ
(ವೇಶ್ಯೆಯರ) ನೂಪುರಂಗಳ
ರವಂಗಳೊಳ್ (ಶಬ್ದದಲ್ಲಿ)
ನೃಪಭವನ (ಅರಮನೆ)
ಉಪವನ ದೀರ್ಘಿಕಾ
(ಹಂಸಗಳು) ಹಂಸಕುಳಂಗಳ್
ತಳವೆಳಗಾದುವು

(ಹೆದರಿದವು); ರಾಜಹಂಸ
ಪಾರಾವತ (ಪಾರಿವಾಳ)
ಮಿಥುನಂಗಳು (ಜೊಡಿಗಳು)
ಉತ್ತುಂಗಪ್ರಾಸಾದಶಿಖರ
(ಉತ್ತುಂಗ-ಎತ್ತರದ
ಪ್ರಾಸಾದಶಿಖರ -ಉಪ್ಪರಿಗೆಯ
ತುದಿಯಲ್ಲಿರುವ)
ಮಣಿಗವಾಕ್ಷಾಂತರಾಳ (ಮಣಿ
- ರತ್ನ, ಗವಾಕ್ಷ- ಕಿಟಕಿ
ಅಂತರಾಳ -ಒಳಗೆ ಮತ್ತು)
ವಿವಿಧ ಗೃಹ

ಅಮತರಗತಂಗಳಾದುವು
(ಮನೆಯ ಒಳಗೆ ಸೇರಿದವು);
ಉದಯಗಿರಿ ಕಟಕ (ತಪ್ಪಲು)
ಕುಹರ (ಗವಿಗಳ) ಪರಿಕರ
ನಿಶಾಕರಂ (ಸಹಾಯದ
ಚಂದ್ರನು) ಹರಿದಳಿತ (ಹರಿ-
ಸಿಂಹದಿಂದ ಸೀಳಿದ) ನಿಜ
ಹರಿಣ ರುಧಿರ ನಿಚಯ (ತನ್ನ
ಜಿಂಕೆಯ ರಕ್ತದ ರಾಶಿಯಿಂದ)
ನಿಚಿತಮಾದಂತೆ
(ತುಂಬಿದಂತೆ)

ಲೋಹಿತಾಂಗನಾಗೆ (ಕೆಂಪು ಬಣ್ಣದವನಾಗಲು)-

ವಚನ:ಅರ್ಥ:ಆಗ ಸಮೂಹವು ದಿಕ್ಕಿನ ವನಿತೆಯರ ಕಿರೀಟದಂತೆ, ಬೆಳಗಿದರೂ ಕತ್ತಲೆಯನ್ನು ಹೋಗಲಾಡಿಸಲು ಶಕ್ತವಾಗಲಿಲ್ಲ. ಚಿನ್ನದ ಉಪ್ಪರಿಗೆಯ ಸಾಲುಗಳು ಪಳಪಳನೆ ಬೆಳಗುತ್ತಿದ್ದ ದೀಪಗಳು ಸೂರ್ಯನ

ನಂಟರೆಂದು ಕತ್ತಲೆಯೆಂಬ ರಾಜನು ಕೋಪಗೊಂಡು (ಆ ದೀಪಗಳನ್ನು) ಸರೆಹಿಡಿದು ಬಂಧಿಸಿದ; ಅವು ಬೆಳಕಿನ ಸೆರೆಮನೆಗಳಂತೆ ಆದವು. ಮದ್ದಾನೆಗಳ ಕಪೋಲ ಪ್ರದೇಶಗಳಲ್ಲಿ ಎರಗಿ ಝೇಂಕರಿಸುವ ದುಂಬಿಯ ಸಮೂಹಗಳು ಮುಖತಿರುಗಿಸಿದವು-ಹೊರಟುಹೋದವು.

ಗುಂಪುಗುಂಪಾಗಿ ಅರಮನೆಗೆ ಬಂದು ಹೋಗುವ ವೇಶ್ಯೆಯರ ಕಾಲಂದಿಗೆಯ ಶಬ್ದವನ್ನು ಕೇಳಿ ಅರಮನೆಯ ಕೈದೋಟ ಸರೋವರದಲ್ಲಿದ್ದ ಹಂಸ ಸಮೂಹಗಳು ಹೆದರಿದವು. ರಾಜಹಂಸ ಮತ್ತು ಪಾರಿವಾಳದ ಜೋಡಿಗಳು ಉಪ್ಪರಿಗೆಯ ತುದಿಯಲ್ಲಿರುವ ರತ್ನಖಚಿತವಾದ ಕಿಟಕಿಗಳ ಮಧ್ಯಭಾಗದ ಮನೆಗಳ ಒಳಗೆ

ಮತ್ತು ಮನೆಯ
ಗೂಡುಗಳನ್ನು ಹೋಗಿ
ಸೇರಿದುವು. ಉದಯ
ಪರ್ವತದ ತಪ್ಪಲಿನ ಗವಿಗಳ
ಸಹಾಯಕ ಉದಯ
ಚಂದ್ರನು ಸಿಂಹದಿಂದ
ಸೀಳಲ್ಪಟ್ಟ ತನ್ನ ಜಿಂಕೆಯ
ರಕ್ತರಾಶಿಯಿಂದ
ತುಂಬಿದವನಂತೆ ಕೆಂಪು
ಬಣ್ಣದವನಾಗಲು. (ಸೂರ್ಯ
ಮುಳುಗಿ ಕತ್ತಲಾಯಿತು,

ಕೆಂಪು ಚಂದ್ರ ಉದಯಿಸಿದ,
ಆಗ-)

ಮ|| ನೆರೆದೈ ಸಂಜೆಯೊಳೆಂದು
ಕಾಯ್ದೊದೆದೊಡೇನಾತ್ಮಾಂಗ
ದೊಳ್ ರೋಹಿಣೀ
ಚರಣಾಲಕ್ತಕ
ರಾಗಮಚ್ಚೊಱಿದುದೋ
ಮೇಣ್ ಕಾಮಿಗಳ್ಗೀವ ರಾ|
ಗರಸಂ ಪೊಣ್ಮಿದುದೋ
ತಮೋಗಜದ

ಕೋಡೇಱಿಂದಮೇಂ
ನೊಂದುದೋ
ಹರಿಣಂ ತಾನೆನಿಸಿತ್ತು
ರಕ್ತರುಚಿಯಿಂ ಬಿಂಬಂ
ಸುಧಾಸೂತಿಯಾ|| ೫೦ ||

ಪದ್ಯ-೫೦:ಪದವಿಭಾಗ-ಅರ್ಥ:ನೆರೆದ್ಯೆ(ಬೆರೆ, ಸೇರು) ಸಂಜೆಯೊಳು ಎಂದು (ಚಂದ್ರನೇ ಸಂಜೆಹೆಣ್ಣಿನ ಜೊತೆ ಸೇರಿದೆಯಾ) ಕಾಯ್ದು ಒದೆದೊಡೆ (ಚಂದ್ರನ ಪತ್ನಿ

ಸಿಟ್ಟಿನಿಂದ ಒದ್ದಾಗ) ಏನು
ಆತ್ಮಾಂಗದೊಳ್ (ಆತ್ಮ-ತನ್ನ-
ಚಂದ್ರನ ದೇಹದಲ್ಲಿ)
ರೋಹಿಣೀಚರಣ ಅಲಕ್ತಕ
(ರೋಹಿಣಿ ಕಅಲಿನ ಅರಗಿನ
ಬಣ್ಣ->) ರಾಗಂ
ಅಚ್ಚೆಱಿದುದೋ (ಹತ್ತಿತೊ),
ಮೇಣ್ (ಅಥವಾ) ಕಾಮಿಗಳ್ಗೆ
ಈವ ರಾಗರಸಂ (ಕುಡಿಯಲು
ಕೊಡುವ ಕಾಮ ಹೆಚ್ಚುವ
ರಸವು) ಪೊಣ್ಮಿದುದೋ

(ಹೊರಹೊಮ್ಮಿತೊ),
ತಮೋಗಜದ ಕೋಡ
ಏಱಿಂದಂ ಏಂ ನೊಂದುದೋ
ಹರಿಣಂ (ಜಿಂಕೆಯು
ಕತ್ತಲೆಯೆಂಬ ಆನೆಯ
ಕೊಂಬಿನ ಗಾಯದಿಂದ
ನೊಂದಿತೋ) ತಾನ್ ಎನಿಸಿತ್ತು
ರಕ್ತರುಚಿಯಿಂ (ಕೆಂಪು
ಕಾಂತಿಯಿಂದ) ಬಿಂಬಂ
ಸುಧಾಸೂತಿಯಾ(ಚಂದ್ರನ ,
ಬಿಂಬಂ - ಮಂಡಲವು)

(ಎನ್ನುವ ಹಾಗೆ ಚಂದ್ರಬಿಂಬದ ಕೆಂಪು ಕಾಂತಿಯು ಎನ್ನಿಸಿತು)

ಪದ್ಯ-೫೦:ಅರ್ಥ:

ಸಂಜೆಯೆಂಬ (ಅನ್ಯ) ಸ್ತ್ರೀಯಲ್ಲಿ ಕೂಡಿದೆಯಾ ಎಂದು (ಹೆಂಡತಿಯಾದ ರೋಹಿಣಿ ದೇವಿಯು) ಕೋಪದಿಂದ ಒದೆಯಲು ಅವಳ ಕಾಲಿನ ಅರಗಿನ ಬಣ್ಣವು ಚಂದ್ರನಿಗೆ ಹತ್ತಿತೋ, ಅಥವಾ ಕಾಮಿಗಳಿಗೆ

ಕುಡಿಯಲು ಕೊಡುವ ಕಾಮ
ಹೆಚ್ಚುವ ರಸವು
ಹೊರಹೊಮ್ಮಿತೊ, ಅಥವಾ
(ಚಂದ್ರನ) ಜಿಂಕೆಯು
ಕತ್ತಲೆಯೆಂಬ ಆನೆಯ
ಕೊಂಬಿನ ಗಾಯದಿಂದ
ನೊಂದಿತೋ ಎನ್ನುವ ಹಾಗೆ
ಚಂದ್ರನ ಬಿಂಬದ ಕೆಂಪು
ಕಾಂತಿಯು ಎನ್ನಿಸಿತು/
ಎನ್ನುಂವಂತೆ ಕಾಣುತ್ತಿತ್ತು.

ವ|| ಆಗಳ್ ತನ್ನ ರಾಗಮಂ ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ ಕೆಂಪು ಪತ್ತುವಿಟ್ಟಾಗಳ್-

ವಚನ:ಪದವಿಭಾಗ-

ಅರ್ಥ:ಆಗಳ್ ತನ್ನ ರಾಗಮಂ (ಬಣ್ಣವನ್ನು) ರಾಗಿಗಳ್ಗೆಲ್ಲಂ ಪಚ್ಚುಕೊಟ್ಟಂತೆ (ಹಂಚಿಕೊಟ್ಟಂತೆ) ಕೆಂಪು ಪತ್ತುವಿಟ್ಟಾಗಳ್ (ಬಿಟ್ಟು ಹೋದಾಗ)-

ವಚನ:ಅರ್ಥ:ಸ್ವಲ್ಪಕಾಲದ ಮೇಲೆ ತನ್ನ ಕೆಂಪುಬಣ್ಣವನ್ನು ಪ್ರೀತಿಪಾತ್ರರಾದವರಿಗೆ ಹಂಚಿಕೊಟ್ಟಂತೆ ಬಿಟ್ಟು ಹೋದಾಗ-

ಮ|| ಮುನಿದೀಶಂ ತವೆ ಸುಟ್ಟು
ಮುಂ ಕರುಣದಿಂದಿತ್ತಂ
ಪುನರ್ಜನ್ಮಮಂ
ನಿನಗೆಂದಾ ರತಿ ಪಾಪಮುಂ
ಪಡಣಮುಂ ಪೋಪಂತೆ
ಕಾಮಂಗೆ ಮ|

ಜ್ಜನಕೆಂದೆತ್ತಿದ ಚಂದ್ರಕಾಂತ ಘಟದೊಳ್ ತಂದಟ್ಟಿಯಿಂ ಪುಷ್ಪ ವಾ ಸನೆಗೆಂದಿಕ್ಕಿದ ನೀಳ ನೀರರುಹಮಂ ಪೋಲ್ದತ್ತು ಕಟ್ಟಿಂದುವಾ|| ೫೧||

ಪದ್ಯ-೫೧:ಪದವಿಭಾಗ-ಅರ್ಥ:ಮುನಿದು (ಸಿಟ್ಟುಮಾಡಿ) ಈಶಂ ತವೆ (ಚನ್ನಾಗಿ) ಸುಟ್ಟು ಮುಂ (<-ಮೊದಲು), ಕರುಣದಿಂದ

ಇತ್ತಂ ಪುನರ್ಜನ್ಮಮಂ ನಿನಗೆ ಎಂದು, ಆ ರತಿ ಪಾಪಮುಂ ಪಡಣಮುಂ (ಪತನವೂ) ಪೋಪಂತೆ ಕಾಮಂಗೆ ಮಜ್ಜನಕೆ (ಸ್ನಾನಕ್ಕೆ) ಎಂದು ಎತ್ತಿದ ಚಂದ್ರಕಾಂತ ಘಟದೊಳ್ (ಕೊಡದಲ್ಲಿ) ತಂದು ಅೞ್ತಿಯಿಂ ಪುಷ್ಪ ವಾಸನೆಗೆ ಎಂದು ಇಕ್ಕಿದ (ಹಾಕಿದ) ನೀಳ ನೀರರುಹಮಂ (ನೀಳ ನೀಲ-

ಕಪ್ಪು ತಾವರೆಯನ್ನು)
ಪೋಲ್ದತ್ತು (ಹೋಲುತ್ತಿತ್ತು)
ಕಜ್ಜಿಂದುವಾ (ಕಳ್ಳು
ಇಂದುವಾ, ಚಂದ್ರನ ಮೇಲಿದ್ದ
ಕಪ್ಪುಕಲೆ)|
ಪದ್ಯ-೫೧:ಅರ್ಥ: ಈಶ್ವರನೂ
ಮನ್ಮಥನ ಮೇಲೆ ಮೊದಲು
ಕೋಪಿಸಿಕೊಂಡು
(ನೇತ್ರಾಗ್ನಿಯಿಂದ) ಸುಟ್ಟು
ಭಸ್ಮಮಾಡಿ ಪುನ
ಕರುಣೆಯಿಂದ ನಿನಗೆ

ಜನ್ಮವಿತ್ತಿದ್ದಾನೆ ಎಂದು
ರತಿದೇವಿಯು ಅವನ
ಪಾಪವನ್ನು ಪತನವನ್ನು
ಹೋಗಲಾಡಿಸಲು ಕಾಮನ
ಸ್ನಾನಕ್ಕೆ ಎತ್ತಿದ ಚಂದ್ರಕಾಂತ
ಶಿಲೆಯ ಕೊಡದಲ್ಲಿ ಹೂವಿನ
ವಾಸನೆಗಾಗಿ ಪ್ರೀತಿಯಿಂದ
ತಂದಿಟ್ಟ (ಕನ್ಯೆದಿಲೆ) ಕಪ್ಪು
ತಾವರೆಯನ್ನು ಚಂದ್ರನ
ಮೇಲಿದ್ದ ಕಪ್ಪು ಕಲೆ
ಹೋಲುತ್ತಿತ್ತು.

ಕಂ||ಆವರಿಸಿತ್ತೊ ನಭೋಂತ
ರ್ಭೂವಿವರಮನಮರ್ದಿನೆಎಸ
ಕಮೆನೆ ವಿರಹಿಗಳೋ|
ವ್ರೋವಿದು ಮದನನಸೋವನ
ದೀವಿಗೆಯೆನೆ ತೊಳಗಿ
ಬೆಳಗಿದಂತುಹಿನಕರಂ||೫೨||

ಪದ್ಯ-೫೨:ಪದವಿಭಾಗ-ಅರ್ಥ:ಆವರಿಸಿತ್ತೊ ನಭೋ ಅಂತರ್ ಭೂವಿವರಮಂ (ಭೂಮಿ ಅಂತರಿಕ್ಷಗಳ ಮಧ್ಯಭಾಗವನ್ನು) ಅಮರ್ದಿನ

ಎಸಕಮ್ (ಅಮೃತದಕಾಂತಿ)
ಎನೆ (ಎನ್ನುವ ಹಾಗೆ)
ವಿರಹಿಗಳು ಓ ಓ ಇದು
ಮದನನ ಸೋವನ
ದೀವಿಗೆಯೆನೆ (ಮನ್ಮಥನ
ಶೋಧನೆಯ ದೀವಟಿಗೆ
ಎನ್ನುವಂತೆ) ತೊಳಗಿ
ಬೆಳಗಿದಂ
ತುಹಿನಕರಂ(ಚಂದ್ರನು
ತೊಳಗಿ ಬೆಳಗಿದನು)

ಪದ್ಯ-೫೨:ಅರ್ಥ:ಬೆಳುದಿಂಗಳು ಭೂಮಿ ಅಂತರಿಕ್ಷಗಳ ನಡುವಿನ ಭಾಗವನ್ನು ಅಮೃತದಕಾಂತಿ ಆವರಿಸಿತೊ ಎನ್ನುವ ಹಾಗೆ ವಿರಹಿಗಳು ಓ ಓ ಇದು ಮನ್ಮಥನ ಶೋಧನೆಯ ದೀವಟಿಗೆ ಎನ್ನುವಂತೆ, (ಕಾಪಾಡಿ ಕಾಪಾಡಿ ಎಂದು ಕೂಗಿಕೊಳ್ಳುವ ಹಾಗೆ) ಚಂದ್ರನು ತೊಳಗಿ ಬೆಳಗಿದನು.

<u>ಅರ್ಜುನನ್ನು ನೋಡಿ-ಸುಭದ್ರೆಯ ಪ್ರೇಮ -ವಿರಹವೇದನೆ</u>

ವ||ಅಂತು ಸೊಗಯಿಸುವ ಅಚ್ಚಬೆಳ್ದಿಂಗಳೊಳ್ ಸುಧಾಧವಳಿತೋತ್ತಂಗ ರಮ್ಯಹರ್ಮ್ಯಾಗ್ರದೊಳೆ ಸಿರಿಯೋಲಗಂಗೊಟ್ಟು ವಿನೋದಂಗಳೊಳ್ ವಿಕ್ರಮಾರ್ಜುನಂ ಬೆರಸು-

ವಚನ:ಪದವಿಭಾಗ-ಅರ್ಥ:ಅಂತು ಸೊಗಯಿಸುವ ಅಚ್ಚ ಬೆಳ್ದಿಂಗಳೊಳ್ ಸುಧಾಧವಳಿತ ಉತ್ತುಂಗ (ಎತ್ತರದ) ರಮ್ಯಹರ್ಮ್ಯಾಗ್ರದೊಳೆ (ಸುಂದರ ಉಪ್ಪರಿಗೆಯಲ್ಲಿ) ಸಿರಿಯ ಓಲಗಂಗೊಟ್ಟು (ಸಂಪತ್ತಿನ ಸಭೆನೆಡಸಿ) ವಿನೋದಂಗಳೊಳ್

ವಿಕ್ರಮಾರ್ಜುನಂ ಬೆರಸು (ಅರ್ಜುನನೊಡನೆ)-

ವಚನ:ಅರ್ಥ:ಹಾಗೆ ಸೊಗಸಾದ ಸ್ವಚ್ಛವಾದ ಬೆಳದಿಂಗಳಿನಲ್ಲಿ ಸುಣ್ಣದಿಂದ ಬಿಳುಪುಮಾಡಲ್ಪಟ್ಟ ಸಂಪತ್ತಿನ ಸಭೆನೆಡಸಿ ಅರ್ಜುನನೊಡನೆ ಕೃಷ್ಣನು ದ್ವಾರವತಿಯ ಅರಮನೆಯ ಉಪ್ಪರಿಗೆಯಲ್ಲಿ ವಿನೋದದಿಂದಿದ್ದನು.

ಕಂ||ಆಗಳನಂತನನಂತಘ

ನಾಗಣಮಣಿ

ಕಿರಣಮೆಸೆಯೆದುಗ್ಧಾರ್ಣವ

ದೊಳ್|

ರಾಗದಿನಿರ್ಪಂತಿರ್ದಂ

ಭೋಗಿ ತಳತ್ತಳಿಸಿಬೆಳಗೆ

ಕೆಯ್ದೀವಿಗೆಗಳ್||೫೩||

ಪದ್ಯ-೫೩:ಪದವಿಭಾಗ-

ಅರ್ಥ:ಆಗಳು ಅನಂತಂ

(ಕೃಷ್ಣನು)

ಅನಂತಫಣಾಗಣಮಣಿ

ಕಿರಣಂ ಎಸೆಯೆ

ದುಗ್ಧಾರ್ಣವದೊಳ್ (ದುಗ್ಧ ಆರ್ಣವ- ಹಾಲಿ ಸಮುದ್ರದಲ್ಲಿ) ರಾಗದಿಂ ಇರ್ಪಂತೆ ಇರ್ದಂ ಭೋಗಿ (ಸುಖವಾಗಿ ಅರ್ಜುನನು ಇದ್ದನು) ತಳತ್ತಳಿಸಿಬೆಳಗೆ ಕೆಯ್ದೀವಿಗೆಗಳ್ (ಕೈದೀವಿಗೆಗಳು ತಳತಳನೆ ಬೆಳಗುತ್ತಿರಲು)

ಪದ್ಯ-೫೩:ಅರ್ಥ:ಕೃಷ್ನನು, ಆದಿಶೇಷನ ಅನಂತವಾದ

ಹೆಡೆಯ ರತ್ನಗಳ ಸಮೂಹವು ಪ್ರಕಾಶಿಸುತ್ತಿರಲು, ಕ್ಷೀರಸಮುದ್ರದಲ್ಲಿ ಸಂತೋಷದಿಂದಿರುವ ಹಾಗೆ (ಇಲ್ಲಿ) ಅರ್ಜುನನು ಕೈದೀವಿಗೆಗಳು ತಳತಳನೆ ಬೆಳಗುತ್ತಿರಲು ಸುಖವಾಗಿ ಇದ್ದನು.

ವ||ಆಗಳ್

ವಚನ:ಅರ್ಥ:ಆಗ-

ಕಂ||

ಅತ್ತಸುಭದ್ರೆಯುಮೊಡಲುರಿ

ಯುತ್ತಿರೆ ಮೊರವಟ್ಟು

ವಿಜಯನಿರ್ದತ್ತಲೆ ನೋ|

ಡುತ್ತಿರೆ ಸುಸಾಳಭಂಜಿಕೆ

ಗೆತ್ತುದು ಕೆಳದಿಯರ

ತಂಡಮಾಕೆಯ ರೂಪಂ||೫೪||

ಪದ್ಯ-೫೪:ಪದವಿಭಾಗ-

ಅರ್ಥ:ಅತ್ತ ಸುಭದ್ರೆಯುಮಂ

ಒಡಲು ಉರಿಯುತ್ತಿರೆ

(ವಿರಹತಾಪದಿಂದ

ಮೈಸುಡುತ್ತಿರಲು)
ಮೊರವಟ್ಟು (ಮರಗಟ್ಟಿದಂತೆ)
ವಿಜಯನು ಇರ್ದ ಅತ್ತಲೆ
ನೋಡುತ್ತಿರೆ
ಸುಸಾಳಭಂಜಿಕೆಗೆತ್ತುದು
(ಸುಂದರವಾದ
ಬೊಂಬೆಯೆಂದು ಭಾವಿಸಿತು)
ಕೆಳದಿಯರ ತಂಡಂ ಆಕೆಯ
ರೂಪಂ (ಅವಳ ಗೆಳತಿಯರ
ತಂಡ, ಅವಳ ಆಕಾರವನ್ನು)|

ಪದ್ಯ-೫೪:ಅರ್ಥ:ಅತ್ತ ಸುಭದ್ರೆಯು ಸಹ ವಿರಹತಾಪದಿಂದ ಮೈಸುಡುತ್ತಿರಲು ಮರಗಟ್ಟಿದಂತೆ ಅರ್ಜುನನು ಇದ್ದ ಕಡೆಯೇ ನೋಡುತ್ತಿರಲು ಅವಳ ಗೆಳತಿಯರ ತಂಡ ಅವಳ ಆಕಾರವನ್ನು ಸುಂದರವಾದ ಬೊಂಬೆಯೆಂದು ಭಾವಿಸಿತು.

ಕಂ||ಕನ್ನೆತನಂಗೆಯ್ಯಲ್ ಬಗೆ

ಗುನ್ನಾಣ್ ಮಿಗೆ
ಮನಮುಮಿೞ್ದುವರಿಯಲ್
ಬಗೆಗುಂ|
ಕನ್ನಡಿಕುಂ ತನ್ನಳಿಪಂ
ತನ್ನಲೆ ತಾನಿಂತು ಕನ್ನೆ
ತಳವೆಳಗಾದಳ್|| ೫೫||

ಪದ್ಯ-೫೫:ಪದವಿಭಾಗ-ಅರ್ಥ:ಕನ್ನೆತನಂಗೆಯ್ಯಲ್ (ಕನ್ಯಾಭಾವವನ್ನು ತೋರಲು) ಬಗೆಗುಂ (ಇಷ್ಟಪಟ್ಟರೆ) ನಾಣ್ (ನಾಚಿಕೆ) ಮಿಗೆ (ಅದಕ್ಕೂ

ಹೆಚ್ಚಾಗಿ) ಮನಂ
ಇಚ್ಚಿವರಿಯಲ್ ಬಗೆಗುಂ
(ಮನಸ್ಸು ಅರ್ಜುನನ ಕಡೆ
ಸೆಳೆದುಕೊಂಡು ಹೋಗಲು
ಬಯಸುತ್ತದೆ) ಕನ್ನಡಿಕುಂ
(ಪ್ರತಿಫಲಿಸುತ್ತದೆ) ತನ್ನ
ಅಳಿಪಂ (ತನ್ನ ಪ್ರೇಮವನ್ನು)
ತನ್ನಲೆ (ತನ್ನೊಳಗೇ) ತಾಂ
ಇಂತು(ತಾನು ಹೀಗೆ ಕಂಡು)
ಕನ್ನೆ ತಳವೆಳಗಾದಳ್
(ತಬ್ಬಿಬ್ಬಾದಳು).

ಪದ್ಯ-೫೫:ಅರ್ಥ:

ನಾಚಿಕೆಯು ಕನ್ಯಾಭಾವವನ್ನು ತೋರಲು ಇಚ್ಛಿಸುತ್ತದೆ; ಆದರೆ ಅದಕ್ಕೂ ಹೆಚ್ಚಾಗಿ ಮನಸ್ಸು ಅರ್ಜುನನ ಕಡೆ ಸೆಳೆದುಕೊಂಡು ಹೋಗಲು ಬಯಸುತ್ತದೆ. ತನ್ನ ಪ್ರೇಮವನ್ನು ತನ್ನ ಮನಸ್ಸಿನಲ್ಲಿಯೇ- ಕನ್ನಡಿಯಲ್ಲಿ ಕಂಡಂತೆ ಕಂಡು ಕನ್ಯೆಯಾದ ಸುಭದ್ರೆಯು ತಬ್ಬಿಬ್ಬಾದಳು.

ಕಂ||ನುಡಿಯಿಸಿ ಕೇಳ್ದುಂ
ಹರಿಗನ
ಪಡೆಮಾತನೆ ಮಾತು
ತಪ್ಪೊಡಂ ಮತ್ತಮದಂ|
ನುಡಿಯಿಸುಗುಂ ಮೊದಲಿಂದಾ
ನುಡಿ ಪೞಿಪಡೆ ಮುಳಿದು
ನೋಡುಗಂ ಕೆಳದಿಯರಂ||
೫೬||

ಪದ್ಯ-೫೬:ಪದವಿಭಾಗ-
ಅರ್ಥ:ನುಡಿಯಿಸಿ ಕೇಳ್ದುಂ
ಹರಿಗನ ಪಡೆಮಾತನೆ

(ಅರ್ಜುನನ ಸುದ್ದಿಯನ್ನೆ
(ಕೆಳದಿಯರಿಂದ) ಹೇಳಿಸಿ
ಕೇಳುತ್ತಾಳೆ.) ಮಾತು
ತಪ್ಪೊಡಂ (ಆ ಮಾತು
ನಿಂತರೆ) ಮತ್ತಂ ಅದಂ
ನುಡಿಯಿಸುಗುಂ ಮೊದಲಿಂದ
ಆ ನುಡಿ (ಪುನಃ ಆ ಮಾತನ್ನೇ
ಮೊದಲಿಂದ ಹೇಳಿಸುತ್ತಾಳೆ.)
ಪಱಿಪಡೆ ಮುಳಿದು
ನೋಡುಗಂ (ಹರಿದರೆ- ಆ
ಮಾತು ನಿಂತರೆ ಗೆಳತಿಯರನ್ನು

ಕೋಪದಿಂದ ನೋಡುತ್ತಾಳೆ.)
ಕೆಳದಿಯರಂ.

ಪದ್ಯ-೫೬:ಅರ್ಥ:
ಅರ್ಜುನನ ಸುದ್ದಿಯನ್ನೆ (ಕೆಳದಿಯರಿಂದ) ಹೇಳಿಸಿ ಕೇಳುತ್ತಾಳೆ. ಆ ಮಾತು ನಿಂತರೆ ಪುನಃ ಆ ಮಾತನ್ನೇ ಹೇಳಿಸುತ್ತಾಳೆ. ಆ ಮಾತು ನಿಂತರೆ ಗೆಳತಿಯರನ್ನು ಕೋಪದಿಂದ ನೋಡುತ್ತಾಳೆ.

ಕಂ||ಅಱಿ ಮರುಳಂತುಟೆ

ಪೊರ್ಕಿನ

ತೆಱದಂತುಟೆ

ಮನಮೊಱಿಲ್ವುದೆರ್ದೆಯುರಿವು

ದು ಮೆ|

ಯ್ಯೆಱಿಗುವುದು

ಪದೆವುದಾನಿದ

ನಱಿಯೆನಿದೇಕೆಂದು ಕನ್ನೆ

ತಳವೆಳಗಾದಳ್|| ೫೭||

ಪದ್ಯ-೫೭:ಪದವಿಭಾಗ-

ಅರ್ಥ:ಅಱಿ ಮರುಳಂತುಟೆ

(ಅರುಳುಮರುಳಂತೆ

ಆಗುವಳು)

ಸೊರ್ಕಿನತೆಱದಂತುಟೆ

(ಸೊಕ್ಕಿನಲ್ಲಿ ಮೈಮರತಂತೆ

ಇರುವಳು) ಮನಮೊಱಲ್ವುದು

(ಮನಂ ಒರಲ್ವುದ ಮನಸ್ಸು

ಪ್ರೀತಿಯಿಂದ ಕೂಗುವುದು)

ಎರ್ದೆಯು ಉರಿವುದು

(ಎದೆಯಲ್ಲಿ ಉರಿ- ಸಂಕಟ)

ಮೆಯ್ಯೆಱಗುವುದು (ಮೈ

ಎರಗುವುದು- ಮೈ

ಒಲೆಯುವುದು) ಪದೆವುದು
(ಬಯಸುವುದು) ಇದನು
ಅಱಿಯೆಂ (ಅರಿಯೆನು)
ಇದೇಕೆ ಎಂದು ಕನ್ನೆ
ತಳವೆಳಗಾದಳ್
(ತಳವೆಳಗೊಂಡಳು).
ಪದ್ಯ-೫೭:ಅರ್ಥ:
ಅರುಳುಮರುಳಂತೆ
ಆಗುವಳು; ಸೊಕ್ಕಿನಿಂದ
ಮೈಮರತಂತೆ ಇರುವಳು.
ಮನಸ್ಸು ಪ್ರೀತಿಸುತ್ತದೆ.

ಎದೆಯುರಿಯುತ್ತದೆ. ಮೈ
ಒಲೆಯುವುದು)(ಅವನ ಕಡೆ
ಬಾಗುತ್ತದೆ). (ಅವನನ್ನೇ)
ಬಯಸುವುದು. ಹೀಗೇಕೆ,
ಇದನ್ನು ತಾನು ಅರಿಯೆನು,
ಎಂದು ಕನ್ಯೆಯಾದ
ಸುಭದ್ರೆಯು
ತಳವೆಳಗೊಂಡಳು.

ಉ|| ಆನೆಯನೇಱ ಸೌಷ್ಠವದೆ ಬರ್ಪರಿಕೇಸರಿಯೊಂದು ಗಾಡಿಯು

ದ್ದಾನಿ ತಗುಳ್ದು ಕಣ್ಣೊಳೆ
ತೊಱಲ್ದಿರ್ದೆಯೊಳ್
ತಡಮಾಡೆ ಬೇಟದು ||
ದ್ದಾನಿಯನಾನೆ ಮನ್ಮಥ
ಮಹೀಭುಜನೋವದೆ
ತೋಱಿಕೊಟ್ಟುದೊಂ
ದಾನೆಯೆ
ತನ್ನನಾನೆಗೊಲೆಗೊಂದಪುದೆಂ
ದು ಲತಾಂಗಿ ಬೆರ್ಚಿದಳ್|| ೫೮
||

ಪದ್ಯ-೫೭:ಪದವಿಭಾಗ-ಅರ್ಥ:ಆನೆಯನು ಏಱಿ ಸೌಷ್ಠವದೆ ಬರ್ಪ ಅರಿಕೇಸರಿಯ ಒಂದು ಗಾಡಿಯ ಉದ್ದಾನಿ (ಆನೆಯನ್ನು ಹತ್ತಿ ಚಂದವಾಗಿ ಬರುತ್ತಿರುವ ಅರ್ಜುನನ ಒಂದು -ಗಾಡಿಯ ಉದ್ದಾನಿ- ಸೌಂದರ್ಯದ ಅತಿಶಯವು) ತಗುಳ್ದು (ತಗಲಿಕೊಂಡು ಬಂದು) ಕಣ್ಣೊಳೆ ತೊಡಲ್ದು

(ಕಣ್ಣಲ್ಲಿ ತೊಳಲಿ)
ಎರ್ದೆಯೊಳ್
ತಡಮಾಡೆ(ಎದೆಯಲ್ಲಿ
ನಿಲ್ಲಲು) ಬೇಟದು
ಉದ್ದಾನಿಯನು ಆನೆ
(ಪ್ರೇಮದ ಉತ್ಕಟತೆಯನ್ನು
ಆನೆ- ತಡೆಯಲು) ಮನ್ಮಥ
ಮಹೀಭುಜನು ಓವದೆ
(ರಕ್ಷಿಸದೆ ಕರುಣೆಯಿಲ್ಲದೆ)
ತೋಱಿಕೊಟ್ಟ (ತೋರಿಸಿ
ಛೂಬಿಟ್ಟ) ಒಂದು ಆನೆಯೆ

ತನ್ನನು
ಆನೆಗೊಲೆಗೊಂದಪುದೆಂದು
(ಘೂಬಿಟ್ಟು ಒಂದು
ಆನೆಯಿಂದ ಕೊಲ್ಲಿಸುವಂತೆ
ತನ್ನನ್ನು ಕೊಲ್ಲಿಸುತ್ತಿದ್ದಾನೆ
ಎಂದು) ಲತಾಂಗಿ ಬೆರ್ಚಿದಳ್
(ಹೆದರಿದಳು.)

ಪದ್ಯ-೫೭:ಅರ್ಥ: .
ಆನೆಯನ್ನು ಹತ್ತಿ ಚಂದವಾಗಿ
ಬರುತ್ತಿರುವ ಅರ್ಜುನನ
ಒಂದು -ಗಾಡಿಯ ಉದ್ದಾನಿ-

ಸೌಂದರ್ಯದ ಅತಿಶಯವು ತನ್ನನ್ನು (ಸುಭದ್ರೆಯನ್ನು) ಹಿಂಬಾಲಿಸಿ ಕಣ್ಣಿನಲ್ಲಿ ತೊಳಲಿಕೊಂಡು ಎದೆಯಲ್ಲಿ ನಿಂತು ಪ್ರೇಮದ ಉತ್ಕಟತೆಯನ್ನು ತಡೆಯಲು, ಮದನನೆಂಬ ರಾಜನು ಸಹಾಯಮಾಡಿ ರಕ್ಷಿಸದೆ ಕರುಣೆಯಿಲ್ಲದೆ, "ತೋರಿಸಿ ಭೂಬಿಟ್ಟು ಒಂದು ಆನೆಯಿಂದ ಕೊಲ್ಲಿಸುವಂತೆ"

(ನುಡಿಗಟ್ಟು)ಒಂದು
ಆನೆಯಿಂದ (ಅತಿ ವಿರಹ
ವೇದನೆಯಿಂದ) ತನ್ನನ್ನು
ಕೊಲ್ಲುತ್ತಿದ್ದಾನೆ ಎಂದು
ಲತಾಂಗಿಯಾದ ಸುಭದ್ರೆಯು
ಹೆದರಿದಳು.

ಮ||
ಮನಮಾರಾತಹೋಮಭೂ
ಮಿ ಪಶುಗಳ್ ಕಾಮಾತುರರ್
ಬಂದ ಮಾ

ವನಿತುಂ ಸ್ಥಾಪಿತ
ಯೂಪಕೋಟಿ
ಬಳವತ್ಕಾಮಾಗ್ನಿ ಹೋಮಾಗ್ನಿ
ಚಂ|
ದನ ಕರ್ಪೂರ
ಮೃಣಾಳನಾಳಮೆ
ಪೊದಳ್ದಿರ್ಧ್ಮಂಗಳಿಂತಾಗೆ ತಾ
ನಿನಿತುಂ ಕಾಮನ
ಬೇಳ್ವೆಯೆಂದು ಸುಗಿದಳ್
ತನ್ವಂಗಿ ಬೆಳ್ದಿಂಗಳೊಳ್|| ೫೯||

ಪದ್ಯ-೫೯:ಪದವಿಭಾಗ-ಅರ್ಥ:ಮನಮ್ ಆರಾತಹೋಮಭೂಮಿ ಪಶುಗಳ್ ಕಾಮಾತುರರ್ (ಮನಸ್ಸು ಆರಾಧಿಸಲ್ಪಟ್ಟ ಯಜ್ಞಭೂಮಿ, ಕಾಮಪೀಡಿತರಾದವರೇ ಬಲಿಗಾಗಿರುವ ಪಶುಗಳು,) ಬಂದ ಮಾವು ಅನಿತುಂ ಸ್ಥಾಪಿತ ಯೂಪಕೋಟಿ (ಹೂಬಂದ

ಮಾವಿನಮರಗಳೇ ನೆಟ್ಟಿರುವ ಬಲಿಗಂಬಗಳು) ಬಳವತ್ ಕಾಮಾಗ್ನಿ ಹೋಮಾಗ್ನಿ (ಬಲವಾದ ಕಾಮಾಗ್ನಿಯೇ ಹೋಮಾಗ್ನಿ,) ಚಂದನ ಕರ್ಪೂರ ಮೃಣಾಳನಾಳಮೆ (ತಾವರೆಯ ದಂಟುಗಳೇ) ಪೊದಳ್ದ (ಹರಡಿದ) ಇಧ್ಮಂಗಳು (ಸೌದೆಗಳು) ಇಂತಾಗೆ ತಾನ್ ಇನಿತುಂ ಕಾಮನ ಬೇಳ್ವೆಯೆಂದು

(ಇವಿಷ್ಟೂ ಕಾಮನ
ಯಜ್ಞವೆಂದು) ಸುಗಿದಳ್
(ಭಯಪಟ್ಟಳು) ತನ್ವಂಗಿ
(ಕೋಮಲವಾದ ಶರೀರದ
ಸುಭದ್ರೆ) ಬೆಳ್ದಿಂಗಳೊಳ್
ಪದ್ಯ-೫೯:ಅರ್ಥ: . ಮನಸ್ಸು
ಆರಾಧಿಸಲ್ಪಟ್ಟ ಯಜ್ಞಭೂಮಿ,
ಕಾಮಪೀಡಿತರಾದವರು
ಬಲಿಗಾಗಿರುವ ಪಶುಗಳು,
ಹೂಬಂದ ಮಾವಿನಮರಗಳೇ
ನೆಟ್ಟಿರುವ ಬಲಿಗಂಬಗಳು.

ಬಲವಾದ ಕಾಮಾಗ್ನಿಯೇ
ಹೋಮಾಗ್ನಿ, ಶ್ರೀಗಂಧ,
ಕರ್ಪೂರ, ತಾವರೆಯ
ದಂಟುಗಳೇ ಅಲ್ಲಿ ಹರಡಿರುವ
ಸೌದೆಗಳು. ಹೀಗಿರಲು
ಇವಿಷ್ಟೂ ಕಾಮನ
ಯಜ್ಞವೆಂದು ಕೋಮಲವಾದ
ಶರೀರದ ಸುಭದ್ರೆಯು
ಬೆಳುದಿಂಗಳಿನಲ್ಲಿ
ಭಯಗೊಂಡಳು

ವ|| ಅಂತು ಕಾಮದೇವನೆಂಬ
ಮಂತ್ರವಾದಿಯ
ದಿವ್ಯಮಂತ್ರದಿಂ
ಸ್ತೋಭಂಗೊಂಡ ದಿವ್ಯ
ಗ್ರಹದಂತೆ ಕಾಮಗ್ರಹ
ಗೃಹೀತೆಯಾಗಿರೆ (ಕಾಮವೆಂಬ
ಗ್ರಹದಿಂದ ಹಿಡಿಯಲ್ಪಟ್ಟು)
ಮನೋವೈಕಲ್ಯ
ರೋಮಾಂಚಕ ಸ್ತಂಭಕ ಕಂಪ
ಸ್ವೇದ ವೈವರ್ಣ್ಯ
ಸಂತಾಪನಾಹಾರ ವ್ಯಾಮೋಹ

ಗದ್ಗದಾಶ್ರುಮೋಕ್ಷ

ಮೂರ್ಛಾದಿ ನಾನಾ

ವಿಕಾರಂಗಳನೊಡನೊಡನೆ

ತೋಱುವುದುಮಾಕೆಯ

ದಾದಿಯ ಮಗಳ್

ಚೂತಲತಿಕೆಯೆಂಬಳ್ ಕಂಡು-

ವಚನ:ಪದವಿಭಾಗ-

ಅರ್ಥ:ಅಂತು

ಕಾಮದೇವನೆಂಬ

ಮಂತ್ರವಾದಿಯ

ದಿವ್ಯಮಂತ್ರದಿಂ

ಸ್ತೋಭಂಗೊಂಡ
(ಸ್ತಂಭಿತಳಾದ) ದಿವ್ಯ
ಗ್ರಹದಂತೆ, ಕಾಮಗ್ರಹ
ಗೃಹೀತೆಯಾಗಿರೆ
ಮನೋವೈಕಲ್ಯ
ರೋಮಾಂಚಕ ಸ್ತಂಭಕ ಕಂಪ
ಸ್ವೇದ ವೈವರ್ಣ್ಯ (ಣ್ಣ
ಕಂದುವುದು)
ಸಂತಾಪನಾಹಾರ(ಆಹಾರವಿ
ಲ್ಲದಿರುವಿಕೆ) ವ್ಯಾಮೋಹ,
ಗದ್ಗದಾಶ್ರುಮೋಕ್ಷ (ಗದ್ಗದ

ಅಶ್ರುಮೋಕ್ಷ -ತಡವರಿಸಿದ
ಗದ್ಗದಮಾತು,
ಕಣ್ಣೀರುಸುರಿಯುವಿಕೆ)
ಮೂರ್ಛೆ ಆದಿ ನಾನಾ
ವಿಕಾರಂಗಳನು ಒಡನ ಒಡನೆ
(ಮತ್ತೆಮತ್ತೆ) ತೋಱುವುದುಂ
ಆಕೆಯ ದಾದಿಯ ಮಗಳ್
ಚೂತಲತಿಕೆಯೆಂಬಳ್ ಕಂಡು-
ವಚನ:ಅರ್ಥ:ಹಾಗೆ
ಕಾಮದೇವನೆಂಬ
ಮಂತ್ರವಾದಿಯ

ದಿವ್ಯಮಂತ್ರದಿಂದ
ಸ್ತಂಭಿತಳಾದ ದಿವ್ಯಗ್ರಹದ
ಹಾಗೆ ಕಾಮವೆಂಬ ಗ್ರಹದಿಂದ
ಹಿಡಿಯಲ್ಪಟ್ಟು, ಬುದ್ಧಿಭ್ರಮಣೆ,
ರೋಮಾಂಚ, ಸ್ತಂಭನ,
ನಡುಕ, ಬೆವರುವುದು, ಬಣ್ಣ
ಕಂದುವುದು, ಚಿಂತೆ,
ಆಹಾರವಿಲ್ಲದಿರುವಿಕೆ,
ಪ್ರೇಮಾತಿಶಯ,
ಗದ್ಗದಮಾತು,
ಕಣ್ಣೀರುಸುರಿಯುವಿಕೆ,

ಮೂರ್ಛೆಹೋಗುವುದು ಮೊದಲಾದ ನಾನಾ ವಿಕಾರಗಳನ್ನು (ಸುಭದ್ರೆಯು) ಮತ್ತೆಮತ್ತೆ ತೋರುತ್ತಿರಲು ಆಕೆಯ ದಾದಿಯ ಮಗಳಾದ ಚೂತಲತಿಕೆಯೆಂಬವಳು ಇದನ್ನು ಕಂಡು -.

ಚಂ|| ಪದೆವೆರ್ದೆ ಬತ್ತೆ ಕೆತ್ತುವಧರಂ ದೆಸೆಗೆಟ್ಟಲರ್ಗಣ್ಣ ನೋಟಮು

ಣ್ಮಿದ ಬೆಮರೋಳಿವಟ್ಟ
ನಿಡುಸುಯ್
ತೊದಳಿಂಗೆಡೆಗೊಂಡ ಮಾತು
ಕುಂ||
ದಿದ ಲತಿಕಾಂಗಮೊಂದಿದ
ವಿಕಾರಮದೀಕೆಯೊಳೀಗಳಾ
ದುದಿಂ
ತಿದು
ಕುಸುಮಾಸ್ತ್ರನೆಂಬದಟನಿಕ್ಕಿದ
ಸೊರ್ಕಿನ ಗೊಡ್ಡಮಾಗದೇ||
೬೦||

ಪದ್ಯ-೬೦:ಪದವಿಭಾಗ-ಅರ್ಥ:ಪದೆವೆರ್ದೆ ಬತ್ತೆ (ಪದೆವೆ ಎರ್ದೆ ಬತ್ತೆ - ಪ್ರೀತಿಸುವ ಎದೆ ಒಣಗಲು), ಕೆತ್ತುವಧರಂ (ಕೆತ್ತುವ ಅಧರಂ ನಡುಗುವ ತುಟಿ) ದೆಸೆಗೆಟ್ಟ ಅಲರ್ ಕಣ್ಣ (ಹೂವಿನಂತಿರುವ ಕಣ್ಣು ದೆಸೆಕಟ್ಟ ಸ್ಥಿತಿ) ನೋಟಂ ಉಣ್ಮಿದ (ಹೊರಸೂಸಿದ ನೋಟ) ಬೆಮರ, ಓಳಿವಟ್ಟ

ನಿಡುಸುಯ್ (ಸಾಲಾಗಿ
ಬರುವ ಕೂಡಿದ ನಿಟ್ಟುಸಿರು)
ತೊದಳಿಂಗೆ ಎಡೆಗೊಂಡ
ಮಾತು (ತೊದಲು ಮಾತು),
ಕುಂದಿದ ಲತಿಕಾಂಗಂ- ಲತಿಕ
ಅಂಗ (ಕುಗ್ಗಿದ
ಬಳ್ಳಿಯಂತಿರುವ ಶರೀರ,)
ಒಂದಿದ ವಿಕಾರಂ ಅದು
ಈಕೆಯೊಳು ಈಗಳು
ಆದುದು- ಇಂತು ಇದು
ಕುಸುಮಾಸ್ತ್ರನೆಂಬ ಅದಟನು

(ಪುಷ್ಪಬಾಣನಾದ ಮನ್ಮಥನೆಂಬ ಶೂರನು) ಇಕ್ಕಿದ ಸೊರ್ಕಿನ ಗೊಡ್ಡಮಾಗದೇ(ಹಾಕಿರುವ ಉನ್ಮಾದ ಚೇಷ್ಟೆಯಲ್ಲವೇ!)

ಪದ್ಯ-೬೦:ಅರ್ಥ: ಈಕೆಯ ಪ್ರೀತಿಸುವ ಎದೆ ಒಣಗಲು, ನಡುಗುವ ತುಟಿ, ಹೂವಿನಂತಿರುವ ಕಣ್ಣಿನ ದೆಸೆಗೆಟ್ಟ ದೃಷ್ಟಿ, ಬೆವರುತ್ತಿರುವ, ಸಾಲಾಗಿ ಬರುವ ಕೂಡಿದ

ನಿಟ್ಟುಸಿರು, ತೊದಲು ಮಾತು,
ಕುಗ್ಗಿದ ಬಳ್ಳಿಯಂತಿರುವ
ಶರೀರ, ಹೇಗೆ ತೋರುವ
ವಿಕಾರಗಳು ಇವೆಲ್ಲ ಈಗ
ಇವಳಲ್ಲಿ ಉಂಟಾಗುತ್ತಿವೆ,
ಇವು ಪುಷ್ಪಬಾಣನಾದ
ಮನ್ಮಥನೆಂಬ ಶೂರನು
ಹಾಕಿರುವ ಉನ್ಮಾದ
ಚೇಷ್ಟೆಯಲ್ಲವೇ! ಅದೇ ಸರಿ.

ವ|| ಎಂದು ತನ್ನೊಳೆ ಬಗೆದು ಮತ್ತಮಿಂತೆಂದಳ್ -

ವಚನ:ಪದವಿಭಾಗ-

ಅರ್ಥ:ಎಂದು ತನ್ನೊಳೆ ಬಗೆದು (ಯೋಚಿಸಿ) ಮತ್ತಮ್ ಇಂತೆಂದಳ್ -

ವಚನ:ಅರ್ಥ:ಎಂದು ತನ್ನಲ್ಲಿಯೇ ಯೋಚಿಸಿ ಪುನ ಹೀಗೆಂದಳು

ಚಂ|| ಕಱಿಯಲರಾದ ಸಂಪಗೆಯ ಬಣ್ಣದವೋಲೆ ಬೆಳರ್ತ ಬಣ್ಣದೊಳ್

ಗಱಿಯಿಸೆ ಕೆಂಪು ಕಣ್ಗಳ
ಮೊದಲ್ಗಳೊಳೊಯ್ಯನೆ
ತೋರಿ ಬಾಡಿ ಪಾ|
ಡಱಿದು ಬಱಿಲ್ದು ಜೋಲ್ದಿರವು
ಮೆಯ್ಯೊಳೆ ಮೆಯ್ವಿಡಿದೆನ್ನ
ಕಣ್ಗಳೊಳ್
ಸುಱಿದುವು ತಾಮೆ
ಕನ್ನಡಿಸಿದಪ್ಪುವು ಕನ್ನೆಯ
ಕನ್ನೆವೇಟಮಂ|| ೬೧||

ಪದ್ಯ-೬೧:ಪದವಿಭಾಗ-

ಅರ್ಥ:ಕಱಿಯಲರಾದ (ಕಳಿ

ಅಲರು, ಕಳಿತ- ಹಣ್ಣಾದ-
ಹೂ)ಸಂಪಗೆಯ
ಬಣ್ಣದವ್ರೋಲೆ ಬೆಳರ್ತ
(ಬಿಳಿಚಿದ) ಬಣ್ಣದೊಳ್
ಗೞಿಯಿಸೆ (ಉಂಟಾಗಲು)
ಕೆಂಪು ಕಣ್ಗಳ ಮೊದಲ್ಗಳು,
ಒಯ್ಯನೆ (ಮೆಲ್ಲಗೆ) ತೋರಿ
ಬಾಡಿ ಪಾಡೞಿದು ಬೞಲ್ದು
(ಪಾಡು ಅಳಿದು -ಸ್ಥಿತಿಗೆಟ್ಟು
ಬಳಲಿ) ಜೋಲ್ದ ಇರವು
(ಜೋತು ಬಾಡಿದ ಇರುವಿಕೆ)

ಮೆಯ್ಯೊಳೆ ಮೆಯ್ವಿಡಿದು
(ಇವಳ ದೇಹವನ್ನು ಹಿಡಿದು)
ಎನ್ನ (ದಾಸಿಯ ಮಗಳ)
ಕಣ್ಗಳೊಳ್ ಸುೞಿದುವು
(ಸುಳಿದವು) ತಾಮೆ
ಕನ್ನಡಿಸಿದಪ್ಪುವು ಕನ್ನೆಯ
ಕನ್ನೆವೇಟಮಂ (ಇವೆಲ್ಲಾ
ತಾವೇ ಕನ್ಯೆಯ ಕನ್ಯಾ
ಪ್ರೀತಿಯನ್ನು/ ಪ್ರಥಮ
ಪ್ರೇಮವನ್ನು ಕನ್ನಡಿಸಿದಪ್ಪುವು
- ಪ್ರತಿಬಿಂಬಿಸುತ್ತವೆ.)

ಪದ್ಯ-೬೧:ಅರ್ಥ: ಕಳಿತು ಹಣ್ಣಾದ ಸಂಪಗೆಯ ಹೂವಿನ ಬಣ್ಣದ ಹಾಗೆ ಬಿಳಿಸಿದ ಕಣ್ಣಿನ ಮೊದಲಿನಲ್ಲಿ, ಕೆಂಪುಬಣ್ಣವು ಉಂಟಾಗಲು, ಬಾಡಿ, ಸ್ಥಿತಿಗೆಟ್ಟು, ಬಳಲಿ, ಜೋತು ಬಾಡಿದ ಇರುವಿಕೆ, ಈಕೆಯ ಶರೀರಸ್ಥಿತಿಯೇ ನನ್ನ ಕಣ್ಣಿನಲ್ಲಿ(ದಾಸಿಯ ಮಗಳ ಕಣ್ಣಿನಲ್ಲಿ) ಇವೆಲ್ಲಾ ತಾವೇ ಕನ್ಯೆಯ ಪ್ರಥಮ ಪ್ರೇಮವನ್ನು

ಪ್ರತಿಬಿಂಬಿಸುತ್ತವೆ (ಎಂದು ತಿಳಿದಳು).

ವ|| ಅದಱಿನೀಕೆಯ ಬಗೆಯನಱಿಯಲ್ವೇೞ್ಕುಮೆಂದು ಮೆಲ್ಲಮೆಲ್ಲನೆ ಕೆಲಕ್ಕೆವಂದು ಕುಂಚದಡಪದ ಡವಕೆಯ ಪರಿಚಾರಿಕೆಯರೆಲ್ಲರುಮಂ ಕಣ್ಗೆತ್ತಿ ಕಳೆದೇಕಾಂತದೊಳ್ ಕನ್ನೆಯನಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಅದಱಿಂ ಈಕೆಯ

ಬಗೆಯನು (ಮನಸ್ಸನ್ನು)
ಅಱಿಯಲ್ವೇೞ್ಕುಂ
(ತಿಳಿಯಬೇಕು) ಎಂದು
ಮೆಲ್ಲಮೆಲ್ಲನೆ ಕೆಲಕ್ಕೆವಂದು
(ಪಕ್ಕಕ್ಕೆ ಬಂದು)
ಕುಂಚದಡಪದ ಡವಕೆಯ
(ಕುಂಚವನ್ನು ಹಿಡಿಯುವ,
ಅಡಕೆಲೆ ಹಿಡಿಯುವ)
ಪರಿಚಾರಿಕೆಯರೆಲ್ಲರುಮಂ
(ಸೇವಕಿಯರನ್ನೆಲ್ಲ) ಕಣ್ಗೆತ್ತಿ
(ಕಣ್ಸನ್ನೆಯಿಂದ) ಕಳೆದು

(ಕಳುಹಿಸಿ) ಏಕಾಂತದೊಳ್
ಕನ್ನೆಯನು ಇಂತೆಂದಳ್-
ವಚನ:ಅರ್ಥ:ಆದುದರಿಂದ
ಈಕೆಯ ಮನಸ್ಸನ್ನು
ತಿಳಿಯಬೇಕು ಎಂದು
ನಿಧಾನವಾಗಿ ಪಕ್ಕಕ್ಕೆ ಬಂದು
ಕುಂಚವನ್ನು ಹಿಡಿಯುವ,
ಅಡಕೆಲೆ ಹಿಡಿಯುವ,
ಸೇವಕಿಯರನ್ನೆಲ್ಲ
ಕಣ್ಸನ್ನೆಯಿಂದ ಕಳುಹಿಸಿ
ಏಕಾಂತದಲ್ಲಿ ಕನ್ಯೆ

ಸುಭದ್ರೆಯನ್ನು ಕುರಿತು
ಕೇಳಿದಳು -

ಚಂ|| ಮೃಗಮದ
ಪತ್ರರೇಖೆಗಳನೇಕೆಗೆ
ತಾಳ್ದಿರದಾದುವೀ ಕದಂ
ಪುಗಳುರಮೇಕೆ ಹಾರ
ಮಣಿಮಂಜರಿಯಿಲ್ಲದೆ
ಬಿನ್ನಗಿರ್ದುದೀ|
ಜಗನಮಿದೇಕೆ
ಹೇಮರಶನಾಧ್ವನಿಯಿಲ್ಲದೆ
ಮೂಗುವಟ್ಟುದೀ

ಬಗೆಯೊಳಲಕ್ತಕ ದ್ರವದೊಳೊಂದದೆ ನಿಂದುವು ಪಾದಪಂಕಜಂ|| ೬೨ ||

ಪದ್ಯ-೬೨:ಪದವಿಭಾಗ-

ಅರ್ಥ:ಮೃಗಮದ ಪತ್ರರೇಖೆಗಳನು ಏಕೆಗೆ ತಾಳ್ದಿರದಾದುವು ಈ ಕದಂಪುಗಳ್ (ಈ ನಿನ್ನ ಕೆನ್ನೆಗಳು ಕಸ್ತೂರಿಯಿಂದ ಬರೆದ ಪತ್ರರೇಖೆಗಳನ್ನು ಏಕಮ್ಮ ಧರಿಸಿಲ್ಲದೆ ಇವೆ?)

ಉರಂ (ಎದೆ) ಏಕೆ ಹಾರ
ಮಣಿಮಂಜರಿ ಯಿಲ್ಲದೆ
ಬಿನ್ನಗಿರ್ದುದು
(ಶೂನ್ಯವಾಗಿದೆ) ಈ ಜಗನಂ
(ಸೊಂಟವು)ಇದೇಕೆ
ಹೇಮರಶನಾಧ್ವನಿಯಿಲ್ಲದೆ
ಮೂಗುವಟ್ಟುದು (ಚಿನ್ನದ
ಡಾಬಿನ ಸದ್ದಿಲ್ಲದೆ
ಮೂಕವಾಗಿದೆ?) ಈ
ಬಗೆಯೊಳು ಅಲಕ್ತಕ
ದ್ರವದೊಳು ಒಂದದೆ

ನಿಂದುವು (ಅರಗಿನ ರಸದ ಲೇಪನಹೊಂದದೆ ನಿಂತಿವೆ) ಪಾದಪಂಕಜಂ (ಕಮಲದಂತಿರುವ ಪಾದಗಳು ಏಕೆ).

ಪದ್ಯ-೬೨:ಅರ್ಥ: ಈ ನಿನ್ನ ಕೆನ್ನೆಗಳು ಕಸ್ತೂರಿಯಿಂದ ಬರೆದ ಪತ್ರರೇಖೆಗಳನ್ನು ಏಕಮ್ಮ ಧಏಕಮ್ಮ ಧರಿಸಿಲ್ಲದೆ ಇವೆ? ನಿನ್ನ ಎದೆಯೇಕೆ ರತ್ನಹಾರದ

ಗೊಂಚಲುಗಳಿಲ್ಲದೆ
ಶೂನ್ಯವಾಗಿದೆ? ಈ ನಿನ್ನ
ಸೊಂಟವೇಕೆ ಚಿನ್ನದ ಡಾಬಿನ
ಗೆಜ್ಜೆಗಳ ಸದ್ದಿಲ್ಲದೆ
ಮೂಕವಾಗಿದೆ. ನಿನ್ನ
ಕಮಲದಂತಿರುವ ಪಾದಗಳು
ಏಕೆ ಈ ರೀತಿಯಲ್ಲಿ ಅರಗಿನ
ರಸದ ಲೇಪನಹೊಂದದೆ
ನಿಂತಿವೆ? ಎಂದು
ಚೂತಲತಿಕೆಯೆಂಬವಳು
ಸುಭದ್ರೆಯನ್ನು ಕೇಳಿದಳು.

ಮ|| ನಗೆಗಣ್ ಸೋರ್ವ
ಕದುಷ್ಣ ವಾರಿಚಯದಿಂ
ಬಿಂಬಾಧರಂ ಸುಯ್ಯ್ಯ ಬೆಂ
ಕೆಗಳಿಂ ನಾಡೆ
ಬೆಡಂಗುಗೆಟ್ಟಿರವಿದಿಂತೇಕಾರ
ಣಂ ಮಜ್ಜನಂ|
ಬುಗದಾರೋಗಿಸಲೊಲ್ಲದಿರ್ಪಿ
ರವಿದೇಂ ನಾಣಳ್ಕಿದೇಂ
ಕಾಮನಂ
ಬುಗಳತ್ತಿತ್ತೆಡೆಯಾಡೆ
ಸೋಂಕವೆ ವಲಂ ನಿನ್ನಂ

ಸರೋಜಾನನೇ|| ೬೩ ||

ಪದ್ಯ-೬೩:ಪದವಿಭಾಗ-

ಅರ್ಥ:ನಗೆಗಣ್ (ನೆಗೆಯಿಂದ ಕೂಡಿದ ಕಣ್ಣು) ಸೋರ್ವ ಕದುಷ್ಣ ವಾರಿಚಯದಿಂ (ಸ್ವಲ್ಪ ಬಿಸಿ ಕಣ್ಣೀರು ಸೋರುವ, ನೆಗೆಯಿಂದ ಕೂಡಿದ ಕಣ್ಣು) ಬಿಂಬಾಧರಂ (ತುಟಿ) ಸುಯ್ಯ ಬೆಂಕೆಗಳಿಂ (ನಿಟ್ಟುಸಿರಿನ ಬೆಂಕಿಯಿಂದ ತೊಂಡೆಹಣ್ಣಿನಂತಿರುವ ತುಟಿ)

ನಾಡೆ (ವಿಶೇಷವಾಗಿ)
ಬೆಡಂಗುಗೆಟ್ಟ ಇರವು ಇದಿಂತು
ಏ ಕಾರಣಂ (ತನ್ನ ಬೆಡಗು ಕೆಟ್ಟ
ಈ ಸ್ಥಿತಿಯೂ ಇದೇಕೆ?)
ಮಜ್ಜನಂಬುಗದ,
ಆರೋಗಿಸಲೊಲ್ಲದ ಇರ್ಪ
ಇರವು ಇದೇಂ (ಸ್ನಾನ
ಮಾಡದ, ಊಟ ಒಲ್ಲದ,
ಇರುವು ಇದಕ್ಕೆ
ಕಾರಣವೇನು?) ನಾಣ್ ಅಳ್ಕು
ಇದೇಂ (ನಾಚಿಕೆ ಅಳುಕು

ಇದೇನು?) ಕಾಮನ
ಅಂಬುಗಳು ಅತ್ತಿತ್ತೆಡೆಯಾಡೆ
ಸೋಂಕವೆ ವಲಂ ನಿನ್ನಂ
ಸರೋಜಾನನೇ (ಕಮಲ
ಮುಖಿಯೇ, ಕಾಮನ
ಬಾಣಗಳು ಅತ್ತಿತ್ತ ಸುತ್ತಾಡಿ
ಬಂದು ನಿನ್ನನ್ನು ವಲಂ-
ನಿಜವಾಗಿಯೂ
ತಾಗುತ್ತಿಲ್ಲವೇ?
ತಾಗುತ್ತಿದೆಯೋ ಹೇಗೆ?)

ಪದ್ಯ-೬೩:ಅರ್ಥ: ಸ್ವಲ್ಪ ಬಿಸಿ ಕಣ್ಣೀರು ಸೋರುವ, ನೆಗೆಯಿಂದ ಕೂಡಿದ ಕಣ್ಣು, ನಿಟ್ಟುಸಿರಿನ ಬೆಂಕಿಯಿಂದ ತೊಂಡೆಹಣ್ಣಿನಂತಿರುವ ತುಟಿ, ತನ್ನ ಬೆಡಗು ಕೆಟ್ಟ ಈ ಸ್ಥಿತಿಯೂ ಇದೇಕೆ? ಸ್ನಾನ ಮಾಡದ, ಊಟ ಒಲ್ಲದ, ಇರುವು ಇದಕ್ಕೆ ಕಾರಣವೇನು? ನಾಚಿಕೆ, ಅಳುಕು ಇದೇನು? ಕಮಲ ಮುಖಿಯೇ, ಕಾಮನ

ಬಾಣಗಳು ಅತ್ತಿತ್ತ ಸುತ್ತಾಡಿ

ಬಂದು ನಿನ್ನನ್ನು ವಲಂ-

ನಿಜವಾಗಿಯೂ

ತಾಗುತ್ತಿಲ್ಲವೇ?

ತಾಗುತ್ತಿದೆಯೋ ಹೇಗೆ?

ವ|| ಎಂದು ಮುನ್ನಮೆ ಮುಟ್ಟಿ

ನುಡಿಯದೆ ಪೊಱಪೊಱಗನೆ

ಬಳಸಿ ಕನ್ನೆಯ ಶಂಕೆಯಂ

ಕಿಡಿಸಿ ಮತ್ತಮಿಂತೆಂದಳ್-

ವಚನ:ಪದವಿಭಾಗ-ಅರ್ಥ:

ಎಂದು ಮುನ್ನಮೆ ಮುಟ್ಟಿ

ನುಡಿಯದೆ (ಎಂದು ಮೊದಲೇ ಒಳಮನಸ್ಸನ್ನು ಹೊಕ್ಕು ತಿಳಿದು ಮಾತನಾಡದೆ) ಪೊಱಪೊಱಗನೆ (ಪೊರಪೊರಗನೆ) ಬಳಸಿ (ಮೇಲೆ ಮೇಲೆ ಬಳಸುಮಾತನಾಡಿ) ಕನ್ನೆಯ ಶಂಕೆಯಂ ಕಿಡಿಸಿ (ತಗೆದು) ಮತ್ತಂ ಇಂತೆಂದಳ್-

ವಚನ:ಅರ್ಥ:ಎಂದು ಎಂದು ಮೊದಲೇ ಒಳಮನಸ್ಸನ್ನು

ಹೊಕ್ಕು ತಿಳಿದು ಮಾತನಾಡದೆ,
ಮೇಲೆ ಮೇಲೆ
ಬಳಸುಮಾತನಾಡಿ ಅವಳ
ಸಂದೇಹವನ್ನು ಹೋಗಲಾಡಿಸಿ
ಪುನ ಹೀಗೆಂದಳು-

ಮ|| ವನಭೃತ್ಕುಂತಳೆಯಾ
ಶಿರೀಷ ಕುಸುಮಾಭಾಂಗಕ್ಕೆ
ಕಂದಂ ಕನ
ತ್ಕನಕಾಂಭೋಜನಿಭಾನನಕ್ಕೆ
ಪಿರಿದುಂ ದೀನತ್ವಮಂ ನೀಳ್ದ
ಮಾ|

ವಿನ ಪೋಂದದ ಕಣ್ಗೆ ಬಾಷ್ಪಜಲಮಂ ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದನಾವನಾತನೆ ವಲಂ ಗಂಧೇಭ ವಿದ್ಯಾಧರಂ|| ೬೪||

ಪದ್ಯ-೬೪:ಪದವಿಭಾಗ-ಅರ್ಥ:ವನಭೃತ್ಕುಂತಳೆಯಾ (ವನಭೃತ್ ಕುಂತಳೆಯಾ -ಮೋಡದ ಬಣ್ಣದ ಗುಂಗುರು ಕೇಶವುಳ್ಳ) ಶಿರೀಷ

ಕುಸುಮಾಭಾಂಗಕ್ಕೆ ಕಂದಂ (ಶಿರೀಷ ಕುಸುಮ ಅಭಾಂಗಕ್ಕೆ - ಬಾಗೆಹೂವಿನ ಬಣ್ಣವುಳ್ಳ ನಿನ್ನ ಶರೀರಕ್ಕೆ ಮಾಸುವಿಕೆಯನ್ನೂ) ಕನತ್ ಕನಕಾಂಭೋಜನಿಭ ಆನನಕ್ಕೆ ಪಿರಿದುಂ ದೀನತ್ವಮಂ (ಹೊಳೆವ ಹೊಂದಾವರೆಗೆ ಸಮಾನವಾದ ಮುಖಕ್ಕೆ ಬಹಳ ದೀನತೆನ್ನೂ) ನೀಳ್ದ ಮಾವಿನ ಪೋಳಿಂದದ ಕಣ್ಗೆ

ಬಾಷ್ಪಜಲಮುಂ (ಮಾವಿನ ಹೋಳಿನಂತೆ ನೀಳವಾದ ಕಣ್ಣಿಗೆ ಕಣ್ಣೀರನ್ನೂ), ಚಿತ್ತಕ್ಕೆ ಸಂತಾಪಮುಂ (ಮನಸ್ಸಿಗೆ ದುಃಖವನ್ನೂ) ನಿನಗಂ ಮಾಡಿದನು ಆವನು ಆತನೆ ವಲಂ ಗಂಧೇಭವಿದ್ಯಾಧರಂ (ನಿನಗೆ ಮಾಡಿದವನು, ಯಾವನು! - ಅವನೇ ನಿಜಕ್ಕೂ ಗಂದೇಭವಿದ್ಯಾಧರನಾದ ಅರ್ಜುನ! ಅಲ್ಲವೇ?)|

ಪದ್ಯ-೬೪:ಅರ್ಥ:

ಮೋಡದಂತೆ ಕಪ್ಪಾದ ಮುಂಗುರುಳುಳ್ಳ ಬಾಗೆಹೂವಿನ ಬಣ್ಣವುಳ್ಳ ನಿನ್ನ ಶರೀರಕ್ಕೆ ಮಾಸುವಿಕೆಯನ್ನೂ, ಹೊಳೆವ ಹೊಂದಾವರೆಗೆ ಸಮಾನವಾದ ಮುಖಕ್ಕೆ ಬಹಳ ದೀನತೆನ್ನೂ, ಮಾವಿನ ಹೋಳಿನಂತೆ ನೀಳವಾದ ಕಣ್ಣಿಗೆ ಕಣ್ಣೀರನ್ನೂ, ಮನಸ್ಸಿಗೆ ದುಃಖವನ್ನೂ ನಿನಗೆ

ಮಾಡಿದವನು, ಯಾವನು -
ಅವನೇ ನಿಜಕ್ಕೂ
ಗಂದೇಭವಿದ್ಯಾಧರನಾದ
ಅರ್ಜುನ! ಅಲ್ಲವೇ?

ವ|| ಎಂದು ತನ್ನ ಮನಮನಱಿದು ಮುಟ್ಟಿ ನುಡಿದ ಕೆಳದಿಯ ನುಡಿಗೆ ಪೆಱತೇನುಮನೆನಲಱಿಯದೆ ನಾಣ್ಚಿ ತಲೆಯಂ ಬಾಗಿ ನೆಲನಂ ಬರೆಯುತ್ತುಂ ನೀರೊಳ್ ಮುಳುಗಿದರಂತುಮ್ಮನೆ

ಬೆಮರುತ್ತುಮ್ಮಳಿಕೆ ವಂದು ಬೆಚ್ಚನೆ ಸುಯ್ದೊಡೆ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಮನಮನಱಿದು ಮುಟ್ಟಿ ನುಡಿದ ಕೆಳದಿಯ ನುಡಿಗೆ (ಮನಸ್ಸನ್ನು ತಿಳಿದು ಮನಮುಟ್ಟುವಂತೆ ಮಾತನಾಡಿದ ಗೆಳತಿಯ ಮಾತಿಗೆ) ಪೆಱತೇನುಮಂನು ಎನಲು ಅಱಿಯದೆ

(ಬೇರೆಯೇನನ್ನೂ ಹೇಳಲು
ತಿಳಿಯದೆ) ನಾಣ್ಚಿ ತಲೆಯಂ
ಬಾಗಿ ನೆಲನಂ ಬರೆಯುತ್ತುಂ
(ನಾಚಿ ತಲೆಯನ್ನು ಬಗ್ಗಿಸಿ
ನೆಲವನ್ನು ಕಾಲಿನಿಂದ
ಬರೆಯುತ್ತ) ನೀರೊಳ್
ಮುೞುಗಿದರಂತು ಉಮ್ಮನೆ
(ನೀರಿನಲ್ಲಿ ಮುಳುಗಿದವರ
ಹಾಗೆ ಸುಮ್ಮನೆ ಇದ್ದು,)
ಬೆಮರುತ್ತುಂ ಉಮ್ಮಳಿಕೆ
ವಂದು ಬೆಚ್ಚನೆ ಸುಯ್ದೊಡೆ-

ವಚನ:ಅರ್ಥ:ಎಂದು ತನ್ನ ಮನಸ್ಸನ್ನು ತಿಳಿದು ಮನಮುಟ್ಟುವಂತೆ ಮಾತನಾಡಿದ ಗೆಳತಿಯ ಮಾತಿಗೆ ಬೇರೆಯೇನನ್ನೂ ಹೇಳಲು ತಿಳಿಯದೆ, ನಾಚಿ ತಲೆಯನ್ನು ಬಗ್ಗಿಸಿ ನೆಲವನ್ನು ಕಾಲಿನಿಂದ ಬರೆಯುತ್ತ ನೀರಿನಲ್ಲಿ ಮುಳುಗಿದವರ ಹಾಗೆ ಸುಮ್ಮನೆ ಇದ್ದು,

ಬೆವರುತ್ತ ದುಖದಿಂದ ಬಿಕ್ಕಳಿಕೆ
ಬಂದು, ಬಿಸು ಸುಯ್ದಳು; ಆಗ-

ಕಂ|| ಉಸಿರದಿರೆ
ಮನದೊಳೆರ್ದೆಯಂ
ಪಸರಿಸುಗುಂ
ಮಱುಕಮದಱಿನೆನಗಿಂತುಟೆ
ಎಂ|
ದುಸಿರುಸಿರ್ದೊಡೆ ಬಗೆ
ತೀರ್ಗುಂ
ಬಿಸಿದುಂ ಬೆಟ್ಟತ್ತುಮುಸಿರದೇಂ
ತೀರ್ದಪುದೇ|| ೬೫ ||

ಪದ್ಯ-೬೫:ಪದವಿಭಾಗ-ಅರ್ಥ:ಉಸಿರದಿರೆ (ಹೇಳದಿದ್ದರೆ) ಮನದೊಳು ಎರ್ದೆಯಂ ಪಸರಿಸುಗುಂ ಮಱುಕಂ(ಮರುಕವು- ದುಖವು ಹೃದಯವನ್ನು ಆವರಿಸುವುದು,) ಅದಱಿಂ ಎನಗಿಂತುಟೆ ಎಂದು ಉಸಿರ್ (ಅದರಿಂದ ನನಗೆ ಹೀಗೆ ಎಂದು ಹೇಳು) ಉಸಿರ್ದೊಡೆ (ಹೇಳಿದರೆ) ಬಗೆ ತೀರ್ಗುಂ

(ಇಷ್ಟವು ನೆರವೇರುವುದು)
ಬಿಸಿದುಂ ಬೆಟ್ಟತ್ತುಂ ಉಸಿರು
ಅದೇಂ ತೀರ್ದಪುದೇ
(ಅದಿಲ್ಲದೆ- ಬಿಸಿಯುಸಿರು,
ಬಿರುಸು ಉಸಿರು ಅದೇನು
ನಿಲ್ಲುತ್ತದೆಯೇ?)
ಪದ್ಯ-೭೫:ಅರ್ಥ: ಸುಭದ್ರೆಗೆ
ಗೆಳತಿಯು, ಸುಭದ್ರೆ
ಮನಸ್ಸಿನಲ್ಲಿ ಇರುವುದನ್ನು
ಬಾಯಿಬಿಟ್ಟು ಹೇಳದಿದ್ದರೆ,
ದುಖವು ಹೃದಯವನ್ನು

ಆವರಿಸುತ್ತದೆ. ಅದರಿಂದ
ನನಗೆ ಹೀಗೆ ಎಂದು ಹೇಳು;
ಹೇಳಿದರೆ ಇಷ್ಟವು
ನೆರವೇರುವುದು. ಅದಿಲ್ಲದೆ
ಬಿಸಿಯುಸಿರು, ಬಿರುಸು-
ಸಂಕಟದ ಉಸಿರು ಅದೇನು
ನಿಲ್ಲುತ್ತದೆಯೇ? ಎಂದಳು-

ಕ||ಪೇೞೆಂಬುದುಮಾಂ
ನಿನಗೆಡೆ
ವೇೞದೆ ಪೇೞಾರ್ಗೆ
ಪೇೞ್ವೆನಿಂದಿನ ಬಂದಾ|

ಕಾೞಾದ ವಾೞ್ತೆಗೊಂಡೊಡೆ ಪಾೞಾದುದು ಮನಮುಮೆರ್ದೆಯುಮೇನಂ ಪೇೞ್ವೆಂ|| ೬೬ ||

ಪದ್ಯ-೬೬:ಪದವಿಭಾಗ-ಅರ್ಥ:ಪೇೞ್ ಎಂಬುದುಮಾಂ (ಹೇಳು ಎನ್ನಲಾಗಿ) ನಿನಗೆ ಎಡೆವೇೞದೆ ಪೇೞ ಆರ್ಗೆ ಪೇೞ್ವೆನು (ನಿನಗೆ ತಿಳಿಸದೆ ಬೇರೆ ಯಾರಿಗೆ ಹೇಳಲಿ;) ಇಂದಿನ

ಬಂದ ಆ ಕಾಳಾದ ವಾರ್ತೆ
ಗೊಂಡೊಡೆ (ಈ ದಿನ ಆ ಕೆಟ್ಟ
ಸುದ್ದಿಯನ್ನು
ಕೇಳಿದೊಡನೆಯೇ)
ಪಾರಾದುದು ಮನಮುಂ
ಎರ್ದೆಯುಂ ಏನಂ ಪೇೞ್ವೆಂ
(ಮನಸ್ಸೂ ಎದೆಯೂ
ಹಾಳಾಯಿತು, ಏನು ಹೇಳಲಿ!)
ಪದ್ಯ-೬೬:ಅರ್ಥ: ಹೇಳು
ಎನ್ನುತ್ತಲು ನಾನು ನಿನಗೆ
ತಿಳಿಸದೆ ಬೇರೆ ಯಾರಿಗೆ

ಹೇಳಲಿ. ಈ ದಿನ ಆ ಕೆಟ್ಟ ಸುದ್ದಿಯನ್ನು ಕೇಳಿದೊಡನೆಯೇ ಮನಸ್ಸೂ ಎದೆಯೂ ಹಾಳಾಯಿತು,ಏನು ಹೇಳಲಿ! ಎಂದಳು ಸುಭದ್ರೆ.

ಕಂ||ಭೋಂಕನೆ ಮನಮಂ
ಕದಡಿ ಕ
ಲಂಕಿದಪುದು ಬಿಡದೆ
ಮನಮನೊನಲಿಸಿದಪುದಾ|
ದಂ ಕೆಳದಿ ಪಾಣ್ಬರಂಕುಸ

ನಂಕುಸದಾ ಪೊಳಪುಮವನ ಕಣ್ಗಳ ಬೆಳ್ಪುಂ|| ೬೭ ||

ಪದ್ಯ-೬೭:ಪದವಿಭಾಗ-ಅರ್ಥ:ಭೋಂಕನೆ (ಇದ್ದಕಿಕ್ಕಿದ್ದಂತೆ) ಮನಮಂ ಕದಡಿ ಕಲಂಕಿದಪುದು (ಮನಸ್ಸನ್ನು ಕದಡಿ ಕಲಕಿಸುವುದ) ಬಿಡದೆ ಮನಮನು ಒನಲಿಸಿದಪುದು (ಒಂದೇ ಸಮನೆ ಮನಸ್ಸನ್ನು ಉದ್ರೇಕಿಸುವುದು) ಅದಂ

ಕೆಳದಿ (ಗೆಳತಿಯೇ ಅದು) ಪಾಣ್ಬರಂಕುಸನ (ಪಾಣ್ಬರಂಕುಶ ಎಂಬುದು ಅರಿಕೇಸರಿಯ ಬಿರುದು ಅನ್ವಯ- ಇಲ್ಲಿ ಅರ್ಜುನ; ಅರ್ಜುನನ) ಅಂಕುಸದ ಆ ಪೊಳಪುಂ ಅವನ ಕಣ್ಗಳ ಬೆಳ್ಪುಂ (ಅಂಕುಶದಂತೆ ಸೆಳೆಯುತ್ತಿದೆ, ಅವನ ಕಣ್ಣಿನ ಬೆಳ್ಪು- ಕಾಂತಿ, ಆ ಪೊಳಪು - ಆ ಪ್ರಕಾಶ)

ಪದ್ಯ-೬೭:ಅರ್ಥ: (ಎಲೆ ಸಖಿಯೇ) ಇದ್ದಕ್ಕಿದ್ದಂತೆ ಅರ್ಜುನನ - ಅವನ ಕಣ್ಣಿನ ಕಾಂತಿ, ಆ ಪ್ರಕಾಶ ಅಂಕುಶದಂತೆ ಸೆಳೆಯುತ್ತಿದೆ, ಇದ್ದಕ್ಕಿದ್ದ ಹಾಗೆ ಮನಸ್ಸನ್ನು ಕದಡಿ ಕಲಕಿಸುತ್ತವೆ. ಅಷ್ಟಕ್ಕೆ ಬಿಡದೆ ಮನಸ್ಸನ್ನು ಉದ್ರೇಕಿಸುವುದು. ಎಂದಳು ಸುಭದ್ರೆ.

ಚಂ|| ಮನಸಿಜನಂಬರಲ್ದ
ಪೊಸ ಮಲ್ಲಿಗೆ ತೆಂಕಣ
ಗಾಳಿಯೆಂಬಿವಿಂ
ತನುಬಲದಿಂದಮೆನ್ನನಲೆದಪ್ಪು
ವವೆನ್ನನೆ ಪೆಟ್ಟುವೆರ್ಚೆ ಚಂ|
ದ್ರನ ಬಲದಿಂದಮೆನ್ನ
ನಲೆದಪ್ಪುವದರ್ಕೆನಗೀಗಳೊಂ
ದಿ ಚಂ
ದ್ರನ ಬಲಮೊಳ್ಳಿತಾಗಿ
ಸಲೆಯಿಲ್ಲದೊಡಾವುದುಮೊಳ್ಳಿ
ಕೆಯ್ಯುಮೇ|| ೬೮ ||

ಪದ್ಯ-೬೮:ಪದವಿಭಾಗ-ಅರ್ಥ:ಮನಸಿಜನ (ಮನ್ಮಥನ) ಅಂಬು, ಅರಲ್ದ ಪೊಸ ಮಲ್ಲಿಗೆ, ತೆಂಕಣ ಗಾಳಿಯೆಂಬಿವು ಇಂತು ಅನುಬಲದಿಂದಂ (ಇವು ಪರಸ್ಪರ ಒಟ್ಟುಗೂಡಿದ ಶಕ್ತಿಯಿಂದ) ಎನ್ನನು ಅಲೆದಪ್ಪುವವು (ಹಿಂಸಿಸುತ್ತವೆ.) ಎನ್ನನೆ ಪೆಟ್ಟುವೆರ್ಚೆ(ಗರ್ವದಿಂದ)

ಚಂದ್ರನ ಬಲದಿಂದಂ ಎನ್ನನು ಅಲೆದಪ್ಪುವು (ಹಿಂಸಿಸುತ್ತವೆ) ಅದರ್ಕೆ ಎನಗೆ ಈಗಳು ಒಂದಿ ಚಂದ್ರನ ಬಲಮೊಳ್ಳಿತಾಗಿ (ಚಂದ್ರನ ಬೆಳದಿಂಗಳ ಬಲ) ಸಲೆಯಿಲ್ಲದೊಡೆ (ಚೆನ್ನಾಗಿ ಇಲ್ಲದಿದ್ದರೆ) ಆವುದುಂ ಒಳ್ಳಿಕೆಯ್ಯುಗುಮೇ (ಯಾವುದು ತಾನೆ ಒಳಳೆಯದು ಮಾಡುವುದು?)

ಪದ್ಯ-೬೮:ಅರ್ಥ:ಸುಭದ್ರೆಯ ದುಃಖ: ಮನ್ಮಥನ ಬಾಣ ಅರಳಿದ ಹೊಸಮಲ್ಲಿಗೆ ದಕ್ಷಿಣಗಾಳಿ ಇವು ಪರಸ್ಪರ ಒಟ್ಟುಗೂಡಿದ ಶಕ್ತಿಯಿಂದ ನನ್ನನ್ನು ಹಿಂಸಿಸುತ್ತವೆ. ಇವು ಚಂದ್ರನ ಬೆಳದಿಂಗಳಿನ ಬಲದಿಂದ ನನ್ನನ್ನು ಮತ್ತೂ ಹಿಂಸಿಸುತ್ತವೆ. ಈಗ ನನಗೆ ಚಂದ್ರಬಲವು (ಗ್ರಹಬಲ) ಸರಿಯಾಗಿಲ್ಲದಿದ್ದರೆ

ಯಾವುದು ತಾನೆ ಒಳ್ಳೆಯದು ಮಾಡುವುದು?

ವ|| ಎಂದು ಮನದ ಮಱುಕಮುಮನೆರ್ದೆಯ ಕುದಿಪಮುಮಂ ಬಗೆಯ ಕುಱಿಪಮುಮಂ ಮೆಯ್ಯ ಬಡತನಮುಮನಱಿಯೆ ತೋಱಿ ನುಡಿದೊಡೆ ರಾಜಹಂಸಿ ಮಾನಸ ಸರೋವರಮನಲ್ಲದೆ ಪೆಱತನೇಕೆ ಬಯಸುಗುಂ

ಕಳಹಂಸಗಮನೆಯಾ
ಸುರತಮಕರಧ್ವಜನನಲ್ಲದೆ
ಪೆಱತನೇಕೆ
ಬಯಸುಗುಮೆಂದು
ಮನದೊಳೆ ಮಂತಣಮಿರ್ದು
ಬಗೆಯೊಳೆ ಗುಡಿಗಟ್ಟಿ
ಸಂತಸಂಬಟ್ಟಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಎಂದು ಮನದ ಮಱುಕಮುಮನು ಎರ್ದೆಯ ಕುದಿಪಮುಮಂ (ಮನಸ್ಸಿನ

ದುಃಖವನ್ನೂ ಹೃದಯದ
ಬೇಗೆಯನ್ನೂ) ಬಗೆಯ
ಕುಱಿಪಮುಮಂ (ಮನಸ್ಸಿನ
ರೀತಿಯನ್ನೂ), ಮೆಯ್ಯ
ಬಡತನಮುಮನು ಅಱಿಯೆ
(ದೇಹದ ಬಡತನವನ್ನು)
ತೋಱಿ ನುಡಿದೊಡೆ
(ಸ್ಪಷ್ಟವಾಗಿ ತಿಳಿಯುವ ಹಾಗೆ
ಹೇಳಿದಾಗ), ರಾಜಹಂಸಿ
ಮಾನಸ ಸರೋವರಮನಲ್ಲದೆ
ಪೆಱತನೇಕೆ ಬಯಸುಗುಂ

(ರಾಜಹಂಸಪಕ್ಷಿಯು ಮಾನಸಸರೋವರವನ್ನು ಅಲ್ಲದೆ ಬೇರೆಯದನ್ನೇಕೆ ಬಯಸುತ್ತದೆ?) ಕಳಹಂಸಗಮನೆಯು ಆ ಸುರತಮಕರಧ್ವಜನನಲ್ಲದೆ ಪೆಱತನೇಕೆ ಬಯಸುಗುಂ ಎಂದು (ಹಂಸದಂತೆ ನೆಡೆಯುವ ಸುಭದ್ರೆಯು ಸುರತಮಕರಧ್ವಜನಾದ ಅರ್ಜುನನನ್ನಲ್ಲದೆ

ಇತರರನ್ನೇಕೆ ಆಶಿಸುತ್ತಾಳೆ?)
ಎಂದು ಮನದೊಳೆ
ಮಂತಣಮಿರ್ದು
(ಮನಸ್ಸಿನಲ್ಲಿ ಯೋಚಿಸಿ)
ಬಗೆಯೊಳೆ ಗುಡಿಗಟ್ಟಿ
ಸಂತಸಂಬಟ್ಟು (ಮನಸ್ಸಿನಲ್ಲೇ
ಮುಂದಿನ ಶುಭದ ಧ್ವಜವೇರಿಸಿ
ಸಂತಸಪಟ್ಟು) ಇಂತೆಂದಳ್ -
ವಚನ:ಅರ್ಥ:ಎಂದು
ಸುಭದ್ರೆಯು, ಮನಸ್ಸಿನ
ದುಃಖವನ್ನೂ ಹೃದಯದ

ಬೇಗೆಯನ್ನೂ ಮನಸ್ಸಿನ ರೀತಿಯನ್ನೂ ಶರೀರದ ಬಡತನವನ್ನೂ ಸ್ಪಷ್ಟವಾಗಿ ತಿಳಿಯುವ ಹಾಗೆ ಹೇಳಿದರೆ ಆ ಸಖಿಯು ತನ್ನ ಮನಸ್ಸಿನಲ್ಲಿಯೇ ರಾಜಹಂಸಪಕ್ಷಿಯು ಮಾನಸಸರೋವರವನ್ನಲ್ಲದೆ ಬೇರೆಯದನ್ನೇಕೆ ಅಪೇಕ್ಷಿಸುತ್ತದೆ. ಹಂಸದಂತೆ ನಡೆಯುವ ಸುಭದ್ರೆಯು

ಸುರತಮಕರಧ್ವಜನಾದ
ಅರ್ಜುನನನ್ನಲ್ಲದೆ
ಇತರರರನ್ನೇಕೆ ಆಶಿಸುತ್ತಾಳೆ?
ಎಂದು ಯೋಚಿಸುತ್ತಿದ್ದು
ಮನಸ್ಸಿನಲ್ಲೇ ಮುಂದಿನ
ಶುಭದ ಧ್ವಜವೇರಿಸಿ
ಸಂತಸಪಟ್ಟು, ಹೀಗೆಂದಳು-

ಮ|| ನನೆಯಂಬಂ
ತೆಗೆದೆಚ್ಚನಂಗಜನ
ತಪ್ಪೇನಾನುಮಂ ತೋರೆ ಕಾ

ಣ್ಬನಿತಂ ಮಾಡದೆ ಪದ್ಮಜಂ
ಮದನನಂ ಬೈದಂತುಟೇ
ಬೇಡಮೀ
ಬಿನದಂ ತಪ್ಪಲೆ ಕಲ್ಪಿತಂ
ಪರಿಯದಾತಂಗೆಂದು ನಿನ್ನೀ
ಮನಂ
ನಿನಗಾತಂ ದೊರೆ ನೆಟ್ಟನಾದಿ
ಪುರುಷಂಗೇಕಕ್ಕ
ನೀನ್ನಾಣ್ಚುವೈ|| ೬೯||

ಪದ್ಯ-೬೯:ಪದವಿಭಾಗ-
ಅರ್ಥ:ನನೆಯಂಬಂ

(ಹೂವಿನ ಬಾಣವನ್ನು)
ತೆಗೆದೆಚ್ಚಂ(ಹೊಡೆದನು)
ಅಂಗಜನ ತಪ್ಪು ಏನಾನುಮಂ
(ಮನ್ಮಥನ ತಪ್ಪೇನನ್ನೂ)
ತೋರೆ ಕಾಣ್ಬನಿತಂ ಮಾಡದೆ
ಪದ್ಮಜಂ (ಬ್ರಹ್ಮನು ತೋರಿ
ಸರಿಯಾಗಿ ಕಾಣುವಂತೆ
ಮಾಡದೆ ಇರುವಾಗ)
ಮದನನಂ ಬೈದಂತುಟೇ
(ಮನ್ಮಥನನ್ನು
ಬೈಯುವುದೇ?) ಬೇಡಂ ಈ

ಬಿನದಂ, (ಈ ವಿನೋದವು ಬೇಡ!) ತಪ್ಪಲೆ ಕಲ್ಪಿತಂ ಪರಿಯದು ಆತಂಗೆ ಎಂದು ನಿನ್ನೀ ಮನಂ (ಪ್ರೀತಿಸಿದ್ದು ತಪ್ಪು ಎಂಬುದು ಕಲ್ಪಿತ, ಅದು ತಪ್ಪಲ್ಲ! ; ನಿನ್ನ ಮನಸ್ಸು ಆತನನ್ನು ಬಿಟ್ಟು ಹರಿಯದು ಎಂದು ನಿನ್ನ ಮನಸ್ಸು ಹೇಳುವುದು.) ನಿನಗೆ ಆತಂ ದೊರೆ (ನಿನಗೆ ಅವನೇ ತಕ್ಕವನು) ನೆಟ್ಟನೆ ಆದಿ

ಪುರುಷಂಗೆ ಏಕೆ ಅಕ್ಕ ನೀನ್
ನಾಣ್ಚುವೈ (ನೆಟ್ಟನೆ ಇರುವ-
ನ್ಯಾಯವಾಗಿ ಪ್ರೀತಿಸುವ
ನೀನು
ಅರ್ಜುನನವಿಷಯದಲ್ಲಿ
ನಾಚಿಕೆ ಏಕೆ?)

ಪದ್ಯ-೬೯:ಅರ್ಥ:

ಪುಷ್ಟಬಾಣವನ್ನು ಹೊಡೆದ
ಮನ್ಮಥನ ತಪ್ಪನ್ನು
ಪ್ರಕಟವಾಗಿ ತೋರುವಂತೆ
ಬ್ರಹ್ಮನು ಮಾಡದೆ ಇರಲು,

ಮನ್ಮಥನನ್ನು ಬೈಯುವುದೇ?
ಈ ವಿನೋದವು ಬೇಡ?
ಪ್ರೀತಿಸಿದ್ದು ತಪ್ಪು ಎಂಬುದು ಕಲ್ಪಿತ, ಅದು ತಪ್ಪಲ್ಲ! ನಿನ್ನ ಮನಸ್ಸು ಆತನನ್ನು ಬಿಟ್ಟು ಹರಿಯದು. ನಿನಗೆ ಅವನೇ ತಕ್ಕವನು. ನ್ಯಾಯವಾಗಿ ಪ್ರೀತಿಸುವ ನೀನು, ಆದಿಪುರುಷನಾದ ಅರಿಕೇಸರಿಯ/ ಅರ್ಜುನನ

ವಿಷಯದಲ್ಲಿ ನಾಚಿಕೆ ಏಕೆ)?
ಎಂದಳು ಸಖಿ.

ವ|| ನೀನಿದರ್ಕೇನುಮಂ ಬಗೆಯಲ್ವೇಡ ನಿನ್ನ ಬಗೆಯಂ ಬಗೆದಂತೆ ತೀರ್ಚುವೆನೆಂದನೇಕ ಪ್ರಕಾರ ವಚನ ರಚನೆಗಳಿಂದಾಕೆಯ ಮನಮನಾರೆ ನುಡಿಯುತ್ತಿರ್ಪಿನಮಿತ್ತ ವಿಕ್ರಮಾರ್ಜುನನುಮೋಲಗಂ ಪರೆದಿಂಬಟಿೞಿಯಂ ತನ್ನ

ಪವಡಿಸುವ
ಮಾಡಕ್ಕೊಡನೊಡ
ನೋಲಗಿಸುತ್ತುಂ ಬಂದ
ಪಂಡಿಕರ್ತಳುಮನುಚಿತ
ಪ್ರತಿಪತ್ತಿಗಳಿಂ ವಿಸರ್ಜಿಸಿ
ಸುಭದ್ರೆಯ ರೂಪು ಕಣ್ಣ
ಪಾಪೆಯಂತೆ ಕಣ್ಣೊಳೆ
ತೊಱಲೆ ಕಣ್ಮುಚ್ಚದೆ ತನ್ನ
ಜಸದಂತೆ
ಪಸರಿಸಿದಚ್ಚವೆಳ್ದಿಂಗಳನಾಕೆ
ಯ ಕಣ್ಗಳ ಬೆಳ್ಪಿನ

ತಳರ್ಪೆನುತ್ತುಂ ಪೆಳ್ಪಳಿಸಿ ಚಂದ್ರನಂ ನೋಡಿ-

ವಚನ:ಪದವಿಭಾಗ-

ಅರ್ಥ:ನೀನು ಇದರ್ಕೆ ಏನುಮಂ ಬಗೆಯಲ್ವೇಡ (ಏನೂ ಚಿಂತಿಸಬೇಡ) ನಿನ್ನ ಬಗೆಯಂ ಬಗೆದಂತೆ ತೀರ್ಚುವೆನು (ನಿನ್ನ ಆಸೆಯನ್ನು ಇಷ್ಟಟ್ಟಣತೆಯೇ ತೀರಿಸುತ್ತೇನೆ) ಎಂದು ಅನೇಕ ಪ್ರಕಾರ ವಚನ ರಚನೆಗಳಿಂದ

ಆಕೆಯ ಮನಮನು ಆರೆ ನುಡಿಯುತ್ತಿರ್ಪಿನಂ (ಮನಸ್ಸನ್ನು ಶಾಂತಪಿಸಲು ನುಡಿಯುತ್ತಿರಲು) ಇತ್ತ, ವಿಕ್ರಮಾರ್ಜುನನುಂ ಓಲಗಂ ಪರೆದಿಂಬಟಿಯಂ (ಪರೆದು ಇಂಬಟಿಯಂ- ಹರೆದು- ಚದುರಿದ ನಂತರ) ತನ್ನ ಪವಡಿಸುವ (ಮಲಗುವ) ಮಾಡಕ್ಕೆ ಒಡನೊಡನೆ ಓಲಗಿಸುತ್ತುಂ ಬಂದ (ತನ್ನ

ಜೊತೆಯಲ್ಲಿಯೇ ಅನುಸರಿಸಿ ಬಂದ)ಪಂಡಿಕರ್ತಳುಮನು ಉಚಿತ ಪ್ರತಿಪತ್ತಿಗಳಿಂ ವಿಸರ್ಜಿಸಿ (ಉಚಿತವಾದ ಸತ್ಕಾರಗಳಿಂದ ಬೀಳ್ಕೊಟ್ಟು), ಸುಭದ್ರೆಯ ರೂಪು ಕಣ್ಣ ಪಾಪೆಯಂತೆ ಕಣ್ಣೊಳೆ ತೊಳಲೆ (ಕಣ್ಣಿನ ಗುಡ್ಡೆಯಂತೆಯೇ ಸುತ್ತಾಡುತ್ತಿರಲು) ಕಣ್ಣು ಮುಚ್ಚದೆ ತನ್ನ ಜಸದಂತೆ

(ಯಶಸ್ಸಿನಂತೆ) ಪಸರಿಸಿದ
ಅಚ್ಚ ವೆಳ್ದಿಂಗಳನು
(ಸ್ವಚ್ಛವಾದ ಬೆಳುದಿಂಗಳನ್ನು)
ಆಕೆಯ ಕಣ್ಗಳ ಬೆಳ್ಪಿನ
ತಳರ್ಪೆನುತ್ತುಂ(ಚಲನೆಯೆಂ
ದುಕೊಂಡು) ಪೆಳ್ಪಳಿಸಿ
(ಆಕೆಯ ಕಣ್ಣುಗಳ ಬಿಳಿಯ
ಬಣ್ಣದ
ಚಲನೆಯೆಂದುಕೊಂಡು
ಭಾವಿಸಿ ಹೆದರಿ) ಚಂದ್ರನಂ
ನೋಡಿ-

ವಚನ:ಅರ್ಥ:ನೀನು ಇದಕ್ಕೆ ಏನೂ ಚಿಂತಿಸಬೇಡ. ನಿನ್ನ ಆಸೆಯನ್ನು ಇಷ್ಟಟ್ಟಣತೆಯೇ ತೀರಿಸುತ್ತೇನೆ ಎಂದು ಅನೇಕ ರೀತಿಯ ಮಾತಿನ ಹಿತವಚಗಳಿಂದ ಅವಳ ಮನಸ್ಸು ಶಾಂತಪಡಿಸುವಂತೆ ನುಡಿಯುತ್ತಿರಲು, ಈ ಕಡೆ ವಿಕ್ರಮಾರ್ಜುನನಾದ ಅರಿಕೇಸರಿಯು ಸಭೆಯು ಚದುರಿದ ಬಳಿಕ ಮಲಗುವ

ಮನೆಗೆ ಬರುವಾಗ, ತನ್ನ ಜೊತೆಯಲ್ಲಿಯೇ ಅನುಸರಿಸಿ ಬಂದ ಪಂಡಿತರುಗಳನ್ನು ಉಚಿತವಾದ ಸತ್ಕಾರಗಳಿಂದ ಬೀಳ್ಕೊಟ್ಟು. ಸುಭದ್ರೆಯ ಸೌಂದರ್ಯವು ತನ್ನ ಕಣ್ಣಿನಲ್ಲಿ ತನ್ನ ಕಣ್ಣಿನ ಗುಡ್ಡೆಯಂತೆಯೇ ಸುತ್ತಾಡುತ್ತಿರಲು ಕಣ್ಣನ್ನು ಮುಚ್ಚದೆ ತನ್ನ ಯಶಸ್ಸಿನಂತೆ ಹರಡಿದ್ದ ಸ್ವಚ್ಛವಾದ ಬೆಳುದಿಂಗಳನ್ನು ಆಕೆಯ

ಕಣ್ಣುಗಳ ಬಿಳಿಯ ಬಣ್ಣದ ಚಲನೆಯೆಂದೇ ಭಾವಿಸಿ ಹೆದರಿದನು. ಚಂದ್ರನನ್ನು ನೋಡಿ-

ಚಂ|| ಪ್ರಿಯ ಸತಿಯಾನನೇಂದುವೊಳಮಿಂ ದುವೊಳಂ ಬಿದಿ ಮುನ್ನಮಾವುದಂ ನಯದೊಳೆ ನೋಡಿ ಮಾಡಿದನದಾವುದನೆಂದಱಿ ಯಲ್ಕೆ ನಾಡೆ ಸಂ|

ದೆಯಮದು ನೀಳ ನೀರಜ
ವನಂಗಳ ಚೆಲ್ವುಗಳೆಂಬುವಾ
ಲತಾಂ
ಗಿಯ ಕಡೆಗಣ್ಣ ಬೆಳ್ಪುಗಳ
ಸಿಲ್ಕಿದ ಸಿಲ್ಕಿನ ಸಿಲ್ಕಿವಲ್ಲವೇ||
೨೦ ||

ಪದ್ಯ-೨೦:ಪದವಿಭಾಗ-ಅರ್ಥ:ಪ್ರಿಯಸತಿಯ ಆನನೇಂದು (ಪ್ರಿಯವನಿತೆಯಾದ ಸುಭದ್ರೆಯ, ಆನನ ಇಂದು-

ಚಂದ್ರನಂತಿರುವ ಮುಖ)
ಒಳಂ (ಇದೆ,
ಹೇಗೆಂದರೆ-)ಇಂದುಂ ಒಳಂ
(ಚಂದ್ರನಂತೆ), ಬಿದಿ
(ಬ್ರಹ್ಮನು), ಮುನ್ನಂ ಆವುದಂ
ನಯದೊಳೆ ನೋಡಿ
ಮಾಡಿದನು ಆದಾವುದನು
ಎಂದಱಿಯಲ್ಕೆ (ಬ್ರಹ್ಮನು
ಇವುಗಳಲ್ಲಿ ಯಾವುದನ್ನು
ನಯದಿಂದ/ ಚಂದವಾಗಿ
ಯೋಚಿಸಿ-ಮಾದರಿಯಾಗಿ

ಮೊದಲು ಮಾಡಿದನು ಎಂದು ತಿಳಿಯುವುದಕ್ಕೆ) ನಾಡೆ ಸಂದೆಯಂ (ಬಹಳ ಸಂದೇಹವೇ ಸರಿ,) ಅದು ನೀಳ ನೀರಜ ವನಂಗಳ (ನೀಲವಾಧ ಕನ್ನೈದಿಲೆ ಹೂವಿನ ತೋಟಗಳ) ಚೆಲ್ವುಗಳೆಂಬುವು (ಸೌಂದರ್ಯಗಳು) ಆ ಲತಾಂಗಿಯ ಕಡೆಗಣ್ಣ ಬೆಳ್ಪುಗಳ ಸಿಲ್ಕಿದ (ಆ

ಸುಭದ್ರೆಯ ಕಡೆಗಣ್ಣ
ಕಾಂತಿಯ ಸಿಲುಕಿನ) ಸಿಲ್ಕಿನ
ಸಿಲ್ಕು ಇವಲ್ಲವೇ (ಮತ್ತು
ಚಂದ್ರನ ಕಾಂತಿಯ ಸಿಲುಕಿನ,
ಎರಡೂ ಸೇರಿದ ಸಿಲುಕು-
ಸಿಕ್ಕು, ಬಿಡಿಸಲಾರದ ಸಿಕ್ಕು
ಇದು. ಅಲ್ಲವೇ? ಎರಡೂ
ಒಂದೇ ಬಗೆ)?

ಪದ್ಯ-20:ಅರ್ಥ:

ಪ್ರಿಯವನಿತೆಯಾದ
ಸುಭದ್ರೆಯ ಚಂದ್ರನಂತಿರುವ

ಮುಖ ಚಂದ್ರನಂತೆಯೇ ಇದೆ, ಅವು ಎರಡೂ ಒಂದೇ ರೀತಿಯಲ್ಲಿವೆ. ಬ್ರಹ್ಮನು ಇವುಗಳಲ್ಲಿ ಯಾವುದನ್ನು ಮಾದರಿಯಾಗಿ ಮೊದಲು ಮಾಡಿದನು ಎಂದು ತಿಳಿಯುವುದಕ್ಕೆ ಬಹಳ ಸಂದೇಹವೇ ಸರಿ. ನೀಲವಾಧ ಕನ್ನೈದಿಲೆ ಹೂವಿನ ತೋಟಗಳ ಸೌಂದರ್ಯಗಳು ಆ ಸುಭದ್ರೆಯ ಕಡೆಗಣ್ಣ

ಕಾಂತಿಯ ಒಂದಕ್ಕೊಂದು
ಸೇರಿ ಸಿಲುಕಿನ-ಸಿಕ್ಕಿನ ಮತ್ತು
ಚಂದ್ರನ ಕಾಂತಿಯ ಸಿಲುಕಿನ,
ಎರಡೂ ಸೇರಿದ ಸಿಲುಕು-
ಸಿಕ್ಕು ಇದು, ಬಿಡಿಸಲಾರದ
ಸಿಕ್ಕು ಇದು. ಅಲ್ಲವೇ?
ಎರಡೂ ಒಂದೇ ಬಗೆ ಇದೆ.)

ವ|| ಅದಲ್ಲದೆಯುಂ-

ವಚನ:ಅರ್ಥ:|| ಅದೂ
ಅಲ್ಲದೆ

ಉ|| ಆ ನವ ಮಾಳಿಕಾ
ಕುಸುಮ ಕೋಮಳೆ ರಾಗ ರಸ
ಪ್ರಪೂರ್ಣಂ ಚಂ
ದ್ರಾನನ ಲಕ್ಷ್ಮಿಯಿಂ
ನಭದೊಳಿರ್ದಮೃತಾಂಶುವಿನು
ದ್ಧ್ಯಕಾಂತಿ ಸಂ|
ತಾನಮನಾವಗಂ ತನಗೆ
ಮಾಡಿದಳೆಂದೊಡೆ ತದ್ಗ್ರ
ಹಾಂತರೋ
ದ್ಯಾನಸರಸ್ಸರೋಜರುಚಿಯಿಂ
ಬುದಿದಾಕೆಯ ಕೆಯ್ಯದೆನ್ನಿರೇ||

೭೧||

ಪದ್ಯ-೭೧:ಪದವಿಭಾಗ-

ಅರ್ಥ: ಆ ನವ ಮಾಳಿಕಾ ಕುಸುಮ ಕೋಮಳೆ (ಆ ಹೊಸದಾದ ಮಾಲೆಯ ಹೂವಿನಂತೆ ಕೋಮಲವಾಗಿರುವ ಆ ಸುಭದ್ರೆಯು) ರಾಗ ರಸ ಪ್ರಪೂರ್ಣಂ ಚಂದ್ರಾನನ ಲಕ್ಷ್ಮಿಯಿಂ (ಕೆಂಪು ಬಣ್ಣದ ತನ್ನ ಪ್ರೀತಿರಸದಿಂದ ತುಂಬಿದ

ಚಂದ್ರನಂತಿರುವ ಮುಖ
ಕಾಂತಿಯಿಂದ) ನಭದೊಳಿರ್ದ
ಅಮೃತಾಂಶುವಿನ
ಉದ್ಘಕಾಂತಿ ಸಂತಾನಮನು
(ಆಕಾಶದಲ್ಲಿರುವ ಚಂದ್ರನ
ಉತ್ತಮಕಾಂತಿಯ
ಮೊತ್ತವನ್ನು) ಆವಗಂ ತನಗೆ
ಮಾಡಿದಳೆಂದೊಡೆ
(ತನ್ನದ್ದನ್ನಾಗಿ
ಮಾಡಿಕೊಂಡಿದ್ದಾಳೆಂದರೆ)
ತದ್ ಗೃಹ ಅಂತರ ಉದ್ಯಾನ

ಸರಸ್ ಸರೋಜ ರುಚಿ (ಅವಳ ಮನೆಯ ಉದ್ಯಾನವ ಕೊಳಗಳ ತಾವರೆಯ ಕಾಂತಿಯು) ಎಂಬುದು ಇದು ಆಕೆಯ ಕೆಯ್ಯದು ಎನ್ನಿರೇ (ಆಕೆಯ ಕೈಲ್ಲಿರುವ ವಸ್ತು ಎಂದು ಎನ್ನಿ.)

ಪದ್ಯ-೭೧:ಅರ್ಥ: ಆ ಹೊಸದಾದ ಮಾಲೆಯ ಹೂವಿನಂತೆ ಕೋಮಲವಾಗಿರುವ ಆ

ಸುಭದ್ರೆಯು ಕೆಂಪು ಬಣ್ಣದ
ತನ್ನ ಪ್ರೀತಿರಸದಿಂದ ತುಂಬಿದ
ಚಂದ್ರನಂತಿರುವ ಮುಖ
ಕಾಂತಿಯಿಂದ
ಆಕಾಶದಲ್ಲಿರುವ ಚಂದ್ರನ
ಉತ್ತಮವಾದ ಕಾಂತಿಯ
ಮೊತ್ತವನ್ನು ತನ್ನದ್ದನ್ನಾಗಿ
ಮಾಡಿಕೊಂಡಿದ್ದಾಳೆಂದರೆ
ಅವಳ ಮನೆಯ ಉದ್ಯಾನವ
ಕೊಳಗಳ ತಾವರೆಯ
ಕಾಂತಿಯು ಆಕೆಯ ಕೈಲ್ಲಿರುವ

ವಸ್ತು ಎನ್ನಿ. ಆ ಕಮಲಗಳ ಕಾಂತಿಯನ್ನು ತನ್ನದು ಮಾಡಿಕೊಂಡಿದ್ದಾಳೆ.

ವ|| ಎಂದು ತನ್ನ ಮನಮುಮನೆರ್ದೆಯುಮನುರೆ ಸೆವಿಡಿದಿರ್ದಪೂರ್ವ ರೂಪೆಯ ರೂಪಮಂ ಮನದೊಳೆ ಬಗೆದು ಭಾವಿಸಿ ಮತ್ತಮಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ತನ್ನ ಮನಮುಮನು

ಎರ್ದೆಯುಮನು
(ಮನಸ್ಸನ್ನೂ, ಹೃದಯವನ್ನೂ)
ಉರೆ ಸೆರೆವಿಡಿದಿರ್ದ
ಅಪೂರ್ವ ರೂಪೆಯ
ರೂಪಮಂ ಮನದೊಳೆ
ಬಗೆದು ಭಾವಿಸಿ ಮತ್ತಂ
ಇಂತೆಂದಂ-
ವಚನ:ಅರ್ಥ:ಎಂದು ತನ್ನ
ಮನಸ್ಸನ್ನೂ, ಹೃದಯವನ್ನೂ
ಬಹಳ ಸೆರೆಹಿಡಿದಿದ್ದ
ಅಪೂರ್ವ ಸುಂದರಿಯ

ರೂಪವನ್ನು ತನ್ನ ಮನಸ್ಸಿನಲ್ಲಿ ಯೋಚಿಸಿ ಪುನ ಭಾವಿಸಿಕೊಂಡು ಹೀಗೆಂದನು-

ಚಂ|| ಕುಸುರಿಯ ರೂಪನೆಯ್ದೆ ಪೊಗೞಲ್ಕಱಿಯೆಂ ನಡು ಪುರ್ವು ಬಾಸೆ ಕ ಣ್ಪೊಸಗೆಯನುಂಟುಮಾೞ್ಪ ಜಘನಂ ಬೆಳರ್ವಾಯ್ ಮೊಲೆಗಳ್ ಕದಂಪುಗು| ರ್ವಸಿೞನೆ ನೋಡೆ ಮೊಕ್ಕಳಮದಾರ್ ನಡೆ

ನೋೞ್ಪೊಡಮಂತುಮಿಂತುಂ ಮೂ
ಱಿಸಿಯವು ಮೂೞು
ದೊಡ್ಡಿದುವು ಮೂಡೆ
ತೆಳ್ಳಿದುವಂಬುಜಾಕ್ಷಿಯಾ||
೭೨||

ಪದ್ಯ-೭೨:ಪದವಿಭಾಗ-ಅರ್ಥ:ಕುಸುರಿಯ ರೂಪನು ಎಯ್ದೆ ಪೊಗೞಲ್ಕೆ ಅೞಿಯೆಂ (ಹೂವಿನ ಕೇಸರಗಳಂತಿರುವ ಅವಳ ಸೌಂದರ್ಯವನ್ನು

ಚೆನ್ನಾಗಿ ಹೊಗಳಲು ಅರಿಯೆನು) ನಡು ಪುರ್ವು ಬಾಸೆ ಕಣ್ಗೆ ಒಸಗೆಯನು ಉಂಟುಮಾಟ್ಟಿ ಜಘನಂ (ಅವಳ ಸೊಂಟ, ಹುಬ್ಬು, ಹೊಟ್ಟೆಯ ಮೇಲಿನ ಕೂದಲಿನ ಸಾಲು, ಕಣ್ಣು, ಹಬ್ಬವನ್ನುಂಟುಮಾಡುವ ಜಘನಗಳು,) ಬೆಳರ್ವಾಯ್ ಮೊಲೆಗಳ್ ಕದಂಪು ಉಗುರ್ ವಸಿಱನೆ (ಬೆಳ್ಳಗಿರುವ ಬಾಯಿ,

ಮೊಲೆಗಳು, ಕೆನ್ನೆ, ಉಗುರು,
ಹೊಟ್ಟೆ) ನೋಡೆ ಮೊಕ್ಕಳಂ
(ನೋಡಿದರೆ ವಿಶೇಷವಾಗಿ)
ಅದು ಆರ್ (ಅದು ಯಾರು)
ನಡೆ ನೋೞ್ಪೊಡಂ
(ವಿಶೇಷವಾಗಿ ದೃಷ್ಟಿಸಿ
ನೋಡಿದರೂ)
ಅಂತುಮಿಂತುಂ
ಮೂಱಿಸಿಯವು ಮೂಱು
ದೊಡ್ಡಿದುವು ಮೂಡೆ
ತೆಳ್ಳಿದುವು ಅಂಬುಜಾಕ್ಷಿಯಾ.

ಪದ್ಯ-೭೨:ಅರ್ಥ: ಹೂವಿನ ಕೇಸರಗಳಂತಿರುವ ಅವಳ ಸೌಂದರ್ಯವನ್ನು ಹೊಗಳಲು ನನಗೆ ಶಕ್ಯವಿಲ್ಲ. ಇಷ್ಟುಮಾತ್ರ ಹೇಳಬಲ್ಲೆ : ಅವಳ ಸೊಂಟ, ಹುಬ್ಬು, ಹೊಟ್ಟೆಯ ಮೇಲಿನ ಕೂದಲಿನ ಸಾಲು, ಕಣ್ಣು, ಹಬ್ಬವನ್ನುಂಟುಮಾಡುವ ಜಘನಗಳು, ಬೆಳ್ಳಗಿರುವ ಬಾಯಿ, ಮೊಲೆಗಳು, ಕೆನ್ನೆ, ಉಗುರು, ಹೊಟ್ಟೆ ಇವುಗಳನ್ನು

ನೋಡಿದರೆ, ವಿಶೇಷವಾಗಿ
ದೃಷ್ಟಿಸಿ ನೋಡಿದರೂ
ಕಮಲಾಕ್ಷಿಯಾದ ಆ
ಸುಭದ್ರೆಯ ಅಂಗಗಳಲ್ಲಿ
ಅಂತು ಇಂತು ಮೂರು
ಸಣ್ಣವು, ಮೂರು ದಪ್ಪ,
ಮೂರು ತೆಳುವಾದುವು.

ಕಂ|| ಮೃಗಶಿಶುನೇತ್ರೆಯ
ನಡುವೆರ್ದೆ
ಯುಗುರ್ಗಳ್ ಕರಮಸಿದು
ಕನಕ ಕಾಂಚೀ ನಿನದ|

ಪ್ರಗಣಿತಮಗಲ್ದ ನಲ್ಲಳ ಜಗನಮಿದೆನ್ನೆರ್ದೆಯನೆಂತು ಪೊಕ್ಕಳಿಪುವುದೋ॥ ೭೩॥

ಪದ್ಯ-೭೩:ಪದವಿಭಾಗ-ಅರ್ಥ:ಮೃಗಶಿಶುನೇತ್ರೆಯ (ಜಿಂಕಮರಿಯ ಕಣ್ಣುಗಳ) ನಡು ಎರ್ದೆಯು ಉಗುರ್ಗಳ್ (ಸೊಂಟ, ಎದೆ, ಉಗುರುಗಳು) ಕರಂ ಅಸಿದು (ವಿಶೇಷ ತೆಳುವು) ಕನಕ ಕಾಂಚೀ ನಿನದ ಪ್ರಗಣಿತಂ

(ಚೆನ್ನದ ಡಾಬಿನ ಸದ್ದಿನ
ಸದ್ದುಗಳು) ಅಗಲ್ದ ನಲ್ಲಳ
(ಡಾಬು ಇಲ್ಲದ ಪ್ರಿಯೆಯ-)
ಜಗನಂ ಇದು ಎನ್ನೆರ್ದೆಯನು
(ನನ್ನ ಹೃದಯವನ್ನು
ಪ್ರವೇಶಿಸಿ) ಎಂತು ಪೊಕ್ಕು
ಅಳಿಪುವುದೋ(ಅರಳಿಸುವು
ದೋ -
ಪ್ರೀತಿಯನ್ನುಂಟುಮಾಡುವು
ದೋ)

ಪದ್ಯ-೭೩:ಅರ್ಥ:
ಜಿಂಕಮರಿಯ ಕಣ್ಣುಗಳಂತೆ ಕಣ್ಣುಳ್ಳ ಸುಭದ್ರೆಯ ಸೊಂಟ, ಎದೆ, ಉಗುರುಗಳು ವಿಶೇಷ ತೆಳುವು. ಚಿನ್ನದ ಡಾಬಿನ ಸದ್ದಿಲ್ಲದ ಪ್ರಿಯೆಯ ಜಘನಗಳು ನನ್ನ ಹೃದಯವನ್ನು ಪ್ರವೇಶಿಸಿ ಹೇಗೆ ಪ್ರೀತಿಯನ್ನುಂಟುಮಾಡುವುದೋ!

ವ|| ಎಂದು ಸೈರಿಸದೆ-

ವಚನ:ಅರ್ಥ:ಎಂಬುದಾಗಿ

ಸೈರಿಸಲಾರದೆ-

ಮ|| ಮೊಲೆಗಳ್ ಬಟ್ಟಿದುವಾಗಿ

ಕರ್ಗಿದ ಕುರುಳ್ ಕೊಂಕಾಗಿ

ಕಣ್ಗೆಯ್ದೆ ನೀ

ಳ್ದರ್ಗಣ್ಗಳ್ ಚಪಳಂಗಳಾಗಿ

ಜಘನಂ ಕಾಂಚೀ ಕಳಾಪ

ಪ್ರಭೋ|

ಜ್ಜ ಲಮುಧ್ವ ತ್ತಮುಮಾಗಿ

ತಾಮಲೆಗೆ

ಮಧ್ಯಸ್ಥಂಗಳಾಗಿರ್ದುವ

ಕ್ಕಲೆಯಲ್ ತಕ್ಕುದೆ ಕೆನ್ನಮಾ ತ್ರಿವಳಿಗಳ್ಗೆನ್ನಂ ಸರೋಜಾಕ್ಷಿಯಾ|| ೭೪ ||

ಪದ್ಯ-೭೪:ಪದವಿಭಾಗ-ಅರ್ಥ:ಮೊಲೆಗಳ್ ಬಟ್ಟಿದುವಾಗಿ (ಮೊಲೆಗಳು ದುಂಡಾಗಿ) ಕರ್ಗಿದ ಕುರುಳ್ ಕೊಂಕಾಗಿ ಕಣ್ಗೆಯ್ದೆ (ಕರ್ರಗಿನ ಕುರುಳು ಗುಂಗುರಾಗಿ ಕಣ್ಣಿನ ಬಳಿ ಬಂದಿರಲು,) ನೀಳ್ದರ್ಗಣ್ಗಳ್ ಚಪಳಂಗಳಾಗಿ

(ನೀಳ್ದ ಅಲರ್ ಕಣ್ಗಳ್ -
ಉದ್ದವಾದ ಹೂವಿನಂತಿರುವ
ಕಣ್ಣುಗಳು ಚಂಚಲವಾಗಿದ್ದು)
ಜಘನಂ ಕಾಂಚೀ ಕಳಾಪ
ಪ್ರಭೋಜ್ಜಲಂ ಉದ್ವ ತ್ತಮುಂ
ಆಗಿ ತಾಂ ಅಲೆಗೆ- ಪೀಡಿಸಲಿ
(ಜಘನವು ಡಾಬಿನ
ಕಾಂತಿಯಿಂದ ಪ್ರಕಾಶವಾಗಿದ್ದು
ಉಬ್ಬಿದ ಜಘನಗಳು ಅವು
ನನ್ನನ್ನು ಪೀಡಿಸಲಿ;)
ಮಧ್ಯಸ್ಥಂಗಳು ಆಗಿರ್ದುವು

ಅಕ್ಕಲೆಯಲ್ (ಪೀಡಿಸಲು - ಕಲಕಲು) ತಕ್ಕುದೆ ಕೆನ್ನಂ (ವಿಶೇಷ) ಆ ತ್ರಿವಳಿಗಳ್ಗೆ ಎನ್ನಂ ಸರೋಜಾಕ್ಷಿಯಾ(ಕಮಲಾಕ್ಷಿ ಯಾದ ಸುಭದ್ರೆಯ ಮಧ್ಯಪ್ರದೇಶದ - ಹೊಟ್ಟೆಯಮೇಲಿನ ಮೂರು ವಿಶೇಷ ನೆರಿಗೆ- ತ್ರಿವಳಿಗಳು ನನ್ನನ್ನು ಮನಸ್ಸನ್ನು ಕಲಕಲು ತಕ್ಕದಾಗಿದೆ.)

ಪದ್ಯ-೭೪:ಅರ್ಥ: ಅವಳ ದುಂಡುಮೊಲೆಗಳು ಕರ್‍ರಗಿನ ಕುರುಳು ಗುಂಗುರಾಗಿ ಕಣ್ಣಿನ ಬಳಿ ಬಂದಿರಲು, ಉದ್ದವಾದ ಹೂವಿನಂತಿರುವ ಕಣ್ಣುಗಳು ಚಂಚಲವಾಗಿದ್ದು ಡಾಬಿನ ಕಾಂತಿಯ ಸಮೂಹದಿಂದ ಕೊಬ್ಬಿ ಬೆಳೆದ ಜಘನಗಳು ನನ್ನನ್ನು ಪೀಡಿಸಲಿ; ಕಮಲದಂತಿರುವ ಆ ಸುಭದ್ರೆಯ ಮಧ್ಯಪ್ರದೇಶದ

ತ್ರಿವಳಿಗಳು ನನ್ನ ಮನಸ್ಸನ್ನು ವಿಶೇಷವಾಗಿ ಕಲಕಲು ಯೋಗ್ಯವಾಗಿವೆ. ಎಂಬುದಾಗಿ ಸ್ವಲ್ಪ ಹೊತ್ತು ಜ್ಞಾನಶೂನ್ಯನಾದಂತೆ ಹಲುಬಿ ಹಂಬಲಿಸಿ ಪುನ ಹಾವ, ಭಾವ, ವಿಳಾಸ, ವಿಭ್ರಮ, ಕಟಾಕ್ಷ ದೃಷ್ಟಿಗಳ ಮನಸ್ಸನ್ನು ಒಲಿಸಿಯೂ ಎದೆಯನ್ನು ಕಲಕಿಯೂ ಮನ್ಮಥನೆಂಬ ಆನೆಯಿಂದ

ವ|| ಎಂದು ಕಿಱಿದುಂ
ಬೇಗಮಱಿಮರುಳಂತು
ಪಲುಂಬಿ ಪಂಬಲಿಸಿ
ಮತ್ತಮಾಕೆಯ ಹಾವ ಭಾವ
ವಿಳಾಸ ವಿಭ್ರಮ
ಕಟಾಕ್ಷೇಕ್ಷಂಗಳ್
ಮನಮನೊನಲಿಸೆಯುಮೆರ್ದೆ
ಯಂ ಕನಲಿಸೆಯು ಮನಂಗ
ಮತಂಗಜ
ಕೋಳಾಹಳಾಕುಳೀಕೃತಾಂತ
ರಂಗನಾಗಿ-

ವಚನ:ಪದವಿಭಾಗ-ಅರ್ಥ:ಎಂದು ಕಿಱಿದುಂ ಬೇಗಂ ಅಱಿಮರುಳಂತು ಪಲುಂಬಿ ಪಂಬಲಿಸಿ(ಅರುಳುಮರುಳ ನಂತೆ ಹಲುಬಿ, ಬಯಸಿ ವ್ಯಥೆಪಟ್ಟು) ಮತ್ತಂ ಆಕೆಯ ಹಾವ ಭಾವ ವಿಳಾಸ ವಿಭ್ರಮ ಕಟಾಕ್ಷ ಈಕ್ಷಂಗಳ್ (ನೋಟಗಳನ್ನು) ಮನಮನು ಒನಲಿಸೆಯುಂ (ಮನಸ್ಸನ್ನು

ಕೆರಳುವಂತೆ) ಎರ್ದೆಯಂ ಕನಲಿಸೆಯುಂ (ರೇಗಿಸಿ, ಉದ್ರೇಕಿಸಿ) ಅನಂಗ ಮತಂಗಜ (ಮನ್ಮಥನೆಂಬ ಮದಗಜದಿಂದ) ಕೋಳಾಹಳ ಆಕುಳೀಕೃತ ಅಂತರಂಗನಾಗಿ (ಗದ್ದಲ ಉಂಟುಮಾದಿದ ಮನಸ್ಸುಳ್ಳವನಾಗಿ)-

ವಚನ:ಅರ್ಥ:ಎಂಬುದಾಗಿ ಸ್ವಲ್ಪ ಹೊತ್ತು ಅರುಳುಮರುಳನಂತೆ

ಹಲುಬಿ, ಹಂಬಲಿಸಿ ಪುನ
ಹಾವ, ಭಾವ, ವಿಳಾಸ,
ವಿಭ್ರಮ, ಕಟಾಕ್ಷ ದೃಷ್ಟಿಗಳ
ಮನಸ್ಸನ್ನು
ಕೆರಳುವಂತೆಮಾಡಿ,
ಎದೆಯನ್ನು ಉದ್ರೇಕಿಸಿ,
ಮನ್ಮಥನೆಂಬ ಮದಗಜದಿಂದ
ಗದ್ದಲ ಉಂಟುಮಾದಿದ
ಮನಸ್ಸುಳ್ಳವನಾಗಿದ್ದನು.

ವ|| ಜಗಮಂ ಮಾಡಿದ
ಪದ್ಮಜಂ ಪಡೆದನಿಲ್ಲೀ

ಕನ್ನೆಯಂ ಮಾಡುವ
ಲ್ಲಿಗೆ ಚಂದ್ರಂ ಮಳಯಾನಿಳಂ
ಮಳಯಜಂ
ನೀರೇಜಮಿಮ್ಮಾವು ಮ|
ಲ್ಲಿಗೆಯೆಂದಿಂತಿವನಚ್ಚಿಱಿಂದ
ಮರ್ದಿನೊಳ್ ತಾನಟ್ಟಿಯಿಂ
ತೊಯ್ದು ಮೆ
ಲ್ಲಗೆ ಸಂದಂಗಜನೆಂಬಜಂ
ಪಡೆದನಂತಾ ಕಾಂತಿಯಿಂ
ಕಾಂತೆಯಂ|| ೭೫||

ಪದ್ಯ-೭೫:ಪದವಿಭಾಗ-ಅರ್ಥ:ಜಗಮಂ ಮಾಡಿದ ಪದ್ಮಜಂ ಪಡೆದನು ಇಲ್ಲ ಈ ಕನ್ನೆಯಂ (ಜಗತ್ತನ್ನು ಸೃಷ್ಟಿಸಿದ ಬ್ರಹ್ಮನು ಈ ಕನ್ಯೆಯನ್ನು ಸೃಷ್ಟಿಸಿದು ಅಲ್ಲ) (ಹಿಂದೆ ಇದ್ದ ಮನ್ಮಥನೆಂಬ ಬ್ರಹ್ಮನು ಪಡೆದನು- ಸೃಷ್ಟಿಸಿದನು-) ಮಾಡುವ ಅಲ್ಲಿಗೆ (ಹಾಗೆ ಮಾಡುವಾಗ) ಚಂದ್ರಂ ಮಳಯಾನಿಳಂ ಮಳಯಜಂ

ನೀರೇಜಂ ಇಮ್ಮಾವು
ಮಲ್ಲಿಗೆಯೆಂದ ಇಂತಿವಂ
(ಇವನ್ನೆಲ್ಲಾ) ಅೞ್ಕಿೞಿಂದ
ಅಮರ್ದಿನೊಳ್
ತಾನೞ್ತಿಯಿಂ ತೊಯ್ದು
(ಪ್ರೀತಿಯಿಂದ ಅಮೃತದಲ್ಲಿ
ಇಷ್ಟಪಟ್ಟು ನೆನೆಯಿಸಿ) ಮೆಲ್ಲಗೆ
ಸಂದಂಗಜನೆಂಬಜಂ (ಸಂದ
-ಆಗಿಹೋದ -ಇದ್ದ,
ಅಂಗಜನೆಂಬ-ಮನ್ಮಥನೆಂಬ
ಅಜಂ - ಬ್ರಹ್ಮನು) ಪಡೆದನು,

ಅಂತು ಆ ಕಾಂತಿಯಿಂ ಕಾಂತೆಯಂ- ಕನ್ಯೆಯನ್ನು (ಈ ಕನ್ಯೆಯನ್ನು ಆ ಪ್ರಕಾಶದಿಂದ ಪಡೆದನು)

ಪದ್ಯ-೭೫:ಅರ್ಥ: ಜಗತ್ತನ್ನು ಸೃಷ್ಟಿಸಿದ ಬ್ರಹ್ಮನು ಈ ಕನ್ಯೆಯನ್ನು ಸೃಷ್ಟಿಸಿರಲಾರ; ಇಷ್ಟು ಕಾಂತಿಯುಕ್ತಳಾದ ಈ ಕನ್ಯೆಯನ್ನು ಮನ್ಮಥನೆಂಬ ಬ್ರಹ್ಮನು ಸೃಷ್ಟಿಸುವಾಗ ಚಂದ್ರ, ಮಲಯಮಾರುತ, ಶ್ರೀಗಂಧ,

ತಾವರೆ, ಸಿಹಿಮಾವು, ಮಲ್ಲಿಗೆ
ಇವನ್ನೆಲ್ಲಾ ಪ್ರೀತಿಯಿಂದ
ಅಮೃತದಲ್ಲಿ ಇಷ್ಟಪಟ್ಟು
ನೆನೆಯಿಸಿ ಮೆಲ್ಲಗೆ ಹೀಗೆ
ಪಡೆದನು, ಈ ಕನ್ಯೆಯನ್ನು ಆ
ಕಾಂತಿಯಿಂದ ಸೃಷ್ಟಿಸಿದನು

ವ|| ಅಂತಲ್ತಪ್ಪಂದಾ
ಕಾಂತೆಯಂ ವಿಧಾತ್ರಂ
ಮಾಡುವಂದು ಕೊಸಗಿನ
ಕೇಸರಂಗಳನಮೃತರಸದೊ
ಳಂ ಶೃಂಗಾರರಸದೊಳಂ

ಭಾವಿಸಿ ರಸಸಿದ್ಧಮಪ್ಪ ಪೊನ್ನ
ಲತೆಯ ಮೆಯ್ಯುಮಂ ನೀಲದ
ತಲೆನವಿರುಮಂ ಪವಳದ
ಬಾಯ್ದೆರೆಯುಮಂ ಮುತ್ತಿನ
ಪಲ್ಲುಮಂ ರಾಜಾವರ್ತದ
ಸೆಳ್ಳುಗುರುಮಂ ಧೂಪದ
ಸುಯ್ಯುಮಂ ರತಿಯ
ಸೌಭಾಗ್ಯಮುಮಂ ಸೀತೆಯ
ಸೈರಣೆಯುಮನದ್ರಿಜಾತೆಯ
ಶೃಂಗಾರಮುಮಂ
ಮನೋಮಥನ ಮದನ

ಮೋಹನ ಸಂತಾಪನ ವಶೀಕರಣಂಗಳೆಂಬ ಕಾಮದೇವನಯ್ದಲರಂಬಿನ ಶಕ್ತಿಗಳುಮನೊಂದುಮಾಡಿ ಲೋಕಮೆಲ್ಲಂ ಮರುಳ್ಮಾಡಲೆಂದು ಪೆಣ್ಮಾಡಿದನಕ್ಕುಮೆಂದು ಮತ್ತಮಾಕೆಯ ನೋಡಿದ ನೋಟಮಂ ಭಾವಿಸಿ-

ವಚನ:ಪದವಿಭಾಗ-

ಅರ್ಥ:ಅಂತಲ್ಲುತ್ತ ಅಪ್ಪಂದು ಆ

ಕಾಂತೆಯಂ ವಿಧಾತ್ರಂ
(ಹಾಗಿಲ್ಲದ ಪಕ್ಷದಲ್ಲಿ ಆ
ಹೆಣ್ಣನ್ನು ಬ್ರಹ್ಮನು)
ಮಾಡುವಂದು ಕೊಸಗಿನ
ಕೇಸರಂಗಳನು
ಅಮೃತರಸದೊಳಂ
ಶೃಂಗಾರರಸದೊಳಂ ಭಾವಿಸಿ
(ಮಾಡುವಾಗ
ಬೆಟ್ಟದಾವರೆಯ
ಎಸಳುಗಳನ್ನು ಅಮೃತರಸ
ಮತ್ತು ಶೃಂಗಾರರಸದಲ್ಲಿ

ನೆನೆಯಿಸಿ) ರಸಸಿದ್ಧಮಪ್ಪ
ಪೊನ್ನ ಲತೆಯ ಮೆಯ್ಯುಮಂ
(ರಸವಿದ್ಯೆಯಿಂದ
ಸಿದ್ಧವಾಗಿರುವ ಚಿನ್ನದ
ಬಳ್ಳಿಯಂತಿರುವ ಮೈಯನ್ನು)
ನೀಲದ ತಲೆನವಿರುಮಂ
ಪವಳದ ಬಾಯ್ದೆಯುಮಂ
(ಕಪ್ಪು ತಲೆಗೂದಲನ್ನೂ
ಹಳವದಂತಿರುವ
ತುಟಿಯನ್ನು), ಮುತ್ತಿನ
ಪಲ್ಲುಮಂ (ಮುತ್ತಿನಂತಿರುವ

ಹಲ್ಲನ್ನೂ), ರಾಜಾವರ್ತದ
ಸೆಳ್ಳುಗುರುಮಂ
(ಎಳೆನೀಲದಂತಿರುವ
ತೆಳುವಾದ ಉಗುರುಗಳನ್ನೂ)
ಧೂಪದ ಸುಯ್ಯುಮಂ
ರತಿಯ ಸೌಭಾಗ್ಯಮುಮಂ
(ಧೂಪದ ಪರಿಮಳದ
ಉಸಿರನ್ನೂ, ರತಿಯ
ಅಂದವನ್ನೂ) ಸೀತೆಯ
ಸೈರಣೆಯುಮಂ
ಅದ್ರಿಜಾತೆಯ

ಶೃಂಗಾರಮುಮಂ
(ಸೀತಾದೇವಿಯ
ಸಹನೆಯನ್ನೂ ಗಿರಿಜೆಯ
ಶೃಂಗಾರವನ್ನೂ)
ಮನೋಮಥನ, ಮದನ,
ಮೋಹನ, ಸಂತಾಪನ,
ವಶೀಕರಣಂ,ಗಳೆಂಬ
ಕಾಮದೇವನ ಅಯ್ದು
ಅಲರಂಬಿನ ಶಕ್ತಿಗಳುಮನು
ಒಂದುಮಾಡಿ (ಮನ್ಮಥನ
ಅಯ್ದು ಪುಷ್ಪಬಾಣಗಳ

ಶಕ್ತಿಗಳನ್ನು ಒಂದುಗೂಡಿಸಿ)
ಲೋಕಮೆಲ್ಲಂ
ಮರುಳ್ಮಾಡಲೆಂದು
ಪೆಣ್ಮಾಡಿದನು ಅಕ್ಕುಮೆಂದು
(ಲೋಕವನ್ನು
ಮರುಳುಮಾಡಲು ಇದೇ ಸರಿ
ಎಂದು ಹೆಣ್ಣನ್ನು ಸೃಷ್ಟಿಸಿದನು)
ಮತ್ತಂ ಆಕೆಯ ನೋಡಿದ
ನೋಟಮಂ ಭಾವಿಸಿ-
ವಚನ:ಅರ್ಥ:ಹಾಗಿಲ್ಲದ
ಪಕ್ಷದಲ್ಲಿ ಆ ಹೆಣ್ಣನ್ನು

(ಸುಭದ್ರೆಯನ್ನು) ಬ್ರಹ್ಮನು
ಮಾಡುವಾಗ ಬೆಟ್ಟದಾವರೆಯ
ಎಸಳುಗಳನ್ನು
ಅಮೃತರಸದಲ್ಲಿಯೂ
ಶೃಂಗಾರರಸದಲ್ಲಿಯೂ
ನೆನೆಯಿಸಿ ರಸವಿದ್ಯೆಯಿಂದ
ಸಿದ್ಧವಾಗಿರುವ ಚಿನ್ನದ
ಬಳ್ಳಿಯಂತಿರುವ ದೇಹವನ್ನೂ,
ಕಪ್ಪು ತಲೆಗೂದಲನ್ನೂ
ಹಳವದಂತಿರುವ
ತುಟಿಯನ್ನೂ,

ಮುತ್ತಿನಂತಿರುವ ಹಲ್ಲನ್ನೂ
ಎಳೆನೀಲದಂತಿರುವ
ತೆಳುವಾದ ಉಗುರುಗಳನ್ನೂ,
ಧೂಪದ ಪರಿಮಳದಿಂದ
ಕೂಡಿದ ಉಸಿರನ್ನೂ
ಸೀತಾದೇವಿಯ ಸಹನೆಯನ್ನೂ
ಗಿರಿಜೆಯ ಶೃಂಗಾರವನ್ನೂ,
ಮನೋಮಥನ (ಮನಸ್ಸನ್ನು
ಕಲಕುವಿಕೆ), ಮದನ
(ಕಾಮೋದ್ರೇಕವನ್ನುಂಟು
ಮಾಡುವಿಕೆ) ಮೋಹನ

(ಪರವಶವನ್ನಾಗಿಸುವಿಕೆ)
ಸಂತಾಪನ
(ದುಃಖನ್ನುಂಟುಮಾಡುವಿಕೆ)
ವಶೀಕರಣ (ತನಗೆ ವಶ
ಮಾಡಿಕೊಳ್ಳುವಿಕೆ) ಎಂಬ
ಮನ್ಮಥನ ಅಯ್ದು
ಪುಷ್ಪಬಾಣಗಳ ಶಕ್ತಿಗಳನ್ನು
ಒಂದುಗೂಡಿಸಿ ಲೋಕವನ್ನೆಲ್ಲ
ಮರುಳುಮಾಡಲು ಇದೇ ಸರಿ
ಎಂದು ಹೆಣ್ಣನ್ನು ಸೃಷ್ಟಿಸಿದನು.
ಪುನ ಆಕೆಯ ನೋಟದ

ನೋಟವನ್ನು ಮನಸ್ಸಿನಲ್ಲಿ
ಭಾವಿಸಿಕೊಂಡು -

**ಚಂ||ನೆರೆಗೊಳೆ ಗಾಡಿ ನೋೞ್ಪ
ಬಗೆ ಬರ್ಪುದುಮಾನೆ ದಲಂದು
ದಂತಿಯಂ
ನಿಱಿಸಿ ಮರಲ್ದು
ನೋಡುವುದುಮೆನ್ನುಮನಾ
ಸತಿ ಸೋಲದತ್ತ ಮ|
ತ್ತೆಱಗಿ ಬೞಲ್ದು ಜೋಲ್ದಳಿಪಿ
ನೋಡಿದಳಿಂತೆಲೆ ಸತ್ತ ಪೊತ್ತ ಕ**

ಣ್ಣಱಿಯದ ಬೆಳ್ಳನಲ್ಲೆನಱಿದೆಂ ಧವಳಾಕ್ಷಿಯ ನೋಟದಂದಮಂ || ೭೬||

ಪದ್ಯ-೭೬:ಪದವಿಭಾಗ-ಅರ್ಥ:ನೆರೆಗೊಳೆ ಗಾಡಿ (ಗಾಡಿ- ಸೌಂದರ್ಯವು, ನೆರೆಗೊಳೆ-ನೆರೆ ಕೊಳಲ್- ಪೂರ್ಣ ಸೆಳೆಯಲು) ನೋೞ್ಪ ಬಗೆ ಬರ್ಪುದುಂ(ನೋಡುವ ಮನಸ್ಸು ಬರಲು), ಆನೆ ದಲ್ ಅಂದು ದಂತಿಯಂ ನಿಱಿಸಿ

(ದಲ್- ಅಲ್ಲವೇ, ಅಂದು
ನಾನೇ ಆನೆಯನ್ನು ನಿಲ್ಲಿಸಿ)
ಮರಲ್ದು ನೋಡುವುದುಂ
(ಪುನ ಅವಳನ್ನು
ನೋಡಿದಾಗ) ಎನ್ನುಮನು ಆ
ಸತಿ ಸೋಲದತ್ತ ಮತ್ತೆಱಗಿ
ಬಱಿಲ್ದು ಜೋಲ್ದು ಅಳಿಪಿ
ನೋಡಿದಳು (ಆ ವನಿತೆ
ನನ್ನನ್ನೂ ಪ್ರೇಮದಿಂದ ಈ
ಕಡೆಗೆ ವಲೆದು, ತಾನೂ ನನಗೆ
ಸೋತು ಪ್ರೀತಿಯಿಂದ

ನೋಡಿದಳು.) ಇಂತೆಲೆ (ಇಂತು ಎಲೆ-ಎಲವೋ) ಸತ್ತ ಪೊತ್ತ ಕಣ್ಣಱಿಯದ (ಸತ್ತದ್ದನ್ನು ಹೊತ್ತಿರವುದನ್ನು ಕಂಡು ತಿಳಿಯದ) ಬೆಳ್ಳನಲ್ಲೆನ್ ಅಱಿದೆಂ (ಬೆಪ್ಪನಲ್ಲ, ಅವಳ ಮನಸ್ಸನ್ನು ಅರಿತೆನು,) ಧವಳಾಕ್ಷಿಯ ನೋಟದಂದಮಂ (ಕಾಂತಿಯ ಕಣ್ಣುಳ್ಳ ಆ ಸುಭದ್ರೆಯ

ನೋಟದ ಮರ್ಮವನ್ನು ತಿಳಿದೆನು)

ಪದ್ಯ-೭೬:ಅರ್ಥ:

ಅರ್ಜುನನ ಚೆಂನೆ- ಅವಳ ಸೌಂದರ್ಯವು ನನ್ನನ್ನು ಪೂರ್ಣವಾಗಿ ಸೆಳೆಯಲು, ನಾನೇ ಆ ಆನೆಯನ್ನು ನಿಲ್ಲಿಸಿ, ಪುನ ಅವಳನ್ನು ನೋಡಿದಾಗ, ಆ ವನಿತೆ ನನ್ನನ್ನೂ ಪ್ರೇಮದ ಕಡೆಗೆ ಬಾಗಿಸಿ ತಾನೂ ಈ ಕಡೆಗೆ ವಲೆದು, ನನಗೆ ಸೋತು

ಪ್ರೀತಿಯಿಂದ ನೋಡಿದಳು.
ಇಂತು ಎಲವೋ ಸತ್ತದ್ದನ್ನು
ಹೊತ್ತಿರವುದನ್ನು ಕಂಡು
ತಿಳಿಯದ ಬೆಪ್ಪನಲ್ಲ ತಾನು,
ಅವಳ ಮನಸ್ಸನ್ನು ಅರಿತೆನು,
ಕಾಂತಿಯ ಕಣ್ಣುಳ್ಳ ಆ
ಸುಭದ್ರೆಯ ನೋಟದ
ಮರ್ಮವನ್ನು ತಿಳಿದೆನು.

ಹರಣೀಪ್ಲುತ ವೃತ್ತ || ದಳಿತ ಕಮಲಚ್ಛಾಯಾಟೋಪಂ ಮನೋಜ ರಸ ಪ್ರಭಾ

ವಳಯ ನಿಳಯಂ

ಪ್ರೋದ್ಯದ್ಭ್ರೂವಿಭ್ರಮಂ

ಮುಕುಳೀಕೃತಂ||

ಲಳಿತ ಮಧುರಂ

ಲಜ್ಜಾಳೋಳಂ ಸ್ಮರಾಕುಳಿತಂ

ಮನಂ

ದಳಿತಮಪಸನ್ಮುಗ್ಧಂ ಸ್ನಿಗ್ಧಂ

ವಿಳೋಕನಮೋಪಳಾ|| ೭೭ ||

ಪದ್ಯ-0೭೭:ಪದವಿಭಾಗ-

ಅರ್ಥ:ದಳಿತ ಕಮಲಚ್ಛಾಯ ಆಟೋಪಂ (ಅರಳಿದ

ಕಮಲದ ಬಣ್ಣವುಳ್ಳದ್ದು),
ಮನೋಜ(ಮನ್ಮಥನ) ರಸ
(ಭಾವ- ಪ್ರೇಮರಸ)
ಪ್ರಭಾವಳಯ ನಿಳಯಂ
(ಪ್ರೇಮರಸದ ಪ್ರಭಾ
ಆವರಣಕ್ಕೆ ಮನೆಯಾಗಿದೆ.)
ಪ್ರೋದ್ಯದ್ಭ್ರೂವಿಭ್ರಮಂ
(ಪ್ರೋದ್ಯತ್ ಭ್ರೂ ವಿಭ್ರಮಂ-
ಎತ್ತರದ ಹುಬ್ಬಿನ ವಿಲಾಸದ್ದು)
ಮುಕುಳೀಕೃತಂ ಲಳಿತ
ಮಧುರಂ ಲಜ್ಜಾಳೋಳಂ

(ಮುಕುಳೀಕೃತಂ-ಮುಚ್ಚಿದ-
ಮೊಗ್ಗಿನ ಆಕಾರದ್ದು)
ಸ್ಮರಾಕುಳಿತಂ (ಸ್ಮರ
ಆಕುಳಿತಂ- ಮನ್ಮಥನಿಂದ
ಬಾಧಿತ/ಆವರಿಲ್ಪಟ್ಟುದು;
ಸುಂದರವೂ ಮಧುರವೂ
ಆದುದು;)
ಮನಂದಳಿತಂ(ಮನಂ- ತಳಿತಂ
ಮನಸ್ಸನು
ಅರಳಿಸುವಂತಹದು)
ಅಪಸನ್ಮುಗ್ಧಂ ಸ್ನಿಗ್ಧಂ

(ಅಪಸನ್ ಮುಗ್ಧಂ-
ಮುಗ್ಧತೆಮೀರಿದುದು; ಸ್ನಿಗ್ಧಂ-
ನಯ/ ಕೋಮಲವಾದುದು.)
<-/ವಿಳೋಕನಂ(ನೋಟವು)
ಓಪಳಾ (ಪ್ರಿಯಳಾದ
ಸುಭದ್ರೆಯ)

ಪದ್ಯ-೭೭:ಅರ್ಥ:

ಪ್ರಿಯಳಾದ ಸುಭದ್ರೆಯ ನೋಟವು ಅರಳಿದ ಕಮಲದ ಬಣ್ಣವುಳ್ಳದ್ದು ; ಪ್ರೇಮರಸದ ಪ್ರಭಾ ಆವರಣಕ್ಕೆ

ಮನೆಯಾಗಿದೆ.. ಎತ್ತಿದ
ಹುಬ್ಬಿನ ವೈಭವವುಳ್ಳದ್ದು ;
ಮೊಗ್ಗಾಗಿ ಮಾಡಲ್ಪಟ್ಟುದು;
ಸುಂದರವೂ ಮಧುರವೂ
ಆದುದು; ಲಜ್ಜೆಯಲ್ಲಿ
ಆಸಕ್ತವಾದುದು;
ಮನ್ಮಥನಿಂದ ಬಾಸಲ್ಪಟ್ಟುದು;
ಮನಸ್ಸನ್ನು
ಅರಳಿಸುವಂತಹದು;
ಮುಗ್ಧತೆಮೀರಿದುದು

(ಸರಳವಾದುದು)
ಕೋಮಲವಾದುದು.

ಚಂ||ಉಡಮೊಗಮೆಂಬ ತಾವರೆಯ ನೀಳ್ದೆಸಱೊಳ್ ಮಱಿದುಂಬಿ ಪಾಯ್ದೊಡಂ ಬಡನೊಳಕೊಂಡು ಕಣ್ಮಲರ ಬೆಳ್ಪುಗಳಾಲಿಯ ಕಱ್ಪಿನೊಳ್ ಪೊದ|
ಳ್ದೊಡನೊಡನೋಡುವಟ್ಟೆನಗೆ ಸಂತಸಮಂ ಮಱುಕಕ್ಕೆ ಮಾಣ್ದೊಡೀ

ನಡೆಗಿಡೆ ಸತ್ಯಮಂ ತಮಮುಮಂ ಕಡೆಗಣ್ಣೊಳೆ ಕಂಡೆನೋಪಳಾ|| ೭೮||

ಪದ್ಯ-೭೭:ಪದವಿಭಾಗ-ಅರ್ಥ: ಉಡಮೊಗಮೆಂಬ ತಾವರೆಯ (ಬಾಗೆಹೂವಿನ ತಾವರೆಮುಖ) ನೀಲ್ದ ಎಸಱೊಳ್ ಮಱಿದುಂಬಿ ಪಾಯ್ದು (ತಾವರೆಯ ನೀಳವಾದ ಎಸಳುಗಳಲ್ಲಿ ಮರಿದುಂಬಿಯು ಹೋಗಿ)

ಒಡಂಬಡನು ಒಳಕೊಂಡು
(ಒಪ್ಪಿಗೆ ಪಡದು) ಕಣ್ಮಲರ
(ಕಣ್ ಅಲರ್
-ಹೂವಿನಂತಿರುವ ಕಣ್ಣಿನ)
ಬೆಳ್ಪುಗಳಾಲಿಯ ಕಟ್ಪಿನೊಳ್
(ಬಿಳಿಯಭಾಗದ ಮಧ್ಯದ
ಕಪ್ಪುಪಾಪೆಯಲ್ಲಿ,) ಪೊದಳ್ದು
(ಸೇರಿಹೊಂದಿಕೊಂಡು) ಒಡನೆ
ಒಡನೋಡುವಟ್ಟ ಎನಗೆ
(ಆಗಲೇ ಜೊತೆಯಲ್ಲಿಯೇ
ಅವಳನ್ನೇ ನೋಡುತ್ತಿರುವ

ನನಗೆ) ಸಂತಸಮಂ
ಮಱುಕಕ್ಕೆ (ಸಂತೋಷವನ್ನೂ
ಸಂತಾಪವನ್ನೂ) ಮಾಣ್ದೊಡೆ
(ಬಿಟ್ಟರೆ) ಈ ನಡೆಗಿಡೆ (ಈ
ಕ್ರಿಯೆ ನಿಂತುಹೋದಾಗ)
ಸತ್ವಮಂ ತಮಮುಮಂ)
ಕಡೆಗಣ್ಣೊಳೆ ಕಂಡೆನು
ಓಪಳಾ(ಪ್ರಿಯಳಾ)
(ಪ್ರಿಯಳಾದ ಅವಳ
ಕಡೆಗಣ್ಣಿನಲ್ಲಿ ಸತ್ವ
(ಪ್ರೇಮ)ಮತ್ತು ತಮೋಗುಣ

(ಕಾಮ)ಗಳನ್ನು ಏಕತ್ರ ನೋಡುತ್ತಿದ್ದೇನೆ

ಪದ್ಯ-೭೭:ಅರ್ಥ: . ಬಾಗೆಹೂವಿನ ತಾವರೆಮುಖ ಎಂಬಂತಿರುವ ಅವಳ ಮುಖವೆಂಬ ತಾವರೆಯ ದೀರ್ಘವಾದ ಎಸಳುಗಳಲ್ಲಿ ಮರಿದುಂಬಿಯು ಹೋಗಿ ಸೇರಿ ಸಮನ್ವಯಗೊಂಡಿರುವಂತೆ ಹೂವಿನಂತಿರುವ ಅವಳ ಕಣ್ಣಿನ ಬಿಳಿಯ ಬಣ್ಣವು

ಗುಡ್ಡೆಯ ಕಪ್ಪು ಬಣ್ಣದಲ್ಲಿ ಹೊಂದಿಕೊಂಡು ಆಗಲೇ ಜೊತೆಯಲ್ಲಿಯೇ ಅವಳನ್ನೇ ನೋಡುತ್ತಿರುವ ನನಗೆ (ಅವಳ ಪ್ರೇಮದ)ಸಂತೋಷವನ್ನೂ (ಕಾಮದ) ಸಂತಾಪವನ್ನೂ ನಾನು ಅವಳ ಕಡೆಗಣ್ಣಿನಲ್ಲಿ ಸತ್ವ (ಪ್ರೇಮ)ಮತ್ತು ತಮೋಗುಣ (ಕಾಮ)ಗಳನ್ನು ಏಕತ್ರ ನೋಡುತ್ತಿದ್ದೇನೆ

ಚಂ|| ಒದವಿದ
ಬೇಟವಪ್ಪೊಡೆನಗತ್ತ್ತಳಗಂ
ಬಗೆವೇಱೆಪ್ಪೊಡೆನ್ನ ಮೇ
ಳದ
ಕೆಳೆಯರ್ಕಳಿಲ್ಲವಳುಮಪ್ಪೊಡೆ
ಜವ್ವನಮತ್ತೆ ನಾಣ ಕಾ|
ಪದು ಪಿರಿದೋತು
ಮಾತಡಕಲೊಂದಿದ
ದೂದವರಿಲ್ಲ ನೆಟ್ಟನ
ಪ್ಪುದಱಿನದಿಂತರಣ್ಯರುದಿತಂ
ವಲವೆನ್ನೊಲವಿಂದುವಕ್ತ್ರೆಯಾ||

೭೯ ||

ಪದ್ಯ-೭೯:ಪದವಿಭಾಗ-ಅರ್ಥ:ಒದವಿದ ಬೇಟವಪ್ಪೊಡೆ ಎನಗೆ ಅತ್ತಳಗಂ (ನನಗೆ ಈಗ ಒದಗಿದ ಪ್ರೇಮವಾದರೋ ಸಹಿಸಲಶಕ್ಯವಾದುದು) ಬಗೆವೇಟಪ್ಪೊಡೆ ಎನ್ನ ಮೇಳದ ಕೆಳೆಯರ್ಕಳಿಲ್ಲ (ಮನಸ್ಸನ್ನು (ಅವಳಿಗೆ) ತಿಳಿಸೋಣವೆಂದರೆ ಆಪ್ತ ಸ್ನೇಹಿತರಿಲ್ಲ) ಅವಳುಂ

ಅಪ್ಪೊಡೆ ಜವ್ವನಮತ್ತೆ (
ಸುಭದ್ರೆಯಾದರೋ
ಯವ್ವನದಿಂದ
ಮದಿಸಿರುವವಳು;) ನಾಣ
ಕಾಪದು ಪಿರಿದು (ಅವಳಿಗೆ
ನಾಚಿಕೆಯ ತಡೆ ದೊಡ್ಡದು)
ಓತು ಮಾತಡಕಲು ಒಂದಿದ
ದೂದವರಿಲ್ಲ (ಪ್ರೀತಿಸಿ
ಮಾತಾಡೋಣವೆಂದರೆ
ನಂಬಿದ ದೂತರಿಲ್ಲ.) ನೆಟ್ಟನೆ
ಅಪ್ಪುದಱಿನದಿಂತು

ಅರಣ್ಯರುದಿತಂ (ನಿಜಕ್ಕೂ ಆದ್ದರಿಂದ ಇದು ಅರಣ್ಯರೋದನವಾಗಿದೆ) ವಲಂ! ಎನ್ನೊಲವು ಇಂದುವಕ್ತ್ರೆಯಾ(ಚಂದ್ರಮುಖಿಯ ನನ್ನ ಪ್ರೇಮವು ವಲಂ-ನಿಜಕ್ಕೂ)

ಪದ್ಯ-೭೯:ಅರ್ಥ: ನನಗೆ ಈಗ ಒದಗಿದ ಪ್ರೇಮವಾದರೋ ಸಹಿಸಲಶಕ್ಯವಾದುದು.

ಮನಸ್ಸನ್ನು (ಅವಳಿಗೆ)
ತಿಳಿಸೋಣವೆಂದರೆ ಆಪ್ತ
ಸ್ನೇಹಿತರಿಲ್ಲ ;
ಸುಭದ್ರೆಯಾದರೋ
ಯವ್ವನದಿಂದ
ಮದಿಸಿರುವವಳು; ಅವಳಿಗೆ
ನಾಚಿಕೆಯ ತಡೆ ದೊಡ್ಡದು.
ಪ್ರೀತಿಸಿ
ಮಾತಾಡೋಣವೆಂದರೆ
ನಂಬಿದ ದೂತರಿರಿಲ್ಲ.
ಆದುದರಿಂದ

ಚಂದ್ರಮುಖಿಯಾದ ಸುಭದ್ರೆಗೆ
ಸಂಬಂಸಿದ ನನ್ನ ಪ್ರೇಮವು
ವಲಂ-ನಿಜಕ್ಕೂ ಇದು
ಅರಣ್ಯರೋದನವಾಗಿದೆ.

ವ|| ಎಂದಿಂತು ನಲ್ಲಳಂ ನೆನೆದು ಕಣ್ಣಾಗಪನೆ ಕಾದು ಚಿಂತಾಸಮುದ್ರಾಂತರ ಪರಿವೃತನಾಗಿ ಸೈರಿಸಲಾಱದೆಪ್ಪೊೞಲಂ ತೊೞಲ್ದು ನೋೞ್ಪ ಬಗೆದಂದು ರಾಜಮಂದಿರದಿಂ

ಪೊಱಮಟ್ಟು ಬರೆ ತನ್ನಂ
ಕಾಣಲೊಡಮಱಿದು
ನುಡಿಯಿಸಿ ಮೆಚ್ಚಿ ಮೇಳದ
ನಾಗರಿಕ ವಿಟ ವಿದೂಷಕ
ಪೀತಮರ್ದಕರ್ಕಳ್ವೆರಸು
ಕಾಮದೇವನೋಲಗಕ್ಕೆ
ಬರ್ಪಂತೆ
ಸೂಳೆಗೇರಿಯೊಳಗನೆ
ಬರ್ಪುದುಮಲ್ಲಿ-

ವಚನ:ಪದವಿಭಾಗ-

ಅರ್ಥ:ಎಂದು ಇಂತು ನಲ್ಲಳಂ

ನೆನೆದು ಕಣ್ಣಾಪನೆ ಕಾದು
(ಅವಳು ಕಣ್ಣಿಗೆ
ಬೀಳುವುದನ್ನೇ ಕಾಯುತ್ತಾ)
ಚಿಂತಾಸಮುದ್ರಾಂತರ
ಪರಿವೃತನಾಗಿ ಸೈರಿಸಲಾಱದೆ
(ಚಿಂತೆಯ ಸಮುದ್ರದಿಂದ
ಸುತ್ತುವರಿದವನಾಗಿ
ಸಹಿಸಲಾರದೆ) ಪೊೞಲಂ
ತೊೞಲ್ದು ನೋೞ್ಪ ಬಗೆದು
(ನಗರವನ್ನು ಸುತ್ತಿ ನೋಡಿ
ಬರೋಣವೆಂದು ಮನಸ್ಸು

ನಾಡಿ- ಮಾಡಿದನು.) ಅಂದು ರಾಜಮಂದಿರದಿಂ ಪೊಱಮಟ್ಟು ಬರೆ (ಅರಮನೆಯಿಂದ ಹೊರಟು ಬರಲು) ತನ್ನಂ ಕಾಣಲೊಡಂ ಅಱಿದು ನುಡಿಯಿಸಿ ಮೆಚ್ಚಿ ಮೇಳದ ನಾಗರಿಕ ವಿಟ ವಿದೂಷಕ (ಅರಮನೆಯಿಂದ ಹೊರಟು ಬರಲು ತನ್ನನ್ನು ಕಂಡು ತಕ್ಷಣವೇ ಗುರುತಿಸಿ ಮಾತನಾಡಿ ಮೆಚ್ಚಿದ

ಜೊತೆಗಾರರಾದ ನಾಗರಿಕ ವಿಟ / ಸ್ತ್ರೀಲೋಲ ಹಾಸ್ಯಗಾರ ಮತ್ತು) ಪೀತಮರ್ದಕರ್ಕಳ್ ವೆರಸು (ರಾಜಕುಮಾರರ ಸ್ತ್ರೀಸಹಾಯಕರ ಒಡಗೂಡಿ) ಕಾಮದೇವನ ಓಲಗಕ್ಕೆ ಬರ್ಪಂತೆ (ಬರುವಂತೆ) ಸೂಳೆಗೇರಿಯೊಳಗನೆ ಬರ್ಪುದುಂ ಅಲ್ಲಿ-

ವಚನ:ಅರ್ಥ:ಹೀಗೆ ಅರ್ಜುನನು ಪ್ರಿಯಳನ್ನು

ಜ್ಞಾಪಿಸಿಕೊಂಡು ಅವಳು
ಕಣ್ಣಿಗೆ ಬೀಳುವುದನ್ನೇ
ಕಾಯುತ್ತಾ ಚಿಂತಾಸಮುದ್ರದ
ಮಧ್ಯದಿಂದ
ಸುತ್ತುವರಿಯಲ್ಪಟ್ಟವನಾಗಿ
ಸಹಿಸಲಾರದೆ
(ಮನಶಾಂತಿಗಾಗಿ) ನಗರವನ್ನು
ಸುತ್ತಿ ನೋಡಿ ಬರೋಣವೆಂದು
ಮನಸ್ಸು ಮಾಡಿ,
ಅರಮನೆಯಿಂದ ಹೊರಟು
ಬರಲು ತನ್ನನ್ನು ಕಂಡು

ತಕ್ಷಣವೇ ಗುರುತಿಸಿ
ಮಾತನಾಡಿ ಮೆಚ್ಚಿದ
ಜೊತೆಗಾರರಾದ ನಾಗರಿಕ
(ಜಾಣನಾದ ಪಟ್ಟಣದವನು)
ವಿಟ (ಸ್ತ್ರೀಲೋಲರಾದ
ರಾಜಕುಮಾರರ ಸ್ನೇಹಿತ)
ವಿದೂಷಕ (ಹಾಸ್ಯಗಾರ)
ಪೀತಮರ್ದಕರೊಡಗೂಡಿ
ಮನ್ಮಥನ ಸಭೆಗೆ ಬರುವಂತೆ
ಸೂಳೆಗೇರಿಯೊಳಗೆ ಬಂದಾಗ
ಅಲ್ಲಿ.

<u>ವೇಶ್ಯಾವಾಟಿಕೆ ವರ್ಣನೆ</u>

ಮ|| ಮೃಗಭೂಖದ್ಧ
ವಿಳಾಸಿನೀ ಕಬರಿಕಾ
ಬಂಧಂಗಳಂ ಪೊತ್ತು ಮ
ಲ್ಲಿಗೆಯೊಳ್ ಭಾವಿಸಿ
ಧೂಪದೊಳ್ ಪೊರೆದು
ತತ್ಕಾಂತಾ ರತಿ ಸ್ವೇದ ಬಿಂ|
ದುಗಳೊಳ್ ನಾಂದು
ಕುರುಳ್ಗಳೊಳ್ ಸುೞಿದು
ಮುಂದೊಂದಿರ್ದ ಸೌಭಾಗ್ಯ
ಘಂ

ಟೆಗಳೊಂದಿಂಚರದೊಳ್ ಪಳಂಚಿ ಸುಟಿದತ್ತಂದೊಂದು ಮಂದಾನಿಳಂ|| ೮೦ ||

ಪದ್ಯ-೮೦:ಪದವಿಭಾಗ-ಅರ್ಥ:ಮೃಗಭೂ ಋದ್ಧ ವಿಳಾಸಿನೀ ಕಬರಿಕಾ ಬಂಧಂಗಳಂ ಪೊತ್ತು (ಕಸ್ತೂರಿಯಿಂದ ಹೆಚ್ಚಿದ ತರುಬಿನ ಗಂಟುಗಳನ್ನು ಹೊತ್ತು) ಮಲ್ಲಿಗೆಯೊಳ್ ಭಾವಿಸಿ ಧೂಪದೊಳ್

ಪೊರೆದು (ಮಲ್ಲಿಗೆಯ
ಪರಿಮಳ, ಧೂಪಹೊಗೆ
ಕೊಟ್ಟುಕೊಂಡು) ತತ್ ಕಾಂತಾ
ರತಿ ಸ್ವೇದ ಬಿಂದುಗಳೊಳ್
ನಾಂದು(ಆ ಸ್ತ್ರೀಯರ
ರತಿಕ್ರೀಡೆಯಲ್ಲಿನ ಬೆವರ
ಹನಿಯಲ್ಲಿ ತೊಯ್ದು)
ಕುರುಳ್ಗಳೊಳ್ ಸುೞಿದು
(ಮುಂಗುರುಳಿನಲ್ಲಿ ಸುತ್ತಾಡಿ)
ಮುಂದೆ ಒಂದಿರ್ದ ಸೌಭಾಗ್ಯ
ಘಂಟೆಗಳ ಒಂದು

ಇಂಚರದೊಳ್ (ದನಿ) ಪಳಂಚಿ (ವೇಶ್ಯಾಗೃಹದ ಮುಂದೆ ಕಟ್ಟಿದ ಇಂಪಾದ ಘಂಟಾನಾದದಲ್ಲಿ ತಾಗಿ,) ಸುೞಿದತ್ತು ಅದೊಂದು ಮಂದಾನಿಳಂ (ಒಂದು ಮಂದಮಾರುತವು ಬೀಸಿತು)

ಪದ್ಯ-೮೦:ಅರ್ಥ: . ಅಲ್ಲಿಯ ಸುಂದರ ಸ್ತ್ರೀಯರು ತಮ್ಮ ತುರುಬಿನಲ್ಲಿ ವಿಶೇಷವಾಗಿ ಲೇಪಿಸಿಕೊಂಡಿದ್ದ ಕಸ್ತೂರಿಯ ಕಂಪನ್ನು ಧರಿಸಿ ಮಲ್ಲಿಗೆಯ

ಪರಿಮಳ, ಧೂಪಹೊಗೆ ಕೊಟ್ಟುಕೊಂಡು ಆ ಸ್ತ್ರೀಯರ ರತಿಕ್ರೀಡೆಯ ಬೆವರ ಹನಿಯಲ್ಲಿ ತೊಯ್ದು, ಮುಂಗುರುಳಿನಲ್ಲಿ ಸುತ್ತಾಡಿ, ವೇಶ್ಯಾಗೃಹದ ಮುಂದೆ ಕಟ್ಟಿದ ಇಂಪಾದ ಘಂಟಾನಾದದಲ್ಲಿ ತಾಗಿ, ಅಲ್ಲಿ ಆಗ ಒಂದು ಮಂದಮಾರುತವು ಬೀಸಿತು.

ವ|| ಆಗಳಾಱುಂ ಋತುಗಳ ಪೂಗಳನೊಂದುಮಾಡಿ

ಪೂವಿನಂಬುಗಳಂ

ಪಣ್ಣಲೆಂದು ಕಾಮದೇವಂ

ಮಾಡಿದೋಜನ

ಸಾಲೆಯಿರ್ಪಂತಿರ್ದ ಪೂವಿನ

ಸಂತೆಯೊಳ್

ವಸಂತಕಾಂತೆಯರಂತೆ-

ವಚನ:ಪದವಿಭಾಗ-

ಅರ್ಥ:ಆಗಳು ಆಱುಂ (ಆರು) ಋತುಗಳ ಪೂಗಳನು ಒಂದುಮಾಡಿ ಪೂವಿನಂಬುಗಳಂ

ಪಣ್ಣಲೆಂದು ಕಾಮದೇವಂ (ಪುಷ್ಪಬಾಣಗಳನ್ನು ಮಾಡಬೇಕೆಂದು ಕಾಮದೇವನು) ಮಾಡಿದ ಓಜನ ಸಾಲೆಯಿರ್ಪಂತೆ ಇರ್ದ(ಕಮ್ಮಾರನ ಬಾಣದತುದಿ ಹದಮಾಡುವ ಶಾಲೆಯಂತೆ ಇದ್ದ) ಪೂವಿನ ಸಂತೆಯೊಳ್ ವಸಂತಕಾಂತೆಯರಂತೆ

(ವಸಂತ ಋತುವಿನ ಅಧಿ ದೇವತೆಯರಂತೆ)-

ವಚನ:ಅರ್ಥ:ಆಗ ಆರು ಋತುಗಳ ಹೂವುಗಳನ್ನೂ ಒಟ್ಟುಗೂಡಿಸಿ ತನ್ನ ಪುಷ್ಪಬಾಣಗಳನ್ನು ಮಾಡಬೇಕೆಂದು ಕಾಮದೇವನು ಮಾಡಿದ ಅಕ್ಕಸಾಲೆಯ ಮನೆಯ ಹಾಗಿದ್ದ ಹೂವಿನ ಸಂತೆಯು ಕಂಡಿತು. ಹೂವಿನ

ಸಮೂಹದ ಮಧ್ಯೆ ಇರುವ
ವಸಂತ ಋತುವಿನ ಅಧಿ
ದೇವತೆಯರಂತೆ-
(ಮಾಲೆಗಾತಿಯರು)

ವ|| ಎತ್ತಿದ ತೋಳ
ಮೊತ್ತಮೊದಲಂಗಜ ಲಂಪಟ
ವಿದ್ದೆಗೆತ್ತಿದಂ
ತೆತ್ತಮಪೂರ್ವಮಾಗೆ
ಪೊಸವಾಸಿಗಮಂಗಜ
ಚಕ್ರವರ್ತಿಗೆಂ|

ದೆತ್ತಿದ

ಮೀನಕೇತನಮನೋತ್ತರಿಸುತ್ತಿ

ರೆ ಚಲ್ಲವಾಡಿ ಪೂ

ವೆತ್ತುವ

ಮಾಲೆಗಾರ್ತಿಯರನೆಂದರಿಕೇ

ಸರಿ ನಿಂದು ನೋಡಿದಂ|| ೮೧||

ಪದ್ಯ-೮೧:ಪದವಿಭಾಗ-

ಅರ್ಥ:ಎತ್ತಿದ ತೋಳ

ಮೊತ್ತಮೊದಲ ಅಂಗಜ

ಲಂಪಟ ವಿದ್ದೆಗೆ

ಅತ್ತಿದಂತೆ(ಎತ್ತಿದ ತೋಳ-

ಬುಡದ ಮೊದಲ ಮನ್ಮಥನ
ಗಾಳಿಪಟ ಆಡಿಸಲು
ಎತ್ತಿದಂತೆ) ಎತ್ತಂ
ಅಪೂರ್ವಮಾಗೆ (ಎಲ್ಲೆಡೆ
ವಿಶೇಷವಾಗಲು)
ಪೊಸವಾಸಿಗಂ (ಹೊಸ
ಬಾಸಿಗ, ಹೂವಿನಹಾರ)
ಅಂಗಜ ಚಕ್ರವರ್ತಿಗೆಂದು
(ಕಾಮರಾಜನಿಗೆ) ಎತ್ತಿದ
ಮೀನಕೇತನಮನು
ಒತ್ತರಿಸುತ್ತಿರೆ (ಮೀನಿನ

ಧ್ವಜವನ್ನು ತಿರಸ್ಕರಿಸುತ್ತಿರಲು)
ಚಲ್ಲವಾಡಿ ಪೂವ ಎತ್ತುವ
ಮಾಲೆಗಾರ್ತಿಯರನು ಅಂದು
ಅರಿಕೇಸರಿ ನಿಂದು ನೋಡಿದಂ

ಪದ್ಯ-೮೧:ಅರ್ಥ: . ಎತ್ತಿದ
ತೋಳ- ಬುಡದ ಮೊದಲ
ಮನ್ಮಥನ ಗಾಳಿಪಟದಂತೆ
ಆಡಿಸಲು ಎತ್ತಿದ ಅಪೂರ್ವ
ಸೌಂದರ್ಯದಿಂದ ಕೂಡಿರಲು
ಹೊಸದಾಗಿ ಕಟ್ಟಿದ ಹಾರವು
ಮನ್ಮಥ ಚಕ್ರವರ್ತಿಗೆಂದೆತ್ತಿದ

ಮೀನಿನ ಧ್ವಜವನ್ನು
ತಿರಸ್ಕರಿಸುತ್ತಿರಲು
ಚೆಲ್ಲಾಟಗಳಿಂದ ಹೂವನ್ನು
ಮೇಲೆತ್ತಿ ತೋರಿಸುತ್ತಿರುವ
ಅವರನ್ನು ಅರಿಕೇಸರಿಯು
ನಿಂತು ನೋಡಿದನು

ವ|| ನೋಡಿ
ನಾಡಾಡಿಯಲ್ಲದಾಕೆಗಳ
ಜೋಡೆಗೆಯ್ತಂಗಳಂ ಕಂಡಿದು
ಮನೆಯಾಣ್ಮನಂ
ಮಾರುವಂದಮಲ್ಲದೆ ಪೂ

ಮಾರುವಂದಮಲ್ತೆಂದು
ಮುಗುಳ್ನಗೆ ನಗುತ್ತುಂ
ಬರ್ಪನೊಂದೆಡೆಯೊಳ್
ಮನೆಯಾಣ್ಮನ ಕಣ್ಣೆಮೆಯೆ
ಕಾಂಡಪಟಮಾಗೆಯುಂ
ಬಗೆಯಾಣ್ಮನ ಕಣ್ಣೆಮೆಯೆ
ದೂದವಿಯಾಗೆಯುಂ
ಬಗೆದೆಡೆಯನೆಯ್ದಿ ಬಗೆದ
ಬಗೆಯಂ ಬಗೆದಂತೆ ತೀರ್ಚಿ
ಪೋಪ ಜೋಡೆಯರಂ ಕಂಡು
ವಿಕ್ರಮಾರ್ಜುನನಿಂತೆಂದಂ-

ವಚನ:ಪದವಿಭಾಗ-ಅರ್ಥ:

ನೋಡಿ ನಾಡಾಡಿಯಲ್ಲದ ಆಕೆಗಳ ಜೋಡೆಗೆಯ್ತಂಗಳಂ ಕಂಡು (ಸಾಮಾನ್ಯ ನಡತೆಯಲ್ಲದ ಅವರ ಜಾರಚೇಷ್ಟೆಗಳನ್ನು ಕಂಡು) ಇದು ಮನೆಯ ಆಣ್ಮನಂ (ಗಂಡನನ್ನು) ಮಾರುವ ಅಂದಂ (ರೀತಿ) ಅಲ್ಲದೆ ಪೂ ಮಾರುವ ಅಂದಮು ಅಲ್ತೆಂದು ಮುಗುಳ್ನಗೆ

ನಗುತ್ತುಂ, ಬರ್ಪನು
ಒಂದೆಡೆಯೊಳ್ ಮನೆಯ
ಆಣ್ಮನ ಕಣ್ಣ್ಮೆಯೆ
ಕಾಂಡಪಟಂ (ಆಣ್ಮನ
ತೆರೆಯನ್ನಾಗಿ, -ಗಂಡನ
ಕಣ್ಣುತಪ್ಪಿಸಿ) ಆಗೆಯುಂ
ಬಗೆಯ ಆಣ್ಮನ (ಮನದ
ಪ್ರೀತಿಯ ಪರಪುರುಷನ)
ಕಣ್ಣ್ಮೆಯೆ
ದೂದವಿಯಾಗೆಯುಂ (ಸಖಿ
ದಾಸಿಯಾಗಿಯೂ) ಬಗೆದ

ಎಡೆಯನು ಎಯ್ದಿ () ಬಗೆದ ಬಗೆಯಂ ಬಗೆದಂತೆ ತೀರ್ಚಿ ಪೋಪ (ತೀರಿಸಿಕೊಂಡು ಹೋಗುವ) ಜೋಡೆಯರಂ(ಜಾರೆಯರನ್ನು) ಕಂಡು ವಿಕ್ರಮಾರ್ಜುನನು ಇಂತು ಎಂದಂ-

ವಚನ:ಅರ್ಥ:ಸಾಮಾನ್ಯ ನಡತೆಯಲ್ಲದಅವರ ಜಾರಚೇಷ್ಟೆಗಳನ್ನು ಕಂಡು, ಇದು ಮನೆಯ ಗಂಡನನ್ನು

ಮಾರುವ ರೀತಿಯಲ್ಲದೆ
ಹೂವನ್ನು ಮಾರುವ
ರೀತಿಯಲ್ಲವೆಂದು
ಹುಸಿನಗೆಯನ್ನು ನಗುತ್ತ
ಮುಂದೆ ನಡೆದನು. ಒಂದು
ಕಡೆಯಲ್ಲಿ ಮನೆಯೊಡೆಯನ
ಕಣ್ಣರೆಪ್ಪೆಯನ್ನು
ತೆರೆಯನ್ನಾಗಿಯೂ
ಮನದೊಲವಿನ ಮಿಂಡನ
ಕಣ್ಣ ದೃಷ್ಟಿಯನ್ನೇ
ಸಖಿಯನ್ನಾಗಿಯೂ ಭಾವಿಸಿದ

ಆಸೆಯನ್ನ ಅವನೊಡನೆ ಸೇರಿ
ಇಷ್ಟಾರ್ಥವನ್ನು ಬಗೆದಂತೆ
ತೀರಿಸಿಕೊಂಡು ಹೋಗುವ
ಜಾರೆಯರನ್ನು ಕಂಡು
ವಿಕ್ರಮಾರ್ಜುನನು
ಹೀಗೆಂದನು-

ಮ|| ಕುಱುಪಂ ಪುರ್ವಿನ
ಜರ್ವೆ ತೋರೆ ಬಗೆಯಂ
ಕಣ್ಸನ್ನೆಗಳ್ ಪೇೞ್ ತ
ನ್ನೈಱಿಕಂ ತನ್ನ ಮನಕ್ಕೆ ಕೂಡೆ
ಕೆಲಕಂ ಗಂಡಂಗಮೊಳ್ಪಂ

ಕರಂ|
ಮೆರೆವಾ ಪ್ರೌಢೆಯ
ಜೋಡೆಯಕ್ಕುಮೆಡೆಯೊಳ್
ದೂಂಟಿಂದೆ ದೂರಟಿಂಗೆ ಪೆ
ರ್ವಯಂ ಪೊಯ್ಸಿ ಕೆಲಕ್ಕೆ
ನಾಣ್ಚಿ ತಲೆಗುತ್ತಿರ್ಪಾಕೆಯೇಂ
ಜೋಡೆಯೇ|| ೮೨ ||

ಪದ್ಯ-೮೨:ಪದವಿಭಾಗ-
ಅರ್ಥ:ಕುಱುಪಂ ಪುರ್ವಿನ
ಜರ್ವೆ ತೋರೆ
(ಸಂಕೇತಸ್ಥಳವನ್ನು ಹುಬ್ಬನ್ನು

ಜರಗಿಸುವುದರಿಂದಲೇ
ತೋರುವ) ಬಗೆಯಂ
ಕಣ್ಸನ್ನೆಗಳ್ ಪೇಟೆ ತನ್ನೆಱಕಂ
(ತನ್ನ ಮನಸ್ಸಿನ
ಬಯಕೆಯವನ್ನು ಕಣ್ಣಿನ
ಸನ್ನೆಗಳಿಂದಲೇ ತೋರಿಸುತ್ತ,)
ತನ್ನ ಮನಕ್ಕೆ ಕೂಡೆ ಕೆಲಕಂ
ಗಂಡಂಗಂ ಒಳ್ಪಂ ಕರಂ
ಮೆರೆವಾ ಪ್ರೌಢೆಯ
ಜೋಡೆಯಕ್ಕುಂ ಎಡೆಯೊಳ್
-ಎಲ್ಲರ ನಡುವೆ, (ತನ್ನ

ಪ್ರೀತಿಯು ತನ್ನ ಮನಸ್ಸಿಗೆ
ಒಪ್ಪಿರಲು ತನ್ನ ಪಕ್ಕದವ
ಮತ್ತು ತನ್ನ ಗಂಡ ಇವರಿಗೆ
ಒಳಿತನ್ನು ಚೆನ್ನಾಗಿ ನೆಡೆಸುವ
ಆ ಚತುರಳೇ ಎಲ್ಲರ ನಡುವೆ
ನಿಜವಾದ ಜಾರೆ.) ದೂಂಟಿಂದೆ
ದೂರಟಿಂಗೆ (ಹೆಜ್ಜೆ ಹೆಜ್ಜೆಗೆ)
ಪೆರ್ವಯಂ ಪೊಯ್ಸಿ (ಡಂಗುರ
ಹೊಡಿಸಿ) ಕೆಲಕ್ಕೆ ನಾಣ್ಚೆ
(ಪಕ್ಕದವರಿಗೆ- ಸಮಾಜಕ್ಕೆ
ನಾಚಿ) ತಲೆಗುತ್ತಿರ್ಪ

ಆಕೆಯೇಂ ಜೋಡೆಯೇ (ತಲೆತಗ್ಗಿಸುವಾಕೆ ಜಾರೆಯಾಗಬಲ್ಲಳೇ?)

ಪದ್ಯ-೮೨:ಅರ್ಥ: ಸಂಕೇತಸ್ಥಳವನ್ನು ಹುಬ್ಬನ್ನು ಜರಗಿಸುವುದರಿಂದಲೇ ತೋರುವ, ತಮ್ಮ ಮನಸ್ಸಿನ ಬಯಕೆಯವನ್ನು ಕಣ್ಣಿನ ಸನ್ನೆಗಳಿಂದಲೇ ತೋರಿಸುತ್ತ, ತನ್ನ ಪ್ರೀತಿಯು ತನ್ನ ಮನಸ್ಸಿಗೆ ಒಪ್ಪಿರಲು ತನ್ನ ಪಕ್ಕದವ

ಮತ್ತು ತನ್ನ ಗಂಡ ಇವರಿಗೆ
ಒಳಿತನ್ನು ಚೆನ್ನಾಗಿ ನೆಡೆಸುವ
ಆ ಚತುರಳೇ ನಿಜವಾದ ಜಾರೆ.
ಪಕ್ಕಪಕ್ಕಗಳಲ್ಲಿ ಹೆಜ್ಜೆ ಹೆಜ್ಜೆಗೂ
ಡಂಗುರ ಹೊಡಿಸಿ
ಅಕ್ಕಪಕ್ಕದವರಿಗೆ
ನಾಚಿಕೊಂಡು ತಲೆತಗ್ಗಿಸುವಾಕೆ
ಜಾರೆಯಾಗಬಲ್ಲಳೇ? (ನಾಚಿಕೆ
ಬಿಟ್ಟವಳು ಮಾತ್ರಾ ಜಾರೆ
ಎಂದು ಭಾವವೇ? ಆಥವಾ

ತನ್ನ ಗುಟ್ಟನ್ನು ಬಿಡದವಳು
ಎಂದೇ?)

ಉ|| ಕೂರಿದುವಪ್ಪ
ಕಣ್ಮಲರ್ಗಳಳ್ಕೆರ್ದೆಯೊಳ್
ತಡಮಾಡೆ ತಾಮೆ ಕಣ್
ಪೇರಿಸೆ ಪುರ್ವು
ನಾಲಗೆವೊಲಾಗೆ
ಮನಂಬುಗಿಸಲ್ಕೆ ಬಲ್ಲೊಡಾ|
ಜಾರೆಯೆ ಜಾರೆ ಪಾರೆನೆ ಕರಂ
ಪಿರಿದುಂ ಗಱಪುತ್ತುಮಿರ್ಪಳಂ

ಸಾರಿಕೆಯೆಂಬರಲ್ಲದಭಿಸಾರಿಕೆ ಯೆಂಬರೆ ಬುದ್ಧಿಯುಳ್ಳವರ್|| ೮೩ ||

ಪದ್ಯ-00:ಪದವಿಭಾಗ-ಅರ್ಥ:ಕೂರಿದುವಪ್ಪ (ತೀಕ್ಷ್ಣವಾದ) ಕಣ್ ಅಲರ್ಗಳು ಅಳ್ಕೆದೆರ್ದೆಯೊಳ್ ತಡಮಾಡೆ (ಕಣ್ಣೆಂಬ ಹೂವುಗಳು ವಿಟನ ದುರ್ಬಲವಾದ ಎದೆಯನ್ನು ಅಲುಗಿಸಿ) ತಾಮೆ ಕಣ್ಪೇರಿಸೆ

ಪುರ್ವು ನಾಲಗೆವೊಲ್ ಆಗೆ (ಹುಬ್ಬುಗಳನ್ನು ನಾಲಗೆಯಂತೆ ನುಡಿಸುವ ಹಾಗೆ ಚಲಿಸಿ) ಮನಂಬುಗಿಸಲ್ಕೆ ಬಲ್ಲೊಡೆ ಆ(ಅವನ ಮನಸ್ಸೊಳಗೆ ತನ್ನ ಇಂಗಿತ ಸೇರುವಂತೆ ಮಾಡಲು ಬಲ್ಲವಳು- ಅವಳು) ಜಾರೆಯೆ ಜಾರೆ (ನಿಜವಾದ ವೇಶ್ಯೆ.) ಪಾರೆನೆ ಕರಂ ಪಿರಿದುಂ ಗೞಿಪುತ್ತುಂ ಇರ್ಪಳಂ ಸಾರಿಕೆಯೆಂಬರು

(ಬಾಯಿಬಡುಕಿ-ಗಿಣಿಯೆನ್ನುವರು) ಅಲ್ಲದ ಅಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್?

ಪದ್ಯ-00:ಅರ್ಥ: ತನ್ನ ತೀಕ್ಷ್ಣವಾದ ಕಣ್ಣೆಂಬ ಹೂವುಗಳು ವಿಟನ ದುರ್ಬಲವಾದ ಎದೆಯನ್ನು ಅಲುಗಿಸಿ, ಹುಬ್ಬುಗಳನ್ನು ನಾಲಗೆಯಂತೆ ನುಡಿಸಿ ಅವನ ಮನಸ್ಸೊಳಗೆ ತನ್ನ ಇಂಗಿತ

ಸೇರುವಂತೆ ಮಾಡಲು
ಬಲ್ಲವಳು ನಿಜವಾದ ವೇಶ್ಯೆ.
ಜಾರತ್ವವನ್ನು ಕುರಿತು
ವಿಶೇಷವಾಗಿ
ಹರಟುವವಳನ್ನು
ಗಣಿಯೆನ್ನುವರು ಅಲ್ಲದೆ
ಅಭಿಸಾರಿಕೆಯೆಂದು
ಬುದ್ಧಿಯುಳ್ಳವರು
ಅನ್ನುತ್ತಾರೆಯೆ?

ವ|| ಎಂದು ಪಾಣ್ಬರಂಕುಸನಾ ಪಾಣ್ಬೆಯರ ಗೆಯ್ವ

ಗೆಯ್ತಂಗಳುಮಂ ತೋರ್ಪ ಸನ್ನೆಗಳುಮಂ ಆಡುವ ಮಿಱುಗೊಡ್ಡಂಗಳುಮಂ ಕಂಡು ಚೋದ್ಯಂಬಟ್ಟು-

ವಚನ:ಪದವಿಭಾಗ-

ಅರ್ಥ:ಎಂದು ಪಾಣ್ಬರ (ಜಾರೆಯರ) ಅಂಕುಸನು ಆ ಪಾಣ್ಬೆಯರ ಗೆಯ್ವ (ಮಾಡುವ) ಗೆಯ್ತಂಗಳುಮಂ (ಕಾರ್ಯಗಳನ್ನು) ತೋರ್ಪ ಸನ್ನೆಗಳುಮಂ ಆಡುವ

ಮಿಟ್ಟಿಗೊಡ್ಡಂಗಳುಮಂ (ಮೃತ್ಯುವಿನಂತಹ ಚೇಷ್ಟೆಯ ಮಾತು) ಕಂಡು ಚೋದ್ಯಂಬಟ್ಟು-

ವಚನ:ಅರ್ಥ:ಎಂದು ಜಾರೆಯರಿಗೆ ಅಂಕುಶದಂತಿರುವ ಅರಿಕೇಸರಿಯು ಆ ಜಾರೆಯರು ಮಾಡುವ ಕಾರ್ಯವನ್ನೂ ತೋರುವ ಸನ್ನೆಗಳನ್ನೂ ಆಡುವ

ಮೃತ್ಯುವಿನಂತಹ ಚೇಷ್ಟೆಯ ಮಾತುಗಳನ್ನೂ ಕಂಡು ಆಶ್ಚರ್ಯಪಟ್ಟು-

ಮ|| ಅಲರ್ಗಣ್ಣೊಳ್ ಸ್ಮರನಿರ್ದನಕ್ಕುಮೆಡೆವೋಽಪಾ ಜೋಡೆ ಕಾಮಂಗೆ ಕಾ ದಲೆಯಕ್ಕುಂ ಪೆಱತೇನೊ ಪಾರದರದೊಳ್ ಸಂಸಾರ ಸರ್ವಸ್ವಮಂ| ಗೆಲೆವಂದಿಂಪಿನಲಂಪನಾಳ್ದ ಸವಿಯುಂಟಕ್ಕುಂ

ಸಮಂತಾವಗಂ

ತಲೆಯಂ

ಮೂಗುಮನೊತ್ತೆಯಿಟ್ಟು

ನೆರೆವಂತುಂತೇನವರ್

ಗಾಂಪರೇ|| ೮೪ ||

ಪದ್ಯ-00:ಪದವಿಭಾಗ-

ಅರ್ಥ:ಅಲರ್ಗಣ್ಣೊಳ್ (ಅಲರ್ ಕಣ್ಣೊಳ್) ಸ್ಮರಂ ಇರ್ದನಕ್ಕುಂ (ಹೂವಿನಂತಿರುವ ಕಣ್ಣಿನಲ್ಲಿ ಮನ್ಮಥನಿದ್ದಿರಬೇಕು.)

ಎಡೆವ್ರೋಪಾ ಜೋಡೆ
(ಸಂಕೇತಸ್ಥಾನಕ್ಕೆ ಹೋಗುವ
ಆ ಜಾರೆ) ಕಾಮಂಗೆ
ಕಾದಲೆಯಕ್ಕುಂ (ಕಾಮನ
ಪ್ರೀತಿಗೆ ಪಾತ್ರಳಾಗಿದ್ದಿರಬೇಕು)
ಪೆಱತೇನೊ ಪಾರದರದೊಳ್
(ಹಾದರದಲ್ಲಿ ಬೇರೆ
ಏನೋ)ಸಂಸಾರ
ಸರ್ವಸ್ವಮಂ ಗೆಲೆವಂದ (ಗೆದ್ದ,
ಮೀರಿದ) ಇಂಪಿನ ಅಲಂಪನು
(ಸುಖ) ಅಳ್ದ

ಸವಿಯುಂಟಕ್ಕುಂ (ಹೊಂದಿದ ರುಚಿಯಿದ್ದಿರಬೇಕು) ಸಮಂತು ಆವಗಂ(ಯಾವಾಗಲೂ ಚೆನ್ನಾಗಿ) ತಲೆಯಂ ಮೂಗುಮಂ ಒತ್ತೆಯಿಟ್ಟು ನೆರೆವಂತೆ (ತಲೆಯನ್ನೂ ಮೂಗನ್ನೂ ಒತ್ತೆಯಿಟ್ಟು ಹಾದರದಲ್ಲಿ ಕೂಡಲು- ಹಿಂದೆ ಶಿಕ್ಷೆ - ಹಾದರಕ್ಕೆ ತಲೆ ಮೂಗು ಕತ್ತರಿಸುತ್ತಿದ್ದರು)

ಅಂತೇನವರ್ ಗಾಂಪರೇ
(ಹಾಗೆ ಅವರು ದಡ್ಡರೇ?)

ಪದ್ಯ-00:ಅರ್ಥ:

(ಜಾರಸ್ತ್ರೀಯರ)
ಹೂವಿನಂತಿರುವ ಕಣ್ಣಿನಲ್ಲಿ
ಮನ್ಮಥನಿದ್ದಿರಬೇಕು.
ಸಂಕೇತಸ್ಥಾನಕ್ಕೆ ಹೋಗುವ ಆ
ಜಾರೆ ಕಾಮನ ಪ್ರೀತಿಗೆ
ಪಾತ್ರಳಾಗಿದ್ದಿರಬೇಕು.
ಹಾದರದಲ್ಲಿ ಸಂಸಾರಸಾರ
ಸರ್ವಸ್ವವನ್ನೂ ಮೀರಿರುವ

ಸುಖದ ಸೊಂಪನ್ನು ಹೊಂದಿದ ರುಚಿಯಿದ್ದಿರಬೇಕು. ಹಾಗಿಲ್ಲದ ಪಕ್ಷದಲ್ಲಿ ಯಾವಾಗಲೂ ಅವರು ತಲೆಯನ್ನೂ ಮೂಗನ್ನೂ ಒತ್ತೆಯಿಟ್ಟು ಸುಮ್ಮನೆ ಜಾರತನ ಮಾಡಿ ಕೂಡಲು ದಡ್ಡರೆ?

ವ|| ಎನತ್ತುಂ ಬರ್ಪನೊಂದೆಡೆಯೊಳ್ ಮನಸಿಜನ ನಡಪಿದ ಜಂಗಮಲತೆಗಳಂತೆ

ಮನೋಜನ ಕಾಪಿನ
ಕಲ್ಪಲತೆಗಳಂತೆ
ಮನೋಜನೆಂಬ ದೀವಗಾಱನ
ಪುಲ್ಲೆಗಳಂತೆ ತಂತಮ್ಮ
ಮನೆಯ ಮುಂದಣ ಪಚ್ಚೆಯ
ಜಗುಲಿಗಳೊಳಂ ಮಣಿಮಯ
ಮತ್ತವಾರಣಂಗಳೊಳಮಳವಿ
ಗೞಿದ ವಿಳಾಸಂಗಳೊಳಂ
ತಂಡತಂಡದೆ ನೆರೆದಿರ್ದ
ಪೆಂಡವಾಸದೊಳ್ವೆಂಡಿರಂ
ಕಂಡು-

ವಚನ:ಪದವಿಭಾಗ-ಅರ್ಥ:ಎನತ್ತುಂ ಬರ್ಪನೊಂದು ಎಡೆಯೊಳ್ ಮನಸಿಜನ ನಡಪಿದ () ಜಂಗಮಲತೆಗಳಂತೆ (ಮನ್ಮಥನು ನೆಟ್ಟ ನೆಡೆದಾಡುವ ಬಳ್ಳಿಯಂತೆಯೂ,) ಮನೋಜನ ಕಾಪಿನ ಕಲ್ಪಲತೆಗಳಂತೆ ಮನೋಜನೆಂಬ ದೀವಗಾಱನ

(ಬಲಿಯೊಡ್ಡಿ
ಬೇಟೆಯಾಡುವವ)
ಪುಲ್ಲೆಗಳಂತೆ ತಂತಮ್ಮ
ಮನೆಯ ಮುಂದಣ ಪಚ್ಚೆಯ
ಜಗುಲಿಗಳೊಳಂ ಮಣಿಮಯ
ಮತ್ತವಾರಣಂಗಳೊಳಂ
ಅಳವಿಗಱಿದ
(ಅಳೆಯಲಾಗದ)
ವಿಳಾಸಂಗಳೊಳಂ
(ವೈಭವಗಳಿಂದ ಕೂಡಿ)
ತಂಡತಂಡದೆ ನೆರೆದಿರ್ದ

ಪೆಂಡವಾಸದೊಳ್ (ಸೂಳೆಗೇರಿಯಲ್ಲಿ) ವೆಂಡಿರಂ (ಒಳ್ಳೆಯ ಹೆಂಗಸರನ್ನು) ಕಂಡು-

ವಚನ:ಅರ್ಥ:ಎಂದುಕೊಂಡು ಬರುತ್ತಿದ್ದವನು ಒಂದು ಸ್ಥಳದಲ್ಲಿ ಮನ್ಮಥನು ನೆಟ್ಟ ನೆಡೆದಾಡುವ ಬಳ್ಳಿಯಂತೆಯೂ, ಕಾಮನ ರಕ್ಷಣೆಯಲ್ಲಿರುವ ಕಲ್ಪಲತೆಗಳಂತೆಯೂ,

ಮನೋಜನೆಂಬ ಬೇಟೆಗಾರನ
ಬಲಿಗಿಟ್ಟ ಹುಲ್ಲೆಯಂತೆಯೂ,
ತಮ್ಮ ತಮ್ಮ ಮನೆಯ
ಮುಂದಿನ ಪಚ್ಚೆಯ ರತ್ನದಿಂದ
ನಿರ್ಮಿತವಾದ
ಜಗಲಿಗಳಲ್ಲಿಯೂ
ರತ್ನಖಚಿತವಾದ ಮನೆಯ
ಮುಂದಿನ ಕೈಸಾಲೆಗಳಲ್ಲಿಯೂ
ಅಳೆಯಲಾಗದ
ವೈಭವಗಳಿಂದ ಕೂಡಿ ಗುಂಪು
ಗುಂಪಾಗಿ ಸೇರಿದ್ದ

ಸೂಳೆಗೇರಿಯಲ್ಲಿ ಒಳ್ಳೆಯ ಹೆಂಗಸರನ್ನು ನೋಡಿದನು; ನೋಡಿ-

ಚಂ|| ಮನಸಿಜನೀಕೆಗಂಡು
ರತಿಯಂ ಬಿಸುಟಂ
ಹರನೀಕೆಗಂಡು ನೂ
ತನ ಗಿರಿಜಾತೆಯಂ ತೊರೆದನಾ
ನರಕಾಂತಕನೀಕೆಗಂಡು ತೊ|
ಟ್ಟನೆ ನಿಜಲಕ್ಷ್ಮಿಯಂ
ಮರೆದನೆಂಬ
ನೆಗಳ್ತೆಯನಪ್ಪುಕೆಯ್ದು ಜ

ವ್ವನದ ವಿಳಾಸದಂದದ ಬೆಡಂಗಿನ ಪೆಂಡಿರೆ ಪೆಂಡಿರಲ್ಲಿಯಾ|| ೮೫||

ಪದ್ಯ-೮೫:ಪದವಿಭಾಗ-ಅರ್ಥ:ಮನಸಿಜನು (ಮನ್ಮಥನು) ಈಕೆಗಂಡು ರತಿಯಂ ಬಿಸುಟಂ ಹರನು ಈಕೆಗಂಡು ನೂತನ ಗಿರಿಜಾತೆಯಂ ತೊರೆದಂ, ಆ ನರಕಾಂತಕನು (ವಿಷ್ಣುವು) ಈಕೆಗಂಡು ತೊಟ್ಟನೆ

ನಿಜಲಕ್ಷ್ಮಿಯಂ ಮರೆದನು,
ಎಂಬ ನೆಗಟ್ತೆಯನು
ಅಪ್ಪುಕೆಯ್ದು ಜವ್ವನದ
ವಿಳಾಸದ ಅಂದದ
(ಪ್ರಸಿದ್ಧಿಯನ್ನು ಪಡೆದು
ಯವ್ವನದ ಶೋಭೆಯ)
ಬೆಡಂಗಿನ ಪೆಂಡಿರೆ ಪೆಂಡಿರು
ಇಲ್ಲಿಯಾ

ಪದ್ಯ-೮೫:ಅರ್ಥ: (ಈ
ವೇಶ್ಯಾವಟಿಕೆಯ ಹೆಣ್ಣನ್ನು
ಕಂಡು ಅರ್ಜುನ-) ಇವಳ

ಸೌಂದರ್ಯವನ್ನು ನೋಡಿ ಮನ್ಮಥನು (ತನ್ನ ಪ್ರಿಯಪತ್ನಿಯಾದ) ರತಿಯನ್ನು ಬಿಸುಟಿದ್ದಾನೆ. ಈಶ್ವರನು ಇವಳನ್ನು ನೋಡಿ ನೂತನವಧುವಾದ ಪಾರ್ವತಿಯನ್ನು ತೊರೆದಿದ್ದಾನೆ. ಆ ನರಕಾಸುರನಿಗೆ ಮೃತ್ಯುವಾದ ವಿಷ್ಣುವು ಇದಕ್ಕಿದ್ದ ಹಾಗೆ ತನ್ನ ಲಕ್ಷ್ಮಿಯನ್ನೂ ಮರೆತಿದ್ದಾನೆ

ಎಂಬ ಪ್ರಸಿದ್ಧಿಯನ್ನು ಪಡೆದು ಯವ್ವನದ ವಿಳಾಸದ ಬೆಡಗಿನಿಂದ ಕೂಡಿದ ಸ್ತ್ರೀಯರೇ ಸ್ತ್ರೀಯರು! (ಇವರ ಚೆಲುವಿಗೆ ಮಿಗಿಲಿಲ್ಲ ಎಂಬ ಭಾವ).

ಚಂ||ತಿಸರಮಿದಾವುದಕ್ಕ ಧರಣೀಂದ್ರನ ಕೊಟ್ಟುದು ವಜ್ರದಾಳಿ ಕ ಣ್ಗೆಸೆವುದಿದಾವುದೊಲ್ಲದುಱಿ ದಟ್ಟಿದೊಡಂದು

ಕುಬೇರನಿತ್ತುದೆ|
ಕ್ಕಸರಮಿದಾವುದಾಂ
ಮುಳಿಯೆ ಕಾಲ್ವಿಡಿದಿಂದ್ರನ
ಕೊಟ್ಟುದಲ್ತೆ ಪೋ
ಪುಸಿಯದಿರೆಂಬ ಸೂಳೆಯರ
ಸೂಳೆಯರಲ್ಲಿಯ
ಪೆಂಡವಾಸದಾ|| ೮೬ ||

ಪದ್ಯ-೮೬:ಪದವಿಭಾಗ-
ಅರ್ಥ:ತಿಸರಂ(ಮೂರೆಳೆ ಸರ)
ಇದಾವುದು ಅಕ್ಕ?
ಧರಣೀಂದ್ರನ ಕೊಟ್ಟುದು,

ವಜ್ರದಾಳಿ (ವಜ್ರದ ತಾಲಿ)
ಕಣ್ಗೆಸೆವುದು (ಕಣ್ಣಿಗೆ
ಎಸೆವುದು); ಇದಾವುದು?
ಒಲ್ಲದೆ ಉಱಿದು (ಸಿಟ್ಟು
ಮಾಡಿ) ಅಟ್ಟಿದೊಡೆ, ಅಂದು
ಕುಬೇರನು ಇತ್ತುದು;
ಎಕ್ಕಸರಂ (ಒಂದೆಳೆಸರ)
ಇದಾವುದು? ಆ ಮುಳಿಯೆ
ಕಾಲ್ವಿಡಿದು ಇಂದ್ರನ
(ಇಂದ್ರನು) ಕೊಟ್ಟುದಲ್ತೆ; ಪೋ
ಪುಸಿಯದಿರು (ಹೋಗು

ಸುಳ್ಳು ಹೇಳಬೇಡ) ಎಂಬ ಸೂಳೆಯರೆ ಸೂಳೆಯರು ಅಲ್ಲಿಯ ಪೆಂಡವಾಸದಾ (ಆ ಸೂಳೆಗೇರಿಯ)

ಪದ್ಯ-೮೬:ಅರ್ಥ:

ಮೂರೆಳೆಯ ಹಾರವು ಇದಾವುದಕ್ಕ? ಧರಣೀಂದ್ರನೆಂಬ ಸರ್ಪರಾಜನು ಕೊಟ್ಟುದು; ವಜ್ರದ ತಾಲಿಯ ಕಾಂತಿ ಕಣ್ಣಿಗೆ ಕುಕ್ಕುವುದು, ಇದು

ಯಾವುದು? ನೀನು ಒಪ್ಪದೆ ತಿರಸ್ಕರಿಸಿ ಕಳುಹಿಸಲು ಆ ದಿನ ಕುಬೇರನು ಕೊಟ್ಟುದು. ಈ ಒಂದೆಳೆಯ ಸರ ಯಾವುದು? ನಾನು ಕೋಪಿಸಿಕೊಂಡಾಗ ನನ್ನ ಕಾಲನ್ನು ಕಟ್ಟಿಕೊಂಡು ಇಂದ್ರನು ಕೊಟ್ಟುದಲ್ಲವೇ? ಹೋಗು ಸುಳ್ಳು ಹೇಳಬೇಡ! ಎಂಬ ಪ್ರಸಿದ್ಧಿಯನ್ನು ಪಡೆದಿರುವ ಸೂಳೆಯರೇ

ಸೂಳೆಯರು, ಆ
ಸೂಳೆಗೇರಿಯ!

ವ|| ಎಂಬುದಂ ಕೇಳುತ್ತುಂ ಬರೆವರೆ ಮತ್ತಮಾ ಪೆಂಡವಾಸಗೇರಿಯೊಳಗೆ ಸೌಭಾಗ್ಯದ ಭೋಗದ ಚಾಗದ ರೂಪುಗಳ್ ಮಾನಸರೂಪಾದಂತೆ-

ವಚನ:ಪದವಿಭಾಗ-

ಅರ್ಥ:ಎಂಬುದಂ ಕೇಳುತ್ತುಂ ಬರೆವರೆ (ಬರುವಾಗ) ಮತ್ತಂ

ಆ ಪೆಂಡವಾಸಗೇರಿಯೊಳಗೆ
(ಆ ಸೂಳೆಗೇರಿಯೊಳಗೆ)
ಸೌಭಾಗ್ಯದ ಭೋಗದ ಚಾಗದ
(ತ್ಯಾಗದ) ರೂಪುಗಳ್
ಮಾನಸರೂಪಾದಂತೆ-
ವಚನ:ಅರ್ಥ:ಎನ್ನುವುದನ್ನು
ಕೇಳುತ್ತಾ ಬರುವಾಗ ಪುನ ಆ
ಸೂಳೆಗೇರಿಯೊಳಗೆ
ಸೌಭಾಗ್ಯದ, ಭೋಗದ,
ತ್ಯಾಗದ ರೂಪಗಳು

ಮನುಷ್ಯಾಕಾರವನ್ನು
ತಾಳಿದಂತೆ- (ಇತ್ತು).

<u>ವಿಟರು ಮತ್ತು ಪಾನಶಾಲೆಯ ವರ್ಣನೆ</u>

**ಉ|| ಸೀಗುರಿ ಚಾಪಿ
ನಾಣ್ಕುಣಿದು ಮೆಟ್ಟುವ
ಗುಜ್ಜರಿಗೆಟ್ಟೆ ಬೀರಮಂ
ಚಾಗದ ಪೆಂಪುಮಂ ಪೊಗಳ್ವ
ಸಂಗಡವರ್ಪವರೊಳ್ಪಿನಿಂದೆ
ಮೆ|**

ಯ್ಯೋಗಮಳುಂಬಮಪ್ಪ

ಬಿಯಮಾಗೆರ್ದೆಗಂ ಬರೆ ಬರ್ಪ

ಪಾಂಗಗು

ವಾ್ಗಿರೆ

ಚೆಲ್ವನಾಯ್ತುರಬೋಜಂಗರ

ಲೀಲೆ ಸುರೇಂದ್ರ ಲೀಲೆಯಿಂ||

೮೭||

ಪದ್ಯ-೮೭:ಪದವಿಭಾಗ-

ಅರ್ಥ:ಸೀಗುರಿ ಚಾಪಿ

(ಸೀಗುರಿಯೆಂಬ ಛತ್ರಿ)

ನಾಣ್ಕುಣಿದು ಮೆಟ್ಟುವ

ಗುಜ್ಜರಿಗೆಟ್ಟಿ (ಕುಣಿವ ಗುರ್ಜರ ಕತ್ತೆ) ಬೀರಮಂ ಚಾಗದ ಪೆಂಪುಮಂ ಪೊಗೞ್ವಿ (ಶ್ರೇಷ್ಠತೆಯನ್ನು ಹೊಗಳುವ) ಸಂಗಡ ವರ್ಪವರ ಒಳ್ಪಿನಿಂದೆ (ಒಳ್ಳೆಯರೀತಿ ಮಾಡಿಕೊಂಡಿರುವ) ಮೆಯ್ಯೋಗಂ ಅಳುಂಬಮಪ್ಪ (ದೇಹಾಲಂಕಾರವು ಅತ್ಯತಿಶಯವಾಇರಲು) ಬಿಯಂ ಆಗೆ ಎರ್ದೆಗಂ ಬರೆ

(ಅದರ ವೆಚ್ಚ ಹೆಚ್ಚಿ ಎದೆಗೆ/
ಮನಸ್ಸಿಗೆ ಬರಲು) ಬರ್ಪ
ಪಾಂಗು ಅಗುರ್ವಾಗಿರೆ
(ಬರುವ ರೀವಿಯು
ಅಚ್ಚರಿಯುಂಟು ಮಾಡಲು,)
ಚೆಲ್ವನಾಯ್ತು
(ಚಂದವಾಗಿದ್ದಿತು)
ಅರಬೊಜಂಗರ ಲೀಲೆ
(ಅರಸವಿಟರ ವಿಲಾಸ)
ಸುರೇಂದ್ರ ಲೀಲೆಯಿಂ
(ದೇವೇಂದ್ರನ ವಿಲಾಸಕ್ಕಿಂತ)

ಪದ್ಯ-೮೭:ಅರ್ಥ:

ಸೀಗುರಿಯೆಂಬ ಛತ್ರಿ, ಅಂಗರಕ್ಷಕರು, ಕುಣಿವ ಗುರ್ಜರ ಕತ್ತೆ, ತಮ್ಮ ವೀರ ಮತ್ತು ತ್ಯಾಗದ ಶ್ರೇಷ್ಠತೆಯನ್ನು ಹೊಗಳುವ ಜೊತೆಗೆ ಬರುತ್ತಿರುವವರ ಒಳ್ಳೆಯರೀತಿ ಮಾಡಿಕೊಂಡಿರುವ ದೇಹಾಲಂಕಾರವು ಅದರ ಮೆಚ್ಚ ಹೆಚ್ಚಿ ಎದೆಗೆ/ಮನಸ್ಸಿಗೆ ಬರಲು

(ಹೃದಯಸ್ಪರ್ಶಿಯಾಗಿರಲು),
ಠೀವಿಯು ಅಚ್ಚರಿಯುಂಟು
ಮಾಡಲು, ಬರುತ್ತಿರುವ
ರಾಜವಿಟರ ವಿಲಾಸ
ದೇವೇಂದ್ರನ ವಿಲಾಸಕ್ಕಿಂತ
ಚಂದವಾಗಿದ್ದಿತು

ವ|| ಮತ್ತಮಲ್ಲಿ ಕೋಟಿ ಪೊಂಗೆ ಘಂಟೆಯಲುಗುವ ಕಿಱುಕುಳ ಬೊಜಂಗರುಮಂ ಸುಣ್ಣದೆಲೆಯನೊತ್ತೆಯಿಟ್ಟು ಮದದಾನೆಯುಮಂ

ಮಾಣಿಕಮುಮನೊತ್ತೆವಿಡಿಸಲ
ಟ್ಟುವ ಚಿಕ್ಕ ಪ್ರೋರ್ಕುಳಿ
ಬೊಜಂಗರುಮಂ ಕತ್ತುರಿ
ಬಿಯಮಂ ಮೆರೆದು
ಕತ್ತುರಿಯೊಳ್ ಪೂಱ್ದು
ಕತ್ತುರಿಮಿಗದಂತಿರ್ಪ ಕತ್ತುರಿ
ಬೊಜಂಗರುಮಂ ನೋಡಿ
ಪೊಱಲ ಬೊಜಂಗರ
ಬಿಯದಳವಿಗೆ ಮನದೊಳ್
ಮೆಚ್ಚುತ್ತುಂ ಬರ್ಪನೊಂದೆಡೆ
ಯೊಳ್ದುರ್

ಕಳ್ಕೊಳಮಮರ್ದಿನೊಳಂ
ಪುಟ್ಟಿದ ಪೆಂಡಿರಂತೆ
ಸೊಗಯಿಸುವ ಪಲರು
ಮೊಳ್ವೆಂಡಿರೊಂದೆಡೊಯೊಳಿ
ರ್ದು ಕಾಮದೇವನೆಂಬ
ಬಳಮರ್ದುಕಾಱಿನ ಮಾಡಿದ
ಮರ್ದಿನಂತೆ ಬಳೆದು
ದಳಂಬಡೆದು
ಮೂನೂಱುಱುವತ್ತು ಜಾತಿಯ
ಕಳ್ಗಳಂ ಮುಂದಿಟ್ಟು
ಮಧುಮಂತ್ರದಿಂ

ಮಧುದೇವತೆಗಳನರ್ಚಿಸಿ
ಪೊನ್ನ ಬೆಳ್ಳಿಯ ಪದ್ಮರಾಗದ
ಪಚ್ಚೆಯ ಗಿಳಿಯ ಕೋಗಿಲೆಯ
ಕೊಂಚೆಯಂಚೆಯ
ಕುಂತಳಿಕೆಯ ಮಾಟ್ಕೆಯ
ಸಿಪ್ಪುಗಳೊಳ್ ತೀವಿ
ಮಧುಮಂತ್ರಂಗಳಿಂ ಮಂತ್ರಿಸಿ
ನೆಲದೊಳೆರೆದು ತಲೆಯೊಳ್
ತಳಿದು ಕಳ್ಳೊಳ್
ಬೊಟ್ಟನಿಟ್ಟುಕೊಂಡು
ಕೆಲದರ್ಗೆಲ್ಲಂ ಬೊಟ್ಟಿಟ್ಟು

ಕಿಱಿಯರ್ ಪಿರಿಯರಱಿದು
ಪೊಡವಟ್ಟು
ಧರ್ಮಗಳ್ಗುಡಿವರ್ಗೆಲ್ಲಂ
ಮೀಸಲ್ಗಳ್ಳನೆದು ಪೊನ್ನ
ಬೆಳ್ಳಿಯ ಸಿಪ್ಪುಗಳೊಳ್
ಕಿಱಿಕಿಱಿದನೆರೆದು ಕುಡಿಬಿದಿರ
ಕುಡಿಯ ಮಾವಿನ ಮಿಡಿಯ
ಮಾರುದಿನ ಮೆಣಸುಗಡಲೆಯ
ಪುಡಿಯೊಳಡಸಿದಲ್ಲವಲ್ಲಣಿಗೆ
ಯ ಚಕ್ಕಣಾಂಗಳಂ
ಸವಿಸವಿದು-

ವಚನ:ಪದವಿಭಾಗ-ಅರ್ಥ:ಮತ್ತಂ ಅಲ್ಲಿ ಕೋಟಿ ಪೊಂಗೆ(ಹೊನ್ನಿಗೆ) ಘಂಟೆಯ ಅಲುಗುವ ಕಿಱುಕುಳ (ಸಾಮಾನ್ಯ) ಬೊಜಂಗರುಮಂ (ವಿಟರನ್ನೂ) ಸುಣ್ಣದೆಲೆಯನು ಒತ್ತೆಯಿಟ್ಟು ಮದದಾನೆಯುಮಂ ಮಾಣಿಕಮುಮನು ಒತ್ತೆವಿಡಿಸಲು ಅಟ್ಟುವ ಚಿಕ್ಕ

ಪೊರ್ೞ್ಕುೞಿ ಬೊಜಂಗರುಮಂ (ಕೆಳಮಟ್ಟದ ಜಗಳಗಂಟ ವಿಟರನ್ನೂ) ಕತ್ತುರಿ ಬಿಯಮಂ (ವೆಚ್ಚವನ್ನು) ಮೆರೆದು ಕತ್ತುರಿಯೊಳ್ ಪೂೞ್ದು ಕತ್ತುರಿಮಿಗದಂತಿರ್ಪ (ಕಸ್ತೂರಿಯಲ್ಲಿ ಹೂಳಿದ-ಮುಳುಗಿದಂತಿರುವ, ಕಸ್ತೂರಿ ಮೃಗದಮತಿರುವ) ಕತ್ತುರಿ ಬೊಜಂಗರುಮಂ (ವಿಟರನ್ನು ನೋಡಿ) ನೋಡಿ ಪೊೞಲ

ಬೊಜಂಗರ (ನಗರದ ವಿಟರ)
ಬಿಯದಳವಿಗೆ (ಬಿಯದ -
ಖರ್ಚಿನ ಪ್ರಮಾಣಕ್ಕೆ)
ಮನದೊಳ್ ಮೆಚ್ಚುತ್ತುಂ
ಬರ್ಪನ್ ಒಂದೆಡೆಯೊಳ್
ಇರ್ದು (ಮುಂದೆ ಬರಲು,
ಒಂದು ಕಡೆ) ಕಳ್ಳೊಳಂ
ಅಮರ್ದಿನೊಳಂ ಪುಟ್ಟಿದ
ಪೆಂಡಿರಂತೆ(ಕಳ್ಳಿನಲ್ಲಿಯೂ
ಅಮೃತದಲ್ಲಿಯೂ ಹುಟ್ಟಿದ
ಸ್ತ್ರೀಯರಂತೆ) ಸೊಗಯಿಸುವ

ಪಲರುಂ ಒಂಳ್ವೆಂಡಿರ್
(ಹಲವು ಒಳ್ಳೆಯ ಹೆಂಗಸರು)
ಒಂದೆಡೊಯೊಳ್ ಇರ್ದು
ಕಾಮದೇವನೆಂಬ
ಬಳಮರ್ದುಕಾಱನ (ಸೈನ್ಯದ
ಸಿಡಿಮದ್ದು ಮಾಡುವವನ)
ಮಾಡಿದ ಮರ್ದಿನಂತೆ ಬಳೆದು
(ಬೆಳೆದು) ದಳಂಬಡೆದು
(ದೊಡ್ಡದಾಗಿ)
ಮೂನೂಱಱುವತ್ತು (೩೬೦)
ಜಾತಿಯ ಕಳ್ಗಳಂ

(ಮದ್ಯವನ್ನು) ಮುಂದಿಟ್ಟು
ಮಧುಮಂತ್ರದಿಂ
ಮಧುದೇವತೆಗಳನು ಅರ್ಚಿಸಿ
(ಮದ್ಯವನ್ನು ಪೂಜೆಮಾಡಿ)
ಪೊನ್ನ ಬೆಳ್ಳಿಯ ಪದ್ಮರಾಗದ
ಪಚ್ಚೆಯ (ಈ ವಿಧದ) ಗಿಳಿಯ
ಕೋಗಿಲೆಯ
ಕೊಂಚೆಯಂಚೆಯ
ಕುಂತಳಿಕೆಯ ಮಾಟ್ಕೆಯ
(ಆಕಾರದ)ಸಿಪ್ಪುಗಳೊಳ್
ತೀವಿ (ಚಿಪ್ಪು-ಬಟ್ಟಲಲ್ಲಿ)

ಮಧುಮಂತ್ರಂಗಳಿಂ ಮಂತ್ರಿಸಿ
ನೆಲದೊಳೆರೆದು (ನೆಲಕ್ಕೆ ಹಾಕಿ)
ತಲೆಯೊಳ್ ತಳಿದು
(ಚಿಮುಕಿಸಿಕೊಂಡು) ಕಣ್ಗೊಳ್
ಬೊಟ್ಟನಿಟ್ಟುಕೊಂಡು
ಕೆಲದರ್ಗೆಲ್ಲಂ (ಪಕ್ಕದ)
ಬೊಟ್ಟಿಟ್ಟು ಕಿಱಿಯರ್
ಪಿರಿಯರಱಿದು ಪೊಡವಟ್ಟು
(ನಮಿಸಿ)
ಧರ್ಮಗಳ್ಗುಡಿವರ್ಗೆಲ್ಲಂ
ಮೀಸಲ್ಗಳ್ಳನೆರೆದು ಪೊನ್ನ

ಬೆಳ್ಳಿಯ ಸಿಪ್ಪುಗಳೊಳ್
ಕಿಱಿಕಿಱಿದನೆರೆದು (ಸ್ವಲ್ಪ
ಸ್ವಲ್ಪ ಹಾಕಿ) ಕುಡಿಬಿದಿರ
ಕುಡಿಯ (ಕಳಲೆಚೂರು)
ಮಾವಿನ ಮಿಡಿಯ
ಮಾರುಡಿನ (ಬಿಲ್ಪತ್ರೆಕಾಯಿ)
ಮೆಣಸುಗಡಲೆಯ
ಪುಡಿಯೊಳು ಅಡಸಿದ
ಅಲ್ಲವಲ್ಲಣಿಗೆಯ (ಹಸಿಯ
ಶುಂಠಿಯ ಮಿಶ್ರಣವ)

ಚಕ್ಕಣಂಗಳಂ ಸವಿಸವಿದು-(ಕುಡಿಯುತ್ತಿದ್ದರು)
ವಚನ:ಅರ್ಥ:ಮತ್ತೆ ಅಲ್ಲಿ ಕೋಟಿಹೊನ್ನುಗಳನ್ನು ಕೊಡುತ್ತೇವೆ ಎಂದು ಸೂಳೆಯರ ಮನೆಯ ಮುಂದಿನ ಗಂಟೆಯನ್ನು ಬಾರಿಸುವ ಸಾಮಾನ್ಯ ವಿಟರನ್ನೂ, ಸುಣ್ಣದೆಲೆಯನ್ನು ಒತ್ತೆಯಿಟ್ಟು ಮದ್ದಾನೆಯನ್ನೂ ಮಾಣಿಕ್ಯವನ್ನೂ

ಒತ್ತೆಯಾಗಿಡಲು
ಹೇಳಿಕಳುಹಿಸುವ ಚಿಕ್ಕ
ಜಗಳಗಂಟ ವಿಟರನ್ನೂ, ತಾವು
ವಿಶೇಷವಾಗಿ ಕಸ್ತೂರಿಯನ್ನು
ಲೇಪನ ಮಾಡಿಕೊಂಡು
ಅದರಲ್ಲಿಯೇ
ಮುಳುಗಿದಂತಿರುವ ಆ
ಕಸ್ತೂರಿಯ ವೆಚ್ಚವನ್ನೇ
ಒತ್ತೆಯನ್ನಾಗಿ ತೋರಿಸುತ್ತ
ಕಸ್ತೂರಿಯ ಮೃಗದಂತೆ
ಕರ್ರಗಿರುವ ಕಸ್ತೂರಿ

ವಿಟರನ್ನೂ, ನೋಡಿ ಆ
ಪಟ್ಟಣದ ವಿಟರ ಖರ್ಚು
ಮಾಡುವ ಹಂದ ಪ್ರಮಾಣಕ್ಕೆ
ಮನಸ್ಸಿನಲ್ಲಿ ಮೆಚ್ಚುತ್ತ ಮುಂದೆ
ಬರಲು, ಪಾನಶಾಲೆಯು
ಕಣ್ಣಿಗೆ ಬಿದ್ದಿತು. ಒಂದು
ಕಡೆಯಲ್ಲಿ ಕಳ್ಳಿನಲ್ಲಿಯೂ
ಅಮೃತದಲ್ಲಿಯೂ ಹುಟ್ಟಿದ
ಸ್ತ್ರೀಯರಂತೆ – ಸುರಾದೇವಿ
ಮತ್ತು ಲಕ್ಷ್ಮೀದೇವಿಯರಂತೆ
ಸೊಗಯಿಸುವ ಅನೇಕ

ಸುಂದರಿಯರು ಒಂದು ಕಡೆ
ಸೇರಿ ಕಾಮದೇವನೆಂಬ
ಮದ್ದುಗಾರನು (ತುಬಾಕಿಯ
ಮದ್ದನ್ನು ಮಾಡುವವನು)
ಮಾಡಿದ ಮದ್ದಿನಂತೆ
ಅಭಿವೃದ್ಧಿಯಾಗಿ
ಪುಷ್ಟಿಗೊಂಡಿರುವ
ಮುನ್ನೂರರುವತ್ತು ಜಾತಿಯ
ಕಳ್ಳುಗಳನ್ನು (ಹೆಂಡಗಳನ್ನು)
ತಮ್ಮ ಮುಂದೆ ಇಟ್ಟುಕೊಂಡು
ಮಧುಮಂತ್ರದಿಂದಲೇ

ಮಧುದೇವತೆಗಳನ್ನು ಪೂಜಿಸಿದರು. ಚಿನ್ನ ಬೆಳ್ಳಿ ಮತ್ತು ಪದ್ಮರಾಗಗಳಿಂದ ಗಿಳಿ, ಕೋಗಿಲೆ, ಕ್ರೌಂಚ, ಹಂಸ ಮತ್ತು ಕುಂತಳಿಕೆಯೆಂಬ ಹಕ್ಕಿಗಳ ಮಾದರಿಗಳಲ್ಲಿ ಮಾಡಿರುವ ಚಿಪ್ಪುಗಳಲ್ಲಿ ಯಾ ಬಟ್ಟಲಲ್ಲಿ ತುಂಬಿ (ಮಧುಮಂತ್ರಗಳಿಂದಲೇ ಮಂತ್ರಿಸಿ ನೆಲದಲ್ಲಿ ಸ್ವಲ್ಪ ಸ್ವಲ್ಪ ಚೆಲ್ಲಿ ತಲೆಯಲ್ಲಿ

ಪ್ರೋಕ್ಷಿಸಿಕೊಂಡು,) ಕಳ್ಳಿನಿಂದ
ಮುಖಕ್ಕೆ ಬೊಟ್ಟನ್ನಿಟ್ಟು
ಕಿರಿಯರಾದವರು
ಹಿರಿಯರಾದವರನ್ನು ನಮಿಸಿ
ಮಾಡಿ ಉಚಿತವಾಗಿ
ದಾನಮಾಡಬೇಕಾದವರಿಗಾಗಿ
ಮೀಸಲಾದುದನ್ನು ಅವರಿಗೆ
ದಾನಮಾಡಿದರು. ಚಿನ್ನದ
ಮತ್ತು ಬೆಳ್ಳಿಯ ಚಿಪ್ಪುಗಳಲ್ಲಿ
ಸ್ವಲ್ಪ ಸ್ವಲ್ಪವಾಗಿ
ತುಂಬಿಕೊಂಡು ಎಳೆಯ

ಬಿದಿರಿನ ಕಳಲೆಚೂರು,,

ಮಾವಿನ ಮಿಡಿ, ಬಿಲ್ವಪತ್ರೆಯ

ಕಾಯಿನ ತಿರುಳು, ಕಾರದ

ಕಡಲೆಯ ಪುಡಿಯಿಂದ

ಕೂಡಿದ ಹಸಿಯ ಶುಂಠಿಯ

ಮಿಶ್ರಣವನ್ನುಳ್ಳ

ಚಕ್ಕಣಗಳೆಂಬ ನಂಜಿಕೊಳ್ಳುವ

ಪದಾರ್ಥಗಳನ್ನು ಸವಿಸವಿದು

ಕಳ್ಳು(ಕುಡಿಯುತ್ತಿದ್ದರು)

ಮ|| ಮಧು ಸೀತುಂ(ಸೀಧುಂ)

ಕಟು ಸೀದು ಪೋ ಪುಳಿತ

ಕಳ್ಳಲ್ತುಂ ಕರಂ ಕಯ್ತು ಬ

ರ್ಪುದು ಮಾರೀಚಿ

ತೊಡರ್ಪುಳಿಂದೆ ಸರದಿಂ

ಕಂಪಿಲ್ಗ ಸೋರ್ಕಿಪ್ಪಲಾ|

ಱದು ಚಿಂತಾಮಣಿಗೇವುದಕ್ಕ

ದಳಮಿಲ್ಲೀ ಕಕ್ಕರಕ್ಕಿಂತುಟ

ಪ್ಪುದು ಕಳ್ಳಪ್ಪುದು ತಪ್ಪದೆಂದು

ಕುಡಿದರ್ ಕಾಮಾಂಗಮಂ

ಕಾಂತೆಯರ್|| ೮೮||

ಪದ್ಯ-೮೮:ಪದವಿಭಾಗ-

ಅರ್ಥ:ಮಧು ಸೀತುಂ ಕಟು

ಸೀದು (ಮಧು, ಸೀಧು,
ಕಟುಸೀದು ಮೂರು ಬಗೆ
ಮದ್ಯವು,) ಪೋ (ಏ
ಹೋಗು!) ಪುಳಿತ(ಹುಳಿಯ)
ಕಳ್ಳಲ್ತುಂ ಕರಂ ಕಯ್ತು
ಬರ್ಪುದು(ಬಹಳ
ಕಹಿಯಾಗಿರುವುದು),
ಮಾರೀಚಿ ತೊಡರ್ಪುಳಿಂದೆ
ಸರದಿಂ ಕಂಪಿಲ್ಲ
(ಶರದೆಯೆಂಬ ಮದ್ಯ
ಸವಾಸನೆಯದಲ್ಲ;)

ಸೊರ್ಕಿಪ್ಪಲಾಱಿದು (ಬಹಳ ಮತ್ತುಕೊಡುವುದಲ್ಲ) ಚಿಂತಾಮಣಿಗೆ ಏವುದಕ್ಕ (ಏವುದು- ಏಕೆ ಅಕ್ಕ) ದಳಂ (ಅಡಿಕೆ) ಇಲ್ಲ ಈ ಕಕ್ಕರಕ್ಕೆ ಇಂತುಟಪ್ಪುದು (ಹೀಗಿರುವುದು) ಕಳ್ಳಪ್ಪುದು ತಪ್ಪದೆಂದು (ಹಾಗೆಯೇ ಮದ್ಯವಾಗುತ್ತದೆ ಎಂದು) ಕುಡಿದರ್ ಕಾಮಾಂಗಮಂ

(ಕಾಮವನ್ನು ಕೆರಳಿಸುವ) ಕಾಂತೆಯರ್

ಪದ್ಯ-೮೮:ಅರ್ಥ: ಮಧು, ಸೀಧು, ಕಟುಸೀದು ಮೂರು ಬಗೆ ಮದ್ಯವು, ಕಟುಸೀದುವೆಂಬುದು ಕಟುವಾದುದು, ಹುಳಿಯ ಹೆಂಡವಲ್ಲ; ಬಹಳ ಕಹಿಯಾಗಿರುವುದು. ಮಾರೀಚಿ ಮತ್ತು ತೊಡಪ್ಪುರ್ಳ್ ಎಂಬ

ಮದ್ಯಗಳಿಗಿಂತ ಶರದೆಯೆಂಬ
ಮದ್ಯ ಸವಾಸನೆಯದಲ್ಲ,
ಅಷ್ಟು ಸೊಕ್ಕಿಸಲಾರದು;
ಚಿಂತಾಮಣಿಯೆಂಬ ಮದ್ಯದ
ಸೇವನೆಗೆ ಅಡಿಕೆಯೇಕೆ ಅಕ್ಕ?,
ಕಕ್ಕರವೆಂಬ ಮದ್ಯಕ್ಕೂ
ಹಾಗೆಯೇ (ಬೇಕಿಲ್ಲ)
ಇಂತಹವೇ ಸರಿಯಾದ ಮದ್ಯ
ಎಂದು ಆ ಸ್ತ್ರೀಯರು
ಕಾಮೋದ್ರೇಕಮಾಡುವ
ಮದ್ಯವನ್ನು ಕುಡಿದರು.

ವ|| ಅಂತು ಕುಡಿಯೆ
ಕಕ್ಕರಗೆಯ್ತದಿಂ
ತುದಿನಾಲಗೆಯೊಳ್
ತೊದಳ್ವೆರಸು ನುಡಿವ
ನುಡಿಗಳುಂ ಪೊಡರ್ವ ನಿಡಿಯ
ಪುರ್ವುಗಳುಂ
ನಿಡಿಯಲರ್ಗಣ್ಗಳೊಳ್
ವಿಕಾರಂ ಬೆರಸು
ನೆಗಱ್ದಭಿನಯಂಗಳುಂ
ಮಳಮಳಿಪ ರೂಪು
ಕಣ್ಗಳೊಳ್ ಬೆಳ್ಪನೞಿಯೆ

ಸೋಂಕುವ ಕೆಂಪುಗಳುಂ
ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು
ಕಣ್ಗಳ ಬೆಳ್ಪಂ ತಮಗೆ
ಮಾಱುಗೊಂಡಂತೆ
ತನಿಗೆತ್ತುವರೆಸು ಬತ್ತಿ
ಸೊಗಯಿಸುವ
ಬೆಳರ್ವಾಯ್ಗಳೊಳಿಂಪಂ ತಾಳ್ದಿ
ಪೊಱಮಡುವ
ತಣ್ಗಂಪುಗಳುಮಮೃತಬಿಂದು
ಗಳಂತೆ ನೆಗೞ್ವ ಬೆಮರ
ಬಿಂದುಗಳುಮಳವಲ್ಲದೊಪ್ಪೆ

ಪಲರುಮೊಳ್ವೆಂಡಿರೊಂದೆಡೆ ಯೊಳಿರ್ದಲ್ಲಿ ಯೊರ್ವಳ್-

ವಚನ:ಪದವಿಭಾಗ-

ಅರ್ಥ:ಅಂತು ಕುಡಿಯೆ ಕಕ್ಕರಗೆಯ್ತದಿಂ (ಕಕ್ಕರ ಕೈತ-ಮದ್ಯಕುಡಿಯುವ ಕಾರ್ಯ) ತುದಿನಾಲಗೆಯೊಳ್ ತೊದಳ್ವೆರಸು (ತೊದಲು ಮಾತುಗಳು ಬೆರೆತು) ನುಡಿವ ನುಡಿಗಳುಂ ಪೊಡರ್ವ ನಿಡಿಯ ಪುರ್ವುಗಳುಂ

(ಉದ್ದವಾದ ಪುರ್ಬು/
ಹುಬ್ಬುಗಳು
ಅಲುಗಾಡುತ್ತಿದ್ದವು) ನಿಡಿಯ
ಅಲರ್ಗಣ್ಗಳೊಳ್
(ಹೂವಿನಂತಿರುವ ಉದ್ದ
ಕಣ್ಣುಗಳಲ್ಲಿ) ವಿಕಾರಂ ಬೆರಸು
ನೆಗಟ್ದಿ ಅಭಿನಯಂಗಳುಂ
(ಚೇಷ್ಟೆಗಳು) ಮಳಮಳಿಪ
ರೂಪು (ಕೆಂಪು ಮುಖದ
ರೂಪು) ಕಣ್ಗಳೊಳ್
ಬೆಳ್ಪನೞಿಯೆ (ಕಣ್ಣಿನ ಬಿಳುಪು

ಅಳಿಯೆ/ ಹೋಗಲು)
ಸೋಂಕುವ ಕೆಂಪುಗಳುಂ
ತಮ್ಮ ಕೆಂಪಂ ಕಣ್ಗಳ್ಗೆ ಕೊಟ್ಟು,
ಕಣ್ಗಳ ಬೆಳ್ಪಂ ತಮಗೆ
ಮಾಱುಗೊಂಡಂತೆ
ತನಿಗೆತ್ತುವರೆಸು (ತುಟಿಗಳು-
ನಡುಕವನ್ನು ಹೊಂದಿ) ಬತ್ತಿ
ಸೊಗಯಿಸುವ
ಬೆಳವಾರ್ಯ್ಗಳೊಳ್ ಇಂಪಂ
ತಾಳ್ದಿ (ಬತ್ತಿದ ಬಿಳುಪಾದ
ಬಾಯಿಗಳಲ್ಲಿ ಇಂಪಾದ)

ಪೊಱಮಡುವ
ತಣ್ಗಂಪುಗಳುಂ (ತಂಪಾದ
ವಾಸನೆಗಳು)
ಅಮೃತಬಿಂದುಗಳಂತೆ ನೆಗೞ್ವ
ಬೆಮರ ಬಿಂದುಗಳುಂ
(ಶೋಭಿಸಿವ ಬೆವರ ಹನಿಗಳು)
ಅಳವಲ್ಲದೆ ಒಪ್ಪೆ
(ಅಳತೆಮೀರಿ ಒಪ್ಪಲು)
ಪಲರುಂ ಒಳ್ವೆಂಡಿರ್
(ಉತ್ತಮ ಸ್ತ್ರೀಯರು)

ಒಂದೆಡೆಯೊಳು ಇರ್ದು
ಅಲ್ಲಿಯ ಒರ್ವಳ್ -
ವಚನ:ಅರ್ಥ:ಹಾಗೆ
ಕುಡಿಯಲು ಕಕ್ಕರವೆಂಬ
ಮದ್ಯಪಾನದ ಮದದಿಂದ
ತುದಿನಾಲಗೆಯಲ್ಲಿ ತೊದಲು
ಮಾತುಗಳುಂಟಾದುವು.
ಉದ್ದವಾದ ಹುಬ್ಬುಗಳು
ಅಲುಗಾಡುತ್ತಿದ್ದವು.
ಹೂವಿನಂತಿರುವ ಉದ್ದ
ಕಣ್ಣುಗಳಲ್ಲಿ ವಿಕಾರದಿಂದ

ಕೂಡಿದ ಚೇಷ್ಟೆಗಳು ಕಂಡವು. ಕೆರಳಿ ಕೆಂಪಾದ ರೂಪವು ಕಣ್ಣುಗಳು, ಕಣ್ಣಿನ ಬಿಳುಪು ಹೋಯಿತು. ಆವರಿಸುತ್ತಿರುವ ಕೆಂಪುಬಣ್ಣದ ತುಟಿಗಳು ತಮ್ಮ ಕೆಂಪನ್ನು ಕಣ್ಣುಗಳಿಗೆ ಕೊಟ್ಟು ಅದರ ಬಿಳುಪನ್ನು ತಾವು ತೆಗೆದುಕೊಂಡಂತೆ ತೋರಿದವು. ವಿಶೇಷವಾಗಿ ಅಲುಗಾಡುತ್ತ ಬತ್ತಿದ ಬಿಳುಪಾದ ಬಾಯಿಗಳಲ್ಲಿ

ಇಂಪಾದ ತಂಪಾದ
ವಾಸನೆಗಳು ಸೂಸಿದವು.
ಅಮೃತಬಿಂದುಗಳಂತೆ ಬೆವರ
ಹನಿಗಳು ಶೋಭಿಸಿದುವು.
ಅಳತೆಮೀರಿ ಒಪ್ಪಲು,
ಸೌಂದರ್ಯದಿಂದ ಕೂಡಿದ
ಅನೇಕ ಉತ್ತಮ ಸ್ತ್ರೀಯರು
ಒಂದೆಡೆ ಸೇರಿದರು. ಆ
ಸ್ಥಳದಲ್ಲಿ ಒಬ್ಬಳು-

**ಪೃಥ್ವಿ|| ಬೆಳರ್ತ ಬೆಳರ್ವಾಯ್
ಕರಂ ಪೊಳೆವಪಾಂಗೆ**

ಕಣ್ಣಿಂದಳು
ರ್ತುಳುಂಕೆ ನಿಡುವುರ್ವುಗಳ್
ಪೊಡರೆ ಬಾಯ ಕಂಪಿಂಗೆ ಸಾ|
ರ್ವಳಿಪ್ರಕರಮಂದು
ಸೀಗುಡಿವೊಲಾಗೆ ನಾಣ್ಗೆಟ್ಟು
ಮೊ
ಕ್ಕಳಂ ಜತಿಗೆ ಮೆಟ್ಟುವಳ್
ಪಿಡಿದು ಮೆಟ್ಟುವಳ್
ನೋೞ್ಪರಂ|| ೮೯

ಪದ್ಯ-೮೯:ಪದವಿಭಾಗ-

ಅರ್ಥ:ಬೆಳರ್ತ ಬೆಳರ್ವಾಯ್

(ಬಿಳಿಚಿಕೊಂಡ ತುಟಿ) ಕರಂ
ಪೊಳೆವ ಅಪಾಂಗೆ (ಕಡೆಗಣ್ಣಿನ
ನೋಟವುಳ್ಳ) ಕಣ್ಣಿಂದ
ಅಳುರ್ ತುಳುಂಕೆ (ಅಲುರ್/
ದೃಷ್ಟಿಯು ವ್ಯಾಪಿಸಲು)
ನಿಡುವುರ್ವುಗಳ್ ಪೊಡರೆ
(ನೀಳ ಹುಬ್ಬುಗಳು
ಕುಣಿಯಲು) ಬಾಯ ಕಂಪಿಂಗೆ
ಸಾರ್ವ ಅಳಿಪ್ರಕರಂ
(ಮುತ್ತುತ್ತಿರುವ ದುಂಬಿಯ
ಸಮೂಹವು) ಅಂದು

ಸೀಗುಡಿವ್ರೊಲಾಗೆ ನಾಣ್ಗೆಟ್ಟು (ನಾಣ್ ಕೆಟ್ಟು) ಮೊಕ್ಕಳಂ ಜತಿಗೆ ಮೆಟ್ಟುವಳ್ (ಜತಿಗೆ-ತಾಳಕ್ಕೆ ಸರಿಯಾಗಿ ಕುಣಿಯುವಳು) ಪಿಡಿದು ಮೆಟ್ಟುವಳ್ ನೋಟ್ಪಿರಂ (ನೋಡುವವರನ್ನು ಹಿಡಿದು ಮೆಟ್ಟುವಳು (ಮರುಳು ಮಾಡುವಳು.)

ಪದ್ಯ-೮೯:ಅರ್ಥ:

ಬಿಳಿಚಿಕೊಂಡ ತುಟಿ,

ವಿಶೇಷವಾಗಿ ಹೊಳೆವ
ಕಡೆಗಣ್ಣಿನ ನೋಟವುಳ್ಳ
ಒಬ್ಬಳು ತನ್ನ ಕಣ್ಣಿನ ದೃಷ್ಟಿಯು
ಎಲ್ಲಡೆ ಹರಿಯುತ್ತಿರಲು ನೀಳ
ಹುಬ್ಬುಗಳು ಕುಣಿಯಲು,
ಬಾಯ ವಾಸನೆಯ
ಮುತ್ತುತ್ತಿರುವ ದುಂಬಿಯ
ಸಮೂಹವು ಸೀಗುಡಿ/
ಕೊಡೆಯಂತಾಗಲು
ಲಜ್ಜೆಯಿಲ್ಲದೆ
ನೋಡುವವರನ್ನು

ಮರುಳುಮಾಡುವಂತೆ ತಾಳಕ್ಕೆ ಸರಿಯಾಗಿ ಕುಣಿಯುವಳು-ಕುಣಿದಳು.

ವ||

ಮತ್ತಮೊರ್ವಳೂರ್ವಶಿಯನೆ ಪೋಲ್ವಾಕೆ ತನ್ನ ಗಂಭೀರನವಯೌವನ ಮದದೊಳಂ ಮದಿರಾಮದದೊಳಮಳವಿಗ ಟಿಯೆ ಸೊರ್ಕಿ-

ವಚನ:ಪದವಿಭಾಗ-ಅರ್ಥ:ಮತ್ತಮೊರ್ವಳು ಊರ್ವಶಿಯನೆ ಪೋಲ್ವಾಕೆ ತನ್ನ ಗಂಭೀರನವಯೌವನ ಮದದೊಳಂ ಮದಿರಾಮದದೊಳಂ ಅಳವಿಗಳಿಿಯೆ ಸೊರ್ಕಿ-

ವಚನ:ಅರ್ಥ:ಊರ್ವಶಿಯನ್ನೇ ಹೋಲುವ ಮತ್ತೊಬ್ಬಳು ಗಂಭೀರವಾದ ತನ್ನ ಹೊಸಯವ್ವನದ

ಮದದಿಂದಲೂ ಮದ್ಯಪಾನ
ಮದದಿಂದಲೂ ಮಿತಿಮೀರಿ
ಸೊಕ್ಕಿ-

ಚಂ|| ಮುಡಿ
ಮಕರಧ್ವಜಂಬೊಲೆಱಲುತ್ತಿರೆ
ಬೆಂಬಿಡಿದೊಯ್ಯನೊಯ್ಯನು
ಳ್ಳುಡೆ ಕಟಿಸೂತ್ರದೊತ್ತಿನೊಳೆ
ಜೋಲ್ದಿರೆ ನಾಣ್ ತಲೆದೋರೆ
ಕೂಡೆ ಕೂ|
ಕಿಡುವ ಕುಕಿಲ್ವ ಬಿಕ್ಕುಳಿಪ
ತೇಗುವ ತನ್ನ ತೊಡಂಕದೆಯ್ದೆ

ನೂ

ರ್ಮಡಿ ಮನದೊಳ್

ಪಳಂಚಲೆಯೆ

ಡಕ್ಕೆಯೊಳಟ್ಟಿಜವಾಗೆಯಾಡಿದ

ಳ್|| ೯೦||

ಪದ್ಯ-೯೦:ಪದವಿಭಾಗ-

ಅರ್ಥ:ಮುಡಿ

ಮಕರಧ್ವಜಂಬೊಲ್

(ಮನ್ಮಥನ ಬಾವುಟ)

ಎಱಲುತ್ತಿರೆ

(ಜೋಲಾಡುತ್ತಿರಲು)

ಬೆಂಬಿಡಿದು ಒಯ್ಯನೊಯ್ಯನೆ ಉಳ್ಳುಡೆ (ಜೊತೆಗೆ ಒಳುಡುಪು ಮೆಲ್ಲಮೆಲ್ಲಗೆ) ಕಟಿಸೂತ್ರದ ಒತ್ತಿನೊಳೆ ಜೋಲ್ದಿರೆ (ಉಡುದಾರದ ಹತ್ತಿರವೇ ಜೋತುಬಿದ್ದಿರಲು) ನಾಣ್ ತಲೆದೋರೆ (ನಾಚಿಕೆಯಸ್ಥಳವು ಕಾಣಿಸುತ್ತಿರಲು) ಕೂಡೆ ಕೂಕಿಡುವ (ನೆಗೆಯುವ) ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ

ತೊಡಂಕು ಅದೆಯ್ದೆ (ತನ್ನ ವೇದನೆ ಬಹಳ) ನೂರ್ಮಡಿ ಮನದೊಳ್ ಪಳಂಚಿ ಅಲೆಯೆ (ಸುಳಿದಾಡಿ ಅಲೆಯಲು) ಡಕ್ಕೆಯೊಳ್ ಅಟ್ಟಿಜವಾಗೆ ಆಡಿದಳ್ (ಡಕ್ಕೆಗೆ-ತಬಲಕ್ಕೆಸರಿಯಾಗಿ ಅಚ್ಚರಿಯಾಗುವಂತೆ ಕುಣಿದಳು)

ಪದ್ಯ-೯೦:ಅರ್ಥ: ತನ್ನ ತಲೆಕೂದಲು (ದಪ್ಪಜಡೆ)

ಮನ್ಮಥನ ಮೀನಿನ
ಬಾವುಟದಂತೆ
ಜೋಲಾಡುತ್ತಿರಲು
ಒಳಉಡುಪು ಉಡುದಾರದ
ಹತ್ತಿರವೇ ಜೋತುಬಿದ್ದಿರಲು
ನಾಚಿಕೆಯ ಸ್ಥಳವು
ಕಾಣಿಸುತ್ತಿರಲು, ಒಡನೆಯೇ
ಮೇಲಕ್ಕೆ ನೆಗೆದು ಹಕ್ಕಿಯಂತೆ
ಶಬ್ದಮಾಡಿ ಬಿಕ್ಕಳಿಸುವ
ತೇಗುವ ತನ್ನ ವೇದನೆ ಬಹಳ
ಸುಳಿದಾಡಿ ಅಲೆಯುವಂತೆ

ತಬಲಕ್ಕೆಸರಿಯಾಗಿ
ಅಚ್ಚರಿಯಾಗುವಂತೆ
ಕುಣಿದಳು'

ವ|| ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ ಗಂಧೇಭವಿದ್ಯಾಧರನಿಂತೆಂದಂ -

ವಚನ:ಪದವಿಭಾಗ-ಅರ್ಥ:ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು (ಬಿಂದಿಗೆ) ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ ಗಂಧೇಭವಿದ್ಯಾಧರನಿಂತೆಂದಂ -

ವಚನ:ಅರ್ಥ:ಹಾಗೆ ಆ ಹೆಣ್ಣುಗಳು ಅತ್ತಿತ್ತ ತೊನೆದಾಡುವ

ತೂಗಾಟಗಳನ್ನೂ ಬಿಂದಿಗೆ-
ಬಿಲ್ಲುಗಳನ್ನು ಹಿಡಿದು
ಭೂತಗಳ ಆಟವಾಡುವುದನ್ನು
ಗಂದೇಭವಿದ್ಯಾಧರನಾದ
ಅರ್ಜುನನು ನೋಡಿ
ಹೀಗೆಂದನು-

ಚಂ|| ನುಡಿವರೆ ನೋಡ
ಕಳ್ಗುಡಿವರೆಂಬುದಿದಾಗದ
ಸೂರುಳಂತದಂ
ಕುಡಿವನುಮಂತೆ
ಕಳ್ಗುಡಿವರೆಂದೊಡೆ

ನಾಣ್ಚುವರಂತುಟಪ್ಪುದಂ| ಕುಡಿದುಮಿವಂದಿರಾರೆರ್ದೆಯುಮಂ ಸೆರೆಗೆಯ್ದಪರೆಯ್ದೆ ದೋಷದೊಳ್ ತೊಡರ್ವುದುಮೊಂದುಪಾಶ್ರಯವಿಶೇಷದೊಳೊಳ್ಪನೆ ತಳ್ವುದಾಗದೇ|| ೯೧||

ಪದ್ಯ-೯೧:ಪದವಿಭಾಗ-ಅರ್ಥ:ನುಡಿವರೆ ನೋಡ ಕಳ್ಗುಡಿವರೆಂಬುದು (ಕಳ್ ಕುಡಿಯುವವರು ಎಂದು

ಹೇಳಬಹುದೇ-ನೋಡು!)
ಇದು ಆಗದ
ಸೂರುಳಂತದಂಕುಡಿವನು
ಮಂತೆ ಕಳ್ಗುಡಿವರೆಂದೊಡೆ
ನಾಣ್ಚುವರ್
ಅಂತುಟಪ್ಪುದಂ(ಲಜ್ಜಿತರಾಗು
ತ್ತಾರೆ. ಹಾಗೆ ಕುಡಿದರೂ)
ಕುಡಿದುಂ ಇವಂದಿರು
ಆರೆರ್ದೆಯುಮಂ
ಸೆರೆಗೆಯ್ದಪರು (ಅವರು
ಎಲ್ಲರ ಹೃದಯವನ್ನೂ

ಸೆರೆಹಿಡಿಯುತ್ತಾರಲ್ಲವೇ.)
ಎಯ್ದೆ ದೋಷದೊಳ್
ತೊಡರ್ವುದುಂ ಒಂದು
ಉಪಾಶ್ರಯ ವಿಶೇಷದೊಳ್
ಒಳ್ಪನೆ ತಳ್ವುದು ಆಗದೇ-
(ವಿಶೇಷ ಅವಲಂಬನದಿಂದ
ಅವರಿಗೆ ಒಳ್ಳೆಯದೇ
ಆಗುವುದಿಲ್ಲವೇ?).

ಪದ್ಯ-೯೧:ಅರ್ಥ:

ಕುಡಿಯುವವರನ್ನು ಕಳ್
ಕುಡಿಯುವವರು ಎಂದು

ಹೇಳಬಹುದೇ? ನೋಡು! ಆಗದು. ಕುಡಿಯುವವರನ್ನು ಹಾಗೆ ಕುಡುಕರೆಂದರೆ ಅವರು ಲಜ್ಜಿತರಾಗುತ್ತಾರೆ. ಹಾಗೆ ಕುಡಿದರೂ ಅವರು ಎಲ್ಲರ ಹೃದಯವನ್ನೂ ಸೆರೆಹಿಡಿಯುತ್ತಾರಲ್ಲವೇ. ಹೀಗೆಮಾಡಿ ದೋಷದಲ್ಲಿ ತೊಡಗಿದರೂ ಒಂದು ವಿಶೇಷ ಅವಲಂಬನದಿಂದ ಅವರಿಗೆ ಒಳ್ಳೆಯದೇ ಆಗುವುದಿಲ್ಲವೇ?

(ಯಾವುದೋ ನೋವನ್ನು ಕಳೆಯುವ ದಾರಿಯೇ?)

ವ|| ಎನುತುಂ ಬರ್ಪನೊಂದೆಡೆಯೊಳೊರ್ವಂ ಪೞಿಕೆಯ್ದ ನಲ್ಲಳನುೞಿಯಲಾಱದೆ ಸುಱಿಯೆ ಮುಳಿದಾತನ ಕೆಳೆಯನಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎನುತುಂ ಬರ್ಪನು ಒಂದೆಡೆಯೊಳ್ ಒರ್ವಂ

ಪೞಿಕೆಯ್ದ ನಲ್ಲಳಂ (ಹಳಿದ ಪ್ರಿಯಳನ್ನು) ಉೞಿಯಲಾೞಿದೆ (ಬಿಡಲಾದೆ) ಸುೞಿಯೆ (ಅವಳ ಮನೆ ಬಳಿ ಸುಳಿಯಲು) ಮುಳಿದು ಆತನ ಕೆಳೆಯನಿಂತೆಂದಂ-

ವಚನ:ಅರ್ಥ:ಎನ್ನುತ್ತ ಬರುತ್ತಿದ್ದವನು ಒಂದೆಡೆಯಲ್ಲಿ ತನ್ನನ್ನು ಬಯ್ಯುತ್ತಿದ್ದ ಪ್ರಿಯಳನ್ನು ಬಿಡಲಾರದೆ

ಅವಳ ಮನೆಯ ಬಳಿ
ಸುಳಿದಾಡುತ್ತಿರಲು
ಕೋಪಿಸಿಕೊಂಡ ಅವನ
ಗೆಳೆಯನು ಹೀಗೆಂದು ಅವನಿಗೆ
ಹೀಗೆ ಹೇಳಿದನು

ಚಂ||
ಬಸನದೊಡಂಬಡಿಂಗಲಸಿ
ಮಾಣ್ದೊಡಮಿಂತಿದನೀವೆನೆಂ
ದನಂ
ಪುಸಿದೊಡಮಾಸೆದೋಱ
ಬಗೆದೋಱದೊಡಂ

ನೆರದಿರ್ದೊಡಂ ಸಗಾ|
ಟಿಸದೊಡಮಾಯಮುಂ
ಚಲಮುಮುಳ್ಳೊಡೆ
ಪೇಸದವಳ್ಗೆ ಮತ್ತಮಾ
ಟಿಸುವುದೆ ಮತ್ತಮಂಜುವುದೆ
ಮತ್ತಮಱಿಲ್ವುದೆ
ಮತ್ತಮೀವುದೇ|| ೯೨ ||

ಪದ್ಯ-೯೨:ಪದವಿಭಾಗ-
ಅರ್ಥ: ಬಸನದ
ಒಡಂಬಡಿಂಗೆ ಅಲಸಿ
(ವ್ಯಸನದ-ರತಿಕ್ರೀಡೆಗೆ

ಒಡಗೂಡಲು ಬೇಸರಿಸಿ) ಮಾಣ್ದೊಡಂ (ಮಾಣ್- ಬೇಡವೆಂದು ಬಿಟ್ಟರೂ) ಇಂತು ಇದನು ಈವೆನು ಎಂದನಂ (ಹೀಗೆ ಇವುಗಳನ್ನು ಕೊಡುವನೆಂದ ನಿನಗ) ಪುಸಿದೊಡಂ ಆಸೆದೋಱೆ ಬಗೆದೋಱಿದೊಡಂ (ಸುಳ್ಳು ಹೇಳಿದರೂ, ಆಸೆತೋರಿಸಿದರೂ, ಬಗೆ- ಮನಸ್ಸು - ತನ್ನ ಪ್ರೇಮವನ್ನೂ

ತೋರಿಸದಿದ್ದರೂ)
ನೆರದಿರ್ದೊಡಂ (ಜೊತೆ
ಸೇರದಿದ್ದರೂ,)
ಸಗಾಟಿಸದೊಡಂ
(ಪ್ರೇಮವನ್ನು
ತೋರಿಸದಿದ್ದರೂ)
ಆಯಮುಂ
ಚಲಮುಮುಳ್ಳೊಡೆ (ಬಲವೂ
ಛಲವೂ ಇದ್ದ ಪಕ್ಷದಲ್ಲಿ)
ಪೇಸದೆ ಅವಳ್ಗೆ
ಮತ್ತಮಾಟಿಸುವುದೆ (ಅವಳಿಗೆ

ಹೇಸದೆ ಪುನಃ ಅವಳಿಗಾಗಿ ಆಸೆ ಪಡುವುದೇ,) ಮತ್ತಂ ಅಂಜುವುದೆ ಮತ್ತಂ ಅಱಿಲ್ಚುದೆ ಮತ್ತಂ ಈವುದೇ(ಪುನ ಅವಳಿಗೆ (ಧನಕನಕಾದಿಗಳನ್ನು- ಈವುದೇ- ಕೊಡುವುದೇ?)

ಪದ್ಯ-೯೩:ಅರ್ಥ: ರತಿಕ್ರೀಡೆಗೆ ಒಡಗೂಡಲು ಬೇಸರಿಸಿ ಅವಳು ಬಿಟ್ಟರೂ (ನಿನಗೆ ಬೇಕಾದ) ಹೀಗೆ ಇವುಗಳನ್ನು

ಕೊಡುವನೆಂದ ನಿನಗೆ ಸುಳ್ಳು
ಹೇಳಿದರೂ ನೀನು ಆಸೆ
ತೋರಿಸಿದರೂ ತನ್ನ
ಪ್ರೇಮವನ್ನೂ
ತೋರಿಸದಿದ್ದರೂ ನೀನು
ಅವಳನ್ನು ಕೂಡಿಕೊಂಡಿದ್ದರೂ
ಅವಳು ತನ್ನ ಪ್ರತಿಪ್ರೇಮವನ್ನು
ತೋರಿಸದಿದ್ದರೂ ನಿನಗೆ
ಬಲವೂ ಛಲವೂ ಇದ್ದ
ಪಕ್ಷದಲ್ಲಿ, ಅವಳಿಗೆ ಹೇಸದೆ
ಪುನಃ ಅವಳಿಗಾಗಿ ಆಸೆ

ಪಡುವುದೇ, ಅಂಜುವುದೇ,
ಪುನ ವ್ಯಸನ ಪಡುವುದೇ,
ಪುನ ಅವಳಿಗೆ
(ಧನಕನಕಾದಿಗಳನ್ನು)
ಕೊಡುವುದೇ?

ವ|| ಎಂದು ನುಡಿದು ಬಿಸುಡಿಸಿದಂ ಮತ್ತೊರ್ವಂ ತನಗೆರಡಱಿಯದೊಲ್ದ ನಲ್ಲಳನೇತರೊಳಪ್ಪೊಡಮೇವಮಂ ಮಾಡದೆ ಬೇಟಮಂ ಸಲಿಸುವುದರ್ಕೆ

ಸಂತಸಂಬಟ್ಟು ಮುಂತಣ್ಗೆ ಕಾಪನಿಟ್ಟಿಂತೆಂದಂ-

ವಚನ:ಪದವಿಭಾಗ-

ಅರ್ಥ:ಎಂದು ನುಡಿದು ಬಿಸುಡಿಸಿದಂ (ಬಿಸುಡು - ದೂರೀಕರಿಸು, ಬಿಡಿಸಿದನು) ಮತ್ತೊರ್ವಂ ತನಗೆ ಎರಡಱಿಯದೆ ಒಲ್ದ ನಲ್ಲಳನು (ಕಪಟವಿಲ್ಲದೆ ಪ್ರೀತಿಸುತ್ತಿದ್ದ ಪ್ರಿಯಳನ್ನು) ಏತರೊಳಪ್ಪೊಡಂ ಏವಮಂ

ಮಾಡದೆ
(ನೋವನ್ನುಮಾಡದೆ)
ಬೇಟಮಂ ಸಲಿಸುವುದರ್ಕೆ
ಸಂತಸಂಬಟ್ಟು ಮುಂತಣ್ಗೆ
ಕಾಪನಿಟ್ಟು (ಮುಂದಕ್ಕೆ
ಕಾವಲಿಟ್ಟು ?) ಇಂತೆಂದಂ-
ವಚನ:ಅರ್ಥ:ಎಂಬುದಾಗಿ
ಹೇಳಿ (ಅವಳನ್ನು)
ಬಿಡಿಸಿದನು. ಮತ್ತೊಬ್ಬನು
ತನಗೆ ಕಪಟವಿಲ್ಲದೆ
ಪ್ರೀತಿಸುತ್ತಿದ್ದ ಪ್ರಿಯಳನ್ನು

ಯಾವುದರಲ್ಲಿಯೂ
ನೋವನ್ನುಮಾಡದೆ
ಪ್ರೀತಿಯನ್ನು ಸಲ್ಲಿಸಿದ್ದಕ್ಕೆ
ಸಂತೋಷಪಟ್ಟು ಮುಂದಕ್ಕೆ
ಕಾವಲಿಟ್ಟು ಹೀಗೆ ಹೇಳಿದನು.

ವ|| ಇನಿಯಂ
ನೊಯ್ದುಮೊಡಂಬಡಂ
ನುಡಿದೊಡೆಂದೆಂದಪ್ಪೊಡಂ
ನಿನ್ನೊಳೆ
ಳ್ಳನಿತುಂ
ದೋಷಮನುಂಟುಮಾಡದಿರೆ

ಯುಂ ಕಣ್ಬಿಂತೆ
ಸಂದಪ್ಪುದೊಂ|
ದನೆ ಕೇಳ್ದೋಪಳೆ
ಕೂರ್ಮೆಗೆಟ್ಟೆನಗೆ
ನೀನೇನಾನುಮೊಂದೇವಮಂ
ಮನದೊಳ್ ಮಾಡಿದೊಡಂದೆ
ದೀವಳಿಗೆಯಂ
ಮಾನಾಮಿಯಂ ಮಾಡೆನೇ||
೯೩ ||

ಪದ್ಯ-೯೩:ಪದವಿಭಾಗ-
ಅರ್ಥ:ಇನಿಯಂ (ಇನಿಯಳ್

-ಪ್ರಿಯಳು -ಡಿಎಲ್ಎನ್)
ನೊಯ್ದುಂ ಒಡಂಬಡಂ
ನುಡಿದೊಡೆಂದು (ಪ್ರಿಯನು
ಅಡಬಡ/ ಎಡವಟ್ಟು
ಮಾತನಾಡಿದರೆ
ನೊಂದಕೊಳ್ಳುವನು ಎಂದು)
ಎಂದಪ್ಪೊಡಂ
(ಎಂದುಕೊಂಡರೂ) ನಿನ್ನೊಳೆ
ಎಳ್ಳನಿತುಂ ದೋಷಮನು
(ನಿನ್ನಲ್ಲಿ ಸ್ವಲ್ಪ ದೋಷವನ್ನು)
ಉಂಟುಮಾಡದಿರೆಯುಂ

(ದೋಷವನ್ನುಂಟುಮಾಡದಿದ್ದ
ರೂ) ಕಣ್ಪಿಂತೆ (ಕಣ್ ಪಿಂತೆ
-ಕಣ್ಣನೋಟ ಹಿಂದೆ)
ಸಂದಪ್ಪುದು (ಸರಿಯುವುದು)
ಒಂದನೆ ಕೇಳ್ದೋಪಳೆ (ಕೇಳ್ದ
ಓಪಳೆ- ಪ್ರಿಯಳೇ
ಒಂದುಮಾತನ್ನು ಕೇಳು)
ಕೂರ್ಮೆಗೆಟ್ಟೆನಗೆ (ನಿನ್ನ
ಪ್ರೀತಿಯನ್ನು ಕಳೆದುಕೊಂಡ
ನನಗೆ) ನೀನ್
ಏನಾನುಮೊಂದು ಏವಮಂ

((ಅನಾದರ, ತಿರಸ್ಕಾರ, ಕಡುಕು)) ಮನದೊಳ್ ಮಾಡಿದೊಡೆ (ನೀನು ಏನಾನಾದರೊಂದು ನಿಂದೆಯನ್ನು ಮನಸ್ಸಿನ್ನಲ್ಲಿ ಮಾಡಿದರೂ) ಅದೆ ದೀವಳಿಗೆಯಂ ಮಾನಾಮಿಯಂ ಮಾಡೆನೇ (ನನಗೆ ಅದೇ ದೀವಳಿಗೆ ಮಹಾನವಮಿಯ ದೊಡ್ಡ ಹಬ್ಬ)

ಪದ್ಯ-೯೩:ಅರ್ಥ: ಪ್ರಿಯನು ಎಡವಟ್ಟು ಮಾತನಾಡಿದರೆ ನೊಂದಕೊಳ್ಳುವನು ಎಂದು ನೀನು ಎಂದುಕೊಂಡಿದ್ದರೂ - ಹಾಗೆ ಭಾವಿಸಿ ಮೌನವಹಿಸಬೇಡ, ನಾನು ನಿನ್ನಲ್ಲಿ ಸ್ವಲ್ಪ ದೋಷವನ್ನು ನಾನು ಉಂಟುಮಾಡದಿದ್ದರೂ, ನಿನ್ನ ಕಣ್ಣನೋಟ ಹಿಂದೆ ಸರಿಯುವುದು- ಅಸಮಾಧಾನ

ಪಡುವೆ; ಪ್ರಿಯಳೇ ಒಂದು ಮಾತನ್ನು ಕೇಳು ನಿನ್ನ ಪ್ರೀತಿಯನ್ನು ಕಳೆದುಕೊಂಡ ನನಗೆ, ನೀನು ಏನಾದರೊಂದು ನಿಂದೆಯನ್ನು ಮನಸ್ಸಿನ್ನಲ್ಲಿ ಮಾಡಿದರೂ ಅದೇ ದೀವಳಿಗೆ ಮಹಾನವಮಿಯ ದೊಡ್ಡ ಹಬ್ಬ. ನೀನು ಅನಾದರಿಸಿ ನನ್ನನ್ನು ಮರೆಯದೆ, ನನಗೆ ಬೈದರೂ ಸಂತೋಷ. (ಎಂದು

ಪ್ರಿಯಳಿಗೆ ಒಬ್ಬನು ಹೇಳಿದನು)

ವ|| ಎಂದು ನುಡಿದಂ ಮತ್ತಮೊಂದು ಎಡೆಯೊಳ್ ಒರ್ವನು ಒರ್ವಳ ನಡೆಯ ನುಡಿಯ ಮುಡಿಯ ಗಾಂಪಿಂಗೆ ಮುಗುಳ್ನಗೆ ನಕ್ಕು ತನ್ನ ಕಳೆಯಂಗೆ ತೋಱಿ-

ವಚನ:ಪದವಿಭಾಗ-ಅರ್ಥ:

ಎಂದು ನುಡಿದಂ ಮತ್ತಂ ಒಂದೆಡೆಯೊಳ್ ಒರ್ವನು

ಒರ್ವಳ ನಡೆಯ ನುಡಿಯ
ಮುಡಿಯ ಗಾಂಪಿಂಗೆ
ಮುಗುಳ್ನಗೆ ನಕ್ಕು ತನ್ನ
ಕಳೆಯಂಗೆ ತೋಱಿ-
ವಚನ:ಅರ್ಥ:ಎಂದು
ನುಡಿದನು. ಮತ್ತೊಂದ
ಕಡೆಯಲ್ಲಿ ಒಬ್ಬನು ಒಬ್ಬಳ
ನೆಡಿಗೆಯ, ಮಾತಿನ,
ತುರುಬಿನ, ದಡ್ಡತನಕ್ಕೆ
ಮುಗುಳ್ನಗೆ ನಕ್ಕು, ತನ್ನ

ಸ್ನೇಹಿತನಿಗೆ ತೋರಿಸಿ
ಹೇಳಿದನು

ಚಂ|| ನಯದೊಳೆ ನೋಡಿ
ನೋಟದೊಳೆ ಮೇಳಿಸಿ
ಮೇಳದೊಳಪ್ಪುಕೆಯ್ದು ಗೊ
ಟ್ಟಿಯೊಳೊಳಪೊಯ್ದು
ಪತ್ತಿಸುವ
ಸೂಳೆಯರಂದಮನೆಯ್ದೆ
ಪೋಲ್ವಂ ಸೂ|
ಳೆಯರ ತುಱುಂಬು
ಸೂಳೆಯರ ಮೇಲ್ನುಡಿ

ಸೂಳೆಯರಿರ್ಪ ಪಾಂಗು ಸೂ
ಳೆಯರ ನೆಗೞ್ತೆ ನಾಡೆ
ತನಗೞ್ತಿ ದಲಕ್ಕನೆ
ಸೂಳೆಯಾಗಳೇ|| ೯೪||

ಪದ್ಯ-೯೪:ಪದವಿಭಾಗ-ಅರ್ಥ: ನಯದೊಳೆ ನೋಡಿ (ಹಿತವಾಗಿ ನೋಡಿ,) ನೋಟದೊಳೆ ಮೇಳಿಸಿ (ನೋಟದಲ್ಲೇ ಮನಕ್ಕೆ ಮನಕೂಡಿಸಿ) ಮೇಳದೊಳು ಒಪ್ಪುಕೆಯ್ದು (ಕೂಟಕ್ಕೆ

ಒಪ್ಪುವಂತೆ ಮಾಡಿ)
ಗೊಟ್ಟಿಯೊಳು ಒಳಪೊಯ್ದು
(ಗೋಷ್ಠಿಯಲ್ಲಿ
ವಶಪಡಿಸಿಕೊಂಡು -
ಒಳಹೊಗಿಸಿಕೊಂಡು)
ಪತ್ತಿಸುವ ಸೂಳೆಯರ
ಅಂದಮನು ಎಯ್ದೆ ಪೋಲ್ವಂ
ಸೂಳೆಯರ (ಹತ್ತಿಸಿಕೊಳ್ಳುವ-
ಬೆಸದುಕೊಳ್ಳುವ ಸೂಳೆಯರ
ರೀತಿಯನ್ನು ಹೋಲುವ,)
ತುಱುಂಬು (ತುರುಬು)

ಸೂಳೆಯರ ಮೇಲ್ನುಡಿ
ಸೂಳೆಯರು ಇರ಼್ ಪಾಂಗು
(ಇರುವ ರೀತಿ) ಸೂಳೆಯರ
ನೆಗೞ್ತೆ (ನೆಡವಳಿಕೆ) ನಾಡೆ
(ವಿಶೇಷವಾಗಿ) ತನಗೆ ಅೞ್ತಿ
(ಇಷ್ಟವಾದುದು) ದಲ್
(ಅಲ್ಲವೇ) ಅಕ್ಕನೆ
ಸೂಳೆಯಾಗಳೇ (ಈ ಅಕ್ಕನೆ-
ಹೆಣ್ಣೇ ಸೂಳೆಯಾಗಿಯೇ
ಇರಬೇಕಲ್ಲವೆ?)

ಪದ್ಯ-೯೪:ಅರ್ಥ: ಹಿತವಾಗಿ ನೋಡಿ, ನೋಟದಲ್ಲೇ ಮನಕ್ಕೆ ಮನಕೂಡಿಸಿ, ಕೂಟಕ್ಕೆ ಒಪ್ಪುವಂತೆ ಮಾಡಿ, ಆಲಿಂಗನದಿಂದಲೇ ಕೂಡಿಕೊಂಡು ಕೂಡುವುದರಿಂದಲೇ ವಶಪಡಿಸಿಕೊಂಡು ತಮ್ಮ ಮನಸ್ಸನ್ನು ಬೆಸೆಯುವ ಸೂಳೆಯರ ರೀತಿಯನ್ನು ಚೆನ್ನಾಗಿ ಹೋಲುವ

ಸೂಳೆಯರ ತುರುಬು,
ಸೂಳೆಯರ ಮೃದುವಾದ
ಮಾತು, ಸೂಳೆಯರು ಇರುವ
ಸ್ಥಿತಿ, ಸೂಳೆಯರ ನಡೆವಳಿಕೆ
ಇವು ನನಗೆ ವಿಶೇಷವಾಗಿ
ಇಷ್ಟವಾದುದು. ಈ ಅಕ್ಕನ
ಆಟ, ನೋಟ, ತುರುಬು,
ಇರುವ ರೀತಿ, ನೋಡಿದರೆ ಈ
ಅಕ್ಕನೆ- ಈ ಹೆಣ್ಣು- ಹೆಣ್ಣೇ
ಸೂಳೆಯಾಗಿಯೇ
ಇರಬೇಕಲ್ಲವೆ?

ವ|| ಎನೆ ಕೇಳ್ದು ಮುಗುಳ್ನಗೆ
ನಗುತ್ತುಂ
ಬರ್ಪನೊಂದೆಡೆಯೊಳೊಂದು
ಕಂದದ ಮೊದಲುಮಂ ವೃತ್ತದ
ತುದಿಯುಮನೊಂದುಮಾಡಿ
ಪದಮಿಕ್ಕಿಯೋದಿ ಪಂಡಿತಿಕ್ಕೆಗೆ
ಮುಯ್ವಾಂತುಮಾವ
ಕಾಳೆಗದೊಳಂ ತಾನೆ
ಓಡಿಯಾರೋಡಿದರೆಂಬಂತೆ
ಬೀರಕ್ಕೆ
ಮುಯ್ವಾಂತುಮೊಂದು

ವೀಸನಪ್ರೌಢಮಾರ್ಗಮಿತ್ತಱಿ ಯದೆ ಚಾಗಕ್ಕೆ ಮುಯ್ವಾಂತುಂ ತಮ್ಮಂ ನಗುವರನಱಿಯದೆಣ್ಬರೇಱಿ ದ ಕಱ್ತೆಯಂತೆ ದೆಸೆದೆಸೆಗೆ ಬೆಸೆವ ಪಚ್ಚಪಸಿಯೆಗ್ಗರುಮಂ ಕಂಡು

ವಚನ:ಪದವಿಭಾಗ-

ಅರ್ಥ:ಎನೆ (ಅರ್ಜುನನು) ಕೇಳ್ದು ಮುಗುಳ್ನಗೆ ನಗುತ್ತುಂ ಬರ್ಪನು ಒಂದೆಡೆಯೊಳು

ಒಂದು ಕಂದದ ಮೊದಲುಮಂ (ಕಂದಪದ್ಯದ ಆದಿಯನ್ನೂ), ವೃತ್ತದ ತುದಿಯಂ ಒಂದುಮಾಡಿ ಪದಮಿಕ್ಕಿಯೋದಿ (ಪದಜೋಡಿಸಿ ಓದಿ) ಪಂಡಿತಿಕ್ಕೆಗೆ ಮುಯ್ವಾಂತುಂ (ತನ್ನ ಪಾಂಡಿತ್ಯಕ್ಕೆ ಮೆಚ್ಚಿಕೊಳ್ಳುತ್ತ) ಆವ ಕಾಳೆಗದೊಳಂ ತಾನೆ ಓಡಿಯಾರೋಡಿದರು (ಓಡಿ

ಆರಿ-ಹಾರಿ, ಓಡಿದರು)
ಎಂಬಂತೆ ಬೀರಕ್ಕೆ
ಮುಯ್ವಾಂತುಮ್ ಒಂದು
(ಶೌರ್ಯವನ್ನು ಹೊಗಳಿ
ಬೆನ್ನತಟ್ಟಿಕೊಳ್ಳುತ್ತಲೂ)
ಒಂದು ವೀಸನ
ಅಪ್ರೌಢಮಾರ್ಗಂ ಇತ್ತು
ಅಱಿಯದೆ ಚಾಗಕ್ಕೆ
ಮುಯ್ವಾಂತುಂ(ಒಂದು
ವೀಸವನ್ನಾದರೂ ಉತ್ತಮ
ಕಾರ್ಯಕ್ಕೆ ಕೊಟ್ಟು ಅರಿಯದ

ತಾನು ತ್ಯಾಗಿಯೆಂದು
ಕೊಚ್ಚಿಕೊಳ್ಳುತ್ತಲೂ) ತಮ್ಮಂ
ನಗುವರನು ಅಱಿಯದೆ
(ಅರಿಯದೆ)ಎಣ್ಬರೇಱಿದ
ಕಱ್ತೆಯಂತೆ (ಎಂಟುಜನ
ಹತ್ತಿಕೊಂಡಿರುವ ಕತ್ತೆಯಂತೆ)
ದೆಸೆದೆಸೆಗೆ ಬೆಸೆವ
ಪಚ್ಚಪಸಿಯೆಗ್ಗರುಮಂ - ಪಚ್ಚ
ಪಸಿ ಅಗ್ಗರು (ಅಚ್ಚ ಹಸಿ
ದಡ್ಡರನ್ನು) ಕಂಡು

ವಚನ:ಅರ್ಥ:ಎಂಬುದನ್ನು ಕೇಳಿ ಅರ್ಜುನನು ಮುಗುಳ್ನಗೆ ನಗುತ್ತ ಬರುತ್ತಿದ್ದವನು ಒಂದು ಕಡೆಯಲ್ಲಿ ಒಂದು ಕಂದಪದ್ಯದ ಆದಿಯನ್ನೂ ಮತ್ತೊಂದು ವೃತ್ತದ ಅಂತ್ಯವನ್ನೂ ಪದಜೋಡಿಸಿ ಓದಿ ತನ್ನ ಪಾಂಡಿತ್ಯಕ್ಕೆ ಮೆಚ್ಚಿಕೊಳ್ಳುತ್ತಲೂ ಯಾವುದೋ ಕಾಳಗದಲ್ಲಿ ತಾನು ಓಡಿ ಹಾರಿ

ಹೋರಾಡಿದನು ಎಂಬಂತೆ
ತನ್ನ ಶೌರ್ಯವನ್ನು ಹೊಗಳಿ
ಬೆನ್ನತಟ್ಟಿಕೊಳ್ಳುತ್ತಲೂ, ಒಂದು
ವೀಸವನ್ನಾದರೂ ಉತ್ತಮ
ಕಾರ್ಯಕ್ಕೆ ಕೊಟ್ಟು ಅರಿಯದ
ತಾನು ತ್ಯಾಗಿಯೆಂದು
ಕೊಚ್ಚಿಕೊಳ್ಳುತ್ತಲೂ, ತಮ್ಮನ್ನು
ನೋಡಿ ನಗುವವರನ್ನು
ತಿಳಿಯದೆ ಎಂಟುಜನ
ಹತ್ತಿಕೊಂಡಿರುವ ಕತ್ತೆಯಂತೆ
ದಿಕ್ಕುದಿಕ್ಕಿನಲ್ಲಿಯೂ

ಗರ್ವವನ್ನು ಪ್ರದರ್ಶಿಸುತ್ತಲೂ
ಇರುವ ಶುದ್ಧ ಹಸಿಯ
ದಡ್ಡರನ್ನು ನೋಡಿ

ಚಂ|| ಇಱಿಯದ ಬೀರಮಿಲ್ಲದ
ಕುಲಂ ತಮಗಲ್ಲದ
ಚಾಗಮೋದದೋ
ದಱಿಯದ ವಿದ್ದೆ ಸಲ್ಲದ
ಚದುರ್ ನೆರೆ ಕಲ್ಲದ ಕಲ್ಪಿ ಕೇಳ
ಮಾ||
ತಱಿಯದ ಮಾತು ತಮ್ಮ
ಬಱುವಾತುಗಳೊಳ್

ಪುದಿದೆಗ್ಗರೆಯ್ದೆ ಕ ಣ್ಣೆರೆವಿನಮಾರ್ ಪೞಿಯದೇನೆಳೆಯಂ ಕಿಡಿಸಲ್ಕೆ ಬಲ್ಲರೋ|| ೯೫||

ಪದ್ಯ-೯೫:ಪದವಿಭಾಗ-ಅರ್ಥ:ಇಱಿಯದ (ಇರಿಯದ) ಬೀರಂ, ಇಲ್ಲದ ಕುಲಂ, ತಮಗಲ್ಲದ ಚಾಗಂ, ಓದದ ಓದು, ಅಱಿಯದ ವಿದ್ದೆ, ಸಲ್ಲದ ಚದುರ್ (ಸಲ್ಲದ ಜಾಣ್ಮೆ) ನೆರೆ ಕಲ್ಲದ ಕಲ್ಪಿ,

ಕೇಳ್ ಮಾತು ಅಱಿಯದ
ಮಾತು, ತಮ್ಮ
ಬಱುವಾತುಗಳೊಳ್
(ಬರಿಮಾತು,
ವ್ಯರ್ಥಮಾತುಗಳಲ್ಲಿ) ಪುದಿದ
ಎಗ್ಗರು ಎಯ್ದೆ (ಸೇರಿರುವ
ದಡ್ಡರು ಹೆಚ್ಚುತ್ತಿರಲು)
ಕಣ್ಣೆರೆವಿನಂ ಆರ್
ಪೞಿಯದೇನು
(ಕಣ್ಣುತೆರೆಯುತ್ತಿರಲು -
ಹೆಚ್ಚುತ್ತಿರಲು,) ಎಳೆಯಂ

(ಇಳೆ- ಲೋಕವನ್ನು) ಕಿಡಿಸಲ್ಕೆ ಬಲ್ಲರೋ ()

ಪದ್ಯ-೯೫:ಅರ್ಥ: ಕಾದದ ಶೌರ್ಯ, ಇಲ್ಲದ ಕುಲ, ತಮ್ಮಲ್ಲಿಲ್ಲದ ತ್ಯಾಗ, ತಾವು ಓದದ ಓದು, ತಿಳಿಯದ ವಿದ್ಯೆ, ಇಲ್ಲದ ಜಾಣ್ಮೆ, ವಿಶೇಷವಾಗಿ ಕಲಿಯದ ಕಲಿಕೆ, ಆಡಲು ತಿಳಿಯದ ಮಾತು, ಇವು ತಮ್ಮ ವ್ಯರ್ಥಮಾತುಗಳಲ್ಲಿ, ಸೇರಿರುವ ದಡ್ಡರು

ಹೆಚ್ಚುತ್ತಿರಲು, ಯಾರು ತಾನೆ ಅವರನ್ನು ಹಳಿಯುವುದಿಲ್ಲ? ಅವರು ಲೋಕವನ್ನು ಕೆಡಿಸಲು ಬಲ್ಲರೋ! (ಕೆಡಿಸಬಹುದು, ತಿಳಿದವರಿಗೆ ಎಡೆಯಿಲ್ಲ)

ವ|| ಎನೆ ನಗುತ್ತುಂ ಬರೆಯೊಂದೆಡೆಯೊಳ್ ನಾಲ್ವರಯ್ವರ್ ಗಾಱೊಡ್ಡುತ್ತಿರ್ದಲ್ಲಿಗೊರ್ವ ನೆಗ್ಗಂ ಗೊಟ್ಟಿಗೆ ವಂದು ಕಣ್ಣಱಿಯದೆ ಸೋಂಕೆಯುಂ

ಮನಮಱಿಯದೆ ನುಡಿಯೆಯುಮಾತನ ನಾಕೆಗಳ್ ಬಾಸೆಯೊಳಿಂತೆಂದರ್-

ವಚನ:ಪದವಿಭಾಗ-

ಅರ್ಥ:ಎನೆ ನಗುತ್ತುಂ ಬರೆ ಒಂದೆಡೆಯೊಳ್ ನಾಲ್ವರು ಅಯ್ವರ್ (೪- ೫ ಜನ) ಗಾಱ್ದೊಱ್ತಿರ್ (ಗಾಳ್‌ದೊಳ್‌ತಿರ್- ತುಂಟದಾಸಿಯರು) ಇರ್ದಲ್ಲಿಗೆ

ಒರ್ವ ನೆಗ್ಗಂ (ದಡ್ಡ) ಗೊಟ್ಟಿಗೆ
ವಂದು (ಗೋಷ್ಠಿಗೆ ಬಂದು)
ಕಣ್ಣಱಿಯದೆ
(ಅಭಿಪ್ರಾಯವನ್ನು ತಿಳಿಯದೆ)
ಸೋಂಕೆಯುಂ-ಮುಟ್ಟಿ
ಮನಮಱಿಯದೆ
ನುಡಿಯೆಯುಂ (ಮುಟ್ಟಿ
ಇಷ್ಟವನ್ನು ತಿಳಿಯದೆ
ನುಡಿಯಲು) ಆತನನು
ಆಕೆಗಳ್ ಬಾಸೆಯೊಳ್
ಇಂತೆಂದರ್ (ತಮ್ಮ

ರಹಸ್ಯಭಾಷೆಯಲ್ಲಿ
ಹೀಗೆಂದರು)-
ವಚನ:ಅರ್ಥ:ಎನ್ನಲು
ಅದನ್ನು ಕೇಳಿ ನಗುತ್ತ
ಬರುತ್ತಿರಲು, ಒಂದು
ಕಡೆಯಲ್ಲಿ ನಾಲ್ಕೈದು ಜನ
ತಂಟದಾಸಿಯರು ಇದ್ದ ಕಡೆಗೆ
ಒಬ್ಬ ದಡ್ಡನು ಅವರ ಗೋಷ್ಠಿಗೆ
ಬಂದು, ಅಭಿಪ್ರಾಯವನ್ನು
ತಿಳಿಯದೆ, ಮುಟ್ಟಿ ಇಷ್ಟವನ್ನು
ತಿಳಿಯದೆ ನುಡಿಯಲು ಆ

ದಾಸಿಯರು ಅವನನನ್ನು
ಕುರಿತು ತಮ್ಮ
ರಹಸ್ಯಭಾಷೆಯಲ್ಲಿ
ಹೀಗೆಂದರು

ಉ|| ಭಾವಕನೆಂದೊಡಂ
ಚದುರನೆಂದೊಡಮಾರ್
ಪೆಱರಾರೊ ನೀನೆ ನಿ
ನ್ನಾವ ಗುಣಂಗಳಂ
ಪೊಗೞ್ವೊಡೆಲ್ಲವಱಿಂ
ನೆರೆದೆಮ್ಮೊಳಿಂತು ಸ|

ದ್ಭಾವದೆ ಗೊಟ್ಟಿರಲ್ ಬಯಸಿ
ಬಂದೆಯದೀಗಳಿದೊಳ್ಳಿತಾ
ಯ್ತು ಮಾ
ದೇವರ
ಮುಂದಣಾತನೆನಲಲ್ಲದೆ
ಪೇೞು
ಪೆೞತೇನನೆಂಬುದೋ|| ೯೬||

ಪದ್ಯ-೯೬:ಪದವಿಭಾಗ-
ಅರ್ಥ:ಭಾವಕನೆಂದೊಡಂ
ಚದುರನೆಂದೊಡಂ ಆರ್
(ರಸಿಕರೆಂದರೆ ಚತುರನೆಂದರೆ

ಯಾರು) ಪೆಱರಾರೊ ನೀನೆ
(ಬೇರೆ ಯಾರಿದ್ದಾರೆ, ನೀನೆ)
ನಿನ್ನ ಆವ ಗುಣಂಗಳಂ
ಪೊಗೞ್ವೊಡೆ ಎಲ್ಲವಱಿಂ
ನೆರೆದು (ನಿನ್ನ ಯಾವ ಎಲ್ಲ
ಗುಣಗಳನ್ನೂ
ಹೊಗಳುವುದಾದರೆ ನೀನು
ಎಲ್ಲಗುಣಗಳಿಂದ ತುಂಬಿ.)
ಎಮ್ಮೊಳಿಂತು-ಎಮ್ಮೊಳು
ಇಂತು ಸದ್ಭಾವದೆ ಗೊಟ್ಟಿರಲ್
ಬಯಸಿ ಬಂದೆ (ನೀನು

ಸದ್ಭಾವದಿಂದ ನಮ್ಮಲ್ಲಿ
ಗೋಷ್ಠಿಯಲ್ಲಿರಲು ಬಯಸಿ
ಬಂದಿದ್ದೀಯೆ) ಬಂದೆ
ಅದೀಗಳು ಇದು ಒಳ್ಳಿತಾಯ್ತು
(ಅದೀಗ ಒಳ್ಳೆಯದಾಯಿತು.)
ಮಾದೇವರ ಮುಂದಣ
ಆತನು ಎನಲು ಅಲ್ಲದೆ
ಪೇೞು(ಹೇಳು) (ನೀನು
ಮಹಾದೇವನಾದ ಶಿವನ
ಮುಂದಿರುವ ಆತನು-'ಬಸವ'
ಅಲ್ಲದೆ ಮತ್ತೇನೆಂದು

ಹೇಳೋಣ- ಎಂದರೆ ನೀನು ಎತ್ತು-ದಡ್ಡ ಬಸವಣ್ಣ)
ಪೆಱತೇನನು ಎಂಬುದೋ (ಮತ್ತೇನೆಂದು ಹೇಳೋಣ- ಎಂದರೆ ನೀನು ಎತ್ತು-ದಡ್ಡ ಬಸವಣ್ಣ)

ಪದ್ಯ-೯೬:ಅರ್ಥ:
ರಸಿಕರೆಂದರೆ ಚತುರನೆಂದರೆ ಯಾರು? ಬೇರೆ ಯಾರಿದ್ದಾರೆ, ನೀನೆ! ನಿನ್ನ ಯಾವ ಎಲ್ಲ ಗುಣಗಳನ್ನೂ

ಹೊಗಳುವುದಾದರೆ ನೀನು ಎಲ್ಲಗುಣಗಳಿಂದ ತುಂಬಿ/ ನೀನು ಸರ್ವಗುಣಸಂಪನ್ನನೆನ್ನಲೇಬೇಕು. ನೀನು ಸದ್ಭಾವದಿಂದ ನಮ್ಮಲ್ಲಿ ಗೋಷ್ಠಿಯಲ್ಲಿರಲು ಬಯಸಿ ಬಂದಿದ್ದೀಯೆ; ಅದೀಗ ಒಳ್ಳೆಯದಾಯಿತು. ನೀನು ಮಹಾದೇವನಾದ ಶಿವನ ಮುಂದಿರುವ ಆತನು-'ಬಸವ' ಅಲ್ಲದೆ ಮತ್ತೇನೆಂದು

ಹೇಳ್ಪೋಣ- ಎಂದರೆ ನೀನು

ಎತ್ತು-ದಡ್ಡ ಬಸವಣ್ಣ

ವ|| ಎಂದಾತನನಾಕೆಗಳ್ ಕಾಡಿ ಕೊಱಚಾಡಿ ಕಳೆದರ್ ಮತ್ತಮೊಂದೆಡೆಯೊಳೊರ್ವಳ್ ತನ್ನನುೞಿದ ಪೊಸ ಬೇಟದಾಣ್ದ (ಣ್ಮ)ನನೇಗೆಯ್ದುಂ ಪೊಗಲೀಯದೆ ತನ್ನಳಿಪನೆ ತೋಱಿ-

ವಚನ:ಪದವಿಭಾಗ-ಅರ್ಥ:ಎಂದು ಆತನನು ಆಕೆಗಳ್ ಕಾಡಿ ಕೊಱಚಾಡಿ ಕಳೆದರ್ (ಎಂದು ಆ ಹೆಣ್ಣುಗಳು ಆತನನ್ನು ಕಾಡಿ ಕಡೆಗಣಿಸಿ ಮಾತನಾಡಿ ಕಳುಹಿಸಿದರು.) ಮತ್ತಮೊಂದು (ಮತ್ತೊಂದು) ಎಡೆಯೊಳ್ (ಕಡೆ) ಒರ್ವಳ್ ತನ್ನನು ಉೞಿದ (ಒಬ್ಬಳು ತನ್ನನ್ನು ಬಿಟ್ಟ) ಪೊಸ ಬೇಟದ

ಆಣ್ಮನನು ಏಗೆಯ್ದುಂ
ಪೊಗಲೀಯದೆ (ಒಬ್ಬಳು
ತನ್ನನ್ನು ಬಿಟ್ಟುಹೋಗುತ್ತಿದ್ದ
ಹೊಸ ಪ್ರೇಮದ
ಪ್ರಿಯಕರನನ್ನು ಏನು
ಮಾಡಿದರೂ ಹೋಗುವುದಕ್ಕೆ
ಬಿಡದೆ) ತನ್ನ ಅಳಿಪನೆ
ತೋಱಿ (ತನ್ನ ಒಲಿಮೆಯನ್ನೇ
ತೋರಿಸಿ)-
ವಚನ:ಅರ್ಥ:ಎಂದು ಆ
ಹೆಣ್ಣುಗಳು ಆತನನ್ನು ಕಾಡಿ

ಕಡೆಗಣಿಸಿ ಮಾತನಾಡಿ ಕಳುಹಿಸಿದರು. ಬೇರೊಂದೆಡೆಯಲ್ಲಿ ಒಬ್ಬಳು ತನ್ನನ್ನು ಬಿಟ್ಟುಹೋಗುತ್ತಿದ್ದ ಹೊಸ ಪ್ರೇಮದ ಪ್ರಿಯಕರನನ್ನು ಏನು ಮಾಡಿದರೂ ಹೋಗುವುದಕ್ಕೆ ಬಿಡದೆ ತನ್ನ ಒಲಿಮೆಯನ್ನೇ ತೋರಿಸಿ-

ಚಂ|| ಮನೆಯನಿವಂ ಮನೋಭವನಿವಂ ಪೊಸ

ಪುಗ್ಗಿಯೊಳಾದದೊಂದು ಕಿ
ತ್ತನಿವನಿದೆನ್ನನೇನುಱಿಯಲೀ
ಗುಮೆ ನೀನುಱಿದಾಗಳೆಂದು
ಪೋ|
ಪನನಿರದೋಪನಂ
ಮಿಡುಕಲೀಯದೆ
ಕಾಲ್ವಿಡಿದಱ್ತು ತೋರ ಕ
ಣ್ಬನಿಗಳನಿಕ್ಕಿದಳ್
ತರಳಲೋಚನೆ
ಸಂಕಲೆಯಿಕ್ಕಿದಂತೆವೋಲ್||
೯೭||

ಪದ್ಯ-೯೭:ಪದವಿಭಾಗ-ಅರ್ಥ:ಮನೆಯನು ಇವಂ ಮನೋಭವನು ಇವಂ (ಇವನು ನನ್ನ ಮನೆಯ ಯಜಮಾನ, ಇವನು ಮನಸಿಜ- ಮನ್ಮಥ) ಪೊಸ ಸುಗ್ಗಿಯೊಳು ಆದದೊಂದು ಕಿತ್ತನು ಇವಂಇದು ಎನ್ನನೇನು ಉೞಿಯಲು ಈಗುಮೆ ನೀನು ಉೞಿದಾಗಳೆಂದು (ನೀನು ಬಿಟ್ಟಾಗ)--(ಹೊಸ

ವಸಂತಕಾಲದಲ್ಲಿ ಮದುವೆ
ಆದುದು, ಚಿಕ್ಕಪ್ರಾಯದವ
ಇವನು, ಇದು- ನೀನು ಬಿಟ್ಟಾಗ
ಇವನು ನನ್ನನ್ನೇನು
ತೊರೆಯಲು ಬಿಡುವೆನೇ?
ಇಲ್ಲ. ಎಂದು ಹೇಳಿಕೊಂಡು)
ಪೋಪನನು ಇರದೆ ಓಪನಂ
ಮಿಡುಕಲೀಯದೆ ಕಾಲ್ವಿಡಿದು
ಅೞ್ತು (ಹೋಗುವ
ಪ್ರಿಯನನ್ನು ಸುಮ್ಮನೆ
ಚಲಿಸುವುದಕ್ಕೂ ಬಿಡದೆ

ಕಾಲುಗಳನ್ನು ಕಟ್ಟಿಕೊಂಡು ಅತ್ತು) ತೋರ ಕಣ್ಬನಿಗಳನ್ ಇಕ್ಕಿದಳ್ ತರಳಲೋಚನೆ ಸಂಕಲೆಯ ಇಕ್ಕಿದಂತೆವೋಲ್ (ಸಂಕೋಲೆ ಹಾಕಿದಂತೆ ಚಂಚಲನೇತ್ರೆಯಾದ ಅವಳು ತೋರ/ ದೊಡ್ಡ ಕಣ್ಣೀರಿನ ಹನಿಗಳನ್ನು ಸುರಿಸಿದಳು)

ಪದ್ಯ-೯೭:ಅರ್ಥ: ಇವನು ನನ್ನ ಮನೆಯ ಯಜಮಾನ, ಇವನು ಮನ್ಮಥ, ಹೊಸ

ವಸಂತಕಾಲದಲ್ಲಿ ಮದುವೆ
ಆದುದು, ಚಿಕ್ಕಪ್ರಾಯದವ
ಇವನು, ಇದು- ನೀನು ಬಿಟ್ಟಾಗ
ಇವನು ನನ್ನನ್ನೇನು
ತೊರೆಯಲು ಬಿಡುವೆನೇ?
ಇಲ್ಲ. ಹೋಗುವ ಪ್ರಿಯನನ್ನು
ಸುಮ್ಮನೆ ಚಲಿಸುವುದಕ್ಕೂ
ಬಿಡದೆ ಕಾಲುಗಳನ್ನು
ಕಟ್ಟಿಕೊಂಡು ಅತ್ತು,
ಸಂಕೋಲೆ ಹಾಕಿದಂತೆ
ಚಂಚಲನೇತ್ರೆಯಾದ ಅವಳು

ತೋರ/ ದೊಡ್ಡ ಕಣ್ಣೀರಿನ ಹನಿಗಳನ್ನು ಸುರಿಸಿದಳು

ವ|| ಮತ್ತೊರ್ವಂ ತನ್ನ ಸೂಳೆಯೊಳಾದ ಬೇಸಱಿಂ ತನ್ನ ಕೆಳೆಯಂಗಿಂತೆಂದಂ-

ವಚನ:ಪದವಿಭಾಗ-

ಅರ್ಥ:ಮತ್ತೊರ್ವಂ ತನ್ನ ಸೂಳೆಯೊಳು ಆದ ಬೇಸಱಿಂ (ಬೇಸರವನ್ನು) ತನ್ನ ಕೆಳೆಯಂಗೆ ಇಂತೆಂದಂ(ಹೀಗೆಂದನು)-

ವಚನ:ಅರ್ಥ:ಮತ್ತೊಬ್ಬನು ತನ್ನ ಸೂಳೆಯೊಡನೆ ಆದ ಬೇಸರವನ್ನು ತನ್ನ ಗೆಳೆನಿಗೆ ಹೀಗೆ ಹೇಳಿದನು.

ಚಂ|| ಮುಳಿಸಱಿದಂಜಿ
ಬಾೞ್ತೆಯಱಿದಿತ್ತು
ಮನಂಗೊಳೆಯುಂ ಕನಲ್ಬುದ
ರ್ಕಳವಿಯುಮಂತುಮಿಲ್ಲ
ಸನಿಯನ್ನಳೆ ಕುಂಟಣಿ ಪೋದ
ಮಾರಿಯ|

ನ್ನಳೆ ಮನೆದೊೞ್ತು ಸೀರ್ಕರಡಿಯನ್ನಳೆ ನಾದುನಿಯೊಲ್ದುವೊಲ್ಲದ ನ್ನಳೆ ಗಡ ಸೂಳೆಯೆಂದೊಡಿನಿತಂ ತಲೆವೇಸಱನೆಂತು ನೀಗುವೆಂ|| ೯೮||

ಪದ್ಯ-೯೮:ಪದವಿಭಾಗ-ಅರ್ಥ:ಮುಳಿಸ ಅಱಿದು ಅಂಜಿ (ಅವಳ ಕೋಪವನ್ನು ನೋಡಿ ಹೆದರಿ) ಬಾೞ್ತೆಯ

ಅಱಿದು ಇತ್ತು
ಮನಂಗೊಳೆಯುಂ
(ಬಾಳ್ತೆಯ-ಒಡವೆಯನ್ನು
ಅಪೇಕ್ಷೆ ತಿಳಿದು ಕೊಟ್ಟು ಅವಳ
ಮನಸ್ಸನ್ನು
ವಶಪಡಿಸಿಕೊಂಡಿದ್ದರೂ)
ಕನಲ್ವುದರ್ಕೆ ಅಳವಿಯುಂ
ಅಂತುಮಿಲ್ಲ ಸನಿಯನ್ನಳೆ
(ಶನಿ) ಕುಂಟಣಿ (ಅವಳು
ರೇಗುವುದಕ್ಕೆ ಅಳತೆಯೂ
ಅಂತ್ಯವೂ ಅಲ್ಲ.

ತಲೆಹಿಡಿಕಿಯೂ
ಶನಿಯಂತಹವಳೇ.) ಪೋದ
ಮಾರಿಯನ್ನಳೆ ಮನೆದೊಟ್ಟಿ
(ಹೋದ ಮಾರಿಯಂತಹವಳೇ
ಮನೆಕೆಲಸ ಮಾಡುವ
ದಾಸಿಯೂ) ಸೀರ್
ಕರಡಿಯನ್ನಳೆ ನಾದುನಿ
(ನಾದಿನಿಯು
ಸೀರ್ಕರಡಿಯಂತೆ
ಜಗಳಗಂಟಿ) ಒಲ್ದುಂ
ಒಲ್ಲದನ್ನಳೆ ಗಡ

ಸೂಳೆಯೆಂದೊಡೆ(ಒಲಿದೂ ಒಲಿಯದಂತೆ ಇರುವವಳು ತಾನೆ! ಸೂಳೆಯರು) ಇನಿತಂ ತಲೆವೇಸಱಿನೆಂತು ನೀಗುವೆಂ(ಇಷ್ಟೊಂದು ತಲೆಬೇನೆಯನ್ನು ಹೇಗೆ ನೀಗಲಿ)

ಪದ್ಯ-೯೮:ಅರ್ಥ: . (ಅವಳ)-ಕೋಪವನ್ನ ನೋಡಿ ಹೆದರಿ (ಅವಳ) ಬಾಳ್ತೆಯ-ಒಡವೆಯ ಅಪೇಕ್ಷೆಯನ್ನು ತಿಳಿದು ಕೊಟ್ಟು

ಅವಳ ಮನಸ್ಸನ್ನು
ವಶಪಡಿಸಿಕೊಂಡಿದ್ದರೂ,
ಅವಳು ರೇಗುವುದಕ್ಕೆ
ಅಳತೆಯೂ ಅಂತ್ಯವೂ ಅಲ್ಲ.
ತಲೆಹಿಡಿಕಿಯೂ
ಶನಿಯಂತಹವಳೇ.
ಮಾರಿಯಂತಹವಳೇ
ಮನೆಕೆಲಸ ಮಾಡುವ
ದಾಸಿಯೂ. ನಾದಿನಿಯು
ಸೀರ್ಕರಡಿಯಂತೆ ಜಗಳಗಂಟಿ.
ಎಷ್ಟಾದರೂ ಸೂಳೆಯು

ಒಲಿದೂ
ಒಲಿಯದಂತಿರುವವಳೆ ತಾನೆ!
ಇಷ್ಟೊಂದು ತಲೆಬೇನೆಯನ್ನು
ಹೇಗೆ ನೀಗಲಿ.

ವ|| ಎಂದು ನುಡಿದು
ಗೆಂಟಾದಂ ಮತ್ತೊರ್ವ
ಬೇಟಕಾರ್ತಿ ತಾಯ ಕಣ್ಣಂ
ಬಂಚಿಸಿ ತನ್ನ ಮೋಪಿನಾಕೆಯ
ಮನೆಗೆ ಪೋಪ
ಬೇಟದಾಣ್ಮನಂ ಪಿಡಿದು-

ವಚನ:ಪದವಿಭಾಗ-ಅರ್ಥ:

ಎಂದು ನುಡಿದು ಗೆಂಟಾದಂ (ಹೋದನು) ಮತ್ತೊರ್ವ ಬೇಟಕಾರ್ತಿ (ನಲ್ಲಳು) ತಾಯ ಕಣ್ಣಂ ಬಂಚಿಸಿ (ತಾಯಿಯಕಣ್ಣು ತಪ್ಪಿಸಿ) ತನ್ನ ಮೋಪಿನಾಕೆಯ ಮನೆಗೆ ಪೋಪ (ಹೋಗುತ್ತಿರುವ) ಬೇಟದಾಣ್ಮನಂ (ಪ್ರಿಯನಲ್ಲನನ್ನು) ಪಿಡಿದು-

ವಚನ:ಅರ್ಥ:ಎಂದು ಹೇಳಿ ಹೋದನು. ಬೇರೊಬ್ಬ ಪ್ರಿಯಳು ತನ್ನ ತಾಯಿಯ ಕಣ್ಣನ್ನು ತಪ್ಪಿಸಿ ತನ್ನ ಗೆಳತಿಯ ಮನೆಗೆ ಹೋಗುತ್ತಿರುವ ತನ್ನ ಪ್ರಿಯನಲ್ಲನನ್ನು ಹಿಡಿದುಕೊಂಡು

ಉ|| ತಪ್ಪುದು ಮಾತು
ದೂದವರ ಕೆಯ್ಯೊಳೆ
ಕಾಲ್ವಿಡಿದಟ್ಟೆ ಕಣ್ಣ ನೀರ್

ತಪ್ಪುವು

ನಿಚ್ಚಮಚ್ಚಿಗದೊಳಚ್ಚು ಕರಂ

ಬಿಸುಸುಯ್ಯೆ ಸುಯ್ದ ಸುಯ್|

ತಪ್ಪುದು ತಪ್ಪುದೆನ್ನ ತನು

ಬೇಟದ ಕಾಟದೊಳಿಂತು

ಕಂಡುಮಿ

ನ್ನಪ್ಪೊಡಮಾಸೆವಾತನೆನಗೋ

ಪನೆ ನೀಂ

ದಯೆಗೆಯ್ಯಲಾಗದೇ|| ೯೯||

ಪದ್ಯ-೯೯:ಪದವಿಭಾಗ-

ಅರ್ಥ:ತಪ್ಪುದು ಮಾತು

ದೂದವರ ಕೆಯ್ಯೊಳೆ
ಕಾಲ್ಪಿಡಿದು ಅಟ್ಟಿ
(ಸಂದೇಶವಾಹಕರ ಕಯ್ಯಲ್ಲಿ
ಅವರ ಕಾಲುಹಿಡಿದು
ಕಳುಹಿಸಿದ ಮಾತುಗಳು
ತಪ್ಪಿತು-
ಪ್ರಯೋಜನವಾಗಿಲ್ಲ.) ಕಣ್ಣ
ನೀರ್ ತಪ್ಪುವು ನಿಚ್ಚಂ
ಅಚ್ಚಿಗದೊಳ್ ಅೞ್ತು
(ನಿತ್ಯವೂ ದುಃಖಪಟ್ಟು ಅತ್ತು
ಕಣ್ಣುನೀರು ಸುರಿಸುವುದು

ತಪ್ಪುವುದಿಲ್ಲ) ಕರಂ
ಬಿಸುಸುಯ್ಯೆ ಸುಯ್ದು ಸುಯ್
ತಪ್ಪುದು ತಪ್ಪುದು ಎನ್ನ ತನು
ಬೇಟದ ಕಾಟದೊಳು ಇಂತು
ಕಂಡುಂ ಇನ್ನಪ್ಪೊಡಂ
(ಇನ್ನಾದರೂ) ಅಸೆವಾತನು
ಎನಗೆ ಓಪನೆ ನೀಂ
ದಯೆಗೆಯ್ಯಲಾಗದೇ
(ಪ್ರಿಯನೇ ನೀನು ಪ್ರೀತಿಯ
ಮಾತನ್ನು ಕರಣಿಸಬಾರದೇ?)

(ತಪ್ಪುದು- ಹಾಳಾಗುವುದು-
ವ್ಯರ್ಥವಾಗುವುದು)

ಪದ್ಯ-೯೯:ಅರ್ಥ: .
ಸಂದೇಶವಾಹಕರ ಕಯ್ಯಲ್ಲಿ
ನಿನ್ನ ಕಾಲುಹಿಡಿದು ಕಳುಹಿಸಿದ
ಮಾತುಗಳು ತಪ್ಪಿತು-
ಪ್ರಯೋಜನವಾಗಿಲ್ಲ. ನಿತ್ಯವೂ
ದುಃಖಪಟ್ಟು ಅತ್ತು ಕಣ್ಣುನೀರು
ಸುರಿಸುವುದು ತಪ್ಪುವುದಿಲ್ಲ.
ದಿನವೂ/ಬಹಳ ನಿಟ್ಟುಸಿರು
ಬಿಸಿಯುಸಿರು ಬಿಡುವುದು

ತಪ್ಪುವುದಿಲ್ಲ. ನನ್ನ ಶರೀರವು ಬೇಟದ ಕಾಟದಿಂದ ಸೊರಗುವುದು ತಪ್ಪುವುದಿಲ್ಲ. ಇದನ್ನು ನೋಡಿಯೂ ಇನ್ನು ಮೇಲಾದರೂ ಪ್ರಿಯನೇ ನೀನು ಪ್ರೀತಿಯ ಮಾತನ್ನು ಕರಣಿಸಬಾರದೇ?- ಎಂದು ತನ್ನ ಪ್ರಿಯನಲ್ಲನನ್ನು ಹಿಡಿದುಕೊಂಡು ಬೇಡಿದಳು.

ವ|| ಎಂದು ಕರುಣಾಂಬಡೆ ನುಡಿದೊಡಗೊಂಡು

ಪೋದಳ್ ಮತ್ತಮೊಂದೆಡೆಯೊಳೊರ್ವಳ್ ಕುಂಟಣಿಯುಪರೋಧಕ್ಕೆ ಪಿರಿದೀವ ಮುದುಪನನುೞಿಯಲಂಜಿ ತನ್ನ ಬೇಸಱಿಂ ತನ್ನ ಸಬ್ಬವದಾಕೆಗಿಂತೆಂದಳ್-

ವಚನ:ಪದವಿಭಾಗ-

ಅರ್ಥ:ಎಂದು ಕರುಣಾಂಬಡೆ (ಕರುಣೆ ಬರುವಂತೆ) ನುಡಿದು ಒಡಗೊಂಡು ಪೋದಳ್,

ಮತ್ತಮೊಂದು ಎಡೆಯೊಳ್ ಒರ್ವಳ್ ಕುಂಟಣಿಯು (ವಿಟರದೂತಿಯ) ಅಪರೋಧಕ್ಕೆ ಪಿರಿದು ಈವ (ಹೆಚ್ಚು ಹಣಕೊಡುವ ಒತ್ತಾಯಕ್ಕೆ) ಮುದುಪನನು ಉೞಿಯಲಂಜಿ (ಮುದುಕನನ್ನು ಉಳಿಯಲು-ಬಿಡಲು ಅಂಜಿ) ತನ್ನ ಬೇಸಱಿಂ ತನ್ನ ಸಬ್ಬವದಾಕೆಗಿಂತೆಂದಳ್-

ವಚನ:ಅರ್ಥ:ಎಂದು ಕರುಣೆ ಬರುವಂತೆ ಮಾತನಾಡಿ ಜೊತೆಯಲ್ಲಿ ಕರೆದುಕೊಂಡು ಹೋದಳು. ಬೇರೊಂದು ಕಡೆಯಲ್ಲಿ ಕುಂಟಣಿಯ ಹೆಚ್ಚು ಹಣಕೊಡುವ ಒತ್ತಾಯಕ್ಕೆ ಹೆಚ್ಚು ಹಣ ಕೊಡುವ ಮುದುಕನನ್ನು ಬಿಡಲು ಅಂಜಿ ತನ್ನ ಬೇಸರವನ್ನು ತನ್ನ ಪ್ರಿಯಸಖಿಗೆ ಹೀಗೆಂದಳು

ಚಂ|| ಕೊರೆವೊಡೆ ಬೆಟ್ಟುಗಳ್
ಬಿರುವುವುಣ್ಮುವ ಲಾಳೆಯ
ಲೋಳೆಗಳ್ ಪೊನ
ಲ್ವರಿವುವು ಕೆಮ್ಮಿ ಕುಮ್ಮಿದೊಡೆ
ತೋಳೊಳೆ ಜೀವ
ವಿಯೋಗಮಪ್ಪುದೆಂ|
ದಿರದೆರ್ದೆಗಪ್ಪುದತ್ತಳಗಮಾ
ನೆರೆಪಂ ನೆರೆವಂದು ಪೊಂಗಳಂ
ಸುರಿವೊಡಮಾರೊ
ಸೈರಿಸುವರಾತನ

ಪಲ್ಲಿಲ್ಲಿವಾಯ ನಾತಮಂ|| ೧೦೦||

ಪದ್ಯ-೧೦೦:ಪದವಿಭಾಗ-ಅರ್ಥ:ಕೊರೆವೊಡೆ ಬೆಟ್ಟುಗಳ್ ಬಿರುವುವು (ಗೊರಕೆಹೊಡೆದರೆ ಬೆಟ್ಟಗಳೇ ಬಿರಿಯುವುವು) ಉಣ್ಮುವ ಲಾಳೆಯ ಲೋಳೆಗಳ್ ಪೊನಲ್ವರಿವುವು (ಹೊಮ್ಮುವ ಜೊಲ್ಲುರಸ ಪೊನಲ್ ವರಿವುವು- ಪ್ರವಾಹ

ಹರಿಯುವುದು) ಕೆಮ್ಮಿ
ಕುಮ್ಮಿದೊಡೆ ತೋಳೊಳೆ
ಜೀವ ವಿಯೋಗಮಪ್ಪುದೆಂದು
ಇರದೆ (ಕೆಮ್ಮಿ ಕುಮ್ಮಿಟ್ಟಿದರೆ
ತನ್ನ ತೋಳಿನಲ್ಲಿಯೇ ಜೀವ
ಬಿಡುವನೆಂದು) ಎರ್ದೆಗೆ
ಅಪ್ಪುದು ಅತ್ತಳಗಂ(ಮನಸ್ಸಿಗೆ
ಅತ್ತಳಗ- ಕಳವಳ ಆಗುತ್ತದೆ.)
ಆ ನೆರೆಪಂ ನೆರೆವಂದು (ಆ
ನರೆಗೂದಲಿನ ಕೂಡಲು
ಬಂದು) ಪೊಂಗಳಂ

ಸುರಿವೊಡಂ (ಹೊನ್ನುಗಳನ್ನು ಸುರಿದರೂ) ಆರೊ ಸೈರಿಸುವರರ ಆತನ ಪಲ್ಲಿಲ್ಲಿವಾಯ (ಯಾರು ಸಹಿಸುವರು ಅವನ ಹಲ್ಲಿಲ್ಲದ ಬಾಯಿನ ನಾತವನ್ನು!)ನಾತಮಂ

ಪದ್ಯ-೧೦೦:ಅರ್ಥ: (ಆ ಮುದುಕನು) ಗೊರಕೆಹೊಡೆದರೆ ಬೆಟ್ಟಗಳೇ ಬಿರಿಯುವುವು. ಸುರಿಯುವ

ಜೊಲ್ಲಿನ ಲೋಳೆಗಳು
ಪ್ರವಾಹವಾಗಿ ಹರಿಯುತ್ತವೆ.
ಕೆಮ್ಮಿ ಕುಮ್ಮಿಟ್ಟಿದರೆ
ತೋಳಿನಲ್ಲಿಯೇ ಜೀವ
ಬಿಡುವನೆಂದು ಮನಸ್ಸಿಗೆ
ಕಳವಳ ಆಗುತ್ತದೆ. (ಇಂತಹ)
ಆ ನರೆಗೂದಲಿನವನು
ಕೂಡಲು ಬಂದು ಎಷ್ಟು
ಹೊನ್ನುಗಳನ್ನು ಸುರಿದರೂ,
ಯಾರು ಸಹಿಸುವರು ಅವನ
ಹಲ್ಲಿಲ್ಲದ ಬಾಯಿನ

ನಾತವನ್ನು! (ಎಂದು
ನಗಿಸುವಳು)

ವ|| ಎಂದು ನಗಿಸುತ್ತಿರ್ದಳ್ ಮತ್ತಮೊಂದೆಡೆಯೊಳೊರ್ವಳ್ ತನ್ನ ನಲ್ಲನಲ್ಲಿಗೆದೂದುವೋಗಿ ಬಂದ ದೂದವಿಗೇಗಯ್ವ ತೆಱನುಮನಱಿಯದೆ ಪದೆದು ಪಡೆಮಾತಂ ಬೆಸಗೊಳ್ವಳಂ ಕಂಡು-

ವಚನ:ಪದವಿಭಾಗ-ಅರ್ಥ:ಎಂದು ನಗಿಸುತ್ತಿರ್ದಳ್ (ಎಂದು ನಗಿಸುತ್ತಿದ್ದಳು) ಮತ್ತಮೊಂದೆಡೆಯೊಳ್ ಒರ್ವಳ್ ತನ್ನ ನಲ್ಲನಲ್ಲಿಗೆ ದೂದುವೋಗಿ ಬಂದ ದೂದವಿಗೇಗಯ್ವು ತೆಱನುಮನಱಿಯದೆ ಪದೆದು ಪಡೆಮಾತಂ ಬೆಸಗೊಳ್ವಳಂ ಕಂಡು-

ವಚನ:ಅರ್ಥ:ಎಂದು ನಗಿಸುತ್ತಿದ್ದಳು, ಇನ್ನೊಂದೆಡೆಯಲ್ಲಿ ಒಬ್ಬಳು ತನ್ನ ಪ್ರಿಯನ ಕಡೆಗೆ ಪ್ರೇಮಸಂದೇಶವನ್ನು ಕೊಂಡುಹೋಗಿ ಬಂದ ದೂತಿಗೆ ಏನು ಮಾಡಬೇಕೆಂಬುದನ್ನು ತಿಳಿಯದೆ ಆಶೆಪಟ್ಟು (ಅವನು ಕಳುಹಿಸಿದ) ಪ್ರತ್ಯುತ್ತರವನ್ನು ಕೇಳುವವಳನ್ನು ನೋಡಿ

ನಲ್ಲ ನಲ್ಲೆಯರ ಪ್ರೇಮ -ವಿರಹಗಳ ಸುಖ ದುಃಖ

ಚಂ|| ಬಿರಯಿಸಿ ಬೇಟದೊಳ್
ಬಿರಿವ ನಲ್ಲರಗಲ್ದು
ಕನಲ್ದೊನಲ್ದು ನ
ಲ್ಲರ ದೆಸೆಯಿಂದಮಟ್ಟಿವರೆ
ಕೋಗಿಲೆಯಕ್ಕೆಲರಕ್ಕೆ
ತುಂಬಿಯ|
ಕ್ಕರಗಿಳಿಯಕ್ಕೆ
ಬಂದೊಡಮೊಱಲ್ದೆರ್ದೆಯಾ
ಱುವರೆಂದೊಡೋತ ದೂ

ತರೆ ತರೆ ಬಂದ ಸಬ್ಬವದ ಮಾತುಗಳಂ ಗುಡಿಗಟ್ಟಿ ಕೇಳರೇ ||೧೦೧||

ಪದ್ಯ-೧೦೧:ಪದವಿಭಾಗ-ಅರ್ಥ:ಬಿರಯಿಸಿ (ವಿರಹದಿ) ಬೇಟದೊಳ್ ಬಿರಿವ ನಲ್ಲರು(ಪ್ರೇಮದಲ್ಲಿ ನರಳುವ ಪ್ರಿಯರು) ಅಗಲ್ದು ಕನಲ್ದೊನು (ಸಿಟ್ಟಿನಿಂದ ಬಿಟ್ಟುಹೋದ) ಒಲ್ದು ನಲ್ಲರ ದೆಸೆಯಿಂದಂ ಅಟ್ಟಿವರೆ (ತಮ್ಮನಲ್ಲರ

ಕಡೆಯಿಂದ ಪ್ರೇಮ ಸಂದೇಶ
ಬರಲು) ಕೋಗಿಲೆಯಕ್ಕೆ
ಎಲರಕ್ಕೆ(ಗಾಳಿಯಾಗಲಿ)
ತುಂಬಿಯಕ್ಕೆ ಅರಗಿಳಿಯಕ್ಕೆ
ಬಂದೊಡಂ (ಬಂದರೂ)
ಒಱಲ್ದು (ಒಲಿದು?)
ಎರ್ದೆಯಾಱುವರು ಎಂದೊಡೆ
(ಮನಸ್ಸಮಾಧಾನವನ್ನು
ಪಡೆಯುತ್ತಾರೆ ಎಂದಾಗ,)
ತಮ್ಮ ಪ್ರೀತಿಪಾತ್ರರಾದ) ಓತ
ದೂತರೆ ತರೆ ಬಂದ(ಒಲಿದ

ದೂತರೇ ತೆಗೆದುಕೊಂಡು ಬಂದ) ಸಬ್ಬವದ ಮಾತುಗಳಂ ಗುಡಿಗಟ್ಟಿ (ಬಾವುಟಹಾರಿಸಿ-ಸಂತಸದಿಂದ) ಕೇಳರೇ(ವಿನೋದದ ವಾರ್ತೆಯನ್ನು ಪುಳಕಿತರಾಗಿ ಕೇಳುವುದಿಲ್ಲವೇ?)

ಪದ್ಯ-೧೦೧:ಅರ್ಥ: ವಿರಹವೇದನೆಯಿಂದ ನರಳುತ್ತಿರುವ ಪ್ರೇಮಿಗಳು, ಸಿಟ್ಟಿನಿಂದ ಬಿಟ್ಟುಹೋದ

ತಮ್ಮನಲ್ಲರ ಕಡೆಯಿಂದ
ಪ್ರೇಮ ಸಂದೇಶ ಬರಲು,
ಕೋಗಿಲೆಯಾಗಲಿ,
ಗಾಳಿಯಾಗಲಿ,
ತುಂಬಿಯಾಗಲಿ, ಗಿಳಿಯಾಗಲಿ,
ಬಂದರೂ ಒಲಿದು/ನಲಿದು
ಮನಸ್ಸಮಾಧಾನವನ್ನು
ಪಡೆಯುತ್ತಾರೆ ಎಂದಾಗ ತಮ್ಮ
ಒಲಿದ ದೂತರೇ
ತೆಗೆದುಕೊಂಡು ಬಂದ
ವಿನೋದದ ವಾರ್ತೆಯನ್ನು

ಪುಳಕಿತರಾಗಿ

ಕೇಳುವುದಿಲ್ಲವೇ?

ವ|| ಅಂತುಮಲ್ಲದೆಯುಂ-

ವಚನ:ಪದವಿಭಾಗ-ಅರ್ಥ:

ಅಂತುಂ ಅಲ್ಲದೆಯುಂ-

ವಚನ:ಅರ್ಥ:

ಹಾಗಲ್ಲದೆಯೂ-

ಚಂ||

ಮನದೊಳಲಂಪನಾಳ್ದಿನಿಯನ

ಟ್ಟಿದ ದೂದರ ಸೀಯನಪ್ಪ

ಮಾ

ತಿನ ರಸದೊಳ್ ಕೊನರ್ವುದು
ತಳಿರ್ವುದು ಪೂವುದು
ಕಾಯ್ವುದಂತು ಕಾ
ಯ್ತನಿತರೊಳಂತು ನಿಂದು
ಮನದೊಳ್ ತೊದಳಿಲ್ಲದ
ನಲ್ಮೆಯೆಂಬ ನಂ
ದನವನಮೋಪರೊಳ್
ನೆರೆದೊಡಂತು ರಸಂ ಬಿಡೆ
ಪಣ್ತುದಾಗದೇ|| ೧೦೨||

ಪದ್ಯ-೧೦೨:ಪದವಿಭಾಗ-
ಅರ್ಥ:ಮನದೊಳು

ಅಲಂಪನು ಆಳ್ದ ಇನಿಯನು
ಅಟ್ಟಿದ (ಮನಸ್ಸಿನಲ್ಲಿ
ಸಂತೋಷಪಟ್ಟು ಪ್ರಿಯನು
ಕಳುಹಿಸಿದ) ದೂದರ
ಸೀಯನಪ್ಪ ಮಾತಿನ
ರಸದೊಳ್ (ದೂತರ
ತಂದಿರುವ ಸಿಹಿ/
ಪ್ರಿಯವಾರ್ತೆಯ ರಸದಲ್ಲಿ)
ಕೊನರ್ವುದು ತಳಿರ್ವುದು
ಪೂವುದು ಕಾಯ್ವುದು
(ಪ್ರೇಮವು-

ಕವಲೊಡೆಯುವುದು,
ಚಿಗುರುವುದು,
ಹೂವುಬಿಡುವುದು, ಕಾಯಿ
ಬಿಡುವುದು) ಅಂತು ಕಾಯ್ತ
ಅನಿತರೊಳ್ ಅಂತು ನಿಂದು
(ಹಾಗೆ ಕಾಯಿಬಿಟ್ಟ
ಅಷ್ಟರಲ್ಲೂ) ಮನದೊಳ್
ತೊದಳಿಲ್ಲದ ನಲ್ಮೆಯೆಂಬ
(ಮನಸ್ಸಿನಲ್ಲಿ ಕಪಟವಿಲ್ಲದ
ಪ್ರೇಮವೆಂಬ ನಂದನವನವು)
ನಂದನವನಂ ಓಪರೊಳ್

ನೆರೆದೊಡೆ (ನಂದನವನವು, ಪ್ರೇಮಿಗಳಲ್ಲಿ ಸೇರಿದರೆ)ಅಂತು ರಸಂ ಬಿಡೆ ಪಣ್ತುದಾಗದೇ (ಹಾಗೆ ರಸವು ಸುರಿದು ಹಣ್ಣಾಗದೇ? ಆಗುವುದು.)|

ಪದ್ಯ-೧೦೨:ಅರ್ಥ:

ಮನಸ್ಸಿನಲ್ಲಿ ಸಂತೋಷಪಟ್ಟು ಪ್ರಿಯನು ಕಳುಹಿಸಿದ ದೂತರ ತಂದಿರುವ ಪ್ರಿಯವಾರ್ತೆಯ ರಸದಲ್ಲಿ ಪ್ರೇಮವು ಕವಲೊಡೆಯುವುದು,

ಚಿಗುರುವುದು,
ಹೂವುಬಿಡುವುದು, ಕಾಯಿ
ಬಿಡುವುದು. ಹಾಗೆ
ಕಾಯಿಬಿಟ್ಟ ಅಷ್ಟರಲ್ಲೂ,
ಮನಸ್ಸಿನಲ್ಲಿ ಕಪಟವಿಲ್ಲದ
ಪ್ರೇಮವೆಂಬ ನಂದನವನವು
ಪ್ರೇಮಿಗಳಲ್ಲಿ ಸೇರಿದರೆ, ಹಾಗೆ
ರಸವು ಸುರಿದು ಹಣ್ಣಾಗದೇ?
ಆಗುವುದು.

ವ|| ಅಂತುಮಲ್ಲದೆಯುಂ-

ವಚನ:ಅರ್ಥ:ಹಾಗಲ್ಲದೆ

ಯೂ

ಚಂ|| ಅನುವಿಸೆ

ಬೇಟಕಾಱನೊಲವಿರ್ಮಡಿಯ

ಪ್ಪುದು ಬಯ್ಕೆ ಬೇಟಕಾ

ಱನ ಬಗೆ

ನಿಲ್ಲದಿಕ್ಕೆಗೊಳಗಪ್ಪುದು ನಿಟ್ಟಿಸೆ

ಬೇಟ ಬೇಟಕಾ|

ಱನ ರುಚಿ ಬಂಬಲುಂ

ತುಱುಗಲುಂ ಕೊಳುತಿರ್ಪುದು

ನೂಂಕೆ ಬೇಟಕಾ

ಱನ ಮನವಟ್ಟಿ ಪತ್ತುವುದು ಬೇಟವಿದೇಂ ವಿಪರೀತವೃತ್ತಿಯೋ|| ೧೦೩ ||

ಪದ್ಯ-೧೦೩:ಪದವಿಭಾಗ-ಅರ್ಥ:ಅನುವಿಸೆ ಬೇಟಕಾಱನ ಒಲವು ಇರ್ಮಡಿಯಪ್ಪುದು (ಪ್ರೇಮಿಯ ಪ್ರೀತಿ ಎರಡರಷ್ಟಾಗುತ್ತದೆ.) ಬಯ್ಕೆ ಬೇಟಕಾಱನ ()ಪ್ರೇಮಿಯ) ಬಗೆ (ಮನಸ್ಸು) ನಿಲ್ಲದಿಕ್ಕೆಗ

ಒಳಗಪ್ಪುದು (ಅಸ್ಥಿರತೆಗೆ
ಒಳಗಾಗುತ್ತದೆ), ನಿಟ್ಟಿಸೆ ಬೇಟ
ಬೇಟಕಾಱಿನ ರುಚಿ (ದಿಟ್ಟಿಸಿ
ನೋಡಿದರೆ ಪ್ರಿಯನ ಸವಿ)
ಬಂಬಲುಂ (ಗೊಂಚಲು)
ತುರುಱುಗಲುಂ
ಕೊಳುತಿರ್ಪುದು (ಸಂದಣಿ
ಅಧಿಕವಾಗಿಹೆಚ್ಚುವುದು)
ನೂಂಕೆ ಬೇಟಕಾಱಿನ
ಮನವಟ್ಟಿ ಪತ್ತುವುದು
(ಬೇಡವೆಂದು ನೂಕಿದರೆ

ಮನಸ್ಸು ಅಟ್ಟಿಬಂದು
ಮೇಲೇರುವುದು)
ಬೇಟವಿದೇಂ
ವಿಪರೀತವೃತ್ತಿಯೋ (ಪ್ರೇಮದ
ಸ್ವಭಾವವು ಏನು
ವಿರುದ್ಧಗತಿಯದೋ!)
ಪದ್ಯ-೧೦೩:ಅರ್ಥ:
ಒತ್ತಾಯ/ ಪ್ರೇಮದ
ಬಲವಂತ ಮಾಡಿದರೆ
ಪ್ರೇಮಿಯ ಪ್ರೀತಿ
ಎರಡರಷ್ಟಾಗುತ್ತದೆ. ಬಯ್ದರೆ

ಪ್ರಿಯನ ಮನಸ್ಸು
ಅಸ್ಥಿರವಾಗುತ್ತದೆ. ದೃಷ್ಟಿಸಿ
ನೋಡಿದರೆ ಪ್ರೇಮವೂ
ಪ್ರೇಮಿಯ ಸವಿಯೂ
ಕವಲೊಡೆದು
ಇಮ್ಮಡಿಯಾಗುವುದು.
ನೂಕಿದರೆ ಬೇಡವೆಂದು
ನೂಕಿದರೆ ಮನಸ್ಸು
ಬೆನ್ನಟ್ಟಿಬಂದು
ಮೇಲೇರುವುದು/
ಹೆಚ್ಚುವುದು. ಪ್ರೇಮದ

ಸ್ವಭಾವವು ಏನು
ವಿರುದ್ಧಗತಿಯದೋ!

ವ|| ಇಂದಿವಿ ದೂದವರೆಂಬರ್ ಬೇಟಕಾಱರ ಬೇಟಮೆಂಬ ಲತೆಗಳಡರ್ಪಿರ್ಪಂತಿರ್ದರೆಂತ ಪ್ಪ ಬೇಟಂಗಳುಮವರ್ ಪೊಸಯಿಸೆ ಪೊಸತಪ್ಪುದು ಕಿಡಿಸೆ ಕಿಡುವುದಂತುಮಲ್ಲದೆಯುಂ-

ವಚನ:ಪದವಿಭಾಗ-

ಅರ್ಥ:ಇಂದು ಇವಿ

ದೂದವರೆಂಬರ್ (ವಿಟರ
ದೂತಿಯರು) ಬೇಟಕಾಱರ
ಬೇಟಮೆಂಬ (ಪ್ರೇಮಿಗಳ
ಪ್ರೇಮವೆಂಬ ಲತೆಗಳು)
ಲತೆಗಳು ಅಡರ್ಪುಗ ಇರ್ಪಂತೆ
ಇರ್ದರು (ಲತೆಗೆ ಹಬ್ಬುವ
ಗಿಡದಂತೆ ಇದ್ದಾರೆ) ಎಂತಪ್ಪ
ಬೇಟಂಗಳುಂ ಅವರ್
ಪೊಸಯಿಸೆ ಪೊಸತಪ್ಪುದು
(ಹೀಗೆ ವಿಟವನಿತೆಯರ
ಪ್ರೇಮಗಳನ್ನ ಅವರು

ಹೊಸದು ಮಾಡಿದರೆ ಹೊಸದಾಗುತ್ತದೆ) ಕಿಡಿಸೆ ಕಿಡುವುದು (ಕೆಡಿಸಿದರೆ ಕೆಡುವುದು).
ಅಂತುಮಲ್ಲದೆಯುಂ-
ವಚನ:ಅರ್ಥ:ಹೀಗೆ ನಲ್ಲ/ ನಲ್ಲೆಯರ ದೂತಿಯರೆಂಬುವರು ಪ್ರೇಮಿಗಳ ಪ್ರೇಮವೆಂಬ ಬಳ್ಳಿಗೆ/ಲತೆಗೆ ಹಬ್ಬುವ ಗಿಡದಂತೆ ಇದ್ದಾರೆ. ಹೀಗೆ

ವಿಟವನಿತೆಯರ ಪ್ರೇಮಗಳನ್ನ
ಅವರು ಹೊಸದು ಮಾಡಿದರೆ
ಹೊಸದಾಗುತ್ತದೆ. ಕೆಡಿಸಿದರೆ
ಕೆಟ್ಟುಹೋಗುತ್ತದೆ. ಹಾಗೆ
ಅಲ್ಲದೆಯೂ

ಚಂ||

ನುಡಿಗಳೊಳಾಸೆಯುಂಟೆನ

ಲೊಡಂ ತಳೆದಂತಿರೆ

ನಿಲ್ವುದೆಂತುಮಾ

ವೆಡೆಯೊಳಮಾಸೆಗಾಣೆನೆನೆ

ತೊಟ್ಟನೆ ಪೋಪುವು

ನಲ್ಲರಿರ್ವರೀ|

ರೊಡಲೊಳಗಿರ್ಪ

ಜೀವಮದುಕಾರಣದಿಂದಮೆ

ಪೋಪ ಬರ್ಪೊಡಂ

ಬಡನೊಳಕೊಂಡ ದೂದವರ

ಕೆಯ್ಯೊಳೆ

ಕೆಯ್ಯೆಡೆಯಿರ್ಪುದಾಗದೇ||

೧೦೪

ಪದ್ಯ-೧೦೪:ಪದವಿಭಾಗ-

ಅರ್ಥ:ನುಡಿಗಳೊಳು

ಆಸೆಯುಂಟು ಎನಲೊಡಂ

(ದೂತರು ತರುವ
ಮಾತುಗಳಲ್ಲಿ
ಆಸೆಯಿದೆಯೆಂದೊಡನೆ)
ತಳೆದಂತಿರೆ ನಿಲ್ವುದು
(ಜೀವಧಾರಣೆ ಮಾಡಿದ ಹಾಗೆ
ಎದ್ದು ನಿಲ್ಲುತ್ತದೆ.) ಅಂತುಂ
ಆವೆಡೆಯೊಳಂ ಆಸೆಗಾಣೆನು
ಎನೆ ತೊಟ್ಟನೆ ಪೋಪುವು
(ಯಾರ ಕಡೆಯಲ್ಲಿಯೂ
ಆಸೆಯಿಲ್ಲ ಎಂದೊಡನೆ
ತಟಕ್ಕನೆ ಹೊರಟು

ಹೋಗುತ್ತದೆ.) ನಲ್ಲರು
ಈರ್ವರು ಈರ್
ಒಡಲೊಳಗಿರ್ಪ ಜೀವಂ
ಅದುಕಾರಣದಿಂದಮೆ
(ಪ್ರೇಮಿಗಳಿಬ್ಬರ
ದೇಹದಲ್ಲಿರುವ ಪ್ರಾಣವು
ಅದರಿಂದ) ಪೋಪ ಬರ್ಪ
ಒಡಂಬಡನು ಒಳಕೊಂಡ
ದೂದವರ ಕೆಯ್ಯೊಳೆ
ಕೆಯ್ಯೆಡೆಯಿರ್ಪುದು
(ಪ್ರಿಯರಲ್ಲಿಗೆ ಹೋಗಿ ಬಂದು

ಅವರ ಒಪ್ಪಿಗೆಯನ್ನು
ಪಡೆದಿರುವ ದೂತಿಯರ
ಕಯ್ಯಲ್ಲಿಯೇ ಪ್ರಣಯಿಗಳ
ಪ್ರಾಣವು ಇರುವುದು)
ಆಗದೇ- ಅಲ್ಲವೇ!

ಪದ್ಯ-೧೦೪:ಅರ್ಥ:

ಪ್ರೇಮಿಗಳಿಬ್ಬರ
ದೇಹದಲ್ಲಿರುವ ಪ್ರಾಣವು
ದೂತರು ತರುವ ಮಾತುಗಳಲ್ಲಿ
ಆಸೆಯಿದೆಯೆಂದೊಡನೆ
ಜೀವಧಾರಣೆ ಮಾಡಿದ ಹಾಗೆ

ಎದ್ದು ನಿಲ್ಲುತ್ತದೆ. ಯಾರ ಕಡೆಯಲ್ಲಿಯೂ ಆಸೆಯಿಲ್ಲವೆಂದೊಡನೆ ತಟಕ್ಕನೆ ಹೊರಟು ಹೋಗುತ್ತದೆ. ಆದುದರಿಂದ ಪ್ರಿಯರಲ್ಲಿಗೆ ಹೋಗಿ ಬಂದು ಅವರ ಒಪ್ಪಿಗೆಯನ್ನು ಪಡೆದಿರುವ ದೂತಿಯರ ಕಯ್ಯಲ್ಲಿಯೇ ಪ್ರಣಯಿಗಳ ಪ್ರಾಣವು ಇರುವುದು) ಆಗದೇ- ಅಲ್ಲವೇ (ಅಷ್ಟು

ಗಾಢವಾದ ಪ್ರೇಮವನ್ನು
ಅಗಲಿ ನಾನು
ದೂರವಿರುವುದನ್ನು ಹೇಗೆ
ಸಹಿಸಲಿ ಎಂದು ಭಾವ)

ವ|| ಎಂದು ನುಡಿಯುತ್ತುಂ ಬರೆವರೆ ಮತ್ತೊಂದೆಡೆಯೊಳೊರ್ವಂ ಗರ್ಭೇಶ್ವರಂ ತನ್ನ ಹೃದಯೇಶ್ವರಿಯನಗಲ್ದು ಬಂದು ಪೆಱರಾರುಮಂ ಮೆಚ್ಚದಾಕೆಯಂ ನೆನೆದು-

ವಚನ:ಪದವಿಭಾಗ-ಅರ್ಥ:ಎಂದು ನುಡಿಯುತ್ತುಂ ಬರೆವರೆ ಮತ್ತೊಂದು ಎಡೆಯೊಳ್ ಒರ್ವಂ ಗರ್ಭೇಶ್ವರಂ (ಮತ್ತೊಂದು ಕಡೆಯಲ್ಲಿ ಒಬ್ಬ ಆಗರ್ಭ ಶ್ರೀಮಂತನು) ತನ್ನ ಹೃದಯೇಶ್ವರಿಯನು ಅಗಲ್ದು (ಅಗಲಿ) ಬಂದು ಪೆಱರಾರುಮಂ (ಬೇರೆ

ಯಾರನ್ನೂ) ಮೆಚ್ಚದೆ

ಆಕೆಯಂ ನೆನೆದು-(

ವಚನ:ಅರ್ಥ:ಎಂದು

ಮಾತಾಡುತ್ತ ಬರುತ್ತಿರುವಾಗ

ಮತ್ತೊಂದು ಕಡೆಯಲ್ಲಿ ಒಬ್ಬ

ಆಗರ್ಭ ಶ್ರೀಮಂತನು ತನ್ನ

ಪ್ರಿಯೆಯನ್ನು ಅಗಲಿ ಬಂದು,

ಬೇರೆ ಯಾರನ್ನೂ ಮೆಚ್ಚದೆ

ಆಕೆಯನ್ನು ಜ್ಞಾಪಿಸಿಕೊಂಡು

ಚಂ|| ಮಿಱುಗುವ

ತೋರಹಾರಮುಮನಪ್ಪಿನ

ಕಾಳಸೆಗಡ್ಡಮೆಂಬ ಬೇ
ಸಱಿನೊಳೆ
ಕಟ್ಟಲೊಲ್ಲದನಿತಱ್ಕಱನಿಱ್ಕುಳಿ
ಗೊಂಡಲಂಪಿನ|
ತ್ತೆಱಿಗಿದ
ನಲ್ಲಳಳ್ಳೆರ್ದೆಯೊಳಕ್ಕಟ
ಬೆಟ್ಟುಗಳುಂ ಬನಂಗಳುಂ
ತೊರೆಗಳುಮೀಗಳೊಡ್ಡಱಿಯ
ದೊಡ್ಡಿಸೆ
ಸೈರಿಸುವಂತುಟಾದುದೇ||
೧೦೫ ||

ಪದ್ಯ-೧೦೫:ಪದವಿಭಾಗ-ಅರ್ಥ:ಮಿಱುಗುವ ತೋರಹಾರಮುಮಂ ಅಪ್ಪಿನ ಕಾಳಸೆಗೆ ಅಡ್ಡಮೆಂಬ ಬೇಸಱಿನೊಳೆ (ಮಿರುಗುವ ದೊಡ್ಡ ಹಾರವನ್ನು ಅಪ್ಪುವ ಗಾಢತೆಗೆ ಅಡ್ಡ ಎಂದು ಅದನ್ನು) ಕಟ್ಟಲೊಲ್ಲದೆ ಅನಿತು ಅೞ್ಕಱಿನು ಇೞ್ಕುಳಿಗೊಂಡ (ಕಟ್ಟಿಕೊಳ್ಳಲು ಒಪ್ಪದೆ, ಅಷ್ಟು ಪ್ರೇಮವನ್ನು, ಹಾರವನ್ನು ಇ/

ಕಸಿದುಕೊಂಡು ಅಪ್ಪಿ)
ಅಲಂಪಿನತ್ತ ಎಱಗಿದ
(ಸುಖದತ್ತ ಎರಗಿದ/ ಧಾವಿಸಿ)
ನಲ್ಲಳ ಅಳ್ಕೆರ್ದೆಯೊಳು
ಅಕ್ಕಟ (ಪ್ರಿಯಳ ಮೃದು
ಹೃದಯದಲ್ಲಿ ಇರಲು
ಅಯ್ಯೋ/ಅಕ್ಕಟಾ
ಅಡ್ಡಬಂದಿದೆ) ಬೆಟ್ಟುಗಳುಂ
ಬನಂಗಳುಂ/ವನಗಳು
ತೊರೆಗಳುಂ/ನದಿಗಳು
ಈಗಳು

ಒಡ್ಡಟಿಯದೆ(ರಾಶಿರಾಶಿಯಾಗಿ) ಒಡ್ಡಿಸೆ (ಹೀಗೆ ಚಾಚಿಕೊಂಡಿರಲು) ಸೈರಿಸುವಂತುಟೆ ಆದುದೇ (ಸಹಿಸುವ ಹಾಗಾಯಿತೆ?)

ಪದ್ಯ-೧೦೨:ಅರ್ಥ: ಮಿರುಗುವ ದೊಡ್ಡ ಹಾರವನ್ನು ಅಪ್ಪುವ ಗಾಢತೆಗೆ ಅಡ್ಡ ಎಂದು ಅದನ್ನು ಕಟ್ಟಿಕೊಳ್ಳಲು ಒಪ್ಪದೆ, ಅಷ್ಟು ಪ್ರೇಮವನ್ನು, ಹಾರವನ್ನು ಇ/ಕಸಿದುಕೊಂಡು

ಅಪ್ಪಿ ಸುಖದತ್ತ ಎರಗಿದ/
ಧಾವಿಸಿ, ಪ್ರಿಯಳ ಮೃದು
ಹೃದಯದಲ್ಲಿ ಇರಲು
ಆಗದೆ,ಅಯ್ಯೋ/ಅಕ್ಕಟಾ,
ಬೆಟ್ಟಗಳೂ ತೊರೆಗಳೂ
ಕಾಡುಗಳೂ ರಾಶಿ ರಾಶಿಯಾಗಿ
ಅಡ್ಡವಾಗಿ ಚಾಚಿಕೊಂಡಿರಲು
ಸಹಿಸುವ ಹಾಗಾಯಿತೆ!
(ಪ್ರಿಯಳು ಮುತ್ತಿನ
ಹಾರವನ್ನು ಧರಿಸಿದರೆ ನಮ್ಮ
ಅಪ್ಪುಗೆಯ ಸುಖಕ್ಕೆ

ಅಡ್ಡಿಯಾಗುತ್ತದೆಂದು ಅವಳ
ಕತ್ತಿನಹಾರವನ್ನು ತೊಡಿಸದೇ
ಅಷ್ಟು ಪ್ರೇಮವನ್ನು
ತೋರಿದ್ದು, ಈಗ ಸುಖದ
ಕಡೆಗೇ ಬಾಗಿದ ನನಗೂ,
ನಲ್ಲಳ ನಡುಗುವ ಎದೆಗೂ
ನನಗೂ ಮಧ್ಯೆ ಅಯ್ಯೋ
ಬೆಟ್ಟಗಳೂ ತೊರೆಗಳೂ
ಕಾಡುಗಳೂ ರಾಶಿ ರಾಶಿಯಾಗಿ
ಅಡ್ಡವಾಗಿರುವಂತೆ
ಚಾಚಿಕೊಂಡಿರಲು ಸಹಿಸುವ

ಹಾಗಾಯಿತೆ? (ಎಂದು
ಸಿರಿವಂತನು ದಃಖಿಸಿದನು.)

ಚಂ||
ಮುನಿಸಿನೊಳಾದಮೇವಯಿಸಿ
ಸೈರಿಸದಾದೞಿಲೊಳ್ ಕನಲ್ದು
ಕಂ
ಗನೆ ಕನಲುತ್ತುಮುಮ್ಮಳಿಸಿ
ಸೈರಿಸಲಾಱದೆ ಮೇಲೆವಾಯ್ದು
ಬ
ಯ್ದನುವಿಸಿ ಕಾಡಿ ನೋಡಿ
ತಿಳಿದಟ್ಟಿಱನಿಟ್ಟುಳಿಗೊಂಡಲಂ

ಪುಗಳ್

ಕನಸಿನೊಳಂ

ಪಳಂಚಲೆವುವೆನ್ನೆರ್ದೆಯೊಳ್

ತರಾಳಾಯತೇಕ್ಷಣೇ|| ೧೦೬

ಪದ್ಯ-೧೦೬:ಪದವಿಭಾಗ-ಅರ್ಥ:ಮುನಿಸಿನೊಳು ಆದಂ ಏವಯಿಸಿ (ಹೇವರಿಸಿ?) ಸೈರಿಸದಾದ ಅಱಲೊಳ್ (ಸಿಟ್ಟಿನಲ್ಲಿ ಬಹಳ ಬೇಸರಪಟ್ಟು ಸಹಿಸದೆ ಆದ ದುಃಖದಲ್ಲಿ) ಕನಲ್ದು ಕಂಗನೆ

ಕನಲುತ್ತ ಉಮ್ಮುಮ್ಮಳಿಸಿ
ಸೈರಿಸಲಾಱದೆ (ಬಹಳ
ಕೋಪಿಸುತ್ತ ದುಃಖದಿಂದ
ಉಮ್ಮಳಿಸಿ, ತಾಳಲಾರದೆ)
ಮೇಲೆವಾಯ್ದು ಬಯ್ದು
ಅನುವಿಸಿ ಕಾಡಿ ನೋಡಿ
(ಮೇಲೆ ಬಿದ್ದು ಬಯ್ದು
ಬಲಾತ್ಕರಿಸಿ ಕಾಡಿ ನೋಡಿ)
ತಿಳಿದ ಅಚ್ಚಿಕಱಂ (ಶಾಂತವಾಗಿ
ಪ್ರೀತಿಯನ್ನು/ ಮುತ್ತನ್ನು)
ಇಚ್ಚುಳಿಗೊಂಡ

(ಪಡೆದುಕೊಂಡ)
ಅಲಂಪುಗಳ್ (ಸುಖಗಳು)
ಕನಸಿನೊಳಂ ಪಳಂಚಿ
ಅಲೆವುವು
ಎನ್ನೆರ್ದೆಯೊಳ್(ಸುಖದ
ನೆನಪುಗಳು ಕನಸ್ಸಿನಲ್ಲಿಯೂ
ನನ್ನೆದೆಯಲ್ಲಿ ತಗುಲಿಕೊಂಡು
ಪೀಡಿಸುತ್ತಿರುವುವು)
ತರಾಳಾಯತೇಕ್ಷಣೇ
(ಚಂಚಲಾಕ್ಷಿಯೇ)

ಪದ್ಯ-೧೦೬:ಅರ್ಥ: ಎಲೌ ಚಂಚಲಾಕ್ಷಿಯೇ ಕೋಪದಲ್ಲಿ ಬಹಳ ಬೇಸರಪಟ್ಟು ಸಹಿಸದೆ ಆದ ದುಃಖದಲ್ಲಿ ಬಹಳ ಕೋಪಿಸುತ್ತ ದುಃಖದಿಂದ ಉಮ್ಮಳಿಸಿ, ತಾಳಲಾರದೆ, ಮೇಲೆ ಬಿದ್ದು ಬಯ್ದು ಬಲಾತ್ಕರಿಸಿ ಕಾಡಿ ನೋಡಿ ಶಾಂತವಾಗಿ ಪ್ರೀತಿಯನ್ನು/ ಮುತ್ತನ್ನು ಸೆಳೆದುಕೊಂಡ ಸುಖದ ನೆನಪುಗಳು

ಕನಸ್ಸಿನಲ್ಲಿಯೂ ನನ್ನೆದೆಯನ್ನು ತಗುಲಿ ಪೀಡಿಸುತ್ತಿರುವುವು.

ವ|| ಎಂದು ಸೈರಿಸಲಾರದೆ ತನ್ನ ಪ್ರಾಣವಲ್ಲಭೆಯೊಡನಿರ್ದಂದಿನ ಮುಳಿಸೊಸಗೆಗಳಂ ನೆನೆದು-

ವಚನ:ಪದವಿಭಾಗ-

ಅರ್ಥ:ಎಂದು ಸೈರಿಸಲಾರದೆ ತನ್ನ ಪ್ರಾಣವಲ್ಲಭೆಯ ಒಡನಿರ್ದ ಅಂದಿನ ಮುಳಿಸ ಒಸಗೆಗಳಂ (ಪ್ರೇಮದಕಾಣಿಕೆ) ನೆನೆದು-

ವಚನ:ಅರ್ಥ:ಎಂದು ಸಹಿಸಲಾರದೆ ತನ್ನ ಪ್ರಾಣಪ್ರಿಯೆಯ ಜೊತೆಯಲ್ಲಿದ್ದ ಆ ದಿನದ ಕೋಪ, ಪ್ರೇಮದಕಾಣಿಕೆಗಳನ್ನು ನೆನೆಸಿಕೊಂಡು

ಚಂ|| ಬಗೆ ಗೆಲಲೆಂದು ಕಾಡಿ ಪುಸಿನಿದ್ದೆಯೊಳಾನಿರೆ ಲಲ್ಲೆಗೆಯ್ದು ಲ

ಲ್ಲೆಗೆ
ಮರೆದಿರ್ದೊಡಟ್ಟಿಱಿನೊ
ಳೊಂದಿ ಮೊಗಂ ಮೊಗದತ್ತ
ಸಾರ್ಚೆ ಬೆ|
ಚ್ಚಗೆ ನಿಡುಸುಯ್ದ ನಲ್ಲಳ
ಮುಖಾಂಬುಜ ಸೌರಭದೊಳ್
ಪೊದಳ್ದದೇಂ
ಮಗಮಗಿಸಿತ್ತೊ ಕತ್ತುರಿಯ
ಕಪ್ಪುರದೊಂದು
ಕದಂಬದಂಬುಲಂ|| ೧೦೭||

ಪದ್ಯ-೧೦೭:ಪದವಿಭಾಗ-ಅರ್ಥ:ಬಗೆ (ಮನಸ್ಸನ್ನು) ಗೆಲಲೆಂದು ಕಾಡಿ ಪುಸಿನಿದ್ದೆಯೊಳು ಆನು ಇರೆ (ಅವಳ- ಮನಸ್ಸನ್ನು ಗೆಲ್ಲಬೇಕೆಂದು ಸುಳ್ಳುನಿದ್ದೆಯಲ್ಲಿ ನಾನು ಇರಲು) ಲಲ್ಲೆಗೆಯ್ದು (ಅವಳು ಮುದ್ದುಮಾತುಗಳನ್ನಾಡಿ) ಲಲ್ಲೆಗೆ ಮರೆದಿರ್ದೊಡೆ (ಲಲ್ಲೆಗೆ ಮೈಮರೆತವನಂತೆ ಇರಲು)

ಅಟ್ಟಿಱಿನೊಳು ಒಂದಿ

(ಪ್ರೇಮದಿಂದ ಕೂಡಿ) ಮೊಗಂ

ಮೊಗದತ್ತ ಸಾರ್ಚಿ (

ಮುಖದೊಡನೆ ತನ್ನ

ಮುಖವನ್ನು ಸೇರಿಸಿ) ಬೆಚ್ಚಗೆ

ನಿಡುಸುಯ್ದ ನಲ್ಲಳ

(ಬಿಸಿಯಾಗಿ ನಿಟ್ಟುಸಿರು ಬಿಟ್ಟ

ಪ್ರಿಯೆಯ) ಮುಖಾಂಬುಜ

ಸೌರಭದೊಳ್

(ಮುಖಕಮಲದ

ಸುಗಂಧದಲ್ಲಿ) ಪೊದಳ್ದು

(ತುಂಬಿಕೊಂಡ) ಅದೇಂ ಮಗಮಗಿಸಿತ್ತೊ (ಎಷ್ಟೊಂದು ಗಮಗಮಿಸಿತ್ತೊ?) ಕತ್ತುರಿಯ ಕಪ್ಪುರದೊಂದು ಕದಂಬದಂಬುಲಂ(ಕಸ್ತೂರಿಯ ಸುಗಂಧದಲ್ಲಿ ಸೇರಿಕೊಂಡ ಪಚ್ಚಕರ್ಪೂರ ಮಿಶ್ರಿತವಾದ ತಾಂಬೂಲದ ಉಂಡೆಯು)

ಪದ್ಯ-೧೦೭:ಅರ್ಥ:

(ಪ್ರಿಯಳೊಡನೆ) ಜಗಳಾಡಿ,

ನಂತರ ಅವಳ ಮನಸ್ಸನ್ನು
ಗೆಲ್ಲಬೇಕೆಂದು ನಾನು
ಹುಸಿನಿದ್ದೆಯಲ್ಲಿರಲು ಅವಳು
ಮುದ್ದುಮಾತುಗಳನ್ನಾಡಿ ಆ
ಮುದ್ದುಮಾತಿಗೂ ನಾನು
ಮೈಮರೆತವನಂತಿರಲು,
ಪ್ರೇಮದಿಂದ ಕೂಡಿ ನನ್ನ
ಮುಖದೊಡನೆ ತನ್ನ
ಮುಖವನ್ನು ಸೇರಿಸಿ
ಬಿಸಿಯಾಗಿ ನಿಟ್ಟುಸಿರು ಬಿಟ್ಟ
ಪ್ರಿಯಳ ಮುಖಕಮಲದ

ಕಸ್ತೂರಿಯ ಸುಗಂಧದಲ್ಲಿ
ಸೇರಿಕೊಂಡ ಪಚ್ಚಕರ್ಪೂರ
ಮಿಶ್ರಿತವಾದ ತಾಂಬೂಲದ
ಉಂಡೆಯೂ ಎಷ್ಟೊಂದು
ಗಮಗಮಿಸಿತ್ತೊ?

ವ|| ಎಂದು ತನ್ನೊಳ್ ಪಲುಂಬುತಿರ್ದನಂ ಕಂಡೀತನುಮೆಮ್ಮಂದಿಗನುಮೆಮ್ಮ ನಂಟನು ಮಕ್ಕುಮೆಂದು ಮುಗುಳ್ನಗೆ ನಗುತ್ತುಂ ಬರ್ಪನೊಂದೆಡೆಯೊಳ್-

ವಚನ:ಪದವಿಭಾಗ-ಅರ್ಥ:ಎಂದು ತನ್ನೊಳ್ ಪಲುಂಬುತಿರ್ದನಂ (ಹಲುಬುತ್ತಿದ್ದವನನ್ನು) ಕಂಡು ಈತನುಮ್ ಎಮ್ಮಂದಿಗನುಮ್ ಎಮ್ಮ ನಂಟನುಮ್ ಅಕ್ಕುಮೆಂದು ಮುಗುಳ್ನಗೆ ನಗುತ್ತುಂ ಬರ್ಪನೊಂದು ಎಡೆಯೊಳ್-

ವಚನ:ಅರ್ಥ:ಅರ್ಜುನನು- ಎಂದು ತನ್ನಲ್ಲಿಯೇ

ಹಲುಬುತ್ತಿದ್ದವನನ್ನು ಕಂಡು
ಇವನೂ ನಮ್ಮಂತಹವನೂ
ನಮ್ಮ ನಂಟನೂ ಆಗಿದ್ದಾನೆ
ಎಂದು ಮುಗುಳ್ನಗೆ ನಗುತ್ತ
ಬರುತ್ತಿದ್ದವನು ಒಂದು
ಕಡೆಯಲ್ಲಿ

ಚಂ|| ಒಲವಿನೊಳಾದ ಕಾಯ್ದು
ಮಿಗೆ ಕಾದಲನಂ ಬಿಸುಟಂತೆ
ಪೋಪ ಕಾ
ದಲಳಳುತಂ ತೆಱಂದಿರಿದು
ನೋಡಿದ ನೋಟದೊಳೆಯ್ದೆ

ತಳ್ತ ಪೆ|

ರ್ಮೊಲೆ ಪೊಱಿಮುಯ್ವು

ಬೆನ್ನಿನಿತುರ್ಮೊರ್ಮೆಯೆ

ನಾಂಬಿನಮುಣ್ಮಿ ಪೊಣ್ಮಿ ಕ

ಣ್ಮಲರ್ಗಳಿನೆಚ್ಚು

ಪಾಯ್ದುವರಲಂಬುಗಳಂತೆ

ವಿಲೋಚನಾಂಬುಗಳ್|| ೧೦೮

||

ಪದ್ಯ-೧೦೭:ಪದವಿಭಾಗ-

ಅರ್ಥ:ಒಲವಿನೊಳು ಆದ

ಕಾಯ್ದು ಮಿಗೆ

(ಪ್ರಣಯಕಲಹದಲ್ಲಿ
ಉಂಟಾದ ಕೋಪವು
ಹೆಚ್ಚಲು) ಕಾದಲನಂ
ಬಿಸುಟಂತೆ ಪೋಪ ಕಾದಲಳ್
ಅೞುತಂ (ಪ್ರಿಯನನ್ನು
ಅಲಕ್ಷ್ಯದಿಂದ ತೊರೆದು
ಹೋಗುತ್ತಿರುವ ಪ್ರಿಯಳು
ಅಳುತ್ತಾ) ತೆಱಂದಿರಿದು
(ನಾನಾತೆರದಲ್ಲಿ ಹಿಂದಿರುಗಿ
ನೋಡುತ್ತಾ) ನೋಡಿದ
ನೋಟದೊಳ್ ಅಯ್ದೆ ತಳ್ತ

ಪೆರ್ಮೊಲೆ (ನೋಟದಲ್ಲಿ
ಅವಳ ಗಾಢವಾದ
ದಪ್ಪಮೊಲೆಗಳೂ)
ಪೊಱಮುಯ್ಯು (ಹೆಗಲ
ಹಿಂಭಾಗವೂ) ಬೆನ್ ಇನಿತುಂ
(ಬೆನ್ನು ಇಷ್ಟೂ) ಒರ್ಮೆಯೆ
ನಾಂಬಿನಂ ಉಣ್ಮೆ-> (ಹೆಗಲ
ಹಿಂಭಾಗವೂ ಬೆನ್ನೂ
ಏಕಕಾಲದಲ್ಲಿ
ತೊಯ್ದುಹೋಗುವ ಹಾಗೆ
)ಉಣ್ಮೆ ಪೊಣ್ಮೆ ಕಣ್ಮಲರ್ಗಳಿಂ

ಇನು ಎಚ್ಚು (ಚಿಮ್ಮಿ ಸೂಸಿ
ಕಣ್ ಅಲರ್ಗಳಿಂ
ಹೂವಿನಂತಿರುವ
ಕಣ್ಣುಗಳಿಂದ ಇಸು
-ಹೊಡೆದು) ಪಾಯ್ದುವು
ಅರಲಂಬುಗಳಂತೆ (ಅಲರ್
ಅಂಬುಗಳಂತೆ- ಹೂವಿನ
ಕಣೆಗಳಂತೆ ಹಾಯ್ದುವು-ಚಿಮ್ಮಿ
ಹರಿದವು)
ವಿಲೋಚನಾಂಬುಗಳ್
(ನೋಟದ ಬಾಣಗಳು)

ಪದ್ಯ-೧೦೮:ಅರ್ಥ:

ಪ್ರಣಯಕಲಹದಲ್ಲಿ ಉಂಟಾದ ಕೋಪವು ಹೆಚ್ಚಲು, ಪ್ರಿಯನನ್ನು ಅಲಕ್ಷ್ಯದಿಂದ ತೊರೆದು ಹೋಗುತ್ತಿರುವ ಪ್ರಿಯಳು ಅಳುತ್ತಾ ನಾನಾತೆರದಲ್ಲಿ ಹಿಂತಿರುಗಿ ನೋಡಿದ ನೋಟದಲ್ಲಿ ಅವಳ ಗಾಢವಾದ ಪೆರ್ಮೊಲೆಗಳೂ ಹೆಗಲ ಹಿಂಭಾಗವೂ ಬೆನ್ನೂ

ಏಕಕಾಲದಲ್ಲಿ

ತೊಯ್ದುಹೋಗುವ ಹಾಗೆ

ಅವಳ ಹೂವಿನಂತಿರುವ

ಕಣ್ಣುಗಳಿಂದ ಕಣ್ಣೀರು

ಪುಷ್ಪಬಾಣಗಳಂತೆ ಹೆಚ್ಚಿ

ಚಿಮ್ಮಿ ಸೂಸಿ ನೋಟದ

ಬಾಣಗಳು ಹರಿದುವು.

ವ||

ಮತ್ತಮೊಂದೆಡೆಯೊಳೊಂದು

ಕಾಳಾಗರು ಧೂಪ ಧೂಮ

ಮಲಿನ ಶ್ಯಾಮಲಾಲಂ

ಕೃತವಿಚಿತ್ರಭಿತ್ತಿವಿರಾಜಿತರಮ್ಯ ಹರ್ಮ್ಯತಳದೊಳ್ ಪಲಕಾಲಮಗಲ್ದ ನಲ್ಲರಿರ್ವರುಮೊಂದೆಡೆಯೊಳ್ ಕೂಡಿ-

ವಚನ:ಪದವಿಭಾಗ-

ಅರ್ಥ:ಮತ್ತಮೊಂದು ಎಡೆಯೊಳು ಒಂದು ಕಾಳ ಅಗರು ಧೂಪ ಧೂಮ ಮಲಿನ ಶ್ಯಾಮಲಾಲಂಕೃತ (ಕಪ್ಪುಬಣ್ಣದಿಂದ ವರ್ಣದಿಂದ

ಅಲಂಕರಿಸಲ್ಪಟ್ಟ) ವಿಚಿತ್ರ
ಭಿತ್ತಿವಿರಾಜಿತ (ಚಿತ್ರಮಯ
ಗೋಡೆಗಳಿಂದ
ಶೋಭಿಸುವವ)
ರಮ್ಯಹರ್ಮ್ಯತಳದೊಳ್
(ರಮಣೀಯವಾದ
ಉಪ್ಪರಿಗೆಗಳಲ್ಲಿ) ಪಲಕಾಲಂ
ಅಗಲ್ದ ನಲ್ಲರು ಇರ್ವರುಂ
ಒಂಮೊಂದೆಡೆಯೊಳ್
ಕೂಡಿ(ಅಗಲಿದ್ದ ಇಬ್ಬರು

ಪ್ರೇಮಿಗಳು ಒಂದು ಕಡೆ ಕೂಡಿದ್ದರು.)-

ವಚನ:ಅರ್ಥ:ಮತ್ತೊಂದು ಕಡೆಯಲ್ಲಿ ಕಪ್ಪಾಗಿರುವ ಅಗುರು ಧೂಪದ ಹೊಗೆಯಿಂದ, ಮಾಸಿದ ಶ್ಯಾಮಲ/ಕಪ್ಪುಬಣ್ಣದಿಂದ ವರ್ಣದಿಂದ ಅಲಂಕರಿಸಲ್ಪಟ್ಟು ಚಿತ್ರಮಯ ಗೋಡೆಗಳಿಂದ ಶೋಭಿಸುವವ ರಮಣೀಯವಾದ

ಉಪ್ಪರಿಗೆಯ ಪ್ರದೇಶದಲ್ಲಿ
ಹಲವು ಕಾಲ ಅಗಲಿದ್ದ
ಇಬ್ಬರು ಪ್ರೇಮಿಗಳು ಒಂದು
ಕಡೆ ಕೂಡಿದ್ದರು.

ಮ||
ಸಮಸಂದಲ್ಕಿಱಲಂಪನೀಯೆ
ಶಯನಂ ಘರ್ಮಾಂಬುವಿಂ
ನಾನೆ ಮು
ನ್ನಮೆ ನಾಣೊಳ್ಕುಡಿವೋಗಿ
ಸೂಸುವ ಪದಂ
ಗಂಗಾಂಬುವಂ ಪೋಲೆ ವಿ|

ಭ್ರಮಮಂ ಕಂಠರವಕ್ಕೆ ತಾಡನ ರವಂ ತಂದೀಯೆ ತಚ್ಛಯ್ಯೆಯೊಳ್ ಸಮಹಸ್ತಂಬಿಡಿವಂತುಟಾಯ್ತು ಸುರತ ಪ್ರಾರಂಭ ಕೋಳಾಹಳಂ|| ೧೦೯ |

ಪದ್ಯ-೧೦೯:ಪದವಿಭಾಗ-ಅರ್ಥ:ಸಮಸಂದ ಅಟ್ಕಿಱ ಅಲಂಪನು ಈಯೆ (ಸಮಾನವಾಗಿ ಉಂಟಾದ ಪ್ರೀತಿಯು ಸುಖವನ್ನು

ಕೊಡಲು) ಶಯನಂ
ಘರ್ಮಾಂಬುವಿಂ ನಾನೆ
(ಬೆವರಿನಿಂದ ಹಾಸಿಗೆಯು
ಒದ್ದೆಯಾಗಲು) ಮುನ್ನಮೆ
ನಾಣ್ ಒಬ್ಬುಡಿವೋಗಿ
ಸೂಸುವ ಪದಂ (ಮೊದಲೇ
ಲಜ್ಜೆಯಿಂದ ಪ್ರಸರಿಸಿ
ಹರಿಯುವ ಸುರತದ್ರವವು)
ಗಂಗಾಂಬುವಂ ಪೋಲೆ
(ಗಂಗಾಜಲವನ್ನು ಹೋಲಲು,)
ವಿಭ್ರಮಮಂ ಕಂಠರವಕ್ಕೆ

ತಾಡನ ರವಂ ತಂದೀಯೆ
(ಕೊರಳಿನ ಗರಗರಿಕೆಯ
ಶಬ್ದಕ್ಕೆ ಸುರತಧ್ವನಿ ಸೊಗಸನ್ನು
ಕೊಡಲು,) ತತ್ ಶೆಯ್ಯೆಯೊಳ್
ಸಮಹಸ್ತಂ
ಬಿಡಿವಂತುಟಾಯ್ತು ಸುರತ
ಪ್ರಾರಂಭ ಕೋಳಾಹಳಂ (ಆ
ಹಾಸಿಗೆಯಲ್ಲಿ ಪ್ರಿಯ
ಪ್ರೇಯಸಿಯರ
ಸುರತಕ್ರೀಡೆಯ ಪ್ರಾರಂಭದ
ಅಬ್ಬರವು ಎರಡುಹಸ್ತ

ಬಡಿದಂತೆ/ ಕೈತಟ್ಟಿದಂತೆ ಸಮಪ್ರಮಾಣವುಳ್ಳದ್ದಾಯಿತು.)

ಪದ್ಯ-೧೦೯:ಅರ್ಥ: ಆ ಪ್ರಿಯ ಪ್ರೇಯಸಿಯರಲ್ಲಿ ಸಮಾನವಾಗಿ ಉಂಟಾದ ಪ್ರೀತಿಯು ಸುಖವನ್ನು ಕೊಡಲು, ಬೆವರಿನಿಂದ ಹಾಸಿಗೆಯು ಒದ್ದೆಯಾಗಲು. ಮೊದಲೇ ಲಜ್ಜೆಯಿಂದ ಪ್ರಸರಿಸಿ ಹರಿಯುವ

ಸುರತದ್ರವವು
ಗಂಗಾಜಲವನ್ನು ಹೋಲಲು,
ಕೊರಳಿನ ಗರಗರಿಕೆಯ ಶಬ್ದಕ್ಕೆ
ಸುರತಧ್ವನಿ ಸೊಗಸನ್ನು
ಕೊಡಲು, ಆ ಹಾಸಿಗೆಯಲ್ಲಿ
ಪ್ರಿಯ ಪ್ರೇಯಸಿಯರ
ಸುರತಕ್ರೀಡೆಯ ಪ್ರಾರಂಭದ
ಅಬ್ಬರವು ಎರಡುಹಸ್ತ
ಬಡಿದಂತೆ/ ಕೈತಟ್ಟಿದಂತೆ
ಸಮಪ್ರಮಾಣವುಳ್ಳದ್ದಾಯಿತು
.

ವ|| ಅಂತನೇಕಪ್ರಕಾರ ಪುರ ಜನಜನಿತ ವಿಕಾರಂಗಳಂ ತೋಟಿಲ್ಲು ನೋೞ್ಪಿನ್ನೆಗಂ-

ವಚನ:ಪದವಿಭಾಗ-

ಅರ್ಥ:ಅಂತು ಅನೇಕಪ್ರಕಾರ ಪುರ ಜನಜನಿತ ವಿಕಾರಂಗಳಂ ತೋಟಿಲ್ಲು ನೋೞ್ಪಿನ್ನೆಗಂ-

ವಚನ:ಅರ್ಥ: ಹೀಗೆ ಪುರಜನರ ಅನೇಕ ಪ್ರಕಾರವಾದ ಜನಜನಿತ

ವಿಕಾರಗಳನ್ನು ಅರ್ಜುನನು ಅಲೆಯುತ್ತಾ ನೋಡುವಾಗ;-

ಚಂ||

ಸೊಡರ್ಗುಡಿಯೊಯ್ಯನಾಗೆ

ಪೊಸ ಮಲ್ಲಿಗೆ ಮೆಲ್ಲಗೆ ಕಂಪು

ನಾರೆ ತ

ಣ್ಪೆಡಿದೆಲರೂದೆ ಗಾವರದ

ಮೆಲ್ಲುಲಿ ತುಂಬಿಯ

ಗಾವರಂಗಳಂ|

ಗೆಡೆಗೊಳೆ ಚಂದ್ರಿಕಾಪ್ರಭೆ

ಮೊದಲ್ಗಿಡೆ ನಾಡೆ ವಿತರ್ಕದಿಂ

ಬೆರ
ಲ್ಮಿಡಿದು ಗುಣಾರ್ಣವಂ
ನೆರೆಯೆ ನಿಟ್ಟಿಸಿದಂ ಬೆಳಗಪ್ಪ
ಜಾವಮಂ|| ೧೧೦||

ಪದ್ಯ-೧೧೦:ಪದವಿಭಾಗ-ಅರ್ಥ:ಸೊಡರ್ಗುಡಿಯು ಒಯ್ಯನಾಗೆ (ಉರಿಯುವ ದೀಪದ ಕುಡಿಯು ಮೆಲ್ಲಗೆ/ ಸಣ್ಣವಾಯಿತು) ಪೊಸ ಮಲ್ಲಿಗೆ ಮೆಲ್ಲಗೆ ಕಂಪು ನಾರೆ(ಮಲ್ಲಿಗೆಯು

ಮೃದುವಾಗಿ ಪರಿಮಳವನ್ನು
ಬೀರಿತು) ತಣ್ಪಿಡಿದ ಎಲರು
ಊದೆ (ತಂಪಾದ ಗಾಳಿ
ಬೀಸಲು,) ಗಾವರದ ಮೆಲ್ಲುಲಿ
(ತಂಗಾಳಿಯ ಸಣ್ಣ ಸದ್ದು)
ತುಂಬಿಯ ಗಾವರಂಗಳಂಗೆ
ಎಡೆಗೊಳೆ (ದುಂಬಿಯ
ಝೇಂಕಾರದೊಡನೆ ಸೇರಲು,)
ಚಂದ್ರಿಕಾಪ್ರಭೆ ಮೊದಲ್ಗಿಡೆ
(ಬೆಳುದಿಂಗಳ ಕಾಂತಿ
ಮೊದಲ್ ಕಿಡೆ,

ಕಡಿಮೆಯಾಗಲು) ನಾಡೆ
ವಿತರ್ಕದಿಂ (ರೂಢಿಯ
ವಿಶೇಷ ತರ್ಕದಿಂದ)
ಬೆರಲ್ಮಿಡಿದು (ಬೆರಳಲ್ಲಿ ಚಿಟಿಕೆ
ಹೊಡೆದು) ಗುಣಾರ್ಣವಂ
ನೆರೆಯೆ ನಿಟ್ಟಿಸಿದಂ (ಚೆನ್ನಾಗಿ
ನೋಡಿದನು) ಬೆಳಗಪ್ಪ
ಜಾವಮಂ (ಅರ್ಜುನನು
ಬೆಳಗಾಗುವ ಸಮಯವನ್ನು
ಚೆನ್ನಾಗಿ ನೋಡಿದನು.)

ಪದ್ಯ-೧೧೦:ಅರ್ಥ:

ಉರಿಯುವ ದೀಪದ

ಕುಡಿಯು ಸಣ್ಣವಾಯಿತು,

ಮಲ್ಲಿಗೆಯು ಮೃದುವಾಗಿ

ಪರಿಮಳವನ್ನು ಬೀರಿತು,

ತಂಪಾದ ಗಾಳಿ ಬೀಸಲು,

ತಂಗಾಳಿಯ ಮೃದುವಾದ

ಸದ್ದು ದುಂಬಿಯ

ಝೇಂಕಾರದೊಡನೆ ಸೇರಲು.

ಬೆಳುದಿಂಗಳಿನ ಕಾಂತಿ

ಕಡಮೆಯಾಗಲು, ರೂಢಿಯ

ವಿಶೇಷ ತರ್ಕದಿಂದ,
ಚಿಟಿಕೆಹೊಡೆದು ಅರ್ಜುನನು
ಬೆಳಗಾಗುವ ಸಮಯವನ್ನು
ಚೆನ್ನಾಗಿ ನೋಡಿದನು.

ವ|| ಆಗಳ್ ತನ್ನೊಡನೆ ತೊಱಲ್ವ ನಾಗರಕ ವಿಟ ವಿದೂಷಕ ಪೀಠಮರ್ದಕರ್ಕಳನಿರಲ್ವೇೞ್ದು ರಾಜಮಂದಿರಮಂ ಪೊಕ್ಕು ತನ್ನ ಪವಡಿಸುವ ಮಾಡಕ್ಕೆವಂದು ಹಂಸ ಧವಳ

ಶಯ್ಯಾತಳದೊಳ್
ಗಂಗಾನದೀ ಪುಳಿನ ಪರಿಸರ
ಪ್ರದೇಶದೊಳ್
ಮರೆದೊಱಗುವೈರಾವತದಂತೆ
ಪವಡಿಸಿ ಕಿಱಿದಾನುಂ
ಬೇಗದೊಳ್ ಸುಭದ್ರೆಯಂ
ಕನಸಿನೊಳ್ ಕಂಡು
ನನಸೆಂದು ಬಗೆದು
ಮಂಗಳಪಾಠಕರವಂಗಳೊಳ್
ಭೋಂಕನೆಚ್ಚತ್ತನನ್ನೆಗಂ-

ವಚನ:ಪದವಿಭಾಗ-ಅರ್ಥ:ಆಗಳ್ ತನ್ನೊಡನೆ ತೊಟಿಲ್ಪ ನಾಗರಕ ವಿಟ ವಿದೂಷಕ ಪೀಠಮರ್ದಕರ್ಕಳಂ ನಿರಲ್ವೇೞ್ದು (ಇರಲ್ ವೇಳ್ದು- ಅಲ್ಲಿಯೇ ಇರಲುಹೇಳಿ) ರಾಜಮಂದಿರಮಂ ಪೊಕ್ಕು (ಹೊಕ್ಕು) ತನ್ನ ಪವಡಿಸುವ ಮಾಡಕ್ಕೆವಂದು ಹಂಸ ಧವಳ ಶಯ್ಯಾತಳದೊಳ್ (ತಾನು

ಮಲಗುವ ಉಪ್ಪರಿಗೆಯ
ಮನೆಗೆ ಬಂದು ಹಂಸದಷ್ಟು
ಬೆಳ್ಳಗಿರುವ ಹಾಸಿಗೆಯಲ್ಲಿ)
ಗಂಗಾನದೀ ಪುಳಿನ ಪರಿಸರ
ಪ್ರದೇಶದೊಳ್
(ಗಂಗಾನದಿಯ ಮರಳು
ದಿಣ್ಣೆಯ ಪ್ರದೇಶದಲ್ಲಿ)
ಮರೆದು ಒಱಗುವ
ಐರಾವತದಂತೆ ಪವಡಿಸಿ
(ಮರೆತು ಮಲಗಿರುವ
ಐರಾವತದ ಹಾಗೆ ಮಲಗಿದ್ದು)

ಕಿಱಿದಾನುಂ ಬೇಗದೊಳ್ ಸುಭದ್ರೆಯಂ ಕನಸಿನೊಳ್ ಕಂಡು(ಸ್ವಲ್ಪ ಕಾಲದ ಮೇಲೆ ಸುಭದ್ರೆಯನ್ನು ಕನಸಿನಲ್ಲಿ ಕಂಡು,), ನನಸೆಂದು ಬಗೆದು ಮಂಗಳಪಾಠಕ ರವಂಗಳೊಳ್ (ಮಂಗಳವನ್ನು ಹಾಡುವ ಹೊಗಳುಭಟರ ಸದ್ದುಗಳಿಂದ) ಭೋಂಕನೆ ಎಚ್ಚಿತ್ತನು (ಎಚ್ಚರಾದನು) ಅನ್ನೆಗಂ-

ವಚನ:ಅರ್ಥ: ಆಗ ತನ್ನ ಜೊತೆ ಅಲೆಯುತ್ತಿದ್ದ ನಾಗರಿಕ, ವಿಟ, ವಿದೂಷಕ, ಪೀಠಮರ್ದಕರನ್ನು ಅಲ್ಲಿಯೇ ಇರಲುಹೇಳಿ ಅರಮನೆಯನ್ನು ಪ್ರವೇಶಿಸಿ, ತಾನು ಮಲಗುವ ಉಪ್ಪರಿಗೆಯ ಮನೆಗೆ ಬಂದು ಹಂಸದಷ್ಟು ಬೆಳ್ಳಗಿರುವ ಹಾಸಿಗೆಯಲ್ಲಿ ಗಂಗಾನದಿಯ ಮರಳು ದಿಣ್ಣೆಯ ಪ್ರದೇಶದಲ್ಲಿ ಮರೆತು ಮಲಗಿರುವ

ಐರಾವತದ ಹಾಗೆ ಮಲಗಿದ್ದು, ಸ್ವಲ್ಪ ಕಾಲದ ಮೇಲೆ ಸುಭದ್ರೆಯನ್ನು ಕನಸಿನಲ್ಲಿ ಕಂಡು, ಅದು ನಿಜ ಎಂದು ಭಾವಿಸುವಷ್ಟರಲ್ಲಿ, ಮಂಗಳವನ್ನು ಹಾಡುವ ಹೊಗಳುಭಟರ ಸದ್ದುಗಳಿಂದ ಇದ್ದಕ್ಕಿದ್ದ ಹಾಗೆ ಎಚ್ಚರಾದನು. ಅಷ್ಟರಲ್ಲಿ

ಚಂ|| ಪುದಿದ ತಮಂ ಮದೀಯ

ಕಿರಣಾಳಿಯನಾನದವೋಲೆ
ನಿನ್ನ ನಾ
ವದಟರುಮಾನರೆನ್ನುದಯಮ
ಭ್ಯುದಯಂ ನಿನಗೆಂದು
ಕನ್ನೆಯಂ|
ಪದೆದೊಡಗೊಂಡು
ಪೋಗಿರದಿರೆಂದು
ಗುಣಾರ್ಣವ ಭೂಭುಜಂಗೆ ಕ
ಟ್ಟಿದಿರೊಳೆ
ಬಟ್ಟೆದೋಱುವವೊಲಂದೊಗೆ

ದಂ ಕಮಲೈಕಬಾಂಧವಂ||
೧೧೧||

ಪದ್ಯ- ೧೧೧:ಪದವಿಭಾಗ-ಅರ್ಥ:ಪುದಿದ ತಮಂ (ಕವಿದ ಕತ್ತಲೆ) ಮದೀಯ ಕಿರಣಾಳಿಯನ ಆನದವೋಲೆ (ನನ್ನ ಕಿರಣಸಮೂಹಗಳನ್ನು ಎದುರಿಸಲಾರದಂತೆ) ನಿನ್ನನ್ನು ಆವ ಅದಟರುಂ ಆನರ್ (ನಿನ್ನನ್ನು ಯಾವ ಶೂರರೂ ಎದುರಿಸಲಾರರು.) ಎನ್ನ

ಉದಯಂ ಅಭ್ಯುದಯಂ ನಿನಗೆಂದು ಕನ್ನೆಯಂ ಪದೆದು ಒಡಗೊಂಡು ಪೋಗು ಇರದಿರ್ ಎಂದು (ನನ್ನ ಉದಯವು ನಿನಗೆ ಶ್ರೇಯಸ್ಕರವು, ಕನ್ಯೆ ಸುಭದ್ರೆಯನ್ನು ಬಯಸಿ ಜೊತೆಯಲ್ಲಿ ಕರೆದುಕೊಂಡು ಹೋಗು (ಹೋಗದೇ ಇರಬೇಡ) ಇಲ್ಲಿರಬೇಡ ಎಂದು) ಗುಣಾರ್ಣವ

ಭೂಭುಜಂಗೆ (ಅರ್ಜುನನಿಗೆ) ಕಟ್ಟಿದಿರೊಳೆ ಬಟ್ಟೆದೋಱುವವೊಲ್ (ಮುಂದಿನ ದಾರಿ ತೋರಿಸುವ ಹಾಗೆ) ಅಂದು ಒಗೆದಂ ಕಮಲೈಕಬಾಂಧವಂ(ಕಮಲದ ಏಕ ಬಾಂಧವನಾದ ಸೂರ್ಯನು ಆ ದಿನ ಉದಯವಾದನು)

ಪದ್ಯ- ೧೧೧:ಅರ್ಥ: ಕವಿದದ ಕತ್ತಲೆಯು ನನ್ನ

ಕಿರಣಸಮೂಹಗಳನ್ನು
ಎದುರಿಸಲಾರದಂತೆ,
ಹಾಗೆಯೇ ನಿನ್ನನ್ನು ಯಾವ
ಶೂರರೂ ಎದುರಿಸಲಾರರು.
ನನ್ನ ಉದಯವು ನಿನಗೆ
ಶ್ರೇಯಸ್ಕರವು, ಕನ್ಯೆ
ಸುಭದ್ರೆಯನ್ನು ಬಯಸಿ
ಜೊತೆಯಲ್ಲಿ ಕರೆದುಕೊಂಡು
ಹೋಗು, ಇಲ್ಲಿರಬೇಡ ಎಂದು,
ಅರ್ಜುನ ಮಹಾರಾಜನಿಗೆ
ಮುಂದಿನ ದಾರಿ ತೋರಿಸುವ

ಹಾಗೆ ಸೂರ್ಯನು ಆ ದಿನ ಉದಯವಾದನು

ॐ

||ಇದು ವಿವಿಧ ವಿಬುಧಜನವಿನುತ ಜಿನಪದಾಂಭೋಜ ವರ ಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾಗುಣಾರ್ಣವ ವಿರಚಿತಮಪ್ಪ ವಿಕ್ರಮಾರ್ಜುನ

ವಿಜಯದೊಳ್
ಚತುರ್ಥಾಶ್ವಾಸಂ||
||ವ|| ಇದು ಅನೇಕ
ದೇವತೆಗಳಿಂದ ಸ್ತುತಿಸಲ್ಪಟ್ಟ
ಜಿನಪಾದ ಕಮಲಗಳ
ವರಪ್ರಸಾದದಿಂದ
ಹುಟ್ಟಿದುದೂ ತಿಳಿಯೂ
ಗಂಭೀರವೂ ಆದ ಮಾತುಗಳ
ರಚನೆಯಲ್ಲಿ
ಚಾತುರ್ಯವನ್ನುಳ್ಳ ಕವಿತಾ
ಗುಣಾರ್ಣವನಿಂದ

ರಚಿತವಾದ ವಿಕ್ರಮಾರ್ಜುನ ವಿಜಯದಲ್ಲಿ ನಾಲ್ಕನೆಯ ಆಶ್ವಾಸವು.||

♦♣♣♣♣♣♣♣♣♣♣♣♣ ♣♣♣♣♣♣♣♦

ಪಂಪಭಾರತ

ಪಂಪಭಾರತ: ಅಧ್ಯಾಯ ಅಥವ ಆಶ್ವಾಸಗಳು->	ಪಂಪ:ಕವಿ-ಕೃತಿ ಪರಿಚಯ	1	2	3	4	5	6	7	8	9	10	11	12	13	14

ಪರಿವಿಡಿ

ಕನ್ನಡ ವಿಕಿಸೋರ್ಸ್

ಹಳಗನ್ನಡ ಸಾಹಿತ್ಯ| ಪಂಪಭಾರತ |ಜೈಮಿನಿ ಭಾರತ |ಕುಮಾರವ್ಯಾಸ ಭಾರತ | ನಾಡಗೀತೆಗಳು | ಜನಪದ ಸಾಹಿತ್ಯ | ಚಲನಚಿತ್ರ ಸಾಹಿತ್ಯ | ಚಲನಚಿತ್ರೇತರ ಸಾಹಿತ್ಯ |ಭಾವಗೀತೆಗಳು | ಭಕ್ತಿಗೀತೆಗಳು | ದಾಸ ಸಾಹಿತ್ಯ | ವಚನ ಸಾಹಿತ್ಯ | ತಾತ್ವಿಕ ಸಾಹಿತ್ಯ | ಭಗವದ್ಗೀತೆ | ಮಂಕುತಿಮ್ಮನ ಕಗ್ಗ | ಶಿಶು ಸಾಹಿತ್ಯ | ಕವನ ಸಂಕಲನಗಳು | ಸಂಪ್ರದಾಯ ಗೀತೆಗಳು |ಮಂಕುತಿಮ್ಮನ ಕಗ್ಗ| |ಸರ್ವಜ್ಞ | ಜೀವನ ಚರಿತ್ರೆ|ಸ್ತೋತ್ರಗಳು| ಸಂಸ್ಕೃತ ಸಾಹಿತ್ಯ

"https://kn.wikisource.org/w/index.php?title=ಪಂಪಭಾರತ_ಚತುರ್ಥಾಶ್ವಾಸಂ&

oldid=159028" ಇಂದ ಪಡೆಯಲ್ಪಟ್ಟಿದೆ

ವಿಕಿಸೋರ್ಸ್
ಒಂದು ಮುಕ್ತ ಗ್ರಂಥಾಲಯ

ಈ ಪುಟವನ್ನು ೧೯ ಆಗಸ್ಟ್ ೨೦೧೮, ೧೮:೩೬ ರಂದು ಕೊನೆಯಾಗಿ ಸಂಪಾದಿಸಲಾಯಿತು. •

ವಿಶೇಷವಾಗಿ ಟಿಪ್ಪಣಿ ಮಾಡದಿದ್ದ ಹೊರತು ಪಠ್ಯ "CC BY-SA 4.0 " ರಡಿ ಲಭ್ಯವಿದೆ.